ಎರಡಾಣೆ

Regd. No. M. 3618

1-1-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೭
ವಾರ ೧೮

NAVAYUGA WEEKLY, UDIPI.

FOUNDER: **Hon'ble Mr. A. B. SHETTY**, Health Minister, Govt. of Madras.

Vol. 27
No. 18

THE

Canara Mutual Assurance Company Ltd.,
Head Office: UDIPI, S. I

We thank all our Policy-holders, Patrons, Friends and constituents for their continued good-will and support and assure them that we will try in every way to be deserving of their patronage. We sincerely wish them all A Happy Christmas and A Prosperous New Year

T R. A. Pai,
MANAGING DIRECTOR.

New Year Greetings

On the occasion of the
First New Year in an Independent India.
We convey to all our Policy-holders,
Agents, Medical Examiners and Well-wishers
our Best Wishes
for their
Happiness & Prosperity.

KOCHIKAR BROTHERS, LIMITED.
Chief Agents for South India.
THE BOMBAY LIFE ASSURANCE COMPANY, LTD.
Bombay Life Building,
Udipi:- (S. K.)
Bangalore, Calicut, Madura, Bombay, Trivandrum, Madras, Mangalore.

ಹೊಸ ವರ್ಷದ ಅಭಿವಂದನೆಗಳು

ನಮ್ಮ

ಎಲ್ಲಾ ಪೋಲಿಸಿದಾರರಿಗೆ, ಏಜಂಟರಿಗೆ, ಒರ್ಗನೈಜರರಿಗೆ, ಡಾಕ್ಟರರಿಗೆ ಮತ್ತು ಸಕಲ ಹಿತಕಾಂಕ್ಷಿಗಳಿಗೆ

ಇದೀಗ ಬರುವ

ನವ—1948—ವರ್ಷವು

ಸಕಲ ಸುಖ-ಶಾಂತಿದಾಯಕವಾಗಲೆಂದು ಹೃತ್ಪೂರ್ವಕ ಹಾರೈಸುತ್ತೇವೆ.

ಕೆ. ಸಿ ಭವಾನಿಶಂಕರ ಶೆಟ್ಟಿ, ಬ್ರಾಂಚ್ ಸೆಕ್ರೆಟರಿ,

ದಿ ನಾರ್ದರ್ನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಮಂಗಳೂರು ಶಾಖೆ.

ವಿಮೆ ಮಾಡಲಿಕ್ಕೆ, ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ:-ಧಾರವಾಡ,

ಹೆಚ್ಚಿನ ಸವಲತ್ತಿನ ಬಗ್ಗೆ—
ಪೋಸ್ಟು ಬಾಕ್ಸ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಢಿಲ್ಲಿಯಿಂದ ಶ್ರೀನಗರಕ್ಕೆ

ಕಾಶ್ಮೀರದಲ್ಲಿ ಭಾರತ ಸರಕಾರವೊಂದು ಸಾಹಸಕ್ಕೆ ಕೈಯಿಕ್ಕಿ ಏನೇ ಆದರೂ ಆ ಕೆಲಸವನ್ನು ಮುಗಿಸಿಯೇ ಸಿದ್ಧವೆಂದು ಭೀಷ್ಮ ಪ್ರತಿಜ್ಞೆ ತೊಟ್ಟಿದೆ. ಕಾಶ್ಮೀರ ರಂಗದಲ್ಲಿ ಯುದ್ಧ ನಿರತರಿರುವ ಅಲ್ಲಿಯ ಜನತೆಯ ಮತ್ತು ಹಿಂದೀ ಸೈನಿಕರ ಧೈರ್ಯ ಸಾಹಸಗಳ ಕುರಿತು ಬಹಳ ಕಥೆಗಳನ್ನು ಕೇಳಿದ್ದೇವೆ. ಪಂಡಿತ ನೆಹರುಗಳು ಅವರಂತೆಯೇ ಇವರಿಗೂ ಮುಕ್ತಕಂಠದ ಶ್ಲಾಘನೆ ಸಲ್ಲಿಸಿರುವ, ಸರಬರಾಯಿ ಕಾರ್ಯವಾಹಕರಾದ ನಾಗರಿಕ ವೈಮಾನಿಕರ ಹಾರಾಟ ರೀತಿಯ ಕುರಿತು ಅವರಲ್ಲೋರ್ವ ವೈಮಾನಿಕ ಶ್ರೀ. ಟಿ. ಕೆ. ಟಾಲಿತ್, ಇವರು ತನ್ನ ಸ್ವಾನುಭವವನ್ನು ವರ್ಣಿಸಿದ್ದಾರೆ. ಅದನ್ನಿಲ್ಲಿ ಅನುವಾದಿಸಿ ಕೊಡಲಾಗಿದೆ.

ಒಬ್ಬ ನನ್ನೊಂದಿಗೆ; ಆ ಸುಂದರ ಕಾಶ್ಮೀರ ಕಂದರದ ಮೇಲೆ ಸುಳಿದಾಡಿಕೊಂಡು ಬರುವಾ.

ಢಿಲ್ಲಿಯ ವಿಲ್ಲಿಂಗ್ಡನ್ ವಿಮಾನ ನಿಲ್ದಾಣ. ನಸುಕು ಮುಂಜಾನೆ: ಆಗಲೂ ಚುಚ್ಚುವ ಛಳಿಯಿದೆ. ಇಲ್ಲಿ ಬಾಗಿಲಲ್ಲೇ ಗಾಡಿಯು ನಿಮ್ಮನ್ನೂ ಇತರ ವಿಮಾನಯಾತ್ರಿಕರನ್ನು ಇಳಿಸಿ ಹೋಗಿ ಬಿಡುತ್ತದೆ. ಗಗನೋಲ್ಲಂಘನಕ್ಕೇ, ಇಲ್ಲಿಂದಲೇ ನಿಮ್ಮ ದೈನಿಕ ವಹಿವಾಟಿಗಾರಂಭ. ಎಳಲಾರದಂತಹ ಆಯಾಸ ಮತ್ತು ನಿದ್ರೆಯಿಂದ ಈಗಲೂ ಅಲ್ಲಿ ಬಿದ್ದುಕೊಂಡಿರುವ ನಿರಾಶ್ರಿತರ ಮೇಲೆ ಕಾಲು ಬೀಳದಂತೆ ಮುಂಜಾಗ್ರತೆ ವಹಿಸಿ, ತೆವಳಿಕೊಂಡು ಆ ಭವನದೊಳಗಡೆ ನೀವು ಮುಂದೊತ್ತಿ ಹೋಗಿ ಆಫೀಸನ್ನು ಮುಟ್ಟಬೇಕು. ಅಲ್ಲಿ ಆಗತ್ಯವುಳ್ಳ ಕಾಗದಗಳಿಗೆ ಸಹಿ ಹಾಕಬೇಕು. ಮುಬ್ಬುಗಣ್ಣಿನ, ಆದರೂ ಅತ್ಯುತ್ಸಾಹದಿಂದಿರುವ ಕ್ಷೇತ್ರ ಇಂಜಿನೀಯರನು 'ಗುಡ್‌ಮೋರ್ನಿಂಗ್' ಎಂದು ನಿಮ್ಮನ್ನು ಸ್ವಾಗತಿಸಿ, ವಿಮಾನದ ಕಡೆಗೆ ಸನ್ನೆ ಮಾಡಿತೋರಿಸುತ್ತಾನೆ. ವಿಮಾನಗಳನ್ನು ತಯಾರುಗೊಳಿಸುವದಕ್ಕಾಗಿ ಆತನು ತನ್ನ ಇತರ ಜನರೊಂದಿಗೆ ಇಡೀ ರಾತ್ರೆ ಅಲ್ಲಿ ಕೆಲಸ ಮಾಡಿರಬೇಕು. ನಿಜಕ್ಕೂ ಶ್ಲಾಘನೆ ಪಡೆಯದ ಆಕಾಶವೀರರಿವರು!

ಈ ವಿಮಾನ ನಿಲ್ದಾಣದ ಗೊಂದಲವನ್ನು ಹೇಳಿ ತೀರದು. ವೈಮಾನಿಕರು, ರೇಡಿಯೋ ಆಫೀಸರರು, ನೆಲ ನೌಕರರು, ಎಲ್ಲರೂ ಮಿಶ್ರಗೊಂಡು ಗಲಿಬಿಲಿಯಲ್ಲಿರುತ್ತಾರೆ. ವಿಮಾನ ನಿಲ್ದಾಣದ ಫಲಹಾರ ಮಂದಿರವುಂಟಲ್ಲಾ; ಅದು ನಿಮಗೆ ರೈಲ್ವೇ ಉಪಹಾರ ಮಂದಿರವನ್ನೇ ನೆನಪಿಗೆ ತಂದೀತು. ಆ ಮೇಲೆ ನಮ್ಮ ಪಾಲಿಗುಳಿದಿರುವುದು ಸಿಗರೇಟೆಳೆಯುವಷ್ಟೇ ಹೊತ್ತು. ನಾವು ಹೊರಡುವ ಮುಹೂರ್ತ ಸಮೀಪಿಸುತ್ತಿದೆ. ನೌಕರರು ಸಿದ್ಧರಾಗಿ ನಿಂತಿರುತ್ತಾರೆ; ನೀವು ಕ್ಷೇತ್ರಕ್ಕೆ ಹೋಗಿ, ನಿಮ್ಮ ವಿಮಾನದ ಸರಿಯಾದ ರೂಪರೇಷೆಯನ್ನೊಮ್ಮೆ ಕಂಡುಕೊಳ್ಳಲು ನೋಡುತ್ತೀರಿ. ಆ ಮೇಲೆ ಅಲ್ಲಿರುವ ಅಧಿಕಾರಿಯೊಡನೊಂದು ಮಾತು. ನಿಮ್ಮ ಗ್ರಹಗತಿಗೆ ಅಭಿವಂದನೆಗಳಿರಲಿ—"ಶ್ರೀನಗರಕ್ಕೆ ಹೋಗಿಬರಬೇಕು, ಕೇಪ್ಟನ್!"—ಎನ್ನುತ್ತಾನೆ ಆತ. ಸರಿ. ನಾವು ವಿಮಾನವನ್ನು ಸಮೀಪಿಸುತ್ತೇವೆ. ಆ ಜನ ಅಷ್ಟರಲ್ಲೇ ಒಳಗಡೆ ಸೇರಿರುತ್ತಾರೆ; ಆ ಒಳಕೋಣೆ ವಿಲಕ್ಷಣ ರೀತಿಯಲ್ಲಿರುತ್ತದೆ. ಜನರನ್ನೂ ಸಾಮಾನುಗಳನ್ನೂ ತುಂಬಿಸಿಕೊಳ್ಳಲಾಗುವಂತೆ ಅಲ್ಲಿದ್ದ ಕುರ್ಚಿಗಳು ತೆಗೆಯಲ್ಪಟ್ಟಿವೆ. ಒಮ್ಮೆ ಆ ಹೊರೆಗಳ ಪರಿಶೋಧನೆ. ಆ ಮೇಲೆ ಬಾಗಿಲು ಬಂದ್! ಮತ್ತೆ ತಡವಿಲ್ಲ. "ಎಲ್ಲಾ ಸರಿದರೋ?" "ಎಡಒದಿಯನ್ನು ತಾಗಿಸಿ ಬಿಡು." "ಬಲಒದಿಯನ್ನು ತಾಗಿಸಿಬಿಡು". ಸರಿ; ಯಂತ್ರ ಜೀವವೆತ್ತಿ ಘೂಂಕರಿಸಹತ್ತುತ್ತದೆ. ಈ ಹೊತ್ತಿನೊಳಗೇನೇ ಬೇರೆ ಅರ್ಧ ಡಜನ್ ಮಂದಿ ಹೊರಡಲು ತಯಾರಾಗುತ್ತಿದ್ದಾರೆ. ನಾವು ಅವರನ್ನು ಹಿಂದೆ ಹಾಕಬಲ್ಲೆವೇ? ಆಕಾಶದಲ್ಲಿ ಅದೃಶ್ಯವಾಗಿ ನೆಲ್ಲಿಂಗ್ಟನ್ ಗೋಪುರವಿದೆ; ಹಾರಾಟಾರಂಭದ ಹೊತ್ತಿನಲ್ಲಿ ನೀವು ಸಂಖ್ಯೆ 4ನೆಯವರು; ಅಮೂಲಾಗ್ರವಾಗಿ ಶೋಧಿಸಿ ನೋಡಲು ಸಾಕಷ್ಟು ಸಮಯವಿದೆ. ಅಂತೂ ನಾವೀಗ ನಂ. 1. ತಯಾರ್! ನಾವು ಹೊರಟೆವು; "ಕಾಶ್ಮೀರ್ ಚಲೋ"

ಪೂರ್ಣ ಶಾಂತತೆ ವ್ಯಾಪಿಸಿದೆ; ನಮ್ಮ ವಿಮಾನಕ್ಕಾದರೋ ಮೈ ಬಹಳ ಭಾರವಾದಂತಿದೆ; ಕಾರಣ ಮೈಮೇರಿ ತುಂಬಿಸಿರುವ ಹೊರೆಗಳೇ. ಈ ದಿನ ನಾವು ಭಾಗ್ಯಶಾಲಿಗಳು. ವಿಮಾನದಲ್ಲಿ ನಾವಿರುವುದು ಕೆಲವೇ ಮಂದಿ. ಕ್ರಮಪ್ರಕಾರವೆಂದರೆ ಸರಬರಾಯಿಗಳು ಮತ್ತು ಮೂರು ಜನರು ಮಾತ್ರ. ಇದೊಂದು ಶುದ್ಧ ಶುಭದಿನವೆಂಬಂತೆ ಕಾಣುತ್ತಿದೆ; ಹೀಗಾಗಿ ನಾವು 10000 ಅಡಿ ಎತ್ತರವನ್ನೇ ಅವಲಂಬಿಸಿಬಿಟ್ಟಿದ್ದೇವೆ; ಇಷ್ಟಿಲ್ಲದಿದ್ದರೆ ವಿಪರೀತ ಛಳಿಯಾಗುತ್ತದೆ. ಸರಿ; ನಾವೆಲ್ಲರೂ ಈಗ ಪಸಂದಾಗಿದ್ದೇವೆ; ವಿಮಾನ ಮತ್ತದರ ಯಂತ್ರಗಳು ಸುಗಮಚಲನೆಯಲ್ಲೇ ಇವೆ. ಸುತ್ತಲೂ ನೋಡಬಹುದು; ನೋಡಿ ಆನಂದಿಸಲಾಗುವಷ್ಟು ಸಮಯವಿದೆ. ನಮ್ಮ ಬಲಭಾಗದಲ್ಲಿ ಜಮುನಾ ಹರಿಯುತ್ತಿದ್ದಾಳೆ. ಸಿಮ್ಲದ ತಪ್ಪಲುಗಳು ದೂರದಲ್ಲಿ ಸೊಗಸಾಗಿ ಕಾಣಿಸುತ್ತಿವೆ. ಐವತ್ತು ಮಿನಿಟುಗಳು ಹಾರಾಡಿದೆವು; ಪಾಟಿಯಾಲಾವನ್ನು ನಮ್ಮ ಎಡಗಡೆಗೆ ಹಾಕಿ ಮುಂದೊತ್ತಿದ್ದೇವೆ. ಆದರ ಸುಂದರ ನಗರವು ಎಷ್ಟು ಆಯಕಟ್ಟಿನದಾಗಿ ಕಾಣುತ್ತಿದೆ! ಅರಮನೆಯ ದೃಶ್ಯವಂತೂ ಆಕಾಶದಿಂದ ನೋಡುವಾಗ ಚಿತ್ರಮಯ.

ನಾವು ಹರ್ಷಮೋದದಿಂದಲೇ ಹಾರಾಡುತ್ತಿದ್ದೇವೆ; ಆದರಲ್ಲೂ ಆ ಆಕಾಶದಲ್ಲಿ ನಾವು ಮಾತ್ರ ಇರುವುದಲ್ಲ. ಸಹವೈಮಾನಿಕ ಮತ್ತು ರೇಡಿಯೋ ಆಫೀಸರನು ಒಂದೇ ಸಲ, ನಾವು ಹೊರಟಲ್ಲಿಗೇನೇ ಹೋರಟು ಆಕಾಶದಲ್ಲಿರುವ ಹಾರಾಟ ಯೋಧರನ್ನು ತೋರಿಸುತ್ತಾರೆ. ಅವು ಯಾವ ಕಂಪೆನಿಗೆ ಸೇರಿದವುಗಳೆಂಬುದನ್ನು ಕಂಡುಹಿಡಿಯೋಣವೆಂದು ನಾವು ತುಸು ಹೊತ್ತು ಅವುಗಳೆಡೆಗೆ ಕಣ್ಣಿಟ್ಟು ನೋಡುತ್ತೇವೆ. ನಾವು ನೋಡುತ್ತಿದ್ದಂತೆಯೇ ಅವು ವಿಚಿತ್ರ ರೀತಿಯಿಂದ ಅಂತರ್ಧಾನಗೊಳ್ಳುತ್ತವೆ. ಹೂಂ. ಹೋಗಲಿ; ಗಲಿಬಿಲಿ ಬೇಡ. ಹೇಗೂ ನಾವವರನ್ನು ಶ್ರೀನಗರದಲ್ಲಿ ಕೂಡಿಕೊಳ್ಳುವೆವು ತಾನೆ!

ಈಗ ನಾವು ಹೋಶಿಯಾರ್‌ಪುರಕ್ಕೆ ಸಮೀಪಿಸಿದೆವು. ಇಲ್ಲಿ ನಮ್ಮ ಹಾದಿಯು ಶಿವಾಲಿಕ್ ಶ್ರೇಣಿಯ ಸಾಲನ್ನೇ ಹಿಡಿದು ಹೋಗಿದೆ. ಹೀಗಾಗಿ ಸುಮಾರು ಒಂದು ಘಂಟೆ 50 ಮಿನಿಟುಗಳ ಹಾರಾಟದ ನಂತರ ನಾವೊಮ್ಮೆ ಪಾಠನಕೋಟ್‌ಗೆ ತಾಗಿದೆವು. ಇಲ್ಲಿದೆ ಕವಲೊಡೆದ ರಸ್ತೆ. ಜಮ್ಮುವಿಗೆ ಹೋಗಿರುವ ಆದರ ಒಂದು ಶಾಖೆಯೇ ಸಂಚಾರ ಸಮಾನು ಗಾಡಿಗಳು ಹೋಗುವಂತಹದು. ನಮ್ಮ ಪ್ರಯಾಣದ ಉತ್ತಮ ಭಾಗವಾರಂಭಿಸುವದು ಇಲ್ಲಿಂದಲೇ. ನಮ್ಮ ಮುಂಭಾಗ, ಬಲಭಾಗಗಳಲ್ಲಿ ಪರ್ವತ ಶಿಖರಗಳ ಸಾಲುಗಳು. ನಕಾಶೆಯ ಕಡೆಗೆ ದಿಟ್ಟಿಸಿದರೆ ಈ ದೂರದ ಪರ್ವತಾಗ್ರಗಳು 14000ದಿಂದ 19000 ಅಡಿಗಳಷ್ಟು ಎತ್ತರವಿವೆ ಎಂದು ತಿಳಿದುಬರುತ್ತದೆ.

ಈಗ ನಮ್ಮ ಮುಂದಿನ ಗುರಿಯೆಂದರೆ ಸಮುದ್ರ ಮಟ್ಟಕ್ಕೆ 9000 ಅಡಿ ಎತ್ತರವಿರುವ ಬನ್ನಿಹಾಲ್ ಕಣಿವೆ. ಸದ್ಯಕ್ಕೊಮ್ಮೆ ನಾವು 14000 ಅಡಿ ಎತ್ತರದ ಆ ಶಿಖರಕ್ಕೆ ಡಿಕ್ಕಿ ಹೊಡೆಯಲು ಧಾವಿಸುತ್ತಿರುವೆವೇನೋ ಎಂದು ತೋರುತ್ತದೆ. ಆದರೆ ನಮಗೆ ಗೊತ್ತು; ಶ್ರೇಣಿಗಳ ನಡುವಿನ ಚೆನಾಬ್ ಹೊಳೆಗೆ ಮುಟ್ಟಿದೊಡನೆಯೇ, ನಮ್ಮ ಮುಖವನ್ನು ಕಣಿವೆಯತ್ತ ಬಲಗಡೆಗೆ ತಿರುಗಿಸತಕ್ಕದ್ದೆಂಬುದನ್ನು ಬಲ್ಲೆವು. ಯಂತ್ರವೇನೋ ಬಲವಾಗಿ ಘರ್ಜನೆ ಕೊಡುತ್ತಲೇ ಇದೆ. ಮತ್ತೊಂದು ತಡೆ. ಹಾ! ಇಲ್ಲಿ ಜಮ್ಮುವಿನಿಂದ ಶ್ರೀನಗರಕ್ಕೆ ತಿರುಗಿರುವ ರಸ್ತೆ ಕಾಣಿಸುತ್ತಿದೆ. ಅದು ಚೆನ್ನಾಬ್ ಹೊಳೆಯನ್ನು ದಾಟುವಲ್ಲಿ ಒಂದು ಸೇತುವೆ—ನೆಲ ಗುರುತದ ಪ್ರಮುಖ್ಯ ಚಿಹ್ನೆಯದು. ತನ್ನ ಒಡೆದು ಕಾಣುವ ರಸ್ತೆಯೊಂದಿಗೆ ಬನ್ನಿಹಾಲ್ ಕಂದರವೀಗ ಕಾಣಿಸುತ್ತಿದೆ. ಈಗ ನಾವು ವ್ಯಯಿಸುವ ಮಹೂರ್ತಗಳಾದರೋ ರೋಮಾಂಚನವೆಬ್ಬಿಸುವಂತಹವೇ. ನಮ್ಮ ಸುತ್ತಲೂ ಮಂಜು ಟೋಪಿ ತೊಟ್ಟು ನಿಂತ ಪರ್ವತ ಶಿಖರಗಳು; ಮತ್ತಾ ಕಣಿವೆಯ ಮೇಲೆಯೇ ಶುದ್ಧ ಹಿಮದ ದರ್ಶನ. ಯಂತ್ರಘೋಷವೊಂದರ ವಿನಹ ಅಲ್ಲಿ ವ್ಯಾಪಿಸಿರುವ ಗಭೀರ ಪ್ರಶಾಂತತೆಯು ಹೃದಯ ಚಿವುಟುವಂತಹದು. ಈಗ ನಾವು ನೇರಾಗಿ ಪರ್ವತ ಶ್ರೇಣಿಗಳ ಮೇಲೆಯೇ ಬಂದೆವು.

ಮತ್ತೆ ಒಂದೇ ಒಂದು ಮಿನಿಟು; ಆ ಸುಂದರ ಕಂದರಕ್ಕೆ ಬಂದೇಬಿಟ್ಟೆವು. ನಾವೇನೋ ವಿಶೇಷತಃ ಭಾಗ್ಯಶಾಲಿಗಳು. ಅಲ್ಲಿ ಮಂಜು ಗಿಂಜು ಯಾವುದೂ ಇಲ್ಲ. ಎಲ್ಲಾ ಭೂಚಿಹ್ನೆಗಳೂ ಸ್ಪಷ್ಟವಾಗಿ ಕಾಣಿಸುತ್ತಿವೆ. ದೂರದಲ್ಲಿ ನಂಗ ಪ್ರಭಾತದ ಭವ್ಯ ನೋಟ. ಸುತ್ತಲೂ ಗುಡ್ಡೆಗಳೇ. ನೀವು ಲಕ್ಷ್ಯಪೂರ್ವಕ ನೋಡುವಿರಾದರೆ ಶ್ರೀನಗರವನ್ನು ಗೊತ್ತುಹಚ್ಚಬಲ್ಲಿರಿ. ನಾವೀಗ ತುಸು ವೇಗವನ್ನು ವಹಿಸಬೇಕಾಗಿದೆ. ಇನ್ನು ನಮ್ಮ ನೆಲೆಗೆ ಸೇರಲು ಉಳಿದಿರುವುದು ಹತ್ತೇ ಮಿನಿಟು. ಅದ್ದರಿಂದ ಈಗಿನ ಏರಿಕೆಯಿಂದ ತಗ್ಗಿಗಭಿಮುಖವಾಗಬೇಕು. ಈಗ ಮತ್ತೊಂದು ಬಾರಿ ವಿಮಾನ ನಡಿಗೆ ತಡೆ ಬೀಳುತ್ತದೆ; ಹಾಗೂ ರೇಡಿಯೋ ಆಫೀಸರನು ಶ್ರೀನಗರದ ಗೋಪುರದ ಸಂಪರ್ಕ ಹೊಂದುವುದರಲ್ಲಿ ನಿರತನಾಗುತ್ತಾನೆ.

ಶ್ರೀನಗರ ವಿಮಾನ ನಿಲ್ದಾಣವು ಸಮುದ್ರ ಮಟ್ಟಕ್ಕೆ 5054 ಅಡಿ ಎತ್ತರದಲ್ಲಿದೆ. ನಾವಾದರೋ ಅದಕ್ಕೆ 1000 ಅಡಿ ಮೇಲಿನಿಂದ ಹಾರುತ್ತಿದ್ದೇವೆ. ಆದರೆ ಆ ನಿಲ್ದಾಣವೆಲ್ಲಿದೆ? ಕಾಣಿಸುವದಿಲ್ಲವೇ? ಆ ತಪ್ಪಲಿನ ಆಗಾಗ ಏಳುತ್ತಿರುವ ಧೂಳಿನ ಮೋಡಗಳನ್ನು ಕಾಣಲಾರಿರಾ? ಅದೇ ಶ್ರೀನಗರದ ಆಕಾಶಯಾನ ನಿಲ್ದಾಣ; ಆ ನೋಡಿ ಎಮ್. ಸಿ. ಸಿ. ರಂಗ. ನಾವೀಗ

(೧೧ನೇ ಪುಟ ನೋಡಿರಿ.)

The Canara Industrial & Banking Syndicate, Ltd.

Estd 1925. Head Office: UDIPI.

We thank all our Patrons, Friends and constituents for their continued good-will and support and assure them that we will try in every way to be deserving of their patronage. We sincerely wish them all

A Happy Christmas And A Prosperous New Year.

T. A. Pai, B. Com (Bom), A. I. I. B., F. R. E. S. (Lond)
GENERAL MANAGER.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ತಡತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶಲ್ ರೂ. ೫-; ಅಧಿಕಾಧಿಕ ಸ್ಪೆಶಲ್ ರೂ. ೬/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, P. DS. (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಭಾರತದ ಮುಸ್ಲಿಮರ ಭಾವ ಬದಲಾವಣೆ

ಹಿಂದೀ ರಾಜಕೀಯದಲ್ಲಿ ಕಳೆದ ವಾರವು ಮುಖ್ಯತಃ ಹೃದಯ ಶುದ್ಧೀಕರಣ ಅವಧಿಯಾಗಿತ್ತೆನ್ನಬಹುದು. ಕಾರ್ಯರಂಗದಲ್ಲಿ ಗಣ್ಯ ಆಗುಹೋಗುಗಳೇನೂ ನಡೆದಿಲ್ಲ; ಆದರೆ ಭಾವನಾರಂಗದಲ್ಲಿ ದೊಡ್ಡದೊಡ್ಡ ಪ್ರಗತಿ ಮತ್ತು ಪರಿವರ್ತನೆಗಳು ಕಂಡುಬಂದಿವೆ. ರಾಜಕೀಯ ಸಮುದ್ರದ ಇದುವರೆಗಿನ ಮಂಥನದಲ್ಲಿ ಹುಟ್ಟಿದ ವಿಷರಾಶಿಯು ಹಾವಳಿ ಮುಗಿದು, ಮುಂದಿನ ಮಂಥನವು ಅಮೃತೋದ್ಭವ ಕ್ಕಂಬ ಚಿಹ್ನೆಗಳು ಕಾಣಿಸುತ್ತಿವೆ. ಈಗ ಮುಖ್ಯ ಸಮಸ್ಯೆಗಳಾಗಿ ಉಳಿದಿರುವುವೆಂದರೆ ಅತ್ತ ಕಾಶ್ಮೀರ-ಇತ್ತ ಮುಸ್ಲಿಂ ಲೀಗಿನ ದ್ವಿದಳ ರೂಪ. ಇವೆರಡರಲ್ಲೂ ಮುಸ್ಲಿಂ ನಾಯಕರೇ ಮುಂದಾಗಿ ಸದ್ಭಾವ ಹಿಡಿಯಬೇಕಾದುದು ಅಗತ್ಯವೆಂಬುದು ಸ್ಪಷ್ಟ; ಅವರೀಗ ಸದ್ಭೋದನೆ ಮಾಡುತ್ತಿದ್ದಾರೆ. ಲೀಗಿನ 'ದ್ವಿರಾಷ್ಟ್ರ ತತ್ವ'ದ ಅಮಲು ಈಗ ಎಲ್ಲರ ತಲೆಯಿಂದಲೂ ಇಳಿಯುತ್ತಿದೆ. ಕಾಶ್ಮೀರದ ಸಂಬಂಧದಲ್ಲಿ ಒಳಗಡೆ ಶೇಕ್ ಅಬ್ದುಲ್ಲಾರಿಂದ, ಹೊರಗಡೆ ಪಂಡಿತ ನೆಹರೂಗಳಿಂದ ಲೀಗ್ ಅಮಲು ಜಯಶೀಲವಾಗಿ ನಿಷೇಧಿಸಲ್ಪಟ್ಟಿದ್ದರೆ, ಇತ್ತ ಭಾರತದಲ್ಲಿ ಮುಸ್ಲಿಂ ಲೀಗಿನ ಅಮಲುಪ್ರಸಾರ ಮಾಡಲು ಕೈಕೊಂಡ ಪ್ರಯತ್ನಕ್ಕೆ ಮುಸ್ಲಿಂ ನಾಯಕರೇ ಬಹಿಷ್ಕಾರ ಹಾಕುತ್ತಿದ್ದಾರೆ. ಮಿ. ಇಸ್ಮಾಯಿಲ್ 'ಕನ್ವೀನರ್' ಆಗಿ ಮದ್ರಾಸಿನಲ್ಲಿ ಕರೆಯಲ್ಪಟ್ಟಿದ್ದ ಅ. ಭಾ. ಲೀಗ್ ಸಮ್ಮೇಲನಕ್ಕೆ ಮದ್ರಾಸ್ ಸರಕಾರ ಒಹಿಷ್ಕಾರ ಸಿದ್ಧತೆಯಲ್ಲಿ ಅತ್ತ ಲಕ್ನೋದಲ್ಲಿ ಮೌಲಾನಾ ಆಜಾದರಿಂದ ಕರೆಯಲ್ಪಟ್ಟ ಅ. ಭಾ. ಮುಸ್ಲಿಂ ಸಮ್ಮೇಲನ ನಡೆದಿದೆ. ಲೀಗ್ ಭಾವನೆಯನ್ನು ಬೇರು ಸಮೇತ ಕಿತ್ತುಕೊಂಡು ಗಾಳಿ ಯಾವ ದಿಕ್ಕಿಗೆ ಬೀಸುತ್ತಿದೆ ಎಂಬುದನ್ನು ತೋರಿಸುವ ಕೆಲವು 'ಸುಂಯ್ ಕಾರ' ಗಳನ್ನು—ಮುಸ್ಲಿಂ ನಾಯಕರ ಉದ್ಗಾರಗಳನ್ನು—ಇಲ್ಲಿ ಕೊಡಲಾಗಿದೆ:—

ಶೇಕ್ ಅಬ್ದುಲ್ಲಾ

ಕಾಶ್ಮೀರದ ಹುಲಿ, ಅ. ಭಾ. ಸಂಸ್ಥಾನ ಪರಿಷತ್ತಿನ ಅಧ್ಯಕ್ಷ, ಶೇಕ್ ಅಬ್ದುಲ್ಲಾ ಇಂದೋರಿನಲ್ಲಿ ಭಾಷಣಮಾಡುತ್ತಾ ಹೇಳಿದರು: "ಕಾಶ್ಮೀರದಲ್ಲಿ ಈಗ ನಡೆಯುತ್ತಿರುವ ಯುದ್ಧವೆಂದರೆ ಜಾತೀಯತೆ ಮತ್ತು ರಾಷ್ಟ್ರೀಯತೆಗಳೊಳಗಿನ ಘರ್ಷಣೆ. ಕಾಶ್ಮೀರದ ಜನತೆಯು ಕೊನೆಯವರೆಗೂ ಪಂಡಿತ ಜವಾಹರಲಾಲ ನೆಹರೂರವರನ್ನು ಅನುಸರಿಸುವದು. ಧಾಳಿಗಾರರ ಹಿಂದೆ ಪಾಕಿಸ್ತಾನ ಮತ್ತು ಅದರ ನಾಯಕರಿದ್ದಾರೆಂಬುದು ಸುಸ್ಪಷ್ಟ. ಕಾಶ್ಮೀರ ಯುದ್ಧದ ಪರಿಣಾಮವನ್ನು ಭಾವಿಸಿಯೇ ಭಾರತ-ಪಾಕಿಸ್ತಾನಗಳ ಭಾವೀ ಸಂಬಂಧವಿದೆ. ಕಾಶ್ಮೀರದ ಜನತೆಯು, ಹಿಂದೀ ಕೇಂದ್ರದೊಂದಿಗೆ ಜೋಡಣೆಗೊಳ್ಳುವ ತಮ್ಮ ನಿರ್ಧಾರವನ್ನು ಇಷ್ಟರಲ್ಲೇ ಮಾಡಿದೆ. ಅವರ ಈ ನಿರ್ಧಾರವನ್ನು ಬದಲಾಯಿಸುವಂತೆ ಮಾಡಬಲ್ಲ ಯಾವ ಶಕ್ತಿಯೂ ಈ ಪ್ರಪಂಚದಲ್ಲಿಲ್ಲ. ನಾವೀಗ, ಪೂರ್ಣ ಖಾತ್ರಿಯಿರುವ ಆ ಸೇನಾವಿಜಯದ ಕುರಿತಾವ ಚಿಂತೆಯಲ್ಲೂ ಇಲ್ಲ. ಆದರೆ ಮಿ. ಜಿನ್ನರ ಆ ಪೂರ್ವಪ್ರೇರಿತ ತತ್ವವಾದ ದ್ವಿರಾಷ್ಟ್ರೀಯತೆಯನ್ನು ಸೋಲಿಸಿ, ಹಿಂದೂ, ಮುಸ್ಲಿಂ, ಸಿಖ್ಖರು ಒಟ್ಟಿಗೆ ಬಾಳಬಲ್ಲರೆಂಬುದನ್ನು ತೋರಿಸಿಕೊಡಬೇಕಾಗಿದೆ".

ಮಿ. ಸುಹ್ರವರ್ದಿ

ಪಾಕಿಸ್ತಾನ್ ಹೋರಾಟದ ವೇಳೆ ಕಟ್ಟುಗ್ರ ಲೀಗ್ ನಾಯಕರಾಗಿದ್ದು, ಕಲ್ಕತ್ತಾ ಪ್ರಳಯದ ಕಾಲದಲ್ಲಿ ಬಂಗಾಳದ ಪ್ರಧಾನ ಮಂತ್ರಿಯೂ ಆಗಿದ್ದ ಮಿ. ಸುಹ್ರವರ್ದಿಗಳು ಈಗ ಭಾರತ ಮುಸ್ಲಿಮರಿಗೆ ಕೊಡುತ್ತಿರುವ ಉಪದೇಶ: "ಭಾರತದ ಮುಸ್ಲಿಮರಿಗೆ ಮಹಾತ್ಮಾ ಗಾಂಧಿಯವರಿತ್ತಿರುವ ಉಪದೇಶಕ್ಕೆ ನನ್ನ ಹೃತ್ಪೂರ್ವಕ ಸ್ವಾಗತವಿದೆ. ದ್ವಿರಾಷ್ಟ್ರ ರಚನೆಯಾದ ಮೇಲೆ ಜಾತೀಯತಾ ಸಂಸ್ಥೆಗಳ ಪ್ರಶ್ನೆಯೇ ಉಳಿಯುವುದಿಲ್ಲ. ಪ್ರತಿಯೊಬ್ಬ ನಾಗರಿಕನೂ ತನ್ನರಾಷ್ಟ್ರದ ಕಲ್ಯಾಣ ಸಾಧನೆ ಮಾಡಬೇಕು; ಸರಕಾರ ಮತ್ತು ರಾಷ್ಟ್ರೀಯ ಸಂಸ್ಥೆಯ ಮೂಲಕವೇ ತನ್ನ ಹಕ್ಕುಬಾಧ್ಯತೆಗಳನ್ನು ರಕ್ಷಿಸಿಕೊಳ್ಳಬೇಕು. ಕೆಲವು ಮುಸ್ಲಿಮರಿಗೆ ಈ ಸಹಜ ಪರಿಣಾಮದ ಮೇಲೆ ನಂಬಿಕೆಯಿದೆ. ಆದರೆ, ಇದೊಂದು ಯುಕ್ತಿಮಾರ್ಪಾಟ ಮಾತ್ರ ಇದ್ದು ಯಥಾರ್ಥವಲ್ಲವಾದ್ದರಿಂದ ಇದನ್ನೆಂದೂ ನಂಬಬಾರದೆಂದು ಕೆಲವು ಅತಿರೇಕವಾದಿ ವಿಮರ್ಶಕರನ್ನುತ್ತಿದ್ದಾರೆ. ಇಂತಹ ವ್ಯಕ್ತಿಗಳಿಂದಾಗಿಯೇ ಭಾರತದ ಮುಸ್ಲಿಮರು ಸ್ಪಷ್ಟ ಹೆಜ್ಜೆಯಿಡುವ ಮೊದಲು ಕಾಯಬೇಕಾಗಿ ಬಂದಿದೆ. ನಮ್ಮನ್ನು ಹೃತ್ಪೂರ್ವಕವಾಗಿಹಾಗೂ ಯಥಾರ್ಥತೆಯಿಂದ ಸ್ವಾಗತಿಸಿಕೊಳ್ಳುವರೆ? ನಮ್ಮ ಭಾವನೆ ಸೂಚನೆಗಳಿಗೆ ಕಾಂಗ್ರೆಸ್ ತಕ್ಕ ಬೆಲೆ ಕೊಟ್ಟೀತೆ? ಅದು ಸಿಖರಿಗೂ ತನ್ನ ಬಾಗಿಲುಗಳನ್ನು ತೆರೆದಿಟ್ಟು ನಮ್ಮನ್ನು ಬರಮಾಡಿಸಿಕೊಂಡೀತೆ? ಇವು ಮತ್ತಿಂತಹ ಇತರ ಪ್ರಶ್ನೆಗಳು ನಮ್ಮ ಮುಂದಿನಲ್ಲಿ ಇರುತ್ತಿವೆ. ನಾನು ಭಾರತೀಯ ಮುಸ್ಲಿಮರಿಗೆ ಮತ್ತೊಂದು ಎಚ್ಚರಿಕೆ ಕೊಡುತ್ತೇನೆ. ನಮ್ಮ ಹಿತಸಂಬಂಧಗಳ ಪಾಲನೆಯ ಮಟ್ಟಿಗೆ ಮುಸ್ಲಿಂ ಲೀಗನ್ನು ಬದುಕಿಸುವ, ಅಥವಾ ಬರ್ಖಾಸ್ತುಪಡಿಸುವ ವಿಷಯವು ಅಗಣ್ಯ. ಭಾರತ ಮತ್ತು ಪಾಕಿಸ್ತಾನ್ ಸರಕಾರಗಳು ಒಟ್ಟಿಗೆ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ರಕ್ಷಣಾ ನಿರ್ಣಯ ವಿಧಾನಗಳನ್ನು ಕಂಡುಹಿಡಿದು, ಅವುಗಳನ್ನು ಜಾರಿಗೆತರುವ ಯಂತ್ರರಚಿಸಿದರೆ ಮಾತ್ರವೇ ನಮ್ಮ ಸ್ಥಾನಮಾನವುಳಿಯಬಲ್ಲದು. ಗಾಂಧಿಜೀಯಿಂದ ಇದಕ್ಕೆ ಉತ್ತರ ಬಂದಿದೆ. ನಾವೀಗ ಕಾಂಗ್ರೆಸನ್ನು ಸೇರಲು ತಯಾರಾಗಿ ನಿಲ್ಲಬೇಕು. ಆದರೆ ನಾವು ಸ್ವಾಗತಿಸಲ್ಪಡದೆ ಅದರೊಳಗೆ ಪ್ರವೇಶಿಸಕೂಡದು. ಕಾಂಗ್ರೆಸು ಮತ್ತು ಲೀಗುಗಳೊಳಗಿನ ರಾಜಕೀಯ ಘರ್ಷಣೆಯೀಗ ಮುಕ್ತಾಯಗೊಂಡಿದೆ. ಆದ್ದರಿಂದ ನಮಗೆ ನ್ಯಾಯದಾನ ಮಾಡಿ, ನಮ್ಮ ಬೇಡಿಕೆಗಳ ಕಡೆಗೆ ಸಹಾನುಭೂತಿಯಿಡುವದೆಂಬ ನಿರೀಕ್ಷೆಯಿಂದ ಮಹಾತ್ಮಾ ಗಾಂಧಿಯವರ ನಿರ್ದೇಶಕತ್ವ ಮತ್ತು ಪಂಡಿತ ಜವಾಹರಲಾಲರ ತತ್ವಪ್ರೇರಣೆಯ ಕಾಂಗ್ರೆಸ್ ಸಂಸ್ಥೆಯೊಳಗೆ ನಾವೀಗ ಸೇರಿಕೊಳ್ಳಲು ಯಾವ ತಡೆಯೂ ಇಲ್ಲ. ಈ ನಡುವೆ ನಾವು ಆಪಾದನೆಗಳಾಗಬಾರದು. ನಾವಾವ ಒಳಬುದ್ಧಿಯನ್ನೂ ಕಟ್ಟಿಕೊಳ್ಳದೆ ರಾಷ್ಟ್ರದ ಸೇವೆಗೆ ತಯಾರಿದ್ದೇವೆ. ಕಷ್ಟ, ನಷ್ಟ, ಮರಣ, ನಾಶ, ಇತ್ಯಾದಿಗಳನ್ನು ಅನುಭವಿಸಬೇಕಾಗಿ ಬಂದಂತಹ ಹಿಂದೀ ಮುಸ್ಲಿಮರ ಅಗ್ನಿ ಪರೀಕ್ಷೆಯ ಕಾಲವಿದು, ಎಂಬುದನ್ನು ಸರಿಯಾಗಿ ಜ್ಞಾಪಕದಲ್ಲಿಟ್ಟುಕೊಂಡೇ ಇವುಗಳಲ್ಲಾವುದೂ ನಮ್ಮ ಕರ್ತವ್ಯಪಥದಿಂದ ನಮ್ಮನ್ನು ಬೇರ್ಪಡಿಸದಂತಿರಬೇಕು. ನಮಗೆ ಸ್ವಾಗತ ದೊರೆಯುವುದು ಯಾವಾಗ ಮತ್ತು ಹೇಗೆ ಎಂಬುದೇ ಮುಂದಿನ ಪ್ರಶ್ನೆ. ಕಾಂಗ್ರೆಸಿನೊಳಗಡೆಯ ಶಕ್ತಿಗಳ ಪರಿಚಯ ನಮಗಿರುವುದು ಕಡಿಮೆ. ಅದು ಯಾವಾಗ ಎಂಬುದನ್ನು ನಮಗೆ ತಿಳಿಸುವಂತೆ ನಾವಿದನ್ನು ಗಾಂಧಿಜೀಗೇನೇ ಬಿಟ್ಟುಬಿಡುವುದು ವಾಸಿ. ಹುಚ್ಚಾದ ಪ್ರಪಂಚಕ್ಕೆ ಬುದ್ಧಿಶಕ್ತಿಯನ್ನು ಉಂಟುಮಾಡಿದ ಓರ್ವ ಮನುಷ್ಯನೆಂದರೆ ಅವರೇ. ಅನ್ಯಾಯ ಮತ್ತು ಕ್ರೌರ್ಯಗಳ ಇದಿರಾಗಿ ಪೀಡಿತರ ಕಡೆಯಿಂದ ಅವರು ಹೋರಾಡಿದ್ದಾರೆ. ಅವರು ಬರೀ ಕಿರಣ ಬೀರಿ, ನೈತಿಕ ಬಲಪ್ರದರ್ಶನೆ ಮಾಡಿದ್ದಾರೆ. ಭಾರತದ ಮುಖ್ಯ ಅಲ್ಪ ಸಂಖ್ಯಾಕರಾದ ಮುಸ್ಲಿಮರು ಅವರಿಗೆ ಕೃತಜ್ಞರಾಗಿರಲು ಕಾರಣಗಳಿವೆ; ನಮಗೆ ಸರಿಯಾದ ನಾಯಕತ್ವ ತೋರಿಸುವಂತೆ ನಾವವರ ಮೇಲೆ ಭರವಸೆಯಿಡಬೇಕಾಗಿದೆ. ಅವರ ಉಪದೇಶಕ್ಕೆ ವಿಧೇಯರಾಗಿರಬೇಕೆಂದು ನನ್ನ ಮುಸ್ಲಿಂ ಸಹೋದರರನ್ನು ಕೇಳಿಕೊಳ್ಳುತ್ತೇನೆ. ಅವರಿಂದ ಸೂಚನೆ ಬರುವುದನ್ನೇ ನಾವು ಕಾಯುತ್ತಿರುವಾ".

ಮಿ. ಜಫ್ರುಲ್ಲಾ ಹುಸ್ಸೇನ್ ಲಾರಿ

ಸಂಯುಕ್ತ ಪ್ರಾಂತಿಕ ಎಸೆಂಬ್ಲಿಯ ಲೀಗ್ ನಾಯಕ ಮಿ. ಲಾರಿಯವರೆಂದಿದ್ದಾರೆ. "ನಾನು ಕಳೆದ ಕೆಲವು ತಿಂಗಳುಗಳ ಪರಿಸ್ಥಿತಿಯನ್ನು ಲಕ್ಷ್ಯಪೂರ್ವಕ ಪರಿಶೀಲಿಸಿ, ಗಾಂಧಿಜೀ, ಆಜಾದ್, ಸುಹ್ರವರ್ದಿ, ಮಹಮ್ಮದ್ ಇಸ್ಮಾಯಿಲ್, ಮುಂತಾದವರೊಡನೆ ಪರ್ಯಾಲೋಚನೆ ನಡೆಸಿ, ಮುಸ್ಲಿಂ ಜನತೆಯ ಮನಸ್ಸನ್ನು ಅರಿತುಕೊಂಡು, ಈ ಕೆಳಗಿನ ನಿರ್ಧಾರಗಳನ್ನು ಹೊಂದಿದ್ದೇನೆ. 1. ಜಾತೀಯತೆಯ ನಿಮಿತ್ತವಾಗಿ ಪಾರ್ಲಿಮೆಂಟರೀ ಕಾರ್ಯ ನಡೆಸುವುದು ಸಾಧ್ಯವೂ ಅಲ್ಲ, ಅಪೇಕ್ಷಣೀಯವೂ ಅಲ್ಲ. ರಾಷ್ಟ್ರೀಯತೆಯನ್ನಾಧರಿಸಿದ ಲೌಕಿಕವಾದಿ ದೃಷ್ಟಿಕೋನವಿರಬೇಕು. ಲೀಗು ತನ್ನ ಶಾಸನ ಸಭಾ ಘೋರಣೆ ಮತ್ತು ಪಾರ್ಲಿಮೆಂಟರೀ ಬೋರ್ಡನ್ನು ಬರ್ಖಾಸ್ತುಗೊಳಿಸಬೇಕು. 2. ಸರ್ವ ಮುಸ್ಲಿಮರಿಗಾಗುವ ಇನ್ನೊಂದು ನಿಲ್ದಾಣ ದೊರೆಯುವ ವರೆಗೆ ಶಾಸನ ಸಭೇತರ ಕಾರ್ಯಗಳಿಗಾಗಿ ಲೀಗು ಇರಬಹುದು. 3. ಪ್ರತಿಯೊಬ್ಬ ಮುಸ್ಲಿಮನಿಗೂ ತನಗಿಚ್ಛೆಬಂದ ರಾಜಕೀಯ ಪಕ್ಷವನ್ನು-ಕಾಂಗ್ರೆಸ್, ಸೋಶಿಯಾಲಿಸ್ಟ್ ಪಕ್ಷ, ಕಮ್ಯೂನಿಸ್ಟ್ ಪಕ್ಷ, ಇತ್ಯಾದಿ-ಸೇರುವ ಸ್ವಾತಂತ್ರ್ಯವಿರಬೇಕು. 4. ವಿವಿಧ ಶಾಸನ ಸಭೆಗಳಲ್ಲಿರುವ ಲೀಗ್ ಪಕ್ಷಗಳು ಎಲ್ಲಾ ಜಾತಿಗಳವರಿಗೂ ಬಾಗಿಲು ತೆರೆದಿಡುವ ಹಕ್ಕನ್ನು ಕೊಡಬೇಕು; ಅವು ಲೀಗಿನಾಶ್ರಯ ಬಿಡಬೇಕು".

ಹಲವು ಕಂಠಗಳಿಂದ—

"ಮುಸ್ಲಿಂ ಲೀಗನ್ನು ಉಳಿಸತಕ್ಕದ್ದೆಂಬ ಕರಾಚಿ ನಿರ್ಣಯವು ಮುಸ್ಲಿಮರಿಗೆ ಅಪಾರ ಹಾನಿಯೊದಗಲಿದೆ. ಭಾರತದ ಮುಸ್ಲಿಮರು ಮೌಲಾನಾ ಆಜಾದರ ನಾಯಕತ್ವವನ್ನು ಅಂಗೀಕರಿಸಲಿ"—ಮಿ. ಎ. ಕ್ಯೂ. ಅನ್ಸಾರಿ. "ಕರಾಚಿಯ ಲೀಗ್ ಕೌನ್ಸಿಲಿಗೆ ಹಿಂದೀ ಮುಸ್ಲಿಮರ ಮಾರ್ಗದರ್ಶಕತ್ವ ವಹಿಸುವ ಹಕ್ಕಿಲ್ಲ"—ನವಾಬ್ ಮಹಮ್ಮದ್ ಇಸ್ಮಾಯಿಲ್. "ಲೀಗನ್ನು ಇನ್ನೂ ಇಟ್ಟುಕೊಳ್ಳುವ ಕರಾಚಿ ನಿರ್ಣಯವು ಮುಸ್ಲಿಂ ಹಿತಸಂಬಂಧಗಳಿಗೆ ವಿರುದ್ಧ"—ಖಾನ್ ಬಹದೂರ್ ಮೊಯಿದೀನ್. "ಮದ್ರಾಸಿನಲ್ಲಿ ಲೀಗಿನ ಮುಖ್ಯ ಕಚೇರಿಯಾಗುವದೆಂಬುದನ್ನು ಕೇಳಿ ಮುಸ್ಲಿಮರು ದಿಗಿಲು ಬಿದ್ದಿದ್ದಾರೆ. ಮದ್ರಾಸ್ ಸರಕಾರವು ಈಗಲೇ ಅದಕ್ಕೆ ಬಹಿಷ್ಕಾರ ಹಾಕಲಿ"—ಡಾ। ಎಂ. ಎ. ಕರೀಮ್.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Kalapadi.
'ಭುವನೇಂದ್ರ'
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ ೧೦ರಿಂದ ೪ ಬೊಟ್ಟು, ಸಣ್ಣಮಕ್ಕಳಿಗೆ ೧ರಿಂದ ೩ ಬೊಟ್ಟು ಲವಂಗ ಯಾಲಕ್ಕಿ ಕಷಾಯದಲ್ಲಿ ದಿನಕ್ಕೆ 2 ಯಾ ೩ ಸರ್ತಿ ಯುಕ್ತ ರೀತಿಯಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹೊಟ್ಟೆತೊಳಸು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಳಪಾಡಿ, ದ. ಕ.
ಉಡುಪಿ ಸ್ಟಾಕಿಸ್ಟರು: — ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ ಜಿ ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊರಕ್ಕಲ್; ನವಭಾರತ ಬುಕ್ ಡಿಪೋ.

ಕಾಸರಗೋಡಿನಲ್ಲಿ ೩೧ನೇ—

ಡಿಸೆಂಬರ್ ೨೭, ೨೮, ೨೯, ೩೦ರಲ್ಲಿ ಕಾಸರಗೋಡಿನಲ್ಲಿ ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಲನ ಜರಗಿತು; ಸಮ್ಮೇಲನದ ಅಂಗವಾಗಿ ಸಾಹಿತ್ಯಗೋಷ್ಠಿ, ಮಹಿಳಾಗೋಷ್ಠಿ, ವಿಜ್ಞಾನಗೋಷ್ಠಿಗಳು ನೆರೆದುವು. ಜೊತೆಯಾಗಿ ಕರ್ನಾಟಕ ಏಕೀಕರಣ ಸಮ್ಮೇಳನವೂ ಜರಗಿತು. ಕನ್ನಡ ನಾಡಿನ ಹಿರಿಯ ಕಿರಿಯ ಸಾಹಿತಿಗಳು, ಏಕೀಕರಣ ಕಾರ್ಯಕರ್ತರು, ರಾಜಕಾರಣಿಗಳು ಅಲ್ಲಿ ಒಟ್ಟಾದರು; ತಮ್ಮ ನಾಡುನುಡಿಗಳ ಗತ ವೈಭವದ ಸ್ಮರಣೆ, ವರ್ತಮಾನಕಾಲದ ಸಂವೇದನೆ, ಭವಿಷ್ಯತ್ತಿನ ಕಲ್ಪನೆ ಮಾಡಿಕೊಂಡರು. ಅಖಿಲ ಕರ್ನಾಟಕದ ನಿಲ್ದಾಣವು ಕಾಸರಗೋಡಿನಲ್ಲಾಯಿತು; ಅಲ್ಲಿಂದ ಕನ್ನಡ ಭೇರಿ ಮೊಳಗಿತು. ಕನ್ನಡದ ಕಾಲೋಚಿತ ಪ್ರವಾಹದ ಮೂಲ ಬುಗ್ಗೆಯು ಕಾಸರಗೋಡಿನಿಂದ ಚಿಮ್ಮಿತು; ಕನ್ನಡ ದೇಶ—ಭಾಷಾ ಅಭಿಮಾನವನ್ನು ಕುದುರಿಸಿ ರೂಪಿಸುವ ಕಾರ್ಯಾಲಯ ಕಾಸರಗೋಡಿನ 'ಮುದ್ದಣನಗರ'ವಾಯಿತು. ಕನ್ನಡನಾಡು, ಭಾಷೆ, ಸಂಸ್ಕೃತಿ—ಇವೆಲ್ಲವುಗಳ ರಚನೆ, ಪಚನಗಳ ಸಂಬಂಧದ ಉಪನ್ಯಾಸಗಳು, ಚರ್ಚೆಗಳು, ನಿರ್ಧಾರಗಳು ಅಲ್ಲಿ ಆದುವು. ಒಟ್ಟಿನಮೇಲೆ ಕರ್ನಾಟಕದ ಹೃದಯವೇ ಈ ಬಾರಿ ಕಾಸರಗೋಡಾಯಿತು. ಕನ್ನಡ ನಾಡಿನ ಪರವಾಗಿ—ಕನ್ನಡ ಸಾಹಿತ್ಯ, ಕಲೆ, ವಿಜ್ಞಾನ, ಸಂಸ್ಕೃತಿಯ ಪರವಾಗಿ—ಅಧಿಕಾರಪೂರ್ವಕ ಮಾತಾಡಬಲ್ಲ, ಕಾರ್ಯ ಮಾಡಬಲ್ಲ, ಹೆಚ್ಚಿನವರು ಅಲ್ಲಿ ಕೂಡಿದ್ದರು. ಕೇರಳದೊತ್ತಿನ ಕಾಸರಗೋಡಿನಲ್ಲಿ, ಅಲ್ಲಿಯ ಕಿರಿಚಾಟಗಳನ್ನು ಅಡಗಿಸಿ, ಮೂಲೆ ಮೂಲೆಗೂ ಪ್ರತಿಧ್ವನಿ ಕೊಡುವಂತಹ, ಕನ್ನಡ ಘೋಷವೆದ್ದಿತು. ಸಮರ್ಥ ಕಾರ್ಯಕರ್ತರು ಹಾಗೂ ಯೋಗ್ಯರಾದ ಅಗ್ರಾಸನಾರೂಢರಿಂದಾಗಿ ಕಾಸರಗೋಡಿನ ಸಮ್ಮೇಲನಗಳೂ ಗೋಷ್ಠಿಗಳೂ ಜಯಶೀಲವಾದುವು. ಸ್ಮಾರಕಗ್ರಂಥ 'ತೆಂಕನಾಡು' ಮತ್ತು ವಸ್ತು ಪ್ರದರ್ಶನವು ಸಮ್ಮೇಲನಾಂಗನೆಯ ಮಾಂಗಲ್ಯ ಸೂತ್ರ ಮತ್ತು ಉಚಿತ ಶೃಂಗಾರಗಳಾಗಿ ಗೌರವ ಘನತೆಗಳನ್ನು ಕೊಟ್ಟಿದ್ದುವು. ಅಖಿಲ ಕನ್ನಡಿಗರ ಪರಿಶ್ರಮ-ಕಾಸರಗೋಡಿನವರ ಹಾಗೂ ದಕ್ಷಿಣ ಕನ್ನಡಿಗರ ಸ್ವಾಗತ ಶ್ರಮ-ಈ ಮೂಲಕ ಸಾರ್ಥಕವಾಯಿತು. ಎಲ್ಲರೂ ಕೃತ ಕೃತ್ಯರಾದರು.

೩೧ನೇ ಸಾಹಿತ್ಯ ಸಮ್ಮೇಲನ

ಇದರ ಅಧ್ಯಕ್ಷರು ಬೆಂಗಳೂರಿನ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು. ಉದ್ಘಾಟಕರು ಬೊಂಬಾಯಿ ಹೈಕೋರ್ಟಿನ ನ್ಯಾಯಾಧೀಶ ಶ್ರೀ. ಆರ್. ಎ. ಜಹಗೀರ್ದಾರರು. ಸ್ವಾಗತಾಧ್ಯಕ್ಷರು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು. ಸ್ವಾಗತ ಕಾರ್ಯದರ್ಶಿಗಳು ಶ್ರೀ. ಬಿ. ಶ್ರೀಧರ ಕಕ್ಕಿಲ್ಲಾಯ, ಶ್ರೀ. ಎಮ್. ಉಮೇಶರಾವ್, ಅವರು. ಅಧ್ಯಕ್ಷ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರ್, ಇವರ ಪರಿಚಯವು ಕನ್ನಡಿಗರಿಗೆಲ್ಲಾ ಇದ್ದದ್ದೇ—ಯಾವ ಕಡೆಗೆ ಮುಖ ಮಾಡಿ ಹೊರಟವರಿಗೂ ಇವರು ದೊರೆತಿದ್ದಾರೆ. ಕರ್ನಾಟಕದ ಸಾಹಿತ್ಯ, ಪತ್ರಿಕೋದ್ಯಮ, ಸಂಶೋಧನೆ, ರಾಜಕಾರಣ—ಇವುಗಳಲ್ಲಿ ಯಾವ ರಂಗವೇ ಇರಲಿ, ಒಳಗಡೆಗೆ ಹೆಜ್ಜೆಯಿಟ್ಟವರು ತುಸು ಮುಂದೊತ್ತುವುದರೊಳಗೆ ದೊರೆಯುವ ಹೆಸರುಗಳಲ್ಲಿ ಶ್ರೀ ತಾತಾಚಾರ್ಯರು, ಒಂದು. "ನನ್ನ ಯೋಗ್ಯತಾಸಿದ್ಧಿ ಕುರಿತು 'ಗುಣಗಾನ' ಮಾಡುವಾಗ ಅನೇಕ 'ಗುಣವಾಚಕ'ಗಳನ್ನು ಉಪಯೋಗಿಸಿದ್ದಾರೆ. 'ಪತ್ರಿಕೋದ್ಯಮಿ.' 'ಶೈಲಿಶಿಲ್ಪಿ' 'ಸಾಂಸ್ಕೃತಿಕ ಸೇನಾನಿ' 'ಸ್ವಾತಂತ್ರ್ಯಯೋಧ' 'ಸಂಶೋಧಕ' 'ಸತ್ಯಾಗ್ರಹ ಪಂಥದ ಉಪಾಸಕ' 'ಕೆಚ್ಚೆದೆಯ ಪತ್ರಿಕಾಕರ್ತ' ಇವೇ ಆ ಮಾತುಗಳು" ಎಂದು ಶ್ರೀ ಶರ್ಮರ್ ತನ್ನ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದ್ದಾರೆ. ಇವುಗಳಲ್ಲಾವುದರಲ್ಲೂ ತಿದ್ದುವ ಅಂಶವಿಲ್ಲವೆಂದರೆ ಸಾಕು, ಈ ಸವ್ಯಸಾಚಿಯನ್ನು ಅರಿತಂತಾಗುವುದು. ಅವುಗಳ ಪೈಕಿ 'ಸ್ವಾತಂತ್ರ್ಯ ಯೋಧ'ನೆಂಬುದೇ ತನಗೆ ಬಹಳ ಪ್ರಿಯವಾದುದು ಎಂದು ಇವರಂದಿದ್ದಾರೆ; ಇದರಿಂದ ಇವರ ಹೃದಯವನ್ನೂ ಅರಿತಂತಾಗುವುದು. ಸ್ವಾಗತಾಧ್ಯಕ್ಷ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಂ. ಎಲ್. ಸಿ. ಇವರಂತೂ ದಕ್ಷಿಣಕನ್ನಡದಲ್ಲಿ ಇಂತಹ ಕಾರ್ಯಗಳಿಗಿರುವ ಒಂದು ದೊಡ್ಡ ಆಶ್ರಯ. ಸಾರ್ವಜನಿಕ ಸಭೆ ಸಮ್ಮೇಳನಗಳ—ಧಾರ್ಮಿಕ, ರಾಜಕೀಯ ಕಲೆ, ಸಾಹಿತ್ಯ, ದಲಿತೋದ್ಧಾರ, ಇತ್ಯಾದಿ—ವ್ಯವಸ್ಥೆಗಳ ಯೋಚನೆ ಮೂಡುವ ಯಾರಿಗಾದರೂ ಪ್ರಥಮತಃ ಧರ್ಮಸ್ಥಳ ಹೆಗಡೆಯವರ ನೆನಪು ಮೂಡಲೇ ಬೇಕು. ಸಮ್ಮೇಳನದ ಉದ್ಘಾಟಕರು ಬೊಂಬಾಯಿ ಹೈಕೋರ್ಟಿನ ನ್ಯಾಯಾಧೀಶ ಶ್ರೀ. ಆರ್. ಎ. ಜಾಹಗೀರ್ದಾರರೇ. ಅನ್ಯಾಯಕ್ಕೊಳಗಾಗಿರುವ ಕನ್ನಡದ ಪಾಲಿನ ನ್ಯಾಯವೂ ಈ ನ್ಯಾಯಮೂರ್ತಿಗಳಿಂದಲುದ್ಘಾಟನೆಗೊಂಡಿತೆಂದು ಆಶಿಸಬಹುದು. ಕಾರ್ಯದರ್ಶಿದ್ವಯರು—ಶ್ರೀ. ಬಿ. ಶ್ರೀ ಕಕ್ಕಿಲ್ಲಾಯ ಮತ್ತು ಶ್ರೀ. ಉಮೇಶರಾಯರು ಸಮ್ಮೇಲನ ಕರೆದು ನೆರೆಯಿಸಿಕೊಂಡ ಎರಡು ಕೈಗಳೇ; ಇಂತಹ ಕಾರ್ಯಕ್ಕಗತ್ಯವುಳ್ಳ ತರಬೇತಿ ಮತ್ತು ಶಕ್ತಿ ಎರಡೂ ಇದ್ದ ಬಾಹುಗಳವು. ವಸ್ತು ಪ್ರದರ್ಶನವನ್ನು ತೆರೆದವರು ಶ್ರೀ ಶ್ರೀ ಈಶ್ವರಾನಂದಭಾರತಿ ಸ್ವಾಮಿಗಳವರು ನಾಡನುಡಿಯ ಅನುಭವವುಳ್ಳವರಿದ್ದಂತೆಯೇ ಆಶೀರ್ವದಿಸಲರಿತವರೂ ಅಲ್ಲಿದ್ದರು.

ಅಧ್ಯಕ್ಷ ಭಾಷಣ

ಸಮ್ಮೇಲನದ ಅಧ್ಯಕ್ಷ ಭಾಷಣದ ಸಾರ, ಆಕಾರ, ಯಾವುದೂ ಕಾಲ ಬಾಧೆಗೊಳಗಾಗುವಂತಹದಲ್ಲ; ಕನ್ನಡದ ಒಂದು ದಾಖಲೆಯಾಗಿ ನಿಲ್ಲುವಂತಹದೇ. ಶ್ರೀ ಶರ್ಮರಿಗೆ ಮೊದಲೇ ದೊರೆತಿರುವ 'ಶೈಲಿ ಶಿಲ್ಪಿ' 'ಸಾಂಸ್ಕೃತಿಕ ಸೇನಾನಿ' ಗುಣವಾಚಕ ನಾಮಗಳನ್ನು ಈ ಭಾಷಣದ ಪಾರಾವಾರಗಳು ಬುಡದಿಂದ ತುದಿವರೆಗೆ ಅನುಮೋದಿಸುತ್ತಾ ಹೋಗಿವೆ. ದಕ್ಷಿಣ ಕನ್ನಡದೊಂದಿಗೆ ತಾನು ಗಳಿಸಿದ್ದ ಸಂಬಂಧದನ್ನು ನೆನಪನ್ನು ಅವರು ಮಾಡಿಕೊಟ್ಟ ರೀತಿಯು,'ಇಷ್ಟೊಂದು ಮಧುರವಾಗಿ ಸ್ಮರಿಸಬಲ್ಲ ಆಪ್ತರೆಷ್ಟು ಮಂದಿಯಿದ್ದಾರೆ?'ಎಂದು ದ. ಕ. ಜಿಲ್ಲೆಯ ಮನಸ್ಸನ್ನೇ ತನ್ನ ಮೈತ್ರೀ ಸಂಬಂಧಗಳ ಕಡೆಗೆ ತಿರುಗಿಸುವಂತಹದು. ಬರಬೇಕಾದುದರ ಹೆಚ್ಚಿನಂಶ ಅಧ್ಯಕ್ಷ ಭಾಷಣದಲ್ಲಿ ಬಂದಿದೆ; ಸೊಗಸಾಗಿ ಬಂದಿದೆ. ತನಗೆ ಬಂದಿರುವ ಅಭಿನಂದನ ವಚನಗಳಲ್ಲಿ ಪಡಿಮೂಡಿದ್ದ ಕನ್ನಡಿಗರ ಆಸೆ, ಆದರ್ಶ, ಆತುರ, ಕಾತರಗಳನ್ನು ಮುಂದಿಟ್ಟು, ಸಾಹಿತ್ಯ ಸಮ್ಮೇಲನಾಧ್ಯಕ್ಷರಿಂದಿದ್ದಾರೆ: "ಕ್ರಾಂತಿ ಬೇಕು! ಕನ್ನಡ ನಾಡೆಲ್ಲ ಒಂದಾಗಬೇಕು! ನನ್ನ ಅಧ್ಯಕ್ಷಪದದ ಅವಧಿಯಲ್ಲೇ ಆ ಕಾರ್ಯ ಸಿದ್ಧಿ ಆಗಬೇಕು!! ಯಾರಿಗೆ ಬೇಡ? ಆಗಬೇಕು! ಹಾಗೆ ಆಗಲೇಬೇಕೆಂದು ನಾವೆಲ್ಲ ಸಂಕಲ್ಪ ಮಾಡಿದರೆ ಆಗಿಯೇ ಹೋಯಿತು!.... ....ಕನ್ನಡನಾಡಿನ ಜನರು "ನಾಡನ್ನು ಕಟ್ಟಬೇಕು" ಎಂದು ಸಂಕಲ್ಪ ಮಾಡಿ ಅನೇಕ ವರ್ಷಗಳಾದುವು. ಆ ಸಂಕಲ್ಪ ಸಾಧನೆಯ ಸಿದ್ಧಿಯ ಕಾಲ ಸಮೀಪಿಸುತ್ತಿರುವ ಹಾಗಿದೆ. "ಇಗೋ ಸಿದ್ಧಿಸಿತು" ಎಂದು ಕಾಸರಗೋಡಿನ ವೇದಿಕೆಯಿಂದ ಕನ್ನಡಿಗರೆಲ್ಲ ಉಚ್ಚಕಂಠದಿಂದ ಸಾಗರ ಘೋಷವನ್ನು ಮೀರಿ ಘೋಷಿಸಿದ್ದಾದರೆ ಸಿದ್ಧಿಸಿತು! ಇಚ್ಛಾಶಕ್ತಿಯನ್ನು ಮೀರಿದ ಶಕ್ತಿ ಮತ್ತೊಂದಿಲ್ಲ. ಇಚ್ಛಾಶಕ್ತಿಯ ಜೊತೆಗೆ ಮತ್ತೊಂದು ಬೇಕು. ಇಚ್ಛೆಯು ಮೊದಲನೇ ಹೆಜ್ಜೆಯಾದರೆ ಪ್ರಗತಿಪಥದಲ್ಲಿ,ಮಹತ್ಸಾಧನೆಯ ಯಾತ್ರಾಪಥದಲ್ಲಿ, ಅಭಿಮಾನವು ಎರಡನೆಯ ಹೆಜ್ಜೆ. ಅಭಿಮಾನವಿಲ್ಲದೆ ಇರುವಿಕೆಯೇ ಇಲ್ಲ...." ಇಚ್ಛಾ ಶಕ್ತಿಯ ವ್ಯಕ್ತಸ್ವರೂಪ ವಿಪ್ಲವ, ಕ್ರಾಂತಿ, ಪ್ರಳಯವೆಂಬುದನ್ನು ಮನಮುಟ್ಟುವಂತೆ ತಿಳಿಸಿ, 'ಕ್ರಾಂತಿಗಿದೋ ಸ್ವಾಗತ'ವೆಂದು ಸಾರಿದ್ದಾರೆ. ಸಾಹಿತ್ಯವು ರಾಜಕಾರಣದಿಂದ ಗಾವುದ ದೂರದಲ್ಲಿರಬೇಕು, ಎಂಬ 'ಮಡಿ ಸಾಹಿತ್ಯ' ವ್ಯೂಹವನ್ನು ಒಡೆದು ಹಾಕಿದ ಶ್ರೀ ಶರ್ಮರ ವಾದ ಸರಣಿಯನ್ನು ಕೊಂಡಾಡಬೇಕು. ಈ ಕೆಲಸ ಹಿಂದಿನ ಸಮ್ಮೇಳನಗಳ ಅಧ್ಯಕ್ಷರಿಂದಾಗಿರಲಿಲ್ಲ; ಈ ಬಾರಿಯ ಅಧ್ಯಕ್ಷರದನ್ನು ಮಾಡಿದಂತೆ ಹಿಂದಿನವರಾರೂ ನಿಜಕ್ಕೂ ಮಾಡಿರಲಿಲ್ಲ, ಅವಶ್ಯಕತೆಯಿದ್ದರೂ ಆಗಿರಲಿಲ್ಲ. ಶ್ರೀ ಶರ್ಮರು ಈ ಹೊಸಹೆಜ್ಜೆಯಿಟ್ಟುದಕ್ಕಾಗಿ ವಿಶೇಷತಃ ಅಭಿವಂದನಾರ್ಹರು. ಸಾಹಿತ್ಯ ಪರಿಷತ್ತಿನಲ್ಲಿ ಸುಧಾರಣೆಗಳಾಗಬೇಕು- ಅದರ ಕಾರ್ಯಕ್ಷೇತ್ರ ವಿಸ್ತಾರವಾಗಬೇಕು- ಪ್ರಚಾರಾವಶ್ಯಕತೆ- ಮೊದಲಾದುವುಗಳನ್ನು ಅಧ್ಯಕ್ಷರು ತನ್ನ ಭಾಷಣದಲ್ಲಿ ಒತ್ತಿ ಹೇಳಿದ್ದಾರೆ. ಭಾಷಾಭ್ಯಾಸ, ಶಬ್ದಸಂಪತ್ತಿ, ಪಾರಿಭಾಷಿಕ ಶಬ್ದ ಸಂಪತ್ತಿ, ಪಠ್ಯಪುಸ್ತಕಗಳು, ಲಿಪಿಸಮಸ್ಯೆ, ಸಾಹಿತ್ಯ, ಶಿಶುಸಾಹಿತ್ಯ, ವ್ಯವಸಾಯ, ವಯೋನುಪೂರ್ವ ಸಾಹಿತ್ಯ, ಸಂಶೋಧನೆ, ಕರ್ನಾಟಕ ಏಕೀಕರಣ ಪ್ರಯತ್ನ, ಗೋವೆಯ ಮಾತು, ಭದ್ರ ಕರ್ನಾಟಕ, ನೆಹರುಗಳ ಮಾತು, ಕರ್ನಾಟಕ ಸಬ್ ಫೆಡರೇಶನ್, ಸೀಮಾ ಚಿಹ್ನೆಗಳ ನಿರ್ಣಯ, ಗಡಿನಿರ್ಣಯ ತತ್ವಗಳು, ಕರ್ನಾಟಕ-ಕೇರಳ, ಇತ್ಯಾದಿ ಕನ್ನಡ ನುಡಿಗೆ, ನಾಡಿಗೆ ಸಂಬಂಧಿಸಿದ ಎಲ್ಲವುಗಳ ಕಡೆಗೂ ಅಧ್ಯಕ್ಷರು ದೃಷ್ಟಿ ಹರಿಸಿದ್ದಾರೆ; ಎಲ್ಲವುಗಳನ್ನೂ ಕ್ರಾಂತಿ ದೃಷ್ಟಿಯಿಂದಲೇ ಕಂಡ, ಮಿಕ್ಕವರೂ ಅದೇ ನೋಟದಿಂದ ನೋಡುವಂತೆ ಪ್ರೇರಣೆ ಕೊಟ್ಟಿದ್ದಾರೆ. ಅವರ ಭಾಷಣವು ಕಲ್ಮಷವಿದ್ದಲ್ಲಿ ತೊಳೆದು, 'ಕತ್ತಲೆಯಿದ್ದಲ್ಲಿ ಬೆಳಕು ಹಾಕಿ, ಎಲ್ಲವನ್ನೂ ಸ್ವಚ್ಛಗೊಳಿಸಿ 'ಸ್ಪಷ್ಟಗೊಳಿಸಿ ತೋರಿಸಿಕೊಟ್ಟಿದೆ ಹೊರತು, ಕನ್ನಡಿಗರ ಕೈ ಹಿಡಿದು ನಡೆಯಿಸಿಕೊಂಡು ಹೋಗುವಂತಿಲ್ಲವೇಕೆ? ಅವರೇ ಒಂದೆಡೆ ಕಾರಣಹೇಳಿದ್ದಾರೆ:"ಏನಾಗಬೇಕು,ಹೇಗಾಗಬೇಕೆಂಬ ನಿರ್ಣಯಮಾಡುವ ಸ್ಥಳವಿದಲ್ಲ. ಆದರೆ ಜನತೆಯ ಹೃದಯದಲ್ಲಿ ಈ ಬಗೆಯ ಅಪೇಕ್ಷೆಯೊಂದಿದೆಯೆಂಬುದನ್ನು ಒತ್ತಿ ಹೇಳಬೇಕಾಗಿದೆ; ಸ್ವಾಗತಿಸಬೇಕಾಗಿದೆ. ಅಲ್ಲದೆ ಪರಿಷತ್ತಿನ ಆಗುಹೋಗುಗಳ ಜೊತೆಗಿಂತ ಹೊತ್ತವರ ಲಕ್ಷ್ಯವನ್ನೀಕಡೆ ಎಳೆಯುವುದು ಅವಶ್ಯಕ

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೊರ್ವ ವ್ಯಕ್ತಿಯ ಕರ್ತವ್ಯವು ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೩೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣನಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲವೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

ಕನ್ನಡ ಸಾಹಿತ್ಯ ಸಮ್ಮೇಲನ

ಸಾಹಿತ್ಯಗೋಷ್ಠಿ
ವಿಜ್ಞಾನಗೋಷ್ಠಿ
ಮಹಿಳಾಗೋಷ್ಠಿ

ನೆಂದು ಕಂಡುಬರುತ್ತದೆ". ೩೦. ವರುಷಕ್ಕೊಮ್ಮೆ ನೆರೆಯುವ ಸಮ್ಮೇಲನವೆಂದರೆ, ಕನ್ನಡ ಸಾಹಿತ್ಯ ದೇಗುಲದ ಒಂದು ವಾರ್ಷಿಕೋತ್ಸವ-ಆಗ ಧ್ವಜವನ್ನೇರಿಸುವಂತೆ ಅಧ್ಯಕ್ಷರನ್ನೇರಿಸಿ, ಇಳಿಸಿಕೊಳ್ಳಲಾಗುತ್ತದೆ ಆ ಮೇಲಿನ ನಿತ್ಯಪೂಜೆಯವರು ಬೇರೆಯೇ-ಅವರೇ ಧ್ವಜದ ಗೌರವಕ್ಕನುಗುಣವಾಗಿ ವರ್ತಿಸಿದರಾದೀತು-ಇದೇ ಕ್ರಮ ನಂದಾದಲ್ಲಿ ಹಾಗಾದರೂ ಆಗಲಿ!

ಇತರ ಭಾಷಣಗಳು

ಸ್ವಾಗತಾಧ್ಯಕ್ಷರಾದ ಶ್ರೀ ಧರ್ಮಸ್ಥಳ ಹೆಗ್ಗಡೆಯವರ ಭಾಷಣವು ವಿನಯ, ಮಾಧುರ್ಯದಿಂದ ತುಂಬಿದ್ದು ಸ್ವಾಗತೋಚಿತ ಪರಿಚಯಗಳನ್ನೆಲ್ಲಾ ಮಾಡಿಕೊಟ್ಟಿತ್ತು. ದಕ್ಷಿಣಕನ್ನಡ ಜಿಲ್ಲೆಯ ಪ್ರಕೃತಿ ಸೌಂದರ್ಯ, ಮತ್ತಲ್ಲಿಯ ಹಿಂದಿನ ಇಂದಿನ ಕಲೆ, ಸಾಹಿತ್ಯ, ಸಿರಿ, ಉದ್ಯಮ, ಸಂಪತ್ತುಗಳ ಗುರುತಾರ್ಥಗಳು ಅದರಲ್ಲಿ ಒಂದಿದ್ದುವಲ್ಲದೆ ಕನ್ನಡ ಏಕೀಕರಣದ ಆವಶ್ಯಕತೆ, ಭಾಷೆ, ಸಾಹಿತ್ಯಗಳ ರೂಪು ಮಾರ್ಪಡದ ಕುರಿತೂ ಮನನೀಯಾಂಶಗಳಿದ್ದುವು.

ಸಮ್ಮೇಲನವನ್ನು ಉದ್ಘಾಟಿಸಿದ ನ್ಯಾಯಮೂರ್ತಿ ಜಾಹಗೀರದಾರರು ಸಾಹಿತ್ಯದ ಗುರಿ ಮತ್ತು ಗತಿ ಬದಲಾವಣೆಗಳನ್ನು ತಿಳಿಸಿ, "ಪಾಶ್ಚಿಮಾತ್ಯ ದೇಶಗಳಲ್ಲಿ ಯುದ್ಧಪೂರ್ವ ಸಾಹಿತ್ಯ, ಯುದ್ಧೋತ್ತರ ಸಾಹಿತ್ಯವೆಂಬ ಭಾಗಗಳನ್ನಾಗಿ ಮಾಡುವುದುಂಟು. ನಾವು ಸ್ವಾತಂತ್ರ್ಯಪೂರ್ವ ಸಾಹಿತ್ಯ, ಸ್ವಾತಂತ್ರ್ಯೋತ್ತರ ಸಾಹಿತ್ಯ ಎಂದು ಭಾಗಗಳನ್ನು ಮಾಡಬಹುದು" ಎಂದು ಕಾರಣ ಕೊಟ್ಟು ವಿವರಿಸಿದರು. ಸಾಹಿತ್ಯದ ಪ್ರಗತಿಗಾಮಿತ್ವವನ್ನು ತೋರಿಸಿಕೊಟ್ಟು, ತರುಣ ಸಾಹಿತಿಗಳು ಶಾಸ್ತ್ರೀಯ ಮತ್ತು ವೈಜ್ಞಾನಿಕ ಪ್ರಕಾರಗಳ ಸಾಹಿತ್ಯ ನಿರ್ಮಾಣದ ಕಡೆಗೆ ವಿಶೇಷ ಗಮನ ಕೊಡಬೇಕೆಂದು ಹುರಿದುಂಬಿಸಿ, ಕರ್ನಾಟಕದ ಏಕರೂಪ, ಮತ್ತು ಅದಕ್ಕಾಗಿ ಒಕ್ಕಟ್ಟಿನಿಂದ ದುಡಿಯಬೇಕಾದ ಆವಶ್ಯಕತೆಯನ್ನು ಒತ್ತಿಹೇಳಿದರು.

ವಸ್ತುಪ್ರದರ್ಶನವನ್ನು ಉದ್ಘಾಟನೆ ಮಾಡಿದ ಶ್ರೀಮದೀಶ್ವರಾನಂದ ಭಾರತಿ ಶ್ರೀಪಾದಂಗಳವರು "ಇದುವರೆಗೆ ನಮ್ಮ ಸ್ವಾಮ್ಯವನ್ನು ಬಿಕ್ಕಟ್ಟುಗಳಿಗೆಲ್ಲ ವಿದೇಶೀ ಆಡಳಿತೆಗಾರರನ್ನು ಹೊಣೆ ಮಾಡಲು ಸಾಧ್ಯವಿತ್ತು. ಇನ್ನು ಎಲ್ಲಕ್ಕೂ ನಾವೇ ಹೊಣೆಗಾರರಲ್ಲವೆ? ಎಲ್ಲಿ ನೋಡಿದರೂ ಅಶಾಂತಿ, ಅವಿಶ್ವಾಸ, ಅಧರ್ಮ, ಕ್ಷಾಮಗಳ ತಾಂಡವ! ಇವನ್ನು ಹೋಗಲಾಡಿಸಿ ಶಾಂತಿ ವಿಶ್ವಾಸವನ್ನು ನೆಲೆಗೊಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ"ವೆಂದರು. ಇದಕ್ಕಾಗಿ ಜನರ ಮನೋವೃತ್ತಿಯಲ್ಲೇ ಕ್ರಾಂತಿಯಾಗಬೇಕೆಂದರು. ತರುಣರು ನಾಡನುಡಿಯ ಸೇವೆಯನ್ನು ಇನ್ನೂ ಹೆಚ್ಚಾಗಿ ಕೈಕೊಳ್ಳಲಿ ಎಂದು ಹಾರೈಸಿ ತುಳುವರು — ಕನ್ನಡಿಗರು ಎಂಬ ಭೇದ ನಿರ್ಮಿಸಲು ಹವಣಿಸುತ್ತಿರುವ ಹೊರಗಿನವರೂ ತಮ್ಮ ಲಕ್ಷ್ಯವನ್ನು ಇತರ ಉತ್ತಮ ರಚನಾತ್ಮಕ ಕಾರ್ಯಗಳತ್ತ ಹರಿಸಲಿ ಎಂದು ಕೋರಿ, "ಕರ್ನಾಟಕವು ಬಹುಬೇಗನೆ ಸ್ವಾಯತ್ತ ಏಕತಂತ್ರ ಪ್ರಾಂತ್ಯವಾಗಿ ವಿಜಯನಗರದ ಗತ ವೈಭವವು ಕನ್ನಡ ದೇವಿಗೆ ಪುನಃ ಪ್ರಾಪ್ತವಾಗಲಿ" ಎಂದರು.

ಸಾಹಿತ್ಯಗೋಷ್ಠಿ

'ಶ್ರೀರಂಗ'ರು (ಶ್ರೀ ಆರ್. ವಿ. ಜಾಹಗೀರ್‌ದಾರ್) ಅಧ್ಯಕ್ಷರಾದುದರಿಂದ ಈ ಬಾರಿಯ ಸಾಹಿತ್ಯ ಗೋಷ್ಠಿಗೆ ಕಳೆಯೇರಿದ್ದಿತು. ಶ್ರೀ ರಂಗರ 'ಕೈಗುಣ' ಕರ್ನಾಟಕಕ್ಕೆಲ್ಲಾ ಚೆನ್ನಾಗಿ ಗೊತ್ತು. ದುಷ್ಕೃತ್ಯಗಳನ್ನು ಅಣಕಿಸಿ ಅಲ್ಲಗಳೆಯುವುದರಲ್ಲಿ-ಜಡ ಸ್ವಭಾವವನ್ನು ಕೆಣಕುವುದರಲ್ಲಿ-ಅಗ್ರಗಣ್ಯರು ಮಾತ್ರವಲ್ಲ, ಆತ್ಮರಂಜನೆ ಹೊಂದುವ ಜನ ಇವರು. ಇಂಥವರು 'ಗೋಷ್ಠಿ'ಯ ಅಧ್ಯಕ್ಷರಾಗಿ ಒಳಗಣ್ಣನ್ನು ತೆರೆಯಿಸಿದ್ದಾರೆ. ನಮ್ಮಲ್ಲಿರುವ ವಿನುರ್ಶೆಯ ಮತ್ತು ವಿವೇಕದ ಅಭಾವವನ್ನು ಚುಚ್ಚು ಮಾತುಗಳಿಂದ ತೋರಿಸಿಕೊಟ್ಟಿದ್ದಾರೆ. 'ಒಂದೆರಡು ಸಂಗತಿಗಳನ್ನು ಹೊರತುಪಡಿಸಿದರೆ ಮಿಕ್ಕ ದೃಷ್ಟಿಯಲ್ಲಿ ಇಂದಿನ ಕನ್ನಡ ಸಾಹಿತ್ಯಕ್ಕೂ ಹಿಂದುಸ್ತಾನಕ್ಕೂ ಯಾವ ಸಂಬಂಧವೂ ಇಲ್ಲ' "ನಮ್ಮ ಇಂದಿನ ಸಾಹಿತ್ಯಗಳನ್ನು ಹಿಂದುಸ್ತಾನದ ಸಾಹಿತ್ಯಗಳೊಡನೆ ಹೋಲಿಸಿದಾಗ ಅಷ್ಟೊಂದು ಯೋಗ್ಯತೆಯುದೆನಿಸಲಿಕ್ಕಿಲ್ಲ; ಪ್ರಜಾರದ ನಮ್ಮ ಸಂಘಟನೆಯಲ್ಲಿ ಬುದ್ಧಿವಂತಿಕೆ ಇರಲಿಲ್ಲ" "ನಮ್ಮ ಸಾಹಿತ್ಯದ ಬೆಳವಣಿಗೆ ವಿವಿಧವಾಗಿದೆ; ಗಾತ್ರ ಶಕ್ಯಮಟ್ಟಿಗೆ ವಿಪುಲವೂ ಆಗಿದೆ ಆದರೆ ಇದೆಲ್ಲ ಸ್ಥೂಲರೂಪವಾಗಿ ನೋಡಿದಾಗ ಮಾತ್ರ; ಸೂಕ್ಷ್ಮವಾಗಿ ನೋಡಿದಲ್ಲಿ ನಮ್ಮ ಸಾಹಿತ್ಯದಲ್ಲಿ ಗುಣವೃದು ಇಲ್ಲ, ಎಷ್ಟರ ಮಟ್ಟಿಗೆ ಇಲ್ಲ, ಎಂಬುದು ಸ್ಪಷ್ಟವಾಗುವುದು" "ಇಪ್ಪತ್ತು ವರ್ಷ ಮುಂಚೆನಿಂದ ಬರೆಯುತಿದ್ದವರೆ ಇಂದು ಬರೆಯುತಿದ್ದಾರೆ; ಅವರು ಇಪ್ಪತ್ತು ವರುಷಗಳ ಮುಂಚೆ ಬರೆದಂತೆ ಮತ್ತು ಬರೆದದ್ದನ್ನೆ ಬರೆಯುತ್ತಲಿದ್ದಾರೆ; ಹೊಸತಾಗಿ ಬರುವವರೆಲ್ಲ ಹೆಚ್ಚಾಗಿ ಮಾಸ ಪತ್ರಿಕೆಯ ಸಾಹಿತಿಗಳು'. 'ನಮ್ಮಲ್ಲಿ ಕವಿತೆಗಳಿವೆ, ಕಾವ್ಯ ಇಲ್ಲ. ಮಹಾಕಾವ್ಯವನ್ನು ಬರೆಯಬಲ್ಲ ಪ್ರತಿಭೆಯ ಕವಿ ನಮ್ಮಲ್ಲಿಲ್ಲ'—ಮುಂತಾದ ಅವರ ಚಾಣ್ನುಡಿಗಳಲ್ಲಿ ನಿರ್ದಾಕ್ಷಿಣ್ಯವಿದ್ದರೂ ನೀತಿಯಿದೆ. ಸಾಹಿತ್ಯ ಆಸ್ಥಾನದ (Academy of Kanrada Literature) ಏರ್ಪಡಬೇಕು-ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಅಖಿಲ ಕರ್ನಾಟಕಕ್ಕೆ ಪ್ರಾತಿನಿಧಿಕವಾಗಿ ಒಂದು ನಿಯತ ಕಾಲಿಕೆಯನ್ನು ನಾವು ಪ್ರಕಟಿಸಬೇಕು-ನಮ್ಮಲ್ಲಿಯ ಪ್ರಕಾಶಕರು ಮತ್ತು ಗ್ರಂಥಮಾಲೆಗಳ ಸಂಚಾಲಕರು ಸ್ಥಾನಿಕ ಅಥವಾ ಪ್ರಾದೇಶಿಕ 'ತಜ್ಞ ಸಮಿತಿ'ಗಳನ್ನು ರಚಿಸಿಕೊಂಡು ಗ್ರಂಥ ಪ್ರಕಾಶನ ಮಾಡಬೇಕು—ಎಂಬ ಮೂರು ಸೂಚನೆಗಳನ್ನು ಅಧ್ಯಕ್ಷಸ್ಥಾನದಿಂದ ಶ್ರೀ ರಂಗರಿತ್ತಿದ್ದಾರೆ.

ಸಾಹಿತ್ಯಗೋಷ್ಠಿಯ ಸ್ವಾಗತಾಧ್ಯಕ್ಷ, ಸರಳ ಕವಿ ಶ್ರೀ ಮುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರ ಸ್ವಾಗತ ಪದ್ಯ ಮತ್ತು ಭಾಷಣದಲ್ಲಿ ಉಪಚಾರ ಮಾಧುರ್ಯವಿತ್ತು. ಕಾರ್ಯದರ್ಶಿ ಶ್ರೀ. ಬಿ. ಶಂಕರ ಭಟ್ಟರ ಚಾಲಕತ್ವವು ಪರಿಣಾಮಕಾರಿಯಾಗಿದ್ದಿತು.

ಉಳಿದೆರಡು ಗೋಷ್ಠಿಗಳು

ವಿಜ್ಞಾನಗೋಷ್ಠಿಯ ಅಧ್ಯಕ್ಷ ಪ್ರೊ. ಪಡುಕೋಣೆ ರಮಾನಂದರಾಯರ ಉಪನ್ಯಾಸವು ವಿಚಾರೋದ್ದೀಪಕವಿದ್ದಿತು. ಅದರ ಸ್ವಾಗತಾಧ್ಯಕ್ಷ ಶ್ರೀ ಹೊಸಬೆಟ್ಟು ರಾಮರಾಯರು ತಮ್ಮ ಪಾಲಿನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದರು. ಮಹಿಳಾಗೋಷ್ಠಿಗೆ ಬೆಂಗಳೂರಿನ ಶ್ರೀಮತಿ ಎಂ ಆರ್. ಲಕ್ಷ್ಮಮ್ಮ ಅಧ್ಯಕ್ಷೆಯಾಗಿ ಕನ್ನಡತಿಯರ ಕರ್ತವ್ಯವೇನೆಂಬುದನ್ನು ಕಾಲೋಚಿತವಾಗಿ ವಿವರಿಸಿದರು. ಕಾರ್ಯದರ್ಶಿ ಕಾಸರಗೋಡಿನ ಶ್ರೀಮತಿ ಸೀತಾ ಅವರ ಸ್ವಾಗತ ವ್ಯವಸ್ಥೆಯು ನಾಜೋಕಿನದಿತ್ತು.

ಕಾಸರಗೋಡಿನ ಸಾಹಿತ್ಯ ಸಮ್ಮೇಲನದ ಸವಿ, ಚಿರ ನೆನಪಿನ ಹೊತ್ತಿಗೆಯಾಗಿ ಪ್ರಕಟಗೊಂಡ "ತೆಂಕನಾಡು" ಸಂಪಾದಕರಾದ ಶ್ರೀಗಳಾದ ನೀರ್ಚಾಲು ಕೃಷ್ಣ ಭಟ್ಟ, ಕಯ್ಯಾರ ಕಿಂಞಣ್ಣ ರೈ, ಪಿ. ಕೆ. ನಾರಾಯಣ, ಕೆ. ಶ್ರೀನಿವಾಸ ಶರ್ಮರ ಕಲಾನೈಪುಣ್ಯ ಸಾಹಿತ್ಯ ಜ್ಞಾನ, ಶ್ರಮ, ಸಾಹಸಗಳು ಕೊಂಡಾಡತಕ್ಕವಿವೆ. ಸ್ವಯಂಸೇವಕ ನಾಯಕ ಶ್ರೀ. ತುಕಾರಾಮ ಭಂಡಾರಿ, ವಿವಿಧ ವಿನೋದಾವಳಿಗಳ ಕಾರ್ಯದರ್ಶಿ ಶ್ರೀ. ಕೆ. ಯಸ್. ಶರ್ಮ, ಕಾರ್ಯಾಲಯ ಕಾರ್ಯದರ್ಶಿ ಶ್ರೀ ಪಿ. ಕೆ. ನಾರಾಯಣ, ಸ್ವಾಗತ ಸಮಿತಿ ಸದಸ್ಯರು, ಸ್ವಯಂಸೇವಕರು, ಇತರ ಎಲ್ಲಾ ವಿಧದ ಸಹಾಯಕರು, ಇವರೆಲ್ಲಾ ಕಾಸರಗೋಡಿನ ಕನ್ನಡೋತ್ಸವಗಳ ಸ್ಮರಣೆಯೊಂದಿಗೆ ನೆನಪಿಗೆ ಬರತಕ್ಕವರು. ಕನ್ನಡಿಗರೆಲ್ಲರ ಸಹಕಾರ, ಸಹಭಾಗಿತ್ವದಿಂದ ಕಾಸರಗೋಡಿನಲ್ಲಿದ್ದ 'ಸಿರಿಗನ್ನಡಂಗೆಲ್ಗೆ' ಘೋಷವು ಮಾರ್ದನಿಗೊಡುವಂತಾಯಿತು।

ಏಕೀಕರಣ ಸಮ್ಮೇಳನ

ಅತಿ ಮುಖ್ಯವಾದ ಹಾಗೂ ಅಲ್ಲಾವ ನಿರ್ಧಾರವಾಯಿತು ಎಂಬುದನ್ನು ಕನ್ನಡಿಗರು ಆತುರಪೂರ್ವಕ ಕಾಯುತ್ತಿರಬಹುದಾದ ಸಮ್ಮೇಳನವೆಂದರೆ ಕಾಸರಗೋಡಿನ 'ಮುದ್ದಣ್ಣ ನಗರ'ದಲ್ಲಿತಾ. 29-12-47ರಲ್ಲಿ ಸೇರಿದ್ದ ಕರ್ನಾಟಕ ಏಕೀಕರಣ ಸಮ್ಮೇಳನ. ಇದರ ಅಧ್ಯಕ್ಷರಾಗಿ ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿ ಶ್ರೀ ಎ. ಬಿ ಶೆಟ್ಟಿಯವರು ನಿಯೋಜಿಸಲ್ಪಟ್ಟಿದ್ದರು. ಆದರೆ ಭಾರತ ಸರಕಾರದ ಆರೋಗ್ಯ ಮಂತ್ರಿ ಶ್ರೀಮತಿ ಅಮೃತ ಕೌರರು ಇದೇ ಕಾಲದಲ್ಲಿ ಮದ್ರಾಸಿಗೆ ಭೇಟಿಯಿತ್ತಿರುವುದರಿಂದ ಶ್ರೀ ಶೆಟ್ಟರಿಗಲ್ಲಿಂದ ಹೊರಡುವುದಸಾಧ್ಯವಾಯಿತೆಂದು ತಿಳಿದುಬರುತ್ತದೆ. ಸ್ವಾಗತಾಧ್ಯಕ್ಷರು ಶ್ರೀ ಕೆ. ಆರ್. ಕಾರಂತ. ಎಂ. ಎಲ್. ಎ, ಇವರು. ಸಮ್ಮೇಳನವನ್ನು ಮೈಸೂರಿನ ನಡುಗಾಲ ಸರಕಾರದ ಸದಸ್ಯ ಶ್ರೀ ಯಚ್. ಸಿದ್ದಯ್ಯನವರು ಉದ್ಘಾಟನೆ ಮಾಡಿದರು. ಕರ್ನಾಟಕ ಏಕೀಕರಣವು ಈಗ ಎಲ್ಲಕ್ಕಿಂತ ಮುಖ್ಯ; ಅದೀಗ ಪ್ರತಿಯೊಬ್ಬ ಕನ್ನಡಿಗನ ಹೃದಯ ಮತ್ತು ಬಾಯಿಯಲ್ಲಿರುವಂತೆಯೇ ಪ್ರಾಂತಿಕ ಶಾಸನಸಭೆಗಳು, ಕೇಂದ್ರಶಾಸನ ಸಭೆ ಮತ್ತು ಘಟನಾ ಸಮಿತಿಯಲ್ಲೂ ಕೇಳಿಬರುತ್ತಿರುವ ಪ್ರಶ್ನೆಯಾಗಿದೆ. ಆದ್ದರಿಂದಲೇ ಕಾಸರಗೋಡಿನ ಸಾಹಿತ್ಯ ಸಮ್ಮೇಳನ ಮತ್ತದರ ಉಪಾಂಗಗಳಾದ ವಿವಿಧ ಗೋಷ್ಠಿಗಳ ಪ್ರತಿಯೊಂದು ಉಪನ್ಯಾಸದಲ್ಲೂ ಈ ವಾದವೇ ಮುಖ್ಯಾಂಗವಾಗಿ ಸೇರಿಕೊಂಡಿದ್ದಿತು. ಅಂತಹ ಏಕೀಕರಣದ ಸಮ್ಮೇಳನಕ್ಕೆ, ಹಾಗೆ ಏಕೀಕರಣ ಹೊಂದತಕ್ಕ ಭಾಗಗಳಲ್ಲಿ ಅತಿ ದೊಡ್ಡದಾದ ಮೈಸೂರು ಸಂಸ್ಥಾನದ ಓರ್ವ ಮಂತ್ರಿಯು ಉದ್ಘಾಟಕರಾಗಿ, ಒತ್ತು ಭಾಗದವರೂ ಏಕೀಕರಣದ ಕುರಿತು ಸತತ ಪ್ರಯತ್ನಮಾಡುತ್ತಿರುವವರೂ ಆದ ಮಾಜೀ ಮಂತ್ರಿ ಶ್ರೀ. ಕೆ. ಆರ್. ಕಾರಂತರು ಸ್ವಾಗತಾಧ್ಯಕ್ಷರಾಗಿ ದೊರೆತ ಲಕ್ಷಣವೊಳ್ಳೆಯದು: ಕೆಲಸ ನಡೆದೀತೆಂಬುದಕ್ಕೊಂದು ಭರವಸೆಯಿದು. ಏಕೀಕರಣಗೊಳ್ಳವ ಕುರಿತು ಮೈಸೂರು ಹೇಳುವದೇನು? ಎಂಬ ಪ್ರಶ್ನೆಯು ಈ ಸಂದರ್ಭದಲ್ಲಿ ಅತಿ ಮುಖ್ಯವಿರುವುದರಿಂದ ಮೈಸೂರು ಮಂತ್ರಿ ಶ್ರೀ. ಯಚ್. ಸಿದ್ದಯ್ಯನವರ ಮಾತುಗಳು ಇಲ್ಲಿ ಬಂದಿವೆ.

(೮ನೇ ಪುಟ ನೋಡಿರಿ)

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಮನ್ನಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ-

ದಿ ವಿಜಯಾ ಬ್ಯಾಂಕ್,
ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಞಂಗಾಡು, ಮಡಿಕೇರಿ ಮತ್ತು ಮುಂಬಯಿ.

THE VIJAYA BANK, LIMITED.

The Canara Banking Corporation Limited.

(Incorporated in British India)

Estd: 1906.

Head Office: **UDIPI**, S. India.

ANNOUNCEMENT.

A branch of the BANK has been opened at High Road,

TRICHUR. (Cochin State.)

on 28th November, 1947.

ಗುರುವಾರ, ಉಡುಪಿ, ೧-೧-'೪೮

1948

ಹೊಸ ಇಸವಿ ಬಂತು; ಎಲ್ಲರ ಆಯುಷ್ಯದ ಒಂದು ವರುಷ ಕಳೆದು ಹೋಯಿತು. ಯಾವುದಕ್ಕಾದರೂ ತಡೆಯೆಂಬುದಿದೆ; ಎಂತಹದನ್ನಾದರೂ ತಡೆದು ನಿಲ್ಲಿಸಬಹುದಾಗುವ ಶೋಧ, ಸಾಹಸ ನಡೆಯುವುದಿದೆ. ಕಾಲಚಕ್ರದ ಸುತ್ತೊಂದೇ ಇದಕ್ಕಪವಾದ. ಅದರ ಆದ್ಯಂತ್ಯ ಅಗೋಚರ. ಪ್ರಪಂಚದ ಪ್ರತಿಯೊಂದೂ ಒಂದಲ್ಲೊಂದರ ಆಧಾರ, ಆಶ್ರಯದಲ್ಲೇ ಇರಬೇಕು—ಆದರೆ ಎಲ್ಲವೂ ಕಾಲಾಧೀನ. ಕೊನೆಯಗುರಿ—ಮೂಲತತ್ವ—ಇತ್ಯಾದಿ ನಿರ್ಣಯಗಳೇನೋ ಮನುಷ್ಯರಿಂದಾಗುವದಿದೆ; ಆದರೆ ಎಲ್ಲವೂ ಕಾಲದ ಕೈಯಲ್ಲಿದೆ. ಮನುಷ್ಯನ ಕೈಮೀರಿದ ಎಷ್ಟೆಷ್ಟೋ ಈ ಕಾಲದ ಕೈಯಿಂದಾಗಿ ಹೋಗುತ್ತಾನೆ. ಇದು ಗೊತ್ತಿರುವುದರಿಂದಲೇ ನಮ್ಮ ನಿರೀಕ್ಷೆಗೆ, ಸಾಧನೆಗೆ ಸಿಕ್ಕಿದ ಸಂಪತ್ತು ಆಪತ್ತು, ಸುಖದುಃಖ, ಅಭ್ಯುದಯ ಅವನತಿಗಳಿಗಾಗಿ ಕಾಲವನ್ನೇ ಹೊಗಳುತ್ತೇವೆ, ಅಥವಾ ತೆಗಳುತ್ತೇವೆ. ಈ ಕಾಲ ಶರಧಿಯ ಅನಂತ ಅಲೆಗಳಲ್ಲೊಂದು ಲೀನವಾಗಿ ಹೊಸತೊಂದು ಈಗ ತಾನೇ ಎದ್ದಿದೆ.

ನಿನ್ನೆಗಿಂತ ಒಂದು ವರುಷ ಹಿರಿಯ ಪ್ರಪಂಚ ಈ ದಿನದ್ದು. ಪ್ರಪಂಚದ ಆಯುಷ್ಯದ ಕೊನೆಯೆಲ್ಲಿಯೋ ತಿಳಿದಿಲ್ಲ; ಆದರೆ ಪ್ರಾಪಂಚಿಕರ ಅವಧಿ ಬಹಳ ಕಡಿಮೆ. ಆದ್ದರಿಂದ ಕಳೆದು ಹೋದ ಒಂದು ವರುಷವು ಮನುಷ್ಯಾಯುಷ್ಯದಲ್ಲಿ ಲೆಕ್ಕಿಸತಕ್ಕ ಭಾಗ. ಈ ದೃಷ್ಟಿಯಲ್ಲಿ 1947 ಸಾರ್ಥಕಗೊಂಡು ಸಂದಿತೇ? 1947ರಲ್ಲಾಗಬೇಕೆಂದು ಬಯಸಿದ್ದುದೆಲ್ಲವೂ ಆಗಿರುವದೇ? ನಿಜಕ್ಕೂ ಇಲ್ಲ. ಆದ್ದರಿಂದ 1947ನೇ ಇಸವಿ ಮಾನವ ಜನಾಂಗಕ್ಕಾದ ನಷ್ಟ, ದುರ್ವ್ಯಯ!

ಪ್ರಥಮತಃ ಭಾರತವನ್ನು ನೋಡೋಣ. ಅಲ್ಲೋಲ ಕಲ್ಲೋಲತೆಯಲ್ಲಿ ಕೂಡಾ ಸಿಪಾಯಿಗಳ ಸ್ವಾತಂತ್ರ್ಯ ಹೋರಾಟದ 1857ಕ್ಕಿಂತಲೂ ಈ 1947ನೇ ಇಸವಿಯು ಭಾರತದ ಚರಿತ್ರೆಯಲ್ಲಿ ಒಡೆದು ತೋರುವಂತಹದೇ; ಹಕ್ಕು ಸಂಪಾದನೆಯ ದೃಷ್ಟಿಗೆ ಈ ಇಸವಿಗೆ ಅನನ್ಯಸ್ಥಾನವಿದೆ. ಕಳೆದೆರಡು ಶತಮಾನಗಳಿಂದ ಕಳಕೊಂಡಿದ್ದ ಅಮೂಲ್ಯ ವಸ್ತು—ಭಾರತದ ಮಾಂಗಲ್ಯಸೂತ್ರವೇ ಎನ್ನಬಹುದು—ಮರಳಿ ಕೈಸೇರಿದ ಇಸವಿಯಿದು. ಆದರೆ ಆ ಭಾಗ್ಯದೊಂದಿಗೆ ಸುಖವೂ ಬಂದಿತ್ತೆ? ಇಲ್ಲ; ಇಡೀ ಇಸವಿಯೇ ರಕ್ತ ಪ್ರವಾಹದಲ್ಲಿ ತೇಲಿ ಹೋಯಿತು. ಬೇರೆಲ್ಲಿ ಶಾಂತಿಯಿತ್ತು? ಏಶ್ಯಾಖಂಡವು ಕಳೆದ ಇಡೀ ವರುಷ ಕುದಿಯುತ್ತಲೇ ಇತ್ತು; ಈಗ ಆ ಕುದಿತವೇರಿದೆ. ಪೆಲೆಸ್ತೈನ್, ಚೈನಾ, ಇಂಡೋನೇಶಿಯಾ, ಇಂಡೋಚೈನಾಗಳ ರಕ್ತಪ್ರಳಯಗಳನ್ನು ಈಗಲೂ ಕಾಣುತ್ತಿದ್ದೇವೆ; ಅವುಗಳ ಅಂತ್ಯ ಹೇಗೆ ಮತ್ತು ಯಾವಾಗ ಎಂದು ಆತುರದಿಂದ ಕಾಯುತಿದ್ದೇವೆ. ಯುರೋಪಾದರೂ ನೆಮ್ಮದಿಯಿಂದಿಲ್ಲ. ರಶ್ಯಾ ಮತ್ತು ಅಮೇರಿಕ ಬ್ರಿಟನುಗಳೊಳಗೆ ಇಂದು ಮೇಲಾಟ, ನಾಳೆ ಏರಾಟ ಎಂಬಂತಿದೆ! ಒಟ್ಟಿನ ಮೇಲೆ ಎರಡನೇ ಲೋಕ ಮಹಾಯುದ್ಧ ಮುಗಿದರೂ ಅದರ ನಂಜು ಇಳಿದಿಲ್ಲ. ಲೋಕದ ಆರೋಗ್ಯ ಸಾಧನೆಯಾಗುವಂತಿದ್ದರೆ 1947ರಲ್ಲಿ ಅದಾಗಬೇಕಿತ್ತು; ಆಗಿಲ್ಲ. ಆದ್ದರಿಂದ ಭರವಸೆ ಮೂಡುವುದಿಲ್ಲ; ನೆಮ್ಮದಿಯಿಂದಿರುವುದು ಅಸಾಧ್ಯ. ಶಾಂತಿ, ಸೌಖ್ಯ, ಸಮಾನತೆ, ಅಭಿವೃದ್ಧಿ—ಇವು ಇನ್ನೂ ತಮ್ಮ ಸ್ಥಾನಗಳಿಗೇರಿಲ್ಲ. ಧನಾಧಿಕಾರಲಾಲಸೆ, ಸ್ವಾರ್ಥ, ಮೇಲು ಕೀಳು ಭಾವ, ಸಂಕುಚಿತ ಧೋರಣೆ— ಇವು ಆ ಸ್ಥಾನಗಳನ್ನು ಇದು ವರೆಗೂ ಬಿಟ್ಟು ಕೊಡದಿರುವುದೇ ಕಾರಣ. ಇವುಗಳನ್ನಿಳಿಸಿ, ಅವುಗಳನ್ನೇರಿಸುವ ಕಡೆಗೆ ಯಾರೂ ಸಾಕಷ್ಟು ಲಕ್ಷ್ಯ ಹರಿಸಿಲ್ಲ.

ಹೊಸ ವರುಷದಲ್ಲಿ ಈ ಕೆಲಸವನ್ನು ಮಾಡಿ ಮುಗಿಸುವೆವೆಂಬುದೇ 1948ನೇ ಇಸವಿಯ ಪ್ರತಿಜ್ಞೆಯಾಗಲಿ. ಕಠೋರತೆಯ, ಕಲ್ಮಷದ ಪರಮಾವಧಿಯನ್ನು 1947 ಪ್ರದರ್ಶಿಸಿ ಮುಗಿಸಿದೆ. ಆ ವಿಷವನ್ನೆಲ್ಲಾ ತಾನೇ ಹೀರಿ, ಕಳೆದ ವರುಷ ಉಪಕಾರಮಾಡಿದೆ; ಇನ್ನದರ ಅಂಶ ಬಾಕಿಯಿಲ್ಲವೆಂದು ಮನೋಬಲದಿಂದಲೇ ತೀರ್ಮಾನಿಸೋಣ. ಸರ್ವರ ಶಾಂತಿ, ಸುಖ, ಸಮಾನತೆ, ಅಭಿವೃದ್ಧಿಯನ್ನು 1948 ಸಾಧಿಸಲಿ; ಹೊಸ ವರುಷ ಶುಭದಾಯಕವಾಗಲಿ.

ಹಳ್ಳಿಗರಲ್ಲಿ—

ಹಳ್ಳಿವಲಯಗಳ ಹಸುಗೆ ಪದ್ಧತಿಯಿಂದಾಗಿ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚಿನ ಗೊಂದಲವು ಹಳ್ಳಿಗರಲ್ಲಿದ್ದಿದೆ. ಪರಿಸ್ಥಿತಿಯನ್ನು ಸರಿಯಾಗಿ ತಿಳಿದುಕೊಂಡಲ್ಲಿ ಈ ಗಲಿಬಿಲಿಯು ಸಹಜವೆಂಬುದು ಯಾರಿಗಾದರೂ ಹೊಳೆಯದಿರದು. ಆದರೆ ಸರಕಾರದ ಲಕ್ಷ್ಯಕ್ಕಿದು ಬಂದಿರಬಹುದೇ? ನಮಗನುಮಾನವಿದೆ. ಸ್ವತಃ ಹಳ್ಳೀ ಜನತೆಯಿಂದಲ್ಲದೆ, ಈ ವಿಷಯವನ್ನು ಸರಕಾರದ ಮನಕ್ಕೆ ನಾಟಿಸಲು ಇತರರಿಂದಾಗುವಂತಿಲ್ಲ. ಆದ್ದರಿಂದ ಗ್ರಾಮನಿವಾಸಿಗಳೀಗ ಗಲಿಬಿಲಿಗೊಳ್ಳುವುದಲ್ಲ; ಕಾರ್ಯತತ್ಪರರಾಗಬೇಕು. ನಿಯಂತ್ರಣ ರದ್ದತಿಯ ರೀತಿನೀತಿಗಳನ್ನು ನಾವು ಕಳೆದ ವಾರ ಪ್ರಕಟಿಸಿದ್ದೇವೆ. ಸರಕಾರವು ಗ್ರಾಮಗಳನ್ನು ಹೆಚ್ಚಿನಂಶ ಖಾಲಿ ಮಾಡಿಯೇ ಕೈಬಿಟ್ಟಿರುವಾಗ ಗ್ರಾಮವಾಸಿಗಳ ಊಟಕ್ಕೇನು ಗತಿ? ಎಂಬ ಪ್ರಶ್ನೆಗೆ ಸರಕಾರದ ಉತ್ತರ ಬಂದಿದೆ. "ಆಹಾರ ಧಾನ್ಯಗಳ ಬೆಲೆಯು ನಿಶ್ಚಿತ ಧಾರಣೆಗಿಂತ ಏರಿದಾಗ ಮತ್ತು ಪರಿಸ್ಥಿತಿಯು ಮೇಲಿಂದ ಅಗತ್ಯತೋರಿದಾಗ ಧಾನ್ಯಗಳ ಸಂಗ್ರಹಗಳನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಡಿಸ್ಟ್ರಿಕ್ಟ ತಹಸೀಲ್ದಾರರಿಗಿಂತ ಕಡಿಮೆಯವರಲ್ಲದ ರೆವಿನ್ಯೂ ಅಧಿಕಾರಿಗಳಿಗೆಲ್ಲಾ ಕೊಡಲಾಗಿದೆ. ಅನುಕೂಲಸ್ಥರು ಧಾನ್ಯವನ್ನು ದಾಸ್ತಾನಿಟ್ಟುಕೊಳ್ಳದಂತೆ ಪ್ರತಿಬಂಧಿಸುವ ಸರಕಾರೀ ಶಾಸನ ಜಾರಿಯಲ್ಲಿರುವುದು. ಧಾನ್ಯ ಕಡಿಮೆಯಿರುವ ಜಿಲ್ಲೆಗಳಿಗೆ ಸ್ಥಿತಿಗತಿಗನುಗುಣವಾಗಿ ಸರಕಾರದಿಂದ ಧಾನ್ಯ ಸರಬರಾಯಿಯಾಗುವುದು. ಈ ಸರಬರಾಯಿಯ ಪ್ರಥಮಾಂಶವು ಕ್ರಮಬದ್ಧ ಹಸುಗೆ ಜ್ಯಾರಿಯಲ್ಲಿರುವ ಪೇಟೆಪಟ್ಟಣಗಳವರಿಗೆ ಮೀಸಲಿಡಲ್ಪಟ್ಟು ಆ ಮೇಲಿನ ಅಂಶವು ಧಾನ್ಯ ಕಡಿಮೆಯಿರುವ ಹಳ್ಳೀವಲಯಗಳಿಗೆ ಕೊಡಲ್ಪಡುವುದು. ಇಂತಹ ಹಳ್ಳೀಮೂಲೆಗಳಲ್ಲಿ ದಿನಕ್ಕೊಬ್ಬನಿಗೆ 8ಔನ್ಸಿನಂತೆ ಪ್ರತಿದಿನ ಕ್ರಮ್ಮ ಅಕ್ಕಿಮಾರುವಂತೆ 'ರಕ್ಷಣಾ ಅಂಗಡಿ'ಗಳನ್ನು ತೆರೆಯುವರೆ ಕಲೆಕ್ಟರರುಗಳಿಗೆ ಸೂಚನೆ ಹೋಗಿದೆ. ಬೇರೆಲ್ಲಿಯೂ ಅಕ್ಕಿ, ಧಾನ್ಯ ದೊರೆಯದಂತಾದ ಸಂದರ್ಭಗಳಲ್ಲಿ ಮಾತ್ರ ಇಂತಹ ಅಂಗಡಿಗಳನ್ನು ತೆರೆಯತಕ್ಕದ್ದು. ಅಗತ್ಯ ತೋರಿದಲ್ಲಿ ದೊಡ್ಡ ವರ್ಗದಾರರು ಇಂತಿಷ್ಟೇ ಅಕ್ಕಿ ಕೊಡತಕ್ಕದ್ದೆಂದು ವಿಧಿಸುವ ಹಕ್ಕನ್ನು ಕಲೆಕ್ಟರರುಗಳಿಗೀಯಲಾಗಿದೆ" ಹಸುಗೆ ಪದ್ಧತಿಯು ಅಕಸ್ಮಾತ್ತಾಗಿ ಜಾರಿಹೋಗಿಬಿಟ್ಟ ಇಡೀ ಜಿಲ್ಲೆಯ ಮೂಲೆಮೂಲೆಗಳಲ್ಲಿ ಎಲ್ಲವೂ ಅಸ್ತವ್ಯಸ್ತವಾಗಿರುವಾಗ ಮೇಲಿನ ವಿಧಾನಗಳಂತೆ ಕಲೆಕ್ಟರರು ಸರಿಯಾಗಿ ಪರೀಕ್ಷಿಸಿ ನೋಡುವುದರಲ್ಲೇ ಹೊತ್ತು ಕಳೆಯುವವರಲ್ಲಿ—ರೆವಿನ್ಯೂ ಖಾತೆಯ ಪದ್ಧತಿಯಂತೆ ಆಪೀಸ ವ್ಯವಹಾರದಿಂದ ಆ ವ್ಯವಸ್ಥೆ ನಡೆಯುವುದರೊಳಗೆ—ಜನಸಾಮಾನ್ಯರ ಹೊಟ್ಟೆಯ ಪಾಡು ಹೇಗಾಗುವುದೋ ಹೇಳುವುದಸಾಧ್ಯ. ಸರಕಾರದಿಂದ ಸಾಕಷ್ಟು ಪೂರೈಕೆಯಾದೀತೇ ಎಂಬ ಪ್ರಶ್ನೆ ಪ್ರತ್ಯೇಕವಿದೆ. ಆದರೆ ಎಲ್ಲವೂ ಹಳ್ಳೀ ಜನತೆಯ ಕೈಯಲ್ಲಿದೆ; ತಮಗಾಗಬೇಕಾದುದನ್ನು ಅನ್ಯರು ಮಾಡುವರು ಎಂದು ಕಾಯದೆ, ತಾವು ಮಾಡಿಕೊಳ್ಳುವೆವು ಎಂದು ಶಪಥತೊಟ್ಟು ಹಳ್ಳಿಗರು ಒಕ್ಕಟ್ಟಾಗಿ ಸಾಧಿಸಿದರೆ, ಸಂದರ್ಭವೆಂತಹದಿದ್ದರೂ ಅವರು ಗೆಲ್ಲಬಲ್ಲರು. ಆದ್ದರಿಂದ ಹಳ್ಳಿಗರು ಸಂಘಟನೆಗೊಳ್ಳಲಿ ಎಂದು ಮತ್ತೊಮ್ಮೆ ವಿಜ್ಞಾಪಿಸಿಕೊಳ್ಳುತ್ತೇವೆ.

In the Court of the Subordinate Judge of South Kanara.

O. S. No. 1361/947.

Between

Leela Shedthi -Plaintiff

Vs.

Ramayya Shetty & others -Defendants.

To

10th Defendant:- Kunhappa Shetty son of Kaveri Hengasu, residing in Kulai village of Mangalore Taluk.

Please take notice that the Plaintiff above named filed the above suit against you and others for a declaration that the suit properties belong to the Plaintiffs' family and for other reliefs and the same is posted to 19-1-'48 for your appearance. If you fail to appear on that date either in person or through a duly authorised pleader, the said suit will be decided in your absence.

(By order of the Court.)

(Sd). **S. Venkat Rao.**

Vakil for Plaintiff

Mangalore, 20-12-'47.

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. No. 311/1947

ರಾಘವ ಉಪಾಧ್ಯಾಯ - ವಾದಿ

ಲಕ್ಷ್ಮೀ ಹೆಂಗ್ಸು ಸಹಾ ಪ್ರತಿವಾದಿ

ಸದ್ರಿ ವ್ಯಾಜ್ಯದ 2ನೆ ಪ್ರತಿವಾದಿ ಪುತ್ತೂರು ತಾಲ್ಲೂಕು ಬಂಟ್ರಗ್ರಾಮದ ಆಳೇರಿಯಲ್ಲಿರುವ ಅಂತಕ್ಕೆ ಹೆಂಗ್ಸಿನ ಮಗ ಗುಡ್ಡಪ್ಪ ರೈಗಳಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ.

ಮೇಲ್ಕಂಡ ವ್ಯಾಜ್ಯದ ವಾದಿಯು ನಿಮ್ಮ ಮೇಲೆ ಹೂಡಾ ಮಾಡಿದ ಮೇಲಿನ ವ್ಯಾಜ್ಯಕ್ಕೆ ನಿಮ್ಮ ಹಾಜರಾತಿ ಬಗ್ಗೆ ತಾ. 16-1-1948ಕ್ಕೆ ಇಟ್ಟಿರುವುದರಿಂದ, ಆದ್ಯೆ ನಿಮ್ಮದೇನಾದರೂ ಆಕ್ಷೇಪಣೆ ಇದ್ರೆ ಸದ್ರಿ ದಿವ್ಸ 10ಗಂಟೆಗೆ ಸರಿಯಾಗಿ ಮುಜ್ಕೂರು ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ದ್ವಾರಾ ಹಾಜರಾಗಿ ಉಜರಪಡಿಸಿಕೊಳ್ಳಲಿಕ್ಕೆ ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ವ್ಯಾಜ್ಯ ತೀರ್ಮಾನಿಸಲಾದೀತು.

(Sd) C S Shastry

Vakil for plf

ಪುತ್ತೂರು, ತಾ 12-12 47

ಕಣ್ಣಿನ ಡಾಕ್ಟರು

ಎಲ್ಲಾ ತರದ ಕಣ್ಣಿನ ರೋಗಗಳನ ಬರೇ ಕುಡಿಯಲಿಕ್ಕೆ ಮಾತ್ರ ಮದ್ದು ಕೊಟ್ಟು ಗುಣಪಡಿಸುವರು. ಅಲ್ಲದೆ 6 ವರ್ಷದಿಂದ ಬಂದಾದ ಮೂತ್ರವನ್ನ ನೇಕ ತರದ ಮದ್ದಿನಿಂದಲೂ ರಬ್ಬ ಟ್ಯೂಬಿನಿಂದಲೂ ಕುಡಿಯಲಿಕ್ಕೆ ಮದ ಕೊಟ್ಟು 7ಗಂಟೆಯೊಳಗೇ ಹೋಗುವಂ ಮಾಡಿದ್ದಾರೆ. ಒಂದೇ ಕಿವಿ ಕೇಳುತ್ತಿ 53 ವರುಷದವರೊಬ್ಬರಿಗೆ ಹೀಗೆಯ ಕುಡಿಯಲಿಕ್ಕೆ ಮದ್ದು ಕೊಟ್ಟು ಎರಡೂ ಕಿವಿ ಕೇಳುವಂತೆ ಮಾಡಿದ್ದಾರೆ. ಬೇರೆ ದ್ದಿನಿಂದ ಗುಣವಾಗದವರು ಕೆಳಗಿನ ಲ್ಲಿಗೆ ಹೋಗಿ ಗುಣಪಡಿಸಿಕೊಳ್ಳಿ. ಸಮ ಬೆಳಗ್ಗೆ 9-30ರಿಂದ ಸಂಜೆ 5ಗಂಟೆ ತನಕ.

Dr. S. T. Soa

Eye specialist, F. C. J.

Court road Udipi, S.

★ ಹಿಂದೀ ಮುಸ್ಲಿಮರ ನಿರ್ಧಾರ ★

ಕಳೆದ ತಾ. 27. 28ರಲ್ಲಿ ಹಿಂದೀ ಕೇಂದ್ರದ ಮುಸ್ಲಿಂ ಸಮ್ಮೇಲನವು ಮೌಲಾನಾ ಅಬ್ದುಲ್ ಕಲಾಮ್ ಆಜಾದರ ಅಧ್ಯಕ್ಷತೆಯಲ್ಲಿ ಲಕ್ನೋವಿನಲ್ಲಿ ಸೇರಿದೆ. ಅಖಿಲ ಭಾರತದ ಸುಮಾರು 60ಸಾವಿರ ಮುಸ್ಲಿಮರು ಈ ಸಮ್ಮೇಲನದಲ್ಲಿ ಭಾಗಿಗಳಾಗಿದ್ದರು. ಮೌಲಾನಾ ಆಜಾದರು ಸ್ಪಷ್ಟವಾಣಿಯಲ್ಲಿ ಹಿಂದೀ ಮುಸ್ಲಿಮರಿಗೆ ಮಾರ್ಗದರ್ಶನ ಮಾಡಿಕೊಟ್ಟರು. "ಜಾತೀಯ ಸಂಸ್ಥೆಗಳಿಗೆ ರಾಷ್ಟ್ರದ ರಾಜಕೀಯ ಜೀವನದಲ್ಲಿ ಸ್ಥಾನವಿಲ್ಲ; ಮಾತ್ರವು ಅಪಾಯಕರ. ಆದ್ದರಿಂದ ಜಾತೀಯತಾರಹಿತ ಸಮಿತಿಯನ್ನು ರಚಿಸಿ ರಾಷ್ಟ್ರದ ವಾತಾವರಣವನ್ನು ತಿಳಿಗೊಳಿಸುವುದಕ್ಕೂ ಈ ಸಮ್ಮೇಲನದ ನಿರ್ಣಯಗಳನ್ನು ಅಸ್ತಿತ್ವಕ್ಕೆ ತರುವುದಕ್ಕೂ ನೋಡಬೇಕು" ಎಂದು ಮೌಲಾನಾರು ತಮ್ಮ ಅಧ್ಯಕ್ಷಭಾಷಣದಲ್ಲಿ ಸೂಚಿಸಿದರು. "ರಾಷ್ಟ್ರದ ಜಾತೀಯತಾ ಐಕ್ಯತೆಗೆ ಹೊಣೆಯಾಗಿರುವ ಮುಸ್ಲಿಂಲೀಗಿನ ಧೋರಣೆ ಅಥವಾ ನಾಯಕತ್ವ ಬದಲಾದ ಮಾತ್ರಕ್ಕೆ ಪರಿಸ್ಥಿತಿ ಬದಲಾಗದು. ಎಲ್ಲಾ ಜಾತೀಯ ಸಂಸ್ಥೆಗಳನ್ನೂ ಬರ್ಖಾಸ್ತುಗೊಳಿಸಬೇಕು ಮುಸ್ಲಿಮರದೇ ಆದ ಯಾವುದೇ ಜಾತೀಯ ರಾಜಕೀಯ ಸಂಸ್ಥೆಯೂ, ಅದೇ ರೀತಿ ಇತರ ಯಾವುದೇ ಜಾತೀಯ ರಾಜಕೀಯ ಸಂಸ್ಥೆಯು ತೋರುವಿಕೆಗೆ ಎಷ್ಟೊಂದು ಪ್ರಗತಿಪರವಾಗಿ ಕಂಡರೂ ಮುಸ್ಲಿಮರಿಗೆ ಮತ್ತು ರಾಷ್ಟ್ರದ ಹಿತಕ್ಕದು ಅಪಾಯ. ದೇಶದ ಇಂದಿನ ಪರಿಸ್ಥಿತಿಯಲ್ಲಿ ಅಂಥವುಗಳ ಇರುವಿಕೆಯು ಅಸಹನೀಯ. ಧರ್ಮ ಮತ್ತು ಸಂಸ್ಕೃತಿಗೆ ಮಾತ್ರ ಕಟ್ಟುಬಿದ್ದು ರಾಜಕೀಯದಿಂದ ಕೈತೊಳೆದು ದೂರವಿರುವ ಜಾತೀಯ ಸಂಸ್ಥೆಗಳಿರಬಹುದು." ಎಂದೇ ಮೌಲಾನರ ಸ್ಪಷ್ಟವಾಣಿ. ಜಾತೀಯತಾ ರಾಜಕೀಯವನ್ನು ಸಂಪೂರ್ಣವಾಗಿ ತೊಡೆದು ಹಾಕಿ, ಒಂದು ಸಂಯುಕ್ತ ನಿರ್ಧಾರಕ್ಕೆ ಬರಬೇಕೆಂದು ವಿವಿಧ ರಾಜಕೀಯಾಭಿಪ್ರಾಯಗಳ ಎಲ್ಲಾ ಮುಸ್ಲಿಮರನ್ನೂ ಕೇಳಿಕೊಳ್ಳುವ ಮತ್ತು ಭಾರತದ ಮುಸ್ಲಿಮರು ಜಾತಿಯತಾರಹಿತ ರಾಜಕೀಯ ಪಕ್ಷಗಳ ಸದಸ್ಯರಾಗುವಂತೆಯೂ ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಕ್ಕಟ್ಟಿನ ಮುಖ್ಯ ನಿಲ್ದಾಣವಾದ ಕಾಂಗ್ರೆಸಿಗೇನೇ ಸೇರಬೇಕೆಂದೂ ಒತ್ತಾಯಿಸುವ ನಿರ್ಧಾರಗಳು ಲಕ್ನೋ ಮುಸ್ಲಿಂಸಮ್ಮೇಲನದಲ್ಲಾಗಿವೆ. ಮಹಾತ್ಮಾಗಾಂಧಿ ಮತ್ತಿತರ ಅಗ್ರಗಣ್ಯ ಕಾಂಗ್ರೆಸಿಗರು ಹಿಂದೀಕೇಂದ್ರದಎಲ್ಲಾ ನಾಗರಿಕರ ಹಕ್ಕು ರಕ್ಷಣೆಗಾಗಿ ಮಾಡಿರುವ ಪ್ರಯತ್ನಗಳನ್ನು ಅಭಿನಂದಿಸುವ, ಆದರೆ ಸರಕಾರೀ ಅಧಿಕಾರಿಗಳಲ್ಲಿ ಕಂಡುಬಂದಿರುವ ಆ ತತ್ವದ ಅಭಾವಕ್ಕಾಗಿ ಪಶ್ಚಾತ್ತಾಪ ಸೂಚಿಸಿ ಸರಕಾರವದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುವ ನಿರ್ಣಯವಾಗಿದೆ. ಸಮ್ಮೇಲನದ ನಿರ್ಧಾರಗಳ ... ಕಾರ್ಯ ವಾಹಿಯಾಗಿ ಒಂದು ಸಮಿತಿ ರಚಿಸಲ್ಪಟ್ಟಿದೆ.

ಕಾಶ್ಮೀರದ ಕಾಳಗ

ಕಾಶ್ಮೀರದ ಜಮ್ಮುವಿನಲ್ಲಿ ಧಾಳಿಗಾರರು ಮತ್ತು ಹಿಂದೀ ಕಾಶ್ಮೀರೀ ಸೈನಿಕರೊಳಗೆ ಜಾಂಗಾರ್—ನೌಕರಾ ಕ್ಷೇತ್ರದಲ್ಲಿ ಅತಿ ಭೀಕರ ಬಡಾ ಬಡಿ ಹೋರಾಟ ನಡೆಯಿತು. ಧಾಳಿಗಾರರ ಸೈನ್ಯ ಮತ್ತು ಶಸ್ತ್ರೋಪಕರಣಗಳ ಬಲವು ಅಧಿಕಾಧಿಕವಾಗಿರುವುದು ಕಂಡುಬಂದಿದೆ. ಹಿಂದೀ ವಿಮಾನಗಳು ವಿಶೇಷ ರೀತಿಯ ಬೋಂಬುಧಾಳಿ ನಡೆಸಿವೆ. ಪಾಕಿಸ್ತಾನದಿಂದ ಧಾಳಿಗಾರರಿಗೆ ಅತಿ ಹೆಚ್ಚಿನ ಸಹಾಯ ಸಲಕರಣೆಗಳೀಗ ದೊರೆಯುತ್ತಿರುವ ಕುರಿತು ಭಾರತ ಸರಕಾರವು ತೀಕ್ಷ್ಣಾಲೋಚನೆ ಮಾಡುತ್ತಿದೆ. ಪಾಕಿಸ್ತಾನದ ಕಡೆಗಿನ ಅವರ ತಾಳ್ಮೆಯೀಗ ಬರಿದಾಗುತ್ತಾ ಬಂದಿದೆ. ಪಾಕಿಸ್ತಾನವೇ ಪ್ರತ್ಯಕ್ಷ ಸಹಾಯಕೊಡುತ್ತಿರುವಾಗ, ಧಾಳಿಗಾರರು ಕಾಶ್ಮೀರಕ್ಕೆ ಮುಟ್ಟುವ ಮೊದಲೇ ಮಧ್ಯಹಾದಿಯಲ್ಲಿ ಅವರನ್ನು ತಡೆಗಟ್ಟಿ, ಕಾಶ್ಮೀರದೊಳಗೆ ಬಂದವರ ಸಂಬಂಧ ಕಡಿಯಲು ಪಾಕಿಸ್ತಾನ್ ಗಡಿಯೊಳಗೇನೇ ಭಾರತ ಸರಕಾರವು ಕಾರ್ಯಕ್ಕಿಳಿದಲ್ಲಿ ಅನ್ಯಾಯವಾಗಲಾರದೆಂಬ ಭಾವನೆಂಟಾಗಿದೆ. ಕಾಶ್ಮೀರದ ಮಾಜೀ ಸೋಲ್ಜರರನ್ನೆಲ್ಲಾ ಯುದ್ಧಕ್ಕೀಗ ಕರೆಯಲಾಗಿದೆ. ಸದ್ಯದಲ್ಲೇ ಸಂಸ್ಥಾನದೊಳಗಿನ ಸಮರ್ಥರಾಯರನ್ನೆಲ್ಲಾ ಸೇನೆಗೆ ಸೇರಿಸಿಕೊಳ್ಳಲಾಗುವದೆಂದೂ ತಿಳಿದು ಬರುತ್ತದೆ.

ಸರ್ದಾರ್ ಪಟೇಲರು ಮೊನ್ನೆ ಪುನಃ ಜಮ್ಮುವಿಗೆ ಹಾರಿ ಕಾಶ್ಮೀರದ ಮಹಾರಾಜರೊಡನೆಯೂ ಸಂಸ್ಥಾನದ ಮುಖ್ಯಾಧಿಕಾರಿಗಳೊಡನೆಯೂ ಸವಿವರ ಪರ್ಯಾಲೋಚನೆನಡೆಸಿದ್ದಾರೆ. ಜಮ್ಮುವಿನಲ್ಲಿ ಸೇರಿದ ಪ್ರಚಂಡ ಸಾರ್ವಜನಿಕಸಭೆಯಲ್ಲಿ ಭಾಷಣಮಾಡುತ್ತಾ "ನಾನು ನಿಮಗೆ ಮಾತು ಕೊಡುತ್ತೇನೆ. ಕಾಶ್ಮೀರವನ್ನು ಉಳಿಸಲು ಸಾಧ್ಯವಿದ್ದುದೆಲ್ಲವನ್ನು ನಾವು ಮಾಡುವೆವು. ಅದಕ್ಕೆ ತಾಗುವ ವೆಚ್ಚ ಅಥವಾ ಸಾಮಾಗ್ರಿಗಳನ್ನು ನಾವು ಲೆಕ್ಕಿಸುವಂತಿಲ್ಲ. ಏನೇ ಆಗಲಿ, ನಾವು ಕಾಶ್ಮೀರವನ್ನು ಬಿಟ್ಟುಕೊಡುವಂತಿಲ್ಲ. ಈಗ ನಾವು ಕೈಯಿಕ್ಕಿರುವ ಈ ಕೆಲಸವನ್ನು ಪೂರ್ಣಗೊಳಿಸಿಯೇ ಸಿದ್ಧ!' ಎಂದರು. ಎಲ್ಲರೂ ಶೇಕ್ ಅಬ್ದುಲ್ಲಾರ ಹಿಂದೆ ಧೈರ್ಯಶಾಲಿಗಳಾಗಿ ನಿಲ್ಲಬೇಕೆಂದು ಹೇಳುತ್ತಾ, ಸರ್ದಾರರೆಂದರು: 'ಮರಣವೆಂಬುದಿರುವದು ಖಂಡಿತ. ಅದು ಬರುವುದೊಂದೇಸಲ ಅದರ ಭಯಗೊಂದಲಕ್ಕೀಡಾಗಿ ಬಾಳುವದೆಂದರೆ ನಿತ್ಯವೂ ಸಾಯುವದೆಂದೇ ಅರ್ಥ. ನಾವು ಧೀರರಂತೆ ಬಾಳಬೇಕು-ಸಂಕಷ್ಟಗಳನ್ನು ಉಲ್ಲಾಸದಿಂದೆದಿರಿಸಬೇಕು. ಅಪರಾಧಿಗಳಾರೇ ಇರಲಿ; ಅವರಿಗೆ ಶಿಕ್ಷೆ ತಪ್ಪಲಾರದು; ದೇವರೆದುರು ಅವರು ವಾಗ್ದಾನ ಕೊಡಬೇಕಿದೆ ಎಂಬುದು ನೆನಪಿರಲಿ'

ಸ್ಮಾರಕೋತ್ಸವ—ಶ್ರೀ ಫಲಿಮಾರು ಮಠದ ಸ್ವಾಮಿಗಳವರ ಅಕಾಲ ನಿಧನದ ಸಲುವಾಗಿ ಪರ್ಯಾಯ ಶ್ರೀ ಶಿರೂರುಮಠದ ಸ್ವಾಮಿಗಳವರು ಕಳೆದ ಆದಿತ್ಯವಾರ ಶ್ರೀಕೃಷ್ಣನಿಗೆ ಗರುಡೋತ್ಸವವನ್ನು ಮಾಡಿಸಿದ!

ಷಾದಕರ ಮರಣ—ಶ್ರೀ ಮಕೀಲ್ ಟ ಗಾಜಯ್ಯ ಶೆಟ್ಟಿ ಪತ್ನಿಯವರು 3-4 ದಿವಸಗಳಿಂದ ಉನ್ಮಾದಾವಸ್ಥೆಯಲ್ಲಿದ್ದು ತಾ. 29-12-47ನೇ ಮುಂಜಾನೆ ಬಾವಿಗೆ ಹಾರಿ ಮೃತಪಟ್ಟಿರುವರೆಂಬುದು ಅತ್ಯಂತ ವಿಷಾದಕರವಿದೆ.

ಹಿಂದೂ ಸೇವಾ ಸಮಿತಿಯು - ಉಡುಪಿಯಲ್ಲಿ ಸ್ಥಾಪನೆಯಾಗಿ ಒಂದೆರಡೇ ತಿಂಗಳುಗಳು ಕಳೆದಿವೆಯಾದರೂ ಇಷ್ಟರಲ್ಲೇ ಹತ್ತಿಪ್ಪತ್ತು ಹಿಂದೂ ಅನಾಥ ಶವಗಳ ಸಂಸ್ಕಾರ ವ್ಯವಸ್ಥೆಯನ್ನದು ಮಾಡಿರುವುದು ಸ್ತುತ್ಯವಿದೆ. ಕಳೆದ ತಾ 24ರಲ್ಲಿ ದೂರದೂರುಗಳ ಎರಡು ಅನಾಥ ಶವಗಳ ಸಂಸ್ಕಾರ ಕ್ರಿಯೆ ನಡೆಸಿದರು.

ತಿದ್ದುಪಡಿ: -ಕಳೆದ ಸಂಚಿಕೆಯ 8ನೇ ಪುಟದಲ್ಲಿ ಪ್ರಕಟವಾದ ಶ್ರೀ. ಪಿ. ಜನಾರ್ದನ ನಾಯ್ಕರಿಂದ ಬರೆಯಲ್ಪಟ್ಟ 'ಮಧ್ಯಪಾನ ನಿರೋಧ ಕಾನೂನು' ಎಂಬಲೇಖನದಲ್ಲಿ ಕೆಲವು ಮುದ್ರಾದೋಷಗಳುಂಟಾಗಿವೆ. 1ನೆಯ ಕಲಂನ ಕಡೆಯ ಸಾಲಿನಲ್ಲಿಯ ಪ್ರೊಹಿಬಿಷನ್ ಆಕ್ಟಿನ 16ನೆಯ ಕಲಮಿನನ್ವಯ ಎಂಬುದನ್ನು 18ನೇ ಕಲಮಿನನ್ವಯ ಎಂಬುದಾಗಿಯೂ 3ನೇ ಕಲಮಿನ ಎರಡನೆ ಸಾರದಲ್ಲಿಯ 12ನೇ ವೈದ್ಯಕೀಯ ಲೈಸನ್ಸುದಾರನು ಮೇಲ್ಗಡೆ ವಿವರಿಸಿದ ಆರು ಅಸವಾನಿಷ್ಟಗಳನ್ನು ತಯಾರಿಸಲು ಅರ್ಹನಾಗಿರುತ್ತಾನೆ. ಎಂಬುದನ್ನು 4ನೇ ವೈದ್ಯಕೀಯ ಲೈಸನ್ಸ್ ದಾರನು ಮೇಲ್ಗಡೆ ವಿವರಿಸಿದ ಆರು ಆಸವಾರಿಷ್ಟಗಳನ್ನು ಬಿಟ್ಟು ಉಳಿದ ಆಸವಾರಿಷ್ಟಗಳನ್ನು ತಯಾರಿಸಲು ಅರ್ಹನಾಗಿರುತ್ತಾನೆ ಎಂದೂ ತಿದ್ದಿಕೊಳ್ಳಬೇಕಾಗಿದೆ-ಸಂ

NOTICE

IN the Court of the District Munsif of Puttur.

O. S. No. 359 of 1947
(O. P. No. 14 of 1947)

Lakshmi Hengsu - Plaintiff.
Vs
Ramakrishna Bhatta - Defendant

To

The Defendant Ramakrishna Bhat, son of Matanthadka Subraya Bhagavatha, residing in Peruvaje village, Puttur Taluk

Notice is hereby given to the defendant that the above named plaintiff has instituted the above suit against you for an annual maintenance of Rs. 175/- on the charge of the properties detailed in the plaint schedule and the same stands posted to 17-1-1948. You are therefore hereby informed that in case you have any objection you must file your statement on the said date at 11 A. M. Failing which you will be declared ex-parte and the suit will be decreed in your absence.

(By Order of Court)
(Sd) **P. Krishna Bhat**
Vakil for plaintiff.

Puttur 23-12-1947.

The Universal Fire & General Insurance Co. Ltd.

ESTD: HEAD OFFICE: **BOMBAY** 1919

ದಿ ಯುನಿವರ್ಸಲ್ ಫೈರ್ ಅಂಡ್ ಜನರಲ್ ಇನ್ಶ್ಯೂರೆನ್ಸ್ ಕಂಪೆನಿ. ಲಿಮಿಟೆಡ್

B. K. Satalvad—Chairman.
T. P. Kapadia—Manager.

ಹೆಡ್ ಆಫೀಸ್: **ಬೊಂಬಾಯಿ**

ಈ ಕಂಪೆನಿಯು ಜೀವ, ಅಗ್ನಿ, ಮೋಟಾರ್, ಸಮುದ್ರೋಪಯೋಗ, ಈ ಮೊದಲಾದ ವಿಮಾ ವಹಿವಾಟುಗಳನ್ನು ನಿಮ್ಮೆ ಮಾಡುವ ಪುರಾತನ ಕಂಪೆನಿಯಾಗಿದೆ

ಓರ್ಗನೈಜರ್‌ರೂ, ಏಜಂಟರೂ ಆಗಲಿಚ್ಛಿಸುವವರು ಕೂಡಲೇ ಬರೆಯಿರಿ.

ಹೊಸ ವರುಷದ ಅಭಿವಂದನೆಗಳು

P. D. Nanaya,
Chief Agent.
Udipi; S. K.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾ. **31—12—47**ರಿಂದ

ಪ್ರಭಾತದವರ ಪರಮ ಶ್ರೇಷ್ಠ ಸಾಮಾಜಿಕ ಚಿತ್ರ

ಆಧಿ

ಶಾಂತಾ ಹುಬ್ಳೀಕರ್, ಸಾಹು ಮೋಡಕ್, ರಾಮ ಮರಾಠೆ.

ತಾ. 5—1—47ರಿಂದ ನ್ಯೂಥಿಯೇಟರ್ಸ್‌ನವರ

ಮಶೀಯತ್ ನಾಮ,

ಛ ರತಿದೇವಿ, ಅಸಿತ್ ಭರಣ್, ಅಹಿನ್ ಚೌಧುರಿ.

ಅನಂತರ ಗೋಪಾಲಕೃಷ್ಣ (ಪ್ರಭಾತ್)

(೩ನೇ ಪುಟದಿಂದ)

ಶ್ರೀ. ಯಚ್. ಸಿದ್ಧಯ್ಯನವರ ಭಾಷಣ

"ನಮ್ಮ ರಾಷ್ಟ್ರವು ಪುನರುತ್ಥಾನ ವಾದ ಈ ಮಹಾಕಾಲದಲ್ಲಿ ಕನ್ನಡ ಜನ ತಮ್ಮ ಗುರಿಯನ್ನು ಸಾಧಿಸಬೇಕು. ಅವರಿಗಿರುವುದು ಒಂದೇ ಗುರಿ. ಅದು ಕನ್ನಡ ಪ್ರಾಂತ ಒಂದುಗೂಡಬೇಕೆಂಬುದು. ಭಾರತವು ಬಲಯುತವಾಗಬೇಕಾದರೆ ಭಾರತದ ಸಮಸ್ತ ಭಾಗಗಳೂ ಬಲಯುತವಾಗಿರಬೇಕು. ವಿಸ್ತಾರವಾದ ಸಮುದ್ರ ತೀರವನ್ನುಳ್ಳ—ಮುನ್ನೂರು ಮೈಲಿ ದೂರ ಹಬ್ಬಿದಸಮುದ್ರತೀರವನ್ನುಳ್ಳ—ಕನ್ನಡನಾಡು ಭಾರತದ ಈ ಪ್ರದೇಶವನ್ನು ರಕ್ಷಿಸಲು ಸಶಕ್ತವಾಗಬೇಕು.

ನಮಗೆ ಭವ್ಯವಾದ ಪ್ರಾಚೀನ ಇತಿಹಾಸವಿದೆ. ಗಂಗ, ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ವಿಜಯನಗರ, ಕೆಳದಿ, ಮೈಸೂರು, ಕೊಡಗು ಮುಂತಾದ ಅರಸುಮನೆತನಗಳು ನಮ್ಮ ಇತಿಹಾಸವನ್ನು ಉಜ್ವಲಗೊಳಿಸಿವೆ. ನೇಪಾಲಿನ ಮಲ್ಲರಾಜರು ಕನ್ನಡಿಗರು. ಕನ್ನಡ ಶಾಸನ ನೇಪಾಲಿನಲ್ಲಿವೆ. ಕನ್ನಡಿಗರು ಒಂದು ಕಾಲದಲ್ಲಿ ಬಹು ದೂರದ ಬಂಗಾಲವನ್ನು ಜಯಿಸಿದ್ದರು.

ಭಾರತದ ಅತಿ ಪ್ರಾಚೀನ ಭಾಷೆಗಳಲ್ಲಿ ಕನ್ನಡ ಮೂರನೆಯದು. ಪ್ರಾಚೀನ ಗೌರವದಲ್ಲಿ ಸಂಸ್ಕೃತ, ತಮಿಳಿನ ನಂತರ ಕನ್ನಡವೇ ಹಿರಿದಾದುದು. ಭಾಷೆಯಲ್ಲಿ, ಭಾವದಲ್ಲಿ, ಲಾಲಿತ್ಯದಲ್ಲಿ, ಸೊಬಗಿನಲ್ಲಿ, ಸಂಗೀತದಲ್ಲಿ, ಕೊನೆಯದಾಗಿ ಲಿಪಿಯ ಸೌಂದರ್ಯದಲ್ಲಿ ಕನ್ನಡ ಉನ್ನತವಾದುದು. ಸಾಹಿತ್ಯದ ಹಲವು ವಿಭಾಗಗಳಲ್ಲಿ ಕನ್ನಡಿಗರು ತಮ್ಮ ಹಿರಿಮೆಯನ್ನು ಗಳಿಸಿದ್ದಾರೆ. ಕಾವ್ಯ, ವಾಚನ, ಹಾಡು-ಗೀತೆಗಳು, ಕಥೆ, ನಾಟಕಗಳು, ಹೀಗೆ ಹಲವು ವಿಭಾಗಗಳಲ್ಲಿ ಕನ್ನಡಿಗರು ತೇಜಸ್ವಿಗಳಾಗಿದ್ದಾರೆ.

ಇನ್ನು ಕನ್ನಡಿಗರ ಕಲಾವೈಭವವನ್ನು ಕುರಿತು ಹೇಳಲೆ? ಅದು, ಜಗದ್ವಿಖ್ಯಾತವಾಗಿದೆ. ಭವ್ಯಸೌಧಗಳನ್ನು ನಿರ್ಮಿಸಿದವರು, ಲೋಕ ಬೆರಗಾಗುವ ಮೂರ್ತಿಗಳನ್ನು ಸೃಷ್ಟಿಸಿದವರು, ಕಲ್ಲಿನಲ್ಲಿ ಜೀವಪ್ರಕೃತಿಗಳನ್ನು ತುಂಬಿದವರು ಕನ್ನಡಿಗರು.

ಇದಿಷ್ಟೂ ಕನ್ನಡ ನಾಡಿನ ಪ್ರಾಚೀನ ಘನತೆಯಾಯಿತು. ಕನ್ನಡ ನಾಡಿನ ಪ್ರಾದೇಶಿಕ ಪರಿಚಯವನ್ನು ಕೊಡುವುದಾದರೆ ಅದು ೬೮,೪೯೦ ಚದರ ಮೈಲಿ ಪ್ರದೇಶವನ್ನು ಒಳಗೊಂಡ ವಿಸ್ತಾರ ಭಾಗ. ಅದರ ಜನಸಂಖ್ಯೆ ಸುಮಾರು ಎರಡು ಕೋಟಿ. ಸಂಸ್ಥಾನಗಳನ್ನುಳಿದ ಕನ್ನಡ ಭಾಗವೇ ಒಂದು ವೇಳೆ ಏಕ ಪ್ರಾಂತ್ಯವಾಗಬೇಕಾದರೆ ಅದು ಆಗಲೂ ತನ್ನ ಆಡಳಿತವನ್ನು ನಡೆಸಿಕೊಂಡು ಹೋಗಬಹುದಾದ ಸಾಧನ ಸಂಪತ್ತಿಯನ್ನು ಪಡೆದಿದೆ. ಮತ್ತು ಇದಕ್ಕೆ ಇಪ್ಪತ್ತೊಂಭತ್ತುವರೆ ಸಾವಿರ ಚದರ ಮೈಲಿಯುಳ್ಳ ಹತ್ತು ಕೋಟಿ ವರಮಾನವಿರುವ ಎಪ್ಪತ್ತಾರು ಲಕ್ಷ ಪ್ರಜಾ ಸಂಖ್ಯೆಯುಳ್ಳ ಮೈಸೂರು ಸಂಸ್ಥಾನವೂ ಸೇರಿದರೆ ಅದರ ಪ್ರಶಸ್ತಿ ಇನ್ನೂ ಶ್ರೇಷ್ಠವಾಗುವುದು. ಅಂತೆಯೇ ನಿಜಾಂ ರಾಜ್ಯದ ಇಪ್ಪತ್ತಾರು ಸಾವಿರ ಚದರ ಮೈಲಿಯ ಕೊಪ್ಪಳ, ರಾಯಚೂರು, ಕಲಬುರ್ಗಿ, ಮತ್ತು ಬಿದರೆ ಜಿಲ್ಲೆಗಳು ಸೇರಬೇಕು. ಆದರೆ ಸದ್ಯಕ್ಕೆ ಇದು ಒಂದು ಸಮಸ್ಯೆ. ಪ್ರಜಾಭಿಪ್ರಾಯವೇ ಕೊನೆಯ ತೀರ್ಮಾನವಾಗುವ ಕಾಲದಲ್ಲಿ ಈ ಸಮಸ್ಯೆಯು ಸುಗಮವಾಗಿ ಬಗೆಹರಿದೀತೆಂದು ಹಾರೈಸೋಣ.

ಉತ್ತರ ಕರ್ನಾಟಕದ ಹಲವು ಸಂಸ್ಥಾನಗಳು ಈ ಭಾವಿ ಕರ್ನಾಟಕ ಪ್ರಾಂತದಲ್ಲಿ ಸಮಾವೇಶವಾಗುವ ಸೂಚನೆ ಇದೆ. ಒರಿಸ್ಸಾ ಪ್ರಾಂತ್ಯಕ್ಕೆ ಹೊಂದಿಕೊಂಡ ಹಲವು ಪುಟ್ಟ ಸಂಸ್ಥಾನಗಳು ಈಗ ಭಾರತ ಸರ್ಕಾರಕ್ಕೆ ತಮ್ಮ ಆಡಳಿತವನ್ನು ವಹಿಸಿಕೊಟ್ಟ ವಿಷಯ ನಮಗೆ ಉತ್ಸಾಹವನ್ನು ತರುವುದಾಗಿದೆ. ಕರ್ನಾಟಕದ ಜಮಖಂಡಿ ರಾಜರು ಸ್ವಾಭಿಮಾನದಿಂದ ತಮ್ಮ ಸಂಸ್ಥಾನವನ್ನು ಭಾರತ ಸರ್ಕಾರಕ್ಕೆ ಅರ್ಥಾತ್ ಭಾವಿಕರ್ನಾಟಕ ಪ್ರಾಂತ್ಯಕ್ಕೆ ವಹಿಸಿಕೊಡುವೆನೆಂಬ ಆಶ್ವಾಸನ ಪ್ರಶಂಸನೀಯವಾದುದು.

ಉಳಿದ ಸಣ್ಣ ಸಂಸ್ಥಾನಿಕರು ಈರೀತಿ ದೇಶಪ್ರೇಮದಿಂದ ಪ್ರೇರೇಪಿತರಾಗಿ ಕರ್ನಾಟಕ ಸರ್ಕಾರದೊಂದಿಗೆ ತಮ್ಮ ಸಂಸ್ಥಾನಗಳನ್ನು ವಿಲೀನಗೊಳಿಸಿದರೆ ಅದಕ್ಕಿಂತ ಅವರಿಗೆ ಭೂಷಣವಾದ ಕಾರ್ಯ ಇನ್ನೊಂದು ಇರಲಾರದು. ಅಂಥ ಶ್ಲಾಘನೀಯವಾದ ತ್ಯಾಗಬುದ್ಧಿಯನ್ನು ತೋರಿ ಕನ್ನಡಿಗರ ಕೃತಜ್ಞತೆಗೂ ಮತ್ತು ತಮ್ಮ ಪ್ರಜೆಗಳ ಗೌರವಕ್ಕೂ ಪಾತ್ರರಾಗುತ್ತಾರೆಂದು ನಾವು ನಂಬಿದ್ದೇವೆ.

ಈಗಾಗಲೆ ಮೈಸೂರು ಶ್ರೀಮನ್ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಪ್ರಜಾಸರ್ಕಾರವನ್ನೇರ್ಪಡಿಸಿದ್ದಾರೆ. ಪ್ರಜೆಗಳ ಪ್ರತಿನಿಧಿಗಳೇ ರಾಜ್ಯ ಸೂತ್ರವನ್ನು ಕೈಗೊಂಡಿದ್ದಾರೆ. ಶ್ರೀ ಮಹಾರಾಜರವರು ಅಖಿಲ ಕರ್ನಾಟಕಕ್ಕೂ ದೊರೆಗಳಾಗಿ ತನ್ಮೂಲಕ ಪ್ರಜಾ ಪ್ರಭುತ್ವವೇರ್ಪಟ್ಟರೆ ಅದು ನಮ್ಮ ದೇಶಕ್ಕೆ ಭೂಷಣವೇ ಆದೀತು. ಕದಂಬರ ಕಾಲದಿಂದಲೂ ಕನ್ನಡನಾಡಿನ ಲಾಂಛನವಾದ ಗಂಡಭೇರುಂಡ ಧ್ವಜವು ಕೆಳದಿಯ ಅರಸರಿಂದಲೂ ನಂತರ ಮೈಸೂರು ಅರಸರಿಂದಲೂ ಮೆರೆಸುತ್ತಿರುವಲ್ಲಿ, ಈಗಲೂ ಅದೇ ಧ್ವಜವು ಅಖಿಲ ಕರ್ನಾಟಕಕ್ಕೂ ಧ್ವಜವಾಗಿ ಮೆರೆದರೆ ಅದು ನಮಗೆ ಭೂಷಣ.

ಕನ್ನಡ ಪ್ರಾಂತ ನಿರ್ಮಾಣಕ್ಕೆ ನಮ್ಮ ಒತ್ತಾಯ ಮತ್ತು ನಮ್ಮ ಅಭಿಮತ ಪ್ರಬಲವಾಗಬೇಕು. ಆಂಧ್ರರೂ, ಮಹಾರಾಷ್ಟ್ರರೂ ಪ್ರಚಂಡ ಚಳವಳಿ ನಡೆಸಿದ್ದಾರೆ. ತಮಿಳರೂ ಕೇರಳೀಯರೂ ತಮ್ಮ ತಮ್ಮ ಪ್ರಾಂತಗಳಿಗಾಗಿ ಒತ್ತಾಯ ಮಾಡುತ್ತಿದ್ದಾರೆ. ಗಡಿ ನಿರ್ಮಾಣದಲ್ಲಿ ಕನ್ನಡ ಭಾಗಗಳು ಯಾವುವೆಂಬುದು ಸರ್ವಸಮ್ಮತವಾಗುವಂತೆ ನಿರ್ಣಯವಾಗಬೇಕು. ಆದರೆ ಈ ಕಾರ್ಯ ನಡೆಯುವಾಗ ನಮ್ಮ ಎಚ್ಚರಿಕೆ ಎಷ್ಟಿದ್ದರೂ ಸಾಲದು. ಕನ್ನಡ ಜಿಲ್ಲೆಯಲ್ಲಿ ನಡೆಯುವ ಈ ಸಮ್ಮೇಳನ ಈ ಕಾರಣದಿಂದ ಅತಿ ಮಹತ್ವದ್ದು ಆಗಿದೆ. ಪರಪ್ರಾಂತೀಯರೊಂದಿಗೆ ನಾವು ಸಹಕಾರದಿಂದಿರಬೇಕಾದರೂ ನಮ್ಮ ಭಾಗಗಳು ನಮ್ಮದಾಗಿರಬೇಕೆಂಬುದೇ ನಾವು ಸಾಧಿಸುವ ಗುರಿ.

ಹೀಗೆ ನಿರ್ಮಾಣವಾದ ಕನ್ನಡ ಪ್ರಾಂತ ಸರ್ವ ವಿಧದಿಂದಲೂ ಅಭಿವೃದ್ಧಿ ಹೊಂದುವುದರಲ್ಲಿ ಏನೂ ಸಂಶಯವಿಲ್ಲ. ಇದಕ್ಕಿರುವ ವನ, ಖನಿಜ ಸಂಪತ್ತು, ವಿಸ್ತಾರವಾದ ಹಲವು ಬಂದರುಗಳನ್ನುಳ್ಳ ಸಮುದ್ರ ತೀರ, ಫಲವತ್ತಾದ ಭೂಭಾಗಗಳು, ಅನೇಕ ನದಿಗಳು—ಇವೆಲ್ಲಾ ಈ ನಾಡಿನ ಸಂಪತ್ತಿಗೆ ಭರವಸೆಯಾಗಿವೆ. ಸುಮಾರು ಒಂದು ಲಕ್ಷ ಚದರಮೈಲಿಯುಳ್ಳ, ಎರಡು ಕೋಟಿ ಜನಸಂಖ್ಯಾ ಬಾಹುಳ್ಯವನ್ನುಳ್ಳ, ಸುಮಾರು ಇಪ್ಪತ್ತುಕೋಟಿ ವರಮಾನ ಉಳ್ಳದ್ದಾಗುವ ಈ ಪ್ರಾಂತ ವಿಸ್ತಾರದಲ್ಲಿ, ಜನಸಂಖ್ಯೆಯಲ್ಲಿ ಮತ್ತು ಆದಾಯದಲ್ಲಿ ಅಸ್ಸಾಂ, ಸಿಂಧ್, ಒರಿಸ್ಸಾ, ವಾಯುವ್ಯ ಗಡಿ ಪ್ರಾಂತಗಳನ್ನು ಮೀರಿಸುತ್ತದೆ."

ಕಾಂಗ್ರೆಸ್ ಕೈದಿಗಳಿಗೆ ಭೂದಾನ

ಮದ್ರಾಸ್ ಸರಕಾರದ ಹುಕುಂ

ಕಾಂಗ್ರೆಸ್ ನಡೆಸಿದ್ದ ಸ್ವಾತಂತ್ರ್ಯ ಹೋರಾಟಗಳಲ್ಲಿ ಶಿಕ್ಷೆಗೊಳಗಾಗಿದ್ದವರಿಗೆ ಭೂಮಿದಾನ ಮಾಡಲಾಗುವದೆಂದು ಮದ್ರಾಸ್ ಸರಕಾರವು ಕಳೆದ ಅಗೋಸ್ತು 14ರಲ್ಲಿ ಪ್ರಕಟಿಸಿದ್ದಿತು. ಈ ಸಂಬಂಧವಾಗಿ ಪ್ರತ್ಯೇಕ ಹುಕುಮುಗಳನ್ನು ಇಷ್ಟರಲ್ಲೇ ಹೊರಡಿಸಲಾಗಿದೆ. ಎಂದು ಮದ್ರಾಸ್ ಸರಕಾರವು ಇದೇ ತಾ. 23ರ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಈ ಭೂದಾನದ ನಿಯಮಗಳು ಹೀಗಿವೆ: ರಾಜಕೀಯ ಕಷ್ಟನಷ್ಟ ಹೊಂದಿದ ಪ್ರತಿಯೊಬ್ಬನಿಗೆ ಐದು ಎಕ್ರೆಯಂತೆ ಸಾಗುವಳಿಗೆ ಯೋಗ್ಯ ಭೂಮಿಯನ್ನು ಕೊಡಲಾಗುವುದು; ಅಥವಾ ಅದಕ್ಕೆ ಸರಿ ಮೌಲ್ಯದವುಗಳನ್ನು ಈಯಲಾಗುವುದು. ಹೀಗೆ ಕೊಡಲ್ಪಡುವ ಭೂಮಿಯು ಧರ್ಮಾರ್ಥವಾದರೂ, ಮಾರಕೂಡದು, ಅಥವಾ ಹತ್ತು ವರುಷಾವಧಿಯ ಒಳವು ಇಲ್ಲವೇ ಪರಾಧೀನ ಮಾಡಕೂಡದು. ಕಾಂಗ್ರೆಸಿನಿಂದಾರಂಭಿಸಲ್ಪಟ್ಟ, ಅಥವಾ ಅದರಾಜ್ಞಾನುಸಾರ ನಡೆಸಲ್ಪಟ್ಟ ರಾಜಕೀಯ ಚಳವಳಿಗಳಲ್ಲಿ ಸತ್ತವರ, ಅಂತೆಯೇ ಆ ಚಳವಳಿಗಳಲ್ಲಿ ಭಾಗವಹಿಸಿ ಆನಂತರ ಸತ್ತವರ, ಕುಟುಂಬದವರೂ ಈ ದಾನಹೊಂದಲು ಹಕ್ಕುದಾರರಿದ್ದಾರೆ. ಭೂಮಿಗಾಗಿ ಅರ್ಜಿಗಳನ್ನು, ಅನುಭವಿಸಿದ ಶಿಕ್ಷೆ ಅಲ್ಲವಾಸದ ವಿವರಗಳೊಂದಿಗೆ, ಆಯಾಯಾ ಜಿಲ್ಲೆಗಳ ಕಲೆಕ್ಟರುಗಳಿಗೆ ಕಳುಹಿಸಿಕೊಡಬೇಕು. ಮಾನ್ಯಮಂತ್ರಿಗಳಿಗೆ ಹಲವು ಅರ್ಜಿಗಳು ಬಂದಿವೆ. ಅವುಗಳನ್ನು ಸಂಬಂಧಪಟ್ಟ ಕಲೆಕ್ಟರರಿಗೆ ಕಳುಹಿಸಿ ಕೊಡಲಾಗುವುದು. ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳೂ, ಜಿಲ್ಲಾ ಕಾಂಗ್ರೆಸ್ ಕಮಿಟಿಗಳೂ, ತಮಗಿಷ್ಟರಲ್ಲೇ ಬಂದಿರುವ, ಮತ್ತಿನ್ನು ಸಕಾಲದೊಳಗೆ ಬರಲಿರುವ ಈ ಸಂಬಂಧದ ಅರ್ಜಿಗಳನ್ನೆಲ್ಲಾ ಜಿಲ್ಲಾ ಕಲೆಕ್ಟರರುಗಳಿಗೆ ಕಳುಹಿಸಿಕೊಡಬೇಕೆಂದು ವಿಜ್ಞಾಪಿಸಲಾಗಿದೆ. ಸಾಮೂಹಿಕವಾಗಿ ಅಥವಾ ಸಹಕಾರೀ ಪದ್ಧತಿಯಲ್ಲಿ ವ್ಯವಸಾಯ ನಡಿಸುವ ಉದ್ದೇಶದಿಂದ ಹತ್ತು ಮಂದಿ ಅಥವಾ ಅದಕ್ಕೂ ಹೆಚ್ಚಿನವರೊಟ್ಟಾಗಿ ಭೂಮಿಗಾಗಿ ಅರ್ಜಿ ಬರಕೊಂಡಲ್ಲಿ ಅಂತಹ ಅರ್ಜಿಗಳ ಕುರಿತೂ ಸರಕಾರವು ಪರ್ಯಾಲೋಚಿಸುವುದು.

Notice

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S 300/1947

ನೇಸಿಂದ್ರಾಜಬಂಗ—ವಾದಿ.

ವೆಂಕಟ್ರಮಣಯ್ಯ ಕೂಡಾ—ಪ್ರತಿವಾದಿಯು.

1. ವೆಂಕಟ್ರಮಣಯ್ಯ—ಮುಂಚಾಣಿ ಶಂಕ್ರನಾರಾಯಣ ಯಾನೆ ಅಂಬಪ್ಪಯ್ಯನ ಮಗ 2. ರಾಮಕೃಷ್ಣಯ್ಯ 3. ತಿರುಮಲೇಶ್ವರ 1ನೇ ಪ್ರತಿವಾದಿ ವೆಂಕಟ್ರಮಣಯ್ಯನ ಮಕ್ಕಳು—ಮಂಗಳೂರು ತಾಲೂಕು ಗೋಳಿಮಜಲು ಗ್ರಾಮದ ನಟ್ಟಿಬೈಲ ಮುಂಚಾಣಿ.

ಪ್ರತಿವಾದಿಯರಿಂದ ಬರಬೇಕಾದ ಅಡವಿನ ಎರಡು ವರ್ಷಗಳ ಬಡ್ಡಿ ಬಾಕಿ ರೂ 1378-0-0ಕ್ಕೆ ದಾವೆ ಮಾಡಿ ಅದರ ನೋಟೀಸಿನ ತಸ್ತಿಕ್ಕಾಗಿ ತಾ 10-1-1948ಕ್ಕೆ ಕ್ಯಾದೆ ನಿಶ್ಚಯಿಸಲಾಗಿದ್ದರಿಂದ ಆ ಕ್ಯಾದೆ ದಿನ ಪ್ರತಿವಾದಿಯರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಒರಜಿನಿಮೂಲಕ ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಗೈರಾಯಿ ಎಂತ ಮಾಡಿ ಈ ದಾವೆಯನ್ನು ಮುಂದಿನ ತಸ್ತಿಯಿಂದ ತೀರ್ಮಾನಿಸಲಾಗುತ್ತದೆ, ಎಂತ ಈ ಕೋರ್ಟು R. I. A. 1476/47ನೆ ಅರ್ಜಿ ಮುಖಾಂತರ ಪ್ರಕಾರ ಈ ನೋಟೀಸು ಮಾಡಿಸಲಾಗಿದೆ.

B. Ramachandra Rao,
Pleader for plaintiff

ತಾರೀಖು 10-12-1947
ಪ್ಲೋಕ್ಯಾಂ ಪುತ್ತೂರು. ದ. ಕ.

CONTROLS.

Even if all the foodstuffs are decontrolled you need control yourselves! Infection—Cold & fatigue are the dreaded enimies of health!

Control over these by drinking a cup of sweet Conch brand sqash every day—

Mine of Vitamins! Pool of flavour! Lime, Pineapple or orange which suits your taste.

Mfrs:-Cannada Soap & Industrials Ltd. Mangalore.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ದಕ್ಷಿಣ ಕನ್ನಡ.
ಮಂಗಳೂರು.

ಪ್ರೊಟೆಸ್ಟೆಂಟ್ ಮತ್ತು ಆಂಗ್ಲೋ ಕೆಥೋಲಿಕ್ ತರರಸಂಘದ ಕನ್ನಡ ಶಾಖೆಯ ವಾರ್ಷಿಕ ಮಹಾಸಭೆಯು ತಾ 14ರಲ್ಲಿ ಹೆಡ್ ಪೋಸ್ಟ್ ಆಫೀಸಿನಲ್ಲಿ ಜರಗಿತು. ಶ್ರೀ. ಬಿ. ಯಸ್. ಭಾಸ್ಕರ ರೈಗಳು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ರೂ. 333ನ್ನು ಸಂಜಾಪಿನ ನಿರಾಶ್ರಿತರಿಗೆ ಕಳಿಸಬೇಕೆಂದಾಯಿತು.

ನಗರ ಸಭೆ—ತಾ 12ರಲ್ಲಿ ಜರಗಿದಾಗ ಕೌನ್ಸಿಲಿನ ಎಲ್ಲ ವ್ಯವಹಾರಗಳೂ ಕನ್ನಡದಲ್ಲೇ ಆಗಬೇಕೆಂಬ ಶ್ರೀ. ಎಸ್. ಎಸ್ ಕಿಲ್ಲೆಯವರ ಠರಾವು ತುಂಬ ಚರ್ಚೆಯಾಗಿ ಸ್ವೀಕರಿಸಲ್ಪಟ್ಟಿತು. ಶ್ರೀ. ಎಸ್. ನರ್ಸಪ್ಪಯ್ಯನವರ ಕರ್ನಾಟಕ ಏಕೀಕರಣ, ಮಂಗಳೂರನ್ನು ಪ್ರಬುದ್ಧ ಬಂದರ ಮಾಡುವುದು, ಕರ್ನಾಟಕ ವಿದ್ಯಾಲಯ ಅಗತ್ಯವೆನ್ನುವ ನಿರ್ಣಯಗಳೂ ಮಂಜೂರಾದುವು.

ಕೆನರಾ ಹೈಸ್ಕೂಲಿನ ವರ್ಧಂತಿಯು ತಾ. 24-12-47ರಲ್ಲಿ ಶ್ರೀ. ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ವಿಜ್ರಂಭಣೆಯಿಂದ ಜರಗಿತು ಶ್ರೀ. ಎಂ. ರಾಧಾಕೃಷ್ಣ ಪೈಗಳು ಶಾಲಾಸ್ತ್ರೀಯ ಪ್ರಾರ್ಥನೆ ಮಾಡಿದರು. ವಾಡಿಕೆಯ ಯಾವತ್ತು ಕಾರ್ಯಕ್ರಮಗಳೂ ವಿವಿಧ ವಿನೋದಗಳೂ ಇದ್ದವು.

NOTICE
ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
S. C. 659/47.

ವಾದಿರು—1 ಭಾಗೀರಥಿ ಅಮ್ಮ, 2 ಶ್ರೀನಿವಾಸ ಭಟ್ಟ.

ಪ್ರತಿವಾದಿರು—1 ಮೊಗೇರ ಕೊರಗ, 2 ಕೊಲ್ಲು ಹೆಂಗ್ಸು, 3 ಕೂಸ.

ಉಡ್ಪಿತಾಲ್ಲುಕು ಮಣೂರು ಗ್ರಾಮದಲ್ಲಿರುವ ಮೊಗೇರ ಸುಬ್ಬಿ ಹೆಂಗ್ಸಿನ ಮಗ ಮೊಗೇರ ಕೊರಗ, ಸುಬ್ಬಿ ಹೆಂಗ್ಸಿನ ಮಗಳು ಕೊಲ್ಲು ಹೆಂಗ್ಸು, 2ನೇ ಪ್ರತಿವಾದಿ ಕೊಲ್ಲು ಹೆಂಗ್ಸಿನ ಮಗ ಕೂಸ, ಕೂಡಾ 3 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ವಾದಿರ ಹಕ್ಕಿನ ತೆಕ್ಕಟ್ಟೆ ಗ್ರಾಮದ ಸ. ನಂ. 202/4ನೇ ನಂಜಸ್ಥಳವನ್ನು ಪ್ರತಿವಾದಿರು ವರ್ಷ 1ರ ಅಕ್ಕಿಮೂಡೆಗೆ 1ರ ಗೇಣಿಗೆ ಚಾಲಗೇಣಿಗೆ ಪಡೆದು ಸ್ವಾಧೀನವಿದ್ದು ಅನುಭವಿಸಿ ಆ ಬಾಬ್ತು ಕಳದ ಕಾರಣ, ವಾದಿನ ಸ್ವ ... ಸಂವತ್ಸರಗಳ ಗೇಣಿ ನ ಬಡ್ಡಿ ಕೂಡಾ ರೂ. 31-3-9ನ್ನು ಬರಮಾಡಿಕೊಳ್ಳುವರೆ ವಾದಿರು ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಮೇಲಿನ ದಾವೆಯು ತಾ. 5-1-1947 ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಗಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆ ಇದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು, ಎಂಬ ಸಂಗತಿ ಈ ಮೂಲಕ ತಿಳಿಯಪಡಿಸುತ್ತದೆ.

N. S. Parameshwariah.
Advocate for Pltf.
Date 23-12-47, Coondapoor.

ಶ್ರೀ ಕೆ. ಆನಂದ ನಂಬಿಯಾರರ ಆಗಮನ.

—ಎಸ್ ಐ. ರೈಲ್ವೆ ಯೂನಿಯನಿನ ಪ್ರಧಾನ ಕಾರ್ಯದರ್ಶಿ ಹಾಗೂ ಮದ್ರಾಸು ಎಸೆಂಬ್ಲಿಯ ಕಮ್ಯೂನಿಸ್ಟ್ ಸದಸ್ಯ ಶ್ರೀ. ನಂಬಿಯಾರರು ತಾ 28-12-47ರಲ್ಲಿ ಆಗಮಿಸಿದಾಗ ರೈಲ್ವೆ ನಿಲ್ದಾಣದಲ್ಲಿ ಮಜೂರರ ಪ್ರಚಂಡ ಸ್ವಾಗತ ನಡೆಯಿತು. ಸಂಜೆ ಮೈದಾನಿನಲ್ಲಿ ಶ್ರೀ. S. N ಮೊಳ್ಳರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯಾಗಿ ಶ್ರೀ. ನಂಬಿಯಾರರ ಭಾಷಣವಾಯಿತು.

ಹಳ್ಳಿಯ ರಹಿತ.

ನಿಯಂತ್ರಣಗಳ ಗೋಜಿಯು ಹೇಗೂ ಹೋಗುವುದೆಂದಾಗಿದೆ, ಕೆಲವೆಲ್ಲಾ ಹೋಗಿವೆ ಪ್ರತಿಯೊಬ್ಬರೂ ಜಾಗ್ರತಿಕರಾಗಿ ದೇಶ ಹಿತ ಸಾಧನೆ ಉಳ್ಳವರಾಗುವುದು ಈಗಿನ ಸಮಯದ ಕರ್ತವ್ಯ, ಮಹಾತ್ಮಾಜಿಯವರು ಆಗಾಗ ಬೋಧಿಸುತ್ತಿರುವರು. ಶೇಕಡಾ 80ರ ಮೇಲಿನ ಜನಸಂಖ್ಯೆ ರೈತವರ್ಗ. ಈಗಿನ ಸ್ವರಾಜ್ಯ ಜನಸಾಮಾನ್ಯರದು; ಬಹು ಪಕ್ಷೀಯರಿಗೆ ಸೇರಿದುದು. ಹೀಗೆನ್ನುವಾಗ ರೈತವರ್ಗವು ಎಚ್ಚರಿತು ಕೆಲಸ ಮಾಡುವುದಿದೆ.

ಎಲ್ಲಾ ಕಡೆಗಳಲ್ಲೂ ಮುಷ್ಕರ. ಮಹಾತ್ಮಾಜಿಯರಿಂದ ಕಲಿತ ಸಾಕ ಒಂದೆನ್ನಬಹುದು, ಯಾವುದಕ್ಕೆ ಮತ್ತು ಯಾರ ಮೇಲೆಂದು ವಿಚಾರಣೆ ಮಾತ್ರ ಇಲ್ಲ. ನಿರಿವ ಕ್ರಯವು ಇನ್ನು ಕೂಡಾ ಏರುವುದಾದರೆ ಮುಷ್ಕರಗಳಿಗೆ ಮಿತಿಯಿಲ್ಲ. ಆದುದರಿಂದ ಕ್ರಯ ಕಡಿಮೆಯಾಗುವಂತೆ ನೋಡುವುದು ಅಗತ್ಯ ಹೊರಗಿನ ಸರಕಾರ ಅಥವಾ ಅಧಿಕ ಮುನಾಫೆ ಪಡೆಯುವ ಮಾಲಿಕರೊಳಗೆ ಮುಷ್ಕರಕ್ಕೆ ಅರ್ಥವಿದೆ. ಈಗಿನ ಸರಕಾರ ನಮ್ಮದೆನ್ನುವಾಗ ಮುಷ್ಕರಕ್ಕೆ ಅರ್ಥವಿಲ್ಲ, ದೇಶಕ್ಕೆ ಹಾನಿ; ಜನರಿಗೆ ಕಷ್ಟ. ಬಹುಸಂಖ್ಯಾಕರಾದ ರೈತರು ಈಗಿನ ಮುಷ್ಕರಗಳಲ್ಲಿ ಹಿತ ಕಾಣರು. ಕ್ರಯವನ್ನು ಇಳಿಸಿ ಮಾಡಲು ಯತ್ನಿಸಬಹುದು. ಅವಶ್ಯಕತೆಗಳನ್ನು ಹಿಂದಿಡಬಹುದು. ಅನವಶ್ಯ ಖರ್ಚುಗಳನ್ನು ಮಾಡದಿರಬಹುದು ಬೆಳೆಯನ್ನು ಹೆಚ್ಚಿಸಬಹುದು, ಅನೇಕ ರೀತಿ ಸರಕಾರಕ್ಕೆ ಬೆಂಬಲ ಕೊಟ್ಟು, ಎಲ್ಲಾ ದುರ್ವ್ಯಯಗಳನ್ನು ತಡೆಹಾಡಿ ಆದಾಯವು ಹೆಚ್ಚುವ ರೀತಿ ಪ್ರಯತ್ನವಿಟ್ಟು, ದೇಶದ ಹಿತಕ್ಕೆ ಉಪಯೋಗಿಸಲು ನೋಡುವುದು ಎಲ್ಲರ ಕರ್ತವ್ಯವಾಗಬಹುದು. ಬಹುಸಂಖ್ಯಾಕರಾದ ರೈತರ ಮುಖ್ಯ ಕರ್ತವ್ಯ.

ಎಂ. ಆರ್. ಪೂಂಜ,
ಮೂಲ್ಕಿ ಗ್ರಾಮಾಭಿವೃದ್ಧಿ ಕಾರ್ಯದರ್ಶಿ.

ನೋಟೀಸು.
ಉಡ್ಪಿ ಡಿ. ಮು. ಕೋರ್ಟಿನಲ್ಲಿ
O. S. No 392/1946

ಯಮುನಂಮ—ವಾದಿಳು
ಮತ್ತು
1. A. ವೆಂಕಟ್ರಮಣ ರಾವ್, 2. A. ಆನಂದ್ರಾವ್, 3. A. ವ್ಯಾಸರಾವ್, 4. A. ಮೋಹನರಾವ್(ಮೈನರು) ಗಾರ್ಡಿಯನ್-ತಾಯಿ, ರುಗ್ಮಿಣಿ ಅಮ್ಮ—ಪ್ರತಿವಾದಿರು.
ಇವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ 2. 4. ನೆ ಪ್ರತಿವಾದಿರಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ 22-1 48ಕ್ಕೆ ಇಟ್ಟಿರುವದರಿಂದ ಆ ದಿವಸ ಸದ್ರಿ ಪ್ರತಿವಾದಿರು ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

(Sd) **P. Padmanabha Rao,**
Vakil for Plaintiff
Udipi, Dated 23-12-47

Notice
ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
A. S. 17/1947 R. E. P. 557/47
ಅರ್ಜಿದಾರ—ವಾಸುದೇವ ಪುರಾಣಿಕ,
ಎದ್ರಿ—ಬಡಿಯ ಸೆಟ್ಟಿ.

ಕುಂದಾಪುರ ತಾಲ್ಲುಕು ಹಾಲಾಡಿಗ್ರಾಮದ ಜೋರಾಡಿಯಲ್ಲಿರುವ ಮೋನಪ್ಪ ಸೆಟ್ರ ಅಳಿಯ ಬಡಿಯ ಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಮೇಲಿನ A. S. 17/47ನೇ ಡಿಕ್ರಿ ಹಣ ಬರಮಾಡಿಕೊಳ್ಳುವರೆ ಅರ್ಜಿದಾರನು ದಾಖ್ಲು ಮಾಡಿದ ಮೇಲಿನ ಅಮಲ್ದಾರಿಯಲ್ಲಿ ಎದ್ರಿಗೆ ವಾರಂಟು ಯಾಕೆ ನಡಿಸಕೂಡದು ಎಂಬ ಸಬಬು ಕೋರಿಸಲಿಕ್ಕೆ ತಾ 9-1-1948 ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಗಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು, ಎಂಬ ಸಂಗತಿ ಈ ಮೂಲಕ ತಿಳಿಯಪಡಿಸುತ್ತದೆ.

N S. Parameshwariah
Advocate for Petr
Date 23-12-47 Coondapoor

ಬಂಟ್ಸ್ ಕೋಓಪರೇಟಿವ್ ಕನ್ಸೂಮರ್ಸ್‌ಸೊಸೈಟಿ,ಲಿಮಿಟೆಡ್ ಮುಂಬೈ
ರಿಜಿಸ್ಟರ್. (ನಂ) C. 1115

ನಮ್ಮ ಮೇಲ್ತೋರುವ ಸೊಸೈಟಿಯ ಪ್ರಾಥಮಿಕ ಸಮಾರಂಭೋತ್ಸವವು ಸ. 1948ನೆ ಇಸವಿ ಜನವರಿ ತಿಂಗಳ ತಾರೀಕು 11ನೇ ಆದಿತ್ಯವಾರ ಅಪರಾಹ್ನ ಘಂಟೆ 4-15 ಕ್ಕೆ ಸರಿಯಾಗಿ ಕಾಂಗ್ರೆಸ್ ಭವನದ ಸಮೀಪದಲ್ಲಿರುವ ಜಿನ್ನಾ ಹೋಲ್‌ನಲ್ಲಿ ಮುಂಬೈ ಸರಕಾರದ ಕೃಷಿ ಇಲಾಖಾ ಸನ್ಮಾನ್ಯ ಮಂತ್ರಿಗಳಾದ ಯಂ. ಪಿ. ಪಾಟೀಲರವರ ಅಧ್ಯಕ್ಷತೆಯಲ್ಲಿ ನೆರವೇರಿ, ಸೊಸೈಟಿಯ ಉದ್ಘಾಟನೆಯು, ಸನ್ಮಾನ್ಯ ಆರ್ಥಿಕ ಮಂತ್ರಿಗಳಾದ, ವೈಕುಂಠ ಯಲ್. ಮೆಹ್ತಾರವರ ಹಸ್ತದಿಂದ ಜರಗಲಿರುವುದು. ಅನೇದಿನ ಅಪರಾಹ್ನ ಘಂಟೆ 5-30ಕ್ಕೆ ಸಾಧಾರಣ ಮಹಾಸಭೆಯು ಜರಗಿ ಚಾಲ್ತಿವರ್ಷದ ಕಾರ್ಯಕಲಾಪಗಳ ನಿರ್ಧಾರವಾಗಲಿರುವದರಿಂದ ಸೊಸೈಟಿಯ ಎಲ್ಲಾ ಸದಸ್ಯರೂ ಹಿತಚಿಂತಕ ಜಾತಿಬಾಂಧವರೂ ನೆರೆದುಬಂದು ಸದ್ರಿ ಶುಭ ಕಾರ್ಯವನ್ನು ಚಂದಗಾಣಿಸಿಕೊಡಬೇಕಾಗಿ ವಿನಂತಿ.

K M Shetty
Krishna K. shetty,
Promoters

ಪ್ರಕಟವಾಗಿದೆ—ಶ್ರೀ. ಎಂ ವಿ. ಹೆಗ್ಡೆಯವರ

ಸ್ವರಾಜ್ಯ ವಿಜಯ

(ಯಕ್ಷಗಾನ ಪದ್ಯ—ಅರ್ಥಗಳಲ್ಲಿ ಆಗೋಸ್ಟು 15ರ ಸ್ವರಾಜ್ಯ ಚರಿತ್ರೆ)
ಯಕ್ಷಗಾನದಲ್ಲೊಂದು ಕ್ರಾಂತಿ! ನಿಜವಾದ ಜನತಾ ಸಾಹಿತ್ಯದ ಉದ್ಭವ!

ನೆಹರು, ಜಿನ್ನ, ಪಟೇಲ್, ಜೈಪ್ರಕಾಶ್, ಅಟ್ಲಿ, ಮೌಂಟ್‌ಬೇಟನ್, ಗಾಂಧಿ, ನಿಸ್ತಾರ್, ಖಾನ್‌ನೂನ್, ಕ್ರಿಪ್ಸ್ ಮುಂತಾದವರೇ ಇದರಲ್ಲಿರುವ ಪಾತ್ರಗಳು. ... ಸಾಹಿತಿಯ ವರೆಗಿನ ಎಲ್ಲರಿಗೂ ಹೇಳಿಸಿದ ನವೀನ ಕೃತಿ.

ಬೆಲೆ ಕೇವಲ: 0—8—0

ಪ್ರತಿಗಳಿಗೆ ಬರೆಯಿರಿ:—
ನವಭಾರತ ಪುಸ್ತಕ ಭಂಡಾರ, ಉಡುಪಿ.
— ಅಥವಾ —
ನವಯುಗ ಪ್ರೆಸ್, ಉಡುಪಿ, ದ. ಕ.

ತಯಾರಾಗುತ್ತಿದೆ—
ಸರ್ವಧಾರಿ ಸಂವತ್ಸರದ,
ಪಂಚಾಂಗ
ಮೆನೇಜರ್,
ನವಯುಗ ಪ್ರೆಸ್, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ನೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಇದೇ ತಾ. **8-2-1948**ನೇ ರವಿವಾರ ಸಾಯಂ, ಘಂಟೆ **6**ಕ್ಕೆ ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ
ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ
ವಿಖ್ಯಾತ ಗಾಯಕಿ
ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಇವರ
ಸಂಗೀತ ಕಚೇರಿ
ಆಸ್ಥಾನ ವಿದ್ವಾನ್ ಶ್ರೀ. ಚೌಡಯ್ಯ ಇವರ ಪಿಟೀಲು ಶ್ರೀ. ಕಲ್ಪತಿ ರಮಾನಾಥನ್-ಇವರ ಮೃದಂಗ. ಶ್ರೀ. ಅಲಂಗುಡಿ ರಾಮಚಂದ್ರನ್ ಇವರ ಘಟವಾದ್ಯ.
ಟಿಕೇಟು ದರ: ರೂ. **100**, ರೂ. **25**, ರೂ. **10**, ರೂ. **5**.

ದಕ್ಷಿಣ ಕನ್ನಡ

ಉಚ್ಚಿಲ—ಆರೋಗ್ಯ ಮತ್ತು ಶಿಶು ಸಪ್ತಾಹವು ತಾ. 19ರಲ್ಲಿ ಶ್ರೀ ಮಾಳೂರು ತಿಮ್ಮಣ್ಣ ಹೆಗ್ಗಡೆಯವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜಿಲ್ಲಾ ಹೆಲ್ತ್ ಬೋರ್ಡ್ ಅಧ್ಯಕ್ಷರಿಂದ ಸ್ಥಾಪಿಸಿದ ಸಮಿತಿಯ ಬೆಂಬಲದಿಂದ ವಿಜೃಂಭಣೆಯಿಂದ ಜರಗಿತು.

ಯೆಣ್ಣೇರು—ಶಾಲೆಯಲ್ಲಿ 19-12-47ರಲ್ಲಿ ಶಿಶು ಸಪ್ತಾಹವು ಶ್ರೀ ಆರ್. ಎಸ್. ಸಂಜೀವಕಾರ್, ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು.

ಬನ್ನಾಡಿ—ಆರೋಗ್ಯ ಮತ್ತು ಶಿಶು ಸಪ್ತಾಹವು ತಾ. 14-12-47ರಿಂದ ತಾ. 20-12-47ರ ತನಕ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು.

ಗಂಗೆಯ ಸ್ಮಾರಕ ಫಂಡು, ಮುಂಬಾಯಿ—ಇದರ ೧೯೪೮ನೇ ಇಸವಿಯ ಹೊಸ ಕಾರ್ಯಕಾರಿ ಸಮಿತಿಗೆ ೧ ಶ್ರೀಗಳಾದ ಡಿ. ಯಸ್. ಸುವರ್ಣರು. (ಅಧ್ಯಕ್ಷರು) ಬಿ. ಲಕ್ಷ್ಮಣ ವೈ ಸುವರ್ಣರು. (ಕಾರ್ಯದರ್ಶಿ) ಬಾಬು ಟಿ. ಸಾಲ್ಯಾನರು. (ಕೋಶಾಧಿಕಾರಿ) ವಿ. ರಾಜು ಕೆ. ಶ್ರೀಯಾನರು. ಕೆ. ಕೃಷ್ಣಪ್ಪ ಎ. ಬಂಗೇರರು, ಮತ್ತು ಬಿ. ಸೇಸು ಸುವರ್ಣರು. (ಸದಸ್ಯರು) ಆರಿಸಲ್ಪಟ್ಟಿರುವರೆಂದು ಕಾರ್ಯದರ್ಶಿಯವರು ಸೂಚಿಸುತ್ತಾರೆ.

ಪೆರಡಾಲ:—ತಾ. 4-1-1948ನೇ ಆದಿತ್ಯವಾರ ಪೆರಡಾಲ ನವಜೀವನ ಹೈಸ್ಕೂಲಿನ ವರ್ಧಂತ್ಯುತ್ಸವವು ರಾವ್ ಬಹದೂರ್ ಡಾ. ಯು. ಕೇರಳ ಪೈ ಬಿ. ಎ. ಎಂ. ಬಿ. ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಪಾದೆಬೆಟ್ಟು:—ಶ್ರೀ. ವಿಷ್ಣುಮೂರ್ತಿ ದೇವ ಪಾಠಶಾಲಾ ವರ್ಧಂತ್ಯುತ್ಸವವು ತಾ. 27-12-47ರಲ್ಲಿ ಶ್ರೀ. ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಶ್ರೀ. ಕೆ. ನರಸಿಂಹಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಕುಂಜಾಲು:—ಆರ್. ಕೆ. ಪಾಟ್ಕರ್ಸ್ ಶಾರದಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಆರೋಗ್ಯ ಮತ್ತು ಶಿಶುಸಪ್ತಾಹವು ತಾ. 19-12-47ರಲ್ಲಿ ಶ್ರೀ. ಎಚ್. ಆರ್. ಪಾಟೀಲರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಹಂದಾಡಿ:—20-12-47ರಲ್ಲಿ ಶ್ರೀ. ತೋನ್ಸೆ ಗೋಪಾಲಕೃಷ್ಣ ಪೈಗಳವರ ಮುಂದಾಳುತ್ವದಲ್ಲಿ ಆರೋಗ್ಯ ಮತ್ತು ಶಿಶುಸಪ್ತಾಹವು ಡಾ। ಕೆ. ನಾರಾಯಣ ಪೈಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಕುಂದಾಪುರ—ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯು ಬರುವ ತಾ. 10-1-48ನೇ ಶನಿವಾರ ದಿವಸ ಕುಂದಾಪುರ ಟೌನಿನಲ್ಲಿ ಜರಗುವುದಕ್ಕೆ ಅ ಸಂಬಂಧ ಸ್ವಾಗತ ಕಮಿಟಿಯವರು ಸಭಾ ಮಂಟಪ, ಊಟ, ಉಪಾಹಾರ ಮುಂತಾದುವುಗಳಿಗೆ ಈಗಾಗಲೇ ಕಮಿಟಿಗಳನ್ನು ರಚಿಸಿ ಅವಶ್ಯವುಳ್ಳ ಕೆಲಸಗಳನ್ನು ಭರದಿಂದ ಮಾಡುತ್ತಿರುವರು. ಬೇರೆ ಬೇರೆ ತಂಡಗಳನ್ನು ರಚಿಸಿ ಧನ ಸಂಗ್ರಹ ಕಾರ್ಯವನ್ನು ಸಹ ಮುಂದೊತ್ತಿದ್ದಾರೆ.

ರಾಮಕುಂಜ—ಕಳೆದ ತಾ 22ರಂದು ಶ್ರೀ ಎಸ್. ಪದ್ಮನಾಭ ಭಟ್ಟರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯು ಅಭಿಪ್ರಾಯದಂತೆ 'ಗ್ರಾಮೋದ್ಧಾರ ಸಂಘ' ವೊಂದನ್ನು ಸ್ಥಾಪಿಸಿ ಸದಸ್ಯರನ್ನು ಆರಿಸಲಾಯಿತು.

ಹಿರಿಯಡ್ಕ—ತಾ. 21-12-47ರಲ್ಲಿ ಆರ್ಯಸಮಾಜ ಮಂದಿರದಲ್ಲಿ ಶ್ರೀ ಸ್ವಾಮಿ ಸದಾನಂದ ಸರಸ್ವತಿ ಮತ್ತು ಶ್ರೀ ಸಾಣೂರು ಮಂಜುನಾಥ ಶಾಸ್ತ್ರಿ ಇವರ ಭಾಷಣಗಳಾದುವು.

ಹರಿಜನರಿಗೆ ಹೊಟೇಲು ಪ್ರವೇಶ ತಿರಸ್ಕಾರ—ಮಾಡಿದ, ಕಾಫಿ ತಿಂಡಿ ಕೊಡಲೊಪ್ಪದ ಕಲ್ಯಾಡಿಯ ಹೊಟೇಲು ಮಾಲಕರೊಬ್ಬರನ್ನು ಕೈದುಮಾಡಿ ತನಿಖೆಗೆ ಗುರಿಪಡಿಸಲಾಗಿದೆ ಎಂದೊಬ್ಬ ಬಾತ್ಮೀದಾರರು ತಿಳಿಸುತ್ತಾರೆ.

ಪುತ್ತೂರು:—'ಸ್ವರಾಜ್ಯ ಸಪ್ತಾಹವು' ಕಳೆದ ತಾ. 20ರಿಂದ ಶ್ರೀಗಳಾದ ಸೇಡಿಯಾಪು ಕೃಷ್ಣಭಟ್ಟ, ಎಸ್. ಎಸ್. ರಾಘವಾಚಾರ್, ರಂ. ಭಾ. ಜೋಶಿ, ರಾ. ನಂ. ಕರಿಗುಡರ, ಶಿವರಾಮ ಕಾರಂತ ಮೊದಲಾದವರ ಭಾಷಣಾದಿ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿಸಲ್ಪಟ್ಟಿತು.

CHAMPAE'S
Snow & Castrex
Sale Distributers for India
Prop: K. G. NAYAK,
Santhekatte, UDIPI, S K.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 702/1947.

ವಾದಿ—ಶೇಶಗಿರಿ ವೈಪಾಡಿ.

ಪ್ರತಿವಾದಿ—ಶಂಕರನಾರಾಯಣ ಉಡ್ಪ. ಕುಂದಾಪುರ ತಾಲ್ಲೂಕು ಜಪ್ತಿ ಗ್ರಾಮದಲ್ಲಿರುವ ವೆಂಕಪ್ಪ ಉಡ್ಪ ರಮಗ ಶಂಕರನಾರಾಯಣ ಉಡ್ಪರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ,

ಪ್ರತಿವಾದಿಯು ವಾದಿಯಿಂದ ಪಡೆದ ರೂ. 140-0-0ಕ್ಕೆ ತಾ. 18-10-44ರಲ್ಲಿ ಬರೆದುಕೊಟ್ಟ ಡಿಮಾಂಡು ನೋಟಿನ ಹಣ ಬಡ್ಡಿಯನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 19-1-48ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಅ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯ ಪಡಿಸಿರುತ್ತದೆ.

N. S. Parameshwariah.
Advocate for Pltf.

Date 19-12-47, Coondapoor.

ಅಮೃತಾಂಜನ.
ತಲೆವೇದನೆ, ಶಿರೋವೇದನೆ, ಉಳುಕು, ಸಿಕ್ಕಿಗೆ, ಘುಟು ಹಲ್ಲು ವೇದನೆಗಳು ಎದೆನೋವು, ಗಾಯಗಳು ಬಾವು ಕೊಳ್ಳುವುದು, ಜೇನು ಕಚ್ಚುವುದು ಮುಂತಾದ ಬೇನೆ ನೋವು ಮೊದಲಾದ ಎಲ್ಲಾ ರೋಗಗಳಿಗೂ.
REGD.
ಔಷಧ ಮಳಿಗೆಗಳಲ್ಲಿ ಮತ್ತು ಸಕಲ ಅಂಗಡಿಗಳಲ್ಲಿ ದೊರೆಯುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

First aid to Beauty

ಸೌಂದರ್ಯದ ಪ್ರಥಮ ಚಿಕಿತ್ಸೆ

ಮನುಷ್ಯನು ಅನಾದಿ ಕಾಲದಿಂದಲೂ ಮತದ ಕರ್ಮಗಳನ್ನು ಮಾಡುವಾಗ ಶ್ರೀಗಂಧವನ್ನು ಉಪಯೋಗಿಸುತ್ತಿರುವನು. ಅದರ ಮನೋಹರ ಸುವಾಸನೆಯು ಮೂಗಿಗೆ ಅಪ್ಯಾಯಮಾನವುಂಟುಮಾಡುವುದಲ್ಲದೆ ಮನಸ್ಸಿಗೂ ಬಹು ಸುಖವನ್ನು ಕೊಡುವುದು. ಆದರೆ ಕೇರಳಾ ಶ್ರೀಗಂಧದ ಸಾಬೂನು ಇನ್ನೂ ಹೆಚ್ಚಿನ ಪಾಲ ಭ್ಯದಿಂದ ಕೂಡಿದೆ—ಅದು ನಿಮ್ಮ ಮುಖ ಕಾಂತಿಯನ್ನು ಹೆಚ್ಚಿಸುವುದು. ಇದು ಪ್ರಾಕೃತಿಕ ಸೌಂದರ್ಯಕ್ಕೆ "ಪ್ರಥಮ ಚಿಕಿತ್ಸೆ"ಯಾಗಿರುವುದು.



Manufacturers
FAS-KS-I
Kerala Soap Institute, Calicut

NOTICE

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

R. E. P. No. 696/1947
in O. S. No 478/1942

1. ಡಿಕ್ರಿ ಹಕ್ಕು ಮೇಲ್ಬೀಟುದಾರಳು ವಿಲಾಸಿನಿ ಯಾನೆ ಚಂದ್ರಪ್ರಭಾ ಅಮ್ಮ, ನರಸಿಂಹ ಕಾಮ್ತಿಯವರ ವಿಧವೆ, ಕಾಸರಗೋಡು ಕಸ್ಬೆಯಲ್ಲಿರುವವಳು. 2. ಸೀತಾರಾಮ ಭಟ್ಟ, ವೆಂಕಟೇಶ್ವರ ಭಟ್ಟರ ಮಗ, ಕುಂಬಡಾಜೆ ಗ್ರಾಮದ ಯೇತಡ್ಕ ಎಂಬಲ್ಲಿರುವವ (ವಾದಿ)—ಅರ್ಜಿದಾರರು.

ಮತ್ತು.

1. ತ್ರಿವಿಕ್ರಮ ಕುಡಕುಳ್ಳಾಯ, 2. ಪರಮೇಶ್ವರಿ ಅಮ್ಮ, 3. ನಾವೂರು ಶಂಭಟ್ಟ, 4. ರಾಮಚಂದ್ರ ಮಲ್ಯ, 5. Official Receiver of South Kanara, Mangalore, 6. ಬಾಗೀರತಿ ಅಮ್ಮ, 7. ಗೋಪಾಲಕೃಷ್ಣ, 8. ವಿಠಲ, 7-8ವ್ಯಾಸರರು.. (ಡೈಫಾಂಡೆಂಟರು)—ಪ್ರತಿವಾದಿರು.

ಇವರೊಳಗೆ.

ಸದ್ರಿ ಅರ್ಜದಾರರ ಕಡೆಯಿಂದ ಬಂದಿರುವ ನೋಟಿಸು, ತಾ 20-12-1947

1ನೇ ಅರ್ಜಿದಾರಳು 2ನೇ ಅರ್ಜಿದಾರನಿಗೆ ಪಡಕೊಂಡ ಡಿಕ್ರಿ ಮೇಲ್ಚೀಟು ಮಂಜೂರು ದುಪಡ್ಸಿ ಡಿಕ್ರಿಯಲ್ಲಿ ವಿಧಿಸಿದ ಸ್ಥಿರಾಸ್ತಿಗಳು ಹರಾಜಿನಿಂದ ಕ್ರಾಫ್ಟ್ ವಜಾ ಮಾಡಿಸಿಕೊಳ್ಳುವ ಮಾಡಿದ ಮೋಲ್ಯಂಡ ಅಪ್ಲಿಕೇಶನ್ ತಾ 5-1-1948ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಇದಕ್ಕೆ ಆಕ್ಷೇಪವಿದ್ದವರು ತಮ್ಮ ಆಕ್ಷೇಪವನ್ನು ಕೋರ್ಟಿನಲ್ಲಿ ಜಾಹೀರುಮಾಡಬೇಕು.

Sd/ **K. Ganesh Rao,**
B. A., L. L. B.
Vakil.

Kasargod, Dated 20-12-1947.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 433/44 S. E. A. 185/4.

ಅರ್ಜಿದಾರ—ಅಂಜಪ್ಪ.

ಎದುರು—ಶೇಷಿ ಹೆಂಗಸು ಸಹಾ.

ಸದ್ರಿ ಅಮಲ್ಜಾರಿಯ 2-3ನೇ ಎದುರಾಳಿಗೆ ತಿಳಿಯಪಡಿಸುವುದು.

2. ರಾಮ, 3. ಕೃಷ್ಣ, 1ನೇ ಎದುರಾಳು ಶೇಷಿ ಹೆಂಗಸಿನ ಮಕ್ಕಳು, ಕುಂದಾಪುರ ತಾಲ್ಲೂಕು ಬೈಂದೂರು ಗ್ರಾಮ.

ಮೇಲಿನ ಡಿಕ್ರಿಯಲ್ಲಿ ನೀವು ವಗೈರೆಯವರ ಆಸ್ತಿಯನ್ನು ಜಪ್ತಿ ಮಾಡಿಸುವರೆ ಸದ್ರಿ ಅಮಲ್ಜಾರಿಯನ್ನು ಕ್ರಮಪ್ರಕಾರ ಜಾರಿಗೆ ಮಾಡಬೇಕೆಂತ ಅರ್ಜಿದಾರನು ದಾಖಲುಮಾಡಿದ ಸದ್ರಿ ಅರ್ಜಿ ತಾ 12-1-48ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11 ಸದ್ರಿ ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Mayaya Shett
Advocate for Petr.

ತಾ. 12-12-47 ಮೊಕ್ಕಾಂ:-ಕುಂದಾಪುರ.

ದಿ ಮೂಲ್ಕಿ ಬೇಂಕ್
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

(೩ನೇ ಪುಟದಿಂದ).

ಹಾರಾಟದ ಗಾಡಿಗೆ ಬಂದೆವು; ಅದರಲ್ಲೂ ನಾವೊಬ್ಬರೇ ಅಲ್ಲ. ನಾವು ನಂಬ್ರ ೩ನೇಯವರು. ದೇವರೇ, ವಂದನೆಗಳು. ಅಂತೂ ನಮ್ಮ ಸರದಿ ಬಂತು. ನಾವೀಗ ಇಳಿದಂತಾಯಿತು. ತಳಕ್ಕಾರುವುದರಲ್ಲೇ ಸರ್ವ ಲಕ್ಷ್ಯವನ್ನೂ ಕೊಡಬೇಕಾಗಿರುವ ನಮಗೆ ದೃಷ್ಟಿಯನ್ನು ಸುತ್ತಲೂ ಓಡಿಸಲಾಗುವದಿಲ್ಲ. ಆದರೂ ಶ್ರೀನಗರ ಪಟ್ಟಣದ ಸುಂದರ ನೋಟವು ನಮ್ಮ ಕಣ್ಣ ಮುಂದಿದೆ; ನಾವೀಗ ಬಹುಮಟ್ಟಿಗೆ ಅದರಲ್ಲೇ ಇದ್ದೇವೆನ್ನಬಹುದು. ಗಡಿಯ ಮೇಲೆ ಬಂದೆವು; ಹಾಂ. ಮೃದು ಚೀತ್ಕಾರ ಮಾಡುತ್ತಾ, ವಿಮಾನದ ಗಾಲಿಗಳು ನೆಲವನ್ನು ಸ್ಪರ್ಶಿಸಿದುವು; ಅಂತೂ ನಾವಲ್ಲಿ ಮುಟ್ಟಿದಂತಾಯಿತು. ಅದೊಂದು ಹುಲ್ಲು ಬೆಳೆದ ವಿಮಾನ ನಿಲ್ದಾಣ; ಅಷ್ಟೊಂದು ಉದ್ದ ಕೂಡಾ ಇಲ್ಲ. ಆಕಾಶ ಪ್ರೋಷಾಕನ್ನು ಅಲ್ಲಿಯೇ ಕಳಚಿಟ್ಟು ವಿಮಾನಗಳ ಸಾಲಿನ ನಡುವಿನಿಂದ ನಾವು ನುಸುಳಿಕೊಂಡೆವು. ಎಲ್ಲಾ ಇಳಿದರು. ಒಳ್ಳೇದು; ಸ್ವಿಚ್ ತೆಗೆಯಿರಿ. ಸರಿ; ನಾವು ಕೆಲಸವೊಂದನ್ನು ಮಾಡಿಬಿಟ್ಟೆವು.

* * * *

ನೀವು ನಿಮ್ಮ ಇಡೀ ಜೀವಮಾನದಲ್ಲಿ ಮರೆಯಲಾಗದುದೆಂದರೆ ಶ್ರೀನಗರದ ಛಳಿ ಮತ್ತಲ್ಲಿಯ ಧೂಳು. ವಿಮಾನದ ಹೊರೆಗಳನ್ನಿಳಿಸಿಕೊಳ್ಳಲು ಸ್ವಲ್ಪ ಸಮಯ ತಾಗುತ್ತದೆ. ಆಗಿನ ಪ್ರಥಮಾವಶ್ಯ ಸಮಸ್ಯೆಯೆಂದರೆ ಸೇಬುಹಣ್ಣುಗಳು. ನಿಜಕ್ಕೂ ಯಾರಾದರೂ ಗಡಿಬಿಡಿವಾಲರು ಬಿಟ್ಟುಹೋದ ಹಣ್ಣುಬುಟ್ಟಿ ತೋಣೆಯಲ್ಲಿರಬೇಕು. ಕದ್ದು ತಿನ್ನುವುದು ಆಗ ಸತ್ಯಕ್ಕೂ ಕಾಲೋಚಿತವೇ. ಆ ಮೇಲಿನ ಯೋಚನೆ ನಗರದೊಳಗೆ ನುಸುಳುವುದು ಹೇಗೆ ಎಂಬುದೇ. ಆ ಚೆವರ್ಲೆಟ್ ಪೇಟೆಗೆ ಹೋಗುವಂತಹದೋ ನೋಡೋಣ. ಹೋ! ಆ ಕಾರಿನಲ್ಲಿ ಎಂಟು ಮಂದಿ ಈಗಲೇ ತುಂಬಿದ್ದಾರೆ. ಪರವಾ ಇಲ್ಲ; ಇನ್ನೊಂದು ಮೂರು ಮಂದಿಯನ್ನು ತುಂಬಿಸಿಕೊಳ್ಳುವುದು ಹೆಚ್ಚಲ್ಲ. ಬ್ರಿಗೇಡ್ ಮುಖ್ಯ ಕಚೇರಿಯಿಂದ ಒಂದು ಪಾಸ್ ಪಡಕೊಂಡು ನಾವು ಪೇಟೆಗೆ ಹೊರಟೆವು.

ಅದು ದೀರ್ಘ ರಸ್ತೆ; ಪೇಟೆಯೊಳಗಡೆ ಹೋಗುತ್ತಿದೆ. ರಸ್ತೆ ಖಾಲಿ ಬಿದ್ದಂತೆ ಕಾಣುತ್ತದಾದರೂ ಪೂರ್ಣವಾಗಿ ಅಲ್ಲ. ಅರೇ! ಅನುಕ್ರಮವಾಗಿ ಪ್ರತೀ ಐದು ಮಿನಿಟಿಗೊಮ್ಮೆ ನಮ್ಮನ್ನು ತಡೆದು ಪ್ರಶ್ನಿಸುವವರಿದ್ದಾರೆ. ಆ ನಾಗರಿಕ ಪಹರೆಗಾರರು ತಮ್ಮ ರೈಫ್ಲು ಚಾಚಿ ಘರ್ಜಿಸುವ ರೀತಿ ತೀರಾ ಅಹಂಕಾರದ್ದೇ. "ಎಲ್ಲಾ ಸರಿ" "ಮುಂದೆ ಸಾಗಿ"—ಆ ಮೇಲೆಯೇ ನಾವು ಮುಂದೆ ಹೋಗಬೇಕು. ನಮಗೆ ಮಾರ್ಗದರ್ಶಿಯಾಗಿರುವ ಕಾಶ್ಮೀರೀ ಮನುಷ್ಯನು ಈ ನಾಗರಿಕ ಸೇನೆಯ ಸ್ಫೂರ್ತಿಯ ಪರಿಚಯ ಮಾಡಿಕೊಡುತಿದ್ದಾನೆ. ಇವರಲ್ಲಿ ಹಲವರು ಈ ಮೊದಲೆಂದೂ ರೈಫ್ಲುಕೋವಿ ಹಿಡಿದವರಲ್ಲ. ತಮ್ಮ ಜನ್ಮಭೂಮಿಯನ್ನು ಉಳಿಸಿಕೊಳ್ಳುವ ಈ ಕಾರ್ಯದಲ್ಲಿ, ಸರ್ವದಾ ಅಣ್ಣ ತಮ್ಮಂದಿರೇ ಆಗಿರುವ ಅಲ್ಲಿಯ ಹಿಂದೂ ಮುಸ್ಲಿಮರ ಸ್ಫೂರ್ತಿ ಕಿಡಿ ಸದಾ ಉರಿಯುತ್ತಿರುವಂತೆ, ಸ್ಟಾಲಿನ್‌ಗ್ರಾಡ್ ರಕ್ಷಣೆಗೆ ರಶ್ಯಾನರು ಕೊಟ್ಟಿದ್ದ ಆ ಚಿರಸ್ಮರಣೀಯ ಹೋರಾಟದ ನೆನಪು ಗಾಳಿಯಾಗಿ ಎಲ್ಲರ ಹೃದಯಕ್ಕೂ ಬೀಸುತ್ತಿದೆ.

ನಾವೀಗ ಮೊದಲನೇ ಸೇತುವೆಗೆ ಬಂದೆವು—ಕಾಶ್ಮೀರದಲ್ಲಿ ಏಳು ಸೇತುವೆಗಳಿವೆ. ಆ ಮೇಲೆ ಮಾರ್ಕೆಟ್ ಸ್ಥಳಕ್ಕೆ ಮುಟ್ಟಿದೆವು. ಇಲ್ಲಿಯ ಜನಜೀವನ ನಿರ್ಧಾಸ್ತಗಳೇನೂ ಕವಡದೆ ನಿತ್ಯದಂತೆ ಸಾಗುತ್ತಿರುವುದನ್ನು ಕಂಡು ನಾವಾಶ್ಚರ್ಯಗೊಂಡಿದ್ದೇವೆ. ಸರಿ. ನಾವು ಪೇಟೆ ತುಂಬಾ ಸುತ್ತಾಡಿದೆವು. ನೋಟಾರ್ಹ ಸ್ಥಳಗಳನ್ನೆಲ್ಲಾ ನೋಡಿದೆವು. ದಾಲ್ ಸರೋವರವು ನಮ್ಮ ಸಮಯದ ಗಣ್ಯ ಭಾಗವನ್ನು ಸೀರು ಕುಡಿಸಿತು. ನಾವಲ್ಲಿಂದ ಮರಳುತ್ತಾ ಅಲ್ಲಿಯ ಅಸಂಖ್ಯಾತ ಗೃಹಕ್ರೀಣೆಗಳ ಕಡೆಗೆ ಆಶಾಪೂರ್ಣ ದೃಷ್ಟಿ ಬೀರುತ್ತಾ ಮುಂದುವರಿದೆವು. ವಾಸಿಸತಕ್ಕ ಸ್ಥಳವೆಂದರೆ ತ... ಅಕಸ್ಮಾತ್ತಾಗಿ ನಮ್ಮ ಸತ್ಕಾರದಾತನಿಂದ 'ಶೇಕ್ ಸಾಹೇಬರನ್ನು ನೋಡೋಣವೆ'? ಎಂಬ ಸೂಚನೆ ಬರುತ್ತದೆ. "ಓ ಆಗಬಹುದು" ಎನ್ನುತ್ತೇವೆ. ಆದರೆ ನಮ್ಮನ್ನು ನೋಡುವದಸಾಧ್ಯವಾಗುವಷ್ಟು ಕೆಲಸ ಭರದಲ್ಲಿ ಶೇಕರಿರಬಹುದು ಎಂಬ ಸಂದೇಹ ನಮಗಿದ್ದೇ ಇರುತ್ತದೆ.

ನಾವೊಂದು ಅತ್ಯಂತ ಸಾದಾ ರೀತಿಯ ಕಟ್ಟಡದಿದಿರು ನಿಂತೆವು; ಪ್ರಥಮತಃ ಅಬ್ಬರದೊಂದಿಗೆ ತಡೆಗಟ್ಟಲ್ಪಟ್ಟೆವು; ಕೊನೆಗೆ ಮೇಲೆ ಬರುವಂತೆ ಆಹ್ವಾನ ಪಡೆದೆವು. ನಮಗೆ ಸುಸ್ವಾಗತವಿದೆ, ಎಂದು ಶೇಕ್ ಸಾಹೇಬರಿಂದ ಕರೆಬರುತ್ತದೆ. ಇದು ಯಥಾರ್ಥತೆಗೂ ಮಿಕ್ಕಿದ ಅತಿಶಯೋಕ್ತೀಕರಣ. ಉದ್ಧಗನ, ಕಸ್ಮೀರಕ ಧಾರಿ ಮತ್ತು ಆಗಣೇಯ ವ್ಯಕ್ತಿ ಶೇಕ್ ಅಬ್ದುಲ್ಲಾ—ಕಾಶ್ಮೀರದ ಸಿಂಹ—ಸ್ವತಃ ನಮಗೆ ಅಭಿವಂದನೆ ಕೊಟ್ಟು ಸ್ವಾಗತಿಸಿಕೊಳ್ಳುತ್ತಾರೆ. ನಾವಾಗ ಒಂದು ಅವಘಡಕ್ಕೀಡಾದವರಂತಿರುತ್ತೇವೆ. ಅವರ ವ್ಯಕ್ತಿತ್ವವು ಆ ಕೋಣೆಯನ್ನು ತುಂಬಿರುತ್ತದೆ. ಅವರು ನಮ್ಮಿಂದಾದ ಕೆಲಸಕ್ಕಾಗಿ—ನಿಜಕ್ಕೂ ಅತಿ ಸಣ್ಣ ಕೆಲಸ—ನಮಗೆ ನೈಮಾನಿಕರಿಗೆ, ಧನ್ಯವಾದ ಕೊಡುತ್ತಾರೆ. ನಮ್ಮ ಸಂಕಷ್ಟಮಯ ಸರ್ವದಿನಗಳೂ ಸಾರ್ಥಕವಾಗಲು ಇದೊಂದೇ ಸಾಕು. ಬರಮುಲಾವನ್ನು ತಿರುಗಿ ಗೆದ್ದುಕೊಂಡ ಸುದ್ದಿಯೂ ಅದರೊಂದಿಗೆ ಅತ್ಯಾಚಾರಗಳ ಮತ್ತು ಧೈರ್ಯ ಸಾಹಸಗಳ ವರ್ತಮಾನಗಳೂ ಬರುತ್ತವೆ. ಆಶ್ರಯವಿತ್ತ ಮುಸ್ಲಿಮ್ ಉಪಚಾರಕರೇ ಹಿಮ್ಮೆಟ್ಟುವ ಧಾಳಿಗಾರರಿಂದ ತುಂಡರಿಸಲ್ಪಟ್ಟಿದ್ದರು. ಮುಸ್ಲಿಮರು ತಮ್ಮ ಹಿಂದೂ ಸ್ನೇಹಿತರನ್ನು ತಮ್ಮ ಗೋಡೌನುಗಳಲ್ಲೂ ಹಾದಿಗಡ್ಡವಾದ ಸಂದು ಮರೆಗಳಲ್ಲೂ ಗುಟ್ಟಿನಲ್ಲಿ ಅಡಗಿಸಿಟ್ಟು ರಕ್ಷಿಸಿದ್ದರು. ನಾವು ಶೇಕರೊಡನೊಂದು ಪ್ರಶ್ನೆ ಕೇಳಿದೆವು: "ಜನಮತ ಸಂಗ್ರಹಿಸಿದಲ್ಲಿ ಪರಿಣಾಮವೇನಾದೀತು?" "ಈ ಪ್ರಶ್ನೆಯೀಗ ಮುಂದೆಬರುವುದಿಲ್ಲ. ಜನರಿಂದ ನಿರ್ಧಾರ ಸಿಂಧುತ್ವವನ್ನು ಕೇಳುವುದೊಂದೇ ಉಳಿದಿದೆ" ಎನ್ನುತ್ತಾರೆ ಶೇಕ್ ಸಾಹೇಬ್. "ನನ್ನ ಮಿತ್ರರೇ, ಆ ಕತ್ತಲೇ ಕಂದರಗಳಲ್ಲೊಮ್ಮೆ ತಿರುಗಾಡಿಕೊಂಡು ಬನ್ನಿ. ಆಗ ಇಲ್ಲಿಯ ಜನರಲ್ಲಿರುವ ಸೌಹಾರ್ದತಾ ಸ್ಫೂರ್ತಿಯನ್ನು ಸ್ವತಃ ತಿಳಿಯುವಿರಿ. ನಿಮಗೆ ಏನೆಲ್ಲಾ ಕೇಳಲಿಕ್ಕಿರುವುದೋ ಅವೆಲ್ಲವನ್ನೂ ಅವರೊಡನೆಯೇ ಪ್ರಶ್ನಿಸಿರಿ" ಎಂದೇ ಶೇಕ್ ಸಾಹೇಬರ ಮಾತು. ಅಷ್ಟರಲ್ಲಿ ನಾವು ಹೊರಡುವ ಹೊತ್ತಾಯಿತು. 'ಫೋಟೋ' ತೆಗೆದಾದ ಮೇಲೆ, "ನಾವು ತಮ್ಮನ್ನು ಮತ್ತೊಮ್ಮೆ ಭೇಟಿಯಾಗುವೆವೆಂಬಾಶೆಯಿದೆ" ಎಂದು ಶೇಕ್ ಸಾಹೇಬರನ್ನು ಬೀಳ್ಕೊಂಡು ಹಾದಿ ಹಿಡಿದೆವು. ಈಗ ನಮ್ಮ ದೃಷ್ಟಿ ತೀಕ್ಷ್ಣ, ಗಂ... ...ದ ಬೀದಿಗಳಲ್ಲೂ, ಆ ತುದಿಯಿಂದೀತುದಿ ವರೆಗೂ ಹಿಂದುಗಳೂ ಮುಸ್ಲಿಮರೂ ಒಟ್ಟಾಗಿ, ಯುದ್ಧ ವಾರ್ತೆಗಳನ್ನು ಕೇಳುವುದಕ್ಕಾಗಿ ಹಾದಿ ಮೂಲೆಗಳಲ್ಲಿ ಜಮೆಯಾಗಿದ್ದರು. ನಾವು ಮಾರ್ಕೆಟ್ ಸ್ಥಳಕ್ಕೆ ಮರಳಿ ಬಂದೆವು; ಸೇಬು ಹಣ್ಣಿನ ಬುಟ್ಟಿಗಳನ್ನು ಪಡಕೊಂಡು ಹೊರಟೆವು; ಮತ್ತೊಂದು ಕೀರ್ತಿದಾಯಕ ನೋಟವು ನಮ್ಮನ್ನು ಸ್ವಾಗತಿಸುತ್ತದೆ. ಒಂದು ಆಟದ ಬಯಲು. ಅಲ್ಲಿ ಅಸಂಖ್ಯಾತ ತರುಣ ದಳಗಳು ಒಬ್ಬ ಸಿಪಾಯಿಯ ನೇತೃತ್ವದಲ್ಲಿ 'ಡ್ರಿಲ್' ಮಾಡುತ್ತಿವೆ. ಸಾಲು ತಪ್ಪದೆ ಒಂದು ನ್ಯೂ ಉದ್ದಕ್ಕೂ ಜನರು ತಾಳ್ಮೆಯಿಂದ ಕಾಯುತ್ತಾ ನಿಂತಿರುವುದೊಂದು ಇನ್ನೂ ಆಶ್ಚರ್ಯದ ಸಂಗತಿ. ನಮ್ಮ ಮಾರ್ಗದರ್ಶಕ ಕಾರಣವನ್ನು ನಮಗೆ ಹೇಳುತ್ತಾನೆ-ಅವರೆಲ್ಲಾ ಯುದ್ಧ ವಿದ್ಯೆಗಳನ್ನು ಕಲಿಯುವುದಕ್ಕಾಗಿ ನಿಂತವರಂತೆ!

ನಾವು ವಿಮಾನ ನಿಲ್ದಾಣಕ್ಕೆ ಮರಳಿ ಬಂದೆವು. ಅಲ್ಲಿ ನಾವು ಮರಳಿ ಒಯ್ಯುವ ಸಾಮಾನುಗಳು ಸಿದ್ಧವಾಗಿರುವುದನ್ನು ಕಂಡೆವು. ಡೆಲ್ಲಿಗೆ ಮರಳಲಿಚ್ಛಿಸುವ ಕೆಲವು ನಿರಾಶ್ರಿತರೂ ಇದ್ದರು. ಅವರ ಪಾಸುಗಳ ಪರಿಶೀಲನೆ ನಡೆಯಿತು; ಮತ್ತವರನ್ನು ಸಾಮಾಗ್ರಿಗಳ ಸಮೇತ ವಿಮಾನದೊಳಗೆ ಹೊಗಿಸಲಾಯಿತು. ಎಲ್ಲವೂ ಸರಿಗೊಂಡಿತಷ್ಟೆ? ಇಲ್ಲ; ವಿಮಾನದೊಳಗಡೆ ಒಂದು ಗಲಿಬಿಲಿಯೆದ್ದಿದೆ. ಅಲ್ಲಿ ತಪ್ಪಿಬಂದವನಿದ್ದಾನೆ. ತನ್ನ ತಮ್ಮನನ್ನು ಬಿಟ್ಟುಬಿಟ್ಟೇ ಇವ ಬಂದು ಹೊಕ್ಕಿದ್ದಾನೆ. ಈಗ ನಾವೇನು ಮಾಡಬೇಕು? ಇವನನ್ನೂ ಇವನ ಸಾಮಾಗ್ರಿಗಳನ್ನೂ ಕೆಳಗಿಳಿಸುವುದೋ? ಅಥವಾ ಅವನ ತಮ್ಮನನ್ನು ಸಹಾ ಹತ್ತಿಸಿಕೊಳ್ಳಬೇಕೋ? ದೇವರೇ; ಆಗಲಿ; ತಮ್ಮನನ್ನೂ ಒಳಗೆ ಹಾಕಿಬಿಡಿ. ಈ ಕೆಲಸಕ್ಕೆ ತಡವಾದುದು ಅತೀ ಸ್ವಲ್ಪ. ಸರಿ; ನಾವು ಮತ್ತೊಮ್ಮೆ ಆಕಾಶಗಾಮಿಗಳಾಗಿದ್ದೇವೆ. ನಮ್ಮ ಭಾವನೆಯಲ್ಲಿ ನಾವು ವ್ಯಯಿಸಿದ ಆ ಗಿಡ್ಡ ದಿನವೇ ಸಾಗಿದಂತಿದೆ. ಮತ್ತೆ ಕೆಲವೇ ಘಂಟೆಗಳ; ನಾವು ಪುನಃ ಡೆಲ್ಲಿಗೆ ಬಂದೆವು. ನಿರಾತಂಕವಾಗಿ ಇಳಿದೆವು; ಅಂತೂ ಮನೆಸೇರಿದೆವು. ಹೋ! ಪುನಃ ಹುಚ್ಚು ನುಗ್ಗಾಟ-ಈ ಸಲ ಮನೆ ಸೇರುವುದಕ್ಕಾಗಿ. ಈದಿನ ನಾವೇನು ಮಾಡೋಣ? ಸಿನೆಮಕ್ಕೆ ಹೋಗೋಣವೆ? ಅಥವಾ 'ಇಂಪೀರಿಯಲ್'ನಲ್ಲಿ ಅಪರಾಹ್ನವನ್ನು ಕಳೆಯೋಣವೆ? ಇಲ್ಲ. ಆಯಾಸ ಕಾದಿದೆ. ಲಿಯೇಸನ್ ಆಫೀಸರನು ಪಸಂದಾದ ನಗೆ ಚೆಲ್ಲುತ್ತಾ ಬರುತ್ತಾನೆ-ಇವನನ್ನನುಸರಿಸಿ ಒರುವುದಾವುದೆಂಬುದು ನಿಮಗೆ ಗೊತ್ತೇ ಇದೆ. ಪರಿಸ್ಥಿತಿಯು ಒತ್ತಡವಂತಹದು; ಇಂದ ಮೇಲೆ ಮತ್ತೊಮ್ಮೆ ಹಾರಾಟ ಮಾಡಲು ನಾವು ಬೇಸರಿಸುವಂತಿದೆಯೆ? ಇಲ್ಲ; ಎಷ್ಟಕ್ಕೂ ಇಲ್ಲ. ನಿಜಕ್ಕೂ ನಾವು ಹರ್ಷಗೊಂಡೆವು ಪುನಃ ಇದ್ದಲ್ಲೊಡ್ಡಿದೆವು; ನಾವು, ಜನ್ಹಾನಾಜರಕರು ಮತ್ತೊಮ್ಮೆ ಕಾಶ್ಮೀರ ಪ್ರವಾಸಕ್ಕೆಕೊಂಡೆವು. ಏನು, ದುಃಖವಿದೆಯೆ? ಯಥಾರ್ಥನಾಗಿಯೂ ಸತ್ಯಕ್ಕೂ ಇಲ್ಲ.

ಬಾಲಕರು ಆರೋಗ್ಯಕರ...

(ಪ್ರಭೂಸ್) ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'

ಬಾಲಾಮೃತ

ಪ್ರಭೂಸ್ ಬಾಲಾಮೃತದ ಖಾತ್ರಿಗೆ ಬಾಳಿಕೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ, ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಜಿಸ್ಟರ್ಡ್)
ಕುಂಜಾಲು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.

ವಿಶ್ವಾಸ ಮತ್ತು ಭದ್ರತೆ ನಾಮಧೇಯವು
ಸರ್ವರ ಅನುಕೂಲತೆಗಳಿಗೂ ನಿಲುಕುವಂತಹ ಆಕರ್ಷಕ ಯೋಜನೆಗಳನ್ನು ಸಲ್ಲಿಸುವವು
ಲಾಭದಾಯಕ ಶರತ್ತುಗಳಿಂದ ಸ್ವಸ್ಥ ಪ್ರತಿನಿಧಿಗಳು ಬೇಕಾಗಿದ್ದಾರೆ
ವಿವರಗಳಿಗೆ ಬರೆಯಿರಿ:—
ದಿ ಮೆನೇಜಿಂಗ್ ಡೈರೆಕ್ಟರ್,
ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕೊ.,
ಲಿಮಿಟೆಡ್.
ಹಸನ್ ಚೇಂಬರ್ಸ್, ಪಾರ್ಸಿ ಬಜಾರ್ ಸ್ಟ್ರೀಟ್,
ಫೋರ್ಟ್, ಬೊಂಬಾಯಿ 1

Approved firm by the Govt. of Mysore Certified by the Agent of the Govt. of Celone & Indian.

ಮಾನವಂತಹನದ ರೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇ
ಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1—4—0 ಟಿ. ದ್ವಾರ 1—8—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ
ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-*Home Remedies*

ಬೆಲೆ ರೂ. 2-0-0

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ
ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ.
ಹೆರಿಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೊ ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಗಳ್ಗೆ ತಕ್ಕಂತಹ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುದಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧದ ಬಾಟ್ಲಿಗಳು ಹತ್ತು ಕಡಿಮೆ ಆರುದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಭಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ತುಂಬರಮಾಡಿ ಸ್ಟೋರ್ಸ್, ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕರಮುಡಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ-
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕ್ಷಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಪದಂಶವಾಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ:

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ,

Ayurveda Oushadhalaya. GADAG

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

egd. No M. 5018

8-1-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೭
ವಾರ ೧೯

NAVAYUGA WEEKLY, UDIPI.

FOUNDER: **Hon'ble Mr. A. B. SHETTY,** Health Minister, Govt. of Madras.

Vol. 27
No. 19

THE CANARA MUTUAL Assurance Company, Limited.

Estd: 1935

H. O. **UDIPI**, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.
Bombay Life Building,
Central Office, Udipi.

Branches at:
Mangalore, Calicut, Trivandrum, Madura, Madras, Bangalore & Bombay,

THE VISHWABHARATI INSURANCE COMPANY LIMITED.

Head Office: BOMBAY.

Authorised Capital	Rs.	25,00,000
Issued & Subscribed	Rs	12,00,000
Paid up over	Rs.	8,75,000

Offers All that is best in very class of Insurance.

Our Life Department Specialities

1. Most liberal Policy Conditions.
2. Lowest premium rates consistent with safe'
3. Special plans to suit every pocket.
4. Staff insurance Scheme a mordern requirement
5. Hereditary Commissions to Agents A necessity.

Contact Local Branch:—Bunder, MANGALORE.

Sri K. ISHWARA, M. L. A. — *Life Superintendent.*
Sri. N. N. RAO, — *Branch Secretary*

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒಪ್ಪಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬ್ಯಾಂಕುಗಳ ಹಲವಾರು ಧ್ಯೇಯಗಳಲ್ಲಿ ಮುಖ್ಯವಾದವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೩೦,೦೦೦ಕ್ಕೂ ಮಿಕ್ಕ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ... ನಾಲ್ವತ್ತೆರಡು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲವೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED,

Nambiar's

ARYA VAIDYA SALA
UDIPI

Ideal House for Ayurvedic Treatment.

T. N. Kelu Nambiar,
Vaidya

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0
ನವಭಾರತ ಬುಕ್ ಡಿಪೊ, ಉಡುಪಿ.

ವಿಮೆ ಮಾಡಲಿಕ್ಕೆ, ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ—
ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಪಾಕಿಸ್ಥಾನದ ಹೊಸ ವಿದೇಶ ಮಂತ್ರಿ

ಸರ್. ಮುಹಮ್ಮದ್ ಝಫರುಲ್ಲಾ ಖಾನ್.

ಸರ್ ಮುಹಮ್ಮದ್ ಝಫರುಲ್ಲಾ ಖಾನರು ಪಾಕಿಸ್ಥಾನದ ವಿದೇಶ ಮಂತ್ರಿಗಳಾಗಿ ನೇಮಕಗೊಂಡು ಡಂಗುರ ಬಾರಿಸಹತ್ತಿದ್ದಾರೆ. ಮಿ. ಜಿನ್ನಾ, ಮಿ. ಲಿಯಾಖತರುಗಳ ಶಕ್ತಿ ಭಂಡಾರ ಬರಿದಾಗುತ್ತಾ ಬಂದ ಹೊತ್ತಿನಲ್ಲಿ ಪಾಕಿಸ್ಥಾನಕ್ಕೊಂದು ತುಂಬಿದ ಕೊಡ ದೊರೆತಂತಾಯಿತು--ಸರ್. ಝಫರುಲ್ಲಾ ಕೈಕೊಟ್ಟರು. ನಿಜಕ್ಕೂ ಇವರು ಆ ಹುದ್ದೆಗೆ ಹೇಳಿಸಿದ ಜನ. ಸರ್. ಝಫರುಲ್ಲಾ ಈ ಕಾಲದಲ್ಲಿ ಮುಂದೆಬಾರದಿರುತಿದ್ದರೆ, ನಾಲಿಗೆಯೊಣಗುತ್ತಾ ಬಂದ ನಾಯಕರ ದೆಸೆಯಿಂದಾಗಿ ಪಾಕಿಸ್ಥಾನವೇ ಒಣಗಹತ್ತಿತೇನೋ ಎಂಬ ಸಂದೇಹ ಬರಲವಕಾಶವಿತ್ತು; ಅಥವಾ ಪಾಕಿಸ್ಥಾನವು ನ್ಯಾಯದ ಹಾದಿ ಹಿಡಿಯಹತ್ತಿತೆಂದು ಮಿಕ್ಕವರು ವಂಚನೆಗೀಡಾಗಲು ಸಾಧ್ಯವಿತ್ತು; ಪಾಕಿಸ್ಥಾನದ ಸ್ಥಿತಿ ಹೇಗಿದ್ದರೂ ಮತಿ ಬದಲಾಗಿಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸುವ ಸುಚಿಹ್ನೆಯಾಗಿ ಸರ್. ಝಫರುಲ್ಲಾ ಖಾನ್ ಪಾಕಿಸ್ಥಾನದ ವಿದೇಶ ಮಂತ್ರಿಯಾಗಿ ಅಕಳಿಸ ಹತ್ತಿರುವುದು ಎಲ್ಲರಿಗೂ ಹಿತಕರವೇ.

ಸರ್. ಝಫರುಲ್ಲಾ ಖಾನ್

ಈ ಸಾಹೇಬರಿನ್ನೂ 'ಸರ್'! ಪ್ರತ್ಯಕ್ಷ ಹೋರಾಟಕ್ಕೆಳಸುವಾಗ ಮುಸ್ಲಿಂ ಲೀಗ್ ನಾಯಕರೆಲ್ಲಾ ತಮ್ಮ ಬಿರುದುಗಳನ್ನು ಕಿತ್ತೆಸೆದಿದ್ದರಾದರೂ ಸರ್. ಮುಹಮ್ಮದ್ ಝಫರುಲ್ಲಾರವರು ತನ್ನ 'ಸರ್' ಪದವನ್ನು ಸವರಿಕೊಂಡಿರಲಿಲ್ಲ. ಪಾಕಿಸ್ಥಾನದಲ್ಲಿರುವ ಬೆಲೆಯುಳ್ಳ ತಲೆಗಳಲ್ಲಿ ಇದೂ ಒಂದು. ಸರ್. ಝಫರುಲ್ಲಾ ಕಾನೂನು ತಜ್ಞರು; ವಾದ ನಿಪುಣರು; ಮರ್ಮ ಪಂಡಿತರು. ಅವರು ಫೆಡರಲ್ ಕೋರ್ಟಿನ ಜಡ್ಜರಾಗಿದ್ದ ಮನುಷ್ಯ. ಬ್ರಿಟಿಷ್ ಸರಕಾರವು 1946ರಲ್ಲಿ ಪ್ರಥಮತಃ ಮುಂದಿಟ್ಟಿದ್ದ ಮೇ 16ರ ಘೋಷಣೆಯ ಸಂಬಂಧವಾಗಿ 'ಪ್ರಾಂತಿಕ ಪಂಗಡಗಳು ಮತ್ತದರೊಳಗಿನ ಪ್ರಾಂತ್ಯದ ಹಕ್ಕುಗಳು' ಎಂಬ ಕುರಿತು ಕಾಂಗ್ರೆಸಿಗೂ ಲೀಗಿಗೂ ಅಗ ತೀವ್ರವಾದ ವಿವಾದಗಳೆದ್ದಿದ್ದುವಷ್ಟೆ? ಇಂತಹ ವಿವಾದಗಳೆದ್ದಾಗ ಫೆಡರಲ್ ಕೋರ್ಟಿನ ತೀರ್ಮಾನವನ್ನು ತಿರಸಾವಹಿಸಬೇಕೆಂದು ಅದರಲ್ಲೊಂದು ಸೂಚನೆಯಿದ್ದಿತು. ಪ್ರಾಂತ್ಯದ ಹಕ್ಕನ್ನು ಫೆಡರಲ್ ಕೋರ್ಟಿನಲ್ಲಿ ಸಾಧಿಸೋಣವೇ ಎಂದು ಕಾಂಗ್ರೆಸಿಗೂ ಒಮ್ಮೆ ಮನಸ್ಸಾಗಿದ್ದಿತು. ಆದರೆ ಅದು ನಿರರ್ಥಕವೆಂದು ತಮ್ಮೊಳಗೆ ನಿರ್ಧರಿಸಿ ಕಾಂಗ್ರೆಸಿಗರು ಆ ಯೋಚನೆಯನ್ನೇ ಬಿಟ್ಟಿದ್ದರು. ಸರ್. ಝಫರುಲ್ಲಾ ಫೆಡರಲ್ ಕೋರ್ಟಿನ ಓರ್ವ ಜಡ್ಜನಾಗಿದ್ದುದೂ ಒಂದು ಕಾರಣವಿರಬೇಕು. ಕಾನೂನು ಕಾಯಿದೆಗಳಲ್ಲೇ ಆಡಿದ್ದ ಕೈ ಸರ್. ಝಫರುಲ್ಲಾರದು; ಅದೂ ಕೇಂದ್ರ ಸ್ಥಳದಲ್ಲಿದ್ದುಕೊಂಡೇ. ಫೆಡರಲ್ ಕೋರ್ಟಿನಿಂದ ನಿವೃತ್ತರಾದ ಮೇಲೆ ಸರ್. ಝಫರುಲ್ಲಾರು ಲಂಡನಿನಲ್ಲಿದ್ದಾಗ ಹೈದರಾಬಾದ್ ನಿಜಾಮರ ಮತ್ತು ಆ ಕಾಲದಲ್ಲಿ ನಿಜಾಮರ ಧೋರಣೆಯನ್ನೇ ವಹಿಸಿದ್ದ ಇತರ ಕೆಲವು ರಾಜರ ಪರವಾಗಿ ಏನೋ ವಕಾಲತು ನಡೆಸುತ್ತಿರುವರೆಂಬ ವಾರ್ತೆ ಹಬ್ಬಿದ್ದಿತು. ಸರ್. ಝಫರುಲ್ಲಾರು ಅಟ್ಲೀ, ಬೆವಿನ್, ಕ್ರಿಪ್ಸ್, ಮುಂತಾದವರೊಡನೆ ಅಲ್ಲಿ ಗುಪ್ತ ಮಾತುಕತೆ ನಡೆಯಿಸಿದ್ದೂ ಇದೆ. ಆದರ ಬೇರೆ ಪರಿಣಾಮವೇನಾಯಿತೋ! ಆದರೆ ಆ ವಕಾಲತಿನ ರುಚಿಯಿಂದ ಸರ್. ಝಫರುಲ್ಲಾರ ಜೊಕ್ಕಸವು ಇನ್ನಷ್ಟು ಉಬ್ಬಿರಬೇಕೆಂಬುದೊಂದು ಖಂಡಿತ; ಆ ಮೇಲೆ ಜಾಗತಿಕ ಸಂಘದಲ್ಲಿ ಪಾಕಿಸ್ಥಾನ್ ಪ್ರತಿನಿಧಿ ಮಂಡಲದ ನಾಯಕನಾಗಿ ಸರ್. ಝಫರುಲ್ಲಾ ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಈಗೊಂದು ವಾರ್ತೆ ಬಂದಿದೆ. ಯುದ್ಧಕಾಲದಲ್ಲಿ ಪಾಕಿಸ್ಥಾನದೊಳಗೆ ತನ್ನಿಚ್ಛೆಯಂತೆ ತನ್ನ ಸೇನಾಚಲನೆ ಮಾಡುವ ಸ್ವಾತಂತ್ರ್ಯವನ್ನು ಬ್ರಿಟನು ಸಂಪಾದಿಸಿಕೊಂಡಿದೆಯಂತೆ. ಈ ಕುರಿತೊಂದು ಒಪ್ಪಂದ ಬ್ರಿಟನ್--ಪಾಕಿಸ್ಥಾನಗಳೊಳಗಾಗಿದೆಯಂತೆ. ಆಗಿದ್ದರೆ ಇದು ಸರ್. ಝಫರುಲ್ಲಾರ ಕೈವಾಡವೆಂಬುದು ಖಂಡಿತ.

ಪಾಕಿಸ್ಥಾನದ ಮೆದುಳು

ಯುದ್ಧ ಕಾಲದಲ್ಲಿ ಹಿಟ್ಲರನು ತನ್ನ ಉತ್ತರಾಧಿಕಾರಿಗಳೆಂದು ಅನುಕ್ರಮವಾಗಿ ಕೆಲವು ಮಂದಿಯನ್ನು ನೇಮಿಸಿಕೊಂಡಾಗ ಹಲವರಿಗೆ ಆಶ್ಚರ್ಯವಾಗಿತ್ತು. ಜನತೆಯ ದೃಷ್ಟಿಗೆ ಹಿಟ್ಲರನಿಗೆರಡನೆಯವರು ಎಂದು ತೋರಿದ್ದ ಹಲವು ನಾಜೀ ನಾಯಕರ ಹೆಸರು ಆ ಪಟ್ಟಿಯಲ್ಲಿರಲಿಲ್ಲ. ಅಂತೆಯೇ ಸದಾ ರೋಗಿಯಾಗಿರುವ ಮಿ. ಜಿನ್ನರ ಹೃದಯದಲ್ಲಿ ತನ್ನ ಉತ್ತರಾಧಿಕಾರಿಗಳೆಂದಿರುವವರ ಹೆಸರನ್ನು ಕಾಯಿದೇ ಅಝಮರೆಲ್ಲಿಯಾದರೂ ಬಹಿರಂಗಪಡಿಸಿಬಿಟ್ಟರೆ, ಹೆಚ್ಚಿನವರು ಆಶ್ಚರ್ಯಗೊಂಡಾರು. ಮೊದಲನೇ ಹೆಸರೇ ಸರ್. ಝಫರುಲ್ಲಾ ಖಾನರದಾಗಬಹುದು. ರಕ್ತ ಬಲದಿಂದಲೇ ಗಳಿಸಿಕೊಂಡ ಪಾಕಿಸ್ಥಾನಕ್ಕೆ ಮೆದುಳ ಬಲಮಾತ್ರವಿರುವ ಸರ್. ಝಫರುಲ್ಲಾ ನಾಯಕನಾಗುವದೆಂದರೆ ಲೀಗ್ ತರುಣರು ಕೂಡಾ ಆಶ್ಚರ್ಯಗೊಂಡಾರು; ಆಕ್ಷೇಪಗೊಂಡಾರು. ಲೀಗಿನ ಪ್ರತ್ಯಕ್ಷ ಹೋರಾಟದ ವೇಳೆ ಸರ್. ಝಫರುಲ್ಲಾ ಅಪ್ರತ್ಯಕ್ಷರಿದ್ದರು; ಮಿ. ಲಿಯಾಖತರಂಥವರು ತನ್ನ ವಂಶದ ಹಕ್ಕಿನ 'ನವಾಬ್ ಝಾದಾ' ಬಿರುದನ್ನು ಕೂಡಾ ಕಿತ್ತು ಬಿಸಾಡಿದಾಗ, ಝಫರುಲ್ಲಾ ಖಾನರು ಬ್ರಿಟಿಷ್‌ದತ್ತ 'ಸರ್' ಬಿರುದನ್ನು ಬಿಟ್ಟಿರಲಿಲ್ಲ. ಆದರೂ ಮಿ. ಜಿನ್ನರು ಪ್ರತಿಯೊಂದು ಮುಖ್ಯ ಸಮಸ್ಯೆಯಲ್ಲಿಯೂ ಸರ್. ಝಫರುಲ್ಲಾರ ಅಭಿಪ್ರಾಯ ಪಡೆಯುತ್ತಿದ್ದರು; ಹೊರ ದೇಶ ಸಂಬಂಧದ ಪ್ರತಿಯೊಂದು ಪ್ರಾಮುಖ್ಯಪ್ರಶ್ನೆಗೂ ಸರ್. ಝಫರುಲ್ಲಾರನ್ನೇ ಮುಂದೊಡ್ಡುತಿದ್ದರು. ಕಾಯಿದೇ ಅಝಮರ ಬತ್ತಿನ ಮಿ. ಲಿಯಾಖತರು ಜಿನ್ನರ ಬಲಗೈಯ್ಯಾದರೆ ಸರ್. ಝಫರುಲ್ಲಾ ಮೆದುಳಾಗಿದ್ದಾರೆ. ಈಗ ಪಾಕಿಸ್ಥಾನದ ಮೆದುಳು ಕದಡುವಸ್ಥಿತಿ--ಮುಖ್ಯವಾಗಿ ಭಾರತದ ಸಂಬಂಧದಲ್ಲಿ. ಆದ್ದರಿಂದ ಸರ್. ಮುಹಮ್ಮದ್ ಝಫರುಲ್ಲಾ ಈಗ ಪರದೇಶ ಮತ್ತು ಕಾಮನ್‌ವೆಲ್ತ್ ಸಂಬಂಧಗಳ ಮಂತ್ರಿಯಾಗಿ ನೇಮಕಗೊಂಡಿದ್ದಾರೆ. ನಿಜಕ್ಕೂ ಪಾಕಿಸ್ಥಾನ್, ವಿದೇಶ ಧೋರಣೆಗೆ ಜೀವಕಲೆ ಬಂದಿದೆ. ಇತ್ತೀಚೆಗೆ ಮಿ. ಜಿನ್ನಾ, ಮಿ. ಲಿಯಾಖತರ ಕಂಠಸ್ವರಗಳಲ್ಲಿ ಆವೇಶಕ್ಕಿಂತ ಹೆಚ್ಚಿಗೆ ಅಳಮನಂಶವೇ ಕಂಡುಬರುತಿತ್ತು; ಇಬ್ಬರ ಆರೋಗ್ಯವೂ ಅಷ್ಟೊಂದು ಸರಿಯಿಲ್ಲ. ಪಾಕಿಸ್ಥಾನವನ್ನು ನಿರ್ಮಿಸುವುದರಿಂದಾರಂಭಿಸಿ, ನಿಲ್ಲಿಸಿ ಹಿಡಿಯುವ ವರೆಗಿನ ಎಲ್ಲಾ ಕಾರ್ಯಭಾರಗಳಿಗೂ ತಲೆ, ಹೆಗಲು ಕೊಟ್ಟ ಈ ಇಬ್ಬರು ಮುಖಂಡರೂ ಈಗ ಬಹುಮಟ್ಟಿಗೆ ದಣಿದಿದ್ದಾರೆ. ಹಾಗೆ ಕ್ಷಯಿಸದೆ ತನ್ನ ಮೆದುಳನ್ನು ಝಳಕಗೊಳಿಸಿಕೊಂಡೇ ಇದ್ದವ್ಯಕ್ತಿ ಸರ್. ಝಫರುಲ್ಲಾ. ಆದ್ದರಿಂದ ಪಾಕಿಸ್ಥಾನವೀಗ ಆ ನೊಂದಾದ ಆಯುಧದ ಬದಲಿಗೆ ಈ ಹರಿತ ಖಡ್ಗವನ್ನು ಧರಿಸಿದೆ. ಲಿಯಾಖತರ ಕೈಯಲ್ಲಿದ್ದ ವಿದೇಶ ಸಂಬಂಧ ಖಾತೆ ಝಫರುಲ್ಲಾರ ಕೈಗೆ ಬಂದಿದೆ ಮೇಲಾಗಿ ಸರ್. ಝಫರುಲ್ಲಾ ಬ್ರಿಟನಿನ ಹಾಗೂ ಇತರ ವಿದೇಶಗಳ ನಾಯಕರ ಗುಣ ನಡತೆ ಬಲ್ಲವರು; ಅಲ್ಲೆಲ್ಲಾ ಹೊಕ್ಕು ಬಳಕೆಯಿದ್ದು ವ್ಯವಹಾರ ಕ್ರಮವರಿತವರು. ಪರದೇಶಗಳೊಡನೆ ಕೊಡಕೊಂಡ ನಡೆಸುವುದರಲ್ಲಿ ಸರ್. ಝಫರುಲ್ಲಾ ಜಿನ್ನಾ ಲಿಯಾಖತರಿಗಿಂತ ಪ್ರವೀಣ. ಈಗ ಬಂದಿರುವ ಕಾಶ್ಮೀರೀ ಸಮಸ್ಯೆಯಂಥವುಗಳಲ್ಲಿ ಪರದೇಶಗಳ ಸಂಬಂಧದ ಆಗತ್ಯ ಒದಗಿದೆ. ಆದ್ದರಿಂದಲೇ ಮಿ. ಜಿನ್ನರು ಈಗಲೇ ಸರ್. ಝಫರುಲ್ಲಾರನ್ನು ನೇಮಿಸಿಕೊಂಡರು.

ವಿಷವಾಯು ಪ್ರಯೋಗಗಳು

ಸರ್. ಝಫರುಲ್ಲಾ ಪಾಕಿಸ್ಥಾನದ ವಿದೇಶ ಮಂತ್ರಿಯಾದೊಡನೆಯೇ ವಾತಾವರಣವನ್ನು ಇನ್ನಷ್ಟು ಕೆಡಿಸುವ ವಿಷದ ಹಬೆಯನ್ನು ಪ್ರಯೋಗಿಸಹತ್ತಿದ್ದಾರೆ. ಭಾರತ--ಪಾಕಿಸ್ಥಾನಗಳೊಳಗಿನ ಎಲ್ಲಾ ತಾಪ ಪಾಪಗಳನ್ನೂ ಪರಿಹರಿಸುವ ಹೊಣೆ ಮಾದ ಹೊಗೆಯಿದು ಎನ್ನುತಿದ್ದಾರೆ! "ನಾನು ವಿದೇಶ ಮಂತ್ರಿಯಾದುದು ಪಾಕಿಸ್ಥಾನದ ಧೋರಣೆಯನ್ನು ಮುಂದೊತ್ತುವುದಕ್ಕೆ ಹೊರತು ಬದಲಾವಣೆಗಲ್ಲ. ನಗದಿಯಂಶದಲ್ಲಿ ಪಾಕಿಸ್ಥಾನದ ಪಾಲಿಗೆ ಬರುವ ೫೫ ಕೋಟಿ ರೂಪಾಯಿಗಳನ್ನು ಕೊಡಲು ಭಾರತ ಸರಕಾರವು ನಿರಾಕರಿಸಿದೆ. ಪಾಕಿಸ್ಥಾನದ ಪಾಲಿನದಾದ ಮಿಲಿಟರಿ ಸ್ಟೋರುಗಳ ರವಾನೆಯನ್ನೂ ರವಾನಿಸದೆ ತಡೆದು ಹಿಡಿದಿದೆ. ಹೀಗಾಗಿ ಭಾರತ ಮತ್ತು ಪಾಕಿಸ್ಥಾನಗಳೊಳಗಾದ ಆರ್ಥಿಕ ಒಪ್ಪಂದವನ್ನು ಜ್ಯಾರಿಗೆ ತರಲು ಭಾರತ ಸರಕಾರವು ಕಂಠೋಕ್ತವಾಗಿ ನಿರಾಕರಿಸಿದೆ. ಎರಡು ರಾಷ್ಟ್ರಗಳೊಳಗೆ ಸೌಹಾರ್ದವಿರಬೇಕೆಂಬ ಶರ್ತದಿಂದಲೇ ಈ ಆರ್ಥಿಕ ಒಪ್ಪಂದವಾದುದೆಂದು ಅವರ ಹೇಳಿಕೆ. ಅಂತಹ ನಿಯಮವೇನೂ ಆ ಒಪ್ಪಂದದಲ್ಲಿಲ್ಲ. ಮೇಲಾಗಿ ಆ ಮೊತ್ತವು ಪಾಕಿಸ್ಥಾನದ ಹಕ್ಕಿನದಾಗಿ ಅದರ ಪಾಲಿಗೆ ಬಂದಿದೆ ಹೊರತು ದಾನವಾಗಿ, ಉದಾರತೆಯಿಂದ, ಅಥವಾ ಸಾಲವಾಗಿ ಇಡಲ್ಪಟ್ಟಿಲ್ಲ. ಭೌಗೋಲಿಕ ಪರಿಸ್ಥಿತಿಯಿಂದಾಗಿ ಪಾಕಿಸ್ಥಾನದ ಈ ಸೊತ್ತುಗಳು ಹಿಂದುಸ್ಥಾನದಲ್ಲಿ ಉಳಿದಿರುವುವಷ್ಟೆ! ಕಾಶ್ಮೀರದ ಪ್ರಶ್ನೆಯು ಬರೇ ಭಾರತ--ಪಾಕಿಸ್ಥಾನಗಳೊಳಗಿರುವ ಭೇದ ಸರಪಣಿಯ ಒಂದು ಗೊಣಸು ಮಾತ್ರ. ಜಾಗತಿಕ ಸಂಘದಲ್ಲಿ ಅದಕ್ಕೊಂದು ತೀರ್ಮಾನ ದೊರೆಯಬೇಕೇ ಹೊರತು ಇದೊಂದು ಮಾತ್ರ ಮುಂದೆ ಬರುವುದಕ್ಕೆ ನಮ್ಮ ಒಪ್ಪಿಗೆಯಿಲ್ಲ" ಎನ್ನುತ್ತಾ ಎಲ್ಲಾ ಅನ್ಯಾಯಗಳಿಗೂ ಗೊಂದಲಗಳಿಗೂ ಭಾರತವೇ ಕಾರಣವೆಂದು ಸ್ಥಿತಿಗತಿಗಳನ್ನು ವಿಪರ್ಯಾಸಗೊಳಿಸಿ ತೋರಿಸಿದ್ದಾರೆ. ಪಾಕಿಸ್ಥಾನವನ್ನು ಹಣ್ಣು ಮಾಡಿ ದಮ್ಮಯ್ಯ ಹಾಕಿಸುವ ಧೋರಣೆಯನ್ನು ಭಾರತ ಸರಕಾರ ವಹಿಸಿದೆ, ಎಂದಿದ್ದಾರೆ. ಅಂತೂ ಆ ದಿನ ಜಿನ್ನಾನಾಳವು ಇಂದು ಝಫರುಲ್ಲಾ ಕಂಠದೊಳಗೆ ಸೇರಿ ಅದೇ ನಾದ ಹೊರಡಿಸಹತ್ತಿದೆ!

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4೦೦ದ 8 ಬೊಟ್ಟು, ಸಣ್ಣ ಮಕ್ಕಳಿಗೆ 1೦೦ದ 2 ಬೊಟ್ಟು ಲವಂಗ ಯಾಲಕ್ಕಿಯ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ॥ ನಾಯಕ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ॥ ಆರ್॥ ಎಸ್॥ ಶೆಟ್ಟಿ, ರಥಬೀದಿ; ಡಾ॥ ಪಿ॥ ಜಿ॥ ಆಚಾರ್ಯ, ಫಾರ್ಮಸಿ; ಡಾ॥ ಕೆ॥ ಶೇಷಗಿರಿ ಪೈ, L.I.M.; ಡಾ॥ ವೆಂಕಟರಾವ್, ಕೊರಙ್ಗ್ರಪಾಡಿ; ನವಭಾರತ ಬುಕ್ ಡಿಪೊ.

ಒಂದು ವ್ಯಂಗ್ಯ ವಿಮರ್ಶೆ

ಮಹಿಳಾ ಸಮ್ಮೇಳನದ ನಿರ್ಧಾರಗಳು 'ಪುರುಷ ಸಮ್ಮೇಳನ'ದ ನಿಷೇಧಗಳು

ಡಿಸೆಂಬರ್ ತಾ 29ರಿಂದ ಜನವರಿ ತಾ ೧ರ ವರೆಗೆ ಮದ್ರಾಸಿನಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನದ 20ನೇ ವಾರ್ಷಿಕಾಧಿವೇಶನ ಜರಗಿತು. ಶ್ರೀಮತಿ ಅನಸೂಯಾ ಬಾಯಿ ಕಾಳೆಯವರು ಅಧ್ಯಕ್ಷರಾಗಿದ್ದರು. ಹಿಂದೀ ಸರಕಾರದ ಸಾರ್ವಜನಿಕ ಆರೋಗ್ಯಖಾತೆಯ ಮಂತ್ರಿ ರಾಜಕುಮಾರಿ ಅಮೃತಕೌರರು ಈ ಪರಿಷತ್ತಿನ ಉದ್ಘಾಟನೆ ಮಾಡಿದರು. ಸ್ವಾಗತಾಧ್ಯಕ್ಷೆ ಶ್ರೀಮತಿ ಅಂಬುಜಮ್ಮಾಳ್, ಇಂಡೋನೇಷಿಯಾ, ಬರ್ಮಾ, ಸಿಲೋನುಗಳ ಮಹಿಳಾ ಪ್ರತಿನಿಧಿಗಳೂ ಈ ಸಮ್ಮೇಳನಕ್ಕಾಗಮಿಸಿದ್ದರಲ್ಲದೆ ಅಖಿಲ ಭಾರತದ ಮಹಿಳಾ ನಾಯಿಕೆಯರಲ್ಲಿ ಹೆಚ್ಚಿನವರು ಹಾಜರಿದ್ದರು. ಲೇಡಿ ನ್ಯೇ (ಮದ್ರಾಸ್ ಗವರ್ನರರ ಪತ್ನಿ) ಮಿಸೆಸ್ ಕಸಿನ್ಸ್, ಶ್ರೀಮತಿಯರಾದ ಕಮಲಾದೇವಿ, ರಾಧಾಬಾಯಿ ಸುಬ್ಬರಾಯನ್, ಶ್ರೀಮತಿ ಸಾವಿತ್ರಿ ರಾಜನ್, ಲೀಲಾವತಿ ಮುನ್ಷಿ, ಶ್ರೀಮತಿ ರಾಮರಾವ್, ಶ್ರೀಮತಿ ಸಿ. ವಿ. ರಾಮನ್, ಊರ್ಮಿಳಾ ಮೆಹತಾ, ಶ್ರೀಮತಿ ವಿ ತಾಮ್‌ಲಾಮ್, ಕುಟ್ಟಿಮಾಲು ಅಮ್ಮ, ಪರಮೇಶ್ವರಮ್ಮ. ಶ್ರೀಮತಿ ಕ್ಲಬ್‌ವಾಲಾ, ಮೊದಲಾದ ಪ್ರಮುಖ ಮಹಿಳೆಯರು ಅಲ್ಲಿ ಒಟ್ಟಾಗಿದ್ದರು. ಪ್ರೇಕ್ಷಕರಾಗಿ ಕುಳಿತ ಪುರುಷ ಪ್ರಮುಖರಲ್ಲಿ ಗವರ್ನರ್ ನ್ಯೇ, ಮಾನ್ಯ ಮಂತ್ರಿಗಳಾದ ಭಕ್ತವತ್ಸಲಂ, ಗೋಪಾಲರೆಡ್ಡಿ, ಜಸ್ಟೀಸ್ ರಾಮುನ್ನಾರ್, ಶ್ರೀಗಳಾದ ವೆಂಕಟರಾಮಶಾಸ್ತ್ರಿಯಾರ್, ಲಕ್ಷ್ಮಣಸ್ವಾಮಿ ಮೊದಲಿಯಾರ್, ಡಾ। ಯು. ಕೃಷ್ಣರಾವ್, ಡಾ। ಕಸಿನ್ಸ್, [illegible], ಪೀಠಾಪುರಮಿನ ಯುವರಾಜರೂ ಇದ್ದರು.

ಕಲಾಪ್ರೇಮ, ಸೌಂದರ್ಯೋಪಾಸನೆ, ಹಾವಭಾವಾರಾಧನೆ——ಇವು ಮನುಷ್ಯಮಾತ್ರರಲ್ಲಿ ಇರಲೇ ಬೇಕಾದವುಗಳು. ಆದ್ದರಿಂದ ಮದ್ರಾಸ್ ಸಮ್ಮೇಳನದ ವಿವಿಧ ಬಣ್ಣ, ಸರ್ವವಿಧಾನಗಳ ಬಹುತರ ಉಡುಗೆ ತೊಡಿಗೆಗಳು——ಮರ್ಜಿ, ಹಾವಭಾವ, ಸೌಂದರ್ಯಗಳ ಸರ್ವಕಲೆಗತಿಗಳು——ಮಧುರ ತಂತೀ ನಾದಗಳಲ್ಲಾದರೂ ವೈವಿಧ್ಯವಿರುವಂತೆ, ಕೋಮಲಕಂಠಗಳ ಸ್ವರಭೇದಗಳು——ಇತ್ಯಾದಿಗಳು ಪ್ರತಿಯೊಬ್ಬನೂ ಕಂಡು ಕೇಳುವಂತಹವಿದ್ದುವು. ಆದರೆ ಪುರುಷರಾಗಿ ಹುಟ್ಟಿದವರು ಈ ಮಾಧುರ್ಯ ಪ್ರವಾಹದಲ್ಲಿ ತೇಲಿ ಹೋಗದೆ, ದಡದಲ್ಲಿ ನಿಂತು ಆ ಪ್ರವಾಹ ಹರಿಯುತ್ತಿರುವ ದಿಕ್ಕನ್ನು ನೋಡಿ ದಿಗಿಲುಗೊಳ್ಳಬೇಕಾಗಿದೆ, ಎಂದು ಪುರುಷತ್ವವಿದ್ದವರ ಅಭಿಪ್ರಾಯವಿದೆ. ಇದುವರೆಗೆ ಮುಸ್ಲಿಂ ಲೀಗಿನಿಂದಾಗಿದ್ದ ಕಾರ್ಯಗಳೇ ಇನ್ನು ಈ ಮಹಿಳಾ ಸಮ್ಮೇಳನದಿಂದಾಗಬಹುದೆಂದೂ ಕೆಲವರಲ್ಲಿ ಭೀತಿಯಿದ್ದಿದೆ. ಇವೆರಡು ಸಂಸ್ಥೆಗಳಲ್ಲೂ ನಿಕಟ ಸಾಮ್ಯತೆಯಿದೆಯಂತೆ. ಕಾಂಗ್ರೆಸು ಮುಸ್ಲಿಮರಿಗೂ ತನ್ನಲ್ಲಿ ಪ್ರವೇಶಕೊಟ್ಟಿದ್ದರೂ, ಮುಸ್ಲಿಮರು ಕೇವಲ ತಮ್ಮ ಜಾತಿಗಾಗಿಯೇ ಮುಸ್ಲಿಂಲೀಗನ್ನು ಕಟ್ಟಿಕೊಂಡು ರಂಪಾಟ ಹೂಡಿದ್ದರು. ಮಹಿಳೆಯರ ಮರ್ಜಿಯೂ ಅದೇ; ಅಲ್ಲವಾದರೆ, ಪುರುಷರ ಎಲ್ಲಾ ಸಭೆ ಸಮ್ಮೇಳನಗಳಲ್ಲೂ ಸ್ತ್ರೀಯರಿಗೆ ಪ್ರವೇಶವಿರುವಾಗ, ಸಮಪ್ರಾತಿನಿಧ್ಯವಿರುವಾಗ 'ಮಹಿಳಾ ಸಮ್ಮೇಳನ' ಎಂದು ಪ್ರತ್ಯೇಕ ಪಕ್ಷಕಟ್ಟಿಕೊಳ್ಳುವ ಅಗತ್ಯವೇನಿದೆ? ಮುಸ್ಲಿಂ ಲೀಗ್ ಮತ್ತದರ 'ಮುಸ್ಲಿಂ ನೇಶನಲ್ ಗಾರ್ಡ್ಸ್'ನ ಪ್ರಭಾವವನ್ನೇ ಕಾರಣವಾಗಿ ಮಾಡಿಕೊಂಡು 'ಹಿಂದೂ ಮಹಾಸಭೆ' ಮತ್ತು 'ಆರ್. ಯಸ್. ಯ. ಸ' ಈಗ ಪ್ರಬಲಿಸಿರುವಂತೆಯೇ ಈ 'ಅ. ಭಾ. ಮಹಿಳಾ ಸಮ್ಮೇಳನ'ದ ಪ್ರತಿಕ್ರಿಯೆಯಾಗಿ 'ಅ. ಭಾ. ಪುರುಷ ಸಮ್ಮೇಳನ' ಹುಟ್ಟುವುದು ಬೇಡವೇ, ಎಂದು ಮೀಸೆ ಹೊತ್ತ ತುಟಿಗಳಿಂದ ಉದುರಹತ್ತಿದೆ! ಅಂತಹ 'ಅಖಿಲ ಭಾರತ ಪುರುಷ ಸಮ್ಮೇಳನ'ವೊಂದಿರುತ್ತಿದ್ದರೆ, ಮದ್ರಾಸಿನಲ್ಲಿ ಸೇರಿದ 'ಅಖಿಲ ಭಾರತ ಮಹಿಳಾ ಸಮ್ಮೇಳನ'ದಲ್ಲಿ ಆದ ನಿರ್ಣಯಗಳಿಗೆ, ಈ ಕೆಳಗಿನಂತೆ ನಿಷೇಧಗಳನ್ನೂ ತಿದ್ದುಪಡಿಗಳನ್ನೂ ಸೂಚಿಸದೆ ಎಷ್ಟಕ್ಕೂ ಬಿಡುತ್ತಿರಲಿಲ್ಲವಂತೆ—

ನಿರ್ಣಯ—ಮರುನಿರ್ಣಯ

೧. ಮಹಿಳಾ ಸಮ್ಮೇಳನ—'ಸಂಯುಕ್ತ ಪ್ರಾಂತ್ಯದ ಗವರ್ನರರಾಗಿರುವ ಶ್ರೀಮತಿ ಸರೋಜಿನಿ ನಾಯಿಡು, ರಶ್ಯದ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ಭಾರತ ಸರಕಾರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್, ಅಖಿಲ ವಿಶ್ವ ಸಂಬಂಧ ಸಮ್ಮೇಳನದ ಭಾರತ ಪ್ರತಿನಿಧಿ ರಾಣಿ ಲಕ್ಷ್ಮೀಬಾಯಿ ರಾಜವಾಡೆ, ಭಾರತ ಸರಕಾರದ ರಕ್ಷಣೆ ಮತ್ತು ಜನಬದಲಾವಣೆ ಖಾತೆಯ ಮಹಿಳಾ ವಿಭಾಗದ ಡೈರೆಕ್ಟರ್ ಶ್ರೀಮತಿ ರಾಮೇಶ್ವರಿ ನೆಹರು, ಮೊದಲಾದ ಮಹಿಳಾ ನೇಮಕಗಳನ್ನು ಈ ಸಮ್ಮೇಳನವು ಹೆಗ್ಗಳಿಕೆಯೊಡನೆ ಸ್ವಾಗತಿಸುತ್ತದೆ'.

ಪುರುಷ ಸಮ್ಮೇಳನ—'ಸಂಯುಕ್ತ ಪ್ರಾಂತ್ಯದ ಗವರ್ನರರಾಗಿ ನೇಮಕಗೊಂಡಿದ್ದರೂ ಜಾರಿಸಿಕೊಂಡ ಡಾ। ಘೋಷರಂತಹ ಸ್ತ್ರೀ ಪಕ್ಷಪಾತಿ ಪುರುಷರಿಂದ ಪುರುಷ ಸಮಾಜಕ್ಕಾಗಿರುವ ಹಾನಿಗಾಗಿ ಈ ಸಮ್ಮೇಳನವು ತನ್ನ ತೀವ್ರ ನಿಷೇಧವನ್ನು ವ್ಯಕ್ತಪಡಿಸುತ್ತದಲ್ಲದೆ, ಮಹಿಳೆಯರ ನಾಯಕತ್ವದಲ್ಲಿರುವ ಖಾತೆಗಳಲ್ಲಿ ಕೆಲಸ ಮಾಡುವ ಪರಾಧೀನತೆಗೊಳಗಾಗಿರುವ ಪುರುಷ ನೌಕರರ ಕಡೆಗೆ ತನ್ನ ಹಾರ್ದಿಕ ಸಹಾನುಭೂತಿಯನ್ನು ಸೂಚಿಸುತ್ತದೆ'.

೨. ಮ. ಸ.—'ಪ್ರಸೂತಿ ಆಸ್ಪತ್ರೆ ಮತ್ತು ಶಿಶು ಸಂರಕ್ಷಣಾ ಕೇಂದ್ರಗಳ ಸ್ಥಾಪನೆಗಾಗಿ ರಾಷ್ಟ್ರವ್ಯಾಪೀ ಸಂಸ್ಥೆಗಳನ್ನು ರಚಿಸಬೇಕೆಂದು ಈ ಸಮ್ಮೇಳನವು ಮೇಲಿಂದಮೇಲೆ ಮುಂದಿಟ್ಟಿರುವ ಬೇಡಿಕೆಗೆ ಸರಕಾರವು ಸಹಾನುಭೂತಿ, ಸಹಕಾರಗಳನ್ನೀಯಬೇಕೆಂದು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ'

ಪು. ಸ.—'ಮಾತೆಯರಾಗುವವರ ಮತ್ತು ಆದವರ ಹುಸಿ ನಾಗರಿಕತೆ, ಆಸಡ್ಡೆ, ಇತ್ಯಾದಿಗಳ ಬೆಸೆಯಿಂದ 'ಪ್ರಸೂತಿ ಆಸ್ಪತ್ರೆ' ಮತ್ತು 'ಶಿಶು ರಕ್ಷಣಾ ಕೇಂದ್ರ'ಗಳ ಆವಶ್ಯಕತೆಯನ್ನು ಪುರುಷ ವರ್ಗವು ಒಪ್ಪುತ್ತದಾದರೂ, ಗಂಡಂದಿರನ್ನು ದೂರವಿಡುವ ನೆವ ಮಾತ್ರಕ್ಕಾಗಿ ಹೆಂಡಂದಿರು ಪ್ರಸೂತಿ ಗೃಹ ಸೇರದಂತೆ ಆ ಮಟ್ಟಿಗೊಂದು ಕಾಲಾವಧಿಯನ್ನೂ, ತಾವು ಮನೆಯಲ್ಲಿ ಮಕ್ಕಳಿಗಿಂತ ಕಡೆಯಾಗಿ ಕಾಣುತ್ತಿರುವ ಗಂಡಂದಿರನ್ನೂ 'ಶಿಶು ರಕ್ಷಣಾಲಯ'ದೊಳಗೆ ಮಹಿಳೆಯು ಸೇರಿಸಿಬಿಡದಂತೆ ಮಾಡುವುದಕ್ಕಾಗಿ ಈ ಮಟ್ಟಿಗೊಂದು ಪ್ರಾಯದ ಮಿತಿಯನ್ನೂ ಅಗತ್ಯ ಹಾಕಬೇಕೆಂದು ಈ ಸಮ್ಮೇಳನವು ಆಗ್ರಹ ಪೂರ್ವಕ ಸರಕಾರವನ್ನು ಕೇಳಿಕೊಳ್ಳುತ್ತದೆ'

೩. ಮ. ಸ.—'ಮೂಲಭೂತ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತರುವ ರಾಷ್ಟ್ರವ್ಯಾಪೀ ಯೋಜನೆಗಳನ್ನು ಅಂಗೀಕರಿಸಬೇಕೆಂದೂ, ಮಹಿಳಾ ಕೈಗಾರಿಕೆಗಳನ್ನೂ ಮನೆ ವಿಜ್ಞಾನವನ್ನೂ ಹೆಮ್ಮಕ್ಕಳಿಗೆ ಕಡ್ಡಾಯವಾಗಿ ಕಲಿಸಬೇಕೆಂದೂ, ಹೈಸ್ಕೂಲುಗಳ ಮೇಲಿನ ಕ್ಲಾಸುಗಳಲ್ಲಿ ಓದುವ ವಿದ್ಯಾರ್ಥಿನಿಯರಿಗೆ ಲೈಂಗಿಕ ಶಿಕ್ಷಣವನ್ನು ಕೊಡತಕ್ಕದ್ದೆಂದೂ ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.''

ಪು. ಸ—'ಶಿಕ್ಷಣ ಸಂಬಂಧವಾಗಿ ಮಹಿಳಾ ಸಮ್ಮೇಳನವು ಮಾಡಿರುವ ಠರಾವಿನಲ್ಲಡಕವಾಗಿರುವ ವಿವಿಧ ಸೂಚನೆಗಳೆಲ್ಲವನ್ನೂ ಈ ಸಮ್ಮೇಳನವು ಅಮೂಲಾಗ್ರವಾಗಿ ಪುಷ್ಟೀಕರಿಸುತ್ತದಾದರೂ ಅವೆಲ್ಲವುಗಳೂ 'ಸಹ ಶಿಕ್ಷಣ' ವಿಧಾನದಿಂದಾಗಿ ಬಹ ಮಟ್ಟಿಗೆ ಈಗಲೂ ಜ್ಯಾರಿಯಲ್ಲಿರುವಾಗ ಮಹಿಳಾಸಮ್ಮೇಳನವು ಅವುಗಳಿಗಾಗಿ ಪುನಃ ಸರಕಾರವನ್ನು ಕೇಳಿಕೊಂಡಿರುವ ರೀತಿಯು ಪುರುಷವರ್ಗದ ಮೇಲೆ ಹುಟ್ಟಿದ ಅತೃಪ್ತಿಯನ್ನು ಸೂಚಿಸುತ್ತದಾದ್ದರಿಂದ ಈ ಸಮ್ಮೇಳನವು ಅದಕ್ಕಾಗಿ ಪಶ್ಚಾತ್ತಾಪ ಸೂಚಿಸುತ್ತದೆ'.

೪. ಮ. ಸ.—'ಬಹು ಪತ್ನಿತ್ವ ಪತಿತ್ವ ನಿರೋಧಕ ಮತ್ತು ವಿವಾಹ ವಿಚ್ಛೇದನಾ ಶಾಸನಗಳನ್ನು ಮಾಡಿರುವ ಬೊಂಬಾಯಿ ಸರಕಾರವನ್ನು ಈ ಸಮ್ಮೇಳನವು ಅಭಿನಂದಿಸುತ್ತದಲ್ಲದೆ, ಮಿಕ್ಕ ಸರಕಾರಗಳೂ ಈ ಮಾದರಿಯನ್ನನುಕರಿಸಬೇಕೆಂದು ಕೇಳಿಕೊಳ್ಳುತ್ತದೆ'.

ಪು. ಸ.—'ಬಹು ಪತ್ನಿತ್ವ ಮತ್ತು ಬಹು ಪತಿತ್ವ ಎರಡನ್ನೂ ನಿಷೇಧಿಸಿದರೂ ವಿವಾಹ ವಿಚ್ಛೇದನಾ ಸ್ವಾತಂತ್ರ್ಯವೂ ಕೊಡಲ್ಪಡುವುದರಿಂದ, ಒಬ್ಬನಿಗೆ ಅಥವಾ ಒಬ್ಬಳಿಗೆ ಒಂದೇ ಕಾಲದಲ್ಲಿ ಬಹುಮಂದಿ ಪತ್ನಿಯರು ಅಥವಾ ಪತಿಯರು ಇರದಂತಾಗುತ್ತದಾದರೂ, ಇಡೀ ಜೀವಮಾನದಲ್ಲಿ ಅವರು ಬಹಳ ಮಂದಿಯ ಪತಿ ಅಥವಾ ಪತ್ನಿಯಾಗಲು ಸಾಧ್ಯವಿರುವುದರಿಂದ, ಇದು ಕೇವಲ ಮದುವೆ ನಿಯಂತ್ರಣಹೊರತು ಬೇರೇನೂ ಅಲ್ಲ. ಮಹಾತ್ಮಾ ಗಾಂಧಿಯ

ನವವರುಷದ ಶುಭಾಶಯ

ಮುಂಬೈ ವ್ಯವಹಾರ ಕ್ಷೇತ್ರ [illegible] ಪಾರಿಗಳೂ ಆಗಿರುವ, ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ನೂರಾರು ಬಂಧುಮಿತ್ರಬಳಗದವರು 1940ನೇ ಇಸವಿಯಲ್ಲಾಗಾಯ್ತು ಪ್ರತಿ ವರುಷವೂ ನಮ್ಮ ಮುಂಬೈ ಪರ್ಯಟನ ಕಾಲದಲ್ಲಿ

"ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್, ಕಂಪೆನಿ ಲಿಮಿಟೆಡ್, ಮದ್ರಾಸು".

ಇದರಲ್ಲಿ ಲಕ್ಷೋಪಲಕ್ಷ ವಿಮೆಯನ್ನು ಗಳಿಸಿ ನಮ್ಮನ್ನು ಪ್ರೋತ್ಸಾಹಿಸಿದ್ದಕ್ಕಾಗಿ, ಹೊಸ ವರುಷದ ಅಭಿನಂದನಾ ಕಾಣಿಕೆಯನ್ನು ಅರ್ಪಿಸುವುದಲ್ಲದೆ, ಈ ನವವರುಷವು ನಮ್ಮ ಎಲ್ಲಾ ಪಾಲಿಸಿದಾರರಿಗೂ, ಸಾರ್ವಜನಿಕರಿಗೂ, ಶುಭದಾಯಕವಾಗಲೆಂದು ಪ್ರಾರ್ಥಿಸುತ್ತೇವೆ

ಜನತಾ ಸೇವೆಯಲ್ಲಿ ನಿರತರಾಗಿರುವ ನಾವು, ನಮ್ಮ ಪಾಲಿಸಿದಾರರ ಅನುಕೂಲತೆಗಳಿಗಾಗಿಯೂ, ಕಂಪೆನಿಯ ಕಾರ್ಯಾರ್ಥಿಗಳಾಗಿಯೂ, ಎಂದಿನಂತೆ ಈ ಸಲವೂ ಸ್ವಲ್ಪ ಸಮಯದ ಮಟ್ಟಿಗೆ ಮುಂಬೈಗೆ ಬಂದಿರುವುದರಿಂದ, ತಮ್ಮ ಪಾಲಿಸಿಗಳು ಲೇಪ್ಸ್ ಆಗದ್ದು ಅವುಗಳನ್ನು ರಿನ್ಯೂವಲ್ ಮಾಡಿಸುವ ತ್ರಾಸಗಳಿಂದ ನಮ್ಮ ಬರೋಣವನ್ನು ನಿರೀಕ್ಷಿಸುತ್ತಿದ್ದವರೂ, ತಮ್ಮ ಗೆಳೆಯರಂತೆ ನಮ್ಮ ಮುಖಾಂತ್ರ ಹೊಸ ವಿಮೆಯನ್ನು ಇಳಿಸತಕ್ಕವರೂ, ಭಾರಿ ಕಮಿಷನ್ ಯೋಗ್ಯ ಸೌಕರ್ಯಗಳಿರುವ ಈ ಕಂಪೆನಿಯಲ್ಲಿ ಏಜನ್ಸಿ ನಡೆಯಿಸತಕ್ಕವರೂ, [illegible] ಯಾ ಪತ್ರದ್ವಾರಾ ಕಂಡು ನಮ್ಮ ಸಹಕಾ[illegible]ಯನ್ನು ಪಡೆಯಬೇಕಾಗಿ ನಮ್ಮ ವಿನಂತಿ.

ಪಡ್ವಾಲ್ ಬಿಲ್ಡಿಂಗ್, ಲಾಲ್‌ಬಾಗ್,
ಅತೆರ್ ರೋಡ್, ಮುಂಬಯಿ, ನಂ. 12
ತಾ. 1-1-1948.

ಕುರುಕಾಲು ಗಣಪಯ್ಯ ಶೆಟ್ಟಿ,
ಚೀಫ್ ಏಜನ್ಸೀ [illegible],
ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್ ಮದ್ರಾಸು.

CHAMPAE'S

Snow & Castrex

Sole Distributers for India

Prop: K. G. NAYAK,

Santhekatte, UDIPI, S K.

ಭದ್ರತಾ ಕೌನ್ಸಿಲಿಗೆ–

'ಕಾಶ್ಮೀರದ ಧಾಳಿಗಾರರಿಗೆ ಪಾಕಿಸ್ತಾನದ ಸಹಾಯ ನಿಲ್ಲಲಿ'

ಕಳೆದ ವಾರದಲ್ಲಿ ನಿಕ್ಕಲ್ಲಾ ಜ್ವಾಲೆಗಳೂ ನಂದಿ (ಕೆಂಡ ಮಾತ್ರ ಇನ್ನೂ ಉಳಿದಿದೆ) ಹೋಗಿ ಕಾಶ್ಮೀರದ ಪ್ರಶ್ನೆಯೊಂದು ಧಗ್ಗನೇ ಅತಿದೂರಕ್ಕೆ ಜ್ವಾಲೆಯನ್ನೆಬ್ಬಿಸಿದೆ. ಕಾಶ್ಮೀರದ ಕಾಳಗವು ಈಗ ನಿರ್ಮಿಸಿರುವ ವಿದ್ಯಮಾನವು ಹಿಂದು ಮುಂದಿನ ವಿಚಾರ ವಿಮರ್ಶೆಗಳನ್ನೆಬ್ಬಿಸುವಂತಹದು. ಭಾರತ– ಪಾಕಿಸ್ತಾನಗಳೊಳಗಿನ ಪ್ರತ್ಯಕ್ಷ ಹೋರಾಟದ ಪೂರ್ವರಂಗವಾಗಿ ಅದು ತೋರುತ್ತಿದೆ. ಅಂದ ಮೇಲೆ ಭಾರತವು ಬಯಸಿದುದೇನು, ಆದದ್ದೇನು, ಎಂಬ ಗಾಢ ಯೋಚನೆ ಹುಟ್ಟುತ್ತಿದೆ! ಭೂತ, ವರ್ತಮಾನ, ಭವಿಷತ್ಕಾಲಗಳ ಆಗುಹೋಗುಗಳ ಕಡೆಗೆ ದೃಷ್ಟಿ ಯೋಡಿಸುತ್ತಾ ಬಂದಂತೆ "ಏನೇ ಆಗಲಿ ಈ ಕಾಶ್ಮೀರದ ಕಾರಣದಿಂದಲೇ 'ಒಂದೋ ಆಚೆ—ಇಲ್ಲವೇ ಈಚೆ' ಎಂಬ ನಿರ್ಧಾರವೊಮ್ಮೆ ಆಗಿಹೋಗಲಿ". ಎಂದು ಉದ್ಗರಿಸಬೇಕಾಗುತ್ತದೆ. ಹಾಗಲ್ಲದೆ ಸಮಜಾಯಿಸಲು, ಸಂಧಾನ ಸಾಧಿಸಲು ಸಾಧ್ಯವಿರುವ ಕಲಹವೇ ಈ ಪಾಕಿಸ್ತಾನದ್ದು? ತಂಟೆಯೊಂದು ಕಳೆದು ಹೋಗಲಿ, ಎಂದು ಪಾಕಿಸ್ತಾನ ಕೊಟ್ಟ ಬೆನ್ನಲ್ಲೇ ಆ ತಂಟೆ ನಾಲ್ಕಡಿ ನಡೆದುಹೋಯಿತು–ಎಲ್ಲಾ ಗೊಂದಲಗಳೂ ಪರಾಧೀನತೆಯ ಕಾಲದಿಂದ ಬಂದ ಪ್ರಸಾದಗಳಾದ್ದರಿಂದ ಈಗ ದೊರೆತ ಸ್ವಾತಂತ್ರ್ಯಕ್ಕೊಂದು ವ್ಯವಸ್ಥೆಮಾಡಿಕೊಂಡು ಶಾಸನಬದ್ಧ ಸಂಬಂಧವುಳಿಸಿಕೊಳ್ಳೋಣವೆಂದು ಬಗೆದರೆ ಕಾಶ್ಮೀರದಲ್ಲಿ ಕಲಹವೆಬ್ಬಿಸಿದರು–ಅದುಕೂಡಾ ಪಾಕಿಸ್ತಾನವು ಎದೆ ತಟ್ಟಿಕೊಂಡು ಕಾಶ್ಮೀರೀ ರಂಗಕ್ಕೆ ಮುಂದೆಬಾರದೆ, ಮರೆಯಲ್ಲೇ ನಿಂತು ಮಾಡಬೇಕಾದುದನ್ನೆಲ್ಲಾ ಮಾಡುತ್ತಾ ಬರುತ್ತಿದೆ—ಅಂದಮೇಲೆ ಶಾಂತಿ ಸಂಧಾನ ಹೇಗೆ ಸಾಧ್ಯ? ಇಕ್ಕಡೆಗಳಲ್ಲೊಂದಕ್ಕೆ ಅದು ಬೇಸವಾಗಿರುವಾಗ, ಇದಿರುಕಡೆಯ ಶಾಂತಿ ಪ್ರಯತ್ನವನ್ನೇ ತನ್ನ ಸ್ವಾರ್ಥ ಸಾಧನೆಗನುಕೂಲವಾಗಿ ಉಪಯೋಗಿಸಿಕೊಳ್ಳಲು ಅದು ಪ್ರಯತ್ನಿಸುತ್ತಿರುವಾಗ, ಸಂಧಾನ ಸಾಧನೆ ಹೇಗಾದೀತು? ಜಗಳ ನಿರತ ಪಕ್ಷಗಳಾದ ಪಾಕಿಸ್ತಾನ–ಭಾರತಗಳು ತಾವಾಗಿ ಪರಸ್ಪರ ಹೊಂದಿಕೊಳ್ಳಬಲ್ಲೆವೆಂಬ ಆಶೆಯೇ ಮೂಲಕ ಪೂರ್ಣ ಕಳೆದು ಹೋಗಿದೆ. ಉಳಿದಿರುವುದು ಎರಡೂ ಪಕ್ಷಗಳು ತಮ್ಮ ತಮ್ಮ ಹಕ್ಕು ಗೌರವ ರಕ್ಷಣೆಗಾಗಿ ತಂತಮ್ಮ ಕರ್ತವ್ಯಗಳನ್ನು ನೇರೇರಿಸುವುದೊಂದೇ. ಪಾಕಿಸ್ತಾನವು ಅದನ್ನೇನೂ ಬಾಕಿಯಿಡದೆ ಮಾಡುತ್ತಾ ಬಂದಿದೆ. ಕಾಶ್ಮೀರದೊಳಗೆ ಧಾಳಿಗಾರರನ್ನು ಹೊಗಿಸಿದೆ; ಅವರಿಗೆ ಸಂಗ್ರಹ, ತರಬೇತಿ, ಸಲಕರಣೆ, ಸೌಕರ್ಯಗಳನ್ನೊದಗಿಸುತ್ತಲೇ ಇದೆ; ಆದರೆ ಭಾರತ ಸರಕಾರವು ಈ ತನಕ ತನ್ನ ಹಕ್ಕಿನ ಕಾಶ್ಮೀರದ ಗಡಿಯೊಳಗೆ ನುಗ್ಗಿ ಬಂದಷ್ಟು ಮಂದಿಯನ್ನು ಥಳಿಸುವುದೊಂದಲ್ಲದೆ, ಅವರು ನುಗ್ಗಿ ಬರುವ ಮೊದಲೇ ಚಲ್ಲಾಪಿಲ್ಲಿ ಗೊಳಿಸುವ ಸಾಹಸಕ್ಕೆ ಕೈಹಾಕಿಲ್ಲ. ಅದರೀಗ ಮುಂದೊತ್ತಿ ಹೋಗಿ ಧಾಳಿಗಾರರ ಹಿನ್ನೆಲೆಯನ್ನು ಪುಡಿಗುಟ್ಟದೆ ನಿರ್ವಾಹವಿಲ್ಲವಾಗಿದೆ ಕಾರಣವೆಂದರೆ ಕಾಶ್ಮೀರದ ಸುಮಾರು 50 ಸಾವಿರ ಮಂದಿಯನ್ನೂ ಪಾಕಿಸ್ತಾನದ ಸುಮಾರು 1ಲಕ್ಷ ಜನರನ್ನೂ ಪಾಕಿಸ್ತಾನವು ಕಾಶ್ಮೀರದ ಧೌಡಿಗಾಗಿ ತಯಾರಿಸಿದೆ ಇವರೆಲ್ಲರ ಜಮೆ, ತರಬೇತಿ, ಸಂಚಾರ ಸವಾರಿ ಪಾಕಿಸ್ತಾನದೊಳಗಡೆಯಲ್ಲೇ. ಅವರಿಗೆ ಬೇಕಾಗುವ ಶಸ್ತ್ರಾಸ್ತ್ರಗಳು ಮತ್ತಿತರ ಸರ್ವ ಸರಬರಾಯಿಗಳೂ ಪಾಕಿಸ್ತಾನದೊಳಗಿನಿಂದಲೇ; ಅವು ಧಾರಾಕಾರವಾಗಿ ಹರಿದು ಬರುತ್ತಲೇ ಇವೆ. ಕಾಶ್ಮೀರವನ್ನು ಮುತ್ತುವ ಕಟ್ಟಿರುವೆಗಳ ಬಿಲವಾಗಿ ವಿಶಾಲ ಪಾಕಿಸ್ತಾನವಿದೆ. ಭಾರತ ಸರಕಾರವು ಬಿಲದ ದ್ವಾರದಲ್ಲಿ ನಿಂತು ಹೊರಗೆ ಬಂದವುಗಳನ್ನಷ್ಟೇ ಕೊಲ್ಲುವ ಹಿಂದಕ್ಕೋಡಿಸುವ ಕೆಲಸ ನಡೆಸುತ್ತಿದೆ; ಇದು ಮುಗಿಯಲಾರದ ಕೆಲಸ; ಮಾತ್ರವಲ್ಲ, ತುಸು ಕೈ ತಡೆದರೆ ಸಾಕು–ಕಟ್ಟಿರುವೆಗಳ ಹಿಂಡುಹಿಂಡೇ ನುಗ್ಗಿಬಿಡುತ್ತದೆ. ಅಂದಮೇಲೆ ಈ ಇರುವೇ ತಂಡದ ನಾಶಕ್ಕಾಗಿ ಬಿಲದೊಳಗೆ ಬೆಂಕಿ ಹಚ್ಚದೆ ನಿರ್ವಾಹವಿಲ್ಲ; ಪಾಕಿಸ್ತಾನದೊಳಗಡೆಗೆ ಬಿಸಿ ತಾಗಿಸದೆ ವಿಧಿಯಿಲ್ಲ! ಸರಿ. ಕಾಶ್ಮೀರ ಯುದ್ಧವನ್ನು ಪಾಕಿಸ್ತಾನದ ಒಳಗಡೆಗೆ ಹೊಗಿಸಬೇಕೆಂದೇ ಇದರ ಅರ್ಥ. ಹಾಗೆ ಮಾಡುವ ಮೊದಲು ತಾವು ತಪ್ಪುಗಾರರೆನ್ನಿಸದಂತೆ ಇಂತಹ ಜಗಳಗಳ ತೀರ್ಮಾನಕ್ಕಾಗಿ ಇರುವ ಜಾಗತಿಕ ಸಂಘಕ್ಕೊಮ್ಮೆ ದೂರು ಕೊಡಬೇಕಾಗಿ ಬಂತು. ಭಾರತ ಸರಕಾರವು ಆ ದೂರನ್ನು ಕೊಟ್ಟಿದೆ. ಜಾಗತಿಕ ಸಂಘದ ಭದ್ರತಾ ಕೌನ್ಸಿಲು ಇದೇ ತಾ 6ನೇ ಮಂಗಳವಾರ ಈ ದೂರಿನ ಪರ್ಯಾಲೋಚನೆಗಾಗಿ ಸೇರಿದೆ.

ಭಾರತದ ದೂರು

"ಕಾಶ್ಮೀರದ ಧಾಳಿಯನ್ನು ನಡೆಸುತ್ತಿರುವುದು ಪಾಕಿಸ್ತಾನವೇ. ಅದೀ ಕೆಲಸವನ್ನು ಕೂಡಲೇ ನಿಲ್ಲಿಸುವಂತೆ ಮಾಡಬೇಕು. ಪಾಕಿಸ್ತಾನವು ಧಾಳಿಗಾರರಿಗೆ ಕೊಡುತ್ತಿರುವ ಸಹಾಯವನ್ನು ಕೂಡಲೇ ನಿಲ್ಲಿಸದಿದ್ದಲ್ಲಿ, ಸ್ವರಕ್ಷಣೆಗಾಗಿ ಧಾಳಿಗಾರರ ಮೇಲೆ ಸೇನಾ ಕಾರ್ಯ ಕೈಕೊಳ್ಳಲು ಭಾರತ ಸರಕಾರವು ಪಾಕಿಸ್ತಾನದ ಪ್ರದೇಶಗಳೊಳಗೆ ನುಗ್ಗಬೇಕಾಗುವುದು" ಎಂಬುದೇ ಭಾರತ ಸರಕಾರವು ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನ ಮುಂದಿಟ್ಟಿರುವ ಮನವಿ. ಆ ಮನವಿಯಲ್ಲಿ ಹೀಗಿದೆ: "ಜಾಗತಿಕ ಸಂಘದ ನಿಯಮಾವಳಿಯ 35ನೇ ವಿಭಾಗದಲ್ಲಿ, ಯಾವುದೇ ಸದಸ್ಯನು ಅಂತರ್ರಾಷ್ಟ್ರೀಯ ಭದ್ರತೆ ಮತ್ತು ಶಾಂತಿಗೆ ಭಂಗವೆಂದು ತೋರುವ ಯಾವುದೇ ವಿದ್ಯಮಾನವನ್ನು ಭದ್ರತಾ ಕೌನ್ಸಿಲಿನ ಮುಂದಿಡಬಹುದೆಂದಿದೆ–ಈಗ, ಪಾಕಿಸ್ತಾನದ ಪ್ರಜೆಗಳು ಮತ್ತು ಪಾಕಿಸ್ತಾನಕ್ಕೊತ್ತಿನ ಗುಡ್ಡಗಾಡುಗಳವರಿಂದ ಕೂಡಿರುವ ಧಾಳಿಗಾರರು ಪಾಕಿಸ್ತಾನದೊಳಗಡೆಯಿಂದ, ಪಾಕಿಸ್ತಾನದ ಸಹಾಯ ಪಡೆದು, ಭಾರತದೊಡನೆ ಜೋಡಣೆಗೊಂಡಿರುವ ಮತ್ತು ಭಾರತದ ಭಾಗವಾಗಿರುವ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದೊಳಗೆ ನುಗ್ಗಿರುವುದರಿಂದ ಭಾರತ ಪಾಕಿಸ್ತಾನಗಳೊಳಗೆ ಅಂತಹ ವಿದ್ಯಮಾನವೆದ್ದಿದೆ. ಕಾಶ್ಮೀರವು ಭಾರತದೊಂದಿಗೆ ಸೇರಿಕೊಂಡ ವಿದ್ಯಮಾನಗಳು, ಭಾರತವು ಸೇನಾಕಾರ್ಯ ಕೈಕೊಳ್ಳುವಂತೆ ಮಾಡಿದ ಧಾಳಿಗಾರರ ಕೃತ್ಯಗಳು, ಮತ್ತು ಧಾಳಿಗಾರರು ಪಾಕಿಸ್ತಾನದಿಂದ ಪಡೆದಿರುವ ಮತ್ತೀಗಲೂ ಪಡೆಯುತ್ತಿರುವ ಸಹಾಯ ಸೌಕರ್ಯಗಳು, ಮನವಿಯ ಕೊನೆ ಭಾಗದಲ್ಲಿ ವಿವರವಾಗಿ ನಮೂದಿಸಲ್ಪಟ್ಟಿವೆ. ಪಾಕಿಸ್ತಾನವು, ಭಾರತದ ಪ್ರತ್ಯಕ್ಷ ವಿರುದ್ಧಾಚರಣೆಯಾಗಿರುವ ಆ ಸಹಾಯ ಸಲ್ಲಿಸುವಿಕೆಯನ್ನು ಕೂಡಲೇ ನಿಲ್ಲಿಸುವಂತೆ ಪಾಕಿಸ್ತಾನಕ್ಕೆ ತಿಳಿಸಬೇಕೆಂದು ಭಾರತ ಸರಕಾರವು ಈ ಮೂಲಕ ಭದ್ರತಾ ಕೌನ್ಸಿಲನ್ನು ವಿಜ್ಞಾಪಿಸಿಕೊಳ್ಳುತ್ತದೆ. ಪಾಕಿಸ್ತಾನವು ಹಾಗೆ ಮಾಡದಿದ್ದಲ್ಲಿ, ಸ್ವರಕ್ಷಣೆಗಾಗಿ ಧಾಳಿಗಾರರ ಮೇಲೆ ಸೇನಾ ಕಾ

ವರ ಅಭಿಪ್ರಾಯಾನುಸಾರ ಎಲ್ಲಾ ನಿಯಂತ್ರಣಗಳೂ ರದ್ದಾಗಿ 'ವ್ಯವಹಾರ ಸ್ವಾತಂತ್ರ್ಯ' ದೊರೆಯತಕ್ಕದ್ದೆಂಬ ತತ್ವದಂತೆ ಈ ನಿಯಂತ್ರಣವೂ ರದ್ದಾಗಬೇಕೆಂದೂ, ಇಲ್ಲವಾದರೆ ಈ ಕ್ಷೇತ್ರದಲ್ಲಿ ಈಗಲೇ ಹಬ್ಬಿರುವ ಕಳ್ಳಸಂತೇ ವಹಿವಾಟು ಇನ್ನಷ್ಟು ಹೆಚ್ಚಬಹುದೆಂದೂ ಈ ಸಮ್ಮೇಳನವು ಅಭಿಪ್ರಾಯಪಡುತ್ತದೆ.'

೫. ಮು. ಸ.—'ಜೀವನಾವಶ್ಯ ಧಾನ್ಯ ಸಾಮಾಗ್ರಿಗಳ ಮೇಲಿನ ನಿಯಂತ್ರಣವನ್ನು ಸರಕಾರವು ರದ್ದುಪಡಿಸಿದ್ದನ್ನು ಈ ಸಮ್ಮೇಳನವು ನಿಷೇಧಿಸುತ್ತದೆ. ಮತ್ತು ಕೂಡಲೇ ನಿಯಂತ್ರಣಗಳನ್ನು ಜಾರಿಗೆ ತರಬೇಕೆಂದೂ ಕಳ್ಳ ದಾಸ್ತಾನು, ಕಳ್ಳ ಸಂತೆಗಳ ನಿರ್ಮೂಲನಕ್ಕಾಗಿ ಕಠಿಣ ಕಾರ್ಯ ಕೈಕೊಳ್ಳಬೇಕೆಂದೂ ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.'

ಪ್ರ. ಸ.—'ನಿಯಂತ್ರಣಗಳನ್ನು ರದ್ದುಪಡಿಸಿ ಊಟ ಉಡಿಗೆ ಸಂಬಂಧದ ಎಲ್ಲಾ ಜವಾಬ್ದಾರಿಗಳನ್ನೂ ಅವುಗಳ ಹಕ್ಕಿನ ಮಾಳಿಗೆಯಂಗೇನೇ ಬಿಟ್ಟುಕೊಟ್ಟ ಸರಕಾರವನ್ನು ಈ ಸಮ್ಮೇಳನವು ಅಭಿನಂದಿಸುತ್ತದೆ'.

೬. ಮು. ಸ.—'ಭಾರತವು ಸ್ವಾತಂತ್ರ್ಯ ಹೊಂದಿದುದಕ್ಕಾಗಿ ಈ ಸಮ್ಮೇಳನವು ಹಿರಿ ಹಿಗ್ಗುತ್ತದಲ್ಲದೆ ಭಾರತವನ್ನು 'ಸ್ವತಂತ್ರ ಸಮಾನತಾ ಜನತಾ ಸರಕಾರ'ದ ಗುರಿ ಮುಟ್ಟಿಸಲು ಪೂರ್ಣ ಸಹಕಾರ ಸಲ್ಲಿಸತಕ್ಕದೆಂದು ಆಶ್ವಾಸನೆ ಕೊಡುತ್ತದೆ. ಮಹಾತ್ಮಾ ಗಾಂಧಿ ಮತ್ತವರ ನಾಯಕತ್ವಕ್ಕೆ ಧನ್ಯವಾದ ಕೊಡುತ್ತದೆ.'

ಪ್ರ. ಸ.—'ದೊರೆತ ಸ್ವರಾಜ್ಯಕ್ಕಾಗಿ ಹಿಗ್ಗಿ, ಮುಂದಿನ ಗುರಿ 'ಸ್ವತಂತ್ರ ಸಮಾನತಾ ಜನತಾ ಸರಕಾರ'ವನ್ನು ಒಪ್ಪಿಕೊಳ್ಳುವಾಗಲೇ, ಆ ಸಮಾನತೆಯು ಪ್ರಕೃತಿಜನ್ಯ ಹಾಗೂ ದೈಹಿಕ ವ್ಯತ್ಯಾಸಗಳ ಮಟ್ಟಿಗೆ ಅನ್ವಯವಾಗಲಾರದೆಂಬುದನ್ನು ಈ ಸಮ್ಮೇಳನವು ನೆನಪಿಗೆ ತರುತ್ತದೆ. ಆದರ್ಶ ಮಹಿಳೆ ಕಸ್ತೂರಿಬಾ ಗಾಂಧಿಯನ್ನು ಈ ಸಮ್ಮೇಳನವು ಅಭಿನಂದಿಸುತ್ತದೆ'.

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs

ಹೊಸ ವ್ಯವಸ್ಥೆ - ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—

ಎಲ್ಲಿ ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ.

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging,
KATAPADI, S. K.

ಭಾರತದ ದೂರು

‘ನಿಲ್ಲದಿದ್ದರೆ ಹಿಂದೀ ಸರಕಾರ ಪಾಕಿಸ್ತಾನದೊಳಗೆ ನುಗ್ಗುವುದು’

ರ್ಯ ಕೈಕೊಳ್ಳುವುದಕ್ಕಾಗಿ ಭಾರತ ಸರಕಾರವು ಪಾಕಿಸ್ತಾನ್ ಕ್ಷೇತ್ರದೊಳಗಡೆ ಪ್ರವೇಶಿಸಬೇಕಾಗಿ ಬರಬಹುದು. ಹೀಗಾಗಿ ಈ ವಿಷಯವು ಅತ್ಯಂತ ಅವಸರದ್ದಾಗಿರುವದರಿಂದ, ಅಂತರ್ರಾಷ್ಟ್ರೀಯ ಶಾಂತತಾಭಂಗವಾಗುವುದನ್ನು ತಡೆಯಲಾಗುವಂತೆ ಭದ್ರತಾ ಸಮಿತಿಯು ಕೂಡಲೇ ಕಾರ್ಯ ಕೈಕೊಳ್ಳುವದು ಅಗತ್ಯವಿದೆ"–ಎಂದಿರುವ ಭಾರತ ಸರಕಾರದ ಮನವಿಯಲ್ಲಿ ಸಭ್ಯದ ಘೋಷಣೆಯು ವಿದ್ಯಮಾನಗಳೆಲ್ಲ ಮಂಡಟ್ಟಾಗುವ ವಿಷಯಗಳು ಬಂದಿವೆ. ಕಾಶ್ಮೀರದ ಘರ್ಷಣೆಯ ಹಿನ್ನೆಲೆ–ಅದರಲ್ಲಿ ಪಾಕಿಸ್ತಾನದ ಪಾಲುಗಾರಿಕೆ–ಈಗಲೂ ಜಮ್ಮು ಮತ್ತು ಕಾಶ್ಮೀರದಿತರ ಕಡೆಗಳಲ್ಲಿರುವ ಧಾಳಿಗಾರರ ಬೆನ್ನಿಗೊತ್ತಾಗಿ ಇರುವ ರಕ್ಷಣಾ ನೆಲೆಗಳು, ಸರಬರಾಯಿ ಪಥಗಳು–ಪಾಕಿಸ್ತಾನ್‌ದಿಂದ ಬರುತ್ತಿರುವ ಸಹಾಯ ಸಲಕರಣೆಗಳು–ಇವೆಲ್ಲವುಗಳನ್ನೂ ಭಾರತ ಸರಕಾರವು ಭದ್ರತಾ ಸಮಿತಿಯ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದೆ. ನೆರೆಯ ಹಾಗೂ ಮೈತ್ರಿಯ ಒಂದು ಸಂಸ್ಥಾನವು ತನ್ನ ಒಳಗಿನ ಅಥವಾ ಹೊರಗಿನ ವ್ಯವಸ್ಥೆಗಳನ್ನು ಬಲಾತ್ಕಾರಕ್ಕೆ ಬಲಿಬಿದ್ದು ನಿಷ್ಕ್ರಿಯಸಿಕೊಳ್ಳದಂತಾಗಬೇಕು–ಭಾರತ ವಸಾಹತಿಗೆ ಜೋಡಣೆಗೊಂಡಮೇಲೆ ಜಮ್ಮು ಕಾಶ್ಮೀರದ ರಕ್ಷಣೆಯು ಶಾಸನಬದ್ಧವಾಗಿ ಭಾರತ ಸರಕಾರದ್ದೇ–ಎಂಬೆರಡು ಕಾರಣಗಳಿಂದ ಕಾಶ್ಮೀರದೊಳಗೆ ಸೇನಾಕಾರ್ಯ ಕೈಕೊಂಡುದನ್ನು ತಿಳಿಸಿ ಪಶ್ಚಿಮ ಪಂಜಾಬಿನ ಪಾಕಿಸ್ತಾನೀ ಪ್ರಜೆಗಳೇ ಸುಮಾರು 1 ಲಕ್ಷ ಮಂದಿ ಈ ಧಾಳಿಗೆ ತರಬೇತಿ ಪಡೆದು ಬಂದಿರುವುದನ್ನೂ, ಪಾಕಿಸ್ತಾನದ ಸೇನಾ ತಜ್ಞರು ಮತ್ತು ಸೈನಿಕರು ಕಾಶ್ಮೀರದ ಧಾಳಿಯನ್ನು ನಡೆಸುತ್ತಿರುವುದನ್ನೂ, ಪೆಟ್ರೋಲು, ಸರ್ವ ವಿಧದ ಶಸ್ತ್ರೋಪಕರಣಗಳು, ರೇಶನ್ ಸಮೇತ ಸರ್ವ ಸಲಕರಣೆಗಳನ್ನೂ ಪಾಕಿಸ್ತಾನವು ಧಾಳಿಗಾರರಿಗೆ ಒದಗಿಸುತ್ತಿರುವುದನ್ನೂ ಒತ್ತಿಹೇಳಿದೆ. ಧಾಳಿಗಾರರನ್ನು ಪಾಕಿಸ್ತಾನದೊಳಗಡೆಯಿಂದ ಸಾಗಿಬರಲು ಬಿಟ್ಟದ್ದು–ಧಾಳಿಗಾರರಲ್ಲಿ ಪಾಕಿಸ್ತಾನದವರಿರುವುದು–ಧಾಳಿಗಾರರ ನಿಲ್ದಾಣಗಳು ಪಾಕಿಸ್ತಾನ ಕ್ಷೇತ್ರದಲ್ಲೇ ಇರುವುದು—ಧಾಳಿಗಾರರ ಹೆಚ್ಚಿನ ಶಸ್ತ್ರಾಸ್ತ್ರಗಳು, ಸೌಕರ್ಯ ಸಲಕರಣೆ ಸಹಾಯ ತರಬೇತಿ ಸಿದ್ಧತೆ ಎಲ್ಲವೂ ಪಾಕಿಸ್ತಾನದಿಂದಲೇ ದೊರೆತಿರುವುದು—ಪಾಕಿಸ್ತಾನದಿಂದ ಹೊರತು ಬೇರೆಲ್ಲಿಂದಲೂ ಧಾಳಿಗಾರರಿಗೆ ಅಂತಹ ಸರಬರಾಯಿಯಾಗಲು ಸಾಧ್ಯವಿಲ್ಲದಿರುವುದು—ಇವು ಭಾರತ ಸರಕಾರದ ಮನವಿಯಲ್ಲಿ ಬಂದಿರುವ ಮೂಲ ಮುದ್ದೆಗಳು. ‘ಇಂತಹ ಅನ್ಯಾಯವನ್ನು ನಿಲ್ಲಿಸುವಂತೆ ಪಾಕಿಸ್ತಾನಕ್ಕೆ ಭಾರತ ಸರಕಾರವು ನೇಲಿಂದ ಮೇಲೆ ಕೊಟ್ಟ ಸೂಚನೆಗಳನ್ನೂ ಭಾರತದ ಪ್ರಧಾನ ಮಂತ್ರಿಯು ಪಾಕಿಸ್ತಾನ್ ಪ್ರಧಾನ ಮಂತ್ರಿಗೆ ಸ್ವತಃ ಕೈಯಾರೆಕೊಟ್ಟ ಆಕ್ಷೇಪಪತ್ರವನ್ನೂ ಪಾಕಿಸ್ತಾನವು ಮುಚ್ಚಿಟ್ಟು ಕುಳಿತುಕೊಂಡಿದೆ; ಉತ್ತರವನ್ನೇ ಕೊಟ್ಟಿಲ್ಲ. ಅಂತರ್ರಾಷ್ಟ್ರೀಯ ನೀತಿ ಪ್ರಕಾರ ನಮ್ಮ ಸ್ವರಕ್ಷಣೆಗಾಗಿ ನಾವು ಇಷ್ಟರಲ್ಲಿಯೇ ಪಾಕಿಸ್ತಾನದೊಳಗೆ ನುಗ್ಗಿ ಹೋಗಬಹುದಿತ್ತಾದರೂ ಸಹನೆ ಮತ್ತು ನಯಧೋರಣೆ ವಹಿಸಿ ಹೀಗೆ ಮಾಡಿದ್ದೇವೆ. ಆದ್ದರಿಂದ ಭದ್ರತಾ ಕೌನ್ಸಿಲು ಈ ಕುರಿತು ಅತ್ಯವಸರದಿಂದ ಕಾರ್ಯ ಕೈಕೊಳ್ಳಬೇಕು. ಇತ್ತೀಚಿಗಿನ ಕೆಲವು ದಿನಗಳಲ್ಲಿ ಕಾಶ್ಮೀರದ ಯುದ್ಧಗತಿಯು ತೀವ್ರವಾಗಿರುವದರಿಂದ ಮಧ್ಯಾವಧಿಯಲ್ಲಿ ಅಗತ್ಯಬೀಳುವ ದಿಕ್ಕಿಗೆ ಯುದ್ಧಗತಿ ತಿರುಗಿಸುವ ಹಕ್ಕು ನಮ್ಮದೆಂದು ಇಲ್ಲಿಯೇ ತಿಳಿಸಿ ಬಿಡುತ್ತೇವೆ. ನಾವು ಸೌಹಾರ್ದದಿಂದಿರಲು ಬಯಸಿದ್ದ ಪಾಕಿಸ್ತಾನದ ಸಂಬಂಧವು ಹೀಗಾದುದಕ್ಕೆ ನಮಗೆ ಪಶ್ಚಾತ್ತಾಪವಿದೆ’ ಎಂದು ಭಾರತ ಸರಕಾರವು ಎಲ್ಲವನ್ನೂ ಸ್ಪಷ್ಟಪಡಿಸಿದೆ. ಇವೆಲ್ಲ ವಿಷಯಗಳನ್ನು ಪಂಡಿತ ನೆಹರುಗಳು ತನ್ನೊಂದು ಹೇಳಿಕೆಯಲ್ಲಿ ಘಂಟಾಘೋಷವಾಗಿ ಸಾರಿದ್ದಾರೆ.

ಪಾಕಿಸ್ತಾನದ ಪ್ರತಿದೂರು

ಭಾರತ ಸರಕಾರವು ಎಲ್ಲವನ್ನೂ ಗಾಢವಾಗಿ ಪರ್ಯಾಲೋಚಿಸಿ, ಭಾವೀ ಸಂಭವಗಳ ಅಪಾಯಗಳೊಡನೆ ತನ್ನ ಶಕ್ತಿಸಾಮರ್ಥ್ಯಗಳನ್ನು ತೂಕಕ್ಕಿಟ್ಟು ನೋಡಿಕೊಂಡೇ, ಪಾಕಿಸ್ತಾನದ ತಂಟೆಯನ್ನು ಈ ಮೂಲಕ ‘ಮುಗಿಸುವೆ ಇಲ್ಲವೇ ಮುರಿಯುವೆ’ ಎಂಬ ಶಪಥ ತೊಟ್ಟೇ ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟಿದೆ. ತಾನೀ ಹೆಜ್ಜೆಯಿಟ್ಟುದನ್ನು, ಸಂಪ್ರದಾಯ ಪ್ರಕಾರ ಬ್ರಿಟನು ಮತ್ತು ಪಾಕಿಸ್ತಾನ ಸಮೇತ ಎಲ್ಲಾ ವಸಾಹತುಗಳಿಗೂ ತಿಳಿಸಿದೆ. ಇದರ ಪರಿಣಾಮವಾಗಿ ಇತ್ತ ಪಾಕಿಸ್ತಾನಾಧಿಕಾರಿಗಳು ಹೊಸ ಚಟುವಟಿಕೆಗಳಿಗಾರಂಭಿಸಿದ್ದಾರೆ. ಅತ್ತ ಲಂಡನಿನಲ್ಲೂ ಮಾನಸಿಕಾಂದೋಲನವೆದ್ದಿದೆ. ಕಾಶ್ಮೀರಕ್ಕೆ ಸಮೀಪವಿರುವ ರಶ್ಯಕ್ಕೂ ಈ ಪ್ರಶ್ನೆಯಲ್ಲಿ ವಿಶೇಷ ಆಸಕ್ತಿಯಿದೆ. ಆ ಕಡೆಯಿಂದ ನುಗ್ಗಿ ಬಂದ ಗುಡ್ಡಗಾಡು ಜನರ ಕೈಯಲ್ಲಿ ಹೊಸ ಮಾದರಿಯ ರಶ್ಯನ್ ಆಯುಧಗಳಿದ್ದ ನಿದರ್ಶನಗಳೂ ಇದ್ದುವು. ಜಾಗತಿಕ ಸಂಘದಲ್ಲಿ, ರಶ್ಯವೇ ಮೊದಲಾದ ವಿದೇಶಗಳ ಸಮ್ಮುಖದಲ್ಲಿ ಎಲ್ಲಾ ದಾಖಲೆಗಳನ್ನೂ ಹಾಜರುಪಡಿಸುವದಕ್ಕಿಂತ ತಮ್ಮ ಮಧ್ಯಸ್ತಿಕೆಯಿಂದಲೇ ಭಾರತ–ಪಾಕಿಸ್ತಾನಗಳ ಈ ಜಗಳವನ್ನು ತೀರ್ಮಾನಿಸಿಬಿಡಬಹುದಿತ್ತು ಎಂದು ಬ್ರಿಟನಿನ ಆಶೆ. ಕಾಶ್ಮೀರದ ಕುರಿತು ಏನಾದರೂ ‘ಅರ್ಧ ಅತ್ತ–ಅರ್ಧ ಇತ್ತ’ ಮಾಡುವ ಆಲೋಚನೆ ಬ್ರಿಟಿಷ್ ಮುತ್ಸದ್ದಿಗಳಲ್ಲಿರುವಂತೆ ಕಾಣುತ್ತದೆ. ಇತ್ತ ಸತ್ಯ ಸಂಗತಿ ತಿಳಿದಿಲ್ಲವಾದರೂ ಭಾರತ ಪಾಕಿಸ್ತಾನಗಳೊಳಗೆ ಯುದ್ಧವಾಗದಂತೆ ನೋಡಬೇಕೆಂದೂ, ಆಗುವಂತಿದ್ದರೆ ತಾನು ರಾಜೀನಾಮೆ ಕೊಟ್ಟು ಹೊರಡುವುದೇ ಸರಿಯೆಂದೂ ಲೋರ್ಡ್ ಮೌಂಟ್‌ಬೇಟನರ ಅಭಿಪ್ರಾಯವೆಂದು ವಾರ್ತೆಯಿದೆ. ಇದೇ ತಾ 6ರಲ್ಲಿ ಕೇವಲ ಇದೊಂದೇ ವಿಷಯದ ಪರಿಶೀಲನೆಗಾಗಿ ಸೇರಿದ್ದ ಜಾಗತಿಕ ಸಂಘದ ಭದ್ರತಾ ಕೌನ್ಸಿಲು ಆ ದಿನ ಭಾರತಪ್ರತಿನಿಧಿಯ ಬಾಯ್ದೆರೆ ಹೇಳಿಕೆ ಮತ್ತದಕ್ಕೆ ಪಾಕಿಸ್ತಾನ್ ಪ್ರತಿನಿಧಿಯ ಉತ್ತರವೇನೆಂಬುದನ್ನು ಕೇಳಿಕೊಂಡು, ಕೌನ್ಸಿಲು ಸದಸ್ಯರಿಗೆ ಸರಿಯಾದ ಪರ್ಯಾಲೋಚನೆಗೆ ಸಮಯ ದೊರೆಯಲಾಗುವಂತೆ ಕೆಲವು ದಿನಗಳ ಮಟ್ಟಿಗೆ ಮುಂದುವರಿವುದು, ಎಂದು ತಿಳಿದುಬರುತ್ತದೆ. ಈ ಕೌನ್ಸಿಲಿನ ಸಭೆಗಾಗಿ ಬ್ರಿಟನಿನ ಪ್ರತಿನಿಧಿಗಳು ಹೊರಟಿದ್ದಾದರೂ, ಅವರಾ ಸಭೆ ಸೇರುವ ಲೇಕ್ ಸಕ್ಸೆಸ್‌ಗೆ ತಾ 6ಕ್ಕೆರಡು ದಿನ ತಡವಾಗಿ ಮುಟ್ಟಲಿದ್ದಾರೆ. ಕೂಡಲೇ ಮಧ್ಯ ಪಂಚಾಯತಿಕೆಗಾರಂಭಿಸುವರೆಂದು ತಿಳಿದು ಬರುತ್ತದೆ. ಭಾರತದ ವಿಜ್ಞಾಪನಾ ಪತ್ರವನ್ನು ಭದ್ರತಾ ಕೌನ್ಸಿಲಿನಲ್ಲಿ ಖಾಯಂ ಹಿಂದೀ ಪ್ರತಿನಿಧಿಯಾಗಿರುವ ಡಾ| ಪಿ. ಪಿ. ಪಿಳ್ಳೆಯವರು ಕೌನ್ಸಿಲಿನ ಮುಂದಿಟ್ಟು–ವ್ಯಾಖ್ಯಾನಾರಂಭಿಸುವರು. ಪಾಕಿಸ್ತಾನದ ಖಾಯಂ ಸದಸ್ಯ ಮಿ. ಇಸ್ಪಹಾನಿಗಳು ಅದನ್ನಿದಿರಿಸುವರು. ಅಲ್ಲಿಯ ಚರ್ಚೆಗಳ ವೇಳೆ ಭಾರತದ ಏಕಮಾತ್ರ ಪ್ರತಿನಿಧಿಯಾಗಿ ಶ್ರೀ ಎಂ. ಸಿ. ಸೆಟಲ್ವಾಡರನ್ನು ನೇಮಿಸಲಾಗಿದೆ, ಎಂದು ತಿಳಿದು ಬರುತ್ತದೆ. ಬ್ರಿಟನಿನ ಪ್ರತಿನಿಧಿಗಳ ನಾಯಕನಾಗಿ ಮಿ. ನೋಯೆಲ್ ಬೇಕರ್ ಹೊರಟಿದ್ದಾರೆ

ಪಾಕಿಸ್ತಾನದ ಉತ್ತರ

ಪಾಕಿಸ್ತಾನದ ಉತ್ತರವು ಸಿದ್ಧವಾಗಿದೆಯೆಂದು ತಿಳಿದುಬರುತ್ತದೆ. ಕಾಶ್ಮೀರದ ಕಾಳಗದ ಕುರಿತು ಭಾರತ ಸರಕಾರವು ತನ್ನ ಮೇಲೆ ಮಾಡಿರುವ ದೂರುಗಳನ್ನು ಅಲ್ಲಗಳೆಯುವ ಸಾಹಸಕ್ಕೆ ಪಾಕಿಸ್ತಾನವು ಹೋಗುವಂತೆ ಕಾಣುವದಿಲ್ಲ. ಬದಲಿಗೆ ಭಾರತದ ಒಂದು ದೂರಿಗೆ ಪ್ರತಿಯಾಗಿ ನಾಲ್ಕು ದೂರುಗಳನ್ನು ತಾನು ಭಾರತದ ಮೇಲೆ ಹೇರಲು ಅದು ಕಟಿಬದ್ಧವಾಗಿದೆ. “ಕಾಶ್ಮೀರದ ವಿವಾದವು ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳ ಸರಪಣಿಯ ಒಂದೇ ಒಂದು ಗೊಣಸು. ಇಡೀ ಸರಪಣಿಯನ್ನೇ ದುರಸ್ತುಪಡಿಸಬೇಕು ಹೊರತು ಅದರ ಒಂದು ಕೊಂಡಿ ಮಾತ್ರವಲ್ಲ” ಎಂದ ಸರ್, ಝಫರುಲ್ಲಾ ಖಾನರ ವಾದವೇ ಅಲ್ಲಿ ಪಾಕಿಸ್ತಾನ್ ಪ್ರತಿವ್ಯಾಜ್ಯದ ಅಸ್ತಿವಾರವಾಗಲಿದೆ. ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಆಲೀಖಾನರು, ತಾನು ಪ್ರಧಾನಿಯಾದ ನಂತರ ಇದೀಗ ಮೊದಲಬಾರಿ ಪತ್ರಿಕಾ ಸಮ್ಮೇಳನ ಕರೆದು ಭಾರತದ ಮೇಲೆ ಚತುರ್ಮುಖೀ ಆರೋಪಗಳನ್ನು ಹೇರಿದ್ದಾರೆ. “ಭಾ

(೬ನೇ ಪುಟ ನೋಡಿರಿ.)

ಪ್ರಕಟಣೆ

ಬೈಂದೂರು (ದ. ಕನ್ನಡ) ಶಾಂತ ಆಶ್ರಮದ ಸಂಸ್ಥಾಪಕ ಸ್ವಾಮಿ ಕೃಷ್ಣಚೈತನ್ಯ ಯಾನೆ ಸಾಧು ಕೃಷ್ಣಚೈತನ್ಯನಾದ ನಾನು ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವುದೇನೆಂದರೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಶ್ರೀಧರ ಕೃಷ್ಣ ಶ್ಯಾನುಭಾಗ ಎಂಬವರು ನಮ್ಮ ಆಶ್ರಮದ ರಿಜಿಸ್ಟ್ರಿಯಾದ ಕಾನೂನು ಕಟ್ಟಳೆಗಳನ್ನು ಮುರಿದಿರುವುದರಿಂದ ಅವರಿಗೆ ನಮ್ಮ ಆಶ್ರಮದ ಯಾವ ಸಂಬಂಧವೂ ಇರುವುದಿಲ್ಲ. ಈ ಕೆಳಗೆ ಸಹಿಮಾಡಿದ ನಾವೇ ಆಶ್ರಮದ ಯಾವತ್ತೂ ಚಟುವಟಿಕೆಗಳ ಬಾಧ್ಯತೆಯುಳ್ಳವರಾಗಿದ್ದೇವೆ.

(ಸಹಿ) ಸ್ವಾಮಿ ಕೃಷ್ಣಚೈತನ್ಯ
ಭಾಗೇಶ್ವರ ಪತ್ತುಮುಡಿರ ಟೋಲ್‌ಷ್ಟೋರ್,
ಲೇಡಿಹಾರ್ಡಿಂಜ್ ರೋಡು ಬೊಂಬಾಯಿ 28

ಕಣ್ಣಿನ ಡಾಕ್ಟರು

ಎಲ್ಲಾ ತರದ ಕಣ್ಣಿನ ರೋಗಗಳನ್ನು ಬರೇ ಕುಡಿಯಲಿಕ್ಕೆ ಮಾತ್ರ ಮದ್ದು ಕೊಟ್ಟು ಗುಣಪಡಿಸುವರು. ಅಲ್ಲದೆ 67 ವರ್ಷದವರ ಬಂದಾದ ಮೂತ್ರವನ್ನೂ ಅನೇಕ ತರದ ಮದ್ದಿನಿಂದಲೂ ರಬ್ಬರ್ ಟ್ಯೂಬಿನಿಂದಲೂ ಬಾರದ್ದನ್ನು ಕುಡಿಯಲಿಕ್ಕೆ ಮದ್ದು ಕೊಟ್ಟು 7 ಗಂಟೆಯೊಳಗೇ ಹೋಗುವಂತೆ ಮಾಡಿದ್ದಾರೆ. ಒಂದೇ ಕಿವಿ ಕೇಳುತ್ತಿದ್ದ 53 ವರುಷದವರಿಗೊಬ್ಬರಿಗೆ ಹೀಗೆಯೇ ಕುಡಿಯಲಿಕ್ಕೆ ಮದ್ದು ಕೊಟ್ಟು ಎರಡೂ ಕಿವಿ ಕೇಳುವಂತೆ ಮಾಡಿದ್ದಾರೆ. ಬೇರೆ ಮದ್ದಿನಿಂದ ಗುಣವಾಗದವರು ಕೆಳಗಿನವರಲ್ಲಿಗೆ ಹೋಗಿ ಗುಣಪಡಿಸಿಕೊಳ್ಳಿ. ಸಮಯ ಬೆಳಗ್ಗೆ 9–30ರಿಂದ ಸಂಜೆ 5 ಗಂಟೆ ತನಕ

Dr S. T. Soans
Eye specialist, F. C. J. b.
Court road Udipi. S. K.

WARDEN

Reaches New Heights in 1946.

Business Received	... ...	Rs. 2,04,00,000
Business Completed	... ...	Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its hearties thanks and congratulations to its representatives and policy-holders all over the country and abroad

Managing Director — Agency Manager

Shivaprasad Thaker, — *M. Sunderram Shetty.*

Branch Office At Mangalore

K. P. Bhavanishanker Shetty
Branch Secretary.

The Canara Banking Corporation Limited.
(Incorporated in British India)
Estd: 1906.
Head Office: **UDIPI**, S. India.

ANNOUNCEMENT.

A branch of the BANK has been opened at High Road,
TRICHUR. (Cochin State)
on 28th November, 1947.

ನವಯುಗ

ಗುರುವಾರ, ೮ ಜನವರಿ ೧೯೪೮

ಕನ್ನಡಿಗರ ನಿರ್ಧಾರಗಳು

ಕಳೆದ ತಿಂಗಳ ಕೊನೆಯ ಭಾಗದಲ್ಲಿ ದ. ಕ. ಜಿಲ್ಲೆಯ ಕಾಸರಗೋಡಿನಲ್ಲಿ ಸೇರಿದ್ದ ಕರ್ನಾಟಕ ಸಾಹಿತ್ಯ ಸಮ್ಮೇಳನ, ಕರ್ನಾಟಕ ಏಕೀಕರಣ ಸಮ್ಮೇಳನ, ಸಾಹಿತ್ಯ ಗೋಷ್ಠಿ, ಮಹಿಳಾ ಗೋಷ್ಠಿ, ವಿಜ್ಞಾನ ಗೋಷ್ಠಿ—ಇವೆಲ್ಲವುಗಳ ಸಮಾಚಾರ, ನಿರ್ಧಾರಗಳು ಕನ್ನಡಿಗರಿಗೆ ದೊರೆತಿವೆ. ಕನ್ನಡ ನಾಡಿನ ವಿವಿಧ ಭಾಗಗಳವರು ಒಂದೆಡೆಯಲ್ಲಿ ಒಟ್ಟಾದರು; ವಿವಿಧ ರೀತಿಯ ಕಾರ್ಯಕಲಾಪಗಳನ್ನು ಜರಗಿಸಿದರು; ಪರಸ್ಪರ ವಿಚಾರ ವಿನಿಮಯಗಳಾದುವು; ಸಖ್ಯ ಸೌಹಾರ್ದತೆಗಳುಂಟಾದುವು. ತಮ್ಮೆಲ್ಲರ ಪಾಲಿಗೆ ಮುಂದಾವುದು, ಎಂಬ ಮಾರ್ಗಗಳನ್ನು ಗೊತ್ತುಹಚ್ಚಿಕೊಂಡರು; ರೀತಿ ವಿಧಾನಗಳನ್ನು ನಿರ್ಧರಿಸಿಕೊಂಡರು. ಇಂತಹ ಒಕ್ಕೂಟವೇ ಒಂದು ಮಹಾಶಕ್ತಿ. ಅಲ್ಲಿ ಹೊರಬಿದ್ದ ಭಾವನೆಗಳು ಮತ್ತು ಆದ ನಿರ್ಧಾರಗಳಾದರೋ ಈ ಶಕ್ತಿಯು ಮುನ್ನಡೆಯಲಾಗುವ ಬೆಳಕನ್ನು ಚೆಲ್ಲಿವೆ. ಈ ದೃಷ್ಟಿಯಿಂದ ಕಾಸರಗೋಡಿನ ಸಮ್ಮೇಳನವು ಯಶಸ್ವಿಯಾಯಿತೆನ್ನಲು ಸಂತೋಷಪಡುತ್ತೇವೆ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮಾ, ಅವರು ಹೊರಗೆಡಹಿದ ಪ್ರಗತಿಶೀಲ ಅಭಿಪ್ರಾಯಗಳು ಕಾಲೋಚಿತವಿವೆ. ಆದರೆ ಆ ವರೆಗಿದ್ದ ಸಾಹಿತ್ಯಪರಿಷತ್ತಿನ ನಿಯಮಗಳಂತೆ ಸಮ್ಮೇಳನಾಧ್ಯಕ್ಷತೆಯ ಮೇಲೆ ಗೌರವಭಾರವಿದ್ದಷ್ಟು ಕಾರ್ಯಭಾರವಿರಲಿಲ್ಲ; ಅಧ್ಯಕ್ಷರ ಅಭಿಪ್ರಾಯವೇ ಸಾಹಿತ್ಯಪರಿಷತ್ತಿನ ಕಾರ್ಯಕಲಾಪಗಳಿಗೆ ಅಸ್ತಿವಾರವಾಗುವದೆಂಬ ಭರವಸೆಯಿರಲಿಲ್ಲ. ಕಾರ್ಯಾಧ್ಯಕ್ಷರಾಗಿ ವರುಷದ ಎಲ್ಲಾ ಕೆಲಸಗಳನ್ನು ನಿರ್ವಹಿಸುವ ಉಪಾಧ್ಯಕ್ಷರು ಸಾಹಿತ್ಯ ಪರಿಷತ್ತಿಗೆ ಪ್ರತ್ಯೇಕವಿದ್ದರು. ಉತ್ಸವ ನಾಯಕ ಬೇರೆ, ಉದ್ಯೋಗಕರ್ತ ಪ್ರತ್ಯೇಕವಿದ್ದ ಇದುವರೆಗಿನ ಸ್ಥಿತಿಯನ್ನು ಕಾಸರಗೋಡಿನಲ್ಲಿ ಸೇರಿದ್ದ ಸಾಹಿತ್ಯಪರಿಷತ್ತು ಬದಲಾಯಿಸಿದೆ. ಸಮ್ಮೇಳನಾಧ್ಯಕ್ಷರೇ ಆ ವರುಷ ಪರಿಷತ್ತಿನ ಕಾರ್ಯಾಧ್ಯಕ್ಷರಾಗಿರಬೇಕೆಂದೂ, ಅಧ್ಯಕ್ಷರು ಬೆಂಗಳೂರಿನಲ್ಲಿರುವವರಲ್ಲವಾದರೆ, ಕಾರ್ಯವಾಹೀ ಸಮಿತಿಯ ಅಭಿಮತ ಪಡೆದು ಕಾರ್ಯನಿರ್ವಹಣೆಕ್ಕಾಗಿ ಉಪಾಧ್ಯಕ್ಷನನ್ನು ನೇಮಿಸಿಕೊಳ್ಳಬಹುದೆಂದೂ ಈ ಬಾರಿ ಬದಲಾವಣೆಯಾಗಿದೆ. ಈ ಮೂಲಕ ಕನ್ನಡ ಸಾಹಿತ್ಯ ಪರಿಷತ್ತನ್ನು ನಡೆಯಿಸಿಕೊಂಡು ಹೋಗುವ ಹೊಣೆಗಾರಿಕೆ ಸಮ್ಮೇಳನಾಧ್ಯಕ್ಷರ ಹೆಗಲಮೇಲೆ ಬಿದ್ದಿದೆ. ಈ ಜವಾಬ್ದಾರಿ ಹೊತ್ತ ಪ್ರಥಮಾಧ್ಯಕ್ಷರೆಂದರೆ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು. ಹೀಗಾಗುವದೆಂದು ಶ್ರೀ ಶರ್ಮರೇ ಊಹಿಸಿರಲಿಲ್ಲವೆಂಬುವನ್ನು ಅವರ ಅಧ್ಯಕ್ಷಭಾಷಣದಿಂದ ಅರಿಯಬಹುದು. ಆದರೆ ಆ ಭಾಷಣವು ತೋರಿಸಿಕೊಟ್ಟಿದ್ದ ಪ್ರಗತಿ ಮಾರ್ಗಗಳುವೂ ಪರಿಷತ್ತಿನ ಜವಾಬ್ದಾರಿ ಮತ್ತು ಶಕ್ತಿಗೆ ಮೀಕ್ಕಿದವುಗಳಲ್ಲ; ಮಾಡತಕ್ಕವರು ಬೇರೆಯೇ ಎಂದು ನಿರ್ಧರಿಸಿಕೊಂಡು ಕೇವಲ ತನ್ನ ಪ್ರಗತಿಶೀಲತೆಯನ್ನು ತೋರಿಸಲು ಕಟ್ಟಿದ ರಮ್ಯ ಕಲ್ಪನೆಗಳೇನೂ ಅಲ್ಲ. ಈಗ ತಾನಾಡಿದಂತೆ ಮಾಡಿತೋರಿಸುವ ಸಂದರ್ಭವು ಸಮ್ಮೇಳನಾಧ್ಯಕ್ಷರಿಗೊದಗಿದೆ. ಆದ್ದರಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಇನ್ನೂ ಹೆಚ್ಚಿನ ಪ್ರಗತಿಪರ ಹಾಗೂ ಪರಿಣಾಮಕಾರೀ ಕಾರ್ಯಗಳನ್ನು ನಾವು ನಿರೀಕ್ಷಿಸುತ್ತೇವೆ. ಪರಿಷತ್ತಿನ ಸದಸ್ಯ ಚಂದಾವನ್ನು ಒಂದು ರೂಪಾಯಿಗಿಳಿಸಿದುದರಿಂದ ಅದರ ಸಂಖ್ಯಾಬಲ ಮತ್ತು ಆ ಮೂಲಕ ಕಾರ್ಯಕ್ಷೇತ್ರವೂ ದೊಡ್ಡದಾಗಲನುಕೂಲವಾಗಿದೆ.

ಕರ್ನಾಟಕ ಏಕೀಕರಣ ಸಮ್ಮೇಳನದ ಸ್ವಾಗತಾಧ್ಯಕ್ಷರ ಹಾಗೂ ಅಧ್ಯಕ್ಷರ ಭಾಷಣಗಳು ಕೇಂದ್ರನಾಯಕರ ಕಣ್ಣನ್ನು ತೆರೆಯಿಸುವಂತಿವೆ. ಈ ಕಾಲದಲ್ಲೂ—ಸ್ವರಾಜ್ಯದಲ್ಲಿಯೂ— ತಮಗಾಗುತ್ತಿರುವ ಅನ್ಯಾಯಗಳಿಗಾಗಿ ಕನ್ನಡಿಗರಲ್ಲಿ ದೀರ್ಘಾವಧಿಯಿಂದಿರುವ ಆವೇಶಕ್ಕೆ, ಅನುತಾಪವೂ ಈಗ ಜತೆಗೂಡಿದೆ ಯೆಂಬುದನ್ನು ತೋರಿಸುವಂತಹವಿವೆ. ಇರಲಿ, ಕೆ ಮುಖ್ಯ —ಅದನ್ನು ಸಾಧಿಸಿಕೊಳ್ಳುವ ಕರ್ತವ್ಯ ಪಾಲನೆಯಲ್ಲೂ, ಯಾವುದೇ ಹಂಗು, ದಾಕ್ಷಿಣ್ಯಕ್ಕೆ ಕನ್ನಡಿಗರು ಬಲಿಬೀಳುವಂತಿಲ್ಲ—ಎಂಬುದನ್ನು ಆ ಭಾಷಣಗಳು ಮತ್ತಲ್ಲಿಯ ನಿರ್ಧಾರಗಳು ಸ್ಪಷ್ಟಪಡಿಸಿವೆ. ಕರ್ನಾಟಕ ಪ್ರಾಂತ್ಯದ ಆಕಾರ ಚಿತ್ರದ ಗೆರೆಯನ್ನಾದರೂ ಅಲ್ಲಿ ಸ್ಪಷ್ಟವಾಗಿ ಎಳೆದು ತೋರಿಸಬಹುದಿದ್ದಿತು; ಆ ಕೆಲಸವಾಗಿಲ್ಲ. 'ಒಂದಾಗಬೇಕು' ಎಂಬ ಆತುರವು ಅದಮ್ಯವಿರುವಾಗ 'ಹೀಗೆ ಒಂದಾಗಬೇಕು' ಎಂದು ತಿಳಿಯಪಡಿಸುತಿದ್ದರೆ ಒಂದು ಹೆಜ್ಜೆ ಮುಂದಿಟ್ಟಂತಾಗುತಿತ್ತು; ಕರ್ನಾಟಕದೊಳಗಿನ ವಿವಿಧ ಭಾಗಗಳ ಮಟ್ಟಿಗಾದರೂ ಆ ಏಕಾಕಾರವನ್ನು ಎಲ್ಲರ—ಈ ಕಾಲದಲ್ಲಿ ಮುಖ್ಯವಾಗಿ ಕೇಂದ್ರಾಧಿಕಾರಿಗಳ ಮತ್ತು ನೆರೆಪ್ರಾಂತ್ಯಗಳ —ಕಣ್ಣಮುಂದೆ ತರುವುದು ಅಗತ್ಯವಿತ್ತು. ಯಾಕೆಂದರೆ ಅಂತಹ ಆಕಾರದ ಒದಿಗೆ ಕತ್ತರಿ ಹಾಕುವ ಅಥವಾ ಕೆತ್ತನೆ ಕೆಲಸಗಳ ಭಾಷಾವಾರು ಪ್ರಾಂತ್ಯಗಳ 'ಗಡಿ ನಿರ್ಣಯ ಸಮಿತಿ'ಗಳಿಂದಾಗಲಿವೆಯೆಂಬುದನ್ನು ನಾವು ನಿರೀಕ್ಷಿಸಬೇಕು. ಅಂತಹ ಕತ್ತರಿಗಳಿಗೆ ನಮ್ಮ ನ್ಯಾಯವಾದ ಹಕ್ಕಿನ ಭಾಗವಾವುದೂ ಬಲಿಯಾಗದಂತೆ ನೋಡಬೇಕಾದರೆ ನಮ್ಮ ಕರ್ನಾಟಕದ ಸ್ಪಷ್ಟ ಸ್ವರೂಪವು ಕಣ್ಣ ಮುಂದಿರಬೇಕು. ಕಾಸರಗೋಡಿನ ಸಮ್ಮೇಳನದಲ್ಲಿ ಸಾಕಷ್ಟು ಸಿದ್ಧತೆ ಅವಕಾಶಗಳಿಲ್ಲದ ದೆಸೆಯಿಂದಾಗಿ ಈ ಕೆಲಸವಾಗಿಲ್ಲವಾದರೆ, ಇನ್ನಾದರೂ ಕೂಡಲೇ ಅಂತಹ ವ್ಯವಸ್ಥೆಯಾದೀತೆಂದು ಆಶಿಸುತ್ತೇವೆ.

ಸಾಹಿತ್ಯಗೋಷ್ಠಿ ಕೂಡಾ 'ಬರೆಹಗಾರರ ಸಮಿತಿ ರಚನೆ'ಯಂತಹ ಕಾರ್ಯಕ್ಕೆ ಕೈಹಾಕಿದೆ; ಅಭ್ಯಾಸಕ್ಕೆ, ಆನಂದಾನುಭವಕ್ಕೆ ಮಾತ್ರ ಇದ್ದ ತನ್ನ ಮರ್ಜಿಯನ್ನೇ ಬದಲಾಯಿಸಿ ಆಚರಣೆಗಿಳಿದಿದೆ. ವಿಜ್ಞಾನ ಗೋಷ್ಠಿ, ಮಹಿಳಾ ಗೋಷ್ಠಿಗಳೂ ಕಾಲೋಚಿತ ಭಾವನೆಗಳನ್ನು ಪ್ರದರ್ಶಿಸಿವೆ. ಒಟ್ಟಿನಮೇಲೆ ಜಯಶೀಲವಾಗಿ ನೆರೆದ ಕಾಸರಗೋಡಿನ ಕನ್ನಡ ಸಮ್ಮೇಳನವು ಜಾತ್ರೆಯ ಗುಂಪು ಅನ್ನಿಸದೆ, ಕನ್ನಡಿಗ ಯೋಧರ ವಿಜಯಯಾತ್ರೆಯಾರಂಭದ ಜಮಾ ಕೇಂದ್ರವನ್ನಿಸಲಿ; ಅಲ್ಲಿ ಆಗಿರುವ ನಿರ್ಧಾರಗಳು ವಾರ್ಷಿಕೋತ್ಸವದ 'ದುರ್ಸು'ಗಳನ್ನಿಸದೆ ಕನ್ನಡಿಗರನ್ನು ಗುರಿಯತ್ತ ನಡೆಯಿಸುವ ದೀವಿಗೆಗಳಾಗಲಿ!

(೫ನೇ ಪುಟದಿಂದ)

ರತ ಸರಕಾರವು ದೇಶ ವಿಭಜನೆಯನ್ನೆಂದಿಗೂ ಹೃತ್ಪೂರ್ವಕವಾಗಿ ಅಂಗೀಕರಿಸಿದ್ದಿಲ್ಲ. ಅದರ ನಾಯಕರು, ಬ್ರಿಟಿಷ್ ಸೇನೆಗಳನ್ನು ದೇಶದಿಂದ ಹೊರಗೆ ಕಳುಹಿಸುವುದಕ್ಕಾಗಿ, ನೆಪಮಾತ್ರ ಬಾಯಿ ಸಮ್ಮತಿಯನ್ನಷ್ಟೇ ಸೂಚಿಸಿದ್ದಾರೆ. 2 ಹಿಂದೀ ನಾಯಕರು ಇನ್ನೂ ಭಾರತದೊಂದು ಭಾಗವೆಂದೇ ಭಾವಿಸಿಕೊಟ್ಟು ಗಣಿಸಿರುವ ಪಾಕಿಸ್ತಾನ ರಾಷ್ಟ್ರವನ್ನು ಭಾರತವು ನಿರ್ನಾಮ ಮಾಡಲು ಹೊರಟಿದೆ. 3. ವಿಭಜನೆಯನ್ನು ಅಸ್ತಿತ್ವಕ್ಕೆ ತರುವ ಕಾರ್ಯಕ್ಕೆ ಮಾಡುತ್ತಿರುವ ವ್ಯವಸ್ಥಾಪೂರ್ವಕ ಧಕ್ಕೆಗಳು; ಇದ್ದಲು ಮತ್ತು ರೈಲ್ವೇ ಉಪಕರಣಗಳ ರವಾನೆಯನ್ನು ನಿಲ್ಲಿಸಿರುವುದು; ಪಾಕಿಸ್ತಾನದ ಪಾಲಿನ ನಿಧಿಗಳನ್ನು ಆಯುಧಗಳನ್ನು ಉಪಕರಣಗಳನ್ನು ಉದ್ದೇಶಪೂರ್ವಕ ಹರಕೊಟ್ಟು ತಡೆದಿಟ್ಟುಕೊಂಡಿರುವುದು, ಮುಸ್ಲಿಂ ಜನತೆಯನ್ನು ಸಾಮೂಹಿಕವಾಗಿ ಧ್ವಂಸಮಾಡಿರುವುದು—ಇವೆಲ್ಲವೂ ಪಾಕಿಸ್ತಾನವನ್ನು ಧ್ವಂಸ ಮಾಡಬೇಕೆಂಬ ಏಕಮಾತ್ರ ಗುರಿಯಿಟ್ಟುಕೊಂಡು ಸಾಗಿವೆ. 4. ಪಾಕಿಸ್ತಾನಕ್ಕೆ ಸೇರಿಕೊಂಡಿದ್ದ ಜುನಾಗಾಡ್, ಮಾನವದಾರ್, ಮತ್ತು ಕಾಥಿಯಾವಾಡದ ಇತರ ಸಂಸ್ಥಾನಗಳನ್ನು ಬಲಾತ್ಕಾರದಿಂದ ಆಕ್ರಮಿಸಿಕೊಂಡಿರುವುದೂ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನವನ್ನು ಮೋಸದಿಂದ ಸ್ವಾಧೀನಪಡಿಸಿಕೊಂಡುದೂ, ಭಾರತವು ತಾನು ಯಾವುದರ ನಾಶವನ್ನು ತನ್ನ ಸಮೀಪದ ಗುರಿಯಾಗಿ ಇಟ್ಟುಕೊಂಡಿರುವುದೋ ಆ ಪಾಕಿಸ್ತಾನದ ವಿರೋಧ ಕೃತ್ಯಗಳು. ಇವೆಲ್ಲಾ ಪ್ರಶ್ನೆಗಳೂ ಜಾಗತಿಕ ಸಂಘದ ಮುಂದೆ ಬರಬೇಕೆಂದೂ ಅವುಗಳ ವಿಚಾರಣೆ ನಡೆಯಬೇಕೆಂದೂ ನಮ್ಮ ಅಪೇಕ್ಷೆಯಿದೆ. ಭಾರತದೊಡನಿರುವ ಇವೆಲ್ಲಾ ಜಗಳಗಳೂ ರಾಜೀತೀರ್ಮಾನ ಹೊಂದಬೇಕೆಂದು ನಮ್ಮ ಬಯಕೆ" ಎಂದು ಮಿ. ಲಿಯಾಖತರಿಂದಿದ್ದಾರೆ "ಭಾರತದೊಡನೆ ಮೈತ್ರಿ ಮತ್ತು ಶಾಂತಿಯಿಂದಿರಬೇಕೆಂದು ಆಗೋಸ್ತು 15 ರಿಂದಲೂ ನಾವು ನಮಗೆ ಶಕ್ಯವಿದ್ದಷ್ಟು ಪ್ರಯತ್ನಿಸುತ್ತಾ ಬಂದಿದ್ದೇವೆ. ಘರ್ಷಣೆಯು ಇಕ್ಕಡೆಗೂ ಆತ್ಮಹತ್ಯಾ ಸಮಾನವೆಂದು ನಮ್ಮ ಭಾವನೆ. ಇನ್ನಾದರೂ ಶಾಂತಿಸ್ಥಾಪನೆ ಸಾಧ್ಯವಿದೆ. ಪಾಕಿಸ್ತಾನದೊಳಗಡೆಯಲ್ಲಿರುವರೆಂದು ಕಲ್ಪಿಸಿಕೊಂಡಿರುವ ಆಕ್ರಮಣಗಾರರನ್ನಿಸಿರುವವರ ಜಮಾ ಕೇಂದ್ರಗಳ ಮೇಲೆ ತಾವು ಧಾಳಿಮಾಡುವುದು ನ್ಯಾಯವಾಗುವದೆಂದು ಪಂಡಿತ ನೆಹರುಗಳಂದಿದ್ದಾರೆ. ಹಾಗೇನಾದರೂ ನಡೆದಲ್ಲಿ ಅದು ಅಕಾರಣವಾಗಿ, ಅಸಂಗತವಾಗಿ ಪಾಕಿಸ್ತಾನದ ಮೇಲಾದ ಪ್ರತ್ಯಕ್ಷ ಆಕ್ರಮಣವೇ ಸರಿ. ಇಂತಹ ಉದ್ರೇಕಕರ ಕಾರ್ಯಕ್ಕೆ ಪಂಡಿತ ನೆಹರುಗಳಾಗಲೀ ಅವರ ಸರಕಾರವಾಗಲೀ ಕೈಯಿಕ್ಕಲಾರದೆಂದು ಆಶಿಸುತ್ತೇವೆ. ಹೇಗಿದ್ದರೂ ನಾವೆಂತಹ ಸಂಭವಕ್ಕೂ ಸಿದ್ಧರೇ ಇದ್ದೇವೆ." ಎಂದು ಎಚ್ಚರಿಸುತ್ತಾ ಭಾರತ ಸರಕಾರವೇ ಎಲ್ಲಾ ಸಂದರ್ಭಗಳಲ್ಲೂ ಪಾಕಿಸ್ತಾನಕ್ಕೆ ಅನ್ಯಾಯ ಮಾಡುತ್ತಾ, ಆತಿರೇಕವರ್ತನೆ ಕೈಕೊಳ್ಳುತ್ತಾ ಬಂದಿದೆ ಎಂದು ಕಟುವಾಗಿ ಟೀಕಿಸಿದ್ದಾರೆ.

ಮುಂದೇನು?

ಕಾಶ್ಮೀರದ ಧಾಳಿಯೆಂಬುದು ಪಾಕಿಸ್ತಾನದಗಡಿ ಮರೆಯೊಳಗೆ ಅಡಗಿಕೊಂಡಿರುವ ಕೈಯಲ್ಲಿ ಹಿಡಿ. ಕಾಶ್ಮೀರದೊಳಗೆ ಅದರ ಮೊನೆಯಿರುವ ಖಡ್ಗವಾದ್ದರಿಂದ ಆ ಕೈಯನ್ನು ಕಡಿಯದೆ ಈ ಖಡ್ಗ ಪ್ರಹಾರವನ್ನು ನಿಲ್ಲಿಸಲಾಗುವದಿಲ್ಲವೆಂಬುದು ಖಂಡಿತವಾದ್ದರಿಂದಲೇ ಭಾರತ ಸರಕಾರವು ಈ ಹೆಜ್ಜೆಯಿಟ್ಟಿದೆ.

ಇಲ್ಲಿ ಧಾಳಿಗಾರರಿಗೆ ಪಾಕಿಸ್ತಾನವು ಕೊಡುವ ಸಹಾಯವನ್ನು ನಿಲ್ಲಿಸಬೇಕೆಂದು ಭಾರತ ಸರಕಾರ ಕೇಳಿಕೊಂಡಿದೆಯಲ್ಲದೆ, ಕಾಶ್ಮೀರದ ಯುದ್ಧ ನಿಲ್ಲಿಸಬೇಕೆಂದು ಯಾಚಿಸಿಲ್ಲ; ಆ ಸಂಬಂಧದ ದೂರನ್ನು ಪಾಕಿಸ್ತಾನ ಮುಂದಿಟ್ಟರೆ ಮಾತ್ರ ಎಲ್ಲವೂ ಭದ್ರತಾ ಕೌನ್ಸಿಲಿನಲ್ಲಿ ಪರ್ಯಾಲೋಚಿಸಲ್ಪಡಬಹುದು.

ಭದ್ರತಾ ಕೌನ್ಸಿಲು ತೀರ್ಮಾನ ಕೊಡಬಹುದು. ಇಂಡೋನೇಶಿಯಾದಂತೆಯೇ ಇಲ್ಲಿಯೂ ಅದು ಕಾರ್ಯತಃ ಜಾರಿಗೆ ಬಾರದೆ ಭಾರತ ಪಾಕಿಸ್ತಾನಗಳೊಳ ಯುದ್ಧ ಖಂಡಿತ ಆ ತೀರ್ಮಾನಕ್ಕೂ ಮಯ ಹಿಡಿಯಬಹುದಾದ್ದರಿಂದ ಆಗತಬಿದ್ದರೆ ಆ ಕೂಡಲೇ ಭಾರತವು ಮುನ್ನುಗ್ಗಬಹುದು

ಕಾಶ್ಮೀರದ ಕಾಳಗ ಭಾರತ-ಪಾಕಿಸ್ತಾನಗಳೊಳಗಾಗುವದೆ?

ಕಾಶ್ಮೀರದ ಸಂಬಂಧವಾಗಿ ಪಾಕಿಸ್ತಾನದ ಮೇಲೆ ಭಾರತ ಸರಕಾರವು ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟಂತೆಯೇ, ಇತ್ತ ಕಾಶ್ಮೀರ ರಂಗದಲ್ಲಿ ನೆರೆಯೇರಿದ ಪ್ರವಾಹದಂತೆ ಹಲವೆಡೆಗಳಿಂದ ನುಗ್ಗುತ್ತಿರುವ ಧಾಳಿಗಾರರನ್ನು ತಡೆಯಲು ವಿಶೇಷ ಸೇನೋಪಕರಣ ಮತ್ತು ವಿಮಾನಗಳನ್ನು ಸರಬರಾಯಿ ಮಾಡಿದೆ; ಮುಂದೊತ್ತಿ ಬಂದ ಧಾಳಿಗಾರರನ್ನು ಬಡಿದು ಹಿಂದಕ್ಕಟ್ಟುತ್ತಿದೆ.

ಶೋಧನಾ ಸಮಿತಿ?

ಅತ್ತ ಜಾಗತಿಕ ಸಂಘದ ಭದ್ರತಾ ಕೌನ್ಸಿಲು ಭಾರತ-ಪಾಕಿಸ್ತಾನಗಳ ವಾದ ವಿವಾದಗಳನ್ನು ಪ್ರಥಮತಃ ಕೇಳಿಕೊಂಡು ಕಾಶ್ಮೀರಕ್ಕೆ ಹೋಗಿ ಎಲ್ಲವನ್ನೂ ಪ್ರತ್ಯಕ್ಷ ಪರಿಶೀಲಿಸಲು ಮೂರು ಮಂದಿಯುಳ್ಳ 'ಕಮಿಶನ್' ಒಂದನ್ನು ನೇಮಿಸುವ ಸಂಭವ ಕಾಣುತ್ತದೆ. ಈ ಸೂಚನೆಯು ಬ್ರಿಟನಿನ ಪ್ರತಿನಿಧಿಗಳಿಂದಲೇ ಮುಂದೆ ಬರಲಿದೆ. ಈ ಸಮಿತಿಯು ಎಲ್ಲವನ್ನೂ ತನಿಖೆ ನಡಿಸಲು ಕಾಲ ಹಿಡಿಯಬಹುದಾದ್ದರಿಂದ ಆ ವರೆಗೆ ಇಂಡೋನೇಶಿಯದಲ್ಲಿ ಮಾಡಿದಂತೆ ಇತ್ತಡೆಯುವರೂ ರಣರಂಗಗಳ ಸೇನಾ ಚಟುವಟಿಕೆಗಳನ್ನು ನಿಲ್ಲಿಸತಕ್ಕದ್ದೆಂದು ಭದ್ರತಾ ಕೌನ್ಸಿಲು ಕೇಳಿಕೊಳ್ಳಲಿಕ್ಕಿದೆ. ಕಾಶ್ಮೀರ ಸಂಬಂಧವಾಗಿ-ಭಾರತ-ಪಾಕಿಸ್ತಾನಗಳು ಒಂದು ದುಂಡು ಮೇಜು ಸಮ್ಮೇಳನದಲ್ಲಿ ಸೇರಿ ತೀರ್ಮಾನಿಸಬೇಕೆಂಬ ಸೂಚನೆಯೂ ಮುಂದೆ ಬಂದಿದೆ. ಭದ್ರತಾ ಕೌನ್ಸಿಲು ಇಷ್ಟರಲ್ಲೇ ಬಾಲ್ಕನ್ ಸಮಿತಿ, ಕೊರಿಯನ್ ಸಮಿತಿ, ಪೆಲಸ್ಟೈನ್ ಸಮಿತಿಗಳಂಥವನ್ನು ರಚಿಸಿಕೊಂಡು ಸಾಕಷ್ಟು ಪರಿಣಾಮ ದೊರೆಯದೆ ಯೋಚನೆಗೀಡಾಗಿದೆ. ಆದ್ದರಿಂದ ಹೆಚ್ಚಿನವರಲ್ಲಿ ಕಾಶ್ಮೀರೀ ಸಂಬಂಧದ ಒಂದು ಹೊಸ ಸಮಿತಿ ರಚಿಸುವ ಕುರಿತು ಅಷ್ಟೊಂದು ಉತ್ಸಾಹ ಕಂಡುಬರುತ್ತಿಲ್ಲ. ಮೇಲಾಗಿ ಕಾಶ್ಮೀರದ ಧಾಳಿಗೂ ತನಗೂ ಸಂಬಂಧವಿಲ್ಲವೆಂದು ಪಾಕಿಸ್ತಾನ್ ಸರಕಾರದ ವಾದವಿರುವಾಗ 'ಮಧ್ಯಾವಧಿಯಲ್ಲಿ ಯುದ್ಧ ನಿಲ್ಲಿಸತಕ್ಕದ್ದು' ಎಂಬ ಭದ್ರತಾ ಕೌನ್ಸಿಲಿನ ನೋಟಿಸು ಆ ಕಡೆಯ ಯಾರಮೇಲೆ ಜಾರಿಯಾಗಬೇಕೋ ಅರ್ಥವಾಗುವದಿಲ್ಲ!

ಗಾಂಧಿಜೀಯ ಅಭಿಪ್ರಾಯ

ನವದಿಲ್ಲಿಯ ಪ್ರಾರ್ಥನೋತ್ತರ ಭಾಷಣದಲ್ಲಿ ಮಹಾತ್ಮಾಗಾಂಧಿಯವರು ಕಾಶ್ಮೀರೀ ಕಾಳಗದ ಕುರಿತು ಹೀಗೆಂದಿದ್ದಾರೆ: 'ದುರ್ದೈವವಶಾತ್ ಭಾರತ-ಪಾಕಿಸ್ತಾನಗಳೊಳಗಿನ ಯುದ್ಧದ ವಾರ್ತೆಗಳೇ ಜನರ ಬಾಯಿಯಿಂದ ಬರುತ್ತಿವೆ. ಕಾಶ್ಮೀರೀ ಧಾಳಿಯಲ್ಲಿ ಪಾಕಿಸ್ತಾನದ ಕೈಯಿದೆ ಎಂಬ, ಹಾಗೂ ಭಾರತ ಸರಕಾರವು ಜಾಗತಿಕ ಸಂಘದ ಮುಂದಿಟ್ಟಿರುವ ಮನವಿಯ ಸತ್ಯವನ್ನು ಪಾಕಿಸ್ತಾನವು ಅಲ್ಲಗಳೆಯುತ್ತಿರುವುದನ್ನು ಕಂಡು ನಾನು ವಿನೋದಗೊಂಡಿದ್ದೇನೆ. ಧಾಳಿಗಾರರನ್ನು ಹಿಂದಟ್ಟಲು ಕಾಶ್ಮೀರವು ಸಹಾಯ ಯಾಚಿಸಿದಾಗ ಅದರ ರಕ್ಷಣೆಗೆ ಹೋಗದೆ ಭಾರತ ಸರಕಾರಕ್ಕೆ ಅನ್ಯಥಾ ಉಪಾಯವಿರಲಿಲ್ಲ. ಈ ಕೆಲಸದಲ್ಲಿ ಹಿಂದೀ ಕೇಂದ್ರಕ್ಕೆ ಸಹಾಯವಾಗುವುದು ಪಾಕಿಸ್ತಾನದ ಕರ್ತವ್ಯವಾಗಿತ್ತು. ಆದರೆ ಪಾಕಿಸ್ತಾನವು ಪ್ರದರ್ಶನ ಮಾತ್ರ ಸಹಾಯ ಸಮ್ಮತಿಯನ್ನು ಸೂಚಿಸಿದರೂ ಆ ಕುರಿತಾದ ಕಾರ್ಯವನ್ನೂ ಕೈಕೊಂಡದ್ದಿಲ್ಲ. ಯಾವಾಗ ರಾಷ್ಟ್ರ ವಿಭಜನೆಯಾಯಿತೋ, ಆ ಮೇಲೆ ದ್ವೇಷಕ್ಕೆಡೆಯೇ ಇಲ್ಲವೆಂಬುದನ್ನು ಪಾಕಿಸ್ತಾನ್ ನಾಯಕರ ಮನಮುಟ್ಟಿಸಲು ನಾನಿಚ್ಛಿಸುತ್ತೇನೆ. ಧಾರ್ಮಿಕ-ಜಾತೀಯತೆಯನ್ನಾಧರಿಸಿ ರಾಷ್ಟ್ರದ ಪಾಲನ್ನು ಕೇಳಬಾಗಿತ್ತು. ಅದ್ದರಿಂದ ತನ್ನ ಹೆಸರಿಗೆತಕ್ಕಂತೆ, ತನ್ನೆಲ್ಲಾ ವಹಿವಾಟುಗಳಲ್ಲೂ ಶುದ್ಧವಾಗಿರಬೇಕಾದುದು ಪಾಕಿಸ್ತಾನದ ಕರ್ತವ್ಯ. ಮುಸ್ಲಿಮರು, ಮತ್ತು ಹಿಂದುಗಳು ಇಬ್ಬರೂ ಕ್ರೂರಕೃತ್ಯಕ್ಕಿಳಿದಿದ್ದಾರೆ; ಭಯಂಕರ ಪ್ರಮಾದಗಳನ್ನು ಮಾಡಿದ್ದಾರೆ. ಈ ಹುಚ್ಚು ಸ್ಪರ್ಧೆಯು ಹೀಗೆಯೇ ಮುಂದೊತ್ತಿ ಯುದ್ಧದಲ್ಲೇ ಪರ್ಯವಸಾನಗೊಳ್ಳಬೇಕೆಂದು ಇದರ ಅರ್ಥವಲ್ಲ. ಒಂದು ಯುದ್ಧವಾದಲ್ಲಿ ಅದು ಇವೆರಡು ವಸಾಹತುಗಳನ್ನೂ ಮೂರನೇ ರಾಷ್ಟ್ರವೊಂದರ ಅಧೀನಕ್ಕೆ ದೂಡಬಹುದು; ಇದಕ್ಕಿಂತ ಹೀನವಾದುದು ಬೇರಿರಲಾರದು. ಆದ್ದರಿಂದ ಇಕ್ಕಡೆಯವರೂ ತಮ್ಮೊಳಗೆ ಶಾಂತಿ ಸೌಹಾರ್ದತೆ ನಿರ್ಮಿಸಿಕೊಂಡು, ಹಿಂದೀ ಸರಕಾರವು ಘನತೆಯೊಡನೆ ತನ್ನ ದೂರನ್ನು ಜಾಗತಿಕ ಸಂಘದಿಂದ ಹಿಂದೆಗೆಯುವಂತಾಗಲಿ. ಆದರೆ ಆ ಒಪ್ಪಿತವೆಂಬುದು ಯಥಾರ್ಥವಾಗಿರಬೇಕು. ಒಳದ್ವೇಷವಿಟ್ಟುಕೊಂಡು ಕುದಿಯುತ್ತಿರುವುದು ಯುದ್ಧಕ್ಕಿಂತಲೂ ಕಳಪೆ".

ಮಹಿಳಾಗೋಷ್ಠಿ:— ಕಾಸರಗೋಡಿನಲ್ಲಿ ಸಾಹಿತ್ಯಸಮ್ಮೇಲನದ ವೇಳೆ ಜರಗಿದ ಮಹಿಳಾಗೋಷ್ಠಿಯ ಸ್ವಾಗತಾಧ್ಯಕ್ಷೆ ಶ್ರೀ. ಲೀಲಾಬಾಯಿ ಕಾಮತರು ತಮ್ಮ ಸ್ವಾಗತ ಭಾಷಣದಲ್ಲಿ ಕನ್ನಡ ಜನತೆ, ಕಲೆ, ಮಹಿಳೆಯರು, ಇವರ ಜೀವನದ ನೆಲೆ ಇತ್ಯಾದಿಗಳನ್ನು ವಿವರಿಸಿದರು. ಶ್ರೀ ಜಯಲಕ್ಷ್ಮೀ ಅಮ್ಮನವರು ಅಂದಿನ ಅಧ್ಯಕ್ಷೆಯಾಗಿದ್ದು ಕನ್ನಡ ಸಾಹಿತ್ಯ, ಜನತೆಗಳ ಸೂಕ್ಷ್ಮ ಪರಿಚಯಮಾಡಿ ಏಕೀಕರಣದ ಅಗತ್ಯವನ್ನು ಎತ್ತಿಹೇಳಿದರು. ಬಳಿಕ ಶ್ರೀ ವತ್ಸಲಾ ಬಾಯಿ ಮೊದಲಾದವರು ಉಪನ್ಯಾಸವಿತ್ತರು.

ಮೈಸೂರು ರಿಯಾಸತ್ ಹಿಂದೀ ಪ್ರಚಾರ ಸಮಿತಿ, ಬೆಂಗಳೂರು ನಗರ— ಇದರ ಕಡೆಯಿಂದ ನಡೆಸಿಕೊಂಡು ಬಂದಿರುವ ಕರ್ನಾಟಕ ಹಿಂದೀ ಮಹಾ ವಿದ್ಯಾಲಯದಲ್ಲಿ ಫೆಬ್ರವರಿ ತಿಂಗಳಾರಂಭದಿಂದ ಹಿಂದೀ ತರಗತಿಗಳು ಪ್ರಾರಂಭಿಸಲ್ಪಡುವವು. ಯೋಗ್ಯರಾದ ಮೂವತ್ತು ಮಂದಿ ವಿದ್ಯಾರ್ಥಿಗಳಿಗೆ ಮಾಹೆಯಾನಾ ಇಪ್ಪತ್ತೈದು ರೂಪಾಯಿಗಳ ವಿದ್ಯಾರ್ಥಿ ವೇತನ ಕೊಡಲಾಗುವುದು. ಹೆಚ್ಚಿನ ಮಾಹಿತಿಗೂ ಅಚ್ಚಾದ ಆವೇದನ ಪತ್ರಗಳಿಗೂ ಒಂಭತ್ತು ಕಾಸಿನ ಸ್ಟಾಂಪನ್ನು ಕಳುಹಿಸಿ ಸಮಿತಿಯ ಕಾರ್ಯಾಲಯದಿಂದ ಪಡೆಯಬಹುದು.

ಸ್ವೀಕಾರ

ಕಥಾಕುಂಜ ಗ್ರಂಥಭಾಂಡಾರ ಬೆಳಗಾವಿ ಇವರ ಪ್ರಕಟಣೆಗಳು—೧ ಪ್ರತಿಫಲ ಇತರ ಕತೆಗಳು ೧-೪-೦ ೨. ಆರು ಕತೆಗಳು (ತಿದ್ದಿದ 3ನೇ ಆ.) ೧-೪-೦ ೩ ಸಂಗೊಳ್ಳಿ ರಾಯಣ್ಣ (ಐ. ನಾಟಕ) ೧-೮-೦ ೪ ಮಾಸರ ಮಾಮುಗೆ (೨ನೇ ಆವೃತ್ತಿ) ೧-೪-೦.

ಶಾರದಾ ಪ್ರಕಟನಾಲಯದವರ ಮುಗುಳುನಗೆ ಬೆಲೆ ೧-೦-೦.

'ಜನಶಕ್ತಿ'ಯ ಕಾಸರಗೋಡು ಏಕೀಕರಣ ಸಾಹಿತ್ಯ ಸಮ್ಮೇಳನಾಂಕ.

'ಕಿತ್ತಿಯೂರ ಪ್ರಪಂಚ'ದ ಮಧುವನ (೨ನೇ ಆವೃತ್ತಿ) ಬೆಲೆ 3-0-0.

ಯಶಸ್ವಿ 5ನೇ ವಾರ! ಯಶಸ್ವಿ 5ನೇ ವಾರ!
ತಾರೀಖು 9-1-48ರಿಂದ 5ನೇ ವಾರ!

* ಮಹಾತ್ಮಾ ಪಿಕ್ಚರ್ಸ್‌ರವರ *
ಅಮೋಘ ಕಾಣಿಕೆ
ಕೃಷ್ಣ ಲೀಲಾ
(ಕನ್ನಡ)
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

CHITRAKOT ASTHMA CURE
(Registered)
Widely renowned and a most Powerful highly effective remedy for curing Asthma completely by one dose to be taken on 26-1-1948 full moonday.
Apply at once in English:
SRI MAHATMA JOGI BABA
Ayurvedic Buti Bhandar,
P. O. CHITRAKOT, U P.

ಕರ್ನಾಟಕದಲ್ಲಿ ತೀರ ಹೊಸ ಮಾದರಿಯ ವಾರಪತ್ರಿಕೆ
ಅಂತರಂಗ
ಹೊಸವರ್ಷದಲ್ಲಿ ನವೀನ ವೈವಿಧ್ಯಗಳಿಂದ ಹೊರಡಲಾರಂಭಿಸಿದೆ.
ವಾರ್ಷಿಕ ಚಂದಾ ಬರೇ ರೂ. 4—8—0 ಮಾತ್ರ
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ವಿಳಾಸ:—ಮೆನೇಜರ್, ಅಂತರಂಗ ವಾರಪತ್ರಿಕೆ, ಉಡುಪಿ.

ತಿದ್ದುಪಡಿ— ಕಳೆದ ಸಂಚಿಕೆಯ 6ನೆ ಪುಟದಲ್ಲಿ ಪ್ರಕಟವಾದ 'ಅಣ್ಣನ ಡಾಕ್ಟರ್' ಎಂಬ ಜಾಹೀರಾತಿನ 6ನೇ ಸಾಲಿನಲ್ಲಿ 'ರಬ್ಬರ್ ಟ್ಯೂಬಿನಿಂದಲೂ' ಎಂದಾದ ಮೇಲೆ 'ಚಾರದ್ದಷ್ಟು' ಎಂಬ ಶಬ್ದ ಬಿಟ್ಟುಹೋಗಿದೆ. ಅದನ್ನು ಸೇರಿಸಿ ಓದಬೇಕಾಗಿದೆ.

ಉಡುಪಿ.

ಜುಲ್ಮಾನೆ – ಮುನಿಸಿಪಲ್ ಹಿಂದು ಸ್ಕೂಲಿನ ಕಾಂಪೌಂಡಿನೊಳಗೆ ಶಾಲಾ ಸಮಯದಲ್ಲಿ ಒಳನುಗ್ಗಿ ಶಾಲೆಯ ಹೆಡ್ಮಾಸ್ತರರಿಗೆ ಹೊಡೆದು ಗಲಾಟೆ ಮಾಡಿದವರೆಂಬ ಆರೋಪಕ್ಕೆ ಒಳಗಾದ ಯಂ. ಎಸ್. ಅಬ್ದುಲ್ ಖಾದರ್ ಎಂಬವನಿಗೆ ಸ್ಥಳೀಯ ಸಬ್ ಮೆಜಿಸ್ಟ್ರೇಟರು ಎರಡು ತಪ್ಪುಗಳಿಗಾಗಿ ಒಂದಕ್ಕೆ ರೂಪಾಯಿ 40 ರಂತೆ ಎಂಭತ್ತು ರೂಪಾಯಿ ಜುಲ್ಮಾನೆ ವಿಧಿಸಿರುವರಾಗಿ ತಿಳಿದು ಬರುತ್ತದೆ.

ಒಂದೇ ಬಾರಿ ಮೂರು ಕರು– ಉಡುಪಿಗೆ ಸಮೀಪದ ಕೆಮ್ಮಣ್ಣಿನ ಶ್ರೀ ಪರಂಗ ಪೂಜಾರಿ ಎಂಬವರ ದನವೊಂದು ಇದೇ ತಾ 4ರಲ್ಲಿ ಒಮ್ಮೆಗೇ ಎರಡು ಗಂಡು, ಒಂದು ಹೆಣ್ಣು ಹೀಗೆ ಮೂರು ಕರು ಹಾಕಿರುವುದೆಂದು ಒಂದು ಸುದ್ದಿ ಬಂದಿದೆ.

'ಫ್ಲೋರವರ್' ಸಂಪಾದಕ– ಪಿ. ಜೋಕಿಮ್ ಆಳ್ವರು ಉಡುಪಿಗೆ ಬಂದಿದ್ದು, ಇದೇ ತಾ 4ರಲ್ಲಿ ಸ್ಥಳೀಯ ಇಗರ್ಜಿ ವಠಾರದಲ್ಲಿ ಸೇರಿದ ಕೆಥೋಲಿಕರ ಹಾಗೂ ಇತರ ಸಾರ್ವಜನಿಕರ ಸಭೆಯಲ್ಲಿ ರಾಷ್ಟ್ರಸೇವೆ, ಜಾತೀಯ ಐಕ್ಯತೆಯ ಕುರಿತು ಭಾಷಣವಿತ್ತರು. ಕ್ರಿಸ್ತರು ಮತ್ತು ಹಿಂದುಗಳ ಒಕ್ಕಟ್ಟಿಗೆ ಎಂದಿಗೂ ಚ್ಯುತಿಯಿಲ್ಲವೆಂದು ಪಿ. ಆಳ್ವರು ವಿವರಿಸಿದರು.

ಜೈ ಹಿಂದ್ ನಾಟಕ ಕಂಪೆನಿ— ಶ್ರೀ. ಯಚ್. ಆರ್. ಪಂಡೆ ಸಹೋದರರ ವ್ಯವಸ್ಥಾಪಕತ್ವದ 'ಜೈ ಹಿಂದ್ ಸಂಗೀತ ನಾಟ್ಯಕಲಾ ಸೇವಾ ಸಂಘ'ದವರು ಉಡುಪಿಗೆ ಬಂದಿದ್ದು ಇದೇ ತಾ. 5ರಲ್ಲಿ ತಮ್ಮ ಪ್ರಥಮ ಪ್ರದರ್ಶನವಾಗಿ ಪೌರಾಣಿಕ ನಾಟಕ 'ಉಷಾ'ವನ್ನು ಯಶಸ್ವಿಯಾಗಿ ಆಡಿ ತೋರಿಸಿದರು. ಶ್ರೀಗಳಾದ ಮಧ್ವಾಚಾರ್ ಉಮರ್ಜಿ, ಪಿ. ವಿ. ನಾಯಕ್, ಪಡಗಲೀ ವೀರಭದ್ರಪ್ಪ, ಅನಂತ ದೇಶಪಾಂಡೆ, ರಜ್‌ಕನಿ ಈರಪ್ಪ, ಗಂಗಾಧರ, ನಾರಾಯಣ ರಾವ್ ಬಸ್ರೂರು ಕಾರ್, ಶ್ರೀಮತಿ ಸಾವಿತ್ರಿ ಬಾಯಿ ಬ್ಯಾಡಿಗಿ, ಮೊದಲಾದ ನುರಿತ ನಟನಟಿಯರು ಈ ನಾಟಕ ಮಂಡಲಿಯಲ್ಲಿದ್ದು, ಹಲವು ಸಾಮಾಜಿಕ ಪೌರಾಣಿಕಗಳನ್ನವರು ಅಭಿನಯಿಸಲಿರುವರು.

ಹೊಸ ವರ್ಷಾರಂಭದಲ್ಲಿ ಹಿರಿಯರಿಗೆ ಸನ್ಮಾನ– ದಿ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೋರ್ಪರೇಶನ್, ಲಿಮಿಟೆಡ್, ಉಡುಪಿ, ಈ ಸಂಸ್ಥೆಯವರು ಕಳೆದ ಏಳೆಂಟು ವರುಷಗಳಿಂದ ನಡೆಸಿಕೊಂಡು ಬಂದಂತೆ ಈ ಬಾರಿಯೂ ತಾ 1ರಲ್ಲಿ ಮುಕುಂದನಿವಾಸದ ವಠಾರದಲ್ಲಿ ಸಾರ್ವಜನಿಕ ಸೇವೆಯಲ್ಲಿ ಹಿರಿತನವನ್ನು ಪಡೆದ ಶ್ರೀ ಕೊಳ್ಕೆಕಾರ್ ಪದ್ಮನಾಭ ಪೈಗಳನ್ನು ಸನ್ಮಾನಿಸುವ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಶ್ರೀ ಪುತ್ತಿಗೆ ಮಠದ ಸ್ವಾಮಿಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸರಾವ್, ಎಲ್. ಆರ್. ಕುಂಜೂರು, ಜನಾಬ್ ಎಮ್. ಉಸ್ಮಾನ್ ಸಾಹೇಬ್, ಟಿ. ರಮೇಶ ಪೈ, ಟಿ. ಅನಂತ ಪೈ, ವೈಕುಂಠ ಬಾಳಿಗ, ಡಾ. ಟಿ. ಮಾಧವ ಪೈಗಳವರು ಮಾನ್ಯ ಅತಿಥಿಯ ಕುರಿತು ಸಂದರ್ಭೋಚಿತ ಭಾಷಣಗಳನ್ನು ಮಾಡಿದರು. ಶ್ರೀ ಜನಾರ್ದನ ಅಳ್ವೆಯವರು ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು— ತಾ. 5ರಲ್ಲು ಬೆಳಗ್ಗೆ ಚೆಯರ್ಮೆನ್ ಶ್ರೀ. ಪಿ. ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಮದ್ರಾಸು ಸರಕಾರದ ಮಾನ್ಯ ಮಂತ್ರಿ ಶ್ರೀ ಎಂ. ಭಕ್ತವತ್ಸಲಂರವರಿಗೆ ಮಾನಪತ್ರನೀಯಬೇಕೆಂದು ನಿರ್ಣಯವಾಯಿತು.

ಉಡುಪಿ ಜಾತ್ರೆ ಇದೇ ತಾ. 9ನೆ ಶುಕ್ರವಾರ ಆರಂಭವಾಗುವುದು. ತಾ. 14ರಲ್ಲಿ ಮಕರ ಸಂಕ್ರಾಂತಿ ಜಾತ್ರೆ, 15ರಲ್ಲು ಹಗಲು ತೇರು, ತಾ. 18ರಲ್ಲು ಸೋದೆ ಸ್ವಾಮಿಗಳವರ ಪರ್ಯಾಯ ಉತ್ಸವ ಜರಗುವದು.

ಸಾರ್ವಜನಿಕ ಸಭೆ–ಸ್ಥಳೀಯ ಮಜೂರರ ಸಾರ್ವಜನಿಕ ಸಭೆಯೊಂದು ಪಠವೇದಿಯಲ್ಲಿ ತಾ 5ನೇ ಅಪರಾಹ್ನ ಜರಗಿ ನಿಯಂತ್ರಣ ರದ್ದತಿಯನ್ನು ನಿಷೇಧಿಸಿ, ನ್ಯಾಯಾಧೀಶರ ತೀರ್ಪನ್ನು ಜಾರಿಗೆ ತಾರದ್ದಕ್ಕಾಗಿ ಬೀಡಿ ಮಜೂರರ ಮುಷ್ಕರ ಸೂಚಿಸಿ, ಭಾಷಣ ನಿರ್ಣಯಗಳಾದುವು.

ಮಂಗಳೂರು

ಮಂತ್ರಿದ್ವಯರ ದ. ಕ. ಜಿಲ್ಲಾ ಸಂಚಾರ ಸದ್ಯಕ್ಕೆ ರದ್ದಾಯಿತು— ಇದೇ ತಾ 7ರಿಂದ ತಾ 11ರವರೆಗೆ ದ. ಕ. ಜಿಲ್ಲೆಯ ಸಂಚಾರ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದ ಮಾನ್ಯ ಮಂತ್ರಿದ್ವಯರಾದ ಶ್ರೀ ಎಮ್. ಭಕ್ತವತ್ಸಲಂ ಮತ್ತು ಎ. ಬಿ. ಶೆಟ್ಟಿಯವರು ಅನಿರೀಕ್ಷಿತ ಜರೂರು ಕೆಲಸಗಳ ನಿಮಿತ್ತ ಸದ್ಯಕ್ಕೆ ತಮ್ಮ ಸಂಚಾರ ಕಾರ್ಯಕ್ರಮವನ್ನು ನಿಲ್ಲಿಸಿರುವರು. ಆದರೆ ಮಾನ್ಯ ಶ್ರೀ ಭಕ್ತವತ್ಸಲಂ ಇವರು ಕೆನರಾ ಚೇಂಬರ್ ಒಫ್ ಕೊಮರ್ಸ್ ವಾರ್ಷಿಕೋತ್ಸವಕ್ಕೆ ಮಾತ್ರ ಬರಲಿರುವರೆಂದು ತಿಳಿದುಬರುತ್ತದೆ.

ಅಳಿಯ ಸಂತಾನ ಮಸೂದೆ

ಈ ಮಸೂದೆಯನ್ನು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ತರುವ ಬಗ್ಗೆ ಸರಕಾರದವರು ಗಜೇಟಿನಲ್ಲಿ ಪ್ರಕಟಿಸಿರುವರು. ಮಸೂದೆಯಲ್ಲಿ ತಿದ್ದುಪಡಿ ಮಾಡುವ ಬಗ್ಗೆ ಒಂದು ಕಮಿಟಿಯನ್ನು ಕೂಡಲೇ ಏರ್ಪಡಿಸುವರು. ಅದಕ್ಕೆ ಸರಿಯಾಗಿ ಅಳಿಯ ಸಂತಾನಿಗರು ತಮ್ಮ ಅಭಿಪ್ರಾಯಗಳನ್ನು ಸೂಚಿಸುವುದು ಅತೀ ಅಗತ್ಯ. ಈಗ ತಂದ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳು ಅವಶ್ಯವೆಂದು ನನಗೆ ಕಾಣುತ್ತದೆ. ಈಗಲೇ ನಾವು ಅದನ್ನು ಸರಿಪಡಿಸದಿದ್ದರೆ ಹೆಚ್ಚಿನ ತೊಂದರೆಗಳು ಉಂಟಾದೀತು.

ಮಸೂದೆಯು 36 ಕಲಮಿನದ್ದು. 3ನೇ ಕಲಂ ಪೈಕಿ ಒಂದು ಉಪ ಕಲಮಿನಲ್ಲಿ "ಕವರು" ಅಂದರೆ ಒಂದು ಹೆಂಗಸು ಮತ್ತು ಅವಳ ಮಕ್ಕಳು ಮತ್ತು ಹೆಣ್ಣುಮಕ್ಕಳ ಸಂತಾನಾಂತರ ಇರುವ ಸಂತತಿ ಎಂತ ವಿವರಿಸಿರುತ್ತದೆ ಈ ದೆಸೆಯಿಂದ ಕೆಲವು ಮುಂದಿನ ಕಲಮುಗಳಲ್ಲಿ ಅನ್ಯಾಯ ಉಂಟೆಂಬವಾಗಿ ಕಾಣುತ್ತದೆ. 25ನೇ ಕಲಂ ಪ್ರಕಾರ ಬಿಟ್ಟ ಹೆಂಗಸು ಮರಣಪಟ್ಟರೆ ಅವಳ ಆಸ್ತಿಯು ಅವಳ ಕವರಿನವರಿಗೆ ಹೋಗುತ್ತದೆ ಎಂತ ಉಂಟು. ಅಂದರೆ ಅವಳ ಮಗನ ಮಕ್ಕಳಿಗೆ ಅದರಲ್ಲಿ ಹಕ್ಕಿಲ್ಲ ಎಂಬ ಅರ್ಥ. ಉದಾಹರಣೆಗಾಗಿ ಅವಳ ಮಗನು ಮೊದಲೇ ತೀರಿ ಹೋಗಿದ್ದಾನೆ ಮತ್ತು ಅವನಿಗೆ ಒಂದು ಮಗು ಉಂಟೆಂಬುದಾಗಿ ಭಾವಿಸುವ, ಆದರೆ ಆ ಮಗುವಿಗೆ ಮಸೂದೆ ಪ್ರಕಾರ ಏನೂ ಹಕ್ಕು ಬರುವದಿಲ್ಲ. ಇದು ನಿಜವಾಗಿಯೂ ಸುಧಾರಣೆ ಅಲ್ಲ. ಅಳಿಯ ಸಂತಾನದ ಉಪಯೋಗವು ಈ ಕೂಡಲೇ ಹೋಗಿರುತ್ತದೆ. ಪ್ರತಿ ಒಂದು ಕುಟುಂಬದಲ್ಲಿಯೂ ಈ ಕಳೇ ಪದ್ಧತಿಯ ಕಾನೂನಿನ ದೆಸೆಯಿಂದ ಆಗುವ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳನ್ನು ನಾನು ಎತ್ತಿ ಹೇಳುವ ಆವಶ್ಯಕತೆ ಇಲ್ಲ.

ಮಸೂದೆಯಲ್ಲಿ 6ನೇ ಅಧ್ಯಾಯ ಪ್ರಕಾರ ಪಾಲು ಮಾಡಿಕೊಳ್ಳಬಹುದು. ಅದರಲ್ಲಿ ಗಂಡಸಿಗೆ ಪಾಲುಬಂದರೆ ಅದು ಅವನಿಗೆ ಜೀವಮಾನದ ಹಕ್ಕು ಮಾತ್ರ ಎಂತ ಬರೆದಿದೆ. ಆದರೆ ಅವನ ತಂಗಿಗೆ ಬಂದ ಪಾಲನ್ನು ಅವಳು ವಿಕ್ರಿತ ಕೂಡಾ ಮಾಡಬಹುದು. ಇದು ಕೇವಲ ಅನ್ಯಾಯ. ಈಗಿನ ಕಾನೂನು ಪ್ರಕಾರ ಆಸ್ತಿಯಲ್ಲಿ ಗಂಡಸರಿಗೆ ಮತ್ತು ಹೆಂಗಸರಿಗೆ ಸರಿಸಮಾನ ಹಕ್ಕಿರುತ್ತದೆ ಅದನ್ನು ಬಿಟ್ಟು ಈಗ ಗಂಡಸರನ್ನು ಕೈಕಟ್ಟುವುದು ಸರಿಯಲ್ಲ. ಗಂಡಸಿಗೆ ಪಾಲು ಬಂದರೆ ಅವನು ಹಾರಾಟ ಮಾಡುವನೆ? ಹೆಂಗಸಿಗೆ ಪಾಲು ಬಂದರೆ ಅವಳು ಉಳಿಸಿಕೊಳ್ಳುವಳೇ? ಹಿಂದೂಸ್ಥಾನಕ್ಕೆ ಸ್ವರಾಜ್ಯ ಸಿಕ್ಕುವಾಗ ಅಳಿಯ ಸಂತಾನದ ಗಂಡಸರಿಗೆ ಇನ್ನೂ ಬಂಧನವೇ? ಇದನ್ನು ನಾವು ಖಂಡಿತವಾಗಿಯೂ ತಿದ್ದುಪಡಿ ಮಾಡಬೇಕು. ಹೆಂಗಸರಿಗಾಗಲೀ ಗಂಡಸರಿಗಾಗಲೀ ಅವರ ಅಂಶಕ್ಕೆ ಬಂದ ಆಸ್ತಿಯನ್ನು ವೃದ್ಧಿಗೊಳಿಸುವರೆಯೂ ಅನುಭವಿಸುವರೆ ಪೂರ್ಣ ಹಕ್ಕಿರಬೇಕು. ಇಲ್ಲದಿದ್ದರೆ ಒಬ್ಬ ಗಂಡಸಿಗೆ ಬಂದ ಪಾಲಿನಲ್ಲಿ ಅವನಿಗೆ ಜೀವನಾಂಶದ ಹಕ್ಕು ಮಾತ್ರ ಇದ್ದರೆ ಅವನು ಅದನ್ನು ಬೇರೆ ಬೇರೆ ವಿಧದ ಸ್ವಾಧೀನ ವ ಗೇಣಿ ವಗೈರೆ ಪಡಕೊಂಡು ಹೆಚ್ಚು ಕಾಲಕ್ಕೆ ಗೇಣಿಗೆ ಕೊಟ್ಟು ಮೃತಪಟ್ಟರೆ ವ್ಯಾಜ್ಯವು ತಪ್ಪಲಿಕ್ಕಿಲ್ಲ.

ಆಸ್ತಿಯ ಅಡಕ್ತೆ ವಿಷಯದಲ್ಲಿ ಯಜಮಾನನು ಲೆಕ್ಕಪತ್ರವನ್ನು ಇಡಬೇಕು ಮತ್ತು ಅದನ್ನು ಬಾಕಿ ಮೆಂಬರರಿಗೆ ತೋರಿಸಬೇಕು ಎಂತ ಉಂಟು. ಇದನ್ನು ತೆಗೆಯುವದು ಒಳ್ಳೇದು. ನಾವು ಅನಾವಶ್ಯಕವಾದ ದಾವೆಗಳಿಗೆ ಎಡೆಕೊಡುವುದಾಗಿ ಕಾಣುತ್ತದೆ.

ಈಗ ಸದ್ಯದಲ್ಲೇ ಜರಗಲಿರುವ ಬಂಟರ ಯಾನೆ ನಾಡವರ ಸಂಘದ ಸಭೆಯಲ್ಲಿ ಆಗತ್ಯವಿದ್ದ ಠರಾವನ್ನು ಮಾಡುವುದಲ್ಲದೆ ಅಳಿಯ ಸಂತಾನವನ್ನಾಚರಿಸುವ ಎಲ್ಲಾ ಜನರು ಈ ಮಸೂದೆಗೆ ಸರಿಯಾದ ಆಲೋಚನೆಯನ್ನು ಕೊಟ್ಟು ಅಗತ್ಯವಿದ್ದ ತಿದ್ದುಪಡಿಯನ್ನು ಸರಕಾರದವರಿಗೆ ವ್ಯಕ್ತಪಡಿಸಬೇಕು ನಮಗೆ ಸುಧಾರಣೆಯು ಅಗತ್ಯ. ಆದರೆ ನ್ಯಾಯವಾದ ಸುಧಾರಣೆಯು ಬೇಕಲ್ಲದೆ ಸ್ವಲ್ಪಮಟ್ಟಿನ ಸುಧಾರಣೆಯಿಂದ ಹೆಚ್ಚು ಕೆಡುಕುಂಟಾದೀತು. ಈ ಸಂಗತಿಯನ್ನು ಬಳಸುವರೆ ಜಿಲ್ಲೆಯ ಮುಖ್ಯ ಅಳಿಯ ಸಂತಾನಿಗರು ಒಂದು ಸಭೆಯನ್ನು ಕರೆದು ಮಸೂದೆಯನ್ನು ಸರಿಯಾಗಿ ವಿಮರ್ಶಿಸಿ ಗವರ್ನ್‌ಮೆಂಟಿಗೆ ಅಗತ್ಯಕಂಡ ಮನವಿ ಮಾಡಿಕೊಳ್ಳಬೇಕು. ನಾವು ಜಾಗ್ರತೆಯಿಂದ ಮತ್ತು ಶೀಘ್ರದಲ್ಲೇ ಈ ಕೆಲಸವನ್ನು ನೆರವೇರಿಸಬೇಕೆಂದು ಅಳಿಯ ಸಂತಾನ ಬಾಂಧವರಲ್ಲಿ ನನ್ನ ಅರಿಕೆ.

ಎ. ಶಂಕರ ಆಳ್ವ, ವಕೀಲ್.
ಮಂಗಳೂರು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. S. 546/47

R. I. A. 1426/47

ಅಪ್ಪ ರಬೆಲ—ವಾದಿ

ವಾಮನಬಂಡಾರಿ ಸಹಾ–ಪ್ರ. ರು.

2 ಮಂಜುನಾಥ ಶೆಣೈ, 3 ಶಾಂತಾರಾಮ ಶೆಣೈ 4 ಜಯವಂತ ಶೆಣೈ ವಾಮನಬಂಡಾರಿ ಮಕ್ಕಳು

2ನೇ ಪ್ರತಿವಾದಿ ಉಡುಪಿ ಸ್ಟ್ಯಾಂಟ್ ಸಿಸಿಲಿ ಹೈಸ್ಕೂಲಲ್ಲಿ ಡ್ರಾಯಿಂಗ್ ಮಾಸ್ತರನಾಗಿಯೂ 3ನೇ ಪ್ರತಿವಾದಿ ಭಾರತ ಬ್ಯಾಂಕಿನ ಹುಬ್ಬಳ್ಳಿ ಬ್ರ್ಯಾಂಚಿನಲ್ಲಿ ಕ್ಲಾರ್ಕ್ ಆಗಿಯೂ 4ನೇ ಪ್ರತಿವಾದಿ ಸದ್ರಿ ಭಾರತ ಬ್ಯಾಂಕ್‌ನ ಬೆಳಗಾಂ ಬ್ರ್ಯಾಂಚಿನ ಕ್ಲಾರ್ಕ್ ಆಗಿಯೂ ಇರುತ್ತಾರೆ.

ವಾದಿಯು ಪ್ರತಿವಾದಿರ ಮೇಲೆ ಮಾಡಿದ ದಾವೆಯು III (a) ಕಲಂಮಿನಲ್ಲಿ 1700-0 0 ಎಂತ ಯಿದ್ದದ್ದನ್ನು ಹೊಡದು 3900/- ಎಂತಲೂ ಮತ್ತು 4000 0-0 ಎಂತ ಯಿದ್ದದ್ದನ್ನು ಹೊಡದು ಅದ್ರ ಬದ್ಲಿಗೆ 1800-0-0 ಎಂತಲೂ ಬರದು ಕೈಸೇತು ದುರಸ್ತಿ ಪಡಿಸಬೇಕೆಂತ ವಾದಿ ಕೊಟ್ಟ ಮೇಲ್ಕಂಡ ದುರಸ್ತಿ ಅರ್ಜಿಯು ತಾ 17-1-48ಕ್ಕೆ ಅಪ್ಸೈರ ತಕ್ಕೆಗೆ ಮುಕ್ರರಾಗಿಯದೆ. ಆಕುರಿತು ನಿಮ್ಮದೇನಾದ್ರೂ ಆಕ್ಷೇಪ ಯಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರುಮಾಡಿ ಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರ್ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ವಾದಿ ಕಡೆಯಿಂದ ಈ ಮೂಲ್ಕ ತಿಳಿಸಿಯದೆ.

M. Ananthaya,
Advocate for plaintiff.
Kundapur, Date 5-1-48



Approved firm by the Govt. of Mysore
Certified by the Agent of the Govt. of Ceylone & India.

The name that at once spells confidence and security
offers Attractive schemes to suit needs of all

Respectable Representatives

WANTED

On lucrative terms.

For full particulars write to:

Managing Director.

The Security Provident Insurance Co, Ltd

Hassan Chambers, arsee Bazar Street, Fort, Bombay: 1

ಉಡುಪಿ ಜಾತ್ರೆಯ ಸಮಯದಲ್ಲಿ ಪ್ರಕಟವಾಗುವುದು

ಪರಿಷ್ಕೃತ ಆವೃತ್ತಿ  **ನಮ್ಮ ಉಡುಪಿ**  ಪರಿಷ್ಕೃತ ಆವೃತ್ತಿ

ಅಂದಿಂದಿನ ಉಡುಪಿಯ ಕುರಿತು ತಿಳಿಯಬೇಕಾದ ಸಮಗ್ರ ವಿಷಯಗಳನ್ನೊಳಗೊಂಡಿದೆ.

ಬೆಲೆ: **0–12–0** ವಿಳಾಸ: ನವಭಾರತ ಬುಕ್ ಡಿಪೊ, ಉಡುಪಿ.

ಕರ್ನಾಟಕ ಪ್ರಾಂತ್ಯವು ಹೇಗಾಗಬೇಕು?

(ಶ್ರೀ. ಎನ್. ಎಸ್. ಕಿಲ್ಲೆಯವರು ತಾ: 29-12-47ರಲ್ಲಿ ಕಾಸರಗೋಡಿನಲ್ಲಿ ಜರಗಿದ ಕರ್ನಾಟಕ ಏಕೀಕರಣ ಪರಿಷತ್ತಿನಲ್ಲಿ ಮಾಡಿದ ಭಾಷಣದಿಂದ)

"ಈ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಮುಂದಾಳುಗಳಾದ ಮತ್ತು ಕೇಂದ್ರ ಸರಕಾರದ ಅಧಿಕಾರಸ್ಥರಲ್ಲಿರುವ ಮಾನ್ಯ ಪಂಡಿತ ಜವಾಹಿರಲಾಲರ ಹಾಗೂ ಸರ್ದಾರ್ ಪಟೇಲರ ಕುರಿತು ಬೇರೆ ಬೇರೆ ಬಗೆಯ ಅಭಿಪ್ರಾಯಗಳು ಕೊಡಲ್ಪಟ್ಟಿವೆ. ಅಂದರೆ ನಮ್ಮ ಕರ್ನಾಟಕ ಏಕೀಕರಣದ ವಿಚಾರದಲ್ಲಿ ಅವರು ಹೆಚ್ಚಿನ ಅಸಡ್ಡೆಯನ್ನು ತೋರಿಸಿರುವರಾಗಿ ಕೆಲವು ಭಾಷಣಗಳಿಂದ ನಾವು ತಿಳಿಯುವಂತಾಗಿದೆ. ಈ ವಿಚಾರದಲ್ಲಿ ನಾನೇನೂ ಹೆಚ್ಚು ಹೇಳಲಾರೆ. ಆದರೆ ಆಂಧ್ರದೇಶದ ಪ್ರಾಂತೀಕರಣವು ಈಗಲೇ ಸಾಧ್ಯವಾಗಬಹುದೆನ್ನುವ ನಮ್ಮ ಮುಂದಾಳುಗಳು ಕರ್ನಾಟಕ ಪ್ರಾಂತ್ಯದ ವಿಷಯದಲ್ಲಿ ಮಾತ್ರ ಯಾಕಾಗಿ ಅಸಡ್ಡೆ ತೋರಿಸಬೇಕು? ಇದನ್ನು ಚೆನ್ನಾಗಿ ವಿಚಾರಿಸಹತ್ತಿದರೆ ನಮ್ಮಲ್ಲೇ ಏನಾದರೂ ದೋಷವಿರಬಹುದೆಂದು ನನ್ನ ಅಭಿಪ್ರಾಯ. ಆಂಧ್ರದೇಶದವರಿಗೆ ಒಬ್ಬ ಮುಂದಾಳು ಮತ್ತು ಒಂದೇ ಅಭಿಪ್ರಾಯವಿದ್ದು ಅವರು ಸಾಕಷ್ಟು ಪ್ರಚಾರಮಾಡಿ ಜನಮತವನ್ನು ಪೂರ್ಣ ಸಂಗ್ರಹಮಾಡಿ ಒಮ್ಮತದ ನೆಲೆಯಿಂದ ಪ್ರಾಂತೀಕರಣದ ಪ್ರಶ್ನೆಯನ್ನು ದೇಶದ ಮುಂದೆ ಇಟ್ಟಂತಿದೆ. ನಮ್ಮ ವಿಷಯ ಹಾಗಿಲ್ಲ. ನಮ್ಮಲ್ಲಿ ಮೈಸೂರು ಸಮೇತವಾದ ಇಡೀ ಕರ್ನಾಟಕ ಪ್ರಾಂತ್ಯವಾಗಬೇಕೆನ್ನುವವರು ಕೆಲವರು. ಮೈಸೂರನ್ನು ಬಿಟ್ಟಾದರೂ ಬ್ರಿಟಿಷ್ ಕರ್ನಾಟಕದ ಜಿಲ್ಲೆಗಳು ಒಂದಾಗಬೇಕೆನ್ನುವವರು ಹಲವರು. ಮೈಸೂರಿಗೆ ಮಹಾರಾಜರಿರುವ ತನಕ ಅದನ್ನು ದೂರ ಬಿಟ್ಟುಬಿಡಬೇಕೆನ್ನುವ ಅಭಿಪ್ರಾಯದವರೂ ಕೆಲವರಿದ್ದಾರೆ. ಈ ಎಲ್ಲಾ ವಿಚಾರಗಳನ್ನು ನೋಡುವಾಗ ನಮ್ಮಲ್ಲಿ ಒಮ್ಮತವಿಲ್ಲವೆಂಬುದೂ ಅಖಂಡ ಕರ್ನಾಟಕಕ್ಕೆ ಏಕಮಾತ್ರ ನಾಯಕ ಮತ್ತು ಏಕಕಂಠದ ಕೇಳಿಕೆ ಮತ್ತು ಕೂಗು ಇಲ್ಲವೆಂಬುದೂ ನಿರ್ವಿವಾದ. ನಮ್ಮ ಮುಂದಾಳುಗಳೆನ್ನಿಸುವವರಲ್ಲಿಯೇ ಕೆಲವರು ಈ ಪ್ರಾಂತೀಕರಣಕ್ಕೆ ಒಳಗಿಂದೊಳಗೆ ವಿರೋಧವಿದ್ದಂತೆಯೂ ಕಾಣುತ್ತಿದೆ. ಮುಂಬಯಿಯಿಂದ ಮೊದಲುಗೊಂಡು ಗೋವೆಯ ತನಕ ಕರಾವಳಿಯ ಕೆಲವು ಭಾಗಗಳನ್ನು ಕೂಡಿಸಿ ಒಂದು ಕೊಂಕಣ ಪ್ರಾಂತ್ಯವನ್ನು ಮಾಡಬೇಕೆನ್ನುವ ಅಭಿಪ್ರಾಯ ಕೂಡಾ ನಡೆಯುತ್ತಿದೆ. ಹೀಗೆಲ್ಲಾ ವಿಚಾರಗಳಿರುವಾಗ, ನಮ್ಮಲ್ಲಿ ಸಾಕಷ್ಟು ಪ್ರಚಾರವಾಗಲೀ ಜನಮತ ಸಂಗ್ರಹವಾಗಲೀ ಸರ್ವಥಾ ಆಗಲಿಲ್ಲವೆಂದರೆ ತಪ್ಪಾಗದು. ಉದಾಹರಣೆಗಾಗಿ ನಮ್ಮ ಮಂಗಳೂರ ಜಿಲ್ಲೆಯ ವಿಚಾರವನ್ನೇ ನೋಡೋಣ. ನಮ್ಮ ನೆರೆ ಪ್ರಾಂತ್ಯವಾಗಿರುವ ಮಲಬಾರಿನ ಮುಖಂಡರು ದಕ್ಷಿಣ ಕನ್ನಡವೆಂಬ ಹೆಸರಿರುವ ಈ ಇಡೀ ಜಿಲ್ಲೆಯನ್ನು ಮಲಬಾರಿಗೆ ಸೇರಿಸಬೇಕೆನ್ನುವ ಅಭಿಪ್ರಾಯಕ್ಕೆ ಕಾರಣವೇನಿರಬಹುದು? ಈ ಪ್ರಶ್ನೆಯನ್ನು ನಾವು ಉತ್ತರಿಸಹತ್ತಿದರೆ ನನಗೆ ಹೀಗೆ ತೋರುತ್ತಿದೆ. ಸುಮಾರು 15 ಲಕ್ಷ ಜನರಿರುವ ಈ ಜಿಲ್ಲೆಯಲ್ಲಿ ಇಂದು ನಾವು ನಿಂತಿರುವ ಕಾಸರಗೋಡಿನ ಈ ನೆಲೆಯಿಂದ ಉಡುಪಿ ತಾಲೂಕಿಗೆ ಸೇರಿದ ಕಲ್ಯಾಣಪುರ ಹೊಳೆಯ ತನಕ ಸಾಮಾನ್ಯ ಮೂರೂವರೆ ತಾಲೂಕಿಗಿಂತಲೂ ಹೆಚ್ಚಾದ ಸ್ಥಳ ಶುದ್ಧ ತುಳು ಮಾತಾಡುವ ಭಾಗವೆಂದು ಧೈರ್ಯದಿಂದ ಹೇಳಬಹುದು. ಇಲ್ಲಿ ಸಾಮಾನ್ಯ 10 ಲಕ್ಷಕ್ಕೆ ಮಿಕ್ಕಿದ ಜನಸಂಖ್ಯೆ ಇರಬೇಕು. ಆ ಮೇಲೆ ಬರುವ ಕುಂದಾಪುರ ತಾಲೂಕಿನಲ್ಲಿ ಕೇರಳದವರಿಗೆ ಶ್ರೀ ಕೊಲ್ಲೂರಿನ ಸಂಬಂಧವಂತೆ. ಅನಂತರ ಶ್ರೀ ಗೋಕರ್ಣದವರೆಗೂ ಅವರ ಯಾತ್ರೆಯ ಸ್ಥಳವಂತೆ. ಅರ್ಥವಿಲ್ಲದ ಕೇರಳದವರ ಈ ಕೂಗು ಏನೇ ಇರಲಿ; ನಮ್ಮ ಜಿಲ್ಲೆಯ ಒಬ್ಬನೇ ಒಬ್ಬ ತುಳು ಮಾತಾಡುವವನು ಕೂಡಾ ಕೇರಳದ ಸಂಬಂಧವನ್ನು ಸರ್ವಥಾ ಇಚ್ಛಿಸುವುದಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆನು. ಅಲ್ಲದೆ, ಮಲೆಯಾಳಿ ಮಾತಾಡುವವರಲ್ಲಿ ಕೂಡಾ ಕೆಲವರು, ಆ ಸ್ಪಕೆ ಹೆಚ್ಚಾಗಿ ನಮ್ಮ ಮುಸಲ್ಮಾನ ಬಂಧುಗಳು ಕೇರಳವನ್ನು ಖಂಡಿತವಾಗಿ ಸೇರಲು ಇಚ್ಛಿಸಲಾರರು. ಆದರೆ ಇಂದಿನವರೆಗಿನ ನಮ್ಮ ಜಿಲ್ಲೆಯ ವಿಷಯವನ್ನು ಚೆನ್ನಾಗಿ ವಿಚಾರಿಸಿದರೆ, ಇಲ್ಲಿಯ ಬಂಟರಿಗೂ ಭಟ್ಟರಿಗೂ ಕೇರಳದ ನಾಯರರಿಗೂ ನಂಬೂದಿರಿಗಳಿಗೂ, ಇಲ್ಲಿಯ ಬಿಲ್ಲವರಿಗೂ ಕೇರಳದ ತೀಯರಿಗೂ ಇರುವಷ್ಟು ಸಮೀಪದ ಸಂಬಂಧವು, ಈ ಜಿಲ್ಲೆಯ ಯಾವ ಜನರಿಗೂ ಮುಂಬಯಿ ಪ್ರಾಂತ್ಯಕ್ಕೆ ಸೇರಿದ ಕನ್ನಡ ಜಿಲ್ಲೆಗಳ ಜನರಿಗೂ ಇರುವುದಿಲ್ಲ. ವಾಸ್ತವಿಕವಾದ ಸ್ಥಿತಿಯು ಹೀಗಿರುವಾಗ, ಕರ್ನಾಟಕ ಪ್ರಾಂತೀಕರಣದ ಪ್ರಶ್ನೆಯು ನಮ್ಮ ಜಿಲ್ಲೆಗೆ ಹೆಚ್ಚು ಆಕರ್ಷಣವಾಗುವ ರೀತಿಯಿಂದ ವಿಚಾರಿಸುವುದು ನಮ್ಮ ಕರ್ತವ್ಯವಿದೆ. ಕರ್ನಾಟಕ ಪ್ರಾಂತ್ಯದ ಸಂಬಂಧವು ನಮ್ಮ ಜಿಲ್ಲೆಗೆ ಹೊಚ್ಚಬೇಕಾದರೆ ಮೈಸೂರು ಸಮೇತವಾಗಿರುವುದೇ ಅತ್ಯಾವಶ್ಯಕ. ಯಾಕೆಂದರೆ ನಮ್ಮ ಜಿಲ್ಲೆಯ ಜನರು ಆಗುಂಬೆ, ತೀರ್ಥಹಳ್ಳಿ, ಶಿವಮೊಗ್ಗ ಮೊದಲಾದ ಮೈಸೂರಿನ ಎಷ್ಟೋ ಭಾಗಗಳಲ್ಲಿ ಅನೇಕ ಸಂಖ್ಯೆಯಿಂದ ನೆಲೆಸಿರುವರು. ಮಂಗಳೂರು, ಮಡಿಕೇರಿ, ಮೈಸೂರು, ಬೆಂಗಳೂರು ಈ ಭಾಗಗಳು ಈ ಹೊತ್ತು ಕೂಡಾ ಒಂದು ಹೊಕ್ಕು ಬಳಕೆಯಲ್ಲಿ ಇದ್ದಂತಿವೆ. ಹೀಗಿರುವುದರಿಂದಲೇ ನಮ್ಮ ಜಿಲ್ಲೆಯಲ್ಲಿ ಅನೇಕರು ಮೈಸೂರು ಕೂಡದಿರುವ ಪ್ರಾಂತ್ಯವಾದರೆ ಕರ್ನಾಟಕವು ತಮಗೆ ಸರ್ವಥಾ ಬೇಡವೆಂದು ಕೂಡಾ ಹೇಳಬಹುದು. ಮೈಸೂರು ಕರ್ನಾಟಕ ಪ್ರಾಂತ್ಯಕ್ಕೆ ಸೇರುವುದನ್ನು ನಮ್ಮಲ್ಲಿ ಕೆಲವರಾದರೂ ಯಾಕೆ ವಿರೋಧಿಸುವರೆಂಬುದನ್ನು ನೋಡೋಣ. ಮೈಸೂರಿನಲ್ಲಿ ಮಹಾರಾಜರಿರುವರಂತೆ. ಅವರು ನಮಗೆ ಬೇಡವಂತೆ. ಮೈಸೂರಿನ ಮಹಾರಾಜರು ಬೇಕೆಂಬು ಹೇಳುವವನು ನಾನಲ್ಲ ಯಾಕೆಂದರೆ ಈ ಭಾಗವನ್ನು ಹಿಂದಕ್ಕೆ ಆಳುತ್ತಿದ್ದ ಟಿಪ್ಪುವನ್ನು ಇಂಗ್ಲೀಷರು ಕೊಂದಾಗ, ಎಲ್ಲಿಯೋ ಕಾರಾಗೃಹದಲ್ಲಿದ್ದ ರಾಜವಂಶೀಯನೊಬ್ಬನನ್ನು ಮೈಸೂರು ಸಿಂಹಾಸನದ ಅಧಿಕಾರಿಯೆಂದು ಅವರು ತಂದು ಪಟ್ಟಕಟ್ಟಿದ್ದರಂತೆ. ಇದು ಆ ರಾಜಪರಂಪರೆಗೂ ಬ್ರಿಟಿಷರಿಗೂ ಇರುವ ಸಂಬಂಧ. ಈಗ ಬ್ರಿ[illegible] ಭಾರತವನ್ನು ಬಿಟ್ಟು ತೊಲಗಿ ಹೋದಾಗ ಈ ಮಹಾರಾಜರು ಕೂಡಾ ತನ್ನ ಅಧಿಕಾರದಿಂದ ತೊಲಗುವುದು ಚೆನ್ನಾಗಿತ್ತು. ಅವರು ಹಾಗೆ ಮಾಡಲಿಲ್ಲ. ಆದರೆ ಮೈಸೂರು ಜನತೆಯೇ ಅವರ ನಿರಂಕುಶ ಪ್ರಭುತ್ವವನ್ನು ಪ್ರತಿಭಟಿಸಿ ಪ್ರಜಾಜವಾಬ್ದಾರಿ ಮಂತ್ರಿಮಂಡಳವನ್ನು ರಚಿಸಿದ ಮೇಲೆ ರಾಜರು ನಮಗೇಕೆ ಬೇಕು? ಆದರೆ ಹೆಸರಿಗಾದರೂ ಮಹಾರಾಜರು ಇಂದು ಕೂಡಾ ಮೈಸೂರಿನಲ್ಲಿರುವರಲ್ಲವೇ ಎಂಬ ಮಾತು ಹೊರಡಬಹುದು. ಇರಲಿ, ಏನಾಯ್ತು? ಮೈಸೂರಿಗೆ ಮಿಕ್ಕಿದ ಮಹಾರಾಜರು ಸಮಗ್ರ ಕರ್ನಾಟಕಕ್ಕೆ ಏಕಿಲ್ಲವರೇ? ಸ್ವಲ್ಪವಾದರೂ ರಾಜರ ಪ್ರಭಾವಕ್ಕೆ ಒಳಗಾಗಿರುವ ನಮ್ಮ ಮೈಸೂರ ಬಂಧುಗಳ ಸಂಪೂರ್ಣ ಸ್ವಾತಂತ್ರ್ಯಕ್ಕೆ ಪ್ರಾಂತೀಕರಣವು ಪ್ರಯೋಜನಕಾರಿಯಾಗುವುದಾದರೆ ಮೈಸೂರು ಸಹಿತವಾದ ಪ್ರಾಂತ್ಯ ರಚನೆಯನ್ನು ಮಾಡುವುದರಲ್ಲಿ ಏನನ್ಯಾಯವಿದೆ? ಅಲ್ಲದೆ ಮೈಸೂರಿಂದ ಆಚೆಗಿರುವ ಕೊಳ್ಳೇಗಾಲು, ನೀಲಗಿರಿ, ಹಿಂದುಪುರ ಮೊದಲಾದ ಕನ್ನಡ ಭಾಗಗಳನ್ನು ನಮ್ಮ ಪ್ರಾಂತ್ಯಕ್ಕೆ ಮೈಸೂರನ್ನು ಬಿಟ್ಟು ಸೇರಿಸಿಕೊಳ್ಳುವ ಬಗೆಯಾದರೂ ಹೇಗೆ? ಈ ಬಗೆಯಿಂದ ವಿಚಾರಿಸಿ ವಿಶಾಲ ಕರ್ನಾಟಕದ ದೃಷ್ಟಿಯನ್ನಿಟ್ಟುಕೊಂಡು ಮೈಸೂರು ಸಮೇತವಾದ ಸಮಗ್ರ ಕರ್ನಾಟಕ ಪ್ರಾಂತ್ಯವಾಗಬೇಕೆಂಬ ನಿಶ್ಚಿತವಾದ ಗೊತ್ತುಗುರಿಯುಳ್ಳ ಈ ಧೋರಣೆಯಿಂದಲೇ ಇಂದು ಕನ್ನಡಿಗರು ಒಮ್ಮತದಿಂದ ಮುಂದೆ ಸಾಗಬೇಕು. ಇದೇ ರೀತಿಯಲ್ಲಿ ಬೇರೆ ಬೇರೆ ಜಿಲ್ಲೆಗಳು ತಮ್ಮ ತಮ್ಮ ಅಡಚಣೆಗಳನ್ನು ತಿಳಿದು ತಡಮಾಡದೆ ಅವುಗಳನ್ನು ನೀಗಿಸಲು ಯತ್ನಿಸಿ ಪ್ರಾಂತೀಕರಣದ ಪ್ರಶ್ನೆಯಲ್ಲಿ ಸೇರಿಬರಬೇಕು. ಕೊಡಗು ಪ್ರತ್ಯೇಕ ಪ್ರಾಂತ್ಯವಾಗಿಯೇ ಇರಬೇಕೆಂದು ಹಲವು ಕೊಡಗು ಬಂಧುಗಳ ಅಭಿಪ್ರಾಯವಿರುವಂತೆ ಕಾಣುತ್ತದೆ. ಇದರ ಕಾರಣವೇನೆಂದರೆ ನಮ್ಮ ಪುತ್ತೂರು ತಾಲೂಕಿನ ಅರ್ಧದಷ್ಟಿರುವ ಈ ಕೊಡಗು ಜಿಲ್ಲೆಯ ಸಾಮಾನ್ಯ ಒಂದು ಲಕ್ಷದ ಇಪ್ಪತ್ತು ಸಾವಿರ (1,20,000) ಜನಸಂಖ್ಯೆಯಲ್ಲಿ, ಕೊಡಗರು ಸಾಮಾನ್ಯ 40,000 ಮಾತ್ರ ಇರಬಹುದು. ಆದರೂ ಹೆಚ್ಚಿನ ಅಧಿಕಾರವು ಈ ಹೊತ್ತು ಕೊಡಗು ಜಿಲ್ಲೆಯಲ್ಲಿ ಅವರ ಕೈಯಲ್ಲಿದೆ. ಕೊಡಗುನಾಡು ಕರ್ನಾಟಕಕ್ಕೆ ಸೇರಿಹೋದರೆ ತಮ್ಮ ವರ್ಚಸ್ಸು, ಪ್ರಭಾ[illegible] ಅಧಿಕಾರಗಳು ಕಡಿಮೆಯಾಗಬಹುದೆಂದು ಅವರ ಭಾವನೆ ಇರಬಹುದು. ಆದರೆ ಇದು ಬರೇ ಸಂಕುಚಿತ ಸ್ವಾರ್ಥದ ಪ್ರಶ್ನೆಯಾಯಿತು. ಬಹುಜನರ ಬಹುಸುಖವೆಂಬ ನೆಲೆಯಲ್ಲಿ ಈ ಬಗೆಯ ಸ್ವಾರ್ಥ ಮತ್ತು ಸಂಕುಚಿತತೆಯು ಕಿರಿಯು ಸೇರಿಹೋಗಬೇಕು. ಒಂದು ಗ್ರಾಮಕ್ಕಾಗಿ ವ್ಯಕ್ತಿಯೂ, ಒಂದು ದೇಶಕ್ಕಾಗಿ ಗ್ರಾಮವೂ, ಸಂಕುಚಿತ ಸ್ವಾರ್ಥವನ್ನು ಬಿಡಬೇಕೆಂದು ಬಲ್ಲವರ ಮಾತಿದೆ. ಈ ತತ್ವವನ್ನು ಕೊಡಗಿನ ನನ್ನ ಬಂಧುಗಳು ಹೆಚ್ಚಾಗಿ ಲಕ್ಷ್ಯದಲ್ಲಿಡಬೇಕೆಂದು ನಾನು ಪ್ರಾರ್ಥಿಸುವೆನು. 10 ಲಕ್ಷದ ವರೆಗಿನ ತುಳುವರಾದ ನಾವು ನಮ್ಮ ಜಿಲ್ಲೆಯು ಕರ್ನಾಟಕ ಪ್ರಾಂತ್ಯಕ್ಕೆ ಸೇರಿಹೋಗುವಷ್ಟು ಸ್ವಾರ್ಥತ್ಯಾಗವನ್ನು ಮಾಡುವಾಗ ಕೇವಲ 40,000 ಸಂಖ್ಯೆಯ ಕೊಡಗರು ಒಂದಿಷ್ಟು ಉದಾರತೆ ತೋರಿಸಿದರೆ ಹೆಚ್ಚಾಗುವುದೇ?

ಎರಡನೆಯದಾಗಿ, ಮೇಲೆ ಹೇಳಿದ ರೀತಿಯಲ್ಲಿ ನಿಶ್ಚಿತವಾದ ಧೋರಣೆಯಿಂದ ಇಡೀ ಕರ್ನಾಟಕವೆಂದು ನಾವು ಮುಂದೊತ್ತುವಾಗ ಸಾಕಷ್ಟು ಪ್ರಚಾರದ ಶಕ್ತಿಯು ನಮ್ಮಲ್ಲಿ ಕೂಡಿಬರಬೇಕು. ಆ ಭಾಗದಲ್ಲಿಯೂ ನಾವು ತುಂಬಾ ಹಿಂದಿರುವೆವು, ಕರ್ನಾಟಕ ಏಕೀಕರಣ ಸಂಘದ ಆಫೀಸಿನಲ್ಲಿ ಕಾರ್ಯದರ್ಶಿಗಳಿಗೆ 5 ತಿಂಗಳ ಸಂಬಳ ಮತ್ತು ಕೆಲಸದವರಿಗೆ 6 ತಿಂಗಳ ಸಂಬಳ ಬಾಕಿ ಇರುವಷ್ಟು ನಮ್ಮ ಭಂಡಾರವು ಬರಿದಾಗಬೇಕಾದರೆ ನಮ್ಮಲ್ಲಿ ಸಾಕಷ್ಟು ಧನಸಂಗ್ರಹವು ಆಗಲಿಲ್ಲೆಂಬುದು ಖಂಡಿತವಷ್ಟೇ? ಆ ದೃಷ್ಟಿಯಿಂದಲೇ ವಿಚಾರಿಸುವಾಗ ಪ್ರಚಾರದ ಕೊರತೆಯೂ ಇದೆಯೆಂದು ನಿರ್ಭೀತಿಯಿಂದ ಹೇಳಬಹುದು. ಆದುದರಿಂದಲೇ ಬರುವ ಮಾರ್ಚಿ ತಿಂಗಳ ಒಳಗೆ ನಮ್ಮ ಜಿಲ್ಲೆಯ ಪರವಾಗಿ ರೂಪಾಯಿ 10,000-ದ ನಿಧಿಯನ್ನು ಕೊಡುವುದಾಗಿ ಈ ದಿನ ಮಾತುಕೊಡಲು ಕಾರಣವಾಯಿತು. ಇದೇ ರೀತಿಯಲ್ಲಿ ಇತರ ಜಿಲ್ಲೆಗಳು ಕೂಡಾ ಧಾರಾಳ ಬುದ್ಧಿಯಿಂದ ಮುಂದೆ ಬಂದು ಸಾಕಷ್ಟು ನಿಧಿಸಂಗ್ರಹಮಾಡಿ ಸಂಘವನ್ನು ಬಲಪಡಿಸಬೇಕು. ಆ ಮೇಲೆ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಧ್ವನಿ ಪ್ರತಿಧ್ವನಿಗೊಳ್ಳುವಂತೆ ನಮ್ಮ ಪ್ರಚಾರ ಕೆಲಸ ನಡೆಯಬೇಕು. ನಮ್ಮ ಪ್ರಭಾವವು ಏರಬೇಕು. ಅಂದರೆ ಮಾತ್ರ ನಮ್ಮ ಕರ್ನಾಟಕದ ಜನತೆಯ ನರನಾಡಿಗಳು ಒಲಿದೆಂದು ನಮ್ಮ ಪ್ರಶ್ನೆಯು ಸಶಕ್ತವಾಗಿ ದೇಶದ ಮುಂದೆ ಬರಲು ಸಾಧ್ಯವೆಂದು ನನ್ನ ನಂಬಿಕೆ. ಆ ಕಾಲಕ್ಕೆ ನಮ್ಮ ಮುಂದಾಳುಗಳು ಕರ್ನಾಟಕ ಪ್ರಾಂತ್ಯದ ಪ್ರಶ್ನೆಯನ್ನು ಎಂದೂ ಅಪೇಕ್ಷಿಸಲಾರರೆಂದು ನಾನು ಖಂಡಿತವಾಗಿ ಹೇಳಬಲ್ಲೆನು. ಒಂದೊಮ್ಮೆಗೆ ಮತ್ತೂ ತೊಂದರೆಗಳು ಬರುವವಾದರೆ 1920ನೇ ಇಸವಿಯ [illegible] ಮಹಾತ್ಮಾ ಗಾಂಧಿಯವರ ಮುಂದಾಳುತನದಿಂದ ಭಾರತದ ಸ್ವಾತಂತ್ರ್ಯಕ್ಕಾಗಿ ಮುಂದೆ ಬಂದವರು ಇನ್ನೂ ನಮ್ಮಲ್ಲಿರುವರು. ಅವಶ್ಯ ಬಿದ್ದಲ್ಲಿ ಅವರು ಕರ್ನಾಟಕ ಪ್ರಾಂತ್ಯಕ್ಕಾಗಿ ಬಲಿದಾನಮಾಡಲು ಮುಂದೆ ಬಾರದೆ ಹೋಗುವರೇ? ಇಂದಿನ ಕೂಲಿಕಾರರು, ಇಂದಿನ ವಿದ್ಯಾರ್ಥಿಗಳು, ಇಂದಿನ ಮಹಿಳೆಯರು ಮತ್ತು ಮಹನೀಯರು ಎಲ್ಲರೂ ಹಿಂದಿಗಿಂತ ಹೆಚ್ಚು ಎಚ್ಚತ್ತವರು. ಅಧಿಕಾರದಲ್ಲಿರುವವರು ಅವರ ಅಮಲನ್ನು ಹೋಗಲಾಡಿಸುವುದಕ್ಕಾಗಿಯಾದರೂ ಇಳಿದು ಬರುವರು. ಕಾರಾಗೃಹಗಳಿಂದ ತಣ್ಣಗಾಗಿರುವವರು ಬಿಸಿಯೇರುವರು. ಈ ರೀತಿಯಿಂದ ಕ್ರೋಢೀಕೃತವಾದ ಸಾಹಸವನ್ನು ಕನ್ನಡಿಗರೆಲ್ಲರೂ ಅವಶ್ಯ ಬಿದ್ದಲ್ಲಿ ತೋರಿಸುವ ಸಂದರ್ಭವು ಬರಬಹುದು. ಅಂದರೆ ಕನ್ನಡಿಗರು ಎಂದೂ ಹಿಂಜರಿಯಲಾರರು. ಅಂತೂ ಕರ್ನಾಟಕ ಪ್ರಾಂತ್ಯವು ಆಗಿಯೇ ತೀರುವುದು."

ಪ್ರಕಟವಾಗಿದೆ—ಶ್ರೀ ಎಂ ವಿ. ಹೆಗ್ಡೆಯವರ

ಸ್ವರಾಜ್ಯ ವಿಜಯ

(ಯಕ್ಷಗಾನ ಪದ್ಯ—ಅರ್ಥಗಳಲ್ಲಿ ಆಗೋಸ್ತು 15ರ ಸ್ವರಾಜ್ಯ ಚರಿತ್ರೆ)

ಯಕ್ಷಗಾನದಲ್ಲೊಂದು ಕ್ರಾಂತಿ! ನಿಜವಾದ ಜನತಾ ಸಾಹಿತ್ಯದ ಉದ್ಭವ!

ನೆಹರು, ಜಿನ್ನ, ಪಟೇಲ್, ಪೈಸ್ರಕಾರ್, ಆಟ್ಲಿ, ಮೌಂಟ್‌ಬೇಟನ್, ಗಾಂಧಿ, ಸಿಸ್ತಾರ್, ಖಾನ್‌ನೂನ್, ಕ್ರಿಪ್ಸ್ ಮುಂತಾದವರೇ ಇದರಲ್ಲಿರುವ ಪಾತ್ರಗಳು. ಸಾಮಾನ್ಯನಿಂದ ಹಿಡಿದು ಸಾಹಿತಿಯ ವರೆಗಿನ ಎಲ್ಲರಿಗೂ ಬೇಕಿರುವ ಪುಸ್ತಕ

ಬೆಲೆ ಕೇವಲ: 0—8—0

ಪ್ರತಿಗಳಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

— ಅಥವಾ

ನವಯುಗ ಪ್ರೆಸ್, ಉಡುಪಿ, ದ. ಕ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಪಾಂಗಾಳ — ಜನಾರ್ದನ ದೇವಸ್ಥಾನದಲ್ಲಿ ಕಾಲಾಂತ್ರತಿಯಲ್ಲಿ ಮುಕ್ಕೋಟಿ ದ್ವಾದಶಿ ದಿನಸ ನಡೆಯತಕ್ಕ ಉತ್ಸವ ಬಹು ವಿಜೃಂಭಣೆಯಿಂದ ನಡೆಯಿತು. ಈ ಮೊದಲು ನಿಶ್ಚಯವಾದಿದಂತೆ ದೇವಸ್ಥಾನಕ್ಕೆ ಅಡಿಗೆ ಮಾಡುವ ಪಾತ್ರೆಗಳು ಪೂರಾ ತಯಾರು ಮಾಡಿಸಿ, ಸದ್ರಿ ಉತ್ಸವ ಕಾಲದಲ್ಲಿ ಶ್ರೀ ದೇವರ ಸನ್ನಿಧಾನದಲ್ಲಿ ಒಪ್ಪಿಸಲಾಗಿಯದೆ. ಸದ್ರಿ ಪಾತ್ರೆಗಳಿಗೆ ಸಹಾಯ ಮಾಡಿದ ಸರ್ವರಿಗೂ ಕಾರ್ಯದರ್ಶಿ ಶ್ರೀ. ಕಿ. ಸುಬ್ರಾಯರು ಧನ್ಯವಾದಗಳನ್ನರ್ಪಿಸುತ್ತಾರೆ.

ಮೂಲ್ಕಿ:— ಇಲ್ಲಿಯ ಚಿತ್ರಾಪು ಗ್ರಾಮದಲ್ಲಿ "ಚಿತ್ರಾಪು ಯುವಕ ಸಂಘ" ಪ್ರತ್ತೀಚೆಗೆ ಸ್ಥಾಪಿತವಾಗಿ ಇದರ ನೇತೃತ್ವದಲ್ಲಿ 'ಶ್ರೀ ಸುಭಾಷ್ ಹಿಂದೀ ರಾತ್ರಿ ಶಾಲೆ'ಯು ತೆರೆಯಲ್ಪಟ್ಟು ಸುಮಾರು 50 ಮಂದಿ ಬಾಲ, ಬಾಲಕಿ ಮತ್ತು ತರುಣರಿಗೆ ಜಾತಿ ಮತ ಬೇಧವಿಲ್ಲದೆ ಧರ್ಮಾರ್ಥವಾಗಿ ಹಿಂದೀ ಕಲಿಸುವ ಏರ್ಪಾಡು ನಡೆದಿದೆ. ಸಂಘವು ಮಹಾಜನರ ಪ್ರೋತ್ಸಾಹವನ್ನು ಹಾರೈಸುತ್ತಿದೆ. ಸಂಘಕ್ಕೆ (1) ದೇಜಪ್ಪ ಸುವರ್ಣ (2) ಸಂಜೀವ ಕುಂದರ್ (3) ಕೃಷ್ಣ ಬಂಗೇರ (4) ಕೃಷ್ಣ ಶೆಟ್ಟಿ (5) ಮುದ್ದಣ್ಣ ಶೆಟ್ಟಿ (6) ಒಲಿವ ಕಾಂಚನ್ (7) ಮನ್ನ ಕರ್ಕೇರ (8) ವೆಂಕಪ್ಪ ಪುತ್ರನ್ (9) ನಾರಾಯಣ ಸಾಲಿಯಾನ್ (10) ಸಸಂದ್ರ ಸುವರ್ಣ (11) ಬೂಬ ಪುತ್ರನ್ (12) ರಾಮಪ್ಪ ಬಂಗೇರ, ಇವರು ಕಾರ್ಯಕರ್ತರಾಗಿರುವರು.

ಪೆಡೂರ್ರು:— ತಾ 26-12-47ರಿಂದ 1-1-48ರ ವರೆಗೆ ನಡೆದ ಬೇಡ್ಮಿಂಟನ್ ಪಂದ್ಯಾಟದಲ್ಲಿ ಜಯಶಾಲಿಗಳಾದವರಿಗೆ ಬಹುಮಾನ ಹಂಚುವ ಸಮಾರಂಭವು ಶ್ರೀ. A ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಲ್ಪಟ್ಟಿತು ಲಘು ಉಪಹಾರಾನಂತರ ಡಬಲ್ಸ್‌ನಲ್ಲಿ ಗೆದ್ದ ಶ್ರೀ. ಎ. ಭೋಜರಾಜ ಹೆಗ್ಡೆ ಮತ್ತು ಶ್ರೀ ಬಿ ಸಂಜೀವ ಹೆಗ್ಡೆ ಇವರಿಗೆ ಪ್ರಥಮ ಬಹುಮಾನವಾದ ಚಿನ್ನದ ಪದಕಗಳನ್ನೂ ದ್ವಿತೀಯ ಬಹುಮಾನವಾದ ಬೆಳ್ಳಿಯ ಕಪ್ಪುಗಳನ್ನು ಶ್ರೀ A. ಉಮಾನಾಥ ಹೆಗ್ಡೆ ಮತ್ತು ಡಾ। ಎಸ್. ಪದ್ಮನಾಭ ಸೆಟ್ಟಿ ಇವರಿಗೂ ಪ್ರೈಸ್‌ನ ಪ್ರಥಮ ಬಹುಮಾನವನ್ನು ಪೆಡೂರು ಟೀಮಿನವರಿಗೂ ದ್ವಿತೀಯ ಬಹುಮಾನವನ್ನು ಉಡುಪಿ ಟೀಮಿನವರಿಗೂ ಹಂಚಿದ ನಂತರ ಸೆಕ್ರೆಟರಿಯವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಉಚ್ಚಿಲ:— ಶಿರಿಯಾಳ ಸಮಾಜ ಸುಧಾರಕ ಸಂಘ, ಬಾರಕೂರು ಹೋಬಳಿಯ ವಾರ್ಷಿಕ ಮಹಾಸಭೆಯು ತಾ. 11-1-48 ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 10ಕ್ಕೆ ಉಚ್ಚಿಲ ಶ್ರೀ ಸರಸ್ವತಿ ಮಂದಿರದಲ್ಲಿ ಶ್ರೀ ಬಿ ಭೋಜರಾಯರವರ ಅಧ್ಯಕ್ಷತೆಯಲ್ಲಿ ಜರಗುವುದು

ನಿಧನ:— ದಿವಂಗತ ಮೂಲೂರು ಕಂಕಣಗುತ್ತು ರುಕ್ಮ ಶೆಟ್ರ ಮಗ ಶ್ರೀ ನಾರಾಯಣ ಶೆಟ್ರು, ಇದೇ ತಿಂಗಳ ತಾ 2ರಲ್ಲಿ ತಮ್ಮ ಮೂಲೂರು ಮನೆಯಲ್ಲಿ ಮೃತಪಟ್ಟರೆಂದು ತಿಳಿಸಲು ತುಂಬಾ ವಿಷಾದ ಪಡುತ್ತೇವೆ. ಶ್ರೀಯುತರು ಬೊಂಬೇ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಕಂಪೆನಿಯ ಪ್ರಸಿದ್ಧ ಏಜಂಟರೊಬ್ಬರಲ್ಲದೆ, ಈ ವೃತ್ತಿಯಲ್ಲಿ ಜನತೆಗೆ ಆಭರಣತೆಗೊಳಿಸಿದ್ದರು. ದಯಾಳುಗಳೂ, ಬಡಜನಪ್ರಿಯರೂ ಇದ್ದ ಇವರು ತಮ್ಮ 44ನೇ ಪ್ರಾಯದಲ್ಲಿ ಮೃತಪಟ್ಟದ್ದು ವಿಷಾದಕರವಿದೆ.

ಲಲಿತಕಲಾ ಕರ್ನಾಟಕ ನಾಟಕ ಸಭಾ, ಮುಂಬಯಿ.

ಇವರು ತಾ. 25-1-47ರಂದು ಶ್ರೀ ಕೆ. ನಿತ್ಯಾನಂದ ಬೋಳಾರ್, ಇವರಿಂದ ಬರೆಯಲ್ಪಟ್ಟ "ವಿಚಿತ್ರ ಮಾನವ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು ದಾಮೋದರ್ ಠಾಕರ್ಸಿ ಹೋಲಿನಲ್ಲಿ ಬಹಳ ಯಶಸ್ವಿಯಾಗಿ ಅಭಿನಯಿಸಿದರು. ನಾಟಕದ ಕಥಾ ಭಾಗವು ಮುಂಬಯಿ ಕನ್ನಡಿಗರಿಗೆ ಬಹಳ ಅಚ್ಚುಮೆಚ್ಚಿನದಾಗಿತ್ತು. ಅಂದಿನ ನಾಟಕಕ್ಕೆ ಸಭೆಯ ಚೇರ್‌ಮೇನರಾದ ಶ್ರೀ. ಯು. ಜ. ಪುತ್ತಿಲ್ಲಯರು ಶ್ರೀ. ನರಸಿಂಗ್ ರಾವ್ ಕೊಡಿಕಲ್‌ನವರನ್ನು ಅಧ್ಯಕ್ಷಸ್ಥಾನಕ್ಕಾಗಿ ಬಾಸಿಸಿಯಿಸಿದರು. ಶ್ರೀಯುತರು ಇಂದಿನ "ವಿಚಿತ್ರ ಮಾನವ" ನಾಟಕವನ್ನೂ ಲಲಿತಕಲಾ ಕರ್ನಾಟಕ ನಾಟಕ ಸಭೆಯವರ ಕಾರ್ಯಕಲಾಪಗಳನ್ನೂ ನೋಡಿ ನನಗೆ ಅತ್ಯಂತ ಸಂತೋಷವಾಯಿತೆಂದು ಶ್ಲಾಘಿಸಿದರು ಸಭೆಯ ಚೇರ್‌ಮೇನರಾದ ಶ್ರೀ. ಯು ಜಿ, ಪುತ್ತಿಲ್ಲಯವರು ಮದನಮೋಹನನ ಪಾತ್ರವಹಿಸಿದ ಶ್ರೀ ಯಸ್. ಸುಂದರ ಸೆಟ್ಟಿಯವರಿಗೆ ಒಂದು ಬೆಳ್ಳಿಯ ಕಪ್‌ನ್ನೂ ಮಾಧವರಾಯನ ಪಾತ್ರವಹಿಸಿದ ಶ್ರೀ. ಗಣೇಶ್‌ರಾವ್ ತ್ರಾಸಿ ಇವರಿಗೆ ಒಂದು ಬೆಳ್ಳಿಯ ಪದಕವನ್ನೂ ಬಹುಮಾನವಾಗಿ ಕೊಟ್ಟರು. ಸಭೆಯ ಅಧ್ಯಕ್ಷರಾದ ಶ್ರೀ ಸುಂದರ್, ಯಸ್, ಸೆಟ್ಟಿಯವರು ನೃತ್ಯಮಾಡಿದ ಶ್ರೀ. ಸಂಜೀವನವರಿಗೆ ಒಂದು ಪದಕವನ್ನು ಬಹುಮಾನವಾಗಿ ಕೊಟ್ಟರು. ಅಲ್ಲದೆ ಪ್ರತಿಯೊಬ್ಬ ಪಾತ್ರಧಾರರು ನಾಟಕದಲ್ಲಿ ಬೇಕಾದ ನಟನೆಗಳನ್ನು ಮಾಡಿ ಸಭಿಕರ ಮನಸ್ಸನ್ನು ಸಂತೋಷಗೊಳಿಸಿದರು ತದನಂತರ ಸಭೆಯ ಕಾರ್ಯದರ್ಶಿಯವರಾದ ಶ್ರೀ. ಬಿ. ಯಸ್, ನಾಯ್ಕರು "ವಿಚಿತ್ರ ಮಾನವ" ನಾಟಕವನ್ನು ಬರೆದ ಶ್ರೀ. ಕೆ. ನಿತ್ಯಾನಂದ ಬೋಳಾರ್ ರವರಿಗೂ ನಾಟಕಕ್ಕೆ ಇನ್ನಿತರ ವಿಷಯಗಳಲ್ಲಿ ತನ್ನ ತನು ಮನ ಧನಗಳಲ್ಲಿ ಸಹಾಯ ಮಾಡಿದ ಶ್ರೀ ಆನಂದ ಕರ್ಕೆರರಿಗೂ ನಾಟಕಕ್ಕೆ ಸಹಾಯಮಾಡಿದ ಸರ್ವಮಹನೀಯರಿಗೂ ಧನ್ಯವಾದಗಳನ್ನು ಅರ್ಪಿಸಿದರು ಇದೇ ನಾಟಕವು ಭಾಂಗವಾಡಿ ಥಿಯೇಟರಿನಲ್ಲಿ ಇನ್ನೊಮ್ಮೆ ಪ್ರದರ್ಶನವಾಗಲಿದೆ

ಬಾಲಕರು ಆರೋಗ್ಯಶಾಲಿಗಳಾಗಲು

(ಪ್ರಭೂಸ್) ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗಗಳುಳ್ಳವರಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ ಮಾತ್ರ, ಕೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'

ಬಾಲಾಮೃತ

ಪ್ರಭೂಸ್ ಬಾಲಾಮೃತದ ಖ್ಯಾತಿಗೆ ಮಾರುಲೆ ಬೇಕೆ? ಹಾಗಾದರೆ ಅದರ ಒಂದು ಪಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೊ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

L. N. Sharma, Mangalore.

ಸ್ವೀಕಾರ—ವಿಮರ್ಶೆ

ಕವಿತಾ ಕಾಮಿನಿ—ಭಾಗ ೧. ಕವನಗಳು. ಶ್ರೀ. ಎಸ್. ವೆಂಕಟರಾಜರು. ಪ್ರಕಾಶಕರು, ಕಿರಿಯರ ಪ್ರಪಂಚ, ಉಡುಪಿ. ಕಿರೀಟ ೧/೮ ಆಕಾರ ಪುಟಗಳು: ೧೨೮ ಬೆಲೆ. ರೂ ೨-೦-೦

ತೊದಲ್ನುಡಿ ಗ್ರಂಥಮಾಲೆಯ ೨ನೆಯ ಸುಮವಾದ ಹೊತ್ತಗೆಯಿದು. ಪ್ರಾಯದಲ್ಲಿ ತರುಣರಾದರೂ ಸಾಹಿತ್ಯದಲ್ಲಿ ಪರಿಚಿತರಾದ ಶ್ರೀ. ಎಸ್. ವೆಂಕಟರಾಜರು ಪ್ರಾರಂಭದಿಂದ ೧೯೪೭ರ ವರೆಗೆ ಬರೆದ, ಸುಮಾರು ೭೫ ಕವನಗಳು ಇಲ್ಲಿ ಸಂಗ್ರಹವಾಗಿವೆ. "ಸಾಹಿತ್ಯವು ಸೃಷ್ಟಿಯ ಕೇವಲ ಪ್ರತಿಬಿಂಬವಾಗಿರದೆ ಸೃಷ್ಟಿಯಲ್ಲಿ ಹುದುಗಿದ ಸತ್ಯವನ್ನು ಕಲ್ಪನೆಯ ಮಾಯಾಲಾಂದರಿನ ಬೆಳಕಿನಲ್ಲಿ ಹಿಡಿದು ತೋರಿಸುವ ಛಾಯಾಚಿತ್ರ". ಎಂಬ ಮಾತು ನಿಜವಾದರೆ, "ಕವಿತಾ ಕಾಮಿನಿ"ಯು ಅಂತಹ ಅತ್ಯುತ್ತಮ ಚಿತ್ರಗಳಲ್ಲೊಂದು ಎಂದರೆ ತಪ್ಪಾಗದು. ಸುರಸವಾದ ಈ ಕವಿತೆಗಳನ್ನೋದಿದರೆ, ಕವಿಯಲ್ಲಿರುವ ವಿಶಾಲದೃಷ್ಟಿ, ಜಗದ ಜೀವಿಗಳ ನೋವು, ನಲಿವುಗಳಲ್ಲಿ ಒಂದಾಗಿ ಹೋಗುವ ಸಂವೇದನಾಶೀಲ ಮನಸು ವ್ಯಕ್ತವಾಗುತ್ತಿವೆ. ಪುಸ್ತಕದ ಮುದ್ರಣವು ಅಚ್ಚುಕಟ್ಟಾಗಿದ್ದು, ಬಹಿರಂಗದಲ್ಲಿಯೂ ಆಕರ್ಷಣೀಯವಾಗಿದೆ. "ಕವಿತಾ ಕಾಮಿನಿ"ಯ ಎರಡನೆಯ ಭಾಗವೂ ಸಧ್ಯದಲ್ಲೇ ಹೊರಬೀಳಲೆಂದು ಆಶಿಸುತ್ತೇವೆ.

ವಸಂತ:—(ಸ್ವಾತಂತ್ರ್ಯ ವರ್ಷಾಂಕ) ಮದರಾಸು ಕ್ರಿಶ್ಚನ್ ಕೊಲೆಜ್ ಗೆಳೆಯರ ಹಸ್ತಾಕ್ಷರ ಪತ್ರಿಕೆ. ಡೆಮಿ ೧/೪ ಆಕಾರದ ಸುಮಾರು ೨೫೦ ಪುಟಗಳು. ಸಂಪಾದಕರು: ಮಲ್ಲ-ಭಟ್ಟ.

ನಮ್ಮ ಕಾಲೇಜು ತರುಣರು ತಾಯ್ನುಡಿಯಲ್ಲಿ ಮಾತನಾಡಲಿಕ್ಕೂ ಹೇಸುತ್ತಿದ್ದ ಕಾಲವು ಹೋಗಿ ಬರೆಯುವಷ್ಟು ಮುಂದೆ ಬರಲಾರಂಭಿಸಿರುವ ನೂತನ ಕಳದ ವಸಂತಾಗಮನವನ್ನು ಸಾರುವಂತಿದೆ "ವಸಂತ"ದ ಈ ಸಂಚಿಕೆ. ತರುಣರ ಧ್ಯೇಯವೆಂಬಂತಿರುವ ಸಮತಾವಾದವನ್ನು ಸಮರ್ಥಿಸುವ ಹಾಗೂ ಸಾಹಿತ್ಯ, ರಾಜಕೀಯಗಳನ್ನು ವಿಮರ್ಶಿಸುವ ಕತೆ–ಕವನಗಳೂ, ಕಾಲೇಜು ಮಿತ್ರರ ನಿತ್ಯ ಜೀವನದ ಅನುಭವಗಳೇ ವಸ್ತುವಾಗಿರುವ ಏಕಾಂಕ, ಕತೆ, ಹರಟೆಗಳೂ, ಉತ್ತಮ ವರ್ಣಚಿತ್ರಗಳೂ, ವಸಂತದ ವೈಶಿಷ್ಟ್ಯಗಳಾಗಿವೆ ಪತ್ರಿಕೆಯು ಹೊಸಹೊಸ ಬರೆಹಗಾರರನ್ನು ತಯಾರುಮಾಡುತ್ತಿರುವುದೂ, ಅನ್ಯತ್ರ ಸಾಮಾನ್ಯವಾಗಿ ಬರುವವುಗಳಿಗಿಂತಲೂ ಉತ್ತಮ ಕತೆ-ಕವಿತೆಗಳನ್ನು ಒದಗಿಸಿಕೊಂಡಿರುವುದೂ ಸಂತೋಷದ ಸಂಗತಿ. ಆ ಬಗ್ಗೆ ಪತ್ರಿಕೆಯ ಆಧಾರ ಸ್ತಂಭಗಳಂತಿರುವ ಶ್ರೀ. ಕು ಶಿ. ಹರಿದಾಸ ಭಟ್. ಮತ್ತು ಸೇವ ನೇಮಿರಾಜ ಮಲ್ಲರು ಅಭಿನಂದನೀಯರು. ಸಂಚಿಕೆಯ ರಕ್ಷಾಪತ್ರದಲ್ಲಿ ಶ್ರೀ ಆರ್. ಕೆ. ದೇವಡಿಗಾರರು ಬರದ ಚಿತ್ರವು ಆಕರ್ಷಣೀಯವಿವೆ, ಬರೆಹವೂ ಮುದ್ದಾಗಿದೆ. ಗಂಭೀರ ಲೇಖನಗಳು ಮತ್ತು ಚಿತ್ರಗಳು ಮಾತ್ರ ಸಾಲದೆನಿಸುತ್ತವೆ. ಮುಂದಿನ ಸಂಚಿಕೆಯಲ್ಲಿ ಲೇಖನಗಳು ಮತ್ತು ಚಿತ್ರಗಳು ಮುಖ್ಯತಃ ಕನ್ನಡಕ್ಕೆ ಈಗ ಅತ್ಯಾವಶ್ಯಕವಿರುವ ವ್ಯಂಗ್ಯಚಿತ್ರ ಕಲೆಯ ಕೆಲವು ಅಭ್ಯಾಸ ಕೃತಿಗಳಾದರೂ ಹೆಚ್ಚಾಗಿ ಸೇರಿ ಬರಲೆಂದು ಹಾರೈಸುತ್ತೇವೆ. ಕ್ರಿಶ್ಚಿಯನ್ ಕಾಲೇಜಿನ ಇಂಗ್ಲೀಷ್ ಮತ್ತು ತಮಿಳುಮಯ ವಾತಾವರಣದಲ್ಲಿಯೂ ಕನ್ನಡದ ಒಂದು ಬಾವುಟವನ್ನು ಎತ್ತಿಹಿಡಿಯುವ ತರುಣಮಿತ್ರರ ಈ ಸಾಹಸವು ಪ್ರಶಂಸನೀಯವಿದೆ.

—ಕೆ. ವಿ. ಎಸ್.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಕ್ಷೇತ್ರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.

ಅಮೃತಾಂಜನ.

ತಲೆವೇದನೆ, ಶರೀರ ವೇದನೆ, ಉಳುಕು, ಶೀತ, ಗಂಟಲು, ಕೆಮ್ಮು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೆಂಪ್ಪು, ಕೀಲು ಮುಂತಾದ ಬೇರೆ ಎಲ್ಲಾ ವೇದನೆ ಕೊಡುವ ಎಲ್ಲಾ ರೋಗಗಳಿಗೂ

REGD.

ಅಧ, ಮುಳುಕಿ ಮತ್ತು ಸಣ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಇದೇ ತಾ. 8—2—1948ನೇ ರವಿವಾರ

ಸಾಯಂ. ಘಂಟೆ 6ಕ್ಕೆ ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ

ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಇವರ

✤ ಸಂಗೀತ ಕಚೇರಿ ✤

ಆಸ್ಥಾನ ವಿದ್ವಾನ್ ಶ್ರೀ. ಚೌಡಯ್ಯ ಇವರ ಪಿಟೀಲು ಶ್ರೀ. ಕಲ್ಪತಿ ರಮಾನಾಥನ್—ಇವರ ಮೃದಂಗ, ಶ್ರೀ. ಅಲಂಗುಡಿ ರಾಮಚಂದ್ರನ್ ಇವರ ಘಟವಾದ್ಯ.

ಟಿಕೇಟು ದರ: ರೂ. 100, ರೂ. 25, ರೂ. 10, ರೂ. 5.

ಕರ್ನಾಟಕ ಏಕೀಕರಣ ಸಮ್ಮೇಳನ

ಕಾಸರಗೋಡಿನಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಜೊತೆಯಾಗಿ ತಾ. 29-12-47 ರಲ್ಲಿ ನಡೆದ ಕರ್ನಾಟಕ ಏಕೀಕರಣ ಸಮ್ಮೇಳನದ ಸ್ವಾಗತಾಧ್ಯಕ್ಷ ಮಾಜೀ ಮಂತ್ರಿ ಶ್ರೀ. ಕೆ. ಆರ್. ಕಾರಂತ ಎಂ. ಎಲ್. ಎ., ಇವರ ಭಾಷಣವೂ ಅಧ್ಯಕ್ಷ ಶ್ರೀ ರಂಗನಾಥ ದಿವಾಕರರ ಭಾಷಣವೂ (ಉದ್ಘಾಟಕರ ಭಾಷಣಸಾರ ಕಳೆದವಾರ ಬಂದಿದೆ.) ಕರ್ನಾಟಕ ಪ್ರಾಂತ್ಯ ರಚನೆಗಾಗಿ ಕನ್ನಡಿಗರ ಹೃದಯದಲ್ಲಿರುವ ಕಳಕಳಿಯನ್ನು ಸರಿಯಾಗಿ ಪ್ರತಿಬಿಂಬಿಸಿವೆ. ಅವುಗಳ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ.

ಅಧ್ಯಕ್ಷ ಶ್ರೀ. ರಂಗನಾಥ ದಿವಾಕರರು

"ಕನ್ನಡ ನಾಡು ಯಜಮಾನನಿಲ್ಲದ ಮನೆಯಾಗಿದೆ, ಒಂದೆಡೆ ಆಂಧ್ರರು, ಇನ್ನೊಂದೆಡೆ ತಮಿಳರು, ಮತ್ತೊಂದೆಡೆ ಮಲಯಾಳಿಗಳು, ಮಗದೊಂದೆಡೆ ಮರಾಠರು ಈ ಮನೆಯ ಸೊತ್ತನ್ನು ಅಪಹರಿಸುತ್ತಿದ್ದಾರೆ. ಇದಕ್ಕೆ ಕಾರಣ ಏಕತಂತ್ರ ಕರ್ನಾಟಕವಾಗದಿರುವುದು. ಏಕತಂತ್ರ ಕರ್ನಾಟಕವಿರದೆ ಜನರ ಹಾವಳಿಯು ತಪ್ಪಲಾರದು.

ಮನೆಯ ಸ್ವಾತಂತ್ರ್ಯ ರಕ್ಷಣೆಯು ನಮಗೆ ಬೇಕಿದೆ. ಮನೆಯನ್ನು ಕಾಯದೆ ನಮ್ಮವರ ಮತ್ತು ನಮ್ಮ ಉನ್ನತಿಯಾಗದು. ಭಾರತದ ಉನ್ನತಿಗೆ ಕರ್ನಾಟಕದ ಉನ್ನತಿಯು ಇದರಿಂದ ಮುಖ್ಯವಾಗಿದೆ. ಕಾಂಗ್ರೆಸ್ಸು ಭಾಷಾವಾರು ಪ್ರಾಂತ್ಯರಚನೆಯು ಇದಕ್ಕಾಗಿಯೇ ಪ್ರಾಮುಖ್ಯವೆಂದು ೧೯೩೭ರಲ್ಲಿ ಹೇಳುತ್ತಿದ್ದಿತು. ಇದರ ಮೊದಲೂ ಈ ಪ್ರಾಂತ್ಯರಚನೆಯೇ ಭಾರತ ಸ್ವಾತಂತ್ರ್ಯ ರಕ್ಷಣೆಗೆ ಒಂದು ದಾರಿಯೆಂದು ಕಾಂಗ್ರೆಸಿನ ಮುಖಂಡರು ಹೇಳುತ್ತಿದ್ದರು.

ತಂದೆಯ ಮಾತು ಮಗನಿಗಿಲ್ಲ

ದಿವಂಗತ ಪಂಡಿತ ಮೋತೀಲಾಲ ನೆಹರುಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮ ರಂಗದಲ್ಲಿ ಹೋರಾಡುತ್ತಿದ್ದಾಗ ಕರ್ನಾಟಕವೇಕೆ ಎಲ್ಲಾ ಭಾಷಾವಾರು ಪ್ರಾಂತ್ಯಗಳ ನಿರ್ಮಾಣವು ಭಾರತ ಸ್ವಾತಂತ್ರ್ಯದ ತಳಹದಿಯೆಂದು ಸಾರಿದ್ದರು. ಆದೇನೋ ಕನ್ನಡಿಗರ ದೌರ್ಭಾಗ್ಯದಿಂದ ಅವರ ಮಗ ಪಂಡಿತ ಜವಾಹರಲಾಲರಲ್ಲಿ ಕರ್ನಾಟಕ ಪ್ರಾಂತ್ಯ ರಚನೆಯ ವಿಚಾರವಾಗಿ ಮಾತೆತ್ತಿದಾಗ ಸಾಕಷ್ಟು ಸಂಪತ್ತಿಲ್ಲದ ನೆಲೆಯು ಕರ್ನಾಟಕ ಪ್ರಾಂತರಚನೆಗೆ ಅಡ್ಡಿಯಾಗಿದೆ ಎಂದಿರುವರು. ತಂದೆಯಲ್ಲಿದ್ದ ನುಡಿ ಮಗನಲ್ಲಿಲ್ಲವಾಗಿ ಇಂದು ನಮಗೆ ಕಾಣುತ್ತಿದೆ.

ಕಿಸೆ ನೋಡಿ ಮಾತಲ್ಲ!

ಕರ್ನಾಟಕಪ್ರಾಂತರಚನೆಯ ಮಾತಿಗೆ ಹಣವು ಮುಖ್ಯವೆಂದು ಕಾಂಗ್ರೆಸ್ಸಿನ ಧುರೀಣರು ಹೇಳುತ್ತಾರೆ. ಸರದಾರ ವಲ್ಲಭಭಾಯಿ ಪಟೇಲರು ಇಟ್ಟ ಹೆಜ್ಜೆಯನ್ನು ಹಿಂದಿಡದ ಯೋಧರು. ಅವರೇ ಇಂದಿನ ಕನ್ನಡ ಪ್ರಾಂತರಚನೆಯ ವಿಷಯದಲ್ಲಿ ತನ್ನ ಹೆಜ್ಜೆಯನ್ನು ಹಿಂದಿಡುವುದನ್ನು ನಾವು ಕಾಣುತ್ತಿರುವೆವು. ಕಿಸೆಯೊಳಗಣ ರೊಕ್ಕವನ್ನು ಕಂಡು ಸ್ಥಾನಗೊಡುವ ಯೋಜನೆ ಇಂದಿನ ಭಾರತ ಸರಕಾರದ್ದು. ಅಮೇರಿಕದಲ್ಲಿ ಕರ್ನಾಟಕಕ್ಕಿಂತಲೂ ಕಿರಿದಾದ ಪ್ರಾಂತಗಳನ್ನು ಮಾಡಿದ್ದು ಕಂಡುಬರುತ್ತಿದೆ. ಅಲ್ಲಿ ಇಲ್ಲಿನ ಅಂದರೆ ಕರ್ನಾಟಕದ ಭೂಭಾಗ ಮತ್ತು ಜನಸಂಖ್ಯೆ ಸಂಪತ್ತಿನ ನೆಲೆಗಳಿಂದ ಕಿರಿದಾದ ಪ್ರಾಂತರಚನೆಯು ಇದ್ದುದು ಕಂಡುಬರುತ್ತಿದೆ. ಅಮೇರಿಕದವರು ಈ ಯೋಜನೆಯನ್ನೇಕೆ ಮಾಡಿರುವರು? ಅಲ್ಲಿನ ಜನರ ಬೆಳೆಯುವಿಕೆಯು ಉದ್ದೇಶವಲ್ಲದೆ ಮತ್ತೇನು?

ಭಾರತದ ಸ್ವಾತಂತ್ರ್ಯ ಸಂಗ್ರಾಮ ಪೂರ್ವದಲ್ಲಿ ಬ್ರಿಟಿಷರ ಆಳಿಕೆ ಇತ್ತು. ಅಂದಿನ ಸರಕಾರ ಕನ್ನಡಿಗರಲ್ಲಿ ದರೋಡೆಗಳ್ಳತನವನ್ನು ನಡೆಸಿತು. ಅದು ಕನ್ನಡಿಗರನ್ನು ಹಲವಾರು ಆಳರಸರೆನಿಸಿದ ದರೋಡೆಗಳ್ಳರಲ್ಲಿ ನಿಲಿಸುವಂತೆ ಮಾಡಿತು. ಕನ್ನಡಿಗರು ರಾಜಾಶ್ರಯವನ್ನು ಬಯಸುತ್ತಿಲ್ಲ. ಮೈಸೂರ ಸ್ವಾತಂತ್ರ್ಯ ಸಮರ ಇದಕ್ಕೆ ಹೆಗ್ಗುರುತು. ಮೈಸೂರ ಕನ್ನಡಿಗರು ಜನಹಿತದ ಸರಕಾರವನ್ನು ಸ್ಥಾಪಿಸಹತ್ತಿದ್ದಾರೆ. ಅವರು ಸಮಸ್ತ ಕರ್ನಾಟಕವನ್ನು ಏಕತಂತ್ರ ಯೋಜನೆಯಲ್ಲಿರುವಂತೆ ಮಾಡಲೆಳಸದಿದ್ದರೆ ದರೋಡೆಗಳ್ಳರ ಹಾವಳಿಯು ಕರ್ನಾಟಕಕ್ಕೆ ತೀರಿದಂತಾಗದು. ಹಿಂದಣ ಬ್ರಿಟಿಷರ ಆಳಿಕೆಯ ಸರಕಾರ ಪಾಕ್ಯವು ಇಂದಿನ ಕಾಂಗ್ರೆಸ್ಸು ಅಧಿಕಾರ ಸರಣಿಯೂ ಕನ್ನಡಿಗರ ಪಾಲಿಗೆ ಭಿನ್ನವಾಗಲಿಲ್ಲ. ಇದು ಆ ಅಧಿಕಾರ ಪಟ್ಟದ ದೋಷವಾಗಿರಬೇಕು. ಕಾಂಗ್ರೆಸ್ಸು ಹಣವನ್ನು ನೋಡುತ್ತಿಲ್ಲ. ಜನಹಿತವನ್ನು ಅನುಸರಿಸಿಯಾದರೆ ಪಾಕಿಸ್ಥಾನದ ಯೋಜನೆ ಏಕಾಯಿತು? ಪಾಕಿಸ್ಥಾನದ ಪ್ರಶ್ನೆಗಿಂತ ಈ ಪ್ರಾಂತರಚನೆಯ ವಿಚಾರ ಬೇರೆ. ಪಾಕಿಸ್ಥಾನ ಸಂಪ್ರದಾಯಕ್ಕುಳ್ಳದ್ದು ಕರ್ನಾಟಕ ಪ್ರಾಂತರಚನೆಯದಲ್ಲ.

ಕನ್ನಡ ಪ್ರಾಂತರಚನೆಯ ವಿಚಾರದಲ್ಲಿ ಅಡಚಣೆಯ ಮಾತನ್ನು ಇಂದು ಭಾರತದ ಸರಕಾರವು ಹೇಳುತ್ತಿದೆ. ಅಡಚಣೆಗಳು ದೂರೀಕರಿಸುವುದೇ ಪ್ರಾಂತರಚನೆಯ ವಿಚಾರ. [illegible]ಕದ ಅಡಚಣೆಯು ದೂರಗೊಳ್ಳಬೇಕಾದರೆ ಪ್ರಾಂತರಚನೆಯ ಹೊಣೆಗಾರಿಕೆ ಸಲ್ಲಬೇಕು

ಎಷ್ಟರತನಕ ಸುಮ್ಮನಿರಬಹುದು?

ಹಸಿದವನು ಅಡುಗೆಯಾಗುವ ತನಕ ಸುಮ್ಮನಿರಬಹುದು. ಎಲೆಯಿಟ್ಟು ಬಳಸಿಯಾಯಿತು. ತುಪ್ಪ ವಿಕ್ಕಿಯಾಯಿತು. ಮುಂದೆ ಉಣಕೊಡದೆಂದರೆ ಸುಮ್ಮನಿರಬರುವುದೇ? ಭಾರತದ ಸ್ವಾತಂತ್ರ್ಯವನ್ನು ತರಲು ಕನ್ನಡಿಗರು ತಮ್ಮ ತನುಮನಧನಗಳನ್ನರ್ಪಿಸಿದ್ದಾರೆ. ಸ್ವಾತಂತ್ರ್ಯದ ಅಡುಗೆಯಾಗಿ ಭೋಜನವನ್ನುಣ್ಣಲು ನಾವಿಂದು ಕುಳಿತವರಿದ್ದೇವೆ. ತುಪ್ಪ ಬಿದ್ದ ಮೇಲೆ ತಡೆಯುತ್ತಿರುವುದು ಕೆಚ್ಚೆದೆಯವರನ್ನು ಕೆರಳಿಸದೆ ಉಳಿಯದು.

ಪ್ರತಿಯೊಬ್ಬನೂ ಬಹಳ ದೂರದ ವಿಚಾರವನ್ನು ಕಾಣುತ್ತಿರುವನು. ಅದಕ್ಕಾಗಿ ಆತನು ಯತ್ನಿಸುತ್ತಿರುವನು. ಜನರ ಹೊಣೆಗಾರಿಕೆ ಇಂತಹದು. ಕನ್ನಡದ ಜನತೆ, ಇಂದು ತನ್ನ ಮುಂದಿನ ದೂರದ ವಿಚಾರವನ್ನು ಕಾಣುತ್ತಿದೆ. ಮುಖಂಡರು ತಮ್ಮೆದುರು ಮಾತ್ರ ಕಾಣುವರು ಅವರಿಗೆ ಎದುರಿಗಿರುವ ವಿಚಾರವನ್ನು ಸರಿಪಡಿಸುವುದಿರುತ್ತದೆ ಕರ್ನಾಟಕ ಏಕೀಕರಣ ಕನ್ನಡ ಜನತೆಯದು. ಭಾರತ ಸಂಸ್ಕೃತಿಯ ಮತ್ತು ಸ್ವಾತಂತ್ರ್ಯದ ಕಳೆಗುಳ್ಳದು ಕನ್ನಡದಲ್ಲಿನ ಧರ್ಮನೀತಿಗಳ ಹರಿವೇ ಭಾರತದ ಸಂಸ್ಕೃತಿ. ಶಂಕರ, ರಾಮಾನುಜ, ಮಧ್ವ, ಶೈವ, ಜೈನಧರ್ಮಗಳ ಹರಿವೇ ಭಾರತದಲ್ಲಿ. ಅವುಗಳ ತವರುಮನೆ ಕನ್ನಡ. ಕರ್ನಾಟಕದ ಸ್ವಾತಂತ್ರ್ಯ ಭಾರತವನ್ನು ಬೆಳಗಿಸಬಲ್ಲುದು. ಕನ್ನಡವು ಏಕತಂತ್ರವಾಗಲಿರುವ ಹೋರಾಟಕ್ಕೆ ನಾವೆಲ್ಲರೂ ಇಳಿಯುವ ಹೊತ್ತು ಬರಬಹುದು. ಅದರ ಪೂರ್ವಚಿಹ್ನೆ ಇಂದು ತೋರುತ್ತಿದೆಯಾದರೂ ಆ ಹೋರಾಟಕ್ಕೆ ನಮ್ಮ ತನುಮನಧನಗಳನ್ನು ಸಲ್ಲಿಸುವ ತ್ಯಾಗದ ಸಿದ್ಧತೆಯನ್ನು ಸಮ್ಮೇಳನದಲ್ಲಿ ಕೂಡಿದ ಮತ್ತು ಅಲ್ಲಲ್ಲಿ ಚದರಿರುವ ಕನ್ನಡಿಗರು ಜಾಗೃತೆಯಿಂದ ನಡೆಸಬೇಕಿದೆ."

ಸ್ವಾಗತಾಧ್ಯಕ್ಷ ಶ್ರೀ. ಕೆ. ಆರ್. ಕಾರಂತರು

"ಪ್ರಾಂತ ರಚನೆಯ ಚಳವಳದ ಆರಂಭವು ಈಗಿನಿಂದಲ್ಲ. ಸುಮಾರು ೧೯೧೭ರಿಂದ. ಈ ವಿಷಯದಲ್ಲಿ ಕನ್ನಡದವರೇನೂ ಹಿಂದುಳಿಯಲಿಲ್ಲ. ಮದ್ರಾಸು ಪ್ರಾಂತದ ಕನ್ನಡಿಗರು ಅನುಭವಿಸುವ ಕಷ್ಟ ಪರಿಸ್ಥಿತಿ ಎಲ್ಲರಿಗೂ ತಿಳಿದೇ ಇದೆಯಾದರೂ ಇಂದಿನ ಕಾಂಗ್ರೆಸ್ಸು ಸರಕಾರದ ಹೊತ್ತೂ ಆಂಧ್ರ, ತಮಿಳು, ಮಲೆಯಾಳ ವರ್ಗದವರಿಂದಲೂ ಅಧಿಕಾರಿಗಳಿಂದಲೂ ಏನೂ ಸುಖಕರವಲ್ಲ. ಆಂಧ್ರರ ಪ್ರಶ್ನೆಯ ನಂತರ ಕನ್ನಡಿಗರದು. ಬಳ್ಳಾರಿಯು ಆಂಧ್ರಕ್ಕೆ ಸೇರಬೇಕಂತೆ. ನೀಲಗಿರಿ ತಮಿಳರ ಸೊತ್ತಾಗಬೇಕಂತೆ. ಇದಕ್ಕಿರುವ ಯೋಜನೆಯೇ ಮದ್ರಾಸ್ ಮಂತ್ರಿವರ್ಗದವರಲ್ಲಿ ತೋರಿಬರುತ್ತಿದೆ. ಕೊಯಮುತ್ತೂರ ಕನ್ನಡಿಗರು ಹೆರವರ ಪಾಲಾಗಬೇಕು. ಕಾಸರಗೋಡ ವಿಚಾರ ಇನ್ನೂ ಇದೆ. ಉಳಿದ ದಕ್ಷಿಣ ಕನ್ನಡದವರು ಎಲ್ಲಿಗೆ ಬೇಕೋ ಅಲ್ಲಿಗೆ ಸೇರಬೇಕಂತೆ. ಮದ್ರಾಸು ಸರಕಾರದೊಡನೆ ಹಾಗಿದ್ದರೆ ನಾವು ಸೇರುವುದು ಬೇಡ. ಮುಂಬಯಿಯು ಕನ್ನಡಿಗರನ್ನು ನಾವು ಬಿಡುವಂತಿಲ್ಲ

ದಕ್ಷಿಣ ಕನ್ನಡದ ಜನರಿಗೆ ಮನೆ ಮಾತು ಭಿನ್ನ ಭಿನ್ನವಾಗಿದ್ದರೂ ಕನ್ನಡವನ್ನು ಬಿಡಲು ತುಳುವರಿಗೂ, ಕೊಂಕಣಿಯವರಿಗೂ ಮನಸ್ಸಿಲ್ಲ. ಟಿಪ್ಪುಸುಲ್ತಾನನ ಆಳಿಕೆಯಲ್ಲಿ ಕನ್ನಡಕ್ಕೆ ಸೇರಿದ ಇಲ್ಲಿನ ಮುಸ್ಲಿಂ ಬಂಧುಗಳು ಕನ್ನಡವನ್ನು ಬಿಟ್ಟಿರಲು ಆಶಿಸುತ್ತಿಲ್ಲ. ಕೇಳಪ್ಪನವರ ಆಶೆ ತಮ್ಮ ಪ್ರಾಂತವನ್ನು ಬೆಳೆಯಿಸುವುದರಲ್ಲಿದ್ದು ಜನತೆಯ ಭಂಡವಾಳ ಸಂಪ್ರದಾಯವಾಗಿದೆ. ಭಂಡವಾಳಗಾರನು ಆಸ್ತಿಯನ್ನು ಮಾಡಿ ಗಡಿಗಳನ್ನು ಮುಂದೊತ್ತುವಂತೆ ಕನ್ನಡಿಗರ ಮೇಲೆ ಕೇಳಪ್ಪನವರ ಈ ಶ್ರಮ ಸಾಗುತ್ತಿದೆ. ಅದಕ್ಕಾರೂ ಒಪ್ಪುತ್ತಿಲ್ಲ

ಮೈಸೂರು ಇಂದು ರಾಜಾಶ್ರಯದಿಂದ ತಪ್ಪಿದೆ. ಜನಹಿತದ ಸರಕಾರವು ಅಲ್ಲಿ ಸ್ಥಾಪಿತವಾಯಿತು. ಬ್ರಿಟಿಷರ ಆಳಿಕೆಯಲ್ಲಿ ಅವರ ಆಯಬಂಧದಂತಿದ್ದ ಸಂಸ್ಥಾನದ ಅರಸರುಗಳು ಬ್ರಿಟಿಷರ ರಾಯಭಾರಿ ಯೋದಂದಿಸಿಂದ ತಮ್ಮ ಇರವು ಇಲ್ಲವಾದಂತೆಯೇ ಸರಿ ಕನ್ನಡಕ್ಕೆ ಜನಹಿತದ ಅಧಿಕಾರ ಬೇಕಿದೆ. ಮೈಸೂರೇ ಮೊದಲಾದ ಇನ್ನೂ ಕೆಲವು ರಾಜಮನೆತನಗಳು ದರೋಡೆಯ ಅರಸರ ಉದಾರತನವನ್ನು ತೋರಿ ಜನಹಿತವನ್ನು ಸಾಧಿಸಬೇಕಿದೆ. ಮೈಸೂರು ಕಳೆದ ಸ್ವಾತಂತ್ರ್ಯ ಸಮರದಿಂದ ಏಕತಂತ್ರ ಕರ್ನಾಟಕದ ಇಂದಿನ ಕಾರ್ಯಕ್ಕೆ ಭಾರತೀಯ ಸ್ವಾತಂತ್ರ್ಯದಲ್ಲಿ ತೋರಿದ ದಾರಿಯನ್ನು ಹಿಡಿಯದೆ ಉಳಿಯದು.

ಕಾಂಗ್ರೆಸ್ಸು ಹಿಂದೆ ಪ್ರಾಂತರಚನೆಯು ಮುಖ್ಯವೆಂದು ಹೇಳುತಿತ್ತು. ಭಾರತ ಸ್ವಾತಂತ್ರ್ಯದ ನಂತರ ಇದನ್ನೆತ್ತಿದಾಗ ತನ್ನ ಘೋಷಣೆಯನ್ನು ಬದಲಾಯಿಸಿದಂತಿದೆ. ಪಂಡಿತ ನೆಹರುಗಳೂ ಪಟೇಲರೂ ಕರ್ನಾಟಕ ಏಕೀಕರಣದ ವಿಚಾರವನ್ನು ಕೇಳಿದಾಗ ಅದನ್ನು ಹಿಂದಕ್ಕೆ ಹಾಕುವರು. ಆಂಧ್ರರ ಪ್ರಶ್ನೆಯ ನಂತರ ನಮ್ಮದು ಎನ್ನುವರು. ಕನ್ನಡಿಗರು ಹಿಂದುಳಿಯಬಾರದೆಂದು ಹೋರಾಟವನ್ನೇ ಮಾಡಲೆಂದು ಇವರು ಗರ್ಜಿಸಿರಬಹುದು ತಮ್ಮ ಏಕೀಕರಣಕ್ಕೆ ಅಡ್ಡಬಂದರೆ ಪಂಡಿತ ನೆಹರುಗಳನ್ನಾದರೂ ವಿರೋಧಿಸಲು ಕನ್ನಡಿಗರು ತಯಾರಿರಬೇಕು. ಈ ಕುರಿತು ಬಂದ ಗಾಂಧಿಜೀಯ ಅಭಿಪ್ರಾಯವನ್ನಾದರೂ ನಾನು ಒಪ್ಪಲಾರೆ. ಈ ಕಾರ್ಯ ಸಾಧನೆಗೆ ನಮ್ಮ ಜಿಲ್ಲೆಯಿಂದ ಹತ್ತು ಸಾವಿರ ರೂಪಾಯಿಗಳನ್ನು ಮೂರು ತಿಂಗಳಲ್ಲಿ ಒಂದುಗೂಡಿಸಬೇಕಿದೆ. ಹತ್ತು ಸಾವಿರ ರೂಪಾಯಿಗಳನ್ನು ನಮ್ಮ ಜಿಲ್ಲೆಯವರು ಕೊಟ್ಟು, ಕರ್ನಾಟಕದ ಸ್ವಾತಂತ್ರ್ಯವನ್ನು ಭಾರತದ ಸ್ವಾತಂತ್ರ್ಯದೊಂದಿಗೆ ರಕ್ಷಿಸುವ ತ್ಯಾಗ ಜಾಗೃತಿಗಳನ್ನು ಇಂದು ಹೊಂದಬೇಕಿದೆ."

ನಿಯಂತ್ರಣಗಳು

[illegible]

ತಯಾರಿಸುವವರು:

ಕನ್ನಡ ಸೋಪ್ ಎಂಡ್ ಇಂಡಸ್ಟ್ರಿಯಲ್ಸ್ ಲಿಮಿಟೆಡ್, ಮಂಗಳೂರು.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ.

ಪ್ರೇಮ ವಿಜಯ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇ
ಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1—4—0 ಟ. ದ್ವಾರ 1—8—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ
ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies

ಬೆಲೆ ರೂ. 2-0-0

ಮಕ್ಕಳ, ಹೆಂಗಸರ, ಗರ್ಭಿಣಿ. ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ
ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ.
ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೊ ಉಡುಪಿ.

ಬಾಣಂತಿಯರ ಸಲು
ವಾಗಿಯೇ ದೇಶ ಮತ್ತು
ಪ್ರಕೃತದ ದೇಹಸ್ಥಿತಿಯ
ನ್ನು ನಿರ್ನೈಸಿ ತಯಾ
ರಿಸಲ್ಪಟ್ಟ ಅನೋಘ
ವಾದ ಮಧುರದ್ರವ
ರಸಾಯನ. ಅಲ್ಪ ಮೌ
ಲ್ಯದಿಂದ ಬಡವರಿಗೂ,
ಭಾಗ್ಯಶಾಲಿಗಳಿಗೂ ಸು
ಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಆಯಾ ಪಟ್ಟಣಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳಿಂ ಒಂದು ಬಾಣಂತಿತನಕ್ಕೆ ಸಾಕಾಗುವಷ್ಟು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

—ಮಕ್ಕಳನ್ನು ಹಡೆಯುವುದು ಸಾಕು—

ಅನೇಕ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ— ಚಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಜೆಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಕ್ಷಯ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್,ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲಿ ಸಂಗ್ತಿ ಬರವಿದ್ದಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ, ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ,

Ayurveda Oushadhalaya. GADAG

Edited, Printed & Published by K. H. Shetty at the Navayuga Press Udipi, S. India.

Regd. No. M. 3618

15-1-1948

ನವಯುಗ

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ,

ವರ್ಷ ೨೭
ವಾರ ೨೦

NAVAYUGA WEEKLY, UDIPI.

FOUNDER: Hon'ble Mr. A. B SHETTY, Health Minister, Govt. of Madras.

Vol. 27
No. 20

THE CANARA MUTUAL
Assurance Company, Limited.
Estd: 1935
H. O. UDIPI, S. Kanara

BONUS DECLARED FOR 8 YEARS

We are glad to announce that we have declared a Bonus for 8 years from 1939 to 1945 both years inclusive as also an interim bonus for the next valuation period.

T. R. A. Pai,
Managing Director.

The 1945 Record Business proves the popularity
THE BOMBAY LIFE ASSURANCE COMPANY, LTD.
Company's New Business in 1946— 3.28 Crores
Our Chief Agency New business in 1946 about 54 Lakhs
Our experience of 37 years available to you for arranging Insurance investment. It therefore, pays you to consult us to Insure or to represent
MESSRS. KOCHIKAR BROTHERS, LIMITED,
Chief Agents for South India
Bombay Life Building,
Central Office, Udipi:
Branches at:
Mangalore, Calicut, Trivandrum, Madura,
Madras, Bangalore & Bombay,

ಕೆನರಾ ಬ್ಯಾಂಕ್, ಲಿಮಿಟೆಡ್
ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು ವಣಿಜರಿಗೂ ಕೃಷಿಕರಿಗೂ ಕ್ಲಿಪ್ತಕಾಲಕ್ಕೆ ಧನಸಹಾಯನಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒಪಗಿಸಿಕೊಡುವುದು, ಇವೆಲ್ಲವುಗಳು ದೇಶೋನ್ನತಿಯನ್ನು ಇಚ್ಛಿಸುವ ಬ್ಯಾಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾ ಕಾಲವೂ ಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೆರಡು ವರ್ಷದ ಅನುಭವದಿಂದ ಗಳಿಸಿದ ಅನುಭವ [illegible] ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ

ESTD: 1906
CANARA BANK LIMITED,

ವಾರ್ಡನ್
1946ರಲ್ಲಿ ಹೊಸ ದಾಖಲೆಯ ಶಿಖರಕ್ಕೇರಿದೆ.
ಸ್ವೀಕರಿಸಲ್ಪಟ್ಟ ವ್ಯವಹಾರ ... ... ರೂ. 2,04,00,000
ಪೂರ್ಣಗೊಳಿಸಲ್ಪಟ್ಟ ವ್ಯವಹಾರ ... ... ರೂ 1.72,00,000

ವಾರ್ಡನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಚ್ಚ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೋಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ಠಾಕರ್ — ಮ್ಯಾನೇಜಿಂಗ್ ಡೈರೆಕ್ಟರ್,
ಎಮ್. ಸುಂದರರಾಮ ಶೆಟ್ಟಿ — ಏಜನ್ಸಿ ಮೇನೇಜರ್.
ಮಂಗಳೂರು ಶಾಖೆ
ಕೆ. ಸಿ. ಭವನಿಶಂಕರ ಶೆಟ್ಟಿ
ಬ್ರಾಂಚ್ ಸೆಕ್ರೆಟರಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ನಿಮ್ಮಷ್ಟಕ್ಕೆ ನೀವು ಮನೆಯಲ್ಲೇ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0
ನವಭಾರತ ಬುಕ್ ಡಿಪ್ರೊ, ಉಡುಪಿ.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂ. 10, ಉಡುಪಿ,
ಪ್ರಧಾನ ಕಾರ್ಯಾಲಯ:- ಧಾರವಾಡ,
THE UNITED KARNATAK INSURANCE COMPANY, LIMITED.

ಸರ್ದಾರರ ಕಾಲೋಚಿತ ಘರ್ಜನೆ

ಭಾರತ-ಪಾಕಿಸ್ತಾನಗಳೊಳಗಿನ ಸಂಬಂಧವು ಹುಸಿನಿರೀಕ್ಷೆ, ಭಯಾಕಾಂಕ್ಷೆಗಳಿಗವಕಾಶವೀಯುತ್ತಾ ಅನಿಶ್ಚಿತ ಸ್ಥಿತಿಯಲ್ಲೇ ಇರುವಂತೆ ಮಾಡಿದೆ ಕಾಶ್ಮೀರದ ಹೋರಾಟ. ಮುಂದೆ ಹೇಗೆ ಎಂಬುದೀಗ ಸ್ಪಷ್ಟವಾಗಲೇ ಬೇಕಾಗಿದೆ. ಇಂತಹ ಸಂದರ್ಭದಲ್ಲಿ ಕಳೆದವಾರ ಲಕ್ನೋವಿನಲ್ಲಿ ಪ್ರಚಂಡ ಸಾರ್ವಜನಿಕ ಸಭೆಯೊಂದರಲ್ಲಿ ಸರ್ದಾರ್ ಪಟೇಲರಿತ್ತ ಭಾಷಣವು ಕಾಲೋಚಿತವಿದೆ; ಶತ್ರು ಮಿತ್ರ ಭೇದವಿಲ್ಲದೆ ಎಲ್ಲರಿಗೂ ಮನಮುಟ್ಟುವಂತಹದಿದೆ. ಅದರ ಸಾರಾಂಶವನ್ನಿಲ್ಲಿ ಕೊಡಲಾಗಿದೆ:-

ಪಾಕಿಸ್ತಾನದ ಬುದ್ಧಿ ಬದಲಾಗಲಿ'

"ಪಾಕಿಸ್ತಾನದ ಧೋರಣೆಯು ಅಪರಿವರ್ತಕ, ಅನಿಶ್ಚಿತ ಮತ್ತು ಅನಾಸಕ್ತಿಯುದಿದೆ. ಪಾಕಿಸ್ತಾನವು ತನ್ನ ಸ್ವಂತ ಹಿತಸಾಧನೆಗಾಗಿಯೇ ತನ್ನ ಮನೋವೃತ್ತಿಯನ್ನು ಬದಲಾಯಿಸಬೇಕು. ಪಾಕಿಸ್ತಾನದ ಉದ್ದೇಶಗಳೇನೆಂಬುದನ್ನು ಜುನಾಗಡ್ ಮತ್ತು ಕಾಶ್ಮೀರ ಘಟನೆಗಳು ತೋರಿಸಿಕೊಟ್ಟಿವೆ. ನಿಮಗೆ ಉಳಿದ ಭಾರತವನ್ನೂ ವಿಭಜಿಸಬೇಕೆಂಬ ಮನಸ್ಸಿದ್ದರೆ, ಧೈರ್ಯವಾಗಿ ಹಾಗೆಯೇ ಹೇಳಿಬಿಡಿ; ನಾವದನ್ನು ಬಹಿರಂಗ ಕ್ಷೇತ್ರದಲ್ಲೇ ನಿರ್ಧರಿಸಿಕೊಳ್ಳೋಣ. ಪಾಕಿಸ್ತಾನವನ್ನು ಮುರಿದುಹಾಕಬೇಕೆಂದು ಕಾಂಗ್ರೆಸು ಪ್ರಯತ್ನಿಸುತ್ತಿದೆ ಎಂಬ ಪಾಕಿಸ್ತಾನ್ ನಾಯಕರ ಆರೋಪವು ನಿರಾಧಾರದ್ದು. ಪಾಕಿಸ್ತಾನ್ ಸ್ಥಾಪನೆಯೆಂದರೆ ಭೂಲೋಕದಲ್ಲಿರುವ ಮುಸಲ್ಮಾನರ ಪಾಲಿಗೆ ಸ್ವರ್ಗವನ್ನೆ ಇಳಿಸತರುವುದೆಂದು ಡಂಗುರ ಬಾರಿಸಲಾಗಿತ್ತು. ಅವರದನ್ನೊಂದು ಸ್ವರ್ಗವಾಗಿ ಮಾಡಿಕೊಳ್ಳುತ್ತಾರಾದರೆ ನಾವು ಆನಂದಪಡಬಹುದಿತ್ತು. ಪಾಕಿಸ್ತಾನದ ವಿರೋಧಿಗಳು ಅದರ ಒಳಗಿದ್ದಾರೆ ಹೊರತು ಹೊರಗಿಲ್ಲವೆಂಬುದನ್ನು ಅವರು ತಿಳಿದುಕೊಳ್ಳಬೇಕು. ಪಾಕಿಸ್ತಾನವು ನಿರ್ನಾಮವಾಗುವುದಾದರೆ ಅದಾಗುವುದು ಅದರ ತಪ್ಪು ಮತ್ತು ಪಾಪದ ಪರಿಣಾಮವಾಗಿಯೇ ಹೊರತು ಬೇರಲ್ಲ.

ವಿಭಜನೆಯ ನಂತರ

ರಾಷ್ಟ್ರದ ವಿಭಜನೆಗೆ ಕಾಂಗ್ರೆಸು ಒಪ್ಪಿದ್ದೇಕೆ ಎಂಬುದು ಗೊತ್ತಿರುವ ಸಂಗತಿ. ಹಾಗೆ ಪ್ರತ್ಯೇಕವಾದ ಬೆನ್ನಲ್ಲೇ ನಮಗೆ ಉಸಿರಾಡುವಷ್ಟು ವಿರಾಮ ದೊರೆಯುದಂತಾಗುವದೆಂದು ಆಗ ನಾವು ಯೋಚಿಸಿರಲಿಲ್ಲ. ಪಾಕಿಸ್ತಾನವನ್ನು ಮುರಿದ ಹಾಕುವ ಹಂಚಿಕೆಗಳು ಹಿಂದುಸ್ಥಾನದಲ್ಲಿ ಒಳಗಿಂದೊಳಗೆ ತಯಾರಾಗುತ್ತಿವೆ ಎಂಬ ಮಾತು ಈ ದಿನ ಕೇಳಬರುತ್ತಿದೆ. ಆದರೆ ಹಿಂದುಸ್ಥಾನದಲ್ಲಿ ಅಂತಹ ಒಳಸಂಚಾವುದೂ ನಡೆದಿಲ್ಲವೆಂದು ನನ್ನ ಆಶ್ವಾಸನೆಯಿದೆ. ಅಂತಹ ಯಾವುದೇ ಒಳಸಂಚು ತಯಾರಾಗುತ್ತಿದೆಯಾದರೆ ಅದು ಪಾಕಿಸ್ತಾನದೊಳಗಡೆಯಲ್ಲೇ ತಯಾರಾಗುತ್ತಿದೆ. ಪಾಕಿಸ್ತಾನವನ್ನು ಹಾಳುಮಾಡಲಿರುವುದು ಪಾಕಿಸ್ತಾನದಲ್ಲಿರುವ ಪರಿಸ್ಥಿತಿಯೇ. ಹಿಂದುಗಳು ಮತ್ತು ಸಿಖ್ಖರು ತಮಗೆ ತಂಟೆ ಕೊಡುತ್ತಿದ್ದಾರೆ ಎಂದು ಅವರು ಆಗಾಗ ದೂರುವದಿದೆ. ಆದರೆ ನಾನು ನಿಮಗೆ ಸ್ಪಷ್ಟವಾಗಿ ಹೇಳಿಬಿಡುತ್ತೇನೆ-ಪಾಕಿಸ್ತಾನವು ಪತನಹೊಂದುತ್ತದಾದರೆ ಅದು ನಮ್ಮಿಂದಲ್ಲ; ಬದಲಿಗೆ ಅದರ ಒಳಗಡೆಯಲ್ಲೇ ಇರುವ ಅದರ ಸ್ವಂತ ವೈರಿಗಳಿಂದಲೇ.

ನಾನು ಮುಸ್ಲಿಂ ವೈರಿಯಲ್ಲ

ನನ್ನನ್ನು ತಮ್ಮ ಅತಿದೊಡ್ಡ ವೈರಿಯೆಂದು ಮುಸ್ಲಿಮರು ಹೇಳುತ್ತಾ ಬರುತ್ತಿದ್ದಾರೆ. ಮೊದಲವರು ಮಹಾತ್ಮಾ ಗಾಂಧಿಯವರನ್ನು ತಮ್ಮ ನಂಬ್ರ 1ನೇ ವೈರಿಯೆಂದು ಕರೆಯುವದಿತ್ತು. ಈಗ ಅವರು ಗಾಂಧಿಜೀಯನ್ನು ತಮ್ಮ ಮಿತ್ರನೆಂದು ಭಾವಿಸಹತ್ತಿದ್ದಾರೆ; ಅವರ ಹಿಂದಿನ ಸ್ಥಾನಕ್ಕೆ ನನ್ನನ್ನು ವರ್ಗಾಯಿಸಿದ್ದಾರೆ; ನಾನು ಇದ್ದುದನ್ನು ಇದ್ದಂತೆ ಹೇಳುತ್ತಿರುವುದೇ ಇದಕ್ಕೆ ಕಾರಣ. ಪಾಕಿಸ್ತಾನವನ್ನು ಪಡೆದುಕೊಂಡಕೂಡಲೇ ಮುಸ್ಲಿಮರಿಗೆ ಸಂಪೂರ್ಣ ರಕ್ಷಣೆಕೊಡಲು ತಮ್ಮಿಂದಾಗುವದೆಂದು ಅವರು ನಂಬಿದ್ದರು. ಆದರೆ ಅವರಿಂದಾವರೂ ಹಿಂದುಸ್ಥಾನದಲ್ಲಿ ವಾಸಿಸುತ್ತಿರುವ ಮುಸ್ಲಿಮರ ಕಡೆಗೆ ನೋಡಿದುದಿದೆಯೆ? ಇವರ ಕಡೆಗೆ ಅವರಿಂದಾವರೂ ಸಹಾನುಭೂತಿ ತೋರಿಸಿದುದಿದೆಯೆ.? ಸ್ವಾತಂತ್ರ್ಯ ದೊರೆತೊಡನೆಯೇ ನಮ್ಮ ಘನತೆಯನ್ನು ತಗ್ಗಿಸಿದ ಪಂಜಾಬ್ ಧ್ವಂಸಗಳು ನಡೆದವು. ಆ ಮೇಲೆ ಜುನಾಗಾಡ್ ಪ್ರಶ್ನೆ ಬಂತು; ಅದರ ಬೆನ್ನಲ್ಲೇ ಕಾಶ್ಮೀರದ ಸಮಸ್ಯೆ ಮುಂದಾಯಿತು. 'ನಮಗದರಲ್ಲಿ ಸಂಬಂಧವಿಲ್ಲ' ಎಂದು ಅವರ ಉತ್ತರ ಬಂದಿದೆ. 'ಅದಕ್ಕೆ ಕಾಶ್ಮೀರದ ಅಝಾದ್ ಸರಕಾರ' ಮತ್ತು ಕಾಶ್ಮೀರೀ ಮುಸಲ್ಮಾನರು ಹೊಣೆ'ಯೆಂದು ಅವರು ಹೇಳಿದ್ದಾರೆ. ಆದರೆ ಗಡಿನಾಡಿನ ಆ ಗುಡ್ಡಗಾಡು ಜನರಿಗೆ ಪಾಕಿಸ್ತಾನದಿಂದಲೇ ರೇಶನುಗಳು, ಯುದ್ಧ ಸಾಮಗ್ರಿಗಳು, ಮೋಟಾರು ವಾಹನಗಳು ಮತ್ತು ಪೆಟ್ರೋಲು ಇತ್ಯಾದಿಗಳು ದೊರೆಯುತ್ತಿವೆ ಎಂಬುದು ಈಗೇನೂ ಗುಟ್ಟಾಗಿಲ್ಲ.

ಹಿಂದೀ ಮುಸ್ಲಿಮರಿಗೊಂದು ಪ್ರಶ್ನೆ

ಭಾರತ ಸರಕಾರವೀಗ ಕಾಶ್ಮೀರದ ಪ್ರಶ್ನೆಯನ್ನು ಜಾಗತಿಕ ಸಂಘದ ಮುಂದಿಟ್ಟಿರುವುದು ಒಂದು 'ಪರೀಕ್ಷಾರ್ಥ ಆಶ್ರಯಾಧಾರ'ವೆಂದೇ. ಈಗ ನಾನು ಭಾರತದ ಮುಸ್ಲಿಮರಿಗೆ ಒಂದೇ ಒಂದು ಪ್ರಶ್ನೆ ಕೇಳಬಿಚ್ಛಿಸುತ್ತೇನೆ. ಇತ್ತೀಚಿಗೆ ಸೇರಿದ ಅಖಿಲ ಭಾರತ ಮುಸ್ಲಿಂ ಸಮ್ಮೇಳನದಲ್ಲಿ ಕಾಶ್ಮೀರೀ ಪ್ರಶ್ನೆಯ ಕುರಿತು ನೀವೇಕೆ ತುಟಿ ಬಿಚ್ಚಲಿಲ್ಲ? ಪಾಕಿಸ್ತಾನದ ಕೃತ್ಯಗಳನ್ನು ನೀವಲ್ಲಿ ಖಂಡಿಸಲಿಲ್ಲವೇಕೆ? ಈ ಸಂಗತಿಯು ಜನತೆಯ ಮನಸ್ಸಿನಲ್ಲಿ ಸಂದೇಹವನ್ನು ಹುಟ್ಟಿಸುತ್ತಿದೆ. ಆದ್ದರಿಂದ ಮುಸ್ಲಿಮರ ಸ್ನೇಹಿತನಾಗಿ ನಾನೊಂದು ಮಾತನ್ನು ಹೇಳಲೇ ಬೇಕಾಗಿದೆ; ಯಾಕೆಂದರೆ ಸ್ಪಷ್ಟವಾಗಿ ಮಾತಾಡುವುದು ಸನ್ಮಿತ್ರನಾದವನ ಕರ್ತವ್ಯವಿದೆ. ಈಗ ನೀವು ನಮ್ಮ ದೋಣಿಯಲ್ಲೇ ಸವಾರಿ ಹೋಗತಕ್ಕವರು. ಮುಳುಗುವುದಾದರೂ ಈಜುವುದಾದರೂ ಜತೆಯಲ್ಲೇ ಇರಲು ಬದ್ಧರಿದ್ದೀರಿ. ನೀವು ಒಂದೇಬಾರಿ ಎರಡು ಕುದುರೆಗಳ ಮೇಲೆ ಸವಾರಿಮಾಡಲಾರಿರಿ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ನಾನೀಗ ಹೇಳಬೇಕಾಗಿದೆ. ನಿಮಗೆ ಯಾವುದು ಉತ್ತಮವೆಂದು ತೋರುತ್ತದೋ ಆ ಒಂದು ಕುದುರೆಯನ್ನೇ ನೀವು ಆರಿಸಿಕೊಳ್ಳಬೇಕು. ಘಟನಾ ಸಮಿತಿ ಸಭೆಯಲ್ಲಿ ಲಕ್ನೋವಿನ ಮುಸ್ಲಿಂ ಲೀಗ್ ನಾಯಕರೊಬ್ಬರು 'ಪ್ರತ್ಯೇಕ ಮತದಾನ; ಕಾದಿಟ್ಟ ಸ್ಥಾನಗಳು' ಇರಬೇಕೆಂದು ವಾದಿಸಿದ್ದರು. 'ಇವೆರಡು ಹಾದಿಗಳನ್ನೂ ಒಂದೇಬಾರಿ ತುಳಿಯಲು ನಿಮಗಾಗದು.' ಎಂದು ಆಗ ನಾನು ಬಾಯಿಬಿಡಬೇಕಾಯಿತು. ಆ ಸಾಹೇಬರೀಗ ಪಾಕಿಸ್ತಾನಕ್ಕೆ ಹೋಗಿದ್ದಾರೆ. ಅಂತೆಯೇ ಪಾಕಿಸ್ತಾನಕ್ಕೆ ಹೋಗುವ ಬಯಕೆಯುಳ್ಳವರು ಹಾಗೆ ಮಾಡಬಹುದು; ಅಲ್ಲಿ ಶಾಂತಿಯಿಂದಿರಬಹುದು. ಇಲ್ಲಿ ನಾವಾದರೂ ನಮ್ಮ ಪಾಲಿನ ಕೆಲಸವನ್ನು ಮಾಡಿಕೊಂಡು ಶಾಂತಿಯಿಂದಿರಬಹುದಲ್ಲ.

ಈಗಿನ ಅವಶ್ಯಕತೆ

ದೇಶವಿಭಜನೆಯಾದಂದಿನಿಂದ ಭಾರತದ ಹೊಸ ಸರಕಾರದ ಮೇಲೆ ಎಷ್ಟು ದೊಡ್ಡ ಮತ್ತೆಂತಹ ಹೊರೆ ಬಿದ್ದಿತೆಂದರೆ, ಅಷ್ಟು ದೊಡ್ಡ ಭಾರವು ಆ ರೀ ಅಕಸ್ಮಾತ್ ಬೇರಾವ ಹೊಸ ಸರಕಾರದ ಮೇಲೆ ಬೀಳುತ್ತಿದ್ದರೂ ಅದು ನಿಷ್ಪ್ರಾಣವಾಗುತಿತ್ತು. ಆದರೆ ನಾವು ಅಪಜಯಗೊಳ್ಳಲಿಲ್ಲ. ನಿಜಸ್ಥಿತಿಯೆಂದರೆ ನಾವೀ ಅತಿವ ಕಷ್ಟದಾಯೀ ಕೆಲಸಗಳನ್ನು ನಿರ್ವಹಿಕೊಂಡ ರೀತಿಯು ಜಗತ್ತಿನಲ್ಲಿ ನಮ್ಮ ಘನತೆಯನ್ನು ಹೆಚ್ಚಿಸಿದೆ. ಈಗ ಭಾರತ ಪುನರ್ರಚನೆಗಾಗಿ ಎರಡು ಸಂಗತಿಗಳು ಅತಿ ಮುಖ್ಯವಿವೆ ಬಲವಾದ ಕೇಂದ್ರ ಸರಕಾರ ಮತ್ತು ಅಜೇಯ ಸೇನೆ. ಸೇನೆ ಯೆನ್ನುವದರಲ್ಲಿ ವಿಮಾನ, ನೌಕೆ, ಕಾಲ್ಬಲ, ವೆದಲಾದ ಅದರ ಎಲ್ಲಾ ಶಾಖೆಗಳೂ ಸೇರಿವೆ. ಪಾಕಿಸ್ತಾನ್ ಮತ್ತು ಹಿಂದುಸ್ಥಾನಗಳ ಸಂಬಂಧವು ಈಗಿರುವಂತೆಯೇ ಮುಂದುವರಿದರೆ ಪರಿಣಾಮವೇನೆಂಬುದು ಎಲ್ಲರಿಗೂ ಗೊತ್ತಿರುವಂತಹದೇ. ನಾನೇನನ್ನೂ ಮುಚ್ಚುಮರೆ ಮಾಡಲಾರೆ; ವಸ್ತುಸ್ಥಿತಿಯನ್ನು ಇದ್ದಂತೆ ಮುಂದಿಟ್ಟಿದ್ದೇನೆ. ಯಾರೇ ಆದರೂ ನಮ್ಮ ಕಣ್ಣಿಗೆ ಮಣ್ಣೆರಚುವುದನ್ನು ನಾನು ಮೆಚ್ಚುವದಿಲ್ಲ.

ಹಿಂದೂ ವಾದಿಗಳಿಗೆ

ಹಿಂದೂ ಮಹಾಸಭೆಯವರು ಕಾಂಗ್ರೆಸನ್ನು ಸೇರಿಕೊಳ್ಳಬೇಕೆಂದು ನನ್ನ ವಿಜ್ಞಾಪನೆ. ಪ್ರತ್ಯೇಕವಿದ್ದು ನೀವಾವ ಒಳ್ಳಿತನ್ನೂ ಸಾಧಿಸಲಾರಿರಿ. ಹಿಂದುತ್ವದ ರಕ್ಷಣಾಕರ್ತರೆಂದರೆ ನೀವೊಬ್ಬರೇ ಎಂಬ ಅಹಂಕಾರ ನಿಮ್ಮಲ್ಲಿದ್ದರೆ ನೀವು ತಪ್ಪಿಬಿದ್ದೀರಿ. ಜೀವನದಲ್ಲಿ ವಿಶಾಲದೃಷ್ಟಿ ಕೋನವಿರಬೇಕೆಂದೇ ಹಿಂದುತ್ವದ ಬೋಧನೆಯಿದೆ. ಕೆಲವೆಡೆಗಳಲ್ಲೀಗ ಅರ್ಥ ಕಟ್ಟಲ್ಪಟ್ಟಿರುವುದಕ್ಕಿಂತ ಹೆಚ್ಚಿನ ಸಹನೆಯು ಹಿಂದುತ್ವದಲ್ಲಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದವರೂ ಕಾಂಗ್ರೆಸನ್ನು ಸೇರಿಕೊಳ್ಳಬೇಕೆಂದು ನಾನಾಹ್ವಾನಿಸುತ್ತೇನೆ. ರಾಷ್ಟ್ರದಲ್ಲಿ ಗೊಂದಲವನ್ನು ನಿರ್ಮಿಸುವ ಮೂಲಕ ಆಡಳಿತೆಯನ್ನು ದುರ್ಬಲಗೊಳಿಸಕೂಡದೆಂದು ನಾನವರನ್ನು ಕೇಳಿಕೊಳ್ಳುತ್ತೇನೆ. ಉದ್ದೇಶತಃ ಅವರಲ್ಲಿ ಸ್ವಾರ್ಥವೇನೂ ಇಲ್ಲವೆಂಬ ಸಂಗತಿ ನನಗೆ ಮನದಟ್ಟಾಗಿದೆ. ಆದರೆ ಸದ್ಯಸ್ಥಿತಿಯಲ್ಲಿ ಅವರು ಸರಕಾರದ ಕೈಯನ್ನು

(೧೧ನೇ ಪುಟ ನೋಡಿರಿ.)

ಬಾಲಕರು ಆರೋಗ್ಯಶಾಲಿಯಾಗಲು
ಪ್ರಭೂಸ್ ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ
ಹಲವು ಬಗೆಯ ರೋಗರುಜಿಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.
ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನು ಮಕ್ಕಳು ಮುದ್ದಾಡುವಂತೆ ಮಾಡುವುದನು ಕಂಡುಕೊಳ್ಳುವಿರಿ.
ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೊ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:-
ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. Sharma, Mangalore,

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.
'ಭುವನೇಂದ್ರ'
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಜೀರಿಗೆ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ
ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನಲ್ಟಿಂಗ್ ರೂಮ್ ಎಂಡ್ ಫಾರ್ಮೆಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L I M.; ಡಾ। ವೆಂಕಟರಾವ್, ಕೊರಮ್ಮಲ್; ನವಭಾರತ ಬುಕ್ ಡಿಪೊ

CHAMPAE'S
Snow & Castrex
Sole Distributers for India
Prop: K. G. NAYAK,
Santhekatte, UDIPI, S K.

ಈ ಶಕುನಗಳ ಪರಿಣಾಮವೇನು?

ಈ ದಿನ ಹಿಂದೀ ರಾಜಕೀಯಾಕಾಶದಲ್ಲಿ ಹಲವು ಕುಗ್ರಹಗಳು ಹೊಸತಾಗಿ ಮೂಡಿ ತೋರುತ್ತಿವೆ; ಈ ಧೂಮಕೇತುಗಳ ಲಕ್ಷಣಗಳೇನು? ಇವು ಸೂಚಿಸುತ್ತಿರುವ ಭವಿಷ್ಯವಾವುದು? ಮುಂದೇನು?

ಭಾರತ—ಪಾಕಿಸ್ತಾನಗಳೊಳಗೆ ಇತ್ತೀಚೆಗಾದ ಆರ್ಥಿಕ ಒಪ್ಪಂದದಲ್ಲಿ ಭಾರತವು ಪಾಕಿಸ್ತಾನಕ್ಕೆ 55ಕೋಟಿ ರೂ.ಗಳನ್ನು ಕೊಡಬೇಕೆಂದಿದೆ. ಆದರೆ ಸಂದಾಯಕ್ಕೆ ಎರಡು ರಾಷ್ಟ್ರಗಳೊಳಗೆ ಸೌಹಾರ್ದವಿರಬೇಕಾದುದು ಅಗತ್ಯವಾದ್ದರಿಂದ, ಕಾಶ್ಮೀರೀ ಕಾಳಗದ ಕುರಿತು ತನ್ನ ಅನ್ಯಾಯವನ್ನು ಇನ್ನೂ ಹೆಚ್ಚಿಸಿರುವ ಪಾಕಿಸ್ತಾನಕ್ಕೆ ಆ ಮೊತ್ತವನ್ನು ಕೊಡದೆ ಹಿಂದುಸ್ತಾನ್ ಸರಕಾರವು ಇದುವರೆಗೆ ತಡೆ ಹಿಡಿದಿದೆ. ಆ ಕುರಿತು ಪಾಕಿಸ್ತಾನ್ ನಾಯಕರು ಬೇಕಾದಷ್ಟು ದೂರು ದೂಷಣೆ ಮಾಡಿ, ಈಗ ಭಾರತದ ರಿಜರ್ವ್ ಬೇಂಕಿಗೆ ನೇರಾಗಿ ಅರ್ಜಿ ಬರೆಕೊಂಡಿದ್ದಾರೆ: 'ಆ 55ಕೋಟಿ ರೂಪಾಯಿಯ ಹಕ್ಕುದಾರ ನಾನು—ನನಗದನ್ನು ಪಾವತಿ ಮಾಡಬೇಕು—ತಪ್ಪಿದರೆ ಈಗ ಬೇಂಕಿನಲ್ಲಿ ಉಳಿದಿರುವ ನಗದಿಯಂಶವಾವುದನ್ನೂ ನನ್ನ ಒಪ್ಪಿಗೆ ವಿನಹಾ ಹಿಂದುಸ್ತಾನ್ ಸರಕಾರವು ಅಲ್ಲಿಂದ ತೆಗೆಯತಕ್ಕದ್ದಲ್ಲ' ಎಂದು ಪಾಕಿಸ್ತಾನ್ ಸರಕಾರವು ರಿಜರ್ವ್ ಬೇಂಕಿಗೆ ತಿಳಿಸಿದೆ. ಈ ತಕರಾರಿನ ತೀರ್ಮಾನ ಹೇಗೆ?

೦೦ ೦೦

ಹೈದರಾಬಾದಿನ ನಿಜಾಮರು ಪಾಕಿಸ್ತಾನಕ್ಕೆ 25 ಕೋಟಿ ರೂಪಾಯಿಯ ಸಾಲವನ್ನು ಮಂಜೂರು ಮಾಡಿರುವರೆಂದು ಪ್ರಕಟವಾಗಿದೆ. ಇದು ಸಂಸ್ಥಾನದ್ದೋ ನಿಜಾಮರ ಸ್ವಂತದ್ದೋ? ಅದು ಯಾವಾಗ ಮತ್ತು ಯಾವ ರೂಪದಿಂದ ಕೊಡಲ್ಪಟ್ಟಿದೆ? ಹೀಗೆ ಸಹಾಯ ಕೊಡುವುದರಲ್ಲಿ ನಿಜಾಮರ ಉದ್ದೇಶವೇನು? ಹಿಂದೀ ರೂಪಾಯಿಗೆ ತನ್ನಲ್ಲಿ ಬಹಿಷ್ಕಾರ ಹಾಕಿ ಹೈದರಾಬಾದ್ ಸರಕಾರವು ಒಂದು ಓರ್ಡಿನೆನ್ಸನ್ನು ಹೊರಡಿಸಿ ಭಾರತ ಸರಕಾರದ ಮನನೋಯಿಸಿದೆ; ಅನ್ಯ ಸಂಸ್ಥಾನಗಳೊಡನೆ ಸ್ವತಃ 'ಅದಲು ಬದಲು' ವಹಿವಾಟು ನಡಿಸುವ ಪ್ರಯತ್ನದಲ್ಲಿದೆ. ಹೈದರಾಬಾದು ವಿದೇಶಗಳೊಡನೆ ಅಂತಹ ಸಂಬಂಧ ನಡಿಸಬೇಕು ಭಾರತ ಸರಕಾರದ ಮೂಲಕವೇ ಎಂಬ ಕರಾರಿದ್ದರೂ ನಿಜಾಮರು ಇಂತಹ ವಿಪರೀತಾಚರಣೆಗಿಳಿದಿರುವುದರ ಗುರಿಯೇನು?

೦೦ ೦೦

ರಶ್ಯಾ—ಪಾಕಿಸ್ತಾನಗಳು ಹತ್ತು ಅಥವಾ ಇಪ್ಪತ್ತು ವರುಷಗಳ ಮೈತ್ರಿ ಮತ್ತು ಪರಸ್ಪರ ಸಹಾಯಕ ಕರಾರು ಮಾಡಿಕೊಳ್ಳಬೇಕೆಂದು ರಶ್ಯವು ಪಾಕಿಸ್ತಾನ್ ಸರಕಾರವನ್ನು ಒತ್ತಾಯಿಸುತ್ತಿದೆಯಂತೆ. ಕಳೆದ ಮಳೆಗಾಲದಲ್ಲಿ ಪಾಕಿಸ್ತಾನ್ ರಕ್ಷಣೆಯನ್ನೊಳಗೊಂಡ ಇಂತಹ ಕರಾರು ಸೂಚನೆಯು ರಶ್ಯದಿಂದೊಮ್ಮೆ ಬಂದಿತ್ತೆಂದೂ ಮಿ. ಜಿನ್ನರದನ್ನು ನಿರಾಕರಿಸಿದ್ದರೆಂದೂ ತಿಳಿದು ಬರುತ್ತದೆ. ಈ ಬಾರಿ, ಹೀಗೆ ಹತ್ತಿಪ್ಪತ್ತು ವರುಷಗಳ ಒಪ್ಪಂದವು ರಶ್ಯಾ—ಪಾಕಿಸ್ತಾನಗಳೊಳಗಾಗುವುದು ಭಾರತಕ್ಕೆ ಅತಿ ದೊಡ್ಡ ಗಂಡಾಂತರವಲ್ಲವೆ? ಇತ್ತ ಅಮೇರಿಕವು ಭಾರತದೊಡನೆ ಅಂತಹ ಮೈತ್ರಿ ಕರಾರು ಮಾಡಿಕೊಳ್ಳಲು ಬಂದರೆ ಭಾರತವೂ ಯುರೋಪು ರಾಷ್ಟ್ರಗಳಂತೆ ರಶ್ಯಾ—ಅಮೇರಿಕಾಗಳ ಸ್ಪರ್ಧೆಯ ರಂಗವಾಗಲಾರದೆ? ಹೇಗಾಗಬಹುದು?

೦೦ ೦೦

'ಭಾರತ ಸರಕಾರವು ಪಾಕಿಸ್ತಾನದ ಮೇಲಿನ ದೂರನ್ನು ಜಾಗತಿಕ ಸಂಘದ ಭದ್ರತಾ ಕೌನ್ಸಿಲಿಗೇಕೆ ಕೊಟ್ಟಿತು? ನಮ್ಮ 'ಅರಬ್ ಲೀಗ್'ನ ಮುಂದಿಡುತ್ತಿದ್ದರೆ ನಾವು ಮಧ್ಯಸ್ಥಿಕೆ ವಹಿಸುತ್ತಿದ್ದೆವಲ್ಲ? ಜಾಗತಿಕ ಸಂಘದಲ್ಲಿ ಪೆಲೆಸ್ಟೈನ್ ವಿಭಜನೆಯನ್ನು ವಿರೋಧಿಸುವದರಲ್ಲಿ ನಮ್ಮ ಪಕ್ಷ ಹಿಡಿದಿದ್ದ ಏಕ ಮಾತ್ರ ಯದ ಎರಡು ರಾಷ್ಟ್ರಗಳು ಹೀಗೆ ಜಗಳಕ್ಕಿದ್ದುದರಿಂದ ಯೆಹೂದ್ಯರಿಗೆ ಸಂತೋಷವಾಗಬಹುದು' ಎಂದು ಮಧ್ಯಪೂರ್ವದ ಅರಬ್ ರಾಷ್ಟ್ರಗಳವರು ಮಾದಿಸಹತ್ತಿದ್ದಾರೆ. ಪೆಲೆಸ್ಟೈನ್ ಚರ್ಚೆಯವೇಳೆ ಅರಬರ ಪಕ್ಷ ಹಿಡಿದು ಆವೇಶವಾದ ಹೊಡಿ ಎಲ್ಲರ ಮನಮೆಚ್ಚಿಸಿದ್ದ ಸರ್. ಝಫ್ರುಲ್ಲಾರ ಮೇಲೆ ಅರಬರಿಗೆ ವಿಶೇಷ ಗೌರವವಿದೆ; ಪಾಕಿಸ್ತಾನದ ಮೇಲೆ ಸಹಾನುಭೂತಿಯಿದೆ. ಮುಂದೆ ಭಾರತ—ಪಾಕಿಸ್ತಾನ್ ಘರ್ಷಣೆಯೊದಗಿದರೆ ಆಗ ಈ ಅರಬ್ಬೀ ರಾಷ್ಟ್ರಗಳು?

೦೦ ೦೦

ವಝೀರಿಸ್ಥಾನದಲ್ಲಿ ನಿಲ್ಲಿಸಿದ್ದ ಸೇನೆಗಳನ್ನು ಪಾಕಿಸ್ಥಾನವು ಇತ್ತೀಚೆಗೆ ಹಿಂದೆಗೆದು ಕೊಂಡಿತಷ್ಟೆ? ಹಾಗೆ ಹಿಂದೆಗೆಯುತ್ತಿದ್ದಾಗ ಇಫಿ ಫಕೀರನ ಸೈನಿಕರು ಅವರ ಮೇಲೆ ಧಾಳಿನಡೆಸಿದ್ದರಂತೆ. ಆಯುಧ ಮತ್ತು ಗುಂಡುಗಳನ್ನು ಕಸಗೊಳ್ಳುವುದೇ ಈ ಧಾಳಿಯ ಉದ್ದೇಶವಾಗಿತ್ತಂತೆ. ಇಫಿ ಫಕೀರನಿಗೂ ಪಾಕಿಸ್ತಾನದ ಸಹಾಯಕ ಮಂತ್ರಿ ಶೇಖ್ ಫಿನ ಪೀರರಿಗೂ ಈಗಲೂ ಮಹತ್ವಾದ ದ್ವೇಷವಿದೆಯಂತೆ. ಸರಹದ್ದಿನ ಈ ಆಂದೋಲನವು ಹೋಗಗಡೆಯವರಿಗೆ ಜೋರಾದ ಸದ್ಯ ಸ್ಥಿತಿಯಲ್ಲಿ ಪಾಕಿಸ್ತಾನಕ್ಕಾಗಲೀ ಭಾರತಕ್ಕಾಗಲೀ ಹಿತಕರವೇ?

೦೦ ೦೦

ಗಡಿನಾಡು ಪ್ರಾಂತ್ಯದ ಏಳು ಮಂದಿ ಕಾಂಗ್ರೆಸ್ ಎಂ ಎಲ್. ಎ. ಗಳು ಮುಸ್ಲಿಂ ಲೀಗ್ ಪಕ್ಷವನ್ನು ಸೇರಿಕೊಂಡರು; ಇನ್ನೂ ಕೆಲವರು ಸೇರಬಹುದು. ಅಂತೂ ಇದುವರೆಗೆ ಗಡಿನಾಡು ಪ್ರಾಂತಿಕ ಎಸೆಂಬ್ಲಿಯಲ್ಲಿ ಇಲ್ಲದಿದ್ದ ಬಹುಮತ ಕೂಡಾ ಈಗ ಲೀಗಿಗೆ ದೊರೆತಿದೆ. ಇದೇನನ್ನು ಸೂಚಿಸುತ್ತದೆ?

೦೦ ೦೦

'ನೀವು ಅಲ್ಲಿ ಕಾಶ್ಮೀರದ ಕುರಿತು ತುಟಿ ಬಿಚ್ಚಲಿಲ್ಲವೇಕೆ? ಪಾಕಿಸ್ತಾನದ ವರ್ತನೆಯನ್ನು ನಿಷೇಧಿಸುವ ನಿರ್ಣಯ ಮಾಡಲಿಲ್ಲವೇಕೆ? ಎರಡು ದೋಣಿಗಳಲ್ಲಿ ಕಾಲಿಡುವ ಕುಟ್ಟಾಟ ಬೇಡ' ಎಂದು ಸರ್ದಾರ್ ಪಟೇಲರು,ಮೌಲಾನಾ ಆಜಾದರ ನಾಯಕತ್ವದಲ್ಲಿ ಸೇರಿದ್ದ ಅಖಿಲ ಭಾರತದ ಮುಸ್ಲಿಂ ಸಮ್ಮೇಲನವನ್ನು ಕೂಡಾ ಸಂದೇಹ ದೃಷ್ಟಿಯಿಂದ ಕಂಡದ್ದು ಸರಿಯೆ? ಕಾಶ್ಮೀರದ ಕುರಿತು ಮಾತ್ರವೇನು, ಭಾರತ—ಪಾಕಿಸ್ತಾನಗಳೊಳಗಿನ ಯಾವುದೇ ರಾಜಕೀಯ ಸಂಬಂಧಗಳ ಕುರಿತೂ ಆ ಸಮ್ಮೇಲನವು ತುಟಿಯೆತ್ತಲಿಲ್ಲ. ಭಾರತದಲ್ಲಿರುವ ಮುಸ್ಲಿಮರು ಇನ್ನು ಮುಂದೆ ಹೇಗಿರಬೇಕೆಂಬುದನ್ನು ನಿರ್ಧರಿಸುವದೊಂದೇ ಆ ಸಮ್ಮೇಲನದ ಗುರಿಯಾಗಿತ್ತು. ಅಂದಮೇಲೆ ಸರ್ದಾರರ ಈ ವಾಗ್ಬಾಣವು ರಾಷ್ಟ್ರೀಯ ಮುಸ್ಲಿಮರ ಹೃದಯವನ್ನಷ್ಟೇ ಅಲ್ಲ, ರಾಷ್ಟ್ರೀಯತೆಯನ್ನೂ ಘಾತಿಸಿದಂತಾಗಲಿಲ್ಲವೆ?

೦೦ ೦೦

'ಆರ್. ಯಸ್. ಯಸ್.ನ್ನು ದಂಡ ಪ್ರಯೋಗದಿಂದ ದಮನಿಸ ಕೂಡದು' ಎಂಬ ಸರ್ದಾರರ ಮತ್ತೊಂದು ಮಾತಿನ ಗುರಿ? ಸದ್ಯದಲ್ಲೇ ಭಾರತ—ಪಾಕಿಸ್ತಾನ್ ಕಾಳಗವಾಗಲಿರುವಾಗ ಭಾರತದೊಳಗಡೆಯುಳ್ಳಿರುವ ಸುಮಾರು ನಾಲ್ಕು ಕೋಟಿ ಮುಸ್ಲಿಮರಲ್ಲಿ ಹೆಚ್ಚಿನವರು ಪಾಕಿಸ್ತಾನದ ಪಂಚಮದಳದವರಾದರೆಂದು ನಿರೀಕ್ಷಿಸಿ, ಅಂಥವರನ್ನು ಅಂತಹ ಸಂದರ್ಭಗಳಲ್ಲಿ ಹತ್ತಿಕ್ಕಲು ಈ ಆರ್. ಯಸ್. ಯಸ್. ಆಪದ್ಬಾಂಧವರು ಬೇಕೆಂಬುದಕ್ಕಾಗಿಯೇ ಸರ್ದಾರ್ ಪಟೇಲರು ಹೀಗೆ ಬೆನ್ನು ಚಪ್ಪರಿಸಿದುದಲ್ಲವೆ? ಆರ್. ಯಸ್. ಯಸ್. ನಂತಹ ಜಾತೀಯ ಸೇನೆಗಳ ಮೇಲೆ ಬಹಿಷ್ಕಾರ ಹಾಕಬೇಕೆಂದು ಕಾಂಗ್ರೆಸ್ ಸಮಿತಿಯಲ್ಲಿ ಠರಾವಾಗಿದ್ದರೂ, ಆ ಸೂಚನೆ ತಂದಿದ್ದ ಪಂಡಿತ ಪಂತರ ಸಂಯುಕ್ತ ಪ್ರಾಂತ್ಯ ಸಹಿತ ಯಾವ ಪ್ರಾಂತ್ಯದಲ್ಲೂ ಆ ಬಹಿಷ್ಕಾರ ಬೀಳದಿರಲು ಸರ್ದಾರ್ ಪಟೇಲರೇ ಕಾರಣವೆಂಬುದು ಈಗ ಸ್ಪಷ್ಟವಾಗುವುದಿಲ್ಲವೆ?

೦೦ ೦೦

ರಾಜಕೀಯ ಸಮುದ್ರದಲ್ಲಿ 'ಮೈನ್'ಗಳಂತೆ ಮುಳುಗೇಳುತ್ತಿರುವ ಇವೆಲ್ಲಾ ಸಮಸ್ಯೆಗಳ ನಡುವೆ ಹಿಂದೀ ರಾಜಕೀಯ ನೌಕೆಯನ್ನು ಸಾಗಿಸಬೇಕಾಗಿರುವ ನೆಹರೂ ಸರಕಾರಕ್ಕೆ ಹಿಂದೀ ಜನತೆಯು ಸರ್ವ ಶಕ್ತಿಯಿಂದ ಬೆಂಬಲವಾಗಬೇಕಾದುದು ಅತ್ಯಗತ್ಯವಲ್ಲವೆ?

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 672/47

ವಾದಿ. ಮೋಟಿನ ಗೋವಿಂದ ಸೆಟ್ಟಿ.

ಪ್ರತಿವಾದಿರು. 1. ಬಿಲ್ಲ ಪುಟ್ಟಿ. ರುಪಿಕೇತು ಮನೆ, ಲಿಂಗಿ ಹಂಗ್ಸನ ಮಗ, 2. ಬಿಲ್ಲ ಶೀನಿ ಹೆಂಗ್ಸು, 1ನೇ ಪ್ರತಿವಾದಿಯ ಅತ್ತೆ ಸ ಬಿಎಸ್ಟಾಯ್ಕನ ಕೋಟದ ಗೋವಿಂದನ ತಂಗಿ ಕುಂದಾಪುರ ಕ್ಸಬಾಗ್ರಾಮದ ಕೋಡಿ,

ಸದ್ರಿ ಪ್ರತಿವಾದಿರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದರೆ.

ಪ್ರತಿವಾದಿರು ವಾದಿಗೆ ತಾ. 26-9-44ರ ಸ್ಲಿಪ್ ರು. 105ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಬಾಕಿ ಹಣ ಬಡ್ಡಿ ವಗೈರೆಯನ್ನು ಬರಮಾಡಿಕೊಳ್ಳುವ ಕುರಿತು ವಾದಿಯು ದಾಖಲ್ಮಾಡಿದ ಮೇಲಿನ ದಾವೆ ತಾ. 26-1-1948ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿದೆ.

B. S. Shetty, B. A. B. L.
Vakil for Plaintiff.
Coondapoor 6-1-48

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:

For 3 months at 2½% per annum.
For 6 months at 3¼% per annum.

For further particulars you may apply or call at any of our following Offices.

Branches: Kadri Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs

ವಿವಿಧ ಪಾತ್ರೆಗಳು



ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ.

ತಯಾರಾಗುತ್ತಿದೆ—
ಸರ್ವಧಾರಿ ಸಂವತ್ಸರದ
ಪಂಚಾಂಗ
ಮೆನೇಜರ್,
ನವಯುಗ ಪ್ರೆಸ್, ಉಡುಪಿ.

ಭದ್ರತಾ ಕೌನ್ಸಿಲಿನ ಮುಂದೆ— ಸಮಯ ಸಂದಾಯವೊ? ಸಂಧಾನ ಸಾಧನೆಯೊ?

ಕಳೆದ ವಾರದ ಘಟನೆಗಳ ಮತ್ತು ದರ ವಿಸ್ತೃತ ಹಿನ್ನೆಲೆಯ ಕಡೆಗೊಮ್ಮೆ ದೃಷ್ಟಿಯೋಡಿಸಿ ಆ ಮೇಲೊಂದು ಕ್ಷಣ ಮೌನವಾಗಿ ನಿಂತು ಯೋಚಿಸಿದರೆ 'ಛೆ! ಲೋಕಕ್ಕಿನ್ನೂ ಬುದ್ಧಿ ಬಂದಿಲ್ಲ. ಎರಡಾದುದು (ಲೋಕ ಮಹಾ ಯುದ್ಧ) ಮೂರಾಗದೆ ಹೋಗುವಂತಿಲ್ಲ' ಎಂದು ಉದ್ಗರಿಸಲೇಬೇಕಾಗುವುದು. ಆಯುಷ್ಯದ ಕೊನೆಯ ಅಂಶದಲ್ಲಿರುವವರು 'ನಮ್ಮ ಕಾಲದಲ್ಲಿ ಇನ್ನೊಂದು ಯುದ್ಧವಿಲ್ಲವೇನೋ!' ಎಂದು ಧೈರ್ಯಪಡುವಂತಿತ್ತು ಕೆಲವು ವಾರಗಳ ಮೊದಲು ಲೋಕಸ್ಥಿತಿ. ಈಗ ಆ ಧೈರ್ಯವೂ ಕಡಿಮೆಯಾಗುವಂತಹ ಘಟನೆಗಳು ನಡೆಯುತ್ತಿವೆ ಇದು ಲೋಕದ ಮಾತಾದರೆ ಸ್ವತಃ ಭಾರತೀಯರ ಮಟ್ಟಿಗೆ ಈ ಪ್ರಶ್ನೆಯು ಆಯುಷ್ಯ ಅಥವಾ ವರುಷಕ್ಕೆ ಸಂಬಂಧಿಸಿಲ್ಲ; ಇಂದು ನಾಳೆ—ಮುಂದಿನ ವಾರ-ಮುಂದಿನ ತಿಂಗಳು, ಎಂಬಲ್ಲಿಯೇ ಇದೆ! ಕಾಶ್ಮೀರದ ಸಂಬಂಧದ ಭಾರತ-ಪಾಕಿಸ್ತಾನ್ ಜಗಳವೀಗ ಆ ಮಟ್ಟಕ್ಕೆ ಬಂದಿದೆ.

ಲೋಕ ಸ್ಥಿತಿ

ಪೆಲೆಸ್ತೈನಿನ ಅರಬ-ಯಹೂದಿ ಜಗಳವು ತೀರಾ ಕೆರಳಿದೆ. ಇಲ್ಲಿಯ ಧಾಳಿಯ ಪೆಲೆಸ್ತೈನ್ ಅರಬರೊಂದಿಗೆ ನೆರೆಯ ಎಲ್ಲಾ ಅರಬ್ಬೀ ರಾಷ್ಟ್ರಗಳೂ ಒಂದಲ್ಲೊಂದು ವಿಧದಿಂದ ಪಾಲುಗೊಂಡಂತೆ ಕಾಣುತ್ತಿದೆ. ಸಿರಿಯಾದ ಗಡಿಯಿಂದ ನುಗ್ಗಿದ ಅರಬರು ಪೆಲೆಸ್ತೈನಿನ ಯಹೂದೀ ಕ್ಷೇತ್ರದೊಳಗೆ ಧಾಳಿಯಿಟ್ಟು ಠಾಣವನ್ನು ನಿರ್ಮಿಸಿ ಬ್ರಿಟಿಷ್ ಆಕಾಶ ಪಡೆಗಳ ಸಮೇತ ಬ್ರಿಟಿಷ್ ಸೋಲ್ಜರರು ಕಾರ್ಯ ಕೈಕೊಳ್ಳಬೇಕಾಯಿತು. ಬ್ರಿಟನು ಇದಕ್ಕಾಗಿ ಸಿರಿಯಾ ಸರಕಾರಕ್ಕೆ ನಿಷೇಧ ಸೂಚಿಸಿದೆ. ಪೆಲೆಸ್ತೈನಿನಲ್ಲಿರುವ ಅಮೇರಿಕನ್ ಸಂಸ್ಥೆಗಳ ರಕ್ಷಣೆಯ ನೆವ ಹೇಳಿಕೊಂಡು ಅಮೇರಿಕನ್ ನೌಕಾ ಪಡೆಯವರು ಅಲ್ಲಿ ತಳವೂರುವ ಸನ್ನಾಹ ನಡೆದಿದೆ. ಇದಕ್ಕೈಪ್ಟಿಗೆ ಕೊಟ್ಟ ಬ್ರಿಟಿಷ್ ಸರಕಾರಕ್ಕೆ ಅರಬ್ ಲೀಗ್ ತನ್ನ ಬಲವಾದ ನಿಷೇಧ ಸೂಚಿಸಲಣಿಯಾಗಿದೆ. ಪೆಲೆಸ್ತೈನ್ ವಿಭಜನಾ ಕಾರ್ಯದ ಜಾರಿಗಾಗಿ ಅಗತ್ಯಬಿದ್ದರೆ ಬಲಪ್ರಯೋಗಕ್ಕೂ ತಯಾರೆಂದು ಅಮೇರಿಕದ ರಾಯಭಾರಿಯು ಲೇಕ್ ಸಕ್ಸೆಸ್‌ನಲ್ಲಿ ಸೇರಿದ ಪೆಲೆಸ್ತೈನ್ ಕಮಿಶನಿನ ಸಭೆಯಲ್ಲಂದಿದ್ದಾರೆ.

ಚೀನಾದಲ್ಲಿ ಸರಕಾರ ಮತ್ತು ಕಮ್ಯೂನಿಸ್ಟ್ ಸೇನೆಗಳ ಕಾಳಗ ಉಗ್ರರೂಪದಿಂದ ಸಾಗುತ್ತಲೇ ಇದೆ. ಕಮ್ಯೂನಿಸ್ಟರ ಮುತ್ತಿಗೆಗೊಳಗಾಗಿ ಅತಿ ಕಳಕೊಂಡಿದ್ದ ಪ್ರಾಮುಖ್ಯ ನಗರ ಮುಕ್ಡೆನಿನಲ್ಲಿ ಇದೀಗ ಒಮ್ಮೆ ಚೀನೀ ಸರಕಾರದ ಕೈ ಮೇಲಾಗಿ ಕಮ್ಯೂನಿಸ್ಟ್ ಸೇನೆ ಹಿಮ್ಮೆಟ್ಟಬೇಕಾಗಿ ಬಂದಿದೆ.

ಇಂಡೋನೇಶಿಯದಲ್ಲೂ ಅಲ್ಲಿಯ ರಿಪಬ್ಲಿಕ್ ಮತ್ತು ಡಚ್ಚರೊಳಗಿನ ಜಗಳ ಸಂತಿಲ್ಲ. ಮಧ್ಯಸ್ಥಿಕೆಗಾಗಿ ಭದ್ರತಾ ಕೌನ್ಸಿಲಿನಿಂದ ನೇಮಕಗೊಂಡಿರುವ 'ಹಿತ ಸಮಿತಿ'ಯ ಕಾರ್ಯಕಲಾಪಗಳು ಸತ್ಪರಿಣಾಮದಾಯಿಗಳಾಗಿಲ್ಲ. ಪ್ರಕೃತ 'ಗುಂಡು ಹಾರಾಟ' ನಿಲ್ಲಿಸುವ ಒಪ್ಪಂದ ಶರ್ತಗಳೇ ಹಿಡಿಯದೆ, ಕೂಡಲೇ ಆ ತೀರ್ಮಾನವಾಗದಿದ್ದರೆ, ತಾವು ತಮ್ಮ ಇಚ್ಛೆಯಂತೆ ಮುಂದೊತ್ತಿ ಬಿಡುವೆವೆಂದು ಡಚ್ಚರು ತಿಳಿಸಿದ್ದಾರೆ.

ಇತ್ತ ಪರ್ಶಿಯಾದ ಸರಹದ್ದಿನಲ್ಲಿ ರಶ್ಯದ ಸೇನೆಗಳು ವಿಶೇಷ ರೀತಿಯ ಚಟುವಟಿಕೆಗಳಲ್ಲಿವೆ ಎಂದು ವರದಿಯಾಗಿದೆ.

ಯುರೋಪಿನಲ್ಲಿ ಗ್ರೀಸು ಈಗ ನೋಟ ಮಾಟಗಳ ಕೇಂದ್ರವಾಗಿ ಮಾರ್ಪಟ್ಟಿದೆ. ಅಲ್ಲಿಯ ಈಗಿನ ಸರಕಾರವು ಅಮೇರಿಕ ಬ್ರಿಟನುಗಳ ಕೈಗೊಂಬೆಯಾಗಿದ್ದರೆ, ರಶ್ಯದ ಕೈಗೊಂಬೆ ಜನರಲ್ ಮಾರ್ಕೋಸ್‌ನ ನಾಯಕತ್ವದಲ್ಲಿರುವ ಗೆರಿಲ್ಲಾ ಸೈನಿಕರು "ಸ್ವತಂತ್ರ ಗ್ರೀಸ್ ಸರಕಾರ"ವನ್ನು ರಚಿಸಿಕೊಂಡಿದ್ದಾರೆ. ಈಗ ಬ್ರಿಟನು ಗ್ರೀಸ್ ಸರಕಾರಕ್ಕೆ ಶಸ್ತ್ರಾಸ್ತ್ರ ಸರಬರಾಯಿ ಮಾಡಿದೆಯಲ್ಲದೆ ಅಮೇರಿಕವು ಜನರಲ್ ಮಾರ್ಕೋಸನ ದಂಗೆಗಾರ ಸರಕಾರವನ್ನು ನೆರೆಯ ರಾಷ್ಟ್ರಗಳು ಒಪ್ಪಿಕೊಳ್ಳಕೂಡದೆಂದು ಎಚ್ಚರಿಕೆಕೊಟ್ಟು, ಸಂದರ್ಭ ಬಂದರೆ ಕಾರ್ಯಕೈಕೊಳ್ಳುವೆವೆಂಬ ಸೂಚನೆಗಾಗಿ ಭೂಮಧ್ಯ ಸಮುದ್ರದ ಅಮೇರಿಕನ್ ನೌಕಾ ಪಡೆಯು ಗ್ರೀಸ್ ಪಕ್ಕದಲ್ಲಿ ತಂಬೇತಿ ಕವಾಯಿತು ನಡೆಸಿದೆ. ಈ ಪಡೆಯನ್ನು ಮತ್ತೊಂದು ಸಾವಿರ ಅಮೇರಿಕನ್ ನೌಕಾ ಪಡೆ ಸದ್ಯದಲ್ಲೇ ಸೇರಿಕೊಳ್ಳಲಿದೆ.

ಇತ್ತ, ಯುರೋಪು ರಾಷ್ಟ್ರಗಳಿಗೆಲ್ಲಾ ಯುದ್ಧೋತ್ತರ ಪುನರ್ಚೇತನಕ್ಕಾಗಿ ನಾಲ್ಕು ವರುಷಗಳ ಅತಿ ದೊಡ್ಡ ಮೊತ್ತದ ಸಹಾಯ ಕೊಡುವ ಅಮೇರಿಕದ ಮಾರ್ಶೆಲ್ ಯೋಜನೆಯ ಕುರಿತು 'ಸೆನೇಟ್ ವಿದೇಶ ಸಂಬಂಧ ಸಮಿತಿ'ಯು ವಿಚಾರಣೆ ನಡೆಸುತ್ತಿದೆ. ಇದರ ಮುಂದೆ ಹೇಳಿಕೆ ಕೊಡುತ್ತಾ ಈ ಯೋಜನೆಯ ಕರ್ತ ಅಮೇರಿಕದ ಸ್ಟೇಟ್ ಸೆಕ್ರೆಟರಿ ಜೋರ್ಜ್ ಮಾರ್ಶಲರೆಂದರು: "ಲೋಕಸ್ಥಿತಿಯು ಈಗ ಪರಮಾವಧಿಯ ಬಿಕ್ಕಟ್ಟಿಗೆ ಬಂದಿದೆ. ನಾವು ಶಾಂತಿ ಸಂಪಾದಿಸಿಕೊಂಡೆವೆಂಬ ಮಾತು ಸ್ವಲ್ಪವೂ ಮುಂದುವರಿಯುವಂತಹುದಲ್ಲ. ಹಲವು ಕಡೆಗಳಲ್ಲೀಗ ಯುದ್ಧ ಕಾಲದಲ್ಲಿದ್ದುದಕ್ಕಿಂತಲೂ ಹೆಚ್ಚಿನ ಹೋರಾಟಗಳು ನಡೆದಿವೆ. ನಮಗೆಲ್ಲರಿಗೂ ಗೊತ್ತಿರುವಂತೆ, ಸ್ವತಂತ್ರ ಮಾನವ ಜನಾಂಗ ಮತ್ತು ಸ್ವತಂತ್ರ ನಾಗರಿಕತೆಗೆ ವಿರುದ್ಧವಾಗಿರುವ ರೀತಿಯಲ್ಲಿ ಯುರೋಪಿನ ಮುಖವನ್ನೇ ಬದಲಾಯಿಸುವ ಪ್ರಬಲ ಪ್ರಯತ್ನಗಳು ನಡೆದಿವೆ."

ಈ ರೀತಿ ಇಡೀ ಪ್ರಪಂಚದ ಮರ್ಮಸ್ಥಳಗಳಲ್ಲೆಲ್ಲಾ ಬೆಂಕಿ ಹತ್ತಿಕೊಂಡಿದೆ; ಅಲ್ಲಲ್ಲಿ ಕೆಂಡಗಳು ಧಗಿಸುತ್ತಿವೆ; ಉಳಿದೆಡೆಯ ಕಿಡಿಗೆ ಬೂದಿ ಮುಚ್ಚಿಕೊಂಡಿದೆ, ಅಷ್ಟೆ! ಈ ನಡುವೆ ಕೌತುಕಗಳಿಗೂ ಕೊರತೆಯಿಲ್ಲ. ಕೆಲಕಾಲದಿಂದ ಕಠಿಣ ಕಾಹಿಲೆಯಲ್ಲಿದ್ದ ರಶ್ಯದ ಸ್ಟಾಲಿನರು ಮರಣಗೊಂಡರೆಂದು ಸ್ವಿಟ್ಸರ್ಲೇಂಡಿನ ವಾರ್ತೆ. ಇಂತಹ ವಾರ್ತೆಗಳು ಈ ಮೊದಲೂ ಹುಟ್ಟಿದ್ದುವಾದರೂ, ಆ ಸಂದರ್ಭಗಳಲ್ಲೆಲ್ಲ ಕೂಡಲೇ ರಶ್ಯವೇ ಸುದ್ದಿಯನ್ನು ಅಲ್ಲಗಳೆದಿದ್ದಿತು. ಈ ಬಾರಿ ಹಾಗಾದುದಿಲ್ಲವೆನ್ನುತಿದ್ದಾರೆ. ಈ ವಾರ್ತಾವಾಹಕರು. 'ಇದೊಂದು ಸಕ್ಕರ್ ಹೀನಾಯಮಾನ ಜಾತಿ ಮಾತು' ಎಂದು ಲಂಡನಿನ ರಶ್ಯನ್ ರಾಯಭಾರಿಯೇನೋ ಬಾಯಿ ತುಂಬಾ ಉಗುಳಿದ್ದಾರೆ. ಆದರೆ ಸತ್ಯವನ್ನು ನಿರ್ಧರಿಸಿ ಹೇಳುವುದು ಸದ್ಯಕ್ಕೆ ಕಷ್ಟ!

ಲೋಕದ ವಿವಿಧ ರಾಷ್ಟ್ರಗಳು ನಿಧಾನವಾಗಿ ನಡುಬಿಗಿದುಕೊಳ್ಳುತ್ತಿರುವಾಗ ಭಾರತ-ಪಾಕಿಸ್ತಾನಗಳಂತೂ ಮುಖಾಮುಖಿ ನಿಂತು ತೊಡೆ ಚಪ್ಪರಿಸಿಕೊಳ್ಳುತ್ತಿವೆ. ಕಾಶ್ಮೀರದ ಅನ್ಯಾಯಕ್ಕಾಗಿ ಪಾಕಿಸ್ತಾನವನ್ನು ಅಲ್ಲಿ ಜಾಗತಿಕ ಸಂಘದ ಕೋರ್ಟಿಗೆಳೆದು, ಇಲ್ಲಿ ಅಗತ್ಯಬಿದ್ದರೆ ರಟ್ಟೆ ಹಿಡಿದು ರಣರಂಗಕ್ಕೆಳೆಯಲು ಭಾರತ ಸರಕಾರವೆದ್ದಿದೆ. ಇತ್ತ ಇವೆರಡರೊಳಗಿನ ಹೋರಾಟದ 'ಕೊಡ ಕೊಂಡ'ವೂ ವ್ಯಾಜ್ಯದಿಂದಲೇ ತೀರ್ಮಾನಗೊಳ್ಳಬೇಕಾದ ಸ್ಥಿತಿಯೊದಗಿದೆ. ಈ ನಡುವೆ, ಆ ಬಾರಿ ಭಾರತದ ರಾಜಧಾನಿ ನವದಿಲ್ಲಿಯಲ್ಲಾದಂತೆ, ಈ ಬಾರಿ ಪಾಕಿಸ್ತಾನದ ರಾಜಧಾನಿ ಕರಾಚಿಯಲ್ಲೂ ಜಾತೀಯ ಗೊಂದಲಾಗ್ನಿ ವ್ಯಾಪಿಸಿ ಹಿಂದೂ ಸಿಖ್ಖರಿಗೆ ವಿಶೇಷ ಪ್ರಾಣ, ಮಾನ, ಸೊತ್ತು ಹಾನಿಯಾಗಿವೆ.

ಭದ್ರತಾ ಕೌನ್ಸಿಲಿನಲ್ಲಿ

'ಕಾಶ್ಮೀರದ ಧಾಳಿಗಾರರಿಗೆ ಪಾಕಿಸ್ತಾನವು ಕೊಡುತ್ತಿರುವ ಸರ್ವ ವಿಧದ ಪ್ರೇರಣೆ, ಸಹಾಯಗಳನ್ನು ಕೂಡಲೇ ನಿಲ್ಲಿಸಬೇಕು; ಇಲ್ಲವಾದರೆ ಭಾರತವು ಅನಿವಾರ್ಯವಾಗಿ ಪಾಕಿಸ್ತಾನದೊಳಗೆ ನುಗ್ಗಬೇಕಾಗುವುದು' ಎಂದು ಭಾರತ ಸರಕಾರವು ಕೊಟ್ಟ ದೂರಿನ ಪರ್ಯಾಲೋಚನೆಗಾಗಿ ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನ ಸಭೆಯು ಪೂರ್ವ ನಿಶ್ಚಯದಂತೆ ಇದೇ ಜನವರಿ ತಾ ೧ರಲ್ಲಿ ನ್ಯೂಯೋರ್ಕಿನ ಲೇಕ್ ಸಕ್ಸೆಸಿನ ಕಾರ್ಯಾಲಯದಲ್ಲಿ ಸೇರಿತು. ಚರ್ಚೆಯಲ್ಲಿ ಭಾಗ ವಹಿಸಲು ಭಾರತ-ಪಾಕಿಸ್ತಾನಗಳಿಗಾಮಂತ್ರಣ ಬಂದಿದ್ದು ಭಾರತ ಸರಕಾರದ ಪರವಾಗಿ ಶ್ರೀ. ಪಿ. ಪಿ. ಪಿಳ್ಳೆಯವರೂ ಪಾಕಿಸ್ತಾನದ ಪರವಾಗಿ ಮಿ. ಇಸ್ಪಹಾನಿಗಳೂ ಹಾಜರಿದ್ದರು. ಮತಾಧಿಕಾರ ವಿನಹ ಚರ್ಚೆ ಭಾಗಿಗಳಾಗುವ ಪೂರ್ಣಾಧಿಕಾರವು ಇವರಿಗೆ ಕೊಡಲ್ಪಟ್ಟಿದ್ದಿತು. ಭಾರತ ಸರಕಾರದ ಆರೋಪದ ಚರ್ಚೆಯನ್ನು ಮುಂದುವರಿಸಬೇಕೆಂದು ಕೇಳಿಕೊಳ್ಳುವ ಹೇಳಿಕೆಯೊಂದನ್ನು ಮಿ. ಇಸ್ಪಹಾನಿಗಳು ತಯಾರಿಸಿಕೊಂಡು ಬಂದಿದ್ದು ಅವನ್ನೋದಿ ಹೇಳಿದರು:

ಇಸ್ಪಹಾನಿ ವಾದ

'ಭಾರತವೇ ದೂರನ್ನು ಕೊಟ್ಟಿದೆ ಎಂಬುದನ್ನು ಸಂಘದ ಕಾರ್ಯದರ್ಶಿಗಳು ನನಗೆ ಟೆಲಿಫೋನ್ ಮೂಲಕ ಜನವರಿ 2ರಲ್ಲಿ ತಿಳಿಸಿದ್ದರು. ಆರೋಪದ ಪ್ರತಿಯು ನನಗೆ ಮರುದಿನ ಸಿಕ್ಕಿತು; ನನ್ನ ಸರಕಾರಕ್ಕೆ ಆ ವ್ಯಾಜ್ಯದ ವಿಷಯ ತಿಳಿದಿಲ್ಲವೆಂಬುದನ್ನು ಆ ಮೇಲೆ ತಿಳಿದೆ. ಭಾರತ ಸರಕಾರವದನ್ನು ತನ್ನ ಸರಕಾರಕ್ಕೆ ಗುಪ್ತ ಲಿಪಿಯಲ್ಲಿ ಟೆಲಿಗ್ರಾಫ್ ಮಾಡಿದ್ದು, ಅದು ಪ್ರತಿ ತೆಗೆಯುವಂತಿರಲಿಲ್ಲವಾದ್ದರಿಂದ ಪುನರಾವರ್ತನೆಗಾಗಿ ನನ್ನ ಸರಕಾರವು ಎರಡು ಬಾರಿ ಕೇಳಿಕೊಳ್ಳಬೇಕಾಯಿತು. ಒಂದು

ಹೊಸ ವ್ಯವಸ್ಥೆ-ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—
ಎಲ್ಲಿ?
ನೇತಾಜಿ ಲಂಚ್ ಹೋಮ್
ಕಟಪಾಡಿ, ಇಲ್ಲಿಯೆ.
ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.
ಯೋಗ್ಯ ಉಪಹಾರ! ಉತ್ತಮ ಉಪಚಾರ!
ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ.
☞ ಟೀಪಾರ್ಟೀ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
Nethaji Lunch Home,
Boarding & Lodging,
KATAPADI, S. K.

ಕಣ್ಣಿನ ಡಾಕ್ಟರ್
ಎಲ್ಲಾ ತರದ ಕಣ್ಣಿನ ರೋಗಗಳನ್ನು ಬರೇ ಕುಡಿಯಲಿಕ್ಕೆ ಮಾತ್ರ ಮದ್ದು ಕೊಟ್ಟು ಗುಣಪಡಿಸುವರು. ಅಲ್ಲದೆ 67 ವರ್ಷದವರ ಬಂದಾದ ಮೂತ್ರವನ್ನೂ ಅನೇಕ ತರದ ಮದ್ದಿನಿಂದಲೂ ರಬ್ಬರ್ ಟ್ಯೂಬಿನಿಂದಲೂ ಬಾರದ್ದನ್ನು ಕುಡಿಯಲಿಕ್ಕೆ ಮದ್ದು ಕೊಟ್ಟು 7 ಗಂಟೆಯೊಳಗೆ ಹೋಗುವಂತೆ ಮಾಡಿದ್ದಾರೆ. ಒಂದೇ ಕಿವಿ ಕೇಳುತ್ತಿದ್ದ 63 ವರುಷದವರಿಗೊಬ್ಬರಿಗೆ ಹೀಗೆಯೇ ಕುಡಿಯಲಿಕ್ಕೆ ಮದ್ದು ಕೊಟ್ಟು ಎರಡೂ ಕಿವಿ ಕೇಳುವಂತೆ ಮಾಡಿದ್ದಾರೆ. ಬೇರೆ ಮದ್ದಿನಿಂದ ಗುಣವಾಗದವರು ಕೇಗಿನವರಲ್ಲಿಗೆ ಹೋಗಿ ಗುಣಪಡಿಸಿಕೊಳ್ಳಿ. ಸಮಯ: ಬೆಳಗ್ಗೆ 9-30ರಿಂದ ಸಂಜೆ 5 ಗಂಟೆ ತನಕ.
Dr. S. T. Soans, F. C. I. E.
Eye specialist,
Court road, Udipi, S. K.

ಭಾರತ ಪಾಕಿಸ್ತಾನ್ ವ್ಯಾಜ್ಯ

ಕಾಶ್ಮೀರದಲ್ಲಿ ಮೋಸ!

ಕಾಸಿಗಾಗಿ ಆವೇಶ

ಪ್ರತಿಯನ್ನು ವಿಮಾನ ಮೂಲಕ ಕಳುಹಿಕೊಡುವವನಾಗಿ ಈಗ ಭಾರತ ಸರಕಾರ ನನಗೆ ತಿಳಿಸಿದೆ. ಇಂತಹ ಪರಿಸ್ಥಿತಿಯಲ್ಲಿ ವ್ಯಾಜ್ಯದ ಪರಿಶೀಲನೆ ನಡೆಸಲು ಅಥವಾ ಇಂದಿನ ಪ್ರಥಮ ತನಿಖೆಗಾಗಿ ನನಗೊಂದು ಟಿ.ಟಿ.ಕ ಟಿಪ್ಪಣಿಯನ್ನು ಕಳುಹಿಸಿಕೊಡಲು ನನ್ನ ಸರಕಾರಕ್ಕೆ ಸಾಧ್ಯವೆಂಬುದು ನಿಮಗೆ ಮಂದಟ್ಟಾಗಬಹುದು. ನನ್ನ ವಾದವನ್ನು ನಿಮ್ಮ ಮುಂದಿಡುವುದಕ್ಕಾಗಿ ನನ್ನ ಸರಕಾರವು ವಿದೇಶ ಮಂತ್ರಿ ಸರ್. ಝಫರುಲ್ಲಾಖಾನರನ್ನು ಕಳುಹಲಿಕ್ಕಿದೆ. ಆದ್ದರಿಂದ ಭಾರತ ಸರಕಾರದ ದೂರಿನ ಹಿನ್ನೆಲೆಯ ಕುರಿತು, ಕೆಲವೇ ಶಬ್ದಗಳನ್ನಲ್ಲದೆ ಹೆಚ್ಚಿಗೆ ಹೇಳಲು ನನ್ನಿಂದ ಸಾಧ್ಯವಿಲ್ಲ. ಕಾಶ್ಮೀರದ ಕುರಿತು ಸಂಧಾನ ಮೂಲಕ ಶಾಂತಿಪೂರ್ಣ ವ್ಯವಸ್ಥೆ ಮಾಡಿಕೊಳ್ಳುವ ಆವಶ್ಯಕತೆಯ ಕುರಿತು ನನ್ನ ಸರಕಾರವು ಮೇಲಿಂದಮೇಲೆ ಭಾರತ ಸರಕಾರವನ್ನು ಒತ್ತಾಯಿಸಿದ್ದಿತು. 1947ನೇ ನವಂಬರ್ 4ರಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಲಾಹೋರಿನಲ್ಲಿತ್ತ ಆಕಾಶವಾಣಿ ಭಾಷಣದ ಮಾತನ್ನೇ ಇಲ್ಲಿ ಎತ್ತಿಕೊಳ್ಳುವುದಕ್ಕಿಂತ ಉತ್ತಮವಾದ ಬೇರೇನನ್ನೂ ನಾನು ಮಾಡಲಿಕ್ಕಿಲ್ಲ". ಹೀಗನ್ನುವಾಗ ಅಧ್ಯಕ್ಷರಾದ ಲೇಂಗೆನ್ ಡೋನೆಯವರು ನಡುವೆ ಬಾಯಿ ಹಾಕಿ 'ಸದ್ಯದ ಕೆಲಸವು ಸಭೆ ಮುಂದುವರಿಸುವ ಪ್ರಶ್ನೆಯೊಂದಕ್ಕೇನೇ ಕಟ್ಟು ಬಿದ್ದಿರಬೇಕು' ಎಂದರು. ಮಿ. ಇಸ್ಪಹಾನಿಗಳು ವರ್ಣನೆ ನಿಲ್ಲಿಸಿ ಮಿ. ಝಫರುಲ್ಲಾರು ಇದೇ ತಾ 14 ಅಥವಾ 15ರಲ್ಲಿ ಬರಬಹುದೆಂದೂ ಆ ವರೆಗೆ ಸಭೆ ಮುಂದುವರಿಸಬೇಕೆಂದೂ ಕೇಳಿಕೊಂಡರು.

ಪಿ. ಶಿ. ಪಿಳ್ಳೆ ಪ್ರತಿವಾದ

ಸಂಗತಿಯು ಭಾರತದ ಪಾಲಿಗೆ ಅತ್ಯಂತ ಪ್ರಾಮುಖ್ಯದ್ದು ಮತ್ತು ಅತ್ಯವಸರದ್ದೆಂಬ ಕಾರಣ ಕೊಟ್ಟು ಭಾರತ ಪ್ರತಿನಿಧಿ ಶ್ರೀ. ಪಿಳ್ಳೆಯವರು ಇದನ್ನಾಕ್ಷೇಪಿಸಿದರು. ಆಗ ತಾನೇ ಬಂದಿದ್ದ 400ಮಂದಿ ಉಕ್ಕಿನ ಶಿರಸ್ತ್ರಾಣಧಾರೀ ಸೈನಿಕ ಪೋಷಾಕಿನ ಧಾಳಿಗಾರರು ನೌಶೇರಾ ಕ್ಷೇತ್ರದೊಳಗೆನುಗ್ಗಿ ಬಂದರೆಂಬ ವಾರ್ತೆಯನ್ನು ಓದಿ ಹೇಳುತ್ತಾ ಭಾರತ ಪ್ರತಿನಿಧಿಯೆಂದರು: "ಇದು ಸಂಗತಿಯೆಷ್ಟು ಅವಸರದ್ದೆಂಬುದಕ್ಕೊಂದು ನಿದರ್ಶನ. ಹೇಗಿದ್ದರೂ, ಚರ್ಚೆಯನ್ನು ಮುಂದುವರಿಸಬೇಕೆಂಬ ಪಾಕಿಸ್ತಾನ್ ಸರಕಾರದ ವಿಜ್ಞಾಪನೆಯು ನ್ಯಾಯ ಪ್ರಕಾರ ವಿರೋಧಿಸಲಿಕ್ಕಾಗದ ವಿಜ್ಞಾಪನೆಯೆಂಬುದು ನನ್ನ ಸರಕಾರದ ಮನವರಿಕೆಯಲ್ಲಿದೆ. ಆದರೇ ಬೇಡಿಕೆಗೆ ಸಂಪೂರ್ಣ ಸಹೃದಯತೆಯಿಂದ ನಾವು 'ಆಗಲಿ' ಎಂದೇ ಹೇಳಲಿಚ್ಛಿಸುತ್ತೇವೆ. ಪಾಕಿಸ್ತಾನಕ್ಕೆ ಅಲ್ಪಾವಧಿ ಸಮಯ ಮಂಜೂರು ಮಾಡುವುದರಲ್ಲಿ ನಮ್ಮ ಆಕ್ಷೇಪವೇನೂ ಇಲ್ಲ" ಆವರೆ 15ನೇ ತಾರೀಕಿನ ವರೆಗೆ ಮುಂದೂಡುವುದನ್ನು ಶ್ರೀ ಪಿಳ್ಳೆಯವರಾಕ್ಷೇಪಿಸಿ, ಮುಂದಿನ ವಾರಾದಿಗಿತ ಬಹುದೆಂದು ಸೂಚಿಸಿದರು. ತನಗೆ ಕೌನ್ಸಿಲಿಗೆ ಸಹಾಯವಾಗಬೇಕೆಂದು ಬಹಳ ಆಶೆಯಿದೆಯಾದರೂ, ಉತ್ತಮ ಪ್ರಯಾಣ ಸೌಕರ್ಯಗಳಿಲ್ಲದಿರುವ ಕಾರಣ ಸರ್. ಝಫರುಲ್ಲಾರು ಬೇಗನೇ ಬರಬಹುದೆಂಬ ಗ್ಯಾರಂಟಿಯೀಯಲು ತನ್ನಿಂದ ಸಾಧ್ಯವಿಲ್ಲವೆಂದು ಮಿ. ಇಸ್ಪಹಾನಿಗಳೆಂದರು.

ತಾ. ೧೨ರಿಂದ ೧೫ರೊಳಗೆ

ಆ ಮೇಲೆ ಅಧ್ಯಕ್ಷರು 'ಸರ್. ಝಫರುಲ್ಲಾರು ಆ ಹೊತ್ತಿಗೆ ಇಲ್ಲಿ ಹಾಜರಿರುವ ಪಕ್ಷದಲ್ಲಿ ಕೌನ್ಸಿಲ್ ಸಭೆಯು ಜನವರಿ ತಾ. 12 ಅಥವಾ 13ರಲ್ಲಿ ಸೇರಬೇಕು. ಹೇಗಿದ್ದರೂ ಜನವರಿ ತಾ. 15ರೊಳಗೆ ಸೇರಲೇ ಬೇಕು' ಎಂದು ತೀರ್ಮಾನಿಸಿದರು. ಭದ್ರತಾ ಕೌನ್ಸಿಲಿನ ಅಧ್ಯಕ್ಷ ಬೆಲ್ಜಿಯಮಿನ ಎಮ್. ಫೆರ್ನಾಂಡ್ ವಾನ್ ಲೇಂಗೆನ್ ಡೋನೆಯವರು ಭಾರತ ಮತ್ತು ಪಾಕಿಸ್ತಾನಗಳಿಗೆ ತನ್ನ ಹೆಸರಿನಿಂದ ಈ ಕೆಳಗಿನ ತಂತಿ ಬಿಟ್ಟಿದ್ದಾರೆ: "ಶಾಸನ ಪತ್ರದ 35ನೇ ವಿಭಾಗಕ್ಕನುಸಾರವಾಗಿ ಭದ್ರತಾ ಕೌನ್ಸಿಲು ಈ ವ್ಯಾಜ್ಯವನ್ನು ... ಮ ನಡೆಸಬೇಕಾಗಿ ಬಂದಿದೆ. ಆ ಶಾಸನ ಪತ್ರಕ್ಕೆ ಹೊಂದಿಕೆಯಾಗದ ಮತ್ತು ಭದ್ರತಾ ಕೌನ್ಸಿಲಿನ ಕಾರ್ಯವನ್ನು ಇನ್ನಷ್ಟು ಕಷ್ಟಗೊಳಿಸುವ ಎಲ್ಲಾ ಕೃತ್ಯಗಳನ್ನೂ ತಡೆ ಹಿಡಿಯಬೇಕೆಂದು ನಾನೀ ಮೂಲಕ ಎರಡೂ ರಾಷ್ಟ್ರಗಳನ್ನು ಆಗ್ರಹದಿಂದ ಕೇಳಿಕೊಳ್ಳುವ ಸ್ವಾತಂತ್ರ್ಯ ವಹಿಸುತ್ತೇನೆ".

ಇದರ ವಕೀಲರು

ಭದ್ರತಾ ಕೌನ್ಸಿಲಿನಲ್ಲಿ ಭಾರತದ ಪರವಾಗಿ ವಾದಿಸುವ ಪ್ರತಿನಿಧಿ ಮಂಡಲದ ನಾಯಕ ಹಿಂದೀ ಸರಕಾರದ ಓರ್ವ ಮಂತ್ರಿ ಶ್ರೀ. ಎನ್. ಗೋಪಾಲಸ್ವಾಮಿ ಅಯ್ಯಂಗಾರ್. ಆ ಮೇಲಿನವರು ಹೈಕೋರ್ಟಿನ ಎಡ್ವೋಕೇಟ್ ಮತ್ತು ಕಳೆದ ಬಾರಿ ಜಾಗತಿಕ ಸಂಘದಲ್ಲಿ ಭಾರತದೋರ್ವ ಪ್ರತಿನಿಧಿಯಾಗಿದ್ದವರು ಶ್ರೀ. ಎಮ್. ಸಿ. ಸೆಟಲ್ವಾಡ್; ಹಿಂದೀ ವಿದೇಶ ಖಾತೆಯ ಕಾರ್ಯದರ್ಶಿ ಎಮ್. ಕೆ. ವೆಲ್ಲೋಡಿ, ಕಾಶ್ಮೀರದ ನಾಯಕ ಶೇಕ್ ಅಬ್ದುಲ್ಲಾ, ಮತ್ತು ಪ್ರತಿನಿಧಿ ನಾಯಕನ ಕಾರ್ಯದರ್ಶಿಯಾಗಿ ಸಿ. ಪಾರ್ಥಸಾರಥಿ, ಕರ್ನಲ್ ಕೌಲ್, ಪಿ. ಯನ್. ಹಕ್ಸರ್, ಎ ಎಸ್. ಝುಟ್ಸಿ ಮೊದಲಾದ ಇತರ ಸಹಾಯಕರೂ ಈ ಮಂಡಲಿಯಲ್ಲಿದ್ದಾರೆ. ಇವರೆಲ್ಲರೂ ನ್ಯೂಯೋರ್ಕಿಗೆ ಮುಟ್ಟಿದ್ದಾರೆ. "ಕಾಶ್ಮೀರಕ್ಕೂ ತಾನಾಗಿ ಭಾರತಕ್ಕೆ ಸೇರ ಬಂದ ಜುನಾಗಡಿಗೂ ಹೋಲಿಕೆಯಿಲ್ಲ. ಕಾಶ್ಮೀರದ ಧಾಳಿಗಾರರು ಪಾಕಿಸ್ತಾನದ ಕೈಗಳೆಂಬುದನ್ನು ತೋರಿಸುವ ದಾಖಲೆಗಳನ್ನು ಹಿಡಿದುಕೊಂಡೇ ಹೊರಟಿದ್ದೇವೆ. ಕಾಶ್ಮೀರೀ ಜನತೆಯ ಜೀವನ್ಮರಣದ ಪ್ರಶ್ನೆಯಾಗಿರುವ ಇದರಲ್ಲೂ ಕಾಲಹರಣ ಮಾಡುವ ಯಾವ ವಿಧಾನಕ್ಕೂ ನಾವಲ್ಲಿ ಒಪ್ಪುವಂತಿಲ್ಲ" ಎಂದು ಸೆಟಲ್ವಾಡರಂದಿದ್ದಾರೆ. "ಲೋಕ ಮತವು ಸಂಪೂರ್ಣವಾಗಿ ಭಾರತಕ್ಕನುಕೂಲವಾಗಲೇಬೇಕೆಂದು ನಮ್ಮ ಭರವಸೆ. ನಮ್ಮ ವಾದವು ಸಾಧಾರವಾದುದು. ನಾವು ಯೋಗ್ಯ ವರ್ತನೆ ಮತ್ತು ನ್ಯಾಯವನ್ನು ಮಾತ್ರ ಅಪೇಕ್ಷಿಸಿದ್ದೇವೆ" ಎಂದು ಎನ್. ಜಿ. ಅಯ್ಯಂಗಾರ್‌ರಂದಿದ್ದಾರೆ. "ಕಾಶ್ಮೀರ ರಂಗದ ಸೇನಾ ಕಾರ್ಯದ ಕುರಿತು ನಮಗಾವ ಚಿಂತೆಯೂ ಇಲ್ಲ. ಆ ಮಟ್ಟಿಗೆ ವಿಜಯ ಖಂಡಿತ; ಆದರೆ ಈ ಯುದ್ಧ ವಿಜಯವು ರಾಜಕೀಯ ವಿಜಯದ ಒಂದು ಸಾಧನವಾಗಬೇಕೆಂದು ನನ್ನಾಶೆ" ಎಂದು ಶೇಕ್ ಅಬ್ದುಲ್ಲಾ ಅಂದಿದ್ದಾರೆ.

ಪಾಕಿಸ್ತಾನದ ಪ್ರತಿನಿಧಿಗಳು—ವಿದೇಶ ಮತ್ತು ವಸಾಹತು ಸಂಬಂಧ ಮಂತ್ರಿ ಸರ್. ಮಹಮ್ಮದ್ ಝಫರುಲ್ಲಾ ನಾಯಕರು. ಆ ಮೇಲಿನವರಾಗಿ ಅಮೇರಿಕದಲ್ಲಿ ಪಾಕಿಸ್ತಾನ್ ರಾಯಭಾರಿಯಾಗಿರುವ ಎಮ್. ಎ. ಯಚ್. ಇಸ್ಪಹಾನಿ; ಪಾಕಿಸ್ತಾನದ ಜನರಲ್ ಕಾರ್ಯದರ್ಶಿ ಮಹಮ್ಮದ್ ಆಲಿ. ವಿದೇಶ ಖಾತೆಯ ಉಪಕಾರ್ಯದರ್ಶಿ ಅಕ್ತಾರ್ ಹುಸ್ಸೇನ್, ಕರ್ನಲ್ ಮಾಜೀವಾಲೀ ಮೊದಲಾದವರು ಈ ಮಂಡಲಿಯಲ್ಲಿದ್ದಾರೆ. "ಶಾಸನ ಪತ್ರಾನುಸಾರವಾಗಿ ಕಾಶ್ಮೀರದ ಪ್ರಶ್ನೆಯೊಂದನ್ನೇ ತೀರ್ಮಾನಿಸಲು ಭದ್ರತಾ ಕೌನ್ಸಿಲಿಗೆ ಅಸಾಧ್ಯ; ಶಾಂತಿಭಂಗತರುವ ಯಾವ ವಿಷಯವನ್ನಾದರೂ ಯಾವುದೇ ಸದಸ್ಯರಾಷ್ಟ್ರವು ಅಲ್ಲಿ ಮುಂದೊತ್ತಬಲ್ಲುದು. ಭಾರತ ಪಾಕಿಸ್ತಾನಗಳೊಳಗಿನ ಜಗಳ ಹೇತುವಾದ ಇತರ ಪ್ರಾಮುಖ್ಯ ವಿಷಯಗಳು ಹಲವಿವೆ. ನಾವು ಅವುಗಳನ್ನೂ ಮುಂದಿಡುವೆವು. ಭಾರತದೊಡನೆ ಮೈತ್ರಿ ಒಪ್ಪಂದವಾಗಬೇಕೆಂದೇ ನಮ್ಮ ಆತುರ. ಆದ್ದರಿಂದ ಇವೆರಡು ರಾಷ್ಟ್ರಗಳನ್ನು ದೂರೀಕರಿಸಿಕೊಳಿಸಿರುವ ಎಲ್ಲಾ ವಿವಾದಗಳ ತೀರ್ಮಾನವನ್ನೂ ನಾವಲ್ಲಿ ಬಯಸುತ್ತೇವೆ" ಎಂದು ಸರ್. ಝಫರುಲ್ಲಾ ಅಂದಿದ್ದಾರೆ.

ಕಾಶ್ಮೀರದ ಧಾಳಿಗಾರರ ನಾಯಕನಾದ ಸರ್ದಾರ್ ಮಹಮ್ಮದ್ ಇಬ್ರಾಹಿಮನೂ ತನ್ನ 'ಆಝಾದ್ ಕಾಶ್ಮೀರ್' ಸರಕಾರದ ಪರವಾಗಿ ವಾದಿಸಲು ಭದ್ರತಾ ಕೌನ್ಸಿಲಿನ ಸಭೆಗೆ ಹೋಗಲು ನಿರ್ಧರಿಸಿದ್ದಾನೆ. ಈ ಸಂಬಂಧದ 'ಪಾಸ್‌ಪೋರ್ಟ್' ಮತ್ತು ಇತರ ಸೌಕರ್ಯಗಳಿಗಾಗಿ ಈ ಸರ್ದಾರ್ ಪಾಕಿಸ್ತಾನದ ಪ್ರಧಾನ ಮಂತ್ರಿಗಳಿಗೆ ಬರೆದುಕೊಂಡಿದ್ದಾನೆಂದು ತಿಳಿದುಬರುತ್ತದೆ. ಆದರೆ ಆತ ಪಾಕಿಸ್ತಾನದ ಕೈಗೊಂಬೆಯೆಂಬ ಭಾರತ ಸರಕಾರದ ವಾದದ ಸತ್ಯವು ಈ ಮೂಲಕ ಹೊರಬಿದ್ದೀತೆಂದು ಪಾಕಿಸ್ತಾನ ಸರಕಾರವು ಸರ್ದಾರ್ ಮಹಮ್ಮದ್ ಇಬ್ರಾಹಿಮನನ್ನು ಕಳುಹಿಕೊಡಲು ಶಂಕಿಸಬೇಕು. ಭದ್ರತಾ ಕೌನ್ಸಿಲಿನ ಆಮಂತ್ರಣರಹಿತ ಅತಿಥಿಯಾದೀತ ಅಲ್ಲಿಯ ಚರ್ಚೆಗಳಲ್ಲಿ ಹೇಗೆ ಭಾಗಿಯಾಗುವನೋ ಗೊತ್ತಾಗುವುದಿಲ್ಲ. ಮೇಲಾಗಿ ಭಾರತ ಸರಕಾರವು ಕಾಶ್ಮೀರದ ಧಾಳಿಗಾರರ ಮೇಲೇನೂ ದೂರು ಕೊಟ್ಟಿಲ್ಲ. 'ಆಜಾದ್ ಕಾಶ್ಮೀರ ಸರಕಾರ'ಕ್ಕೆ ಜಾಗತಿಕ ಸಂಘವೆ ಅನುಮತಿ ದೊರೆತಿರುವ ಮಾತಂತಿರಲಿ, ಅದರ ಅಸ್ತಿತ್ವವೇ ಸುಳ್ಳು! ಆದ್ದರಿಂದ ಇಲ್ಲಿಯೂ ಇದೊಂದು ವಿನೋದ! ಕಾಶ್ಮೀರ ರಣಾಂಗದಲ್ಲಂತೂ ಧಾಳಿಗಾರರು ಹುಚ್ಚು ನೆರೆಯಂತೇರಿ ಬರುತಿದ್ದಾರೆ; ಹಿಂದೀ ಸೇನೆಯೂ ಅದಕ್ಕನುಗುಣವಾದ ಶಕ್ತಿಯಿಂದಿದಿರಿಸಿ, ಹಿಂದಕ್ಕಟ್ಟುತ್ತಿದೆ. ಸರ್ದಾರ್ ಪಟೇಲರು ಆಗಕ್ಕೆ ಅಧಿಕಾರಿಗಳೊಂದಿಗೆ ತಾ. 10ರಲ್ಲಿ ಮತ್ತೊಮ್ಮೆ ಜಮ್ಮುವಿಗೆ ಹೋದ್ದಾರೆ.

ದುಡ್ಡಿನ ಜಗಳ

ಇತ್ತ ಪಾಕಿಸ್ತಾನವು ಸಂಪೂರ್ಣವಾಗಿ, ತನ್ನ ಹಕ್ಕಿನದೆಂದು ಕೇಳುತ್ತಿರುವ, ಅಂತೆಯೇ ಪರಸ್ಪರ ಸೌಹಾರ್ದತೆಯಿದ್ದಲ್ಲಿ ಭಾರತ ಸರಕಾರವೂ ಕೊಡಲೊಪ್ಪಿದ್ದ 55 ಕೋಟಿ ರೂಪಾಯಿಗಳನ್ನು, ಭಾರತ ಸರಕಾರವೀಗ ಸಂದಾಯಿಸದೆ ಕಾಶ್ಮೀರದ ದಗಾಖೋರತನದಂತಹ ದ್ರೋಹಿ ವರ್ತನೆಗಳನ್ನು ಕೈಕೊಂಡಿರುವ ಪಾಕಿಸ್ತಾನಕ್ಕೆ ಬುದ್ಧಿ ಬರಿಸುವೆನೆಂದು ಸುಮ್ಮಗಿದೆ. ಈ ಕುರಿತು ಪಾಕಿಸ್ತಾನ್ ನಾಯಕರೆಬ್ಬಿಸುತ್ತಿರುವ ಕಿರಿಚಾಟಗಳು ಕಪಿಕೋಲಾಹಲವಿವೆ. ಲಿಯಾಖತ್ ಅಲೀಖಾನ್, ಝಫರುಲ್ಲಾಖಾನರಂಥವರು ತಮ್ಮ 'ಗಂಟು ತಿಂದು ಹಾಕಿದರವರ' ಮನಸ್ಥಿತಿಯಿಂದಿಸಿದ ಬೆನ್ನಲ್ಲೇ ಪಾಕಿಸ್ತಾನದ ಹಣಕಾ

(೬ನೇ ಪುಟ ನೋಡಿರಿ)

ಚ್ಯವನಪ್ರಾಶ ರಸಾಯನ
(ಉರಕ್ಷತ, ಕ್ಷಯ, ಶ್ವಾಸ ಕಾಸಹಾರಿ)
ಕ್ರಯ—1 ಪೌಂಡು ರೂ 5-0-0
ನಮ್ಮ ಕೆಟಲಾಗು ಧನ್ವಂತರಿ
ದಿ ಮಹಾಜನ ಕೆಮಿಕಲ್ಸ್
ಎಂಡ್ ಫಾರ್ಮಸ್ಯೂಟಿಕಲ್ಸ್
ಲಿಮಿಟೆಡ್,
ಕಾಸರಗೋಡು—ದ. ಇಂಡಿಯ.

ನಿಯಂತ್ರಣಗಳು
ಆಹಾರ ವಸ್ತುಗಳ ನಿಯಂತ್ರಣ ಹೋದಾಗ್ಯೂ ನೀವು ಮಾತ್ರ ನಿಮ್ಮ ಆರೋಗ್ಯದ ನಿಯಂತ್ರಣವನ್ನು ಇಟ್ಟುಕೊಳ್ಳಲೇ ಬೇಕು. ಚಳಿ, ಆಯಾಸ ಮೊದಲಾದುವು ಆರೋಗ್ಯದ ತಂತ್ರ ತಪ್ಪಿಸುವ ವೈರಿಗಳು!
ಒಂದು ಕಪ್ ಬಿಸಿ ಮಾಕಿನ ರಸವನ್ನು ದಿನಾಲೂ ಪಾನ ಮಾಡಿರಿ.
ಆಹಾರ ಪತ್ತನ ಗಳ! ರುಚಿ, ಪರಿಮಳ, ಬೆಲೆ, ಕಿಮ್ಮತ್ತು, ಅನುಭವ ನಿಮ್ಮ ನಾಲಗೆ ರುಚಿಯ ಅಚ್ಚುಮೆಚ್ಚಿನದು.
ತಯಾರಿಸುವವರು:
ಕನ್ನಡ ಸೋಪ್ ಎಂಡ್
ಇಂಡಸ್ಟ್ರಿಯಲ್ಸ್ ಲಿಮಿಟೆಡ್, ಮಂಗಳೂರು.

The Canara Banking Corporation Limited.
(Incorporated in British India)
Estd: 1906.
Head Office: UDIPI, S. India.

ANNOUNCEMENT.

A branch of the BANK has been opened at High Road, TRICHUR. (Cochin State) on 28th November, 1947.

ನವಯುಗ

ಗುರುವಾರ, ೮ ಮಾಘ, ೧೫-೧-'೪೮

ಒಂದು ಒಳನೋಟ

ಯಾವ ಅಪಾಯವನ್ನು ನಿವಾರಿಸಬೇಕೆಂಬ ಉದ್ದೇಶವಿಟ್ಟುಕೊಂಡು ದೇಶವಿಭಜನೆಯಾಯಿತೋ, ಆ ಉದ್ದೇಶ ಭಂಗವಾಯಿತೆಂಬುದೀಗ ಸ್ಪಷ್ಟವಿದೆ. ಪಾಕಿಸ್ತಾನ್ ಸ್ಥಾಪನೆಯಾಗುವ ಮೊದಲು ರಕ್ತದ ತೊರೆ ಹರಿದಿದ್ದರೆ ಆ ನಂತರ ಅದರ ನದಿಯೇ ಹರಿಯಿತು! ಇದು, ಹುಟ್ಟಿದ ರೋಗ ಗುಣ ಹೊಂದುವ ಮೊದಲಿನ ಉಲ್ಬಣಾವಸ್ಥೆಯೆನ್ನೋಣವೆ? ಈ ವೈಷಮ್ಯಕ್ಕೆ ಸಾಮಾನ್ಯ ಜನತೆಯ ಅಂಧ ಮನೋವೃತ್ತಿಯೊಂದೇ ಆಧಾರವಾಗಿ ಇರುತಿದ್ದರೆ ಹಾಗನ್ನಬಹುದಿತ್ತು; ಆದರೆ ವೈರವು ಸರ್ವವ್ಯಾಪಿಯಾಗಿದೆ- ಸಂಘಾನಾತೀತವಿದೆ- ಅಜ್ಞ ಜನತೆಯ ಮನಸ್ಸಿಗೆ ಮಾತ್ರವಲ್ಲ, ಆಡಳಿತೆಯ ಸೂತ್ರಗಳಿಗೂ ಅಂಟಿಕೊಂಡಿದೆ- ಎಂಬುದಕ್ಕೆ ಕಾಶ್ಮೀರದ ಕಾಳಗವೇ ನಿದರ್ಶನ. ಅಂದಮೇಲೆ ಇದೀಗ ಭಾರತದ ಪಾಲಿಗೆ ಅಭ್ಯುದಯ-ಅಧೋಗತಿಯ ಪ್ರಶ್ನೆಯಷ್ಟೇ ಅಲ್ಲ; ಬದುಕು- ಸಾವಿನ ಪ್ರಶ್ನೆ ಕೂಡಾ! ಪ್ರತಿಯೊಂದೂ ಸ್ಪಷ್ಟವಾಗಿ ದೃಢವಾಗಿ ಇರಬೇಕಾದ ಈ ಸಂದರ್ಭದಲ್ಲಿ ಭಾರತದೊಳಗಡೆಯ ಸಂದೇಹಾತ್ಮಕ ವಿಷಯಗಳನ್ನು ಕೆದಕಿ ಸ್ಪಷ್ಟ ರೂಪವನ್ನು ಕಂಡು ಹಿಡಿಯುವುದು ಅಗತ್ಯ.

ಸದ್ಯ ಕಣ್ಣ ಮುಂದಿರುವ ಆಪತ್ತು ಪಾಕಿಸ್ತಾನದ್ದು. ದ್ವಂದ್ವದಿಂದಲೇ ಭಾರತದಲ್ಲಿರುವ ಮುಸ್ಲಿಮರ ಧೋರಣೆಯೇನು? ಎಂದು ಒತ್ತಿ ಕೇಳಬೇಕಾಗಿದೆ. ಅವರ ಬಾಯಿ ಹೇಳಿಕೆಗಳು ಹೇಗೆ ಎಂಬುದನ್ನಲ್ಲ, ಮನಸ್ಸೆತ್ತ ಬಾಗಿಕೊಂಡಿದೆ ಎಂಬುವನ್ನು, ಅತ್ಯಂತ ಜಾಗರೂಕತೆಯಿಂದ ಪರೀಕ್ಷಿಸಬೇಕಾಗಿದೆ. ಹೀಗೆ ಹಿಂದೀ ಮುಸ್ಲಿಮರನ್ನು ವಿಂಗಡಿಸಿ ತೂಕಕ್ಕಿಡುವುದು ಜಾತೀಯ ಭಾವನೆಯ ಮೇಲಿಂದಲ್ಲ; ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಶಿ, ಮತ್ತಿತರ ಎಲ್ಲಾ ಸಮಾಜಗಳವರಿರುವ ಭಾರತದ ರಕ್ಷಣೆಯ ಆವಶ್ಯಕತೆಯಿಂದಲೇ. ಭಾರತದ ಇದಿರು ಇಂದು ಪಾಕಿಸ್ತಾನವಿರುವ ಸ್ಥಾನದಲ್ಲಿ ರಶ್ಯವೆಲ್ಲಿಯಾದರೂ ಇರುತಿದ್ದರೆ, ಇಲ್ಲಿಯ ಕಮ್ಯೂನಿಸ್ಟರೆಲ್ಲರನ್ನೂ ಈಗ ಹಿಂದೀಮುಸ್ಲಿಮರನ್ನು ಕಾಣಬೇಕಾದ ದೃಷ್ಟಿಯಿಂದಲೆ ಕಾಣಮಂತಾಗುತಿತ್ತು ಎಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು. ಭಾರತದಲ್ಲಿ ನಾಲ್ಕು ಕೋಟಿ ಮುಸ್ಲಿಮರಿದ್ದಾರೆ. ಅವರ ನಾಯಕರೇನೇ ಹೇಳದರೂ-ಹಲವರು ನಿಜಕ್ಕೂ ಪ್ರತ್ಯೂರ್ವಕವಾಗಿ ಭಾರತದ ಹಿತವನ್ನೇ ಸಾಧಿಸುತ್ತಿರುವರಾದರೂ-ಅತ್ಯಧಿಕ ಬಹು ಸಂಖ್ಯಾಕ ಹಿಂದೀ ಮುಸ್ಲಿಮರ ಹೃದಯವು ಈಗಲೂ ಪಾಕಿಸ್ತಾನದ ಕಡೆಗೇನೇ ಇದೆ ಎಂಬ ಕುರಿತು ಅನುಮಾನವೇ ಇಲ್ಲ. ಇಷ್ಟೆಲ್ಲಾ ಅನಾಹುತಗಳಿಗೆ ಕಾರಣವಾದ ಮುಸ್ಲಿಂ ಲೀಗನ್ನು ಇನ್ನಾದರೂ ಹೂಳುವ ಬದಲಿಗೆ ಹೋಳು ಮಾಡಿ ಪಾಕಿಸ್ತಾನಕ್ಕೂ ಭಾರತಕ್ಕೂ ಹಂಚಿ ಹಾಕಿರುವುದು- ಜಾತೀಯತೆಯನ್ನು ಧರಿಸಿ ರಾಜಕೀಯ ಪಕ್ಷಗಳೇ ಇರಕೂಡದು ಎಂದು ನಿರ್ಧರಿಸಿರುವ ಮುಸ್ಲಿಮರು ಕೂಡಾ ಸಂದರ್ಭಕ್ಕಗತ್ಯವುಳ್ಳ ಕಾರ್ಯವೇನನ್ನೂ ಮಾಡದಿರುವುದು-ಮದ್ರಾಸಿನಂತಹ ಶಾಂತ ನಗರದಲ್ಲಿ ಕೂಡಾ ಏಳೆಂಟು ಮಸೀದಿಗಳು ಮತ್ತು ಮುಸ್ಲಿಂ ಶವದಫನ ಸ್ಥಳದಲ್ಲಿ ಅಡಗಿಸಿಟ್ಟ ಶಸ್ತ್ರಾಸ್ತ್ರಗಳೂ ಮದ್ದು ಗುಂಡುಗಳೂ ದೊರೆತಿರುವುದು-ಮುಸ್ಲಿಮರೊಡನೆ ಸಂಭಾಷಿಸಿದಾಗ, ಅವರ ನಡೆ ನುಡಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ತೀರಾ ಸಾಮಾನ್ಯ ಮಟ್ಟದ ಹರೆಂಗಿ ತಜ್ಞನಿಗಾದರೂ ಮುಸ್ಲಿಂ ಜನತೆಯು ಪಾಕಿಸ್ತಾನ್ ಪಕ್ಷಪಾತಿಯೆಂಬುದು ಕೂಡಲೇ ಹೊಳೆಯುವಂತಿರುವುದು- ಇವೆಲ್ಲವೂ ಕಣ್ಣು ತೆರೆಯಿಸುವ ಸಂಗತಿಗಳೇ. ಭಾರತ-ಪಾಕಿಸ್ತಾನಗಳೊಳಗೆ ಘರ್ಷಣೆಯೇಳುವಾಗ (ಹಾಗಾಗದಿರಲಿ!) ಹಿಂದೀ ಮುಸ್ಲಿಮರ ಮೇಲೆ ಕಣ್ಣಿಡುವ ಆವಶ್ಯಕತೆಯಿಲ್ಲವೆ? ಅತ್ತ ಕಾದಾಟ- ಇತ್ತ ಕಲಹ- ಇವೆರಡರ ಹೊಣೆಯೂ ಸಂಪೂರ್ಣವಾಗಿ ಸರಕಾರದ ತಲೆಯ ಮೇಲೆಯೇ ಬೀಳುವಂತಾದರೆ ಕಾರ್ಯಕಷ್ಟವಾಗದೆ? ಆದ್ದರಿಂದಲೇ 'ಆರ್. ಯಸ್. ಯಸ್.ನ್ನು ಉಪದ್ರವಿಸಲು ಹೋಗಬೇಡಿ' ಎಂದು ಸರ್ದಾರ್ ಪಟೇಲರನ್ನುವಾಗ ಯಾವ ರಾಷ್ಟ್ರಪ್ರೇಮಿಗೂ ಆಗಬೇಕಾದಷ್ಟು ನೋವು ಆಗುತ್ತಿಲ್ಲ. ಈ ಸಂಗತಿಯನ್ನು ಅಗತ್ಯವಾಗಿ ಅರಿತುಕೊಳ್ಳಬೇಕಾದುದು ಹಿಂದೀ ಮುಸ್ಲಿಮರೇ. ಭಾರತ ರಕ್ಷಣೆಯಲ್ಲಿ ಅವರು ತಮ್ಮ ಸರ್ವಸ್ವದೊಡನೆ, ತ್ರಿಕರಣಪೂರ್ವಕವಾಗಿ ಮಿಕ್ಕವರಿಗಿಂತ ಮುಂದಿರುವರೆಂಬುದನ್ನು ಕಂಡ ಹೊರತು -ಆ ದಿನ ಪಾಕಿಸ್ತಾನ್ ಸ್ಥಾಪನಾಯೋಧರಾಗಿದ್ದ ಇವರ ಮನೋವೃತ್ತಿಯು ಈದಿನವಾದರೂ ಬದಲಾಗಿದೆ, ಎಂಬ ವಿಶ್ವಾಸವಿಡುವುದು ಈ ಸಂದರ್ಭದಲ್ಲಿ ಅಸಾಧ್ಯವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಹಿಂದೀ ಮುಸ್ಲಿಮರ ಹೃದಯ ಮಾರ್ಪಾಟವಾಗಬೇಕು; ಇಲ್ಲವೇ ಮಿಕ್ಕವರ ಹೃದಯ ಈ ಸಂದರ್ಭದಲ್ಲಿ ಕಲ್ಲಾಗಬೇಕು, ಎಂದು ಒತ್ತಿಹೇಳುತ್ತೇನೆ.

(ಆನೇ ಪುಟದಿಂದ).

ಕಿಸ್ತಾನ ಮಂತ್ರಿ ಗುಲಾಮ್ ಮಹಮ್ಮದರು ಹೊಟ್ಟೆಯುರಿ, ಹೃದಯದ ನಂಜು, ಎರಡನ್ನೂ ಕಾರಿದ್ದಾರೆ! "ರಿಝರ್ವ್ ಬೇಂಕು ಪಾಕಿಸ್ತಾನದ ಸಾಲವನ್ನು ಸಂದಾಯಿಸದಂತೆ ಮಾಡಿ ಭಾರತ ಸರಕಾರವು ರಿಝರ್ವ್ ಬೇಂಕಿನ ಕಾರ್ಯಪಥಕ್ಕೇನೇ ಅಡ್ಡ ಬಂದಿದೆ ಭಾರತ ಸರಕಾರದ ಈ ಆತಂಕವನ್ನು ತನ್ನ ಕಡೆಗಿನ ವೈರತ್ವ ರಾಹಿತ್ಯಮಾತ್ರವಲ್ಲ, ಆಕ್ರಮಣ ಕೃತ್ಯವೆಂದೇ ಪಾಕಿಸ್ತಾನ್ ಸರಕಾರವು ಗಣಿಸುತ್ತದೆ ನಗದಿ ಮೊತ್ತದ ತನ್ನ ಪಾಲಿನ ವಹಿವಾಟನ್ನು ಭಾರತ ಸರಕಾರವು ರಿಝರ್ವ್ ಬೇಂಕಿನಿಂದ ನಡೆಯಿಸುತ್ತಿರುವಾಗ, ಪಾಕಿಸ್ತಾನದ ಹಕ್ಕಿನ 55 ಕೋಟಿ ರೂಪಾಯಿಗಳನ್ನು ಮಾತ್ರ ಸಂದಾಯ ಮಾಡಕೂಡದೆಂದು ಅದು ರಿಝರ್ವ್ ಬೇಂಕಿಗೆ ತಿಳಿಸಿದೆ" ಎನ್ನುತ್ತಾ ಗುಲಾಮ್ ಮಹಮ್ಮದರು ಬೇರೆ ವಿಧಾನಗಳಿಂದ ಪಾಕಿಸ್ತಾನವನ್ನು ಬಗ್ಗಿಸಲಾಗದ ಭಾರತವು ಆರ್ಥಿಕ ವಿಧಾನಗಳಿಂದ ಅದನ್ನು ಹಣ್ಣು ಮಾಡಬೇಕೆಂದು ಈ ನಂಬಿಕೆ ದ್ರೋಹವನ್ನು ಕೈಕೊಂಡಿದೆ ಎಂದು ದೂರಿ, ರಿಝರ್ವ್ ಬೇಂಕು ತನ್ನ ಕರ್ತವ್ಯವನ್ನು ನ್ಯಾಯ ಪ್ರಕಾರ, ಯೋಗ್ಯವಾಗಿ ಮತ್ತು ನಿಷ್ಪಕ್ಷಪಾತ ರೀತಿಯಿಂದ ಮಾಡಿಲ್ಲವೆಂದು ಆರೋಪಿಸಿದ್ದಾರೆ. ಭಾರತ ಸರಕಾರದ ಇಚ್ಛಾಧೀನವಾಗಿ ವರ್ತಿಸಿ ಈ ಬೇಂಕು ಅಂತರ್ರಾಷ್ಟ್ರಿಯ ವಿಶ್ವಾಸ ಕಳಕೊಂಡಿದೆ ಎಂದಿವರ ಆರೋಪ. ಭಾರತ-ಪಾಕಿಸ್ತಾನಗಳ ಪಾಲಿನ ಸ್ಟರ್ಲಿಂಗ್ ಮೊತ್ತದ ಆರು ತಿಂಗಳಾವಧಿಯ ಸಂಧಾನದ ಮಾತುಕತೆಗಾಗಿ ಈ ಬಾರಿ ಪಾಕಿಸ್ತಾನವು ನವಂಬರಿಲ್ಲಿಯ ಬ್ರಿಟನು- ಭಾರತ-ಪಾಕಿಸ್ತಾನ ಮಾತುಕತೆಗೆ ಪ್ರತಿನಿಧಿಯನ್ನು ಕಳಹಿಸದೆ ಬಹಿಷ್ಕರಿಸಿದೆ. ಆ 55 ಕೋಟಿ ರೂಪಾಯಿ ಕೊಡದುದಕ್ಕಾಗಿ ಈ ಮುಸ್ಕರವಂತೆ! ಆದರೆ ಆದರ್ಶ ಪಾಲುಪಟ್ಟಿಯ ಮೂಲ ವ್ಯವಸ್ಥೆ ಮೊದಲೇ ಆಗಿರುವುದರಿಂದ ಭಾರತದ ಮಟ್ಟಿಗೆ ಪಾಕಿಸ್ತಾನವು ಈ ಕೂಟಕ್ಕೆ ಬಂದರೂ ಬಾರದಿದ್ದರೂ ಒಂದೇ.

ಗುಲಾಮ್ ಮಹಮ್ಮದರು ಭಾರತ ಸರಕಾರದ ಮೇಲೆ ಹಾಕಿದ 'ನಂಬಿಕೆ ದ್ರೋಹ'ದ ಅಪವಾದನೆಯನ್ನು ಸರ್ದಾರ್ ಪಟೇಲರು ಸ್ಪಷ್ಟವಾಣಿಯಿಂದ ಅಲ್ಲಗಳೆದಿದ್ದಾರೆ. "ಭಾರತ ಮತ್ತು ಪಾಕಿಸ್ತಾನಗಳೊಳಗೆ ಇತ್ತೀಚೆಗಾಗಿರುವ ಆರ್ಥಿಕ ಒಪ್ಪಂದದಲ್ಲಿ ನಾವು ಪಾಕಿಸ್ತಾನದ ಕಡೆಗೆ ತೋರಿಸಿದ ಔದಾರ್ಯಕ್ಕೆ ತಕ್ಕ ಮನ್ನಣೆಯು ಪಾಕಿಸ್ತಾನದಿಂದ ದೊರೆತಿಲ್ಲ. ನಮ್ಮೀ ಔದಾರ್ಯವನ್ನು ಅಪಮಾನಿಸಿ ಭಾರತ ಸರಕಾರದ ಮೇಲೆ ನಿರಾಧಾರವಾದ ಆರೋಪಗಳನ್ನು ಹೇರುತಿದ್ದಾರೆ. ಸತ್ಯಕ್ಕೆ ನಾವಿದುವರೆಗೆ, ಮತ್ತೀಗಲೂ ಅತ್ಯಂತ ನಿಷ್ಠೆಯಿಂದ ನಮ್ಮ ಭಾಗದ ಕರ್ತವ್ಯವನ್ನು ನೆರವೇರಿಸಿದ್ದೇವೆ ನಮ್ಮ ಧೋರಣೆಯಲ್ಲಿ ಲೋಕಮತದ ಮುಂದೆ ನ್ಯಾಯವೆಂದು ತೀರ್ಮಾನ ಹೊಂದಲಾಗದ ಅಂಶವೇನೂ ಇಲ್ಲ" ಎಂದು ಸರ್ದಾರ್ ಪಟೇಲರಂದಿದ್ದಾರೆ. ಭಾರತ ಸರಕಾರದ ಕಾರ್ಯಕ್ಷೇತ್ರದ ಹಕ್ಕಿನ ರಿಝರ್ವ್ ಬೇಂಕು ಎರಡೂ ರಾಷ್ಟ್ರಗಳ ಹಕ್ಕಿನದೆಂಬಂತೆ ಅಸತ್ಯಾರೋಪ ಮಾಡಿರುವ ಪಾಕಿಸ್ತಾನ್ ವಿದೇಶ ಮಂತ್ರಿಯು ಹೊಸಾಪತ್ತುಗಳಿಗಾಮಂತ್ರಣ ಕೊಟ್ಟಿರುವರೆಂದೂ, ಭಾರತ ಸರಕಾರವು ಉದಾರತೆಯಿಂದ ಪಾಕಿಸ್ತಾನದ ಭಾಗಗಳಲ್ಲಿ ಇಟ್ಟಿರುವ ರಿಝರ್ವ್ ಬೇಂಕಿನ ಶಾಖೆಗಳನ್ನು ಮುಚ್ಚಿಸುವ ಅವಶ್ಯಕತೆಯು ಹಿಂದುಸ್ತಾನಕ್ಕೊದಗಬಹುದೆಂದೂ ಹಿಂದೀ ಸರಕಾರದ ಹಣಕಾಸಿನ ಖಾತೆಯ ಓರ್ವ ಪ್ರಮುಖಾಧಿಕಾರಿ ಎಚ್ಚರಿಸಿದ್ದಾರೆ.

ಹೈದರಾಬಾದಿನ ಬಂಧು ಪ್ರೇಮ!

ಇತ್ತ ಹೈದರಾಬಾದಿನ ನಿಜಾಮ್ ಸರಕಾರವು ಪಾಕಿಸ್ತಾನಕ್ಕೆ ಸಾಲಕೊಟ್ಟಿರುವ ವಾರ್ತೆಯು ಪ್ರಥಮತಃ ಪತ್ರಿಕೆಗಳಲ್ಲಿ ಪ್ರಕಟವಾಗಿ ಗೊಂದಲವೆದ್ದ ಮೇಲೆ ಹಿಂದುಸ್ತಾನ್ ಸರಕಾರವು ಹೈದರಾಬಾದ್ ಸರಕಾರವನ್ನು ವಿಚಾರಿಸಬೇಕಾಯಿತು. ಆ ತನಕ ತನ್ನೀ ದೊಡ್ಡ ಕೆಲಸದ ಕುರಿತು ನಿಜಾಮ್ ಸರಕಾರವೇನನ್ನೂ ಆಡಿರಲಿಲ್ಲ. ಈಗ ಹೈದರಾಬಾದಿನ ಅರ್ಥಮಂತ್ರಿ ನವಾಬ್ ಮೊಯಿನ್ ನವಾಝ್ ಝಂಗ್ ಬಹದೂರರು ಸಂಗತಿಯನ್ನು ಸ್ಪಷ್ಟಪಡಿಸಿದ್ದಾರೆ. "ನಿಜಾಮ್ ಸರಕಾರವು ತಾನು ಭಾರತ ಸರಕಾರದಲ್ಲಿಟ್ಟಿದ್ದ 20 ಕೋಟಿ ರೂ. ಮೌಲ್ಯದ ಸೆಕ್ಯೂರಿಟಿಗಳನ್ನು ಪಾಕಿಸ್ತಾನ್ ಸರಕಾರಕ್ಕೆ ವರ್ಗಾಯಿಸಿದೆ ಈ ವಹಿವಾಟು ಭಾರತ—ಪಾಕಿಸ್ತಾನಗಳ ಸಂಬಂಧವೀರೀತಿ ಕೆಡುವ ಮೊದಲೇ ನಡೆದಟ್ಟಾಗಿದೆ. ಇದು ಭಾರತದ ಕಡೆಗಿನ ವೈರತ್ವದ ವಿರುದ್ಧ ವರ್ತನೆಯಲ್ಲವೇ ಅಲ್ಲ. ಪಾಕಿಸ್ತಾನದ ಹಣಕಾಸಿನ ಮಂತ್ರಿ ಗುಲಾಮ್ ಮಹಮ್ಮದರು ಮೊನ್ನೆ ಹೈದರಾಬಾದಿಗೆ ಬಂದುದಕ್ಕೂ ಈ ಸಾಲಕ್ಕೂ ಸಂಬಂಧವಿಲ್ಲ" ಎಂದು ಈ ಬಹದೂರ್ ಸಾಹೇಬರ ಹೇಳಿಕೆಯಾಗಿದೆ. 'ಇದು ಮೊನ್ನೆ ನವಂಬರಿನಲ್ಲಿ ನಿಜಾಮ್ ಸರಕಾರವು ಭಾರತ ಸರಕಾರದೊಡನೆ ಮಾಡಿಕೊಂಡ ಒಂದು ವರುಷದ ಪ್ರಚಲಿತ ಒಪ್ಪಂದಕ್ಕೆ ಬದ್ಧ ವಿರುದ್ಧವಾದ ವರ್ತನೆ' ಎಂದು ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರು ಕಠಿಣವಾಗಿ ಟೀಕಿಸಿದ್ದಾರೆ. ಭಾರತ ಸರಕಾರವು ಮುಂದೇನು ಮಾಡುವುದೋ ನೋಡಲಿಕ್ಕಿದೆ.

ಕರಾಚಿಯ ಗಲಭೆ

ಕೆಲವು ದಿನಗಳಿಂದ ಭಾರತ ಮತ್ತು ಪಾಕಿಸ್ತಾನ, ಎರಡರಿಂದಲೂ ಬಾಗದಿದ್ದ ಜಾತೀಯ ದಂಗೆಯ ವಾರ್ತೆಯು ಕಳೆದ ವಾರ ಪಾಕಿಸ್ತಾನದ ರಾಜಧಾನಿಯಿಂದಲೇ ಬಂತು; ಪಾಕಿಸ್ತಾನೀ ಮುಸ್ಲಿಮರ ರಕ್ತದಾಹವಿನ್ನೂ ಆರಿಲ್ಲವೆಂಬುದು ಕರಾಚಿಯಲ್ಲಿ ಮೊನ್ನೆ ತಾನೇ ಮತ್ತೊಮ್ಮೆ ಕಂಡುಬಂತು. ಜನವರಿ ತಾ 6ರಲ್ಲಿ ಸಿಂಧ್ ಪ್ರಾಂತ್ಯದ ಉತ್ತರಗಡೆಯ ಸಿಖ್ ನಿರಾಶ್ರಿತರ ತಂಡಗಳನ್ನು ಭಾರತಕ್ಕೆ ರವಾನೆ

ಸ ವೃದಶ್ಕಾಗಿ ಕರಾಚಿಗೆ ತೆರಳಲಾಗಿತ್ತು. ಕರಾಚಿಯ ರತನ್ ತಲಾವ್‌ನಲ್ಲಿರುವ ಪಾಕಿಸ್ತಾನ್ ಸರಕಾರದ ಮುಖ್ಯ ಕಚೇರಿಗೆ ಕೇವಲ ಕಲ್ಲೆಸೆತದಷ್ಟು ದೂರದಲ್ಲಿರುವ ಸಿಖ್ ಗುರುದ್ವಾರದಲ್ಲಿ ಈ ನಿರಾಶ್ರಿತ ಸಿಖ್ಖರು ತಂಗಿದ್ದಾಗ 8000ಕ್ಕೂ ಮಿಕ್ಕಿದ ಮುಸ್ಲಿಂ ಪುಂಡರು ಅವರ ಮೇಲೆ ಅಮಾನುಷ ಧಾಳಿ ನಡೆಸಿ ಹಲವರನ್ನು ತುಂಡರಿಸಿಹಾಕಿದರು. 122 ಜನ ಸತ್ತು 219 ಜನ ಜಖಂಗೊಂಡರೆಂದು ಪಾಕಿಸ್ತಾನ್ ಸರಕಾರದ ಲೆಕ್ಕ. ಈ ಗಲಭೆಯ ಬೆನ್ನಲ್ಲೇ ಕರಾಚಿಯಲ್ಲೆಲ್ಲಾ ಸಿಖ್ ಹಿಂದೂ ಧ್ವಂಸಗಳು ನಡೆದುವು. ಪೋಲೀಸರು 600ಕ್ಕೂ ಮಿಕ್ಕಿದ ಪುಂಡರನ್ನು ದಸ್ತಗಿರಿ ಮಾಡಿದ್ದಾರೆ. ಕೆಲವು ಬಾರಿ ಗುಂಡು ಹಾರಾಟ ನಡೆಯಿತು. ಕರ್ಫ್ಯೂ ಜಾರಿಗೆ ಬಂದಿದೆ. ಕರಾಚಿಯ ಹಿಂದೂ ಅಂಗಡಿ ಮನೆಗಳನ್ನೆಲ್ಲಾ ಮುಸಲ್ಮಾನರು ಬಲಾತ್ಕಾರದಿಂದ ಸ್ವಾಧೀನ ಪಡಿಸಿಕೊಳ್ಳುತಿದ್ದಾರೆ. ಹಿಂದುಗಳ ಅಮೂಲ್ಯ ಆಸ್ತಿಗಳು ಅಲ್ಪ ಬೆಲೆಗೆ ಮಾರಾಟವಾಗುತ್ತಿವೆ. ಹಿಂದೂ ಸಿಖ್ಖರು ಹಿಂಡುಗಟ್ಟಿ ಕರಾಚಿ ಹಾಗೂ ಸಿಂಧ್ ಪ್ರಾಂತ್ಯದಿಂದಲೇ ಓಡಿಬರ ಹತ್ತಿದ್ದಾರೆ. ಅಲ್ಪ ಸಂಖ್ಯಾತರ ಪ್ರಾಣ ಸೊತ್ತುಗಳ ಆಶ್ವಾಸನೆಯಿತ್ತಿರುವ ಜಿನ್ನಾರ ಕಣ್ಣೆದಿರಲ್ಲೇ ಹಿಂದೂ ಸಿಖ್ಖರ ನಿರ್ನಾಮಕಾರ್ಯ ನಡೆದಿದೆ! ಪಾಕಿಸ್ತಾನ್ ಸರಕಾರವು ಗೊಂದಲವಡಗಿಸುವ ಪ್ರಯತ್ನ ಮಾಡಿದೆ. ಭಾರತೀಯರ ದುರದೃಷ್ಟವಿನ್ನೂ ಮುಗಿದಿಲ್ಲವೆಂಬುದಕ್ಕೆ ಹೊಸ ನಿದರ್ಶನ ದೊರೆತಂತಾಯಿತು!

ಕಾಶ್ಮೀರದ ಪ್ರಶ್ನೆ

ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಇದೇ ತಾ. 15ಕ್ಕೆ ಮುಂದೆಬರಲಿದೆ. ಸರ್ವಾಧಿಕಾರ ಕೊಟ್ಟು 'ಸಮಿತಿ'ಯೊಂದನ್ನು ಕೂಡಲೇ ನೇಮಿಸಿ ಕಾಶ್ಮೀರಕ್ಕೆ ಬೀಳ್ಕೊಡುವ ಆಲೋಚನೆ ಅಲ್ಲಿ ಹಬ್ಬಿರುವಂತೆ ಕಾಣುತ್ತದೆ. "ಗಡಿ ವಲಯಗಳ ಗುಡ್ಡಗಾಡು ಜನರಿಗೆ ಈ ಮೊದಲು ಹಣ ಕೊಟ್ಟೇ ಬ್ರಿಟಿಷ್ ಸರಕಾರವು ಒಲಿಸಿಕೊಂಡಿಟ್ಟಿದ್ದಿತು. ಹೀಗೆ ಮಾಡಲು ಸಾಧ್ಯವಿಲ್ಲದ ಪಾಕಿಸ್ತಾನವು ಅವರನ್ನು ಹುರಿದುಂಬಿಸಿ ಕಾಶ್ಮೀರದ ಕೊಳ್ಳೆ ಹೊಡೆದು ಬದುಕಿರೆಂದು ನಮ್ಮಲ್ಲಿಗೆ ನುಗ್ಗಿಸಿದೆ" ಎಂದು ಶೇಖ್ ಅಬ್ದುಲ್ಲಾ ಲೇಕ್ ಸಕ್ಸೆಸಿನಲ್ಲಿಂದಿದ್ದಾರೆ. 'ಕಾಶ್ಮೀರ ಮತ್ತು ಇತರ ಪ್ರಶ್ನೆಗಳಲ್ಲಿ ಸಮಾಧಾನಕರ ತೀರ್ಮಾನವಾದ ಹೊರತು ಭಾರತ–ಪಾಕಿಸ್ತಾನಗಳೊಳಗಾದ ಆರ್ಥಿಕ ಒಪ್ಪಂದವನ್ನು ಜಾರಿಗೆ ತರುವಂತಿಲ್ಲ' ಎಂದು ಸರ್ದಾರ್ ಪಟೇಲರೂ ಆರ್ಥಿಕ ಮಂತ್ರಿ ಶ್ರೀ. ಷಣ್ಮುಗಂ ಚೆಟ್ಟಿಯಾರರೂ ಪತ್ರಿಕಾ ಸಮ್ಮೇಲನದಲ್ಲಿ ಸ್ಪಷ್ಟಪಡಿಸಿದ್ದಾರೆ. "ಕಾಶ್ಮೀರದೊಳಗೆ ಗಲಭೆಯೆಬ್ಬಿಸಿ, ಸರಕಾರವನ್ನು ಅಡಿಮೇಲು ಮಾಡಿ ಪಾಕಿಸ್ತಾನದೊಳಗೆ ಸೇರಿಸಿಕೊಳ್ಳುವ ಒಳಸಂಚು ಇಲ್ಲಿಯ ಪಾಕಿಸ್ತಾನಿಗಳಿಂದ ನಡೆದಿದ್ದಿತು. ಅವರು ಕಾಯಿದೇ ಆಝಮರ ನಿವಾಸಕ್ಕಾಗಿ ಸ್ಥಳ ಕೂಡಾ ನೋಡಿ ಇಟ್ಟಿದ್ದರು. ಕಾಶ್ಮೀರದಲ್ಲಿ ಜಾತೀಯ ಗಲಭೆ ನಿರ್ಮಿಸಿದವರಾರೆಂಬುದನ್ನು ತನಿಖೆ ಮಾಡುವ ನಿಷ್ಪಕ್ಷಪಾತ ನ್ಯಾಯಮಂಡಲಿಯ ಮುಂದೆ ಮಹಾರಾಜರು, ನಾನು, ಮತ್ತೆಲ್ಲಾ ಮುಖ್ಯಾಧಿಕಾರಿಗಳು ನಿಲ್ಲಲು ಸಿದ್ಧರಿದ್ದೇವೆ" ಎಂದು ಕಾಶ್ಮೀರ ಪ್ರಧಾನ ಮಂತ್ರಿ ಶ್ರೀ. ಮಹಾಜನರಂದಿದ್ದಾರೆ. ಜಾತೀಯ ಗೊಂದಲ ನಿರ್ಮಿಸಿದರೆಂದು ಮಹಾರಾಜರನ್ನು ಗಾಂಧಿಜೀ ದೂರಿದುದಕ್ಕೀ ಉತ್ತರ.

ಸಿಂಧಿನ ಹಿಂದುಗಳನ್ನು

ಇಡೀ ಸಿಂಧ್ ಪ್ರಾಂತ್ಯದ ಹಿಂದೂ, ಸಿಖ್ ಮತ್ತು ಮುಸ್ಲಿಮೇತರರೆಲ್ಲರನ್ನೂ ಅಲ್ಲಿಂದ ಭಾರತಕ್ಕೆ ತರಲು ಸಿಂಧೀ ಸರಕಾರವೀಗ ಭರದಿಂದ ಸಿದ್ಧತೆ ನಡಿಸಿದೆ. ನಿರಾಶ್ರಿತರಿಗಾಶ್ರಯ ಕೊಡುವಂತೆ ಬೊಂಬಾಯಿ ಸರಕಾರವನ್ನು ಕೇಳಿಕೊಂಡಿದೆ.

ನಿರಾಶ್ರಿತರ ವ್ಯವಸ್ಥೆ ನೋಡಲು ಭಾರತ ಸರಕಾರವು ಒಂದು ವಿಶೇಷ ಸಮಿತಿಯನ್ನು ರಚಿಸಿದೆಯಲ್ಲದೆ ಅವರಿಗಾಗಿ [illegible] ನಗರವೊಂದನ್ನು ನಿರ್ಮಿಸಲು ತಯಾರು ಮಾಡಿದೆ.

ಆರ್ಥಿಕ ನಿಯಂತ್ರಣಗಳನ್ನೂ ಜನವರಿ ತಾ 18ರಿಂದ ರದ್ದುಗೊಳಿಸಬೇಕೆಂದೇ ಭಾರತ ಸರಕಾರವು ನಿರ್ಧಾರಕ್ಕೆ ಬಂದಿದೆ. ಬೆಲೆಯೇರದಂತೆ ಜಾಗ್ರತೆ ವಹಿಸಲಾಗುವದು.

ಗಾಂಧಿಜೀ ಅನಿಯಮಿತಾವಧಿ ಉಪವಾಸ!

ಇದೇ ತಾ. 13ನೇ ಮಂಗಳವಾರದಿಂದಾರಂಭ

ಮಹಾತ್ಮಾ ಗಾಂಧಿಯವರು ಇದೇ ತಾ 13ನೇ ಮಂಗಳವಾರ 11 ಘಂಟೆಯಿಂದ ಅನಿಶ್ಚಿತಾವಧಿಯ ಉಪವಾಸ ಕೈಕೊಂಡಿದ್ದಾರೆಂದು ತಿಳಿದುಬರುತ್ತದೆ. 'ಹಿಂದೂ ಮುಸ್ಲಿಂ ಗೊಂದಲ ಮತ್ತು ದ್ವೇಷ ಭಾವನೆ ನಿಲ್ಲಬೇಕು-ಭಾರತ ಪಾಕಿಸ್ತಾನಗಳು ಒಮ್ಮತಕ್ಕೆ ಬರಬೇಕು-ಈ ಉದ್ದೇಶ ಸಾಧಿಸದ ವಿನಹ ಉಪವಾಸ ನಿಲ್ಲಿಸಲಾರೆ' ಎಂದೇ ಗಾಂಧಿಜೀ ಶಪಥ ತೊಟ್ಟಿದ್ದಾರೆಂದು ವಾರ್ತೆ ಬಂದಿದೆ.

ಕಳೆದ ಒಂದೆರಡು ವರುಷಗಳಿಂದ ರಾಷ್ಟ್ರಗಳಲ್ಲೆಲ್ಲಾ ನಡೆದಿರುವ ಹಿಂದೂ ಮುಸ್ಲಿಂ ದಂಗೆಗಳು ಗಾಂಧಿಜೀಯ ಹೃದಯಕ್ಕೆ ದೊಡ್ಡ ಆಘಾತವನ್ನಿತ್ತಿದ್ದುವು. ರಾಷ್ಟ್ರದ ವಿಭಜನೆ ಮತ್ತು ಆ ವೇಳೆ ನಡೆದ ಅತಿ ದೊಡ್ಡ ಪರಿಮಾಣದ ಧ್ವಂಸ ಕೃತ್ಯವಂತೂ ಮಹಾತ್ಮರ ಹೃದಯವನ್ನು ಪೂರ್ತಿ ಭೇದಿಸಿ, ಅವರಿಗೆ ತನ್ನ ಜೀವನದಲ್ಲೇ ಜಿಗುಪ್ಸೆ ಹುಟ್ಟುವಂತೆ ಮಾಡಿದ್ದಿತು. "ನನ್ನೊಡನೆ ಸಹಸಂತಾಪ ಸೂಚಿಸಿರಿ; ಈ ರೌರವಗಳನ್ನು ಕಾಣಲು ಇನ್ನೂ ಉಳಿದಿರುವ ನನಗಾಗಿ ಕನಿಕರ ಪ್ರದರ್ಶಿಸಿರಿ. ಅಭಿನಂದಿಸುವಿರೇಕೆ? ಆ ಅಭಿವಂದನೆಗೆ ನಾನು ಪಾತ್ರನಾಗುವುದು ಹೇಗೆ?" ಎಂದು ತಮ್ಮ ಬಾರಿಯ ಜನ್ಮ ದಿನದಲ್ಲಿ ವಂದನೆ ಸಲ್ಲಿಸಲು ಬಂದವರೊಡನೆ ಗಾಂಧಿಜೀ ಹೇಳಿದುದಿದೆ. "ಭಾರತ-ಪಾಕಿಸ್ತಾನಗಳೊಳಗೆ ಯುದ್ಧವಾಗುವದಾದರೆ ಅದನ್ನು ನೋಡಲು ನಾನು ಉಳಿಯಲಾರೆ" "ತಮ್ಮ ಪಾಲಿನ ಕರ್ತವ್ಯವಾಗಿರುವ ತಂತಮ್ಮ ಕ್ಷೇತ್ರಗಳಲ್ಲಿ ಐಕ್ಯವನ್ನು ನಿರ್ಮಿಸಿ ಎಲ್ಲರ ಪ್ರಾಣ ಸೊತ್ತುಗಳನ್ನೂ ರಕ್ಷಿಸಲಾಗದಿದ್ದರೆ ಭಾರತ ಮತ್ತು ಪಾಕಿಸ್ತಾನದ ಎರಡು ಸರಕಾರಗಳೂ ರಾಜಿ ಕೊಡಲಿ" ಎಂದು ಗಾಂಧಿಜೀ ಇತ್ತೀಚೆಗೆ ಆಗಾಗ ಒತ್ತಿ ಹೇಳುತ್ತಾ ಬಂದಿದ್ದರು. ಕಳೆದ ಬಾರಿ ಅವರು ಕಲ್ಕತ್ತದಲ್ಲಿದ್ದಾಗ ಹಿಂದೂ ಮುಸ್ಲಿಂ ದಂಗೆಯೆದ್ದೊಡನೆ ಇದೇ ರೀತಿಯ ಅನಶನ ಕೈಕೊಂಡು ಜಯಶೀಲರಾಗಿದ್ದರು. ಅಲ್ಲಿಂದ ಗಲಭೆ ಪೀಡಿತ ನವದಿಲ್ಲಿಗಾಗಮಿಸಿದವರಿಗೆ–ಪಾಕಿಸ್ತಾನಕ್ಕೆ ಹೋಗಿ ಅಲ್ಲಿಯ ಮುಸ್ಲಿಮೇತರರ ರಕ್ಷಣೆಗಾಗಿ ಸಾಯುವವರೆಗೂ ಅಲ್ಲಿಯೇ ಇರುವೆನೆಂಬ ಉದ್ದೇಶದಿಂದ ಹೊರಟಿದ್ದವರಿಗೆ-ಈ ತನಕವೂ ಡಿಲ್ಲಿಯಿಂದ ಹೊರಡಲಾಗಿರಲಿಲ್ಲ. ನವದಿಲ್ಲಿಯಿಂದಾರಂಭಿಸಿ, ಎಲ್ಲೆಡೆಯ ಜಾತೀಯ ದಂಗೆಗಳೂ ಅನಂತರ ಬಹಳ ಮಟ್ಟಿಗೆ ನಿಂತಿದ್ದುವು. ಆದರೆ ಮೊನ್ನೆ ತಾ ... ನೇ ಕರಾಚಿಯಲ್ಲಿ ಮುಸ್ಲಿಮೇತರರ ಧ್ವಂಸ ನಡೆಯಿತು; ಸಿಂಧ್ ಪ್ರಾಂತ್ಯದಲ್ಲಿರುವ ಹಿಂದೂ ಸಿಖ್ಖರನ್ನೆಲ್ಲಾ ಅಲ್ಲಿಂದ ಸಾಗಿಸಿ ತರಲು ಭಾರತ ಸರಕಾರವು ನಡುಬಗಿಯಿತು. ಇಂತಹ ಜನ ಬದಲಾವಣೆಯು ಆತ್ಮಹತ್ಯಕ್ಕೆ ಸಮಾನವೆಂದೂ ಪಾಕಿಸ್ತಾನಕ್ಕೋಡಿಹೋಗಿರುವ ಎಲ್ಲಾ ಮುಸ್ಲಿಮರೂ ಭಾರತಕ್ಕೋಡಿಬಂದಿರುವ ಎಲ್ಲಾ ಮುಸ್ಲಿಮೇತರರೂ ತಂತಮ್ಮ ಮೂಲ ಸ್ಥಳಗಳಿಗೆ ಮರಳುವದನ್ನು ಕಾಣದೆ ತನಗೆ ವಿಶ್ರಾಂತಿಯಿಲ್ಲವೆಂದೂ ಗಾಂಧಿಜೀ ಹೇ[illegible]. ಇತ್ತ ಕಾಶ್ಮೀರದ ಸಂಬಂಧವಾಗಿ ಭಾರತ–ಪಾಕಿಸ್ತಾನಗಳು ವಿದೇಶಗಳ ಇದಿರಲ್ಲಿ ವಾದಿ-ಪ್ರತಿವಾದಿಗಳಾಗಿ ವಿಚಾರಣೆಗೊಳಗಾಗಿರುವುದು ಗಾಂಧಿಜೀಯ ಯಾತನೆಯನ್ನು ಮತ್ತಷ್ಟು ಹೆಚ್ಚಿಸಿತು. ಎರಡು ರಾಷ್ಟ್ರಗಳೊಳಗೆ ಯುದ್ಧ ಸಂಭವವೂ ಕಾಣುತ್ತಿದೆ. ಇದರಿಂದಾಗಿ ಭಾರತ-ಪಾಕಿಸ್ತಾನಗಳೆರಡೂ ಮೂರನೇ ರಾಷ್ಟ್ರದ ಅಂಕೆಗೊಳಗಾಗಬಹುದೆಂದು ಗಾಂಧಿಜೀಗೆ ಹೆದರಿಕೆ ಆಗಿದೆ. ಆದ್ದರಿಂದ ಅವರಲ್ಲಿ ನಿಜಕ್ಕೂ ಈ ಆಪತ್ತನ್ನು ನಿವಾರಿಸಲಾಗದ ತನ್ನ ಪ್ರಾಣವೇ ನಿರರ್ಥಕವೆಂಬ ನಿರ್ಧಾರ ಮೂಡಿತು; ಅವರು ಅಮರಣಾಂತ ಉಪವಾಸ ಕೈಕೊಂಡರು.

ಇದರ ಪರಿಣಾಮವೇನು?

ತನ್ನ ಪ್ರಾಣವು ರಾಷ್ಟ್ರದ ಅಮೂಲ್ಯ ಸೊತ್ತೆಂಬುದನ್ನು ತಿಳಿದಿರುವ ಗಾಂಧಿಜೀ ರಾಷ್ಟ್ರದ ಹಿತದೃಷ್ಟಿಯಿಂದಲ್ಲದೆ, ಅನ್ಯಥಾ ಅದನ್ನು ಪಣಕ್ಕೊಡ್ಡುವ ಅವಿವೇಕಿಯಲ್ಲ. ತನ್ನ ತಪಸ್ಸಿಗೆ ಬೆಲೆಕೊಡಬಲ್ಲ ಭಾರತ ಸರಕಾರ ಮತ್ತು ಹಿಂದುಗಳ ಸಮ್ಮುಖದಲ್ಲಲ್ಲದೆ, ಪಾಕಿಸ್ತಾನ ಮತ್ತು ಮುಸ್ಲಿಮರ ವಿರುದ್ಧವಾಗಿ ಅವರು ಎಂದೂ ಉಪವಾಸ ಕೈಕೊಂಡವರಲ್ಲ. ಈ ಬಾರಿಯೂ ಅವರು ಭಾರತ ಸರಕಾರ ಮತ್ತು ಹಿಂದುಗಳನ್ನು ಇನ್ನಷ್ಟು ಮೃದುಗೊಳಿಸಲು ಅನಶನ ವ್ರತ ಹಿಡಿದರೆನ್ನಬಹುದಲ್ಲವೇ? ಈ ಕಾಲದಲ್ಲಿ ಇದು ಸರಿಯೆ?

ಪಾಕಿಸ್ತಾನ್ ಅಧಿಕಾರಿಗಳೂ ಜನತೆಯೂ ಈಗ ತಾವು ದುರ್ಬಲ ಪಕ್ಷವಾಗಿರುವುದರಿಂದ ಮಾತ್ರ ಗಾಂಧೀ ಉಪವಾಸಕ್ಕೆ ಬೆಲೆ ಕೊಡುವ ನೆಪದಿಂದ ಮಹಾತ್ಮರ ವಾದವನ್ನು ಸಮರ್ಥಿಸಿ ತಮ್ಮ ಕಾರ್ಯ ಸಾಧಿಸಿಕೊಳ್ಳಬಹುದು. ಭಾರತದ ಅಧಿಕಾರಿಗಳೂ ಭಾರತೀಯರೂ ಗಾಂಧೀ ಪ್ರಾಣದ ಮೇಲಿನ ಮೋಹದಿಂದ ಇದಿರುವಾದಿಗಳಿದಿರು ಬಗ್ಗಬೇಕಾದೀತು. ಮಹಾತ್ಮರು ಪ್ರಾಣವನ್ನು ಪಣವಿಟ್ಟು ಇದಲ್ಲದೆ ಬೇರಾವುದನ್ನು ಸಾಧಿಸಿಯಾರು?

ಈ ಅಗ್ನಿ ಪರೀಕ್ಷೆಯ ಕಾಲದಲ್ಲಿ ನೆಹರೂ ಸರಕಾರದ ಲಕ್ಷ್ಯವನ್ನು ಗಾಂಧಿಜೀ ಈ ರೀತಿ ತನ್ನೆಡೆಗೆ ತಿರುಗಿಸಿಕೊಂಡದ್ದು ಸರಿಯೆ? ನೆಹರು, ವಲ್ಲಭಭಾಯಿಗಳಂಥವರು ರಾಜೀನಾಮೆ ಕೊಡಲು ಮುಂದಾಗಲಾರರೆ? ಹಿಂದೀಯರು ಮಾತ್ರ ಹೊರತು ಪಾಕಿಸ್ತಾನವಾಗಲೀ, ಜಾಗತಿಕ ಸಂಘವಾಗಲೀ ಗಾಂಧಿಜೀಯ ಇಂತಹ ಉಪವಾಸಗಳಿಗೆ ಎಂದಾದರೂ ಯಾವ ರೀತಿಯಿಂದಾದರೂ ಬೆಲೆ ಕೊಡುವಂತಿದೆಯೇ?

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ಪರ್ಯಾಯದ ಸಲುವಾಗಿ

ಪ್ರಭಾತ ಚಿತ್ರ

ಸಂತ ಜ್ಞಾನೇಶ್ವರ

ಭಕ್ತಿಪರ, ಮೋಕ್ಷ ಸಾಧಕ ಚಿತ್ರ.

ಉಡುಪಿ

ದುರ್ಮರಣ:—ಇದೇ ತಾ 10ರಲ್ಲಿ ಸ್ಥಳೀಯ ವಕೀಲ್ ಶ್ರೀ. ಕೆ. ಎಲ್. ಐತಾಳರ ಸಾಧಾರಣ ನಾಲ್ಕೈದು ವರ್ಷ ಪ್ರಾಯದ ಬಾಲಕನು ಸಾಯಂಕಾಲ ಕಣ್ಮರೆಯಾಗಿದ್ದು ಎಲ್ಲಿ ಹುಡುಕಿದರೂ ಸಿಗದೆ ಕೊನೆಗೆ ಆತನ ಶವವು ಮನೆಯ ಬಾವಿಯಲ್ಲಿ ಇತ್ತು. ಬಾವಿಯ ದಂಡೆ ಬಳಿ ಆಡುತ್ತಿದ್ದು ಪರಾಮೋಶಿಯಿಂದ ಬಾವಿಗೆ ಬಿದ್ದಿರಬೇಕೆಂದು ಹೇಳಲಾಗಿದೆ. ಇದೇ ತಾ 11ರಲ್ಲಿ ಜವ್ವನಿಗನೊಬ್ಬ ಸಂಚಾರ ಹೋಗಿದ್ದಲ್ಲಿಯೇ ರಕ್ತ ಕಾರಿ ಕೂಡಲೇ ಮರಣಗೊಂಡರು. ಇವರು ತೀರ್ಥಹಳ್ಳಿಯವರಿದ್ದು ಕೆಲಕಾಲದಿಂದ ಕ್ಷಯ ಪೀಡಿತರಿದ್ದರೆಂದು ತಿಳಿದುಬರುತ್ತದೆ.

ಧೂಳಿನ ಹಾವಳಿ!—ಮುನಿಸಿಪಾಲಿಟಿಯ ಕಡೆಯಿಂದ ಜನ, ವಾಹನ ಸಂಚಾರ ಜಾಸ್ತಿಯಿರುವ ಎಲ್ಲಾ ರಸ್ತೆಗಳಿಗೂ ಧೂಳು ಹಾರದಂತೆ ನೀರು ಹಾಕಿಸುವ ಏರ್ಪಾಡು ಇನ್ನೂ ನಡೆಯಲಿಲ್ಲ. ಕೆಲವು ರಸ್ತೆಗಳಿಗೆ ಮಾತ್ರ ನೀರು ಹಾಕಿಸುವ ಸೌಕರ್ಯ ಉಳಿದವುಗಳಿಗೆ ಯಾಕೆ? ನಗರ ಸಭೆಯು ಇಂತಹ ತಾರತಮ್ಯದ ಧೋರಣೆಯನ್ನು ಸರಿಪಡಿಸಿಕೊಳ್ಳುವುದು ವಿಹಿತವಲ್ಲವೇ?

ಉಡುಪಿ

ಪರ್ಯಾಯ ಸೇವಾ ಶಿಬಿರವು. ತಾ. 9-1-1948ರಿಂದ ಉಡುಪಿಯ ಸ್ಕೌಟು ದಳದವರಿಂದ ರಥಬೀದಿಯಲ್ಲಿ ಪಲಿಮಾರು ಮಠದ ಜಪ್ಪಂದಲ್ಲಿ ತೆರೆಯಲ್ಪಟ್ಟಿದೆ, ಶಿಬಿರವು ತಾ 18-1-1948ರ ತನಕ ತನ್ನ ಸೇವೆಯನ್ನು ಸಲ್ಲಿಸುವುದು ಜನಸಂದಣಿಯ ಸುವ್ಯವಸ್ಥೆಯನ್ನು ಕ್ರಮಪಡಿಸುವುದು. ಪ್ರಥಮ ಚಿಕಿತ್ಸೆ, ಕಳೆದುಹೋದ ಚಿಕ್ಕ ಮಕ್ಕಳು ಅಥವಾ ವಸ್ತು ಒಡವೆಗಳನ್ನು ಮರಳಿ ದೊರಕಿಸುವುದು, ಇನ್ನೇ ಮೊದಲಾದ ವಿವಿಧ ಸೇವೆಗಳನ್ನು ಸಲ್ಲಿಸುವುದೇ ಶಿಬಿರದ ಮುಖ್ಯೋದ್ದೇಶ. ಆದುದರಿಂದ ಅಗತ್ಯವಿರುವ ಪ್ರತಿಯೊಂದು ವಿಷಯದಲ್ಲೂ ಸ್ಕೌಟ್ ದಳದವರ ಸೇವೆಯನ್ನು ಜನತೆಯು ಸ್ವೀಕರಿಸಿ ಸಹಕರಿಸಬೇಕಾಗಿ ಆಗ್ರಹ ಪೂರ್ವಕ ವಿನಂತಿ, ಹೆಚ್ಚಿನ ಮಾಹಿತಿಯನ್ನು ಅಥವಾ ಬೇಕಾದ ಅನುಭವವನ್ನು ಪಡೆಯಲು ಶಿಬಿರದ "**ವಿಚಾರಣಾ ಆಫೀಸಿ**"ನಲ್ಲಿ ವಿಚಾರಿಸಿ ತಿಳಿಯಿರಿ.

ಟಿ. ರಮೇಶ. ಯು. ಪೈ,
ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಕಮಿಶನರ್,
ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನ್,
ಮುಕುಂದ ನಿವಾಸ, ಉಡುಪಿ, 9-1-1948

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ—ಇದರ ಚೀಫ್ ಏಜನ್ಸಿಯ ಡಿಪೋವು ಶ್ರೀ N. ಸೀತಾರಾಮ ಕಾಮತ್‌ರ ನೇತೃತ್ವದಲ್ಲಿ ಬಸ್ ಸ್ಟಾಂಡಿನ ಎದುರಿನ ಸಿ. ಪಿ. ಸಿ. ಕಟ್ಟಡದಲ್ಲಿ ತಾ 12ರಂದು ತೆರೆಯಲ್ಪಟ್ಟಿರುವುದು. ಇದೇದಿನ ಇದರ ಅಫೀಸೂ ಕೂಡ ಮೊದಲು ಕೋಆಪರೇಟಿವ್ ಸ್ಟೋರ್ಸ್ ಇದ್ದ ಕಟ್ಟಡದ ಮಾಳಿಗೆಯಲ್ಲಿ ಆರಂಭವಾಗಿದೆ.

ಕಾಲೇಜು ಸ್ಥಾಪನೆ ಸಿದ್ಧತೆ—ಮಣಿಪಾಲದ ಎಕೆಡೆಮಿ ಒಫ್ ಜನರಲ್ ಎಡ್ಯುಕೇಶನ್ ಸಂಸ್ಥೆಯ ಒಂದು ಸಭೆಯು ತಾ 10ರಲ್ಲಿ ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಉಡುಪಿಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸುವರೆ ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳುವರೆ ಒಂದು ಕಮಿಟಿಯು ಸ್ಥಾಪನೆಯಾಯಿತು.

ಈ ಕಮಿಟಿಗೆ ಡಾ। ಎಸ್ ಆರ್. ಪೈಗಳು ಅಧ್ಯಕ್ಷರಾಗಿಯೂ ಡಾ। ಮಾಧವ ಪೈಗಳವರು ಖಜಾಂಚಿಯರಾಗಿಯೂ ಶ್ರೀ ಟಿ. ಆರ್ ಎ. ಪೈಗಳು ಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟರು.

ಮಾನಪತ್ರ— ಉಡುಪಿ ಮುನಿಸಿಪಲ್ ಕೌನ್ಸಿಲಿನ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ನಾಯ್ಕರು ತಾ 9ರಲ್ಲಿ ಶ್ರೀ ಜೋಕಿಂ ಆಳ್ವರಿಗೂ ಅವರ ಪತ್ನಿ ಶ್ರೀಮತಿ ವಯೊಲೆಟ್ ಆಳ್ವರಿಗೂ ನಗರಸಭೆಯ ಪರವಾಗಿ ಟೀಪಾರ್ಟಿ ಸತ್ಕಾರವನ್ನಿತ್ತು ಮಾನಪತ್ರ ಅರ್ಪಿಸಿ ಗೌರವಿಸಿದರು

ಮಣಿಪಾಳ—ಹಿಂದೂಸ್ಥಾನ ಸ್ಕೌಟ್ ಸಂಘದ ವತಿಯಿಂದ ಪ್ಲೋಕ್‌ಲೀಡರ್ಸ್ ಟ್ರೈನಿಂಗ್ ಕ್ಯಾಂಪನ್ನು ಇದೇ ತಾ.8ರಲ್ಲಿ ಮಣಿಪಾಳದಲ್ಲಿ ಶ್ರೀಮತಿ ವಯೊಲೆಟ್ ಆಳ್ವರು ಉದ್ಘಾಟನೆ ಮಾಡಿದರು. ಡಾ। ಮಾಧವ ಪೈ ಶ್ರೀ ಟಿ. ಎ. ಪೈಗಳವರು ಮಾತನಾಡಿದರು. ಮದ್ರಾಸಿನ ಶ್ರೀ ಎಮ್. ರಾಜಗೋಪಾಲನ್ ಮತ್ತು ಮಿಸ್ ಗೌರಿ ಸುಂದರಮ್ಮನವರು ಟ್ರೈನಿಂಗ್ ಕ್ಯಾಂಪನ್ನು ನಡೆಸುತ್ತಿರುವರು.

ಸ್ಕೌಟು ದಳದ ಸುರಿಯಾಳುಗಳ ತರಬೇತಿ ಶಿಬಿರವು ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನ್‌ದವರು ತಾರೀಕು 7-1-1948 ರಿಂದ ಮಣಿಪಳದಲ್ಲಿ ತೆರೆದಿದ್ದು, ತಾರೀಕು 13-1-1948ರ ಮುಂಜಾನೆ ಕೊನೆಗೊಂಡಿತು. ತಾ 12ರ ರಾತ್ರಿ ಡಾಕ್ಟರ್ ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ "ಸಂದರ್ಶಕರ ದಿನ" ಆಚರಿಸಲ್ಪಟ್ಟಿತು. ಎಸಿಸ್ಟೆಂಟ್ ಡಿಸ್ಟ್ರಿಕ್ಟ್ ಕಮಿಶನರಾದ ಶ್ರೀಯುತ ಟಿ. ರಮೇಶ ಪೈಗಳ ಪ್ರಸ್ತಾವನೆಯ ನಂತರ, ಶ್ರೀಮತಿ ಪ್ರೇಮಾ. ಎ.ಪೈಗಳವರಿಗೆ ಗರ್ಲ್ಸ್ ಸ್ಕೌಟ್ಸ್‌ನ ಎಸಿಸ್ಟೆಂಟ್ ಡಿಸ್ಟ್ರಿಕ್ಟ್ ಕಮಿಶನರ ಹುದ್ದೆಯ ನೇಮಕ ಪತ್ರವು ಕೊಡಲ್ಪಟ್ಟಿತು. ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನ್‌ದ ಪ್ರಾಂತಿಕ ಓರ್ಗನೈಸರ್‌ರಾದ ಶ್ರೀಯುತ ಎಮ್. ರಾಜಗೋಪಾಲನ್ ಮತ್ತು ಮೈಸೂರು ಸ್ಕೌಟು ದಳದ ಜಿಲ್ಲಾ ಅಧ್ಯಕ್ಷರಾದ ಡಾ॥ ಬಿ. ಎಮ್. ಮಹದೇವನರೂ ಸಂದರ್ಭೋಚಿತ ಮಾತನಾಡಿದರು. ಆನಂತರದ "ಕೇಂಪ್ ಫಯರ್" ಮುಗಿದೊಡನೆ ಅಧ್ಯಕ್ಷರಾದ ಡಾ। ಮಾಧವ ಪೈಗಳು ತನ್ನ ಕೊನೆಯ ಭಾಷಣದಲ್ಲಿ ಮಹಿಳೆಯರ ಬಿಕ್ಕಟ್ಟನ್ನು ಬಗೆಹರಿಯಲು ಹೆಣ್ಣು ಮಕ್ಕಳ ಸ್ಕೌಟ್ ದಳದ ಸ್ಥಾನವನ್ನು ವಿವರಿಸಿ, ಸ್ಕೌಟ್ ದಳದವರು ಏಮ್ಮನಸ್ಸಿನಿಂದ ಉದಾತ್ತ ಕಾರ್ಯಗಳನ್ನು ಕೈಗೊಂಡು ಯಶಸ್ವಿಯಾಗಿ ಪೂರೈಸಲಿ ಎಂದು ಆಶಿಸಿದರು. ಧನ್ಯವಾದ ಸಮರ್ಪಣೆಯೊಂದಿಗೆ ಸಮಾರಂಭವು ಮುಕ್ತಾಯಗೊಂಡಿತು.

ಕಲ್ಯಾಣಪುರ— ಶ್ರೀ ಜೋಕಿಂ ಆಳ್ವ ಮತ್ತು ಅವರ ಪತ್ನಿ ವಯೊಲೆಟ್ ಆಳ್ವರು ತಾ 9ರಲ್ಲಿ ಕಲ್ಯಾಣಪುರ ಶಾಲೆಯನ್ನು ಸಂದರ್ಶಿಸಿದಾಗ ಶಾಲೆಯ ಕಡೆಯಿಂದ ಅವರಿಗೆ ಸ್ವಾಗತವೀಯಲಾಯಿತು. ಶಾಲಾ ಮೆನೇಜರ್ ರೆ। ಫಾ। ಡಿಸೋಜರು ಮಾನ್ಯ ಅತಿಥಿಗಳ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಶ್ರೀ ಆಳ್ವರು ವಿದ್ಯಾರ್ಥಿಗಳನ್ನುದ್ದೇಶಿಸಿ ಬೋಧಪರ ಭಾಷಣವಿತ್ತರು.

ಕಂಕ್ರನಾರಾಯಣ- ಕುಂದಾಪುರ ಮತ್ತು ಹಾಲಾಡಿ ರಾಷ್ಟ್ರೀಯ ಸೇವಾದಳದವರು ತಾ 11-1-48ರಂದು ಇಲ್ಲಿಯೂ ಒಂದು ಶಾಖೆಯನ್ನು ಉದ್ಘಾಟಿಸಿದರು. ಶ್ರೀ ಲಿಯೋಡೇಸರು ಉದ್ಘಾಟಕರು. ಶ್ರೀ M. M. ಹೆಬ್ಬಾರರು ಅಧ್ಯಕ್ಷರು. ಶ್ರೀಗಳಾದ ವಕೀಲ್ M. M. ಹೆಗ್ಡೆ ಹಾರ್ದಳ್ಳಿ ಶಂಕರ ಸೆಟ್ರು, ಶ್ರೀನಿವಾಸ ಉಪಾಧ್ಯರು, ಜಗನ್ನಾಥ ಮೂಡ್ಲ ಕಟ್ಟೆಯವರು ಸೇವಾದಳದ ಕುರಿತು ಭಾಷಣವಿತ್ತರು. ಶ್ರೀ ಶಂಕರ ಸೆಟ್ರ ಧನ್ಯವಾದಗಳೊಂದಿಗೆ ವಂದೇ ಮಾತರಂ ಹಾಡಿ ಸಭಾಂತ್ಯವಾಯಿತು.

ಮಂಗಳೂರು

ಪುತ್ತೂರು—ಸ್ಥಳೀಯ ಪಂಚಾಯತ ಬೋರ್ಡಿನವರು ಸಿಳುಸಾವಿರದಷ್ಟು ಖರ್ಚು ಮಾಡಿ ಒಂದು ಹೊಸ ಕಟ್ಟಡ ಕಟ್ಟಿಸುತ್ತಿದ್ದಾರೆ.

ಸ್ಥಳೀಯ ವಿಕ್ಟರ್ಸ್ ಗರ್ಲ್ಸ್ ಹೈಸ್ಕೂಲಿನಲ್ಲಿ ಗ್ರಾಮವಸ್ತು ಪ್ರದರ್ಶನವೊಂದು ರೆವಿನ್ಯೂ ಡಿವಿಜನಲ್ ಅಫೀಸರರಿಂದ ಉದ್ಘಾಟಿಸಲ್ಪಟ್ಟಿರುವುದು.

ದ. ಕ. ಜಿಲ್ಲಾ ವಾಣಿಜ್ಯ ಸಂಘದ ವಾರ್ಷಿಕೋತ್ಸವದಲ್ಲಿ ಮಾನ್ಯ ಮಂತ್ರಿ ಶ್ರೀ ಭಕ್ತವತ್ಸಲಂ ರವರು— ಶೃಂಗರಿಸಲ್ಪಟ್ಟ ಕೆನರಾ ಹೈಸ್ಕೂಲಿನ ಮಟಾರದಲ್ಲಿ ಇದೇ ತಾ 11ರಲ್ಲಿ ರಾತ್ರಿ ದ. ಕ. ಜಿಲ್ಲಾ ವಾಣಿಜ್ಯ ಸಂಘದ ವಾರ್ಷಿಕೋತ್ಸವವು ಮದ್ರಾಸಿನ ಮಂತ್ರಿ ಶ್ರೀ ಎಮ್. ಭಕ್ತವತ್ಸಲಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪಬ್ಲಿಕ್ ಹೆಲ್ತ್ ಶಾಖಾ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರೂ ಊರ ಪರವೂರುಗಳ ಇತರ ಆಮಂತ್ರಿತ ಮಹನೀಯರುಗಳೂ ಹಾಜರಿದ್ದರು.

ವಾಣಿಜ್ಯ ಸಂಘದ ಅಧ್ಯಕ್ಷ ಶ್ರೀ ಎ. ಎಸ್. ಕುಡ್ವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಸಿ. ರಮಾನಾಥ ಶೆಣೈಯವರು ಈ ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಸಂದೇಶಗಳನ್ನೋದಿದರು. ಮಡಿಕೇರಿಯ ಶ್ರೀ ಐ. ಸಿ. ಸುಬ್ಬಯ್ಯನವರೂ ಶ್ರೀ ಸಿ. ಜಿ. ಕಾರ್ಲಸನ್‌ರವರೂ ಮಂಗಳೂರು ಬಂದರವನ್ನು ಪ್ರಬುದ್ಧ ಬಂದರವನ್ನಾಗಿ ಮಾಡುವ ಅವಶ್ಯಕತೆಯ ಕುರಿತು ಮಾತನಾಡಿದರು.

ಮಾನ್ಯ ಭಕ್ತವತ್ಸಲಂರವರು ಮಾತನಾಡುತ್ತಾ 'ಕರ್ನಾಟಕ ಪ್ರಾಂತ್ಯ ರಚನೆ' ಬೇಗನೇ ಆಗಿ ದ. ಕ. ಜಿಲ್ಲೆಯು ಅದರ ಅಂಗವಾಗುವುದು ಆ ಬಗ್ಗೆ ತಮ್ಮ ಸಂಪೂರ್ಣ ಸಹಕಾರವಿದೆ ಎಂದು ಆಶ್ವಾಸನೆಯಿತ್ತರು. ಕೈಗಾರಿಕೆಗಳ ರಾಷ್ಟ್ರೀಕರಣದ ಕುರಿತು ಮಾತನಾಡುತ್ತಾ ಖಾಸಗಿ ಕೈಗಾರಿಕೆ ಸಂಸ್ಥೆಗಳಿಗೆ ಸಹಕಾರವು ಸರಕಾರದಿಂದ ದೊರೆಯುವುದೆಂದರು ವಿನಿಯಂತ್ರಣ ಬಂದರುಗಳು, ಆಹಾರ ಧಾನ್ಯಗಳ ಕುರಿತು ಮಾತನಾಡಿ ಸ್ವಾತಂತ್ರ್ಯ ಪಡೆದ ಈ ಸಮಯದಲ್ಲಿ ಜನತೆಯು ಹೆಚ್ಚಿನ ಸ್ವಾರ್ಥ ತ್ಯಾಗಕ್ಕೆ ಸಿದ್ಧರಾಗಿರಬೇಕು, ಅಂತೆಯೇ ಶಿಸ್ತನ್ನು ಪಾಲಿಸಿ, ಸಹಕಾರ ಬುದ್ಧಿಯನ್ನು ಅಭಿವೃದ್ಧಿಸಬೇಕಾಗಿದೆ ಎಂದು ಸೂಚಿಸಿದರು. ಭೋಜನ ಕಾಲದಲ್ಲಿ ಶ್ರೀಗಳಾದ ಜಾಕಿಂ ಆಳ್ವ, ಶ್ರೀನಿವಾಸ ಪೈ, ಮೊದಲಾದವರ ಭಾಷಣ, ತದನಂತರ ಧನ್ಯವಾದಾರ್ಪಣೆಗಳಾದುವು.

ತಿದ್ದುಪಡಿ—ಕಳೆದ ಸಂಚಿಕೆಯ 8ನೇ ಪುಟದಲ್ಲಿ ಪ್ರಕಟವಾದ 'ಜುಲ್ಮಾನೆ' ಎಂಬ ಸುದ್ದಿಯಲ್ಲಿ ಹೆಡ್ಮಾಸ್ತರರಿಗೆ ಹೊಡೆದನ್ನು ಎಂಬುದು ತಪ್ಪೆಂದೂ ಅದು ಸಹಾಯಕ ಉಪಾಧ್ಯಾಯ ಮಿ.Y.S.ಇಬ್ರಾಹೀಂ ಸಾಹೇಬರಿಗೆ ಎಂದಾಗಬೇಕೆಂದೂ ಹೊಡೆದು-ಜುಲ್ಮಾನೆಗೊಳಗಾದವರ ಹೆಸರು ಯಂ. ಯಸ್. ಅಬ್ದುಲ್ ಖಾದರ್ ಎಂದಿದ್ದುದು ಯು. ಯಸ್. ಅಬ್ದುಲ್ ಖಾದರ್ ಎಂದಾಗಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ವಿಶ್ವಾಸ ಮತ್ತು ಭದ್ರತೆ ನಾಮಧೇಯವು

ಸರ್ವರ ಅನುಕೂಲತೆಗಳಿಗೂ ನಿಲುಕುವಂತಹ ಆಕರ್ಷಕ ಯೋಜನೆಗಳನ್ನು ಸಲ್ಲಿಸುವವು
ಲಾಭದಾಯಕ ಶರತ್ತುಗಳಿಂದ ಗೃಹಸ್ಥ ಪ್ರತಿನಿಧಿಗಳು ಬೇಕಾಗಿದ್ದಾರೆ.
ವಿವರಗಳಿಗೆ ಬರೆಯಿರಿ:—
ದಿ ಮೆನೇಜಿಂಗ್ ಡೈರೆಕ್ಟರ್,

ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಶೂರೆನ್ಸ್ ಕೊ.,
ಲಿಮಿಟೆಡ್.
ಹಸನ್ ಚೇಂಬರ್ಸ್, ಫಾರಿಸ್ ಬಜಾರ್ ಸ್ಟ್ರೀಟ್,
ಫೋರ್ಟು, ಬೊಂಬಾಯಿ 1.

ಉಡುಪಿಯ ಯಾತ್ರಿಕರು ಸಂದರ್ಶಕರು ಊರವರು ಪರವೂರವರು ಅವಶ್ಯ ಕೊಂಡುಕೊಳ್ಳಬೇಕಾದ ಪುಸ್ತಕ?

'ನಮ್ಮ ಉಡುಪಿ'

48 ಚಿತ್ರಗಳ ಸಹಿತವಾಗಿ ಉಡುಪಿ ಕ್ಷೇತ್ರ ವಿವರಣೆ

ಶ್ರೀ ಮನ್ಮಧ್ವಾಚಾರ್ಯರ, ಶ್ರೀಗುರುವಾದಿರಾಜ ಸ್ವಾಮಿಗಳ, ಎಳುವ ಮತ್ತು ಕೂಡುಕೊಳ್ಳುವ ಪರ್ಯಾಯ ಮಠಗಳ ಚರಿತ್ರೆಗಳು-ಶ್ರೀಕೃಷ್ಣ ಮಠ, ಅಷ್ಟ ಮಠಗಳು, ಮಕರಸಂಕ್ರಮಣೋತ್ಸವ, ಪರ್ಯಾಯ ಮಹೋತ್ಸವ, ಇತರ ಉತ್ಸವಗಳು, ಉಡುಪಿಯ ಸುತ್ತು ಸುತ್ತುಮುತ್ತಲಿನ ಸಂದರ್ಶನೀಯ ಸ್ಥಳಗಳು, ಸಂಘ ಸಂಸ್ಥೆಗಳು- ಇತ್ಯಾದಿ ಹಿಂದಿನ ಇಂದಿನ ಉಡುಪಿಯ ವಿಚಾರ ತಿಳಿಯಬೇಕಾದುದೆಲ್ಲ ಸಚಿತ್ರವಾಗಿ- ಕರ್ನಾಟಕದ ಸುಪ್ರಸಿದ್ಧ ಲೇಖಕರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ಲೇಖನಿಯಿಂದ ಈಗ ತಾನೇ ಹೊರಬಿದ್ದಿದೆ.

116ಪುಟಗಳ ಈ ಸಚಿತ್ರ ಪುಸ್ತಕಕ್ಕೆ ಬೆಲೆ ಬರೇ ಹನ್ನೆರಡಾಣೆ

ದೊರೆಯುವ ಸ್ಥಳ: (1) **ನವಭಾರತ ಪುಸ್ತಕ ಭಂಡಾರ, ಉಡುಪಿ.**
(2) **ನವಯುಗ ಪ್ರೆಸ್, ಉಡುಪಿ.**

ನೋಟೀಸು

ಕಾಸ್ರಗೋಡು ಡಿ. ಮು. ಕೋರ್ಟಿನಲ್ಲಿ.
O. S. 202/43. R. E. P. 267/1947
ರಾಮ ಅಡಿಗ— ಅರ್ಜಿದಾರ
ಕಾಪ್ಪಂಮ ಕೂಡಾ— ರೆಸ್ಪಾಂಡೆಂಟ್ರು
2ನೇ ರೆಸ್ಪಾಂಡೆಂಟ ಕಾಸರಗೋಡು ತಾಲ್ಲೂಕು ಮಧೂರು ಗ್ರಾಮದ ಬನ್ನೂರಲ್ಲಿರುವ ಪಾಪೋಕ್ಷ್ಯಂ ಮ್ಮೈಯ್ಯರ ಮಗ ನಾರಾಯಣ ಪುಯ್ಯಾಗ ತಿಳಿಸುವುದೇನೆಂದ್ರೆ.

ಮೇಲ್ಕಂಡ ಅಪ್ಲಿಕ್ಯಾಶನಿಯಲ್ಲಿ ಅರ್ಜಿದಾರನು ಕೊಡಬೇಕಾದ ಬಾಕಿ ಸಲುವಾಗಿ ... ಬಗ್ಗೆ ತಾರೀಕು 17-1-1948ಕ್ಕೆ ಇಟ್ಟಿರುವುದರಿಂದ ಆ ದಿನ್ನ ನೀವು ಹಾಜರಾಗದಿದ್ರೆ ಎಕ್ಸಪಾರ್ಟ ಮಾಡಲಾಗುವುದು. ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿದೆ.

(Sd) **S. Laxman Rau**
Vakil for petitioner
Kasaragod, 12-1-48

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
L. C. 727/4[illegible]

ವಾದಿರು—1 ರಾಮಣ್ಣ ಸೆಟ್ಟಿ 2 ಲಕ್ಷ್ಮಿ ಸೆಟ್ಟಿ, ಸೌಕೂರು ಮಂಜಯ್ಯ ಸೇರಿಗಾರ ಅಳಿಯಂದಿರು. ಗುಲುವಾಡಿ ಗ್ರಾಮದ ಸೌಕೂರಲ್ಲಿರುವವರು.

ಪ್ರತಿವಾದಿರು—1 ಕೊಗ್ಗಭಟ್ಟ 3 ಲಕ್ಷ್ಮಿ ನಾರಾಯಣ ಭಟ್ಟ, ನಾಗಪ್ಪ ಭಟ್ಟರ ಮಕ್ಕಳು, ಕೋಟೇಶ್ವರ ಗ್ರಾಮದಲ್ಲಿರುವವರು.

ಸದ್ರಿ ವಾದಿರು 1-3ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ ವಾದಿರು ವಾದಿರಾಗಿ ಪ್ರತಿವಾದಿರಿಂದ ಹಲೇವಾದೇವಿ ಬಾಬ್ತು ಹಣ ಬಡ್ಡಿ ಕೂಡ ರೂಪಾಯಿ 213-0-7ನ್ನು ಪ್ರತಿವಾದಿರಿಂದ ವಸೂಲುಮಾಡಿಕೊಳ್ಳುವರೆ ವಾದಿರು ಮೇಲಿನ ಕೋರ್ಟಿನಲ್ಲಿ ಫಿರ್ಯಾದಿ ಮಾಡಿದ ಮೇರೆಗೆ ಅದರ ವಿಚಾರಣೆಯು ತಾರೀಕು 27-1-1948ಕ್ಕೆ ಇಡಲಾಗಿದೆ. ಆ ಕುರಿತು ಯೇನಾದರೂ ತಕರಾರು ಇದ್ದರೆ ಮೇಲಿನ ತಾರೀಕು ದಿವಸ ಸದ್ರಿ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.ತಿಳಿದಿರುವದು.

(S. d) **S. S, Kolkeba[illegible]**
Advocate for plf

Camp. Coondapoor
Date 12-1-48

ದ. ಕ. ಜಿಲ್ಲೆಯ ಆಹಾರ ಪರಿಸ್ಥಿತಿ

ಶ್ರೀ ಕೆ. ಆರ್. ಕಾರಂತರ ಪ್ರಸ್ತಾವನೆ

ಕಳೆದ ವರುಷ ಅಧಿಕಾರಿಗಳು ಆಹಾರ ಸಂಗ್ರಹಣ ವಿಧಾನದಲ್ಲಿ ಅನುಸರಿಸಿದ ಅಕ್ರಮ ಧೋರಣೆಯನ್ನು ಜಿಲ್ಲೆಯ ಶಾಸನ ಸಭಾ ಸದಸ್ಯರಾದ ನಾವು ಆಹಾರ ಮಂತ್ರಿಗಳ ದೃಷ್ಟಿಗೆ ತಂದೆವು. ಅನಂತರ ಇಲ್ಲಿಯ ಮತ್ತು ಮದ್ರಾಸಿನ ಪತ್ರಿಕೆಗಳಲ್ಲಿ ಅವನ್ನು ವಿಶದಗೊಳಿಸಿದೆವು. ಆದರೆ ನಮ್ಮ ಹೇಳಿಕೆಗಳೆಲ್ಲ ಅರಣ್ಯರೋದನವಾದುವು; ನಾವು ಸೂಚಿಸಿದ ಸಂಕಟಗಳಲ್ಲಿ ಒಂದೇ ಒಂದನ್ನಾದರೂ ಸರಕಾರ ಪರಿಹರಿಸಲಿಲ್ಲ. ಕಳೆದ ವರ್ಷಕ್ಕಿಂತಲೂ ಉಗ್ರವಾಗಿ ಈ ವರುಷ ಅಧಿಕಾರಿಗಳು ಆಹಾರ ಸಂಗ್ರಹಣ ಕಾರ್ಯವನ್ನು ಕೈಗೊಂಡರು. ರೈತರ ಉಪಯೋಗಕ್ಕೆಂದು ಕಳೆದ ವರ್ಷ ಎಂಟು ತಿಂಗಳಿಗೆ ಬೇಕಾದಷ್ಟು ಧಾನ್ಯವನ್ನು ಬಿಟ್ಟಿದ್ದರೆ ಈ ವರ್ಷ ಕೇವಲ ನಾಲ್ಕು ತಿಂಗಳಿಗೆ ಬೇಕಾದುದನ್ನು ಮಾತ್ರ ಬಿಟ್ಟಿರುವರು. ಬೇಸಾಯಗಾರನ ಕುಟುಂಬ ಪೋಷಣೆಗೂ, ಅವನ ಕೃಷಿ ವೆಚ್ಚಕ್ಕೂ ಅಗತ್ಯವೆನಿಸುವುದನ್ನು ಅವನಲ್ಲಿಯೇ ಬಿಡಬೇಕೆಂದೂ ಆಹಾರ ಮಂತ್ರಿಗಳಿಗೆ ನಾವು ಮಾಡಿದ ವಿನಂತಿಗೆ ಪುರಸ್ಕಾರ ದೊರೆಯಲಿಲ್ಲ. ಕೆಳಗಿನ ದರ್ಜೆಯ ಅಧಿಕಾರಿಗಳಿಗೆ ಮೇಲಿನ ಸ್ಥಾನಗಳನ್ನು ಕೊಡುವಾಗ, ಆಹಾರ ಸಂಗ್ರಹಣದಲ್ಲಿ ಅವರು ಕೈಗೊಂಡ ಕಾರ್ಯವನ್ನು ಪರಿಶೀಲಿಸಲಾಗುವುದೆಂಬ ಅಪ್ಪಣೆ ಹೊರಟಿದೆ.

ಈ ಸಂಗ್ರಹಣ ಧೋರಣೆಯು ಸಂಪೂರ್ಣವಾಗಿ ಅಂದಾಜುಮಾಡಿದ ೪೦ ಸಾವಿರ ಟನ್ನು ಧಾನ್ಯದಲ್ಲಿ ೩೩ ಸಾವಿರ ಟನ್ನುಗಳಷ್ಟು ಕಳೆದ ನವೆಂಬರ ಡಿಸಂಬರ ತಿಂಗಳುಗಳಲ್ಲಿ ಸಂಗ್ರಹವಾಗಿದೆ. ಎರಡನೆ ಬೆಳೆ ೨೦ ಸಾವಿರ ಟನ್ನುಗಳಷ್ಟೆಂದು ಅಂದಾಜು ಮಾಡಲಾಗಿದೆ. ಹಿಂಗಾರು ಮಳೆ ಸರಿಯಾಗಿ ಬಾರದುದರಿಂದ ಈ ಅಂದಾಜಿನ ಅರ್ಧಾಂಶವಾದರೂ ದೊರೆಯುವುದು ಕಷ್ಟ. ಸಾಧಾರಣವಾಗಿ ಈ ಜಿಲ್ಲೆಯಲ್ಲಿ ೧೪೦೦೦ ೧೫ ಸಾವಿರ ಟನ್ನುಗಳಷ್ಟು ಕೊರತೆ ಬೀಳುತ್ತಿದ್ದರೆ ಈ ವರ್ಷ ೨೫೦೦೦ ೩೦ ಸಾವಿರ ಟನ್ನುಗಳಷ್ಟು ಆಹಾರಾಭಾವ ತಲೆದೋರುವುದು.

ಈಗ ಸರಕಾರ ನಿಯಂತ್ರಣವನ್ನು ಕೈಗೊಂಡಿದೆ. ಡಿಸೆಂಬರ ೨೫ರಿಂದ ಹಸುಗೆಯನ್ನು ಗ್ರಾಮಗಳಲ್ಲಿ ವಿಸರ್ಜಿಸಬೇಕೆಂದು ರೆವಿನ್ಯೂ ಬೋರ್ಡಿನ ಆಜ್ಞೆಯಾಗಿದೆ. ಹಳ್ಳಿಗಳಲ್ಲಿ ಇನ್ನೂ ಒಂದೆರಡು ವಾರ... ಬಳಿಕ ಹಸುಗೆಯ ಕ್ರಮ ಉಳಿಯಲಾರದು. ಈ ಜಿಲ್ಲೆಯಿಂದ ೧೦ ಸಾವಿರ ಟನ್ನುಗಳಷ್ಟು ಧಾನ್ಯಗಳನ್ನು ಮಲಬಾರಿಗೆ ಕಳುಹಿಸಬೇಕೆಂದು, ಜಿಲ್ಲಾ ಅಧಿಕಾರಿಗಳು ಪ್ರತಿಪಾದಿಸಿದರೂ ಜಿಲ್ಲೆಯ ಹಿತವನ್ನು ಅವಗಣಿಸಿ, ಸರಕಾರ ಕಳುಹಲಿಕ್ಕೆ ಆಜ್ಞಾಪಿಸಿದೆ. ಈಗಾಗಲೇ ೨೫೦೦ ಟನ್ನುಗಳು ಹೋಗಿವೆ; ಪ್ರತಿನಿತ್ಯ ಸುಮಾರು ೩೦೦ ಟನ್ನುಗಳಷ್ಟು ಹೋಗುತ್ತಿವೆ. ಗ್ರಾಮೀಣ ಹಸುಗೆಯನ್ನು ರದ್ದುಗೊಳಿಸಿದುದರಿಂದ ಜಿಲ್ಲೆಯಲ್ಲಿ ಸಂಗ್ರಹಣ ವಿತರಣ ಕಾರ್ಯಗಳನ್ನು ನಡೆಸುತ್ತಿದ್ದ ಜಿಲ್ಲಾ ಸಹಕಾರಿ ಸಂಘದ ಸ್ಟೋರುಗಳನ್ನು ಕ್ರಮೇಣ ಮುಚ್ಚಬೇಕಾಗುವುದು. ಈ ಜಿಲ್ಲೆಯ ೭೯೯ ಹಳ್ಳಿಗಳಿಗೆ ೨೦೧ ಸ್ಟೋರುಗಳಿವೆ, ಇವುಗಳಲ್ಲಿ ೭೪ ಈಗಾಗಲೇ ಮುಚ್ಚಲ್ಪಟ್ಟಿವೆ. ೯೯ ಸ್ಟೋರುಗಳಲ್ಲಿ ರುವ ದಾಸ್ತಾನು ಮುಗಿದೊಡನೆಯೇ ಮುಚ್ಚಲ್ಪಡುವುವು. ಇನ್ನು ಬಾಕಿ ಉಳಿವುದೆಂದರೆ ಕರಾವಳಿಯ ಪ್ರದೇಶಗಳಲ್ಲಿ ಹೆಚ್ಚಾಗಿರುವ ೩೩ ಸ್ಟೋರುಗಳು. ಈ ಸ್ಟೋರುಗಳಿಂದ ನಗರಗಳಿಗೆ ಆಹಾರವನ್ನು ಒದಗಿಸಲೋಸುಗ ದಾಸ್ತಾನಿರುವ ಧಾನ್ಯಗಳನ್ನೆಲ್ಲಾ ಕೇಂದ್ರ ಡಿಪೋಗಳಿಗೆ ಒಯ್ಯಲಾಗುತ್ತಿದೆ. ಇನ್ನು ಹಳ್ಳಿಗಳಲ್ಲಿ ವಾರಕ್ಕೊಂದು ಸಲ ಹಸುಗೆಯನ್ನು ಕೊಡದೆ ದಿನಂಪ್ರತಿ ಕೊಡಬೇಕೆಂಬ ಆಜ್ಞೆಯಿಂದ ಪ್ರತಿನಿತ್ಯ ಹಸುಗೆಗಾಗಿ ಹಳ್ಳಿಗರು ತಮ್ಮ ಮನೆಗಳಿಂದ ದೂರದ ಡಿಪೋಗಳಿಗೆ ಹೋಗಬೇಕಾಗಿ ಬರುವುದರಿಂದ ತುಂಬಾ ಅಡಚಣೆಗೆ ಕಾರಣವಾಗಿದೆ.

ನಿಸಿಯಂತ್ರಣಕ್ಕೆ ಪ್ರಧಾನ ಕಾರಣರಾದ ಮಹಾತ್ಮಾಜಿಯವರು ಗ್ರಾಮೀಣ ಸ್ಥಳಗಳಿಂದ ಉಳಿತಾಯವನ್ನು ಬೇರೆಡೆಗಳಿಗೆ ಒಯ್ಯಬಾರದೆಂದು ಎಚ್ಚರಿಕೆ ಕೊಟ್ಟಿರುವರು. ಜಿಲ್ಲೆಯಲ್ಲಿ ವಿಸ್ತೃತ ರೀತಿಯ ಉಪವಾಸ, ಸಾವು ಮತ್ತು ಕಾಳಸಂತೆಗಳಿಗೆ ಕಾರಣವೆನಿಸಿದ ಅಂಶಗಳು ಈಗ ಚಟುವಟಿಕೆಗಳನ್ನು ಆರಂಭಿಸಿವೆ. ಬೆಳೆಯ ಹೆಚ್ಚಿನ ಅಂಶವನ್ನು ಸರಕಾರವು ಸಂಗ್ರಹಿಸಿರುವುದರಿಂದ ಬೇಸಾಯಗಾರರಲ್ಲಿಯೂ ಕೂಲಿಕಾರರಲ್ಲಿಯೂ ಧಾನ್ಯಗಳಿಲ್ಲ. ಹಸ್ತಗಳಲ್ಲಿ ಸಂಗ್ರಹಿಸಿದ ಆಹಾರವನ್ನು ಗ್ರಾಮೀಣ ಹಸುಗೆ ಮತ್ತು ಕೊರತೆಯಿರುವ ಮೂರು ನಗರಗಳ ಉಪಯೋಗಕ್ಕಾಗಿ ಬಳಸಬೇಕಾಗಿತ್ತು. ಈ ದಾಸ್ತಾನನ್ನು ಸಹಾ ಹಳ್ಳಿಗಳಿಂದ ರವಾನಿಸಿ, ಡಿಪೋಗಳು ಮುಚ್ಚಲ್ಪಡುತ್ತಿವೆ.

ಸರಕಾರ ತನ್ನ ತಪ್ಪನ್ನು ತಿಳಿದುಕೊಂಡು, ಸರಿಪಡಿಸಲು ಮುಂದೆ ಯತ್ನಿಸಿದರೂ, ಒಮ್ಮೆ ಮುಚ್ಚಿದ ಡಿಪೋಗಳನ್ನು ಮರಳಿ ತೆರೆಯುವುದು ಕಷ್ಟ. ೩೦ ಸಾವಿರ ಟನ್ನುಗಳಷ್ಟು ಆಹಾರ ಕೊರತೆ ಈ ಜಿಲ್ಲೆಯಲ್ಲುಂಟಾಗಬಹುದು. ಈಗ ಸ್ವಯುಕ್ತಿಕವಾಗಿ ಮಾರಾಟಕ್ಕೆ ದಾಸ್ತಾನು ಇರುವುದೆಂದರೆ ೩ ಸಾವಿರ ಟನ್ನುಗಳು ಮಾತ್ರ. ಸರಕಾರ ಬೆಲೆ ನಿಶ್ಚಯಿಸಿದ್ದ ಕಾರಣದಿಂದ ಇದರ ಕೊಳು ಕೊಡೆಗಳಾಗಿಲ್ಲ. ಈ ಅಂಶಗಳನ್ನೆಲ್ಲಾ ಪರಿಶೀಲಿಸಿದರೆ ಈ ಜಿಲ್ಲೆಯ ದರಿದ್ರ ವರ್ಗದ ಜನರ ಭವಿತವ್ಯವು ಉಪವಾಸ ಮತ್ತು ಸಾವುಗಳೆಂದು ಹೇಳದಿರಲಾಗದು. ಆ ಭವಿಷ್ಯ ಬಹು ದೂರದಲ್ಲಿಲ್ಲ. ಹಸುಗೆಯನ್ನು ನಿಲ್ಲಿಸಿದೊಡನೆಯೇ ಉಪವಾಸ ಆರಂಭವಾಗುವುದು. ನಿನ್ನೆ ದಿನ ಸುಳ್ಯದಿಂದ ಇಬ್ಬರು ಹಳ್ಳಿಗರು ತಮ್ಮ ಸಂಕಟಗಳನ್ನು ಅರಿಕೆ ಮಾಡಲು ನನ್ನ ಬಳಿಗೆ ಬಂದಿದ್ದರು.

ಸರಕಾರವು ಜಿಲ್ಲೆಯ ಪರಿಸ್ಥಿತಿಯನ್ನು ಅಲಕ್ಷ್ಯಿಸಿ ನಿರಾದರಣೀಯವಾದುದನ್ನು ಕೈಗೊಳ್ಳುವುದೇ? ಒಂದೇ ಒಂದು ದಿನ ವಿಳಂಬಿಸಲು ಬರುವಂತಿಲ್ಲ.

ಬೇಗ ಚಂದಾದಾರರಾಗಿರಿ!

3ನೇ ಪುಷ್ಪ

ಸ್ವಾತಂತ್ರ್ಯಕ್ಕಾಗಿ ಇಂಗ್ಲೀಷರೊಡನೆ ಮೊದಲು ಹೋರಾಡಿದ ಶೂರನಾದ-ಕನ್ನಡ ಕೇಸರಿ

ಸಂಗೊಳ್ಳಿ ರಾಯಣ್ಣ

(ಸಾಧ್ಯ ಸಂಗೀತ ಐತಿಹಾಸಿಕ ನಾಟಕ)

ಬೆಲೆ ೧-೮-೦

ಮುಂಬರುವ ಪುಷ್ಪ!

ವಿಜಯನಗರ ಸಾಮ್ರಾಜ್ಯ

(ಐತಿಹಾಸಿಕ ನಾಟಕ)

ಪ್ರೊ. ರಂ. ಶ್ರೀ. ಮುಗಳಿಯವರ ಕೃತಿ.

ಬೆಲೆ ೧-೮-೦

ಜನವರಿ ತಿಂಗಳ ಕೊನೆಗೆ ಪ್ರಕಟವಾಗಲಿದೆ.

ವಾ. ಚಂದಾ (ಅ. ವೆ. ಸೇರಿ) ೪ ರೂ.

ವರುಷದಲ್ಲಿ 3 ಪುಷ್ಪಗಳು.

ಸಂಪಾದಕರು: ಪ್ರೊ. ಟಿ. ಹಾವನೂರು(?)

ವಿಜಯ ಗ್ರಂಥಮಾಲೆ

ಗಣಪತಿ ಬೀದಿ-ಬೆಳಗಾವಿ.

ಮಂಗಳೂರು.

ಜಿಲ್ಲಾ ರೈತ ಸಮ್ಮೇಳನ— ಈ ಜಿಲ್ಲೆಯ ಯಾವತ್ತೂ ರೈತರ ಸಮ್ಮೇಳನವು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ಬೇಗನೆ ಓರಿಯದ್ದ(?) ಕಂದಾಯ ಮಂತ್ರಿ ಶ್ರೀ ಕಾಳ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಲಿದೆಯೆಂದು ವಿಶ್ವಸನೀಯವಾಗಿ ತಿಳಿದುಬಂದಿದೆ.

ಕಡವುಗಳ ಹರಾಜು—೧೯೪೮—೪೯ನೇ ವರ್ಷದ ಬಗ್ಗೆ ಕಡವುಗಳ ಬಹಿರಂಗ ಹರಾಜು ಈ ಕೆಳಗೆ ಕಾಣಿಸಿದ ತಾಲೂಕುಗಳಲ್ಲಿ ಅಲ್ಲಿಯೇ ಸೂಚಿಸಲಾದ ಆಯಾಯ ದಿನಗಳಲ್ಲಿ ನಮೂದಿಸಲ್ಪಟ್ಟ ಅಧಿಕಾರಿಗಳಿಂದ ನಡೆಯುವುದೆಂದು ಜಿಲ್ಲಾ ಕಲೆಕ್ಟರರು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುತ್ತಾರೆ: ೧. ಮಂಗಳೂರು ತಾಲೂಕು—ಹೈವೇ ಎಸಿಸ್ಟೆಂಟ್ ಇಂಜಿನಿಯರರ ಆಫೀಸಿನಲ್ಲಿ ಜನವರಿ ತಾ. ೧೫ನೇ ಗುರುವಾರ. ೨. ಕಾಸರಗೋಡು ತಾಲೂಕು—ಕಾಸರಗೋಡು ಎಸಿಸ್ಟೆಂಟ್ ಇಂಜಿನಿಯರರ ಆಫೀಸಿನಲ್ಲಿ ಜನವರಿ ತಾ. ೧೭ನೇ ಶನಿವಾರ ೩. ಪುತ್ತೂರು ತಾಲೂಕು—ಪುತ್ತೂರು ಎಸಿಸ್ಟೆಂಟ್ ಇಂಜಿನಿಯರರ ಆಫೀಸಿನಲ್ಲಿ, ಜನವರಿ ೨೦ನೇ ಮಂಗಳವಾರ. ೪. ಉಡುಪಿ ತಾಲೂಕು—ಉಡುಪಿ ಎಸಿಸ್ಟೆಂಟ್ ಇಂಜಿನಿಯರರ ಆಫೀಸಿನಲ್ಲಿ, ಜನವರಿ ತಾ. ೨೨ನೇ ಗುರುವಾರ. ೫. ಕುಂದಾಪುರ ತಾಲೂಕು—ಕುಂದಾಪುರ ಹೈವೇ ಸುಪರ್ ವೈಜರರ ಆಫೀಸಿನಲ್ಲಿ, ಜನವರಿ ತಾ. ೨೬ನೇ ಸೋಮವಾರ. ೬. ಕಾರ್ಕಳ ತಾಲೂಕು—ಕಾರ್ಕಳ ಸುಪರ್ ವೈಜರರ ಆಫೀಸಿನಲ್ಲಿ, ಜನವರಿ ತಾ. ೨೮ನೇ ಬುಧವಾರ.

ರೈತರ ಸಮ್ಮೇಳನ—ಬಂಟ್ವಾಳದಲ್ಲಿ ತಾ. ೧೮-೧-೪೮ರಲ್ಲಿ ಸೇರಲಿರುವ ಮಂಗಳೂರು ತಾಲೂಕು ರೈತ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ಎಸ್. ಎನ್. ಹೊಳ್ಳರು ವಹಿಸಲಿರುವರೆಂದು ತಿಳಿದುಬರುತ್ತದೆ.

ಭಾಷಣಗಳು—ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಶಾಲೆಯಲ್ಲಿ ತಾ. 2ನೇ ಸಂಜೆ ಮೈಸೂರಿನ ಶಾಸನಸಭಾ ಸದಸ್ಯೆಯಾದ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ಕರ್ನಾಟಕ ಏಕೀಕರಣದ ಕುರಿತು ಭಾಷಣ ಮಾಡಿದರು. ಮುಖ್ಯ ಅಧ್ಯಕ್ಷತೆ ಶ್ರೀಮತಿ ಕೆ. ರಾಧಾಬಾಯಿ, ಎಲ್. ಎನ್. ರಾಯರು ಭಾಷಣಗಾರ್ತಿಯ ಪರಿಚಯ ಮಾಡಿದರು. ಮರುದಿನ ಶ್ರೀ ಕುಳುಕುಂದ ಶಿವರಾಯರು 'ಭಾರತದಲ್ಲಿ ಮಹಿಳೆಯರ ಚಳವಳಿ' ಯ ಕುರಿತು ಮಾತನಾಡಿದರು.

ಜಿಲ್ಲಾ ಪ್ರೆಸ್ ಕೆಲಸಗಾರರ ಪ್ರಥಮ ಸಮ್ಮೇಳನವು ತಾ. ೪ರಂದು ಮೈದಾನದಲ್ಲಿ ಶ್ರೀ ಕುಳಕುಂದ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿ ಬಿಜಾಪುರದ ಜನಾಬ್ ನಬಿಸಾಹೇಬ್ ಬಾಲಸಿಂಗ ಮಾಸ್ತರರ ಭಾಷಣವಾಯಿತು. ಬೇರೆಬೇರೆ ಕಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದ ಮೇಲೆ ಹಲವಾರು ಠರಾವುಗಳಾದುವು.

ಸಾಹಿತಿಗಳ ಸಭೆ—ತಾ. ೪ರಲ್ಲಿ ಬಿಸೆಂಟ್ ಶಾಲೆಯಲ್ಲಿ ನಗರದ ಲೇಖಕರ ಸಭೆಯೊಂದು ಜರಗಿತು. ಅತಿಥಿಗಳಾದ ವಿಜಾಪುರದ ಜನಾಬ್ ನಬಿಸಾಹೇಬ್ ಬಾಲಸಿಂಗ ಮಾಸ್ತರ್, ಶ್ರೀ ಜಾದ್ರಿ ರಾಮಣ್ಣ ಶ್ರೀ ಕುಳುಕುಂದ ಶಿವರಾಯರು ಉಪಹಾರಾನಂತರ ಭಾಷಣವನ್ನು ಮಾಡಿದರು.

ಅಖಿಲ ಭಾರತದ ಮಹಿಳಾ ಪರಿಷತ್ತಿನ ನಾಯಕಿಯರಾದ ಶ್ರೀಮತಿಗಳಾದ ಕಮಲಾದೇವಿ, ಕಾಮೇಶ್ವರಿ ಅಮ್ಮ, ನಾಡಿಯ, ಊರ್ಮಿಳಾ ಮೇಥಾ ಮೊದಲಾದವರು ತಾ. ೪ರಲ್ಲಿ ಮಂಗಳೂರಿಗೆ ಬಂದು ಕೆಲವು ಮಹಿಳಾ ಸಂಸ್ಥೆಗಳನ್ನು ಸಂದರ್ಶಿಸಿ ತೆರಳಿದರು.

ಶ್ರೀ ಶ್ರೀಗಳವರ ಆರಾಧನೆ

ಮದರಾಸು—ವೃಂದಾವನಸ್ಥರಾದ ಶ್ರೀಮಾನ್ ರಘುವರಾನ್ಯತೀರ್ಥ ಶ್ರೀಪಾದಂಗಳವರ ಆರಾಧನೆಯು ತಾ. ೨೮-೧೨-೪೭ನೇ ರವಿವಾರ ಶ್ರೀ ಶ್ರೀಗಳವರು ಸಮಾಧಿ ಹೊಂದಿದ ಪುಣ್ಯಕ್ಷೇತ್ರವಾದ ಘಟಿಕಾಚಲದಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಮದರಾಸಿನ ಪ್ರಾಮುಖ್ಯ ಕನ್ನಡಿಗರೆಲ್ಲರೂ ನೆರೆದಿದ್ದರು 'ವುಡ್‌ಲೇಂಡ್ಸ್' ಮಾಲಕರಾದ ಶ್ರೀ ಕೃಷ್ಣರಾಯರು ಶ್ರದ್ಧೆಯಿಂದ ಸಲಕರಣೆಗಳನ್ನೊದಗಿಸಿ ಸಮಾರಂಭವನ್ನು ವೈಭವದಿಂದ ಜರಗಿಸಿದರು; (ಶ್ರೀಶ್ರೀಗಳವರ ಆರೋಗ್ಯಕ್ಕೋಸ್ಕರ ಅವರು ಪಟ್ಟ ಶ್ರಮವು ಅಪ್ರತಿಮವಿತ್ತು.) 'ಮೊಡರ್ನ್ ಕೆಫೆ' ಮಾಲಕರಾದ ಶ್ರೀ ಕೆ. ಸೀತಾರಾಮರಾಯರು ಉದಾರ ಮನಸ್ಸಿನಿಂದ ಧನ ಜನ ಸಹಾಯವನ್ನಿತ್ತಿದ್ದರು; ಶ್ರೀ ಶ್ರೀಯವರ ವೃದ್ಧ ಮಾತೆಗೆ, ತೀರ್ಥಯಾತ್ರೆ ಬಗ್ಗೆ ಧನಸಹಾಯವನ್ನೂ ಇತ್ತಿದ್ದಾರೆ. ಶ್ರೀ ಅದಮಾರು ಮಠಾಧೀಶರು ತಾ. ೪ರಲ್ಲಿ ಉಡುಪಿಗೆ ಹೊರಟಿರುವರು.

The Karnataka Bank Ltd., Coondapoor

Auction Sale Notice

ಈ ಕೆಳಗೆ ಕಾಣಿಸಿದ ಅಸಾಮಿಗಳಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳ ಪೈಕಿ 1, 2. 3ನೇ ಯವರಿಗೆ ಜ್ಯಾರಿ ಆಗಿಯೂ, 4ನೇ ಯವರು ಸ್ವೀಕರಿಸದೆ ವಾಪಸು ಬಂದಿರುವುದರಿಂದಲೂ, ಸದರಿ ಅಸಾಮಿಗಳು ಈಡಿಟ್ಟ ನಗಗಳು ತಾರೀಕು 20-1 48ನೇ ಮಂಗಳವಾರ ಯಾ ಬೇಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಃ ನೋಟೀಸು ವಗೈರೆ ಕೊಡದೆ ಮಧ್ಯಾಹ್ನ 1 ಘಂಟೆಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾರಾಟ ಮಾಡಲ್ಪಡುವವು.

ಸಂ.	ಸಾಲದ ನಂಬ್ರ	ಅಸಾಮಿಯ ಹೆಸರು ವ ನಿವಾಸ	ಸಾಲದ ನೆಬಲಗು ರೂ.	ಅ	ಪೈ.
1	258·44	ಶ್ರೀ ಮಾರಹೇಶ್ವರ ಭಟ್ಟ, ಕೇಶ ಭಟ್ಟರ ಮಗ, ಕಮಲಶಿಲೆ ಗ್ರಾಮ; ಶಂಕರನಾರಾಯಣ ಪೋಸ್ಟು	65	0	0
2	228/48	ಶ್ರೀ ಜಿ ಗಣಪತಿ ಶೇಟ್, ಶ್ರೀನಿವಾಸ ಶೇಟರ ಮಗ, ಕುಂದಾಪುರ	103	0	0
3	3/47	ಶ್ರೀ ಎ. ನಾರಾಯಣ ಶೆಟ್ಟಿ, ... ಶೆಟ್ಟಿ ಮಗ, ಗುಮ್ಮಸ್ತರು, ಕುಂದಾಪುರ	45	0	0
4	291·44	ಶ್ರೀ ಜಿ ಗೋಪಾಲಕೃಷ್ಣ ರಾವ್, ಕಸ್ಬಾ ತಪಾರ್ ಶ್ಯಾನುಭಾಗ, ಕುಂದಾಪುರ	29	0	0

ಕುಂದಾಪುರ,
8—1—48

V Narayana Holla,
Agent.

P. S. Nayak,

Proprietor.

Universal Trading Co.

Court Road. UDIPI.

Wishes all his customers and wellwishers a happy & Bright New Year.

Sole Distributor for.

Pangal Borax Toilet Soap

Omega Bar Soap

Have a trial order to-day.

ದಕ್ಷಿಣ ಕನ್ನಡ

ಕಾರ್ಕಳ ಈದ:—ಶ್ರೀ ಮುಜಲ್ಪ್ಯ ಯ ಗ್ರಾ ಥಮಿಕ ಶಾಲೆಯ ಹೊಸ ಕ ಟ್ಟಡದ ಉದ್ಘಾಟನಾ ಸಮಾರಂಭವು ತಾ. ೨ 1 48ರಲ್ಲಿ ಶ್ರೀಯುತ ಯಂ. ಶಿವರಾಮ ರಾವ B. A. L. T. ಇವರ ನೇತೃತ್ವದಲ್ಲಿ ಶ್ರೀಯುತ ಜಿ. ಗೋಪಾಲಯ್ಯನವರಿಂದ ನೆ ರವೇರಿಸಲ್ಪಟ್ಟಿತು. ಶ್ರೀ ಯಂ. ಧರ್ಮರಾಜ ಅಧಿಕಾರಿಯವರಿಂದ ರಾಷ್ಟ್ರಧ್ವಜಾರೋಹಣ, ಗ್ರಾಮದ ಉತ್ಪತ್ತಿ, ಕೈಗಾರಿಕೆ ಮತ್ತು ಜಾ ನುವಾರು ಪ್ರದರ್ಶನ, ರಾಷ್ಟ್ರಸೇವಾದಳದವರ ಕವಾಯತು ಪ್ರದರ್ಶನ, ಸಾಯಂಕಾಲ 6 ಘಂ ಟೆಗೆ ಶ್ರೀಯುತ ಕೆ. ಪಿ. ಜಿನರಾಜ ಹೆಗ್ಡೆಯ ವರ ಅಧ್ಯಕ್ಷತೆಯಲ್ಲಿ ಮಹಾಸಭೆ, ರಾತ್ರಿ ಹ ರಿಕಥಾ ಮತ್ತು ಯಕ್ಷಗಾನಗಳು ಜರಗಿ ದವು.

ಸುರತ್ಕಲ್:—ತಾ. 24-1 48ನೇ ಸಾಯಂಕಾಲ ವಿದ್ಯಾದಾಯಿನಿ ಹೈಸ್ಕೂಲಿನ ವರ್ಷಂತಿಯು ಶ್ರೀ ಎಚ್. ಸಿ. ಸಾಯನ್ಸ್, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜ ರಗುವುದು.

ಮೂಲ್ಕಿ:—ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಪ್ರತಿಷ್ಠಾ ದಿನಾಚರಣೆ ಯು ಸಬ್ ರಿಜಿಸ್ಟ್ರಾರ್ ಶ್ರೀ ಪಿ. ಸೀತಾ ರಾಮರವರ ಅಧ್ಯಕ್ಷತೆಯಲ್ಲಿ ವಿವಿಧ ಕಾ ರ್ಯಕ್ರಮಗಳಿಂದ ಜರಗಿತು

ಮಣಿಪುರ:—ಇಲ್ಲಿಯ ನೇತಾಜಿ ಯುವಕ ಸಂಘದ ಮಹಾ ಸಭೆಯು ತಾ. 1 1-1948ರಲ್ಲಿ ಶ್ರೀ ಯಂ ರಂಗನವರ ಅ ಧ್ಯಕ್ಷತೆಯಲ್ಲಿ ಜರಗಿತು. ಮಣಿಪುರ ಪರೀ ಲ್ ಪಿ. ಜೋಸಿ ಅಲ್ವರ ನಿಧನದ ಬಗ್ಗೆ ಸಂ ತಾಪ ಸೂಚನೆ ರವಾನು, ಅಕ್ಕಿಯ ರೇಶನ್ ಪದ್ಧತಿಯಿಂದ ಬಡವರ ಜೀವನಕ್ಕೆ ಧಕ್ಕೆ ತಗ ಲುವುದರಿಂದ, ಈ ವರುಷಾಂತ್ಯದ ಪರಗಾದ ರೂ ರೇಶನನ್ನು ಊರ್ಜಿತಪಡಿಸುವಂತೆ ಸರಕಾರವನ್ನು ಪ್ರಾರ್ಥಿಸಿಕೊಳ್ಳುವುದು ಎಂ ಬೀ ಸೂಚನೆಗಳು ಮಂಜೂರಾದುವು.

ಪೆರಡಾಲಿನಲ್ಲಿ ಜಾನುವಾರು ಪ್ರದರ್ಶನ

ತಾ. 4-1-48ರಲ್ಲಿ ಡಾ ... ಯನ್. ಶೀ ಟ್ಟಿಗಳವರ ಆಸ್ಪತ್ರೆಯಲ್ಲಿ ಪ್ರೇಮಸೂಟದ ಆಶ್ರಯದಲ್ಲಿ ಸ್ಥಳೀಯ ಪಂಚಾಯಿತಿ ಸಭೆ ಯೊಂದು ಶ್ರೀ ಕೆ. ಕೆ. ರೈ, ಸಿದ್ದಾಪ್ ಇವ ರ ಅಧ್ಯಕ್ಷತೆಯಲ್ಲಿ ಜರಗಿತು. ಪಡುಬೆಲ (ಬದಿಯಡ್ಕ) ಗ್ರಾಮದಲ್ಲಿ ಜಾನುವಾರು ಪ್ರ ದರ್ಶನವನ್ನು ಇದೇ ತಾ. 31-1-48ಕ್ಕೆ ಜರ ಗಿಸಬೇಕೆಂದು ನಿಶ್ಚಯವಾಯಿತು. ಬಹು ಮಾನಗಳನ್ನು ಕೊಡುವ ಬಗ್ಗೆ ಮದ್ರಾಸು ಸರಕಾರದವರಿಂದ ರೂ 200.- ಮಂಜೂರಾಗಿದೆ ನಿಧಿ ಸಂಗ್ರಹ ಪ್ರದರ್ಶನ ದ ವ್ಯವಸ್ಥೆಗಳನ್ನು ಮಾಡಲು ಶ್ರೀಗಳಾದ ಕೆ. ಕೆ. ರೈಗಳು (ಅಧ್ಯಕ್ಷರು) ಕೆ. ಬಾಬು ಶೆಟ್ಟರು (ಫಿರ್ಕಾಡೆವಲಪ್‌ಮೆಂಟ್ ಆಫೀಸ ರ್ ಕುಂಬಳೆ) (ಕಾರ್ಯದರ್ಶಿಗಳು ಮತ್ತು ಕೋಶಾಧಿಕಾರಿಗಳು); ಬಿ ಯನ್. ಶೆಟ್ಟಿ; ಪಿ ಕೃಷ್ಣ ಭಟ್ಟರು; ಮುಂದಿಗೆ ನಾರಾಯಣ ಭಟ್ಟರು ಮತ್ತು ಕೆ ಕೃಷ್ಣರಾಯರ ಸಮಿತಿ ಯು ನೇಮಕವಾಯಿತು.

ತಾ. 31 1 48ರ ಪೂರ್ವಾಹ್ನ ಜಾನುವಾ ರು ಪ್ರದರ್ಶನವೂ, ಅಪರಾಹ್ನ ಪ್ರೇಮಸೂ ಟದ ವಾರ್ಷಿಕೋತ್ಸವವೂ ಜರಗಲಿರುವುವು. ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಲು ಶ್ರೀ ತಿಮ್ಮರಾವ್ ಕಾರಂತರು ಒಪ್ಪಿರುವರು.

ಪೆರಡಾಲ—ನವಜೀವನ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 4-1-48ರಂದು ರಾವ್ ಬಹದ್ದೂರ್ ಯಂ. ಕೇಶವಪ್ಪಯ ವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಗ್ಗೆ ಪ್ರ ಭಾತ ಫೇರಿ ನಡೆದು ಶಾಲಾ ಮೈದಾನಿನಲ್ಲಿ ಶ್ರೀ. ಬಿ. ನಾರಾಯಣ ಶೆಣೈಯವರಿಂದ ಧ್ವ ಜವು ಏರಿಸಲ್ಪಟ್ಟಿತು. ತಿಂಡಿ ಸಿಹಿಹಂಚಿದ ಮೇಲೆ ಬೆ ಳಗ್ಗಿನ ಕಾರ್ಯಕ್ರಮವು ಮುಕ್ತಾಯವಾ ಯಿತು ಸಾಯಂಕಾಲ ಪ್ರಾರ್ಥನಾನಂತರ ಹೆಡ್ಮಾಸ್ಟರ ಶ್ರೀ. ಪಿ. ಸುಬ್ರಾಯ ಭಟ್ಟರು ಶಾಲಾ ವರದಿಯನ್ನು ಓದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈಗಿನ ವಿದ್ಯಾಭ್ಯಾಸ ಕ್ರ ಮವು ಸರಿಯಾಗಿಲ್ಲವೆಂದೂ, ಈಗಿನ ವಿದ್ಯಾ ಭ್ಯಾಸ ಕ್ರಮದಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಎಡೆ ಕೊಡಬೇಕೆಂದೂ ಸಂಸ್ಕೃತ ಭಾಷೆಯನ್ನು ಕಲಿ ಸಬೇಕೆಂದೂ ಮಕ್ಕಳು ಶಿಸ್ತು ಪಾಲಿಸುವ ರೀತಿಯಲ್ಲಿ ಅವರಿಗೆ ತರಬೇತಿ ಕೊಡಬೇಕೆಂ ದೂ ಹೇಳಿ, ಮಹಾತ್ಮಾಗಾಂಧಿಯವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕೆಂ ದರು ಆರಂಭದಲ್ಲಿ ಶಾಲಾ ಮೆನೇಜಿಂಗ್ ಸಮಿ ತಿಯ ಅಧ್ಯಕ್ಷರಾದ ಮಾಯಿಪಾಡಿಯ ರಾಜ ರಾದ ಶ್ರೀಮಂತ ರಾಜಾ ಶ್ರೀ ರಾಮವರ್ಮ ರಾಜರು ಸ್ವಾಗತ ಭಾಷಣ ಮಾಡಿದರು. ಕೊ ನೆಗೆ ವಿವಿಧ ವಿನೋದಾವಳಿಗಳು ನಡೆದುವು.

ಕುಂದಾಪುರದಲ್ಲಿ ಬಂಟರಯಾನೆ ನಾಡವರ ಸಂಘದ ಮಹಾಸಭೆ—

ತಾ 10-1-48ನೇ ಶನಿವಾರ ಮಧ್ಯಾಹ್ನ ಘಂ ಟೆ 3ಕ್ಕೆ ಸರಿಯಾಗಿ ಕುಂದಾಪುರ ಪಟ್ಟಣದಲ್ಲಿ ಇದಕ್ಕಾಗಿ ಕಟ್ಟಿಸಿದ ಭವ್ಯ ಸಭಾ ಮಂಟಪದ ಲ್ಲಿ ರಾವ್ ಬಹದೂರ್ ಎನ್. ಮಹಾಲಿಂಗ ಅದ್ಯಂತಾಯರ ಅಧ್ಯಕ್ಷತೆಯಲ್ಲಿ ಬಹು ವಿ ಜೃಂಭಣೆಯಿಂದ ಸಾಂಗವಾಗಿ ನೆರವೇರಿತು. ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಂದ ಪ್ರ ತಿನಿಧಿಗಳು ಆಗಮಿಸಿದ್ದರು. ಜನ ಸಂದಣಿಯ ಕಿಕ್ಕಿರಿದು ನೆರೆದಿತ್ತು. ತಳಿರು ತೋರಣಗಳಿಂದ ಅಲಂಕೃತವಾದ ವಿಶಾಲ ಚಪ್ಪರದ ಮಹಾ ದ್ವಾರದ ಉಭಯ ಪಾರ್ಶ್ವಗಳಲ್ಲಿ ಒಂದೆಡೆ ವ್ಯ ವಸಾಯ ಇಲಾಖೆಯವರ ಪ್ರದರ್ಶನಗಳೂ ಇನ್ನೊಂದೆಡೆ ಮದ್ರಾಸು ಸರಕಾರದ ಪಬ್ಲಿ ಕ್ ಹೆಲ್ತಿಗೆ ಸಮ್ಬಂಧವಾದ ಪ್ರಚಾರಕ್ಕೆ ಬೇ ಕಾದ ವ್ಯವಸ್ಥೆಯೂ ಇದ್ದು ಇದರಿಂದ ಚಪ್ಪ ರದ ಶೋಭೆಯು ಇನ್ನೂ ಹೆಚ್ಚು ನಂತಾಯಿ ತು. ಕಾರ್ಯಕ್ರಮದಂತೆ ಪ್ರಾರ್ಥನೆ, ಅಧ್ಯ ಕ್ಷರ ಆರಿಸುವಿಕೆ, ಸ್ವಾಗತ ಭಾಷಣ, ಅಧ್ಯಕ್ಷ ರ ಭಾಷಣ, (ಇಂಗ್ಲಿಷಿನಲ್ಲಿ ಇದನ್ನು ಶ್ರೀ ಮಾನ್ ಕಲ್ಲೆಯವರು ಸುರಸವಾಗಿ ಕನ್ನಡ ಕ್ಕೆ ಭಾಷಾಂತರಿಸಿದರು.) ಆ ಮೇಲೆ ಅಳಿಯ ಸಂತಾನ ಸುಧಾರಣ, ಕರ್ನಾಟಕ ಏಕೀಕರಣ ವೇ ಮೊದಲಾದ ಕೆಲವು ನಿರ್ಣಯಗಳು ಮಂ ಜೂರಾದವು. ಅನಂತರ ಶ್ರೀ ಎಸ್ಸ್. ರ ಮಂಜ ಯ್ಯ ಶೆಟ್ಟರು ಈ ಸಮಾರಂಭದಲ್ಲಿ ಸಕಲ ವಿ ಧದಿಂದ ಸಹಾಯವನ್ನಿತ್ತ ಎಲ್ಲಾ ಮಹನೀ ಯರಿಗೂ ಆಭಾರ ಸೂಚಿಸಿದರು. ನಂತರ ಶ್ರೀ. ಕೆ. ನಾರಾಯಣ ಶೆಟ್ಟರು ಮಾಡಿಕೊಂ ಡಿದ ವಿನೋದಗಳಿಂದ ಸಭೆಗಳಿಗೆ ಆನಂದವ ನ್ನುಂಟುಮಾಡಿದರು. ಮುಂದಿನ ಮಹಾ ಸಭೆಯನ್ನು ಕಾರ್ಕಳದವರು ಆಮಂತ್ರಿಸಿದ ರು ರಾತ್ರಿ ಘಂಟೆ 9ಕ್ಕೆ ಯಕ್ಷಗಾನ ನಾಟಕ ಅಂಗದ ಸಂಧಾನ ಮತ್ತು ಕೆಲವು ವಿನೋದ ಗಳು (ಬನ್ನಾಡಿ ಹೈಯರ್ ಎಲಿಮೆಂಟ್ರಿ ಶಾ ಲೆಯ ವಿದ್ಯಾರ್ಥಿಗಳಿಂದ) ಶ್ರೀ. ಬಿ. ಸುಬ್ಬಣ್ಣ ಹೆಗ್ಡೆಯರು ಮತ್ತು ಅವರ ಸಹೋದ್ಯೋಗಿ ಗಳ ಮೇಲ್ವಿಚಾರಣೆಯಿಂದ ಚೆಲುವಾಗಿ ಅಭಿನಯಿಸಿ ದರು. ಪಾತ್ರವಲ್ಲ, ಸಭಿಕರ ಮೆಚ್ಚಿಗೆಗೆ ಪಾತ್ರ ವಾಗಿ ಪಾರಿತೋಷಕಗಳನ್ನು ಪಡೆದರು. ನಂ ತರ ಭವನದ ನಿವಾಸಿಗಳು ನಿಜ ದಾಂಪತ್ಯ ಎಂಬ ನಾಟಕವನ್ನು ಉತ್ತಮವಾಗಿ ಅಭಿನ ಯಿಸಿದರು ನಾಟಕದ ಪಾತ್ರ ವರ್ಗದಲ್ಲಿ ಕೆಲ ವರಿಗೆ ಮತ್ತು ಸಂದ್ಯಾಟಗಳಲ್ಲಿ ಗೆದ್ದವರಿಗೆ ಶ್ರೀ. ಕೆ. ಟಿ. ಆಳ್ವರಿಂದ ಬಹುಮಾನ ಹಂಚ ಲಾಯಿತು.

ಬೇರೆ ಬೇರೆ ತಾಲೂಕುಗಳಿಂದ ಬಂದ ಪ್ರ ತಿನಿಧಿಗಳಿಗೆ ವಸತಿಯ ವ್ಯವಸ್ಥೆ, ಊಟ ಉಪ ಚಾರ ಇವುಗಳ ಏರ್ಪಾಡು ಪ್ರಶಂಸನೀಯ ವಾಗಿದೆ.

ಸಂಘಕ್ಕೆ (ಕುಂದಾಪುರ ಉಪವಿದ್ಯಾರ್ಥಿ ಭವನದ ಸಹಾಯಾರ್ಥವಾಗಿ) ರೂಪಾಯಿ ದತ್ತು ಸಾವಿರದ ವರೆಗೆ ವಂತಿಗೆ ವಸೂಲು ಬಂದಿದೆ ಎಂದು ತಿಳಿದು ಬರುತ್ತದೆ.

ಸ್ವಾಗತ ಗೀತೆ

(೧೯೪೭ನೇ ಡಿಸೆಂಬರ ೩೦)

ಧಾಟಿ:-ರಾಗ-ಕಾಂಬೋದಿ, ತಾಳ-ಝಂಪೆ

ಸ್ವಾಗತಂ 'ಕರ್ನಾಟಕ'ದ ಸಹೋದರರೇ!
ಸ್ವಾಗತಂ ಸಿರಿ 'ಭಾರತ' ಸುಭೋದಯರೇ!
ಇಂದಿನ 'ಸ್ವತಂತ್ರಭಾರತ'ದಲ್ಲಿ ನೆಲೆಸಲಾಗಿ
ಸಂಧಿಸುವ 'ಸಾಹಿತ್ಯ ಪರಿಷತ್ತ'ನಾಗಿ
ಬಂಧಿಕ್ಕೆ 'ಪ್ರಜಾಧಿಪತ್ಯ'ದ ಮಹೋತ್ಸವಕೆ
ಕುಂದಣದ ಚಂದನದೆ ಕಳೆ ಸಭಾಂಗಣದೆ!
ಸ್ವರ್ಣಭೂ 'ಸ್ವಾತಂತ್ರ್ಯ'ದೊಡನೆ ಸ್ವಜನಾ ಭ್ಯುದಯ
ವನ್ನು ಚಿಂತಿಸುವ 'ಸತ್ಯಾಗ್ರಹ'ದ ಹಡೆಯು!
ಕನ್ನಡದ 'ಹೈದರಾಬಾದಿ'ನ ಸುಯೋಧರೇ!
ಕನ್ನಡಿಗರೇ! ನೀವು ಬಂದಿರೀ! ಭಲರೇ!
'ಕರ್ನಾಟಕ ಪ್ರಾಂತ'ದೇಕೀರಣ ವಿಜಯ
ವನ್ನು ಸಾಧಿಸಿ 'ಮಹಾಕರ್ನಾಟಕ'ವನು
ಮನ್ನಿಸಲಿಕೆ ಮನ 'ಮುಂಬಯಿ'
ಸಂಸ್ಥಾನದಾ
ಕನ್ನಡದ ಮಲ್ಲರೇ! ಸುಕ್ಷೇಮವೇನು?
ಕನ್ನಡದ ದಡದೊಳದಗಿರುವ ಕನ್ನಡನಾಡ
ಗಡಿಗಡಿಗಿಂದಲಿಸುವವರ ಕರೆಯ ದೃಢ
ಬಲದ
ಕಡಲೊಡನೆಗಂಜದಾ ಬೆಡಗಿನಾ ಕೊಡಗಿನ
ಕಡುಗಲಿಗಳ್ಳಿಂದಿರೇ! ಸುಖದ ಪಯಣ!
'ವಿಶ್ವಕರ್ನಾಟಕ'ದ 'ತಾನ್'ಅಧ್ಯಕ್ಷತೆಯು
ವಿದ್ವತ್ಸಭೆ 'ನಮ್ಮ' ನಾಡಿನೇಳಿಗೆಯು!
ವಿಶ್ವಭಾರತದಲ್ಲಿ 'ಮದರಾಸ'ನೆಡೆಗೆ
'ವಿಶ್ವಕನ್ನಡಿಗ'ರೇ! ಬಂದುದಾನಂದ
ಮಹ್ಯ, ಕಂಕರ 'ಮಠ'ಗಳಲ್ಲಿ 'ಕೂಡಲಿ'
ನಾದ
ವೇದ್ಯ 'ಸಂಗಮ'ನಾದ 'ಕಾಪಿ'ನಾಲಯದ
ಶುದ್ಧ ಕನ್ನಡದ 'ಕಾಸರಗೋಡು' ಸ್ವಾಗತಕೆ
ಸಿದ್ಧವಿದೆ ಕರ್ನಾಟಕದ ಮಹೋತ್ಸವಕೆ
ಇಲ್ಲಿ 'ಭುವನೇಶ್ವರಿ'ಯ 'ಕನ್ನಡಾಂಬೆಯ
ಹರಕೆ
ಸಲ್ಲಿಸಲು ನೆರೆದ ಕನ್ನಡ 'ಭಕ್ತ' ಜನಕೆ
'ಮಲ್ಲಿಕಾರ್ಜುನ' ದೇವನಭಯವನು
ಕರುಣಿಸಲಿ
ಸಲ್ಲಲಿತ 'ವಿಜಯಲಕ್ಷ್ಮೀ'ರ್ನೊಲಿದಿರಲಿ!

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ

In the Court of the District Munsif of Puttur.

O. S. No. 325/1947
R. I. A. No. 1014/47

Sham Bhat, son of Maira Ishwara Bhat, residing in Kepu village, Puttur Taluk-Plaintiff
Vs
Vasudeva Sharma, son of Manipadavu Govinda Naika, residing in Kepu village, Puttur Taluk, Post Vittal—Defendant

To
The Defendant Vasudeva Sharma.

Notice is hereby given that the above named plaintiff has instituted the above suit against you for recovery of the sum of Rs. 473-0-9 due from you and also attached the moveables and immoveable properties of your right and the said suit and attachment petition stands posted to 16-1-1948 for hearing Therefore you are hereby informed that in case you have any objection to the same you must file the same before this court on the said date at 11 A. M. either in person or through a vakil, failing which the suit and the petition will be heard in your absence and you will be decreed and the suit will be declare and the attachment be made absolute

(By order of Court)

(sd) **P. Krishna Bhat**
(Vakil for Plaintiff)

Puttur 25-12-1947.



ಅಮೃತಾಂಜನ.
ತಲೆನೋವನ್ನೆ, ಶೀತ, ನೆಗಡಿ, ಉಳುಕು, ಸೆಳೆತ, ಕೀಲು ನೋವು, ಬೇನೆಗಳ ಕಡಿತ ಮತ್ತು ಎದೆನೋವು, ಗಾಯಗಳು ಬಹು ಶೀಘ್ರವಾಗಿ ವಾಸಿ ಮಾಡುವದು, ಹೀಗೆ ೬೦ ವರುಷದಿಂದ ಸಹಸ್ರ ಬಳಕೆಯಲ್ಲಿ ಬಂದಿದೆ. ಬಹಳ ನಂಬಿಕೆಯ ಔಷಧ ಎಲ್ಲಾ ರೋಗಗಳಿಗೂ ಸಹ, ಸುಗಂಧ, ತುಂಬಾ ಸುಲಭ ಬೆಲೆಯಲ್ಲಿ ಸಿಕ್ಕುವ ಔಷಧ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.



ಇದೇ ತಾ. **8-2-1948**ನೇ ರವಿವಾರ ಸಾಯಂ. ಘಂಟೆ **6**ಕ್ಕೆ ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ

ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಇವರ

✤ ಸಂಗೀತ ಕಚೇರಿ ✤

ಆಸ್ಥಾನ ವಿದ್ವಾನ್ ಶ್ರೀ. ಚೌಡಯ್ಯ ಇವರ ಪಿಟೀಲು ಶ್ರೀ. ಕಲ್ಪತಿ ರಾಮನಾಥನ್-ಇವರ ಮೃದಂಗ, ಶ್ರೀ. ಆಲಂಗುಡಿ ರಾಮಚಂದ್ರನ್ ಇವರ ಘಟವಾದ್ಯ.

ಟಿಕೇಟು ದರ: **ರೂ. 100, ರೂ. 25, ರೂ. 10, ರೂ. 5.**

ಈ ಬಾರಿ ಬೆಳಕಿಗೆ ಬಂದವರು!—

ಶ್ರೀ. ಪಿ. ಪಿ. ಪಿಳ್ಳೆ—ಜಾಗತಿಕ ಸಂಘದಲ್ಲಿ ಭಾರತ ಸರಕಾರದ ಖಾಯಂ ಪ್ರತಿನಿಧಿ, ಭಾರತ ಸರಕಾರವು ಕಾಶ್ಮೀರದ ಸಂಬಂಧವಾಗಿ ಪಾಕಿಸ್ತಾನದ ಮೇಲೆ ಜಾಗತಿಕ ಸಂಘದಲ್ಲಿ ದೂರು ಕೊಟ್ಟದ್ದು ಇವರ ಮುಖಾಂತರವೇ. ಆ ಕೋರ್ಟಿನಲ್ಲಿ ಭಾರತದ ವಕೀಲನಾಗಿ ಇದೇ ತಾ. ೧ರಲ್ಲಿ ಫಿರ್ಯಾದು ದಾಖಲು ಮಾಡಿದವರೂ, ಪ್ರಥಮವಾದ ಹೂಡಿದವರೂ ಇವರೇ.

ಮಿ. ಎಮ್. ಎ. ಯಚ್. ಇಸ್ಪಹಾನಿ—ಅಮೇರಿಕದಲ್ಲಿ ಪಾಕಿಸ್ತಾನದ ರಾಯಭಾರಿ ಮತ್ತು ಜಾಗತಿಕ ಸಂಘದಲ್ಲಿ ಅವರ ಪ್ರತಿನಿಧಿ. ಭಾರತ ಸರಕಾರದ ದೂರು ತನ್ನ ಸರಕಾರದ ಮೇಲೆ ಬಂದಾಗ ತಾ 6ರಲ್ಲಿ ತಮ್ಮ ಸರಕಾರದ ಪ್ರತಿನಿಧಿ ಮಂಡಲಿ ಬರುವುದಕ್ಕೂ ವಾದ ವಿಚಾರಿಸುವುದಕ್ಕೂ ಸಮಯ ಬೇಕೆಂದು ವಾದಿಸಿ, ಒಪ್ಪಿಗೆ ಪಡಕೊಂಡವರು.

ಶ್ರೀ ಎನ್. ಗೋಪಾಲ ಸ್ವಾಮಿ ಅಯ್ಯಂಗಾರ್—ಜಾಗತಿಕ ಸಂಘದಲ್ಲಿ ಪಾಕಿಸ್ತಾನದ ಮೇಲೆ ಮಾಡಿರುವ ವ್ಯಾಜ್ಯವನ್ನು ನಡೆಸುವುದಕ್ಕಾಗಿ ಭಾರತ ಸರಕಾರದ ಪ್ರತಿನಿಧಿ ಮಂಡಲಿಯ ನಾಯಕನಾಗಿ—ಹಿಂದೀ ಸರಕಾರದ ಮುಖ್ಯ ವಕೀಲನಾಗಿ—ಅಮೇರಿಕಕ್ಕೆ ಹೋಟಿದ್ದಾರೆ. ಶ್ರೀ. ಅಯ್ಯಂಗಾರರು ಹಿಂದೀ ಕೇಂದ್ರ ಸರಕಾರದ ಖಾತೆರಹಿತ ಮಂತ್ರಿಗಳು. ಕಾನೂನು ನಿಯಮಗಳ ಸೂಕ್ಷ್ಮ ಮರ್ಮಗಳನ್ನು ಕಂಡು ಹಿಡಿಯುವುದರಲ್ಲಿ ಮತ್ತು ವಾದ ಬಲದಲ್ಲಿ ಇವರು ಅಸಾಮಾನ್ಯರು. ಬ್ರಿಟಿಷ್ ಮಂತ್ರಿಸಮಿತಿಯ 1946ನೇ ಮೇ 16ರ ಪ್ರಾಂತಿಕ ಪಂಗಡಗಳ ಘೋಷಣೆಯೊಳಗೆ ಯಾರ ದೃಷ್ಟಿಗೂ ಗೋಚರಿಸದೆ ಹುದುಗಿಕೊಂಡಿದ್ದ ದೋಷಗಳನ್ನು ಹೊರಗೆಳೆದು ತೋರಿಸಿ ಭಾರತದ ನಾಯಕರ ಕಣ್ಣು ತೆರೆಯಿಸಿದವರಿವರು. ಆ ಮೇಲೆ ಹಿಂದೀ ಸರಕಾರ ನಾಯಕರು ಭಾರತದ ರಾಜ್ಯಾಂಗರಚನೆಯ ಪ್ರತಿಯೊಂದು ಗೂಢಸಮಸ್ಯೆಯಲ್ಲೂ ಶ್ರೀ. ಅಯ್ಯಂಗಾರರ ಅಭಿಪ್ರಾಯ ಪಡೆಯದಿರುವದಿಲ್ಲ. ಖಾತೆಯಿಲ್ಲದ ಮಂತ್ರಿಯಾಗಿ ಈ ಅಪದ್ಬಾಂಧವನನ್ನು ಭಾರತ ಸರಕಾರವು ಗಟ್ಟಿಹಿಡಿದುಕೊಂಡಿದೆ. ಇವರೂ, ಶ್ರೀ ಪಿಳ್ಳೆಯವರಂತೆಯೇ ಮದ್ರಾಸಿಗರು, ಹೃದಯಬಲದ ಮಟ್ಟಿಗೆ ಹೇಗಿದ್ದರೂ ಮೆದುಳ ಬಲ ಮತ್ತು ನಾಲಿಗೆ ಶಕ್ತಿಯಲ್ಲಿ ಮದ್ರಾಸಿಗರೇ ಮುಂದೆ!

ಸರ್. ಮುಹಮ್ಮದ್ ಝುಫರುಲ್ಲಾ ಖಾನ್—ಭಾರತ ಸರಕಾರದ ಮುಖ್ಯ ವಕೀಲನಾಗಿ ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರರು ಹೊರಟಂತೆ ಪಾಕಿಸ್ತಾನದ ಮುಖ್ಯ ವಕೀಲನಾಗಿ ಸರ್. ಝುಫರುಲ್ಲಾ ಹೊರಟಿದ್ದಾರೆ. ಬರ್ಮಾ ಸ್ವಾತಂತ್ರ್ಯ ಉದ್ಘಾಟನಾ ಸಭೆಯಲ್ಲಿ ಹಾಜರಿರುವದಕ್ಕಾಗಿ ಹೋಗಿದ್ದ ಸರ್ ಝುಫರುಲ್ಲಾರಿಗೆ ಅಮೇರಿಕಕ್ಕೆ ಹೋಗಲು ಸಮಯ ಬೇಕೆಂಬುದಕ್ಕಾಗಿಯೇ ಭದ್ರತಾ ಕೌನ್ಸಿಲು ಕಾಶ್ಮೀರೀ ಅರ್ಜಿಯನ್ನು ಮುಂದುವರಿಸಿದ್ದಿತು. ಇವರು ಈ ಮೊದಲು 'ಪೆಲಸ್ಟೈನ್' ವಿವಾದದ ಮೇಲೆ ಪಾಕಿಸ್ತಾನ್ ರಾಯಭಾರಿಯಾಗಿ ಜಾಗತಿಕ ಸಂಘದಲ್ಲಿ ಹಾಜರಿದ್ದವರು, ಈಗ ಪಾಕಿಸ್ತಾನದ ವಿದೇಶ ಮಂತ್ರಿ ಮತ್ತು ಪಾಕಿಸ್ತಾನದ ಮೆದುಳು ಕೂಡಾ!

ಶ್ರೀ. ಕೆ. ಎಂ. ಮುನ್ಷಿ—ಬೊಂಬಾಯಿಯ ಸುಪ್ರಸಿದ್ಧ ವಕೀಲ, ಲೇಖಕ ಮತ್ತು ರಾಜಕಾರಣದಲ್ಲಿ ಅತಿ ಪ್ರವೀಣ, ಶ್ರೀ. ಮುನ್ಷಿಯವರು ಹೈದರಾಬಾದಿನಲ್ಲಿ ಭಾರತ ಸರಕಾರ ರಾಯಭಾರಿಯಾಗಿ ನೇಮಕಗೊಂಡು ಅಲ್ಲಿ ಹೋದಾಗ ನಿಜಾಮರಿಂದ ರಾಯಭಾರಿ ನಿವಾಸದೊರೆಯದೆ ಪಂಜಾಬು ನಿರಾಶ್ರಿತರಂತೆ ಬೀದಿಗೆ ಬಿದ್ದಿದ್ದಾರೆ!

ಶ್ರೀ. ಎನ್. ಸಿ. ಮೆಹತಾ—ಹಿಂದೀ ಕೇಂದ್ರದ ಸಂಸ್ಥಾನಿಕ ಮಂತ್ರಿ ಸರ್ದಾರ್ ಪಟೇಲರ ಸಲಹೆಯಂತೆ ಇಂದೋರಿನ ಪ್ರಧಾನಮಂತ್ರಿಯಾಗಿದ್ದ ಇವರನ್ನೀಗ ಇಂದೂರು ರಾಜರು 'ಡಿಸ್‌ಮಿಸ್' ಅಂದಿದ್ದಾರೆ.

ಶ್ರೀ. ನಾರಾಯಣ ರಾವ್ ಮತ್ತು ಗುಂಡಯ್ಯ—ಆ ದಿನ ನಿಜಾಮರ ಮೇಲೆ ಬಾಂಬೆಸೆದರೆಂದು ಇವರನ್ನು ಹೈದರಾಬಾದ್ ಸಿಟಿ ಮೆಜಿಸ್ಟ್ರೇಟರು 'ಸೆಶ್ಯನ್ಸಿಗೆ ಕಮಿಟ್' ಮಾಡಿದ್ದಾರೆ. ಮೂರನೇ ಆರೋಪಿ ವಿಠಲರಾವ್ [illegible] ಹೇಳಿಬಿಟ್ಟ.

ಡಾ| ಅಬ್ದುಲ್ ಗಾನಿ ಕುರೇಶಿ—ಇವರು ಡಿಲ್ಲಿಯ ನಗರ ಸಭಾ ಸದಸ್ಯರು, ಮುಸ್ಲಿಂ ಡಾಕ್ಟರರು. ಆದರೆ ಇಲ್ಲಿಯ ಹಿಂದೂ ಡಾಕ್ಟರ್ ಎನ್. ಸಿ. ಜೋಶಿಗಳ ಮನೆಯನ್ನು ಮುಸ್ಲಿಂ ದಂಗೆಗಾರರೊಂದಿಗೆ ನುಗ್ಗಿ ಡಾ| ಜೋಶಿಯವರನ್ನು ಸ್ವತಃ ಗುಂಡಿಟ್ಟು ಕೊಂದುದಕ್ಕಾಗಿ ಡಾ| ಕುರೇಶಿಗಳಿಗೆ ಡಿಲ್ಲಿ ಸೆಶನ್ಸ್ ಜಡ್ಜರು ಫಾಶೀ ಶಿಕ್ಷೆ ವಿಧಿಸಿದ್ದಾರೆ. ಆ ದಿನ ಡಾ| ಕುರೇಶಿ ಲಾಹೋರಿನಲ್ಲಿದ್ದರೆಂದು ಪಾಕಿಸ್ತಾನದ ಸರಕಾರೀ ನೌಕರರು 'ಡಿಫೆನ್ಸ್' ಸಾಕ್ಷ್ಯವಿತ್ತಿದ್ದರು.

ಸರ್ದಾರರ ಕಾಲೋಚಿತ ಘೋಷಣೆ

●

(೩ನೇ ಪುಟದಿಂದ).

ಬಲಗೊಳಿಸಬೇಕು; ರಾಷ್ಟ್ರದ ಶಾಂತಿ ಪಾಲನೆಗೆ ನೆರವಾಗಬೇಕು ಕಾಂಗ್ರೆಸಿನಲ್ಲಿ ಅಧಿಕಾರ ಸ್ಥಾನದಲ್ಲಿರುವವರಿಗೂ ನಾನೊಂದು ಎಚ್ಚರಿಕೆ ಮಾತನ್ನು ಹೇಳಬೇಕಾಗಿದೆ. ತಮ್ಮಲ್ಲಿರುವ ಅಧಿಕಾರ ಬಲದಿಂದ ತಾವು ಆರ್. ಯಸ್. ಯಸ್. ನ್ನು ಸದೆಬಡಿಯಬಹುದೆಂದು ಕಾಂಗ್ರೆಸಿನಲ್ಲಿ ಅಧಿಕಾರದಲ್ಲಿರುವವರು ಎಣಿಸಿಕೊಂಡಿದ್ದಾರೆ. ನೀವೊಂದು ಸಂಸ್ಥೆಯನ್ನು 'ದಂಡ' ಪ್ರಯೋಗದಿಂದ ಧ್ವಂಸಮಾಡಲಾರಿರಿ. 'ದಂಡ'ವಿರುವುದು ಕಳ್ಳರು ಮತ್ತು ದರೋಡೆಗಾರರಿಗಾಗಿ. ಹೇಗಿದ್ದರೂ ಆರ್. ಯಸ್. ಯಸ್.ನವರು ಕಳ್ಳರೂ ಅಲ್ಲ; ದರೋಡೆಗಾರರೂ ಅಲ್ಲ ತಮ್ಮ ದೇಶದ ಮೇಲೆ ಪ್ರೇಮವುಳ್ಳ ದೇಶಭಕ್ತರವರು. ಅವರ ಯೋಚನಾಗತಿಯೇನೋ ಬೇರೆ ದಿಕ್ಕಿಗೆ ತಿರುಗಿದೆ ಕಾಂಗ್ರೆಸಿಗರು ಅವರನ್ನು ಪ್ರೀತಿಯ ಮೂಲಕವೇ ಗೆಲ್ಲಬೇಕು.

ಉತ್ಪನ್ನ ಹೆಚ್ಚಲಿ

ಭಾರತಕ್ಕೀಗ ಬಲವಾದ ರಕ್ಷಣಾ ಸೇನೆಗಳಿರಬೇಕೆನ್ನುವಾಗ ಉದ್ಯಮಗಳ ಅಭಿವೃದ್ಧಿ ಮತ್ತು ಔದ್ಯೋಗಿಕ ಉತ್ಪನ್ನಗಳ ಕ್ರಮಬದ್ಧ ಹೆಚ್ಚಳವು ಇಲ್ಲಿಯ ಪ್ರಥಮ ಆವಶ್ಯಕತೆಗಳು. ಕೂಲಿಗಾರರ ಅಶಾಂತಿ, ಅತೃಪ್ತಿಗಳು ನಡೆಯುತ್ತಲೇ ಇದ್ದರೆ, ಸಮರ್ಥ ಹಾಗೂ ಅಜೇಯ ಬಲವನ್ನು ಕಟ್ಟಿಕೊಳ್ಳುವುದಸಾಧ್ಯ. ಕಳೆದಬಾರಿಯ ಔದ್ಯೋಗಿಕ ಸಮ್ಮೇಳನದಲ್ಲಿ ಕೂಲಿಗಾರ ಮುಖಂಡರು ಸರಕಾರದೊಡನೆ ಒಪ್ಪಂದಕ್ಕೆ ಬಂದಿದ್ದರು. ಆದರೂ ಬೊಂಬಾಯಿಯಲ್ಲಿ ಒಂದು ದಿನದ ಮುಷ್ಕರ ನಡೆಯಿತು. ನಾವು ಇದೇ ಸಾಲಿನಲ್ಲಿ ಮುಂದೊತ್ತಿದೆವಾದರೆ, ಭಾರತವು ಧ್ವಂಸಾತ್ಮಕ ಗುರಿಗೆ ಹೋಗಿ ಸೇರುವಂತಾಗುವುದು. ಭಾರತವು ಒಂದು ಉದ್ಯಮೀ ರಾಷ್ಟ್ರವಾಗಿ ಇಲ್ಲ. ಪ್ರಥಮತಃ ಅದನ್ನು ಔದ್ಯೋಗೀಕರಣ ಮಾಡಬೇಕಾಗಿದೆ, ಮೇಲಿನ ಮಾದರಿಯ ಅವಿವೇಕಗಳು ರಾಷ್ಟ್ರದ ಉನ್ನತಿ ಪಥದಲ್ಲಿ ಕಂಟಕಗಳನ್ನು ಮಾತ್ರ ತೂರಬಲ್ಲುವು. ಆದ್ದರಿಂದ ಮುಷ್ಕರಗಳನ್ನು ಹೂಡಿಸಬೇಡಿ; ಗೊಂದಲಗಳನ್ನು ನಿರ್ಮಿಸಬೇಡಿರೆಂದು ನಾನು ಕೂಲಿಗಾರ ನಾಯಕರನ್ನು ವಿನಂತಿಸಿಕೊಳ್ಳುತ್ತೇನೆ. ಈಗ ನಮ್ಮಲ್ಲಿ ಪರದೇಶೀ ಆಡಳಿತೆಯಿಲ್ಲ. ನಮ್ಮನ್ನು ಸಂಧಿಸುವುದು ಅತೀ ಸುಲಭವಿದೆ. ಕೂಲಿಗಾರ ಮುಖಂಡರು ನೇರಾಗಿ ನಾವಿದ್ದಲ್ಲಿಗೆ ಬಂದು ಕೂಲಿಗಾರರ ಸಂಕಷ್ಟಗಳ ಕುರಿತು ನಮಗೇನೇ ಹೇಳಬಾರದೇಕೆ? ಟ್ರೇಡ್ ಯೂನಿಯನ್ ಕಾಂಗ್ರೆಸ್ ಕಮ್ಯೂನಿಷ್ಟರ ಪ್ರಭಾವದಡಿಯಲ್ಲಿದೆ. ಮುಷ್ಕರ ಮತ್ತು ಹರತಾಳಗಳ ಕಾಲಗಳು ಕಳೆದವು. ವಿದೇಶೀ ಆಡಳಿತೆಯೊಡನೆ ನಾವು ಹೋರಾಡುತ್ತಿದ್ದಾಗ ಅವುಗಳ ಆವಶ್ಯಕತೆಯಿದ್ದಿತು. ಈ ಹಂಚಿಕೆಗಳೀಗ ನಿಲ್ಲಬೇಕು. ನಮಗೆ ಸಮಯ ಕೊಡಿರಿ, ಕೊನೆಯ ಪಕ್ಷ ನಾವು ಮೂರು ಅಥವಾ ನಾಲ್ಕು ವರುಷಗಳ ಒಪ್ಪಂದವನ್ನು ಮಾಡಿಕೊಂಡು, ಮುಂದೇನು ಮಾಡಬೇಕೆಂಬುದನ್ನು ಆ ಮೇಲೆ ನೋಡೋಣ."

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MIS. D. DEVEE, F. DS. (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು



Approved firm by the Govt. of Mysore Certified by the Agent of the Govt. of Cylone & India.

ಕರ್ನಾಟಕದಲ್ಲಿ ತೀರ ಹೊಸ ಮಾದರಿಯ ವಾರಪತ್ರಿಕೆ

ಅಂತರಂಗ

ಹೊಸವರ್ಷದಲ್ಲಿ ನವೀನ ವೈವಿಧ್ಯಗಳಿಂದ ಹೊರಡಲಾರಂಭಿಸಿದೆ.

ವಾರ್ಷಿಕ ಚಂದಾ ಬರೇ ರೂ. 4—8—0 ಮಾತ್ರ.

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಿಳಾಸ:—ಮೆನೇಜರ್, ಅಂತರಂಗ ವಾರಪತ್ರಿಕೆ, ಉಡುಪಿ.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ಕಾರ್ಯಾಕ್ಯದುಬ್ಬಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ.

ಪ್ರೇಮ ವಿಜಯ

ಬೆಲೆ: ರೂ 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇ
ದಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1—4—0 ಟ ದ್ವಾರ 1—8—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ
ಚಿತ್ರಿಸುವ ಕಥಾ ಸಂಗ್ರಹ ಬೆಲೆ 1—4—0

ಮನೆಮದ್ದು-*Home Remedies*

ಬೆಲೆ ರೂ. 2-0-0

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಯಿಲೆಗಳಿಗೆ
ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ.
ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪೋ ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ವಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, 2) ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಬಾಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್,(3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅನುಭವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಬಿಲ್ಲಿನ ಬಾಟ್ಲಿಗಳು ಹೆಚ್ಚು ಕಡಿಮೆ ೫೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳಲ್ಲಿ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಪರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:— ಕಾಲಪ್ಪಾ ಫಕೀರಪ್ಪಾ, ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್, ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕದುಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಫಲಾಹಾರಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಕಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ,

Ayurveda Oushadhalaya. GADAG

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 5018

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೨೦

NAVAYUGA WEEKLY, UDIPI.

FOUNDER: **Hon'ble Mr. A. B. SHETTY,** Health Minister, Govt. of Madras.

Vol. 28
No. 20

THE CANARA MUTUAL Assurance Company, Limited.

Estd: 1935

H. O. UDIPI, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India
Bombay Life Building,
Central Office, Udipi:

Branches at:
Mangalore, Calicut, Trivandrum, Madura, Madras, Bangalore & Bombay,

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಪ್ರೋದಿಸಿ ಉಳಿತಾಯವನ್ನು ಕಲ್ಪಿಸುವುದು ವರ್ತಕರಿಗೂ ಕೃಷಿಕರಿಗೂ ಕ್ಲಿಷ್ಟಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒಪ್ಪಿಸಿಕೊಡುವುದು, ಮೊದಲಾದವುಗಳು ದೇಶೋನ್ನತಿಯನ್ನು ಇಚ್ಛಿಸುವ ಬ್ಯಾಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಜ್ಞಾನದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906

CANARA BANK LIMITED,

THE VISHWABHARATI INSURANCE COMPANY LIMITED.

Head Office: BOMBAY.

Authorised Capital	Rs.	25,00,000
Issued & Subscribed	Rs	12,00,000
Paid up over	Rs	8,75,000

Offers All that is best in very class of Insurance.

Our Life Department Specialities.

1. Most liberal Policy Conditions.
2. Lowest premium rates consistent with safety.
3. Special plans to suit every pocket.
4. Staff insurance Scheme a mordern requirement
5. Hereditary Commissions to Agents A necessity.

Contact Local Branch:—Bunder, MANGALORE.

Sri K. ISHWARA, M. A. *Life Superintendent.*
Sri. N. N. RAO, *Branch Secretary*

Nambiar's

ARYA VAIDYA SALA
UDIPI

Ideal House for Ayurvedic Treatment.

T. N. Kelu Nambiar,
Vaidya

ನಿಮ್ಮಷ್ಟಕ್ಕೆ ನೀವು ಮನೆಯಲ್ಲೇ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0
ನವಭಾರತ ಬುಕ್ ಡಿಪೊ, ಉಡುಪಿ.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ:-ಧಾರವಾಡ,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ,

THE UNITED KARNATAK INSURANCE COMPANY, LIMITED.

ಗಾಂಧಿಜೀಯ ಉಪವಾಸ ಪೀಠಿಕೆ

ಮಹಾತ್ಮಾ ಗಾಂಧಿಯವರ ಮಾತುಗಳು ಕಳೆದ ಸುಮಾರು ಇಪ್ಪತ್ತು ವರುಷಗಳಿಂದ ಹಿಂದೀಯರ ಪಾಲಿಗೆ ವೇದವಾಕ್ಯಗಳಂತೆಯೇ ಇವೆ. ಮಿಕ್ಕ ದಿನಗಳಲ್ಲಿ ಅವುಗಳ ಸ್ವಾಗತಕ್ಕಾಗಿ ಎಲ್ಲರ ಅಂತರಂಗದ ಬಾಗಿಲು ತೆರೆದಿರುತ್ತಿದ್ದರೆ, ಗಾಂಧಿಜೀಯ ಉಪವಾಸದ ದಿನಗಳಲ್ಲಂತೂ ಆ ಮಾತುಗಳನ್ನು ಬರಮಾಡಿಕೊಳ್ಳಲು ಹಿಂದೀಯರ ಆತ್ಮವೇ ತೆರವಾಗಿರುತ್ತದೆ. ಇದೇ ತಾ 13ಕ್ಕೆ "ಅನಿಶ್ಚಿತಾವಧಿಯ" ಮತ್ತೊಂದು ಉಪವಾಸವಾರಂಭಿಸಿದ ಮಹಾತ್ಮರು ತಾ 18ರಲ್ಲದನ್ನು ಮುಗಿಸಿದ್ದಾರೆ. ಸಾಮಾನ್ಯ ಕಾಲದ ಮಹಾತ್ಮನಿಗೂ, ಸಾವನ್ನು ಸಮೀಪಿಸ ಹೊರಟ ಮಹಾತ್ಮನಿಗೂ ಹಿಂದೀಯರ ದೃಷ್ಟಿಯಲ್ಲಿ ಬಹಳ ವ್ಯತ್ಯಾಸವಿದೆ. ಮಹಾತ್ಮರ ಅನುದಿನದ ಬೋಧನೆಗಳನ್ನು ಪ್ರವಚನಗಳೆಂದು ಗಣಿಸುವ ಭಾರತೀಯರು, ಅವರ ಅನಶನ ಕಾಲದ ಮಾತುಗಳನ್ನು ಪ್ರಾಣಾಧಿಕಗಳೆಂದೇ ಗಣಿಸುತ್ತಾರೆ. ಆದ್ದರಿಂದ ಈ ಬಾರಿಯ ಆರು ದಿನಗಳ ಉಪವಾಸಾರಂಭದ ಗಾಂಧಿಜೀ ವಚನಾಮೃತಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ.

ಉಪವಾಸ ಪೀಠಿಕೆ

ಹಿಂದೂ ಮುಸ್ಲಿಂ ಹೃದಯ ಸಮ್ಮಿಲನಕ್ಕಾಗಿ ತಾನು ಮರುದಿನದಿಂದ ಅನಿಯಮಿತಾವಧಿಯ ಉಪವಾಸಾರಂಭಿಸುವೆನೆಂದು ತಾ 12ರಲ್ಲಿ ನವದಿಲ್ಲಿಯ ಪ್ರಾರ್ಥನಾ ಸಭೆಯಲ್ಲಿ ಜಾಹೀರು ಮಾಡಿ ಮಹಾತ್ಮಾ ಗಾಂಧಿಜೀಯೆಂದರು. "ನಾನು ಪಶ್ಚಿಮ ಪಂಜಾಬಿಗೆ ಹೋಗಬೇಕೆಂದೇ ಸೆಪ್ಟೆಂಬರ್ ತಾ 9ರಲ್ಲಿ ಕಲ್ಕತ್ತದಿಂದ ದಿಲ್ಲಿಗೆ ಬಂದಿದ್ದೆ. ಆದರೆ ಹಾಗಾಗುವಂತಿರಲಿಲ್ಲ. ಉಲ್ಲಾಸೀ ದಿಲ್ಲಿಯು ಶವನಗರವಾಗಿ ತೋರುತಿತ್ತು. ಬಂಡಿಯಿಂದಿಳಿಯುವಾಗಲೇ ನನ್ನ ಕಣ್ಣಿಗೆ ಬಿದ್ದ ಎಲ್ಲಾ ಮುಖಗಳೂ ಬಾಡಿಹೋಗಿದ್ದುದನ್ನು ನಾನು ಕಂಡೆ. ಎಂದೂ ಭಂಗಗೊಳ್ಳದ ವಿನೋದ ಮತ್ತು ಉಲ್ಲಾಸದ ಮನುಷ್ಯ ಸರ್ದಾರರು ಕೂಡಾ ಈ ಬಾರಿ ಅಪವಾದವಾಗಿರಲಿಲ್ಲ. ಇದರ ಕಾರಣ ನನಗೆ ಗೊತ್ತಿರಲಿಲ್ಲ. ನನ್ನನ್ನು ಸ್ವಾಗತಿಸಲು ಅವರು ನಿಲ್ದಾಣಕ್ಕೆ ಬಂದಿದ್ದರು. ಹಿಂದೀ ಕೇಂದ್ರದ ಸರ್ವಜನವಿಶ್ರುತ ರಾಜಧಾನಿಯಲ್ಲಿ ನಡೆದ ಗೊಂದಲಗಳ ವಾರ್ತೆಗಳನ್ನು ಕೂಡಲೇ ಅವರು ನನ್ನ ಕಿವಿಗೆ ಹಾಕಿದರು. ನಾನು ದಿಲ್ಲಿಯಲ್ಲೇ ನಿಂತು ಮಾಡಬೇಕು ಅಥವಾ ಮಡಿಯಬೇಕು ಎಂಬುದನ್ನು ತಕ್ಷಣ ಅರಿತುಕೊಂಡೆ. ಸೇನೆ ಮತ್ತು ಪೋಲೀಸರ ಕಠಿಣ ಕಾರ್ಯಗಳಿಂದಾಗಿ ಅಲ್ಲಿ ಪೂರ್ಣಶಾಂತತೆ ವ್ಯಾಪಿಸಿದ್ದಿತು. ಆದರೆ ಹೃದಯಗಳಲ್ಲಿ ಮಾತ್ರ ಬಿರುಗಾಳಿ ಸುಂಯಿಗೊಡುತ್ತಿತ್ತು. ಅದು ಯಾವ ಕ್ಷಣದಲ್ಲಾದರೂ ಭೇದಿಸಿ ಹೊರ ಸಿಡಿಯುವಂತಹದೇ. ನನ್ನ ಅನುಪಮ ಮಿತ್ರನಾದ ಮೃತ್ಯುವಿನಿಂದ ನನ್ನನ್ನು ದೂರವಿರಿಸಬಲ್ಲ ಏಕಮಾತ್ರ ಉಪಾಯವಾದ 'ಮಾಡುವ' ಪ್ರತಿಜ್ಞೆಯು ಇಷ್ಟರಿಂದ ಪೂರ್ಣಗೊಂಡಿತೆಂದು ನಾನು ಭಾವಿಸುವಂತಿಲ್ಲ.

ಮೈತ್ರಿರಾಹಿತ್ಯ

ಹಿಂದೂ, ಸಿಖ್ ಮತ್ತು ಮುಸ್ಲಿಮರೊಳಗೆ ಹೃತ್ಪೂರ್ವಕ ಮೈತ್ರಿಯಿರಬೇಕೆಂಬುದೇ ನನ್ನ ಹಂಬಲ. ಒಂದು ಕಾಲದಲ್ಲಿ ಆವರ ನಡುವೆ ಹಾಗಿತ್ತು. ಆದರಿಂದಿನ ದಿನ ಇಲ್ಲ. ಭಾರತದ ದೇಶಪ್ರೇಮಿಯೆನಿಸಿಕೊಳ್ಳಬಲ್ಲ ಯಾರೇ ಆದರೂ ಸಮಾಧಾನಪಡುವದಸಾಧ್ಯವಾಗಿರುವ ಪರಿಸ್ಥಿತಿಯಿದು. ನನ್ನ ಅಂತರ್ವಾಣಿಯು ದೀರ್ಘಾವಧಿಯಿಂದ ಕೂಗುತ್ತಿದ್ದರೂ, ಅದು ಸೈತಾನನ ಕರೆಯೆಂಬಂತೆ ನಾನದಕ್ಕೆ ಕಿವಿ ಮುಚ್ಚಿಕೊಂಡೇ ಇದ್ದೆ. ಹಾಗಲ್ಲವಾದರೆ ಅದು ನನ್ನ ದೌರ್ಬಲ್ಯವೆನ್ನಬೇಕು. ನಾನು ಸಾಮರ್ಥ್ಯರಹಿತನೆಂದು ಎಂದಿಗೂ ಭಾವಿಸುವಂತಿಲ್ಲ. ಸತ್ಯಾಗ್ರಹಿಯಾದವನು ಯಾವ ಕಾಲಕ್ಕೂ ಹಾಗೆ ಭಾವಿಸಕೂಡದು. ಅವನ ಅಥವಾ ಇತರರ ಖಡ್ಗದ ಸ್ಥಾನದಲ್ಲಿ, ಕೊನೆಯದಾಗಿ ಸತ್ಯಾಗ್ರಹಿಯು ಕೈಕೊಳ್ಳಬೇಕಾದುದೆಂದರೆ ಉಪವಾಸ. ನನ್ನನ್ನು ಅನುನಿತ್ಯ ಬಂದು ಕಾಣುತ್ತಿರುವ ಮುಸ್ಲಿಂ ಮಿತ್ರರಿಗೆ ನಾನು ಹೇಳುವಂತಹದೇನೂ ಇಲ್ಲ. ಇತ್ತೀಚೆಗಂತೂ ನನ್ನ ದೌರ್ಬಲ್ಯವು ನನ್ನನ್ನು ಚುಚ್ಚುತ್ತಿತ್ತು. ಇದ ನಾನು ಉಪವಾಸ ಕೈಕೊಂಡೊಡನೆಯೇ ಅದು ಹೋಗಿಬಿಡುವುದು. ನಾನೀ ವಿಷಯದ ಮೇಲೆ ಮೂರು ದಿನಗಳಿಂದ ಗಾಢ ಚಿಂತನೆ ನಡೆಸಿದ್ದೇನೆ. ಕೊನೆಯ ನಿರ್ಧಾರವು ನನ್ನಲ್ಲಿ ಪ್ರಜ್ವಲಿಸಿ ನನ್ನನ್ನು ಆನಂದಗೊಳಿಸಿದೆ. ಪರಿಶುದ್ಧನಿದ್ದಲ್ಲಿ ಒಬ್ಬ ಮನುಷ್ಯ ತನ್ನದಾಗಿರುವ ಪ್ರಾಣಕ್ಕಿಂತ ಅಮೂಲ್ಯವಾದುದಾವುದೂ ಕೊಡಲಿಕ್ಕಿರುವುದಿಲ್ಲ. ಈ ಹೆಜ್ಜೆಯು ನ್ಯಾಯವೆನ್ನಿಸಲಾಗುವಂತಹ ಪರಿಶುದ್ಧತೆ ನನ್ನಲ್ಲಿದೆ ಎಂದು ನಾನಾಶಿಸುತ್ತೇನೆ, ಮತ್ತು ಅದಕ್ಕಾಗಿ ಪ್ರಾರ್ಥಿಸುತ್ತೇನೆ. ನನ್ನೀ ಪ್ರಯತ್ನವನ್ನು ಆಶೀರ್ವದಿಸಿರೆಂದೂ, ನನಗಾಗಿ ಮತ್ತು ನನ್ನೊಂದಿಗೆ ಪ್ರಾರ್ಥಿಸಿರೆಂದೂ ನಾನು ನಿಮ್ಮೆಲ್ಲರನ್ನೂ ಕೇಳಿಕೊಳ್ಳುತ್ತೇನೆ.

ನನ್ನ ಉಪವಾಸ

ಮಾನವ ಬುದ್ಧಿಯ ಶುದ್ಧೀಕರಣಕ್ಕಾಗಿ ಉಪಾಯ ವಿಧಾನದ ಮೇಲೆ ನಂಬಿಕೆಯಿರದ ಮಿತ್ರರಿದ್ದಾರೆ. ಅವರು ನನ್ನೊಡನೆ ಹೊಂದಿಸಿಕೊಳ್ಳಲಿ, ತಮ್ಮ ಮಟ್ಟಿಗೆ ತಾವಪೇಕ್ಷಿಸುವಂತಹ ಸ್ವಾತಂತ್ರ್ಯವನ್ನೇ ನನಗೂ ಅವರು ಕೊಡಲಿ. ಅತಿ ದೊಡ್ಡ ಹಾಗೂ ಏಕಮಾತ್ರ ಸಲಹೆಗಾರನಾಗಿ ದೇವರನ್ನೇ ನಂಬಿರುವ ನಾನು, ಬೇರಾವ ಸಲಹೆಗಾರರನ್ನೂ ಕಟ್ಟಿಕೊಳ್ಳದೇನೇ ನಿರ್ಧಾರಕ್ಕೆ ಬರಬೇಕೆಂದು ನನಗನ್ನಿಸಿದೆ. ನಾನು ತಪ್ಪುಮಾಡಿ, ಕೊನೆಗದನ್ನು ಕಂಡುಕೊಂಡೆನಾದರೆ ಅದನ್ನು ಘಂಟಾಘೋಷವಾಗಿ ಸಾರಿ ನನ್ನಾ ತಪ್ಪು ಹೆಜ್ಜೆಯನ್ನು ಹಿಂದಕ್ಕಿಡಲು ನಾನೆಂದಿಗೂ ಅಳುಕುವವನಲ್ಲ. ಅಂತಹದನ್ನು ಕಂಡುಕೊಳ್ಳುವಂತಾಗುವ ಸಂದರ್ಭ ಅತ್ಯಲ್ಪವಿದೆ. ನಾನೀಗ ಸಾರುತ್ತಿರುವಂತೆ, ಅಂತರ್ವಾಣಿಯಲ್ಲಿ ಸ್ಪಷ್ಟತೆಯಿರುವಾಗ, ಅದು ಅಲ್ಲಗೆಳೆಯಲ್ಪಡಲಾರದು. ಆದ್ದರಿಂದ ಯಾವ ಪ್ರತಿವಾದ ಅಥವಾ ಈಗಿನ ಹೆಜ್ಜೆಗೆ ನಿರೀಕ್ಷಿತ ತಿದ್ದುಪಡಿಸೂಚನೆ ಯಾವುದೂ ಮುಂದೆ ಬಾರದಿರಲಿ, ಎಂದು ನಾನು ಕೇಳಿಕೊಳ್ಳುತ್ತೇನೆ. ನನ್ನ ಹಿಂದಿನ ಉಪವಾಸಗಳಲ್ಲಿ ಆ ಉಪವಾಸದಿಂದ ಬಿದ್ದ ಒತ್ತಾಯವೊಂದಲ್ಲವಾಗಿದ್ದರೆ ಪರಿಣಾಮಗಳು ವಿರುದ್ಧವಾಗುತ್ತಿದ್ದುವೆಂದು ವಿಮರ್ಶಕರ ಭಾವನೆಯಿದೆ. ಉದ್ದೇಶವು ಅನೋಘವಿಷಯವೆಂಬುದು ಪ್ರದರ್ಶಿಸಲ್ಪಟ್ಟಿರುವಲ್ಲಿ, ಪ್ರತಿಕೂಲ ತೀರ್ಮಾನಕ್ಕೆ ಬೆಲೆ ಬಂದೀತೆ? ಒಂದು ಕರ್ತವ್ಯದಂತೆಯೇ, ಒಂದು ಪರಿಶುದ್ಧ ಉಪವಾಸದಲ್ಲೇ ಅದರ ಉಡುಗೊರೆಯೂ ಇದೆ. ನಾನು ಪರಿಣಾಮವನ್ನು ಲೆಕ್ಕಿಸಿ ನೋಡಿಕೊಂಡು ಅದನ್ನಂಗೀಕರಿಸಿಕೊಳ್ಳುವವನಲ್ಲ. ಅದನ್ನು ಮಾಡಬೇಕು ಎಂಬುದಕ್ಕಾಗಿಯೇ ಮಾಡುತ್ತೇನೆ. ಆದ್ದರಿಂದ ನಾನು ನಿರ್ವಿಕಾರ ಬುದ್ಧಿಯಿಂದ ಪ್ರತಿಯೊಬ್ಬನಲ್ಲೂ ಕೇಳಿಕೊಳ್ಳುವದೇನೆಂದರೆ- ಉದ್ದೇಶವನ್ನು ಪರೀಕ್ಷಿಸಿರಿ, ನಾನು ಸಾಯಬೇಕಾಗಿ ಬಂದರೆ ನಾನಾಶಿಸುತ್ತಿರುವಂತೆ ಶಾಂತಿಯಿಂದಲೇ ನನ್ನನ್ನು ಸಾಯಲು ಬಿಡಿರಿ. ಭಾರತ, ಹಿಂದೂತ್ವ, ಸಿಖ್ಖತ್ವ, ಇಸ್ಲಾಮುಗಳ ವಿನಾಶದ ಪ್ರೇಕ್ಷಕನಾಗಿ ಬಾಳುವದಕ್ಕಿಂತ ಸಾಯುವುದೇ ನನ್ನ ಪಾಲಿಗೆ ಕೀರ್ತಿದಾಯಕ ಬಿಡುಗಡೆಯಾಗಿದೆ. ಪಾಕಿಸ್ಥಾನವು ಜಗತ್ತಿನ ಸರ್ವ ಧರ್ಮಗಳವರಿಗೂ ಸ್ಥಾನಸಮಾನತೆ ಮತ್ತು ಭದ್ರತೆಯನ್ನೀಯದಿದ್ದರೆ, ಭಾರತವೂ ಅದನ್ನ ಅನುಕರಿಸದಿದ್ದರೆ ಆ ವಿನಾಶವಂತೂ ಖಂಡಿತ. ಆಗಲಂತೂ ಇಸ್ಲಾಮು ಎರಡು ಭಾಗಗಳಲ್ಲಿ ಮಾತ್ರ ಸಾಯುತ್ತದೆ, ಹೊರತು ಜಗತ್ತಿನಲ್ಲೇ ಅಲ್ಲ. ಆದರೆ ಹಿಂದೂತ್ವ ಮತ್ತು ಸಿಖ್ಖತ್ವಗಳಿಗೆ ಭಾರತವನ್ನು ಬಿಟ್ಟರೆ ಬೇರೆ ಪ್ರಪಂಚವಿಲ್ಲ. ಎಷ್ಟೇ ಕಠೋರ ಟೀಕೆ ಮಾಡಿದರೂ ನನ್ನೊಡನೆ ಭಿನ್ನಾಭಿಪ್ರಾಯಪಡುವವರೆಲ್ಲರೂ, ನನ್ನಿಂದ ಗೌರವಿಸಲ್ಪಡುವರು. ನನ್ನ ಉಪವಾಸವು ಮನಸ್ಸಾಕ್ಷಿಯನ್ನು ಚುರುಕುಗೊಳಿಸಲಿ, ಅದನ್ನು ಸಾಯಿಸದಿರಲಿ. ಪ್ರೀತಿಯ ಭಾರತದಲ್ಲಿ ನಡೆದು ಹೋದ ಅನಾಹುತಗಳನ್ನು ನೀವೊಮ್ಮೆ ಕಲ್ಪಿಸಿಕೊಳ್ಳುವಿರಾದರೆ, ಅದಕ್ಕಾಗಿ ಒಂದು ಸಖರ ಹೆಜ್ಜೆಯಿಡಬಲ್ಲ ಸಾಕಷ್ಟು ಶಕ್ತಿವಂತನಾದ ಮತ್ತು ಬಹುಶಃ ಸಾಕಷ್ಟು ಪರಿಶುದ್ಧನಾದ ಓರ್ವ ವಿನೀತ ಪುತ್ರನಾಕೆಗಿದ್ದಾನೆ ಎಂಬುದಕ್ಕಾಗಿ ನೀವು ಆನಂದಪಡಬಹುದು. ಅವನಲ್ಲಿ ಅದೊಂದೂ ಇಲ್ಲವಾದರೆ ಆತ ಭೂಮಿಗೊಂದು ಭಾರ. ಆತ ಹೊರಟು ಹೋಗಿ, ಭಾರತದ ವಾತಾವರಣದ ಮೇಲಿನ ಒಂದು ಹೊರೆಯು ಎಷ್ಟು ಬೇಗ ಕಳೆಯುವದೋ ಅಷ್ಟೂ ಅವನಿಗೂ ಸಂಬಂಧಪಟ್ಟ ಎಲ್ಲರಿಗೂ ಹಿತಕರ. ಯಾರೂ ಇಲ್ಲಿಗೋಡಿಬರುವುದೂ ಬೇಡ; ನನ್ನನ್ನು ಉಪವಾಸ ಬಿಡುವಂತೆ ಮಾಡಲು ಪ್ರಯತ್ನಿಸುವುದೂ ಬೇಡ. ನಾನು ದೇವರ ಕೃಪೆಯಲ್ಲಿದ್ದೇನೆ. ಎಲ್ಲರೂ ಶೋಧನಾ ಬೆಳಕನ್ನು ತಮ್ಮೊಳಗಡೆ ಹಾಯಿಸಿಕೊಳ್ಳುವದು ಉಚಿತ. ಇದೀಗ ನಮ್ಮೆಲ್ಲರ ಪರೀಕ್ಷಾ ಕಾಲ. ಉಪವಾಸವು ಆತ್ಮಶುದ್ಧಿಯ ಸಾಧನ."



Approved 6 m by the Govt. of Mysore
Certified by the Agent of the Govt. of Ceylone & Indian.

WARDEN

Reaches New Heights in 1946.

Business Received Rs 2,04,00,000
Business Completed Rs 1,72,00,000

THIS represent the latest and greatest achievement in WARDEN'S progressive career

For this fine performance the Company extends its hearties thanks and congratulations to its representatives and policy-holders all over the country and abroad

Managing Director — *Shivaprasad Thaker,*
Agency Manager — *M. Sunderram Shetty*

Branch Office At Mangalore

K. P. Bhavanishanker Shetty,
Branch Secretary

ಆಡಿದಂತೆ–ಮಾಡಲಾದೀತು?

"ಗಾಂಧಿಜೀಯ ಉಪವಾಸದ ಕುರಿತು ಸರ್ವ ವಿಧದ ಕಲ್ಪನಾ ಕಥೆಗಳು ಪೋಣಿಸಲ್ಪಟ್ಟವೆ. ನಿಜಸ್ಥಿತಿಯಿಷ್ಟೆ: ಇಲ್ಲಿ ಬೊಂಬಾಯಿಯಲ್ಲಿ ಮತ್ತು ಅಖಿಲ ಭಾರತದಲ್ಲಿ ಬಲವಂತೆಯೇ ಡಿಲ್ಲಿಯಲ್ಲೂ ಶಾಂತತೆ ವ್ಯಾಪಿಸಿದ್ದರೂ, ಇದು ಬಲ ಪ್ರಯೋಗದಿಂದ ನಿರ್ಮಾಣಗೊಂಡ ಶಾಂತಿಯಾಗಿದೆ ಹೊರತು ಹೃದಯ ಮಿಲನದ ಶಾಂತಿಯಲ್ಲವೆಂದು ಗಾಂಧಿಜೀಯನ್ನುತ್ತಾರೆ. ನಮಗೆ ಎಟಕದಷ್ಟು ಅನೋಘವಾದ, ಮಾತು, ಯೋಚನೆಗಳು, ಗಾಂಧಿಜೀಯವರದು, ನಾವಲ್ಲಿಗೆ ಮುಟ್ಟಲು ಬಹಳ ದೂರವಿದೆ. ಹಾಗೆ ಮಾಡುವ ಶಕ್ತಿಯು ಸುಲಭದಲ್ಲಿ ನಮಗೊದಗದು. ಸಿಟ್ಟು, ವಿಕಾರತೆ ಯಾವುದೂ ಸ್ಪರ್ಶಿಸದಷ್ಟು ಎತ್ತರಕ್ಕೇರಿದ್ದಾರೆ ಗಾಂಧಿಜೀ. ನಮಗೂ ಅವರಂತಹ ಸ್ವಚ್ಛ ಹೃದಯವಿರುತಿದ್ದರೆ ವ್ಯತ್ಯಾಸವನ್ನರಿಯುತಿದ್ದೆವು. ಈಗ ಮಾತ್ರ ಅವರು ಅಪೇಕ್ಷಿಸುವ ರೀತಿಯಲ್ಲಿ ನಮ್ಮನ್ನು ನಾವು ಆಳಿಕೊಂಡಿರಲು ಸಾಧ್ಯವಿಲ್ಲ"–ಬೊಂಬಾಯಿ ಕೋರ್ಪರೇಶನಿನ ಮಾನಪತ್ರಕ್ಕುತ್ತರಕೊಡುತ್ತಾ ತಾ 16ರಲ್ಲಿ ಸರ್ದಾರ್ ಪಟೇಲರಾಡಿದ ಮಾತು.

ವಲ್ಲಭಾಯಿಗಳಿಗೆ ಗಾಂಧಿಜೀಯ ಮನೋಮಟ್ಟವನ್ನೆಟಕಲು ಎಷ್ಟು ಕಷ್ಟವಿದೆಯೋ, ಅಷ್ಟೇ ಕಷ್ಟ ಗಾಂಧಿಜೀಗೆ ಪಾಕಿಸ್ತಾನದ ಮನೋಮಟ್ಟವನ್ನು ಮಟ್ಟುವುದರಲ್ಲೂ ಇದೆ. ಪಾಕಿಸ್ತಾನಕ್ಕೆ 55 ಕೋಟಿ ರೂ.ಗಳನ್ನು ಕೊಡಿಸಿದ ಮೇಲಂತೂ ಅದು ಮತ್ತಷ್ಟು ದೂರಹೋಗಿದೆ!

× × ×

"ಪಾಕಿಸ್ತಾನದಿಂದ ಬಂದಿರುವ ನಿರಾಶ್ರಿತರಿಗೆ ಸರಕಾರನಾವ ಅಡಚಣೆಯನ್ನೂ ನಿರ್ಮಿಸಿಲ್ಲ. ಅವರು ರಾಷ್ಟ್ರದ ಸಂಪತ್ತು ಸರಕಾರದ ಸರ್ವ ಲಕ್ಷ್ಯವನ್ನು ತಮ್ಮೆಡೆಗೆಳೆಯುವ ಪೂರ್ಣಾಧಿಕಾರ ಅವರಿಗಿದೆ. ಆದರೆ ಸ್ವತಃ ಕಾನೂನನ್ನೇ ತಮ್ಮ ಕೈಗೆ ತೆಗೆದುಕೊಳ್ಳುವ ಅಧಿಕಾರ ಅವರಿಗಿಲ್ಲ."–ಗಾಂಧಿಜೀ ಉಪವಾಸ ನಿಮಿತ್ತ ಡಿಲ್ಲೀ ಕಾಂಗ್ರೆಸಿನವರೇರ್ಪಡಿಸಿದ್ದ ಶಾಂತಿಸಮಾರಂಭದಲ್ಲಿ ನೆಹರೂಗಾಡಿದ ಮಾತು

ಆದ್ದರಿಂದಲೇ ಬಿರ್ಲಾ ಭವನದ ಗೇಟಿನ ಬಳಿ ಕೂಡಿ 'ಗಾಂಧಿ ಸಾಯಲಿ' ಎಂದು ಕೂಗು ಹಾಕಿದ್ದ ನಿರಾಶ್ರಿತರನ್ನು ಓಡಿಸಿಕೊಂಡು ಹೋದ ನೆಹರೂಗಳು ಪಾಕಿಸ್ತಾನದ ತನಕವೂ ಬೆನ್ನಟ್ಟದೆ ಬಿಟ್ಟಿದ್ದರು!

\+ × ×

"ಪಾಕಿಸ್ತಾನವು ಹಾಕಿಕೊಟ್ಟ ಯಾವ ಮಾದರಿಯನ್ನೂ ನೀವು ಅನುಕರಿಸಕೂಡದು ಆರಂಭದಿಂದಲೇ ಅವರ ನಡತೆಗಳು ಅನ್ಯಾಯಯುದ್ಧರುವುದರಿಂದ ಅವರೀಗ ಕಠಿಣಾಯಮಾನಸ್ಥಿತಿಯಲ್ಲಿದ್ದಾರೆ. ಕಾಶ್ಮೀರದಲ್ಲಿ ಅವರು ಕಂಟಿ ಕೊಟ್ಟಿದ್ದಾರೆ. ನಾವಲ್ಲಿ ನಮ್ಮ ಸರ್ವಶಕ್ತಿಯಿಂದ ಹೋರಾಡುತಿದ್ದೇವೆ ಮತ್ತು ಹೋರಾಡುವೆವು. ಅವರ ಕೃತಿ ದಂಡವೀಗ ಸ್ವತ: ಅವರ ತಲೆಗೇನೇ ಬಡಿಯುತಿದೆ. ಅವರು ಕಾಶ್ಮೀರದಲ್ಲಿ ಗಾಳಿಯನ್ನು ಬಿತ್ತಿದ್ದರೆ, ಪಶ್ಚಿಮ ಪಂಜಾಬಿನಲ್ಲಿ ಸಂಪೂರ್ಣ ಅನಾಯಕತ್ವ, ಅರಾಜಕತೆಯ ಬಿರುಗಾಳಿಯನ್ನೇ ಕಟಾಯಿಸುವಂತಾಗಿದೆ"–ಡಿಲ್ಲಿಯ ಶಾಂತಿ 'ರ್‍ಯಾಲಿ'ಯಲ್ಲಿ ನೆಹರೂಗಳ ಮತ್ತೊಂದು ಮಾತು.

ಅಲ್ಲಾನ ಉಪದೇಶ ಮತ್ತು ಗಾಂಧಿಯ ಉಪವಾಸವಿರುವ ವರೆಗೆ ಈ ಆಪತ್ತಿಲ್ಲಕ್ಕೂ ಅಕಸ್ಮಾತ್ ನಿವಾರಣೆಯಿದೆ.

× × ×

ಇದೇ ತಾ 15ರಲ್ಲಿ ಕಾಶ್ಮೀರ ಸಂಬಂಧವಾಗಿ ಭಾರತ-ಪಾಕಿಸ್ತಾನಗಳು ವಾದಿ-ಪ್ರತಿವಾದಿಗಳಾಗಿ ಮುಂದೊಡ್ಡಿದ ವ್ಯಾಜ್ಯದ ತನಿಖೆಯು ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಆರಂಭಿಸಿದಾಗ ಶ್ರೀ. ಯನ್. ರಾಜಗೋಪಾಲ ಅಯ್ಯಂಗಾರರು ಭಾರತದ ಪರವಾಗಿ 6000 ಶಬ್ದಗಳಿದ್ದ ದೂರನ್ನು ಮುಂದಿಟ್ಟು, ಕಾಶ್ಮೀರ ಕಾಳಗದ ಹಿನ್ನೆಲೆ-ಭಾರತ ಸರಕಾರವು ಆ ಘರ್ಷಣೆ ನಿವಾರಣೆಗೆ ಮಾಡಿದ್ದ ಪ್ರಯತ್ನ-ಪಾಕಿಸ್ತಾನವು ಶಾಂತಿಗೊಡ್ಡಿದ ಈ ಅಪಾಯವನ್ನು ಭದ್ರತಾ ಕೌನ್ಸಿಲು ನಿವಾರಿಸಬೇಕೆಂಬ ಬಿನ್ನಹ-ಭದ್ರತಾ ಕೌನ್ಸಿಲಿನ ಮುಂದಿರುವುದು ಸರಳವಾದ ಹಾಗೂ ನೇರಾದ ಕಾಶ್ಮೀರೀ ಸಮಸ್ಯೆಯೊಂದೇ ಎಂಬ ಸ್ಪಷ್ಟೀಕರಣ-ಇಷ್ಟನ್ನೂ ಮುಂದಿಟ್ಟಾಗುವಂತೆ ನಿವೇದಿಸಿಕೊಂಡರು.

ಇದರಿಂದಾಗಿ ಸ್ವತಂತ್ರ ಭಾರತದ ಚರಿತ್ರೆಗೊಂದು ಹೊಸ ಅಧ್ಯಾಯ ಸೇರುವುದೋ, ಭದ್ರತಾ ಕೌನ್ಸಿಲಿನ ಪುಸ್ತಕ ಭಂಡಾರಕ್ಕೆ 'ಅಯ್ಯಂಗಾರ್ ಡಿಕ್ಸ್‌ನರಿ' ಮಾತ್ರ ಹೊಸತಾಗಿ ಸೇರಿತೋ, ಎಂಬುದನ್ನು ಕೊನೆಯಲ್ಲಿ ತಿಳಿಯಬೇಕು.

× × ×

ಶ್ರೀ ಅಯ್ಯಂಗಾರರ ವಾದಕ್ಕುತ್ತರವಾಗಿ ತಾ 16ರಲ್ಲಿ ಮಧ್ಯ ವಿರಾಮವೇನೂ ಇಲ್ಲದೆ ಭದ್ರತಾ ಕೌನ್ಸಿಲಿನಲ್ಲಿ ಪಾಕಿಸ್ತಾನದ ಪ್ರತಿನಿಧಿ ಸರ್. ಝಫರುಲ್ಲಾ ಖಾನರು ಮೂರು ಘಂಟೆ ಹತ್ತು ಮಿನಿಟುಗಳ ವರೆಗೆ ವಾದಿಸಿ, ಸಭೆ ಮರುದಿನಕ್ಕೆ ಮುಂದುವರಿಯಲಿದ್ದಾಗ ಮರುದಿನವೂ ತನಗೆ ಸುಮಾರು ಒಂದು ಘಂಟೆ ಬೇಕೆಂದು ಕೇಳಿಕೊಂಡರು. ಭದ್ರತಾ ಕೌನ್ಸಿಲಿನಲ್ಲಿ ಆ ವರೆಗಿದ್ದ ಭಾಷಣ ದಾಖಲೆಯೆಂದರೆ ರಶ್ಯದ ಎಂಡ್ರೆಲ್ ವಿಶಿನ್ಸ್ಕಿಯವರು ಹಿಂದೊಮ್ಮೆ ಒಂದು ಘಂಟೆಗೂ ಮಿಕ್ಕಿ ಮಾತಾಡಿದ್ದುದು.

ಸರಿ 'ಹೋರಾಡಿದುದು ಕಾಂಗ್ರೆಸು, ಹೊಡೆದುಹಾಕಿದುದು ಲೀಗು' ಎಂಬ ಮಾತಿರುವಂತೆ 'ದಾವೆ ಹೂಡಿದುದು ಭಾರತ, ದಾಖಲೆ ನಿರ್ಮಿಸಿದುದು ಪಾಕಿಸ್ತಾನ" ಎಂಬ ಹೊಸ ಗಾದೆಯೊಂದು ಹುಟ್ಟುವಂತಾಯಿತು.

× × ×

ಆ 3 ಘಂಟೆ 10 ಮಿನಿಟುಗಳ ಭಾಷಣದಲ್ಲಿ, ಭದ್ರತಾ ಕೌನ್ಸಿಲು ಭಾರತ ಪಾಕಿಸ್ತಾನಗಳೊಳಗಿನ ಎಲ್ಲಾ ವಿವಾದಗಳನ್ನೂ ತೀರ್ಮಾನಿಸಬೇಕಲ್ಲದೆ ಕಾಶ್ಮೀರ ಪ್ರಶ್ನೆಯೊಂದಕ್ಕೇನೇ ಕಟ್ಟುಬಿದ್ದರೆ ಅದು ನಿರರ್ಥಕ ಪ್ರಯತ್ನವಾಗುವದು––ಭಾರತದ ಮುಸ್ಲಿಮರನ್ನು ಸುವ್ಯಸ್ಥಿತ ಯೋಜನಾನುಸಾರ ಸಾಮೂಹಿಕವಾಗಿ ಕೊಲೆಮಾಡಿದ ಹೊಣೆಗಾರಿಕೆಯ ಪಾಲನ್ನು ಭಾರತವು ಹೊರಲಿಕ್ಕಿದೆ-ಕಾಶ್ಮೀರದ ಅನಾಹುತಕ್ಕೆ ಕಾರಣ ಕಾಶ್ಮೀರದ ಮಹಾರಾಜರು ಮತ್ತು ಭಾರತ ಸರಕಾರವೇ-ಎಂದು ಸರ್. ಝಫರುಲ್ಲಾಖಾನರು ಸವಿವರ ವರ್ಣನೆ ಮಾಡುವಾಗ ಮಧ್ಯದಲ್ಲೊಂದು ನಾಟಕವನ್ನೂ ಆಡಿದ್ದರು: "ಪೂರ್ವ ಪಂಜಾಬ್ ಒಂದೇ ಕ್ಷೇತ್ರದಲ್ಲಿ 235,000 ಇದ್ದ ಇಡೀ ಮುಸ್ಲಿಂ ಜನತೆಯನ್ನು ಅವರು ಧ್ವಂಸ ಮಾಡಿದ್ದರು" ಎನ್ನುವಾಗ ಸರ್. ಝಫರುಲ್ಲಾ ('ಸರ್ವಪರಿ ಅಲ್ಲಾ?') ಶಂಕಿಸಿದವರಂತೆ ನಟಿಸುತ್ತಾ ವ್ಯಂಗ್ಯವಾಗಿ ಹೇಳಿದರು: "ತಪ್ಪಿದೆ; ಇಡೀ ಜನತೆಯಲ್ಲ. ಈ ದಿನ ಮುಂಜಾನೆ ನನಗೆ ತಿಳಿದುಬಂತು–ಅಲ್ಲಿ ಇಬ್ಬರು ಮುಸ್ಲಿಮರೀಗಲೂ ಉಳಿದಿದ್ದಾರೆ".

ಇಷ್ಟೂ ಲೆಕ್ಕ ಸರಿಯಾಗಬೇಕಾದರೆ, ಆ 234998 ಮುಸ್ಲಿಮರೇ ಸರ್. ಝಫರುಲ್ಲಾರ ಮೈ ಮೇಲೆ ಬಂದು 3 ಘಂಟೆ 10 ಮಿನಿಟು 'ನುಡಿ' ಕೊಟ್ಟಿರಬೇಕಲ್ಲವೆ? ಆ ಝಫರುಲ್ಲಾರನ್ನು ಕಂಡ ಮೇಲೂ ಭೂತ ಪ್ರೇತಗಳಿಲ್ಲವೆನ್ನುವವರಾರು?

\+ × ×

'ಭಾರತ ಸರಕಾರದ ಸಂಸ್ಥಾನಿಕ ಮಂತ್ರಿತ್ವದ (ಸರ್ದಾರ್ ಪಟೇಲರ ಖಾತೆ) ದುರ್ಬಲ ಧೋರಣೆಯ ಕುರಿತೆದ್ದಿರುವ ಟೀಕೆಗಳಿಗೇನನ್ನುವಿರಿ?' ಎಂದು ಪ್ರಶ್ನಿಸಲ್ಪಟ್ಟಾಗ ಬೊಂಬಾಯಿಯಲ್ಲಿ ಸರ್ದಾರ್ ಪಟೇಲರೆಂದರು: "ಬಹು ಸಂಖ್ಯೆಯ ಸಂಸ್ಥಾನಗಳ ಮಟ್ಟಿಗೆ ರಾಜರಲ್ಲೂ ಪ್ರಜೆಗಳಲ್ಲೂ ವಿಶ್ವಾಸ ಹುಟ್ಟಿಸಿ ಕೂಡಿಸಿಕೊಳ್ಳುವುದೇ ನಮ್ಮ ಧೋರಣೆಯಾಗಿತ್ತು; ಅದರಲ್ಲಿ ನಾವು ಜಯಶೀಲರಾಗಿರುವೆವು. ದುರ್ಬಲತೆಯ ಆರೋಪವು ಹೈದರಾಬಾದಿನ ಮಟ್ಟಿಗೆ ಮಾತ್ರವಾದರೆ ನಾನಾ ಆರೋಪವನ್ನು ಶಿರಸಾವಹಿಸುತ್ತೇನೆ. ಘರ್ಷಣೆ, ಸಮಸ್ಯೆ, ಮತ್ತು ಸ್ಥಿತಿ ವಿಪರ್ಯಾಸವೇಳಬಾರದೆಂದು ಹೈದರಾಬಾದಿನ ಸಂಬಂಧವಾಗಿ ನಾವು ಆ ರೀತಿ ವರ್ತಿಸಿದ್ದೆವು. ಇದನ್ನಾಧರಿಸಿ ತಾವು ತೊಂದರೆ ಕೊಡಲೇಳಬಹುದೆಂದು ಕೆಲವರು ಭಾವಿಸಿದ್ದರೆ, ಅವರು ತಪ್ಪಿಬಿದ್ದಿದ್ದಾರೆ; ಅಂಥವರ ಕೃತ್ಯದಿಂದ ಹೈದರಾಬಾದಿಗಾಗಲೀ ಅವರಿಗಾಗಲೀ ಲಾಭವಾಗದು ಎಂದು ನಾನು ಖಂಡಿತವಾಗಿ ಹೇಳುತ್ತೇನೆ."

ಇದು ಲಾಭ-ನಷ್ಟದ ಪ್ರಶ್ನೆಯೆಂದಾದರೆ- ದಿವಾಳಿ ತೆಗೆಯಲು ಸಮೀಪಿಸಿರುವ ಪಾಕಿಸ್ತಾನಕ್ಕೆ 20 ಕೋಟಿ ರೂ.ಗಳ ಭದ್ರತಾ ಪತ್ರ ಕೊಡುವಂತಹ ಕೃತ್ಯಗಳಿಂದ ಹೈದರಾಬಾದಿಗೂ ಲಾಭವಾಗಲಾರದು; 55 ಕೋಟಿ ರೂ.ಗಳನ್ನು ಕೊಟ್ಟ ಭಾರತಕ್ಕೂ ಕಷ್ಟ ನಷ್ಟ ತಪ್ಪದು!

× + ×

'ಹೈದರಾಬಾದು ಮತ್ತು ಮದ್ರಾಸು ಪ್ರಾಂತ್ಯಗಳ ಗಡಿ ಜಿಲ್ಲೆಗಳಲ್ಲಿ ಹೈದರಾಬಾದಿನವರು ನಡೆಸಿದ ಘರ್ಷಣೆಗಳನ್ನು ವಿಚಾರಿಸಿ ವರದಿ ಮಾಡುವಂತೆ ಭಾರತ ಸರಕಾರವು, ಅಲ್ಲಿರುವ ಹಿಂದೀ ರಾಯಭಾರಿ ಶ್ರೀ. ಕೆ. ಎಮ್. ಮುನ್ಷಿಗಳನ್ನು ಕೇಳಿಕೊಂಡಿದೆ.'

ಕರ್ನಾಟಕ-ಕೇರಳ, ಆಂಧ್ರ-ತಮಿಳು ಗಡಿ ಘಟನೆಗಳ ವಿಚಾರಣೆಗಾಗಿಯೂ ಅಲ್ಲಿಂದ ಮುನ್ಷಿಗಳೇ ಬಂದುಬಿಟ್ಟಾರೆಂದು ಆಶಿಸಲಾಗಿದೆ!

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಕ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The name that at once spells confidence and security offers Attractive schemes to suit needs of all.

Respectable Representatives

WANTED

On lucrative terms.

For full particulars write to:

Managing Director.

The Security Provident Insurance Co, Ltd.

Hassan Chambers, arsee Bazar Street, Fort, Bombay: 1

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 56 lacs

ಇದು ಪರ್ವತ ಪ್ರಸವವಲ್ಲವೆ? ಇದು ಅಸಹ್ಯವರ್ತನೆಯಲ್ಲವೆ?

ಶ್ರೀ

ತಾ॥ ೧೩ನೇ ಪೂರ್ವಾಹ್ನ ಘಂಟೆ 11 ಗಳೆದೊಡನೆ ಆರಂಭವಾದ ಗಾಂಧಿಜೀಯ ಉಪವಾಸವು ತಾ 18ನೇ ಮಧ್ಯಾಹ್ನ 12-40ಕ್ಕೆ ಸರಿಯಾಗಿ ಮೌಲಾನಾ ಆಜಾದರ ಕೈಯ್ಯಿಂದ ಒಂದು ಗ್ಲಾಸ್ ಕಿತ್ತಳೇ ರಸ ಕುಡಿಯುವುದರೊಂದಿಗೆ ಮುಗಿದು ಹೋಯಿತು!

ಈ ಉಪವಾಸದ ಗುರಿ-ಅದು ಹಿಂದೀಯರ ಹೃದಯಗಳಲ್ಲೆಬ್ಬಿಸಿದ ಪ್ರತಿಕ್ರಿಯೆ-ಅದಕ್ಕೆ ಕೊಟ್ಟ ಬೆಲೆ-ಕೊನೆಗೆ ಅದು ಮುಕ್ತಾಯಗೊಂಡ ವಿಧಾನ-ಇವೆಲ್ಲವನ್ನೂ ಆದಿಯಿಂದ ಅಂತ್ಯದ ವರೆಗೆ ಗಾಢವಾಗಿ ಆಲೋಚಿಸಿದರೆ ಇವಕ್ಕೇನೆನ್ನಬೇಕು?

—ಪರ್ವತಪ್ರಸವ!

ಇಲ್ಲಿ ಯಾರೂ ಯಾವ ತಪ್ಪಭಿಪ್ರಾಯವನ್ನೂ ಕಟ್ಟಿಕೊಳ್ಳದಿರಲಿ. ಸ್ವತಃ ಮಹಾತ್ಮರ ಮಟ್ಟ, ಮನೋಗತಿ, ರೀತಿ ನೀತಿಗಳ ಮೇಲಿಂದ ಅವರು ಅವರ ಮಟ್ಟಿಗೆ ಸಂಪೂರ್ಣ ಸರಿ. ಆದರೆ ಈ ತಪಜ್ವಾಲೆಯಿಂದ ಕರಗಿದ ಸಾಮಾನ್ಯ ಜನರ ಹೃದಯವು ಗಾಂಧೀವ್ಯಕ್ತಿತ್ವದೊಂದಿಗೆ ಎಷ್ಟೇ ತಾದಾತ್ಮ್ಯ ಹೊಂದಿದರೂ ಮಹಾತ್ಮರು ಮಹಾತ್ಮರೇ,ಸಾಮಾನ್ಯರು ಸಾಮಾನ್ಯರೇ. ಆದ್ದರಿಂದ ಜೀರ್ಣವಾಗುವುದನ್ನೂ ಗಾಂಧೀ ದೃಷ್ಟಿಯಿಂದ ನೋಡಲಾರದ ನಾವು ಇದೊಂದು ಉಪವಾಸವನ್ನು ಮಾತ್ರ ಆ ನೋಟದಿಂದ ನೋಡಿ ಸಾರ್ಥಕವೇನು? ಎಷ್ಟು ಕಾಲ ಮತ್ತೆಷ್ಟರ ಮಟ್ಟಿಗೆ ಜನಸಾಮಾನ್ಯರಿಂದ ಹಾಗೆ ನೋಡಲು ಸಾಧ್ಯವಿದೆ? ಆದ್ದರಿಂದ ಅಂತಹ ಆತ್ಮವಂಚನೆಗೆ ಹೋಗದೆ ಇದನ್ನೂ ನಾವು ನಮ್ಮ ದೃಷ್ಟಿಯಿಂದಲೇ ನೋಡಿದರೆ ನಿಜಕ್ಕೂ, ಈ ಗಾಂಧೀ ಉಪವಾಸದ ಪರಿಣಾಮವು ಪರ್ವತ ಪ್ರಸವವೇ!

"ಇಡೀ ರಾಷ್ಟ್ರದಲ್ಲಿ ಕೊನೆಯ ಪಕ್ಷ ದಿಲ್ಲಿಯಲ್ಲಾದರೂ, ಹಿಂದೂ, ಸಿಖ್, ಮುಸ್ಲಿಮರ ಹೃದಯ ಮಿಲನವಾಯಿತೆಂದು ನನಗೆ ಸಮಾಧಾನವಾದಾಗಲೇ ಈ ಉಪವಾಸದ ಮುಕ್ತಾಯ" ಎಂದು ಗಾಂಧಿಜೀ ಆರಂಭಿಸಿದ್ದರು. ಕೊನೆಗದನ್ನು ಮುಗಿಸಿದುದು ಈ ಕೆಳಗಿನ ಶರ್ತಗಳಿಗೆ ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯ ಶಾಂತಿ ಸಮಿತಿಯು ಒಪ್ಪಿಗೆ ಕೊಟ್ಟ ಕೂಡಲೆ: 1 ಪದ್ಧತಿಯಂತೆ ಸದ್ಯದಲ್ಲೇ ಜರಗಬೇಕಾದ ದಿಲ್ಲಿಯ ಖ್ವಾಜಾ ಭಕ್ತಿಯಾರನ ಮೌಸೋಲಿಯಮ್ ವಾರ್ಷಿಕ ಜಾತ್ರೆಯು ನೆರೆಯಬೇಕು, ಮತ್ತದಕ್ಕೆ ಎಲ್ಲ ಮುಸ್ಲಿಮರೂ ನಿರ್ಭಯವಾಗಿ ಸೇರುವಂತೆ ಮಾಡಬೇಕು. 2 ಇತ್ತೀಚೆಗೆ ನಡೆದ ಗೊಂದಲಗಳ ನಂತರ ದೇವಸ್ಥಾನಗಳಾಗಿಯೂ, ವಾಸಗೃಹಗಳಾಗಿಯೂ ಮಾರ್ಪಾಟು ಹೊಂದಿದ್ದ ದಿಲ್ಲಿಯ 117 ಮಸೀದಿಗಳನ್ನು ಆಯಾಯಾ ಕಡೆಗಳ ಮುಸ್ಲಿಮೇತರರು ಪುನಃ ಮಸೀದಿಗಳನ್ನಾಗಿಯೇ ಮಾಡಿ ಮುಸ್ಲಿಮರಿಗೆ ಬಿಟ್ಟುಕೊಡಬೇಕು. 3 ದಿಲ್ಲಿಯಿಂದ ಪಾಕಿಸ್ತಾನಕ್ಕೋಡಿರುವ ಮುಸ್ಲಿಮರು ಮರಳಿ ದಿಲ್ಲಿಗೆಬರಲಿಚ್ಛಿಸಿದರೆ ಬರುವುದಕ್ಕೆ ಹಿಂದುಗಳು ಆಕ್ಷೇಪ ಮಾಡಕೂಡದು. 4. ರೈಲ್ವೇ ಬಂಡಿಗಳಲ್ಲಿ ಮುಸ್ಲಿಮರು ಯಾವ ಅಪಾಯವೂ ಇಲ್ಲದೆ ಸಂಚರಿಸುವಂತಾಗಬೇಕು. 5. ಮುಸ್ಲಿಮರ ಮೇಲೆ ಆರ್ಥಿಕ ಬಹಿಷ್ಕಾರ ಹಾಕಕೂಡದು. 6. ಈ ಮೊದಲು ಮುಸ್ಲಿಮ್ ಕ್ಷೇತ್ರಗಳಾಗಿದ್ದ ದಿಲ್ಲಿಯ ಕರೋಲ್‌ಬಾಘ್, ಸಬ್ಜಿಮಂಡಿ, ಪಹಾಡ್‌ಗಂಜ್‌ಗಳಲ್ಲಿ ಮುಸ್ಲಿಮರು ಸ್ವತಂತ್ರವಾಗಿ ಯಾವ ಅಪಾಯವೂ ಇಲ್ಲದೆ ಸಂಚರಿಸುವಂತಾಗಬೇಕು. 7. ಮುಸ್ಲಿಂ ಕ್ಷೇತ್ರಗಳಲ್ಲಿ ಮುಸ್ಲಿಮೇತರರಿಗೆ ನಿವಾಸಾನುಕೂಲತೆಗಳನ್ನು ಕೊಡುವದೂ ಬಿಡುವದೂ ಸಂಪೂರ್ಣವಾಗಿ ಅಲ್ಲಿಯ ನಿವಾಸಿಗಳ ಅಭಿಮತವನ್ನೇ ಹೊಂದಿಕೊಂಡಿರಬೇಕು.

ಎಂತಹ ಅಲ್ಪತೃಪ್ತಿ!

ದಿಲ್ಲಿಯಲ್ಲಿ ಅಲ್ಪ ಸಂಖ್ಯಾಕರಾಗಿರುವ ಮುಸ್ಲಿಮರನ್ನು ದಿಲ್ಲಿಯ ಮಟ್ಟಿಗೆ ಮಹಾತ್ಮಾ ಗಾಂಧಿಯವರು ತನ್ನೀ ಉಪವಾಸದ ಮೂಲಕ ಉಳಿಸಿಕೊಟ್ಟರೆಂಬುದು ಮೇಲಿನ ಶರ್ತಗಳಿಂದ ಸ್ಪಷ್ಟವಿದೆ. ಇವೆಲ್ಲವೂ ಮಾನವತ್ವದ ದೃಷ್ಟಿಯಿಂದ ಅಗತ್ಯವಾಗಿ ಆಗಬೇಕಾದ ಕಾರ್ಯಗಳಾದ್ದರಿಂದ ಯಾರೂ ತಪ್ಪೆನ್ನಲಾರರು. ಆದರೆ ಇಡೀ ಭಾರತೀಯರನ್ನು ಸಂಕಟಕ್ಕೀಡುಮಾಡಿ, ಲೋಕವನ್ನೇ ದಂಗುಬಡಿಸಿ, ತನ್ನ ಪ್ರಾಣವನ್ನ ಎರವಿಟ್ಟು ಗಾಂಧಿಜೀ ಸಂಪಾದಿಸಿಕೊಂಡುದು ಈ ಅಲ್ಪ ಲಾಭಗಳನ್ನೇ ಎನ್ನುವಾಗ, ನಾವು 'ಗಾಂಧೀ ಭಕ್ತಿ'ಯಿಂದ 'ಮಹಾಪ್ರಸಾದ'ವೆಂದು ತಲೆಬಾಗಿದರೂ ವಿದೇಶೀ ರಾಜಕಾರಣಿಗಳು ಅಪಹಾಸ್ಯ ಮಾಡಲಾರರೆ?

ಪಾಕಿಸ್ತಾನ್—ಭಾರತಗಳಲ್ಲಿ ಅಲ್ಪ ಸಂಖ್ಯಾಕರಾಗಿರುವ ನರಕ ಯಾತನೆ, ಸ್ಮಶಾನಯಾತ್ರೆಗಳೆದಿರಲ್ಲಿ, ಗಾಂಧಿಜೀ ಈಗ ಗುಣಪಡಿಸಿದ ದಿಲ್ಲೀ ಮುಸ್ಲಿಮರ ಆಡಚಣೆಗಳನ್ನು ಇಟ್ಟು ಹೋಲಿಸಿದರೆ ಮಹಮ್ಮೇರುವಿನೆದಿರು ಮಣ್ಣುಗುಪ್ಪೆಯಲ್ಲವೆ? ಇವೆಲ್ಲಾ ಸುಧಾರಣೆಗಳನ್ನ ನೆಹರೂ ಸರಕಾರಕ್ಕೆ ಹೇಳಿ ಮಾಡಿಸಲು ಗಾಂಧಿಜೀಯಿಂದ ಸಾಧ್ಯವಿರಲಿಲ್ಲವೆ? ಅಥವಾ ಆ ಆರು ದಿನಗಳಲ್ಲಿ ಗಾಂಧಿಜೀ ಸ್ವತಃ ಸಂಚರಿಸಿ ಸಂಬಂಧಪಟ್ಟ ಜನರನ್ನು ವಿನಂತಿಸಿಕೊಳ್ಳುತ್ತಿದ್ದರೆ ಕೆಲಸವಾಗುತ್ತಿರಲಿಲ್ಲವೆ?

'ಅಷ್ಟೇ ಅಲ್ಲ. ಬಾಪೂಜೀಯ ಉಪವಾಸದಿಂದ ಇಡೀ ರಾಷ್ಟ್ರದ (ಪಾಕಿಸ್ತಾನ್ ಸಮೇತ!) ಜನತೆಯ ಹೃದಯ ಶುದ್ಧಿಯ ಮತ್ತೊಂದು ಮಹತ್ಕಾರ್ಯವಾಗಿದೆ' ಎನ್ನುವವರಿರಬಹುದು. ಇದು ತಪ್ಪು! ಇಂತಹ ಅನ್ಯಾಯಗಳಿಗೆ ಆದಿಯಿಂದಿದುವರೆಗೂ ಪ್ರತಿಸಲವೂ ಮುಂದಾಗುತ್ತಿರುವವರೂ, ಹೆಚ್ಚಿನ ಅನ್ಯಾಯ ಮಾಡಿದವರೂ ಮುಸ್ಲಿಮರೆಂಬ ವೇದನೆಯು ಮುಸ್ಲಿಮೇತರರೆಲ್ಲರ ಹೃದಯಕ್ಕೆ ನಾಟಿರುವಾಗ—ಹಿಂದುಗಳು, ಭಾರತದ ನಾಯಕರು ಹಾಗೂ ಕಾಂಗ್ರೆಸ್ಸು ಆ ಸಂಬಂಧವಾಗಿ ತೋರಿಸುತ್ತಾ ಬಂದಿರುವ ಸಹನೆಯು ಕುಂತ, ಜನತೆಯಲ್ಲಿ ಅಸಹನೆ ಬೆಳೆಯುತ್ತಿರುವಾಗ—ಕಾಶ್ಮೀರದ ಧಾಳಿಯಲ್ಲಿ ಪಾಕಿಸ್ತಾನದ ಕೈಬಲಗೊಳ್ಳುವಂತಾಗಲು ಗಾಂಧಿಜೀ ಅದಕ್ಕೆ 55 ಕೋಟಿ ರೂಪಾಯಿಗಳನ್ನು ಕೊಡಿಸಿದುದೂ, ಕರಾಚಿಯಲ್ಲಿ ಮುಸ್ಲಿಮೇತರರು ಮಣ್ಣುಗೂಡುತ್ತಿರುವಾಗ ದಿಲ್ಲಿಯಲ್ಲಿ ಮುಸ್ಲಿಮರನ್ನು ಮದುಮಕ್ಕಳಂತೆ ಕಾಣಬೇಕೆಂಬುದಕ್ಕಾಗಿಯೇ ಗಾಂಧಿಜೀ ಉಪವಾಸಮಾಡಿ ಗೆದ್ದುದೂ, ಯಾವ ಹಿಂದೀ ಹೃದಯಕ್ಕೆ ಸಮಾಧಾನ ಕೊಟ್ಟೀತು?

ಗಾಂಧಿಜೀ ತನ್ನ ಪ್ರಾಣವನ್ನು ಪಣವಿಟ್ಟು ಪಾಕಿಸ್ತಾನಕ್ಕೆ ಕೊಡಿಸಿದ 55 ಕೋಟಿ ರೂ.ಗಳು ("ಪಾಕಿಸ್ತಾನ ಹಾದಿಗೆ ಬಾರದೆ ಈ ಹಣ ಸಂದಾಯವಿಲ್ಲ" ಎಂದು ಪಟೇಲ್, ಷಣ್ಮುಗಂ ಚೆಟ್ಟಿಯಾರರಂಥವರು ಭೂಮ್ಯಾಕಾಶ ಮಾರ್ದನಿಗೊಡುವಂತೆ ಘರ್ಜಿಸಿದ ಬೆನ್ನಲ್ಲೇ!) ದಿಲ್ಲೀ ಮುಸ್ಲಿಮರಿಗೆ ಕೊಡಿಸಿದ 7 ಸೌಕರ್ಯಗಳು-ಇಡೀ ರಾಷ್ಟ್ರದಲ್ಲಿ ಗಾಂಧಿಜೀಯ, ಕಾಂಗ್ರೆಸ್ ನಾಯಕರ, ಮತ್ತು ಕಾಂಗ್ರೆಸಿನ ಮೇಲಿನ ಗೌರವವನ್ನು ಕಡಿಮೆಯೆಂದರೂ ನೇಕಡಾ 40 ರಷ್ಟು ತಗ್ಗಿಸಿವೆ, ಎಂಬುದು ಖಂಡಿತ.

ಆ 55 ಕೋಟಿ ರೂ. ಗಳನ್ನು ಕೊಡದೆ ಹಿಡಿದುಕೊಂಡ ಕಾರಣಗಳನ್ನು ಸರ್ದಾರ್ ಪಟೇಲರು ವಿವರಿಸಿದುದು ಜನತೆಗರ್ಥವಾಗಿದೆ; ಒಪ್ಪಿಗೆಯಾಗಿದೆ. 'ಗಾಂಧಿಜೀಯ ಅಭಿಮತಾನುಸಾರ' ವೆನ್ನುತ್ತಾ ಅದನ್ನು ಮರುದಿನವೇ ಕೊಡಬೇಕಾದರೆ ಅದೇನು ಆ ಕೀರ್ತಿಶೇಷ ಕರಮಚಂದರ ಹಣವೋ? ಹಿಂದೀ ಜನತೆಯ ಪಾಲಿನದೋ? ಜಗತ್ತಿನಿದಿರು ಉತ್ತಮ ವರ್ಗದ ರಾಜಕಾರಣಿಗಳೆಂದು ತೋರಿಸಿಕೊಳ್ಳಲು ಹವಣಿಸುತ್ತಿರುವ ಮಹಾಭಾರತದ ಸರಕಾರೀ ನಾಯಕರ ರಾಜಕಾರಣವು ಓರ್ವ ವ್ಯಕ್ತಿಯ ಕಾಲ್ಗೆಜ್ಜೆಯಾಗಿ, ಆ ಹೆಜ್ಜೆಯ ಹಿಂದು ಮುಂದನ್ನನುಸರಿಸಿಯೇ ರುಣಿತ್ಕಾರ ಕೊಡುತ್ತಿರುವುದನ್ನು ಕಂಡು ಲೋಕದವರು ಪರಿಹಾಸ್ಯದ ನಗೆಬೀರಲಾರರೆ? ತನ್ನಣ್ಣ ವಿಠಲಭಾಯಿ ಪಟೇಲರು ತನ್ನ ಖಾಸಗೀ ಹಣ ರೂ. ಒಂದುಲಕ್ಷವನ್ನು ಸುಭಾಷರ ಹೆಸರಿಗೆ 'ವಿಲ್ ನಾಮೆ' ಮಾಡಿಟ್ಟಾಗ, ಕಾನೂನು ಪ್ರಕಾರ ಅದನ್ನಾತಂಕಿಸಿ ತಪ್ಪಿಸಿದ್ದ ಸರ್ದಾರ್ ಪಟೇಲರು ಜನತೆಯ ಈ ಹಣದ ಈ ವಹಿವಾಟಿಗಾವ ಕಾನೂನನ್ನಾಧರಿಸುವರು?

ಮಿಕ್ಕೆಲ್ಲವೂ ಹಾಗಿರಲಿ—'ಹಿಂದೂ ಮುಸ್ಲಿಮರ ಹೃದಯ ಮಿಲನ'ದ ಗುರಿಯಿಟ್ಟುಕೊಂಡು ಆರಂಭವಾದ ಈ ಉಪವಾಸವು ಮೇಲಿನ ಶರ್ತಗಳ ಮೇಲಿಂದ ಕೇವಲ ಹಿಂದುಗಳ ಹೃದಯವನ್ನಷ್ಟೇ ಮೃದುಗೊಳಿಸಿ ಮುಗಿಯಿತೆಂಬುದು ಸ್ಪಷ್ಟ. ಉಪವಾಸ ವಿಜಯಗೊಂಡಿತೆ?

(೫ನೇ ಪುಟ ನೋಡಿರಿ).

CONTROLS.

Even if all the foodstuffs are decontrolled you need control yourselves! Infection—Cold & fatigue are the dreaded enimies of health!

Control over these by drinking a cup of sweet Conch brand sqash every day—

Mine of Vitamins! Pool of flavour! Lime, Pineapple or orange which suits your taste.

Mfrs:-Cannada Soap & Industrials Ltd. Mangalore.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ.

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging,
KATAPADI, S. K.

ಪ್ರಕಟಣೆ

ಕಣ್ಣಿನ ಎಲ್ಲಾ ತರದ ರೋಗಗಳನ್ನೂ ಕ್ಷಯ, ವಿಷಜ್ವರ, ನೇಸ, ಮೂತ್ರ ಕೋಶ ದೋಷಗಳನ್ನೆಲ್ಲಾ ಕುಡಿಯುವ ಮದ್ದಿನಿಂದ ಗುಣಮಾಡುವದಲ್ಲದೆ ಮುದುಕರಿಗೂ ರಕ್ತ ಕಡಿಮೆ ಆದರೆ ಮುಚೀನಿನಿಂದ ನೋಡಿ ರಕ್ತವನ್ನು ಹೆಚ್ಚಿಸಬಹುದು.

Dr S. T. Soans,
F. C. I. B.
Court Road Udipi

CHAMPAE'S

Snow & Castrex

Sale Distributers for India

Prop: K. G. NAYAK,
Santhekatte, UDIPI, S K.

The Canara Banking Corporation Limited.

(Uncorporated in British India)

Estd: 1906.

Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates:—

3 & 4 months — @ 2¼ % p. a.

5 & 6 months — @ 2¾ % p. a.

ಗುರುವಾರ, ಉಡುಪಿ, ೨೨-೧-'೪೮

ಕರ್ಣಾಟಕ ಏಕೀಕರಣ

ಕರ್ಣಾಟಕದ ವಿವಿಧ ಭಾಗಗಳನ್ನು ಒಂದುಗೂಡಿಸಿ, ಪ್ರತ್ಯೇಕ ಪ್ರಾಂತ್ಯವಾಗಿ ರಚಿಸಬೇಕೆಂಬ ಚಳವಳವು ದೀರ್ಘಾವಧಿಯಿಂದ ನಡೆಯುತ್ತಾ ಬಂದಿದೆ; ಈಗ ತುಸು ವಿಶೇಷ ರೀತಿಯಿಂದ ಸಾಗಿದೆ. 'ಕರ್ಣಾಟಕ ಏಕೀಕರಣ' ಭಾಷಣಗಳು, ಲೇಖನಗಳು- ಏಕೀಕರಣ ಸಭೆ ಸಮ್ಮೇಳನಗಳು-ಏಕೀಕರಣ ದಿನಾಚರಣೆಗಳು, ಕನ್ನಡಿಗರ ಸ್ವಾಭಿಮಾನ ಮತ್ತು ಜಾಗ್ರತಿಯ ದ್ಯೋತಕಗಳು. ಆದರೆ ಸದ್ಯಸ್ಥಿತಿಯಲ್ಲಿ ಇವೆಲ್ಲವೂ 'ಕನ್ನಡಿಗರು ತಯಾರಿದ್ದಾರೆ' ಎಂಬುದನ್ನಷ್ಟೇ ತೋರಿಸುವಂತಹವು ಹೊರತು, 'ತಯಾರಿಸುತ್ತಿದ್ದಾರೆ' ಎಂಬ ಸೂಚನೆಗಳಲ್ಲ. ಕರ್ಣಾಟಕ ಪ್ರಾಂತ್ಯರಚನೆಯು ಎಲ್ಲರಿಂದಲೂ ಎಂದೋ ಒಪ್ಪಲ್ಪಟ್ಟ ವಿಷಯ, 'ಆಗುವಂತಹದು' ಎಂದು ಎಲ್ಲೆಡೆಯಿಂದಲೂ ಮೌನ ಸಮ್ಮತಿ ಪಡೆದ ಒಂದು ವಿಷಯವನ್ನ 'ಆಗುವಂತಹದು' ಎಂದು ಸಂಬಂಧಪಟ್ಟವರು ... ಹೇಳಿದ ಮಾತ್ರಕ್ಕೆ ಆದರಲ್ಲಿ ಹೊಸತೇನೂ ಇಲ್ಲ. 'ಆಗಬೇಕು—ಆಗಲೇ ಬೇಕು' ಎಂಬ ಕನ್ನಡಿಗರ ಉಚ್ಚಸ್ವರವೂ ಈಗೀಗ ಕೇಳಬರುತ್ತಿದೆ. ಆದರೂ ಈ ಮಟ್ಟಿಗೆ ಆಂಧ್ರದವರಿಗಿಂತ ನಾವು ಎಂದಿನಂತೆ ಈಗಲೂ ಹಿಂದಿದ್ದೇವೆ. 'ಆಂಧ್ರ ಪ್ರಾಂತ್ಯರಚನೆಯು ಕೂಡಲೇ ಆಗುವಂತಹದು; ಆದರೆ ಕರ್ಣಾಟಕ, ಮಹಾರಾಷ್ಟ್ರಗಳಂತಹ ಪ್ರಾಂತ್ಯಗಳ ರಚನೆಯಲ್ಲಿ ಆಲೋಚಿಸಿ ನೋಡಿಕೊಳ್ಳಬೇಕಾದ ಅಂಶಗಳಿವೆ' ಎಂದ ಪಂಡಿತ ನೆಹರುಗಳು ಕನ್ನಡಿಗರ ದೃಷ್ಟಿಗೆ ತಪ್ಪಿತಸ್ಥರಾಗಿ ತೋರಿದ್ದಾರೆ. ಇದೂ, ಈ ಸಂಬಂಧವಾಗಿ ಡೆಲ್ಲಿಯಲ್ಲಿ ನಡೆದ ಮತ್ತು ನಡೆಯುತ್ತಿರುವ ಇತರ ಒಳ ವಹಿವಾಟುಗಳೂ ಕನ್ನಡಿಗರ ಅಭಿಮಾನವನ್ನು ಇನ್ನಷ್ಟು ಕೆರಳಿಸಿವೆ. ಕೂಡಲೇ ಪ್ರಾಂತ್ಯರಚನೆಯಾಗಬೇಕಾದುದು ಕನ್ನಡಿಗರ ಪಾಲಿಗೆ ಅತ್ಯಗತ್ಯವೆಂದು ತೋರುತ್ತಿದ್ದರೆ ಈಗೀಗ ಹಾಗಾಗದೆ ಹೋಗುವುದು ಅಪಮಾನಕರವೆಂದೂ ಹೊಳೆಯುತ್ತಿದೆ. ಏಕ ಭಾಷೆ, ಏಕ ರೀತಿಯ ಮನೋಗತಿಯವರಿಗೆ ಏಕಾಡಳಿತೆಯಿಲ್ಲದ ದುರ್ಗತಿಯು ಕನ್ನಡಿಗರಲ್ಲಿ ಅಸಹನೆಯನ್ನು ನಿರ್ಮಿಸಿದ್ದರೆ, ತಮ್ಮಂತೆಯೇ ಪ್ರತ್ಯೇಕಾಡಳಿತೆ ಕೇಳುತ್ತಿದ್ದ ಆಂಧ್ರರ ಬೇಡಿಕೆಗೆ ಕೂಡಲೇ 'ಸೈ' ಗೊಡುತ್ತ ತಮಗೆ ಮಾತ್ರ 'ಸರಿ, ನೋಡೋಣವಂತೆ' ಎನ್ನುವ ನಾಯಕರ ವರ್ತನೆಯು ಕನ್ನಡಿಗರಲ್ಲಿ ಅಸೂಯೆಯನ್ನೂ ನಿರ್ಮಿಸಿದೆ. ರಘುಕ್ಕೆ ಗತಿಯಂತೆ ಈ ಮೂಲಕ ಜಾಗೃತಿಗೆ ಸ್ಪರ್ಧೆಯ ಹುರುಪೂ ಸೇರಿಕೊಂಡಿದೆ. ಕಣಕದೆ ಕೇಳುವದನ್ನರಿಯದ ಕನ್ನಡಿಗರ ಮಟ್ಟಿಗೆ ಹೀಗಾದುದು ಒಳ್ಳೆತಾಯಿತು. ಕನ್ನಡಿಗರ ಆಗ್ರಹವನ್ನು, ಸಹಜಾಸೂಯೆಯನ್ನು ಹೆಚ್ಚಿಸುವ ಘಟನೆಗಳೇ ಇನ್ನೂ ನಡೆಯಬಹುದು. ಆಂಧ್ರ ಪ್ರಾಂತ್ಯರಚನೆಗಾಗಿ ಡೆಲ್ಲಿಗೆ ಹೋಗಿ ಪ್ರಧಾನಿ, ಉಪಪ್ರಧಾನಿ, ಕಾಂಗ್ರೆಸ್ ಅಧ್ಯಕ್ಷರೇ ಮೊದಲಾದವರೊಂದಿಗೆ ಮಾತಾಡಿ, 'ಎಲ್ಲವನ್ನೂ ಸ್ಪಷ್ಟೀಕರಿಸಿಕೊಂಡು ಬಂದ ಶ್ರೀ ಟಿ ಪ್ರಕಾಶಮರು ಇದೇ 1948ನೇ ಏಪ್ರಿಲಿನಲ್ಲಿ ಆಂಧ್ರಪ್ರಾಂತ್ಯದ ರಚನೆಯಾಗುವುದು, ಎಂದಿದ್ದಾರೆ. ಹಿಂದೆ ಒರಿಸ್ಸಾ, ಸಿಂಧ್ ಪ್ರಾಂತ್ಯಗಳನ್ನು ವಿಂಗಡಿಸಿದ ಮಾದರಿಯಲ್ಲೇ ಇನ್ನು ಮೂರು ತಿಂಗಳೊಳಗೆ ಒಂದು 'ಕೌನ್ಸಿಲ್ ಕ್ರಮ' (Order-in-Council)ದ ಮೂಲಕ ಆಂಧ್ರವು ಈಗಿನ ಮದ್ರಾಸ್ ಪ್ರಾಂತ್ಯದಿಂದ ಪ್ರತ್ಯೇಕಿಸಲ್ಪಡುವುದಂತೆ. ಆಗ ಕರ್ಣಾಟಕದ ಕಣ್ಣು ಮತ್ತಷ್ಟು ತೆರೆಯದಿರದು; ಕೆಂಪೇರದಿರದು. 'ನಮ್ಮ ಪಾಲಿನದು ನಮಗೆ. ದೊರೆಯದೇಕೆ?' ಎನ್ನುತ್ತಿರುವವರು ಆಗ 'ನಮ್ಮ ಪಂಗ್ತಿಯವರಿಗ ಬಂದರೂ ನಮಗಿಲ್ಲವೆ ...' ... ಹಂಬೀಳಲೇ ಬೇಕಾಗುವುದು; ಹೋರಾಡಲೇ ಬೇಕಾಗುವುದು. ಕನ್ನಡಿಗರ ಶಕ್ತಿ ಪರೀಕ್ಷೆಯ ಕಾಲವೀರೀತಿ ಸಮೀಪಿಸುತ್ತಿದೆ ಎಂದು ನಮಗನ್ನಿಸುತ್ತಿದೆ. 'ಆಂಧ್ರದೊಟ್ಟಿಗೆ ಕರ್ನಾಟಕ ಪ್ರಾಂತ್ಯರಚನೆಯೂ ಆಗದಿದ್ದರೆ ಶಾಸನ ಸಭೆಗಳಲ್ಲಿರುವ ಎಲ್ಲಾ ಕನ್ನಡಿಗ ಸದಸ್ಯರೂ ರಾಜೀನಾಮೆ ಕೊಟ್ಟು ಹೊರಬರಬೇಕು'ಎಂದು ಏಕೀಕರಣ ಸಂಘವು ನಿರ್ಧರಿಸಿದೆ. ಅಂತಹ ಹೋರಾಟದ ಸಂದರ್ಭವೊದಗದೆ ಕನ್ನಡಿಗರ ಅರಿಮನಸ್ಸು, ಅನೈಕ್ಯ ನಿವಾರಣೆಯಾಗದೆಂದೇ ತೋರುತ್ತದೆ. ಇದುವರೆಗೆ ಕನ್ನಡಿಗರು ಮಾಡುತ್ತಾ ಬಂದುದೆಲ್ಲವೂ 'ನಾವೂ ಇದ್ದೇವೆ' ಎಂದು ತೋರಿಸಿಕೊಳ್ಳುವಷ್ಟೆ! ಅದಕ್ಕಿಂತ ಹೆಚ್ಚಿನದೇನೂ ಆಗದಂತೆ ಕನ್ನಡಿಗರಲ್ಲಿರುವ ಲೋಪದೋಷಗಳು ಆತಂಕಗಳಾಗಿದ್ದುವು. ನಮ್ಮಲ್ಲಿ ಸರ್ವಮಾನ್ಯ ನಾಯಕರಿಲ್ಲ; ಆಶ್ರಿತ ರಾಜರಾಧೀನದಲ್ಲಿರುವ ಕರ್ಣಾಟಕ ಮತ್ತು ಮಿಕ್ಕ ಕರ್ಣಾಟಕ ಭಾಗಗಳನ್ನು ಹೇಗೆ ಒಂದುಗೂಡಿಸಿಕೊಳ್ಳುವದೆಂಬ ಕುರಿತು ಒಮ್ಮತವಿಲ್ಲ; ಒಳಜಿಡೆಯ ಜೋಡಣೆಗಳನ್ನೂ ಹೊರಗಿನ ಗಡಿಮೇರೆಗಳನ್ನೂ ಸ್ಪಷ್ಟಪಡಿಸಿ, 'ಇದು ಕರ್ಣಾಟಕ' ಎಂದು ತೋರಿಸುವಂತಹದು ತಯಾರಾಗಿಲ್ಲ; ಇವೆಲ್ಲಾ ಇನ್ನೂ ಏತಕ್ಕಾಗಿಲ್ಲವೆಂದರೆ ಅದಕ್ಕಿರುವ ಕಾರಣ ಕೂಡಾ ಒಂದೇ ಅಲ್ಲ-ತೀರ್ಮಾನಿಸಿಕೊಳ್ಳುವದಕ್ಕಿಂತ ಕಡೆಗಣಿಸಿ ಮುಂದೊತ್ತುವುದೊಂದೇ ಯೋಗ್ಯ ಉಪಾಯವನ್ನಿಸುವಷ್ಟು ಹತ್ತು ಹಲವು! ಹಾಗೆ ಒಕ್ಕಟ್ಟಾಗಿ ಮುಂದೊತ್ತುವಂತಾಗಬೇಕಾದರೆ ಈಗ ಕಾಣಿಸುತ್ತಿರುವ ಹೋರಾಟದ ಸಂದರ್ಭವೇ ಒದಗಬೇಕು; ಒದಗಿಬರುತ್ತಿದೆ ಆದ್ದರಿಂದ ಇಂದಿನ ಈ ಸ್ಥಿತಿಗತಿ ಅನಿವಾರ್ಯ ಮತ್ತು ಸ್ವಾಗತಯೋಗ್ಯವಿದೆ ಎನ್ನುತ್ತೇವೆ.

(೪ನೇ ಪುಟದಿಂದ).

ಪಾಕಿಸ್ತಾನದ ಪಾಲಿನ ಹಣಸಿಕ್ಕಿತು-ಕಾಶ್ಮೀರದ ಧಾಳಿನಿಲ್ಲಲಿಲ್ಲ! ಡೆಲ್ಲೀ ಮುಸ್ಲಿಮರು ಸುಕ್ಷೇಮವಾದರು-ಕರಾಚಿ, ಪಶ್ಚಿಮ ಪಂಜಾಬುಗಳ ಮುಸ್ಲಿಮೇತರರ ಜೀವಕ್ಕೆ ಅಭಯಾಶ್ವಾಸನೆ ಬರಲಿಲ್ಲ! ಭಾರತದಲ್ಲಿ ಮುಸ್ಲಿಂ ರಕ್ಷಣೆಯ ಉಪವಾಸಕ್ಕೆಳೆಯುವ ಗಾಂಧಿಜೀ ಯಿದ್ದಾರೆ—ಪಾಕಿಸ್ತಾನದಲ್ಲಿ ಮುಸ್ಲಿಮೇತರರ ರಕ್ಷಣೆಯ ಉದ್ಯೋಗಕ್ಕಿಳಿಯುವವರು ಕೂಡಾ ಇಲ್ಲ! ಕಾಂಗ್ರೆಸಿನೊಳಗಾಗಲೀ, ಸರಕಾರದೊಳಗಾಗಲೀ ಸೇರಲು ಆಧ್ಯಾತ್ಮಿಕನಾದಿ ಗಾಂಧಿಜೀ ತಯಾರಿಲ್ಲ-ಅದರೆ ಜೊತೆ ಕೊಪ್ಪ ವ್ಯವಹಾರವಾದಿಗಳು, ಪೂರ್ವಾಪರ ವಿಚಾರದೊಂದಿಗೆ ಒಂದು ವ್ಯವಸ್ಥಿತ ಯೋಜನೆ ಹಾಕಿ ಅದರಲ್ಲಿ ಅರಿವಾಸಿಯನ್ನು ಮುಂದೊತ್ತಿದಾಗ, ಅಲ್ಲಿಗಡ್ಡಬರಲು ತಯಾರಿದ್ದಾರೆ! ಇದು ರಾಜಕೀಯವೇ ಕೇವಲ ವ್ಯಕ್ತಿ ಪೂಜೆಗಾಗಿ ಆಕ್ಕ ವಂಚನೆ, ರಾಜಕೀಯ ತಿದ್ದುಪಡಿ, ಮಿಲಿಯಾಪಧಿ ಜನತೆಯ ಭವಿಷ್ಯದೊಡನೆ ಆಟ-ಇದಕ್ಕಿಂತ ಅಸಹ್ಯವಾದುದು ಬೇರಿರಲಾರದು!

ಗಾಂಧಿಜೀ ಅವರ ಮಟ್ಟಿಗೆ ತಪ್ಪಲ್ಲ; ಆದರೆ ದೇಶದ ಪಾಲಿಗೊಂದು ದೊಡ್ಡ ತಪ್ಪು! ಗಾಂಧಿಜೀ ನಾಯಕರವರೇ; ಎಂದೂ ಸಾಯದಂತೆ ಅವರನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ-ಅತಹ ತನ್ನ ಸಾವನ್ನು ಮುಂದೊಡ್ಡಿ ಅವರೀಗ ಸಾಧಿಸಿಕೊಂಡುದು ಪ್ರಮಾದಗಳನ್ನೇ.

ಅತ್ತ ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಹಿಂದೀ ಪ್ರತಿನಿಧಿಗಳೇ ಗಾಳಿಯೂದಿ ಬ್ರಿಟಿಷ್ ಪ್ರತಿನಿಧಿ ನೋಯೆಲ್ ಬೇಕರರಿಂದ ಹೇಳಿಸಿ, ಭದ್ರತಾ ಕೌನ್ಸಿಲಿನ ಅಧ್ಯಕ್ಷರ ಅಧ್ಯಕ್ಷತೆಯಲ್ಲೇ ಭಾರತ ಮತ್ತು ಪಾಕಿಸ್ತಾನಗಳ ಪ್ರತಿನಿಧಿಗಳು ಖಾಸಗೀ ಸಭೆ ಸೇರಿ ಕಾಶ್ಮೀರದ ವಿವಾದವನ್ನು ತೀರ್ಮಾನಿಸಲು ಪ್ರಯತ್ನಿಸಬೇಕೆಂಬ ಸೂಚನೆಯನ್ನು ಮಂಜೂರು ಮಾಡಿಸಿದ್ದಾರೆ. 'ಭಾರತ ಪಾಕಿಸ್ತಾನಗಳು ಮೈತ್ರಿಯಿಂದಿರಬೇಕು, ಹೊರತು ಅನ್ಯ ರಾಷ್ಟ್ರಗಳಿಗವಕಾಶ ಕೊಡಕೂಡದು ಎಂಬ ಗಾಂಧಿಜೀ ಅಭಿಪ್ರಾಯಕ್ಕೆ ಬೆಲೆ ಕೊಡುವುದಕ್ಕಾಗಿಯೇ ಅಲ್ಲಿ ಹಿಂದೀ ಪ್ರತಿನಿಧಿಗಳು ಒಳಗಿಂದೊಳಗೆ ಈ ಹೆಜ್ಜೆಯಿಟ್ಟಿರಲೂ ಬಹುದು. ಅಂದಮೇಲೆ ಅಲ್ಲಿಯೂ ಭಾರತವೇ ಜನಗಕ್ಕ ವಿನಯ ಪ್ರದರ್ಶಿಸಿ, ಸ್ವನಿರ್ಮಿತ ಪರಾಭವಕ್ಕೀಡಾಗಲಿದೆ ಎಂದೂಹಿಸಿದರೆ ತಪ್ಪಾದೀತೆ? ಹಾಗಾದರೆ ಕಾಶ್ಮೀರದ ದೂರನ್ನು ಭಾರತವು ಅಲ್ಲಿಗೇಕೆ ಮುಟ್ಟಿಸಬೇಕಿತ್ತು? ಮುಟ್ಟಿಸುವ ಮೊದಲೇ ಗಾಂಧಿಜೀಯೇಕೆ ತಡೆಯಬಾರದಿತ್ತು?

ಇನ್ನೊಂದು ಸ್ಥಿತಿ ವ್ಯತ್ಯಾಸವು ನಮ್ಮ ನಾಯಕರ ಲಕ್ಷ್ಯಕ್ಕೆ ಬಂದಿರುವುದೆ? ನಮ್ಮ 'ಕರ್ನಾಟಕ ಪ್ರಾಂತ್ಯರಚನೆಯ ಬೇಡಿಕೆ ಪತ್ರಕ್ಕೆ ಸಹಿ ಪಡೆದಂತೆ, ಡೆಲ್ಲಿಯ ಮುಸ್ಲಿಮರ ಪ್ರಾಣ ರಕ್ಷಣೆ ಮಾಡುವೆವೆಂಬುದಕ್ಕೆ ಎರಡು ಲಕ್ಷಕಣ್ಣು ಮಿಕ್ಕಿದ ಅಲ್ಲಿಯ ಮುಸ್ಲಿಮೇತರರಿಂದ ಸಹಿ ಹಾಕಿಸಿರಬಹುದು. ಮೊದಲೇ ಹೊಟ್ಟೆಗಿಲ್ಲದ ಡೆಲ್ಲಿಯ 200 ಮಹಿಳೆಯರು ಗಾಂಧಿಜೀ ಜೆಸರಿನಿಂದ ಒಂದು ದಿನದ ಉಪವಾಸ ಮಾಡಿರಬಹುದು. 'ಮಹಾತ್ಮಾ ಗಾಂಧೀ ಕರೀ ಪುಕಾರ್, ಹಿಂದೂ ಮುಸ್ಲಿಂ ಭಾಯೀ ಭಾಯೀ' ಎಂಬ ಐಕ್ಯ ಘೋಷಣೆ ಬ್ಬಿಸುತ್ತಾ ಬೊಂಬಾಯಿಯಲ್ಲೊಂದು ಮೆರವಣಿಗೆ ಹೋಗಿರಬಹುದು. ಆದರೆ ರಾಷ್ಟ್ರದ ಅಧಿಕಾರೀ ವರ್ಗ ಹೊರತು ಸಾಮಾನ್ಯ ಜನತೆಯು ಗಾಂಧಿಜೀಯ ಈ ಬಾರಿಯ ಉಪವಾಸಕ್ಕೆ ಹಿಂದಿನ ಉಪವಾಸಗಳಿಗೆ ಕೊಟ್ಟಷ್ಟು ಬೆಲೆಯನ್ನು ಕೊಟ್ಟ ಚಿಹ್ನೆಗಳು ಇಡೀ ರಾಷ್ಟ್ರದಲ್ಲಿ ಎಲ್ಲಿಯಾದರೂ ಕಾಣಿಸುತ್ತಿವೆಯೇ? ಅಂತರಂಗವನ್ನು ಅಳೆದು ನೋಡಿದರೆ ಜನತೆಯು ಈ ಉಪವಾಸದ ಕುರಿತು ವೇದನಾತ್ಮಕ ತಾಟಸ್ಥ್ಯವನ್ನು ವಹಿಸಿದೆ ಎಂಬುದು ತಿಳಿಯದೆ? ಇದೇನನ್ನು ಸೂಚಿಸುತ್ತದೆ?

ಗಾಂಧಿಜೀ ಈ ಉಪವಾಸದ ಮೂಲಕ ತನ್ನ ಹೃದಯದ ಸಮಸ್ಯೆಗಳನ್ನು ಯಾತನೆಯನ್ನೂ ಜನತೆಯ ಹೃದಯಕ್ಕೆ ವರ್ಗಾಯಿಸಿ, ಹಿಂದೀ ಜನತೆಗೆ ಸಂಕಟದಾನ ಮಾಡಿದರು, ಎಂದರೆ ಪಾಪ ಬಂದೀತೆ?

—ವಿಮರ್ಶಕ.

ಹೀಗೇನು?

"ದಯವಿಟ್ಟು ಗೊಂದಲ ನಿರ್ಮಿಸಬೇಡಿ; ನಿಮ್ಮ ನಾಯಕ ಪಂಡಿತ ನೆಹರುಗಳು ಈ ಗೊಂದಲಗಳ ನಿವಾರಣೆಗಾಗಿ ಅವಿಶ್ರಾಂತ ಪರಿಶ್ರಮಿಸಿ, ಇನ್ನು ಹತ್ತು ವರುಷಗಳ ನಂತರ ಎಷ್ಟು ಮುದುಕರಾಗಬೇಕಿತ್ತೋ ಅಷ್ಟು ಈಗಲೇ ಮುದಿಯಾಗಿ ಹೋಗಿದ್ದಾರೆ"—ಬೊಂಬಾಯಿಯಲ್ಲಿ ಸರ್ದಾರ್ ಪಟೇಲ್.

"ಜನಹಿತ ಸಾಧನೆಗಾಗಿ ಸವೆಯಿಸಲ್ಪಡುತ್ತಿರುವ ನಿಮ್ಮ ಪ್ರಾಣದ ಪ್ರಾಮುಖ್ಯತೆಯನ್ನು ಪ್ರತಿಯೊಬ್ಬನೂ ಅರಿತುಕೊಂಡಿರಬೇಕೆಂದು ನನ್ನ ಅಭಿಮತ"—ಗಾಂಧಿಜೀಗೆ ಹೈದರಾಬಾದ್ ನಿಜಾಮರ ತಂತಿ.

"ನಾನು ಡೆಲ್ಲಿಗೆ ಹಾರಲಿಕ್ಕಿದ್ದಾಗಲೇ ನೀವು ನಿಮ್ಮ ಉಪವಾಸವನ್ನು ನಿಲ್ಲಿಸಲು ಶಕ್ತರಾದಿರಿ ಎಂಬುದನ್ನು ಕೇಳಿ ಒಮ್ಮೆಗೇ ಬಹಳವಾಗಿ ಆತುರ ಬಿಡುಗಡೆಗೊಂಡೆ"-ಹೈದರಾಬಾದಿನ ಪ್ರಧಾನಿ ಲಾಯಿಕ್ ಅಲಿಗಳ ತಂತಿ.

'ಜರ್ಮನಿಯೊಳಗೆ ಮುಷ್ಕರಗಳನ್ನು ಎಬ್ಬಿಸಿ ಪಶ್ಚಿಮ ಜರ್ಮನಿಯ ಸಂಚಾರ ಪಹಿವಾಟುಗಳನ್ನು ಕೆಡಿಸಲು ಕಮ್ಯೂನಿಸ್ಟರು ನಡೆಸಿದ್ದ ಅಗಾಧ ಹಂಚಿಕೆ ತಿಳಿದು ಬಂದಿದೆ'-ಬ್ರಿಟಿಷ್ ವಿದೇಶೀ ಕಚೇರಿಯ ಸುದ್ದಿ.

— ಗಾಂಧಿಜೀಗೆ 133 ವರುಷ ಬಾಳುವ ಆಶೆ ಮೂಡಿದೆ! —

ಹೃದಯ ಸ್ಪರ್ಶೀ ಸನ್ನಿವೇಶಗಳ ನಡುವೆ ತನ್ನ ಆರು ದಿನಗಳ ಉಪವಾಸವನ್ನು ತಾ. ೧೮ರಲ್ಲಿ ಮುಗಿಸಿಕೊಂಡ ಗಾಂಧಿಜೀ ತನ್ನ ಮುಂದಿನ ಜೀವನದ ಗುರಿಯನ್ನು ಆ ದಿನ ಬರೆದು ಕಳುಹಿದ ಪ್ರಾರ್ಥನೋತ್ತರ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ:—

"ಈ ದಿನ ನನಗೆ ಕೊಡಲ್ಪಟ್ಟ ಜಾತೀಯ ಐಕ್ಯತೆಯ ಪ್ರತಿಜ್ಞೆಯು ಪೂರ್ಣಗೊಳಿಸಲ್ಪಟ್ಟಲ್ಲಿ, ಕೊನೆಯ ಘಳಿಗೆಯ ತನಕವೂ ಮಾನವ ವರ್ಗದ ಸೇವೆ ಮಾಡುತ್ತಾ ಪೂರ್ಣಾಯುಷ್ಯದವರೆಗೂ ಬಾಳಬೇಕೆಂಬ ನನ್ನ ಅಭಿಲಾಷೆ ಹಾಗೂ ದೇವರ ಪ್ರಾರ್ಥನೆಯನ್ನದು ಪುನರುಜ್ಜೀವಿಸಿ ಇಮ್ಮಡಿ ಪ್ರಬಲಗೊಳಿಸುವದು. ಅಂತವರ ಅಭಿಪ್ರಾಯ ಪ್ರಕಾರ ಆಯುಷ್ಯದ ಪೂರ್ಣತೆಯೆಂದರೆ ಕಡಿಮೆಯೆಂದರೆ 125ವರುಷ, ಕೆಲವರು 133ವರುಷಗಳೆಂದೂ ಹೇಳುತ್ತಾರೆ. ನಾನು ಯಾವುದರ ಸರ್ವಪ್ರಿಯ ಹೆಸರು 'ದೇವರು' ಎಂದಿದೆಯೋ ಆ ಸತ್ಯದ ಹೆಸರಿನಿಂದ ಉಪವಾಸ ಕೈಕೊಂಡೆ. ಜೀವಂತ ಸತ್ಯವಿಲ್ಲದಿದ್ದರೆ ದೇವರೆಲ್ಲಿಯೂ ಇರಲಾರ. ದೇವರ ಹೆಸರಿನಿಂದ ನಾವು ಸುಳ್ಳುಗಳನ್ನಾಡುತ್ತಾ ಬಂದಿದ್ದೇವೆ; ನಿರಪರಾಧಿಗಳೋ ಅಪರಾಧಿಗಳೋ, ಗಂಡಸರೋ ಹೆಂಗುಸರೋ, ಮಕ್ಕಳೋ ಹಸುಕೂಸುಗಳೋ ಎಂಬುದನ್ನು ನೋಡದೆ ಸಾಮೂಹಿಕ ನಾಶಗಳನ್ನು ಮಾಡುತ್ತಾ ಬಂದಿದ್ದೇವೆ; ಜುಲುಮೆಯ ಮಾನಭಂಗಗಳನ್ನೂ ಬಲಾತ್ಕಾರದ ಮತಾಂತರಗಳನ್ನೂ ಮಾಡುತ್ತಾ ಬಂದಿದ್ದೇವೆ. ಮತ್ತೆ ಇವೆಲ್ಲವನ್ನೂ ಏನೊಂದೂ ನಾಚಿಕೆಯಿಲ್ಲದೆ ಮಾಡಿದ್ದೇವೆ. ಯಾವನೇ ಆದರೂ ಇವುಗಳನ್ನು ಸತ್ಯದ ಹೆಸರಿನಿಂದ ಮಾಡಿದ್ದಾನೋ ಎಂಬುದು ನನಗೆ ತಿಳಿದಿಲ್ಲ. ಅದೇ ಹೆಸರನ್ನು ಉಚ್ಚರಿಸಿಕೊಂಡೇ ನಾನು ಉಪವಾಸವನ್ನು ಮುಗಿಸಿದ್ದೇನೆ. ನಮ್ಮ ಜನತೆಗೊದಗಿರುವ ದುರಂತವನ್ನು ಸಹಿಸಿಕೊಂಡಿರುವುದಸಾಧ್ಯ.

ಪ್ರತಿನಿಧಿ ಮಂಡಲಿಯ ಪ್ರತಿಜ್ಞೆ

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು, ಹಿಂದೂ, ಮುಸ್ಲಿಂ, ಸಿಖ್ಖರ ಪ್ರತಿನಿಧಿಗಳು, ಹಿಂದೂ ಮಹಾಸಭೆ, ರಾಷ್ಟ್ರೀಯ ಸ್ವಯಂಸೇವಕ ಸಂಘ, ಪಂಜಾಬ್ ನಿರಾಶ್ರಿತರು ಗಡಿನಾಡು ಮತ್ತು ಸಿಂಧ್ ನಿರಾಶ್ರಿತರು—ಇವರೆಲ್ಲರ ಪ್ರಾತಿನಿಧ್ಯವಿದ್ದ 100ಕ್ಕೂ ಮಿಕ್ಕಿದಷ್ಟು ಜನರನ್ನು ನಾನಿದ್ದಲ್ಲಿಗೆ ಕರೆತಂದಿದ್ದರು. ಈ ಪ್ರಾತಿನಿಧಿಕ ಸಮೂಹದಲ್ಲೇ ಪಾಕಿಸ್ತಾನದ ಹೈಕಮಿಶನರಾದ ಝಾಹಿದ್ ಹುಸ್ಸೇನ್ ಸಾಹೇಬ್, ಡೆಲ್ಲಿಯ ಚೀಫ್ ಕಮಿಶನರ್, ಡೆಪ್ಯುಟಿ ಕಮಿಶನರ್, ಅಜಾದ್ ಹಿಂದ್ ಫೌಜಿನ ಪ್ರತಿನಿಧಿ ಜನರಲ್ ಶಾನವಾಝ್ ಖಾನ್, ಇವರೆಲ್ಲಾ ಇದ್ದರು. ಪಂಡಿತ ನೆಹರೂರವರಂತೂ ಪ್ರತಿಮೆಯಂತೆ ಅಲ್ಲೇ ಕುಳಿತಿದ್ದರು; ಅವರಂತೆಯೇ ಮೌಲಾನಾ ಸಾಹೇಬರು ಸಹಾ. ಇವರೆಲ್ಲರ ಸಹಿಗಳಿದ್ದ ದಾಖಲೆಯೊಂದನ್ನು—ತಮ್ಮ ಮೇಲೆ ಇನ್ನೂ ಹೆಚ್ಚಿನ ಯಾತನೆ ಹೇರದೆ ಉಪವಾಸ ನಿಲ್ಲಿಸುವ ಮೂಲಕ ದುರಂತ ನಿವಾರಿಸಬೇಕೆಂಬ ಕೇಳಿಕೆಯನ್ನು—ಬಾಬು ರಾಜೇಂದ್ರ ಪ್ರಸಾದರು ಹಿಂದುಸ್ಥಾನಿಯಲ್ಲಿ ಓದಿ ಹೇಳಿದರು. ಪಾಕಿಸ್ತಾನದಿಂದಲೂ ಭಾರತದಿಂದಲೂ ಹೀಗೆಯೇ ನನ್ನನ್ನು ಕೇಳಿಕೊಳ್ಳುವ ಟೆಲಿಗ್ರಾಮುಗಳಂತೂ ಮೇಲಿಂದ ಮೇಲೆ ಬಂದಿದ್ದುವು. ಇವೆಲ್ಲಾ ಮಿತ್ರರ ಸಲಹೆಗಳನ್ನು ಪ್ರತಿಭಟಿಸುವದು ನನ್ನಿಂದಾಗದು. ಏನೇ ಬಂದರೂ ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್, ಪಾರ್ಶಿ ಮತ್ತು ಯೆಹೂದಿಗಳೊಳಗಿನ ಸಂಪೂರ್ಣ ಸ್ನೇಹಾಚಾರ ಮುರಿಯಲಾರದೆಂಬ ಅವರ ಪ್ರತಿಜ್ಞೆಯ ಮೇಲೆ ನಾನು ಅಪನಂಬಿಕೆಯಿಡಲಾರೆ. ಆ ಸ್ನೇಹಾಚಾರವನ್ನು ಮುರಿದುಹಾಕುವದೆಂದರೆ ರಾಷ್ಟ್ರವನ್ನೇ ಮುರಿದುಹಾಕಿದಂತೆ.

ಪ್ರೀತಿ ನೆಲೆ ನಿಲ್ಲಬೇಕು

ಸಮುಜಯಿಸುವ ತಂತಿಗಳ ಸಮುದ್ರದಲ್ಲಿ ನಾನು ಓಲಾಡುವಂತಾಗಿದೆ ಎಂದು ಬರೆಯುವಾಗ, ನನ್ನ ಕಣ್ಣೆದಿರು ರಾಶಿ ಬಿದ್ದಿರುವ ಮಾನವ ಸೇವೆಯನ್ನು ನಿರ್ವಹಿಸುವ ಯೋಗ್ಯತೆ ಮತ್ತು ಬುದ್ಧಿಸ್ಥಿರತೆಯನ್ನು ದೇವರು ನನಗೀಯಲಿ ಎಂಬ ಬಯಕೆ ನನ್ನಲ್ಲೆದ್ದಿದೆ! ಈ ದಿನ ನನಗಿತ್ತ ಆ ದೃಢ ಪ್ರತಿಜ್ಞೆಯು ಸಂಪೂರ್ಣವಾಗಿ ನೆರವೇರಿದರೆ ಕೊನೆಯ ಕ್ಷಣದವರೆಗೂ ಮಾನವ ಸೇವೆಯಲ್ಲೇ ಸವೆಯಲಾಗುವಂತೆ ಆಯುಷ್ಯದ ಪರಮಾವಧಿ 125 ಅಥವಾ ಕೆಲವರು ಹೇಳುವಂತೆ 133 ವರುಷಗಳವರೆಗೂ ಬಾಳಬೇಕೆಂಬ ನನ್ನ ಉತ್ಕಟಾಕಾಂಕ್ಷೆಗೆ ಮತ್ತೆ ಈ ಕುರಿತು ದೇವರೊಡನೆ ನಾನು ಮಾಡಿಕೊಳ್ಳುತ್ತಿರುವ ಪ್ರಾರ್ಥನೆಗೆ ಪುನರ್ಜೀವ ಹಾಗೂ ಇಮ್ಮಡಿ ಬಲ ಬರುತ್ತದೆಂದು ನಾನು ನಿಮಗೆ ಆಶ್ವಾಸನೆ ಕೊಡುತ್ತೇನೆ. ನನ್ನ ಪ್ರತಿಜ್ಞೆಯು ಹಿಂದೂ ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದವರ ಸಮೇತ ಡೆಲ್ಲಿಯ ನಾಗರಿಕರ ಅಮೋಘ ಹಿತಾಕಾಂಕ್ಷೆಯ ದೆಸೆಯಿಂದ ನಾನು ನಿರೀಕ್ಷಿಸಿದ್ದುದಕ್ಕಿಂತಲೂ ಬೇಗನೇ ಪೂರ್ತಿಗೊಂಡಿತು. ನಿನ್ನೆಯಿಂದ ಸಾವಿರಾರು ನಿರಾಶ್ರಿತರು ಉಪವಾಸ ಕುಳಿತಿದ್ದಾರೆ ಎಂಬುದನ್ನು ನಾನರಿತ ಮೇಲೆ ಪರಿಣಾಮವು ಬೇರೆಯಾಗಲು ಸಾಧ್ಯವಿರಲಿಲ್ಲ. ಹಾರ್ದಿಕ ಮೈತ್ರಿಯ ಆಶ್ವಾಸನೆಗಳು ಸಹಸ್ರ ಸಂಖ್ಯೆಯಲ್ಲಿ ನನ್ನ ಮೇಲೆ ಸುರಿದಿವೆ. ಟೆಲಿಗ್ರಾಫ್ ಆಶೀರ್ವಾದಗಳು ಲೋಕದ ಎಲ್ಲಾ ಕಡೆಗಳಿಂದಲೂ ಬಂದಿವೆ. ನನ್ನೀ ವರ್ತನೆಯಲ್ಲಿ ದೇವರ ಹಸ್ತವಿದೆ ಎಂಬ ಕುರುಹು ಇದಕ್ಕಿಂತ ಹೆಚ್ಚಿನ ಬೇರಾವ ಚಿಹ್ನೆಯಿಡಲು ಸಾಧ್ಯ? ಆದರೆ ನನ್ನೀ ಪ್ರಾಣಾವಧಿ ಪ್ರತಿಜ್ಞಾಕರಾರು ಪೂರ್ಣಗೊಂಡುದಕ್ಕಿಂತಲೂ, ಯಾವುದರ ನಿಮಿತ್ತ ಆ ಕರಾರು ಖಾಲಿಕರಣವಾಗುವುದೋ ಆ ಜೀವಾಳವೇ ಇಲ್ಲಿ ಹೆಚ್ಚಿನದು. ಪ್ರತಿಜ್ಞೆಯ ಜೀವಾಳವೆಂದರೆ ಹಿಂದೀ ಕೇಂದ್ರದೊಳಗಿನ ಹಿಂದುಗಳು, ಮುಸ್ಲಿಮರು, ಮತ್ತು ಸಿಖ್ಖರೊಳಗಿನ ನ್ಯಾಯಥಾರ್ಥ ಮೈತ್ರಿ ಮತ್ತು ಪಾಕಿಸ್ತಾನದಲ್ಲೂ ಇದೇ ಮಾದರಿಯ ಸ್ನೇಹಾಚಾರ ವಿರಚಿಸಬೇಕಾದುದು. ಈ ಪೈಕಿ ಮೊದಲನೆಯದು ಆದ ಬೆನ್ನಲ್ಲೇ, ರಾತ್ರಿಯ ಬೆನ್ನಲ್ಲಿ ಹಗಲಿರುವಂತೆ ಎರಡನೆಯದು ಆಗಲೇ ಬೇಕು. ಭಾರತದಲ್ಲಿ ಕತ್ತಲೆಯುಳಿದರೆ, ಪಾಕಿಸ್ತಾನದಲ್ಲಿ ಬೆಳಕಿರಬೇಕೆಂದು ನಿರೀಕ್ಷಿಸುವುದು ನಿರರ್ಥಕವೇ ಸರಿ. ಬದಲಿಗೆ ಭಾರತದ ಕತ್ತಲೆಯು ಸಂದೇಹದ ಛಾಯೆ ಕೂಡಾ ಉಳಿಯದ ರೀತಿಯಲ್ಲಿ ತೊಲಗಿಹೋದರೆ, ಪಾಕಿಸ್ತಾನದಲ್ಲೂ ಹಾಗಾಗದೆ ಗತ್ಯಂತರವಿಲ್ಲ; ಆ ಕುರಿತು ಯಾವ ಲಕ್ಷಣವೂ ಕಾಣುವುದಿಲ್ಲವೆಂದಿಲ್ಲ. ಪಾಕಿಸ್ತಾನದಿಂದ ಅಸಂಖ್ಯಾತ ಸಂದೇಶಗಳು ಬಂದಿವೆ; ಅವುಗಳಲ್ಲಿ ಪ್ರತಿಕೂಲವಾದುದೊಂದು ಇರಲಿಲ್ಲ. ಯಾರು ಸತ್ಯವೋ ಆ ದೇವರು, ಕಳೆದ ಆರು ದಿನಗಳಲ್ಲಿ ಪ್ರತ್ಯಕ್ಷ ಕಂಡು ಬರುವ ರೀತಿಯಲ್ಲೇ ನಮಗೆ ಹೇಗೆ ಮಾರ್ಗದರ್ಶಕನಾದನೋ ಹಾಗೆಯೇ ಮುಂದಕ್ಕೂ ನಮಗೆ ಹಾದಿ ತೋರಿಸಲಿ". ಎನ್ನುತ್ತಾ ಗಾಂಧಿಜೀ ಭಾರತದಲ್ಲಿ ಹಾರ್ದಿಕ ಸೌಹಾರ್ದತೆ, ಪೂರ್ಣ ಶಾಂತತೆಯನ್ನು ನೆಲೆಗೊಳಿಸಿ, ತನ್ನ ಕೆಲಸವನ್ನು ಸಾಗಿಸಲು ತಾನು ಕೂಡಲೇ ಪಾಕಿಸ್ತಾನಕ್ಕೆ ಹೋಗುವಂತೆ ಬಿಡುಗಡೆ ಮಾಡಿರೆಂದು ಡೆಲ್ಲೀ ನಾಗರಿಕರನ್ನು ಕೇಳಿಕೊಂಡರು. ಗಾಂಧಿಜೀ ಉಪವಾಸ ಮುಗಿಸಿದ ವಾರ್ತೆ ತಲಪಿದೊಡನೆ ಲೋಕದಲ್ಲೆಲ್ಲ 'ಕೋಟಿ ಜೀವ ಮರಳಿ ಬಂದಂತಹ' ವಿಶೇಷ ರೀತಿಯ ಸಮಾಧಾನ ಹುಟ್ಟಿದ ಲಕ್ಷಣಗಳು ಅಲ್ಲಲ್ಲಿ ಕಂಡುಬಂದಿವೆ. "ಗಾಂಧಿಜೀಯವರು ಆಸ್ಯಾದ ಎಲ್ಲಾ ಘನತೆ ಮತ್ತು ದೈವಿಕತೆಗಳ ಪ್ರತಿಬಿಂಬ" ಎನ್ನುತ್ತಾ ಪಾಕಿಸ್ತಾನವು ನ್ಯಾಯ ವರ್ತನೆ ಕೈಕೊಳ್ಳಬೇಕೆಂದು ಮಿ. ಲಾರಿಗಳಂತಹ ಲೀಗ್ ಮುಸ್ಲಿಮರು ಹೇಳಹತ್ತಿದ್ದಾರೆ.

ಭದ್ರತಾ ಕೌನ್ಸಿಲಿನಲ್ಲಿ

ಕಾಶ್ಮೀರ ಸಂಬಂಧದ ಭಾರತದ ದೂರಿಗೆ ಉತ್ತರವಾಗಿ ಪಾಕಿಸ್ತಾನದ ಪ್ರತಿನಿಧಿ ಸರ್. ಝಫರುಲ್ಲಾರು ಎರಡು ದಿನಗಳಲ್ಲಿ ೫ ಘಂಟೆ 25 ಮಿನಿಟು ಅಸ್ಖಲಿತ ವಾಣಿಯ ವಾದ ಹೂಡಿ ಎಲ್ಲರನ್ನೂ ಬೆರಗುಗೊಳಿಸಿದ ಮೇಲೆ, ಬ್ರಿಟಿಷ್ ಪ್ರತಿನಿಧಿಯ ಸೂಚನೆಯಂತೆ ಭಾರತ ಪಾಕಿಸ್ತಾನ ಪ್ರತಿನಿಧಿಗಳ ಪ್ರತ್ಯೇಕ ದುಂಡು ಮೇಜು ಸಮ್ಮೇಳನವು ಕೌನ್ಸಿಲ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸೇರಿ ಸಾಗಿದೆ. ಪದ್ಧತಿಯಂತೆ ಒಮ್ಮತಕ್ಕೆ ಬರುವುದ ಸಾಧ್ಯವೆಂದು ತಿಳಿದು ಬರುತ್ತದೆ. ಇತ್ತ ಕಾಶ್ಮೀರದ ಪ್ರಶ್ನೆಯನ್ನು ಪ್ರತ್ಯಕ್ಷ ಪರಿಶೀಲಿಸಿ ತೀರ್ಮಾನಿಸಲು ಇಕ್ಕಡೆಯವರೊಪ್ಪಿದರೆ ಒಂದು ಸಮಿತಿಯನ್ನು ಕೂಡಲೇ ಕಳುಹಿಕೊಡುವ ನಿರ್ಧಾರಕ್ಕೆ ಭದ್ರತಾ ಕೌನ್ಸಿಲು ಬಂದಂತಿದೆ. ಈ ಸಮಿತಿಯಲ್ಲಿ ಭಾರತದ ಮತ್ತು ಪಾಕಿಸ್ತಾನದ ಒಬ್ಬೊಬ್ಬ ಪ್ರತಿನಿಧಿಯೂ ಭದ್ರತಾ ಕೌನ್ಸಿಲಿನ ಅಧ್ಯಕ್ಷರಿಂದ ನೇಮಿಸಲ್ಪಡುವ ಮೂರನೇ ಪ್ರತಿನಿಧಿಯೂ ಇರುವರು. ಸಮಿತಿಯು ಹಾಕಿಕೊಳ್ಳಬೇಕಾದ ಕಾರ್ಯಕ್ರಮಗಳ ಮಟ್ಟಿಗೆ ಭಾರತ–ಪಾಕಿಸ್ತಾನಗಳೊಳಗೆ ತೀವ್ರ ಭಿನ್ನಾಭಿಪ್ರಾಯಗಳಿದ್ದು ಆ ಕುರಿತು ತೇಪೆ ಹಚ್ಚುವ ಪ್ರಯತ್ನ ನಡೆದಿದೆ.

ನಿಯೋಜಿತ ಸಮಿತಿ

ಕಾಶ್ಮೀರಕ್ಕೊಂದು ಸಮಿತಿಯನ್ನು ಬೇಕೆನ್ನುವ ಭದ್ರತಾ ಕೌನ್ಸಿಲಿನ ಸೂಚನೆಗೆ ಪಾಕಿಸ್ತಾನದ ಪ್ರತಿನಿಧಿಗಳು ಒಪ್ಪಿಗೆ ಸೂಚಿಸಿದ್ದರೆಂದೂ ಭಾರತದ ಪ್ರತಿನಿಧಿಗಳು ಮಾತ್ರ ಆಲೋಚನೆಗೆ ಸಮಯ ಕೇಳಿರುವರೆಂದೂ ತಿಳಿದುಬರುತ್ತದೆ. ಈ ಮಧ್ಯವರ್ತೀ ಸಮಿತಿಯ ರೂಪ–ಕಾರ್ಯ ರೀತಿಗಳು ಹೀಗಿವೆ:

ಮೊದಲನೆಯದಾಗಿ ಒಬ್ಬ ಸದಸ್ಯನನ್ನು ಭಾರತವು, ಮತ್ತೊಬ್ಬ ಸದಸ್ಯನನ್ನು ಪಾಕಿಸ್ತಾನವು ಆರಿಸಿಕೊಳ್ಳಬೇಕು. ಮೂರನೆಯ ಅಧ್ಯಕ್ಷನನ್ನು ಈ ಇಬ್ಬರು ಸದಸ್ಯರು ಆರಿಸಿಕೊಳ್ಳತಕ್ಕದ್ದು. ಈ ಮೂರು ಸದಸ್ಯರನ್ನೂ ಸಂಯುಕ್ತ ಸಂಘದ ಸದಸ್ಯ ರಾಷ್ಟ್ರಗಳಿಂದಲೇ ಆರಿಸತಕ್ಕದ್ದು.

ಎರಡನೆಯದಾಗಿ ಮೇಲಿನ ಸಮಿತಿಯು ಹೋರಾಟ ಕ್ಷೇತ್ರಗಳಿಗೆ ಪ್ರತ್ಯಕ್ಷ ಭೇಟಿ ಕೊಡಬೇಕು.

ಮೂರನೆಯದಾಗಿ ಸಮಿತಿಯು ಭಾರತ ಮತ್ತು ಪಾಕಿಸ್ತಾನಗಳೊಳಗಿನ ವಿವಾದಗಳನ್ನು ಇತ್ಯರ್ಥಗೊಳಿಸಲು ಪ್ರಯತ್ನಿಸಬೇಕು.

ನಾಲ್ಕನೆಯದಾಗಿ, ಈ ಮಧ್ಯಾವಧಿಯಲ್ಲಿ ಅಗತ್ಯವೆಂದು ತೋರುವ ಬೇರೆ ಹೆಚ್ಚಿನ ಕಾರ್ಯಕ್ರಮಗಳನ್ನು ಕೈಕೊಳ್ಳುವ ಅಧಿಕಾರವು ಭದ್ರತಾ ಕೌನ್ಸಿಲಿಗಿದೆ.

ಮೇಲಿನ ಸೂಚನೆಗಳಿಗೆ ಪಾಕಿಸ್ತಾನವು ಒಪ್ಪಿಗೆ ಕೊಡಲು ಕಾರಣವೆಂದರೆ ಭಾರತ ಮತ್ತು ಪಾಕಿಸ್ತಾನಗಳೊಳಗಿನ ಎಲ್ಲಾ ವಿವಾದಗಳನ್ನೂ ತೀರ್ಮಾನಿಸಬೇಕಲ್ಲದೆ ಕಾಶ್ಮೀರದ ಪ್ರಶ್ನೆಯೊಂದನ್ನೇ ಅಲ್ಲವೆಂಬ ತನ್ನ ಬೇಡಿಕೆಯು ಮಾನ್ಯವಾಗಿ ನಿಯೋಜಿತ ಸಮಿತಿಯು ಆ ವಿವಾದಗಳ ಪರಿಶೀಲನಾಧಿಕಾರವನ್ನು ಪಡೆದಿರುವುದೇ. 'ಬೇರಾವುದೂ ಬೇಡ; ಕಾಶ್ಮೀರದ ಕಾಳಗದ ಕುರಿತೂ ನಮ್ಮ ದೂರಲ್ಲ; ಪಾಕಿಸ್ತಾನವು ಧಾಳಿಗಾರರಿಗೆ ಕೊಡುತ್ತಿರುವ ಸಹಾಯವೊಂದರ ಕುರಿತೇ ಕಾರ್ಯ ಕೈಕೊಳ್ಳತಕ್ಕದ್ದು' ಎಂದು ಕೇಳಿರುವ ಭಾರತದ ಪಾಲಿಗೀಗ ಎಲ್ಲವೂ ಮಿಶ್ರಗೊಂಡ 'ಪಂಚಕಜ್ಜಾಯ'ವೇ ದೊರೆತಂತಾಗಿದೆ!

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ
ಬಂದಾಯಿತು! ನೀವು ನಿರೀಕ್ಷಿಸುತ್ತಿದ್ದ
ಜಗದ್ವಂದ್ಯ ವರ್ಣಚಿತ್ರ
ಸಾವಿರದ ಒಂದು ರಾತ್ರಿ
ತಾರೀಕು 21—1—1948ರಿಂದ
Columbia's Thousand And One night
in Technicolour
ಬರುವ ಚಿತ್ರ— ಸುಭದ್ರಾ
ಹೊನ್ನಪ್ಪ ಭಾಗವತರ್, ಜಯಮ್ಮ

ಉಡುಪಿ.

ನ್ಯಾಯಸುಧಾಮಂಗಳ—ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರಿಂದ ತಾ. ೧೭ರಲ್ಲು ಶ್ರೀ ಕೃಷ್ಣಮಠದಲ್ಲಿ ಯಥಾಸ್ಥಿಯಾಗಿ ಜರಗಿತು. ಶಿಷ್ಯರೆಲ್ಲಾ ಪುಷ್ಕಲ ಸಂಭಾವನೆ ಕೊಡಲಾಯಿತು. ವಿದ್ವತ್ ಪಂಡಿತರಿಗೂ ಅವರವರ ಯೋಗ್ಯತಾನುಸಾರವಾಗಿ ಪಾರಿತೋಷಕಗಳು ಕೊಡಲಾದುವು. ಈ ಸಂದರ್ಭದಲ್ಲಿ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ತಾನು ಬರೆದ 'ನಮ್ಮ ಉಡುಪಿ' ಪುಸ್ತಕವನ್ನು ಬೆಳ್ಳಿ ಹರಿವಾಣದಲ್ಲಿಟ್ಟು ಸ್ವಾಮಿಗಳವರಿಗೆ ಒಪ್ಪಿಸಿದರು. ಎರಡು ವರುಷಗಳ ಪರ್ಯಾಯವನ್ನು ಸಾಂಗ ಗೊಳಿಸಿದ ಸ್ವಾಮಿಗಳವರನ್ನು ಅಭಿನಂದಿಸಿ ಮಾನಪತ್ರಗಳೂ ಅರ್ಪಿಸಲಾದುವು. ಇಂದು ಪೂರ್ವಾಹ್ನ ಶ್ರೀ ಕೃಷ್ಣನಿಗೆ ಮಹಾ ರಥೋತ್ಸವವೂ ಮಧ್ಯಾಹ್ನ ನಾಲ್ಕಾರು ಸಾವಿರ ಮಂದಿಗೆ ಅನ್ನ ಸಂತರ್ಪಣೆಯೂ ನಡೆಯಿತು.

ಅಧಿಕಾರ ಬದಲಾವಣೆ—ಇದೇ ತಾ. ೧೮ರಲ್ಲು ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ಶ್ರೀ ಕೃಷ್ಣಮಠದ ಪರ್ಯಾಯ ಅಧಿಕಾರವನ್ನು ತಮ್ಮ ದ್ವಂದ್ವ ಮಠಾಧಿಪತಿಗಳಾದ ಶ್ರೀ ಸೋದೆ ಸ್ವಾಮಿಯವರಿಗೆ ಬಿಟ್ಟುಕೊಟ್ಟರು. ಶ್ರೀ ಸೋದೆ ಮಠದ ಜನರಲ್ ಏಜೆಂಟರು ಕಾಯಿಲೆಯಲ್ಲಿದ್ದುದರಿಂದ ಪರ್ಯಾಯ ಮಹೋತ್ಸವದ ಏರ್ಪಾಡುಗಳು ಅತೃಪ್ತಿಕರವಿದ್ದುದು ಜನತೆಯ ಸ್ಪಷ್ಟ ಅಭಿಪ್ರಾಯವಿದೆ.

ಮಳೆ—ಇದೇ ತಾ. ೧೭ರಲ್ಲು ರಾತ್ರಿ ಮತ್ತು ಮರುದಿನ ಧಾರಾಕಾರವಾಗಿ ಮಳೆ ಬಂದಿದೆ. ಅಕಾಲ ವೃಷ್ಟಿ ಯಾದರೂ ಮುನ್ಸಿಪಾಲಿಟಿಗೆ ಸಹಾಯವಾಗುವಂತಾಯಿತು.

ಪರ್ಯಾಯ ಸಾಹಿತ್ಯೋತ್ಸವ—ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಾ. ೧೫ರಿಂದ ೧೭ರ ತನಕ ಮುನಿಸಿಪಲ್ ಹೈಸ್ಕೂಲ್ ಶಾಲೆಯಲ್ಲಿ ಪರ್ಯಾಯ ಸಾಹಿತ್ಯೋತ್ಸವವು ಭಾಷಣ, ಹರಿಕಥೆ, ಯಕ್ಷಗಾನ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು. ಪ್ರಥಮದಿನದ ಸಭೆಗೆ ಡಾ| ಮಾಧವ ಪೈಗಳವರು ಅಧ್ಯಕ್ಷರಿದ್ದು ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸರಾವ್ ಎ. ಲಕ್ಷ್ಮೀನಾರಾಯಣ ರಾವ್ ಮೊದಲಾದವರೂ ಎರಡನೆ ದಿನದ ಸಭೆಗೆ ಶ್ರೀ ಎಂ. ಎಸ್. ಕಾಮತರು ಅಧ್ಯಕ್ಷರಾಗಿದ್ದು ಸಂಯುಕ್ತ ಕರ್ನಾಟಕದ ಉಪ ಸಂಪಾದಕ ... ಶ್ರೀ ... ಬಿ ನಾಯಕ ಶ್ರೀ. ಯಚ್.

ಎ. ರಾವ್ ಮೊದಲಾದವರೂ ಕೊನೆಯ ದಿವಸ ಶ್ರೀ ಬಿ. ವಾಸುದೇವರಾಯರು ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದು ಶ್ರೀ. ಪಂಜೆ ಮಂಗೇಶರಾಯ, ಶ್ರೀ. ಕೆ. ಆಚಾರ್ ಮೊದಲಾದವರೂ ಭಾಷಣ ಮಾಡಿದರು.

ಕಲಾ ವೃಂದದಲ್ಲಿ—ಇದೇ ತಾ|೧೪ರಲ್ಲು ಮುಖ್ಯ ನೃತ್ಯದ ವೈಶಿಷ್ಟತೆ ಕುರಿತು ಮೈಸೂರಿನ ಶ್ರೀ ಎಚ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಪಾಡೂರು ವಾಸುದೇವ ಉಪಾಧ್ಯಾಯ, ದಾವಣಗೆರೆ ಭೀಮರಾವ್ ಮೊದಲಾದವರ ಭಾಷಣಗಳಾದುವು ಎಂದು ವರದಿ ಬಂದಿದೆ.

'ರೈತವಾಣಿ'—ಪತ್ರಿಕೆಯ ಉದ್ಘಾಟನಾ ಸಮಾರಂಭವು ಸ್ಥಳೀಯ ನಾಟಕ ಥಿಯೇಟರಿನಲ್ಲಿ ಇದೇ ತಾ. ೧೮ರಲ್ಲು ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಚ್. ಬಿ. ಅಧಿಕಾರಿ, ಎಮ್. ಉಮೇಶರಾವ್, ಆರ್ ಆರ್. ಕುಂಜೂರು ಮೊದಲಾದವರ ದೀರ್ಘ ಭಾಷಣಗಳಾದುವು. ಸಂಪಾದಕ ಶ್ರೀ ನಿಂಜೂರು ಧನ್ಯವಾದಗಳನ್ನ ರ್ಪಿಸಿದರು.

ಶ್ರೀ ಫಲಿಮಾರು ಮಠ ಸಂಸ್ಥಾನಾಧಿ—ಪತಿಗಳಾಗಿ ಸದ್ರಿ ಮಠದ ಏಜಂಟರಾಗಿದ್ದ ದಿವಂಗತ ಶ್ರೀ ಶ್ರೀನಿವಾಸ ಸೆಜತ್ತಾಯರ ಪುತ್ರನನ್ನು ಆರಿಸಿ ಇದೇ ತಾ. ೧೭ರಲ್ಲು ಫಲಿಮಾರಿನಲ್ಲಿ ಆಶ್ರಮ ದೀಕ್ಷೆಯನ್ನಿತ್ತು ಶ್ರೀರಘುವಲ್ಲಭ ತೀರ್ಥರೆಂದು ನಾಮಕರಣ ಮಾಡಲಾಯಿತು. ಬಾಲಯತಿಗಳು ಅದೇ ದಿನ ರಾತ್ರಿ ಮೆರವಣಿಗೆಯಿಂದ ಉಡುಪಿ ಕೃಷ್ಣ ಹಾಗೂ ಮಠಪ್ರವೇಶ ಮಾಡಿದರು. ಶ್ರೀ ಫಲಿಮಾರು ಮಠಕ್ಕೆ ಇಂಟೆರಿಮ್ ಟ್ರಸ್ಟಿಯಾಗಿ ಎಡ್ವೋಕೇಟ್ ಶ್ರೀ. ಪಡಿಯಿಲ್ಲಾಯರು ನೇಮಿಸಲ್ಪಟ್ಟಿರುವರು.

ಉಡುಪಿಯ ಯಾತ್ರಿಕರು ಸಂದರ್ಶಕರು ಊರವರು ಪರವೂರವರು ಅವಶ್ಯ ಕೊಂಡುಕೊಳ್ಳಬೇಕಾದ ಪುಸ್ತಕ?

'ನಮ್ಮ ಉಡುಪಿ'

40 ಚಿತ್ರಗಳ ಸಹಿತವಾಗಿ ಉಡುಪಿ ಕ್ಷೇತ್ರ ವಿವರಣೆ

ಶ್ರೀ ಮನ್ಮಧ್ವಾಚಾರ್ಯರ, ಶ್ರೀಗುರುವಾದಿರಾಜ ಸ್ವಾಮಿಗಳ, ಎಳುವ ಮತ್ತು ಕೊಡುಕೊಳ್ಳುವ ಪರ್ಯಾಯ ಮಠಗಳ ಚರಿತ್ರೆಗಳು—ಶ್ರೀಕೃಷ್ಣ ಮಠ, ಅಷ್ಟ ಮಠಗಳು, ಮಕರಸಂಕ್ರಮಣೋತ್ಸವ, ಪರ್ಯಾಯ ಮಹೋತ್ಸವ, ಇತರ ಉತ್ಸವಗಳು, ಉಡುಪಿಯ ಮತ್ತು ಸುತ್ತುಮುತ್ತಲಿನ ಸಂದರ್ಶನೀಯ ಸ್ಥಳಗಳು, ಸಂಘ ಸಂಸ್ಥೆಗಳು- ಇತ್ಯಾದಿ ಹಿಂದಿನ ಇಂದಿನ ಉಡುಪಿಯ ವಿಚಾರ ತಿಳಿಯಬೇಕಾದುದೆಲ್ಲ ಸಚಿತ್ರವಾಗಿ-ಕರ್ನಾಟಕದ ಸುಪ್ರಸಿದ್ಧ ಲೇಖಕರಲ್ಲೊಬ್ಬರಾದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ಲೇಖನಿಯಿಂದ ಈಗ ತಾನೇ ಹೊರಬಿದ್ದಿದೆ.

116 ಪುಟಗಳ ಈ ಸಚಿತ್ರ ಪುಸ್ತಕಕ್ಕೆ ಬೆಲೆ ಬರೇ ಹನ್ನೆರಡಾಣೆ

ದೊರೆಯುವ ಸ್ಥಳ: (1) ನವಭಾರತ ಪುಸ್ತಕ ಭಂಡಾರ, ಉಡುಪಿ. (2) ನವಯುಗ ಪ್ರೆಸ್, ಉಡುಪಿ.

ನೋಟೀಸು

ಈ ಮೂಲಕ ತಿಳಿಯಪಡಿಸುವದೇನೆಂದರೆ:—

1948ನೇ ಎಪ್ರಿಲ್ ತಿಂಗಳ ತಾರೀಕು 1ರ ಆರಭ್ಯಾ 1949ನೇ ಇಸವಿ ಮಾರ್ಚ ತಾ 31ರ ವರೆಗಿನ ಒಂದು ವರ್ಷದ ವರೆಗೆ ಈ ಕೆಳಗೆ ಕಾಣಿಸಿದ ಉಡುಪಿ ಮುನಿಸಿಪಾಲಿಟಿಯೊಳಗಿರುವ ಮಾರ್ಕೇಟು, ಗಾಡಿ ಚೌಕ, ಜಟ್ಕಾ ಚೌಕ ಮತ್ತು ವಧಾ ಗೃಹದಲ್ಲಿ ವಸೂಲು ಮಾಡುವ ಮತ್ತು ಮಾರ್ಕೇಟುಗಳಲ್ಲಿರುವ ಕಾಯಂ ... ಗಳ ಬಾಡಿಗೆ ವಸೂಲು ಮಾಡುವ ಸ್ವತಂತ್ರವನ್ನು ಮತ್ತು ಉಡುಪಿ ದಿನವಹಿ ಮೀನು ಮಾರ್ಕೇಟಿನ ಪರಾರದೊಳಗಿರುವ ಮೂರು (Mutton Stalls) ಮಾಂಸ ಮಾರಾಟ ಮಾಡುವ ಅಂಗಡಿಗಳನ್ನು ಒಂದು ವರ್ಷಕ್ಕೆ ಉಪಯೋಗಿಸಿಕೊಳ್ಳುವ ಹಕ್ಕನ್ನು ಕೂಡಾ ಉಡುಪಿ ಮುನಿಸಿಪಾಲಿಟಿಯ ಕಮಿಶನರರವರು ತಮ್ಮ ಆಫೀಸಿನಲ್ಲಿ ತಾರೀಕು 31-1 1948ನೇ ಶನಿವಾರ ದಿವಸ ಅಪರಾಹ್ನ ಗಂಟೆ 3ಕ್ಕೆ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಆಫೀಸು ಸಮಯ ಮುನಿಸಿಪಲ್ ಆಫೀಸಿಗೆ ಬಂದು ತಿಳಕೊಳ್ಳಬಹುದು.

ಮಾರ್ಕೇಟು

1. ಉಡುಪಿ ದಿನವಹಿ ಪ ಹಪ್ತೆವಾರು ತರಕಾರಿ ಮಾರ್ಕೇಟು.
2. ಉಡುಪಿ ದಿನವಹಿ ಮೀನು ಮಾರ್ಕೇಟು.
3. ಕುಂಜಿಬೆಟ್ಟು ಮೀನು ಮಾರ್ಕೇಟು.
4. ಆದಿಉಡುಪಿ ಮೀನು ಮಾರ್ಕೇಟು.

ಗಾಡಿ ಚೌಕ

1. ಉಡುಪಿ ಜಟ್ಕಾ ಚೌಕ. 2. ಉಡುಪಿ ಗಾಡಿ ಚೌಕ.

ವಧಾಗೃಹ ಮತ್ತು ಉಡುಪಿ ದಿನವಹಿ ಮೀನು ಮಾರ್ಕೇಟಿನ ಪರಾರದೊಳಗಿರುವ ಮೂರು (Mutton Stalls) ಮಾಂಸ ಮಾರಾಟ ಮಾಡುವ ಅಂಗಡಿಗಳು.

T. HARISCHANDRA RAO,
ಕಮಿಶನರ್, ಯು. ಯಂ.

ಮುನಿಸಿಪಲ್ ಆಫೀಸು,
ಉಡುಪಿ.
ತಾ. 15-1-1948.

ಕೃಷಿ ಮತ್ತು ಮಲೇರಿಯಾ ಪ್ರತಿಬಂಧಕ ಪ್ರದರ್ಶನಗಳು-ರಥೋತ್ಸವ ದಿನಗಳಲ್ಲಿ ಜಯಶೀಲವಾಗಿ ಏರ್ಪಡಿಸಲ್ಪಟ್ಟಿದ್ದವು. ಇವುಗಳ ಸದುಪಯೋಗವನ್ನು ಉತ್ಸವದ ಸಂತೆಗೆ ಬಂದ ಎಷ್ಟು ಜನರು ಪಡೆದಿರುವರೋ ತಿಳಿಯದಾಗಿದೆ. ಎಲ್ಲೆಲ್ಲಿ ಬೆಳೆದ ಬೀಜ, ಗಿಡ, ಫಲ ಮೊದಲಾದುದನ್ನು ತಂದು ಇಂತಹ ಸಮಾರಂಭಗಳಲ್ಲಿ ಪ್ರದರ್ಶಿಸುವುದಕ್ಕಿಂತಲೂ ಉತ್ತಮ ಬೆಳೆ ಬೆಳೆಯುವವರು ಜಿಲ್ಲೆಯ ಯಾವ ಪ್ರದೇಶದಲ್ಲಿದ್ದರೂ ಅವರನ್ನು ಬೆಳಕಿಗೆ ತರುವ ಪ್ರದರ್ಶನವನ್ನೇರ್ಪಡಿಸಿದರೆ ಹೆಚ್ಚಿನ ಫಲಕಾರಿಯಾಗದೆ?

ಶ್ರೀ ಮಧ್ವನವಮಿ—ಜಾತ್ರೆಯು ಇದೇ ತಾ. ೩೦ರಲ್ಲು ಜರಗಿತು.

ಎಕೆಡೆಮಿ ಆಫ್ ಜನರಲ್ ಎಡ್ಯುಕೇಶನ್ ಮಣಿಪಾಲ-ಇದರ ಸುಪ್ರೀಮ್ ಗವರ್ನಿಂಗ್ ಬೋರ್ಡಿಯ ಸಭೆಯು ತಾ 25ನೇ ಅಪರಾಹ್ನ ಗಂಟೆ 3-30ಕ್ಕೆ ಮತ್ತು ಅದರ ಪರ್ಷಾವಧಿ ಮಹಾಸಭೆಯು ಅಪರಾಹ್ನ ಗಂಟೆ 4ಕ್ಕೆ ಮುಕುಂದ ನಿವಾಸದಲ್ಲಿ ಜರಗುವುದು.

ಆ| ಕಮರ್ಶಿಯಲ್ ಟೇಕ್ಸ್ ಆಫೀಸರರ ಪ್ರಕಟಣೆ

ಮದ್ರಾಸು ಜನರಲ್ ಸೇಲ್ಸ್ ಟೇಕ್ಸ್ ಆಕ್ಟು ಮತ್ತು ರೂಲ್ಸುಗಳ ಹೊಸ ತಿದ್ದುಪಡಿಗಳಿಗನುಸಾರವಾಗಿ ರೂಪಾಯಿ 7500/-ಕ್ಕೆ ಮಿಕ್ಕಿ ವಹಿವಾಟುಳ್ಳವರು ತಾರೀಕು 1-2 1948ರೊಳಗಾಗಿ ಅವರವರ ಹೆಸರುಗಳನ್ನು ರಿಜಿಸ್ಟ್ರಿ ಮಾಡತಕ್ಕದ್ದು. ಫಾರ್ಮ್ ಎ 6ರಲ್ಲಿ ಅರ್ಜಿ ಮಾಡಬೇಕು. ರಿಜಿಸ್ಟ್ರಿ ಫೀಸು ಒಂದಾಯಿ ಆರು ತೆರತಕ್ಕದ್ದು. ಸಕಾಲದಲ್ಲಿ ಹೆಸರುಗಳನ್ನು ರಿಜಿಸ್ಟ್ರಿ ಮಾಡದಿದ್ದರೆ ರೂ. 1000 ದ ತನಕ ದಂಡನೆ ಹೊಂದಬಹುದು. ವ್ಯಾಪಾರಸ್ಥರು ತೀವ್ರ ಗಮನಕೊಡಬೇಕಾದ ವಿಷಯ.

ಸಾದರ ಸ್ವೀಕಾರ

ಪ್ರಕಾಶ-ಪರ್ಯಾಯ ಸಂಚಿಕೆ-ಸಂಪಾದಕರು ಶ್ರೀ. ಯು. ಪ್ರಭಾಕರರಾವ್. ಉಡುಪಿ ಪರ್ಯಾಯದ ನೆಲೆ ಪ್ರಕಟಿಸಲ್ಪಟ್ಟ ಉತ್ತಮ ವಿಶೇಷ ಸಂಚಿಕೆ. ಬೆಲೆ ರೂ. 0 12-0.

ಕನ್ನಡ ನುಡಿ ವಿಶೇಷ ಸಂಚಿಕೆ-ಕಾಸರಗೋಡಿನ ಸಾಹಿತ್ಯ ಸಮ್ಮೇಲನದ ಅವಧಿಯಲ್ಲಿ ಪ್ರಕಟಿಸಲ್ಪಟ್ಟ ವಿಶೇಷ ಸಂಚಿಕೆ. ಬೆಲೆ ರೂ. 1-0-0.

ತೆಂಕನಾಡು ಕಾಸರಗೋಡು ಸಾಹಿತ್ಯ ಪರಿಷತ್ತಿನ ಸಮಯ ಶ್ರೀಗಳಾದ ಸೇಡಿಯಾಪು ಕೃಷ್ಣ ಭಟ್ಟ, ಪಿ ಕೆ. ನಾರಾಯಣ, ಕಯ್ಯಾರ ಕಿಞ್ಞಣ್ಣ ರೈ ಕೆ. ಶ್ರೀನಿವಾಸ ಶರ್ಮ ಇವರಿಂದ ಸಂಪಾದಿಸಲ್ಪಟ್ಟ ಗ್ರಂಥ, ಬೆಲೆ ರೂ. 2 0 0.

ಮುರುಕು ದಂಬೂರು-ಶ್ರೀ ... ಭೀಮರಾಯರಿಂದ ಬರೆಯಲ್ಪಟ್ಟು ಮಂಗಳೂರಿನ ಬಾಳಿಗಾ ಎಂಡ್ ಸನ್ಸ್‌ರವರಿಂದ ಪ್ರಕಟಿಸಲ್ಪಟ್ಟ ಉಪಕಥಾ ಗ್ರಂಥ. ಬೆಲೆ ರೂ. 2-4 0.

ಸ್ವರಾಜ್ಯ ವಿಜಯ—ಶ್ರೀ. ಎಂ. ಎ. ಹೆಗ್ಡೆಯವರಿಂದ ಬರೆಯಲ್ಪಟ್ಟು ಉಡುಪಿ ಕಿಣಿಯವರ ಪ್ರಕಾಶದಿಂದ ಪ್ರಕಟಿಸಲ್ಪಟ್ಟ, ಯಕ್ಷಗಾನ ಪದ್ಯ, ಅರ್ಥಗಳಿರುವ ನೂತನ ಯಕ್ಷಗಾನ ಪ್ರಸಂಗ. ಬೆಲೆ ರೂ. 0-8-0.

ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರ—(1) ಸ್ವರಾಜ್ಯ ಗೀತಾಮೃತ ಬೆಲೆ. 0-12-0; (2) ಲೀಲೆ ಬೆಲೆ ರೂ. 0-2-0; (3) ಬಾಲಗಂಗಾಧರ ಸ್ತವ ಬೆಲೆ 0-4-0; (4) ಸ್ವಾಗತ ಗೀತೆ ಎಂಬ ನಾಲ್ಕು ಪದ್ಯ ಕುಸುಮಗಳು.

ರೈತವಾಣಿ—ಉಡುಪಿ ಜಿಲ್ಲಾ ರೈತ ಸಂಘದಿಂದ ಪ್ರಕಟಿಸಲ್ಪಡಲಾರಂಭಿಸಿದ 'ನವಯುಗ' ಪತ್ರಿಕೆಯ ಆಕಾರದ 4 ಪುಟಗಳ ನೂತನ ವಾರಪತ್ರಿಕೆ, ಸಂಪಾದಕರು ಶ್ರೀ. ನಿಂಜೂರು ವಿಟ್ಠಲದಾಸರು, ವಾ. ಚಂದಾ ರೂ 4-0-0

ಚ್ಯವನಪ್ರಾಶ ರಸಾಯನ
(ಉರಕ್ಷತ, ಕ್ಷಯ, ಶ್ವಾಸ ಕಾಸಹಾರಿ)
ಕ್ರಯ—1 ಪೌಂಡು ರೂ. 5-0-0
ನಮ್ಮ ಕೆಲಸಗಾರ ಧರ್ಮಾರ್ಥ
ದಿ ಮಹಾಜನ ಕೆಮಿಕಲ್ಸ್ ಎಂಡ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್,
ಕಾಸರಗೋಡು, ದ. ಇಂಡಿಯಾ.

ಅಮೃತಾಂಜನ. ತಲೆನೋವು, ಶೀತ, ನೋವು, ಉಳುಕು, ಸೆಳೆತ, ಉಳುಕು ಮತ್ತು ಮೈಕೈ ನೋವುಗಳು ಎದೆನೋವು, ಭಾದೆಯಗಳು ಬಾಹು ಶೋಕಯದು, ಹೇಳು ಏಕ ಮುಂತಾದ ಬೇನೆ ... ರೋಗಗಳಿಗೆಲ್ಲಾ
REGD.
ಔಷಧ, ಅಮುಕುಳ್ಳ ಮತ್ತು ನಕಲಿ ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ದಕ್ಷಿಣ ಕನ್ನಡ.

ಎಡನೀರು—ತಾ. 11-1-48ರಲ್ಲಿ ಶ್ರೀ ನ್ಯಾ. ಸೂರು ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿದ ಪರ ಕೂಟದ ಸಭೆಯಲ್ಲಿ ಶ್ರೀ. ಸುರಲ್ ಭೋಜರಾಯರು ತುಳು ಭಾಷೆಯ 'ಮಾರ್ಕಂಡೇಯ ಚರಿತ್ರೆ' ಹರಿಕತೆ ಮಾಡಿದರು. ಶ್ರೀ. ಸೋಮಯ್ಯ ಶೆಟ್ಟಿ ಕೊನೆಯಲ್ಲಿ ಧನ್ಯವಾದವಿತ್ತರು.

ಮುಂದಾರ್ತಿ—ಶ್ರೀ. ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ತಾ 10-2-1948ರಿಂದ 15-2-48ರ ವರೆಗೆ ರಥೋತ್ಸವವು ಜರಗಲಿದೆ.

ಶ್ರೀ ಭಗವತೀ ನೃತ್ಯಕಲಾ ಮಂದಿರ, ಮುಂಬಾಯಿ—ಇದರ ಸಹಾಯಾರ್ಥವಾಗಿ ಬೆಳ್ಳಾವೆ ನರಹರಿ ಶಾಸ್ತ್ರಿಗಳಿಂದ ವಿರಚಿತವಾದ ಮಾರ್ಕಂಡೇಯ, ನಾಟಕವನ್ನು ಂಗ್‌ವಾಡಿ ಥಿಯೇಟರ್‌ನಲ್ಲಿ ಎಪ್ರಿಲ್ ನೇ ಶುಕ್ರವಾರ ರಾತ್ರಿ ಗಂಟೆ 8½ಗೆ ಅಭಿನಯಿಸಲಿಕ್ಕಿರುವರು.

ಕಿನ್ನಿಗೋಳಿ--ಇದೇ ತಾ. 8ರಲ್ಲಿ ಕಿನ್ನಿಗೋಳಿ ಸಮೀಪದ ದಾಮಸ್‌ಕಟ್ಟೆ ಎಂಬಲ್ಲಿ ಮಂದಿಯುಳ್ಳ ಒಂದು ಮುಸಲ್ಮಾನ ಪರಿವಾರವನ್ನು ಶುದ್ಧೀಗೊಳಿಸಿ ಹಿಂದೂ ಸಮಾಜಕ್ಕೆ ಸೇರಿಸಲಾಯಿತು. ಈ ಪರಿವಾರವು ಸುಮಾರು ಹತ್ತು ವರ್ಷಗಳ ಮೊದಲು ಬಿಲ್ಲವ ಸಮಾಜದಿಂದ ಮುಸಲ್ಮಾನ ಮತವನ್ನು ಸ್ವೀಕರಿಸಿತ್ತು. ಕಿನ್ನಿಗೋಳಿ ಸಮೀಪದ ಬಗ್ಗತೋಟ ಎಂಬಲ್ಲಿಯ ಶ್ರೀ ಕಾಂತಪ್ಪ ಟ್ಯಾನರವರ ವಿಶೇಷ ಪ್ರಯತ್ನದಿಂದ ಈ ಕಾರ್ಯವು ನೆರವೇರಿತು, ಶುದ್ಧೀಸಂಸ್ಕಾರವು ಮಂಗಳೂರು ಆರ್ಯ ಸಮಾಜದ ಪರವಾಗಿ ಶ್ರೀ. ಬಿ. ಲಕ್ಷ್ಮಣ ದೇವ ವಿದ್ಯಾರ್ಥಿ ಮತ್ತು ಶ್ರೀ. ಪ. ರಾಮಕೃಷ್ಣ ರಾವ್. ಇವರ ಪೌರೋಹಿತ್ಯದಲ್ಲಿ ನೆರವೇರಿತು.

ತಾ. 7-8 ಮತ್ತು 11 ಈ ಮೂರು ದಿನಗಳಲ್ಲಿ ಶ್ರೀ. ಬಿ. ಲಕ್ಷ್ಮಣ ದೇವ ವಿದ್ಯಾರ್ಥಿಯವರು ಕಿನ್ನಿಗೋಳಿ, ಬೆಪ್ಪಾಡಿ, ಈ ಎರಡು ಕಡೆಗಳಲ್ಲಿ ಜರಗಿದ ಸಾರ್ವಜನಿಕ ಸಭೆಗಳಲ್ಲಿ ಹರಿಕಥೆ, ಉಪನ್ಯಾಸಗಳ ಮೂಲಕ ಇಂದಿನ ಸಮಸ್ಯೆ ಮತ್ತು ಹಿಂದೂ ಸಂಘಟನೆಯ ಆವಶ್ಯಕತೆ ಕುರಿತು ಬೋಧಪ್ರದವಾಗಿ ವಿವರಿಸಿದರು.

ನೋಟೀಸು.

ಮೂಲ್ಕಿ ಗ್ರಾಮಾಭಿವೃದ್ಧಿ ಸೆಂಟರು "3ನೇ ಕೃಷಿ ಕೈಗಾರಿಕೆ ಪ್ರದರ್ಶನವನ್ನು" ತನ್ನ ಮುಂಡ್ಕೂರು ಸೆಂಟರಿನಲ್ಲಿ ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಇದೇ ಬರುವ

ಫೆಬ್ರವರಿ ತಾ. 27—28—29ಕ್ಕೆ

ಜರಗಿಸುವುದು.

ಪಶುಪ್ರದರ್ಶನವೂ ನಡಿಯುವುದು.

ಸ್ಟಾಲ್ ಫೀ ಮತ್ತು ಪ್ರದರ್ಶನ ಟಿಕೇಟು ಸಹ ಇಲ್ಲವೆಂದು ನಿಶ್ಚಯಿಸಿರುತ್ತಾ, ಜಿಲ್ಲೆಯ ಅನೇಕರು ಮಾಡುವ ಊರ ಕೃಷಿ ಕೈಗಾರಿಕೆ ವಸ್ತುಗಳನ್ನು ಕಳುಹಿಸಿ ಪ್ರದರ್ಶಿಸುವುದಲ್ಲದೆ ಎಲ್ಲವರೂ ಬಂದು ನೋಡಲು ಸ್ವಾಗತವಿದೆ.

ಮಹಾಬಲ ಶೆಟ್ಟಿ- ಅಧ್ಯಕ್ಷ.
ಕೆ. ನಾರಾಯಣ ಶೆಟ್ಟಿ-ಉಪಾಧ್ಯಕ್ಷ.
ಲಕ್ಷ್ಮಣ ಕಮ್ತಿ-ಕೋಶಾಧಿಕಾರಿ.
ಸತ್ಯನಾರಾಯಣ ರಾವ್, ನಲ್ಲಪ್ಪ ಶೆಟ್ಟಿ, ವೆಂಕಣ್ಣ ಶೆಟ್ಟಿ, ನಾರಾಯಣ ರಾವ್, ಶಿವಣ್ಣ ಶೆಟ್ಟಿ, ಎಮ್. ಆರ್. ಪೂಂಜ-ಕಾರ್ಯದರ್ಶಿಗಳು.
ಮೂಲ್ಕಿ 18-1-48.

ಕಡಂದಲೆ—ಇಲ್ಲಿಯ ಬೋ. ಹಾ. ಎ. ಶಾಲೆಯಿಂದ 48 ಮಕ್ಕಳೂ 8 ಉಪಾಧ್ಯಾಯರೂ ತಾ 11-1-48ರಲ್ಲಿ ಮೂಲ್ಕಿಗಾಗಿ ಹೆಜಮಾಡಿ ವಗೈರೆ ಸ್ಥಳಗಳಿಗೆ ಪರ್ಯಟನ ಹೋದಾಗ ಆದರಾತಿಥ್ಯ ಮಾಡಿದ ಶ್ರೀಗಳಾದ ಹೆಜ್ಮಾಡಿ ಪಟೇಲ್ ನಾರಾಯಣ ಶೆಟ್ರು ಮೊದಲಾದವರಿಗೆ ಕೃತಜ್ಞರಾಗಿದ್ದೇವೆಂದು ಮುಖ್ಯ ಉಪಾಧ್ಯಾಯರು ತಿಳಿಸುತ್ತಾರೆ.

ಶ್ರೀ ಕೊಳ್ಕೆಬ್ಬೈಲು ಸುಬ್ಬಣ್ಣ ಹೆಗ್ಡೇರವರು ದಿವಂಗತರಾದರು—ಉಡ್ಪಿ ತಾಲೂಕಿನ ಸುಪ್ರಸಿದ್ಧ ಕೊಳ್ಕೆಬ್ಬೈಲು ಮನೆತನದ ರತ್ನಪ್ರಾಯರಾದ ಶ್ರೀ. ಸುಬ್ಬಣ್ಣ ಹೆಗ್ಡೇರವರು 73ನೇ ವಯಸ್ಸಿನಲ್ಲಿ ತಾ. 18-1-48ನೇ ಆದಿತ್ಯವಾರ ಬೆಳಿಗ್ಗೆ ಪರಂಧಾಮವನ್ನೈದಿದರು. ಇವರು ಕೆಲವು ಸಮಯದಿಂದ ಅಸ್ವಸ್ಥರಿದ್ದರು. ದಿವಂಗತರು ಜನಪ್ರಿಯರು. ಬುದ್ಧಿಶಾಲಿಗಳು; ಒಳ್ಳೇ ಪಂಚಾಯತರು. ಇವರು ಉಡ್ಪಿ ತಾಲೂಕು ಬೋರ್ಡ್ ಮೆಂಬರರಾಗಿಯೂ ಇದ್ದರು. ಇವರ ಆಡಳಿತೆಯಲ್ಲಿ ಕುಟುಂಬಕ್ಕೆ ಭವ್ಯ ಮನೆಯನ್ನು ಕಟ್ಟಿಸಿರುವರು. ಸ್ವಸಮಾಜದ ಸಂಘಕ್ಕೆ ಉದಾರ ದಾನಮಾಡಿರುವರು. ಇವರ ವಿಯೋಗದಿಂದ ಬಂಟ ಸಮಾಜದ ಒಬ್ಬ ಘನಸ್ಥ ಮುಂದಾಳುವನ್ನು ಕಳಕೊಂಡಂತಾಗಿದೆ.

ಮಂಗಳೂರು.

ಆರೋಗ್ಯ—ಊರಲ್ಲಿ ಅಲ್ಲಲ್ಲಿ ಕೊಲೆರಾ, ಕೋಟ್ಲ ಇತ್ಯಾದಿ ಬೇನೆಗಳಿವೆ. ಕೆಲವು ಕಡೆಗಳಲ್ಲಿ ಆಮಾಂಶ ಕಾಹಿಲೆಯೂ ಇದೆ.

ಕಾಫಿ ಚಹಾ ದರ ಹೆಚ್ಚಿಸಲ್ಪಟ್ಟಿತು—ಈ ವಾರದಿಂದ ಮಂಗಳೂರಿನ ಹೆಚ್ಚಿನ ಹೋಟೇಲುಗಳಲ್ಲಿ ಕಾಫಿ ಮತ್ತು ಚಹಕ್ಕೆ 'ಸಿಂಗಲಿ'ಗೆ ಒಂದೂವರೆ ಆಣೆ ಮಾಡಿರುತ್ತಾರೆ. ಒಂದು ಪಾವು ಅಕ್ಕಿ ಊಟಮಾಡಿ ಅರೆ ಹೊಟ್ಟೆಯಲ್ಲಿರುವ ಜನರು ಇತ್ತೀಚೆಗೆ ಹೆಚ್ಚಾಗಿ ಹೋಟೇಲು ಕಾಫಿ ಮತ್ತು ತಿಂಡಿಯ ಮೇಲೆ ಅವಲಂಬಿಸಿದ್ದರು. ಈ ಕಾಲದಲ್ಲಿ ಹೋಟೇಲು ಮಾಲಕರ ಈ "ಸುಲಿಗೆ"ಯು ತೀರ ಅನ್ಯಾಯವಾಗಿದೆ. ಜನರು ಇದನ್ನು ಮೌನವಾಗಿ ಸಹಿಸದೆ, ಪ್ರತಿಭಟಿಸಬೇಕು; ಸಂಬಂಧಪಟ್ಟ ಅಧಿಕಾರಿಗಳು ಜನತೆಯೊಡನೆ ಸಹಕರಿಸಿ, ಈ ಸುಲಿಗೆ ನಿಲ್ಲಿಸುವಲ್ಲಿ ಸಹಾಯಕರಾಗಬೇಕು. ನಮ್ಮ ದೇಶಭಕ್ತರು ಮುಂದೆ ಬಂದು ಈ ಪ್ರಶ್ನೆಯ ಇತ್ಯರ್ಥಕ್ಕೆ ಕಾರ್ಯಪ್ರವೃತ್ತರಾಗಬೇಕು.

ನೆಹರುಗಳ ಚಿತ್ರದ ಅನಾವರಣ—ಸ್ವತಂತ್ರ ಭಾರತದ ಪ್ರಥಮ ಪ್ರಧಾನ ಸಚಿವ ಪಂಡಿತ ಜವಾಹಿರಲಾಲ ನೆಹರುಗಳವರ ತೈಲಚಿತ್ರ ಅನಾವರಣವು, ತಾ. ೧೪ನೇ ಬುಧವಾರ ಸಾಯಂಕಾಲ ಘಂಟೆ ೫ಕ್ಕೆ, ಮಂಗಳೂರು ಮುನಿಸಿಪಲ್ ಹೋಲಿನಲ್ಲಿ, ಆರೋಗ್ಯ ಮಂತ್ರಿ ಮಾನ್ಯ ಎ. ಬಿ. ಶೆಟ್ಟರವರ ಹಸ್ತದಿಂದ ನೆರವೇರಿತು. ಮುನಿಸಿಪಲ್ ತೆರಿಗೆ ವಸೂಲಿ ಸಿಬಂದಿಯವರು ಈ ತೈಲ ಚಿತ್ರವನ್ನು ಅರ್ಪಿಸಿದ್ದರು. ಮುನಿಸಿಪಲ್ ಅಧ್ಯಕ್ಷ ಶ್ರೀ. ಎಲ್. ಸಿ. ಪಾಯ್ಸರವರು, ಮಾನ್ಯ ಮಂತ್ರಿಗಳಿಗೆ ಪುಷ್ಪಹಾರ ಹಾಕಿ ಸನ್ಮಾನಿಸಿ, ಚಿತ್ರ ಅನಾವರಣ ಮಾಡಲು ಕೇಳಿಕೊಳ್ಳಲು ಮಾನ್ಯ ಎ. ಬಿ. ಶೆಟ್ಟರು ಅನಾವರಣ ನೆರವೇರಿಸುತ್ತ ಪಂಡಿತ ಜವಾಹರಲಾಲರ ವ್ಯಕ್ತಿತ್ವ, ಜನತೆಯು ಅವರಲ್ಲಿರಿಸಿದ ವಿಶ್ವಾಸ—ಪ್ರೇಮಾದರಗಳು, ಅವರ ಘನವಾದ ನಡತೆ, ಸರಲ ಜೀವನ ಇವನ್ನು ವಿವರಿಸಿದರು.

ದ. ಕ. ಜಿಲ್ಲೆಯಲ್ಲಿ ನೀರಾವರಿ—ಇದರ ಬಡಾವಣೆಯ ಸಂಬಂಧ, ಮದರಾಸು ಪಬ್ಲಿಕ್ ವರ್ಕ್ಸ್ ಇಲಾಖಾ ಸಚಿವ ಮಾನ್ಯ ಎಂ. ಭಕ್ತವತ್ಸಲಂ ಇವರು ಮೊನ್ನೆ ಮಂಗಳೂರಿಗೆ ದಯಮಾಡಿಸಿದ್ದಾಗ, ಇಂಜಿನಿಯರ್‌ಗಳೊಂದಿಗೆ ಜಿಲ್ಲಾ ಬೋರ್ಡ್ ಮಂದಿರದಲ್ಲಿ ನಡೆದ ಸಮಾಲೋಚನೆಯಲ್ಲಿ ಈ ಕೆಳಗಿನಂತೆ ತೀರ್ಮಾನಗಳಾಗಿವೆಯೆಂದು ತಿಳಿಯಲಾಗಿದೆ: ೧. ಚರ್ವತ್ತೂರು-ಕಾರ್ಕಳ-ಬೈಂದೂರುಗೊಂಡು ಹೆದ್ದಾರಿ, ಅಂದಾಜು ವೆಚ್ಚ ೨೩ ಲಕ್ಷ ರೂಪಾಯಿ. ೨. ಜಿಲ್ಲೆಯ ಹೆದ್ದಾರಿಗಳಿಗೆ ಡಾಮರು (ಕೆಲವಂಶಕ್ಕೆ)-ಅಂದಾಜು ವೆಚ್ಚ ರೂ. ೪ ಲಕ್ಷ. ೩. ಕೂಳೂರು ನದಿಗೆ ಸೇತುವೆ- ರೂ. ೨ ಲಕ್ಷ. ೪. ಕಲ್ಯಾಡಿ, ಎಕ್ಕಾರು, ಶಿರೂರು, ಪುತ್ತಿಗೆ ಹೊಳೆಗಳ ಸೇತುವೆಗಳ ವಿಚಾರದಲ್ಲಿ ಬೇಗನೆ ಕಾರ್ಯ ಕೈಕೊಳ್ಳಬೇಕು. ೫. ಗುರ್ಪುರ ಹೊಳೆಗೆ ಅಣೆಕಟ್ಟು-ಅಂದಾಜು ವೆಚ್ಚ ೬ ಲಕ್ಷ ರೂಪಾಯಿ; ಇದರಿಂದ ೧೫೦೦ ಎಕ್ರೆಗಳಲ್ಲಿ ಎರಡನೆಯ ಬೆಳೆಯೂ, ೫೦೦ ಎಕ್ರೆಗಳಲ್ಲಿ ಮೂರನೆಯ ಬೆಳೆಯೂ ಲಭಿಸುವುದು. ೬. ಸಿರಿಯಾ ಹೊಳೆಗೆ ಅಣೆಕಟ್ಟು-ವೆಚ್ಚ ರೂ. ೬ ಲಕ್ಷ, ೧೯ ಸಾವಿರ. ಇದರಿಂದ ೫೫೦ ಎಕ್ರೆಗಳಲ್ಲಿ ಎರಡನೆ ಬೆಳೆಯಾಗುವುದು. ೭. ಕುಂದಾಪುರ ತಾಲೂಕಿನ ಮೂರು ಕೆರೆಗಳಿಗೆ ರೂ. ೩೪ ಸಾವಿರ. ೮ ಬ್ರಹ್ಮಾವರದ ಚಂದ್ರಮುದಗಕ್ಕೆ ರೂ ೨೮ ಸಾವಿರದ ವೆಚ್ಚ.

ಮಂಗಳೂರು ಮ್ಯುನ್ಸಿಪಾಲಿಟಿಯ ಸಭೆಯು—ತಾ. ೧೧ರಂದು ಸಂಜೆ ನಗರ ಸಭೆಯ ಕಚೇರಿಯಲ್ಲಿ ಶ್ರೀ. ಎಲ್. ಸಿ ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಆಗ ಬಿ. ಎಸ್. ಭಾಸ್ಕರ ರೈಗಳು ತಂದ ಈ ಕೆಳಗಿನ ಠರಾವು ಸ್ವೀಕರಿಸಲ್ಪಟ್ಟಿತು. "ಭಾರತದ ಸ್ವಾತಂತ್ರ್ಯ ಸಾಧನೆಯಲ್ಲಿ ಮಹಾತ್ಮಾ ಗಾಂಧೀಜಿಯವರು ಸಲ್ಲಿಸಿದ ಸೇವೆಯನ್ನು ಈ ಕೌನ್ಸಿಲು ಅಭಿನಂದನಾಪೂರ್ವಕವಾಗಿ ದಾಖಲುಪಡಿಸುತ್ತದೆ." ಆ ಮೇಲೆ ಚಕ್ರವರ್ತಿ ರಾಜಗೋಪಾಲಚಾರ್ಯರ ೭೦ನೇ ಜನ್ಮದಿನವನ್ನು ಆಚರಿಸಬಹುದೆಂದೂ, ಆ ಕುರಿತು ರೂ ೧೦೦ನ್ನು ವೆಚ್ಚ ಮಾಡಬಹುದೆಂದೂ ಮದ್ರಾಸು ಸರಕಾರದಿಂದ ಬಂದ ಹುಕುಮನ್ನು ದಾಖಲೆ ಮಾಡಲಾಯಿತು. ವಿಮಾನಿನ ಕುಕ್ಕೆ ಬಂದರ ಅರ್ಧಾಣೆ ತೆರಿಗೆ ವಿಧಿಸಲಾಯಿತು. 'ಗೋಳಿಕಟ್ಟೆ'ಯಲ್ಲಿ ಈಗ ನೀರಿನ ಪಂಪು ಇರುವ ಸ್ಥಳದಲ್ಲಿ, ಅದನ್ನು ಬೇರೆ ಕಡೆಗೊಯ್ದು, ಜನಾಬ್ ಹಾಜಿ ಅಬ್ದುಲ್ ಸತ್ತಾರ್ ಸಾಹೇಬರ ಹೆಸರಿನಲ್ಲಿ ಒಂದು ದೀಪದ ಸ್ತಂಭವಿಡುವ ವ್ಯವಸ್ಥೆಯನ್ನು ಮಾಡಿಸಬೇಕೆಂದೂ ಆ ಕುರಿತು ತಗಲುವ ಎಲ್ಲಾ ವೆಚ್ಚವನ್ನು ತಾನು ವಹಿಸುವುದಾಗಿ ಶ್ರೀ ಹಾರೂನ್ ಹಾಜಿ ಅಬ್ದುಲ್ ಸತ್ತಾರ್ ಸೇಟರು ಬರೆದ ಪತ್ರವನ್ನು ಸ್ವೀಕರಿಸಲಾಯಿತು. ಇವುಗಳಲ್ಲದೆ ಸರಕಾರದಿಂದ ಬಂದ ಹುಕುಮುಗಳನ್ನು ರಿಕಾರ್ಡು ಮಾಡುವ ಮತ್ತು ನಾಗರಿಕ ಅಪೀಲುಗಳ ಚರ್ಚೆ ಕಾರ್ಯವೂ ಜರಗಿತು.

ಪದ್ಮಶಾಲಿ ಸಮಾಜ ಸೇವಾ ಸಂಘ, ಮುಂಬಾಯಿ- ಇದರ ವಾರ್ಷಿಕೋತ್ಸವವು ಇದೇ ಜನವರಿ ತಿಂಗಳ ತಾ. 25ನೇ ರವಿವಾರ ಅಪರಾಹ್ನ ಘಂಟೆ 2ಕ್ಕೆ "ಮೋತ್ಲಾ ಕಟ್ಟೋಣ"ದಲ್ಲಿ ಶ್ರೀ. ಕೆ.ಸಿ. ಸೆಟ್ಟಿಗಾರರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಜರಗಲಿದೆ. ಸ್ವಜಾತಿ ಬಾಂಧವರೆಲ್ಲರಿಗೂ ಸ್ವಾಗತವಿದೆ ಎಂದು ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ನೋಟಿಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 66/1947

1. ತುಂಗಮ್ಮ ಯಾನೆ ಅಕ್ಕಣಿ ಸೆಟ್ಟಿ.
2. ಬಾಲಕೃಷ್ಣ, 3. ವಸಂತಿ, 4. ಮಲ್ಲಿ, 5 ಗುಲಾಬಿ; ಮ್ಯಾನರ್ಸು, ಕ್ಷೇಮಚಿಂತಕಳು ತಾಯಿ 1ನೆ ಅರ್ಜಿದಾರಳು—ಅರ್ಜಿದಾರರು.

1ನೆ ಅರ್ಜಿದಾರಳ ಗಂಡ, ಮಿಕ್ಕ ಅರ್ಜಿದಾರರ ತಂದೆ, ಇರುವೈಲು ಗ್ರಾಮದಲ್ಲಿ ತಾ. 31-8-1946ರಲ್ಲು ಮೃತಪಟ್ಟ ಮುದ್ದಣ ಯಾನೆ ಕುಂಞಣ್ಣ ಶೆಟ್ರು ಮೂಡಬಿದ್ರಿ ಬ್ರೇಂಚಿನ ಮಂಗಳೂರು ಬೇಂಕಿನಲ್ಲಿ ಅಡವಿಟ್ಟ ಆಭರಣಗಳನ್ನು ಪಡಿಯುವರೆ ಆತನ ವಾರಿಸುದಾರರಾದ ಅರ್ಜಿದಾರರ ಕಡೆಯಿಂದ 1ನೆ ಅರ್ಜಿದಾರಳಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಸದ್ರಿ ಅರ್ಜಿಯು ತಾ. 30-1-1948ಕ್ಕೆ ತನ್ನಿಖೆಗೆ ಇಡೋಣಾಗಿಯದೆ. ಆಕ್ಷೇಪ ಉಳ್ಳವರು ಸದ್ರಿ ದಿನ ಬೆಳಿಗ್ಗೆ 11 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Ramachandra Rao
ಅರ್ಜಿದಾರರ ಕಡೆ ವಕೀಲ್,
ಕಾರ್ಕಳ, ತಾರೀಕು 12-1-1948

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಡತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶಲ್ ರೂ. 5 -; ಅಧಿಕಾಧಿಕ ಸ್ಪೆಶಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪನಿ, ಮಂಗಳೂರು



ಇದೇ ತಾ. **8—2—1948**ನೇ ರವಿವಾರ
ಸಾಯಂ ಘಂಟೆ **6**ಕ್ಕೆ ಮಂಗಳೂರಿನ ಸೆಂಟ್ರಲ್ ಮೈದಾನಿನಲ್ಲಿ
ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ
ಸಹಾಯಾರ್ಥವಾಗಿ
ವಿಖ್ಯಾತ ಗಾಯಕಿ
ಶ್ರೀಮತಿ ಯಂ. ಯಸ್. ಸುಬ್ಬು ಲಕ್ಷ್ಮಿ ಇವರ
❖ ಸಂಗೀತ ಕಚೇರಿ ❖
ಆಸ್ಥಾನ ವಿದ್ವಾನ್ ಶ್ರೀ. ಚೌಡಯ್ಯ ಇವರ ಪಿಟೀಲು ಶ್ರೀ. ಕಲ್ಪತಿ ರಮಾನಾಥನ್-ಇವರ ಮೃದಂಗ. ಶ್ರೀ. ಆಲಂಗುಡಿ ರಾಮಚಂದ್ರನ್ ಇವರ ಘಟವಾದ್ಯ.
ಟಿಕೇಟು ದರ: **ರೂ. 100, ರೂ. 25, ರೂ. 10, ರೂ. 5**

ಗಾಂಧಿಜೀ ಉಪವಾಸದ ಕೆಲವು ಪರಿಣಾಮಗಳು

ಗಾಂಧಿಜೀಯ ಉಪವಾಸಗಳಲ್ಲಿ ಆಶ್ಚರ್ಯ–ಅಸ್ವಾಭಾವಿಕತೆ- ಅದ್ಭುತಗಳಿರುವಂತೆಯೇ ಆ ಅವಧಿಗಳಲ್ಲಿ ಜನತೆಯ ಹೃದಯದಲ್ಲಿ ಆವೇಶ, ಆಕ್ರೋಶಗಳೆದ್ದು ಕೆಲವು ವಿಚಿತ್ರ ಘಟನೆಗಳು ನಡೆಯುವವಿವೆ. ಇದೇ ತಾ. 13-1-48ನೇ ಮಂಗಳವಾರ ಪೂರ್ವಾಹ್ನ 11 ಘಂಟೆಯಿಂದ ತಾ 18ನೇ ಆದಿತ್ಯವಾರ ಮಧ್ಯಾಹ್ನ 12 ಘಂಟೆಯ ವರೆಗೆ ನಡೆದ ಮಹಾತ್ಮರ ಉಪವಾಸಕ್ಕೆ ಸಂಬಂಧಪಟ್ಟ ಕೆಲವು ಮನ ಮುಟ್ಟುವ ಘಟನೆಗಳನ್ನು ಇಲ್ಲಿ ಕೊಡಲಾಗಿದೆ.

ಗಾಂಧಿಜೀ ಈ ಬಾರಿ ಕೈಕೊಂಡ ಉಪವಾಸವು ಅವರ 15ನೇ ಉಪವಾಸ. ಇದು ವರೆಗಿನ ಎಲ್ಲಾ ಉಪವಾಸಗಳ ಪರಿಣಾಮಗಳನ್ನು ಪರೀಕ್ಷಿಸಿದರೂ ಎಲ್ಲವೂ ತಾತ್ಕಾಲಿಕ ಶಮನ ಮಾಡಿದ್ದವೇ ಹೊರತು ಶಾಶ್ವತವಾದುದೇನನ್ನೂ ಸಾಧಿಸಿರಲಿಲ್ಲ.

ಉಪವಾಸದ ಮೊದಲ ದಿನ ಮಹಾತ್ಮರು ಗವರ್ನರ್ ಜನರಲ್ ಮೌಂಟ್‌ಬೇಟನರ ಭೇಟಿ ಮಾಡಿದ್ದರು; ಪಂಡಿತ ಜವಾಹರಲಾಲರು ಬಿರ್ಲಾ ಭವನಕ್ಕೆ ಬಂದು ಗಾಂಧಿಜೀಯೊಂದಿಗೆ ಎರಡು ಘಂಟೆಯಿದ್ದರು. ಆದರೆ ಉಪವಾಸಾರಂಭದ ಒಂದೂವರೆ ತಾಸು ಮೊದಲು ಸರ್ದಾರ್ ಪಟೇಲರು ಬಂದು, ಆಕೂಡಲೇ ಮಹಾತ್ಮರಿಗೆ ಕಾವಲಿದ್ದವರನ್ನೆಲ್ಲಾ ದೂರಕ್ಕೆ ಕಳುಹಿಸಿ ಮುಕ್ಕಾಲು ಘಂಟೆ ಮಾತಾಡಿದುದು ಮಿಕ್ಕೆಲ್ಲವುಗಳಿಗಿಂತಲೂ ಅತಿ ಮಹತ್ವದ ಸಂಭಾಷಣೆಯೆನ್ನಬೇಕು. ಸರ್ದಾರರಿಗೆ ಕಣ್ಣೀರು ತೆಗೆಯುವ ಅಭ್ಯಾಸವಿದ್ದ ಪಕ್ಷದಲ್ಲಿ ಆ ಸಂದರ್ಭದಲ್ಲಿ ಅವರು ಅತ್ತಿರಬೇಕೆಂದು ಊಹಿಸಬಹುದು.

ನಿಜಾಮರ ಏಜಂಟ್ ಜನರಲ್ ಆಗಿ ದಿಲ್ಲಿಯಲ್ಲಿರುವ ಝುಣಾಯಿನ್ ಝುಂಗ್ ಬಹದೂರರಂಥವರೂ 'ಮಹಾತ್ಮಾಜೀ' (ಬಾಪೂಜೀ–ಸಂಬೋಧನೆ ಮಾತ್ರ ಬಾಕಿ) ಎಂದು ಗಾಂಧಿಜೀಯನ್ನು ಸಂಬೋಧಿಸಿದುದು ಇದೇ ತಾ 13ರಿಂದ 18ರ ಒಳಗಿನ ಅವಧಿಯಲ್ಲೇ.

ತಾ 14ರಲ್ಲಿ ಮಹಾತ್ಮಾ ಗಾಂಧಿ, ಪಂಡಿತ ನೆಹರು, ಸರ್ದಾರ್ ಪಟೇಲ್, ಮೌಲಾನಾ ಅಜಾದರ ಜತೆ ಮಾತುಕತೆಗಳು ನಡೆದುವು; ಅದೇ ದಿನ ಆ ಮೊದಲು ನಡೆದ ಇಂತಹ ಸಂಭಾಷಣೆಗೆ ಅರ್ಥ ಮಂತ್ರಿ ಶ್ರೀ ಷಣ್ಮುಗಂಚೆಟ್ಟಿಯಾರ್ ಮತ್ತಿತರ ಮಂತ್ರಿಗಳೂ ಹಾಜರಿದ್ದರು. ಈ ಸಂಭಾಷಣೆಗಳಲ್ಲೇ ಪಾಕಿಸ್ಥಾನಕ್ಕೆ 55 ಕೋಟಿ ರೂಪಾಯಿ ಕೊಟ್ಟುಬಿಡುವ- ಭಾರತದ ಮುಸ್ಲಿಮರನ್ನು ಸೌಹಾರ್ದತೆಯಿಂದ ಕಾಣುವ- ಸರ್ದಾರ್ ಪಟೇಲರಂಥವರು ಉಗ್ರ ಮಾತುಗಳನ್ನಾಡಬಾರದೆನ್ನುವ—ಕಾಶ್ಮೀರದ ಭವಿಷ್ಯದ ರೂಪ ರೇಖೆಯೆಳೆಯುವ—ಭಾರತ ಪಾಕಿಸ್ಥಾನ ಸಂಬಂಧವನ್ನು ಕಲ್ಪಿಸುವ—ತೀರ್ಮಾನಗಳಾಗಿರಬೇಕು. ಒಂದು ಸರಕಾರವು ತನ್ನ ಪಾಲಿನ ಇಂತಹ ಅತಿ ಪ್ರಾಮುಖ್ಯ ನಿರ್ಧಾರಗಳನ್ನು, ಎಷ್ಟೇ ದೊಡ್ಡವನಿದ್ದರೂ ಸರಕಾರೀ ಮಂತ್ರಿಯಾಗಿರದ ಒಬ್ಬನ ಸಮಕ್ಷಮದಲ್ಲಿ, ಅವನ ಸಲಹೆಯಂತೆ ತೀರ್ಮಾನಿಸಿಕೊಂಡ ಮತ್ತೊಂದು ನಿದರ್ಶನವು ಆಧುನಿಕ ಜಗತ್ತಿನ ಯಾವ ರಾಷ್ಟ್ರದ ರಾಜಕೀಯದಲ್ಲೂ ಇಲ್ಲ. ರಾಮದಾಸ, ವಿದ್ಯಾರಣ್ಯರಂಥವರ ಕಾಲದಲ್ಲಿ ಭಾರತದಲ್ಲಿ ಮಾತ್ರ ಇದ್ದುದಿದೆ.

ಗಾಂಧೀ, ನೆಹರು, ಪಟೇಲ್, ಅಜಾದರ ಜತೆ ಸಂಭಾಷಣೆ ಮುಗಿಸಿ, ಪಂಡಿತ ನೆಹರುಗಳು ಬಿರ್ಲಾ ಭವನದಿಂದ ಕಾರು ಹತ್ತಿ ಹೊರಗೆ ಬರುತಿದ್ದಾಗ ಬಿರ್ಲಾಭವನದ ಗೇಟಿನ ಹೊರಭಾಗದಲ್ಲಿ ಸುಮಾರು 30 ಮಂದಿ ನಿರಾಶ್ರಿತರು ನಿಂತುಕೊಂಡು 'ಗಾಂಧಿ ಸತ್ತು ಹೋಗಲಿ!' ಎಂದು ಬೊಬ್ಬೆ ಹೊಡೆಯುತಿದ್ದರು. ಪಂಡಿತ ನೆಹರುಗಳು ಕೂಡಲೇ ಕಾರು ನಿಲ್ಲಿಸಿ, ಇಳಿದು ಓಡಿಸಿಕೊಂಡು ಹೋಗುತ್ತಾ "ಏನಂದಿರಿ? ಹಾಗೆ ಹೇಳಲು ನಿಮಗೆ ಧೈರ್ಯ ಹೇಗೆ ಬಂತು? ಬನ್ನಿ, ಮೊದಲು ನನ್ನನ್ನು ಕೊಲ್ಲಿರಿ" ಎಂದು ಆರ್ಭಟಿಸಿದಾಗ ಅವರೆಲ್ಲರೂ ಸಿಕ್ಕ ಸಿಕ್ಕ ದಿಕ್ಕಿಗೆ ಓಡಿಬಿಟ್ಟರು.

ಗಾಂಧಿಜೀಯ ಉಪವಾಸವು ಪ್ರತಿ ಬಾರಿಯೂ ವಿಶೇಷ ಪ್ರಾರ್ಥನೆಗಳೊಂದಿಗೆ ಆರಂಭಿಸುವ ಸಂಪ್ರದಾಯ. ಈ ಬಾರಿಯ ಉಪವಾಸದ ವೇಳೆ ಹಾಡಲ್ಪಟ್ಟ ಪ್ರಥಮ ಸೊಲ್ಲು ಕ್ರೈಸ್ತ ಸ್ವಾಮಿಯ ಶಿಲುಬೆಗೆ ಸಂಬಂಧಿಸಿದ 'ಕೀರ್ತಿ ಪುತ್ರನು ಮರಣಗೊಂಡ ಆ ಆಶ್ಚರ್ಯಕರ ಶಿಲುಬೆಯನ್ನು ನಾನು ನಿರುಕಿಸಿದಾಗ" ಎಂಬುದು. ಅದರ ಬೆನ್ನಲ್ಲೇ ಮುಸ್ಲಿಮರ ಕುರಾನಿನ ಮತ್ತು ನಂತರ ಸಿಖ್ಖರ ಗ್ರಂಥಸಾಹೇಬದ ಸೊಲ್ಲುಗಳು. ಆ ಮೇಲೆ ಹಿಂದೂ ಗೀತಗಳು.

ಮಹಾತ್ಮಾ ಗಾಂಧಿಯವರ ಉಪವಾಸದಿಂದಾದ ಪ್ರತ್ಯಕ್ಷ ಪರಿಣಾಮಗಳಲ್ಲಿ ಅತಿ ಹೆಚ್ಚಿನದೆಂದರೆ ಪಾಕಿಸ್ಥಾನಕ್ಕೆ ಹಿಂದುಸ್ಥಾನವು ಇದುವರೆಗೂ ವ್ಯಾಜ್ಯದಲ್ಲಿಟ್ಟ 55 ಕೋಟಿ ರೂಪಾಯಿಗಳನ್ನು ಕೊಡಲೊಪ್ಪಿದುದು. [illegible] ಸದ ಉದ್ದೇಶವು ಸಾರ್ಥಕವಾಗುವಂತೆ ಸರ್ವ ವಿಧಾನಗಳಿಂದ ನೆರವಾಗಬೇಕೆಂಬ ಭಾರತ ಸರಕಾರದ ಬಯಕೆಯೇ ಈ ಕೊಡುಗೆಗೆ ಕಾರಣವೆಂದು ಪಂಡಿತ ನೆಹರುಗಳೂ 'ವಾತಾವರಣ'ವನ್ನು ಪರಿಶುದ್ಧಗೊಳಿಸಿ, ಗಾಂಧಿಜೀಯ ಹೃದಯ ವೇದನೆಯನ್ನು ಕಡಿಮೆ ಮಾಡುವ ಉದ್ದೇಶದಿಂದಲೇ ಭಾರತವು ಪಾಕಿಸ್ಥಾನದೊಡನೆ ಮಾಡಿಕೊಂಡಿದ್ದ ಈ ಆರ್ಥಿಕ ಒಪ್ಪಂದವನ್ನು ಕೂಡಲೇ ಜ್ಯಾರಿಗೆ ತರಲು ಮುಂದಾಯಿತು ಎಂದು ಸರ್ದಾರ್ ಪಟೇಲರೂ ಜಾಹೀರು ಮಾಡಿದ್ದಾರೆ. ಗಾಂಧಿಜೀಯ ಆಹಾರ ಚೀಲಕ್ಕೂ, ಪಾಕಿಸ್ಥಾನದ ದುಡ್ಡಿನ ಚೀಲಕ್ಕೂ ಸಂಬಂಧವಿರುವ ಆಶ್ಚರ್ಯವೊಂದು ಈ ಮೂಲಕ ಕಂಡುಬಂತು.

ಭಾರತದ ಮತ್ತು ಪಾಕಿಸ್ಥಾನದ ಹೈಕಮಿಶನರರೊಟ್ಟಾಗಿ ಹಿಂದೂ–ಮುಸ್ಲಿಂ ಐಕ್ಯತಾ ಸ್ಥಾಪನೆಯ ಭರವಸೆಯನ್ನು ಮಹಾತ್ಮಾ ಗಾಂಧಿಯವರಿಗೆ ಕೊಟ್ಟುದರಿಂದ ಮತ್ತು ದಿಲ್ಲಿಯ ಶಾಂತತೆಯುಳಿಯುವ ಖಂಡಿತ ಭರವಸೆ ದೊರೆತುದರಿಂದ ಮಹಾತ್ಮಾ ಗಾಂಧಿಯವರು ಉಪವಾಸ ನಿಲ್ಲಿಸಿದರೆಂದು ತಿಳಿದುಬರುತ್ತದೆ. ಅನ್ಯ ರಾಷ್ಟ್ರದ ನಾಯಕನೊಬ್ಬನ ಸ್ವಾಭಾವಿಕ ಮರಣವನ್ನು ತಪ್ಪಿಸುವುದಕ್ಕಾಗಿ ಒಂದು ರಾಷ್ಟ್ರದ ಪ್ರತಿನಿಧಿಯು ಈ ರೀತಿ ಮುಂದೆ ಬಂದ ಬೇರೆ ನಿದರ್ಶನವು ಚರಿತ್ರೆಯಲ್ಲಿರುವಂತಿಲ್ಲ.

ಮೇಲಿನವು ಗಾಂಧಿಜೀ ಉಪವಾಸದ ಪ್ರತ್ಯಕ್ಷ ಪರಿಣಾಮಗಳಾಗಿದ್ದರೆ, ಅದರ ಅಪ್ರತ್ಯಕ್ಷ ಪರಿಣಾಮಗಳು ಇನ್ನಷ್ಟು ಹೆಚ್ಚಿನವು. ಮೊದಲನೆಯದಾಗಿ ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ, ಕಾಶ್ಮೀರದ ಕಾಳಗದ ಮೂಲಕ ಪಾಕಿಸ್ಥಾನವು ಭಾರತಕ್ಕೆ ಕೊಡುತ್ತಿದ್ದ ನೋವಿಗೆ ಪ್ರತಿಯಾಗಿ ಭಾರತವು 55 ಕೋಟಿ ರೂ—ಗಳನ್ನು ಕೊಡದೆ ಪಾಕಿಸ್ಥಾನಕ್ಕೆ ನಿರ್ಮಿಸಿದ್ದ ಸಂಕಟವು ಬೆನ್ನಿಗೆ ಹೊಡೆದ ವೈರಿಯ ಹೊಟ್ಟೆಗೆ ಹೊಡೆದಂತಾಗಿತ್ತು. ಆ ಪೈಕಿ ಎರಡನೇ ಪೆಟ್ಟನ್ನು ಗಾಂಧಿಜೀ ಸಕಾಲದಲ್ಲಿ ತಪ್ಪಿಸಿ ಪಾಕಿಸ್ಥಾನಕ್ಕೆ ಮಹದುಪಕಾರ ಮಾಡಿದ್ದಾರೆ. [illegible] ಜನ್ನಾ ತಟಸ್ಥವಾಗಿ ವಿಚಾರಿಸಿದರೆ, ಮುಸ್ಲಿಂ ಲೀಗಿನ ಕಠೋರ ಧೋರಣೆಗೆ ಆದಿಯಿಂದಲೂ ಅವಕಾಶ ದೊರೆತುದು ಗಾಂಧೀಜಿಯ ತತ್ವಗಳಿಂದಾಗಿಯೇ. ಕೃತಜ್ಞತೆಯು ಲವಾಂಶವಾದರೂ, ಪಾಕಿಸ್ಥಾನ ನಾಯಕರ ಹೃದಯಗಳಲ್ಲಿರುವ ಪಕ್ಷದಲ್ಲಿ ಅವರು ಕಾಯಿದೇ ಅಝಮರಿಗಿಂತ ಹೆಚ್ಚಿಗೆ ಮಹಾತ್ಮರನ್ನು ಪೂಜಿಸಬೇಕು.

ಗಾಂಧಿಜೀ ಕೂಡಲೇ ಉಪವಾಸ ಹಿಡಿಯದಿರುತಿದ್ದರೆ, ಕರಾಚಿಯಲ್ಲಿ ಮುಸ್ಲಿಮರು ಮಾಡಿದ ಸಾವಿರಾರು ಸಿಖ್ಖರ ಕೊಲೆ ಮತ್ತು ಗಡಿನಾಡಿನ ಮುಸ್ಲಿಮೇತರ ರೈಲ್ವೇ ಪ್ರಯಾಣಿಕರನ್ನು ಪಶ್ಚಿಮ ಪಂಜಾಬಿನಲ್ಲಿ ಹಿಂಡುಹಿಂಡಾಗಿ ವಧಿಸಿದುದಕ್ಕೆ ಪ್ರತೀಕಾರವಾಗಿ ದಿಲ್ಲಿ ಮತ್ತಿತರ ಕಡೆಗಳಲ್ಲಿ ಮುಸ್ಲಿಂ ಜನತೆ ನಿರ್ನಾಮವಾಗಿ ಹೋಗುತಿತ್ತು. ಆದ್ದರಿಂದ ಜಾತೀಯತೆಯ ಮೇಲಿಂದ ಮುಸ್ಲಿಮರು, ಮಾನುಷತ್ವದ ದೃಷ್ಟಿಯಿಂದ ಎಲ್ಲರೂ ಗಾಂಧಿಜೀಯ ಈ ಉಪವಾಸದಲ್ಲಿ ಸಾವಿರಾರು ಪ್ರಾಣಗಳನ್ನು ಉಳಿಸಿದ ಪುಣ್ಯವನ್ನು ಕಾಣಬೇಕು.

ನಿಜಕ್ಕೂ ಪಾಕಿಸ್ಥಾನಿಗಳ ಉಪದ್ರವವನ್ನು ಸಹಿಸಿಸಹಿಸಿ, ತಾಳ್ಮೆಯ ಕೊನೆಯ ಬಿಂದುವೂ ಖಾಲಿಯಾಗಿರುವ ಭಾರತದ ನಾಯಕರು ಈ ಬಾರಿ ಕ್ರೌರ್ಯವನ್ನು ಶೌರ್ಯದಿಂದ ಪ್ರತಿಭಟಿಸಿ ನಿರ್ಮೂಲಿಸುವುದೇ ಸರಿಯೆಂದು ನಡು ಬಿಗಿದಿದ್ದರು. ಗಾಂಧಿಜೀಯ ಉಪವಾಸವು ಆ ಓಟಕ್ಕೊಂದು ಬಲವಾದ ಕಡಿವಾಣವಾಗಿ ನಿಧಾನಗತಿಯನ್ನು ನಿರ್ಮಿಸಿದೆ. ಆದ್ದರಿಂದ ಪಾಕಿಸ್ಥಾನಕ್ಕೂ ಅದರ ಇಂದಿನ ದುರ್ಬುದ್ಧಿಗೂ ಇನ್ನೂ ಆಯುಷ್ಯವಿದೆ ಎಂದಾಯಿತು!

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ದಿನಕೆ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, [illegible] ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಂಗ್ರಪಾಡಿ; ನವಭಾರತ ಬುಕ್ ಡಿಪೋ

ಬಾಲಕರು ಆರೋಗ್ಯಶಾಲಿಗಳಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಸುವಂತೆ ಮಾಡುವುದನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಜಿಸ್ಟರ್ಡ್)
ಕುಂಜಾಲು, ಪೊ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. harma, Mangalore,

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಮಾನವಂತತನದ ಸೋಗಿನಿಂದ ನಡೆದ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1—4—0 ಟ. ದ್ವಾರ 1—8—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ 1—4—0

ಮನೆಮದ್ದು-*Home Remedies*

ಬೆಲೆ ರೂ. 2-0-0

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ.

ಔಷಧಿ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪೋ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಆರು ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರುಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ 5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಬೆಳಗಾಂವಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ್. ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಲಾಲದಾಸ, ಕೆ ವಿಸ್ವ್, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಖಾದ್ಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

ಪ್ರೊಪ್ರೈಟರ್.

INDRA BHAVAN COFFEE HOTEL,

Balmatta Road, MANGALORE.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯರೋಗ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಲೆ ಸಂಗ್ತಿ ಬರದಕ್ಷಿ ರೋಗಗಳಿಗೆ ತಕ್ಕಂಥ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, 2) ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಫೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕ್ಷೀಣವಾಗಿದ್ದರೆ,.... ಚಿಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ಶಿವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ,

Ayurveda Oushadhalaya GADAG

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ಎರಡಾಣೆ

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

29-1-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

NAVAYUGA WEEKLY, UDIPI.

FOUNDER: Hon'ble Mr. A. B SHETTY, Health Minister, Govt. of Madras.

ವರ್ಷ ೨೮ }
ವಾರ ೨೧ }

Vol. 28
No. 21

THE CANARA MUTUAL Assurance Company, Limited.

Estd: 1935

H. O. UDIPI, S. Kanara

THEY HAD WAITED TOO LONG

Last year in one Country alone 1,64,000 persons found that they had waited too long to buy life insurance. When atlast they said 'Yes' to an insurance agent and went to a doctor for examination they found that in their then physical condition they could not buy insurance at any price. No-one should postpone insuring when he is still healthy

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.
Bombay Life Building,
Central Office, Udipi

Branches at:
Mangalore, Calicut, Trivandrum, Madura, Madras, Bangalore & Bombay,

ವಾರ್ಡನ್

1946ರಲ್ಲು ಹೊಸ ದಾಖಲೆಯು ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ ... ... ರೂ. 2,04,00,000
ಪೂರ್ಣಗೊಳಿಸಲ್ಪಟ್ಟ ವ್ಯವಹಾರ ... ... ರೂ 1,72,00,000

ವಾರ್ಡನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಜ್ವ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರದ ಪೊಲಿಸಿಗಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ತಾಕರ್ — ಮೆನೇಜಿಂಗ್ ಡೈರೆಕ್ಟರ್,
ಎಮ್. ಸುಂದರರಾಮ ಶೆಟ್ಟಿ — ಏಜನ್ಸಿ ಮೇನೇಜರ್.

ಮಂಗಳೂರು ಶಾಖೆ

ಕೆ. ಪಿ. ಭವಾನಿಶಂಕರ ಶೆಟ್ಟಿ
ಬ್ರಾಂಚ್ ಸೆಕ್ರೆಟರಿ.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮೆಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಅಚಾರ್ಯ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

Nambiar's
ARYA VAIDYA SALA
UDIPI

Ideal House for Ayurvedic Treatment.

T. N. Kelu Nambiar,
Vaidya

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. **1—8—0**
ನವಭಾರತ ಬುಕ್ ಡಿಪೊ, ಉಡುಪಿ.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ,

ಪ್ರಧಾನ ಕಾರ್ಯಾಲಯ:- ಧಾರವಾಡ,
THE UNITED KARNATAK INSURANCE COMPANY, LIMITED

ನಾರಿಯಿಂದಾಗುವದು ಪುರುಷನಿಂದಾಗದು.



ಹಿಂದೀ ರಾಜಕೀಯವೀಗ ಇರಬೇಕಾದ ಸ್ಥಿತಿಯಲ್ಲಿಲ್ಲವೆಂಬುದು ನಿರ್ವಿವಾದವಷ್ಟೆ? ಇದಕ್ಕೆ ಮುಖ್ಯ ಕಾರಣವು ರಾಷ್ಟ್ರದ ಸೂತ್ರಧಾರಿಗಳಲ್ಲಿ ಮತ್ತು ಜನತೆಯಲ್ಲಿ ಇರಬೇಕಾದಷ್ಟು ಸಹನೆಯಿಲ್ಲದುದೇ ಎಂಬುದೂ ಅಂತೆಯೇ ಸ್ಪಷ್ಟವಿದೆ. 'ದೇಶವನ್ನು ಇಬ್ಭಾಗಿಸುವ ಬದಲಿಗೆ ಇನ್ನೂ ಕೆಲವು ವರುಷ ಬ್ರಿಟಿಷರೇ ಆಳಿಕೊಂಡಿರಲಿ ಎಂದು ಸುಮ್ಮಗಿರುತ್ತಿದ್ದರೆ ಹೀಗಾಗುತ್ತಿದ್ದಿಲ್ಲ' 'ಗಾಂಧಿಜೀಯವರಂತಹ ಧಾರ್ಮಿಕ ಭಾವನೆಯವರ-ಜಿನ್ನರಂತಹ ಸ್ವಧರ್ಮ ಭ್ರಾಂತರ-ವಜ್ರ ಮುಷ್ಟಿಗಳೊಳಗೆ ರಾಜಕೀಯ ಸೂತ್ರಗಳಿರುವ ಬದಲಿಗೆ ಆರ್ಥಿಕ ತಳಹದಿಯ ಮೇಲೆಯೇ ರಾಜಕೀಯವನ್ನು ಕಟ್ಟುವವರ ಕೈಯಲ್ಲಿ ಅದಿರುತ್ತಿದ್ದರೆ ಇಂದಿನ ಅನಾಹುತ ತಪ್ಪುತಿತ್ತು'. 'ಯಾರೇ ಇರಲಿ; ಈಗಿನಂತೆ ಪ್ರಾಯ 60 ಮೀರಿದವರ ನಾಯಕತ್ವದ ಬದಲಿಗೆ ನವಯುವಕರ ಆಳಿಕೆಯಾರಂಭಿಸಿದರೆ ಎಲ್ಲವೂ ಒಮ್ಮೆ ಸ್ವಚ್ಛವಾಗುವುದು'-ಎಂದು ಮುಂತಾಗಿ ವಿವಿಧಾಭಿಪ್ರಾಯಗಳು ಭಿನ್ನ ವರ್ಗದ ವಿಚಾರಿಗಳ ತಲೆಯಲ್ಲಿ ಮೂಡಿವೆ. ಇವೆಲ್ಲಕ್ಕೂ ವಿರೋಧಗಳಿರಬಹುದು. ಆದರೆ, ಸಹನೆಯ ಅಭಾವದಿಂದಾಗಿಯೇ ಇಷ್ಟೆಲ್ಲಾ ಅಡಿಮೇಲುಗಳಾಗುತ್ತಿವೆ ಎಂದಮೇಲೆ 'ಪುರುಷರ ಬದಲಿಗೆ ಸ್ತ್ರೀಯರ ನಾಯಕತ್ವ ಬರಬೇಕು' ಎಂಬ ವಾದಕ್ಕೆ ಮಾತ್ರ ಪ್ರಾಯಶಃ ಯಾರ ಆಕ್ಷೇಪವೂ ಇರಲಾರದು.

ಸ್ತ್ರೀ ಪಕ್ಷಪಾತಿ ಗಾಂಧಿಜಿ

ನಮ್ಮ ರಾಜಕೀಯ ಹೀಗಿದೆಯೋ ಗಾಂಧಿಜೀಯೂ ಹಾಗಿದ್ದಾರೆ ಎನ್ನಬಹುದು. ಪೂರ್ವಾಚಾರವಾದಿ ಹಿಂದುಗಳ ದೃಷ್ಟಿಗೆ ಅವರು 'ಧರ್ಮದ್ರೋಹಿ'ಗಳಾಗಿ ಕಾಣುತ್ತಿದ್ದಾರೆ; ಲೌಕಿಕವಾದಿ ಕಟ್ಟುಗ್ರ ಸುಧಾರಕರ ದೃಷ್ಟಿಗೆ ಅವರು 'ಧಾರ್ಮಿಕ ಹಳೇ ಹದ್ದು' ಎಂದು ತೋರುತ್ತಿದ್ದಾರೆ ಮುಸಲ್ಮಾನರಿಗೆ 'ಸ್ವಸಮಾಜ ಪಕ್ಷಪಾತಿ ಹಿಂದು' ಆಗಿ ಕಾಣುತ್ತಾರಾದರೆ ಹಿಂದುಗಳಿಗೆ 'ಮುಸ್ಲಿಂ ಪಕ್ಷಪಾತಿ ಅಹಿಂದು'ವಾಗಿಯೇ ತೋರಿದ್ದಾರೆ ಆದರೆ ಗಾಂಧಿಜೀ 'ಸ್ತ್ರೀ ಪಕ್ಷಪಾತಿ' ಎಂಬ ಮಾತು ಮಾತ್ರ ಸರ್ವರಿಗೂ ಒಪ್ಪಿಗೆಯಾದುದು. ಸತ್ಯ, ಅಹಿಂಸೆ, ಸಹನೆ, ಸದಾತನ, ಇತ್ಯಾದಿಗಳನ್ನೇ ಉಪಕರಣಗಳನ್ನಾಗಿ ಮಾಡಿ ಸ್ವಾತಂತ್ರ್ಯ ಹೋರಾಟಗಳನ್ನು ಹೂಡುವಾಗಲೆಲ್ಲಾ ಮಹಾತ್ಮಾ ಗಾಂಧಿಯವರು ಮಹಿಳಾ ಸಮಾಜಕ್ಕೆ ವಿಶೇಷ ವಿನಂತಿ ಮಾಡಿಕೊಳ್ಳುವ ಸಂಪ್ರದಾಯವಿತ್ತು. "ನನ್ನೀ ಹೋರಾಟವನ್ನು ಜಯಶೀಲಗೊಳಿಸುವ ಯೋಗ್ಯತೆಯು ಪುರುಷರಿಗಿಂತ ಹೆಚ್ಚಾಗಿ ನಿಮ್ಮಲ್ಲಿದೆ. ನೀವು ಅಹಿಂಸೆ, ಸಹನೆಯ ಪ್ರತಿಮೂರ್ತಿಗಳು. ನೀವು ಅವುಗಳನ್ನು ಪಾಲಿಸಬಲ್ಲಿರಿ. ನಿಮ್ಮ ಪುರುಷರು ಪಾಲಿಸುವಂತೆಯೂ ಮಾಡಬಲ್ಲಿರಿ" ಎಂದು ಅವರು ನಾರಿಯರನ್ನು ಹುರಿದುಂಬಿಸುವದಿತ್ತು. ಮೊನ್ನೆ ತನ್ನ 15ನೇ ಉಪವಾಸ ಮುಗಿಸಿಕೊಂಡಾಗಲೂ ಅವರು ದಿಲ್ಲಿಯ ಹಿಂದೂ ಸಿಖ್ ಸ್ತ್ರೀಯರಲ್ಲಿ ಇಂತಹ ವಿನಂತಿಯನ್ನೇ ಮಾಡಿಕೊಂಡಿದ್ದರು: "ಮುಸ್ಲಿಂ ಮಹಿಳೆಯರೊಡನೆ ಕೂಡಿ ಬೆರೆತು ಹಾರ್ದಿಕ ಮೈತ್ರಿ ನಿರ್ಮಿಸಿಕೊಳ್ಳಿರಿ. ಆ ಮೂಲಕ ದಿಲ್ಲಿಯ ವಾತಾವರಣವನ್ನು ಸ್ವಚ್ಛಗೊಳಿಸಿರಿ" ಎಂದಿದ್ದರು

ಸುಚೇತಾ—ಅರುಣಾ

ಇನ್ನು ಕಾಂಗ್ರೆಸ್ ರಾಜಕೀಯದ ಇದುವರೆಗಿನ ಚರಿತ್ರೆಯನ್ನೇ ನೋಡೋಣ. ಸಾಮಾನ್ಯ ಕಾಂಗ್ರೆಸ್ ಕೆಲಸಗಾರರಿಂದಾರಂಭಿಸಿ, ಧುರೀಣೆಯರ ವರೆಗಿನ ಕಾಂಗ್ರೆಸ್ ಮಹಿಳೆಯರು ಸ್ವಾಭಿಮಾನ, ಅಸಹನೆಯಿಂದ ಶಿಸ್ತು ಭಂಗ ಮಾಡಿದ ನಿದರ್ಶನಗಳು ಅತ್ಯಪರೂಪ. ಇಲ್ಲವೆಂದರೂ ಸಲ್ಲುವದು. ನೇತಾಜೀ ಬೋಸ್, ವೀರ ನರಿಮನ್, ಡಾ। ಖರೆಯಂತಹ ಪುಢಾರಿಗಳಂತೆಯೇ ಪ್ರಾಂತಿಕ, ಜಿಲ್ಲಾ, ತಾಲೂಕು, ಸರ್ಕಲ್ ಕಾಂಗ್ರೆಸ್ ಸಮಿತಿಗಳ ಪುರುಷ ಸದಸ್ಯರೆಷ್ಟೋ ಮಂದಿ ಕಾಂಗ್ರೆಸಿನ ಶಿಸ್ತು ಜ್ಯಾರಿಗೊಳಗಾದುದಿದೆ. ಆದರೆ ಸ್ತ್ರೀ ಸದಸ್ಯರಿಗೆ ಆ ರಾಹು ಸೋಂಕಿದುದಿಲ್ಲ. ಮೊನ್ನೆ ತಾನೇ ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಶಿಸ್ತುಭಂಗ ಮಾಡಿದರೆಂದು ಶ್ರೀ ಅಶೋಕ ಮೇಥಾರಂತಹ ಕೆಲವು ಸುಪ್ರಸಿದ್ಧ ಸಮತಾವಾದೀ ಸದಸ್ಯರ ಮೇಲೂ ಶಿಸ್ತಿನ ಗದೆ ಬೀಸಿದೆ. ಆದರೆ ಎಲ್ಲೆಲ್ಲಿಯೂ ಮಹಿಳಾ ಸದಸ್ಯೆಯರು ಮಾತ್ರ ಇದಕ್ಕಪವಾದ. ರಾಷ್ಟ್ರಪತಿಯಾಗಿದ್ದ ಕೃಪಾಲನಿಗಳಿಗೆ ಕೇಂದ್ರ ಸರಕಾರದಲ್ಲಿರುವ ರಾಷ್ಟ್ರಮಾನ್ಯ ನೆಹರುಗಳಂತಹ ಅನುಯಾಯೀ ಸಚಿವರ ವರ್ತನೆ ಕೂಡಾ ಸಹ್ಯವಾಗದ ದೆಸೆಯಿಂದ ಅವರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದರು. ರಾಷ್ಟ್ರಪತಿ ರಾಜೇಂದ್ರರೀಗ ರಚಿಸಿಕೊಂಡಿರುವ ಕಾರ್ಯಕಾರೀ ಸಮಿತಿಯಲ್ಲಿ ಆಚಾರ್ಯ ಕೃಪಾಲನಿಗಳಿಲ್ಲ. ಅವರೀಗ ಬಹುಪಟ್ಟಿಗೆ ಅಜ್ಞಾತವಾಸಿ. ಪುರುಷ ಸ್ವಾಭಿಮಾನವಂತಹದು. ಆದರೆ ಅವರ ಪತ್ನಿ ಶ್ರೀಮತಿ ಸುಚೇತಾ ಕೃಪಾಲನಿಗಳು ರಾಜೇಂದ್ರ ಪ್ರಸಾದರ ಇಂದಿನ ಕಾರ್ಯಕಾರೀ ಸಮಿತಿಯ ಓರ್ವ ಸದಸ್ಯೆ. ಗಂಡನಲ್ಲಿಲ್ಲದ ಸಹನೆ ಹೆಂಡತಿಯಲ್ಲಿದೆ; ಪುರುಷನಲ್ಲಿಲ್ಲದ ಯೋಗ್ಯತೆ ಸ್ತ್ರೀಯಲ್ಲಿದೆ! ಮತ್ತೊಂದು ನಿದರ್ಶನ. ಅಮೇರಿಕದಲ್ಲಿ ಭಾರತದ ರಾಯಭಾರಿಯಾಗಿರುವ ಮಿ. ಆಸಫ್ ಅಲಿಗಳ ವರ್ತನೆಯ ಕುರಿತು ಹಲವು ಗಾಳೀ ವಾರ್ತೆಗಳು ಈ ಮೊದಲು ಹಬ್ಬಿದ್ದುವು. ಈ ರಾಷ್ಟ್ರೀಯ ಮುಸ್ಲಿಂ ಪುಡಾರಿಯ ಒಲವು ಪಾಕಿಸ್ತಾನದ ಕಡೆಗಿದೆಯೆಂಬ ಕಲ್ಪನೆಯೋ, ಅರ್ಧ ಸತ್ಯವೋ, ಅಂತರಂಗವೋ ಅಂತೂ ಒಂದು ದುರ್ವಾಸನೆ ಹುಟ್ಟಿ, ಅವರನ್ನು ಹಿಂದೆ ಕರೆಸಿಕೊಳ್ಳಬೇಕೆಂಬ ಬೇಡಿಕೆ ಕೂಡಾ 'ಹಿಂದೂವಾದಿ'ಗಳಿಂದ ಬಂದಿದ್ದಿತು. ಇದು ಹೇಗಿದ್ದರೂ ಈ ಬಾರಿ, ಮಿ. ಆಸಫ್ ಅಲಿಗಳು ಆ ಹುದ್ದೆಯಿಂದ ನಿವೃತ್ತರಾಗುವುದಂತೂ ಖಂಡಿತವೆಂದು ಗೊತ್ತಾಗಿದೆ. ಶ್ರೀಮತಿ ಅರುಣಾ ಆಸಫ್ ಅಲಿಯವರೀಗ ತನ್ನ ಪತಿಯೊಂದಿಗೆ ಅಮೇರಿಕದಲ್ಲಿದ್ದಾರೆ. ಭಾರತ ರಾಜಕೀಯ ರಂಗದಲ್ಲಿ ಶ್ರೀಮತಿ ಅರುಣರ ಅಭಾವವು ಒಡೆದು ತೋರುತ್ತಿರುವಷ್ಟು ಮಿ. ಆಸಫ್ ಅಲಿಗಳಲ್ಲಿನ ಕೊರತೆ ಕಂಡುಬರುವುದಿಲ್ಲ. ಭಾರತದ ರಾಯಭಾರಿತ್ವವನ್ನು ಬಿಟ್ಟು ಮಿ. ಆಸಫ್ ಅಲಿಗಳು ಅಮೇರಿಕೆಯಿಂದ ಬರಲಿರುವುದು ಹಿಂದೀ ರಾಜಕೀಯಕ್ಕೆ ಅವರ ಅಗತ್ಯ ಬಿದ್ದುದರಿಂದೇನೂ ಅಲ್ಲ. ಆದರೆ ಅವರ ಸಹಧರ್ಮಿಣಿ ಅರುಣಾ ಅಸಫ್ ಅಲಿಗಳ ಆವಶ್ಯಕತೆಯು ದಿಲ್ಲಿಯ ಸಮತಾವಾದಿಗಳಿಗೆ ಮಾತ್ರವಲ್ಲ; ಸ್ವತಃ ಗಾಂಧಿಜೀಗೇನೇ ಕಂಡುಬಂದಿದೆ. "ನಿನ್ನ ಸ್ಥಾನ ಭಾರತದಲ್ಲೀ; ಕೂಡಲೇ ಹೊರಟು ಬಾ" ಎಂದು ಶ್ರೀಮತಿ ಅರುಣಾ ಆಸಫ್ ಅಲಿಗೆ ಗಾಂಧಿಜೀಯ ಒತ್ತಾಯದ ಕರೆ ಹೋಗಿದೆ. ಆದ್ದರಿಂದ ಗಂಡನಿಗಿಂತ ಮೊದಲೇ ಹೆಂಡತಿ ಅಲ್ಲಿಂದ ಭಾರತಕ್ಕೆ ಬರಲಿರುವರೆಂದು ತಿಳಿದುಬರುತ್ತದೆ. ಯಾರು ಮೇಲು? ಯಾರು ಮುಂದೆ? ಸ್ತ್ರೀಯೋ ಪುರುಷನೋ? ಗಂಡನೋ ಹೆಂಡತಿಯೋ?

ಆ ರಶ್ಯನ್ ಸ್ತ್ರೀ

ಸ್ತ್ರೀ ಮಹಾತ್ಮೆ, ಅಥವಾ ಮೋಹಿನೀ ಮಂತ್ರ ಪ್ರಭಾವಕ್ಕೆ ಮತ್ತೊಂದು ಉಜ್ವಲ ನಿದರ್ಶನವು ಕಾಶ್ಮೀರ ಪ್ರಶ್ನೆಯ ಪರ್ಯಾಲೋಚನೆಗಾಗಿ ಜಾಗತಿಕ ಸಂಘದ ಭದ್ರತಾ ಕೌನ್ಸಿಲು ಸೇರಿದ್ದಲ್ಲಿಯೇ ಕಂಡುಬಂತು. ಅಲ್ಲಿ ತಾಸುಗಟ್ಲೆ ವಾದ-ವಿವಾದ ಹೂಡಿದ್ದ ಭಾರತ-ಪಾಕಿಸ್ತಾನ ಪ್ರತಿನಿಧಿಗಳನ್ನು ಒಂದುಗೂಡಿಸಲು ಪ್ರಪಂಚದ ಯಾವ ಶಕ್ತಿಗಾದರೂ ಸಾಧ್ಯವೇ? ಸ್ತ್ರೀ ಶಕ್ತಿಗೆ ಅದೂ ಸಾಧ್ಯವಾಯಿತು. ಮಿಸ್. ಬೋರ್ಡ್ ಎಂಬ ರಶ್ಯನ್ ಸ್ತ್ರೀಯು-ಜಾಗತಿಕ ಸಂಘಕ್ಕೆ ಸಂಬಂಧಿಸಿದ ಭಾವ ಚಿತ್ರಗಳನ್ನೆತ್ತುವ ಕೆಲಸದ ಮೇಲೆ ಲೇಕ್ ಸಕ್ಸೆಸ್ ನಲ್ಲಿರುವವಳು. ಆಕೆ ನಗುಮೊಗದ ಸುಂದರಿ ಕುಮಾರಿ. ಜನವರಿ ತಾ 17ರಲ್ಲಿ ಜಾಗತಿಕ ಸಂಘದ ಪ್ರತಿನಿಧಿ ನಿವಾಸಕ್ಕೆ ಬಂದು ತಾನು 'ಫೋಟೋ' ಎತ್ತಲಾಗುವಂತೆ ಜತೆಯಲ್ಲಿ ನಿಲ್ಲಬೇಕೆಂದು ಭಾರತದ ಪ್ರತಿನಿಧಿ ನಾಯಕ ಶ್ರೀ. ಎನ್ ಗೋಪಾಲ ಸ್ವಾಮಿ ಅಯ್ಯಂಗಾರರನ್ನೂ ಪಾಕಿಸ್ತಾನದ ಪ್ರತಿನಿಧಿ ನಾಯಕ ಸರ್ ಝಫರುಲ್ಲಾ ಖಾನರನ್ನೂ ಆಕೆ ಕೇಳಿಕೊಂಡಳು. ಅವಳ ಆ ನಗೆಬೆಳದಿಂಗಳಲ್ಲಿ 'ಒಟ್ಟಾಗುವವರು ನಾವಲ್ಲ' ಎನ್ನಲು ಅಯ್ಯಂಗಾರ್—ಝಫರುಲ್ಲಾರಿಂದಾಗಲಿಲ್ಲ. ಒಟ್ಟಿಗೆ ನಿಂತರು. 'ಹಾಗೆ ನಿಲ್ಲಿ; ಹೀಗೆ ನಿಲ್ಲಿ' ಎಂದು ಮಿಸ್. ಬೋರ್ಡ್ ನಗುತ್ತಾ ಆಜ್ಞಾಪಿಸಿದ ಪ್ರಕಾರ ಹಲವು ಬಾರಿ 'ಫೋಟೋ'ಕ್ಕೆ ನಿಂತು ವಿವಿಧ ಭಾವ ಭಂಗಿಗಳನ್ನು ಕೊಟ್ಟರು. ಒಂದು ಬಾರಿ ಇಬ್ಬರನ್ನೂ ಜತೆಯಾಗಿ ಕೈ ಕುಲುಕಿಕೊಳ್ಳುವಂತೆ ಮಾಡಿ ಆಕೆ ಚಿತ್ರವೆತ್ತಿದಳು. ಕೊನೆಗೆ ಅವಳಾಜ್ಞೆಯಂತೆ ಶ್ರೀ. ಅಯ್ಯಂಗಾರರು, ಝಫರುಲ್ಲಾಖಾನರ ಹೆಗಲ ಮೇಲೆ ಕೈ ಹಾಕಿ ತಬ್ಬಿಕೊಂಡು ನಿಂತಲ್ಲಿಯೇ ನಗುತ್ತಾ ಕೇಳಿದರು: "ನಾವಿಬ್ಬರೂ ಚುಂಬಿಸಿಕೊಳ್ಳಬೇಕೆಂದು ಈಗ ಹೇಳುತ್ತಾಳೆ, ನೋಡಿ" ಆದರೆ ಪುಣ್ಯಕ್ಕೆ ಆ ಆಜ್ಞೆಯಾಗಲೀ, ನನ್ನನ್ನು ಚುಂಬಿಸುವ ಅಪ್ಪಣೆಯಾಗಲೀ ಆಕೆಯಿಂದ ಬರಲಿಲ್ಲ! ಮತ್ತೊಂದು ಫೋಟೋ ಎತ್ತುತ್ತಾ ಆಕೆ ತಮಾಷೆ ಮಾಡಿದಳು: "ನೀವಿಬ್ಬರೂ ನನ್ನೊಡನೋ ... ಕುತ್ತು ತೆಗೆಯುವಿರಾದರೆ, ನಿಮಗೆ ಜಾಗತಿಕ ಸಂಘದ ಅಗತ್ಯವೇ ಬೇಡದು". ಇದು ಆಧುನಿಕ ಸ್ತ್ರೀ ಮಹಾತ್ಮೆ!

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಜೊತೆಗಾರರ ಪರಿಮಿತಿಗೊಳಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೫,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧,೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
೪ ರಿಂದ ೫ ತಿಂಗಳು ,, ,, ೨॥
೬ ರಿಂದ ೯ ತಿಂಗಳು ,, ,, ೨॥।

ರೂ. ೧೦೦೦ಕ್ಕಿಂತ ಕಡಿಮೆಯಿಲ್ಲದ ರೂ. ೧೦,೦೦೦ಗಳ ಒಳಗೆ ರೂ. ೫೦೦ರ ಗುಣಕದ ಠೇವಣಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906

ಇವುಗಳಿಗೆ ಅರ್ಥವೇನು

ದೇಶವಿಭಜನೆಯನ್ನು ಅಂತಃಕರಣಪೂರ್ವಕವಾಗಿ ಎಂದೂ ಒಪ್ಪದಿರುವ ಭಾರತ ಸರಕಾರವು ಪಾಕಿಸ್ತಾನವನ್ನು ಹಣ್ಣುಮಾಡಿ ಅದನ್ನು ಒಳಗೊಳ್ಳಲು ಪ್ರಯತ್ನಿಸುತ್ತಿದೆ ಎಂದು ಸರ್. ಝಫರುಲ್ಲಾ ಖಾನರು ಭದ್ರತಾ ಕೌನ್ಸಿಲಿನಲ್ಲಿ ಮಾಡಿದ ಆರೋಪಕ್ಕುತ್ತರ ಕೊಡುತ್ತಾ, ನವದಿಲ್ಲಿಯಲ್ಲಿ ಪಂಡಿತ ಜವಾಹಿರಲಾಲರೆಂದಿದ್ದಾರೆ— "ವಿಭಜನೆಯನ್ನು ಹುಸಿಗೊಳಿಸುವದಕ್ಕಾಗಿ ನಾವು ಒಳಸಂಚು ಹೂಡುತ್ತಿದ್ದೇವೆ ಎಂಬ ಮಾತು ಹಾಗಿರಲಿ; ಈಗ ಪಾಕಿಸ್ತಾನವು ಭಾರತದೊಂದಿಗೆ ಪುನರ್ಮಿಲನಗೊಳ್ಳುವೆನೆಂದು ಕೇಳಿಕೊಂಡು ಬಂದರೂ ನಾವು ಖಂಡಿತವಾಗಿ ನಿರಾಕರಿಸುವೆವು; ಅಂತಹ ಸೂಚನೆಯನ್ನು ಪ್ರತಿಭಟಿಸುವೆವು".

ಕಾರಣ? ಪಂಜಾಬು ನಿರಾಶ್ರಿತರನ್ನು ಕರೆಸಿ ಕೂಡಿಕೊಂಡಂತಾದರೂ ಬಡ ಪಾಕಿಸ್ತಾನವನ್ನು ಕೂಡಿಕೊಂಡರಾಗದೆ?

ºº ºº

"ಸುಭಾಸ್ ಬಾಬುಗಳಿಗೆ ಪ್ರಾಂತೀಯತೆ ಅಥವಾ ಜಾತೀಯತೆಯೆಂದರೇನೆಂಬುದೇ ಗೊತ್ತಿರಲಿಲ್ಲ. ಅವರ ಸೇನೆಯಲ್ಲಿ ಯಾವ ಭೇದವೂ ಇಲ್ಲದೆ ಅಖಿಲ ಭಾರತದ ಎಲ್ಲಾ ವರ್ಗಗಳವರೂ ಇದ್ದರು; ಸುಭಾಸರು ಇವರೆಲ್ಲರ ಪ್ರೀತ್ಯಾದರಗಳಿಗೆ ಸಮಾನ ಪಾತ್ರರಾಗಿದ್ದರು." ನೇತಾಜೀ ಬೋಸರ ಜನ್ಮ ದಿನವಾದ ಜನವರಿ ತಾ 23ರ ಪ್ರಾರ್ಥನಾ ಸಭೆಯಲ್ಲಿ ಗಾಂಧಿಜೀಯ ಮಾತು. "ರಾಷ್ಟ್ರದ ಬಿಡುಗಡೆಗಾಗಿಯೇ ಸುಭಾಸ್‌ಚಂದ್ರ ಬೋಸರು ಪ್ರಾಣಾರ್ಪಣೆ ಮಾಡಿದರು. ಇಂತಹ ಧೀರ ನಾಯಕನನ್ನು ಆತನ ಜನ್ಮ ದಿನದಲ್ಲಿ ಸ್ಮರಿಸುವದೆಂದರೆ ನಮ್ಮ ಜೀವನಕ್ಕೊಂದು ಹೊಸ ಅಧ್ಯಾಯವೇ ಸೇರಿದಂತೆ"—ಪಂಡಿತ ನೆಹರು.

"ಸ್ಮರಣೆಯೊಂದೇ ಸಾಲದೇ?" ಎಂದು ಪ್ರಶ್ನಿಸಿದ ಪಾಸರ ಹಾಡಿಗೆ ಉತ್ತರವಾಗಿ "ಸಾಲದು" ಎನ್ನುತ್ತಿದ್ದವರು ಈಗೇನನ್ನುವರು?

ºº ºº

ಕಾಶ್ಮೀರದ ಪ್ರಶ್ನೆ ಭದ್ರತಾ ಕೌನ್ಸಿಲಿನಲ್ಲಿರುವಾಗ, ಪ್ರತ್ಯಕ್ಷ ಕಾಶ್ಮೀರದ ಸ್ಥಿತಿಗತಿ ಹೀಗೆಯೇ ಮುಂದೊತ್ತಿದರೆ, ಆ ಪ್ರಶ್ನೆಯು ತೀರ್ಮಾನವಾಗುವ ಮೊದಲೇ ಕಾಶ್ಮೀರಕ್ಕೊಂದು ಗತಿ ದೊರೆಯುವುದೋ ಎಂಬ ಅನುಮಾನ ಕಾಣುತ್ತಿದೆ. ಇಂಗ್ಲಿಷರ ನಾಯಕತ್ವದಲ್ಲಿ ಪಾಕಿಸ್ತಾನದ ಸೇನೆಗಳೀಗ ಅಲ್ಲಿ ನಿಜರೂಪದಿಂದ ಕಾಣಿಸಿಕೊಳ್ಳಹತ್ತಿವೆ. 60000 ಧಾಳಿಗಾರರು ಕಾಶ್ಮೀರೀ ರಂಗದಲ್ಲಿ ಪ್ರತ್ಯಕ್ಷ ಹೋರಾಟ ಭಾಗಿಗಳಾಗಿದ್ದು ಅವರ ಹಿಂಭಾಗದಲ್ಲಿ ಕಟ್ಟಿರುವೇ ಸಮೂಹದಂತೆ ಇನ್ನೆಷ್ಟೋ ಸಹಸ್ರ ಮಂದಿ ತಯಾರಿದ್ದಾರೆ. ಜಮ್ಮುವಿನೊಳಗೆ ಸರ್ವ ವಿಧದ ಆಧುನಿಕ ಶಸ್ತ್ರೋಪಕರಣಗಳೊಡನೆ ಕ್ರಮಬದ್ಧ ಸೈನಿಕರ ಸಮೇತ ನುಗ್ಗಿರುವ ಸಹಸ್ರಾರು ಮಂದಿ ಧಾಳಿಗಾರರು, ಹಿಂದೀ ಸೇನೆಯ ಮುಖ್ಯ ಸಂಬರಾಯಿ ಹಾದಿಗೆ ತೀರಾ ಸಮೀಪದವರೆಗೂ ಮುಂದೊತ್ತಿ ಬಂದಿದ್ದಾರೆ. ಹಾದಿಯ ಗ್ರಾಮಗಳ ದಹನ, ಲೂಟಿ, ಭಯಂಕರ ಅತ್ಯಾಚಾರಗಳನ್ನು ನಡೆಸುತ್ತಾ ಬರುತ್ತಿರುವ ಈ ವ್ಯಕ್ತ್ಯ ಪಾಳಿಯಕ್ಕೆ ಹೆದರಿ ಕಾಶ್ಮೀರಿಗಳು ಹಿಂದುಗಟ್ಟಿ ಜಮ್ಮುವಿಗೋಡಿ ಬರುತ್ತಿದ್ದಾರೆ; ಜಮ್ಮುವಿಗೀಗ ಉಳಿದಿರುವುದು ಕೆಲವೇ ಮೈಲುಗಳ ದೂರ!

ಈ ಧಾಳೀಗಾರರು ಈ ಬಾರಿ ಅಹುದೂ ಸದಲ್ಲಾದರೂ 'ಮಹಾತ್ಮಾ ಗಾಂಧಿಕೀ ಜೈ!' ಘೋಷವೆಬ್ಬಿಸುತ್ತಿರಲಾರರೆ?

ºº ºº

ಕಾಶ್ಮೀರೀ ಪ್ರಶ್ನೆಯಲ್ಲಿ ಬಹಳ ಮಾತು ಕೇಳಿ ಬಂದಿರುವ ಗುಡ್ಡಗಾಡು ಜನರೊಡನೆ ತನಗೆ ಸಂಬಂಧವಿದೆಯೆನ್ನುತ್ತಾ ಭದ್ರತಾ ಕೌನ್ಸಿಲಿನಲ್ಲಿ ನಡೆಯುವ ಕಾಶ್ಮೀರೀ ಪ್ರಶ್ನೆಯ ಪರ್ಯಾಲೋಚನೆಯ ವೇಳೆ ತನ್ನನ್ನು ಸೇರಿಸಿಕೊಳ್ಳಬೇಕೆಂದು ಅಫ್ಘಾನಿಸ್ಥಾನವು ಕೇಳಿಕೊಂಡಿದೆ. ಭಾರತ–ಪಾಕಿಸ್ತಾನಗಳೊಳಗೆ ಜಗಳ ನಿರ್ಮಿಸುವ ಮೂಲಕ ತನ್ನ 'ವಿಭಾಗಿಸಿ ಆಳುವ' ಆಟವನ್ನೇ ಬ್ರಿಟನು ಆಡುತ್ತಿದೆಯೆಂದು ರಶ್ಯದ ಅಧಿಕಾರೀ ಪತ್ರಿಕೆಯೊಂದು ಆರೋಪಿಸಿದೆಯಲ್ಲದೆ, ಕಾಶ್ಮೀರಿ ವಿಚಾರಣೆಗೆ ತ್ರಿಮೂರ್ತಿ ಸಮಿತಿಯನ್ನು ರಚಿಸುವ ಭದ್ರತಾ ಕೌನ್ಸಿಲಿನ ಸೂಚನೆಗೆ ರಶ್ಯವು ಮತ ಕೊಟ್ಟಿಲ್ಲ.

ನವದಿಲ್ಲಿಯಲ್ಲಿ ಮೊನ್ನೆ ಮದನಲಾಲನನ್ನು ಶೋಧಿಸಿದಂತೆ ಕಾಶ್ಮೀರದ ಧಾಳಿಗಾರರನ್ನು .... ನ ತಲೆಯ ವರೆಗೆ ಪರೀಕ್ಷಿಸಿದರೆ ರಶ್ಯನ್ ಆಯುಧ ಮತ್ತು ಆಕಾರ ಕೂಡಾ ಕಂಡುಬಂದೀತೇ?

ºº ºº

ಹೈದರಾಬಾದಿನ ನಿಜಾಮರು ಪಾಕಿಸ್ತಾನಕ್ಕೆ 20 ಕೋಟಿ ರೂಪಾಯಿ ಸಾಲ ಕೊಟ್ಟರೆಂದು ಪ್ರಕಟವಾಗಿತ್ತಷ್ಟೆ? ಆ 20 ಕೋಟಿಯನ್ನೀಗ ನಿಜಾಮರು 70 ಕೋಟಿಗೇರಿಸಿದ್ದಾರೆಂದು ತಿಳಿದುಬರುತ್ತದೆ. ಭಾರತ ಸರಕಾರವು ಪಾಕಿಸ್ತಾನದ ಪಾಲಿನ ರೂ. 55 ಕೋಟಿಗಳನ್ನು ತಡೆ ಹಿಡಿದ್ದಾಗ ನಿಜಾಮರು 20 ಕೋಟಿಗಳನ್ನು ಕೊಟ್ಟದ್ದು ಭಾರತ-ಹೈದರಾಬಾದು ಒಪ್ಪಂದಕ್ಕೆ ವಿರುದ್ಧವೆಂದು ಹಿಂದೀ ಸರಕಾರವು ಆಕ್ಷೇಪಿಸಿದ್ದಿತು. ಈಗ ಭಾರತವೇ ತನ್ನ ಪಾಲಿನ ಹಣವನ್ನು ಕೊಟ್ಟಿರುವುದರಿಂದ ಇನ್ನು ಪ್ರಾಯಶಃ ನಿಜಾಮರಿಗೂ ತಡೆಯಿರುವಂತಿಲ್ಲ. ಭಾರತದ 55 ಕೋಟಿ, ನಿಜಾಮರ 70 ಕೋಟಿ-ಹೀಗೆ 125 ಕೋಟಿ ರೂಪಾಯಿ ಪಾಕಿಸ್ತಾನಕ್ಕೆ ದೊರೆಯಿತು.

ಪಾಕಿಸ್ತಾನದಲ್ಲಿರುವ ಸುಮಾರು 10 ಕೋಟಿ ಜನರೆಲ್ಲರಿಗೂ ಕಾಶ್ಮೀರ ಗಡಿಯವರೆಗಿನ ಪ್ರಯಾಣದ ವೆಚ್ಚವಾಗಿ ತಲೆಯೊಂದಕ್ಕೆ 12½ ರೂಪಾಯಿಯಂತೆ ದೊರೆಯಿತು!

ºº ºº

ಗಡಿನಾಡು ಪ್ರಾಂತ್ಯದಲ್ಲಿ ಕಾಂಗ್ರೆಸ್ ಪ್ರಧಾನ ಮಂತ್ರಿಯಾಗಿದ್ದ ಡಾ! ಖಾನ್ ಸಾಹೇಬರು ಲೀಗಿಗೆ ಸೇರಿಕೊಂಡಲ್ಲಿ ಅವರನ್ನು ಗಡಿನಾಡು ಪ್ರಾಂತ್ಯದ ಗವರ್ನರ್‌ನಾಗಿ ನೇಮಿಸಲಾಗುವದೆಂದು ಪಾಕಿಸ್ತಾನ್ ನಾಯಕರು ಆಶೆ ತೋರಿಸಿದುದಕ್ಕೆ ಡಾ! ಖಾನ್ ಸಾಹೇಬರೊಪ್ಪಲಿಲ್ಲ. ತನ್ನ ಡಾಕ್ಟರರ ಸಲಹೆಯನ್ನು ಮನ್ನಿಸಿ ವಿಶ್ರಾಂತಿ ಚಿಕಿತ್ಸೆ ಹೊಂದಲು ಮಿ. ಜಿನ್ನರು ಸ್ವಿಟ್ಸರ್ಲೆಂಡಿಗೆ ಹೋಗಿ ಅಲ್ಲೇ ಒಂದು ತಿಂಗಳು ನಿಲ್ಲಲಿರುವರೆಂದೂ, ಅವರ ಗೈರುಹಾಜರಿಯ ವೇಳೆ ಪೂರ್ವ ಬಂಗಾಳದ ಗವರ್ನರ್ ಆಗಿರುವ ಸರ್. ಫ್ರೆಡರಿಕ್ ಬೋರ್ನೆಯವರು ಪಾಕಿಸ್ತಾನದ ಗವರ್ನರ್ ಜನರಲರಾಗುವರೆಂದೂ ಲಾಹೋರಿನಲ್ಲಿ ವಟ್ಟ ವದಂತಿ ಹಬ್ಬಿದೆ.

ಹಾಗೇಕೆ? ಮಿ. ಜಿನ್ನರ ಸ್ಥಾನವನ್ನೇ ಡಾ! ಖಾನ್ ಸಾಹೇಬರಿಗೆ ಕೊಡಬಹುದಿತ್ತಲ್ಲ!

ºº ºº

"ಪಶ್ಚಿಮ ಪಂಜಾಬು ಮೊದಲಾದ ಪಾಕಿಸ್ತಾನ್ ಕೇಂದ್ರಗಳಿಂದ ಬಂದಿರುವ ಸುಮಾರು 40 ಲಕ್ಷ ನಿರಾಶ್ರಿತರಿಗೆ ಆಶ್ರಯ ಮತ್ತು ಶಾಶ್ವತ ಜೀವನ ವ್ಯವಸ್ಥೆ ಮಾಡಿಕೊಡುವ ಮಹತ್ತಾದ ಹೊಣೆಗಾರಿಕೆಯು ಹಿಂದೀ ಸರಕಾರದ ಹೆಗಲ ಮೇಲೆ ಬಿದ್ದಿದೆ. ದಿನಕ್ಕೆ 10 ಲಕ್ಷ ರೂಪಾಯಿಗಳಂತೆ ಸರಕಾರಕ್ಕೆ ವೆಚ್ಚವಾಗುತ್ತಿದೆ"- ಪಂಡಿತ ನೆಹರುಗಳ ಮಾತು.

ಪಾಕಿಸ್ತಾನಕ್ಕೆ 55 ಕೋಟಿ ರೂಗಳನ್ನು ಕೊಡುವಾಗ ಈ ಲೆಕ್ಕ ಪ್ರಕಾರವೂ ತನ್ನ ತತ್ವಪ್ರಕಾರವೂ ಅಲ್ಲಿಂದ ಬಂದ ನಿರಾಶ್ರಿತರನ್ನೆಲ್ಲಾ 550 ದಿನಗಳ ಮಟ್ಟಿಗೆ ಪಾಕಿಸ್ತಾನಕ್ಕೇನೇ ಕಳುಹಿಸಿಬಿಡಿ-ಎಂದು ಗಾಂಧಿಜೀ ಆಜ್ಞಾಪಿಸದಿದ್ದುದು ಆ ನಿರ್ಗತಿಕ ಸ್ತ್ರೀ ಪುರುಷರ ಪುಣ್ಯವೆನ್ನಬೇಕು.

ºº ºº

ಸಾಂಗ್ಲಿ, ಮಿರಾಜ್ (ಹಿರಿ) ಭೋರ್, ಫಾಲ್ಟನ್, ರಾಮದುರ್ಗ, ಮಿರಾಜ್ (ಕಿರಿ)- ಈ ಏಳು ಧಾರವಾಡ ಸಂಸ್ಥಾನಗಳು ಬೊಂಬಾಯಿ ಪ್ರಾಂತ್ಯದೊಳಗೆ ಮಿಲನಗೊಳ್ಳಲು ನಿರ್ಧರಿಸಿ ತಕ್ಕ ಏರ್ಪಾಡುಗಳು ನಡೆದಿವೆ. ಕಾಥಿಯಾವಾಡದ ಹಲವು ಸಣ್ಣ ಸಂಸ್ಥಾನಗಳು ಏಕಾಡಳಿತೆಯೊಳಗೆ ಮಿಲನಗೊಂಡು 'ಸೌರಾಷ್ಟ್ರ'ವಾಗಿ ರೂಪುಗೊಳ್ಳುವ ನಿರ್ಧಾರವಾಗಿದೆ. ಡಾಕ್ಕಾ ಸಂಸ್ಥಾನಗಳ ಪೈಕಿ ಹೈದರಾಬಾದಿನ ಗಡಿಯಲ್ಲಿರುವ ಸಂಸ್ಥಾನಗಳು ಈ ರೀತಿ ಬೊಂಬಾಯಿಯೊಂದಿಗೆ ಮಿಲನಗೊಳ್ಳುವದನ್ನು ತಾನು ತನ್ನ ವಿರುದ್ಧ ಕೃತ್ಯವಾಗಿ ಗಣಿಸುವೆನೆಂದು ನಿಜಾಮ್ ಸರಕಾರವು ಆ ಸಂಸ್ಥಾನಗಳನ್ನು ಹೆದರಿಸಿದೆ, ಎಂದು ತಿಳಿದು ಬರುತ್ತದೆ.

ಈ ಸಣ್ಣ ಸಂಸ್ಥಾನಿಕರಿಗೆ 'ಒಕ್ಕಟ್ಟಿನಲ್ಲಿ ಬಲವಿದೆ' ಎಂದು ತೋರಿದಂತೆಯೇ ನಿಜಾಮರಿಗೆ ಭಳವಿದೆ, ಎಂಬುದೂ ಇಷ್ಟರಲ್ಲೇ ಕಂಡುಬಂದಿದೆ!

ºº ºº

"ಒಂದು ದೊಡ್ಡ ರಾಷ್ಟ್ರದ (ರಶ್ಯ) ಅಧಿಕೃತ ಧೋರಣೆಯಾಗಿರುವ ಕಮ್ಯೂನಿಸಮ್ ಎಂಬುದು ಸ್ವಮತ ಭ್ರಾಂತಿಯ ಚಳವಳವೇ ಸರಿ. ಈ ಕಮ್ಯೂನಿಸ್ಟ್ ಜೀವನ ವಿಧಾನಕ್ಕೆ ನಾವು ಬದ್ಧ ವಿರೋಧಿಗಳಿದ್ದೇವೆ. ಎಲ್ಲಾ ರಾಷ್ಟ್ರಗಳಲ್ಲೂ ಪ್ರಜಾಸತ್ತಾತ್ಮಕ ಸಮತಾವಾದ ಬರಬೇಕೆಂದು ನನ್ನ ಸಹಾಜಾಕಾಂಕ್ಷೆಯಿದ್ದರೂ, ಮಿಕ್ಕ ರಾಷ್ಟ್ರಗಳ ಒಳ ವ್ಯವಸ್ಥೆಯಲ್ಲಿ ಕೈಹಾಕುವುದು ಬ್ರಿಟನಿನ ಕೆಲಸವಲ್ಲ' ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವಿದೇಶ ಸಂಬಂಧವಾಗಿ ನಡೆದ ಎರಡು ದಿನಗಳ ಸಭೆಯ ಮುಕ್ತಾಯದ ವೇಳೆ ಪ್ರಧಾನಿ ಮಿ. ಅಟ್ಲಿಗಳಾಡಿದ ಮಾತು.

'ರವಿ ಕಾಣದುದನ್ನು ಕವಿ ಕಾಣುವನು'; ಬ್ರಿಟನು ಕೈಹಾಕದ ಕಡೆ ರಷ್ಯಾ ಕೈಹಾಕುವದು!

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ.

The Vijaya Bank Limited.

All our good wishes for a happy and presperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಬೆಲೂನ್ಸ್ ಬೆಲೂನ್ಸ್

ಬಾಳಿಕೆ ಬರುವ, ಆಕರ್ಷಕ ಹಾಗೂ ಬಣ್ಣ ಬಣ್ಣದ ಚಲೋ ಟ್ಯೂಬ್‌ಗಳೂ ಬೆಲೂನ್ಸ್‌ಗಳೂ ಮಿತ ದರದಲ್ಲಿ ಪುಷ್ಕಳ ಪಗಾರದೊಂದಿಗೆ ದೊರೆಯುವುವು. ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

Jey Bharat Rubber Products
609, Vetal Peth, Poona 2.

ಜಯಭಾರತ ರಬ್ಬರ್ ಪ್ರೊಡಕ್ಟ್ಸ್
609, ವೆತಲ ಪೇಟೆ, ಪೂನಾ 2.

ಭದ್ರತಾ ಕೌನ್ಸಿಲಿನಲ್ಲಿ ಹಿಂದೀ ಪಾಕಿ ವಿವಾದ

ಕಳೆದ ವಾರ ಜಾಗತಿಕ ರಂಗದಲ್ಲಿ ಒಡೆದು ಕಾಣುತ್ತಿದ್ದ ಮುಖ್ಯ ಸಂಗತಿ ಎಂದರೆ ಹಿಂದಿನಿಂದಲೂ ಇದ್ದ ಸೋವಿಯತ್ ರಶ್ಯದ ಕಮ್ಯೂನಿಸಮ್‌ನ ವಿರುದ್ಧವಾಗಿ ಆಂಗ್ಲೋ-ಅಮೆರಿಕಾನರು ಸೂಡಿ ಕಟ್ಟುತ್ತಿದ್ದಾರೆ; ಆ ಸೂಡಿಗೆ ಹೊಸಹೊಸ ಕಟ್ಟುಗಳು ಬೀಳಹತ್ತಿವೆ, ಎಂಬುದೇ. ಕಳೆದ ಎರಡು ಮೂರು ವಾರಗಳೊಳಗೆ ಬ್ರಿಟಿಷ್ ಸರಕಾರದ ಪ್ರಧಾನ ಮಂತ್ರಿ ಅಟ್ಲೀ ಮತ್ತು ಬೆವಿನ್ನರು ಎರಡು ಮೂರು ಬಾರಿ ರಶ್ಯದ ಧೋರಣೆಯ ಕುರಿತು ಬಹಿರಂಗ ಟೀಕೆ ಮಾಡಿದ್ದಾರೆ. ಈ ಉದ್ದೇಶದಿಂದಲೇ ಪಶ್ಚಿಮ ಯುರೋಪಿನ ಎಲ್ಲಾ ರಾಷ್ಟ್ರಗಳ ಒಕ್ಕೂಟ ರಚಿಸಿಕೊಳ್ಳಲು ಬ್ರಿಟನು ಮುಂದಾಗಿದೆ; ಈ ಗುರಿ ಸಾಧನೆಗಾಗಿಯೇ ಯುರೋಪು ರಾಷ್ಟ್ರಗಳಿಗೆ ಸಹಾಯ ಸಲ್ಲಿಸುವ ಅಮೇರಿಕದ ಮಾರ್ಶಲ್ ಯೋಜನೆಯ ಕಾರ್ಯಭಾರ ಸಾಗಿದೆ.

ಭಾರತ ರಾಜಕೀಯದ ಅತಿ ಮುಖ್ಯ ಪ್ರಶ್ನೆಯೂ ಕಳೆದ ಕೆಲವು ವಾರಗಳಿಂದ ಅಗ್ರ ಸ್ಥಾನ ಪಡೆದಿರುವಂತಹದೇ-ಕಾಶ್ಮೀರದ ಕಾಳಗ. ಅದೀಗ ಭದ್ರತಾ ಕೌನ್ಸಿಲಿನಲ್ಲೂ, ಪ್ರತ್ಯಕ್ಷ ರಣರಂಗದಲ್ಲೂ ಕೊನೆಯ ಅಂಕಕ್ಕೆ ಬಂದಂತೆ ಕಾಣುತ್ತಿದೆ. ಸೂಕ್ಷ್ಮವಾಗಿ ವಿಚಾರಿಸಿದರೆ ಸ್ಥಿತಿಗತಿಯು ಭಾರತಕ್ಕನುಕೂಲವಲ್ಲವೆನ್ನಬಹುದು.

ಮದ್ರಾಸಿನ ಕಾಂಗ್ರೆಸ್ ಸರಕಾರವು, ಜಮೀನ್ದಾರೀ ಬರ್ಖಾಸ್ತು ಮಸೂದೆ, ಗೃಹ ರಕ್ಷಕ ದಳ ರಚನೆಯಂತಹ ಜನಜೀವನ ಸುಧಾರಣೆಯ ಕೆಲವು ಶಾಸನಗಳನ್ನು ತಯಾರಿಸುವ ಕಾರ್ಯಭಾರ ನಿರ್ವಹಿಸುತ್ತಿದೆ. ಕರ್ನಾಟಕ ಪ್ರಾಂತ್ಯ ರಚನೆಯ ಸಂಬಂಧದ ಒಳ-ಹೊರ ಪಡಿಪಾಟುಗಳಿಗೂ ಹೊಸ ಚೇತನ ಬಂದಿದೆ.

ಒಟ್ಟಿನ ಮೇಲೆ 'ಇಂಜೆಕ್ಷನ್'ನ ಪರಿಣಾಮವು ಅಂಗಾಂಗಗಳಲ್ಲಿ ತೋರಿಬರುವಂತೆ–ಬುಡಕ್ಕೆ ಹಾಕಿದ ಗೊಬ್ಬರದ ಪರಿಣಾಮವು ರೆಂಬೆ ಕೊಂಬೆ ಫಲ ಪುಷ್ಪಗಳಲ್ಲೂ ಕಂಡುಬರುವಂತೆ–ಭಾರತ ಸರಕಾರಕ್ಕೆ ಗಾಂಧಿಜೀ ಈ ಬಾರಿ ಮಾಡಿದ 'ಬುದ್ಧಿ ಚಿಕಿತ್ಸೆ'ಯ ಪರಿಣಾಮವು ಹಿಂದೀ ರಾಜಕೀಯದಲ್ಲೆಲ್ಲಾ ಕಂಡುಬರುತ್ತಿದೆ. ಆದರ ಧೋರಣೆ ಹಾಗೂ ಪ್ರಭಾವ–ಇವೆರಡೂ ಸೌಮ್ಯಪಥ ಹಿಡಿದಂತಿದೆ.

ಆ ಕೌನ್ಸಿಲ್—ಈ ಕಾಶ್ಮೀರ

ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಕಾಶ್ಮೀರದ ಸಂಬಂಧವಾಗಿ ಭಾರತ ಮತ್ತು ಪಾಕಿಸ್ತಾನಗಳ ಪ್ರತಿನಿಧಿಗಳು ನಡೆಸಿರುವ ವಾದ ವಿವಾದಗಳು ಬಹುಶಃ ಲೋಕದ 'ಪ್ರಸಿದ್ಧ ವ್ಯಾಜ್ಯ ಸಾಜ್ಯ'ಗಳ ಪಾಖಲೆಗೇನೇ ಸೇರುವಂತಹವು. ಅಲ್ಲಿ ಇಕ್ಕಡೆಯವರೂ ತಾಸುಗಟ್ಟಲೆ ವಾದ–ಪ್ರತಿವಾದಗಳನ್ನು ನಡೆಸಿದ್ದಾರೆ; ಆರೋಪ ಪ್ರತ್ಯಾರೋಪಗಳನ್ನು ಹೊರಿಸಿಕೊಂಡಿದ್ದಾರೆ ಒಟ್ಟಿನ ಮೇಲೆ ಇಕ್ಕಡೆಯವರೂ ತಮ್ಮ ಹೊಲಸುಗಳನ್ನು ಲೋಕದ ಬದಿರಲ್ಲಿ ನಿಶ್ಯಂಕೆಯಿಂದ ಬಿಚ್ಚಿ ತೋರಿಸಿದ್ದಾರೆ! ಈ ತನಕ ನಡೆದುದು, ಮತ್ತಿನ್ನು ಮುಂದಿನ ಸಂಭವಗಳಾಗಿ ಕಾಣುತ್ತಿರುವುದಿಷ್ಟೆ:— ಕಾಶ್ಮೀರಕ್ಕೆ ಹೋಗಿ ಪ್ರತ್ಯಕ್ಷ ಪರೀಲಿಸಿ ವರದಿಯೊಪ್ಪಿಸಲು ತ್ರಿಮೂರ್ತಿಗಳುಳ್ಳ ಒಂದು ಸಮಿತಿಯನ್ನು ನೇಮಿಸಬೇಕೆಂದು ಭದ್ರತಾ ಕೌನ್ಸಿಲು ನಿರ್ಧರಿಸಿತು. ಈ ಕೌನ್ಸಿಲು ಪ್ರಥಮತಃ ಕಾಶ್ಮೀರದ ಪ್ರಶ್ನೆಯೊಂದನ್ನೇ ಎತ್ತಿಕೊಳ್ಳಬೇಕೆಂದೂ, ಆ ಮೇಲೆ ಅಗತ್ಯ ತೋರಿದರೆ, ಭಾರತ-ಪಾಕಿಸ್ತಾನಗಳೊಳಗಿನ ಇತರ ವಿವಾದಾಂಶಗಳನ್ನೂ ಎತ್ತಿಕೊಂಡು ಭದ್ರತಾ ಕೌನ್ಸಿಲಿನ ಮುಂದಿಟ್ಟು ಅದರ ಅನುಮತಿಯಂತೆ ಆ ವಿಷಯಗಳಲ್ಲೂ ತಲೆ ಹಾಕಬಹುದೆಂದೂ ನಿರ್ಧಾರವಾಗಿತ್ತು. ಮಧ್ಯಾವಧಿಯಲ್ಲಿ ಅಗತ್ಯ ತೋರುವ ಇತರ ಕಾರ್ಯ ಕೈಕೊಳ್ಳುವ ಹಕ್ಕನ್ನು ಭದ್ರತಾ ಕೌನ್ಸಿಲು ಇಟ್ಟುಕೊಂಡಿದ್ದಿತು. ಅದರ ಮರುದಿವಸವೇ 'ಹಿಂದೀ ಸೇನೆಯಾಕ್ರಮಿಸುತ್ತಾ ಬರುತ್ತಿರುವ ಜುನಾಗಾಡ್ ಪ್ರಶ್ನೆಯು ಪಾಕಿಸ್ತಾನದ ಸೇನಾ ಪ್ರವೇಶದ ಅಗತ್ಯ ಬೀಳುವಂತಹದಿರುವುದರಿಂದ' ಜುನಾಗಾಡ್ ಪ್ರಶ್ನೆಯನ್ನೂ ಇತ್ಯರ್ಥಿಸಬೇಕೆಂದು ಪಾಕಿಸ್ತಾನ್ ಪ್ರತಿನಿಧಿಗಳು ಭದ್ರತಾ ಕೌನ್ಸಿಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಅದನ್ನು ಹಾಕಿಸಿದರು; ಸತ್ತು ತಿಂಗಳುಗಳಾದ ಜುನಾಗಾಡ್ ಪ್ರಶ್ನೆಗೂ ಅಲ್ಲಿ ಜೀವ ಕೊಟ್ಟರು. ಭಾರತ–ಪಾಕಿಸ್ತಾನಗಳೊಳಗಿನ ಎಲ್ಲಾ ವಿವಾದಗಳನ್ನೂ ಪರಿಶೀಲಿಸತಕ್ಕದ್ದೆಂಬ ವಾದ ಅದರಿಂದ ಮುಂದೆ ಬಂತು; ಅದಕ್ಕವಕಾಶವೂ ದೊರೆತಂತಾಯಿತು. ಇತ್ತ ಭದ್ರತಾ ಕೌನ್ಸಿಲಿನ ಅಧ್ಯಕ್ಷರ ನೇತೃತ್ವದಲ್ಲಿಯೇ ಭಾರತ–ಪಾಕಿಸ್ತಾನಗಳ ಪ್ರತಿನಿಧಿಗಳ ದುಂಡುಮೇಜು ಸಮ್ಮೇಲನ ಸೇರಿ, ಕಾಶ್ಮೀರೀ ಪ್ರಶ್ನೆಯನ್ನು ಜನಮತ ಸಂಗ್ರಹಿಸಿಯೇ ನಿರ್ಧರಿಸುವ ಕಾರ್ಯ ರೀತಿಗಳನ್ನು ಅವರೀಗ ತಯಾರಿಸಹತ್ತಿದ್ದಾರೆ. ಇಲ್ಲಿ ಕಾಶ್ಮೀರೀ ರಣಕಣವಂತೂ ಪ್ರತ್ಯಕ್ಷ ನರಕವೇ ಆಗಿದೆ. ಧಾಳಿಗಾರ ಪ್ರವಾಹಕ್ಕೆ ಒಮ್ಮೆಯೇ ನೆರೆಯೇರಿ ಅವರು ಜಮ್ಮುವಿನಲ್ಲಿ ನುಗ್ಗುತ್ತಿರುವ ದೃಶ್ಯವು ಚಿಂತಾಜನಕವಿದೆ ಅತ್ತ ಭಾರತದ ಗಡಿಯ ಮತ್ತೊಂದು ಸಂಸ್ಥಾನದೊಳಗೂ ಪಠಾಣೀ ಧಾಳಿಗಾರರು ನುಗ್ಗಿ ವಾತಾವರಣವು ಅಲ್ಲೋಲಕಲ್ಲೋಲವಾಗಿದೆ. ಒಟ್ಟಿನ ಮೇಲೆ ಸದ್ಯಕ್ಕೊಮ್ಮೆ ವಾದರಂಗದಲ್ಲೂ ಯುದ್ಧ ರಂಗದಲ್ಲೂ ಆಕ್ರಮಣಗಾರರ ಕೈ ಮೇಲಾಗಿದೆ. ಹೀಗೇಕಾಯಿತು? ಭಾರತ ಸರಕಾರದ ಶಕ್ತಿ ಸಾಕಾಗದೆ ಹೋಯಿತು, ಎನ್ನೋಣವೆ? ಅಲ್ಲ; ನಿಜಕ್ಕೂ ಸಾಹಸ ಸಡಿಲಾಯಿತು! ಇದು ಮುಖ್ಯತಃ ಗಾಂಧಿಜೀಯ ಕೆಲಸ

ವಾದ—ಪ್ರತಿವಾದ

ಭದ್ರತಾ ಕೌನ್ಸಿಲಿನ ಚರ್ಚೆಗಳಲ್ಲಿ ಭಾರತ–ಪಾಕಿಸ್ತಾನಗಳ ವಶ ಹೇರಳ ಮೆದುಳು ಭಂಡಾರ ಮತ್ತು ವಿಶೇಷ ವಾದಬಲ ಹಾಗೂ ಅಪಾರಪದ ಸಮೂಹಗಳಿವೆ ಎಂಬುದು ಖಚಿತವಾಯಿತು. ಪ್ರಥಮತಃ ಕಾಶ್ಮೀರೀ ಸಂಬಂಧವಾಗಿ ಪಾಕಿಸ್ತಾನದ ಮೇಲಿನ ಭಾರತದ ದೂರಿನ ದೊಡ್ಡ ದಾಖಲೆಯನ್ನು ಹಾಜರುಪಡಿಸಿ, ಶ್ರೀ ಎನ್. ಗೋಪಾಲ ಸ್ವಾಮಿ ಅಯ್ಯಂಗಾರರು ಮನಸ್ಸೀಯ ದೀರ್ಘ ವಾದ ಹೂಡಿದರು. ಅದಕ್ಕೆ ಎರಡು ದಿನಗಳಲ್ಲಿ 5 ಘಂಟೆ 20 ಮಿನಿಟು ಸರ್. ಝಫರುಲ್ಲಾ ಖಾನರು ಪಾಕಿಸ್ತಾನದ ಪರವಾಗಿ ಉತ್ತರಕೊಟ್ಟರು. ಕಾಶ್ಮೀರ ಮತ್ತು ಭಾರತ ಸರಕಾರಗಳು ಮಾಡಿದ್ದ ವಂಚನೆಗಳಿಂದಾರಂಭಿಸಿ, ಪಾಕಿಸ್ತಾನವನ್ನು ಹಣ್ಣು ಮಾಡಿ ನುಂಗಿ ನೀರು ಕುಡಿಯಲು ಹಿಂದೀ ಸರಕಾರವು ಪ್ರಯತ್ನಿಸಿರುವದನ್ನು ಸೂಚಿಸಿಕೊಂಡು, ಭಾರತದಲ್ಲಿರುವ ಮುಸಲ್ಮಾನರನ್ನು ಸಮೂಲ ನಾಶ ಮಾಡಲು ವ್ಯವಸ್ಥಾಪೂರ್ವಕ ಕೈಕೊಂಡ ಎಲ್ಲಾ ಕೃತ್ಯಗಳ ವರೆಗೂ ಸರ್. ಝಫರುಲ್ಲಾ ಶಂಕಿಸದೆ, ತಡವರಿಸದೆ ನಾಲಿಗೆ ಹಾರಿಸಿದ್ದರು. ಆ ಮೇಲೆ 'ಕಾಶ್ಮೀರದ ಪ್ರಶ್ನೆ'ಯ ಪರಿಶೀಲನೆಗಾಗಿ-ಭಾರತವೊಬ್ಬನನ್ನು ಪಾಕಿಸ್ತಾನವೊಬ್ಬನನ್ನು ಮತ್ತಾ ಇಬ್ಬರು ಸೇರಿ ಮೂರನೆಯವನೊಬ್ಬನನ್ನು ಆರಿಸಿಕೊಳ್ಳಬೇಕೆಂಬ ತ್ರಿಮೂರ್ತಿ ಸಮಿತಿ ರಚಿಸುವ ನಿರ್ಧಾರವಾಯಿತು. ಅದರ ಬೆನ್ನಲ್ಲೇ ಸರ್. ಝಫರುಲ್ಲಾರು ಒಂದು ಪತ್ರ ಮೂಲಕ ವಿಜ್ಞಾಪಿಸಿಕೊಂಡಂತೆ ಭದ್ರತಾ ಕೌನ್ಸಿಲಿನ ಕಾರ್ಯಕ್ರಮದಲ್ಲಿ 'ಕಾಶ್ಮೀರ ಮತ್ತು ಜಮ್ಮುವಿನ ಪ್ರಶ್ನೆ'ಯೆಂದಿದ್ದುದನ್ನು ಅಧ್ಯಕ್ಷರು 'ಭಾರತ– ಪಾಕಿಸ್ತಾನ್ ಪ್ರಶ್ನೆ'ಯೆಂದು ವಿಸ್ತರಿಸಿದರು. ಇದನ್ನು ಶ್ರೀ. ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಬಲವಾಗಿ ವಿರೋಧಿಸಿ, ಹೀಗೆ ಎಲ್ಲವನ್ನೂ 'ಪಂಚಕಜ್ಜಾಯ' ಮಾಡಿ ಕಾರ್ಯಕ್ರಮವನ್ನು ವಿಸ್ತರಿಸುವಪಾದಲ್ಲಿ ಭಾರತದ ಪ್ರತಿನಿಧಿ ಮಂಡಲಿಯು ಮುಂದಿನ ತನ್ನ ಸ್ಥಾನದ ಕುರಿತು ಆಲೋಚಿಸಬೇಕಾಗುವದು, ಎನ್ನುತ್ತಾ 'ಕಾಲ್ತೆಗೆಯುವ' ಸೂಚನೆ ಕೂಡಾ ಕೊಟ್ಟರು. ಬ್ರಿಟನ್, ಅಮೇರಿಕ, ರಶ್ಯಾ, ಸಿರಿಯಾಗಳ ಪ್ರತಿನಿಧಿಗಳೂ ಭಾರತದ ವಾದವನ್ನು ಸಮರ್ಥಿಸಿದರು. ಆದರೆ ಅಧ್ಯಕ್ಷರ ಅಭಿಮತಕ್ಕೆ ಚ್ಯುತಿಯಿಲ್ಲ.

ಆ ಮೇಲೆ ಸರ್. ಝಫರುಲ್ಲಾರು ಭಾರತ ಸರಕಾರದ ಮೇಲೆ ಮಾಡಿದ್ದ ಆರೋಪಗಳಿಗೆ, ಶ್ರೀ ಎಮ್. ಸಿ. ಸೆಟಲ್ವಾಡರ ಉತ್ತರ ಬಂತು. ಎರಡು ದಿನಗಳಲ್ಲಿ ೪½ಘಂಟೆ ಶ್ರೀ ಸೆಟಲ್ವಾಡರು ಮಾತಾಡಿದರು. ಸರ್. ಝಫರುಲ್ಲಾ ಹೌದೆಂದುದನ್ನೆಲ್ಲಾ ಇವರು ಅಲ್ಲವೆಂದರು. ಝಫರುಲ್ಲಾರದು ಅತಿಶಯೋಕ್ತಿ ಮತ್ತು ಅಸತ್ಯವೆಂದರು; ಪಾಕಿಸ್ತಾನವು ಉದ್ದೇಶಪೂರ್ವಕ ಕಾಶ್ಮೀರೀ ಧಾಳಿಗಾರರಿಗೆ ಆಶ್ರಯ ಕೊಟ್ಟಿರುವುದನ್ನೂ ನಿಕಟ ಸಂಬಧವಿಟ್ಟಿರುವುದನ್ನೂ ವರ್ಣಿಸಿದರು. ಭಾರತದ ಹೆಚ್ಚಿನ ಕಡೆಗಳಲ್ಲಿ ಮುಸ್ಲೀಮರು ಶಾಂತಿ ಸೌಖ್ಯದಲ್ಲಿದ್ದು, ಅಲ್ಲಿಂದ ಹೊರಟಲು ಎಷ್ಟಕ್ಕೂ ತಯಾರಿಲ್ಲದಿರುವುದನ್ನು ವರ್ಣಿಸಿದರು. ನೇಕಡಾ 80ರಷ್ಟು ಮುಸ್ಲಿಮರಿರುವ ಕಾಶ್ಮೀರದಲ್ಲಿ ಮುಸ್ಲಿಮರನ್ನು ನಿರ್ನಾಮ ಮಾಡುವ ಉದ್ದೇಶವಿತ್ತೆಂಬ ಆರೋಪದ ಅಪಹಾಸ್ಯಕರ ಅಸತ್ಯವನ್ನು ತೋರಿಸಿಕೊಟ್ಟರು. ಮುಸ್ಲಿಮರಿಗೆ ಉಪಕಾರ ಮಾಡಲು ಗಾಂಧಿಜೀ ಕೈಕೊಂಡ ಪ್ರಾಣಾಪಾಯವನ್ನು ಕೂಡಾ ನಿದರ್ಶನವಾಗಿ ಕೊಟ್ಟರು. ಪಾಕಿಸ್ತಾನದಿಂದಾದ ಅನ್ಯಾಯಗಳನ್ನು–ಮತ್ತೆಲ್ಲಾ ಅನಾಹುತಗಳಿಗೂ ಅದೇ ಕಾರಣವಾಗಿರುವದನ್ನು-ಎಸಳೆಸಳಾಗಿ ಬಿಡಿಸಿ ತೋರಿಸಿದರು.

ಆ ಮೇಲೆ ಪುನಃ ಸರ್. ಝಫರುಲ್ಲಾರ ಮರುತ್ತರ. ಶ್ರೀ ಸೆಟಲ್ವಾಡರು 'ಹೌದು' ಎಂದುದಕ್ಕೆಲ್ಲಾ ಇವರ ನಕಾರ ಬಂತು. ಪೂರ್ವ ಪಂಜಾಬಿನ ಕಾದಿಯಾನ್ ಎಂಬಲ್ಲಿದ್ದ ತನ್ನ ಸ್ವಂತ ಮನೆಯನ್ನೇ ಹಿಂದುಗಳು ಐದುದಿನ ಲೂಟಿ ಮಾಡಿದ್ದರು:—ಪಶ್ಚಿಮ ಪಂಜಾಬಿನ ಗಲಭೆಯು ಅವ್ಯವಸ್ಥಿತವಿದ್ದರೆ ಪೂರ್ವಪಂಜಾಬಿನಲ್ಲಿ ಮುಸ್ಲಿಂ ನಾಶಕ್ಕಾಗಿ ಸುವ್ಯವಸ್ಥೆಯಿಂದ

ಇದೀಗ ಪ್ರಕಟವಾಗಿದೆ-

ಸಪ್ತಸಾಗರ

ಕನ್ನಡ ನಾಡಿನ ಸುಪ್ರಸಿದ್ಧ ಕವಿ-ಕತೆಗಾರರಾದ

ಶ್ರೀ ಎಸ್. ವೆಂಕಟರಾಜರ ಅನೋಘ್ಯಕೃತಿ

ಏಳು ಕತೆಗಳ ಸಂಗ್ರಹ. ಬೆಲೆ 0 12 0

ಪ್ರತಿಗಳಿಗೆ ಬರೆಯಿರಿ:— (1) ಕಿರಿಯರ ಪ್ರಪಂಚ, ಉಡುಪಿ. (2) ನವಭಾರತ ಬುಕ್ ಡಿಪೊ, ಉಡುಪಿ ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ರಜಪುತಾನದೊಳಗೆ ಪಾಕಿಸ್ತಾನದ ಧಾಳಿ!

ಸರಕಾರದ ಪ್ರೋತ್ಸಾಹದಿಂದಲೇ ನಡೆಯಿತು-ಹಿಂದುಗಳಲ್ಲಿರುವ ಜಾತಿ ಪದ್ಧತಿಯು ಮುಸ್ಲಿಮರನ್ನು ದೂರಗೊಳಿಸಿತೇ ಹೊರತು ಮುಸ್ಲಿಂ ಲೀಗ್ ಕಲಿಸಿದ ದ್ವೇಷ ಭಾವನೆಯು ಇದಕ್ಕೆ ಕಾರಣವಲ್ಲ-- ಗಾಂಧಿಯವರಿಗೆ ಪಾಕಿಸ್ತಾನದ ಕೃತಜ್ಞತೆಯಿದೆಯಾದರೂ ಅವರು ಉಪವಾಸ ನಿಲ್ಲಿಸಿದ ಶರ್ತಗಳೆಂಬಲೇ ದಿಲ್ಲಿಯ ಸ್ಥಿತಿ ಹೇಗಿತ್ತೆಂಬುದನ್ನು ಅರಿಯಬಹುದು-- ಕಾಶ್ಮೀರದಲ್ಲಿ ದೋಗ್ರಾದಬ್ಬಾಳಿಕೆಯಿಂದ ಆಗಿರುವ ಅನ್ಯಾಯಗಳಿಂದಾಗಿ ಕಾಶ್ಮೀರೀ ಜನತೆಯೇ ಹೂಡಿರುವ ಚಳವಳದ ಮೇಲೆ ಪಾಕಿಸ್ತಾನಕ್ಕೆ ಸಹಾನುಭೂತಿಯಿರುವುದು ನಿಜ--ಭಾರತ ಪಾಕಿಸ್ತಾನಗಳಲ್ಲಿ ಪರಸ್ಪರ ಓಡಿ ಬಂದು ನಿಂತಿರುವ ಸುಮಾರು 1 ಕೋಟಿ ಜನರು ಪುನಃ ತಮ್ಮ ಸ್ವಸ್ಥಾನ ಸೇರಿ, ಅವರಿಗೆ ಪರಿಹಾರ ದೊರೆಯಬೇಕೆಂಬುದೇ ನಮ್ಮ ಇಚ್ಛೆ-- ಎಂದು ಸರ್. ಝಫರುಲ್ಲಾರ ಪ್ರತಿವಾದ.

ಇಕ್ಕಡೆಯ ವಾಗ್ವೀರರ ಅಂಬೋಣಾವತಾರವೀ ರೀತಿ ಮುಗಿದ ಮೇಲೆ ಬ್ರಿಟಿಷ್ ಪ್ರತಿನಿಧಿ ನೋಯೆಲ್ ಬೇಕರರು, ಭಾರತ ಪಾಕಿಸ್ತಾನಗಳು ಕಾಶ್ಮೀರೀ ಜಗಳದಿಂದಾಗಿ ಯುದ್ಧಕ್ಕೆ ತೀರಾ ಸಮೀಪವಾಗಿವೆ, ಎಂದು ಹೇಳಿ 'ನ್ಯಾಯಬದ್ಧ ಶಾಂತಿ' ಸ್ಥಾಪನೆಗಾಗಿ ಭದ್ರತಾ ಕೌನ್ಸಿಲಿನ ಅಧ್ಯಕ್ಷರ ಜತೆಗೆ ಇಕ್ಕಡೆಯ ಪ್ರತಿನಿಧಿಗಳೂ ಸೇರಿ ಒಂದು ಹಂಚಿಕೆ ತಯಾರಿಸಬೇಕೆಂದು ಕೇಳಿಕೊಂಡರು. ಅಮೇರಿಕ, ಕೆನಡಾ, ಫ್ರಾನ್ಸ್, ಚೈನಾ, ಸಿರಿಯಾದ ಪ್ರತಿನಿಧಿಗಳು ಈ ಹೇಳಿಕೆಯನ್ನು ಅನುಮೋದಿಸಿದರು. ಕೊನೆಗೆ ಭಾರತ ಮತ್ತು ಪಾಕಿಸ್ತಾನದ ಪ್ರತಿನಿಧಿಗಳ ಒಪ್ಪಿಗೆದೊರೆಯಿತು. ಕಾಶ್ಮೀರದಲ್ಲಿ ಜನಮತಸಂಗ್ರಹಿಸಿ ಭವಿಷ್ಯ ನಿರ್ಧರಿಸುವ ಮತಸಂಗ್ರಹದ ರೀತಿ ನೀತಿಗಳನ್ನು ಗೊತ್ತುಹಚ್ಚಲು ಒಪ್ಪಿಗೆಕೊಟ್ಟರು.

ಜೈಸಾಲ್ಮೀರ್ ಧಾಳಿ

ಈ ನಡುವೆ ಭಾರತ ಪಾಕಿಸ್ತಾನಗಳ ಗಡಿಯಲ್ಲಿರುವ ರಜಪುತಾನ ಸಂಸ್ಥಾನವಾದ ಜೈಸಾಲ್ಮೀರದೊಳಗೆ ಪಾಕಿಸ್ಥಾನ್ ಸೈನಿಕರ ಮಾರ್ಗದರ್ಶಕತ್ವದಲ್ಲಿ ಪಠಾಣಪಡೆನುಗ್ಗಿಬಂದು ಹಲವುಹಳ್ಳಿಗಳನ್ನು ನಾಶಮಾಡಿ ಆಕ್ರಮಿಸುತ್ತಾ ಮುಂದೊತ್ತುತ್ತಿರುವ ಹೊಸಾಪತ್ತು ಮೂಡಿದೆ. ಆಕ್ರಮಣಗಾರರು ಹಳ್ಳೀಮನೆಗಳನ್ನು ಸುಡುತ್ತಾ ಲೂಟಿಮಾಡುತ್ತಾ ಮಹಿಳೆಯರ ಅಪಹಾರ, ಮಾನಭಂಗ, ಕೊಲೆ ದರೋಡೆಗಳನ್ನು ನಡೆಸುತ್ತಾ ದೌಡಾಯಿಸುತ್ತಿದ್ದಾರೆ. ಹಿಂದುಳಿದ ಜನತೆ ದಿಕ್ಕಾಪಾಲಾಗಿ ಪ್ರಾಣ ಭೀತಿಯಿಂದೋಡಿ ಬರುತ್ತಿದೆ. ಪಠಾಣಿ ಧಾಳಿಗಾರರೊಂದಿಗೆ ಸೇನಾ ಪೋಷಾಕಿನ ಪಾಕಿಸ್ತಾನ್ ಸೈನಿಕರಿದ್ದಾರೆ; ಒಂಟೆಗಳನ್ನೇರಿಕೊಂಡು ನವೀನ ಆಧುನಿಕ ಶಸ್ತ್ರೋಪಕರಣಗಳೊಡನೆ ಈ ಪಾಕಿಸ್ತಾನೀ ಪಠಾಣರು ಆಕ್ರಮಣವಾರಂಭಿಸಿರುವುದು ಜೈಸಲ್ಮೀರಿನ ಒತ್ತಿನಲ್ಲಿದ್ದು ಪಾಕಿಸ್ತಾನಕ್ಕೆ ಸೇರಿರುವ ಬಹಾವಲ್ಪುರದಿಂದ. ಇನ್ನೊಂದು ಬದಿಯಲ್ಲಿ ಜೈಸಾಲ್ಮೀರಿಗೆ ತಾಗಿಕೊಂಡಿರುವ ಜೋಧಪುರ ಮತ್ತು ಬಿಕಾನೀರ್ ಸಂಸ್ಥಾನಗಳಲ್ಲೂ ಅಪಾಯ ನಿರೀಕ್ಷೆಯಿಂದ ಗೊಂದಲವೆದ್ದಿದೆ. ಅವು ರಕ್ಷಣಾ ಸಿದ್ಧತೆಗಳನ್ನು ನಡೆಸಿವೆ. ಬಿಕಾನೀರಿನ ಒಂಟೇ ದಳವು ಮುಂದೊತ್ತಿ ಹೋಗಿ ಧಾಳಿಗಾರರನ್ನಿದಿರಿಸಿದರೂ ಪರಿಣಾಮವೇನಾಯಿತೆಂಬುದು ತಿಳಿದುಬಂದಿಲ್ಲ. ಭಾರತದ ರಕ್ಷಣಾ ಮಂತ್ರಿಗಳು ಈ ಹೊಸ ಆಪತ್ತನ್ನು ಇದಿರಿಸುವ ಸಿದ್ಧತೆಗಳನ್ನು ನಡೆಸಿದ್ದಾರೆ. ಭಾರತ ಸರಕಾರವು ಪಾಕಿಸ್ತಾನವು ಕೈಕೊಂಡ ಈ ಆಕ್ರಮಣವನ್ನು ನಿಷೇಧಿಸಿ ಕಠಿಣ ಶಬ್ದಗಳ ನಿಷೇಧ ಸೂಚನೆಯನ್ನು ಪಾಕಿಸ್ತಾನಕ್ಕೆ ಕಳುಹಿಸಿದೆ. ಧಿಲ್ಲಿಯಲ್ಲಿ ಸೇರಿರುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೂ ಈ ನವೀನ ವಿದ್ಯಮಾನದ ಕುರಿತು ಗಾಢ ಪರ್ಯಾಲೋಚನೆ ನಡೆಸಿವೆ. ಜಮ್ಮುವಿನಲ್ಲಿ ಮುಂಮೊತ್ತುತ್ತಿರುವ ಧಾಳಿಗಾರರನ್ನು ಪ್ರತಿಭಟಿಸಲು ವಿಶೇಷ ಸರಬರಾಯಿ ಹೋಗದಂತೆ ಭಾರತ ಸರಕಾರದ ಲಕ್ಷ್ಯವನ್ನು ಬೇರೆಕಡೆಗೆಳೆಯುವ ಹಂಚಿಕೆಯಿಂದಲೇ ಈ ಧಾಳಿಯನ್ನಾರಂಭಿಸಿರಬಹುದೆಂಮ ಧಿಲ್ಲಿಯ ಸೇನಾ ತಜ್ಞರ ಊಹೆ.

ರಜಪೂತ ಸಂಸ್ಥಾನ

ಈಗ ಪಾಕಿಸ್ತಾನದ ಧಾಳಿಗೊಳಗಾಗಿರುವ ಜೈಸಾಲ್ಮೀರವು ರಜಪುತಾನದ ದೊಡ್ಡ ಸಂಸ್ಥಾನಗಳಲ್ಲೊಂದು. ಸುಮಾರು 16000 ಚದರ ಮೈಲು ವಿಸ್ತಾರವಿರುವ ರಾಜ್ಯವದು. ಆದರೆ ಮರುಭೂಮಿಯಾದ್ದರಿಂದ ನಿವಾಸಿ [illegible] ಸುಮಾರಿ ಪ್ರಕಾರ ಆ ಸಂಸ್ಥಾನದ ಜನಸಂಖ್ಯೆ 93000-ಮೈಲಿಗಾರೇ ಮಂದಿ! ಈ ಸಂಸ್ಥಾನಕ್ಕೂ ಪಾಕಿಸ್ತಾನಕ್ಕೂ ಸುಮಾರು 500 ಮೈಲು ಉದ್ದಕ್ಕೆ ಗಡಿಯುಂಟು. ಸಿಂಧ ಪ್ರಾಂತ್ಯ ಮತ್ತು ಪಾಕಿಸ್ತಾನದೊಂದಿಗೆ ಸೇರಿರುವ ಖೈರ್‌ಪುರ ಮತ್ತು ಬಹವಾಲ್ಪುರ ಸಂಸ್ಥಾನಗಳು ಇದರ ಗಡಿಯಾಗಿವೆ. ಜೈಸಾಲ್ಮೀರವು ಭಾರತದೊಂದಿಗೆ ಜೋಡಣೆಗೊಂಡಿದೆ. ಅದಕ್ಕೆ ತಾಗಿ ಭಾರತದೊಂದಿಗೇನೇ ಸೇರಿರುವ ಜೋಧ್‌ಪುರ ಮತ್ತು ಬಿಕಾನೀರ್ ಸಂಸ್ಥಾನಗಳಿವೆ. ಆ ಗೊಂಡಾರಣ್ಯದಲ್ಲಿ ಆ ಮೊದಲೇ ಸರ್ವ ಸಿದ್ಧತೆಮಾಡಿ ಒಂಟೇ ಬೆನ್ನು ಹತ್ತಿ ನುಗ್ಗಿ ಬಂದ ದಳದ ಅಕಸ್ಮಾತ್ ಧಾಳಿಯನ್ನು ಅಲ್ಲಿಯೇ ಆಗಲೇ ಎದುರಿಸುವುದು ಸಹಜವಾಗಿ ಅಸಾಧ್ಯ. ಮೈಲುಗಟ್ಲೆ ಬಂಜರಿರುವ ಭೂಮಿಯಲ್ಲಿ ಅಡ್ಡಿ ಏನಹಾ ಸುಂಟರಗಾಳಿಯಂತೆ ಬಹು ದೂರದ ವರೆಗೂ ಧಾಳಿಗಾರರು ಬೀಸಿಕೊಂಡು ಬರಬಹುದು. ಪಾಕಿಸ್ತಾನವು ನೂರಾರು ಮೈಲು ಸ್ಥಳವನ್ನಾಕ್ರಮಿಸಿಕೊಂಡ ಹೆಗ್ಗಳಿಕೆಯನ್ನು ಕೆಲವೇ ದಿನಗಳೊಳಗೆ ಸಂಪಾದಿಸುವುದೂ ಅಸಂಭವವಲ್ಲ. ಆದರೆ ಭಾರತ ಸರಕಾರವು ದೃಢತೆ ವಹಿಸಿದಲ್ಲಿ ಪಾಕಿಸ್ತಾನದ ಪಾಲಿಗದು ತಿರುಕನ ಸ್ವಪ್ನವಾಗುವದು ಖಂಡಿತ. ತನ್ನ ನೆರೆಮನೆಗೆ ಹತ್ತಿದ ಬೆಂಕಿಯಿಂದ ಕೂಡಲೇ ಕಣ್ಣು ತೆರೆದು ನಡು ಬಿಗಿಸಿರುವ ಬಿಕಾನೀರ್, ಜೋಧ್‌ಪುರ ಸಂಸ್ಥಾನಗಳೂ ಶೌರ್ಯ ಸ್ಥೈರ್ಯಗಳಿಗೆ ಪುರಾತನ ಕಾಲದಿಂದಲೂ ಹೆಸರಾದವುಗಳು.

'ಇದಾವ ಲಕ್ಷಣ?

ಇತ್ತ ಜಮ್ಮುವಿನ ಧಾಳಿಯು ಭಾರತದಲ್ಲಿ ಕೆಲವರನ್ನು ದಿಗಿಲುಗೊಳಿಸಿರುವಷ್ಟು ಅಪಾಯಕಾರಿಯೇನೂ ಅಲ್ಲವೆಂದೂ, ಜಮ್ಮುವಿನ ಹಿಂದೀ ಸೇನೆಯ ಸರಬರಾಯಿ ಮುಖ್ಯ ಪಥವನ್ನಾಕ್ರಮಿಸಿಕೊಳ್ಳುವುದಾಗಲೀ, ಆ ಕಡೆಗೆ ಸುದೃಢ ಧಾಳಿ ಹೂಡುವದಾಗಲೀ ಆಕ್ರಮಣಗಾರರಿಂದಾಗಿಲ್ಲ- ಆಗುವಂತಿಲ್ಲವೆಂದೂ, ಹಿಂದೀ ಸರಕಾರದ ಸೇನಾ ವಕ್ತಾರರ ಆಶ್ವಾಸನೆಯಿದೆ. ಕಾಶ್ಮೀರದ ಸ್ಥಿತಿ ಹಿಂದಿನಂತೆಯೇ ಭದ್ರವಿದೆ ಎಂದೂ ತಿಳಿದುಬರಿದೆ. ಆದರೂ ಅಲ್ಲಿ ಧಾಳಿಗಾರರು ಇತ್ತೀಚೆಗೆ ಬಲಗೊಂಡಿದ್ದಾರೆಂಬುದು ಖಂಡಿತ. ಇತ್ತ ಆಗೇ ಕಾಲದಲ್ಲಿ, ಪಾಕಿಸ್ತಾನವು ಭಾರತದ ಗಡಿಯು ಮತ್ತೊಂದೆಡೆಯಲ್ಲಿ ನುಗ್ಗಹತ್ತಿದೆ. ಭದ್ರತಾ ಕೌನ್ಸಿಲಿನಲ್ಲಿ ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳ ಪರ್ಯಾಲೋಚನೆ ನಡೆಯುತ್ತಿರುವಾಗ-ಇಕ್ಕಡೆಯವರೂ ಪರಿಸ್ಥಿತಿಯನ್ನು ಕೆಡಿಸುವಂತಹದಾವುದನ್ನೂ ಮಾಡದೆ ಸಹನೆಯಿಂದಿರಬೇಕೆಂದು ಭದ್ರತಾ ಕೌನ್ಸಿಲಿನ ಅಧ್ಯಕ್ಷರು ಭಾರತ ಪಾಕಿಸ್ತಾನಗಳಿಗೆ ವಿಶೇಷ ವಿನಂತಿಯನ್ನು ಮಾಡಿಕೊಂಡಿರುವಾಗ-ಆ ವಿನಂತಿಯಂತೆ ವರ್ತಿಸಬೇಕೆಂದು ಪ್ರಧಾನಿ ನೆಹರೂಗಳು ಭಾರತದ ಜನತೆ ಮತ್ತು ಪತ್ರಿಕೆಗಳನ್ನು ಕೇಳಿಕೊಂಡಿರುವಾಗ, ಪಾಕಿಸ್ತಾನವು ಈ ರೀತಿ ದುಡುಕುತ್ತಿರುವುದರ ಗುಟ್ಟೇನು? ಈ ತಪ್ಪಿಗೆ ಪ್ರಾಯಶ್ಚಿತ್ತವೇನು? ಇನ್ನಿದರ ಪರಿಣಾಮವೇನು?

ಗಾಂಧಿಜೀ ಹಾಕಿದ ಶರ್ತಿಯ ದುಷ್ಪರಿಣಾಮಗಳಲ್ಲವೇ ಈ ಕೆಳಗಿನ ಕಾರಣಗಳು ಹಾಗೆಂದೇ ಸ್ಪಷ್ಟಪಡಿಸುತ್ತಿಲ್ಲವೆ?

ಭಾರತವು ಭದ್ರತಾಕೌನ್ಸಿಲಿಗೆ ಕಾಶ್ಮೀರ ಸಂಬಂಧವಾಗಿ ಪಾಕಿಸ್ತಾನದ ಮೇಲೆ ದೂರನ್ನು ಕೊಟ್ಟದ್ದು, ಆಗತ್ಯ ತೋರಿದೊಡನೆ ಪಾಕಿಸ್ತಾನದೊಳಗೆ ನುಗ್ಗಬೇಕಾಗುವುದೆಂಬ ನಿರ್ಧಾರದಿಂದಲೇ. ಆದ್ದರಿಂದಲೇ 'ಧಾಳಿಗಾರರಿಗೆ ಪಾಕಿಸ್ತಾನ ಕೊಡುತ್ತಿರುವ ಸಹಾಯ'ವೆಂಬುದೊಂದನ್ನುಳಿದೆ ಬೇರಾವುದನ್ನೂ ಭದ್ರತಾ ಕೌನ್ಸಿಲಿನಲ್ಲಿ ಚರ್ಚಿಸಲು ಅದು ಪ್ರಥಮತಃ ತಯಾರಿರಲಿಲ್ಲ. ಆದರೆ ಭಾರತ ಪಾಕಿಸ್ತಾನಗಳೊಳಗೆ ಯುದ್ಧವಾಗುವ ಕುರಿತು ಗಾಂಧಿಜೀ ಪ್ರಾಣಾವಧಿ ವಿರೋಧ ಸೂಚಿಸಿದುದರಿಂದಲೇ ಭಾರತವು ತನ್ನ ಧೋರಣೆಯನ್ನಲ್ಲಿ ಬದಲಾಯಿಸಬೇಕಾಯಿತೆಂಬುದು ಸ್ಪಷ್ಟವಲ್ಲವೇ? ಭಾರತವು ಸೌಮ್ಯ ಧೋರಣೆ ವಹಿಸಿದ ಪರಿಮಾಣದಲ್ಲಿ-ಆ ಗುಟ್ಟನ್ನರಿತೇ-ಪಾಕಿಸ್ತಾನವು ಉಗ್ರ ಧೋರಣೆ ವಹಿಸಿತೆಂಬುದೂ ಖಂಡಿತವಲ್ಲವೇ?

ಭಾರತವು ೫೫ ಕೋಟಿ ರೂ.ಗಳನ್ನು ಕೂಡನೆ ಕಡೆಹಿಡಿದುದರಿಂದಲೂ, ಹೈದರಾಬಾದು ವಂಚಿಸುತ್ತಾ 20 ಕೋಟಿ ರೂ.ಗಳ ಸಾಲವನ್ನು ಮಂಜೂರುಮಾಡಿದ್ದರೂ, ಅದಕ್ಕೂ ಭಾರತವೇನು ಮಾಡುವುದೋ ಎಂಬ ಹೆದರಿಕೆಯಿದ್ದುದರಿಂದಲೂ- ಧಾಳಿಗಾರರಿಗೆ ಸಹಾಯ, ತನ್ನೊಳಗಿನ ವ್ಯವಸ್ಥೆ ಇತ್ಯಾದಿಗಳ ಆರ್ಥಿಕ ಪ್ರಶ್ನೆಯಿಂದ ಪಾಕಿಸ್ತಾನವು ಗೊಂದಲದಲ್ಲಿದ್ದಾಗ, ಗಾಂಧಿಜೀಯಿಂದಾಗಿ ಆ ಸಂಕಟ ನಿವಾರಣೆಯಾಗಿ, ಪಾಕಿಸ್ತಾನದ ಆಕ್ರಮಣಗಳು ಬೆಳೆದುವಲ್ಲವೆ? ಆ ಮೊದಲು ಪ್ರತ್ಯಕ್ಷ ಕಂಡು ಬಾರದಿದ್ದ ಪಾಕಿಸ್ತಾನದ ಸೈನಿಕರು ಕಾಶ್ಮೀರ ರಂಗದಲ್ಲಿ ನಿಜವೇಷದಿಂದ ತೋರಿಬಂದದ್ದೂ, ರಜಪುತಾನದಲ್ಲಿ ಇದೇ ಮಾದರಿಯ ಹೊಸ ಧಾಳಿಯಾರಂಭಿಸಿದುದೂ ಬೇರೇನನ್ನು ಸೂಚಿಸುತ್ತವೆ?

ತನ್ನ ಕೆಲಸ ಹೀಗೆಯೇ ಆಗುತ್ತಿದ್ದರೆ ಪಾಕಿಸ್ತಾನವು ಭದ್ರತಾ ಕೌನ್ಸಿಲನ್ನು ಕಡೆಗಣಿಸದೇ ಸಂಗತಿ ಹೀಗೆಯೇ ಮುಂದುವರಿದರೆ ಭಾರತವು ಭದ್ರತಾ ಕೌನ್ಸಿಲಿನಿಂದ ಕಾಲ್ತೆಗೆಯುವಂತಾಗದೇ?

ನಿಯಂತ್ರಣಗಳು

ಆಹಾರ ವಸ್ತುಗಳ ನಿಯಂತ್ರಣ ಹೋದಾಗ್ಯೂ ನೀವು ಮಾತ್ರ ನಿಮ್ಮ ಆರೋಗ್ಯದ ನಿಯಂತ್ರಣವನ್ನು ಇಟ್ಟುಕೊಳ್ಳಲೇ ಬೇಕು. ಚಳಿ, ಆಯಾಸ ಮೊದಲಾದುವು ಆರೋಗ್ಯದ ತುತ್ತತುದಿಯ ವೈರಿಗಳು!

ಒಂದು ಕಪ್ ಶಂಕ ಮಾರ್ಕಿನ ರಸವನ್ನು ದಿನಾಲೂ ಪಾನ ಮಾಡಿರಿ

ಆಹಾರ ಸತ್ವದ ಗನಿ! ರುಚಿ, ಪರಿಮಳ, ಬಿಂಬೆ, ಕಿತ್ತಳೆ, ಅನಾನಾಸು ನಿಮ್ಮ ನಾಲಗೆ ರುಚಿಯ ಅಚ್ಚುಮೆಚ್ಚಿನದು.

ತಯಾರಿಸುವವರು:

ಕನ್ನಡ ಸೋಪ್ ಎಂಡ್
ಇಂಡಸ್ಟ್ರಿಯಲ್ಸ್ ಲಿಮಿಟೆಡ್, ಮಂಗಳೂರು.

ವಿಶ್ವಾಸ ಮತ್ತು ಭದ್ರತೆ ನಾಮಧೇಯವು

ಸರ್ವರ ಅನುಕೂಲತೆಗಳಿಗೂ ನಿಲುಕುವಂತಹ ಆಕರ್ಷಕ ಯೋಜನೆಗಳನ್ನು ಸಲ್ಲಿಸುವವು

ಲಾಭದಾಯಕ [illegible] ಪ್ರತಿನಿಧಿಗಳು ಬೇಕಾಗಿದ್ದಾರೆ.

ವಿವರಗಳಿಗೆ ಬರೆಯಿರಿ:—

ದಿ ಮೆನೇಜಿಂಗ್ ಡೈರೆಕ್ಟರ್,

ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕೊ.,
ಲಿಮಿಟೆಡ್.
ಹಸನ್ ಚೇಂಬರ್ಸ್, ಪಾರ್ಸಿ ಬಜಾರ್ ಸ್ಟ್ರೀಟ್,
ಫೋರ್ಟ್, ಬೊಂಬಾಯಿ 1.

The Canara Banking Corporation Limited.
(Incorporated in British India)
Estd: 1906.
Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates:—
3 & 4 months — @ 2¼ % p. a.
5 & 6 months — @ 2¾ % p. a.

ನವಯುಗ

ಗುರುವಾರ, ಉಡುಪಿ, ೨೯-೧-'೪೮

ಹೊಸ ಪ್ರಕಾಶ

ಕಳೆದ ಒಂದೆರಡು ವಾರಗಳಿಂದ ಭಾರತದ ರಾಜಕೀಯದಲ್ಲಿ ಕೆಲವಾದರೂ ಶುಭಶಕುನಗಳು ಕಂಡು ಬಂದಿವೆ; ಅವು ಶುಭ್ರಭವಿಷ್ಯದ ಸೂಚನೆಗಳೆನ್ನಬಹುದು. ಕೇವಲ ಈ ದಿನದ ಮಟ್ಟಿಗೆ ಪರಿಸ್ಥಿತಿಯು ಅನುಕೂಲವಾಗಿರುವುದಕ್ಕಿಂತ ಹೆಚ್ಚಿಗೆ ಪ್ರತಿಕೂಲವಾಗಿದೆ ಎಂಬುದೇನೋ ನಿಜ. ಕಾಶ್ಮೀರದ ಸಂಬಂಧವಾಗಿ, ಭದ್ರತಾ ಕೌನ್ಸಿಲಿನಲ್ಲಿ ನಡೆದಿರುವ ವಿಚಾರ ವಿಮರ್ಶೆಗಳಲ್ಲಿ ಇರಬೇಕಾದಷ್ಟು ಸ್ವಚ್ಛತೆ ಕಾಣುತ್ತಿಲ್ಲ. ಸಾಲದುದಕ್ಕೆ ಜೈಸಾಲ್ಮೇರ್ ಆಕ್ರಮಣದಂತಹ ಪಾಕಿಸ್ತಾನ್ ದುರಹಂಕಾರದ ಹೊಸ ನಿದರ್ಶನಗಳೂ ದೊರೆತಿವೆ. ಹಾರ್ದಿಕ ಮೈತ್ರೀ ಸಾಧನೆಗೆ ಪಾಕಿಸ್ತಾನವಿನ್ನೂ ಮುಂದೆ ಬಂದಿಲ್ಲ; ಬದಲಿಗೆ ಭಾರತದ ಶಾಂತಿ ಪ್ರೇಮವನ್ನು ತನ್ನ ಸ್ವಾರ್ಥಸಾಧನೆಗೆ ಉಪಯೋಗಿಸಿಕೊಳ್ಳುವ ದೌರ್ಬಲ್ಯವನ್ನೇ ಅದು ಅವಲಂಬಿಸಿದಂತಿದೆ.

ಆದರೊಂದು ಸಮಾಧಾನವಿದೆ. ಪಾಕಿಸ್ತಾನದ ಈ ದುಶ್ಚೇಷ್ಟೆಗಳೆಲ್ಲವೂ ಸ್ವಭಾವಬದ್ಧವಾದವುಗಳೇ. ಆಳವಾಗಿ ವಿಚಾರಿಸಿದರೆ ಇವೆಲ್ಲವೂ ಪಾಕಿಸ್ತಾನದ ದೌರ್ಬಲ್ಯವನ್ನೇ ಸೂಚಿಸುತ್ತಿವೆ ಹೊರತು ಪ್ರಾಬಲ್ಯದ ದ್ಯೋತಕಗಳಾಗಿಲ್ಲ ಅದು ಮುಂದೊಡ್ಡುವ ಆತಂಕಗಳೆಲ್ಲವೂ, ಭಾರತವು 'ಮನಸ್ಸು ಮಾಡಿದರೆ ಹಾಹಾ ಎನ್ನುವುದರೊಳಗೆ' ಪರಿಹರಿಸಿಬಿಡಲಾಗುವಂತಹವೇ ಎಂದರೆ ಅತಿಶಯೋಕ್ತಿಯಾಗದು. ಸಹನೆ ಮತ್ತು ಹೇಡಿತನಗಳೊಳಗೆ ವ್ಯತ್ಯಾಸವನ್ನರಿಯದವರಿಗೆ ಮಾತ್ರ ಭಾರತದ ಇಂದಿನ ಧೋರಣೆಯಲ್ಲಿ ಶೌರ್ಯದ ಅಭಾವವು ಕಂಡುಬಂದೀತು! ಭಾರತವು ಈ ಕಂಟಕಗಳನ್ನು ನಿವಾರಿಸಿಕೊಳ್ಳಲೇ ಬೇಕು--ಆದರೆ ಹೇಗೆ, ಎಂಬುದೇ ಈಗಿನ ಪ್ರಶ್ನೆ. ದಂಡಿಸಿ ಕಲಿಸುವುದೊಂದೇ ಉಪಾಯವೋ, ಔದಾರ್ಯ ಪ್ರದರ್ಶಿಸುವ ಅಂಶ ವಿದೆಯೋ ಎಂಬುದೊಂದೇ ತುಲನೆ ಮಾಡಿಕೊಳ್ಳಲು ಉಳಿದಿದೆ ಭಾರತದ ಮಟ್ಟಿಗೆ ಇವೆರಡೂ ಸಾಧ್ಯ. ಆದ್ದರಿಂದ ಇಲ್ಲಿ ಅಪಾಯದ ಮಾತೇ ಇಲ್ಲ; ದೌರ್ಬಲ್ಯದ ಪ್ರಶ್ನೆಯಿಲ್ಲ. ಭಾರತದ ಸಹನೆ ಬರಿದಾಗುವಷ್ಟು-ಉದಾರತೆಯು ಅಂಶ ಮಾತ್ರವೂ ಉಳಿಯದಷ್ಟು—ಪಾಕಿಸ್ತಾನದ ಅತಿರೇಕಗಳು ಇಷ್ಟರಲ್ಲೇ ಬೆಳೆದಿರುವಾಗ ಇನ್ನೂ ಮೃದು ಧೋರಣೆಯೆಂದರೇನು, ಎಂಬ ಆಕ್ಷೇಪವು ಎಲ್ಲೆಡೆಗಳಿಂದಲೂ ಕೇಳಿಬರುತ್ತಿದೆ ನಿಜಕ್ಕೂ ಈ ಕುರಿತು ಜನತೆಯ ಹೃದಯವೀಗ ಕದಡಿ ಹೋಗಿದೆ. ಜನತೆಯ ಈ ಅಸಹನೆ, ಅನಿಶ್ಚಿತ ಮನೋವೃತ್ತಿಯು ಬೆಳೆಯುತ್ತಾ ಹೋಗಿ, ಅದು ಹಿಂದೀ ಸರಕಾರದ ಧೋರಣೆಯ ಕಡೆಗೆ ಜಿಗುಪ್ಸೆ ಹಾಗೂ ದ್ವೇಷವಾಗಿ ಮಾರ್ಪಟ್ಟಲ್ಲಿ, ಅದು ಮಾತ್ರ ಅಪಾಯಕರ! ಆದ್ದರಿಂದ ಈಗ ಸೂಕ್ಷ್ಮವಾಗಿ ವಿಚಾರಿಸಬೇಕಾದ ಅಂಶವೆಂದರೆ, ಹಿಂದೀ ಸರಕಾರವು ತನ್ನ ಕಣ್ಣಮುಂದಿನ ಕಂಟಕಮಯ ಹಾದಿಯಲ್ಲಿ ಇಂದಿನಂತೆ ತೂಕದ ಹೆಜ್ಜೆಯನ್ನೇ ಇಡಬೇಕೋ, ಅಥವಾ ದಾಟಿಟ್ಟು ಗೆಲ್ಲಬೇಕೋ ಎಂಬುದೊಂದೇ. ಈ ಸಂದರ್ಭದಲ್ಲಿ ಸರಕಾರೀ ಚುಕ್ಕಾಣಿ ಹಿಡಿದಿರುವ ನಾಯಕರು ಒಂದೋ ಅನಗತ್ಯವಾದ ಸಹನೆ ತೋರಿಸುತ್ತಿರಬೇಕು; ಇಲ್ಲವೇ ಸಾಮಾನ್ಯ ಜನರು ಅಜ್ಞಾನವಶಾತ್ ಅಸಹನೆ ತೋರಿಸುತ್ತಿರಬೇಕು. ಈ ಪೈಕಿ ಯಾರು ತಪ್ಪಿಬಿದ್ದಿದ್ದರೋ ಅವರು ತಿದ್ದಿಕೊಂಡು, ರಾಷ್ಟ್ರದ ನಾಯಕರು ಮತ್ತು ಜನತೆಯು ಪರಸ್ಪರ ಹೊಂದಿಕೊಂಡು ಹೋಗುವುದು ಅತ್ಯಗತ್ಯ. ಆದ್ದರಿಂದ ಸಂಗತಿಯ ಆಮೂಲಾಗ್ರ ಜ್ಞಾನವಿಲ್ಲದ-ಅಂತಹ ತಿಳುವಳಿಕೆಯನ್ನು ಇದ್ದಂತೆ ಹೊಂದುವದು ಸಾಧ್ಯವೂ ಇಲ್ಲದ--ಸಾಮಾನ್ಯ ಜನರು, ಸಂದರ್ಭಕ್ಕನುಸಾರವಾಗಿ ಮುಂದೆ ಬರುವ ತಾತ್ಕಾಲಿಕ ಘಟನೆಗಳಿಂದ ಉದ್ವೇಗಾತುರರಾಗದೆ ಎಲ್ಲಾ ಸನ್ನಿವೇಶಗಳಲ್ಲೂ ಈ ಕೆಳಗಿನ ಒಂದೆರಡು ಮೂಲ ಸೂತ್ರಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಅತ್ಯಗತ್ಯವೆನ್ನುತ್ತೇವೆ:—

ದೀರ್ಘಾವಧಿಯ ಪರಾವಲಂಬನದ ಪರಿಣಾಮವಾಗಿ ಹಿಂದೀ ಸಾಮಾನ್ಯ ಜನತೆಯ ಸದ್ಯದ ಮನೋಮಟ್ಟವು, ಲೋಕದ ಮುಂದುವರಿದ ಇತರ ಜನಾಂಗಗಳ ಮಟ್ಟದಷ್ಟು ಮೇಲಿಲ್ಲವೆಂಬ ಕಠೋರ ಸತ್ಯವನ್ನು ಸರ್ವರೂ ಅರಿತಿರಬೇಕು; ಆದರೆ ಈಗ ಹಿಂದೀ ಸರಕಾರದ ಸೂತ್ರಧಾರಿಗಳಾಗಿರುವ ನಾಯಕರು ಲೋಕದ ಯಾವುದೇ ನಾಯಕ ವರ್ಗಕ್ಕಿಂತ ಉತ್ತಮ ಮಟ್ಟದವರೆಂಬುದು ಭಾರತೀಯರು ಹೆಗ್ಗಳಿಕೆಯಿಂದ ಮತ್ತು ವಿಶ್ವಾಸದಿಂದ ಕಾಣಬೇಕಾದ ಏಕಮಾತ್ರ ಸಂಗತಿಯೆಂಬುದೂ ಲಕ್ಷ್ಯದಲ್ಲಿರಬೇಕು.

ರಾಜಕೀಯವೆಂಬುದು, ಸಸಿರೂಪಕ್ಕಿಂತ ಹೆಚ್ಚಾಗಿ ಗೆಡ್ಡೆ ಬಳ್ಳಿಯಾಕಾರದ್ದೇ. ಅದರಲ್ಲಿ ಎದ್ದು ತೋರುವ ಭಾಗಕ್ಕಿಂತ ಒಳಭಾಗದಲ್ಲಿ ಅಡಗಿರುವ ಅಂಶಗಳೇ ಹೆಚ್ಚಿಗೆ. ಆದ್ದರಿಂದ ಕಾಶ್ಮೀರದ ಪ್ರಶ್ನೆ, ಹಣಕಾಸು ಮತ್ತಿತರ ವಹಿವಾಟುಗಳ ಪ್ರಶ್ನೆ, ಇವುಗಳೊಳಗಿನ ಗೂಢವೇನು,ಎಂಬುದು,ಅವುಗಳೊಳಗೆ ಕೈಯ್ಯಾಡಿಸುತ್ತಿರುವ ನಾಯಕರಿಗೆ ಗೊತ್ತಿರುವಷ್ಟು ಸಾಮಾನ್ಯರಿಗೆ ಗೊತ್ತಿರಲು ಸಾಧ್ಯವಿಲ್ಲ. ನಾಯಕರ ದೃಷ್ಟಿಪಥದಲ್ಲಿ ರಾಷ್ಟ್ರದ ಹಾಗೂ ರಾಷ್ಟ್ರೀಯರ ಹಿತಸಾಧನೆಯೊಂದೇ ಇದೆ ಎಂಬ ಕುರಿತು ಸಂದೇಹಕ್ಕೆಡೆಯಿಲ್ಲದಿರುವವರೆಗೆ, ಇಂತಹ ಪ್ರಶ್ನೆಗಳನ್ನವರು ತೀರ್ಮಾನಿಸುವ ವಿಧಾನಗಳ ಕುರಿತೂ ಜನತೆ ಸಂದೇಹ ಸೂಚಿಸುವದು ನ್ಯಾಯವಾಗದು.

ಈಗ ಸ್ವತಂತ್ರ ಭಾರತದ ಸರಕಾರದ ಸೂತ್ರಧಾರರುಗಳಾಗಿರುವ ನಾಯಕರು ಆದಿಯಿಂದಲೂ ಆ ಸ್ವಾತಂತ್ರ್ಯಕ್ಕಾಗಿ ದುಡಿಯುವುದರಲ್ಲೂ, ಅದು ದೊರೆತ ಮೇಲಂತೂ ಆ ಸಂಬಂಧವಾಗಿ ಎದ್ದಿರುವ ಸರ್ವಶ್ರುತ ದುರಂತಗಳ ನಿವಾರಣೆಗಾಗಿ ಅಹರ್ನಿಶಿ ಒದ್ದಾಡುವುದರಲ್ಲೂ ದಣಿದಿರುವ ಜೀವಗಳು. ಇಂದು ಆ ಸ್ಥಾನಗಳಿಗೆ ಅವರೇ ಬೇಕಾಗಿದ್ದಾರೆ ಹೊರತು, ಅವರಿಗೆ ಆ ಸ್ಥಾನಗಳು ಬೇಕಾಗಿಲ್ಲ. ಅಂಥವರಿಗೆ ಅಗತ್ಯವಿರುವ ವಿಶ್ರಾಂತಿಯನ್ನು ಕೊಡಲು ರಾಷ್ಟ್ರವಿಂದು ತಯಾರಾದರೆ, ಜಾತೀಯತಾವಾದಿಗಳಾಗಲೀ ಅನ್ಯರಾಷ್ಟ್ರೀಯ ತತ್ವದ ಅಮಲು ಏರಿದವರಾಗಲೀ, ಅಧಿಕಾರಕ್ಕೇರುವ ಅಪಾಯವಿದೆ. ಏನಿಲ್ಲೆಂದರೂ ಇದುವರೆಗೆ ಸಾರಥಿತ್ವ ನಡಿಸಿ ಮರ್ಮವರಿತವರ ಕೈಯಿಂದ ಈ ಸಂದಿಗ್ಧ ಕಾಲದಲ್ಲಿ ಸೂತ್ರ ತಪ್ಪಿ ಅನನುಭವಿ, ಅಪಕ್ವ ಬುದ್ಧಿಯವರ ಕೈಗದು ಹೋದರೆ ಅಪಾಯ ತಪ್ಪದು.

ರಾಜಕೀಯದಲ್ಲಾಗಲೀ, ಯುದ್ಧದಲ್ಲಾಗಲೀ ಸಂದರ್ಭಾನುಸಾರ ಹಿಂದೆ ಮುಂದೆ, ಅಕ್ಕಪಕ್ಕಗಳಿಗೆ ಹೆಜ್ಜೆಯಿಟ್ಟೇ ಗುರಿ ಸೇರಬೇಕಾಗುತ್ತದೆ. ಕೊನೆಯ ಪರಿಣಾಮವನ್ನು ಕಂಡಮೇಲೆಯೇ ಜಯಾಪಜಯಗಳನ್ನು ಗೊತ್ತು ಹಚ್ಚಬೇಕು ಹೊರತು, ಮಧ್ಯಹಾದಿಯ ಹೆಜ್ಜೆಗಳ ಮೇಲಿಂದಲ್ಲ.

ಭಾರತ ರಾಜಕೀಯದ ತಪ್ಪು ಮೂಲದಲ್ಲೇ ಇದೆ—ಧಾರ್ಮಿಕತೆ, ಜಾತೀಯತೆಯನ್ನಾಧರಿಸಿ ಅದು ಬೆಳೆದು ಬಂದದ್ದೇ ಆ ತಪ್ಪು. ಆದರೆ ಈಗ ಆ ಹಾದಿಯಲ್ಲೇ ಮುಕ್ಕಾಲಂಶ ಮುಂದುವರಿದು ಬಂದಮೇಲೆ, ಇನ್ನು ಅದೇ ಹಾದಿಯಿಂದ ಅದನ್ನು ಮುಂದಕ್ಕೆಳೆದುಕೊಂಡು ಹೋಗಿ, ಹೇಗೂ ಒಪ್ಪ ಗುರಿಮುಟ್ಟಿಸಿ,ಅಲ್ಲಿ ಮಾನುಷತ್ವ,ಆರ್ಥಿಕತೆಯ ಆಧಾರದಮೇಲೆ ಸಮಾನತೆ ಸ್ಥಾಪಿಸಲು ನೋಡಬೇಕೇ ಹೊರತು, ಮುಕ್ಕಾಲಂಶ ಮುಗಿಯುತ್ತಾ ಬಂದದ್ದನ್ನು ನಿರ್ಮೂಲಿಸಿ, ಹೊಸತಾಗಿ ಪ್ರಾರಂಭಿಸುವೆವೆಂದರದು ಸಮಯ ಶಕ್ತಿಗಳ ವ್ಯಯ; ಅನ್ಯಾಯ.

ಈ ಮುಖ್ಯ ಮುದ್ದೆಗಳನ್ನು ಲಕ್ಷಿಸಿದರೆ ಕಳೆದ ಒಂದೆರಡು ವಾರಗಳಲ್ಲಿ ಗಾಂಧೀ ನೆಹರುಗಳು ಭಾರತದ ಜನತೆಯ ಮನೋರಂಗದಲ್ಲಿ ಮಾಡಿರುವ ಶುದ್ಧೀಕರಣ ಕಾರ್ಯಗಳು ಭವಿಷ್ಯದ ಕುರಿತು ನಿಜಕ್ಕೂ ಸ್ಪಷ್ಟ ಭರವಸೆಯನ್ನು ಮೂಡಿಸಿವೆ. ಪಾಕಿಸ್ತಾನದ ಕೆಲವು ಅತಿರೇಕಗಳಿಗೆ ಅಪ್ರತ್ಯಕ್ಷ ಪ್ರೇರಣೆಯಾದ ಗಾಂಧೀಜಿಯ ಉಪವಾಸದ ದುಷ್ಪರಿಣಾಮಗಳನ್ನು ಗಣಿಸಿ ಅದಕ್ಕೆ ತಕ್ಕ ಪ್ರತೀಕಾರವನ್ನು ಕೈಕೊಳ್ಳುವಾಗಲೇ, ಅದರಿಂದಾದ ಇದೊಂದು ಉಪಕಾರವನ್ನೂ ಲಕ್ಷಿಸಿ, ಅದನ್ನು ಬೆಳೆಯಿಸಲು ಜನರು ಪ್ರಯತ್ನಿಸಬೇಕಾದುದು ಅಗತ್ಯ.

NOTICE

In the matter of the Indian Company's Act.
In the matter of the CANARA FOREST AND FARMS LTD, (in Liquidation)

Notice to the Creditors and Shareholders of the company under Sec. 209 G to attend the General meeting.

Please take notice that there will be a General Meeting of the creditors and Shareholders of the said Company on sunday the 22nd day of February 1948 at 10 a. m. at the office of the Liquidator at Karkal, South Kanara Dt. as required under sec. 209 G. of the Indian Company's Act. All the Creditors and Shareholders of the Company are requested to attend.

N. M. Adyanthaya,
Liquidator.

Karkal: 26-2-48

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 343/1947

ವಾದಿಳು: ಲಿಲ್ಲಿ ಮೇರಿ ಫರ್ನಾಂಡಿಸ್ ಬ್ಯಾ.
ಪ್ರತಿವಾದಿರು: ಸೆಯ್ಯದ ಜಬ್ಬಾರಿ ಕೂಡಾ.

ಪುತ್ತೂರು ಕಸಬೆಯ ಪರ್ಲಡ್ಕದಲ್ಲಿರುವ ಸರ್ವತ್ತೋಡಿ ಬಾಲಕೃಷ್ಣ ರೈಗಳ ಹೆಂಡ್ತಿ ವನಲೊಟ್ಟು ಚನ್ನಮ್ಮ ಹೆಂಗ್ಸಿನ ಮಗಳು ಬೆಳ್ಳಿಪಾಡಿ ರಹಿ ಹೆಂಗ್ಸಿಗೆ ಈ ಮೂಲಕ ತಿಳಿಸುವದೇನೆಂದ್ರೆ:-

ಮೇಲ್ಕಂಡ ವಾದಿಳು ನಿಮ್ಮ ಮೇಲೆ ಕೂಡಾ ಮಾಡಿದ ಈ ವ್ಯಾಜ್ಯದಲ್ಲಿ ತಾ. 5-2-48 ಕ್ಕೆ ನಿಮಗೆ ನೋಟೀಸು ಬಗ್ಗೆ ಯಿಟ್ಟಿದೆ. ಆ ದಿವ್ಸ ನೀವು ಹಗಲು 10 ಗಂಟೆಗೆ ಖುದ್ದು ಯಾ ವಕೀಲರ ಮುಖಾಂತರ ಹಾಜರಾಗದಿದ್ರೆ ನಿಮ್ಮನ್ನು ಬಿಟ್ಟು ಮಾಡಿ ವ್ಯಾಜ್ಯವನ್ನು ತೀರ್ಮಾನಿಸಲಾಗುವದೆಂತ ಈ ಮೂಲ್ಕ ತಿಳಿಸಿಯದೆ.

ಸವೂರ ಆನಂದ ರಾವ್,
ವಾದಿಳ ವಕೀಲ

ಪುತ್ತೂರು, 20 1-1948

ಸುರತ್ಕಲ್

ತಾ 22-1-48ರಲ್ಲಿ ಶ್ರೀ ಪಿ. ಶ್ರೀನಿವಾಸ ರಾವ್, ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ವಾರ್ಷಿಕ ಆಟ ಪಂದ್ಯಾಟಗಳ ದಿನಾಚರಣೆ ನಡೆದು ಆಟಗಳ ಬಹುಮಾನ ವಿತರಣೆ, ಶಾಲಾ ಆಂಜನೇಯ ಬಾಲಸೇವ ದಳದವರ ಶಿಬಿರಾಗ್ನಿ ಕಾರ್ಯಕ್ರಮಗಳೂ ಜರಗಿದವು.

CHAMPAE'S
Snow & Castrex
Sole Distributers for India,
Prop: K. G. NAYAK,
Santhekatte, UDIPI, S K.

ಕರ್ನಾಟಕ ಪ್ರಾಂತ್ಯ ರಚನೆಗಾಗಿ ನಾಯಕರಲ್ಲಿ ಮನವಿ.

ಕರ್ನಾಟಕ ಪ್ರಾಂತ್ಯದ ಜನತೆಯು ತ ಹೆಕ್ಕಿನ ಪ್ರತ್ಯೇಕ ಪ್ರಾಂತ್ಯ ರಚನೆ ಗೆ ಸರ್ವ ಪ್ರಯತ್ನಗಳನ್ನು-ಸಕಾಲದ ಸರ್ವ ಶಕ್ತಿಯಿಂದ-ಮಾಡಲೇಬೇಕೆಂ ಈ ಬಾರಿ ನಡು ಬಿಗಿದಿದೆ. ಪಂಡಿತ ನೆ ರುಗಳು ಭಾಷಾವಾರು ಪ್ರಾಂತ್ಯ ರಚನೆ ಲ್ಲಿ ಆಂಧ್ರದ ಮಟ್ಟಿಗೆ ಸರಾಗವಾಗಿ ಒ , ಕರ್ನಾಟಕದ ಕುರಿತು ಸಾವಧಾನ ತ್ತು ಶಂಕೆ ಪ್ರದರ್ಶಿಸಿದುದರಿಂದ ಕನ್ನ ರ ಸಹಜವಾದ ಆಶೆಯು ಅಗ್ರಹವಾಗಿ ರ್ಪಟ್ಟಿದೆ.

ಶ್ರೀ ಗಂಗಾಧರರಾವ್ ದೇಶಪಾಂಡೆಯ ು ಕರ್ನಾಟಕದ ಪ್ರಾಂತ್ಯ ರಚನೆಯ ರಿತು ನೆಹರುಗಳಾಡಿದ ಮಾತಿಗಾಗಿ ಃಖ ಸೂಚಿಸಿ ಗಾಂಧಿಜೀಗೆ ಪತ್ರ ದಾಗ, ಕರ್ನಾಟಕ ಪ್ರಾಂತ್ಯ ರಚ ಯು ಅತ್ಯಗತ್ಯವೆಂದೊಪ್ಪಿ 'ಸಂಬಂ ಪಟ್ಟ ಪ್ರಾಂತ್ಯಗಳು ತಾವೇ ಆ ರಿತು ರೂಪರೇಷೆ, ಗಡಿ ನಿರ್ಧಾರ ನ್ನು ಮಾಡಿಕೊಂಡರೆ ಭಾರತ ಸರಕಾ ರ ಅದನ್ನು ಅಂಗೀಕರಿಸಿಕೊಳ್ಳುವದೆಂ ದೇ ಪಂಡಿತ ನೆಹರುಗಳ ಮಾತಿನ ಅ ವೆಂದು ನಾನು ನಂಬುತ್ತೇನೆ' ಎಂದು ಗಾಂಧಿಜೀ ಉತ್ತರ ಕೊಟ್ಟಿದ್ದಾರೆ.

ಕರ್ನಾಟಕದ ಶಿಷ್ಟಮಂಡಲಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕ ಟಿ ಮತ್ತು ಘಟನಾ ಸಮಿತಿಯಲ್ಲಿರುವ ರ್ನಾಟಕ ಸದಸ್ಯರ ಸರವಾಗಿ ಶಿಷ್ಟಮಂ ಲಿಯೊಂದು ನವದೆಹಲಿಯಲ್ಲಿ ಮಹಾತ್ಮ ಗಾಂಧಿಯವರನ್ನೂ ಕಾಂಗ್ರೆಸ್ ಕಾರ್ಯ ಕಾರೀ ಸಮಿತಿಯನ್ನೂ ಸಂಧಿಸಿದೆ. ಕಾಂ ಗ್ರೆಸ್ ಅಧ್ಯಕ್ಷರ ಮತ್ತು ಕಾರ್ಯಕಾರೀ ಯ ಶಿಗೆ ಕರ್ನಾಟಕ ಪ್ರಾಂತ್ಯವ ನ್ನು ಕೂಡಲೇ ರಚಿಸುವ ಬಿನ್ನವತ್ತಳೆಯ ನ್ನು ಒಪ್ಪಿಸಿ ಈ ಮಂಡಲಿಯು ಕರ್ನಾಟ ಕದ ಪರವಾಗಿ ಸ್ಪಷ್ಟ ನಿವೇದನೆ ಮಾಡಿ ಕೊಂಡಿದೆ- 'ಬಾಗಗದೆ ಹೋದರೆ, ಕೇಂ ದ್ರ ಮತ್ತು ಪ್ರಾಂತಿಕ ಶಾಸನ ಸಭೆಗಳಲ್ಲಿ ನ ಕರ್ನಾಟಕದ ಸದಸ್ಯ... ಕೊಡತಕ್ಕದ್ದೆಂದು ಕರ್ನಾಟಕಪ್ರಾಂ ತಿಕ ಕಾಂಗ್ರೆಸ್ ಕಮಿಟಿಯು ಜನವರಿ 14ರಲ್ಲಿ ಮಾಡಿರುವ ನಿರ್ಧಾರಕ್ಕನು ಸಾರವಾಗಿ ರಾಜೀನಾಮೆಕೊಡುವರೆ ನಿ ಮ್ಮ ಅನುಮತಿ ಕೇಳುವ ವಿನಹಾ ಬೇರೆ ಾದಿ ನಮಗಿಲ್ಲವೆನ್ನಲು ವಿಷಾದಿಸುತ್ತೇ '- ನವದೆಹಲಿಯಲ್ಲಿ ಈಗ ಸೇರಿರುವ ಂಗ್ರೆಸ್ ಕಾರ್ಯಕಾರೀ ಸಮಿತಿಯು ಪ್ರಾಂತ್ಯಗಳನ್ನು ಭಾಷಾವಾರಾಗಿ ಪುನ ರಚಿಸುವ ಪ್ರಶ್ನೆಯನ್ನು ಪರ್ಯಾಲೋ ಚಿಸುತ್ತಿದೆ. ಮಹಾತ್ಮಾ ಗಾಂಧಿಯವರ ಂಬಲ, ಕರ್ನಾಟಕದ ಮುಂದಾಳುಗಳ ಪ್ರಯತ್ನದ ಫಲವಾಗಿ ಎಲ್ಲಾ ಭಾಷಾವಾರು ಪ್ರಾಂತ್ಯಗಳ ರಚನೆಯನ್ನೂ ಏಕಕಾಲ ದಲ್ಲಿ, ಆದಷ್ಟು ಬೇಗನೇ ಕೈಕೊಳ್ಳುವಂ ತಾಗಬಹುದೆಂದೂ, ಪಕ್ಷಪಾತ ತೋರಿ ಬ ರಾರದೆಂದೂ ಆಶೆಮೂಡಿದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಚರ್ಚೆಯು ವೇ ಈ ಕುರಿತು ಕಾರ್ಯ ಕೈಕೊಳ್ಳತಕ್ಕ ಹರು, ವಲ್ಲಭಾಯಿಗಳೂ ಹಾಜರಿದ್ದರು. 25ರ ತನ್ನ ಪ್ರಾರ್ಥನಾ ಸಭೆಯಲ್ಲಿ ಮಹಾತ್ಮಾ ಗಾಂಧಿಯವರು ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆಯನ್ನೇ ಎತ್ತಿಕೊಂಡು, ಅದು ಪ್ರಾಂತಿಕ ಭಾಷಾ ಬೆಳವಣಿಗೆ ಮತ್ತು ಜನಜೀವನಕ್ಕೆ ಅಗತ್ಯವೆಂದು ಪುಷ್ಟೀಕರಿಸಿ, ಏಕ ರಾಷ್ಟ್ರೀಯತೆಯ ಒಳಾಂತಸ್ಸುಗಳಾಗಿಯೇ ಪ್ರಾಂತ್ಯಗಳಿರಬೇಕೆಂಬುದನ್ನು ಸೂಚಿಸಿದ್ದಾರೆ. ಗಡಿ ನಿರ್ಣಯಕ್ಕಾಗಿ 'ಗಡಿ ಸಮಿತಿ'ಗಳನ್ನು ನೇಮಿಸುವುದು ವಿದೇಶೀ ಪದ್ಧತಿಯಾದ್ದರಿಂದ ಅನಗತ್ಯವೆಂದೂ ಈಗಿನ ಪ್ರಾಂತ್ಯಗಳವರು ತಾವಾಗಿ ಸಂಹಬ್ದುಗಳನ್ನು ನಿರ್ಣಯಿಸಿಕೊಂಡು, ಪ್ರಧಾನ ಮಂತ್ರಿಗಳ ಮುಂದಿಡುವುದೇ ನ್ಯಾಯವೆಂದೂ ಗಾಂಧಿಜೀಯ ಅಭಿಮತ.

ಕರ್ನಾಟಕದ ಮನವಿ

ರಾಷ್ಟ್ರಪತಿ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಮುಂದೆ ಕರ್ನಾಟಕದ ಶಿಷ್ಟಮಂಡಲಿಯಿಟ್ಟಿರುವ ಮನವಿಯ ಸಾರಾಂಶ ಹೀಗಿದೆ: 'ಕರ್ನಾಟಕದ ಪಳಿತ ಜನಾಂಗದ ನಿತ್ಯ ಜೀವನಾಸ್ತಿತ್ವದ ದೃಷ್ಟಿಯಿಂದಲೇ ಪ್ರತ್ಯೇಕ ಪ್ರಾಂತ್ಯದ ಪ್ರಶ್ನೆಯು ಅತಿ ಮುಖ್ಯವಾದುದು. ಈ ಭಾಗಗಳ ಜನ ಸಮೂಹದ ದೈನಿಕ ಜೀವನ ವಿಧಾನದಲ್ಲಿ ಬದಲಾವಣೆ ಮತ್ತು ಸುಧಾರಣೆ ಮಾಡಲಾಗದಿದ್ದರೆ ಸ್ವತಃ ಆ ಸ್ವಾತಂತ್ರ್ಯಕ್ಕೇನೇ ಅರ್ಥವಿಲ್ಲ. ಈಗಲೇ ಒತ್ತಿನ ಬೊಂಬಾಯಿ ಮತ್ತು ಮದ್ರಾಸುಗಳೊಂದಿಗೆ ಸೇರಿ ಹೋಗಿರುವ ಕನ್ನಡಿಗರ ಪ್ರತಿನಿಧಿಗಳ ಮಾತುಗಳಿಗೆ ಅಲ್ಲಿ ಅತ್ಯಲ್ಪ ಬೆಲೆ ಅಥವಾ ಏನೂ ಬೆಲೆ ದೊರೆಯದಂತಾಗಿದೆ. ಇನ್ನಂತೂ ಬೇಗನೇ ಆಂಧ್ರವು ಪ್ರತ್ಯೇಕಿಸಲ್ಪಟ್ಟು ಆಗಲೇ ಕರ್ನಾಟಕ ಪ್ರಾಂತ್ಯವೂ ರಚನೆಯಾಗದಿದ್ದರೆ ಈ ಭಾಗಗಳು ಅದರಲ್ಲೂ ಮುಖ್ಯವಾಗಿ, ವಿಸ್ತಾರವಾದ ಹಾಗೂ ಹರಿಹಂಚಾದ ಕರ್ನಾಟಕದ ಗಡಿ ಕ್ಷೇತ್ರಗಳ ದೈನಿಕ ಆಡಳಿತೆಯೇ ಅಸಂಧ್ಯವಾದೀತು. ಆಮೇಲೆ, ಕನ್ನಡಿಗರಿಗೆ ಏನೊಂದೂ ಸ್ಥಾನಮಾನವಿಲ್ಲದ ತಮಿಳುನಾಡಿನೊಂದಿಗೆ ಸೇರಿ ಉಳಿಯುವ ದಕ್ಷಿಣ ಕನ್ನಡ, ನೀಲಗಿರಿ, ಮತ್ತು ಕೊಯಿಮುತ್ತೂರಿನ ಕನ್ನಡ ಭಾಗಗಳಿಗೆ ಇರಸ್ತಿಕೆಯೇ ಇರದು. ನಮ್ಮ ವಿದ್ಯೆ, ಆಹಾರ, ನೀರಾವರಿ, ಔದ್ಯೋಗಿಕ ಹಾಗೂ ಸಂಸ್ಕೃತಿಯಂತಹ ಮುಖ್ಯ ಪ್ರಶ್ನೆಗಳ ಸಂಬಂಧವಾಗಿ ಯೋಜನೆಗಳನ್ನು ತಯಾರಿಸುವದಾಗಲೀ ನಿರ್ವಹಿಸಿಕೊಳ್ಳುವುದಾಗಲೀ ಮತ್ತೆ ಅಸಾಧ್ಯ. ನಮ್ಮ ಸ್ವಂತ ಪ್ರಾಂತ್ಯವು ನಿರ್ಮಾಣಗೊಂಡಲ್ಲಿ ಆಗ ಮಾತ್ರ ಇದು ಸಾಧ್ಯವಾಗಬಲ್ಲುದು.

ನೆಹರುಗಳ ಹೇಳಿಕೆ

ಭಾಷಾವಾರು ಪ್ರಾಂತ್ಯರಚನೆಯ ಸಾಮಾನ್ಯ ತತ್ವವನ್ನೊಪ್ಪಿಕೊಂಡ ಪ್ರಧಾನ ಮಂತ್ರಿಗಳ ಹೇಳಿಕೆಗೆ ನಾವು ಕೃತಜ್ಞರಿದ್ದೇವೆ, ಎಂಬುದು ನಿಸ್ಸಂದೇಹ. ಆದರೆ ಅದೇ ಕಾಲದಲ್ಲಿ ಆಂಧ್ರ ಮತ್ತು ಕರ್ನಾಟಕಗಳ ನಡುವೆ ಭೇದ ಮಾಡಿದುದು ಮಾತ್ರ ಶೋಚನೀಯವಿದೆ. ಏನಾದರೊಂದು ರಿಯಾಯತಿ ತೋರಿಸಲೇ ಬೇಕಾಗಿದ್ದರೆ, ದೀರ್ಘಾವಧಿಯ ಬಿಚ್ಛಿನ್ನತೆ ಪ್ರತ್ಯೇಕತೆಗಳಿಂದಾಗಿ ವಿಶೇಷ ಕಷ್ಟನಷ್ಟಗಳಿಗೀಡಾಗಿದ್ದ ಮತ್ತು ಈಡಾಗಿರುವ ಭಾಗಕ್ಕೇನೇ ಅಂತಹ ರಿಯಾಯತಿ ಸಿಗತಕ್ಕದ್ದು. ಇದಕ್ಕೆ ಬದಲಾಗಿ ನಮ್ಮ ಜನತೆಗೆ ಈಗ ಇರುವದಕ್ಕಿಂತಲೂ ಕಳಕೆಯ ಗತಿಯನ್ನು ನಿರ್ಮಿಸುವ ವಿಧಾನವನ್ನು ಕಲ್ಪಿಸಿಕೊಳ್ಳಲಾಗಿದೆ.

ವ್ಯತಿರಿಕ್ತ ಭಾವನೆಯಲ್ಲ.

ಮಹಾತ್ಮಾ ಗಾಂಧಿಯವರ ಚತುರ್ಯ ಪೂರ್ಣ ಮಾರ್ಗದರ್ಶಿತ್ವ ಮತ್ತು ನಾಯಕತ್ವದಲ್ಲಿ, ತನ್ನ ಸ್ವಂತ ಸಂಘಟನೆ ಹಾಗೂ ಸ್ವಾತಂತ್ರ್ಯ ಹೋರಾಟಕ್ಕಾಗಿ 1920ರಲ್ಲೇ ಭಾಷಾವಾರು ಪ್ರಾಂತ್ಯರಚನೆ ಮಾಡಿಕೊಳ್ಳುವ ದೂರದರ್ಶಿತ್ವವು ಕಾಂಗ್ರೆಸಿಗಿದ್ದಿತು. ಈ ದೂರದೃಷ್ಟಿಗೆ ತಕ್ಕ ಉಪಯೋಗವೂ ದೊರೆತಿದ್ದಿತು. ಆದರೆ ಆಡಳಿತೆಯ ಮಟ್ಟಿಗೂ ಭಾಷಾವಾರು ಪ್ರಾಂತ್ಯರಚನೆಯಾಗುವ ಶಾಸನ ಸ್ವರೂಪವು ಇನ್ನೂ ಬಂದಿಲ್ಲ ಈ ಸಂಬಂಧವಾಗಿ ನಾವು ಮಾಡುತ್ತಿರುವ ಪ್ರಯತ್ನಗಳನ್ನು ವ್ಯತಿರಿಕ್ತಾಚರಣೆಗಳೆಂದು ಕೆಲವರು ಭಾವಿಸಿಕೊಂಡಿರುವುದು ತಿಳಿದುಬಂದಿದೆ; ಅದಕ್ಕಾಗಿ ಸಂತಾಪ ಪಡುತ್ತೇವೆ. ಹಿಂದೀ ಕೇಂದ್ರದ ಜೀವಂತ ಅಂಗಗಳಾಗುವಂತೆ ಕೂಡಲೇ ಭಾಷಾವಾರಾಗಿ ಪ್ರಾಂತ್ಯರಚನೆಗಳನ್ನು ಮಾಡಿಕೊಳ್ಳುವುದು ಅತ್ಯುಚ್ಚ ವಿಧಾಯಕ ನಾಗರಿಕ ವರ್ತನೆಯೆಂಬ ಬಹುಸಂಖ್ಯಾಕ ಪ್ರಮುಖ ಕಾಂಗ್ರೆಸಿಗರ ಅಭಿಮತವೇ ನಮ್ಮ ಅಭಿಮತವೆಂಬುದನ್ನು ಇಲ್ಲಿ ಸ್ಪಷ್ಟಪಡಿಸಲಿಚ್ಛಿಸುತ್ತೇವೆ.

ಆಪತ್ತುಗಳನ್ನು ಬಲ್ಲೆವು

ಇಡೀ ರಾಷ್ಟ್ರವು ಇಂದು ಇದಿರಿಸಿರುವ ಮಹತ್ತಾದ ಕಂಟಕಗಳೇನೂ ನಮ್ಮ ಮನಸ್ಸಿನಲ್ಲಿಲ್ಲವೆಂದಲ್ಲ. ಇವು ಮತ್ತಿಂತಹ ಇತರ ತೊಂದರೆಗಳು ಒಂದಲ್ಲೊಂದು ರೂಪದಿಂದ, ಇನ್ನು ಕೆಲ ಕಾಲದ ವರೆಗೆ ಮುಂದೆ ಬರುವಂತಹವೇ ಇವೆ. ಈ ದೊಡ್ಡ ಸಮಸ್ಯೆಗಳ ತೀರ್ಮಾನಪಥಕ್ಕೆ ಆಂಧ್ರ ರಚನೆಗಿಂತ ಹೆಚ್ಚಾಗಿ, ಕರ್ನಾಟಕಪ್ರಾಂತ್ಯ ರಚನೆಯ ಕಾರ್ಯವೆಂದಿಗೂ ಅಡ್ಡವಾಗಲಾರದೆಂದು ನಾವು ನಿಮಗೆ ಆಶ್ವಾಸನೆ ಕೊಡುತ್ತೇವೆ ಸತ್ಯಸ್ಥಿತಿಯೆಂದರೆ ಇವೆರಡು ಸ್ಥಳೀಯ ಪ್ರಶ್ನೆಗಳು ಶೀಘ್ರವಾಗಿ ತೀರ್ಮಾನಿಸಿದಲ್ಲಿ, ಇಲ್ಲಿಯ ಜನತೆಯು ಅದರಿಂದ ಉತ್ಸಾಹಗೊಳ್ಳುವಂತಾಗುವದೆಂದೂ, ಈಗಿನಂತೆ ಅತೃಪ್ತಿಯುಳ್ಳ ಜನತೆ, ಹಾಗೂ ಒಕ್ಕಟ್ಟಿಲ್ಲದ ದುರ್ಬಲ ಸರಕಾರಗಳ ಬದಲಿಗೆ ಸಮರ್ಥ ಹಾಗೂ ಸ್ವಜನತಾಪ್ರಾಂತಿಕ ಸರಕಾರಗಳು ರಚನೆಗೊಳ್ಳುವಂತಾಗಿ, ಆ ಮೂಲಕ ಕೇಂದ್ರ ಸರಕಾರಕ್ಕೆ ಮತ್ತು ಸಾರ್ವತ್ರಿಕವಾಗಿ ಕಾಂಗ್ರೆಸಿಗೆ ಅದು ಶಕ್ತಿ ಭಂಡಾರ ಮತ್ತು ಬೆಂಬಲವಾಗುವದೆಂದೂ ನಾವು ನಂಬುತ್ತೇವೆ".

ಕನ್ನಡಿಗರ ಕರ್ತವ್ಯ

ಮೇಲಿನ ಮನವಿಯನ್ನು ಕಾಂಗ್ರೆಸ್ ಹಾಯಕಮಾಂಡಿನ ಮುಂದಿಟ್ಟ ಕರ್ನಾಟಕದ ಶಿಷ್ಟಮಂಡಲಿಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ನಾಯಕರಾಗಿದ್ದು ಮದ್ರಾಸಿನ ಮಾಜೀ ರೆವಿನ್ಯೂ ಮಂತ್ರಿ ಶ್ರೀ ಕೆ. ಆರ್. ಕಾರಂತ, ಎಂ. ಎಲ್. ಎ. ಬೊಂಬಾಯಿಯ ಬೇಸಾಯ ಖಾತೆಯ, ಮಂತ್ರಿ ಶ್ರೀ ಎಂ. ಪಿ. ಪಾಟೀಲ್, ಘಟನಾಸಮಿತಿ ಸದಸ್ಯ ಶ್ರೀ ಆರ್. ಆರ್. ದಿವಾಕರರಿದ್ದರು.

ಕರ್ನಾಟಕ ಭಾಗಗಳು ಒಂದು ಯೋಗ್ಯ ಪ್ರಾಂತ್ಯವಾಗುವ ಸರ್ವಾನುಕೂಲತೆಗಳನ್ನು, ಸಕಲ ಸಲ್ಲಕ್ಷಣಗಳನ್ನು—ಹಣಕಾಸಿನ ಭದ್ರತೆ, ಗಡಿ, ಸಾಮ್ಯತೆ, ಸಂಸ್ಕೃತಿ, ಭಾಷೆ, ಆಡಳಿತೆಯ ಯೋಗ್ಯತೆ, ಇತ್ಯಾದಿಗಳನ್ನು-ಒಳಗೊಂಡಿದ್ದರೂ ಅವುಗಳ ಏಕೀಕರಣವಾಗುವುದು ಎಷ್ಟು ಪ್ರಯಾಸಕ್ಕಿಟ್ಟಿದೆ ಎಂಬುದನ್ನೂ, ಇಂತಹದರ ಆಕ್ಷೇಪಕ್ಕೂ ನೆವನಗಳು ದೊರೆಯುತ್ತಿವೆ, ಎಂಬುದನ್ನೂ ಎಲ್ಲರೂ ಲಕ್ಷ್ಯದಲ್ಲಿಟ್ಟು ಕೊಂಕಣಿ ಪ್ರಾಂತ್ಯ ತುಳುನಾಡು ಇತ್ಯಾದಿ ಒಳ ರಾಗಗಳನ್ನು ನಿಲ್ಲಿಸುವುದು ಬಹಿಷ್ಕಾಭಿಮಾನದ ಮಾತು ಹೇಗಿದ್ದರೂ, ಕಾಥಿಯಾವಾರ, ಥಕ್ಕಾ ಸಂಸ್ಥಾನಗಳ ಸಮಿಲನ ಧೋರಣೆಯನ್ನು ಕಂಡ ಮೇಲಾದರೂ ಒಳ ಭಾಗಗಳಿಗೆ ಪ್ರತ್ಯೇಕತೆಯು ಅಸಾಧ್ಯವೆಂಬುದನ್ನು ತಿಳಿದು ಎಲ್ಲರೂ ಕರ್ನಾಟಕದ ಏಕೀಕರಣಕ್ಕೆ ಸರ್ವ ಪ್ರಯತ್ನಮಾಡಬೇಕಾದುದು ಅತ್ಯಗತ್ಯ

ಮೈಸೂರು, ಮದ್ರಾಸು ಇತರ ಸಣ್ಣ ಕನ್ನಡ ಸಂಸ್ಥಾನಗಳಿಗೆ ಭಾವೀ ಕರ್ನಾಟಕದಲ್ಲಿರಬೇಕಾದ ಸ್ಥಾನಗಳನ್ನೂ ಕರ್ನಾಟಕದ ಗಡಿಗಳನ್ನೂ ಗೊತ್ತುಹಚ್ಚಿ ನಿರ್ಧರಿಸಲು, ಪ್ರತಿನಿಧಿ ಸ್ಥಾನ ಮಾನಗಳುಳ್ಳ ಸರ್ವ ಕನ್ನಡಿಗರ ಒಂದು ಸಮ್ಮೇಳನವನ್ನು ಕೂಡಲೇ ನೆರೆಯಿಸುವುದೂ ಅಗತ್ಯ.

ತಾರೀಕು **30—1—1948**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ಜೀವನದಲ್ಲಿ ಬೆಳಕು ಬೇಕೆಂದು ಬಹುಮಂದಿ ಬಯಕೆ ಪಡುತ್ತಿರುವಾಗ

ತಕ್ಕ ಸಮಯಕ್ಕೆ ಯುಕ್ತ ಚಿತ್ರವು ಬಂದಿತು

... ಟಾಕೀಸಿನವರ

ಜೀವನ ಪ್ರಭಾತ್

ತಾ. 31-1-48 ಮತ್ತು 1-2-48ನೇ ಶನಿವಾರ, ಆದಿತ್ಯವಾರ ಬೆಳಗ್ಗೆ

10-30ಕ್ಕೆ ಕೊಲಂಬಿಯಾದವರ

'ಎಡ್ವೆಂಚರ್ಸ್ ಪಿಘ್ ರಪ್ಸಿ'

ಉಡುಪಿ.

ಮುನಿಸಿಪಲ್ ಕೆಲಸಗಾರರ ಸಭೆಯು— ತಾ. ೨೬ರಲ್ಲಿ ಶ್ರೀ ಅನಂತ ಕೃಷ್ಣ ಪಡಿಯಾರರ ಅಧ್ಯಕ್ಷತೆಯಲ್ಲಿ ಜರಗಿ ಮುನಿಸಿಪಲ್ ಕೆಲಸಗಾರರ ಆರ್ಥಿಕ ಜೀವನ ಸುಧಾರಣೆಯ ಸಲುವಾಗಿ ಅವರ ಕನಿಷ್ಠ ಬೇಡಿಕೆಗಳನ್ನು ಮುನಿಸಿಪಾಲಿಟಿಯವರು ಒಪ್ಪಿ ಅವುಗಳನ್ನು ಜಾರಿಯಲ್ಲಿ ತರಬೇಕಾಗಿ ನಿರ್ಣಯವಾಯಿತೆಂದು ಸದ್ರಿ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಮುನಿಸಿಪಲ್ ಕೌನ್ಸಿಲ್ ಮೀಟಿಂಗು— ಇದೇ ತಾ. ೨೨ರಲ್ಲಿ ಚೆಯರ್‌ಮನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾತಂತ್ರ್ಯ ದಿನಾಚರಣೆ ಕಮಿಟಿಯವರು ರೂಪಾಯಿ ೨೨೦೦|- ಬೆಲೆಯ ಸರಕಾರೀ ನೋಟನ್ನು ದಾನವಾಗಿ ಕೊಟ್ಟಿದ್ದುದನ್ನು ಧನ್ಯವಾದ ಪೂರ್ವಕವಾಗಿ ಸ್ವೀಕರಿಸಿ ಅದರ ಬಡ್ಡಿಯಿಂದ ಸ್ಥಳೀಯ ಹೈಸ್ಕೂಲುಗಳಲ್ಲಿ ಕಲಿಯುವ ಒಳ್ಳೆ ನಡತೆಯ ಬಡ ವಿದ್ಯಾರ್ಥಿಗಳಿಗೆ ವೇತನಕೊಡುವ ಏರ್ಪಾಟನ್ನು ಮನ್ನಿಸಲಾಯಿತು. ಮುನಿಸಿಪಲ್ ಲೈಬ್ರೆರಿಗೆ ರೂಪಾಯಿ ೧೬೦.- ಸಹಾಯಧನವಾಗಿ ಸಂಕ್ಷನ್ ಮಾಡಲಾಗಿದೆ ಎಂದು ತಿಳಿಸಿದ ಸರಕಾರಿ ಜಿ. ಒ. ವನ್ನು ರಿಕಾರ್ಡು ಮಾಡಲಾಯಿತು. ಕೌನ್ಸಿಲು ಲೆಖ್ಖದಿಂದ ರೂಪಾಯಿ ೪೦೦|- ವಾಚನಾಲಯಕ್ಕೆ ಪುಸ್ತಕಗಳನ್ನು ಕೊಂಡುಕೊಳ್ಳುವರೆ ಸಂಕ್ಷನ್ ಮಾಡಲಾಯಿತು. ಶ್ರೀಗಳಾದ ಟಿ. ಉಪೇಂದ್ರ ಪೈ ಮತ್ತು ಕೆ. ಕಮಲಾಕ್ಷ ಪೈಗಳವರು ಮಲ್ಪೆ ಬಂದರವನ್ನು ದೊಡ್ಡ ಬಂದರವನ್ನಾಗಿ ಮಾಡುವುದು, ಮನೆಕಟ್ಟೋಣಗಳಿಗೆ ಪ್ರೋತ್ಸಾಹವೀಯುವುದು, ಮಂಗಳೂರು ಉಡುಪಿಗೆ ರೈಲ್ವೆ ಲೈನು ಹಾಕುವುದು ಇವುಗಳ ಆವಶ್ಯಕತೆಯ ಕುರಿತು ಪ್ರತ್ಯಪ್ರತ್ಯೇಕ ತಂದ ನಿರ್ಣಯಗಳು ಸುದೀರ್ಘನಿದ್ದು ಅವುಗಳ ಸಮರ್ಥನೆಯ ಒಕ್ಕಣೆಗಳಿರುವುದರಿಂದ ಅವು ಕಾನೂನು ನಿಯಮಗಳಿಗೆ ಸರಿಯೇ ಎಂದು ಶ್ರೀ ಎ. ಮಂಜುನಾಥ ರಾಯರು 'ಪಾಯಿಂಟ್ ಒಫ್ ಆರ್ಡರು' ತಂದು ಚೆಯರ್‌ಮನರನ್ನು ರೂಲಿಂಗ್ ಕೊಡುವ ಬಗ್ಗೆ ಕೇಳಿಕೊಂಡರು. ಇಬ್ಬರು ಗೊತ್ತುವಳಿದಾರರೂ ಚೆಯರ್‌ಮನರ ಸೂಚನೆಯನ್ನು ಮನ್ನಿಸಿದುದರಿಂದ ನಿರ್ಣಯಗಳನ್ನು ಮುಂದೊತ್ತಲಾಗಲಿಲ್ಲ.

ಪೈಗಂಬರ ದಿನಾಚರಣೆಯು— ಅಂಜುಮನ್ ಕ್ಲಬ್ಬಿನ ವಠಾರದಲ್ಲಿ ತಾ. ೨೪ರಲ್ಲು ಸಂಜೆ ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀಗಳಾದ ಎಮ್. ವಿ. ಹೆಗ್ಡೆ, ಡಾ| ಕೆ. ಎಲ್. ಐತಾಳ್, ಹಾಜಿ ಅಬ್ದುಲ್ ರಹಿಮಾನ್, ಹಾಜಿ ಕೆ. ಎಮ್. ಇಸ್ಮಾಯಿಲ್ ಮೊದಲಾದವರು ಪೈಗಂಬರರ ಆದರ್ಶ ತತ್ವಗಳನ್ನು ಕುರಿತು ಮಾತನಾಡಿದರು. ಅಧ್ಯಕ್ಷರು, ಕುರಾನು ಬೋಧೆಯ ಬಂಧುಭಾವನನ್ನು ಮುಂದಟ್ಟುಗುವಂತೆ ವಿವರಿಸಿ, ಮದ್ರಾಸ್ ಪ್ರಾಂತ್ಯದ ಜಾತೀಯ ಐಕ್ಯತೆಗಾಗಿ ಸಂತೋಷ ಸೂಚಿಸಿದರು. ಪಿ. ಇಮಾಮ್ ಸಾಹೇಬರು ಧನ್ಯವಾದಗಳನ್ನರ್ಪಿಸಿದರು.

ಹುತಾತ್ಮರ ದಿನಾಚರಣೆಯನ್ನು— ಸರ್ಕಲ್ ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ ತಾ. ೨೬ರಲ್ಲು ಸಂಜೆ ತೇರುಬೀದಿಯಲ್ಲಿ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಜನ ಸಭೆಯಲ್ಲಿ ಶ್ರೀ ಎಮ್. ವಿ. ಹೆಗ್ಡೆಯವರ ಭಾಷಣ, ಹುತಾತ್ಮರ ತ್ಯಾಗದ ಬಗ್ಗೆ ಅಭಿನಂದನಾ ನಿರ್ಣಯ ಮೊದಲಾದ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಸರ್ಕಲ್ ಕಾಂಗ್ರೆಸ್ ಕಮಿಟಿಯ ನಾಯಕಮಂಡಳಿಯ ಸಭೆಯು ತಾ. ೨೬ರಲ್ಲಿ ಶ್ರೀ ಬಿ. ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿತು. ದೊಡ್ಡ ಬಂದರ ನಿರ್ಮಾಣದ ಕುರಿತು ತಜ್ಞರ ಕಮಿಟಿಯು ಮಲ್ಪೆಗೆ ಬಂದು ಅಲ್ಲಿಯ ಸೌಕರ್ಯಗಳನ್ನು ಪರಾಂಬರಿಸುವಂತೆ ಅವರನ್ನು ಕೇಳಿಕೊಳ್ಳುವ, ಚಾ ಕಾಫಿ ಹೊಟೆಲುಗಳಲ್ಲಿ ಹರಿಜನರಿಗೆ ಹೊಟೆಲ್ ಮಾಲಕರು ಅತ್ಯ ಸಂತೋಷದಿಂದ ಪ್ರವೇಶ ಕೊಡಬೇಕೆಂದು ವಿನಂತಿಸುವ, ಮಹಾತ್ಮಾ ಗಾಂಧಿಯವರ ಉಪವಾಸ ವ್ರತವು ಯಶಸ್ವಿಯಾಗಿ ಕೊನೆಗೊಂಡ ಬಗ್ಗೆ ಅಭಿನಂದಿಸುವ, ಹಿಂದೂ ಮುಸ್ಲಿಂ ಐಕ್ಯತೆಯು ಸ್ಥಿರವಾಗಿ ನಿಲ್ಲುವಂತೆ ಸತತ ಪ್ರಯತ್ನಿಸಬೇಕೆನ್ನುವ ನಿರ್ಣಯಗಳಾದುವು.

ಕೊಡವೂರು— ಇದೇ ೩೦ರಿಂದ ಫೆಬ್ರವರಿ ೧ರ ವರೆಗೆ ಕೊಡವೂರು ಶಂಕರ ನಾರಾಯಣ ಭಜನಾಮಂದಿರದಲ್ಲಿ ತ್ಯಾಗರಾಜ ಸ್ವಾಮಿಗಳ ಪುಣ್ಯ ದಿನೋತ್ಸವದ ಸಂಬಂಧ ಸಂಗೀತ, ಹರಿಕಥಾದಿಗಳು ಜರಗುವವು.

ಸ್ವೀಕಾರ-ವಿಮರ್ಶೆ

೧ **ಪ್ರಕಾಶ**—[ಪರ್ಯಾಯ ವಿಶೇಷಾಂಕ ೧೯೪೮] ಕ್ರೌನ್ ೧/೪ ಆಕಾರದ ೯೨ ಪುಟಗಳು. ಬೆಲೆ: ೧೨ ಆಣೆ. ಸಂಪಾದಕ ಪ್ರಕಾಶಕರು: ಶ್ರೀ ಉ. ವ್ಯಾಸರಾವ್. ಉಡುಪಿ

ಉಡುಪಿಯ ನವೋದಿತ ಪತ್ರಿಕೆಗಳಲ್ಲೊಂದಾದ 'ಪ್ರಕಾಶ'ದ ೪ ಮತ್ತು ೫ನೆಯ ಸಂಯುಕ್ತ ಸಂಚಿಕೆಯು ಪರ್ಯಾಯೋತ್ಸವದ ಸಮಯದಲ್ಲಿ, ವಿಶೇಷಾಂಕವಾಗಿ ಹೊರಬಿದ್ದಿರುವುದು ಸಂತೋಷ. ಇದರಲ್ಲಿ ಪ್ರೊ. ಜಹಗೀರದಾರ್, ಗೋವಿಂದ ಪೈ, ಎಂ. ವಿ. ಸೀತಾರಾಮಯ್ಯ, ಕೆ. ಎಸ್. ಹವಣಾರ, ಕೆ. ಗೋಪಾಲ ಕೃಷ್ಣರಾಯ, ಕಿಞ್ಞಣ್ಣ ರೈ, ವೆಂಕಟರಾಜರೇ ಮೊದಲಾದ ಹೆಸರಾಂತ ಬರೆಹಗಾರರ ಲೇಖನಿಯಿಂದ ಬಂದ ಹಾಗೂ ಶಾಶ್ವತ ಬೆಲೆಯುಳ್ಳ ಲೇಖನ, ಕತೆ, ಕವನ, ಏಕಾಂಕ ನಾಟಕಗಳೇ ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಿವೆ. ಎಂತಲೆ ಸಂಚಿಕೆಯು ವಿಸ್ತತಪೂರ್ಣವೂ, ವೈವಿಧ್ಯ ಭರಿತವೂ, ಮನೋರಂಜಕವೂ ಆಗಿರುವುದರಲ್ಲಿ ಆಶ್ಚರ್ಯವಿಲ್ಲ. ಕೆಲವು ಲೇಖಕರ ಎರಡೆರಡು ಬರೆಹಗಳು ಬಂದಿರುವುದು ಸಂಪಾದಕರು ಉತ್ತಮ ಲೇಖನಗಳ ಆಯ್ಕೆಯ ವಿಚಾರದಲ್ಲಿ ವಹಿಸಿರುವ ಶ್ರದ್ಧೆಯ ಸೂಚನೆಯೆಂದು ನಂಬುತ್ತೇವೆ. ಮುಖಪತ್ರವು ವರ್ಣರಂಜಿತವೂ ಆಕರ್ಷಣೀಯವೂ ಆಗಿದೆ. 'ಪ್ರಕಾಶ'ವು ತನ್ನ ಪ್ರಥಮ ವರ್ಷದ ಪ್ರಥಮಾರ್ಧದಲ್ಲಿಯೇ ಇಷ್ಟು ಉತ್ತಮವಾದ ಸರ್ವಾಂಗ ಸುಂದರ ಸಂಚಿಕೆಯನ್ನು ಹೊರಡಿಸಿದ ಬಗ್ಗೆ ಸಂಪಾದಕರನ್ನು ಅಭಿನಂದಿಸುತ್ತೇವೆ. ಅವರ ಈ ಪ್ರಯತ್ನವು ನಾಡಿನ ಹಲವು ಹಿರಿಯ ಪತ್ರಿಕೆಗಳನ್ನು ನಾಚಿಸುವಂತಿದೆಯೆಂದರೂ ತಪ್ಪಲ್ಲ.

೨. **"ಲೀಲೆ" "ಬಾಲ ಗಂಗಾಧರಸ್ತವ" "ಸ್ವರಾಜ್ಯ ಗೀತಾಮೃತ" "ಸ್ವಾಗತ ಗೀತೆ"** ಇತ್ಯಾದಿ ಬರೆದವರು: ಶ್ರೀ. ಮುಂಡೂರು ಲಕ್ಷ್ಮೀನಾರಾಯಣ ಮಣಂಚತ್ತಾಯರು. ಬೆಲೆ ಅನುಕ್ರಮವಾಗಿ ೨, ೪ ಮತ್ತು ೧೨ ಆಣೆಗಳು. ದೊರೆಯುವ ಸ್ಥಳ: ಭಕ್ತ ಬ್ರದರ್ಸ್, ಕಾಸರಗೋಡು. ದ. ಕ.

ಸಾಹಿತ್ಯ, ಮತ್ತು ರಾಜಕೀಯದಲ್ಲಿ ಉತ್ಪಾದಿ ವಿಶೇಷ ಸಂದರ್ಭಗಳು ಪ್ರಾಪ್ತವಾದಾಗ, ಸಂದರ್ಭೋಚಿತ ಗೀತಾರೂಪದ ಕವನಗಳನ್ನು ಬರೆಯುವುದರಲ್ಲಿ ಶ್ರೀ. ಮಣಂಚತ್ತಾಯರು ಸಿದ್ಧಹಸ್ತರು. ಅವರ ಕವಿತೆಗಳು ಸರಲವಾಗಿ, ಅರ್ಥ ಪೂರ್ಣವಾಗಿ, ಓದಲು ಕೇಳಲು ಮಾತ್ರವಲ್ಲದೆ ಹಾಡಲಿಕ್ಕೂ ಯೋಗ್ಯವಾಗಿರುತ್ತವೆ. ಕನ್ನಡದಲ್ಲಿ ರಾಷ್ಟ್ರೀಯ ಸಾಹಿತ್ಯ ನಿರ್ಮಾಪನೆಗೆ ತೊಡಗಿದ ಮೊದಲಿಗರು ಶ್ರೀ ಮಣಂಚತ್ತಾಯರೊಬ್ಬರು. ಶ್ರೀಯುರು ತಮ್ಮ ಕವಿತಾ ಲೇಖನಿಗೆ ತುಕ್ಕು ಹಿಡಿಯದಂತೆ, ಆಗಾಗ ಆದರಿಂದ ಉತ್ತಮ ಕೃತಿಗಳನ್ನು ರಚಿಸಿ, ಪ್ರಕಟಿಸಿ, ಕನ್ನಡಿಗರಿಗೆ ನೀಡುತ್ತಿರುವ ಸೇವೆ ಸ್ತುತ್ಯವೇ ಆಗಿದೆ.

—ಕೆ. ವಿ ಎಸ

ಬ್ರಹ್ಮಾವರ— ತಾ. 26-1-48ರಲ್ಲಿ ಬಾರ್ಕೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಹುತಾತ್ಮರ ದಿನಾಚರಣೆಯು ಶ್ರೀ. ಬಿ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯಂ. ಶ್ರೀನಿವಾಸಾಚಾರ್, ಬಸವ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು.

ಶಿವಪುರ— ತಾ. 23-1-48ರಲ್ಲಿ ಶಿವಪುರ ಮತ್ತು ಕೆಂಬೆಟ್ಟು ಗ್ರಾಮಸ್ಥರ ಸಭೆಯೊಂದು ಜರಗಿ ಕೃಷಿಕ ಸಂಘವೊಂದನ್ನು ಸ್ಥಾಪಿಸಲಾಯಿತು. ಈ ಸಂಘಕ್ಕೆ ಶ್ರೀ. ಎಸ್. ಎಂ. ಬೆಳ್ಳತ್ತಾಯರು, ಶ್ರೀ. ಕೆ. ಯಂ. ಸೂಡರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

The Udipi Bank Limited, Udipi.

ದಿ. ಉಡುಪಿ ಬ್ಯಾಂಕ್ ಲಿಮಿಟೆಡ್, ಉಡುಪಿ.

ನೋಟೀಸು.

ಎನ್. ಸೀತಾರಾಮ ಶೇಟ್ S/o. ವೆಂಕಟ್ರಮಣ ಶೇಟ್, ಜ್ಯುವೆಲರ್, ಸಿರಿಬೀಡು, ಉಡುಪಿ. ಇವರು ತಾ. 27ನೆ ಆಗೋಸ್ತು 1947ರಲ್ಲಿ ಚಿನ್ನಾಭರಣ ಈಡಿನ ಮೇಲೆ ಈ ಬ್ಯಾಂಕಿನಿಂದ ಪಡೆದ ಸಾಲ ನಂಬ್ರ J. L. 129/47ರ ಅಸಲು ರೂ. 80/- ವ ಅದರ ಬಡ್ಡಿಯನ್ನು ನೋಟೀಸು ಕೊಟ್ಟರೂ ಈ ವರೆಗೆ ಪಾವತಿ ಮಾಡಲಿಲ್ಲವಾದ್ದರಿಂದ ಸದರಿಯವರು ಈಡಿಟ್ಟಿರುವ ಚಿನ್ನಾಭರಣವನ್ನು ತಾ. 9 2-1948ನೇ ಸೋಮವಾರ ಮಧ್ಯಾಹ್ನ 12 ಘಂಟೆಗೆ ಅಥವಾ ಬ್ಯಾಂಕಿಗೆ ಯುಕ್ತತೋರುವ ಇನ್ನಿತರ ದಿವಸದಲ್ಲಿ ಪುನಃ ನೋಟೀಸು ಕೊಡದೇನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಸಾಲಪಡಕೊಂಡ ಸದರಿ ಎನ್. ಸೀತಾರಾಮ ಶೇಟ್‌ರಿಗೆ ಈ ಸಮ್ಬಂಧ ಪ್ರತ್ಯೇಕ ರಿಜಿಸ್ತ್ರಿ ನೋಟೀಸು ಕೊಡಲಾಗಿದೆ.

Office of the Bank
Udipi 28--1—1948

U. V Prabhu
Manager.

ಪ್ರಕಟವಾಗಿದೆ—ಶ್ರೀ ಎಂ ವಿ ಹೆಗ್ಡೆಯರ

ಸ್ವರಾಜ್ಯ ವಿಜಯ

(ಯಕ್ಷಗಾನ ಪದ್ಯ—ಅರ್ಥಗಳಲ್ಲಿ ಆಗೋಸ್ತು 15ರ ಸ್ವರಾಜ್ಯ ಚರಿತ್ರೆ)

ಯಕ್ಷಗಾನದಲ್ಲೊಂದು ಕ್ರಾಂತಿ! ನಿಜವಾದ ಜನತಾ ಸಾಹಿತ್ಯದ ಉದ್ಭವ!

ನೆಹರು, ಜಿನ್ನಾ, ಪಟೇಲ್, ಜೈಪ್ರಕಾಶ್, ಆಟ್ಲಿ, ಮೌಂಟ್‌ಬೇಟನ್, ಗಾಂಧಿ, ಸಿನ್ಹಾ, ಖಾಸ್‌ನೂನ್, ಕ್ರಿಪ್ಸ್ ಮುಂತಾದವರೇ ಇದರಲ್ಲಿರುವ ಪಾತ್ರಗಳು. ಸಾಮಾನ್ಯನಿಂದ ಹಿಡಿದು ಸಾಹಿತಿಯ ವರೆಗಿನ ಎಲ್ಲರಿಗೂ ಹೇಳಿಸಿದ ನವೀನ ಕೃತಿ.

ಬೆಲೆ ಕೇವಲ: 0-8-0

ಪ್ರತಿಗಳಿಗೆ ಬರೆಯಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

— ಅಥವಾ —

ನವಯುಗ ಪ್ರೆಸ್, ಉಡುಪಿ, ದ. ಕ.

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 656/47

ವಾದಿ. ಹಂದಾಡಿ ಸೀತಾರಾಮ ಅಡಿಗ

ಪ್ರ. ರು. ಬಾಬ ಮೋಸ್ತಿ ಸಹಾ.

ಉಡ್ಡಿಹಾಲು ಬಾಳ್ಕುದ್ರು ಗ್ರಾಮದ ಹಂಗಾರಕಟ್ಟೆಯಲ್ಲಿರುವ ಸಾಲಿಕೆರಿ ಕೂಸ ಕೊರಗ ಮೋಸ್ತಿ ಮಗ 1ನೇ ಪ್ರತಿವಾದಿ ಬಾಬ ಮೋಸ್ತಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದರೆ,

ವಾದಿಗೆ ಮೂಲಗೇಣಿ ಬಾಬ್ತು ಬರ ರೂ. 141-10-0 ವಸ್ಸೂಲಿಯನ್ನು ಬರಮಾಡಿಕೊಳ್ಳುವರೆ ದಾಖಲ್ಮಾಡಿದ ಮೇಲಿನ ದಾವೆ ತಾ. 12-2-1948ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲ್ಕ ತಿಳಿಸಲಾಗಿದೆ.

B. S. Shetty.
B. A. B. L.
Vakil for Plaintiff.
Coondapoor, 23-1-48.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 356-19

1 ಪಧುವಿನ ಭೀಮ ಭಟ್ಟ, ಶಂಕ್ರ ಭಟ್ಟ ಮಗ, 2 ಶಂಕ್ರ ಭಟ್ಟ 1ನೇ ವಾದಿಯ ಮಗ, ಇಬ್ಬರು ಸರ ಪಟ್ಲ ಕಸಬೆಯಲ್ಲಿ—
ವಾದಿರು,

1 ನಾರಾಯಣ ಭಟ್ಟ, ಕುಂಬ್ಳೆ ಅಪ್ಪಯ ಯಾನೆ ಕೃಷ್ಣ ಭಟ್ರ ಮಗ, ಚಿಪ್ಲಿಪದ್ನೂರು ಗ್ರಾಮ, 2 ಸಾವಿತ್ರಮ್ಮ, ಕಾಯಪಾರ್ಡಿ ವೆಂಕಟ್ರಮಣ ಭಟ್ರ ಹೆಂಡ್ತಿ, ಇಳಂತ್ತಿ ಗ್ರಾಮ.
ಪ್ರತಿವಾದಿರು.

1ನೇ ಪ್ರತಿವಾದಿಯು ತಾ. 2-5-1942ರಲ್ಲು ರಿಜಿಸ್ಟ್ರ ಮಾಡಿಕೊಂಡ ವ್ಯಾದೆ ಗೇಣಿಚೀಟು ಪ್ರಕಾರ ಗೇಣಿ ಬಾಕಿ ಸಮೇತ ಆಸ್ತಿ ಸ್ವಾಧೀನತೆಗೆ ಪ್ರತಿವಾದಿರ ಮೇಲೆ ವಾದಿರು ರೂ. 1055-6-0ಕ್ಕೆ ದಾವಾ ಮಾಡಿ ಅದರ ನೋಟೀಸಿನ ವ್ಯಾದೆ ತಾ. 3-2-1948ಕ್ಕೆ ಇಟ್ಟಿರುತ್ತದೆ. ಆ ವ್ಯಾದೆ ದಿನ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿವಾಯೆಂತ ಮಾಡಿ ಈ ದಾವೆಯನ್ನು ಮುಂದಿನ ಪಕ್ಷಯಿಂದ ತೀರ್ಮಾನಿಸಲಾಗುತ್ತದೆ ಎಂತ ಈ ಕೋರ್ಟು R. I. A. 31-1948ನೇ ಅರ್ಜಿ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ. ಮತ್ತು ಅದೇ ದಿನ ದಾವಾ ಜಸ್ತಿಗೆ ರಿಸೀವರ ನೇಮ್ಕೂರು ಬಗ್ಗೆ ... ಮಾಡಿರುವ R. I. A 1304/1947ನೆ ಅರ್ಜಿಯು ತನ್ಕಿಗೆ ಇದೇ ಆಗಿಯದೆ.

B. Ramachandra Rao,
Pleader for pltfs
ಪುತ್ತೂರು, ತಾ 10-1-1948

ಮಂಗಳೂರು.

ಚಿಮಿಣಿ ಎಣ್ಣೆ ಬೆಲೆ–ಇದೇ ತಾ ೧...ರ ಎಲ್ಲಾ ಮಾರ್ಕಿನ ಚಿಮಿಣಿ ಎಣ್ಣೆ ಡಬ್ಬಿ ...ಂದರ 0-1-3 ಮತ್ತು ಬಾಟ್ಲಿ ಒಂದರ 1-0-1ಪ್ರಕಾರ ಬೆಲೆ ಜಾಸ್ತಿ ಮಾಡಲಾಗಿದೆಯೆಂದು ಜಿಲ್ಲಾ ಕಲೆಕ್ಟರರ ಪ್ರಕಟಣೆಯೊಂದು ಹೊರಟಿದೆ.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ–ದ ವಾರ್ಷಿಕೋತ್ಸವವು ಫೆಬ್ರವರಿ ತಾ. ...ಕ್ಕೆ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾದ ಶ್ರೀ ದಾನಿಯಲ್ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಈ ಸಂದರ್ಭದಲ್ಲಿ 'ಸ್ವರಾಜ್ಯ ವಿಜಯ' ಎಂಬ ನವೀನ ಯಕ್ಷಗಾನ ಪ್ರಸಂಗವು ಅಭಿನಯಿಸಲ್ಪಡುವುದು.

ಶ್ರೀಮತಿ ಸುಮತಿ ಬೋಳಾರ—ಶ್ರೀಮತಿ ಸುಮತಿ ಬೋಳಾರ, ಬಿ ಎ, (ಬನಾರಸ್) ಇವರು ಚಿತ್ರಕಲೆಯಲ್ಲಿ ಪ್ರಸಿದ್ಧಿ ಪಡೆದವರಿದ್ದು, ಆ ಕಲೆಗಳಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲೋಸುಗ ಅಮೇರಿಕಕ್ಕೆ ಹೋಗುವವರಿದ್ದಾರೆ. ಅಲ್ಲಿ ಫೊಟೋಗ್ರಾಫಿಯಲ್ಲಿಯೂ ಉತ್ತಮ ಶಿಕ್ಷಣ ಪಡೆಯಬೇಕೆಂದು ಅವರ ಇಚ್ಛೆಯಿರುತ್ತದೆ. ಆ ಬಗ್ಗೆ ನಾಟ್ ...ಮಲ್ ಫಂಡ್ ದೇಶಸೇವಾ ವಿದ್ಯಾರ್ಥಿ ವೇತನ ಪಡೆಯಲು ಪ್ರಯತ್ನಿಸುತ್ತಿರುವರೆಂದು ತಿಳಿದು ಬರುತ್ತದೆ

ಪ್ರಕಟಣೆ

ಕುಂದಾಪುರ ತಾಲ್ಲೂಕು ಕಟ್ಟೆ ಹೆಜ್ಜಾರು ಗ್ರಾಮದಲ್ಲಿ ವಾಲಿಯಿರುವ ನೂಜಾಡಿ ಗ್ರಾಮದ ಹೊಸಮನೆ ವೆಂಕಮ್ಮ ಶೆಟ್ಟರ ಮಗಳು ...ಕ್ಕಮ್ಮ ಶೆಟ್ಟಿಳು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದ್ರೆ, ನಮ್ಮ ಕುಟುಂಬ ...ಕ ಪಟ್ಟಾದಾರಳಾದ ನೂಜಾಡಿ ಗ್ರಾಮದ ...ಸಮನೆ ಲಿಂಗಮ್ಮ ಶೆಟ್ಟರ ಮಗಳು ಸೂ...ಮ್ಮ ಶೆಟ್ಟಿ ರು। ಯಿವರ ಮಗಳು ವೆಂಕಮ್ಮ ...ತ್ತಿರು, ಯಿವರ ಮಗಳು ಕೊರಗಮ್ಮ ...ತ್ತಿ। ಕೂಡಾ 3 ಜನರು ಯಿತ್ತಲಾಗಿ ಕೊ...ಮ್ಮ ಶೆಟ್ಟಗಂಡ ರಾಮಣ್ಣ ಶೆಟ್ಟಿ ಪ್ರೇರೇಪಣೆಯಿಂದ ವ ಉತ್ತೇಜನದಿಂದ ಕುಟುಂಬ ...ಗಾಗಿ ಕುಟುಂಬಕ್ಕೆ ಅಗತ್ಯವಿಲ್ಲದ ಕಲ್ಪನೆ ಸಾಲಗಳನ್ನು ಮಾಡಿದ್ದಾಗಿ ರಿಕಾರ್ಡು ಮಾಡುವ ಯಿರಾಧೆಯಲ್ಲಿರುತ್ತಾರಾಗಿ ...ದು ಬರುತ್ತದೆ ಸದ್ರಿಯವರು ಮಾಡುವ ...ಷ್ಟನ್ನಾದರೂ ಸಾಲ ನಮ್ಮ ಕುಟುಂಬದ ...ಲೆ ಬದ್ಧವಾದ್ದಲ್ಲ ವ ಅವರು ಮಾಡುವ ...ವ ರಿಕಾರ್ಡು ನಮ್ಮ ಕುಟುಂಬದ ... ...ಧಕವಾಗತಕ್ಕದ್ದಲ್ಲ ವ ನಮ್ಮ ... ...ಕ್ಕೆ ಸಾಲದ ಅಗತ್ಯವಿಲ್ಲ ವ ಗರ್ಜು ಸಹಾ...ರುವದಿಲ್ಲ. ಅಭ್ರಂದ ಯಾರಾದರೂ ಅವ...ದ ಏನಾದರೂ ರಿಕಾರ್ಡು ಮಾಡಿಕೊಂಡ ... ಸಿಂಧುವಾದ್ದಲ್ಲ ಅವರು ಏನಾದರೂ ...ಲ್ಪನೆ ಸಾಲಕಾಜ್ಞೆ ರಿಕಾರ್ಡು ಮಾಡಿದರೆ ಅ...ಣ ಅವರ ದೇಹ ಜವಾಬ್ದಾರಿಯಿಂದಲೇ ಪ...ಕೊಳ್ಳಬೇಕಲ್ಲದೆ ಕುಟುಂಬದ ಮೇಲೆ ಬದ್ಧ...ವಲ್ಲ ವ ಸಿಂಧುವಾದ್ದಲ್ಲ ಯೆಂಬ ಸಂಗ್ತಿ...ಈ ಮೂಲ್ಕ ಸರ್ವಜನರಿಗೆ ತಿಳಿಯ...ಸಲಾಗಿರುತ್ತದೆ, ತಾ.21-1-1948ನೆ ಯ್ಸಾವಿ...ಮೊಗೆರೆ ಪುಕ್ಕಮ್ಮ ಶೆಟ್ಟಿ ರುಜು,



Approved firm by the Govt. of Mysore Certified by the Agent of the Govt. of Ceylon & Indian

ಕೊಂಕಣಿ ನಾಟಕ ಸಭಾ—ಈ ನಾಟಕ ಸಭೆಯವರು, ಇತ್ತೀಚೆಗೆ, ಮಿಲಾಗ್ರಿಸ್ ಹೈಸ್ಕೂಲಿನ ಮಂದಿರದಲ್ಲಿ 'ಪ್ರೊಹಿಬಿಶನ್' 'ಮದ್ಯಪಾನ ನಿಷೇಧ' ಎಂಬ ನಾಟಕವನ್ನು ಶ್ರೀ ಕೆ. ಸರ್ವೋತ್ತಮ ರಾವ್, ಸ್ಪೆಶಲ್ ಡೆವಲಪ್‌ಮೆಂಟ್ ಆಫೀಸರ, ಪ್ರೊಹಿಬಿಶನ್ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಆಡಿತೋರಿಸಿದರು: ಮದ್ಯಪಾನದಿಂದ ಜನರಿಗೂ ಅವರ ಕುಟುಂಬಗಳಿಗೂ ಆಗುವ ಕಷ್ಟನಷ್ಟಗಳನ್ನೂ ಸರ್ವನಾಶವನ್ನೂ ಚೆಲೋದಾಗಿ ಈ ನಾಟಕದಲ್ಲಿ ತೋರಿಸಲಾಗಿತ್ತು.

"ಮಿಲಾದುನ್ನಬಿ"—ಮಿಲಾದುನ್ನಬಿಯಾನೆ ಪೈಗಂಬರರ ದಿನಾಚರಣೆಯು ಇಲ್ಲಿಯ ಯಂಗ್‌ಮೆನ್ಸ್ ಮುಸ್ಲಿಂ ಎಸೋಸಿಯೇಶನಿನವರ ನೇತೃತ್ವದಲ್ಲಿ ತಾ. ೨೪ನೇ ಶನಿವಾರ ಯೋಗ್ಯ ಕಾರ್ಯಕ್ರಮಗಳಿಂದ ನೆರವೇರಿತು. ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ಸಿಟಿ ಮುನಿಸಿಪಲ್ ಕೌನ್ಸಿಲರರಾದ ಜನಾಬ್ ಮಿರ್ಜಾನೂರ್ ಹುಸೇನ್ ಸಾಹೇಬರು ಈ ದ್ದಿನದಲ್ಲಿ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದರು ಜನಾಬ್ ಪಿ ಅಬ್ದುಲ್ಲ ಕುಟ್ಟಿ, ಎಮ್ ಎ., ಬಿ. ಎಲ್ ಬಿ. ಟಿ., ಜನಾಬ್ ಹಾಫಿಜ್ ಸಯದ್ ಮಹಮದ್, ಯೂಸೂಫ ಸಾಹೇಬ, ಜನಾಬ್ ಪಿ. ಎಮ್ ಇದಿನಬ್ಬ ಸಾಹೇಬ ಮೊದಲಾದವರ ಭಾಷಣಗಳಿದ್ದವು

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿ— ಇದೇ ತಾ-...ರಲ್ಲಿ ಶ್ರೀ ಎಚ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡಾಯಿತು ಜಿಲ್ಲೆಯಲ್ಲಿ ಕೃಷಿಕರ ಸಂಘಟನೆಯನ್ನು ಸ್ಥಾಪಿಸುವ ಕುರಿತು ದೀರ್ಘ ಚರ್ಚೆ ನಡೆಯಿತು ಆ ಮೇಲೆ ದ ಕ ಕೃಷಿಕ ಸಂಘದ ಘಟನೆ ಮತ್ತು ನಿಯಮಗಳನ್ನು ತಯಾರಿಸುವರೆ ಶ್ರೀಗಳಾದ ಎಚ್ ನಾರಾಯಣ ರಾವ್, ಕೆ ಕೆ. ಶೆಟ್ಟಿ, ಪಿ. ಉಮೇಶರಾವ್, ಮತ್ತು ಎಂ ಡಿ. ಅಧಿಕಾರಿಗಳಿಂದ ಕೂಡಿದ ಒಂದು ಉಪಸಮಿತಿಯನ್ನು ನೇಮಿಸಲಾಯಿತು. ಉಡುಪಿ ತಾಲೂಕಿನ ಸಂಘವು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಮಾಡಿಕೊಂಡಿದ್ದ ಅರ್ಜಿಯ ವಿಷಯದಲ್ಲಿ ಬಹಳ ಚರ್ಚೆ ನಡೆಯಿತು. ನಡೆದು ಅದನ್ನು ಜಿಲ್ಲಾ ಕೃಷಿಕ ಸಂಘವಾಗಿ ಅಂಗೀಕರಿಸಲಾಯಿತು. ಅಲ್ಲದೆ ಅವರು ದ. ಕ. ಕೃಷಿಕ [ರೈತ] ಪರಿಷತ್ತನ್ನು ಓರಿಯಡ್ಕದಲ್ಲಿ ನಡೆಸುವರೆ ಒಪ್ಪಿಕೊಳ್ಳಲಾಯಿತು. ಸದ್ರಿ ಪರಿಷತ್ತಿ... ...ಕೃಷಿಕ ಸಂಘಗಳಿಂದ ಮತ್ತು ಉಡುಪಿ ತಾಲೂಕು ರೈತರ ಸಂಘಗಳಿಂದ ೨೫ ಸದಸ್ಯರಿಗೆ ಒಬ್ಬರಂತೆ ಆರಿಸಲ್ಪಡುವವರು ಪ್ರತಿನಿಧಿಗಳಾಗಬೇಕೆಂದು ನಿರ್ಧಾರವಾಯಿತು ಮಧ್ಯಾಹ್ನ ಸೇರಿದ ಸಭೆಯಲ್ಲಿ ಮಹಾತ್ಮಾ ಗಾಂಧೀಜೀಯವರು ಉಪವಾಸವನ್ನು ನಿಲ್ಲಿಸಿದ ಕುರಿತು ಆನಂದ ಸೂಚಿಸಲಾಯಿತು ಕಾಂಗ್ರೆಸ್ ಸೇವಾದಳ ಮತ್ತು ಕಾಂಗ್ರೆಸ್ ಮಜದೂರ್ ಘಟನೆಗಳ ಕುರಿತು ಚರ್ಚೆ ನಡೆದು ಅದನ್ನು ಮುಂದಿನ ಸಭೆಗೆ ಮುಂದುವರಿಸಲಾಯಿತು ಗ್ರಾಮ ಕಾಂಗ್ರೆಸ್ ಕಮಿಟಿಗಳು ರಚಿಸಿಯಾದ ಕಡೆಗಳಲ್ಲಿ ಪ್ರಧಾನ ಕಾರ್ಯದರ್ಶಿಗಳು ಅದನ್ನು ವಿಮರ್ಶಿಸಿ ಅಂಗೀಕರಿಸಬಹುದೆಂದು ನಿರ್ಣಯವಾಯಿತು.

ಅಖಿಲ ಕರ್ನಾಟಕ ಏಕೀಕರಣ ಸಂಘದ–ಕಾರ್ಯನಿರ್ವಾಹಕ ಸಮಿತಿಗೆ ದ. ಕನ್ನಡ ಜಿಲ್ಲೆಯಿಂದ (೧) ಶ್ರೀ ಕೆ ಪಿ ಜಿನರಾಜ ಹೆಗ್ಡೆ–ಅಧ್ಯಕ್ಷರು, (೨) ಶ್ರೀ. ಎಸ್ ಎಸ್. ಕೊಳ್ಕೆ, (೩) ಶ್ರೀ ಕೆ. ಕೆ ಶೆಟ್ಟಿ, (೪) ಶ್ರೀ ನಾರಾಯಣ ಕಿಲ್ಲೆ, ಇವರು ಆಯ್ಕೆಯನು ಹೊಂದಿದ್ದಾರೆ

ನಿಧನ— ಮದರಾಸಿನಲ್ಲಿ ಕಳೆದ ಮೂವತ್ತು ವರ್ಷಗಳಿಂದ ಶಸ್ತ್ರಕ್ರಿಯೆಯಲ್ಲಿಯೂ ಇತರ ಚಿಕಿತ್ಸೆಯಲ್ಲಿಯೂ ಹೆಸರುಹೊಂದಿದ್ದ ನಮ್ಮ ಜಿಲ್ಲೆಯ ಡಾ। ವಿಲಿಯಮ್ ಜೆ. ಫೆರ್ನಾಂಡಿಸ್, ಎಲ್. ಎಮ್. ಎಂಡ್ ಎಸ್., ಇವರು ತಾ. ೧೧...ಳತರಲ್ಲಿ ನಿಧನ ಹೊಂದಿರುವುದು ವಿಷಾದಕರ. ಡಾ। ವಿಲಿಯಮರವರು ಬಡವರ ಶುಶ್ರೂಷೆಯಲ್ಲಿ ಯಾವಾಗಲೂ ಆಸಕ್ತಿ ವಹಿಸಿದ್ದವರು ...ಲ್ಲಿ ಪೋಪ್ ಸ್ವಾಮಿಯವರು ಅವರಿಗೆ ಕೆ. ಎಸ್ ಜಿ (ನಾಯ್ಟ್ ಒಸ್ ಸೈಂಟ್ ಗ್ರೆಗರಿ ದಿ ಗ್ರೇಟ) ಬಿರುದನ್ನು ದಯಪಾಲಿಸಿದ್ದರು.

ಪ್ರಕಟಣೆ.

ಉಡುಪಿ ಕಾನ್ವೆಂಟ ರೋಡ್ ಕಾಣಬಟ್ಟೆ ಸಲ್ಲಿರುವ ಯಸ್ ...ಮಿನೇಜಸರ ಹೆಂಡ್ತಿ ನೋರಿ ಮಿನೇಜಸಳಾದ ನಾನು ಈ ಮೂಲಕ ಸರ್ವ ಜನರ ತಿಳುವಳಿಕೆ ಬಗ್ಗೆ ಪ್ರಕಟಿಸುವದೇನಂದ್ರೆ

ನಾನು ತಾ 13-11 1947ನೆ "ನವಯುಗ" ಪತ್ರಿಕೆಯಲ್ಲಿ ಕೆಲವು ಸಂಗ್ತಿಗಳು ಕಾಣಿಸಿ Publication ಕೊಟ್ಟರೂ ಎಲ್ಲಾ ವಿವಾದಗಳನ್ನು ರಾಜಿಯಿಂದ ಗ್ರಹಸ್ಥರಿದ್ದು ತೀರ್ಮಾನಿಸಿರುವದ್ರಿಂದ ನಾನು ಕೊಟ್ಟ ಸದರೀ Publication ಈ ಮೂಲಕ ರದ್ದುಮಾಡಿದ್ದೇನೆ.

ನೋರಿ ಮಿನೆಜಸ್ ರುಜು

ತಾ 23—1—1948.

ಪ್ರಕಟಣೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 391/1947

1 ಶಿವ್ಪು ಯೆಂಗ್ಸ, 2. ಸೋಮಪ್ಪ ಪೂಜಾರಿ, 3 ಕೊಗ್ಗು ಪೂಜಾರಿ, –ವಾದಿರು.

ರಾಮಪ್ಪ ಪೂಜಾರಿ, ರಂಗು ಹೆಂಗ್ಸಿನ ಮಗ, ಮಂಗ್ಳೂರು ತಾಲ್ಲೂಕು ಕಾರ್ಕಳ ಮೂಡೂರು ಗ್ರಾಮ, –ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ತಿಳಿಯಪಡ್ಸಿಸುವದೇನೆಂದರೆ:—

ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಗೆ ನೋಟ್ಸಬಗ್ಗೆ ತಾರೀಕು 31-1 1948ನೇ ದಿವ್ಸ ಹಗ್ಲು 10ಘಂಟೆಗೆ ಸದ್ರಿ ಕೋರ್ಟಿನಲ್ಲಿ ನ್ಯಾಯ ಆಗಿರುವದ್ರಿಂದ ಪ್ರತಿವಾದಿಯು ಆ ವ್ಯಾಯದೆಗೆ ಕೋರ್ಟು ಮುಂದೆ ಹಾಜ್ರಾಗಿ ಉದಪರಿಸಲು ತಪ್ಪಿದ್ರೆ, ಆತನನ್ನು ಶಿನ್ನಾಮಾಡಿ ದಾವೆಯನ್ನು ಯುಕ್ತಕಂಡಂತೆ ತೀರ್ಮಾನಿಸಲಾಗುತ್ತು ಎಂಬ ಸಂಗ್ತಿ ಕೋರ್ಟು ಸ್ಕಂ ಪ್ರಕಾರ ತಿಳಿಸಿಯದೆ

K Narayana Rai.
Advocate for Plff.

ಪುತ್ತೂರು, 23-1-48

ಚ್ಯವನಪ್ರಾಶ ರಸಾಯನ

(ಉರಕ್ಷತ, ಕ್ಷಯ, ಶ್ವಾಸ ಕಾಸಹಾರಿ)

ಕ್ರಯ—1 ಪೌಂಡು ರೂ. 5-0-0

ನಮ್ಮ ಕೆಟಲಾಗು ಧರ್ಮಾರ್ಥ

ದಿ ಮಹಾಜನ ಕೆಮಿಕಲ್ಸ್ ಎಂಡ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್,

ಕಾಸರಗೋಡು. ದ ಇಂಡಿಯ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಇದೇ ತಾ. **8-2-1948**ನೇ ಆದಿತ್ಯವಾರ ಸಾಯಂ ಘಂಟೆ **6**ಕ್ಕೆ
ಮಂಗಳೂರು ಸೆಂಟ್ರಲ್ ಮೈದಾನಿನಲ್ಲಿ ಕಟ್ಟಿಸಿದ ನವೀನ ಮಂದಿರದಲ್ಲಿ
ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥ
ವಿಖ್ಯಾತ ಗಾಯಕಿ **ಶ್ರೀಮತಿ ಯಂ. ಯಸ್. ಸುಬ್ಬು ಲಕ್ಷ್ಮಿ** ಇವರ

ಸಂಗೀತ ಕಚೇರಿ

ಟಿಕೇಟುಗಳ ವಿವರ

ಪೋಷಕ ವರ್ಗ	ರೂ. 100
Iನೇ ವರ್ಗ	ರೂ. 25
IIನೇ ವರ್ಗ	ರೂ. 10
IIIನೇ ವರ್ಗ	ರೂ. 5

ಟಿಕೇಟುಗಳು ಶ್ರೀ. ಪಿ ಶ್ರೀನಿವಾಸ ರಾವ್, ಎಡ್ವೊಕೇಟ್, ಕೆ. ಯಸ್. ರಾವ್, ರಸ್ತೆ ಮಂಗಳೂರು ಮತ್ತು ಶ್ರೀ. ವಿ ರಾಮಚಂದ್ರರಾವ್, ಎಡ್ವೊಕೇಟ್ ಪುತ್ತೂರು ಇವರಲ್ಲಿ ದೊರಕುವುವು.

ಆಸ್ಥಾನ ವಿದ್ವಾನ್ ಶ್ರೀ. ಚೌಡಯ್ಯ–ಇವರ ಪಿಟೀಲು.
ಶ್ರೀ ಕಲ್ಪತಿ ರಮಾನಾಥನ್ –ಇವರ ಮೃದಂಗ.
ಶ್ರೀ ಆಲಂಗುಡಿ ರಾಮಚಂದ್ರನ್ –ಇವರ ಘಟವಾದ್ಯ.
ಧ್ವನಿ ವರ್ಧಕ ಇತ್ಯಾದಿ ಏರ್ಪಾಡು ರೇಡಿಯೋ ಸೇಲ್ಸ್ ಸರ್ವಿಸ್ ತ್ರಿಚುನಾಪಳ್ಳಿ–ಇವರಿಂದ.

ಜನರ ಸೌಕರ್ಯಕ್ಕಾಗಿ ಈ ಕುರಿತು ಮಂಗಳೂರಿಗೆ ಬರಲಿಕ್ಕೂ, ಹಿಂದೆ ಹೋಗಲಿಕ್ಕೂ ಎಲ್ಲಾ ಲೈನುಗಳಲ್ಲಿಯೂ ಸ್ಪೆಶಲ್ ಬಸ್ ಸರ್ವಿಸುಗಳ ವ್ಯವಸ್ಥೆ ಇದೆ.

ದಕ್ಷಿಣ ಕನ್ನಡ.

ಹಂಗಾರಕಟ್ಟೆ---ಬಾರ್ಕೂರುಗಳಲ್ಲಿ— ತಾ 17-1-48ರಲ್ಲಿ ಹಾಗೂ 18-1-48 ರಲ್ಲಿ ಅನುಕ್ರಮವಾಗಿ ಕುಂದಾಪುರ ರಾಷ್ಟ್ರ ಸೇವಾದಳದವರು ಶಿಬಿರ ನಡಿಸಿ ಸೇವಾದಳವನ್ನು ಸ್ಥಾಪಿಸಿದರು. ಶ್ರೀ ಚಂದ್ರಶೇಖರ ಸ್ಪೈತಾಳರು ಹಂಗಾರಕಟ್ಟೆಯಲ್ಲೂ; ಶ್ರೀ ಬಿ. ಕೃಷ್ಣ ಬ್ಯಾರಿಗಳು ಬಾರ್ಕೂರಿನಲ್ಲಿಯೂ ಸಭೆಯ ಅಧ್ಯಕ್ಷರಾಗಿದ್ದರು. ಕುಂದಾಪುರದವರು ತಮ್ಮ ಶಿಸ್ತು ಪ್ರದರ್ಶನ ನಡಿಸಿದ ನಂತರ ಶಿಬಿರಾಧಿಪ ಶ್ರೀ. ಶ್ರೀನಿವಾಸ ಉಪಾಧ್ಯರು, ಉದ್ಘಾಟನೆ ನಡಿಸಿದರು. ಆದೆರಡು ಸಭೆಯಲ್ಲಿ ಸೇವಾದಳದ ಧ್ಯೇಯ-ಧೋರಣೆಯ ಕುರಿತು ಶ್ರೀ. ವಕೀಲ್. ಎಮ್. ಎಮ್ ಹೆಗ್ಡೇರೂ ಶ್ರೀ. ಜಗನ್ನಾಥ ಮೂಡ್ಲಕಟ್ಟೆಯವರೂ ಭಾಷಣವಿತ್ತರು.

ಕಡ್ತಲ—(ಕಾರ್ಕಳ ತಾಲೂಕು) ಸ್ಥಳೀಯ ಬೋ. ಎ. ಶಾಲಾ ಅಧ್ಯಾಪಕರಾದ ಶ್ರೀ. ಎಮ್. ಕೊಲ್ಲಯ್ಯ ಸೆಟ್ಟರು ಕೆಲಸದಿಂದ ನಿವೃತ್ತಿಯಾದುದರಿಂದ, ಅವರನ್ನು ಸನ್ಮಾನಿಸುವ ಸಮಾರಂಭವು, ಶ್ರೀ. ಎಮ್. ನಾಗಪ್ಪ ಹೆಗ್ಡೆಯವರ ನೇತೃತ್ವದಲ್ಲಿ ಜರಗಿ ಶ್ರೀ. ಸೆಟ್ಟರ ಕಾರ್ಯದಕ್ಷತೆ, ನಿಸ್ವಾರ್ಥ ಸೇವೆ ಮತ್ತು ಪ್ರೀತಿ ವಿಶ್ವಾಸಗಳನ್ನು ಸಭಿಕರಾದ ಶ್ರೀ. ಎ. ಪುಟ್ಟಣ್ಣಯ್ಯ, ಶ್ರೀ ಕೆ. ರಾಜೀವ ಸೆಟ್ಟಿ, ಶ್ರೀ. ಮಂಜುನಾಥ ನ್ಯಾಕರು ವಿವರಿಸಿದ ಬಳಿಕ ಅತಿಥಿಗಳು ತಕ್ಕ ಪ್ರತ್ಯುತ್ತರವನ್ನಿತ್ತರು. ಲಘು ಉಪಹಾರ, ಗ್ರೂಪ್ ಫೋಟೋ, ರಾತ್ರಿ ಹರಿಕಥೆಯು ಕ್ರಮವಾಗಿ ನೆರವೇರಿದುವು.

ಪ್ರಕಟಣೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No. 3/1948.

ಮಂಗು ಪೂಜಾರ್ತಿ, ಬೊಮ್ಮು ಪೂಜಾರಿ ವಿಧವೆ-ಉಡುಪಿ ತಾಲ್ಲೂಕು ಶಿರ್ವ ಗ್ರಾಮದ ಮಾಣಿಪಾಡಿ, —ಅರ್ಜಿದಾರಳು

ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದ್ರೆ:

ಅರ್ಜಿದಾರಳ ಮಗ ತಾ 1-4-1947ಲ್ಲಿ ಮೃತಪಟ್ಟ ಮೆಣ್ಣ ಪೂಜಾರಿಗೆ "The Empire of India Life Assurance Co., Ltd Bombay" ಇವರ ನಂಬ್ರ 218661ನೇ ಪೋಲಿಸಿ ಬಾಬ್ತು ವಸೂಲಾಗತಕ್ಕ ಮೃವಜು ರು 600 0-0ನ್ನು ವಸೂಲು ಪಡಿಯುವರೆ ಸದ್ರಿ ಮೃತನ ನುುಖ್ಯ ವಾರೀಸುದಾರಳಾದ ಅರ್ಜಿದಾರಳೀ ಹಕ್ಕು ದಾರಳೆಂತಲೂ-ಆ ಕುರಿತು ಅರ್ಜಿದಾರಳಿಗೆ ಸಕ್ಸೆಶ್ಯನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ವಗೈರೆ ಸಂಗ್ತಿಗಳನ್ನು ಕಾಣಿಸಿ ಅರ್ಜಿದಾರಳು ದಾಖ್ಲುಮಾಡಿರುವ ಮೇಲ್ಕಂಡ ಅರ್ಜಿಯು ತಾ. 12-2-48ಕ್ಕೆ ಇಟ್ಟಿರುತ್ತದೆ ಆಕ್ಷೇಪ ಹೇಳಲುಳ್ಳವರು ಸದ್ರಿ ತಾ. 12-2-48ನೇ ದಿವ್ಸ ಬೆಳಿಗ್ಗೆ 10ಘಂಟೆಗೆ ಸ್ವತಹಾ ವ ವಕೀಲು ದ್ವಾರಾ ಈ ಕೋರ್ಟಿನ ಮುಂದೆ ಹಾಜ್ರಾಗಿ ಜ್ವಾಬೀರುಮಾಡಿಕೊಳ್ಳತಕ್ಕದ್ದು.

P. V. Acharya.
Vakil for Petitioner.

ಉಡುಪಿ, ತಾ. 20-1-48.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.೬/- [ವಿ. ಪಿ. ಖರ್ಚು ಪ್ರತ್ಯೇಕ]

MIS D. DEVEE, F. 08. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಪುತ್ತೂರು— ಪುತ್ತೂರು ಹೈಸ್ಕೂಲಿನ ಹೊಸ ಕಟ್ಟಡದ ಕೆಳಗಿನ ಅಂತಸ್ತು ಸಾರ್ವಜನಿಕರ ಉದಾರಾಶ್ರಯದಿಂದ ಪೂರ್ತಿಗೊಂಡಿದೆ. ಸದ್ರಿ ಕಟ್ಟಡವನ್ನು ಜಿಲ್ಲಾ ಬೋರ್ಡಿಗೆ ಬಿಟ್ಟು ಕೊಡುವುದರ ಆಗತ್ಯವಿದ್ದರೆ ಬೋರ್ಡಿನ ಖರ್ಚಿನಿಂದ ದಾನಪತ್ರ ಬರಕೊಡುವುದರ ಕುರಿತು ಮತ್ತು ಮುಂದಿನ ಕಾರ್ಯಕ್ರಮದ ಕುರಿತು ಪರ್ಯಾಲೋಚಿಸಲು ತಾ. 31-1-48ರಲ್ಲು ಅಪರಾಹ್ನ ಘಂಟೆ 5ಕ್ಕೆ ಪುತ್ತೂರು ಹೈಸ್ಕೂಲಿನಲ್ಲಿ ಸಹಾಯಧನ ಕೆತ್ತವರ ಮಹಾಸಭೆ ಜರಗಲಿರುವುದರಿಂದ ಎಲ್ಲರೂ ದಯವಿಟ್ಟು ಸಹಕರಿಸಬೇಕಾಗಿ ಬಿಲ್ಡಿಂಗ್ ಕಮಿಟಿಯ ಅಧ್ಯಕ್ಷರಾದ ಶ್ರೀ. ಬಿ. ಮಂಗೇಶರಾಯರು ವಿನಂತಿಸುತ್ತಾರೆ.

ಕುಂದಾಪುರ ಆಹಾರ ಪರಿಸ್ಥಿತಿ ಚೆನ್ನಾಗಿಲ್ಲ—ನೇಬುದನ್ನು ಸ್ಪಷ್ಟಪಡಿಸಿ ಜಿಲ್ಲಾ ಆಹಾರ ಸಮಿತಿಯ ಸದಸ್ಯರಾದ ಶ್ರೀ ಬಿ. ಸುಬ್ಬಣ್ಣ ಸೆಟ್ಟರು ಒಂದು ವಿನಂತಿಯನ್ನು ಬೊರದಿಸಿ ಅದನ್ನು ಮದ್ರಾಸಿನ ಆಹಾರ ಮಂತ್ರಿಗಳಿಗೆ ಕಳುಹಿಸಿರುತ್ತಾರೆ. ಅಕ್ಕಿ, ಭತ್ತವನ್ನು ಸ್ಟೋರುಗಳಿಗೆ ಒಪ್ಪಿಸಿದ ನಂತರ ರೇಶನಿಂಗ್ ಮತ್ತು ಕಂಟ್ರೋಲುಗಳನ್ನು ತೆಗೆದುಹಾಕಿದುದರಿಂದ ಬೇಸಾಯಗಾರರಲ್ಲಿ ಅವರ ಕುಟುಂಬ ಪೋಷಣೆಗೆ ಸಾಕಷ್ಟು ಸಹ ಆಹಾರ ಧಾನ್ಯಗಳು ಉಳಿಯಲಿಲ್ಲ. ಈ ಬಗ್ಗೆ ಯೋಗ್ಯ ವ್ಯವಸ್ಥೆಯಾಗಬೇಕು. ಮಾತ್ರವಲ್ಲದ ಜನತೆಗೆ ಸಲಾಗವಾಗಿ ಪಡಿಯಕ್ಕಿ ದೊರೆಯುವಂತೆ ಶೀರೂರು, ಬೈಂದೂರು, ಎಡ್ತರೆ, ಉಪ್ಪುಂದ, ನಾವುಂದ, ಮರವಂತೆ, ಗಂಗೊಳ್ಳಿ, ಕುಂದಾಪುರ, ಬಸ್ರೂರು, ಕೋಟೇಶ್ವರ, ಶಂಕರನಾರಾಯಣ, ಕೊಲ್ಲೂರು, ಕಾರ್ವಾಡಿ, ವಂಡ್ಸೆ, ತಲ್ಲೂರು ಮತ್ತು ತೆಕ್ಕಟ್ಟೆ ಸೆಂಟರುಗಳಲ್ಲಿ ಪಡಿಯಕ್ಕಿ ಅಂಗಡಿಗಳು ತೆರೆಯುವಂತಾಗಬೇಕು ಇತ್ಯಾದಿ ಈ ವಿನಂತಿಯಲ್ಲಿ ಸೂಚಿಸಿದ್ದಾರೆ.

ಹಾಲಾಡಿ— ತಾ 23-1-48ರಂದು ಹಾಲಾಡಿ ಮತ್ತು ಬಿದ್ಕಲ್ ಕಟ್ಟೆ ರಾಷ್ಟ್ರೀಯ ಸೇವಾದಳದವರ ವತಿಯಿಂದ ಸುಭಾಸ ಜನ್ಮದಿನಾಚರಣೆಯು ಜರುಗಿತು. ಶ್ರೀ ಕೆ. ಶಾಂತಪ್ಪನವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀಗಳಾದ H. ರಾಮಚಂದ್ರ ಹೆಗ್ಡೆ, ಹಾರ್ದಳ್ಳಿ ಶಂಕರ ಸೆಟ್ಟಿ, ಹಾಲಾಡಿ ಸಂಜೀವ ಸೆಟ್ಟಿ ಮೊದಲಾದವರು ಭಾಷಣವನ್ನಿತ್ತರು.

ಸುರತ್ಕಲ್— ವಿದ್ಯಾದಾಯಿನೀ ಹಾಯಸ್ಕೂಲಿನ ವರ್ಷಂತ್ಯುತ್ಸವ ಸಮಾರಂಭವು ಇದೇ ತಾ 24-1-48ನೇ ಶನಿವಾರ ಸಾಯಂ. ಘಂ 4ಕ್ಕೆ ಶಾಲಾಂಗಣದಲ್ಲಿ ಶ್ರೀ ಯಲ್. ಸಿ. ಪಾಯಸ್, ಎಂ. ಎಲ್. ಎ. ಮಂಗಳೂರು ನಗರ ಸಭಾಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಪ್ರಾರ್ಥನೆಯಾದ ಅನಂತರ ಶ್ರೀ ಟಿ. ವಿ. ರಾವ್, ಶಾಂತಿ ಇಲಾಖೆ ಕೋಲಾಪುರ', ಇವರು ಶಾಲಾಭಿನಂದನ ಕಾರ್ಯವನ್ನು ನಡೆಸಿದರು. ಶಾಲಾ ಮುಖ್ಯೋಪಾಧ್ಯಾಯರಿಂದ ವರದಿವಾಚನವಾದ ಮೇಲೆ ಬಹುಮಾನ ವಿತರಣ ನಡೆಯಿತು ಆ ಬಳಿಕ ಸಭಾಧ್ಯಕ್ಷರು ತಮ್ಮ ಸೊಗಸಾದ ಭಾಷಣದಲ್ಲಿ ಜನಹಿತಕ್ಕಾಗಿರುವ ಇಂತಹ ಸಂಸ್ಥೆಯನ್ನು ಎಲ್ಲರೂ ಪ್ರೋತ್ಸಾಹಿಸಬೇಕೆಂದು ತಿಳಿಸಿ ಉಪಾಧ್ಯಾಯರೂ ವಿದ್ಯಾರ್ಥಿಗಳೂ ತಮ್ಮ ಮುಂದಿರಿಸಿಕೊಳ್ಳಬೇಕಾದ ಧ್ಯೇಯಗಳನ್ನು ಸುಂದರ ಉದಾಹರಣೆಗಳಿಂದ ವಿವರಿಸಿ ಮಾತನಾಡಿದರು. ಧನ್ಯವಾದಾರ್ಪಣೆಯಾದ ಬಳಿಕ ಶಾಲಾ ಬಾಲಕ ಬಾಲಿಕೆಯರಿಂದ ಮನರಂಜನೆಯ ವಿವಿಧ ವಿನೋದಾವಳಿ ಕಾರ್ಯಕ್ರಮವು ನಡೆದು ರಾತ್ರಿ ಘಂ. ೧೧ಕ್ಕೆ ಸಮಾರಂಭವು ಯಶಸ್ವಿಯಾಗಿ ಕೊನೆಗೊಂಡಿತು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗುಗಳನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದೆ ಇರುವುದರಿಂದ ಸದ್ರಿಯವರಿಗೆ ಕ್ರಮ ಪ್ರಕಾರ ರಿಜಿಸ್ಟ್ರೀ ನೋಟೀಸನ್ನು ಕಳುಹಿಸಿದಲ್ಲಿ ಸದ್ರಿ ಸಾಲಗಳ ಅಸಲು, ಬಡ್ಡಿ, ವಗೈರೆಗಳನ್ನು ಇನ್ನೂ ಬಾಕಿ ಇಟ್ಟುಕೊಂಡಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ-

ಸದ್ರಿ ಸಾಲಗಾರರು ನಮ್ಮ ಬೇಂಕಿಗೆ ಸಲ್ಲಿಸಲಿಕ್ಕಿರುವ ಅಸಲು ಬಡ್ಡಿ ವಗೈರೆ ಈ ನೋಟೀಸಿನ ಖರ್ಚು ಸಮೇತ ಆಖೈರಿಜನ್ನು ಇದೇ ಫೆಬ್ರವರಿ ತಿಂಗಳ ತಾ. 4ನೇ ಬುಧವಾರ ಹಗಲು ಗಂಟೆ ೩ರ ಒಳಗೆ ನಮ್ಮ ಬೇಂಕಿಗೆ ಪಾವತಿ ಮಾಡದಿದ್ದಲ್ಲಿ ತಾ. 7ನೇ ಶನಿವಾರ ಹಗಲು ಗಂಟೆ 3ಕ್ಕೆ, ಈ ಬೇಂಕಿನ ಯುಕ್ತ ಕಂಡ ದಿನದಲ್ಲಿ ಸದ್ರಿಯವರ ನಗನ್ನು ಬಹಿರಂಗವಾಗಿ ಬೇಂಕಿನ ವಠಾರದಲ್ಲಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
63/42-3	ಶ್ರೀ ಎಚ್. ಭವಾನಿಶ್ಶಂಕರ ಸೇಟ್, ರಾಮಚಂದ್ರ ಸೇಟರ ಮಗ ಚಿನಿವಾರ, ಹಂಗ್ಳೂರು, ವಡೇರ ಹೋಬಳಿಗ್ರಾಮ, ಕುಂದಾಪುರ.	50 0 0
233/42-3	ಶ್ರೀ ಬಿ. ಸುಬ್ಬಣ್ಣ ಸೆಟ್ಟಿ, ಪಟೇಲ ವೆಂಕಪ್ಪ ಸೆಟ್ಟರ ಅಳಿಯ, ಕಟ್ಟೆ ಬೆಳ್ತೂರು ಗ್ರಾಮ, ಹಕ್ಲಾಡಿ.	45 0 0
236/42-3	ಶ್ರೀ ಪುಟ್ಟಯ್ಯ ಸೆಟ್ಟಿ, ನಾಗ್ಯ ಸೆಟ್ಟರ ಅಳಿಯ, ಕಟ್ಟೆ ಬೆಳ್ತೂರು ಗ್ರಾಮ, ಹಕ್ಲಾಡಿ	35 0 0
46/43-4	ಶ್ರೀ ಕೆ. ವೆಂಕಟೇಶ ಸೇಟ್, ಪುತ್ತು ಸೇಟರ ಮಗ, ಚಿನಿವಾರ, ಕುಂದಾಪುರ.	12 9 0
209/43-4	ಶ್ರೀ. ಕೃಷ್ಣಪ್ಪ ಸೆಟ್ಟಿ, ಮಾಲಿಂಗ ಸೆಟ್ಟರ ಅಳಿಯ, ಆನೆಗಲ್ಲಿ ಗ್ರಾಮ, ಕುಂದಾಪುರ.	6 0 0
314/45-6	ಶ್ರೀ ನೈಲಾಡಿ ಬೊಮ್ಮಯ್ಯ ಹೆಗ್ಡೆ, ಮಂಜಯ್ಯ ಬಂಡಾರರ ಮಗ, ಜಿಲ್ಲಾಡಿ ಗ್ರಾಮ ಬಾರ್ಕೂರು.	400 0 0
120/46-7	ಶ್ರೀ ಕೆ. ನರಸಿಂಹ ಸೇಟ್, ಮತ್ತು ಯಾನೆ ನಾರಾಯಣ ಸೇಟರ ಮಗ, ಚಿನಿವಾರ ಕುಂದಾಪುರ.	2,800 0 0

ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ. 20—1—48 } K. Narayana Shetty ಏಜಂಟ.

ಪ್ರಕಟಣೆ

ಕಾಲೇಜು ಕಮಿಟಿ, ಉಡುಪಿ

ಮಹಾಜನರಲ್ಲಿ ವಿನಂತಿ:

ಉಡುಪಿಗೊಂದು ಕಾಲೇಜಿನ ಆವಶ್ಯಕತೆಯು ಸರ್ವರಿಗೂ ಮನನವಿರುವ ವಿಷಯ, ಉಡುಪಿಯಲ್ಲಿ ಹಾಗೂ ಇದರ ಆಸುಪಾಸಿನಲ್ಲಿ ಸುಮಾರು 15 ಹೈಸ್ಕೂಲುಗಳಿವೆ. ಸರ್ವಸಾಧಾರಣವಾಗಿ ವರುಷ ಒಂದಕ್ಕೆ 650 ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಿರುವರು, ಈ ಸಂಖ್ಯೆಯು ವರುಷ ಸಂದಂತೆ ವೃದ್ಧಿಯಾಗುತ್ತಿರುವುದು. ಹೀಗೆ ಪಾಸಾಗುತ್ತಿರುವ ಶಾಲಂತದ ವಿದ್ಯಾರ್ಥಿಗಳಿಗೂ ಪ್ರಕೃತ ಕಾಲೇಜು ವಿದ್ಯೆಯ ಪ್ರಯೋಜನವು ದೊರೆಯದ ಹಾಗಾಗಿದೆ. ಇದಕ್ಕೆ ಕಾರಣವನ್ನು ಹುಡುಕಬೇಕಾಗಿಲ್ಲ. ಮಕ್ಕಳನ್ನು ಪರವೂರಿಗೆ ಕಳುಹಿಸಿ ಅಧಿಕ ವೆಚ್ಚವನ್ನು ಸಹಿಸುವ ಶಕ್ತಿಯು ಹೆತ್ತವರಲ್ಲಿ ಹಲವರಿಗಿಲ್ಲ. ಶಕ್ತಿ ಇರುವವರ ಮಕ್ಕಳಿಗೂ ಈಗಿರುವ ಕಾಲೇಜುಗಳಲ್ಲಿ ಸೀಟು ಸಿಗುವುದು ಕಷ್ಟಸಾಧ್ಯ. ಈ ಪರಿಸ್ಥಿತಿಗಾಗಿ ಕಾಲೇಜುಗಳನ್ನು ದೂರಿ ಫಲವಿಲ್ಲ; ಇರುವ ಸೀಟುಗಳು ಕೆಲವು ಮಾತ್ರವಿದ್ದು, ಪ್ರವೇಶಾಕಾಂಕ್ಷಿಗಳು ಹಲವರಿರುವಾಗ ಕಾಲೇಜುಗಳಿಗೆ ಈ ಬಿಕ್ಕಟ್ಟನ್ನು ಸರ್ವ ಸಮ್ಮತವಾಗಿ ಬಗೆಹರಿಸಲು ಹೇಗೆ ತಾನೆ ಸಾಧ್ಯವಾಗಬೇಕು? ಈ ಬಿಕ್ಕಟ್ಟನ್ನು ಪರಿಹರಿಸುವ ಒಂದೇ ಒಂದು ಬಗೆ ಎಂದರೆ ಉಡುಪಿಯಲ್ಲೇ ಕಾಲೇಜು ಸ್ಥಾಪಿಸುವುದು.

ಕಳೆದ ವರುಷ ಕಾಲೇಜುಗಳ ತಾತ್ಕಾಲಿಕ ಅಂಗೀಕಾರದ ನಿಬಂಧನೆಗಳಲ್ಲಿ ಕೆಲವನ್ನು ವಿಶ್ವವಿದ್ಯಾಲಯದವರು ಸಡಿಲಿಸಿದೊಡನೆ, ಉಡುಪಿಯಲ್ಲಿ ಕಾಲೇಜನ್ನು ಸ್ಥಾಪಿಸುವ ಪ್ರಯತ್ನ ನಡೆದಿತ್ತು. ಆದರೆ ವಿಶ್ವವಿದ್ಯಾಲಯದ ಈ ಪ್ರಕಟಣೆಯು ವೇಳೆ ಕಳೆದು ಬಂತು. ವಿಶ್ವವಿದ್ಯಾಲಯದ ಅಧಿಕಾರಿಗಳಲ್ಲಿ ನಮ್ಮ ಅಭಿಲಾಷೆಯನ್ನು ಸ್ವತಹ ನಿವೇದಿಸಿಕೊಂಡಲ್ಲಿ ಉಡುಪಿಗೊಂದು ಕಾಲೇಜಿನ ಅಗತ್ಯ ಇದೆ ಎಂದು ಅವರು ಮನಗಂಡು ತಮ್ಮ ಸಹಾನುಭೂತಿಯನ್ನು ಪ್ರದರ್ಶಿಸಿದರು. ಆದರೆ ಸಕಾಲದಲ್ಲಿ ಹಣ ಹಾಗೂ ಇನ್ನಿತರ ಸಿದ್ಧತೆಗಳನ್ನು ಪೂರೈಸಲು ಶಕ್ಯವಾಗಲಿಲ್ಲ. ಕಾಲೇಜನ್ನು ಹೊಂದುವ ಈಗಿನ ಪ್ರಯತ್ನವು ಜಯಶೀಲವಾಗಬಹುದೆಂದು ಹಾರೈಕೆ ಇದೆ. ಪರಿಪೂರ್ಣ ಕಾಲೇಜನ್ನು ಸ್ಥಾಪಿಸಲು ಸುಮಾರು ಹತ್ತು ಲಕ್ಷ ರೂಪಾಯಿಗಳ ವರೆಗೆ ಬೇಕಾಗಬಹುದಾದರೂ ತಾತ್ಕಾಲಿಕ ಅಂಗೀಕಾರವನ್ನು ಅತ್ಯಂತ ಸುಲಭದಲ್ಲಿ ಪೂರೈಸಬಹುದೆಂದು ಊಹಿಸಲಾಗಿಯದೆ. ಆದುದರಿಂದ ಮಹಾಜನರೆಲ್ಲರೂ ಶಕ್ತಿಮೀರಿ ಧನಸಹಾಯವನ್ನು ಮಾಡಬೇಕಾಗಿ ಅಪೇಕ್ಷಿಸುತ್ತೇವೆ.

ಐದು ಲಕ್ಷ ರೂಪಾಯಿಯನ್ನು ದಾನಮಾಡಿದ ಯಾರೊಬ್ಬ ಮಹನೀಯರು, ತಮ್ಮ ಅಥವಾ ಅವರ ಮನಸೇಚ್ಛೆಯಂತೆ ಇನ್ನಿತರರ ಸ್ಮಾರಕಾರ್ಥವಾಗಿ ಕಾಲೇಜಿಗೆ ಹೆಸರಿಡುವ ಅಧಿಕಾರವನ್ನು ಪಡೆಯುತ್ತಾರೆ. ಅಂತೆಯೇ ರೂಪಾಯಿ ಒಂದು ಲಕ್ಷ ಸಹಾಯವನ್ನು ನೀಡುವ ಮಹನೀಯರು ಕಾಲೇಜಿನ ಕಟ್ಟಡದ ಹೆಸರನ್ನಿಡುವ ಅಧಿಕಾರವನ್ನು ಪಡೆಯುತ್ತಾರೆ. ಅಥವಾ 25,000/ ರೂಪಾಯಿಯನ್ನು ಕೊಡುವವರು ಕಟ್ಟಡದ ಒಂದೊಂದು ವಿಭಾಗಕ್ಕೆ ಸ್ಮಾರಕಾರ್ಥ ಹೆಸರಿಡಲು ಅರ್ಹರಾಗುತ್ತಾರೆ. ರೂಪಾಯಿ 5000/-ವನ್ನು ಕೊಡುವವರು ಕಾಲೇಜಿನ ಪೋಷಕರು ಹಾಗೂ ಎಕೆಡೆಮಿಯ ಅಜೀವ ಸದಸ್ಯರಾಗುತ್ತಾರೆ.

ಪುಣ್ಯಕಾರ್ಯಗಳಲ್ಲಿ ವಿದ್ಯಾದಾನವು ಶ್ರೇಷ್ಠವೆನಿಸಿಗುವುದು. ಇಂತಹ ವಿದ್ಯಾದಾನಕ್ಕೆ ಅನುವಾಗುವ ಈ ವಿಷಯದಲ್ಲಿ, ಮಹಾಜನರು ಸಹಾಯ ನೀಡುವ ಅಗತ್ಯವಿದೆ.

ಉದಾರ ಹೃದಯದಿಂದ ಧನ ಸಹಾಯಮಾಡಿ ಸಹಕರಿಸಿರಿ:

(Sd) T. R. A. Pai, ಸೆಕ್ರೆಟರಿ.
(Sd) T. M. A. Pai, ಟ್ರೆಜರರ್.
(Sd) U. S. R. Pai, ಪ್ರೆಸಿಡೆಂಟ್.

ಗಾಂಧಿಜೀಗೊಂದು ಬೋಂಬು!

ಮಹಾತ್ಮಾ ಗಾಂಧಿಯವರಿರುವ ವರೆಗೆ ಭಾರತದ ರಾಜಕೀಯದಲ್ಲಿ ಅಗ್ರಗಾಮಿಯಾಗಿರುವ ಶಕ್ತಿ ಅವರ ಪಾಲಿನದೇ ಎಂಬ ದನ್ನು ಸ್ಪಷ್ಟಪಡಿಸಿ ಲೋಕದ ಕಣ್ಣು ತೆರೆಯಿಸುವ ಘಟನೆಗಳು ಆಗಾಗ ನಡೆಯುವದಿದೆ. ಗಾಂಧಿಜೀಯನ್ನು ಹಿಂದೆ ಹಾಕಿ, ಅಥವಾ ಬದಿಗೆ ಸರಿಸಿ ಹಿಂದೀ ರಾಜಕೀಯವು ಒಮ್ಮೊಮ್ಮೆ ಮುಂದೊತ್ತಿನಂತೆ ಕಾಣುತ್ತದೆ; ಕಡಿವಾಣ ಗಾಂಧಿಜೀಯ ಕೈಯಿಂದ ಜಾರಿ ಹೋಯಿತನ್ನಿಸುತ್ತದೆ. ಆದರೆ ಕೂಡಲೇ ಮಹಾತ್ಮರು ತನ್ನ ಸರ್ವಶಕ್ತಿಯಿಂದ ಒಮ್ಮೆಗೇ ಮುನ್ನೆಗೆದು ಆಸೂತ್ರವನ್ನು ಹಿಡಿದು ಬಿಡುತ್ತಾರೆ. ಒಂದೊಂದು ಬಾರಿ ಗಾಂಧಿಜೀಯ ಪ್ರಯತ್ನ ವಿನಹಾ ಅವರ ಕಡೆಗೆ ಸರ್ವರ ಲಕ್ಷ್ಯ ಮತ್ತು ಗೌರವವನ್ನು ಹರಿಯಿಸುವ ಘಟನೆಗಳು ತಾವಾಗಿ ನಡೆದುಹೋಗುತ್ತವೆ. ಢಿಲ್ಲಿಯಲ್ಲಿ ಕಳೆದ ವಾರ ಅವರು ಕೈಕೊಂಡ ಉಪವಾಸವೂ, ಅದರ ಮುಕ್ತಾಯದ ಬೆನ್ನಲ್ಲೇ ಅವರ ಪ್ರಾರ್ಥನಾ ಸಭೆಯಲ್ಲಿ ಸಿಡಿದ ಬೋಂಬೂ ಅಂತಹವೇ! ಮೊದಲನೆಯದು ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಗಾಂಧಿಜೀ ಸ್ವತಃ ಮಾಡಿದ ಪ್ರಯತ್ನವಾಗಿದ್ದರೆ, ಎರಡನೆಯದು ಗಾಂಧೀ ನಾಯಕತ್ವವನ್ನು ಉಳಿಸಿಕೊಡಲು ತಾನಾಗಿ ನಡೆದ ಘಟನೆ!

ಬೋಂಬು ಸ್ಫೋಟ

ಗಾಂಧಿಜೀಯ ಉಪವಾಸ ಮುಗಿದು ಎರಡ ದಿನ ಕಳೆದಿದ್ದುವು ಮಾತ್ರ. ತಾ. 20ನೇ ಮಂಗಳವಾರ ಅಪರಾಹ್ಣ ನವಢಿಲ್ಲಿಯ ಬಿರ್ಲಾ ಭವನದ ವಠಾರದಲ್ಲಿ ಗಾಂಧಿಜೀ ಪ್ರಾರ್ಥನೋತ್ತರ ಭಾಷಣ ಮಾಡುತ್ತಿದ್ದರು. ಆಗಲೇ ಅವರಿಗೆ ಕೆಲವು ಗಜಗಳ ದೂರದಲ್ಲಿ-ಸುಮಾರು 20 ಅಥವಾ 30 ಗಜವಿರಬಹುದು-ಬೆಂಕಿ ಹಚ್ಚಲ್ಪಟ್ಟ ಬೋಂಬೊಂದು ಸಿಡಿಯಿತು. ಭಾಷಣ ಮಾಡುತಿದ್ದ ಗಾಂಧಿಜೀಗೆ ಈ ಸಂಗತಿ ತಿಳಿದುಬಂದಿಲ್ಲ. ಅವರು ಯಥಾಪ್ರಕಾರ ತನ್ನ ಉಪನ್ಯಾಸವನ್ನು ಮುಂದುವರಿಸಿ ಮುಗಿಸಿದರು. ಸ್ಫೋಟದ ಶಬ್ದವಾದೊಡನೆ ಸಭೆಯಲ್ಲಿದ್ದ ಕೆಲವರು ಆ ಸ್ಥಳಕ್ಕೋಡಿ, ಬೋಂಬಿಟ್ಟ ಮನುಷ್ಯನನ್ನು ಹಿಡಿದು ಪೋಲೀಸರ ಕೈಗೆ ಕೊಟ್ಟರು. ಅವನ ದೇಹ ಜಡ್ತಿ ನಡೆಸಿದಾಗ ಮತ್ತೊಂದು ಜೀವಂತ ಬೋಂಬು ದೊರೆಯಿತಂತೆ. ಗಾಂಧಿಜೀ ಪ್ರಾರ್ಥನೆ ನಡೆಸುತ್ತಿರುವ ಬಿರ್ಲಾ ಭವನದ ವಠಾರಕ್ಕೆ ಹೊರಸುತ್ತಾಗಿ ಸುಮಾರು ಹದಿನೈದಡಿ ಎತ್ತರದ ದೊಡ್ಡ ಗೋಡೆಯಿದೆ. ಅದರ ಒಳಗಡೆಯಲ್ಲಿ ಅಂತಹ ಮೂರೇ ಅಡಿ ಎತ್ತರದ ಮತ್ತೊಂದು ಗೋಡೆಯಿದೆ. ಇವೆರಡು ಗೋಡೆಗಳು ಸೇರುವ ಸ್ಥಳದಲ್ಲಿ ಗಾಂಧಿಜೀ ಪ್ರಾರ್ಥನೆಗೆ ನಿಲ್ಲುವ ಹತ್ತಿಪ್ಪತ್ತು ಗಜ ದೂರದಲ್ಲಿ ಆ ಬೊಂಬನ್ನು ಹತ್ತಿಸಲಾಗಿತ್ತು. ಅಲ್ಲಿಯ ಸಂಗತಿಯೆಲ್ಲಾ ನಡೆದು ಮುಗಿದ ವೇಳೆ, 'ಅದು ಬೋಂಬು, ಅದನ್ನಿಟ್ಟ ತರುಣನ ವಶ ಮತ್ತೊಂದು ಬೋಂಬೂ ಇತ್ತು' ಎಂದು ಗಾಂಧಿಜೀಗೆ ಗುಟ್ಟು ಬಿಟ್ಟಾಗ ಅವರು ನಿರ್ವಿಕಾರ ಬುದ್ಧಿಯಿಂದ "ಪ್ರಾಯಶಃ ಯಾರೋ ಬೊಂಬೊಗೆಯುವ ಕರಬೇತಿ ಮಾಡುತ್ತಿದಬೇಕು" ಎಂದರು.

ನಡೆದುದೇನು?

ದೂರದಲ್ಲಿ ಹಾಗೆ ಬೋಂಬನ್ನಿಟ್ಟುದು ಗಾಂಧಿಜೀಯನ್ನು ಹೆದರಿಸುವುದಕ್ಕೋ ಕೊಲ್ಲುವುದಕ್ಕೋ ಎಂಬುದಾವುದೂ ಸ್ಪಷ್ಟವಾಗುವುದಿಲ್ಲ. ಆ ಬೋಂಬಿಟ್ಟವನೆಂದು ಅಲ್ಲಿಯೇ ದಸ್ತಗಿರಿ ಮಾಡಲ್ಪಟ್ಟು ಈಗ ರಿಮಾಂಡಿನಲ್ಲಿರುವವನು ಸುಮಾರು 20 ವರ್ಷಪ್ರಾಯದ ಹಿಂದೂ ತರುಣ. ಮದನಲಾಲ್ ಎಂದು ಅವನ ಹೆಸರು. ಈತ ಪಶ್ಚಿಮ ಪಂಜಾಬಿನಿಂದ ಬಂದಿದ್ದ ನಿರಾಶ್ರಿತ. ಬೇರೆ ನಿವಾಸಾನುಕೂಲತೆಯಿಲ್ಲದೆ ನವಢಿಲ್ಲಿಯಲ್ಲಿ ಮಸೀದಿಯೊಂದರಲ್ಲಿ ಅಪ್ಪಣೆ ವಿನಹಾ ವಾಸಿಸುತಿದ್ದನಂತೆ. ಗಾಂಧಿಜೀಯ ಉಪವಾಸ ಮುಕ್ತಾಯದ ಶರ್ತವಾಗಿ ಮುಸಲ್ಮಾನರಿಗೆ ಮರಳಿ ದೊರೆತ 117 ಮಸೀದಿಗಳ ಪೈಕಿ ಇವನಿದ್ದುದೂ ಒಂದು. ಪೋಲೀಸರು ಅವನಿಗೆ ಅಲ್ಲಿಂದ ಹೊರಡುವ ಆಜ್ಞೆ ಕೊಟ್ಟಿದ್ದರು. ಗಾಂಧಿಯವರು ಹಿಂದುಗಳಿಗೆ ದ್ರೋಹ ಮಾಡುತಿದ್ದಾರೆ-ಅವರ ಭಾರತ-ಪಾಕಿಸ್ತಾನ ಅಥವಾ ಹಿಂದು-ಮುಸ್ಲಿಂ ಮೈತ್ರಿ ಬೋಧೆ ತನಗೊಪ್ಪಿಗೆಯಿಲ್ಲವಾದ್ದರಿಂದ ತಾನು ಹಾಗೆ ಮಾಡಿದನೆಂದೇ ಅವನ ಹೇಳಿಕೆಯಾಗಿದೆ. ಬೋಂಬು ಸಿಡಿದ ಸ್ಥಳಕ್ಕೆ ಹತ್ತಿರದಲ್ಲಿದ್ದ ಸೇವಕಿಯೊಬ್ಬಳ ವಾಗ್ಮೂಲದಂತೆ-ಒಂದು ದೊಡ್ಡ ಮೋಟಾರು ಬಂಡಿಯಲ್ಲಿ ನಾಲ್ಕು ಜನ ಬಂದರು; [illegible] ಇದ್ದ; ಅವಸರವಾಗಿ ಬೋಂಬು ಹೊತ್ತಿಸಿ ಒಗೆದ; ಹತ್ತಿರದಲ್ಲಿದ್ದವನೊಬ್ಬ ಅವನನ್ನು ಹಿಡಿಯಲು ಹೋದ. ಬೇರೆ ಜನರೂ ಸೇರಿ ಆತನನ್ನು ಹಿಡಿಯುವುದನ್ನ ಕಂಡ ಮಿಕ್ಕ ಮೂವರು ಗಾಡಿ ಹತ್ತಿ ಓಡಿಬಿಟ್ಟರು. ಮತ್ತೊಬ್ಬನ ಹೇಳಿಕೆಯಂತೆ ಅವರು ಬಂದದ್ದು ದೊಡ್ಡ ಮೋಟಾರಿನಲ್ಲಲ್ಲ, ಹಿಂದು ಹಸುರು ಕಾರಿನಲ್ಲಿ. ಬೋಂಬೊಗೆದ ಮನುಷ್ಯ ಮರಳಿ ಕಾರನ್ನು ಹತ್ತಿ ಬಿಡಬೇಕೆಂದು ಅಲ್ಲಿಂದ ಬೇಗಬೇಗನೇ ಓಡಿದಾಗ ಅವನ ಸಂಗಾತಿಗಳು ಮೊದಲೇ ಕಾರು ಹತ್ತಿ ಓಡಿದ್ದುದರಿಂದ ಸಿಕ್ಕಿಬಿದ್ದ. ಮದನಲಾಲನಿದ್ದ ಅಲ್ಲಿಯ ಪ್ರಸಿದ್ಧ ಹೋಟೆಲೊಂದಕ್ಕೆ ಅವನ ಸಂಗಾತಿಗಳನ್ನು ಹಿಡಿಯಲು ಪೋಲೀಸರು ಹೋದಾಗ ಅಲ್ಲಿದ್ದ ಇಬ್ಬರು ಬೋಂಬು ಸಿಡಿದ ಒಂದು ಘಂಟೆಯ ಮೇಲೆ, ಪೋಲಿಸರು ಬರುವ ಎರಡು ಘಂಟೆಗ ಮೊದಲೇ ತಮ್ಮ ಬಿಲ್ಲನ್ನೆಲ್ಲಾ ಕೊಟ್ಟು ಹೊರಟು ಹೋಗಿದ್ದರೆಂದು ತಿಳಿದುಬಂತು. ಮರುದಿನ ಕೋವಿ ಧಾರಿ ಪೋಲಿಸ್ ಪಡೆಯು ಆ ಹೋಟೆಲಿನಲ್ಲಿ ಜಡ್ತಿ ನಡೆಸಿತು. 'ಅನ್ಯರಿಗೆ ಸಾವನ್ನೆಸಗಬಲ್ಲ ಸಿಡಿ ಮದ್ದುಗಳನ್ನು ಹಿಡಿದುಕೊಂಡ' ಆರೋಪಕ್ಕನುಸಾರವಾಗಿ ಸಿಡಿ ಮದ್ದು ಶಾಸನದ 4 ಮತ್ತು 5ನೇ ಸೆಕ್ಷನುಗಳನ್ವಯ ಮದನಲಾಲನ ವಿಚಾರಣೆಯಾಗಲಿದೆ.

ಗಾಂಧಿಜೀಯ ಹಿತಬೋಧೆ

ತಾ. 21ರ ಪ್ರಾರ್ಥನಾ ಸಭೆಯಲ್ಲಿ ಹಿಂದಿನ ದಿನದ ಬೋಂಬು ಸ್ಫೋಟದ ಕುರಿತು ಗಾಂಧಿಜೀ ತನ್ನ ಶುದ್ಧ ಹೃದಯಕ್ಕನುಸಾರವಾಗಿ ಹೀಗೆಂದರು: "ಅದು ನನ್ನನ್ನು ಕೊಲ್ಲಲಿಕ್ಕಾಗಿ ಒಗೆದ ಬೋಂಬೆಂಬ ಸಂಗತಿ ಆಗ ನನಗೆ ತಿಳಿದಿರಲಿಲ್ಲ. ನನ್ನ ಮೇಲೆ ಕಾಗಿ ಬೋಂಬೊಂದು ಸಿಡಿಯುವಂತಾದರೆ ಆ ಹೊತ್ತಿನಲ್ಲಿ ನಾನು ಹೇಗೆ ವರ್ತಿಸುವೆನೋ ಅದು ದೇವರಿಗೆ ಮಾತ್ರ ಗೊತ್ತು. ಆದ್ದರಿಂದ ಈಗ ನಾನು ಶ್ಲಾಘನೆಗರ್ಹನಲ್ಲ. ಅಂತಹ ಒಂದು ಬೋಂಬು ಸಿಡಿದು ನಾನು ಬಿದ್ದಲ್ಲಿ, ಮತ್ತು ಹೊತ್ತಿ ನಲ್ಲೂ ಅದನ್ನೊಗೆದವನ ಮೇಲೆ ಏನೊಂದೂ ದುರ್ಭಾವನೆಯಿಲ್ಲದೆ, ನನ್ನ ಮೊಗದಲ್ಲಿ ನಗೆ ಮಿಂಚುತ್ತಿದ್ದ ಪಕ್ಷದಲ್ಲಿ ಆಗ ಮಾತ್ರ ನಾನು ಸರ್ಟಿಫಿಕೇಟು ಪಡೆಯಲು ಯೋಗ್ಯನಾಗುತ್ತೇನೆ. ಈಗ ನಾನು ಹೇಳುವದೇನೆಂದರೆ ತಪ್ಪು ದಾರಿ ಹಿಡಿದ ಆ ತರುಣನನ್ನಾರೂ ದ್ವೇಷಿಸಬಾರದು. ನಾನೊಬ್ಬ ಹಿಂದೂತ್ವದ ವೈರಿಯೆಂದು ಅವನ ಭಾವನೆಯಿದ್ದಿರಬೇಕು. ಎಂದಾದರೂ ಧರ್ಮವನ್ನು ಹಾಳು ಮಾಡುವ ದುಷ್ಟನಿದ್ದಲ್ಲಿ ಅವನನ್ನು ಅಂತ್ಯಗೊಳಿಸಲು ದೇವರು ಯಾರನ್ನಾದರೂ ಕಳುಹಿಸುತ್ತಾನೆಂದು ಗೀತೆಯಲ್ಲಿ ಹೇಳಿಲ್ಲವೆ? ತನಗಿಂತ ಭಿನ್ನಾಭಿಪ್ರಾಯ ವಿರುವವರೆಲ್ಲಾ ದುಷ್ಟರೇ ಅಲ್ಲ ಎಂದು ಆ ತರುಣನು ತಿಳಿದಿರಬೇಕು. ಹಾಗೂ, ಪಾಪಾಚರಣೆಯವರ ನಿರ್ನಾಮ ಕ್ಕಾಗಿ ದೇವರಿಂದ ಕಳುಹಿಸಲ್ಪಟ್ಟ ಪಂಥು ಧ್ವನೆಂಟು ಭ್ರಮೆಯನ್ನು ಸ್ತ್ರೀ, ಅಥವಾ ಪುರುಷ ಯಾರೊಬ್ಬರೂ ಕಟ್ಟಿಕೊಳ್ಳಕೂಡದು. ಯಾವ ವಿಧದಿಂದಲೂ ಈ ತರುಣನನ್ನು ಉಪದ್ರವಿಸಬಾರದೆಂದು, ನಾನು ಪೋಲೀಸ್ ಇನ್ಸ್‌ಪೆಕ್ಟರ್ ಜನರಲಂಗೆ ಹೇಳಿದ್ದೇನೆ. ಎಲ್ಲರೂ ಅವನನ್ನು ಕನಿಕರದಿಂದ ಕಾಣಬೇಕು; ಪ್ರೇಮದಿಂದ ಅವನ ಹೃದಯವನ್ನು ಮಾರ್ಪಡಿಸಿ ಸನ್ಮಾರ್ಗಕ್ಕೆ ಹಚ್ಚಲು ನೋಡಬೇಕು. ನನ್ನ ಪ್ರಾಣವು ದೇವರ ಕೈಯಲ್ಲಿರುವುದರಿಂದ ಭಯವಿಲ್ಲ."

ನೋಟೀಸು.

ಮೂಲ್ಕಿ ಗ್ರಾಮಾಭಿವೃದ್ಧಿ ಸಂಘರು "3ನೇ ಕೃಷಿ ಕೈಗಾರಿಕೆ ಪ್ರದರ್ಶನವನ್ನು" ತನ್ನ ಮುಂದ್ಯಾರು ಸೆಂಟರಿನಲ್ಲಿ ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಇದೇ ಬರುವ

ಫೆಬ್ರವರಿ ತಾ. 27—28—29ಕ್ಕೆ

ಜರಗಿಸುವುದು.

ಪಶುಸ್ಪರ್ಧೆ ದರ್ಶನವೂ ನಡೆಯುವುದು.

ಸ್ಟೋಲ್ ಫೀ ಮತ್ತು ಪ್ರವೇಶನ ಟಿಕೇಟು ಸಹ ಇಲ್ಲವೆಂದು ನಿಶ್ಚಯಿಸಿರುತ್ತಾ, ಜಿಲ್ಲೆಯ, ಅನೇಕರು ಮಾಡುವ ಊರ ಕೃಷಿ ಕೈಗಾರಿಕೆ ವಸ್ತುಗಳನ್ನು ಕಳುಹಿಸಿ ಪ್ರದರ್ಶಿಸುವುದಲ್ಲದೆ ಎಲ್ಲವರೂ ಬಂದು ನೋಡಲು ಸ್ವಾಗತವಿದೆ.

ಮಹಾಬಲ ಶೆಟ್ಟಿ- ಅಧ್ಯಕ್ಷ.
ಕೆ. ನಾರಾಯಣ ಶೆಟ್ಟಿ-ಉಪಾಧ್ಯಕ್ಷ.
ಲಕ್ಷ್ಮಣ ಕಾಂಚನ-ಕೋಶಾಧಿಕಾರಿ.
ಸತ್ಯನಾರಾಯಣ ರಾವ್, ಎಲ್ಲಪ್ಪ ಶೆಟ್ಟಿ, ವೆಂಕಪ್ಪ ಶೆಟ್ಟಿ, ನಾರಾಯಣ ರಾವ್, ಶಿವಪ್ಪ ಶೆಟ್ಟಿ, ಎಮ್. ಆರ್. ಪೂಂಜ-ಕಾರ್ಯದರ್ಶಿಗಳು.

ಮೂಲ್ಕಿ 18-1-48.

ಬಾಲಕರ ಆರೋಗ್ಯ ಕಾಯರಿಗಲು
ಪ್ರಭೂಸ್ ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗಗಳಿಂದ ಪೀಡಿತರಾಗಿ, ದೇಹದಲ್ಲಿ ಬಲವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಸಂತೋಷ ಪಡಿಸುವಂತೆ ಮಾಡುವುದನ್ನು ಕಂಡುಕೊಳ್ಳಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೊ ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.



ಅಮೃತಾಂಜನ,
ತಲೆನೋವು, ಶೀತ, ನೆಗಡಿ, ಉಳುಕು, ಕತ್ತಿಗೆ, ಘಟ್ಟ, ಹಲ್ಲು ನೋವುಗಳ ಗಟ್ಟಿ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ಕಡಿತ ಮುಂತಾದ ಬೇನೆ ಗಳಿಗೆ ನೋವು ನಿವಾರಕ ಮುಲಾಮು

ಸರ್ವ ರೋಗಗಳಿಗೂ ಆಪ್ತ ಮುಲಾಮು
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಹೊಸ ವ್ಯವಸ್ಥೆ-ಆಧುನಿಕ ಕಲಕರಣೆ, ರೇಡಿಯೋ ಸಂಯೋಜನೆ—
ಎಲ್ಲಿ?
ನೇತಾಜಿ ಲಂಚ್ ಹೋಮ್
ಕಟಪಾಡಿ, ಇಲ್ಲಿಯೆ.
ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.
ಯೋಗ್ಯ ಉಪಹಾರ! ಉತ್ತಮ ಉಪಚಾರ!
ಊಟ ಮತ್ತು ವಿಶ್ರಾಂತಿಯ ವ್ಯವಸ್ಥೆಯೂ ಇದೆ.
ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
Nethaji Lunch Home,
Boarding & Lodging,
KATAPADI, S K.

ಮಾನವಂತತನದ ಸೋಗಿನಿಂದ ಸಡೆವ ಅನಾಚಾರ—ತಾರುಣ್ಯದುಬ್ಬಿ ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇದಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1—4—0 ಟ. ದ್ವಾರ 1—8—0

ಕದಂಬ

ಕಿರಿಯರ ಪ್ರಪಂಚದ ಪ್ರಕಟಣೆ — ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ 1—4—0

ಮನೆಮದ್ದು-*Home Remedies* ಬೆಲೆ ರೂ. 2-0-0

ಮಕ್ಕಳ, ಹೆಂಗಸರ, ಗರ್ಭಿಣಿ. ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇವೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200. ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪೊ ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ವಾಲಿಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಂತಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, 2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ವಿವರಕ್ಕೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು;—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ದಾಢವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ್, ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲದಾಸಿ, ಕೆ ಎಂಸ್ಸ್, ಹಾವೇರಿ ಬ್ಯಾಡಿ

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಭಾಯುವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇಟಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ: ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ,

Ayurveda Oushadhalaya GADAG

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

Regd No M. 3618 ಎರಡಾಣೆ 5-2-1948

ನವಯುಗ

ಹಾ! ಬಾಪೂಜಿ!

ಬಾಪೂಜೀ ನಮ್ಮನ್ನು ಬಿಟ್ಟು ಹೋದರು.

ಈ ತಾರೀಕು 30-1-48ನೇ ಶುಕ್ರವಾರ ಅಪರಾಹ್ನ 5¼ ಘಂಟೆಗೆ ನಮ್ಮ ಬಾಪೂಜೀ ತನ್ನ ನಶ್ವರಕಾಯವನ್ನು ಬಿಟ್ಟು ನಮ್ಮನ್ನು ಅನಾಥರನ್ನಾಗಿ ಮಾಡಿಟ್ಟು ಹೋದರು.

ಸೂರ್ಯ ಮುಳುಗಿದ. ನಮ್ಮ ಪಾಲಿನ ಮಾನುಷತ್ವ, ಬಾಳ್ವೆ, ಭಾಗ್ಯ ಇವೆಲ್ಲವುಗಳ ಬೆಳಕು ಬೀರುತ್ತಿದ್ದ ದಿನಮಣಿ ಅಸ್ತಮಿಸಿದ.

ಅವನಿಗೇನೆನ್ನಬೇಕೋ, ಅವನಾ ಸಂಸ್ಥೆಗೇನೆನ್ನಬೇಕೋ-ಪ್ರಪಂಚವಿದುವರೆಗಿಂತಹ ಕಲ್ಮಷವನ್ನರಿತಿಲ್ಲವಾದ್ದರಿಂದ ಇಂಥವನಿಗೆ ಹೇಳಿಸಿದ ಹೆಸರೂ ನಿರ್ಮಾಣವಾಗಿಲ್ಲ—ಹಿಂದೂಮಹಾಸಭೆಯ ವಿಷದ ಮುದ್ದೆಯೊಬ್ಬ ಗಾಂಧಿಜೀಯನ್ನು ಗುಂಡಿಟ್ಟು ಕೊಂದುಹಾಕಿದ. ನಾಲ್ಕು ಗುಂಡುಗಳನ್ನು ತೀರಾ ಸಮೀಪದಲ್ಲಿ ನಿಂತು ಆತ ಹೊಡೆದಿದ್ದ. ಬಾಪುಜೀಯ ಎದೆಗೆ ಕಿಬ್ಬೊಟ್ಟೆಗೆ ಗುಂಡುಗಳು ನಾಟಿದ್ದುವು. ಹಾಯ್!

ಗುಂಡಿಟ್ಟವನ ಹೆಸರು ಬೇಕೆ? ನಿಮ್ಮ ಕಿವಿಗೆ ಕಾದ ಕಬ್ಬಿಣವನ್ನು ಸುರಿಯಬಹುದೆ? ಪ್ರಪಂಚದ ಚರಿತ್ರೆಯಲ್ಲಿ ಎಲ್ಲಕ್ಕಿಂತ ದಪ್ಪ ಕರಿ ಮಸಿಯಿಂದ ಬರೆಯಲ್ಪಡತಕ್ಕ ಆ ಅಕ್ಷರಗಳನ್ನೂ ಉಲ್ಲೇಖಿಸಬಹುದೇ-ಆ ಪಾಪಾವಧಿ ಪಾಪಿಯ ಹೆಸರು 'ನಾಥುರಾಮ್ ವಿನಾಯಕ್ ಘೋಡ್ಸೆ'. ಪೂನೆಯ ಹಿಂದೂ ಮಹಾಸಭೆಯ ಕಾರ್ಯದರ್ಶಿ; ಆರ್. ಯಸ್. ಯಸ್. (ರಾಷ್ಟ್ರೀಯ ಸ್ವಯಂಸೇವಕ ಸಂಘ)ದ ಸದಸ್ಯ; 'ಹಿಂದೂ ರಾಷ್ಟ್ರ' ಪತ್ರಿಕೆಯ ಸಂಪಾದಕ.

ಬಡವನ ಪ್ರತಿಬಿಂಬವಾಗಿದ್ದ ಆ ಅನಾಚ್ಛಾದಿತ ಎದೆಗೆ ಗುಂಡು ಬಿದ್ದು ಚಿಮ್ಮಿದ ರಕ್ತ-ಬಿಲ ಕೊರೆದಿದ್ದ ಬಾಪೂ ಕಾಯವನ್ನು ಎತ್ತಿ ಹಿಡಿದು ವಲ್ಲಭಾಯಿಗಳು ಹಾಕಿದ ಬೊಬ್ಬೆ-ನೆಹರುಗಳ ಆರ್ತನಾದ, ಮೂರ್ಛೆ—ಯಾರು ನೋಡಬೇಕು!

ಬಾಪೂಜೀಯ ಕಳೇಬರವು ತಾ 31-1-48ನೇ ಶನಿವಾರ ಪೂರ್ವಾಹ್ನ 11 ಘಂಟೆಗೆ ಮೆರವಣಿಗೆಯಿಂದ ಜಮುನಾ ನದಿ ತಟಕ್ಕೊಯ್ಯಲ್ಪಟ್ಟು ಅಲ್ಲಿ 4½ ಘಂಟೆಗೆ ದಹನವಾಯಿತು. ಬಾಪೂ ಶವ ಮೆರವಣಿಗೆಗೆ 10 ಲಕ್ಷಕ್ಕೂ ಮಿಕ್ಕಿದ ಜನ ಸಂದಣಿ ಸೇರಿದ್ದಿತು. ಭಾರತದ ಹೆಚ್ಚಿನ ಪ್ರಮುಖರು,ಗವರ್ನರುಗಳು, ಮಂತ್ರಿಗಳು ಎಲ್ಲಾ ಸೇರಿದ್ದರು. ಆ ದೃಶ್ಯವರ್ಣನಾತೀತ; ಅಲ್ಲಿಯ ಜನ ನುಗ್ಗಾಟ ಧರೆ ಬಿರಿಯುವಂತೆ ಕವಿದ್ದರೆ, ಅಲ್ಲಿ ಏಳುತ್ತಿದ್ದ ಜಯಘೋಷ ಗಗನ ಭೇದಿಸವಿದ್ದಿತು. ಕರುಳು ಕತ್ತರಿಸಿ ಹೊರಬರುತ್ತಿದ್ದ ಕೂಗುಗಳು ಬೊಬ್ಬೆಗಳು ಶಿಲೆ ಕರಗಿಸುವಂತಹವಿದ್ದುವು ಚಿತೆಗೆ ಬೆಂಕಿ ಹಚ್ಚುವಾಗ ಪಂಡಿತ ನೆಹರುಗಳು ತಲೆತಿರುಗಿ ಬೀಳುವುದರಲ್ಲಿದ್ದರು; ಲೋರ್ಡ್ ಮತ್ತು ಲೇಡಿ ಮೌಂಟ್ ಬೇಟನರು ಪಂಡಿತಜೀಯನ್ನು ಹಿಡಿದು ಮೈ ಕುಲುಕಿ ಎಚ್ಚರಿಸಬೇಕಾಯಿತು. ಧುರೀಣ ಧುರೀಣರೆಲ್ಲಾ ತಾಯಿಯನ್ನು ಕಳಕೊಂಡ ತಬ್ಬಲಿಗಳಂತೆ ಅಳುತ್ತಿದ್ದರು. ಪ್ರಪಂಚದ ಪ್ರತಿಯೊಂದು ರಾಷ್ಟ್ರದ ಪ್ರತಿಯೊಬ್ಬ ಪ್ರಮುಖಾಧಿಕಾರಿ ಮತ್ತು ನಾಯಕನೂ, ಲೋಕದ ಅತಿದೂಡ್ಡ ಮ[illegible] ಮರಣಕ್ಕಾಗಿ ದುಃಖ ಸೂಚಿಸಿದ್ದಾರೆ; ದಂಗುಬಡೆದು ಹಾಹಾಕಾರ ಹಾಕಿದ್ದಾರೆ. ಜಾಗತಿಕ ಸಂಘದಲ್ಲಿ, ಮತ್ತೆಲ್ಲಾ ಕಡೆಗಳಲ್ಲಿ ಧ್ವಜಗಳು ಅರ್ಧಕ್ಕಿಳಿಸಲ್ಪಟ್ಟುವು ಒಮ್ಮೆ ಇಡೀ ಪ್ರಪಂಚಕ್ಕೆ ಕತ್ತಲೆ ಕವಿದ ಕಟು ಅನುಭವವಾಯಿತು.

ಹಾ! ಏನಾಗಿ ಹೋಯಿತು! ನಾವು ಅಕಸ್ಮಾತ್ ಅನಾಥರಾಗಿ ಹೋದೆವು! ಬಾಪೂಜೀ ಇನ್ನಿಲ್ಲ! ಮಾನವ ಜನಾಂಗದ ಹೃದಯಕ್ಕೆ ನಾಟಿರುವ ವಿಷದ ಮುಳ್ಳನ್ನು ಕಿತ್ತೊಗೆಯಲು ನಿಂತಲ್ಲಿಯೇ ಉರುಳಿಬಿದ್ದರು! ಇಡೀ ಪ್ರಪಂಚದ ಪಾಲಿನ ಕಲ್ಪವೃಕ್ಷವು ಒಂದೇ ಹೊಡೆತಕ್ಕೆ ಮುರಿದು ಬಿತ್ತು! ಮಾನವತ್ವವನ್ನು ಮೇಲಕ್ಕೆತ್ತಲು ಕೈಕೊಟ್ಟಲ್ಲಿಯೇ ಎದೆಗೆ ಗುಂಡು! ಮಾತಾಡಲು ಹೋಗುವಾಗಲೇ ಮರಣ! ಅಮೃತ ಬಿಂದುಗಳನ್ನು ಸುರಿಸಲೇಳುವಾಗಲೇ ಅಪಮೃತ್ಯು! ರಾಮಧುನ್ ಹಾಡಲು ಹೊರಟಿರುವಾಗ ('ಹಿಂದು' ಹೆಸರಿನ) ರಾಕ್ಷಸನಿಂದ ಕೊಲೆ! ಅಬ್ಬಾ ಮರಣ ಮಹಾತ್ಮೆಯೇ! ಅಪಮೃತ್ಯುವಿನ ಪ್ರತೀಕಾರವೇ! ತನ್ನ ಬಾಯಿ ತುತ್ತುಗಳಿದ್ದ ಕೋಟ್ಯಾವಧಿ ಜೀವಗಳನ್ನು ತಪ್ಪಿಸಿಬಿಟ್ಟ, ಮತ್ತಾಗಲೂ ಅಪಮೃತ್ಯುವಿನ ಆಹುತಿಯನ್ನು ತಪ್ಪಿಸುವುದರಲ್ಲೇ ನಿರತನಾಗಿದ್ದ, ಆ ದೊಂದು ಜೀವವನ್ನು ಆ ಅಪಮೃತ್ಯುವು ಅಕಸ್ಮಾತ್ ಆಕ್ರಮಿಸಿಕೊಂಡು ಸೇಡು ತೀರಿಸಿಕೊಂಡ ಬಗೆಯೇ!

ಮೊನ್ನೆ ತಾನೇ ಉಪವಾಸದಿಂದೆದ್ದು ಪೂರ್ಣ ನಿತ್ರಾಣಗೊಂಡಿದ್ದ ಜೀವವದು. ಕಿಬ್ಬೊಟ್ಟೆಗೆ ಮೊದಲನೇ ಗುಂಡು ಹೊಕ್ಕಾಗಲೇ ಅದು ಹೊರಟುಹೋಗಲಿದ್ದಿತು; ಮೊದಲ ಗುಂಡು ಹಾರುವದರೊಂದಿಗೇನೇ ಪ್ರಪಂಚದ ಸಾರವಾರಿದ್ದಿತು! ಆ ಗುಂಡು ಬಿದ್ದೊಡನೆ ಬಾಪೂಜೀ ಕೈ ಮುಗಿದುಕೊಂಡು ಸಭೆಯತ್ತ ಶಾಂತಮುಖಮಾಡಿ 'ರಾಮ,ರಾಮಾ, ರಾಮಾ!!!'-ಎನ್ನುತ್ತಾ ಉರುಳಿದರು. ಅಷ್ಟರೊಳಗೆ ಮತ್ತೆರಡು ಗುಂಡು ನಾಟಿದ್ದಿತು—ಎದೆಗೆ! ಮತ್ತೆ ಕಾಣುವಾಗ ಅದು ಶವದ ಮುಖವಾಗಿರಲಿಲ್ಲ—ಶಾಂತಿಸುಖ ಅಲ್ಲಿ ಬೀಡು ಬಿಟ್ಟಿದ್ದಿತು. ಅದು ಹೆಣದ ಮುಖವೆಂದು ತೋರುತ್ತಿರಲಿಲ್ಲ ಬೇರೆಲ್ಲಿಯೂ ಸ್ಥಾನದೊರೆಯದೆ ಶಾಂತಿದೇವಿ ಆಗಲೂ ಈ ಮುಖದಲ್ಲೇ ಮನೆ ಮಾಡಿದ್ದಳು-ಸುಮಾರು 30ವರ್ಷಗಳಿಂದ ಪ್ರತಿಯೊಂದು ಕ್ಷಣವನ್ನೂ, ತನ್ನ ಶಕ್ತಿ ಮತ್ತು ರಕ್ತದ ಪ್ರತಿಯೊಂದು ಕಣವನ್ನೂ ಜನತಾ ಜನಾರ್ದನನ ಸೇವೆಯಲ್ಲಿ ಸವೆಯಿಸುತ್ತಾ ಬಂದಿದ್ದ ಆ ಜೀವಕ್ಕೆ ವಿಶ್ರಾಂತಿ ದೊರೆಯಿತು. ಕೊನೆಗೊಮ್ಮೆ ಶಾಂತಿ ಲಭಿಸಿತು ಎಂಬುದನ್ನು ಆ ಮುಖ ಹೇಳುತ್ತಿತ್ತು ಈ ಪಾಪೀ ಸಮೂಹದಲ್ಲಿ ಇದ್ದುಕೊಂಡು ಅದೇನೇ ಹೇಳಿದರೂ ಒಂದೇ ಒಂದು ಕ್ಷಣದ ಶಾಂತಿಯನ್ನಾದರೂ ಆಜೀವಕ್ಕೆ ಕೊಡದಿದ್ದವರು ಇನ್ನು ತಾವು ಮಾಡಿದ್ದನ್ನು ತಾನೇ ಉಣ್ಣಲಿ!

ಹಾ! ಏನಿದು! ಹೃದಯವನ್ನು ಕೊರೆದುಕೊಂಡು ಮೂಡಿ ತೋರುತ್ತಿರುವ ಆ ದೃಶ್ಯವೆಂತಹದಿದು! ಮಹಾತ್ಮಾ ಕ್ರೈಸ್ತನ ನಂತರ ಇಡೀ ಲೋಕಕ್ಕೇನೇ ನಿರ್ಮಿಸಲಾಗದ, ಪ್ರಪಂಚದ ಸದಾಕಾಲದ ಒಂದು ಅಮೂಲ್ಯ ವಸ್ತುವನ್ನು ಒಂದೇ ಹೊಡೆತಕ್ಕೆ ಧ್ವಂಸ ಮಾಡಿ ಬಿಡಲು ಒಂದು ನರ ಹುಳುವಿಗೆ ಸಾಧ್ಯವಾಗಿ ಹೋಯಿತು! ಪ್ರಾಚೀನ ಕಾಲದ ಋಷಿ ಮುನಿಗಳ ತತ್ವಗಳಿಂದಾರಂಭಿಸಿ, ಆಧುನಿಕ ಜಗತ್ತಿನ ವರೆಗಿನ ಸರ್ವಸಾರದ ಸಂಗ್ರಹದಿಂದಾದ ಮಹಾತ್ಮನೊಬ್ಬನಿಗೆ ಮರಣವೊಡ್ಡಲು ಒಂದು ಕೀಟ ಸಾಕಾಯಿತು! ನಿರ್ಮಾಣದಲ್ಲಿರುವ ಪ್ರಯಾಸಕ್ಕೂ ನಿರ್ನಾಮದ ಸುಲಭವೆಂಬುದಕ್ಕೂ ಇದಕ್ಕಿಂತ ದೊಡ್ಡ ಬೇರೊಂದು ನಿದರ್ಶನ ದೊರೆತೀತೆ?

ಹೇಗದು? ಗಾಂಧಿಜೀ ಸತ್ತಿಲ್ಲ; ನಾಲ್ಕು ಗುಂಡುಗಳ ಹಾರಾಟದಿಂದ ಸಾಯುವವರು ಅವರಲ್ಲ-.40 ಕೋಟಿ ಗುಂಡುಗಳು ಒಂದೇಬಾರಿ ಹಾರಿ 40 ಕೋಟಿ ಹಿಂದೀ ಜೀವಗಳೇನೂ ಹಾರಿಹೋಗಿಲ್ಲವಾದ್ದರಿಂದ ಬಾಪೂಜೀಯೂ ಹೋಗಿಲ್ಲ. ಯಾರು'ಗಾಂಧಿ'ಯಲ್ಲ? 'ಗಾಂಧಿ' ಯಾರಲ್ಲಿಲ್ಲ? ನೆಹರು, ವಲ್ಲಭಾಯಿಗಳಿಂದಾರಂಭಿಸಿ, ಜಿನ್ನಾರವರೆಗಿನ ಎಲ್ಲರೂ ಗಾಂಧಿಜೀಯ ನಿರ್ಮಾಣ. ಬಿಳಿಟೋಪಿಧಾರಿ ಸಾಮಾನ್ಯ ಹಾದಿಹೋಕನಿಂದಾರಂಭಿಸಿ, ಇಂದು ಗವರ್ನರ್ ಆಗಿರುವವರ ವರೆಗಿನ ಎಲ್ಲರಲ್ಲೂ 'ಗಾಂಧೀ' ತುಂಬಿದ್ದಾರೆ. ನಮ್ಮ ನಿತ್ಯಜೀವನದ ಕ್ಷಣ ಕ್ಷಣದ ಆಗುಹೋಗುಗಳಿಂದಾರಂಭಿಸಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ವೈದ್ಯಕೀಯ, ಆಧ್ಯಾತ್ಮಿಕ, ವೈಜ್ಞಾನಿಕ,ಧಾರ್ಮಿಕ, ನೈತಿಕ, ರಾಜಕೀಯ, ಎಲ್ಲಾ ವಿಭಾಗಗಳಲ್ಲೂ 'ಗಾಂಧಿತ್ವ' ಹರಡಿಹೋಗಿದೆ. ಅದೊಂದು ವಿಷಜೀವಿಯ ಕಿಸೆ ರಿವಾಲ್ವರಿನಿಂದ ಸಿಡಿದ ನಾಲ್ಕು ಗುಂಡುಗಳು ಭಾರತವನ್ನೇ ಅಡಿಮೇಲುಮಾಡಿ ಹಾಕಿರುವವೆ? ಇಲ್ಲೇನು ಪ್ರಳಯವಾಯಿತೇ? ಇಲ್ಲಪ್ಪೆ. ಹಾಗಾದರೆ ಮಹಾತ್ಮಾಜೀ ಇದ್ದಾರೆ. ಈ ತನಕ ಎಲ್ಲಾ ಹೃದಯಗಳಿಗೂ ಸುಧೆ ಸುರಿಯುತ್ತಾ ಆ ಅಮೃತಕಲಶ ಅಲ್ಲಿತ್ತು; ಜನತೆ ಕಣ್ಮುಚ್ಚಿ ಕರೆಯುವುದರೊಳಗೆ—"ಓ ಪಾಪೀ! ಆ ಜೀವವನ್ನು ಮುಟ್ಟಬೇಡಾ! ಅದರ ಬದಲಿಗೆ ನಿನಗೆಷ್ಟು ವಿಲಿಯ ಜೀವಬೇಕೋ,ತೆಗೆದುಕೋ" ಎಂದು ಪ್ರಪಂಚದ ಜನಾಂಗವೇ ಕೂಗು ಹಾಕುತ್ತಾ ತಡೆಯಲು ಓರವುದರೊಳಗೆ—ಕಾಲ ಯಮ ಘಕ್ಕನೇ ಒಡೆದು

(೧೨ನೇ ಪುಟ ನೋಡಿರಿ.)

ಬಾಪೂಜೀಯ ಬಾಳುವೆ

ಜನನ. **1869 ಒಕ್ಟೋಬರ್ 2.**

ಮರಣ: **1948 ಜನವರಿ 30.**

1869ನೇ ಒಕ್ಟೋಬರ್ ತಾ 2ರಲ್ಲಿ ಜನನ.

1893ರಲ್ಲಿ ದಕ್ಷಿಣಾಫ್ರಿಕಕ್ಕೆ ಪ್ರಯಾಣ

1895ರಲ್ಲಿ ದ. ಆಫ್ರಿಕದಿಂದ ಭಾರತಕ್ಕೆ ಪುನರಾಗಮನ.

1896ರಲ್ಲಿ ಪುನಃ ದ ಆಫ್ರಿಕಕ್ಕೆ ಪಯಣ.

1899ರಲ್ಲಿ ಅಲ್ಲಿಯ ಆಂಗ್ಲೋ-ಬೋವರ್ ಯುದ್ಧದಲ್ಲಿ ಎಂಬ್ಯುಲೆನ್ಸ್ ದಳದ ನಿರ್ಮಾಣ.

1901ರಲ್ಲಿ ಭಾರತಕ್ಕೆ ಪುನರಾಗಮನ.

1902ರಲ್ಲಿ ಮರಳಿ ದ. ಆಫ್ರಿಕ ಪ್ರಯಾಣ.

1904ರಲ್ಲಿ ಜೋಹನ್ಸ್‌ಬರ್ಗಿನಲ್ಲಿ ಪ್ಲೇಗು ವ್ಯಾಪಿಸಿದಾಗ ಪ್ರಯತ್ನಿಸಿ ಅದರ ನಿವಾರಣ.

1906ರಲ್ಲಿ ನೇಟಾಲಿನ ಮೂಲನಿವಾಸಿಗಳು ದಂಗೆಯೆದ್ದಾಗ ಆಪನ್ನಿವಾರಕ ದಳದ ರಚನೆ.

1906ರಲ್ಲೇ 'ಏಷ್ಯಾ ನಿರೋಧಕ' ಶಾಸನದ ವಿರುದ್ಧವಾಗಿ ಅಸಹಯೋಗ ಪ್ರತಿಭಟನೆಯ ಪ್ರತಿಜ್ಞಾಧಾರಣ.

1907ರಲ್ಲಿ 'ದೇಶ ಬಿಡಿಸುವ ಮಸೂದೆ' ಅಸ್ತಿತ್ವಕ್ಕೆ ಬಂದಾಗ ಅದನ್ನು ವಿರೋಧಿಸಿ ಭಾಷಣ ಕೊಟ್ಟು ಬಂಧನ.

1908ರಲ್ಲಿ 'ಸ್ವಯಂ ಪ್ರೇರಣೆಯ ರಿಜಿಸ್ಟ್ರೇಶನ್'ನ್ನು ಸಮರ್ಥಿಸಿದಾಗ ತತ್ಪರಿಣಾಮವಾಗಿ ಪುಂಡರ ತಂಡದಿಂದ ಬಲವಾಗಿ ತಾಡನ.

1913ರಲ್ಲಿ 3 ಪೌಂಡುಗಳ ತೆರಿಗೆ ಹೇರಲ್ಪಟ್ಟಾಗ ಅದನ್ನು ವಿರೋಧಿಸಿ ಅಸಹಯೋಗೀ ಅಸಹಕಾರ ಜ್ವಾಲೆಯ ಪುನರುದ್ದೀಪನ.

1913ರಲ್ಲೇ ಸ್ಮಟ್ಸ್-ಗಾಂಧೀ ಕರಾರುಬದ್ಧ ಸಂಧಾನ.

1914ರಲ್ಲಿ ದಕ್ಷಿಣಾಫ್ರಿಕ ಸರಕಾರದೊಡನೊಂದು ರಾಜೀ ಕರಾರುನಿರ್ಮಾಣ.

ಈ ಅವಧಿಯೊಳಗೆ ಒಂದೆರಡು ಬಾರಿ ಅನಶನ ವ್ರತ ಧಾರಣ.

× +

1914ರಲ್ಲೇ ಲಂಡನಿಗೆ, ಅಲ್ಲಿಂದ ಭಾರತಕ್ಕೆ ಬಂದು ಪ್ರಥಮ ಜಾಗತಿಕ ಯುದ್ಧಕ್ಕಾಗಿ ಹಿಂದೀ ಸ್ವಯಂಸೇವಕ ದಳ ತಯಾರಿಸಿದುದು.

1915ರಲ್ಲಿ ಬ್ರಿಟಿಷ್ ಸರಕಾರದಿಂದ 'ಕೈಸರೀ ಹಿಂದ್' ಮೆಡ್ಲ್ ಪಡೆದುದು.

1916ರಲ್ಲಿ ಅಹಮ್ಮದಾಬಾದಿನಲ್ಲಿ ಸತ್ಯಾಗ್ರಹ ಆಶ್ರಮ ಸ್ಥಾಪಿಸಿದುದು.

1917ರಲ್ಲಿ ಚಂಪಾರಣ್ಯದಲ್ಲಿ ದಸ್ತಗಿರಿಯಾದುದು.

1919ರಲ್ಲಿ ರೌಲೆಟ್ ಆಕ್ಟ್ ಜ್ಯಾರಿಗೆ ಬಂದುದು.

1919ರಲ್ಲೇ ರೌಲೆಟ್ ಆಕ್ಟ್ ಶಾಸನದ ವಿರುದ್ಧ ಸತ್ಯಾಗ್ರಹ ಪ್ರತಿಜ್ಞೆ ಕೈಗೊಂಡುದು.

1919ರಲ್ಲೇ ಸತ್ಯಾಗ್ರಹವನ್ನು ಅಪಮಾನಕುಪಡಿಸಿ ಉಪವಾಸ ವ್ರತಧಾರಿಯಾದುದು.

1919ರಲ್ಲೇ ಪಂಜಾಬು ಅತ್ಯಾಚಾರ ಮತ್ತು ಖಿಲಾಫತ್ ಅನ್ಯಾಯಗಳಿಗಾಗಿ ಬಲವಾದ ಚಳವಳ ಹೂಡಿದುದು.

1920ರಲ್ಲಿ ಕೈಸರೀ ಹಿಂದ್ ಮೆಡಲನ್ನು ಮರಳಿಸಿ ಅಸಹಕಾರ ಸಮರ ಘೋಷಣೆ.

1921ರಲ್ಲಿ ಡ್ಯೂಕ್ ಓಫ್ ಕನ್ನಾಟರಿಗೊಂದು ಬಹಿರಂಗ ಪತ್ರ ರವಾನೆ.

1921ರಲ್ಲೇ ವೈಸರಾಯಿ ಲೋರ್ಡ್ ರೀಡಿಂಗರೊಡನೆ ಮುಖಾಮುಖಿ ಸಂಭಾಷಣೆ.

1921ರಲ್ಲೇ ಪ್ರಿನ್ಸ್ ಓಫ್ ವೇಲ್ಸರ ಆಗಮನ ಮತ್ತು ಬೊಂಬಾಯಿಯಲ್ಲಿ ರಕ್ತ ಪಾತದ ಘರ್ಷಣೆ; ಅನಶನ ತಪಾಚರಣೆ.

1922ರಲ್ಲಿ ಲೋರ್ಡ್ ರೀಡಿಂಗರಿಗೆ ಕೊನೆಯ ಎಚ್ಚರಿಕೆಯ ಒಂದು ಒಕ್ಕಣೆ.

1922ರಲ್ಲೇ ಚೌರಿಚೌರಾದಲ್ಲಿ ಜಾತೀಯ ದೊಂಬಿಯ ಘಟನೆ. ಅದಕ್ಕಾಗಿ ಉಪವಾಸಧಾರಣೆ.

1922ರಲ್ಲೇ ಅಹಮ್ಮದಾಬಾದಿನಲ್ಲಿ ಬಂಧನ ಮತ್ತು 6 ವರುಷಗಳ ಸಜೆ ದೊರೆತ ವಿಚಾರಣೆ.

1924ರಲ್ಲಿ ಕಾಹಿಲೇ ಸಂಬಂಧವಾಗಿ ಬಿಡುಗಡೆ ಮತ್ತು ಶಸ್ತ್ರಕ್ರಿಯೆ. ಆ ಮೇಲೆ 'ಯಂಗ್ ಇಂಡಿಯಾ' ಪತ್ರಿಕೆಯ ಸಂಪಾದನೆ.

1924ರಲ್ಲೇ ಉಪವಾಸ ವ್ರತ ಮತ್ತು ವರುಷವೇ ಬೆಳಗ್ಗಾಂವಿ ಕಾಂಗ್ರೆಸಿನ ಅಧ್ಯಕ್ಷ ಪೀಠಾರೋಹಣೆ.

× ×

1929ರಲ್ಲಿ ಲಾಹೋರು ಕಾಂಗ್ರೆಸಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ಗುರಿಯೆಂಬ ನಿರ್ಧಾರ.

1930ರಲ್ಲಿ ಕಾಯಿದೇಭಂಗ ಹೋರಾಟ ನಡಿಸಲು ಕಾಂಗ್ರೆಸಿನಿಂದ ಸರ್ವಾಧಿಕಾರ.

1930ರಲ್ಲೇ ವೈಸರಾಯೀ ಲೋರ್ಡ್ ಇರ್ವಿನರೊಡನೆ ಪತ್ರ ವ್ಯವಹಾರ; ದಂಡೀ ಯಾತ್ರೆ ಉಪ್ಪಿನ ಕಾನೂನು ಭಂಗ ಚಳವಳದ ರಾಷ್ಟ್ರಸ್ವೀಕಾರ.

1931ರಲ್ಲಿ ಕಾರಾಗಾರ ಮತ್ತು ವರ್ಷವೇ ಮುಕ್ತದ್ವಾರಾ.

1931ರಲ್ಲೇ ದುಂಡು ಮೇಜು ಸಮ್ಮೇಳನಕ್ಕಾಗಿ ಲಂಡನಿಗೆ ಸವಾರಿ ಮತ್ತು ಮರುಸಂಚಾರ.

1932ರಲ್ಲಿ ಕಾಯಿದೇ ಭಂಗ ಚಳವಳದ ಪುನರುದ್ದೀಪನಕ್ಕಾಗಿ ಕಾರಾಗಾರ. ಅಲ್ಲಿ ಮಿಸ್. ಸ್ಲೇಡಗಳನ್ನು ತನ್ನೊಡನೆ ಮಾತನಾಡಲು ಬಿಡದಿದ್ದುದರ ನಿಷೇಧಾರ್ಥವಾಗಿ ವಾರ ಸಂಭಾಷಣೆಗೇನೇ ಧಿಕ್ಕಾರ.

1932ರಲ್ಲೇ ಹರಿಜನರಿಗೆ ಪ್ರತ್ಯೇಕ ಮತದಾನ ಕೊಡುವ 'ಮೆಕ್ಡೊನಾಲ್ಡ್ ಎವಾರ್ಡ್'ನ ವಿರುದ್ಧವಾಗಿ ಆಮರಣಾಂತ ಉಪವಾಸ ಕೈಕೊಳ್ಳುವೆನೆಂದು ಬ್ರಿಟನ್ನಿನ ಪ್ರಧಾನ ಮಂತ್ರಿ ಮತ್ತು ಭಾರತ ಕಾರ್ಯದರ್ಶಿಗೆ ಪತ್ರ ಬರೆದು ಅದರಂತೆ ಪ್ರಾಣಾವಧಿ ಉಪವಾಸಧಾರಣೆ, ಅಂಬೇಡ್ಕರ್ ಮತ್ತು ಹಿಂದೂ ಪ್ರಮುಖರೊಳಗಾದ ಒಪ್ಪಂದಾನುಸಾರ 'ಎವಾರ್ಡ್' ರದ್ದಾಗಿ ಆಹಾರ ಸ್ವೀಕಾರ.

1932ರಲ್ಲೇ ಜೈಲಿನಿಂದಲೇ ಅಸ್ಪೃಶ್ಯತಾ ನಿವಾರಣಾ ಪ್ರಚಾರ.

1933ರಲ್ಲಿ ಮತ್ತೊಮ್ಮೆ 21 ದಿನಗಳ ಉಪವಾಸಧಾರಣೆ; ಬಿಡುಗಡೆ ಕಾಯಿದೇ ಭಂಗವನ್ನು ಅವಮಾನತುಪಡಿಸಿ ಓರ್ಡಿನೆನ್ಸುಗಳನ್ನು ಹಿಂತೆಗೆದುಕೊಳ್ಳುವಂತೆ ಸರಕಾರವನ್ನು ಕೇಳಿಕೊಂಡು ಮೂರು ವಾರಗಳ ನಂತರವೇ ಆಹಾರ ಸ್ವೀಕಾರ. ಭೇಟಿಯಾಚಿಸಿದ್ದಕ್ಕೆ ವೈಸರಾಯರ ನಕಾರ.

1933ರಲ್ಲೇ ಸ್ವರಾಜ್ಯ ವಿನಹಾ ಇದು ಬೇಡವೆಂದು ಸಬರ್ಮತಿ ಆಶ್ರಮವನ್ನು ಬಹಿಷ್ಕೃತಪಡಿಸಿದುದು. 33 ಅನುಯಾಯಿಗಳೊಡನೆ, ರಾಸ್‌ನತ್ತ ಸತ್ಯಾಗ್ರಹ ದಾಡು; ಎಲ್ಲರೊಂದಿಗೆ ಪುನಃ ಕೈದು; ಕಾರಾಗಾರ.

1933ರಲ್ಲೇ ಬಿಡುಗಡೆ ಹೊಂದಿ, ಪ್ರತಿಬಂಧಕಾಜ್ಞೆಯನ್ನು ಮುರಿದುದಕ್ಕಾಗಿ ಪುನಃ ದಸ್ತಗಿರಿಯಾಗಿ ಜೈಲಲ್ಲಿ ಪುನಃ ಉಪವಾಸ ಸ್ವೀಕಾರ.

1933ರಲ್ಲೇ ನಿಶ್ಶರ್ತ ಬಿಡುಗಡೆ; ಕಾಯಿದೇಭಂಗ ಚಳವಳದ ಅವಮಾನತು; ಹರಿಜನೋದ್ಧಾರಕ್ಕಾಗಿ ದೇಶವ್ಯಾಪೀ ಪ್ರಚಾರ.

1934ರಲ್ಲಿ ಭೂಕಂಪಪೀಡಿತ ಕ್ಷೇತ್ರ ಸಂಚಾರ.

1934ರಲ್ಲೇ ಪೂನೆಯಲ್ಲಿ ಕಾರಿಗೊಂದು ಬೋಂಬು-ಅಪಾಯವಾಗಲಿಲ್ಲ. ಹರಿಜನೋದ್ಧಾರ ಸಂಚಾರ ಮುಗಿಸಿ ವಾರ್ಧಾಕ್ಕೆ ಬಂದು ಮತ್ತೊಂದು ಅನಶನವ್ರತ ಒಂದು ವಾರ.

× ×

1934ರಲ್ಲೇ ಕಾಂಗ್ರೆಸಿನ ನಿಯಮಬದ್ಧ ಸರ್ವ ಸಂಬಂಧಗಳನ್ನೂ ಕಡಿದುಕೊಂಡುದು. ಗಡಿನಾಡಿನಲ್ಲಿ ಸಂಚಾರ. ಕಾಂಗ್ರೆಸ್ ಘಟನೆಯ ಸುಧಾರಣೆ, ಚುನಾವಣೆ, ವೈಸರಾಯಿಯೊಡನೆ ನಡೆಸಿದ್ದ ಪತ್ರ ವ್ಯವಹಾರ ಇತ್ಯಾದಿಗಳ ಕುರಿತು ಬಹಿರಂಗ ಹೇಳಿಕೆಗಳನ್ನಿತ್ತುದು.

1935ರಲ್ಲಿ 4 ವಾರಗಳ ಮೌನ ವ್ರತ ಕೈಕೊಂಡುದು;

1936ರಲ್ಲಿ ವಾರ್ಧಾಕ್ಕೆ 5 ಮೈಲು ದೂರದ ಸೇವಾ ಗ್ರಾಮದಲ್ಲಿ ತನ್ನ ಮುಖ್ಯ ಕಾರ್ಯಾಲಯ ಹಾಗೂ ಆಶ್ರಮವನ್ನು ಸ್ಥಾಪಿಸಿಕೊಂಡದ್ದು.

1937ರಲ್ಲಿ ಹಿಂದೀ ಬಿಕ್ಕಟ್ಟಿನ ಕುರಿತು ಲೋರ್ಡ್ ಝೆಟ್ಲೇಂಡರ ಹೇಳಿಕೆ. ಆ ಸಂಬಂಧ ವಿಚಾರಣಾ ಮಂಡಲಿ ರಚಿಸಬೇಕೆಂದು ವಾದಿಸಿದುದು. ಕಾಂಗ್ರೆಸ್ ಮಂತ್ರಿಗಳ, ಕಾಂಗ್ರೆಸ್ ಸಮತಾವಾದಿಗಳ, ಮತ್ತು ಕಾಂಗ್ರೆಸ್ ಹುಳುಕುಗಳ ಕುರಿತು ಆಗಾಗ ಸದ್ಬೋಧೆಗಳನ್ನಿತ್ತುದು.

1938ರಲ್ಲಿ ಸಂಸ್ಥಾನಿಕ ಪ್ರಜೆಗಳ ಸಂಕಷ್ಟಗಳ ಕುರಿತು ಆಸಕ್ತಿ ವಹಿಸಿದುದು.

1939ರಲ್ಲಿ ಬಾಬು ಸುಭಾಸಚಂದ್ರ ಬೋಸರು ಪುನಃ ರಾಷ್ಟ್ರಪತಿಯಾಗಿ ಆರಿಸಲ್ಪಟ್ಟ ಕುರಿತು ಬಲವಾದ ಆಕ್ಷೇಪ ಸೂಚಿಸಿದುದು.

1939ರಲ್ಲೇ ರಾಜಕೋಟ ಸಂಸ್ಥಾನದ ಸುಧಾರಣೆಗಾಗಿ ಆಮರಣಾಂತ ಉಪವಾಸ ಕೈಕೊಂಡು ಕೊನೆಗೆ ವೈಸರಾಯಿ ಕೈ ಹಾಕಿ ತೀರ್ಮಾನ ಮಂಡಲಿ ನೇಮಿಸಿದ್ದರಿಂದ ಉಪವಾಸ ನಿಲ್ಲಿಸಿದುದು. ಅಂತೆಯೇ ಸಾಂಸ್ಥಾನಿಕ ಚಳವಳಗಳನ್ನು ಸಾಮೂಹಿಕವಾಗಿ ಅವಮಾನತುಗೊಳಿಸಿದುದು.

1939ರಲ್ಲೇ ಯುದ್ಧ ಕಾಲದ ಸಂಧಾನವೊಂದನ್ನು ಮಾಡಿಕೊಳ್ಳಲು ವೈಸರಾಯಿ ಲೋರ್ಡ್ ಲಿನ್‌ಲಿತ್‌ಗೋರೊಂದಿಗೆ ಸಂಭಾಷಿಸಿ ವಿಫಲಗೊಂಡುದು. ಕಾ-

(೧೧ನೇ ಪುಟ ನೋಡಿರಿ.)

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಪಡಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ ೧,೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ,, ,, ೨॥

೬ ರಿಂದ ೯ ತಿಂಗಳು ,, ,, ೨॥।

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ನಮೂನೆಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹಿರಾತಿಗೆ ಉತ್ತಮ
ಸಾಧನ ವಿಚಾರಿಸಿ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

5-2-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೨೨

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 28
No. 22

THE CANARA MUTUAL Assurance Company, Limited.

Estd: 1935

H. O. UDIPI, S. Kanara.

THEY HAD WAITED TOO LONG

Last year in one Country alone 1,64,000 persons found that they had waited too long to buy life insurance. When atlast they said 'Yes' to an insurance agent and went to a doctor for examination they found that in their then physical condition they could not buy insurance at any price. No-one should postpone insuring when he is still healthy.

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.
Bombay Life Building,
Central Office, Udipi.

Branches at:
Mangalore, Calicut, Trivandrum, Madura, Madras, Bangalore & Bombay,

WARDEN

Reaches New Heights in 1946.

Business Received	... ...	Rs. 2,04,00,000
Business Completed	... ...	Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its hearties thanks and congratulations to its representatives and policy-holders all over the country and abroad.

Managing Director. — Agency Manager.
Shivaprasad Thaker, — *M. Sunderram Shetty,*

Branch Office At Mangalore

K. P. Bhavanishanker Shetty,
Branch Secretary

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನಲ್ಟಿಂಗ್ ರೂಮ್ ಎಂಡ್ ಫಾರ್ಮಸಿ। ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಡಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶ್ರೀಪತಿ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

Nambiar's
ARYA VAIDYA SALA
UDIPI

Ideal House for Ayurvedic Treatment.

T. M. Kelu Nambiar,
Vaidya

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ–

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0
ನವಭಾರತ ಬುಕ್ ಡಿಪೊ, ಉಡುಪಿ.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— — ಪ್ರಧಾನ ಕಾರ್ಯಾಲಯ:- ಧಾರವಾಡ,
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ, — **THE UNITED KARNATAK INSURANCE COMPANY, LIMITED.**

ಬಾಪೂಜೀಯ ಬಾಳುವೆ

ಜನನ: **1869 ಒಕ್ಟೋಬರ್ 2.**

ಮರಣ: **1948 ಜನವರಿ 30.**

1869ನೇ ಒಕ್ಟೋಬರ್ ತಾ 2ರಲ್ಲಿ ಜನನ.

1893ರಲ್ಲಿ ದಕ್ಷಿಣಾಫ್ರಿಕಕ್ಕೆ ಪ್ರಯಾಣ

1895ರಲ್ಲಿ ದ. ಆಫ್ರಿಕದಿಂದ ಭಾರತಕ್ಕೆ ಪುನರಾಗಮನ.

1896ರಲ್ಲಿ ಪುನಃ ದ ಆಫ್ರಿಕಕ್ಕೆ ಪಯಣ.

1899ರಲ್ಲಿ ಅಲ್ಲಿಯ ಆಂಗ್ಲೋ-ಬೋವರ್ ಯುದ್ಧದಲ್ಲಿ ಎಂಬ್ಯೂಲೆನ್ಸ್ ದಳದ ನಿರ್ಮಾಣ.

1901ರಲ್ಲಿ ಭಾರತಕ್ಕೆ ಪುನರಾಗಮನ.

1902ರಲ್ಲಿ ಮರಳಿ ದ. ಆಫ್ರಿಕ ಪ್ರಯಾಣ.

1904ರಲ್ಲಿ ಜೋಹನ್ನೆಸ್‌ಬರ್ಗಿನಲ್ಲಿ ಪ್ಲೇಗು ವ್ಯಾಪಿಸಿದಾಗ ಪ್ರಯತ್ನಿಸಿ ಅದರ ನಿವಾರಣ.

1906ರಲ್ಲಿ ನೇತಾಲಿನ ಮೂಲನಿವಾಸಿಗಳು ದಂಗೆಯೆದ್ದಾಗ ಅಗ್ನಿವಾರಕ ದಳದ ರಚನ.

1906ರಲ್ಲೇ 'ಏಸ್ಯಾ ನಿರೋಧಕ' ಶಾಸನದ ವಿರುದ್ಧವಾಗಿ ಅಸಹಯೋಗ ಪ್ರತಿಭಟನೆಯ ಪ್ರತಿಜ್ಞಾಧಾರಣ.

1907ರಲ್ಲಿ 'ದೇಶ ಬಿಡಿಸುವ ಮಸೂದೆ' ಅಸ್ತಿತ್ವಕ್ಕೆ ಬಂದಾಗ ಅದನ್ನು ವಿರೋಧಿಸಿ ಭಾಷಣ ಕೊಟ್ಟು ಬಂಧನ.

1908ರಲ್ಲಿ 'ಸ್ವಯಂ ಪ್ರೇರಣೆಯ ರಿಜಿಸ್ಟ್ರೇಶನ್'ನ್ನು ಸಮರ್ಥಿಸಿದಾಗ ತತ್ಪರಿಣಾಮವಾಗಿ ಪುಂಡರ ತಂಡದಿಂದ ಬಲವಾಗಿ ತಾಡನ.

1913ರಲ್ಲಿ 3 ಪೌಂಡುಗಳ ತೆರಿಗೆ ಹೇರಲ್ಪಟ್ಟಾಗ ಅದನ್ನು ವಿರೋಧಿಸಿ ಅಸಹಯೋಗೀ ಅಪಕಾರ ಜ್ವಾಲೆಯ ಪುನರುದ್ದೀಪನ.

1913ರಲ್ಲೇ ಸ್ಮಟ್ಸ್-ಗಾಂಧೀ ಕರಾರುಬದ್ಧ ಸಂಧಾನ.

1914ರಲ್ಲಿ ದಕ್ಷಿಣಾಫ್ರಿಕ ಸರಕಾರದೊಡನೊಂದು ರಾಜೀ ಕರಾರುನಿರ್ಮಾಣ.

ಈ ಅವಧಿಯೊಳಗೆ ಒಂದೆರಡು ಬಾರಿ ಅನಶನ ವ್ರತ ಧಾರಣ.

× +

1914ರಲ್ಲೇ ಲಂಡನಿಗೆ, ಅಲ್ಲಿಂದ ಭಾರತಕ್ಕೆ ಬಂದು ಪ್ರಥಮ ಜಾಗತಿಕ ಯುದ್ಧಕ್ಕಾಗಿ ಹಿಂದೀ ಸ್ವಯಂಸೇವಕ ದಳ ತಯಾರಿಸಿದುದು.

1915ರಲ್ಲಿ ಬ್ರಿಟಿಷ್ ಸರಕಾರದಿಂದ 'ಕೈಸರೀ ಹಿಂದ್' ಮೆಡ್ಲ್ ಪಡೆದುದು.

1916ರಲ್ಲಿ ಅಹಮ್ಮದಾಬಾದಿನಲ್ಲಿ ಸತ್ಯಾಗ್ರಹ ಆಶ್ರಮ ಸ್ಥಾಪಿಸಿದುದು.

1917ರಲ್ಲಿ ಚಂಪಾರಣ್ಯದಲ್ಲಿ ದಸ್ತಗಿರಿಯಾದುದು.

1919ರಲ್ಲಿ ರೌಲೆಕ್ಟ್ ಆಕ್ಟ್ ಜ್ಯಾರಿಗೆ ಬಂದುದು.

1919ರಲ್ಲೇ ರೌಲೆಕ್ಟ್ ಆಕ್ಟ್ ಶಾಸನದ ವಿರುದ್ಧ ಸತ್ಯಾಗ್ರಹ ಪ್ರತಿಜ್ಞೆ ಕೈಗೊಂಡುದು.

1919ರಲ್ಲೇ ಸತ್ಯಾಗ್ರಹವನ್ನು ಅವಮಾನಪಡಿಸಿ ಉಪವಾಸ ವ್ರತಧಾರಿಯಾದುದು.

1919ರಲ್ಲೇ ಪಂಜಾಬು ಅತ್ಯಾಚಾರ ಮತ್ತು ಖಿಲಾಫತ್ ಅನ್ಯಾಯಗಳಿಗಾಗಿ ಬಲವಾದ ಚಳವಳ ಹೂಡಿದುದು.

1920ರಲ್ಲಿ ಕೈಸರೀ ಹಿಂದ್ ಮೆಡಲನ್ನು ಮರಳಿಸಿ ಅಸಹಕಾರ ಸಮರ ಘೋಷಣೆ.

1921ರಲ್ಲಿ ಡ್ಯೂಕ್ ಓಫ್ ಕನ್ನಾಟಿಗೊಂದು ಬಹಿರಂಗ ಪತ್ರ ರವಾನೆ.

1921ರಲ್ಲೇ ವೈಸರಾಯಿ ಲೋರ್ಡ್ ರೀಡಿಂಗರೊಡನೆ ಮುಖಾಮುಖಿ ಸಂಭಾಷಣೆ.

1921ರಲ್ಲೇ ಪ್ರಿನ್ಸ್ ಓಫ್ ವೇಲ್ಸರ ಆಗಮನ ಮತ್ತು ಬೊಂಬಾಯಿಯಲ್ಲಿ ರಕ್ತಪಾತದ ಘರ್ಷಣೆ; ಅನಶನ ತಪಾಚರಣೆ.

1922ರಲ್ಲಿ ಲೋರ್ಡ್ ರೀಡಿಂಗರಿಗೆ ಕೊನೆಯ ಎಚ್ಚರಿಕೆಯ ಒಂದು ಒಕ್ಕಣೆ.

1922ರಲ್ಲೇ ಚೌರಿಚೌರಾದಲ್ಲಿ ಜಾತೀಯ ದೊಂಬಿಯ ಘಟನೆ. ಅದಕ್ಕಾಗಿ ಉಪವಾಸಧಾರಣೆ.

1922ರಲ್ಲೇ ಅಹಮ್ಮದಾಬಾದಿನಲ್ಲಿ ಬಂಧನ ಮತ್ತು 6 ವರುಷಗಳ ಸಜೆ ದೊರೆತ ವಿಚಾರಣೆ.

1924ರಲ್ಲಿ ಕಾಹಿಲೆ ಸಂಬಂಧವಾಗಿ ಬಿಡುಗಡೆ ಮತ್ತು ಶಸ್ತ್ರಕ್ರಿಯೆ. ಆ ಮೇಲೆ 'ಯಂಗ್ ಇಂಡಿಯಾ' ಪತ್ರಿಕೆಯ ಸಂಪಾದನೆ.

1924ರಲ್ಲೇ ಉಪವಾಸ ವ್ರತ ಮತ್ತಾ ವರುಷವೇ ಬೆಳ್ಗಾಂವಿ ಕಾಂಗ್ರೆಸಿನ ಅಧ್ಯಕ್ಷ ಪೀಠಾರೋಹಣ.

× ×

1929ರಲ್ಲಿ ಲಾಹೋರು ಕಾಂಗ್ರೆಸಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ಗುರಿಯೆಂಬ ನಿರ್ಧಾರ.

1930ರಲ್ಲಿ ಕಾಯಿದೇಭಂಗ ಹೋರಾಟ ನಡಿಸಲು ಕಾಂಗ್ರೆಸಿನಿಂದ ಸರ್ವಾಧಿಕಾರ.

1930ರಲ್ಲೇ ವೈಸರಾಯೀ ಲೋರ್ಡ್ ಇರ್ವಿನರೊಡನೆ ಪತ್ರ ವ್ಯವಹಾರ; ಮಹಾದಂಡೀ ಯಾತ್ರೆ ಉಪ್ಪಿನ ಕಾನೂನು ಭಂಗ ಚಳವಳದ ರಾಷ್ಟ್ರಕಾರ.

1931ರಲ್ಲಿ ಕಾರಾಗಾರ ಮತ್ತಾ ವರ್ಷವೇ ಮುಕ್ತದ್ವಾರಾ.

1931ರಲ್ಲೇ ದುಂಡು ಮೇಜು ಸಮ್ಮೇಳನಕ್ಕಾಗಿ ಲಂಡನಿಗೆ ಸವಾರಿ ಮತ್ತು ಮರುಸಂಚಾರ.

1932ರಲ್ಲಿ ಕಾಯಿದೇ ಭಂಗ ಚಳವಳದ ಪುನರುದ್ದೀಪನಕ್ಕಾಗಿ ಕಾರಾಗಾರ. ಅಲ್ಲಿ ಮಿಸ್. ಸ್ಲೇಡಗಳನ್ನು ತನ್ನೊಡನೆ ಮಾತನಾಡಲು ಬಿಡದಿದ್ದುದರ ನಿಷೇಧಾರ್ಥವಾಗಿ ಪಾರ ಸಂಭಾಷಣೆಗೇನೇ ಧಿಕ್ಕಾರ.

1932ರಲ್ಲೇ ಹರಿಜನರಿಗೆ ಪ್ರತ್ಯೇಕ ಮತದಾನ ಕೊಡುವ 'ಮೆಕ್ಡೊನಾಲ್ಡ್ ಎವಾರ್ಡ್'ನ ವಿರುದ್ಧವಾಗಿ ಆಮರಣಾಂತ ಉಪವಾಸ ಕೈಕೊಳ್ಳುವೆನೆಂದು ಬ್ರಿಟಿನ ಪ್ರಧಾನ ಮಂತ್ರಿ ಮತ್ತು ಭಾರತ ಕಾರ್ಯದರ್ಶಿಗೆ ಪತ್ರ ಬರೆದು ಅದರಂತೆ ಪ್ರಾಣಾವಧಿ ಉಪವಾಸಧಾರಣೆ, ಅಂಬೇಡ್ಕರ್ ಮತ್ತು ಹಿಂದೂ ಪ್ರಮುಖರೊಳಗಾದ ಒಪ್ಪಂದಾನುಸಾರ 'ಎವಾರ್ಡ್' ರದ್ದಾಗಿ ಆಹಾರ ಸ್ವೀಕಾರ.

1932ರಲ್ಲೇ ಜೈಲಿನಿಂದಲೇ ಅಸ್ಪರ್ಶತಾ ನಿವಾರಣಾ ಪ್ರಚಾರ.

1933ರಲ್ಲಿ ಮತ್ತೊಮ್ಮೆ 21 ದಿನಗಳ ಉಪವಾಸಧಾರಣೆ; ಬಿಡುಗಡೆ ಕಾಯಿದೇ ಭಂಗವನ್ನು ಅವಮಾನತಃಪಡಿಸಿ ಓರ್ಡಿನೆನ್ಸುಗಳನ್ನು ಹಿಂತೆಗೆದುಕೊಳ್ಳುವಂತೆ ಸರಕಾರವನ್ನು ಕೇಳಿಕೊಂಡು ಮೂರು ವಾರಗಳ ನಂತರವೇ ಆಹಾರ ಸ್ವೀಕಾರ. ಭೇಟಿಯಾಚಿಸಿದ್ದಕ್ಕೆ ವೈಸರಾಯರ ನಕಾರ.

1933ರಲ್ಲೇ ಸ್ವರಾಜ್ಯ ವಿನಹಾ ಇದ ಬೇಡವೆಂದು ಸಬರ್ಮತಿ ಆಶ್ರಮವನ್ನು ಬರ್ಖಾಸ್ತುಪಡಿಸಿದುದು. 33 ಅನುಯಾಯಿಗಳೊಡನೆ, ರಾಸ್‌ನತ್ತ ಸತ್ಯಾಗ್ರಹ ದಾಡು; ಎಲ್ಲರೊಂದಿಗೆ ಪುನಃ ಕೈದು. ಕಾರಾಗಾರ.

1933ರಲ್ಲೇ ಬಿಡುಗಡೆ ಹೊಂದಿ, ಪ್ರತಿಬಂಧಕಾಜ್ಞೆಯನ್ನು ಮುರಿದುದಕ್ಕಾಗಿ ಪುನಃ ದಸ್ತಗಿರಿಯಾಗಿ ಜೈಲಲ್ಲಿ ಪುನಃ ಉಪವಾಸ ಸ್ವೀಕಾರ.

1933ರಲ್ಲೇ ನಿಶ್ಶರ್ತ ಬಿಡುಗಡೆ; ಕಾಯಿದೇಭಂಗ ಚಳವಳದ ಅವಮಾನತು; ಹರಿಜನೋದ್ಧಾರಕ್ಕಾಗಿ ದೇಶವ್ಯಾಪೀ ಪ್ರಚಾರ.

1934ರಲ್ಲಿ ಭೂಕಂಪಪೀಡಿತ ಕ್ಷೇತ್ರ ಸಂಚಾರ.

1934ರಲ್ಲೇ ಪೂನೆಯಲ್ಲಿ ಕಾರಿಗೊಂದು ಬೋಂಬು-ಅಪಾಯವಾಗಲಿಲ್ಲ. ಹರಿಜನೋದ್ಧಾರ ಸಂಚಾರ ಮುಗಿಸಿ ವಾರ್ಧಾಕ್ಕೆ ಬಂದು ಮತ್ತೊಂದು ಅನಶನವ್ರತ ಒಂದು ವಾರ.

× ×

1934ರಲ್ಲೇ ಕಾಂಗ್ರೆಸಿನ ನಿಯಮಬದ್ಧ ಸರ್ವ ಸಂಬಂಧಗಳನ್ನೂ ಕಡಿದುಕೊಂಡುದು. ಗಡಿನಾಡಿನಲ್ಲಿ ಸಂಚಾರ. ಕಾಂಗ್ರೆಸ್ ಘಟನೆಯ ಸುಧಾರಣೆ, ಚುನಾವಣೆ, ವೈಸರಾಯಿಯೊಡನೆ ನಡೆಸಿದ್ದ ಪತ್ರ ವ್ಯವಹಾರ ಇತ್ಯಾದಿಗಳ ಕುರಿತು ಬಹಿರಂಗ ಹೇಳಿಕೆಗಳನ್ನಿತ್ತುದು.

1935ರಲ್ಲಿ 4 ವಾರಗಳ ಮೌನ ವ್ರತ ಕೈಕೊಂಡುದು;

1936ರಲ್ಲಿ ವಾರ್ಧಾಕ್ಕೆ 5 ಮೈಲು ದೂರದ ಸೇವಾ ಗ್ರಾಮದಲ್ಲಿ ತನ್ನ ಮುಖ್ಯ ಕಾರ್ಯಾಲಯ ಹಾಗೂ ಆಶ್ರಮವನ್ನು ಸ್ಥಾಪಿಸಿಕೊಂಡದ್ದು.

1937ರಲ್ಲಿ ಹಿಂದೀ ಬಿಕ್ಕಟ್ಟಿನ ಕುರಿತು ಲೋರ್ಡ್ ಝೆಟ್ಲೆಂಡರ ಹೇಳಿಕೆ. ಆ ಸಂಬಂಧ ವಿಚಾರಣಾ ಮಂಡಲಿ ರಚಿಸಬೇಕೆಂದು ವಾದಿಸಿದುದು. ಕಾಂಗ್ರೆಸ್ ಮಂತ್ರಿಗಳ, ಕಾಂಗ್ರೆಸ್ ಸಮಾಜವಾದಿಗಳ, ಮತ್ತು ಕಾಂಗ್ರೆಸ್ ಹುಳುಕುಗಳ ಕುರಿತು ಆಗಾಗ ಸದ್ಬೋಧೆಗಳನ್ನಿತ್ತುದು.

1938ರಲ್ಲಿ ಸಂಸ್ಥಾನಿಕ ಪ್ರಜೆಗಳ ಸಂಕಷ್ಟಗಳ ಕುರಿತು ಆಸಕ್ತಿ ವಹಿಸಿದುದು.

1939ರಲ್ಲಿ ಬಾಬು ಸುಭಾಸಚಂದ್ರ ಬೋಸರು ಪುನಃ ರಾಷ್ಟ್ರಪತಿಯಾಗಿ ಆರಿಸಲ್ಪಟ್ಟ ಕುರಿತು ಬಲವಾದ ಆಕ್ಷೇಪ ಸೂಚಿಸಿದುದು.

1939ರಲ್ಲೇ ರಾಜಕೋಟ ಸಂಸ್ಥಾನದ ಸುಧಾರಣೆಗಾಗಿ ಆಮರಣಾಂತ ಉಪವಾಸ ಕೈಕೊಂಡು ಕೊನೆಗೆ ವೈಸರಾಯಿಕ್ಕೆ ಹಾಕಿ ತೀರ್ಮಾನ ಮಂಡಲಿ ನೇಮಿಸಿದ್ದರಿಂದ ಉಪವಾಸ ನಿಲ್ಲಿಸಿದುದು. ಅಂತೆಯೇ ಸಾಂಸ್ಥಾನಿಕ ಚಳವಳಗಳನ್ನು ಸಾಮೂಹಿಕವಾಗಿ ಅವಮಾನತುಗೊಳಿಸಿದುದು.

1939ರಲ್ಲೇ ಯುದ್ಧ ಕಾಲದ ಸಂಧಾನವೊಂದನ್ನು ಮಾಡಿಕೊಳ್ಳಲು ವೈಸರಾಯಿ ಲೋರ್ಡ್ ಲಿನ್‌ಲಿತ್‌ಗೋರೊಂದಿಗೆ ಸಂಭಾಷಿಸಿ ವಿಫಲಗೊಂಡುದು. ಕಾಂ

(೧೧ನೇ ಪುಟ ನೋಡಿರಿ.)

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಜೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೨,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ ೧,೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು ಪೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ,, ,, ೨॥

೬ ರಿಂದ ೯ ತಿಂಗಳು ,, ,, ೨॥।

ರೂ ೧೦೦೦ಕ್ಕಿಂತ ಕಡಿಮೆಯುಳ್ಳದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

ಎರಡಾಣೆ

egd. No. M. 3618

5-2-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೨೨

NAVAYUGA WEEKLY, UDIPI.

FOUNDER: Hon'ble Mr. A. B SHETTY, Health Minister, Govt. of Madras.

Vol. 28
No. 22

THE CANARA MUTUAL Assurance Company, Limited.

Estd: 1935

H. O. UDIPI, S. Kanara.

THEY HAD WAITED TOO LONG

Last year in one Country alone 1,64,000 persons found that they had waited too long to buy life insurance. When atlast they said 'Yes' to an insurance agent and went to a doctor for examination they found that in their then physical condition they could not buy insurance at any price. No-one should postpone insuring when he is still healthy

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.
Bombay Life Building,
Central Office, Udipi.

Branches at:
Mangalore, Calicut, Trivandrum, Madura, Madras, Bangalore & Bombay,

WARDEN

Reaches New Heights in 1946.

Business Received ... ... Rs. 2,04,00,000
Business Completed ... ... Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its hearties thanks and congratulations to its representatives and policyholders all over the country

Managing Director — Agency Manager

hivaprasad Thaker, — *M. Sunderram Shetty,*

Branch Office At Mangalore

K. P. Bhavanishanker Shetty,
Branch Secretary

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರ 8 ಬೊಟ್ಟು, ಸಣ್ಣ ಮಕ್ಕಳಿಗೆ 10ರ 2 ಬೊಟ್ಟು ಲವಂಗ ಯಾಲಿ ಮದ್ದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನಸಲ್ಟಿಂಗ್ ರೂಮ್ ಎಂಡ್ ಫಾರ್ಮೆಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮೆಸಿ; ಡಾ। ಕೆ। ಶ್ರೀನಿವಾಸ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0
ನವಭಾರತ ಬುಕ್ ಡಿಪೊ, ಉಡುಪಿ.

ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ ನಂಬ್ರ 10, ಉಡುಪಿ, **THE UNITED KARNATAK INSURANCE COMPANY. LIMITED.**

ಬಾಪೂಜಿ

ತಾ. 30ನೇ ಶುಕ್ರವಾರ ಗಂಟೆ 5ರಿಂದ 31ನೇ ಶನಿವಾರ ಗಂಟೆ 5ರ ತನಕ—

ಇಡಿಯ ಭಾರತ ರಾಷ್ಟ್ರದ ನೆತ್ತಿಗೊಂದು ಸಿಡಿಲು ತಾ 30-1-48ನೇ ಶುಕ್ರವಾರ ಅಪರಾಹ್ನ 5-12ಕ್ಕೆ ಬಡಿಯಿತು; ಅಖಿಲ ರಾಷ್ಟ್ರದ ಹೃದಯಕ್ಕೆ ಆ ಮುಹೂರ್ತದಲ್ಲೊಂದು ಶೂಲ ನೆಟ್ಟಿತು; ಆ ಮೂಲೆಯಿಂದೀಮೂಲೆಯ ವರೆಗಿನ ಭಾರತವನ್ನು ಕಂಪಿಸಬಲ್ಲ ಆಟಂಬೋಂಬು ಸ್ಫೋಟಗೊಂಡಿತು. ರಾಷ್ಟ್ರಜನಕ ಗಾಂಧಿಜೀ, ಗುಂಡಿಗೆದೆಯೊಡ್ಡಿ ಇಹ ಯಾತ್ರೆ ಮುಗಿಸಿಕೊಂಡರು.

ತನ್ನ ಆಯುಷ್ಯದ 79 ವರುಷಗಳ ಪೈಕಿ ಕಳೆದ 30 ವರುಷಗಳ ಪ್ರತಿಯೊಂದು ಕ್ಷಣವನ್ನೂ ಭಾರತೀಯರ ಸ್ವಾತಂತ್ರ್ಯಕ್ಕಾಗಿಯೂ, ಮಾನವ ಜನಾಂಗದ ಉದ್ಧಾರಕ್ಕಾಗಿಯೂ ಸವೆಯಿಸಿದ್ದ ಜೀವವು ಮೊನ್ನೆ ತನ್ನ ಕೆಲಸ ಮುಗಿಸಿ ಹೊರಟು ಹೋಯಿತು. ಕಳೆದ ಮೂರು ದಶಮಾನಗಳಲ್ಲಿ ಅವಿಶ್ರಾಂತವಾಗಿ ಚಾಲೂಗುತ್ತಿದ್ದ ಇಡೀ ಪ್ರಪಂಚದ ಪಾಲಿನ ಸತ್ಯಾಹಿಂಸೆಯ ಕಾರ್ಖಾನೆಯೊಂದು ಮೊನ್ನೆ ಬೆಂಕಿ ಬಿದ್ದು ಸುಟ್ಟು ಹೋಯಿತು. ಪ್ರಪಂಚದ ಚರಿತ್ರೆಯ ಪವಿತ್ರಾಧ್ಯಾಯವೊಂದು ಮುಕ್ತಾಯವಾಯಿತು.

ಈ ಮುಕ್ತಾಯ ವಿಧಿ ನಡೆದುಮುಗಿದುದು 1948ನೇ ಜನವರಿ ತಾ 30ನೇ ಶುಕ್ರವಾರ ಅಪರಾಹ್ನ 5 ಘಂಟೆಯ ನಂತರ-ತಾ 31ನೇ ಶನಿವಾರ 6 ಘಂಟೆಯ ಒಳಗೆ. ಈ 25 ಘಂಟೆಗಳನ್ನು ನಾವು ಮಾತ್ರವಲ್ಲ, ನಮ್ಮ ಸಂತಾನ ಪರಂಪರೆಯೂ ಮರೆಯುವಂತಿಲ್ಲ.

ಬಾಪೂಜೀಗೆ ಗುಂಡು

ನವದೆಹಲಿಯ ಬಿರ್ಲಾ ಭವನದಲ್ಲಿದ್ದ ಗಾಂಧಿಜೀಯಲ್ಲಿ ಮೊದಲ ದಿನ ಗುರುವಾರ ಅಪರಾಹ್ನವೇ ಒಂದು ರೀತಿಯ ಬದಲಾವಣೆ ಕಂಡುಬಂದಿದ್ದಿತಂತೆ. ಸಾವು ಸಮೀಪಿಸಿತೆಂದು ಕೂಗಿ ಹೇಳುತ್ತಿಪ್ಪ ಒಳಧ್ವನಿಯೊಂದನ್ನು ಆಲಿಸುವವರಂತೆ ಅವರು ಕಂಡುಬಂದಿದ್ದರು. ಗುಂಡಿಟ್ಟ ಮನುಷ್ಯನು ಮೊದಲದಿನವೇ ಬೆಡ್ಡಿಂಗ್ ಒಂದನ್ನು ಮಾತ್ರ ಹಿಡಿದುಕೊಂಡು ನವದೆಹಲಿಗೆ ಬಂದಿದ್ದನೆಂಬುದನ್ನೂ, ಆ ಬೆಡ್ಡಿಂಗು ಆ ಮೇಲೂ ಹಳೇದಿಲ್ಲಿಯ ರೈಲ್ವೇ ಸ್ಟೇಶನಿನಲ್ಲಿ ಬಿದ್ದುಕೊಂಡಿದ್ದುದನ್ನೂ ನೆನಸಿದರೆ, ಆತ ಅತ್ತ ದಿಲ್ಲಿಗೆ ಮುಟ್ಟಿದೊಡನೆಯೇ ಇತ್ತ ಗಾಂಧಿಜೀಯ ಭಾವ ಬದಲಾವಣೆಯಾಗಿರಬೇಕು. “ಸೇವಾಗ್ರಾಮಕ್ಕೆ ಹೊರಡುವುದು ಯಾವಾಗ?” ಎಂದು ಮೊಮ್ಮಗಳು ವಿಚಾರಿಸಿದಾಗ ಇಂತಹ ಸಂದರ್ಭಗಳಲ್ಲಿ ಎಂದೂ ಹಾಗೆ ಹೇಳದಿದ್ದ ಗಾಂಧಿಜೀ “ದೇವರಿಗೇ ಗೊತ್ತು!” ಎಂದಿದ್ದರಂತೆ. ತನ್ನ ಕೊನೆಯ ರಾತ್ರಿಯ ನಿದ್ರೆಗೆ ಹೋಗುವ ಮೊದಲು ಪದ್ಧತಿ ವಿರುದ್ಧವಾಗಿ ಗುಜರಾತಿ ಚರಮ ಶ್ಲೋಕವನ್ನು ಅವರು ಹಾಡಿದ್ದರು. ಶುಕ್ರವಾರ ಅತಿ ಮುಂಜಾನೆ ಎದ್ದು ಧ್ಯಾನ ತೀರಿಸಿದೊಡನೆಯೇ ತನ್ನ ಸಹಾಯಕನನ್ನು ಕರೆದು, ತಾನು ಕೂಡಲೇ ಉತ್ತರ ಬರೆಯಲಾಗುವಂತೆ ತನಗೆ ಬಂದಿದ್ದ ಎಲ್ಲಾ ಮುಖ್ಯ ಪತ್ರಗಳನ್ನೂ ತರುವಂತೆ ಹೇಳಿದ್ದರು. ಈಗ ತಿಳಿದುಬರುವಂತೆ ಅಪರಾಹ್ನ ಗುಂಡಿಟ್ಟ ಆಸಾಮಿ ಅಂದು ಮುಂಜಾನೆಯೇ ಬಿರ್ಲಾಭವನಕ್ಕೆ ಬಂದು ಬಾಪೂಜೀ ನಿವಾಸದ ಬಳಿಯಲ್ಲಿ ಸುಳಿದಾಡುತ್ತಿದ್ದನಂತೆ. ಅವನನ್ನು ವಿಚಾರಿಸಿದಾಗ ಪರಿಚಯವನ್ನಾಗಲೀ, ಬಂದ ಉದ್ದೇಶವನ್ನಾಗಲೀ ಹೇಳಲಿಲ್ಲವಾದ್ದರಿಂದ ಅಲ್ಲಿಂದ ಹೊರಟು ಹೋಗುವಂತೆ ಹೇಳಲಾಗಿತ್ತು. ‘ಕಾಂಗ್ರೆಸು ಮುಂದೆ ಹೇಗಿರಬೇಕು’ ಎಂಬ ಕೆಲವು ಸೂಚನೆಗಳನ್ನು, ಎರಡು ಪುಟಗಳಷ್ಟು ಮಧ್ಯಾಹ್ನದಲ್ಲಿಯೇ ಬರೆದಿಟ್ಟಿದ್ದರು; ಅದು ಅಪೂರ್ಣವಿದ್ದರೂ ಮೂಲ ಸೂತ್ರಗಳು ಅಲ್ಲಿದ್ದು ಈಗ ಅದೊಬ್ಬ ಕಾಂಗ್ರೆಸ್ ಪ್ರಮುಖನ ಕೈಯಲ್ಲಿದೆ. ಅಪರಾಹ್ನ 4 ಘಂಟೆಗೆ ಸರ್ದಾರ್ ವಲ್ಲಭಾಯಿಗಳು ಬಿರ್ಲಾ ಭವನಕ್ಕೆ ಬಂದು ಗಾಂಧಿಜೀಯೊಡನೆ ಸಂಭಾಷಿಸುತ್ತಾ ಒಂದು ತಾಸು ಅವರ ಜತೆಯಲ್ಲೇ ಕಳೆದಾಗ, ಮಹಾತ್ಮಾಜೀ ತನ್ನ ಗಡಿಯಾರವನ್ನು ತೆಗೆದು ನೋಡಿ “ಪ್ರಾರ್ಥನಾ ಸಭೆಗೆ ಹೊತ್ತಾಯಿತು” ಎಂದೆದ್ದರು. ಮೊಮ್ಮಂಗಳಂದಿರು (ಮಗನ ಮಗಳು ಕನೂಗಾಂಧಿ ಮತ್ತು ಮಗನ ಸೊಸೆ ಅವ್ವಾಗಾಂಧಿ) ಎಡಬಲಗಳಲ್ಲಿ ನಿಂತಾಗ, ಮುದಿಪ್ರಾಯ ಮತ್ತು ಉಪವಾಸದಿಂದ ರಕ್ತಹೀನವಾಗಿದ್ದ ತನ್ನ ನಿತ್ರಾಣ ದೇಹಕ್ಕೆ ಅವರ ಹೆಗಲುಗಳ ಆಧಾರ ಕೊಡುತ್ತಾ ಹೊರಟರು. ಸರ್ದಾರ್ ಪಟೇಲರು ಕಾರುಹತ್ತಿ ತನ್ನ ನಿವಾಸದತ್ತ ಹೊರಟು ಹೋದರು. ಬಾಪೂಜೀ ಹೂದೋಟವನ್ನು ದಾಟಿ ಬಂದಾಗ, ಅಲ್ಲಿ ಕಾಯುತ್ತಾ ಕುಳಿತಿದ್ದ ಸ.ಮಾರು 500 ಮಂದಿ ಭಜಕರ ಸಭೆಯೆದ್ದು ಮಹಾತ್ಮಾಜೀಗೆ ಹಾದಿ ಮಾಡಿಕೊಡಲು ಇಬ್ಭಾಗವಾಯಿತು. ಪ್ರಾರ್ಥನಾ ಮಂಟಪದ ಕಡೆಗಿದ್ದ ಮೆಟ್ಟಿಲು ಪಂಕ್ತಿಗಳಲ್ಲಿ ನಾಲ್ಕು ಮೆಟ್ಟಿಲುಗಳನ್ನು ಗಾಂಧಿಜೀ ಹತ್ತಿದ್ದರು ಮಾತ್ರ, ಎರಡು ಗಜಕ್ಕಿಂತಲೂ ಸಮೀಪವಿಲ್ಲದ್ದ ಒಬ್ಬ ಎದ್ದು ಬಂದು, ನಿಂತಿದ್ದ ಜನ ಸಾಲನ್ನು ಭೇದಿಸಿ ಗಾಂಧಿಜೀಯತ್ತ ಬಗ್ಗುತ್ತಿರುವುದು ಕಂಡುಬಂತು. ಪಾದ ಮುಟ್ಟಲು ಪ್ರಯತ್ನಿಸುತ್ತಿದ್ದಾನೆಂದು ಬಗೆದ ಕನೂ ಗಾಂಧಿಯವರು, ಅದು ಬೇಡವೆಂಬಂತೆ ಅವನನ್ನು ತಡೆಯಲು ನೋಡಿದರು. ಗಾಂಧಿಜೀ ಅವನಿಗೆ ಪ್ರತಿ ನಮಸ್ಕಾರ ಕೊಟ್ಟಾಗ “ನೀವೀ ದಿನ ಬಂದುದು ತಡವಾಗಿ” ಎಂದನವ. ಪದ್ಧತಿಯ ನಗೆಯೊಡನೆ “ಹೌದು. ನಾನು ತಡ ಮಾಡಿದೆ” ಎಂದರು ಬಾಪೂಜೀ. ಆ ಪಾಪಿ ಆಗಲೇ ತನ್ನ ರಿವಾಲ್ವರನ್ನು ಹೊರ ತೆಗೆದು ಗುಂಡು ಹಾರಿಸಹತ್ತಿದ. ಮೊದಲನೇ ಗುಂಡು ಕಿಬ್ಬೊಟ್ಟೆಗೇನೇ ಬಿತ್ತು. ಅವರ ಬಿಳಿ ಧೋತಿಯಲ್ಲಿ ರಕ್ತವೊಸರಿಕೊಂಡು ಬರುವುದು ಕಂಡುಬಂತು. ಮೊದಲ ಗುಂಡಿನ ಸಿಡಿತದೊಂದಿಗೇನೇ “ಹಾ ರಾಮ, ಹಾ ರಾಮ” ಬಾಪೂವಿನ ಬಾಯಿಯಿಂದ ಹೊರಟಿತು; ಅಷ್ಟರಲ್ಲೇ ಒಂದರ ಬೆನ್ನಲ್ಲಿನ್ನೊಂದರಂತೆ ಮತ್ತೆರಡು ಗುಂಡುಗಳು ಗಾಂಧಿಜೀಯ ಎದೆಗೆ ಹೊಕ್ಕಿದ್ದುವು. ದೇಹವಿಡೀ ಕೆಂಬಣ್ಣವಾಯಿತು. ಬಾಪೂಜೀಯ ಮೆಟ್ಟುಗಳು ಜಾರಿ ದೂರಹೋಗಿ ಬಿದ್ದುವು; ಕನ್ನಡಕ ಕಳಚಿಬಿತ್ತು. ಸಭೆಯತ್ತ ನೋಡಿ ಎರಡೂ ಕೈಗಳನ್ನು ಜೋಡಿಸಿಕೊಂಡು ಅವರು ಬೀಳುವುದರಲ್ಲಿರುವಾಗ ಮೊಮ್ಮಗಳಂದಿರು ಗಟ್ಟಿ ಹಿಡಿದು ಅಲ್ಲೇ ಕುಳ್ಳಿರಿಸಿದರು. ಕೈ ಜೋಡಿಸಿ, ಕಣ್ಮುಚ್ಚಿಕೊಂಡು ಶಾಂತ, ಕ್ಷಮಾಶೀಲತೆ ಮಿಂಚುತ್ತಿದ್ದ ವದನದಿಂದ ಮಹಾತ್ಮಾಜೀ ಪ್ರಾರ್ಥನೆಗೆ ಕುಳಿತಂತೆ ತೋರುತಿತ್ತು. ಅಷ್ಟರೊಳಗೆ ಜನಸಂದಣಿಯವರು ಕೊಲೆಗಡುಕನ ಮೇಲೆ ಬಿದ್ದುದರಿಂದ ಅವನ ರಿವಾಲ್ವರ್ ಜಾರಿ ಬಿತ್ತು; ಬಡಿದು ಜಜ್ಜಿದ ಭರಕ್ಕೆ ಅವನಿಗೆ ಸ್ವಲ್ಪ ಜಖಮಾಗಿದೆಯೆಂದು ತಿಳಿದು ಬರುತ್ತದೆ. ಗಾಂಧೀಜೀಗೆ ಹೊಡೆದ ರಿವಾಲ್ವರನ್ನು ತನ್ನೆದೆಗಿಟ್ಟುಕೊಂಡು ಆತ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದನೆಂಬ ಮಾತು ಸುಳ್ಳೆಂದು ತಿಳಿದುಬಂದಿದೆ.

ಬಾಪೂಜೀಯ ಕೊನೆ

ಕೂಡಲೇ ಗಾಂಧಿಜೀಯನ್ನು ನಾಲ್ಕೈದು ಮಂದಿಯೆತ್ತಿಕೊಂಡು ಬಿರ್ಲಾಭವನದ ಕೋಣೆಗೊಯ್ದು ಜನರು ನುಗ್ಗಿಬಂದುದರಿಂದ ಬಾಗಿಲು ಹಾಕಿಕೊಂಡರು. ಅಷ್ಟರಲ್ಲಿ ಸುದ್ದಿ ಮುಟ್ಟಿ ನೆಹರು, ವಲ್ಲಭಾಯಿ, ಮೌಂಟ್ ಬೇಟನ್, ಬಲದೇವಸಿಂಗ್, ಬಾಬಾ, ಚಮನಲಾಲ್, ಮುಂತಾದವರೆಲ್ಲಾ ಧಾವಿಸಿಬಂದರು. ಡಾಕ್ಟರರುಗಳು ಕೂಡಲೇ ಹಾಜರಾದರು. ಆದರೆ ಪ್ರಾಣದ ಮುಕ್ತಾಯವನ್ನು ಮೊದಲನೇ ಗುಂಡೇ ಮಾಡಿದ್ದಿತು. ಹದಿನೈದು ಮಿನಿಟುಗಳೊಳಗೆ ಪ್ರಾಣ ಹಾರಿಹೋಯಿತು. ಡಾಕ್ಟರರು ಕೈತೆಗೆದು ಪ್ರತಿಮೆಗಳಾಗಿ ನಿಂತೊಡನೆ, ಎದೆಯವರೆಗೆ ಬಿಳಿ ಖಾದಿಯನ್ನೆಳೆದರು; ಆಗಲೇ ಗಾಂಧಿಜೀಯ ಆಶ್ರಮವಾಸಿಗಳು ಮತ್ತಿತರರಿಂದ ಆರಂಭವಾದ ಗೀತಾ ಪಠನ, ಗಾಂಧಿಜೀಯ ಪ್ರೀತಿಯ ವೈಷ್ಣವಗೀತ, ರಾಮಧುನ್ ಇತ್ಯಾದಿ ಸ್ತೋತ್ರಗಳು ಅವಿರಾಮವಾಗಿ ನಡೆದುವು; ಈಗಲೂ ನಡೆದಿವೆ. ಬಾಪುವಿನ ಎದೆ ಹೊಟ್ಟೆಗೆ ಸಿಡಿದ ಗುಂಡಿನ ವಾರ್ತೆ ನವದೆಹಲಿಯಲ್ಲೂ, ಆಕಾಶವಾಣಿ ಮೂಲಕ ಇಡೀ ರಾಷ್ಟ್ರದಲ್ಲೂ ಸಿಡಿಲಾಗಿ ಒಮ್ಮೆಗೇ ಎರಗಿತು. ಇಡೀ ರಾಷ್ಟ್ರಕ್ಕೆ ಆ ಮುಹೂರ್ತದಲ್ಲೊಮ್ಮೆ ಕಣ್ಣು ಕತ್ತಲೆ ಕವಿಯಿತು; ನಿಂತವರು ನಿಂತಲ್ಲಿಯೇ, ಎತ್ತಿದ ಕೈ ನಾಲಿಗೆಗಳು ಅಲ್ಲಲ್ಲೇ; ಎಲ್ಲರೂ ಸ್ಮೃತಿ ತಪ್ಪಿದಂತಾದರು. ಈ ವಾರ್ತೆ ಸಿಡಿಲು ಬಡಿದು ಒಬ್ಬಿಬ್ಬರ ಪ್ರಾಣ ಕೂಡಲೇ ಹಾರಿ ಹೋದ ವಾರ್ತೆ ಮೀರತ್ ಮತ್ತಿತರ ಕಡೆಯಿಂದ ಬಂದಿದೆ. ಇಡೀ ರಾಷ್ಟ್ರದ ಎಲ್ಲಾ ವಹಿವಾಟುಗಳೂ ತಕ್ಷಣ ನಿಂತುಹೋದುವು. ಭಾರತದ ಪ್ರತಿಯೊಂದು ಮನೆಯ ಅನ್ನದಾತನೂ ತೀರಿಕೊಂಡಂತೆ ಎಲ್ಲೆಡೆಯ ಎಲ್ಲರೂ ಆವೇಗಗೊಂಡಿದ್ದರು; ಅಳುತಿದ್ದರು. ಸಭೆ ಸಮಾರಂಭಗಳ, ಆಟಕೂಟಗಳ ಮಾತು ಹಾಗಿರಲಿ-ಶುಭ ಮುಹೂರ್ತ ನೋಡಿ ಹೊರಟಿದ್ದ ಮದುವೇ ದಿಬ್ಬಣಗಳು, ಆ ಸುದ್ದಿ ಬಡಿದೊಡನೆ ಸ್ಮಶಾನಯಾತ್ರೆಗಳಾಗಿ ಮಾರ್ಪಟ್ಟು ಮೌನವಾಗಿ ಚದರಿದುವು. ಇಂಗ್ಲೆಂಡಿನ ಚಕ್ರವರ್ತಿಯಂತಹ ಪೀಠಾರೂಢರಿಂದಾರಂಭಿಸಿ, ಬರ್ನಾಡ್ ಶಾರಂತಹ ಕಲಾವಿದರು, ಚರ್ಚಿಲ್ಲರಂತಹ ರಾಜಕಾರಣಿಗಳು-ಅವರಿವರು, ಅಲ್ಲಿಯವರಿಲ್ಲಿಯವರೆನ್ನದೆ, ಇಡೀ ಪ್ರಪಂಚದ ಪ್ರತಿಯೊಬ್ಬ ಗಣ್ಯನೂ ಈ ಯುಗದ ಅತಿ ದೊಡ್ಡ ಮನುಷ್ಯನ ಆಘಾತಕರ ಮರಣಕ್ಕಾಗಿ ದುಃಖ ಸೂಚಿಸಿದ್ದಾರೆ. ತನ್ನ ಸ್ವಂತ ಅಗ್ರಗಣ್ಯ ಪುರಸ್ಕರ್ತ ಹೇಗೋ, ಹಾಗೆಂದೇ ಭಾವಿಸಿ ಭೂಲೋಕದ ಪ್ರತಿಯೊಂದು ರಾಷ್ಟ್ರವೂ ತನ್ನ ಪಾಲಿನ ದುಃಖ ಸೂಚಕ ಆಚರಣೆಗಳನ್ನು ಕೈಕೊಂಡಿದೆ. ಅಂತೂ ಮಹಾತ್ಮರ ಮರಣ-ಅದರಿಂದಾಗಿ ಇಡೀ ಲೋಕಕ್ಕಾಗಿರುವ ದುಃಖ ಇವೆಲ್ಲವನ್ನು ಸರಿಯಾಗಿ ವರ್ಣಿಸಲು ಶಬ್ದಗಳು ಸಾಕಾಗವು. ‘ಅತಿಶಯೋಕ್ತಿ ಸಲ್ಲದು’ ಎಂದು ಎಲ್ಲರಿಗೂ, ಮುಖ್ಯವಾಗಿ ಪತ್ರಿಕಾಕಾರರಿಗೆ ಬೋಧಿಸಿದ್ದ ಗಾಂಧಿಜೀ ತನ್ನ ಮರಣದ ಕುರಿತು ಯಾರಿಗಾದರೂ ಅತಿಶಯೋಕ್ತಿ ಅಸಾಧ್ಯವಾಗುವಂತೆ ಮಾಡಿಬಿಟ್ಟರು. ಅತಿಶಯ ಮಾಡಿ ವರ್ಣಿಸುವ ಮಾತಂತಿರಲಿ, ಆ ಘಟನೆ, ಮತ್ತದರಿಂದೆದ್ದ ಭಾವಾಂದೋಲನಗಳನ್ನು ಯಥಾಸ್ಥಿತಿ ಚಿತ್ರಿಸುವೆನೆಂದರೂ ಎಂತಹ ಅತಿ ಪ್ರವೀಣ ಶಬ್ದ ಚ

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2½% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ವಿಯೋಗ

ಆ ಪುಣ್ಯ ಶರೀರವನ್ನು ಗುಂಡು ಭೇದಿಸಿದಂದಿನಿಂದ ಬೆಂಕಿ ಬೂದಿ ಮಾಡಿದ ವರೆಗೆ—

ತ್ರಗಾರನಿಂದಲೂ ಅಸಾಧ್ಯ. ಇರುವ ಶಬ್ದಗಳು ಸಾಕಾಗವು-ಭಾವಾಂದೋಲನಗಳ ಛಾಯಾಚಿತ್ರವೆತ್ತಲಾಗುವ ಯಂತ್ರ ಬಂದಿಲ್ಲ!

ಬಾಪೂ ಶವವಾದ ಮೇಲೆ

ದಿಲ್ಲಿಗೆ ಬಂದಂದಿನಿಂದ ಗಾಂಧಿಜೀ ತನ್ನ ಕಾರ್ಯಕಲಾಪಗಳನ್ನು ನಿರ್ವಹಿಸುತಿದ್ದ ಬಿರ್ಲಾ ಭವನದ ಕೋಣೆಯೊಳಗೆ, ಧೂಪ ದೀಪಗಳ ಹೊಗೆ, ಪುಷ್ಪಗಳ ರಾಶಿ,ಗಾಂಧಿಜೀಯು ಸಮೀಪದ ಬಂಧುಗಳು ಮತ್ತು ನಿಕಟಾನುಯಾಯಿಗಳ ಮುತ್ತಿಗೆಯ ನಡುವೆ ಒಂದು ಶವ ಹಲಗೆಯಲ್ಲಿ ಎದೆಯ ವರೆಗೆ ಬಿಳಿ ಖಾದಿಯನ್ನೆಳೆದು ಶವವನ್ನು ಮಲಗಿಸಿದ್ದರು; ಧುರೀಣರಲ್ಲಿ ಕೆಲವರಲ್ಲೇ ದಂಗು ಬಡೆದು ಬಿದ್ದಿದ್ದರೈ,ಬೇರೆ ಕೆಲವರು ಮುಂದಿನ ವ್ಯವಸ್ಥೆಗಾಗಿ ಅಡ್ಡಾಡುತಿದ್ದರು-ಮುಖದ ಮೇಲಿಂದ ಸಂಚಾರೀ ಶವಗಳಂತೆಯೇ ತೋರುತ್ತಿದ್ದರು. ಕೊನೆಯ ದರ್ಶನವನ್ನೊಮ್ಮೆ ಪಡೆಯೋಣವೆಂದು ನುಗ್ಗಿ ಬರುತ್ತಿದ್ದ ಜನ ಶಂಡವನ್ನು ತಡೆಹಿಡಿಯುವುದು,ರಸ್ತೆಗಡಿಗೆ ನುಗ್ಗಿ ಬರುತ್ತಿರುವ ಸೇನೆಯೊಂದನ್ನು ತಡೆಗಟ್ಟುವಷ್ಟು ಪ್ರಯಾಸಕರವಾಗಿ ಕಂಡು ಬಂತು. ಕೊನೆಗೊಮ್ಮೆ ರಾತ್ರಿಯಲ್ಲಿ ಶವವನ್ನು ಹೊರಗಿನ ವರಾಂಡಕ್ಕೆ ತಂದು ಜನರಿಗೆ ತೋರಿಸಿ ಒಳಗೊಯ್ಯುವಾಗ ಎದ್ದ ಅಳು, ಮತ್ತು ಜಯಕಾರಗಳು ಕಾಲನ ಕರುಳನ್ನು ಕೂಡಾ ಬೇಯಿಸುವಂತಹದಿದ್ದುವು. ಗಾಂಧಿಜೀ ಇನ್ನಿಲ್ಲವೆಂದಾದೊಡನೆಯೇ ಲೋರ್ಡ್ ಮೌಂಟ್ ಬೇಟನ್ ಮತ್ತು ಹಿಂದೀ ಸರಕಾರದ ಮಂತ್ರಿಗಳು ಮುಂದಿನ ವ್ಯವಸ್ಥೆಯ ಕುರಿತು ಅಲ್ಲೇ ಪರ್ಯಾಲೋಚಿಸಿದರು. ದರ್ಶನಾಪೇಕ್ಷಿಗಳ ಕೊನೆಯ ದರ್ಶನಕ್ಕನುಕೂಲವಾಗುವಂತೆ ಹೆಣವನ್ನು ಕೆಲವು ದಿನಗಳವರೆಗೆ ಇಡಬೇಕೆಂದು ಧುರೀಣರ ಸಂಕಲ್ಪವಿತ್ತಾದರೂ, ತಾನು ಸತ್ತೊಡನೆ ದಹಿಸಿಬಿಡಬೇಕೆಂದೇ ಮಹಾತ್ಮರ ಮನಸ್ಸಿದ್ದಿತೆಂದು ದೇವದಾಸ ಗಾಂಧಿ ಮತ್ತು ಪ್ಯಾರೇ ಲಾಲರು ಹೇಳಿದ್ದರಿಂದ ಮರುದಿನವೇ ಹೆಣ ತೆಗೆಯುವ ನಿರ್ಧಾರಮಾಡಿದರು. ಶವ ಯಾತ್ರೆಯಲ್ಲಿ ಜನ ನುಗ್ಗಾಟದ ವ್ಯವಸ್ಥೆಗೆ ಸೇನೆಯೇ ಬೇಕೆಂಬ ನಿರ್ಣಯವಾಯಿತು. ಹೆಣವನ್ನಿಡುವ ಗಾಡಿಯಾವುದೆಂದು ನಿಶ್ಚಯಿಸುವುದು ಸುಲಭವಾಗಿರಲಿಲ್ಲ. ಅದು ಆ ಪ್ರಚಂಡ ಜನಸಂದಣಿಗೆ ಕಾಣಿಸುವಷ್ಟು ಎತ್ತರವಿರಬೇಕು; ಅದಕ್ಕೆ ಸೇನಾ ಬಂಡಿಯೇ ಹೇಳಿಸಿದ್ದಾದರೂ ಯಂತ್ರವಿರೋಧಿ ಗಾಂಧಿಜೀಯ ತತ್ವಕ್ಕೆ ಅವರ ಶವವಾಹನವೇ ವಿರುದ್ಧವಾಗಕೂಡದಷ್ಟೆ!ಕೊನೆಗೆ ಆಯುಧ ತುಂಬಿಸುವ ದೊಡ್ಡ ವಾಹನವನ್ನು ಆರಿಸಲಾಯಿತು. ರಾತ್ರಿಯಿಡೀ ಕೆಲಸಮಾಡಿ ಅದರ ಆಸನ ಮಟ್ಟವನ್ನು ತೆಗೆದು ಎತ್ತರದ ಹಾಸುವೇದಿಕೆಯನ್ನಲ್ಲಿ ಕಟ್ಟಲಾಯಿತ; ಎಂಜಿನನ್ನು ಮುನ್ನಾ ಸಡಿಸಿ, ಒಂದೊಂದನ್ನು 50 ಮಂದಿ ಯೋಧರು ಎಳೆಯುವಂತಹ ನಾಲ್ಕು ಹಗ್ಗಗಳನ್ನು ಸಿಕ್ಕಿಸಲಾಯಿತು.ರಾತ್ರಿಯ ಪ್ರಥಮ ಭಾಗದಲ್ಲಿ ನೆಹರು, ವಲ್ಲಭಭಾಯಿಗಳು ಅಳುತ್ತಳುತ್ತಾ ಬಾಪೂಜೀ ವಿಯೋಗದ ಸಂಗತಿಯನ್ನೂ ಜನತೆಯ ಕರ್ತವ್ಯವನ್ನೂ ಆಕಾಶವಾಣಿ ಮೂಲಕ ಘೋಷಿಸಿದರು; ಬಾಪೂ ವಿಯೋಗಕ್ಕಾಗಿ ಎದೆ ಬಿರಿದು ಅಳುವ ತಮ್ಮಂದಿರನ್ನು ಹಿರಿಯಣ್ಣಂದಿರು ಸಮಾಧಾನ ಪಡಿಸುವಂತಿದ್ದುವು ಅವರ ಮಾತುಗಳು. ಇಡೀ ರಾಷ್ಟ್ರದ ಮೂಲೆ ಮೂಲೆಗಳಲ್ಲಿದ್ದ ಧುರೀಣರು ಎಲ್ಲಾ ಕೆಲಸಗಳನ್ನೂ ಅಲ್ಲಲ್ಲೇ ಕೈಬಿಟ್ಟು ವಿಮಾನಹತ್ತಿ ದಿಲ್ಲಿಗೋಡಿಬಂದರು.

ಬಾಪೂ ಶವ ಮೆರವಣಿಗೆ

ಶನಿವಾರ ಅತಿ ಮುಂಜಾನೆ ಯಮುನಾಜಲದಿಂದ ಬಾಪೂಜೀಯ ಶವವನ್ನು ಮೀಯಿಸಿ, ಅದಕ್ಕೆ ತ್ರಿವರ್ಣ ಧ್ವಜವನ್ನು ಹೊದಿಸಿ ಮಲಗಿಸಿದರು. ಮುಖವೊಂದನ್ನು ಬಿಟ್ಟು ಇಡೀ ದೇಹವು ಪುಷ್ಪ ರಾಶಿಗಳಿಂದ ಆ ಮುಹೂರ್ತದಲ್ಲೇ ಮುಚ್ಚಿ ಹೋಯಿತು. ಧೂಪ, ಲೋಭಾನಗಳ ಹೊಗೆಗಳಿಂದಲೂ ಪುಷ್ಪ ಸುವಾಸನೆಗಳಿಂದಲೂ ಮಂತ್ರ ಘೋಷಗಳಿಂದಲೂ ವಾತಾವರಣವು ಘಮಘಮಿಸುತಿತ್ತು; ಜನಸಂದಣಿಯ ಕಣ್ಣೀರು, ಆ ಶವದ ಸುತ್ತಣ ನೆಲವನ್ನೂ ಮೀಯಿಸಿತು. ಪ್ರಥಮತಃ ಕೋಣೆಯಲ್ಲೇ ಇಟ್ಟು ಜನರು ಹತ್ತಾಡಿ ದೂರದಿಂದಲೇ ಏಕ ಸಾಲಲ್ಲಿ [illegible] ಹೋಗುವ ಅಚ್ಚುಕಟ್ಟಾದ ವ್ಯವಸ್ಥೆಯಿದ್ದರೂ ಕೊನೆಗೆ ಹೊರಗಿನ ಜನ ಸಮುದ್ರದ ಕೂಗಾಟವನ್ನು ಸಹಿಸಲಾರದೆ ಹೆಣವನ್ನು ಹೊರಗೆ ತಂದು ಎತ್ತರದಲ್ಲಿಟ್ಟು ತೋರಿಸಬೇಕಾಯಿತು. ಬಾಪೂಜೀ ಸ್ವರ್ಗಕ್ಕೆ ಹೋದರೋ, ಸ್ವರ್ಗವನ್ನೇ ಇಲ್ಲಿಗೆ ತಂದರೋ ಎಂಬ ಸಂದೇಹ ಬರಿಸುತಿತ್ತು ಅಲ್ಲಿಯ ಸನ್ನಿವೇಶ. ವಿವಿಧ ರಾಷ್ಟ್ರಗಳ ಪರವಾಗಿ ವಜನ ಪುಷ್ಪಗಳು ಶವಕ್ಕೆ ಸಮರ್ಪಿಸಲ್ಪಟ್ಟುವು. ಗಾಂಧಿಜೀಯ ಮೂರನೇ ಮಗ ರಾಮದಾಸ ಗಾಂಧಿ, ಅಂದೇ ರಾಜೇಂದ್ರ ಪ್ರಸಾದರೊಂದಿಗೆ ನಾಗಪುರದಿಂದ ಬಂದಿದ್ದರು; ಅವರ ನಾಲ್ಕನೇ ಹಾಗೂ ಕೊನೆಯ ಮಗ ದೇವದಾಸ ಗಾಂಧಿ ದಿಲ್ಲಿಯಲ್ಲೇ ಇದ್ದುದರಿಂದ ಗುಂಡು ಬಿದ್ದಾರಭ್ಯ ಶವದ ಸಾಮೀಪ್ಯ ಬಿಟ್ಟಿರಲಿಲ್ಲ. ಎರಡನೇ ಮಗ ಮಣಿಲಾಲ್ ಗಾಂಧಿ ದಕ್ಷಿಣಾಫ್ರಿಕದಲ್ಲಿದ್ದಾರೆ. ಹಿರಿಯ ಮಗ ಹೀರಾಲಾಲ್ ಗಾಂಧಿ 'ಬಚ್ಚಾಖಿ'ಯಾಗಿದ್ದು ಎಲ್ಲಿದ್ದಾರೋ ಆದು ಲೆಕ್ಕಕ್ಕೆ ಸಿಕ್ಕದ ಪ್ರಾಣಿ. ಬಂಡಿಯಲ್ಲಿ ಆ ಪಾವನ ಶರೀರವನ್ನು ಮಲಗಿಸಲು ರಾಷ್ಟ್ರೀಯ ಧ್ವಜ ಬಣ್ಣದಂತೆ ಹಸುರು, ಬಿಳಿ, ಕೇಸರೀ ಬಣ್ಣಗಳ ಹೂವಿನ ಹಾಸಿಗೆ ಮಾಡಲಾಗಿತ್ತು. ಬಾಪೂಜೀಯ ಕಾಯವನ್ನು ಭಾರತ ಧ್ವಜದಿಂದ ಮುಚ್ಚಿ ಘಂಟೆ 11½ಗೆ ಸರಿಯಾಗಿ ಅದರ ಮೇಲೆ ಮಲಗಿಸಲಾಯಿತು. ಕೂಡಲೇ ಆ ಪಾವನ ಕಾಯದ ಕೊನೆಯ ಲೌಕಿಕ ಪ್ರಯಾಣ ಪ್ರಾರಂಭ. ಮೊದಲ ರಾತ್ರಿಯಾರಂಭಿಸಿ, ಎಡೆ ಬಿಡದೆ ಆ ಕಾಯದ ಮೇಲೆ ಸುರಿಯುತ್ತಲೇ ಇದ್ದ ಪುಷ್ಪವೃಷ್ಟಿ ಮತ್ತು ಕಣ್ಣೀರ ಮಳೆಗಳೀಗ ಒತ್ತಾಗಿ ಸುರಿದುವು."ಮಹಾತ್ಮಾ ಗಾಂಧೀಕೀ ಜೈ" "ಮಹಾತ್ಮಾ ಗಾಂಧೀ ಜಯ ಹೋ!" ಧ್ವನಿಗಳು ದಶ ದಿಸೆಗಳಿಂದ ಮಾರ್ದನಿಸತ್ತೊಡಗಿದುವು. ಬಾಪೂಜೀ ನೇಮಿತ ಉತ್ತರಾಧಿಕಾರಿ ಪಂಡಿತ ಜವಾಹಿರಲಾಲರು ಬಂಡಿಯ ಮುಂಭಾಗದಲ್ಲಿ ಕುಳಿತಿದ್ದರು. ಸರ್ದಾರ್ ಬಲದೇವ ಸಿಂಗರು ಬಂಡೀ ಮುಂಭಾಗದ ಕೆಳ ಪಕ್ಕದಲ್ಲಿ ನಿಂತಿದ್ದರು. ಸರ್ದಾರ್ ಪಟೇಲರು ಶವದ ಕಾಲಬಳಿ ಬಂಡಿಯ ಹಿಂಭಾಗದಲ್ಲಿದ್ದರು. ಮೌಲಾನಾ ಆಜಾದ್ ಆಚಾರ್ಯ ಕೃಪಲಾನಿ, ರಾಜಕುಮಾರಿ ಅಮೃತಕೌರ್, ರಾಮದಾಸ ಗಾಂಧಿಯವರು ಶವದ ಸುತ್ತ ಬಂಡಿಯಲ್ಲಿ ಕುಳಿತಿದ್ದರು. ಮುಂಭಾಗದಲ್ಲಿ ಹಾದಿ ಮಾಡಿಕೊಡಲು ಸೇನಾದಳ ಸಾಗುತಿತ್ತು. ಅದಕ್ಕೂ ಮುಂದೆ ಪಥವನ್ನು ತೆರವು ಗೊಳಿಸಲು ಸೇನಾ ಗಾಡಿಯೊಂದು ನಿಧಾನವಾಗಿ ಹಿಂದಕ್ಕೂ ಮುಂದಕ್ಕೂ ಆಗಾಗ ಚಲಿಸುತಿತ್ತು. ಈ ದಳದ ಹಿಂದೆ ಪೋಲೀಸ್ ಮತ್ತು ಸೇನಾದಳಗಳು ದುಃಖ ಸೂಚನೆಯಾಗಿ ರೈಫಲ್‌ಗಳನ್ನು ಕೆಳನೋಗಮಾಡಿ ಹಿಡಿದುಕೊಂಡು ಸಾಗಿದ್ದುವು. ಆದರ ಹಿಂದೆ ಆಶ್ರಮವಾಸಿಗಳ ಭಜನಾ ಘೋಷಗಳ ನಡುವೆ ಈ ಪುಣ್ಯ ಶರೀರವಿದ್ದ ಬಂಡಿಯು ಯೋಧರಿಂದೆಳೆಯಲ್ಪಟ್ಟು ಮುಂದೆ ಮುಂದೆ ಬರುತಿತ್ತು. ಬಂಡಿಯ ಇಕ್ಕ ಪಕ್ಕಗಳಲ್ಲೂ ಸವಾರೀ ಸೈನಿಕರ ಮತ್ತು ಪೋಲೀಸ್ ದಳಗಳಿದ್ದುವು. ಅದರ ಹಿಂದೆ ಕರುಳು ಕತ್ತರಿಸಿ ಬರುತ್ತಿದ್ದ ಅಳುವಿನಿಂದಲೂ ರಾಮಧುನ್ ಹಾಡುತ್ತಲೂ ಸಹಸ್ರರು ಮಹಿಳೆಯರು; ಅವರನ್ನೇ ಅನುಸರಿಸಿಕೊಂಡು ಎಲ್ಲೆಡೆಗಳಲ್ಲೂ ಮಿಲಿಯಾವಧಿ ಜನತೆ. ಮೆರವಣಿಗೆ ಮುಂದುವರಿದಂತೆ ಏಳುತ್ತಿದ್ದ ಬೊಬ್ಬೆಗಳು, ಜಯಘೋಷಗಳು, ಹಾಡುಗಳು, ಒಬ್ಬನಿಗೆ ಸಹಸ್ರ ಕರ್ಣಗಳಿದ್ದರೂ ಸಾಲದೆನ್ನಿಸುವಂತಿದ್ದುವು;ಹಾದಿ ಪಕ್ಕಗಳಲ್ಲಿ ಮರದ ಗೆಲ್ಲು, ಮನೆಯ ಮಾಡು, ಗೋಡೆ ಪಾಗಾರಗಳ ಅಂಗುಲಾಂಗುಲ ಸ್ಥಳಗಳಲ್ಲಾವುದನ್ನೂ ಬಿಡದೆ ನಿಂತುಕೊಂಡು, ನೇತಾಡಿಕೊಂಡು ತುಂಬಿದ ಕಣ್ಣುಗಳಿಂದ ಕಾಣುತ್ತಿದ್ದ ಆ ಜನ ಸಂದಣಿಯನ್ನು ನೋಡುವವರಿಗೆ ಸಾವಿರ ಕಣ್ಣಿದ್ದರೂ ಒಸರುವಂತಿತ್ತು;ಆನೋಟವು ಒಬ್ಬಗ್ಗೈನೂರರಂತಿರುತಿದ್ದರೂ ಎದೆಗಳೆಲ್ಲವನ್ನೂ ಕರಗಿಸುವಂತಹದೇ! ಮೇಲ್ಗಡೆಯಲ್ಲಿ ಮೂರು ವಿಮಾನಗಳು ಹಾರಾಡುತ್ತಾ ಆಗಾಗ ಮಂಡನಾ ಪೂರ್ವಕ ತಗ್ಗಿಳಿದು ಬಂದು ಪುಷ್ಪವೃಷ್ಟಿಗರೆದು ಹೋಗುವಾಗ, ಬಾಪೂ ಆತ್ಮವನ್ನೊಯ್ಯಲು ಬಂದ ದೇವವಿಮಾನಗಳನ್ನು ಕಂಡವರಂತೆ ಆ ಜನ ಸಮುದ್ರ ಹಾಕುತ್ತಿದ್ದ 'ಘೋ'ಧ್ವನಿ ವರ್ಣನಾತೀತ. ನುಗ್ಗಾಟವನ್ನು ವ್ಯವಸ್ಥೆಗೆ ತರುವ ಮಾತೆಂತಿರಲಿ, ಸ್ವತಃ ಸಹಿಸಿಕೊಂಡು ಸಾಗಬೇಕಾದರೆ ಸೈನಿಕರ ಪ್ರಾಣಕ್ಕೆ ಬಂದಂತಾಗಿತ್ತು. 4000 ಸೈನಿಕರು, 1000 ವೈಮಾನಿಕರು, 1000 ಪೋಲೀಸ್, 100 ನಾವಿಕರು ಈ ಮೆರವಣಿಗೆಯಲ್ಲಿದ್ದರು. ವ್ಯವಸ್ಥೆಗಾಗಿ ಅವರು ಕೋಟೆಕಟ್ಟಿದೊಡನೆ ಅದು ಜನ ನುಗ್ಗಾಟದಿಂದ ಬಿರಿದು ಹೋಗುತಿತ್ತು. ದಿಲ್ಲಿಯ ಪ್ರಸಿದ್ಧ ಸ್ಮಾರಕ ಕಮಾನಿನ ಮೇಲೇರಿ, ಅಲ್ಲಿಯ ಮರದ ಗೆಲ್ಲುಗಳು ಮುರಿದು ಬೀಳುವಂತಾಗುವವರೆಗೂ ಹಿಡಿದು ನೇತಾಡಿ ನೋಡಿದ ಗುಂಪಿದ್ದ, ಸುತ್ತಲೂ ಇದ್ದ ನೀರಿನ ಕೊಳಕ್ಕೆ ಧುಮುಕಿ ಈಜಾಡಿಹೋಗಿ ನಡುವೆ ಎತ್ತರದಲ್ಲಿ ನಿಂತಿದ್ದ Vನೇ ಜೋರ್ಜರ ಪ್ರತಿಮೆಯಿದ್ದ ಸ್ತಂಭಕ್ಕೇರಿ ಜೀವದಾಸೆಯಿಲ್ಲದೆ ಅಲ್ಲಿ ನುಗ್ಗಿ ನಿಂತುನೋಡಿದ ಹಿಂಡುಇದೆ. ಎಲ್ಲಾ ದೃಶ್ಯಗಳನ್ನು ವರ್ಣಿಸುವುದಸಾಧ್ಯ.

ಬಾಪೂಜೀಯ ಚಿತೆ.

ನವದಿಲ್ಲಿಯ ಅಲ್ಬುಕರ್ಕ್ ರಸ್ತೆಯಲ್ಲಿರುವ ಬಿರ್ಲಾ ಭವನದಿಂದ ಬಾಪೂ ಕಾಯ ಭಸ್ಮವಾದ ರಾಜಘಟ್ಟವು ಹಳೇ ದಿಲ್ಲಿಯಲ್ಲಿ ಸುಮಾರು4½ಮೈಲು ದೂರದ ಜಮುನಾ ತಟದಲ್ಲಿ ಕೆಂಪು ಕೋಟೆಯ ದಕ್ಷಿಣದಲ್ಲಿದೆ. ಮೆರವಣಿಗೆ ಅಲ್ಲಿಗೆ, ಮುಟ್ಟುವಾಗ ಅಪರಾಹ್ನ 4¾ ಘಂಟೆ. ಹೊರಟು ಐದು ಘಂಟೆ ಯಾಗಿತ್ತು. ಅಥವಾ ಹಳೇ ದಿಲ್ಲಿ, ನವದಿಲ್ಲಿಗಳಲ್ಲಿ ಇಂಚು ಸ್ಥಳವನ್ನೂ ಬಿಡದೆ ವ್ಯಾಪಿಸಿಕೊಂಡು ಅಲ್ಲೋಲಕಲ್ಲೋಲವಾಗುತ್ತಿದ್ದ ಆ ಜನ ಸಮುದ್ರದಲ್ಲಿ ಬಾಪೂ ಶವ ಬಂಡಿಯೆಂಬ ದೇವ ನೌಕೆಯನ್ನು ಹೇಗೂ ಸಾಗಿಸಿಕೊಂಡು ಹೋದರೆನ್ನಬಹುದಲ್ಲವೆ, ಆ ಜನ ಸಮೂಹ ಮುಂದೆ ಹೋಗುತ್ತಿರುವುದೇ ತಿ

(೬ನೇ ಪುಟ ನೋಡಿರಿ.)

ಹೊಸ ವ್ಯವಸ್ಥೆ-ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—
ಎಲ್ಲಿ ?
ನೇತಾಜಿ ಲಂಚ್ ಹೋಮ್
ಕಟಪಾಡಿ, ಇಲ್ಲಿಯೆ.
ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.
ಯೋಗ್ಯ ಉಪಹಾರ! ಉತ್ತಮ ಉಪಚಾರ!
ಊಟ ವಸ್ತಿ ನಿವಾಸದ ವ್ಯವಸ್ಥೆಯೂ ಇದೆ
☞ ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
Nethaji Lunch Home,
Boarding & Lodging,
KATAPADI, S.K.

The Canara Banking Corporation Limited.

Estd: 1906.

ANNOUNCEMENT

The Directors have much pleasure in announcing that the new issue of 8000 Ordinary Shares of Rs. 50/- each of the aggregate nominal value of Rs. 4 lakhs, issued for subscription at a premium of Rs. 40/- per share and offered in that first instance to members as on 31-12-'47, has been heavily oversubscribed.

The Directors thank the Shareholders for their ready response in making this new issue of shares a complete success before the last date fixed for receipt of applications.

They are also happy to inform that one of the 100 rupee Government of India Prize Bonds held by the Bank, has secured a prize of "RUPEES FIVE THOUSAND ONLY" in the drawing held on 15-1-1948.

ನವಯುಗ

ಗುರುವಾರ, ಉಡುಪಿ, ೫-೨-'೪೮

ಬಾಪೂಜಿ

ಮಹಾತ್ಮಾ, ರಾಷ್ಟ್ರಜನಕ, ಲೋಕಪೂಜ್ಯ, ಬಾಪೂಜೀ ಜನವರಿ ತಾ 30ನೇ ಶುಕ್ರವಾರ 5 ಘಂಟೆಯ ವರೆಗಿದ್ದಂತೆ ಶರೀರ ಧಾರಿಯಾಗಿ ಈಗ ನಮ್ಮ ನಡುವೆ ಇಲ್ಲ. ಆದರೆ ಮಾರ್ಗದರ್ಶಕ ದೀಪಿಗೆಧಾರಿಯಾಗಿ, ಸತ್ಯರೂಪಿಯಾಗಿ, ಸದಾಕಾಲ ನಮ್ಮೊಂದಿಗಿದ್ದಾರೆ. ಗಾಂಧಿಜೀ ಅಮರ!

ಮಹಾತ್ಮರಿಗಾದರೂ ಮರಣ ತಪ್ಪಿದ್ದಲ್ಲವೆಂದು ನಮಗೆ ತಿಳಿದಿತ್ತು; ತಿಳಿಯಿತು. '125 ಅಥವಾ 133ರ ಗಡಿ ಸೇರುವ' ಆಶೆಯನ್ನು ಬಾಪೂಜೀ ಇತ್ತೀಚೆಗೆ ಪ್ರದರ್ಶಿಸಿದ್ದರೂ ಪ್ರಾಯ 79ರ ಮುದುಕ ಇನ್ನೆಷ್ಟು ವರುಷ ಬಾಳಿಯಾರೆಂಬ ಭರವಸೆಯಿರಲಿಲ್ಲ. 'ಗಾಂಧಿಜೀಯೊಂದಿಗೆ ಸರ್ವವೂ ಹೋಯಿತು!' ಎಂದು ನಾವು ಹೃದಯ ಕಳಕೊಂಡಲ್ಲಿ ನಮಗಾಗಿ ತನ್ನ ಸರ್ವಸ್ವವನ್ನೂ ಅರ್ಪಿಸಿ, ನಮ್ಮ ಪಾಲಿಗೆ ಹೇರಳ ಮಾಡಿಟ್ಟುಹೋದ ಪೂಜ್ಯ ಬಾಪೂಜಿಯ ಮೇಲೆ ಅಸತ್ಯಾರೋಪವನ್ನು ಮಾಡಿದಂತಾದೀತು; ನಾವು ಕೃತಘ್ನರಾದೇವು! ಎಂದೂ ವಿರಾಮ ಪಡೆಯದೆ ನಮಗಾಗಿ ದುಡಿಯುವುದರಲ್ಲೇ ಇದ್ದ ಆ ಜೀವಕ್ಕೆ ಒಂದು ದಿನ ಶಾಶ್ವತ ವಿಶ್ರಾಂತಿ ಹೊಂದುವ ಹಕ್ಕು ಇದ್ದೇ ಇತ್ತು; ನಾವು, ಅವರ ಮಾತುಗಳಿಗೆ ತಪ್ಪಿ ನಡೆದು ಮಾಡಿರುವ ಅಪರಾಧಗಳೇ ಸಾಕು-ಅವರ ಹಕ್ಕಿನ ಮರಣ ಕೂಡಾ ಅವರಿಗೆ ತಪ್ಪಬೇಕಿತ್ತೆಂದು ಆಶಿಸುವಷ್ಟು ದ್ರೋಹಿಗಳಾಗುವದು ಬೇಡ! ಮಹಾತ್ಮರದು ಸದಾಕಾಲವೂ ಇರತಕ್ಕ ಜೀವವಾಗಿತ್ತೆ? ಅವರಿರುವಾಗಲಾದರೂ ಸರ್ವರ ನಡುವೆಯೂ ಕೂಡಿ ಆಡಿ ನಲಿದುಕೊಂಡೇ ಇದ್ದರೆ? ಎರಡೂ ಅಲ್ಲ. ನಮ್ಮ ಪಾಲಿಗೆ ಇದುವರೆಗೆ ಅವರು ಹೇಗಿದ್ದರೋ, ಇನ್ನೂ ಹಾಗೆಯೇ ಇದ್ದಾರೆ. ಅವರೇನು, ಕೈಯೆತ್ತಿ ನಮ್ಮಲ್ಲಿ ಪ್ರತಿಯೊಬ್ಬನ ತಲೆ ಸವರಿ, ಆಶೀರ್ವದಿಸುತ್ತಾ ನಮ್ಮನ್ನು ಉದ್ಧರಿಸಿದುದಲ್ಲ. ತನ್ನ ಬೋಧೆಗಳ ಮೂಲಕ, ಕಾರ್ಯಗಳ ಮೂಲಕ ನಮ್ಮನ್ನು ಮುನ್ನಡೆಸಿದ್ದರು; ನಮ್ಮನ್ನು ಮನುಷ್ಯರನ್ನಾಗಿ ಮಾಡಿದ್ದರು. ಆ ಉಪದೇಶಗಳು, ನೀತಿಸೂತ್ರಗಳು ಶಾಶ್ವತವಾಗಿ ನಮ್ಮ ಕಣ್ಣ ಮುಂದಿವೆ. ಈಗಲಂತೂ ಬಾಪೂಜೀಯ ಪರಿಶುದ್ಧ ರಕ್ತದಿಂದಲೇ ಮೆರಗು ಕೊಡಲ್ಪಟ್ಟ ಆ ಹಿತವಚನಪಟ್ಟಿ ನಾವಿನ್ನಿಡುವ ಹೆಜ್ಜೆ ಹೆಜ್ಜೆಗೂ ನಮ್ಮ ಕಣ್ಣ ಮುಂದೆ ತೂಗಾಡಲಿದೆ. ಅಂದ ಮೇಲೆ ಬಾಪೂಜೀ ಅಳಿಲ್ಲವೆಂದು ನಾವೇಕೆ ಕೂಗಾಡಬೇಕು? ಅವರೀಗ ದೂರ ಹೋದುದಲ್ಲ—ಅಲ್ಲಿದ್ದುಕೊಂಡು ಎಷ್ಟೇ ಕಲಿಸಿದರೂ ಕಲಿಯಲಾಗದ ದಡ್ಡರು ನಾವೆಂಬುದನ್ನರಿತು ಆ ಗುರು ನಮ್ಮ ಸಮೀಪಕ್ಕೇನೇ ಬಂದರು; ನಮ್ಮೊಳಗೆ ಸೇರಿಹೋದರು! ಅಳಬೇಕೇಕೆ?

ನಾವಿನ್ನೂ ಪೂರ್ತಿ ಮಾನುಷತ್ವವನ್ನೇ ಸಂಪಾದಿಸಿಲ್ಲ-ಆದರೆ ನಮ್ಮ ನಡುವೆ ಇಡೀ ಮಾನವ ಜನಾಂಗದ ಉದ್ಧಾರಕನಾದ ಮಹಾತ್ಮನೊಬ್ಬನ ಅವತಾರವನ್ನು ಗಳಿಸಿದ್ದೆವು! ನಮ್ಮ ಹೇಯ ಮನೋಮಟ್ಟವನ್ನು ಕಂಡು ಲೋಕವು ನಾಚಿಕೆಯಿಂದ ತಲೆ ಬಾಗುವೆನೆನ್ನುವಾಗಲೇ, ನಮ್ಮ ನಟ್ಟನಡುವೆ ಇದ್ದ ಮಹಾತ್ಮನೊಬ್ಬನ ಘನತೆಯನ್ನು ಕಂಡು ಗೌರವದಿಂದಲೇ ತಲೆ ಬಾಗಬೇಕಾಗಿತ್ತು! ಕರಗಿ ಕರಗಿ ನೀರಾಗಿ ಹರಿಯುತ್ತಿರುವ ನಮ್ಮ ಹೃದಯಕ್ಕೆ ಬಾಪೂಜೀ ಬೋಧೆಯ ಅಣೆಕಟ್ಟನ್ನು ಹಾಕಿಕೊಂಡು-ಶುಕ್ರವಾರದ ಘಟನೆಯನ್ನು ನೆನೆನೆನೆದು ಸಿಡಿಯುತ್ತಿರುವ ನಮ್ಮ ಮೆದುಳಿಗೆ ಬಾಪೂ ಹಿತವಚನದ ಲೇಪ ಹಚ್ಚಿಕೊಂಡು-ಮುಂದೆ ನಮಗೇನು, ಎಂಬುದನ್ನೀಗ ಯೋಚಿಸೋಣ. ನಾವಾರು? ಎರಡು ಶತಮಾನಗಳಿಂದಿದ್ದ ನಮ್ಮ ಗುಲಾಮಗಿರಿಯನ್ನು ನಿವಾರಿಸಿ, ನಮಗೆ ಮಾನುಷತ್ವ ದೊರಕಿಸಿಕೊಟ್ಟ ನಮ್ಮ ಪಾಲಿನ ಭಾಗ್ಯವಿಧಾತನನ್ನೇ ಕೊಂದವರು! ನಾವಾರು? ನಮ್ಮ ಪಾಲಿನದಾಗಿ, ಅಂತೆಯೇ, ಪಾಶವಿಕ ಕಗ್ಗತ್ತಲೆಯ ಲೋಕದ ಪಾಲಿನದಾಗಿ ನಮ್ಮಲ್ಲಿದ್ದ ನಂದಾದೀಪವನ್ನು ಮುನ್ನಿಂದು ಊದಿ ನಂದಿಸಿಕೊಂಡವರು! ಶ್ರೀಕೃಷ್ಣನನ್ನು ಪಡೆದಂತೆಯೇ ಆತನಿಗೆ ಬಾಣ ಬಿಟ್ಟು ಕೊಂದ ಬೇಡನನ್ನೂ ಪಡೆದವರು! ನಾವೊಂದು ವಿಲಕ್ಷಣ ಜನಾಂಗ! ಈ ಸಂದರ್ಭದಲ್ಲಿ ನಮ್ಮನ್ನು ನಾವು ಅರಿತುಕೊಳ್ಳಬೇಕು. ಬಾಪೂಜೀಯ ಪಾದಕ್ಕೆ ತಲೆಮುಟ್ಟಿಸಲು ನಮಗೆ ತಿಳಿದಿತ್ತು; ಅವರ ಉಪದೇಶಗಳನ್ನು ಮೆದುಳೊಳಗೆ ತುಂಬಿಸಿಕೊಳ್ಳಲಾಗದಿದ್ದರೂ, ಮಹಾಪ್ರಸಾದವಾಗಿ ತಲೆಯ ಮೇಲೆ ಹೊತ್ತುಕೊಳ್ಳುವುದನ್ನು ನಾವು ಕಲಿತಿದ್ದೆವು. ಮೊನ್ನೆ ಚೆಲ್ಲಿದ ಬಾಪೂ ರಕ್ತಕ್ಕೆ ನಾವು ಕೊಡುವ ಬೆಲೆಯೇನು? ಪತಿತೋದ್ಧಾರ ಭಾವನಾ ರಸದ ಕೊಡವಾಗಿದ್ದ ಆ ಹೃದಯಕ್ಕೆ ನಾಟಿದ ಗುಂಡಿಗೆ ನಾವೂ ನಮ್ಮ ಪಾಲಿನದಾಗಿ ಕೊಡುವಂತಹದಾವುದು?—ನೆಹರುಗಳೆಂದಂತೆ 'ಸ್ವೇಷಮತ್ತು ಹಿಂಸೆ, ಜಾತೀಯತಾ ಭಾವನೆ'! ನಿರ್ಮೂಲಿಸಿ ಬಿಡೋಣ—ಜಾತೀಯತಾ ಸಂಸ್ಥೆಗಳನ್ನು, ಜಾತೀಯ ಭಾವನೆಗಳನ್ನು ನಾಮಾವಶೇಷಗೊಳಿಸೋಣ! ಧೈರ್ಯ, ಸ್ಥೈರ್ಯ, ಸ್ವಚ್ಛತಾ ಸಮಾನತಾ ಭಾವನೆಗಳನ್ನು ತುಂಬಿಸಿ ಹೃದಯವನ್ನು ಮೇಲಕ್ಕೆತ್ತೋಣ-ಗಾಂಧಿಜೀ ಮುಟ್ಟಿದ ಮರೆಗೂ ಎತ್ತುವ! ಬಾಪೂಜೀ ಚಿರಾಯುವಾಗಲಿ.

ಬಾಪೂಜಿ ವಿಯೋಗ

(೫ನೇ ಪುಟದಿಂದ)

...ಳಿಯಲಾರದಷ್ಟು ನಿಬಿಡವಿದ್ದುದರಿಂದ ಬೇರೇನೂ ಹೇಳಲಾಗುವದಿಲ್ಲ. ಸಂಖ್ಯೆಯು ಷ್ಟಾದೀತೆಂದು ಸಹಜವಾಗಿ ಯಾರಿಂದಲೂ ಹೇಳಲಾಗಿಲ್ಲ. ಹತ್ತು ಲಕ್ಷಕ್ಕಿಂತ ಕಡಿಮೆಯಿರಲಿಲ್ಲವೆಂದು ಅಂದಾಜು ಮಾಡಲಾಗಿದೆ. ಮಹಾತ್ಮಾಜೀಯ ನಶ್ವರಕಾಯವನ್ನು ಬೂದಿ ಮಾಡಿದ ಜಮುನಾ ನದಿ ತಟದ ರಾಜಘಟ್ಟ ವಿಶಾಲ ಕ್ಷೇತ್ರದಲ್ಲಿ ಆ ಮೊದಲು ಕಂಟಿ ಕಣಚಲುಗಳು ತುಂಬಿದ್ದುವು. ಅವನ್ನೆಲ್ಲಾ ಸವರಿ ತೆಗೆದು ಶಾಸ್ತ್ರವಿಧಿವರಿ ಮಣ್ಣು ಇಟ್ಟಿಗೆಗಳಿಂದ ಕಟ್ಟೆಯೊಂದನ್ನು ಎತ್ತರಿಸಿ ಕಟ್ಟಲಾಗಿತ್ತು. ಜನ ನುಗ್ಗಾಟಕ್ಕೊಂದು ಪ್ರತಿಬಂಧಕವೆಂದು ಈ ಕಟ್ಟೆಗೆ ನೂರು ಗಜಗಳ ದೂರದಲ್ಲಿ ಸುತ್ತಲೂ ಬಲವಾದ ಬೇಲಿಗಳನ್ನು ಹಾಕಲಾಗಿತ್ತು. ನಿಶ್ಚಿತ ವೇಳೆಗೆ ಷ್ಟೋ ಮೊದಲು ಆ ದಹನ ಸ್ಥಳವು ಜನಸಂದಣಿಯಿಂದ ತುಂಬಿಹೋಗಿತ್ತು. ಮೆರವಣಿಗೆಯಾರಂಭದ ವೇಳೆ ದುಃಖಸೂಚಕ ಕಂಕೋಳುಕಟ್ಟನ್ನು ಸುತ್ತಿಕೊಂಡು, ತನ್ನ ಪತ್ನಿ ಮತ್ತು ಇಬ್ಬರು ಪುತ್ರಿಯರೊಂದಿಗೆ ಬಿರ್ಲಾಭವನದಲ್ಲಿದ್ದ ಲೋರ್ಡ್ ಮೌಂಟ್ ಬೇಟನರೂ, ರಾಜೇಂದ್ರ ಪ್ರಸಾದ್, ಸರೋಜನಿ ನಾಯುಡು, ಪೇರ್, ತ್ರಿವೇದಿ, ಅರ್ಚಿಬಾಲ್ಡ್ ನೈ, ಮೊದಲಾದವರೂ ಶವ ಬರುವ ಮೊದಲೇ ದಹನ ಸ್ಥಳಕ್ಕೆ ಬಂದಿದ್ದರು. ಶವದ ಗಾಡಿ ತೋರಿ ಬಂದೊಡನೆ ಮೌಂಟ್ ಬೇಟನ್ ಮತ್ತು ಧುರೀಣರು ಚಿತೆಯ ಕಟ್ಟೆಯನ್ನೇರಿದರು. ಮೆರವಣಿಗೆ ಸ್ಮಶಾನ ಕ್ಷೇತ್ರದೊಳಗೆ ಪ್ರವೇಶಿಸಿದುದೇ ತಡ— ದುಃಖಾವೇಗ, ದರ್ಶನಾತುರಗಳ ಆ ಮಹಾಸ್ರನಾಹಕ್ಕೆಬನ್ನೆಯೇ ಸರಿಯೆಂದಿದಂತಾಗಿ, ಅಲ್ಲಿ ನಡೆದ ನುಗ್ಗಾಟ, ಗೊಂದಲಗಳ ಅಂಶಮಾತ್ರವನ್ನಾದರೂ ವರ್ಣಿಸುವುದು ಅಸಾಧ್ಯ. ಸುತ್ತಲೂ ಕಟ್ಟಿದ್ದ ಬೇಲಿಗಳು ಮದ್ದಾನೆ ಹಿಂಡಿಗೆ ಸಿಕ್ಕಿದ ಕಬ್ಬು ಕೋಲುಗಳಂತೆ ಜನ ನುಗ್ಗಾಟಕ್ಕೆ ಪಟಪಟನೇ ಮುರಿದುವು. ಬಾಪೂಜೀಯ ಬದಲಿಗೆ ತಾವೇ ಚಿತೆಯನ್ನೇರುವುದು ವಾಸಿಯೆಂದು ತೋರಿತೇನೋ ಎಂಬಂತೆ ಆ ಪ್ರಚಂಡ ಜನ ಸಂದಣಿ ಚಿತೆಯತ್ತ ಕವಿದು ನುಗ್ಗಿತು. ಮಹಿಳೆಯರು ಗೋಳೋ ಎಂದಳುತ್ತಾ ಚಿತೆಗಭಿಮುಖವಾಗಿ ಕವಚಿಬಿದ್ದರು. ಸೈನಿಕರ ಕೋಟೆಯೊಡೆದು ಛಾಲು ಜಾರಿತು. ಮೌಂಟ್ ಬೇಟನರು ಜನ ನುಗ್ಗಾಟದೊಳಗೆ ಸಿಕ್ಕಿ, ಜಜ್ಜಿ ಹೋಗಿ ಅಲ್ಲಿಂದಲೇ ಗುಂಪನ್ನು ಹಿಂದಕ್ಕೊತ್ತಿರೆಂದು ಸೈನಿಕರಿಗಾಜ್ಞೆ ಕೂಗುಹಾಕಬೇಕಾಯಿತು. ಕೊನೆಗೊಮ್ಮೆ ಬಾಪೂ ದರ್ಶನ ಪಡೆಯೋಣವೆಂದು ನುಗ್ಗಿದ ಹಲವು ಸ್ತ್ರೀ ಪುರುಷರು ಸ್ಮೃತಿ ತಪ್ಪಿಬಿದ್ದರು. ಆದಿಯಿಂದಲೂ ಮೆರವಣಿಗೆಯಲ್ಲಿ ಜಾಗ್ರತೆಯಿಂದ ನೋಡಿಕೊಂಡು ಬಂದಿದ್ದ ಸ್ವಯಂಸೇವಕರೂ ಚಿಕಿತ್ಸಕ ದಳದವರೂ ಅವರನ್ನು ಹೆಕ್ಕಿ ಒಯ್ದರು. ಮಕ್ಕಳು ಮರಿಗಳು ಕಾಣೆಯಾಗಿ, ಆ ಮಹಾ ಗದ್ದಲದಲ್ಲಿ ಏನು, ಎಲ್ಲಿ ಎಂಬ ಅರಿವೇ ಇಲ್ಲದಂತಾಗಿ ಹೋಯಿತು. ನೆಹರು, ವಲ್ಲಭಾಯಿ, ಮತ್ತು ಲೇಡಿ ಮೌಂಟ್ ಬೇಟನರು ತಪ್ಪಿಹೋದ ಕೂಸುಗಳನ್ನೆತ್ತಿಕೊಂಡು ರಕ್ಷಕರ ವಶಕ್ಕೀಯುತ್ತಿರುವುದು ಕಂಡುಬಂತು. ಇದುವರೆಗೆ ವ್ಯಕ್ತಿ ಜಾತಿಯ ಯಾವುದಕ್ಕೂ ದೊರೆಯದಿದ್ದಂತಹ ಅನನ್ಯ ಪುಣ್ಯ ಶರೀರವೊಂದರ ಸ್ಪರ್ಶ ಭಾಗ್ಯ ಕಾದಿದ್ದ, ಆ ಗಂಧದ ಚಿತೆಯ ಮೇಲೆ ಜನ ಸಮುದ್ರ ಕವಿದು ಬಿದ್ದು ಏನಾಗುವುದೋ ಎಂಬ ಭೀತಿಯಿದ್ದಿತು-ಒಮ್ಮೆ ನಡೆದ ಗಲಿಬಿಲಿಯಿಂದ! ಕೊನೆಗೆ ಹೇಗೂ ಸವಾರೀ ಸೈನಿಕರು ಪರಮಾವಧಿ ಪ್ರಯಾಸದಿಂದ ಜನ ತಂಡವನ್ನು ಹಿಂದಕ್ಕೆ ಸರಿಸಿ ಚಿತೆಯ ಆವರಣವನ್ನು ತೆರವು ಮಾಡಿದರು.

ಬಾಪೂ ಶವ ದಹನ

ಬಂಡಿಯಿಂದ ಬಾಪೂಜೀ ಶರೀರವನ್ನು, ಅವರ ಆಶ್ರಮವಾಸಿಗಳು ಹೊತ್ತು ತಂದು ಗಂಧದ ಚಿತೆಯ ಮೇಲೆ ಬಡಗು ದಿಕ್ಕಿಗೆ ತಲೆಮಾಡಿ ಮಲಗಿಸಿದರು. ಸುತ್ತಲೂ ಕುಳಿತು ಭಜನೆ ಹಾಡಿದರು. ಪುಷ್ಪ ರಾಶಿಗಳು, ಖಾದೀ ಹಾರಗಳು, ಶಾಲುಗಳು ಮಹಾತ್ಮರ ಕಾಯಕ್ಕೆ ಹೊದಿಸಲ್ಪಟ್ಟವು; ವಿವಿಧ ರಾಷ್ಟ್ರಗಳ ರಾಯಭಾರಿಗಳ ಹೊದಿಕೆ ಕಾಣಿಕೆಗಳರ್ಪಿಸಲ್ಪಟ್ಟವು. ದೇಹದ ಮೇಲೆ ಹೊದೆದಿದ್ದ ರಾಷ್ಟ್ರಧ್ವಜವನ್ನು ತೆಗೆದು ಗಂಧದ ತುಂಡುಗಳಿಂದದನ್ನು ಮುಚ್ಚಲಾಯಿತು. ಪುರೋಹಿತರಾಗಿ ಪಂಡಿತ ರಾಮಧೂನ್ ಶರ್ಮರು ವೈದಿಕ ಮಂತ್ರ ಪಠನೆ ಮಾಡುತಿದ್ದರು. ಅಲ್ಲಿದ್ದ ಇಬ್ಬರು ಮಕ್ಕಳ ಪೈಕಿ ಹಿರಿಯವರಾದ ರಾಮದಾಸ್ ಗಾಂಧಿಯವರು ಘಂಟೆ 4-55ಕ್ಕೆ ಸರಿಯಾಗಿ ಚಿತೆಗೆ ಬೆಂಕಿ ಹಚ್ಚಿದಾಗ, ಅಲ್ಲಿದ್ದ ಭಾರತದ ಅತ್ಯಂತ ಶ್ರೀಮಂತರಿಂದ ಹಿಡಿದು ಅತೀ ಬಡವನ ರೆಗಿನ ಆ ಮಾಲಿಯ ಮುಂದಿಯಲ್ಲಿ ಪ್ರತಿ

ಬಾಪೂಜೀ ಹೊರಟು ಹೋದ ಮೇಲೆ—

ಯೊಬ್ಬನೂ ದುಃಖಾವೇಗದಿಂದ ತಮ್ಮನ್ನು ತಾವು ಮರೆತರು. ಒಮ್ಮೆಗೇ ಪ್ರಳಯ ಶರಧಿ ಘೋಷದಂತೆದ್ದ ಅಳುಧ್ವನಿಯು ಎಂತಹ ರಾಕ್ಷಸೀ ಹೃದಯವನ್ನಾದರೂ ಛಿದ್ರ ಛಿದ್ರಗೊಳಿಸುವಂತಹದಿತ್ತು. ವಲ್ಲಭಭಾಯಿ ಪಟೇಲರು ಒಂದೆಡೆ ಶಿಲಾಪ್ರತಿಮೆಯಂತೆ ಕುಳಿತಲ್ಲಿಯೇ ಸುಮಾರು ಅರ್ಧ ಘಂಟೆ ಹೊತ್ತು ಸ್ಮೃತಿ ತಪ್ಪಿ ಸ್ತಬ್ಧರಾಗಿದ್ದರು. ಕೊನೆಗೆ ತನ್ನೊತ್ತಿನಲ್ಲಿ ಅಳುತ್ತಿದ್ದ ಹುಡುಗಿಯೊಬ್ಬಳನ್ನು ಸಂತೈಸಲು ತಲೆಸವರುವ ಮೂಲಕ ಪ್ರಜ್ಞೆ ಸೂಚಿಸಿದರು. ಬಾಬೂ ರಾಜೇಂದ್ರ ಪ್ರಸಾದ್, ಪಂಡಿತ ಪಂತ್, ಸರೋಜಿನಿ ನಾಯುಡು, ಮೊದಲಾದ ಪ್ರಮುಖರು ತೊಲೆಯಾಡುವ ತಾಯಿಯನ್ನು ಕಳಕೊಂಡ ಹಸುಕೂಸುಗಳಂತೆ ಅಳುತಿದ್ದರು. ಪಂಡಿತ ನೆಹರುಗಳು ಅದೊಂದೇ ಮುಹೂರ್ತದಲ್ಲಿ ಹತ್ತು ವರುಷಗಳಷ್ಟು ಪೆಚಗೆ ಮುದಕರಾದಂತೆ ತೋರಿದ್ದರು. ಆ ಪ್ರಚಂಡ ಜನಸಂದಣಿಯ ಹಿಂಭಾಗದ ಕೊನೆಯಲ್ಲಿರುವವರು ಕೂಡಾ ಚಿತೆಗೆ ಹಾಕಲು ಪುಷ್ಪಹಾರ ಇತ್ಯಾದಿಗಳನ್ನು ಹಿಡಿದುಕೊಂಡು ಮುನ್ನುಗ್ಗುವೆನೆಂದು ಉರುಡಾಡುತಿದ್ದರು, ಆದರೆ ಹೇಗೆ? ಗಂಧ ಘೃತ, ಸುವಾಸನಾ ದ್ರವಗಳಿಂದ ಕೆಂಪು ಜ್ವಾಲೆ ಭುಗ್ಗನೇ ಹತ್ತಿಕೊಂಡು ಆಕಾಶಕ್ಕೇರಿತು. ಜತೆಯಲ್ಲೇ ಆಕಾಶ ಭೇದಿಸುವ 'ಮಹಾತ್ಮಾ ಗಾಂಧೀ ಅಮರರಾಗಯೀ!' ಘೋಷವದ್ದಿತು. ಪವಿತ್ರ ಯಮುನೆಯು ಭಾರತಾಂಬೆಯ ಕಣ್ಣೀರಿಂಬಂತೆ ಪಕ್ಕದಲ್ಲಿ ಹರಿಯುತಿದ್ದಳು; ಪಡುವಣ ಗಗನದಲ್ಲಿ ಅಸ್ತಮಿತ ಸೂರ್ಯ ಬಿಂಬ ಭಾರತೀಯರ ಭಾಗ್ಯರವಿಯೆಂಬಂತೆ ಕೆಳಗಿಳಿಯುತ್ತಿದ್ದ. ಯಮುನೆಗಿಪ್ಪತ್ತು ಮೈಲು ದೂರದ ಹಳ್ಳಿಯೊಂದರ ಹಾಲುಮಾರುವವರು ಬಾಪೂಜೀಯ ಮರಣ ವಾರ್ತೆ ಕೇಳಿದೊಡನೆ ಉಪವಾಸ ಕೈಕೊಂಡು ಎರಡು ಪಟ್ಟೆ ಶುದ್ಧ ತುಪ್ಪವನ್ನು ಹೊತ್ತುಕೊಂಡು ಬಂದಿದ್ದರು; ಅದನ್ನೂ ಚಿತೆಗೆ ಸುರಿಯಲಾಯಿತು. ಆರು ಘಂಟೆಗೆ ಇಡೀ ಚಿತೆಯು ಉರಿದು ಬಾಪೂ ಶರೀರವು ಪೂರ್ಣ ಬೂದಿಯಾಗಿ ಹೋಯಿತು. ಚಿತೆ ಉರಿಯುತ್ತಿದ್ದಾಗಲೂ ಆ ಮೇಲೂ ಅಲ್ಲಿ ಸುತ್ತ ಹಾರಿ ಬಿದ್ದಿದ್ದ ಹೂವಿನ ಅವಶೇಷಗಳನ್ನೂ, ಅರಿವೆ ಚೂರುಗಳನ್ನೂ, ಗಂಧದ ಕೊರಡಿನ ತುಣುಕುಗಳನ್ನೂ, ಬೂದೀ ಕಣಗಳನ್ನೂ, ಅತ್ಯಂತ ಭಕ್ತಿಯಿಂದ ಜನರು ಹೆಕ್ಕಿಕೊಂಡರು; ಪುಣ್ಯ ಪ್ರಸಾದವಾಗಿ ಕಾಯ್ದಿಡಲು ಸಂಗ್ರಹಿಸಿಕೊಂಡರು. ಒಹಳ ರಾತ್ರಿಯ ವರೆಗೂ ಜನ ಸಂದಣಿಯು ಅಲ್ಲಿ ಕಿಕ್ಕಿರಿದಿತ್ತು. ತಡವಾಗಿ ಬಂದವರು, ಚಿತೆಯ ಪುಣ್ಯಾವಶೇಷಗಳನ್ನು ಕೊಂಡುಹೋಗಲು ಬಂದವರು, ರಾಜ ಘಟ್ಟದಲ್ಲಿ ಇಡೀ ರಾತ್ರಿ ಬರುತ್ತ ಹೋಗುತ್ತಾ ಇದ್ದರು. ರಾತ್ರಿಯಿಡೀ ಶವದಹನ ಸ್ಥಳಕ್ಕೆ ಬಲವಾದ ಸೇನಾ ಕಾವಲಿದ್ದಿತು. ಬಾಪೂಜೀಯ ಕಾಯ ಆದರ ಜತೆಯಲ್ಲೇ ಭಾರತದ ಶಾಂತಿ, ಕಣ್ಮರೆಯಾಯಿತು! ಜೈ ಬಾಪೂಜಿ! ಜೈಹಿಂದ್!

ಬಾಪೂಜೀಯ ಬೂದಿ

ಬಾಪೂವಿನ ಕಾಯ ಭಸ್ಮವಾದ ಸ್ಥಳದಲ್ಲಿ ಆರು ತೆಂಗಿನ ಸಸಿಗಳನ್ನು ನೆಡಲಾಗಿದೆ. ಕಾಯವನ್ನು ಮಲಗಿಸಿದ ತಲೆಬದಿ ಸ್ಥಳದಲ್ಲೆರಡು, ಪಾದದ ಬಳಿಯಲ್ಲೆರಡು; ಮತ್ತೆರಡನ್ನು ಚಿತೆಗೆ ಹತ್ತುವ ಮೆಟ್ಟಲುಗಳ ಎರಡು ಪಕ್ಕಗಳಲ್ಲಿ ನೆಡಲಾಗಿದೆ. ಪ್ರಾರ್ಥನೆಗಳೂ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳ ಪಠನೆಯೂ ಅಲ್ಲಿ ಎಡೆಬಿಡದೆ ನಡೆದಿವೆ. ತಮ್ಮ ಜನ್ಮಾವಧಿ ಕಾಯ್ದಿಡುವ ಮಹಾ ಪ್ರಸಾದವಾಗಿ ಆ ಪಾವನ ಕಾಯದ ಬೂದಿಯನ್ನೊಯ್ಯಲು ನುಗ್ಗಿ ಬರುವವರ ಸಂಖ್ಯೆ ವಿಶೇಷವಾದ್ದರಿಂದ ಬಲವಾದ ಸೇನಾ ಪಹರೆಯಿದ್ದಂತೆಯೇ ಸುತ್ತಲೂ ತಂತೀ ಬೇಲಿಯನ್ನು ಹಾಕಲಾಗಿದೆ. ನೆಹರುಗಳೂ ಮತ್ತಿತರ ಮಂತ್ರಿಗಳು ಹಾಗೂ ಪ್ರಮುಖರೂ ಬೆಳಗಿನ ಸಂಪ್ರತಿ ಶವದಹನ ಸ್ಥಳಕ್ಕೆ ಬಂದು ಹೂಮಾಲೆ ಹಾಕಿ ಮೌನ ಪ್ರಾರ್ಥನೆ ಸಲ್ಲಿಸಿ ಹೋಗುತಿದ್ದಾರೆ. ಫೆಬ್ರವರಿ ತಾ. 2 ಬಾಪೂಜಿಯ ಬೂದಿ ಸಂಗ್ರಹ ದಿನ. ಚಿತೆಯ ದಿನ್ನೆಯು ಹೂಮಾಲೆ, ಹೂರಾಶಿಗಳಿಂದ ಮುಚ್ಚಿಹೋಗಿತ್ತು. ಎಲ್ಲಾ ಜಾತಿಮತಗಳ ಸಹಸ್ರಾರು ಜನರು ಅಲ್ಲಿ ನೆರೆದಿದ್ದರು. ಒಂದೂವರೆ ತಾಸುಗಳ ತನಕ ಆ ವಿಧಿ ನಡೆಯಿತು. ಪ್ರಥಮತಃ ವೈದಿಕ ಮಂತ್ರ ಪಠನೆಗಳೊಂದಿಗೆ ಭಾಗೀರಥೀ ಜಲವನ್ನು ಬೂದಿಗೆ ಚಿಮುಕಿಸಿ, ಅಲ್ಲಿ ಉಳಿದಿದ್ದ ಬೂದಿ ಮತ್ತು ಎಲುಬು ತುಂಡುಗಳನ್ನು ಸಂಗ್ರಹಿಸಿ ಒಂದು ಬಿಳೀ ಖಾದೀ ಚೀಲದೊಳಗೆ ತುಂಬಿಸಲಾಯಿತು. ಆ ಮೇಲೆ ಒಂದು ತಾಮ್ರದ ಪಾತ್ರೆಯೊಳಗೆ ಅದನ್ನು ತುಂಬಿಸಲಾಯಿತು. ಪಾತ್ರೆಯ ಹೊರಮೈಯಲ್ಲಿ 'ರಾಮ, ರಾಮ' ಬರೆಯಲಾಗಿತ್ತು; ಅದರ ಕಂಠಕ್ಕೆ ಹೂಹಾರಗಳನ್ನು ಸುತ್ತಿದ್ದರು. ಕೊನೆಗದರ ಬಾಯಿಯನ್ನು ಕೆನೆ ಹಾಲು ಬಣ್ಣದ ಖಾದಿಯಿಂದ ಮುಚ್ಚಿಟ್ಟಿದ್ದಾರೆ. ಬೂದಿ ಸಂಗ್ರಹಿಸುವಾಗ ಬಾಪೂಜೀ ಹೊಟ್ಟೆಗೆ ನಾಟಿದ್ದ ಒಂದು ಗುಂಡು ಅದರಲ್ಲಿ ದೊರೆತಿದೆ. ಬಹುಶಃ 13ನೇ ದಿನ ತಾ 10-2-48ನೇ ಬುಧವಾರ ಈ ಅವಶೇಷಗಳನ್ನು ಗಂಗಾಯಮುನಾ ಸಂಗಮ ಸ್ಥಳವಾದ ಅಲ್ಲಹಾಬಾದಿನ ಪ್ರಯಾಗದಲ್ಲಿ ಕದಡಿಸಲಾಗುವದು. ಇತ್ತ ಬಿರ್ಲಾಭವನದಲ್ಲಿ ಗಾಂಧಿಜೀ ಪ್ರಾರ್ಥನೆ ನಡೆಸುತ್ತಿದ್ದ ಹಾಗೂ ಅವರಿಗೆ ಗುಂಡು ಬಿದ್ದ ಅಂಗಣದ ಸುತ್ತಲೂ ಬಲವಾದ ಬಿದಿರು ಗೋಡೆಗಳನ್ನು ಕಟ್ಟಿದ್ದಾರೆ; ಜನ್ಮಪಾವನ ಗಂಧವೆಂದು ಅಲ್ಲಿಯ ಮಣ್ಣನ್ನೆಲ್ಲಾ ಅಗೆದು ಬೊಗಸೆ ಬೊಗಸೆಯಾಗಿ ಹಿಡಿದುಕೊಂಡು ಹೋಗುತ್ತಿರುವ ಜನರ ಒತ್ತಡ ಹೆಚ್ಚಿದುದೇ ಇದಕ್ಕೆ ಕಾರಣ. ಒಂದಡಿ ಆಳದ ಕುಳಿಗಳು ಇಷ್ಟರೊಳಗೇನೇ ಅಲ್ಲಿ ಆಗಿವೆ. ಗಾಂಧಿಜೀ ವಾಸಿಸಿದ್ದ, ಮತ್ತು ಪ್ರಾಣಬಿಟ್ಟ ಬಿರ್ಲಾಭವನದ ಕೋಣೆಯನ್ನು ಹಾಗೆಯೇ ಇಟ್ಟಿದ್ದಾರೆ. ಗಾಂಧಿಜೀ ಕುಳಿತುಕೊಂಡು ಬರೆಯುತ್ತಿದ್ದ ಸಣ್ಣ ಚಾಪೆಯೊಂದು ಆ ಕೋಣೆಯಲ್ಲಿ ಹಾಗೆಯೇ ಇದೆ; ಅವರ ಖಾಸಗೀ ಪುಸ್ತಕಗಳು, ಕಾಗದಗಳು, ಮತ್ತಿತರ ಸಾಮಾಗ್ರಿಗಳನ್ನು ಮೊದಲೆಲ್ಲಿದ್ದವೋ ಅಲ್ಲಿಯೇ ಹಾಗೆಯೇ ಇಡಲಾಗಿದೆ. ಗಾಂಧೀಜಿಯ ಚಾಪೆಯ ಮೇಲೆ ಅವರ ಒಂದು ಭಾವಚಿತ್ರವನ್ನಿರಿಸಿ ಅದರ ಮುಂಭಾಗದಲ್ಲಿ ಅವರ 'ಯೆರವಾಡಾ ಚರಕ'ವನ್ನು ತೆರೆದಿಟ್ಟಿದ್ದಾರೆ. ಗಾಂಧೀ ಚಿತ್ರದ ಪಕ್ಕದಲ್ಲಿ, ಬರ್ಮಾದ ಪ್ರಧಾನ ಮಂತ್ರಿಗಳು ಉಡುಗೊರೆಯಾಗಿ ಕೊಟ್ಟಾಗ ಗಾಂಧಿಜೀಯವರು ತನ್ನ ತಲೆಗಿಟ್ಟುಕೊಂಡಿದ್ದ ಬರ್ಮೀಯ ರೈತನ ಟೋಪಿಯನ್ನು ಇರಿಸಿದ್ದಾರೆ. ಧೂಪದೀಪಗಳ ಹೊಗೆಯುಬ್ಬಿಸುತ್ತ ಚಿಕ್ಕದೊಂದು ಪಾತ್ರೆ ಅಲ್ಲಿದೆ. ಬೇರಾವುದೂ ಆ ಕೋಣೆಯಲ್ಲಿಲ್ಲ. ಬಾಗಿಲು ತೆರೆದಿಟ್ಟಿದೆ. ಪ್ರಾಣಬಿಟ್ಟ ಆ ಕೋಣೆ, ಗುಂಡುಬಿದ್ದ ಅಂಗಣ, ಕಾಯ ಭಸ್ಮವಾದ ರಾಜಘಟ್ಟ—ಇವು ಮೂರು ಈಗ ಪುಣ್ಯ ಸ್ಥಳಗಳಾಗಿ ಮಾರ್ಪಟ್ಟಿವೆ. ಸಹಸ್ರಾರು ಯಾತ್ರಿಕರು ಬರುತ್ತಾ ಹೋಗುತ್ತಾ ಇದ್ದಾರೆ. ಜೈ ಮಹಾತ್ಮಾ!

ನಾವು ತಬ್ಬಲಿಗಳಾದೆವು—ಬಾಪಿಗೆ ಬಾಯಿ, ಎದೆಗೆ ಕೈ! ಸತ್ಕೃತ್ಯಕ್ಕಾಗಲೀ ದುಷ್ಕೃತ್ಯಕ್ಕಾಗಲೀ—ಒಳ್ಳೇತನಕ್ಕಾಗಲೀ, ಕೆಟ್ಟತನಕ್ಕಾಗಲೀ ಒಂದು ಮಿತಿಯಿರಬಹುದೆಂಬ ಭಾವನೆ ಇನ್ನು ಬೇಡ! ಮಹಾತ್ಮರಷ್ಟು ಒಳ್ಳೆಯವನಾಗುವುದೂ ಸಾಧ್ಯ—ನಾಥುವಿನಷ್ಟು ಕೆಟ್ಟವನಾಗುವುದೂ ಸಾಧ್ಯವೇ! ಮನುಷ್ಯ ದೇವರಂತಾಗಲೂ ಬಲ್ಲನು—ಮನುಷ್ಯ ದೇವರಿಗೂ ಗುಂಡಿಡಬಲ್ಲನು ಎಂದಾಯಿತು! ಹೇಗಿದೆ ಪ್ರಪಂಚ?

[redacted]

ಪುಂಡರಮೇಲೆ ದ್ವೇಷಾಗ್ನಿ

ಬಾಪೂಜೀಯ ಅಪಮೃತ್ಯುವು ಹಿಂದೂ ಮಹಾಸಭೆಯವನೆಂದು ತಿಳಿದುಬಂದ ಕೂಡಲೇ ದೇಶದ ಎಲ್ಲಾ ಕಡೆಗಳಲ್ಲೂ ಹಿಂದೂ ಮಹಾಸಭೆಯ ಕಾರ್ಯಾಲಯಗಳು, ಹಾಗೂ ಕಾರ್ಯಕರ್ತರ ಮೇಲೂ ಆರ್. ಯಸ್. ಯಸ್. ದಳಗಳ ಮೇಲೂ ಜನತೆಬಿದ್ದು ಹೊಡೆಯಹತ್ತಿದೆ. ಮಹಾಸಭಾ ನಾಯಕ ಸಾವರ್ಕರರ ಮನೆ ನುಗ್ಗಿ ಹೊಡೆದು ಅವರಿಗೆ ಜಖಮವಾಗಿದೆ. ಮಹಾಸಭಾಧ್ಯಕ್ಷ ಭೋಪಟಕರರ ಮನೆ, ಕಚೇರಿಗಳ ಮೇಲೆ ಧಾಳಿ ನಡೆಯಿತು. ಕೆಲವು ಹಿಂದು ಸಭಾ ಕಾರ್ಯಾಲಯಗಳು ಬೆಂಕಿ ಹಚ್ಚಲ್ಪಟ್ಟವು. ಉರಿನಂದಿಸುವ ಜಲವಾಹನಗಳನ್ನೂ ಅಡ್ಡಗಟ್ಟಿ ಕೆಲವು ಹಿಂದೂ ಸಭಾ ಕಾರ್ಯಾಲಯಗಳನ್ನು ಬಾಪೂಜೀ ಚಿತೆಯುರಿಯುವ ಹೊತ್ತಿನಲ್ಲೇ ಉರಿಯಿಸಿ ಬೂದಿಮಾಡಿದ್ದರು. ಎಲ್ಲೆಲ್ಲೂ ಜನತೆ ರೇಗಿ ಬಿದ್ದು ಹಿಂದೂಸಭೆ, ಆರ್. ಯಸ್. ಯಸ್.ನವರನ್ನು ಊರು ನುಗ್ಗಿದ ಹುಲಿಗಳನ್ನು ಬೇಟೆಯಾಡುವಂತೆ ಹೊಡೆಯಹತ್ತಿದ್ದಾರೆ. ಹಲವೆಡೆಗಳಲ್ಲಿ ಕರ್ಫ್ಯೂ, 144ನೇ ಸೆಕ್ಷನುಗಳು ಜ್ಯಾರಿಯಾಗಿವೆ. ಮಾನವ ಜನಾಂಗ, ಭಾರತ ರಾಷ್ಟ್ರ ಮತ್ತು ಹಿಂದೂ ಧರ್ಮವನ್ನು ಉದ್ಧರಿಸಿದ ಮಹಾತ್ಮಜೀಯ ರಕ್ತಹೀರುವಷ್ಟು ರುಧಿರ ಪಿಪಾಸೆ ಈ ಜಾತೀಯ ಸಂಸ್ಥೆಗಳಿಗಿದೆಯೆಂದಾದೊಡನೆ, ಹಿಂದೂ ಜನತೆಗೆ ಅವುಗಳ ಮೇಲೆ ಮೂಡಿರುವ ದ್ವೇಷವೇಗ ಆಕಸ್ಮಿಕತೆಗೆ ಮಿಕ್ಕಿದುದು. ಪಂಡಿತ ನೆಹರು, ಸರ್ದಾರ್ ವಲ್ಲಭಭಾಯಿ, ಸರೋಜಿನಿ, ಕೃಪಲಾನಿ, ಜೈಪ್ರಕಾಶ್ ನಾರಾಯಣ, ಗೋವಿಂದ ವಲ್ಲಭಪಂತ್ ಮೊದಲಾದ ಪ್ರಮುಖರು ಗಾಂಧೀಜೀ ಹೆಸರು ಹೇಳಿ ಅನುದಿನವೂ ಜನತೆಗೆ ಕರ್ತವ್ಯಪ್ರೇರಕ ಶಾಂತಿ ಸಂದೇಶಗಳನ್ನು ಕೊಡುತಿದ್ದಾರೆ.

ಗಾಂಧಿಜೀಗೆ ಗುಂಡುಬಿದ್ದ ಮೊದಲ ದಿನವೇ ಅಮೃತಸರಕ್ಕೆ ಹೋಗಿದ್ದಲ್ಲಿ ಬೋಂಬು ಹಿಡಿದುಕೊಂಡು ನೆಹರುಗಳನ್ನು ಕಾಯುತಿದ್ದ ಇಬ್ಬರನ್ನು ಹಿಡಿಯಲಾಗಿತ್ತು. ಗಾಂಧೀಜಿ, ನೆಹರುಜೀ ಮತ್ತಿತರ ಕಾಂಗ್ರೆಸ್ ನಾಯಕರನ್ನು ಕೊಲ್ಲುವ ಒಳಸಂಚು ಆ ಕರಾಳ ಜಾತೀಯ ಸಂಸ್ಥೆಗಳದ್ದೆಂದು ತಿಳಿದು ಬಂದಿದೆ. ಇನ್ನಾದರೂ ಮಹಾತ್ಮರ ಪ್ರಕಾಶ ಎಲ್ಲಾ ಕಡೆಗೂ ಬೀಳಲಿ!

ಮಂಗಳೂರಲ್ಲಿ ಗಲಭೆಯ ಚಿಹ್ನೆಗಳು

೧೪೪ನೆ ಸೆಕ್ಷನ್ ಜ್ಯಾರಿ

ತಾ. ೧೨ರಂದ "ಆರ್. ಎಸ್. ಎಸ್. ಮುರ್ದಾಬಾದ್— ಆರ್. ಎಸ್. ಎಸ್. ಹೋಗಬೇಕು" ಮುಂತಾದ ಘೋಷಣೆಗಳಿಂದ ಜನರ ಮೆರವಣಿಗೆಗಳು ಮಂಗಳೂರು ನಗರದಲ್ಲಿ ಸಂಚರಿಸಲಾರಂಭಿಸಿವೆ. ಕಮ್ಯೂನಿಸ್ಟರ ಪ್ರತ್ಯೇಕ ಮೆರವಣಿಗೆಗಳು ಹೊರಟಿದ್ದುವು. ತಾ ೨ರಲ್ಲೂ ಶಾಲಾ ಬಾಲಕ ಬಾಲಕಿಯರು ನಗರದಲ್ಲಿ ಮೆರವಣಿಗೆಗಳನ್ನು ನಡೆಸಿದರು.

ಬೀಡಿ ಕೆಲಸಗಾರನೊಬ್ಬನನ್ನು ಆರ್. ಎಸ್. ಎಸ್. ಯುವಕರು ಕೆಲವರು ಹೊಡೆದರೆಂದು ಕೊಂಚ ಗಲಭೆಯೇಳುವ ಚಿಹ್ನೆ ತೋರಿದೆ. ಶಾಂತಿಭಂಗವಾದೀತೆಂದು ಜಿಲ್ಲಾ ಮೆಜಿಸ್ಟ್ರೇಟರು ನಗರದಲ್ಲಿ ೧೪೪ನೆ ಸೆಕ್ಷನ್ ಜ್ಯಾರಿ ಮಾಡಿರುವರೆಂದು ಗೊತ್ತಾಗಿದೆ.

1947ನೆ ಆಗೋಸ್ತು ತಾ 30-9-47
ನೆನಪಿರಲಿ ಕೈಲಾಸ ಬೆಟ್ಟದ ಗಿಡ ಮೂಲಿಕೆಯ (ರಿಜಿಸ್ಟರ್ಡ್) ಒಂದು ಡೋಸ್ ಔಷಧವನ್ನು ತಾ. 24-2-48ನೆ ಶನಿವಾರ ಹುಣ್ಣಿಮೆ ದಿನ ಸೇವಿಸಿದರೆ ಎಂತಹ ಅಸ್ತಮಾ-ಗೂರು ಬ್ಬಸವು ಕಡಿಮೆಯಾಗುವುದು.
ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

Brambachari G. Das,
Shri Sidh Bramhacharya,
Sewa Ashram,
P. O. Chitrakot (U. P.)

ಕಿಶೋರ್ ಸಾಹು ದಿಗ್ದರ್ಶಿಸಿರುವ

ವೀರಕುನಾಲ್

ತಾರೀಖು **5—2—1948**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ಬರುವುದು! ಬರುವುದು!

ತಾ. **14—2—48**ರಿಂದ ಕನ್ನಡ ಚಿತ್ರ

ನಿನ್ನೆ ಮೊನ್ನೆ ತಯಾರಾದ ಸಿನಿಮಾ ಮನೆಮಾತಿನ ಕನ್ನಡ ಚಿತ್ರ ಸಿನಿಮಾ ತಾರ ಮುಂದ್ನಾ ಮಕ್ಕಳು ಪಾತ್ರವಹಿಸಿ ಸಿಮ್ಮೂರ ಕಲಾಭಿಮಾನಿಗಳಿಂದ ಕಳೆಗೂಡಿದೆ.

ಚಂದ್ರಹಾಸ (ಕನ್ನಡದಲ್ಲಿ)

ಉಡುಪಿ

ಕೊಲೇಜು ಕಮಿಟಿ, ಉಡುಪಿ— ಕೊಲೇಜು ಫಂಡಿಗೆ ಧನಸಹಾಯ ಮಾಡಿದವರು: ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಮತ್ತು ಕೆನರಾ ಮ್ಯುಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ರೂ 1001/- ರಂತೆ, ಸದರ್ನ್ ಇಂಡಿಯಾ ಎಫೆಕ್ಸ್ ಬೇಂಕ್ ಲಿಮಿಟೆಡ್ ಮತ್ತು ಮಹಾರಾಷ್ಟ್ರ ಎಫೆಕ್ಸ್ ಬೇಂಕ್ ಲಿಮಿಟೆಡ್ ರೂ. 501.- ರಂತೆ, ಜನರಲ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್ ಲಿಮಿಟೆಡ್ ರೂ. 350-/ ಶ್ರೀ. ಅಂಬಾ ಬಾಯಿ, ಶ್ರೀ. ಯಶೋದಮ್ಮ, ಶ್ರೀ. ಪಿ. ಪಾಂಡುರಂಗ ಪೈ ಮತ್ತು ಸಹೋದರರು, ಶ್ರೀ. ಕೆ. ಶ್ರೀನಿವಾಸ ಆಚಾರ್ಯ, ಶ್ರೀ. ಎಸ್. ಎಸ್. ಸೋಮಯಾಜಿ, ಶ್ರೀ. ಅನಂತರಾಮ ಆಚಾರ್ಯ, ಮತ್ತು ಶ್ರೀ ಪುರುಷೋತ್ತಮ ಆಚಾರ್ಯ ರೂ. 101/-ರಂತೆ, ಶ್ರೀ. ಬಿ. ರಾಘವೇಂದ್ರ ರಾವ್ ರೂ. 71/-, ಶ್ರೀ. ಯು. ವೆಂಕಟೇಶ ಜೋಗಪ್ಪ ಶ್ಯಾನುಭಾಗ ಎಂಡ್ ಸನ್ಸ್ ರೂ. 55/-, ಶ್ರೀ. ಕೆ. ರಾಮಕೃಷ್ಣ ಆಚಾರ್ಯ, ಐಡಿಯಲ್ ಸ್ಟೋರ್ಸ್, ಮತ್ತು ಮೆಜೆಸ್ಟಿಕ್ ಸ್ಟೋರ್ಸ್ ರೂ. 51/-ರಂತೆ, ಮಿಸೆಸ್ ಹೆಲೆನ್ ರೆಬೆಲ್ಲೊ ರೂ. 100/-, ಶ್ರೀ. ಟಿ. ಗಣಪಯ್ಯ ಸೆಟ್ಟಿ ರೂ. 25/-, ಮತ್ತು ಶ್ರೀ ಯು. ಶಾಂತಪ್ಪ ಸೇಟ್ ರೂ. 5/-

ಅಲ್ಲದೆ ಕೊಲೇಜು ಫಂಡಿಗೆ ಮುಸ್ತಿಯಾಗುವ ಬಗ್ಗೆ ರೂ. 1000/- ರಂತೆ ಎಕಡೆಮಿ ಒಫ್ ಜನರಲ್ ಎಡುಕೇಶನಿಗೆ ತೆತ್ತು ಅದರ ಅಜೀವ ಸದಸ್ಯರಾದವರು: ಶ್ರೀಮದ್ ವಿಬುಧೇಶತೀರ್ಥ ಶ್ರೀಪಾದಂಗಳವರು, ಶ್ರೀಮದ್ ಸುಜ್ಞಾನೇಂದ್ರತೀರ್ಥ ಶ್ರೀಪಾದಂಗಳವರು, ಶ್ರೀಮದ್ ವಿದ್ಯಾಸಮುದ್ರತೀರ್ಥ ಶ್ರೀಪಾದಂಗಳವರು, ಶ್ರೀಮದ್ ವಿಭುದೇಶತೀರ್ಥ ಶ್ರೀಪಾದಂಗಳವರು, ಶ್ರೀ ಟಿ. ಅನಂತ ಪೈ, ಶ್ರೀ ಟಿ. ರಘುನಾಥ ಪೈ, ಶ್ರೀ ಎ. ಲಕ್ಷ್ಮೀನಾರಾಯಣ ರಾವ್, ಡಾ। ಯು. ಸುಂದರರಾಮ ಪೈ, ಶ್ರೀಮತಿ ಶಾಂತಾ ಬಾಯಿ ಪಿ. ಪೈ, ಶ್ರೀ ಯು. ಸದಿಯ ಮರಕಾಲ ಮತ್ತು ಶ್ರೀ. ಕಲ್ಮಂಜೆ ವ್ಯಾಸಾಚಾರ್ಯ. ಶ್ರೀ ರಾಮಭಟ್ ಒಬಿಡೆಯವರು ಗಳು ರೂ. 100 ಮತ್ತು 250ನ್ನು ಅನುಕ್ರಮಕೊಟ್ಟದ್ದು ಒಂದು ಸಾವಿರಕ್ಕೆ ಭರ್ತಿ

ಹರತಾಳ ಮತ್ತು ಶೋಕಪ್ರದರ್ಶನೆ— ಮಹಾತ್ಮಾಜೀಯವರ ಕೊಲೆಯ ದುಃಖಸೂಚಕ ವರ್ತಮಾನವು ರೇಡಿಯೋ ಮೂಲಕ ತಿಳಿದೊಡನೆ ಇಲ್ಲಿಯ ವ್ಯಾಪಾರಿಗಳು ಶುಕ್ರವಾರ ದಿನ ಸಂಜೆ ತಮ್ಮ ಅಂಗಡಿಗಳನ್ನು ಮುಚ್ಚಿದರು. ಅಂತೆಯೇ ಮರುದಿನ ಹರತಾಳವನ್ನು ಆಚರಿಸಿದರು. ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧೀನದಿಂದ ಸ್ತ್ರೀ ಪುರುಷರ ಮೌನ ಮೆರವಣಿಗೆಯು ಶನಿವಾರ ಮಧ್ಯಾಹ್ನ ಮೂರು ಗಂಟೆಗೆ ಹೊರಟು ಅಜ್ಜರಕಾಡು ಗಾಂಧಿ ಮೈದಾನಿಗೆ ಬಂದು ಅಲ್ಲಿ ನೆರೆದ ಜನಸಮುದಾಯವು ಮಹಾತ್ಮರ ಆತ್ಮಶಾಂತಿಗಾಗಿ ಮೂರು ನಿಮಿಷಗಳ ಮೌನ ಪ್ರಾರ್ಥನೆಯನ್ನಾಚರಿಸಿತು. ಶ್ರೀಗಳಾದ ಎಮ್. ವಿ. ಹೆಗ್ಡೆ, ಮತ್ತು ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರು ನಾಲ್ಕು ಮಾತುಗಳನ್ನಾಡಿದ ಬಳಿಕ ರಾಷ್ಟ್ರ ಸೇನಾದಳದ ಸೈನಿಕರನ್ನನುಸರಿಸಿ ಇಡೀ ಸಭೆಯು ಭಜನೆ ನಡೆಯಿತು. ರಾಮಧೂನ್ ವಂದೇ ಮಾತರಂ ಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು. ಫಾಯರ್ ಸರ್ವಿಸ್ ದಳದವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸೋಮವಾರ ಶಾಲೆಗಳಿಗೆ ರಜೆಯಿತ್ತು.

ತಾಲೂಕು ಆಹಾರ ಸಮ್ಮೇಳನವು ಇದೇ ತಾ. ೨೫ರಲ್ಲು ಅಜ್ಜರಕಾಡು ಮೈದಾನದಲ್ಲಿ ಕರ್ನಾಟಕ ರೈತ ಮುಖಂಡರಾದ ಶ್ರೀ ಎನ್. ಟಿ. ಮಾಳ್ವೇಕರ್ ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಶ್ರೀ ಎಸ್. ಎನ್. ಹೊಳ್ಳರು ಸಮ್ಮೇಳನವನ್ನು ಉದ್ಘಾಟಿಸುವರು. ಶ್ರೀ ಎನ್. ಎಚ್. ಕೃಷ್ಣಪ್ಪನವರು ಧ್ವಜಾರೋಹಣ ಮಾಡುವರೆಂದು ಪ್ರಕಟಣೆ ಹೊರಟಿದೆ.

ಕಲ್ಯಾಣಪುರ— ಬಾಪೂಜಿ ನಿಧನದ ಸಲುವಾಗಿ ಇಲ್ಲಿಯವರೆಲ್ಲಾ ಹರತಾಳವಾಚರಿಸಿದರು. ಪೇಟೆಯವರೂ ಹಳ್ಳಿಯವರೂ ಜಾತಿಮತಭೇದವಿಲ್ಲದೆ ಸರ್ವರೂ ಮೌನ ಮೆರವಣಿಗೆಯಿಂದ ಕಲ್ಯಾಣಪುರ ಹೊಳೆಯ ದಡಕ್ಕೆ ಬಂದು ಮಹಾತ್ಮರ ಪ್ರಿಯಗಾನಗಳನ್ನು ಹಾಡಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಮೌನ ಪ್ರಾರ್ಥನೆ ಮಾಡಿದರು.

ಕುತ್ಪಾಡಿ— ಉಡುಪಿಯ ವೈದಿಕ ಧರ್ಮ ಪಂಪತ್ತಿನ ಶಾಖೆಯೊಂದು ತಾರೀಕು 31-1-48ರಲ್ಲಿ ಪುತ್ತಿಗೆ ಮಠದ ಸುಜ್ಞಾನೇಂದ್ರತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಕುತ್ಪಾಡಿ ನರಸಿಂಗರಾಯರ ಮನೆಯಲ್ಲಿ ತೆರೆಯಲ್ಪಟ್ಟಿತು. ಶ್ರೀ ಸ್ವಾಮಿಗಳವರು ಸಂಘದ ಉದ್ದೇಶ ಮತ್ತು ಅವಶ್ಯಕತೆಯ ಕುರಿತು ಭಾಷಣಮಾಡಿದರು. ಶ್ರೀ ಕುಪ್ಪಣ್ಣಾಚಾರ್ಯರು ಸಂಘದ ನಿಯಮಾವಳಿಯನ್ನು ಓದಿದ ಬಳಿಕ ಶ್ರೀ ನರಸಿಂಗ ರಾವ್—ಅಧ್ಯಕ್ಷ, ವೆಂಕಟಾಚಲ ಭಟ್ಟ, ವಿದ್ವಾನ್, —ಸೆಕ್ರೆಟರಿ, ಶ್ರೀ ರಾಮಚಂದ್ರ ರಾವ್ ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ಎಡಪೀರು— ತಾ 1-2-48ರಲ್ಲು ನಡೆದ ಮಣಿಪುರ ಗ್ರಾಮದ ರೈತ ಸಂಘದ ಸಭೆಯಲ್ಲಿ ಮಾನ್ಯ ಮಹಾತ್ಮಾಗಾಂಧಿಯವರು ಸ್ವರ್ಗಸ್ಥರಾದ ಕುರಿತು ದುಃಖ ಸೂಚಿಸಿ ಮಹಾತ್ಮರ ಆತ್ಮಕ್ಕೆ ಶಾಂತಿ ಲಭಿಸುವಂತೆ ಪ್ರಾರ್ಥಿಸಲಾಯಿತು. ಮತ್ತು ಮಣಿಪುರ, ಮರ್ಣೆ, ಬೆಳ್ಳೆ ಗ್ರಾಮಗಳ ಬಡಜನರಿಗೆ ರೇಶನ್ ಸಿಗುವಂತೆ ರಿಲೀಫ್ ಸ್ಟೋರು ತೆರೆಯಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಬರಕೊಳ್ಳುವಂತೆ ಮಂಜೂರಾಯಿತು.

ಹಿರಿಯಡ್ಕ— ಮಹಾತ್ಮರ ನಿಧನ ವಾರ್ತೆ ಬಂದೊಡನೆ ತಾ. 31-1-48ರಲ್ಲು ಪೇಟೆಯಲ್ಲಿ ಸಂಪೂರ್ಣ ಹರತಾಳ ಆಚರಿಸಿ, ಸಾರ್ವಜನಿಕ ಉಪವಾಸ, ಭಗವದ್ಗೀತಾ ಪಾರಾಯಣ, ಮೌನ ಪ್ರಾರ್ಥನೆ, ಸ್ತ್ರೀ ಪುರುಷರೆಲ್ಲರೂ ಸೇರಿ ಮೌನ ರೀತಿಯ ಮೆರವಣಿಗೆ ಹೊರಟು ಶ್ರೀ ವೀರಭದ್ರ ದೇವಸ್ಥಾನದ ಎದುರು ಬೈಲಿನಲ್ಲಿ ಬಂದು ಸೇರಿ, ಅರ್ಧಕ್ಕೆ ಧ್ವಜ ಇಳಿಸಿ ದುಃಖಸೂಚಕ ಸಭೆಸೇರಿ ಮೌನ ಪ್ರಾರ್ಥನೆಯೊಂದಿಗೆ ಈ ದಿವ್ಸದ ಕಾರ್ಯಕ್ರಮವು ಕೊನೆಗೊಂಡಿತು.

ತಾ. 1-2-48ರಲ್ಲೂ ಸಂಪೂರ್ಣ ಹರತಾಳ ಆಚರಿಸಿ, ಧ್ವಜಕಟ್ಟೆಯಲ್ಲಿ ಊರಿನ ಎಲ್ಲ ಜನರು ಕೂಡಿ 26 ಚರಕದಿಂದ ಬೆಳಗ್ಗೆಯಿಂದ ಸಾಯಂಕಾಲದ ತನಕ ನೂಲು ತೆಗೆದು ಮೌನ ಪ್ರಾರ್ಥನೆಯಾಗಿ ಮಹಾತ್ಮರ ಮೃತಶರೀರಕ್ಕೆ ಶಾಂತಿಯನ್ನು ಕೋರಿ ಸಭೆ ಚದರಿತು.

ಉದಿಯಾವರ— ತಾ 31-1-48ರಲ್ಲು ಬಾಪೂಜಿಯ ನಿಧನಕ್ಕೋಸ್ಕರ ಇಲ್ಲಿ ಸಂಪೂರ್ಣ ಹರತಾಳವನ್ನು ಆಚರಿಸಿದ್ದರು. ಸಾಯಂಕಾಲ 4 ಗಂಟೆಗೆ ಮೌನ ಮೆರವಣಿಗೆಯು ಹೊರಟು ಉದಿಯಾವರ ಹೊಳೆ ನೀರಿನಲ್ಲಿ ನಿಂತು ಮೌನ ಪ್ರಾರ್ಥನೆ ಮಾಡಿದ ಬಳಿಕ ಉದಿಯಾಚಲ ಮೈದಾನಿನಲ್ಲಿ ಡಾ। ಕೊರಡ್ಕಲ್ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದುಃಖ ಸೂಚಿಸಲಾಯಿತು.

ಕಾರ್ಕಳ— ತಾ. 30ರಂದು ಕಾರ್ಕಳದ ಸರ್ವರೂ ರಾತ್ರಿ ಕಾಲದಲ್ಲಿಯೇ ಗಾಂಧಿ ಮೈದಾನಿನಲ್ಲಿ ಸಭೆ ಕೂಡಿ ಮಹಾತ್ಮರ ಆತ್ಮಕ್ಕೆ ಚಿರಶಾಂತಿಯು ದೊರೆಯಲೆಂದು ಪ್ರಾರ್ಥಿಸಿದರು. ಮರುದಿನ ಹರತಾಳ ಮತ್ತು ಶ್ರೀ ಕೆ. ವೆಂಕಟೇಶ ಪ್ರಭುಗಳ ಅಧ್ಯಕ್ಷತೆಯಲ್ಲಿ ದುಃಖಸೂಚಕ ಸಭೆ ಜರಗಿತು. ಮಹಾತ್ಮರ ಆತ್ಮಕ್ಕೆ ಪುನಃ ಶಾಂತಿಯನ್ನು ಕೋರಲಾಯಿತು.

ಮಹಾತ್ಮಾಜಿಯವರ ನಿಧನದಿಂದಾಗಿ ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ ಮಂಗಳೂರಲ್ಲಿ ತಾ. 8-2-1948 ರಲ್ಲಿ ನಡೆಯಲಿಕ್ಕಿದ್ದ ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಇವರ ಸಂಗೀತ ಕಚೇರಿಯನ್ನು ಮುಂದರಿಸಲಾಗಿದೆ. ಮಹಾಜನರು ಇದನ್ನು ಗಮನಿಸಬೇಕಾಗಿ ವಿನಂತಿ.

ಮುಂದೆ ನಡೆಯುವ ದಿನ ಯಾವುದೆಂಬುದನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುವುದು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. 3/1948

ಅರ್ಜಿದಾರ— ಸಿಡ್ಗಲ್ ನಾರಾಯಣ ಪ್ರಭು-ರಾಮಯ್ಯ ಪ್ರಭು ಮಗ-ಪುತ್ತೂರು ತಾಲ್ಲೂಕು ಸಿಡ್ಗಲ್ ಗ್ರಾಮಸ್ಥ.

ಯೆದ್ರಿರು— 1. ಲಲಿತಾ ಯಾನೆ ಶೀತಾಬ್ಬ-ಪಡ್ಪು ಮುಗೇರು ರಾಮಪ್ರಭು ವಿಧವೆ, 2. ಮ್ಯಾನರ ಮಂಜುನಾಥಾ, 3. ಮ್ಯಾನರ ಯಶವಂತಾ, ರಾಮ ಪ್ರಭು ಮ್ಯಾನರ ಮಕ್ಕಳು. ಗಾರ್ಡಿಯಾನಳು ತ್ಯಾ 1ನೆ ಯೆದ್ರಿಳು.

ಸಮ್ಮಂಧ ಪಟ್ಟ ಯಲ್ಲವರಿಗೆ ಈ ಮೂಲ್ಕ ತಿಳಿಸುವದೇನೆಂದ್ರೆ

ಮುಂಡಾಜೆ ಗ್ರಾಮದ ಪಡ್ಪು ಮುಗೇರಿನಲ್ಲಿ ವಾಸಿಸಿಕೊಂಡಿದ್ದ ಅರ್ಜಿದಾರನ ಮಗ ಹಾಲಿಮೃತ ಪಟ್ಟ ಎಂ. ಪಿ. ರಾಮ ಪ್ರಭುಗೆ ಜನರಗಿನಿಂದ ಬರತಕ್ಕ ಅವಜುಗಳನ್ನು ವಸೂಲು ಮಾಡುವರೆ ತನಗೆ ವಾರಿಶಿ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ನೋಟ್ಟಂಡ ಕೋರ್ಟಿನಲ್ಲಿ ಮಾಡಿದ ಅರ್ಜಿಯು ತಾ 13-2-1948ಕ್ಕೆ ಇಟ್ಟಿನೆ. ಈ ಕುರಿತು ಆಕ್ಷೇಪ ಮಾಡುವವರು ಆ ದಿವ್ಸ ಹಗಲು 10 ಗಂಟೆಗೆ ಖುದ್ದು ಯಾ ವಕೀಲರ ಮೂಲಕ ಹಾಜರಾಗಿ ಆಕ್ಷೇಪಣೆಗಳನ್ನು ದಾಖ್ಲು ಮಾಡದಿದ್ದರೆ ಅರ್ಜಿದಾರನ ಅಪೇಕ್ಷೆಯಂತೆ ಆತನ ಹೆಸರಿಗೆ ವಾರಿಸಿ ಸರ್ಟಿಫಿಕೇಟು ಕೊಡಲಾಗುವದು.

ಕವೂರ ಆನಂದರಾವ್,
ಅರ್ಜಿದಾರನ ವಕೀಲ್.

The name that at once spells confidence and security offers Attractive schemes to suit needs of all.

Respectable Representatives

WANTED

On lucrative terms.

For full particulars write to:

Managing Director.

The Security Provident Insurance Co, Ltd.

Hassan Chambers, arsee Bazar Street, Fort, Bombay: 1

ಪ್ರತಿಯೊಬ್ಬರೂ ಓದಲೇ ಬೇಕಾದ ಪುಸ್ತಕ

ಮಹಾತ್ಮಾ ಗಾಂಧಿಯವರ

ನೀತಿಧರ್ಮ

ಬೆಲೆ ೦ ೬ ೦

ಸಿಗುವ ಸ್ಥಳಗಳು—

1. ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಉಡುಪಿ.
2. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು
3. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು.
4. ನವಭಾರತ ಪುಸ್ತಕ ಭಂಡಾರ, ಉಡುಪಿ.

ಬೇಕಾಗಿದ್ದಾರೆ.

ರಾಷ್ಟ್ರಧ್ವಜ ಮಾರ್ಕಿನ ಪ್ರಖ್ಯಾತ ಮತ್ತು ಮನೋಲ್ಲಾಸಿನಿ ಉತ್ತಮ ತರಗತಿಯ ಚಹಾವನ್ನು ರಖಂ ಆಗಿ ವಿಕ್ರಯಿಸಲು ಅನುಭವಸ್ಥ ಹಾಗೂ ಸಮರ್ಥ ಏಜಂಟರು ಬೇಕಾಗಿದ್ದಾರೆ. ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ನೇಶನಲ್ ಟೀ ಸಿಂಡಿಕೇಟ್,
ಬಂದರ, ಮಂಗಳೂರು (ದ. ಕನ್ನಡ)

"ಸ್ಟೆಂಡಾರ್ಡ್ ಚಹಾವನ್ನು ಕುಡಿದು ಆನಂದ ಪಡೆಯಿರಿ.

ಉತ್ತಮ ಸುವಾಸನೆಯುಳ್ಳದಾಗಿದ್ದು ಮನಸ್ಸಿಗೆ ಉಲ್ಲಾಸವನ್ನು ಕೊಡುವಂತಹುದು. ಕ್ರಯ ಬಹಳ ಕಡಿಮೆ; ಆದರೆ ಮಾಲು ಅತ್ಯುತ್ಕೃಷ್ಟವಾದುದು.

ದಿ ಸ್ಟೆಂಡಾರ್ಡ್ ಟೀ ಸಿಂಡಿಕೇಟ್
ಆರ್. ಎಸ್. ಪುರಂ., ಪಿ. ಒ.
ಕೊಯಮುತ್ತೂರು.

ಚ್ಯವನಪ್ರಾಶ ರಸಾಯನ

(ಉರಕ್ಷತ, ಕ್ಷಯ, ಶ್ವಾಸ ಕಾಸಹಾರಿ)

ಕ್ರಯ—1 ಪೌಂಡು ರೂ. 5-0-0

ನಮ್ಮ ಕೆಟಲಾಗು ಧರ್ಮಾರ್ಥ

ದಿ ಮಹಾಜನ ಕೆಮಿಕಲ್ಸ್ ಎಂಡ್ ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್,

ಕಾಸರಗೋಡು, ದ. ಇಂಡಿಯ.

ದಕ್ಷಿಣ ಕನ್ನಡ.

ಪೆರ್ಡೂರು—ತಾ 31-1-48ನೇ ದಿವಸ ಬಾಪೂಜೀಯವರ ಮರಣದ ದುಃಖ ಸೂಚನೆಯ ಬಗ್ಗೆ, ಹರತಾಳಾಚರಣೆ, ಸಾಯಂಕಾಲ ಮೌನ ಮೆರವಣಿಗೆ, ಶ್ರೀ ಎ. ಕೃಷ್ಣಯ್ಯ ಹೆಗ್ಡೇರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಸಭೆಯಲ್ಲಿ ಮಹಾತ್ಮಾಜೀಯವರ ಆತ್ಮಶಾಂತಿಗಾಗಿ ಮೌನ ಪ್ರಾರ್ಥನೆಯ ಮೇಲೆ ಹಲವರು ಅವರ ಜೀವನ,ಮಹತ್ವ,ಧ್ಯೇಯ, ಆದರ್ಶಗಳ ಕುರಿತು ಭಾಷಣವಿತ್ತರು.

ವಿಟ್ಲ—ತಾ. 30-1-48ರಂದು ಸಂಜೆ ಪೂಜ್ಯ ಗಾಂಧಿಜೀಯ ಮರಣ ವಾರ್ತೆಯನ್ನು ಕೇಳಿ ಇಲ್ಲಿ ಸಂಪೂರ್ಣ ಹರಿತಾಳವನ್ನು ಆಚರಿಸಿ ಮರುದಿನ ಮುಂಜಾನೆ ಪ್ರಚಂಡ ಸಭೆಯೊಂದು ಶ್ರೀ ಕೋಳಳ ನಾರಾಯಣ ಭಟ್ರ ಅಧ್ಯಕ್ಷತೆಯಲ್ಲಿ ಸೇರಿ ದುಃಖ ಸೂಚಿಸಲಾಯಿತು; ಶ್ರೀ ವಿಠಲದಾಸ ಶೆಟ್ಟಿ ಮೊದಲಾದವರು ಸಭೆಯವರ ಮನ ಕರಗುವ ರೀತಿಯಲ್ಲಿ ಗಾಂಧೀಜಿಯವರ ದುರ್ಮರಣದ ವಿಚಾರ ವಿವರಿಸಿ ಹೇಳಿದರು. ಆ ತರುವಾಯ ಸಭೆಯಲ್ಲಿ ನೆರೆದವರೆಲ್ಲಾ ಕಣ್ಣೀರಿಳಿಸುತ್ತಾ ಚದರಿದರು.

ಮಣಿಪುರ—ನೇತಾಜಿ ಜನ್ಮ ದಿನಾಚರಣೆಯು ಕಳೆದ ತಾ ೨೩ರಲ್ಲು ನೇತಾಜಿ ಯುವಕ ಸಂಘದ ಆಶ್ರಯದಲ್ಲಿ ಮೆರವಣಿಗೆ, ಭಜನಾಮಂದಿರದಲ್ಲಿ ಶ್ರೀ ಪಿ. ಬಾಲಕೃಷ್ಣ ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀ ಎಮ್. ರಂಗನವರಿಂದ ನೇತಾಜಿಯ ಭಾವಚಿತ್ರ ಅನಾವರಣ, ಶ್ರೀಗಳಾದ ಎಮ್. ಸುಬ್ಬ ಸುವರ್ಣ, ಸೋಮಯ್ಯ ಶೆಟ್ಟಿ, ಎಮ್ ಶಿವಾನಂದ, ಯು. ಬಿ. ಗೋಪಾಲಕೃಷ್ಣಯ್ಯ ತಿಮ್ಮಪ್ಪ ಮೊದಲಾದವರ ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

ವಿದ್ಯಾದಾಯಿನೀ ಹ್ಯಾಸ್ಕೂಲು, ಸುರತ್ಕಲ್—ಈ ಪ್ರಾಂತ್ಯ ಪಾಠಶಾಲೆಯು ಇದೀಗ 30 ವರುಷಗಳಿಗೂ ಮಿಕ್ಕಿ ಹಳ್ಳಿಯ ಭಾಗದಲ್ಲಿ ವಿದ್ಯಾ ಸಂಸ್ಥೆಗಳನ್ನು ಉತ್ತಮ ರೀತಿಯಿಂದ ನಡೆಸುತ್ತಿರುವ ಹಿಂದು ವಿದ್ಯಾದಾಯಿನೀ ಸಂಘದಿಂದ 1944ರಲ್ಲಿ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಇದು ವರ್ಷವರ್ಷವೂ ಅಭಿವೃದ್ಧಿ ಹೊಂದುತ್ತಾ ಬಂದು ಇದೀ 1947ನೇ ಜೂನಿನಿಂದ ಒಂದು ಸಂಪೂರ್ಣ ಹ್ಯಾಸ್ಕೂಲು ಆಗಿರುತ್ತದೆ. ಮಂಗಳೂರಿನಿಂದ ಕರಾವಳಿ ಮಾರ್ಗದಲ್ಲಿ ಬರೇ 10 ಮೈಲು ದೂರದಲ್ಲಿ ಈ ಶಾಲೆಯ ವಿಶಾಲವಾದ ಸ್ಥಳ ಸನ್ನಿವೇಶಗಳೂ ಭವ್ಯವಾದ ಕಟ್ಟಡಗಳೂ ಕಾಣಸಿಗುವವು. ಶಾಲಾ ಆಡಳಿತೆಯವರೂ ವಿದ್ಯಾಭಿಮಾನಿಗಳೂ ಉದಾರಿಗಳೂ ಆದ ಮಹನೀಯರ ಬೆಂಬಲವನ್ನು ಪಡೆದು ಇದು ತನಕ ಶಾಲೆಗಾಗಿ ಸುಮಾರು ಮುಪ್ಪ ಎಂದು ಲಕ್ಷಕ್ಕೂ ಮಿಕ್ಕಿ ಹಣವನ್ನು ವೆಚ್ಚಮಾಡಿರುವರು. ಮುಂದಿನ ವಿದ್ಯಾಭಿವೃದ್ಧಿಯ ಸುಧಾರಣೆಗಳಿಗೂ ಶಾಶ್ವತನಿಧಿ, ವೇತನನಿಧಿ, ಕಟ್ಟಡಗಳು ಮೊದಲಾದವುಗಳಿಗೂ ಈ ಸಂಸ್ಥೆಗೆ ಇನ್ನೂ ಹೆಚ್ಚಿನ ಧನ ಸಂಗ್ರಹವು ಅಗತ್ಯವಾಗಿದೆ. ಈ ಉದ್ದೇಶದಿಂದ ಇದೇ ತಾರೀಕು 8-2-1948ರಲ್ಲು ಅಖಿಲಭಾರತ ಖ್ಯಾತಿಯನ್ನು ಪಡೆದ ಸುಪ್ರಸಿದ್ಧ ಗಾಯಕಿ ಶ್ರೀಮತಿ ಎಮ್. ಎಸ್. ಸುಬ್ಬುಲಕ್ಷ್ಮಿ ಮತ್ತು ಇವರ ಪತಿರಾಂತ ಒಪ್ಪಿಗೆಯನ್ನು ಪಡೆದು ಈ ಶಾಲಾ ಸಹಾಯಾರ್ಥವಾಗಿ ಮಂಗಳೂರಲ್ಲಿ ಒಂದು ಗಾಯನ ಸಮಾರಂಭವು ನಡೆಯಲಿದೆ. ಅತಿ ಅಪೂರ್ವವೂ ಸತ್ಕಾರ್ಯ ಸಹಾಯಕವೂ ಆದ ಈ ಸಂಗೀತ ಸಮಾರಂಭಕ್ಕೆ ಸರ್ವರೂ ಪ್ರೋತ್ಸಾಹವನ್ನಿತ್ತು ಸುಪ್ರಾವ್ಯ ಗಾಯನವನ್ನು ಕೇಳಿದ ಸಂತೋಷದೊಂದಿಗೆ ವಿದ್ಯಾಸಂಸ್ಥೆಗೆ ನೆರವನ್ನಿತ್ತ ಪುಣ್ಯಕ್ಕೂ ಭಾಗಿಗಳಾಗಬೇಕಾಗಿ ಕೋರಲಾಗಿದೆ.

ಮಂಗಳೂರು

ಜಿಲ್ಲಾ ದೇವಾಂಗ ಪರಿಷತ್ತು. ಮಂಗಳೂರು—ದಕ್ಷಿಣ ಕನ್ನಡದ ದೇವಾಂಗರು ಈ ವರೆಗೂ ನ್ಯಾಯವಾದ ಸಂಘಬಲವಿಲ್ಲದೆ ಬಹಳ ಹಿಂದುಳಿದಿರುವರು. ಕೇರಳದ ಚಿರಕ್ಕಲಿನಿಂದ ಮಂಗಳೂರ ವರೆಗೆ [illegible] ಪ್ರಾಚೀನ ರೀತಿಯ ಒಂದು ಸಂಘಟನೆಯಿಂದ ಕೂಡಿಕೊಂಡು ಬರುತ್ತಾರೆ. ನೇಯ್ಗೆಯನ್ನು ಇನ್ನಷ್ಟು ಪರಿಷ್ಕಾರಕ್ಕೆ ತಂದು ಕಲಾ ಕೌಶಲ್ಯವನ್ನು ಪ್ರಕಟಿಸಬೇಕೆಂಬ ಹಂಬಲದಿಂದಲೂ, ಆದಕ್ಕಾ ಸಮಾಜದ ತರುಣರು ಪ್ರತ್ಯೇಕ ಶಿಕ್ಷಣ ಪಡೆಯಲು ಅರ್ಹರಾಗಬೇಕೆಂದೂ ಸಂಕಲ್ಪಿಸಿ, ಅದು ಈಡೇರುವಂತೆ ಮಾಡಲು ಒಂದು ಸಂಘವನ್ನು ಸ್ಥಾಪಿಸಲು ಯತ್ನಿಸಿರುವರು. ಇದೇ ಬರುವ ಎಪ್ರಿಲ್ 18ಕ್ಕೆ ಮಂಗಳೂರ ಅತ್ತಾವರದಲ್ಲಿ ನಮ್ಮ ಜಿಲ್ಲೆಯ ದೇವಾಂಗರ ಪ್ರಥಮ ಪರಿಷತ್ತನ್ನು ಜರಗಿಸಲು ಯೋಚಿಸಿರುವರು. ಈ ಪರಿಷತ್ತು ಯಶಸ್ವಿಯಾಗಿ ನಡೆಯುವಂತೆ ಕಾರ್ಯಕಾರಿಕರಿಗೆ ಬೇಕಾದ ಸಹಕಾರ ನೀಡುವದು ಪ್ರತಿಯೊಬ್ಬ ದೇವಾಂಗನ ಕರ್ತವ್ಯವಾಗಿದೆ. ನಮ್ಮ ಜಿಲ್ಲೆಯ ಕೈಗಾರಿಕೆಯಲ್ಲಿ ಉತ್ತಮವಾದ ನೇಯಿಗೆಯ ನೂತನ ರೀತಿಯ ಅಭಿವೃದ್ಧಿಯ ಸೃಷ್ಟಿಯಿಂದಲೂ ಸೋದರ ಸಮಾಜದ ಮೇಲ್ಮೆಯನ್ನು ಹಾರೈಸುವ ಸದಿಚ್ಛೆಯಿಂದಲೂ ಜಿಲ್ಲೆಯ ಎಲ್ಲಾ ಮಹಾಜನರೂ ಪ್ರೋತ್ಸಾಹಿಸಬೇಕಾದ ಕಾರ್ಯವಿದು

ಜಿಲ್ಲಾ ಮೋಟರ ಕೆಲಸಗಾರರ ಪ್ರಥಮ ವಾರ್ಷಿಕ ಸಮ್ಮೇಳನ—ಕೆನರಾ ಹೈಸ್ಕೂಲಿನಲ್ಲಿ ಈ ಅಧಿವೇಶನವು ಕಳೆದ ತಾ ೨೫ರಂದು ಬೆಳಿಗ್ಗೆ ಮದ್ರಾಸ್ ಪ್ರಾಂತೀಯ ಮೋಟರ್ ಕೆಲಸಗಾರರ ಫೆಡರೇಶನಿನ ಪ್ರೆಸಿಡೆಂಟ್ ಶ್ರೀ. ಎಂ. ಸೀತಾರಾಮ ಸ್ವಾಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಧ್ವಜಾರೋಹಣವೂ, ಉದ್ಘಾಟನವೂ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ। ನಾಗಪ್ಪ ಆಳ್ವರಿಂದ ಜರಗಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಾಲಕರು ಕೆಲಸಗಾರರಿಗೆ ಕೊಡಬೇಕಾದ ಸಂಬಳ ಮತ್ತು ಇತರ ಸೌಕರ್ಯಗಳ ಕುರಿತು ಮಾತನಾಡಿದರು. ಕೆಲಸಗಾರರ ಕೇಳಿಕೆಗಳ ವಿಚಾರದಲ್ಲಿ ಚರ್ಚೆ ನಡೆಯಿತು. ಸಂಜೆ ಮೈದಾನಿನಲ್ಲಿ ಅವರದೇ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ನೆರೆದಾಗ, ಶ್ರೀಗಳಾದ ಕೆ. ಕೆ. ಶೆಟ್ಟರು, ರಟಿಲ್ಲೋ, ಡಾ। ನಾಗಪ್ಪ ಆಳ್ವ, ಎಸ್. ಎಸ್. ಕಿಲ್ಲೆ, ಬಿ. ಕಾಸಿಂ ಸಾಹೇಬ್, ಎಸ್. ಎಸ್ ಯೋಳ್ಯ, ಗೋಪಿಂದ ಮೆಸೂನ್, ಬಿ. ವಿ. ಕಕ್ಕಿಲ್ಲಾಯ, ಇವರೂ,ಅಧ್ಯಕ್ಷರೂ ಮಾತಾಡಿದರು.

ಸ್ವಾತಂತ್ರ್ಯ ದಿನಾಚರಣೆ—ಕಳೆದ ತಾ- ೨೬ರ ಸಂಜೆ ಮೈದಾನಿನ ಸಾರ್ವಜನಿಕ ಸಭೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧದಲ್ಲಿ ಭಾಷಣಗಳನ್ನು ಶ್ರೀಗಳಾದ ಕೆ. ಕೆ. ಶೆಟ್ಟಿ, ಎಸ್. ಎಸ್. ಕಿಲ್ಲೆ, ಬಿ. ಕಾಸಿಂ ಸಾಹೇಬ್ ಮೊದಲಾದವರು ಮಾಡಿ ಸ್ವಾತಂತ್ರ್ಯ ಸಮರದ ಹುತಾತ್ಮರಿಗೆ ಭಾಷ್ಪಾಂಜಲಿಯನ್ನು ಅರ್ಪಿಸಿದರು.

ರಿಜಿಸ್ಟರಾಗದ ವೈದ್ಯರಿಗೆ—ಔಷಧಾಲಯಗಳ ಲೈಸೆನ್ಸು ಕೊಡುವುದಿಲ್ಲವಾಗಿಯೂ ಅಂಥವರು ಆಸ್ಪತ್ರೆಗಳನ್ನು ಲೈಸನ್ಸು ಉಳ್ಳವರ ಹೆಸರಿನಡಿ ತಮ್ಮಲ್ಲಿಯೇ ಇಟ್ಟುಕೊಂಡಲ್ಲಿ ಪ್ರೊಹಿಬಿಷನ್ ಡಿಪಾರ್ಟಮೆಂಟಿನವರು ವಶಪಡಿಸಿಕೊಳ್ಳುವರಾಗಿಯೂ ಈಗ ತಿಳಿದುಬರುತ್ತದೆ.

ಮಂಗಳೂರು ತಾಲೂಕು ರೈತರ ಪ್ರಥಮ ಸಮ್ಮೇಳನವು—ಕಳೆದ ತಾ. ೧೮ರಲ್ಲು ಬಂಟವಾಳದಲ್ಲಿ ಶ್ರೀ ಎಸ್. ಎಸ್. ಹೆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವಿ. ಕಕ್ಕಿಲ್ಲಾಯರು ಸಮ್ಮೇಳನವನ್ನು ಉದ್ಘಾಟಿಸಿದರು. ತಾಲೂಕಿನ ಬೇರೆ ಬೇರೆ ಭಾಗಗಳಿಂದ ನಾಲ್ಕು ನೂರಕ್ಕೂ ಮಿಕ್ಕಿ ಪ್ರತಿನಿಧಿಗಳು ಬಂದಿದ್ದರು. ರೈತರಿಗೆ ಸಂಬಂಧಿಸಿದ ಹಲವು ನಿರ್ಣಯಗಳು ಸಭೆಯಲ್ಲಿ ಮಂಜೂರಾದುವು.

ಹರಿತಾಳ—ತಾ. ೩೦ರಂದು ಗಾಂಧಿಜಿಯವರ ಮರಣದ ವಾರ್ತೆಯು ಹಬ್ಬಿದೊಡನೆ ಅಂಗಡಿಗಳೆಲ್ಲ ಮುಚ್ಚಿ ಜನರು ರೇಡಿಯೋ ಬಳಿ ಕಿಕ್ಕಿರಿದು ನೆರೆದರು. ರವಿವಾರ ದಿನ ಪೊಗ್ಗೆ ಬಜಾರಿನ ನದಿ ಕಿನಾರೆಗೆ ಮೆರವಣಿಗೆಗಳು ಹೊರಟಿದ್ದು ಅಲ್ಲಿ ಪ್ರಾರ್ಥನೆಯಾಯಿತು. ಸಂಜೆ ಆಜಾದ ಮೈದಾನಿನಲ್ಲಿ ಸಾರ್ವಜನಿಕ ಸಭೆಯು ಸೇರಿ ಅದರಲ್ಲಿ ಗೀತೆ ಕುರಾನ ಮತ್ತು ಬೈಬಲಿನಿಂದ ಪ್ರಾರ್ಥನೆಗಳನ್ನು ಓದಲಾಯಿತು. ಸಂಪೂರ್ಣ ಹರತಾಳವಾಚರಿಸಲಾಯಿತು, ಎಲ್ಲಿ ನೋಡಿದರೂ ಜನತೆಯು ದುಃಖಸಾಗರದಲ್ಲಿ ಮುಗ್ನವಾಗಿತ್ತು.

ಮದ್ರಾಸು—ಮಾಧ್ವನವಮಿ ಉತ್ಸವವು ಕಳೆದ ತಾ ೧೭ರಂದು ಪ್ರಾರಂಭವಾಗಿ ಶ್ರೀ ಕೆ ಸೀತಾರಾಮ ರಾಯರ ದಾಸ ಪ್ರಸಾದದಲ್ಲಿ ಹತ್ತು ದಿನಗಳವರೆಗೆ ನಡೆಯಿತು. ದಿನಾಲೂ ಸಂಜೆ ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ಭಾಷಣ, ಹರಿಕಥೆಗಳಾದುವು. ತಾ ೨೦ರಲ್ಲು ಶ್ರೀಗಳಾದ ಬಿ. ವೆಂಕಟೇಶಾಚಾರ್ಯ, ಕಾಪಾಜಿ ಶ್ರೀನಿವಾಸಾಚಾರ್ಯರ ವಿಶೇಷ ಭಾಷಣಗಳಾದುವು. ತಾ ೨೧ರಂದು ಶ್ರೀಮತಿ ಸಿ. ಸರಸ್ವತಿ ಬಾಯಿಯವರ ಸಂಗೀತ ಮತ್ತು ಶ್ರೀ ಹಯಗ್ರೀವಾಚಾರ್ಯರ ಭಜನಾ ಕಾಲಕ್ಷೇಪ ನಡೆಯಿತು. ಮಾಧ್ವನವಮಿ ನಿಮಿತ್ತ ಅನೇಕ ಬಡಜನರಿಗೆ ಅನ್ನ ಸಂತರ್ಪಣೆ ನಡೆಯಿತು.

ಬೊಂಬಾಯಿ—ಶ್ರೀ ಶಾರದಾ ವಿಜಯ ಕನ್ನಡ-ಇಂಗ್ಲಿಷ್ ಧರ್ಮಾರ್ಥ ರಾತ್ರಿ ಶಾಲೆಯು ೧೯೩೫ರಲ್ಲಿ ಸ್ಥಾಪಿಸಲ್ಪಟ್ಟು ವಿದ್ಯಾವಿಹೀನ ಕನ್ನಡಿಗರಿಗೆ ಶಿಕ್ಷಣ ಕೊಟ್ಟು ಸೇವೆಯನ್ನು ಸಲ್ಲಿಸುತ್ತಾ ಬರುತ್ತಿದೆ. ಈ ಸಂಸ್ಥೆಗೆ ಉದಾರ ಬುದ್ಧಿಯ ಮಹನೀಯರು ಕೊಡುಗೈಯಿಂದ ಧನಸಹಾಯ ನೀಡಿ ಹೆಚ್ಚಿನ ವಿದ್ಯಾ ಪ್ರಚಾರಕ್ಕೆ ನೆರವಾಗಬೇಕಾಗಿ ಸದ್ರಿ ಸಂಸ್ಥೆಯ ಸಂಚಾಲಕರಾದ ಶ್ರೀ ವಿ. ಎಸ್. ಶಿಬ್ರೂರ್‌ಕರ್ (ಹೆಡ್ಮಾಸ್ಟರ್) ಶ್ರೀಗಳಾದ ಎಸ್. ಜಿ. ರಾವ್ ಎಚ್. ಪಿ. ಸೋರ್ಲೆ ಮೊದಲಾದವರು ಅಪೇಕ್ಷಿಸುತ್ತಾರೆ.

ನೋಟೀಸು

ಮೂಲ್ಕಿ ಗ್ರಾಮಾಭಿವೃದ್ಧಿ ಸೆಂಟರು "೩ನೇ ಕೃಷಿ ಕೈಗಾರಿಕೆ ಪ್ರದರ್ಶನವನ್ನು" ತನ್ನ ಮುಂಡ್ಕೂರು ಸೆಂಟರಿನಲ್ಲಿ ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಇದೇ ಬರುವ

ಫೇಬ್ರುವರಿ ತಾ. 27—28—29ಕ್ಕೆ

ಜರಗಿಸುವುದು.

ಪಶುಪ್ರದರ್ಶನವೂ ನಡೆಯುವುದು.

ಸ್ಟಾಲ್ ಫೀ ಮತ್ತು ಪ್ರದರ್ಶನ ಟಿಕೇಟು ಸಹ ಇಲ್ಲವೆಂದು ನಿಶ್ಚಯಿಸಿರುತ್ತಾ ಜಿಲ್ಲೆಯ ಅನೇಕರು ಮಾಡುವ ಊರ ಕೃಷಿ ಕೈಗಾರಿಕೆ ವಸ್ತುಗಳನ್ನು ಕಳುಹಿಸಿ ಪ್ರದರ್ಶಿಸುವುದಲ್ಲದೆ ಎಲ್ಲರೂ ಬಂದು ನೋಡಲು ಸ್ವಾಗತವಿದೆ.

ಮಹಾಬಲ ಶೆಟ್ಟಿ- ಅಧ್ಯಕ್ಷ.
ಕೆ. ನಾರಾಯಣ ಶೆಟ್ಟಿ–ಉಪಾಧ್ಯಕ್ಷ.
ಲಕ್ಷ್ಮಣ ಕಂಪ್ಲಿ–ಕೋಶಾಧಿಕಾರಿ.
ಸತ್ಯನಾರಾಯಣ ರಾವ್, ಎಲ್ಲಪ್ಪ ಶೆಟ್ಟಿ, ವೆಂಕಣ್ಣ ಶೆಟ್ಟಿ, ನಾರಾಯಣ ರಾವ್, ಶಿವಣ್ಣ ಶೆಟ್ಟಿ, ಎಮ್. ಆರ್. ಪೂಂಜ-ಕಾರ್ಯದರ್ಶಿಗಳು
ಮೂಲ್ಕಿ 18-1-48.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಪ್ರಕಟವಾಗಿದೆ—ಶ್ರೀ ಎಂ ವಿ. ಹೆಗ್ಡೆಯರ

ಸ್ವರಾಜ್ಯ ವಿಜಯ

(ಯಕ್ಷಗಾನ ಪದ್ಯ—ಅರ್ಥಗಳಲ್ಲಿ ಆಗೋಸ್ತು 15ರ ಸ್ವರಾಜ್ಯ ಚರಿತ್ರೆ)

ಯಕ್ಷಗಾನದಲ್ಲೊಂದು ಕ್ರಾಂತಿ! ನಿಜವಾದ ಜನತಾ ಸಾಹಿತ್ಯದ ಉದ್ಭವ!

ನೆಹರು, ಜಿನ್ನ, ಪಟೇಲ್, ಜೈಪ್ರಕಾಶ್, ಅಟ್ಲಿ, ಮೌಂಟ್‌ಬೇಟನ್, ಗಾಂಧಿ, ನಿಸ್ತಾರ್, ಖಾನ್‌ನೂನ್, ಕ್ರಿಪ್ಸ್ ಮುಂತಾದವರೇ ಇದರಲ್ಲಿರುವ ಪಾತ್ರಗಳು. ಸಾಮಾನ್ಯನಿಂದ ಹಿಡಿದು ಸಾಹಿತಿಯ ವರೆಗಿನ ಎಲ್ಲರಿಗೂ ಹೇಳಿಸಿದ ನವೀನ ಕೃತಿ.

ಬೆಲೆ ಕೇವಲ: ೦—೮—೦

ಪ್ರತಿಗಳಿಗೆ ಬರೆಯಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಥವಾ

ನವಯುಗ ಪ್ರೆಸ್, ಉಡುಪಿ, ದ. ಕ.

ಆನಸರದಲ್ಲಿ ಬರುವ ಅತಿಥಿಗಳಿಗೆ

ಪ್ರೀತಿಯ ಪಾನಕ

ಲಿಂಬೆ, ಕಿತ್ತಳೆ, ಅನನಾಸಗಳಿಂದ ತಯಾರಿಸಲ್ಪಟ್ಟ ವಂಕ ಮಾರ್ಕಿನ

ಶರಬತ್ತು

ಉಷ್ಣ ಕಾಲದಲ್ಲಿ ಮಧುರ ಪಾನೀಯ.

ತಯಾರಕರು—

ಕನ್ನಡ ಸೋಪ್ ಎಂಡ್ ಇಂಡಸ್ಟ್ರಿಯಲ್ಸ್ ಲಿಮಿಟೆಡ್,
ಮಂಗಳೂರು.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1—4—0 ಟ. ದ್ವಾರ 1—8—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies

ಬೆಲೆ ರೂ. 2-0-0

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪೊ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಅಷ್ಟು ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು. ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:—ಕಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ಸ ಆರ್ ಎಲ್ ಕರ್ಜಗಿದಾರ, ಕೆಮಿಸ್ಟ, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

ಪ್ರೊಪ್ರೈಟರ್.

INDRA BHAVAN COFFEE HOTEL,

Balmatta Road, MANGALORE.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಟಲಾಗಿಗೆ ಬರೆದಲ್ಲಿ ರೋಗಕ್ಕೆ ತಕ್ಕಂಥ ಔಷಧ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಹು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ: ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಕಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ,

Ayurveda Oushadhalaya GADAG

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

ಗ್ರೆಸ್ ಮಂತ್ರಿಗಳು ರಾಜೀನಾಮೆಯಿತ್ತುದು.

× ×

1940ರಲ್ಲಿ ಯುದ್ಧ ವಿರೋಧ ಸೌಮ್ಯ ವ್ಯಕ್ತಿ ಸತ್ಯಾಗ್ರಹ ಘೋಷಣೆ.

1941ರಲ್ಲಿ ಬ್ರಿಟನಿಗೆ ನಷ್ಟ ಮಾಡಿ ಭಾರತಕ್ಕೆ ಲಾಭ ಮಾಡಿಕೊಳ್ಳುವ ಬಯಕೆ ತನ್ನದಲ್ಲವೆಂಬ ಸೂಚನೆ.

1941ರಲ್ಲೇ ಸ್ವಹಸ್ತದಿಂದ ಕಮಲಾ ನೆಹರೂ ಆಸ್ಪತ್ರೆಯ ಉದ್ಘಾಟನೆ

1941ರಲ್ಲೇ ಸಿಂಧನ್ನು ಸತ್ಯಾಗ್ರಹ ಕ್ಷೇತ್ರದಿಂದ ಹೊರತುಪಡಿಸಿದುದು. ಹಿಂದೂ ಮುಸ್ಲಿಂ ಗಲಭೆಗಳನ್ನು ನಿಷೇಧಿಸಿ ಒತ್ತಿ ಒತ್ತಿ ಬೋಧನೆ.

1941ರಲ್ಲೊಮ್ಮೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಮೂಲಕ, ನಾಯಕತ್ವದಿಂದಲೇ ತನ್ನ ಬಿಡುಗಡೆಯ ಯಾಚನೆ.

1942ರಲ್ಲಿ ಪುನಃ ಕಾಂಗ್ರೆಸ್ ಪುಡಾರಿತ್ವ ಧಾರಣೆ.

1942ರಲ್ಲೇ ತನ್ನ ಉತ್ತರಾಧಿಕಾರಿಯು ಪಂಡಿತ ಜವಾಹರಲಾಲರು ಹೊರತು ಸರ್ದಾರ್ ವಲ್ಲಭಾಯಿಗಳೂ ಅಲ್ಲ, ರಾಜಾಜಿಯೂ ಅಲ್ಲವೆಂದು ಬಹಿರಂಗ ಘೋಷಣೆ.

1942ರಲ್ಲೇ 'ಹರಿಜನ' ಪತ್ರಿಕೆಯಲ್ಲಿ 'ಒಂದೊಮ್ಮೆಗೆ ಜರ್ಮನರು ಗೆದ್ದಲ್ಲಿ—' ಎಂಬ ಲೇಖನದ ಮೂಲಕ ಲೋಕದ ಕ

ಬಾಪೂಜೀಯ ಬಾಳುವೆ

(೨ನೇ ಪುಟದಿಂದ ಮುಂದುವರಿದುದು.)

ಣ್ಣನ್ನು ಸರಿಯಾಗಿ ತೆರೆಯಿಸಿದ ಅಮೂಲ್ಯ ಭಾವ ಪ್ರಕಟಣೆ.

1942ಲ್ಲೇ ಚೈನಾದ ಚಿಯಾಂಗ್ ದಂಪತಿಗಳ ಭೇಟಿ, ಸಂಭಾವನೆ.

1942ಲ್ಲೇ ಕ್ರಿಪ್ಸ್ ರಾಯಭಾರತ್ವ, ಗಾಂಧೀ-ಕ್ರಿಪ್ಸ್ ಸಂಭಾಷಣೆ. 'ತಾರೀಕು ನಮೂದಿಸದ ಹುಸಿ ಚೆಕ್ಕು' ಎನ್ನುತ್ತಾ ಕ್ರಿಪ್ಸ್ ಸೂಚನೆಗಳ ಖಂಡನೆ.

1942ರಲ್ಲೇ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಯುದ್ಧ ವಿರೋಧ ನಿರ್ಧಾರಕ್ಕೆ ಅನುಮೋದನೆ. ಜಪಾನ್, ಚೈನಾಗಳಿಗೆ ಹಿತ ಸೂಚನೆ.

× ×

1942ನೇ ಆಗೋಸ್ತಿನಲ್ಲಿ ಬೊಂಬಾಯಿಯ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ. 'ಕ್ವಿಟ್ ಇಂಡಿಯಾ' ಘರ್ಜನೆ. 'ಮಾಡಿರಿ, ಇಲ್ಲವೇ ಮಡಿಯಿರಿ' ಎಂಬ ಕೊನೆಯ ಸಂದೇಶ.

1942ರಲ್ಲೇ ರಾತ್ರಾರಾತ್ರಿ ಬಂಧನ; ಆಗಾಖಾನ್ ಅರಮನೆಯಲ್ಲಿ ಅಜ್ಞಾತವಾಸ.

1942ರಲ್ಲೇ ಬ್ರಿಟಿಷ್ ಸರಕಾರದ ಮೇಲೆ ಆರೋಪ ಪಟ್ಟಿ ತಯಾರಿ. ಆಗಾಖಾನ್ ಅರಮನೆಯಲ್ಲೇ ಮಹದೇವ ದೇಸಾಯಿಗಳ ಕೊನೆಯ ಶ್ವಾಸ.

1943ರಲ್ಲಿ 'ಗೊಂದಲಗಳಿಗೆ ಕಾಂಗ್ರೆಸ್ ಜವಾಬ್ದಾರ' ಎಂಬ ಟೋಟೆನ್ ಹ್ಯಾಮ್ ಪ್ರಕಟಣ. ಆಗಾಖಾನ್ 'ಅರಮನೆ'ಯಲ್ಲೇ 'ಶಕ್ತ್ಯನುಸಾರ' ಉಪವಾಸ. ತಾತ್ಕಾಲಿಕ ಬಿಡುಗಡೆಯ ಕೊಡುಗೆಗೆ ನಿರಾಕರಣೆ. ಪ್ರೊಫೆಸರ್ ಭನ್ಸಾಲಿಗಳ ಸಹೋಪವಾಸ.

1944ರಲ್ಲಿ ಆಗಾಖಾನ್ ಅರಮನೆಯಲ್ಲೇ ಕಸ್ತೂರಿ ಭಾ ಗಾಂಧಿಯ ದೇಹ ತ್ಯಾಗ. ದೇಶವ್ಯಾಪೀ ಕ್ಲೇಶ.

1944ರಲ್ಲೇ ಅನಾರೋಗ್ಯದ ನಿಮಿತ್ತ, ನಿಶ್ಶರ್ತ ಬಿಡುಗಡೆ. ಗಾಂಧೀ-ಗವರ್ನರ್ಮೆಂಟ್, ಗಾಂಧೀ-ಜಿನ್ನಾ, ಸಿ. ಆರ್-ಜಿನ್ನಾ ಪತ್ರವ್ಯವಹಾರಗಳ ಪ್ರಕಟಣೆ. ವೈಸರಾಯಿಗೊಂದು ಪತ್ರ. ಮತ್ತದಕ್ಕೆ ವೈಸರಾಯಿಯ ಉತ್ತರ. ಚರ್ಚಿಲ್ಲರಿಗೊಂದು ಪತ್ರ. ಬೊಂಬಾಯಿಯ ಜಿನ್ನಾ ಭವನದಲ್ಲಿ ಜಿನ್ನರೊಂದಿಗೆ ಭೇಟಿ. ರಾಷ್ಟ್ರಕ್ಕೆ ನವೋಪದೇಶ.

1945ರಲ್ಲಿ ಕಾಂಗ್ರೆಸ್ ಧುರೀಣರಿಗೆ, ರಾಷ್ಟ್ರಕ್ಕೆ ಮಾರ್ಗದರ್ಶನ, ಗತಿ ನಿರೂಪಣೆ, ಸದುಪದೇಶ.

× ×

1946ರಲ್ಲಿ ಮಂತ್ರಿ ಸಮಿತಿ ರಚನೆ, ಮೇ 16ರ ಘೋಷಣೆ ಅದಕ್ಕೆ ಗಾಂಧಿಜೀಯ ಪುಷ್ಟೀಕರಣ ನಡುಗಾಲ ಸರಕಾರ ರಚನೆ. ನೆಹರುಗಳ ಲಂಡನ್ ಪಯಣ. ಲೀಗನ್ನು ಬಿಟ್ಟೇ ಘಟನಾ ಸಮಿತಿ ಸೇರಿದುದು, ಅಧಿಕಾರ ರಚನೆಯ ವಿವಿಧಾಂದೋಲನ.

1946ಲ್ಲೇ ಬಂಗಾಳ, ಅಸ್ಸಾಮು, ದಕ್ಷಿಣ ಭಾರತಗಳ ಪರ್ಯಟನ.

1946ರಲ್ಲೇ ಇವರ ಸ್ಪೆಶ್ಯಲ್ ಟ್ರೈನನ್ನು ಉರುಳಿಸಿ ಹಾಕಲು ಪೂನೆಯಲ್ಲಾಗಿದ್ದ ನಿರರ್ಥಕ ಯತ್ನ.

1946ರಲ್ಲೇ ಜಾತೀಯ ಗಲಭೆ ಪೀಡಿತ ಸ್ಥಳಗಳವರಿಗೆ ಶಾಂತಿ ಸಂದೇಶ; ಧೈರ್ಯ ಬೋಧೆ; ಬಂಗಾಳ, ಕಲ್ಕತ್ತಾ, ನವಖಾಲೀ ಪರ್ಯಟನ

1946ರಲ್ಲೇ ನವಖಾಲಿಯಲ್ಲಿ ಪಾದಚಾರಿಯಾಗಿ ಗ್ರಾಮದಿಂದ ಗ್ರಾಮಕ್ಕೆ ಸಂಚಾರ. ಅಲ್ಲಿಂದ ಬಿಹಾರಿಗೆ ಪಯಣ.

1947ರಲ್ಲಿ ದೇಶ ತುಂಡಾದುದಕ್ಕಾಗಿ ಕಳವಳ. ಆದರೆ ಪರಿಸ್ಥಿತಿಯನ್ನರಿತು ಅದರ ಪುಷ್ಟೀಕರಣ.

1947ನೇ ಆಗೋಸ್ತು 15ರಲ್ಲಿ ಸ್ವರಾಜ್ಯ ಸಂಸ್ಥಾಪನಾ.

1947ರಲ್ಲೇ ಕಲ್ಕತ್ತದಲ್ಲಿ ಹಿಂದುಗಳು ಪುನಃ ದಂಗೆಯದ್ದರೆಂದು ಉಪವಾಸಧಾರಣ.

1947ರಲ್ಲೇ ಅಲ್ಲಿಂದ ಡೆಲ್ಲಿಗೆ ಬಂದು ಜಾತೀಯ ಐಕ್ಯ ಸ್ಥಾಪನಾ ಪ್ರಯತ್ನ. ನಿಯಂತ್ರಣಗಳ ರದ್ದತೀ ಆಂದೋಲನ.

1948ನೇ ಜನವರಿ 13ರಲ್ಲಿ ಡೆಲ್ಲಿಯಲ್ಲಿ ಜಾತೀಯ ಸೌಹಾರ್ದತಾ ಸ್ಥಾಪನೆಗಾಗಿ ಅನಿಶ್ಚಿತಾವಧಿಯ ಉಪವಾಸಧಾರಣ. ಭಾರತ-ಪಾಕಿಸ್ತಾನ ಮತ್ತು ಹಿಂದೂ, ಮುಸ್ಲಿಂ, ಸಿಖ್ ಐಕ್ಯತೆಗಾಗಿ ಚಿರಸ್ಮರಣಾರ್ಹ ಅಮೋಘ ಹಿತ ವಚನ.

1948ನೇ ಜನವರಿ 18ರಲ್ಲಿ ತನ್ನ ಏಳು ಶರ್ತಗಳು ಪಾಲಿಸಲ್ಪಟ್ಟುದರಿಂದ ಉಪವಾಸ ಮನ್ನಾ.

1948ನೇ ಜನವರಿ 20ರಲ್ಲಿ ನವಡೆಲ್ಲಿಯ ಪ್ರಾರ್ಥನಾ ಸಭೆಯಲ್ಲಿ ಪ್ರಾಣ-ಪಹಾರ ಬಾಂಬು ಸ್ಫೋಟ. ಅಪರಾಧಿಯ ಮೇಲೆ ಕರುಣೆಯಿಡಿರೆಂಬ ಹಿತ ವಚನ.

1948ನೇ ಜನವರಿ 30ರಲ್ಲಿ ಅಪರಾಹ್ನ 5 ಘಂಟೆಗೆ ನವಡೆಲ್ಲಿಯ ಬಿರ್ಲಾ ಭವನದ ಅಂಗಣದ ಪ್ರಾರ್ಥನಾ ಸಭೆಗೆ ಹೋಗುತ್ತಿದ್ದಾಗ ಗುಂಡು ಬಿದ್ದು, ಕಾಲರ್ಧ ಘಂಟೆಯೊಳಗೆ ಮರಣ.

ನೋಟೀಸು

ಕುಂದಾಪುರ ಪ್ರಿ. ಮು. ಕೋರ್ಟಿನಲ್ಲಿ

O. S. 649-1947

ವಾದಿರು— ಶ್ರೀನಿವಾಸ ಹೆಬ್ಬಾರ ಕೂಡಾ

ಪ್ರತಿವಾದಿರು- ಶೇರಗಾ ಗೋಟ ಕೂಡಾ.

ಕುಂದಾಪುರ ತಾಲ್ಲೂಕು ಕುಂಭಾಸಿ ಗ್ರಾಮದಲ್ಲಿರುವ ಸುಬ್ರಾಯ ಗೋಟರ ಮಗ 1ನೇ ಪ್ರತಿವಾದಿ ಶೇರಗಾ ಗೋಟನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿರಿಗೆ 1ನೇ ಪ್ರತಿವಾದಿಯಿಂದ ತಾ. 18-5-1921ನೇ ಭೋಗ್ಯಾದಿ ಅಡವಿನ ಬಾಬ್ತು ಬರಬೇಕಾದ ಹಣ ಬಡ್ಡಿ ಕೂಡಾ ರೂಪ್ಯ 150-11 3ನ್ನು ಬರಮಾಡಿಕೊಳ್ಳುವರೆ ವಾದಿರು ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಮೇಲಿನ ದಾವೆಯು ತಾ. 9-2-1948 ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮಗಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ತ್ಯಾಜೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ

(Sd.) N. S. **Parameshwariah**

Advocate for Plffs

Coondapoor, Date 31-1-48



ಅಮೃತಾಂಜನ. ತಲೆವೇದನೆ, ಶಿರೋವೇದನೆ, ಕುಕಾಸ, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಛಾಯೆಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

REGD.

ಪ್ರತ್ಯಕ್ಷ ಫಲದಾಯಕ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ಇದೀಗ ಪ್ರಕಟವಾಗಿದೆ-

ಕನ್ನಡ ನಾಡಿನ ಸುಪ್ರಸಿದ್ಧ ಕವಿ-ಕತೆಗಾರರಾದ

ಶ್ರೀ ಎಸ್. ವೆಂಕಟರಾಜರ ಅನೋಘ ಕೃತಿ

ಏಳು ಕಥೆಗಳ ಸಂಗ್ರಹ. ಬೆಲೆ 0 12 0

ಪ್ರತಿಗಳಿಗೆ ಬರೆಯಿರಿ:— (1) ಕರಿಯರ ಪ್ರಪಂಚ, ಉಡುಪಿ (2) ನವಭಾರತ ಬುಕ್ ಡಿಪ್ಪೊ, ಉಡುಪಿ. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪ್ರಕಟಣೆ

ಶ್ರೀಗಳಾದ N. A. ಶೀನಪ್ಪ ಹೆಗ್ಡೆ ಪೊಳಲಿ ಮತ್ತು ಅಡ್ಯಾರು ರಾಮಣ್ಣ ಶೇಕರು ತಾ. 30-10-47ರ ನವಯುಗ ಪತ್ರಿಕೆಯಲ್ಲಿ 20-10-47ರ ತಾರೀಕಿನ ನೋಟೀಸು ಒಂದನ್ನು ಪ್ರಕಟಿಸಿರುತ್ತಾರೆ. ಅದರಲ್ಲಿ ಅವರು ಮಂಗಳೂರು ತಾಲೂಕು ಅಮುಂಜೆ ಗ್ರಾಮದ R. S. ನಂಬ್ರ 164ರ ಪೆಜತ್ತಿಮಾರು ಬೈಲು ಗದ್ದೆಯ ಆಗ್ನೇಯ ಅಂಶದ ಮೇಲೆ ತಮಗೆ ಹಕ್ಕಿರುವುದೆಂಬುದಾಗಿ ಪ್ರಕಟಿಸಿರುತ್ತಾರೆ. ನಮ್ಮ ಹಿರಿಯರ ಬಾಬ್ತು ಕಳೆದ 1886ನೇ ಯುಸ್ಟಿ ಜಿಲ್ಲಾ ರಿ. ಅ. ನಂಬ್ರ 246ಕ್ಕೆ ರಿಜಿಸ್ಟ್ರಿಯಾದ ಪಾಲುಪಟ್ಟಿ ಪ್ರಕಾರ ಕುಟುಂಬದ ಪ್ರಥಮ ಶಾಖೆಯ ಯಜಮಾನನಾದ ಅಮುಣುಂಜೆಗುತ್ತು ಸೇಸು ಸೆಟ್ಟಿಯಾದ ನಾನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದ್ರೆ—

ಕುಟುಂಬದ ಮೂಲ ಪುರುಷಾದಿ, ದೈವ ದೇವರ ಗಡಿಯು ಹಿರಿ ವಗೈರೆ ವಿನಿಯೋಗಾದಿಗಳನ್ನು ಮೇಲೆ ನಮೂದಿಸಿದ ಆಸ್ತಿಯಿಂದ ಪ್ರಥಮ ಶಾಖೆಯವರು ನಡೆಸಬೇಕಾಗಿರುವುದಾದ್ದರಿಂದ ಇತರ ಎಲ್ಲಾ ಶಾಖೆಗಳವರಿಗೂ ಸದ್ರಿ ಆಸ್ತಿಯ ಪಾಲಿನ ಮೌಲ್ಯವು ಪ್ರಥಮ ಶಾಖೆಯಿಂದ ಈ ಮೊದಲೇ ಕೊಡಲ್ಪಟ್ಟಿರುತ್ತದೆ, ಮತ್ತು ಇತರ ಶಾಖೆಯವರಿಗೆ ಸದ್ರಿ ಆಸ್ತಿಯಲ್ಲಿ ಯಾವ ತರದ ಹಕ್ಕೂ ಇರುವುದಿಲ್ಲ. ಆದುದರಿಂದ ಸದ್ರಿ ಗದ್ದೆಯ ಆವೆಮಣ್ಣನ್ನು ಮಾರುವ ವಿಷಯದಲ್ಲಿ ಮೇಲಿನವರ ಆಕ್ಷೇಪಣೆಯು ಅಕಾಲಿಕವಾದದ್ದು, ಮಾತ್ರವಲ್ಲದೆ ಕುಟುಂಬದ ಹಿತಕ್ಕೆ ಹಾನಿಕರವಾದದ್ದು. ಯಾಕೆಂದ್ರೆ. ಸದ್ರಿ ಗದ್ದೆಯಿಂದ ಆವೆ ಮಣ್ಣನ್ನು ತೆಗೆಯುವುದರಿಂದ ಅದರ ಮಟ್ಟವು ಕೆಳಗಿಳಿದು ಅದರಲ್ಲಿ ಈಗಿನಂತೆ ಸಂದೇಹಕರವಾದ ಒಂದು ಎಸಲು ಬೆಳೆಯ ಬದಲಿಗೆ ಸುಗ್ಗಿ ಮತ್ತು ಕೊಳಕೆ ಎರಡು ಬೆಳೆಗಳಾಗಿ ಅದು ಅಭಿವೃದ್ಧಿಯಾಗುವಂತಾಗುವುದು. ಆದ್ದರಿಂದ ಮೇಲಿನ ಆಕ್ಷೇಪಣಾದರ ಆಕ್ಷೇಪಣೆಯು ಕುಟುಂಬದ ಹಿತಕ್ಕೆ ಅಹಿತವೂ ಆಧಾರ ರಹಿತವೂ ಆಗಿರುವುದೆಂದು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸಲಾಗಿದೆ.

ಸೇಸು ಸೆಟ್ಟಿ ರುಜು.

25-1-1948

(೧ನೇ ಪುಟದಿಂದ)

ಹಾರಿಬಿಟ್ಟ. ಆದರೆ ಕಲಶವೊಡೆಯಿತು-ಒಡೆದ ಭರಕ್ಕೆ ಅದರೊಳಗಿನ ಅಮೃತ ಸಿಡಿದು ಹನಿ ಹಾಳಾಗದೆ ಈಗ ಎಲ್ಲಾ ಹೃದಯಗಳಲ್ಲಿ ತುಂಬಿ ನಿಂತಿದೆ. ಮಹಾತ್ಮಾಜೀ ಚಿರಂಜೀವಿ! ರಾಷ್ಟ್ರದ ಬಾಳುವೆಯೇ ಬಾಪೂಜೀಯ ಬಾಳುವೆ!

೦೦ ೦೦ ೦೦

ಅವತಾರ ಸಮಾಪ್ತಿಯಾದುದು ಹೀಗೆ:- ತಾ 13ರಿಂದ 18ರ ವರೆಗೆ ಆರು ದಿನ ಉಪವಾಸ ಮಾಡಿ 79ರ ಮುದುಕ ಬಾಪೂಜೀಯ ದೇಹ ಪೂರ್ಣ ದುರ್ಬಲಗೊಂಡಿದ್ದಿತು. ತಾ 20ರ ಪ್ರಾರ್ಥನಾ ಸಭೆಯಲ್ಲೇ ಅವರ ಕಡೆಗೊಂದು ಬೋಂಬು ಸಿಡಿಯಿತು. ಸಂಚರಿಸುವಷ್ಟು ತ್ರಾಣ ಬಂದೊಡನೆ ಪಾಕಿಸ್ತಾನಕ್ಕೆ ಹೋಗಿ ಅಲ್ಲಿಯ ಮುಸ್ಲಿಮೇತರರ ಪ್ರಾಣ ಮಾನಗಳಿಗೆ ಗ್ಯಾರಂಟಿಯಾಗಿ ಸಾಯುವ ವರೆಗೂ ಅಲ್ಲಿಯೇ ಇರಬೇಕೆಂದು ಬಾಪೂಜೀಯ ಇಚ್ಛೆಯಿದ್ದಿತು. ಆದರೆ ಡಾಕ್ಟರರ ಒತ್ತಾಯದಂತೆ ದುರ್ಬಲ ಪ್ರಕೃತಿಯನ್ನು ಸುಧಾರಿಸಿಕೊಳ್ಳಲು ಕೆಲಕಾಲ ವಾರ್ಧಾಕ್ಕೆ ಹೋಗಿ ಸೇವಾ ಗ್ರಾಮದಲ್ಲಿ ನಿಲ್ಲಬೇಕೆಂದು ಸಂಕಲ್ಪಿಸಿದ್ದರು. ತಾ 30ನೇ ಶುಕ್ರವಾರ ಅಪರಾಹ್ನ 4 ಘಂಟೆಗೆ ಸರ್ದಾರ್ ಪಟೇಲರು ಬಿರ್ಲಾ ಭವನಕ್ಕೆ ಬಂದು 1 ಘಂಟೆ ಗಾಂಧಿಜೀಯೊಡನಿದ್ದರು ಘಂಟೆ 5 ಆದೊಡನೆ ಪದ್ಧತಿಯಂತೆ ಬಿರ್ಲಾ ಭವನದ ಇದಿರಾಂಗಣದ ಪ್ರಾರ್ಥನಾ ಸಭೆಗೆ ಹೋಗುವೆನೆಂದು ಎದ್ದರು ಬಾಪೂಜೀ. ಅವರ ಮೊಮ್ಮಗಳಂದಿರಿಬ್ಬರೂ (ಮಗನ ಮಗಳು ಮತ್ತು ಮಗನ ಸೊಸೆ) ಎಡಬಲಗಳಲ್ಲಿದ್ದರು. ಆ ಪಾವನ ಶರೀರ ತನ್ನಾಯುಷ್ಯದ ಕೊನೆಯ ಹೆಜ್ಜೆಗಳನ್ನಿಡುತ್ತಾ ಪ್ರಾರ್ಥನಾ ಸಭೆಯತ್ತ ಬರುತಿತ್ತು! ವ್ಯವಸ್ಥಾಸೇವಕರು ಹಾದಿ ತೆರವು ಮಾಡಿಕೊಟ್ಟರು; ವೇದಿಕೆಯತ್ತ ನಡೆಯುತ್ತಿದ್ದಾಗ ಅಲ್ಲಿ ಕಾದಿದ್ದ ಲೋಕಕಂಟಕ ಅಪಮೃತ್ಯು--ಕಾಳಕೂಟಕ್ಕಿಂತಲೂ ಕಠೋರವಾದ ಉರಿವಿಷದ ಮನುಷ್ಯರೂಪೀ ಮುದ್ದೆ--ಖಾಕಿಧಾರಿ ಮನುಷ್ಯ ಎದ್ದುನಿಂತು ರಿವಾಲ್ವರ್ ತೆಗೆದು ಕೈಗೆ ಕೈ ತಾಗುವಷ್ಟು ಸಮೀಪದಿಂದಲೇ ನಾಲ್ಕು ಬಾರಿ ಗುಂಡು ಹಾರಿಸಿದ; ಅವು ಕಿಬ್ಬೊಟ್ಟೆ ಮತ್ತು ಎದೆಯನ್ನು ಭೇದಿಸಿದುವು. ಕೈ ಮುಗಿದುಕೊಂಡು ಶಾಂತ ಪ್ರಫುಲ್ಲವದನದಿಂದ ಸಭೆಯತ್ತ ನೋಡಿ 'ರಾಮ ರಾಮ ರಾಮ' ಎನ್ನುತ್ತಾ ಮಹಾತ್ಮ ಉರುಳಿದರು. ಕೂಡಲೆ ಸುದ್ದಿ ಹೋಗಿ ನೆಹರು ವಲ್ಲಭಾಯಿಗಳೋಡಿಬಂದರು. ಡಾಕ್ಟರರು ಬಂದರು. ಯಾವ ಸ್ವರ್ಗಾಧಿಪನಾದರೂ ತನ್ನ ಒಡ್ಡೋಲಗದಲ್ಲಿ ಅಗ್ರಪೂಜೆ ಕೊಡಬೇಕೆಂದು ಸ್ಪರ್ಧಿಸಲೇಬೇಕಾದ ಈ ಅಮೂಲ್ಯ ಜೀವವನ್ನು ತಂತಮ್ಮದನ್ನಾಗಿ ಮಾಡಿಕೊಳ್ಳಲು ಮೃತ್ಯು ಮತ್ತು ಮಾನವರಿಬ್ಬರೂ ಆ ಮುಹೂರ್ತದಲ್ಲಿ ಒಮ್ಮೆ ಪರಮಾವಧಿ ಸ್ಪರ್ಧಿಸಿಕೊಂಡರು. ಮೃತ್ಯುವೇ ಗೆದ್ದಿತು! ಬಾಪೂಜೀ ಅವತಾರ ಸುಮಾರು 5½ ಘಂಟೆಗೆ ಸಮಾಪ್ತಿಗೊಂಡಿತು; ಮುಗಿಯಿತು. ಮಹಾತ್ಮಾಜೀ ಇನ್ನು ಅಲ್ಲಿಲ್ಲ-ಇಲ್ಲೇ, ನಮ್ಮಲ್ಲೇ!

ಚರಿತ್ರೆಯಲ್ಲಿ ಪಾವಿತ್ರ್ಯದ ಮಟ್ಟಿಗೆ ಭಾರತದ ರಾಷ್ಟ್ರ ಜನಕನ-ಬಾಪೂಜೀಯ-ಹೆಸರು ಹೇಗೆ ಎಲ್ಲಕ್ಕಿಂತ ದಪ್ಪ ಸುವರ್ಣಾಕ್ಷರಗಳಲ್ಲಿ ಚಿರಸ್ಥಾಯಿಯಾಗಲಿರುವುದೋ, ಅಂತೆಯೇ ಪಾಪದ ಮಟ್ಟಿಗೆ ಎಲ್ಲಕ್ಕಿಂತ ದಪ್ಪ ಕಪ್ಪಕ್ಷರಗಳಲ್ಲಿ ಚಿರಸ್ಥಾಯಿಯಾಗನಿಲ್ಲಲಿರುವ 'ನಾತುರಾಮ್ ವಿನಾಯಕ ಗೋಡ್ಸೆ'ಯೆಂತಹ ಕಠೋರ ಕಾಳಕೂಟದ ಮುದ್ದೆಯಾಗಿದ್ದ! ಸೈತಾನನ ಸರ್ವ ದೃಢತೆಯೂ ಅವನಲ್ಲಿ ಹೇಗೆ ಮೂರ್ತೀಭವಿಸಿದ್ದಿತು! ಆತ ಕೆಡಿಸಿದ ಲೋಕವನ್ನು ಆತ ಅನುಭವಿಸಿಕೊಂಡಿರಲಾಗುವಂತೆ, ಈ ಅನನ್ಯಾದೃಷ್ಟ ಜಂತುವಿಗೇನನ್ನೂ ಮಾಡದೆ ಬಿಟ್ಟುಬಿಟ್ಟರಾಗದೇ-ಎಂಬ ಯೋಚನೆ ಮೂಡುವಷ್ಟಿದೆ ಈ ಘಟನೆಯ ವಿಚಿತ್ರ! 36 ವರುಷ ಪ್ರಾಯದ ಈ ಕಾಲಯಮ ಬಾಪೂಜೀ ಪ್ರಾರ್ಥನಾ ಮಂಟಪಕ್ಕೆ ಸಮೀಪಿಸುತ್ತಿದ್ದಾಗ ಎರಡೇ ಗಜ ದೂರದಿಂದೆದ್ದು ರಾಷ್ಟ್ರ ಜನಕನಿಗೆ ಬಗ್ಗಿ ಪ್ರಣಾಮ ಮಾಡಿದ. ಬಾಪೂಜೀ ಪ್ರತಿಯಾಗಿ ನಮಸ್ಕಾರ ಕೊಟ್ಟರು. ಆತ ಎದ್ದು "ನೀವೀ ದಿನ ಪ್ರಾರ್ಥನೆಗೆ ಬಂದುದು ತಡವಾಗಿ" ಎಂದ. ಬಾಪೂಜೀ ನಗುತ್ತಾ "ಹೌದು; ನಾನು ತಡ ಮಾಡಿದೆ" ಎಂದರು ಆಗ ಮಹಾತ್ಮನ ಸಮೀಪವಾಗಿದ್ದ ಆತ ಕೂಡಲೇ ರಿವಾಲ್ವರ್ ತೆಗೆದು ಢಂ, ಢಂ, ಢಂ ಹೊಡೆದ. ಗುಂಡುಗಳು ಎದೆಯ ಕೆಳಭಾಗ ಮತ್ತು ಹೊಟ್ಟೆಗೆ ನಾಟಿದುವು. ಗಾಂಧಿಜೀ ಸಭೆಯತ್ತ ಎರಡೂ ಕೈಗಳನ್ನು ಜೋಡಿಸಿ ಬೀಳುವುದರಲ್ಲಿರುವಾಗ ಎಡ ಬಲಗಳಲ್ಲಿದ್ದ ಮೊಮ್ಮಗಳಂದಿರು ಅಭಾಗಾಂಧಿ, ಮತ್ತು ಮನೂ ಗಾಂಧಿ, ಅವರನ್ನು ಗಟ್ಟಿ ಹಿಡಿದುಕೊಂಡರು. ಅವತಾರ ಅಲ್ಲಿಗೇ ಸಮಾಪ್ತಿ! 5½ ಮೈಲುದ್ದದ ಸ್ಮಶಾನ ಯಾತ್ರೆಯಲ್ಲಿ 10 ಲಕ್ಷಕ್ಕೂ ಮಿಕ್ಕಿದ ಜನ ಸಂದಣಿ ಬಾಯಿಬಿಟ್ಟು, ಕರುಳನ್ನು ಬಾಯಿಗೆ ತಂದು ಅಳುತ್ತಾ ಹೋಗುತ್ತಿದ್ದಾಗ, ಅದನ್ನು ಕಂಡೇನಾದರೂ ಈ ಪಿಶಾಚಿ ಕರಗುವಂತಿದೆಯೇ ನೋಡೋಣವೆಂದು ಈ ನಾತುವನ್ನೂ ಮೆರವಣಿಗೆಯಲ್ಲೊಯ್ದಿದ್ದರು. ಆತ ಅಲ್ಲಿ ನಗುತ್ತಿದ್ದನಂತೆ. ಗಂಧದ ಚಿತೆಯಲ್ಲಿ ಶವವನ್ನಿರಿಸಲು ನೆಹರುಗಳು ಹೆಜ್ಜೆಯಿಟ್ಟಾಗ ಇಡೀ ಜನ ಸಂದಣಿ ಅವರ ಪಾದಕ್ಕೆ ನೀಟಾನೀಟ ಅಡ್ಡಬಿತ್ತು; ಸ್ಮಶಾನ ಭೂಮಿ ತೊಯಿದು ಹೋಯಿತು! ಆಕಾಶ ಅಳುವಿಕೆಯಿಂದ ಬಿರಿಯಿತು! ಬಾಪೂಜೀಯ ಕಾಯ ಭಸ್ಮವಾಯಿತು! ಆತ್ಮ ನಮ್ಮ ಶಾಶ್ವತ ಬೆಳಕಾಗಿ ನಿಂತಿತು!

ರಘುಪತಿ ರಾಘವ ರಾಜಾರಾಮ್!
ಪತೀತ ಪಾವನ ಸೀತಾರಾಮ್॥
ಈಶ್ವರ ಅಲ್ಲಾ ತೇರೇ ನಾಮ್!
ಸಬಕೋ ಸನ್ಮತಿ ದೇ ಭಗವಾನ್॥

॥ಮಹಾತ್ಮಾ ಗಾಂಧಿಕೀ ಜೈ॥

ಓಂ ಶಾಂತಿಃ ಶಾಂತಿಃ ಶಾಂತಿಃ

ಬಾಲಕರು ಆರೋಗ್ಯಕಾಯರಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೋ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:–
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.



Approved firm by the Govt. of Mysore
Certified by the Agent of the Govt. of Cylone & Indian.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹಪತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 6/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MRS D. DEVEE, P. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಬೆಲೂನ್ಸ್ ಬೆಲೂನ್ಸ್

ಬಾಳಿಕೆ ಬರುವ, ಆಕರ್ಷಕ ಹಾಗೂ ಬಣ್ಣ ಬಣ್ಣದ ಚಲೋ ಟ್ಯೂಬ್‌ಗಳೂ ಬೆಲೂನ್ಸ್‌ಗಳೂ ಮಿತ ದರದಲ್ಲಿ ಪುಷ್ಕಳ ಸಗಾರದೊಂದಿಗೆ ದೊರೆಯುವುವು. ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

ಜಯಭಾರತ ರಬ್ಬರ್ ಪ್ರೊಡಕ್ಟ್ಸ
609, ವಿಠಲ ಪೇಟೆ, ಪೂನಾ 2.

Jay Bherat Rubber Products
609, Vetal Peth, Poona 2.

ಇದೇ ತಾ. **8-2-1948**ನೇ ಆದಿತ್ಯವಾರ ಸಾಯಂ. ಘಂಟೆ **6**ಕ್ಕೆ
ಮಂಗಳೂರು ಸೆಂಟ್ರಲ್ ಮೈದಾನಿನಲ್ಲಿ ಕಟ್ಟಿಸಿದ ನವೀನ ಮಂದಿರದಲ್ಲಿ
ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥ
ವಿಖ್ಯಾತ ಗಾಯಕಿ **ಶ್ರೀಮತಿ ಯಂ. ಯಸ್. ಸುಬ್ಬ ಲಕ್ಷ್ಮಿ** ಇವರ

ಸಂಗೀತ ಕಚೇರಿ

ಟಿಕೇಟುಗಳ ವಿವರ

ಪೋಷಕ ವರ್ಗ	ರೂ. 100
1ನೇ ವರ್ಗ	ರೂ. 25
11ನೇ ವರ್ಗ	ರೂ. 10
111ನೇ ವರ್ಗ	ರೂ. 5

ಟಿಕೇಟುಗಳು ಶ್ರೀ. ಪಿ. ಶ್ರೀನಿವಾಸ ರಾವ್, ಎಡ್ವಕೇಟ್, ಕೆ. ಯಸ್. ರಾವ್, ರಸ್ತೆ ಮಂಗಳೂರು ಮತ್ತು ಶ್ರೀ. ಬಿ. ರಾಮಚಂದ್ರರಾವ್, ಎಡ್ವಕೇಟ್ ಪುತ್ತೂರು ಇವರಲ್ಲಿ ದೊರಕುವುವು.

ಆಸ್ಥಾನ ವಿದ್ವಾನ್ ಶ್ರೀ. ಚೌಡಯ್ಯ-ಇವರ ಪಿಟೀಲು.
ಶ್ರೀ. ಕಲ್ಪತಿ ರಮಾನಾಥನ್ -ಇವರ ಮೃದಂಗ.
ಶ್ರೀ ಆಲಂಗುಡಿ ರಾಮಚಂದ್ರನ್ -ಇವರ ಘಟವಾದ್ಯ.
ಧ್ವನಿ ವರ್ಧಕ ಇತ್ಯಾದಿ ಏರ್ಪಾಡು ರೇಡಿಯೋ ಸೇಲ್ಸ್ ಸರ್ವಿಸ್ ಕ್ರಿಚುನಾಪಳ್ಳಿ-ಇವರಿಂದ.

ಜನರ ಸೌಕರ್ಯಕ್ಕಾಗಿ ಈ ಕಾರಿಗೆ ಮಂಗಳೂರಿಗೆ ಬರಲಿಕ್ಕೂ, ಹಿಂದೆ ಹೋಗಲಿಕ್ಕೂ ಎಲ್ಲಾ ಲೈನುಗಳಲ್ಲಿಯೂ ಸ್ಪೆಶಲ್ ಬಸ್ ಸರ್ವಿಸುಗಳ ವ್ಯವಸ್ಥೆ ಇದೆ.

ಎರಡಾಣೆ

Regd. No. M. 5618 — 12-2-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮ / ವಾರ ೨೩

NAVAYUGA WEEKLY, UDIPI.

FOUNDER: Hon'ble Mr. A. B SHETTY, Health Minister, Govt. of Madras.

Vol. 28 / No. 23

THE CANARA MUTUAL Assurance Company, Limited.

Estd: 1935
H. O. UDIPI, S. Kanara.

THEY HAD WAITED TOO LONG

Last year in one Country alone 1,64,000 persons found that they had waited too long to buy life insurance. When atlast they said 'Yes' to an insurance agent and went to a doctor for examination they found that in their then physical condition they could not buy insurance at any price. No-one should postpone insuring when he is still healthy

T. R. A. Pai,
Managing Director.

The 1946 Record Business proves the popularity
THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India.
Bombay Life Building,
Central Office, Udipi:

Branches at:
Mangalore, Calicut, Trivandrum, Madura, Madras, Bangalore & Bombay,

ವಾರ್ಡನ್

1946ರಲ್ಲಿ ಹೊಸ ದಾಖಲೆಯ ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ ... ... ರೂ. 2,04,00,000
ಪೂರ್ಣಗೊಳಿಸಲ್ಪಟ್ಟ ವ್ಯವಹಾರ ... ... ರೂ 1,72,00,000

ವಾರ್ಡನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಚ್ಚ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೋಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃ[illegible] ವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ತಾಕರ್ — ಎಮ್. ಸುಂದರರಾಮ ಸೆಟ್ಟಿ
ಮೆನೇಜಿಂಗ್ ಡೈರೆಕ್ಟರ್. — ಏಜನ್ಸಿ ಮೆನೇಜರ್.

ಮಂಗಳೂರು ಶಾಖೆ

ಕೆ. ಪಿ. ಭವಾನಿಶಂಕರ ಸೆಟ್ಟಿ
ಬ್ರಾಂಚ್ ಸೆಕ್ರೆಟರಿ.

The best preventive in epidemics of CHOLERA
"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾಲಕ್ಕಿ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ, ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ನಿಮ್ಮಷ್ಟಕ್ಕೆ ನೀವು ಮನೆಯಲ್ಲೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ—

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.
ನವಭಾರತ ಬುಕ್ ಡಿಪೊ, ಉಡುಪಿ.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ:-ಧಾರವಾಡ,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ,

THE UNITED KARNATAK INSURANCE COMPANY, LIMITED.

ಬಾಪೂಜಿಯ ಬಲಿದಾನಕ್ಕಾಗಿ ಲೋಕ ಪ್ರಮುಖರ ಹಾಹಾಕಾರ!

'ಶ್ರೀ ಘನವಾದ ತತ್ವಗಳಲ್ಲಿ ಜೀವನ ತಲ್ಲೀನತೆ ಹೊಂದುವ ಮಹಾ ಮಾದರಿಯೊಂದನ್ನು ಗಾಂಧಿಯವರು ಇಡೀ ಪ್ರಪಂಚಕ್ಕೆ ಹಾಕಿಕೊಟ್ಟಿದ್ದಾರೆ. ಅವರು ಸತ್ತರೂ ಅವರ ಜೀವನ ಹಾಗೂ ಬೋಧನೆಗಳ ಸುದೀರ್ಘ ಪರಿಣಾಮವು ಆಗುತ್ತಾ ಹೋಗುವದು. ಅವರ ದೇಶ ಮತ್ತು ಇಡೀ ಜಗತ್ತಿನಲ್ಲಿರುವ ಅವರ ಈ ಪುಣ್ಯ ಸ್ಮರಣೆಯ ನಿಷ್ಠಾವಂತರೆಲ್ಲರೂ, ಅವರು ಬಲಿದಾನವಾದ, ನಮ್ಮೀ ಜಾಗತಿಕ ಸಂಘದ ಅಸ್ತಿವಾರವಾಗಿರುವ ಅಹಿಂಸೆ ಮತ್ತು ಸೌಹಾರ್ದತಾ ತತ್ವಗಳನ್ನು ಪ್ರಸಾರಮಾಡಲಿರುವರು'—ಭದ್ರತಾ ಕೌನ್ಸಿಲಿನ ಅಧ್ಯಕ್ಷ ಫೆರ್ನಾಂಡ್ ವಾನ್ ಲ್ಯಾಂಗನ್ ಹೋವೆ.

'ಮಹಾತ್ಮಾ ಗಾಂಧಿಯವರ ಮರಣ ದುರಂತವು ಮಾನವಜನಾಂಗಕ್ಕೇನೆ- ಅದಲ್ಲೂ ಜನತೆಯ ಪಾಲಿಗೊದಗಿರುವ ಭೀಕರ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಆಧ್ಯಾತ್ಮಿಕ ನಾಯಕನೊಬ್ಬನ ಅತ್ಯಾತ್ಯಾವಶ್ಯಕತೆಯಿರುವ ಈ ಕಾಲದಲ್ಲಿ ಪ್ರಪಂಚಕ್ಕೆ-ತುಂಬಿ ಬರಲಾರದ ಮಹಾ ನಷ್ಟ'-ನಾಗರಿಕ ಸಂಘದ ಕಾರ್ಯದರ್ಶಿ ಬ್ರೈಯನ್ ಪ್ರೈಸ್.

'ಮಾನವ ಚರಿತ್ರೆಯ ಮಹಾ ಮನುಷ್ಯರಲ್ಲಿ ಕೆಲವರು ಕೊಲೆಗಡುಕರ ಕೈಯಲ್ಲೇ ಪ್ರಾಣ ಕೊಟ್ಟಿದ್ದಾರೆ. ಗಾಂಧಿಯವರಂತಹ ಮಿಕ್ಕವರು ತಮ್ಮ ಜೀವಕ್ಕೆ ಕಂಟಕವಿದೆ, ಎಂಬುದನ್ನರಿತಿದ್ದರು. ಅಪಾಯದ ಕಡೆಗಿಂತಹ ನಿಸ್ವಾರ್ಥಪರ ಧಿಕ್ಕಾರವನ್ನು ಯಾರೂ ತೋರಿಸಿರಲಿಲ್ಲ. ಕೊಲೆಗಡುಕತನ ಮತ್ತದರ ಉಗಮವಾದ ಆವೇಶ ಭ್ರಾಂತಿಯಲ್ಲಿರುವ ಅವಿವೇಕ ಹಾಗೂ ಹುಚ್ಚಾಟವನ್ನು ತನ್ನ ಮರಣದ ಮೂಲಕ ಈ ರೀತಿ ಸ್ಪಷ್ಟಪಡಿಸಿದವರು ಬೇರಿಲ್ಲ. ಇವರ ಮಹತ್ಕಾರ್ಯಗಳಲ್ಲಿ ಅತಿ ಮಹತ್ವದ್ದು ಇನ್ನು ಸಾಫಲ್ಯ ಹೊಂದಲಿದೆ ಎಂದು ನಾವು ನಂಬುತ್ತೇವೆ. ಗಾಂಧಿಯವರು ಬಡವರ, ನಿಸ್ಸಹಾಯಕರ, ನಿರ್ಗತಿಕರ ಸ್ನೇಹಿತರಾಗಿದ್ದರು'-ಬ್ರಿಟಿಷ್ ಪ್ರತಿನಿಧಿ ನೋವೆಲ್ ಬೇಕರ್.

'ಭಾರತದ ಅತಿ ದೊಡ್ಡ ನಾಯಕರಲ್ಲೊಬ್ಬರಾದ ಗಾಂಧಿಯವರು ಭಾರತ ಚರಿತ್ರೆಯಲ್ಲಿ ನಿಜಕ್ಕೂ ತನ್ನ ಗಾಢ ಮೊಹರೊಂದನ್ನು ಒತ್ತಿದ್ದಾರೆ. ತಮ್ಮ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹಿಂದೀ ಜನತೆಯು ಮಾಡಿದ ಸುದೀರ್ಘ ಹೋರಾಟದಲ್ಲಿ ಗಾಂಧಿಯವರ ಹೆಸರು ಶಾಶ್ವತ ಸಂಗಮಗೊಂಡಿದೆ'-ರಶ್ಯನ್ ಪ್ರತಿನಿಧಿ ಎಮ್. ಗ್ರೋಮಿಕೊ.

'ಮಹಾತ್ಮಾ ಗಾಂಧಿಯವರ ಮರಣದಿಂದ ಏಸ್ಯಾ ಖಂಡವು ತನ್ನ ಅಗ್ರಗಣ್ಯ ಜೀವಂತ ಸಂತನನ್ನು ಕಳಕೊಂಡಂತಾಯಿತು. ಮಹಾತ್ಮಾ ಗಾಂಧಿಯವರಂತೆ ಈ ಪುರಾತನ ಖಂಡದ ಭಾವನೆ ಮತ್ತು ಘನತೆಯನ್ನು ಪ್ರತಿನಿಧಿಸುವ ವ್ಯಕ್ತಿಸ್ವವಿದ್ದ ಮತ್ತೊಬ್ಬನಿಲ್ಲ. ಅವರ ತತ್ವಗಳು ಲೋಕ ಪ್ರಾಮುಖ್ಯವಿವೆ'-ಚೈನಾದ ಪ್ರತಿನಿಧಿ ಡಾ| ಟ್ಸಿಯಾಂಗ್.

'ಅಂತರ್ಯುದ್ಧವು ಭಾರತದ ಅಧಿಕಾರ ಹಿಡಿದುಕೊಂಡಿರಲಿಚ್ಛಿಸುವವರಿಗಲ್ಲದೆ ಕವುಗೆಂದಿಗೂ ಹಿತಕರವಲ್ಲವೆಂಬುದನ್ನು ಗಾಂಧಿಯವರು ತನ್ನ ಅನುಯಾಯಿಗಳಿಗೆ ಮಂದಟ್ಟು ಮಾಡಿಕೊಟ್ಟಿದ್ದಾರೆ. ಈ ಕೆಲಸ ಮಧ್ಯದಲ್ಲೇ ನಿಲ್ಲದೆಂದಾಶಿಸುತ್ತೇನೆ"-ಉಕ್ರೈನ್ ಪ್ರತಿನಿಧಿ ವಾಸ್ಸಿಲಿಟ್ ಟಿಸೆಂಕೋ.

'ಸಹನೆಯ ಆವಶ್ಯಕತೆಯು ಬಹಳವಿರುವ ಬಿಕ್ಕಟ್ಟು ಮತ್ತು ಘರ್ಷಣೆಯ ಈ ದುಷ್ಕಾಲದಲ್ಲೇ ಮಹಾತ್ಮಾ ಗಾಂಧಿಯವರ ಮರಣವಾದುದು ಮಹತ್ತಾದ ದುರಂತ. ಅವರಾವ ತತ್ವಗಳಿಗಾಗಿ ಬಾಳುತ್ತಿದ್ದರೋ ಆ ತತ್ವಗಳನ್ನು ಸಂಯುಕ್ತ ರಾಷ್ಟ್ರಗಳ ಜನತೆಯು ಮುಂದೊತ್ತುವಂತೆ ಅವರ ಈ ಬಲಿದಾನವು ಮಾಡುವದೆಂದು ಬಲವಾದ ಆಶೆಯಿದೆ"-ಅಮೇರಿಕದ ಪ್ರತಿನಿಧಿ ವಾರೆನ್ ಆಸ್ಟಿನ್.

"ಈ ಪ್ರವಾದಿಗೆ ಈ ರೀತಿಯ ಮರಣವೊದಗಿದುದು ಪ್ರಪಂಚದ ಒಂದು ಮಹಾ ದುರ್ದೈವ. ಆದರೆ, ಪ್ರಾಯಶಃ ಅವರು ಜೀವದಲ್ಲಿದ್ದಾಗಿನಿಂದ ಹೆಚ್ಚಾಗಿ ಇನ್ನು ಅವರ ಅಭಿಪ್ರಾಯಗಳು ಗೌರವಿಸಲ್ಪಡಲಿವೆ. ಅವರಾವುದಕ್ಕಾಗಿ ಪ್ರಾಣ ಬಲಿಕೊಟ್ಟರೋ ಆ ಶಾಂತಿಯನ್ನು ಭಾರತೀಯರು ದಕ್ಕಿಸಿಕೊಂಡರಾದರೆ ಅವರೀ ಮರಣವು ನಿರರ್ಥಕವೆನ್ನಿಸದು. ಅವರ ಸ್ಮರಣೆಯು ಸಾರ್ಥಕ ಸ್ಮರಣೆಯಾಗಬೇಕು"-ಸಿರಿಯಾದ ಪ್ರತಿನಿಧಿ ಎಲ್. ಖೌರಿ.

"ಗಾಂಧಿಯವರು ತನ್ನ ಕಾಲದ ಅತಿ ದೊಡ್ಡ ನಾಯಕರಲ್ಲೊಬ್ಬರೆಂಬುದು ನಿರ್ವಿವಾದ. ಅವರು ತನ್ನ ಜೀವನ ಮತ್ತು ಉಪದೇಶಗಳ ಮೂಲಕ ಆತ್ಮಬಲ ಮತ್ತದರ ಶಕ್ತಿಯನ್ನು ಸಿದ್ಧಮಾಡಿತೋರಿಸಿದ್ದಾರೆ. ಅವರೊಂದು ಮಹತ್ತಾದ ಮೇಲ್ಪಂಕ್ತಿ ಹಾಕಿದ್ದಾರೆ. ನ್ಯಾಯಕ್ಕಾಗಿ ನಡೆದ ಹೊಸ ಮಹಾತ್ಮಾ ಬಲಿಯಿದು. ಅವರ ತತ್ವಗಳಲ್ಲಿ ನಾವುನಂಬಿಕೆಯಿಟ್ಟಲ್ಲಿ, ನಮ್ಮ ಕಾರ್ಯಕ್ಕೆ ವಿಜಯ ಮಕುಟವೇರುವದೆಂಬ ಕುರಿತೂ ವಿಶ್ವಾಸವಿಡಬಹುದು. ಜಗತ್ತಿನ ಶಾಂತಿಪ್ರೇಮಿ ಶಕ್ತಿಗಳಿಗೆ ನಾವು ವಿಜಯವನ್ನು ಆಶಿಸುತ್ತೇನೆ"-ಅರ್ಜೆಂಟನಾದ ಡಾ. ಜೋಸೆ ಆರ್ಸ.

'ಗಾಂಧಿಯವರೊಂದಿಗೆ ಮಾನವ ಜನಾಂಗದ ಅತ್ಯಂತ ದೊಡ್ಡದಾದ ಮತ್ತು ಅತ್ಯಂತ ಪರಿಶುದ್ಧವಾದ ಜೀವವೊಂದು ಹೊರಟು ಹೋದಂತಾಯಿತು. ಗಾಂಧಿಯವರ ಹೆಸರನ್ನರಿಯದ ಮತ್ತದನ್ನು ಗೌರವಿಸದ ಒಬ್ಬನೇ ಒಬ್ಬ ಫ್ರೆಂಚನಿಲ್ಲ. ಅವರು ತನ್ನ ತತ್ವಗಳಿಗಾಗಿ ಪ್ರಾಣ ಕೊಟ್ಟರು; ತನ್ನ ಅತ್ಯಂತ ಘನವಾದ ಜೀವನಕ್ಕೆ ಜೀವ ಬಲಿದಾನದ ಮಕುಟವನ್ನೇರಿಸಿಕೊಂಡರು'-ಫ್ರಾನ್ಸಿನ ಟೂರ್ನೆಲ್ಲೀ.

'ಗಾಂಧಿಯವರ ಮರಣವು ಭಾರತಕ್ಕೆ ಮಾತ್ರವಲ್ಲ; ಎಲ್ಲೆಲ್ಲೂ ಇರುವ ಸರ್ವ ಸಹೃದಯಿಗಳ ಪಾಲಿಗೂ ಒದಗಿದ ಒಂದು ಮಹಾ ಗಂಡಾಂತರ. ಅವರ ವಿಯೋಗ ದುಃಖದ ನಡುವೆ, ಅವರ ಭಾವ ಸ್ಫುರಣೆಗಳಲ್ಲಿ ಸಹಭಾಗಿಗಳಾದ ನಾವು ಅವರ ವರ್ಚಸ್ಸು ಇನ್ನು ಮತ್ತಷ್ಟು ವ್ಯಾಪಿಸಿ ಶಾಂತಿ ಸ್ವಾತಂತ್ರ್ಯಗಳ ಶೋಧನೆಗೆ ನಮ್ಮ ಬುದ್ಧಿ ಪಕ್ವಗೊಳ್ಳುವಂತೆ ಮಾಡುವದೆಂದು ಆಶಿಸಬಹುದು'-ಕೆನಡದ ಜನರಲ್ ಏಂಡ್ರ್ಯೂ.

"ನಮ್ಮ ಸ್ವಾತಂತ್ರ್ಯ ಸಮರವೂ ಭಾರತದ ಸ್ವಾತಂತ್ರ್ಯ ಸಮರವೂ ಕೊನೆಯ ಅಂಕದಲ್ಲಿ ಏಕ ರೀತಿಗೆ ಬಂದಿದ್ದುವು. ನಮ್ಮ ಜನತೆಯು ಭಾರತೀಯ ಜನತೆಯನ್ನು, ಸಮಾನಾಂತಸ್ತಿನ ಸಹೋದರರೆಂದೇ ಭಾವಿಸಿದ್ದರು. ಭಾರತೀಯರನ್ನು ಇಂದು ದುಃಖಾವರಿಸಿಕೊಂಡಿದೆ; ನಾವವರ ದುಃಖದಲ್ಲಿ ಸಹಭಾಗಿಗಳು. ಇಂದಿನ ಸ್ವಾತಂತ್ರ್ಯಕ್ಕೆ ತಮ್ಮನ್ನು ತಂದವನನ್ನೇ ಅವರಿಂದು ಕಳಕೊಂಡಿದ್ದಾರೆ. ಈಗ ನಮ್ಮ ಪ್ರಾರ್ಥನೆಯಿಷ್ಟೆ. ಅವರಿಗೆ ಇಷ್ಟೊಂದು ಪ್ರಿಯವಾಗಿದ್ದ ಬಂಧುಭಾವನೆಯನ್ನು ಅವರ ಈ ಪ್ರಾಣಾರ್ಪಣೆಯು, ಆ ಕಾರ್ಯಕ್ಕಾಗಿ ಅವರೀ ರೀತಿ ಸಮರ್ಪಿಸಿದ ಪೂರ್ಣಾರ್ಪಣವು ಹಿಂದೀ ಜನತೆಯಲ್ಲಿ ನೆಲೆಗೊಳಿಸಲಿ"-ಐರ್ಲೆಂಡಿನ ಪ್ರಧಾನಿ ಡಿವೆಲೆರಾ.

"ಇಷ್ಟೊಂದು ನಿಸ್ವಾರ್ಥತೆಯಿಂದ ಹಿಂಸೆಯ ನಿವಾರಣೆಯಲ್ಲಿ ತಲ್ಲೀನವಾಗಿದ್ದ ಆ ಜೀವವು ಹಿಂಸಾಚರಣೆಗೇನೇ ಬಲಿಯಾಗಿ ಮುಗಿಯಿತೆಂಬುದು ವಿಶೇಷ ಅನುಕಂಪನೀಯ ಸಂಗತಿ"-ಕೆನಡಾದ ಪ್ರಧಾನಿ ಮೆಕೆನ್ಜಿ ಕಿಂಗ್.

"ಲೋಕವು ನಮ್ಮ ಕಾಲದ ಅತ್ಯಂತ ದುಃಖಕರ ವಾರ್ತೆಯನ್ನು ಈಗ ತಾನೇ ಕೇಳಿತು"- ಫ್ರೆಂಚ್ ವಿದೇಶ ಮಂತ್ರಿ ಜೋರ್ಜ್ ಬಿಡಾಲ್ಟ್.

'ಭಾರತದಲ್ಲಿ ಶಾಂತಿ ಸ್ಥಾಪನೆ ಮಾಡುವ ಹೋರಾಟದಲ್ಲಿಯೇ ಗಾಂಧಿಯವರು ಈ ಮುದಿ ಪ್ರಾಯದಲ್ಲಿ ಪ್ರಾಣಕೊಡಬೇಕಾಯಿತೆಂಬೊಂದೇ ಸಂಗತಿಯು ಕಳೆದ ಲೋಕಯುದ್ಧವು ಜನರ ತಲೆಯೊಳಗೆ ಎಂತಹ ಪಾಶವಿಕತೆಯನ್ನು ನಿರ್ಮಿಸಿದೆ, ಎಂಬುದಕ್ಕೊಂದು ಮಹತ್ತಾದ ನಿದರ್ಶನ'-ಡೇನಿಶ್ ಪ್ರಧಾನಿ ಹಾಂಡ್ಸ್ ಹೆಡ್ ತೋಫ್ಟ್.

'ಸಮಸ್ಯೆಯ ನಡುವೆ ಸಿಕ್ಕಿರುವ ಪ್ರಪಂಚದಲ್ಲಿ ತತ್ವವನ್ನೇ ಆಚೆಯ ಬಲವಾಗಿ ನಿರ್ಮಿಸಿದ್ದ ಆ ಮನುಷ್ಯನ ಮರಣವಾರ್ತೆ ಕೇಳಿ ಕಂಪಿಸಿ ಹೋದೆ'—ಜರ್ಮನಿಯ ಅಮೇರಿಕನ್ ಮಿಲಿಟರಿ ಗವರ್ನರ್ ಜನರಲ್ ಡಿ. ಕ್ಲೇ.

'ನಮ್ಮೀ ತಲೆಮಾರವನ್ನೇ ಕದಡಿಸಿ ಬಿಟ್ಟಿರುವ, ಎಲ್ಲೆಲ್ಲೂ ವ್ಯಾಪಿಸಿರುವ ಪಾಶವಿಕ ಪರಿಸ್ಥಿತಿಯೆಂತಹದೆಂಬುದನ್ನು ಬಿಟ್ಟೆಳೆದು ತೋರಿಸುವ ಕೊನೆಯ ಕೈಯಂತಿದೆ ಗಾಂಧಿಯವರ ಕೊಲೆ. ಯುರೋಪು 'ರಾಷ್ಟ್ರೀಯತಾ'ನಿರ್ಮಾಣ ಮಾಡಿತು. ಈ ತತ್ವವೀಗ ರಕ್ತ ಹಾಗೂ ಪಾಪಾಚರಣೆಗಳಲ್ಲಿ ಮುಳುಗಿರುವ ಏಸ್ಯಾ ಮತ್ತು ಆಫ್ರಿಕದತ್ತ ರವಾನೆಯಾಗುತ್ತಿದೆ'—ಇಟಲಿಯ ವಿದೇಶ ಮಂತ್ರಿ ಕೌಂಟ್ ಸ್ಫೋರ್ಝಾ.

'ಹಿಂದೂ ಮುಸ್ಲಿಂ ಐಕ್ಯವನ್ನು ಸಾಧಿಸುತಿದ್ದಲ್ಲೇ ಭಾರತದ ಈ ಶಾಂತಿ ಪ್ರೇಮೀ ನಾಯಕನು ಕೊಲೆಯಾದುದನ್ನು ಇಡೀ ಪ್ರಪಂಚದಂತೆ ಈಜಿಪ್ಟು ಖಂಡಿಸು

ಉಡುಪಿಯಲ್ಲಿ ಮನೆಗಳು ಮಾರಾಟಕ್ಕಿವೆ

ಉಡುಪಿ ಮುನಿಸಿಪಾಲಿಟಿಯ ಕಾಡಬೆಟ್ಟು ವಾರ್ಡಿನ ಸರ್ವೆನಂಬ್ರ 127, ಸಬ್ ಡಿವಿಜನ್ ನಂಬ್ರ 5, 6 A ಮತ್ತು 6 B ಯಲ್ಲಿರತಕ್ಕ 4582, 4583, 4590 ಮತ್ತು 4591ನೆ ನಂಬ್ರದ ಮನೆಗಳು ಮಾರಾಟಕ್ಕಿವೆ. ಬೇಸಿಗೆ ಸಮಯದಲ್ಲೂ ಧಾರಾಳ ನೀರು ಸಿಕ್ಕುವ ಬಾವಿಗಳಿವೆ.

ಆಧುನಿಕ ಸಲಕರಣಗಳನ್ನು ಒದಗಿಸಿ ಗ್ರಾಹಕರ ಅಪೇಕ್ಷೆ ಮೇರೆಗೆ ಸಿಮೆಂಟು ಹಾಕಿಸಿ ಮನೆಯ ಪಟಾರವನ್ನು ಹೊಸರೀತಿಯಲ್ಲಿ ಬೇಕಾದರೂ ಮಾಡಿಕೊಡಬಹುದು.

ಹೆಚ್ಚಿನ ಮಾಹಿತಿಗಾಗಿ ಬರೆಯಿರಿ:-

ಯು. ಎನ್. ಕೃಷ್ಣರಾವ್
ಬೀಟಿ ಗಾರ್ಡನ್
P. O. ಕಂಕನಾಡಿ (ದ. ಕನ್ನಡ)

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಗೊಳಿಸಲ್ಪಟ್ಟು, ಇಂಡಿಯಾದಲ್ಲಿ ಸಾರ್ವತ್ರೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೨,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧,೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೨|
೪ ರಿಂದ ೫ ತಿಂಗಳು ,, ,, ೨||
೬ ರಿಂದ ೯ ತಿಂಗಳು ,, ,, ೨|||

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

'ಭಾರತದ್ದಷ್ಟೇ ಅಲ್ಲ-ಲೋಕದ ದೀಪವಾರಿತು!'

ತ್ತದೆ. ಇಡೀ ಲೋಕದ ಸದಾ ಕಾಲದ ಅತಿ ದೊಡ್ಡ ಮನುಷ್ಯರಲ್ಲಿ ಇವರೊಬ್ಬರು. ತನ್ನ ಜನತೋದ್ಧಾರಕ್ಕಾಗಿ ಅವರು ಮಾಡಿರುವುದು ಅಗಣಿತ'– ಈಜಿಪ್ಟಿನ ಪ್ರಧಾನಿ ನೋಕ್ರಾಶಿ ಪಾಶಾ.

'ಮಾನವೀಯತೆಯ ಮೇಲೆ ಮಾಡಲು ಸಾಧ್ಯವಿರುವ ಅಪರಾಧಗಳ ಪೈಕಿ ಇದು ಅತ್ಯಂತ ಕಳತೆಯದು. ಜಗತ್ತು ಮಹಾ ಮನುಷ್ಯನೊಬ್ಬನನ್ನು ಕಳಕೊಂಡಿತು'– ಅರಬ್ ಲೀಗಿನ ಕಾರ್ಯದರ್ಶಿ ಅಝಾಮ್ ಪಾಶಾ.

'ಅವರು ಒಂದು ಪಂಗಡದಷ್ಟೇ ಅಲ್ಲ, ಎಲ್ಲರ ಶಾಂತಿಗಾಗಿ ಒದ್ದಾಡಿದರು. ಗಾಂಧಿಯವರ ಮರಣವು ಮಹಾ ತತ್ವಗಳಿಗೇನೇ ಬಿದ್ದ ಹೊಡೆತ. ಅದರ ಪರಿಣಾಮವು ಭಾರತದಂತೆಯೇ ಪಾಕಿಸ್ತಾನದ ಮೇಲೂ ಜಗತ್ತಿನ ಮೇಲೂ ಆಗಲಿದೆ'– ಈಜಿಪ್ಟ್ ನಾಯಕ ನಾಹಾಸ್ ಪಾಶಾ.

'ಸದಾಕಾಲದ ಅತಿದೊಡ್ಡ ಮನುಷ್ಯ ಈ ಮಹಾತ್ಮ. ಈ ನಷ್ಟ ಭಾರತಕ್ಕೇ ಅಲ್ಲ—ಇಡೀ ಲೋಕಕ್ಕೆ'– ಇರಾಕ್ ನಾಯಕ ಕಾಮಿಲ್ ಚಾಂದ್ರ್ಜಿ.

'ಮನುಷ್ಯರ ನಡುವೆ ಇದ್ದ ಓರ್ವ ಮಹಾರಾಜಾ ಹೊರಟು ಹೋದ. ನನಗೆ ೩೦ ವರುಷಗಳಿಗೂ ಮಿಕ್ಕಿ ಅವರೊಡನೆ ಖಾಸಗೀ ಪರಿಚಯವಿತ್ತು. ಭಿನ್ನಾಭಿಪ್ರಾಯವಿದ್ದರೂ ಈ ಪರಿಚಯವು ಅವರ ಮೇಲಿನ ನನ್ನ ಗೌರವವನ್ನು ಬಹಳವಾಗಿ ಹೆಚ್ಚಿಸಿದ್ದಿತು'– ದಕ್ಷಿಣಾಫ್ರಿಕದ ಪ್ರಧಾನಿ ಜನರಲ್ ಸ್ಮಟ್ಸ್.

'ಈ ದುರಂತವು ಭಾರತದ ಮೇಲೆ ಮಾತ್ರವಲ್ಲ, ಇಡೀ ಜಗತ್ತಿನ ಮೇಲೆ ಹೇಗೆ ಪ್ರತಿಫಲಿಸುವದೋ ಎಂಬುದನ್ನು ಯೋಚಿಸಲಾಗದಷ್ಟು ನಾನು ದುಃಖಾವೇಗಗೊಂಡಿದ್ದೇನೆ'– ಸಿಲೋನಿನ ಪ್ರಧಾನಿ ಸೇನಾನಾಯಕೆ.

'ಇದು ಭಾರತಕ್ಕಷ್ಟೇ ಅಲ್ಲ, ಲೋಕಕ್ಕೇನೇ ಯೋಚನಾತೀತ ಗಂಡಾಂತರ. ಪ್ರಥಮತಃ ನನಗೀಗ ಪಂಡಿತ ನೆಹರು ಮತ್ತವರ ಮೇಲೆ ಬಿದ್ದ ಜವಾಬ್ದಾರಿಯ ನೆನಪಾಗುತ್ತಿದೆ'– ಸಿಲೋನಿನ ಗೃಹಮಂತ್ರಿ ಗೂನೆಟ್ಟಿಲಕೆ.

'ಏನು ಹೇಳುವುದಕ್ಕೂ ಆಗದಷ್ಟು ದುಃಖದ ಸಿಡಿಲೇ ಬಡಿದಂತಾಗಿದ್ದೇನೆ'– ಸಿಲೋನಿನ ಸ್ಥಳೀಯ ಮಂತ್ರಿ ಭಂಡಾರನಾಯಕೆ.

'ಒಬ್ಬ ತತ್ವವೇತ್ತ ಮಹಾನಾಯಕನು ನಮ್ಮ ನಡುವಿನಿಂದ ಅಪಹರಿಸಲ್ಪಟ್ಟ. ಅವರ ಧೀರೋದಾತ್ತ ನಾಯಕತ್ವ ಮತ್ತು ತ್ಯಾಗವಲ್ಲದಿರುತಿದ್ದರೆ ಭಾರತವಿನ್ನೂ ತನ್ನ ಗುರಿಗಿಂತ ದೂರವಿರುತಿತ್ತು. ಅವರ ಖಾಸಗೀ ವ್ಯಕ್ತಿತ್ವವು ಅವರ ಜನತೆಯ ಉಚ್ಚ ತತ್ವಗಳ ಪ್ರತಿಬಿಂಬವೇ ಆಗಿತ್ತು. ಭಾರತದ ಐಕ್ಯತೆಗಾಗಿ ತನ್ನ ಕೊನೆಯ ಘನ ಹೋರಾಟದ ಸೇನಾನಿತ್ವ ನಿರ್ವಹಿಸುತಿದ್ದಲ್ಲಿಯೇ ಮಹಾತ್ಮರು ಗುಂಡು ತಾಗಿ ಮಡಿದು ಬಿದ್ದರು. ಅವರನ್ನು ಹುತಾತ್ಮ ಪೀಠಕ್ಕೇರಿಸಿಕೊಂಡ ಚೈನಕ್ಕೆ ಈ ಮಹಾ ನಷ್ಟದ ತೀವ್ರ ವೇದನೆಯೂ ಗೊತ್ತಿದೆ. ಗಾಂಧಿಯವರು ಏಶ್ಯಾದ ದೊಡ್ಡ ಮನುಷ್ಯ. ಅವರ ನಂತರ ಅವರ ತತ್ವಗಳು ಭಾವೋದ್ದೀಪಕಗಳಾಗಿ ಬಾಳಲಿವೆ'– ಚೀನೀ ಸರಕಾರದ ಪ್ರಕಟಣೆ.

'ಆಧುನಿಕ ಪ್ರಪಂಚದ ಚರಿತ್ರೆಯಲ್ಲೇ ಈ ಪವಿತ್ರ ಮನುಷ್ಯನನ್ನು ತಿಳಿಗೇಡಿತನದಿಂದ ಕೊಂದಷ್ಟು ಅಲ್ಲೋಲಕಲ್ಲೋಲದಾಯಿಯಾದ ಮತ್ತೊಂದು ಘಟನೆ ಸಂಭವಿಸುವುದು ಅಸಾಧ್ಯ. ಇವರು ಹಿಂಸೆಗೆ ಬಲಿಬಿದ್ದು ಸಾಯಬೇಕಾಯಿತೆಂಬ ಒಂದೇ ಸಂಗತಿಯು, ಲೋಕದ ಎಲ್ಲಾ ತರ್ಕಶಾಸ್ತ್ರಗಳನ್ನೂ ಅಡಿಮೇಲು ಮಾಡುವಂತಹ ಮಹಾ ಅಸಂಬದ್ಧ. ಸಾಮೂಹಿಕ ಬಲಪ್ರಯೋಗವು ಮೂಲತಃ ತಪ್ಪು ಮಾತ್ರವಲ್ಲ, ಸ್ವನಾಶದ ಕೀಟಗಳನ್ನೊಳಗೊಂಡಿರುವಂತಹದೆಂಬ ಅವರತತ್ವವನ್ನು ಸರ್ವರೂ ಅಂಗೀಕರಿಸಿದರೆ ಮಾತ್ರ ನಾಗರಿಕತೆಯುಳಿಯಬಲ್ಲುದು. ಕಾಲಕ್ಕಿಂತ ಎಷ್ಟೋ ಮುಂದೆ ಹೋಗಿ ವಾಸಿಸಿದ್ದ ಲೋಕದ ಮಹಾ ಪ್ರವಾದಿಗಳಲ್ಲಿ ಗಾಂಧಿ ಒಬ್ಬರು'—ಜಾಪಾನಿನ ಮಿತ್ರ ರಾಷ್ಟ್ರೀಯ ಸರ್ವ ಸೇನಾನಿ ಜನರಲ್ ಮೇಕರ್ಥರ್.

'ಅತ್ಯಂತ ದುಃಖದ ಸಂಗತಿ'—ವಾರ್ತೆ ಕೇಳಿದೊಡನೆ ಒಮ್ಮೆ ಕಂಪಿಸಿ ಹೋದ ಜಪಾನಿನ ಚಕ್ರವರ್ತಿ ಹಿರೋಹಿಟೋ

'ನಾನು ಗಾಂಧೀಜೀಯವರ ಜೀವನ ತತ್ವಗಳ ಮಹಾಭಕ್ತ. ಇಂತಹ ಶಾಂತಿಪ್ರೇಮಿಯು ಪಾಶವಿಕ ಅತ್ಯಾಚಾರಕ್ಕೆ ಹಾಗೂ ಹಿಂಸೆಗೆ ಬಲಿಯಾದುದು ವಿಶೇಷತಃ ದುಃಖದಾಯಕವಿದೆ. ಆದರೆ ಈ ಮಹಾ ಭಾರತನಾಯಕನ ಬಯಕೆಯು ಭಾರತ ಜನತೆಯಿಂದ ಈಡೇರುವುದೆಂದು ದೃಢವಾಗಿ ನಂಬುತ್ತೇನೆ'– ಜಾಪಾನಿನ ಪ್ರಧಾನಿ ಟೆಟ್ಸು ಕಟ್ಯಾಮಾ.

'ನಾವು ಈ ಸುದ್ದಿ ಕೇಳಿ ದಂಗುಬಡೆದು ಹೋಗಿದ್ದೇವೆ. ಗಾಢ ಶೋಕಕ್ಕೀಡಾ[illegible]ವೆ. ಶಾಂತಪಥದ ಈ ಆತ್ಮ ಬಲಿದಾನಿ ಅಹಿಂಸಾ[illegible] ಸಂತನು ಹಿಂಸೆಗೆ ಬಲಿಯಾಗಬೇಕಾಗಿ ಬಂದುದು ನಿಜಕ್ಕೂ ಹೃದಯಹೀಳುವ ದುರಂತ'—ಚೈನದ ಅಧ್ಯಕ್ಷ ಚಿಯಾಂಗ್ ಕೈ ಶೇಕ್ ಮತ್ತು ಮೇಡಮ್ ಚಿಯಾಂಗ್.

'ಬರ್ಮಾದ ಜನತೆ ಮತ್ತು ಸರಕಾರವು ಈ ಸುದ್ದಿ ಕೇಳಿ ಶೋಕಸಾಗರದಲ್ಲದ್ದಿದೆ. ಮಹಾತ್ಮ ಗಾಂಧಿಯವರ ಮರಣವು ಭಾರತದಂತೆಯೇ ಬರ್ಮಕ್ಕೂ ಒಂದು ನಷ್ಟವೆಂದು ಇಲ್ಲಿಯವರ ಅಂತರ್ಯ. ಆದ್ದರಿಂದ ನಮಗೂ ಇದು ದುಃಖದ ದಿನ'– ಬರ್ಮಾದ ಪ್ರಧಾನಿ ಥಾಕಿನ್ ನ್ಯೂ.

'ಗಾಂಧೀಜೀಯ ಅಗಲುವಿಕೆಯು ಸ್ವತಃ ನಮಗಾದ ಅಗಲುವಿಕೆಯಂತೆಯೇ ನಾವು ಶೋಕಿಸುತಿದ್ದೇವೆ'—ಇಂಡೋನೇಶಿಯಾ ಉಪಾಧ್ಯಕ್ಷ ಡಾ। ಹಟ್ಟಾ.

'ಮಾನವ [illegible]ಕ್ಕಾಗಿ ಸತತ ಶ್ರಮಿಸುತ್ತಿದ್ದ ಗಾಂಧಿಯವರ ದುಃಖದಾಯೀ ಮರಣವಾರ್ತೆಯಿಂದ ಆಸ್ಟ್ರೇಲಿಯದ ಸರಕಾರ ಮತ್ತು ಜನತೆಯು ಅತ್ಯಂತ ಶೋಕಕ್ಕೀಡಾಗಿದೆ'– ಆಸ್ಟ್ರೇಲಿಯದ ಪ್ರಧಾನಿ ಜೋಸೆಫ್ ಚಿಫ್ಲೆ.

'ಅನೇಘ ಚರಿತರೂ, ಶಾಶ್ವತ ಮಾದರೀ ಪ್ರಕಾಶವಾಗಿ ನಿಲ್ಲುವಂತಹ ತ್ಯಾಗ ಮತ್ತು ಧೀರತನದ ಮಾನವ ಸೇವಾಕಾರ್ಯ ನಿರತರೂ ಆದ ಮಹಾತ್ಮಾ ಗಾಂಧಿಯವರಿಗೊದಗಿದ ಅಪಮೃತ್ಯುವಿನ ವಾರ್ತೆ ಕೇಳಿ ಅತಿಹೆಚ್ಚಿನ ದುಃಖಾವೇಗಕ್ಕೀಡಾಗಿದ್ದೇವೆ'– ಇಜಿಪ್ಟಿನ ರಾಜ ಫರೂಕ್.

'ಪಂಡಿತ ನೆಹರುಗಳೇ, ಇಡೀ ಮಾನವ ಜನಾಂಗಕ್ಕಾಗಿರುವ ಈ ಮಹತ್ತಾದ ನಷ್ಟದ ದುಃಖದಲ್ಲಿ ಅಖಿಲ ಇಟಲಿಯು ನಿಮ್ಮೊಂದಿಗಿದೆ'– ಇಟಲಿಯ ವಿದೇಶ ಮಂತ್ರಿ ಕೌಂಟ್ ಸ್ಪೋರ್ಝಾ.

'ಸುದ್ದಿ ಕೇಳಿ ಅತಿರೇಕ ದಿಗಿಲುಗೊಂಡೆ. ಮಹಾತ್ಮರಿಗೆ ತನ್ನ ಬಂಧುಗಳ ಅಭಿವೃದ್ಧಿ ಸಾಧನೆಗಾಗಿ ಯಾವ ವ್ಯಕ್ತಿಗತ ತ್ಯಾಗವೂ ಹೆಚ್ಚೆನಿಸದಾಗಿರಲಿಲ್ಲ'– ಡಚ್ ಪ್ರಧಾನಿ ಡಾ। ಬೀಲ್.

'ನಿಮ್ಮ ಸ್ವಾತಂತ್ರ್ಯ ಮತ್ತು ಸ್ವಾಧಿಕಾರದ ಪ್ರತಿನಿಧಿ ಮಹಾತ್ಮಾ ಗಾಂಧಿಯವರ ಮರಣದ ಮಹಾದುಃಖದಲ್ಲಿ ನಮ್ಮ ಗಾಢ ಸಹಸಂತಾಪವಿದೆ'– ಝೆಕೊಸ್ಲೋವೇಕಿಯಾ ಅಧ್ಯಕ್ಷ ಡಾ. ಬೆನೆಸ್.

'ಭಾರತದ ಆತ್ಮ ಸತ್ತಿತು'– ಸ್ವೀಡನ್ ಪತ್ರಿಕೆಗಳು.

'ಭಾರತದ ಹೊರಗಿನ ಹೆಚ್ಚಿನವರು ಗಾಂಧಿಯವರನ್ನೋರ್ವ ಕ್ರಾಂತಿಕಾರನೆಂದು ತಿಳಿದಿದ್ದಾರೆ. ನಾನು ಕಂಡ ಅತ್ಯಂತ ಗಣನೀಯ ವ್ಯಕ್ತಿತ್ವಗಳಲ್ಲಿ ಅವರೊಬ್ಬರು ಎಂದು ನಾನನ್ನುತ್ತೇನೆ. ಸದ್ಯಸ್ಥಿತಿಯಲ್ಲಿ ಈ ದುರಂತವು ಗೊಂದಲಪೀಡಿತ ಭಾರತದ ಪಾಲಿಗೆ ಉರಿಯುವ ಘಾಯಕ್ಕೆ ಉಪ್ಪಾಗದಿರಲಿ ಎಂದು ಪ್ರಾರ್ಥನೆ'– ಬಂಗಾಳದ ಮಾಜೀ ಗವರ್ನರ್ ಕೇಸಿ.

'ಆ ಕ್ರೂರ ಗುಂಡು ಬಿದ್ದು ಗಾಂಧಿಯವರು ನೆಟ್ಟನೆಟ್ಟಬಿದ್ದಂತೆಯೇ ಭಾರತ ಮತ್ತು ಪ್ರತಿಯೊಬ್ಬ ಭಾರತೀಯನೂ ನೆಟ್ಟನೆಟ್ಟ ಬಿದ್ದರು'– ಎನಾರ್ಕಸ್ಯ ಲಮಿನ ಆರ್ಚ್ ಬಿಶೋಪ್.

'ಅವರು ಆಪ್ರಾಣಾವಧಿ ಪ್ರಾರ್ಥಿಸುತಿದ್ದ ಮತ್ತು ದುಡಿಯುತಿದ್ದ ಔದಾರ್ಯ, ಬಂಧುಭಾವ ಮತ್ತು ಶಾಂತಿಯನ್ನು ದೇವರು ಭಾರತಕ್ಕೂ ಇಡೀ ಜಗತ್ತಿಗೂ ದಯಪಾಲಿಸಲಿ'– ಆಯರ್ಲೆಂಡ್ ಅಧ್ಯಕ್ಷ ಸೀನ್ ಓಕೆಲ್ಲಿ.

'ಭಾರವಾದ ಹೃದಯದಿಂದ ನಾವು ಭಾರತದ ಈ ದುಃಖದಲ್ಲಿ ಸಹಭಾಗಿಗಳಾಗುವುದಲ್ಲದೆ, ಲೋಕದ ಅತಿ ದೊಡ್ಡ ಮಾನವನ ಅವಶೇಷಗಳ ಮುಂದೆ, ದುಃಖಭಾರದಿಂದ ತಲೆಬಾಗುತ್ತೇವೆ'– ಅಫ್ರಿಕದ ನಿಗ್ರೋ ನಾಯಕರಾದ ಮಿಖೆಲ್, ಏಡ್ಮೋರ್ ಹಾರ್ಟ್.

'ಅವರ ಮರಣವು ಇಷ್ಟೊಂದು ಕ್ರೂರವಾಗಿ, ಇಷ್ಟೊಂದು ಅಂಧತೆಯಿಂದ ಬಂದುದಕ್ಕಾಗಿ ನಾವು ದುಃಖಿಸುತ್ತೇವೆ. ಗಾಂಧೀಜೀಯ ಹಿಂಸಾತ್ಮಕ ಮರಣವು ಸಾಮ್ರಾಜ್ಯ ರಾಷ್ಟ್ರಗಳಲ್ಲಿ ಏರುತ್ತಾ ಬರುತ್ತಿದ್ದ ಭಾರತದ ವರ್ಚಸ್ಸಿಗೆ ಮಾತ್ರವಲ್ಲ, ಮಾನವ ಸ್ವಾತಂತ್ರ್ಯದ ಮಹಾ ತತ್ವಕ್ಕೇನೇ ಬಿದ್ದ ದೊಡ್ಡ ಹೊಡೆತ. ಗಾಂಧೀಜೀಯ ಈ ಮರಣವನ್ನು ಸಾರ್ಥಕಗೊಳಿಸುವ ಪೂರ್ಣ ಜವಾಬ್ದಾರಿಯು ಇನ್ನು ಭಾರತದ ಜನತೆಯ ಮೇಲಿದೆ'– ಲೋಕ ಪ್ರಸಿದ್ಧ ಅಮೇರಿಕನ್ ಲೇಖಕಿ ಪರ್ಲ್ ಬಕ್.

'ಈ ಕ್ರೂರ ಅಪರಾಧವನ್ನು ಕಂಡು ದಂಗುಬಡೆದಿದ್ದೇನೆ'—ಚರ್ಚಿಲ್.

'ಭಾರತಕ್ಕೂ ಪ್ರಪಂಚಕ್ಕೂ ಅತ್ಯಗಾಧ ದುಃಖದಾಯೀ ದುರಂತವಿದು'– ಬ್ರಿಟನಿನ ಅರ್ಥ ಮಂತ್ರಿ ಕ್ರಿಪ್ಸ್.

'ಈ ಭಯಂಕರ ಘಟನೆಯಿಂದ ಭಾರತಕ್ಕೆ ಮತ್ತು ಲೋಕಕ್ಕಾದ ನಷ್ಟವೆಂತಹದೆಂಬುದನ್ನು ವರ್ಣಿಸಲು ಶಬ್ದವೇ ದೊರೆಯುವದಿಲ್ಲ”– ಬ್ರಿಟನಿನ ವಿದೇಶ ಮಂತ್ರಿ ಬೆವಿನ್.

'ಇಡೀ ಮಾನವ ಜನಾಂಗದ ಈ ಮಹಾಸೇವಕನ ವಿಯೋಗವು ಲೋಕಕ್ಕಾದ ಅಪಾರ ನಷ್ಟ”– ಬ್ರಿಟಿಷ್ ಪ್ರಧಾನಿ ಅಟ್ಲಿ.

'ಅವರು ಅತೀ ಒಳ್ಳೇಯವರಾಗಿದ್ದುದರಿಂದಲೇ ಅಪಾಯಕ್ಕಾಹುತಿಯಾದರು.” ಜೋರ್ಜ್ ಬರ್ನಾರ್ಡ್ ಶಾ.

'ಒಬ್ಬ ಬೋಧಕ ಹಾಗೂ ನಾಯಕನಾದ ಗಾಂಧಿಯವರ ವರ್ಚಸ್ಸು ಭಾರತದಲ್ಲಿ ಮಾತ್ರವಲ್ಲ, ಲೋಕವ್ಯಾಪಿಯಾಗಿತ್ತು. ಅಂತೆಯೇ ಅವರ ಮರಣಕ್ಕಾಗಿ ಜಗತ್ತಿನ ಎಲ್ಲಾ ಶಾಂತಿ ಪ್ರೇಮಿಗಳೂ ಶೋಕಿಸುತಿದ್ದಾರೆ. ಮಾನವ ವರ್ಗದ ಮತ್ತೊಬ್ಬ ಮಹಾ ಮನುಷ್ಯ ಬಾಂಧವ್ಯ ಸ್ಥಾಪನೆಗಾಗಿ ಪ್ರಾಣಕೊಟ್ಟಂತಾಯಿತು”– ಅಮೇರಿಕಾಧ್ಯಕ್ಷ ಟ್ರೂಮೇನ್.

'ಎಲ್ಲಾ ಮನುಷ್ಯರ ಮನಸ್ಸಾಕ್ಷಿಯ ವಕ್ತಾರ ಹೊರಟು ಹೋದ'– ಅಮೇರಿಕದ ಕಾರ್ಯದರ್ಶಿ ಜೋರ್ಜ್ ಮಾರ್ಶಲ್.

'ಗಾಂಧಿಯವರ ಮರಣ ವಾರ್ತೆಯಿಂದ ರಾಣಿ ಮತ್ತು ನಾನು ಅಗಾಧ ಶೋಕ ಗೊಂಡಿದ್ದೇವೆ. ಭಾರತದ ಜನರಿಗೆ ಮತ್ತು ನಿಜಕ್ಕೂ ಇಡೀ ಮಾನವ ವರ್ಗಕ್ಕೆ ಒದಗಿದ ತುಂಬಿಬರಲಾರದ ಈ ನಷ್ಟದಲ್ಲಿ ನಮ್ಮ ಸಹಾನುತಾಪವನ್ನು ದಯವಿಟ್ಟು ಭಾರತದ ಜನತೆಗೆ ಮುಟ್ಟಿಸುವಿರಾ?” ಬ್ರಿಟನಿನ ಎಚ್. ಎಮ್. ರಾಜರು ಆರನೇ ಜೋರ್ಜರು.

(ಲೋಕದ ಪ್ರತಿಯೊಬ್ಬ ಗಣ್ಯ ವ್ಯಕ್ತಿಯ ಹೃದಯ ಭೇದಿಸಿ ಹೊರಬಂದಿರುವ ಅಗಣಿತ ಸಂಖ್ಯೆಯ ಶೋಕೋದ್ಗಾರಗಳನ್ನು ಇಲ್ಲಿ ಉದ್ಧರಿಸುವುದಸಾಧ್ಯ. ಇದುವರೆಗೆ ಗಣ್ಯ ಅಪವಾದವೆಂದರೆ ರಶ್ಯದ ಸ್ಟ್ಯಾಲಿನ್ ಮತ್ತು ಅವರ ಅನುಯಾಯೀ ಪ್ರಮುಖರು!)

“ಸ್ಟೆಂಡಾರ್ಡ್ ಚಹಾವನ್ನು ಕುಡಿದು ಆನಂದ ಪಡೆಯಿರಿ.

ಉತ್ತಮ ಸುವಾಸನೆಯುಳ್ಳದಾಗಿದ್ದು ಮನಸ್ಸಿಗೆ ಉಲ್ಲಾಸವನ್ನು ಕೊಡುವಂತಹುದು. ಕ್ರಯ ಬಹಳ ಕಡಿಮೆ; ಆದರೆ ಮ್ಯಾಲು ಅತ್ಯುತ್ಕೃಷ್ಟವಾದುದು.

ದಿ ಸ್ಟೆಂಡಾರ್ಡ್ ಟೀ ಸಿಂಡಿಕೇಟ್,
ಆರ್. ಎಸ್. ಪುರಂ., ಪಿ. ಒ.,
ಕೊಯಮುತ್ತೂರು.

ಬಾಪೂಜಿಯ ಬಲಿದಾನ—

> ಇದೇ ತಾ 12-2-48ನೇ ಗುರುವಾರ ರಾಷ್ಟ್ರಜನಕ ಬಾಪೂಜಿಯ ಉತ್ತರಕ್ರಿಯೆಯ ದಿನ. ಎಲ್ಲರೂ ಹರತಾಳ ಮತ್ತು ಉಪವಾಸ ಮಾಡಬೇಕು. ನಮ್ಮ ಪಾಲಿನ ಪಿತೃಗಳ ದಾತನಾದ ಬಾಪೂಜಿಯ ಅಪಾರ ಋಣವನ್ನು ಆ ದಿನ ಸ್ಮರಿಸಬೇಕು.

ಮಹಾತ್ಮಾಜೀಯಿಲ್ಲದ ಒಂದು ವಾರವನ್ನು ಕಳೆದು ಎರಡನೇ ವಾರವನ್ನು ಮುಗಿಸಿಕೊಳ್ಳುವಲ್ಲಿಗೆ ನಾವೀಗ ಬಂದಿದ್ದೇವೆ; ನಮಗೆ ಶಕ್ತಿ, ಸ್ವಾಭಿಮಾನ, ಸಂಪತ್ತು, ಸತ್ಕೀರ್ತಿ ದೊರಕಿಸಿಕೊಟ್ಟ ಯಜಮಾನನನ್ನು ಕಳಕೊಂಡ ನಾವು ಸೂತಕದ ಮನೆಯಾಗಿದೆ ಈಗ ನಮ್ಮ ಭಾರತ ದೇಶ. ಈ ದಿನ (ಗುರುವಾರ, ತಾ 12-2-48) ಅವರ ಅಂತ್ಯ ಕ್ರಿಯೆಯನ್ನು ಜರಗಿಸಿ ಮುಗಿಸಿದೆವಾದರೆ ಮುಗಿದುವು—ಬಾಪೂಜೀಯ ಆ ನಶ್ವರ ಕಾಯಕ್ಕೆ ಸಂಬಂಧಪಟ್ಟ ನಮ್ಮ ಆಚರಣೆಗಳು. ಆದರೆ ಅವರ ಆ ಆತ್ಮ? ಅದು ನಮ್ಮ ಶಾಶ್ವತ ಬೆಳಕಾಗಿ ನಿಲ್ಲಲಿದೆ; ಸೇವಾಗ್ರಾಮ, ದಿಲ್ಲಿಗಳಲ್ಲಿ ನಮಗೆ ಉಪದೇಶಕೊಡಲು ಚೌಕ ಹಾಕಿ ಕುಳಿತ ಆ ಮಹಾತ್ಮನಿಗಿಂತ ಹೆಚ್ಚಾಗಿ, ಹೊಟ್ಟೆ ಮತ್ತು ಎದೆಗೆ ಗುಂಡುಬಿದ್ದಾಗ ನಮ್ಮತ್ತ ಕೈಜೋಡಿಸಿಕೊಂಡು ಉರುಳಿದ ಆ ಬಲಿದಾನಿ ಮಹಾತ್ಮನ ಮೌನ ಸಂದೇಶವು ನಮ್ಮ ಹೃದಯಕ್ಕೆ ನಾಟಿದೆ. ಈ ಮೊದಲು ಸಾಮೂಹಿಕ ಅನ್ಯಾಯ ಹಬ್ಬಿದಲ್ಲಿ, ಮಹಾತ್ಮರೆಲ್ಲಿಯಾದರೂ ಉಪವಾಸ ಬೀಳುವರೇನೋ ಎಂಬ ಹೆದರಿಕೆ ಮಾತ್ರವಿತ್ತು. ಇನ್ನು ಹಾಗಲ್ಲ; ಪ್ರತಿಯೊಬ್ಬ ಭಾರತೀಯನೂ ತಪ್ಪು ಹೆಜ್ಜೆಯಿಡುವ ಪ್ರತಿಯೊಂದು ಸಂದರ್ಭದಲ್ಲೂ ಎದೆಗೊಂದು ತೂತುಕೊರೆದಿದ್ದು ಕೈಜೋಡಿಸಿಕೊಂಡ ಆ ಬಾಪೂ ಮೂರ್ತಿ ಕಣ್ಣ ಮುಂದೆ ಬರಲಿದೆ! ಕ್ರಿಸ್ತ ಸ್ವಾಮಿಯೇರಿದ ಶಿಲುಬೆಯ ಪವಿತ್ರ ಚಿಹ್ನೆಯಿಂದು ಹಲವರ ಕಂಠಗಳಲ್ಲಿ, ದೇವಾಲಯಗಳಲ್ಲಿ ಕಂಡುಬರುತ್ತಿರಬಹುದು; ಹೊಟ್ಟೆ ಎದೆ ಭೇದಿಸಲ್ಪಟ್ಟ ಗಾಂಧಿಜೀಯ ಮೂರ್ತಿಯು ಪ್ರತಿ ಭಾರತೀಯನ ಹೃದಯದಲ್ಲೂ ಈಗ ಕೆತ್ತಲ್ಪಟ್ಟಿದೆ! ರಾಷ್ಟ್ರದಂತೆ ಹೃದಯವಲ್ಲ; ಗಾಂಧಿಜೀಯ ಸನ್ನಿಧಾನದಲ್ಲೇ ಅನಾಚಾರಗಳನ್ನು ನಡೆಸುತ್ತಿದ್ದ ರಾಷ್ಟ್ರದಂತೆಯೇ, ಗಾಂಧಿಜೀಯ ಈ ಮೂರ್ತಿಯನ್ನು ಪ್ರತಿಷ್ಠಾಪಿಸಿ ಕೊಂಡಲ್ಲಿಯೇ ಅನ್ಯಾಯವನ್ನೂ ಲೇಪಿಸಿಕೊಂಡಿರಲು ಹೃದಯಕ್ಕಾಗದು. ಇದನ್ನು ಯೋಚಿಸಿದರೆ ಮಹಾತ್ಮರ ಈ ಕೊನೆಯ ಆಚರಣೆಯೂ ತನ್ನ ಕಾರ್ಯದ ಪೂರ್ಣತೆಗಾಗಿಯೇ ಎನ್ನಬೇಕು! ಒತ್ತಿಬೋಧಿಸಿದರೂ ಪ್ರಾಣವನ್ನು ಒತ್ತೆಯಿಟ್ಟು ಹಠಹಿಡಿದರೂ ಸಾಧಿಸಲಾಗದ ಕಾರ್ಯವನ್ನು ಸತ್ತು ಸಾಧಿಸುವೆನೆಂದೇ ಬಾಪೂಜೀ ಎದ್ದು ಹೋದರು! ಇನ್ನಾದರೂ ಅವರ ಕೆಲಸವಾಗಲಿ; ಅದನ್ನು ನೆರವೇರಿಸಿಕೊಡೋಣ.

ಇದು ಮಹಾತ್ಮಾ ಮರಣ

ಗಾಂಧಿಜೀ ಅಪಮೃತ್ಯುವಿಗೀಡಾದ ಕುರಿತು ಸಹಜವಾಗಿ ಎಲ್ಲಾ ಹೃದಯಗಳೂ ಅಡಿಮೇಲಾಗಿವೆ. 'ಮಹಾತ್ಮರಿಗೆ ಈ ದುರ್ಮರಣ ಪ್ರಾಪ್ತವಾಗಬಾರದಿತ್ತು..!' 'ಗಾಂಧಿಜೀಯ ಪ್ರಾಣ ರಕ್ಷಣೆಯು ತಮ್ಮ ಪ್ರಥಮ ಕರ್ತವ್ಯವೆಂದು ಭಾವಿಸಿ ಸರಕಾರವು ಸರ್ವ ವಿಧದ ಮುಂಜಾಗ್ರತೆ ವಹಿಸಬೇಕಿದ್ದಿತು'-ಇತ್ಯಾದಿ ಇತ್ಯಾದಿ ಪರಮಾವಧಿ ಪಶ್ಚಾತ್ತಾಪದ ಉದ್ಗಾರಗಳು ಕೇಳಬರುತ್ತಿವೆ. ಎಲ್ಲವೂ ವ್ಯರ್ಥ! ಹೀಗಾಗುವಂತಹದಿತ್ತು, ಮಾತ್ರವಲ್ಲ, ಹೀಗಾದುದೇ ಯೋಗ್ಯ! ಇದು ಮಹಾತ್ಮರಿಗೆ ಹೇಳಿಸಿದ ಮರಣ; ಅವರನ್ನು ವಂಚಿಸಿಯೇ ಬಾಳಿದ್ದ ಜನತೆಯ ತಪ್ಪಿಗಿದು ತಕ್ಕ ಶಿಕ್ಷೆ!

ಬಾಪೂಜೀಯ ಜೀವನದ ಯಾವ ಒಂದಂಶವೂ ತತ್ವರಹಿತವಾಗಿರಲಿಲ್ಲ; ಆ ಜೀವನದ ಕ್ಷಣ ಕಾಲ ಕೂಡಾ ಅಪವ್ಯಯವಾದುದಿಲ್ಲ; ಅಂತಹದರ ಅಂತ್ಯ ಮಾತ್ರ ವ್ಯರ್ಥವಾಗಬೇಕೆ? ಎಲ್ಲರಂತೆ ರೋಗಕ್ಕೀಡಾಗಿ ಆ ಬಾಳುವೆ ಮುಕ್ತಾಯಗೊಳ್ಳಬೇಕಿತ್ತೆ? ಕೂಡದು. ಯಾವ ತತ್ವಗಳ ಸಾಧನೆಗಾಗಿ ಆ ಜೀವನವಿದ್ದಿತೋ, ಆ ಸಾಧನೆಗಾಗಿಯೇ ಮರಣವೂ ಆಯಿತು. ಇದ್ದಾಗ ಅಪೂರ್ಣವಾಗಿಯೇ ಇರುವ ಅವರ ಕೆಲಸಗಳು ಮರಣಾನಂತರ ಪೂರ್ಣಗೊಳ್ಳುವಂತಾದುವು.

ಇನ್ನೊಂದು ಮಾತು. ಮಹಾತ್ಮರೆಂದರೆ ಯಾರು? ಅರಮನೆಯಲ್ಲಿದ್ದು ನಮ್ಮನ್ನಾಳಿಕೊಂಡಿದ್ದ ಅರಸರೂ ಅಲ್ಲ; ಅರಮನೆಯಂತಹ ಬಂಗ್ಲೆಯಲ್ಲಿದ್ದು ಅಧಿಕಾರ ಚಲಾವಣೆ ಮಾಡುತ್ತಿದ್ದ ಅಧಿಕಾರಿಯೂ ಅಲ್ಲ. ಬಡವರ ಪ್ರತಿನಿಧಿಯಾಗಿದ್ದ ಒಂದು ಸೇವಾ ಜೀವಿ; ದರಿದ್ರ ನಾರಾಯಣ. ಭಾರತದಲ್ಲಿರುವ ಬಡತನದ ಯಥಾರ್ಥ ಪ್ರಾತಿನಿಧ್ಯ ವಹಿಸಬೇಕೆಂದೇ ಅವರು ಎರಡು ಬೈರಾಸುಗಳಲ್ಲಿದ್ದರು; 'ಅರೆ ಬತ್ತಲೆ ಫಕೀರ'ನೆನ್ನಿಸಿದ್ದರು. ಬಡವರ ಹಕ್ಕಿನ ಮೂರನೇ ತರಗತಿಗಳಲ್ಲೇ ಪ್ರಯಾಣ ಮಾಡುತ್ತಿದ್ದರು. ದಲಿತರಲ್ಲಿ ದಲಿತನಾಗಿರಬೇಕೆಂದೇ ಪರಮಾವಧಿ ನಿಕೃಷ್ಟೋದ್ಯಮವೆನ್ನಿಸಿರುವ ಪಾಯಿಖಾನೆ ಸ್ವಚ್ಛತೆಯನ್ನು ಅವರು ಮಾಡಿದ್ದರು. ದೀನ ದುಃಖಿತರ ನಿಜವಾದ ಪ್ರತಿನಿಧಿಯಾಗಿತ್ತು ಆ ಜೀವನ; ಈ ದಿನದ ನಿರಪರಾಧಿ ನಿಸ್ಸಹಾಯಕರ, ದುರಂತ ಮರಣದ ಯಥಾರ್ಥ ಪ್ರತಿನಿಧಿಯಾಯಿತು ಈ ಮರಣ. ಜಾತೀಯ ಗಲಭೆಗಳಲ್ಲಿ ನಿರಪರಾಧಿ ಸ್ತ್ರೀಪುರುಷರ ಕೊಲೆಗಳೆಷ್ಟು ನಡೆದಿಲ್ಲ? ಅತ್ಯಂತ ನಿರ್ಗತಿಕರ ಆಪ್ತ ಪ್ರತಿನಿಧಿಯಾಗಿದ್ದ ಈ ಜೀವವು ಅತ್ಯಂತ ನಿರ್ಗತಿಕರ ಮರಣವನ್ನೇ ಸ್ವಾಗತಿಸಿಕೊಂಡುದರಲ್ಲಿ ಅಸಹಜತೆಯೇನಿದೆ? ಆ ಜೀವನವೂ ಬಡತನದ್ದೇ; ಅದರ ಮರಣವೂ ಇಂದಿನ ಬಡವರದೇ. ಜೀವನ-ಮರಣವೆರಡರಲ್ಲೂ ಅವರು ಬಡವರ ಪ್ರತಿನಿಧಿ. ಬದುಕಿರುವಾಗಲೂ ಸತ್ತ ಮೇಲೂ ಅವರು ನಿರ್ಗತಿಕರ, ನಿಸ್ಸಹಾಯಕರ ಒಡನಾಡಿ! ಇಲ್ಲಿ ತುಳಿಯಲ್ಪಟ್ಟು ತೀರಾ ಕೆಳಮಟ್ಟದಲ್ಲಿರುವ ಹರಿಜನರು ಮತ್ತು ಬಡವರೊಂದಿಗಿದ್ದರು; ಅಲ್ಲಿ ತೀರಾ ಕಠೋರ ರೀತಿಯ ದುರ್ಮರಣಕ್ಕೊಳಗಾದ ನಿರ್ಗತಿಕರೊಂದಿಗೆ ಸೇರಿಕೊಂಡರು. ಇವು ಮಹಾತ್ಮೆ; ಇವರೇ ದರಿದ್ರ ನಾರಾಯಣ!

ಸರಕಾರವು ಅವರ ಪ್ರಾಣರಕ್ಷಣೆಯ ಮುಂಜಾಗ್ರತೆ ವಹಿಸಿದುದು ಸಾಕಾಗಲಿಲ್ಲವೆಂಬ ಮಾತೊಂದಿದೆ. ಸಂಗತಿಯರಿಯದವರ ಪ್ರಲಾಪವಿದು. ಮೈಗಾವಲಿನ ವಿಜೃಂಭಣೆಯನ್ನೊಪ್ಪುವವರು ಮಹಾತ್ಮರೇ? "ಆದರೂ ನಾವು ನಮ್ಮ ಕೆಲಸವನ್ನು ಮಾಡಿದ್ದೆವು. ಬಾಂಬು ಸ್ಫೋಟವಾದ ನಂತರ ಬಿರ್ಲಾ ಭವನದ ಪ್ರತಿಯೊಂದು ಕೋಣೆಯಲ್ಲೂ ಒಬ್ಬೊಬ್ಬ ಪೋಲಿಸ್ ಅಧಿಕಾರಿಯಿದ್ದೇ ಇದ್ದ. ಮಹಾತ್ಮರ ಬಲಿದಾನವಾದ 500 ಜನರಿದ್ದ ಆ ಸಭೆಯಲ್ಲೂ ಸುಮಾರು 30 ಮಂದಿ ಗುಪ್ತ ಪೋಲೀಸರು ವೇಷ ಬದಲಾಯಿಸಿಕೊಂಡಿದ್ದರು. ಕೊಲೆಗಡುಕ ಗಾಂಧಿಜೀಯೆಡೆಗೆ ಬಗ್ಗಿದಾಗ ಪ್ರಣಾಮ ಮಾಡುತ್ತಾನೆಂದೇ ನೆನಸಬೇಕಾಯಿತು. ಪ್ರಾರ್ಥನಾ ಸಭೆಗೆ ಬರುವವರನ್ನು ಜಡ್ತಿ ಮಾಡುವ ಪ್ರಸಂಗಕ್ಕೆ ತಾನೆಂದಿಗೂ ಒಪ್ಪಲಾರೆನೆಂದು ಗಾಂಧಿಜೀ ಕಂಠೋಕ್ತವಾಗಿ ವಿರೋಧಿಸಿದ್ದುದರಿಂದ ಬಿಟ್ಟಿದ್ದೆವು. "ಯಾರಾದರೂ ನನ್ನನ್ನು ಕೊಲ್ಲಬೇಕೆಂದಿದ್ದರೆ ಅವರು ಪ್ರಾರ್ಥನಾ ಸಭೆಯಲ್ಲೇ ತಮ್ಮ ಕೆಲಸ ಮಾಡಿಕೊಳ್ಳಲಿ. ದೇವರ ಇಚ್ಛೆಯಿದ್ದಂತಾಗಲಿ" ಎಂದೇ ಗಾಂಧಿಜೀ ಹೇಳಿದ್ದರು. ನಾವೇನು ಮಾಡಬೇಕಿತ್ತು? ಮಹಾತ್ಮರನ್ನು ಇನ್ನೂ ನಮ್ಮ ನಡುವೆ ಇಟ್ಟುಕೊಳ್ಳುವ ಭಾಗ್ಯವನ್ನು ನಾವು ಪಡೆದುಕೊಂಡು ಬಂದಿಲ್ಲ"—ಎಂದು ಸರ್ದಾರ್ ಪಟೇಲರು ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಅತ್ತಿದ್ದರು.

ಮರಣವನ್ನು ತಪ್ಪಿಸಲು ಸಾಧ್ಯವೆ? ಮರಣ ಬರುವ ವಿಧಾನವನ್ನೂ ತಪ್ಪಿಸಿಕೊಳ್ಳಬಹುದಿತ್ತೆಂಬ ಆಸೆ ಸುಳ್ಳು.

ದಕ್ಷಿಣಾಫ್ರಿಕದಲ್ಲೊಮ್ಮೆ ಪಠಾಣನೊಬ್ಬನು ಅವರಿಗೆ ಹೊಡೆದು ಹೊಡೆದು ಸತ್ತು ಹೋದರೆಂದು ನೆನಸಿಯೇ ಗಾಂಧಿಜೀಯನ್ನು ಬಿಟ್ಟು ಹೋಗಿದ್ದ—ಇವರು ಸಾಯಲಿಲ್ಲ. ಅಲ್ಲಿಯ ಬಿಳಿಜನರು ಗುಂಪುಕಟ್ಟಿ ಹೊಡೆದಿದ್ದರು-ಸಾಯಲಿಲ್ಲ. ಪೂನೆಯಲ್ಲೊಂದು ಬಾರಿ ಇವರ ಕಾರಿಗೆಂದು ಬಾಂಬಿಟ್ಟಿದ್ದರು-ಸಾಯಲಿಲ್ಲ. ಪೂನೆಯಲ್ಲೇ ಇವರು ಬರುವ ರೈಲನ್ನು ಉರುಳಿಸಿ ಕೊಲ್ಲುವ ಪ್ರಯತ್ನ ನಡೆದಿತ್ತು—ಸಾಯಲಿಲ್ಲ. ಇಪ್ಪತ್ತೊಂದು ದಿನಗಳವರೆಗೂ ಉಪವಾಸ ಬಿದ್ದುದಿದೆ-ಸಾಯಲಿಲ್ಲ. ಯಾವ ಪಹರೆಯೂ ಇಲ್ಲದೆ ಊರುಗೋಲಾಗಿ ಒಬ್ಬೊಬ್ಬರನ್ನಿಟ್ಟುಕೊಂಡು ಮೈಲುದ್ದಕ್ಕೂ ನಡೆದು ಹೋಗುವ ಅಭ್ಯಾಸವಿವರಿಗಿತ್ತು-ಕೊಂದವರಿಲ್ಲ. ಕಾರಣ "ನನ್ನ ಪ್ರಾಣ ದೇವರ ಕೈಯಲ್ಲಿದೆ. ಅತನಿಗೆ ನನ್ನ ಸೇವೆ ಸಾಕೆಂದು ತೋರಿದಾಗ ಕರೆಯಿಸಿಕೊಳ್ಳುತ್ತಾನೆ" ಎಂದು ಆಗಾಗ ಹೇಳುತ್ತಿದ್ದ ಅವರ ಮಾತೊಂದೇ ಸತ್ಯ ಹೋತು, 'ಕರೆಯಿಸಿಕೊಳ್ಳಲಿಕ್ಕೆಂದೂ ಬಿಡಬಾರದಿತ್ತು' ಎಂಬ ಮಿಕ್ಕವರ ಮಾತಲ್ಲ!

ಈ ಮರಣ ಮಹಾತ್ಮೆ

ಅಂತೂ 80ರ ಮುದುಕನಾಗುವ ಯೋಗ ಬಾಪೂಜೀಗಿರಲಿಲ್ಲ. ಅವರು ಹೇಳುತಿದ್ದಂತೆ 'ಕರೆಯಿಸಿಕೊಳ್ಳುವ ಕಾಲ' ಅವರ 79ನೇ ಪ್ರಾಯದಲ್ಲೇ 'ತ್ತು—ಬಂತು! ನವದೆಹಲಿಯಲ್ಲಿ ಸಯುವ ಹನ್ನೆರಡೇ ದಿನಗಳಿಗೆ ಮೊಲು ನಿಲ್ಲಿಸಿದ್ದ ಆ ಉಪವಾಸಾರಂಭದಲ್ಲಿ ಗಾಂಧಿಜೀ 'ತುಲನಾತ್ಮಕ ಸಾ' ಎಂದು ಮೃತ್ಯುವನ್ನು ವಿಶೇಷರೀತಿಯಿಂದ ಸಂಬೋಧಿಸಿದ್ದರು. ಪ್ರಪಂಚದ ಮಿಕ್ಕವೂ ತನಗೆ ವಿರೋಧವಿರುವಂತೆ ತೋ ಮೃತ್ಯುವೊಂದೇ ಅನನ್ಯ ಸ್ನೇಹಿತನಾಗಿ ವರಿಗೆ ತೋರುತ್ತಿದ್ದಿತೆಂಬುದು ನಿ

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2½% per annum.
For 6 months at 3½% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಬಾಲಕರು ಆರೋಗ್ಯಕಾಯುರಾಗೇ

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಸುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು. ಪೊ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.

ಭಾರತದೊಂದು ಬೇಕು

ತಾ 12ನೇ ಗುರುವಾರ ಮುಂಜಾನೆ 7-40ಕ್ಕೆ ಪ್ರದರ್ಶನ-ಮಹಾತ್ಮರ ಭಸ್ಮವನ್ನು ತ್ರಿವೇಣಿ ಸಂಗಮದಲ್ಲಿ ಸಮರ್ಪಿಸುವ ಮಧ್ಯಾಹ್ನ 12 ಘಂಟೆಗೆ ವಿಶೇಷ ಪ್ರಾರ್ಥನೆ-ಅಪರಾಹ್ನ ಮೆರವಣಿಗೆ ಮತ್ತು 5 ಘಂಟೆಗೆ ಸಭೆ-ಜರಗಿಸಬೇಕು.

ವಾದ, ಅವಿಶ್ರಾಂತವಾಗಿ ದುಡಿದು ದಣಿದ ಜೀವವು ಈ ಶಾಂತಿಯನ್ನು ಬಯಸಹತ್ತಿದ್ದಿತು.

ತನ್ನ ಸೇವೆ ಸಾಕೆಂದು ತೋರಿದಾಗ ಮಾತ್ರ ತನಗೆ ಸಾವು ಬಂದೀತೆಂದೇ ಗಾಂಧಿಜೀಗೆ ಆದಿಯಿಂದಲೂ ದೃಢ ವಿಶ್ವಾಸವಿದ್ದಿತು. ನಿಜಕ್ಕೂ ಅವರು ದೇಹಧಾರಿಯಾಗಿರುವ ಕಾಲ ಮುಗಿಯಬೇಕಾಗಿ ಬಂದುದರಿಂದಲೇ ಅವರ ಮಹಾತ್ಮೆಗೆ ಹೇಳಿಸಿದ ರೀತಿಯಲ್ಲಿ ಮರಣವೊದಗಿತು. ಆ ಕಾಲ ಹೀಗೇಕೆ ಆಕಸ್ಮಿಕವಾಗಿ ಮುಗಿಯಿತೇಕೆ? ಭವಿಷ್ಯದ ಕುರಿತು ಗಾಢ ಯೋಚನೆ ಮಾಡಬೇಕಾಗುತ್ತದೆ. ಮಹಾತ್ಮರ ಕೈ ಕಡಿವಾಣ ಕಡಿದು ಹೋಗಿ, ಅವರ ಆತ್ಮ ಮಾತ್ರ ಸ್ಫೂರ್ತಿಯಾಗಿ ನೇರಕೊಂಡು ಭಾರತವು ವೇಗದಿಂದ ಗುರಿಮುಟ್ಟಲಿರುವುದೋ, ಅಥವಾ ಆ ಅಂಕೆ ತಪ್ಪಿ ಸಿಕ್ಕಾಬಟ್ಟೆ ಧಿಕ್ಕೆ ಹೊಡೆದು ಚೆಲ್ಲಾಪಿಲ್ಲಿಯಾಗಲಿರುವುದೋ? ಬಾಪೂ ಬಲಿದಾನದ ಪ್ರಕಾಶ ಬದ್ದು ಭಾರತದ ಮಬ್ಬು ಕವಿದ ಉಚ್ಚ ಸಂಸ್ಕೃತಿ ಬೆಳಗಿ ಭಾರತದ ಗತಿ ತೀವ್ರಗೊಂಡು ಗುರಿಮುಟ್ಟುವುದೇ ಸಂಭವನೀಯ.

ಜಾತೀಯತಾ ಸೇನಾ ಮರ್ಜಯ ದಳಗಳಿಗೆ ಎಂದೋ ಬೀಳಬೇಕಾಗಿದ್ದ ಬಹಿಷ್ಕಾರವು ಬಾಪೂ ಮರಣದಿಂದಾಗಿ ಬಿದ್ದಿದೆ; ಮಾತ್ರವಲ್ಲ, ಜನತೆಗೆ ಅವುಗಳ ಮೇಲೆ ಉಂಟಾಗಿರುವ ದ್ವೇಷ ತಿರಸ್ಕಾರಗಳು ಜಾತೀಯತಾ ದುಸ್ಸ್ಫೂರ್ತಿಯು ಇನ್ನೆಂದಿಗೂ ತಲೆಯೆತ್ತಲಾಗದ ರೀತಿಯಲ್ಲಿ ಅದನ್ನು ತುಳಿದು ನೆಲಸಮ ಮಾಡುತ್ತಿವೆ.

ಜಾತೀಯತಾ ದುಶ್ಶಕ್ತಿಗಳನ್ನು ಬೆಳೆಯಲು ಬಿಟ್ಟು ತಾವೆಂತಹ ಆಪತ್ತನ್ನು ತಂದುಕೊಂಡೆವು ಎಂಬ ಪಶ್ಚಾತ್ತಾಪವೀಗ ಸರಕಾರೀ ನಾಯಕರಿಂದ ಹಿಡಿದು ಪ್ರತಿಯೊಬ್ಬ ಭಾರತೀಯನ ಹೃದಯವನ್ನೂ ಕೊರೆಯುತ್ತಿದೆ. ಇದರಿಂದ ಹಿಂದುಗಳ ಸಂಘಟನೆಗೆ ಮಾತ್ರ ಪ್ರತಿಬಂಧಹೊಂದು ಮುಸ್ಲಿಮರ ಆಟಕ್ಕೇನೂ ಆತಂಕವಾಗದಲ್ಲಾ ಎಂದಾರೂ ಹೆದರಬೇಕೆಂದಿಲ್ಲ. ಮುಸ್ಲಿಂ ಜಾತೀಯತಾ ದಳಗಳಿಗೂ ಬಹಿಷ್ಕಾರ ಬಿದ್ದಿದೆ ಎಂಬುದನ್ನು ಮರೆಯಬಾರದು. ಮೇಲಾಗಿ ಇದೇನೂ ದೂರದೂರುಗಳ ಕಲ್ಪನಾಕಥೆಯನ್ನು ಹೇಳಿ ಕೆದರಿಸಿ ಎಬ್ಬಿಸಿದ ಜಾತೀಯತಾಸ್ಫೂರ್ತಿಯಲ್ಲ; ಅಂತಃಕರಣವನ್ನು ಅಲುಗಾಡಿಸಿ ಆವಿರ್ಭವಿಸಿರುವ ಜಾಗ್ರತಿ. ಯಾವ ಕಡೆಯ ಯಾವುದೇ ಜಾತೀಯತಾದುಸ್ಫೂರ್ತಿಯನ್ನಾದರೂ ಇದಿನ್ನು ಸಹಿಸದು.

ಪಾಕಿಸ್ತಾನದಲ್ಲೂ ಭಾರತದಲ್ಲೂ ನ್ಯಾಯವು ದಿವಾಳಿ ತೆಗೆದಿರುವಾಗ ಭಾರತದಲ್ಲೊಬ್ಬ ನ್ಯಾಯ ಮೂರ್ತಿಯಿದ್ದ, ಎರಡೂ ಕಡೆಗಳ ಅನ್ಯಾಯವೂ ಎರಡೂ ಕಡೆಗಳಲ್ಲಿರುವ ಅಲ್ಪಸಂಖ್ಯಾಕ ಸಮಾಜಗಳವರ ಮೇಲೆಯೇ ಅಂದ ಮೇಲೆ ಭಾರತದಲ್ಲಿದ್ದ ಈ ನ್ಯಾಯಮೂರ್ತಿಯಿಂದ ಭಾರತದ ಅಲ್ಪ ಸಂಖ್ಯಾಕರಿಗೇ ನ್ಯಾಯದಾನವಾಗುತಿತ್ತು; ಆ ಮೂಲಕ, ಆ ಮೇಲೆ ಮಾತ್ರ ಪಾಕಿಸ್ತಾನದಲ್ಲಿ ನ್ಯಾಯದಾನವಾಗಬೇಕಾಗಿತ್ತು. ಅಂತಹ ರಕ್ಷಕನು ಕಳೆದುಹೋದ ಮೇಲೆ ಭಾರತದಲ್ಲಿರುವ ಅಲ್ಪ ಸಂಖ್ಯಾಕರಾದ ಮುಸ್ಲಿಮರು ಇನ್ನು ತಾವಾಗಿ ನ್ಯಾಯವಾದಿಗಳಾಗಬೇಕಾದುದು ಅನಿವಾರ್ಯವೆಂಬುದನ್ನು ಮರೆಯಬಾರದು.

ಮೇಲಾಗಿ, 'ಹಿಂದೂ ಸಮಾಜದ ಅತಿ ದೊಡ್ಡ ಮನುಷ್ಯ' ಎಂದು ಮಿ. ಜಿನ್ನರಿಂದ, ಸತ್ತ ಗಾಂಧಿಜೀ ಕೂಡಾ ಸಂಬೋಧನೆ ಪಡೆದಿರುವಾಗ ಜಿನ್ನಾ ಅನುಯಾಯಿಗಳಾದ ಮುಸ್ಲಿಮರು ಮನುಷ್ಯರು ಹೌದಾದರೆ, ತಮ್ಮ ರಕ್ಷಣೆಗಾಗಿಯೇ 'ಈ ಮಹಾಹಿಂದು' ಹಿಂದುವೊಬ್ಬನಿಂದ ಕೊಲೆ ಮಾಡಲ್ಪಟ್ಟನಲ್ಲಾ, ಎಂಬ ಪಶ್ಚಾತ್ತಾಪದಿಂದ, ಗಾಂಧಿಜೀ ತಮಗೆ ಕೊಟ್ಟಿದ್ದ ಬೋಧನೆಯಂತೆ ವರ್ತಿಸಿಯಾರು. ಅಂತಹ ಮಾನವತ್ವವು ಭಾರತದ ಮುಸ್ಲಿಮರಲ್ಲಿ ತೋರಿ ಬಾರದೆ ಹೋದರೆ, ಅದನ್ನೂ ಸಹಿಸುವ ಸ್ಥಿತಿಯಲ್ಲಿ ಈಗ ಭಾರತದ ಸರಕಾರವಾಗಲಿ ಜನತೆಯಾಗಲೀ ನಿಜಕ್ಕೂ ಇಲ್ಲ. ಅದರೆ ಹಿಂದೀ ಮುಸ್ಲಿಮರ ಹೃದಯ ಕರಗಿ ಪರಿವರ್ತನೆಗೊಳ್ಳುತ್ತಿರುವ ಲಕ್ಷಣಗಳು ಕಂಡುಬಂದಿವೆ.

ಈ ತನಕ ಆಗಾಗ ಮುಂದೆ ಬರುತಿದ್ದ ಮಹಾ ಸಮಸ್ಯೆಗಳ ನಿವಾರಣೆಯ ಹಾದಿ ತೋರಿಸುತಿದ್ದವರು-ರಾಷ್ಟ್ರ ನಾಯಕರೊಳಗೇನೇ ಭಿನ್ನಾಭಿಪ್ರಾಯಗಳೆದ್ದು ಬಿರುಕು ಬಿದ್ದಾಗಲೆಲ್ಲಾ ತೇಪೆ ಹಚ್ಚಿ, ಸೂಡಿ ಕಟ್ಟಿ ಬಿಡುತ್ತಿದ್ದವರು-ಗಾಂಧಿಜೀ. ಇನ್ನು ಅವರಿಲ್ಲದ ದೆಸೆಯಿಂದ ನಮ್ಮ ರಾಷ್ಟ್ರೀಯ ಸರಕಾರ ಮತ್ತು ರಾಷ್ಟ್ರ ಜೀವನವೇನಾಗುವುದೋ ಎಂಬ ಹೆದರಿಕೆ ಹುಟ್ಟಬಹುದು. ಇಲ್ಲ; ಇನ್ನೆಲ್ಲವೂ ಶಾಶ್ವತವಾಗಿ ಸುಭದ್ರಗೊಂಡೀತು. ಜೀವಂತ ಮಹಾತ್ಮನ ಬೋಧನೆಯ ಕಾರ್ಯವನ್ನು-ಅದಕ್ಕೂ ಹೆಚ್ಚಿನದನ್ನು-ಬಲಿದಾನೀ ಮಹಾತ್ಮನ ಸ್ಮರಣೆಯು ಮಾಡಬಲ್ಲುದು. ನಮ್ಮ ರಾಷ್ಟ್ರ ನಾಯಕರೆಲ್ಲರೂ ಗಾಂಧೀ ನಿರ್ಮಾಣಗಳು; ಒಂದೇ ಕುಲುಮೆಯಲ್ಲಿ ಕಡಲ್ಪಟ್ಟು ಆಕಾರಕ್ಕೆ ಬಂದವರು; ಅವರು ಒಂದೇ!

ಜನತೆ ಕಣ್ತೆರೆಯಲಿ

ಆದರೆ ಜನತೆಗೆ ಜ್ಞಾಪಕ ಶಕ್ತಿ ಕಡಿಮೆ; ಹಿಂದೀ ಜನ ಸಾಮಾನ್ಯರಲ್ಲಂತೂ ಯೋಚನಾ ಶಕ್ತಿ ಸೊನ್ನೆ. ಅದ್ದರಿಂದಲೇ ಮಹಾತ್ಮಾ ಗಾಂಧಿಯವರು-ಹಾದಿಯುದ್ದು' ಎಂದು ನಮ್ಮನ್ನು ಕೂಗಿ ಕರೆದು ಹೇಳುತ್ತಾ, ಒಮ್ಮೊಮ್ಮೆ 'ಕೇಳಲಾರಿರಾ? ಹಾಗಾದರೆ ಇಲ್ಲೇ ಪ್ರಾಣಬಿಡುವೆ' ಎನ್ನುತ್ತಾ, ಪೂರ್ವಾಭಿಮುಖವಾಗಿ ಮುಂದೆ ಮುಂದೆ ಹೋಗಿ ಕೊನೆಗೆ ಕಣ್ಣು ತಪ್ಪಿಸಿಕೊಂಡರು —ನಾವು 'ಬಂದೆವು. ನಾವು ನಿಮ್ಮೊಂದಿಗೇನೇ ಇದ್ದೇವೆ' ಎಂದು ಅವರನ್ನು ವಂಚಿಸಿ ಪಶ್ಚಿಮಾಭಿಮುಖವಾಗಿಯೇ ಸಾಗುತ್ತಾ ಅವರು ಪ್ರಾಣಬಿಡಲು ಹೊರಟಾಗಲೆಲ್ಲಾ ಓಡಿಹೋಗಿ ಅವರನ್ನು ಸೇರಿಕೊಂಡಂತೆ ನಟಿಸಿದರೂ ಬೆನ್ನಲ್ಲೇ ಹಿಂದಿನ ಹಾದಿ ಹಿಡಿದು ಹಿಂದೆಹಿಂದೆ ಹೋಗಿ ಈಗ ಶೋಕ ಸಮುದ್ರದಲ್ಲಿ ಬಿದ್ದೆವು. ನಮ್ಮೀ ವಂಚನೆಗಾಗಿ ನಾವಿನ್ನು ಕೊರಗಿದಷ್ಟೂ ಸಾಲದು.

ನಮ್ಮೀ ರಾಷ್ಟ್ರಕ್ಕೆ ಸವಾದೃಷ್ಟ ಸೋಂಕಿದಂದಿನಿಂದ ಇದುವರೆಗೆ ಬಾಪೂಜೀ ಹೇಳುತ್ತಾ ಬಂದ ಮಾತುಗಳನ್ನು ನೆನಸಿದರೆ ಮಹಾತ್ಮರ ಮರಣವು ನಮಗೆ ಮಾತ್ರ ಆಕಸ್ಮಿಕ ಹೊರತು ಸ್ವತಃ ಗಾಂಧಿಜೀಗಲ್ಲವೆಂಬುದು ಖಚಿತವಾಗುವದು. "ದೇಶವನ್ನು ತುಂಡರಿಸಿದರೆ ನನ್ನನ್ನೇ ತುಂಡರಿಸಿದಂತೆ" ಎಂದವರು, ವಿಭಜನೆಯ ಸಿದ್ಧತೆಯಲ್ಲೇ ಹೇಳಿದ್ದರು. ತನ್ನ 79ನೇ ಜನ್ಮ ದಿನದಲ್ಲಿ ಸಂತೋಷ ಸೂಚಿಸಿದವರಿಗೆಲ್ಲಾ "ನನ್ನೊಡನೆ ಸಹ ಸಂತಾಪ ಸೂಚಿಸಿರಿ; ನನಗೆ ಬದುಕುವ ಆಸೆಯಿಲ್ಲ. ಇಂತಹ ಭಾರತದಲ್ಲಿ ನಾನು ಬದುಕಲಾರೆ" ಎಂದು ಸ್ಪಷ್ಟವಾಗಿ ಹೇಳಿದ್ದರು "ನೀವು ನನಗೆ ಶ್ಲಾಘನೆ ಸಲ್ಲಿಸಬೇಕಾದುದು ಈಗಲ್ಲ. ಬೋಂಬು ಸ್ಫೋಟಿಸಿ ನನ್ನ ಮೈಮೇಲೆ ಬಿದ್ದು ಆಗಲೂ ಬೋಂಬಿಟ್ಟವನ ಮೇಲೆ ಯಾವ ಕಹಿ ಭಾವನೆಯೂ ಇಲ್ಲದೆ, ಮುಖದಲ್ಲಿ ನಗೆ ಮಿಂಚಿಸುತ್ತಾ ನಾನು ಪ್ರಾಣ ಬಿಡುವಂತಾದರೆ ಆ ಕಾಲದಲ್ಲಿ ನನ್ನನ್ನು ಹೊಗಳಿರಿ" ಎಂದು ಅದೇ ಪ್ರಾರ್ಥನಾ ಸಭೆಯಲ್ಲಿ ಬೋಂಬೊಂದು ಸಿಡಿದು ಹೋದ ಸಂದರ್ಭದಲ್ಲಿ ಬಾಪೂಜೀ ಹೇಳಿದ್ದರು-ಹಾಗೆ ಹೇಳಿ ಹತ್ತು ದಿನ ಕಳೆಯುವಾಗಲೇ, ಹೇಳಿದಂತೆ ಮಾಡಿದರು—'ರಾಮ ರಾಮ' ಎನ್ನುತ್ತಾ ಶಾಂತ ಹಸನ್ಮುಖದಿಂದ ಗುಂಡಿಗೆದೆ ಕೊಟ್ಟು ಮಡಿದ ಮಹಾತ್ಮರನ್ನು ಕಾಣುವಂತಾಯಿತು! ಅಂತೂ ಅವರು ಎಲ್ಲಾ ತರದ ಗೌರವ ಮತ್ತು ಶ್ಲಾಘನೆಯನ್ನೂ ಸಂಪಾದಿಸಿಕೊಂಡೇ ಹೋದರು, ನಾವು? ಇನ್ನಾದರೂ ಅವರ ಮಹಾತ್ಮೆಗೆ ತಕ್ಕ ದೇಶಬಂಧುಗಳು ಆಗ್ನಿಸುವುದು ಬೇಡವೆ?

ಎಲ್ಲಾ ಭಾರತೀಯರು-ಮುಖ್ಯವಾಗಿ 'ಹಿಂದು'ಗಳೆಂದು ಹೇಳಿಸಿಕೊಳ್ಳುವ ನರಪಶುಗಳು-ಲೋಕದಿದಿರಲ್ಲಿ ತಮ್ಮ ಸ್ಥಾನವೆಂತಹದಾಯಿತೆಂಬುದನ್ನೊಮ್ಮೆ ಯೋಚಿಸಬೇಕು. ಮಹಾತ್ಮರಂತಹ ಉಚ್ಚ ಮಾನುಷತ್ವವು ನಮ್ಮಲ್ಲಿ-ನಮ್ಮ ಧರ್ಮದ ದೃಷ್ಟಿಯಿಂದ-ಕೊಲೆಯಾಗುವ ವಸ್ತುವೆಂದಾದ ಮೇಲೆ ಭಾರತೀಯರನ್ನು ರಾಕ್ಷಸರೆಂದಲ್ಲದೆ ಮನುಷ್ಯರೆಂದು ಲೋಕ ಭಾವಿಸುವಂತಿದೆಯೆ? ಪರಿಶುದ್ಧ ಹಿಂದೂ ತತ್ವಗಳನ್ನು ಬೋಧಿಸುತ್ತಿದ್ದ 'ರಾಮಾ ರಾಮಾ" ಎನ್ನುತ್ತಲೇ ಹೊರಟು ಹೋದ ಆ ಜೀವವನ್ನು ತೆಗೆಯುವುದು "ಹಿಂದೂತ್ವ"ಕ್ಕೆ ಅಗತ್ಯವಿತ್ತೆಂದ ಮೇಲೆ 'ಹಿಂದೂ ಧರ್ಮ'ಕ್ಕಿಂತ ದೊಡ್ಡ ನರಕವೇ ಮತ್ತೊಂದಿರಲಾರದೆಂದು ಲೋಕವು ಭಾವಿಸಿಕೊಂಡರೆ ತಪ್ಪೆ?

'ನಮ್ಮ ನಂಬ್ರ 1ನೇ ವೈರಿ'ಯೆಂದು ಒಂದು ಕಾಲದಲ್ಲಿ ಬ್ರಿಟಿಷರು, ಇತ್ತೀಚೆಗೆ ಲೀಗ್ ಮುಸ್ಲಿಮರು, ಇದೇ ಮಹಾತ್ಮರನ್ನು ಹೇಳಿದ್ದರು. ಆದರೆ ಕೊಂದು ಹಾಕುವ ಕ್ರೂರತೆಯಾಗಲೀ ಧೈರ್ಯವಾಗಲೀ ಯಾರಿಗಿತ್ತು? ಅದಿದ್ದುದು ಓರ್ವ 'ಹಿಂದು' ವಿನಲ್ಲೇ! ತಮ್ಮ ಉದ್ಧಾರಕನಾದ, ಅತ್ಯಂತ ವಂದ್ಯನಾದ, ಲೋಕ ಪೂಜ್ಯನನ್ನೇ ಹೊಡೆದು ಕೊಂದ ಹಿಂದುಗಳು ಮುಸ್ಲಿಮರಿಗೆಂತಹ ಅತ್ಯಾಚಾರ ಮಾಡುವದಕ್ಕೂ ಹೇಸಲಾರರೆಂಬ ವಿಶ್ವಾಸವು ಇದೇ ಪ್ರಸಂಗಕ್ಕೆ ಈ ಮೂಲಕ ಹುಟ್ಟಲಾರದೆ?

'ಗಾಂಧಿ'ಎಂಬುದಕ್ಕಿಂತ ಮಿಕ್ಕಿದ ಭಾರತ ದೇಶವೆಂಬುದೊಂದಿದೆ, ಎಂಬುದನ್ನು ಲೋಕದಲ್ಲಿ ಅರಿಯದೇನೇ ಇರುವವರು ಬಹಳ ಮಂದಿ. ಗಾಂಧಿಯ ಕೊಲೆಯಾಯಿತೆಂದೊಡನೆ ಭಾರತ ಸತ್ತಿತೆಂದೇ ನೆನಸಿಕೊಂಡವರಿದ್ದಾರೆ. ಹಿಂದೀಯರೆಲ್ಲರೂ "ಗಾಂಧಿ"ಯಾಗಿ, ಗಾಂಧಿಜೀಯ ತತ್ವಗಳ ನಿಷ್ಠಾವಂತ ಭಕ್ತರಾಗಿ, ಇನ್ನು ತಾನೇ ಅಸ್ತಿತ್ವ ದೊರಕಿಸಿಕೊಳ್ಳಬೇಕೆಂಬುದು ನೆನಪಿರಲಿ. ಇನ್ನಾ ಲೋಕಕ್ಕೆ ಹೇಸಿಕೆಯಾಗಿ ತೋರಿದ ಈ ಕಲ್ಮಷವನ್ನು ತೊಳೆದುಕೊಳ್ಳುವ ಮಹಾತ್ಮೆಯನ್ನು ಭಾರತೀಯರೆಲ್ಲರೂ ಒಮ್ಮೆಯೇ ಪ್ರದರ್ಶಿಸದೆ ಹೋದರೆ ನಾವು ಹಾಳಾದಂತೆಯೇ!

ಇದೀಗ ಪ್ರಕಟವಾಗಿದೆ-

ಕನ್ನಡ ನಾಡಿನ ಸುಪ್ರಸಿದ್ಧ ಕವಿ-ಕತೆಗಾರರಾದ
ಶ್ರೀ ಎಸ್. ವೆಂಕಟರಾಜರ ಅಮೋಘ ಕೃತಿ
ಏಳು ಕತೆಗಳ ಸಂಗ್ರಹ. ಬೆಲೆ ॥ 12 ॥

ಪ್ರತಿಗಳಿಗೆ ಬರೆಯಿರಿ:— (1) ಕರಿಯರ ಪ್ರಪಂಚ, ಉಡುಪಿ. (2) ನವಭಾರತ ಬುಕ್ ಡಿಪ್ಪೊ, ಉಡುಪಿ. (3) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು; (4) ಎಂ. ಎಸ್. ಮಯ್ಯ ಪುತ್ತೂರು.

The Canara Banking Corporation Limited.

Estd: 1906

(Incorporated in British India)

Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates:—

3 & 4 months — @ 2½ % p. a.

5 & 6 months — @ 2¾ % p. a.

ನವಯುಗ

ಗುರುವಾರ, ಉಡುಪಿ, ೧೨-೨-'೪೮

ಬಾಪೂ ಶ್ರಾದ್ಧ

ಇಂದು:-ತಾ. 12-2-48ನೇ ಗುರುವಾರ- ರಾಷ್ಟ್ರಜನಕ ಗಾಂಧಿಜೀಯ ಶ್ರಾದ್ಧದ ದಿನ. ಅವರ ಬೂದಿಯನ್ನು ಸಮೇಳ ನೀರಿನಲ್ಲಿ ಕದಡಿಸಿ ಬಿಟ್ಟು ಕೈತೊಳೆದುಕೊಂಡು ನಾವು ಕುಳಿತುಕೊಳ್ಳುವ ದಿನ. ನಾವು, ಹಿಂದೀಯರು ಗಾಂಧಿಜೀಯ ಕಾಯದೊಂದಿಗೆ ಬಹಳ ಕೆಲಸಮಾಡಿದ್ದೆವು! ಅದಂದಿರು ಸಾಷ್ಟಾಂಗ ಪ್ರಣಾಮ ಮಾಡುವುದು- ಪಾದ ಮುಟ್ಟುವುದು- ಅವರ ಛಾಯಾಚಿತ್ರಗಳನ್ನು ತೂಗಾಡಿಸುವುದು, ಪ್ರತಿಮೆಗಳನ್ನಿಡುವುದು- ಅದಕ್ಕೆ ಹೂಮಾಲೆ, ದೀಪಧೂಪಗಳ ಪೂಜೆ ಸಲ್ಲಿಸುವುದು- ದೇವ ಮೂರ್ತಿಯೆದಿರಲ್ಲಿ ಭಕ್ತರು ಮಾಡಬೇಕಾದ್ದೇನೇನೋ ಅನೆಲ್ಲವನ್ನೂ ಮಾಡಿದ್ದೆವು. ಮೊನ್ನೆ ಗುಂಡಿನ ಪೂಜೆಯನ್ನೂ ಸಲ್ಲಿಸಿದೆವು; ಇಂದವರ ಭಸ್ಮವನ್ನೂ ಕದಡಿಸಿ ಆ ಸಂಬಂಧದ ಎಲ್ಲಾ ಕೆಲಸಗಳನ್ನೂ ಮುಗಿಸಿಕೊಳ್ಳುವೆವು! ಇನ್ನು ಮುಂದೇನು?

ನಮಗೆ ಕಲಿಸಿಕೊಡುವ ಗುರುವೊಬ್ಬನಿದ್ದ; ನಮ್ಮನ್ನು ನಡೆಯಿಸಿಕೊಂಡು ಹೋಗುವ ನಾಯಕನೊಬ್ಬನಿದ್ದ; ನಾವೆಲ್ಲರೂ ಮನುಷ್ಯರು ಎಂಬುದನ್ನು ತೋರಿಸುವ ಎಲ್ಲಾ ಕೆಲಸಗಳನ್ನೂ ತಾನೊಬ್ಬನೇ ಮಾಡುತ್ತಿದ್ದ ಮಹಾತ್ಮನೊಬ್ಬನಿದ್ದ; ಇನ್ನು ಅವನಿಲ್ಲ. ಉಳಿದದ್ದು ನಾವೇ. ಅವನೊಬ್ಬನನ್ನು ಕಳೆದರೆ ಮತ್ತೆ ನಮ್ಮಲ್ಲಿ ಉಳಿಯುವ ಅಂಶವೂ ಬಹುಮಟ್ಟಿಗೆ ತಾ 30ನೇ ಶುಕ್ರವಾರದ ಒಂದು ರಾತ್ರಿ ಆ ಬಿರ್ಲಾ ಭವನದಲ್ಲಿ ಉಳಿದಿದ್ದ ಕಾಯದಂತಹದೇ- ನಿಜಕ್ಕೂ ಜೀವವಿಲ್ಲದ ಒಂದು ದೇಹ! ಇದು ಅತ್ಯುಕ್ತಿಯಿಲ್ಲ; ಹದ ತಪ್ಪಿದ ನಾಯಕ ಪೂಜೆಯ ಒಂದು ಮಾದರಿಯೂ ಅಲ್ಲ; ಗಾಢವಾಗಿ ವಿಚಾರಿಸಿ ನೋಡುವಾಗ ತೋರುವ ವಸ್ತುಸ್ಥಿತಿ. ನಿಜಕ್ಕೂ ಆಧುನಿಕ ಯುಗದಲ್ಲಿ ಲೋಕದ ಯಾವ ಒಂದು ರಾಷ್ಟ್ರಕ್ಕೂ ದೊರೆಯದಿದ್ದಂತಹ ಅತ್ಯುಚ್ಚನಾಯಕನು ನಮಗೆ ದೊರೆತಿದ್ದ; ಸತ್ಯಕ್ಕೂ ಪ್ರಪಂಚದ ಬೇರಾವ ರಾಷ್ಟ್ರೀಯರಾದರೂ ಮಾಡಲು ಹೇಸುವಂತಹ ಅಪರಾಧವನ್ನು ನಾವು ಅವನಿಗೆ ಮಾಡಿದೆವು. ಮನುಷ್ಯನ ಉನ್ನತಿಯ ಪರಮಾವಧಿಯಲ್ಲಿ, ಎಂಬುದನ್ನು ಈ ಕಾಲದಲ್ಲಾದರೂ ನೋಡಬೇಕಾದರೆ ನಮ್ಮ ಮಹಾತ್ಮನನ್ನೇ ನೋಡಬೇಕು; ಮನುಷ್ಯನ ಅವನತಿಯ ಕೊನೆಯ ತುದಿಯಾವುದು ಎಂಬುದನ್ನು ನೋಡಬೇಕಾದರೂ ನಮ್ಮ ಕಡೆಗೇನೇ ನೋಡಬೇಕು. ಇದು ಖಂಡಿತ!

ಮಹಾತ್ಮರ ಮರಣದ ಕುರಿತು ಲೋಕ ನಮ್ಮನ್ನು ನೋಡಿ ಹೇಳುತ್ತಿರುವ ಮಾತುಗಳ ಕಡೆಗೆ ಕಿವಿಕೊಟ್ಟರೆ ಸಾಕು-ನಾವೆಂಥವರೆಂಬುದನ್ನು ನಾವರಿತುಕೊಳ್ಳಬಹುದು. ತನ್ನೆರಡು ಮಹಾ ನಗರಗಳು ಆಟಂ ಬೋಂಬಿನಿಂದ ಭಸ್ಮವಾದುದನ್ನು ಕಂಡಾಗ ಕೂಡಾ ಎದೆ ಕಳಕೊಳ್ಳದಿದ್ದ ಜಪಾನ್ ಚಕ್ರವರ್ತಿಗಳು ಮಹಾತ್ಮರ ಕೊಲೆಯ ಸುದ್ದಿ ಕೇಳಿದೊಡನೆ ಒಮ್ಮೆ ದಿಗಿಲುಬಿದ್ದರು. ಕಠೋರ ಕಾರ್ಯಕ್ಕೆ ಹೇಳಿಸಿದ ಜನವಾದ್ದರಿಂದಲೇ ಅಕ್ರಮಿತ ಜಪಾನಿನ ಸೇನಾನಾಯಕತ್ವ ದೊರೆತಿರುವ ಜನರಲ್ ಮೇಕರ್ಥರರ ತೋಕೋದ್ಗಾರಗಳನ್ನು ಗ್ರಹಿಸಿಕೊಂಡರೆ ಸಾಕು! ಆಟಂ ಬೋಂಬಿನ ಭೀಕರತೆಯನ್ನು-ಪಾಶ್ಚಾತ್ಯ ಸೈನಿಕರ ಯುದ್ಧ ಕಾಲದ ಕ್ರೌರ್ಯಗಳನ್ನು-ಕೇಳಿ ನಾವು ರೋಮಾಂಚನಗೊಂಡವರು; ನಮ್ಮ ಇಂದಿನ ಅಮಾನುಷ ಕ್ರೌರ್ಯವು ಸ್ವತಃ ಅವರನ್ನೇ ದಂಗುಬಡಿಸಿದೆ! ಮಾನವನ ಮನೋ ಮಟ್ಟದ ಆ ಕಾಶ ಪಾತಾಳಗಳೆರಡೂ ನಮ್ಮಲ್ಲೇ!

ಇದು ಭಾವೋದ್ರೇಕದ ಮಾತಲ್ಲ; ಮನುಷ್ಯ ಪೂಜೆಯ ಮಿತಿಯ ಮೇರೆಯನ್ನು ಮೀರಿ ಹೋದ ಹುಚ್ಚಾಟವೇನೂ ಅಲ್ಲ. ನಾವು ಮೊನ್ನೆ ಗುಂಡಿಟ್ಟುದು ಒಬ್ಬ ಮನುಷ್ಯನಿಗಲ್ಲ-ಮಾನವೀಯತೆಯ ಉಚ್ಚ ತತ್ವಗಳ ಸಾಕಾರವೊಂದಕ್ಕೆ! ಜನತಾ ಶಕ್ತಿಯ ಬಲದಿಂದಲೇ ಅಧಿಕಾರಕ್ಕೆ ಬರುವ ನಾಯಕರು ಮಿಕ್ಕ ರಾಷ್ಟ್ರಗಳಲ್ಲಿರುವಾಗ, ತನ್ನ ಸ್ವಂತ ಶಕ್ತಿಯಿಂದಲೇ ನವೀನ ರಾಷ್ಟ್ರವೊಂದನ್ನು ನಿರ್ಮಿಸಿದ ವಿಭೂತಿ ಪುರುಷನೊಬ್ಬ ನಮಗಿದ್ದ-ಆದರೆ ನಾವು ಆ ನಿರ್ಮಾಪಕನನ್ನೇ ನಿರ್ಮೂಲಿಸಿಕೊಂಡ ಅಜ್ಞಾನಿಗಳು, ಅಧಮರು!

ಇಂದು ಅವರ ಉತ್ತರಕ್ರಿಯೆಯ ದಿನ. 'ಹೋಯಿತು, ಕಳೆದುಕೊಂಡೆವು!'-ರೋದನವೆಲ್ಲವನ್ನೂ ಇಂದೇ ಮುಗಿಸಿಕೊಳ್ಳೋಣ. ಈ ದಿನ ಪುಣ್ಯ ನದಿಗಳಲ್ಲಿ ಅವರ ಭಸ್ಮವನ್ನು ನಾವು ಕದಡಿಸಿಬಿಡುವುದಷ್ಟೇ ಅಲ್ಲ-ಆ ಪುಣ್ಯ ಸ್ಮರಣೆಯಿಂದ ನಮ್ಮ ದೌರ್ಬಲ್ಯ, ಪಾಪಗಳೆಲ್ಲವನ್ನೂ ತೊಳೆದುಕೊಂಡು ಶುದ್ಧರಾಗೋಣ. 'ಮಹಾತ್ಮರ ಸಂದೇಶವನ್ನು ಪೂರ್ತಿಗೊಳಿಸುವೆವು' ಎಂದು ನಮ್ಮ ಕೇಂದ್ರ ಸರಕಾರವು ತೊಟ್ಟ ಪ್ರತಿಜ್ಞೆಯನ್ನೇ ನಮ್ಮಲ್ಲಿ ಪ್ರತಿಯೊಬ್ಬನೂ ತೊಡೋಣ. ಆ ಪ್ರತಿಜ್ಞಾಧಾರಣ ದಿನ ಇದೇ. ಇದು ಬಾಪೂಜೀಯ ಶ್ರಾದ್ಧ ದಿನ-ಸರ್ವ ಭಾರತೀಯರ ಶ್ರದ್ಧಾ ದಿನ. ಅವರ ಅಂತ್ಯ ಕ್ರಿಯೆಯು-ನಮ್ಮ ಆತ್ಮ ಕ್ರಿಯೆಯ ದಿನ. ಅವರು ತೋರಿಸಿಕೊಟ್ಟ ಹಾದಿ ನಮ್ಮ ಕಣ್ಣ ಮುಂದೆ ಸ್ಪಷ್ಟವಿದೆ; ಆ ಹಾದಿಯಲ್ಲಿ ನಡಿಸಲು ಆ ಮಹಾತ್ಮನ ಹುತಾತ್ಮನೇ ಇದೆ. ಈ ದಿನದಿಂದಲೇ ನಡು ಬಿಗಿದು ಆ ಪಥ ಹಿಡಿಯೋಣ

ಈ ನರಭಕ್ಷಕ ವ್ಯಾಘ್ರಗಳ ಕಡೆಗೆ ಕಣ್ಣಿರಲಿ!

'ದೇವಾಲಯಗಳಿಗೆಲ್ಲಾ ಹರಿಜನರನ್ನು ಹೊಗಿಸಿ ಭ್ರಷ್ಟಗೊಳಿಸಿದವನಿಗೆ ದೇವರು ಇಂತಹ ಶಿಕ್ಷೆ ಕೊಡದೆ ಬಿಟ್ಟಾರೆ?' ಎನ್ನುವ ಕಿರಿಚಾಟವು, ತಮ್ಮ ಕೊಳಕು ಕೂಪದಲ್ಲೇ ಹೊರಳಾಡುತ್ತಿರುವ ಹುಳಗಳಿಂದಾಗುತ್ತಿದೆ. ನಮ್ಮ 'ಹಿಂದೂ ಧರ್ಮ'ದ ಅಧಿಕಾರಿಗಳೆನ್ನಿಸಿಕೊಳ್ಳುತ್ತಿರುವವರು ಇಂತಹ ಅಪಾಯಕಾರೀ ವಿಷದ ಕೀಟಗಳೆಂಬ ಕಡೆಗೆ ಅಗತ್ಯ ಲಕ್ಷ್ಯವಿರಲಿ.

'ನಮಗಿದ್ದ ಏಕಮಾತ್ರ ಪಾನ ಸೌಕರ್ಯವನ್ನೂ ತಪ್ಪಿಸಿದ ಆ ಮನುಷ್ಯನಿಗೆ ಇಷ್ಟೂ ಮಾಂದಿಯ ಹೊಟ್ಟೆಯುರಿ ಬಡಿದೇ ಹೀಗಾಗದೆ ಹೋದೀತೆ?' ಎನ್ನುವ ಮಂಕು ಕೊಳಕುಗಳಿವೆ. ತಿಳಿದಿರಲಿ.

ಗಾಂಧಿಜೀ ಸತ್ತ ವಾರ್ತೆ ಕೇಳಿದೊಡನೆ ಸಂತೋಷದಿಂದ ಹಾಲು ಕುಡಿದ, ಮಿಠಾಯಿ ತಿಂದ, ಪಾಯಸವುಂಡ, ವಿಷಜಂತುಗಳು ಹಲವೆಡೆಗಳಲ್ಲಿ ಪಕಪ್ರಕಾರ ವಿದ್ದುವೆಂಬ ವಾರ್ತೆ ಕೇಳಿಬರುತ್ತಿದೆ. ನಮ್ಮ ಸುತ್ತ ಮುತ್ತ, ಎಂತಹ ಕಾಳೋರಗಗಳು ಹರಿದಾಡುತ್ತಿವೆ, ಎಂಬ ಕಡೆಗೆ ಅಗತ್ಯ ಲಕ್ಷ್ಯವಿರಲಿ.

ಜನತೆಯ ಕ್ರೋಧ, ತಿರಸ್ಕಾರ, ಅಸಹಕಾರಗಳಿಗೆ ಹೆದರಿ ಈಗ ಥಕ್ಕನೇ ಬಣ್ಣ ಬದಲಾಯಿಸಿರುವ-ವೇಷಭೂಷಣಗಳನ್ನು ಕಳಚಿಟ್ಟು, ಮರೆಸೇರಿರುವ-ನಂಜುವಿಷದ ಕೊಡಗಳಿವೆ. 'ಶುದ್ಧ ಹೇಡಿಯಾದರೆ ಶುದ್ಧೀಕರಣವಾದಂತಲ್ಲ' ಎಂದ ಗಾಂಧಿಜೀಯ ಮಾತು ನೆನಪಿರಲಿ. ಜಾಗ್ರತೆ ತಪ್ಪದಿರಿ.

ಇದುವರೆಗೆ 'ಆರ್ ಯಸ್. ಯಸ್.' 'ಹಿಂದೂ ಮಹಾಸಭೆ'ಯಂಥವುಗಳಲ್ಲಿ ಸೇರಿದ್ದವರು ಇನ್ನೆಂದಾದರೂ ಯಾವುದೇ ಹೆಸರು, ರೂಪದಿಂದ ತಲೆಯೆತ್ತಲು ನೋಡುವ ಚಿಹ್ನೆ ಕಂಡು ಬಂದೊಡನೆ ಖಂಡಿತವಾಗಿ ತಿಳಿದುಕೊಳ್ಳಿ- ಇವರು 'ಆ ರಾಷ್ಟ್ರೀಯ ಮುಸ್ಲಿಮ'ರನ್ನು ಪಾಕಿಸ್ತಾನಕ್ಕೆ ಕಳುಹಿಸಿಕೊಡಲು ಹೊರಟವರಲ್ಲ; ಗಾಂಧಿಜೀಯ ಅನುಯಾಯಿಗಳಾದ ರಾಷ್ಟ್ರ ನಾಯಕರಿಗೆ ಮತ್ತು ಮಹಾತ್ಮರ ರಾಷ್ಟ್ರೀಯತೆ ಹಾಗೂ ಶುದ್ಧ ಹಿಂದೂ ತತ್ವಗಳ ಆರಾಧಕರಾದ ಎಲ್ಲರಿಗೆ ಪರಲೋಕಕ್ಕೋ ಪಾಕಿಸ್ತಾನಕ್ಕೋ 'ಪಾಸ್‌ಪೋರ್ಟು' ಕೊಡಲು ಹೊರಟವರು! ಇದನ್ನೆಂದೂ ಮರೆಯದಿರಿ.

ಅಸ್ಪರ್ಶರೆಂದೋ, ಅಸಮಾನರೆಂದೋ ಬಹುಸಂಖ್ಯಾಕ ಹಿಂದುಗಳನ್ನು ದೂರವಿಟ್ಟು ಬದುಕುವವರೇ, ಅತ್ಯಧಿಕ ಬಹುಸಂಖ್ಯಾಕರನ್ನು ಸುಲಿದು ಬದುಕುವ ಕಳ್ಳ ಸಂತೆಯವರೇ ಈ ಹಿಂದೂ ಮಹಾಸಭೆ, ಆರ್. ಯಸ್. ಯಸ್. ಗಳಲ್ಲಿ ಇರುವುದೆಂದೂ—ಈ ಕಾರಣದಿಂದಾಗಿಯೇ ಅವರು ಹಿಂದೂ ಸಮಾಜ ಸುಧಾರಣೆಯ ಯಾವ ಕಾರ್ಯವನ್ನೂ ಮಾಡದೆ, ಬಡವರ ಉದ್ಧಾರ ಯೋಜನೆಗಳನ್ನು ಬಲವಾಗಿ ವಿರೋಧಿಸುತ್ತಾ ಬಂದಿದ್ದಾರೆಂದೂ, ಧರ್ಮದ ಹೆಸರಿನಿಂದ ಅತ್ಯಾಚಾರಗಳ ಕಡೆಗೆ ಹಿಂದೂ ಜನತೆಯ ಲಕ್ಷ್ಯವನ್ನೆಳೆದು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಬೇಕೆಂಬ ಇವರ ಸ್ವೈರಾಚಾರಿಗಳಿಗೆ ಗಾಂಧಿಜೀಯೊಂದು ಆತಂಕವೆಂದು ತಿಳಿದೇ ಅವರಿಗೆ ಅಂತ್ಯ ಮಾಡಿದರೆಂದೂ-ಅಗತ್ಯ ತಿಳಿದುಕೊಳ್ಳಿ, ಇಂಥವರ ಮುಖ ಕಾಣುವಾಗಲೆಲ್ಲಾ ಬಾಪೂಜೀಯ ಕೊಲೆ ಪಾತಕ ಛಾಯೆಯನ್ನು ಕಾಣಲು ಮರೆಯದಿರಿ.

ಈ ಜಾತೀಯ ಸಂಸ್ಥೆಗಳು ನಿರಪರಾಧಿಗಳು ಹಲವರ ರಕ್ತದ ಹೊಳೆಯಲ್ಲಿ ಮಿಂದಿವೆ; ಕೊನೆಯದಾಗಿ ಮಹಾತ್ಮರ ಆ ಪವಿತ್ರ ರಕ್ತವನ್ನು ಕುಡಿದಿವೆ; ಈಗಲಂತೂ ಇಡೀ ಮಾನವ ಜನಾಂಗದ ಕಣ್ಣೀರಿನ ಹಾಗೂ ಜತೆಯಲ್ಲೇ 'ಛೂ! ಛೂ!' ಎಂದು ಇಡೀ ಪ್ರಪಂಚವೇ ಹೇಸಿ ಉಗುಳಿದ ಎಂಜಲು ನೀರಿನ ಪ್ರಳಯದಲ್ಲೇ ತೇಲಿ ಹೋಗಿವೆ. ಇನ್ನವುಗಳ ಅಸ್ತಿತ್ವದ ಮಾತೆಲ್ಲಿ? ಅವುಗಳ ನಾಮೋಚ್ಚಾರವೂ ಮಹಾಪಾಪ! ಇದುವರೆಗೆ ಅಸಡ್ಡೆಯಿಂದ ಅವುಗಳನ್ನು ಬೆಳೆಯಲು ಬಿಟ್ಟ ಪ್ರಮಾದವು ಸದಾಕಾಲ ನೆನಪಿರಲಿ.

ಆದರೆ ಸಹನೆ ತಪ್ಪದಿರಿ; ದೃಢತೆ ಕುಗ್ಗದಿರಲಿ. ನಿಮ್ಮ ಶಾಂತಿ, ಬಂಧು ಭಾವನೆ-ಎಂದೂ ಲೋಪವಾಗದಿರಲಿ. ಉದ್ರೇಕ, ದುರಭಿಮಾನ, ಸಂಕುಚಿತ ಸ್ವಾರ್ಥ ಬುದ್ಧಿ ಎಲ್ಲಿಯೂ ಇಲ್ಲವೇ ಇಲ್ಲವೆಂದಾಗಲಿ. ಪ್ರತಿಯೊಂದು ಸಂದರ್ಭದಲ್ಲೂ ಗಾಂಧಿಜೀಯ ನೆನಪು ಬರಲಿ.

ಅಗ್ಗ ಬೆಲೆಯಲ್ಲಿ—

ಸರ್ವ ಮಾಹಿತಿಯನ್ನೊಳಗೊಂಡ

1948 ಸರ್ವಧಾರೀ ಸಂವತ್ಸರದ 1949

ನವಯುಗ ಪಂಚಾಂಗ

ಸರ್ವಸಾಮಾನ್ಯವಾಗಿ ಪಂಚಾಂಗಗಳಲ್ಲಿರುವ ನಿತ್ಯ ಪಂಚಾಂಗ ಮತ್ತು ಎಲ್ಲ ಮಾಹಿತಿಗಳಲ್ಲದೆ ಪಗಾರದ ಲೆಕ್ಕ, ತಂತೀ ಟಪ್ಪಾಲು ದರ ಇತ್ಯಾದಿಗಳೂ ಇವೆ.

ಸುಮಾರು **60** ಪುಟಗಳು. ಬೆಲೆ **0—೮—0.**

0—7—0 ಸ್ಟಾಂಪು ಕಳಿಸಿದರೆ 1 ಪ್ರತಿ ಕಳಿಸಲ್ಪಡುವುದು.

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ನವಯುಗ ಪ್ರೆಸ್, ಉಡುಪಿ

ಗಾಂಧಿಜೀ ಕೊಲೆಯ ಮಾರ್ದನಿ-ಮಹಾಂದೋಲನ!

ಮಹಾತ್ಮಾಜೀ ಮಡಿದ 14ನೇ ದಿನವಾದ ತಾ. 12-2-48ನೇ ಗುರುವಾರ ಅವರ ಭಸ್ಮಾವಶೇಷಗಳನ್ನು ಪವಿತ್ರ ನದಿಗಳಲ್ಲರ್ಪಿಸಿ ಕೊನೆಯ ಅಂತ್ಯ ಕ್ರಿಯೆಯನ್ನಾಚರಿಸಲಾಗುವುದು. ಗಾಂಧಿಜೀ ಭಗ್ನಾವಶೇಷಗಳ ಕ್ರಿಯೆಯು ಮೂಲತಃ ಅಲಹಾಬಾದಿನ ತ್ರಿವೇಣೀ ಸಂಗಮ ಸ್ಥಳವಾದ ಪ್ರಯಾಗದಲ್ಲಿ ಜರಗುವುದು. ಅದಕ್ಕಾಗಿ ಗಾಂಧಿಜೀಯ ಎಲುಬು ಭಸ್ಮಗಳ ಮುಖ್ಯ ಭಾಗವನ್ನು ಹೊತ್ತುಕೊಂಡ ಸ್ಪೆಶಲ್ ಟ್ರೈನು ಪುರೋಹಿತರು ಮತ್ತು ಗಾಂಧೀ ಪುತ್ರ ರಾಮದಾಸ ಗಾಂಧಿ ಮತ್ತಿತರರೊಂದಿಗೆ ಇದೇ ತಾ 11ರಲ್ಲಿ ಡಿಲ್ಲಿಯಿಂದ ಅಲಹಾಬಾದಿಗೆ ಹೊರಟಿದೆ. ತಾ. 12ನೇ ಪ್ರಾತಃಕಾಲ ಅದು ಅಲಹಾಬಾದಿಗೆ ಮುಟ್ಟುವುದು. ಕೂಡಲೇ ಅಲಹಾಬಾದಿನಲ್ಲಿ ಬಾಪೂಜೀ ಕಾಯದ ಅವಶೇಷಗಳ ಮೆರವಣಿಗೆ ಪ್ರಯಾಗಕ್ಕೆ ಹೊರಟು ಅಲ್ಲಿ ಶಾಸ್ತ್ರೋಕ್ತವಾಗಿ ಕ್ರಿಯಾವಿಧಿಗಳನ್ನು ನೆರವೇರಿಸಲಾಗುವುದು. ಇಲ್ಲಿ ಪ್ರಚಂಡ ಜನಸಂದಣಿ ಸೇರುವದೆಂಬ ನಿರೀಕ್ಷೆಯಿದೆ.

ಎಲ್ಲಾ ಪುಣ್ಯ ಜಲಗಳಲ್ಲಿ-

ಗಾಂಧಿಜೀ ಕಾಯದಹನವಾದ ಮೂರನೇ ದಿನ 'ಬೂದಿ ಕೂಡಿಸುವ' ವಿಧಿ ನಡೆದೊಡನೆ ಅದುವರೆಗೆ ಅದಕ್ಕಾಗಿ ಡಿಲ್ಲಿಯಲ್ಲೇ ನಿಂತಿದ್ದ ಪ್ರತಿಯೊಂದು ಪ್ರಾಂತ್ಯದ ಗವರ್ನರರೂ ತಂತಮ್ಮ ಪ್ರಾಂತ್ಯದ ಪಾಲಿನ ಬಾಪೂ ಭಸ್ಮಾವಶೇಷಗಳನ್ನು ಹಿಡಿದುಕೊಂಡು ಸ್ವಪ್ರಾಂತ್ಯಗಳಿಗೆ ಬಂದಿದ್ದಾರೆ. ಇವೆಲ್ಲವೂ ತಾ. 12ನೇ ದಿನ ನಿಶ್ಚಿತ ಮುಹೂರ್ತವಾದ ಮಧ್ಯಾಹ್ನ 12 ಘಂಟೆಗೆ ಆಯಾಯಾ ಪ್ರಾಂತ್ಯದ ಪ್ರತಿಯೊಂದು ಪ್ರಸಿದ್ಧ ತೀರ್ಥ ಸ್ಥಳಗಳಲ್ಲೂ ಸಮರ್ಪಿಸಲ್ಪಡುವವು. ಭಾರತದಲ್ಲಿ ಪ್ರಸಿದ್ಧಿ ಹೊಂದಿರುವ ನದಿ, ಸರೋವರಗಳೆಲ್ಲವೂ ಆ ದಿನ ಗಾಂಧಿಜೀ ಬೂದಿ ಕದಡಿ ಇನ್ನಷ್ಟು ಪವಿತ್ರವಾಗಲಿವೆ. ನಾಸಿಕದ ಗೋದಾವರಿ, ಬೆಜವಾಡದ ಕೃಷ್ಣಾ, ಶ್ರೀರಂಗಮಿನ ಕಾವೇರಿ, ಅಹಮ್ಮದಾಬಾದಿನ ಸಬರ್ಮತಿ, ದಕ್ಷಿಣೇಶ್ವರದ ಹೂಗ್ಲಿ, ಪೂರ್ವ ಪಂಜಾಬಿನ ಸಟ್ಲೆಜ್, ಒರಿಸ್ಸಾದ ಮಹಾನದಿ, ಗಯಾದ ಗೋಮತಿ, ಅಸ್ಸಾಮಿನ ಬ್ರಹ್ಮಪುತ್ರ, ವಾರ್ಧಾದ ಪಾವ್ನಾರ್, ಹೊಳೆಗಳಲ್ಲೂ ಪುರಿ, ರಾಮೇಶ್ವರ, ಕೇಪ್ ಕೊಮರಿನ್ ಪೋರ್ ಬಂದರ ಸಮುದ್ರಗಳಲ್ಲೂ ಈ ಅವಶೇಷಾರ್ಪಣೆಯಾಗುವದು. ಪ್ರತಿಯೊಂದು ಪ್ರಾಂತ್ಯದ ಪಾಲುಗಳೂ ಒಳಗಡೆಯವರ ಒತ್ತಾಯದ ಬೇಡಿಕೆಯಿಂದಾಗಿ ಹಲವು ಪಾಲುಗಳಾಗಲಿವೆ. ಹಲವು ಸಂಸ್ಥಾನಗಳೂ ಸಿಲೋನ್, ಮಲಯ ಮತ್ತಿತರ ಪರ ರಾಷ್ಟ್ರಗಳವರೂ ಗಾಂಧಿಜೀಯ ಬೂದಿ ಪಾಲನ್ನು ಯಾಚಿಸಿದ್ದಾರೆ. ಅಯೋಧ್ಯೆ, ಪುಷ್ಕರಣೀ ಸರೋವರ, ಉಜ್ಜಯಿನಿ, ಮೈಸೂರಿನ ಕಾವೇರಿ ಮೊದಲಾದ ಪುಣ್ಯ ಜಲಗಳಲ್ಲೂ ಈ ತರ್ಪಣ ನಡೆಯಲಿದೆ. ಮದ್ರಾಸಿನ ಪಾಲನ್ನು ಗವರ್ನರ್ ನ್ಯೇಯವರು ತಂದಾಗ ಮಂತ್ರಿಗಳು ಅತ್ಯಂತ ಭಕ್ತಿಯಿಂದ ಅದನ್ನು ಶಿರಸಾವಹಿಸಿ ದರ್ಶನಾಪೇಕ್ಷಿ ಯಾತ್ರಿಕರಿಗೆ ನೋಡಲಾಗುವಂತೆ ಕನ್ನಡೀ ಗೂಡಿನೊಳಗೆ ಸರಕಾರೀ ಭವನದಲ್ಲಿ ತಾ 12ರವರೆಗಿಟ್ಟಿದ್ದಾರೆ. ಭಕ್ತರು ಹಿಂಡುಗಟ್ಟಿ ನೋಡಿ ತಲೆಬಾಗಿಸಿ ಹೋಗುತಿದ್ದಾರೆ.

ರಾಷ್ಟ್ರಕ್ಕೆ ಶಾಂತಿಯಿರಲಿ!

ಬಾಪೂಜೀಯ ಕೊಲೆಯ ಹಿಂದೆ, ಕಾಂಗ್ರೆಸ್ ನಾಯಕರೆಲ್ಲರನ್ನೂ ಕೊಂದು, ಈಗಿನ ರಾಷ್ಟ್ರೀಯ ಸರಕಾರವನ್ನೇ ಅಡಮೇಲು ಮಾಡುವ ಮಹಾ ಒಳಸಂಚು ಇದ್ದಿತೆಂಬುದು ಬೆಳಕಿಗೆ ಬಿದ್ದಿದೆ. ಈ ಕುರಿತು ಅಮೂಲಾಗ್ರ ಶೋಧ ನಡೆಯುತ್ತಿದೆ. ಈ ದ್ರೋಹಿಗಳ ಕಾಳಕಾರ ಸ್ಥಾನದ ಮುಖ್ಯ ಕೇಂದ್ರವು ಬೊಂಬಾಯಿಯಿಂದ ಪೂನೆಯವರೆಗಿದ್ದಂತೆ ಕಾಣುತ್ತದೆ. ಬೊಂಬಾಯಿ ಸರಕಾರ ಮತ್ತು ಭಾರತ ಸರಕಾರದ ತಜ್ಞ ಪತ್ತೇದಾರಿಗಳು ಅವಿಶ್ರಾಂತವಾಗಿ ಪರಿಶೋಧನಾ ಪರಿಶ್ರಮದಲ್ಲಿದ್ದಾರೆ. ಎಲ್ಲವೂ ಬಹಿರಂಗವಾಗುವಾಗ ಅದ್ಭುತ ಅಂತರ್ಗಾಮೀ ಮಹಿವಾಟೊಂದು ಬೆಳಕಿಗೆ ಬಿದ್ದೀತು. 'ಹಿಂದೂ ವಾದಿ' ನಾಮಧಾರಿ ನರರಾಕ್ಷಸರು, ಪುರಾಣಗಳಲ್ಲಿ ಕಂಡು ಬರುವ ಯಜ್ಞವಿನಾಶೀ ರಾಕ್ಷಸರಿಗಿಂತಲೂ ಕ್ರೂರವಾದ ರಾಷ್ಟ್ರವಿಧ್ವಂಸಕ ಹಂಚಿಕೆಗಳನ್ನು ಒಳಗಿಂದೊಳಗೆ ನಡೆಸುತಿದ್ದರೆಂಬುದು ನಿಸ್ಸಂದೇಹ. ಅದ್ದರಿಂದಲೇ ಹಿಂದೂ ಮಹಾಸಭೆಯ ಅಧ್ಯಕ್ಷ ಸಾವರ್ಕರ್, ಕಾರ್ಯದರ್ಶಿ ದೇಶಪಾಂಡೆ, ಮತ್ತಿತರ ಪ್ರಮುಖ ಮಹಾಸಭಾ ಮುಖಂಡರ ಬಂಧನವಾಗಿದೆ. ಹೆಚ್ಚಿನ ಕಡೆಯ ಪ್ರಾಂತಿಕ, ಜಿಲ್ಲಾ ಹಾಗೂ ಇತರ ಮಹಾಸಭಾ ಕಾರ್ಯಕರ್ತರು ಹೆದರಿಯೇ ತಂತಮ್ಮ ಸ್ಥಾನಗಳನ್ನು ಬರ್ಖಾಸ್ತುಪಡಿಸಿಕೊಂಡು 'ಶರಣು' ಅಂದಿದ್ದಾರೆ.

ಆರ್. ಎಸ್. ಎಸ್.ಗೆ ನಿಷೇಧ

ಆರ್. ಎಸ್. ಎಸ್. ಜೇಕಾಯಿದೇಶೀರ ಸಂಸ್ಥೆಯೆಂದು ಸರಕಾರ ಘೋಷಿಸಿದೆ. ಎಲ್ಲಾ ಪ್ರಾಂತಿಕ ಸರಕಾರಗಳೂ 'ಆರ್ ಯಸ್. ಯಸ್.,ಗೆ ಬಹಿಷ್ಕಾರ ಹಾಕಿವೆ. ಅವರ 'ಸಾರ್ ಸಂಘ ಚಾಲಕ್' ಗುರುಜೀ [illegible] ಬಂಧಿತರಾಗಿದ್ದಾರೆ. ಇಡೀ ಭಾರತದ ಪ್ರತಿಯೊಂದು ಕಡೆಗಳಲ್ಲೂ ಆರ್. ಯಸ್ ಯಸ್. ನ ಮುಖ್ಯ ಕೆಲಸಗಾರರನ್ನು ಬಂಧಿಸುತಿದ್ದಾರೆ. ಅವರ ಕಾರ್ಯಾಲಯಗಳ ಜಪ್ತಿ ನಡೆದಿದೆ. ಹಲವೆಡೆ ಶಸ್ತ್ರ ಕೋವಿಗಳು ದೊರೆತ ವಾರ್ತೆಯಿದೆ. 'ಮುಸ್ಲಿಂ ನೇಶನಲ್ ಗಾರ್ಡ್ಸ್' 'ಕಮ್ಯೂನಿಸ್ಟ' ದಳಗಳಂತಹ ಇತರ ಜಾತೀಯತಾ ಸೇನಾ ಮರ್ಜಿಯ ದಳಗಳಿಗೂ ಬಹಿಷ್ಕಾರ ಬಿದ್ದಿದೆ. ಈ ಬಹಿಷ್ಕಾರವು ಭಿನ್ನ ಧೋರಣೆ ವಹಿಸಿರುವ ಹಿಂದೂ ಮಹಾಸಭೆಗಾಗಲೀ, ಮುಸ್ಲಿಂ ಲೀಗ್, ಕಮ್ಯೂನಿಸ್ಟ್ ಪಕ್ಷದಂತಹ ರಾಜಕೀಯ ಸಂಸ್ಥೆಗಳ ಮೇಲಾಗಲೀ ಬಿದ್ದಿಲ್ಲ. ಸೈನಿಕ ಮರ್ಜಿಯ ಜಾತೀಯತಾ ದಳಗಳ ಮೇಲೆ ಮಾತ್ರ ಬಿದ್ದಿದೆಯೆಂಬುದನ್ನು ಮರೆಯಬಾರದು. ಅದರಲ್ಲೂ ಈಗ ಬಹಿಷ್ಕರಿಸಿರುವವರೆಗೆ ಆರ್. ಯಸ್. ಯಸ್‌ನ್ನೇ ಬರ್ಖಾಸ್ತುಗೊಳಿಸಿದ್ದೇನೆಂದು ಅದರ 'ಗುರುಜೀ' ಬಂಧನದೊಳಗಿಂದಲೇ ಪ್ರಕಟಣೆಗೆ ಕೊಟ್ಟಿದ್ದಾರೆ.

ಭೀಕರ ಮರೀಚ ಕಾರಸ್ಥಾನ!

ಗಾಂಧಿಜೀಯಂತೆಯೇ ನೆಹರು ಮತ್ತಿತರ ರಾಷ್ಟ್ರೀಯ ನಾಯಕರನ್ನೂ ಕೊಲೆ ಮಾಡಿ, ಮುಂದೆ ಎಲ್ಲೆಡೆಯಲ್ಲೂ ಒಮ್ಮೆಗೇ ಎಂತಹ ಮತ್ತು ಯಾರಾರ ಧ್ವಂಸವನ್ನು ನಡೆಸಬೇಕೆಂದು ಈ ಜಾತೀಯ ಸಂಸ್ಥೆಗಳ ಒಳಸಂಚು ನಡೆದಿತ್ತೋ ಈಗ ಹೇಳುವದಸಾಧ್ಯ. ಆದರೆ ಮಹಾತ್ಮಾಜೀ ತಾವು ಜೀವಿಸಿರುವಾಗ ಯಾವ ರೀತಿ ಮಿಲಿಯಾವಧಿ ಜನರ ಪ್ರಾಣವುಳಿಸಿದ್ದರೋ, ಅದೇ ರೀತಿ ತಾನೊಬ್ಬನೇ ಮುಂದಾಗಿ ಸತ್ತು, ರಾಷ್ಟ್ರದ ಅಮೂಲ್ಯ ಸೊತ್ತುಗಳಾದ ಇತರ ನಾಯಕರಂತೆಯೇ ಸಹಸ್ರಾರು ಜನರ ಜೀವವುಳಿಸಿದರೆಂದು ಹೇಳಲಡ್ಡಿಯಿಲ್ಲ. ನವ ಡಿಲ್ಲಿಯಲ್ಲೀಗ ನೆಹರು, ಪಟೇಲ್ ಮತ್ತಿತರ ಮಂತ್ರಿಗಳ ನಿವಾಸದಲ್ಲೂ, ಘಟನಾ ಸಮಿತಿಯ ಸಭಾಭವನದ ಸುತ್ತಲೂ ಬಲವಾದ ಸಶಸ್ತ್ರ ಪಹರೆಯಿಡಬೇಕಾಗಿ ಬಂದಿದೆ. ಸರಿಯಾಗಿ ಶೋಧಿಸದೆ, ಪೂರ್ಣ ಗುರ್ತು ತಿಳಿಯದೆ ಎಂಥವರನ್ನೂ ಒಳಗೆ ಬಿಡುತ್ತಿಲ್ಲ. ಅಲಹಾಬಾದಿಗೆ ಬಂದಲ್ಲಿಯೂ ನೆಹರುಗಳಿದ್ದೆಡೆಯಲ್ಲಿ ಪ್ರಬಲ ಕಾವಲಿದೆ. ಭಯಂಕರ ಅಂತರಾಪತ್ತಿನ ವಾಸನೆ ದೊರೆತುದೇ ಇದಕ್ಕೆ ಕಾರಣ. ಇಡೀ ರಾಷ್ಟ್ರದಲ್ಲಿ ವಿಶೇಷತಃ ಬೊಂಬಾಯಿಯೀಚೆಯ ದಕ್ಷಿಣ ಭಾಗದಲ್ಲಿ ಆರ್. ಯ.ಸ್. ಯಸ್. ಮತ್ತು ಹಿಂದೂ ಮಹಾಸಭಾ ಕಾರ್ಯಾಲಯಗಳಿಗೆ ಬೆಂಕಿಕೊಡುವದು-ಅವುಗಳಿಗೆ ಸೇರಿದವರನ್ನು ಕಂಡಲ್ಲಿ ಮಕ್ಕು ಹುಡುಕಿ ಹುಡುಕಿ ಹೊಡೆಯುವುದು--ಇತ್ಯಾದಿ ಹಿಂಸಾಚರಣೆಗಳು ನಡೆದಿವೆ. ಇಂತಹ ಕೃತ್ಯಗಳು ಮತ್ತು ಇತರ ಅನಾಚಾರಗಳು ಗಾಂಧಿಜೀ ತತ್ವಗಳಿಗೆ ವಿರೋಧವೆಂದು ಎಚ್ಚರಿಸುತ್ತಾ, ನೆಹರು, ವಲ್ಲಭಭಾಯಿ, ಕೃಪಲಾನಿ, ಸರೋಜಿನಿ, ಪಂತ್, ಜೈಪ್ರಕಾಶ್, ದೇವದಾಸ ಗಾಂಧಿ ಮೊದಲಾದ ಪ್ರಮುಖರು ಜನತೆಯ ಕರ್ತವ್ಯದ ಕುರಿತು ಮೇಲಿಂದ ಮೇಲೆ ಭಾಷಣವೀಯುತಿದ್ದಾರೆ.

ಗಾಂಧಿಜೀಯ ವಿಧಾಯಕ ಕಾರ್ಯಕ್ರಮಗಳನ್ನು ಸರ್ವ ವ್ಯಾಪಿಗೊಳಿಸಲು ಮಹಾನಿಧಿಯೊಂದನ್ನು ರಚಿಸುವ ನಿರ್ಧಾರ ಮಾಡಿ ಪ್ರತಿಯೊಬ್ಬನೂ ತನ್ನ ಹತ್ತು ದಿನಗಳ ಉತ್ಪತ್ತಿಯನ್ನು ಈ ನಿಧಿಗರ್ಪಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಕೇಳಿಕೊಂಡಿದೆ. ಒಳಸಂಚಿನಲ್ಲಿ ಭಾಗ ವಹಿಸಿದ್ದ ಅನುಮಾನವಿರುವ ಅಲ್ವಾರಿನ ದಿವಾನ್ ಡಾ. ಖರೇ (ಕಾಂಗ್ರೆಸಿನಿಂದ ದಬ್ಬಲ್ಪಟ್ಟಿರುವ ಮಧ್ಯ ಪ್ರಾಂತ್ಯದ ಮಾಜೀ ಪ್ರಧಾನಿ) ಮತ್ತು ಅಲ್ವಾರ್ ರಾಜರನ್ನು ಸಂಸ್ಥಾನನಿಂದ ಹೊರಗೆ ನಿಲ್ಲಲು ಭಾರತ ಸರಕಾರವು ಆಜ್ಞಾಪಿಸಿದೆ. ಡಾ. ಖರೆ ಡಿಸ್‌ಮಿಸ್ ಆಗಿದ್ದಾರೆ.

ಹಿಮಾಲಯದ 'ಗೌರೀಶಂಕರ"ಕ್ಕೆ 'ಗಾಂಧೀ ಶಿಖರ" ಡಿಲ್ಲಿಗೆ 'ಗಾಂಧಿನಗರ" ವೆಂದು ಹೆಸರಿಡುವ ಸೂಚನೆಗಳು ಬಂದಿವೆ. ಜೈ ಮಹಾತ್ಮಾ!

ದ. ಕ. ಜಿಲ್ಲೆಗೂ ಮಹಾತ್ಮರ ಅವಶೇಷ ಭಸ್ಮ-ವನ್ನು ಮದ್ರಾಸಿನಿಂದಲೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಿಂದಲೂ ತರಲಾಗುವುದೆಂದೂ ಅದನ್ನು ಮಂಗಳೂರು, ಉಪ್ಪಿನಂಗಡಿಯ ಕುಮಾರಧಾರ ನೇತ್ರಾವತಿ ಸಂಗಮದಲ್ಲಿಯೂ ಉಡುಪಿಯ ವಡಭಾಂಡೇಶ್ವರದಲ್ಲಿಯೂ ವಿಸರ್ಜಿಸುವ ವ್ಯವಸ್ಥೆ ನಡೆದಿದೆಯೆಂದೂ ತಿಳಿದು ಬರುತ್ತದೆ.

ಕಟಪಾಡಿ— ಇಲ್ಲಿಯ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾಸಮಿತಿಯ ದೇವಸ್ಥಾನದಲ್ಲಿ ಪರಮ ಪೂಜ್ಯ ಬಾಪೂಜಿಯವರಿಗೆ ಗೌರವಾಶ್ರುಗಳನ್ನು ಸಲ್ಲಿಸಲು ಸಭೆ ಜರಗಿತು; ಕಣ್ಮರೆಯಾದ ಮಹಾತ್ಮರ ದಿವ್ಯಾತ್ಮವು ಅಮರ ಶಾಂತಿಯನ್ನೈದುವಂತೆ ಸ್ವಾಮಿ ಸನ್ನಿಧಿಯಲ್ಲಿ ಪ್ರಾರ್ಥಿಸಲಾಯಿತು.

ಭಾರದ್ವಾಜರ

ಇಂಗ್ಲಿಷ್-ಇಂಗ್ಲಿಷ್-ಕನ್ನಡ

ಡಿಕ್ಸ್‌ನರಿ

ಉತ್ತಮ ಪ್ರತಿ ರೂ. 6—0—0
ಸಾಧಾರಣ ಪ್ರತಿ ರೂ. 4—8—0

ಅಂಚೆವೆಚ್ಚ ಪ್ರತ್ಯೇಕ

ನವಭಾರತ ಬುಕ್ ಡಿಪೊ,
: ಉಡುಪಿ :

ನವಯುಗ

ವಿಜ್ಞಾಪನೆ

ಮಹಾತ್ಮಾಜಿಯವರ ನಿಧನದ ಸಂತಾಪ ಸೂಚನಾರ್ಥವಾಗಿ ಒಂದು ವಾರದ ನವಯುಗವನ್ನು ನಿಲ್ಲಿಸಬೇಕೆಂದು ನಿರ್ಣಯಿಸಿದ್ದರಿಂದ ಬರುವ ವಾರದ ಅಂದರೆ ತಾ.19-2-48ರ ಸಂಚಿಕೆಯು ಹೊರಡುವುದಿಲ್ಲ. ವಾಚಕರು ಗಮನಿಸಬೇಕಾಗಿ ವಿನಂತಿ.

—ವ್ಯವಸ್ಥಾಪಕ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾರೀಕು **13—2—1948**ರಿಂದ

ಪ್ರಧಾನ್ ಪಿಕ್ಚರ್ಸ್‌ನವರ

ಅನೋಖ ಕಲಾಕೃತಿ.

"ದಾಸಿ"

ರಾಗಿಣಿ, ಸಜ್‌ಮಾಲ್,

ಮುಂದಿನ ಬದಲಾವಣೆ.

"ಚಂದ್ರಹಾಸ"

(ಕನ್ನಡ ಚಿತ್ರ)

ಉಡುಪಿ

ಬಾಪೂಜಿಯವರ—ಹದಿನಾಲ್ಕನೆಯ ಸೂತಕ ದಿನ ಉಚಿತವಾಗಿ ಕಾರ್ಯಕ್ರಮಗಳನ್ನು ನಿರ್ಧರಿಸುವರೆ ಕಾಂಗ್ರೆಸ್ ಕಚೇರಿಯಲ್ಲಿ ತಾ ೭ರಲ್ಲು ಪುರಜನರ ಸಭೆಯೊಂದು ವಕೀಲ್ ಶ್ರೀ. ಕೆ ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು.

ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನ್—ಇದರ ಮಹಾಸಭೆಯು ತಾ ೭ರಲ್ಲು ಡಾ। ಎಲ್ ಆರ್ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿ ಗಾಂಧಿಜಿಯವರ ನಿಧನದ ಬಗ್ಗೆ ದುಃಖ ಸೂಚಕ ನಿರ್ಣಯವಾಯಿತು ಶ್ರೀ ಕೆ ವಿಠಲ ಶೆಣೈ, ಕಾರ್ಯದರ್ಶಿಯವರು ಒಪ್ಪಿಸಿದ ವರದಿಯನ್ನು ಓದಿ ಅಂಗೀಕರಿಸಲಾಯಿತು. ಸಂಘದ ಹೊಸ ನಿಯಮಾವಳಿಗಳು ಸ್ವೀಕರಿಸಲ್ಪಟ್ಟು ಬಳಿಕ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರ ಚುನಾವಣೆಯಾಯಿತು

ನಮಗೆ ಬಂದ ಪತ್ರಗಳ ಸಾರ

ತಾ 15 1-48ನೇ ನವಯುಗ ಸಂಚಿಕೆಯಲ್ಲಿ, ಸಮಾಧಿ ಹೊಂದಿದ ಪಲಿಮಾರು ಶ್ರೀ ರಘುಮಾನ್ಯ ತೀರ್ಥ ಶ್ರೀ ಪಾದಂಗಳವರ ಆರಾಧನ ವಿಷಯ ಘಟಿಕಾಚಲದಲ್ಲಿ ನಡೆದ ವರ್ತಮಾನವನ್ನು ಪ್ರಕಟಿಸಿದ್ದ ಕಡೆಯಲ್ಲಿ ನೆಲ್ಲೂರ್ ಕೆನೆ ಮಾಲೀಕರಾದ ಶ್ರೀ ಸೀತಾರಾಮರಾಯರು ಸಮಾಧಿ ಹೊಂದಿದ ಶ್ರೀಗಳವರ ವೃದ್ಧಮಾತೆಗೆ ತೀರ್ಥಯಾತ್ರೆಗೆ ಧನಸಹಾಯ ಮಾಡಿದ್ದಾರೆಂತ ಇತ್ತು. ಆದರೆ ಮಾರು ದಿನದ ಶ್ರೀಪಾದಂಗಳವರ ಕೂಡೆ ವಿಚಾರಿಸುವಾಗ್ಯೆ ತೀರ್ಥಯಾತ್ರೆ ಸಂಬಂಧ ಯಾರೊಬ್ಬರೂ ಶ್ರೀ. ಶ್ರೀಯವರ ಮಾತೃಶ್ರೀಯವರೀಗೆ ಸಹಾಯಮಾಡಿದ್ದು ಇಲ್ಲವೆಂಬವಾಗಿ ಹೇಳಿದ್ದರಿಂದ ಯಾರೂ ಶ್ರೀ ಸೀತಾರಾಮರಾಯರ ಮನಸ್ಸಂತೋಷಕ್ಕೊ ಅಥವಾ ಸಮಾಧಿಹೊಂದಿದ ಶ್ರೀ ಶ್ರೀಯವರ ಮಾತುಶ್ರೀಯವರ ಮನಸ್ತಾಪಕ್ಕೊ ಹೀಗೆ ಪ್ರಕಟಿಸಿದ್ದಾಗಿರಬೇಕು.

ಕೆ. ರಾಮರಾವ್, ಪವರಾಳು

ಬಾಪೂಜಿಯವರ—ಚಿರ ನೆನಹಿಗಾಗಿ ಉಡುಪಿಯ ಜನತಾ ಸೇವೆಯನ್ನು ಕೈಕೊಂಡ ಮಹನೀಯರೂ, ಹಿಂದೂ ಧರ್ಮಾಭಿಮಾನಿಗಳೂ, ಲೋಕ ಕಲ್ಯಾಣದ ಕನಸು ಕಾಣುತ್ತಿರುವವರೂ, ಎಲ್ಲರೊಂದಾಗಿ ನಗರದ ಮಧ್ಯಸ್ಥಳದಲ್ಲಿ ಎಲ್ಲಿಯಾದರು ಬಾಪೂಜಿಯ ಇಚ್ಛೆಯಂತೆ ಸರ್ವರೂ ಪೂಜಿಸುವರೆ ಅನುಕೂಲವಾಗುವಂತಹ ಒಂದು ದೇವಾಲಯವನ್ನು ಕಟ್ಟಿಸಿ ಅದರಲ್ಲಿ ವಿಷ್ಣು ಇಲ್ಲವೇ ಶ್ರೀರಾಮ ಮೂರ್ತಿಯನ್ನು ಪ್ರತಿಷ್ಠಿಸಿ, ಬಾಪೂಜಿಯವರ ಇಚ್ಛಾ ಪೂರ್ತಿಮಾಡುವರೇ, ಎಂದು ನನ್ನ ಹಾರೈಕೆ

ಎಸ್. ವಿ. ಕಾಮತ್, ಎಡ್ವಕೇಟ್.

ಬ್ರಹ್ಮಾವರ—ಪೂಜ್ಯ ಗಾಂಧೀಜಿಯವರ ನಿಧನದ ಸಂತಾಪ ಸೂಚನಾರ್ಥವಾಗಿ ತಾ 31 1 48ರಲ್ಲಿ ಮಧ್ಯಾಹ್ನ ಘಂಟೆ 12ಕ್ಕೆ ಊರಜನರ ಮೌನ ಮೆರವಣಿಗೆಯು ಆಗಿ ಘಂಟೆ 5ಕ್ಕೆ ಸಬ್ ರಿಜಿಸ್ಟ್ರಾರ್ ಶ್ರೀ ಕೆ. ವೇಣಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ ರಾಮನ್ ಗುರುಕ್ಕಳರು ಹರಿಜನರನ್ನುದ್ದೇಶಿಸಿ ಕೆಲವು ಮಾತುಗಳನ್ನಾಡಿದ ತರುವಾಯ ಎಲ್ಲರೂ ಎದ್ದುನಿಂತು ಪೂಜ್ಯ ಮಹಾತ್ಮಾಜಿಯ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಮೌನ ಪ್ರಾರ್ಥನೆಮಾಡಿದರು.

ಕಟಪಾಡಿ—ತಾ 1-2-48ರಲ್ಲಿ ಶಾಲಾ ವಠಾರದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಹಾತ್ಮಾಜಿಯವರ ನಿಧನ ಕುರಿತು ಸಂತಾಪ ಸೂಚಿಸಲಾಯಿತು. ಕೆಲವೊಂದು ಜಾತೀಯ ಕೋಮುವಾದಿ ಪ್ರತಿಗಾಮಿ ಸಂಸ್ಥೆಗಳು ಮಹಾತ್ಮರ ನಿಧನದ ದುಃಖ ಪ್ರದರ್ಶನದಲ್ಲಿ ಸಹಕರಿಸದೆ ತೋರಿಸಿದ ತಿರಸ್ಕಾರ ಧೋರಣೆಯನ್ನೂ ತಾ1-2-48ರಲ್ಲಿ ರಾಷ್ಟ್ರೀಯಸ್ವಯಂ ಸೇವಕ ಸಂಘದವರು ತಮ್ಮ ಚಟುವಟಿಕೆಗಳನ್ನು ನಡೆಸಿವೆಂಕಟ್ರಮಣದೇವಳದಲ್ಲಿ ನಡೆಸಿದ ಭೋಜನ ಸಮಾರಂಭವನ್ನೂ ಖಂಡಿಸಲಾಯಿತು

ಬೈಲೂರು—ಮಹಾತ್ಮರ ನಿಧನದ ವಾರ್ತೆಯನ್ನು ಕೇಳಿದಕೂಡಲೇ ಪುರಜನರು ಉಪವಾಸ ವ್ರತವನ್ನೂ, ಹರತಾಳವನ್ನೂ ಆಚರಿಸಿ ತಾ 31 1-48ನೇ ಬೆಳಿಗ್ಗೆಯೂ ಸಾಯಂಕಾಲವೂ ಕಪ್ಪು ಬಟ್ಟೆಯನ್ನು ಧರಿಸಿ ಕರಿ ಬಾವುಟಿಯೊಂದಿಗೆ ಸೇವಾದಳದ ಮುಂದಾಳುತನದಿಂದ ಮೆರವಣಿಗೆ ದುಃಖಸೂಚಕ ಸಭೆ ಜರಗಿಸಲಾಯಿತು. ತಾ 26-2-48ರಲ್ಲಿ ರಾಷ್ಟ್ರಸೇವಾದಳದ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ. ನಂಜೂರು ಸಂಜೀವ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಡಿ. ಡಿ. ಅನ್ವಾಲ್, ಬಿ ನಾಗಯ್ಯ ಶೆಟ್ಟಿ, ಯಂ. ಅನಂತಪ್ಪ ಕಿಣಿ ಮೊದಲಾದವರ ಭಾಷಣಗಳಾದುವು

ಉಡುಪಿ ತಾ ೧೨ನೆ ಗುರುವಾರದ ಕಾರ್ಯಕ್ರಮಗಳು—ಬೆಳಿಗ್ಗೆ ೭ ಆಂಕೆ ಗಾಂಧಿ ಮೈದಾನದಲ್ಲಿ ಸೈರನ್ ಧ್ವನಿಯೊಡನೆ ದೇವಾಲಯ, ಇಗರ್ಜಿ, ಮಸೀದಿಗಳಲ್ಲಿ ಪ್ರಾರ್ಥನೆ. ಮಧ್ಯಾಹ್ನ ೧೨ ತಾಸಿಗೆ ಮಹಾತ್ಮರ ಅವಶೇಷ ಭಸ್ಮವನ್ನು ತ್ರಿವೇಣಿ ಸಂಗಮದಲ್ಲಿ ಸಮರ್ಪಿಸುವ ಕಾಲಕ್ಕೆ ಸರಿಯಾಗಿ ಸ್ವಸ್ಥಾನದಲ್ಲಿ ಯಾ ನದಿ, ಸಮುದ್ರಾದಿ ಜಲಾಶಯ ತೀರದಲ್ಲಿ ವಿಶೇಷ ಪ್ರಾರ್ಥನೆ, ಸಾಯಂ ನಾಲ್ಕು ಗಂಟೆಗೆ ಬೋರ್ಡ್ ಹೈಸ್ಕೂಲಿನಿಂದ ಮೆರವಣಿಗೆ ಹೊರಟು ನಗರಸುತ್ತು ಬಂದು ಅಜ್ಜರಕಾಡು ಗಾಂಧಿ ಮೈದಾನದಲ್ಲಿ ವಕೀಲ್ ಶ್ರೀ. ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಐದು ಗಂಟೆಗೆ ಸಭೆ, ರಾಮಧುನ್ ಭಜನೆ, Felt Lt ಯು. ಆರ್. ಆಚಾರ್ಯರಿಂದ ಗೀತಾ ಪ್ರವಚನ, ರೆ. ಫಾ. ಎ. ಡಿ. ಪಿಂಟೋರಿಂದ ಬೈಬಲ್ ಪ್ರವಚನ, ಜನಾಬ್ ಮಹಮ್ಮದ್ ಉಸ್ಮಾನ್ ಸಾಹೇಬರಿಂದ ಖುರಾನ್ ಪ್ರವಚನ, ಶ್ರೀಮತಿ ಪ್ರೇಮಾ ಆನಂದ ಪೈಗಳಿಂದ ವೈಷ್ಣವ ಜನತೊ ಭಜನೆ, ಡಾ। ಟಿ. ಮಾಧವ ಪೈ. ಶ್ರೀಮತಿ ಪಾರ್ವತಿ ಬಾಯಿ, ಶ್ರೀ. ಎಂ. ಪಿ. ಹೆಗ್ಡೆ, ಡಾ। ಯಸ್, ಆರ್ ಪೈ ಶ್ರೀ. ಕೆ. ವೆಂಕಪ್ಪ, ಶ್ರೀ, ಎಚ್, ಹರಿಶ್ಚಂದ್ರ ರಾವ್, ಶ್ರೀ ಬಿ ಕೃಷ್ಣಯ್ಯ ಹೆಗ್ಡೆ ಇವರಿಂದ ಭಾಷಣಗಳು, ಅಧ್ಯಕ್ಷರ ಭಾಷಣವಾಗಿ ವಂದೇ ಮಾತರಂ ನೊಡನೆ ಸಭಾಂತ್ಯ ನಡೆವೆ ನಡುವೆ ಕಾಂಗ್ರೆಸ್ ಸೇವಾ ದಳದವರಿಂದ ರಾಮಧುನ್ ಭಜನೆ,

ಆರ್ ಎಸ್. ಎಸ್—ಕೂಟಕ್ಕೆ ಸ. ಬಂಧಪಟ್ಟ ನಾಲ್ಕಾರು ಮಂದಿಯ ದಸ್ತಗಿರಿಯಾಗಿದೆ ಶಿರ್ವ ಹಿರಿಯಡ್ಕ ಮೊದಲಾದ ಕಡೆಗಳಲ್ಲಿ ಈ ಕೂಟದ ಚಟುವಟಿಕೆಗಳನ್ನು ಬಹಿರ್ಸ್ತ್ರ ಪಡಿಸಲಾಗಿದೆಯೆಂದು ತಿಳಿದು ಬರುತ್ತದೆ.

ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯೊಂದು ತಾ ೧೧ರಲ್ಲು ಶ್ರೀ ಎ. ಬಿ ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿ ಗಾಂಧೀಜಿಯವರ ನಿಧನದ ಕುರಿತು ಸಂತಾಪ ಸೂಚಕ ನಿರ್ಣಯವಾಯಿತು, ಮಿ। ಆರ್, ಎ. ಸಾಮ್ಸನ್ನರು ನಿರ್ಣಯವನ್ನು ಅನುಮೋದಿಸಿದ ನಂತರ ಎಲ್ಲರೂ ಎದ್ದು ನಿಂತು ಶ್ರದ್ಧಾಂಜಲಿ ಸಲ್ಲಿಸಿದರು.

ದುಃಖಾಶ್ರು

(ಕೋಟೆ ಗಣೇಶ ಸುಬ್ಬಪ್ಪಯ್ಯ)

ಭರಸಿಡಿಲು ಹೊಡೆದಂತೆ ಪೂಜ್ಯ ಗಾಂಧೀಜಿಯ
ಮರಣ ವಾರ್ತೆಯ ಕೇಳಿ ಮರುಗದವರಾರು!
ಸರಿದಾರಿ ನಿಸರು ಆಚಾರದೇ ನೋಡಲಾಗ
ಹಿರಿಯರೇ ಧೃತಿಗೆಟ್ಟು, ಅಳಲುತಿರಲೂ,
ಬೆಳಕಿಲ್ಲದಾಯ್ತು ಕಾರ್ಗತ್ತಲೆಯು ಬಂತೆಂದು
ಕಳವಳದಿ ಸಾರೆ ಜನತೆಗೆ ಜವಾಹರನೂ;
ಹಿಂದೂ ಮುಸಲ್ಮಾನ ಬಾಂಧವರುಗಳು ಅಳುತಿರಲು
ನೊಂದಿಹರು ಜನ್ನ ಚರ್ಚಿಲ್ಲರಂತಹರೂ.
ಸ್ವಾತಂತ್ರ್ಯ ಬಂದ ಮರುದಿನವೆ ಗಾಂಧೀಜೀಯು
ಹತರಾಗಬೇಕೆ ನಮ್ಮವರ ದೆಸೆಯಿಂದ!
ಚರ್ಚಿಲ್ ರೂಜ್ವೆಲ್ಟ ಸ್ಟಾಲಿನ್ನ ಪ್ರಭೃತಿಗಳು
ನಡುಗಿರಲು ವಿಶ್ವ ಶಾಂತಿಗೆ ಖಡ್ಗವನ್ನೂ
ಹಿಡಿದು ಆಪತ್ತಿನ ವಿರುದ್ಧ ಗಾಂಧೀಜೀಯು
ಎಚ್ಚರಿಸಿ ತೋರಿದ ಅಹಿಂಸೆಯಸ್ತ್ರವನೂ.
ಸ್ವಾತಂತ್ರ್ಯ ಶಿಲ್ಪಿ ಭಾರತಮಾತೆ ಗಾಂಧಿಯರ
ಶಾಂತಿ ಸಂದೇಶವನ್ನುಳ್ಳ ಪ್ರತಿಧ್ವನಿಸೆ,
ಶಾಂತಿಗೊಳುವುದು ಬಾಪೂಜೀಯಾತ್ಮ ಪಾವನಕೆ
ಸಂಕಲ್ಪ ಬಲಿಸಿ ಸಾಧಿಸುವವನ ಗುರಿಯಾ
ಗಾಂಧಿಜೀ' ನೀನು ಜಾಗತಿಕ ದೀಪಸ್ತಂಭ!
ನೊಂದ ಜನತೆಗೆ ತೋರು ಬೆಳಕ ಕಣ್ತುಂಬ,

ಪುತ್ತೂರು—ಹೈಸ್ಕೂಲಿನ ಹೊಸ ಕಟ್ಟಡಕ್ಕೆ ಸಹಾಯ ಧನ ಕೊಟ್ಟವರ ಮಹಾಸಭೆಯು ತಾ 31 1-48ಕ್ಕೆಂದು ನಿರ್ಣಯಿಸಿ ನೋಟೀಸು ಕೊಟ್ಟನಂತರ ಪೂಜ್ಯ ಮಹಾತ್ಮಾಜಿಯವರನ್ನು ಕೊಲೆ ಮಾಡಿದುದರಿಂದ ಸಭೆಯನ್ನು ಮುಂದುವರಿಸಲಾಯಿತು. ಆ ಸಭೆಯನ್ನು ತಾ 21-2-48ಲ್ಲು ಸ್ಯಾಮ ಘಂಟೆ 5ಕ್ಕೆ ಪುತ್ತೂರು ಹೈಸ್ಕೂಲು ವಠಾರದಲ್ಲಿ ಜರಗಲಿರುವುದರಿಂದ ಎಲ್ಲರೂ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P 468/47.
O.S. 147/42.

ಕೃಷ್ಣಯ್ಯ ಶೇರಿಗಾರ ಅರ್ಜಿದಾರ,
ದಾಸಪ್ಪ ಶೇರಿಗಾರ ಸಹಾ..ಎದ್ರಿರು.

ಒಜೆದಾರನ ಕಡೆಯಿಂದ ಈ ಮೂಲ್ಕಿ ಎಸ್.ಫ್ಹದೇಸಿಂದ್ಡೆ

1 ದಾಸಪ್ಪ ಶೇರಿಗಾರ ಹೆಗ್ಗರಿ ಬೈಲ ಶೇರಿಗಾರನ ಮಗ, 2. ಮಂಜುನಾಥ ಶೇರಿಗಾರ—1ನೇ ಎದ್ರಿ ಮಗ,

ಏಡುಮರಿ ಗ್ರಾಮ

ಸದ್ರಿ ಅಮ್ಲುಜಾರಿಯಲ್ಲಿ ಎದ್ರಿರ ಬಿಂಬುಸ್ಕ್ರಿಪ್ಟನ್ನು ಲೈಲಾಮುಮಾಡಿಸುವಗೋಸ್ಕರ ಇಪ್ಪ ಮಾಡ್ಸಿಯದೆ ಈ ಕುರಿತು ನಿಮ್ಮ ದೇಗಾರದ್ದು ಅಕ್ಷೇಪವಿದ್ದ ತಾ. 27-2-48 ನೇ ದಿನ್ನ ಹಗ್ಲು 11ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರ ಹಾಜರಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿದೆ,

G. Sanjiva Rao,

Kundapur Date 7-2-48

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ

S C S. 765/1947

ಅಣ್ಣಪ್ಪ ಕಾರಂತ— ವಾದಿ

ಬಲರಾಮ ಹಂದೆ, ಮಹಾಬಲ ಹಂದೇರ ಮಗ, ಕೋಟತಟ್ಟು ಗ್ರಾಮದ ಹಂದಟ್ಟು ಪ್ರತಿವಾದಿ

ಪ್ರತಿವಾದಿಗೆ ಕೊಡುವ ನೋಟೀಸು

ಪ್ರತಿವಾದಿಯು ವಾದಿಯಿಂದ ಪಡೆದ ಸಾಮಾನುಗಳ ಕ್ರಯದ ಬಾಕಿ ರೂ 250 ನ ಬಡ್ಡಿ ಬಗ್ಗೆ ಮಾಡಿದ ಮೇಲಿನ ದಾವೆಯನ್ನು ತಾ 21 2-1948ಕ್ಕೆ ತನಿಖೆ ಯಿಟ್ಟಿರುವುದರಿಂದ ಉಪಸ್ಥಿತರಿರುವದಾದರೆ ಆ ದಿನ ಹಗಲು 11 ಗಂಟೆಗೆ ಹಾಜರಾಗತಕ್ಕದ್ದು

K. Ramappaiya

Advocate for Plff

Kundapur, 10-2-48

ಅವಸರದಲ್ಲಿ ಬರುವ ಅತಿಥಿಗಳಿಗೆ

ಪ್ರೀತಿಯ ಪಾನಕ

ಲಿಂಬೆ, ಕಿತ್ತಳೆ, ಅನನಾಸಗಳಿಂದ ತಯಾರಿಸಲ್ಪಟ್ಟ ಶಂಕ ಮಾರ್ಕಿನ

ಶರಬತ್ತು

ಉಷ್ಣ ಕಾಲದಲ್ಲಿ ಮಧುರ ಪಾನೀಯ

ತಯಾರಕರು—

ಕನ್ನಡ ಸೋಪ್ ಎಂಡ್ ಇಂಡಸ್ಟ್ರಿಯಲ್ಸ್ ಲಿಮಿಟೆಡ್,

ಮಂಗಳೂರು

ಚಂದ್ರಿಕಾ

ಹಲ್ಲಿನ ರೋಗಗಳನ್ನೂ ಕ್ರಿಮಿಯನ್ನೂ ಹೋಗಲಾಡಿಸಿ ಶುಚಿಕರಿಸುವ

ಹಲ್ಲು ಪುಡಿ

ಒಂದು ತೊಲೆ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಪಿ. ಲಿಮಿಟೆಡ್,

ಕಾಸರಗೋಡು, ದ. ಇಂಡಿಯಾ.

CHITRAKOT ASTHMA CURE

(Registered)

Widely renowned and a most Powerful highly effective remedy for curing Asthma completely by one dose to be taken on 24-2-1948 full moonday.

Apply at once in English

SRI MAHATMA JOGI BABA

Ayurvedic Buti Bhandar,

P. O CHITRAKOT, U P.

Approved firm by the Govt. of Mysore Certified by the Agent of the Govt. of Cylone & Indian.

ಅಮೃತಾಂಜನ. ತಲೆನೋವು, ಶೀತ, ನೆಗಡಿ, ಉಳುಕು, ಕೀಲುನೋವು, ಕುತ್ತಿಗೆ ಹಿಡಿತ, ಮೈಕೈನೋವು ಮುಂತಾದ ಬೇನೆಗಳಿಗೆ ರಾಮಬಾಣ

REGD.

ಕಡ್ಡ, ಹೂಕಟ್ಟೆ ಮತ್ತು ಎಲ್ಲ ಅಂಗಡಿಗಳಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್,

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರು

ಜಿಲ್ಲೆಯ ಆರ್.ಎಸ್.ಎಸ್.ಜನರ ಬಂಧನ- ಮಂಗಳೂರಲ್ಲಿ ತಾ ೫ರಂದು ಆರ್. ಎಸ್. ಎಸ್. ಸಂಘದ ಕಾರ್ಯಕರ್ತರ ಬಂಧನಕ್ಕೆ ಆರಂಭವಾಗಿ ರಾತ್ರಿಯೊಳಗೆ ೧೦ ಮಂದಿಯು ಬಂಧನವಾಗಿದೆ. ಅವರನ್ನು ಮರುದಿನ ಬೆಳಗ್ಗಿನ ರೈಲುಬಂಡಿಯಲ್ಲಿ ವೆಲ್ಲೂರು ಜೈಲಿಗೊಯ್ದರು. ಬಂಧಿತರಾದವರು ಎಮ್. ಜನಾರ್ಧನ ಮಲ್ಯ (ವಕೀಲ್), ವಿಜಾರು ಗೋವಿಂದ ಪೈ, (ಮುನ್ಸಿಪಲ್ ಕೌನ್ಸಿಲರ್) ಎಮ್. ಅನಂತ ಪೈ, ಪಂಜನುಹಾಲ್ ವಾಸುದೇವ ಕಾಮತ್, ಮಂಗಲ್ಪಾಡಿ ರಾಘವೇಂದ್ರ ಬ್ಯಾನುಭಾಗ, ಮಂಜೇಲ್ ವಿಠಲ್ ನಾಯಕ್, ಎಮ್. ಗೋಪಾಲಕೃಷ್ಣ ಕಾಮತ್ (ಕಾಮತ್ ಎಂಡ್ ಕೊ), ಬಸ್ತಿ ದಾಸಪ್ಪ ಶೆಣೈ, ಬಸ್ತಿ ಮಂಜುನಾಥ ಕಾಮತ್, ಯು. ಮೋಹನರಾವ್ ಶೆಣೈ, ತಾ ೬ರಂದು ಇನ್ನೂ ಕೆಲವು ಬಂಧನಗಳಾಗಿವೆ. ಜಿಲ್ಲೆಯ ಇತರ ಕಡೆಗಳಲ್ಲೂ ಇದೇ ರೀತಿ ಬಂಧನಗಳಾಗಿವೆ.

ಬಾಪೂಜಿಗೆ ಭಾಷ್ಪಾಂಜಲಿ- ಕಳೆದ ತಾ ೬ರಂದು ಉಪ್ಪಿನಕೋಟೆಯಲ್ಲಿ ಹತ್ತು ಸಮಸ್ತರು ಸೇರಿ ಮಹಾತ್ಮಾಗಾಂಧೀಜಿಗೆ ತಮ್ಮ ಬಾಷ್ಪಾಂಜಲಿಯನ್ನು ನೇತ್ರಾವತಿ ದಡೆಯಲ್ಲಿ ಸುರಿಸಿ ಗಾಂಧಿಜೀಯು ಆತ್ಮಕ್ಕೆ ಶಾಂತಿಕೋರಿದರು.

ಮೈದಾನಿನಲ್ಲಿ— ಹಿಂದೂ ಕ್ರೈಸ್ತ ಮುಸಲ್ಮಾನ ಬಂಧುಗಳು ಸಭೆ ಸೇರಿದರು. ಶ್ರೀ ಕೇಶವ ಭಟ್ಟರು ಗೀತೆಯಿಂದಲೂ ಮೌಲ್ವಿ ಯುಸೂಫ್ ಸಾಹೇಬರು ಕುರಾನಿನಿಂದಲೂ ರೆ| ಫಾ| ಕೊಯ್ಲೋರವರು ಬೈಬಲಿನಿಂದಲೂ ಪ್ರಾರ್ಥನೆಗಳನ್ನು ಓದಿದರು. ಶ್ರೀ ರಾಮರಾಜಕಿಣಿಯರು 'ವೈಷ್ಣವಜನತೋ' ಮತ್ತು ರಾಮಧುನ್ ಹಾಡಿದರು ಬಳಿಕ ಜಿಪ್ಪು [illegible]ನವರು ದು:ಖ ಸೂಚಕ ಬ್ಯಾಂಡುಬಾರಿಸಿದರು. ಅನಂತರ ಸರ್ವರೂ ಎದ್ದುನಿಂತು 'ಬಾಪೂಜೀ ಚಿರಾಯುವಾಗಲಿ' ಎಂದು ಭಾಷ್ಪಾಂಜಲಿ ಸುರಿಸಿ ಅವರ ಆತ್ಮಕ್ಕೆ ಶಾಂತಿಕೋರಿದರು. ಹಿಂದೂ ಮಹಾಸಭೆಯ ನಾಯಕರಾಗಲೀ ಆರ್. ಎಸ್. ಎಸ್. ಸಂಘಟಕರಾಗಲೀ ಈ ಸಮಾರಂಭದಲ್ಲಿ ಭಾಗವಹಿಸಿದಂತೆ ತೋರಲಿಲ್ಲ.

ಸರ್ವಪಕ್ಷಗಳ ಸಭೆಗಳು— ರಾಷ್ಟ್ರಪಿತರಾದ ಮಹಾತ್ಮಾ ಗಾಂಧೀಜಿಯವರ ಮರಣಕ್ಕೆ ದುಃಖ ಸೂಚಿಸುವ ಮತ್ತು ಈ ದುರಂತದಿಂದ ಉಂಟಾದ ಪರಿಸ್ಥಿತಿಯಲ್ಲಿ ಜನತೆಯು ಹೇಗೆ ವರ್ತಿಸಬೇಕೆಂಬುದನ್ನು ತಿಳಿಸುವ ಸಲುವಾಗಿ ಕಾಂಗ್ರೆಸ್, ಕಮ್ಯೂನಿಸ್ಟ್, ಸೋಸಿಯಲಿಸ್ಟ್, ಮುಸ್ಲಿಂ ಲೀಗಿನ ಮತ್ತಿತರ ಸಭೆಗಳು ನಗರದ ಬೇರೆ ಬೇರೆ ಸ್ಥಳಗಳಲ್ಲಿ ಜರಗಿದವು. ಡಾ| ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಶ್ರೀಗಳಾದ ಕೆ. ಕೆ. ಸೆಟ್ಟಿ, ಎಸ್. ಎನ್. ಹೊಳ್ಳ, ಎಸ್. ಎಸ್. ಕಿಲ್ಲೆ, ಸಂಜೀವನಾಥ, ಮಹಮ್ಮದ್ ಕವಾಲ್, ಬಿ ವಿ. ಕಕ್ಕಿಲ್ಲಾಯ ಮತ್ತು ಶ್ರೀಮತಿ ಮೇರಿ ಬ್ರಿಟೋರವರು ಮಾತನಾಡಿದರು. ಜೆಪ್ಪಿನಲ್ಲಿ ಜರಗಿದ ಸಭೆಗೆ ದ. ಕ. ಕಾಂಗ್ರೆಸಿನ ಉಪಾಧ್ಯಕ್ಷ ಶ್ರೀ ಎಚ್. ನಾರಾಯಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಕಂಕನಾಡಿಯಲ್ಲಿ ಶ್ರೀ ಕೆ. ಕೆ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಡಾ| ಯು. ಪಿ. ಮಲ್ಯ, ಎಮ್. ಎಲ್. ಎ ಮತ್ತು ಶ್ರೀ ವೆಂಕಟೇಶ ಪೈಗಳು ಮಾತನಾಡಿದರು.

ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರ ಶೋಕ— ಗವರ್ನಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಆ ಕಾಲೇಜಿನ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಮಹಾತ್ಮರ ನಿಧನದ ಬಗ್ಗೆ ಸಂತಾಪ ಸೂಚಿಸಿದರು. ಗವರ್ನಮೆಂಟ್ ಹಾ| ಎ| ಟ್ರೈನಿಂಗ್ ಶಾಲೆ, ರಾಷ್ಟ್ರೀಯ ಬೆಸೆಂಟ್ ಬಾಲಿಕಾ ಪಾಠಶಾಲೆ, ಸೈಂಟ್ ಅಗ್ನೇಸ್ ಕಾಲೇಜು, ಸೈಂಟ್ ಜೋಸ್ಸ್ ಶಾಲೆಯ ಹಳೆಯ ವಿದ್ಯಾರ್ಥಿ ಸಂಘ ಸಂಸ್ಥೆ ಮೊದಲಾದುವುಗಳಲ್ಲಿಯೂ ದು:ಖ ಸೂಚಕ ಸಭೆ ಭಾಷಣಗಳಾದುವು.

ದಕ್ಷಿಣ ಕನ್ನಡ.

ಕನ್ನಡ ಬರೆಹಗಾರರ ಸಮಿತಿ— ಕಾಸರಗೋಡಿನಲ್ಲಿ ನಡೆದ ಸಾಹಿತ್ಯಗೋಷ್ಠಿಯಲ್ಲಿ ನಿಶ್ಚಿತವಾದಂತೆ ಕನ್ನಡ ಬರೆಹಗಾರರ ಸಮಿತಿಯ ನಿರ್ಮಾಣಕ್ಕೆ ಪ್ರಾರಂಭವಾಗಿದೆ. ಯೋಜನೆಯೊಂದನ್ನು ಸಿದ್ಧಪಡಿಸಿ, ಉಪಸಮಿತಿಯ ಸದಸ್ಯರಿಗೆ ಕಳುಹಿಸಲಾಗಿದೆ. ಕಾಸರಗೋಡಿನಲ್ಲಿಯೇ ಸುಮಾರು ೬೦ ಸಾಹಿತಿಗಳು ಸಮಿತಿಯ ಸದಸ್ಯರಾಗಿದ್ದಾರೆ. ಸಮಿತಿಗೆ ಸಾಹಿತ್ಯವಿಲಾಸಿಗಳಿಂದ ಪತ್ರಿಕಾಕರ್ತರಿಂದ ಮತ್ತು ಗ್ರಂಥ ಪ್ರಕಟನೆಯ ಸಂಸ್ಥೆಗಳಿಂದ ಸಲಹೆ ಸಹಕಾರ್ಯಗಳು ಅಗತ್ಯವಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ. (೧) ತಿಂಗಳು ತಿಂಗಳಂತೆ ಕನ್ನಡದಲ್ಲಿ ಪ್ರಕಟವಾಗುತ್ತಿರುವ ಗ್ರಂಥಗಳ ಪರಿಚಯ ಪುಸ್ತಿಕೆ. (೨) ಜೊತೆಗೆ ಇತರ ಭಾರತೀಯ ಸಾಹಿತ್ಯಗಳ ಪರಿಚಯ. ಮುಖ್ಯ ಉದ್ದೇಶಗಳಾಗಿವೆ. ಈ ಯೋಜನೆ ಸಿದ್ಧಿಸಬೇಕಾದರೆ ಪತ್ರಿಕೆಗಳು ಪ್ರಕಟನೆಯ ಮೂಲಕವಾಗಿ ಮತ್ತು ಸಾಹಿತ್ಯವಿಲಾಸಿಗಳು ಹಾಗು ಗ್ರಂಥ ಪ್ರಕಾಶನ ಸಂಸ್ಥೆಗಳು ಸದಸ್ಯರಾಗಿ ಸಹಕರಿಸುವುದು ಅವಶ್ಯ. ಸದಸ್ಯತ್ವದ ಚಂದಾ ಮತ್ತು ಬೇರೆ ವಿವರಗಳ ಯೋಜನೆಗೆ ಉಪಸಮಿತಿಯ ಒಪ್ಪಿಗೆ ದೊರೆತೊಡನೆ ಪ್ರಕಟಿಸಲಾಗುವುದು. ಮುಂದಿನ ತಿಂಗಳೊಳಗಾಗಿ ಕಾರ್ಯ ಪ್ರಾರಂಭಿಸುವ ವಿಚಾರವಿದೆ. ಆದ್ದರಿಂದ ಸಲಹೆಗಳನ್ನು ಸದಸ್ಯರಾಗುವ ಬಗ್ಗೆ ಒಪ್ಪಿಗೆಯನ್ನು ಎಲ್ಲರೂ ಆದಷ್ಟು ಬೇಗ ಕೆಳಗಿನ ವಿಳಾಸಕ್ಕೆ ತಿಳುಹಿಸಬೇಕೆಂದು ಬೇಡುತ್ತೇನೆ. ಶ್ರೀ ರಂಗ, ಪ್ರಧಾನ ಕಾರ್ಯದರ್ಶಿ, ಕನ್ನಡ ಬರೆಹಗಾರರ ಸಮಿತಿ, C/o ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

ಮಂಗಲಪಾಡಿ— ರಾಷ್ಟ್ರಪಿತ ಬಾಪೂಜಿಯ ನಿಧನದ ವಾರ್ತೆ ಕೇಳಿದ ಇಲ್ಲಿಯ ಜನತೆ ದಿಗಿಲುಗೊಂಡಿತು. ಮರುದಿನ ಎಲ್ಲಾ ಹೋಟೆಲು, ಅಂಗಡಿ, ಶಾಲೆಗಳು ಮುಚ್ಚಲ್ಪಟ್ಟು ಹರತಾಳ ಆಚರಿಸಲ್ಪಟ್ಟಿತು. ಸ್ಥಳೀಯ ಶಾರದಾ ಎಲಿಮೆಂಟರಿ ಶಾಲೆಯ ಸಹಾಯಾರ್ಥವಾಗಿ ಪ್ರದರ್ಶಿಸಲ್ಪಡುತ್ತಿದ್ದ ಬಯಲಾಟವು ನಿಲ್ಲಿಸಲ್ಪಟ್ಟಿತು.

ಹಿಂದುಸ್ಥಾನಿ ಪರೀಕ್ಷೆಗಳು— ದಕ್ಷಿಣ ಭಾರತ ಹಿಂದುಸ್ಥಾನೀ ಪ್ರಚಾರ ಸಭೆಯ ಪರೀಕ್ಷೆಗಳು ಇದೇ ತಿಂಗಳ ತಾ 21, 22, 23 ನೇ ದಿನಗಳಲ್ಲಿ ನಡೆಯುವುವು ಮಂಗಳೂರಲ್ಲಿ ಈ ಪರೀಕ್ಷೆಗಳು ಮೊದಲು ಕೆನರಾ ಹೈಸ್ಕೂಲಿನಲ್ಲಿ ನಡೆಯುತ್ತಿದ್ದವು. ಈ ಸಾರಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದರಿಂದ ಪ್ರಾಥಮಿಕ ಪರೀಕ್ಷೆಯನ್ನು ಮಾತ್ರ ಕೆನರಾ ಹೈಸ್ಕೂಲಿನಲ್ಲಿಯೂ ಇತರ ಪರೀಕ್ಷೆಗಳನ್ನು ಗಣಪತಿ ಹೈಸ್ಕೂಲಿನಲ್ಲಿಯೂ ನಡೆಯುವ ವ್ಯವಸ್ಥೆ ಮಾಡಲಾಗಿದೆ

ಯೇಣಗುಡ್ಡೆ ಗರಡಿ ಬಿಲ್ಲವರ ಸಂಘ, ಮುಂಬಯಿ— ತಾ. 29-1-48ರ [illegible] ಸಂಘದವರು ಮುಂಬಯಿಗೆ ಆಗಮಿಸಿರುವ ಶ್ರೀ. ಕಟಪಾಡಿ ಮುದ್ದು ಸುವರ್ಣರವರನ್ನು ಆಮಂತ್ರಿಸಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು. ಸಂಘೋದ್ದೇಶ ಸಾಧನೆಗಳನ್ನೂ ಸಂಘವು ಸ್ಥಾಪಿಸಿದಂದಿನಿಂದ ಈ ವರೆಗೆ ನಡೆಸಿಕೊಂಡು ಬಂದಿರುವ ಕೆಲಸಗಳನ್ನೂ ಶ್ರೀಗಳಾದ ಪಿ. ಕೆ. ಸುವರ್ಣ, ಡಿ. ಬಿ. ಕೋಟ್ಯಾನ್, ವೈ. ವಿಟ್ಠಲ ಅಮೀನ್ ಇವರುಗಳು ತಿಳಿಯಪಡಿಸಿದನಂತರ, ಅತಿಥಿಗಳಾಗಿ ಆಗಮಿಸಿದ್ದ ಶ್ರೀಗಳಾದ ಕಟಪಾಡಿ ಅಣ್ಣಯ ಕೋಟ್ಯಾನ್, ಯನ್. ಯಂ. ಉದ್ಯಾವರ್ ಇವರುಗಳೂ ತಮ್ಮ ಭಾಷಣವಿತ್ತರು. ಅಂದಿನ ಅಧ್ಯಕ್ಷ ಶ್ರೀ. ಸುವರ್ಣರವರು ಸಂಘದ ಧ್ಯೇಯಗಳನ್ನು ತಿಳಿದು ತುಂಬಾ ಸಂತೋಷಪಟ್ಟು ಗರಡಿಯಲ್ಲಿ ಬಿಲ್ಲವರಿಗೆ ಇರತಕ್ಕ ಹಕ್ಕು ಬಾಧ್ಯತೆ, ಸ್ಥಾನಮಾನಗಳನ್ನು ಕಾಪಾಡಿಕೊಳ್ಳಲು ಪ್ರತಿಯೋರ್ವ ಬಿಲ್ಲವನೂ ಪ್ರಯತ್ನಿಸತಕ್ಕದ್ದೆಂತಲೂ, ಸಂಘಕ್ಕೆ ತನ್ನಿಂದಾಗುವ ಮಟ್ಟಿನ ಸಹಾಯವೀಯಲು ತಾನು ಸಿದ್ಧನಿರುವೆನೆಂತಲೂ ಹೇಳಿ ಚಿಕ್ಕ ಚೊಕ್ಕ ಭಾಷಣ ಮಾಡಿದರು. ಲಘು ಫಲಾಹಾರದೊಂದಿಗೆ ಸತ್ಕಾರ ಕೂಟವು ಕೊನೆಗೊಂಡಿತು.

ನೋಟೀಸು

ಮೂಲ್ಕಿ ಗ್ರಾಮಾಭಿವೃದ್ಧಿ ಸೆಂಟರು "೩ನೇ ಕೃಷಿ ಕೈಗಾರಿಕೆ ಪ್ರದರ್ಶನವನ್ನು" ತನ್ನ ಮುಂಡ್ಕೂರು ಸೆಂಟರಿನಲ್ಲಿ ಜಿಲ್ಲಾ [illegible] ಸಂಘದ ಆಶ್ರಯದಲ್ಲಿ ಇದೇ ಬರುವ

ಫೆಬ್ರುವರಿ ತಾ 27—28—29ಕ್ಕೆ

ಜರಗಿಸುವುದು.

ಪಶುಪ್ರದರ್ಶನವೂ ನಡೆಯುವುದು.

ಪಶು ಇಲಾಖೆಯವರು ಇನಾಮ ಕೊಡಲು ರೂ. 100ನ್ನು ಸೆಕ್ಷನ್ನು ಮಾಡಿರುವರೆಂದು ಸಂತೋಷ ಮೂಲಕ ಸೂಚಿಸುವೆವು. ಸ್ಟೋಲ್ ಫೀ ಮತ್ತು ಪ್ರದರ್ಶನ ಟಿಕೇಟು ಸಹ ಇಲ್ಲವೆಂದು ನಿಶ್ಚಯಿಸಿರುತ್ತಾ ಜಿಲ್ಲೆಯ ಅನೇಕರು ಮಾಡುವ ಊರ ಕೃಷಿ ಕೈಗಾರಿಕೆ ವಸ್ತುಗಳನ್ನು ಕಳುಹಿಸಿ ಪ್ರದರ್ಶಿಸುವುದಲ್ಲದೆ ಎಲ್ಲವರೂ ಬಂದು ನೋಡಲು ಸ್ವಾಗತವಿದೆ.

ಮಹಾಬಲ ಶೆಟ್ಟಿ- ಅಧ್ಯಕ್ಷ.
ಕೆ. ನಾರಾಯಣ ಶೆಟ್ಟಿ-ಉಪಾಧ್ಯಕ್ಷ.
ಲಕ್ಷ್ಮಣ ಕಾಮ್ತಿ-ಕೋಶಾಧಿಕಾರಿ.
ಸತ್ಯನಾರಾಯಣ ರಾವ್, ಎಲ್ಲಪ್ಪ ಶೆಟ್ಟಿ, ವೆಂಕಣ್ಣ ಶೆಟ್ಟಿ, ನಾರಾಯಣ ರಾವ್, ಶಿವಣ್ಣ ಶೆಟ್ಟಿ, ಎಮ್. ಆರ್. ಪೂಂಜ-ಕಾರ್ಯದರ್ಶಿಗಳು.
ಮೂಲ್ಕಿ 18-1-48.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
ಕ್ರಮಸಂಖ್ಯೆ 27,1948
R. I. A. 65/1948

ದೇವು ಸೆಟ್ಟಿ ಕೂಡಾ 10 ಜನರು ವಾದಿರು.
ಅರ್ಜಿದಾರರು
ಕೃಷ್ಣಮೂರ್ತಿ ರಾವ್ ಕೂಡಾ 6 ಜನರು.
ಪ್ರತಿವಾದಿರು —ಎದ್ರಿರು.

ಈ ಮೂಲಕ ಸಕಲ ಜನರಿಗೂ ತಿಳಿಯಪಡಿಸುವದೇನೆಂದ್ರೆ-ಬೆಳ್ಳು ಗ್ರಾಮದ ಬಂಟರ ಮತ್ತು ಬಿಲ್ಲವರ ಸಮಾಜದವರ ಕಡೆಯಿಂದ ಕೂಡಾ ನಿವೃತ್ತಿ ಕೇಳಿ ವಾದಿರು ವಾದಿ ಮೇಲ್ಕಾಣ್ಸಿದ ದಾವೆಯಲ್ಲಿ ಸದ್ರಿ ಬೆಳ್ಳು ಗ್ರಾಮದ ಬಂಟರ ಮತ್ತು ಬಿಲ್ಲವರ ಸಮಾಜದವರ ಕಡೆಯಿಂದ ಸದ್ರಿ ದಾವಾ ನಡೆಸುವರೆ ತಮಗೆ ಪರ್ಮೀಶನ ಕೊಡಿಸಬೇಕಾಗಿ ಕೇಳಿ ವಾದಿರು ಕೊಟ್ಟ ಮೇಲ್ಕಂಡ ಅರ್ಜಿಯು ತಾರೀಕು 19-2-1948ಕ್ಕೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಇದ್ದವರು ಮೇಲ್ಕಂಡ ಕೋರ್ಟಿನ ಮುಂದೆ ಸದ್ರಿ ದಿನ ಬೆಳಿಗ್ಗೆ 11 ಘಂಟೆಗೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ಎಂಬದನ್ನು ಈ ಮೂಲಕ ಪ್ರಕಟಿಸಲಾಗಿಯದೆ.

P. Ramachandra Rao
ವಾದಿರ ಕಡೆ ವಕೀಲ.
ಕಾರ್ಕಳ, ತಾ 9-2-48

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
O. S. 672/47

ವಾದಿ. ಕಂದಾವರ ಮಹಾಲಿಂಗಸೆಟ್ಟಿ.
ಪ್ರತಿವಾದಿರು. ನಾಗಮ್ಮ ಸೆಟ್ಟಿ ಸಹಾ.

ಸದ್ರಿ ದಾವೆಯ 1ನೇ ಪ್ರತಿವಾದಿಗೆ ತಿಳಿಯಪಡಿಸುವದ್ದು 1ನೇ ಪ್ರತಿವಾದಿಯು ನಾಗಮ್ಮ ಸೆಟ್ಟಿ, ಲಕ್ಷ್ಮಿ ಸೆಟ್ಟೀರ ಮಗಳು. ಕುಂದಾಪುರ ತಾಲ್ಲೂಕು ಬೇಳೂರು ಗ್ರಾಮದಲ್ಲಿರುವವಳು.

ಸದ್ರಿ ವಾದಿಯು ತನಗೆ ಮತ್ತು ತನ್ನ ತಾಯಿ ಮೃತ ಅಂತಮ್ಮ ಸೆಟ್ಟಿಗೀಗೆ ಕೊಡಾ ಬರತಕ್ಕ ಅವನಾರ್ಥದ ಬ್ಯಾಲೇಜು ರೂಪಾಯಿ 1337-2-0ನ್ನು ಬರಮಾಡಿಕೊಳ್ಳುವರೇ ದಾಖಲು ಮಾಡಿದ ಮೇಲಿನ ದಾವೆ ತಾ 19-2-48ಕ್ಕೆ ತನಿಖೆಗೆ ಇಟ್ಟಿದೆ. ಆ ಕುರಿತು ನಿಮ್ಮ ಉಜಾರಿದಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಾಣ್ಸಿದ ಕೋರ್ಟುಮುಂದೆ ಹಾಜರಾಗಿ ತಿಳಿಸತಕ್ಕದ್ದು

Y. Manjaya Shetty
Advocate for Plff.
ತಾ. 5-2-48, ಮೊಕ್ಕಾಂ ಕುಂದಾಪುರ

ಬಲೂನ್ಸ್ [illegible]
ಬಾಳಿಕೆ ಬರುವ, ಆಕರ್ಷಕ ಹಾಗೂ ಬಣ್ಣ ಬಣ್ಣದ ಚಲೋ ಟ್ಯೂಬ್‌ಗಳೂ ಬಲೂನ್ಸ್‌ಗಳೂ ಮಿತ ದರದಲ್ಲಿ ಪುಷ್ಕಳ ಪಗಾರದೊಂದಿಗೆ ದೊರೆಯುವುವು. ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.
ಜಯಭಾರತ ರಬ್ಬರ್ ಪ್ರೊಡಕ್ಟ್ಸ
609, ವಿಠಲ ಪೇಟೆ, ಪೂನಾ 2.
Jay Bharat Rubber Products
609, Vetal Peth, Poona 2.

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ ಬೆಲೆ; ರೂ 3|; ಸ್ಪೆಶಲ್ ರೂ. 5; ಅಧಿಕಾಧಿಕ ಸ್ಪೆಶಲ್ ರೂ.೬|-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ]
M/S P. DEVEE, P. Box (N. J.)
Tollygunge CALCUTTA.
ಸ್ಟಾಕಿಸ್ಟರು: ರಹಾಕಂಪೆನಿ. ಮಂಗಳೂರು

ವಿಶ್ವಾಸ ಮತ್ತು ಭದ್ರತೆ ನಾಮಧೇಯವು
ಸರ್ವರ ಅನುಕೂಲತೆಗಳಿಗೂ ನಿಲುಕುವಂತಹ ಆಕರ್ಷಕ ಯೋಜನೆಗಳನ್ನು ಕಲ್ಪಿಸುವವು
ಲಾಭದಾಯಕ ಶರತ್ತುಗಳಿಂದ ಗೃಹಸ್ಥ ಪ್ರತಿನಿಧಿಗಳು ಬೇಕಾಗಿದ್ದಾರೆ.
ವಿವರಗಳಿಗೆ ಬರೆಯಿರಿ
ದಿ ಮೆನೇಜಿಂಗ್ ಡ್ಯಾರೆಕ್ಟರ್,
ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕೊ.,
ಲಿಮಿಟೆಡ್.
ಹಸನ್ ಚೇಂಬರ್ಸ್, ಪಾರ್ಸಿ ಬಜಾರ್ ಸ್ಟ್ರೀಟ್,
ಫೋರ್ಟ್, ಬೊಂಬಾಯಿ 1

ನಿಯಂತ್ರಣವು ನೀತಿಬಾಹಿರ

ಲೇಖಕರು: ಶ್ರೀ ಬಿ. ನಾರಾಯಣ ಶೆಟ್ಟಿ, ವಕೀಲ್

[illegible]ರವ ಹಳ್ಳಿಗಳ ಜೀವಾತ್ಮನೆನಿಸಿದ್ದು, ಹಳ್ಳಿಗರ ಗೋಳುಗಳಿಗೆ ಉಸಿರನ್ನು ಕೊಟ್ಟು, ನಾಡಿನ ಮಹಾತ್ಮಾಜಿಯು ಇಂದು ಮಡಿದಿರುವರು. ಅವರ ಆತ್ಮಕ್ಕೆ ಚಿರಶಾಂತಿಯಿರಲಿ. ಕಂಟ್ರೋಲ್ ಯಾನೆ ಬೆಲೆ ನಿಯಂತ್ರಣವೆಂಬ ಪಾಶವನ್ನು ಕಿತ್ತೊಗೆದು ಹಳ್ಳಿಗರಿಗೆ ತನ್ನ ಕೊನೆಯ ದಾನವನ್ನಿತ್ತರು.

ಆದರೆ ಈಗಾಗಲೆ ಪಟ್ಟಣ ನಿವಾಸಿಕರಾದ ಸರಕಾರೀ ಮತ್ತು ಇತರ ನೌಕರ ವರ್ಗದವರು ತಮ್ಮ ಸ್ವಾರ್ಥ ದೃಷ್ಟಿಯಿಂದ ಕಂಟ್ರೋಲುಗಳನ್ನು ಪುನರುಜ್ಜೀವನಗೊಳಿಸುವ ಯತ್ನಗಳನ್ನು ಸಾಗಿಸಿಕೊಂಡು ಬಂದಿರುವರಲ್ಲದೆ, ಜನರು ಕಂಟ್ರೋಲಿಗಾಗಿ ಹಾತೊರೆಯುತ್ತಿದ್ದಾರೆಂದು ಕೃತಕ ಕೂಗನ್ನು ಎಬ್ಬಿಸಿ ಮನವಿಗಳನ್ನು ಸರಕಾರಕ್ಕೆ ಕಳುಹಿಸುತ್ತಿದ್ದಾರಾಗಿ ತಿಳಿಯಬರುತ್ತದೆ.

ಕಂಟ್ರೋಲುಗಳನ್ನು ರದ್ದುಗೊಳಿಸುವುದರ ಕುರಿತು ಮಹಾತ್ಮಾಜಿಯವರ ಅಂದೋಲನವು ಅನಾಧಾರವಾದ್ದೆಂದು ಟೀಕಿಸುವವರು ಹಲವರಿದ್ದಾರೆ. ಆದರೂ ಅರ್ಥಿಕ ದೃಷ್ಟಿಯಿಂದ ಪರಿಶೀಲಿಸುವುದಾದರೆ ಗಾಂಧೀಜಿಯವರ ಅಭಿಪ್ರಾಯವು ಸರ್ವ ಸಮಂಜಸವಾದ್ದೆಂದು ನಿಸ್ಸಂದೇಹವಾಗಿ ಹೇಳಬಹುದು.

ಅಂದು ಬ್ರಿಟಿಷ್ ಸರಕಾರವು ತನ್ನ ಯುದ್ಧಮುಖ ರಚನಾರ್ಥ ಕಾರ್ಯದ ಭಾಗವಾಗಿ ಇಂಡಿಯನ್ ಕರೆನ್ಸಿಯನ್ನು 172 ಕೋಟಿಯಿಂದ 860 ಕೋಟಿ ರೂಪಾಯಿವರೆಗೆ ಏರಿಸಿತು. ಈ ಕರೆನ್ಸಿಯ ಬೆಂಬಲಕ್ಕಿರುವ ಬ್ರಿಟಿಷ್ ಸ್ಟರ್ಲಿಂಗು ತೇಲಹತ್ತಿತು. ಇದ್ದರಿಂದ ಸ್ವಾಭಾವಿಕವಾಗಿ ರೂಪಾಯಿಯ ಬೆಲೆಯು 0-3-4ಕ್ಕೆ ಇಳಿಯಿತು. ಇದರಿಂದ ಮಾಲುಗಳ ಕ್ರಯವು ಏರಿತೆಂದು ಕಾಣಿಸಿಕೊಂಡಿತು. ಆ ಸಂದರ್ಭದಲ್ಲಿ 'ಮಾಲಿಗೆ ಮಾಲು ಕೊಟ್ಟು ಕೊಳ್ಳಿರಿ' ಎಂದು ಗಾಂಧೀಜಿ ಘೋಷಿಸಿದ್ದರು. ಅಂತೆಯೆ ಜನರು ವರ್ತಿಸಿದರೆ, ಯುದ್ಧಮುಖ ರಚನಾರ್ಥ ಕ್ರಮವು ನೆಲಕ್ಕೆ ಉರುಳುವುದೆಂದು ಅರಿತ ಬ್ರಿಟಿಷ್ ಸರಕಾರವು, ಬರೆ 0-3-4 ಬೆಲೆಯುಳ್ಳ ತಂಮ ರುಪ್ಯಾ (ರಿ) ನೋಟಿಗೆ ಕನಿಷ್ಠವೆಂದರೆ 0-10-0 ಬೆಲೆಯ ಮಾಲು ಆದರೂ ಸಿಗುವಂತಾಗಲೆಂದು ನಿಯಂತ್ರಣೋಪಾಯವನ್ನು ಜ್ಯಾರಿಗೆ ತಂದರು. ನಿಯಂತ್ರಿಸಲ್ಪಟ್ಟ ಮಾಲುಗಳ ಪಟ್ಟಿಯನ್ನು ಪರಿಶೀಲಿಸಿದಲ್ಲಿ, ಅವುಗಳು ಸೈನ್ಯಕ್ಕೋಸ್ಕರವಾಗಿ ಖರೀದಿಸಲ್ಪಟ್ಟವೆ ಎಂದು ವ್ಯಕ್ತವಾಗುವುದು. ಮಾದರಿಗಾಗಿ, ಸಿಗರೇಟು, ಸಕ್ಕರೆ, ಚಿಮಿಣಿ ಎಣ್ಣೆ, ಪೆಟ್ರೋಲ್ ಇವುಗಳ ನಿಯಂತ್ರಣದಿಂದ ಸಾಮಾನ್ಯ ಜನರಿಗೆ ಉಂಟಾದ ಸೌಕರ್ಯವೇನು? ಆಹಾರ ಮತ್ತು ಬಟ್ಟೆಯು ಜನರ ಅವಶ್ಯಕತೆಗೆ ಸಂಬಂಧಿಸಿದವುಗಳಾದರೂ, ಮುಖ್ಯವಾಗಿ ಸೈನ್ಯದ ಉಪಯೋಗಕ್ಕೆ ಬೇಕಾದವುಗಳಾದ್ದರಿಂದಲೇ ಕಂಟ್ರೋಲ್ ಪಟ್ಟಿಯಲ್ಲಿ ಸೇರಿರುವವು.

ಆರ್ಥಿಕ ತತ್ವಪ್ರಕಾರ, ಒಂದು ವಸ್ತುವಿನ ಬೆಲೆಯು, ಅದರ ಸಂಗ್ರಹ ಮತ್ತು ಅದಕ್ಕಿರುವ ಗ್ರಾಹಕಗಳಿಂದ ನಿರ್ಣಯಿಸಲ್ಪಡುತ್ತದೆ. ಗ್ರಾಹಕ ಸ್ಥಿರವಾಗಿದ್ದು, ಸಂಗ್ರಹವು ಜಾಸ್ತಿಯಾದಲ್ಲಿ ಬೆಲೆಯು ಕುಗ್ಗುವುದು. ಹಾಗೆಯೇ ಸಂಗ್ರಹವು ಸ್ಥಿರವಾಗಿದ್ದು, ಗ್ರಾಹಕ ಜಾಸ್ತಿಯಾದಲ್ಲಿ ಬೆಲೆಯು ಹಿಗ್ಗುವುದು. ಹೀಗಲ್ಲದೆ, ಸರಕಾರೀ ಶಾಸನಬಲದಿಂದ ಬೆಲೆಯನ್ನು ತಗ್ಗಿಸಲು ಯತ್ನಿಸಿದರೆ ಕ್ರಮೇಣ ಸಂಗ್ರಹವೇ ಕಡಿಮೆಯಾಗುವುದು; ಇಲ್ಲವೆ ಶಾಸನವೇ ಉಲ್ಲಂಘಿಸಲ್ಪಡುವುದು. ಇದು ಸಿದ್ಧಾಂತ.

ಪ್ರಕೃತ ನಿಯಂತ್ರಣವನ್ನು ತೆಗೆದಿರುವುದರಿಂದ ಆಹಾರ ಧಾನ್ಯಗಳ ಬೆಲೆ ಏರಿರುವುದು ನಿಶ್ಚಯ. ಎಂದರೆ, ಸಾಗುವಳಿ ಉದ್ಯೋಗದಲ್ಲಿ ಲಾಭವು ಹೆಚ್ಚಾಗುವುದು. ಆಗ ಪೇಟೆ ಪಟ್ಟಣಗಳನ್ನು ಸೇರುತ್ತಿದ್ದ ಜನಸಂಖ್ಯೆಯು ಮರಳಿ ಹೊಲವನ್ನು ಸೇರಿ ಬೆಳೆಯನ್ನು ಬೆಳೆಯಲಾರಂಭಿಸುವರು. ಇದರಿಂದ ಧಾನ್ಯಸಂಗ್ರಹವು ಜಾಸ್ತಿಯಾಗಿ ಬೆಲೆಯು ತಾನಾಗಿ ತಗ್ಗುವುದು. ಹಾಗೂ ಎಲ್ಲಾ ವಸ್ತುಗಳ ಬೆಲೆಯು ಈ ಕ್ರಮದಿಂದ ಸ್ಥಿಮಿತಕ್ಕೆ ಬಂದೇ ಬರುವುದು. ಉದಾಹರಣೆಗಾಗಿ ಬೆಲ್ಲದ ಧಾರಣೆ ಜಾಸ್ತಿಇದ್ದುದರಿಂದ ಹೆಚ್ಚು ಕಬ್ಬು ಬೆಳೆಯಲ್ಪಟ್ಟಿತು. ಕಬ್ಬಿನ ಬೆಳೆ ಹೆಚ್ಚಾದುದರಿಂದ ಬೆಲ್ಲದ ಧಾರಣೆಯು ಇಳಿದಿರುವುದು ನಾವು ಪ್ರತ್ಯಕ್ಷ ಕಾಣಬಹುದು.

ಅದಲ್ಲೂ, ಚಲಾವಣೆಯಲ್ಲಿರುವ ಕರೆನ್ಸಿಯು ಎಂದಿನವರೆಗೆ ಚಲಾವಣೆಯ ಅವಶ್ಯಕತೆಗಳಿಗೆ ಮಿಕ್ಕಿ ಇರುವುದೋ ಅಂದಿನವರೆಗೆ ಆ ಕರೆನ್ಸಿಯ ಬೆಲೆಗೆ ಅನುಸರಿಸಿ, ಮಾಲುಗಳ ಬೆಲೆಯು ಜಾಸ್ತಿಯಾಗಿಯೇ ಕಾಣಿಸಿಕೊಳ್ಳುತ್ತದೆ. ಈ ಪರಿಸ್ಥಿತಿಯನ್ನು, ಅಗತ್ಯ ಕಂಡಲ್ಲಿ ಸರಕಾರವು, ಕಂದಾಯವನ್ನು ಏರಿಸಿ, ಕರೆನ್ಸಿಯನ್ನು ಹಿಂತೆಗೆದು ಸುಧಾರಿಸಬಹುದು.

ಪರಂತು, ಸ್ವಂತ ಲಾಭದಾಸೆಯ ಸಲುವಾಗಿ ಪೇಟೆ ಪಟ್ಟಣಗಳನ್ನು ಸೇರಿಕೊಂಡು ಲಾಭದಾಯಕವಾದ ಉದ್ಯೋಗದಲ್ಲಿರುವ ಜನರಿಗೆ ಆಹಾರವನ್ನು ಕಡಿಮೆ ದರದಲ್ಲಿ ಒದಗಿಸಿ ಕೊಡುವ ಜವಾಬ್ದಾರಿಯನ್ನು ಸರಕಾರವು ಯಾಕೆ ವಹಿಸಬೇಕು? ಆಹಾರದ ಬೆಲೆಯು ಅಧಿಕವಾಗಿದೆ ಎನ್ನುವವರಿದ್ದರೆ, ಸಾಗುವಳಿಗಾರನ ಲಾಭವು ಅಧಿಕವಾಗಿರುವುದೆಂದು ಅರ್ಥವಾಗುವುದು. ಹಾಗಿದ್ದರೆ ಅಪೇಕ್ಷೆಯುಳ್ಳವರು, ಲಾಭದಾಯಕವಾದ ಸಾಗುವಳಿಯನ್ನು ಕೈಕೊಂಡರಾಯಿತು; ಇಲ್ಲವೆ ತಂಮಲ್ಲಿರುವ ವಡವೆಗಳಿಗೆ, ಯಾ ತಮ್ಮ ಕೆಲಸಕ್ಕೆ ಜಾಸ್ತಿ ಬೆಲೆಯನ್ನಿಟ್ಟುಕೊಂಡರಾಯಿತು. ತನ್ನ ವಡವೆಗಳಿಗೆ ಜಾಸ್ತಿ ಬೆಲೆ ಸಿಗಬೇಕೆಂಬ ಹಳ್ಳಿಗನು ಪಟ್ಟಣಿಗರ ಸಲಹೆ ಬೇಕಾಗಿದ್ದಲ್ಲಿ ಅವರ ಬೇಡಿಕೆಯ ದರವನ್ನು ಕೊಡುವನು, ಅಥವಾ ಬದಲಾಗಿ ತನ್ನ ವಡವೆಗಳನ್ನೆ ಕೊಡಬೇಕಾಗುವುದು. ಕಂಟ್ರೋಲು ಇಲ್ಲದಿರುವಲ್ಲಿ ಹೀಗೆ ಕ್ರಮವಾಗಿ ಬೆಲೆಯು ಮಟ್ಟಕ್ಕೆ ಬರುವುದರಿಂದ, ಸರಕಾರೀ ನೌಕರರನು ಬಿಟ್ಟು, ಮಿಕ್ಕ ಯಾವ ವರ್ಗದವರಿಗೂ ತೊಡಕುಂಟಾಗುವುದಿಲ್ಲ.

ಸರಕಾರೀ ನೌಕರರಿಗೆ ಯೋಗ್ಯ ಸಂಬಳವನ್ನು ಕೊಡುವುದು ಸರಕಾರದ ಮುಖ್ಯ ಕರ್ತವ್ಯವಾಗಿದೆ. ಸರಕಾರವು ಆ ಸಲುವಾಗಿ, ಕಂದಾಯವನ್ನು ಏರಿಸಿ ಜಾಸ್ತಿ ಸಂಬಳವನ್ನು ಕೊಡಬಹುದು ಯಾ ತೆರಿಗೆಯನ್ನು ಧಾನ್ಯ ರೂಪವಾಗಿ ವಸೂಲು ಪಡೆದು, ಧಾನ್ಯ ರೂಪದಲ್ಲಿ ಸಂಬಳವನ್ನು ಕೊಡಬಹುದು. ಅಥವಾ 'ಆಹಾರ ಹೆಚ್ಚು ಹೆಚ್ಚಾಗಿ ಬೆಳೆಯಿರಿ' ಎಂಬ ನಿಷ್ಫಲವಾದ ಪ್ರಚಾರ ಕಾರ್ಯವನ್ನು ಮೂಲೆಗಿರಿಸಿ ಸರಕಾರಕ್ಕೆ ಒಪ್ಪಿಸಲ್ಪಟ್ಟಿರುವ ಸಾವಿರಾರು ಎಕ್ರೆ ಬಂಜರು ಬಿದ್ದಿರುವ, ಮಲೆನಾಡು ಭೂಮಿಯನ್ನು, ಅಧುನಿಕ ಕ್ರಮದಿಂದ ಸರಕಾರೀ ವ್ಯವಸಾಯ ಡಿಪಾರ್ಟ್‌ಮೆಂಟಿನ ಮುಖಾಂತ್ರ ಸಾಗುವಳಿ ಮಾಡಿಸಿ, ಹೆಚ್ಚು ಹೆಚ್ಚಾಗಿ ಬೆಳೆಯನ್ನು ಬೆಳೆದು ಸರಕಾರೀ ನೌಕರರ ಅವಶ್ಯಕತೆಗೆ ಬೇಕಾದಷ್ಟು ಧಾನ್ಯವನ್ನು ಉಳಿಸಿಕೊಂಡು ಮಿಕ್ಕುಳಿಯುವ ಉಳಿತಾಯವನ್ನು ದ. ಕ. ಸಹಕಾರಿ ಸಂಘಕ್ಕೆ ವಹಿಸಿಕೊಟ್ಟು, ಬೇರೆ ರೈತ ವರ್ಗದವರಿಗಿಂತ ಕಡಿಮೆ ದರದಲ್ಲಿ ವಿಕ್ರಯಿಸಿ ಆಹಾರದ ಬೆಲೆಯನ್ನು ತಗ್ಗಿಸಲೂ ಬಹುದು.

ಹೀಗೆ ಅರ್ಥಿಕ ತತ್ವಗಳಿಗನುಸಾರವಾದ ಧೋರಣೆಯನ್ನು ಸರಕಾರವು ವಹಿಸಬೇಕೇ ಹೊರತು, ಪಟ್ಟಣವಾಸಿಗರಾದ ಕೆಲವೇ ಸ್ವಾರ್ಥಸಾಧಕರ ಪ್ರಚಾರಕ್ಕೆ ಬಲಿಬಿದ್ದು, ಸೇಕಡಾ 1ರಷ್ಟಿರುವ ನೌಕರರ ಹಿತಕ್ಕಾಗಿ, ಕಂಟ್ರೋಲು ಕ್ರಮವನ್ನು ಪುನಃ ಜ್ಯಾರಿಗೆ ತಂದರೆ ಸೇಕಡಾ 75ರಷ್ಟಿರುವ ಸಾಗುವಳಿದಾರರನ್ನು ಪಟ್ಟಣಿಗರ ದಾಸರನ್ನಾಗಿ ಮಾಡಿದಂತಾಗುವುದಲ್ಲದೆ 'ಹೆಚ್ಚು ಧಾನ್ಯವನ್ನು ಬೆಳೆಯಬೇಕೆಂಬ' ಸರಕಾರದ ಉದ್ದೇಶಕ್ಕೆ ಕೊಡಲಿ ಇಟ್ಟಂತಾಗುವುದು. ಮಹಾತ್ಮಾಜಿಯವರ ವಾದವು ಅಸಾಧಾರವಾದದ್ದಾದರೆ, ಕಂಟ್ರೋಲು ತತ್ವವು ಸಂಘಟಿತ ಪಶುಬಲವನ್ನು ಅವಲಂಬಿಸಿರುವುದರಿಂದ ಪೈಶಾಚಿಕವಾದದೆನ್ನಬೇಕು.

Supplement to the South Kanara District Gazette

UDIPI MUNICIPALITY

NOTIFICATION

(Notification under [illegible] of the Madras District Municipalities Act, 1920, as amended.)

The Municipal Council, Udipi, in its resolution No.5 dated 22-1-1948 had determined to levy the following taxes also with effect from 1-4-1948.

1. Lighting Tax:—

(i) On lands exclusively used for agricultural purposes at 3% per half year of the Government assessment thereon.

(ii) On lands which are not used exclusively for agricultural purposes and are not occupied by and appurtenent to buildings at ⅛ of the rate of tax per half year levied for general purposes on similar lands.

2. Education Tax:—

(i) On buildings and lands occupied by and appurtenent to buildings at 1⅜ per half year of the annual rental value thereon.

(ii) On Profession Tax at 25% per half year of the tax levied for general purposes.

Objections, if any, received in the Muncipal Office, Udipi, within a month from the date of publication of this Notification will be considered by the Municipal Council, Udipi.

Municipal Office, Udipi, Date 4-2-1948

M. Srinivasa Rao,
Commissioner Delegate
& Municipal Health Officer U.M.

ಉಡುಪಿ ಮುನಿಸಿಪಾಲಿಟಿ

ಪ್ರಕಟಣೆ

[1920ನೇ ಇಸವಿಯ ಮದ್ರಾಸು ಡಿಸ್ಟ್ರಿಕ್ಟ್ ಮುನಿಸಿಪಾಲಿಟಿಯ ಆಕ್ಟು ತದನಂತರ ತಿದ್ದಲ್ಪಟ್ಟಂತೆ ಅದರ 78ನೇ ಸೆಕ್ಷನಿನ ಮೇರೆಗೆ ಪ್ರಕಟಣೆ.)

ತಾ 22-1-1948ರಲ್ಲಿ ಜರಗಿದ ಉಡುಪಿ ಮುನ್ಸಿಪಲ್ ಕೌನ್ಸಿಲ್ ಸಭೆಯ ನಂಬ್ರ 5ನೇ ಠರಾವಿನ ಮೇರೆಗೆ ತಾ 1-4-1948ರ ಮೊದಲ್ಗೊಂಡು ಪ್ರತಿ ಅರ್ಧ ವರ್ಷಕ್ಕೆ ಈ ಕೆಳಗೆ ಕಾಣಿಸಿದ ತೆರಿಗೆಯನ್ನು ಸಹ ಹೊರಿಸುವರೆ ನಿಶ್ಚಯಿಸಿರುತ್ತದೆ.

1. ದೀಪದ ತೆರಿಗೆ:—

[i] ಕೇವಲ ವ್ಯವಸಾಯದ ಬಗ್ಗೆ ಉಪಯೋಗಿಸಲ್ಪಡುವ ಜಮೀನುಗಳಿಗೆ ಅರ್ಧ ವರ್ಷಕ್ಕೆ ಅಂಥಾ ಜಮೀನಿನ ಸರಕಾರಿ ತೀರ್ವೆಯ ಸೇಕಡಾ 3ರ ದರದಲ್ಲಿ.

[ii] ಕೇವಲ ವ್ಯವಸಾಯದ ಉದ್ದೇಶಗಳಿಗಾಗಿಯೇ ಉಪಯೋಗಿಸಲ್ಪಡದ ಮತ್ತು ಕಟ್ಟಡಗಳಿಗೆ ಸಮ್ಮಂಧಿಸಿದ ಯಾ ಅವಕ್ಕೆ ನೆರೆಕರೆಯಾಗಿದ್ದು ಸೇರಿರದ ಜಮೀನುಗಳ ಸಂಗತಿಯಲ್ಲಿ ಅರ್ಧ ವರ್ಷಕ್ಕೆ ಅಂಥಾ ಸ್ಥಳಗಳ ಮೇಲೆ ಸರ್ವಸಾಧಾರಣ ಉದ್ದೇಶಗಳ ಬಗ್ಗೆ ಹೊರಿಸಿದ ತೆರಿಗೆಯ ⅛ನೇ ದರದಲ್ಲಿ.

2. ವಿದ್ಯಾಭ್ಯಾಸದ ತೆರಿಗೆ:—

[i] ಕಟ್ಟಡಗಳು ಅವುಗಳ ಸ್ಥಳ ಮತ್ತು ಅವರ ಉಪಭಾಗವಾಗಿ ಅನುಭೋಗಿಸಲ್ಪಡುವ ನೆರೆಕರೆಯಲ್ಲಿರುವ ಇತರ ನಿವೇಶಗಳ ಸಹಿತವಿರುವ ಎಲ್ಲಾ ಜಮೀನುಗಳಿಗೆ ಅರ್ಧ ವರ್ಷಕ್ಕೆ ಅವುಗಳ ವರ್ಷಾವಧಿ ಮೌಲ್ಯದ ಸೇಕಡಾ 1⅜ರ ದರದಲ್ಲಿ.

[ii] ವೃತ್ತಿ ತೆರಿಗೆಯ ಬಾಬಿನಲ್ಲಿ ಪ್ರತಿ ಅರ್ಧ ವರ್ಷಕ್ಕೆ ಸರ್ವಸಾಧಾರಣ ಉದ್ದೇಶಗಳ ಬಗ್ಗೆ ಹೊರಿಸಲ್ಪಡುವ ತೆರಿಗೆಯ ಸೇಕಡಾ 25ರ ದರದಲ್ಲಿ.

ಮೇಲಿನ ಸೂಚನೆಗಳಿಗೆ ಈ ನೋಟೀಸು ಪ್ರಕಟಣೆಯ ತಾರೀಕಿನಿಂದ ಒಂದು ತಿಂಗಳೊಳಗೆ ಉಡ್ಪಿ ಮುನ್ಸಿಪಲ್ ಆಫೀಸಿನಲ್ಲಿ ತಲಪಬಹುದಾದ ಆಕ್ಷೇಪಣೆಗಳು ಉಡ್ಪಿ ನಗರ ಸಭೆಯಿಂದ ಆಲೋಚಿಸಲ್ಪಡುವುವು.

ಮುನಿಸಿಪಲ್ ಆಫೀಸು, ಉಡುಪಿ. ತಾ 4-2-1948.

ಎಮ್. ಶ್ರೀನಿವಾಸರಾವ್,
ಕಮಿಶನರ್ ಡೆಲಿಗೇಟ್
ಮತ್ತು
ಮುನ್ಸಿಪಲ್ ಹೆಲ್ತ್ ಆಫೀಸರ್ ಉ. ಮು.

ಸ್ವೀಕಾರ-ವಿಮರ್ಶೆ

ಮುಗುಳುನಗೆ—ಲೇಖಕರು ಶ್ರೀ, ‘ಜಿಬಿಜ್’ (ಜಿ. ಬಿ. ರಾಜ್) –ಪ್ರಕಾಶಕರು—‘ರಾಧಾ ಪ್ರಕಟಣಾಲಯ’ ಅರಳೇಪೇಟೆ, ಬೆಂಗಳೂರು ನಗರ. ಕ್ರೌನ್ 1/8 ಆಕಾರದ 96ಪುಟಗಳು–ಬೆಲೆ ರೂ. 1 4-0 ಇದು ೧೩ ನಗೆ ಬರೆಹಗಳ ಸಂಗ್ರಹ–ಇತರ ನಗೆ ಬರೆಹಗಳಂತಲ್ಲ. ನಮ್ಮ ಮತ್ತು ನಮ್ಮ ಸುತ್ತುಮುತ್ತಲಿನ ಜನಜೀವನದಲ್ಲಿ ನಾವು ಅನುದಿನ ಕಾಣಬಹುದಾದ ಸನ್ನಿವೇಶಗಳಲ್ಲಿ ಕೆಲವನ್ನು ಎತ್ತಿಕೊಂಡು ಬರೆಯಲ್ಪಟ್ಟ ಈ ನಗೆ ಚಿತ್ರಗಳು ಹೊಸಪರಿಯವು. ನಾವು ಎಲ್ಲಿ ಹೇಗೆ ನಕ್ಕು ನಮ್ಮ ಬಾಳಿನ ಬಿಗುವನ್ನು ಹಗುರಗೊಳಿಸಬಹುದೆಂಬುದಕ್ಕೆ ನಿದರ್ಶನವಾಗಿ ಹದಿಮೂರು ನೋಟಗಳನ್ನು ಕೊಟ್ಟು ನಗಲಿಕ್ಕೆ ಕಲಿಸಿದ್ದಾರೆ ಇವರು ತೋರಿರುವ ನೋಟದಿಂದ ನಮ್ಮ ಅನುದಿನದ ಜೀವನವನ್ನು ಕಂಡರೆ ಬಾಳು ಭಾರವಾಗಿ ತೋರುವ ಬದಲಾಗಿ ಹಗುರಾಗಿ ಸ್ವಾರಸ್ಯವಾಗಿ ಕಂಡೀತು. ವಿಶೇಷತಃ ಇಂದಿನ ಕಠಿಣ ಜೀವನ ಸಂಗ್ರಾಮದಲ್ಲಿ ಈ ದೃಷ್ಟಿ ಬೇಕು. ಕನ್ನಡ ಸಾಹಿತ್ಯವು ಓದುಗರಿಗೆ ಇಂತಹ ದೃಷ್ಟಿಯನ್ನು ಕೊಡಬೇಕು. ಶ್ರೀ. ‘ಜಿಬಿಜ್’ರು ಈ ಬಗೆಯಲ್ಲಿ ಒಳ್ಳೆಯ ಯತ್ನಮಾಡಿದ್ದಾರೆ. ಶ್ರೀ. ಜಿ. ಪಿ. ರಾಜರತ್ನಂ ಅವರು ಇದಕ್ಕೆ ಮುನ್ನುಡಿಯಾಗಿ ಅಭಿಪ್ರಾಯವೀಯುತ್ತ ‘ಇವೆಲ್ಲ ‘ಇನ್ನೂ ಮೊಗ್ಗಿನಂತಿರುವ ಬರಹಗಳ ಸಾಲು; ಅರಳುವುದಕ್ಕೆ ಇನ್ನೂ ಅವಕಾಶವಿರುವ ಚಿತ್ರಗಳ, ಹರಟೆಗಳ, ಕಥನ ಪ್ರಯತ್ನಗಳ ಪಂಕ್ತಿ. ಇನ್ನೂ ವಿದ್ಯಾರ್ಥಿದಶೆಯಲ್ಲಿರುವ ಚಿರಂಜೀವಿಗಳು ಇಲ್ಲಿ ಉದ್ಧಕ್ಕೂ ಸಭ್ಯತೆ ತಪ್ಪದ ರೀತಿಯಲ್ಲಿ ನಕ್ಕು ನಗಿಸುತ್ತಾ ನಡೆದಿದ್ದಾರೆ. ಇದೇ ರುಚಿಯನ್ನು ಉಳಿಸಿಕೊಂಡು ಕಾವ್ಯಾಭ್ಯಾಸದಿಂದ ಬೋಧಸ್ಸನ್ನು ಬೆಳೆಸಿಕೊಂಡು ಈ ಮುಗುಳುಗಳನ್ನು ಬಿರಿಸುವ ಮುಗುಳುಗಳನ್ನು ಸಾರಸ್ವತಿಗೆ ಸಮರ್ಪಿಸಲಿ’ ಎಂದು ಹಾರೈಸಿರುವ ಮಾತನ್ನೇ ನಾವೂ ಅನುಮೋದಿಸಿ, ಇಂತಹ ತರುಣ ನಗುಬರೆಹಗಾರರ ಕೃತಿಯನ್ನು ಓದಿನಕ್ಕು ಆದರಿಸಿ ಪ್ರೋತ್ಸಾಹಿಸುವುದು ಕನ್ನಡ ಸಾಹಿತ್ಯಾಭಿವೃದ್ಧಿಯ ದೃಷ್ಟಿಯಿಂದ ಅವಶ್ಯವಿದೆ ಎಂದು ಒತ್ತಿ ಹೇಳಲು ಬಯಸುತ್ತೇನೆ.

‘**ಸುಲಭ ಚಿಕಿತ್ಸೆ**’–ದ್ವಿತೀಯ ಮುದ್ರಣ ಪ್ರಕಾಶಕರು, ಡಾ। ಆರ್. ಅನ್ನಪೂರ್ಣ ರಾವ್. ಶ್ರೀಮ ಸಾಹಿತ್ಯಮಾಲೆ, ತುಂಗಭದ್ರ (ಬಳ್ಳಾರಿ ಜಿಲ್ಲೆ) ಬೆಲೆ ರೂ ೨. ಕ್ರೌನ್ 1/8 ಪ್ರಮಾಣದ ೧೧೬ ಪುಟಗಳ ಈ ಪುಸ್ತಕವು ಶ್ರೀಮ ವಿದ್ಯಾಪೀಠದ ಸಂಸ್ಥಾಪಕರಾದ ದಿವಂಗತ ಪಂಡಿತ ತಾರಾನಾಥಜಿಯವರ ವೈದ್ಯಕೀಯ ಲೇಖಸಂಗ್ರಹವಾಗಿದೆ. ಇದರಲ್ಲಿ ಮೂವತ್ತು ಪ್ರಧಾನರೋಗಗಳ ಲಕ್ಷಣ, ಕಾರಣ, ಚಿಕಿತ್ಸೆ, ಪಥ್ಯಾಪಥ್ಯ ವಿಚಾರಗಳನ್ನು ಸವಿಸ್ತಾರವಾಗಿ ಹೇಳಿದೆ. ರೋಗಿಯ ಆರೈಕೆಯ (nursing) ಬಗೆಗೆ ಉಪಯುಕ್ತ ಸಲಹೆ ಸೂಚನೆಗಳೂ ಅಲ್ಲಲ್ಲಿ ಇವೆ. ರೋಗಕ್ಕೆ ಮದ್ದುಗಳನ್ನು ಹೇಳುವಾಗ ಒಳ್ಳೆಯ ಗುಣಕಾರಿಯಾಗುವ, ಕಿರಾಣಿಯಂಗಡಿಗಳಲ್ಲಿ ದೊರೆಯಲಾಪ, ತಯಾರಿಸಲಿಕ್ಕೆ ಸುಲಭ ಸಾಧ್ಯವಾಗುವ ಔಷಧಿ ದ್ರವ್ಯಗಳನ್ನೇ ಆಯ್ದು ಸಂಯೋಜಿಸಿ ತೂಕ ಅಳತೆ ಸಿದ್ಧತೆಯ ವಿಧಿವಿಧಾನ ಸಹಿತ ವಿವರಿಸಿರುವುದು ಉಪಯುಕ್ತವಾಗಿದೆ. ಅಲ್ಲಲ್ಲಿ ಪಂಡಿತಜೀಯವರು ತನ್ನ ಅನುಭವ ಸಿದ್ಧವಾದ ಚುಟುಕು ಮದ್ದುಗಳನ್ನು ಹೇಳಿದ್ದಾರೆ ಮಾತ್ರವಲ್ಲ ಶಾಸ್ತ್ರೀಯವಾದ ಕಷಾಯ, ಚೂರ್ಣ, ಲೇಹ್ಯ, ತೈಲಗಳಲ್ಲಿ ಸಾಮಾನ್ಯರೋಗಗಳಿಗೆ ಗುಣಕಾರಿಯಾಗುವ ಮತ್ತು ಮನೆಯಲ್ಲಿ ಸಾಧಾರಣ ಬಲ್ಲವರೆಲ್ಲರು ಮಾಡಿಕೊಳ್ಳಲಾಗುವಂತಹವುಗಳನ್ನೇ ಆಯ್ದು ಸಿದ್ಧತೆಯ ಸಕಲ ವಿವರ ಸಹಿತ ಕೊಟ್ಟಿರುವುದೂ ಪ್ರಯೋಜನಕಾರಿಯಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಮತ್ತು ಆಯುರ್ವೇದ ಶಾಸ್ತ್ರಾವಲೋಕನ ವಿಶೇಷವಿಲ್ಲದೆ ಅನುವಂಶಿಕವಾಗಿ ವೈದ್ಯಕೀಯ ವೃತ್ತಿ ನಡೆಯಿಸುವವರಿಗೆ ಈ ಪುಸ್ತಕದಿಂದ ಒಳ್ಳೆಯ ಉಪಕಾರವಾದೀತು.

‘**ಕಲಾವಿದ**’–ಹೊಸ ಪತ್ರಿಕೆ, ಮಾಸಿಕ. ವಾರ್ಷಿಕ ಚಂದಾ ರೂ. ೩ ಸಂಪಾದಕರು ಶ್ರೀ ಯಂ. ಎಸ್. ಶೆಟ್ಟಿ, ಕಂಕನಾಡಿ ಮಂಗಳೂರು. ಕನ್ನಡನಾಡಿನ ಕಲಾ ದೀವಿಗೆಯನ್ನು ಬೆಳಗಿಸುವ ಧ್ಯೇಯ ವೈಶಿಷ್ಟ್ಯದಿಂದ ಹೊರಟಿರುವ ಈ ಪತ್ರಿಕೆಯ ೪೪ ಪುಟಗಳ ಮೊದಲ ಸಂಚಿಕೆಯು ಕಲಾಪೂರ್ಣವಾದ ಮುಖಪತ್ರದಿಂದಲೂ ಕಲಾ ವಿಷಯಕವಾದ ಕೆಲವು ಲೇಖನ ಹಾಗೂ ಕತೆ ಕವನಗಳಿಂದಲೂ ಕೂಡಿ ಸುಂದರವಾಗಿ ಪ್ರಕಟವಾಗಿರುವುದು ಅಭಿನಂದನೀಯ. ‘ಕಲಾವಿದ’ನು ಯಶಸ್ವಿಯಾಗಲೆಂದು ಹಾರೈಕೆ.

ಸರ್ವಧಾರೀ ಸಂವತ್ಸರದ ‘ಶ್ರೀ ಕೃಷ್ಣ ಪಂಚಾಂಗ, ಉಡುಪಿ’–ಈ ಪಂಚಾಂಗವು ಶ್ರೀ. ಪಾರಂಪಳ್ಳಿ ಲಕ್ಷ್ಮೀನಾರಾಯಣ ಅಡಿಗ, ಜ್ಯೋತಿಷ ಶಿರೋಮಣಿ ವಿದ್ವಾನ್, ಸಾಲಿಗ್ರಾಮ ಸಂಸ್ಕೃತ ಪಾಠಶಾಲಾ ಅಧ್ಯಾಪಕ, ಇವರಿಂದಲೂ ಶ್ರೀ. ಗೋವಾಡಿ ಕೃಷ್ಣ ಉಪಾಧ್ಯಾಯರಿಂದಲೂ ಗುಣಿಸಿ ಪರಿಶೋಧಿಸಲ್ಪಟ್ಟು ಶ್ರೀ. ಭಂ. ನಾರಾಯಣಾಚಾರ್ಯರಿಂದ ವಿಮರ್ಶಿಸಲ್ಪಟ್ಟು ಉಡುಪಿಯ ‘ಮೆಜೆಸ್ಟಿಕ್ ಪ್ರೆಸ್ಸ್’ನವರಿಂದ ಪ್ರಕಟಿಸಲ್ಪಟ್ಟಿದೆ. [illegible] ರೀತ್ಯಾ [illegible] ನವೀನ ಪೃಕ್ಸಿದ್ಧಾಂತ ರೀತ್ಯಾ ಗ್ರಹಣ ಗ್ರಹಸ್ಪುಟಾದಿಗಳೂ ಇವೆ. ಉತ್ತಮ ಕಾಗದ, ಚಂದದ ಮುದ್ರಣ, ತಾಳಿಕೆ ಬಾಳಿಕೆ ಬರುವ ದಪ್ಪದ ಅಂದದ ರಕ್ಷಾಪತ್ರ, ಇವುಗಳಿಂದ ಪಂಚಾಂಗವು ಚಿಟೋದಿದೆ ಹೆಚ್ಚಿಗೆ ಬೆಲೆ ಇಡಬಹುದಾಗಿದ್ದ ಈ ಪಂಚಾಂಗಕ್ಕೆ ಬರೇ ಆರು ಆಣೆ ಬೆಲೆಯಿಟ್ಟಿರುವುದೂ ಪ್ರಶಂಸನೀಯ.

ಕೊರಡ್ಕಲ್

ಬಂಟ್ಸ್ ಕೋ-ಓಪರೇಟಿವ್ ಕನ್ಸ್ಯೂಮರ್ಸ್ ಸೊಸೈಟಿ ಲಿಮಿಟೆಡ್, ಮುಂಬಾಯಿ- ಇದರ ಉದ್ಘಾಟನಾ ಸಮಾರಂಭವು ತಾ. 11-1-48ರಂದು ಮುಂಬಯಿ ಕಾಂಗ್ರೆಸ್ ಭವನದ ವರಾಂಡದಲ್ಲಿರುವ, ಜಿನ್ನಾ ಹಾಲಿನಲ್ಲಿ ಮುಂಬಾಯಿ ಸರಕಾರದ ಸನ್ಮಾನ್ಯ ಕೃಷಿ ಇಲಾಖಾ ಮಂತ್ರಿಗಳಾದ ಯಂ. ಪಿ. ಪಾಟೀಲರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯಕ್ರಮದಂತೆ ಪ್ರಾರ್ಥನೆ,ಸ್ವಾಗತ ಭಾಷಣಗಳಾಗಿ, ಮುಂಬಾಯಿ ಸರಕಾರದ ಆರ್ಥಿಕ ಮಂತ್ರಿಗಳಾದ ವೈಕುಂಠ. ಯಲ್ ಮೆಹತರವರು ಉದ್ಘಾಟಿಸುತ್ತ ತನ್ನ ಅನುಭವಸಿದ್ಧ ವಾಣಿಯಿಂದ ಸಹಕಾರ ಸಂಘಗಳಿಂದ ಬಡ ಜನಸಾಮಾನ್ಯರಿಗಾಗುವ ಪ್ರಯೋಜನವನ್ನು ವಿವರಿಸಿ; ಇಂಥಾ ಕಾರ್ಯಗಳಲ್ಲಿ ಜನತೆಯು ಮುಂದಾಗುವಂತೆ ಉತ್ತೇಜನವಿತ್ತು; ಅಂಥಾ ಕೆಲಸದಲ್ಲಿ ಸಹಾನುಭೂತಿಯಿದೆ ಎಂದರು ಆನಂತರ ಅಧ್ಯಕ್ಷರಾದ ಯಂ. ಟಿ. ಪಾಟೀಲರವರು ತನ್ನ ಘೋಷಣೆಯ ಭಾಷಣದಲ್ಲಿ ಪರಸ್ಪರ ಐಕ್ಯತೆ ಸಹಾನುಭೂತಿ ಕಾರ್ಯದಕ್ಷತೆಯನ್ನಿಟ್ಟುಕೊಂಡು ಸಮಾಜದ ಉದ್ಧಾರ ಮಾಡಬೇಕೆಂತಲೂ. ಅಂಥಾ ಕಾರ್ಯಗಳಿಗೆ ತನ್ನಿಂದ ಸದಾ ಸಹಾಯವಾಗುವದೆಂತಲೂ ಭರವಸೆಯಿತ್ತರು. ಧನ್ಯವಾದಾರ್ಪಣವಾದ ಮೇಲೆ ಸಂಗೀತ ಪ್ರೊಫೆಸರ್ ಚಂದರ್ ರೈ ಮತ್ತು ಅವರ ಶಿಷ್ಯವರ್ಗದವರಿಂದ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಆ ಮೇಲೆ ಅದೇ ಹಾಲಿನಲ್ಲಿ ಸೊಸೈಟಿಯ ಹಿತಚಿಂತಕರೆಲ್ಲೊಟ್ಟುಗೂಡಿ ಶ್ರೀಮಾನ್ ಕುತ್ಯಾರು ಮದನ ಶೆಟ್ಟರವರ ಅಧ್ಯಕ್ಷತೆಯಲ್ಲಿ-ಮುಂಬಾಯಿ ಡಿಸ್ಟ್ರಿಕ್ಟ್ ಕೊ-ಓಪರೇಟಿವ್ ಆಫೀಸರ ಸಮಕ್ಷ ಬಾಕಿ ವರ್ಷದ ಕಾರ್ಯಕ್ರಮಗಳ ನಿರ್ಣಯಕ್ಕಾಗಿ ಸಭೆ ಸೇರಿತು ಬಂಟ್ಸ್ ಕೋ-ಓಪರೇಟಿವ್ ಕನ್ಸ್ಯೂಮರ್ಸ್ ಸೊಸೈಟಿ ಲಿಮಿಟೆಡ್ ರಿಜಿಸ್ಟ್ರಿ ಮಾಡಲ್ಪಟ್ಟ ರಿಜಿಸ್ಟ್ರಿ ಸರ್ಟಿಫಿಕೇಟನ್ನು ಕ್ರಮನಿಬಂಧನೆಗಳನ್ನು ಪ್ರಕಾಶಚಂದ್ರ ಶೆಟ್ರವರು ಸಭಿಕರಿಗೆ ವಿವರಿಸಿ ಹೇಳಿದರು.

ಸೊಸೈಟಿಯ [illegible] ಸದಸ್ಯರ ಹೆಸರನ್ನು ಕ್ರಮವಾಗಿ ಶ್ರೀ [illegible] ಮಹಾಬಲ ಶೆಟ್ಟರವರು ಓದಿಹೇಳಿದರು. ಕ್ರಮನಿಬಂಧನೆಗಳನ್ನೂ ಸದಸ್ಯತನವನ್ನೂ ಸಭೆಯ ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ನಂತರ ಬಾಕಿ ವರ್ಷದ ಕಾರ್ಯಕಲಾಪವನ್ನು ನಿರ್ವಹಿಸುವರೇ ಶ್ರೀಗಳಾದ ಕಾಪು ಕಾಂತಪ್ಪ. ಸಿ. ಶೆಟ್ರನ್ನು ಅಧ್ಯಕ್ಷರನ್ನಾಗಿಯೂ ಕಡಂದಲೆ ಮಹಾಬಲ ಶೆಟ್ರನ್ನು ಗೌರವ ಕಾರ್ಯದರ್ಶಿಯರನ್ನಾಗಿಯೂ ಶ್ರೀ ಸೂಡ ವೀರಪ್ಪ ಶೆಟ್ರು, ಶ್ರೀ ಪಾದೂರು ಕೃಷ್ಣ ಶೆಟ್ರು, ಎರ್ಮಾಳು ಕೃಷ್ಣ ಶೆಟ್ರು, ಸಂದೊಳಿಗೆ ಜೋಗಪ್ಪ ಹೆಗ್ಡೆಯವರು, ಕಟಪಾಡಿ ಪೊಕಪ್ಪ ಶೆಟ್ರು, ಮುರ್ಡೆ ಸೇಸು ಶೆಟ್ರು, ಪಾದೆಬೆಟ್ಟು ವಾಸು ಶೆಟ್ರು,ನಿಂಜೂರು ಕೃಷ್ಣ ಶೆಟ್ರು, ಅತ್ರಾಡಿ ಬೇಜ ಶೆಟ್ರು, ಮೋಗನ ನೂಲಾಡಿ ನಾರಾಯಣ ಶೆಟ್ರು, ಇವರು 11 ಮಂದಿಯನ್ನು ಕಾರ್ಯಕಾರಿ ಮಂಡಲದ ಸದಸ್ಯರನ್ನಾಗಿಯೂ ಶ್ರೀಗಳಾದ ಶಾಂತರಾಮ ಅಡ್ಯಂತಾಯರು, ಕಟಪಾಡಿ ಅಣ್ಣಯ್ಯ ಶೆಟ್ರು, ಇನ್ನ ಬಗ್ಗ ರೆಗುತ್ತು ನರ್ಸ ಶೆಟ್ರು, ಈ ಮೂವರನ್ನು ಕಂಟ್ರೋಲು ಕಮಿಟಿಯ ಸದಸ್ಯರನ್ನಾಗಿಯೂ ಆರಿಸಲಾಯಿತು. ಶ್ರೀ ಯಂ ಪ್ರತಾಪ ಶೆಟ್ರನ್ನು ಸೊಸೈಟಿಯ ಗೌರವ ಲೆಖ್ಖ ಪರಿಶೋಧಕರನ್ನಾಗಿ ನಿರ್ಣಯವಾಯಿತು ಆವೇಳೆ ಸಭೆಗೆ ಆಗಮಿಸಿದ ಶ್ರೀ ಕಟ್ಪಾಡಿ ಸೀತಾರಾಮ ಧೋರಿ ಬಲ್ಲಾಳರವರು, ಕುಂಬಳೆ ಗಣಪಯ್ಯ ಶೆಟ್ರು, ಮುದ್ರಾಡಿ ಭೋಜರಾಜ ಶೆಟ್ರು, ಮುಕ ಸೇಸು ಶೆಟ್ರು, ಹೊಟೇಲು ಎಸೋಸಿಯೇಶನಿನ ಅಧ್ಯಕ್ಷ ಅಲತ್ತಾರ್ ಪುರೇನ, ಕಾಪು ಕಾಂತಪ್ಪ ಶೆಟ್ರು ಮೊದಲಾದವರು ಸೊಸೈಟಿಯ ಏಳಿಗೆಯನ್ನು ಹಾರೈಸಿ ಸಂದರ್ಭೋಚಿತ ಭಾಷಣವಿತ್ತರು ನಂತರ ಧನ್ಯವಾದಾರ್ಪಣದೊಂದಿಗೆ ಸಭೆ ಮುಕ್ತಾಯಗೊಂಡಿತು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 6/1948

ದೇವಕಿ ಶೆಡ್ತಿ—(ಬಡದ ಕುಟುಂಬದ ಯಜಮಾನಳಾಗಿ) ಅಂಣಯ್ಯ ಶೆಟ್ರ ಹೆಂಡತಿ ವ ಹೆರ್ಗಲಬ್ಬ ಶೆಟ್ರ ಮಗಳು ಉಡುಪಿ ತಾಲೂಕು ಹೆರ್ಗಗ್ರಾಮ

ಅರ್ಜಿದಾರಳು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದ್ರೆ:–

ಅರ್ಜಿದಾರಳ ತಂದೆ ಸಂಕಪ್ಪ ಶೆಟ್ಟಿ ಯೆಂಬವರು ತಾರೀಕು 7-11-1947ರಲ್ಲಿ ಉಡುಪಿ ತಾಲೂಕು ಬಡಾಗ್ರಾಮದಲ್ಲಿ ಮೃತಪಟ್ಟಿದ್ದು ಅವರ ಬಾಬ್ತು ಓರಿಯಂಟಲ್ ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬಾಯಿ—ಯಿದರಲ್ಲಿರುವ ಪೋಲಿಸಿ ನಂಬ್ರ 534083ರ ಬಾಬ್ತು ಬೋನಸ್ ಸಹಿತವಾದ ಐವೇಜು ರೂ. 1104-8-0 ನ್ನು, ದಿ. ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಉಡುಪಿ. ಯಿದರಲ್ಲಿರುವ ಪೋಲಿಸಿ ನಂಬ್ರ 10295ರ ಬಾಬ್ತು ಐವಜು 471-14-0ನ್ನೂ ವಸೂಲು ಮಾಡುವರೆ ತನ್ನ ಹೆಸರಲ್ಲಿ ಒಂದು ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 26-2-1948ಕ್ಕೆ ಯಿಟ್ಟಿರುತ್ತದೆ. ಆಕ್ಷೇಪವೇನಾದರೂ ಯಿದ್ದವರು ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಬಂದು ಆಕ್ಷೇಪಿಸಬಹುದು.

K. Ramakrishna Rao
Vakil for Petitioner

ಉಡುಪಿ. ತಾ. 5-2-1948

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ವಿವಿಧ ಪಾತ್ರೆಗಳು



ಯಾವತರ್ಹ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಪ್ರಕಟವಾಗಿದೆ—ಶ್ರೀ. ಎಂ ವಿ ಹೆಗ್ಡೆಯವರ

ಸ್ವರಾಜ್ಯ ವಿಜಯ

(ಯಕ್ಷಗಾನ ಪದ್ಯ—ಅರ್ಥಗಳಲ್ಲಿ ಆಗೋಸ್ತು 15ರ ಸ್ವರಾಜ್ಯ ಚರಿತ್ರೆ)

ಯಕ್ಷಗಾನದಲ್ಲೊಂದು ಕ್ರಾಂತಿ! ನಿಜವಾದ ಜನತಾ ಸಾಹಿತ್ಯದ ಉದ್ಭವ!

ನೆಹರು, ಜಿನ್ನ, ಪಟೇಲ್, ಜೈಪ್ರಕಾಶ್, ಅಟ್ಲಿ, ಮೌಂಟ್‌ಬೇಟನ್, ಗಾಂಧಿ, ನಿಸ್ತಾರ್, ಜಾನ್‌ಸೂನ್, ಕ್ರಿಪ್ಸ್ ಮುಂತಾದವರೇ ಇದರಲ್ಲಿರುವ ಪಾತ್ರಗಳು. ಸಾಮಾನ್ಯನಿಂದ ಹಿಡಿದು ಸಾಹಿತಿಯವರೆಗಿನ ಎಲ್ಲರಿಗೂ ಹೇಳಿಸಿದ ನವೀನ ಕೃತಿ

ಬೆಲೆ ಕೇವಲ ೦—೮—೦

ಪ್ರತಿಗಳಿಗೆ ಬರೆಯಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

— ಅಥವಾ

ನವಯುಗ ಪ್ರೆಸ್, ಉಡುಪಿ, ದ. ಕ.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ಹಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1—4—0 ಟ. ದ್ವಾರ 1—8—0

ಕಿರಿಯರ ಪ್ರಪಂಚದ ಪ್ರಕಟಣೆ **ಕದಂಬ** ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-*Home Remedies* ಬೆಲೆ ರೂ 2-0-0

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪೋ ಉಡುಪಿ.

ಧಾತುಪುಷ್ಟಿ ...ಗ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬೆಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್,ರಥಬೀದಿ ನಂಬ್ರ, 10ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕ ಕಾಡ ಔಷಧಿ ದವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, 2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್,(3)ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ಔಷಧಿಯ ಬಾಟ್ಲಿಗಳು ಹೆಚ್ಚು ಕಡಿಮೆ ಆಯಾ ದಿವಸಗಳಿಗೆ ಬರುವವು, ಅಂದರೆ ಕೇವಲ ಆ ರಸಾಯನಗಳಿಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು—ಡಾ| ಐ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಸೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕಿತ್ಸಾಲಯಲ್ಲಿ:—ಕುಂಬರವಾಡಿ ಸ್ಟೋರ್, ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಿ

Ayurveda Oushadalaya, GADAG CITY.

ಹೊಸ ವ್ಯವಸ್ಥೆ-ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾಸಿಯುಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging,
KATAPADI. S K.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಸೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಶಕ್ತ್ಯನುಸಾರ ಮಾಡತಕ್ಕ ನಾಲಕರ ದೀವಿಸಿ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

Ayurveda Oushadhalaya. GADAG.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

26-2-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೨೫

NAVAYUGA WEEKLY, UDIPI.

FOUNDER: **Hon'ble Mr. A. B. SHETTY**, Health Minister, Govt. of Madras.

Vol. 28
No. 25

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬
[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ, ೧೧,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ।
೪ ರಿಂದ ೫ ತಿಂಗಳು ,, ,, ।।
೬ ರಿಂದ ೯ ತಿಂಗಳು ,, ,, ।।।

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿ ರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India
Bombay Life Building,
Central Office Udipi.

Branches at:
Mangalore, Calicut, Trivandrum, Madura, Madras, Bangalore & Bombay,

WARDEN

Reaches New Heights in 1946.

Business Received	... ...	Rs. 2,04,00,000
Business Completed	... ...	Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its hearties thanks and congratulations to its representatives and policy-holders all over the country and abroad.

Managing Director: *Shivaprasad Thaker,*
Agency Manager *M. Sunderram Shetty.*

Branch Office At Mangalore

K. P. Bhavanishanker Shetty,
Branch Secretary.

The best preventive in epidemics of CHOLERA

"BHUVANENDRA" CHANDRAMAS

Also a [illegible] remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ತೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ತೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಕೇಶವ ಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

Nambiar's

ARYA VAIDYA SALA
UDIPI

Ideal House for Ayurvedic Treatment.

T. N. Kelu Nambiar,
Vaidya

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0
ನವಭಾರತ ಬುಕ್ ಡಿಪೊ, ಉಡುಪಿ.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ,

ಪ್ರಧಾನ ಕಾರ್ಯಾಲಯ:-ಧಾರವಾಡ,

THE UNITED KARNATAK INSURANCE COMPANY, LIMITED.

ಬಾಪೂಜಿ ಕೊನೆಯ ದಿನದಲ್ಲಿ—

— ಮಹಾತ್ಮರ ಕಾರ್ಯದರ್ಶಿ ಶ್ರೀ. ಪ್ಯಾರೇಲಾಲರ ಲೇಖನ —



ತಾ. 29ನೇ ಇಡೀ ದಿವಸ ಗಾಂಧಿಜಿಗಿದ್ದ ಕೆಲಸದ ಒತ್ತಡದ ದೆಸೆಯಿಂದಾಗಿ ದಿವಸದ ಅಂತ್ಯದಲ್ಲಿ ಅವರು ಅತಿರೀಕ ದಣಿದಿದ್ದರು. ತಾನು ತಯಾರಿಸುತ್ತಿದ್ದ ಕಾಂಗ್ರೆಸ್ ಘಟನೆಯ ಕರಡಿನ ಕಡೆಗೆ ಕೈತೋರಿಸುತ್ತಾ 'ನನ್ನ ತಲೆ ತಿರುಗುತ್ತಿದೆ. ಆದರೂ ನಾನೀ ಕೆಲಸವನ್ನು ಮುಗಿಸಲೇ ಬೇಕು" ಎಂದರು ಗಾಂಧಿಜೀ ಅಭಾನೊಡನೆ. "ಬಹುಶಃ ಬಹಳ ರಾತ್ರಿಯ ವರೆಗೂ ನಾನು ಕುಳಿತುಕೊಳ್ಳಬೇಕಾಗುವದೇನೋ' ಎಂದರು ಅಂತೂ ರಾತ್ರಿ 9-15 ಘಂಟೆಗೆ ಅವರು ಆ ಕೆಲಸದಿಂದೆದ್ದರು. ಬಾಪೂ ನಿತ್ಯದ ವ್ಯಾಯಾಮ ಮಾಡಲಿಲ್ಲವೆಂಬುದನ್ನು ಹುಡುಗಿಯರು ಅವರಿಗೆ ನೆನಪು ಮಾಡಿದಾಗ "ಆಗಲಿ. ಯಾವಾಗ ನೀವು ಹೇಳಿದಿರೋ, ಇನ್ನು ನಾನದನ್ನು ಮಾಡುತ್ತೇನೆ'ಎನ್ನುತ್ತಾ ವ್ಯಾಯಾಮಕ್ಕೆ ಹೋದರು. ಆ ಇಬ್ಬರು ಹುಡುಗಿಯರನ್ನೇ 'ಕಂಭ'ಗಳಾಗಿ ಮಾಡಿ ಅವರ ಹೆಗಲುಗಳನ್ನಾಧರಿಸಿ ಮೂರು ಬಾರಿ ಬಸ್ಕಿ ತೆಗೆದರು.

ಕೊನೆಯ ಶಯನ

ಹಾಸಿಗೆಯಲ್ಲಿ ಮಲಗಿಕೊಂಡಲ್ಲೆ ಗಾಂಧಿಜೀಯ ಪಾದ ಮತ್ತು ಕೈಕಾಲುಗಳನ್ನು ಅದುಮುವ ಒಂದು ಪದ್ಧತಿಯಿತ್ತು. ಸ್ವತಃ ಅವರ ಪ್ರಯೋಜನಕ್ಕಿಂತಲೂ ಕೈಕಾಲುಗಳನ್ನೊತ್ತುವವರ ಅವಶ್ಯಕತೆಯೇ ಇದರಲ್ಲಿ ಹೆಚ್ಚಿನದೆನ್ನಬಹುದು. ಇದೊಂದು ಅಲ್ಪಾರ್ಥಿಕೆಯಾದರೂ ಅವರಿಗಗತ್ಯವೆಂದು ನನಗೆ ಗೊತ್ತಿದ್ದರೂ ಗಾಂಧಿಜೀ ಇದನ್ನು ತಲೆಗೆ ಹಚ್ಚಿಕೊಂಡದ್ದೇ ಇಲ್ಲ. ಇಡೀ ದಿನ ಪಟ್ಟ ಆಯಾಸದ ಭಾರವನ್ನು ನಿವಾರಿಸುವ ಲಘು ಸಲ್ಲಾಪ ಹಾಗೂ ವಿನೋದಗಳಿಗೂ ಇದೇ ಒಂದು ಸಂದರ್ಭವಾಗುತ್ತಿತ್ತು. ಇಂತಹ ವಿನೋದದ ಸಮಯದಲ್ಲೂ ಅವರು ಕಾರ್ಯ ಸೂಚನೆಗಳನ್ನು ಕೊಡುತ್ತಿದ್ದರು. ಆ ಗು:. ರಾತ್ರಿ ಸಂದರ್ಭವಶಾತ್ ಬಂದಿದ್ದ ಆಶ್ರಮ ನಿವಾಸಿ ಮಹಿಳೆಯೊಬ್ಬಳೊಡನೆ ಅವರು ಸಂಭಾಷಣೆಗೆ ತೊಡಗಿದ್ದರು. ಆ ಸ್ತ್ರೀ ತನ್ನ ಆರೋಗ್ಯದ ಕಡೆಗೆ ಸಾಕಷ್ಟು ಲಕ್ಷ್ಯ ಕೊಡದ ಕುರಿತು ಗಾಂಧಿಜೀ ಆಕೆಯನ್ನು ಗದರಿಸಿದರು. 'ನಿನ್ನ ಹೃದಯದಲ್ಲಿ ರಾಮನಾಮ ಪ್ರತಿಷ್ಠೆ ಹೊಂದಬೇಕಾದರೆ ನೀನು ಕಾಹಿಲೆ ಬೀಳದಿರಬೇಕು ಆದರೆ ಇದರಲ್ಲಿ ನಂಬಿಕೆಯಿರಬೇಕಾದುದು ಮುಖ್ಯ'ಎಂದರು ಆಕೆಗೆ ಗಾಂಧಿಜೀ.

ಆ ದಿನ ಅಪರಾಹ್ನ ನಡೆದಿದ್ದ ಒಂದು ಘಟನೆಯ ನೆನಪಾಗುತ್ತಿದೆ. ಪ್ರಾರ್ಥನಾ ಸಭೆ ಮುಗಿದ ಮೇಲೆ ಓರ್ವ ಸಭಿಕ ಗಾಂಧೀಜಿಯ ಬೆನ್ನು ಹಿಡಿದೋಡಿ ಬಂದು, ಇವರು 2ನೇ ತಾರೀಕಿಗೆ ವಾರ್ಧಾಕ್ಕೆ ಹೋಗಲಿರುವುದರಿಂದ ತನಗೊಂದು ಹಸ್ತಾಕ್ಷರ ಸಹಿದಯಪಾಲಿಸಬೇಕೆಂದು ಬೇಡಿಕೊಂಡ. "ಯಾರು ಹೇಳಿದರು, ನಾನು ವಾರ್ಧಾಕ್ಕೆ ಹೋಗುವೆನೆಂದು?" ಎಂದರು ಗಾಂಧಿಜೀ. 'ಪತ್ರಿಕೆಗಳಲ್ಲಿತ್ತು' ಎಂದ ಆ ಅತ್ಯಾಗ್ರಹೀ ಸಹಿ ಬೇಟೆಗಾರ. ಗಾಂಧಿಜೀ ಗಹಗಹಿಸಿ ನಕ್ಕರು. 'ನಾನೂ ಆ ಗಾಂಧಿಯ ಈ ಸುದ್ದಿಯನ್ನು ನೋಡಿದ್ದೇನೆ. ಆದರೆ ಆ ಗಾಂಧಿ ಯಾರೋ ನನಗೆ ಗೊತ್ತಿಲ್ಲ' ಎಂದರು ಬಾಪು. ಮಲಗಿಕೊಂಡಲ್ಲಿಯೂ ಇಂತಹ ಮಾತುಗಳನ್ನೇ ಅವರು ಆಡಿದ್ದರು.

ಕೊನೆಯ ಸ್ನಾನ

ದೃಷ್ಟದಾಯಿ ತಾ. 30ನೇ ಮುಂಜಾನೆ ಗಾಂಧಿಜೀ 'ಪ್ರಾತಸ್ಮರಾಮಿ" ಪ್ರಾರ್ಥನೆಗಾಗಿ ಪದ್ಧತಿಯಂತೆ 3-30 ಘಂಟೆಗೇ ಎದ್ದರು. ಪ್ರಾರ್ಥನೆಯಾದ ಮೇಲೆ ಕೆಲಸಕ್ಕೆ ಕುಳಿತರು. ಆ ಮೇಲೆ ತೂಕಡಿಕೆ ಬಂದು ಪುನಃ ಮಲಗಿಕೊಂಡರು. 8 ಘಂಟೆಯು ಅವರ ದೇಹ 'ಮಾಲೀಸ್'ನ ಹೊತ್ತು. ಅದಕ್ಕಾಗಿ ನನ್ನ ಕೋಣೆಯನ್ನು ಹಾದು ಹೋಗುತ್ತಾ, ರಾಷ್ಟ್ರಕ್ಕೆ ಅವರ ಕೊನೆಯ ವೀಲು ಅಥವಾ ಮೃತ್ಯುಪತ್ರವಾಗಿ ಪರಿಣಮಿಸಿದ—ಕೆಲವಂತವನ್ನು ಆ ರಾತ್ರಿಯೇ ಅವರು ತಯಾರಿಸಿದ ಕಾಂಗ್ರೆಸ್ ನವಘಟನೆಯ ಕರಡನ್ನು ನನ್ನ ಕೈಗೆ ಕೊಟ್ಟು ಅದನ್ನು ಅಮೂಲಾಗ್ರವಾಗಿ ಪರಿಶೀಲಿಸುವಂತೆ ಹೇಳಿದರು. "ಅದರಲ್ಲೇನಾದರೂ ಬಿಟ್ಟುಹೋಗಿದ್ದರೆ ಸೇರಿಸಿಬಿಡು. ನಾನದನ್ನು ಅತಿರೀಕ ಆಯಾಸದ ನಡುವೆ ಬರೆದಿದ್ದೆ" ಎಂದರು. "ಮಾಲೀಸ್" ಮುಗಿದು ವಾಪಾಸು ಬರುವಾಗ 'ಪರಿಶೀಲಿಸಿ ಆಯಿತೇ' ಎಂದು ನನ್ನನ್ನು ವಿಚಾರಿಸಿದರು ಮತ್ತು ಮದ್ರಾಸಿನಲ್ಲೇಳಬಹುದೆಂಬ ಭೀತಿಯಿರುವ ಆಹಾರ ಬಿಕ್ಕಟ್ಟಿನ ಕುರಿತು ನನ್ನ ನವಾಖಾಲಿ ಅನುಭವ ಮತ್ತು ಪ್ರಯೋಗವನ್ನಾಧರಿಸಿ ಒಂದು ಟಿಪ್ಪಣಿಯನ್ನು ತಯಾರಿಸಬೇಕೆಂದೂ ಹೇಳಿದರು. "ಆಹಾರ ಮಂತ್ರಿಗಳು ಗಲಿಬಿಲಿಗೊಂಡಂತಿದೆ ಆದರೆ ವಿವಿಧ ರೀತಿಯ ಬೇರುಗೆಡ್ಡೆ ಇತ್ಯಾದಿಗಳನ್ನು ಬೆಳೆಸಿದರೂ ಪ್ರಕೃತಿದತ್ತ ತೆಂಗು, ತಾಳೆ, ನೆಲಗಡಲೆ, ಬಾಳೆ ಇತ್ಯಾದಿಗಳ ಹೇರಳಾನುಕೂಲತೆಯಿರುವ ಮದ್ರಾಸು ಉಪವಾಸ ಬೀಳಬೇಕೆಂದಿಲ್ಲವೆಂದು ನನ್ನ ಅಭಿಪ್ರಾಯ."ಎಂದರು ಅದೀತೆಂದೆ ನಾನು. ಆ ಮೇಲೆ ಅವರು ಸ್ನಾನಕ್ಕೆ ಹೋದರು. ಸ್ನಾನ ಮಾಡಿ ಬಂದಾಗ ಅವರು ಬಹಳ ಗೆಲವಾಗೊಂಡಂತೆ ತೋರಿತು. ಹಿಂದಿನ ರಾತ್ರಿಯ ಆಯಾಸವೆಲ್ಲ ಮಾಯವಾಗಿತ್ತು. ತನ್ನ ನಿತ್ಯದ ಸರಸ ವಿನೋದಗಳಿಂದ ಅವರು ತುಂಬಿದ್ದರು. ದುರ್ಬಲ ಪ್ರಕೃತಿಯವರಾಗಿರುವುದಕ್ಕಾಗಿ ಆಶ್ರಮದ ಹುಡುಗಿಯರನ್ನು ಅವರು ಹಂಗಿಸಿದರು. 'ವಾಹನ ದೊರೆಯದ ದೆಸೆಯಿಂದ....ಳಿಗೆ ಟ್ರೈನು ತಪ್ಪಿಹೋಯಿತು' ಎಂದಲ್ಲಿ ಯಾರೋ ಹೇಳಿದಾಗ 'ಅವಳು ನಡೆದುಕೊಂಡೇಕೆ ಹೋಗಲಿಲ್ಲ?"ಎಂದು ಪ್ರಶ್ನಿಸಿದರು. ಅದೊಂದು ಖಾಲೀ ಪ್ರತ್ಯುತ್ತರವೇನೂ ಆಗಿರಲಿಲ್ಲ. ಯಾಕೆಂದರೆ ಆಂಧ್ರ ದೇಶದ ಸಂಚಾರ ಕಾಲದಲ್ಲೊಮ್ಮೆ, ಮೋಟಾರ್ ಕಾರುಗಳ ಪೆಟ್ರೋಲು ಖಾಲಿಯಾಗಿದ್ದುದನ್ನು ಕಂಡು, ಪತ್ರಿಕೆಗಳನ್ನೂ ಕೆಲವು ಲಘು ಸಾಮಾನುಗಳನ್ನೂ ಹಿಡಿದುಕೊಂಡು 13 ಮೈಲು ದೂರದಿರುವ ರೈಲ್ವೇ ಸ್ಟೇಶನಿಗೆ ಕಾಲ್ನಡೆಯಿಂದ ಹೊರಡಲು ನನ್ನನ್ನು ಅಪರೆಬ್ಬಿಸಿದ್ದುದು ನನಗೆ ಈಗಲೂ ನೆನಪಿದೆ.

ಕೊನೆಯ ಉಪದೇಶ

9-20ಕ್ಕೆ ಅವರು ತನ್ನ ಬೆಳಗ್ಗೆಯ ಊಟಕ್ಕೆ ಕುಳಿತರು. ಆಡಿನ ಹಾಲು, ಪಾಕ ಮಾಡಿದ ಮತ್ತು ಹಸಿ ತರಕಾರಿ, ಕಿತ್ತಳೆಯ ಮತ್ತು ಡಿಕೋಕ್ಷನ್ ಶುಂಠೀ ರಸ, ಹುಳಿ ಲೆಮನ್, ಘೃತಕುಮಾರಿಯಿದ್ದ ತನ್ನ ನಿತ್ಯದ ಊಟಕ್ಕೆ ಅವರು ಕುಳಿತಿದ್ದಲ್ಲಿಗೇ, ನಾನು 'ಕಾಂಗ್ರೆಸು ಕರಡಿ'ನ ನನ್ನ ಕೆಲಸ ಮುಗಿಸಿಕೊಂಡು ಹೋದೆ ಅವರು ನಾನು ಮಾಡಿದ್ದ ತಿದ್ದುಪಡಿ ಮತ್ತು ಸೇರಿಸಿದ್ದ ಹೊಸ ಭಾಗಗಳನ್ನು ತನ್ನ ಪದ್ಧತಿಪ್ರಕಾರ ಅತ್ಯಂತ ಲಕ್ಷ್ಯಪೂರ್ವಕ ಪರಿಶೀಲಿಸಿದರು. ಲೆಕ್ಕ ಹಾಕಿನೋಡಿ ಪಂ
ಚಾಯತ್‌ನಾಯಕರ ಸಂಖ್ಯೆಯ ಸಂಬಂ
ಧದಲ್ಲಿದ್ದ ಒಂದು ತಪ್ಪನ್ನು ತೊಡೆದುಹಾ
ಕಿದರು. ಮೊದಲ ದಿನ ಈ ಕು ಅನಾ
ರೋಗ್ಯದಲ್ಲಿದ್ದ ಡಾ. ರಾಜೇಂದ್ರ ಪ್ರಸ
ದರನ್ನು ನೋಡಿಕೊಂಡು ಬರಲು ಅವರ
ನನ್ನನ್ನು ಕಳುಹಿದ್ದರು. ಅಂತೆಯೇ ಹಿ
ದಿನ ಅಪರಾಹ್ನ ಡಾ. ಶ್ಯಾಮಪ್ರಸಾ
ಮುಖರ್ಜಿಯವರು ಪೂರ್ವ ಬಂಗಾಳ
ಸ್ಥಿತಿಗತಿಗಳನ್ನು ನನಗೆ ವಿವರಿಸಿದ್ದರ
ನಾನು ಇವೆರಡರ ಸವಿವರ ವರದಿಯನ
ಅಲ್ಲಿಯೇ ಒಪ್ಪಿಸಿದೆ ತತ್ಕ್ಷಣ ಮಾ
ನವಾಖಾಲಿಯ ಪ್ರಶ್ನೆಯು ಚರ್ಚೆಗೆ ಬ
ತು. ಅಲ್ಲಿಯ ಹಿಂದುಗಳನ್ನು ಸುವ್ಯವಸ್ಥೆ
ಯಿಂದ ಈಚೆಗೆ ತರುವುದೇ ವಾಸಿಯೆಂದ
ನಾನು ತಿಳಿಸಿದೆ. ಆದರೆ ಅವರ ಅಭಿಪ್ರಾಯ
ವು ಸ್ಪಷ್ಟ ಹಾಗೂ ಸುದೃಢವಿತ್ತು." ನೀ
'ಮಾಡುವ ಅಥವಾ ಮಡಿಯುವ' ಕೆಲ
ಗಾರರಾಗಿರುವಂತೆಯೇ, ಜನರು ಕೂಡ
ತಮ್ಮ ಸ್ವಾಭಿಮಾನ, ಗೌರವ ಹಾಗ
ಧಾರ್ಮಿಕ ಹಕ್ಕುಬಾಧ್ಯತೆಗಳಿಗಾ
'ಮಾಡುವವರು ಅಥವಾ ಮಡಿಯುವ
ರಾಗುವಂತೆ ನೀವು ಜನರನ್ನು ತಯಾ
ಗೊಳಿಸಬೇಕು. ಇದರಿಂದಾಗಿ ಕಟ್ಟಕ
ಗೆ ಕೆಲವೇ ಮಂದಿ ಮಾತ್ರ ಉಳಿಯ
ವಂತಾಗಬಹುದು. ಆದರೂ, ದುರ್ಬ
ಯಲ್ಲಿ ಸಶಕ್ತತೆಯನ್ನು ನಿರ್ಮಿಸಲು ಬೆ
ರಾದಿಯಿಲ್ಲ. ಸಶಸ್ತ್ರ ಯುದ್ಧಗಳಲ್ಲಿ
ಡಾ ಸೇನಾ ತುಕಡಿಗಳು ಧ್ವಂಸವ
ಹೋಗುವುದಿಲ್ಲವೇ? ಅಂದ ಮೇಲೆ ಅ
ಸೆಯಲ್ಲಿ ಬೇರೇನಾಗಲು ಸಾಧ್ಯವಿದ
ಎನ್ನುತ್ತಾ ಅವರು ನನಗೆಂದರು—"ನೀ
ಹಾದಿಹಿಡಿದಿರುವಿ, ಮರಣದ ಭಯವ
ಚೆಲ್ಲಿಕೊಟ್ಟು ಜನತೆಯ ಹೃದಯ
ಲ್ಲೊಂದು ಗೌರವ ಸ್ಥಾನ ಪಡೆದಿರ
ಪ್ರೇಮ ಮತ್ತು ಉದ್ಯೋಗ ಶೀಲ
ಜ್ಞಾನವೂ ಸೇರಿರಬೇಕು. ಅದು ನಿನ್ನ
ದೆ. ನಿನಗೆ ಗೊತ್ತು—ನನಗಿಲ್ಲಿ ನನ್ನ ಅಗ
ಬಹಳವಿದೆ; ಭಾರವನ್ನೂ ದೊಡ್ಡ
ಆದರೀಗ ನಾನು ನನ್ನನ್ನೇ ಗಟ್ಟಿಮಾ
ಕೊಂಡಿದ್ದೇನೆ. ಯಾಕೆಂದರೆ ನೀನಿ
ಮಾಡುತ್ತಿರುವ ಕೆಲಸ ವಿಶೇಷ ಮು
ವಾದುದು." ಆ ಮೇಲೆ ಸರಕಾರವು ತ
ಕರ್ತವ್ಯಪಾಲನೆ ಮಾಡದಿದ್ದಲ್ಲಿ ಪು
ರೊಡನೆ ಹೇಗೆ ವರ್ತಿಸಬೇಕೆಂಬ ಕು
ಅವರು ಸೂಚನೆಗಳನ್ನು ಕೊಟ್ಟರು.

"ನೆಹರು–ವಲ್ಲಭಾಯಿ"

ಆ ದಿನ ಮಧ್ಯಾಹ್ನದ ನಿದ್ರೆಯ
ರ ಶ್ರೀ ಸುಧೀರ ಘೋಸರೊಡನೆ
ಷಿಸಿದ್ದರು. ಶ್ರೀ ಘೋಸರು ಇತ್ತಂ
ಯಗಳ ನಡುವೆ ಲಂಡನಿನ 'ಟೈಮ್ಸ್'
ತ್ರಿಕೆಯ ತುಂಡೊಂದನ್ನೂ ಓರ್ವ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¼% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore. Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಷ್ ಸ್ನೇಹಿತ ಬರೆದಿದ್ದ ಪತ್ರದ ಕೆಲವು ಭಾಗಗಳನ್ನು ಗಾಂಧಿಜೀಗೆ ಓದಿ ಹೇಳಿದರು. ಸರ್ದಾರ್ ಪಟೇಲರು ಜಾತೀವಾದಿಯೆಂದು ಚಿತ್ರಿಸಿ, ಪಂಡಿತ ನೆಹರುಗಳನ್ನು ಹೊಗಳುವಂತೆ ನಟಿಸಿ ನೆಹರು-ಪಟೇಲರೊಳಗೆ ಭೇದವನ್ನು ತಂದಿಕ್ಕಲು ಕೆಲವರು ಯಾವ ರೀತಿ ದುರುದ್ದೇಶಪೂರ್ವಕ ಪ್ರಯತ್ನಿಸುತಿದ್ದಾರೆಂಬುದು ಅವುಗಳಿಂದ ವ್ಯಕ್ತವಾಗುತಿತ್ತು. ಈ ಸಂಚಿಕೆಯು ತನಗೆ ಗೊತ್ತೇ ಇದ್ದು ತಾನಾ ಕುರಿತು ಗಾಢ ಯೋಚನೆ ಮಾಡಿದ್ದೇನೆಂದು ಗಾಂಧಿಜೀಯೆಂದರು. 'ಹರಿಜನ"ದಲ್ಲಿ ಪ್ರಕಟಗೊಂಡ ಒಂದು ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧಿಜೀ ಈ ಕುರಿತು ಮೊದಲೇ ಬೋಧಿಸಿದ್ದರು. ಆದರೂ ಇನ್ನೂ ಹೆಚ್ಚಿನ ಕೆಲಸ ಮಾಡಬೇಕಾಗಿದೆಯೆಂದು ಗಾಂಧಿಜೀಗೆ ಮನವರಿಕೆಯಾಗಿ ಅವರಾ ಕುರಿತು ಯೋಚಿಸುತಿದ್ದರು. ಆ ದಿನವಿಡೀ ಅವಿಶ್ರಾಂತ ಸಂಭಾಷಣೆಗಳಲ್ಲೇ ಕಳೆಯಿತು. ದಿಲ್ಲಿಯ ಮೌಲಾನರುಗಳು ಗಾಂಧಿಜೀಯ ಭೇಟಿಗೆ ಬಂದಿದ್ದರು. ಗಾಂಧಿಜೀ ವಾರ್ಧಾಕ್ಕೆ ಹೋಗುವುದಕ್ಕೆ ಅವರು ಒಪ್ಪಿಗೆ ಕೊಟ್ಟರು. 'ದೇವರ ಸಂಕಲ್ಪ ಬೇರೆಯಾಗದಿದ್ದರೆ, ಅನಿರೀಕ್ಷಿತವಾದುದೇನಾದರೂ ನಡೆಯದಿದ್ದರೆ' ತಾನು ವಾರ್ಧಾಕ್ಕೆ ಹೋಗಿ, ತಾ. 11ರ ಜಮುನಾಲಾಲ್ ವರ್ಧಂತಿಯನ್ನು ಮುಗಿಸಿ ಬಳಿಕ ತಾ. 14ಕ್ಕೆ ದಿಲ್ಲಿಗೆ ಮರಳುವೆನೆಂದು ಗಾಂಧಿಜೀ ತಿಳಿಸಿದ್ದರು. ನಾವು ವಿಚಾರಿಸುವ ಮತ್ತೊಂದಂಶ ಬಾಕಿಯಿತ್ತು. "ಬಾಪೂ ಕೆಲವು ದಿವಸಗಳ ಮಟ್ಟಿಗೆ........ಳನ್ನು ನಾನು ನವಾಖಾಲಿಗೆ ಕರಕೊಂಡು ಹೋಗಲೆ? ಯಾಕೆಂದರೆ ಅಲ್ಲಿಯ ಮುಸ್ಲಿಂ ಮಹಿಳೆಯರ ನಡುವೆ ಕೆಲಸ ಮಾಡಲನುಕೂಲವಾಗುತ್ತದೆ.' ಎಂದು ಕೇಳಿದೆ. "ಏನೂ ಅಡ್ಡಿಯಿಲ್ಲ"ಎಂದರು ಬಾಪೂ. ನಾನವರಿಂದ ಕೇಳಿದ ಕೊನೆಯ ಮಾತು ಇದೇ!

ಕೊನೆಯ ಭೇಟಿ—ಹೆಜ್ಜೆ

ಅಪರಾಹ್ನ 4–30ಕ್ಕೆ ಅಭಾ, ಅಪರಾಹ್ನದೂಟವನ್ನು ತಂದಳು. ಬಾಪೂ ಈ ಲೋಕದಲ್ಲಿ ಕೊನೆಯ ಬಾರಿ ಬಾಯಿಗಿಟ್ಟ ಊಟ ಅದೇ. ಬೆಳಗ್ಗಿನ ಊಟದಷ್ಟೇ ಅದರಲ್ಲೂ ಇತ್ತು. ಅಲ್ಲಿ ನಡೆದ ಮಾತುಕತೆಗಳ ಪೈಕಿ, ಕೇಂದ್ರ ಸರಕಾರದಲ್ಲಿ ಒಡಕು ಹುಟ್ಟಿಸುವ ಉದ್ದೇಶದಿಂದ ಸರ್ದಾರರ ವಿರುದ್ಧ ನಡೆದಿರುವ ಹೇಯ ಅಪಪ್ರಚಾರವೂ ಒಂದು. ರಾಷ್ಟ್ರದ ಚರಿತ್ರೆಯಲ್ಲೇ ಅತಿ ಬಿಕ್ಕಟ್ಟಿನದಾದ ಈ ಕಾಲದಲ್ಲಿ ಸೂತ್ರಧಾರಿಗಳಲ್ಲೇನಾದರೂ ಒಡಕು ಹುಟ್ಟಿತೆಂದರೆ ಅದು ಮಹಾ ಗಂಡಾಂತರದಾಯಿಯೆಂದು ಬಾಪೂವಿನ ಸ್ಪಷ್ಟಾಭಿಪ್ರಾಯವಿತ್ತು. ಆ ದಿನದ ಪ್ರಾರ್ಥನೋತ್ತರ ಭಾಷಣದಲ್ಲಿ ಇದನ್ನು ತಿಳಿಸುವೆನಾಗಿ ಆಗ ಬಂದಿದ್ದ ಸರ್ದಾರರೊಡನೆ ಅವರು ಹೇಳಿದರು. ಪ್ರಾರ್ಥನಾ ನಂತರ ಪಂಡಿತಜೀಯೂ ಬಾಪೂ ಭೇಟಿಗೆ ಬರುವರಾದ್ದರಿಂದ ಅವರೊಡನೆಯೂ ಈ ವಿಷಯವನ್ನು ಚರ್ಚಿಸುವುದಾಗಿ ತಿಳಿಸಿದರು. ಅಗತ್ಯ ಬಿದ್ದರೆ 2ನೇ ತಾರೀಕಿಗೆ ವಾರ್ಧಕ್ಕೆ ಹೊರಡುವುದನ್ನು ಕೂಡಾ ಬದಿಗಿಡುವೆನೆಂದೂ ಇವರಿಬ್ಬರೊಳಗೆ ಜಗಳ ತಂದು ಹಾಕಬೇಕೆಂದು ನಡೆದಿರುವ ಎಲ್ಲಾ ಕೊಳಕು ಪ್ರಚಾರಗಳನ್ನೂ ಪೂರ್ಣ ಝಾಡಿಸಿ ತೆಗೆಯದೆ ದಿಲ್ಲಿಯನ್ನು ಬಿಡಲಾರೆನೆಂದೂ ಅವರು ತಿಳಿಸಿದರು. ಈ ರೀತಿ ಸರ್ದಾರರೊಡನೆ ಮಾತುಕತೆ ಉದ್ದಕ್ಕೂ ಬೆಳೆದಿತ್ತು. ಪಾಪ, ಅಭಾಳಿಗೆ ಅದಕ್ಕಡ್ಡ ಬರಲು ಧೈರ್ಯವಾಗದೆ ಕಾದು ನಿಂತಿದ್ದಳು. ಸಮಯಕ್ಲುಪ್ತತೆಗೆ-ಅದರಲ್ಲೂ ಪ್ರಾರ್ಥನಾ ಸಮಯಕ್ಕೆ-ಬಾಪು ಎಷ್ಟು ಪ್ರಾಮುಖ್ಯತೆ ಕೊಡುತಿದ್ದರೆಂಬುದನ್ನರಿತಿದ್ದ ಆಕೆ ಉಪಾಯವಿಲ್ಲದೆ, ಅಲ್ಲಿಯೇ ಕೆಳಗಿದ್ದ ಬಾಪುವಿನ ಗಡಿಯಾರವನ್ನು ಎತ್ತಿಕೊಂಡು, ತಡವಾದುದನ್ನು ಅವರು ತಿಳಿಯಲಾಗುವಂತೆ ಗಾಂಧಿಜೀಯ ಕಣ್ಣೆದುರೆತ್ತಿ ಹಿಡಿದಳು. ಕೂಡಲೇ ಅವರು ಪ್ರಾರ್ಥನಾ ಸಭೆಗೆ ಹೋಗುವ ಮುನ್ನ ಸ್ನಾನದ ಕೋಣೆಗೆ ಹೊರಡಲೇಳುತ್ತಾ "ಈಗ ಸ್ವತಃ ನಾನೇ ಕಣ್ಣೀರು ಬಿಡಬೇಕು"ಎಂದು ಹೋಗಿಬಂದರು. ಆ ಮೇಲೆ ತನ್ನ "ಕೈಕೋಲು"ಗಳಾದ ಅಭಾ ಮತ್ತು ಮನುವಿನ ಹೆಗಲುಗಳನ್ನಾಧರಿಸಿ ಪ್ರಾರ್ಥನಾ ಸಭೆಯಲ್ಲೇರಿಸಿದ್ದ ವೇದಿಕೆಯ ಮೆಟ್ಟಲುಗಳ ಬುಡಕ್ಕೆ ಬಂದರು; ದಾರಿಯುದ್ದಕ್ಕೂ ಅವರೊಡನೆ ತಮಾಷೆ ನಡೆದಿತ್ತು. "ಬಾಪೂ, ನಿಮ್ಮ ಗಡಿಯಾರಕ್ಕೀಗ ತನ್ನನ್ನು ಕೇಳುವವರೇ ಇಲ್ಲವೆಂದಾಗಿದೆ ನೀವದರ ಕಡೆಗೆ ನೋಡುವುದೇ ಇಲ್ಲ" ಎಂದಳು ಅಭಾ. "ನನ್ನ ಸಮಯ ಸೂಚಕರಾದ ನೀವಿರುವಾಗ ನಾನು ಅದನ್ನೇಕೆ ನೋಡಬೇಕು" [illegible]ದರು [illegible]ಗಾಂಧಿಜೀ. "ಆದರೆ ನೀವು ನಿಮ್ಮ ಸಮಯ ಸೂಚಕರನ್ನು ನೋಡುವುದೂ ಇಲ್ಲ" ಎಂದಳು ಮತ್ತೊಬ್ಬಳು. ಬಾಪೂ ಗಹಗಹಿಸಿ ನಕ್ಕರು. ಮೆಟ್ಟಲು ದಾಟುತ್ತಾ ಅವರು ಹೇಳಿದ ಕೊನೆಯ ಮಾತೆಂದರೆ "ನಾನು 10 ಮಿನಿಟು ತಡ ಮಾಡಿದೆ. ತಡ ಮಾಡುವುದೆಂದರೆ ನನಗಾಗುವದಿಲ್ಲ. ಐದು ಹೊಡೆಯುವ ಹೊತ್ತಿನಲ್ಲಿ ಪ್ರಾರ್ಥನಾಸ್ಥಳದಲ್ಲಿರಲೇಬೇಕು" ಎಂಬುದೇ. ಇಲ್ಲಿಯೇ ಸಂಭಾಷಣೆ ನಿಂತಿತು. ಪ್ರಾರ್ಥನಾ ರಂಗದ ಸರಹದ್ದಿಗೆ ಬಂದ ಕೂಡಲೇ ಸಂಭಾಷಣೆ, ಸರಸ ವಿನೋದಗಳೆಲ್ಲವೂ ನಿಲ್ಲತಕ್ಕದ್ದೆಂದೂ, ಪ್ರಾರ್ಥನೆಯೊಂದೇ ತಲೆಯಲ್ಲಿ ತುಂಬಿರಬೇಕೆಂದೂ ಈ 'ಕೋಲು'ಗಳದೊಂದು ಅಂತರ್ನಿರ್ಣಯವಿದ್ದಿತು.

"ರಾಮ-ರಾಮ!"

ಪ್ರಾರ್ಥನಾ ಸಭೆಯೊಳಗೆ ಸಾಲು ಹಿಡಿದು ನಿಂತಿದ್ದ ಹಾದಿಯಿಂದ ಬರುವಾಗ ಸಭಿಕರ ನಮಸ್ಕಾರಗಳಿಗೆ ಪ್ರತಿ ನಮಸ್ಕಾರ ಕೊಡಲು ಇಬ್ಬರು ಹುಡುಗಿಯರ ಹೆಗಲುಗಳಿಂದ ಕೈತೆಗೆದು ಬಾಪು ಕೈಜೋಡಿಸಿಕೊಂಡು ಬರುತಿದ್ದರು. ಅಷ್ಟರಲ್ಲಿ ಆಕಸ್ಮಾತ್ ಬಲಬದಿಯಿಂದೊಬ್ಬ ಬಗ್ಗಿಕೊಂಡು ಮುಂದೆ ಬರುತಿದ್ದ. ಹುಡುಗಿ ಮನು ಆತ ಪಾದ ಮುಟ್ಟಲು ಪ್ರಯತ್ನಿಸುತಿದ್ದಾನೆಂದು ಬಗೆದು, ಅಷ್ಟರಲ್ಲಿಯೇ ತಡವಾಗಿದೆಯಾದ್ದರಿಂದ, ಇನ್ನೇ ಪ್ರಣಾಮ ತೊಂದರೆ ಬೇಡವೆಂದೇನೋ ಹೇಳುತ್ತಾ ಆವನ ಕೈಹಿಡಿದುಕೊಳ್ಳಲು ನೋಡಿದಳು. ಆವನು ಅವಳನ್ನು ಬಲವಾಗಿ ನೂಕಿದ ರಭಸಕ್ಕೆ, ಅವಳು ಕೈಯಲ್ಲಿ ಹಿಡಿದುಕೊಂಡಿದ್ದ ಆಶ್ರಮ ಭಜನಾವಳಿ ಮತ್ತು ಬಾಪೂಜೀಯ ಪೀಕದಾನಿ ಹಾಗೂ 'ಮಾಲೆ' ಕೆಳಗೆ ಬಿದ್ದುವು. ಚೆಲ್ಲಾಪಿಲ್ಲಿಯಾದ ಆ ಸಾಮಾನುಗಳನ್ನು ಹೆಕ್ಕಿಕೊಳ್ಳಲು ಹುಡುಗಿಯರು ಬಗ್ಗಿದಾಗ, ಆತ ನೆಟ್ಟಗೆ ಬಾಪೂಜಿಗೆ ಮುಖಾಮುಖಿ ನಿಂತು,ಏಳು ತೋಟೆಗಳ 'ಆಟೋಮೆಟಿಕ್' ಪಿಸ್ತೂಲಿನಿಂದ ಫಟ್ಫಟ್ಟನೇ ಗುಂಡುಗಳನ್ನು ಹಾರಿಸಿದ. ಮೂರು ಗುಂಡುಗಳು ದೇಹದೊಳಕ್ಕೆ ಪ್ರವೇಶಿಸಿದ್ದುವು. ಆತ ಎಷ್ಟು ಸಮೀಪ ನಿಂತು ಹೊಡೆದಿದ್ದನೆಂದರೆ ಒಂದು ಗುಂಡು ಬಾಪುವಿನ ವಸ್ತ್ರದ ಮಡಿಕೆಯೊಳಗೆ ಸಿಕ್ಕಿಕೊಂಡಿದ್ದುದು ಕೊನೆಗೆ ದೊರೆಯಿತು. ಮೊದಲನೇ ಗುಂಡು ಹೊಕ್ಕುಳಿನ ಎರಡೂವರೆ ಇಂಚು ಮೇಲ್ಗಡೆ, [illegible]ಗೆ [illegible] ಇಂಚು ಬಲಗಡೆಗೆ ಕಿಬ್ಬೊಟ್ಟೆಗೆ ಪ್ರವೇಶಿಸಿತು. ಎರಡನೆಯದು ಮಧ್ಯ ಗೆರೆಗೆ ಒಂದಿಂಚು ಬಲಭಾಗಕ್ಕೆ ಏಳನೇ ಎಡೆಯೆಲುಬಿನ ಅಂತರ ಸ್ಥಳಕ್ಕೆ, ಮೂರನೆಯದು ಎದೆಯ ಬಲ ಮೊಲೆಯ ಒಂದಿಂಚು ಮೇಲೆ ಮಧ್ಯಗೆರೆಯ ನಾಲ್ಕಿಂಚು ಅಂತರದಲ್ಲಿ ಹೊಕ್ಕಿತು. ಮೊದಲನೆಯ ಮತ್ತು ಎರಡನೆಯ ಗುಂಡುಗಳು ನೇರಾಗಿ ಛೇದಿಸಿಕೊಂಡು ಹೋಗಿ ಬೆನ್ನಿನಿಂದ ಹೊರಟಿದ್ದುವು. ಮೂರನೆಯದು ಶ್ವಾಸಕೋಶದೊಳಗೆ ಹುದುಗಿಹೋಯಿತು. (ಭಸ್ಮದಲ್ಲಿ ದೊರೆತಿವೆ.) ಚಲನೆಯಲ್ಲೇ ಇದ್ದ ಬಾಪುವಿನ ಕಾಲು ಮೊದಲನೆಯ ಹೊಡೆತ ಬಿದ್ದೊಡನೆಯೇ ಬಿದ್ದಿತ್ತು. ಆದರೂ ಎರಡನೇ ಗುಂಡು ಬೀಳುವ ವರೆಗೂ ಅವರು ನೆಟ್ಟಗೆ ನಿಂತಿದ್ದು ಆಗ ಬಿದ್ದರು. ಅವರು ಉಚ್ಚರಿಸಿದ ಕೊನೆಯ ಪದ 'ರಾಮ-ರಾಮಾ' ಮುಖಭಾವ ಬೂದುಬಣ್ಣಕ್ಕೆ ಮಾರ್ಪಟ್ಟಿತು. ಬಿಳೀ ವಸ್ತ್ರದಲ್ಲಿ ರಕ್ತ ಕೆಂಪು ಹರಡಿಕೊಂಡಿತು. ಜನಕಂಡಕ್ಕೆ ನಮಸ್ಕಾರ ಕೊಡಲು ಜೋಡಿಸಿ ಎತ್ತಿದ್ದ ಕರಗಳು ನಿಧಾನವಾಗಿ ಕೆಳಗಿಳಿದುವು. ಒಂದು ಕೈ ತನ್ನ ಸಹಜ ಸ್ಥಾನವಾದ ಅಭಾಳ ಹೆಗಲ ಮೇಲೆ ಬಿತ್ತು. ಸಡಿಲಾದ ದೇಹ ನಿಧಾನವಾಗಿ ಕೆಳಕ್ಕೆ ಜಗ್ಗಿತು. ಮನು ಮತ್ತು ಅಭಾಳಿಗೆ ಆದುದೇನೆಂಬುದು ತಿಳಿದುದು ಆಗಲೇ.

ಎಲ್ಲವೂ ಮುಗಿದು ಬಿರ್ಲಾ ಭವನದ ಕೋಣೆಯಲ್ಲಿ ಬಾಪೂ ಕಾಯವನ್ನು ಮಲಗಿಸಿದಾಗ, ಅವರ ಅನುಯಾಯಿಗಳ ಪೈಕಿ ಮೊದಲು ಬಂದವರು ಸರ್ದಾರರು. ಅವರು ಬಾಪುವಿನ ಪಕ್ಕದಲ್ಲಿ ಕುಳಿತುಕೊಂಡು ಕೈನಾಡಿಯನ್ನು ಪರೀಕ್ಷಿಸುತ್ತಾ, ಆದಾಗಲೂ ಮೆಲ್ಲಗೆ ಹೊಡೆಯುತ್ತಿದೆ ಎಂದು ಭ್ರಾಂತಿಗೊಂಡರು. ಡಾ| ಜೀವರಾಜ ಮೆಹತಾರು ಒಂದು ನಾಡಿಗಳನ್ನೂ, ಕಣ್ಣು ಗುಡ್ಡೆಗಳನ್ನೂ ಪರೀಕ್ಷಿಸಿ ನೋಡಿ ತುಂಬಿ ಬಂದ ದುಃಖದಿಂದ ತಲೆಯಲ್ಲಾಡಿಸಿದೊಡನೆ ಹುಡುಗಿಯರು ಗೋಳೋ ಅಂದರು. ಕೂಡಲೇ ತಮ್ಮನ್ನು ಸುಧಾರಿಸಿಕೊಂಡು ರಾಮನಾಮ ಪಠಿಸಹತ್ತಿದರು. ಶವದ ಪಕ್ಕದಲ್ಲಿ ತಾಜಾ ಹೆಣದ ಮುಖದಂತಾಗಿದ್ದ ಸರ್ದಾರರು ಪ್ರತಿಮೆಯಾಗಿ ಹೋದರು. ಆ ಮೇಲೆ ಬಂದ ಪಂಡಿತ ಜವಾಹರಲಾಲರು ಶವದ ಮೇಲೆ ಬಿದ್ದು ಬಾಪೂವಿನ ವಸ್ತ್ರದೊಳಗೆ ತನ್ನ ಮುಖವನ್ನು ತುರುಕಿಸಿ ಸಣ್ಣ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರು.........

ಬಾಲಕರ ಆರೋಗ್ಯಕಾರಿಗಳು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಸುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಭಾಶಿ, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. Sharma, Mangalore.

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years. Filaria is a dirty, disfiguring disease. And yet a little united effort on the part of the public could at very little cost wipe out these two evils. **Please, watch this space.**

Inserted by:

The Canara Mutual Assurance Company Limited,
ESTD. 1935
H. O. UDIPI.

ಆವಸರದಲ್ಲಿ ಬರುವ ಅತಿಥಿಗಳಿಗೆ
ಪ್ರೀತಿಯ ಪಾನಕ
ಲಿಂಬೆ, ಕಿತ್ತಳೆ, ಅನನಾಸಗಳಿಂದ ತಯಾರಿಸಲ್ಪಟ್ಟ ಶಂಕ ಮಾರ್ಕಿನ
ಶರಬತ್ತು
ಉಷ್ಣ ಕಾಲದಲ್ಲಿ ಮಧುರ ಪಾನೀಯ.
ತಯಾರಕರು:—
ಕನ್ನಡ ಸೋಪ್ ಎಂಡ್
ಇಂಡಸ್ಟ್ರಿಯಲ್ಸ್ ಲಿಮಿಟೆಡ್,
ಮಂಗಳೂರು.

ಜಾತೀಯ ದುರ್ಭಾವ —ನಿವಾರಣ—

ಗಾಂಧಿಜೀಯಿಲ್ಲದ ಒಂದೊಂದೇ ದಿನಗಳನ್ನು ಕಳೆಯುತ್ತಾ ಈಗ ತಿಂಗಳನ್ನು ಸಮೀಪಿಸಿದ್ದೇವೆ. ಹುತಾತ್ಮಾ ಗಾಂಧಿಯ ಅಂಕೆಯಲ್ಲಿರುವ ವಾತಾವರಣದಲ್ಲೇ ಇದ್ದೇವೆ.

ಕಾಶ್ಮೀರದ ಕುರಿತು ಪಾಕಿಸ್ತಾನದ ಮೇಲೆ ಭಾರತವು ಕೊಟ್ಟಿದ್ದ ದೂರಿನ ಸಂಬಂಧವಾಗಿ ಜಾಗತಿಕ ಸಂಘದ ಭದ್ರತಾ ಕೌನ್ಸಿಲು ವಹಿಸಿದ ತೀರ್ಮಾನ ಧೋರಣೆ ಹಾಗೂ ಕಾರ್ಯಕ್ರಮಗಳಿಂದ ಭಾರತ ಸರಕಾರ ಜಿಗುಪ್ಸೆಗೊಂಡಿದೆ. ಅಲ್ಲಿಯ ದೂರನ್ನು ಹಿಂದೀ ಸರಕಾರವು ಹಿಂದೆಗೆದುಕೊಂಡಿಲ್ಲವಾದರೂ ಸದ್ಯಕ್ಕೆ ಭಾರತ ಪ್ರತಿನಿಧಿಗಳು ಭಾರತಕ್ಕೆ ಮರಳಿದ್ದಾರೆ.

ಹೈದರಾಬಾದು, ತಾನು ಹಿಂದೀ ಸರಕಾರದೊಡನೆ ಮಾಡಿಕೊಂಡ ಒಂದು ವರುಷದ ಕರಾರಿನ ಶರ್ತಗಳನ್ನು ಗೌರವಪೂರ್ವಕ ಪಾಲಿಸುತ್ತಿಲ್ಲ; ಅದರ ಒಳಗಡೆಯ ಆಂದೋಲನವಂತೂ ಬಿರುಸಾಗಿ ಸಾಗಿದೆ. ಆದ್ದರಿಂದ ಹೈದರಾಬಾದಿನ ಪ್ರಶ್ನೆಯು ಬೇಗನೇ ತೀರ್ಮಾನಗೊಳ್ಳಬೇಕೆಂದು ಭಾರತ ಸರಕಾರವೀಗ ನಿರ್ಧರಿಸಿದೆ.

ಗಾಂಧಿಜೀಯ ಕೊಲೆಯ ನಂತರ ಭಾರತದ ಜಾತೀಯತಾ ದಳಗಳನ್ನು ನಿರ್ಮೂಲಿಸಿ, ವಾತಾವರಣವನ್ನು ಶುದ್ಧಗೊಳಿಸುವ ಕಾರ್ಯದ ಕಡೆಗೇ ಕೇಂದ್ರ ಸರಕಾರ ಮತ್ತು ಪ್ರಾಂತಿಕ ಸರಕಾರಗಳು ವಿಶೇಷ ಲಕ್ಷ್ಯಗೊಟ್ಟಿವೆ. 'ಮಹಾತ್ಮಾಜೀ ಮಹಾತ್ಮೆಯಿದು!' ಎನ್ನಲಾಗುವಂತೆ ಶುದ್ಧೀಕರಣ ಕಾರ್ಯವಂತೂ ನಿರಾತಂಕವಾಗಿ, ಸತ್ಪರಿಣಾಮಕಾರಿಯಾಗಿ ಸಾಗಿದೆ.

ನವದಿಲ್ಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಹಾಗೂ ಅ. ಭಾ. ಕಾಂಗ್ರೆಸ್ ಕಾರ್ಯಕಾರೀ ಸಮಿತಿ,ಸಭೆಗಳು ಸೇರಿವೆ. ಈ ಸಪ್ರಮುಖ್ಯ ಕಾಲಕ್ಕುಚಿತವಾದ ಅತಿ ಮುಖ್ಯ ನಿರ್ಧಾರಗಳನ್ನು ಮಾಡಿವೆ.

ಪ್ರಾಪಂಚಿಕ ರಂಗದಲ್ಲೂ ಹಿಂದಿನಂತೆ ಪ್ರಮುಖ ರಾಷ್ಟ್ರಗಳೊಳಗೆ ಅಧಿಕಾರಾಕಾಂಕ್ಷೆಯ ಮೇಲಾಟವೇ ನಡೆದಿವೆ. 'ಬಾಯಿಯಲ್ಲಿ ನೀತಿ-ಬಗಲಲ್ಲಿ ಕತ್ತಿ' ಎಂಬ ಗಾದೆಯು ಯುರೋಪಿನ ನಾಯಕರ ಮಾತುಕೃತಿಗಳಿಗೆ ಅಕ್ಷರಶಃ ಅನ್ವಯಿಸುವಂತಿದೆ. ಅಯರ್ಲೆಂಡಿನ ಸ್ವಾತಂತ್ರ್ಯದಾತ ಡಿವೆಲರಾರವರು 15 ವರುಷಗಳಿಂದ ಇದ್ದ, ಅನನ್ಯ ನಾಯಕತ್ವವನ್ನು ಈ ಬಾರಿಯ ಅಲ್ಲಿಯ ಚುನಾವಣೆಯಲ್ಲಿ ಕಳೆದುಕೊಂಡುದು ತುಸು ವಿಶೇಷದ ಸಂಗತಿ. ಮಿ. ಜೋನ್‌ಕೋಸ್ಟೆಲ್ಲೋರವರು ಅಯರ್ಲೆಂಡಿನ ನವಪ್ರಧಾನ ಮಂತ್ರಿಯಾಗಿ ಆರಿಸಲ್ಪಟ್ಟಿದ್ದಾರೆ. ಪೆಲೆಸ್ತೈನಿನ ಅರಬ್-ಯೆಹೂದೀ ಜಗಳ ಯಥಾ ಪ್ರಕಾರ ಸಾಗಿದೆ. ಅರಬರು ಪಾಕಿಸ್ತಾನ್ ಸರಕಾರದ ಸಹಾಯ ಯಾಚಿಸಿ, ರಾಯಭಾರಿಯನ್ನು ಕರಾಚಿಗೆ ಬೀಳ್ಕೊಂಡಂತಿದೆ. ಅತ್ತ, ಆ ಕಾಲದಲ್ಲಿ ಕ್ರಾಂತಿಕಾರ ಸುಧಾರಣೆಗಳನ್ನು ಜ್ಯಾರಿಗೆ ತಂದ ಕಾರಣದಿಂದಾಗಿ ಗಡ್ಡಾಸಾಹೇಬರುಗಳಿಂದ ಅಫ್ಘಾನಿಸ್ಥಾನದಿಂದಟ್ಟಲ್ಪಟ್ಟಿದ್ದ ರಾಜಾ ಅಮಾನುಲ್ಲಾರನ್ನು ಬ್ರಿಟಿಷರು ಪುನಃ ಅಫ್ಘಾನಿಸ್ಥಾನದೊಳಗೆ ಹೊಗಿಸುವ ಹಂಚಿಕೆ ಹೂಡಿರುವುದು ರಾಜಕೀಯ ಪಗಡೆಯಾಟದ ಮತ್ತೊಂದು ತಂತ್ರ. ಈಗಿನ ಅಫ್ಘಾನಿ ಸರಕಾರವು ರಶ್ಯದ ಬಲೆಯೊಳಗೆ ಬಿದ್ದು, ಭಾರತದ ಗಡಿನಾಡು ಪ್ರಾಂತ್ಯದ ಮೇಲೆ ಬೇಡಿಕೆಯಂತಹ ಹಲವು ಕಿರುಕುಳಗಳನ್ನಾರಂಭಿಸಿರುವುದೇ ಈ ಆಟಕ್ಕೆ ಕಾರಣವಿರಬೇಕೆಂದೂಹಿಸಲಾಗಿದೆ. ಚೈನಾಕ್ಕೆ 5,70,000,000 ಡೋಲರುಗಳ ಸಾಲ ಕೊಡುವ ಯೋಜನೆಯನ್ನು ಅಮೇರಿಕಾಧ್ಯಕ್ಷ ಟ್ರುಮೇನರು ಮಂಜೂರು ಮಾಡಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಚೈನದ ಸದ್ಯದ ಅಂತರ್ಯುದ್ಧ ಸ್ಥಿತಿಗೆ ಕಾರಣವಾದ ಅಲ್ಲಿಯ ರಾಷ್ಟ್ರೀಯ ಸರಕಾರದ ಧೋರಣೆಯನ್ನು ಜೋರ್ಜ್ ಮಾರ್ಶಲರು ಸ್ಪಷ್ಟವಾಗಿ ಖಂಡಿಸಿದುದು ಗಣನೀಯ ವಿಷಯ. ಅತ್ತ ಝೆಕೊಸ್ಲೊವೇಕಿಯದಲ್ಲೂ ಮಂತ್ರಿಮಂಡಲವು ಬಿರಿದು ಹೋಗಿದೆ; ಕಮ್ಯೂನಿಸ್ಟರಲ್ಲದ ಎಂಟುಮಂದಿ ಮಂತ್ರಿಗಳು ರಾಜೀನಾಮೆಯಿತ್ತಿದ್ದಾರೆ.

ಒಟ್ಟಿನ ಮೇಲೆ ಮಾನವ ಜನಾಂಗದ ಇಂದಿನ ಸ್ಥಿತಿಗತಿಗಳನ್ನು ನೋಡುವಾಗ ಈಜಾಡಿ ಈಜಾಡಿ ಕೈಕಾಲು ದಣಿದರೂ ದಡಸೇರಲಾಗದೆ, ಆ ದಡವೇ ಮುಂದೆ ಬಂದು ತಮ್ಮನ್ನು ರಕ್ಷಿಸಿಕೊಳ್ಳಬಾರದೇಕೆ,ಎಂಬ ಹುಸಿಯಾಸೆ ಮತ್ತು ಭ್ರಾಂತಿಯನ್ನು ಅದು ಕಟ್ಟಿಕೊಂಡಂತಿದೆ. ಈ ಶತಮಾನದಲ್ಲಿ ಇಡೀ ಜಗತ್ತಿನ ಪಾಲಿಗೊಬ್ಬನೇ ಇದ್ದ ಶಾಂತಿದೂತ ಗಾಂಧಿಜೀಯನ್ನು ಕಳಕೊಂಡಾಗ ಲೋಕದ ಎಲ್ಲಾ ಕಠಿಣ ಹೃದಯಗಳೂ ಸೂಸಿದ ರೋದನದ ಮೇಲಿಂದೆ ಈಗ ಸರ್ವರೂ ಸೋತು ಶಾಂತಿ, ಅಹಿಂಸೆಯನ್ನು ಬಯಸುತಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಆದರೆ ಯಾರಿಗೂ ಶಾಂತಿಯತ್ತ ತಮ್ಮ ಗಮನವನ್ನು ತಿರಿಗಿಸಲು ಸಾಧ್ಯವಾಗದಿರುವುದನ್ನು ಕಾಣುವಾಗ ನಿಜಕ್ಕೂ ಕನಿಕರ ಮತ್ತು ಅಪಾಯ ಭೀತಿ ಹುಟ್ಟುತ್ತಿದೆ. ಇಂತಹ ಸಂಕಟದಾಯೀ ಪರಿಸ್ಥಿತಿಯ ಸಮಾಪ್ತಿ ಹೇಗೆ?-ಬಹುಶಃ 'ಗಾಂಧೀ ಬೆಳಕಿ'ನಿಂದಲೇ

ಬಾಪು ವಿಯೋಗಾನಂತರ

ಇಡೀ ಪ್ರಪಂಚಕ್ಕೆ ವೇದನಾತ್ಮಕ ಅನುಭವವಿರುವಂತೆ ಕಳೆದ ತಾ. 12ರಲ್ಲಿ ಗಾಂಧಿಜೀಯ ಚಿತಾ ಭಸ್ಮದ ವಿಸರ್ಜನೆ ದೇಶದ ಹಲವೆಡೆಗಳಲ್ಲಿ ನಡೆಯಿತು. ಅಲಹಾಬಾದಿನ ತ್ರಿವೇಣೀ ಸಂಗಮದಲ್ಲಿ ಮೂಲಧರ್ಮೋದಕ ವಿಧಿ ಚರಿತ್ರಾಪೂರ್ವ ರೀತಿಯಿಂದ ನಡೆಯಿತು. ದೇಶದ ಕೆಲವು ಸಂದುಮೂಲೆಸ್ಥಳಗಳಿಗೂ ಸಿಲೋನಿನಂತಹ ಹೊರಭಾಗಗಳಿಗೂ ಗಾಂಧೀಭಸ್ಮದ ಪಾಲು ದೊರೆತಿದ್ದು, ಅದರ ವಿಸರ್ಜನಾ ವಿಧಿಯಲ್ಲಿ ಪ್ರಕಟಗೊಂಡ ಜನತಾ ಹೃದಯದ ಮೇಲಿಂದ ಮಹಾತ್ಮರು ಎಂತಹ ಮನುಷ್ಯನಾಗಿದ್ದರೆಂಬುದು ಹಿಂದೆಂದೂ ತಿಳಿದು ಬಾರದಿದ್ದ ರೀತಿಯಲ್ಲಿ ತಿಳಿಯಿತು. ಅವರಂತೆ ತನ್ನ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ಮತ್ತು ಆಶ್ರಯದಾತನಾಗಿರಬಲ್ಲ ಬೇರೊಬ್ಬ ಮಹಾತ್ಮ ಪ್ರಪಂಚದ ಚರಿತ್ರೆಯಲ್ಲಿಲ್ಲವೆಂಬುದು ನಿರ್ವಿವಾದ. ಇನ್ನು, ಅವರ ಬಲಿದಾನದಿಂದಾಗಿರುವ ಪರಿಣಾಮವೋ? ಇದರ ಸೂಕ್ಷ್ಮವನ್ನರಿತು ವರ್ಣಿಸುವುದಕ್ಕಾದರೂ ಗಾಂಧಿಜೀಯಿರಬೇಕಿತ್ತು, ಎಂಬಾಶೆ ಮೂಡುವಷ್ಟು ಆಶ್ಚರ್ಯದ್ದಿದೆ! ನಿಜಕ್ಕೂ ಗಾಂಧಿಜಿಯಿರುತಿದ್ದರೆ, ಈ 'ಬಲಿದಾನಿ ಗಾಂಧಿ' ಮಾಡಿಬಿಟ್ಟ ಕೆಲಸಗಳನ್ನು ಅನುಕ್ರಮವಾಗಿ ತನ್ನ ಮೂರು ಪ್ರಾರ್ಥನೋತ್ತರ ಭಾಷಣಗಳಲ್ಲಿ ವರ್ಣಿಸಿ ಹೊಗಳುತಿದ್ದರು! ಗಾಂಧಿಜೀಯೇನಾಗಬೇಕೆಂದು ಹಾರೈಸಿದ್ದರೋ, ಅದರ ಮುಖ್ಯ ಭಾಗವೊಂದನ್ನು ಬಲಿದಾನಿ ಮಹಾತ್ಮ ಸಾಧಿಸಿದ್ದಾರೆ.

ರಾಷ್ಟ್ರದ ಆದ್ಯಂತ್ಯವೂ ಜಾತೀಯ ಗಲಭೆಯು ಒಮ್ಮೆಗೇ ನಂದಿ ಹೋಯಿತು, ಆರ್. ಯಸ್. ಯಸ್., ಮುಸ್ಲಿಂ ನೇಶನಲ್ ಗಾರ್ಡ್ಸ್, ಖಾಕ್ಸಾರ್, ಕೆಂಪು ದಳದಂತಹ ಜಾತೀಯ ಸೇನಾ ಮರ್ಜಿ ಸಂಸ್ಥೆಗಳಿಗೆ ಸಾರ್ವತ್ರಿಕ ಬಹಿಷ್ಕಾರ ಬಿದ್ದು ನಿದಾಕ್ಷಿಣ್ಯವಾಗಿ ಬಂಧನ, ಜಪ್ತಿ, ಬೇಟೆ ನಡೆದರೂ ಕಿರುಬೆರಳೆತ್ತುವ ಎದೆಗಾರಿಕೆ ಯಾರಿಗೂ ಉಂಟಾಗಿಲ್ಲ. ಈ ಝಾಡಣೆ ಪೂರ್ಣಗೊಂಡು ಶುದ್ಧ ರಾಷ್ಟ್ರೀಯತಾ ಭಾವನೆಯನ್ನು ಪ್ರತಿಷ್ಠಾಪಿಸುವ ಕಾರ್ಯವೊಮ್ಮೆ ಆಗಿಹೋದರೆ ಆಗ ಗಾಂಧಿಜೀಯ ಬಯಕೆ ಪೂರ್ಣಗೊಂಡಂತೆಯೇ.

ಇತ್ತ ಬಾಪೂಜೀ ಕೊಲೆಯ ಹಿಂದಿನ ಕೊಲೆಗಡುಕ ಪಂಗಡದ ಶೋಧನಾ ಕಾರ್ಯವು ರಭಸದಿಂದ ಸಾಗಿದೆ. ರೋಮಾಂಚಕಾರೀ ಸಂಗತಿಗಳು ಬೆಳಕಿಗೆ ಬೀಳುವ ದಿನ ಮುಂದಿದೆ ಇಷ್ಟರಲ್ಲೇ ಅರಿತುಕೊಳ್ಳಬಹುದಾದ ವಿಷಯವೆಂದರೆ ಈ ಕುಹಕಿಗಳು ಕ್ರೂರತೆಯಲ್ಲಿ ಹೆ

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಪುರ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Vijaya Bank Ltd., Coondapur
ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ

ಏಲಂ ನೋಟೀಸು

ಈ ಕೆಳಗೆ ಕಾಣಿಸಿದವರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ... ... ಮೀ ವ, ಅವುಗಳ ಮೇಲಿನ ಬಡ್ಡಿಯನ್ನಾಗಲೀ, ವಾಯಿದೆಗೆ ಸರಿಯಾಗಿ ಸಲ್ಲಿಸದೆ ಇರುವುದರಿಂದ, ಸದ್ರಿಯವರಿಗೆ ಕ್ರಮಪ್ರಕಾರವಾಗಿ ರಿಜಿಸ್ಟ್ರೀ ನೋಟೀಸನ್ನು ಕಳುಹಿಸಿದ್ದಲ್ಲಿ ಸದ್ರಿ ಸಾಲಗಳ ಅಸಲು, ಬಡ್ಡಿ ವಗೈರೆಗಳನ್ನು ಈ ವರೆಗೆ ಪಾವತಿಮಾಡದೆ ಇರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ಸದ್ರಿ ಸಾಲಗಾರರು ನಮ್ಮ ಬೇಂಕಿಗೆ ಸಲ್ಲಿಸಲಿಕ್ಕಿರುವ ಅಸಲು ಬಡ್ಡಿ ವಗೈರೆ, ಈ ನೋಟೀಸಿನ ಖರ್ಚು ಸಮೇತ ಇದೇ ಮಾರ್ಚ ತಿಂಗಳ ತಾರೀಖು 2ರ ಒಳಗೆ ಬೇಂಕಿಗೆ ಪಾವತಿ ಮಾಡದೆ ಇದ್ದರೆ ಇದೇ ಬರುವ ಮಾರ್ಚ ತಿಂಗಳ ತಾರೀಖು 11ನೇ ಹಗಲು ಘಂಟೆ 3-30ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ದಿನದಲ್ಲಿ, ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಸದ್ರಿ ನಗಗಳನ್ನು ಏಲಂ ಮಾಡಲಾದೀತು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
428/43-44	ಶ್ರೀ. ಕೆ. ಪುತ್ತು ಶೇಟ್, ವೆಂಕಟ್ರಮಣ ಶೇಟರ ಮಗ, ಚಿನಿವಾರ, ಕುಂದಾಪುರ.	30 0 0
444/43-44	ಶ್ರೀ. ಕೆ. ಪುತ್ತು ಶೇಟ್, ವೆಂಕಟ್ರಮಣ ಶೇಟರ ಮಗ, ಚಿನಿವಾರ, ಕುಂದಾಪುರ.	66 0 0
146/44-45	ಶ್ರೀ. ಕೆ. ವೆಂಕಟೇಶ ರಾವ್, ಪುತ್ತು ಶೇಟರ ಮಗ, ಚಿನಿವಾರ ಕುಂದಾಪುರ.	12 0 0
439/44-45	ಶ್ರೀ ಸುಬ್ಬಯ್ಯ ಶೆಟ್ಟಿ, ವೆಂಕಮ್ಮ ಶೆಡ್ತಿಯರ ... ... ಆಲೂರು ಗ್ರಾಮ, ಕುಂದಾಪುರ.	20 0 0
605/4445	ಶ್ರೀ ನೈಲಾಡಿ ಮೋನಪ್ಪ ಶೆಟ್ಟಿ, ಮಂಜಯ ಭಂಡಾರಿಯರ ಅಳಿಯ, ಬಿಲ್ಲಾಡಿ ಗ್ರಾಮ, ಬಾರಕೂರು.	45 0 0

ಕುಂದಾಪುರ,
16—2—48

K. Narayana Shetty,
Agent.

Notice

THE BOMBAY LIFE ASSURANCE COMPANY, LIMITED.

Notice having been give of the Loss of Policy Nc 63376 on the Life of Udya var Laxuman Kamath duplicate policy will be issue unless objection is lodge with us within one mont from this date.

K. Balasubrahmanyam,
Manager & Actuai

Bombay, 10-2-1948

ಕಾಶ್ಮೀರ, ಹೈದರಾಬಾದು ---ಆಂದೋಲನ--

ಗೋ: ಹಾಗೆ ಕಾಳಕೂಟ ಸ್ಥಾನದಲ್ಲೂ ಪ್ರಪಂಚದಲ್ಲೇ ಅಗ್ರಗಣ್ಯರಿರಬೇಕು. ರಾಜರ, ಶ್ರೀಮಂತರ ಅಧಿಕಾರಲಾಲಸೆ, ಧನ ದಾಹ, ಲಕ್ಷ್ಮೀ-ಹೇಯ ಮನೋವೃತ್ತಿಯು ಧರ್ಮಾಂಧರ ನಿರಾಶಾಜನ್ಯ ದ್ವೇಷ-ಸಂಕುಚಿತ ಪ್ರಾಂತ್ಯಾಭಿಮಾನಿಗಳ ಮತ್ಸರ—ಹಿಂದೀ ವಾತಾವರಣ ವ್ಯಾಪಿಯಾಗಿರುವ ಕಿಡಿಗೇಡಿತನ- ಇವೆಲ್ಲ ಒಂದೆಡೆ ಜಮೆಯಾಗಿ, ಲೋಕದ ಅತ್ಯುಗ್ರ ದುಃಶಕ್ತಿಯಾಗಿ ಮಾರ್ಪಟ್ಟು, ಮಹಾತ್ಮರ ಪ್ರಾಣದಂತಹ ಜಾಗತಿಕ ಕೌಸ್ತುಭವನ್ನೇ ಬಲಿಗೊಂಡಿತೆಂಬುದು ಖಂಡಿತ. ಈ ಕಾಳಕೂಟದ ಸ್ಪರ್ಶಮಾತ್ರವೂ ಅನಾಹುತಕಾರಿಯಿರುವುದರಿಂದ ಅದನ್ನು ಅಣು ಕೂಡಾ ಉಳಿಯದಂತೆ ತೊಡೆದುಹಾಕಲು ಇನ್ನೂ ಕೆಲಸವಾಗಬೇಕಾಗಿದೆ. ನವದಿಲ್ಲಿಯಲ್ಲಿ ಮೊನ್ನೆ ತಾನೇ ಚೂರಿಧಾರಿಯೊಬ್ಬನು ನೆಹರು ವಲ್ಲಭಾಯಿಗಳನ್ನು ಹೊಂಚುತ್ತಿದ್ದುದು-ಮದ್ರಾಸ್ ಎಸೆಂಬ್ಲಿಯೊಳಗೆ ಕೂಡಾ ಇಂತಹ ಒಬ್ಬ ಕಸಾಯಿಯನ್ನು ಹಿಡಿಯಬೇಕಾಗಿ ಬಂದುದು- ಎಲ್ಲವೂ ಸ್ವಚ್ಛವಾಗಿಲ್ಲವೆಂಬುದಕ್ಕೆ ನಿದರ್ಶನ.

ಅ. ಭಾ. ಕಾಂಗ್ರೆಸ್ ಸಮಿತಿ

ಇಂದಿನ ಸ್ವರಾಜ್ಯ ಸಂಪಾದನೋತ್ತರ ಕಾಲಕ್ಕೆ ಹೊಂದಿಕೆಯಾಗುವಂತೆ ಕಾಂಗ್ರೆಸಿನ ಗುರಿ, ರೂಪಗಳನ್ನು ಬದಲಾಯಿಸಿಕೊಳ್ಳುವ ಹಾಗೂ ಗಾಂಧಿಜೀಯ ವಿಯೋಗದಿಂದೆದ್ದಿರುವ ಹೊಸ ಪರಿಸ್ಥಿತಿಗನುಗುಣವಾಗಿ ವರ್ತಿಸುವ ಪ್ರಾಮುಖ್ಯ ಕಾರ್ಯಭಾರ ನಿರ್ಧರಿಸಲು ಕಾಂಗ್ರೆಸಿನ ಕಾರ್ಯಕಾರೀ ಸಮಿತಿ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಗಳು ಈ ವಾರ ನವದಿಲ್ಲಿಯಲ್ಲಿ ನಡೆದುವು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಗಾಂಧಿಜೀ ಇಹಯಾತ್ರೆ ಮುಗಿಸಿಕೊಳ್ಳುವ ಕೆಲವೇ ದಿನಗಳಿಗೆ ಮೊದಲು, ಅವರ ಪ್ರತ್ಯಕ್ಷ ಹಾಜರಿಯಲ್ಲೇ ಒಮ್ಮೆ ಸೇರಿದ್ದಿತು; ಆ ಸಮಿತಿಯು ಅವಗಾಹನೆಗೆಂದೇ ಮಹಾತ್ಮಾಜೀ ತನ್ನ ಕೊನೆಯ ರಾತ್ರಿಯ ಗಣ್ಯ ಭಾಗವನ್ನು ಕಾಂಗ್ರೆಸಿನ ಪುನರ್ಘಟನೆಯ ಸೂತ್ರಗಳನ್ನು ತಯಾರಿಸಲು ವ್ಯಯಿಸಿದ್ದರು. ಇತ್ತ ನವನಿಯಮಾವಳಿಗಳ ರಚನೆಗಾಗಿ ತಯಾರಿಸಿದ್ದ ಉಪಸಮಿತಿಯೂ ತನ್ನ ಸೂಚನೆಗಳನ್ನಿತ್ತಿದ್ದಿತು. ಇವೆಲ್ಲವನ್ನೂ ಪರ್ಯಾಲೋಚಿಸಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು "ಸಾಮಾಜಿಕ, ಆರ್ಥಿಕ, ರಾಜಕೀಯ ಹಕ್ಕು ಬಾಧ್ಯತೆಗಳು ಮತ್ತು ಸರ್ವ ಸಂದರ್ಭಗಳಲ್ಲಿ ಸರ್ವರಿಗೂ ಸಮಾನತೆಯಿರುವ ಸಹಕಾರೀ ಪದ್ಧತಿಯ ಪಂಚಾಯತ್ ರಾಜ್ಯಸ್ಥಾಪನೆಯೇ ಕಾಂಗ್ರೆಸಿನ ಧ್ಯೇಯ"ವೆಂಬುದಾಗಿ ಗುರಿಪಡಿಸಿಕೊಂಡಿದೆ. ಅಂತೆಯೇ ಗಾಂಧಿಜೀಯ ತತ್ವ ಮತ್ತು ಬರೆಹ, ಉಪದೇಶಗಳ ಪ್ರಕಟಣೆಗಾಗಿಯೂ, ಅವರ ವಿಧಾಯಕ ಕಾರ್ಯಕ್ರಮಗಳನ್ನು ಮುಂದೊತ್ತುವುದಕ್ಕಾಗಿಯೂ ಒಂದು ಮಹಾ 'ಗಾಂಧೀಸ್ಮಾರಕ ರಾಷ್ಟ್ರೀಯ ನಿಧಿ'ಯನ್ನು ಕೂಡಿಸಬೇಕೆಂದು ನಿರ್ಧರಿಸಿದೆ. ಪ್ರತಿಯೊಬ್ಬನೂ ಕಡಿಮೆಯೆಂದರೆ ತನ್ನ ಹತ್ತು ದಿನಗಳ ಉತ್ಪನ್ನವನ್ನು ಈ ನಿಧಿಗೆ ಕೊಡಬೇಕೆಂದು ಕೇಳಿಕೊಂಡಿದೆ. ಇದೇ ತಾ. 21ರಲ್ಲಿ ನವದಿಲ್ಲಿಯಲ್ಲೇ ಸೇರಿದ 'ಎ. ಐ. ಸಿ. ಸಿ.' ಸಭೆಯೂ ಕಾರ್ಯಕಾರೀ ಸಮಿತಿಯ ಈ ನಿರ್ಧಾರಗಳನ್ನು ಪುಷ್ಟೀಕರಿಸಿದೆ. 'ಭಾರತವು ಲೌಕಿಕವಾದಿ ಮಾದರೀ ಪ್ರಜಾಪ್ರಭುತ್ವವಾಗಿರುವಂತೆ ಸರ್ವಜನರು, ಮುಖ್ಯವಾಗಿ ಕಾಂಗ್ರೆಸಿಗರು, ಜಾತೀಯತಾ ಭಾವನೆಯೆಂಬ ಕಂಟಕವನ್ನು ಬೇರು ಸಮೇತ ಕಿತ್ತೆಸೆದುಕೊಳ್ಳಬೇಕು' ಎಂದು ಅಖಿಲಭಾರತ ಕಾಂಗ್ರೆಸ್ ಸಮಿತಿಯು ಸರ್ವ ಭಾರತೀಯರನ್ನೂ ಅಗ್ರಹಪೂರ್ವಕ ವಿಜ್ಞಾಪಿಸಿಕೊಂಡಿದೆ. ಈ ಕುರಿತು ವಿಶೇಷ ಚರ್ಚೆ ನಡೆದಿತ್ತು. ಗಾಂಧಿಜೀಯ ನಿಧನಕ್ಕಾಗಿ ದುಃಖ ಮತ್ತು ಕೊಲೆಗಾಗಿ ಲಜ್ಜೆ ಪ್ರದರ್ಶಿಸುವ ಠರಾವು ಅ. ಭಾ. ಕಾಂ. ಸಮಿತಿಯ ಇಡಿ ಚರಿತ್ರೆಯಲ್ಲೇ ಸಣ್ಣದು.

ಭೇಧ ನಿವಾರ್ಣಕರು

ಆ ವಾತು ಅಥವಾ ಮೃತ್ಯು ಆ ದಿನ ಗಾಂಧಿಜೀಗೆ ಮತ್ತೊಂದು ಘಂಟೆ ಸಮಯ ಕೊಡುತ್ತಿದ್ದರೆ ಅವರು ತನ್ನ ಅಂದಿನ ಪ್ರಾರ್ಥನೋತ್ತರ ಭಾಷಣದಲ್ಲಿ ಒತ್ತಿ ಹೇಳುತ್ತಿದ್ದರು—ನೆಹರು ವಲ್ಲಭಾಯಿಗಳಲ್ಲಿ ಭೇಧವಿಲ್ಲ ಮತ್ತದು ಎಂದಿಗೂ ಇರಕೂಡದು ಎಂದು! ಅವರ ಲೇಖನ ಭಾಷಣ, ಮಾತುಕತೆಗಳ ಮೂಲಕ ಅವರ ಕೊನೆಯ ಬಯಕೆಗಳಾಗಿ ಏನೇನಿದ್ದುವೆಂಬುದನ್ನು ನೋಡಿದರೆ ತಿಳಿದುಬರುವವುಗಳಿವು: ಭಾರತದಲ್ಲಿ ಸಂಪೂರ್ಣ ಶಾಂತಿ ನೆಲಸಿ ಜಾತಿ ಜಾತಿಗಳೊಳಗೆ ಹಾರ್ದಿಕ ಮೈತ್ರಿ ನೆಲೆಗೊಳ್ಳಬೇಕು—ಕಾಂಗ್ರೆಸು ಶುದ್ಧೀಕರಿಸಲ್ಪಟ್ಟು ಸೇವಾಬುದ್ಧಿಯ ಜನತಾ ಸೇವಕರ ಸಂಸ್ಥೆಯಾಗಿ ಮಾರ್ಪಡಬೇಕು—ಸಾಗುವಳಿದಾರ ರೈತನೇ ರಾಜ್ಯಭಾರ ನಿರ್ವಹಣದ ಎಲ್ಲಾ ಪ್ರಾಮುಖ್ಯ ಅಧಿಕಾರ ಸ್ಥಾನಗಳಿಗೇರಬೇಕು—ಏನೇ ಆದರೂ ನೆಹರು ವಲ್ಲಭಾಯಿಗಳು ಎಂದೂ ಬೇರೆ ಆಗಬಾರದು, ಸದ್ಯದ ಕೇಂದ್ರ ಸರಕಾರವು ರಾಷ್ಟ್ರವನ್ನು ಶಾಂತಿಭದ್ರತಾ ದಡಕ್ಕೆ ಸೇರಿಸುವ ತನಕ ಸುಸ್ಥಿರವಾಗಿರಬೇಕು.

ಗಾಂಧಿಜೀಯ ಮೇಲಿನ ಬಯಕೆಗಳ ಪೈಕಿ ಯಾವುದೂ ಇದುವರೆಗೆ ಪೂರ್ಣಗೊಂಡಿಲ್ಲ. ಆದರೆ ರಾಷ್ಟ್ರಪಿತನ ಈ ಅಂತಿಮಾಭಿಲಾಷೆಯನ್ನೀಡೇರಿಸುವುದು ಅವರಿಗೆ ಸದಾ ಋಣಿಗಳಾಗಿರುವ ತಮ್ಮ ಕರ್ತವ್ಯವೆಂಬ ಸ್ಫುರಣೆಯು ಸರ್ವ ಹಿಂದೀಯರಲ್ಲೂ ಹುಟ್ಟಿದೆ. ಬಾಪೂ ಬಲಿದಾನವು ಎಲ್ಲಾ ಮೆದುಳು ಮತ್ತು ಹೃದಯವನ್ನು ಕದಡಿ, ಕರಗಿಸಿ ಅದನ್ನು ಕಲಿಸಿದೆ. ಹೀಗಾಗಿ ಈ ಮೊದಲು ಕಿವಿ ಮಾತಾಗಿದ್ದ ನೆಹರು-ವಲ್ಲಭಾಯಿ ಜಗಳದ ಕಲ್ಪನಾ ಕಥೆಗಳೆಲ್ಲವೂ, ಸ್ವತಃ ನೆಹರುಗಳ ನಕಾರ ಘರ್ಜನೆಯೆದುರಲ್ಲಿ ಗಾಳಿ ಪಾಲಾಗಿವೆ. "ಕಳೆದ 25 ವರುಷಗಳಿಂದ ಒಂದೇ ರಥದಲ್ಲಿದ್ದು ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದ—ಒಬ್ಬನೇ ಗುರುವಿನ ಪಾದದ ಬಳಿ ಕುಳಿತು ಕಲಿತಿದ್ದ—ನಾವಿಬ್ಬರೂ ರಾಷ್ಟ್ರದ ಪಾಲಿನ ಈ ಅನ್ಯಾದೃಶ ಬಿಕ್ಕಟ್ಟಿನ ಕಾಲದಲ್ಲಿ ರಾಷ್ಟ್ರದ ಹಿತವೊಂದಕ್ಕಲ್ಲದೆ ಬೇರಾವುದಕ್ಕಾದರೂ ಮನಸ್ಸು ಕೊಟ್ಟೇವೇ? ಸರ್ದಾರರು ಜನತೆಯ ಸುದೃಢ ಸೇನಾನಿಯಿಕ್ಕವರು ಎದೆಗೆಡುವಂತಹ ಸಂದರ್ಭದಲ್ಲೂ, ಅವರು ಹೃದಯ ಕಳಕೊಳ್ಳುವವರಲ್ಲ" ಎನ್ನುತ್ತಾ ಪಂಡಿತಜೀ ಭಾರತದ ವಾತಾವರಣದಲ್ಲಿ ಹಬ್ಬಿದ್ದ ಚಾಡಿಯ ಬಳ್ಳಿಜಡುಪನ್ನು ಕತ್ತರಿಸಿಹಾಕಿದ್ದಾರೆ. "ಮುದಿ ಸರ್ದಾರರ ಕೈಯಿಂದ ಗೃಹಖಾತೆಯನ್ನು ತಪ್ಪಿಸುವುದು ವಾಸಿ" ಎನ್ನುತ್ತಾ ಆ ಕಾಲದಲ್ಲಿ ತಮ್ಮ ಮೂಗು ತೂರಿಸಲು ನೋಡಿದ ಕಾಂಗ್ರೆಸ್ ಸಮಾಜವಾದಿಗಳು ಅಷ್ಟರಿಂದಲೇ ಮೌನವಾಗಬೇಕಾಯಿತು. ಆದರೂ ಈ ಬಾರಿಯ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯಲ್ಲಿ 'ಜಾತೀಯತಾ ದಳಗಳನ್ನು ಹತ್ತಿಕ್ಕಿದ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳನ್ನು ಅಭಿನಂದಿಸುವ' ಠರಾವು ಬಂದಾಗ ಶ್ರೀ. ಜೈಪ್ರಕಾಶ ನಾರಾಯಣರೇ ಮೊದಲಾದವರು 'ಗಾಂಧಿಜೀಯಿರುವಾಗ ಸಕಾಲದಲ್ಲೇ ಆ ಕೆಲಸಮಾಡಲಾರದ ಸರಕಾರಗಳನ್ನು ಅಭಿನಂದಿಸಕೂಡದೆಂದೂ, ಯಾವುದೇ ಜಾತೀಯಸಂಸ್ಥೆಯ ಸದಸ್ಯರು ಅಥವಾ ಸಮರ್ಥಕರಾಗಿರುವವರನ್ನು ಮಂತ್ರಿ ಮಂಡಲದಲ್ಲಿಡಕೂಡದೆಂದೂ ವಾದಿಸಿದ್ದರು. ಅಂತೂ ಮಹಾತ್ಮರ ವಿಯೋಗಾನಂತರ ಹಿಂದೂ ಮುಸ್ಲಿಂ ಪೈಪೋಟಿಗಿಂತ, ರಾಷ್ಟ್ರೀಯತೆಯು ಜಾತೀಯತೆಯನ್ನು ಸ್ಪರ್ಧಿಸಿ ಗೆಲ್ಲುವದೇ ಮುಂದೆ ಬಂದಿದೆಯಾದರೂ, ಎಲ್ಲವನ್ನೂ ಹಿಂದಿಕ್ಕಿ ಗಾಂಧಿಜೀಯ ಬಂಧು ಭಾವನೆ ರಾಜಿಸುತ್ತಿದೆ.

ಕಾಶ್ಮೀರ——ಹೈದರಾಬಾದು

ಕಾಶ್ಮೀರದಲ್ಲಿ ಇಕ್ಕಡೆಯವರೂ ಯುದ್ಧ ನಿಲ್ಲಿಸಿ ಸೇನೆಗಳನ್ನು ಹಿಂದೆಗೆಯಬೇಕು—ಈಗಿನ ಕಾಶ್ಮೀರೀ ಸರಕಾರದ ಬದಲಿಗೆ ಭದ್ರತಾ ಕೌನ್ಸಿಲು ನೇಮಿಸುವ ಸರಕಾರದಡಿಯಲ್ಲಿ ಪಕ್ಷಪಾತವೇನೊಂದೂ ನಡೆಯದ ರೀತಿ ಕಾಶ್ಮೀರವು ಭಾರತವನ್ನು ಕೂಡಬೇಕೋ ಪಾಕಿಸ್ಥಾನವನ್ನೋ ಎಂದು ಜನಮತ ಸಂಗ್ರಹಿಸಿ ತಿಳಿಯಬೇಕು. ಎಂಬ ಭದ್ರತಾ ಕೌನ್ಸಿಲ್ ಅಧ್ಯಕ್ಷನ ಸೂಚನೆಗೆ ಹಿಂದೀ ಪ್ರತಿನಿಧಿಗಳು ಒಪ್ಪದೆ ಆ ಪ್ರಶ್ನೆಯನ್ನು ಮುಂದೂಡಿಸಿ ಮರಳಿ ಬಂದಿದ್ದಾರೆ. ಕಾಶ್ಮೀರದ ಕಾಳಗ ಪೂರ್ತಿ ನಿಂತು ಶಾಂತಿಸ್ಥಾಪನೆಯಾಗದೆ ಜನಮತ ತೆಗೆಯಲಡ್ಡಿಯಿಲ್ಲ; ಶೇಕ್ ಅಬ್ದುಲ್ಲಾ ಸರಕಾರವನ್ನು ರದ್ದುಪಡಿಸಲು ಸಾಧ್ಯವಿಲ್ಲ, ಎಂಬುದೇ ಹಿಂದೀ ಸರಕಾರದ ಅಭಿಮತ. ಶ್ರೀ. ಎನ್. ಜಿ. ಅಯ್ಯಂಗಾರರೂ, ಶೇಕ್ ಅಬ್ದುಲ್ಲಾರೂ ನವದಿಲ್ಲಿಯಲ್ಲಿ ಎಲ್ಲಾ ವಿಷಯಗಳ ಸವಿವರ ವರದಿಯನ್ನು ಭಾರತ ಸರಕಾರಕ್ಕೊಪ್ಪಿಸಿದ್ದಾರೆ. ಅತ್ತ ಪಾಕಿಸ್ಥಾನ ಪ್ರತಿನಿಧಿ ಸರ್. ಝಫರುಲ್ಲಾರು ಲೇಕ್ ಸಕ್ಸೆಸ್‌ನಲ್ಲೇ ಇದ್ದು ಜುನಾಗಾಡ್ ಪ್ರಶ್ನೆಯಂತಹ ಹೊಸ ವಿವಾದಗಳನ್ನು ಭದ್ರತಾ ಕೌನ್ಸಿಲಿನ ಮುಂದೆ ತಂದಿದ್ದಾರೆ. ಭಾರತವು ಜಾಗತಿಕ ಸಂಘದಿಂದ ತನ್ನ ದೂರನ್ನೇ ಹಿಂದೆಗೆದುಕೊಂಡಿಲ್ಲವಾದ್ದರಿಂದ ಅಲ್ಲಿ ಕೊನೆಯ ನಿರ್ಧಾರವಾಗುವ ವರೆಗೆ ಭಾಗವಹಿಸಲು ಹಿಂದೀ ಪ್ರತಿನಿಧಿಗಳು ಪುನಃ ಹೋಗಲಿದ್ದಾರೆ.

ಇತ್ತ ಒಂದು ವರುಷದ ಪ್ರಚಲಿತ ಒಪ್ಪಂದವಿದ್ದರೂ ಹೈದರಾಬಾದು ಸಂಸ್ಥಾನವು ಭಾರತ ಸರಕಾರವನ್ನು ವಂಚಿಸುತ್ತಾ, ಉದ್ದೇಶ ಪೂರ್ವಕ ಒಪ್ಪಂದವನ್ನು ಅಪಮಾನಿಸುತ್ತಾ ಬಂದುದರಿಂದ, ಇನ್ನು ತಡಮಾಡದೆ ಒಂದು ನಿರ್ಧಾರಕ್ಕೆ ಬರಲೇಬೇಕೆಂದು ಭಾರತ ಸರಕಾರ ಸ್ಪಷ್ಟವಾಗಿ ತಿಳಿಸಿದೆ. ಲಂಡನಿನಲ್ಲಿದ್ದ ನಿಜಾಮರ ಸಲಹೆಗಾರ ಸರ್ ವಾಲ್ಟರ್ ಮೋಂಕ್‌ಟನ್ ಹೈದರಾಬಾದಿಗೆ ಬಂದಿದ್ದಾರೆ. ಹೈದರಾಬಾದಿನ ಒಳಗಡೆಯಲ್ಲಿ ಪ್ರಜಾದಮನ ದಬ್ಬಾಳಿಕೆಯೂ, ಮಜ್ಲೀಸ್‌ಗಳ ಭೀಕರ ಅತ್ಯಾಚಾರಗಳೂ ಭರದಿಂದ ಸಾಗಿವೆ.

ಒಟ್ಟಿನಲ್ಲಿ ಹಿಂದೀ ರಾಜಕೀಯರಂಗದ ಮೇಲೆ ಗಾಂಧಿಜೀ ಬಲಿದಾನದ ಪರದೆ ಬಿದ್ದರೂ, ಇದುವರೆಗಿನ ದುಃಖಾತ್ಮಕ ಕಥೆಯನ್ನು ಸುಖಾಂತ್ಯಗೊಳಿಸುವ ದೃಶ್ಯವು ಇನ್ನು ತಾನೇ ಆರಂಭವಾಗಬೇಕು!



Approved firm by the Govt. of Mysore Certified by the Agent of the Govt. of Celone & Indies.

The Canara Banking Corporation Ltd.

Estd] [1906

NOTICE

is hereby given that the Annual Ordinary General Meeting of the Shareholders of the Bank will be held at its Registered Office at Udipi on Sunday, the 28th March, 1948 at 3 P. M.

I. To receive the Report of the Directors and the Audited Accounts for the year ended 31st December, 1947.

II. To declare a dividend.

III. To elect Directors in place of those retiring.

IV. To fill up the vacancy of a Director caused by the demise of Dr. B. Rama Baliga.

V. To appoint an Auditor or Auditors and fix his or their remuneration.

Notice is also given that Register of members and Share Transfer Books of the Bank will remain closed from 15-3-48 to 28-3-1948 both days inclusive.

UDIPI, 5th February, 1948

V. B. Kamath,
General Manager.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

SEASONAL DEPOSITS

for Rs. 5000/- and over are now accepted at all Offices of the Bank at the following rates:—

3 & 4 months — @ 2¼ % p. a.

5 & 6 months — @ 2½ % p. a.

ನವಯುಗ

ಗುರುವಾರ, ಉಡುಪಿ, ೨೬-೨-'೪೮

ಈಗೇನು ?

ನಾವೀಗ, ಗಾಂಧಿಜೀಯಿಲ್ಲದ ಬಾಳುವೆಯನ್ನು ಸಾಗಿಸುವುದರಲ್ಲಿದ್ದೇವೆ. ಶಾಂತಿದೂತನಿಲ್ಲದ ಜಗಳಪೀಡಿತ ಜಗತ್ತಿನಲ್ಲಿ-ಮಹಾತ್ಮನಿಲ್ಲದ ಮಾನವ ದುರ್ಬಲತೆಗಳ ನಡುವೆ-ಕತ್ತಲೆಯಲ್ಲಿ ಕೈದೀಪ ಕಳೆಕೊಂಡವರಂತಾಗಿದ್ದೇವೆ. ಈ ಕಷ್ಟದಲ್ಲಿ, ಈ ಪರೀಕ್ಷಾ ಕಾಲದಲ್ಲಿ,ನಾವು ವರ್ತಿಸಬೇಕಾದುದು ಹೇಗೆ? ನವದಿಲ್ಲಿಯಲ್ಲೀ ಜಾರಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಹೇಳಿದಂತೆ "ಮಹಾತ್ಮಾ ಗಾಂಧಿಯವರಿಲ್ಲದ ಕಾಂಗ್ರೆಸನ್ನು ಕಲ್ಪಿಸಿಕೊಳ್ಳುವದೂ ಕಷ್ಟವೆನ್ನಿಸುತ್ತದೆ. ಆದರೂ ನಾವು ವಸ್ತುಸ್ಥಿತಿಗೆ ಹೊಂದಿಕೊಂಡು ಹೋಗಬೇಕು. ಗಾಂಧಿಜೀಯ ಜೀವನದಿಂದ ಹೇಗೋ, ಹಾಗೆಯೇ ಅವರ ಮರಣದಿಂದಲೂ ನಾವು ಕಲಿಯಬೇಕಾದುದು ಬಹಳವಿವೆ. ಒಂದು ಘನ ಹಾಗೂ ನ್ಯಾಯಬದ್ಧ ತತ್ವಕ್ಕಾಗಿ ಗಾಂಧಿಜೀ ಪ್ರಾಣ ಕೊಟ್ಟರು; ಜಾತೀಯತಾ ಭೂತದೊಡನೆ ಧೀರ ಹೋರಾಟ ಕೊಡುತ್ತಾ ಮಡಿದು ಬಿದ್ದರು. ಅವರು ತನ್ನ ಪ್ರಾಣವನ್ನೇ ಬಲಿಯಾಗಿ ತೆತ್ತ ಆ ತತ್ವವೆಂದರೆ ಜಾತೀಯ ಒಕ್ಕಟ್ಟು ಮತ್ತು ಸೌಹಾರ್ದತೆ. ಇನ್ನು ನಮ್ಮೀ ರಾಷ್ಟ್ರದ ಭವಿಷ್ಯ ಈ ತತ್ವ ಪಾಲನೆಯೆಷ್ಟರ ಮಟ್ಟಿಗಾಗುವದೆಂಬುದನ್ನಾಧರಿಸಿ ಕೊಂಡಿದೆ." ಜಾತೀಯತಾ ಭಾವನೆಯ ಛಾಯೆ ಕೂಡಾ ಉಳಿಯದಂತೆ ಅದನ್ನು ನಾಶಮಾಡಬೇಕೆಂದು ಕಾಂಗ್ರೆಸ್ ಸಮಿತಿಯು ತನ್ನ ಒಂದು ನಿರ್ಣಯದ ಮೂಲಕ ಹಿಂದೀಯರನ್ನು ಅತ್ಯಾಗ್ರಹದಿಂದ ಕೇಳಿಕೊಂಡಿದೆ.

ರಾಷ್ಟ್ರಪತಿಯ ಹಾಗೂ ರಾಷ್ಟ್ರ ಸಭಾ ಸಮಿತಿಯ ಈ ವಿಜ್ಞಾಪನೆಗಳು ಜನತೆಯ ಎದೆಯಾಳದ ಕೂಗಿನ ಪ್ರತಿಧ್ವನಿಗಳೇ ಹೊರತು ಹೊಸಾಹ್ವಾನಗಳಲ್ಲ. ಪಾಪವು ಪಶ್ಚಾತ್ತಾಪದಿಂದ ನಿವಾರಣೆಯಾಗಬಲ್ಲುದಾದರೆ- ಕಲ್ಮಶವು ಕಣ್ಣೀರಿನಿಂದ ತೊಳೆದುಹೋಗುವಂತಹದು ಹೌದಾದರೆ -ನಿಜಕ್ಕೂ ಗಾಂಧಿಜೀಕೊಲೆಯಿಂದಲೇ ಆ ಕೆಲಸವೀಗ ಆಗಿದೆ. ತಮ್ಮ ಅಸಡ್ಡೆ ಮತ್ತು ಅಜ್ಞಾನದ ದೆಸೆಯಿಂದ ಎಂತಹ ಪ್ರಮಾದವಾಗಿ ಹೋಯಿತು ಎಂಬ ಪಶ್ಚಾತ್ತಾಪದಿಂದ ಹಿಂದೀಯರ ಹೃದಯ ಕರಗಿ ನೀರಾಗಿದೆ; ಸರಕಾರವು ತಡಮಾಡದೆ ಜಾತೀಯತಾ ಕಂಟಕಗಳನ್ನು ನೆಲಸಮ ಮಾಡುತ್ತಿದೆ. ಆದರೂ ನಾವು ವಸ್ತುಸ್ಥಿತಿಯನ್ನು ವಂಚಿಸಿ ಮನಸ್ಸಮಾಧಾನ ಹೊಂದಲು ನೋಡಬಾರದು. ಜಾತೀಯ ದಳಗಳು ತಲೆ ಹೊರಡಾಕದಂತೆ ಬಹಿಷ್ಕಾರದ ತಡೆಹಾಕಿ ಬಿಟ್ಟೊಡನೆ ಆ ಕಲ್ಮಷದ ಮೂಲೋಚ್ಚಾಟನೆಯಾದಂತಲ್ಲ- ಬಿಲದ ದ್ವಾರವನ್ನು ಮುಚ್ಚಿದಂತಾಯಿತೇ ಹೊರತು ಹಾವನ್ನು ಕೊಂದಿಲ್ಲ. ಜನತೆಯ ಹೃದಯಕ್ಕಾಗಿರುವ ಆಘಾತವೂ ಅಂತಹದೇ; ಕಹಿ, ಕಲ್ಮಷಗಳ ಛಾಯೆ ಕೂಡ ಸೋಂಕಿರದ ಬಾಪೂಜಿಯ-ರಾಷ್ಟ್ರಪಿತನ-ಪವಿತ್ರ ಹೃದಯಕ್ಕೆ ಇದಿರಿನಿಂದ ಪ್ರವೇಶಿಸಿದ ಗುಂಡು ಬೆನ್ನಿನಿಂದ ಹೊರಟಿತೆನ್ನುವಾಗ ಕರಗದ ಕಲ್ಲಾವುದಿದ್ದೀತು? ಆದರೆ ಕಣ್ಣೀರಿಟ್ಟ ಮಾತ್ರಕ್ಕೆ ಕಲಿತಂತಾಗದು. ಇಂದಿನ ಹೃದಯಾಂದೋಲನವು ಜನತೆಯು ಸ್ವತಃ ಕೈಕೊಂಡ ಆತ್ಮಶುದ್ಧೀಕರಣ ಕಾರ್ಯವೇನೂ ಅಲ್ಲ-ಗಾಂಧಿಜೀಯ ಕೊಲೆಯಿಂದಾಗಿರುವ ಕೆಲಸವದು; ಬಾಪೂ ಹೃದಯಕ್ಕೆ ನಾಟಿದುದು ಜನತೆಯ ಹೃದಯಕ್ಕೂ ಪ್ರವೇಶಿಸಿತು. ಅದನ್ನನುಸರಿಸಿ ಜನತೆಯು ತಾನಾಗಿ ಮಾಡಬೇಕಾದ ಕೆಲಸ ಪ್ರತ್ಯೇಕವಿದೆ; ಬಹಳವಿವೆ. ಎಲ್ಲಾ ಹೃದಯಗಳೂ 'ಬಲಿದಾನೋತ್ತರ ಪುನರ್ರಚನೆ'ಗೊಳ್ಳಬೇಕಾಗಿದೆ. ಜಾತೀಯತಾ ಭಾವನೆಯು ಎಲ್ಲಿ, ಯಾವರೂಪದಿಂದ, ಹೇಗಿದ್ದರೂ ಅದರ ಅಣುಮಾತ್ರವೂ ಉಳಿಯದಂತೆ ನಿರ್ಮೂಲಿಸಿಕೊಳ್ಳಬೇಕು. ಗುಂಡಿಡುವ ಉದ್ದೇಶದಿಂದ ಬಾಪೂಜಿಗೆ ಪ್ರಣಾಮ ಮಾಡುವವನಂತೆ ನಟಿಸಿದ "ಗೋಡ್ಸೆ"ಯಂತೆಯೇ ನಾವೆಲ್ಲರೂ ಒಂದಲ್ಲೊಂದು ರೀತಿಯಿಂದ ಗಾಂಧಿಜೀಯ ವಂಚಕರೇ ಎಂಬುದನ್ನು ಮರೆಯಬಾರದು. ಎಲ್ಲಾ ಹೃದಯಗಳೂ 'ರಾಷ್ಟ್ರೀಯತೆ"ಯ ಆಕಾರಕ್ಕೆ ಬರುವಂತೆ ಈಗಲೇ, ಬಿಸಿಯಿರುವಾಗಲೇ ಬಡಿಯುವ ಪ್ರಚಾರ ನಡೆಯಬೇಕು. ಇದೊಂದೇ ಗಾಂಧಿಜೀಗೆ ಹೇಳಿಸಿದ ಸ್ಮಾರಕವೆಂಬು ತಿಳಿದು, ಅವರ ತತ್ವ ಪ್ರಚಾರಗಳಿಗಾಗಿ 'ಗಾಂಧೀ ಸ್ಮಾರಕ ರಾಷ್ಟ್ರೀಯ ನಿಧಿ" ಯನ್ನು ರಚಿಸಲು ರಾಷ್ಟ್ರಸಭೆಯು ಮುಂದಾಗಿರುವುದು ಸಮಂಜಸವಿದೆ. ಆ ನಿಧಿ ಸ್ಥಾಪನೆಯಾದ ಮೇಲೆಯೇ ಕಾರ್ಯಾರಂಭವೆಂದು ಕಾಯದೆ, ಈಗಿನಿಂದಲೇ ಶಾಂತಿ ಸಂಘಟನಾ ಪ್ರಚಾರವು ಸಾರ್ವತ್ರಿಕವಾಗಿ ನಡೆಯುತ್ತಾ ಹೋಗುವುದು ಅಗತ್ಯವೆನ್ನುತ್ತೇವೆ. ಸ್ವತಃ ಹುತಾತ್ಮ ಗಾಂಧಿ ಸರ್ವ ಹೃದಯಗಳಲ್ಲೂ ತುಂಬಿರುವ ಕಾಲವಿದು; ಜತೆಯಲ್ಲೇ ಅವರ ತತ್ವಗಳನ್ನೂ ಅಲ್ಲಿ ತುಂಬಿಸಿ ಸ್ಥಾಪಿಸುವುದು ಸುಲಭವಾದ್ದರಿಂದ ಈ ಸಂದರ್ಭವನ್ನು ಕಳಕೊಳ್ಳಕೂಡದು.

ಭಾರತದ ಭಾಗ್ಯರವಿಗೆ— ರಾಹು ಸಮಾನ ಸಂಘ(ಆರ್. ಯಸ್ ಯಸ್).

ಗಾಂಧಿಜೀಯ ಆಯುಷ್ಯಕ್ಕೆ ಅರ್ಧ ಚಂದ್ರಪ್ರಯೋಗವಾದ ನಂತರದ ಐದನೇ ದಿನಕ್ಕೆ ಆರ್. ಯಸ್. ಯಸ್. ಸ್ಥಾಪನೆಯಾಗಿ ಪೂರ್ತಿ 25 ವರುಷಗಳಾಗುವವು. ಮಹಾತ್ಮರನ್ನು ಯಜ್ಞಪಶು ಮಾಡಿ ರಜತೋತ್ಸವ ರಾಜಸೂಯ ನಡೆಯಿತೆ?

1920ನೇ ಇಸವಿ ಫೆಬ್ರವರಿ ತಿಂಗಳ ಮೊದಲ ವಾರದೊಂದು ದಿನ ಸಂಜೆ ಡಾ| ಹೆಡ್ಗೇವಾರರ ನೇತೃತ್ವದಲ್ಲಿ ನಾಗಪುರದ ಹಳೇ ಪೇಟೆಯಲ್ಲಿ ಕೆಲವು ಮರಾಠೀ ತರುಣರು ಒಟ್ಟು ಸೇರಿ ಈ 'ರಾಷ್ಟ್ರೀಯ ಸೇವಾ ಸಂಘ"ವನ್ನು ಸ್ಥಾಪಿಸಿಕೊಂಡಿದ್ದರು.

ಇದರ ಸ್ಥಾಪಕರಾದ ಡಾ|| ಹೆಡ್ಗೇವಾರರು ನಾಗಪುರದವರಿದ್ದು ಕಲ್ಕತ್ತದ 'ನೇಶನಲ್ ಮೆಡಿಕಲ್ ಕಾಲೇಜ್"ನ ವಿದ್ಯಾರ್ಥಿಯಾಗಿದ್ದರು. 1905ರಲ್ಲಿ ಕಲ್ಕತ್ತದ 'ಕ್ರಾಂತಿಕಾರ ಪಕ್ಷ"ದ ಓರ್ವ ಸದಸ್ಯನಾಗಿದ್ದು ಅಲ್ಲಿಯ ಮೆಡಿಕಲ್ ಕಾಲೇಜನ್ನು ಬಿಡುವಾಗ ಈ ಸದಸ್ಯತ್ವವನ್ನೂ ಬಿಟ್ಟು ಬಂದಿದ್ದರು.

1903ರಲ್ಲಿ ಡಾ|| ಹೆಗ್ಡೇವಾರರು 'ಸಮಾ ಬಾಂಧವ" ಎಂಬ 200 ಸದಸ್ಯರಿದ್ದ ಒಂದು ಸಂಸ್ಥೆಯನ್ನು ಕಟ್ಟಿಕೊಂಡಿದ್ದರು. ಆದರೆ 'ರಾಷ್ಟ್ರೀಯ ಸೇವಾ ಸಂಘ' ಸ್ಥಾಪಿಸಿದ ಮೇಲೆ ಅದನ್ನು ಬಿಟ್ಟರು.

'ಹಿಂದೂ ರಾಜ್ಯ' ಸ್ಥಾಪಿಸಬೇಕು-ಅದಕ್ಕಾಗಿ ಹಿಂದೂ ಮುಸ್ಲಿಮರೊಳಗೆ ಐಕ್ಯ ನಿರ್ಮಾಣವಾಗದಂತೆ ಜಗಳ ನಿರ್ಮಿಸಬೇಕು- ಇಂತಹ ಸ್ಥಿತಿ ಮತ್ತು ರಾಜ್ಯಸ್ಥಾಪನೆಗೆ ಕಾಂಗ್ರೆಸು ವಿರೋಧಿಯಾದ್ದರಿಂದ ಅದನ್ನಿದಿರಿಸಿ ನಿರ್ಮೂಲಿಸಬೇಕು, ಎಂಬುದೇ ಈ ಆರ್. ಯಸ್. ಯಸ್.ನ ಗುರಿ ಮತ್ತು ಧೋರಣೆ.

ಈ ಸಂಸ್ಥೆಯು ದೇಶದಲ್ಲೆಲ್ಲಾ ತನ್ನ ಶಾಖೆಗಳನ್ನು ವ್ಯವಸ್ಥೆಯಿಂದ ಸಂಘಟನೆಗೊಳಿಸುತ್ತಾ ಬಂದರೂ ಸುಮಾರು 22 ವರುಷಗಳ ವರೆಗೆ ಜನತೆಯ ಲಕ್ಷ್ಯವನ್ನೆಳೆದಿರಲಿಲ್ಲ. ಆದರೆ 1927ರಲ್ಲಿ ನಾಗಪುರದಲ್ಲಿ ಹಿಂದೂ ಮುಸ್ಲಿಂ ದಂಗೆ ನಡೆದಾಗ, ಇವರು ಅಗ್ರಭಾಗ ವಹಿಸಿ ಖ್ಯಾತಿ ಪಡೆದರು. ಆ ಮೇಲೆಯೇ ಶಿವಾಜಿಯ „ಭಗವಾ ಝುಂಡ"ವನ್ನು ತಮ್ಮ ಧ್ವಜವಾಗಿ ಅಂಗೀಕರಿಸಿಕೊಂಡರು.

ಗಾಂಧೀ ಚಳವಳಿವಾವುದರಲ್ಲೂ ಭಾಗ ವಹಿಸಬಾರದೆಂದು ಇವರ ನಿಯಮವಿತ್ತು. ಆದರೆ ಮಧ್ಯಪ್ರಾಂತ್ಯದ ಕಾಂಗ್ರೆಸಿಗರು ಡಾ. ಮೂಂಜೆ ಮತ್ತಿತರ ಹಿಂದೂ ಸಭಾ ಮುಖಂಡರ ವಿರುದ್ಧ ಮೆರವಣಿಗೆಗಳನ್ನು ಹೊರಡಿಸಿದಾಗ ಇಂತಹ ಮೆರವಣಿಗೆಗಳ ಮೇಲೆ ಬಿದ್ದು ಹೊಡೆಯಬೇಕೆಂದು ಅಲ್ಲಿಯ ಆರ್. ಯಸ್. ಯಸ್. ನಿರ್ಧರಿಸಿತು, ಹಾಗೆ ಹೊಡೆಯುವಾಗ ಕಾಂಗ್ರೆಸಿಗರಾರು, ಆರ್. ಯಸ್. ಯಸ್.ನವರಾರು ಎಂಬ ಭೇದ ತಿಳಿಯಬೇಕಲ್ಲವೆ? ಆದಕ್ಕಾಗಿ ಕಾಂಗ್ರೆಸಿನ 'ಬಿಳಿಟೋಪಿ'ಯ ವಿರುದ್ಧ "ಕಪ್ಪು ಟೋಪಿ"ಯನ್ನು ಧರಿಸುವ ನಿಯಮವನ್ನಿವರು ಜಾರಿಗೆ ತಂದರು. ಈಗ ಕತ್ತಲೆ ಹಬ್ಬಿಸಿದ ಈ ಕಪ್ಪುಟೋಪಿ ಅವತರಿಸಿದುದು ಹೀಗೆ!

ಸಂಘ ಬೆಳೆಯುತ್ತಾ ಹೋಗಿ 1940ನೇ ಇಸವಿಗೆ ಇಡೀ ರಾಷ್ಟ್ರದಲ್ಲಿ ಇದಕ್ಕೆ ಸುಮಾರು ಒಂದು ಲಕ್ಷದಷ್ಟು ಸದಸ್ಯರಿದ್ದಿರಬಹುದು. ಇದರ ಸಾರ್ ಸಂಘಚಾಲಕರಾದ ಡಾ. ಹೆಡ್ಗೇವಾರರು 1940ರಲ್ಲಿ ನಾಗಪುರದಲ್ಲಿ ಮೃತಪಟ್ಟರು. ಸಾಯುವಾಗ 'ಆರ್. ಯಸ್. ಯಸ್."ನ ಚಾಲಕ ಸ್ಥಾನವನ್ನು ನಾಗಪುರದವರೇ ಆದ ಶ್ರೀ ಗೋಲ್ವಾಲ್ಕರರಿಗೆ ಬಿಟ್ಟುಕೊಟ್ಟರು, ಅಂದಿನಿಂದಿದು ವರೆಗೂ ಇವರೇ ಇದರ ಸೂತ್ರಧಾರಿಗಳು.

'ಹಿಂದೂ ಸಮಾಜ, ಹಿಂದೂ ಸಂಸ್ಕೃತಿ, ಹಿಂದೂ ಧರ್ಮರಕ್ಷಣೆಗಾಗಿ ಪ್ರಾಣ ಕೊಡಲು ಸಿದ್ಧನಿದ್ದೇನೆ- ಭಗವಾ ಝುಂಡಾದ ಹೊರತು ಬೇರಾವುದಕ್ಕೂ ತಲೆಬಾಗಲಾರೆ-ನನ್ನ ಸ್ವಂತ ಶಕ್ತಿ ಮತ್ತು ಸ್ವಂತ ಹಣದಿಂದಲೇ ಸೇವೆ ಸಲ್ಲಿಸುತ್ತೇನೆ- ಸಂಘದ ಧೋರಣೆ, ಅದರ ಕಾರ್ಯೋದ್ದೇಶವಾವುದು ಹೇಗೆ, ಎಂಬ ಕುರಿತಾಗಲೀ, ಸಂಘದ ಹಣದ ಬಾಬ್ತಾಗಲೀ, ಏನೊಂದೂ ಪ್ರಶ್ನಿಸದೆ ಸಂಘದ ಆಜ್ಞೆಗಳಿಗೆ ಸಂಪೂರ್ಣ ವಿಧೇಯನಾಗಿರುತ್ತೇನೆ".— ಎಂದು 'ಆರ್. ಯಸ್. ಯಸ್.'ನ ಪ್ರತಿಜ್ಞಾಪತ್ರದಲ್ಲಿದೆ.

1942ರಿಂದ ವಿಶೇಷವಾಗಿ ಬೆಳೆಯುತ್ತಾ ಬಂದ ಈಸಂಘವು ಮುಸ್ಲಿಂ ಲೀಗಿನ ಭಿನ್ನ ಜನಾಂಗ ಧೋರಣೆ, "ಮುಸ್ಲಿಂ ಪುಂಡರ ಅತ್ಯಾಚಾರಗಳ ದೆಸೆಯಿಂದಾಗಿ ಹಿಂದೂ ಅಭಿಮಾನಿಗಳಿಗೆ ಪ್ರಿಯವಾಗುತ್ತಾ ಬಂದು,ಮೊನ್ನೆ ಬಹಿಷ್ಕಾರಬೀಳುವಾಗ ಇಡೀರಾಷ್ಟ್ರದಲ್ಲಿ ಅದರ ಯೋಧರಸಂಖ್ಯೆ 10ಲಕ್ಷವಿರಬಹುದೆಂದು ನಂಬಲಾಗಿದೆ.

ಇದು ಮೂಕ ಸಂಘ. ಈ ಸಂಘದೊಳಗೆ 'ವಿಚಾರ ಸ್ವಾತಂತ್ರ್ಯ"ವೆಂಬುದಿಲ್ಲ. ಎಲ್ಲಾ ವಿಷಯಗಳಲ್ಲೂ ಸಾರ್ ಸಂಘಚಾಲಕ ಗುರುಜೀಯ ವಾಕ್ಯವೇ ವೇದವಾಕ್ಯ; ಅನುಲ್ಲಂಘನೀಯ ಶಾಸನ. ಸೇನಾನಿಯು ತಮ್ಮನ್ನು ರಂಗಕ್ಕೊಯ್ದು ಇಳಿಸುವ ವರೆಗೂ, ಸಾಮಾನ್ಯ ಸೈನಿಕರಿಗೆ ತಾವಾರನ್ನು ಹೊಡೆಯಲು ಹೋಗುತ್ತೇವೆ ಎಂಬ ಗುಟ್ಟು ಹೇಗೆ ತಿಳಿಯದೋ ಅದೇ ರೀತಿ ಸಾಮಾನ್ಯ ಕಪ್ಪು ಟೋಪಿಯವನಿಗೂ ತನ್ನ ಕೆಲಸದ ಗುರಿ ತಿಳಿಯುವಂತಿಲ್ಲ.

ತಂದೆ, ತಾಯಿ, ಮನೆ, ಕುಟುಂಬಗಳ ಮೇಲಿನ ಭಕ್ತಿ, ವಿಶ್ವಾಸಗಳನ್ನು ತಪ್ಪಿಸಿ ಅವುಗಳನ್ನು ಸಂಘದ ಕಡೆಗೆ ತಿರುಗಿಸುವ ನಿಷ್ಠೆ ಇವರಲ್ಲಿದೆ. ಸಣ್ಣ ಮಕ್ಕಳನ್ನು ಕೂಡಾ ಎಳೆದುಕೊಂಡು ಪ್ರಥಮತಃ ಲಘು ವ್ಯಾಯಾಮದಿಂದ ಆರಂಭಿಸಿ, ಕೊನೆಗೆ ಹೋರಾಟ ವಿಧಾನಗಳನ್ನು ಕಲಿಸಿ, ಉದ್ದೇಶಪೂರ್ವಕ ಹೊಡೆದು ನೋಡಿ ಸಹಿಸಬಲ್ಲನೆಂದು ತೋರಿದಾಗ ಮಾತ್ರ ತಮ್ಮ ಯೋಧನ ಮೇಲೆ ಈ ಸಂಘಚಾಲಕರು ಭರವಸೆಯಿಡುತ್ತಾರೆ- ಅಂಥವರಲ್ಲಿ ಮಾತ್ರ ಗುಟ್ಟುಬಿಡುತ್ತಾರೆ.

ಭಾರತದಲ್ಲಿ ಎಲ್ಲವನ್ನೂ ಅಡಿಮೇಲು ಮಾಡಿ, ತಮ್ಮ 'ಮರಾಠೀ ರಾಜ್ಯ" ಸ್ಥಾಪಿಸುವ ಹಂಚಿಕೆಯು ಇವರದಿತ್ತು,. ಆದರೆ ಮಹಾತ್ಮಾಜೀ ತಾನೇ ಪ್ರಥಮತಃ ಬಲಿಬಿದ್ದು, ಜೀವನದಲ್ಲಿ ಹೇಗೋ ಮರಣದಲ್ಲೂ ಹಾಗೆ,ಸಹಸ್ರಾರು ಜೀವಗಳನ್ನೂ ರಾಷ್ಟ್ರವನ್ನೂ ಉಳಿಸಿಕೊಟ್ಟರು!

ಉಡುಪಿ.

ಕರ್ಮಯೋಗಿ ಮಹಾತ್ಮರ ಚಿತಾಭಸ್ಮವು ತಾ. ೧೧ರಲ್ಲಿ ಮಧ್ಯರಾತ್ರಿ ವೇಳೆ ಡಾ. ಮಾಧವ ಪೈ ಡಾ. ಸುಂದರರಾಮ ಪೈ ಮೊದಲಾದವರಿಂದ ಮಂಗಳೂರಿನಿಂದ ಉಡುಪಿಗೆ ತರಲ್ಪಟ್ಟಿತು. ಕಟಿಯಾಳಿ ಸಮೀಪದಿಂದ ಚಿತಾ ಭಸ್ಮವು ಆನೆಯ ಮೇಲೆ ಜಯಘೋಷ, ರಾಮ ಭಜನೆಯೊಡನೆ ಮೆರವಣಿಗೆಯಿಂದ ಬೋರ್ಡ್ ಹೈಸ್ಕೂಲಿನ ಹೀಪಲ್ಸ್ ಹಾಲಿನ ಶೃಂಗರಿಸಿದ ಭವ್ಯಾಸನದಲ್ಲಿರಿಸಲ್ಪಟ್ಟಿತು. ಶಹರಿನವರೂ ಹಳ್ಳಿ ಹಳ್ಳಿಯವರೂ ಗುಂಪು ಗುಂಪಾಗಿ ಮರುದಿನ ಹತ್ತು ತಾಸಿನವರೆಗೆ ಅಲ್ಲಿಗೆ ಬಂದು ಪುಷ್ಪ ಹಾರಗಳನ್ನರ್ಪಿಸಿ ತಮ್ಮ ಭಕ್ತಿ ಪ್ರದರ್ಶಿಸಿದರು. ಆ ಮೇಲೆ ಸಿಂಗರಿಸಲ್ಪಟ್ಟ ಫಾಯರ್ ಸರ್ವಿಸಿನ ಮೋಟಾರ್ ಬಂಡಿಯಲ್ಲಿ ಚಿತಾ ಭಸ್ಮದ ಕರಡಿಗೆಯು ಇಡಲ್ಪಟ್ಟು ಶ್ರೀಗಳಾದ ಪಾಂಗಾಳ ಮಂಜುನಾಥ ನಾಯ್ಕ, ಕೆ. ನರಹರಿ ಕಾಮತ್, ಬಾಳ್ಕಟ್ಟೆಬೀಡು ಕೃಷ್ಣಯ್ಯ ಹೆಗ್ಡೆ ಮೊದಲಾದವರ ನೇತೃತ್ವದಲ್ಲಿ ಸಾರ್ವಜನಿಕ ಮೆರವಣಿಗೆಯು ಹೊರಟು ಕಿರಿಬೀದು ಮಲ್ಪೆ ಮಾರ್ಗವಾಗಿ ವಡಭಾಂಡೇಶ್ವರಕ್ಕೆ ಬಂದು ಶ್ರೀ ಬಲರಾಮ. ಸುಬ್ರಹ್ಮಣ್ಯ ಸ್ವಾಮಿ ಸನ್ನಿಧಿಯ ಸಮುದ್ರದಲ್ಲಿ ವಿಸರ್ಜಿಸಲಾಯಿತು. ಸಾವಿರಾರುಮಂದಿ ಈ ಸುಮುಹೂರ್ತದಲ್ಲಿ ಸಮುದ್ರ ಸ್ನಾನವನ್ನು ಮಾಡಿದರು.

ಸಂಜೆ ಪ್ರಚಂಡ ಸಾರ್ವಜನಿಕ ಮೆರವಣಿಗೆಯು ಮಹಾತ್ಮಾಜೀಯವರ ಛಾಯಾಚಿತ್ರದೊಡನೆ ಬೋರ್ಡ್ ಹೈಸ್ಕೂಲಿನಿಂದ ಹೊರಟು ಕಲ್ಸಂಕ, ಬಡಗಪೇಟೆ ರಥಬೀದಿ, ತೆಂಕಪೇಟೆ, ಕೊಳದ ಪೇಟೆ, ಕೋರ್ಟ್ ರಸ್ತೆ ಮಾರ್ಗವಾಗಿ ಅಜ್ಜರಕಾಡು ಗಾಂಧಿ ಮೈದಾನಿಗೆ ಬಂದು ಮುಟ್ಟಿತು. ತದನಂತರ ವಕೀಲ್

ಪ್ರಕಟಣೆ

ಪರ್ಕಳ ಪಂಚಾಯತ ಬೋರ್ಡ್
ಪ್ರೆಸಿಡೆಂಟರು

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ:—

ಪರ್ಕಳ ವಾರ ಸಂತೆ, ದಿನವಹಿ ಮೀನು ಮಾರ್ಕೆಟು ಮತ್ತು ಗಾಡಿ ಚೌಕಗಳಲ್ಲಿ 1948ನೇ ಇಸವಿ ಎಪ್ರೀಲು ತಿಂಗಳ ತಾರೀಕು 1ರಿಂದ 1949ನೇ ಇಸವಿಯ ಮಾರ್ಚ ತಿಂಗಳ ತಾರೀಕು 31ರ ವರೇಗೆ ಒಂದು ವರ್ಷದಲ್ಲಿ ವಸೂಲು ಮಾಡುವ ಹಕ್ಕನ್ನು ಪ್ರತ್ಯ ಪ್ರತ್ಯೇಕವಾಗಿ ಇದೇ ಮಾರ್ಚ ತಿಂಗಳ ತಾರೀಕು 5ನೇ ಶುಕ್ರವಾರ ಸಾಯಂಕಾಲ ಗಂಟೆ 3ರಿಂದ ಪ್ರಾರಂಭವಾಗಿ ಪ್ರೆಸಿಡೆಂಟರಿಂದಲೂ—ಅವರಿಂದ ಅಧಿಕಾರ ಹೊಂದಿದವರಿಂದ, ಬೋರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಏಲಂ ಶರ್ತ ಮ. ನಿಬಂಧನೆಗಳನ್ನೊಳಗೊಂಡ ಪ್ರಕಟಣಾ ಪ್ರತಿಯನ್ನು ಆಫೀಸು ಬೋರ್ಡಿನಲ್ಲಿ ನೋಡಿಯೂ ಆಫೀಸಿನಲ್ಲಿ ಪಡೆದು ತಿಳಿಯಬಹುದು

S ಹಿರಿಯಣ್ಣ ಹೆಗ್ಡೆ,
ಪ್ರೆಸಿಡೆಂಟ್.

ಪಂಚಾಯತ್ ಬೋರ್ಡ್ ಆಫೀಸು, ಪರ್ಕಳ
ತಾರೀಕು, 23--2—48.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ, ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ ಬೆಲೆ; ರೂ 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/- [ವಿ. ಪಿ. ಖರ್ಚು ಪ್ರತ್ಯೇಕ]

Mrs. D. DEVEE, F. D8. (N. J.)
Tollygunge CALCUTTA.
ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು

ಶ್ರೀ. ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಯು. ರಾಘವೇಂದ್ರಾಚಾರ್, ರೆ| ಫಾ| ಪಿಂಟೊ, ಜನಾಬ್ ಮಹಮ್ಮದ್ ಉಸ್ಮಾನ್ ಸಾಹೇಬರು ಅನುಕ್ರಮವಾಗಿ ಗೀತೆ, ಬೈಬಲ್ ಕುರಾನ್‌ಗಳಿಂದ ಪ್ರಾರ್ಥನಾ ಶ್ಲೋಕಗಳನ್ನು ಹೇಳಿದರು. ಸೇವಾ ದಳದವರು 'ರಘುಪತಿ ರಾಘವ ರಾಜಾರಾಮ್'. ಭಜನೆ ಮಾಡಿದರು. ಶ್ರೀಮತಿ ಪ್ರೇಮಾ ಅನಂತ ಪೈಗಳು 'ವೈಷ್ಣವ ಜನತೊ' ಹಾಡಿದರು. ಶ್ರೀಗಳಾದ ಟಿ. ಅನಂತ ಪೈ, ಶ್ರೀಮತಿ ಪಾರ್ವತಿಬಾಯಿ, ಡಾಕ್ಟರ್ ಸುಂದರರಾಮ ಪೈ, ಮಾಧವ ಪೈ, ಎಮ್. ವಿ. ಹೆಗ್ಡೆ, ಬಾಳ್ಕಟ್ಟೆ ಬೀಡು ಕೃಷ್ಣಯ್ಯ ಹೆಗ್ಡೆ, ತಹಶೀಲ್ದಾರ್ ವೆಂಕಪ್ಪನವರು ಭಾಷಣ ಮಾಡಿದರು. ವಂದೇ ಮಾತರಂ ಗೀತೆಯೊಂದಿಗೆ ಸಭಾಂತ್ಯವಾಯಿತು. ಮಠ ದೇವಾಲಯಗಳಲ್ಲೂ ಪೂಜೆ, ಅನ್ನದಾನಾದಿಗಳು ಇದ್ದುವು.

ಉಡುಪಿ ನಗರ ಸಭೆಯು-ತಾ. ೨೧ರಲ್ಲು ಸಂಜೆ ಚೆಯರ್‌ಮನ್ ಶ್ರೀ ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ನಗರ ಸಭೆಯ ಧನ ಸಹಾಯವನ್ನಪೇಕ್ಷಿಸಿ ಉಡುಪಿ ಕಾಲೇಜು ಕಮಿಟಿಯು ಮಾಡಿದ ವಿನಂತಿ ಪತ್ರವನ್ನು ಓದಲಾಯಿತು. ಕನಿಷ್ಠ ಪಕ್ಷ ರೂಪಾಯಿ ೫೦/- ಆದರೂ ಕೊಡಬಹುದಾಗಿ ಶ್ರೀ. ಟಿ. ರಮೇಶ ಪೈಗಳು ಸೂಚಿಸಿದರು. ಕಾಲೇಜು ಮುನಿಸಿಪಲ್ ಕ್ಷೇತ್ರದೊಳಗೆ ಸ್ಥಾಪಿಸಲಾಗುವುದೋ ಅಥವಾ ಹೊರಬದಿಯಲ್ಲಿಯೋ ಎಂಬುದು ವಿನಂತಿ ಪತ್ರದಲ್ಲಿ ತೋರುವುದಿಲ್ಲ. ನಗರ ಕ್ಷೇತ್ರದೊಳಗೆನೇ ಇರುವ ಮತ್ತು ನಗರದ ಹುಡುಗರೇ ಜಾಸ್ತಿ ಸಂಖ್ಯೆಯಲ್ಲಿ ಅಭ್ಯಾಸಮಾಡುವ ಸ್ಥಳೀಯ ಬೋರ್ಡ್ ಹೈಸ್ಕೂಲಿಗೆ ಧನ ಸಹಾಯಕೊಡಬೇಕೆಂದು ಜಿಲ್ಲಾ ಬೋರ್ಡ್ ವಿನಂತಿಸಿದಾಗ ನಾವದನ್ನು ಮನ್ನಿಸಲಿಲ್ಲ. ಪರಿಸ್ಥಿತಿ ಹೀಗಿರುತ್ತಾ ಕಾಲೇಜು ಸ್ಥಾಪಿಸುವ ಸ್ಥಳಯಾವುದೆಂದು ಪ್ರಥಮತಃ ತಿಳಿಯಬೇಕಾಗಿದೆ ಎಂದು ಶ್ರೀ ಎ. ಮಂಜುನಾಥ ರಾಯರು ಹೇಳಿದರು ಅದನ್ನು ಶ್ರೀ ಶಂಭು ಸೆಟ್ಟರು ಅನುಮೋದಿಸಿದರು, ವಿಷಯ ಮುಂದರಿಸಿಡಲಾಯಿತು.

ಮುನಿಸಿಪಲ್ ಕ್ಷೇತ್ರದಲ್ಲಿ ಮನೆಗಳೂ ಕಟ್ಟಡಗಳೂ ಹೆಚ್ಚು ಸಂಖ್ಯೆಯಲ್ಲಿ ಆಗುವುದಕ್ಕೆ ನಗರಸಭೆಯು ಸ್ವಾಗತದ ಪ್ರೋತ್ಸಾಹವನ್ನೀಯುತ್ತದೆ. ಕೌನ್ಸಿಲಿನ ಈ ಧ್ಯೇಯವನ್ನು ಸಾಧಿಸುವುದಕ್ಕೆ ಕಮಿಶನರರು ಸಹಕಾರವನ್ನು ಕೊಡುವರೆಂದು ಈ ಸಭೆಯು ಇಚ್ಛಿಸುತ್ತದೆ ಎಂಬರ್ಥವುಳ್ಳ ಒಂದು ನಿರ್ಣಯವನ್ನು ಶ್ರೀ. ಟಿ. ರಮೇಶ ಪೈಗಳು ತಂದರು, ಮುನಿಸಿಪಾಲಿಟಿ ಆಕ್ಟಿನ [illegible] ಸೆಕ್ಸನ್ ಪ್ರಕಾರ ಈ ನಿರ್ಣಯವನ್ನು ಅಂಗೀಕರಿಸಲಾಗುವುದಿಲ್ಲವೆಂದು ಶ್ರೀ. ಎ. ಮಂಜುನಾಥ ರಾಯರು ಪಾಯಿಂಟ್ ಒಫ್ ಆರ್ಡರ್ ಸೂಚಿಸಿ ಹಿಂದಿನ ಕೌನ್ಸಿಲು ಹಾಗೂ ಕಮಿಶನರರು ಈ ಕುರಿತು ಸಾಕಷ್ಟು ಸಿಗಾ ಕೊಡಲಿಲ್ಲವೆಂಬ ಅರ್ಥ ನಿರ್ಣಯದಲ್ಲಿ ಅಡಕವಾಗಿರುವುದೆಂದರು. ಚೆಯರ್‌ಮನರು ಪಾಯಿಂಟ್ ಒಫ್ ಆರ್ಡರನ್ನು ತೆಗೆದು ಹಾಕಿದರು. ಬಳಿಕ ಸುದೀರ್ಘ ಚರ್ಚೆ ನಡೆದು ಭಿನ್ನಾಭಿಪ್ರಾಯಗಳು ತಲೆದೋರಿದವು. ಇಷ್ಟರ ತನಕ ಆಫೀಸಿನಿಂದ ತೊಂದರೆ ಆಗಿರುವುದು ಎಂಬ ದೂರು ಕೇಳಿಬರಲಿಲ್ಲ ಕಾನೂನಿಗನುಸಾರವಾಗಿ ಅದನ್ನು ಶೀಘ್ರದಲ್ಲಿ ಮನೆ ಕಟ್ಟಿಸುವವರಿಗೆ ಲೈಸೆನ್ಸು ಕೊಡೋಣಾಗಿರುವದೆ. ಆದರೆ ಕೆಲವರು ಮಾತ್ರ ಕಾನೂನಿನ ಅರಿವಿದ್ದೂ [illegible] ಕಾಲದಲ್ಲಿ ಮಾಡದೆ ಪರ್ವಾನಿಗೆಯಿಲ್ಲದೆ ಕಟ್ಟಡಗಳನ್ನು ಕಟ್ಟಿಸಲು ಪ್ರಾರಂಭಿಸಿ ಕೊನೆಗೆ ಅರ್ಜಿ ಮಾಡಿ ಕೃತಕೃತ್ಯರಾಗದಿದ್ದವರು ದೂರಲು ಕಾರಣವಿದೆ. ಜನರಿಂದ ಯಾರಿಗೆ ಅನ್ಯಾಯವಾಗಿದೆ ಎಂಬುವನ್ನು ಸ್ಪಷ್ಟಪಡಿಸುವುದು ಮತ್ತು ಬಹಿರಂಗದಲ್ಲಿ ಹೇಳುವುದು ನ್ಯಾಯವಾಗಿದೆ ಎಂದು ಕಮಿಶನರ್. ಶ್ರೀ. ಟಿ. ಹರಿಶ್ಚಂದ್ರರಾಯರೆಂದರು. ಈ ಮಾತುಗಳು ಸರಿಯೆಂದಾದ ಬಳಿಕ 'ಕೌನ್ಸಿಲು ಮನೆ ಕಟ್ಟಡಗಳ ನಿರ್ಮಾಣವನ್ನು ಹೆಚ್ಚು ಹೆಚ್ಚಾಗಿ ಸ್ವಾಗತಿಸುತ್ತದೆ ಎಂದಿಷ್ಟೆ ಅರ್ಥವುಳ್ಳ ನಿರ್ಣಯವು ಪಾಸಾಯಿತು

ಮಲ್ಪೆ ಬಂದರವನ್ನು ದೊಡ್ಡ ಬಂದರವನ್ನಾಗಿ ಬೇಗನೆ ಮಾಡುವಂತೆ ಕೇಂದ್ರ ಸರಕಾರವನ್ನು ಕೇಳಿಕೊಳ್ಳುವಂತೆ ಮದ್ರಾಸು ಸರಕಾರವನ್ನು ಈ ಸಭೆಯು ವಿನಂತಿಸುತ್ತದೆ. ಮತ್ತು ಮಂಗಳೂರು ಉಡುಪಿಗೆ ರೈಲ್ವೆ ಲೈನು ಆಗಬೇಕು ಎಂಬ ಠರಾವನ್ನು ಶ್ರೀ. ಕೆ. ಕಮಲಾಕ್ಷ ಪೈಗಳು ಮುಂದೆ ತಂದರು. ಮಲ್ಪೆ ಬಂದರವು ನಗರ ಸಭೆಗೆ ಸಂಬಂಧಪಟ್ಟ ವಿಷಯವಲ್ಲವೆಂದು ಹೇಳಿ ಮುನಿಸಿಪಾಲಿಟಿ ಆಕ್ಟಿನ ಸೆಕ್ಸನ್ ೨೦ ೨)ರಂತೆ ಶ್ರೀ ಎ. ಮಂಜುನಾಥ ರಾಯರು ಪಾಯಿಂಟ್ ಒಫ್ ಆರ್ಡರು ತಂದರು. ಚೆಯರ್‌ಮನರು ಅದನ್ನು ಮನ್ನಿಸದ್ದರಿಂದ ಠರಾವು ಪಾಸಾಯಿತು

ಆಹಾರ ಸಮ್ಮೇಳನ:-ತಾಲೂಕು ಆಹಾರ ಸಭೆಯು ತಾ. ೧೫ರಲ್ಲು ಗಾಂಧಿ ಮೈದಾನದಲ್ಲಿ ಶ್ರೀ ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ವಿ. ಕಕ್ಕಿಲ್ಲಾಯರು ಸಮ್ಮೇಳನ ತೆರೆದರು ಮಹಾತ್ಮಾಜೀಯವರ ನಿಧನದಬಗ್ಗೆ ಸಂತಾಪ ಸೂಚಿಸುವ, ಹಿಂದೂ ಮಹಾಸಭೆಯ ಮೇಲೂ ನಿಷೇಧ ಹಾಕಬೇಕೆನ್ನುವ, ಆರ್. ಎಸ್. ಎಸ್. ಕೂಟವನ್ನು ನಿಷೇಧಿಸಿದ ಬಗ್ಗೆ ಸರಕಾರವನ್ನು ಅಭಿನಂದಿಸುವ, ರೇಶನಿಂಗ್ ಕ್ರಮವನ್ನು ಊರ್ಜಿತದಲ್ಲಿರಿಸಬೇಕೆನ್ನುವ ನಿರ್ಣಯಗಳಾದುವು. ಬೀಡಿ ಮಜೂರ, ಕಮ್ಯೂನಿಸ್ಟ್ ಪಾರ್ಟಿಗಳ ಪತಿಯಿಂದ ಸಮ್ಮೇಳನ ಏರ್ಪಡಿಸಲಾಗಿತ್ತು

ಚಂದ್ರಹಾಸ ಚಲಚ್ಚಿತ್ರವು-ದಕ್ಷಿಣ ಹಿಂದೂಸ್ಥಾನದಲ್ಲಿಯೇ ಪ್ರಥಮವಾಗಿ ಪ್ರದರ್ಶಿಸುವ ಸಮಾರಂಭವು ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಾ. ೧೯ರಲ್ಲು ಡಾ। ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ನರ್ತನ ನಿರ್ದೇಶಕರಾದ ಶ್ರೀ. ಕೆ. ಎಲ್. ಭಟ್ಟರು ಹಾಗೂ ಶ್ರೀ ಪಿ. ಸೀನ ಸೆಟ್ಟರು 'ಚಂದ್ರಹಾಸ' ಚಲಚ್ಚಿತ್ರದ ಪ್ರೋತ್ಸಾಹವನ್ನು ಹಾರೈಸಿದರು. ಸ್ಥಳೀಯ ಪತ್ರಿಕೋದ್ಯೋಗಿಗಳಿಗೆ ವಿಶೇಷ ಆಮಂತ್ರಣ ಕೊಡಲಾಗಿತ್ತು. ಚಿತ್ರದ ವಿಮರ್ಶೆಯು ಬರುವ ಸಂಚಿಕೆಯಲ್ಲಿ ಕೊಡಲ್ಪಡುವುದು.

ಸ್ಥಳಾಭಾವದಿಂದ—ನಮಗೆ ಬಂದ ಹಲವು ವಾರ್ತೆಗಳನ್ನೂ ಗ್ರಂಥ ಮತ್ತು ವರದಿಗಳ ವಿಮರ್ಶೆಯನ್ನೂ ಈ ಬಾರಿ ಪ್ರಕಟಿಸಲಾಗಲಿಲ್ಲ. ಕೆಲವನ್ನು ಸಂಕ್ಷೇಪಿಸಿ ಪ್ರಕಟಿಸಬೇಕಾಯಿತು. (ಸಂ.)

ಶ್ರೀರಾಮಕೃಷ್ಣಥಿಯೇಟರ್ ಲಿಮಿಟೆಡ್ ಉಡುಪಿ.

—ದಕ್ಷಿಣ ಕನ್ನಡದಲ್ಲಿ ಮೊದಲ ಪ್ರದರ್ಶನ—

ನಿಮ್ಮ ಊರಲ್ಲಿ ನಿಮ್ಮ ಕಣ್ಣಮುಂದೆ ಅನುದಿನ ತಿರುಗುತ್ತಿದ್ದ ನಿಮ್ಮ ಕಲಾಭಿಮಾನಿಗಳು ಇಂದು ಕಲಾಪೂರ್ಣತೆಗೊಂಡ ಚಿತ್ರಕ್ಕೆ ಕಲೆಯೋಡಿಸಲು ಅನುಕೂಲರಾಗಿ ನಮ್ಮ ಕರ್ಣಾಟಕಕ್ಕೆ ಕೀರ್ತಿತಂದರು.

ಕನ್ನಡದಲ್ಲಿಚಂದ್ರಹಾಸ

ತಿಲೋತ್ತಮ, ಕುಮಾರಿವತ್ಸಲಾ ಪಾಂಗಾಳ್, ವಿಕಾಸ್, ಸಿದ್ಧರಾಮಪ್ಪ. ನರ್ತನವು ನಮ್ಮವರಾದ (ಕೆ. ಎಲ್. ಭಟ್) ಲಕ್ಷ್ಮೀನಾರಾಯಣ ಭಾರ್ಗವರಿಂದ ನರ್ತನ ಪ್ರಪಂಚದ ಭವಿಷ್ಯ ತೋರಿಸಿತು.

ಉದಿಯಾವರ—ಇಲ್ಲಿಯ ಬಿಲ್ಲವ ಸಮಾಜದಿಂದ ಬೇರೆ ಜಾತಿಗೆ ಹೋದ ಯಾ. ಜಾತಿಭ್ರಷ್ಟರಾದವರು ಸ್ವಜಾತಿ ಬೇಕೆಂದು ಆಶಿಸಿ ಉದಿಯಾವರ [illegible] ಬ ರತಿಯಿಂದಲ್ಲ ಅಂಥವರನ್ನು ವಿಧಿಪ್ರಕಾರ ಶುದ್ಧೀಕರಿಸಿ ಜಾತಿಗೆ ಸೇರಿಸಿಕೊಳ್ಳಲಾಗುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಹಿರಿಯಡ್ಕ—ಉಡುಪಿ ತಾಲೂಕು ರೈತರ ಸಂಘದ ಆಶ್ರಯದಲ್ಲಿ ಜಿಲ್ಲಾ ರೈತ ಪರಿಷತ್ತನ್ನು ಜರಗಿಸುವ ಬಗ್ಗೆ ಏರ್ಪಟ್ಟ ಸ್ವಾಗತ ಸಮಿತಿಯು ಸರಿಯಾದ ಕೆಲಸ ಮಾಡದ್ದರಿಂದ ಅದನ್ನು ವಿಸರ್ಜಿಸಿ ಈಗ ಹೊಸ ಸಮಿತಿಯು ಶ್ರೀ. ಕೆ. ಜಗನ್ನಾಥ ಶೆಟ್ರು ಕನ್ವೀನರ್ ಆಗಿ ಸ್ಥಾಪನೆಯಾಗುವ ವ್ಯವಸ್ಥೆಯಾಗಿದೆ.

ಕಂಡ್ಲೂರು—ತಾ. 20-2-48ರಲ್ಲಿ ಡಾ. ರಾಜೀವ ಶೆಟ್ರ ಪ್ರೀಮಾಮೆಡಿಕಲ್ ಹಾಲ್ ಚಹಾ ಸತ್ಕಾರಾದಿಗಳಿಂದ ತೆರೆಯಲ್ಪಟ್ಟಿತು

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 603/47.

ಶಾಮರಾಯ ಸ್ವಾಮಿ ಬುಕ್ಕಿನ [illegible]
ಅರ್ಜಿದಾರಳು.

ಮತ್ತು

ಯಬಡು ಯಬ್ಬಾಟಿ ಮ ಕೂಡಾ—
ಎದ್ರಿರು.

4ನೇ ಎದ್ರಿ ವೆಂಕಟಾ. ಮಂಜು ಮಗ, ಕುಂದಾಪುರ ತಾಲೂಕು ನಂಬ್ರ 1ನೇ ಶೀರೂರು ಗ್ರಾಮದಲ್ಲಿರುವವ.

ಅರ್ಜಿದಾರಳು ಹಾಜ್ರುಪಡಿಸಿದ ಸ್ಥಿರ ಆಸ್ತಿ ವಿಕ್ರಯದ ಪುಸ್ತಕದ ಶರ್ತಗಳನ್ನು ನಿರ್ಣಯಿಸಲಿಕ್ಕೆ ಮೇಲೆ ಕಾಣಿಸಿದ ಅರ್ಜಿಯು ತಾ. 5-3-1948ಕ್ಕೆ ತಸ್ಕಿಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪವಿದ್ದರೆ ಸದ್ರಿ ದಿವ್ಸ ಹಗಲು 10 ಘಂಟೆಗೆ ಕೋರ್ಟು ಮುಂದೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ಮುಂದಿನ ಹುಕುಮು ಆಗುವುದು ಎಂತ ಈ ಮೂಲ್ಕ ತಿಳಿಸೋಣಾಗುತ್ತದೆ.

G. Sanjiva Rao
Vakil for Petr

ಮೊಕ್ಕಾಂ: ಕುಂದಾಪುರ ತಾ. 16-2-48.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 408/1947
R. I. A. 193/1948

ವೆಂಕಟರಮಣ—ವಾದಿಳು

ಮತ್ತು

ರುಕ್ಮಯ್ಯ ಯಾನೆ ಸಂಕಪ್ಪ ಶೆಟ್ಟಿ ಕೂಡಾ—
ಪ್ರತಿವಾದಿರು.

9ನೇ ಪ್ರತಿವಾದಿ-ಪದ್ಮಾವತಿ-10ನೇ ಪ್ರತಿವಾದಿ ಪದ್ಮ ಶೆಟ್ಟಿ, ಹೆಂಡ್ತಿ.

10ನೇ ಪ್ರತಿವಾದಿ ಪದ್ಮ ಶೆಟ್ಟಿ, ರುಕ್ಮ ಶೆಟ್ಟಿ ಅಳಿಯ,

ಪುತ್ತೂರು ತಾಲ್ಲೂಕು ವೀರಕಂಬ ಗ್ರಾಮದ ಪ್ಯಾಲ ಎಂಬಲ್ಲಿ—ಇವರಿಗೆ

ವಾದಿಳು ಪ್ರತಿವಾದಿರ ಮೇಲೆ ದಾಖಲು ಮಾಡಿದ ಸದ್ರಿ ವ್ಯಾಜ್ಯದಲ್ಲಿ 9-10ನೇ ಪ್ರತಿವಾದಿರಿಗೆ 2ಸರ್ತಿ ನೋಟೀಸು ಮಾಡ್ಸಿದ್ದು ಜ್ಯಾರಿ ಆಗದ ಪ್ರಯುಕ್ತ ಅವರ ಮೇಲೆ ಸಬ್ಸಿಟ್ಯೂಟೆಡ್ ಸರ್ವಿಸಿಗೆ ಹುಕುಂ ಆಗಿ ಇದೇ ಬರುವ ಮಾರ್ಚ ತಾ. 8ಕ್ಕೆ ತಸ್ಕಿಗಿಟ್ಟಿರುತ್ತದೆ. ಆ ದಿವ್ಸ ಆಕ್ಷೇಪಗಳಿದ್ರೆ ಜಾಹೀರು ಮಾಡತಕ್ಕದ್ದು. ತಪ್ಪಿದಲ್ಲಿ ಎಕ್ಸ ಪಾರ್ಟಿಯಾಗಿ ತೀರ್ಮಾನಿಸಲ್ಪಡುವದು—ಎಂಬುದಾಗಿ ಈ ಮೂಲ್ಕ ತಿಳಿಸಿಯದೆ.

B. Chidananda Rao,
Vakil for plaintiff

ಪುತ್ತೂರು 13-2-48

ಮಂಗಳೂರು.

ಬಾಪೂಜಿಯವರ ಚಿತಾಭಸ್ಮ— ಸನ್ಮಾನ್ಯ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ತಾ. 11ರಂದು ಸಂಜೆಯ ಮೈಲ್ ಗಾಡಿಗೆ ಬರುವಂತೆ ಡಾ! ಮಾಧವ ಪ್ರಭುಗಳೊಡನೆ ಕಳುಹಿಸಿದ್ದರು. ಆ ವೇಳೆಗೆ ಸರಿಯಾಗಿ ಮಂಗಳೂರ ಪ್ರಮುಖರೆಲ್ಲರೂ ರೈಲು ನಿಲ್ದಾಣದಲ್ಲಿ ನೆರೆದಿದ್ದರು. ರೈಲು ಬಂದೊಡನೆ ಭಸ್ಮ ಪಾತ್ರೆಯನ್ನು ಹಿಡಿದುಕೊಂಡು ಡಾ. ಮಾಧವ ಪ್ರಭುಗಳು ಕೆಳಗೆ ಇಳಿವ ಮೊದಲು ಮುನಿಸಿಪಲ್ ಚೆಯರ್‌ಮೆನ್ ಶ್ರೀ ಎಲ್. ಸಿ. ಪಾಯಸರು ಚಿತಾಭಸ್ಮದ ಪಾತ್ರೆಗೆ ಪೂಹಾರ ಹಾಕಿ ಅದನ್ನೆತ್ತಿಕೊಂಡು ಬಂದು ಸಿಂಗರಿಸಿದ ಪಾಲಕಿಯಲ್ಲಿಟ್ಟರು. ಅದಕ್ಕೆ ಬಹು ಜನರು ಪುಷ್ಪಹಾರಗಳನ್ನರ್ಪಿಸಿದರು. ತದನಂತರ ಮೆರವಣಿಗೆಯಾಗಿ ರಾತ್ರಿ ಸುಮಾರು 10½ ತಾಸಿಗೆ ಗವರ್ನಮೆಂಟ್ ಕಾಲೇಜಿಗೆ ಬರುವಾಗ್ಗೆ ಜನಸ್ತೋಮವು ಸಾಧಾರಣ ಎತ್ತು ಸಾವಿರಕ್ಕೂ ಜಾಸ್ತಿಯಾಗಿತ್ತು. ಮರುದಿನ ಜನರು ತಂಡೋಪತಂಡವಾಗಿ ಇಲ್ಲಿಗೆ ಬಂದು ಮಹಾತ್ಮರಿಗೆ ತಮ್ಮ ಶ್ರದ್ಧಾಂಜಲಿಗಳನ್ನು ಅರ್ಪಿಸಿದರು.

ಮೂರು ತಾಸಿಗೆ ಸರಿಯಾಗಿ ಚಿತಾಭಸ್ಮದ ಸಂಸ್ಕಾರ ಮೆರವಣಿಗೆಯು ಗವರ್ನಮೆಂಟ್ ಕಾಲೇಜಿನಿಂದ ಹೊರಟಿತು. ಮೆರವಣಿಗೆಯು ವೈಕ್ಷ್ಣವ ಭಜನೆ ರಾಮಧುನ್ ಗಾನದ ಸ್ವರವು ಕೇಳುತ್ತಿತ್ತು. ನಗರದ ಮುಖ್ಯ ಮಾರ್ಗಗಳಿಂದಾಗಿ ಮೆರವಣಿಗೆಯು ಉಪ್ಪಿನ ಕೋಟೆಗೆ ತಲ್ಪಿದಾಗ ಅಲಂಕೃತ ಲೋಂಚಿನಲ್ಲಿ ಭಸ್ಮವನ್ನು ಅಳಿವೆಗೆ ಕೊಂಡೊಯ್ದರು. ಶ್ರೀ ಕೆ. ಕೆ. ಸೆಟ್ಟರು ಭಸ್ಮವನ್ನಿರಿಸಿದ ಬೆಳ್ಳಿಯ ಕರಡಿಗೆಯನ್ನು ಹಿಡಿದಿದ್ದರು. ಪೌರ ಸಭಾಧ್ಯಕ್ಷ ಶ್ರೀ ಎಲ್. ಸಿ. ಪಾಯಸ್, ಜಿ. ಖಾಸಿಂ ಸಾಹೇಬ್, ಡಾ। ಯು. ಪಿ. ಮಲ್ಯ, ಸಿಮ್ಕೋಡಿ ಅನಂತೋಪಾಧ್ಯಾಯ, ಕೆ. ಈಶ್ವರ-ಮುಂತಾದ ಕೆಲವು ಪ್ರಮುಖರು ಈ ಅಂತ್ಯ ಸಂಸ್ಕಾರವನ್ನೆಸಗಿದರು. ಉಪ್ಪಿನ ಕೋಟೆಯಲ್ಲಿ ಜಮಾಯಿಸಿದ ಜನಸ್ತೋಮವು ಸ್ಮಶಾನಕ್ಕೆ ಗುಂಪು ಗುಂಪಾಗಿ ಸಾಗಿತು. ಅಲ್ಲಿ ಸಾರ್ವಜನಿಕ ಸಭೆಯು ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ವೈಷ್ಣವ ಜನತೋ, ರಾಮಧುನ್ ಪ್ರಾರ್ಥನೆಗಳಾದನಂತರ ಬೈಬಲ್ ಮತ್ತು ಕುರಾನಿನಿಂದಲೂ ಪ್ರಾರ್ಥನೆಗಳಾದುವು. ಶ್ರೀಗಳಾದ ಕೆ. ಕೆ. ಸೆಟ್ಟಿ, ಎಲ್. ಸಿ. ಪಾಯಸ್, ಎಸ್. ಎಸ್. ಕಿಲ್ಲೆ, ಯು. ಎಚ್. ನಾರಾಯಣ ರಾವ್ ಇವರು ಭಾಷಣ ಮಾಡಿದರು. ಗಾಂಧೀಜಿಯವರ ನಿಧನದ ಕುರಿತು ಕೆಲವರು ತಾವು ರಚಿಸಿದ ಹಾಡುಗಳನ್ನು ಹಾಡಿದ ಬಳಿಕ 'ರಘುಪತಿ ರಾಘವ ರಾಜಾ ರಾಮ್' ಗೀತೆಯೊಡನೆ ಜಯಕಾರಗಳಿಂದ ಸಭೆಯು ಕೊನೆಗೊಂಡಿತು.

ತಿದ್ದುಪಡಿ—ತಾ. 12-2-48ರ ಸಂಚಿಕೆಯ 10ನೆ ಪುಟದಲ್ಲಿ 'ಉಡುಪಿ ಮುನಿಸಿಪಾಲಿಟಿ'ಯ ಪ್ರಕಟಣೆಯಲ್ಲಿ 2 Education Tax (i) On buildings and lands occupied by and appurtenent to buildings at 1¼ per half year ಎಂಬುದನ್ನು 1¼% per half year ಎಂದು ತಿದ್ದಿ ಓದಬೇಕಾಗಿದೆ. (ಸಂ. ನ.)

ಮದ್ರಾಸ್ ಸೆನೆಟಿಗೆ ಚುನಾವಣೆ— ಮಂಗಳೂರು ಮತ್ತು ಉಡುಪಿ ಮುನ್ಸಿಪಾಲಿಟಿಗಳ ಪರವಾಗಿ ಒಬ್ಬ ಪ್ರತಿನಿಧಿಯನ್ನು ಮದ್ರಾಸ್ ಸೆನೆಟಿಗೆ ಆರಿಸುವ ಚುನಾವಣೆಯು ತಾ. 20ನೇ ಸಂಜೆ ಟ್ರೆಜರಿ ಡೆಪ್ಯುಟಿ ಕಲೆಕ್ಟರರ ಸಮ್ಮುಖದಲ್ಲಿ ಅವರ ಕಚೇರಿಯಲ್ಲಿ ಜರಗಿತು. ಉಮೇದ್ವಾರರಾದ ಉಡುಪಿ ಮುನ್ಸಿಪಾಲಿಟಿಯ ಸದಸ್ಯೆ ಶ್ರೀಮತಿ ಲೀಲಾಬಾಯಿ ಕಾಮತರಿಗೆ ೨೪, ಮಂಗಳೂರು ಮುನ್ಸಿಪಾಲಿಟಿ ಸದಸ್ಯ ಡಾ। ಪಿ ಆರ್. ಹೆಗ್ಡೆಯವರಿಗೆ ೨೨ ಓಟುಗಳು ದೊರೆತು ಮೊದಲಿನವರು ಚುನಾಯಿಸಲ್ಪಟ್ಟಿರುವರು. ಶ್ರೀಮತಿಯವರು ಕಳೆದ ಬಾರಿ ಉಡುಪಿ ನಗರ ಸಭೆಯ ಉಪಾಧ್ಯಕ್ಷೆಯೂ ಆಗಿದ್ದರು.

ಪ್ರಕಟಣೆ.

ತೋನ್ಸೆ ಪಂಚಾಯತ ಬೋರ್ಡು.

ಈ ಬೋರ್ಡು ವ್ಯವಹಾರ ಕ್ಷೇತ್ರಕ್ಕೊಳಪಟ್ಟ ಪಡುತೋನ್ಸೆ ಗ್ರಾಮದ ಕೆಮ್ಮಣ್ಣು ಇಪ್ಪಿನಾರು ಸಂತೆ, ದಿನಚರ್ಯದ ಮೀನು ಮಾರ್ಕೆಟು, ಮೊಳ್ಳು ಪಡುಕುದ್ರು ಬಾಗಿಲಲ್ಲಿ 1948ನೇ ಇಸವಿ ಏಪ್ರಿಲ್ 1ನೇ ತಾರೀಕಿನಿಂದ 1949ನೆ ಇಸವಿ ಮಾರ್ಚಿ 31ನೆ ತಾರೀಕಿನ ವರೆಗೆ ಒಂದು ವರುಷಕ್ಕೆ ವಸೂಲು ಮಾಡುವ ಸ್ವತಂತ್ರವನ್ನು 1948ನೆ ಇಸವಿ ಮಾರ್ಚ 4ನೆ ತಾರೀಕು, ಗುರುವಾರ ಸಾಯಂಕಾಲ 3 ಘಂಟೆಗೆ ಕೆಮ್ಮಣ್ಣು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಸದರಿ ಬೋರ್ಡು ಪ್ರೆಸಿಡೆಂಟರಿಂದ ಪ್ರತ್ಯೇಕ ಪ್ರತ್ಯೇಕ ಬಹಿರಂಗವಾಗಿ ಏಲಂ ಮಾಡಲ್ಪಡುವುದೆಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ. ಮಾರಾಟದ ಶರ್ತ ವಗೈರೆ ಹೆಚ್ಚಿನ ಅನುಭವಗಳನ್ನು ಪ್ರೆಸಿಡೆಂಟರಿಂದ ತಿಳಿಯಬಹುದು.

ಪಡುಕುದ್ರು ಪಿ. ಕೃಷ್ಣ
ಪಂಚಾಯತ ಬೋರ್ಡು ಪ್ರೆಸಿಡೆಂಟ್
ಪಡುತೋನ್ಸೆ ತಾರೀಕು 23-2-1948.

ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರ ಪ್ರಕಟಣೆ—೧ ೧೯೪೭ರ ಆಹಾರ ಧಾನ್ಯ ನಿಯಂತ್ರಣ ಅಪ್ಪಣೆಯಂತೆ, ಗ್ರಾಮೀಣ ಪಡುಗೆ ಯೋಜನೆಗನುಸಾರವಾಗಿ, ಹಳ್ಳಿಗಳಲ್ಲಿ ಪಡುಗೆಯಂಗಡಿಗಳನ್ನು ನಡೆಸುತ್ತಿದ್ದ ಚಿಲ್ಲರೆ ವ್ಯಾಪಾರಿಗಳಿಗೆ ಈ ಕಚೇರಿಯಿಂದ ಕೊಟ್ಟ ಎಕ್ಸೆಂಪ್‌ಷನ್ ಸರ್ಟಿಫಿಕೇಟುಗಳನ್ನು ಈ ಕಚೇರಿಗೆ ಇನ್ನೂ ಮರಳಿ ಒಪ್ಪಿಸಿರುವುದಿಲ್ಲ. ಗ್ರಾಮೀಣ ಪಡುಗೆ ಕ್ರಮವನ್ನು ರದ್ದುಗೊಳಿಸಿದರೂ, ಆ ಸರ್ಟಿಫಿಕೇಟುಗಳ ಮೂಲಕ ಆಹಾರಧಾನ್ಯಗಳ ವ್ಯಾಪಾರಕ್ಕೆ ತಮಗೆ ಸ್ವಾತಂತ್ರ್ಯವಿದೆಯೆಂಬ ತಪ್ಪು ತಿಳುವಳಿಕೆಯೋ ಇದಕ್ಕೆ ಕಾರಣವಾಗಿರಬಹುದು.

೨ ಗ್ರಾಮೀಣ ಪಡುಗೆಯ ಪದ್ಧತಿ ಈ ಜಿಲ್ಲೆಯಲ್ಲಿ ರದ್ದಾದುದರಿಂದ, ಈ ಎಕ್ಸೆಂಪ್‌ಷನ್ ಸರ್ಟಿಫಿಕೇಟುಗಳ ಸಾಧುತ್ವವು ರದ್ದುಗೊಳಿಸಲ್ಪಟ್ಟಿದೆ. ಕ್ರಮಪ್ರಕಾರವಾದ ಲೈಸನ್ಸ್ ಅಲ್ಲದೆ ಗ್ರಾಮೀಣ ಪಡುಗೆಯು ರದ್ದಾದ ಅನಂತರ ನಡೆಸಿದ ಆಹಾರಧಾನ್ಯಗಳ ರಖಂವಾರಿ ವಹಿವಾಟುಗಳನ್ನು ಆಹಾರ ನಿಯಂತ್ರಣ ಅಪ್ಪಣೆಯ ಮೂರನೇ ಪ್ರಕರಣೆಯ ಉಲ್ಲಂಘನೆಯೆಂದೂ ಆ ಅಪರಾಧವು ಶಿಕ್ಷೆಗೆ ಗುರಿಯಾಗುವಂತಹದೆಂದೂ, ಈ ಮೂಲಕ ತಿಳಿಯಪಡಿಸಲಾಗಿದೆ.

೩ ಎಕ್ಸೆಂಪ್‌ಷನ್ ಸರ್ಟಿಫಿಕೇಟುಗಳಿದ್ದ ಮಾಜಿ ಚಿಲ್ಲರೆ ವ್ಯಾಪಾರಿಗಳು ವಿಳಂಬಮಾಡದೆ ತಮ್ಮ ಸರ್ಟಿಫಿಕೇಟುಗಳನ್ನು ಈ ಕಚೇರಿಗೆ ಕಳುಹಿಸಿಕೊಡಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಭತ್ತ ಮತ್ತು ಅಕ್ಕಿ ವ್ಯಾಪಾರಿಗಳು, ರಖಂವಾರಿ ವ್ಯಾಪಾರ ನಡೆಸಲು ಇಚ್ಛಿಸುತ್ತಿದ್ದರೆ ಅವರು ೧೯೪೭ರ ಪೂರ್ವದಲ್ಲಿ ಅಕ್ಕಿ ಮತ್ತು ಭತ್ತದ ವ್ಯಾಪಾರಿಗಳಾಗಿದ್ದ, ೧೯೪೭ರ ಮದ್ರಾಸು ಆಹಾರ ನಿಯಂತ್ರಣ ಅಪ್ಪಣೆಯಂತೆ ಒಂದು ಸ್ಥಿರ ಲೈಸನ್ಸ್ ಪಡೆದುಕೊಳ್ಳಲು ಬಿ ಫಾರಮಿನಲ್ಲಿ ಅಸಿಸ್ಟೆಂಟ್ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರ ಮೂಲಕ ಅರ್ಜಿ ಮಾಡಿಕೊಳ್ಳಬಹುದು.

ಮಾರಾಟಕ್ಕಿದೆ

ಡೆಲ್ಕೋ ಲೈಟ್ ಮೊಡೆಲ್ 1286 ಸರ್ವೋಪಕರಣ ಎಂಜಿನುಗಳುಳ್ಳ 2½ ಎಚ್. ಪಿ. ಶಕ್ತಿಯುತವಾದ 32 ವಾಲ್ಟ್ ಪ್ರಮಾಣದ 1½ ಕೆಂಡಬ್ಯು ಸೆಕೆಂಡ್ ಹೆಂಡ್ ಚಾಲೂಸ್ಥಿತಿಯಲ್ಲಿರುವ ಮೆಷಿನು. ಇದರ ಉಪಯೋಗದಿಂದ ಇಲೆಕ್ಟ್ರಿಸಿಟಿ ಇಲ್ಲದ ಸ್ಥಳದಲ್ಲಿಯೂ ಇಲೆಕ್ಟ್ರಿಸಿಟಿ ಪಡೆಯಬಹುದು. ಅಂದಾಜು ಕ್ರಯ ರೂಪಾಯಿ 900/- ಖಾಯಿಸಿಯುಳ್ಳವರು ಕೂಡಲೇ ವಿಚಾರಿಸಿರಿ:—

ರಾಮಕೃಷ್ಣ ಗುಂಡುನಾಯಕ್, ಮರ್ಚೆಂಟ್, ರಥಬೀದಿ, ಉಡುಪಿ.

ಮಂಗಳೂರಿನ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನ— ದ್ವಿವಾರ್ಷಿಕೋತ್ಸವವು ತಾ॥ ೧೫ರಂದು ಶ್ರೀ ನಡ್ಯೋಡಿ ಅನಂತೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ। ಕುಪ್ಪಣ್ಣಾಚಾರ್ಯರ ಸ್ವಾಗತವಾದ ಮೇಲೆ ಶ್ರೀ। ಶಂಕರನಾರಾಯಣಭಟ್ಟರು ವರದಿ ಒಪ್ಪಿಸಿದರು. ಆ ಮೇಲೆ 'ಸ್ವಸ್ತಿ' ಭಾಷಣಗಳೂ ಉತ್ತರಗಳೂ ಆದುವು. ಫಲಹಾರದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಬಂಟರ ಯಾನೆ ನಾಡವರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳ ವಾರ್ಷಿಕೋತ್ಸವವು ತಾ. ೧೫ರಂದು ಸಂಜೆ ರಾ। ಬ। ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ವರದಿಗಳಾದ ಮೇಲೆ ಶ್ರೀ। ರಾಜೀವಶೆಟ್ಟರು 'ಸ್ವಸ್ತಿ' ವಚನ ಹೇಳಿದರು. ಶ್ರೀ। ಕಾಂತಪ್ಪ ಶೆಟ್ಟರು ವಿವರಿಸಿದರು. ಬಳಿಕ ಬಹುಮಾನ ವಿತರಣೆಯಾಗಿ ವಿವಿಧ ವಿನೋದಾವಳಿಗಳಾದುವು. ಶ್ರೀ। ಎಂ. ವಿ. ಹೆಗ್ಡೆಯ 'ಸ್ವಾಂತ್ರ್ಯ ವಿಜಯ' ಉತ್ತಮವಾಗಿತ್ತು.

ಬೆಲೂನ್ಸ್ ಬೆಲೂನ್ಸ್

ಬಾಳಿಕೆ ಬರುವ, ಆಕರ್ಷಕ ಹಾಗೂ ಬಣ್ಣ ಬಣ್ಣದ ಬೆಲೋ ಟ್ಯೂಬ್‌ಗಳೂ ಬೆಲೂನ್ಸ್‌ಗಳೂ ಮಿತ ದರದಲ್ಲಿ ಪುಷ್ಕಳ ಸಗಾರದೊಂದಿಗೆ ದೊರೆಯುವುವು. ಕಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

ಜಯಭಾರತ ರಬ್ಬರ್ ಪ್ರೊಡಕ್ಟ್ಸ್
609, ವಿಠಲ ಪೇಟೆ, ಪೂನಾ 2.

Jay Bharat Rubber Products
609, Vetal Peth, Poona 2.

ನೋಟೀಸು

ಮೂಲ್ಕಿ ಗ್ರಾಮಾಭಿವೃದ್ಧಿ ಸೆಂಟರು ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಮುಂಡ್ಕೂರಲ್ಲಿ ಜರಗಿಸುವ 3ನೇ ಪ್ರದರ್ಶನವು ಇದೇ ತಾ 27ನೇ ಶುಕ್ರವಾರ ಪೂರ್ವಾಹ್ನ 10 ಘಂಟೆಗೆ ಆರಂಭಿಸುವದು. ಸ್ಟೋಲುಗಳೆಲ್ಲಾ ತಾ 26ಕ್ಕೆ ತಯಾರಿರಬೇಕಾಗಿದೆ. ಜಿಲ್ಲಾ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ಶ್ರೀ. ಎ. ಬಿ. ಎಚ್. ಡಿಕ್ಸನ್‌ರವರ ಅಧ್ಯಕ್ಷತೆಯಲ್ಲಿ ಅವರ ಪತ್ನಿಯವರು ಉದ್ಘಾಟಿಸುವರು.

ತಾ 29ನೆ ಆದಿತ್ಯವಾರ ಅಪರಾಹ್ನ 2 ಘಂಟೆಗೆ ಪಶು ಪ್ರದರ್ಶನವೂ, 4 ಘಂಟೆಗೆ ಪಾರಿತೋಷ ಹಂಚೋಣದ ಕಾರ್ಯವೂ ಜರಗುವುದು.

ಶ್ರೀ. ಎಸ್. ಆರ್. ಕೈವರ್. ಐ. ಸಿ. ಯಸ್. ಜಿಲ್ಲಾ ಕಲೆಕ್ಟರರು ಅಧ್ಯಕ್ಷ ಸ್ಥಾನವನ್ನು ವಹಿಸುವರು.

ಈ ಕಾರ್ಯಗಳಿಗೂ, ಪ್ರದರ್ಶನದ 27, 28, 29ರ ದಿನಗಳಲ್ಲಿಯೂ ಎಲ್ಲರಿಗೂ ಸ್ವಾಗತವಿದೆ.

ಮಹಾಬಲ ಶೆಟ್ಟಿ- ಅಧ್ಯಕ್ಷ.
ಕೆ. ನಾರಾಯಣ ಶೆಟ್ಟಿ-ಉಪಾಧ್ಯಕ್ಷ.
ಲಕ್ಷ್ಮಣ ಕಂಬ್ಳಿ-ಕೋಶಾಧಿಕಾರಿ.
ಸತ್ಯನಾರಾಯಣ ರಾವ್, ಎಲ್ಲಪ್ಪ ಶೆಟ್ಟಿ, ವೆಂಕಣ್ಣ ಶೆಟ್ಟಿ, ನಾರಾಯಣ ರಾವ್, ಶಿವಣ್ಣ ಶೆಟ್ಟಿ, ಎಮ್. ಆರ್. ಪೂಂಜ-ಕಾರ್ಯದರ್ಶಿಗಳು
ಮೂಲ್ಕಿ. 18-1-48.

ಬೆಲೆ ಕಡಿಮೆಯಾಗಿರಬೇಕು, ಮಾಲು ಉತ್ತಮವಾಗಿರಬೇಕು
ಎಂದಲ್ಲವೇ ನಿಮ್ಮ ಅಪೇಕ್ಷೆ?

ಸರ್ವಧಾರಿ ಸಂವತ್ಸರದ (1948-1949) ನವಯುಗ ಪಂಚಾಂಗವು

ನಿಮ್ಮ ಅಪೇಕ್ಷೆಯನ್ನು ಪೂರೈಸುವುದು.

ನಿತ್ಯ ಪಂಚಾಂಗದಲ್ಲಿಯೇ ಅಗತ್ಯವಿರುವ ಮಾಹಿತಿಗಳೂ ಇದ್ದರೆ-ಅದೂ ಕಡಿಮೆ ಬೆಲೆಗೆ ಸಿಗುವಂತಿದ್ದರೆ ಅದನ್ನು 'ಖಾಯಸ್' ಮಾಡದವರಾರು?

ಬೆಲೆ ಅಗ್ಗ 0-5-0 ಸಂಗ್ರಹ ಅಧಿಕ. ಪುಟ 56

0-6-0 ಸ್ಟಾಂಪು ಕಳುಹಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು

ವ್ಯಾಪಾರಿಗಳು ಸಮಂ ದರಗಳಿಗೆ ಬರೆದುಕೊಳ್ಳಬಹುದು.

ಪ್ರತಿಯೊಬ್ಬನಿಗೂ ಸಾಕಷ್ಟು ವ್ಯವಹಾರ ಜ್ಞಾನವು ಬೇಕೇಬೇಕು.

ಅನ್ಯರ ಸಹಾಯವಿಲ್ಲದೆ ಅನುದಿನದ ವ್ಯವಹಾರವನ್ನು ತಮ್ಮಷ್ಟಕ್ಕೆ ತಾವೇ ತಿಳಿದುಕೊಳ್ಳಲಿಕ್ಕಾಗುವ **ಆತ್ಮಸಹಾಯುಕ್ತ ಪುಸ್ತಕವೆಂದರೆ**

ವ್ಯವಹಾರಜ್ಞಾನದರ್ಪಣ

ಲೋಕವ್ಯವಹಾರ ಬೋಧನೆಯ ಇಂತಹ ಪುಸ್ತಕಗಳು ಕನ್ನಡದಲ್ಲಿ ತೀರ ವಿರಳ:

ವಕೀಲ್ ಗುಮಾಸ್ತರು, ದಸ್ತಾವೇಜು ಬರೆಯುವವರು ಇವರಿಗಂತೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ದೊಡ್ಡಸೈಜಿನ 164 ಪುಟಗಳು ಬೆಲೆ ರೂ. 1-8-0

ರೂ 1-12-0ನ್ನು ಕಳುಹಿಸಿದರೆ ಒಂದು ಪ್ರತಿಯನ್ನು ರವಾನಿಸಬಹುದು.

ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ವಿ. ಯಸ್. ಕುಡ್ವರಿಗೆ ಉತ್ತರ.

ಇದೇ ಕಳೆದ 3-2-'48, ನವಭಾರತದಲ್ಲಿ ಶ್ರೀ ಕುಡ್ವರು "ಸತ್ಯ, ಅಹಿಂಸೆ ಮತ್ತು ತ್ಯಾಗ"ವೆಂಬ ಶಿರೋನಾಮೆಯ ಲೇಖನವನ್ನು ಪ್ರಕಟಿಸಿದ್ದರು. ಅದರಲ್ಲಿ ಅವರು ಗಾಂಧೀಜಿಯವರ ಅಹಿಂಸೆಯು ವ್ಯಾವಹಾರಿಕವಲ್ಲ; ಅದರಿಂದಾಗಿಯೇ ಅವರ ಮರಣವಾಗಿರುವುದು ಮತ್ತು ಅದನ್ನೇ ಅನುಸರಿಸಿದರೆ ಹಿಂದೂಸ್ಥಾನವನ್ನೇ ಒಂದುದಿನ ಕಳೆದುಕೊಳ್ಳುವ ಸಂಭವವಿದೆಯೆಂದು ಬರೆದಿರುವರು. ಅಲ್ಲದೆ ಆ ಲೇಖನದಲ್ಲಿ, ಕೇಂದ್ರ ಸರಕಾರದ ಮತ್ತು ಪಂಡಿತ ಜವಾಹರಲಾಲರ ಧೋರಣೆಯ ಮೇಲೆ ಕೂಡಾ ಟೀಕೆ ಬಂದಿದೆ. ಅದಕ್ಕೆ ಸರಿಯಾದ ಉತ್ತರವನ್ನು ನಾನು ಮರುದಿನವೇ ಕೆನರಾ ಹೈಸ್ಕೂಲಿನ ವಠಾರದಲ್ಲಿ ಜರಗಿದ ಸಭೆಯಲ್ಲಿ ಕೊಟ್ಟಿದ್ದ. ಆದರೆ ಪತ್ರಿಕೆಯಲ್ಲಿ ಪ್ರಕಟಿಸುವ ಗೋಜಿಗೆ ಮಾತ್ರ ಹೋಗಲಿಲ್ಲ. ಯಾಕೆಂದರೆ ಶ್ರೀ ರಾಜಾಜಿಯವರು ಹೇಳಿದಂತೆ, ನಾವು ಕೊಂಚನಾದರೂ ಉದ್ವೇಗದ ಸ್ಥಿತಿಯಲ್ಲಿರುವಾಗ ನಮ್ಮಿಂದ ಹೊರಡುವ ಅಭಿಪ್ರಾಯವು ವಸ್ತುಸ್ಥಿತಿಗೆ ವಿರೋಧವಾಗುವ ಸಂಭವವಿರಬಹುದು. ಹಾಗಾಗಿ ನನ್ನ ದುಃಖ ಮತ್ತು ಉದ್ವೇಗದ ಬಿಸಿ ಆರುವ ತನಕ ತಣ್ಣಗಿದ್ದು ಇಷ್ಟುದಿನಗಳಾದ ಮೇಲೆ ಈ ಉತ್ತರವನ್ನು ಪ್ರಕಟಿಸಲೆಳಸಿರುತ್ತೇನೆ. ಶ್ರೀ ಕುಡ್ವರು, ನಿರ್ಭಯವಾಗಿ ತನ್ನಿಂದ ಹೊರಟಿರುವ ಅಭಿಪ್ರಾಯವು ತನ್ನ ಯಥಾರ್ಥತೆಯ ಕುರುಹೆಂದು ಹೇಳಬಹುದು. ಆದರೆ ಯಾವುದಕ್ಕೂ ಒಂದು ಕಾಲವಿದೆ. ಇಡೀ ಪ್ರಪಂಚವೇ ದುಃಖ ಸಾಗರದಲ್ಲಿ ಮುಳುಗಿದ್ದು ಗಾಂಧೀಜಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವುದರಲ್ಲಿ ನಿರತವಿರುವಾಗ, ಶ್ರೀ ಕುಡ್ವರು ಮಾತ್ರ ಈ ರೀತಿಯ ಟೀಕಾತ್ಮಕ ಲೇಖನವನ್ನು, ಹದಿಮೂರು ದಿನದ ಸೂತಕ ದಾಟುವ ಮೊದಲೇ ಬರೆಯಲು ದುಡುಕುವ ಅಗತ್ಯವೇನಿರಬಹುದೆಂದು ನನಗೆ ತಿಳಿಯದು. ಅದು ಏನೇ ಇರಲಿ, ಆ ರಹಸ್ಯವನ್ನು ನಾನೀಗ ಭೇದಿಸಲಿಚ್ಛಿಸುವುದಿಲ್ಲ.

ಮೊದಲನೆಯದಾಗಿ ಭಾರತದ ರಾಜಕಾರಣದಲ್ಲಿ ತಮ್ಮ ಅಹಿಂಸಾ ತತ್ವವು ಪರಿಣಾಮಕಾರಿಯಾಗಲಿಲ್ಲವೆಂದು ಗಾಂಧೀಜಿಯವರೇ ಮನಗಂಡಿದ್ದರೆಂದು ಶ್ರೀ ಕುಡ್ವರ ಅಭಿಪ್ರಾಯ. ಇದು ಶುದ್ಧ ತಪ್ಪು ಮತ್ತು ಆಧಾರ ರಹಿತವಾದುದು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಂಗ್ರೆಸ್ ಅನುಸರಿಸಿದ ಅಹಿಂಸೆಯು ದುರ್ಬಲರ ಅಹಿಂಸೆಯಾಗಿತ್ತೆಂದು ಮಾತ್ರ ಗಾಂಧೀಜಿಯವರು ಹೇಳಿರುವುದೇನೋ ನಿಜ. ಆದರೆ ಅದರಿಂದಾಗಿ ಅಹಿಂಸೆಯ ಕುರಿತಾದ ತನ್ನ ಭರವಸೆ ಮಾತ್ರ ಇನ್ನೂ ಹೆಚ್ಚಾಗಿದೆಯೆಂದು ಅವರು ಸಾರಿರುವರು. ದುರ್ಬಲರ ಅಹಿಂಸೆಯಿಂದಲೇ ಹಿಂದೂಸ್ಥಾನವು ಸ್ವಾತಂತ್ರ್ಯ ಸಾಧಿಸಿಕೊಳ್ಳಬಹುದಾದರೆ ಸಬಲ ಅಹಿಂಸೆಯು ಎಷ್ಟೊಂದು ಶಕ್ತಿಯುತವಾಗಬಹುದೆಂಬುದನ್ನು ನಾವೇ ಊಹಿಸಬಹುದೆಂದು ಅವರೆಂದಿರುವರು. ಆ ವಿಚಾರದಲ್ಲಿ ಹೆಚ್ಚು ಬರೆಯುವ ಅಗತ್ಯವಿಲ್ಲ. ಯಾಕೆಂದರೆ ಜಪಾನಿನ ಮೇಲೆ ಅಟಮ್ ಬಾಂಬ್ ಪ್ರಯೋಗಿಸಿದ ಜನರಲ್ ಮೆಕ್‌ಆರ್ಥರ್‌ರಂಥವರೇ, ಅಹಿಂಸಾ ಪಥವನ್ನು ಬಹುವಾಗಿ ಹೊಗಳಿರುವರು. ಕಣ್ಣಿದ್ದ ಪ್ರಪಂಚಕ್ಕೆ ಇನ್ನು ಬೇರೆ ಸಾಕ್ಷಿ ಬೇಕೇ? ಆದರೆ ಶ್ರೀ ಕುಡ್ವರು ಮಾತ್ರ ತನ್ನನ್ನೂ ಕೂಡಾ ಸ್ವದೇಶಾಭಿಮಾನಿಯಾಗಿ ಮಾಡಿದ ಮಿ. ಜಿನ್ನರು ಮೊದಲು ಕಾಂಗ್ರೆಸಿಗರಾಗಿದ್ದರೂ, ಗಾಂಧೀಜಿಯವರ ಅಹಿಂಸಾ ವಿಧಾನದಿಂದಾಗಿ ಕಾಂಗ್ರೆಸನ್ನು ಬಿಡಲು ಕಾರಣವಾಯಿತೆಂದು ಬರೆಯುತ್ತಾರೆ. ಇದು ಶ್ರೀ ಕುಡ್ವರದೇ ಒಂದು ವಿಚಿತ್ರ ಶೋಧ ಮತ್ತು ತರ್ಕ. ಪ್ರಪಂಚದ ಅಭಿಪ್ರಾಯವು ಹೀಗಿಲ್ಲ. ಮಿ. ಜಿನ್ನರು ಕಾಂಗ್ರೆಸನ್ನು ಬಿಟ್ಟದ್ದು ಅದು ಸರಕಾರದ ಮುಂದೆ ಪ್ರತ್ಯಕ್ಷ ವಿರೋಧ ಹೂಡಿ, ತ್ಯಾಗದ ಸಂಸ್ಥೆಯಾದಾಗ. ಆ ಕಾಲಕ್ಕೆ ಸೆರೆಮನೆಯ ಕಷ್ಟಕ್ಕೂ, ಬಲಿದಾನದ ಇನ್ನಿತರ ಸಂಕಷ್ಟಗಳಿಗೂ ಹೆದರಿದರಾಸ್ಸವು ಖಂಡರೆಂದೆನಿಸಿಕೊಂಡ ಹಲವರು ಮಿ. ಜಿನ್ನರಂತೆಯೇ ಕಾಂಗ್ರೆಸಿನ ಗಾಳಿ ಕೂಡಾ ಸೋಂಕಬಾರದೆಂದು ದೂರ ಸರಿದಿದ್ದಾರೆ. "ಮಿ. ಜಿನ್ನರು ತಮ್ಮ ಶರೀರದ ರೋಮ ಮಾಸುವಷ್ಟು ಸ್ವಾರ್ಥ ತ್ಯಾಗಕ್ಕೂ ಸಿದ್ಧರಿಲ್ಲ"ವೆಂದು ಮೌಲಾನಾ ಮಹಮ್ಮದಾಲಿಯವರು ಆ ಕಾಲದಲ್ಲೇ ಹೇಳಿದ್ದರು.

ಎರಡನೆಯದಾಗಿ, ಅಹಿಂಸಾ ವಿಧಾನವನ್ನೊಪ್ಪದ ಮಿ. ಜಿನ್ನರು ಅಷ್ಟು ಸುಲಭವಾಗಿ ಪಾಕಿಸ್ಥಾನವನ್ನು ಸಂಪಾದಿಸಿರುವಾಗ, ಇಂಡಿಯಾದ ಸ್ವಾತಂತ್ರ್ಯಕ್ಕೆ ಗಾಂಧೀಜಿಯವರ ಅಹಿಂಸೆಯು ಕಾರಣವೆಂದು ನಾವೇಕೆ ತಿಳಿಯಬೇಕೆಂದು ಶ್ರೀ ಕುಡ್ವರ ತರ್ಕ. ಇದಕ್ಕೆ ಯಾವ ಅರ್ಥವೂ ಇಲ್ಲ. ಮಿ. ಜಿನ್ನರಾಗಲಿ ಅವರ ಅನುಯಾಯಿಗಳಾಗಲಿ ಪಾಕಿಸ್ಥಾನಕ್ಕಾಗಿ ಯಾವ ಹೋರಾಟವನ್ನು ಬ್ರಿಟಿಷ್ ಸರಕಾರದೊಡನೆ ನಡೆಸಿರುವರು? ಅವರು ಹೋರಾಟ ನಡೆಸಿದುದೆಂದರೆ ಕಾಂಗ್ರೆಸಿನ ಮೇಲೆ. ಅಂದರೆ, ಕಾಂಗ್ರೆಸ್ ಬ್ರಿಟಿಷ್ ಪ್ರಭುತ್ವದ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಸಿಗುವುದಾದರೆ ತಮಗೆ ಪಾಕಿಸ್ಥಾನ ಬೇಕೆಂಬ ಹಟವೇ ಮಿ. ಜಿನ್ನರ ಹೋರಾಟ. ಒಂದು ವೇಳೆ ಕಾಂಗ್ರೆಸ್ಸಿಗೆ ಸ್ವಾತಂತ್ರ್ಯ ಬೇಡವಾಗಿದ್ದರೆ ಮಿ. ಜಿನ್ನರಿಗೆ ಪಾಕಿಸ್ಥಾನ ಹೇಗೆ ದೊರಕುತ್ತಿತ್ತು? ಒಂದು ಕುಟುಂಬದಲ್ಲಿ ಬಲಿಷ್ಠ ಯಜಮಾನನೊಡನೆ ತಮ್ಮ ಹಕ್ಕಿಗಾಗಿ ಒಂದು ಪಾಲಿನವರು ಹೋರಾಡುವಾಗ, ಮತ್ತೊಂದು ಪಾಲಿನವರು ಆ ಯಜಮಾನನೊಡನೆ ಪ್ರೀತಿಯಿಂದ ನಡೆದು ಕೊಂಡು ಸುಖವಾಗಿರುತ್ತಾರೆ. ಆದರೆ ಹೋರಾಟ ನಡೆಸಿದ ಪಾಲಿನವರಿಗೆ ಪಾಲು ಸಿಗುವಾಗ ಈ ಪಾಲಿನವರಿಗೂ ಸಿಗುವುದು. ಇವರಲ್ಲಿ ಯಾರನ್ನು ಬುದ್ಧಿವಂತರೆಂದು ಹೇಳೋಣ? ಹಾಗೆಯೇ 50 ವರ್ಷಗಳಿಂದ ಸ್ವಾತಂತ್ರ್ಯಕ್ಕೆ ಹೋರಾಡಿದ್ದು ಕಾಂಗ್ರೆಸ್, ಫಲ ಕೊಡುವ ಕಾಲ ಸಮೀಪಿಸಿದಾಗ ತಮ್ಮ ಪಾಲು ಪ್ರತ್ಯೇಕವೇ ಸಿಗಬೇಕೆಂದು ಮುಸ್ಲಿಮ್ ಲೀಗಿನ ಮೂಲಕ ಬಲ ತೊಟ್ಟು ಹಿಂದೀ ಸ್ವಾತಂತ್ರ್ಯವನ್ನು ಆದಷ್ಟು ಹಿಂದೂಡಿದ ಮಹಾ ಹೋರಾಟ ಮಿ. ಜಿನ್ನರದು! ಇದು ಶ್ರೀ ಕುಡ್ವರಂಥವರಿಗೆ ದೊಡ್ಡ ವಿಚಾರವಾಗಿ ತೋರಬಹುದು. ಇರಲಿ, ಒರ್ಮಾ ಸಿಲೋನುಗಳಿಗೆ ಹೇಗೆ ಸ್ವಾತಂತ್ರ್ಯ ಸಿಕ್ಕಿತೆಂದು ಶ್ರೀ ಕುಡ್ವರ ಇನ್ನೊಂದು ಪ್ರಶ್ನೆ. ಇದಕ್ಕೆ ನಾನೊಂದು ಉದಾಹರಣೆ ಕೊಡುವೆನು. ಶ್ರೀ ಕುಡ್ವರಿಗೆ ಬಹುದೂರದಲ್ಲಿ ದೊಡ್ಡದೊಂದು ಆಸ್ತಿಯಿದ್ದರೆ, ಅದರ ಸಮೀಪದ ಸಣ್ಣ ಹಿತ್ತಲು ಮನೆ ಯಿದ್ದರೂ ಅದಕ್ಕೆ ಒಗ್ಗಿಯಾಗಿ ಅಗತ್ಯವಿದ್ದು ಅವರು ಕೊಂಡು ಕೊಳ್ಳುವರು. ಒಂದು ವೇಳೆ ಆ ದೊಡ್ಡ ಆಸ್ತಿಯನ್ನೇ ಮಾರುವ ಸಂಭವ ಬಂದರೆ ಆ ಹಿತ್ತಲು ಮನೆಯನ್ನು ಅವರು ಉಳಿಸಿಕೊಳ್ಳುವರೇ? ಅದೇ ರೀತಿಯಲ್ಲಿ ಬ್ರಿಟಿಷ್ ಪ್ರಭುತ್ವಕ್ಕೆ ಹಿಂದೂದೇಶವು ಸೇರಿರುವಷ್ಟುಕಾಲ ಬರ್ಮಾ ಸಿಲೋನುಗಳು ಸುಲಭವಾಗಿ ವಶವಾಗಿದ್ದವು. ಹಿಂದೂ ದೇಶವು ತಪ್ಪಿಹೋಗುವಾಗ ಅವುಗಳೆಲ್ಲವೂ ತಪ್ಪಿಹೋಗುವದೂ ಸಹಜವೇ. ಆದುದರಿಂದಲೇ ಗಾಂಧೀಜಿಯವರಾಗಲಿ, ಪಂಡಿತ್ ಜವಹರಲಾಲ ನೆಹರುಗಳಾಗಲಿ, "ಹಿಂದೂದೇಶದ ಸ್ವಾತಂತ್ರ್ಯವೆಂದರೆ ಏಸ್ಯಾ ಖಂಡದ ಬಂಧ ವಿಮೋಚನೆ"ಯೆಂದು ಆಗಾಗ ಹೇಳುತ್ತಾ ಬಂದಿರುವರು.

ಹಿಂದೆ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿದ್ದ ಅಶೋಕನು ಅಹಿಂಸೆಯಿಂದಾಗಿ ಅದನ್ನು ಕಳೆದು ಕೊಂಡಂತೆ ಇಂಡಿಯಾ ದೇಶವಾದರೂ ಅಹಿಂಸೆಯಿಂದ ತನ್ನ ಸ್ವಾತಂತ್ರ್ಯವನ್ನು ಕಳೆದು ಕೊಳ್ಳುವುದೆಂಬುದು ಶ್ರೀ ಕುಡ್ವರ ಭವಿಷ್ಯವಾಣಿ. ಈ ಪೋಲಿಕೆಯೇ ಅರ್ಥರಹಿತವಾದುದು. ಒಂದು ವೇಳೆ ತರ್ಕಕ್ಕಾಗಿ ಅಶೋಕನು ಅಹಿಂಸೆಯಿಂದಾಗಿ ರಾಜ್ಯವನ್ನು ಕಳೆದು ಕೊಂಡನೆಂದು ಒಪ್ಪಿದರೂ, ರೋಮು ಸಾಮ್ರಾಜ್ಯವು ಹೇಗೆ ಬಿಟ್ಟು ಹೋಯಿತು? ಗ್ರೀಕ್ ಸಾಮ್ರಾಜ್ಯದ ಪತನವಾದುದು ಹೇಗೆ? ಅವರಂಗಜೇಬನ ಮೊಗಲ್ ಸಾಮ್ರಾಜ್ಯವಾಗಲಿ, ಛತ್ರಪತಿ ಶಿವಾಜಿಯ ಮಹಾರಾಷ್ಟ್ರವಾಗಲಿ ಒಡೆದು ಹೋದುದು ಹೇಗೆ? ಕಾಲಗತಿಯಿಂದ ಎಲ್ಲವೂ ಹಾಗೆಯೇ ಆಗುವಾಗ ಯಾರಿಂದಲೂ ತಡೆದು ನಿಲ್ಲಿಸಲು ಸಾಧ್ಯವಿಲ್ಲ. ಆದರೆ ಅಹಿಂಸೆಯಿಂದಲೇ ಒಂದು ಪ್ರೇಮದ ಜಾಗತಿಕ ಸಾಮ್ರಾಜ್ಯವನ್ನು ಇಂದು ಕಟ್ಟಿದವರಿದ್ದರೆ ಅದು ಮಾತ್ರ ಮಹಾತ್ಮಾ ಗಾಂಧಿಯವರು! ಹಿಂದಿನ ಹಿಂದುಸ್ಥಾನದ ಇತಿಹಾಸದಲ್ಲಿ ಅಶೋಕನ ರಾಜ್ಯಭಾರವು ಉಚ್ಚ ಮಾದರಿಯದಾಗಿ ಪ್ರಖ್ಯಾತವಾಗಿರುವುದು.

ಕೇಂದ್ರ ಸರಕಾರವನ್ನು ಕುರಿತು ಟೀಕಿಸುತ್ತಾ ಶ್ರೀ. ಕುಡ್ವರು ಪಂಡಿತ ಜವಹರಲಾಲರು, ಇಂಡೋನೇಶಿಯಾ, ಇಂಡೋಚೈನಾ ಮತ್ತು ಪ್ಯಾಲೆಸ್ಟೈನ್ ಮೊದಲಾದ ವಿಚಾರಗಳಲ್ಲಿ ಆಗಾಗ ತುಂಬಾ ಮಾತಾಡಿ, ಅಮೇರಿಕ ರಷ್ಯ, ಹಾಲೆಂಡ್ ಮತ್ತು ಫ್ರಾನ್ಸ್‌ಗಳ ವಿರೋಧಕ್ಕೆ ಎಡೆ ಕೊಟ್ಟಿರುವರೆಂದೂ ಮಿ. ಜಿನ್ನರು ಹಾಗೇನೂ ಮಾಡದೆ ಮೌನದಿಂದಿರುವುದು ಸರಿಯಾದುದೆಂದೂ ಬರೆದಿರುವರು. ಇದು ಅನಾವಶ್ಯಕವಲ್ಲದ ವಿಚಾರವೆಂದು ನಾವು ಸುಲಭವಾಗಿ ತಿಳಿಯಬಹುದು. ಭಾರತದ ಸ್ವಾತಂತ್ರ್ಯದ ಸಂಗ್ರಾಮದಲ್ಲಿ ನಾವು ನಿರತರಾಗಿದ್ದಾಗ ಎಲ್ಲಾ ವಸಾಹತುಗಳ ಕುರಿತು ಪರಸ್ಪರ ಸಹೋದರತೆಯ ಧೋರಣೆಯನ್ನು ಕಾಂಗ್ರೆಸು ವಹಿಸಿತ್ತು. ಅದಕ್ಕನುಕೂಲವಾದ ಹೇಳಿಕೆಗಳನ್ನು ಆಗಾಗ ಮುಖಂಡರು ಕೊಡುತ್ತಿದ್ದರು. ವಸ್ತುಸ್ಥಿತಿಯು ಹೀಗಿರುತ್ತಾ, ನಮಗೆ ಸ್ವಾತಂತ್ರ್ಯ ಲಭಿಸಿದ ಮಾತ್ರಕ್ಕೆ ಆ ವಿಚಾರಗಳಲ್ಲಿ ನಾವು ತಾಟಸ್ಥ್ಯವನ್ನು ವಹಿಸುವುದು ಯಾವ ರಾಜಕಾರಣವೋ ನಾನರಿಯೆ, ಇದು ವ್ಯಾಪಾರ ದೃಷ್ಟಿಯ ರಾಜಕಾರಣವಿರಬಹುದು. ಆದರೆ ಅಂತರಾಷ್ಟ್ರೀಯ ಮುತ್ಸದ್ದಿ, ಏಸ್ಯಾ ಖಂಡದ ನಾಯಕ ನೆಹರುಗಳ ದೃಷ್ಟಿಯಲ್ಲಿ ಕ್ಷುದ್ರವಾದುದು. ಮಿ. ಜಿನ್ನರು ಪಂಡಿತ್ ನೆಹರುಗಳಂತೆ ಹೋರಾಟ ನಡೆಸಿದ್ದೂ ಇಲ್ಲ ಈಗ ಅವರು ಮೌನರಾಗಿದ್ದರೂ ಕೇಳುವವರಿಲ್ಲ. ಆದರೆ ಪಂಡಿತ್ ಜವಹಾರಲಾಲರು ಸಂದರ್ಭೋಚಿತವಾಗಿ ಭಾರತದ ಧೋರಣೆಯನ್ನು ಪ್ರಕಟಿಸದೆ ಹೋದರೆ ಸಂದರ್ಭ ಸಾಧಕರು ಮತ್ತು ಕಾರ್ಯ ಬಾಹಿರರೆಂಬ ಅಪವಾದಕ್ಕೆ ಒಳಗಾಗಬೇಕಾಗುವದು.

ಕೊನೆಯದಾಗಿ, ನಮ್ಮ ಸರಕಾರವು ಅಹಿಂಸೆಯನ್ನನುಸರಿಸಿ ಸರಿಯಾದ ಭದ್ರತೆಯನ್ನು ಒದಗಿಸದಿದ್ದುದರಿಂದ ಗಾಂಧೀಜಿಯವರ ಕೊಲೆಗೆ ಕಾರಣವಾಯಿತೆಂದು ಶ್ರೀ ಕುಡ್ವರು ಬರೆದಿರುವರು. ಇದಕ್ಕೆ ಸರಿಯಾದ ಉತ್ತರವನ್ನು ಗೃಹ ಮಂತ್ರಿ ಸರದಾರರ ಹೇಳಿಕೆಯೇ ಕೊಡುತ್ತಿದೆ. ಅವರು ಬೇಕಾದ ಭದ್ರತೆಯ ವ್ಯವಸ್ಥೆ ಮಾಡಿದ್ದರು. ಅದಕ್ಕಿಂತಲೂ ಮಿಕ್ಕಿದ ಭದ್ರತೆಗೆ ಗಾಂಧೀಜಿಯವರೇ ಎಡೆ ಕೊಡದಿರುವಾಗ ಯಾವುದೂ ಶಕ್ಯವಿಲ್ಲ. ಒಂದು ವೇಳೆ ಗಾಂಧೀಜಿಯವರು ಎಡೆ ಕೊಡುತ್ತಿದ್ದರೂ ಇಂತಹ ಕೊಲೆಯನ್ನು ಯಾವ ಕಾಲಕ್ಕೂ ತಪ್ಪಿಸಲು ಸಾಧ್ಯವಿಲ್ಲವೆಂದೇ ನನ್ನ ಅಭಿಪ್ರಾಯ. ಅತಿ ಸುಸಜ್ಜಿತವಾದ ಸೈನ್ಯ ಪಡೆ ರಕ್ಷಣೆಗೆ ಒಳಗಾದ ಎಷ್ಟು ರಾಜಕಾರಣ ಪಟುಗಳ ಕೊಲೆ ನಡೆದಿಲ್ಲ? ಅವುಗಳನ್ನು ತಪ್ಪಿಸಲು ಸಾಧ್ಯವಾಗಿತ್ತೆ?

—ಎನ್. ಯಸ್. ಕಿಲ್ಲೆ.

ರೇಶನ್ ಕಾರ್ಡುಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಇದೇ ತಾ. **7—3—1948**ನೇ ಆದಿತ್ಯವಾರ ಸಾಯಂ. ಘಂಟೆ **6**ಕ್ಕೆ

ಮಂಗಳೂರು ಸೆಂಟ್ರಲ್ ಮೈದಾನಿನಲ್ಲಿ ಕಟ್ಟಿಸಿದ ನವೀನ ಮಂದಿರದಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ

ವಿಖ್ಯಾತ ಗಾಯಕಿ **ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ** ಇವರ ಸುಶ್ರಾವ್ಯ

ಸಂಗೀತ ಕಚೇರಿ

ಸಂಗೀತ ರತ್ನ ಶ್ರೀ. ಚೌಡಯ್ಯ -ಇವರ ಪಿಟೀಲು.

ಶ್ರೀ. ಕಲ್ಪಾತಿ ರಘುನಾಥನ್ -ಇವರ ಮೃದಂಗ,

ಶ್ರೀ ಆಲಂಗುಡಿ ರಾಮಚಂದ್ರನ್ -ಇವರ ಘಟವಾದ್ಯ.

ಧ್ವನಿ ವರ್ಧಕ ಇತ್ಯಾದಿ ಏರ್ಪಾಡು ರೇಡಿಯೋ ಸೇಲ್ಸ್ ಸರ್ವಿಸ್ ತ್ರಿಚಿನಾಪಳ್ಳಿ-ಇವರಿಂದ.

ಈ ಮೊದಲು ಸಂಗೀತ ಕಚೇರಿಯು ನಡೆಯುವದೆಂದಿದ್ದ ತಾ. 8-2-48ನೇ ತಾರೀಕಿನ ಟಿಕೇಟುಗಳೇ ಈ ಸಂಗೀತ ಕಚೇರಿಗೂ ಅನ್ವಯಿಸುವುವು.

ಟಿಕೇಟುಗಳ ವಿವರ

ಪೋಷಕ ವರ್ಗ	ರೂ. 100
Iನೇ ವರ್ಗ	ರೂ. 25
IIನೇ ವರ್ಗ	ರೂ. 10
IIIನೇ ವರ್ಗ	ರೂ. 5
IVನೇ ವರ್ಗ	ರೂ. 2

ಜನರ ಸೌಕರ್ಯಕ್ಕಾಗಿ ಈ ಕುರಿತು ಮಂಗಳೂರಿಗೆ ಬರಲಿಕ್ಕೂ, ಹಿಂದೆ ಹೋಗಲಿಕ್ಕೂ ಎಲ್ಲಾ ಲೈನುಗಳಲ್ಲಿಯೂ ಸ್ಪೆಶಲ್ ಬಸ್ ಸರ್ವಿಸುಗಳ ವ್ಯವಸ್ಥೆ ಇದೆ.

— ಜಿಲ್ಲೆಯ ಎಲ್ಲೆಲ್ಲಿಯೂ ಮಹಾತ್ಮಾಜಿಯವರಿಗೆ ಶ್ರದ್ಧಾಂಜಲಿ —

ಅನಂತಾಡಿ— ತಾ. 12 2 48ರಂದು ಶ್ರೀ ಚೆನ್ನಪ್ಪಾಡಿ ವೆಂಕಪ್ಪಶೈನರ ಮುಂದಾಳು ತನದಲ್ಲಿ ಗಾಂಧೀಜಿ ಪುಣ್ಯದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸುಮಾರು ಐನೂರು ಜನರಿಗೆ ಊಟ, ಶಾಲಾ ಮಕ್ಕಳಿಗೆ ತಿಂಡಿ ಹಂಚಲಾಗಿತ್ತು.

ಪೆರ್ಲೆ— ಬಾಪೂಜಿ ದಿನಾಚರಣೆಯು ಶ್ರೀ ಗಂಗಾಧರ ಸುಂದರಪ್ಪ ಸೆಟ್ಟಿ ಮತ್ತು ದೇವಸ್ಥಾನದ ಆಡಳಿತ ಮೊಕ್ತೇಸರರ ಸಹಕಾರದಿಂದ ಊಟ, ಭಾಷಣ ಇತ್ಯಾದಿ ಕಾರ್ಯಕ್ರಮಗಳಿಂದ ಜರಗಿತು.

ಮಣಿನಾಲ್ಕೂರು— ಪರಿತಾಳ, ಶ್ರೀ ಕೋಟ್ಯಣ್ಣ ಆಜಿಲರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಾದಿ ಕಾರ್ಯಕ್ರಮಗಳಿಂದ ಗಾಂಧೀಜಿ ಸ್ಮಾರಕ ದಿನವು ಆಚರಿಸಲ್ಪಟ್ಟಿತು.

ಧರ್ಮಸ್ಥಳ— ಪ್ರಭಾತಫೇರಿ, ದೇವಸ್ಥಾನ, ಬಸದಿಗಳಲ್ಲಿ ಪ್ರಾರ್ಥನೆ, ಅನ್ನದಾನ, ಮೆರವಣಿಗೆ, ಶ್ರೀ ಮಾನ್ ಡಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ವರ್ಧಮಾನ ಹೆಗ್ಡೆಯವರ ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು

ಕೊಲ್ನಾಡು— ಗ್ರಾಮ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಮಹಾತ್ಮಾಜೀಯವರ ದಿನಾಚರಣೆಯು ಗೀತಾಪಠನ, ಸಾರ್ವಜನಿಕ ಸಭೆ, ಮಿಶ್ರ ಫಲಾಹಾರ ಕೂಟಗಳಿಂದ ಜರಗಿತು. ಶ್ರೀ ಕುಳಾಯಿ ಅಣ್ಣಪ್ಪ ಭಂಡಾರಿಗಳು ಧನ್ಯವಾದಗಳನ್ನಿತ್ತರು.

ಬಾರಕೂರು ಹತ್ತು ಸಾವಿರ ರೂಪಾಯಿ ಸಂಗ್ರಹಿಸಿ ಮಹಾತ್ಮಾಜೀಯವರ ಸ್ಮಾರಕ ಮಂದಿರವನ್ನು ಹೈಸ್ಕೂಲು ವಠಾರದಲ್ಲಿ ಕಟ್ಟುವ ವ್ಯವಸ್ಥೆಯಾಗಿದೆ. ಈ ಬಗ್ಗೆ ಶ್ರೀ ಎಚ್. ಸುಬ್ಬಣ್ಣ ಸೆಟ್ಟರು ಅಧ್ಯಕ್ಷರಾಗಿರುವ ಒಂದು ಕಮಿಟಿಯು ರಚನೆಯಾಗಿದೆ.

ಮಹಾತ್ಮರ ದಿನಾಚರಣೆಯು ಸಾರ್ವಜನಿಕ ಸಭೆ, ಹಲವರ ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಯಥಾ ಸಾಂಗವಾಗಿ ಜರಗಿತು.

ಪೆರ್ಡೂರು— ಬಾಪೂಜಿಯವರ ಸ್ಮಾರಕ ದಿನಾಚರಣೆಯು ಪ್ರಾರ್ಥನೆ, ಮೆರವಣಿಗೆ, ಶ್ರೀ ಎ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣ, ಶ್ರೀ ಅನಂತಕೃಷ್ಣ ಭಟ್ಟರಿಂದ ಹರಿಕಥಾ ಕಾಲಕ್ಷೇಪಾದಿಗಳಿಂದ ಜರಗಿತು.

ಹುಣ್ಸೆಕಟ್ಟೆ— ಸುತ್ತುಮುತ್ತಲಿನ ಗ್ರಾಮಸ್ಥರು ಸೇರಿ ಶ್ರೀಗಳಾದ ಪಟೇಲ ಪಿ. ಶೀನಪ್ಪ ಸೆಟ್ಟಿ, ಎಚ್. ಮಹಾಬಲ ಪ್ರಭು ಮೊದಲಾದವರ ಭಾಷಣಗಳಿಂದ ಜರಗಿತು. ಸ್ಮಾರಕಾರ್ಥವಾಗಿ ಒಂದು ಶಾಲೆಯನ್ನು ಕಟ್ಟುವ ನಿರ್ಣಯವಾಗಿ ಸಾವಿರಾರು ರೂಪಾಯಿಗಳ ವಾಗ್ದಾನವಾಗಿದೆ.

ಚೇರ್ಕಾಡಿ— ಶ್ರೀ ಬಿ. ಕೆ. ಆರ್. ಪ್ರಭುಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹಲವರ ಭಾಷಣಗಳಿಂದ ಸ್ಮಾರಕ ದಿನಾಚರಣೆ ನಡೆಯಿತು.

ಪೆರ್ನಾಲ— ಬಾಪೂಜಿಯವರ ಚಿತಾಭಸ್ಮ ಸಂಸ್ಕಾರವು ಪ್ರವಚನ, ಮೆರವಣಿಗೆ, ಮೊದಲಾದ ಕಾರ್ಯಕ್ರಮಗಳಿಂದ ಸುವರ್ಣ ನದೀ ತೀರದಲ್ಲಿ ನಡೆಯಿತು ಸಂಜೆ ಸಾರ್ವಜನಿಕ ಸಭೆ, ಭಾಷಣ, ಹರಿಜನರಿಗೆ ಅಕ್ಕಿ ವಿತರಣೆಯೂ ಆಯಿತು.

ಕಲ್ಯಾಣಪುರ— ಸ್ಮಾರಕ ದಿನಾಚರಣೆಯು ಶ್ರೀ ಸಗ್ರಿ ಅನಂತರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಗೀತಾ ಬೈಬಲ್ ಪ್ರವಚನ, ಶ್ರೀಗಳಾದ ನಾರಾಯಣ ರಾವ್, ಎ. ಬಿ. ರೆಬೆಲ್ಲೊ ಮೊದಲಾದವರ ಭಾಷಣಗಳಿಂದ ಜರಗಿತು.

ಬನ್ನಾಡಿ— ಶಾಲಾ ಮಕ್ಕಳ ಭಜನೆ. ಶ್ರೀ. ಬಿ. ಸುಬ್ಬಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ, ಭಾಷಣಗಳಿಂದ ಜರಗಿತು.

ಎಡನೀರು— ಮಂಜೇಶ್ವರ ಕೇಂದ್ರ ಸೈನ್ಯ ಸಂಘಟಕರಿಂದಲೂ ಗ್ರಾಮಸ್ಥರಿಂದಲೂ ಸ್ಮಾರಕ ದಿನಾಚರಣೆಯು ಶ್ರೀ. ವೈ. ಸೂರು ಸೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಸೋಮಯ್ಯ ಸೆಟ್ಟಿ, ತೋಮಾಸ್ ಡಿಸೋಜ ಮೊದಲಾದವರ ಭಾಷಣಗಳಿಂದ ಜರಗಿತು.

ಬೆಳ್ವಾರು ಪದವು— ಗಾಂಧೀಜೀಯವರ ಸ್ಮಾರಕ ದಿನಾಚರಣೆಯು ಶ್ರೀ ಸುಬ್ಬ ಸೆಟ್ಟರ ನೇತೃತ್ವದಲ್ಲಿ ಕೀರ್ತನೆ, ಭಾಷಣಾದಿ ಕಾರ್ಯಕ್ರಮಗಳಿಂದ ಜರಗಿತು.

ಮಣಿಪುರ— ನೇತಾಜಿ ಯುವಕ ಸಂಘದವರು ವಿವಿಧ ಕಾರ್ಯಕ್ರಮಗಳಿಂದ ಸ್ಮಾರಕ ದಿನಾಚರಣೆ ಮಾಡಿದರು.

ಬೆಳ್ಮಣ್ಣು— ಮೆರವಣಿಗೆ ಶ್ರೀ ನಾರಾಯಣ ಶೇಕರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಾರ್ವಜನಿಕ ಸಭೆ, ಶ್ರೀ ಗೋವಿಂದ ಶೆಣೈ, ಸಿ. ಕೆ. ಅಬ್ದುಲ್ ಇವರ ಪ್ರಾರ್ಥನೆ, ಶ್ರೀಗಳಾದ ಕೆ. ನಾರಾಯಣ ರಾವ್, ಕೆ. ಆರ್. ಪುತ್ತುರಾವ್, ಕೆ. ಶಂಕರ ರಾವ್, ಬಿ. ನಾಮದೇವ ಶೆಣೈ, ಎಸ್. ವೆಂಕಟ ಸುಬ್ಬರಾವ್ ಮೊದಲಾದವರ ಭಾಷಣಗಳಾದುವು ಹರಿತಾಳ, ದೇವಸ್ಥಾನಗಳಲ್ಲಿ ಪೂಜೆ, ಬಡಬಗ್ಗರಿಗೆ ಧರ್ಮ ಸಹಾಯವಿತ್ತು.

ಹೆಗ್ಗುಂಜೆ— ವಸಂತಗಿರಿಯಲ್ಲಿ ಸಾವಿರಾರು ಜನರು ಸೇರಿ ವಿವಿಧ ಕಾರ್ಯಕ್ರಮಗಳಿಂದ ಸ್ಮಾರಕ ದಿನಾಚರಣೆ ನಡೆಯಿತು. ಶ್ರೀ ಹೆಬ್ಬಾಡಿ ಮಹಾಬಲ ಸೇರ್ವೆಗಾರರ ಮುಂದಾಳುತ್ವದಲ್ಲಿ ಸ್ಮಾರಕ ಮಂದಿರವೊಂದನ್ನು ನಿರ್ಮಿಸುವ ವ್ಯವಸ್ಥೆಯಾಗಿದೆ.

ಆಲ್ಬೆಸಾಡಿ— ಮಹಾತ್ಮಾ ಗಾಂಧಿಯವರ ಸ್ಮಾರಕ ದಿನಾಚರಣೆಯು ಮೆರವಣಿಗೆ, ಸಭೆ, ಉಪಹಾರಗಳಿಂದ ಆಚರಿಸಲ್ಪಟ್ಟಿತು.

ಕಲ್ಮಡ್ಕ— ಸಾರ್ವಜನಿಕ ಸಭೆ ಭಾಷಣಗಳು ಆಗಿ ಸ್ಮಾರಕವೊಂದನ್ನು ನಿರ್ಮಿಸುವ ಬಗ್ಗೆ ಸಮಿತಿಯೊಂದರ ರಚನೆಯಾಗಿ ಆಗಲೇ ನಾಲ್ಕು ನೂರು ರೂಪಾಯಿಗಳಷ್ಟು ವಾಗ್ದಾನವಾಯಿತು. ಶ್ರೀಮತಿ ಉಡುಪಿ ಗೋಡೆ ಸರಸ್ವತಿ ಅಮ್ಮನವರು ಭಂಗಾರದ ತನ್ನ ಕಂಠದ ಹಾರವನ್ನು ಸ್ಮಾರಕ ಸಮಿತಿಗೆ ಅರ್ಪಿಸಿದರು.

ಫಲಿಮಾರು— ಫಲಿಮಾರುಮಠದ ಇಂಟರಿಮ್ ಟ್ರಸ್ಟಿ ಶ್ರೀ ದಂಡಿಲ್ಲಾಯರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ ಭೋಜನ ಮೊದಲಾದ ಕಾರ್ಯಕ್ರಮಗಳಿಂದ ಸ್ಮಾರಕ ದಿನಾಚರಣೆಯು ಜರಗಿತು.

ಬೈಲೂರು— ರಾಷ್ಟ್ರ ಸೇವಾದಳದ ನೇತೃತ್ವದಲ್ಲಿ ಸಂಕೀರ್ತನೆ, ಬಡಬಗ್ಗರಿಗೆ ಊಟ, ಶ್ರೀ ಕೋಣಿ ಅಣ್ಣಪ್ಪ ಕಾರಂತರ ಅಧ್ಯಕ್ಷತೆಯಲ್ಲಿ ಸಭೆ, ಗೀತಾ, ಬೈಬಲ್, ಕುರಾನ್ ಪ್ರವಚನ, ಶ್ರೀಗಳಾದ ಎಮ್. ಅನಂತಪ್ಪ ಶೆಣೈ, ಡಿ. ಡಿ. ಅಬ್ದುಲ್, ಎನ್. ಯಸ್. ಸಂಜೀವ ಸೆಟ್ಟಿ ಮೊದಲಾದವರ ಭಾಷಣ, ಶ್ರೀ ಬಾಬುರಾಯ ಪೈಗಳವರಿಂದ ಪಾನೀಯ ವಿತರಣೆ ಇತ್ಯಾದಿ ಕಾರ್ಯಕ್ರಮಗಳಿಂದ ಸ್ಮಾರಕ ದಿನಾಚರಣೆ ಜರಗಿತು. ಗಾಂಧಿ ಸ್ಮಾರಕ ಮಂದಿರವೊಂದನ್ನು ನಿರ್ಮಿಸುವ ಬಗ್ಗೆ ವ್ಯವಸ್ಥೆ ಕೂಡಾ ನಡೆಯಿತು.

ಕಂಡ್ಲೂರು— ಸಾರ್ವಜನಿಕ ಸಭೆ, ಶ್ರೀಗಳಾದ ಕೊಳ್ಕೆಬೈಲು ಮಹಾಬಲ ಸೆಟ್ಟಿ, ಕೆ. ಆನಂದ ಮಾಸ್ತರ್, ಕೆ. ಹುಸ್ಸೇನ್ ಸಾಹೇಬ್ ಇವರ ಭಾಷಣಗಳಿಂದ ಸ್ಮಾರಕ ದಿನಾಚರಣೆ ಜರಗಿತು.

ಮುನಿಯಾಲು— ಪ್ರಚಂಡ ಸಾರ್ವಜನಿಕ ಸಭೆ, ಭಾಷಣ, ಸಹ ಪಂಕ್ತಿ ಭೋಜನ ಮೊದಲಾದ ಕಾರ್ಯಕ್ರಮಗಳಿಂದ ಬಾಪೂಜಿ ದಿನಾಚರಣೆ ನಡೆಯಿತು.

ನಿಡ್ಡೋಡಿ— ಮಹಾತ್ಮರ ಸ್ಮರಣಾರ್ಥವಾಗಿ ನಿಡ್ಡೋಡಿ ಭಾವದ ಶ್ರೀ ಮುದ್ದಣ್ಣ ಸೆಟ್ಟರು ಬಡಬಗ್ಗರಿಗೂ ಹರಿಜನರಿಗೂ ಉಪಹಾರವನ್ನಿತ್ತುದಲ್ಲದೆ ಸಂಜೆ ಜರಗಿದ ಸಾರ್ವಜನಿಕ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು.

ಶಿರ್ವ— ರಾಷ್ಟ್ರ ಸೇವಾದಳದ ನೇತೃತ್ವದಲ್ಲಿ ಬಾಪೂಜಿಯವರ ಸೂತಕ ದಿನದ ಸಲುವಾಗಿ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಿ ಅವರ ಆತ್ಮದ ಶಾಂತಿಗಾಗಿ ಮೂರು ನಿಮಿಷ ಮೌನ ಪ್ರಾರ್ಥನೆಯಾಯಿತು. ಆರ್. ಎಸ್. ಎಸ್. ನವರು ತಮ್ಮ ಕೃತಿಗಾಗಿ ಪಶ್ಚಾತ್ತಾಪ ಸೂಚಿಸಿ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಶಿರೂರು— ಮಹಾತ್ಮರ ನಿಧನದ ಸಲುವಾಗಿ ಊರವರು ಹರತಾಳವನ್ನಾಚರಿಸಿದರು. ಮೆರವಣಿಗೆ, ಸಭೆ, ಸಂತಾಪ ಸೂಚಕ ನಿರ್ಣಯ ಮೊದಲಾದ ಕಾರ್ಯಕ್ರಮಗಳಾದುವು.

ಸೆರ್ನಾಲ— ಮಹಾತ್ಮರ ನಿಧನದ ಸಲುವಾಗಿ ತಾ. 31-1-48ರಲ್ಲು ಜರಗಬೇಕಾಗಿದ್ದ ಜಾನುವಾರು ಪ್ರದರ್ಶನವು ತಾ. 7-3-48ಕ್ಕೆ ಮುಂದುವರಿಸಲಾಯಿತು.

ಮೂರೂರು— ಬಾಪೂಜಿ ನಿಧನ ಸಲುವಾಗಿ ಶ್ರೀ ಕೆ. ಸುಬ್ಬಯ್ಯ ಸೆಟ್ರ ನೇತೃತ್ವದಲ್ಲಿ ಊರವರು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಸಭೆ, ಭಾಷಣ, ಬ್ರಾಹ್ಮಣ ಸಂತರ್ಪಣೆ, ರಾಮ ಭಜನೆ ಮೊದಲಾದ ಸತ್ಕಾರ್ಯಗಳನ್ನು ಮಾಡಿದರು.

ಪಾದೆಬೆಟ್ಟು— ಶ್ರೀ ವಿಷ್ಣುಮೂರ್ತಿ ವೇದಪಾಠಶಾಲೆಯಲ್ಲಿ ಸಭೆ ಸೇರಿ ಮಹಾತ್ಮಾಜೀಯವರ ನಿಧನದ ಬಗ್ಗೆ ಸಂತಾಪ ಸೂಚಿಸಿ ಶಾಲೆಯಲ್ಲಿ ಅವರ ತೈಲಚಿತ್ರವೊಂದನ್ನು ಇಡುವ ನಿರ್ಧಾರವಾಯಿತು. ಶ್ರೀ ಪಿ. ಕೃಷ್ಣರಾಯರು ತೈಲ ಚಿತ್ರವನ್ನು ಕೊಡುವರೆ ಒಪ್ಪಿಕೊಂಡರು.

ಕುಂದಾಪುರ— ಗಾಂಧೀಜಿಯವರ ಭಸ್ಮವನ್ನು ಶ್ರೀ ಬಿ. ಸುಬ್ಬಣ್ಣ ಸೆಟ್ಟರು ತಂದಿದ್ದು ಅದರ ವಿಸರ್ಜನೆಯು ಸಭೆ, ಭಾಷಣಾದಿಗಳಿಂದ ಕುಂದಾಪುರ, ಬಸ್ರೂರು, ಗಂಗೊಳ್ಳಿ, ಕುಂಭದಕೋಣೆ ಮೊದಲಾದ ಸ್ಥಳಗಳಲ್ಲಿ ನಡೆಯಿತಲ್ಲದೆ ಬಡವರಿಗೆ ಕೆಲವೆಡೆ ಅಕ್ಕಿ ವಿತರಣೆಯೂ ಆಯಿತು.

ಹೆರಂಜಲ್— ಗ್ರಾಮದ ಭಜನೆ ಮಂದಿರದಲ್ಲಿ ಬಾಪೂಜಿಯವರ ಸೂತಕ ದಿನಾಚರಣೆಯು ರಾಮಭಜನೆ, ಮೆರವಣಿಗೆ, ಸಭೆ, ಭಾಷಣಾದಿಗಳಿಂದ ಆಚರಿಸಲ್ಪಟ್ಟಿತು.

ಹಿರಿಯಡ್ಕ— ಶ್ರೀ ಕೋಲ್ಕಾರ್ ಜಗನ್ನಾಥ ಸೆಟ್ರಿಂದ ಮಂಗಳೂರಿಂದ ತರಲ್ಪಟ್ಟ ಮಹಾತ್ಮರ ಚಿತಾಭಸ್ಮವನ್ನು ವಿಜೃಂಭಣೆಯ ಮೆರವಣಿಗೆಯಿಂದ ಮುನ್ಯಾವರಾಹನದೀ ತೀರದಲ್ಲಿ ವಿಧಿಯುಕ್ತವಾಗಿ ವಿಸರ್ಜಿಸಲಾಯಿತು. ಗಾಂಧಿ ಮೈದಾನದಲ್ಲಿ ಶ್ರೀ ಬಸ್ತಿ ನಾಗಪ್ಪ ಪೈಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಮತಿ ಶಾರದ ಮ್ಮನವರಿಂದ 'ವೈಷ್ಣವ ಜನತೊ' ಗಾನವಾದ ಮೇಲೆ ಶ್ರೀ ಪೇರೂರ ಉಗ್ಗಪ್ಪ ಭಂಡಾರಿಗಳಿಂದಲೂ ಶ್ರೀ ಎಸ್. ಎಸ್. ಕಿಲ್ಲೆಯವರಿಂದಲೂ ರಚಿಸಲ್ಪಟ್ಟ ಚರಮ ಗೀತೆಗಳು ಓದಲ್ಪಟ್ಟವು. ಅನಂತರ ಹಲವರ ಭಾಷಣಗಳಾದುವು. ಡಾ। ಬಂಸಯ್ಯ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು. ಚಿತಾಭಸ್ಮ ವಿಸರ್ಜಿಸಿದ ಸ್ಥಳದಲ್ಲಿ ಶ್ರೀ ಟಿ. ರಮಾನಾಥ ಪೈಗಳು ಒಂದು ಕಟ್ಟೆಯನ್ನು ಕಟ್ಟಿಸುವುದಾಗಿ ಜಾಹೀರು ಮಾಡಲಾಯಿತು.

ಯೆಡ್ಮೇರು— ಶ್ರೀ. ಎನ್. ರಾಜು ಸೆಟ್ಟರ ನೇತೃತ್ವದಲ್ಲಿ ನಿತ್ಯ ಭಜನೆ, ತಾ 12ರಲ್ಲಿ ಬಾಪೂ ದುಃಖ ಮೆರವಣಿಗೆ. ಕಟ್ಟಂಗೆರೆ ಹೊಳೆಯಲ್ಲಿ ತರ್ಪಣ, ಫಲಾಹಾರ, ಸಾರ್ವಜನಿಕ ಸಭೆ, ಶ್ರೀ ರಾಮಪ್ಪ ಹೆಬ್ಬಾರರ ಭಾಷಣ, ಸಹ ಪಂಕ್ತಿ ಭೋಜನಗಳಾದುವು.

ಬ್ರಹ್ಮಾವರ— ಬಾಪೂಜಿಯವರ ಸ್ಮಾರಕ ದಿನಾಚರಣೆಯು ಬಹು ಅಚ್ಚುಕಟ್ಟಿನಿಂದ ನಗರ ಸಂಕೀರ್ತನೆ, ಭಸ್ಮ ವಿಸರ್ಜನೆ, ಬಂಡಿಯ ಮೆರವಣಿಗೆ, ರೆ। ಫಾ। ಪಿ. ಜಿ. ಕೋಶಿಗಳವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ, ಗೀತಾವಾಚನ, ಕುರಾನ್, ಬೈಬಲ್ ಪ್ರಾರ್ಥನೆಗಳಾಗಿ ಅನೇಕರ ಭಾಷಣಗಳಾದುವು.

The Security Provident Insurance Co., Ltd.

Head Office.

Hassan Chambers, Parsee Bazar St., **Fort, BOMBAY 1**

ANNOUNCEMENT

We have the pleasure to announce that Mr. C. N. SHETTY, our Inspector of Agencies, will be available at Cafe Royal, Udipi from 20th February 1948. It is hoped that our Agents, Organisers and Policy Holders will take this opportunity for their business consultations.

ಋಷಿಕೇಶ ಚ್ಯವನಪ್ರಾಶ

ಬಾಬಾ ಕಾಲಿ ಕಮ್ಲಿವಾಲಾ ಋಷಿಕೇಶ ಇವರ ಅಷ್ಟ ಪ್ರಯೋಗಗಳಿಂದ ಕೂಡಿದ ಸನ್ಯಾಸಿ ಪ್ರಯೋಗದ ಚ್ಯವನಪ್ರಾಶ ಲೇಹವು ಅಪೂರ್ವ ಗುಣಕಾರಿಯಾಗಿದೆ ಅಗ್ನಿಮಾಂದ್ಯ, ಕೆಮ್ಮು, ಶೀತ, ನೆಗಡಿ, ಉಬ್ಬಸ, ಕ್ಷಯ ಮೊದಲಾದ ಶ್ವಾಸಕೋಶಗಳ ರೋಗಗಳನ್ನು ಗುಣಪಡಿಸುವ ರಾಮಬಾಣ ಔಷಧಿ. ಈ ಲೇಹ ಸೇವನೆಯಿಂದ ನವಚೇತನ ಉಂಟಾಗುವುದರಲ್ಲಿ ಅನುಮಾನವಿಲ್ಲ.

ಕ್ರಯ ರಾತ್ತಲಿಗೆ ರೂಪಾಯಿ 5/- ಅರ್ಧ ರಾತ್ತಲಿಗೆ 2-12-0 ಒಂದು ರೂಪಾಯಿ ಅಡ್ವಾನ್ಸ್ ಕಳುಹಿಸಿದ್ದಲ್ಲಿ ವಿ. ಪಿ. ಪಿ. ಪಾರ್ಸೆಲು ಮಾಡಬಹುದು.

ಸ್ಟೋಕಿಸ್ಟರು:

ಕಾಡಬೆಟ್ಟು ರಾಮಕೃಷ್ಣ ಗುಂಡು ನಾಯಕ್, ರಥಬೀದಿ, ಉಡುಪಿ.

ಅಥವಾ

ದ. ಕ. ಜಿಲ್ಲಾ ಪ್ರೊಲೀಸ್ ಆಫೀಸರ್ಸ್ ಕೋಅಪರೇಟಿವ್ ಸ್ಟೋರ್ಸ್ ಲಿಮಿಟೆಡ್, ಮಂಗಳೂರು.

ಅಮೃತಾಂಜನ.

ತಲೆವೇದನೆ, ತಿರೋವೇದನೆ, ಉಳುಕು, ಸೆಳೆತಗೆ, ಳುಲು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೀಳ್ನೋವು, ಚೇಳು ವಿಷ ಮುಂತಾದ ಜೀವಿ ವಿಷ್ಣಬಾಧೆ ಮೊದಲಾದ ಎಲ್ಲಾ ರೋಗಗಳಿಗೂ ಸಹ

REGD.

ಅಧಿ ಜಾಸ್ತಿ ಪರೀಕ್ಷೆ ಮಾಡಿ ಸಹ ನಮ್ಮ ಸ್ವಂತ ಸಿದ್ಧಪಡಿಸಿದ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ಮದ್ರಾಸು ಅಳಿಯ ಸಂತಾನ ಬಿಲ್--

(ವಿಮರ್ಶಾತ್ಮಕ ಲೇಖನ — ಶ್ರೀ. ಬಿ. ಮಂಜಯ್ಯ ಹೆಗ್ಗಡೆ,
ಎಡ್ವೋಕೇಟ್, ಮಂಗಳೂರು — ಇವರಿಂದ)

ಮದ್ರಾಸು ಅಳಿಯ ಸಂತಾನ ಬಿಲ್ ಎಂಬ ಮಸೂದೆಯು ಕರಡು ಜನತೆಯ ಅವಗಾಹನೆಗಾಗಿ ಪತ್ರಿಕೆಗೆ ಪ್ರಕಟವಾಗಿತ್ತು. ಈಗ ಅದು ಶಾಸನ ಸಭೆಯ ಮುಂದೆ ಬಂದು ತಿದ್ದುಪಡಿಗಾಗಿ ಒಂದು ಸಮಿತಿಗೆ ಒಪ್ಪಿಸಲ್ಪಟ್ಟಿದೆ ಎಂದು ತಿಳಿದುಬಂದಿದೆ. ಈ ಮಸೂದೆಯಲ್ಲಿ ಏಳು ಅಧ್ಯಾಯಗಳಿವೆ. ಮೊದಲನೆಯದರಲ್ಲಿ ಮಸೂದೆಯ ಹೆಸರು, ಅನ್ವಯ, ವ್ಯಾಪ್ತಿ, ಶಬ್ದಾರ್ಥ ವಿವರಣೆ ಇತ್ಯಾದಿ ಪೀಠಿಕಾ ವಿಷಯ; ಎರಡನೆಯದರಲ್ಲಿ ಮದುವೆ ಮತ್ತು ಬಿಡುಗಡೆ; ಮೂರನೆಯದರಲ್ಲಿ ಜೀವನಾಂಶ ಮತ್ತು ಗಾರ್ಡಿಯನತನ; ನಾಲ್ಕನೆಯದರಲ್ಲಿ ವೀಲು ಬರೆದಿಡದ ಮೃತನ ಸೊತ್ತುಗಳ ಹಕ್ಕುದಾರಿಕೆ; ಐದನೆಯದರಲ್ಲಿ ಕುಟುಂಬದ ಸೊತ್ತುಗಳ ಹಿಸೆ; ಆರನೆಯದರಲ್ಲಿ ಸೊತ್ತುಗಳ ಹಿಸೆ, ಏಳನೆಯದರಲ್ಲಿ ಇತರ ವಿವಿಧ ವಿಷಯ; ಇವು ಅಡಕವಾಗಿವೆ.

ಒಂದನೇ ಸೆಕ್ಷನಿನ ಒಂದನೇ ಕಲಮು ಈ ಶಾಸನವನ್ನು 1948ನೇ ಇಸವಿಯ ಮದ್ರಾಸು ಅಳಿಯ ಸಂತಾನ ಆಕ್ಟ್ ಎಂದು ಹೆಸರಿಸಲ್ಪಡಬಹುದೆಂದು ಹೇಳುತ್ತದೆ. ಅದರ ೩ನೇ ಕಲಮು ಮದ್ರಾಸು ಪ್ರಾಂತದೊಳಹೊರಗಿನ ಅಳಿಯ ಸಂತಾನ ಪದ್ಧತಿಯನ್ನಾಚರಿಸುವ ಎಲ್ಲ ಹಿಂದೂ ಮತ್ತು ಜೈನರ ಮದ್ರಾಸು ಪ್ರಾಂತದೊಳಗಿರುವ ಸೊತ್ತುಗಳಿಗೆ ಈ ಕಾನೂನು ಅನ್ವಯಿಸುತ್ತದೆಂದು ಹೇಳುತ್ತದೆ. ಅಂದರೆ ಅಳಿಯ ಸಂತಾನಿಗರಿಗೆ ಮದ್ರಾಸು ಪ್ರಾಂತದ ಹೊರಗಿರಬಹುದಾದ ಸೊತ್ತುಗಳಿಗೆ ಅನ್ವಯಿಸುವುದಿಲ್ಲವೆಂದರ್ಥವಾಗುತ್ತದೆ. ಮದ್ರಾಸು ಪ್ರಾಂತದ ಹೊರಗೆ ನಗದು ಹಣ, ಹೊರ ಬಾಕಿ, ಚರ ಸೊತ್ತುಗಳುಳ್ಳ ಹಿಂದೂ ಮತ್ತು ಜೈನ ಅಳಿಯ ಸಂತಾನಿಗರು ಎಷ್ಟೋ ಇದ್ದಾರೆ. ಇಂತವರ ಹೊರ ಪ್ರಾಂತದ ಸೊತ್ತುಗಳನ್ನು ಈ ಮಸೂದೆಯ ವ್ಯಾಪ್ತಿಯಿಂದ ವಿರಹಿತಪಡಿಸುವುದು ಇದರ ಪುರಸ್ಕರ್ತರ ಉದ್ದೇಶವೋ? ಅಥವಾ ಅಂತಹ ಸೊತ್ತುಗಳಿಗೂ ಈ ಆಕ್ಟನ್ನು ಅನ್ವಯಿಸುವುದರಲ್ಲಿ ಕಾನೂನು ಸಂಬಂಧವಾದ ಅಡೆ ತಡೆಗಳೇನಾದರೂ ಇವೆಯೋ? ತಿದ್ದುಪಡಿ ಮಾಡಿ ಸ್ಪಷ್ಟೀಕರಿಸಲ್ಪಡಬೇಕೆಂದು ನಾವು ಬಯಸಿರುವ ಕಾನೂನು ಹಿಂದೂ ಮತ್ತು ಜೈನರ ವ್ಯಕ್ತಿ ಸಂಬಂಧವಾಗಿದ್ದು ಅದು ಅವರೆಲ್ಲಿ ಹೋದರೂ ಅವರಿಗೆ ಅನ್ವಯಿಸತಕ್ಕದು. ಆದುದರಿಂದ ಪ್ರಾಂತದ ಹೊರಗಿನ ಸೊತ್ತುಗಳನ್ನು ವಿರಹಿತಪಡಿಸುವುದು ಉದ್ದೇಶವಲ್ಲವಾಗಿದ್ದರೆ ಆ ಎರಡನೆಯ ಕಲಮನ್ನು ತಕ್ಕಂತೆ ತಿದ್ದುಪಡಿ ಮಾಡತಕ್ಕದು. ಮೂರನೇ ಸೆಕ್ಷನಿನ (f) ಕಲಮಿನಲ್ಲಿ 'ನಿಸ್ಸಂತತಿ ಕವರು' ಎಂದರೆ ಸಂತತಿ ಕವರಲ್ಲದಿರುವ ಕವರು ಎಂದು ವ್ಯಾಖ್ಯಾನ ಮಾಡಿದೆ. ಇದು ಸ್ಪಷ್ಟ ಅರ್ಥಗೊಡುವುದಿಲ್ಲ. ಕುಟುಂಬದ ಸೊತ್ತುಗಳ ಹಿಸೆಯಲ್ಲಿ ಭಾಗಿಯಾಗಿದ್ದ ಹೆಣ್ಣು ಮೆಂಬರುಗಳಲ್ಲಿ ಬದುಕಿ ಉಳಿದ ಕೊನೆಯ ಮೆಂಬರಳ ಮರಣ ಕಾಲದಲ್ಲಿ ಹೆಣ್ಣು ಪರಂಪರೆಯಲ್ಲಿ ಸಂತತಿಯಿಲ್ಲದ ಕವರು ಎಂಬ ವಿವರಣೆಯೂ ಇತರ ವಿವರಣೆಗಳೊಂದಿಗೆ ಈ ಮೊದಲು ತಯಾರಿಸಲ್ಪಟ್ಟ ಕರಡು ಮಸೂದೆಗಳಲ್ಲೊಂದರಲ್ಲಿ IV ನೆಯ ಕಲಂ ಆಗಿ ಸೇರ್ಪಡೆಯಾಗಿತ್ತು. ಈಗ ಮುಂದಿರುವ ಮಸೂದೆಯಲ್ಲಿ ಈ ಅರ್ಥ ಸೂಚನೆಯಿರುವ ಕವರನ್ನು ಎಣಿಸಿ ತಕ್ಕೊಂಡಂತೆ ತೋರಿಬರುವುದಿಲ್ಲ. 3ನೇ ಸೆಕ್ಷನಿನ (h) ಕಲಮಿನಲ್ಲಿ ಸಂತತಿ ಕವರಿನ ವ್ಯಾಖ್ಯಾನ ಮಾಡುವಾಗ-ನಾಲ್ವತ್ತೈದು ವರ್ಷ ಪ್ರಾಯ ಮುಗಿಯದ ಒಂದು ಹೆಣ್ಣು ಮೆಂಬರಳಾದರೂ ಇರುವ ಕವರು-ಎಂದು ಹೇಳಿದೆ. ಇದರರ್ಥವು ಒಂದು ಕವರೆಂದಾಗಬೇಕಾದರೆ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳಿದ್ದು ಅವರಲ್ಲಿ ಒಂದಾದರೂ ನಾಲ್ವತ್ತೈದು ವರ್ಷ ಪ್ರಾಯ ಮೀರದ ಹೆಂಗಸಾಗಿರಬೇಕೆಂದೋ? 3ನೇ ಸೆಕ್ಷನಿನ (f) ಕಲಮಿನಲ್ಲಿ ಯಜಮಾನ ಎಂಬ ಶಬ್ದದ ಅರ್ಥ ವಿವರಣೆ ಹೀಗಿದೆ-ಪದ್ಧತಿಯ ಪ್ರಕಾರ ಒಂದು ಕುಟುಂಬ ಅಥವಾ ಕವರಿನ ಸೊತ್ತುಗಳ ಆಡಳಿತವಿರುವ ಆದರ ಹಿರಿಯ ಮೆಂಬರ ಅಥವಾ ಕರಾರು ಯಾ ಕೋರ್ಟಿನ ಡಿಕ್ರಿ ಯಾ ಇತರ ರೀತಿಯಿಂದ ಆಡಳಿತೆಯ ಹಕ್ಕು ಹೊಂದಿರುವ ಇತರ ಮೆಂಬರನು ಯಜಮಾನನೆನಿಸುವನು-ಎಂದಿರುತ್ತದೆ. ಈ ವ್ಯಾಖ್ಯಾನ ಸೂಚಿಸುವಂತೆ ಆಡಳಿತೆಯ ಹಕ್ಕು ಪದ್ಧತಿಯನುಸಾರ ಹಿರಿಯ ಮೆಂಬರನಿಗೆ ಬರುವುದಿಲ್ಲ. ಕಾನೂನು ಪ್ರಕಾರ ಹಿರಿಯ ಮೆಂಬರನಿಗೆ ಆ ಹಕ್ಕು ಬರುತ್ತದೆ. ಹಿರಿಯ ಮೆಂಬರನಲ್ಲದಿದ್ದಲ್ಲಿ ಮಾತ್ರ ಕರಾರು, ಡಿಕ್ರಿ, ಹೆಂಗಸಿನ ಸಂಪ್ರದಾಯ, ಪದ್ಧತಿ ಅಥವಾ ಇತರ ವಿಧಾನದಿಂದ ಇತರ ಮೆಂಬರನ ಮೇಲೆ ಬರುವುದು. ಅಳಿಯ ಸಂತಾನ ಕಟ್ಟಳೆಯನ್ನು ಆಚರಿಸುವವರು ತಿಳಿದುಕೊಂಡಿರುವ ಅರ್ಥದಲ್ಲೇ ಯಜಮಾನ ಎಂಬ ಶಬ್ದವನ್ನು ಪ್ರಯೋಗಿಸುವುದು ಮಸೂದೆಯ ಪುರಸ್ಕರ್ತರ ಉದ್ದೇಶವಾಗಿದ್ದರೆ ತಕ್ಕ ತಿದ್ದುಪಡಿ ಮಾಡುವುದು ಅವಶ್ಯವಿದೆ. ಹಿಸೆಯ ಅಧ್ಯಾಯದ 33ನೇ ಸೆಕ್ಷನಿನ (h) ಕಲಮಿನ ಒಕ್ಕಣೆಯು ಅಸ್ಪಷ್ಟವಿರುವುದನ್ನು ಸ್ಪಷ್ಟಗೊಳಿಸಬೇಕಾಗಿದೆ. ಮದುವೆ, ಆಡಳಿತೆ, ಹಿಸೆ ಇವುಗಳ ವಿಷಯವಾಗಿ ಏನಾದರೊಂದು ಬಗೆಯ ಶಾಸನ ರೂಪದಲ್ಲಿ ಮಸೂದೆಯು ಪರ್ಯವಸಾನವಾಗುವುದಿದ್ದಲ್ಲಿಯೂ ಅದರ ಕೆಲವು ಭಾಗಗಳನ್ನು ತಿದ್ದುವ ಅಥವಾ ಮರುಪ್ರೋಕ್ಷಣಿಸುವ ಅವಶ್ಯವಿದೆಯೆಂಬುದಕ್ಕೆ ಮೇಲಿನ ಕೆಲವು ಉದಾಹರಣೆಗಳನ್ನು ಎತ್ತಿ ತೋರಿಸಿದುದಾಗಿದೆ.

ಶಾಸನದ ಆವಶ್ಯಕತೆ ಇದೆಯೋ?

3 ಅಲ್ಲದಿದ್ದಲ್ಲಿ ತಿದ್ದುವ ಅಥವಾ ಮರುಪ್ರೋಕ್ಷಣೆ ಸುವ ವಿಚಾರವಂತಿರಲಿ; ಈಗ ಮಂಡಿಸಲ್ಪಟ್ಟಿರುವಂತಹ ಹಲವು ಸ್ವಭಾವದ ನಿಬಂಧನೆಗಳನ್ನೊಳಗೊಂಡ ಈ ಮಸೂದೆಯು ತಿದ್ದುಪಡಿಯಿಲ್ಲದೆ ಅಥವಾ ಅದರ ಕೆಲವು ಲಕ್ಷಣ ಸ್ವಭಾವಗಳನ್ನು ಬದಲಾಯಿಸಿಯೋ ಶಾಸನವಾಗುವುದು ಕ್ಷೇಮಕರವೇ ಎಂಬುದನ್ನು ತರ್ಕ ವಿಚಾರ ಮಾಡುವುದು ನಮ್ಮ ಕರ್ತವ್ಯವಿದೆ-ಮಸೂದೆಯ ಕಾರಣ ಉದ್ದೇಶಗಳ ವಿವರಣೆಯಲ್ಲಿ ಮರುಮಕ್ಕತ್ತಾಯ ಕಟ್ಟಳೆಯವರಿಗೆ ಹೇಗೋ ಹಾಗೆಯೇ ಅಳಿಯ ಸಂತಾನ ಕಟ್ಟಳೆಯವರಿಗೂ ಮದುವೆ ಮುಂತಾದ ವಿಷಯಗಳಲ್ಲಿ ಕಾನೂನು ಆವಶ್ಯವಿದೆ' ಎಂದೂ 1933ನೇ ಇಸವಿಯ ಮರುಮಕ್ಕತ್ತಾಯ ಕಾನೂನಿನಿಂದ ಅಳಿಯ ಸಂತಾನ ಕಟ್ಟಳೆಯವರನ್ನು ವಿರಹಿತಗೊಳಿಸಿದುದು ಅಳಿಯ ಸಂತಾನದ ಒಂದು ಪಕ್ಷದವರು ಅದರಲ್ಲಡಕವಾದ ಮದುವೆ ಮತ್ತು ಹಿಸೆಗೆ ಸಂಬಂಧಪಟ್ಟ ನಿಬಂಧನೆಗಳಿಗೆ ಆಕ್ಷೇಪಿಸಿದುದರಿಂದ ಎಂತಲೂ ಅಂದಿನಿಂದೀಚೆಗೆ ಅಂತಹ ಕಾನೂನು ಬೇಕೆಂಬ ಅಭಿಪ್ರಾಯವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಬಲವಾಗುತ್ತ ಬಂದಿದೆ ಎಂತಲೂ ಹೇಳಲಾಗಿದೆ. ಈ ಮಸೂದೆಯ ಪುರಸ್ಕರ್ತರು ಮರುಮಕ್ಕತ್ತಾಯ ಕಾನೂನಿನಿಂದ ಆ ಕಟ್ಟಳೆಯವರಿಗೆ ವಿಶೇಷ ಹಿತವುಂಟಾಗಿದೆ ಎಂದೂ ಅಳಿಯ ಸಂತಾನಿಗರನ್ನು ಅಂತಹ ಕಾನೂನಿಗೆ ಒಳಪಡಿಸುವುದಕ್ಕೆ ವಿಳಂಬ ಮಾಡುವುದರಲ್ಲಿ ನ್ಯಾಯವಿಲ್ಲವೆಂದೂ ಕಟ್ಟಿಕೊಂಡ ಹಾಗಿದೆ. ಮರುಮಕ್ಕತ್ತಾಯ ಕಟ್ಟಳೆಯವರಿಗೆ ಆ ಕಾನೂನಿಂದ ಒಳ್ಳೆದಾಗಿದೆ ಎಂದು ಕಟ್ಟಿಕೊಳ್ಳಲಿಕ್ಕೆ ತಕ್ಕಷ್ಟು ಆಧಾರವಾಗಲೀ ಕಾರಣವಾಗಲೀ ಇಲ್ಲ. ಅಂತೂ 1933ನೇ ಇಸವಿಯ ಮರುಮಕ್ಕತ್ತಾಯ ಕಾನೂನಿಗೆ ಒಳಗಾದ ಎಷ್ಟೋ ಜನರು ಈ ಅಭಿಪ್ರಾಯವುಳ್ಳವರಾಗಿ ತೋರುವುದಿಲ್ಲ. ಈ ಕಾನೂನು ಬೇಕೆಂದು ಬಯಸಿ ತದನುಸಾರ ಕುಟುಂಬ ಸೊತ್ತುಗಳನ್ನು ಖಡ್ಡಾಯವಾಗಿ ಹಿಸೆ ಹೊಂದಿದವರಲ್ಲಿಯೂ ಹೆಚ್ಚಿನವರು ತಮ್ಮ ಕೃತ್ಯದಿಂದಾಗಿ ಅಥವಾ ಕಾನೂನಿಂದುಂಟಾದ ಪರಿಣಾಮದಿಂದಾಗಿ ಸುಖಹೊಂದಿರುವಂತೆ ತೋರುವುದಿಲ್ಲ.

4 ದಕ್ಷಿಣ ಕನ್ನಡ ಜಿಲ್ಲೆಯ ಜನರಲ್ಲಿ ಈ ಕಾನೂನು ಬೇಕೆಂಬ ಅಭಿಪ್ರಾಯವು ಪ್ರಬಲವಾಗಿಯೂ ನಿರಾಳವಾಗಿಯೂ ಹಬ್ಬಿದೆ ಎಂಬ ಮಾತು ಸಮಂಜಸವಾದುದಲ್ಲ. ಏಕೆಂದರೆ ಅಷ್ಟೊಂದು ಎದ್ದು ಕಾಣುವಷ್ಟಿಲ್ಲ. ಕಾನೂನು ಬದ್ಧವಾದ ಇತರ ಯಾವ ವಿವಾಹ ಪದ್ಧತಿಯಷ್ಟೇ ಪವಿತ್ರವು ಜೀವಾಂತ ವ್ಯಾಪ್ತಿಯುಳ್ಳದೂ ಆಗಿರುವ ತಮ್ಮ ವಿವಾಹ ಪದ್ಧತಿಗೆ ಶಾಸನ ಬದ್ಧತೆ ಬರಬೇಕೆಂಬ ಅಭಿಪ್ರಾಯವು ಅಳಿಯ ಸಂತಾನಿಗರಲ್ಲಿದೆ ಎಂಬುದೇನೋ ನಿಜ. ಅದರೆ ಇದಕ್ಕಿಂತಲೂ ಮುಂದುವರಿದು ಜನರು ವಿವಾಹ ವಿಚ್ಛೇದನ ಅಥವಾ ಸಂಬಂಧದ ಬಿಡುಗಡೆಗೆ ಸಂಬಂಧಪಟ್ಟ ಕಾನೂನುಗಳು ಶಾಸನ ರೂಪದಲ್ಲಿ ಬರಬೇಕೆಂಬ ಕಳಕಳಿಯುಳ್ಳವರೆಂದು ಕಟ್ಟಿಕೊಳ್ಳುವುದು ಸಾಮಾನ್ಯ ಜನತಾಭಿಪ್ರಾಯದೊಂದಿಗೆ ಸರಿಹೋಗಲಾರದು. ಏಕಪತ್ನಿತ್ವ, ವಿವಾಹ ವಿಚ್ಛೇದನ, ಸಂಬಂಧ ಮುರಿಯುವಿಕೆ ಇವುಗಳ ವಿಷಯವಾಗಿ ಕಾನೂನಾಗುವುದು ಕೆಡುಕೆನಿಸಬಹುದು. ಆದರೆ ಈ ವಿಷಯಗಳಲ್ಲಿ ಈಗಲೇ ಶಾಸನವನ್ನು ತರಬೇಕಾಗಿದೆಯೇ ಎಂಬುದು ವಿಚಾರಿಸತಕ್ಕ ಸಂಗತಿ. ಸಾಮಾಜಿಕ ಕಟ್ಟುಕಟ್ಟಳೆಯ ಮೇಲೆ ಶಾಸನವನ್ನು ತರುವಾಗ ಸಾಮಾಜಿಕ ಅವಶ್ಯಕತೆಯೂ ಜನತಾಪೇಕ್ಷೆಯೂ ಆಧಾರ ಭೂತವಾಗಿರತಕ್ಕದ್ದು. ಈ ಕಾನೂನನ್ನು ಸರಕಾರವು ತರುವುದಕ್ಕೆ ಈ ದೃಷ್ಟಿಯಿಂದ ನ್ಯಾಯವಿದೆಯೋ?

ಮದುವೆ ಮತ್ತು ಬಿಡುಗಡೆ

4 (j) ನೇ ಸೆಕ್ಷನಿನಲ್ಲಿ ವಿವಾಹದ ವ್ಯಾಖ್ಯಾನವು ಅಳಿಯಸಂತಾನ ಕುಟುಂಬದೊಡನೆ ಆದೇ ಜಾತಿಗೆ ಸೇರಿದ ಗಂಡಿನ ವೈವಾಹಿಕ ಸಂಬಂಧ ಎಂತ ಹೇಳಿದೆ. ಈ ಮಾತಿನಲ್ಲಿ ಮಲಬಾರಿನಲ್ಲಿ ರೂಢಿಯಿರುವ ಸಂಬಂಧದ ಛಾಯೆಯಿರುವುದರಿಂದ ಹಿತವಾಗಿ ತೋರುವುದಿಲ್ಲ. ಒಂದೇ ಜಾತಿಯ ಗಂಡು ಹೆಣ್ಣುಗಳೊಳಗೇ ವಿವಾಹವಾಗುವಂತೆ ಈ ಸೆಕ್ಷನು ನಿರ್ಬಂಧಿಸುವಂತಿದೆ. ಅಳಿಯ ಸಂತಾನ ಕಟ್ಟಳೆಯನ್ನು ಆಚರಿಸುವವರಲ್ಲಿ ಎಷ್ಟು ಜಾತಿಗಳಿವೆ ಎಂದೂ ಅಂತಹ ಪ್ರತಿಯೊಂದು ಜಾತಿಯ ವೈಲಕ್ಷಣ್ಯವೇನೆಂಬುದನ್ನೂ ಈ ಮಸೂದೆಯ ಪುರಸ್ಕರ್ತರುಗಳು ಸಂಶೋಧನೆ ನಡೆಯಿಸಿದಂತೆ ತೋರುವುದಿಲ್ಲ. ಈ ವಿಷಯದಲ್ಲಿ ಅಧಿಕಾರಯುಕ್ತವಾದ ಹಾಗೂ ಅಂಗೀಕೃತವಾದ ಗೊತ್ತುವಳಿಯಿಲ್ಲದೆ ಇಂತಹ ನಿಬಂಧನೆಗಳನ್ನು ಮದುವೆಯ ನ್ಯಾಯಬದ್ಧತೆಗೆ ಅನ್ವಯಿಸುವುದು ಅಪೇಕ್ಷಣೀಯವಾಗದಿರಬಹುದು. ಮೇಲಾಗಿ ಇಂತಹ ನಿರ್ಬಂಧವನ್ನು ಹಾಕುವುದು ಅವಶ್ಯವೋ ಅಥವಾ ಗಂಡು ಹೆಣ್ಣುಗಳು ಒಂದೇ ಜಾತಿಗೆ ಸೇರದಿದ್ದರೂ ಅಳಿಯ ಸಂತಾನ ಕಟ್ಟಳೆಗೆ ಸೇರಿದವರಾಗಿದ್ದರೆ ವಿವಾಹಿತರಾಗುವ ಸ್ವಾತಂತ್ರ್ಯವನ್ನು ಬಿಡುವುದು ಒಳ್ಳೆಯದೋ ಎಂಬುದು ಆಲೋಚಿಸತಕ್ಕ ವಿಷಯ. ಹೀಗೆಯೇ ಈ ಸೆಕ್ಷನಿನ ಇತರ ಉಪನಿಬಂಧನೆಗಳಲ್ಲಿ ಕಾಣುವ ನಿರ್ಬಂಧಗಳೂ ಇಂತಹ ಆಕ್ಷೇಪಾರ್ಹವಾಗಿವೆ. ಇನ್ನು ಮದುವೆಯಾಗುವ ಸ್ಥಳದ ವಿಷಯವಾಗಿ ಯಾವ ನಿರ್ಬಂಧಗಳೂ ಇದ್ದಂತೆ ತೋರುವುದಿಲ್ಲ. ಮದ್ರಾಸುಪ್ರಾಂತದ ಹೊರಗಿನ ಗೋಕರ್ಣ, ಮಡಿಕೇರಿ, ಅಥವಾ ಮತ್ತಾವ ಸ್ಥಳದಲ್ಲಿಯೂ ಮದುವೆಯಾಗಬಹುದು. ಆದರೆ ದಾಂಪತ್ಯ ವಿಚ್ಛೇದನಕ್ಕಾಗಿ ಅರ್ಜಿಹಾಕುವುದು ಮದುವೆಯಾದ ಸ್ಥಳದಿಂದಾಗಲೀ ಅಥವಾ ಎದ್ರಿಯು ಇರುವ ಜಾಗದಲ್ಲಾಗಲೀ ಆಗತಕ್ಕದ್ದೆಂದು ಇದೆ. ಮದುವೆಯು ಮದ್ರಾಸು ಪ್ರಾಂತದ ಹೊರಗೆ ನಡೆದಿದ್ದು ಎದ್ರಿಯೂ ಮದ್ರಾಸು ಪ್ರಾಂತದ ಹೊರಗೇ ವಾಸಿಸುತ್ತಿರುವ ಸಂದರ್ಭದಲ್ಲಿ ವಿಚ್ಛೇದನಕ್ಕಾಗಿ ಅರ್ಜಿಹಾಕಬೇಕಾದ ಅವಶ್ಯಕತೆ ಬಂದರೆ ಎಲ್ಲಿ ದಾಖಲು ಮಾಡಬೇಕು? ಈ ವಿಷಯವನ್ನು ನಿಬಂಧನೆಯು ಸ್ಪಷ್ಟಪಡಿಸುವುದಿಲ್ಲ.

ಕುಟುಂಬ ಮತ್ತು ಆಡಳಿತೆ

6 ಐದನೆಯ ಅಧ್ಯಾಯವು ಕುಟುಂಬ ಮತ್ತು ಅದರ ಆಡಳಿತೆಗೆ ಸಂಬಂಧಪಟ್ಟದಾಗಿದೆ. ಅದರ 27ನೇ ಸೆಕ್ಷನ್‌ನಲ್ಲಿ ಯಜಮಾನನು ಕುಟುಂಬದ ಆಯವ್ಯಯದ ಸರಿಯಾದ ಲೆಕ್ಕವನ್ನು ಇಡಬೇಕೆಂದೂ ಕುಟುಂಬದ ಇತರ ವಯಸ್ಕ ಮೆಂಬರನಿಗೆ ಪ್ರತಿ ವರ್ಷದ ಲೆಕ್ಕ ಪತ್ರಾದಿಗಳನ್ನು ಪರಿಶೀಲಿಸುವ ಹಕ್ಕಿರತಕ್ಕದ್ದೆಂದೂ ಹೇಳಲಾಗಿದೆ. ಅಳಿಯ ಸಂತಾನದ ಪ್ರತಿಯೊಂದು ಕುಟುಂಬವೂ ಬರಹ ಮೂಲಕ ಸರಿಯಾದ ಲೆಕ್ಕಪತ್ರಗಳನ್ನಿಡಲು ಶಕ್ತವಾಗಿದೆಯೆಂಬುದನ್ನು ಈ ಸೆಕ್ಷನು ಕಟ್ಟಿಕೊಂಡಂತಿದೆ. ಅಳಿಯ ಸಂತಾನದ ಕಟ್ಟಳೆಯನ್ನಾಚರಿಸುವ ಹಲವು ಜಾತಿಗಳೊಳಗೆ ವಿದ್ಯಾ ಪ್ರಚಾರವು ತಕ್ಕಷ್ಟು ಮುಂದುವರಿದಿಲ್ಲ ಎಂಬುದು ಎಲ್ಲರೂ ಬಲ್ಲ ವಿಷಯ. ಈಗಲೂ ಈ ಜಾತಿಯ ದೊಡ್ಡದೊಂದಂಶವು ನಿರಕ್ಷರಿಗಳಾಗಿಯೇ ಉಳಿದಿರುತ್ತಾರೆ. ಹಲವು ಕುಟುಂಬಗಳಂತೂ ತೀರ ಬಡತನದ್ದಿವೆ. ಇಂತಹ ಕುಟುಂಬಗಳ ಯಜಮಾನನಿಗೆ ಈ ಸೆಕ್ಷನಿನ ನಿಯಮಾನುಸಾರ ಸರಿಯಾದ ಲೆಕ್ಕಪತ್ರಗಳನ್ನಿಡುವುದು ಮಾನವತಃ ಸಾಧ್ಯವೇ? ಒಬ್ಬ ಗುಮಾಸ್ತೆಯನ್ನಿಟ್ಟುಕೊಂಡು ಕ್ರಮವಾದ ಲೆಕ್ಕಪತ್ರಗಳನ್ನಿಡಿಸುವುದು, ಶ್ರೀಮಂತ ಕುಟುಂಬದ ಯಜಮಾನನಿಗೆ ಸಾಧ್ಯವಿರುವ ಕಾರಣ ಅಂತವರಿಗೆ ಈ ಸೆಕ್ಷನನ್ನು ಅನ್ವಯಿಸಬಹುದಲ್ಲದೆ ಬಡವ ಬಲ್ಲಿದರೆಂಬೆನ್ನದೆ ಎಲ್ಲ ಯಜಮಾನರಿಗೂ ಈ ಕಾನೂನನ್ನು ಅನ್ವಯಿಸುವುದರಲ್ಲಿ ನ್ಯಾಯವಿಲ್ಲ ಮತ್ತು ಅದು ವ್ಯವಹಾರ್ಯವೂ ಅಲ್ಲ

(ಮುಂದುವರಿಯುವುದು)

ಮಾರಾಟಕ್ಕಿದೆ

ನಮ್ಮ ಚಲೋ ದೊಡ್ಡ ಕುದುರೆ ಜಟಕಾಗಾಡಿ ಮತ್ತು ಅದಕ್ಕೆ ಆಗುವ ಒಳ್ಳೇ ಜಾತಿಯ, ದೊಡ್ಡ ಕುದುರೆ ಮತ್ತು ಅದರ ಸಾಮಾನು ಸಮೇತ ಬಹು ಸುಲಭಸಾಧ್ಯವಾದ ಬೆಲೆಗೆ ಸಿಕ್ಕುತ್ತವೆ. ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ವ ಹೊತ್ತಾ ಬಂದು ಮಾತನಾಡಬಹುದು. ಸದ್ರಿ ಗಾಡಿ, ಕುದುರೆ ನೋಡಲಪೇಕ್ಷೆ ಉಳ್ಳವರು ಆಫೀಸು ಸಮಯದಲ್ಲಿ ಬಂದು ನೋಡಬಹುದು.

M/S. KOCHIKAR BROTHERS LTD , UDIPI.

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ
ಹೋಗಗೊಳಿಸಿ ಶುಚಿಪಡಿಸುವ
ಹಲ್ಲು ಪುಡಿ
ಒಂದು ತೊಲೆ ಕಟ್ಟು 1ರ 0 1 0
ಏಜಂಟರಿಗೆ ಧಾರಾಳ ಕಮಿಶನ್
ಕೊಡಲಾಗುವುದು.
ದಿ ಮಹಾಜನ ಸಿ ಎಂಡ್ ಪಿ.
ಲಿಮಿಟೆಡ್,
ಕಾಸರಗೋಡು, ದ. ಇಂಡಿಯಾ.

First aid to Beauty

ಸೌಂದರ್ಯದ ಪ್ರಥಮ ಚಿಕಿತ್ಸೆ

ಮನುಷ್ಯನು ಅನಾದಿ ಕಾಲದಿಂದಲೂ ಮತದ ಕರ್ಮಗಳನ್ನು ಮಾಡುವಾಗ ಶ್ರೀಗಂಧವನ್ನು ಉಪಯೋಗಿಸುತ್ತಿರು ವನು, ಅದರ ಮನೋಹರ ಸುವಾಸ ನೆಯು ಮೂಗಿಗೆ ಅಪ್ಯಾಯಮಾನ ವುಂಟುಮಾಡುವುದಲ್ಲದೆ ಮನಸ್ಸಿಗೂ ಬಹು ಸುಖವನ್ನು ಕೊಡುವುದು ಆದರೆ ಕೇರಳಾ ಶ್ರೀಗಂಧದ ಸಾಬೂನು ಇನ್ನೂ ಹೆಚ್ಚಿನ ಸೌಲ ಭ್ಯದಿಂದ ಕೂಡಿದೆ–ಅದು ನಿಮ್ಮ ಮುಖ ಕಾಂತಿಯನ್ನು ಹೆಚ್ಚಿಸುವುದು.. ಇದು ಪ್ರಾಕೃತಿಕ ಸೌಂದರ್ಯಕ್ಕೆ 'ಪ್ರಥಮ ಚಿಕಿತ್ಸೆ' ಯಾಗಿರುವುದು.

Kerala

FAS-KS-1

Manufacturers

Kerala Soap Institute, Calicut

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಸ್ವಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ

ಸೂತಿಕಾ ರಸಾಯನ



ಈ ಬಿನ್ನಿನ ಎಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು– ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಸ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕವಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

ಹೊಸ ವ್ಯವಸ್ಥೆ–ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ— ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging,

...ADI. S K

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂಪಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯನಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯು ವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ- -ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಹ್ಯಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕಂತಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, 2) ಬೊಂಬಾಯಿ ಏಜಂಟರು —ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ಎರಡಾಣೆ

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

4-3-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

NAVAYUGA WEEKLY, UDIPI.

ವರ್ಷ ೨೮ | ವಾರ ೨೬

FOUNDER: Hon'ble Mr. A. B. SHETTY, Health Minister, Govt. of Madras.

Vol. 28 | No. 26

ಗಾಂಧಿಜಿಯ ಕೊಲೆ ಮತ್ತು ದ. ಕನ್ನಡಿಗರ ಹೊಣೆ

ಅವಿಚಾರಾಂಧ, ಅಪ್ರಾಸಂಗಿಕ ಆಸುರೀ ಶಕ್ತಿಯ ಒಳಸಂಚಿನ ಸೈತಾನಿ ಹಸ್ತವು, ಬಾಪುವಿನ ಭೌತಿಕ ಶರೀರವನ್ನಿಂದು ಬಲಿತೆಗೆದುಕೊಂಡಿರುವುದು. ಆದರೆ ಆ ಅಂಧತಮಸ್ಸನ್ನು, ಮಹಾತ್ಮರ ಆತ್ಮ ಭಾಸ್ಕರನು, ತನ್ನ ಶತ ಸಹಸ್ರ ಕಿರಣಗಳಿಂದ ಒಮ್ಮೆಯೇ ವಿಚ್ಛೇದಿಸಿ, ಮೊದಲಿಗಿಂತ ಎಷ್ಟೋ ಪಾಲು ಹೆಚ್ಚು ಕಳೆಗೊಂಡು ಬೆಳಗುತ್ತಿರುವನು. ಬದುಕಿ ಗಳಿಸಿದುದಕ್ಕಿಂತ ಹತ್ತು ಪಾಲು ನೂರು ಪಾಲು, ಅಧಿಕ ಪ್ರಭಾವವನ್ನಿಂದು ಪಡೆದಿರುವರು ಗಾಂಧಿಜಿ. ಅವರನ್ನು ತನ್ನ ನಂಬ್ರ ಒಂದನೇ ವೈರಿಯಾಗಿ ಪರಿಗಣಿಸಿ ಕೊಂದು ತಾನೇ ತಾನಾಗಿ ತಾಂಡವವಾಡಬೇಕೆಂದೆಣಿಸಿದ್ದ ಪೈಶಾಚಿಕ ಶಕ್ತಿಯು ಇಂದು, ಕ್ಷಣಮಾತ್ರದಲ್ಲೆಂಬಂತೆ ನಶಿಸಿ ಮಣ್ಣುಗೂಡಿ ಹೋಗಿರುವುದು.

ಕೊಲೆಯಲ್ಲಿ ದಕ್ಷಿಣಕನ್ನಡಕ್ಕೆ ಪಾಲಿದೆಯೇ?

ಗಾಂಧಿಜಿಯ ಕೊಲೆಯಲ್ಲಿ ಅಪ್ರತ್ಯಕ್ಷವಾಗಿಯಾದರೂ ದಕ್ಷಿಣ ಕನ್ನಡಕ್ಕೆ ಪಾಲಿಲ್ಲೆನ್ನಲು ಸಾಧ್ಯವಿದೆಯೇ? ಗಾಂಧಿಜಿಯ ಕೊಲೆಯ ಮಹಾ ದುರಂತದ ಸಂದರ್ಭದಲ್ಲೆ, ಆ ಸೂತಕ ದಾಟುವ ತನಕವೂ ತಾಳಿಕೊಂಡಿರುವಷ್ಟರ ತಾಳ್ಮೆಯಿಲ್ಲದೆ, ಅವರ ಅಹಿಂಸೆ ಸತ್ಯ, ಮತ್ತು ತ್ಯಾಗ, ಹಿಂದೀ ರಾಷ್ಟ್ರೀಯ ಸರಕಾರ ಧೋರಣೆಯ ಕುರಿತೆಲ್ಲ ಮನಸೋಕ್ತಿ ಟೀಕಿಸಿ ಉದ್ಧಟ ಲೇಖ ಬರೆದು, ಜನತೆಯಲ್ಲಿ ಗೊಂದಲವೆಬ್ಬಿಸುವ, ವಿಲಕ್ಷಣ ಹಾಗೂ ಉದ್ಧಟ ಮನೋವೃತ್ತಿಯು ನಮ್ಮೆದೆಯ ಮೇಲೆ ನಿಂತು ತನ್ನಾಟ ನಡೆಸಿಲ್ಲವೇ? ಗಾಂಧಿಜಿಯವರ ಕೊಲೆಯ ವಾರ್ತೆಯು ನಮ್ಮಲ್ಲಿ ಕೆಲವರಿಗೆ ಮೊದಲೇ ತಿಳಿದಿಲ್ಲವೆನ್ನಲು ಸಾಧ್ಯವಿದೆಯೇ? ಗಾಂಧಿಜಿಯ ಕೊಲೆಯ ವಾರ್ತೆ ಬಂದೊಡನೆಯೆ ಸಂತೋಷಪಟ್ಟವರು ನಮ್ಮಲ್ಲಿ ಅನೇಕರಿಲ್ಲವೇ? ಹಾಲು ಪಾಯಸ ಮಾಡಿ ತಿಂದವರು, ಮಿಠಾಯಿ ಹಂಚಿದವರು, ಮತ್ತು ವಿಹಾರ ಭೋಜನ ನಡೆಸಿದವರೂ ನಮ್ಮಲ್ಲಿರುವರೆಂದ ಮೇಲೆ ದಕ್ಷಿಣ ಕನ್ನಡವು, ಗಾಂಧಿ ಪೂಜೆಯಂತೆಯೇ ಕೊಲೆಯಲ್ಲಿಯೂ ಪ್ರಮುಖ ಪಾಲು ಪಡೆದಿಲ್ಲೆನ್ನಬಹುದೇ?

ಒಮ್ಮೆ ಕಾಂಗ್ರೆಸ್! ಈಗ ಆರ್. ಎಸ್. ಎಸ್!

1919ರಲ್ಲಿ ಗಾಂಧಿಜಿಯು ರೌಲೆಟ್ ಆಕ್ಟನ್ನು ನಿಷೇಧಿಸಿ ಸತ್ಯಾಗ್ರಹ ಹೂಡಿದಾಗ, ಅದರಲ್ಲಿ ಭಾಗವಹಿಸಲು ಮುಂದಾದ ದೇಶದ ಕೆಲವೇ ಮಂದಿಗಳ ಪೈಕಿ ದಕ್ಷಿಣ ಕನ್ನಡಿಗರಾದ ದಿವಂಗತ ದೇಶಭಕ್ತ ಕಾರ್ನಾಡು ಸದಾಶಿವ ರಾಯರೊಬ್ಬರು. ಆ ಮೇಲೆ ಗಾಂಧಿಜಿಯ 1920ರ ಅಸಹಕಾರ, ನಾಗಪುರ ಧ್ವಜ ಸತ್ಯಾಗ್ರಹ, 1930ರ ಉಪ್ಪಿನ ಸತ್ಯಾಗ್ರಹ, 1941ರ ವೈಯಕ್ತಿಕ ಸತ್ಯಾಗ್ರಹ ಮತ್ತು 1942ರ ಕ್ವಿಟ್ ಇಂಡಿಯಾ ಮಹಾ ಸಮರಗಳಲ್ಲೆಲ್ಲ ಗಣನೀಯ ಭಾಗ ವಹಿಸಿದ್ದಾರೆ ದಕ್ಷಿಣ ಕನ್ನಡಿಗರು. ಕಾಂಗ್ರೆಸ್ ಜಿಲ್ಲೆಯೆಂದು ಪ್ರಖ್ಯಾತಿ ಪಡೆದಿದ್ದಿತು ದ. ಕ. ಜಿಲ್ಲೆ.

ಆದರೆ ಇಂದಿನ ಪರಿಸ್ಥಿತಿಯಾದರೂ ಏನು? ದಕ್ಷಿಣ ಕನ್ನಡವು ಇಡೀ ಹಿಂದುಸ್ಥಾನದಲ್ಲೆ ಆರ್. ಎಸ್. ಎಸ್. ನ ಅತಿ ದೊಡ್ಡ ಕೇಂದ್ರ. ಕೆನರಾ ಹೈಸ್ಕೂಲೇ ಆರ್. ಎಸ್. ಎಸ್, ಮಹದಾಶಯರಂಗ. ಆಗೋಸ್ತು ಹದಿನೈದು ಕಪ್ಪು ದಿನವಾಗಿ ಆಚರಿಸಲ್ಪಟ್ಟು, ಕರಿ ಪತಾಕೆ ಏರಿಸಲ್ಪಟ್ಟಿದ್ದಿತು ಕೆನರಾ ಹೈಸ್ಕೂಲಿನ ಕೆನರಾ ಹೋಸ್ಟೆಲಿನಲ್ಲಿ. ಆ ದಿನ 'ದುಃಖದ ಗಂಜಿ' ಉಂಡಿದ್ದಾರೆ ಜಿಲ್ಲೆಯ ಆರ್. ಎಸ್. ಎಸ್. ಮುಖಂಡರು. ಗಾಂಧಿಜಿಯ ಕೊಲೆ ಪಾತಕಿ ನಾಥೂರಾಮ ಗೋಡ್ಸೆಯೇ ದಕ್ಷಿಣ ಕನ್ನಡಕ್ಕೆ ಬಂದು ಉದಾರಾಶ್ರಯ ಪಡೆದು ಹಣ ಕೂಡಾ ಸಂಗ್ರಹಿಸಿಕೊಂಡು ಹೋಗಿರುವನೆಂದು ಸುದ್ದಿ ಹಬ್ಬಿದ್ದು ಅದನ್ನು ಈ ವರೆಗೆ ಯಾರೂ ಅಲ್ಲಗಳೆದಿಲ್ಲ. ಅವನ ಗೆಳೆಯ ಯಾದರಾವ್ ಜೋಶಿಗೆ ದಕ್ಷಿಣ ಕನ್ನಡವೆಂದರೆ ಅತ್ತೆಮನೆಯಂತೆ!

ನವಭಾರತ ಲೇಖಮಾಲೆ

ಗಾಂಧಿಜಿಯ ಕೊಲೆಯಾಗುವ ಸ್ವಲ್ಪ ಸಮಯದ ಮೊದಲು, ಗಾಂಧಿಜಿಯ ಜನಾಂಗ ನಾಶಕ ಧೋರಣೆಯನ್ನು ಕಾಂಗ್ರೆಸು ಅನುಸರಿಸಿ ದೇಶಕ್ಕೆ ಹಾನಿ ಮಾಡುತ್ತಿರುವುದೆಂಬರ್ಥದ ಅಗ್ರ ಲೇಖನವೊಂದು ಸಿ. ಪಿ. ಸಿ.ಯ ಶ್ರೀ. ವಿ. ಎಸ್. ಕುಡುವರ ನವಭಾರತದಲ್ಲಿ ಪ್ರಕಟವಾಗಿದ್ದಿತು. ಆ ಮೇಲೆ 'ವಿಜಯ'ವೆಂಬ ಗುಪ್ತನಾಮದಿಂದ ಎರಡು ಮುಖ್ಯ ಲೇಖಗಳು ಬಂದುವು. ಮದ್ರಾಸಿನ ವಕೀಲ ಶ್ರೀ ಸಂಜೀವ ಕಾಮತರು, ಆರ್. ಎಸ್. ಎಸ್ನ್ನು ಹಿಂದೂ ಸ್ಕೌಟ್ ಚಳವಳವೆಂದು ತಿಳಿದುದು ತಪ್ಪು. ಆರ್. ಎಸ್. ಎಸ್.ನವರು ರಾಜಕೀಯ ಪಕ್ಷವಾಗಿ ಸಂಘಟಿತರಾಗಿ ಅಧಿಕಾರವನ್ನು ವಶಪಡಿಸಿಕೊಳ್ಳಬೇಕು. ಗಾಂಧಿಜಿಯು ಒಂದಲ್ಲ, ಹಲವು ಹಿಮಾಲಯದಂತಹ ತಪ್ಪು ಮಾಡಿರುತ್ತಾರೆ. ಪಂಡಿತ ನೆಹರುರವರು, ಆದರ್ಶವಾದಿ ಭಾವೋದ್ವೇಗಪರ ನಾಯಕ. ಗಾಂಧಿಜಿಯರ ತತ್ವಾನುಕರಣೆ ಮತ್ತು ಪಂಡಿತರ ಆಡಳಿತ ಧೋರಣೆಯಿಂದ ಹಿಂದು ಜನಾಂಗಕ್ಕೆ ಗಂಡಾಂತರವಿದೆಯೆಂಬುದೇ ಈ ಲೇಖಗಳ ಮಥಿತಾರ್ಥ.

ಗಾಂಧಿಜಿಯು ಕೊಲ್ಲಲ್ಪಟ್ಟ ಮರುದಿನವೇ ಎಂಬಂತೆ, 'ಸತ್ಯ, ಅಹಿಂಸೆ, ತ್ಯಾಗ" ಎಂಬ ದೊಡ್ಡ ತಲೆಬರೆಹದಿಂದ ಗಾಂಧಿಜಿಯ ತತ್ವ ಮತ್ತು ರೀತಿ ನೀತಿಗಳನ್ನು ಮನಸೋಚ್ಛೆ ಖಂಡಿಸಿ ಹಿಂದೀ ರಾಷ್ಟ್ರೀಯ ಸರಕಾರದ ಆಡಳಿತ ಧೋರಣೆಯನ್ನು ಟೀಕಿಸಿ, ಗಾಂಧಿಜಿಯ ಅಹಿಂಸೆಯ ಮೇಲಿನ ಕುರುಡು ವಿಶ್ವಾಸವೇ ಅವರನ್ನು ಕೊಂದಿತು; ಅದನ್ನನುಸರಿಸಿದರೆ ಮುಂದೆ ನಾವು ದೇಶವನ್ನೂ ಕಳಕೊಳ್ಳಲಿರುವೆವೆಂದು ಎಚ್ಚರವೀಯಲೆಡೆಗೊಂಡಿದ್ದಾರೆ. ಶ್ರೀಮಾನ್ ವಿ. ಎಸ್. ಕುಡುವರು ಹಿಂದುಧರ್ಮನೀತಿ, ಸಭ್ಯತೆ ಮತ್ತು ಇತಿಹಾಸಪರಂಪರೆಗೇನೇ ಬಾಹಿರವಾಗಿರುವ, ಗಾಂಧಿಜಿಯ ಕೊಲೆಗೆ ಕಾರಣವಾದ ಒಳಸಂಚನ್ನು—ನಮಸ್ಕರಿಸಿ ಕಾಲುಹಿಡಿಯಹೋಗಿ ಪಿಸ್ತೂಲು ಹಾರಿಸಿಕೊಲ್ಲುವ ವಿದ್ರೋಹವನ್ನು-ಖಂಡಿಸಿ ಒಂದು ಮಾತನ್ನಾದರೂ ಬರೆಯದ ಶ್ರೀ ವಿ. ಎಸ್. ಕುಡುವರು ಆರ್. ಎಸ್. ಎಸ್ಸಿನವರನ್ನು ಸಿಕ್ಕಾಬಟ್ಟೆ ಕೈದು ಮಾಡಿದ ಕುರಿತು ಟೀಕೆಗಳನ್ನು ಪ್ರಕಟಿಸಲು ಮುಂದಾಗುತ್ತಾರೆ.

ಆರ್. ಎಸ್. ಎಸ್. ಪ್ಲೇಗಿನಿಂದ ಸಂಪೂರ್ಣ ಮುಕ್ತವಾಗಬೇಕು.

ದಕ್ಷಿಣ ಕನ್ನಡದ ಸಾರ್ವಜನಿಕ ಜೀವನವು ಎಷ್ಟೊಂದು ಕೆಳಮಟ್ಟಕ್ಕಿಳಿದು ಕೆಟ್ಟುಹೋಗಿದೆ; ಅದರಲ್ಲಿ ಎಂತಹ ಕಪಟನಾಟಕಗಳೆಲ್ಲ ನಡೆಯುತ್ತಿವೆ! ಕಾಂಗ್ರೆಸಿಗರು ಈ ಸಂದರ್ಭ ಸಾಧಕತೆಯನ್ನೆದುರಿಸಲು ಅಶಕ್ತರಾಗಿ ಹೇಗೆ ಮೂಲೆಗುಂಪಾಗಿ ಬೆಂದು ಬೇಗುದಿಗೊಳ್ಳುತ್ತಿದ್ದಾರೆಂಬುದನ್ನೆಲ್ಲ ಬರೆಯಲು ಇದು ಸಂದರ್ಭವಲ್ಲ. ಆದರೆ, ನಮ್ಮ ಜಿಲ್ಲೆಯಲ್ಲಿ ಇತ್ತೀಚೆಗೆ ಪ್ಲೇಗಿನಂತೆ ಹಬ್ಬಿರುವ ಆರ್. ಎಸ್. ಎಸ್. ಸಂಘದ ಉಗ್ರ, ಸಂಕುಚಿತ ಹಾಗೂ ಅಂಧ ಹಿಂದು ಮನೋಭಾವವು, ನಮ್ಮ ಜಿಲ್ಲೆಯ ಜನಸಾಮಾನ್ಯರ ಸ್ವಭಾವ, ಮನೋವೃತ್ತಿ ಮತ್ತು ಸಂಪ್ರದಾಯ ಸಹಜವಾಗಿ ಬೆಳೆದು ಬಲಗೊಂಡುದಲ್ಲ; ಜಿಲ್ಲೆಯ ಹೊರಗಿನ ಮಹಾರಾಷ್ಟ್ರದಿಂದ ಆಮದಾಗಿ ಅದು ಬಂದುದೆಂದು ಸ್ಪಷ್ಟವಾಗಿ ಹೇಳಲೇ ಬೇಕಾಗಿದೆ. ಇನ್ನಾದರೂ ತಮ್ಮ ಪ್ರತ್ಯೇಕತೆಯ ಭಾವನೆಯನ್ನು ಬಿಡಲು ಮನಸ್ಸಿಲ್ಲದೆ, ತಮ್ಮ ಪ

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:—ಧಾರವಾಡ,

ಪೋಸ್ಟು ಬಾಕ್ಸ ನಂಬ್ರ 10, ಉಡುಪಿ, THE UNITED KARNATAK INSURANCE COMPANY, LIMITED.

ಭಾವ ಮತ್ತು ಕ್ರೌರ್ಯತೆಯನ್ನು ಈ ಜಿಲ್ಲೆಯಲ್ಲಿ ನೆಲೆಗೊಳಿಸಬೇಕೆಂದು ಹಾತೊರೆಯುವ, ಮಹಾರಾಷ್ಟ್ರದ ನಾಯಕತ್ವದ ಮೋಹಾಂಧರಾಗಿರುವ ಕೆಲ ಮುಂದಿಯೇ ತಮ್ಮ ಸಂಕುಚಿತ ಸ್ವಾರ್ಥಸಾಧನೆಗಾಗಿ ಈ ವಿಷಬೀಜವನ್ನು ಜಿಲ್ಲೆಗೆ ತಂದು ಬಿತ್ತಿದವರೆಂದರೆ ತಪ್ಪಾಗಲಾರದು. ಈ ಪ್ಲೇಗಿನ ಹಾವಳಿಯಿಂದ ನಮ್ಮ ಜಿಲ್ಲೆಯನ್ನು ಸಂಪೂರ್ಣ ವಿಮುಕ್ತಗೊಳಿಸುವುದು ನಮ್ಮೆಲ್ಲರ ಮೊದಲಿನ ಕರ್ತವ್ಯ. ಹೊರಗಿನ ಅಂಟುರೋಗವಾದ ಈ ಆರ್. ಎಸ್. ಎಸ್.ಗೆ ಜಿಲ್ಲೆಯ ಜನರು ಇನ್ನು ಮುಂದೆ ಲವಲೇಶವಾದರೂ ಇಂಬುಗೊಡಬಾರದು. 'ಆ ಮನೋವೃತ್ತಿಯನ್ನು ಕಂಡ ಕಂಡಲ್ಲಿ ಅಣಗಿಸಿ ನಿರ್ಮೂಲಗೊಳಿಸುವ, ಅದಕ್ಕೆ ಒಳಗಿಂದೊಳಗೆ ಆಶ್ರಯ ಕೊಟ್ಟವರು ಮತ್ತು ಕೊಡುತ್ತಿರುವವರನ್ನು ಸಮಾಜದ್ರೋಹಿಗಳಾಗಿ ಬಗೆದು ಅವರೊಡನೆ ಯಾವ ವ್ಯವಹಾರವನ್ನೂ ಮಾಡದೆ ದೂರೀಕರಿಸುವ ಧೀಮಂತ ನಿರ್ಧಾರ ಮಾಡುವಷ್ಟು ಗಂಭೀರತೆ ಮತ್ತು ನಿಷ್ಠುರತೆ ವಹಿಸಬೇಕು ಜಿಲ್ಲೆಯ ಜನರಿಂದು. ಯಾಕೆಂದರೆ ಅಷ್ಟೊಂದು ಘೋರವಾಗಿ ನಮ್ಮ ಜಿಲ್ಲೆಯ ಜನಜೀವನವನ್ನು ಕ್ಷಯಕೀಟದಂತೆ ಕೊರೆದು ತಿಂದು ಪ್ರಭಾವ ಪಡೆದು ಬೆಳೆದಿದೆ ನಮ್ಮ ಜಿಲ್ಲೆಯಲ್ಲಿ ಆರ್. ಎಸ್. ಎಸ್! ಗಾಂಧಿಜಿಯ ರಕ್ತಸಾಕ್ಷಿಯಾಗಿ ಈ ಪ್ರತಿಜ್ಞೆ ಮಾಡಬೇಕೆಂದು ನಾವು.

ಗಾಂಧಿಜಿಯ ರಕ್ತದ ಕರೆ!

ಗಾಂಧಿಜಿಯ ತತ್ವದಂತೆ ನಡೆದು ಅವರ ಸದ್ಬೋಧೆಗಳನ್ನು ಕಾರ್ಯರೂಪಕ್ಕೆ ತರುವುದೇ ಅವರಿಗೆ ನಾವು ಸಲ್ಲಿಸುವ ಅತಿ ದೊಡ್ಡ ಸೇವೆ. ಇಂದೀಗ ಜಿಲ್ಲೆಯ ಕಾಂಗ್ರೆಸಿಗರ ಮೇಲೆ ಅತಿದೊಡ್ಡ ಹೊಣೆಯಿದೆ. ಅವರು ಆತ್ಮಶೋಧನೆಮಾಡಿಕೊಂಡು ತಮ್ಮ ದೌರ್ಬಲ್ಯ, ಆಸಕ್ತಿ, ಮತ್ತು ವೈಮನಸ್ಸುಗಳನ್ನೆಲ್ಲ ಮೂಲೆಗೊತ್ತಿ, ಸಂಕುಚಿತ ವೈಯಕ್ತಿಕತೆ ಮತ್ತು ಜಾತೀಯತೆಯನ್ನೂ ಪ್ರತಿಭಟಿಸಿ, ಜಿಲ್ಲೆಯ ಸಾರ್ವಜನಿಕ ಜೀವನವನ್ನು ಶುದ್ಧೀಕರಿಸುವ ಪಣತೊಟ್ಟು ಒಕ್ಕಟ್ಟಿನಿಂದ ಕಾರ್ಯನಿರತರಾಗಬೇಕು. ಸಂಕುಚಿತ ಹಿಂದು ಮನೋವೃತ್ತಿಯು ನಮ್ಮಲ್ಲಿ ಹಲವರಲ್ಲಿ ಜ್ಞಾತವಾಗಿಯೂ ಅಜ್ಞಾತವಾಗಿಯೂ ರಕ್ತಗತವಾಗಿರುವುದು.

ಮುಸಲ್ಮಾನರು ದ್ವಿಜನಾಂಗ ಮನೋವೃತ್ತಿ ಮತ್ತು ಹಿಂದುದ್ವೇಷ ಭಾವ ಬೆಳಸಿ ಇಸ್ಲಾಮಿಗೆ ಗಂಡಾಂತರದ ಕೂಗೆಬ್ಬಿಸಿ ದೇಶಕ್ಕೆ ಅತಿದೊಡ್ಡ ಹಾನಿ ಮಾಡಿದವರೆಂಬುದೇನೋ ನಿಜ. ಆದರೆ ಅದು ತಪ್ಪೆಂದು ನಿಷೇಧಿಸುವ ಕಾಂಗ್ರೆಸಿಗರಾಗಲಿ, ಹಿಂದುಗಳಾಗಲಿ, ಆ ತಪ್ಪನ್ನೇ ತಾವು ಮಾಡಿದರೆ ಒಪ್ಪಿಗುವುದು ಹೇಗೆ? ಒಂದು ತಪ್ಪನ್ನು ಇನ್ನೊಂದು ತಪ್ಪಿನಿಂದ ಅಣಗಿಸಲಾಗುವುದೇ? ಗಾಂಧಿಜಿಯವರು, ಪ್ರಾಣ ಬಲಿದಾನವಿತ್ತು, ದೇಶವನ್ನು ದೊಡ್ಡ ಪ್ರತಿಕ್ರಾಂತಿಯಿಂದ ಉಳಿಸಿದರು. ಮುಸ್ಲಿಮ್ ಮತ್ತು ಹಿಂದು ಫೇಸಿಸ್ಮಿನ ಭಯಂಕರ ಧಾಳಿಯಿಂದ ಹಿಂದೀ ಸ್ವಾತಂತ್ರ್ಯವನ್ನು ಪಾರುಮಾಡಿದರು. ಆರ್. ಎಸ್. ಎಸ್ಸಿನ ಒಳಸಂಚಿನ ಕಾಟಕೂಟಕ್ಕೆ ತಾನೊಬ್ಬನೇ ಬಲಿಯಾಗಿ, ನೂರಾರು ಮಂದಿ ರಾಷ್ಟ್ರ ಮುಖಂಡರನ್ನು ಮತ್ತು ಕಾಂಗ್ರೆಸಿಗರನ್ನು ಬದುಕಿಸಿದರು. ಇನ್ನಾದರೂ ನಾವು ಜನಸಾಮಾನ್ಯ ಹಿತವಿಘಾತುಕ ಸಂಕುಚಿತ ಸ್ವಾರ್ಥ ಸಾಧನ ಶಕ್ತಿಗಳನ್ನೆಲ್ಲ ನಿರ್ದಾಕ್ಷಿಣ್ಯವಾಗಿ ನಿರ್ಭಯವಾಗಿ ಪ್ರತಿಭಟಿಸಿ, ಜನತೆಯ ನಿಜವಾದ ಹಿತಸಾಧನೆಗೆ ಸೊಂಟಕಟ್ಟಬೇಕು. ಯಾವ ತರದ ಜಾತೀಯತೆಯ ವಿಷಕೀಟಕ್ಕೂ ಬಂದಿಷ್ಟಾದರೂ ಇಂಬುಗೊಡದೆ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಉಜ್ವಲವಾಗಿ ಉದಾತ್ತವಾಗಿರಿಸಿಕೊಂಡು, ಗಾಂಧಿಜಿಯ ಕಲ್ಪನೆಯ ರಾಮರಾಜ್ಯದ ತಳಹದಿಯಲ್ಲಿ ನವಭಾರತವನ್ನು ನಿರ್ಮಾಣ ಮಾಡುವ ಪ್ರತಿಜ್ಞಾಬದ್ಧರಾಗಬೇಕು. ಗಾಂಧಿ ಪರಂಪರೆಯವರಾದ ನಾವೆಲ್ಲ ಗಾಂಧಿ ಮನ್ವಂತರ ನಿರ್ಮಾಣಕರಾಗಿ ಅವರ ಋಣಭಾರವನ್ನು ಶಕ್ತ್ಯನುಸಾರ ಸಲ್ಲಿಸುವ. ಇದೇ ನಮಗೆ ಗಾಂಧಿಜಿಯವರ ಕರೆ.

ಕೆ. ಕೆ. ಶೆಟ್ಟಿ,
ಕಾರ್ಯದರ್ಶಿ,
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

NOTICE.

In the Court of the District Munsif of Puttur.

O. P. No. 13 of 1948.

1. Krishna Sampigethaya, son of Vasudeva Sampigethaya residing at Machina village of Puttur Taluk Post Madanthyaru, South Kanara District

2. Radamma, wife of Narayana Belaminnaya and daughter of Shankaradas Sampigethaya, residing in Ujre village, Puttur Taluk, Post Ujre, South Kanara District—Petitioners.

Notice is hereby given to all concerned that the above petitioners have applied to this court for issue of a succession certificate in favour of the 1st petitioner empowering him to collect the outstandings due to the estate of deceased Narayana Sampigethaya and Shankar. das Sampigethaya from the South Kanara Central Co-operative Wholesale Stores Ltd., No. L. 412, Mangalore S. K. i. e. about Rs. 621—0—0 and the said petition stands posted to 15-3-1948 for hearing.

(By order of Court).

(Sd). **P. Krishna Bhat,**
Vakil for Petitioner,
Puttur, S. K, 21-2-48.

The 1946 Record Business proves the popularity
THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for, arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India.
Bombay Life Building,
Central Office, Udipi.

Branches at:
Mangalore, Calicut, Trivandrum, Madura, Madras, Bangalore & Bombay,

ದಿ ಕೆನರಾ ಬ್ಯಾಂಕ್, ಲಿಮಿಟೆಡ್.
ಸ್ಥಾಪಿತ: ೧೯೦೬
[ಜವಾಬ್ದಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]
ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
೪ ರಿಂದ ೫ ತಿಂಗಳು ,, ,, ೨॥
೬ ರಿಂದ ೯ ತಿಂಗಳು ,, ,, ೨॥।

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.
ESTD: 1906.

ನಾರ್ದನ್
1946ರಲ್ಲಿ ಹೊಸ ದಾಖಲೆಯ ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ ... ... ರೂ. 2,04,00,000
ಪೂರ್ಣಗೊಳಿಸಲ್ಪಟ್ಟ ವ್ಯವಹಾರ ... ... ರೂ. 1,72,00,000

ನಾರ್ದನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಚ್ಚ ಸಾಹಸ.

ಇಂತಹ ದಾಖಲೆಗೆ ಸಂ... [illegible] ರಾಷ್ಟ್ರಗಳ ಪೊಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ಠಾಕರ್ — ಮೆನೇಜಿಂಗ್ ಡೈರೆಕ್ಟರ್,
ಎಮ್. ಸುಂದರರಾಮ ಶೆಟ್ಟಿ — ಏಜನ್ಸಿ ಮೆನೇಜರ್.

ಮಂಗಳೂರು ಶಾಖೆ.
ಕೆ. ಪಿ. ಭವಾನಿಶಂಕರ ಶೆಟ್ಟಿ
ಬ್ರಾಂಚ್ ಸೆಕ್ರೆಟರಿ.

The Vijaya Bank Limited.

All our good wishes for a happy and prosperous new year.

Season deposits are now accepted at the Head Office and Branches of the Bank in sums of Rs 1000/- and over, in multiples of Rs. 500/- at the following rates:-

For 3 months at 2¼% per annum.
For 6 months at 3¼% per annum.

For further particulars you may apply or call at any of our following Offices

Branches: Kadri-Road, Mangalore, City-Mangalore, Udipi. Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

★ ಜೈಪ್ರಕಾಶರ ವಾದ ಸರಿಯೆ? ★

ಮಹಾತ್ಮಾಜೀಯ ಕೊಲೆಯಾದೊಡನೆ, ದುಃಖ ಸೂಚನೆಯೊಂದಿಗೆ ಸುಧಾರಣಾ ಸೂಚನೆ ಕೊಡಲು ಎದಗೊಂಡ ಭಾರತ ಪ್ರಮುಖನೆಂದರೆ ಸಮತಾವಾದೀ ಪಕ್ಷದ ನಾಯಕ ಶ್ರೀ ಜೈಪ್ರಕಾಶ್ ನಾರಾಯಣರು. "ಗೃಹ—ಸಂಸ್ಥಾನ ಸಂಬಂಧ-ಸುದ್ದಿ ಖಾತೆಯಂತಹ ಮೂರು ಮುಖ್ಯ ಖಾತೆಗಳನ್ನು ಸರ್ದಾರ್ ಪಟೇಲರಂತಹ ಒಬ್ಬನೇ ಮುದುಕನ ಕೈಗೆ ಕೊಡುವ ಬದಲಿಗೆ ಗೃಹಖಾತೆಯನ್ನು ಅವರ ಕೈಯಿಂದ ಸಮರ್ಥ ಜವ್ವನಿಗ ಮುಂದಾಳಿನ ಕೈಗೆ ವರ್ಗಾಯಿಸುವುದು ವಿಹಿತ" ಎಂಬುದು ಶ್ರೀ ಜೆ. ಪಿ. ನಾರಾಯಣರ ಸೂಚನೆ. ಗಾಂಧಿಜೀಯ ನಿಧನದ ಬೆನ್ನಲ್ಲೇ ಶ್ರೀ ನಾರಾಯಣರು ಸಿಡಿಯಿಸಿದ ಈ ಬಾಂಬು ಬಹುಸಂಖ್ಯಾಕರ ದೃಷ್ಟಿಯಲ್ಲಿ ಅವರನ್ನೊಂದಿಂಚು ಕೆಳ ಮಟ್ಟಕ್ಕಿಳಿಸಿದಂತಿದೆ.

ಶ್ರೀ. ನಾರಾಯಣರ ಸ್ಪಷ್ಟೀಕರಣ

ಫೆಬ್ರವರಿ ತಾ 27ರಲ್ಲಿ ಬೊಂಬಾಯಿಯಲ್ಲಿ ಸಾರ್ವಜನಿಕ ಭಾಷಣವೀಯುತ್ತಾ ಜೈ ಪ್ರಕಾಶ್ ನಾರಾಯಣರು ಹಿಂದೀ ಮಂತ್ರಿಮಂಡಲದಿಂದ ತೆಗೆದು ಹಾಕಬೇಕಾದ ಮಂತ್ರಿಗಳ ಹೆಸರೆತ್ತಿಹೇಳಿ ತನ್ನ ಅಭಿಪ್ರಾಯವನ್ನು ಇನ್ನಷ್ಟು ಸ್ಪಷ್ಟಪಡಿಸಿದ್ದಾರೆ: "ಜಾತೀಯ ಸಂಸ್ಥೆಗಳ ಸಂಬಂಧವಿರುವ, ಅಥವಾ ಬ್ರಿಟಿಷ್ ಸಾಮ್ರಾಜ್ಯವಾದದ ಪಕ್ಷಪಾತಿಗಳಾಗಿರುವ ಕೆಲವುಮಂತ್ರಿಗಳನ್ನು ಕೇಂದ್ರಸರಕಾರದಿಂದ ಕಿತ್ತುಹಾಕಬೇಕು. ಅವರೆಂದರೆ ಹಿಂದೂ ಮಹಾ ಸಭೆಯ ಡಾ| ಶ್ಯಾಮ ಪ್ರಸಾದ ಮುಖರ್ಜಿ, ಅಕಾಲೀ ದಳದ ಸರ್ದಾರ ಬಲದೇವಸಿಂಗ್, ಮೊದಲು ಬ್ರಿಟಿಷ್ ಜೋಹುಕುಂವಾಲನಾಗಿದ್ದ ಶ್ರೀ ಷಣ್ಮುಗಂಚೆಟ್ಟಿ, ಮತ್ತು ಓರ್ವ ಭಂಡವಾಳಗಾರನಾಗಿರುವ ಶ್ರೀ. ಸಿ. ಯಚ್ ಬಾಬಾ. ಸ್ವಾತಂತ್ರ್ಯ ಸಾಧನೆಗಾಗಿ ಮಿಲಿಯಾವಧಿ ಭಾರತೀಯರು ತ್ಯಾಗ ಮಾಡಿದುದು ಇಷ್ಟಕ್ಕಾಗಿಯೇ ಏನು? ಇವರ ಅನುಭವಗಳು ಬೇಕಾಗಿರುವವೆಂಬ ವಾದವು ಮುಂದೆ ಬರುತ್ತಿದೆ. ಇದೊಂದೇ ಕಾರಣವಾಗಿದ್ದರೆ, ಅವರನ್ನು ಸಲಹೆಗಾರರಾಗಿ ಇಟ್ಟು ಅಭಿಮತ ಪಡೆಯಬಹುದು. ನಾನು ಸರ್ದಾರ್ ಪಟೇಲರನ್ನು ಮಂತ್ರಿ ಮಂಡಲದಿಂದಲೇ ಕಿತ್ತು ಹಾಕಬೇಕೆಂದು ಎಂದೂ ಹೇಳಲಿಲ್ಲ. ಗೃಹ, ಸಂಸ್ಥಾನ ಮತ್ತು ಸುದ್ದಿ ಖಾತೆಯಂತಹ ಮೂರು ಮುಖ್ಯ ಖಾತೆಗಳನ್ನು ಒಬ್ಬನ ಕೈಯಲ್ಲೇ ಇರಗೊಡಿಸಕೂಡದೆಂಬುದೇ ನನ್ನ ವಾದ, ಏನು, ಒಬ್ಬನೇ ಮುಖ್ಯ ಮೂರು ಖಾತೆಗಳನ್ನು ಹಿಡಿದುಕೊಳ್ಳಬೇಕಾದರೆ ಭಾರತದಲ್ಲಿ ಬೇರೆ ಸಾಕಷ್ಟು ಜನರಿಲ್ಲವೆಂದೇ? ಸರ್ವಾಧಿಕಾರವಾಗಿ ಪರಿಣಮಿಸುವಂತಹ ಅಧಿಕಾರವನ್ನೇ ಸರ್ದಾರರು ಪಟೇಲರು ಬಯಸಿದ್ದಾರೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮಹಾತ್ಮಾ ಗಾಂಧಿಯವರ ಮರಣದ ಕುರಿತೂ, ಅವರ ರಕ್ಷಣಾ ವ್ಯವಸ್ಥೆಯನ್ನು ಸರಿಯಾಗಿ ಮಾಡದಿರುವ ಕುರಿತೂ ಸರಕಾರವು ಕುಂಟುನೆವಗಳನ್ನು ಮುಂದೊಡ್ಡಿದೆ. ಜನವರಿ 20ರಲ್ಲಿ ಪ್ರಾರ್ಥನಾ ಸಭೆಯಲ್ಲಿ ಬಾಂಬೊಗೆಯಲ್ಪಟ್ಟದ್ದು ಕಣ್ಣನ್ನು ತೆರೆಯಿಸುವ ಘಟನೆಯಾಗಿದ್ದರೂ ಸರಕಾರವು ಸಾಕಷ್ಟು ಮುಂಜಾಗ್ರತೆ ವಹಿಸಲಿಲ್ಲ. ಮಹಾತ್ಮಾ ಗಾಂಧಿಯವರು ಪೋಲೀಸ್ ರಕ್ಷಣೆ ಪಡೆಯುವದಕ್ಕೆ ವಿರುದ್ಧವಿದ್ದರೂ, ಅವರ ನವಖಾಲೀ ಸಂಚಾರದ ವೇಳೆ ಆಗಿನ ಮಂತ್ರಿ ಸುಹ್ರವರ್ದಿಗಳು ಮಾಡಿದ್ದಂತೆ ಅಗತ್ಯವುಳ್ಳ ಮುಂಜಾಗ್ರತೆ ವಹಿಸುವದು ಸರಕಾರದ ಆದ್ಯ ಕರ್ತವ್ಯವಿತ್ತು. ಮನು ಗಾಂಧಿಯ ಕೈಯ ಪುಸ್ತಕಗಳು ಕೆಳಗೆ ಬಿದ್ದು ಮೂರು ಗುಂಡುಗಳು ಹಾರಿಸಲ್ಪಡುವವರೆಗೂ ಆ ಸ್ಥಳದಲ್ಲಿ ಪೋಲೀಸರೇ ಇರಲಿಲ್ಲ. ಅಪರಾಧಿಯನ್ನು ಹಿಡಿದುಕೊಂಡುದು ಬಿರ್ಲಾ ಭವನದ ಓರ್ವ ತೋಟಗಾರ ಮತ್ತು ವಿಮಾನ ಪಡೆಯ ಒಬ್ಬ ಮನುಷ್ಯ. ಆರ್. ಯಸ್. ಯಸ್. ಮತ್ತು ಇತರ ಜಾತೀಯ ಸಂಸ್ಥೆಗಳನ್ನು ಮಹಾತ್ಮಾ ಗಾಂಧಿಯವರು 'ರಾಷ್ಟ್ರದ ಕಂಟಕ' ಎಂದು ಸಂಬೋಧಿಸಿದ್ದರೂ ಭಾರತ ಸರಕಾರದ ಕೆಲವು ಸದಸ್ಯರೇ ಅವುಗಳನ್ನು ಬಹಿರಂಗವಾಗಿ ಸಮರ್ಥಿಸುತಿದ್ದಾರೆ"

ಅಧಿಕಾರಾಕಾಂಕ್ಷೆಯಲ್ಲ—

ಬಂಧು ಜೈಪ್ರಕಾಶರು ಭಾವೀ ಭಾರತದ 'ನೇತಾ' ಅನ್ನಿಸುವ ಯೋಗ್ಯತೆಯ ಜನ. ಮೇಲ್ಗಡೆ ನಮೂದಿಸಿರುವ ಅವರ ವಾದದ ಮೇಲಿಂದ— ಶುದ್ಧ ರಾಷ್ಟ್ರೀಯತಾವಾದಿಗಳಾಗಿರದ ನಾಲ್ಕು ಮಂದಿ ಮಂತ್ರಿಗಳನ್ನು ತೆಗೆದು ಹಾಕಿ, ನಾಲ್ವರು ಸಮತಾವಾದಿ ನಾಯಕರನ್ನು ಆ ಸ್ಥಾನಗಳಿಗೇರಿಸಿಕೊಂಡು, ಸರ್ದಾರ್ ಪಟೇಲರ ಕೈಯಲ್ಲಿರುವ ಗೃಹಖಾತೆಯನ್ನು ತನ್ನ ಕೈಗೀಯುವುದನ್ನು ಅವರಾಶಿಸುತಿದ್ದಾರೆ, ಎಂದು ಸ್ಪಷ್ಟಾರ್ಥವಾಗುತ್ತದೆ. ಸಮತಾವಾದಿಗಳದ್ವೇಷಕರು ಇದನ್ನೇ 'ಅಧಿಕಾರ ಲಾಲಸೆ'ಯೆಂದು ಕುರೂಪಗೊಳಿಸಿ ಚಿತ್ರಿಸುತಿದ್ದಾರೆ. ನಿಜಕ್ಕೂ ರಾಷ್ಟ್ರಹಿತ ದೃಷ್ಟಿಯಿಂದ ಅಂತಹ ಜವಾಬ್ದಾರಿ ಹೊರಲು ಶ್ರೀ ಜೈಪ್ರಕಾಶರು ಸಿದ್ಧರಿದ್ದಾರಾದರೂ, ಅಧಿಕಾರಿಯಾಗುವದಕ್ಕಾಗಿ ಅವರೆಂದೂ ಆ ಸ್ಥಾನವನ್ನು ಅಪೇಕ್ಷಿಸುವವರಲ್ಲ. ಮಹಾಸಭೆಯ ಡಾ| ಮುಖರ್ಜಿಯವರನ್ನು ಕೂಡಿಕೊಂಡುದಕ್ಕಿಂತ ಹೆಚ್ಚಿನ ಆತುರವು' ಸಮತಾವಾದಿ ಪಕ್ಷದ ಶ್ರೀ ಜೈ ಪ್ರಕಾಶರನ್ನು ತನ್ನ ಮಂತ್ರಿಮಂಡಲದಲ್ಲಿಸೇರಿಸಿಕೊಳ್ಳುವದರಲ್ಲಿ ಪಂಡಿತ ನೆಹರುಗಳಿಗಿದ್ದಿತು. ಆದರೆ ತನ್ನ ಧೋರಣೆಯಾದ ಸಮತಾವಾದವನ್ನು ಶಕ್ಯವಿದ್ದಷ್ಟಾದರೂ ಚಲಾಯಿಸಲಾಗುವಷ್ಟು ಬಹುಮತ ಅಥವಾ ಅಧಿಕಾರವಿಲ್ಲದ ಮಂಡಲಿಯಲ್ಲಿ ಸೇರಿಕೊಂಡು, ಜನತಾಸೇವೆಯ ತನ್ನ ಕೈಬಾಯಿ ಕಟ್ಟಿಸಿಕೊಳ್ಳಲು ಜೈಪ್ರಕಾಶರೇ ಆಗ ತಯಾರಿರಲಿಲ್ಲ. ಗಾಂಧಿಜೀಯ ಕೊಲೆಗೆ ಕಾರಣವಾದ ಉಗ್ರ ಜಾತೀಯತೆಗೆ ಸರ್ದಾರ್ ವಲ್ಲಭಾಯಿಗಳ ಗೃಹಾಡಳಿತೆಯು ಅವಕಾಶ ಕೊಟ್ಟಿತೆಂದು ಶ್ರೀ. ಜೈ ಪ್ರಕಾಶರಲ್ಲಿ ಸಹಜ ಕ್ರೋಧವಿದೆ. ಇದೇನೂ ಪೂರ್ತಿಸುಳ್ಳಲ್ಲ. ಈ ರೀತಿ ರಾಷ್ಟ್ರದ ಹೃದಯವನ್ನೇ ಇರಿದೀತೆಂಬ ಕಲ್ಪನೆಯಿಲ್ಲದೆ, ಪಾಕಿಸ್ತಾನದ ಘೋಷಣೆಯ ವೇಳೆ ಭಾರತದೊಳಗಡೆಯ ಮುಸ್ಲಿಮರು ಪಂಚಮದಳವಾಗುವಾಗ ಆ ಕಂಟಕಗಳನ್ನು ಕರಿದೊಟ್ಟಲು ಬೇಕಾದೀತೆಂಬ ಆಶೆಯಿಂದ ಸರ್ದಾರ್ ಪಟೇಲರು ಆರ್. ಯಸ್. ಯಸ್. ನಂತಹ ಜಾತೀಯತಾ ಶಕ್ತಿಯೊಡನೆ ಸಲುಗೆಯಾಟವಾಡಿದ್ದರೆಂಬುದು ಖಂಡಿತ. ಹಿಂದಿನ ಬಾರಿಯ ಕಾಂಗ್ರೆಸ್ ಸಮಿತಿ ಸಭೆಯೇ ಜಾತೀಯ ದಳಗಳನ್ನು ದಮನಿಸಬೇಕೆಂದು ಠರಾಯಿಸಿದ್ದರೂ, ಬಾಪೂ ಕೊಲೆಯ ವರೆಗೂ ಅದನ್ನಾವ ಸರಕಾರವೂ ಅಮಲಿನಲ್ಲಿ ತಾರದಂತೆ ಮಾಡಿದ್ದವರೂ ಸರ್ದಾರ್ ಪಟೇಲರೇ ಎನ್ನಬಹುದು. ಆದ್ದರಿಂದ ಇಂದು ಮಹಾತ್ಮರ ಕೊಲೆಗಾಗಿ ಎಲ್ಲರಿಗಿತ ಹೆಚ್ಚಿಗೆ ಕರಗಬೇಕಾದವರು ವಲ್ಲಭಾಯಿಗಳು! ಇವರ ಕೈಕೆಳಗಿನ ಗೃಹಖಾತೆಯು ಗಾಂಧಿಜೀಯ ಪ್ರಾಣರಕ್ಷಣೆಯ ಮುಂಜಾಗ್ರತೆಯನ್ನು ಸಾಕಷ್ಟು ನಡಿಸಿಲ್ಲವೆಂಬುದಕ್ಕೆ ಶ್ರೀ ಜೈಪ್ರಕಾಶರು ಕೊಟ್ಟ ದೃಷ್ಟಾಂತವಾದರೂ ಪೂರ್ಣ ಟೊಳ್ಳಲ್ಲ. ಅಂದ ಮೇಲೆ ಈ ನಾಯಕನ ವಾದದಲ್ಲಿ ತಪ್ಪೇನು?

ಸಂದರ್ಭೋಚಿತವಲ್ಲ.

ನಿಜಕ್ಕೂ ಶ್ರೀ ಜೈಪ್ರಕಾಶರ ವಾದವು ಅಧಿಕಾರ ಲಾಲಸೆಯದೂ ಅಲ್ಲ, ಅನ್ಯಾಯವೂ ಅಲ್ಲ, ಆದರೆ ಅಪ್ರಾಸಂಗಿಕ. ಪೀಠದಿಂದ ಕೆಳಗಿಳಿಸಬೇಕೆಂದು ಅವರು ಹೆಸರೆತ್ತಿ ಹೇಳಿದ ನಾಲ್ವರು ಮಂತ್ರಿಗಳೂ ರಾಷ್ಟ್ರೀಯತೆ ಹಾಗೂ ಕಾಂಗ್ರೆಸ್ ತತ್ವದಿದಿರಲ್ಲಿ ತಪ್ಪುಗಾರರಿರಬಹುದು. ಆದರೆ ಇಂದಿನ ಕೇಂದ್ರ ಮಂತ್ರಿ ಮಂಡಲಿಯು ಸಂಪೂರ್ಣ ಕಾಂಗ್ರೆಸ್ ಮಂಡಲಿಯಾಗಿ ರಚನೆಗೊಂಡಿಲ್ಲ; ಅಷ್ಟೇ ಯಾಕೆ? ಇಂದಿನ ಕೇಂದ್ರ ಸರಕಾರವೇನು ಕ್ರಮಬದ್ಧ ಚುನಾವಣೆಯಾಗಿ ಬಂದಿರುವ ಸರಕಾರವೆ? ತಾತ್ಕಾಲಿಕ ವ್ಯವಸ್ಥೆಯಾಗಿ-ಕ್ರಮಬದ್ಧ ಪ್ರಜಾಪ್ರಭುತ್ವ ಸ್ಥಾಪನೆಯಾಗುವ ವರೆಗಿನ ಮಧ್ಯಾವಧಿಗೆ ಸೇತುವೇ ರೂಪದಿಂದ-ರಚನೆಗೊಂಡಿರುವ ಒಂದು ಸಮಿತಿಯಿದು. ಈಗ ನಮಗೆ ದೊರೆತಿರುವ ಸ್ವಾತಂತ್ರ್ಯ ಕೂಡಾ 'ಸ್ವಾತಂತ್ರ್ಯ ಸಾಧನೆಗಾಗಿ ತ್ಯಾಗಗಳನ್ನು ಮಾಡಿದ್ದ ಮಿಲಿಯಾವಧಿ ಭಾರತೀಯರು' ಅಪೇಕ್ಷಿಸಿರುವ ಮಾದರಿಯದೇ ಅಲ್ಲ; ಅಂತಹದರ ಅಧಿಕಾರ ಸ್ಥಾನದಲ್ಲಿರುವವರು ಕೂಡಾ ಈ ಮಿಲಿಯಾವಧಿ ಭಾರತೀಯರಿಂದ ಅಪೇಕ್ಷಿಸಲ್ಪಟ್ಟವರಲ್ಲವಾಗಿದ್ದರೆ, ಅಷ್ಟಕ್ಕಾಗಿ ಗಾಬರಿ ಪಡಬೇಕೆಂದಿಲ್ಲ. ಈ ಶುದ್ಧೀಕರಣ, ದೃಢೀಕರಣ ಕೆಲಸಗಳೆಲ್ಲಾ ಬಾಕಿಯಿವೆ. ಸದ್ಯಕ್ಕೆ ಗೊಂದಲಗಳ ಬಂಡೆಬಿರುಕಿನೊಳಗೆ ಸಿಕ್ಕಿಕೊಂಡಿರುವ ರಾಷ್ಟ್ರೀಯ ನಾವೆಯನ್ನು ಬಿಡಿಸಿ ಮುಂದಕ್ಕೊಯ್ಯುವ ಕೆಲಸವೊಂದೇ ಮುಖ್ಯ. ಈ ಸಾಹಸಕ್ಕಗತ್ಯವುಳ್ಳ ಜ್ಞಾನ, ಅನುಭವ, ಶಕ್ತಿ, ಯೋಗ್ಯತೆಗಳು ಯಾರಲ್ಲಿದ್ದರೂ ಬೇಕು—ಮುಖರ್ಜಿ, ಸಿಂಗ್, ಚೆಟ್ಟಿಯಾರ್, ಬಾಬಾ, ಇಂಥವರಲ್ಲಿದ್ದರೂ ಬೇಕು. ಸಮತಾವಾದದ ಸ್ಥಾಪನಾಯೋಗ್ಯತೆಯುಳ್ಳ ಶ್ರೀ ಜೈಪ್ರಕಾಶರು ತನ್ನ ಕಾಲ ಬರುವ ವರೆಗೆ ಕಾಯಬೇಕು—ಮನೆ ಸ್ವಚ್ಛಮಾಡುವವಳ ಕೆಲಸವಾಗಿಕೊಳ್ಳಲೆಂದು ಮನೆ ಶೃಂಗಾರ ಮಾಡುವವಳು ಕಾಯುವಂತೆ! ಗಾಂಧಿಜೀಯ ಕೊಲೆಯ ಕೃತ್ಯದಲ್ಲಿ ಗೃಹಖಾತೆಯ ದೌರ್ಬಲ್ಯಕ್ಕಿಂತ ಹೆಚ್ಚಾಗಿ ಮತ್ತು ಮುಂದಾಗಿ ಇತರ ವಿಷಯಗಳಿವೆ; ಗೃಹಖಾತೆ ಮಾತ್ರವೇಕೆ? ಶ್ರೀ ಜೈಪ್ರಕಾಶರ ಸಮೇತ ಎಲ್ಲರೂ ಈ ಮಟ್ಟಿಗೆ ಅಪರಾಧಿಗಳಾಗಿಯೇ ತೋರಬಹುದು. ಮಂತ್ರಿಮಂಡಲದ ಒಬ್ಬೊಬ್ಬ ಸದಸ್ಯನ ಹೆಸರೆತ್ತಿಕೊಂಡೇನು?—ಯಾರನ್ನೇ ಆದರೂ ಇಡುವವರು, ತೆಗೆವವರು ನಾಯಕ ನೆಹರುಗಳು. ಸಂಯುಕ್ತ ಹೊಣೆಗಾರಿಕೆಯುಳ್ಳ ಈ ಸಮಿತಿಯಲ್ಲಿ ಕಾಂಗ್ರೆಸಿಗರದೇ ಬಹುಮತ. ಅಂದಮೇಲೆ ವ್ಯಕ್ತಿ ಟೀಕೆಗೆಡೆಯಿಲ್ಲ. ಇವೆಲ್ಲಾ ಕಾರಣಗಳಿಂದ ಸದ್ಯಕ್ಕಂತೂ ಈಗಿನ ನೆಹರು ಮಂಡಲಿಯೇ ಬೇಕು ಹೊರತು ಜೈ ಪ್ರಕಾಶ್ ಸಮಿತಿ ಅಲ್ಲ.

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years. Filaria is a dirty, disfiguring disease. And yet a little united effort on the part of the public could at very little cost wipe out these two evils. **Please, watch this space.**

Inserted by:

The Canara Mutual Assurance Company Limited,

ESTD. 1935

H. O. UDIPI.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಭಾರತದ ರಾಜ್ಯಾಂಗ ವಿಧಾನ ನಿರೂಪಣೆ

ಕಳೆದ ವಾರ ಭಾರತದ ಘಟನೆಗಳಲ್ಲಿ ನಿರ್ಮಾಣಾಂಗಗಳೇ ಮುಖ್ಯವಿದ್ದುವು; ಆದರೆ ಅವು ನಿರೀಕ್ಷಿತ ಹಾಗೂ ಸಹಜ ರೀತಿಯ ನಿರ್ಮಾಣಗಳೇ ಆಗಿದ್ದುವು. ಬಾಪೂಜಿಯ ಕೊಲೆಯ ಪರಿಣಾಮವಾಗಿ ಭಾವನಾರಂಗದಲ್ಲಿ ಜಾತೀಯತಾ ಐಕ್ಯತೆಯ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ-ಅಥವಾ ತಾನಾಗಿ ಆಗುತ್ತಾ ಹೋಗಿದೆ. ರಚನಾ ರಂಗದಲ್ಲಿ ಘಟನಾ ಸಮಿತಿಯಿಂದ ಭಾರತದ ಭಾವೀ ರಾಜ್ಯಾಂಗದ ರೂಪರೇಷೆ ನಿರ್ಧರಿಸಲು ನೇಮಿಸಲ್ಪಟ್ಟಿದ್ದ ಸಮಿತಿಯು ತಾನು ತಯಾರಿಸಿದ ಘಟನೆಯನ್ನು ಮುಂದಿಟ್ಟಿದೆ. ಇತ್ತ ಆಡಳಿತ ರಂಗದಲ್ಲಿ ಕೇಂದ್ರ ಸರಕಾರ ಹಾಗೂ ಪ್ರಾಂತಿಕ ಸರಕಾರಗಳು ತಂತಮ್ಮ ವಾರ್ಷಿಕ ಆಯ-ವ್ಯಯ ಪಟ್ಟಿಗಳನ್ನು ಮುಂದಿರಿಸಿವೆ. ಕಾಶ್ಮೀರದ ಕಳಗ—ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಜುನಾಗಡಿನಂತಹ ಪ್ರಶ್ನೆಗಳ ಚರ್ಚೆ—ಹೈದರಾಬಾದು ಭಾರತಗಳೊಳಗೆ ಭಾವೀ ಸಂಬಂಧದ ಪರ್ಯಾಲೋಚನೆ-ಸಾಗಿದೆ.

ಅಂತರ್ರಾಷ್ಟ್ರೀಯ ರಂಗದಲ್ಲಿ ಹರಡಿರುವ ಮೇಲಾಟ ಬುದ್ಧಿಯ ಪರಿಣಾಮವಾಗಿ ಹೊಸಹೊಸ ಘರ್ಷಣೆಗಳು ಏಳುತ್ತಲೇ ಇವೆ-ಕಳೆದ ವಾರವೂ ಅಂತಹದರ ಅಭಾವವಿರಲಿಲ್ಲ. ಮಾತ್ರವಲ್ಲ, ಝೆಕೊಸ್ಲೋವೇಕಿಯದ ಆಂದೋಲನವು ಹಿಟ್ಲರನ ಕಾಲದ ಅಂದಿನ ಝೆಕೊಸ್ಲೋವೇಕಿಯವನ್ನೇ ನೆನಪಿಗೆ ತರುತ್ತಿದೆ. ಆ ಮೊದಲಿನ ವಾರದ ವರೆಗೆ ಝೆಕೊಸ್ಲೋವೇಕಿಯದಲ್ಲಿ 'ರಾಷ್ಟ್ರೀಯ ಸಮತಾವಾದಿ'ಗಳ ಮಂತ್ರಿಮಂಡಲವಿದ್ದಿತು. ಕಮ್ಯೂನಿಸ್ಟರು ಗೊಂದಲವೆಬ್ಬಿಸಿ ಕಳೆದ ವಾರ ಆ ಮಂತ್ರಿಮಂಡಲವು ರಾಜೀನಾಮೆಯೀಯಬೇಕಾಗಿ ಬಂದು, ಗೊಟ್ವಾಲ್ಡರು ಪ್ರಧಾನಿಯಾಗಿ ಉಗ್ರ ಕಮ್ಯೂನಿಸ್ಟ್ ಪಕ್ಷವು ಅಧಿಕಾರ ವಹಿಸಿದೆ. ಮಾತ್ರವಲ್ಲ, ಈ ಸರಕಾರದ ವಿರುದ್ಧಾಭಿಪ್ರಾಯವಿರುವವರನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ದಮನಿಸಿ ತನ್ನ ಹಾದಿಯನ್ನು ಸುಗಮ ಸುಧೃಢಗೊಳಿಸಹತ್ತಿದೆ. ಹಿಟ್ಲರನ ಕಾಲದಿಂದಲೂ ಝೆಕೊಸ್ಲೋವೇಕಿಯದ ಅಧ್ಯಕ್ಷರಾಗಿದ್ದು ಅಂದಿನ ನಾಜೀ ಆಕ್ರಮಣವನ್ನು ಅಸಾಧಾರಣ ಧೈರ್ಯದಿಂದ ಪ್ರತಿಭಟಿಸಿ ಪ್ರಾಪಂಚಿಕ ಗೌರವ ಗಳಿಸಿದ್ದ ಡಾ! ಬೆನೆಸರೇ ಈ ತನಕವೂ ಅಲ್ಲಿಯ ಅಧ್ಯಕ್ಷರಾಗಿರುವರು; ಮತ್ತು ಇಂದಿನ ಕಮ್ಯೂನಿಸ್ಟ್ ಸರಕಾರಕ್ಕೆ ಶುಭಾಶಯ ಕೋರಿರುವರು. ಆದರೆ ಹೃದಯತಃ ಅವರೀ ಸರಕಾರಕ್ಕೆ ವಿರೋಧವಿದ್ದು, ಇಂದಿನ ತನ್ನ ನಿಸ್ಸಹಾಯಕ ಸ್ಥಿತಿಯ ಸೆಸೆಯಿಂದ ಅನಿವಾರ್ಯವಾಗಿ, ಒಲ್ಲದವರ ಮುಖಸ್ತುತಿ ಮಾಡಿ ತಲೆಯುಳಿಸಿಕೊಳ್ಳುವ ಯುಕ್ತಿ ಹೂಡಿದ್ದಾರೆಂದೂ ಅವರಿಗಿನ್ನು ರಾಜೀನಾಮೆ ಕೊಡುವ ಅಥವಾ ಅಲ್ಲಿಂದ ಪಲಾಯನ ಪರಿಯುವ ಹೊರತು ಮೂರನೇ ಹಾದಿಯೇ ಉಳಿದಿಲ್ಲವೆಂದೂ ಊಹೆಯಿದೆ. ಅಮೇರಿಕ, ಇಂಗ್ಲಾಂಡು ಮತ್ತು ಫ್ರಾನ್ಸುಗಳು ಒಂದು ಜತೆಹೇಳಿಕೆ ಹೊರಡಿಸಿ ಝೆಕೊಸ್ಲೋವೇಕಿಯದ ಈ ಬದಲಾವಣೆಯನ್ನು ಕಠಿಣವಾಗಿ ಖಂಡಿಸಿವೆ. 'ಪ್ರಜಾಪ್ರಭುತ್ವಕ್ಕೆ ಹಾನಿಕರವಾಗುವ ರೀತಿಯಲ್ಲಿ ಹಿಂದಿನ ಸರಕಾರವನ್ನು ವಜಾಪಡಿಸಿ ಕಮ್ಯೂನಿಸ್ಟರ ಅಧಿಕಾರ ಬಂದುದರಿಂದ ಝೆಕ್ಕರಿಗೆ ಅಪಾಯ ಕಾದಿದೆ' ಎಂದು ಎಚ್ಚರಿಸಿವೆ. ಆದರೆ ಈ ಹೇಳಿಕೆಯ ಪ್ರಕಟಣೆಗೇನೇ ಬಹಿಷ್ಕಾರ ಹಾಕಿ ನವ ಪ್ರಧಾನಿ ಗೊಟ್ವಾಲ್ಡರು, 'ಈ ಸ್ವಾರ್ಥಪೂರಿತ ರಾಷ್ಟ್ರಗಳಿಂದ ತಾವು ಪ್ರಜಾಪ್ರಭುತ್ವದ ಪಾಠವನ್ನು ಕಲಿಯುವಂತಿಲ್ಲ'ನೆಂದೂ, ಮ್ಯೂನಿಚ್ ಒಪ್ಪಂದದಂತಹ ಹೇಯಹೇಡಿತನಕ್ಕೆ ಪ್ರಸಿದ್ಧರಾದ ಇವರನ್ನು ಗಣಿಸುವಂತಿಲ್ಲವೆಂದೂ ಮುಖ ಭಂಗ ಮಾಡಿ ಜರೆದಿದ್ದಾರೆ. ಕಮ್ಯೂನಿಸ್ಟ್ ವಿರೋಧೀ ಕಂಟಕಗಳನ್ನು ನಿರ್ದಾಕ್ಷಿಣ್ಯವಾಗಿ ನಿರ್ಮೂಲಿಸಲು ನಡುಬಿಗಿದಿದ್ದಾರೆ. ಇದರಿಂದ ಅಮೇರಿಕ, ಬ್ರಿಟನು ಮತ್ತೀಗುಂಪಿನ ಪಾಶ್ಚಿಮಾತ್ಯ ರಾಷ್ಟ್ರಗಳೆಲ್ಲಾ ದಿಗಿಲುಗೊಂಡಿವೆ. 'ಝೆಕೊಸ್ಲೋವೇಕಿಯವು ಅಪಾಯ ಸೂಚನೆ ಕೊಟ್ಟಿದೆ. ಪಾಶ್ಚಿಮಾತ್ಯ ರಾಷ್ಟ್ರಗಳು ಈಗಲೇ ಕಣ್ಣು ತೆರೆದು ಸಕ್ರಿಯ ಕಾರ್ಯ ಕೈಕೊಳ್ಳಬೇಕು' ಎಂದು ಬ್ರಿಟನಿನ ಮಾಜೀ ವಿದೇಶ ಮಂತ್ರಿ ಮಿ. ಈಡೆನರಂಥವರು ಘರ್ಜಿಸಹತ್ತಿದ್ದಾರೆ. ಹಿಟ್ಲರನು, ತನ್ನ ದಿಗ್ವಿಜಯದ ಮೊದಲ ಹೆಜ್ಜೆಯಾಗಿ ಡಾ। ಬೆನೆಸರ ಝೆಕೊಸ್ಲೋವೇಕಿಯವನ್ನೇ ಆಕ್ರಮಿಸಿದ್ದನೆಂಬುದನ್ನೂ ಹೇಡಿ ಗಾದೆಯಾಗಿ ಶಾಶ್ವತಗೊಂಡಿರುವ 'ಮ್ಯೂನಿಚ್ ಒಪ್ಪಂದ'ವು ಝೆಕೊಸ್ಲೋವೇಕಿಯಾದ ಸಂಬಂಧದ್ದೆಂಬುದನ್ನೂ ನೆನಸಿದರೆ, ಚರಿತ್ರೆಯು ಪುನರಾವರ್ತನೆಯಾಗುತ್ತಿರಬಹುದೇ ಎಂಬ ಭಯ ಹುಟ್ಟುತ್ತಿದೆ.

ಇನ್ನೊಂದೆಡೆ ಪೆಲೆಸ್ಟೈನ್, ಚೈನಾ ಮೊದಲಾದ ರಾಷ್ಟ್ರಗಳ ಒಳಗೊಂದಲಗಳು ಯಥಾಪ್ರಕಾರ ಸಾಗಿವೆ. ಪೆಲೆಸ್ಟೈನ್ ವಿಭಜನೆ ಹಾಗೂ ಅಲ್ಲಿಯ ಶಾಂತಿ ಪಾಲನೆಯ ಕುರಿತು ಅಮೇರಿಕವು ವಿಶೇಷಾಸಕ್ತಿ ವಹಿಸಿದೆ. ಪೆಲೆಸ್ಟೈನ್ ಗಲಭೆ ನಿಲ್ಲಿಸುವಂತೆ ಮತ್ತು ಅದನ್ನು ಪರಿಶೀಲಿಸಲು ಒಂದು ಸಮಿತಿ ನೇಮಕ ಮಾಡುವಂತೆ ಕೇಳಿಕೊಳ್ಳುವ ಸೂಚನೆಯು ಅಮೇರಿಕದಿಂದ ಭದ್ರತಾ ಕೌನ್ಸಿಲಿನ ಮುಂದೆ ಬಂದಿದೆ.

ಅಂತೂ, ಇಂದು ಇರಬೇಕಾದ ಸ್ಥಿತಿಯಲ್ಲಿಲ್ಲವೆಂಬುದೇನೋ ನಿಶ್ಚಯವೇ. ಇರುವ ಪ್ರಪಂಚದ ಗಮನವಾದರೂ ಶಾಂತಿ ಸಾಧನೆಯ ಕಡೆಗಿರದೆ ಸಮರ ಸಾಧ್ಯತೆಯತ್ತಲೇ ಇದೆ. ಅದರಲ್ಲೂ ಈಗೀಗ ಆ ದಿಕ್ಕು ಹಿಡಿದು ಲೋಕವು ಭರದಿಂದ ಸಾಗಹತ್ತಿದೆ. ಇದು ಭಯಜನಕ ವಿದ್ಯಮಾನ!

ಭಾರತದ ನವ ಘಟನೆ

ಸ್ವತಂತ್ರ ಭಾರತದ ರಾಜ್ಯ ಶಾಸನಗಳನ್ನು ರೂಪಿಸುವದಕ್ಕಾಗಿ ಘಟನಾಸಮಿತಿಯಿಂದ ನೇಮಕಗೊಂಡಿದ್ದ, ಡಾ। ಅಂಬೇಡ್ಕರರು ಅಧ್ಯಕ್ಷರಾಗಿ ಶ್ರೀಗಳಾದ ಎನ್. ಗೋಪಾಲ ಸ್ವಾಮಿ ಅಯ್ಯಂಗಾರ್, ಅಲ್ಲಾಡಿ ಕೃಷ್ಣ ಸ್ವಾಮಿ " . ಕೆ ಎಮ್. ಮುನ್ಷಿ, ಎನ್. ಮಾಧವ ರಾವ್. ಡಿ. ಪಿ. ಖೈತಾನ್ ಮತ್ತು ಸಯ್ಯದ್ ಮಹಮ್ಮದ್ ಸಾದುಲ್ಲಾರಿದ್ದ ಸಮಿತಿಯು ತನ್ನ ವರದಿಯನ್ನೊಪ್ಪಿಸಿದೆ. ರಾಜ್ಯಾಂಗದ ವಿವಿಧ ವಿಷಯಗಳಿಗಾಗಿ ಘಟನಾ ಸಮಿತಿಯು ಪ್ರತ್ಯಪ್ರತ್ಯೇಕವಾಗಿ ನೇಮಿಸಿದ್ದ ಉಪಸಮಿತಿಗಳು ಆಯಾಯಾ ವಿಷಯಗಳಲ್ಲಿ ಈ ಮೊದಲೇ ತಮ್ಮ ವರದಿಗಳನ್ನೊಪ್ಪಿಸಿದ್ದು ಅವುಗಳ ಕುರಿತು ಘಟನಾ ಸಮಿತಿಯು ಚರ್ಚಿಸಿ ತೀರ್ಮಾನಗಳನ್ನೂ ಮಾಡಿದ್ದಿತು. ಆ ಶಿಫಾರಸುಗಳನ್ನಾಧರಿಸಿ, ಅಗತ್ಯ ಕಂಡ ಕೆಲವು ಬದಲಾವಣೆಗಳನ್ನೂ ಮಾಡಿ, ಅಂಬೇಡ್ಕರ್ ಸಮಿತಿಯು ಅಖಿಲ ಭಾರತ ರಾಜ್ಯ ಘಟನಾ ವಿಧಾನಗಳನ್ನು ನಿರೂಪಿಸಿದೆ. ಇದಿನ್ನು ಘಟನಾ ಸಮಿತಿಯಲ್ಲಿ ಸವಿವರವಾಗಿ ಚರ್ಚಿಸಲ್ಪಟ್ಟು ಅಸ್ತಿತ್ವ ಹೊಂದಲಿದೆ. ಈ ರೂಪರೇಖೆಗಳ ಮೇಲಿಂದ ಭಾರತದ ಕೇಂದ್ರಾಧಿಕಾರವು ಅತಿ ಪ್ರಬಲಗೊಳ್ಳುವುದು. ಪಾಕಿಸ್ತಾನವಾಗಿ ರಾಷ್ಟ್ರದೊಂದು ಪಾಲು ಪರದೇಶವಾಗಿ ಪಕ್ಕದಲ್ಲೇ ನಿಂತುದರಿಂದಲೂ, ಆಶ್ರಿತ ರಾಜ್ಯಗಳ ಮೇಲಿನ ಬ್ರಿಟಿಷ್ ಸಾರ್ವಭೌಮಾಧಿಕಾರ ಜಾರಿಹೋಗಿ, ಅವುಗಳ ಜೋಡಣೆಯ ಹೊಸ ಹೊರೆ ಬಿದ್ದಿರುವುದರಿಂದಲೂ, ಇವೆಲ್ಲವುಗಳ ಹೊಣೆಯನ್ನು ನಿರಾತಂಕವಾಗಿ ನಿರ್ವಹಿಸಲಾಗುವಂತೆ ಕೇಂದ್ರವನ್ನು ಇನ್ನಷ್ಟು ಬಲಗೊಳಿಸಲಾಗಿದೆ. ಶೇಷಾಧಿಕಾರವನ್ನೆಲ್ಲಾ ಕೇಂದ್ರಕ್ಕೆ ಬಿಡಲಾಗಿದೆ. ತತ್ಪರಿಣಾಮವಾಗಿ ಪ್ರಾಂತಿಕ ಸರಕಾರಗಳ ಅಧಿಕಾರವು ಈಗಿರುವುದಕ್ಕಿಂತಲೂ ತುಸು ಕಡಿಮೆಯೇ ಆಗುವುದು. ಪ್ರಾಂತಿಕ ಗವರ್ನರುಗಳು ಜನಮತದಿಂದಲೇ ಚುನಾಯಿಸಲ್ಪಡಬೇಕೆಂದು, ಈ ಸಂಬಂಧದ ಮೊದಲಿನ ಉಪ ಸಮಿತಿ ಸೂಚಿಸಿದ್ದರೂ ಅಂಬೇಡ್ಕರ್ ಸಮಿತಿಯು ಆ ಕುರಿತು ನಿ... ತೀರ್ಮಾನವೇನನ್ನೂ ಕೊಡದೆ, ಜನತೆಯಿಂದ ಪ್ರತ್ಯಕ್ಷ ಚುನಾವಣೆ ಹೊಂದುವುದು ಅಥವಾ ಪ್ರಾಂತಿಕ ಅಸೆಂಬ್ಲಿಗಳು ನಾಲ್ಕು ಹೆಸರುಗಳನ್ನು ಸೂಚಿಸಿ ಕೇಂದ್ರಾಧ್ಯಕ್ಷರು ಅವುಗಳಲ್ಲೊಂದನ್ನಾರಿಸಿಕೊಳ್ಳುವುದು, ಎಂಬ ದ್ವಿವಿಧಾನಗಳನ್ನು ಸೂಚಿಸಿದೆ. ವಿಶೇಷ ಸಂದರ್ಭಗಳಲ್ಲಿ ಗವರ್ನರುಗಳಿಗೆ ವಿಶೇಷಾಧಿಕಾರವು ಕೊಡಲ್ಪಟ್ಟಿದೆ. 'ಭಾರತ ರಿಪಬ್ಲಿಕ್' ಮತ್ತು ಬ್ರಿಟಿಷ್ ಕಾಮನ್ ವೆಲ್ತಿನೊಳಗಿನ ಸಂಬಂಧದ ಪ್ರಶ್ನೆಯನ್ನು ಕೊನೆಗೆ ತೀರ್ಮಾನಿಸಬಹುದೆಂದು ಬಾಕಿಯಿಡಲಾಗಿದೆ. ಮಿಕ್ಕೆಲ್ಲಾ ವಿಷಯಗಳಿಗೂ ಆಕಾರಗೊಡಲಾಗಿದೆ.

ಭಾಷಾವಾರು ಪ್ರಾಂತ್ಯ ರಚನೆ

ಈ ರಾಜ್ಯಾಂಗ ವಿಧಾನ ನಿರೂಪಣಾ ಸಮಿತಿಯ ಸೂಚನೆಗಳಲ್ಲಿರುವ ಒಂದು ವಿಷಯವು ಕರ್ನಾಟಕ ಜನತೆಗೆ ಪೂರ್ಣ ಸಮಾಧಾನಕರವಾಗುವುದು. ಅದೆಂದರೆ ಭಾಷಾವಾರು ಪ್ರಾಂತ್ಯರಚನೆಯ ತಯಾರಿ. ಪಂಡಿತ ನೆಹರುಗಳು ಈ ಮೊದಲೊಮ್ಮೆ, ನವರಾಜ್ಯಾಂಗ ವಿಧಾನಗಳು ಜ್ಯಾರಿಗೆ ಬ

ಪುಳಿನಾಪುರ ಇತಿಹಾಸ

ಕನ್ನಡ ವಚನ ಗ್ರಂಥ ಅಚ್ಚಿನಲ್ಲಿದೆ.

ಮೊದಲನೇ ಭಾಗದಲ್ಲಿ ದೇವಿ ಭಾಗವತಾಂತರ್ಗತ ಸುರಥ ವೈಶ್ಯರು ಮೃಣ್ಮಯಗಳಿಂದ ಪ್ರತಿಷ್ಠೆಮಾಡಿದ ದೇವಿ ಲೋಕದ ವಿಸ್ತಾರವಾದ ಸ್ಥಳ ಪುರಾಣವೂ—ಎರಡನೇ ಭಾಗದಲ್ಲಿ ಕೊಲ್ಲೂರು, ಕಟೀಲು, ಸುಬ್ರಮಣ್ಯ ಮೊದಲಾದ ದೇವಿ ಅಂಶಗಳನ್ನೊಳಗೊಂಡ ಪುಳಿನಾಪುರ ಸ್ಥಳ ಮಹಿಮೆಯೂ—ಮೂರನೇ ಭಾಗದಲ್ಲಿ ಅಶೋಕ ಚಕ್ರವರ್ತಿಯ ಕಾಲದಾರಭ್ಯ ಶಿಲಾಶಾಸನ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟ ತಾಮ್ರಶಾಸನ ಇತ್ಯಾದಿ ಆಧಾರಗಳಿಂದ ಬರೆದ ಚರಿತ್ರಾಸಾರವೂ ಇದೆ.

ಆಸ್ತಿಕರಾದ ದೇವಿಭಕ್ತರು ಮುಂದಾಗಿ ತಿಳಿಸಿದವರಿಗೆ ರೂ. ೧ ೮ ೦

೩ ಭಾಗಗಳ ಪುಸ್ತಕಕ್ಕೆ ಬೆಲೆ ರೂ.2¼

ಎನ್. ಎ. ಶೀನಪ್ಪ ಹೆಗ್ಡೆ,

ಅಮುಣಂಜೆ ಗುತ್ತು, ಪೊಳಲಿ,

Post ಚೆಳ್ಳಾರು, ದ. ಕ.

The

Canara Industrial & Banking Syndicate, Ltd.

Head Office.

NOTICE

The Register of Members and Transfer Books of the Syndicate will remain closed from 12th March 1948 to 9th April, 1948, both days inclusive.

(By Order)

"Mukund Nivas", Udipi.
27—2—1948

K. P. Shenoy,
Secretary.

ಕೇಂದ್ರ ಮತ್ತು ಪ್ರಾಂತಿಕ ವಾರ್ಷಿಕ ಆಯವ್ಯಯ

ರುವ ಮೊದಲೇ ಪ್ರತ್ಯೇಕಗೊಳ್ಳುವಂತೆ ಆಂಧ್ರವನ್ನು ವಿಂಗಡಿಸುವ ವ್ಯವಸ್ಥೆ ಮಾಡಬಹುದೆಂದೂ, ಆದರೆ ಕರ್ನಾಟಕ, ಮಹಾರಾಷ್ಟ್ರದಂಥವುಗಳು ಮತ್ತೂ ಸ್ವಲ್ಪಾವಧಿ ಕಾಯಬೇಕಾದೀತೆಂದೂ ಸೂಚಿಸಿ ಕನ್ನಡಿಗರ ಹೃದಯವನ್ನು ಕದಡಿಸಿದ್ದರು. ಈ ಸಂಬಂಧದ ದೂರು ಮಹಾತ್ಮಾ ಗಾಂಧಿಯವರ ವರೆಗೂ ಹೋಗಿ, ಅವರೂ ಆ ಮೇಲೆ ರಾಷ್ಟ್ರಪತಿ ರಾಜೇಂದ್ರ ಪ್ರಸಾದರೂ ಈ ಪಕ್ಷಪಾತತೆಯು ಮಾಸುವ ಮಾದರಿಯ ಆಶ್ವಾಸನೆಗಳನ್ನು ಕೊಟ್ಟಿದ್ದರು. ಸಮಿತಿಯು ಕೂಡಾ ತನ್ನ ಸೂಚನೆಗಳಲ್ಲಿ ಅಂತಹ ಹಂಗಿನ ಭೇದ ಮಾಡದಿರುವುದು ಮಾತ್ರವಲ್ಲ, ನವರಾಜ್ಯ ಘಟನೆಯು ಜ್ಯಾರಿಗೆ ಬರುವಾಗಲೇ ಅದರ ಒಳಗಡೆಯು ಭಾಷಾವಾರು ಪ್ರಾಂತ್ಯದ ರೂಪದಲ್ಲೇ ಇರುವಂತಹ ವ್ಯವಸ್ಥೆಯನ್ನು ಮುಂದಿಟ್ಟಿದೆ. 1935ರ ಭಾರತ ಶಾಸನವು ಜ್ಯಾರಿಗೆ ಬಂದುದು 1937ರಲ್ಲಿ. ಆದರೆ ಒರಿಸ್ಸಾ ಮತ್ತು ಸಿಂಧಗಳನ್ನು ಈ ಶಾಸನದ ಭಾಗವಾಗಿಯೇ ವಿಂಗಡಿಸಿ ಹಾಕಿ, ಅವೆರಡು ಪ್ರಾಂತ್ಯಗಳೂ 1936ರಲ್ಲೇ ಪ್ರತ್ಯೇಕವಾಗಿದ್ದುವು. ಅದೇ ರೀತಿ ನವ ರಾಜ್ಯಘಟನೆಯು ಜ್ಯಾರಿಗೆ ಬರುವ ಮೊದಲೇ ಭಾಷಾವಾರು ಪ್ರಾಂತ್ಯಗಳನ್ನು ನಿರ್ಮಿಸಿ ಹಾಕಿ, ಹೊಸ ರಾಜ್ಯಭಾರ ಪದ್ಧತಿಯು ಅವುಗಳ ಮೇಲೆಯೇ ನಿಲ್ಲುವಂತೆ ಮಾಡುವ ಸೂಚನೆಗಳನ್ನು ಈ ಸಮಿತಿಯಿತ್ತಿದೆ. ಸರಹದ್ದುಗಳ ನಿರ್ಣಯಕ್ಕಾಗಿ ಒಂದು ಗಡಿ ಸಮಿತಿಯು ನೇಮಿಸಲ್ಪಡುವ ಸೂಚನೆಯೂ ಇದೆ. ಈ ಘಟನೆಯು ಮಂಜೂರಾಗಿ ಆದಷ್ಟು ಬೇಗನೆ ಅಸ್ತಿತ್ವದಲ್ಲಿ ಬರುವಂತಾಗುವದೆಂದು ನಿರೀಕ್ಷಿಸಲಾಗಿದೆ.

ಕೇಂದ್ರ ಆಯವ್ಯಯ

ಭಾರತ ಸರಕಾರದ ಅರ್ಥ ಸಚಿವ ಶ್ರೀ. ಆರ್. ಕೆ. ಷಣ್ಮುಗಂ ಚೆಟ್ಟಿಯಾರರು 1948-49ರ ಇಡೀ ವರುಷದ ಆಯವ್ಯಯ ಪಟ್ಟಿಯನ್ನು ಭಾರತದ ಯೂನಿಯನ್ ಪಾರ್ಲಿಮೆಂಟಿನಲ್ಲಿ ಮಂಡಿಸಿದ್ದಾರೆ ಸ್ವತಂತ್ರ ಭಾರತದ ಪ್ರಥಮ ವಾರ್ಷಿಕ 'ಬಜೆಟ್' ಇದು. ಕೆಲವು ಪ್ರಚಲಿತ ಕಂದಾಯಗಳಲ್ಲಿ ವಿನಾಯತಿ ಮತ್ತು ಹೊಸ ತೆರಿಗೆ ನಿರ್ಮಾಣಗಳೇ ಈ ಪಟ್ಟಿಯ ವೈಶಿಷ್ಟ್ಯವೆನ್ನಬೇಕು. ಆಯವ್ಯಯ ಪಟ್ಟಿಯ ಸ್ಥೂಲ ಅಂದಾಜುಗಳು ಹೀಗಿವೆ:- ಈಗ ಇರುವ ತೆರಿಗೆಗಳಂತೆ ಉತ್ಪನ್ನವು 230.52 ಕೋಟಿಗಳು. ಆದರೆ ಹೊಸ ತೆರಿಗೆ ವಿಧಾನಗಳ ಮೇಲಿಂದ ಉತ್ಪನ್ನವು 256.28 ಕೋಟಿಗಳು, ವ್ಯಯ 257.37 ಕೋಟಿಗಳು. ಹೀಗಾಗಿ 1.09 ಕೋಟಿಯ ನಷ್ಟವು ಹಾಗೆಯೇ ಉಳಿಯುತ್ತದೆ. ಅದನ್ನು ತುಂಬಿಸಿಕೊಳ್ಳಲು ಯಾವ ಉಪಾಯವನ್ನೂ ಕೈಕೊಳ್ಳದೆ ಇದ್ದಂತೆ ಬಿಡಲಾಗಿದೆ. ಸಾಲದ ಪಾಲುಗಾರಿಕೆಯಂತೆ ಪಾಕಿಸ್ತಾನದ ಪಾಲಿನ ಸಾಲದ ಬಡ್ಡಿ ದೊರೆತರೆ ಈಗ ಕಡಿಮೆ ಬಿದ್ದ ಅಂತದ ಬದಲಿಗೆ ಗಣ್ಯಾಂಶ ಉಳಿತಾಯವು ಕಂಡುಬರುವಂತಾಗುವದೆಂದು ಅರ್ಥ ಸಚಿವರಂದಿದ್ದಾರೆ ಉದ್ದಿಮೆಗಳ ಮೇಲಿನ ತೆರಿಗೆಯ ಭಾರವನ್ನು ತುಸು ತಗ್ಗಿಸಲು ಈ ಪಟ್ಟಿಯಲ್ಲಿ ಪ್ರಯತ್ನಿಸಿದಂತಿದೆ. ಉದ್ದಿಮೇ ಆದಾಯ ತೆರಿಗೆ, ಮತ್ತು ಸುಪರ್ ಟೇಕ್ಸನ್ನು ತಗ್ಗಿಸಲಾಗಿದೆ. ಸಣ್ಣ ಕಂಪೆನಿಗಳಿಗೆ ತೆರಿಗೆ ರಿಯಾಯತಿಗಳನ್ನು ಸೂಚಿಸಲಾಗಿದೆ. ಮುಂಜೂರಾತಿ ಪಡೆದ ಉದ್ದೇಶಗಳಿಗಾಗಿ ಕೊಡುವ ದಾನಗಳ ಮೇಲೆ ಅದೊಂದು ಮಿತಿಯವರೆಗೆ ತೆರಿಗೆ ವಿನಾಯತಿ, ಅಡಿಕೆಯ ಮೇಲಿನ ಕರರದ್ದತಿ ಇತ್ಯಾದಿಗಳಿವೆ. ಹಾಕಿರುವ ಹೊಸ ತೆರಿಗೆಗಳೆಂದರೆ ವಿದೇಶೀ ಕಂಪೆನಿಗಳ ಮೇಲಿನ ಕೋರ್ಪರೇಶನ್ ತೆರಿಗೆಯನ್ನು ಹೆಚ್ಚಿಸಿದುದು—ಸಿಗರೇಟುಗಳ ಮೇಲೊಂದು ಹೊಸ ಕರ ಹಾಕಿದುದು—ಚಾ, ಕಾಫಿ ಮತ್ತು ಟಯರು ಹಾಗೂ ಸಸ್ಯೋತ್ಪನ್ನಗಳ ಮೇಲಿನ ಕರವನ್ನು ಹೆಚ್ಚಿಸಿದುದು—ಎಣ್ಣೆಬೀಜ, ವನಸ್ಪತಿ ತೈಲಗಳು ಹಾಗೂ ಅದೊಂದು ಲೋಹದ ಮೇಲೆ ರಫ್ತು ತೆರಿಗೆ ಹೇರಿದುದು—ಬೆಂಕಿ ಪೆಟ್ಟಿಗೆಗಳ ಮೇಲಿನ ತೆರಿಗೆಯ ಕನಿಷ್ಠ ಪರಿಮಾಣವನ್ನು ಏರಿಸಿದುದು—ಇತ್ಯಾದಿ ಅರ್ಥಡಜನ್ ಹೊಸ ತೆರಿಗೆಗಳು ಈ ಬಾರಿಯ ಬಜೆಟ್‌ನಲ್ಲಿ ಸೂಚಿಸಲ್ಪಟ್ಟಿವೆ. ಅರ್ಥ ಮಂತ್ರಿಗಳು ತನ್ನ ಆಯವ್ಯಯ ಸ್ಥಿತಿಸೂಚಕ ಭಾಷಣದಲ್ಲಿ ಎಲ್ಲವನ್ನೂ ಸಕಾರಣವಾಗಿ ವಿವರಿಸಿರುವರಾದರೂ, ಜನಸಾಮಾನ್ಯರನ್ನು ದಿಗಿಲುಗೊಳಿಸುವ ಅಂಶಗಳು ಈ ಬಾರಿಯ ಪಟ್ಟಿಯಲ್ಲಿವೆ. ಕಾಫಿ, ಚಹಾ, ಬೆಂಕಿಪೆಟ್ಟಿಗೆ ಮತ್ತು ಸಿಗರೇಟುಗಳ ಮೇಲೆ ಬಿದ್ದ ಹೊಸ ಕರಗಳಿಂದಾಗಿ ಸಾಮಾನ್ಯ ಜನತೆಯ ನಿತ್ಯ ಜೀವನದ ಆವಶ್ಯಕತೆಗಳಾಗಿರುವ ಇವೆಲ್ಲವೂ ಇನ್ನಷ್ಟು ಪ್ರಿಯವಾಗಲಿವೆ ಅಡಿಕೆಯ ಮೇಲಿನ ಕರವನ್ನು ರದ್ದುಪಡಿಸಿ, ಅಡಿಕೇ ವ್ಯವಸಾಯಿಗಳ ದೀರ್ಘಾವಧಿಯ ಬೇಡಿಕೆಯೊಂದನ್ನು ಮನ್ನಿಸಿದ್ದಾರಾದರೂ ಸಾರ್ವಜನಿಕರಿಗೆ ಕಾಫಿ, ಟೀ, ಬೆಂಕಿಪೆಟ್ಟಿಗೆಗಳಿಂದಾಗುವ ನಷ್ಟದಷ್ಟು, ಈ ಅಡಿಕೇ ಬಾಬ್ತಿನ ಲಾಭವೆಂದಿಗೂ ತೋರಬರುವಂತಿಲ್ಲ. ಆದ್ದರಿಂದ ಸ್ವತಂತ್ರ ಭಾರತದ ಈ ಪ್ರಥಮ ಆಯ-ವ್ಯಯ ಪಟ್ಟಿಯು ಜನಸಾಮಾನ್ಯರ ಅಪಕ್ಕೀಡಾಗಿದೆ ಎಂಬುದು ನಿರ್ವಿವಾದ ರೈಲ್ವೇ ಉಳಿತಾಯದಿಂದ 4.5 ಕೋಟಿಗಳನ್ನು ತೆಗೆದುಕೊಂಡು, ಮತ್ತು ಸುಧಾರಿತ ಕಂದಾಯ ಪದ್ಧತಿಗಳಿಂದಾಗುವ ಅಧಿಕೋತ್ಪತ್ತಿಗಳನ್ನು ಕೂಡಿಸಿಕೊಂಡು ಮತ್ತೂ ಕಡಿಮೆ ಬೀಳುವ 1.09 ಕೋಟಿಯನ್ನು ಹಾಗೆಯೇ ಬಿಡಲಾಗಿದೆ.

ಮದ್ರಾಸಿನ ಆಯವ್ಯಯ

ಮದ್ರಾಸ್ ಸರಕಾರದ ಹಣ ಕಾಸಿನ ಮಂತ್ರಿ ಶ್ರೀ. ಬಿ. ಗೋಪಾಲ ರೆಡ್ಡಿಗಳು 1948-49ರ ಮದ್ರಾಸ್ ಪ್ರಾಂತ್ಯದ ಆಯವ್ಯಯ ಪಟ್ಟಿಯನ್ನು ಎಸೆಂಬ್ಲಿಯ ಮುಂದೆ ಮಂಡಿಸಿದ್ದಾರೆ. ಈ ವರುಷದ ಅಂದಾಜು ಆಯವು 50.32 ಕೋಟಿಗಳಿದ್ದು ಅಂದಾಜು ವ್ಯಯವು 55.93 ಕೋಟಿಗಳು. ರೆವಿನ್ಯೂ ರಿಜರ್ವ್ ನಿಧಿಯಿಂದ 5.62 ಕೋಟಿಗಳನ್ನು ತೆಗೆದುಕೊಂಡು ಆಯ ವ್ಯಯವನ್ನು ಬಾಯಿಗೂಡಿಸಿ, ರೂ. 71,000ಗಳ ಅಲ್ಪ ಉಳಿತಾಯವನ್ನು ತೋರಿಸಿರುವ ಪಟ್ಟಿಯಿದು. ಎಲ್ಲವನ್ನೂ ತುಲನೆ ಮಾಡಿ ನೋಡಿದರೆ ಅತ್ಯಂತ ಸಮಾಧಾನಕರ ಹಾಗೂ ಸುಭದ್ರ ಆರ್ಥಿಕಾಡಳಿತೆಯಿದು ಎಂದು ಅರ್ಥ ತಜ್ಞರ ಅಭಿಮತವಿದೆ. ಹೇಗೆಂದರೆ ಬರುವ ಒಕ್ಟೋಬರಿಗೆ ಇಡೀ ಪ್ರಾಂತ್ಯದಲ್ಲಿ ಪಾನನಿಷೇಧ ಜ್ಯಾರಿ ಪೂರ್ಣಗೊಳ್ಳುವುದು. ಇದರಿಂದ ಸರಕಾರದ ಖಜಾನೆಗೆ ಸುಮಾರು 17 ಕೋಟಿ ರೂ. ಕಡಿಮೆ ಬೀಳುವುದು ಇದನ್ನು ತುಂಬಿಸಿಕೊಂಡು, ರಾಷ್ಟ್ರೀಯ ಉದ್ಯಮಗಳಿಗೆ ಸಹಾಯ ಸಲ್ಲಿಸುವದರಲ್ಲೇನೂ ಕಡಿತ ಮಾಡದೆ, ಬದಲಿಗೆ ಕೆಲವೊಂದು ಸಂದರ್ಭಗಳಲ್ಲಿ ಅದನ್ನೂ ಹೆಚ್ಚಿಸಿ ಪ್ರಾಂತ್ಯದ ಆರ್ಥಿಕ ಸ್ಥಿತಿಯನ್ನು ಈ ಮಟ್ಟದಲ್ಲಿರಿಸಿದುದು ನಿಜಕ್ಕೂ ಸಮಾಧಾನಕರವೆನ್ನಬೇಕು. ಕಡಿಮೆ ಬಿದ್ದ ಅಂಶಗಳನ್ನು ಜನರಲ್ ಸೇಲ್ಸ್ ಟೇಕ್ಸ್, ಎಂಟರ್‌ಟೈನ್‌ಮೆಂಟ್ ಟೇಕ್ಸ್‌ಗಳ ಹೆಚ್ಚಳದಿಂದಲೂ, ರಿಜರ್ವ್ ನಿಧಿಯಿಂದ ತೆಗೆದ ಮೊತ್ತದಿಂದಲೂ ಭರ್ತಿ ಮಾಡಿಕೊಳ್ಳಲಾಗಿದೆ. ಕಡ್ಡಾಯ ಶಿಕ್ಷಣ, ಮೂಲ ಭೂತ ಶಿಕ್ಷಣಗಳಿಗಾಗಿ ಗ್ರಾಂಟುಗಳು, ನೀರಾವರಿ ಯೋಜನೆಗಳಿಗೆ ಸಹಾಯ ಇತ್ಯಾದಿಗಳು ಈ ಬಜೆಟಿನಲ್ಲಿವೆ.

ಒಟ್ಟಿನ ಮೇಲೆ ಆಹಾರ ಧಾನ್ಯಗಳ ಆಮದು, ನಿರಾಶ್ರಿತರ ರಕ್ಷಣಾ ವ್ಯವಸ್ಥೆ, ದೇಶರಕ್ಷಣಾ ವ್ಯವಸ್ಥೆ ಇತ್ಯಾದಿ ಕೆಲವು ಅನಿವಾರ್ಯ ಅತಿ ಪ್ರಾಮುಖ್ಯ ವ್ಯಯಗಳ ದೆಸೆಯಿಂದಾಗಿ ಕೇಂದ್ರ ಸರಕಾರದ ಆರ್ಥಿಕ ಸ್ಥಿತಿಯು ಬಡಜನರ ಸ್ಥಿತಿ ಸುಧಾರಣೆ ಮಾಡುವ ಮಟ್ಟಕ್ಕೆಂತೂ ಬರಲಿಲ್ಲ; ಬದಲಿಗೆ ಸಾಮಾನ್ಯರಿಗೆ ಹೊರೆಯಾಗುವ ಕೆಲವು ಹೊಸ ತೆರಿಗೆಗಳನ್ನೇ ಹೇರಿದೆ. ಅದರೊಡನೆ ತುಲನೆ ಮಾಡುವಾಗ ಪ್ರತ್ಯೇಕವಾಗಿ ಮದ್ರಾಸ್ ಪ್ರಾಂತ್ಯದ ಆರ್ಥಿಕ ಸ್ಥಿತಿಯು ವಾಸಿಯೆಂದು ತೋರಿದರೂ, ಪಾನ ನಿಷೇಧದಂತಹ ಹೊಸ ದೊಡ್ಡ ನಷ್ಟಗಳ ದೆಸೆಯಿಂದಾಗಿ ಸಾಮಾನ್ಯ ಜನರ ಜೀವನಮಟ್ಟವನ್ನು ಸುಧಾರಿಸಲಾಪ ಕಾರ್ಯಕ್ರಮಗಳನ್ನು ಕೈಕೊಳ್ಳಲು ಇಲ್ಲಿಯ ಪ್ರಾಂತಿಕ ಸರಕಾರದಿಂದಲೂ ಆಗಿಲ್ಲ. ಆರ್ಥಿಕ ಮಂತ್ರಿಗಳು ನಿರಾತೆಗೆಡೆಯಿಲ್ಲವೆಂದು ಅತ್ಯಂತ ಭರವಸೆಯ ಮಾತುಗಳನ್ನೇನೋ ಆಡುತ್ತಿದ್ದಾರೆ. ರಾಷ್ಟ್ರದ ಸದ್ಯಸ್ಥಿತಿಯಲ್ಲಿ ನಮ್ಮ ಹುಟ್ಟುವಳಿಯು 'ಅಜ್ಜಿಂದಲ್ಲಿಗೆ—ಕೈಯಿಂದ ಬಾಯಿಗೆ' ಎಂಬಂತಿದೆ—ಅದೂ ತುಸು ಪ್ರಯಾಸದಿಂದಲೇ!

ಹೈದರಾಬಾದು—ಕಾಶ್ಮೀರ

ಭಾರತ ಮತ್ತು ಹೈದರಾಬಾದುಗಳೊಳಗಿನ ಮಾತುಕತೆಗಳು ಪುನಃ ಪ್ರಾರಂಭಿಸಿವೆ. ನಿಜಾಮರ ಸಲಹೆಗಾರರಾದ ಸರ್. ವಾಲ್ಟರ್ ಮೋಂಕ್ಟನ್ನರು ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನರೊಂದಿಗೆ ಒಂದು ಬಾರಿ ಸಾಕಷ್ಟು ಸುದೀರ್ಘವಾಗಿ ಸಂಭಾಷಿಸಿದ್ದಾರೆ. ಹೈದರಾಬಾದಿನ ಪ್ರಧಾನ ಮಂತ್ರಿ ಮಿ. ಲಾಯಿಕ್ ಆಲಿ ಮತ್ತಿತರ ಮಂತ್ರಿಗಳುಳ್ಳ ಪ್ರತಿನಿಧಿ ಮಂಡಲಿಯೂ ಡಿಲ್ಲಿಗೆ ತೆರಳಿ ಒಮ್ಮೆ ಮಾತುಕತೆ ಮುಗಿಸಿ ಹೈದರಾಬಾದಿಗೆ ಮರಳಿ ನಿಜಾಮರಿಗೆ ಸಂಗತಿ ನಿವೇದನೆ ಮಾಡಿಕೊಂಡು ಮುಂದಿನ ಮಾತುಕತೆಗಳಿಗಾಗಿ ಪುನಃ ಡಿಲ್ಲಿಗೆ ಮರಳಿದೆ. ಇದೇ ಸೋಮವಾರದಿಂದ ಪರ್ಯಾಲೋಚನೆಯ ದ್ವಿತೀಯಾಧ್ಯಾಯವಾರಂಭಿಸಿದೆ. ಹೈದರಾಬಾದಿನ ಇತ್ತೆಹಾದ್-ಉಲ್-ಮುಸ್ಲಿಮೀನ್ ಸಂಸ್ಥೆಯು ಪ್ರಜೆಗಳಿಗೆ ಭೀತಿದಾಯಕವಾಗಿರುವುದರಿಂದ ಅದನ್ನು ಬರ್ಖಾಸ್ತುಗೊಳಿಸಬೇಕೆಂಬ ಭಾರತ ಸರಕಾರದ ಅಭಿಪ್ರಾಯಕ್ಕೆ ಮಾನ್ಯತೆ ದೊರೆಯುವಂತೆ ಕಾಣುವದಿಲ್ಲ. ತನಗೆ ಸಾಕಷ್ಟು ಶಸ್ತ್ರ ಸರಬರಾಯಿ ಮಾಡದೆ ಹಿಂದೀ ಸರಕಾರವು ಒಪ್ಪಂದವನ್ನು ಅಗೌರವಿಸಿದೆ ಎಂದು ಹೈದರಾಬಾದಿನ ದೂರಿದೆ. ಇತ್ತ ಮದ್ರಾಸ್ ಪ್ರಾಂತ್ಯದ ಗಡಿಜಿಲ್ಲೆಗಳಲ್ಲಿ ಹೈದರಾಬಾದಿನ ಪೋಲಿಸ್ ಅಧಿಕಾರಿ

(೩ನೇ ಪುಟ ನೋಡಿರಿ).

WANTED

Applications are invited up to 31-3-48 for one Officer's post in the Bank, preferably from graduates with previous banking experience. The Candidate selected will be on probation for a period of 3 months, which may be extended or reduced at the discretion of the Bank. Scale of pay on appointment after the period of probation, will be Rs. 75-5/1-125 with such dearness allowance and other allowances as will be in force. The Candidate selected may be also started on a higher initial pay, considering his qualification and previous experience.

THE VIJAYA BANK, LTD.,

Head Office . MANGALORE.

Dated 1-3-48.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates:—

3 & 4 months — @ 2¼ % p. a.

5 & 6 months — @ 2¾ % p. a.

ಗುರುವಾರ, ಉಡುಪಿ, ೪-೩-'೪೮

ಭಾಷಾವಾರು ಪ್ರಾಂತ್ಯ ರಚನೆ

ಭಾವೀ ಭಾರತದ ರಾಜ್ಯಾಂಗ ವಿಧಾನಗಳನ್ನು ರೂಪಿಸುವುದಕ್ಕಾಗಿ ಘಟನಾ ಸಮಿತಿಯು ನೇಮಿಸಿದ್ದ ಸಮಿತಿಯು ಮಾಡಿರುವ ಶಿಫಾರಸುಗಳಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸುವ ಸೂಚನೆಯಿರುವುದು ಸಂತೋಷದ ಸಂಗತಿ. ಸಮಿತಿಯ ಸೂಚನೆಗಳ ಕುರಿತು ಘಟನಾ ಸಮಿತಿಯು ನಿರ್ಧಾರಕ್ಕೆ ಬರುವದಿನ್ನೂ ಬಾಕಿಯಿದೆಯಾದರೂ ಭಾಷಾವಾರು ಪ್ರಾಂತ್ಯರಚನೆಯ ಅವರ ಸೂಚನೆಗಳು ಮಾನ್ಯವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಹೊಸ ರಾಜ್ಯ ಘಟನೆಯು ಜ್ಯಾರಿಗೆ ಬರುವಾಗ ಕರ್ನಾಟಕ ಪ್ರಾಂತ್ಯವು ಇದ್ದೇ ಇರುವುದು ಎಂದು ಕನ್ನಡಿಗರೀಗಲೇ ನಿರ್ಧರಿಸಿಕೊಂಡರೆ ತಪ್ಪಾಗದು. ಆದರೆ, ನಿಜಸ್ಥಿತಿಯೆಂದರೆ, ಭಾಷಾವಾರು ಪ್ರಾಂತ್ಯರಚನೆಯು ಅನಿವಾರ್ಯವೆನ್ನಿಸುವಂತೆ ನವದಿಲ್ಲಿಯಲ್ಲಿರುವ ರಾಷ್ಟ್ರದ ಸೂತ್ರಧಾರಿಗಳ ಮನಸ್ಸಿಗದನ್ನು ಮುಟ್ಟಿಸಿದವರು ಮುಖ್ಯವಾಗಿ ಆಂಧ್ರರು. ಆದ್ದರಿಂದಲೇ ಪ್ರಥಮತಃ ಆಂಧ್ರ ಪ್ರಾಂತ್ಯ ರಚನೆಯೊಂದೇ ಆಗಿ, ಕರ್ನಾಟಕದಂತಹ ಇತರ ಭಾಷಾವಾರು ಭಾಗಗಳು ಹಿಂದೆ ಬೀಳುವ ನಿರೀಕ್ಷೆಯ ಸೂಚನೆ ಬಂದಿದ್ದಿತು. ಇದರಿಂದಾಗಿ ಶಕ್ತ್ರಿರಿದು ಕನ್ನಡಿಗರು ಮಾಡಿದ ಪ್ರಯತ್ನಗಳಿಗೂ ಬೆಲೆ ಬಂತೆಂಬುದು ಈ 'ಸೂತ್ರ ರಚನಾ ಸಮಿತಿ'ಯ ಒಕ್ಕಣೆಗಳಿಂದಲೇ ತಿಳಿಯುತ್ತದೆ. "ಭಾಷಾವಾರು ಪ್ರಾಂತ್ಯಗಳ ರಚನೆಯ ಸಂಬಂಧವಾಗಿ ಇತ್ತೀಚೆಗೊಂದು ಸರಕಾರೀ ಹೇಳಿಕೆ ಹೊರಟಿದ್ದಿತು. 1935ರ ಭಾರತ ಶಾಸನದಲ್ಲಿ ಒರಿಸ್ಸಾ ಮತ್ತು ಸಿಂಧ ಪ್ರಾಂತ್ಯಗಳನ್ನು ಪ್ರತ್ಯೇಕಿಸಿ ಸೇರಿಸಿಕೊಂಡಂತೆ ಹೊಸ ಘಟನೆಯಲ್ಲಿ ಆಂಧ್ರವನ್ನು ಪ್ರಾಂತ್ಯಗಳ ಪಂಗ್ತಿಯಲ್ಲಿ ಸೇರಿಸಿಕೊಳ್ಳಬಹುದೆಂದು ಆ ಹೇಳಿಕೆಯಲ್ಲಿ ಬಂದಿತ್ತು. ಸೂತ್ರರಚನಾ ಸಮಿತಿ ಕೂಡಾ, ಆಂಧ್ರವೊಂದನ್ನೇ ಉಲ್ಲೇಖಿಸುವದೆಂದು ಒಂದುಸಲ ನೆನಸಿದ್ದರೂ, ಎಲ್ಲವನ್ನೂ ಸರಿಯಾಗಿ ಆಲೋಚಿಸಿಕೊಂಡ ಮೇಲೆ, ಒಂದನ್ನಷ್ಟೇ ನಮೂದಿಸಿದರೆ ಸಾಕಾಗದು ಎಂಬ ಅಭಿಪ್ರಾಯಕ್ಕೆ ಬಂದಿದೆ. ಹೊಸ ಪದ್ಧತಿಯಾರಂಭಿಸುವಾಗಲೇ ಅದರ ಎಲ್ಲಾ ಆಡಳಿತ ಯಂತ್ರಗಳೂ ಪೂರ್ಣ ರೂಪದಲ್ಲಿರಲಾಗುವಂತೆ ಪೂರ್ವ ಸಿದ್ಧತೆಗಳನ್ನು ಕೈಕೊಳ್ಳಲಾಗುವದು. ಆದ್ದರಿಂದ ಆಂಧ್ರವೊಂದರದ್ದೇ ಅಲ್ಲ, ಇತರ ಎಲ್ಲಾ ಭಾಷಾವಾರು ಕ್ಷೇತ್ರಗಳ ಸಂಬಂಧದ ಎಲ್ಲಾ ವಿಷಯಗಳನ್ನೂ ವಿಚಾರಿಸಿ, ರಾಜ್ಯಾಂಗ ಶಾಸನವು ಕೊನೆಯ ಒಪ್ಪಿಗೆ ಪಡೆಯುವ ಮೊದಲೇ ಅದರೊಳಗೆ ಸೇರಿಕೊಳ್ಳಲಾಗುವಂತೆ ಸಕಾಲದಲ್ಲಿ ತನ್ನ ವರದಿಯನ್ನೊಪ್ಪಿಸುವದಕ್ಕಾಗಿ ಒಂದು ಕಮಿಶನನ್ನು ನೇಮಿಸಬೇಕೆಂದು ಈ ಸಮಿತಿ ಶಿಫಾರಸು ಮಾಡುತ್ತದೆ" ಎಂಬ ಭಾವನೆಯಲ್ಲೂ 'ಆಂಧ್ರಕ್ಕಿಂತ ಕರ್ನಾಟಕ ಹಿಂದಿದೆ' ಎಂಬುದು ಪಡಿ ಮೂಡಿದೆ. ಆದರೆ ಓರ್ವ ಅತಿಥಿಗಾಗಿ ಏರ್ಪಡಿಸಿದ ಸ್ವಾಗತ ಕೂಟದಲ್ಲಿ ಅನ್ಯರಿಗೂ ಸಮಾನ ದರ್ಜೆ ದೊರೆಯುವಂತೆ, ಆಂಧ್ರದೊಂದಿಗೆ ಕರ್ನಾಟಕ ಮತ್ತಿತರ ಭಾಷಾವಾರು ಪ್ರಾಂತ್ಯಗಳೂ ಮನ್ನಣೆ ಹೊಂದಬಹುದು. ಇದು ಕೂಡಾ ನೇಮಕ ಹೊಂದಲಿರುವ 'ವಿಚಾರಣಾ ಸಮಿತಿ'ಯ ತೀರ್ಮಾನಗಳನ್ನು ಅವಲಂಬಿಸಿಯೇ ನಡೆಯಲಿಕ್ಕಿದೆ. ಆರ್ಥಿಕ ಹಾಗೂ ಆಡಳಿತಾಧ್ಯತೆಯಿಲ್ಲದ ಒಂದು ಭಾಗವು ಭಾಷೆ, ಸಂಸ್ಕೃತಿಗಳ ಅಭಿಮಾನವೊಂದನ್ನೇ ಕಟ್ಟಿಕೊಂಡು ಪ್ರತ್ಯೇಕತೆ ಕೇಳುವದಾದರೆ ಅದೆಂದಿಗೂ ಮನ್ನಿಸಲ್ಪಡಲಾರದು. ಕರ್ನಾಟಕ ಪ್ರಾಂತ್ಯದ ಮಟ್ಟಿಗೆ ಇಂತಹ ಯಾವ ಪರೀಕ್ಷೆಗೆ ನಿಲ್ಲುವದಕ್ಕೂ ಭಯವಿಲ್ಲ. ಆದರೆ ಕರ್ನಾಟಕದ ಯೋಗ್ಯತೆಯ ಕುರಿತು ಕೇಂದ್ರಾಧಿಕಾರಿಗಳಾದ ಕೆಲವರಲ್ಲಿ ಸಂದೇಹಗಳವೆಯೆಂಬುದನ್ನೂ, ಕರ್ನಾಟಕದೊಳಗಡೆಯಲ್ಲೇ ಕೊಂಕಣಿ, ತುಳು ಇತ್ಯಾದಿ ಉಪ ಭಾಗಗಳ ಮಾತು ಕೇಳಬರುತ್ತಿರುವುದನ್ನೂ ಈ ಸಂದರ್ಭದಲ್ಲಿ ಮರೆಯಬಾರದು. ಹೊರಗಿನವರ ಆ ಅಪನಂಬಿಕೆಗಳಲ್ಲೂ, ಒಳಗಿನವರ ಈ 'ಅರ್ಧ ಸವಾಲು'ಗಳಲ್ಲೂ ಏನೂ ಹುರುಳಿಲ್ಲವೆಂಬುದನ್ನು ತೋರಿಸಿಕೊಡಲು ಕನ್ನಡಿಗರು ಒಮ್ಮನಸ್ಸಿನಿಂದ ಈ ಸಂದರ್ಭದಲ್ಲಿ ತಯಾರಾಗಬೇಕು. ಈ ಕುರಿತು ಅಗತ್ಯವುಳ್ಳ ಎಲ್ಲಾ ಕಾರ್ಯಗಳನ್ನೂ ಕೂಡಲೇ ಕೈಕೊಳ್ಳಬೇಕು.

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ ಹಲ್ಲು ಪುಡಿ

ಒಂದು ತೊಲೆ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಕಿ. ಲಿಮಿಟೆಡ್, ಕಾಸರಗೋಡು, ದ. ಇಂಡಿಯ.

ಮಹಾ ಸಭಾವಾದಿಗಳ ಮರುಳು ವಾದ!

ಇದೇ ಜನವರಿ ತಾ. 30ರ ವರೆಗೂ ಗಾಂಧಿಜೀಯನ್ನೂ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸರಕಾರಗಳನ್ನೂ ಮನಸೋಚ್ಛ ಟೀಕಿಸುತ್ತಾ, ಕಾಂಗ್ರೆಸ್ ಸರಕಾರದೊಂದಿಗೆ ಅಸಹಕರಿಸುತ್ತಿದ್ದುದಷ್ಟೇ ಅಲ್ಲ, ಗಾಂಧಿಜೀ ಮತ್ತು ಕಾಂಗ್ರೆಸ್ಸು ಹಿಂದುಗಳ ವೈರಿಗಳೆಂದು ಘೋಷಿಸುತ್ತಾ ಬಂದಿದ್ದ ಹಿಂದೂ ಮಹಾಸಭೆಯ ಕೆಲವು ಪತ್ರಿಕೆಗಳೂ ವ್ಯಕ್ತಿಗಳೂ ಗಾಂಧಿಜೀಯ ಕೊಲೆಯಾದೊಡನೆಯೇ ಗಾಂಧೀಭಕ್ತರಾದಂತೆಯೂ, ಜಾತೀಯ ಐಕ್ಯತಾವಾದಿಗಳಂತೆಯೂ ನಟಿಸಹತ್ತಿವೆ.

ಹಿಂದೂ ಮಹಾಸಭೆಯ ಅಧಿಕಾರ ಸ್ಥಾನದಲ್ಲಿದ್ದ ಗೂಂಡಾಗ್ರಗಣ್ಯನೊಬ್ಬನು ಮಹಾತ್ಮಾಜೀಗೆ ಗುಂಡಿಟ್ಟು ಕೊಂದುದರಿಂದ ಜನತೆ ಮತ್ತು ಸರಕಾರವು ತಮ್ಮ ಕಡೆಗೆ ಬೀರಿರುವ ದೃಷ್ಟಿಯೆದಿರು ನಿಲ್ಲಲಾರದೆ ಮಹಾ ಸಭಾವಾದಿಗಳು ಬಾಲ ಮಡಚುವುದು ಸಹಜವೇ ಇದೆ. ಬೇರಾವ ಘನಸಂಸ್ಥೆಯಲ್ಲೂ ಸ್ಥಾನಮಾನ ದೊರೆಯದ—ಅಥವಾ ಕಾಂಗ್ರೆಸಿನಂತಹ ಸ್ವಾತಂತ್ರ್ಯ ಹೋರಾಟಗಾರ ಸಂಸ್ಥೆಯಲ್ಲಿದ್ದು, ಅಲ್ಲಿ ದೊರೆತ ಕಷ್ಟನಷ್ಟಗಳಿಂದ ತಮ್ಮ ಅಳ್ಳೆದೆ ಕಳಕೊಂಡು ಶರಣು ಹೊಡೆದು ಹೊರಸಿಡಿದಿದ್ದ—ಇಲ್ಲವೇ ಅಲ್ಪಬುದ್ಧಿ, ಅರೆಭ್ರಾಂತ ಮನೋವೃತ್ತಿ, ಅಪಕ್ವ ಮೆದುಳು ಇತ್ಯಾದಿಗಳುಳ್ಳ—ಹೆಚ್ಚಿನವರೇ ತುಂಬಿದ್ದ ಮಹಾಸಭೆಯಿಂದ ಇಂತಹ ಹೇಡಿತನವನ್ನಲ್ಲದೆ ಬೇರಾವುದನ್ನೂ ಜನತೆ ನಿರೀಕ್ಷಿಸಿರಲಿಲ್ಲ. ತಮ್ಮ ಸಭೆಯವನಿಂದ—ಅದೂ ಸಭೆಯ ಜವಾಬ್ದಾರಿ ಸ್ಥಾನವೊಂದರಲ್ಲಿದ್ದವನಿಂದ ಗಾಂಧಿಜೀಯ ಕೊಲೆಯಾಯಿತೆಂದೊಡನೆಯೇ ಬೆಂಗೋಲಿಲ್ಲದ ಮಹಾಸಭಾವಾದಿಗಳೆಲ್ಲರೂ ಮುಗ್ಗರಿಸಿ, ಬಗ್ಗಿ ತಮ್ಮಾ ಸ್ಥಾನಗಳಿಂದ ಜಾರಿಕೊಳ್ಳುವದೇನೋ ಸ್ವಾಭಾವಿಕವೇ. ಆದ್ದರಿಂದ ರಾಷ್ಟ್ರದ ಹಿಂದೂಸಭಾ ಶಾಖೆಗಳು ತಾವಾಗಿ ಬಡಬಡನೇ ಬರ್ಖಾಸ್ತು ಹೊಂದಿರುವುದರಲ್ಲಿ "ಆಶ್ಚರ್ಯವೇನೂ ಇಲ್ಲ; ಆಕ್ಷೇಪವೆಂತೂ ಇಲ್ಲ—ಅವುಗಳ ಉಳಿವು ಅಳಿವುಗಳ ಕಡೆಗೆ ಜನತೆಯು ಲಕ್ಷ್ಯವಿನ್ನದರಲ್ಲವೇ?

ಆದರೆ ಜನತೆಯ ಈ ಅಲಕ್ಷ್ಯವೇ ಮಹಾ ಸಭೆಯ ಕೊಳಕು ಮನೋವೃತ್ತಿಗೆ ಆಶ್ರಯವಾಯಿತು. ಅಸಡ್ಡೆ ಮಾಡಿಬಿಟ್ಟ ಕಾರಣದಿಂದಲೆ ಈ ಒಳರೋಗವು ಗಾಂಧಿಜೀಯನ್ನು ಬಲಿಗೊಳ್ಳುವ ವರೆಗೂ ಬೆಳೆದುಹೋಯಿತು.

ಈಗ ಜನತೆ ಮತ್ತು ಸರಕಾರಗಳು ತನ್ನ ಮೇಲೆ ಉರಿಗಣ್ಣು ತೆರೆದುದನ್ನು ಕಂಡೊಡನೆ ಮಹಾಸಭೆಯು ಚಲ್ಲಾಪಿಲ್ಲಿಯಾದುದು ಸಹಜ. ಧೈರ್ಯ ಸಾಹಸಗಳ ಯಾವುದೊಂದು ದಾಖಲೆಯನ್ನೂ ಇದುವರೆಗಿನ ತನ್ನಾಯುಷ್ಯದಲ್ಲೇ ನಿರ್ಮಿಸದಿರುವ—ಹಿಂದೂ ರಾಜ ಮಹಾರಾಜರನ್ನು, ಸ್ವಾಮಿ ಕಾಮಿಗಳನ್ನು, ಅತ್ಯಲ್ಪ ಸಂಖ್ಯೆಯ ವರ್ಗದವರನ್ನು ಮುಖಸ್ತುತಿ ಮಾಡುತ್ತಾ ಅಧಿಕಸಂಖ್ಯಾಕ ಹಿಂದುಗಳನ್ನು ಸಂಪೂರ್ಣವಾಗಿ ಮರೆತುಬಿಟ್ಟಿರುವ—ಅಸ್ಪೃಶ್ಯತಾ ನಿವಾರಣೆ, ಜಾತಿಭೇದ ನಿವಾರಣೆಯಂತಹ ಅಗತ್ಯವುಳ್ಳ ಸುಧಾರಣೆಗಳಗೊಡವೆಗೇನೇ ಹೋಗದೆ, ಹಿಂದೂ ಸಮಾಜದೊಳಗಡೆಯಲ್ಲೂ, ಅನ್ಯ ಸಮಾಜಗಳ ಮೇಲೂ ನಂಜು ವಿಷದಂತಹ ಭೇದ, ಮತ್ಸರ, ದ್ವೇಷಗಳನ್ನು ನಿರ್ಮಿಸುತ್ತಾ ಬಂದಿರುವ—ಒಟ್ಟಿನ ಮೇಲೆ ಹಿಂದೂ ಧರ್ಮದ ಘನ ತತ್ವಗಳಿಗೆ ದ್ರೋಹವೊಂದನ್ನಲ್ಲದೆ ಬೇರಾರಿಗೂ ಏನನ್ನೂ ಮಾಡಿಲ್ಲವೆಂದು ಪಣ ತೊಟ್ಟು ಹೇಳಬಹುದಾದ—ಈ ಹಿಂದೂ ಮಹಾ ಸಭೆಯು ತನ್ನ ಪಾಲಿಗೆ ಬಂದ ಅಗ್ನಿ ಪರೀಕ್ಷೆಗೆ ನಿಲ್ಲಲು ಹೆದರಿ ತಾನಾಗಿ ಅಂತರ್ಧಾನ ಹೊಂದದೆ ಬೇರೇನು ಮಾಡೀತು? ಕಾಂಗ್ರೆಸಿನಂತೆ ತನ್ನ ತತ್ವ ಮತ್ತು ಧೋರಣೆಗಳಿಗಾಗಿ ಕಷ್ಟ ನಷ್ಟಗಳನ್ನು ಸಹಿಸಿ ಹೋರಾಡಬಲ್ಲ ಸಂಸ್ಥೆಯೇ ಇದು? ಪ್ರಾಣಕ್ಕಿಂತ ಪ್ರಿಯವಾದುದು ಈ ಸಂಸ್ಥೆಯವರ ಪಾಲಿಗೆ ಬೇರೇನಿದೆ?

ಆದ್ದರಿಂದ ಹಿಂದೂ ಮಹಾಸಭೆಯ ಇಂದಿನ ಧೋರಣೆಯು ಎಲ್ಲರಿಗೂ ಅರ್ಥವಾಗುವಂತಹದೇ—ಪ್ರಾಣ ರಕ್ಷಣೆಗಾಗಿ ಶಸ್ತ್ರ ಸನ್ಯಾಸ, ಶರಣಾರ್ಥಿ! ಮಹಾಸಭೆಯು ಆತ್ಮ ವಂಚನೆಯಿಲ್ಲದೆ ತನ್ನೀ ಸೋಲನ್ನು ಸ್ಪಷ್ಟವಾಗಿ ಒಪ್ಪಿಕೊಂಡು ಹಾದಿಗೆ ಬರುತ್ತಿದ್ದರೆ ಜನತೆಯು ಮತ್ತೊಮ್ಮೆ ಅವರ ಗೋಜಿಯನ್ನು ಬಿಡಬಹುದಿದ್ದಿತು. ಸೋತು ಹುಲ್ಲು ಕಡ್ಡಿ ಕಚ್ಚಿದವರ ಮೇಲೂ ಕಾಲಿಡುವವರು ಹಿಂದೀಯರಲ್ಲ.

ಇದುವರೆಗಿನ ತಮ್ಮ ಹೇಯ ಕೃತ್ಯಗಳಿಗಾಗಿ ಸ್ಪಷ್ಟವಾಗಿ ಪಶ್ಚಾತ್ತಾಪ ಸೂಚಿಸಿ, ಇನ್ನು ಮುಂದೆ ರಾಜಕೀಯದಲ್ಲಿ ಕೈಯಿಕ್ಕಲಾರೆವೆಂದು ನಿರ್ಧರಿಸಿ ಕುಳಿತುಕೊಳ್ಳುವದೊಂದೇ ಮಹಾಸಭೆಯವರ ಕರ್ತವ್ಯವಿತ್ತು. ಆದರೆ, ಈಗ ಕೂಡಾ ತಮ್ಮ ದುರ್ಬುದ್ಧಿ, ಹೇಡಿತನದ ಪರಿಚಯವು ಜನತೆಗಾಗಿಲ್ಲವೆಂದು ಭಾವಿಸಿಕೊಂಡು ಹಿಂದೂ ಮಹಾಸಭೆಯ ಕೆಲವು ಅರೆಮರುಳರು ಹೂಡುತ್ತಿರುವ ವಾದಗಳು ವಿನೋದವನ್ನೆಬ್ಬಿಸುತ್ತಿವೆ. ಇನ್ನೂ ಇಂಥವರಿಗೆ ಚಿಕಿತ್ಸೆ ಅಗತ್ಯವಿದೆ ಎಂಬುದನ್ನವು ಸೂಚಿಸುತ್ತಿವೆ.

'ಒಬ್ಬ ಗೋಡ್ಸೆ ಮಾಡಿದ ಮಹಾಪರಾ[illegible] ಹಿಂದೂ ಮಹಾ ಸಭೆಯನ್ನು ದೂರುವುದೆಂದರೇನು?' 'ಯಾರನ್ನೂ ದ್ವೇಷಿಸದೆ ಶಾಂತ ವಾತಾವರಣ ಸ್ಥಾಪಿಸಬೇಕೆಂದ ನೆಹರು, ವಲ್ಲಭಾಯಿ, ಕೃಪಾಲನಿ, ದೇವದಾಸ ಗಾಂಧಿಯವರ ಮಾತಿನಂತೆ ವರ್ತಿಸೋಣ. ಮಿಕ್ಕವರಲ್ಲಿ ವರ್ಗ ದ್ವೇಷ ವ್ಯಕ್ತಿ ದ್ವೇಷಗಳಿವೆ; ಅವರ ಮಾತು ಕೇಳಬೇಡ; ಜಾತೀಯತಾ ಭಾವನೆಯನ್ನೇ ನಿವಾರಿಸಿ ಬಿಡಬೇಕು'—ಎಂಬಂತಹ ಮಾತುಗಳನ್ನಾಡುತ್ತಾ, ಮಹಾಸಭೆಯವರು (ಅಕಸ್ಮಾತ್ತಾಗಿ—ಇಪ್ಪತ್ತನಾಲ್ಕೇ ತಾಸುಗಳೊಳಗೆ!) ಮೋಹ ಸಭೆಯವರಾಗಿ ತೋರಿಸಿಕೊಳ್ಳಹತ್ತಿದ್ದಾರೆ—ಪಾಪ!

ಗುಂಡು ಹಾರಿಸಿದ ಗೋಡ್ಸೆಯ ಹೃದಯವನ್ನಾದರೂ ಶುದ್ಧೀಕರಿಸಿಟ್ಟುಕೊಳ್ಳುವ ಪ್ರಯತ್ನ ನಡೆದಿರುವಾಗ, ಇತರ ಹಿಂದೂ ಮಹಾ ಸಭೆಯವರ ಹೃದಯ ಮಾರ್ಪಾಟವಾಗಿರುವುದು ನಿಜವಾದರೆ ಸ್ವಾಗತಿಸದವರಾರು? ಮೊದಲೇ ಹೇಳಿರುವಂತೆ ಹಿಂದೂ ಧರ್ಮ ದ್ರೋಹವೊಂದನ್ನಲ್ಲದೆ ಬೇರಾರಿಗೂ ಏನನ್ನೂ ಮಾಡದಿರುವ ಇವರ ಮೇಲೂ ವ್ಯಕ್ತಿ ದ್ವೇಷವೆಂದರೇನು

ವರ್ಗ ದ್ವೇಷ (ಇಂತಹ ಕೆಳವರ್ಗಕ್ಕಿಳಿದಿರುವುದನ್ನು ದ್ವೇಷಿಸಬೇಕು) ತಪ್ಪೇನು?

ಅವರೇ ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳುವುದನ್ನು ಬಿಟ್ಟು ಮೇಲಿನಂತಹ ಕುಹಕ ವಾದ ಹೂಡುವವರ ದುರ್ಬುದ್ಧಿ, ದುರಭಿಮಾನವಿನ್ನೂ ಮಾಯವಾಗಿಲ್ಲವೆಂಬುದನ್ನು ಜನತೆಯು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಇಂತಹ ನಂಜು ವಿಷಗಳನ್ನು ದಾಕ್ಷಿಣ್ಯವಿಡದೆ ಪೂರ್ತಿ ನಿವಾರಿಸಿಕೊಳ್ಳಲೇಬೇಕು.

ಗಾಂಧಿಜೀಗೆ ಗುಂಡಿಟ್ಟುದು ಗೋಡ್ಸೆಯೊಬ್ಬನೇ ಎಂಬುದು ನಿಜ. ಕೈ ಜೋಡಿಸಿಕೊಂಡು, ಎದೆ ತೆರೆದಿಟ್ಟುಕೊಂಡು ಮುಂದೆ ಬರುವ ಎಪ್ಪತ್ತೆಂಟರ ಮುದುಕನಿಗೆ ಗುಂಡಿಡಲು ಅವನೊಬ್ಬನೇ ಅಲ್ಲದೆ ಅಖಿಲ ಭಾರತದ ಹಿಂದೂ ಮಹಾ ಸಭೆಯವರೆಲ್ಲರೂ ಹೋಗಬೇಕೆಂದಿತ್ತೆ? ಒಂದೆಡೆಯ ಹಿಂದೂ ಮಹಾಸಭೆಯ ಕಾರ್ಯದರ್ಶಿಯಾಗಿದ್ದ ಗೋಡ್ಸೆ ಬಾಪುವನ್ನೇಕೆ ಕೊಂದು ಹಾಕಿದ? ಹಿಂದೂ ಮಹಾ ಸಭಾ ಮನೋವೃತ್ತಿಯ ಒಂದು ಗುರಿಯ ಸಾಧನೆಗಾಗಿಯೇ ಅಲ್ಲವೇ? 'ಅವನೊಬ್ಬನೇ ಹೊಣೆ ಹೊರತು ಹಿಂದೂ ಮಹಾ ಸಭೆಯಲ್ಲ' ಎನ್ನಬೇಕಾದರೆ, ಮಹಾಸಗಿಯಾಗಿ ಗೋಡ್ಸೆಗೆ, ಆಗ್ಟೆ ಇವನ ಕುಟುಂಬ, ಸೊತ್ತು ವಿತ್ತಗಳಿಗೆ ವ್ಯಕ್ತಿಶಃ ಗಾಂಧಿಜೀಯಿಂದ ಅನ್ಯಾಯವಾಗಿದ್ದು ಅವ ಅದಕ್ಕೆ ಪ್ರತೀಕಾರ ಮಾಡಿದನೆಂದು ಊಹಿಸಬೇಕೆ? ಮತ್ತೇಕೆ ಮಹಾಸಭೆಯವರ ಈ ತಲೆತಿರುಕವಾದ?

'ಗೋಡ್ಸೆಯೊಬ್ಬನೇ' ಎಂದ ಮೇಲೆ ಗಾಂಧಿಜೀಯ ಕೊಲೆಯ ವಾರ್ತೆ ಕೇಳಿದೊಡನೆಯೇ ಹಿಂದೂ ಮಹಾಸಭೆಯ ಶಾಖೆಗಳೆಲ್ಲಾ ಬಡಬಡನೇ ಬರ್ಖಾಸ್ತುಗೊಂಡುದೇಕೆ? ಮಹಾ ಸಭೆಯ ಮೇಲೇನೂ ಬಹಿಷ್ಕಾರ ಬಿದ್ದಿಲ್ಲ. ಗೋಡ್ಸೆಯ ಕೃತ್ಯಕ್ಕೂ ಹಿಂದೂ ಮಹಾ ಸಭೆಗೂ ಸಂಬಂಧವೇ ಇಲ್ಲವೆಂದಾದರೆ ಆಪಾದ ಭೀತಿಯಿಂದಾಗಲೀ, ನಿಷೇಧ ಸೂಚನೆಯಿಂದಾಗಲೀ ಮಹಾಸಭೆ ಅಡಗಿಕೊಳ್ಳುವ ಅಗತ್ಯವೇನಿತ್ತು?

ಇನ್ನು ಜನತೆಯ ಕ್ರೋಧಕ್ಕೆ ಹೆದರಿ, ಕೇವಲ ತಮ್ಮ ರಕ್ಷಣೆಗಾಗಿಯೇ "ಧುರೀಣರು ಹೇಳುವಂತೆ ಶಾಂತರಾಗಿರಿ" ಎಂದು ಕೂಗು ಹಾಕುವ ಮಹಾ ಸಭೆಯವರ ಮಾತಿಗೆ, ಯಾರೂ ರಾಷ್ಟ್ರೀಯ ಶಾಂತಿ ಸ್ಥಾಪನೆಯ ಉದ್ದೇಶದಿಂದ ಸ್ವಯಿಂದಲ್ಲವೆ? ಕಾರ್ಯತಃ ಅದನ್ನು ಸಾಧಿಸಿದ್ದಾರೆ. ಮತ್ತೇ ಶಾಂತಿ, ಸುರಕ್ಷಿತತೆಗಾಗಿಯೇ ಹಿಂದೂ ಮಹಾಸಭೆಯವರ ಈ ಕುಹಕ ಬುದ್ಧಿಯ ಛಾಯೆ ಕೂಡಾ ಉಳಿಯದಂತೆ ನಿರ್ಮೂಲಿಸಲಿದ್ದಾರೆ.

ಭಯಂಕರ ಜಾತೀಯತಾ ದ್ವೇಷವನ್ನು ಬೆಳೆಸಿ, ಲೋಕದ ಚರಿತ್ರೆಯಲ್ಲೇ ಅಪೂರ್ವವಾದ ಮಹಾ ಶಾಂತಿ ದ್ರೋಹವನ್ನು ಮಾಡಿ ಬಿಟ್ಟ ಮಹಾ ಸಭೆಯವರು, ಆ ತಪ್ಪಿಗಾಗಿ "ನಮ್ಮನ್ನು ಕಠಿಣವಾಗಿ ಶಿಕ್ಷಿಸಬೇಡಿ. ನಾವು ಬದುಕಿಕೊಳ್ಳುತ್ತೇವೆ; ಬಿಟ್ಟುಬಿಡಿ" ಎಂದು ಅಂಗಲಾಚುವ ಮಾತಿಗೂ ತಮ್ಮ ಹಿಂದಿನ ದುರಭಿಮಾನದ ವಿಷವನ್ನೇ ಬೆರಸಿ "ಜಾತೀಯತಾ ದ್ವೇಷ ನಿವಾರಿಸೋಣ; ಕಾಂಗ್ರೆಸ್ ಧುರೀಣರ ಮಾತಿನಂತೆ ನಡೆಯಿರಿ" ಎಂದು ರೂಪ ಬದಲಾಯಿಸಿ ಹೇಳಿದ ಮಾತ್ರಕ್ಕೆ ಸಾರ್ವಜನಿಕರು ವಂಚಿಸಲ್ಪಡಲಾರರು.

ಜನತೆಗೆ ಈ ವಿಷ ಜಂತುಗಳೂ ವಿನಯವನ್ನು ಕಲಿಸುವುದೇ ಆಹ!

(೩ನೇ ಪುಟದಿಂದ)

ಗಳು ಆಕ್ರಮ ನಡಸಿದ್ದಾರೆಂದು ಮದ್ರಾಸ್ ಸರಕಾರ ದೂರಿದೆಯಲ್ಲದೆ ತಕ್ಕ ರಕ್ಷಣಾ ವ್ಯವಸ್ಥೆ ಕೈಕೊಂಡಿದೆ. ಜುನಾಗಡಿನಲ್ಲಿ ಜನಮತ ತೆಗೆದಾಗ ಅದು ಹಿಂದೀ ಕೇಂದ್ರಕ್ಕೆ ಸೇರಬೇಕೆಂಬುದಕ್ಕೆ 190,279 ಮತಗಳೂ ಪಾಕಿಸ್ತಾನಕ್ಕೆ ಸೇರಬೇಕೆಂಬುದಕ್ಕೆ 91 ಮತಗಳೂ ದೊರೆತಿವೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
R. E. P. 655/47 in O. S. 186/46
ಅರ್ಜಿದಾರ: ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕುಂದಾಪುರ.
ಎದುರು: ಕೇಶವ ಭಟ್ಟ ಕೂಡಾ

1ನೇ ಎದುರು ಕ. ಕೇಶವ ಭಟ್ಟ, 2ನೇ ಎದುರು ಕೆ. ಲಕ್ಷ್ಮೀನಾರಾಯಣ ಭಟ್ಟ ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ಡಿಕ್ರಿ ಮೇಲೆ ಅರ್ಜಿದಾರನು ದಾಖಲು ಮಾಡಿದ ಅಮಲ್ಜಾರಿ ಅರ್ಜಿಯು ತಾ. 10-3-48ಕ್ಕೆ ತನ್ನ ಬಗ್ಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲು ಕೋರ್ಟಿನ ಮುಂದೆ ಹಾಜರಾಗಿ ಮಾಡಿಕೊಳ್ಳತಕ್ಕದ್ದು.

A. N. Rao,
Advocate for the Petitioner
Coondapoor, 28-2-48

1947ನೆ ಆಗೋಸ್ತು ತಾ. 30-9-47 ನೆನೆಪಿರಲಿ ಕೈಲಾಸ ಬಿಟ್ಟದ ಗಿಡ ಮೂಲಿಕೆಯ (ರಿಜಿಸ್ಟರ್ಡ್) ಒಂದು ಡೋಸ್ ಔಷಧವನು ತಾ. 25-3-48ನೆ ಶನಿವಾರ ಮಧ್ಯಾಹ್ನ ಬಿಸಿ ಸೇವಿಸಿದರೆ ಎಂತಹ ಅಸ್ತಮಾ-ಗೂರು ಬ್ಬಸವು ಕಡಿಮೆಯಾಗುವುದು.
ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.
Bramhachari G. Das,
Shri Sidh Bramhacharya,
Sewa Ashram,
P. O. Chitrakot (U. P.)

ಶಿರ್ವ ಪಂಚಾಯ್ತ ಬೋರ್ಡು ಪ್ರೆಸಿಡೆಂಟರಿಂದ.

ಶಿರ್ವ ಪಂಚಾಯ್ತ ಬೋರ್ಡಿನ ವಾಹನ ನಾರಸಂತೆ ಮತ್ತು ಬನಿಯ ಮಾರ್ಕೆಟಿನಲ್ಲಿ 1-4-1948ರಿಂದ 31-3-49ರ ವರೆಗಿನ ಒಂದು ವರ್ಷ ವರೆ ವಸೂಲು ಮಾಡುವ ಸ್ವತಂತ್ರವನ್ನು ತಾ. 15-3-48ನೇ ಸೋಮವಾರ ಸಾಯಂಕಾಲ ಗಂಟೆ 4ಕ್ಕೆ ಪಂಚಾಯ್ತ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು. ಏಲಂ ಶರ್ತಗಳನ್ನು ಪಂಚಾಯ್ತ ಬೋರ್ಡಿನ ಪ್ರಕಟಣಾ ಪತ್ರಿಕೆಯಿಂದಾಗಲೀ, ಆಫೀಸಿನಲ್ಲಾಗಲೀ ತಿಳಿಯಬಹುದು ಎಂಬ ಸಂಗ್ತಿ ಎಲ್ಲಾ ಬಿಡ್ಡುದಾರರಿಗೂ ಸಮಸ್ತ ಜನರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

(Sd) **S. Annaya Hegde,**
President Panch. Bd. Shirva.
ಪಂ. ಬೋ. ಆಫೀಸು, ಶಿರ್ವ 1-3-48

ಉಡುಪಿ.

ಮನೆಮದ್ದು ಪುಸ್ತಕಕ್ಕೆ ಸಂಭಾವನೆ-ಸ್ಥಳೀಯ ಡಾ। ಕೊಡವೂರು ವೆಂಕಟ್ರಾಯರು ಬರೆದಿರುವ 'ಮನೆಮದ್ದು' (Home Remedies) ಗ್ರಂಥಕ್ಕೆ ಮದ್ರಾಸು ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿಯವರು ರೂಪಾಯಿ 50 ಸಂಭಾವನೆಕೊಟ್ಟಿರುವುದು ಅಭಿನಂದನೀಯ.

ಜಿಲ್ಲೆಗೊಂದು ವಿಮಾನ ನಿಲ್ದಾಣ

ಒಕ್ಕೂಟ ಸರಕಾರವು ಮಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ವಿಮಾನ ನಿಲ್ದಾಣಗಳನ್ನು ಸ್ಥಾಪಿಸಬೇಕೆಂದು ಯೋಚಿಸಿದೆ.

ಸತ್ಕಾರಕೂಟದಲ್ಲಿ ಕಾಂಗ್ರೆಸ್ ಮಂತ್ರಿಮಂಡಲದ ಟೀಕೆ- ಉಡುಪಿ ಮಂಗಳೂರು ಮುನಿಸಿಪಾಲಿಟಿಗಳ ಕಡೆಯಿಂದ ಮದ್ರಾಸು ಯುನಿವರ್ಸಿಟಿ ಸಿನೇಟಿಗೆ ಆರಿಸಲ್ಪಟ್ಟ ಶ್ರೀಮತಿ ಲೀಲಾಬಾಯಿ ಕಾಮತರನ್ನು ಗೌರವಿಸುವರೆ ಕಳೆದ ತಾ 25ನೆ ಬುಧವಾರ ಸಂಜೆ ಮುಕುಂದ ನಿವಾಸದಲ್ಲಿ ಮುನಿಸಿಪಲ್ ಕೌನ್ಸಿಲರ್ ಶ್ರೀ ಟಿ. ರಮೇಶ ಪೈಗಳು ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಕುಂದಾಪುರ ಡಿವಿಜನಿನ ಡಂಗಾಪಿ ಸಬ್ ಕಲೆಕ್ಟರಾಗಿದ್ದ ಸ್ಥಳೀಯ ತಹಸಿಲ್ದಾರ್ ಶ್ರೀ ಎ. ಸದಾನಂದ ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಟಿ. ಅನಂತ ಪೈಗಳು ಶ್ರೀಮತಿಯವರನ್ನು ಅಭಿನಂದಿಸುತ್ತಾ ಅವರಿಂದ ಆಗಬೇಕಾದ ಕಾರ್ಯಗಳೇನೆಂಬುದನ್ನು ಸೂಚಿಸಿ, ಉಡುಪಿಗೆ ಕಾಲೇಜಿನ ಅವಶ್ಯಕತೆ, ಮಲ್ಪೆ ಬಂದರದ ಅಭಿವೃದ್ಧಿ ಇತ್ಯಾದಿ ವಿಷಯಗಳ ಕುರಿತೂ ಮಾತನಾಡಿದರು. 'ಉಡುಪಿಯಲ್ಲಿ ಶ್ರೀ ಕೃಷ್ಣ ಮಠ ಅಷ್ಟ ಮಠಗಳ ವಿನಹ ಬೇರೇನಿದೆ? ರೈಲು ಇದೆಯೋ, ಕಾಲೇಜು ಇದೆಯೋ ದೊಡ್ಡ ಬಂದರವಿದೆಯೋ ಎಂಬ ಪ್ರಶ್ನೆಗಳು ಸಿಂಡಿಕೇಟಿನ ನಮ್ಮ ರಾಜಾ ಕಚೇರಿ ಸ್ಥಳಗಳಲ್ಲಿಯವರು ನನ್ನನ್ನು ಪ್ರಶ್ನಿಸುತ್ತಿದ್ದಾರೆ' ಎಂದು ಡಾ. ಟಿ. ಮಾಧವ ಪೈಗಳು ಸ್ವಾನುಭವದ ಅಭಿಪ್ರಾಯಗಳನ್ನಿತ್ತು ಉಡುಪಿ ಮುನ್ಸಿಪಲ್ ಕ್ಷೇತ್ರವು ಮಲ್ಪೆ, ಕಲ್ಯಾಣಪುರ, ಮಣಿಪಾಲದ ವರೆಗೆ ಉದ್ದಗಲದಲ್ಲಿಯೂ ವ್ಯವಹಾರದ ದೃಷ್ಟಿಯಿಂದಲೂ ಬೆಳೆಯಬೇಕಾಗಿದೆಯೆಂದರು. ಈ ಕಾರ್ಯವನ್ನು ಮುನಿಸಿಪಾಲಿಟಿಯವರು ಮುಂದೊತ್ತಬೇಕು. ಹಾಗೆ ಮಾಡುವಾಗ ಎಷ್ಟು ಹಣಬೇಕಾದರೂ ತಾನು ಕೊಡಲು ಸಿದ್ಧನಿರುವೆನೆಂದರು. ಡಾಕ್ಟರ್ ಸುಂದರರಾವ ಪೈ, ಕೆ. ಎಲ್. ಐತಾಳ, ಶ್ರೀಗಳಾದ ಪಿ. ಉಪೇಂದ್ರ ನಾಯಕ, ಯು. ಎ. ಪೈ, ಕೊಟ್ಟಿಕಾರ ಪದ್ಮನಾಭ ಪೈಗಳವರು ಮಾತನಾಡಿದರು.

ಅಧ್ಯಕ್ಷ ಶ್ರೀ ಸದಾನಂದ ಪೈಗಳು ತನ್ನ ಮುಕ್ತಾಯ ಭಾಷಣದಲ್ಲಿ, ಆಗೋಸ್ತು ಹದಿನೈದರ ಹಿಂದಿನ ಮತ್ತು ಈಗಿನ ಕಾಂಗ್ರೆಸ್ ಸರಕಾರವನ್ನು ತುಲನೆ ಮಾಡಿತೋರಿಸುತ್ತ ಕೆಲವೊಂದು ಆಕ್ಷೇಪಗಳ ತಿದ್ದುಪಡಿ ಮತ್ತು ಆರ್ಥಿಕನ್ನೂಗಳ ಉದಯವಲ್ಲದೆ ಬೇರಾವ ಸುಧಾರಣೆಗಳೂ ಈಗಿನ ಸರಕಾರದಿಂದ ಆಗಿಲ್ಲವೆಂದೂ ಹೆಸರಿಗೆ ಮಾತ್ರ ಇದು ಜನತಾ ಸರಕಾರವಾಗಿದೆಯೆಂದೂ ಹೇಳಿದರು. ಆಂಧ್ರರ, ತಮಿಳರ, ಮಲೆಯಾಳಿಗಳ ವಶದಿಂದಾಗಿ ಕನ್ನಡ ಜಿಲ್ಲೆಗೆ ಆಗಬೇಕಾದುದಾವುದೂ ಆಗಲಿಲ್ಲವೆಂದರು. ಸಾಲದುದಕ್ಕೆ "ಈ ಜಿಲ್ಲೆಯಿಂದ "ಅವಿರೋಧವಾಗಿ ಆರಿಸಲ್ಪಟ್ಟವರಾಗಿರುವ ಮದ್ರಾಸ್ ಶಾಸನಸಭೆಗಳ ನಮ್ಮ ಪ್ರತಿನಿಧಿ ಸದಸ್ಯರು ತಮ್ಮ ಹೊಣೆಗಾರಿಕೆಯನ್ನರಿತು ಕಾರ್ಯನಿರ್ವಹಿಸುತ್ತಿರುವುದೇನೂ ಕಂಡುಬರುವುದಿಲ್ಲ. ನಮ್ಮ ಪ್ರತಿನಿಧಿಯು ಮಂತ್ರಿಮಂಡಲದಲ್ಲಿದ್ದಾರೆ ಎಂಬ ನೆನಪೇ ಇಲ್ಲಿಯ ಜನಸಾಮಾನ್ಯರಿಗೆ ಇರದಂತಹ ಕಠಿಣತರ ಸ್ಥಿತಿಯಲ್ಲಿದೆ" ಎನ್ನುತ್ತಾ ತಹಶೀಲ್ದಾರ್ ಶ್ರೀ. ಸದಾನಂದ ಪೈಗಳು ಈ ಸತ್ಕಾರ ಕೂಟವೆಂಬುದು 'ಸರಕಾರದ ವಿಮರ್ಶಾಕೂಟ'ವೆಂಬಂತೆಯೂ, ಅಲ್ಲಿ ತಾನೋರ್ವ ಸಾರ್ವಜನಿಕ ಮುಂದಾಳುವೆಂಬಂತೆಯೂ ಟೀಕಿಸಿದರು.

ಉಡುಪಿ ಕೋಲೇಜು ಫಂಡು-(ಮುಂದರಿಸಿದ್ದು) ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿ ಲಿಮಿಟೆಡ್ ರೂ. 2000/ ದಿವಂಗತ ಕಲ್ಮಂಕ ವೆಂಕಟ್ರಾಯ ಪೈಗಳ ಮಕ್ಕಳು ರೂ. 1000/-, ಶ್ರೀ. ಶಿವ ಅನಂತ ಭಟ್ಟ ಮತ್ತು ಶ್ರೀಮತಿ ವರದಾ ಬ್ಯಾಅನು ತಪ್ಪ ರೂ. 501/- ರಂತೆ, (ಮುಂದುವರಿವುದು)

ಕಟಪಾಡಿ- ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಮತ್ತು ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 27-2-48 ರಂದು ಡಾಕ್ಟರ್ ಯು. ಸುಂದರರಾವ ಪೈ ಎಮ್. ಬಿ. ಬಿ. ಎಸ್. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಪೂರ್ವಾಹ್ನ ಎರಡೂ ಶಾಲೆಗಳ ಮಕ್ಕಳಿಗೆ ತಿಂಡಿ ಹಂಚಲಾಯಿತು. ಅಪರಾಹ್ನದ ಕಾರ್ಯಕ್ರಮದಲ್ಲಿ ಶ್ರೀ ಎಮ್. ಅಣ್ಣಪ್ಪ ಬಿ. ಎ., ಬಿ. ಟಿ. ಅವರು ಹಾಯರ್ ಎಲಿಮೆಂಟರಿ ಶಾಲೆಯ ಸ್ವಸ್ತಿವಾಚನವನ್ನು ಮಾಡಿದರು. ಶ್ರೀ ಯು. ಅಲ್. ನಾಯ್ಕ ನವರು ಹಾಯರ್ ಎಲಿಮೆಂಟರಿ ಶಾಲಾ ವರದಿಯನ್ನೂ ಶ್ರೀ ಪಿ. ರಾಮದಾಸ ನಾಯಕ್ ಬಿ. ಎ., ಎಲ್. ಟಿ. ಅವರು ಹೈಸ್ಕೂಲಿನ ವರದಿಯನ್ನೂ ಓದಿದರು. ಆ ಬಳಿಕ ವಿದ್ಯಾರ್ಥಿಗಳಿಗೆ ಹಲವು ಆಟ-ಪಾಠಗಳ ಬಗ್ಗೆ ಪಾರಿತೋಷಕ ವಿತರಣೆಯಾಯಿತು. ಅಧ್ಯಕ್ಷರು ಈ ಕೇಂದ್ರದಲ್ಲಿ ಹೈಸ್ಕೂಲಿನ ಆವಶ್ಯಕತೆ, ಅದರ ಚಟುವಟಿಕೆಗಳು, ಹಾಯರ್ ಎಲಿಮೆಂಟರಿ ಶಾಲೆಯು ಇಷ್ಟರ ತನಕ ಮಾಡಿರುವ ಸೇವೆಯನ್ನು ಕೊಂಡಾಡಿ ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಾಗಬೇಕಾಗಿರುವ ಮಾರ್ಪಾಟುಗಳನ್ನು ಸುರಸವಾಗಿ ವಿವರಿಸಿದರು. ಶ್ರೀ ಕೆ. ಆರ್. ಶೆಣೈಯವರಿಂದ ಧನ್ಯವಾದ ಸಮರ್ಪಣೆ. ರಾತ್ರಿ ಬಾಲಿಕೆಯರಿಂದ 'ಸುಭದ್ರಾ ಪರಿಣಯ'ವೆಂಬ ಸಂಗೀತ ನಾಟಕವೂ, ಯಕ್ಷಗಾನ ಸಂಘದವರಿಂದ "ಗರುಡ ಗರ್ವಭಂಗ"ವೆಂಬ ಯಕ್ಷಗಾನ ಪ್ರದರ್ಶನವೂ ಜರಗಿದುವು. ತಾ 28-2-48ನೇ ರಾತ್ರೆ ಹೈಸ್ಕೂಲಿನ ವಿದ್ಯಾರ್ಥಿಗಳಿಂದ ನಾಟಕ ಅಭಿನಯವಿತ್ತು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
S. C. 198/1948
ಆನಂದ ಬ್ಯಾರಿ-ವಾದಿ
ಸುಬ್ರಾಯ ಶೆಟ್ಟಿ ಕೂಡಾ-ಪ್ರತಿವಾದಿ
1ನೇ ಪ್ರತಿವಾದಿ ಸುಬ್ರಾಯ ಶೆಟ್ಟಿ ನಾರಾಯಣ ಶೆಟ್ಟಿ ಮಗ, ಕಾಸ್ರಗೋಡು ಕಸಬಾ ಗ್ರಾಮಸ್ಥ-1ನೇ ಪ್ರತಿವಾದಿ

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಯು ಅಬ್ದುಲ್ ರಹಿಮಾನ ಬ್ಯಾರಿಗೆ ತಾ. 7-6-1944ರಲ್ಲಿ ಬರಕೊಟ್ಟ ದಿವಾನೋಟಿನ ಹಣಗಳನ್ನಲು ಹಕ್ಕನ್ನು ಪಡಕೊಂಡು ಪಡೆದ ಮೇಲ್ಕಂಡ ವಾದಿಯು ದಾಖಲು ಮಾಡಿರುವ ನೋಟಿನ ದಾವೆಯು ಮಿದೆ ಬರುವ ತಾರೀಕು 18-3-48ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನ ಬಗ್ಗೆ ಇಟ್ಟಿರುವುದರಿಂದ ನೀವು ಸದ್ರಿ ದಿವಸದಗೆ ತಪ್ಪದೆ ಹಾಜರು ಆಗಿ ನ್ಯಾಯ ಹರ್ಸುವರೇ ತಪ್ಪಿದಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟಿ ಆಗಿ ತೀರ್ಮಾನವಾದೀತು.

B Padmanab,
Advocate for Plaintiff.

'ನಿರೀಕ್ಷಿಸಿರಿ.'
ಮನದಲ್ಲಿ ಮೂಡಿದುದೇ ಕಣ್ಣಿನಲ್ಲಿ ಪ್ರಕಟವಾಗುವಾಗ ಎಣಿಕೆಗಿಂತ ಮಿಗಿಲಾದ ಚಿತ್ರವಾಗಿ ಖ್ಯಾತಿಗೊಂಡಿತು.
ಆಂಖ್-ಕಿ-ಶರಮ್
ಪೃಥ್ವಿರಾಜ್ ಕಪೂರ್, ತ್ರಿಲೋಕ ಕಪೂರ್, ಕೌಸಲ್ಯ ಮೊದಲಾದವರು
ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.
ಬರುವುದು ಕನ್ನಡ ಪ್ರಪಂಚದ ಕನಕದಂಥಾ ಕಬೀರ.
ಸುಬ್ಬಯ್ಯ ನಾಯ್ಡು, ನಾಗೇಂದ್ರ ರಾವ್, ಲಕ್ಷ್ಮಿ ಬಾಯಿ ಮೊದಲಾದವರು

ಮಂಗಳೂರು

ಮಂಗಳೂರು— ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಬಿಲ್ಲವ ಯೂನಿಯನ್ನಿನ ಆಶ್ರಯದಲ್ಲಿ ವರ್ಷಂಪ್ರತಿ ಜರಗುವ 'ಮಹಾಶಿವರಾತ್ರಿ' ಮಹೋತ್ಸವವು ಇದೇ ತಾ 4ರಿಂದ 10ರ ತನಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಂದ ಜರಗಲಿರುವುದು. ಉದಾರ ಬಾಂಧವರು ಉದಾರ ಹಸ್ತದಿಂದ ಧನ ಸಹಾಯ ಮಾಡಬೇಕಾಗಿ ಸಂಬಂಧಪಟ್ಟವರು ಅಪೇಕ್ಷಿಸುತ್ತಾರೆ.

ಮಂಗಳೂರಿಗೆ ಬಿ. ಟಿ. ಕೊಲೇಜ್?— ಮದ್ರಾಸು ಪ್ರಾಂತ್ಯದ ಕನ್ನಡಿಗರ ಪರವಾಗಿ ಡಾ। ಯು. ಕೃಷ್ಣರಾಯರು, ಡಾ। ಯನ್. ಯಂ. ರಾಯರು, ಶ್ರೀಗಳಾದ ಯಂ. ಯಂ. ಭಟ್ಟರು, ವಿಟ್ಠಲರಾಯರು, ಯಂ. ಕೆ. ಧನಪತಿ ಇವರುಗಳನ್ನೊಳಗೊಂಡ ಶಿಷ್ಟಮಂಡಳಿಯೊಂದು ಮದ್ರಾಸು ಸರಕಾರದ ಮಾನ್ಯ ವಿದ್ಯಾಮಂತ್ರಿಗಳಾದ ಶ್ರೀ ಅವಿನಾಶಲಿಂಗಂ ಚೆಟ್ಟಿಯಾರರವರನ್ನು ಭೇಟಿಯಾಗಿ ಈ ಕೆಳಗಿನ ಅಂಶಗಳನ್ನು ಅವರ ಅವಗಾಹನೆಗೆ ತರಲಾಯಿತು.

1. ಬಿ. ಎ. ಮತ್ತು ಇತರ ಉಚ್ಚತರಗತಿಗಳಲ್ಲಿ ಕನ್ನಡದ ವಿಶೇಷ ಅಭ್ಯಾಸಕ್ಕೆ (ಗ್ರೂಪ್ V. ಬಿ. ಎ. ಬಿ. ಒ. ಯಲ್. ಇತ್ಯಾದಿ) ವ್ಯವಸ್ಥೆ ಮಾಡಿಸುವುದು. 2. ಮಂಗಳೂರಿನ ಗವರ್ನಮೆಂಟ್ ಕೋಲೇಜನ್ನು ಎರಡನೇ ತರಗತಿಯಿಂದ ಒಂದನೇ ತರಗತಿಗೆ ಏರಿಸುವುದು. 3 ಮಂಗಳೂರಲ್ಲೊಂದು ಬಿ. ಟಿ. ಕೋಲೆಜನ್ನು ಸ್ಥಾಪಿಸುವುದು. 4. ಮದ್ರಾಸಿನ ಕ್ವೀನ್ ಮೇರೀಸ್ ಕೋಲೇಜಿನಲ್ಲಿ ಇಂಟರ್ ಮೀಡಿಯೇಟ್, ಬಿ. ಎ. ತರಗತಿಗಳಲ್ಲಿ ಈಗ ತೆಗೆದು ಹಾಕಲ್ಪಟ್ಟ ಕನ್ನಡಕ್ಕೆ ಪುನಃ ಸ್ಥಾನವನ್ನು ಒದಗಿಸುವುದು.

ಮಾನ್ಯ ಮಂತ್ರಿಗಳು ಮೇಲಿನ ಅಂಶಗಳನ್ನು ಕೇಳಿ ತಿಳಿದುಕೊಂಡು ಮೇಲಿನ ಬೇಡಿಕೆಗಳಿಗೆ ಈ ಕೆಳಗಿನ ವ್ಯವಸ್ಥೆ ಮಾಡಿಸುವುದಾಗಿಯೂ ಭರವಸೆ ಕೊಟ್ಟರು.

1 ಮತ್ತು 2. ಪ್ರಸ್ತುತ ಮಂಗಳೂರಿನ ಗವರ್ನಮೆಂಟು ಕೋಲೇಜಿನಲ್ಲಿ ಬಿ. ಎ ಮುಂತಾದ ಕ್ಲಾಸುಗಳನ್ನು ತೆರೆಯಲು ಕಟ್ಟಡಗಳ ಅಭಾವವಿರುವುದರಿಂದ ಅಲ್ಲಿಯ ಹೈಸ್ಕೂಲು ತರಗತಿಗಳನ್ನು ಮುಚ್ಚಿದಲ್ಲಿ ಯಾವ ಕಷ್ಟವೂ ಇಲ್ಲದೆ ಒಂದನೆಯ ತರಗತಿಯ ಕೋಲೇಜನ್ನು ಮಾಡಿಸಬಹುದೆಂದರು.

ಬಿ. ಟಿ. ಕೋಲೇಜನ್ನು ತೆರೆಯಲು ಬಹಳ ದ್ರವ್ಯ ಬೇಕಾದುದರಿಂದ ತತ್ಕಾಲಕ್ಕೆ ಮದ್ರಾಸಿನಲ್ಲಿರುವ ಗವರ್ನಮೆಂಟು ಟ್ರೈನಿಂಗ್ ಕೋಲೇಜಿನಲ್ಲಿ ಕನ್ನಡ ಶಿಕ್ಷಣಕ್ರಮಕ್ಕೆ (Methods) ತಕ್ಕ ವ್ಯವಸ್ಥೆಯನ್ನು ಮಾಡಿಸಿ ಅಲ್ಲಿಯ ಬಿ. ಟಿ. ವಿದ್ಯಾರ್ಥಿಗಳಿಗೆ ಕ್ರಿಶ್ಚಿಯನ್ ಕೋಲೇಜ್ ಸ್ಕೂಲಿನಲ್ಲಿರುವ ಕನ್ನಡ ಮಾಧ್ಯಮ ಕ್ಲಾಸುಗಳಲ್ಲಿ ಅಭ್ಯಾಸವನ್ನು ಕೊಡಿಸಬಹುದೆಂದರು. ಈ ಸಂದರ್ಭದಲ್ಲಿ ಕನ್ನಡ ಅಧ್ಯಾಪಕರ ಪೈಕಿ ಒಂದು ಸ್ಥಾನವು M. E. S. ಶ್ರೇಣಿಯಲ್ಲಿ ಇದೇ 1948ನೇ ಇಸವಿ ಜುಲೈತಿಂಗಳಿಂದ ಇಡಿಸಲಾಗುವುದೆಂದು ಆಶ್ವಾಸನೆ ಕೊಟ್ಟರು.

ಕನಿಷ್ಠಪಕ್ಷಕ್ಕೆ 25 ಮಂದಿ ವಿದ್ಯಾರ್ಥಿನಿಯರು ಬಂದರೆ, ಕ್ವೀನ್ ಮೇರೀಸ್ ಕೋಲೇಜಿನಲ್ಲಿ ಕನ್ನಡ ಕ್ಲಾಸುಗಳನ್ನು ತೆರೆಯಲಾಗುವುದು, ಇಲ್ಲವಾದರೆ ಅದು ಅಸಾಧ್ಯವೆಂದರು.

ಜೂಜಾಡಿದ ಆರೋಪ-ಕಾರ್ಕಳ ಮೂಡಬಿದರೆ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ. ಬಿ. ಕೆ. ಶಿವ ಅವರು ಕಾರ್ಕಳ ಪೋಲೀಸರ ಸಹಾಯ ಪಡೆದು ಆ ಒಂದು ಗುಂಪಿನವರನ್ನು ಹಿಡಿದು ಅವರ ಮೇಲೆ 'ಗೇಮಿಂಗ್' ಕಾಯಿದೆಯ ೮ ಮತ್ತು ೯ನೇ ಪ್ರಕರಣಗಳ ಮೇರೆಗೆ ಆರೋಪ ಹೊರಿಸಿ ಕಾರ್ಕಳ ಸ್ಪೇಶಲ್ ಸಬ್ ಮ್ಯಾಜಿಸ್ಟ್ರೇಟರಲ್ಲಿ ಚಾರ್ಜಶೀಟ್ ಹಾಕಿರುವರು. ಈ ಗುಂಪಿನವರಲ್ಲಿ ಕಾರ್ಕಳ, ನಾರಂಗ, ನಿಟ್ಟೆ, ಬೋಳ, ಪಡುಬಿದ್ರೆ, ಆಗುಂಬೆ, ಶೃಂಗೇರಿ ಮೊದಲಾದ ಸ್ಥಳಗಳ ಸುಮಾರು ೧೪ ಮಂದಿ ಇದ್ದರೆಂದೂ, ಜೂಜಾಡಿದರೆಂಬ ಸ್ಥಳದಿಂದ ನಗದಿಯಾಗಿ ೬೪೪೩ರಷ್ಟು, ವಜ್ರ ಬಂಗಾರದ ಪದಾರ್ಥಗಳೂ ಸೇರಿ ಸುಮಾರು ೧೦ ಸಾವಿರ ರೂ. ಬೆಲೆ ಬಾಳುವಷ್ಟು ಪೋಲೀಸರು ತಮ್ಮ ವಶಪಡಿಸಿಕೊಂಡರೆಂದೂ ತಿಳಿದುಬಂದಿದೆ. ಕೈದಾದವರನ್ನು ಜಾಮೀನಿನ ಮೇಲೆ ಬಿಟ್ಟಿದ್ದಾರೆ.

ದ. ಕ. ಜಿಲ್ಲೆಯಲ್ಲಿ ಸರ್ಜನ್ ಜನರಲ್ಲರ ಸಂಚಾರ-ಮದ್ರಾಸ್ ಸರಕಾರದ ಸರ್ಜನ್ ಜನರಲ್ ಕರ್ನಲ್ ಎಸ್. ಎಲ್. ಭಾಟಿಯಾರವರು ಕಳೆದ ತಾ. 19ರಂದು ಮಂಗಳೂರಿಗೆ ಬಂದು ಮರುದಿನ ಹೊಸ ಆಸ್ಪತ್ರೆಗಾಗಿ ಪ್ರತ್ಯೇಕಿಸಿದ ಕದ್ರಿಯಲ್ಲಿಯ ಸ್ಥಳವನ್ನೂ, ಕದ್ರಿ ದೇವಸ್ಥಾನ, ಲೇಡಿಗೋಶನ್ ವೆನ್‌ಲಾಕ್, ಕಂಕನಾಡಿ ಆಸ್ಪತ್ರೆಗಳನ್ನೂ ಕಾಮನ್‌ವೆಲ್ತ್ ಹಂಚಿನ ಕಾರ್ಖಾನೆಗಳನ್ನೂ, ನಗರದ ಅನಾರೋಗ್ಯದ ಕೆಲ ಭಾಗಗಳನ್ನೂ ಸಂದರ್ಶಿಸಿದರು. ದ. ಕ. ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ ಸತ್ಕಾರಕೂಟದಲ್ಲಿ ಭಾಗವಹಿಸಿದರು. ಮರುದಿನ ಕಾರ್ಕಳ ಆಸ್ಪತ್ರೆಯನ್ನು ಸಂದರ್ಶಿಸಿ ಉಡುಪಿಗೆ ಆಗಮಿಸಿದರು. ಉಡುಪಿ ಆಸ್ಪತ್ರೆಯನ್ನು ಸಂದರ್ಶಿಸಿ ಹೊಸತಾಗಿ ಕಟ್ಟಲಿರುವ ಆಸ್ಪತ್ರೆಗಾಗಿ ಯೋಚಿಸಿದ ಅಜ್ಜರಕಾಡಿನ ಸ್ಥಳವನ್ನು ನೋಡಿದರು. ಬಳಿಕ ಶ್ರೀ. ಕೃಷ್ಣಮಠಕ್ಕೆ ಹೋಗಿ ಅಂದೇ ರಾತ್ರಿ ಮಂಗಳೂರಿಗೆ ಹಿಂತೆರಳಿದರು.

ಜಿಲ್ಲೆಯಲ್ಲಿ ಆರ್. ಎಸ್. ಎಸ್. ಬಂಧನಗಳು—ಆರ್. ಎಸ್. ಎಸ್. ಜಿಲ್ಲಾ ಸಂಚಾಲಕರಾದ ಕಾರ್ಕಳ ಸಹಾಶಿವರಾಯರನ್ನು ತಾ.24ರಂದು ದಸ್ತಗಿರಿ ಮಾಡಿ ಮರುದಿನವೆಲ್ಲೂರು ಜೈಲಿಗೆ ಕೊಂಡುಹೋದರು. ಕುಂದಾಪುರದಲ್ಲಿ ಶ್ರೀಗಳಾದ ಬಿ. ಶ್ರೀನಿವಾಸ ಪ್ರಭು, ಪಾಂಡುರಂಗ, ರಾಮಚಂದ್ರ ಭಂಡಾರ್ಕಾರ್, ಸರೋಜ ಕಾಮತ್, ಮುತ್ತೂರಲ್ಲಿ ಹಿಂದಿ ಪಂಡಿತ್ ಕೃಷ್ಣಮಾಚಾರ್ ಮತ್ತು ಸೀನಪ್ಪ, ಮಂಗಳೂರಲ್ಲಿ ಎಲೋಶಿಯಸ್ ಕಾಲೇಜಿನ ಬಿ.ಎ. ವಿದ್ಯಾರ್ಥಿ ಕುಂಬಳೆ ನರಸಿಂಹ ಕಾಮತ್ ಇವರು ಈ ಮೊದಲೇ ದಸ್ತಗಿರಿ ಮಾಡಲ್ಪಟ್ಟು ವೆಲ್ಲೂರಿಗೆ ಒಯ್ಯಲ್ಪಟ್ಟಿದ್ದಾರೆ.

ಶ್ರೀ ಈಶ್ವರಾನಂದ ಸ್ವಾಮಿಜಿಯವರ ಪುಣ್ಯ ತಿಥಿಯು- ತಾ. 18ರಲ್ಲಿ ಅತ್ತಾವರ ಡಿ. ಸಿ. ಮಿಶ್ಯನ್ ಶಾಲಾ ವಠಾರದಲ್ಲಿ ದ. ಕ. ಜಿಲ್ಲಾ ಆದಿದ್ರಾವಿಡ ಸಂಘದ ನೇತೃತ್ವದಲ್ಲಿ ಜರಗಿತು. ಶ್ರೀ. ಬಿ. ಆರ್. ಕರ್ಕೇರರು ಅಧ್ಯಕ್ಷತೆ ವಹಿಸಿದ್ದು ಆದಿದ್ರಾವಿಡರು ಯಾವ ಸುಧಾರಣೆ ಹೊಂದಬೇಕೆಂದು ತಿಳಿಸಿ ರೂಪಾಯಿ 30 ಸಂಘಕ್ಕೆ ದಾನವಿತ್ತರು. ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರ ಹರಿಕಥಾ ಕಾಲಕ್ಷೇಪದೊಂದಿಗೆ ಸಮಾರಂಭವು ಕೊನೆಗೊಂಡಿತು.

ಶ್ರೀ ಗೋಪಾಲಕೃಷ್ಣ ಗೋಖಲೆಯವರ ಪುಣ್ಯ ತಿಥಿಯು ತಾ. 19ರಲ್ಲಿ ಡಿ. ಸಿ. ಮಿಶ್ಯನಿನ ಆಶ್ರಯದಲ್ಲಿ ಸ್ವಾಮಿ ರಮಾನಂದ ತೀರ್ಥರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ದಾಮೋದರ ಬಾಳಿಗರು ಗೋಖಲೆಯವರ ಜೀವನತತ್ವಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ ಕೆ. ಎಲ್. ಎನ್. ರಾಯರು ಧನ್ಯವಾದಗಳನ್ನರ್ಪಿಸಿದರು.

ನಡು ನಗರದಲ್ಲಿ ಹೆಂಗಸೊಬ್ಬಳ ಕೊಲೆ—ಕಳೆದ ತಾ. 20ರಲ್ಲು ಬೆಳಿಗ್ಗೆ ಅವಲಕ್ಕಿ ಕೇರಿಯ ಓಂಬದಿಯ ರಸ್ತೆಯ ಒಂದು ಮನೆಯ ಜಗಲಿಯಲ್ಲಿ ರಾಧಾಬಾಯಿ ಎಂಬ ಒಬ್ಬ ಹೆಂಗಸಿನ ಕೊಲೆಯಾಗಿದೆ ಎಂದು ತಿಳಿದುಬರುತ್ತದೆ. ಪೋಲೀಸ್ ತನ್ನಿಖೆ ನಡೆಯುತ್ತಿದೆ.

ಪ್ರಕಟಣೆ

ಕಾರ್ಕಳ ತಾಲ್ಲೂಕು ನಂಬ್ರ 1ನೇ ಬೇಳಂಜೆ ಗ್ರಾಮದ ಶೆಟ್ರ ಮನೆಯಲ್ಲಿರುವ ಮುತ್ತಕ್ಕ ಶೆಡ್ತಿಯ ಮಗಳು ನೀಲಮ್ಮ ಶೆಡ್ತಿ 1, ಈಕೆ ಮಗ ಮಹಾಬಲ ಶೆಟ್ಟಿ 1, ಕೂಡಾ 2ಜನರು ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ನಮ್ಮ ಪೈಕಿ 1ನೆಯವಳ ತಾಯಿ 2ನೇಯವರ ಅಜ್ಜಿ ಮುತ್ತಕ್ಕ ಶೆಡ್ತಿಯೆಂಬವರು ಸುಮಾರು 80 ವರುಷಕ್ಕೆ ಮಿಕ್ಕಿದ ಮುದುಕಿಯಾಗಿದ್ದು ಚೇತನದ ಪಕ್ಕದ ಮೇಲೆ ನಮ್ಮ ಕುಟುಂಬದ ರೂಪಾಯಿ 75 ತೀರ್ವೆ ತೆರುವ ಆಸ್ತಿಗಳ ಪಟ್ಟಾದಾರಳಾಗಿರುವದಾದರೂ ಅವರು ಕುಟುಂಬದ ಆಸ್ತಿಗಳ ವಹಿವಾಟಿಯ ಬಾಬಿನಲ್ಲಿ ಯಾವ ತರದ ಕೆಲಸ ಮಾಡಲು ಅಸಮರ್ಥರಾಗಿ ಚಿತ್ತಲಾಗಿ ತಲೆ ಸಹಾ ಸರಿಯಿಲ್ಲದಿರುವದರಿಂದ ಕುಟುಂಬದ ಎಲ್ಲಾ ವಹಿವಾಟುಗಳನ್ನು ನಾವು ನಡಿಸಿಕೊಂಡು ಬರುತ್ತೇವೆ. ನಮ್ಮ ಕುಟುಂಬದ ಖರ್ಚು ವೆಚ್ಚಕ್ಕೆ ಬೇಕಾದಷ್ಟು ಉತ್ಪತ್ತಿಯಿದ್ದು ಸಾಲ ವ ಪರಾಧೀನ ಮಾಡುವ ಯಾವ ಗರ್ಜೂ ಇಲ್ಲ. ಸದ್ರಿ ಮುದುಕಿಯ ಓದೇತನದ ಪಟ್ಟಿಯ ಆಧಾರದಿಂದ ನಮ್ಮ ಕುಟುಂಬಕ್ಕೆ ನಷ್ಟ ವ ಕೆಡಕು ಮಾಡುವ ಪಿರಾಧೆಯಿಂದ ನಮ್ಮ ದ್ವೇಷಿಕರು ಕಲ್ಪನೆಯ ರಿಕಾರ್ಡು ಮಾಡುವ ಪಿರಾಧೆಯಲ್ಲಿರುವನಾಗಿ ತಿಳಿದು ಬಂದಿರುವದರಿಂದ ಯಾರೊಬ್ಬರೂ ನಮ್ಮ ಕೂಡ್ಲಿಕೆ ವಿನಹಾ ಸನಾದರೂ ರಿಕಾರ್ಡು ವಗೈರೆ ಮಾಡಿದ್ರೆ ಅದು ನಮ್ಮ ಪಟ್ಟು ಕುಟುಂಬದ ಮೇಲೆ ಸಿಂಧಾಗಲಾರದೆಂತ ಈ ಮೂಲಕ ಪ್ರಕಟಿಸಿರುತ್ತೇವೆ.

ಮೊಕ್ಕಾಂ, ಬೇಳಂಜೆ.

ತಾರೀಕು 29-2-1948

ಈ ಗೆರೆ ವ ಎಡಗೈ ಹೆಬ್ಬೆಟ್ಟಿನ ಗುರ್ತು ನೀಲಮ್ಮ ಶೆಡ್ತಿ ರುಜು.

B ಪ. ಮಹಾಬಲ ಶೆಟ್ಟಿ ರುಜು.

The Security Provident Insurance Co., Ltd.

Head Office

Hassan Chambers, Parsee Bazar St., **Fort, BOMBAY 1**

ANNOUNCEMENT

We have the pleasure to announce that Mr C.N. SHETTY, our Inspector of Agencies, will be available at Cafe Royal, Udipi from 20th February 1948. It is hoped that our Agents, Organisers and Policy Holders will take this opportunity for their business consultations.

ಬಾಲಕರು ಆರೋಗ್ಯಕಾಯರಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಿಬೆಟ್ಟು, ಪೋ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

L. N. Sharma, Mangalore.

ಬೆಲೆ ಕಡಿಮೆಯಾಗಿರಬೇಕು,
ಮಾಲು ಉತ್ತಮವಾಗಿರಬೇಕು

ಎಂದಲ್ಲವೇ ನಿಮ್ಮ ಅಪೇಕ್ಷೆ?

ಸರ್ವಧಾರಿ ಸಂವತ್ಸರದ
(1948-1949)
ನವಯುಗ ಪಂಚಾಂಗವು

ನಿಮ್ಮ ಅಪೇಕ್ಷೆಯನ್ನು ಪೂರೈಸುವುದು.

ನಿತ್ಯ ಪಂಚಾಂಗದಲ್ಲಿಯೇ ಅಗತ್ಯವಿರುವ ಮಾಹಿತಿಗಳೂ ಇದ್ದರೆ—ಅದೂ ಕಡಿಮೆ ಬೆಲೆಗೆ ಸಿಗುವಂತಿದ್ದರೆ ಅದನ್ನು 'ಚಾಯಿಸ್' ಮಾಡದವರಾರು?

ಬೆಲೆ ಅಗ್ಗ 0-5-0 ಸಂಗ್ರಹ ಅಧಿಕ. ಪುಟ 56

0-6-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು

ವ್ಯಾಪಾರಿಗಳು ರಖಂ ದರಗಳಿಗೆ ಬರೆದುಕೊಳ್ಳಬಹುದು.

ಪ್ರತಿಯೊಬ್ಬನಿಗೂ ಸಾಕಷ್ಟು ವ್ಯವಹಾರ ಜ್ಞಾನವು ಬೇಕೇಬೇಕು.

ಅನ್ಯರ ಸಹಾಯವಿಲ್ಲದೆ ಅನುದಿನದ ವ್ಯವಹಾರವನ್ನು ತಮ್ಮಷ್ಟಕ್ಕೆ ತಾವೇ ತಿಳಿದುಕೊಳ್ಳಲಿಕ್ಕಾಗುವ **ಅತ್ಯುಪಯುಕ್ತ ಪುಸ್ತಕವೆಂದರೆ**

ವ್ಯವಹಾರಜ್ಞಾನದರ್ಪಣ

ಲೋಕವ್ಯವಹಾರ ಬೋಧನೆಯ ಇಂತಹ ಪುಸ್ತಕಗಳು ಕನ್ನಡದಲ್ಲಿ ತೀರ ವಿರಳ:

ವಕೀಲ್ ಗುಮಾಸ್ತರು, ದಸ್ತಾವೇಜು ಬರೆಯುವವರು ಇವರಿಗಂತೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ದೊಡ್ಡ ಸೈಜಿನ 164 ಪುಟಗಳು ಬೆಲೆ ರೂ. **1-8-0**

ರೂ 1-12-0ನ್ನು ಕಳುಹಿಸಿದರೆ ಒಂದು ಪ್ರತಿಯನ್ನು ರವಾನಿಸಬಹುದು.

ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ದಕ್ಷಿಣ ಕನ್ನಡ.

ಬೆಳ್ತಿ.— ಮಹಾತ್ಮಾ ಗಾಂಧಿಯವರ ಸೂತಕ ದಿನಾಚರಣಾ ಸಮಿತಿಯು ಕಡೆಯಿಂದ ಶ್ರೀ ಬೆಳ್ವೆ ವಿಠಲ ಸೆಟ್ರ ನೇತೃತ್ವದಲ್ಲಿ ಕಳದ ತಾ 11ರಿಂದ 22ರವರೆಗೆ ಗ್ರಾಮಸ್ಥರು ಶ್ರೀ ರಾಮ ಭಜನೆಯನ್ನು ಮಾಡಿರುವಲ್ಲದೆ ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಹನ್ನೆರಡು ದಿವಸಗಳವರೆಗೆ ವಿಶೇಷ ಪೂಜಾದಿಗಳನ್ನು ನಡೆಸಿದರು.

ಕೊಟ್ಟೆಕ್ಕಡ— ಇಲ್ಲಿಯ ಸಹಕಾರ ಸಂಘದ ಅಧ್ಯಕ್ಷ ಶ್ರೀ ಎಸ್. ಕೃಷ್ಣಪ್ಪನವರು ಕಳೆದ ತಾ 12ರಲ್ಲಿ ಸಾಧಾರಣ 16ಅಡಿ ಉದ್ದದ ಹೆಬ್ಬಾವಿಯನ್ನು ಗುಂಡಿಕ್ಕಿ ಹೊಡೆದು ಕೊಂದಿರುವರು.

ಮೂಡಬಿದಿರೆ— ಶ್ರೀ ಸರಸ್ವತಿ ಸೇವಾ ಸಂಘವು ಕಳೆದ ತಾ. 21ರಲ್ಲಿ ಪ್ರಾರ್ಥನಾ ಮಂಡಳಿಯ ಕಾರ್ಯಕ್ರಮವಾಗಿ ಪ್ರಥಮ ಭಜನಾ ಮಹೋತ್ಸವವನ್ನು ಜರಗಿಸಿತು ಈ ತಿಂಗಳ ತಾ 20ರಲ್ಲಿ ಭೀಷ್ಮಾರ್ಜುನ ಯಕ್ಷಗಾನ ಕೂಟವನ್ನೇರ್ಪಡಿಸಿರುವುದಲ್ಲದೆ ಪ್ರತಿ ತಿಂಗಳ ಪ್ರಥಮ ವಾರದ ಶನಿವಾರ ರಾತ್ರಿ ಯಕ್ಷಗಾನ ಕಾಲಕ್ಷೇಪದ ಏರ್ಪಾಡನ್ನು ಸಹ ಮಾಡಿಯದೆ.

ಕಿನ್ನಿಗೋಳಿಯಲ್ಲಿ ರಾಷ್ಟ್ರಗೀತೆಗೆ ಬಹಿಷ್ಕಾರ— ಕಿನ್ನಿಗೋಳಿಗೆ ಸಮೀಪದ ತಾಳಿಪಾಡಿ ಪೊಂಪೈ ಹೈಸ್ಕೂಲಿನಲ್ಲಿ ರಾಷ್ಟ್ರಗೀತೆಗೆ ಬಹಿಷ್ಕಾರ ಬಿದ್ದಿದೆಯೆಂದೂ ದಿನಾಲೂ ನಾಲ್ಕುಬಾರಿ ಜಾತೀಯ ಪ್ರಾರ್ಥನೆ ನಡೆಯುತ್ತಿದೆಯೆಂದೂ ಇದರಿಂದಾಗಿ ಶಾಲಾ ಮಕ್ಕಳ ಮತ್ತು ಹೆತ್ತವರ ಮನಸ್ತಾಪ ಉಂಟಾಗಿದೆಯೆಂದೂ ಸಂಬಂಧಪಟ್ಟ ಅಧಿಕಾರಿಗಳು ಈಗಲೇ ಗಮನ ತೆಗೆದುಕೊಳ್ಳದಿದ್ದರೆ ಪರಿಸ್ಥಿತಿ ವಿಷಮಕ್ಕೇರಬಹುದೆಂದೂ ಓರ್ವ ಬಾತ್ಮಿದಾರರು ಬರೆಯುತ್ತಾರೆ.

ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲ್— ತಾ 1 6 1944ರಲ್ಲಿ ಸ್ಥಾಪಿತವಾದ ಈ ವಿದ್ಯಾದಾಯಿನೀ ಹೈಸ್ಕೂಲ್, ಇದೇ ಕಳೆದ ಜೂನ್ ತಿಂಗಳಿನಿಂದ ಸಂಪೂರ್ಣ ಹೈಸ್ಕೂಲಾಗಿ ಅಭಿವೃದ್ಧಿಹೊಂದುತ್ತಿದೆ. ಉದಾರಿಗಳೂ ವಿದ್ಯಾಭಿಮಾನಿಗಳೂ ಆದ ಮಹನೀಯರ ಸಂಪೂರ್ಣ ಸಹಾಯ, ಸಹಕಾರಗಳನ್ನು ಪಡೆದು, ಇದುವರೆಗೆ ರೂಪಾಯಿ ಒಂದು ಲಕ್ಷಕ್ಕೂ ಮಿಕ್ಕಿ ವೆಚ್ಚಮಾಡಿ ಈ ಸಂಸ್ಥೆಗೆ ಬೇಕಾದ ಭವ್ಯವಾದ ಕಟ್ಟಡಗಳು, ಸ್ಥಳ ಸನ್ನಿವೇಶಗಳು ಮತ್ತು ಸಾಹಿತ್ಯ ಉಪಕರಣಗಳನ್ನು ಒದಗಿಸಿಕೊಳ್ಳಲು ಸಾಧ್ಯವಾಗಿರುತ್ತದೆ. ಈ ರೀತಿ ನೆರವಾದ ಮಹನೀಯರೆಲ್ಲರಿಗೂ ಈ ಸಂಸ್ಥೆಯು ಚಿರಋಣಿಯಾಗಿರುತ್ತದೆ. ಆದರೆ ಈ ಸಂಸ್ಥೆಯು ತನ್ನ ಉದ್ದೇಶವಾದ ವಿದ್ಯಾಪ್ರಚಾರ ಮತ್ತು ಸಮಾಜಸೇವಾ ಕಾರ್ಯವನ್ನು ಮುಂದರಿಸಲು ಸಾಧ್ಯವಾಗುವಂತೆ ಆಗತ್ಯವಿರುವ ಶಾಶ್ವತನಿಧಿ, ವೇತನನಿಧಿ, ಕಟ್ಟಡಗಳೇ ಮೊದಲಾದುವುಗಳಿಗೆ ಇನ್ನೂ ಹೆಚ್ಚಿನ ಧನಸಂಗ್ರಹವಾಗಬೇಕಾಗಿದೆ. ಈ ಕುರಿತು ಈ ಶಾಲಾ ಸಹಾಯಾರ್ಥವಾಗಿ, ಅಖಿಲಭಾರತ ಖ್ಯಾತಿಯನ್ನು ಪಡೆದ ಸುಪ್ರಸಿದ್ಧ ಗಾಯಕಿ ಶ್ರೀಮತಿ ಎಮ್. ಎಸ್. ಸುಬ್ಬುಲಕ್ಷ್ಮಿಯವರ ಗಾಯನಕಚೇರಿಯನ್ನು ಇದೇ ತಾ. 7-3-1948ನೇ ಆದಿತ್ಯವಾರ ಮಂಗಳೂರಲ್ಲಿ ನಡಿಸುವುದಾಗಿ ಏರ್ಪಡಿಸಿಯದೆ. ಅತೀ ಅಪೂರ್ವವೂ ಸತ್ಕಾರ್ಯಸಹಾಯಕವೂ ಆದ ಈ ಸಂಗೀತಸಮಾರಂಭಕ್ಕೆ ವಿದ್ಯಾಭಿಮಾನಿಗಳೆಲ್ಲರೂ ಸ್ವಪರಹಸ್ತಗಳಿಂದ ಪ್ರೋತ್ಸಾಹಿಸಿ ಸುಶ್ರಾವ್ಯ ಗಾಯನವನ್ನು ಕೇಳಿದ ಸಂತೋಷದೊಂದಿಗೆ ಈ ವಿದ್ಯಾಸಂಸ್ಥೆಗೆ ನೆರವನ್ನಿತ್ತ ಪುಣ್ಯಕ್ಕೂ ಭಾಗಿಗಳಾಗಬೇಕಾಗಿ ವಿನಂತಿ.

ಹಿರಿಯಡ್ಕ— ಆರ್ಯಸಮಾಜದ ವಾರ್ಷಿಕೋತ್ಸವವು ಕಳದ ತಾ 29ರಲ್ಲಿ ಶ್ರೀ ಸ್ವಾಮಿ ಸದಾನಂದಜೀಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ವೈದಿಕ ಧ್ವಜಾರೋಹಣವನ್ನು ಶ್ರೀ ಮಹಾಬಲ ಹೆಗ್ಗಡೆರು ನೆರವೇರಿಸಿದರು. ಸಂಜೆ ಜರಗಿದ ಸಭೆಯಲ್ಲಿ ಮಹಾತ್ಮಾ ನಾರಾಯಣ ಸ್ವಾಮಿ ಮತ್ತು ಬಾಪೂಜೀಯವರ ನಿಧನಕ್ಕಾಗಿ ಶೋಕ ಪ್ರದರ್ಶಿಸಲಾಯಿತು. ಶ್ರೀ. ಬಿ. ಲಕ್ಷ್ಮಣ ದೇವ ವಿದ್ಯಾರ್ಥಿಗಳು ಸಮಾಜದ ಪರವಾಗಿಬಂದ ಸಂದೇಶಗಳನ್ನು ಓದಿದರು. ತದನಂತರ ಶ್ರೀಗಳಾದ ಮಂಜುನಾಥ ಶೆಟ್ಟಿ, ನೆಲ್ಲಿ, ಮರ್ಣೆ ಗೋವಿಂದ ಸೆಟ್ಟಿ, ತಿಕ್ಕಟ್ಟಿ ದೇವಪ್ಪ ಸೆಟ್ಟಿ, ಎಚ್. ಕೆ. ಅನಂತಯ್ಯ, ಅನಂತ ಕೃಷ್ಣಭಟ್, ಬಿ ಎಲ್. ವಿದ್ಯಾರ್ಥಿ, ರುದ್ರದೇವ ಶಾಸ್ತ್ರಿ ಮೊದಲಾದವರು ಭಾಷಣಮಾಡಿದರು.

ಕುದಿಗ್ರಾಮ— ಉಡ್ಪಿ ತಾಲೂಕು ಕುದಿಗ್ರಾಮದ ಬೈದೆರ್ಕಳ ಗರಡಿ ನೇಮವು ಇದೇ ತಾ 19ನೇ ಶುಕ್ರವಾರ ರಾತ್ರಿ ಜರಗಲಿದ್ದು ಸರ್ವರಿಗೂ ಸುಸ್ವಾಗತವಿದೆಯೆಂಬುದಾಗಿ ಗ್ರಾಮಸ್ಥರ ವಿನಂತಿಯದೆ

ಪೆರಡಾಲ— ಹಿಂದೀ ಪದವೀದಾನ ಮಹೋತ್ಸವವು ಸ್ಥಳೀಯ ಪ್ರೇಮಿಕೂಟದ ಆಶ್ರಯದಲ್ಲಿ ಕಳದ ತಾ- 16ರಲ್ಲಿ ಶ್ರೀ ಕೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನವಜೀವನ ಹೈಸ್ಕೂಲಿನಲ್ಲಿ ಜರಗಿತು.

ಬಳ್ಳಾರಿಯಲ್ಲಿ ತಾರಾನಾಥ ಇನ್ ಪೇಶಂಟ್ ವಾರ್ಡಿನ ಆರಂಭೋತ್ಸವವು— ತಾ 17ರಲ್ಲಿ ಶ್ರೀ. ಕರಮು ಚಂದಾನಿ D. M. O. ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಮಾಜಿ ಆರೋಗ್ಯ ಮಂತ್ರಿ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರಿಂದ ನೆರವೇರಿಸಲ್ಪಟ್ಟಿತು. ಶ್ರೀ. ಬೆಲಗೋಣಿ ಭೀಮಪ್ಪಾ, ಎಂ. ಎಲ್. ಎ. ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು. ಶ್ರೀ. ಸ್ವಾಮಿರಾಯಾಚಾರ್ಯರು ಆಭಾರ ಮನ್ನಿಸಿದರು.

ಮದ್ರಾಸು. ಡಾಕ್ಟರರೊಬ್ಬರ ಕೈವಾಡ— ಮದ್ರಾಸಿನ ಡಾಕ್ಟರ್ ಸಿ. ಆರ್. ಕಾಮತ್, ಎಲ್ ಐ ಎಮ್ ಇವರು ಸೆಕ್ರೆಟೇರಿಯಟಿನಲ್ಲಿ ಸಾರ್ವಜನಿಕ ಆರೋಗ್ಯ ಶಾಖಾ ಮಂತ್ರಿಗಳ ವೈಯಕ್ತಿಕ ಸಿಬ್ಬಂದಿಯ ಕಾರ್ಯಾಲಯಕ್ಕೆ ಪ್ರವೇಶಿಸಿ ಮೇಜಿನ ಮೇಲಿದ್ದ ಫೈಲುಗಳನ್ನು ಕೆಳಗೆ ಬಿಸಾಡಿ, ಕೆಲವು ಮಂತ್ರಿಗಳನ್ನು ಬೈದರೆಂಬ ಆರೋಪದಮೇಲೆ ಕೈದುಮಾಡಲ್ಪಟ್ಟಿದ್ದಾರೆ. ಶ್ರೀ. ಕಾಮತರು ತಾವು ಕ್ರಮತಪ್ಪಿ ವರ್ತಿಸಿಲ್ಲ, ತಮ್ಮ ಹಕ್ಕು ಸ್ಥಾಪನೆಗಾಗಿ ಅಲ್ಲಿಗೆ ಹೋದುದು ಎಂದಿದ್ದಾರೆ

ನೋಟೀಸು

ಹಾವಂಜೆ ಗ್ರಾಮದಲ್ಲಿರುವ ಪಡಿಯ ಸೆಟ್ಟಿ ನೊಮ್ಮಗ ವ್ಯಾಬಲ ಸೆಟ್ಟಿಯಾದ ನಾನು ಯೀ ಮುಂಚೆ ಅನೇಕ ವರುಷಗಳಿಂದ ಮಾಡಿಕೊಂಡು ಬಂದಂತೆ, ಇನ್ನು ಮುಂದೆ ಸಹಾ ನಾನು ಬರಕೊಡಬಹುದಾದ ಯಾವತ್ತು ರಿಕಾರ್ಡಿಗೆ ನನ್ನ ದಸ್ಕತು ಅಲ್ಲದೆ ನನ್ನ ಎಡಹೆಬ್ಬೆಟ್ಟು ಮೊಹರು ಸಹಾ ಹಾಕಲ್ಪಡುವದು. ಹಾಗೆ ನನ್ನ ದಸ್ಕತು ಮತ್ತು ಎಡ ಹೆಬ್ಬೆಟ್ಟು ಮೊಹರು ಸಹ ಇಲ್ಲದ ರಿಕಾರ್ಡು ಕಂಡುಬಂದರೆ ಅದು ನಾನು ಬರಕೊಟ್ಟ ರಿಕಾರ್ಡು ಅಲ್ಲ ಎಂಬುದು ಸರ್ವರೂ ತಿಳಕೊಳ್ಳಬೇಕಾಗಿ ಇದರಿಂದ ಸರ್ವರಿಗೂ ತಿಳಿಯಪಡಿಸುತ್ತೇನೆ.

ವ್ಯಾಬಲ ಸೆಟ್ಟಿ ರುಜು,
ಎಡಹೆಬ್ಬೆಟ್ಟು ಗುರುತು ಸಹಾ.
ಹಾವಂಜ, ತಾ. 23—2—1948.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MIS. D. DEVEE, F' DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಮಾರಾಟಕ್ಕಿದೆ

ಡೆಲ್ಕೊ ಲೈಟ್ ಮೊಡೆಲ್ 1286 ಸರ್ವೋಪಕರಣ ಎಂಜಿನುಗಳುಳ್ಳ 2½ ಎಚ್. ಪಿ. ಶಕ್ತಿಯುತವಾದ 32 ವಾಲ್ಟ್ ಪ್ರಮಾಣದ 1½ ಕೆಂಡಬ್ಲ್ಯು ಸೆಕೆಂಡ್ ಹೆಂಡ್ ಚಾಲೂಸ್ಥಿತಿಯಲ್ಲಿರುವ ಮೆಶಿನು. ಇದರ ಉಪಯೋಗದಿಂದ ಇಲೆಕ್ಟ್ರಿಸಿಟಿ ಇಲ್ಲದ ಸ್ಥಳದಲ್ಲಿಯೂ ಇಲೆಕ್ಟ್ರಿಸಿಟಿ ಪಡೆಯಬಹುದು. ಅಂದಾಜು ಕ್ರಯ ರೂಪಾಯಿ 900/-. ಖಾಯಿಸಿಯುಳ್ಳವರು ಕೂಡಲೇ ವಿಚಾರಿಸಿರಿ:—

ರಾಮಕೃಷ್ಣ ಗುಂಡುನಾಯಕ್,
ಮರ್ಚೆಂಟ್, ರಥಬೀದಿ, ಉಡುಪಿ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ
- ಕ್ರಮನಂಬ್ರ 407/1947
ಕೊರಗಪ್ಪ ಗೌಡ -ವಾದಿ
ಬಾಬಣ್ಣ ಗೌಡ ಕೂಡಾ —ಪ್ರತಿವಾದಿರು.

1ನೇ ಪ್ರತಿವಾದಿ ಬಾಲಣ್ಣ ಗೌಡ, ತೆಂಕಪಡಿ ಮಂಜಣ್ಣ ಗೌಡರ ಮಗ, ಪುತ್ತೂರು ತಾಲ್ಲೂಕು ಮುರುಳ್ಯ ಗ್ರಾಮದ ಪೂಜೆ ಎಂಬಲ್ಲಿರುವವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:-

ಈ ಕೋರ್ಟಿನಲ್ಲಿ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 10 3—48ಕ್ಕೆ ತಕ್ಕಿಗೆ ಇಟ್ಟಿದೆ.

ಸದ್ರಿ ವ್ಯವಹಾರಕ್ಕೆ ನಿಮ್ಮ ಆಕ್ಷೇಪಣೆ ಇದ್ದರೆ ನೀವು ಖುದ್ದು ನ. ವಕೀಲರ ಮುಖಾಂತರ ಹಾಜರಾಗಿ ಉಜರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿಯದೆ.

K. Venkatramana Gowda,
Advocate for Plaintiff.
Puttur, 16-2-1948

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ
O S 635/1947
ವಾದಿರು. ವೆಂಕಪ್ಪು ಸೆಟ್ಟಿ ಕೂಡಾ
ಪ್ರತಿವಾದಿರು. ಸೂರಪ್ಪು ಸೆಟ್ಟಿ ಕೂಡಾ

6ನೇ ಪ್ರತಿವಾದಿಯು. ಗುಲಾಬಿ ಹೆಗ್ಗಡ್ತಿ, ಸೂದಕ್ಕ ಹೆಗ್ಗಡ್ತಿ ಮಗಳು. ಕಾರ್ಕಳ ತಾಲ್ಲೂಕು ನಾಡುಪಾಲು ಗ್ರಾಮದ ಸೋಮೇಶ್ವರದಲ್ಲಿರುವವಳು

ಸದ್ರಿಯವಳಿಗೆ ತಿಳಿಸುವುದೇನೆಂದ್ರೆ

ವಾದಿರು ತಮಗೆ ಬರತಕ್ಕ ಅನಸಾರ್ಥಿಕ ಬಗ್ಗೆ ಮೇಲಿನ ದಾವೆಯನ್ನು ಮಾಡಿರುತ್ತಾರೆ. ಸದ್ರಿ ದಾವೆಯು ತಾ 6 3 1948ನೇ ಶನಿವಾರ ತಕ್ಕಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ಸದ್ರಿ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗತಿಯನ್ನು ತಿಳಿಸಿರುತ್ತದೆ.

By order of the Court.

Y. Tejappa Shetty,
Advocate for Plaintiff.
Coondapoor, Date 26-2-1948

ಇದೇ ತಾ. **7—3—1948**ನೇ ಆದಿತ್ಯವಾರ ಸಾಯಂ. ಘಂಟೆ **6**ಕ್ಕೆ

ಮಂಗಳೂರು ಸೆಂಟ್ರಲ್ ಮೈದಾನಿನಲ್ಲಿ ಕಟ್ಟಿಸಿದ ನವೀನ ಮಂದಿರದಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ

ವಿಖ್ಯಾತ ಗಾಯಕಿ **ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ** ಇವರ ಸುಶ್ರಾವ್ಯ

ಸಂಗೀತ ಕಚೇರಿ

ಸಂಗೀತ ರತ್ನ ಶ್ರೀ. ಚೌಡಯ್ಯ
-ಇವರ ಪಿಟೀಲು

ಶ್ರೀ. ಕಲ್ಪಾತಿ ರಮಾನಾಥನ್
-ಇವರ ಮೃದಂಗ.

ಶ್ರೀ ಅಲಂಗುಡಿ ರಾಮಚಂದ್ರನ್
-ಇವರ ಘಟವಾದ್ಯ.

ಧ್ವನಿ ವರ್ಧಕ ಇತ್ಯಾದಿ ಏರ್ಪಾಡು ರೇಡಿಯೋ ಸೇಲ್ಸ್ ಸರ್ವಿಸ್ ತ್ರಿಚಿನಾಪಳ್ಳಿ-ಇವರಿಂದ.

ಈ ಮೊದಲು ಸಂಗೀತ ಕಚೇರಿಯು ನಡೆಯುವದೆಂದಿದ್ದ ತಾ. 8 2.48ನೇ ತಾರೀಖಿನ ಟಿಕೇಟುಗಳೇ ಈ ಸಂಗೀತ ಕಚೇರಿಗೂ ಅನ್ವಯಿಸುವುವು

ಟಿಕೇಟುಗಳ ವಿವರ

ಪೋಷಕ ವರ್ಗ	ರೂ 100
Iನೇ ವರ್ಗ	ರೂ. 25
IIನೇ ವರ್ಗ	ರೂ. 10
IIIನೇ ವರ್ಗ	ರೂ. 5
IVನೇ ವರ್ಗ	ರೂ. 2

ಜನರ ಸೌಕರ್ಯಕ್ಕಾಗಿ ಈ ಕುರಿತು ಮಂಗಳೂರಿಗೆ ಬರಲಿಕ್ಕೂ, ಹಿಂದೆ ಹೋಗಲಿಕ್ಕೂ ಎಲ್ಲಾ ಲೈನುಗಳಲ್ಲಿಯೂ ಸ್ಪೆಶಲ್ ಬಸ್ ಸರ್ವಿಸುಗಳ ವ್ಯವಸ್ಥೆ ಇದೆ

ಪರಿಚಯ ಶ್ರೀಮತಿ
ಯಂ. ಯಸ್. ಸುಬ್ಬುಲಕ್ಷ್ಮಿ

ಪಾಶ್ಚಾತ್ಯ ಕಲೆಗಳು ಸಂಪ್ರದಾಯ ಬದ್ಧವಾಗಿಯೂ, ಲಕ್ಷ್ಯಯೇ ತಮ್ಮ ವೈಶಿಷ್ಟ್ಯವಾಗಿಯೂ ಇರುವ ಕಾರಣದಿಂದಲೇ ಉತ್ತಮವಾದ ಕರ್ನಾಟಕ ಸಂಗೀತ ಪದ್ಧತಿಯು ತನ್ನ ಜನ್ಮ ಭೂಮಿಯನ್ನು ಬಿಟ್ಟು ಹೊರಗೆ ಎಲ್ಲಿಯೂ ಜನರ ಗೌರವಗಳಿಗೆ ಪಾತ್ರವಾಗದೆ ಹೋಗಿದೆ.

ದಕ್ಷಿಣದ ಸಂಗೀತದ ಸ್ವಾರಸ್ಯವನ್ನು ಹಿಂದುಸ್ಥಾನದ ಹೃದಯ ಮಧ್ಯಕ್ಕೇನೇ ಒಯ್ದು ತನ್ನ ಇಂಪಾದ ಕಂಠದ ಸೊಗಸಾದ ಹಾಡುಗಾರಿಕೆಯಿಂದ ಶ್ರೋತೃಗಳನ್ನು ಪುಲಕಿತರನ್ನಾಗಿ ಮಾಡಿದ ಕೀರ್ತಿಯು ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿಗೆ ಸಲ್ಲುವುದು. ದಕ್ಷಿಣ ದಲ್ಲಂತೂ ಸುಬ್ಬುಲಕ್ಷ್ಮಿಯ ಹೆಸರೆಂದರೆ ಸಂಗೀತದ ಸಮ್ಮೋಹನಾಸ್ತ್ರವಂತೆ. ಆವಳಿಂದು ದಕ್ಷಿಣದ ಪ್ರಥಮ ಶ್ರೇಣಿಯ ಗಾಯಕಿ ಎಂಬುದು ನಿರ್ವಿವಾದ. "ಯಂ. ಯಸ್." ಆವಳ ಜನಪ್ರಿಯ ಹೆಸರು - ತನ್ನ ಗಾನದೀಪಿನಿಂದಲೇ ಲಕ್ಷಾವಧಿ ಜನರ ಹೃದಯವನ್ನು ಸೂರೆಗೊಂಡಿರುವಳು. ಆವಳ ಶ್ರೋತೃವರ್ಗಕ್ಕೆ ಆವಳ ಹಾಡುಗಾರಿಕೆಯು ಗಾನಕಲೆಯ ಪರಮಾವಧಿಯೆಂದೇ ಭಾಸವಾಗುವುದು. ಸುಬ್ಬುಲಕ್ಷ್ಮಿಯು ಮಧುರೆಯಲ್ಲಿನ ಸಂಗೀತಾಭಿರುಚಿಯುಳ್ಳ ಒಂದು ಕುಟುಂಬದಲ್ಲಿ ಜನಿಸಿದಳು. ವಿಖ್ಯಾತ ವೀಣಾವಾದಕ ಷಣ್ಮುಖವಡಿವು ಆವಳ ತಾಯಿ. ವಂಶಾನುಗುಣವಾಗಿ ಬಂದ ಆವಳ ಸಂಗೀತ ವಿದ್ವತ್ತಿನ ಜೊತೆಗೆ ಪ್ರಕೃತಿಯು ಅವಳಿಗೆ ಕೋಕಿಲಾಸಮ ಮಧುರವಾಣಿಯನ್ನು ದಯಪಾಲಿಸಿತು. ಎಳೆಯ ಪ್ರಾಯದಲ್ಲಿಯೇ ಅವಳು ಶ್ರೇಷ್ಠ ಗಾಯಕಿಯಾಗುವ ಲಕ್ಷಣಗಳು ತೋರಿಬಂದವು. ಆವಳು ಮದ್ರಾಸಿನಲ್ಲಿ ನೆಲಸಿ, ಸಂಗೀತ ಕಲಾಭ್ಯಾಸವನ್ನು ಮುಂದರಿಸುವ ಕಾಲದಲ್ಲಿ, ಅನೇಕ ಕಡೆಗಳಿಂದ ಹೊಸ ವಿಚಾರ ವಾಹಿನಿಗಳು ಬಂದು ಸೇರಿದವು. ಅವಳು ಅಂಥ ಹೊಸ ವಿಚಾರಗಳಿಗೆ ತನ್ನದೇ ಆದ ಕಲ್ಪನಾಶಕ್ತಿಯ ಹೊಳಪನ್ನು ಕೊಟ್ಟಳು. ಅವಳು ತನ್ನ ಸಂಗೀತದ ನಯ, ನುಣುಪು ಚೆಲುವುಗಳನ್ನು ಹೆಚ್ಚಿಸಿ, ಲಾಲಿತ್ಯ ಮೋಹಕತೆಗಳನ್ನು ತೂರಿ ಹೊಮ್ಮುವ ತನ್ನ ಗಾಯನ ಶೈಲಿಯನ್ನು ನಿರ್ಮಿಸಿಕೊಂಡಿರುವಳು.

ಸುಬ್ಬುಲಕ್ಷ್ಮಿಯು ಚಲಚಿತ್ರರಂಗ ಮತ್ತು ಸಂಗೀತ ಇವುಗಳಲ್ಲಿ ಯಾವುದರಲ್ಲಿ ಹೆಚ್ಚು ವಿಖ್ಯಾತಳೆಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಯಾಕಂದರೆ ಅವಳು ಉತ್ತಮ ಗಾಯಕಳಿದ್ದಷ್ಟೇ ಉತ್ಕೃಷ್ಟ ನಟಿಯೂ ಆಗಿರುವಳು. ಇತ್ತೀಚೆಗೆ ಪ್ರದರ್ಶಿಸಲ್ಪಟ್ಟ ಹಿಂದೀ ಚಲಚಿತ್ರ "ಮೀರಾ"ದಲ್ಲಿ ಅವಳು ನಾಯಕಿಯ ಪಾತ್ರವನ್ನು ವಹಿಸಿ ಅಪಾರ ಕೀರ್ತಿಗೆ ಪಾತ್ರಳಾಗಿರುವಳು. ಸಾಮಾನ್ಯವಾಗಿ ವ್ಯಕ್ತಿಗಳನ್ನು ಸುಲಭವಾಗಿ ಪ್ರಶಂಸಿಸದ ಶ್ರೀಮತಿ ಸರೋಜಿನಿ ನಾಯ್ಡು ಕೂಡಾ ಇವಳ "ಮೀರಾ" ಪಾತ್ರದ ಅಭಿನಯವನ್ನು ಕಂಡು ಆನಂದಿಸಿ, ಅಭಿಮಾನ ಪುರಸ್ಸರವಾಗಿ ಕೊಂಡಾಡಿರುವಳು.

ಈಗ ಕೆಲವು ವರ್ಷಗಳಿಂದೀಚೆಗೆ ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿಯು ತನ್ನ ಸುಮಧುರ ಸಂಗೀತ ಕಚೇರಿಗಳನ್ನು ಸತ್ಕಾರ್ಯಗಳ ಸಹಾಯಕ್ಕಾಗಿಯೇ ನಡೆಸುತ್ತಿರುವಳು. "ಕಸ್ತೂರಿ ಬಾ ನಿಧಿ", ಮಧುರೆ, ತಿರುಚಿನಾಪಳ್ಳಿಗಳ ಕಾಲೇಜುಗಳು, ನಾಗಪುರ ಬೊಂಬಾಯಿಗಳ ಶಾಲೆಗಳು, ದೇವಸ್ಥಾನಗಳ ಜೀರ್ಣೋದ್ಧಾರ ಮುಂತಾದುವುಗಳಿಗೆ ತನ್ನ ಸಂಗೀತ ಸಮಾರಂಭಗಳ ಮೂಲಕ ನೆರವಾಗಿ, ಆ ಸಂಸ್ಥೆಗಳು ಹೇರಳ ಧನಸಹಾಯವನ್ನು ಪಡೆಯುವಂತೆ ಮಾಡಿರುವಳು. ಇದೇ ತಾ. ೭-೩-೪೮ಕ್ಕೆ ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ ಅವಳು ಮಂಗಳೂರಿನಲ್ಲಿ ಒಂದು ಸಂಗೀತ ಕಚೇರಿಯನ್ನು ಕೊಡಲೊಪ್ಪಿ ಈ ಭಾಗಕ್ಕೆ ಪ್ರಥಮ ಬಾರಿ ಸಂದರ್ಶಿಸಲಿರುವಳು. ಸರ್ವರೂ ಅವಳ ಗಾನಾಮೃತವನ್ನು ಸವಿಯುವ ಈ ಅಪೂರ್ವ ಸಂದರ್ಭದ ಲಾಭವನ್ನು ಪಡೆದು ಆ ಸಮಾರಂಭವು ಯಶಸ್ವಿಯಾಗಿ ನೆರವೇರುವಂತೆ ಪ್ರೋತ್ಸಾಹಿಸುವರೆಂದು ಹಾರೈಸಲಾಗಿದೆ.

ಶಹರುಗಳಲ್ಲಿ ಮನೆ ಕಟ್ಟತಕ್ಕವರಿಗೆ ಅಪೂರ್ವ ಸಂದರ್ಭ.

ಪಟ್ಟಣಗಳಲ್ಲಿ ಮನೆಯಿಲ್ಲದೆ ಕಷ್ಟ ಪಡುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಬರುತ್ತದೆ. ಈ ಕಷ್ಟನಿವಾರಣೆಗಾಗಿ ಒಂದು ಯೋಗ್ಯ ಯೋಜನೆಯನ್ನು ಮದ್ರಾಸು ಸರಕಾರವು ಕೈಕೊಂಡಿದೆ. ಇದಕ್ಕನುಸಾರವಾಗಿ ಪ್ರಾಂತ್ಯದ ಹಲವು ಮುಖ್ಯ ಪಟ್ಟಣಗಳಲ್ಲಿ ಪ್ರತ್ಯೇಕ ಸಹಕಾರಿ ಸಂಘಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ. ಇನ್ನೂ ಹಲವು ಪಟ್ಟಣಗಳಲ್ಲಿ ಇಂತಹ ಸಂಘಗಳ ಸ್ಥಾಪನೆಗೆ ಬೇಕಾದ ಕಾರ್ಯಕ್ರಮವನ್ನು ಸರಕಾರದವರು ಊರವರ ಸಹಕಾರದಿಂದ ಕೈಕೊಂಡಿರುತ್ತಾರೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಪ್ರತಿಯೊಂದು ತಾಲೂಕಿನ ಮುಖ್ಯ ಪಟ್ಟಣದಲ್ಲೂ 50 ಮನೆಗಳನ್ನೊಳಗೊಂಡ ವಸತಿ ಗೃಹಯೋಜನೆಯನ್ನು ಕೈಕೊಳ್ಳಲಾಗಿದೆ. ಈ ಯೋಜನೆಗನುಸರಿಸಿ ಕಾಸರಗೋಡು, ಪುತ್ತೂರು, ಕಾರ್ಕಳ, ಉಡುಪಿ, ಕುಂದಾಪುರ, ಈ ಐದು ಪಟ್ಟಣಗಳಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಸಮಿತಿಗಳ ಮೂಲಕ ಯೋಗ್ಯ ಪ್ರದೇಶವನ್ನು ಆರಿಸಲಾಗಿದೆ. ಪುತ್ತೂರಲ್ಲಿ ಶಿವಪೇಟೆಗೆ ತಾಗಿ ಪೆರ್ಲಡ್ಕ ರಸ್ತೆಯ ಮೂಡು ದಿಕ್ಕಿನಲ್ಲಿ ಸುಮಾರು 25 ಎಕ್ರೆಗಳನ್ನು ಸರಕಾರದ ಸಹಾಯದಿಂದ ಕ್ರಯಕ್ಕೆ ಪಡಕೊಳ್ಳುವ ಹಾಗೂ ಈ ಬಗ್ಗೆ ಸಹಕಾರಿ ಸಂಘವೊಂದನ್ನು ಸ್ಥಾಪಿಸುವ ಏರ್ಪಾಡನ್ನು ಮಾಡಿರುವರು. ಇದೇ ತರದ ನಡವಳಿಯನ್ನು ಉಳಿದ ನಾಲ್ಕು ಪಟ್ಟಣಗಳಲ್ಲೂ ಕೈಕೊಳ್ಳಲಾಗುವುದು. ಹಾಗೆಯೇ ಉಡುಪಿ ಮುನಿಸಿಪಾಲಿಟಿಯಲ್ಲಿ ಸುಮಾರು 100 ಮನೆಗಳನ್ನು ಕಟ್ಟಲಾಗುವುದು. ಈ ಯೋಜನೆಗನುಸರಿಸಿ ಪ್ರತಿಯೊಂದು ಪಟ್ಟಣದಲ್ಲೂ ಎ, ಬಿ, ಸಿ, ಎಂತ ಮೂರು ತರಗತಿಯ ಮನೆಗಳನ್ನೂ ಕಟ್ಟಿಸಲಾಗುವುದು. ಸಾಮಾನ್ಯ ಜನರಿಗೂ ಅನುಕೂಲವಾಗುವಂತೆ ಪ್ರತಿಯೊಂದು ಕಟ್ಟಡಕ್ಕೂ ಸುಮಾರು ರೂ. 3000 ದಿಂದ ರೂ. 5000/- ವರೆಗೆ ಖರ್ಚು ತಗಲಬಹುದು. ಈ ಯೋಜನೆಗೊಳಪಟ್ಟು ಆರಿಸಲಾದ ಸ್ಥಳಗಳಲ್ಲಿ ಕಟ್ಟಲಾಗುವ ಎಲ್ಲಾ ಮನೆಯವರಿಗೂ ಅನುಕೂಲವಾಗುವಂತೆ ಬಾವಿ, ಹೂದೋಟ, ಆಡುಂಬೊಲವೇ ಮುಂತಾದ ಸಾಮುದಾಯಿಕ ಪ್ರಯೋಜನಕಾರಿ ವ್ಯವಸ್ಥೆಗಳನ್ನು ಕೂಡಾ ಮಾಡಲಾಗುವುದು.

ಮೇಲೆ ಹೇಳಿದಂತೆ ಸಹಕಾರಿ ಸಂಘಗಳ ಸ್ಥಾಪನೆಯಾದ ಕೂಡಲೇ ಮನೆಕಟ್ಟುವ ಕಾರ್ಯಕ್ರಮವು ಪ್ರಾರಂಭವಾಗುವುದು. ಈ ಕಟ್ಟಡಗಳಿಗೆ ಆಗತ್ಯವುಳ್ಳ ಸಿಮೆಂಟು, ಕಬ್ಬಿಣ, ಇತ್ಯಾದಿ ಸಾಮಾಗ್ರಿಗಳನ್ನೂ, ಸದಸ್ಯರಿಗೆ ದೀರ್ಘ ಮುದತಿಯ ಸಾಲವನ್ನು ಅಂದರೆ 20 ವರ್ಷಗಳಲ್ಲಿ ಕಂತು ಕಂತಾಗಿ ಮರುಪಾವತಿ ಮಾಡುವಂತಹ ಸುಲಭ ತರದ ಸಾಲಗಳನ್ನೂ ಒದಗಿಸುವ ವ್ಯವಸ್ಥೆಯನ್ನೂ ಸದ್ರಿ ಸಂಘದ ಮೂಲಕವೇ ಮಾಡಲಾಗುವುದು.

ಮೇಲೆ ವಿವರಿಸಲಾದ ವಸತಿಗೃಹ ಯೋಜನೆಯಲ್ಲಿ ಭಾಗವಹಿಸಿ ಸುಲಭವಾಗಿ ಮನೆ ಕಟ್ಟಿಸಬೇಕೆಂದು, ಇಚ್ಛಿಸುವವರು "ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್, ಮಂಗಳೂರು" ಇವರಿಗೆ ಬರಕೊಳ್ಳತಕ್ಕದ್ದು. ಅರ್ಜಿದಾರರು ತಮ್ಮ ಸಂಪೂರ್ಣ ವಿಳಾಸವನ್ನೂ, ಅಪೇಕ್ಷಿಸುವ ಮನೆಯ ತರಗತಿಯನ್ನೂ, ಪಟ್ಟಣದ ಹೆಸರನ್ನೂ ಸ್ಪಷ್ಟವಾಗಿ ಸೂಚಿಸತಕ್ಕದ್ದು. ಈ ವಿಚಾರದಲ್ಲಿ ಹೆಚ್ಚಿನ ವಿವರಗಳನ್ನು ಸದ್ರಿಯವರಿಗೆಸೇ ಬರೆದು ತಿಳಿದುಕೊಳ್ಳಬಹುದು.

ಎಂ. ಶ್ರೀನಿವಾಸ ಶ್ಯಾನುಭೋಗ್,
ಡಿಪ್ಯುಟಿ ರಿಜಿಸ್ಟ್ರರರು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಹುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗ.ಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ!

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

The best preventive in epidemics of CHOLERA

"BHUVANENDRA"
CHANDRAMAS

Also a soverelan remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಧರಿಸತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾಲಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ ದ.ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಟ್ಟಿ, ಗಢಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಳಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕವಲಬಾಳ, ಕೆಮಿಸ್ಟ, ಹಾವೇರಿ, ಬ್ಯಾಡಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

—ಮದ್ರಾಸು ಅಳಿಯ ಸಂತಾನ ಬಿಲ್—

[ವಿಮರ್ಶಾತ್ಮಕ ಲೇಖನ—ಕಳೆದ ಸಂಚಿಕೆಯಿಂದ ಮುಂದುವರಿದುದು—
ಶ್ರೀ. ಬಿ. ಮಂಜಯ್ಯ ಹೆಗ್ಗಡೆ ಎಡ್ವೋಕೇಟ್, ಮಂಗಳೂರು—ಇವರಿಂದ]

ಹಿಸೆ

ಈ ಬಿಲ್ಲಿನ ಏಳನೆಯ ಅಧ್ಯಾಯವು ಮಹತ್ವದ ವಿಷಯವಾದ ಹಿಸೆಯ ಸಂಬಂಧವಾಗಿದೆ. ಅಳಿಯ ಸಂತಾನ ಕಟ್ಟನ್ನಾಚರಿಸುವ ಜನರ ಇತಿಹಾಸದಲ್ಲಿ ಮುಖ್ಯವಾಗಿ ಹಿಸೆಯನ್ನು ಕೇಳುವ ಹಕ್ಕನ್ನು ಮೊಟ್ಟಮೊದಲಿಗೆ ಸೃಷ್ಟಿಸಿ ಕೊಟ್ಟಿರುವುದು ಈ ಸೆಕ್ಷನಿನಲ್ಲಿಯೇ. ಇಲ್ಲೊಂದು ಅಲ್ಲೊಂದು ಕುಟುಂಬಗಳು ಬಹು ದೊಡ್ಡದಾಗಿ ಬೆಳೆದು ಅವುಗಳ ಆಡಳಿತೆಯು ಕ್ರಮಗೆಟ್ಟದ್ದು, ಆಡಳಿತೆಯ ವಿಷಯ ಹಾಗೂ ಜೀವನಾಂಶಕ್ಕಾಗಿ ಮೆಂಬರರೊಳಗೆ ದಾವೆಗಳು ಎದ್ದಿರುವುದುಂಟು. ಅಂತಹ ಕುಟುಂಬಗಳು ಮತ್ತು ಇವುಗಳ ಮೆಂಬರರು ತಮ್ಮ ಅಂತಃಕಲಹಗಳನ್ನು ಕೋರ್ಟು ಮೂಲಕ ಇತ್ಯರ್ಥಿಸಿಕೊಳ್ಳಲಿಕ್ಕೆ ಅನುಕೂಲವಾಗುವಂತೆ ಶಾಸನವು ಅವಶ್ಯವಿದೆಯೆಂದು ಅಭಿಪ್ರಾಯಪಟ್ಟರಬಹುದು. ಆದರೆ ಅಳಿಯ ಸಂತಾನ ಕಟ್ಟನ್ನಾಚರಿಸುತ್ತ ಸಮಷ್ಟಿಯಾಗಿ ಬಾಳುತ್ತಿರುವ ಇತರ ಎಲ್ಲ ಕುಟುಂಬಗಳ ಆಶಯವೂ ಇದೇ ಎಂದು ಹೇಳಲಾಗುವುದಿಲ್ಲ. ಆದರೆ ಹೆಚ್ಚಿನ ಮಟ್ಟಿಗೆ ಅಸಂತೃಪ್ತಿಯು ತಲೆದೋರುವುದು ಐನೂರು ರೂಪಾಯಿಗಿಂತಲೂ ಹೆಚ್ಚಿಗೆ ತೀರ್ವೆ ತೆರುವ, ಐವತ್ತಕ್ಕಿಂತಲೂ ಹೆಚ್ಚಿಗೆ ಮೆಂಬರರಿರುವ ಹೇರಳ ಸೊತ್ತುಗಳಿರುವ ಶ್ರೀಮಂತ ಕುಟುಂಬದಲ್ಲಿ ಎಂಬುದನ್ನು ಲಕ್ಷ್ಯಕ್ಕೆ ತಂದುಕೊಳ್ಳಬೇಕಾಗಿದೆ. ಆದರೆ ಕಡಿಮೆ ತೀರ್ವೆ ತೆರುವ ಕಡಿಮೆ ಮೆಂಬರರಿರುವ ಅಸಂಖ್ಯಾತ ಕುಟುಂಬಗಳಿವೆ ಎಂದೂ ಇವುಗಳಲ್ಲಿ ಕಲಹಗಳೂ ಕಡಿಮೆ ಎಂಬುದನ್ನೂ ಮರೆಯತಕ್ಕುದಲ್ಲ. ಮುಖ್ಯವಾಗಿ ಹಿಸೆ ಕೇಳುವ ಹಕ್ಕು ಇಲ್ಲದ ಕಾರಣದಿಂದಲೇ ಕೋರ್ಟು ಹತ್ತಿ ಸಂಕಷ್ಟಕ್ಕೀಡಾಗಿರುವ ಕುಟುಂಬಗಳ ಸಂಖ್ಯೆಯನ್ನು ಅಳಿಯ ಸಂತಾನ ಕಟ್ಟನ್ನಾಚರಿಸುವ ಇತರ ಕುಟುಂಬಗಳ ಸಂಖ್ಯೆಯೊಡನೆ ಹೋಲಿಸಿ ನೋಡಿದರೆ ಅದು ಗಣ್ಯವಾಗಿ ಕಾಣುವುದಿಲ್ಲ. ಜನರೊಳಗೆ ಹಾನಿಕಾರಕವಾದ ದಾವೆಗಳುಂಟಾಗದಂತೆ ತಡೆಗಟ್ಟುವುದಕ್ಕಾಗಿ ಹಿಸೆಯ ಕಾನೂನನ್ನು ತರುವುದೆಂಬ ವಾದದಲ್ಲಿ ನ್ಯಾಯವಿಲ್ಲ. ಹಿಸೆಯ ಕಾನೂನು ಬರಲಿ, ಬಾರದಿರಲಿ, ಕೆಲವು ಕುಟುಂಬಗಳಲ್ಲಿ ದಾವೆಗಳು ಅನಿವಾರ್ಯವಾಗಿವೆ. ಮಾತ್ರವಲ್ಲ, ಇತ್ತೀಚೆಗೆ ಕೋರ್ಟುಗಳು ಸಮಷ್ಟಿ ಕುಟುಂಬದ ಮೆಂಬರನ ಜೀವನಾಂಶದ ಕೇಳಿಕೆಯ ನ್ಯಾಯ ಆವಶ್ಯಕತೆಯ ಬಗ್ಗೆ ಹಿಂದಿನಂತೆ ಕಠಿಣವಾದ ಹಾಗೂ ಕಷ್ಟಸಾಧ್ಯವಾದ ದಾಖಲೆ ರುಜುವಾತುಗಳನ್ನು ಕೊಡಬೇಕೆನ್ನದೆಯೇ ಉದಾರತರದ ಜೀವನಾಂಶವನ್ನು ಕೊಡಿಸುತ್ತ ಬಂದಿವೆಯೆಂಬುದನ್ನೂ ನಾವು ಲಕ್ಷ್ಯಕ್ಕೆ ತಂದುಕೊಳ್ಳಬೇಕು. ಒಂದು ಕುಟುಂಬದ ಮೆಂಬರನು ಮುಂದೆಂದಾದರೂ ಕುಟುಂಬದ ಸೊತ್ತುಗಳಿಂದ ಜೀವನಾಂಶವನ್ನು ಕೇಳುವ ತನ್ನ ಹಕ್ಕನ್ನು ಅಪಾಯಕ್ಕೀಡು ಮಾಡದೆಯೇ ಕುಟುಂಬದ ಮನೆಯನ್ನು ಬಿಟ್ಟು ಹೋಗಿ ತನ್ನದೇ ಜೀವನ ಮಾರ್ಗವನ್ನು ಅನುಸರಿಸಲು ಸ್ವತಂತ್ರನಾಗಿದ್ದಾನೆ. ಅಂತಹನು ತನ್ನ ವೈಯಕ್ತಿಕ ಉದ್ದಿಮೆಯಲ್ಲಿ ಯಾವಾಗಲಾದರೂ ಸೋತಲ್ಲಿ ಕುಟುಂಬದ ಸೊತ್ತುಗಳಿಂದ ಜೀವನಾಂಶವನ್ನು ಕೇಳುವ ಹಕ್ಕುಳ್ಳವನಾಗಿಯೇ ಇರುತ್ತಾನೆ.

ಅಳಿಯ ಸಂತಾನ ಕಟ್ಟನ್ನಾಚರಿಸುವ ಕುಟುಂಬಗಳಲ್ಲಿ ಅಧಿಕಾಂಶವು ಸಾಗುವಳಿಯ ಸೊತ್ತುಗಳನ್ನು ಅವಲಂಬಿಸಿರುವವುಗಳೆಂಬುದನ್ನೂ ಈ ಸಂದರ್ಭದಲ್ಲಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಒಂದು ನೂರು ರೂಪಾಯಿಗಿಂತ ಹೆಚ್ಚು ತೀರ್ವೆ ತೆರುವ ಸಾಗುವಳಿ ಸೊತ್ತುಗಳಿರುವ ಕುಟುಂಬಗಳ ಸಂಖ್ಯೆಗಿಂತ ಕಡಿಮೆ ತೀರ್ವೆ ತೆರುವ ಕುಟುಂಬಗಳ ಸಂಖ್ಯೆಯು ಎಷ್ಟೋ ಪಟ್ಟು ಹೆಚ್ಚು, ಅಸಂಖ್ಯಾತವೂ ಆಗಿರುತ್ತದೆ. ಇಂತಹ ಕುಟುಂಬಗಳ ಚಿಕ್ಕ ಪುಟ್ಟ ಸಾಗುವಳಿ ಸೊತ್ತುಗಳು ಹಿಸೆಯಾಗಲು ಅವಕಾಶಗೊಟ್ಟರೆ ಅವು ಪರಿಪಂಚಾಗಿ ನಿರರ್ಥಕವಾದ ಚೂರುಚೂರುಗಳಾಗುವುವು. ಸಮಷ್ಟಿಯ ಅನುಭೋಗದಿಂದ ಮಾತ್ರ ಫಲಕಾರಿಯಾಗುವ ಇಂತಹ ಚಿಕ್ಕ ಕೃಷಿಕ ಕುಟುಂಬಗಳ ಬೇಸಾಯದ ಗದ್ದೆ ಹೊಲಗಳನ್ನು ಚೂರುಚೂರಾಗಿ ಹರಿದು ನಿರರ್ಥಕಗೊಳಿಸಲು ಅವಕಾಶಗೊಡುವುದು ಸರಕಾರದ ಅಥವಾ ಈ ಮಸೂದೆಯ ಪುರಸ್ಕರ್ತರ ಧೋರಣೆಯೋ? ಒಂದು ವೇಳೆ ಸರಕಾರವು ಈ ಬಗೆಯಲ್ಲಿ ಕಾನೂನು ಮಾಡಲು ಬದ್ಧಕಂಕಣವಾಗಿದ್ದರೆ, ಈ ಹಿಸೆಯ ಶಾಸನದ ಪರಿಣಾಮವು ಹೇಗಾಗುತ್ತದೆಂದು ನೋಡಲು ಪ್ರಕೃತ ಪ್ರಯೋಗಾರ್ಥವಾಗಿ ದೊಡ್ಡ ಸಾಗುವಳಿಯ ಕುಟುಂಬಗಳ ಮಟ್ಟಿಗೆ ಮಾತ್ರ ಅನ್ವಯಿಸುವಂತೆ ಮಾಡಿ ಅದರ ಪರಿಣಾಮವು ಇಡಿಯ ಸಮಾಜಕ್ಕೇ ಹಿತಕಾರಿಯಾದೀತೆಂದು ಕಾರ್ಯತಃ ಕಂಡುಬಂದಲ್ಲಿ ಆನಂತರ ಈ ಶಾಸನವನ್ನು ಬಡ ಕುಟುಂಬಗಳಿಗೂ ಅನ್ವಯಿಸುವಂತೆ ಮಾಡುವುದು ಒಳ್ಳೆಯದಲ್ಲವೇ ಎಂಬುದು ವಿಚಾರ ಮಾಡತಕ್ಕ ವಿಷಯ.

8. ಬಡ ಕುಟುಂಬಗಳ ಸೊತ್ತುಗಳಲ್ಲಿ ಹಿಸೆ ಮಾಡಿಕೊಳ್ಳುವ ಹಕ್ಕು ಬಂದಲ್ಲಿ ಅವು ಚೂರುಚೂರಾಗಿ ಹೋಗುವುವು ಎಂಬುದೊಂದಲ್ಲದೆ ಇತರ ಹಾನಿಕಾರಕವಾದ ಸನ್ನಿವೇಶಗಳಿಗೆ ಅವಕಾಶಗೊಡುವ ಸಂಭವವೂ ಇದೆ. ಹಲವು ಬಡ ಕುಟುಂಬಗಳ ಮೆಂಬರರು ಮುಂದುಬರಲು ಬಾರದ ತಿಳುವಳಿಕೆಯಿಲ್ಲದ ಹೆಡ್ಡಜನರಾಗಿರುವ ಪ್ರಯುಕ್ತ ಅಂತಹವರಿಗೆ ಹಿಸೆ ಕೇಳುವ ಹಕ್ಕು ಬಂದಲ್ಲಿ ಆಯಾ ಸ್ಥಳೀಯ ಶ್ರೀಮಂತ ವರ್ಗದವರಲ್ಲಿ ಯಾರಾದರೊಬ್ಬರ ಬಗಲಿಗೆ ಇವರು ಸುಲಭವಾಗಿ ಬಿದ್ದು ಹಾಳಾಗುವ ಸಂಭವವಿದೆ. ಇಷ್ಟರತನಕ ಇಂತಹ ಬಡ ಕುಟುಂಬಗಳ ಸೊತ್ತುಗಳ ಭದ್ರತೆಯಿಂದರೆ ಪರಾಧೀನ ಹೊಂದಲಾಗದಿರುವುದು. ಕುಟುಂಬದ ವ್ಯಕ್ತಿಗಾಗಲೀ ಕವರಿಗಾಗಲೀ ಸಾಲ ಕೊಟ್ಟವನಿಗೆ ಕುಟುಂಬದ ಸೊತ್ತುಗಳನ್ನು ಜಪ್ತಿ ಏಲಂಗಳಿಗೆ ತರಲಾಗುತ್ತಿದ್ದಿಲ್ಲ. ಈ ಕಾನೂನು ಬಂದಲ್ಲಿ ಬೇರೆಯವರು ಕುಟುಂಬದ ವ್ಯಕ್ತಿಯನ್ನೇ ಕವರನ್ನೋ ವಶೀಕರಿಸಿಕೊಂಡು ಕುಟುಂಬದ ಇತರ ಎಲ್ಲ ಮೆಂಬರರ ಅಪೇಕ್ಷೆಗೆ ವಿರೋಧವಾಗಿ ಹಿಸೆಯ ಹಕ್ಕನ್ನು ಸಾಧಿಸಲಿಕ್ಕೂ ಹೀಗೆ ಕುಟುಂಬದ ಸೊತ್ತು ಅನ್ಯನೊಬ್ಬನ ವಶವಾಗಲಿಕ್ಕೂ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ಅವಿಭಕ್ತವಾಗಿ ಸಮಷ್ಟಿಯಿಂದ ಇರಲಿಕ್ಕೆ ಈ ಕಾನೂನಿಂದ ಪ್ರತಿಬಂಧಕವಿಲ್ಲೆಂದೂ ಹಿಸೆಯ ಅಪೇಕ್ಷೆ ಇದ್ದವರಿಗೆ ಮಾತ್ರ ಅನುಕೂಲ ಕಲ್ಪಿಸಿ ಕೊಡುವುದು ಕಾನೂನಿನ ಉದ್ದೇಶವೆಂದೂ ಹೇಳಲ್ಪಟ್ಟಿದೆಯಾದರೂ ಕುಟುಂಬದ ಯಾರಾದರೊಬ್ಬ ವ್ಯಕ್ತಿ ಅಥವಾ ಕವರು ಹಿಸೆಯನ್ನು ಅಪೇಕ್ಷಿಸಿದರೆ ಉಳಿದವರ ಬಹುಮತವು ಅದಕ್ಕೆ ವಿರೋಧವಾಗಿದ್ದರೂ ಅವರು ಹಿಸೆಗೆ ಒಳಗಾಗಲೇಬೇಕಾಗಿದೆ. ಒಟ್ಟಾರೆ ಮೇಲೆ ಈ ಕಾನೂನು ಕುಟುಂಬದಲ್ಲಿ ಒಡಕನ್ನು ತಂದು ಅದರ ಹುದುತನವನ್ನು ನಾಶಗೊಳಿಸಲು ತಕ್ಕಷ್ಟು ಅವಕಾಶಗೊಡುವ ಲಕ್ಷಣಗಳುಳ್ಳದಾಗಿದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಈ ಹಿಸೆಯ ಕಾನೂನನ್ನು ತರಬೇಕೆಂತಲೇ ಇದ್ದರೆ ಅಳಿಯ ಸಂತಾನದ ಕಟ್ಟನ್ನಾಚರಿಸುವ ಸಮಾಜದ ಮತ್ತು ಕುಟುಂಬಗಳ ಹಿತದೃಷ್ಟಿಯಿಂದ ಅದನ್ನು ಇನ್ನಷ್ಟು ಮಿತಗೊಳಿಸುವುದು ಕ್ಷೇಮಕರವಲ್ಲವೇ ಎಂಬುದನ್ನು ಸರಕಾರವು ಯೋಚಿಸುವುದು ಒಳ್ಳೆಯದು. ಜೀವನಾಂಶಕ್ಕಾಗಿ ಕುಟುಂಬದ ಸೊತ್ತುಗಳನ್ನು ಹಿಸೆ ಮಾಡುವ ಬದಲಾಗಿ ಹಿಸೆಯನ್ನು ಅಪೇಕ್ಷಿಸುವ ಮೆಂಬರನಿಗೆ ವರ್ಷಂಪ್ರತಿ ದಾವೆ ಮಾಡುವ ಅವಶ್ಯ ಬಾರದಂತೆಯೇ ಕುಟುಂಬದ ಹುಟ್ಟುವಳಿಯಿಂದ ಅಕ್ಕಿ ಅಥವಾ ನಗದಿಯಾಗಿ ಜೀವನಾಂಶ ದೊರಕುವಂತೆ, ಯಜಮಾನನ ದೇಹ ಜವಾಬ್ದಾರಿಯನ್ನು ಒಳಪಡಿಸಿ, ಕಾನೂನನ್ನು ತಿದ್ದುಪಡಿ ಮಾಡುವುದೂ ಅಂತಹ ತಿದ್ದುಪಡಿ ಆಡಳಿತೆಯು ಸರಿಯಿಲ್ಲವೆಂಬ ಕಾರಣದಿಂದ ಹಿಸೆಯಾ ಜೀವನಾಂಶ ಕೇಳುವವರಿಗೆ ಒಪ್ಪಿಗೆಯಾಗಲಾರದೋ ಎಂದು ವಿಚಾರ ಮಾಡುವುದೂ ಪ್ರಯೋಜನಕಾರಿಯಾದೀತು.

ಹಿಸೆಯ ರೀತಿ—

9. ಗಂಡು ಮೆಂಬರರಿಗೆ ದೊರಕುವ ಹಿಸೆಯ ಹಕ್ಕು ಅವರ ಜೀವನಾಂತದ ವರೆಗಿನ ಅನುಭೋಗದ ಮಟ್ಟಿಗಿರುವುದರಿಂದ ವಿಧವೆಯ ಜೀವನಾಧಾರ ಹಕ್ಕಿನ ಲಕ್ಷಣವಿರುವ ಈ ಹಿಸೆಯ ಕ್ರಮವು ಈ ಕಾನೂನು ಬೇಕೆನ್ನುವವರಿಗೂ ಅಸಂತೃಪ್ತಿಯನ್ನುಂಟುಮಾಡಿದೆ. ಆಜೀವ ಅನುಭೋಗಕ್ಕೆ ಮಾತ್ರ ಹಕ್ಕಿರುವವನು ಸೊತ್ತುಗಳಲ್ಲಿ ಕೃತ ಮರಾಮತ್ತು ಮುಂತಾದವುಗಳನ್ನು ಉತ್ತಮಗೊಳಿಸಲು ಉತ್ಸುಕನಾಗುವುದಿಲ್ಲವಾದ ಕಾರಣ ಅಂತಹ ಸೊತ್ತುಗಳು ಅವನ ಮರಣಾನಂತರ ಸಂಬಂಧಪಟ್ಟ ತಾಯಿಗಳಿಗೆ ಮರಳಿ ದೊರಕುವಾಗ ಅವು ತೀರ ಕೆಟ್ಟು ಹಾಳಾಗುವ ಸಂಭವವಿದೆ. ಮಾತ್ರವಲ್ಲ, ಆತನಿಗಾಗಿ ಕೊಡಲ್ಪಟ್ಟಿದ್ದ ಸೊತ್ತು ತಿರುಗಿ ಚೂರುಚೂರಾಗಿ ಹಿಸೆಯಾಗಲ್ಪಡುತ್ತದೆ. ಮಾತ್ರವಲ್ಲ, ಒಬ್ಬ ಗಂಡು ಮೆಂಬರನಿಗೆ ವರ್ಷಕ್ಕೆ ಐವತ್ತು ಮುಡಿಗಿಂತ ಹೆಚ್ಚಿನ ಹುಟ್ಟುವಳಿ ಸಿಗಬಹುದಾದ ಹಿಸೆ ಸಿಕ್ಕುವಂತಹ ಕುಟುಂಬಗಳು ತೀರ ಕಡಿಮೆ. ಎಂದ ಮೇಲೆ ಬಡ ಕುಟುಂಬಗಳ ಗಂಡಸಿಗೆ ದೊರಕುವ ಹತ್ತು ಹದಿನೈದು ಮುಡಿ ಅಕ್ಕಿಯ ಆಸ್ತಿಯಿಂದ ಪ್ರತ್ಯೇಕ ಗೃಹಕೃತ್ಯವನ್ನು ನಡೆಯಿಸುವುದು ಸಾಧ್ಯವೇ? ಇಂತಹ ಆಜೀವ ಅನುಭೋಗದ ಹಕ್ಕಿರುವ ಹಿಸೆಯನ್ನು ಕೊಡುವುದು ಗಂಡು ಮೆಂಬರನ ಅಥವಾ ಕುಟುಂಬದ ಇತರ ಮೆಂಬರರ ಹಿತದೃಷ್ಟಿಯಿಂದ ಕ್ಷೇಮಕಾರಿಯೇ ಎಂಬುದೂ ಯೋಚಿಸತಕ್ಕ ವಿಷಯ.

10. ಇಂದಿನ ತನಕ ಒಂದು ಕುಟುಂಬದ ಸೊತ್ತುಗಳಲ್ಲಿ ಪ್ರತಿಯೊಬ್ಬ ಮೆಂಬರನಿಗೆ, ಅವನು ದೊಡ್ಡದೊಂದು ತಾಯಿಯ ಮೆಂಬರನೇ ಇರಲಿ, ಇತರ ಮೆಂಬರರಂತೆ ಸರಿಸಮಾನವಾದ ಹಕ್ಕು ಇತ್ತು. ಅಂತೆಯೇ ಇಂದಿನ ತನಕ ಒಬ್ಬನು ಜೀವನಾಂಶ ಕೇಳಿದಾಗ ಆತನು ದೊಡ್ಡ ಅಥವಾ ಸಣ್ಣ ತಾಯಿಯ ಮೆಂಬರನೆಂಬ ಪರಿಭೇದ ಮಾಡದೆಯೇ ಕೋರ್ಟು ಸಮಷ್ಟಿ ಹಕ್ಕನ್ನು ಆಧರಿಸಿಯೇ ಎಲ್ಲ ಮೆಂಬರರೂ ಸರಿಸಮಾನ ಹಕ್ಕುದಾರರೆಂದು ಪರಿಗಣಿಸುತ್ತಿತ್ತು. ಈಗಿನ ಮಸೂದೆಯ ಹಿಸೆಯ ಕ್ರಮವು ದೊಡ್ಡ ತಾಯಿಯವರಿಗೆ ಹಾನಿಕಾರಕವಾಗುವಂತಿದೆ.

ಕರಾರುಗಳು ಮತ್ತು ಎವಾರ್ಡು ಡಿಕ್ರಿಗಳು.

11. ಕೆಲವು ಕುಟುಂಬಗಳ ಆಡಳಿತೆ, ಮೆಂಬರರುಗಳ ಹಕ್ಕು, ಬೇರೆ ಬೇರೆ ತಾಯಿಗಳ ಅನುಭೋಗದ ಸೊತ್ತುಗಳು, ಹಿಸೆಗಳು, ಜೀವನಾಂಶಗಳು, ಇತ್ಯಾದಿಗಳ ವಿಷಯವಾಗಿ ಹಲವು ವರುಷಗಳ ಹಿಂದೆಯೇ ನಿಯಮ ನಿಬಂಧನೆಗಳು ನಿಶ್ಚಿತವಾಗಿ ರಿಜಿಸ್ಟ್ರಿಯಾಗಿರುವ ಕರಾರು ಮತ್ತು ಎವಾರ್ಡು ಡಿಕ್ರಿಗಳ ಪಾಡೇನೆಂಬುದಕ್ಕೆ ಮಸೂದೆಯು ಮೌನತಾಳಿದೆ. ಈ ಕರಾರು ಎವಾರ್ಡು ಡಿಕ್ರಿಗಳ ನಿಯಮ ನಿಬಂಧನೆಗಳು ಕೆಲವು ಕುಟುಂಬಗಳ ಕೆಲವು ಮೆಂಬರರುಗಳಿಗೆ ಮಸೂದೆಯ ಕಾನೂನುಗಳಿಗಿಂತಲೂ ಹೆಚ್ಚು ಪ್ರಯೋಜನಕಾರಿಯಾಗಿರಬಹುದು. ಇನ್ನು ಕೆಲವು ಕುಟುಂಬಗಳ ಕೆಲವು ಮೆಂಬರರುಗಳಿಗೆ ಈಗಿನ ಮಸೂದೆಯೇ ಅನುಕೂಲವೆಂದು ತೋರಬಹುದು. ಇಂತಹ ಕರಾರು ಎವಾರ್ಡು ಡಿಕ್ರಿಗಳನ್ನು ಮುರಿದು ಹಿಸೆ ಕೇಳತಕ್ಕುದೆಂದು ಮಸೂದೆಯು ಆಜ್ಞಾಪಿಸುವುದಿಲ್ಲವಾದರೂ ಅವನ್ನು ಮನ್ನಿಸಿ ದಾವೆ ತಾರದಿರುವುದೂ ಉಲ್ಲಂಘಿಸಿ ದಾವೆ ತರುವುದೂ ಮೆಂಬರನ ಇಚ್ಛೆಗೆ ಒಳಪಟ್ಟಿರುವ ಕಾರಣ ಯಾವನಾದರೊಬ್ಬ ಮೆಂಬರ ಅಥವಾ ಕವರು ತನಗೆ ಹೆಚ್ಚು ಸೊತ್ತು ದೊರಕುವ ಸಂದರ್ಭವಿದ್ದಲ್ಲಿ ಈ ಕಾನೂನಿನ ಪ್ರಯೋಜನ ಹೊಂದಲು ಮುಂದಾಗದಿರುವುದು ಅಸಂಭವ. ಈ ಕರಾರು ಎವಾರ್ಡು ಡಿಕ್ರಿಗಳ ಪ್ರಕಾರ ಕುಟುಂಬಗಳು ಎಷ್ಟೋ ವರುಷಗಳಿಂದ ಏನೊಂದೂ ಅಸಂತೃಪ್ತಿಯಿಲ್ಲದೆ ಬಾಳುತ್ತ ಬಂದಿದ್ದ ವ್ಯವಸ್ಥೆಗಳ ವಿಚಾರದಲ್ಲಿ ಈ ಮಸೂದೆಯಿಂದಾಗಿ ಪುನರ್ರಚನೆಯ ಗೊಂದಲವೇಳುವುದು ಅನಿವಾರ್ಯವಾಗಿದೆ.

12. ಆದುದರಿಂದ ವ್ಯಕ್ತಿಗೆ ಸಮಾಜಕ್ಕೆ ಅನ್ವಯಿಸುವ ಶಾಸನಗಳನ್ನು ಮಾಡುವಾಗ ಸರಕಾರವೂ ಶಾಸನವನ್ನು ಸರಕಾರದ ಮುಂದಿಡುವ ಹೊಣೆ ಹೊತ್ತವರೂ ಅವಸರ ಮಾಡದೆ ವಿಷಯಗಳಲ್ಲಿ ಮತ್ತೂ ಹೆಚ್ಚು ಆಳವಾಗಿ ಕೂಲಂಕಷವಾಗಿ ಇಳಿದು ಅನುಕೂಲ ಪ್ರತಿಕೂಲ ಪರಿಣಾಮಗಳನ್ನು ಪರ್ಯಾಲೋಚಿಸತಕ್ಕದ್ದೆಂದು ನಿರೀಕ್ಷಿಸಿದರೆ ಹೆಚ್ಚಾದೀತೆ?


REGD.

ಅಮೃತಾಂಜನ.
ತಲೆವೇದನೆ, ಶಿರೋವೇದನೆ, ಉಳುಕು, ಕೀಲ್ನೋವು, ಹುಳುಕು ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಳ್ಳವಾತ ನೋವಿಗೆ ನೋವಾದ ಎಲ್ಲಾ ರೋಗಗಳಿಗೂ ಸಿದ್ಧ
ಪಟ್ಟಣ ಹಳ್ಳಿಗಳಲ್ಲಿ ಮತ್ತು ಸಕಲ ಸಮ್ಮಸ್ಥಳಗಳಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಋಷಿಕೇಶ ಚ್ಯವನಪ್ರಾಶ

ಬಾಬಾ ಕಾಲಿ ಕಮ್ಲಿವಾಲಾ ಋಷಿಕೇಶ ಇವರ ಅಷ್ಟ ಪ್ರಯೋಗಗಳಿಂದ ಕೂಡಿದ ಸನ್ಯಾಸಿ ಪ್ರಯೋಗದ ಚ್ಯವನಪ್ರಾಶ ಲೇಹವು ಅಪೂರ್ವ ಗುಣಕಾರಿಯಾಗಿದೆ. ಅಗ್ನಿಮಾಂದ್ಯ, ಕೆಮ್ಮು, ಶೀತ, ನೆಗಡಿ, ಉಬ್ಬಸ, ಕ್ಷಯ ಮೊದಲಾದ ಶ್ವಾಸಕೋಶಗಳ ರೋಗಗಳನ್ನು ಗುಣಪಡಿಸುವ ರಾಮಬಾಣ ಔಷಧಿ. ಈ ಲೇಹ ಸೇವನೆಯಿಂದ ನವಚೇತನ ಉಂಟಾಗುವುದರಲ್ಲಿ ಅನುಮಾನವಿಲ್ಲ.

ಕ್ರಯ ರಾತ್ತಲಿಗೆ ರೂಪಾಯಿ 5 - ಅರ್ಧ ರಾತ್ತಲಿಗೆ 2 12 0 ಒಂದು ರೂಪಾಯಿ ಅಡ್ವಾನ್ಸ್ ಕಳುಹಿಸಿದ್ದಲ್ಲಿ ವಿ. ಪಿ. ಪಿ. ಪಾರ್ಸೆಲು ಮಾಡಲಾದೀತು

ಸ್ಟೋಕಿಸ್ಟರು.

ಕಾಡಬೆಟ್ಟು ರಾಮಕೃಷ್ಣ ಗುಂಡು ನಾಯಕ್, ರಥಬೀದಿ, ಉಡುಪಿ.
ಅಥವಾ
ದ.ಕ.ಜಿಲ್ಲಾ ಪೋಲೀಸ್ ಆಫೀಸರ್ಸ್ ಕೋಅಪರೇಟಿವ್ ಸ್ಟೋರ್ಸ್ ಲಿಮಿಟೆಡ್, ಮಂಗಳೂರು.

ರೇಶನ್ ಕಾರ್ಡುಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಸ್ವೀಕಾರ—ವಿಮರ್ಶೆ

೧. **ಜಯಹಿಂದ**—ಜನ್ಮದಿನಾಂಕ. ಕ್ರೌನ್ ೧೪ ಆಕಾರದ ಪುಟಗಳು ೮೪. ಬೆಲೆ ೮ ಆಣೆ.

ಶ್ರೀ. ನಾ. ಸು. ಪಡೀಲಕರರ ಸಂಪಾದಕತ್ವ ಹಾಗೂ ಶ್ರೀ ವಾ. ವೆ. ಕಾಗುನಿಯವರ ಸಹ ಸಂಪಾದಕತ್ವದಲ್ಲಿ ಪುತ್ತೂರಿನಿಂದ ಹೊರಡುತ್ತಿರುವ 'ಜಯಹಿಂದ' ವಾರಪತ್ರಿಕೆಯು ಕಳೆದ ಜನವರಿ-ಸ್ವಾತಂತ್ರ್ಯದಿನ ಪ್ರಕಟಿಸಿರುವ ಈ ೧ನೆಯ ಜನ್ಮದಿನಾಂಕ ವಿಶೇಷ ಸಂಚಿಕೆಯನ್ನು ಆನಂದದಿಂದ ಸ್ವೀಕರಿಸಿದ್ದೇವೆ. ವಿಶೇಷತಃ ರಾಜಕೀಯ ವಿಚಾರಗಳಿಗಾಗಿಯೇ ಮೀಸಲಾಗಿರುವ ಈ ಪತ್ರಿಕೆಯು ಈ ಸಲ ಸಾಹಿತ್ಯ, ಒಕ್ಕಲುತನ, ವಾಣಿಜ್ಯ, ಜೀವವಿಜ್ಞಾನ ಮುಂತಾದ ಇತರ ವಿಷಯಗಳನ್ನೂ ಕೂಡಿಕೊಂಡಿರುವುದು ಸಂತೋಷ. ಮುದ್ರಣವು ಮಾತ್ರ ಅಷ್ಟೊಂದು ಚನ್ನಾಗಿಲ್ಲ.

೨. **ಮೊಗವೀರ**-ತ್ರೈಮಾಸಿಕ. ನಂ. ೪ ಸಂಚಿಕೆ. ೩ ಪುಟಗಳು: ಕಿರೀಟ ೧೪ ಆಕಾರದ ೪೪. ಬಿಡಿ ಸಂಚಿಕೆ: ೮ ಆಣೆ.

ಮೊಗವೀರ ವ್ಯವಸ್ಥಾಪಕ ಮಂಡಳಿಯು ತ್ರೈಮಾಸಿಕ ಪತ್ರಿಕೆಯು ಈ ಸಂಚಿಕೆಯಲ್ಲಿ, ಮದ್ಯಪಾನ ನಿರೋಧ, ಸ್ತ್ರೀಯರ ಕರ್ತವ್ಯ, ಮೀನಿನ ವ್ಯವಸಾಯವೇ ಮೊದಲಾದ ಮೊಗವೀರ ಸಮಾಜದ ಬೆಳವಣಿಗೆಗೆ ಪೋಷಕವಾದ ಕೆಲವು ಬರಹಗಳಿವೆ.

೩. **ತೆಂಕನಾಡು**—ಪ್ರಕಾಶಕರು ಸ್ವಾಗತಸಮಿತಿ, ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕಾಸರಗೋಡು. ಡ. ಕ. ಕ್ರೌನ್ ೧/೪ ಆಕಾರದ ಪುಟಗಳು: ೧೬೦ ಬೆಲೆ: ಎರಡು ರೂಪಾಯಿ.

'ದಕ್ಷಿಣಕನ್ನಡದ ಹಿಂದಿನ ಮತ್ತು ಇಂದಿನ ವಿಶಿಷ್ಟತೆಗಳ, ಮುಖ್ಯವಾಗಿ ಇತಿಹಾಸ, ಸಂಸ್ಕೃತಿಗಳ ಪರಿಚಯವನ್ನು' ಅಖಿಲಕರ್ನಾಟಕಕ್ಕೆ ಮಾಡಿಕೊಡುವ ಉದ್ದೇಶದಿಂದ, ಕಾಸರಗೋಡಿನ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮಂಗಳೂರಿನ ನಾಲ್ವರು ವಿದ್ವಾನರ ಸಂಪಾದಕತ್ವದಲ್ಲಿ ಈ ವಿಶೇಷ ಗ್ರಂಥವು ಹೊರಬಿದ್ದಿದೆ. ಇವರಲ್ಲಿಯ ಶ್ರೀ. ಎಮ್. ಗೋವಿಂದ ಪೈಯವರ 'ತುಳುನಾಡು' ಎಂಬ ಲೇಖನವು ಇತಿಹಾಸ ಸಂಶೋಧನೆಯ ದೃಷ್ಟಿಯಿಂದ ಮಹತ್ವದ್ದಾಗಿದ್ದು, ಪ್ರತ್ಯೇಕ ಗ್ರಂಥವಾಗಿ ಪ್ರಕಟಿಸಲ್ಪಡಲು ಯೋಗ್ಯವಾಗಿದೆಯಾದರೂ, ಕೇವಲ ೧೬೦ ಪುಟಗಳ ಗ್ರಂಥದಲ್ಲಿ ೫೦ ಪುಟಗಳ ಈ ಲೇಖನಕ್ಕೆ ಎಡೆಕೊಟ್ಟುದು ಅಷ್ಟೊಂದು ಉಚಿತವಲ್ಲವೆಂದು ನಮಗನ್ನಿಸುತ್ತದೆ. ಗ್ರಂಥದಲ್ಲಿ 'ಭೂತಾರಾಧನೆ'ಗೆ ಕೂಡಾ ಪ್ರತ್ಯೇಕ ಲೇಖನದ ಒಂದು ಸ್ಥಾನ ದೊರೆತಿರುವಾಗ, ದಕ್ಷಿಣಕನ್ನಡದ ಪ್ರಾಚೀನ ವಿಶಿಷ್ಟ ಕಲೆಯಾದ 'ಯಕ್ಷಗಾನ'ಕ್ಕೊಂದು ಪ್ರತ್ಯೇಕ ಲೇಖನವನ್ನು ಸೇರಿಸಬೇಕಾಗಿತ್ತು. 'ದಕ್ಷಿಣ ಕನ್ನಡದಲ್ಲಿ ಪತ್ರಿಕೋದ್ಯಮದ ಬೆಳವಣಿಗೆ' ಎಂಬ ಲೇಖನವನ್ನು ಬರೆದವರು, ಜಿಲ್ಲೆಯ ಪತ್ರಿಕೆಗಳ ಕಾಲ ನಿರ್ದೇಶಿಸುವ ಮತ್ತು ಪ್ರಶಸ್ತಿ ಮಾಡುವ ರೀತಿಯಲ್ಲಿ ಕೆಲವೊಂದು ಪತ್ರಿಕೆಗಳತ್ತ, ಪಕ್ಷಪಾತ ತೋರಿಸಿದಂತಿದೆ; ಅಲ್ಲದೆ. ಪತ್ರಿಕೆಯ ಹೆಸರುಗಳಲ್ಲಿ ಈಗಲೂ ಪ್ರಚಾರದಲ್ಲಿರುವ ಒಂದೆರಡು ಪತ್ರಿಕೆಗಳ ಪ್ರಸ್ತಾಪವಿಲ್ಲದಿರುವುದು ಶೋಚನೀಯ. ಅಂತೆಯೇ ಕೊನೆಯ ಬರೆಹವಾದ 'ದಕ್ಷಿಣಕನ್ನಡದ ಬರಹಗಾರರು' ಎಂಬುದರಲ್ಲಿ, 'ಒಂದೇ ಒಂದು ಲೇಖನ ಬರೆದವರ, ಒಂದೇ ಒಂದು ಕವಿತೆಬರೆದವರ ಹೆಸರು ಕೂಡ ಬರುವಂತೆ ಪ್ರಯತ್ನಿಸಿದ್ದೇನೆಂದು' ಸಂಗ್ರಾಹಕರು ಹೇಳಿರುವರಾದರೂ ಎಷ್ಟೋ ವರ್ಷಗಳಿಂದ ಪತ್ರಿಕಾ ಸಂಪಾದಕರಾಗಿರುವವರ, ಗ್ರಂಥಕರ್ತರುಗಳ, ಮತ್ತು ಲೇಖಕರ ಹೆಸರುಗಳನ್ನು ಬಿಟ್ಟಿರುವುದು ವಿಷಾದಕರ. ಈ ಲೇಖನದಲ್ಲಿ ತುಂಬ ಲೋಪ, ದೋಷ, ಪುನರುಕ್ತಿಗಳಿವೆ. ಇದರ ಬದಲಿಗೆ ಸಾಹಿತ್ಯ ವಿಷಯದಲ್ಲಿ ಗ್ರಂಥಗಳನ್ನು ಬರೆದವರ ಹಾಗೂ ಸಾಧಾರಣ ೧೦೦ ಪುಟಗಳ ಒಂದು ಗ್ರಂಥಕ್ಕೆ ಬೇಕಾದಷ್ಟು ಯೋಗ್ಯವಾದ ಲೇಖನಗಳನು ಬರೆದವರ ಹೆಸರುಗಳನ್ನಷ್ಟೇ ಸಾಧ್ಯವಾದಷ್ಟು ತಪ್ಪಿಲ್ಲದೆ, ಸಂಗ್ರಹಿಸಿ, ಲೇಖನವನ್ನು ಸಣ್ಣದು ಮಾಡಿ, ಉತ್ತಮಗೊಳಿಸಿ, ಉಳಿದ ಪುಟಗಳನ್ನು ಬೇರೆ ವಿಷಯಗಳಿಗೆ ಉಪಯೋಗಿಸ ಬಹುದಿತ್ತು. ಎನ್ನಿಸುತ್ತದೆ. ದಕ್ಷಿಣ ಕನ್ನಡದ ಕಲೆಗಳು ಎಂಬ ಶ್ರೀ ಕಾರಂತರ ಲೇಖನವು ಈ ಜಿಲ್ಲೆಯ ಎಲ್ಲಕಲೆಗಳನ್ನು ಪ್ರಸ್ತಾಪಿಸುವ ಕಾರಣ ತುಸು ಅವಸರದಿಂದ ಬರೆದಂತಿದೆ. "ದಕ್ಷಿಣಕನ್ನಡದಲ್ಲಿ ಇಕ್ಕೇರಿನಾಯಕರ ಆಳಿಕೆ" ಎಂಬ ಲೇಖನದಲ್ಲಿ ಬಂದಿರುವ ವಿಷಯಗಳು ಈ ಮೊದಲು ಮತ್ತೆಲ್ಲಿಯೋ ಪ್ರಕಟವಾದಂತಿವೆ. 'ಅಳಿಯ ಸಂತಾನಕಟ್ಟು' 'ದಕ್ಷಿಣಕನ್ನಡದಲ್ಲಿ ಜೈನಧರ್ಮದ ಕುರುಹುಗಳು' ಎಂಬವು ಇಂಗ್ಲೀಷ್ ಲೇಖನಗಳ ಭಾಷಾಂತರಗಳಾಗಿದ್ದರೂ ಇತಿಹಾಸ ಪರಿಣತರು ಬರೆದವುಗಳಾಗಿವೆ. "ಕನ್ನಡ ಭಾಷೆಯ ವಿಕಾಸ" ಎಂಬುದು ಕನ್ನಡಲಿಪಿಯ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತದಾದರೂ ಅದರ ಸಂಸ್ಕರಣದ ಕುರಿತು ಕೆಲವು ಸಲಹೆಗಳನ್ನು ಕೊಟ್ಟಿದ್ದರೆ ಮತ್ತಷ್ಟು ಉತ್ತಮವಾಗುತಿತ್ತು. "ಕನ್ನಡ ಮಲಯಾಳ ಸಮಸ್ಯೆ" ಎಂಬುದು ಅಂಕೆ ಸಂಖ್ಯೆಗಳ ಆಧಾರದ ಮೇಲೆ ಬರೆಯಲ್ಪಟ್ಟ ಸಂದರ್ಭೋಚಿತ ಲೇಖನವಾಗಿದೆ. ಒಟ್ಟಿನಲ್ಲಿ ಗ್ರಂಥವು ಜಿಲ್ಲೆಯ ಬರೆಹಗಾರರ ಪ್ರಾತಿನಿಧಿಕ ಪ್ರಯತ್ನವಾಗಿರುವಂತೆ ತೋರುವುದಿಲ್ಲ. ಅಲ್ಲದೆ, ಜಿಲ್ಲೆಯ ಶಿಕ್ಷಣ, ಕೈಗಾರಿಕೆಗಳು, ವಿಮಾ-ವಾಣಿಜ್ಯ ಉದ್ಯಮಗಳನ್ನು ಕುರಿತು ಒಂದೆರಡು ಲೇಖನಗಳನ್ನು ಸೇರಿಸಿದ್ದರೆ ಮತ್ತಷ್ಟು ಚೆನ್ನಾಗುತಿತ್ತು. ಮುದ್ರಣವು ಸುಂದರವಾಗಿ, ಅಚ್ಚುಕಟ್ಟಾಗಿದೆ.

S. & S.

ತರುಣಿಯರ ಆರೋಗ್ಯ— ಬರೆದವರು-ಆಯುರ್ವೇದ ವಿದ್ವಾನ್ ವಿನಾಯಕರಾವ್ ಬಾಪಟ್, ಎಲ್. ಎ. ಎಂ. ಎಸ್., ಪ್ರಕಾಶಕರು-ಸಾಧನ ಪ್ರಕಟನಾಲಯ-ಸಾಗರ-ಶಿವಮೊಗ್ಗ-ಪುಟಗಳು ೧೩೮ ಬೆಲೆ ರೂ ೨.

ಹುಡುಗಿಯು ಬಳೆದು ಹೆಂಗಸಾಗುವಾಗ ಅವಳ ಮೈಮನಸ್ಸಿನಲ್ಲಿ ಮಹತ್ವದ ಅವಸ್ಥಾಂತರಗಳಾಗುವವು. ಮುಂದಿನ ಅವಳ ಬಾಳಿನಲ್ಲಿ ಲೈಂಗಿಕ ಜೀವನವೂ ಗರ್ಭಿಣಿತನ, ಪ್ರಸವ ತಾಯ್ತನ ಮುಂತಾದ ಇತರ ಪ್ರಕೃತಿದತ್ತ ಸ್ತ್ರೀ ಜೀವನ ವೈಶಿಷ್ಟ್ಯಗಳೂ ಬೆಂಬತ್ತಿ ಬರುತ್ತವೆ. ಆದರೆ ಈ ವಿಷಯವಾದ ಶಾಸ್ತ್ರೀಯವಾದ ಜ್ಞಾನವನ್ನು ಅಶ್ಲೀಲವೆಂಬ ತಪ್ಪು ಗ್ರಹಿಕೆಯಿಂದ ನಮ್ಮಲ್ಲಿ ಹೆಮ್ಮಕ್ಕಳಿಗೆ ತಿಳಿಯ ಹೇಳದೆ ಮುಂದಿನ ಅವರ ಬಾಳನ್ನು ಆರೋಗ್ಯ ದೃಷ್ಟಿಯಿಂದಲೂ ದಾಂಪತ್ಯ ಸುಖ ದೃಷ್ಟಿಯಿಂದಲೂ ಹಾಳುಗೆಡಿಸುತ್ತೇವೆ. ಇಂಗ್ಲೀಷಿನಲ್ಲಿ ಇಂತಹ ಲೈಂಗಿಕ ಮತ್ತು ದಾಂಪತ್ಯ ಜೀವನದ ವಿಷಯ ಸಚಿತ್ರವಾದ ಸುಲಭಗ್ರಾಹ್ಯವಾಗುವ ಎಷ್ಟೋ ಪುಸ್ತಕಗಳಿವೆ. ತರುಣಿಯರು ಅವನ್ನೋದಿಯಾದರೂ ತಮಗೆ ಅವಶ್ಯ ಬೇಕಾಗಿರುವ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಆದರೆ ಕನ್ನಡದಲ್ಲಿ ಇಂತಹ ಪುಸ್ತಕಗಳು ತೀರ ಕಡಿಮೆ. ಈ ಕೊರತೆಯನ್ನು ನಿವಾರಿಸಲು ಶ್ರೀ ಬಾಪಟ್ ರವರು ಮಾಡಿದ ಈ ಪ್ರಯತ್ನವು ಸ್ತುತ್ಯವಾಗಿದೆ. ಇದರಲ್ಲಿ ೧೩ ಅಧ್ಯಾಯಗಳಿದ್ದು ತರುಣಿಯರು ತಿಳಿಯ ಬೇಕಾದ ಹಲವು ಮಹತ್ವದ ವಿಷಯಗಳನ್ನು ಸಚಿತ್ರವಾಗಿ ಸುಲಭವಾಗಿ ವಿವರಿಸಲಾಗಿದೆ. ಇದರಲ್ಲಿ ಹೇಳಿರುವ ಕೆಲವು ವಿಷಯಗಳನ್ನು ಆಧುನಿಕರು ಒಪ್ಪದಿರಬಹುದು. ದಾಂಪತ್ಯ ಜೀವನಕ್ಕೆ ಸಂಬಂಧಿಸಿದ, ಇಂಗ್ಲಿಷು ಪುಸ್ತಕಗಳಲ್ಲಿ ಸಾಮಾನ್ಯವಾಗಿರುವ, ಇನ್ನೂ ಹಲವು ಉಪಯುಕ್ತ ವಿಷಯಗಳನ್ನು ಮೊದಲ ಹತ್ತು ಅಧ್ಯಾಯಗಳಲ್ಲಿ ಸೇರಿಸಬಹುದಿತ್ತು, ಕೊನೆಯ ಮೂರು ಅಧ್ಯಾಯಗಳು ಮತ್ತೂ ಹೆಚ್ಚು ಪ್ರಯೋಜನಕಾರಿಯಾಗುವಂತೆ ಬರೆಯಬಹುದಿತ್ತೆಂದೆನಿಸುತ್ತೆ. ಆದರೆ ಕನ್ನಡದಲ್ಲಿ ಏನೂ ಇಲ್ಲದಿರುವಾಗ ಇಷ್ಟನ್ನಾದರೂ ನಮ್ಮ ಕನ್ನಡ ಹೆಮ್ಮಕ್ಕಳ ಮುಂದಿಟ್ಟುದು ದೊಡ್ಡ ಉಪಕಾರವೇ ಸರಿ. ಪ್ರಾಯಕ್ಕೆ ಬರುವ ಹೆಮ್ಮಕ್ಕಳು ಅವಶ್ಯವಾಗಿ ಓದಬೇಕಾದ ಪುಸ್ತಕ.

ಡಾ: ಕೊರಡ್ಕಲ್ ವೆಂಕಟರಾವ್,
ಎಲ್. ಐ. ಎಂ.

ಬೆಲೂನ್ಸ್ ಬೆಲೂನ್ಸ್

ಬಾಳಿಕೆ ಬರುವ, ಆಕರ್ಷಕ ಹಾಗೂ ಬಣ್ಣ ಬಣ್ಣದ ಪೆಲೋ ಟ್ಯೂಬ್‌ಗಳೂ ಬೆಲೂನ್ಸ್‌ಗಳೂ ಮಿತ ದರದಲ್ಲಿ ಪುಷ್ಕಳ ಸಗಾರದೊಂದಿಗೆ ದೊರೆಯುವುವು. ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

ಜಯಭಾರತ ರಬ್ಬರ್ ಪ್ರೊಡಕ್ಟ್ಸ
609, ವಿಠಲ ಪೇಟ, ಪೂನಾ 2.
Jay Bharat Rubber Products
609, Vetal Peth, Poona 2.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ. ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲಿ ಸಂಗ್ತಿ ಬರದಲ್ಲಿ ರೋಗಗಳಿಗೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ಪರ್ಯಾಲೋಚಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ



ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿನಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಣಂತನಕ್ಕೆ ಸಾಕಾಗುವವು. ವಿಶೇಷ ಸೂಚನೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ-ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—

ಎಲ್ಲಿ ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging:
KATAPADI, S K.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

11-3-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ 4 8 0
೬ ತಿಂಗಳಿಗೆ ರೂ 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೨೭

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 28
No. 27

ನಾವು ತಿಳಿದಿರಬೇಕು

ಅಖಿಲ ಭಾರತದ ಹಾಗೂ ಪ್ರತಿಯೊಬ್ಬ ಹಿಂದೀಯನ ಪರೀಕ್ಷಾಕಾಲವಿದು. ಈ ಕಾಲದಲ್ಲಿ ಪ್ರತಿಯೊಬ್ಬ ಹಿಂದೀಯನು, ಮತ್ತಾ ಮೂಲಕ ಭಾರತ ರಾಷ್ಟ್ರವು ತನ್ನ ಯೋಗ್ಯತೆಯನ್ನು ಪ್ರದರ್ಶಿಸಿದರೆ ನೇರ್ಮೆ ಕೀರ್ತಿ, ಪ್ರಗತಿ, ಅಸ್ತಿತ್ವ. ಈಗ ನಾವು ದೌರ್ಬಲ್ಯ ಪ್ರದರ್ಶಿಸಿದರೆ ಅಯೋಗ್ಯರೆಂಬ ದಾಖಲೆಯನ್ನು ನಮಗೆ ನಾವೇ ನಿರ್ಮಿಸಿಕೊಂಡಂತೆ; ಈಗ ನಾವು ಅಪಜಯಗೊಂಡರೆ ಚಿರ ಪರಾಭವಿಗಳು.

ನಮ್ಮ ರಾಷ್ಟ್ರದ ಹಾಗೂ ಪ್ರತಿಯೊಬ್ಬನ ಪಾಲಿನ ರಾಜಕೀಯ, ಸಾಮಾಜಿಕ, ಹಾಗೂ ದೈನಂದಿನ ಜೀವನದಲ್ಲಿ ಯಾವುದನ್ನೇ ನೋಡಿದರೂ ನಿರಾಶೆ ಕವಿದಿದೆ; ಪ್ರತಿಯೊಂದರಲ್ಲೂ ಪರಮಾವಧಿ ಕ್ರೋಧ, ಆವೇಶ, ನಿರಾಶೆ, ಜಿಗುಪ್ಸೆ, ನಿಸ್ಸಹಾಯಕ ಬುದ್ಧಿಗಳೇ ನಮ್ಮಲ್ಲಿ ಮೂಡುತ್ತಿವೆ. ಇವೆಲ್ಲವನ್ನೂ ಜಯಿಸಬಲ್ಲೆವಾದರೆ ನಾವು ಲೋಕವಿಜೇತರು! ಇವುಗಳಲ್ಲಿ ಪ್ರತಿಯೊಂದೂ ಮಾನವ ಹೃದಯವನ್ನು ಕುಗ್ಗಿಸುವಂತಹದಿರುವಾಗ, ಪ್ರತಿಯೊಂದರಿಂದಲೂ ನಾವು ಸೋಲುತ್ತಾ ಹೋದೆವಾದರೆ ನಾವು ಅಸ್ತಿತ್ವಶೂನ್ಯರು. ಹೀಗಾಗಿ ಈ ಸಂದರ್ಭದ ನಮ್ಮ ಸೋಲು-ಗೆಲವನ್ನಾಧರಿಸಿಯೇ ನಮ್ಮ ಭವಿಷ್ಯವಿದೆ.

ಪರಿಸ್ಥಿತಿಗೆ ಹೇಳಿಸಿದ ಪಂಥ ಪರಾಕ್ರಮಗಳು ನಮ್ಮಲ್ಲಿರಬೇಕು. ಪರಿಸ್ಥಿತಿ ಹೇಗಿರ್ದೆ ನಾವು ಹೇಗಿರಬೇಕು?

ಭಾರತಕ್ಕೆ ಸ್ವಾತಂತ್ರ್ಯ ದೊರೆತು ಏಳು ಮಾಸಗಳು ಪೂರ್ಣವಾಗಬೇಕಾದರೆ ಇನ್ನೂ ನಾಲ್ಕೈದು ದಿನಗಳಿವೆ. ಈ ಅವಧಿಯಲ್ಲಿ ನಾವಾವ ಸ್ಥಿತಿಗೆ ಬಂದಿದ್ದೇವೆ? ನಾವೆಂತಹ ಜನರೆನ್ನಿಸಿದ್ದೇವೆ ಎಂಬ ಕಡೆಗೊಮ್ಮೆ ನೋಟ ಬೀರೋಣ. 'ಆಡಳಿತೆ ನಡೆಸಲು ನೀವು ಅಯೋಗ್ಯರು' ಎಂದು ಪರಕೀಯರು ನಮ್ಮ ಮುಖದೆದುರು ಆಡಿ ತೋರಿಸುವಂತಾಗಿಲ್ಲವೇನೋ ನಿಜ, ಆದರೆ ಅವರು ತಮ್ಮೊಳಗೆ ಹಾಗೆ ಆಲೋಚಿಸುವಂತಾಗಿದೆ. ಗುಟ್ಟೇನು? ಸಂಗತಿಯು ಆಳವರಿಯದ ಕೆಲವು ಸಾಮಾನ್ಯ ಹಿಂದೀಯರು 'ಈ ಸ್ವಾತಂತ್ರ್ಯಕ್ಕಿಂತ ಆ ಪಾರತಂತ್ರ್ಯವೇ ಲೇಸು' ಎನ್ನುವಂತಾಗಿಲ್ಲವೆ?

ಕಳೆದ ಏಳು ತಿಂಗಳುಗಳಲ್ಲಿ ಭಾರತದಲ್ಲಿ ಹರಿದ ರಕ್ತವೆಷ್ಟು! ಬಿದ್ದ ಹೆಣಗಳೆಷ್ಟು! ನಡೆದ ಓಡಾಟವೆಷ್ಟು! ಈ ಕಾಲದಲ್ಲಿ, ಒತ್ತಾಯದಿಂದ ಪೂರ್ಣ ಸಮತಾವಾದದಂತಹ ಒಂದು ಕ್ರಾಂತಿಯನ್ನು ತಂದು ಸದ್ಯದ ಜನಜೀವನವನ್ನೇ ಪೂರ್ತಿ ಬದಲಾಯಿಸುವದಕ್ಕಾದರೂ ಇಷ್ಟೊಂದು ರಕ್ತ ಸುರಿಸಬೇಕೆಂದಿರಲಿಲ್ಲ, ಇಂತಹ ಗೊಂದಲವೇಳಬೇಕೆಂದಿಲ್ಲ. ಆದರೆ ಕೇವಲ ಜಾತಿದ್ವೇಷಕ್ಕಾಗಿ ನಮ್ಮಲ್ಲಿ ಇಷ್ಟು ಅನಾಹುತ ನಡೆದುಹೋಯಿತು; ನಾವು ಇಷ್ಟೊಂದು ನಿಕೃಷ್ಟ ಜನಾಂಗವೆನ್ನಿಸಿದೆವು!

ಸಾಲದುದಕ್ಕೆ ರಾಷ್ಟ್ರಜನಕನನ್ನೇ ದ್ವೇಷ ಕುಂಡದೊಳಕ್ಕೆ ತಳ್ಳಿಬಿಟ್ಟೆವು. ನಮಗೆ ದೊರೆತ ಸ್ವಾತಂತ್ರ್ಯವನ್ನು ನಾವು ಇದುವರೆಗೆ ಉಪಯೋಗಿಸಿಕೊಂಡ ರೀತಿ ಹೀಗೆ!

ಬೇರಾವ ವಿಧಾನದಿಂದ ನಾವು ಸುಖಿಗರಾಗಿದ್ದೇವೆ? ರಾಷ್ಟ್ರದ ಪಾಲಿನ ಪುನರ್ರಚನೆ ಯಾವುದೂ ಸಾಂಗವಾಗಿ ಜರಗದಂತಾಗಿದೆ. ದೊರೆತ ಸ್ವಾತಂತ್ರ್ಯದ ತಳಹದಿಯ ಮೇಲೆ ಕಟ್ಟಡವೇರಿಸುವ ಕೆಲಸ ನಡೆದಿಲ್ಲ. ಆದ್ದರಿಂದ ಈ ದಿನವೇ ಈಗಿನ ಎಲ್ಲಾ ತೊಂದರೆಗಳೂ ನಿಂತು ವಾತಾವರಣವು ಸಂಪೂರ್ಣ ತಿಳಿಗೊಂಡರೂ ಕೂಡಾ ಬ್ರಿಟಿಷ್ ಆಳಿಕೆಯ ಕಾಲದಲ್ಲಿದ್ದುದಕ್ಕಿಂತ ಹೆಚ್ಚಿನದಾವುದೂ ನಮ್ಮಲ್ಲಿ ಕಂಡುಬರಲಾರದು. ಕ್ಷೇತ್ರವು ಬಂಜರು ಬಿದ್ದಿದೆ.

ನಮ್ಮ ಆಹಾರ ಪರಿಸ್ಥಿತಿಯ ಕಡೆಗೆ ನೋಡುವ; ವಸ್ತ್ರ ಮತ್ತಿತರ ಜೀವನಾವಶ್ಯ ಸಾಮಾಗ್ರಿಗಳ ಕಡೆಗೆ ನೋಡೋಣ. ಯಾವುದೂ ತೃಪ್ತಿಕರವಾಗಿಲ್ಲ; ಯಾವುದರ ಬೆಲೆಯೂ ಅಂಕೆಯಲ್ಲಿಲ್ಲ. ಅಲ್ಲಿ ಆ ಕಾಲ ಮೃತ್ಯು, ಅಪಮೃತ್ಯುಗಳ ತಾಂಡವನೃತ್ಯ ನಡೆದಿದ್ದರೆ, ಇಲ್ಲಿ ಕಾಳಸಂತೆಯವರ ಕೈವಾಡ ನಡೆದಿದೆ.

ನಮ್ಮ ಕೇಂದ್ರ ಮತ್ತು ಪ್ರಾಂತಿಕ ಸರಕಾರದ ಆಯ-ವ್ಯಯ ಪಟ್ಟಿಗಳ ಕಡೆಗೆ ನೋಡೋಣ ನಿಜಕ್ಕೂ ಅವುಗಳು ಮಾತ್ರ ನಮ್ಮ ಹಳ್ಳೀ ರೈತನ ಸ್ಥಿತಿಯನ್ನೇ ಪ್ರತಿನಿಧಿಸಿ 'ತಲೆಗೆಳೆದರೆ ಕಾಲಿಗಿಲ್ಲ' ಎಂಬಂತಿವೆ. ರಾಷ್ಟ್ರದ ಈಗಿನ ಪರಿಸ್ಥಿತಿಯಲ್ಲಿ ಅವು ಹೀಗಿರುವುದೇ ವಿಶೇಷ!

ಈ ರೀತಿ ಈ ದಿವಸದ ಮಟ್ಟಿಗೆ ನಮ್ಮ ಸ್ಥಿತಿ ಹಾಳಾಗಿದೆ; ಮತಿ ಕೆಟ್ಟಿದೆ! ಇವೆರಡನ್ನು ಸುಧಾರಿಸಿಕೊಳ್ಳದೆ ಬೇರಾವ ಆಲೋಚನೆಯನ್ನು ಮಾಡುವುದೂ ಅಸಾಧ್ಯ ಮತ್ತು ಅನ್ಯಾಯವೆಂಬುದು ಯಾರಿಗಾದರೂ ಹೊಳೆಯುವಂತಹದೇ. ಆದರೆ ಎಲ್ಲರಿಗೂ ಹಾಗನ್ನಿಸಿವೆಯೆ?

ಇಂತಹ ಸ್ಥಿತಿಯಲ್ಲಿಯೂ ನಾವು ಹೆಗ್ಗಳಿಕೆ ಪಡಬಹುದಾದ, ಭರವಸೆಯಿಡಬಹುದಾದ ಏಕಮಾತ್ರ ಸಂಗತಿಯೆಂದರೆ ನಮಗೆ ದೊರೆತಿರುವ ನಾಯಕತ್ವ. ಈಗಿನ ಅಧಿಕಾರವನ್ನು ದೊರಕಿಸಿಕೊಳ್ಳುವುದಕ್ಕಾಗಿ ಹೋರಾಡಿದ್ದ ವೀರರು-ದೊರೆತ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವ ಸರ್ವ ವಿಧದ ಯೋಗ್ಯತೆಗಳನ್ನು ಗಳಿಸಿರುವ ನಾಯಕರು-ನೆಹರು, ವಲ್ಲಭಾಯಿ, ರಾಜೇಂದ್ರ ಪ್ರಸಾದರಂಥವರು ಇಂದಿನ ಸೂತ್ರಧಾರಿಗಳಾಗಿದ್ದಾರೆ. ತ್ರಿಕರಣ ಪೂರ್ವಕವಾಗಿ ಹಿಂದೀ ಜನತೆಯು ಅವರ ಬಯಕೆಗಳನ್ನೀಡೇರಿಸಿ ಕೊಡುತ್ತಿದ್ದರೆ ಪರಿಸ್ಥಿತಿ ಹೀಗೆ ಕೆಡುತ್ತಿರಲಿಲ್ಲ. ಈಗಲಾದರೂ ಈ ನಾಯಕರ ಮಾತಿನಂತೆ, ಅವರಪೇಕ್ಷಿಸುವಷ್ಟೇ ತ್ವರಿತದಲ್ಲಿ ಜನತೆ ವರ್ತಿಸಿದರೆ ಅಭಿವೃದ್ಧಿಯನ್ನು ಕಾಣುವುದೂ ಕಷ್ಟವಲ್ಲ. ಆದರೆ ಇದಾದರೂ ನಿರಾತಂಕವಾಗಿ ನಡೆದಿದೆಯೆ?

ಈಗಿನ ನಾಯಕತ್ವವೇ ಸರಿಯಿಲ್ಲವೆಂಬ ಟೀಕೆಗಳು ಕೇಳಿಬರುತ್ತಿವೆ; ತಿದ್ದುಪಡಿಗಳು ಸೂಚಿಸಲ್ಪಡುತ್ತಿವೆ. 'ನೆಹರು ಸರಕಾರ ಹೋಗಬೇಕು' 'ವಲ್ಲಭಾಯಿಗಳ ವರ್ಚಸ್ಸನ್ನು ಕಡಿಮೆ ಮಾಡಬೇಕು' 'ಸರಕಾರದೊಂದು ಭಾಗವನ್ನು ಕತ್ತರಿಸಿ ತೆಗೆದು ಹೊಸತನ್ನು ಜೋಡಿಸಬೇಕು'-ಇತ್ಯಾದಿ ಎಷ್ಟೆಷ್ಟೋ 'ಬೇಕು-ಬೇಡ'ಗಳು ಮುಂದೆ ಬಂದಿವೆ. ಈ ಕಾಲದಲ್ಲಿ ಇಂತಹ ಪಿಕಲಾಟ ಯಾರಿಗೆ ಬೇಕು?

ಜಾತೀಯತಾ ವಿಷವಂತೂ ನೊರೆ ಕಾರುತ್ತಲೇ ಇದೆ. ಮಧ್ಯಯುಗದ ಸಂಕುಚಿತ ಪ್ರಾಂತ್ಯಾಭಿಮಾನದ ನಂಜು ಹೆಡೆಯೆತ್ತಿದೆ. ಅಲ್ಪ ಬುದ್ಧಿ, ಹೇಯ ಮನೋವೃತ್ತಿಗಳು ತಮ್ಮ ಕೊನೆಯ ಮೇರೆಯನ್ನು ಮುಟ್ಟಿವೆ.

ಇವೆಲ್ಲವೂ ಭಾರತವನ್ನು ಅಧೋಗತಿಗೆಳೆಯುತ್ತಿವೆ.-ತಮ್ಮ ಸರ್ವ ಶಕ್ತಿಯನ್ನೂ ಪ್ರಯೋಗಿಸಿ ಎಳೆಯುತ್ತಿವೆ. ಈ ಸೆಗಳಿನ ಸೆಳೆತದಿಂದ ಭಾರತವನ್ನು ಮೇಲಕ್ಕೆಳೆದು ದಡ ಸೇರಿಸಲು ತಮ್ಮ ಸರ್ವ ಶಕ್ತಿಯನ್ನು ಉಪಯೋಗಿಸುವ ಹೋರಾಟವು ರಾಷ್ಟ್ರದ ನಾಯಕರ ಪಾಲಿಗೊದಗಿದೆ. ಈ ಎಳೆದಾಟದಲ್ಲಿ ಜನತೆಯು ತಮ್ಮ ಒಗ್ಗಟ್ಟಿನ ಬಲವನ್ನು ನಾಯಕರ ಬೆಂಗೋಲಾಗಿ ಕೊಡದಿದ್ದರೆ ಎಲ್ಲವೂ ಕುಸಿದು ಬಿದ್ದು ನೆಗಳಿನ ಪಾಲಾಗುವ ಅಪಾಯವಿದೆ!

ಜನತೆ ತಿಳಿದಿರಬೇಕು: ಎಳ್ಳಷ್ಟು ಮನಶ್ಚಿಂತೆಯಿಲ್ಲದೆ ಆ ಶಾಂತಿ ಸಾಧನೆಗಾಗಿಯೇ ಕ್ಷಣಕ್ಷಣವೂ ಸಾಯುತ್ತಿದ್ದ ಗಾಂಧೀಜೀಯನ್ನು ಸಾಯಿಸಿ ಗೋಡ್ಸೆಯು ವ್ಯಕ್ತಿಶಃ ಗಾಂಧೀಜೀಗೆ ಹೇಗೆ ಉಪಕಾರ ಮಾಡಿದನೋ, ಅದೇ ರೀತಿ ನೆಹರು ವಲ್ಲಭಾಯಿಗಳನ್ನೀ ಸಂಘರ್ಷದಲ್ಲಿ ಸೇರದಿಂದಿಳಿಸಿಕೊಂಡರೆ ಜನತೆಯು ವ್ಯಕ್ತಿಶಃ ಅವರಿಗುಪಕಾರವನ್ನೇ ಮಾಡಿದಂತಾಗುವುದು. ಇದರಿಂದ ಆಪತ್ತು ಅಥವಾ ಅವನತಿಯೆಂದರೆ ರಾಷ್ಟ್ರಕ್ಕೆ ಮಾತ್ರ.

ಗಾಂಧೀಜೀಯ ಕೊಲೆಯ ನಂತರವೂ ನೆಹರು ವಲ್ಲಭಾಯಿಗಳು ಎದೆ ಕಳಕೊಳ್ಳದೆ-ಕಳಕೊಂಡರೂ ಅದನ್ನು ಮರು ಸಂ

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ, THE UNITED KARNATAK INSURANCE COMPANY. LIMITED.

ಸಾಧಿಸಿಕೊಂಡು-ಈ ರೀತಿ ದೃಢವಾಗಿ ನಿಂತಿರುವುದೇ ಪದ್ಯ ರಾಷ್ಟ್ರದ ಪಾಲಿನ ಒಂದು ಭಾಗ್ಯ; ವ್ಯಕ್ತಿಗಳ ಆಯು ಸ್ವಾತಂತ್ರ್ಯದ ಸೂಚನೆ. ಈಗ ಜನತೆಯನ್ನು ರಕ್ಷಿಸಿಕೊಳ್ಳಬೇಕೆಂದು ಈ ನಾಯಕರು ಹೇಗೆ ಪ್ರಯತ್ನಿಸುತಿದ್ದಾರೋ, ಹಾಗೆಯೇ ಈ ನಾಯಕರನ್ನು ಉಳಿಸಿಕೊಳ್ಳಬೇಕೆಂದು ಜನತೆ ಪ್ರಯತ್ನಿಸಬೇಕು. ಅದಕ್ಕಾಗಿ ಅವರ ಮೇಲಿರುವ ಮುಖ್ಯ ಮುಖ್ಯ ಹೊಣೆಗಳ ಪಾಲನ್ನು ಜನರು ತಾವು ವಹಿಸಿಕೊಳ್ಳಬೇಕು.

ಪ್ರಥಮತಃ ನಮ್ಮ ಕಾಲಡಿಯನ್ನೂ ನಮ್ಮ ಸುತ್ತಮುತ್ತಲನ್ನೂ ನೋಡಿಕೊಂಡು ನಮಗೆಟಕುವಷ್ಟು ಕ್ಷೇತ್ರದಲ್ಲಿ ಯಾವುದೇ ರೀತಿಯ ಜಾತೀಯ ವಿಷವೂ ಇರದಂತೆ ಶುದ್ಧೀಕರಿಸಿಕೊಳ್ಳೋಣ. ಪಂಜಾಬಿನಂತಹ ಧ್ವಂಸಗಳು ನಮ್ಮಲ್ಲಿ ನಡೆಯದಿರಬಹುದು; ಆದರೆ ಆ ವಿನಾಶಕ್ಕೆ ಹೇತುವಾದ ಜಾತೀಯತಾ ಭಾವನೆಯು ನಮ್ಮ ನಡುವೆ ಯಾವ ರೂಪದಲ್ಲೂ ಇಲ್ಲವೆನ್ನುವಿರಾ? ಅಲ್ಲಿರುವ 'ಹಿಂದೂ-ಮುಸ್ಲಿಂ' ಭೇದ ಅದೇ ಪರಿಮಾಣದಲ್ಲಿ ಇಲ್ಲಿಲ್ಲದಿರಬಹುದು. ಆದರೆ ಅವರಿವರೆನ್ನದೆ ಜಾತಿ-ಜಾತಿಗಳೊಳಗಿನ ವೈಷಮ್ಯ, ಸ್ಪರ್ಧೆಗಳು ನಮ್ಮಲ್ಲಿಲ್ಲವೆಂದು ಸುಳ್ಳಾಡಬಹುದೆ? ಹಾಗಾದರೆ ನಮ್ಮಲ್ಲಿರುವ ಈ ಜಾತಿ ಭೇದಗಳೂ ಪಂಜಾಬ್ ದ್ವೇಷದ ಮರಿಗಳೇ ಎಂಬುದನ್ನು ಮರೆಯಬೇಡಿ. ಅದು ಯಾವ ಕಾಲಕ್ಕಾವ ಆಕಾರ ಹೊಂದುವದೆಂಬ ನಿಶ್ಚಯವಿಲ್ಲವಾದ್ದರಿಂದ, ಪಂಜಾಬು ಮಾದರಿಗೇರುವವರೆಗೆ ಅದರೊಡನೆ ಕೆಲಸವಿಲ್ಲವೆಂದು ಭಾವಿಸಿಕೊಳ್ಳದೆ ಅಣು ರೂಪದಿಂದಿದ್ದರೂ ನಿರ್ಮೂಲಿಸಿಬಿಡಿ.

ನಮಗೆ ಸಾಧ್ಯವಿದ್ದಷ್ಟು ನಮ್ಮಲ್ಲಿಯೂ ನಮ್ಮ ಆಸುಪಾಸುಗಳಲ್ಲೂ ಇರುವ ಎಲ್ಲಾ ದೌರ್ಬಲ್ಯಗಳನ್ನೂ ನಿವಾರಿಸಿಬಿಡೋಣ. ಅಜ್ಞಾನ, ತಪ್ಪು ಕಲ್ಪನೆ, ನಿರಾಧಾರವಾದ ಸಂದೇಹ, ಭಯ-ಇತ್ಯಾದಿಗಳನ್ನು ಪೂರ್ಣ ದೂರಮಾಡಿಕೊಳ್ಳೋಣ. ನಿತ್ಯ ಜೀವನ ಹಾಗೂ ಸರ್ವ ವಿಧದ ಸಾಮೂಹಿಕ ಜೀವನದಲ್ಲಿ ನಡೆಯುವ ನ್ಯಾಯ-ಅನ್ಯಾಯಗಳ ಪರಿಚಯವು ಸರ್ವಸಾಮಾನ್ಯವಾಗಿ ಎಲ್ಲರಿಗೂ ಇರುತ್ತದೆ. ದುರಭಿಮಾನ, ಜಾತ್ಯಭಿಮಾನ, ಸ್ವಾರ್ಥಗಳಿಲ್ಲದ ನಿರ್ಮಲ ದೃಷ್ಟಿಯಿಂದ ನೋಡುವವರಿಗೆ ಅವು ತಪ್ಪದೆ ತೋರಬಲ್ಲುವು. ಇಲ್ಲಿ ಬೇರಾವುದನ್ನೂ ಗಣಿಸದೆ ನ್ಯಾಯವೊಂದನ್ನೇ ಎತ್ತಿಹಿಡಿದರಾಯಿತು--ಬೇರಾವ ಸಂಬಂಧವನ್ನೂ ನೋಡದೆ ನ್ಯಾಯ ಸಂಬಂಧವೊಂದನ್ನೇ ನೋಡಿದರಾಯಿತು. ಭಯ, ಭೇದ, ಸಂದೇಹ, ಮತ್ಸರ ಮೂಲಕವಾದ ಜಗಳಗಳಿಗೆಡೆಯೆಲ್ಲಿದೆ?

ನಾವೀ ಕೆಳಗಿನ ಪ್ರಶ್ನೆಗಳನ್ನು ನಮ್ಮ ಮನಸ್ಸಾಕ್ಷಿಗೇನೇ ಕೇಳಿಕೊಳ್ಳುವ:—

ರೂಢಿ, ನಿಯಮಗಳಲ್ಲಿ ಎಂತಹ ಭಿನ್ನತೆಯಿದ್ದರೂ ಮನುಷ್ಯನಾದವನಿಗೆ ಧರ್ಮ ಅಥವಾ ಜಾತಿಯ ಹೆಸರಿನಿಂದ ಮಾಡಲಿರುವ ಕಾರ್ಯಗಳು ಅಧಿಕವೋ, ಮನುಷ್ಯನೆಂಬುದರಿಂದ ಆತನು ಮಾಡಬೇಕಾದುದು ಹೆಚ್ಚೋ?

ನ್ಯಾಯ ಮತ್ತು ಜ್ಞಾನ ಮೇಲೋ-ಅಭಿಮಾನ ಮೇಲೊ? ನಾವು, ನಮ್ಮವರು ಅಥವಾ ನಮ್ಮ ಜಾತಿಯವರು ಮಾಡುವ ಅನ್ಯಾಯ ಅಥವಾ ಪ್ರದರ್ಶಿಸುವ ಅಜ್ಞಾನ, ಇವುಗಳೂ ನಮ್ಮವುಗಳೆಂದು ಅಭಿಮಾನದಿಂದ ಕಾಣಬಹುದೆ?

ನಾವು 'ಸರಿ' ಇದ್ದರೆ-ನಮ್ಮ ಹೃದಯ ನಿರ್ಮಲವಿದ್ದರೆ-ಭಯವಾರದು? ಯಾವುದರದು? ಏಕಾಗಿ?

ನಮ್ಮ ನೆರೆಯಲ್ಲೇ ನಡೆದ ಒಂದು ಸಂಗತಿಯ ಸತ್ಯಸ್ಥಿತಿ ನಮಗೆ ತಿಳಿಯದೆ ಹೋಗುತ್ತಿರುವಾಗ ನಮ್ಮ ಹೃದಯವನ್ನು ದೂರದ ವಾರ್ತೆಗಳಿಯ ಪಾಲು ಮಾಡುವುದು ಸರಿಯೆ?

ಅನ್ಯರ 'ಅಪರಾಧ' 'ಅನ್ಯಾಯ' 'ದ್ರೋಹ' ಎಂದು ನಾವು ಹೇಳುವಂಥವುಗಳಲ್ಲೇ ಅನ್ಯರನ್ನು ಸ್ಪರ್ಧಿಸಿ ಗೆಲ್ಲಲು ನೋಡುವುದೆ? ಅವರು ಹಾಳಾದಂತೆ ನಾವೂ ಹಾಳಾಗಬೇಕೆ?

ಮೇಲಿನ ಪ್ರಶ್ನೆಗಳಿಂದ ಹೃದಯವನ್ನು ಮಂಥನ ಮಾಡಿ ಕಲ್ಮಷವನ್ನು ಕಡೆದು ತೆಗೆದು ಚೆಲ್ಲಿಬಿಟ್ಟು ಶುದ್ಧೀಕರಿಸಿಕೊಂಡು, ಅದನ್ನೇ ಬುನಾದಿಯಾಗಿ ಮಾಡಿ ಯಾವ ರಚನೆಯಾಗಬೇಕೋ ಆದಾಗಲಿ. ಆರಂಭವೀರೀತಿ ಬುಡದಿಂದಾಗಬೇಕು; ನಮ್ಮಿಂದಾಗಬೇಕು—ತುದಿಯಿಂದಲ್ಲ; ನಾಯಕರಿಂದಲ್ಲ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಮಾರಾಟಕ್ಕಿದೆ

ಡೆಲ್ಕೊ ಲ್ಯೈಟ್ ಮೊಡೆಲ್ 1286 ಸರ್ವೋಪಕರಣ ಎಂಜಿನುಗಳುಳ್ಳ 2½ ಎಚ್. ಪಿ. ಶಕ್ತಿಯುತವಾದ 32 ವಾಲ್ಟ್ ಪ್ರಮಾಣದ 1½ ಕಿಲೊವ್ಯಾಟ್ ಸೆಕೆಂಡ್ ಹೆಂಡ್ ಚಾಲೂಸ್ಥಿತಿಯಲ್ಲಿರುವ ಮೆಶಿನು. ಇದರ ಉಪಯೋಗದಿಂದ ಇಲೆಕ್ಟ್ರಿಸಿಟಿ ಇಲ್ಲದ ಸ್ಥಳದಲ್ಲಿಯೂ ಇಲೆಕ್ಟ್ರಿಸಿಟಿ ಪಡೆಯಬಹುದು. ಅಂದಾಜು ಕ್ರಯ ರೂಪಾಯಿ 900/- ಖಾಯಿಸಿಯುಳ್ಳವರು ಕೂಡಲೇ ವಿಚಾರಿಸಿರಿ:—

ರಾಮಕೃಷ್ಣ ಗುಂಡುನಾಯಕ್, ಮರ್ಚಂಟ್, ರಥಬೀದಿ, ಉಡುಪಿ.

ಅವಸರದಲ್ಲಿ ಬರುವ ಅತಿಥಿಗಳಿಗೆ
ಪ್ರೀತಿಯ ಪಾನಕ
ಲಿಂಬೆ, ಕಿತ್ತಳೆ ರಸಗಳಿಂದ ತಯಾರಿಸಲ್ಪಟ್ಟ ಶಂಕ ಮಾರ್ಕಿನ
ಶರಬತ್ತು
ಉಷ್ಣ ಕಾಲದಲ್ಲಿ ಮಧುರ ಪಾನೀಯ.
ತಯಾರಕರು—
ಕನ್ನಡ ಸೋಪ್ ಎಂಡ್ ಇಂಡಸ್ಟ್ರಿಯಲ್ಸ್ ಲಿಮಿಟೆಡ್,
ಮಂಗಳೂರು.

The 1946 Record Business proves the popularity
THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India.
Bombay Life Building,
Central Office, Udipi:

Branches at:
Mangalore, Calicut, Trivandrum, Madura, Madras, Bangalore & Bombay,

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬
[ಹೊಣೆಗಾರಿಕೆ ಪರಿಮಿತಿಗೊಳಿಸಲ್ಪಟ್ಟು, ಇಂಡಿಯಾದಲ್ಲಿ ಸಾಂಘೀಕರಿಸಿದ್ದು]
ಮುದ್ದತಿ ಠೇವುಗಳು

ರೂ. ೧೫,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ. ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೭ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೨
೪ ರಿಂದ ೫ ತಿಂಗಳು ,, ,, ೨॥
೬ ರಿಂದ ೯ ತಿಂಗಳು ,, ,, ೨॥।

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.
ESTD: 1906.

WARDEN

Reaches New Heights in 1946.

Business Received ... ... Rs. 2,04,00,000
Business Completed ... ... Rs. 1,72,00,000

THIS represent the latest and greatest achievement in WARDEN'S progressive career.

For this fine performance [illegible] Company extends its hearties thanks and congratulations to its [illegible] and policy-holders all over the country and abroad.

Managing Director. Agency Manager.
Shivaprasad Thaker, *M. Sunderram Shetty*

Branch Office At Mangalore
K. P. Bhavanishanker Shetty,
Branch Secretary.

The Vijaya Bank Limited.

All our good wishes for a happy and prosperous new year.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3¼% per annum.

For further particulars you may ap[illegible] at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಪಾಕಿಸ್ತಾನಕ್ಕೂ ಪೀಡೆಗಳಿವೆ!

ಪಾಕಿಸ್ತಾನ ಮತ್ತು ಅದರ ಗವರ್ನರ್ ಜನರಲ್ ಕಾಯಿದೇ ಅಝಮ್ ಜಿನ್ನರು ಹೇಗಿದ್ದಾರೆ, ಎಂಬ ಕುರಿತು ಈಗ ಸಹಜವಾಗಿ ಭಾರತದಲ್ಲಿರುವವರ ಆತುರ ಕಡಿಮೆಯಾಗಿದೆ. ವಿಭಜನೋತ್ತರ ಕಾಲದ ಆದಿಭಾಗದಲ್ಲೇ ನಾವಿರುವುದರಿಂದಲೂ, ಆ ಸಂಬಂಧದ ಕೆಲವು ತಕರಾರುಗಳು ಮತ್ತು ಗೊಂದಲಗಳು ಇನ್ನೂ ಇರುವುದರಿಂದಲೂ ಈ ಜನಕ ಆ ಕಡೆಗೆ ಆದೊಂದು ಪರಿಮಾಣದ ಆಸಕ್ತಿಯೇನೋ ಇದೆ. ಆದರೆ ಈ ಮಧ್ಯಾವಧಿ ದಾಟಿ ಒಮ್ಮೆ ಶಾಂತಿ ಹಾಗೂ ಸುಸಂಬಂಧ ನೆಲೆಗೊಂಡಿತೆಂದರೆ, ಮತ್ತೆ ಭಾರತೀಯರ ಪಾಲಿಗೆ ಪಾಕಿಸ್ತಾನ ರಾಜಕೀಯವೂ ಅಫ್ಘಾನಿಸ್ತಾನದ ರಾಜಕೀಯದಂತಾಗಬಹುದು. ಭಾರತಕ್ಕೂ ಪಾಕಿಸ್ತಾನಕ್ಕೂ ತಂತಮ್ಮ ಒಳ ವ್ಯವಸ್ಥೆಗಳನ್ನು ಸರಿಪಡಿಸಿಕೊಂಡು ಸ್ವಾಭಿವೃದ್ಧಿ ಸಾಧಿಸುವ ಹೊಣೆಗಾರಿಕೆಯೊಂದೇ ಉಳಿಯಬಹುದು. ಅಂತಹ ಸ್ಥಿತಿ ಮಾರ್ಪಾಟಿವೀಗಲೇ ಕಂಡು ಬರುತ್ತಿದೆ.

ಆಕರ್ಷಣೆಯಿಲ್ಲ

ಮಿ. ಜಿನ್ನರೀಗ ತನ್ನ ಮೊದಲಿನ ಆಕರ್ಷಣೆಯೆಲ್ಲವನ್ನೂ ಕಳಕೊಂಡು ಪಾಕಿಸ್ತಾನದ ಪ್ರಮುಖಾಧಿಕಾರಿ ಮಾತ್ರವಾಗಿದ್ದಾರೆ. ದ್ವಿತೀಯ ಈಸನೋವರಾಗಿ ಕಾಣುತ್ತಿದ್ದಾರೆ. ಪಾಕಿಸ್ತಾನ್ ಸಾಧನೆಯ ಹೋರಾಟದ ಸೇನಾನಿಯಾಗಿದ್ದ ಆ ಕಾಲದಲ್ಲಿ ಅವರ ಶಕ್ತಿ ಸಾಹಸಗಳು ಪ್ರಕಾಶಿಸುತಿದ್ದಷ್ಟು ಈಗ ಪ್ರಕಾಶಿಸುತ್ತಿಲ್ಲ. ಆಗ ಅವರು ಅಖಿಲ ಭಾರತದ-40ಕೋಟಿ ಜನತೆಯ-ಅರ್ಧಷ್ಟದೊಡನಾಡುವ ಮನುಷ್ಯನಾಗಿದ್ದರು. ಮುಸ್ಲಿಮರೆಲ್ಲರ ಗೌರವ ಹಾಗೂ ಮುಸ್ಲಿಮೇತರರೆಲ್ಲರ ಲಕ್ಷ್ಯವನ್ನೂ ಆಗ ತನ್ನ ಕಡೆಗೆಳೆದಿದ್ದರು. ಅವರನ್ನು ಒಲಿಸುವ ಅಥವಾ ಸೋಲಿಸುವ ಕಲಸವು ಆಗ ಎಲ್ಲಾ ಪಕ್ಷೀಯರಿಗೂ ಇದ್ದಿತು. ಈಗ ಹಾಗಲ್ಲ; ಅವರ ಹಂಗಿಲ್ಲ ಅವರು ತನ್ನ ಪಾಲನ್ನು ಪಡಕೊಂಡು ಪ್ರತ್ಯೇಕ ಹೋಗಿದ್ದಾರೆ. ಭಾರತದ ಪ್ರಜೆಗಳಿಗೆ ಅವರತ್ತ ನೋಡುವ ಅವಶ್ಯಕತೆಯೀಗ ಉಳಿದಿಲ್ಲ. ಮಿ. ಜಿನ್ನರ ಕ್ಷೇತ್ರವೀಗ ಮೊದಲಿನದಕ್ಕಿಂತ ಕಾಲು ಪಾಲಷ್ಟೇ ಇದೆ. ಅಲ್ಲಿಯವರಿಂದಾದರೂ ಮಿ. ಜಿನ್ನರು ಮೊದಲಿನಷ್ಟು ಗೌರವವನ್ನು ಪಡೆಯುವಂತಿಲ್ಲ. ಅವರೀಗ ಪಾಕಿಸ್ತಾನದ ಪಾಲಿಗೆ ಹಿಂದಿನಂತೆ ಸಂಪಾದಿಸಿ ತಂದು ಹಾಕುವ ಪುತ್ರನಂತಿರದೆ, ಸಂಪಾದಿಸಿದುದನ್ನು ಕಾಯುತ್ತಿರುವ ಮಗನಂತಾಗಿದ್ದಾರೆ. ಈಗ ಅವರನ್ನಿದಿರಿಸಿರುವುದು 'ಪಾರಕೀಯ ಬಹುಮತ'ವಲ್ಲ; ಸ್ವಂತ ತೊಂದರೆಗಳು. ಪರಕೀಯರಲ್ಲ-ಸ್ವಕೀಯ ಆಡಚಣೆಗಳು. ಮಿ. ಜಿನ್ನರಲ್ಲಿ ಸಂಗ್ರಾಮ ನಾಯಕನ ಯೋಗ್ಯತೆಯಿರುವಷ್ಟು ಸಮಸ್ಯ ನಿವಾರಣಾ ಸಾಮರ್ಥ್ಯವಿಲ್ಲ. ಆದ್ದರಿಂದ ಅವರ ಜನತೆಗೇನೇ ಅವರಲ್ಲಿ ಹಿಂದಿನಂತಹ ಕಾಂತಿ ತೋರುವುದಿಲ್ಲ.

ಕರಾಚೀ ಸಭೆಯಲ್ಲಿ—

ಮೇಲಾಗಿ ವಿಭಜನಾನಂತರ ಭಾರತಕ್ಕೆ ಎಂತೆಂತಹ ತೊಂದರೆಗಳಿಗೀಡಾಗಿದೆಯೋ ಅಂತಹ ತೊಡಕುಗಳಿಗೆ ಪಾಕಿಸ್ತಾನವೂ ಬಲಿಯಾಗಿದೆ. ಅವಸ್ಥಾಂತರ ಕಾಲದಲ್ಲಿ ಸಹಜವಾದವುಗಳು ಕೆಲವಾದರೆ ಸ್ವನಿರ್ಮಿತಾಪತ್ತುಗಳು ಹಲವು. ಈ ತೊಂದರೆಗಳನ್ನು ನಿವಾರಿಸಿಕೊಳ್ಳುವ ಅನುಕೂಲತೆಗಳು ಕೂಡಾ ಭಾರತಕ್ಕಿರುವಷ್ಟು ಪಾಕಿಸ್ತಾನಕ್ಕಿಲ್ಲವೆಂದು ಹೇಳಬಹುದು. ಧೋರಣೆ, ನಂಬಿಕೆ, ಎದೆಗಾರಿಕೆ—ಇವೆಲ್ಲದರಲ್ಲೂ ಭಾರತದ ರಾಷ್ಟ್ರ ಜನಕ ಮಹಾತ್ಮಾಜೀಗಿಂತ ಪಾಕಿಸ್ತಾನದ ರಾಷ್ಟ್ರ ಜನಕ ಕಾಯಿದೇಆಝಮರು ಸಂಪೂರ್ಣ ಬೇರೆಯಾಗಿರುವುದರಿಂದಾಗಿ ಮ॥ ಗಾಂಧಿಜೀಗೊದಗಿದ ಅದೃಷ್ಟ ಮಿ. ಜಿನ್ನರಿಗೊದಗಿಲ್ಲ. ಆದರೆ ಇವರು ಕೂಡಾ ನಿಜಕ್ಕೂ ಸುಖಿಗಳಾಗಿಲ್ಲ. ಕರಾಚಿಯಲ್ಲಿ ಕಳೆದ ಬಾರಿ ನಡೆದ ಮುಸ್ಲಿಂ ಲೀಗ್ ಕೌನ್ಸಿಲಿನಲ್ಲಿ ಮಿ. ಜಿನ್ನರ ನಾಯಕತ್ವದ ವಿರುದ್ಧ ಒಂದು ಬಂಡಾಯವೆದ್ದಿರುವುದು ಬೆಳಕಿಗೆ ಬಂದಿದೆ. ತಾನು ನಾಯಕತ್ವ ವಹಿಸಿದಂದಿನಿಂದ ಎಂದೂ ಪಡೆಯದಿದ್ದಂತಹ ಅವಿಧೇಯತೆಯನ್ನು ಮಿ. ಜಿನ್ನರು ಆ ಸಭೆಯಲ್ಲಿ ತನ್ನ ಕೆಲವು ಅನುಯಾಯಿಗಳಿಂದ ಪ್ರತ್ಯಕ್ಷ ಪಡೆದರೆಂದು ತಿಳಿದು ಬರುತ್ತದೆ. ಆತ್ಮಾಭಿಮಾನೀ ಮಿ. ಜಿನ್ನರ ಹೃದಯಕ್ಕಿದು ವಜ್ರಾಘಾತದ ಪರಿಣಾಮವನ್ನೀಯಬಹುದು. ನೆಹರು ವಲ್ಲಭಾಯಿಗಳಂತಹ ಹಿಂದೀ ನಾಯಕರು ವಿರೋಧಿಗಳಿದಿರು ಹೇಗೋ ತಮ್ಮವರ ವಿಮರ್ಶೆಗಳಿದಿರಲ್ಲೂ ಹಾಗೆಯೇ ವೀರರು. ಆದರೆ ಮಿ. ಜಿನ್ನರ ಪಾಲಿಗೆ ತನ್ನ ಅನುಯಾಯಿಗಳೇ ತನ್ನನ್ನು ಖಂಡಿಸುವದೊಂದು ಹೊಸ ಅನುಭವ.

ಮಿ. ಜಿನ್ನರ ಪರಾಭವ?

ಕರಾಚಿಯ ಲೀಗ್ ಕೌನ್ಸಿಲಿನ ಸಭೆಯ ಕಾರ್ಯಕಲಾಪಗಳು ಗುಪ್ತವಾಗಿದ್ದರೂ ಸಾಧಾರಣವಾಗಿ ಹೊರಬಿದ್ದ ಸುದ್ದಿಗಳು ಹೀಗಿವೆ:—ಮಿ. ಜಿನ್ನರ ಸರಕಾರದ ಧೋರಣೆಯನ್ನು ಕೆಲವರು ಅತ್ಯಂತ ಸ್ಪಷ್ಟವಾಗಿ ಟೀಕಿಸಿದರು. "ಭಾರತದಲ್ಲಿರುವ ಮುಸ್ಲಿಮರ ಹಿತರಕ್ಷಣೆ ಮಾಡುವ ಬಯಕೆ ನಿಮ್ಮದೆಂದಾದರೆ ನೀವೀಗ ಹೋಗಬೇಕಾದುದು ಭಾರತಕ್ಕೆ ಹೊರತು ಇಲ್ಲಿರುವುದಲ್ಲ" ಎಂದು ಮಿ. ಜಿನ್ನರ ಮುಖ ನೋಡಿ ಹೇಳುವುದಕ್ಕೂ ಕೆಲವು ಸದಸ್ಯರು ಹಿಂಜರಿಯಲಿಲ್ಲ. ಪಾಕಿಸ್ತಾನ್ ಸರಕಾರದ ಸದಸ್ಯ ಅಥವಾ ನೌಕರನು ಲೀಗಿನ ಅಧಿಕಾರೀ ಸ್ಥಾನದಲ್ಲಿರಕೂಡದೆಂಬ ಒಂದು ಸೂಚನೆಯು ಆ ಕೌನ್ಸಿಲಿನ ಮುಂದೆ ಬಂದಿತ್ತು. ಇದಕ್ಕೆ ಮತಕೊಡದಂತೆ ಮಾಡಲು ಮಿ. ಜಿನ್ನರು ಹಲವು ಪ್ರಮುಖ ಸದಸ್ಯರನ್ನು ಕರೆಯಿಸಿ ಬೋಧಿಸಿದರೂ ಫಲ ಬರಲಿಲ್ಲವಂತೆ. ಇದನ್ನು ಕಂಡು ಆ ಮತದಾನದಲ್ಲೇ ಏನಾದರೂ ತಪ್ಪನ್ನು ಕಂಡು ಹಿಡಿಯಲಾಗುವುದೋ ನೋಡೋಣವೆಂದು ಮಿ. ಜಿನ್ನರು ಮತಗಳ ಶೋಧನೆ ಮಾಡಿಸಿದರು. ಇಷ್ಟೆಲ್ಲಾ ಪ್ರಯತ್ನ ನಡೆದರೂ ಮೇಲಿನ ಸೂಚನೆಗೆ 69 ಅನುಕೂಲ ಮತ್ತು ಕೇವಲ 23 ಪ್ರತಿಕೂಲ ಮತಗಳು ದೊರೆತು, ಅದು ಮಂಜೂರಾಯಿತು. ಮಿ. ಜಿನ್ನರೀ ಸೂಚನೆಯಿಂದ ಗೊಂದಲಕ್ಕೀಡಾಗಿದ್ದಾರೆಂಬುದನ್ನು ಕಂಡು ಸೂಚನೆಯನ್ನು ತಂದ ಮಹನೀಯರು ಜಿನ್ನರೊಬ್ಬರ ಮಟ್ಟಿಗೆ ಅಂತಹ ಬಹಿಷ್ಕಾರವನ್ನು ತೆಗೆದು ಹಾಕುವ ರಿಯಾಯತಿಗೆ ಮುಂದಾದರು. ಆದರೆ ಸ್ವಾಭಿಮಾನಿ ಜಿನ್ನರದಕ್ಕೊಪ್ಪಲಿಲ್ಲ. ಓರ್ವ ಸದಸ್ಯರಂತೂ "ಮಿ. ಜಿನ್ನರು ಸರ್ವಾಧಿಕಾರಿಯಾಗಿ ಹೋಗಿದ್ದಾರೆ" ಎಂದು ಅಗೌರವಿಸಿ ಮಾತಾಡಿದಾಗ ಜಿನ್ನರು ಸುತ್ತಲೂ ನೋಡಿ "ನಿಜವೆ? ನಿಜಕ್ಕೂ ನಾನೊಬ್ಬ ಸರ್ವಾಧಿಕಾರಿಯಾಗಿರುವೆನೆ?" ಎಂದು ಸಭೆಯನ್ನು ಪ್ರಶ್ನಿಸಿದಾಗ, ಹಾಗೆಂದವನ ಕಡೆಗೆ ಕೆಲವರು ಸಿಟ್ಟಿನಿಂದ ಘರ್ಜಿಸಿದರೆಂದೂ ಮತ್ತೆ ಕೆಲವರು "ಮಿ. ಜಿನ್ನರು ಸರ್ವಾಧಿಕಾರಿಯಾಗಿಲ್ಲವಾದರೆ ಅವರಿಗೆ ಸಿವಿಲ್ ಪದವರೊಬ್ಬರು ಸರ್ವಾಧಿಕಾರಿಯಾಗಿರಬೇಕು" ಎಂದು ಅಷ್ಟೇ ಸ್ಪಷ್ಟವಾಗಿ ಗೊಣಗಿದರೆಂದೂ ತಿಳಿದು ಬರುತ್ತದೆ.

ಇತರ ತೊಡಕುಗಳು—

ಪಾಕಿಸ್ತಾನದ ಆರ್ಥಿಕ ಪರಿಸ್ಥಿತಿ ಕೂಡಾ ಆಶಾದಾಯಕವಾಗಿಲ್ಲ. 1948-49ರ ವರುಷಾವಧಿಯ ಉತ್ಪನ್ನವು 79.57 ಕೋಟಿಯಿದ್ದರೆ ವ್ಯಯವು 89.68 ಕೋಟಿಗಳಿವೆ. ಅರ್ಥಾತ್ ರೂ 10-11 ಕೋಟಿ ಕಡಿಮೆ ಬಿದ್ದಿದೆ. ಪಾರಂಪರ್ಯೇತರ ಒಟ್ಟು ವೆಚ್ಚ ರೂ. 52.53 ಕೋಟಿಗಳ ಪೈಕಿ ರೂ. 37.11 ಕೋಟಿಗಳನ್ನು ರಾಷ್ಟ್ರದ ರಕ್ಷಣಾ ವಿಭಾಗಗಳಿಗಾಗಿಯೇ ಮೀಸಲಿಟ್ಟಿರುವುದರಿಂದ, ಉಳಿದ ನಾಗರಿಕಾನುಕೂಲತೆಗಳಿಗಾಗಿ ಒಟ್ಟಿಗೆ ಕೇವಲ ರೂ. 15.42 ಕೋಟಿಗಳು ಮಾತ್ರ ದೊರೆತಿವೆ. ಪಾಕಿಸ್ತಾನ ಭಾಗವು ಪ್ರತ್ಯೇಕವಾದುದರಿಂದ ಎಷ್ಟು ದೊಡ್ಡ ಮೊತ್ತವು ಅದರ ರಕ್ಷಣಾ ವ್ಯವಸ್ಥೆಗಾಗಿ ವ್ಯಯವಾಗಬೇಕಾಯಿತೆಂಬುದನ್ನು ಇದರಿಂದ ಊಹಿಸಬಹುದು. ಅರ್ಥ ಸಚಿವ ಮಿ. ಗುಲಾಮ್ ಮಹಮ್ಮದರೇ ಒಪ್ಪಿಕೊಂಡಂತೆ 'ಪಾಕಿಸ್ತಾನದಲ್ಲಿ ಪ್ರಕೃತಿ ಸಹಜ ಅನುಕೂಲತೆಗಳೂ ಅವುಗಳನ್ನು ಉಪಯೋಗಿಸಿಕೊಂಡು ಸಂಪತ್ತು ನಿರ್ಮಿಸುವ ಸಂದರ್ಭಗಳೂ ಇವೆಯಾದರೂ ಪ್ರಕೃತ ಈ ನಿರ್ಮಾಣಗಳಿಗಾಗಿ ವಿದೇಶೀಯರ ಸಹಾಯವೇ ಬೇಕಾಗಿದೆ'. ಹೀಗಾಗಲೊಂದು ಕಾರಣವೆಂದರೆ ಇಂತಹ ಉದ್ಯಮಗಳಲ್ಲಿ ನಿಪುಣರಾಗಿದ್ದ ಮುಸ್ಲಿಮೇತರರಿಗೆ ಪಾಕಿಸ್ತಾನದಲ್ಲಿ ಭರವಸೆ ತಪ್ಪಿ ಅವರು ಅಲ್ಲಿಂದ ಹೊರಡುತ್ತಿದುದು. ಅತ್ತ ಗಡಿನಾಡು ಪ್ರಾಂತ್ಯದ ಖಾನ್ ಅಬ್ದುಲ್ ಗಫರ್ ಖಾನರ ಪಕ್ಷವು 'ಪಠಾಣಿಸ್ತಾನ'ದ ಬೇಡಿಕೆಯನ್ನಿನ್ನೂ ಬಿಟ್ಟಿಲ್ಲ; ಸಂದರ್ಭ ಸಾಧನೆಯಲ್ಲೇ ಇದೆ. ನೆರೆಯ ಅಫ್ಘಾನಿಸ್ಥಾನವು ಈ ಭಾಗದ ಮೇಲೆ ಕಣ್ಣಿಟ್ಟುಕೊಂಡೇ ಇದ್ದು ಪಠಾಣಿಸ್ತಾನದ ಬೇಡಿಕೆಯನ್ನು ಅನುಮೋದಿಸುತ್ತಲೇ ಇದೆ. ರಾಜಧಾನಿ ಕರಾಚಿಯು ಸಿಂಧ ಪ್ರಾಂತ್ಯದ್ದಾದರೂ ಪಾಕಿಸ್ತಾನದ ಪ್ರಮುಖಾಧಿಕಾರೀ ಸ್ಥಾನಗಳಲ್ಲಿ ಸಿಂಧ್ ಮುಸ್ಲಿಮರಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆತಿಲ್ಲವೆಂದು ಸಿಂಧದವರಲ್ಲಿ ಅತೃಪ್ತಿ ವ್ಯಾಪಿಸಿದೆ. ಭಾರತದ ರಾಜಧಾನಿಯಿರುವ ದಿಲ್ಲಿಯು ಪ್ರತ್ಯೇಕ ಭಾಗವಾಗಿರುವಂತೆಯೇ ಕರಾಚಿಯನ್ನು ವಿಂಗಡಿಸಿಕೊಳ್ಳಬೇಕೆಂಬುದಕ್ಕೂ ಸಿಂಧೀಯರೊಪ್ಪಿಲ್ಲ. ಅತ್ತ ಪೂರ್ವ ಬಂಗಾಳದ ಭಾಷಾಭಿಮಾನಿ ಬಂಗಾಳಿಗಳೆಲ್ಲರೂ ತಮ್ಮ ಬಂಗಾಳಿಯನ್ನು ಸರಕಾರೀ ಭಾಷೆಗಳಲ್ಲೊಂದಾಗಿ ಪಾಕಿಸ್ತಾನ್ ಸರಕಾರವು ಗಣಿಸದುದರ ನಿಷೇಧಾರ್ಥವಾಗಿ ಸಾರ್ವತ್ರಿಕ ಮುಷ್ಕರಕ್ಕಿದ್ದಿದ್ದಾರೆ.

ಅಂತೂ ಭಾರತದೊಳಗಿರುವಂತೆಯೇ ಪಾಕಿಸ್ತಾನದೊಳಗಡೆಯುಲ್ಲೂ ಹತ್ತು ಹಲವು ಕಂಟಕಗಳಿವೆ. ಒಂದು ಅವಸ್ಥಾಂತರದ ಕಾಲದಲ್ಲಿ ಇವೇನೂ ಅಸ್ವಾಭಾವಿಕವಲ್ಲವಾದರೂ, ಅವುಗಳನ್ನು ನಿವಾರಿಸಿಕೊಳ್ಳುವ ವಿಧಾನದಿಂದರಿಯಬಹುದು-ಯೋಗ್ಯತೆಯೆಷ್ಟೆಂಬುದನ್ನು !

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಪತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/ [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MIS P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಕಹಾಕಂಪನಿ, ಮಂಗಳೂರು

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years, Filaria is a dirty, disfiguring disease. And yet a little united effort on the part of the public could at very little cost wipe out these two evils. Please, watch this space.

Inserted by:

The Canara Mutual Assurance Company Limited.
ESTD. 1935
H. O. UDIPI.

ಹೈದರಾಬಾದಿನ ಹಠ ಕಾಶ್ಮೀರದ ಸುಧಾರಣೆ

ಪ್ರಪಂಚದ ಆಗುಹೋಗುಗಳ ಕಡೆಗೊಮ್ಮೆ ದೃಷ್ಟಿಬೀರಿದರೆ, ಕಳೆದ ವಾರವು ಲೋಕ ಕ್ಷೇಮದಾಯಕವಲ್ಲವೆಂಬುದು ಹೊಳೆಯುವಂತಿದೆ. ಶೀಘ್ರ ಪರಿಣಾಮಕಾರೀ ದೊಡ್ಡ ಘಟನೆಯಾವುದೂ ನಡೆದಿಲ್ಲವಾದರೂ ಲೋಕವು ಮೂರನೇ ಮಹಾಯುದ್ಧದ ಕಡೆಗೆ ಸಾವಧಾನವಾಗಿ ಆದರೆ ಸುದೃಢವಾಗಿ ಹೆಜ್ಜೆಯಿಡುತ್ತಿದೆ, ಎಂಬುದು ಸುಸ್ಪಷ್ಟ.

ಝೆಕೊಸ್ಲೊವೇಕಿಯದಲ್ಲಿ ಮೊದಲಿನ ಸರಕಾರವನ್ನುರುಳಿಸಿ ಕಮ್ಯೂನಿಸ್ಟ್ ಸರಕಾರ ಬಂದಂದಿನಿಂದ ಇಂಗ್ಲಂಡು-ಅಮೇರಿಕ-ಫ್ರಾನ್ಸುಗಳ ಪಂಗಡದ ಉದರಶೂಲೆಯು ವಿಶೇಷ ರೀತಿಯಿಂದ ಬೆಳೆದಿದೆ; ಝೆಕೋಸ್ಲೊವೇಕಿಯದ ಹೊಸ ಸರಕಾರವು ಅದನ್ನು ಬೆಳೆಸುತ್ತಾ ಬಂದಿದೆ. "ನಮ್ಮ ಭದ್ರತೆಯು ಭಂಪಸೆಯಿರುವುದು ರಶ್ಯದ ಮೈತ್ರಿಯೊಂದರಲ್ಲೇ. ಆದ್ದರಿಂದ ನಾವು ಸದಾಕಾಲ ರಶ್ಯದ ಪಕ್ಕದಲ್ಲೇ ಇರುವವರು.' ಎಂದು ಝೆಕ್ ವಿದೇಶ ಮಂತ್ರಿ ಜಾನ್ ಮಸಾರಿಕರು ಬಹಿರಂಗವಾಗಿ ಘೋಷಿಸಿದ್ದಾರೆ. ಝೆಕೊಸ್ಲೊವೇಕಿಯವು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಧುರವೀಳ್ಯಕೊಟ್ಟಂತಾಗಿದೆ. ಮಾರ್ಶಲ್ ಯೋಜನೆಯಂತಹ ತನ್ನ ಸಹಾಯದ ಬಲೆಯೊಳಗೆ ಯುರೋಪು ರಾಷ್ಟ್ರಗಳನ್ನೆಲ್ಲಾ ಕೆಡವಿಕೊಳ್ಳುವ ಅಮೇರಿಕದ ಹಂಚಿಕೆಯು ಸುದೃಢವಾಗಿ ಸಾಗಿರುವಾಗ, 'ಪಶ್ಚಿಮ ಯುರೋಪಿಯನ್ ಕೂಟ' ವೆಂಬೊಂದು ಕೂಡಿಯನ್ನು ಬ್ರಿಟನು ಕಟ್ಟುತ್ತಿದೆ. ಈ ಕೂಟವಾಗಿ ಇಂಗ್ಲಾಂಡ, ಫ್ರಾನ್ಸ್, ಬೆಲ್ಜಿಯಮ್, ನೆದರ್ಲೆಂಡ್, ಲಕ್ಸೆಂಬರ್ಗ್-ಈ ಐದು ರಾಷ್ಟ್ರಗಳು ಒಂದುಗೂಡುವ ಸೂತ್ರ ತಯಾರಿಯಾಗಿದೆ. ಇನ್ನೀ ಗುಂಪಿನೊಳಗೆ ಸೇರಲಿಚ್ಛಿಸುವ ಮಿಕ್ಕ ರಾಷ್ಟ್ರಗಳನ್ನೂ ಅವು ಸೇರಿಸಿಕೊಳ್ಳಲಿಕ್ಕಿವೆ.

ಅತ್ತ, ಜಾಗತಿಕ ಸಂಘವು ಪೆಲಸ್ತೈನ್ ವಿವಾದ, ಕಾಶ್ಮೀರ ವಿವಾದಗಳಂತಹ ಪ್ರಶ್ನೆಗಳನ್ನು ಬಗೆಹರಿಸಲು ಉಪಾಯಗಾಣದೆ, ತಾನೊಂದು ತೀರ್ಮಾನವನ್ನಿತ್ತರೂ ಅದನ್ನು ಅಧಿಕಾರ ಬದ್ಧವಾಗಿ ಜ್ಯಾರಿಗೆ ತರಲಾಗುವ ಹಕ್ಕು ಮತ್ತು ಸಾಧನೆಗಳಾವುವೂ ಇಲ್ಲದೆ ಕೇವಲ ಒಂದು 'ಜಾಗತಿಕ ಕಾನೂನು ಪುಸ್ತಕ'ವೆಂಬಂತಿದೆ. ಎಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸುವಾಗ ದ್ವಿತೀಯ ಲೋಕಯುದ್ಧದ ಮೊದಲ ರಂಗದ ಪುನರಾವರ್ತನೆ ನಡೆದಿರುವಂತೆ ಕಾಣುತ್ತಿದೆ ಈ ಪರಿಸ್ಥಿತಿಯನ್ನು ಹಿಂದಿನಂತೆ ಮತ್ತೊಮ್ಮೆ ಬೆಳೆಯಲು ಬಿಡುವ ಬದಲಿಗೆ ಪ್ರಪಂಚದ ರಾಷ್ಟ್ರ ರಾಷ್ಟ್ರಗಳ ಒಳ ಸಂಬಂಧಗಳೆಲ್ಲವನ್ನೂ ಸ್ಪಷ್ಟೀಕರಿಸಿ, ಶುದ್ಧೀಕರಿಸಿ ಯುದ್ಧ ಬೀಜವು ಮೊಳಕೆ ಬಿಟ್ಟಿರುವಾಗಲೇ ಮುರಿದುಹಾಕುವುದು ಉತ್ತಮವಲ್ಲವೆ? ಅದಕ್ಕಾಗಿ ಸಂಬಂಧಪಟ್ಟವರೆಲ್ಲರ, ಯಾವುದೇ ಹೆಸರಿನ ಪರ್ಯಾಲೋಚನಾ ಸಭೆಯು, 'ತೀರ್ಮಾನ ಕಂಡು ಹಿಡಿದೇ ಸಿದ್ಧ' ಎಂಬ ಗಾಂಧಿ ಶಪಥ ತೊಟ್ಟು ಕುಳಿತುಕೊಂಡರಾಗದೇ? ಆದರೆ ಹಾಗೆ ಮಾಡುವವರಾರು?

ಭಾರತದ ರಾಜಕೀಯದಲ್ಲಂತೂ ಕಳೆದ ವಾರ ಅತಿ ಮಹತ್ವದ ಘಟನೆಗಳೇನೂ ನಡೆದಿಲ್ಲವಾದರೂ ತುಲನಾತ್ಮಕವಾಗಿ ಕೆಲವು ಸುಖಕರ ಸಂಗತಿಗಳು ಸಂಭವಿಸಿವೆ. ಭಾರತ ಪಾರ್ಲಿಮೆಂಟು ಮತ್ತು ಮದ್ರಾಸ್ ಎಸೆಂಬ್ಲಿಗಳಲ್ಲಿ ಆಯ-ವ್ಯಯಪಟ್ಟಿಗಳ ಪರ್ಯಾಲೋಚನೆ ನಡೆದಿದೆ. ಸಂತೋಷದ ಸಂಗತಿಯೆಂದರೆ ಭಾರತದ ಅಖಂಡತ್ವವು ಸ್ತುತ್ಯ ರೀತಿಯಿಂದ ಕೈಗೂಡುತ್ತಾ ಬಂದಿರುವುದು. ಹಲವು ಕೋಟಿಯಂತಹ ಸಣ್ಣ ಸಂಸ್ಥಾನಗಳು ತಮ್ಮ ಪ್ರತ್ಯೇಕತೆಯನ್ನು ತ್ಯಜಿಸಿ ಭಾರತದೊಂದಿಗೆ ವಿಲೀನಗೊಂಡಿರುವುದು. ಈವರೆಗೂ ಹಾದಿಗೆ ಬಾರದ—ಮತ್ತು, ಹಾಗೆ ಹಾದಿಗೆ ಬರುವಷ್ಟು ದೀನತಾನಲ್ಲವೆಂದು ತೋರಿಸಿಕೊಳ್ಳುತ್ತಿರುವ—ಹೈದರಾಬಾದು ಒಂದನ್ನು ಬಿಟ್ಟರೆ ಮಿಕ್ಕೆಲ್ಲಾ ದೊಡ್ಡ ಸಂಸ್ಥಾನಗಳೂ ಭಾರತ ಕೇಂದ್ರದೊಂದಿಗೆ ಇಷ್ಟರಲ್ಲೇ ಜೋಡಣೆಗೊಂಡಿವೆ. ಆ ಪೈಕಿ ಇನ್ನೂ ಕೆಲಸ ಬಾಕಿಯಿರುವ ಸಂಸ್ಥಾನವು ಕಾಶ್ಮೀರ ಮಾತ್ರ. ಹೀಗೆ ಇಂದಿನ ಮುಖ್ಯ ಸಮಸ್ಯೆಗಳೆಂದರೆ ಹೈದರಾಬಾದು ಮತ್ತು ಕಾಶ್ಮೀರ. ಅಖಂಡಭಾರತದ ಅಸ್ತಿವಾರದ ನಡುವೆ ಇವೆರಡು ಬಂಡೆಗಳೇ ತನಕ ತಲೆಯೆತ್ತಿದ್ದು, ಇವನ್ನೂ ಸಮ ಮಟ್ಟಕ್ಕಿಳಿಸಿಕೊಂಡ ಮೇಲೆ ಭಾರತದ ಅಖಂಡತೆ ಪೂರ್ಣಗೊಳ್ಳುವದು ಆಗೋಸ್ತು 15ರ ಮೊದಲಿನ ಮುಸ್ಲಿಂಲೀಗ್ ಭಾಂತವು ಒಂದೇ ಒಂದಾಗಿ ರಾಜಿಸುವಂತಾಗುವದು. ಆ ಕಾಲಂಶ ಪಾಕಿಸ್ತಾನವನ್ನು ಕಡಿದುಹಾಕಿಕೊಳ್ಳದಿರುತಿದ್ದರೆ ಇಂತಹ ಅಖಂಡತೆಗೆಂದೂ ಅಪ್ಪದ ದೊರೆಯುತಿದ್ದಿಲ್ಲವಾದ್ದರಿಂದ 'ಹೀಗಾದುದು ಒಳ್ಳೆತೇ ಆಯಿತು' ಎಂದು ಹೇಳಲಾಗುವ ಕಾಲ ಬರಬಹುದು. ಕಡಿದು ತೆಗೆಯಬಾರದೆಂದಿಟ್ಟರೆ ಆ ಕೊರಡು ಮುಷ್ಟಿಯೊಳಗೆ ಬಾರದಿರುವಾಗ, ಅದರ ಭಾಗವನ್ನು ಕೆತ್ತಿ ತೆಗೆದು ಕೈ ಚಿತ್ತ ಮಾಡಿ ಹಿಡಿದುಕೊಳ್ಳುವದೆಷ್ಟೋ ವಾಸಿ ತಾನೆ!

ಹೈದರಾಬಾದು

ಹೈದರಾಬಾದು ಸಂಸ್ಥಾನದೊಳಗಿನ ಸ್ಥಿತಿ ಮತ್ತು ಭವಿಷ್ಯ ಇವೆರಡೂ ವಿಶೇಷ ಆತುರವನ್ನು ನಿರ್ಮಿಸುವಂತಹವಿವೆ. ಒಂದೆಡೆಯಲ್ಲಂತೂ ವಿದ್ಯಾರ್ಥಿಗಳ ಸತ್ಯಾಗ್ರಹ, ವಕೀಲರ ಕೋರ್ಟುಬಹಿಷ್ಕಾರದಂತಹ ಸೌಮ್ಯ ಹೋರಾಟದ ಜತೆಯಲ್ಲಿ ಕಮ್ಯೂನಿಸ್ಟರ ತುಸು ಉಗ್ರ ರೀತಿಯ ಚಟುವಟಿಕೆಗಳೂ ನಡೆದಿವೆ. ನಿಜಾಮ್ ಸರಕಾರವು ಇವುಗಳ ನಿರ್ನಾಮಕ್ಕಾಗಿ ಕಠೋರದಬ್ಬಾಳಿಕೆಯನ್ನು ನಡೆಸುತ್ತಿದೆ. ಮಾತ್ರವಲ್ಲ, ಇತ್ತೆಹಾದ್-ಉಲ್-ಮುಸ್ಲಿಮೀನ್ ಮಜ್ಲೀಸ್ ಸ್ವಯಂಸೇವಕರು ಹಿಂದೂ ನಿರಪರಾಧಿಗಳ ಮೇಲೆ ಘೋರ ಅತ್ಯಾಚಾರಗಳನ್ನು ಮಾಡುತ್ತಿರುವ ವಾರ್ತೆಗಳು ಬರುತ್ತಿವೆ. ಔರಂಗಾಬಾದ್ ಜಿಲ್ಲೆಯ ಐದು ಹಳ್ಳಿಗಳ ಹಿಂದುಗಳ ಮೇಲೆ ಕೋವಿ, ಲಾಠಿ ಧಾರಿಗಳಾದ ಮಜ್ಲೀಸರು ಬಿದ್ದು ಕೊಲೆ, ಜಖಂ ನಡೆಸಿ, ಸ್ತ್ರೀಯರ ಮಾನಾಪಹಾರ ಮಾಡಿದ ವಾರ್ತೆಗಳಿವೆ.

ಇತ್ತ ಕೇಂದ್ರದೊಂದಿಗೆ ದೀರ್ಘಾವಧಿ ಒಪ್ಪಂದದ ಮಾತುಕತೆ ನಡೆಸಲು ನವದಿಲ್ಲಿಗೆ ಹೋಗಿದ್ದ ನಿಜಾಮರ ಪ್ರಧಾನ ಮಂತ್ರಿ ಮಿ. ಲಾಯಕ್ ಅಲಿ, ವಿದೇಶ ಮಂತ್ರಿ ನವಾಬ್ ಮೊಯಿನ್ ನವಾಝ್ ಝಂಗ್, ಘಟನಾ ಸಲಹೆಗಾರ ಸರ್. ವಾಲ್ಟರ್ ಮೋಂಕ್ಟನರು ನವದಿಲ್ಲಿಯಿಂದ ಹೈದರಾಬಾದಿಗೆ ಮರಳಿ ದಿಲ್ಲೀ ಮಾತುಕತೆಗಳ ವರದಿಗಳನ್ನು ನಿಜಾಮರಿಗೊಪ್ಪಿಸಿದ್ದಾರೆ. ಪುನಃ ಈ ತಿಂಗಳ ಕೊನೆಯ ವಾರದಲ್ಲಿ ಈ ಪ್ರತಿನಿಧಿ ಮಂಡಲಿಯು ನವದಿಲ್ಲಿಗಾಗಮಿಸಿ ಮುಂದಿನ ಚರ್ಚೆಗೆ ತೊಡಗುವದೆಂದು ತಿಳಿದುಬರುತ್ತದೆ. ಆದರೆ ಭಾರತ-ಹೈದರಾಬಾದುಗಳ ನಡುವೆ ಎದ್ದಿರುವ ಭಿನ್ನಾಭಿಪ್ರಾಯಗಳಿಂದ ಸಂಧಾನದ ಬಾಳೆಯೇನೂ ಕಾಣುವದಿಲ್ಲ. ಒಂದು ವರುಷದ ಪ್ರಚಲಿತ ಒಪ್ಪಂದದ ಕೆಲವು ಶರ್ತಗಳನ್ನು ಭಾರತ ಸರಕಾರವು ಉದ್ದೇಶಪೂರ್ವಕ ಮುರಿದಿದೆಯೆಂದು ಹೈದರಾಬಾದಿನ ಆರೋಪವಿದ್ದರೆ ಹೈದರಾಬಾದೇ ತಪ್ಪಿ ನಡೆದಿದೆ ಎಂದು ಭಾರತ ಸರಕಾರದ ದೂರಿದೆ. ತಾನು ಸ್ವತಂತ್ರ ರಾಷ್ಟ್ರವಾಗಿ ಉಳಿದು ಭಾರತದೊಂದಿಗೊಂದು ಸ್ನೇಹ ಕರಾರನ್ನು ಮಾತ್ರ ಮಾಡಿಕೊಳ್ಳಬಲ್ಲೆನೆಂದು ಹೈದರಾಬಾದು ಅನ್ನುತಿದ್ದರೆ, ಮಿಕ್ಕ ಸಂಸ್ಥಾನಗಳ ಮಾದರಿಯಲ್ಲೇ ಅದೂ ಜೋಡಣೆಗೊಳ್ಳತಕ್ಕದ್ದೆಂದು ಭಾರತದ ವಾದವಿದೆ. ನಿಜಾಮ್ ಸರಕಾರವೀಗಲೂ ಮಜ್ಲೀಸರ ಕೈಗೊಂಬೆಯಂತಿರುವಾಗ, ತಾನು ಜಾತೀಯ ಸಂಸ್ಥೆಗಳನ್ನಡಗಿಸಿದ ರೀತಿಯಲ್ಲೇ ಮಜ್ಲಿಸರ ಇತ್ತೆಹಾದ್-ಉಲ್-ಇಸ್ಲಿಮೀನನ್ನು ನಿಜಾಮ್ ಸರಕಾರವು ನಿರ್ಬಂಧಿಸಬೇಕೆಂದು ಭಾರತ ಸರಕಾರದ ಒತ್ತಾಯವಿದೆ. ಇತ್ತ ಈ ಉಗ್ರ ಮುಸ್ಲಿಂ ಜಾತೀಯ ಸಂಸ್ಥೆಯ ಅಧ್ಯಕ್ಷ ಸಯ್ಯದ್ ಕಾಸಿಮ್ ರಿಝ್ವಿಯು ನಾಲಿಗೆ ಸಡಿಲು ಬಿಟ್ಟು ಗರ್ಜಿಸುತಿದ್ದಾನೆ: "ಹೈದರಾಬಾದು ಎಂದಿಗೂ ಭಾರತ ಕೇಂದ್ರದೊಡನೆ ಜೋಡಣೆಗೊಳ್ಳುವಂತೆಯೂ ಇಲ್ಲ; ಜವಾಬ್ದಾರೀ ಸರಕಾರ ಸ್ಥಾಪಿಸುವಂತೆಯೂ ಇಲ್ಲ. ಬದಲಿಗೆ ಹೈದರಾಬಾದಿಗೆ ಬೇಕಾದುದೊಂದು ಒಳ್ಳೇ ಸರಕಾರ ಮಾತ್ರ. ಇಂತಹ ಸರಕಾರವು ಸಮ್ಮತವಾಗದ ಯಾರೇ ಆದರೂ ಇಲ್ಲಿಂದ ಹೊರಟು ಹೋಗಿ ತಾನು ಮೆಚ್ಚುವ ಸರಕಾರದ ಆಶ್ರಯ ಹೊಂದಲು ಸ್ವತಂತ್ರರಿದ್ದಾರೆ" ಎನ್ನುತ್ತ ಮಜ್ಲೀಸ್ ನಾಯಕನು ತಾನು ನಿಜಾಮರ ಮೇಲಧಿಕಾರಿಯೆಂಬಂತೆ ಗುಡುಗಿದ್ದಾನೆ.

ಇತ್ತ ಹೈದರಾಬಾದ್ ಗಡಿಯ ಮದ್ರಾಸ್ ಪ್ರಾಂತ್ಯದ ಕೃಷ್ಣಾ ಜಿಲ್ಲೆಯೊಳಗೆ ಹೈದರಾಬಾದ್ ಸೇನಾ ಪೋಲೀಸರು ಆಗಾಗ [illegible] ಬಂದು ಗುಂಡು ಹಾರಿಸುವ ಹಾಗೂ [illegible] ಹೋಗುವ ರಣಹದ್ದು ವ್ಯಾಪಾರ ನಡಿಸುತ್ತಿದ್ದಾರೆ. ಮದ್ರಾಸ್ ಸರಕಾರವು ಅಲ್ಲಿ ತನ್ನ ಪೋಲೀಸ್ ಪಡೆಯನ್ನು ಹೆಚ್ಚಿಸಿದೆ.

ಕಾಶ್ಮೀರದ ಪ್ರಶ್ನೆ

'ಅವಸರಾಡಳಿತೆಯ ನಾಯಕ'ನಾಗಿ ಈ ತನಕ ಶೇಖ್ ಅಬ್ದುಲ್ಲಾರನ್ನಿರಿಸಿಕೊಂಡಿದ್ದ ಕಾಶ್ಮೀರದ ಮಹಾರಾಜರು ಈಗ ಕ್ರಮಬದ್ಧ ಜವಾಬ್ದಾರೀ ಸರಕಾರವನ್ನು ಸ್ಥಾಪಿಸಲು ಮುಂದಾಗಿ ಕಾಶ್ಮೀರದ ಪ್ರಜೆಗಳ ಹರುಷವನ್ನು ಮತ್ತೊಮ್ಮೆ ಪುಟಗೊಳಿಸಿದ್ದಾರೆ. ಇದೇ ಮಾರ್ಚ್ ತಾ. 10ರಂದ ಕಾಶ್ಮೀರದ ಹುಲಿ ಶೇಖ್ ಅಬ್ದುಲ್ಲಾ ಕಾಶ್ಮೀರದ ಪ್ರಧಾನ ಮಂತ್ರಿಯಾಗಿ ನೇಮಕಗೊಂಡಿದ್ದಾರೆ. ಅವರಾರಿಸಿಯ ಇತರ ಮಂತ್ರಿಗಳುಳ್ಳ ಮಂತ್ರಿಮಂಡಲಿಯೊಂದು ಇನ್ನೊಂದು ವಾರದೊಳಗೆ ರಚನೆಗೊಳ್ಳಲಿದೆ. 'ನಿರಂಕುಶಾಡಳಿತೆ ನಿರ್ನಾಮಗೊಂಡಿತು. ಪ್ರಾಜ್ಯನೊಗ ಜಾರಿಕು. ಶೇಖ್ ಅಬ್ದುಲ್ಲಾ ಚಿರಾಯುವಾಗಲಿ' ಎಂದು ಕಾ

WANTED

Applications are invited up to 31-3-48 for one Officer's post in the Bank, preferably from graduates with previous banking experience. The Candidate selected will be on probation for a period of 3 months, which may be extended or reduced at the discretion of the Bank. Scale of pay on appointment after the period of probation. will be Rs. 75-5/1-125 with such dearness allowance and other allowances as will be in force. The Candidate selected may be also started on a higher initial pay, considering his qualification and previous experience.

THE VIJAYA BANK, LTD.,

Head Office : : MANGALORE.

Dated 1-3-48.

ಪುದುಕೋಟೆ ವಿಲೀನ ಸುದೃಢ ಕೇಂದ್ರ ರಚನೆ

ಶ್ಮೀರದ ಜನತೆ ಜೈಕಾರ ಹಾಕುತ್ತಿದೆ. ಆಕ್ರಮಣಗಾರರನ್ನು ಹಿಂದೋಡಿಸುವ ಹೋರಾಟವು ಹುರುಪಿನಿಂದ ಸಾಗಿದೆ. ಪಂಡಿತ ನೆಹರುಗಳು ಪಾರ್ಲಿಮೆಂಟಿನಲ್ಲಿ ಶೇಕ್ ಅಬ್ದುಲ್ಲಾ ಸರಕಾರ ಸ್ಥಾಪನೆಯ ಮಹಾರಾಜಾ ಜಾಹೀರು ನಾಮೆಯನ್ನೋದಿ ಹೇಳಿ ಕಾಶ್ಮೀರಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳನ್ನೊಳಗೊಂಡ ಶ್ವೇತ ಪತ್ರವನ್ನು ಮಂಡಿಸಿ, ಸಂಸ್ಥಾನಿಕ ಮಂತ್ರಿ ಸರ್ದಾರ್ ಪಟೇಲರನ್ನೂ, ಜಾಗತಿಕ ಸಂಘದಲ್ಲಿ ವಾದಿಸಿದ ಶ್ರೀ ಅಯ್ಯಂಗಾರರೇ ಮೊದಲಾದವರನ್ನೂ, ಹಿಂದೀ ಸೇನೆಯ ಕಾಶ್ಮೀರ ಕಾಳಗದ ಧೈರ್ಯ ಸಾಹಸಗಳನ್ನೂ ಶ್ಲಾಘಿಸಿ, ಜವಾಬ್ದಾರೀ ಸರಕಾರ ರಚಿಸಿದುದಕ್ಕಾಗಿ ಕಾಶ್ಮೀರದ ಮಹಾರಾಜರನ್ನು ಅಭಿನಂದಿಸಿದ್ದಾರೆ.

ಪ್ರಧಾನಿಯಾಗಿ ನೇಮಕಗೊಳ್ಳುವಾಗ ನವದಿಲ್ಲಿಯಲ್ಲಿದ್ದ ಶೇಕ್ ಅಬ್ದುಲ್ಲಾರು ಪತ್ರಿಕಾ ಸಮ್ಮೇಳನದಲ್ಲಾಡಿದ ಈ ಮಾತುಗಳು ಈ ಕಾಲದಲ್ಲಿ ಅತ್ಯಂತ ಮನನೀಯವಿವೆ: 'ಎಲ್ಲದಕ್ಕೂ ಮೊದಲು ಧಾಳಿಗಾರರನ್ನು ಕಾಶ್ಮೀರದಿಂದ ಝೂಡಿಸಿಕೊಳ್ಳಬೇಕೆಂಬುದೇ ನಮ್ಮ ದೃಢ ನಿಶ್ಚಯ. ಒಮ್ಮೆ ಶಾಂತಿ ಸ್ಥಾಪನೆಯಾದ ಮೇಲೆ ತಮ್ಮ ಭವಿಷ್ಯದ ಕುರಿತು ನಿರ್ಧರಿಸುವ ಪೂರ್ಣಾಧಿಕಾರವು ಕಾಶ್ಮೀರದ ಜನತೆಯದು. ಆದರೆ, ನಾನಂತೂ ಬಾಳುವದಾದರೂ ಸಾಯುವದಾದರೂ ಭಾರತದೊಂದಿಗೇನೇ ಸರಿ: ಅಖಿಲ ಭಾರತದ ಶಕ್ತಿ ಮತ್ತು ಗೌರವ ಸಾಧನೆಗಾಗಿ ದುಡಿಯಬೇಕೆಂಬುದೊಂದೇ ನನ್ನಿಷ್ಟ.' ಪಾಕಿಸ್ತಾನಕ್ಕೆ ಹೃದಯದೊಂದು ಮೂಲೆಯಲ್ಲಿ ಸ್ಥಾನವಿತ್ತಿದ್ದವರು ಕೂಡಾ ಆ 'ಸ್ವಾತಂತ್ರ್ಯದಾತರ ಅತ್ಯಾಚಾರ, ಮಹಿಳಾ ಮಾನಭಂಗ, ಕೊಲೆ ಸುಲಿಗೆಗಳನ್ನು ಕಣ್ಣಾರೆ ಕಂಡು ಪಾಠ ಕಲಿಯುವಂತಾಗಿದೆಯೆಂದೂ, ತಮ್ಮ ವಾದಿ ನ್ಯಾಯದ್ದಿರುವಾಗ ಜಾಗತಿಕ ಸಂಘದ ಕಾಲಕ್ಷೇಪಗಳ ಕಡೆಗೆ ಅನಗತ್ಯ ಮಹತ್ವವನ್ನು ಕೊಡಬೇಕೆಂದಿಲ್ಲವೆಂದೂ, ಶೇಕ್ ಅಬ್ದುಲ್ಲಾರ ವಾದ. 'ಓರ್ವ ಮುಸ್ಲಿಮನು ಓರ್ವ ಹಿಂದುವಿನೊಂದಿಗೆ ಅಥವಾ ಓರ್ವ ಹಿಂದು ಓರ್ವ ಮುಸ್ಲಿಮನೊಂದಿಗೆ ವಾಸಿಸುವದಸಾಧ್ಯವೆಂಬ ಭಾವನೆಯನ್ನು ನಮ್ಮ ಹಿಂದಿನ ಯಜಮಾನರು ವಿದೇಶಗಳಲ್ಲಿ ನಿರ್ಮಿಸಿಬಿಟ್ಟಿದ್ದಾರೆ. ಆದರೆ ಭಾರತದಲ್ಲೀಗಲೂ ೩ಕೋಟಿ ಮುಸ್ಲಿಮರು ವಾಸಿಸುತ್ತಿದ್ದಾರೆಂಬುದನ್ನು ಅವರು ಮರೆತಿದ್ದಾರೆ. ಹಿಂದೀ ಪ್ರತಿನಿಧಿಗಳು ಇದನ್ನು ತಿಳಿಸಲು ಸಾಕಾದಷ್ಟು ಕೆಲಸ ಮಾಡಿದ್ದಾರೆ. ಈ ಕಾಲದಲ್ಲೂ ಕಾಶ್ಮೀರೀ ಹಿಂದೂ, ಮುಸ್ಲಿಂ, ಸಿಖ್ಖರು ಒಟ್ಟಿಗಿರಬಲ್ಲರೆಂಬುದನ್ನೂ, ಒಂದಾಗಿ ವೈರಿಗಳನ್ನೆದುರಿಸಬಲ್ಲರೆಂಬುದನ್ನೂ ಭಾರತದಲ್ಲಿರುವವರಿಗೆ ಕೂಡಾ ನಂಬಲು ಕಷ್ಟವಾಗಿದೆ." ಎನ್ನುತ್ತಾ ಶೇಕ್ ಅಬ್ದುಲ್ಲಾರು 'ನವಕಾಶ್ಮೀರ' ನಿರ್ಮಾಣವೇ ತನ್ನ ಪಕ್ಷದ ಗುರಿಯೆಂದು ಘೋಷಿಸಿದ್ದಾರೆ. ಭದ್ರತಾ ಕೌನ್ಸಿಲಿನ ಕಾಶ್ಮೀರದ ಚರ್ಚೆಯಲ್ಲಿ ಭಾಗವಹಿಸಲು ಶ್ರೀ. ಎನ್. ಜಿ. ಅಯ್ಯಂಗಾರರೇ ಮೊದಲಾದ ಹಿಂದೀ ಪ್ರತಿನಿಧಿಗಳು ಲೇಕ್ ಸಕ್ಸೆಸ್‌ಗೆ ಹೋಗಿದ್ದಾರೆ.

ಪುದುಕೋಟೆ ವಿಲೀನ

ಈ ರೀತಿ ಹೈದರಾಬಾದು, ಮತ್ತು ಕಾಶ್ಮೀರದ ಪ್ರಶ್ನೆಗಳೇನೋ ಉಳಿದಿವೆಯಾದರೂ ಭಾರತದೊಳಗಡೆ ಮತ್ತು ಒತ್ತಾಗಿರುವ ಎಲ್ಲಾ ದೊಡ್ಡ ಆಶ್ರಿತ ರಾಜ್ಯಗಳೂ ಹಿಂದೀ ಕೇಂದ್ರದೊಂದಿಗೆ ಜೋಡಣೆಗೊಂಡಿವೆ. ಆಧುನಿಕ ಕಾಲದ ಸ್ಥಿತಿಗತಿಗಳ ದೃಷ್ಟಿಯಿಂದ ಪ್ರತ್ಯೇಕತೆಯ ವೈಶಿಷ್ಟ್ಯವಿರದ ಸಣ್ಣ ಪುಟ್ಟ ಸಂಸ್ಥಾನಗಳು ಹಲವು ತಮ್ಮ ಅಸ್ತಿತ್ವವನ್ನೇ ಬಲಿಗೊಟ್ಟು ಪಡಿಸಿಕೊಂಡು ಭಾರತದೊಂದಿಗೆ ಐಕ್ಯಗೊಂಡಿವೆ. ಇಂತಹ ಸಣ್ಣ ಸಂಸ್ಥಾನಗಳು ಹಲವು ಒಂದೇ ಕಡೆಯಲ್ಲಿರುವಲ್ಲೆಲ್ಲಾ ಅವೆಲ್ಲವೂ ಒಂದು ಸಂಯುಕ್ತ ಕೂಟವಾಗಿ, ಸೌರಾಷ್ಟ್ರದಂತೆ ಏಕಾಡಳಿತೆ ನಿರ್ಮಿಸಿಕೊಂಡು ವಿಶಾಲಾಸ್ತಿತ್ವ ದೊರಕಿಸಿವೆ. ಪ್ರತ್ಯೇಕತೆಬಿಟ್ಟು ಭಾರತದೊಂದಿಗೆ ಸಮಾವೇಶಗೊಂಡ ಬೇರೆ ಬೇರೆ ಸಂಸ್ಥಾನಗಳು ಬೊಂಬಾಯಿ, ಮಧ್ಯಪ್ರಾಂತ್ಯ ಒರಿಸ್ಸಾ, ಸಂಯುಕ್ತ ಪ್ರಾಂತ ಮೊದಲಾದವುಗಳ ಭಾಗಗಳಾಗಿವೆ. ಇಂತಹ ಭಾಗ್ಯವು ಮದ್ರಾಸ್ ಪ್ರಾಂತ್ಯಕ್ಕೂ ದೊರಕಿದೆ ತಮಿಳುನಾಡಿನ ಪುದುಕೋಟೆ ಮತ್ತು ಕರ್ನೂಲು ಜಿಲ್ಲೆಯ ಬಂಗನಪಳ್ಳಿ ಸಂಸ್ಥಾನಗಳು. ಭಾರತದೊಂದಿಗೆ ಐಕ್ಯಗೊಂಡು ಮೊದಲನೆಯದು ಮಾರ್ಚ 3 ರಲ್ಲೂ ಎರಡನೆಯದು ಫೆಬ್ರವರಿ 20 ರಲ್ಲೂ ಮದ್ರಾಸ್ ಪ್ರಾಂತ್ಯದ ಭಾಗಗಳಾಗಿವೆ.

ಬಂಗನಪಳ್ಳಿಯು ಮೈಸೂರಿಗೀಶಾನ್ಯ ದಿಕ್ಕಿನಲ್ಲಿರುವ ಸಣ್ಣ ಸಂಸ್ಥಾನ. ಅಲ್ಲಿ ಆಳಿಕೊಂಡಿದ್ದುದು ಮುಸ್ಲಿಂ ನವಾಬರು. ಎಲ್ಲಾ ವಿಷಯಗಳಲ್ಲೂ ಮದ್ರಾಸನ್ನೇ ಅವಲಂಬಿಸಿಕೊಂಡೂ ಆವರಿಸಲ್ಪಟ್ಟೂ ಇರುವ ಈ ಸಂಸ್ಥಾನಕ್ಕೊಂದು ವಿಶಿಷ್ಟ ಅಸ್ತಿತ್ವವೇ ಇಲ್ಲದ್ದರಿಂದ ಅದರ ನವಾಬರು ಅನಾಯಾಸವಾಗಿ ತನ್ನ ಭಾಗವನ್ನು ಒಪ್ಪಿಸಿಕೊಟ್ಟರು. ಕರ್ನೂಲು ಜಿಲ್ಲಾ ಕಲೆಕ್ಟರರು ಅದರ ಆಡಳಿತೆಯನ್ನು ವಹಿಸಿಕೊಂಡರು.

ಪುದುಕೋಟೆ ಸಂಸ್ಥಾನವು ತಮಿಳರ ಪಾಲಿಗಿದ್ದ ಏಕಮಾತ್ರ ರಾಜಸ್ಥಾನವಾಗಿತ್ತು. ಕಿರೀಟದಲಂಕಾರದ ಮಟ್ಟಿಗೆ ಮೈಸೂರಾಧೀಶರುಳ್ಳ ಕರ್ನಾಟಕಕ್ಕಿರುವ ಭಾಗ್ಯವೋ ದೌರ್ಭಾಗ್ಯವೋ ಆಂಧ್ರರಿಗಾಗಲೀ ತಮಿಳರಿಗಾಗಲೀ ಇಲ್ಲ. ತಿರುಚಿನಾಪಳ್ಳಿಯೊತ್ತಿಗಿದ್ದು ಈಗ ಹಿಂದೀ ಸರಕಾರದ ನಿರ್ದೇಶನಾನುಸಾರ, ಮದ್ರಾಸ್ ಸರಕಾರವು ತಿರುಚಿನಾಪಳ್ಳಿಯ ಕಲೆಕ್ಟರರ ಕೈಗೊಪ್ಪಿಸಿರುವ ಪುದುಕೋಟೆಯು ಸುಮಾರು 1200 ಚದರ ಮೈಲಷ್ಟು ವಿಸ್ತೀರ್ಣವುಳ್ಳದ್ದು; ಜನಸಂಖ್ಯೆ ಸುಮಾರು ೨ ಲಕ್ಷದಷ್ಟು ಮಾತ್ರ. ಉತ್ಪತ್ತಿಯೂ ತೀರಾ ಕಡಿಮೆ. ಆದರೂ ಅಲ್ಲಿಯ ದಿವಾನರೆಲ್ಲರೂ ಅನುಕ್ರಮವಾಗಿ ಸಮರ್ಥರಿದ್ದುದರಿಂದಲೂ, ಹೊರ ಪ್ರದೇಶಗಳಲ್ಲಿ ವರ್ಚಸ್ಸು ಗಳಿಸಿದ ಪ್ರತಿಭಾವಂತರನ್ನು ಪುದುಕೋಟೆಯು ಪಡೆದಿದ್ದುದರಿಂದಲೂ ಅದಕ್ಕೊಂದು ಸ್ಥಾನ ದೊರೆತಿದ್ದಿತು. ಆದರೂ ಭಾರತದ ಇತರ ಸಂಸ್ಥಾನಗಳಷ್ಟು ಈ ಸಂಸ್ಥಾನದ ಚರಿತ್ರೆಯೇನೂ ಬಹಳ ಪುರಾತನದ್ದಲ್ಲ. ಪುದುಕೋಟೆ ಸಂಸ್ಥಾನದ ಉದಯವೇ ಹದಿನೇಳನೇ ಶತಮಾನದ ಅಂತ್ಯಭಾಗದಲ್ಲಿ; ಬ್ರಿಟಿಷರು ಸ್ವತಃ ನಿರ್ಮಿಸಿ ಹಾಕಿದ್ದ ಸಿಂಹಾಸನವದು. ಕರ್ನಾಟಕದ ನವಾಬರೊಡನೆ ಆ ಕಾಲದಲ್ಲಿ ಬ್ರಿಟಿಷರು ನಡೆಸುತ್ತಿದ್ದ ಯುದ್ಧಗಳಲ್ಲಿ ಅತ್ಯಂತ ವಿಶ್ವಾಸಪೂರ್ವಕವಾಗಿ ಬ್ರಿಟಿಷರ ಪರವಾಗಿ ಹೋರಾಡಿದ್ದ ದಳನಾಯಕನೊಬ್ಬನಿಗೆ ಬಹುಮಾನವಾಗಿ ಕೊಡಲು ಬ್ರಿಟಿಷರು ಈ ಸಂಸ್ಥಾನವನ್ನು ನಿರ್ಮಿಸಿದ್ದರು. ಆದರೆ ಹಿಂದೀಯರ ಸಂಪ್ರದಾಯ ಪ್ರೇಮದ ದೆಸೆಯಿಂದಾಗಿ ಒಂದು ಸಿಂಹಾಸನವನ್ನು ಕಳೆದುಕೊಂಡುದಕ್ಕಾಗಿ ಹಲವರು ಅತೃಪ್ತಿಗೊಂಡಿರಬಹುದು. ಪುದುಕೋಟೆಯ ಮಹಾರಾಜರಾದರೂ ಸರ್ದಾರ್ ವಲ್ಲಭಾಯಿಗಳೊಡನೆ ನಡೆಸಿದ ಸಂಭಾಷಣೆಯಲ್ಲಿ ತನ್ನ ಸಂಸ್ಥಾನವನ್ನು ಒಪ್ಪಿಸಿಕೊಡುವ ವಿಶೇಷ ಹುಮ್ಮಸ್ಸನ್ನು ಆದಿಭಾಗದಲ್ಲಿ ತೋರಿಸಿರಲಿಲ್ಲ. ತನ್ನ ಪ್ರಜೆಗಳಲ್ಲಿ ಅತ್ಯಧಿಕ ಬಹುಸಂಖ್ಯಾಕರು ಸೇರ ಬಯಸುವುದಕ್ಕೆ ವಿರೋಧವಿದ್ದಾರೆಂದೂ ಇತರ ಸಂಸ್ಥಾನಗಳಂತೆ ಕೇಂದ್ರದೊಂದಿಗೆ ತನ್ನನ್ನೂ ಜೋಡಿಸಿಕೊಂಡರಾಗಬಹುದೆಂದೂ, ತನ್ನದೊಂದೇ ತಮಿಳು ಸಂಸ್ಥಾನವೆಂದೂ ಪುದುಕೋಟೆ ರಾಜರು ವಾದಿಸಿದ್ದರು. ಆದರೆ ಈ ನವಯುಗದಲ್ಲಿ ಪುದುಕೋಟೆಯಂತಹ ಕಿರಿರಾಜ್ಯಗಳಿಗೆ ಅಸ್ತಿತ್ವವಿಲ್ಲವೆಂಬುದನ್ನು ಸರ್ದಾರ್ ಪಟೇಲರು ಮುಂದಿಟ್ಟು ಪಡಿಸಿದಾಗ, ರಾಜರು ಆಕ್ಷೇಪವಿಲ್ಲದೆ ಹಾಗೊಪ್ಪಿಕೊಂಡರು.

ಭಾರತದ ಚಿತ್ರ

ಅಂತೂ ಇಂದಿನ ಭಾರತವನ್ನು ನಾವು ಸರಿಯಾಗಿ ಚಿತ್ರಿಸಿಕೊಳ್ಳುವದಾದರೆ, ಅದರ ಒಳ ಬಿಸಿಯಾರುತ್ತಾ ಬರುತ್ತಿದೆ; ಆಕಾರ ಕೂಡುತ್ತಾ ಬರುತ್ತಿದೆ, ಎಂಬ ಆಶೆಗವಕಾಶವಿದೆ. ಜಾತೀಯ ಗೊಂದಲಗಳಂತಹವು ನಿಂತಂತಿರುವಾಗ ಅದರ ಏಕರೂಪೀ ಪ್ರಬಲ ಕೇಂದ್ರ ನಿರ್ಮಾಣ ಸುಗಮಗೊಳ್ಳುತ್ತಿದೆ.

ಇನ್ನೂ ಕೆಲಮಟ್ಟಿನ ಗಲಭೆ ಭೀತಿಯುಳಿದಿದ್ದರೂ, ಇನ್ನೂ ಒಂದೆರಡು ಸಂಸ್ಥಾನಗಳ ತೀರ್ಮಾನ ಬಾಕಿಯಿದ್ದರೂ ಇದುವರೆಗಾದ ಕೆಲಸದ ಆಧಾರದಿಂದ ಉಳಿದ ಈ ಅಂಶಗಳನ್ನು ಪೂರ್ತಿಗೊಳಿಸುವುದು ಅಸಾಧ್ಯವೆಂದು ತೋರುವುದಿಲ್ಲ.

ಒಂದು ಶುಭ ಲಕ್ಷಣವೆಂದರೆ ಗಾಂಧಿಜೀಯ ಕೊಲೆಯ ಪ್ರತಿಕ್ರಿಯೆಯಾಗಿ ದೂರದರ್ಶಿಗಳು ಕೂಡಾ ನಿರೀಕ್ಷಿಸಿದ್ದ ಹಲವು ಗಂಡಾಂತರಗಳು ಸಂಭವಿಸದಿರುವುದು. ಬದಲಿಗೆ ಮಹಾತ್ಮರ ಬಲಿದಾನವು ಒಮ್ಮೆಗೇ ಆಶ್ಚರ್ಯಕರ ಸತ್ಪರಿಣಾಮಗಳನ್ನು ಜನಜೀವನದಲ್ಲೂ ರಾಜಕೀಯದಲ್ಲೂ ನಿರ್ಮಿಸಿದೆ. ಸಾಮಾನ್ಯರಂತೆಯೇ ನಾಯಕರಲ್ಲೂ ಅದೊಂದು ಪರಿಮಾಣದಲ್ಲಿದ್ದ ದರ್ಪ ಮತ್ತು ಹೆರಮಾರಿತನಗಳು ಕರಗಿಹೋಗಿವೆ. ಈ ಪರಿಣಾಮವು ಭಾರತವಲ್ಲಿ ಮಾತ್ರವಲ್ಲ, ಪಾಕಿಸ್ತಾನದಲ್ಲಿ ಕೂಡಾ ಕಂಡು ಬರುತ್ತಿರುವುದು ಸಂತೋಷದ ಸಂಗತಿ.

ಆದರೆ ಯಾವ ಕಡೆಯೂ ಈ ತನಕ ದಡ ಸೇರಿಲ್ಲ. ಉಗ್ರ ಅಲೆಗಳೇನೋ ನಿಂತಂತಿವೆಯಾದರೂ ಎಂದೂ ಇನ್ನೊಮ್ಮೆ ಬಿರುಗಾಳಿಯೇಳಲಾರದೆಂದು ಹೇಳಲಾಗುವದಿಲ್ಲ. ಆದ್ದರಿಂದ ಶಾಂತಿಸ್ಥಾಪನೆ, ದೃಢತೆ ನಿರ್ಮಾಣದ ಕೆಲಸಗಳನ್ನು ಜಾಗರೂಕತೆಯಿಂದ ನಿಶ್ಚಲ ಬುದ್ಧಿಯಿಂದ ಮಾಡುತ್ತಾ ಹೋಗಬೇಕಾದ ಅವಧಿಯಿದು.

ಮುಷಿಕೇಶ ಚ್ಯವನಪ್ರಾಶ

ಬಾಬಾ ಕಾಲಿ ಕಮ್ಲಿವಾಲಾ ಮುಷಿಕೇಶ ಇವರ ಅಷ್ಟ ಪ್ರಯೋಗಗಳಿಂದ ಕೂಡಿದ ಸನ್ಯಾಸಿ ಪ್ರಯೋಗದ ಚ್ಯವನಪ್ರಾಶ ಲೇಹವು ಅಪೂರ್ವ ಗುಣಕಾರಿಯಾಗಿದೆ ಅಗ್ನಿಮಾಂದ್ಯ, ಕೆಮ್ಮು, ಶೀತ, ನೆಗಡಿ, ಉಬ್ಬಸ, ಕ್ಷಯ ಮೊದಲಾದ ಶ್ವಾಸಕೋಶಗಳ ರೋಗಗಳನ್ನು ಗುಣಪಡಿಸುವ ರಾಮಬಾಣ ಔಷಧಿ ಈ ಲೇಹ ಸೇವನೆಯಿಂದ ಪನಃಚೇತನ ಉಂಟಾಗುವುದರಲ್ಲಿ ಅನುಮಾನವಿಲ್ಲ

ಕ್ರಯ ರಾತ್ತಲಿಗೆ ರೂಪಾಯಿ 5.- ಅರ್ಧ ರಾತ್ತಲಿಗೆ 2-12-0 ಒಂದು ರೂಪಾಯಿ ಅಡ್ವಾನ್ಸ್ ಕಳುಹಿಸಿದ್ದಲ್ಲಿ ವಿ. ಪಿ. ಪಿ. ಪಾರ್ಸೆಲು ಮಾಡಲಾಗುವುದು.

ಸ್ಟಾಕಿಸ್ಟರು.

ಕಾಡಬೆಟ್ಟು ರಾಮಕೃಷ್ಣ ಗುಂಡು ನಾಯಕ್, ರಥಬೀದಿ, ಉಡುಪಿ. ಅಥವಾ ದ. ಕ. ಜಿಲ್ಲಾ ಪೋಲೀಸ್ ಆಫೀಸರ್ಸ್ ಕೋಆಪರೇಟಿವ್ ಸ್ಟೋರ್ಸ್ ಲಿಮಿಟೆಡ್, ಮಂಗಳೂರು.

'ಕೇಶ ಕಲಾ' ಹೇರ್ ಆಯಿಲ್

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

SEASON DEPOSITS

for Rs. 5000 - and over are now accepted at all Offices of the Bank at the following rates:—

3 & 4 months — @ 2¼ % p. a.

5 & 6 months — @ 2¾ % p. a.

ಗುರುವಾರ, ಉಡುಪಿ, ೧೧-೩-'೪೮

ದ. ಕ. ಜಿಲ್ಲೆಯ ವಾತಾವರಣ

ಭಾರತಕ್ಕೆ ತಟ್ಟಿರುವ ದೊಡ್ಡ ಶಾಪವೆಂದರೆ ಅದರ ರಾಜಕೀಯದ ಮುಖ್ಯಾಂಗವಾಗಿ ಧಾರ್ಮಿಕತೆ ಹಾಗೂ ಜಾತೀಯತೆ ಬೆರತಿರುವದೇ—ಎಂಬುದನ್ನು ನಾವು ಸಂದರ್ಭಾನುಸಾರವಾಗಿ ಆಗಾಗ ಎತ್ತಿ ಹೇಳುತ್ತಾ ಬಂದಿದ್ದೇವೆ. ಸ್ವಾತಂತ್ರ್ಯ ದೊರೆತ ಮೇಲೆ ರಾಷ್ಟ್ರವನುಭವಿಸಿದ ಅದರ ಕಹಿಫಲಗಳೇನೋ ನಮ್ಮ ವಂಶ ಪಾರಂಪರ್ಯಕ್ಕೂ ಸಾರವಾಗುವಷ್ಟಿವೆ. ಗಾಂಧಿಜೀಯನ್ನೇ ಅದಕ್ಕೆ ಬಲಿಕೊಟ್ಟ ಮೇಲೆ ಇನ್ನಾರಿಗೂ ಈ ಕುರಿತು ಹಿಂದಿನಂತೆ ನವ ಹೇಳಲು ಸಾಧ್ಯವಿಲ್ಲವಾಗಿದೆ.

ಆದರೆ ನಿಜಕ್ಕೂ ನಮ್ಮ ಜನಜೀವನ ರಂಗದಿಂದ ಜಾತೀಯತಾ ಕಂಟಕವಿನ್ನೂ ತೊಲಗಿಲ್ಲ. ಇಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ಅಸ್ತಿವಾರವನ್ನೇ ಅಡಿಮೇಲು ಮಾಡಿ ಪುನರ್ರಚನೆಯಾಗುವ್ಯವರೆಗೆ ಯಾವುದೇ ತಾತ್ಕಾಲಿಕ ಶಾಂತಿ ಶಮನಗಳ ಮೇಲೆ ಪೂರ್ಣ ಭರವಸೆಯಿಡಲಾಗುವದಿಲ್ಲ. ಆದ್ದರಿಂದಲೇ, ಇಂದಿನ ಆರ್ಥಿಕ ಅಸಮಾನತೆಗಳ ನಿವಾರಣೆಗಾಗಿ ಮಾತ್ರವಲ್ಲ-ಜನತಾ ಹೃದಯದಲ್ಲಿ ವಿಷವಾಗಿ ಕದಡಿ ಹೋಗಿರುವ ಜಾತೀಯತೆಗೊಂದು ಚಿಕಿತ್ಸೆಯಾಗಿಯೂ ಸರ್ವ ವಿಧದ ಸಮಾನತೆಯನ್ನಾಧರಿಸಿದ ಜನತಾ ರಾಜ್ಯ ಸ್ಥಾಪನೆಯನ್ನು ಆತುರದಿಂದ ನಿರೀಕ್ಷಿಸಬೇಕು; ಅದಕ್ಕಾಗಿ ಸರ್ವಶಕ್ತಿಯಿಂದ ದುಡಿಯಬೇಕು.

ಎಲ್ಲರ ಲಕ್ಷ್ಯವೂ ಇಂತಹ ಪುನರ್ರಚನೆಯ ಕಡೆಗೆ ಬಿದ್ದರೇನೇ ಸಾರ್ಥಕ ಹೊರತು, ಇದ್ದ ಸ್ಥಿತಿಗೆ ಅಲ್ಲಲ್ಲಿ ತೇಪೆ ಹಚ್ಚಿ ಸುಧಾರಿಸಬಹುದೆಂಬ ಧೈರ್ಯವೊಂದು ಭ್ರಾಂತಿಯೇ ಸರಿ. ಯಾತಕ್ಕೆಂದರೆ, ನಮ್ಮ ಸಾರ್ವಜನಿಕ ಜೀವನದ ಕುರೂಪವನ್ನು ಪಾಲಿ ಮಾಡುವ ರೀತ್ಯಾ ಪರದೆಯಂತಹ 'ಶ್ವೇತ ಸೌಜನ್ಯ'ಗಳನ್ನು ಬದಿಗೆ ಸರಿಸಿ ನೋಡಿದರೆ ಹೆಚ್ಚಿನ ಹೃದಯಗಳು ಹೊಲಸು ಕುಳಿಗಳಾಗಿರುವುದನ್ನು ಕಾಣಬಹುದು; ಸ್ವಾರ್ಥ, ವಂಚನೆ, ಧನಾಧಿಕಾರ ಕೀರ್ತಿ ಲಾಲಸೆ, ಜಾತ್ಯಭಿಮಾನಗಳೇ ಅಲ್ಲಿ ತುಂಬಿ ನಾರುತ್ತಿರುವುದನ್ನರಿಯಬಹುದು. ದೃಷ್ಟಾಂತಕ್ಕಾಗಿ ನಮ್ಮ ದಕ್ಷಿಣಕನ್ನಡ ವಾತಾವರಣದ ಕಡೆಗೊಮ್ಮೆ ಒಸನೋಟ ಬೀರೋಣ. ಈ ಬಾರಿ, ಜಾತೀಯ ಗೊಂದಲಗಳಿಂದ ದೂರವಿರಲು ಶಕ್ತವಾದ ಏಕಮಾತ್ರ ಪ್ರಾಂತ್ಯವೆಂದು ಕೀರ್ತಿಗಳಿಸಿರುವ ಮದ್ರಾಸಿನ ಒಂದು ಮೂಲೆಯಲ್ಲಿರುವ ಜಿಲ್ಲೆಯಿದು. ಮದ್ರಾಸ್ ಪ್ರಾಂತ್ಯದ ಮುಕ್ಕ ಭಾಗಗಳಲ್ಲಿರುವ 'ಬ್ರಾಹ್ಮಣ—ಬ್ರಾಹ್ಮಣೇತರ' ವೈಷಮ್ಯ ಕೂಡಾ ಇಲ್ಲಿಲ್ಲದೆ, ತೋರುವಿಕೆಗೆ, ಜನಾಂಗಭೇದರಾಹಿತ್ಯಕ್ಕಾಗಿ ಕೀರ್ತಿ ಪಡೆದ ಪ್ರಾಂತ್ಯದಲ್ಲಿ ಜಾತಿಭೇದ ಕೂಡಾ ಇಲ್ಲದ ಸತ್ಕೀರ್ತಿಶಾಲಿ ಜಿಲ್ಲೆಯಿದು! ಆದರೆ ಒಳಗಿನ ಗುಟ್ಟೇನು? ಇಲ್ಲಿಯ ಪರಿಸ್ಥಿತಿ, ಪರಂಪರಾಗತ ಪದ್ಧತಿ, ಸಾರ್ವಜನಿಕ ಸ್ವಭಾವದ ಮೇಲಿಂದ ಮಾತ್ರವೇ ಶಾಂತಿ ದರ್ಶನವಾಗುತ್ತಿದೆಯಲ್ಲದೆ, ಇಲ್ಲಿಯ ಕೆಲವು ಶ್ರೀಮಂತರ, ಸಾರ್ವಜನಿಕ ಮುಂದಾಳುಗಳನ್ನಿಸಿಕೊಳ್ಳುವವರ ಮನೋವೃತ್ತಿಯು ಒಂದು ರೀತಿಯಿಂದ ಪಂಜಾಬ್ ಗೂಂಡಾ ಮನೋವೃತ್ತಿಗೇನೂ ಕಡಿಮೆಯದಲ್ಲವೆಂದು ನಿಸ್ಸಂಕೋಚವಾಗಿ ಹೇಳಬಹುದು. ಸತ್ಯಕ್ಕೂ ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕ ಜೀವನವು ತೀರಾ ಕನಿಕರಾರ್ಹ ಸ್ಥಿತಿಯಲ್ಲಿದೆ. ಕರೋರತೆಗಿಂತ ಕಪಟಲೇಸು-ಹೊಡೆದಾಟದ ಉರಿಗಿಂತ ಹೊಟ್ಟೆಯುರಿ ಉತ್ತಮ-ಮೇಲೆ ಬಿದ್ದು ಹೊಡೆಯುವವನಿಗಿಂತ ಅಡಗಿ ಕುಳಿತು ತಿವಿಯುವವ ಸಜ್ಜನ-ಎಂದಾದರೆ ಮಾತ್ರ ಪಿಳ್ಳಕಡೆಗಳಿಗಿಂತ ದಕ್ಷಿಣ ಕನ್ನಡ ವಾಸಿ! ನ್ಯಾಯವಾದಿಗಳು, ಜಿಲ್ಲಾಭಿವೃದ್ಧಿಯ ಚಿಂತಕರು ಆಳವಾಗಿ ವಿಚಾರಿಸಿ, ಕಾರ್ಯಪ್ರವೃತ್ತರಾಗಬೇಕಾದ ಕಾಲವೀಗ ಬಂದಿರುವುದರಿಂದ ದ. ಕ. ಜಿಲ್ಲೆಯ ವಾತಾವರಣವನ್ನೊಮ್ಮೆ ಸೂಕ್ಷ್ಮವಾಗಿ ಪರಿಶೀಲಿಸಬೇಕು. ಸಂಕುಚಿತ ಲಾಭಖೋರ ಮನೋವೃತ್ತಿಯವರ ಕೈವಾಡವೇ ಸಾರ್ವಜನಿಕ ಜೀವನದ ಸರ್ವರಂಗಗಳಲೂ ಕಂಡುಬರುತ್ತಿದೆ. ಸ್ವಾರ್ಥ, ಜಾತೀಯ ದುರಭಿಮಾನಗಳ ಗುಪ್ತತಾಂಡವವೇ ಸಾರ್ವತ್ರಿಕವಾಗಿ ನಡೆದಿದೆ. ಸಾಮಾನ್ಯ ಜನರನ್ನು ವಂಚಿಸಿ, ದಾಕ್ಷಿಣ್ಯಕ್ಕೊಳಪಡಿಸಿ, ಒಳಸಂಚು ಹೂಡಿ, ಆ ಮೂಲಕವೇ ಹಣ, ಸ್ಥಾನ, ಕೀರ್ತಿ ಗಳಿಸುವ ಆಟ ನಡೆದಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ ರಂಗಗಳ ಪ್ರತಿಯೊಂದು ಕಾರ್ಯದಲ್ಲೂ ಸ್ವಂತ ಹಾಗೂ 'ಸ್ವಜಾತೀ ಸ್ವಾರ್ಥ'ಕ್ಕೇನೇ ಪ್ರಥಮ ಸ್ಥಾನ ಕೊಡುವವರು, ಇವೆಲ್ಲಾ ಕ್ಷೇತ್ರಗಳೊಳಗೂ ತಲೆ ಹೊಗಿಸಹುತ್ತಿದ್ದಾರೆ. ಜನಸಾಮಾನ್ಯರ ಸರ್ವವಿಧದ ಸಾಮೂಹಿಕ ಕಾರ್ಯಗಳೂ ತಮ್ಮ ಮಾರ್ಗದರ್ಶಿತ್ವದಲ್ಲಿ, ತಮ್ಮ ಅಂಕೆಯೊಳಗಿರಬೇಕೆಂದಷ್ಟೇ ಅಲ್ಲ-ಜನರ ಗುರಿಯೇ ತಾವಾಗಿರಬೇಕೆಂಬ ವರೆಗೂ ಈ ಸ್ವಾರ್ಥಿಗಳು, ಜಾತ್ಯಂಧರು ಮುಂದುವರಿಯುತ್ತಿದ್ದಾರೆ. ಲಾಭವಾಗುವಂತಿದ್ದರೆ, ಅಪಾಯದ ಅಂಜಿಕೆಯಿಲ್ಲವೆಂದಾದರೆ ದರೋಡೆ, ಕೊಲೆಗಳಿಗೂ ಹೇಸದವರ ಕೈಗೆ ಸಾರ್ವಜನಿಕ ಮುಂದಾಳುತನವು ಹೋದರೆ ಜಿಲ್ಲೆಯ ಅದೃಷ್ಟವು ಹೇಗಾದೀತೆಂಬುದನ್ನು ಊಹಿಸಬೇಕು; ಜನತೆ ಸಕಾಲದಲ್ಲಿ ಕಣ್ತೆರೆಯಬೇಕು. ಲಾಭಾನ್ವೇಷಿಗಳು ರಾಜಕಾರಣದಲ್ಲಿ, ಆರ್ಥಿಕ ಸಾಮಾಜಿಕ, ಶೈಕ್ಷಣಿಕ ಹಾಗೂ ಇತರ ಕಾರ್ಯಕ್ಷೇತ್ರಗಳಲ್ಲಿ ಕೈಯಿಕ್ಕಲಾಗುವ ಒಂದು ಜಿಲ್ಲೆಯ ಭವಿಷ್ಯವನ್ನು ಕವಿಯಲು ಗಾಢಾಂಧಕಾರ ಕಾದಿದೆ, ಎಂಬುದನ್ನು ವಿಚಾರಿಗಳು ಮರೆಯಬಾರದು. ವಂಚನೆಯ ಬಲದಿಂದ ದೊರಕಿಸಿಕೊಂಡ ಧನದೌಲತ್ತಿನಿಂದ ಎಲ್ಲವನ್ನೂ ಎಲ್ಲರನ್ನೂ ತಮ್ಮ ಅಂಕೆಯೊಳಗಿಟ್ಟುಕೊಳ್ಳಬಹುದೆಂಬ ಭ್ರಮೆ ಕಟ್ಟಿಕೊಂಡವರಿಗೆ ಸಾರ್ವಜನಿಕ ಜೀವನದಲ್ಲಿ ಅವಕಾಶ ಕಲ್ಪಿಸಿಕೊಟ್ಟೆವಾದರೆ ಜಿಲ್ಲೆಯ ಪಾಲಿಗೆ ಅಮೂಲ್ಯವಾದವುಗಳೇನೇನಿವೆಯೋ ಅವೆಲ್ಲಕ್ಕೂ ಅರ್ಧಚಂದ್ರ ಪ್ರಯೋಗವೇ ಸರಿ! ಆದ್ದರಿಂದ ಸರ್ವರೂ, ಮುಖ್ಯವಾಗಿ ಸಾರ್ವಜನಿಕ ಕಾರ್ಯಾಸಕ್ತರು ಹಾಗೂ ಪತ್ರಿಕೆಗಳು ಜಿಲ್ಲೆಯ ವಾತಾವರಣವನ್ನು ಶುದ್ಧೀಕರಿಸಲು ನಡು ಬಗಿಯಬೇಕಾದುದು ಅತ್ಯಗತ್ಯ. ನ್ಯಾಯ-ಅನ್ಯಾಯ, ಗುಣ-ದೋಷ, ಹಿತ-ಅಹಿತಗಳ ತಾರತಮ್ಯವನ್ನರಿಯುವುದಕ್ಕೂ ಜನತೆಗೆ ಶಿಕ್ಷಣ ಬೇಕಾಗಿಲ್ಲ. ಧನಲಾಲಸಿಗಳು, ಸ್ಥಾನ ಅಥವಾ ಕೀರ್ತಿಕಾಮಿಗಳು ಎಂದೆಂದಿಗೂ ಜನತಾ ಸೇವಕರಾಗಲಾರರೆಂಬುದು ಸ್ವತಃಸಿದ್ಧ ವಿಷಯ; ಜನತಾ ಸೇವಕನಾದವನೇ ಜನನಾಯಕನಾಗಬಲ್ಲ, ಈ ಒರೆಗಲ್ಲಲ್ಲಿ ಪರೀಕ್ಷಿಸಿದ ನಂತರವೇ ಸಾರ್ವಜನಿಕ ರಂಗದಲ್ಲಿ ಮುಂದೆ ಬರುವವರನ್ನು ಜನತೆ ಸ್ವಾಗತಿಸಬೇಕು. ಸಾರ್ವಜನಿಕ ಕೆಲಸಗಾರರೂ ಪತ್ರಿಕೆಗಳೂ ಹಂಗು ದಾಕ್ಷಿಣ್ಯಗಳನ್ನು ತ್ಯಜಿಸಿ, ಕಪಟಾಚರಣೆಗಳನ್ನು ಮುಚ್ಚುಮರೆಯಿಲ್ಲದೆ ಬಯಲಿಗೆಳೆದು ಸಂದರ್ಭೋಚಿತವಾಗಿ ಸಾರ್ವಜನಿಕರ ಕಡೆಗೆ ಬೆಳಕು ಬೀರುತ್ತಾ ಹೋಗಬೇಕು. ಇಲ್ಲವಾದರೆ ದ. ಕ. ಜಿಲ್ಲೆಯ ಭವಿಷ್ಯವು ಸೂರೆಹೋಗುವ ಅಪಾಯವಿದೆ-ಇಂದಿನ ವಿಷವು ವಿನಾಶವನ್ನು ಸಾಧಿಸುವ ವರೆಗೂ ಬೆಳೆದೀತು ಎಂಬುದನ್ನು ಮರೆಯಬಾರದು.

ಮಂಗಳೂರು.

ಮಂಗಳೂರು ನಗರದ ಹಿಂದು ಸ್ನಾನ ಚರರ ಮೇಳವೊಂದು ತಾ. ೨೯ರಂದು ಶ್ರೀ ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮೇಳಕ್ಕೆ ನಗರದ ೬೦೦ಕ್ಕೂ ಮೇಲ್ಪಟ್ಟು ಬಾಲಚರರೂ, ಬಾಲಿಕಾ ಚರರೂ ಬಂದಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಲ್ಲಾ ರೀತಿಯ ಸ್ಕೌಟುಗಳೂ ಒಂದಾಗುವ ಸಮಯವೀಗ ಬಂದಿದೆಯೆಂದೂ, ಕೇಂದ್ರದವರು ಈ ಕುರಿತು ಯೋಜನೆ ಮಾಡಬೇಕೆಂದೂ ತಿಳಿಸಿದರು.

ಕುದ್ಮುಲ್ ರಂಗರಾಯ-(ಸ್ವಾಮಿ ಈಶ್ವರಾನಂದ)ರಿಂದ ಸ್ಥಾಪಿಸಲ್ಪಟ್ಟ ಡಿ. ಸಿ. ಮಿಶನಿನ ಸುವರ್ಣೋತ್ಸವವು ತಾ. ೨೪ರಂದು ಕೊಡಿಯಾಲಬೈಲಿನ ಡಿ. ಸಿ. ಎಂ. ಕೇಂದ್ರದಲ್ಲಿ ಜರಗಿತು. ಈ ಸಮಾರಂಭಕ್ಕೆ ರಾಮಕೃಷ್ಣ ಮಿಶನಿನ ಸ್ವಾಮಿ ವಿಮಲಾನಂದಜೀಯವರು ಅಧ್ಯಕ್ಷರಾಗಿದ್ದರು. ಸ್ವಾಗತ ಸಮಿತಿಯ ಮೇಲೆ ಉಪಾಧ್ಯಕ್ಷರಾದ ಶ್ರೀ ಎಂ. ಕೇಶವ ಪೈಯವರು ಅಧ್ಯಕ್ಷರನ್ನೂ ಅತಿಥಿಗಳನ್ನೂ ಸ್ವಾಗತಿಸಿದರು. ಬಳಿಕ ಕಾರ್ಯದರ್ಶಿಗಳಾದ ಶ್ರೀ ಕೆ. ಎಲ್. ಎನ್. ರಾಯರು ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಸಂದೇಶಗಳನ್ನು ಓದಿದರು. ಆ ಮೇಲೆ ಶ್ರೀಗಳಾದ ಎನ್. ಎಸ್. ಕಿಲ್ಲೆ ಮತ್ತು ಸೇಡಿಯಾಪು ಕೃಷ್ಣ ಭಟ್ಟರು, ರಂಗರಾಯರು ಪ್ರಾರಂಭಿಸಿದ ಪತಿತಜನೋದ್ಧಾರ ಕಾರ್ಯವನ್ನು ಮುಂದೆ ಆಗಬೇಕಾದ ಸುಧಾರಣೆ ಇತ್ಯಾದಿಗಳ ಕುರಿತು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಗಾಂಧೀಜೀಯವರು ದೇಶಕ್ಕಿತ್ತ ನೇತೃತ್ವ, ಇಂದು ಅವರ ನಿಧನದಿಂದಾಗಿ ಹೊಸ ನಾಯಕತ್ವದ ಅವಶ್ಯಕತೆ ಇತ್ಯಾದಿಗಳನ್ನು ಹೇಳಿದರು. ಸಭಾರಂಭದಲ್ಲಿ ಗಾಂಧೀಜಿಯ ನಿಧನದ ಬಗ್ಗೆ ಸಂತಾಪ ಸೂಚಕ ಠರಾವನ್ನು ಅಧ್ಯಕ್ಷರೇ ಸೂಚಿಸಿದಾಗ ಸಭೆಯು ಎದ್ದುನಿಂತು ಅದನ್ನು ಮನ್ನಿಸಿತು. ಕಾರ್ಯದರ್ಶಿಗಳು ವಂದಿಸಿ, ವಿನೋದಾವಳಿಯೊಡನೆ ಕಾರ್ಯಕ್ರಮವು ಕೊನೆಗೊಂಡಿತು.

ಶಾಲೆಯ ಸಹಾಯಾರ್ಥ ಸಂಗೀತ ಕಚೇರಿ—ತಾ. 7ರಲ್ಲು ಸಂಜೆ ಇಲ್ಲಿಯ ಮೈದಾನಿನಲ್ಲಿ ಕಟ್ಟಲ್ಪಟ್ಟ ಭವ್ಯ ಚಪ್ಪರದಲ್ಲಿ ಶ್ರೀ ಎಮ್. ಎಸ್. ಸುಬ್ಬುಲಕ್ಷ್ಮಿಯವರ ಗಾಯನ ಕಚೇರಿಯು ನಡೆಯಿತು. ಬೆಂಗಳೂರಿನ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಆರಂಭ ಭಾಷಣವಾಗಿ ಕಚೇರಿಯು ರಾತ್ರಿ ಒಂಭತ್ತು ಗಂಟೆಯ ತನಕ ನಡೆಯಿತು. ಜನರು ಕಿಕ್ಕಿರಿದು ನೆರೆದಿದ್ದರು. ಸುರತ್ಕಲ್ಲಿನ ವಿದ್ಯಾದಾಯಿನಿ ಶಾಲೆಯ ಸಹಾಯಾರ್ಥವಾಗಿ ನಡೆದ ಈ ಸಂಗೀತ ಕಚೇರಿಯ ಮೂಲಕ ಸಾಕಷ್ಟು ಹಣ ಸಂಗ್ರಹವಾಗಿರಬೇಕೆಂದು ಊಹಿಸಲಾಗಿದೆ.

ಸ್ಪೆಂಬಿಲ-ಜಾನುವಾರು ಪ್ರದರ್ಶನ—ಪ್ರೇಮಕೂಟದ ಆಶ್ರಯದಲ್ಲಿ ಜಾನುವಾರು ಪ್ರದರ್ಶನವೊಂದು ಫಿರ್ಕಾ ಡೆವಲಪಮೆಂಟ್ ಹಾಗೂ ಜಿಲ್ಲಾ ವೆಟರಿನರಿ ಇಲಾಖೆಯವರ ಸಹಾಯದಿಂದ ತಾ 7-1-48ರಂದು ಜರಗಿತು. ಕೋಣ, ಎತ್ತು, ಕೋಳಿ, ಕರು, ಬೀಜದ ಹೋರಿ ಮೊದಲಾದವುಗಳಿಗೆಲ್ಲಾ ಒಟ್ಟು 27 ಬಹುಮಾನಗಳು ಕೊಡಲ್ಪಟ್ಟವು. ಬಹುಮಾನ ವಿತರಣಾ ಸಮಾರಂಭವು ಜಿ. ವೆಟರಿನರಿ ಸರ್ಜನ್ ಡಾ। ಅನಂತ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿ ಜರಗಿತು. ಆ ಸಭೆಯಲ್ಲಿ ಶ್ರೀಗಳಾದ ತೇಜಪ್ಪ ಶೆಟ್ಟಿ, ಬಂಡಿಗ ನಾರಾಯಣ ಭಟ್ಟ, ಕೆ. ಕೃಷ್ಣರಾವ್, ಇವರು ಭಾಷಣವಿತ್ತರು. ಶ್ರೀ. ಜ. ಕೆ. ಪೈಗಳು ವಂದನಾರ್ಪಣ ಮಾಡಿದರು.

ಪ್ರೇಮಕೂಟದ ಮಹಾಸಭೆಯು 7-3-48ರಂದು ಸಂಜೆ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳ ಅಧ್ಯಕ್ಷತೆಯಲ್ಲಿ ಸೇರಿ ವಾರ್ಷಿಕ ವರದಿ ವಾಚನ, ಲೆಕ್ಕ ಪತ್ರ ಮಂಜೂರಾತಿಗಳಾದ ಮೇಲೆ ಈ ಕೆಳಗಿನ ಕಾರ್ಯಕಾರೀ ಸಮಿತಿ ಆರಿಸಲ್ಪಟ್ಟಿತು. ಶ್ರೀ ಎಂ. ವಾಸುದೇವ ರಾಯರು ಅಧ್ಯಕ್ಷ. ಶ್ರೀ ಎಂ. ಜಿ. ಮಹಾಲಿಂಗ ಭಟ್ಟರು ಕೋಶಾಧ್ಯಕ್ಷ. ಶ್ರೀ. ಕೆ. ಶಂಕರನಾರಾಯಣ ಭಟ್ಟರು ಕಾರ್ಯದರ್ಶಿ ಮತ್ತು 12 ಮಂದಿ ಸಮಿತಿ ಸದಸ್ಯರು. ಶ್ರೀ. ಕೆ. ನಾರಾಯಣ ಭಟ್ಟರು ವಂದನಾರ್ಪಣೆ ಮಾಡಿದರು.

೩ಾ 14-3-48ರಿಂದ

ಉಡುಪಿ ರೇಶನ್ ರದ್ದತಿ

ಇದೇ ತಾ. 14ನೇ ಆದಿತ್ಯವಾರದಿಂದ ಉಡುಪಿ ಮುನ್ಸಿಪಲ್ ಕ್ಷೇತ್ರ ಹಾಗೂ ಆಸುಪಾಸಿನ ಆಹಾರ ಧಾನ್ಯಗಳ ಹಸುಗೇ ಪದ್ಧತಿ ತೆಗೆದು ಹಾಕಲ್ಪಡುವುದು. ಇದೇ ತಾರೀಕಿನಿಂದ ದಕ್ಷಿಣ ಆರ್ಕಾಟು ಮತ್ತು ತಿರುಚಿನಾಪಳ್ಳಿ ಜಿಲ್ಲೆಗಳ ಆಹಾರ ಧಾನ್ಯಗಳ ರೇಶನಿಂಗ್ ಮತ್ತು ಕಂಟ್ರೋಲು ಕೂಡಾ ರದ್ದಾಗಲಿದೆ.

ಈ ಸಮಯೋಚಿತ ಸಲಹೆಗಳು—

ಈ ವರುಷ ಅಖಿಲ ಭಾರತದಲ್ಲಿ ಆಹಾರ ಧಾನ್ಯಗಳ ಮಟ್ಟಿಗೆ ಮಿಕ್ಕ ಪ್ರಾಂತ್ಯಗಳಿಗಿಂತ ಹಿಂದಿರುವ ಪ್ರಾಂತ್ಯವೆಂದರೆ ಮದ್ರಾಸು. ಆದ್ದರಿಂದಲೇ ಗಾಂಧಿಜೀಗೆ ಕೊಲೆಯಾಗುವ ದಿನ ಪ್ರಥಮತಃ ಹೊಳೆದಿದ್ದ ಯೋಚನೆಯೆಂದರೆ 'ಮದ್ರಾಸಿನ ಆಹಾರಾಭಾವ ಬಿಕ್ಕಟ್ಟಿನ ನಿವಾರಣಾ ಯೋಚನೆ'. ಆಹಾರ ಯೋಗ್ಯ ವಸ್ತುಗಳ ಸಮೃದ್ಧಿಯಿರುವ ಮದ್ರಾಸ್ ಪ್ರಾಂತ್ಯವು ಅಭಾವವನ್ನನುಭವಿಸಬೇಕಾಗಿಲ್ಲವೆಂದೇ ಗಾಂಧಿಜೀಯ ಅಭಿಪ್ರಾಯವಿದ್ದಿತು. ಕೇಂದ್ರ ಸರಕಾರವು ಮದ್ರಾಸಿನ ಆಹಾರಾಭಾವ ನಿವಾರಣೆಗೆ ತನ್ನಿಂದ ಸಾಧ್ಯವಿದ್ದ ಎಲ್ಲಾ ಸಹಾಯಗಳನ್ನೀಯಲು ಮುಂದಾಗಿದೆ. ಮದ್ರಾಸ್ ಸರಕಾರವು ಧಾನ್ಯ ಸಂಗ್ರಹದಲ್ಲಿ ವಿಶೇಷಾಸಕ್ತಿ ಮತ್ತು ಮುಂಜಾಗ್ರತೆ ವಹಿಸಿ ಕೆಲಸ ಮಾಡುತ್ತಿದೆ. ಆದರೂ ಸದ್ಯಕ್ಕೆ ಅಕ್ಕೀ ಹಸುಗೆಯನ್ನು 8 ಔನ್ಸಿಗೆ ಇಳಿಸಿರುವ ಕಟು ಅನುಭವವು ಜನಕೆಗಾಗಿದೆ.

ಮದ್ರಾಸ್ ಪ್ರಾಂತ್ಯದ ಎಲ್ಲಾ ಕಡೆಗಳಲ್ಲೂ ಕಮ್ಯೂನಿಸ್ಟ್ ಕಾರ್ಯಾಲಯಗಳ ಜಪ್ತಿ, ಕಮ್ಯೂನಿಸ್ಟ್ ಕೆಲಸಗಾರರ ದಸ್ತಗಿರಿಗಳು ನಡೆದಿದೆ.

ನ್ಯಾಯ ತೀರ್ಮಾನ ವಿಭಾಗವನ್ನು ಪ್ರತ್ಯೇಕಿಸುವ ಶಾಸನವನ್ನು ಮದ್ರಾಸ್ ಸರಕಾರವು ಎಪ್ರಿಲ್ ಅಥವಾ ಮೇ ತಿಂಗಳಲ್ಲಿ ಮುಂತರುವದೆಂದು ಗೃಹ ಮಂತ್ರಿ ಡಾ| ಸುಬ್ಬರಾಯನರಂದಿದ್ದಾರೆ. ಮದ್ರಾಸಿನ 1948-49ರ ಆಯ ವ್ಯಯ ಪಟ್ಟಿಗಳ ಚರ್ಚೆಯು ಎಸೆಂಬ್ಲಿ ಹಾಗೂ ಕೌನ್ಸಿಲುಗಳಲ್ಲಿ ನಡೆದು ಮುಗಿದುವು. ಸ್ವಾಭಾವಿಕ ಟೀಕೆ ವಿಮರ್ಶೆಗಳು ಮುಂದೆ ಬಂದರೂ ಸರ್ವಸಾಮಾನ್ಯ ತೃಪ್ತಿಯೇ ಪ್ರಕಟವಾಗಿದೆ.

ಗಾಂಧಿಜೀಯ ಪ್ರಭಾವ

ಮಹಾತ್ಮ ಗಾಂಧಿಜೀ ಭಾರತದ ಮನೋವೃತ್ತಿಯನ್ನು ಹೇಗೆ ಬದಲಾಯಿಸಿರುವರೆಂಬುದಕ್ಕೆ ಇತ್ತೀಚೆಗೆ ಎರಡು ಉತ್ತಮ ನಿದರ್ಶನಗಳು ದೊರೆತಿವೆ. ಒಂದು ಇದೇ ತಾ. 6ರ ಪಾಕಿಸ್ತಾನದ ಪಾರ್ಲಿಮೆಂಟಿನಲ್ಲಿ ಮಿ. ಸುಹ್ರವರ್ದಿಗಳು ಮಾಡಿದ ಸ್ಪಷ್ಟ ಭಾಷಣ. ಮತ್ತೊಂದು ಇದೇ ತಾ. 7ರಲ್ಲಿ ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನರು ಡಿಲ್ಲಿ ಯುನಿವರ್ಸಿಟಿಯ ರಜತೋತ್ಸವದ ಪದವೀದಾನ ಸಮಾರಂಭದಲ್ಲಿ ಆಡಿದ ಮಾತುಗಳು. ಮೊದಲನೆಯವರು ಕಲ್ಕತ್ತಾ ಗಲಭೆಯ ಕಾಲದಲ್ಲಿ ಬಂಗಾಳದ ಲೀಗ್ ಪ್ರಧಾನ ಮಂತ್ರಿಯಾಗಿದ್ದು 'ಅತ್ಯಪಾಯಕಾರೀ ಮನುಷ್ಯ'ನೆಂದು ಅಖಿಲ ಭಾರತದಿಂದ ಹೇಳಿಸಿಕೊಂಡವರು. ಎರಡನೆಯವರು ಬ್ರಿಟಿಷ್ ರಾಜ ಮನೆತನದವರಿದ್ದು, ಕಳೆದ ಲೋಕಯುದ್ಧದ ವೀರರಲ್ಲೊಬ್ಬರೆನ್ನಿಸಿ ಬ್ರಿಟಿಷ್ ಸಾಮ್ರಾಜ್ಯ ಪಾಲಕರ ಪ್ರಥಮ ಪಂಕ್ತಿಗೆ ಸೇರಿದವರು. ಇವೆರಡು ಪಕ್ಷಗಳೂ ಒಂದು ಕಾಲದಲ್ಲಿ ಗಾಂಧೀತತ್ವದ ಬದ್ಧ ವಿರೋಧಿಗಳೆಂಬುದನ್ನು ನೆನಸಿದರೆ ಈಗ ಇವರಿಬ್ಬರಲ್ಲೂ ಗಾಂಧಿಜೀಯು ಮೂಡಿಸಿರುವ ಪರಿವರ್ತನೆಗಳೆಂತಹವೆಂಬುದನ್ನು ಈ ಭಾಷಣಗಳಿಂದ ಅರಿಯಬಹುದು.

ಸುಹ್ರವರ್ದಿಗಳ ಖಂಡತುಂಡ ಮಾತು.

ಪಾಕಿಸ್ತಾನ್ ಪಾರ್ಲಿಮೆಂಟಿನಲ್ಲಿ 'ಬಜೆಟ್' ಚರ್ಚೆಯ ವೇಳೆ ಖಾನ್ ಅಬ್ದುಲ್ ಗಫರ್ ಖಾನರು ತಂದ ಕಡಿತದ ಸೂಚನೆಯೊಂದರ ಕುರಿತು ಮಾತನಾಡುತ್ತಾ ಮಿ. ಸುಹ್ರವರ್ದಿಯವರಂದರು: "ಪಾಕಿಸ್ತಾನದ ಸರ್ವಜನತೆಯ ಹಿತಸಾಧನೆ ಮತ್ತು ಭಾರತ-ಪಾಕಿಸ್ತಾನಗಳೊಳಗೆ ಸುಸಂಬಂಧ, ಇವೆರಡು ಪಾಕಿಸ್ತಾನದ ಅಸ್ತಿವಾರಾಧಾರಗಳು. ಜನತೆಯ ಹಿತ ಮತ್ತು ಸಹಕಾರವನ್ನಾಧರಿಸಿಯೇ ಪಾಕಿಸ್ತಾನವು ನಿಲ್ಲದಿದ್ದರೆ, ಮುಂಬರುವ ಕಾಲದಲ್ಲಿ ಅದು ತನ್ನನ್ನು ತಾನೇ ನಿರ್ನಾಮ ಮಾಡಿಕೊಳ್ಳುವದು. ಇಲ್ಲಿ ಮಹಾತ್ಮಾ ಗಾಂಧಿಯವರ ಒಂದು ಮಾತೇ ನನ್ನ ನೆನಪಿಗೆ ಬರದೆ. ಭಾರತ ಕೇಂದ್ರವು ತನ್ನ ಒಳಗಡೆಯಿರುವ ಮುಸ್ಲಿಮರನ್ನು ನಿರ್ಮೂಲಿಸಿಕೊಂಡು ಹಿಂದೂ ರಾಜ್ಯಕಟ್ಟಲು ನೋಡುತ್ತದಾದರೆ ಹಿಂದೂತ್ವವು ನಾಶವಾಗುವುದು ಎಂದವರು ಒಮ್ಮೆ ಹೇಳಿದ್ದರು. ಪಾಕಿಸ್ತಾನವು ತನ್ನೊಳಗಡೆಯಲ್ಲಿರುವ ಮುಸ್ಲಿಮೇತರರನ್ನು ನಿರ್ನಾಮಮಾಡಿಕೊಳ್ಳುತ್ತದಾದರೆ, ಪಾಕಿಸ್ತಾನದಲ್ಲಿ ಇಸ್ಲಾಂ ನಾಶವಾಗುವುದು. ಅಂತಿದ್ದರೆ ನಿಮ್ಮ ಇಸ್ಲಾಂ ಎಂಬುದು ಸಮಾನತೆ, ಸಹೋದರತೆ ಹಾಗೂ ಸಹನೆಯನ್ನು ಬೋಧಿಸಿರುವ ಇಸ್ಲಾಂ ತತ್ವಗಳಿಗೆ ಸೇರುವಂತಹದಲ್ಲ. ಒಂದು ಕಾಲದಲ್ಲಿದ್ದ 'ಇಸಾಮ್ ಅಪಾಯದಲ್ಲಿದೆ' ಎಂಬ ಕೂಗಿಗೆ ಬದಲಾಗಿ ಈಗಲೂ ನೀವು 'ಪಾಕಿಸ್ತಾನ ಅಪಾಯದಲ್ಲಿದೆ' ಎಂದು ಬೊಬ್ಬೆ ಹಾಕುವಿರಾದರೆ ಅದು ಅಹಿತಾತ್ಮಕರ ಹಾಗೂ ಅಪಾಯಕರವೆಂದು ನಾನು ಎಚ್ಚರಿಸುತ್ತೇನೆ. ಬುದ್ಧಿ, ಹೃದಯ ಹಾಗೂ ಅಂತರಾಳವನ್ನು ತೆರೆದು ಮಾನವೀಯತೆಯ ಹೆಸರಿನಿಂದ ಅಲ್ಪಸಂಖ್ಯಾಕ ಮುಸ್ಲಿಮೇತರರನ್ನು ತನ್ನೊಳಗೆ ತೆಗೆದುಕೊಳ್ಳಬೇಕೆಂದು ಪಾಕಿಸ್ತಾನ ಸರಕಾರವನ್ನು ನಾನು ಕೇಳಿಕೊಳ್ಳುತ್ತೇನೆ".

ಮೌಂಟ್ ಬೇಟನರ ಭರವಸೆ

ತನ್ನ ರಜತೋತ್ಸವಾಚರಣೆಗಾಗಿ ವಿಶೇಷ ಬಿರುದುದಾನ ಸಮಾರಂಭವನ್ನು ಜರಗಿಸುತ್ತಾ ಡಿಲ್ಲಿ ವಿಶ್ವವಿದ್ಯಾಲಯವು ಮೌಂಟ್ ಬೇಟನ್, ನೆಹರು, ಆಜಾದ್ ಮತ್ತು ರಾಜಕುಮಾರಿ ಅಮೃತಕೌರರಿಗೆ ಗೌರವ ಡಿಗ್ರಿಗಳನ್ನು ದಾನಮಾಡಿದ್ದಿತು. ಈ ಸಂದರ್ಭದಲ್ಲಿ ಭಾಷಣವೀಯುತ್ತಾ ಲೋರ್ಡ್ ಮೌಂಟ್ ಬೇಟನರಂದರು: "ಈ ಯುನಿವರ್ಸಿಟಿಯ ಎಕ್ಸಿಕ್ಯೂಟಿವ್ ಕೌನ್ಸಿಲ್ ಮತ್ತು ಎಕೆಡೆಮಿಕ್ ಕೌನ್ಸಿಲ್‌ಗಳು ತಮ್ಮ ಜತೆ ಸಭೆಯಲ್ಲಿ, ಮಹಾತ್ಮಾ ಗಾಂಧಿಯವರ ನಿಧನದಿಂದ ಡಿಲ್ಲಿ ನಗರಕ್ಕೆ ಮಾತ್ರವಲ್ಲ, ಅಖಿಲ ಭಾರತಕ್ಕೇನೇ ಆಗಿರುವ ಅಪಾರ ನಷ್ಟದ ಕುರಿತು ದುಃಖ ನಿರ್ಣಯ ಮಾಡಿರುವುದನ್ನೂ, ಆ ನಿರ್ಣಯದ ಕೊನೆಯಲ್ಲಿ ಈ ಕೆಳಗಿನ ವಾಕ್ಯಗಳಿರುವುದನ್ನೂ ನೋಡಿ ನಾನು ಬಹಳ ಕೃತಜ್ಞತೆಯಿಂದ ತುಂಬಿದ್ದೇನೆ—'ಅವರು ಹಾಕಿಕೊಟ್ಟ ಉಚ್ಚ ಪಾದರಿಯನ್ನು ಅನುಕರಿಸುವುದಕ್ಕೂ ಅದಕ್ಕನುಸಾರವಾಗಿ ಎಲ್ಲಾ ಜಾತಿಮತಗಳೊಳಗೆ ಸೌಹಾರ್ದತೆ ನಿರ್ಮಿಸುವುದಕ್ಕೂ ಎರಡು ದೊಡ್ಡ ಸಂಸ್ಕೃತಿಗಳ ಒಂದುಗೂಡಿ, ಆ ಮೂಲಕ ಒಂದು ಇನ್ನೊಂದರ ಪುಷ್ಟಿಗೆ ನೆರವಾಗುವಂತೆ ಮಾಡುವ ಹಾಗೂ ಅದೆಲ್ಲರಿಗೂ ಸ್ವಾಗತ ಮತ್ತು ರಕ್ಷಣೆಕೊಡುವಂತಹದಾಗಿರುವಂತೆ ಮಾಡುವ ನಿಲ್ದಾಣವಾಗಿರುವಂತೆ ಈ ವಿಶ್ವವಿದ್ಯಾಲಯವನ್ನು ಮಾಡುವುದಕ್ಕೂ ನಾವು ನಮ್ಮ ಸರ್ವಶಕ್ತಿಯಿಂದ ಪ್ರಯತ್ನಿಸುವೆವೆಂದು ಈ ಮೂಲಕ ಸುದೃಢ ಪ್ರತಿಜ್ಞೆ ಕೊಡುತ್ತೇವೆ.' ಗಾಂಧಿಜೀ ಈ ನಿರ್ಣಯವನ್ನು ಎಷ್ಟೊಂದು ಪ್ರೀತಿಸುತ್ತಿದ್ದರು; ಮತ್ತು ವಿಶ್ವವಿದ್ಯಾಲಯದ ಸದಸ್ಯರು ಈ ನಿರ್ಣಯವನ್ನು ಕಾರ್ಯತಃ ಜ್ಯಾರಿಯಲ್ಲಿ ತರುವರೆಂಬುದನ್ನು ತಿಳಿದು ಅವರಿಗೆಷ್ಟು ಆನಂದವಾಗಿರಬಹುದು! ಭಾರತವು ಸ್ವಾತಂತ್ರ್ಯವನ್ನು ಪಡೆದು ಆರು ತಿಂಗಳು ಕೂಡಾ ಕಳೆದಿಲ್ಲ. ಮತ್ತು ನಮಗೆಲ್ಲರಿಗೂ ತಿಳಿದಿರುವಂತೆ ಇದರ ಜತೆಯಲ್ಲೇ ಮಹತ್ತಾದ ಗುಂಡಾಂತರಗಳೂ ಬಂದಿದ್ದುವು. ಭಾರತ ಸರಕಾರವು ಈ ತೊಡಕುಗಳನ್ನು ಕಡೆಹಾಯ್ದು ಈಗ ಈ ರಾಷ್ಟ್ರದ ಭವಿಷ್ಯದ ಕಡೆಗೆ ಲಕ್ಷ್ಯ ಕೊಡುತ್ತಿದೆ. ಅವರ ಧೋರಣೆಯ ಕುರಿತು ಗುಟ್ಟೇನೂ ಇಲ್ಲ. ಆದರೆ ನನಗದು ಹೇಗೆ ತೋರುತ್ತಿದೆ ಎಂಬುದನ್ನಿಲ್ಲಿ ಹೇಳಬಯಸುತ್ತೇನೆ. ನಿಮ್ಮಷ್ಟು ಉತ್ತಮ ಸ್ಥಿತಿಯಲ್ಲಿರದ, ದುಃಖದ ಬೀಡಾಗಿರುವ ಗುಡಿಸಲುಗಳಲ್ಲಿರುವ, ಚಿಂದೀ ವಸ್ತ್ರಧಾರಿಗಳು, ಅರೆಹೊಟ್ಟೆಯವರು ಹಾಗೂ ಅನಕ್ಷರಜ್ಞರಿರುವ, ನಿಮ್ಮ ಮಿಲಿಯಾವಧಿ ದೇಶಬಾಂಧವರ ಜೀವನ ಮಟ್ಟವನ್ನು ಮೇಲೇರಿಸುವುದೇ ಭಾರತ ಸರಕಾರದ ಮುಖ್ಯೋದ್ದೇಶವೆಂಬುದನ್ನು ನೀವೆಲ್ಲರೂ ಬಲ್ಲಿರಿ. ಈ ಮಹಾಸಾಧನೆಯು ಅಸ್ತಿತ್ವಕ್ಕೆ ಬರಲಾಗುವಂತೆ, ಇದಕ್ಕೆ ಸಾಕಾಗುವಷ್ಟು ಪರಿಮಾಣದಲ್ಲಿ ರಾಷ್ಟ್ರದ ಸಂಪತ್ತನ್ನು ಸಂಘಟಿಸಿಕೊಳ್ಳುವದು ಆತ್ಯಗತ್ಯವಿದೆ. ಪ್ರತಿಯೊಬ್ಬನೂ ಒಂದು ನ್ಯಾಯಬದ್ಧ ಹಾಗೂ ವ್ಯವಹಾರ ಯೋಗ್ಯ ವೇತನವನ್ನು ಸಂಪಾದಿಸಿಕೊಳ್ಳಲಾಗುವಷ್ಟು ರಾಷ್ಟ್ರವು ಸುಸಂಘಟನೆಗೊಂಡಿತೆಂಬುದನ್ನು ಅವರು ಮುಂದಾಗಿ ಖಚಿತಮಾಡಿಕೊಳ್ಳಬೇಕೆಂಬುದೇ ಇದರ ಅರ್ಥ. ಮತ್ತೇ ಮೇಲ್ಪಟ್ಟದ ಜೀವನಕ್ಕಗತ್ಯಬೀಳುವಷ್ಟು ಆಹಾರ, ವಸ್ತ್ರ, ಸುಸಜ್ಜಿತ ಗೃಹ ಗುಡಿಗಳು, ಆಸ್ಪತ್ರೆಗಳು, ಡಾಕ್ಟರರು, ಶಾಲೆಗಳು, ವಿದ್ಯಾಭ್ಯಾಸಾನುಕೂಲತೆಗಳು—ಇವೆಲ್ಲವೂ ತಯಾರಿರುವಂತೆ ಅವರು ರಾಷ್ಟ್ರವನ್ನು ಸಂಘಟಿಸಿಕೊಳ್ಳಬೇಕಾಗಿದೆ. ಜನತೆಯ ಜೀವನ ಮಟ್ಟವನ್ನೇರಿಸುವ ಯೋಜನೆಯನ್ನು ಅಸ್ತಿತ್ವದಲ್ಲಿ ತರಬಲ್ಲ ಅಗ್ರಗಾಮಿಗಳು ಭಾರತ ಸರಕಾರಕ್ಕೀಗ ಬೇಕಾಗಿದ್ದಾರೆ. ನೀವು ಒಂದೇ ಬಾರಿ 300 ಮಿಲಿಯ ಜನತೆಗೂ ಕಲಿಸುವದನ್ನಾರಂಭಿಸಲಾರಿರೆಂಬುದು ಸ್ವತಃ ಸಿದ್ಧ. ಆದಕ್ಕಾಗಿ ಈ ಸುತಂತ್ರ-ಭಾಗ್ಯಶಾಲಿಗಳಾದ-ಕೆಲವೇ ಮುಂದಿಯ ಗುಣಾತ್ಮಕತೆಗಳನ್ನು ಅಭಿವೃದ್ಧಿಪಡಿಸಿ, ಅವರದನ್ನು ಕ್ರಮಶಃ ಹಬ್ಬಿಸುವಂತೆ ಮಾಡಬೇಕೆಂಬುದೂ ಸ್ವತಃ ಸಿದ್ಧ. ಆ ಅಗ್ರಗಾಮಿತ್ವವನ್ನು ವಹಿಸತಕ್ಕವರೆಂದರೆ ನಿಮ್ಮಂತಹ ವಿಶ್ವವಿದ್ಯಾಲಯದ ಜನರೇ".

ಪ್ರಾಣಿಬಲಿ ನಿಷೇಧ ಸಭೆ—ತಾ. 17-3-48ನೇ ಬುಧವಾರ ಸಂಜೆ ಘಂಟೆ 4-30ಕ್ಕೆ ಸುರತ್ಕಲ್ ಸಂತೆಕಟ್ಟೆ ಬಳಿಯಲ್ಲಿ ಸಾರ್ವಜನಿಕ ಸಭೆಯು, ಪ್ರಾಣಿಬಲಿ ನಿಷೇಧದ ಕುರಿತು, ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ನಡೆಯಲಿರುವುದು. ಶ್ರೀಗಳಾದ ಎಸ್. ಎಸ್. ಕಿಲ್ಲೆ ಮತ್ತು ಕೆ. ಕೆ ಶೆಟ್ಟಿ ಭಾಷಣ ಮಾಡಲಿರುವರು. ಮಹಾಜನರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯ ೧೫ನೇ ಇಸವಿ ವರದಿ ಮತ್ತು ಚಂದ್ರಹಾಸ ಚಲಚಿತ್ರದ ವಿಮರ್ಶೆಯನ್ನು ಮುಂದಿನ ವಾರ ಪ್ರಕಟಿಸಲಾಗುವುದು.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೇ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.
ನವಭಾರತ ಬುಕ್ ಡಿಪೋ, ಉಡುಪಿ.

ಕನ್ನಡ ಪ್ರಪಂಚಕ್ಕೊಂದು ಕೀರ್ತಿ ತಂದಿತು.
ಕರ್ನಾಟಕ ನಟನಟಿಯರಿಗೊಂದು ಸ್ಥಾನ ಕೊಟ್ಟಿತು.
ಕರ್ನಾಟಕ ಕಲಾವಿದರಿಗೊಂದು ಚೇತನ ಉಣಿಸಿತು.
ಕನ್ನಡದಲ್ಲಿ ಮಹಾತ್ಮಾ ಕಬೀರ್
ಸುಬ್ಬಯ್ಯ ನಾಯ್ಡು, ನಾಗೇಂದ್ರ ರಾವ್, ಲಕ್ಷ್ಮಿ ಬಾಯಿ ಮೊದಲಾದವರು
ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಉಡುಪಿ.

ದಿ ವೆಸ್ಟ್ ಕೋಸ್ಟ್ ಇಂಡಸ್ಟ್ರಿಯಲ್ ಎಂಡ್ ಕಮರ್ಶಿಯಲ್ ಸಿಂಡಿಕೇಟ್ ಲಿಮಿಟೆಡ್-ಇದರ ಗ್ಯಾರೇಜಿನ ಪ್ರಾರಂಭೋತ್ಸವವು ತಾ. ೧ರಲ್ಲಿ ಸಂಜೆ ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಂಸ್ಥೆಯ ಚೆಯರ್‌ಮೆನ್ ಶ್ರೀ ಆನಂದ ಶೆಟ್ಟಿ, ಮನೇಜಿಂಗ್ ಡೈರೆಕ್ಟರ್ ಆದ ಅವರು ಆಮಂತ್ರಿತರಿಗೆ ಸ್ವಾಗತವನ್ನು ಬಯಸಿ ಸಂಸ್ಥೆಯ ಗೊತ್ತುಗುರಿಗಳನ್ನು ವಿವರಿಸಿದರು. ಶ್ರೀಗಳಾದ ಪಿ. ವಾಸುದೇವ ರಾವ್, ಕೆ. ವಿಠಲ ಶೆಣೈ, ಎ ಎಸ್ ಕಾಂತ್, ಕೊಟ್ಟಿಕಾರ್ ಪದ್ಮನಾಭ ಪೈ, ಶ್ರೀಮತಿ ಪಾರ್ವತಿ ಬಾಯಿ ಮೊದಲಾದವರು ಸಂಸ್ಥೆಯನ್ನು ಹರಸಿ ಸಂಸ್ಥೆಯು ಜನತಾ ಸೇವಾದರ್ಶ ಸಂಸ್ಥೆಯಾಗಬೇಕೆಂದು ಕೋರಿ ಭಾಷಣವಿತ್ತರು. ಲಘೂಪಹಾರ, ಧನ್ಯವಾದಾರ್ಪಣೆಗಳಿಂದ ಸಮಾರಂಭವು ಕೊನೆಗೊಂಡಿತು

ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರು ತಾ. ೮ರಲ್ಲಿ ಉಡುಪಿಗೆ ಚಿತ್ತೈಸಿ ಶ್ರೀಕೃಷ್ಣ ಮಠದಲ್ಲಿ ಸಂಪ್ರದಾಯ ಸಂಗೀತ ಸೇವೆಯನ್ನು ಸಲ್ಲಿಸಿದರು.

ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಈಚೆಗೆ ಶ್ರೀ ಕೆ. ವಾಸುದೇವಾಚಾರ್ಯರು ಕೊಟ್ಟ ಮಹಾತ್ಮಾಜೀಯವರ ತೈಲಚಿತ್ರವನ್ನು ಉಡುಪಿ ಮುನಿಸಿಪಲ್ ಚೆಯರ್‌ಮೇನರಾದ ಶ್ರೀ. ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರು ಅನಾವರಣ ಮಾಡಿದರು.

'ಮನೆಮದ್ದು' ಪುಸ್ತಕಕ್ಕೆ ಮತ್ತೊಂದು ಬಹುಮಾನ ಡಾ| ಕೊರಡ್ಕಲ್ ವೆಂಕಟ್ರಾಯರಿಂದ ಬರೆಯಲ್ಪಟ್ಟ 'ಮನೆಮದ್ದು' ಎಂಬ ಗೃಹ ಉಪಯೋಗೀ ವೈದ್ಯಕೀಯ ಪುಸ್ತಕಕ್ಕೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರಿಂದ ರೂಪಾಯಿ 50/- ಪ್ರೋತ್ಸಾಹ ರೂಪದ ಸಂಭಾವನೆ ದೊರೆತಿದೆ.

ನ್ಯೂ ರೋಯಲ್ ಕೆಫೆ ಹಿಂದೆ 'ಕೆಫೆ' ರೋಯಲ್. ಇದ್ದ ಕಟ್ಟಡದಲ್ಲಿ ಮೂಲ್ಕಿಯ ಆರ್ಟಿಸ್ಟ್ ಶ್ರೀ ಎಮ್. ಆರ್ ಭಟ್ಟರ ವ್ಯವಸ್ಥಾಪಕತ್ವದಲ್ಲಿ 'ನ್ಯೂ ರೋಯಲ್ ಕೆಫೆ' ಎಂಬ ಹೊಸ ಚಹಾಕಾಫಿ ಹೊಟೆಲು ಇದೇ ತಾ. ೨ರಲ್ಲು ಪ್ರಾರಂಭವಾಗಿದೆ. ಈ ಸಂಬಂಧ ಉಪಾಹಾರವಿತ್ತು.

ಉಡುಪಿ ಕೋಲೇಜು ಫಂಡು-(ಮುಂದರಿಸಿದ್ದು) ದಿವಂಗತ ಕಪ್ತನ್ ಪಿ. ರಾಮಚಂದ್ರ ರಾಯರ ಸ್ಮರಣಾರ್ಥವಾಗಿ ಅವರ ಸಂಬಂಧಿಕರು ರೂ. 251/- ಶ್ರೀ. ಯು. ರಾಮಪ್ಪ ತಿಮ್ಮಪ್ಪ ರೂ. 250/ , ಶ್ರೀ. ಟಿ. ರಾಮಕೃಷ್ಣ ಪೈ ರೂ 200 , ಶ್ರೀ. ಪಿ. ಕೆ. ಕೃಷ್ಣರಾಜ್ ರೂ 151/-, ಶ್ರೀಗಳಾದ ಎ. ನಾರಾಯಣ ನ್ಯಾಕ್ ಮತ್ತು ಎ. ಗಣಪತಿ ನ್ಯಾಕ್ ಮತ್ತು ಮಕ್ಕಳು ರೂ. 105/-ರಂತೆ. ಶ್ರೀಗಳಾದ ಗೋಕಾಕ ಪುಟ್ಟಣ್ಣ ಭಟ್ಟ, ಬಿ. ವಿಷ್ಣುಮೂರ್ತಿ ರಾವ್, ಬಿ. ರಾಜಮ್ಮ, ಕೊಟ್ಟಿಕಾರ್ ವಾಸುದೇವ ಪೈ, ಅಲೇವೂರು ರಾಮಪ್ಪಯ್ಯ, ಮಂಕಿ ಶ್ರೀನಿವಾಸ ಭಾಗವತ, ಎಸ್. ವೆಂಕಟರಾಜ, ಕಲ್ಯಾಣಕ ಶ್ರೀನಿವಾಸ ಪೈ, ಅಲೇವೂರು ರಂಗಣ್ಣಯ್ಯ, ಅಚ್ಯುತ ಪೈ ಕೊಟ್ಟಿಕಾರ್, ಕಲ್ಯಾಣಕ ನಾಗೇಶ ಪೈ ಮತ್ತು ಸಹೋದರರು ವೆಂಕಟಕೃಷ್ಣ ಕುಕ್ಕಿಲ್ಲಾಯ, ಜಮ್ನಾದಾಸ್ ನೇಲ್ಲಿ ಮತ್ತು ಅಲೇವೂರು ಸರ್ವೋತ್ತಮ ಕಿಣಿ ರೂ. 101 ರಂತೆ, ಶ್ರೀ. ಯು. ಆರ್. ಆಚಾರ್ಯ ರೂ. 100/-, ಐಡಿಯಲ್ ಸ್ಟೋರ್ಸ್ ಮತ್ತು ಶ್ರೀಮತಿ ಕೆ. ರಾಜಮ್ಮ ಶೆಡ್ತಿ ರೂ 55/-ರಂತೆ, ಶ್ರೀ ಕಾರ್ನಾಡು ಸದಾಶಿವ ರಂಗರಾವ್ ರೂ 53/-, ಶ್ರೀಗಳಾದ ಮೊಡೆಸ್ಟಿಕ್ ಸ್ಟೋರ್ಸ್, ಎಮ್. ನಾರಾಯಣ ಭಟ್ಟ, ಕಾಡಬೆಟ್ಟು ಗೋಪಾಲಕೃಷ್ಣ ನ್ಯಾಕ, ಪಿ. ಎನ್. ಹನುಮಂತಪ್ಪ, ... ನರಸಿಂಹಾಚಾರ್ಯ, ಕೆ. ಅನಂತ ಶೆಣೈ ರೂ.51/-ರಂತೆ ಶ್ರೀಗಳಾದ ಜಿ. ಲಕ್ಷ್ಮೀನಾರಾಯಣನ್ ಮತ್ತು ಮಾನಂಜೆ ಶೇಷಗಿರಿ ರಾವ್, ರೂ. 26/- ರಂತೆ ಶ್ರೀಗಳಾದ ಕೆ ವಾಸುದೇವ ರಾವ್, ಕೆ. ಬಾಬುರಾಯ ಕಾಮ್ತಿ, ಎಮ್. ಕೇಶವ ಭಟ್ಟ, ಕಿಣಿ ಸಹೋದರರು, ಕೆ. ಮಂಜುನಾಥ ಭಕ್ತ ಮತ್ತು ಕೆ. ಶಿವರಾಯ ಬಾಳಿಗ ರೂ. 25/-ರಂತೆ. ಶ್ರೀಗಳಾದ ಮಂಕಿ ರಾಮ ಭಾಗವತ, ಕಲ್ಯಾಣಕ ಗಿರಿರಾಯ ಪೈ, ರೂ 21/-ರಂತೆ, ಶ್ರೀಗಳಾದ ಎಸ್. ಕೆ. ಮೂರ್ತಿ ಕೆ. ಗೋವಿಂದ ಬಲ್ಲಾಳ, ಎಚ್. ಲಕ್ಷ್ಮಣ ನ್ಯಾಕ, ಕಿನ್ನಿಮೂಲ್ಕಿ ವಾಸುದೇವ ನ್ಯಾಕ, ಎಸ್. ಆರ್. ಸೋಮಯಾಜಿ ರೂ. 11/- ರಂತೆ, ಶ್ರೀ. ಪಿ. ಸದಾನಂದ ಕಾಮ್ತಿ ರೂ. 5 ಕೊಟ್ಟಿರುವರು.

ಅಲ್ಲದೆ ಕೋಲೇಜು ಫಂಡಿಗೆ ಪ್ರೋತ್ಸಾಹ ಮಾಡುವರೆ ಶ್ರೀ. ಟಿ. ರಮೇಶ ಯು. ಪೈಗಳು ರೂ. 1000-ಕೆತ್ತು ಮತ್ತು ಶ್ರೀ. ವಾಮನ ಸುಬ್ರಾಯ ಕಾಮ್ತಿಯವರು ಪ್ರಥಮ ಕಂತಾಗಿ ರೂ. 250/-ಕೆತ್ತು ಎಕೆಡೆಮಿ ಅಫ್ ಜನರಲ್ ಎಡ್ಯುಕೇಶನ್ನಿನ ಆಜೀವ ಸದಸ್ಯರಾಗಿರುತ್ತಾರೆ.

ಉಡುಪಿ ಕಾಂಗ್ರೆಸಿನ ಮಹತ್ವದ ನಿರ್ಣಯಗಳು.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ—ಸಭೆಯು ಇದೇ ತಾ. 9ನೇ ಆಹಿರಾಹ್ನ ಕಾಂಗ್ರೆಸ್ ಕಚೇರಿಯಲ್ಲಿ ಅಧ್ಯಕ್ಷ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮತಃ ಮಹಾತ್ಮಾಜೀಯ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಹಳ್ಳೀ ಹಸುಗೆಯನ್ನು ರದ್ದುಪಡಿಸಿದುದರಿಂದ ಆಹಾರ ಪದಾರ್ಥಗಳ, ಮುಖ್ಯತಃ ಭತ್ತದ ಬೆಳೆಯ ನಾಗುವಳ್ಳಿಗೆ ಪ್ರೋತ್ಸಾಹ ಕೊಟ್ಟಂತಾಗಿದೆಯೆಂದೂ. ಇದರ ಸತ್ಪರಿಣಾಮವು ಕೊಳಕೆ ಬೆಳೆಯಲ್ಲಿ ತೋರಿಬರಬಹುದೆಂದೂ ಅಭಿಪ್ರಾಯ ಸೂಚಿಸಿ, ಈಗ ಏರಿರುವ ಬೆಲೆಯನ್ನು ಒಂದು ನ್ಯಾಯವಾದ ಮಟ್ಟಕ್ಕೆ ತಗ್ಗಿಸಲು ಧಾನ್ಯವಿಟ್ಟ ಉತ್ಪಾದಕರೂ ವ್ಯಾಪಾರಿಗಳೂ ಉದಾರ ಮನಸ್ಸಿನಿಂದ ಪ್ರಯತ್ನಿಸಬೇಕೆಂದು ವಿನಂತಿಸುವ ನಿರ್ಣಯವಾಯಿತು. ಕಾಂಗ್ರೆಸ್ ಸರಕಾರಗಳ ಪಾಲಿಗೆ ಪರೀಕ್ಷಾಕಾಲವಾಗಿರುವ ಈ ಕಾಲದಲ್ಲಿ ಉಡುಪಿ ತಾಲೂಕಿನ ತಹಸೀಲ್ದಾರರು ಸತ್ಕಾರಕೂಟವೊಂದರಲ್ಲಿ ಮದ್ರಾಸಿನ ಕಾಂಗ್ರೆಸ್ ಸರಕಾರದ ನೀತಿ ನೀತಿಗಳನ್ನು ಟೀಕಿಸಿದುದನ್ನು ಖಂಡಿಸುವ ಹಾಗೂ ಜನರು ಕೂಡಾ ಸಹನೆ ವಹಿಸಬೇಕಾದ ಈ ವಿಷಮಾವಧಿಯಲ್ಲಿ ಸರಕಾರದೊಂದು ಅಂಗವಾಗಿರುವ ಜವಾಬ್ದಾರಿಯುಳ್ಳ ತಹಸೀಲ್ದಾರರೇ ಸರಕಾರವನ್ನು ಟೀಕಿಸಿದರೆ ಆಗುವ ದುಷ್ಪರಿಣಾಮಗಳನ್ನು ಗಮನಿಸಿ, ತಕ್ಕ ಕಾರ್ಯ ಕೈಕೊಳ್ಳಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಧಾರವಾಯಿತು. ಸರಕಾರೀ ಅಧಿಕಾರಿಗಳು ಸಂಚಾರಕ್ಕೆ ಬಂದಲ್ಲಿ ಖಾಸಗೀ ಮನೆಯ ಅತಿಥಿಗೃಹಗಳಲ್ಲಿ ನಿಂತು ಸಂಬಂಧಪಟ್ಟವರ ವರ್ಚಸ್ಸಿನೊಳಗಾಗುವ ಅಪಾಯವಿರುವದನ್ನು ಸರಕಾರದ ಲಕ್ಷ್ಯಕ್ಕೆ ತಂದು ಅಂತಹ ಅಭಿತ್ಯವು ಸರಕಾರೀ ನೌಕರರ ಪಾಲಿಗೆ ನಿಷೇಧನೀಯವೆಂಬ ಆಜ್ಞೆ ಕೊಡಲು ಸರಕಾರವನ್ನು ಕೇಳಿಕೊಳ್ಳುವ ಮತ್ತೊಂದು ನಿರ್ಣಯವಾಯಿತು. ಬಲಿದಾನೀ ಮಹಾತ್ಮರಿಗೆ ಉಡುಪಿಯ ಯೋಗ್ಯ ಸ್ಮಾರಕವನ್ನಿಸುವಂತೆ, ಸುಶಿಕ್ಷಿತರೂ ... ನಮನೋವೃತ್ತಿಯವರೂ ಆಗಿರುವ ಇಂದಿನ ಪರ್ಯಾಯ ಮಠದ ಜನರ ... ನಿಜಾಟದ ವಿಚಾರ ವಹಿಸಿ ಸ್ವೇಚ್ಛೆಯಿಂದ ಶ್ರೀ ಕೃಷ್ಣ ದೇವಾಲಯದೊಳಗೆ ಹರಿಜನರಿಗೆ ಪ್ರವೇಶ ಕೊಡಬೇಕೆಂದು ವಿನಂತಿಸಿಕೊಳ್ಳಲಾಯಿತು.

ಕಲಾವೃಂದದಲ್ಲಿ— ಇತ್ತೀಚೆಗೆ ಡಾ| ಕೆ. ಎಲ್. ಐತಾಳರು ಕೀರ್ತಿಶೇಷ ಪಂಡಿತ ವೆಂಕಟರಮಣಾಚಾರ್ಯರ ಭಾವ ಚಿತ್ರವನ್ನು ಅನಾವರಣ ಮಾಡಿದರು. ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸ ರಾವ್ ಮತ್ತು ಬಿ. ಶ್ರೀನಿವಾಸ ಭಟ್ಟರು ಕಾಲೋಚಿತ ಮಾತುಗಳನ್ನಾಡಿದರು. ವೃಂದದ ಕಾರ್ಯದರ್ಶಿಗಳಾದ ಶ್ರೀ ಅನಂತ ಪದ್ಮನಾಭ ಉಡುಪರು ಧನ್ಯವಾದಗಳನ್ನರ್ಪಿಸಿದರು.

ಬೀಡಿ ಮಜೂರರ ಧರಣ ಮುಷ್ಕರವು ಇದೇ ತಾ ೮ನೆ ರಾತ್ರಿಯಿಂದ ಆರಂಭವಾಗಿದೆ.

ಪೀಡಿಲೇಬರ್ ಯೂನಿಯನ್ನಿನ ಮಹಾಸಭೆಯು ತಾ ೯ರಂದು ಶ್ರೀ ಪಿ. ಸೀನ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರವು ಕೊಟ್ಟ ಎವಾರ್ಡನ್ನು ಜ್ಯಾರಿಗೊಳಿಸದ ಮ್ಹಾಲಕರನ್ನು ಮುಷ್ಕರಕ್ಕೆ ಕೊಡದೆ ಬಂಧಿಸಲಾಗುವುದೆಂದಿದ್ದರೂ ಅದು ಕಾರ್ಯತಃ ನಿಂಧುವಾಗಲಿಲ್ಲವೆಂದೂ ಸರಕಾರವು ಇನ್ನಾದರೂ ಮ್ಹಾಲಕರಮೇಲೆ ನಿರ್ಬಂಧ ಹೊರಿಸಿ ಕೂಡಲೇ ಎವಾರ್ಡನ್ನು ಜ್ಯಾರಿಗೊಳಿಸುವಂತೆ ಮಾಡಬೇಕೆಂದೂ ಪ್ರಾರ್ಥಿಸಲಾಯಿತು.

ಎವಾರ್ಡಿಗೆ ಮಾನ್ಯತೆ ತಾ. ೯ರಲ್ಲು ಸ್ಥಳೀಯ ಪೋಲೀಸ್ ಅಧಿಕಾರಿಗಳ ಮಧ್ಯಸ್ಥಿಕೆಯಿಂದ ಎವಾರ್ಡಿನಲ್ಲಿ ಕೊಟ್ಟ ಬೋನಸ್ ಮತ್ತು ಮಜೂರಿಯಲ್ಲಿ ನೇಕಡಾ 90ರಷ್ಟು ಮಜೂರರಿಗೆ ಕೊಡಲು ಮ್ಹಾಲಕ ಪ್ರತಿನಿಧಿಗಳು ಒಪ್ಪಿರುವರು. 1946 ಮತ್ತು 1947ನೆ ವರುಷಗಳಿಗೆ ಸಂಬಂಧಪಟ್ಟ ಬೋನಸ್ಸು ಮತ್ತು ಜಾಸ್ತಿ ಮಜೂರಿಯನ್ನು ಇದೇ ತಾ 19ರೊಳಗಾಗಿ ಬೀಡಿ ಮಜೂರರಿಗೆ ಕೊಡಲು ಮ್ಹಾಲಕರು ಒಪ್ಪಿರುವರು. ಇದರ ಪರಿಣಾಮವಾಗಿ ಮುಷ್ಕರ ಹಿಂತೆಗೆಯಲಾಗಿದೆ.

ಆದಿಉಡುಪಿಯಲ್ಲಿ ರೈತರ ಪರಿಷತ್ತು ತಾ 7ರಲ್ಲು ಶ್ರೀ ಸಂಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಸೀನ ನಾಯಕರು ಪರಿಷತ್ತನ್ನು ತೆರೆದರು. ಹಳ್ಳಿಯ ರೈತರು ಸ್ಟೋರುಗಳಿಗೆ ರೂಪಾಯಿ 10/-ರ ದರದಲ್ಲಿ ಅಕ್ಕಿಯನ್ನು ಕೊಟ್ಟು ಈಗ ಪೇಟೆಗಳು ರೂಪಾಯಿ 12/-ರಿಂದ 15/-ರ ತನಕದ ಕ್ರಯದಲ್ಲಿ ಗೇಣಿ ಸಲ್ಲಿಸಬೇಕೆಂದು ಒತ್ತಾಯಪಡಿಸುವ ಧನಿಗಳ ಧೋರಣೆಯನ್ನು ಖಂಡಿಸುವ ಹಾಗೂ ಸರಕಾ... ಈ ಕುರಿತು ನಿಶ್ಚಿತ ಗೇಣಿಯನ್ನು ನಿರ್ಣಯಿಸುವಂತೆ ... ಳ್ಳುವ, ಗೇಣಿ ಏರಿಸುವ ಮತ್ತು ಹೊಲಗಳನ್ನು ಬಿಡಿಸುವ ದುರುದ್ದೇಶದಿಂದ ಹೂಡಿದುವ ಎಲ್ಲಾ ಕೇಸುಗಳನ್ನು ವಾಪಾಸು ತೆಗೆದುಕೊಳ್ಳಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಶಿರ್ವ ಪಂಚಾಯತ ಬೋರ್ಡ ಪ್ರೆಸಿಡೆಂಟರಿಂದ—

ಶಿರ್ವ ಪಂಚಾಯತ ಬೋರ್ಡಿನ ಬಾಬ್ತು ನಾರಸಂಕ ಮತ್ತು ದಿನಚರಿ ಮಾರ್ಕೆಟಿನಲ್ಲಿ 1-4-1948ರಿಂದ 31-3-49ರ ವರೆಗಿನ ಒಂದು ವರ್ಷದ ವಸೂಲು ಮಾಡುವ ಸ್ವತಂತ್ರವನ್ನು ತಾ. 15-3-48ನೇ ಸೋಮವಾರ ಸಾಯಂಕಾಲ ಗಂಟೆ 4ಕ್ಕೆ ಪಂಚಾಯತ ಬೋರ್ಡ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು-ಏಲಂ ಶರ್ತಗಳನ್ನು ಪಂಚಾಯತ ಬೋರ್ಡಿನ ಪ್ರಕಟಣಾ ಪತ್ರಿಕೆಯಿಂದಾಗಲೀ, ಆಫೀಸಿನಲ್ಲಾಗಲೀ ತಿಳಿಯಬಹುದು ಏಲಂ ಸಂಗ್ರಹ ಎಲ್ಲಾ ಉಮೇದ್ವಾರ ಹಾಗೂ ಸಮಸ್ತ ಜನರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

(Sd). **S. Annaya Hegde,**
President Panch. Bd. Shirva.
ಪಂ. ಬೋ. ಆಫೀಸು, ಶಿರ್ವ, 1-3-48.

CHITRAKOT ASTHMA CURE
(Registered)
Widely renowned and a most Powerful highly effective remedy for curing Asthma completely by one dose to be taken on 25-3-1948 full moonnight.
Apply at once in English:
SRI MAHATMA JOGI BABA
Ayurvedic Buti Bhandar,
P. O. CHITRAKOT, U.P.

WANTED
Young energetic, and smart candidates to represent a commercial firm with limited liability as Commercial Agents for their Branches to be opened in Several centres of every taluk of South Kanara District Persons who are able to write good English and also to furnish a cash security of Rs. 250/- need apply. Selected Candidates will be paid decent monthly salary and bonus at the end of every financial year.
Apply to—
Post Box No. 10, UDIPI S. K.



ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಭಾರದ್ವಾಜರ
ಇಂಗ್ಲಿಷ್-ಇಂಗ್ಲಿಷ್-ಕನ್ನಡ
ಡಿಕ್ಸನೆರಿ
ಉತ್ತಮ ಪ್ರತಿ ರೂ. 6—0—0
ಸಾಧಾರಣ ಪ್ರತಿ ರೂ. 4—8—0
ಅಂಚೆವೆಚ್ಚ ಪ್ರತ್ಯೇಕ
ನವಭಾರತ ಬುಕ್ ಡಿಪ್ಪೋ,
: ಉಡುಪಿ :

ದಕ್ಷಿಣ ಕನ್ನಡ.

ಮಾಂಗ್ಳೂರಲ್ಲಿ ಕೃಷಿ, ಕೈಗಾರಿಕೆಗಳ ಪ್ರದರ್ಶನ-ಮದ್ರಾಸು ಗ್ರಾಮಸುಧಾರಣಾ ಕಮಿಟಿಯು ವತಿಯಿಂದ ಏರ್ಪಡಿಸಲ್ಪಟ್ಟ ಮೂರನೆ ಕೃಷಿ, ಕೈಗಾರಿಕೆಗಳ ವಸ್ತು ಪ್ರದರ್ಶನವು ಕಳೆದ ತಾ. 27, 28, 29ರಲ್ಲಿ ಮಂಗಳೂರು ಹ. ಎಲಿಮೆಂಟರಿ ಶಾಲಾ ವಠಾರದಲ್ಲಿ ಯಶಸ್ವಿಯಾಗಿ ಜರಗಿತು. ಮಿ. ಎ. ಡಿ. ಎಚ್. ಡಿಕ್ಸನ್ ಅವರ ಅಧ್ಯಕ್ಷತೆಯಲ್ಲಿ ಅವರ ಧರ್ಮಪತ್ನಿಯವರು ಪ್ರದರ್ಶನದ ಉದ್ಘಾಟನೆಮಾಡಿದರು. ವ್ಯವಸಾಯ, ಕೃಷಿ, ಗುಡಿಕೈಗಾರಿಕೆಗಳಿಗೆ ಸಂಬಂಧಪಟ್ಟ ವಸ್ತುಗಳು ವಿಶೇಷತಃ ಪ್ರದರ್ಶಿಸಲ್ಪಟ್ಟಿದ್ದವು. ಇಲಾಖಾವತಿಯಿಂದಲೂ ವಸ್ತುಗಳು ಪ್ರದರ್ಶಿಸಲ್ಪಟ್ಟಿದ್ದವು.

ಮದ್ಯಪಾನ ನಿರೋಧ, ಹರಿಜನ ದೇವಾಲಯ ಪ್ರವೇಶ, ಸರಕಾರೀ ವ್ಯವಸಾಯಿಕ ಗಡ್ಡೆಗಳಿಗೆ ಭೇಟಿ ಇತ್ಯಾದಿ ಹಳ್ಳಿ ರೈತರಿಗೆ ಸಂಬಂಧಿಸಿದ ವಿಷಯಗಳಲ್ಲಿ ಕಮಿಟಿಯು ಕೈಕೊಂಡ ಕಾರ್ಯಕ್ರಮಗಳ ಕುರಿತು ಕಮಿಟಿಯ ಕಾರ್ಯದರ್ಶಿಯವರು ವರದಿ ಓದಿದರು. ಸ್ವತಂತ್ರ ಹಿಂದೂಸ್ಥಾನವು ಕೃಷಿ, ಕೈಗಾರಿಕೆಗಳ ಬೀಡಾಗಲು ಹಳ್ಳಿಹಳ್ಳಿಗಳಲ್ಲೂ ಅವುಗಳ ಪುನರುಜ್ಜೀವನವಾಗಬೇಕು. ಈ ಭಾಗದಲ್ಲಿ ಕಮಿಟಿಯವರು ಕೈಕೊಂಡ ಕಾರ್ಯಕ್ರಮವು ಅಭಿನಂದನೀಯವೆಂದು ಅಧ್ಯಕ್ಷರು ತನ್ನ ಭಾಷಣದಲ್ಲಿ ಹೇಳಿದರು. ಮಹಾತ್ಮಾ ಗಾಂಧಿಯವರ ಹಳ್ಳಿಜೀವನ ಹಾಗೂ ಗ್ರಾಮೋದ್ಧಾರ ತತ್ವಗಳನ್ನೆತ್ತಿ ಶ್ರೀ ಎಸ್. ಎಸ್. ಕಿಲ್ಲೆಯವರೂ, ಹರಿಜನ ದೇವಾಲಯ ಪ್ರವೇಶದ ಆವಶ್ಯಕತೆಯ ಕುರಿತು ಶ್ರೀ ಪಾಂಡುರಂಗ ಶಾನಭಾಗರೂ ಸಮಯೋಚಿತ ಮಾತುಗಳನ್ನಾಡಿದರು.

ನಮ್ಮ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರ್, ಐ. ಸಿ. ಎಸ್. ಅವರು ತಾ. 29ರಲ್ಲಿ ಪ್ರದರ್ಶನದಲ್ಲಿ ಭಾಗವಹಿಸಿ ಪೋಲೀಸರನ್ನು ಪದಕವಿತ್ತಿದ ಬಹುಮಾನಗಳನ್ನು ಹಂಚಿ ಜನತೆಯಲ್ಲಿ ಸ್ವಾವಲಂಬನವು ಅಭಿವೃದ್ಧಿಯಾಗಬೇಕಾಗಿದೆ ಎಂದು ಹೇಳಿ ಕಮಿಟಿಯ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಕನ್ನಡದಲ್ಲಿ ಭಾಷಣವಿತ್ತರು.

ಮುಂದಿನ ಪ್ರದರ್ಶನವು 1919ನೆ ಇಸವಿ ಡಿಸಂಬರ ತಿಂಗಳಲ್ಲಿ ಕಟೀಲು ಕ್ಷೇತ್ರದಲ್ಲಿ ಜರಗುವುದು.

ಪಡೂರು-ಶ್ರೀ ಅನಂತ ಪದ್ಮನಾಭ ದೇವರ ರಥೋತ್ಸವವು ತಾ. 11-3-48ರಿಂದ 18-3-48ರ ತನಕ ಜರಗಲಿರುವುದು. ತಾ. 15-3-48ಕ್ಕೆ ಶ್ರೀಮನ್ಮಹಾರಥೋತ್ಸವ.

ಕಿದಿಯೂರು-ಹಳೆ ವಿದ್ಯಾರ್ಥಿ ಸಂಘದವರು ತಾ. 22-2-49ರಲ್ಲಿ ಸಭೆಸೇರಿ 'ಜಾಮೂಜಿ ರೋವರ್ಸ್ ಟ್ರೂಪ್' ಎಂಬ ಸ್ಕೌಟು ದಳವನ್ನು ಏರ್ಪಡಿಸಿದರು.

ಉಚ್ಚಿಲ-ಇಲ್ಲಿಯ ಸುತ್ತಮುತ್ತಲಿನ ಜಾನುವಾರುಗಳನ್ನು ಹಿಡಿಯುತ್ತಿದ್ದ ಹಾಗೂ ಜನರನ್ನು ಬೆದರಿಸುತ್ತಿದ್ದ ಸುಮಾರು 7ಅಡಿ ಉದ್ದದ ಹುಲಿಯೊಂದನ್ನು ತಾ. 6-2-48ರಲ್ಲೂ, ಅಷ್ಟೇ ದೊಡ್ಡದಿದ್ದ ಮರಿ ಇದಲು ತಯಾರಾಗಿದ್ದ ಇನ್ನೊಂದು ಹುಲಿಯನ್ನು ತಾ. 4-3-48ರಲ್ಲೂ ಇಲ್ಲಿಯ ಸುಪ್ರಸಿದ್ಧ ವೈದ್ಯಶಾಲಾ ಪಂಡಿತ ಶ್ರೀ ಸಿ. ವಿ. ನಾಯರರು ಹೊಡೆದಿರುತ್ತಾರೆ.

ಬ್ರಹ್ಮಾವರ-ಇಲ್ಲಿಯ ಡಾಕ್ಟರ್ ಕೆ. ಶೇಷಗಿರಿ ನಾಗಪ್ಪನವರು ತಮ್ಮ ಮಗಳಾದ ಸೌ॥ ಲೀಲಾವತೀ ಬಾಯಿಯ ವಿವಾಹೋತ್ಸವದ ಗೌರವಾರ್ಥವಾಗಿ ಕಳೆದ ತಾ. 18ರಂದು ಇಲ್ಲಿಯ ಲೇಬರ್ ಸ್ಕೂಲಿನ ಹರಿಜನ ಬಾಲಕರಿಗೆ ಉಪಹಾರವನ್ನಿತ್ತು ಸಂತೋಷಗೊಳಿಸಿದುದು ಅನುಕರಣೀಯವಾಗಿದೆ.

ಸುಬ್ರಹ್ಮಣ್ಯ-ಇಲ್ಲಿರುವ ಶ್ರೀಮಠದ ಶ್ರೀವಿದ್ಯಾಸಿಂಧು ತೀರ್ಥ ಶ್ರೀಪಾದಂಗಳವರು ತಾ. 4-3-48ರಲ್ಲಿ ಮೈಸೂರು ನಗರದಲ್ಲಿರುವ ಶ್ರೀಮುತ್ ಮಹಾರಾಜರವರ ಸಂಸ್ಕೃತ ಕಾಲೇಜಿಗೆ ದಯಮಾಡಿಸಿ ವಿದ್ಯಾಭ್ಯಾಸ ಕ್ರಮಗಳನ್ನು ಪರಿಶೀಲಿಸಿದರು. ಅನಂತರ ನಡೆದ ಸಭೆಯಲ್ಲಿ ಸಂಸ್ಕೃತ ವಿದ್ಯಾಭ್ಯಾಸದ ಮಹತ್ವವನ್ನೂ ಪಂಡಿತರು ಸಲ್ಲಿಸುತ್ತಾ ಇರುವ ಸೇವೆಯನ್ನೂ ವಿದ್ಯಾರ್ಥಿಗಳು ಶ್ರದ್ಧಾಭಕ್ತಿಯಿಂದ ವಿದ್ಯಾಭ್ಯಾಸ ಮಾಡಬೇಕೆಂಬ ವಿಷಯಗಳನ್ನೂ ಕುರಿತು ಶ್ರೀ ಸ್ವಾಮಿಗಳು ಭಾಷಣ ಮಾಡಿ ಸಭಿಕರಿಗೆಲ್ಲ ಫಲಪುಷ್ಪ ಪ್ರಸಾದಗಳನ್ನು ದಯಪಾಲಿಸಿದರು.

ಬನ್ನಾಡಿ—ಬನ್ನಾಡಿ ಶ್ರೀ ಪರಮಹಂಸ ಸ್ಮಾರಕ ಪ್ರಾಥಮಿಕ ಶಾಲೆಯ ಸಪ್ತ ವಾರ್ಷಿಕ ವರ್ಧಂತ್ಯುತ್ಸವವು ತಾ. 29-2-1948ರಲ್ಲಿ ಶ್ರೀ ಯಡ್ತಾರೆ ಮಂಜಯ್ಯ ಶೆಟ್ಟಿ ಬಿ. ಎ. ಬಿ. ಎಲ್. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮಗಳು ಒಂದರಮೇಲೊಂದರಂತೆ ನೆರೆದ ಪ್ರೇಕ್ಷಕರ ಕಣ್ಮನಗಳನ್ನು ಸೂರೆಗೊಳ್ಳುವಂತಿದ್ದುವು. 'ಬಾ ಬಾಪೂ' ಎಂಬ ಭಾವ ಪ್ರಧಾನ ಪದ್ಯವು ಅಭಿನಯಿಸಲ್ಪಟ್ಟಾಗ ಪ್ರೇಕ್ಷಕರಲ್ಲಿ ಪ್ರತಿಯೊಬ್ಬರೂ ಕಣ್ಣೀರನ್ನು ಸುರಿಸದೇ ಇರಲಿಲ್ಲ. ನಂತರ 'ಶಾಕುಂತಲ' ಎಂಬ ಯಕ್ಷಗಾನ ನಾಟಕವು ಅತಿ ಆಕರ್ಷಣೀಯ ರೀತಿಯಲ್ಲಿ ಅಭಿನಯಿಸಲ್ಪಟ್ಟಿತು. ನೆರೆದ ಸಭಿಕರಲ್ಲಿ ಹಲವಾರು ಮಂದಿ ಈ ಸಮಾರಂಭವನ್ನು ಅತಿಯಾಗಿ ಪ್ರಶಂಸಿಸಿದುದಲ್ಲದೆ, ಸಾಸ್ತಾನ ರೆವರೆಂಡ್ ಫಾದರ್ ವಿಲಿಯಮ್ ಡಿಸೋಜರು ಈ ಸಂಸ್ಥೆಯ ಪರವಾಗಿ ಆಶೀರ್ವದಿಸಿದರು. ಇನ್ನೊಂದು ಉತ್ಕೃಷ್ಟ ಸ್ಥಿತಿಯಲ್ಲಿರುವ ಈ ಶಾಲೆಯು ಅದಷ್ಟು ತ್ವರೆಯಲ್ಲಿಯೇ ಒಂದು ಹೈಸ್ಕೂಲಾಗಿ ಪರಿಣಮಿಸಲೆಂದು ಕೂಡಾ ಹಾರೈಸಿದರು. ಕೊನೆಗೆ ಅಧ್ಯಕ್ಷರು ಈ ಸಂಸ್ಥೆಯನ್ನೂ ಹಾಗೂ ಇದರ ಚಾಲಕರಾಗಿರುವ ಶ್ರೀ ಸುಬ್ಬಣ್ಣ ಹೆಗ್ಗಡೆಯವರನ್ನೂ ಇನ್ನಿತರ ಸಹೋದ್ಯೋಗಿಗಳನ್ನೂ ಕೊಂಡಾಡಿದರು. ಇಲ್ಲಿ ಪ್ರದರ್ಶಿಸಲ್ಪಟ್ಟ ಪ್ರತಿಯೊಂದು ಚಟುವಟಿಕೆಯನ್ನು ನೋಡಿ, ಆನಂದಪಟ್ಟು, ಶಾಲಾ ಶ್ರೇಯೋಭಿವೃದ್ಧಿಯ ಕುರಿತು ಬಾಲಕರು ಇತರರ ಬೆಂಬಲದಿಂದ ಇನ್ನೂ ಮುಂದೆಯೂ ಕೆಲಸ ಮಾಡುವಂತೆಯೂ, ಮುಂದಿನ ವಿದ್ಯಾ ಸುಧಾರಣೆಯ ಕಾಲದಲ್ಲಿ ಇದೊಂದು ಗಣನೀಯವಾದ ಸ್ಥಾನವನ್ನು ಹೊಂದುವಂತೆಯೂ ಹಾರೈಸಿದರು. ನಂತರ ಶಾಲಾ ಮೆನೇಜರರಿಂದ ಧನ್ಯವಾದ ಸಮರ್ಪಿಸಲ್ಪಟ್ಟ ತರುವಾಯ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕುಂದಾಪುರ-ತಾಲೂಕು ಆಹಾರ ಸಮಿತಿಯ ಸಭೆಯು ಕಳೆದ ತಾ. 24ರಲ್ಲಿ ತಹಶಿಲ್ದಾರ್ ಶ್ರೀ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ತಾಲೂಕಿನಿಂದ ಇತರ ಕಡೆಗೆ ಒಯ್ಯುವಷ್ಟು ಅಕ್ಕಿಯಿಲ್ಲದಿರುವುದರಿಂದ ಇನ್ನು ಮುಂದೆ ಇಲ್ಲಿಂದ ಇತರ ಕಡೆಗೆ ಅಕ್ಕಿ ಸಾಗಿಸಬಾರದಾಗಿ ಜಿಲ್ಲಾ ಕಲೆಕ್ಟರರ ಅವಗಾಹನೆಗೆ ತರಲಾಯಿತು. ಶ್ರೀ ಬಿ. ಸುಬ್ಬಣ್ಣ ಶೆಟ್ಟರ ಸೂಚನೆಯಂತೆ ಕೆಲವು ಗ್ರಾಮಗಳ ಕೇಂದ್ರಗಳಲ್ಲಿ ರಿಲೀಫ್ ಡಿಪೋಗಳನ್ನು ತೆರೆಯುವದೆ ನಿರ್ಧಾರವಾಯಿತು.

ಮಡಿಕೇರಿ—ಇಲ್ಲಿಯ 'ಕೊಡಗು ಕರ್ನಾಟಕ ಸಂಘ'ದ ಆಶ್ರಯದಲ್ಲಿ ತಾ 29-2-48ರಲ್ಲಿ ಕನ್ನಡ ಸಾಹಿತ್ಯೋತ್ಸವವು ಶ್ರೀ ಸಿ. ಕೆ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಎಸ್. ಕಿಲ್ಲೆಯವರು 'ಭಾರತದ ಕರ್ಣ' ಎಂಬ ಕುರಿತೂ ಶ್ರೀ. ಎಂ. ಆರ್. ಶ್ರೀನಿವಾಸ ಮೂರ್ತಿಯವರು 'ಹರಿಹರನ ಶಿವಗಣದ ರಗಳೆಗಳು' ಎಂಬ ಕುರಿತೂ ಉಪನ್ಯಾಸಗಳನ್ನಿತ್ತರು. ತಾ. 3-3-48ರಲ್ಲಿ ಇಲ್ಲಿಯ ರಾಜಸೀಟಿನಲ್ಲಿ 'ಗಾಂಧಿಯವರ ಕೊಲೆ ಮತ್ತು ಇಂದಿನ ಭಾರತದ ರಾಜಕಾರಣ' ಎಂಬ ಕುರಿತು ಶ್ರೀ ಎಸ್. ಎಸ್. ಕಿಲ್ಲೆಯವರು ಸಾರ್ವಜನಿಕ ಭಾಷಣ ಮಾಡಿದರು.

ಮೂಲ್ಕಿ ಗ್ರಾಮಾಂತರದ ಶಿಕ್ಷಣಾಲಯದ ಆರಂಭೋತ್ಸವವು ಇತ್ತೀಚೆಗೆ ಮೂಲ್ಕಿಯಲ್ಲಿ ಶ್ರೀ ಎಮ್. ಆರ್. ಪೂಂಜರಿಂದ ನೆರವೇರಿಸಲ್ಪಟ್ಟಿತು. ಡಿವಲೆಪ್‌ಮೆಂಟ್ ಆಫೀಸರ್ ಶ್ರೀ ಕೆ. ಎಸ್. ನಾರಾಯಣ ರಾಯರು ಭಾಷಣ ಮಾಡಿದರು.

ಉಪ್ಪಿನಂಗಡಿಯಲ್ಲಿ ಹರಿಜನ ಪರಿಷತ್ತು-ಪುತ್ತೂರು ವ ಉಪ್ಪಿನಂಗಡಿ ಆಸುಪಾಸುಗಳ ಹರಿಜನರ ಪರಿಷತ್ತು ತಾ. 2ರಲ್ಲಿ ವಕೀಲ್ ಶ್ರೀ ಕೆ. ಕೃಷ್ಣ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಹಾಜಿ ಮಹಮ್ಮದ್ ಹಸನ ಸಾಹೇಬರು ರಾಷ್ಟ್ರ ಧ್ವಜಾರೋಹಣ ಮಾಡಿದರು. ಶ್ರೀಗಳಾದ ಕೆ. ತಿಮ್ಮಪ್ಪ ಶೆಟ್ಟಿ, ಕೆ. ನಾರಾಯಣ ರೈ, ಎಮ್. ಪಿ. ನಕೀಪ್ಪ, ಬಾಲಕೃಷ್ಣ ರೈ, ಕೆ. ಎಸ್. ಪಡಕಣ್ಣಾಯ ಮೊದಲಾದವರು ಸಂದರ್ಭೋಚಿತ ಭಾಷಣಮಾಡಿದರು.

ಮುಂಬಯಿ

ಲಲಿತಕಲಾ ಕರ್ನಾಟಕ ನಾಟಕ ಸಭಾ—ಇವರು, ಶ್ರೀ. ಯಂ. ನಾರಾಯಣ ರಾವ್ ಇವರಿಂದ ಬರೆಯಲ್ಪಟ್ಟ "ಕಾಲಚಕ್ರ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು ತಾ 26-3-48ನೇ ಶುಕ್ರವಾರ ಸಗಲು ಘಂಟೆ 3-30ಕ್ಕೆ ಕಲ್ಬಾದೇವಿ ರೋಡಿನಲ್ಲಿರುವ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸುವರು. ಮುಂಬಯಿ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಶ್ರೀ ರಜಕ ಸಂಘ-ಇದರ ವಾರ್ಷಿಕ ಮಹಾಸಭೆಯು ತಾ. 22-2-48ನೇ ದಿನ ಸಂಘಸ್ಥಾಪಕ ಅಧ್ಯಕ್ಷರಾದ ಶ್ರೀ. ಬಿ. ಕೃಷ್ಣನವರ ಸಭಾನೇತೃತ್ವದಲ್ಲಿ ನೆರವೇರಿತು.

ಮೊದಲು ರಾಷ್ಟ್ರಪಿತನ ಮರಣಕ್ಕಾಗಿ ದುಃಖ ಪ್ರದರ್ಶಿಸಲಾಯಿತು. ಸಂಘದ ಹಾಗೂ ಜಾತಿಯ ಶ್ರೇಯೋಭಿವೃದ್ಧಿಯನ್ನು ಬಯಸಿ ಶ್ರೀಯುತರುಗಳಾದ ಮೂಡಬಿದ್ರಿ ಸಿ. ಗೋಪಾಲ, ಕಾಳಪ್ಪ ಎ. ಸಾಲಿಯಾನ್, ನಾಗಪ್ಪ ಯಸ್. ಕುಂದರ್, ಹೂವಪ್ಪ ಕೆ. ಕುಂದರ್, ಮೂಡಬಿದ್ರಿ ಡಿ. ಈಶ್ವರ್, ನಾಗಪ್ಪ ಆರ್. ಗುಜರನ್ ಮತ್ತು ದೇವು ಯಸ್. ಸಾಲಿಯಾನ್ ಇವರುಗಳು ಸುರಸವಾದ ಭಾಷಣಗಳನ್ನಿತ್ತರು. ಅಧ್ಯಕ್ಷರು ಜಾತಿಯ ಐಕ್ಯತೆಯ ಕುರಿತಾಗಿಯೂ ಪರಸ್ಪರ ಬಂಧುಪ್ರೇಮದ ಕುರಿತಾಗಿಯೂ ಮಾತನಾಡಿರುವದಲ್ಲದೆ, ಮುಂಬಾಯಿಯಲ್ಲಿರುವ ಮತ್ತು ಇನ್ನಿತರ ಕಡೆಗಳಲ್ಲಿರುವ ರಜಕರು ತಮ್ಮ ತನುಮನಧನಗಳಿಂದ ಎರವರ ಉದ್ಧಾರಕ್ಕಾಗಿ ಸ್ಥಾಪಿಸಲ್ಪಟ್ಟ ಈ ಸಂಘಕ್ಕೆ ನೆರವಾಗಬೇಕೆಂದು ವಿನಂತಿಸಿದರು.

ಶ್ರೀಕೃಷ್ಣ ಭಜನಾ ಮಂಡಳಿಯಲ್ಲಿ—ತಾ. 26-2-48ರಲ್ಲಿ ಮಹಾಪೂಜೆಯ ಕಾರ್ಯವು ಶ್ರೀ ನಂಜಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಮಂಡಳಿಯ ಏಳಿಗೆಯ ಕುರಿತು ಆಲೋಚಿಸಲಾಯಿತು. ಶ್ರೀಗಳಾದ ಬಾಬು ಶೆಟ್ಟಿ, ಯಸ್. ಯಶ್. ಕೋಟ್ಯಾನ್ ಇವರ ಭಾಷಣಗಳೂ ಶ್ರೀ ಯಸ್. ಯಶ್. ಸುವರ್ಣರ ಸಂಗೀತವೂ ಜರಗಿತು.

ಬಾಲಕರ ಆರೋಗ್ಯಕಾರಿಯಾದಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೋ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:-

. ನವಭಾರತ ಪುಸ್ತಕ ಭಂಡಾರ, ಉಡುಪಿ,

L. N. Sharma, Mangalore,

ಮದ್ರಾಸ್ ಅಳಿಯ ಸಂತಾನ ಮಸೂದೆಯ

ಪ್ರತಿಗಳು 0-2-0 ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ 0-3-0 ಸ್ಟಾಂಪನ್ನು ಕಳಿಸಿದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.

1 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು

2 ನವಯುಗ ಪ್ರೆಸ್, ಉಡುಪಿ.



Approved firm by the Govt. of Mysore Certified by the Agent of the Govt. of Ceylone & Indian.

ಮದ್ರಾಸು ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿ, ಮತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಸಂಭಾವನೆ ಪಡೆದ ಗ್ರಂಥ

'ಮನೆಮದ್ದು'-Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಮತ್ತು ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written-Quite up-to-date-Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2-0-0.] [ಟಪ್ಪಾಲು ದ್ವಾರಾ 2-6-0.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪ್ರಕಟಣೆ

ಕಾರ್ಕಳ ತಾಲ್ಲೂ ನಂಬ್ರ 1ನೇ ಬೇಳಂಜೆ ಗ್ರಾಮದ ಶೆಟ್ಟಿ ಮನೆಯಲ್ಲಿರುವ ಮುತ್ತಕ್ಕ ಶೆಡ್ತಿಯ ಮಗಳು ನೀಲಮ್ಮ ಶೆಡ್ತಿ 1, ಈಕೆ ಮಗ ಮಹಾಬಲ ಶೆಟ್ಟಿ 1, ಕೂಡಾ 2ಜನರು ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ನಮ್ಮ ನಂ 1ನೆಯವಳ ತಾಯಿ 2ನೇ ಯವನ ಅಜ್ಜಿ ಮುತ್ತಕ್ಕ ಶೆಡ್ತಿಯೆಂಬವರು ಸುಮಾರು 80 ವರುಷಕ್ಕೆ ಮಿಕ್ಕಿದ ಮುದುಕಿಯಾಗಿದ್ದು ಮೃತರಾದ ಪಕ್ಕದ ಮೇಲೆ ನಮ್ಮ ಕುಟುಂಬದ ರೂಪಾಯಿ 75 ಶೀರ್ವೆ ತರುವ ಆಸ್ತಿಗಳ ಪಟ್ಟಾದಾರಳಾಗಿರುವದಾದರೂ ಆವರು ಕುಟುಂಬದ ಆಸ್ತಿಗಳ ವಹಿವಾಟಿನಲ್ಲಿ ಯಾವ ತರದ ಕೆಲಸ ಮಾಡಲು ಅಸಮರ್ಥರಾಗಿ ಇತ್ತಲಾಗಿ ತಲೆ ಸರಿಯಿಲ್ಲದಿರುವದರಿಂದ ಕುಟುಂಬದ ಎಲ್ಲಾ ವಹಿವಾಟುಗಳನ್ನು ನಾವು ನಡಿಸಿಕೊಂಡು ಬರುತ್ತೇವೆ. ನಮ್ಮ ಕುಟುಂಬದ ಖರ್ಚು ವೆಚ್ಚಕ್ಕೆ ಬೇಕಾದಷ್ಟು ಉತ್ಪತ್ತಿಯಿದ್ದು ಸಾಲ ವ ಸಿರಾಧೀನ ಮಾಡುವ ಯಾವ ಗರ್ಜೂ ಇಲ್ಲ. ಸದ್ರಿ ಮುದುಕಿಯು ಹಿರೇತನದ ಪಟ್ಟಿಯ ಆಧಾರದಿಂದ ನಮ್ಮ ಕುಟುಂಬಕ್ಕೆ ನಷ್ಟ ವ ಕೆಡಕು ಮಾಡುವ ವಿರೋಧೆಯಿಂದ ನಮ್ಮ ಪ್ರೇರಿತರು ಕೆಲವು ಠಿಕಾಣಿ ಮಾಡುವ ವಿರೋಧೆಯಲ್ಲಿರುವದಾಗಿ ತಿಳಿದು ಬಂದಿರುವದರಿಂದ ಯಾರೊಬ್ಬರೂ ನಮ್ಮ ಕೂಡ್ಲಿಕೆ ವಿನಹಾ ಸಿರಾಧೀನ ಠಿಕಾಣಿ ವಗೈರೆ ಮಾಡಿದ್ರೆ ಅದು ನಮ್ಮ ಪಟ್ಟು ಕುಟುಂಬದ ಮೇಲೆ ಸಿಂಧುವಾಗಲಾರದೆಂತ ಈ ಮೂಲಕ ಪ್ರಕಟಿಸುತ್ತೇವೆ.

ಮೊಕ್ಕಾಂ, ಬೇಳಂಜೆ

ತಾರೀಖು 29-2 1948

ಈ ಗೆರೆ ವ ಎಡಗ್ಗೆ ಹೆಬ್ಬೆಟ್ಟಿನ ಗುರ್ತು ನೀಲಮ್ಮ ಶೆಡ್ತಿ ರುಜು

B ಆ. ಮಹಾಬಲ ಶೆಟ್ಟಿ ರುಜು.

ಪ್ರಕಟಣೆ

ಎಲ್ಲಾ ಜನರ ಅವಗಾಹನೆ ಬಗ್ಗೆ.

ಉಡುಪಿ ತಾಲ್ಲೂ ಕಾಪು ಪಂಚ್ಯಾತ್ ಬೋರ್ಡಿಗೆ ಒಳಪಟ್ಟ ಪಕ್ಕೆಸಾರು ಮತ್ತು ದಿನವಹಿ ಮಾರ್ಕೆಟುಗಳಲ್ಲಿ 1948ನೇ ಯಿಸವಿ ಎಪ್ರಿಲ್ 1ನೇ ತಾರೀಕಿನಿಂದ 1949ನೇ ಇಸವಿ ಮಾರ್ಚ ಆಖ್ಯೆರ ವರೆಗೆ ಪ್ರತ್ಯಪ್ರತ್ಯೇಕ ವರಿ ವಸೂಲುಮಾಡುವ ಹಕ್ಕು ಮತ್ತು ಸ್ಟಾಲುಗಳ ಬಾಬ್ತು ಮೇಲೆ ನಿರ್ದೇಶಿಸಿದ ಅವಧಿಯ ವರೆಗಿನ ಅನುಭೋಗದ ಹಕ್ಕನ್ನು ಇದೇ ಬರುವ ತಾ. 20-3-48ರಲ್ಲಿ ಅಪರಾಹ್ನ ಗಂಟೆ 3ರಿಂದ ಸದ್ರಿ ಪಂಚ್ಯಾತ್‌ಬೋರ್ಡ ಆಫೀಸಿನಲ್ಲಿ ಬಹಿರಂಗವಾದ ಏಲಂ ಮೂಲಕ ಮಾರಾಟ ಮಾಡೋಣಾಗುತ್ತದೆ. ಏಲಂ ಶರ್ತಗಳನ್ನು ಪಂಚ್ಯಾತ್‌ಬೋರ್ಡಿನಲ್ಲಿ ತಗಲಿಸಿರುವ ನೋಟೀಸು ಬೋರ್ಡಿನಲ್ಲಿಯೂ, ಏಲಂ ಕಾಲದಲ್ಲಿ ಓದಿ ಹೇಳುವಾಗಲೂ ತಿಳಿಸೋಣಾಗುತ್ತದೆ.

ಕಾಪು ಮಂಜುನಾಥ ಶೆಣೈ,

ಪ್ರೆಸಿಡೆಂಟ್.

ಪಂಚ್ಯಾತ ಬೋರ್ಡ, ಕಾಪು,

5-3-48.

ವಿವಿಧ ಪಾತ್ರೆಗಳು



ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ

S. C 4/48.

ವಾದಿ ರಾಘವೇಂದ್ರ ಬುಧ್ಯ.

ಪ್ರತಿವಾದಿ- ಸಂಜೀವ ಹೆಗ್ಡೆ, ಆಸೋಡು ಸುಬ್ಬಣ್ಣ ಶೆಟ್ರ ಅಳಿಯ, ಕುಂದಾಪುರ ತಾಲ್ಲೂ ಆಸೋಡು ಗ್ರಾಮದಲ್ಲಿರುವವ

ಸದ್ರಿ ಪ್ರತಿವಾದಿ ಸಂಜೀವ ಹೆಗ್ಡೆಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ

ವಾದಿ ರಾಘವೇಂದ್ರ ಬುಧ್ಯರಿಗೆ ನೀವು 27-12-44ರಲ್ಲಿ ಬರಕೊಟ್ಟ ಡಿಮಾಂಡ ನೋಟಿನ ಅಸಲು ಬಡ್ಡಿ ಹಣಗಳನ್ನು ಒರ ಮಾಡಿಕೊಳ್ಳುವರೆ ನಿಮ್ಮ ಮೇಲೆ ಮೇಲ್ಕಾಣಿಸಿದ ದಾವೆಯನ್ನು ಜರಗಿಸಿರುತ್ತಾರೆ. ಸದ್ರಿ ದಾವೆಯು 17-3-48ಕ್ಕೆ ಮೇಲ್ಕಾಣ್ಸಿದ ಕೋರ್ಟಿನಲ್ಲಿ ತನ್ಕಿಗೆ ಇಡೋಣಾಗಿಯದೆ ಸದ್ರಿ ದಾವೆಯಲ್ಲಿ ನಿಮ್ಮ ಕಡೆಯಿಂದ ತಕ್ರೀರು ಉದಾಹರಣೆ ದಾಕಲ್ಲು ಮಾಡುವಂತಾದ್ದಿದ್ದರೆ ಆ ದಿವಸಕ್ಕೆ ನೀವು ಸದ್ರಿ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮೂಲಕ ಹಾಜರು ಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದ್ರೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ಸದ್ರಿ ದಾವೆಯು ತೀರ್ಮಾನ ಮಾಡಲ್ಪಡುತ್ತದೆ.

By order of the Court

K. Soorappa Shetty,

Advocate,

Coondapoor, 1 3 1948

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O P No. 4/1948

ತಂಗಿ ಹೆಂಗ್ಸು ತೋಮು ಹೆಂಗ್ಸಿನ ಮಗಳು, ಕಾರ್ಕಳ ತಾಲ್ಲೂ ಕಾರ್ಕಳ ಕಸಬಾ ಗ್ರಾಮದ ಸುಬ್ರಾಯ ಪಟ್ಣ ಎಂಬಲ್ಲಿರುವವಳು -ಅರ್ಜಿದಾರಳು.

ಮತ್ತು

ಜನ್ನು ಹೆಂಗ್ಸು, ಅರ್ಜಿದಾರಳು ತಂಗಿ ಹೆಂಗ್ಸಿನ ಮಗಳು ಕಾರ್ಕಳ ತಾಲ್ಲೂ ಕಾರ್ಕಳ ಕಸಬಾ ಗ್ರಾಮದ ಸುಬ್ರಾಯಪಟ್ಣ ಎಂಬಲ್ಲಿರುವವಳು. —ಎದ್ರಿಳು.

ಈ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದ್ರೆ ಅರ್ಜಿದಾರಳ ಮಗ ಅಂಜುರಾಮ ಮ್ಯೊಲಿಯೆಂಬವನು East and West Insurance Co, Ltd, Apollo St, Bombay ಇದರಲ್ಲಿ ಪೋಲಿಸಿ ನಂಬ್ರ 4102ಕ್ಕೆ ರೂಪಾಯಿ 1500-ಕ್ಕೆ ಲ್ಯಾಪ್ಸ್ ಇನ್ಶೂರ್ ಮಾಡಿದ್ದ. ಆತ ಇದೇ ಕಳೆದ ತಾರೀಕು 17-1 1948ರಲ್ಲಿ ಕಾರ್ಕಳ ಕಸಬೆಯಲ್ಲಿ ಮೃತ ಪಟ್ಟಿರುತ್ತಾನೆ. ಆ ಕಾರಣ ಸದ್ರಿ ಹ್ಯನೇಜು ಪಡಿಯುವರೆ ಹಕ್ಕುದಾರಳಾದ ಮೃತನ ತಾಯಿ ಅರ್ಜಿದಾರಳು ಮೇಲ್ಕಂಡ ಕೋರ್ಟಿನಲ್ಲಿ ತನಗೆ ಸಕ್ಸೆಸರ್ ಸರ್ಟಿಫಿಕೇಟು ಕೊಡಬೇಕಾಗಿ ದಾಕಲ್ಲು ಮಾಡಿದ ಅರ್ಜಿಯು ತಾರೀಕು 19-3 1948ಕ್ಕೆ ಇಟ್ಟಿರುವದರಿಂದ ಈ ಕುರಿತು ಆಕ್ಷೇಪಯಿರುವವರು ಸದ್ರಿ ದಿವಸ ಹಗಲು ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಹಾಜೀರು ಮಾಡತಕ್ಕದ್ದು. ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. V. Kamath,

Advocate for Petitioner.

Karkala, 2-3-48

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಲಾಡಿಸಿ ಹೊಳಪಡಿಸುವ ಹಲ್ಲುಪುಡಿ

ಒಂದು ತೊಲೆ ಕಟ್ಟ 1 0 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಪಿ. ಲಿಮಿಟೆಡ್,

ಕಾಸರಗೋಡು, ದ. ಇಂಡಿಯ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೂದಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲೆ, ಅರ್ಧಾಂಗವಾಯು ನಡುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕಟು ಗರ್ಭದಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ತಂಬಾಕು, ಬೀಡಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ.—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಸ್ಟೋರ್ಸ್. ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು, ಲವಂಗ ಯಾಲಕ್ಕಿಯ ಕಷಾಯದಲ್ಲಿ ದಿನಕ್ಕೆ 3 ಯಾ 4 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ.ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ ಫಾರ್ಮಸಿ; ಡಾ। ಕೆ. ಶೇಷಗಿರಿ ಶೈ, L I M ; ಡಾ। ವೆಂಕಟರಾವ್, ಕೊರಂಗ್ರಪಾಡಿ; ನವಭಾರತ ಬುಕ್ ಡಿಪೋ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಶೂಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ದಾನಪ್ಪ ಅಡ್ವೆಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಸ್ಟೋರ್ಸ್ ಆರ್ ಎಲ್ ಕೆರಿಬಸಪ್ಪಾ, ಕೆಮಿಸ್ಟ, ಹಾವೇರಿ ಬ್ಯಾಡಗಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya

ನವಭಾರತಕ್ಕೆ ಉತ್ತರ

ಕೆಲವು ದಿನದಿಂದೀಚೆಗೆ 'ನವಭಾರತ'ದಲ್ಲಿ ಕೆಲವು ವಿಚಿತ್ರ ಲೇಖನಗಳು ಪ್ರಕಟವಾಗುತ್ತಿವೆ. ಅವುಗಳಲ್ಲಿ ಕೆಲವು ಶ್ರೀಮಾನ್ ವಿ. ಎಸ್. ಕುಡುವರ ಸ್ವಂತ ಹೆಸರಿನಲ್ಲಿವೆ. ಮಹಾತ್ಮಾ ಗಾಂಧಿಯವರ ಕೊಲೆಗೆ ಕಾರಣವಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಹಿಂದೂ ಮಹಾಸಭೆಗಳು ಹಿಂದೂಸ್ಥಾನದ ಜನತೆಯ ಅಪ್ರೀತಿಗೆ ಒಳಗಾಗಿ ಪೂರ್ಣ ವರ್ಚಸ್ಸನ್ನು ಕಳೆದುಕೊಂಡಿರುವುದರಿಂದ ಆ ವರ್ಚಸ್ಸನ್ನು ಕೊಂಚವಾದರೂ ಉಳಿಸುವ ಉದ್ದೇಶದಿಂದ ಗಾಂಧೀಜೀಯ ತತ್ವ ಮತ್ತು ಭಾರತ ಸರಕಾರವನ್ನು ಟೀಕಿಸುವದೇ ಈ ಲೇಖನಗಳ ಉದ್ದೇಶವೆಂಬುದು ಸ್ಪಷ್ಟವಿದೆ. ತಾ. 29-2-44ರ ನವಭಾರತದಲ್ಲಿ 'ರಾಷ್ಟ್ರ ರಕ್ಷಣೆ ಮತ್ತು ಜಾತೀಯ ಸಮಸ್ಯೆ' ಎಂಬ ಲೇಖನವು ಪ್ರಕಟವಾಗಿರುತ್ತದೆ. "ಮಹಾತ್ಮಾಜಿಯವರ ಮರಣವು ಹಿಂದುವಿನಿಂದಾದುದೆಂಬುದರಿಂದ, ಆ ಸೋಲೆ ಜಾತೀಯ ಐಕ್ಯವೇ ಪ್ರತೀ ಕಾಂಗ್ರೆಸ್ ಭಾಷಣಗಳಲ್ಲಿ ಪ್ರಾಧಾನ್ಯ ಹೊಂದಿರುತ್ತದೆ" ಎಂದೂ "ಆತ್ಮ ಖಂಡನೆಯೇ, ಈ ಭಾಷಣಗಳ ಮುಖ್ಯ ಸಾರಾಂಶವಾಗಿರುತ್ತದೆ.' ಎಂದೂ 'ಕಾಂಗ್ರೆಸ್ ಧುರೀಣರು, ವಿಷಯದ ಪೂರ್ವಾಪರವನ್ನು ಸರಿಯಾಗಿ ವಿಚಾರಿಸಲು ತಯಾರಿದ್ದಂತೆ ತೋರುವುದಿಲ್ಲ'ವೆಂದೂ ಆ ಲೇಖನದಲ್ಲಿದೆ ಇದಕ್ಕೆ ಯಾವ ಆಧಾರವೂ ಇಲ್ಲ. ಇದೊಂದು ಸ್ವೇಚ್ಛಾರೋಪ ನಮ್ಮಲ್ಲಿ ನಡೆಯುತ್ತಿರುವ ಭಯಂಕರ ಜಾತೀಯ ಘಟನೆಗಳಿಗೆ ಮುಸಲ್ಮಾನರೇ ಕಾರಣರೆಂದೂ, ಮತ್ತದು ಮುಸ್ಲಿಂ ಲೀಗಿನ ಕಾರ್ಯಾಚರಣೆಯಿಂದಲೇ ಆರಂಭವಾದುದೆಂದೂ ನವಭಾರತದ ಅಭಿಪ್ರಾಯವಾಗಿದೆ. ಪಂಡಿತ ನೆಹರುಗಳು ತಾ. 24.2.48ರ ಜಲಂಧರದ ಭಾಷಣದಲ್ಲಿ "ಜಾತೀಯತೆಯನ್ನು ಪ್ರಾರಂಭಿಸಿದುದು ಮುಸ್ಲಿಂ ಲೀಗೆಂಬುದು ನಿಜ", ಎಂದಿದ್ದಾರೆ. ಹಾಗಾದರೆ ಕಾಂಗ್ರೆಸ್ ಧುರೀಣರ ಭಾಷಣಗಳಿಗೆ ಪೂರ್ವಾಪರ ವಿಚಾರವಿಲ್ಲವೆಂಬ ನವಭಾರತದ ಅಭಿಪ್ರಾಯಕ್ಕೆ ಆಧಾರವಿಲ್ಲವಷ್ಟೆ? ಮುಸ್ಲಿಂ ಲೀಗಿನ ಹಿಂಸಾತ್ಮಕವಾದ ಘೋರ ದಾಳಿಗೆ, ಬ್ರಿಟಿಷರು ಇಂಡಿಯಕ್ಕೆ ಬರುವ ಮೊದಲು ಮುಸಲ್ಮಾನರೇ ಹಿಂದೂಗಳನ್ನು ಆಳಿದವರೆಂಬ ಅಭಿಪ್ರಾಯವೇ ಕಾರಣವಂತೆ ಇದು ನಿಜವಿರಬಹುದು. ಆದರೆ ಅದಕ್ಕಿಂತಲೂ ಹೆಚ್ಚಾಗಿ ಇಂದು ಕೂಡ ಹಿಂದೂಗಳಲ್ಲಿರುವ ದುರ್ಬಲತೆಯೇ ಕಾರಣವೆಂದು ಹೇಳಬಹುದು, ನವಭಾರತವು, ಹಿಂದೂಗಳ ಈ ವರೆಗಿನ ವರ್ತನವು ದ್ವೇಷಮೂಲದಿಂದಲ್ಲ, ಅದು ಹೆದರಿಕೆಯಿಂದ ಎಂಬುದಾಗಿ ಬರೆದಿರುವುದೇ ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಸರ್ದಾರ್ ಪಟೇಲರ ಮಾತಿನ ಉದಾಹರಣೆಯಿಂದ ನವಭಾರತವೇ ಬರೆದಿರುವ ರೀತಿಯಲ್ಲಿ, ಇಂಡಿಯಾದಲ್ಲಿರುವ ಹಿಂದೂಗಳ ಸಂಖ್ಯೆಯು 30 ಕೋಟಿಯಂತೆ, ಮುಸಲ್ಮಾನರ ಸಂಖ್ಯೆ 4 ಕೋಟಿಯಂತೆ. ಪರಿಸ್ಥಿತಿಯು ಹೀಗಿದ್ದರೂ ಕೂಡಾ ಇಷ್ಟು ಸಂಖ್ಯೆಯಲ್ಲಿರುವ ಹಿಂದೂಗಳು ಸಾಮಾನ್ಯ 1/7ನೇ ಪಾಲಿನಷ್ಟು ಸಂಖ್ಯೆಯ ಮುಸ್ಲಿಮರಿಗೆ ಹೆದರುವ ಆವಶ್ಯಕತೆಯಾದರೂ ಏನಿದೆ? ಇದರ ಕಾರಣ ಮುಸ್ಲಿಮರಲ್ಲಿರುವಷ್ಟು ವಿಶಾಲ ಐಕ್ಯ ಹಿಂದೂಗಳಲ್ಲಿಲ್ಲವೆಂದು, ನವಭಾರತವೇ ಒಪ್ಪುತ್ತಿದೆ. ಇದನ್ನು ಹೋಗಲಾಡಿಸುವುದಕ್ಕಾಗಿಯೇ ಕಾಂಗ್ರೆಸ್ ಮುಖಂಡರು ಪ್ರಯತ್ನಿಸುತ್ತಿರುವುದು. ಇದರಲ್ಲಿ ಏನನ್ಯಾಯವಿದೆ? ಬಹುಸಂಖ್ಯಾಕರೆನಿಸುವ ಹಿಂದೂಗಳಲ್ಲಿ 1 ಪಾಲಿನಷ್ಟು ಅಸ್ಪೃಶ್ಯರಿದ್ದಾರೆ. ಅವರಲ್ಲಿ ಅನೇಕ ಒಳ ಪಂಗಡಗಳಿವೆ. ಪುನಃ ಮೇಲ್ತರಗತಿಯ ಹಿಂದೂಗಳೆನಿಸುವವರಲ್ಲಿ ಕೂಡಾ ಬ್ರಾಹ್ಮಣರು ಮತ್ತು ಅಬ್ರಾಹ್ಮಣರು, ಬ್ರಾಹ್ಮಣರಲ್ಲಿ ನೂರಾರು ಪಂಗಡಗಳು. ಅಬ್ರಾಹ್ಮಣರಲ್ಲಿ ಸಾವಿರಾರು ಜಾತಿಗಳು. ಈ ರೀತಿ ಲೆಕ್ಕವಿಲ್ಲದ ಜಾತಿ ಮತ್ತು ಪಂಗಡಗಳ ಭೇದ ಭಾವನೆಗಳ ಹಾಳು ಹಿಡಿತದಲ್ಲಿ ಸಿಕ್ಕು ದಿಕ್ಕುಕಾಣದ ಮತ್ತು ಬಲಹೀನವಾದ ಹಿಂದೂ ಸಮಾಜವು ತನ್ನ ಸಂಘಟನೆಯಿಂದ ಮಾತ್ರ ಸರಿಯಾದ ಶಕ್ತಿಯನ್ನು ಸಾಧಿಸಲು ಶಕ್ಯವಿದೆ. ಹಿಂದೂ ಸಮಾಜವು ಸಶಕ್ತವಾದರೆ, ಪ್ರಪಂಚದ ಯಾವ ಜನಾಂಗಕ್ಕೂ ಹೆದರುವ ಆವಶ್ಯಕತೆಯಿರದು. ಆಗ ಮುಸಲ್ಮಾನರು ಹಿಂದೂಗಳೊಡನೆ ಸ್ನೇಹವನ್ನು ತಾವಾಗಿ ಬಯಸುವರು. ಈ ತತ್ವವನ್ನು ತಿಳಿಯದೆ, ದ್ವೇಷದಿಂದಾಗಲೀ ಹೆದರಿಕೆಯಿಂದಾಗಲೀ ಮುಸ್ಲಿಮರೊಡನೆ ಹಿಂಸಾತ್ಮಕವಾದ ಹೊಡೆತಕ್ಕೆ ಮುಂದಾದರೆ ಯಾವ ಪ್ರಯೋಜನವೂ ಕಾಣದು ಆದುದರಿಂದ ಕಾಂಗ್ರೆಸ್ ಮುಖಂಡರಾಗಲೀ, ಇಂದಿನ ಇಂಡಿಯಾ ಸರಕಾರವಾಗಲೀ ಹಿಂದೂಗಳ ಸಂಘಟನೆಗಾಗಿ ತುಂಬ ಶ್ರಮಿಸಿ, ಹಿಂದೂ ಮುಸ್ಲಿಮರ ದ್ವೇಷದ ಮೂಲವನ್ನೇ ಛೇದಿಸಲು ಯತ್ನಿಸಿದರೆ ತಪ್ಪಾದೀತೇ? ಅದು ಹಿಂದೂಗಳ ವಿರುದ್ಧ ಕೈಕೊಂಡಿರುವ ಕಾರ್ಯವೆಂದೂ ಅದರಿಂದ ಹಿಂದೂಗಳು ಅದೃಷ್ಟವಾದಕ್ಕೆ (Fatalism) ಮರೆಹೊಗಲು ಕಾರಣವಾಗುವುದೆಂದೂ, ನವಭಾರತವು ಬರೆಯುವುದರಲ್ಲಿ ಏನಾದರೂ ಅರ್ಥವಿದೆಯೇ?

ನವಭಾರತವು ಮಹಾತ್ಮಾಜೀಯವರ ಹೆಸರನ್ನು ಹಿಂದೂಗಳ ವಿರೋಧಕ್ಕಾಗಿ ಪಾಕಿಸ್ಥಾನದಲ್ಲಿ ಉಪಯೋಗಿಸುತ್ತಿರುವರೆಂದು ಬರೆಯುತ್ತಿದೆ. ಇದನ್ನು ಶುದ್ಧ ತಪ್ಪೆಂದು ಹೇಳೋಣ. ಆದರೆ ಹಿಂದೂಸ್ಥಾನದಲ್ಲಿ ಹಿಂದುಗಳು ಮಹಾತ್ಮಾಜೀಯವರನ್ನು ಕೊಂದಿಕ್ಕಿದ ವಿಚಾರಮಾತ್ರ ನವಭಾರತದ ಈ ಲೇಖನಕ್ಕೆ ಎಷ್ಟು ಜಗುರಾಗಿ ಕಾಣುತ್ತಿದೆ. ಪಾಕಿಸ್ತಾನ್ ನಾಯಕರ ಭಾಷಣಗಳಲ್ಲಿ ತಮ್ಮಲ್ಲಿ ನಡೆದ ಅತಿಹೆಚ್ಚಿನ ಅತ್ಯಾಚಾರಗಳಿಗಾಗಿ ಆತ್ಮಖಂಡನೆಯಿಲ್ಲ. ಬಹವಾಲ್‌ಪುರದ ಅಮೀರರು ಹಿಂದೂಗಳಿಗೆ ಮಾಡಿದಂತೆ ಭಾರತ ಸರಕಾರವು ಮುಸಲ್ಮಾನರಿಗೆ ಮಾಡಿಲ್ಲ. ಜನಬದಲಾವಣೆಯನ್ನು ಅಕ್ಟೋಬರ್ 12ರಲ್ಲೇ ಜಿನ್ನರು ಸೂಚಿಸಿದ್ದರೂ ವಿಚಾರ ರಹಿತರಾಗಿ ಕಾಂಗ್ರೆಸ್ ನಾಯಕರು ಒಪ್ಪಲಿಲ್ಲ.' ಇತ್ಯಾದಿ ನವಭಾರತವು ಪಾಕಿಸ್ತಾನ್ ಧೋರಣೆಯೇ ಪರಮಪೂಜ್ಯವೆಂದು ವಾದಿಸಿದೆ. ಅಲ್ಲದೆ, ನಮ್ಮ ಧುರೀಣರ ವಿಚಾರಶೀಲತೆಯ ಅಭಾವದಿಂದಾಗಿ ಲಕ್ಷಗಟ್ಟಲೆ ಜನರು ಮನೆಮಾರುಗಳನ್ನು ತೊಲಗಿ ಹೊರಡಬೇಕಾಯಿತೆಂದೂ, ಲಕ್ಷಗಟ್ಟಲೆ ಮುಸಲ್ಮಾನೇತರರು ಜಾತಿ ಕೆಡಬೇಕಾಯಿತೆಂದೂ ಲಕ್ಷಗಟ್ಟಲೆ ಜನರು ಪ್ರಾಣ ಕಳಕೊಳ್ಳಬೇಕಾಯಿತೆಂದೂ ನವಭಾರತ ಬರೆಯುವಾಗ ಇದು ಕೇವಲ ಮುಸಲ್ಮಾನೇತರರಿಗೆ ಮಾತ್ರ ಆದ ಪೆಟ್ಟೆಂದು ಅಭಿಪ್ರಾಯ ಕೊಡುವಂತಿದೆ. ಆದರೆ ಎಷ್ಟೋ ಸಂಖ್ಯೆಯಿಂದ ಮುಸಲ್ಮಾನರು ಕೂಡಾ ಈ ಎಲ್ಲಾ ಅನರ್ಥಗಳಿಗೆ ಬಲಿಬಿದ್ದಿರುವರೆಂದು ಎಲ್ಲರಿಗೂ ಗೊತ್ತಿದೆ.

ಕೊನೆಯದಾಗಿ ಮೊತ್ತ ಮೊದಲು ಮುಸಲ್ಮಾನರನ್ನು ಹಿಂದೂಸ್ಥಾನಕ್ಕೆ ಬರುವಂತೆ ಮಾಡಿದ ಹಾಗೂ ಅವರಲ್ಲಿ ಸಂಬಂಧವನ್ನು ಬೆಳೆಸಿದ ಮತ್ತು ಎಷ್ಟೋ ನಿರಪರಾಧಿಗಳನ್ನು ಕೂಡ ಮುಸಲ್ಮಾನಮತಕ್ಕೆ ಸೇರುವಂತೆ ಮಾಡಿದ ಹಿಂದೂ ಸಮಾಜದ ಹಿಂದಿನವರ ಶತಾಪರಾಧಗಳಿಂದಾಗಿ ಇಂದಿನ ಹಿಂದೂ ಸಮಾಜವು ಇಷ್ಟು ಬಲಹೀನವಾಗಲು ಕಾರಣವಾಯಿತು. ಆ ಪಾಪದ ಫಲವನ್ನು ನಾಲ್ಕು ಕೈಗಳಿಂದ ನಾವು ತಿನ್ನುತ್ತಾ ಇದ್ದೇವೆ. ಆದಕ್ಕಾಗಿ ನಾವು ಮುಸಲ್ಮಾನರನ್ನು ಹೊಡೆಯುವುದಕ್ಕಿಂತಲೂ ನಮ್ಮನ್ನೇ ನಾವು ತಿಳಿದು ತಿದ್ದಿಕೊಂಡು ಸರಿದಾರಿಯಲ್ಲಿ ಮುನ್ನಡೆಯುವಂತೆ ಪ್ರೇರೇಪಿಸುತ್ತಿರುವ ಕಾಂಗ್ರೆಸ್ ಮುಖಂಡರನ್ನೂ ಯುಗನಾಯಕರಾದ ಮಹಾತ್ಮಾ ಗಾಂಧಿಯವರ ತತ್ವವನ್ನೂ ಬಹುಮುಖವಾಗಿ ನವಭಾರತವು ಖಂಡಿಸುವುದು ಅತ್ಯಂತ ವ್ಯಸನಕರ ನಮ್ಮ ಮುಂದಾಳುಗಳಲ್ಲಿ ವಿಚಾರಶೀಲತೆಯ ಅಭಾವ ಮತ್ತು ಭಾವನಾ ವಿಪರ್ಯಾಸಗಳು ತುಂಬಿರುವುದಾಗಿ ನವಭಾರತದ ಸ್ಪಷ್ಟೋಕ್ತಿಯಾಗಿದೆ. ಅದಕ್ಕಿಂತ ಜಿನ್ನಾ ಸಾಹೇಬರ ಮತ್ತು ಪಾಕಿಸ್ಥಾನದ ಧೋರಣೆಯೇ ಉತ್ತಮವಾದುದೆಂದು ಅದರ ಖಂಡಿತದ ಅಭಿಪ್ರಾಯವಾಗಿದೆ. ಆದರೆ ಪಾಕಿಸ್ಥಾನವು ತನ್ನ ಧೋರಣೆಯಿಂದಾಗಿ ಒಬ್ಬನೇ ಒಬ್ಬ ಮುಸಲ್ಮಾನನಲ್ಲದವನನ್ನು ಆಕರ್ಷಿಸಲು ಶಕ್ಯವಿಲ್ಲ. ಕಾಂಗ್ರೆಸ್ ತನ್ನ ಧೋರಣೆಯಿಂದಾಗಿ, ಹಿಂದೂಗಳನ್ನು, ಕ್ರಿಸ್ತರನ್ನು, ಸಿಖ್ಖರನ್ನು, ಪಾರಸೀಯರನ್ನು ಮತ್ತು ಅನೇಕ ಮುಸಲ್ಮಾನರನ್ನು ಕೂಡಾ ಆಕರ್ಷಿಸಿಕೊಂಡಿದೆ. ಅಲ್ಲದೆ ಮುಸಲ್ಮಾನರು ಅತ್ಯಂತ ಬಹು ಸಂಖ್ಯೆಯಲ್ಲಿರುವ ಕಾಶ್ಮೀರವು ಇಂಡಿಯನ್ ಯೂನಿಯನ್ನಿಗೆ ಸೇರುವಂತಾದುದು ಕಾಂಗ್ರೆಸ್ ಧುರೀಣತೆಯ ವಿಶಾಲ ಧೋರಣೆಯ ಪ್ರಭಾವದಿಂದಾಗಿ, ಹಿಂದೂಗಳು ಕೊಂಚವಾದರೂ ಹೆಚ್ಚು ಸಂಖ್ಯೆಯಿಂದಿರುವ ಯಾವ ಭಾಗವನ್ನೂ ಪಾಕಿಸ್ಥಾನವು ಸೇರಿಸಿಕೊಳ್ಳಲು ಸಾಧ್ಯವಾಗದು ಮೊನ್ನೆ ತಾನೆ ಮತಗಣನೆ ನಡೆದಿರುವ ಜುನಾಘಡದಲ್ಲಿ ಅಲ್ಪ ಸಂಖ್ಯೆಯ ಮುಸಲ್ಮಾನರು ಕೂಡ ಇಂಡಿಯನ್ ಯೂನಿಯನ್ನಿಗೆ ಸೇರುವುದಕ್ಕೆ ಮತ ಕೊಟ್ಟಿರುವರು. ಕಾಂಗ್ರೆಸ್ ಸಂಸ್ಥೆಯಲ್ಲಿ ದುಡಿಯುತ್ತಿರುವ ಜೈಲಿಗೆ ಹೋದ, ಪೆಟ್ಟು ತಿಂದ, ಸರ್ವವನ್ನು ಕಳೆದುಕೊಂಡ ಮತ್ತು ಗುಂಡಿಗೆ ಎದೆಯೊಡ್ಡಿ ಪ್ರಾಣ ಕಳಕೊಂಡ ಮುಸಲ್ಮಾನರು ಹಲವರಿರುವರು ಮುಸ್ಲೀಮ್ ಲೀಗಿನಲ್ಲಿ ಒಬ್ಬನೇ ಒಬ್ಬ ಮುಸಲ್ಮಾನನಲ್ಲದವನು ಇರಲು ಸಾಧ್ಯವಿಲ್ಲ. ಆದುದರಿಂದ ಮುಸ್ಲೀಮ್ ಲೀಗಿಗಿಂತ ಕಾಂಗ್ರೆಸ್ ಹೆಚ್ಚು ಜವಾಬ್ದಾರಿಯುಳ್ಳ ಮತ್ತು ವಿಶಾಲ ತತ್ವವುಳ್ಳ ಸಂಸ್ಥೆ ಎಂಬುದನ್ನು ಪ್ರಪಂಚ ಒಪ್ಪಲೇ ಬೇಕಾಗಿದೆ. ಕಾಂಗ್ರೆಸ್ ತತ್ವದಿಂದಲೇ ಹಿಂದೂ ಸಂಘಟನೆಯು ಬಲಿಷ್ಠವಾಗಿ ಬೆಳೆದು, ಆ ಮೂಲಕ ಹಿಂದೂ ಮುಸಲ್ಮಾನರ ಬಾಂಧವ್ಯವು ಕೂಡಿಬಂದು ಸಮಗ್ರ ಹಿಂದೂಸ್ಥಾನವು ಆದಷ್ಟು ಬೇಗನೆ ಒಂದಾಗಬಂದು ಹಾರೈಕೆ.

ಸೋಮವಾರಪೇಟೆ ಮಡಿಕೇರಿ } ಎನ್. ಎಸ್. ಶೆಟ್ಟಿ
1-3-48

ಬೆಲೂನ್ಸ್ ಬೆಲೂನ್ಸ್

ಬಾಳಿಕೆ ಬರುವ, ಆಕರ್ಷಕ ಹಾಗೂ ಬಣ್ಣ ಬಣ್ಣದ ಚಲೋ ಟ್ಯೂಬ್‌ಗಳೂ ಬೆಲೂನ್ಸ್‌ಗಳೂ ಮಿತ ದರದಲ್ಲಿ ಪುಷ್ಕಳ ಸಂಗ್ರಹದೊಂದಿಗೆ ದೊರೆಯುವುವು. ಕಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

ಜಯಭಾರತ ರಬ್ಬರ್ ಪ್ರೊಡಕ್ಟ್ಸ್
609, ವೇತಲ ಪೇಟೆ, ಪೂನಾ 2.

Jay Bharat Rubber Products
609, Vetal Peth, Poona 2

ಅಮೃತಾಂಜನ,
ತಲೆನೋವು, ಶೀತ, ನೆಗಡಿ, ಉಳುಕು, ಕೀಲುನೋವು, ಹಲ್ಲು ನೋವು, ಚರ್ಮ ರೋಗಗಳು, ಗಾಯಗಳು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ
REGD.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಉಡುಪಿ ಶ್ರೀ ಮಧ್ವಸಿದ್ಧಾಂತ ಪ್ರಬೋಧಿನಿ
ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ
ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ
ಗುಣಿಸಿ ಪರಿಶೋಧಿಸಲ್ಪಟ್ಟ

ಸರ್ವಧಾರಿ ಸಂವತ್ಸರದ
(1948-1949)
ನವಯುಗ ಪಂಚಾಂಗ

ಐಕ್ಯ ಪಂಚಾಂಗ ಮತ್ತು ಅಗತ್ಯವಿರುವ ಮಾಹಿತಿಗಳಿವೆ.

ಬೆಲೆ ಅಗ್ಗ 0-5-0 ಸಂಗ್ರಹ ಅಧಿಕ. ಪುಟ 56

0-6-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು

ವ್ಯಾಪಾರಿಗಳು ರಖಂ ದರಗಳಿಗೆ
ಬರೆದುಕೊಳ್ಳಬಹುದು.

ಪ್ರತಿಯೊಬ್ಬನಿಗೂ ಸಾಕಷ್ಟು
ವ್ಯವಹಾರ ಜ್ಞಾನವು ಬೇಕೇಬೇಕು.
ಅನ್ಯರ ಸಹಾಯವಿಲ್ಲದೆ ಅನುದಿನದ ವ್ಯವಹಾರವನ್ನು ತಮ್ಮಷ್ಟಕ್ಕೆ ತಾವೇ ತಿಳಿದುಕೊಳ್ಳಲಿಕ್ಕಾಗುವ **ಅತ್ಯುಪಯುಕ್ತ ಪುಸ್ತಕವೆಂದರೆ**
ಶ್ರೀ. ಯು. ಕೆ. ಗಣಪತಿನಾರಾಯಣ ಪ್ರಭುಗಳ

ವ್ಯವಹಾರಜ್ಞಾನದರ್ಪಣ

ಲೋಕವ್ಯವಹಾರ ಬೋಧನೆಯ ಇಂತಹ ಪುಸ್ತಕಗಳು ತೀರ ವಿರಳ:

ವಕೀಲ್ ಗುಮಾಸ್ತರು, ದಸ್ತಾವೇಜು ಬರೆಯುವವರು ಉಪಾಧ್ಯಾಯರು ಇವರಿಗಂತೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.
ದೊಡ್ಡಸೈಜಿನ 164 ಪುಟಗಳು ಬೆಲೆ ರೂ. 1-8-0

ರೂ 1-12-0ನ್ನು ಕಳುಹಿಸಿದರೆ ಒಂದು ಪ್ರತಿಯನ್ನು ರವಾನಿಸಲಾಗುವುದು.

ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವೀಕಾರ-ವಿಮರ್ಶೆ

ನವಯುಗ ಪಂಚಾಂಗ–ಸರ್ವಧಾರಿ ಸಂವತ್ಸರದ ಪಂಚಾಂಗ ಕರ್ತರು, ಉಡುಪಿ ಶ್ರೀ ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜಿನ ಜ್ಯೋತಿಷ ಪಂಡಿತ ಶ್ರೀ ಕೆ. ನರಹರಿ ಉಪಾಧ್ಯಾಯರು. ಪ್ರಕಾಶಕರು ನವಯುಗ ಪ್ರೆಸ್, ಉಡುಪಿ. ಬೆಲೆ ೩ ಆಣೆ. ಸಂಸ್ಕೃತ ಮಹಾ ಪಾಠಶಾಲೆಯ ಪ್ರಧಾನ ಪ್ರಾಧ್ಯಾಪಕರಿಂದ ರಚಿತವಾದ ಪಂಚಾಂಗವೆಂದ ಮೇಲೆ ಇದರ ಆರ್ಯಭಟೀ ವಾಕ್ಯಕರಣರೀತ್ಯಾ ಗುಣಿಸಲ್ಪಟ್ಟ ನಿತ್ಯ ಪಂಚಾಂಗವೂ ನವೀನ ದೃಕ್ಸಿದ್ಧಾಂತ ರೀತ್ಯಾ ಪರಿಶೋಧಿಸಿ ಬರೆಯಲ್ಪಟ್ಟ ಗ್ರಹಣ ಗ್ರಹಸ್ಫುಟಾದಿ ವಿಷಯಗಳೂ ನಿರ್ದೋಷವಾಗಿವೆ ಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಮುದ್ದಾದ ಮುದ್ರಣ, ಉತ್ತಮ ಕಾಗದ. ಸುಂದರವೂ ತಾಳಿಕೆ ಬರುವಂತಹದೂ ಆದ ರಕ್ಷಾಪತ್ರ. ಟಪ್ಪಾಲುದರಗಳು, ಸಂಬಳ ಗಣನೆ ಇವನ್ನೂ ಕೊಟ್ಟಿರುವುದರಿಂದ ಲೌಕಿಕ ವ್ಯವಹಾರಿಗಳಿಗೂ ಒಳ್ಳೆಯ ಪ್ರಯೋಜನಕಾರಿಯಾಗಿದೆ.

ಶ್ರೀ. ಮನ್ಮಧ್ವಸಿದ್ಧಾಂತ ಸಂವರ್ಧಕ ಸಭಾ–ಶ್ರೀ ಭಂಡಾರಕೇರಿ ಮಠ ಬಾರ್ಕೂರು–ಚತುರ್ಥ ವರ್ಷದ ವರದಿ–ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರು ಈ ಸಂಘದ ಮೂಲಕ ಶ್ರೀ ಮಧ್ವಮತ ಶಾಸ್ತ್ರ ಸಂಪನ್ನರಾದ ವಿದ್ವಾಂಸರಿಗೂ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಪ್ರೋತ್ಸಾಹವನ್ನೀಯುತ್ತಿರುವುದು ಪ್ರಶಂಸನೀಯವಾಗಿದೆ. ಸಭೆಯ ವೃತ್ತಾಂತವನ್ನು ಪರಿಶೀಲಿಸಿದರೆ ಇದು ವರ್ಷ ಹೋದಂತೆ ಪ್ರವರ್ಧಮಾನವಾಗುತ್ತ ಬರುತ್ತಿದೆ ಎಂದೂ ವಿಶಾಲ ಕರ್ನಾಟಕದಲ್ಲಿ ಅಧಿಕಾಧಿಕವಾಗಿ ಆದರಾಭಿಮಾನ ಪ್ರೋತ್ಸಾಹಗಳನ್ನು ಹೊಂದುತ್ತ ಬರುತ್ತಿದೆಯೆಂದೂ ವ್ಯಕ್ತವಾಗುತ್ತದೆ. ಶ್ರೀಗಳವರು ಧರ್ಮ ವಿಚಾರದಲ್ಲಿ ಘನ ವಿದ್ವಾಂಸರೂ ವಾಗ್ಮಿಗಳೂ ಶ್ರದ್ಧಾವಂತರೂ ಆಗಿದ್ದು ಧರ್ಮ ಪ್ರಚಾರ ಕಾರ್ಯದಲ್ಲಿ ಸಮಯೋಚಿತವಾದ ಪ್ರೋತ್ಸಾಹವನ್ನೀಯುತ್ತಿರುವುದು ಅಭಿನಂದನೀಯ.

ಮುಂಬೆಳಗು—೧೯ ಸಣ್ಣ ಕವಿತೆಗಳ ಸಂಗ್ರಹ–ಕವಿ– ಶ್ರೀ. ಅ. ಕ. ಸಂಕಪ್ಪ ರೈ ಪ್ರಕಾಶಕರು. ಬಾಳಿಗ ಎಂಡ್ ಸನ್ಸ್, ಮಂಗಳೂರು. ಕ್ರೌನ್ 1/16 ಆಕಾರದ 43 ಪುಟಗಳು. ಬೆಲೆ 12ಆಣೆ. 'ಮುಂಬೆಳಗು' ಎಂಬ ಇದರ ಮೊದಲ ಕವಿತೆಯ ಹೆಸರೇ ಪುಸ್ತಕಕ್ಕಿಡಲ್ಪಟ್ಟಿದೆ. ಇಂಥ ಸಣ್ಣ ಕವಿತೆಗಳನ್ನು ಬರೆಯುವ ಹುಮ್ಮಸು ಬಹಳ. ಕವನಗಳನ್ನು ಕಟ್ಟುವವರೇ ಅವನ್ನೋದಿ ಹೇಳದಿದ್ದರೆ ಅವುಗಳ ಧಾಟಿಯೂ ತಿಳಿಯದು. ಭಾವವೂ ತೋರದು, ಗದ್ಯವೋ ಪದ್ಯವೋ ಎಂಬ ಭೇದವೂ ಕಾಣದು. ಲಾಲಿತ್ಯದಲ್ಲಿ ಧ್ವನಿಯಲ್ಲಿ ಭಾವದಲ್ಲಿ ಅರ್ಥದಲ್ಲಿ ಮಾಧುರ್ಯದಲ್ಲಿ ತಕ್ಕ ಪದಗಳು ತಕ್ಕ ಸ್ಥಾನದಲ್ಲಿ ತಕ್ಕ ಕ್ರಮದಲ್ಲಿ ಸಹಜವಾಗಿ ಸಂಯೋಜಿತವಾಗಿ ಸರಾಗವಾಗಿ ವಾಹಿನಿಯಂತೆ ಹರಿಯುತ್ತ ಬಂದರೆ ಅದು ರಸವತ್ತಾದ ಕವಿತೆ. ಪ್ರಸ್ತುತ ಸಂಗ್ರಹದ 'ಮುಂಬೆಳಗು' 'ಹಾಡು' 'ಕ್ರಾಂತಿಗೀತ' 'ತುಳುನಾಡಿನೊಡತಿ' 'ಗಾಂಧಿಜಿಗೆ' 'ಸತ್ಯಧರ್ಮನಿರ್ದೇಶಿಸೆನ್ನ ಜೀವನದಿ' ಈ ಕವನಗಳಲ್ಲಿ ಮೇಲಿನ ದಿವ್ಯ ಲಕ್ಷಣಗಳು ಕಾಣುತ್ತಿರುವುದು ಅಭಿನಂದನೀಯ. ಕವಿಗಳನ್ನೇ ಕೇಳಿ ತಿಳಿದುಕೊಳ್ಳಬೇಕಾಗುವಂತಹ ಭಾವರಹಸ್ಯಗಳಾಗಲೀ ಅರ್ಥ ವಿವರಣೆಗಳಾಗಲೀ ಪದ ಪ್ರಯೋಗಗಳಾಗಲೀ ಹಾಡುವ ರೀತಿಯಾಗಲೀ ಇಲ್ಲದೆ ಸುಲಭವಾಗಿ ಸುಲಲಿತವಾಗಿ ಸರಾಗವಾಗಿ ಎಲ್ಲ ಕವಿತೆಗಳೂ ವಾಚನೀಯವಿವೆ. ಈ ತರುಣ ಕವಿಗಳು ಮುಂದೆ ಮತ್ತಷ್ಟು ಕಾವ್ಯಾಭ್ಯಾಸದಿಂದ ಲೋಕಾನುಭವದಿಂದ ಇನ್ನೂ ಚೆನ್ನಾದ ಕವಿತೆಗಳನ್ನು ಕಟ್ಟಿಯಾರೆಂದು ನಿರೀಕ್ಷೆಯಿದೆ 43 ಪುಟಗಳ ಈ ಪುಸ್ತಕದ ಬೆಲೆ ೧೨ ಆಣೆ ತುಸು ಬಿಗುವಾಯಿತೆನ್ನಬೇಕು.

—ಕೊರಡ್ಕಲ್.

ಭಾಗ್ಯೋದಯ– ಜಬ್ಬಲ್ ಪುರದಿಂದ ಹೊರಡುವ ಸಚಿತ್ರ ಹಿಂದೀ ಪಕ್ಷ ಪತ್ರಿಕೆ. ಸ್ವಾತಂತ್ರ್ಯ ವರ್ಷದಲ್ಲಿ ಮೊಲನೇ ಸಂಚಿಕೆಯೆಂದು ಬಾಪೂಜಿಯವರ ಸ್ವರ್ಗವಾಸದ 13ನೇ ದಿನ ಈ ಪತ್ರಿಕೆಯು ಹೊರಬಿದ್ದಿದೆ. ಸಂಪಾದಕರು–ಟಿ. ಕೃಷ್ಣಸ್ವಾಮಿ. ವಾರ್ಷಿಕ ಚಂದಾ 5-8-0, ಬಿಡಿ ಪ್ರತಿಗೆ 0-4-0.

ಇದರಲ್ಲಿ "ಬಾಪೂಜಿಯವರ ಸೌರಾಷ್ಟ್ರೀಯ ಘಟನೆಗಳು" "ಕಾಶ್ಮೀರ" "ತಿರುವನ್ನಾಮಲೆ" ಎಂಬ ಉತ್ತಮ ಲೇಖನಗಳೂ ಕತೆ ಕವನಗಳೂ ಇವೆ "ಭುಜಾವಲಂಬಿತ ಸೌತ್ರೀಯಯುತ" ಬಾಪೂಜೀಯವರ ಚಿತ್ರವು ಅಗ್ರ ಭಾಗದಲ್ಲಿ ಕಂಗೊಳಿಸುತ್ತದೆ.

ಈ ಪತ್ರಿಕೆಯು ಬಾಲಕರಿಗೆ ಅರ್ಥಾತ್ ಭಾಷಾಭ್ಯಾಸ ಮಾಡುತ್ತಿರುವವರಿಗೆ ಉಪಯುಕ್ತವಾದುದು. ಬಾಲಕ ಬಾಲಿಕೆಯರೂ ಸ್ತ್ರೀಯರೂ ಸುಲಭವಾಗಿ ಭಾಷಾಜ್ಞಾನವನ್ನು ಮಾಡಿಕೊಳ್ಳುವದೇ ಇದರ ಉದ್ದೇಶ. ಸುಂದರ ಕಾಗದ, ಅಂದದ ಹೊರ ನೋಟ, ಚಂದದ ಮುದ್ರಣ–ಲಲಿತ ಕೃತಿಗಳಿಂದ ಬೆಳಗುವ, ಅಗತ್ಯ ಓದಬೇಕಾದ ಪತ್ರಿಕೆಯಿದು.

—ಕೆ. ಎ. ದೇವದಾಸ.

'ಸ್ವರಾಜ್ಯ ವಿಜಯ': ರಾಜಕೀಯ ಯಕ್ಷಗಾನ ನಾಟಕ, ಪುಟ. ೫೪. ಬೆಲೆ ೦-೮-೦, ಲೇಖಕರು: ಶ್ರೀ. ಎಂ. ವಿ. ಹೆಗಡೆ ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ—ಮಹಾತ್ಮರು ರಾಗಣ ನೆಹರು ಮುಂತಾದ ಮುಖಂಡರು ಕಣ್ಣಿಗೆ ಎಣ್ಣೆ ಹಚ್ಚಿಕೊಂಡು ಕಷ್ಟ–ನಷ್ಟಗಳನ್ನು ಲೆಕ್ಕಿಸದೆ ಹಗಲಿರುಳು ದುಡಿದುದರ ಪರಿಣಾಮವಾಗಿ ಇಂದು ಹಿಂದುಸ್ತಾನದ ಬಂಧನದ ಬೇಡಿ ಬಿರಿಯಿತು. ಸ್ವರಾಜ್ಯವು ಸಿಕ್ಕಿತು, ಆದರೆ ಅದು ಎಂತು ಸಿಕ್ಕಿತು, ಹೇಗೆ ಸಿಕ್ಕಿತು? ಇದು ಬಹುಜನರಿಗೆ ಗೊತ್ತಿಲ್ಲ. ಈಗಿರುವುದು ಜನತಾ ರಾಜ್ಯ, ನಾಳೆ ಇದೇ ಜನರೇ ಆಳುವವರು, ಆದರಿಂದ ಇಂತಹ ಮಹತ್ವದ ವಿಷಯವನ್ನು ಅರಿತಿರುವುದು ಅವಶ್ಯ, ಇದನ್ನು ಮನನ ಮಾಡಿಕೊಡಲು ಲೇಖಕರು ಈ ಚಿಕ್ಕ ಹೊತ್ತಿಗೆಯಲ್ಲಿ ಯತ್ನಿಸಿದ್ದಾರೆ ಹೊತ್ತಿಗೆ ಚಿಕ್ಕದಿದ್ದರೂ ಬಹಳ ವಿಷಯಗಳನ್ನೊಳಗೊಂಡಿದೆ, ಮೂರ್ತಿ ಕಿರಿಯದಾದರೂ ಕೀರ್ತಿ ದೊಡ್ಡದು!

ಕ್ರಿಪ್ಸ್, ಪಥಿಕ್ ಮುಂತಾದವರು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನೀಯುವ ಕುರಿತು ಹಿಂದುಸ್ತಾನದ ಪರಿಸ್ಥಿತಿಯನ್ನು ಪರಿಶೀಲಿಸಲು ಬಂದರು. ಆಗ ಹಲಕೆಲವು ಸಂಸ್ಥೆಗಳ ಮುಖಂಡರು ಮಾಡಿದ ಸೂಚನೆಗಳನ್ನು ಲೇಖಕರು ಹೃದಯಂಗಮವಾಗುವಂತೆ–ಬಣ್ಣಿಸಿದ್ದಾರೆ. ಶ್ರೀ ಕೃಷ್ಣ ಪರಮಾತ್ಮನು ಕುರುರಾಯ ದುರ್ಯೋಧನನಲ್ಲಿಗೆ ದೂತನಾಗಿ ಸಂಧಾನಕ್ಕೆ ಹೋದ. ಪಾಂಡವರಿಗೆ ಅಯ್ದು ಗ್ರಾಮಗಳನ್ನಾದರೂ ಕೊಡೆಂದು ಕೇಳಿದ, ಪಾಂಡವರಾದರೂ ನಂಟು, ನಿನಗೂ, ನಮ್ಮ ಗಳಿಂದ ಕೇಳಿಕೊಂಡರು, ಆದರೆ ಹಟವಾದಿ ದುರ್ಯೋಧನನು ಹಟದ ಕಡಿವಾಣವನ್ನು ಬಿಗಿಯಾಗಿ ಹಿಡಿದು ಸಿಂಹಾಸನವನ್ನು ಬಿಟ್ಟು ಇಳಿಲಿಲ್ಲ, ತನ್ನ 'ಹಟವಾಂತನವನ್ನು ಬಿಡಲಿಲ್ಲ ಇಂತಿತ್ತು ನಮ್ಮ ಹಿಂದುಸ್ತಾನದ ಸ್ಥಿತಿ ಕೊನೆಗೊಮ್ಮೆ ಹೇಗಾದರೂ ಸರಿಯೆ, ಸ್ವರಾಜ್ಯವು ಸಿಕ್ಕಿತು!

ಹಳ್ಳಿ ಹಳ್ಳಿಗಳಲ್ಲಿಯೂ 'ದೊಡ್ಡಾಟ'ವನ್ನು ಹಳ್ಳಿಗರು ಯಕ್ಷಗಾನದಲ್ಲಿ ಆಡುತ್ತಾರೆ. ಇದರೊಳಗೆ ಮೂಡಲಪಾಯ' ವೆಂದೂ ಉಂಟು ಈ ಆಟಗಳಿಗೆ ಸುಶಿಕ್ಷಿತರು ಮೂಗು ಮುರಿಯುವುದುಂಟು. ಯಕ್ಷಗಾನಕಲೆಗೆ ಸಾಹಿತ್ಯದಲ್ಲಿ ಸ್ಥಾನ–ಮಾನಗಳಿಲ್ಲ ಯಕ್ಷಗಾನವನ್ನು ಪುರಾಣದ ಕಥೆಗಳಿಗಷ್ಟೇ ಮೀಸಲಗಿರಿಸದೆ ಅದನ್ನು ರಾಜಕೀಯರಂಗಕ್ಕೂ ತರಬೇಕೆಂದು ಲೇಖಕರ ಉದ್ದೇಶ. ಯಕ್ಷಗಾನದಲ್ಲಿ ಒಂದೆರಡು ಗ್ರಂಥಗಳಿದ್ದರೆ ಅಪರೂಪದ, ನಮ್ಮ ಲೇಖಕರು ರಾಜಕೀಯ ವಿಷಯವನ್ನೂ, ಯಕ್ಷಗಾನವನ್ನೂ ಆಳವಾಗಿ ಅಭ್ಯಸಿಸಿದ್ದಾರೆ. ಇವರ ಸಾಹಸವು ಸ್ತುತ್ಯ. ನಾಟಕವನ್ನೋದುವಾಗ ಎಲ್ಲಿಯೂ ಬೇಸರ ಬರುವುದಿಲ್ಲ, ಮತ್ತೆ ಮತ್ತೆ ಓದಲು ಮನಸ್ಸಾಗುತ್ತದೆ. ಲೇಖಕರು ಇಂತ ಹೊತ್ತಗೆಗಳನ್ನು ಇನ್ನೂ ಜನತೆಯ ಮುಂದಿಡುವರೆಂದು ಆಶಿಸುತ್ತೇನೆ. ಮೇಲ್ನೋಟಕ್ಕೆ ಆಕರ್ಷಕವಿದ್ದ ಸಂದರ್ಭವನ್ನು ಸೂಚಿಸುತ್ತದೆ. 'ಸ್ವರಾಜ್ಯ ವಿಜಯ'ವು ಪ್ರತಿಯೊಬ್ಬ ಸುಶಿಕ್ಷಿತನ ಕೈಯೊಳಗಿರಲೇ ಬೇಕಾದ ಪುಸ್ತಕ.

ಕಿರಿಯರ ಪ್ರಪಂಚ, ಉಡುಪಿಯವರು ಇಂತಹ ಹೊತ್ತಿಗೆಗಳನ್ನೇ ಪ್ರಕಟಮಾಡುತ್ತಾ ಬಂದಿದ್ದಾರೆ. ಅವರೀ ಸಾಹಸವು ಸ್ತುತ್ಯ ಇಂತಹ ಸಂಸ್ಥೆಗೆ ಜನತೆ ಸಹಾಯಮಾಡಿ ಸೇವೆ ಮಾಡಿಸಿಕೊಳ್ಳಲಿ.

—ವಿದ್ವಾನ್ ಹೊಸಮನಿ ಗುಡ್ಡಪ್ಪ

ರೇಶನ್ ಕಾರ್ಡುಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಳ ಬಿನ್ನನ ಬಾಟ್ಲಿಗಳು ಹೆಚ್ಚು ಕಡಿಮೆ ಅವಧಿವಸಗಳಿಗೆ ಬರುವವು, ಅಂದರ ಕೇವಲ ಳ ರೂಪಾಯಿಗಳಿಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು-ಡಾ| ಬಿ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ–ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ– ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging,
KATAPADI, S. K.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ...ವೃದ್ಧಿಯನು ಉಂಟುಮಾಡುವುದು.



...ದ ಬೆಳ್ಳಿ, 5—8—0; ½ ಪೌಂಡು ರೂ. 3—0—0.

ಹಿತ್ತಾಳೆ, ಕಂಚು. ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ದಖಂ ಆಗಿ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಂಜೆ ವ್ಯಾಸಾಚಾರ್ಯ,

ಔಷಧಿಗಳು ದೊರೆಯುತ್ತವೆ.

...ಗ್ಯ ಎಂಡ್ ಸನ್ಸ್, —

...ಬೀದಿ ನಂಬ್ರ, 10 ಮಂಗಳೂರು.

...ಕ್ಯಾಲೆ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಂತಾದ

ಏಜಂಟರು:—ನವಭಾರತ ಬುಕ್ ಡಿಪೋ, ...ರ್ಸ್, ಕೆಮಿಸ್ಟ್ 183, ಸುಬ್ರಾಯಬಾಗ್ ದಿ ... ಕುರುಗಡೆ, ಪರೇಲ್,(3)ಜನರಲ್ ಸ್ಟೋ

ಎರಡಾಣೆ

Regd. No. M. 3613

18-3-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ.
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೨೮

NAVAYUGA WEEKLY, UDIPI.
FOUNDER: Hon'ble Mr. A. B SHETTY, Health Minister. Govt. of Madras.

Vol. 28
No. 28

ದ. ಕ. ಜಿಲ್ಲೆಯ ಜನತೆ ಈ ಕಡೆಗೆ ಕಣ್ಣಿಡಲಿ—

ಮಹಾತ್ಮಾಜೀಯ ಕೊಲೆಯ ನಂತರವೂ, ರಾಷ್ಟ್ರದ ಪ್ರತಿಯೊಂದು ಕಡೆಯವರೂ ತಂತಮ್ಮಲ್ಲಿಯ ವಾತಾವರಣವನ್ನು ಸೂಕ್ಷ್ಮವಾಗಿ ಶೋಧಿಸಿ ನೋಡಿಕೊಂಡು, 'ಬಾಪೂ ಕೊಲೆ'ಗೆ ಹೇತುವಾದ ವಿಷವಾವ ರೂಪದಲ್ಲಿದೆಯೋ ಅದೆಲ್ಲವನ್ನೂ ನಿಶ್ಶೇಷವಾಗಿ ನಿರ್ಮೂಲಿಸಿಕೊಳ್ಳದಿದ್ದರೆ ಆತ್ಮಹತ್ಯೆಮಾಡಿಕೊಂಡಂತಾಗುವುದು-ಗಾಂಧೀ ದ್ರೋಹಿಗಳಾದಂತಾಗುವುದು!

ಮಹಾತ್ಮರ ಕೊಲೆಗೂ ಮಿಕ್ಕಿದ ಒಂದು ರಾಕ್ಷಸೀ ಕೃತ್ಯವು ಬೇರೊಂದಿರಲಾರದು. ಗಾಂಧಿಜೀಯ ತತ್ವ, ಧೋರಣೆ, ಕಾರ್ಯಕ್ರಮಗಳಲ್ಲಿ ಭಿನ್ನಾಭಿಪ್ರಾಯ ಪಡುವವರಿರಬಹುದು, ಅವೆಲ್ಲಕ್ಕೂ ಪ್ರಾಣಾವಧಿ ವಿರೋಧಕಟ್ಟಿಕೊಂಡವರಿರಬಹುದು; ಆ ಸ್ವಾತಂತ್ರ್ಯವು ಪ್ರತಿಯೊಬ್ಬನಿಗೂ ಇದೆ. ಮಹಾತ್ಮರು ಆತ್ಮಬಲದಿಂದಾಳಿದ್ದರು—ಅಧಿಕಾರ ಬಲದಿಂದಲ್ಲ. ಅವರು "ಪ್ರೇಮ ಸಾಮ್ರಾಟ"ನಾಗಿದ್ದರು—'ಶಕ್ತಿ ಸಾಮ್ರಾಟ'ನಾಗಿರಲಿಲ್ಲ. ಆದ್ದರಿಂದ ಅವರ 'ರಾಜ್ಯ'ದಲ್ಲಿ ಅವರ ತತ್ವ, ಧೋರಣೆ, ಕಾರ್ಯಕ್ರಮಗಳನ್ನು ವಿರೋಧಿಸಲಿಚ್ಛಿಸುವವರಿಗೆ ಆ ಸ್ವಾತಂತ್ರ್ಯ ಸಂಪೂರ್ಣವಿತ್ತು; ಪ್ರಪಂಚದ ಬೇರಾವುದೇ ನಾಯಕತ್ವದ ಪ್ರತಿಭಟನೆಗಿರುವ ಯಾವ ತಡೆಯೂ ಗಾಂಧಿ ನಾಯಕತ್ವವನ್ನು ವಿರೋಧಿಸುವವರಿಗಿರಲಿಲ್ಲ. ಆದರೆ ಅದನ್ನು ಸಕಾರಣವಾಗಿ ವಿರೋಧಿಸಿ ಗೆಲ್ಲಲಿಕ್ಕಾರಿಂದಲೂ ಆಗಲಿಲ್ಲ. ಬದಲಿಗೆ ಈ ವೈರಿಗಳು ಗಾಂಧಿಜೀಯನ್ನೇ ಕೊಲೆ ಮಾಡಿಬಿಟ್ಟರು. ಅಂದ ಮೇಲೆ ಈ ವಿರೋಧಿಗಳ ದರ್ಜೆಯೆಂತಹದಿರಬೇಕು!

ಬ್ರಿಟಿಷ್ ಸಾಮ್ರಾಜ್ಯದ ನಂಬ್ರ 1ನೇ ವೈರಿಯಾಗಿದ್ದರು ಗಾಂಧಿಜೀ— ಆದರೆ ಗಾಂಧಿಜೀಯ ಪ್ರಾಣವನ್ನು ದ್ವೇಷಿಸುವ ಮಾತಂತಿರಲಿ, ಅದು ತಮ್ಮ ಸ್ವಾಧೀನದಲ್ಲಿರುವಾಗ ಎಲ್ಲಿಯಾದರೂ ಅಪಾಯ ತಟ್ಟೀತೋ ಎಂಬ ಹೆದರಿಕೆಯೊಂದು ಸದಾಕಾಲ ಬ್ರಿಟಿಷ್ ಸರಕಾರದ ಕರುಳಿಗಂಟಿಕೊಂಡಿದ್ದಿತು; ಅಂತಹ ಪ್ರತಿಯೊಂದು ಸಂದರ್ಭದಲ್ಲೂ ಅದು ಗಾಂಧಿಜೀಯನ್ನು ಬಿಡುಗಡೆಮಾಡುತ್ತಿದ್ದಿತು; ಸರ್ವ ವಿಧದ ಆರೈಕೆ ಅನುಕೂಲತೆಗಳನ್ನೀಯುತ್ತಿದ್ದಿತು. ತಮ್ಮ ನಂಬ್ರ 1ನೇ ವೈರಿಯೆಂದು ಮುಸ್ಲಿಂ ಲೀಗ್ ಮೊನ್ನೆಯವರೆಗೂ ಗಾಂಧಿಜೀಯನ್ನು ಭಾವಿಸಿದ್ದಿತು; ಆದರೆ ನವಖಾಲಿಯಂತಹ ಮುಸ್ಲಿಂ ಜಾತೀಯ ಕೇಂದ್ರಕ್ಷೇತ್ರದಲ್ಲಿ ಮಹಾತ್ಮರು ಬರಿಗಾಲಿನಿಂದ ಸಂಚರಿಸಹತ್ತಿದೊಡನೆಯೇ ಅವರ ಹಾದಿಯುದ್ದರ ಉರಿಯನ್ನಾದರೂ ಮುಸ್ಲಿಮರು ನಂದಿಸಿಕೊಂಡು ಈ ಸಂತನ ಸವಾರಿಯನ್ನು ಸುಗಮಗೊಳಿಸಿದ್ದರು. ಮುಸ್ಲಿಮರ ಸಭೆಯಲ್ಲಿ ಮುಸ್ಲಿಂ ಅತ್ಯಾಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದಾಗ ಗಾಂಧಿಜೀಯವರ ಕಡೆಗೆ ಓಡು ಕಟ್ಟಿಗೆ, ಉರಿದುಬಿದ್ದ ಮುಸ್ಲಿಮರೆಷ್ಟೋ ಇದ್ದರಾದರೂ ಮಹಾತ್ಮನ ಮೈಮೇಲೆ ಕೈಮಾಡುವಷ್ಟು ಕ್ರೂರತೆ ಅಥವಾ ಎದೆಗಾರಿಕೆ ಯಾರಲ್ಲೂ ಇರಲಿಲ್ಲ; ಅದಿದ್ದುದು 'ಹಿಂದೂವಾದಿ'ಗಳಲ್ಲಿ! ಇಡೀ ಪ್ರಪಂಚದಲ್ಲಿ ಇಂತಹ ನಂಜು ವಿಷವಿರುವುದು ಈ ಹಿಂದೂ ದುರಭಿಮಾನಿಗಳ ಹೃದಯ ಮೂಲೆಯಲ್ಲಿ ಮಾತ್ರ! ಪ್ರಪಂಚದ ಪರಮಾವಧಿ ಹೇಡಿತನ, ತುತ್ತ ತುದಿಯ [illegible], ಕೊನೆಯ ಗಡಿಯ ಅಲ್ಪಬುದ್ಧಿ, ಇವು ಮೂರೂ ಒಂದೆಡೆ ಜಮೆಯಾಗಿರುವುದಿದ್ದರೆ ಅದು ಈ ಹಿಂದೂ ಜಾತೀಯ ದುರಭಿಮಾನಿಗಳಲ್ಲಿ ಮಾತ್ರ!

ಗಾಂಧಿಜೀಯ ಮಹಾತ್ಮೆಯ ಮಾತು ಹಾಗಿರಲಿ; ವಿಶ್ವಬಾಂಧವ್ಯ ಘೋಷಣೆಯ ಅವರ ಪ್ರಸಾದಿತ್ವ ಒತ್ತಟ್ಟಿಗಿರಲಿ—ಪಾಪಿಲಿಗೆ ಸೇರಿದ ಕೊಲೆಯನ್ನೇ ತನ್ನ ವೃತ್ತಿಯಾಗಿ ಮಾಡಿಕೊಂಡ ಒಬ್ಬ ಕೊಲೆಗಾರನಿಗಾದರೂ, ಎಷ್ಟೆಂದರೂ ಮುದುಕನೊಬ್ಬನಿಗೆ, ಮಾತಾಡುವಾಗ ಮುಷ್ಟಿ ಜಡಿಯುವಷ್ಟು ಕೂಡಾ ಸ್ನಾಯು ಪ್ರೇರಣೆಯಿರದ ಲೌಕಿಕ ಸನ್ಯಾಸಿಗೆ, ಗುಂಡಿಡಲು ಮನಸ್ಸಾದೀತೆ? ಅಷ್ಟೇಕೆ ಮನುಷ್ಯರಕ್ತದ ಸವಿಯುಂಡು, ಆ ಮೇಲೆ ಮನುಷ್ಯರನ್ನು ಮಾತ್ರ ತಿನ್ನುವ ಸ್ವಭಾವ ಬಲಿತ ನರಭಕ್ಷಕ ವ್ಯಾಘ್ರವೊಂದು ಗಾಂಧಿಜೀಯ ಮೇಲೆ—ಮನುಷ್ಯ ರಕ್ತದೆಲ್ಲಾ ವಾಸನೆಗಳನ್ನೂ ಕಳಕೊಂಡಿದ್ದ ಈ ದೈವಿಕ ಮನುಷ್ಯನ ಮೇಲೆ—ನೆಗೆಯುತ್ತಿದ್ದಿತೆ? ಆದರೂ ಹಿಂದೂ ಜಾತ್ಯಭಿಮಾನಿ ಅವರ ಮೇಲೆ ನೆಗೆದ. ಈ "ಹಿಂದುತ್ವ" ಗಾಂಧಿಜೀಯನ್ನು ಹೇದು ತಿಂದಿತು! ಇನ್ನೂ ಇಂತಹ ಜಾತ್ಯಭಿಮಾನ, ಸಂಕುಚಿತ ಬುದ್ಧಿ, ಕ್ರೂರತೆಗಳ ಕಡೆಗೆ ದಾಕ್ಷಿಣ್ಯವೆ? ಕೂಡದು; ಅವುಗಳೆಲ್ಲೆಲ್ಲಿವೆಯೋ ಎಲ್ಲವನ್ನೂ ಶೋಧಿಸಿ ತೆಗೆದು ನಿರ್ಮೂಲಿಸುವುದರಲ್ಲಿ ಯಾರೂ ಸಂಕೋಚ ಪಡಕೂಡದು. ಏನೇ ಬರಲಿ— ಈ ಕಳಂಕವಾವ ರೂಪದಲ್ಲಿದ್ದರೂ ಪೂರ್ತಿ ನಿವಾರಿಸಿಯೇ ಸಿದ್ಧವೆಂದು ಆಯಾಯಾ ಭಾಗದ ಮಟ್ಟಿಗೆ ಆ ಆ ಕಡೆಯ ಜನತೆ ಭೀಷ್ಮ-ಪ್ರತಿಜ್ಞೆ ತೊಡಬೇಕು.

ದಕ್ಷಿಣ ಕನ್ನಡದ ಜನರು ಇದೇ ದೃಷ್ಟಿಯಿಂದ ದ. ಕ. ಜಿಲ್ಲೆಯ ವಾತಾವರಣವನ್ನು ಆಳದ ವರೆಗೂ ಆಲೋಚಿಸಿ ನೋಡಿ ಮೇಲಿನ ಪ್ರತಿಜ್ಞೆಯನ್ನು ಜ್ಯಾರಿ ಮಾಡಬೇಕು.

ದ. ಕ. ಜಿಲ್ಲೆಯ ವಿದ್ಯಮಾನಗಳ ಹಿಂಗಡೆಯಲ್ಲಿ ಎಂತಹ ಕರಾಳ ವಿಷ ಹುದುಗಿಕೊಂಡಿದೆ ಎಂಬ ಕಡೆಗೆ ಅಗತ್ಯ ಲಕ್ಷ್ಯವಿರಲಿ. ಒಂದೇ ಮಾತಿನಲ್ಲಿ ಹೇಳುವುದಾದರೆ— ಗಾಂಧಿಜೀಗೆ ಗುಂಡಿಡುವ ತನ್ನ ಗುರಿ ಸಾಧನೆಗಾಗಿ ಸುತ್ತಮುತ್ತಲಿನವರನ್ನು ವಂಚಿಸುವದಕ್ಕಾಗಿಯೇ ಪ್ರಣಾಮ ಮಾಡುವವನಂತೆ ತೋರಿಸಿಕೊಂಡ ಗೋಡ್ಸೆಯಂತೆಯೇ ಇದೆ—ಅಷ್ಟೇ ವಂಚನೆಯದಿದೆ ಇಲ್ಲಿಯ ವಾತಾವರಣ! ಜಾಗ್ರತೆಯಿರಲಿ.

ಆರ್. ಯಸ್. ಯಸ್. ಮತ್ತು ಹಿಂದೂ ಮಹಾಸಭೆಯ ಮುಖ್ಯ ಕೇಂದ್ರಗಳಲ್ಲೊಂದಾಗಿತ್ತು ನಮ್ಮೀ ಜಿಲ್ಲೆ. ಇಡೀ ರಾಷ್ಟ್ರದಲ್ಲಿ ಆರ್. ಯಸ್. ಯಸ್. ಸಂಖ್ಯೆ ಮತ್ತು ಪ್ರಭಾವ ಹೆಚ್ಚಾಗಿದ್ದ ಭಾಗಗಳ ಪೈಕಿ ದಕ್ಷಿಣ ಕನ್ನಡವೂ ಒಂದು. ಇಂತಹ ಕೀರ್ತಿ (?) ಈ ಜಿಲ್ಲೆಗೆ ಕಾಂಗ್ರೆಸ್ ಕೆಲಸದ ಮಟ್ಟಿಗಾಗಲೀ ಬೇರಾವ ಕಾರ್ಯದಲ್ಲಾಗಲೀ ದೊರೆತಿಲ್ಲ. ಅದರಲ್ಲೂ ಒಂದು ವಿಶೇಷವಿರುವುದು ಎಲ್ಲರ ಲಕ್ಷ್ಯವಲ್ಲಿರಬೇಕು. ಗಾಂಧಿಜೀಯ ಮತ್ತು ಕಾಂಗ್ರೆಸ್ಸಿನ ಮೇಲಿನ ದ್ವೇಷಾಸೂಯೆಗಳಲ್ಲಿ ರಾಷ್ಟ್ರದ ಮುಖ್ಯ ಭಾಗಗಳ ಆರ್. ಯಸ್. ಯಸ್. ಮತ್ತು ಹಿಂದೂ ಮಹಾಸಭೆಯವರಿಗಿಂತ, ಮರಾಠರೆಷ್ಟೋ ಮುಂದಿದ್ದಾರೆ; ತುಲನಾತ್ಮಕವಾಗಿ ಮಿಕ್ಕ ಕಡೆಗಳವರಿಗಿಂತ ಮಹಾರಾಷ್ಟ್ರೀಯ 'ಹಿಂದೂವಾದಿ'ಗಳ ಸಂಕುಚಿತ ಜಾತೀಯ ಬುದ್ಧಿಯು ಅತ್ಯಂತ ಕಠೋರವಾದುದು. ಈ ಮಟ್ಟಿಗೆ ಮರಾಠರಿಗೆರಡನೆಯವರೇ ದಕ್ಷಿಣ ಕನ್ನಡದ 'ಹಿಂದೂವಾದಿ'ಗಳು! ಇದಕ್ಕೆ ಕಾರಣವೇನು?

ಈ ಕಾಲದಲ್ಲಿದು ಮರೆಮಾಡುವ ವಿಷಯವಿದಲ್ಲವಾದ್ದರಿಂದ ವಸ್ತುಸ್ಥಿತಿಯನ್ನು ಇದ್ದಂತೆ ಅರಿತುಕೊಳ್ಳಲೇ ಬೇಕು. ಹಿಂದೂ— ಮುಸ್ಲಿಂ ಗಲಭೆಯು ಸಾಮೂಹಿಕ ಸ್ವರೂಪ ಹೊಂದುವ ಕಾಲಕ್ಕೆ ಮೊದಲೇ ಮರಾಠೀ ಹಿಂದೂವಾದಿಗಳು ಮಹಾತ್ಮಾ ಗಾಂಧಿಯನ್ನು 'ದುರಾತ್ಮಾ ಗಾಂಧಿ'ಯೆಂದೇ ಸಂಬೋಧಿಸಿಕೊಂಡಿದ್ದರು; ಭಾವಿಸಿಕೊಂಡಿದ್ದರು; ಅತ್ಯುಗ್ರವಾಗಿ ದ್ವೇಷಿಸುತ್ತಾ ಬಂದಿದ್ದರು. ಪ್ರಾಯಶಃ ಛತ್ರಪತಿ ಶಿವಾಜಿಯ ವ್ಯಾಘ್ರನಖದ ಸ್ಫೂರ್ತಿಯನ್ನೇ ವಂಶಪಾರಂಪರ್ಯವಾಗಿ ಇಳಿಸಿಕೊಂಡು ಬಂದ ಮಹಾರಾಷ್ಟ್ರೀಯರ ಈ ಕಾಲಕ್ಕೊಗ್ಗದ ಆ ದುಸ್ಫೂರ್ತಿಯ ಜತೆಗೆ

ವಿಮೆ ಮಾಡಲಿಕ್ಕೆ ಯೋಗ್ಯ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ,

ಪ್ರಧಾನ ಕಾರ್ಯಾಲಯ:-ಧಾರವಾಡ.

THE UNITED KARNATAK INSURANCE COMPANY, LIMITED

ಭಾರತ ನಾಯಕತ್ವವು ತಮ್ಮವರಾದ ಲೋಕಮಾನ್ಯ ತಿಲಕರ ನಂತರ ಗಾಂಧಿಜೀಯ ಕೈಗೆ ಹೋದ ಮೇಲಂತೂ ಗಾಂಧಿಜೀಯ ಮೇಲಿನ ಮತ್ಸರವೂ ಸೇರಿಕೊಂಡಿರಬೇಕು. ಆರ್. ಯಸ್. ಯಸ್.ನ ನಿರ್ಮಾಣ ಮತ್ತು ಕೇಂದ್ರ ಹಾಗೂ ಹಿಂದೂ ಮಹಾಸಭೆಯ ಮೂಲಸ್ಥಾನ ಮಹಾರಾಷ್ಟ್ರದಲ್ಲೇ. ಹೀಗಾಗಿ ಈ ಮರಾಠರ ಸ್ವಭಾವ ಸಂಪ್ರದಾಯ, ಗುಣನಡತೆಗಳಿಗೆ ಸಮೀಪವರ್ತಿಗಳಾದ ದಕ್ಷಿಣ ಕನ್ನಡದ ಕೆಲವು ಜನರು, ಜಾತೀಯ ನಂಜು ವಿಷದ ಮಟ್ಟಿಗೆ ಮರಾಠರ ಹಿಂಬಾಲಕರು ... ಸಹಜವಿದೆ.

ಮತ್ತೊಂದು ಮುಖ್ಯ ಕಾರಣವೂ ಮರೆಯುವಂತಹದಲ್ಲ. ಆರ್. ಯಸ್. ಯಸ್. ಮತ್ತು ಮಹಾಸಭೆಗಳಂತಹ ಪರಧರ್ಮೀಯ ದ್ವೇಷನಿರ್ಮಾಪಕ ಸಂಸ್ಥೆಗಳ ಹಿನ್ನಲೆಯಲ್ಲಿ ಬಂಡವಾಳಶಾಹಿಗಳೂ ಲಾಭಕೋರರೂ ಇದ್ದಾರೆಂಬುದು ಸರ್ವಶ್ರುತ ಸಂಗತಿ. ಜಾತೀಯ ದ್ವೇಷ ಜಗಳಗಳನ್ನು ನಿರ್ಮಿಸಿ, ಜನತೆಯ ಹಾಗೂ ಸರಕಾರದ ಸರ್ವ ಲಕ್ಷ್ಯವನ್ನೂ ಆ ಕಡೆಗೆ ತಿರುಗಿಸಿ ಬಿಟ್ಟರೆ, ಜನಸಾಮಾನ್ಯರನ್ನು ವಿವಿಧ ರೀತಿಯಿಂದ ಸುಲಿಯುವ ತಮ್ಮಾಟಗಳನ್ನು ನಿರಾತಂಕವಾಗಿ ಸಾಗಿಸಬಹುದೆಂಬುದೇ ಇಲ್ಲಿರುವ ಮುಖ್ಯೋದ್ದೇಶ. ಆರ್. ಯಸ್. ಯಸ್. ನಂತಹ ದಳಗಳಿಗೆ ಜನಧನ ಬೆಂಬಲ ಕೊಡುತ್ತಿದ್ದವರಾರು, ಇಂದು ಕೂಡಾ ಅಪ್ರತ್ಯಕ್ಷವಾಗಿಯೂ ದರೂ ತ್ರಿಕರಣಪೂರ್ವಕವಾಗಿ ಅವುಗಳನ್ನು ಸಮರ್ಥಿಸುತ್ತಿರುವವರಾರು, ಎಂಬುದಕ್ಕೆ ನಿದರ್ಶನವಾಗಿ ದ. ಕ. ಜಿಲ್ಲೆಯೊಂದನ್ನೇ ನೋಡಿದರೆ ಸಾಕು!

ಇಲ್ಲವಾದರೆ ಉತ್ತರ ಭಾರತದಂತಹ ಹಿಂದೂ-ಮುಸ್ಲಿಂ ದ್ವೇಷರಂಗದಲ್ಲಿ ಆರ್. ಯಸ್. ಯಸ್. ಪ್ರಾಮುಖ್ಯತೆ ಪಡೆದುದರಲ್ಲಿ ಅನ್ಯಾಯವಿದ್ದರೂ ಒಂದು ಅರ್ಥವಿದೆ. ಆದರೆ ದಕ್ಷಿಣ ಕನ್ನಡದಲ್ಲಿ ಈ ರೋಗವು ಇಷ್ಟು ಪ್ರಬಲವಾಗಿ ವ್ಯಾಪಿಸಿಕೊಂಡುದು ಯಾರ ಹಿತಕ್ಕಾಗಿ? ಇಲ್ಲಿ ಈ ವರೆಗೆ ಹಿಂದೂ-ಮುಸ್ಲಿಂ ಭೇದಕ್ಕಿಂತಲೂ ಹಿಂದುಗಳೊಳ ಜಾತಿಗಳೊಳಗಿನ ಭೇದ ಮತ್ತು ದ್ವೇಷಾಸೂಯೆಗಳೇ ಹೆಚ್ಚೆಂಬುದು ಸತ್ಯಸ್ಥಿತಿಯಲ್ಲವೆ? ಅಂದ ಮೇಲೆ ಇಲ್ಲಿಯ ಆರ್. ಯಸ್. ಯಸ್. ಮನೋವೃತ್ತಿಯ ಧಾಳಿಯು ಮುಸ್ಲಿಮರು ಅಥವಾ ಪರಧರ್ಮೀಯರ ಮೇಲೆಂಬ ನಂಬಿಕೆಯು ದುರ್ಭರವೊಂದು ಭ್ರಮೆಯಲ್ಲವೇ? ಅಥವಾ ಹಾಗೆಂದೇ ಭಾವಿಸಿಕೊಂಡರೂ ಹಿಂದೂ-ಮುಸ್ಲಿಂ ಭೇದವೇನೂ ತೋರಿಬಾರದ ಈ ಜಿಲ್ಲೆಯಲ್ಲೂ ಅದನ್ನು ನಿರ್ಮಿಸಿ ಮುಂದೂಡಿಕೊಳಿಸುವ ಈ ಮನೋವೃತ್ತಿಯನ್ನು ಉಳಿಸಬಹುದೇ?

'ಹಿಂದೂತ್ವ ಮತ್ತು ಹಿಂದು'ಗಳ ರಕ್ಷಣೆಯ ಹೊದಿಕೆಯೊಳಗಡೆ ತಮ್ಮ ಸಂಕುಚಿತ ಜಾತೀಯತಾ ಹೃದಯವನ್ನಿಟ್ಟುಕೊಂಡು-ಜನತೆಯನ್ನು ವಂಚಿಸಿ, ಕಳ್ಳಸಂತೆಯಿಂದ ಗಳಿಸಿದ ಧನದ ಹಾಗೂ ಪ್ರದರ್ಶನರಂಗಕ್ಕೆ ಸ್ಪರ್ಧಿಯೊಂದರಲ್ಲೂ ಮುಂದಿರುವ ಜನದ ಬಲದಿಂದ ಆರ್. ಯಸ್. ಯಸ್. ಜಾಡ್ಯವನ್ನು ಹಳ್ಳಿಮೂಲೆಗಳಿಗೂ ಹಬ್ಬಿಸಿಯಾಯಿತು. ಇದೇ ಮನೋವೃತ್ತಿಯು ಇನ್ನೊಂದು ಕವಲನ್ನು ಆರ್ಥಿಕ, ರಾಜಕೀಯ, ಶಿಕ್ಷಣ ಮತ್ತು ಸರ್ವ ಸಾರ್ವಜನಿಕ ರಂಗಗಳಲ್ಲೂ ಹರಿಯಬಿಟ್ಟು ದ. ಕ. ಜಿಲ್ಲೆಯ ಜನಜೀವನವನ್ನೇ ತಮ್ಮ ಗುರಿಯತ್ತ ಕೊಚ್ಚಿಕೊಂಡೊಯ್ಯುವ ಸಾಹಸ ನಡೆಸುತ್ತಿದೆ. ಜನತೆಯೀ ವಂಚನೆಗಳ ಕಡೆಗೆ ಕಣ್ತೆರೆದು ನೋಡಬೇಕು; ಈ ಪ್ರವಾಹದಲ್ಲಿ ತಮ್ಮ ಕಾಲ್ತಪ್ಪಿ ಹೋಗದಂತೆ ದೃಢವಾಗಿ ನಿಲ್ಲಬೇಕು.

ದ. ಕ. ಜಿಲ್ಲೆಯ ಜನಜೀವನವನ್ನಾವರಿಸುತ್ತಾ ಬರುತ್ತಿರುವ ಕರಿಛಾಯೆಯೊಂದರ ಕಡೆಗೆ ನಾವು ಚೆಲ್ಲಿರುವ ಈ ಪ್ರಕಾಶವು- ನಮ್ಮೀ ವಾದವು-ಕೆಲವರನ್ನು ಕೆರಳಿಸಬಹುದು. ತಮ್ಮ ಮುಸುಕನ್ನೆಳೆದು ನಿಜರೂಪ ಬಯಲಾಗುವಂತೆ ಮಾಡಿದ ನಾವೇ ಜಾತೀಯತಾಕುರೂಪಿಗಳೆಂದೂ ಅಂಥವರು ನಮ್ಮನ್ನು ಅಣಕಿಸಬಹುದು. ಆದರೆ ನಮ್ಮ ಜಿಲ್ಲೆಯ ಸಾರ್ವಜನಿಕ ಜೀವನದಲ್ಲಿ ಈ ಕಂಟಕಗಳು ಸೇರಿಕೊಂಡು ಬೆಳೆಯುವಾಸ್ಪದ ದೊರಕುದೇ ಸಾರ್ವಜನಿಕಕೆಲಸಗಾರರಲ್ಲಿರುವದಾಕ್ಷಿಣ್ಯ ಮತ್ತು ಅಳುಕು ಮನೋವೃತ್ತಿಯಿಂದೆಂಬುದನ್ನು ಮರೆಯಲಾಗುವದಿಲ್ಲ. ಯಾರೇ ಯಾವ ನೆವವನ್ನು ಮುಂದಿಟ್ಟು ಎಂತಹ ಆರೋಪಹೊರಿಸಿದರೂ ಈ ಕಾಲದಲ್ಲಿ ವಸ್ತುಸ್ಥಿತಿಯನ್ನು ಇದ್ದಂತೆ ಚಿತ್ರಿಸಲೇ ಬೇಕು; ವಾತಾವರಣವನ್ನು ಸಾಧ್ಯವಿದ್ದಷ್ಟು ಶುದ್ಧೀಕರಿಸಲೇ ಬೇಕು; ಇಲ್ಲವಾದರೆ ಕರ್ತವ್ಯ ಭ್ರಷ್ಟರಾದ ಹಾಗೂ ಗಾಂಧೀದ್ರೋಹಸಾಧಿಸಿದ ಪಾಪವಿದೆಯಾದ್ದರಿಂದ ಜಾಗ್ರತೀ ಸೂಚನೆ ಕೊಡುವುದು ಅನಿವಾರ್ಯವಾಯಿತು.

ಮೇಲಾಗಿ ದಕ್ಷಿಣಕನ್ನಡಿಗರು ಇದೀಗ ಬೇರಾಗಿ ಬಂದಿರುವ 'ಸ್ವಾರ್ಥಸಾಧಕ ಜಾತೀಯತೆ'ಯಲ್ಲಿ ಚಾಣಕ್ಯ ಚಾತುರ್ಯ, ಕಕುನೀತಂತ್ರ, ಕೃತಕ ಸೌಜನ್ಯ, ಕಪಟ ಸೌಹಾರ್ದತೆ ತುಂಬಿಕೊಂಡಿರುವುದರಿಂದ ಸಾರ್ವಜನಿಕರಲ್ಲಿ ವಿಶೇಷರೀತಿಯ ಸೂಕ್ಷ್ಮದೃಷ್ಟಿ, ದೂರದರ್ಶಿತ, ಮತ್ತು ದೃಢ ಧೋರಣೆಯಿರಬೇಕಾಗಿದೆ- ಮಿಕ್ಕ ಕಡೆಗಳಂತೆ ಇಲ್ಲಿ ಪ್ರತ್ಯಕ್ಷವಾಗಿ ಖಾಡಾ ಖಾಡಿ ರೀತಿಯಿಂದ ಅದು ಧಾಳಿಗೆ ಎದ್ದಿಲ್ಲ. "ಗೋಡ್ಸೆ ಪ್ರಕಾಮ"ದ ಮಾದರಿಯ ನಟನೆ, ವಂಚನೆ ಮಾಡಿ ಸುಲಭದಲ್ಲೇ ಅದು ಗುರಿಮುಟ್ಟುವುದರಲ್ಲಿದೆ. ಅಪಾಯವೀರೂಪದಲ್ಲಿರುವುದರಿಂದಲೇ ಸಕಾಲದಲ್ಲಿ ಜಾಗ್ರತರಾಗಬೇಕು; ಸರಿಯಾಗಿ ವಿಚಾರಿಸಿ ನೋಡಿಕೊಳ್ಳಬೇಕು; ಎಂದು ಮತ್ತೂಮತ್ತೂ ಎಚ್ಚರಿಸಬೇಕಾಗಿದೆ.

ಸರಕಾರದ ಬಹಿಷ್ಕಾರ ಮತ್ತು ಶಿಕ್ಷೆಗೂ ಜನತೆಯ ಸಿಟ್ಟಿಗೂ ಹೆದರಿ ಆರ್. ಯಸ್. ಯಸ್. ಹಾಗೂ ಮಹಾಸಭಾ ಮಂಕರು ಸದ್ಯಕ್ಕೊಮ್ಮೆ ತಲೆ ಮರೆಯಿಸಿಕೊಂಡಿರುವರಾದರೂ ಅವರು ತಮ್ಮ ಬುದ್ಧಿ ತಿದ್ದಿಕೊಂಡಿಲ್ಲವೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳೀಗಲೂ ದೊರೆಯುತ್ತಿವೆ. ಮಾತ್ರವಲ್ಲ, ಈ ಸಂಕುಚಿತ ಜಾತೀಯ ಭಾವನೆಯ ಅಧಿಕಾರಲಾಲಸಿ ಧನಿಕರು ರಾಜಕೀಯ, ಆರ್ಥಿಕ, ಸಾಮಾಜಿಕ, ಶಿಕ್ಷಣ, ಇತ್ಯಾದಿ ಪ್ರತಿಯೊಂದು ಸಾರ್ವಜನಿಕ ರಂಗದೊಳಗೂ ಬೇರೆ ಬೇರೆ ಕೃತಕ ವೇಷಗಳಿಂದ ನುಗ್ಗಹತ್ತಿದ್ದಾರೆ. ಕಾಲ, ಸಂದರ್ಭ, ಕ್ಷೇತ್ರೋಚಿತವಾಗಿ ರೂಪ ಬದಲಾಯಿಸಿಕೊಂಡು ಬರುವ ಗೋಡ್ಸೇ ಮನೋವೃತ್ತಿಯಿದು-ಅದ್ದರಿಂದಲೇ ಮುಚ್ಚುಮರೆಯಿಡದೆ ಈ ಜಾಗ್ರತಿ ಕೊಡಬೇಕಾಯಿತು.

ಈ ಲೇಖನವು ಯಾವುದೊಂದು ಜಾತಿಯ ಕಡೆಗೂ ಕೈತೋರಿಸುತ್ತಿಲ್ಲವೆಂಬುದನ್ನು ಎಲ್ಲರೂ ದಯವಿಟ್ಟು ತಿಳಿದಿರಬೇಕು. ಒಂದು ಅಪಾಯವನ್ನು- ಜನತೆಗೆ ಹಾನಿಕರವಾದ ಒಂದು ಮನೋವೃತ್ತಿಯನ್ನು -ಮಾತ್ರ ಇಲ್ಲಿ ತೋರಿಸಿಕೊಡಲಾಗಿದೆ. ಈ ವಿಷಮ ಮನೋವೃತ್ತಿ ಯಾರಲ್ಲಿರುವುದೋ ಅವರು ತಮ್ಮವರಲ್ಲವೆಂದಲ್ಲರೂ ತಿಳಿದುಕೊಂಡರಾಯಿತು. ಜಾತೀಯತೆಗೆ ಸ್ವಚ್ಛ ಸಾರ್ವಜನಿಕ ಜೀವನದಲ್ಲಿಲ್ಲ-ಸ್ವಾರ್ಥಪೂರಿತ, ಸಂಕುಚಿತ ಮೆದುಳಲ್ಲಿ ಮಾತ್ರ ಸ್ಥಾನವಿದೆ. ನಾವಿಲ್ಲಿ ಖಂಡಿಸಿರುವ ಜಾತೀಯ ವಿಷವನ್ನು ಸ್ವತಃ ಅದರ ರೂಪ ಮತ್ತು ವಾಸನೆಯ ಮೇಲಿಂದಲೇ ಗೊತ್ತುಹಚ್ಚಬೇಕಲ್ಲದೆ, ಒಂದು ಜಾತಿಯನ್ನು ಮಾನವಾಗಿ ಮಾಡಿ ಎಂದೂ ಅಳೆಯಕೂಡದೆಂದು ವಿಜ್ಞಾಪಿಸಿಕೊಳ್ಳುತ್ತೇವೆ 'ನಿರ್ದೋಷಿ ಜಾತಿ'- 'ಸದೋಷಿಜಾತಿ'ಯೆಂದು ಯಾರನ್ನೂ ವಿಂಗಡಿಸಲಾಗುವದಿಲ್ಲ.

ಕೊನೆಯದಾಗಿ ಪುನಃ ಸ್ಪಷ್ಟಮಾತು-ಜನಜೀವನದ ಸ್ವಚ್ಛತೆಗಪಾಯವಾಗಿರುವ ಒಂದು ಮನೋವೃತ್ತಿಯ ಖಂಡನೆಯಿದು; ಒಂದು ಜಾತಿಯ ಖಂಡನೆಯಲ್ಲವೇ ಅಲ್ಲ. ಈ ಮನೋವೃತ್ತಿಯು ತಮ್ಮದೇ ಎಂದು ನೆನಸಿಕೊಳ್ಳುವ ವರ್ಗವೊಂದಿದ್ದರೆ ಅದಕ್ಕೆ ನಾವು ಹೊಣೆಯಲ್ಲ--ಆ ವರ್ಗವು ಎಷ್ಟೇ ದೊಡ್ಡದಿದ್ದರೂ, ಮಿಕ್ಕ ರೀತಿನೀತಿಗಳಲ್ಲೆಷ್ಟೇ ಉತ್ತಮದ್ದಿದ್ದರೂ ಖಂಡನೀಯವಿದೆ-ಅದನ್ನೆದಿರಿಸಿ ಸದೆಬಡಿಯಲೇ ಬೇಕಾಗಿದೆ.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3 28 Crores**

Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.

Bombay Life Building,

Central Office, Udipi

Branches at:

Mangalore, Calicut, Trivandrum, Madura, Madras, Bangalore & Bombay,

The Vijaya Bank Limited.

All our good wishes for a happy and prosperous new year.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¼% per annum.

For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಪುಳಿನಾಪುರ ಮಹಾತ್ಮ್ಯೆ

ಕನ್ನಡ ವಚನ ಗ್ರಂಥ ಅಚ್ಚಿನಲ್ಲಿದೆ.

ಮೊದಲನೇ ಭಾಗದಲ್ಲಿ ದೇವಿ ಭಾಗವತಾಂತರ್ಗತ ಸುರಥ ವೈಶ್ಯರು ಮೃಣ್ಮಯಗಳಿಂದ ಪ್ರತಿಷ್ಠೆಮಾಡಿದ ದೇವಿ ಲೋಕದ ವಿಸ್ತಾರವಾದ ಸ್ಥಳ ಪುರಾಣವೂ-ಎರಡನೇ ಭಾಗದಲ್ಲಿ ... ಕಟೀಲು, ಸುಬ್ರಮಣ್ಯ ಮೊದಲಾದ ದೇವಿ ಅಂಶಗಳನ್ನೊಳಗೊಂಡ ಪೊಳಲಿಪುರ ಸ್ಥಳ ಮಹಿಮೆಯೂ — ಮೂರನೇ ಭಾಗದಲ್ಲಿ ಅಶೋಕ ಚಕ್ರವರ್ತಿಯ ಕಾಲದಾರಭ್ಯ ಶಿಲಾಶಾಸನ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟ ತಾಮ್ರಶಾಸನ ಇತ್ಯಾದಿ ಆಧಾರಗಳಿಂದ ಬರೆದ ಚರಿತ್ರಾಸಾರವೂ ಇದೆ.

ಆಸ್ತಿಕರಾದ ದೇವಿಭಕ್ತರು ಮುಂದಾಗಿ ತಿಳಿಸಿದವರಿಗೆ ರೂ. ೧ ೮ ೦

೩ ಭಾಗಗಳ ಪುಸ್ತಕಕ್ಕೆ ಬೆಲೆ ರೂ. ೨-೪-೦

ಎಸ್. ಎ. ಶೀನಪ್ಪ ಹೆಗ್ಡೆ,

ಅಮುಣಂಜೆ ಗುತ್ತು, ಪೊಳಲಿ,

Post ಬೆಳ್ವೂರು, ದ. ಕ.

ಎಲ್ಲತರದ

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್, ಉಡುಪಿ.

ಮದುವೆ ಕಾಗದಗಳನ್ನು ಅಲ್ಪಾವಧಿಯಲ್ಲೇ ಮಾಡಿ ಕೊಡಲಾಗುವುದು.

★ ಇನ್ನೊಂದು ಯುದ್ಧ?--ಇದರ ಅರ್ಥವೇನು? ★

(ಬ್ರಿಟನಿನ ಪ್ರೊಫೆಸರ್. ಜೆ. ಬಿ. ಯಸ್. ಹಾಲ್ಡೇನ್, ಎಫ್. ಆರ್. ಎಸ್. ಇವರಿಂದ)

ಮಿ. ಅಟ್ಲೆ, ಮಿ. ಬೆವಿನ್ ಮಾತ್ರವಲ್ಲ, ಅಮೂಲಾಗ್ರ ಶಾಂತತಾವಾದಿಯಾಗಿ ರಾಜಕೀಯವನ್ನು ಪ್ರವೇಶಿಸಿದ್ದ ಮಿ. ಬೆವಿನರು ಕೂಡಾ ಈಗ ಮಿ. ಚರ್ಚಿಲ್ಲರಿಗೆ ತೃಪ್ತಿಯಾಗುವಂತೆ ಇನ್ನೊಂದು ಯುದ್ಧದ ವಿಷಯವಾಗಿಯೇ ಮಾತಾಡಹತ್ತಿದ್ದಾರೆ. ಸಾಮಾನ್ಯ ಸ್ತ್ರೀಪುರುಷರ ಪಾಲಿಗೆ ಈ ಯುದ್ಧವೆಂತಹದಾಗುವದೆಂಬುದನ್ನು ನಾವೊಂದಿಷ್ಟು ಯೋಚಿಸೋಣ. ನಮ್ಮ ಮಂತ್ರಿಗಳೀಗ ಮಾತಾಡುತ್ತಿರುವ ಆ ಯುದ್ಧವೆಂದರೆ ಬ್ರಿಟನು ಅಮೇರಿಕದ ಪಕ್ಷ ಹಿಡಿದು ಸೋವಿಯೆಟ್ ಯೂನಿಯನ್‌ನೊಂದಿಗೆ ನಡೆಸುವ ಯುದ್ಧ- ನಾವು ಸೋವಿಯೆಟ್ ರಶ್ಯದೊಡನೊಂದು ಸ್ನೇಹ ಕರಾರಿಗೆ ಸಹಿ ಮಾಡಿರುವೆವಾದರೂ ಸಂಗತಿ ಹೀಗೆ. ಈ ಉದ್ದೇಶಕ್ಕಾಗಿ ಅಮೇರಿಕದವರಿಗೆ ಯುರೋಪಿನಲ್ಲೊಂದು ನಿಲ್ದಾಣ ಬೇಕು; ಬ್ರಿಟನು ಅಂತಹ ಒಂದು ಚಲೋ ನಿಲ್ದಾಣವಾಗಬಲ್ಲುದು-ಅದು ಅವರಿಗಾಗಿ.

ಇಂಗ್ಲಾಂಡಿನ ಸ್ಥಾನ

ಅಮೇರಿಕದ ಪತ್ರಿಕಾವಾಲರಂತೂ ಇಂಗ್ಲಾಂಡು ಅದರ 'ವಿಮಾನ ವಾಹಕ' ಎಂಬರ್ಥದಲ್ಲಿ ಇಷ್ಟರಲ್ಲೇ ಮಾತನಾಡಹತ್ತಿದ್ದಾರೆ. ಆಗ ಅಟೋಮಿಕ್ ಸ್ಫೋಟಕ ಹಾಗೂ ರೋಗಾಣುಗಳನ್ನು ತುಂಬಿಸಿದ ಆಕಾಶಬಾಣಗಳನ್ನು (rockets) ಹಾರಿಸುವ ನಿಲ್ದಾಣವಾಗಿಯೂ ಇದನ್ನು ಉಪಯೋಗಿಸಲಾಗುವುದೆಂಬುದು ನಿಸ್ಸಂದೇಹ. ಇದು ಇಂತಹ ನಿಲ್ದಾಣವಾಗುತ್ತದಾದರೆ ಜರ್ಮನರು 1940ರಿಂದ 45ರ ವರೆಗೆ ಮಾಡಿದಂತೆ ಯುರೋಪಿನ ರಾಷ್ಟ್ರಗಳು ಇದರ ಮೇಲೆ ಬೋಂಬು ಹಾಕಲಿವೆಯೆಂಬುದೂ ನಿಸ್ಸಂಶಯವೇ ಮತ್ತಾ ರಾಷ್ಟ್ರಗಳಲ್ಲಿ ಅಟಂ ಬೋಂಬೇನಾದರೂ ಇರುವ ಪಕ್ಷದಲ್ಲಿ ಕೆಲವು ಬೋಂಬುಗಳು ಬ್ರಿಟನ್ನಿನ ಮೇಲೊಗೆಯಲ್ಪಡುವುದೂ ಖಂಡಿತವೇ. ಪ್ರತ್ಯಕ್ಷ ಸೋವಿಯೆಟ್ ರಶ್ಯದೊಡನೆ ಯಾವ ಅಟಂ ಬೋಂಬೂ ಇಲ್ಲದಿರುವುದು ಹೆಚ್ಚಿನಂಶ ಸತ್ಯವಿರಬಹುದು. ಕೆಲವು ಬೋಂಬುಗಳನ್ನು ತಯಾರಿಸುವಷ್ಟು "ಪ್ಲುಟೋನಿಯಮ್" ಮತ್ತು "ಗ್ರೇನಿಯಮ್" ಸ್ಫೋಟಕ ಕೂಡಾ ಅವರಲ್ಲಿರಬಹುದೆಂಬ ಕುರಿತು ನನಗೇನೂ ಅನುಮಾನವಿಲ್ಲ. ಆದರೆ ಅಟಂ ಶಕ್ತಿಯನ್ನು ಉದ್ಯೋಗ ಸುಧಾರಣೆಗೆ ಉಪಯೋಗಿಸಿದಲ್ಲಿ ನಷ್ಟಕ್ಕೊಳಗಾಗುವಂಥ, ಎಣ್ಣೆ ಮತ್ತು ಇದ್ದಲುಗಳಲ್ಲಿ ಸಂಪ್ರದಾಯ ಬದ್ಧ ವಿಶೇಷ ಹಕ್ಕು ಬಾಧ್ಯತೆಗಳನ್ನು ಪಡೆದಿರುವ ಮಿಲಿಯಾಧೀಶರು ರಶ್ಯದಲ್ಲಿಲ್ಲವಾದ್ದರಿಂದ ಅಲ್ಲಿಯವರು ಬಹುಶಃ ಆ ಅಟಂ ಶಕ್ತಿಯನ್ನು ಔದ್ಯೋಗೀಕರಣಕ್ಕೆಳಸುವುದು ಹೇಗೆಂಬ ಶೋಧನೆಯನ್ನೇ ನಡೆಸುತ್ತಿರಬೇಕು. ಅಂತೂ ಇದು ವರೆಗವರಲ್ಲಿ ಯಾವ ಅಟಂ ಬೋಂಬೂ ಇಲ್ಲವಾಗಿದ್ದರೆ, ಇನ್ನು ಕೆಲವೇ ವರುಷಗಳಲ್ಲಿ ಅವುಗಳನ್ನು ಮಾಡಲಾಗುವ ಸಾಮಾಗ್ರಿಗಳು ಅವರಲ್ಲಿವೆಯೆಂಬುದೇನೋ ಖಂಡಿತ.

ಅಟಂ ಬೋಂಬಿನ ಪರಿಣಾಮ

ಕಳೆದ ಯುದ್ಧದ ಮೊದಲು ಸಾಮಾನ್ಯ ಬೋಂಬುಗಳ ಕುರಿತು ಪತ್ರಿಕಾವಾಲರು ಮಾಡಿದ್ದ ವರ್ಣನೆಗಳಂತೆಯೇ ಈಗ ವಿಜ್ಞಾನಿಗಳು ಅಟಂ ಬೋಂಬಿನಿಂದಾಗುವ ಅನಾಹುತಗಳ ಅತಿವರ್ಣನೆಗಳಿಂದ ತಮ್ಮ ರಕ್ತವನ್ನು ಹೆಪ್ಪುಗಟ್ಟಿಸುತಿದ್ದಾರೆಂದು ಕೆಲವರು ಭಾವಿಸಿಕೊಂಡಿದ್ದಾರೆ. ನಾನಿಲ್ಲಿ ಒಂದು ಸಂಗತಿಯನ್ನು ನೆನಪಿಗೆ ತರುತ್ತೇನೆ. 1938ರಲ್ಲಿ ಪ್ರಕಟವಾದ ನನ್ನ 'ಎ. ಆರ್. ಪಿ.' ಎಂಬ ಪುಸ್ತಕದಲ್ಲಿ "ಲುಫ್ಟ್‌ವಾಫ್ (ನಾಜೀ ವಿಮಾನಪಡೆ)ನ ಪೂರ್ಣ ರೂಪೀ ಧಾಳಿಯು 50000ದಿಂದ 100000ದ ವರೆಗಿನ ಲಂಡನ್ ಜನರನ್ನು ಕೊಲ್ಲಬಹುದು" ಎಂದು ಲೆಕ್ಕ ಹಾಕಿ ತೋರಿಸಿದ್ದೆ. ಸತ್ಯಕ್ಕೂ ಇಂಗ್ಲಾಂಡಿನಲ್ಲೀ ಮೂಲಕ ಕೊಲ್ಲಲ್ಪಟ್ಟ ಒಟ್ಟು ನಾಗರಿಕರ ಸಂಖ್ಯೆಯು ಇವೆರಡು ಅಂಕೆಗಳ ನಡುವೆಯೇ ಇದೆ. ಅಂತೆಯೇ ಅಟಂ ಬೋಂಬಿನ ಒಂದು ಯುದ್ಧದಲ್ಲಿ ಎರಡು ಮಿಲಿಯ ಮಂದಿ ಮಾತ್ರ ಸತ್ತು ಅದಕ್ಕಿಂತ ಎಷ್ಟೋ ಅಧಿಕ ಸಂಖ್ಯೆಯವರು ತೀವ್ರ ಜಖಮುಗೊಳಗಾಗುವಂತಾದರೆ, ಅಷ್ಟಾಗುವುದೇ ನಮ್ಮ ಪಾಲಿನ ಭಾಗ್ಯವೆಂದು ನನ್ನ ಯೋಚನೆಯಿದೆ. ಮತ್ತು ಅಂತಹ ಒಂದು ಬೋಂಬು ಯಾವ ಸ್ಥಳದಲ್ಲಿ ಸಿಡಿಯುತ್ತದೋ ಆ ಕ್ಷೇತ್ರದಲ್ಲಿ ಮುಂದಿನ ಹಲವು ರಕಮಾಸಗಳ ವರೆಗೂ ಮನುಷ್ಯರು ವಾಸಿಸುವುದು ಅಸಾಧ್ಯವಾಗುವದು. ಅಮೇರಿಕದ ಸೇನಾನಿ ಮಂಡಳಿಯು ಬೋಂಬು ಹಾಗೂ ಆಕಾಶಬಾಣಗಳ ಎಸೆತಕ್ಕಾಗಿ ತಮ್ಮ ರಾಷ್ಟ್ರದ ಹೊರಗಡೆಯಲ್ಲಿ ವಿಶಾಲ ನಿಲ್ದಾಣವನ್ನಪೇಕ್ಷಿಸಲು ಮತ್ತೊಂದು ಕಾರಣವೂ ಇದೆ. ರೋಕೆಟ್‌ಗಳು ಗುರಿತಪ್ಪಿ ಸಿಡಿಯುವ-ಹಾರಿಸಿಬಿಟ್ಟ ನಿಲ್ದಾಣದ ಸಮೀಪದಲ್ಲೇ ಸ್ಫೋಟಗೊಳ್ಳುವ- ಸಂದರ್ಭಗಳು ಬಹಳ. ಹೀಗಾಗಿ ಕೆಲವು ಅಮೇರಿಕನ್ ಅಟೋಮಿಕ್ ರೋಕೆಟ್‌ಗಳು ಇಂಗ್ಲಾಂಡಿನ ಮೇಲೆಯೇ ಬಿದ್ದು ಸಿಡಿಯಲಿವೆ ಎಂಬುದನ್ನು ನಾವು ನಿರೀಕ್ಷಿಸಬೇಕು.

ರೋಗಾಣುಗಳು

ಅಮೇರಿಕದಲ್ಲೀಗ ವಿಶೇಷ ರೀತಿಯ ಸಂಶೋಧನಾ ಕಾರ್ಯ ನಡೆದಿರುವ ರೋಗಾಣುಗಳ ಪ್ರಶ್ನೆಯಂತೂ ಇನ್ನಷ್ಟು ಕಠಿಣವಾದುದು. ಒಂದು ರಾಷ್ಟ್ರವು ಈ ರೋಗಾಣು ಬೋಂಬುಗಳನ್ನು ಪ್ರಯೋಗಿಸುವ ಸಂದರ್ಭದಲ್ಲಿ, ಅವು ಬಿಟ್ಟವನಿಗೇನೇ ವಾಪಾಸು ಹೊಡೆಯುವ ಮಹಾಪಾಯವಿದೆ. ಅರ್ಥಾತ್ ಅವುಗಳನ್ನು ಯಾವ ರಾಷ್ಟ್ರವು ಉಪಯೋಗಿಸುತ್ತದೋ ಆ ರಾಷ್ಟ್ರದಲ್ಲೇ ಅವು ಹರಡಿಕೊಳ್ಳಬಹುದು. ಈ ಬೋಂಬುಜನ್ಯ ರೋಗವು ಮನುಷ್ಯನ ಮೇಲೆ, ಇಲ್ಲವೇ ಪಶುಪ್ರಾಣಿ ಅಥವಾ ಬೆಳೆ ತೋಟಗಳ ಮೇಲೆ ಬಿದ್ದರೂ ಮೇಲಿನ ಮಾತಂತೂ ಸತ್ಯವೇ. ಹೇಗಿದ್ದರೂ ಇಂತಹ ರೋಗವು ಅಟ್ಲಾಂಟಿಕ್ ಸಮುದ್ರವನ್ನು ದಾಟಿ ತಾವಿದ್ದಲ್ಲಿಗೆ ಬರುವ ;ಅಪಾಯ ಕಡಿಮೆಯೆಂದು ನೆನೆಸಿಕೊಂಡೇ ಅಮೇರಿಕದ ನಾಯಕರು ಈ ರೋಗಾಣು ಬೋಂಬು ಪ್ರಯೋಗದ ನಿರ್ಧಾರ ಮಾಡಿದ್ದಾರೆ. ಆದರೆ, ಯುರೋಪಿನಲ್ಲಿ ಈ ಪ್ರಯೋಗವನ್ನು ಪ್ರಾರಂಭಿಸಿದ ಪಕ್ಷದಲ್ಲಿ ಅದು ಬಹುಶೀಘ್ರವಾಗಿ ಬ್ರಿಟನ್ನಿನ ಮೇಲಂತೂ ಹಬ್ಬುವದು. ದೃಷ್ಟಾಂತಕ್ಕಾಗಿ ಗೋಧಿ ಮತ್ತು ಬಟಾಟೆಗಳಿಗೆ ರೋಗ ಹಿಡಿಸುವ ಹುಳಗಳ ಉಪಯೋಗವು ಜ್ಯಾರಿಗೆ ಬಂತೆಂದು ಭಾವಿಸಿಕೊಳ್ಳೋಣ. ಆಗ ಇಂಗ್ಲಾಂಡಿನ ಹಳ್ಳೀವಲಯಗಳ ಗೋಧಿ ಬಟಾಟೆ ಬೆಳೆಗಳ ಮೇಲೆ ಕ್ರಿಮಿ ಚೆಲ್ಲುವ ಕೆಲವು ವಿಮಾನಗಳನ್ನು ಕಳುಹಿಸಲು ಯುರೋಪಿಯಾನರಿಗೆ ಸದ್ಯಕ್ಕೂ ಸಾಧ್ಯವಿದೆ. ಬ್ರಿಟಿಷ್ ಬೆಳೆಗೆ ಹುಳ ಹಿಡಿದರೆ, ಮತ್ತೀ ಹುಳ ಸೋಂಕುವ ಹೆದರಿಕೆಯಿಂದ ಆಹಾರ ಹಡಗಗಳನ್ನು ನಮ್ಮಲ್ಲಿಗೆ ಕಳುಹಿಸುವದೂ ಅಪಾಯಕರವೆಂದು ಅಮೇರಿಕದವರಿಗೆ ತೋರಬಹುದು ಹಾಗಾದಲ್ಲಿ ನಮ್ಮ ಪೈಕಿ ಎರಡು ಮಿಲಿಯಕ್ಕೂ ಮಿಕ್ಕಿ ಎಷ್ಟೋ ಮಂದಿ ಸಾಯಬೇಕಾಗುವದು.

ಈ ಯೋಜನೆಗೆ ಸೈಗೊಟ್ಟರೆ

ಅಮೇರಿಕ ಮತ್ತು ರಶ್ಯಗಳೊಳಗಿನ ಯುದ್ಧವೊಂದರಲ್ಲಿ ಭಾಗವಹಿಸುವದನ್ನೇ ಹಾರೈಸುತ್ತಿರುವ ನಮ್ಮ ಮಂತ್ರಿಗಳನ್ನು ನಾವು ಸಮರ್ಥಿಸುತ್ತಾ ಹೋದೆವಾದರೆ, ಭವಿಷ್ಯದ ಕುರಿತು ಯಾವುದೇ ಯೋಜನೆಯ ಚಿಂತನೆ ಮಾಡುವುದು ಬರಿಯ ಭ್ರಾಂತಿಯೇ ಸರಿ. ನಮ್ಮಲ್ಲಿ ಅತ್ಯಧಿಕ ಬಹುಸಂಖ್ಯಾಕರಿಗೆ ಆ ಮೇಲಿನ ಭವಿಷ್ಯವೂ ಉಳಿಯುವಂತಿಲ್ಲ. ಸೋವಿಯೆಟ್ ರಶ್ಯಕ್ಕಂತೂ ಇಂತಹ ಒಂದು ಯುದ್ಧದ ಅಪೇಕ್ಷೆ ಇಲ್ಲ. ಅಲ್ಲಿಯ ಜನತೆಗೆ ಯುದ್ಧ ಸಾಕಷ್ಟಾಗಿದೆ. ಇನ್ನೊಂದು ತಲೆಮಾರಿನ ವರೆಗೆ ತಮ್ಮನ್ನು ಶಾಂತಿಯಲ್ಲಿರಗೊಳಿಸಿದರೆ, ಮಿಕ್ಕವರೆಲ್ಲರೂ ತಮ್ಮ ಮಾದರಿಯನ್ನನುಕರಿಸಲಾಗುವಂತೆ, ತಾವು ಭಂಡವಾಳಶಾಹಿ ರಾಷ್ಟ್ರಗಳಿಗಿಂತ ಎಷ್ಟೋ ಉತ್ತಮಗೊಳ್ಳಬಹುದೆಂಬ ಆಶೆ ಅವರಿಗಿದೆ. ನಿಜಕ್ಕೂ ಅಮೇರಿಕದ ವ್ಯಾಪಾರೋದ್ಯಮಿಗಳಲ್ಲಿರುವ ಹೆದರಿಕೆಯೆಂದರೆ ಇದೇ. ಆದರೆ ಯುರೋಪಿನಲ್ಲಿ ನಿಲ್ದಾಣಗಳು ದೊರೆತ ವಿನಹಾ ಅಮೇರಿಕದವರಿಗೆ ರಶ್ಯದ ಯುರೋಪಿಯನ್ ಭಾಗಗಳ ಮೇಲೆ ಧಾಳಿಮಾಡುವದು ಸುಲಭವಲ್ಲ; ಚೈನಾದ ಕಮ್ಯೂನಿಸ್ಟ್ ಸೇನಾ ವಿಜಯಗಳಿಂದಾಗಿ ಏಶ್ಯಾದಲ್ಲಿರುವ ಅಮೇರಿಕನ್ ನಿಲ್ದಾಣಗಳು ಅಭದ್ರವಾಗುತ್ತಿವೆ.

ಬ್ರಿಟನಿನ ಕರ್ತವ್ಯ

ಈಗಿನ ಸ್ವೀಡಿಶ್ ಸರಕಾರವು ಎಷ್ಟೇ ಕಮ್ಯೂನಿಸ್ಟ್‌ವಿರೋಧಿಯಿದ್ದರೂ ಸೋವಿಯೆಟ್ ರಶ್ಯದ ವಿರುದ್ಧ ಯುದ್ಧವೊಂದರಲ್ಲಿ ಸ್ವೀಡನ್ ಮುಂಭಾಗದಲ್ಲಿರುವುದನ್ನೆಂದಿಗೂ ಬಯಸುವದಿಲ್ಲ. ಅಮೇರಿಕದ ವಿಮಾನವಾಹಕ ತಾನಾಗಲಾರೆನೆಂದು ನಿರಾಕರಿಸುವುದರಲ್ಲೇ ಬ್ರಿಟನ್ನಿನ ಉಳಿಗಾಲವಿದೆ, ಎಂಬುದನ್ನರಿಯುವದಕ್ಕೆ ಒಬ್ಬನು ಕಮ್ಯೂನಿಸ್ಟನಾಗಬೇಕೆಂದಿಲ್ಲ. ಕಳೆದ ಯುದ್ಧದಲ್ಲಿ ಸ್ವೀಡನ್, ಸ್ವಿಟ್ಜರ್ಲೆಂಡ್ ಮತ್ತು ಐರ್ಲೆಂಡುಗಳಿಗೆ ತಟಸ್ಥನಿಲ್ಲಲು ಸಾಧ್ಯವಾಗಿದ್ದರೂ, ಇನ್ನೊಮ್ಮೆ ಆರಂಭವಾದಲ್ಲಿ ಅಂತಹ ಯುದ್ಧದಿಂದ ದೂರವಿರುವುದು ಕಷ್ಟವೇ ಸರಿ. ಅದು ನಮ್ಮಿಂದಾಗದೆ ಹೋಗಬಹುದು. ಆದರೆ ನಮ್ಮನ್ನು ಅಮೇರಿಕದ ನಿಲ್ದಾಣವಾಗಿ ಮಾಡಿಕೊಳ್ಳಲು ನಾವೊಪ್ಪಲಾರೆವೆಂಬುದನ್ನು ಸ್ಪಷ್ಟ ಪಡಿಸುವ ಮೂಲಕ ಯುದ್ಧ ಸಂಭವವನ್ನೇ ನಾವು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು. ನಮ್ಮ ಸರಕಾರವು ಅಮೇರಿಕ ಸರಕಾರಕ್ಕೆ ಬಹಿರಂಗಾಶ್ವಾಸನೆಯೇನನ್ನೂ ಕೊಡದಿದ್ದರೂ ಕೂಡಾ, ಗತ ಕಾಲಗಳಲ್ಲಿ ತಾವಾದ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಿರುವರೇ ಆ ನಾಗರಿಕರಿಗೆ ಗೊತ್ತಾಗದಂತೆಯೇ ನಮ್ಮ ಸರಕಾರಗಳು ಇಂತಹ ಆಶ್ವಾಸನೆಗಳನ್ನು ಗುಟ್ಟಿನಿಂದಲೇ ಕೊಟ್ಟಿದ್ದುವೆಂದೂ, ಮತ್ತೀ ಭರವಸೆಗಳೇ ಯುದ್ಧಗಳನ್ನು ನಿರ್ಮಿಸಿದ್ದುವೆಂದೂ ನಮಗೆ ಗೊತ್ತಿದೆ. ನಮ್ಮ ಸರಕಾರವು ಇಂತಹ ಆಶ್ವಾಸನೆ ಕೊಟ್ಟುಬಿಟ್ಟಲ್ಲಿ, ಅಮೇರಿಕದ ಸರಕಾರವು ಇದನ್ನೊಳಪಡಿಸಿಕೊಂಡು ಅಟಂ ಯುದ್ಧದ ಭೀತಿ ಬೀರಬಹುದು. ರಾಷ್ಟ್ರದ ಜನತೆಯ ಅತ್ಯಧಿಕ ಬಹುಸಂಖ್ಯಾಕರು ಇನ್ನೊಂದು ಸಮರವನ್ನು ಬಯಸುವದಿಲ್ಲ. ಮುಂದಿನ ಯುದ್ಧವೆಂತಹದಾಗಬಹುದೆಂಬುದನ್ನು ಗ್ರಹಿಸಿಕೊಂಡಲ್ಲಿ ಯಾರೊಬ್ಬನೂ ಅದನ್ನಪೇಕ್ಷಿಸಲಾರ. ಆ ಯುದ್ಧದಲ್ಲಿ ಜನತೆಯು ಸಾಯಬೇಕಾಗಿ ಬರುವ ವಿವಿಧ ರೀತಿಗಳಲ್ಲಷ್ಟನ್ನೂ ನಾನಿಲ್ಲಿ ವರ್ಣಿಸಿಲ್ಲ.

ಋಷಿಕೇಶ ಚ್ಯವನಪ್ರಾಶ

ಬಾಬಾ ಕಾಲಿ ಕಮ್ಲಿವಾಲಾ ಋಷಿಕೇಶ ಇವರ [illegible]

ಸನ್ಯಾಸಿ ಪ್ರಯೋಗದ ಚ್ಯವನಪ್ರಾಶ ಲೇಹವು ಅಪೂರ್ವ ಗುಣಕಾರಿಯಾಗಿದೆ ಅಗ್ನಿಮಾಂದ್ಯ, ಕೆಮ್ಮು, ಶೀತ, ನೆಗಡಿ, ಉಬ್ಬಸ, ಕ್ಷಯ ಮೊದಲಾದ ಶ್ವಾಸಕೋಶಗಳ ರೋಗಗಳನ್ನು ಗುಣಪಡಿಸುವ ರಾಮಬಾಣ ಔಷಧ ಈ ಲೇಹ ಸೇವನೆಯಿಂದ ನವಚೇತನ ಉಂಟಾಗುವುದರಲ್ಲಿ ಅನುಮಾನವಿಲ್ಲ

ಕ್ರಯ ರಾತ್ತಲಿಗೆ ರೂಪಾಯಿ 5 ಅರ್ಧ ರಾತ್ತಲಿಗೆ 2-12-0 ಒಂದು ರೂಪಾಯಿ ಅಡ್ವಾನ್ಸ್ ಕಳುಹಿಸಿದ್ದಲ್ಲಿ ವಿ. ಪಿ. ಪಿ. ಪಾರ್ಸೆಲು ಮಾಡಲಾಗುತ್ತದೆ.

ಸ್ಟೋಕಿಸ್ಟರು:

ಕಾಡಬೆಟ್ಟು ರಾಮಕೃಷ್ಣ ಗುಂಡು ನಾಯಕ್, ರಥಬೀದಿ, ಉಡುಪಿ.

ಅಥವಾ

ದ.ಕ.ಜಿಲ್ಲಾ ಪೋಲೀಸ್ ಆಫೀಸರ್ಸ್ ಕೋಪರೇಟಿವ್ ಸ್ಟೋರ್ಸ್ ಲಿಮಿಟೆಡ್, ಮಂಗಳೂರು.

ರೇಶನ್ ಕಾರ್ಡುಗಳು ದೊರೆಯುತ್ತವೆ,

ನವಯುಗ ಪ್ರೆಸ್, ಉಡುಪಿ.

ಇಡೀ ಪ್ರಪಂಚದ ವಿದ್ಯಮಾನಗಳ ಕಡೆಗೊಮ್ಮೆ ದೃಷ್ಟಿಯೋಡಿಸಿದರೆ ಎಲ್ಲವೂ ಬಹುಮಟ್ಟಿಗೆ ಇದ್ದಂತಿವೆ-ಶಾಂತಿ ಸುಭಿಕ್ಷೆಯ ಗುರಿ ಸೇರಲು ಅವಸರ ಪಡುವ ಬದಲಿಗೆ ಇನ್ನೊಂದು ಸಮರದ ಕಡೆಗೇನೇ ಲೋಕವು ಸಾವಧಾನದ ಹೆಜ್ಜೆಗಳನ್ನು ಯಥಾಪ್ರಕಾರ ಇಡುತ್ತಿದೆ-ಎಂದರಿಯಬಹುದು.

ಮುಖ್ಯವಾಗಿ ಝೆಕೋಸ್ಲೋವೇಕಿಯದಲ್ಲಿ ಅವತಾರ ತಾಳಿದ ಕಮ್ಯೂನಿಸ್ಟ್ ಸರಕಾರವು ಸ್ವರಾಷ್ಟ್ರದೊಳಗೆ ಸ್ಥಿತಿಮತಿ ಮಂಥನವನ್ನೂ, ಪ್ರಮುಖ ರಾಷ್ಟ್ರಗಳೊಳಗೆ ವಿಶೇಷ ಭಾವಾಂದೋಲನವನ್ನೂ ಎಬ್ಬಿಸಿದೆ; ಝೆಕೊಸ್ಲೊವೇಕಿಯದ ವಿದೇಶ ಮಂತ್ರಿ ಹಾಗೂ ಅತ್ಯಂತ ಜನಪ್ರೀತರಾಗಿದ್ದ ಜಾನ್ ಮಸಾರಿಕರು ತನ್ನ ಮನೇ ಕಿಟಿಕಿಯಿಂದ ಕೆಳಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಝೆಕೊಸ್ಲೊವೇಕಿಯದಲ್ಲಿ ಕಮ್ಯೂನಿಸ್ಟರು ಅಧಿಕಾರ ಕಸಕೊಳ್ಳುವ ಮೊದಲಿದ್ದ ಸರಕಾರದ ಶಾಶ್ವತ ಪ್ರತಿನಿಧಿಯಾಗಿ ಜಾಗತಿಕ ಸಂಘದಲ್ಲಿದ್ದ ಎಫ್. ಪಾಪಾನೆಕರು 'ರಶ್ಯವು ಝೆಕೊಸ್ಲೊವೇಕಿಯದೊಳಗೆ ಜುಲುಮೆ ನಡೆಸುತ್ತಿದ್ದು, ಲೋಕ ಶಾಂತಿಗೆ ಬಾಧೆ ತಟ್ಟಿದೆ'ಎಂದು ಮುಂತಂದಿದ್ದ ದೂರು ಭದ್ರತಾ ಕೌನ್ಸಿಲಿನಲ್ಲಿ ಉಳಿದಿತ್ತು. ಅದನ್ನೀಗ ಚಿಲಿಯ ಪ್ರತಿನಿಧಿ ಪುನಃ ಪರ್ಯಾಲೋಚನೆಗೆ ಮುಂದೊಡ್ಡಿದ್ದಾನೆ. ಪಾಪಾನೆಕರನ್ನು ಇಂದಿನ ಝೆಕ್ ಸರಕಾರವು ತೆಗೆದು ಹಾಕಿದೆ.

ಇತ್ತ ರಶ್ಯದ ವಿರುದ್ಧ ಪಾಶ್ಚಾತ್ಯ ರಾಷ್ಟ್ರಗಳ ಒಳಕೂಟ ರಚನೆ, ಸಂಚು ಹೊಂಚುಗಳು ಭರದಿಂದ ಸಾಗಿವೆ. 'ಪಾಶ್ಚಿಮಾತ್ಯ ಸ್ವಾತಂತ್ರ್ಯ, ನಾಗರಿಕತೆ ಹಾಗೂ ವ್ಯಾಪಾರ ಕ್ಷೇತ್ರಗಳ ರಕ್ಷಣೆಗಾಗಿ ಬಲವಾದ ಪಶ್ಚಿಮ ಯುರೋಪು ಸಂಯುಕ್ತ ರಾಜಕೀಯ ಮಂಡಲವನ್ನು ರಚಿಸಿಕೊಳ್ಳುವ ಕಾರ್ಯಕ್ರಮವನ್ನು ಕೂಡಲೇ ಕೈಕೊಳ್ಳಬೇಕು' ಎಂಬ ನಿರ್ಣಯವೊಂದನ್ನು ಬ್ರಿಟಿಷ್ ಪಾರ್ಲಿಮೆಂಟಿನ 77 ಸದಸ್ಯರು ಮುಂತಂದಿದ್ದಾರೆ. ಕಮ್ಯೂನಿಸ್ಟ್ ಪಕ್ಷೀಯರ ವಿನಹ ಉಳಿದೆಲ್ಲರೂ ಇದಕ್ಕೆ ಬೆಂಬಲಕೊಟ್ಟಿದ್ದಾರೆ.

ಸದ್ಯದ ಸ್ಥಿತಿಗತಿಗಳ ಮತ್ತು ಹಿಂದು ಮುಂದಿನ ಕಾಲಗಳ ಕಡೆಗೊಮ್ಮೆ ದೃಷ್ಟಿ ಬೀರಿದರೆ ಒಂದು ಮಹಾ ಯುದ್ಧವನ್ನು ಮುಗಿಸಿಕೊಂಡ ಪ್ರಪಂಚವು ಅದರ ಅಪಾರ ಕಷ್ಟ ನಷ್ಟಗಳನ್ನು ಇಷ್ಟು ಬೇಗನೆ ಮರೆತು ಬಿಟ್ಟದನ್ನು ಕಂಡು ನಿಜಕ್ಕೂ ಆಶ್ಚರ್ಯವಾಗುತ್ತದೆ. ಇಂತಹ ನಾಶಕೃತ್ಯವಿನ್ನೆಂದಿಗೂ ಸಂಭವಿಸದಂತೆ ಮಾಡುವ ಪ್ರಯತ್ನವನ್ನು ತ್ರಿಕರಣ ಪೂರ್ವಕ ಕೈಕೊಳ್ಳುವ ಮಾತು ಹಾಗಿರಲಿ-ಒಂದನ್ನು ಮುಗಿಸಿದವರು ಇನ್ನೊಂದರ ಕಡೆಗೆ ಲಕ್ಷ್ಯ ಕೊಡುವ ಮೊದಲು ಸ್ವಲ್ಪವಧಿಯ ವಿಶ್ರಾಂತಿ ಸುಖವನ್ನಾದರೂ ಇಂದಿನ ಪ್ರಮುಖ ರಾಷ್ಟ್ರಗಳು ಸಭವಿಸಲು ತಯಾರಿಲ್ಲವೆಂದರೆ ಈ ದುರದೃಷ್ಟಕ್ಕೇನೆನ್ನಬೇಕು? ಈ ಮಧ್ಯಾಂತದಲ್ಲಿ ನಡೆದ ಕೆಲವೇ ಸತ್ಕಾರ್ಯಗಳ ಪೈಕಿ ಬ್ರಿಟನು ತನ್ನಾಧೀನ ರಾಷ್ಟ್ರಗಳಿಗೆ-ಭಾರತ, ಬರ್ಮಾ, ಸಿಲೋನಿನಂಥವುಗಳಿಗೆ-ಸ್ವಾತಂತ್ರ್ಯದಾನವಮಾಡಿದುದೇ ಅತಿ ಮುಖ್ಯ ಹಾಗೂ ಶ್ಲಾಘನೀಯ ಸಂಗತಿಯೆನ್ನಬಹುದು. ಇದು ವರೆಗೂ ತಮ್ಮ ವಶವಿದ್ದ ಬರ್ಮಾದ ಕೊನೆಯ ರಾಜ ತೀಬಾನ ಸಿಂಹಾಸನವನ್ನು ಭಾರತ ಸರಕಾರವು ಬರ್ಮಾ ಸರಕಾರಕ್ಕೊಪ್ಪಿಸುವ ಚರಿತ್ರಾರ್ಹ ಸಮಾರಂಭವು ರಂಗೂನಿನಲ್ಲಿ ಕಳೆದ ವಾರ ಆತ್ಯಾಕರ್ಷಣೀಯ ರೀತಿಯಿಂದ ನಡೆದಿತ್ತು; ಆ ಸಿಂಹಾಸನ ಮರುಪಾವತಿ ಕಾರ್ಯವನ್ನು ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್ ಬೇಟನರು ಜರಗಿಸಿದರು

ಭಾರತ ರಾಜಕೀಯದಲ್ಲಿ ಕಳೆದ ವಾರದ ಮುಖ್ಯ ಘಟನೆಗಳೆಂದರೆ, ಪ್ರಧಾನಿ ಪಂಡಿತ ನೆಹರುಗಳು ಹಿಂದೀ ಪ್ರಥಮ ಹಡಗ "ಜಲ ಉಷಾ"ವನ್ನು ವಿಶಾಖ ಪಟ್ಟಣದಲ್ಲಿ ಸಮುದ್ರಕ್ಕಿಳಿಸಿದುದು—ಗಾಂಧೀಜೀಯ ವಿಧಾಯಕ ಕಾರ್ಯ ಜ್ಯಾರೀ ಪರ್ಯಾಲೋಚನಾ ಸಭೆ-ಭಾರತದ ಪಾರ್ಲಿಮೆಂಟು ಹಲವು ಪ್ರಾಮುಖ್ಯ ಹಿಂದೀ ಸಮಸ್ಯೆಗಳ ಪರಿಶೀಲನೆ ನಡೆಸುತ್ತಿರುವುದು-ಪ್ರಾಂತ್ಯಗಳ ಎಸೆಂಬ್ಲಿಗಳಲ್ಲಿ ಆಯವ್ಯಯ ಪಟ್ಟಿಗಳ ಮಂಜೂರಾತಿ ನಡೆದಿರುವುದು- ಮತ್ತು ನಿತ್ಯದ ಆ ಕಾಶ್ಮೀರ ಪ್ರಶ್ನೆ.

ಅಂತೂ, ಕೆಲ ಕಾಲದಿಂದ ಅಡ್ಡಾದಿಡ್ಡ ಚಲಿಸಿ, ಹಲವು ಅಡ್ಡಿ ತಡೆಗಳಿಗೆ ಢಿಕ್ಕಿ ಹೊಡೆದು 'ಏನಾಗುವುದೋ!' ಎಂಬ ಭೀತಿ ಹುಟ್ಟಿಸಿದ್ದ ಹಿಂದೀ ರಾಜಕೀಯ ಬಂಡಿಯು ಈಗೊಂದು ಕ್ರಮಬದ್ಧ ಹಾದಿಗೆ ಬಂದಂತಿದೆ. ಇನ್ನು ಹತೋಟಿ ತಪ್ಪಲು ಬಿಡದೆ, ಸರ್ವವನ್ನೂ ದುರಸ್ತಿಪಡಿಸಿಕೊಂಡು, ಹಿಂದಿನ ಪಾಠಗಳಿಂದ ಕಲಿತುದನ್ನೆಲ್ಲಾ ಉಪಯೋಗಿಸಿಕೊಂಡು, ಅಪಘಾತಗಳಿಗಾಸ್ಪದ ಕೊಡದೆ ಅಭಿವೃದ್ಧಿ ಪಥದಲ್ಲಿದನ್ನು ಮುಂದೊತ್ತಬಲ್ಲೆವಾದರೆ ಭಾರತಕ್ಕೆ ಭವ್ಯ ಭವಿಷ್ಯ ದೂರವಿಲ್ಲ.

ವಿಶಾಖಪಟ್ಟಣದಲ್ಲಿ ನೆಹರುಗಳಿಂದ ಪ್ರಥಮ ಹಿಂದೀ ಹಡಗಚಲನೋತ್ಸವ

ವಿಶಾಖ ಪಟ್ಟದಲ್ಲಿ ನೆಹರು—

ಇದೇ ತಾ. 14ರಲ್ಲಿ ಮದ್ರಾಸ್ ಪ್ರಾಂತ್ಯದ ಗಾಂಧಿಗ್ರಾಮ (ವಿಶಾಖ ಪಟ್ಟ) ದಲ್ಲಿ ಭಾರತದಲ್ಲೇ ಕಟ್ಟಲ್ಪಟ್ಟ ಸ್ವತಂತ್ರ ಭಾರತದ ಪ್ರಥಮ ಸಮುದ್ರಗಾಮೀ ಹಡಗ 'ಜಲಉಷಾ'ವನ್ನು ಪಂಡಿತ ನೆಹರುಗಳು ಶರಧಿಗಿಳಿಸಿದ ಸಮಾರಂಭವು ಅತ್ಯಂತ ಆಕರ್ಷಣೀಯವಿದ್ದಿತು. ಗಾಂಧೀ ಅನುಯಾಯಿಗಳ ರಚನಾತ್ಮಕ ಕಾರ್ಯಾಲೋಚನಾ ಸಭೆಗಾಗಿ ನಾಗಪುರಕ್ಕೆ ಬಂದಿದ್ದ ಪಂಡಿತ ನೆಹರುಗಳು ಹಿಂದೀ ಸರಕಾರದ ಸ್ಪೆಶ್ಯಲ್ ವಿಮಾನವೊಂದರಲ್ಲಿ ತನ್ನ ಸಹೋದರಿ ಶ್ರೀಮತಿ ಕೃಷ್ಣಾಹಥೀಸಿಂಗ್, ಸೊಸೆ ಕುಮಾರಿ ತಾರಾ ಪಂಡಿತ ಮತ್ತಿತರರೊಂದಿಗೆ ವಿಶಾಖಾ ಪಟ್ಟದ ವಿಮಾನ ನಿಲ್ದಾಣದಲ್ಲಿಳಿಯುವಾಗ ಅವರನ್ನಿದಿರ್ಗೊಳ್ಳಲು ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ ಓಮಂದೂರು ಮತ್ತಿತರ ಮಂತ್ರಿಗಳೂ, ಪಟ್ಟಾಭಿ, ಪ್ರಕಾಶಂ, ರಂಗ ಮೊದಲಾದ ಆಂಧ್ರ ನಾಯಕರೂ ಹಾಜರಿದ್ದರು, ಈ ಹಡಗವನ್ನು ಕಟ್ಟಿದ್ದ ಯಸ್. ಯಸ್. ಏನ್. ಕೋ.ದ ಚೇರ್ಮೇನ್ ಶ್ರೀ ಲಾಲ್‌ಚಂದ್ ಹೀರಾಚಂದ್ ಮತ್ತಿತರ ಡೈರೆಕ್ಟರರೂ ಹಾಜರಿದ್ದರಲ್ಲದೆ ಹಿಂದೀ ಸರಕಾರದ ಮಂತ್ರಿ ಶ್ರೀ ಗಡ್ಗಿಲರೇ ಮೊದಲಾದವರು ಈ ಸಮಾರಂಭಕ್ಕಾಗಿ ಬಂದಿದ್ದರು. ಹಾರ, ರಿಜರ್ವ್ ಪೋಲೀಸರ ಕವಾಯತು ವಂದನೆ ಪಡೆದು ಮದ್ರಾಸ್ ಪ್ರಧಾನಿಗಳನ್ನೊಡಗೊಂಡು ಪಂಡಿತ ನೆಹರುಗಳು ವಿಮಾನ ನಿಲ್ದಾಣದಿಂದ ವಿಶಾಖ ಪಟ್ಟಕ್ಕೆ ಕಾರು ಸವಾರಿ ಮಾಡಿದ ಹತ್ತು ಮೈಲುದ್ದಕ್ಕೂ ಸಾಲುಗಟ್ಟಿ ಸಹಸ್ರಾರು ಜನರು ಪಂಡಿತಜೀಯನ್ನು ಕಾದು ನಿಂತಿದ್ದು ಜೈಕಾರ ಹಾಕಿದರು. ಬಂದರದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಮುಗಿಸಿ ಪೂರ್ವಾಹ್ನ ಘಂಟೆ 9ಕ್ಕೆ ಸರಿಯಾಗಿ ಹಡಗವನ್ನು ನೀರಿಗಿಳಿಸಿದರು.

'ಜಲಉಷಾ' ಚಲನೋತ್ಸವ

ಪಂಡಿತಜೀಯ ಹಸ್ತದಿಂದ 'ಜಲಉಷಾ' ವು ನೀರಿಗಿಳಿಸಲ್ಪಟ್ಟು ಪ್ರಯಾಣ ಪ್ರಾರಂಭಿಸಿದ ಆ ಮಹೋತ್ಸವವು ಅತ್ಯಾಕರ್ಷಣೀಯವಿದ್ದಿತು. ಸಮಾರಂಭವು ಧಾರ್ಮಿಕ ವಿಧಿಗನುಸಾರವಾಗಿ ಜರಗಿತು. ವಿಶಾಖ ಪಟ್ಟಣದ ಆ ಹಡಗ ಧಕ್ಕೆಯು ಪ್ರಕೃತಿ ಸೌಂದರ್ಯದ ನೆಲೆವೀಡು;ರಮ್ಯ ಗುಡ್ಡಗಳುಳ್ಳ ಕ್ಷೇತ್ರ; ಹಲವು ತಲೆಮಾರುಗಳ ನಂತರ ಈ ಗುಡ್ಡಗಳು ತಾ. 14ರ ಶುಭ್ರ ಮುಂಜಾನೆಯಲ್ಲಿ ಪ್ರಥಮ ಬಾರಿ ವೇದೋಚ್ಚಾರಗಳನ್ನು ಪ್ರತಿಧ್ವನಿಸಿದುವು. ಸಹಸ್ರಾರು ಜನರು ನಸುಕು ಮುಂಜಾನೆಯಲ್ಲೇ ಅಲ್ಲಿ ಜಮೆಯಾಗಿದ್ದು ಗುಡ್ಡದ ಬುಡದಿಂದ ಶಿಖರದವರೆಗೂ ಹರಡಿದ್ದರು; ಆ ಮುಹೂರ್ತದಲ್ಲಿ ಏರು ತಗ್ಗಿನ ಆ ಇಡೀ ಕ್ಷೇತ್ರವೇ 'ಮನುಷ್ಯಮಯ' ವಾಗಿ ಹೋಗಿತ್ತು-ಬುಡದಿಂದ ತುದಿಯ ವರೆಗೂ ತುಂಬಿದ್ದ ಜನರು ಜೀವನದ ಅವನತಿ ಉನ್ನತಿಯ ಸೂಚನೆಗಳಂತಿದ್ದರು. ಪಂಡಿತ ನೆಹರುಗಳು ಸಕಾಲದಲ್ಲಿ ಆಗಮಿಸಿದರು. ದೂರದಿಂದ ಅವರನ್ನು ಕಂಡೊಡನೆಯೇ ಜನತಂಡದಲ್ಲಿದ್ದ ಉತ್ಸಾಹವು ವರ್ಣನಾತೀತ. ಕಾಂಗ್ರೆಸ್ ಸ್ವಯಂಸೇವಕರ"ಗಾರ್ಡ್ ಓಫ್ ಓನರ್"ಹಾಗೂ ಇತರ ಸ್ವಾಗತಗಳಾದುವು.ಹಡಗಗಳು ಪ್ರಧಾನ ಮಂತ್ರಿಗೆ ಸ್ವಾಗತ ಗೀತವಾಗಿ 'ಸೈರೆನ್' ಬಾರಿಸಿದುವು. ಜೈಕಾರಗಳೆದಿರು ಕೈ ಜೋಡಿಸಿ ಕೊಂಡು ಪಂಡಿತಜೀ ಹೊಸ ಹಡಗದ ಒದಿಯಲ್ಲಿ ರಚಿಸಿದ್ದ ಸೋಗಿನ ಸೀಟಕ್ಕೇರಿದರು; ಅಲ್ಲಿ ಚುನಾಯಿತ ಮಂದಿಗಾಗಿ ನಿಲ್ದಾಣವಿದ್ದಿತು; ಅದರಲ್ಲಿ ಮಂತ್ರಿಗಳು,ಸರಕಾರದಮುಖ್ಯಾಧಿಕಾರಿಗಳು ಹಾಗೂ ಪತ್ರಿಕಾವಾಲರು ಕುಳಿತಿದ್ದರು. ಮಿಕ್ಕ ಆಮಂತ್ರಿತರೆಲ್ಲಾ ಅಂಗಣದಲ್ಲಿದ್ದರು. ದೂರದಿಂದ 'ನೆಹರುಕೀ ಜೈ' 'ಗಾಂಧಿಕೀ ಜೈ' ಘೋಷಗಳೇಳುತ್ತಿದ್ದುವು. ಪಾಲ್ಚಂದರ ಸ್ವಾಗತ ಭಾಷಣವಾಗಿ ಹಡಗ ಕಂಪೆನಿಯು ಕಲಾಪೂರ್ಣ ಕಂಡಿಗೆಯುಳ್ಳ [illegible] ಮಾನಪತ್ರವನ್ನು ಸ್ವೀಕರಿಸಿ ಪಂಡಿತ ನೆಹರುಗಳು ಉತ್ತರ ಕೊಟ್ಟರು. ಆ ಮೇಲೆ ಧಾರ್ಮಿಕ ನಿಯಮಾನುಸಾರ ಹಡಗಕ್ಕೆ ಹೆಸರಿಡುವ ಮತ್ತು ನೀರಿಗಿಳಿಸುವ ಸಮಾರಂಭ. ಪಂಡಿತಜೀ 'ಸ್ವಸ್ತಿಕಾ ಚಿಹ್ನೆ'ಯನ್ನು ಕುಂಕುಮ

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years, Filaria is a dirty, disfiguring disease. And yet a little united effort on the part of the public could at very little cost wipe out these two evils. **Please, watch this space.**

Inserted by:

The Canara Mutual Assurance Company Limited.
ESTD. 1935
H. O. UDIPI.

ಮಾರಾಟಕ್ಕಿದೆ

ಡೆಲ್ಕೊ ಪ್ಲ್ಯಾಂಟ್ ಮೋಡೆಲ್ 1286 ಸರ್ವೋಪಕರಣ ಎಂಜಿನುಗಳುಳ್ಳ 2½ ಎಚ್. ಪಿ. ಶಕ್ತಿಯುತವಾದ 32 ವಾಲ್ಟ್ ಪ್ರಮಾಣದ 1½ ಕಿಲೊವಾಟ್ಸ್ ಸೆಕೆಂಡ್ ಹೆಂಡ್ ಚಾಲೂಸ್ಥಿತಿಯಲ್ಲಿರುವ ಮೆಶಿನು. ಇದರ ಉಪಯೋಗದಿಂದ ಇಲೆಕ್ಟ್ರಿಸಿಟಿ ಇಲ್ಲದ ಸ್ಥಳದಲ್ಲಿಯೂ ಇಲೆಕ್ಟ್ರಿಸಿಟಿ ಪಡೆಯಬಹುದು. ಕ್ರಯ ರೂಪಾಯಿ 900/- ಖಾಯಿಸಿಯುಳ್ಳವರು ಕೂಡಲೇ ವಿಚಾರಿಸಿರಿ:—

ರಾಮಕೃಷ್ಣ ಗುಂಡುನಾಯಕ್, ಮರ್ಚೆಂಟ್, ರಥಬೀದಿ, ಉಡುಪಿ.

ಸೇವಾಗ್ರಾಮದಲ್ಲಿ ಹಿಂದೀ ಪ್ರಮುಖರ 'ಗಾಂಧಿಜಿಯ ವಿಧಾಯಕ' ಸಮ್ಮೇಳನ

ದೊಂದಿಗೆ ಹಡಗಕ್ಕೆ ತಾಗಿಸಿದರು. ಅಕ್ಕಿ ಮತ್ತು ಹೂಗಳನ್ನು ಅದರ ಮೇಲೆ ಚೆಲ್ಲಿದರು. ದೊಡ್ಡ ಹೂದಂಡೆಯೊಂದನ್ನು ಸ್ವಸ್ತಿಕಕ್ಕೆ ಹಾಕುತ್ತಾ ಹಿಂದಿಯಲ್ಲಿ "ಈ ಹಡಗಕ್ಕೆ 'ಜಲ ಉಷಾ' ಎಂಬ ಹೆಸರಿಡಬು ನನಗತ್ಯಾನಂದವಾಗುತ್ತಿದೆ. ಇದಕ್ಕೆ ಸರ್ವ ವಿಧದ ವಿಜಯ ಲಭಿಸಲೆಂದೂ ಭವಿಷ್ಯದಲ್ಲಿ ಒಳ್ಳೇ ಭಾಗ್ಯ, ಅಭಿವೃದ್ಧಿ ಯೊದಗಲೆಂದೂ ಹಾರೈಸುತ್ತೇನೆ" ಎಂದರು. ಆ ಮೇಲೆ ಪಂಡಿತಜಿಯೊಂದು ತೆಂಗಿನ ಕಾಯಿಯನ್ನು ಸ್ವಸ್ತಿಕದ ಮೇಲೆ ಒಡೆದು, ಆ ಹಡಗವನ್ನು ಕಡೆದು ನಿಲ್ಲಿಸಿದ್ದ ಬಂಧನವನ್ನು ತಪ್ಪಿಸಿಬಿಟ್ಟೊಡನೆ, ನೆಹರುಗಳಿಂದ ಬಂಧವಿಮೋಚನೆಗೊಂಡ ರಾಷ್ಟ್ರ ನೌಕೆಯಂತೆಯೇ 9000 ಟನ್ ಭಾರದ 'ಜಲ ಉಷಾ' ನಿಧಾನವಾಗಿ ನೈಯಾರದೊಡನೆ, ಗಭೀರ ಸಮುದ್ರದೊಳಕ್ಕೆ ಪ್ರಚಂಡ ಜನಸಮುದ್ರದ ಜಯಘೋಷಗಳೊಡನೆ ಇಳಿಯಿತು. ನೆಹರುಗಳು ಆ ಮುಹೂರ್ತದಲ್ಲಿ ಈ ದೃಶ್ಯದೊಂದಿಗೆ ತಲ್ಲೀನಗೊಂಡರು. ಜನರಂತೂ ಅಪೂರ್ವ ಮಧುರಾನಂದವೊಂದನ್ನನುಭವಿಸಿದರು; ಪಂಡಿತಜೀ ತನ್ನ ಭಾಷಣದಲ್ಲೆಂದರು: "ಸುಮಾರು ಒಂದೂವರೆ ಶತಮಾನಗಳಿಗೂ ಮಿಕ್ಕಿದ ಕಾಲಾನಂತರ ನಾವೀಗ ತಾನೇ ಈ ಮಾದರಿಯ ಒಂದು ಹಿಂದೀ ಹಡಗವನ್ನು ಪ್ರಥಮತಃ ಇಳಿಸಿದ್ದೇವೆ. ಹಿಂದಿನ ಕಾಲಗಳಲ್ಲಿ ಹಿಂದುಸ್ಥಾನದ ಹಡಗ ನಿರ್ಮಾಣವು ಸುಪ್ರಸಿದ್ಧವಿದ್ದು ಲೋಕದ ಇತರ ಕಡೆಗಳ ತಜ್ಞರ ಆತುರದ ಲಕ್ಷ್ಯವನ್ನೆಳೆದಿದ್ದಿತು. ಆ ಉದ್ಯೋಗವೊಮ್ಮೆ ನಿರ್ನಾಮವಾಗಿ ಈ ನವಯುಗದಲ್ಲಿ ಪುನಃ ತಲೆಯೆತ್ತಿದೆ. ಭಾರತವು ಎರಡು ಕಡೆಗಳಲ್ಲಿ ಅಜೇಯ ಪರ್ವತಗಳು ಹಾಗೂ ಸಮುದ್ರಗಳಿಂದ ಆವರಿಸಲ್ಪಟ್ಟಿರುವ ಪುರಾತನ ರಾಷ್ಟ್ರ—ಇದು ಜಗತ್ತಿನ ಇತರ ಭಾಗಗಳೊಂದಿಗೆ ಜೋಡಣೆ ಗೊಂಡಿರುವಂತಹದೆಂದಲ್ಲದೆ, ಒಂದು ಪ್ರತ್ಯೇಕ ಭೂಮಿಯೆಂದು ನಾವು ನೆನಸಿಕೊಂಡಿಲ್ಲ. ಈ ಮುಜಾನೆ ಸಮುದ್ರಕ್ಕಿಳಿಸಿದ ಹಡಗನೆಂದರೆ ರಾಷ್ಟ್ರವು ತನ್ನೆಲ್ಲಾ ಸಂಕುಚಿತತೆಗಳನ್ನೂ ಹರಿದೊಗೆದು ಮುಂದೆ ಪೂರ್ಣ ಸನ್ನಿಧಿಗೆ ಧಾವಿಸ ಹತ್ತಿದ ಸೂಚನೆಯೆಂದೂ, ರಾಷ್ಟ್ರ ನೌಕೆಯ ಪ್ರಯಾಣದ ಪ್ರತೀಕವಿದೆಂದೂ ನಾನು ನಂಬುತ್ತೇನೆ". ಪಂಡಿತ ನೆಹರುಗಳು ಹಿಂದೀ ಸರಕಾರದ ಹಡಗ ರಚನೆ ಹಾಗೂ ಧೋರಣೆಗಳನ್ನು ವಿವರಿಸಿ, ತರುಣರು ನೌಕಾ ಉದ್ಯೋಗಗಳಿಗೆ ಮುಂದೆ ಬರಬೇಕೆಂದು ಆಹ್ವಾನಿಸಿದರು. ಮದ್ರಾಸ್ ಪ್ರಾಂತ್ಯದಲ್ಲಿ ಕೂಲಿಗಾರರ ಗಲಭೆಗಳನ್ನು ಪ್ರೇರೇಪಿಸುತ್ತಿರುವ ಜಗಳ ನಿರ್ಮಾಪಕರಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟರು.

ಗಾಂಧೀವಾದಿಗಳ ಸಭೆ

ಮಾರ್ಚ ತಾ.13,14 ಮತ್ತು 15ರಲ್ಲಿ ಸೇವಾಗ್ರಾಮದಲ್ಲಿ ಸೇರಿದ್ದ ಗಾಂಧಿಜೀ ಅನುಯಾಯಿಗಳ 'ವಿಧಾಯಕ ಕಾರ್ಯಕರ್ತರ ಸಮ್ಮೇಳನವು' ಸದ್ಯ ಸ್ಥಿತಿಯಲ್ಲಿ ಅತಿ ಪ್ರಾಮುಖ್ಯದ್ದೆನ್ನಬಹುದು. ರಾಷ್ಟ್ರಪತಿ ರಾಜೇಂದ್ರ ಪ್ರಸಾದ್, ಆಚಾರ್ಯ ಕೃಪಲಾನಿ, ಶ್ರೀಮತಿ ಕೃಪಲಾನಿ, ಶಂಕರ ರಾವ್ ದೇವೋ, ಡಾ| ಪ್ರಫುಲ್ಲಚಂದ್ರ ಘೋಸ್, ಡಾ| ಝುಕೀರ್ ಹುಸ್ಸೇನ್, ಜೈರಾಮದಾಸ್ ದೌಲತ್‌ರಾಮ್, ರಾಜಕುಮಾರಿ ಅಮೃತ ಕೌರ್, ಮೌಲಾನಾ ಆಜಾದ್, ಅಪ್ಪಾ ಸಾಹೇಬ್ ಪಟ್ವರ್ಧನ್ ಮೊದಲಾದ ಪ್ರಮುಖರು ಈ ಸಮ್ಮೇಳನದಲ್ಲಿ ಭಾಗ ವಹಿಸಿದ್ದರು. ಗಾಂಧಿಜೀಯ ಅನುಯಾಯಿಗಳಾದ 450 ಮಂದಿಗೂ ಮಿಕ್ಕಿದ ಕಾಂಗ್ರೆಸ್ ಕೆಲಸಗಾರರು ಸಮ್ಮೇಳನದಲ್ಲಿದ್ದರು. ಮಹಾತ್ಮರ ತತ್ವ, ಧೋರಣೆ, ಹಾಗೂ ಕಾರ್ಯಕ್ರಮಗಳಿಗನುಸಾರವಾಗಿ ಅವರ ಸಂಸ್ಥೆಗಳನ್ನೂ ವಿಧಾಯಕ ಕಾರ್ಯಕ್ರಮಗಳನ್ನೂ ಸಾಗಿಸುವರೆ ಒಂದು ಸಂಘ ಸ್ಥಾಪನೆ ಮಾಡಿಕೊಳ್ಳುವ ಪರ್ಯಾಲೋಚನೆಯು ಅಲ್ಲಿ ನಡೆದಿದೆ. ವಿಶಾಖಪಟ್ಟಮಿನ ನಾವೆಯ ಪ್ರಾರಂಭೋತ್ಸವ ನೆರವೇರಿಸಬು ಹೊರಟಿದ್ದ ಪಂಡಿತ ನೆಹರುಗಳೂ ತಾ. 15ರಲ್ಲಿ ಸೇವಾಗ್ರಾಮಕ್ಕೆ ಬಂದು ಕೆಲಸಗಾರರ ಸಮ್ಮೇಳನದ ಚರ್ಚೆಯಲ್ಲಿ ಭಾಗವಹಿಸಿದ್ದರು. ನಾಗಪುರದಲ್ಲಿ ಪಂಡಿತರಿಗೆ ಸಂಭ್ರಮದ ಸ್ವಾಗತ ದೊರೆಯಿತು. ನೆಹರುಗಳು ಅಲ್ಲಿಯ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಗಾಂಧಿಜೀಯ ಮಾರ್ಗಾವಲಂಬನೆಯೊಂದೇ ರಾಷ್ಟ್ರದಹ್ಯಾಗೂ ಲೋಕದ ವಿಮೋಚನೆಯ ಮಾರ್ಗವೆಂಬುದನ್ನು ಒತ್ತಿ ಹೇಳಿದರು."ಭಾರತದ ಮುಂದೆ ಈಗ ಎರಡೇ ಮಾರ್ಗಗಳಿವೆ. ಒಂದು ಮಹಾತ್ಮಾ ಗಾಂಧಿಯವರು ಮುಂದಿಟ್ಟಿರುವ ಸತ್ಯ ಮತ್ತು ನ್ಯಾಯದ ಮಾರ್ಗ. ಮತ್ತೊಂದು ಲೋಕಕ್ಕೆ ಅಪಾಯ ಪರಂಪರೆಗಳನ್ನೊಡ್ಡಿರುವ ವಂಚನೆ ಹಾಗೂ ದ್ರೋಹದ ಮಾರ್ಗ. ಈ ಪೈಕಿ ಮೊದಲನೇ ಮಾರ್ಗವನ್ನು ನಾವು ಅನುಸರಿಸಿದರೆ ಇಂದು ನಮ್ಮನ್ನಿದಿರಿಸಿರುವ ಹಲವು ಸಮಸ್ಯೆಗಳನ್ನು ಸುಲಭವಾಗಿಯೂ ಶಾಂತಿಯಿಂದಲೂ ನಿವಾರಿಸಿಕೊಳ್ಳಬಹುದು" ಎಂದರು. "ನಾವು ಯಾವುದೇ ಸಂದರ್ಭ ಹಾಗೂ ಎಲ್ಲಾ ಪರಿಸ್ಥಿತಿಗಳಲ್ಲೂ ನಮ್ಮ ರಾಜಕೀಯಾಂಗದಲ್ಲಿ ಸೇರಿ ಹೋಗಿರುವ ಜಾತೀಯ ವಿಷವನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳಲೇ ಬೇಕು. ಈ ಕೆಲಸವೇನೂ ದಿಲ್ಲಿಯಲ್ಲಿ ಕುರ್ಚಿಗಳಲ್ಲಿ ಕುಳಿತುಕೊಂಡಲ್ಲಿಯೇ ಮಾಡುವಂತಹದಲ್ಲ. ಬಯಲಿಗಿಳಿದು ಬಂದೇ, ಜನರ ನಡುವೆ ಸೇರಿಕೊಂಡೇ ಅದನ್ನು ಸಾಧಿಸಬೇಕು" ಎಂದರು ಪಂಡಿತಜೀ. ಭಾರತಕ್ಕೊದಗಲಿದ್ದ ಒಂದು ಮಹತ್ವಾದ ಗಂಡಾಂತರವನ್ನು ದಿಲ್ಲಿಯಲ್ಲಿ ಜಾತೀಯ ಸೌಹಾರ್ದ್ರತೆ ಸ್ಥಾಪಿಸುವ ಮೂಲಕ ಗಾಂಧಿಜೀ ಬೇಗೆ ತಪ್ಪಿಸಿಬಿಟ್ಟರೆಂಬುದನ್ನು ಪಂಡಿತ ನೆಹರುಗಳು ವರ್ಣಿಸುತ್ತಾ ಆಮೂಲಾಗ್ರವಾಗಿ ಜಾತೀಯತೆಯನ್ನು ನಿರ್ಮೂಲಿಸಿಕೊಳ್ಳುವುದೇ ಗಾಂಧಿಜೀಗೆ ಸಲ್ಲಿಸಬೇಕಾಗಿರುವ ಗೌರವವೆಂದರು. "ಮಹಾತ್ಮಾ ಗಾಂಧಿಯವರ ಕೊಲೆಯೆಂದರೆ, ಸದ್ಯದ ಸರಕಾರವನ್ನು ಬದಲಾಯಿಸಿ, ಹಿಂಸೆಗಿಳಿಯುವದಕ್ಕಾಗಿ ಹಿಂದೂ ಮಹಾ ಸಭೆಯು ನೀಡಿರುವ ಧುರವಿಳ್ಯ. ಈ ರೀತಿಯಿಂದ ಹೊಸ ಸ್ಥಿತಿ ನಿರ್ಮಿಸಬಹುದೆಂದು ಭಾವಿಸಿಕೊಳ್ಳುವುದು ತಿಳಿಗೇಡಿತನವೇ ಸರಿ. ಕೆಲವು ತರುಣರು ಇಷ್ಟೂ ಅಧೋಗತಿಗಿಳಿದಿದ್ದಾರೆಂಬುದನ್ನು ಊಹಿಸುವಾಗ ನನಗೆ ವೇದನೆಯಾಗುತ್ತಿದೆ. ಅಧಿಕಾರ ಸ್ಥಾನದಿಂದ ಕೆಳಗಿಳಿದು ಈ ಜಾತೀಯತಾ ಧುರಾಹ್ವಾನವನ್ನು ಬಹಿರಂಗವಾಗಿ ಇದಿರಿಸಬೇಕೆಂಬ ಯೋಚನೆ ಒಂದೊಂದು ಬಾರಿ ನನ್ನಲ್ಲಿ ಮೂಡುತ್ತಿದೆ. ಜಾತೀಯತೆಯೆಂಬುದು ಎಲ್ಲಾ ರೀತಿಯಿಂದಲೂ ಪ್ರಜಾಪ್ರಭುತ್ವಕ್ಕೆ ಹುಟ್ಟು ವಿರೋಧಿಯಿದ್ದು ಸರ್ವಸಾಮಾನ್ಯವಾಗಿ ನಾಜೀ ಹಾಗೂ ಫೇಸಿಸ್ಟ್ ವಿಧಾನಗಳನ್ನೇ ಅವಲಂಬಿಸಿರುವಂತಹುದು. ಭಾರತವು ಎಂದಿಗೂ 'ಹಿಂದೂ ರಾಜ್ಯ'ವಾಗುವುದು ಹೇಗೆ ಅಸಾಧ್ಯವೋ ಹಾಗೆಯೇ ಪಾಕಿಸ್ತಾನವೆಂದಾದರೂ 'ಇಸ್ಲಾಂ ರಾಜ್ಯ' ಸ್ಥಾಪನೆಯಲ್ಲಿ ಜಯಶಾಲಿಯಾದೀತೆಂಬ ನಂಬಿಕೆ ನನಗಿಲ್ಲ. ಧಾರ್ಮಿಕ ಅಥವಾ ಜಾತೀಯತಾ ರಾಜ್ಯ ವ್ಯವಸ್ಥೆಗೆ ಜಗತ್ತಿನಲ್ಲಿ ಅಸ್ತಿತ್ವವೇ 'ಇಲ್ಲ'"ಎಂದು ಸ್ಪಷ್ಟ ಪಡಿಸಿದರು ಪಂಡಿತ ನೆಹರು.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೫,೦೦೦ ಯೂ ಅದಕ್ಕೆ ಮೇಲ್ಪಟ್ಟು ರೂ. ೧೦೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿವೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
೪ ರಿಂದ ೫ ತಿಂಗಳು ,, ,, ೨।'
೬ ರಿಂದ ೯ ತಿಂಗಳು ,, ,, ೨॥

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೫,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD. 1906.

ಭಾರತ ಪಾರ್ಲಿಮೆಂಟಿನಲ್ಲಿ

ಹಿಂದೀ ಪಾರ್ಲಿಮೆಂಟಿನಲ್ಲಿ ಆಯ-ವ್ಯಯ ಪಟ್ಟಿಯ ವಿವಿಧ ವಿಭಾಗಗಳ ಚರ್ಚೆಯ ವೇಳೆ ಜೀವಂತ ತರ್ಕ ಹಾಗೂ ಉಪಯುಕ್ತ ಸಲಹೆಗಳು ಮುಂದೆ ಬಂದಿವೆ. ಮುಖ್ಯವಾಗಿ ನಿರಾಶ್ರಿತರ ರಕ್ಷಣಾ ವ್ಯವಸ್ಥೆ; ಅಪಹೃತ ಸ್ತ್ರೀಯರ ಶೋಧನೆ ಪಾಲನೆಗಳ ಕಡೆಗೆ ಹಲವರು ಆತ್ಯಾತುರ ತೋರಿಸಿದ್ದಾರೆ. ಸರಕಾರದಿಂದ ಈ ಕುರಿತು ಸಮಾಧಾನಕರ ಆಶ್ವಾಸನೆಗಳು ಬಂದಿವೆ; ದೇಶದ ಅನಕ್ಷರತೆಯನ್ನು ನಿವಾರಿಸಲು ಪಂಚ ವಾರ್ಷಿಕ ಯೋಜನೆಯೊಂದು ಪ್ರಾರಂಭಿಸಲ್ಪಡುವದೆಂದು ವಿದ್ಯಾ ಸಚಿವರ ಆಶ್ವಾಸನೆ ದೊರೆತಿದೆ. ಕರಾವಳೀ ಹಡಗ ವ್ಯಾಪಾರವೆಲ್ಲಾ ಹಿಂದೀ ಹಡಗಗಳಿಂದಲೇ ನಡೆಯುವಂತೆ ನೋಡುವ ಉದ್ದೇಶವು ಸರಕಾರದ್ದಾದರೂ ಪ್ರಸ್ತುತದ ತೊಂದರೆಯೆಂದರೆ ಸಾಕಷ್ಟು ಹಡಗವಿಲ್ಲದಿರುವುದೇ, ಎಂದು ವ್ಯಾಪಾರ ಮಂತ್ರಿ ತಿಳಿಸಿದ್ದಾರೆ. ಪ್ರಪಂಚದ ಪ್ರಮುಖ ರಾಷ್ಟ್ರಗಳ ಯಾವ ಪಂಗಡ ಬಲೆಯೊಳಗೂ ಬೀಳದೆ ಸ್ವತಂತ್ರವಾದ ವಿದೇಶ ಧೋರಣೆ ವಹಿಸುವುದೇ ಭಾರತ ಸರಕಾರದ ಉದ್ದೇಶವೆಂದು ವಿದೇಶಮಂತ್ರಿ ಖಚಿತಗೊಳಿಸಿದ್ದಾರೆ. ಆಶ್ರಿತ ರಾಜ್ಯಗಳನ್ನು ಕೇಂದ್ರದೊಳಗೆ ಜೋಡಣೆಗೊಳಿಸಿಕೊಳ್ಳುವ ಕಾರ್ಯವು ಅತ್ಯಂತ ಜಯಶೀಲವಾಗಿ ಜರಗಿದೆಯೆಂದು ಸಂಸ್ಥಾನಿಕ ಸಚಿವರು ತಿಳಿಸಿ ಕೇಂದ್ರದೊಂದಿಗೆ ಸೇರಿಕೊಂಡ ಸಂಸ್ಥಾನಗಳ ವಿವರವನ್ನು ನಿವೇದಿಸಿಕೊಂಡಿದ್ದಾರೆ. ರಕ್ಷಣಾವೆಚ್ಚವನ್ನು ತಗ್ಗಿಸಬೇಕೆಂಬ ಸೂಚನೆಗಳು ಸದಸ್ಯರಿಂದ ಬಂದಿವೆ. ಹಿಂದೀಕೇಂದ್ರದೊಂದಿಗೆ ಸೇರಿದ ಆಶ್ರಿತರಾಜರಿಗೆ, ಅವರ ಖಾಸಗೀ ಹಣವಾಗಿ ಬಿಡುವ ಮೊತ್ತವು ವರುಷಕ್ಕೆ 10 ಲಕ್ಷ ರೂಪಾಯಿಗಳಿಗೆ ಮಿಕ್ಕಿ ಇರಬಾರದೆಂದು ಭಾರತ ಸರಕಾರದ ಸಂಸ್ಥಾನಿಕ ಮಂತ್ರಿ ಖಾತೆಯ ಸೂಚನೆಯಿದೆಯೆಂದೂ ಇದಕ್ಕೆ ರಾಜರುಗಳ ಒಪ್ಪಿಗೆಯಿದೆಯೆಂದೂ ತಿಳಿದು ಬರುತ್ತದೆ. ಭಾರತ ಪಾಕಿಸ್ತಾನಗಳೊಳಗಿನ ವ್ಯಾಪಾರ ಸಂಬಂಧದ ಮಾತುಕತೆಗಳೂ ಒಂದೆಡೆ ಸಾಗುತ್ತಿರುವಂತಿದೆ.

ಭಾರತ ಸರಕಾರದ ವ್ಯಾಪಾರ ಮಂತ್ರಿ ಶ್ರೀ ಸಿ. ಯಚ್. ಭಾಭಾ, ಅವರು ತನ್ನ ಸ್ವಂತ ಕಾರಣಗಳ ಮೇಲಿಂದ ತನ್ನ ಸ್ಥಾನಕ್ಕೆ ರಾಜೀನಾಮೆಯೊಪ್ಪಿಸಿದ್ದಾರೆಂದೂ "ಬಜೆಟ್" ಅಧಿವೇಶನ ಮುಗಿಯುವ ತನಕ ಆ ಪದವಿಯಲ್ಲಿರುವಂತೆ ಕೇಳಿಕೊಂಡು ರಾಜೀನಾಮೆಯನ್ನಂಗೀಕರಿಸಲಾಗಿದೆಯೆಂದೂ, ನಂತರ ವ್ಯಾಪಾರ ಖಾತೆಯನ್ನೂ ಗಣಿಗಳ ಹಾಗೂ ಕೆಲಸಖಾತೆಯ ಮಂತ್ರಿಯಾದ ಶ್ರೀ ಗಡ್ಗಿಲರೇ ನೋಡಿಕೊಳ್ಳುವರೆಂದೂ ಸುದ್ದಿಯಿದೆ.

ಕೆಲವು ಗಡಿ ಘರ್ಷಣೆಗಳಿಂದಾಗಿರುವ ಪ್ರಾಣ ಮತ್ತು ಸೊತ್ತು ನಷ್ಟಗಳಿಗಾಗಿ ಹೈದರಾಬಾದ ಸರಕಾರದಿಂದ ಭಾರತ ಸರಕಾರವು ನಷ್ಟ ಪರಿಹಾರ ಕೇಳಿದೆಯೆಂದು ತಿಳಿದುಬರುತ್ತದೆ.

(೬ನೇ ಪುಟ ನೋಡಿರಿ)

The Canara Banking Corporation Limited.
Estd 1906.
(Incorporated in British India)
Head Office: **UDIPI**, S. India.

SEASON DEPOSITS

for Rs 5000 - and over are now accepted at all Offices of the Bank at the following rates.—
3 & 4 months — @ 2½ % p. a.
5 & 6 months — @ 2¾ % p. a.

ನವಯುಗ

ಗುರುವಾರ, ಉಡುಪಿ, ೧೮-೩-'೪೮

ಜಿಲ್ಲೆಯ ಆಹಾರ ಪರಿಸ್ಥಿತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಳ್ಳೀ ಹಸುಗೆ ರದ್ದಾದಂದಿನಿಂದ ಅಕ್ಕಿಯ ಬೆಲೆಯು ರೂ. 25ರಿಂದ 30 ಮತ್ತು ಕೆಲವು ಸಂದರ್ಭಗಳಲ್ಲಿ ಈ ಗಡಿ ಮೀರಿಯೂ ಏರಿರುವ ವಾರ್ತೆ ದಿಗಿಲುಗೊಳಿಸುತ್ತಿದೆ. ಇದೇ ತಾ. 14ರಿಂದ ಉಡುಪಿ ನಗರದ ಹಸುಗೆ ತೆಗೆದುಹಾಕಲ್ಪಟ್ಟು ಉಡುಪಿಯೂ ಹಳ್ಳೀ ಪಂಗ್ತಿಗೆ ಸೇರಿದೆ. ತಾ.14ರ ನಂತರದ ಒಂದೇ ವಾರದ ಮಟ್ಟಿಗೆ ಕೊನೆಯ ಕೊಡುಗೆಯಾಗಿ ಉಡುಪಿಯವರಿಗೆ ಹಸುಗೇ ಅಕ್ಕಿ ದೊರೆತಿದೆ. ಇನ್ನು ಮುಂದಿನ ವ್ಯವಸ್ಥೆ ಹೇಗೆ ಎಂಬುದು ಇದುವರೆಗೆ ಸ್ಪಷ್ಟವಾಗಿಲ್ಲವಾದರೂ, ಬಹುತೇಕವಾಗಿ ಉಡುಪಿ ನಗರದ ಪ್ರತಿಯೊಬ್ಬ 'ಕಾರ್ಡುದಾರ'ನಿಗೂ ಅಕ್ಕಿ ಮಾರುವ 'ರಕ್ಷಣಾ ಅಂಗಡಿ'ಗಳನ್ನು ಸರಕಾರವು ಅಲ್ಲಲ್ಲಿ ತೆರೆಯದೆ ನಿರ್ವಾಹವಿಲ್ಲವೆಂಬುದಂತೂ ಖಂಡಿತ. ಈ ಸಂಬಂಧದ ವ್ಯವಸ್ಥೆ ನಡೆಯುತ್ತಿದೆ ಎಂದು ತಿಳಿದುಬರುತ್ತದೆ. ಈ ನಡುವೆ ರೂ. 25-30ರ ಮೌಲ್ಯದಲ್ಲಿ ಬಿಕ್ಕಿ ವಹಿವಾಟುಗಳು ನಡೆಯುತ್ತಿರುವ ವಾರ್ತೆಗಳು ಬರುತ್ತವೆ. ಇಡೀ ಜಿಲ್ಲೆಯ ವಿದ್ಯಮಾನವನ್ನು ನೋಡಿದರೆ, ಧಾರಣೆಯು ರೀತಿ ಏರದಂತೆ ಅಧಿಕಾರಿಗಳು ಸಾಕಷ್ಟು ಮುಂಜಾಗ್ರತೆ ವಹಿಸಿದುದು ಕಂಡುಬರುವುದಿಲ್ಲ. ಹೀಗಾಗುವುದು ಅನಿವಾರ್ಯವೆಂದು ಕೆಲವು ಮಾಸ್ತ್ರನುವಾಲರಲ್ಲಿರುವ ಆತ್ಮ ಸಮಾಧಾನವೇ ಒಂದು ಪರಿಮಾಣದಲ್ಲಿ ಅಧಿಕಾರಿಗಳಲ್ಲೂ ಇರುವಂತಿದೆ. ಅಂದ ಮೇಲೆ ಬಡವರು ಬಾಳಬಲ್ಲರೇ? ಎಂಬ ಪ್ರಶ್ನೆ ಎಲ್ಲೆಲ್ಲಿಂದಲೂ ಕೇಳಿಬರುತ್ತಿರುವುದು ಸಹಜವೇ. ಸರ್ವಸಾಮಾನ್ಯವಾಗಿ ಅಕ್ಕಿಯ ಅಭಾವದ ಕಾಲ ಇದಲ್ಲ; ಈಗಲೇ ಹೀಗಾದರೆ ಮುಂದಿನ ಮಳೆಗಾಲದಲ್ಲಿ ಹೇಗೆ? ಸಂಪಾದನೆ ಕಡಿಮೆಯಿರುವ ಸರ್ವಸಾಮಾನ್ಯರು ಅದನ್ನು ದಾಟಬಲ್ಲರೇ?

ಅಕ್ಕಿ ವಿನಿಯಂತ್ರಣದ ಕಡೆಗೆ ಕೊಡುವ ಲಕ್ಷ್ಯವನ್ನು, ಸರ್ವ ವಿಧಾನಗಳಿಂದಲೂ ಕಡೆಗಣಿಸಲ್ಪಟ್ಟಿರುವ ಧಾನ್ಯೋತ್ಪಾದಕ ಸಾಗುವಳೀದಾರ ರೈತನಿಗೆ ಪ್ರೋತ್ಸಾಹಕೊಡುವ ಕಡೆಗೆ ತಿರುಗಿಸಿ, ಸಾಕಷ್ಟು ಆಹಾರಧಾನ್ಯ ಸಂಗ್ರಹಭರವಸೆ ಮೂಡುವ ವರೆಗೆ ಧಾನ್ಯ ನಿಯಂತ್ರಣಗಳನ್ನು ರದ್ದುಪಡಿಸುವುದು ನ್ಯಾಯವಲ್ಲವೆಂಬ ನಮ್ಮ ಹಿಂದಿನ ವಾದವು ಅಚಲವಿದ್ದು ಈಗಿನ ಆಗುಹೋಗುಗಳಿಂದ ಅನುಮೋದಿಸಲ್ಪಟ್ಟಿದೆ. ಹೇಗಿದ್ದರೂ ನಿಯಂತ್ರಣವನ್ನು ಆದಷ್ಟು ಬೇಗನೆ ಪೂರ್ತಿ ರದ್ದುಪಡಿಸುವ ಗುರಿಯಿಟ್ಟುಕೊಂಡು, ಸರಕಾರವೀಗ ಬಹಳ ಮಟ್ಟಿಗೆ ಅದನ್ನು ಸಮೀಪಿಸಿಯೂ ಆಗಿದೆ. ನಿಯಂತ್ರಣ ರದ್ದತಿಯಿಂದ ಒಂದೆಡೆ ಹಾನಿಯಿರುವಂತೆಯೇ ಇನ್ನೊಂದೆಡೆ ಹಿತವಿದೆಯೆಂಬುದನ್ನಾರೂ ಅಲ್ಲಗಳೆಯುವದಿಲ್ಲ. ಇವೆರಡನ್ನೂ ತೂಗಿ ನೋಡುವಾಗ ಸದ್ಯಸ್ಥಿತಿಯಲ್ಲಿ ಹಿತಕ್ಕಿಂತ ಹಾನಿ ಹೆಚ್ಚೆಂದು ಕಂಡುಬಂದುದರಿಂದಲೇ, ಅದು ಕೂಡದೆಂಬ ವಾದವೆದ್ದುದು. ಇನ್ನಾದರೂ ಈ ಹಿತಾಹಿತಗಳ ಭಾರಗಳನ್ನು ಪರಸ್ಪರ ಬದಲಾಯಿಸಲು ಸಾಧ್ಯವಿದೆ. ಹಾಗಾಗಬೇಕಾದರೆ ಸ್ಥಿತಿಗತಿಗಳನ್ನು ಸರಿಯಾಗಿ ತಿಳಿದುಕೊಂಡು, ಅಲ್ಲಿರುವ ಎಲ್ಲಾ ದೋಷಗಳನ್ನೂ ನಿವಾರಿಸಬೇಕು.

ಮೊದಲನೆಯದಾಗಿ ಧಾನ್ಯೋತ್ಪಾದಕ ರೈತರ ಮುಖ್ಯ ಬೆಳೆಗಳ ಉತ್ಪತ್ತಿಗಳನ್ನು ಸ್ವಾಧೀನಪಡಿಸಿಕೊಂಡ ಮೇಲೆಯೇ ನಿಯಂತ್ರಣ ರದ್ದಾಯಿತೆಂಬುದನ್ನೂ, ಧಾನ್ಯೋತ್ಪಾದಕರಲ್ಲಿ ಬಹುಸಂಖ್ಯಾಕರೀಗ ಧಾನ್ಯವಿಲ್ಲದವರೆಂಬುದನ್ನೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು; ಎರಡನೆಯದಾಗಿ ಹೆಚ್ಚು ಹುಟ್ಟುವಳಿಯಿರುವ ಕೆಲವೇ ಮಂದಿ ವರ್ಗದಾರರ ಜಾಸ್ತಿನುಗಳೂ ಅಧಿಕ ಬೆಲೆಗೀಗ ವ್ಯಾಪಾರಿಗಳಿಗೆ ಖರೀದಿಯಾಗುತ್ತಿವೆ ಎಂಬುದನ್ನು ಮರೆಯಬಾರದು; ಮೂರನೆಯದಾಗಿ ಹೆಚ್ಚು ಬೆಲೆಯಲ್ಲಾದರೂ ಸಾಮಾನ್ಯ ಜನರ ನಡುವೆ ಈಗ ಊಟದಕ್ಕಿಯ ಚಲಾವಣೆಯಾಗುತ್ತಿದೆಯಾದರೆ, ಈ ವಹಿವಾಟು ಅಲ್ಪಾವಧಿಯದಿದ್ದು ಇನ್ನು ಒಂದೆರಡು ತಿಂಗಳೊಳಗೆ ಅದು ನಿಲ್ಲಲಿದೆಯೆಂದು ತಿಳಿದಿರಬೇಕು, ಅಂತೂ ಕಾಲಕಳೆದಂತೆ ಜನರಲ್ಲಿ ಅತ್ಯಧಿಕ ಬಹುಸಂಖ್ಯಾಕರ ನಡುವಿನ ಆಹಾರ ಧಾನ್ಯವು ಮಾಯವಾಗುತ್ತಾ ಬಂದು, ಅದನ್ನು ಪಡೆಕೊಂಡು ಸಂಗ್ರಹಿಸುತ್ತಾ ಬಂದ ವ್ಯಾಪಾರಿಗಳ ಕೈಯಲ್ಲಿ ಮಾತ್ರ ಉಳಿಯಬಹುದು; ಆಹಾರ ವಹಿವಾಟಿನ ಕೇಂದ್ರವೇ ಅವರಾಗಬಹುದು. ಇಂದಿನ ಏರಿಕೆಯ ಬೆಲೆಗೆ ಪಡೆಕೊಂಡ ಆ ಅಕ್ಕಿಯ ಮಾರಾಟ ಧಾರಣೆ ಹೇಗಿರಬಹುದೆಂಬ ಊಹೆ ಕೂಡಾ ಸಂಕಟದಾಯಿಯಿದೆ. ಮಾತ್ರವಲ್ಲ, ಈ ಅಕ್ಕಿಯಾದರೂ ಈ ಜಿಲ್ಲೆಯಲ್ಲೇ ವಿನಿಯೋಗಿಸಲ್ಪಡಬಹುದೆಂದು ನಂಬುವದಾದರೂ ಹೇಗೆ? ಇಲ್ಲಿಗಿಂತ ಹೆಚ್ಚಿನ ಅಭಾವವಿರುವ ಮಲಬಾರಿಗೆ ಇಲ್ಲಿಂದೀ ಮೊದಲು ಅಕ್ಕಿ ರವಾನೆಯಾಗುದಿಲ್ಲವೇ? ಈಗ ಆಗುತ್ತಿಲ್ಲವೆ? ಇವೆಲ್ಲಾ ವಹಿವಾಟುಗಳಿಗಾಸ್ಪದ ದೊರೆತಿದ್ದು, ಇನ್ನೂ ಹಾಗೆಯೇ ಮುಂದುವರಿದಲ್ಲಿ ಪರಿಸ್ಥಿತಿಯೆಷ್ಟು ಭೀಕರವಾಗುವುದೋ ಹೇಳುವುದಸಾಧ್ಯ.

ಇಂತಹ ಪರಿಸ್ಥಿತಿಯಲ್ಲಿ ಸರಕಾರದ ಕರ್ತವ್ಯ ಸ್ಪಷ್ಟವಿದೆ; ಸಾಮಾನ್ಯ ಕಾಲಗಳಲ್ಲೂ ತನ್ನಲ್ಲಿಯ ಉತ್ಪತ್ತಿ ತನಗೆ ಸಾಕಾಗದ ದಕ್ಷಿಣ ಕನ್ನಡ ಜಿಲ್ಲೆಯಿಂದ ಹೊರಗೆ ಅಕ್ಕಿ ಹೋಗದಂತೆ ಕಠಿಣ ಕಾವಲಿಡುವುದು ಮಾತ್ರವಲ್ಲ- ಜಿಲ್ಲೆಯಿಂದೀವರೆಗೆ ಹೊರಗೆ ಹೋಗಿರಬಹುದಾದ ಪರಿಮಾಣದಷ್ಟನ್ನಾದರೂ ಈಗಲೇ ಇಲ್ಲಿಗೆ ಮರಳಿಸಬೇಕು. ತಾಲೂಕು-ತಾಲೂಕುಗಳೊಳಗಿನ ಧಾನ್ಯಚಲಾವಣಾ ಜವಾಬ್ದಾರಿಯು ಸರಕಾರದ್ದೇ ಆಗಿದ್ದು ಅದನ್ನು ಅತ್ಯಂತ ನಿಷ್ಠೆಯಿಂದ ನಿರ್ವಹಿಸಬೇಕು. ಉಡುಪಿಯಂತಹ ನಗರದಲ್ಲಿ ಮಾತ್ರವಲ್ಲ -ಗಿರಾಕಿಗಳಿರುವ ಪ್ರತಿಯೊಂದು ಹಳ್ಳಿಗಳಲ್ಲೂ ಸರಕಾರದ 'ಧಾನ್ಯದ ಅಂಗಡಿ' ಯಾಗಬೇಕು. ಆ ಅಂಗಡಿಗಳಿಗೆ ಕೆಲಸಬಿಟ್ಟು ಪ್ರತಿದಿನವೂ ನಾಲ್ಕೈದು ಮೈಲುಗಳಷ್ಟು ನಡೆದುಬರುವ ಹಳ್ಳಿಗರ ಆಪತ್ತಿಗೆ, ಬೇರೇನೂ ಮಾಡಲಾಗದಿದ್ದರೂ ಅದನ್ನು ವಾರಕ್ಕೊಮ್ಮೆಯೆಂದಾದರೂ ಮಾರ್ಪಡಿಸಬೇಕು. ದಕ್ಷಿಣ ಕನ್ನಡದ ಬೆಳೆಗಳಿಂದ ಸಂಗ್ರಹಿಸಿಕೊಂಡ ಅಂತ- ಅಭಾವವಿರುವ ಭಾಗಗಳಿಗಾಗಿ ಹೊರಗಿನಿಂದ ಆಮದಾಗಿ ಬರುವ ಆಹಾರಧಾನ್ಯಗಳ ಪಾಲು—ಇವೆಲ್ಲಾ ಜಿಲ್ಲೆಯ ಪ್ರತಿಯೊಂದು 'ಸರಕಾರೀ ಅಂಗಡಿ'ಗಳಲ್ಲೂ, ಕೊಂಡುಣ್ಣುವವರಿಗೆ ದೊರೆಯುವಂತಾದರೆ, ಧಾರಣೆಯೇರದಂತೆ ಮಾಡಲು ಬೇರಿನ ಕಾರ್ಯ ಕೈಕೊಳ್ಳುವ ಅಗತ್ಯವೂ ಬೀಳದು; ಈ ಕಮನ ಕಾರ್ಯವನ್ನು ಏನೊಂದೂ ಲೋಪವಿಲ್ಲದೆ, ಜಯಶೀಲವಾಗಿ ಜರಗಿಸುವುದು ಅಸಾಧ್ಯವಾದರೆ, ಪುನಃ ಕಟ್ಟುನಿಟ್ಟಿನ ನಿಯಂತ್ರಣ ಹಾಗೂ ಹಸುಗೇ ಕ್ರಮವನ್ನೇ ಜ್ಯಾರಿಗೆ ತಂದು ಆವಶ್ಯವಿನ್ನಾವರೂ ಸರ್ವರೂ ಸಮಾನವಾಗಿ ಅನುಭವಿಸುವಂತೆ ಮಾಡುವದೇ ವಾಸಿಯೆನ್ನುತ್ತೇವೆ.

ಬನವಾಸಿ ಮಧುಕೇಶ್ವರ ಹರಿಜನರಿಗೆ ಪ್ರವೇಶ ಕೊಟ್ಟ. ಉಡುಪಿಯಂತಹ ದೇವಾಲಯಗಳಿಗೇನು?

ಗಾಂಧಿಜೀಯ ಬಲಿದಾನದ ಯೋಗ್ಯ ಸ್ಮಾರಕವೆನಿಸುವಂತೆ ಮೈಸೂರು ಸಂಸ್ಥಾನದ ದೇವಾಲಯಗಳಿಗೆ ಹರಿಜನರೇ ಮೊದಲಾದ ಎಲ್ಲಾ ಕೆಳಜಾತಿಯವರಿಗೂ ಪ್ರವೇಶ ಸಮ್ಮತಿಕೊಟ್ಟ ಮೈಸೂರು ಸರಕಾರದ ಜಾಹೀರುನಾಮೆಯು ಸ್ತುತ್ಯವಿದೆ. ಮೈಸೂರು ಸರಕಾರದಿಂದ ಸಹಾಯ ಪಡೆಯುತ್ತಿರುವ ಇತರ ಕಡೆಗಳ ದೇವಸ್ಥಾನಗಳು, ಮೈಸೂರು ಮಾಡಿದ ಈ 'ಮಾದರಿ ಸಹಾಯ"ವನ್ನೂ ಅಂಗೀಕರಿಸಿಕೊಳ್ಳಬಾರದೇಕೆ?

ಈ ಸಂದರ್ಭದಲ್ಲಿ ಇದೇ ಫೆಬ್ರವರಿ ತಾ. 22ರಲ್ಲಿ ಹರಿಜನರನ್ನು ಬರಮಾಡಿಸಿಕೊಂಡು ಪೂಜೆ, ವಂದನೆ ಪಡೆದ ಬನವಾಸಿಯ ಮಧುಕೇಶ್ವರನ ನೆನಪಾಗುತ್ತಿದೆ. ಸ್ಥಳ ಮಹಾತ್ಮೆ, ಸಂಪ್ರದಾಯದ ಕಟ್ಟುನಿಟ್ಟುಗಳ ನೆವ ಹೇಳಿ ಇನ್ನೂ ಹರಿಜನರಿಗೆ ಪ್ರವೇಶ ಕೊಡದ ದೇವಾಲಯಗಳ ಅಧಿಕಾರಿಗಳ ಆಕ್ಷೇಪಗಳಿಗೆ ಉತ್ತರವು ಬನವಾಸಿಯಿಂದಲೇ ಬಂದಿದೆ-ಅವರ ಮನಸ್ಸಿನ ಎಲ್ಲಾ ಸಂಕೋಚಗಳಿಗೂ ಮಧುಕೇಶ್ವರನೇ ಮದ್ದರೆದಿದ್ದಾನೆ!

ಬನವಾಸಿಯ ಮಧುಕೇಶ್ವರ—

ಇದು ಸುಮಾರು 1800ವರುಷಗಳ ಪೂರ್ವದಲ್ಲಿ ಕಟ್ಟಿದ್ದ ದೇವಾಲಯ. ಕಟ್ಟಿಸಿದವರು ಕದಂಬ ವಂಶದ ರಾಜರೆಂದು ತಿಳಿದು ಬಂದಿದೆ. ಈ ದೇವಸ್ಥಾನದ ಶಿಲ್ಪಕಲೆಯು ಕಲಾವಿದರ ಶ್ಲಾಘನೆಗೂ ಸಾಮಾನ್ಯರ ಆನಂದಕ್ಕೂ ಪಾತ್ರವಾಗಿದೆ; ಹೆಸರಾಗಿದೆ. ಇನ್ನು ಪಾವಿತ್ರ್ಯದ ಮಟ್ಟಿಗೆ 'ಕನ್ನಡ ನಾಡಿನ ಕಾಶಿ'ಯೆಂದೇ ಇದಕ್ಕೆ ಹೆಸರು.

ಮೇಲ್ಛಾವಣಿ ಸಹಿತ ಈ ದೇವಾಲಯದ ಇಡೀ ಕಟ್ಟಡವು ಸಂಪೂರ್ಣವಾಗಿ ಕೃಷ್ಣಶಿಲೆಯಿಂದ ರಚಿತವಾಗಿದೆ. ಗೋಪುರಗಳು ಹಾಗೂ ಶಿಲಾಸ್ತಂಭಗಳು ಕಲೆ, ಕಾಲ ಮತ್ತು ಹಿಂದೂಧರ್ಮದ ಅಮೋಘತೆಯನ್ನು ಮನಮುಟ್ಟಿಸುವಂತಹವು. ಪ್ರಥಮ ಗೋಪುರದ ಕೆಳಗೆ ಸುಮಾರು ಹತ್ತಡಿ ಎತ್ತರವಿರುವ ಕರಿಕಲ್ಲಿನ ನಂದಿ ಕುಂತಿದ್ದಾನೆ. ಒಂದೇ ಕಲ್ಲಿನಿಂದ ಕೆತ್ತಲ್ಪಟ್ಟಿರುವ ಈ ವೃಷಭೇಶ್ವರ ಮೂರ್ತಿಯನ್ನು ಒಮ್ಮೆ ನೋಡಿದವರು, ಮತ್ತೆ ತಮ್ಮ ಜೀವಮಾನದಲ್ಲಾಗಾಗ ಸ್ಮರಿಸಲೇಬೇಕು. ಒಳಗಿನ ದೇವ 'ಮಧುಕೇಶ್ವರ' ಮೂರ್ತಿಯೆಂದರೆ ಒರ್ವ ಮನುಷ್ಯನಷ್ಟು ಎತ್ತರವುಳ್ಳ ಜೇನಿನ ಬಣ್ಣದ ಮಹಾಲಿಂಗ. ದೇವಸ್ಥಾನದಲ್ಲಿರುವ ಶಿಲಾಶಾಸನಗಳು, ಗತಕಾಲದ ಬೌದ್ಧಮತ ಚಕ್ರವರ್ತಿಗಳು ಹಲವರು ಈ ದೇವಸ್ಥಾನಕ್ಕೆ ಭೇಟಿಯಿತ್ತಿದ್ದರೆಂಬುದನ್ನು ತಿಳಿಸುತ್ತಿವೆ.

ಈ ದೇವಸ್ಥಾನದ ಸ್ಥಳ ಪುರಾಣವನ್ನು ಹೀಗೆ ವರ್ಣಿಸುತ್ತಾರೆ. ನಮ್ಮ ಪುರಾಣಗಳಲ್ಲಿ ಪ್ರಸಿದ್ಧರೇ ಇರುವ ಮಧು, ಕೈಟಭರೆಂಬ ರಾಕ್ಷಸರು ಸಾಮಾನ್ಯ ಜನರಿಗೂ ಋಷಿ ಕುಲಕ್ಕೂ ವಿಶೇಷ ಉಪಟಳಗಳನ್ನು ಕೊಡುತ್ತಿದ್ದಾಗ, ಇವರ ಅತ್ಯಾಚಾರಗಳನ್ನು ಸಹಿಸಲಾರದೆ ನ[illegible]ವರ್ಯರು ಮಹಾ ವಿಷ್ಣುವಿನಲ್ಲಿ ಮೊರೆಯಿಟ್ಟ[illegible] ವಿಷ್ಣುವು ಇಬ್ಬರು ರಾಕ್ಷಸರೊಡನೆಯೂ ಯುದ್ಧಕ್ಕೆ ನಿಂತು ಸಂಹರಿಸಿದ. ಸಾಯುವ ಕಾಲಕ್ಕೆ, ತಮ್ಮೊಡನಿದ್ದ ಶಿವನ ಆತ್ಮಲಿಂಗವನ್ನು ಪ್ರತಿಷ್ಠಿಸಿ ಅದಕ್ಕೆ ಯಥಾಯೋಗ್ಯ ಪೂಜೆ ಸಲ್ಲಿಸಬೇಕೆಂದು, ಅವರು ತಮ್ಮ ಕೊನೆಯಾಸೆಯನ್ನು ನಿವೇದಿಸಿಕೊಂಡರು. 'ತಥಾಸ್ತು' ಎಂದ ವಿಷ್ಣುವಿಂದಲೇ ಬನವಾಸಿಯ ಈ ದೇವಸ್ಥಾನವಾಯಿತು. 'ಮಧುಕೇಶ್ವರ' ಎಂಬ ಹೆಸರು ಬರಲು ಕಾರಣವೂ ಇದೇ.

ಬನವಾಸೀ ಮಧುಕೇಶ್ವರನ ಪ್ರಭಾವವೂ ಪ್ರಸಿದ್ಧವಿದೆ. ಇಂತಹ ಪುರಾತನ ಹಾಗೂ ಮಹಾಮಹಿಮ ದೇವಾಲಯದೊಳಗೆ ಇದೇ ಫೆಬ್ರವರಿ ತಾ 22ರಲ್ಲಿ ಹರಿಜನರು ಪ್ರವೇಶಿಸಿದರು. ಅಂದಮೇಲೆ ಇನ್ನೂ ಹರಿಜನರಿಗೆ ಪ್ರವೇಶಕೊಡದ ದೇವಾಲಯಗಳೇನಂತೆ? ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಧರ್ಮಸ್ಥಳ, ಮೂಲ್ಕಿಯಂತಹ ಪ್ರಸಿದ್ಧ ದೇವಾಲಯಗಳು ಹಾಗೂ ಜಿಲ್ಲೆಯ ಪ್ರತಿಯೊಂದೂರಿನ ಸರ್ವ ದೇವಾಲಯಗಳೂ ಇನ್ನಾದರೂ 'ಕನ್ನಡ ನಾಡಿನ ಕಾಶಿ'ಯ ಮಾದರಿಯನ್ನನುಸರಿಸಬಾರದೇ?

(೫ನೇ ಪುಟದಿಂದ).

ಕಾಶ್ಮೀರದ ಪ್ರಶ್ನೆಯು ಭದ್ರತಾ ಕೌನ್ಸಿಲಿನಲ್ಲಿ ನನೆಗುದಿಗೆ ಬಿದ್ದಿದೆ. ಹಿಂದೀ ಪ್ರತಿನಿಧಿಗಳು ಈ ಬಾರಿ ನವದಿಲ್ಲಿಗೆ ಬಂದು ಮರಳಿದ ಮೇಲೆ ಭದ್ರತಾ ಕೌನ್ಸಿಲ್ ಸದಸ್ಯರ ಮನೋವೃತ್ತಿ ತುಸು ಬದಲಾದಂತಿದೆ. ಆಗ, ಕಳೆದೆರಡು ತಿಂಗಳುಗಳಿಂದಲೂ ಈ ಸಂಬಂಧವಾಗಿ ಅಮೇರಿಕದಲ್ಲೇ ಒದ್ದಾಡುತ್ತಿರುವ ಪಾಕಿಸ್ತಾನ್ ಪ್ರತಿನಿಧಿ ಸರ್. ಝಫರುಲ್ಲಾರಿಗೆ ಇದನ್ನು ಕೊನೆಮುಟ್ಟಿಸುವ ಬಗೆ ಹೇಗೆ ಎಂಬ ಕುರಿತು ಬೇಸರಬಂದಿದೆ. ಕಾಶ್ಮೀರ ರಣರಂಗದಲ್ಲಿ ಕೂಡಾ ಧಾಳಿಗಾರರನ್ನು ಹಿಮ್ಮೆಟ್ಟಿಸುವ ಹೋರಾಟಗಳು ಆಗಾಗ ನಡೆಯುತ್ತಿದ್ದರೂ ಯುದ್ಧಸ್ಥಿತಿಯಲ್ಲಿ ಗಣ್ಯ ಬದಲಾವಣೆಗಳು ಕಂಡುಬರುತ್ತಿಲ್ಲ. ಕಾಶ್ಮೀರದ ಕಾರ್ಯವನ್ನು ವಿಜಯ ಮುಕ್ತಾಯಗೊಳಿಸಿಯೇ ಸಿದ್ಧವೆಂದು ಹಿಂದೀ ರಕ್ಷಣಾಮಂತ್ರಿ ಸರ್ದಾರ್ ಬಲದೇವಸಿಂಗರು ಪಾರ್ಲಿಮೆಂಟಿನಲ್ಲಿ ಪುನಃ ಭರವಸೆಯಿತ್ತಿದ್ದಾರೆ.

ಮದ್ರಾಸ್ ಪ್ರಾಂತ್ಯದಲ್ಲಿ

ಮದ್ರಾಸ್ ಎಸೆಂಬ್ಲಿಯ ಆಯವ್ಯಯ ಪಟ್ಟಿಯ ಚರ್ಚಾಧಿವೇಶನ ನಡೆದು ವಿವಿಧ ಖಾತೆಗಳ ಆಡಳಿತೆ ಸಂಬಂಧ ಸವಿವರ ವಿಮರ್ಶೆಗಳಾದುವು; ಬಡ್ಜೆಟ್ ಮಂಜೂರಾಯಿತು. 'ಬ್ಲೇಕ್ ಮಾರ್ಕೆಟ'ನ್ನು ನಿರ್ಮೂಲಿಸುವ ಮಸೂದೆಯೊಂದನ್ನು ಸದ್ಯದಲ್ಲೇ ಸರಕಾರವು ಮುಂತರಲಿದೆಯೆಂದು ಕಂದಾಯ ಮಂತ್ರಿಗಳು ತಿಳಿಸಿದ್ದಾರಲ್ಲದೆ ಅಧಿಕಾರಿಗಳ ದುರ್ನಡತೆಯೇನಾದರೂ ಕಂಡುಬಂದಲ್ಲಿ ಕಠಿಣ ಕಾರ್ಯ ಕೈಕೊಳ್ಳಲಾಗುವದೆಂದು ಭರವಸೆಯಿತ್ತಿದ್ದಾರೆ.

ಮದ್ರಾಸ್ ಪ್ರಾಂತಿಕ ಸರಕಾರದ ಮುಂದಿರುವ ಮುಖ್ಯ ಪ್ರಶ್ನೆಯೆಂದರೆ ಆಹಾರ ಬಿಕ್ಕಟ್ಟಿನದು. ಭಾರತ ಸರಕಾರವು 1948ನೇ ಇಸವಿಗಾಗಿ ಮದ್ರಾಸ್ ಪ್ರಾಂತ್ಯಕ್ಕೆ ನಾಲ್ಕು ಲಕ್ಷಟನ್ ಆಹಾರ ಧಾನ್ಯಗಳನ್ನೊದಗಿಸುವ ಭರವಸೆ ಕೊಟ್ಟಿದೆ. ಇದು ಜನವರಿಯಿಂದ ಒಕ್ಟೋಬರದವರೆಗಿನ ಅವಧಿಯಲ್ಲಿ ಮದ್ರಾಸಿಗೆ ದೊರೆಯುವದಲ್ಲದೆ, ಕೇಂದ್ರ ಸರಕಾರವು ತನ್ನಿಂದ ಸಾಧ್ಯವಿದ್ದ ಎಲ್ಲಾ ಸಹಾಯವನ್ನೂ ಈ ಪ್ರಾಂತ್ಯಗೆ ಸಲ್ಲಿಸಲಿಕ್ಕಿದೆ.

ಈಗಿನ ಮದ್ರಾಸ್ ಮಂತ್ರಿ ಮಂಡಲ ಪ್ರಕಾಶಂ ಮಂಡಲಿಯ ಅದೃಷ್ಟವೇ ಒದಗಬಹುದೆಂಬ ಊಹೆಗವಕಾಶಕೊಡುವ ಘಟನೆಗಳು ಮದ್ರಾಸಿನ ಕಾಂಗ್ರೆಸ್ ಶಾಸನಸಭಾ ಸದಸ್ಯರ ಪಕ್ಷದೊಳಗೆ ನಡೆಯುತ್ತಿರುವಂತೆ ತೋರುತ್ತಿದೆ. ಕಾಂಗ್ರೆಸ್ ಪಕ್ಷವು ವರುಷಕ್ಕೊಮ್ಮೆ ತನ್ನ ನಾಯಕನನ್ನಾರಿಸಿಕೊಳ್ಳುವ ಸಂಪ್ರದಾಯವಿದೆ. ಈ ವರುಷದ ಅಂತಹ ವಾರ್ಷಿಕ ಸಭೆಯು ಇದೇ ತಿಂಗಳ ತಾ. 26ಕ್ಕೆ ಸೇರುವದು. ಈ ಬಾರಿ ಪುನಃ ಶ್ರೀ ಟಿ. ಪ್ರಕಾಶಮರನ್ನೇ ನಾಯಕನಾಗಿ ಆರಿಸಿಕೊಳ್ಳಬೇಕೆಂದು ಆಂಧ್ರದ ಸದಸ್ಯರು ಒಕ್ಕಟ್ಟಾಗಿದ್ದಾರೆಂದೂ, ಓಮಂದೂರು ಮಂಡಲಿಯ ಕಾರ್ಯಕಲಾಪಗಳಿಂದ ಅತೃಪ್ತಿಗೊಂಡ ತಮಿಳು ನಾಗಿ, ಮತ್ತಿತರ ಭಾಗಗಳ ಸದಸ್ಯರೂ ಅವರನ್ನು ಕೂಡಿಕೊಳ್ಳುವರೆಂದೂ ದಟ್ಟವದಂತಿ ಹಬ್ಬಿದೆ. ಹಾಗಾದಲ್ಲಿ ಈ ತಿಂಗಳಾಂತ್ಯಕ್ಕೆ ಪುನಃ ಪ್ರಕಾಶಮ್ ಮಂಡಲಿಯೇ ಅಧಿಕಾರಕ್ಕೆ ಬರಬಹುದು. ಆದರೆ ಕಾಂಗ್ರೆಸ್ ಹೈಕಮಾಂಡಿನ ವಿಧೇಯವರ್ತಿಯಾಗಿರುವ ಓಮಂದೂರು ಮಂಡಲಿವಿರುದ್ಧ ಬಲವಾದ ಆಧಾರವಿಲ್ಲದೆ, ಅಕಾರಣ ಸ್ಪರ್ಧೆಯೆದ್ದಲ್ಲಿ ಹೈಕಮಾಂಡ್ ಮದ್ರಾಸ್ 'ಹುಡುಗಾಟಿಕೆ'ಯ ಪುನರಾವರ್ತನೆಯನ್ನು ಸಹಿಸದು. ಮೇಲಾಗಿ ಮದ್ರಾಸ್ ಕಾಂಗ್ರೆಸ್ ಪಕ್ಷದ ಒಳಗಿನ ಸ್ಥಿತಿಯೂ ಹೀಗಾಗಿರುವುದರಿಂದ ಸದ್ಯಃ ಸರಿಯಾದ ಕಾರಣ ತೋರುವದಿಲ್ಲ; ಸಂಗತಿಯೇನೆಂಬುದು ಸದ್ಯದಲ್ಲೇ ತಿಳಿದುಬರಲಿಕ್ಕಿದೆ.

ನೋಟೀಸು

ಕುಂದಾಪುರ ಡಿವಿಜನಲ್ ರೆಂಟ್ ಕಂಟ್ರೋಲರ್ ಮತ್ತು ರೆವಿನ್ಯೂ ಡಿವಿಜನಲ್ ಆಫೀಸರ್ರ ಕೋರ್ಟಿನಲ್ಲಿ

H. R. C. O. P. No. 14/1948

ಲಕ್ಷ್ಮೀನಾರಾಯಣ ಉಪಾಧ್ಯ–ಅರ್ಜಿದಾರ

ಮತ್ತು

ಗುಂಡ ಮರಕಾಲ, ಬ್ರಿತ ಮರಕಾಲನ ಮಗಳಗಂಡ— ಉಡ್ಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಕಡಿಯಾಳಿಯಲ್ಲಿರುವವನು— ಎದ್ರಿ

ಎದ್ರಿಗೆ ನೋಟೀಸು.

ತಿಂಗಳುಗಟ್ಲೆ ಮಕ್ಕಾಗಿ ಅರ್ಜಿದಾರ್ರವಳಗೆ ಎದ್ರಿಯು ಅನುಭವಿಸುವ ಉಡ್ಪಿ ಮುನ್ಸಿಪಾಲಿಟಿಯ ಡೋರ್ ನಂಬ್ರ 83/1 ನೇ ಮನೆಯು ಬಾಬ್ತು ಬಾಡಿಗೆ ಬಾಕಿ ಮಾಡಿಕೊಂಡ ಸಬಬಿನಿಂದ ಅರ್ಜಿದಾರನು ಸದ್ರಿ ಕಟ್ಟೋಣದ ಸ್ವಾಧೀನತೆ ಕೇಳಿ ದಾಖಲ್ಲು ಮಾಡಿದ ಅರ್ಜಿಯು ತಾ. 31-3-1948ಕ್ಕೆ ಕುಂದಾಪುರದಲ್ಲಿ ತನಿಖೆಗೆ ಇಟ್ಟಿದೆ. ಆ ದಿನ 10 ಗಂಟೆಗೆ ಎದ್ರಿಯು ಕೋರ್ಟಿನಮುಂದೆ ಹಾಜ್ರಾಗಿ ತನ್ನ ಆಕ್ಷೇಪಣೆ ಜ್ಯಾಹೀರು ಮಾಡಿಕೊಳ್ಳದೆ ಇರುವಲ್ಲಿ ಅವನನ್ನು ಎಕ್ಸ್‌ಪಾರ್ಟೀಯಾಗಿ ಮಾಡಿ ಅವನ ಗೈರು ಹಾಜ್ರಿಯಲ್ಲಿ ಅರ್ಜಿಯು ತೀರ್ಮಾನಿಸಲಾಗುವುದು.

(By ovder of the cburt)

U. B. Krishna Rao

Advocate for the Petitioner

ಉಡುಪಿ. ತಾ. 13-3-1948

ಪತ್ರ ವ್ಯವಹಾರ

(ನಮ್ಮ ತಾ. 4-3-48ರ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ. ಟಿ. ರಮೇಶ ಪೈಗಳು ತಾ 25-2-48ರಲ್ಲಿ ಶ್ರೀಮತಿ ಲೀಲಾಬಾಯಿ ಕಾಮತರಿಗಿತ್ತಿದ್ದ ಸತ್ಕಾರ ಕೂಟದ ವರದಿಯಲ್ಲಿದ್ದ ತನ್ನ ಭಾಷಣದ ಕುರಿತು ಡಾ। ಟಿ. ಮಾಧವ ಪೈಗಳಿಂದ ನಮಗೆ ಈ ಕೆಳಗಿನ ಪತ್ರ ಬಂದಿದೆ. ಈ ಪತ್ರದಲ್ಲಿ ನಮೂದಿಸಿರುವಂತೆ ಅಂದಿನ ಸಭೆಯು ತನ್ನ ಭಾಷಣದಲ್ಲಿ ಡಾ। ಟಿ. ಎಮ್. ಪೈಗಳು, ತಾನು ಮೊದಲೊಮ್ಮೆ ಮುನ್ಸಿಪಲ್ ಚೆಯರ್‌ಮೇನರೊಡನೆ 'ಗ್ರೇಟರ್ ಉಡುಪಿ ಸ್ಕೀಮಿನ ಬ್ಲೂಪ್ರಿಂಟ್ಸ್'ಗೆ ಗ್ರೇಂಟು ಕೊಡಬೇಕೆಂದು ವಿಜ್ಞಾಪಿಸಿದ್ದೆ, ಅಥವಾ ಆ ಬ್ಲೂಪ್ರಿಂಟ್ಸ್‌ನ ಯಾವದೇ ಪ್ರಸ್ತಾಪವನ್ನು ಮಾಡಿದ್ದುದೂ ನಮ್ಮ ಪೂರ್ಣ ಪುನಜ್ಞಾಪಕಕ್ಕೆ ಬರುವುದಿಲ್ಲ. ಆದರೂ, ಮಾರ್ಚ್ ತಾ 4ರ ನಮ್ಮ ಪ್ರಕಟಣೆಯ ಸಂಬಂಧವಾಗಿ ಮಾರ್ಚ್ ತಾ 16ರಲ್ಲಿ ಈ ಪತ್ರ ಬಂದುದಾದರೂ, ಇದನ್ನು ಪೂರ್ಣವಾಗಿ ಪ್ರಕಟಿಸಬೇಕೆಂದು ಡಾ। ಪೈಗಳವರಲ್ಲೇ ಕೇಳಿಕೊಂಡಿರುವಂತೆ, ಇದ್ದಂತೆ ಕೆಳಗೆ ಕೊಡಲಾಗಿದೆ —ಸಂ. ನ.)

The Editor,

'Navayuga',

UDIPI.

Dear Editor,

It has been brought to my notice that my speech given at a party given by Sri T. Ramesh U. Pai on 25-2-1948 to felicitate Mrs. Leela Bai Kamath has not been correctly reported in your Navayuga dated 4—3—48. Through your coloumns I would like to lay before your readers that I did not undertake as reported in your coloumns to bear the entire expenditure of the "Greater Udipi Scheme" When I had requested the Municipal Chairman on a previous occasion to give a token grant of Rs. 100/ from the Municipality for drawing up Blue prints of the Scheme he had expressed that it might not be possible for the Municipality to bear this expenditure on account of certain technical difficulties.

Appreciating that point of view, I had only made an offer to pay all these costs. In the light of this, since the report appearing in your coloumns gives a different picture, I would like you to give the correct version of my speech. Kindly publish this letter in full.

Thanking you,

Yours faithfully,

T. Madhava Pai.

16th March, 1948.

ತೆರಿಗೆ ಹೆಚ್ಚಿಸುವುದಕ್ಕೆ ಸಾರ್ವಜನಿಕರ ವಿರೋಧ–ತಾ.18-3-48ನೆಯ ತಾರೀಕಿಗೆ ಸೇರಲಿರುವ ನಗರಸಭೆಯಲ್ಲಿ ತೆರಿಗೆಗಳನ್ನು ಏರಿಸುದುದನ್ನು ಜಾರಿಗೆ ತರಲು ತೀರ್ಮಾನಿಸಲಾಗುವದೆಂದು ಗೊತ್ತಾಗಿದೆ. ಉಡುಪಿ ನಗರವೊಂದು ಔದ್ಯೋಗಿಕ ಕ್ಷೇತ್ರವಲ್ಲ; ವ್ಯಾಪಾರ ಕೇಂದ್ರವಲ್ಲ. ಇಂಥ ಒಂದು ಬಡನಗರಕ್ಕೆ ಮೊದಲೇ ತಲೆಭಾರವಾದ ತೆರಿಗೆಯನ್ನು ಇನ್ನೂ ಏರಿಸುವ ಸೂಚನೆಗೆ ತೊಡಗಿದ ಪುರಸ್ಕಾರ ವರ್ತನೆ ಭಯದಾಯಕವಾಗಿದೆ. ಖರ್ಚಿನ ಬಾಯಿಗೂಡಿಸಲು ಸಾಧ್ಯವಿಲ್ಲದಾಗಲೆಲ್ಲ ಬಡ ತೆರಿಗೆದಾರರ ಜೇಬು ಕತ್ತರಿಸುವ ಧೋರಣೆಗೆಯೆ ಅಂಟುತ್ತ ನಡೆದರೆ ಹೇಗೆ, ಎಂದು ಜನರು ಚಿಂತಾತುರರಾಗಿದ್ದಾರೆ. ಇಡಿಯ ಉಡುಪಿಯ ನಾಗರಿಕರೆಲ್ಲರೂ ಏಕಕಂಠದಿಂದ ಈ ಕರಭಾರದ ಯೋಜನೆಯನ್ನು ಪ್ರತಿಭಟಿಸುತ್ತಿದ್ದಾರೆ, ಎಂಬ ಸತ್ಯಸಂಗತಿಯನ್ನು ಮನಗಂಡು ಇಂಥ ಜನೋಪದ್ರವಿ ಮಾರ್ಗವನ್ನು ನಗರಸಭೆ ಕ್ರಮಿಸದಿರಲಿ, ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೂ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಶ್ರೀ ದುರ್ಗಾ ಭವನ, ಮೂಲ್ಕಿ.

ಯಂ. ಆರ್. ಭಟ್, (ಆರ್ಟಿಸ್ಟ್) ವ್ಯವಸ್ಥಾಪಕ.

NEO ROYAL CAFE,

Boarding & Lodging,

Santhekatte, UDIPI.

ಕನ್ನಡ ಪ್ರಪಂಚಕ್ಕೊಂದು ಕೀರ್ತಿ ತಂದಿತು.

ಕರ್ನಾಟಕ ನಟನಟಿಯರಿಗೊಂದು ಸ್ಥಾನ ಕೊಟ್ಟಿತು.

ಕರ್ನಾಟಕ ಕಲಾವಿದರಿಗೊಂದು ಬಿಕಣ ಉಣಿಸಿತು.

ಕನ್ನಡದಲ್ಲಿ **ಮಹಾತ್ಮಾ ಕಬೀರ್**

ಸುಬ್ಬಯ್ಯನಾಯ್ಡು, ನಾಗೇಂದ್ರ ರಾವ್, ಲಕ್ಷ್ಮಿ ಬಾಯಿ ನೋಡಲಾದವರು

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

Notice

ಕುಂದಾಪುರ. ಡಿ. ಮು. ಕೋರ್ಟಿನಲ್ಲಿ.

S. C. 285/46 R. E. P. 473/47

ಅರ್ಜಿದಾರ. ಕೆ. ಅಲ್ಲಿ ಸಾಹೇಬ,

ಎದ್ರಿಯು, ಕತಿಜ್ಯಾಭಿ ಯ್ಯಾನ ಕಸ್ತು ಸಹಾ, 1ನೇ ಎದ್ರಿಗೆ ತಿಳಿಯಪಡಿಸ್ವುದು

1ನೇ ಎದ್ರಿಯು, ಕತಿಜ್ಯಾಭಿ ಯ್ಯಾನ ಕಸ್ತು, ಕಾದೀರ ಸಾಹೇಬರ ವಿಧವೆ, ಕುಂದಾಪುರ ತಾಲ್ಕು ಯಡ್ತರೆ ಗ್ರಾಮ.

ಸದ್ರಿ ಅಮ್ಲಜ್ಯಾರಿಯಲ್ಲಿ ಮುಸ್ತಿಕಾರಿನ ಶರ್ತ ನಿರ್ಣಯಿಸ್ವದಬಗ್ಗೆ ಸದ್ರಿ ಅಮ್ಲಜ್ಯಾರಿಯನ್ನು ತಾ. 31-3-48ಕ್ಕೆ ಇಟ್ಟಿದೆ. ಆ ಕುರಿತು ನಿಂಮ್ಮ ಆಕ್ಷೇಪ ಯಿದ್ದರೆ ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

Y. Manjaya Shetty

Advocate for Peter

ತಾ. 15-3-48 ಮೊಕ್ಕಾಂ. ಕುಂದಾಪುರ,

ಉಡುಪಿ.

ಸರಕಾರಿ ಉಪಾಧ್ಯಾಯರ ತರಬೇತಿ ಶಾಲೆಯ ವರ್ಷಾಂತ್ಯೋತ್ಸವವು ಇದೇ ತಾ. 19ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಎನ್. ವೆಂಕಟ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಶ್ರೀ. ಕೆ. ಸಂಜೀವ ಭಟ್, ಮುಖ್ಯೋಪಾಧ್ಯಾಯರು ಅವರ ಸ್ವಾಗತ ಭಾಷಣ ಮಾಡಿ ಶಾಲಾ ವರದಿಯನ್ನು ಓದಿದರು. ಉಡುಪಿಗೆ ಗಂಡಸರ ಮತ್ತು ಹೆಂಗಸರ ಸೆಕೆಂಡರಿಗ್ರೇಡ್ ಟ್ರೈನಿಂಗ್ ಶಾಲೆಗಳ ಅವಶ್ಯಕತೆ ವರದಿಯಲ್ಲಿ ಸೂಚಿಸಲಾಗಿತ್ತು. ಶ್ರೀ. ಕೆ. ನಾರಾಯಣ ಹೆಗ್ಡೆಯವರು ಪಾರಿತೋಷಕ ವಿತರಣೆ ಮಾಡಿದರು. ಬಹುಮಾನ ವಿತರಣೆಯಾದ ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸರಕಾರದ ವಿದ್ಯಾ ಧೋರಣೆಯನ್ನು ವಿವರಿಸುತ್ತ ಅಧ್ಯಾಪಕ ವೃತ್ತಿಯವರು ಸುಧಾರಿತ ವಿದ್ಯಾಕ್ರಮಗಳನ್ನು ಸ್ವಾಗತೀಕರಿಸಲು ಈಗಲೇ ಸಿದ್ಧರಾಗಿರಬೇಕೆಂದರು. ಪ್ರಾಂತದಲ್ಲಿ ಬೇಸಿಕ್ ಎಜ್ಯುಕೇಶನ್ ಟ್ರೈನಿಂಗ್ ಸೆಂಟರುಗಳನ್ನು ಸ್ಥಾಪಿಸುವ ಯೋಜನೆಯು ಸರಕಾರಕ್ಕಿರುವುದರಿಂದ ನಮ್ಮ ಜಿಲ್ಲೆಯಲ್ಲೂ ಅಂತಹ ಒಂದು ಸೆಂಟರು ಆಗಲಿರುವುದೆಂದೂ ಸೂಚಿಸಿ ಆ ಕಾಲದಲ್ಲಿ ಸೆಕೆಂಡರಿ ಗ್ರೇಡ್ ಟ್ರೈನಿಂಗ್ ಶಾಲೆಗಳ ಸ್ಥಾಪನೆಗೆ ಆಸ್ಪದ ಸಿಕ್ಕುವುದು ದುರ್ಲಭವೆಂದರು. ವಿವಿಧ ವಿನೋದಾವಳಿ, ಕೊಂಕಣಿ, ತುಳು, ಕನ್ನಡ ನಾಟಕಾಭಿನಯಗಳಾಗಿ ಶ್ರೀ ಲಕ್ಷ್ಮೀನಾರಾಯಣ ರಾಯರು ಧನ್ಯವಾದಗಳನ್ನರ್ಪಿಸಿದರು.

ರೇಶನಿಂಗ್ ರದ್ದತಿ-ಉಡುಪಿ ನಗರದಲ್ಲಿ ರೇಶನಿಂಗ್ ಪದ್ಧತಿಯು ತಾ. 14ರಿಂದ ಕೊನೆಗೊಂಡಿತು, ಆ ದಿನವೇ ಪೇಟೆಗೆ ಗಾಡಿಗಳಲ್ಲಿ ಅಕ್ಕಿ ಬಂದಿದ್ದು 24-25 ರೂಪಾಯಿಗಳಂತೆ ಅಕ್ಕಿ ಮುಡಿಗಳು ಮಾರಾಟವಾದುವೆಂದು ತಿಳಿದು ಬರುತ್ತದೆ. ಈ ವಾರದಲ್ಲಿ ರೇಶನಿಂಗ್ ಕ್ರಮದಲ್ಲೆ ಎಲ್ಲರಿಗೂ ಅಕ್ಕಿ ವಿತರಣೆಯಾಗುತ್ತಲಿದೆ. ಮುಂದಿನ ವ್ಯವಸ್ಥೆಯೇನೆಂಬುದು ಇನ್ನು ಪ್ರಕಟವಾಗಬೇಕು.

ಸೆಕ್ಯುರಿಟಿ ಪ್ರೊವಿಡೆಂಡ್ ಇನ್ಶ್ಯೂರೆನ್ಸ್ ಕಂಪೆನಿಯ ಶಾಖಾ ಇನ್ಸ್‌ಪೆಕ್ಟರರ ಕಾರ್ಯಾಲಯವೊಂದು ಈ ತಿಂಗಳಾರಂಭದಲ್ಲಿ ತಾಲೂಕು ಆಫೀಸಿನ ಎದುರು (ಸುಖ ಸಮಾಚಾರದ ಸಮೀಪ) ತೆರೆಯಲ್ಪಟ್ಟಿರುವುದು.

ಉಡುಪಿಯಲ್ಲಿ ವಸತಿಗೃಹಯೋಜನೆ

ಉಡುಪಿ ಮುನಿಸಿಪಾಲಿಟಿಯಲ್ಲಿ ಶಿವಳ್ಳಿಗ್ರಾಮದ ಸರ್ವೆನಂಬ್ರ 397-401ರಲ್ಲಿ 40ಎಕ್ರೆ ಸ್ಥಳವನ್ನು ವಸತಿ ಗೃಹಯೋಜನೆಗಾಗಿ ಆರಿಸಲಾಗಿದೆ, ಇದಕ್ಕಾಗಿ ಸಹಕಾರಿ ಸಂಘವೊಂದು ಸ್ಥಾಪಿಸಲ್ಪಡುವುದು. ಬಾವಿ, ರಸ್ತೆ, ತೋಟ ಮೊದಲಾದ ಸಾಮುದಾಯಿಕ ಉಪಯೋಗದ ಕೆಲಸಗಳನ್ನು ಸರಕಾರವೇ ಒದಗಿಸುವುದು. ಇದಕ್ಕಾಗಿ 10 ಎಕ್ರೆ ಸ್ಥಳವು ಪ್ರತ್ಯೇಕಿಸಿಡಲ್ಪಡುವುದು. ಮನೆಗಳ ರಚನೆಗಾಗಿ ಸಹಕಾರಿ ಸಂಘದ ಸದಸ್ಯರೊಳಗೆ ಯಾವತ್ತೂ ಎಕ್ರೆ ಸ್ಥಳವನ್ನು ವಿಭಾಗಿಸಿಕೊಡಲಾಗುವುದು. 40 ಸೆಂಟ್ಸಿನ A ತರಗತಿಯ ಸ್ಥಳದ ಮೌಲ್ಯ ರೂಪಾಯಿ 800- ಪಾಲು ವಂತಿಗೆ ರೂ. 250- ಮನೆಯ ಅಂದಾಜು ವೆಚ್ಚ ರೂ. 5000-30 ಸೆಂಟ್ಸಿನ B ತರಗತಿಯ ಸ್ಥಳದ ಮೌಲ್ಯ ರೂಪಾಯಿ 600 ಪಾಲುವಂತಿಗೆ ರೂ. 200- ಮನೆಯ ಅಂದಾಜುವೆಚ್ಚ 4000- 20 ಸೆಂಟ್ಸಿನ C ತರಗತಿಯ ಸ್ಥಳದ ಮೌಲ್ಯ ರೂ. 400- ಪಾಲುವಂತಿಗೆ ರೂ. 150- ಮನೆಯ ವೆಚ್ಚ ರೂ. 3000-

A ತರಗತಿಯ 15, B ತರಗತಿಯ 30, C ತರಗತಿಯ 75 ಮನೆಗಳಿಗೆ ಮಾತ್ರ ಆಸ್ಪದವಿರುವುದರಿಂದ ಈ ಯೋಜನೆಯ ಪ್ರಯೋಜನವನ್ನು ಹೊಂದಲಿಚ್ಛಿಸುವವರು ಸ್ಥಳದ ಮತ್ತು ಪಾಲು ವಂತಿಗೆಯ ಹಣವನ್ನು ದ. ಕ. ಜಿಲ್ಲಾ ಕೋಆಪರೇಟಿವ್ ಸೆಂಟ್ರಲ್ ಬೇಂಕ್ ಲಿಮಿಟೆಡ್ ಮಂಗಳೂರು ಯಾ ಅದರ ಉಡುಪಿಯ ಬಡಗಬೆಟ್ಟು ಏಜನ್ಸಿಯಲ್ಲಿ 'ಉಡುಪಿ ಕೋಆಪರೇಟಿವ್ ಬಿಲ್ಡಿಂಗ್ ಸೊಸೈಟಿ' ಲೆಕ್ಕಕ್ಕೆ ಪಾವತಿ ಮಾಡಿ ರಶೀದಿಯನ್ನೂ ಅರ್ಜಿಯನ್ನೂ ಈ ತಿಂಗಳ ಅಂತ್ಯದೊಳಗೆ ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ್, ಮಂಗಳೂರು ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿದೆ.

ಕೋಲೇಜು ಫಂಡು, ಉಡುಪಿ.

[ಮುಂದರಿಸಿದ್ದು]

ಕೊಟ್ಟಕಾರ ಟ್ರಸ್ಟ್ ಫಂಡ್, ಉಡುಪಿ ರೂ. 1111/, ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಶ್ರೀ ಕಾಶೀಮಠ ಸಂಸ್ಥಾನ, ಮೂಲ್ಕಿ ರೂ. 500/-, ಶ್ರೀಗಳಾದ ಎಚ್. ವೆಂಕಟೇಶ ನಾಯಕ ಮತ್ತು ಪಾಂಗಾಳ ಗೋಪಾಲನಾಯಕ್ ರೂ. 100/-ರಂತೆ, ಶ್ರೀ. ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ ರೂ 301/-, ಶ್ರೀಗಳಾದ ಪಾವಂಜೆ ಗುರುರಾವ್ ಮತ್ತು ಪಿ. ದಾಸಪ್ಪಯ್ಯ, ರೂ 51/-ರಂತೆ, ಶ್ರೀ. ಎಮ್. ಎಲ್ ಪ್ರಭು, ರೂ. 25/-, ಶ್ರೀಗಳಾದ ಸಿ. ಶ್ರೀಕಣ್ಠ ಮತ್ತು ಯು. ಅನಂತ ಭಂಡಾರಿ, ರೂ 21/-ರಂತೆ, ಶ್ರೀ. ಯು. ವಿಠ್ಠಲಕಾಮತ್ತ ರೂ. 11/-, ಮತ್ತು ಶ್ರೀ. ಎಚ್. ಗೋಪಾಳ ಶ್ಯಾನುಭಾಗ ರೂ. 5/- ಕೊಟ್ಟಿರುತ್ತಾರೆ.

ಕೋಲೇಜು ಫಂಡನ್ನು ಪುಷ್ಟೀಕರಿಸುವರೆ ಶ್ರೀ. ಟಿ. ಎಸ್. ಕೇಳು ನಂಬಿಯಾರವರು ಎಕೆಡೆಮಿ ಆಫ್ ಜನರಲ್ ಎಡುಕೇಶನ್ನಿನ ಅಜೀವ ಸದಸ್ಯರಾಗಲೊಪ್ಪಿ, ಪ್ರಥಮ ಕಂತಾಗಿ ರೂ. 200/-ನ್ನು ಕೊಟ್ಟಿರುತ್ತಾರೆ.

ಶ್ರೀ. ಕೆ. ಶಿವರಾಮ ಹೆಗ್ಡೆ, ಬಿ.ಇ., (ಮದ್ರಾಸು), ಎಮ್.ಎಸ್.(ಅಮೇರಿಕಾ) ಇವರು ಅಮೇರಿಕಾದಲ್ಲಿ ಎರಡು ವರ್ಷಕಾಲ ತನ್ನ ವ್ಯಾಸಂಗವನ್ನು ಪ್ರಶಂಸನೀಯ ರೀತಿಯಲ್ಲಿ ಮುಗಿಸಿ, ಕಳೆದ ಜನವರಿ ತಿಂಗಳಿಂದ ಅಮೇರಿಕಾದ ಪ್ರಧಾನ ನಗರಗಳನ್ನೂ, ಕೈಗಾರಿಕೆಯ ಕೇಂದ್ರಸ್ಥಳಗಳನ್ನೂ ಸಂದರ್ಶಿಸಿ, ಅಲ್ಲಿಂದ ಇಂಗ್ಲಾಂಡಿಗೆ ಪ್ರಯಾಣ ಬೆಳೆಸಿ ಅಲ್ಲಿನ ಮುಖ್ಯ ನಗರಗಳನ್ನೂ, ಫ್ರಾನ್ಸ್, ಸ್ವಿಜರ್‌ಲೆಂಡ್ ಮತ್ತು ಯುರೋಪಿನ ಪ್ರಾಮುಖ್ಯ ಸ್ಥಳಗಳನ್ನೂ ಸಂದರ್ಶಿಸಿಕೊಂಡು ಕಳೆದ ಫೆಬ್ರವರಿ ತಾ. 17ರಲ್ಲು ಲಂಡನ್ ನಗರದಿಂದ ಜಲಮಾರ್ಗವಾಗಿ ಹೊರಟು ಈ ತಿಂಗಳ ತಾ. 11ರಲ್ಲಿ ಬೊಂಬಾಯಿಗೆ ಬಂದು ತಲ್ಪಿದರು. ಇವರು ಇದೇ ತಾ. 17ರಲ್ಲು ಅಲ್ಲಿಂದ ಮದ್ರಾಸಿಗೆ ಬಂದು ಮುಂದಿನ ವಾರ ತನ್ನ ಹುಟ್ಟೂರಾದ ಉಡುಪಿಗೆ ಬರಲಿರುವರೆಂದು ತಿಳಿದುಬರುತ್ತದೆ. ಶ್ರೀಯುತರಿಗೆ ನಮ್ಮ ಹಾರ್ದಿಕ ಶುಭಾಕಾಂಕ್ಷೆಗಳು.

ಪ್ರಕಟಣೆ

ಕುಂಜಾಲು ಪಂಚಾಯತ್ ಬೋರ್ಡು ಸರಹದ್ದಿನ ಈ ಕೆಳಗೆ ಕಾಣಿಸಿದ ಸಂತೆಗಳು ಮತ್ತು ಕಡವುಗಳು ಸದ್ರಿ ಪಂಚಾಯತ್ ಬೋರ್ಡಿನ ಆಫೀಸಿನಲ್ಲಿ ತಾರೀಖು 20-3-1948ನೇ ಶನಿವಾರ ಬೆಳಿಗ್ಯೆ 10½ ಗಂಟೆಗೆ ತಾ. 1-4-48ರಿಂದ ತಾ. 31-3-49ರ ವರೆಗೆ 1 ವರುಷದ ವರಿ ವಸೂಲು ಮಾಡುವ ಸ್ವತಂತ್ರತೆಯನ್ನು ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವತ್ತು ವಿವರ ಸದ್ರಿ ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ತಿಳಿಯಬಹುದು.

1 ಕುಂಜಾಲು ಸಂತೆ ಮಾರ್ಕೆಟು
2 ನೀರ್ಕೆ ಸಂತೆ ಮಾರ್ಕೆಟು
3 ಸೀತಾನದಿ ಭಂಡಿಮಾರ ಕಡವು
4 „ ಆಲೆ ಕಡವು

ಇತ್ಯಾದಿ ಸದಾಶಿವ ಶೆಟ್ಟಿ,
President.
ಪಂಚಾಯತ್ ಬೋರ್ಡು ಆಫೀಸು,
ಕುಂಜಾಲು, ದ. ಕನ್ನಡ,

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. L. P. 699/47 O. S. 133/45

ಅರ್ಜಿದಾರ ನರಸಿಂಹ ಶೇರ್ವೆ

ಎದ್ರಿದು ಸ್ಪೆಷಲ ಅಸಂತೈಯು. ರಾಮಚಂದ್ರ ಹೆಗಡೆಯ ಮಗ ಗಾರ್ಡಿಯನ್. ಮಾವ ಕೃಷ್ಣ ನ್ಯಾಕ್-ಚರ್ದಪ್ಪ ನ್ಯಾಕರ ಮಗ, ಮುಂದಹಡು ಗ್ರಾಮದ ಚೇಂಪು, 2 ರಮಾಮತಿ ಬ್ಯಾ ರಾಮ-ಪ್ರ ಹೆಗಡೆ ವಿಧವೆ, ಚಿತ್ರಪಾಡಿ ಗ್ರಾಮ,

ಎದ್ರಿಗೆ ಕೊಡುವ ನೋಟೀಸು

ಡಿಕ್ರಿಯ ಪ್ರಕಾರ ಆಸ್ತಿ ಅರ್ಜಿದಾರನ ಹಾಟಿ ಬಂದದ್ದಾಗಿ ಸೆಟಿಸಫಿ ಕೇಶನ್ ಮಾಡಬೇಕೆಂತ ಅರ್ಜಿದಾರನು ಅರ್ಜಿ ದಾಖಲ್ಲು ಮಾಡಿದ್ದಾನೆ. ಆಕ್ಷೇಪಯಿದ್ದರೆ ತಾ.2-4-48ನೇ ದಿನ ಈ ಕೋರ್ಟಿನ ಮುಂದೆ 11 ಘಂಟೆಗೆ ಹ್ಯಾಜರು ಮಾಡಬಹುದು,

Sd. A V. N. Hebbar,
Pleader for Petr,
Kundapur, 16-3-48

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ ಹಲ್ಲು ಪುಡಿ

ಒಂದು ಕೆರಲಿ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಪಿ. ಲಿಮಿಟೆಡ್,
ಕಾಸರಗೋಡು, ದ. ಇಂಡಿಯಾ.

WANTED

Young energetic, and smart candidates to represent a commercial firm with limited liability as Commercial Agents for their Branches to be opened in Several centres of every taluk of South Kanara District Persons who are able to write good English and also to furnish a cash security of Rs. 250/- ... apply. Selected Candidates will be paid decent monthly salary and bonus at the end of every financial year.

Apply to—
Post Box No. 10, UDIPI S. K.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.

ನವಭಾರತ ಬುಕ್ ಡಿಪೊ, ಉಡುಪಿ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಕ್ರಮ ಅಮ್ಲಜಾರಿ ಎಪ್ಲಿಕೇಶನ್ 503/47
ಕ್ರಮ ನಂಬ್ರ 245/45

ವಾದಿ-ಯಜ್ಞನಾರಾಯಣ ಉಡ್ಪ

ಪ್ರತಿವಾದಿರು-ಪರಮೇಶ್ವರ ಡಿಸಾ, ಕೂಡಾ16

5ನೇ ಪ್ರತಿವಾದಿ ಪುರುಷೋತ್ತಮ ಡಿಸಾ-ಪರಮೇಶ್ವರ ಡಿಸನ ಮಗ, 21ನೆ ಶಿರಿಯಾರ ಗ್ರಾಮದ ಕಲ್ಲುಗಣಪತ್ತಿ, 13ನೆ ಶಂಕರನಾರಾಯಣ ಭಟ್ಟ-ಬೆಳಗೋಡ ವೆಂಕಟ್ರಮಣ ಭಟ್ಟರ ಮಗ, 101ನೆ ಕೆದೂರ ಗ್ರಾಮ, ಇವರಿಗೆ,

12ನೆ ಪ್ರತಿವಾದಿ ಶಂಕರನಾರಾಯಣ ಉಡ್ಪರ ವಾರಿಸದಾರರ ಮಕ್ಕಳ ಮೇಲೆ ಅಮಲಜಾರಿ ನಡಿಸುವ ಬಗ್ಗೆ ಉಡ್ಪಿ ಕೋರ್ಟಿಗೆ ಟ್ರಾನ್ಸಫರ ಮಾಡಬೇಕೆಂತ ಕೊಟ್ಟ ಅರ್ಜಿಗೆ ನಿಂಮ ಆಕ್ಷೇಪವಿದ್ದರೆ ಈ ಅರ್ಜಿ ತನ್ಕಿಗೆ ಇಟ್ಟ 30-3-48ರಲ್ಲಿ ಪೂರ್ವಾಹ್ನ 11 ಘಂಟೆಗೆ ಕುಂದಾಪುರ ಡಿ. ಮು. ಕೋರ್ಟಿನಲ್ಲಿ ಹಾಜರಾಗಿ ... ನಿಮ್ಮನ್ನು ಎಕ್ಸಪಾರ್ಟೆ ಮಾಡಿ ಮುಂದಿನ ಕ್ರಮ ಮಾಡಲಾದೀತೆಂಬ ಸಂಗ್ತಿಯೇ ಮೂಲಕ ತಿಳಿಸಲಾಗಿಯದೆ.

ವಕೀಲ ಹಗ್ಗರ್ಸೆ ಗಣೇಶ ರಾವ್,
ವಾದಿ ವಕೀಲ
ತಾ. 10-3-48

ಪಬ್ಲಿಕ್ ನೋಟೀಸು

ಉಡುಪಿಯಲ್ಲಿ ಮನೆ ಅಡಿಸ್ಥಳಗಳು ಮಾರಾಟಕ್ಕಿವೆ.

ನನ್ನ ಬಾಬ್ತು ಉಡುಪಿ ಕಾಡಬೆಟ್ಟಿನಲ್ಲಿ ಮೊಡರ್ನ್ ಶಾಲೆಯ ಹಿಂಬದಿಯಿರುವ ಸ್ಥಳಗಳ ಪೈಕಿ ಮೂಡ ನಿಡಂಬೂರು ಗ್ರಾಮದ ಸ. ನಂ. 92/9 A 4 ಪುಂಜ ಸೆಂಟ್ಸು 7, ಸ. ನಂ. 92/26 ಬಾಗ್ಯಾಕು ಸೆಂಟ್ಸು 42, ಸ. ನಂ. 92/11 ನಂಜ ಪೈಕಿ ಪಡುಬದಿ ಸೆಂಟ್ಸು 57, ಸ. ನಂ. 92/11 ನಂಜ ಪೈಕಿ ಮೂಡುಬದಿ ಸೆಂಟ್ಸು 43ರ ಸ್ಥಳಗಳು ಮಾರಾಟಕ್ಕಿವೆ. ಖಾಯಿಸುಳ್ಳವರು ಕಾಡಬೆಟ್ಟಿನಲ್ಲಿರುವ ಮಲ್ಪೆ ರಾಘವೇಂದ್ರ ಭಟ್ರಿಂದ ಅಥವಾ ಉಡುಪಿ ಕೋರ್ಟು ರೋಡಿನಲ್ಲಿರುವ ಮಲ್ಪೆ ಕೇಶವ ಭಟ್ರಿಂದ ನನ್ನ ಪರವಾಗಿ ವಿಚಾರಿಸಿ ಅನುಭವ ಮಾಡಿಕೊಳ್ಳಬಹುದು

J. S Martin
ತಾ. 17-3-48

ಮಂಗಳೂರು

ಜುಗಾರಿ ಸೂಳೆಗಳ ಪತ್ತೆ

ಆಕ್ಟೋಬರದಲ್ಲಿ ಒಂದು ನೇಮ ನಡೆಯುತ್ತಿದ್ದ ಕಾಲದಲ್ಲಿ ಜುಗಾರಾಡುತ್ತಿದ್ದ ೧೩ ಮಂದಿಯು ಕೈಸೆರೆಗೆ ಅವರ ವಿಚಾರಣೆ ಮಂಗಳೂರು ಬೆಂಚ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ನಡೆದು ಅವರಲ್ಲಿ ಪ್ರತಿಯೊಬ್ಬರಿಗೂ ೬-೭ ರೂಗಳ ಜುಲುಮಾನೆಯನ್ನು ಈಚೆಗೆ ವಿಧಿಸಲಾಯಿತು.

ಕೂಳೂರಿನ ಸಮೀಪದ ಪಂಜಿಮೊಗರಿನಲ್ಲಿ ಒಂದು ದೇವಾವಸ್ಥಾನ ಆಟ ಕಳೆದ ತಾ. ೬ರಲ್ಲಿ ನಡೆಯುತ್ತಿದ್ದಾಗ ಜುಗಾರಾಡಿದ ಆರೋಪದ ಮೇಲೆ ೧೧ ಮಂದಿಯನ್ನು ಕೈದು ಮಾಡಿ, ಮಂಡದಲ್ಲಿದ್ದ ರೂಪಾಯಿ ೨೦೩-೧೦-೭ನ್ನು ವಶಪಡಿಸಿಕೊಳ್ಳಲಾಗಿದೆ. ಇವೆರಡು ಮೊಕದ್ದಮೆಗಳನ್ನೂ ಹಿಡಿದವರು «ಮಂಗಳೂರು

ನೋಟೀಸು

ಉಡುಪಿ ಡಿ. ಮು ಕೋರ್ಟಿನಲ್ಲಿ

ಕ್ರಮ ನಂಬ್ರ 11/48

ಮುಖ್ಯಪ್ರಾಣ ಕಲ್ಕೂರ ಕೂಡಾ–ವಾದಿರು

ಮತ್ತು

ಕಾರ್ಕಳ ಶ್ರೀನಿವಾಸ ರಾವ್ ಕೂಡಾ

–ಪ್ರತಿವಾದಿರು

ಯವರೊಳಗೆ

ಮೇಲ್ಕಂಡ ವ್ಯಾಜ್ಯದ 1ನೇ ಪ್ರತಿವಾದಿ—ಕಾರ್ಕಳ ಶ್ರೀನಿವಾಸರಾವ್ ಕಾರ್ಕಳ ನರಸಿಂಗರಾಯರ ಮಗ, ಉಡುಪಿ ತಾಲೂಕು ಹೆಗ್ಗ ಗ್ರಾಮದ ಕಾರ್ಕಳ ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ

ವಾದಿರೀಗೆ ಪ್ಲೇಂಟು 'A ಶೆಡ್ಯೂಲು ಆಸ್ತಿಗಳ ಪ್ರಥಮ ಜವಾಬ್ದಾರಿಯಿಂದ ಬರತಕ್ಕ ಬಟ್ಟಿಫಂಡಿನ ಆ್ಯವಜನ ಬಗ್ಗೆ ವಾದಿರು ವಾಕ್ಲು ಮಾಡಿರುವ ವ್ಯಾಜ್ಯವು ತಾ. 24-3-48ಕ್ಕೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದಲ್ಲಿ ಸದ್ರಿ, ತಾ. 24-3-48 ನೇ ಬುಧವಾರ ಬೆಳಿಗ್ಗೆ 10 ಘಂಟೆಗೆ ಈ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಎಕ್ಸ್ ಪಾರ್ಟಿ ಮಾಡಲಾಗುವುದು.

ಉಡುಪಿ, ತಾ.10-3-48 | B V Acharya, Vakil for Plaintiffs.

ಈಸ್ಟ್ ರಿಜೇರಿಯು ಪೋಲಿಸ್ ಸಬ್ ಇನ್ಸ್ಪೆಕ್ಟರ್ ಶ್ರೀ ಎಚ್. ನಾಗಪ್ಪ ಅವರು.

ಗೋಸಾವಿಗಳಿಗೆ ಜೈಲು–ಡಿ! ಮತ್ತು ಸೆಶ್ಯನ್ಸ್ ಜಡ್ಜರಾದ ಶ್ರೀ ಸಿ. ಕೃಷ್ಣಮೂರ್ತಿ ಬಿ. ಎ. ಬಿ. ಎಲ್. ಅವರು ಖೂನಿ ಆರೋಪದ ಮೊಕದ್ದಮೆಯನ್ನು ತನಿಖೆಮಾಡಿ (1) ಜಾನಿ (2) ಗೋಸಾಯಿ, (3) ಈಶ್ವರ ಗೋಸಾಯಿ, (4) ಕೃಷ್ಣ ಗೋಸಾಯಿ, (5) ರಾಮೋಜಿ ಗೋಸಾಯಿ, (6) ಆಪ್ಪಾ ಗೋಸಾಯಿ (7) ರಾಷಿತ್ ಗೋಸಾಯಿ, (ಇವರೆಲ್ಲರೂ ಕೊಲ್ಲಾಪುರ ಕಡೆಯ ಅಲೆದಾಡುವ ಬಣದವರು) ಎಂಬವರಲ್ಲಿ 1–6ನೆ ಆರೋಪಿಗಳಿಗೆ ಒಂದೊಂದು ವರ್ಷ ಸಜೆ, 4.. 5ನೆ ಆರೋಪಿಗಳಿಗೆ ಎರಡೆರಡು ವರ್ಷ ಕಠಿನ ಸಜೆ, 2-3ನೆ ಆರೋಪಿಗಳಿಗೆ ಮೂರು ಮೂರು ವರ್ಷಗಳ ಕಠಿನ ಸಜೆ ವಿಧಿಸಿದರು.

ಈ ಗುಂಪಿನವರು ಉಡುಪಿ ತಾಲೂಕಿನ ಮೂಡು ತೋನ್ಸೆಯ ಬಳಿಯಲ್ಲಿ ಬಿಡಾರ ಹೂಡಿದ್ದರು. ತಾ 9-7-'47ರಲ್ಲಿ ಒಂದನೇ ಆರೋಪಿಯ ಹೆಂಡತಿ ಅಂಬಾ ಬಾಯಿ ಯೂಸ ಮಾಲು ಬಾಯಿ ಎಂಬಾಕೆಯನ್ನು ಆವಳ ನಡತೆಯಲ್ಲಿ ಸಂಶಯಕಂಡು ಕೊಂದು ಮೊದಲು ಬಾವಿಗ ಹಾಕಿಯೂ ಅನಂತರ ಅಲ್ಲಿಂದ ಆ ಶವವನ್ನು ಎತ್ತಿ ಬೇರೆ ಕಡೆ ಹೂಳಿಟ್ಟು ಇದ್ದರೆಂದು ಅವರ ಮೇಲಿನ ಆರೋಪ.

ಗಾಂಧಿಜಿ ನೆಹರುಗಳ ಚಿತ್ರ ಅನಾವರಣ—ಸಮಾರಂಭವು ಮುಸ್ಲಿಂ ಹಾ! ಎ! ಶಾಲೆಯಲ್ಲಿ ಇತ್ತೀಚೆಗೆ ಹಾಜಿ ಗುಲ್ ಮಹಮ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ನಡೆಯಿತು. ಭಾವ ಚಿತ್ರಗಳನ್ನು ಶಾಲೆಗೆ ಉಚಿತವಾಗಿ ಮುನಿಸಿಪಲ್ ಕೌನ್ಸಿಲರ್ ಶ್ರೀ ಹಾಂಡಿ ಗಣಪತಿ ಕಾಮತರು ಕೊಟ್ಟಿದ್ದರು. ಈ ಸಂದರ್ಭದಲ್ಲಿ ಶ್ರೀಗಳಾದ ಬಿ. ದಾಮೋದರ ಬಾಳಿಗ, ಎಮ್. ಸಿ. ಅಹಮ್ಮದ್, ಬಸ್ತಿ ಕಾಸಿಂ ಸಾಹೇಬ್, ಅಮೀರ್ ಹುಸೇನ್ ಸಾಹೇಬ್, ಯು. ಅಹಮ್ಮದ್ ಹುಸೇನ್ ಅವರು ಮಾತನಾಡಿದರು.

ಶ್ರೀ ಮುಳಿಯ ತಿಮ್ಮಪ್ಪಯ್ಯನವರಿಗೆ ವಿದಾಯ—ಸ್ಯಾಂಟ್ ಎಲೋಸಿಯಸ್ ಕಾಲೇಜಿನ ಹಿರಿಯ ಕರ್ನಾಟಕ ಪಂಡಿತರೂ ಸುಪ್ರಸಿದ್ಧ ಲೇಖಕರೂ ಆದ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಉದ್ಯೋಗದಿಂದ ನಿವೃತ್ತರಾಗುವ ಸಂದರ್ಭದಲ್ಲಿ ಈಚೆಗೆ ಕಾಲೇಜಿನ ಕರ್ನಾಟಕ ಸಂಘದವರು ವಿದಾಯ ಸತ್ಕಾರ ಕೂಟವೊಂದನ್ನೇರ್ಪಡಿಸಿ ಆ ಮಹನೀಯರನ್ನು ಗೌರವಿಸಿದರು. ಅವರ ಹೆಸರಲ್ಲಿ ಒಂದು ಬಹುಮಾನ ನಿಧಿಯನ್ನು ಸ್ಥಾಪಿಸಲು ಹಣ ಕೂಡಿಸಬೇಕೆಂದು ಸಹ ನಿರ್ಣಯವಾಗಿದೆ.

ವಿಚಿತ್ರ ಶಿಶು, ಒಂದು ಕಾಲು, ಹತ್ತು ಬೆರಳು, ಹಿಂದೆ ಬಾಲ—ಕದ್ರಿ ರಾಜ್ಯದ ಬಳಿ ಒಂದು ಕಡೆ ಓರ್ವ ಕ್ರೈಸ್ತ ಹೆಂಗಸು ಕಳೆದ ತಾ 12ರಲ್ಲು ಬೆಳಿಗ್ಗೆ ಪ್ರಸವವಾಗಿ ಒಂದು ವಿಚಿತ್ರ ಮಗುವಿಗೆ ಜನ್ಮವಿತ್ತಳು. ಮಗುವಿಗೆ ಎರಡು ಕೈಗಳು, ಒಂದು ಕಾಲು. ಕಾಲಿಗೆ ಹತ್ತು ಬೆರಳು, ಹಿಂದುಗಡೆ ಒಂದು ಚಿಕ್ಕಬಾಲ ಈ ರೀತಿಯ ವಿಚಿತ್ರ ಅವಯವಗಳು ಕಂಡುಬಂದಿದ್ದುವು. ಮಗು ಹುಟ್ಟುವಾಗಲೇ ಮೃತಪಟ್ಟಿತ್ತು. ಅನೇಕ ಮಂದಿ ಈ ವಿಚಿತ್ರವನ್ನು ಕಂಡು ಬೆರಗಾಗಿರುವರು. ಮಗುವಿನ ಭಾವಚಿತ್ರ ತೆಗೆಯಲಾಗಿದೆ

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 394/47 in S. C. 526/42

ಅರ್ಜಿದಾರ: ವಾಸುದೇವ ನಾಯ್ಕ.

ಎದ್ರಿರು: ದುರ್ಗ ಹೆಗ್ಡೆ ಕೂಡಾ.

4ನೇ ಎದ್ರಿ ಪಿಲ್ಲಿ ಮಹಮ್ಮದ್ ಸಾಹೇಬ, 5ನೇ ಎದ್ರಿ ಗುಷ್ಟೆ, ಮತ್ತೆ ಮಹಮ್ಮದ್ ಸಾಹೇಬ, ಕೂಡಾ ೨ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ–

ಮೇಲ್ಕಂಡ ಡಿಕ್ರಿ ಮೇಲೆ ಅರ್ಜಿದಾರನು ಜರಗಿಸಿದ ಮೇಲಿನ ಅಮ್ಲಜ್ಯಾರಿಯಲ್ಲಿ ಪ್ರತಿವಾದಿರ ಪಕ್ಕನ ಸ್ಥಿರಾಸ್ತಿಯನ್ನು ಜಪ್ತು ಮಾಡೋಣಾಗಿದೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿದೆ. ಆ ಕುರಿತು ಸದ್ರಿ ಎದ್ರಿರ ಆಕ್ಷೇಪವಿದ್ದಲ್ಲಿ ತಾ. 25-3-48ರ ದಿವಸ ಸದ್ರಿ ಕೋರ್ಟು ಮುಂದೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(Sd.) **M. M. Ural**

Advocate for the Petitioner

Condapoor 11-3-48

ಮದ್ರಾಸು ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿ, ಮತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಸಂಭಾವನೆ ಪಡೆದ ಗ್ರಂಥ.

'ಮನೆಮದ್ದು'-Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಮತ್ತು ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮದ್ದು ಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written–Quite up-to-date–Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2–0–0.] [ಟಪ್ಪಾಲು ದ್ವಾರಾ 2–6–0.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪುಸ್ತಕ ಪ್ರಪಂಚದಲ್ಲೊಂದು ಅಪೂರ್ವ ಸಾಹಸ!

ವಿಜ್ಞಾನದ ವಿಚಿತ್ರಗಳು

ಬರೆದವರು: ಶ್ರೀ ಕೆ. ವಿಟ್ಠಲ ಶೆಣೈ, ಬಿ. ಎ., ಎಲ್. ಟಿ.

ವಿಜ್ಞಾನವನ್ನು ಕಲಿಯದಿರುವ ಹೆಂಗಸರು. ಮಕ್ಕಳು. ಹಳ್ಳಿಗರೇ ಮೊದಲಾದ ಎಲ್ಲರಿಗೆ ಅರ್ಥವಾಗುವಂತೆ–ಹಲವಾರು ಚಿತ್ರಗಳ ಸಹಿತ–ವಿಮಾನ, ರೇಡಿಯೊ, ಟೆಲಿವಿಜ್ಹನ್, ಪೆನಿಸಿಲಿನ್, ಅಟಂಬಾಂಬು ಮುಂತಾದ ನೂರಾರು ಆಧುನಿಕ ಅದ್ಭುತಗಳನ್ನು ಸ್ವಾರಸ್ಯವಾಗಿ ವರ್ಣಿಸುವ ಕನ್ನಡದ ಏಕಮಾತ್ರ ಗ್ರಂಥವಿದು. ಪ್ರತಿಯೊಂದು ಪ್ರಕರಣವೂ ಒಂದು ಸೊಗಸಿನ ಕತೆಯಷ್ಟೇ ರಸವತ್ತಾಗಿದೆ!

೧೮೦ ಪುಟಗಳು–ಬಿಳಿಕಾಗದ-೭೦ ಚಿತ್ರಗಳು-ಹಲವು ಆರ್ಟ ಚಿತ್ರಗಳು–ಮುದ್ದಾದ ಮುದ್ರಣ–ವರ್ಣರಂಜಿತ ಮುಖಪತ್ರ.

ಇಷ್ಟಿದ್ದರೂ ಬೆಲೆ ಕೇವಲ ರೂ. ೨–೪–೦ ವಿ. ಪಿ. ಮಾಡಲಾಗುವುದಿಲ್ಲ

(ರೂ. ೨-೮-೦ ಕಳಿಸಿದರೆ ಒಂದು ಪ್ರತಿ ರವಾನಿಸಲಾಗುವುದು.)

ವ್ಯಾಪಾರಿಗಳಿಗೆ ಯೋಗ್ಯ ಕಮಿಷನ್!

ಪ್ರತಿಗಳು ಮತ್ತು ವಿವರಗಳಿಗೆ ಬರೆಯಿರಿ. –

ಕೆ. ಆರ್. ಶೆಣೈ, ಕೋರ್ಟ ರೋಡ್, ಉಡುಪಿ, ದ. ಕ.

ಪ್ರಕಾಶಕರು.

ವಿ. ಸೂ: ಪ್ರತಿಗಳು ಪ್ರಕಾಶಕರಲ್ಲಿಯೂ, ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ, ಮಂಗಳೂರಿನ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ಸಿಗುತ್ತವೆ.

ಮದ್ರಾಸ್ ಅಳಿಯ ಸಂತಾನ ಮಸೂದೆಯು

ಪ್ರತಿಗಳು 0 2 0 ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ 0 3 0 ಸ್ಟಾಂಪನ್ನು ಕಳಿಸಿದ್ದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.

1 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು

2 ನವಯುಗ ಪ್ರೆಸ್, ಉಡುಪಿ.



Approved firm by the Govt. of Mysore Certified by the Agent of the Govt. of Celone & Indian.

'ಕೇಶ ಕಲಾ' ಹೇರ್ ಆಯಿಲ್

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ದಕ್ಷಿಣ ಕನ್ನಡ

ಬೈಲೂರು—ಈ ಕೇಂದ್ರದ ಯಾವ ತ್ತೂ ಶಾಲೆಗಳ ಆಟದ ಹಬ್ಬವು ತಾ 13-2-48ರಲ್ಲಿ ಶ್ರೀ ಜೆ ಬಾಲಕೃಷ್ಣ ಹೆಗ್ಡೇರ ಅಧ್ಯಕ್ಷತೆಯಲ್ಲಿ ಮಾರಣಕಟ್ಟೆಯಲ್ಲಿ ಫಿಜಿಕಲ್ ಇನ್ಸ್ಟ್ರಕ್ಟರ್ ಶ್ರೀ. ಎಚ್. ಬಿ. ಕುಂದರರ ಭಾಷಣ, ಮಕ್ಕಳ ವಿವಿಧ ಆಟಗಳೊಂದಿಗೆ ವಿಜೃಂಭಣೆಯಿಂದ ಜರಗಿತು.

ಹಿರಿಯಡ್ಕ—ಆರ್ಯಸಮಾಜದ ಕಡೆಯಿಂದ ಋಷಿ ಬೋಧೋತ್ಸವವು ತಾ 9ರಲ್ಲು ವೈದಿಕ ಸಂಧ್ಯಾಗ್ನಿ ಹೋತ್ರ, ಗಾಂಧಿ ಮೈದಾನದಲ್ಲಿ ಶ್ರೀ ಎಚ್ ವಿಠಲರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಾದಿಗಳಿಂದ ಜರಗಿತು.

ಬೆಳ್ಳೆ—ಕಳೆದ ಹತ್ತು ವರ್ಷಗಳಿಂದ ಬೆಳ್ಳೆಯ ಗುರುಗಳಾಗಿದ್ದ ರೆ। ಪಾ। ಎ. ಎಮ್. ಎಲ್. ಡಿ ಸೋಜರು ಕಳೆದ ಶನಿವಾರ ಮಂಗಳೂರಲ್ಲಿ ನಿಧನ ಹೊಂದಿದುದರ ದುಃಖ ಸೂಚಕವಾಗಿ ಬೆಳ್ಳೆಯಲ್ಲಿ ಹರತಾಳವಾಚರಿಸಲಾಯಿತು. ಅವರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಪ್ರಾರ್ಥನೆ ನಡೆಯಿತು.

ಹಾಲಾಡಿ—ಇದೇ ತಾ 27ರಲ್ಲು ಕುಂದಾಪುರ ಧನಲಕ್ಷ್ಮಿ ಥಿಯೇಟರಿನಲ್ಲಿ ಸುಪ್ರಸಿದ್ಧ ಅರ್ಥಧಾರಿಗಳಾದ ಶ್ರೀಯುತರು ಎಸ್. ಎಸ್. ಕಿಲ್ಲೆ, ದೇಜಪ್ಪ ಸೆಟ್ಟಿ, ಪೊಳಲಿ ಶಂಕರನಾರಾಯಣ ಶಾಸ್ತ್ರಿ, ವಕೀಲ್ ಬಾಲಕೃಷ್ಣ ರಾವ್, ಮಲ್ಪೆ ಶಂಕರನಾರಾಯಣ ಸಾಮಗರ ಕೂಡುವಿಕೆಯಿಂದ ಯಕ್ಷಗಾನ, ತಾಳಮದ್ದಳೆ ನಡೆಯುವುದು ಇದರ ಉತ್ಪತ್ತಿಯನ್ನು ಹಾಲಾಡಿಯಲ್ಲಿ ಕಟ್ಟುವ ಮಹಾತ್ಮಾಜೀಯವರ ಸ್ಮಾರಕ ಕಟ್ಟಡ ನಿಧಿಗೆ ವಿನಿಯೋಗಿಸಲಾಗುವುದು. ಮಹಾಜನರು ಪ್ರೋತ್ಸಾಹಿಸಬೇಕಾಗಿ ಶ್ರೀ ಹಾಲಾಡಿ ಮಹಾಬಲ ಸೆಟ್ಟರು ವಿನಂತಿಸುತ್ತಾರೆ.

ಪಡುಬಿದ್ರೆ—ದ. ಕ. ಜಿಲ್ಲಾ ಕೃಷಿಕರ ಸಂಘದ ಪಡುಬಿದ್ರೆ ಶಾಖೆಯ ಆಡಳಿತ ಮಂಡಳಿಯ ಸಭೆಯು ಇದೇ ತಾ. 9ರಲ್ಲು ಜರಗಿ ಈ ಕೇಂದ್ರದಲ್ಲಿ ನಿತ್ಯವೂ ಸಟ್ಟಾ, ಕಾಲೀಮಂಡ, ಜುಗಾರಾಟಗಳು ನಡೆಯುತ್ತಿರುವುದನ್ನು ನಿಲ್ಲಿಸಲು ಶಾಖೆಯ ಪ್ರತಿಯೋರ್ವ ಸದಸ್ಯನೂ ಪ್ರಯತ್ನಿಸತಕ್ಕದೆಂದು ನಿರ್ಣಯವಾಯಿತು.

ವಿಟ್ಲ. ಬಡವರ ಮಹಾಸಭೆ—ತಾ 11ರಲ್ಲು ವಿಟ್ಲ ಶಾಲಾ ಮೈದಾನಿನಲ್ಲಿ ಶ್ರೀ. ಕೆ. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಬಡವರ ಮಹಾಸಭೆಯು ಜರಗಿ ಅಕ್ಕಿ ಕೊರತೆಯ ಕುರಿತು ಆಲೋಚಿಸಿ ಯುಕ್ತ ಸಲಹೆಗಳಿಂದೊಡಗೂಡಿದ ನಿರ್ಣಯಗಳಾದುವು. ಆಹಾರದ ಪೂರೈಕೆಯ ಜವಾಬ್ದಾರಿಯನ್ನು ವಹಿಸಿದ ಸರಕಾರವು ಪೂರ್ವಾಪರ ವಿಚಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸದೆ ದವಸಧಾನ್ಯಗಳ ನಿಯಂತ್ರಣವನ್ನು ತೆಗೆದುಹಾಕಿ ಅಕ್ಕಿ ರೇಶನಿಂಗ್ ಕ್ರಮವನ್ನು ನಿಲ್ಲಿಸಿದುದರಿಂದ ಬಡವರಿಗೆ ತುಂಬಾ ಸಂಕಷ್ಟ ಉಂಟಾಗಿದೆ. ಆಹಾರ ಧಾನ್ಯಗಳ ಕಂಟ್ರೋಲ್ ತೆಗೆದುದರಿಂದ ಕಳ್ಳ ಸಂತೆಯನ್ನು ಪ್ರತಿಭಟಿಸುವರೆ ಉಗ್ರ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿದೆ. ಮೊದಲು ಬೆಳೆಯ ಅಕ್ಕಿಯನ್ನು ಸ್ಟೋರುಗಳಿಗೊಪ್ಪಿಸಿದ ನಂತರ ರೇಶನ್ ಪದ್ಧತಿಯನ್ನು ತೆಗೆದು ಹಾಕಿದುದರಿಂದಲೂ ಎರಡನೆ ಬೆಳೆಯು ಸಾಕಷ್ಟು ತೃಪ್ತಿಕರವಾಗಿರುವುದಿಲ್ಲವಾದುದರಿಂದಲೂ ಬಡವರಿಗೆ ನಿಯಮಿತ ದರದಲ್ಲಿ ಅಕ್ಕಿ ದೊರೆಯುವುದಿಲ್ಲವಾದುದರಿಂದ ಸರಕಾರವು ನಿಶ್ಚಿತ ಬೆಲೆಯನ್ನು ನಿಶ್ಚಯಿಸಿ ಬಡವರಿಗೆ ರಿಲೀಫ್ ಶಾಪುಗಳ ಮೂಲಕ ಸರಾಗ ಅಕ್ಕಿ ಸಿಕ್ಕುವಂತಾಗಬೇಕು.

ಬೊಂಬಾಯಿ—ತಾ 9-3-1948ರಲ್ಲು ಶ್ರೀ ಭಗವತೀ ನೃತ್ಯಕಲಾ ಮಂದಿರದಲ್ಲಿ ಮಾರ್ಕಂಡೇಯ ನಾಟಕದ ಪಾತ್ರ ವರ್ಗದವರೂ ಇತರರೂ ಸೇರಿ ಮಹಾ ಶಿವರಾತ್ರಿ ಪೂಜಾ ಮಹೋತ್ಸವವನ್ನು ಜರಗಿಸಿದರು.

ಮಂಗಳೂರು.

ಕರ್ನಾಟಕ ಏಕೀಕರಣದ ಕುರಿತು—ತಾ ೧೧ರಂದು ಬಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರೂ ಶ್ರೀ ಕೆ. ಆರ್. ಕಾರಂತರೂ ಮಾತನಾಡಿದರು. ಅಂದಿನ ಸಭೆಗೆ ಶ್ರೀ ಜಿನರಾಜ ಹೆಗ್ಡೆಯವರು ಅಧ್ಯಕ್ಷರಾಗಿದ್ದರು. ಮಾಸ್ತಿಯವರು ತಮ್ಮ ಭಾಷಣದಲ್ಲಿ "ಇಂದು ಅರಸ ಬೇಕು ಬೇಡವೆನ್ನುವುದು ಮುಖ್ಯವಲ್ಲ. ಎಲ್ಲಿಗೆ ಎಷ್ಟೆಷ್ಟು ಮಂತ್ರಿಗಳೆನ್ನುವುದು ಮುಖ್ಯವಲ್ಲ. ಸಣ್ಣಪುಟ್ಟ ವಿಷಯಗಳನ್ನು ಬದಿಗಿಟ್ಟು ತಿಪ್ಪಾಣಿಯಿಂದ ನೀಲಗಿರಿ ವರೆಗಿರುವ ಎಲ್ಲ ಕನ್ನಡ ನೆಲದ ಜನ ಒಂದು ಆಡಳಿತೆಗೊಳಪಡುವ ಕರ್ನಾಟಕ ಏಕೀಕರಣ ಮುಖ್ಯವಾಗಿದೆ. ಇನ್ನೆರಡು ತಿಂಗಳವರೆಗೆ ಆ ಏಕೀಕರಣಕ್ಕೆ ಯಾರೂ ಯಾವ ರೀತಿಯ ಆತಂಕವೆಸಗಬಾರದು, ಸಹಕರಿಸಬೇಕು"–ಎಂದು ಹೇಳಿದರು. ಕಾರಂತರು ತಮ್ಮ ಭಾಷಣದಲ್ಲಿ ಕರ್ನಾಟಕ ಶಿಷ್ಟಮಂಡಲವು ಗಾಂಧೀಜಿಯನ್ನು ಕಾಂಗ್ರೆಸ್ ಕಾರ್ಯಸಮಿತಿಯನ್ನು ಕಂಡು ಮಾತನಾಡಿದ ವಿಚಾರವನ್ನೂ ಮೈಸೂರು ಮುಖಂಡರೊಡನೆ ಮಾಡಿದ ಮಾತುಕಥೆಗಳನ್ನೂ ತಿಳಿಸುತ್ತಾ ಕರ್ನಾಟಕ ಏಕೀಕರಣಕ್ಕೆ ಈ ಜಿಲ್ಲೆಯ ಕೆಲವೇ ಮಂದಿ ಹಿಂದಿನಿಂದ ವಿರೋಧವಾಗಿ ಕಾರ್ಯಮಾಡುತ್ತಿರುವರೆಂಬುದನ್ನೂ ತಿಳಿಸಿದರು ಅಲ್ಲದೆ ಎಲ್ಲ ಜನರು ಇದು ತನ್ನ ಕೆಲಸವೆಂದು ಸಹಕರಿಸಬೇಕೆಂದೂ ಯಾವ ರೀತಿಯಿಂದಾದರೂ ಇನ್ನೆರಡು ತಿಂಗಳಲ್ಲಿ ಏಕೀಕರಣವಾಗದಿದ್ದರೆ ಮುಂದೆ ಅದು ಇನ್ನಷ್ಟು ಕಷ್ಟವಾಗುವುದೆಂದೂ ಮೈಸೂರು ಕರ್ನಾಟಕದೊಳಗೆ ಸೇರದಿದ್ದರೆ ಹಲವು ಕನ್ನಡ ಊರುಗಳು ನಮ್ಮ ಕೈಬಿಟ್ಟು ಕಷ್ಟಪಡಬಹುದೆಂದೂ ತಿಳಿಸಿದರು. ಅಧ್ಯಕ್ಷರು ತಮ್ಮ ಕೊನೆಯ ಭಾಷಣದಲ್ಲಿ ಮೈಸೂರಿನ ಮುಖಂಡರೊಡನೆ ಅವರು ಮಾತನಾಡಿದಾಗ ಬಂದ ವಿಚಾರಗಳೂ ಅವುಗಳಿಗೆ ಇವರಿತ್ತ ಉತ್ತರಗಳನ್ನೂ ತಿಳಿಸಿ ಅಖಂಡ ಕರ್ನಾಟಕದ ಆವಶ್ಯಕತೆಯನ್ನು ತಿಳಿಸಿದರು.

ನಿಧನ—ಟೆಂಪರರಿ ಆಸಿಸ್ಟೆಂಟ್ ಇನ್ಕಮ್ ಟೇಕ್ಸ್ ಆಫೀಸರರಾದ ಶ್ರೀ ದೇರೆಬೈಲು ನಾರಾಯಣ ತಂತ್ರಿಗಳು ಫೆಬ್ರವರಿ ದಿನಾಂಕ ೨೮ರಂದು ಉರುವದಲ್ಲಿರುವ ತಮ್ಮ ಸ್ವಂತ ಮನೆಯಲ್ಲಿ ನಿಧನ ಹೊಂದಿದರೆಂದು ವಿಷಾದ ಪೂರ್ವಕವಾಗಿ ತಿಳಿಸುತ್ತೇವೆ ಮೃತರ ಆತ್ಮಕ್ಕೆ ಚಿರಶಾಂತಿಯಿರಲಿ.

ಫಿರ್ಕಾ ಡೆವಲಪ್‌ಮೆಂಟ್ ಕಮಿಟಿ ಸಭೆಯು—ತಾ, 11ರಲ್ಲು ಜಿಲ್ಲಾ ಕಲೆಕ್ಟರರಾದ ಶ್ರೀ. ಎಸ್. ಆರ್. ಕೈವಾರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಗೆ ಈ ಯೋಜನೆಗೆ ಸಂಬಂಧಪಟ್ಟವರೆಲ್ಲರೂ ಬಂದಿದ್ದರು. ಕುಂಬಳೆ ಫಿರ್ಕಾದಲ್ಲಿ ಸುಮಾರು 30ಸಾವಿರ ವೆಚ್ಚದಿಂದ 13 ಬಾವಿಗಳನ್ನು ಅಗೆಯಿಸುವುದಲ್ಲದೆ ಮೂರು ಸಾವಿರದ ವೆಚ್ಚದಿಂದ ಆ ಫಿರ್ಕದ ಅಲ್ಲಲ್ಲಿನ ಕೆರೆ, ಓಣಿ, ಕಾಲುದಾರಿ, ಚಿಕ್ಕ ಪುಟ್ಟ ಸಂಕ ಸೇತುವೆಗಳ ದುರಸ್ತಿಮಾಡುವ ಹಾಗೂ ಹೊಸದಾಗಿ ಕಟ್ಟಿಸುವ ನಿರ್ಧಾರಗಳಾದುವು.

ಮದ್ಯ ನಿಷೇಧದ ಅಪರಾಧಗಳು—ಸುರತ್ಕಲಿನ ಪ್ರೇಲರ್ ಮತ್ತು ಅಂಗರ ಪೂಜಾರಿಯರ ಬಳಿ ಸರಾಯಿ ಇತ್ತೆಂಬ ಆರೋಪದ ಮೇಲೆ ಒಂದನೆಯವರಿಗೆ 50 ರೂಪಾಯಿ, ಎರಡನೆಯವರಿಗೆ 100 ರೂಪಾಯಿ ಜುಲುಮಾನೆಯೂ, ಗುರುಪುರದ ಮಗ್ದೇಲ್ ಪಿಂಟೋರ ಬಳಿ ಎರಡು ಗೆಲನ್ ಮಿಶ್ರ ಹುಳಿಯಾದ ರಸ ದೊರಕಿದೆ ಎಂದು ಅವರಿಗೆ 75 ರೂಪಾಯಿ ಜುಲುಮಾನೆಯೂ ಸ್ಪೆ। ಸ। ಮೆಜಿಸ್ಟ್ರೇಟರಿಂದ ವಿಧಿಸಲ್ಪಟ್ಟಿದೆ.

ರಿಲೀಫ್ ಅಂಗಡಿಗಳಲ್ಲಿ ಅಕ್ಕಿ ಧಾನ್ಯ—ರಿಲೀಫ್ ಅಂಗಡಿಗಳಲ್ಲಿ ದಿನಕ್ಕೊಬ್ಬರಿಗೆ ಆರು ಔನ್ಸ್ ಆಹಾರ ಸಾಧನಗಳು, ಅದರಲ್ಲಿ 3 ಔನ್ಸ್ ಅಕ್ಕಿ, 3 ಔನ್ಸ್ ಜೋಳ. ಇದು ರೆವಿನ್ಯೂ ಬೋರ್ಡಿನವರ ಅಪ್ಪಣೆಯಂತೆ ನಿವೃತ್ತಿ ಮಾರ್ಗ.

ಡಿ। ಸೆ। ಜಡ್ಜ ರಾದ–ಮಿ. ಎ. ಎಂ. ಆರ್. ಡೇವಿಡರ್ ಅವರಿಗೆ ಕಡಪಾ ಜಿಲ್ಲೆಗೆ ವರ್ಗವಾಗಿದೆ, ಈಗ ಬಂದಿರುವ ಶ್ರೀ ಸಿ. ಕೃಷ್ಣ ಮೂರ್ತಿ ಅವರು ಇಲ್ಲಿ ಜಡ್ಜರಾಗಿ ಮುಂದುವರಿಸುವರೆಂದು ತಿಳಿದು ಬಂದಿದೆ!

ಭಾಷಣ–ಸ್ಥಳೀಯ ಗವರ್ನಮೆಂಟು ಕಾಲೇಜಿನ ಪಂಡಿತ ತರಬೇತಿಯ ಕೂಟದ ಆಶ್ರಯದಲ್ಲಿ ಶ್ರೀ ತೇಧರ ಸಾಲಿಯನ್ಸ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಕೆ ಶಿವರಾಮ ಕಾರಂತರು 'ಭಾಷೆಯ ಕಡೆಗೆ ನೋಟ' ಎಂಬ ಬಗ್ಗೆ ಕುರಿತು ಭಾಷಣವಿತ್ತರು.

ಪೆಟ್ರೋಲಿನ ಮೇಲೆ ಬಿಡುಗಡೆ—ಆರ್. ಎಸ್. ಎಸ್. ಪ್ರಮುಖರಾದ ಶ್ರೀ ಎಮ್. ಜನಾರ್ಧನ ಮಲ್ಯ (ವಕೀಲ್) ಮತ್ತು ಶ್ರೀ ಬಜಾರ ಗೋವಿಂದ ಪೈ ಇವರು ಕೆಲವು ದಿನಗಳ ಪೆರೋಲಿನ ಮೇಲೆ ಬಿಡುಗಡೆ ಹೊಂದಿ ಬಂದಿರುವರೆಂದು ತಿಳಿದು ಬರುತ್ತದೆ.

ಶ್ರೀ ಜೆರೋಮ್ ಸಾಲ್ದಾನರಿಗೆ ಸ್ಮಾರಕ—ತಾ. 7ರಲ್ಲು ರೋಮನ್ ಕಥೋಲಿಕ್ ಕ್ಲಬ್ಬಿನಲ್ಲಿ ಮುನಿಸಿಪಲ್ ಕೌನ್ಸಿಲರ್ ಶ್ರೀ ಎಮ್. ಎಸ್. ಕ್ರೇಸ್ತರ ಅಧ್ಯಕ್ಷತೆಯಲ್ಲಿ ದಿವಂಗತ ಶ್ರೀ ಜೆರೋಮ್. ಎ. ಸಾಲ್ದಾನರ ಸಂಬಂಧದ ಸ್ಮಾರಕವನ್ನು ರಚಿಸುವ ಕುರಿತು ಆಲೋಚಿಸುವರೆ ಒಂದು ಸಭೆ ಜರಗಿತು. ದಿವಂಗತರ ಸ್ಮಾರಕ ರೂಪದಲ್ಲಿ ಸೈಂಟ್ ಎಲೋಸಿಯಸ್ ಕಾಲೇಜಿನ ಬಡಾವಣೆಯಲ್ಲಿ ಒಂದು ಪಾರ್ಶ್ವ ಭಾಗ ಅಥವಾ ಒಂದು ಹಾಲ್, ಮಿಲಾಗ್ರಿಸ್ ಹೈಸ್ಕೂಲಲ್ಲಿ ಒಂದು ಪಾರ್ಶ್ವ ಭಾಗ ಅಥವಾ ಹಾಲ್, ಹಾಗೆಯೇ ಕೊಡಿಯಾಲಬೈಲು ಹೈಸ್ಕೂಲಲ್ಲಿಯೂ, ಕಥೋಲಿಕ್ ಕ್ಲಬ್ ಬಡಾವಣೆಯಲ್ಲಿಯೂ ಒಂದೊಂದು ಪಾರ್ಶ್ವಯಾ ಹಾಲ್, ಮೂಡಬಿದ್ರೆ ಸೆನಟೋರಿಯಮಿನಲ್ಲಿ ಒಂದು "ಕೊಟೇಜ್" ಕೆನರಾ ಕಥೋಲಿಕ್ ಕೋಅಪರೇಟಿವ್ ವಿದ್ಯಾ ಸಂಸ್ಥೆಯಲ್ಲೊಂದು ವಿದ್ಯಾರ್ಥಿ ವೇತನ, ಬಲ್ಮಠದಲ್ಲಿನ ಗೃಹ ವಿಜ್ಞಾನ ಕಾಲೇಜಿನಲ್ಲಿ ಒಂದು ಹಾಲ್ ಹೀಗೆ ಏಳು ಸ್ಮಾರಕಗಳೇರ್ಪಡುವಂತೆ ನಿರ್ಧಾರವಾಗಿ ಆ ಬಗ್ಗೆ ಹಣ ಸಂಗ್ರಹಿಸುವರೆ ಶ್ರೀ ಎ. ಬಿ. ಕ್ರೇಸ್ತರು ಅಧ್ಯಕ್ಷರಾಗಿರುವ 14ಮಂದಿಯ ಕಮಿಟಿಯ ನೇಮಕವಾಯಿತು.

ಕರ್ನಾಟಕ ಪ್ರಾಂತೀಯ ಗಾಂಧೀ ಸ್ಮಾರಕ ನಿಧಿಗೆ—ನಮ್ಮ ಜಿಲ್ಲೆಯಿಂದ ಶ್ರೀಗಳಾದ ಬಿ. ವಿ. ಬಾಳಿಗಾ, ಯು. ಶ್ರೀನಿವಾಸ ಮಲ್ಯ. ಕೆ. ಆರ್ ಕಾರಂತ ಇವರು ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ ರಾಷ್ಟ್ರಪತಿಗಳ ಬಿನ್ನಹದಂತೆ ಪ್ರತಿಯೊಬ್ಬನೂ ಹತ್ತು ದಿನದ ಉತ್ಪನ್ನವನ್ನು ನಿಧಿಗೆ ಕೊಡಬೇಕೆಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಕೇಳಿಕೊಂಡಿದೆ. ಕೇಂದ್ರ ನಿಧಿ ಸಂಗ್ರಹ ಸಮಿತಿಯವರು ಕಳುಹಿಸಿಕೊಟ್ಟ ರಶೀತಿ ಪುಸ್ತಕಗಳಲ್ಲಿ ಮಾತ್ರ ಹಣ ಸಂಗ್ರಹಿಸಬೇಕಲ್ಲದೆ, ಸಿಕ್ಕಿದಂತೆ ಹಣ ಸಂಗ್ರಹಿಸಬಾರದೆಂದೂ ಕರ್ನಾಟಕ ಪ್ರಾಂತೀಯ ಗಾಂಧೀ ಸ್ಮಾರಕ ನಿಧಿ ಸಮಿತಿಯವರು ತಿಳಿಸಿದ್ದಾರೆ.



ಅಮೃತಾಂಜನ.

ತಲೆನೋವು, ಶೀತ, ನೆಗಡಿ, ಉಳುಕು, ಕುತ್ತಿಗೆ ಹುಳುಕು ನೋವುಗಳಿಗೆ ಎದೆನೋವು, ಗಾಯಗಳು ಚೇಳು ಕಡಿತ, ಜೇನುನೊಣ ಮುಂತಾದ ಜಾತಿ ಕಚ್ಚುವಿಕೆ, ವಾತದಿಂದಾದ ಎಲ್ಲಾ ರೋಗಗಳಿಗೂ

ಸಕಲ ಔಷಧಿ ಅಂಗಡಿಗಳಲ್ಲಿ ಮತ್ತು ಸಂತೆ ಪೇಟೆಗಳಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ಸರ್ವಧಾರಿ ಸಂವತ್ಸರದ (1948–1949) ನವಯುಗ ಪಂಚಾಂಗ

ಸೈಕ್ಲೋ ಪಂಚಾಂಗ ಮತ್ತು ಆಗತ್ಯವಿರುವ ಮಾಹಿತಿಗಳಿವೆ.

ಬೆಲೆ ಅಗ್ಗ 0-5-0 ಸಂಗ್ರಹ ಅಧಿಕ. ಪುಟ 56

0-6-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು

ವ್ಯಾಪಾರಿಗಳು ರಿಯಾಯಿತಿ ದರಗಳಿಗೆ ಬರೆದುಕೊಳ್ಳಬಹುದು.

ಪ್ರತಿಯೊಬ್ಬನಿಗೂ ಸಾಕಷ್ಟು ವ್ಯವಹಾರ ಜ್ಞಾನವು ಬೇಕೇಬೇಕು.

ಅನ್ಯರ ಸಹಾಯವಿಲ್ಲದೆ ಅನುದಿನದ ವ್ಯವಹಾರವನ್ನು ತಮ್ಮಷ್ಟಕ್ಕೆ ತಾವೇ ತಿಳಿದುಕೊಳ್ಳಲಿಕ್ಕಾಗುವ **ಅತ್ಯುಪಯುಕ್ತ ಪುಸ್ತಕವೆಂದರೆ ಶ್ರೀ. ಯು. ಜಿ ಗಣಪತಿನಾರಾಯಣ ಪ್ರಭುಗಳ**

ವ್ಯವಹಾರಜ್ಞಾನದರ್ಪಣ

ಲೋಕವ್ಯವಹಾರ ಬೋಧನೆಯ ಇಂತಹ ಪುಸ್ತಕಗಳು ತೀರ ವಿರಳ:

ವಕೀಲ್ ಗುಮಾಸ್ತರು, ದಸ್ತಾವೇಜು ಬರೆಯುವವರು ಉಪಾಧ್ಯಾಯರು ಇವರಿಗಂತೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ದೊಡ್ಡಸೈಜಿನ 164ಪುಟಗಳು ಬೆಲೆ ರೂ. **1-8-0**

ರೂ 1-12-0ನ್ನು ಕಳುಹಿಸಿದರೆ ಒಂದು ಪ್ರತಿಯನ್ನು ರವಾನಿಸಬಹುದು.

ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಪ್ರಧಾನ ಕಾರ್ಯಾಲಯ ಉಡುಪಿ—

1947ನೇ ಇಸವಿಯ ವಾರ್ಷಿಕ ವರದಿಯ ವಿಹಂಗಮಾವಲೋಕನ ವರದಿಯ ಅಂಕೆ ಸಂಖ್ಯೆಗಳನ್ನು ಅವಲೋಕಿಸಿದರೆ ಕಂಪೆನಿಯು ತನ್ನ ಭದ್ರತೆಯಲ್ಲಿ, ವಿಮಾ ಕಾರ್ಯಬಾಹುಳ್ಯದಲ್ಲಿ, ದಕ್ಷತೆಯ ಆಡಳಿತೆಯಲ್ಲಿ, ಮಿತವ್ಯಯ ಶೀಲತೆಯಲ್ಲಿ ಶ್ಲಾಘನೀಯವಾಗಿ ಮುನ್ನಡೆಯುತ್ತಿರುವುದು ಬಹಳ ಸಂತೋಷವಾಗುತ್ತಿದೆ. ವರ್ಷದಿಂದ ವರ್ಷಕ್ಕೆ ಎಲ್ಲ ಲಕ್ಷಣಗಳಲ್ಲಿಯೂ ಗಣನೀಯವಾದ ಅಭಿವೃದ್ಧಿಯನ್ನು ಹೊಂದುತ್ತ ಜನಪ್ರೀತವಾದ ವಿಮಾ ಸಂಸ್ಥೆಯಾಗಿದೆ ಎಂಬುದಕ್ಕೆ ವರದಿಯಿಂದ ಹಲವು ಅಂಕೆ ಸಂಖ್ಯೆಗಳನ್ನೆತ್ತಿ ತೋರಬಹುದಾದರೂ ಸ್ಥಳಾಭಾವದಿಂದ ಅವನ್ನೆಲ್ಲ ಇಲ್ಲಿ ಎತ್ತಿಯೆತ್ತಿ ಹೇಳದೆ ಕೇವಲ 1945ನೇ 1947ನೇ ವರ್ಷಾಂತ್ಯಗಳಲ್ಲಿ (1) ಈ ಸಂಸ್ಥೆಯು ಕೊಟ್ಟಿದ್ದ ವಿಮಾ ಪತ್ರಗಳ ಮುಖಬೆಲೆ, (2) ಸಂಸ್ಥೆಯ ವಾರ್ಷಿಕ ಪ್ರೀಮಿಯಮ್ ಉತ್ಪತ್ತಿ, (3) ಬಡ್ಡಿ ಮುಂತಾದುವುಗಳಿಂದ ಸಂಸ್ಥೆಗೆ ದೊರೆತ ನೆಟ್ ಆದಾಯ, (4) ವಿಮಾ ಪತ್ರದಾರರಿಗೆ ಪ್ರಥಮ ಭದ್ರತೆಯಾಗಿ ಮೀಸಲಾಗಿರಿಸಲ್ಪಟ್ಟ ಲೈಫ್ ಫಂಡ್ ಈ ನಾಲ್ಕು ವಿಷಯಗಳ ಅಂಕೆ ಸಂಖ್ಯೆಗಳನ್ನು ಮಾತ್ರ ಹೋಲಿಕೆಗೆ ಅನುಕೂಲವಾಗುವಂತೆ ಜೊತೆ ಜೊತೆಯಾಗಿ ಅನುಕ್ರಮವಾಗಿ ಕೆಳಗೆ ಕೊಡಲಾಗಿದೆ:-

(1) ರೂ. 55,05,150 ಮತ್ತು ರೂ. 69,11,050, (2) ರೂ 8,83,834 ಮತ್ತು ರೂ. 13,40,622, (3) ರೂ. 49,810 ಮತ್ತು ರೂ 84,068, (4) ರೂ. 16,24,430 ಮತ್ತು ರೂ. 32,27,210 ಲೈಫ್ ಫಂಡ್ ಸಾಧಾರಣ ಇಮ್ಮಡಿಯಾಗಿರುವುದೂ ಆಡಳಿತೆಯ ವೆಚ್ಚವು ವಾರ್ಷಿಕ ಪ್ರೀಮಿಯಮ್ ಆದಾಯದ ಬರೇ ಸೇಕಡ 9.43ರಷ್ಟು ಕಡಿಮೆಯಿರುವುದೂ ವರದಿಯ ವರ್ಷದಲ್ಲೇ ಲೈಫ್ ಫಂಡಿಗೆ ರೂ 8,85,069 ಸೇರಿಸಿರುವುದೂ 1947ರಲ್ಲಿಯ ವಿಮಾ ಕಾರ್ಯವು 1946ರದಕ್ಕಿಂತ ಸೇಕಡಾ 25ಕ್ಕೂ ಮಿಕ್ಕಿ ಹೆಚ್ಚಿಗಿರುವುದೂ ಸಂಘದ ನಿಧಿಗಳು ಭದ್ರವಾದ ಹಾಗೂ ಲಾಭದಾಯಕವಾದ ಠೇವಣಾತಿಗಳಲ್ಲಿರುವುದೂ ವಿಶೇಷ ತೃಪ್ತಿಕರವಾದ ಸಂಗತಿಗಳು.

ಈ ವಿಮಾ ಸಂಘದ ಮತ್ತೊಂದು ಉಲ್ಲೇಖನೀಯವಾದ ವಿಷಯವೆಂದರೆ ಸಾಮಾನ್ಯವಾಗಿ ಕಳೆದ ಎಂಟು ಹತ್ತು ವರುಷಗಳಿಂದೀಚೆಗೆ ಎಷ್ಟೋ ಕಂಪೆನಿಗಳು ಪೋಲಿಸಿದಾರರಿಗೆ ಬೋನಸ್ಸು (ಲಾಭ) ವಿಭಜಿಸಿಕೊಡಲು ಅಸಮರ್ಥವಾಗಿರುವಲ್ಲಿ, ಈ ಸಂಘದ ಬಗ್ಗೆ 1946ನೇ ವರ್ಷಾಂತ್ಯಕ್ಕೆ ನಡೆದ ಪೂರಣೆಯ ಸಲದ ಚಾತುರ್ಥ ವಾರ್ಷಿಕ ವೆಲ್ಯುಯೇಶನ್ ಕಂಪೆನಿಯ ಸೊತ್ತು ಸಂಪತ್ತುಗಳ ಮೌಲ್ಯ ನಿರ್ಧಾರವು ಸಮರ್ಥ ಎಕ್ಚ್ಯುರಿಗಳಿಂದ ಕೇವಲ ನೆ 2½ ಸರದ ಬಡ್ಡಿಯ ಆಧಾರದ ಮೇಲೆ ಲೆಕ್ಕ ಹಾಕಿ ಪರಿಶೋಧಿಸಲ್ಪಟ್ಟು ಕಂಪೆನಿಯಲ್ಲಿ ಹೊಣೆಗಿಂತ ರೂ. 2,01,399 ಮಿಗುತೆ (ಸರ್ಪ್ಲಸ್) ಇದೆ ಎಂದು ನಿರ್ಣೀತವಾದುದೊಂದು ಮತ್ತು ಅದರಿಂದಾಗಿ ಆ ಅವಧಿಯ ನಾಲ್ಕು ವರುಷಗಳಿಗಲ್ಲದೆ ಮತ್ತೂ ಹಿಂದಿನ ನಾಲ್ಕು ವರುಷಗಳಿಗೂ ಕೂಡಿ ಎಂಟು ವರುಷಗಳಿಗೆ ವಿಮಾಪತ್ರದಾರರಿಗೆ ಲಾಭ ವಿಭಜಿಸಿ (ಬೋನಸ್ಸು) ಕೊಟ್ಟಿರುವುದಲ್ಲದೆ ಮುಂದಿನ ಚತುರ್ಥ ವಾರ್ಷಿಕ ಅವಧಿಯೊಳಗಿನ ವರುಷಗಳಿಗೂ ಬೋನಸ್ಸು ವಿತರಣೆಗೆ ಅವಕಾಶವಿಟ್ಟುಕೊಂಡಿರುವುದು ಮತ್ತೊಂದು ಪ್ರಶಂಸನೀಯವಾದ ವಿಚಾರ. ಕಳೆದ ಕೆಲವು ವರುಷಗಳ ಜಾಗತಿಕ ವಿಷಮ ಪರಿಸ್ಥಿತಿಯ ಅವಧಿಯಲ್ಲಿಯೂ ಇಂತಹ ಅಭಿವೃದ್ಧಿಯನ್ನೂ ಭದ್ರತೆಯನ್ನೂ ಸಾಧಿಸಿದ ಕೆನರಾ ಮ್ಯೂಚುವಲ್ ಅಭಿನಂದನಾರ್ಹವಾಗಿದೆ.

ಚಂದ್ರಹಾಸ
(ಒಂದು ವಿಮರ್ಶೆ)

ಮುಂಬಾಯಿಯಂಥ ಮುಂದುವರಿದ ಊರಲ್ಲಿದ್ದು ಕೊಂಡು- ಚಲಚ್ಚಿತ್ರರಂಗದ ಅನುಭವವುಳ್ಳ ಹಾಗೂ ಚಲಚ್ಚಿತ್ರದ ಪ್ರಗತಿಯ ಪರಿಚಯವುಳ್ಳ ಶ್ರೀ. ಶಾಂತೇಶ ಪಾಟೀಲರ ನೇತೃತ್ವದಲ್ಲಿ ಪಂಪಾ ಪಿಕ್ಚರ್ಸರವರು ರಚಿಸಿದ್ದ ಕನ್ನಡ ಚಿತ್ರವೆಂದ ಮೇಲೆ ಕನ್ನಡ ಕಲಾಪ್ರೇಮಿಯ ಆಸೆ ಕೆರಳುವುದು ಸಹಜವೆ. ಕಥಾ ಲೇಖಕರೋ- ಶ್ರೀ. ಎಸ್. ಕೆ. ಕರೀಂಖಾನ್- ಕತೆಯೋ ಲಕ್ಷ್ಮೀಶನ ರಸಖಂಡ. ಹೀಗೆ ಎಲ್ಲ ಬಗೆಯಿಂದಲೂ ಕನ್ನಡ ಜನ 'ಚಂದ್ರಹಾಸ'ವನ್ನು ಬಹು ಆಸೆಗಣ್ಣಿನಿಂದ ನೋಡಬಯಸಿತು. ಆದರೆ ಚಿತ್ರದ ಪ್ರೇಕ್ಷಣಾನಂತರ ತೀವ್ರ ನಿರಾಶೆಯಾಗುವುದೆಂಬುದು ಒಂದು ಶೋಚನೀಯ ಸತ್ಯ!

ರಂಗಪರಿಚಯವಿಲ್ಲದ ಕಲಾ ಪ್ರತಿಭೆಯಿಲ್ಲದ ಗೊಗ್ಗಯ್ಯಗಳು ಹಣದ ಲೋಭದಿಂದ ತಯಾರಿಸಿದ ಚಿತ್ರಗಳಾದರೆ ಅಂಥವುಗಳಲ್ಲಿ ಶುಭ ನಿರೀಕ್ಷಣೆಯು ಇರುವುದಿಲ್ಲವಾಗಿ- ತಪ್ಪುಗಳಿದ್ದರೂ ಕ್ಷಮ್ಯ. 'ಚಂದ್ರಹಾಸ'ದ ಕಥಾಲೇಖಕರೆ ಆಗಲಿ, ನಿರ್ದೇಶಕರೆ ಆಗಲಿ ಉತ್ತಮ ಚಿತ್ರವನ್ನು ನಾಡಿಗೆ ನೀಡುವಷ್ಟು ಸಮರ್ಥರು. ಇಂಥ ಅಧಿಕಾರಿಗಳೆ ಹೀಗೆ ಜನದ ನಿರೀಕ್ಷೆಯನ್ನು ವಿಫಲಗೊಳಿಸಿದರೆ ಕನ್ನಡ ಚಿತ್ರ ರಂಗದ ಮೇಲೆ ಯಾವ ಭರವಸೆಯನ್ನಿಡಬಹುದು?

ಚಂದ್ರಹಾಸದ ನಾಯಕ-ನಾಯಕಿಯರ ಆಯ್ಕೆಯಲ್ಲಿಯೂ ಕೌಶಲ್ಯವಿಲ್ಲ. ರಂಗಕ್ಕೆ ಬೇಕಾದ ನಿಲುಮೆಯಿಲ್ಲದ ನಾಯಕಿ ಚಂದ್ರಹಾಸನ ಗುಣಗರಿಮೆಗೆ ಹೋಲಿಸಿದ ಮುಖಸೌಂದರ್ಯವಿಲ್ಲದ ನಾಯಕ! ಸಪ್ಪೆಯಾಗಿ ಸಾಗುವ ಕಥಾತಂತ್ರ. ಹೀಗೆ 'ಚಂದ್ರಹಾಸ' ಚಿತ್ರ ಒಂದು ಬೇಸರದ ಕಂತೆಯಾಗಿದೆ.

ಈ ಮಾತು ಕಟುವಾಗಿ ಕಂಡೀತು. ಆದರೆ ಒಳ್ಳೆಯ ಚಿತ್ರಗಳನ್ನು ನಾವು ಪಂಪಾ ಪಿಕ್ಚರ್ಸಿನವರಿಂದಲೂ ಪಡೆಯಲಾರೆವಾದರೆ ಇನ್ನೆಲ್ಲಿಂದ ಪಡೆದೇವು ಎಂಬ ನೋವಿನಿಂದ ಈ ಮಾತು ಬರೆದಿದೆ. ಈ ಸಹೃದಯ ವೇದನೆಯನ್ನರಿತು ಪಂಪಾ ಪಿಕ್ಚರ್ಸರವರು ಮುಂದಿನ ಚಿತ್ರಗಳನ್ನು ಕಲಾಪೂರ್ಣ ಹಾಗೂ ಉತ್ತಮ ತರಗತಿಯವನ್ನಾಗಿ ಮಾಡುವರೆಂದು ಹಾರೈಕೆ.

—ಬನ್ನಂಜೆ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3|-; ಸ್ಪೆಶಲ್ ರೂ. 5; ಅಧಿಕಾಧಿಕ ಸ್ಪೆಶಲ್ ರೂ.6/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mis. D. DEVEE, P. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ ಮಂಗಳೂರು

ವಿವಿಧ ಪಾತ್ರೆಗಳು



ಯಾವತರ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಸ್ಪೆಶಲ್

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕಾಯವಾಗಿದ್ದರೆ,....ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉತುಟು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇಂವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ದೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ   ಪೋಸ್ಟ ಚಾರ್ಜ ೮ ಆಣೆ

ಏಜಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ:
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರಕೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ.ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೩—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ— ವಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಶಿವಯ್ಯ, ಹಾವೇರಿ ಬ್ಯಾಡಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಸ್ವೀಕಾರ-ವಿಮರ್ಶೆ

'ಹೂದೋಟ'-ಕಥಾಸಂಗ್ರಹ ಭಾಗ ೧ ಸಂಪಾದಕ ಮತ್ತು ಪ್ರಕಾಶಕರು ಶ್ರೀ. ಟಿ. ಶ್ರೀಪತಿ, 'ಕೃಷ್ಣ ವಿಹಾರ' ಕದ್ರಿ ಬಂಗಲೆ ರೋಡ, ಮಂಗಳೂರು ಪುಟ ೩೪೮ ಬೆಲೆ ರೂ. ೩ ... ೨೫ ಚಿಕ್ಕ ಕತೆಗಳ ಸಂಗ್ರಹ. ಚೆಲುವಾದ ಹೂದೋಟದ ಚಿತ್ರದಿಂದೊಪ್ಪುವ ತಾಳಿಕೆ ಬಾಳಿಕೆ ಬರುವ ರಕ್ಷಾಪತ್ರ, ಒಳ್ಳೆಯ ಕಾಗದ, ಅಂದವಾದ ಮುದ್ರಣ. ಮುದ್ರಕರು ಮಂಗಳೂರ ಕೆನರಾ ಛಾಪಖಾನೆ. ನಮ್ಮ ಕನ್ನಡ ಕಥಾತಂತ್ರದ ಪರಿಚಯ ಆಗುವಂತೆ ಕನ್ನಡದ ಎಲ್ಲ ಕತೆಗಾರರ ಅಪ್ರಕಟಿತ ಕತೆಗಳನ್ನು ಸಂಗ್ರಹಿಸಿ ಪ್ರಕಟಿಸಬೇಕೆಂಬ ಬಯಕೆಯಿಂದ ಕಾರ್ಯ ಪ್ರವರ್ತಕರಾದ ಪ್ರಕಾಶಕರು ಸಂಪಾದಿತವಾದ ಕತೆಗಳಲ್ಲಿ ೧೫ ಕತೆಗಳನ್ನು ಕಾಗದದ ಅಭಾವದಿಂದಾಗಿ ಒಂದನೆಯ ಭಾಗವಾಗಿ ಪ್ರಕಟಿಸಿ ಉಳಿದಿರುವವುಗಳನ್ನು ದ್ವಿತೀಯ ಭಾಗವಾಗಿ ಶೀಘ್ರದಲ್ಲೇ ಕನ್ನಡಿಗರ ಮುಂದಿಡುವ ಆಶ್ವಾಸನೆಯನ್ನೀಯುತ್ತ ಪ್ರೋತ್ಸಾಹನೆಯ ನೆರವನ್ನು ಬಯಸಿದ್ದಾರೆ. ಬೊಂಬಾಯಿ, ಪುಣೆ, ಧಾರವಾಡ, ಹುಬ್ಬಳ್ಳಿ, ಸೊಲ್ಲಾಪುರ, ಉಡುಪಿ, ಮಂಗಳೂರು, ಬೆಂಗಳೂರು ಮತ್ತು ಮೈಸೂರು ಬರಹಗಾರರ ಕತೆಗಳನ್ನು ಒಳಗೊಂಡ ಪ್ರಸ್ತುತ ಪುಸ್ತಕವನ್ನು ಪ್ರಕಾಶಕರನ್ನುವಂತೆ ಒಂದು ರೀತಿಯಲ್ಲಿ 'ಪ್ರಾತಿನಿಧಿಕ ಕಥಾಸಂಗ್ರಹ' ಎನ್ನಬಹುದು. ಅಲ್ಲಲ್ಲಿಯ ಪ್ರಸಿದ್ಧ ಕವಿ, ಸಾಹಿತಿ, ಲೇಖಕರಲ್ಲಿ ಯಾರಾದರೊಬ್ಬರನ್ನು ಆಯ್ದುಕೊಂಡು ಕತೆ ಬರೆಯಿಸಿದ್ದಾರೆ. ಹೆಚ್ಚಾಗಿ ವಿಶ್ವವಿದ್ಯಾನಿಲಯದ ಒಂದೋ ಎರಡೋ ಪದವಿಗಳನ್ನು ಪಡೆದವರನ್ನೇ ಹುಡುಕಿ ತೆಗೆದಂತಿದೆ. ವಿಶಾಲ ವಿಸ್ತೃತ ಪರಿಜ್ಞಾನವೂ ಜನಜೀವನದ ಒಳನೋಟವೂ ಉಳ್ಳ ಈ ಲೇಖಕರು ಜೀವನದ ಒಂದೊಂದು ತತ್ವವನ್ನು ಕತೆಯ ಕಳಹದಿಯನ್ನಾಗಿಟ್ಟುಕೊಂಡು ಕತೆಯನ್ನು ಹೊಸೆದಿರುತ್ತಾರೆ. ಅದು ಕಾರಣ ಕತೆಗಳಲ್ಲಿ ವೈವಿಧ್ಯವಿದೆ. ಸಾಧಾರಣ ಲಗುಬಗೆಯ ಸಾಮಾನ್ಯ ಕತೆಗಳಾಗಿರದೆ ಅಂತರಾಳದಲ್ಲಿ ಜೀವತತ್ವಗಳನ್ನು ಒಡಗೊಂಡ ಈ ಕತೆಗಳು ವಾಚಕರಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡುತ್ತವೆ. ಕನ್ನಡಿಗರು ಅವಶ್ಯವಾಗಿ ಸಂಗ್ರಹಿಸಬೇಕಾದ ಪುಸ್ತಕವಿದು. ದ್ವಿತೀಯ ಭಾಗವು ಓದುಗರನ್ನು ಮತ್ತೂ ಚೆನ್ನಾಗಿ ಮೆಚ್ಚಿಸುವಂತಾಗಲೆಂಬ ಸದಿಚ್ಛೆಯಿಂದ ಕೆಲವು ಸೂಚನೆಗಳನ್ನು ಕೊಡೋಣವೆನಿಸುತ್ತದೆ. ಪ್ರಸಿದ್ಧ ಲೇಖಕರೆಲ್ಲ ಸಾಹಿತಿಗಳೆಲ್ಲ, ಹೆಸರಾಂತ ಕವಿಗಳೆಲ್ಲ, ವಿಶ್ವವಿದ್ಯಾನಿಲಯದ ಪದವೀಧರರೆಲ್ಲ ಕತೆಗಾರರಾಗಲಾರರು. ಕತೆಗಾರಿಕೆಯು ಒಂದು ವಿಶಿಷ್ಟ ಕಲೆ. ಅದು ಎಲ್ಲರಲ್ಲಿಯೂ ಇಲ್ಲ; ಏನಾದರೊಂದು ತತ್ವ ಪ್ರತಿಪಾದನೆಗಾಗಿ ಒತ್ತಾಯದಿಂದೊಂದು ಕತೆಯನ್ನು ಹೊಸೆದರೆ ಅದರಲ್ಲಿ ಸಹಜತೆ ಬರುವುದಿಲ್ಲ; ಅದು ಓದುಗರ ಮನಸ್ಸನ್ನು ಸೆಳೆದೊಯ್ಯುತ್ತ ಮುಂದೆ ಸಾಗುವುದಿಲ್ಲ. ಆದುದರಿಂದಲೇ 'ಬನ್ನಂಜೆ'ಯವರು ಬರೆದಿರುವ 'ತಿಳಿಯದ ಸಾವು' 'ಕಡಂಗೊಡ್ಲು' ಅವರ 'ಚೂರಿಯ ಕಥೆ' 'ಚಿತ್ರಲಮಣಿ' ಅವರ 'ಮಾತೃಹೃದಯ' 'ಕೃಷ್ಣಮೂರ್ತಿ' ಅವರ 'ತೂರಿ ಬಂದ ತಾರೆ' 'ಹೊಯಿಲಗೋಳ' ಅವರ 'ಭಂಗಾರಿ' 'ಕಲ್ಯಾಣಮ್ಮ' ಅವರ 'ದ್ವೈವೇಚ್ಛೆ' ಇವುಗಳಲ್ಲಿ ಕಾಣುವ ಕತೆಗಾರಿಕೆಯ ಕಲೆ ಉಳಿದವುಗಳಲ್ಲಿ ಅಷ್ಟೊಂದು ಚೆನ್ನಾಗಿ ಹೊಳೆಯುವುದಿಲ್ಲ. ಅವನ್ನು ತುಸು ಪ್ರಯತ್ನಪೂರ್ವಕವಾಗಿಯೇ ಓದುತ್ತ ಹೋಗಬೇಕಾಗುತ್ತದೆ. 'ಬೇಂದ್ರೆ' ಅವರ 'ಕಥೆಗಳ ಕಥೆ'ಯಲ್ಲಿ ಅವರ ಕವಿತೆಯ ಒಂದು ಪಂಕ್ತಿಯು ಸೊಗಸಾಗಿ ಶಾಣವಾಗಿದೆ. ಅದನ್ನು ಕತೆಯನ್ನುವುದಕ್ಕಿಂತ ಉಪನಿಷದ್ ರಹಸ್ಯವನ್ನೊಳಗೊಂಡ ರೂಪಕವೆನ್ನಬಹುದೋ ಏನೋ! ಆದುದರಿಂದ 'ಹೂದೋಟ'ದ ದ್ವಿತೀಯ ಭಾಗವು ಕನ್ನಡ ನಾಡಿನ ವಿವಿಧ ಭಾಗದ ಲೇಖಕರ ಪ್ರಾತಿನಿಧಿಕ ಸಂಗ್ರಹ ಮಾತ್ರವಾಗಿರದೆ ಕನ್ನಡ ಕತೆಗಾರಿಕೆಯ ಇಂದಿನ ಮಟ್ಟವನ್ನಳೆಯುವ ಪ್ರಾತಿನಿಧಿಕ ಮಾನದಂಡವೂ ಆಗುವಂತೆ ಪ್ರಕಾಶಕರು ಕತೆಗಳನ್ನು ಆಯ್ದುಕೊಳ್ಳಬೇಕೆಂದು ಆತ್ಮೀಯ ಹಿತಸೂಚನೆ.

ಕಲಾ— ಮಾಸಿಕ ಪತ್ರಿಕೆ ಸಂಪುಟ ೧ ಸಂಚಿಕೆ ೬.

ಸಂಪಾದಕರು—ಎಲ್ಲೂರು ಉಮೇಶರಾಯರು, ಕಲಾ ಕಾರ್ಯಾಲಯ, ಹಂಪನಕಟ್ಟೆ, ಮಂಗಳೂರು. ಡೆಮಿ ಅಷ್ಟಪತ್ರದಾಕಾರದ ೬೦ ಪುಟಗಳು. ವಾರ್ಷಿಕ ಚಂದಾ ರೂ. ೪-೮-೦ ಬಿಡಿ ಪ್ರತಿಗೆ ಆರು ಆಣೆ. ಹೆಸರಿಗೆ ತಕ್ಕಂತೆ ಕಲಾಪೂರ್ಣವಾದ ಮುಖಪತ್ರ. ಭಿನ್ನ ವಿಷಯಗಳ ಮೇಲೆ ಕತೆ, ಕವನ, ಲೇಖನ, ಅಲ್ಲಲ್ಲಿ ಚೆಲುವಾದ ಚಿತ್ರಗಳು, ಇವುಗಳಿಂದೆಲ್ಲ ಸಂಚಿಕೆಯು ನೋಡೋಣ ಓದೋಣ ಅನ್ನಿಸುವಂತಿದೆ. ನೋಡಿದರೆ ಓದಿದರೆ ಸಂತೋಷವಾಗುತ್ತಿದೆ. ಕವಿತೆಗಳು ಸರಳವಾಗಿ ಲಲಿತವಾಗಿ ಭಾವಪೂರಿತವಾಗಿವೆ. ಕತೆಗಳು ಸಹಜವಾಗಿ ಮಾರ್ಮಿಕವಾಗಿವೆ. ಲೇಖನಗಳು ವಿಚಾರ ಪೂರ್ಣವಾಗಿವೆ. ಇತ್ತೀಚೆಗೆ ಹಲವು ಮಾಸಿಕ ಪತ್ರಿಕೆಗಳು ತಲೆಯೆತ್ತುತ್ತಿರುವುವಾದರೂ ಇದರಷ್ಟು ವಾಚನೀಯವಾದುವು ಬಹಳ ವಿರಳವೆಂದೇ ಹೇಳಬೇಕು. 'ಕಲಾ' ಸಂಪಾದಕರು, ಲೇಖಕರು, ಚಿತ್ರಕರು ಎಲ್ಲರೂ ಅಭಿನಂದ್ಯರು. 'ಕಲಾ' ತುಂಬ ಆಶಾದಾಯಕವಾಗಿದ್ದು ಪ್ರೋತ್ಸಾಹನೀಯವಿದೆ.

'ಮರುಭೂಮಿಯ ಅರಬರು'— ಲೇಖಕರು ಶ್ರೀ. ಎಂ. ಹರಿದಾಸ ರಾವ್, ಪ್ರಕಾಶಕರು. ಸಿಟಿ ಬುಕ್‌ಸ್ಟಾಲ್, ಹುಬ್ಬಳ್ಳಿ. ಕ್ರೌನ್ ಅಷ್ಟಾಂಶಾಕಾರದ ೯೪ ಪುಟಗಳ ಪುಸ್ತಕ. ಬೆಲೆ ರೂ ೧-೪-೦. 'ದ್ವಿತೀಯ ಮಹಾಯುದ್ಧ' 'ಏಷ್ಯಾ, ಆಗ್ನೇಯ ಏಶಿಯಾ' 'ಉಕ್ಕಿನ ಮನುಷ್ಯ' ಮುಂತಾದ ರಾಜಕೀಯ ಸಾಹಿತ್ಯ ಬರೆದು ಪ್ರಸಿದ್ಧರಾದ ಶ್ರೀ. ಹರಿದಾಸರ ಈ ಕೃತಿಯು ಇಂದಿನ ಪರಿಸ್ಥಿತಿಯಲ್ಲಿ ಎಲ್ಲರಿಗೂ ಅವಶ್ಯವಿದೆ. ಹೆಸರು ಸೂಚಿಸುವಂತೆ ಈ ಪುಸ್ತಕವು ಕೇವಲ ಅರಬರ ವಿಷಯವಾಗಿಯೇ ಹೇಳುತ್ತಿಲ್ಲ. ಇಂಡಿಯಾ ಮತ್ತು ಯುರೋಪ್‌ಗಳ ನಡುವಿನ ದಕ್ಷಿಣ ಏಶಿಯಾ ಮತ್ತು ಉತ್ತರ ಆಫ್ರಿಕದ ಭಾಗಗಳ ಜನರ ಜೀವನ, ರಾಜಕೀಯ ವಿಚಾರ, ಇಲ್ಲಿಯ ಆಯಕಟ್ಟಿನ ತಾಣಗಳು, ಇಂದಿನ ಯಾಂತ್ರಿಕ ಯುಗಕ್ಕೆ ಅತ್ಯಾವಶ್ಯಕವಾದ ಪೆಟ್ರೋಲ್ ಮುಂತಾದ ಎಣ್ಣೆಯ ಸಮೃದ್ಧಿ, ಇವುಗಳಿಂದೆಲ್ಲ ಈ ಭಾಗಗಳ ಮೇಲೆ ಇಂಗ್ಲಾಂಡ್ ಅಮೇರಿಕಗಳಿಗಿರುವ ಕಣ್ಣು, ಅವರು ನಡೆಯಿಸುತ್ತಿರುವ ಒಳಸಂಚು, ಇತ್ಯಾದಿ ವಿಚಾರಗಳನ್ನು ಸಂಕ್ಷೇಪವಾಗಿ ಸುಲಭವಾಗಿ ಹೇಳಿದ್ದಾರೆ. ಸ್ವತಂತ್ರವಾದ ಭಾರತವಿಂದು ಜಾಗತಿಕ ರಾಜಕೀಯ ವಿಚಾರಗಳನ್ನು ತಿಳಿದುಕೊಂಡು ಸುತ್ತು ಮುತ್ತು ನೋಟ ನೋಡಿ ಅರಿಯಬೇಕಾಗಿದೆ, ಆದುದರಿಂದ ಅರಬರಾಷ್ಟ್ರಗಳ, ಅವೆಲ್ಲೂ ನಮ್ಮ ನೆರೆಹೊರೆಯಲ್ಲೇ ಇರುವ ಆ ರಾಷ್ಟ್ರಗಳ ಭೌಗೋಲಿಕ ಹಾಗೂ ರಾಜಕೀಯ ಪರಿಚಯ ಪರಿಜ್ಞಾನ ಅತ್ಯಾವಶ್ಯಕವಿದೆ. ಶ್ರೀ. ಹರಿದಾಸರಾಯರು ಸಕಾಲದಲ್ಲಿ ಇಂತಹ ಉಪಯುಕ್ತ ಪುಸ್ತಕವನ್ನು ಬರೆದು ಕನ್ನಡಿಗರಿಗೆ ಒಳ್ಳೆಯ ಉಪಕಾರ ಮಾಡಿದ್ದಾರೆ. ಲೇಖಕರು ಹೀಗೆಯೇ ಜಗತ್ತಿನ ಇತರ ರಾಷ್ಟ್ರಗಳ ಜನಜೀವನ ರಾಜಕೀಯ ವಿಚಾರಗಳ ಪರಿಚಯವನ್ನೀಯುವ ಚಿಕ್ಕ ಪುಸ್ತಕಗಳನ್ನು ಬರೆಯಲು ಉತ್ಸಾಹಗೊಳ್ಳುವಂತೆ ಕನ್ನಡಿಗರು ಈ ಗ್ರಂಥಕ್ಕೆ ಪ್ರೋತ್ಸಾಹವನ್ನೀಯುವುದು ಕರ್ತವ್ಯವಿದೆ.

—'ಕೊರಡ್ಕಲ್'

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಮದ್ರಾಸ್ ಅಳಿಯ ಸಂತಾನ ಮಸೂದೆಯ

ಪ್ರತಿಗಳು 0 2 0 ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ 0 3 0 ಸ್ಟಾಂಪನ್ನು ಕಳಿಸಿದ್ದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.
1 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು
2 ನವಯುಗ ಪ್ರೆಸ್, ಉಡುಪಿ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸೂತಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧ. ಶರೀರ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಖಾಸ ಶಾಂತಿ ಬರದಕ್ಕೆ ರೋಗಕ್ಕೆ ತಕ್ಕಂತ ಔಷಧ ಬದಲಾಯಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸಪಾವಾಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್‌ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಆರು ದಿವಸಗಳಿಗೆ ಬರುವವು. ಅಂದರೆ ಕೇವಲ ೫ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ಶೀಘ್ರದ ಸಂಯೋಜನೆ— ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,
Boarding & Louging,
KATAPADI. S K.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ಎರಡಾಣೆ

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

25-3-1948

ನವಯುಗ
ಚಂದಾ ವಿವರ
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮೆನೇಜರ್,
ನವಯುಗ ಉಡುಪಿ.

ವರ್ಷ ೩೮
ವಾರ ೨೯

NAVAYUGA WEEKLY, UDIPI.

FOUNDER: **Hon'ble Mr. A. B. SHETTY,** Health Minister, Govt. of Madras.

Vol. 26
No. 29

ಸಾರ್ವಜನಿಕ ನೀತಿ ಸೂತ್ರಗಳು

...ತ್ಯ, ಸಮಾನತೆ, ನ್ಯಾಯ- ಇವು ...ಗಳನ್ನಲ್ಲದೆ ಬೇರಾವುದನ್ನೂ ಎನ್ನ...ಅಧರಿಸಲಾರೆನೆಂಬ ಗುರಿಯಿಟ್ಟು ...ಂಡು ಸರ್ವಶಕ್ತಿಯಿಂದ ಇವನ್ನು ...ಪಾಡಬೇಕು.

ಹಣ — ಜಾತಿ ಹಾಗೂ ಸಂಬಂಧ...ಳ ಮೇಲಿಂದ 'ನಮ್ಮವರು' ಎಂಬ ಅ...ಮಾನ- ಇವೆರಡನ್ನೇ ಎರಡು ಗಾಲಿಗಳ...ನ್ನಾಗಿ ಮಾಡಿಕೊಂಡ ಜೀವನರಥವು ಅತಿ ...ಂಕುಚಿತ ಹಾದಿಯಲ್ಲಲ್ಲದೆ, ವಿಶಾಲ ಸಾ...ರ್ವಜನಿಕ ಪಥದಲ್ಲೆಂದೂ ಹೋಗಲಾರ...ದೆಂಬುದನ್ನು ನೆನಪಿನಲ್ಲಿಡಬೇಕು.

'ಧನಾಕಾಂಕ್ಷಿಗಳು ಸಾರ್ವಜನಿಕ ಮುಂ...ದಾಳುಗಳಲ್ಲ' ಎಂಬುದು ಇಡೀ ಪ್ರಪಂಚ...ದ ಸಾರ್ವಜನಿಕ ಜೀವನದ ಮುಖ್ಯ ನೀ...ತಿಯೆಂಬುದನ್ನು ಮರೆಯಬಾರದು. ಇಂ...ಗ್ಲೆಂಡಿನ ಕನ್ಸರ್ವೇಟಿವ್ ಪಕ್ಷದ ಹಿನ್ನೆಲೆ...ಯಲ್ಲಿ-ಹಲವು ಪತ್ರಿಕೆಗಳು ಹಾಗೂ ಸಾರ್ವ...ಜನಿಕ ಬುದ್ಧೀತರಬೇತಿ ಸಂಸ್ಥೆಗಳ ಭಂಡಾ...ರದ ಬಲವಾಗಿ ಮಿಲಿಯಾಧೀಶರಿದ್ದಾರಾದ...ರೂ ಈ ಶ್ರೀಮಂತರಿಗೆ ಸಾರ್ವಜನಿಕ ಜೀವ...ನದಲ್ಲೆಂದು ಗಣ್ಯ ಸ್ಥಾನವೇ ದೊರೆತಿಲ್ಲ; ...ಮಾತ್ರವಲ್ಲ, ಈ ಧನಿಕರ ಸಂಪರ್ಕವುಳ್ಳ...ವುಗಳೆಂಬುದರಿಂದಲೇ ಆ ಪಕ್ಷ, ಸಂಸ್ಥೆಗ...ಳು ಜನತೆಗಪ್ರಿಯವಾಗಿವೆ; ಪರಾಭವ...ಗೊಂಡಿವೆ.

ಭಾರತದ ರಾಜಕೀಯದಲ್ಲಿ ಕೂಡಾ ...ಬಿರ್ಲಾರಂಥವರ ಮಾತು ಆಗಾಗ ಕೇಳ...ಬರುತ್ತಿದೆಯಾದರೂ ಅವರಿಗೆ ರಾಜಕೀ...ಯದಲ್ಲೆಂದು ಸ್ಥಾನದೊರೆತಿಲ್ಲ. ನಾಯ...ಕರಲ್ಲೊಬ್ಬರ್ವನೆಂದು ಇವರನ್ನಾರೂ ಗಣಿ...ಸುವದಿಲ್ಲ. ಇದರ ಗುಟ್ಟು, ಧನಸಂಗ್ರಹೇ...ಚ್ಛೆಯುವನೆಂದಿಗೂ ಜನತಾ ಸೇವಕನಾಗ...ಲಾರನೆಂಬುದೇ, ಒಬ್ಬ, ಒಂದೆಡೆಯಿಂದ ...ಜನತೆಯನ್ನು ಒಂದಲ್ಲೊಂದು ರೀತಿಯಿಂ...ದ ಸುಲಿದು ಹಣ ಸಂಗ್ರಹ ಮಾಡುತ್ತಾ ...ಹೋಗುವಾಗಲೇ ಇನ್ನೊಂದೆಡೆಯಿಂ...ದ ಜನತಾ ನಾಯಕನಾಗಿ ಆ ಜನ...ತೆಯ ಸೇವೆ ಮಾಡುತ್ತಾ ಹೋಗುವನೆಂ...ದು ಭಾವಿಸುವುದೊಂದು ಶುದ್ಧ ಭ್ರಮೆ. ...ಅಂತಹ ಭ್ರಮೆಯು ಲೋಕದ ಯಾವ ...ರಾಷ್ಟ್ರದ ಜನತೆಯಲ್ಲೂ ಇಲ್ಲ; ವ್ಯಾಪಾರಿಗಳಿಗೆಲ್ಲಿಯೂ ಜನನಾಯಕತ್ವ ದೊರೆತಿಲ್ಲ. ಮೊದಲು ವ್ಯಾಪಾರೀಧೋರಣೆಯಿದ್ದರೂ ಅದನ್ನು ತ್ಯಜಿಸಿ ಪೂರ್ಣ ರಾಜಕಾರಣಿಗಳಾಗಿ ಮಾರ್ಪಟ್ಟವರು ಮಾತ್ರ ಕೆಲವೆಡೆ ಮುಂದೆಬಂದಿದ್ದಾರೆ ಹೊರತು, 'ಧನ ಸೇವನೆಗಾಗಿಯೇ ಜನ ಸೇವೆ'ಯೆಂಬ ಧೋರಣೆಯಿಟ್ಟುಕೊಂಡವನಿಗೆ ಮುಂದೆ ಬರಲೆಲ್ಲಿಯೂ ಆಗಿಲ್ಲ.

ಮೇಲಾಗಿ ಶ್ರೀ. ಬಿರ್ಲಾರಂತಹ ಪ್ರಮುಖರು ತಮ್ಮ ಹಣವನ್ನು ಸಾರ್ವಜನಿಕ ಕೆಲಸಗಳಿಗಾಗಿ ನೀರಿನಂತೆ ವ್ಯಯಿಸುತ್ತಾ ಬಂದವರು; ನಿಜಕ್ಕೂ ಅಂಥವರ ಧನ ಸಹಾಯಗಳಿಂದ ಕಾಂಗ್ರೆಸ್ ಕಾರ್ಯಕಲಾಪಗಳು ಪುಷ್ಟಿ ಪಡೆದಿದ್ದುವು.ಆದರೂ ಅಂತಹ ಸಹಾಯಕ್ಕೆ ಜನತೆಯು ಕೊಡಬೇಕಾದ ಮಾನ್ಯತೆಗೊಂದು ಮಿತಿಯಿದೆ. ಕೇವಲ ಸಹಾಯಕ್ಕಾಗಿ ನಮ್ಮನ್ನು ನಾವೇ ಸಮರ್ಪಿಸಿಕೊಳ್ಳುವದಲ್ಲ; ಸಾರ್ವಜನಿಕ ಸಹಾಯ ದಾನಿಯೇ ಸಾರ್ವಜನಿಕ ಜೀವನದ ಧನಿಯಾಗಲಾರ.

ಮೇಲಿನ ಮಾತುಗಳು ತಮ್ಮ ಉಳಿತಾಯಾಂಶಗಳನ್ನು ಸಾರ್ವಜನಿಕ ಕಾರ್ಯಗಳಿಗಾಗಿ ಕೊಟ್ಟು ಅವುಗಳನ್ನು ಪುಷ್ಟೀಕರಿಸುತ್ತಿರುವ ಶ್ರೀ. ಬಿರ್ಲಾರಂತಹ ತ್ಯಾಗೀ ಧನಿಕರ ಸಂಬಂಧವಾಗಿ ಆಡಿದವುಗಳು. ಅಂತಹ ತ್ಯಾಗ ಅವರಲ್ಲಿದ್ದರೂ, ಅವರ ಆ ಸಂಪತ್ತೆಂಬುದೇ ಜನತೆಯ ಪಾಲಿನ ಒಂದು ರೋಗವಾದ್ದರಿಂದ, ಅಂಥವರ ಕೈಗೆ ಜನತೆ ತನ್ನನ್ನು ತಾನು ಒಪ್ಪಿಸಿಕೊಟ್ಟಿಲ್ಲ. ಅಂದ ಮೇಲೆ ಅಂತಹ ತ್ಯಾಗಕ್ಕೂವ್ಯತಿರಿಕ್ತವಾಗಿ ಒಂದೆಡೆಯಿಂದ ಜನತೆಯನ್ನು ಕೃತಕ ವಿಧಾನಗಳಿಂದ ವಂಚಿಸಿ ಸುಲಿಯುತ್ತಾ, ಅವಕ್ಕಾಗಿಯೇ ಸಾರ್ವಜನಿಕ ಮುಂದಾಳುತನವನ್ನೂ ವಿವಿಧ ಕ್ಷೇತ್ರಗಳಲ್ಲಿ ಅಪೇಕ್ಷಿಸುತ್ತಿರುವ ಸ್ಥಳೀಯ ಶ್ರೀಮಂತರ ಕೈಗೆ ಇಲ್ಲಿಯ ಜನರು ಸಿಕ್ಕಿಕೊಂಡರೆ ಕರಡೀ , ಕೈಗೆ ಸಿಕ್ಕಿದಂತೆಯೇ ಸರಿ!

ಸ್ವಲ್ಪ ಮಾತ್ರ ಎಚ್ಚರಗೊಂಡ ಜನತೆಯಾದರೂ ಪ್ರಥಮತಃ ಮಾಡುವ ಕೆಲಸವೆಂದರೆ—ಅವರು ತನ್ನ ಉಳಿತಾಯದ ಕೆಲವಂಶ ತ್ಯಾಗ ಮಾಡಿದರೂ ಕೂಡ ಧನಲಾಲಸಿಗಳನ್ನು ಜನ ಸೇವಾ ಕ್ಷೇತ್ರಗಳಿಂದ ದೂರವಿಡುವುದು; ಅಂದ ಮೇಲೆ ತಮ್ಮ ಧನ ಲಾಲಸೆಗಾಗಿಯೇ, ಧನ ಸ್ಥಾನಮಾನಗಳ ಸಂಪಾದನೆಗಾಗಿಯೇ, ಜನತಾ ಕಾರ್ಯದನಟನೆ ಮಾಡಿಕೊಂಡು ಮುಂಬರುವ ಸ್ವಾರ್ಥಿ ಧನಿಕರನ್ನು ಸ್ವಾಗತಿಸಿಕೊಳ್ಳುವ ಜನತೆಯ ಭವಿಷ್ಯವೇನಾದೀತು?

ಸಹಜವಾಗಿ ತ್ಯಾಗಿ ಧನಿಕರಿಗೆ ಕೂಡಾ ಸ್ಥಾನಕೊಡಬಾರದ ಜನತಾ ಕ್ಷೇತ್ರಗಳಲ್ಲಿ ಸ್ವಾರ್ಥಿಗಳಾದ, ಸಂಕುಚಿತ ಜಾತ್ಯಭಿಮಾನಿಗಳಾದ ಧನಿಕರಿಗೆ ಸ್ಥಾನ ದೊರೆತಲ್ಲಿ, ಲೋಕವಿದುವರೆಗನ್ನುಭವಿಸಿರದ ಅತ್ಯಂತ ಕೆಳಮಟ್ಟದ ಸರ್ವಾಧಿಕಾರತ್ವ ಸ್ಥಾಪನೆಯಾದೀತು! ಸತ್ಯ, ಸಮಾನತೆ, ನ್ಯಾಯದ ಬದಲಿಗೆ ಅಸತ್ಯ, ಸುಲಿಗೆ, ಅನ್ಯಾಯಗಳೇ ಸಾರ್ವಜನಿಕ ಜೀವನದ ಮುಖ್ಯ ಸೂತ್ರಗಳಾಗಬಹುದು!

ಧನ ಬಲವು 'ಹಗಲನ್ನು ರಾತ್ರಿ ಮಾಡಿ ತೋರಿಸಬಹುದು' ಎಂಬ ಅಹಂಕಾರ ಹುಟ್ಟಿಸುತ್ತದೆ. ಆ ಹಣದ ಹಂಗು 'ಸತ್ಯವನ್ನು ಸುಳ್ಳುಮಾಡಿ ತೋರಿಸಬಹುದು' ಎಂಬ ಅಹಂಭಾವ ಬರಿಸುತ್ತದೆ. ಅದರೊಂದಿಗೆ ಜಾತೀಯ ದುರಭಿಮಾನವೂ ಸೇರಿಕೊಂಡರೆ, ಅದು 'ತಮ್ಮವರು'ಮಾತ್ರ ದೈಲ್ಲಾ ಮಾನ್ಯನಾಗಬೇಕು—ಎಂಬ ರೇಂಕಾರ ನಿರ್ಮಿಸುತ್ತದೆ. ಇವು ಮೂರೂ ಸಾರ್ವಜನಿಕ ನೀತಿಯನ್ನು ಇರಿದು ಸಾಯಿಸುವ ತ್ರಿಶೂಲ! ಜನಜೀವನದ ಸರ್ವ ಚಲನವಲನಗಳನ್ನೂ ಹಿಡಿತದೊಳಗಿಟ್ಟುಕೊಳ್ಳುವ ಕಪಿಮುಷ್ಠಿ! ವಿಕಾಸಗೊಳ್ಳಬೇಕಾದ ಸಾರ್ವಜನಿಕ ಜೀವನವೂ ತಮ್ಮ ಸಂಕುಚಿತ ಹೃದಯಾವಕಾಶದಲ್ಲೇ ಇರಬೇಕೆಂಬ ಹಠದಿಂದ ಅದನ್ನು ಮುರುಟುಗೊಳಿಸುವ ದುಸ್ಸಾಹಸ! ಇದೇ ಜನಜೀವನದ ಅತಿ ದೊಡ್ಡ ಅಪಾಯ!

ಪ್ರಚಂಡ ;ಜನಶಕ್ತಿಯೆದಿರು ತಮ್ಮೀ ದುಶ್ಶಕ್ತಿಯೆಂಬುದು ಮಹಮ್ಮೇರುವಿನೆದಿರ ಮಣ್ಣುಗುಪ್ಪೆಯೆಂಬ ತಾರತಮ್ಯವು ಈ ಸ್ವಾರ್ಥಿ ಧನಿಕರ ಕುರುಡುಕಣ್ಣಿಗೆ ಹೊಳೆದಿಲ್ಲ; ಇಂದಿನ ಸಮಾನತಾ ಯುಗದಲ್ಲಿಯೂ ತಾವು ಜನತೆಯನ್ನು ವಂಚಿಸುತ್ತಾ ಹೋಗಿ ಗುರಿ ಮುಟ್ಟಬಹುದೆಂಬ ತಮ್ಮ ಭ್ರಮೆಯು ಬಿರುಗಾಳಿಯೆದಿರ ಬಿಸಿ ಸುಯ್ಲಿನಂತೆ ಅಡಗಿ ಹೋಗುವದೆಂಬುದನ್ನೂ ಅವರು ಊಹಿಸಿಲ್ಲ. ಜನತೆ ಕಣ್ತೆರೆದು ಅದನ್ನು ಕಲಿಸಿಬಿಡಬೇಕು.

ಆದ್ದರಿಂದ ಪ್ರತಿಯೊಬ್ಬನೂ ಪ್ರತಿಯೊಂದು ಸಂದರ್ಭದಲ್ಲೂ ಈ ಕೆಳಗಿನ ಪ್ರಶ್ನೆಗಳ ಒರೆಗಲ್ಲಿನಲ್ಲಿ ತಿಕ್ಕಿ ಸ್ವಾರ್ಥಿಗಳ ಗುಟ್ಟನ್ನರಿತುಕೊಳ್ಳಲು ಮರೆಯಬಾರದು.

ಒಬ್ಬನ ಯೋಗ್ಯತೆಯಾವುದು? ಶ್ರೀಮಂತನೆಂಬುದೊಂದೇ ತಾನೆ? ಶ್ರೀಮಂತಿಕೆಯು ಜನಸೇವೆಯ ಮಟ್ಟಿಗೆ ಒಂದು ಯೋಗ್ಯತೆಯೇ, ಅಯೋಗ್ಯತೆಯೆ? ಅದರಲ್ಲೂ ರಾಜಕೀಯ, ಬಡ ಜನೋದ್ಧಾರ, ಸಾಮಾಜಿಕ, ಶಿಕ್ಷಣ ಕ್ಷೇತ್ರಗಳಲ್ಲೂ ಸ್ವಾರ್ಥಿ ಶ್ರೀಮಂತಿಕೆಯು ಒಂದು ಯೋಗ್ಯತೆಯಾಗಬಲ್ಲುದೆ?

ಅವನಾ ಶ್ರೀಮಂತಿಕೆಯನ್ನು ಸಂಪಾದಿಸಿದುದು ಹೇಗೆ? ಈಗಿನ ಆರ್ಥಿಕ ಪದ್ಧತಿಯಲ್ಲೇ ಅನ್ಯಾಯವಿರುವ ಮಾತು ಹಾಗಿರಲಿ, ಈ ಪದ್ಧತಿಯಲ್ಲಾದರೂ ನ್ಯಾಯವಾದ ಹಾದಿಯನ್ನೇ ಅನುಸರಿಸಿ ಶ್ರೀಮಂತನಾದನೋ, ಅಥವಾ ಜನತೆಯನ್ನು ಬಹುಮುಖಿ ವಂಚನೆಗಳಿಂದ ಸುಲಿದು, 'ಗಾಳೀಗಂಟು'ಗಳನ್ನು ಹಾಕಿಟ್ಟುಕೊಂಡೊ?

ಇಂತಹ ಒಂದು ಶ್ರೀಮಂತಿಕೆಯ ಸಾಧನೆಗಾಗಿ ಮತ್ತದನ್ನು ಉಳಿಸಿಕೊಳ್ಳುವದಕ್ಕಾಗಿ ತ್ರಿಕರಣಪೂರ್ವಕವಾಗಿ ದುಡಿಯಬೇಕಾದುದು ಮತ್ತು ದುಡಿಯುತ್ತಿರಬೇಕಾದುದು ಅಗತ್ಯವಲ್ಲವೆ? ಹಾಗೆ ತನ್ನ ಇದುವರೆಗಿನ ಆಯುಷ್ಯದ ಸರ್ವ ಲಕ್ಷ್ಯವನ್ನೂ 'ಹಣ ಸಂಗ್ರಹ'ದ ಕಡೆಗೇನೇ ಕೊಟ್ಟವನಿಗೆ, ಅವಕ್ಕೆ ಸಂಬಂಧಿಸಿರದ ಬೇರಾವುದೇ ಕಾರ್ಯದ ಅನುಭವವಾಗಲೀ ಅಭಿರುಚಿಯಾಗಲೀ ಇರಲು ಸಾಧ್ಯವೆ?

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—

ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ,

THE UNITED KARNATAK INSURANCE COMPANY, LIMITED.

ಇಂತಹ 'ಭಂಡಾರ ಜಗಳಿ'ಯೊಂದು 'ವಿದ್ಯಾನುಕೂಲತೆಯೊದಗಿಸುತ್ತೇನೆ' 'ತಪ್ಪು ತಡೆಗಳನ್ನು ತಿದ್ದಿ ಸಾರ್ವಜನಿಕ ಸಂಸ್ಥೆಗಳನ್ನು ಹಾಗೂ ರಾಜಕೀಯವನ್ನು ಸರಿ ದಾರಿ ಹಿಡಿಸುತ್ತೇನೆ' 'ಊರನ್ನು ಉದ್ಧರಿಸುತ್ತೇನೆ' ಎಂದು ಮುಂದೆ ಬಂದರೆ ಅದರ ಹುಟ್ಟುಗುಣ ಹಾಗೂ ಪೂರ್ಣ ಯೋಗ್ಯತೆಯಾದ ಧನ ಸಂಗ್ರಹವೊಂದೇ ಇಲ್ಲಿಯ ನಿಜೋದ್ದೇಶವಾಗಿರಬೇಕೆಂದು ಜನರು ಸಂದೇಹ ಪಡುವುದು ತಪ್ಪೆ? ಆ ಸಂದೇಹವನ್ನು ನಿವಾರಿಸುವ ಆಧಾರಗಳು ದೊರೆಯದೆ ಹೋದಾಗ ಆ ಸಂದೇಹವೇ ಸತ್ಯವೆಂದು ನಿರ್ಧರಿಸಿಕೊಳ್ಳುವುದೂ ಸಹಜವಲ್ಲವೆ?

'ಧನ ಸಂಗ್ರಹಕಾರ್ಯವನ್ನು ಸಾಧ್ಯವಿದ್ದಷ್ಟು ಮಾಡಿಯಾಯಿತು--ಇನ್ನು ಜನತಾಸೇವೆಯನ್ನು ಮಾಡೋಣ'ವೆಂದು ಅಂತಹ ಶ್ರೀಮಂತನ ಬುದ್ಧಿ ನಿಜಕ್ಕೂ ಬದಲಾಗಿದೆಯೆಂದು ಭಾವಿಸಬಾರದೇಕೆ? ಎಂಬ ಪ್ರಶ್ನೆ ಬರಬಹುದು. ಮೊದಲೇ ಹೇಳಿರುವಂತೆ ಇದುವರೆಗಿನ ಇಡೀ ಆಯುಷ್ಯವೇ ಯಾವ ಹಾದಿಯಲ್ಲಿ ಹೋಗಿದೆಯೋ ಆ ಹಾದಿಯಿಂದೊಬ್ಬನು ಅಕಸ್ಮಾತ್ ತಿರುಗಿಬಿಟ್ಟನೆಂದು ನಂಬುವದೊಂದು ಅದ್ಭುತವೇ ಸರಿ. ಅಂತಹ ಕೌತುಕನ ಡೆ ಯಿ ತೆಂ ಬು ದ ನ್ನು ನಂಬಬೇಕಾದರೆ, ಆ ಶ್ರೀಮಂತ ತನ್ನ ಏಕಮಾತ್ರ ಶಕ್ತಿಯಾಗಿರುವ 'ಸ್ವಂತ ಹಣ'ದ ಗಣ್ಯ ಭಾಗವನ್ನೇ ವ್ಯಯಿಸಿ ಜನತಾಕಾರ್ಯಮಾಡಿದ ಒಂದು ಸಣ್ಣ ದೃಷ್ಟಾಂತವಾದರೂ ಕಂಡುಬರಬೇಕು. ಬದಲಿಗೆ ಜನತಾ ಕಾರ್ಯಕ್ಕೆಂದು ಜತ ಬಡವರಿಂದ ಪಡೆಯುವ ಪಾಲನ್ನೇ ಒಂದು ಮಾನವಾಗಿ ಮಾಡಿಕೊಂಡು ಆ ಅಳತೇ ಪ್ರಕಾರ ತನ್ನ ಸ್ಥಿತಿಯಲ್ಲಿ ತಾನೆಷ್ಟು ಹಾಕತಕ್ಕದ್ದೋ ಅಷ್ಟನ್ನು ಹಾಕಲಿಕ್ಕೂ ತಯಾರಿಲ್ಲವೆಂದಾದರೆ ಇದು ಆತನ ಜನ ಸೇವೆಯೋ? ಧನಸೇವೆಯೋ?

ಅದೇ ರೀತಿ, ಒಬ್ಬನಿಂದ ತಯಾರಿಸಲ್ಪಡುವ ಒಂದು ಜನತಾ ಕಾರ್ಯ ಯೋಜನೆಗೆ ಬೇಕಾಗುವ ಹಣ ಮಾತ್ರ ಜನತೆಯದು; ಆ ಕಾರ್ಯನಿರ್ವಹಣ ಅಧಿಕಾರವುಳ್ಳ ಜನ ಮಾತ್ರ ಆವನದೇ ಎಂದಾದರೆ, ಅದು ಜನಹಿತ ಸಾಧಕ ಕಾರ್ಯವೇ? ಕೇವಲ ಸ್ವಹಿತಸಾಧಕ ಹಂಚಿಕೆಯೊ?

ಇವೆಲ್ಲಾ ವಿಷಯಗಳ ಮೇಲಿಂದ ಒವ್ವನು ನಿಜಕ್ಕೂ ತನ್ನನ್ನೇ ಸಾರ್ವಜನಿಕ ರಿಗರ್ಪಿಸಿಕೊಂಡಿರುವನೋ, ಅಥವಾ ಸಾರ್ವಜನಿಕರದಿಜಲ್ಲಿ ತನ್ನ ಬಲೆಯನ್ನೊಡ್ಡಿರುವನೋ? ಪತ್ತೆಹಚ್ಚುತಿಯೇನು?

ಮತ್ತೊಂದು ಪ್ರಶ್ನೆ. ಎಲ್ಲಕ್ಕಿಂತ ದೊಡ್ಡದು ಹಾಗೂ ಆರಾಧನಾರ್ಹವಾದುದು ಸತ್ಯ ಹಾಗೂ ನ್ಯಾಯ ತಾನೆ? ಅಥವಾ ಸತ್ಯಕ್ಕಿಂತಲೂ ಸಂಪತ್ತಿದ್ದವ ಮತ್ತು ಅಧಿಕಾರವಿದ್ದವ ದೊಡ್ಡವನೋ? ಸತ್ಯಕ್ಕಿಂತಲೂ 'ನಮ್ಮವರು' ಯಾರೋ ಅವರೇ ವಿಶೇಷ ಆರಾಧನೆಗರ್ಹರೊ?

ಒಂದು ಸ್ಥಾನ ಗೌರವ ಮತ್ತು ದರ ತಿಸ್ತು ನಿಯಮಗಳನ್ನು ಕಾಪಾಡುವ ಪ್ರಥಮ ಜವಾಬ್ದಾರಿಯು ಆ ಸ್ಥಾನಾಪನ್ನನದೋ? ಅಥವಾ ಅವನೇನೇ ಮಾಡಿದರೂ, ಸ್ಥಾನಾಪನ್ನನೆಂಬುದರಿಂದ ಮಾಡಿದ್ದೆಲ್ಲವೂ ಮಾನ್ಯವೆಂದು ಮೌನಧಾರಣೆ ಮಾಡುವುದೊಂದೇ ಮಿಕ್ಕವರ ಕರ್ತವ್ಯವೊ?

ಅದು ಹಾಗಿರಲಿ--'ನಮ್ಮವ'ನೊಬ್ಬನು ಯಾವ ಸ್ಥಾನದಲ್ಲಿದ್ದರೂ ಆ ಸ್ಥಾನವನ್ನು ನಾವೆಲ್ಲರೂ 'ಗುರು ಸ್ಥಾನ'ವೆಂದೇ ಗಣಿಸತಕ್ಕದ್ದೆ? ಸ್ಥಾನಾಪನ್ನನ ತಪ್ಪು, ದೋಷಗಳನ್ನು ಮರೆ ಮಾಡಿ ಸ್ಥಾನದ ಗೌರವವನ್ನು ಕಾಪಾಡಲು ನಮ್ಮಲ್ಲಿ ಪ್ರತಿಯೊಬ್ಬನೂ ಪಣ ತೊಡಬೇಕೆ?

ಇವು ಕೇವಲ ಕೆಲವು ಮಾದರಿ ಪ್ರಶ್ನೆಗಳು; ಸ್ಥಿತಿಗತಿ ಹೇಗಿದೆ ಎಂಬುದರ ಕಡೆಗೆ ಚಿಲ್ಲಿದ ಕಿರಣಗಳು. ವ್ಯಕ್ತಿ, ಜಾತಿ, ಪಕ್ಷ, ಪಂಗಡಗಳ ನೆನಪನ್ನು ಕೂಡಾ ತಂದುಕೊಳ್ಳದೆ ಕಾರ್ಯವೊಂದನ್ನೇ ಗಣಿಸಿ, ಪ್ರತಿಯೊಂದು ಸಂದರ್ಭದಲ್ಲೂ ಮೇಲಿನ ಪ್ರಶ್ನೆಗಳನ್ನು ಪ್ರತಿಯೊಬ್ಬನೂ ತನಗೆ ತಾನೇ ಹಾಕಿಕೊಳ್ಳಬೇಕು. ಎಲ್ಲಾ ಸ್ವಾರ್ಥಕ್ಕಿಂತ ಹೆಚ್ಚಿನ ನ್ಯಾಯ ಮತ್ತು ಧರ್ಮ ಯುಳ್ಳದ್ದು ಮನಸ್ಸಾಕ್ಷಿ. ಅದನ್ನು ವಿಚಾರಿಸಿಕೊಂಡು, ಆ ದೃಷ್ಟಿಯಿಂದಲೇ ಎಲ್ಲವನ್ನೂ ನೋಡಿಕೊಂಡು, ಮುಂದೊತ್ತುವಾಗ ಅಡ್ಡ ಬರುವ ದುಶ್ಶಕ್ತಿಗಳನ್ನು ಧಾಕ್ಷಿಣ್ಯವಿಲ್ಲದೆ ನಿರ್ಮೂಲಿಸುತ್ತಾ ಹೋದರೇನೇ ಸಾರ್ವಜನಿಕ ರಂಗ ಶುದ್ಧವಾದೀತು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P No. 10 of 1948.

(1) M ಜತನ್ನ, ಬೆಂಜಮಿನ್ ಜತನ್ನರ ಮಗ (2) ಜೋಸೆಫಿನ ಸರೋಜಿನಿ. (ಪ್ರಾಯ ಸಂಗಳು) ಕ್ರೀಸ್ತ ಛತ್ರ. 1ನೇ ಅರ್ಜಿದಾರ. ಉಡುಪಿ ತಾಲ್ಲೂಕ ಕಡೇಕಾರು ಗ್ರಾಮದ ಕಿನ್ನಿಮೂಲ್ಕಿಯಲ್ಲಿರುವವರು.

ಅರ್ಜಿದಾರರು.

ಈ ಕೋರ್ಟ O. S. No. 211 of 1943ನೇ ವ್ಯಾಜ್ಯದ ಲೆಕ್ಕಕ್ಕೆ ಡಿಪೋಜಿಟು ಇರುವ ಆಯುವೇಜಿನ ಪಯ್ಕಿ 1ನೇ ಅರ್ಜಿದಾರನ ಹೆಂಡ್ತಿ ವ 2ನೇ ಅರ್ಜಿದಾರಳ ತಾಯಿ ಮೃತ ಲೀಲಾವತಿ ಕ್ರಿಸ್ತಿನ ಪಕ್ಷದ ರೂ 198-5-9ನ್ನು ಕಳೆಯುವರೇ ತಾವು ಪಕ್ಷ್ಯದಾರರೆಂತಲ್ಲೂ--ಈ ಆಯುವೇಜಿನ ಪಯ್ಕಿ ರೂ 66-1-11ನ್ನು 1ನೇ ಅರ್ಜಿದಾರಗೆ ಸಿಕ್ಕತಕ್ಕ ಪಾಗೂ--ಮಿಕ್ಕ ಆಯುವೇಜು ರೂ 132-3-10ನ್ನು ದಿ. ಕೆನರಾ ಬೇಂಕಿನಲ್ಲಿ 2ನೇ ಅರ್ಜಿದಾರಳ ಹೆಸರಿಗೆ ಡಿಪೋಜಿಟು ಮಾಡುವದರ ಮೂಲಕ ಕೂಡಾ ತಮ್ಮ ಹೆಸರಿಗೆ Succession Certificate ಕೊಡ್ಬೇಕಾಗಿ ಅರ್ಜಿದಾರರ ಕಡೆಯಿಂದ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 7-4-1948ಕ್ಕೆ ತನಿಖೆಗೆ ಇಟ್ಟಿರುವದರಿಂದ ಈ ಕುರಿತು ಯಾರಾದರೂ ಆಕ್ಷೇಪಿಸುವವರು ಇದ್ದರೆ ಸದ್ರಿ ತಾರೀಕಿನಲ್ಲಿ ಅವರ ಆಕ್ಷೇಪವನ್ನು ಮೇಲ್ಕಂಡ ಕೋರ್ಟ ಮುಂದೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವಜನರಿಗೆ ತಿಳಿಯಪಡಿಸೋಣಾಗಿಯದೆ.

K. J. Ballal

Vakil for Petitioner

Udipi 17-3-48.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. I. A. 141/48

O. S. 250/47

ವಾದಿ--ದಿ. ಕರ್ನಾಟಕ ಸ್ಟೋರ್ಸ್ ಲಿಮಿಟೆಡ್, ಉಡುಪಿ.

ಪ್ರತಿವಾದಿರು--ಶ್ರೀನಿವಾಸ ಸೋಮಯಾಜಿ ಕೂಡಾ.

ಉಡುಪಿ ತಾಲ್ಲೂಕ ಕಾರ್ಕಡ ಗ್ರಾಮದಲ್ಲಿರುವ ಸೀತರಾಮ ಸೋಮಯಾಜರ ಮಕ್ಕಳು 1ನೇ ಪ್ರತಿವಾದಿ ಶ್ರೀನಿವಾಸ ಸೋಮಯಾಜಿ], 2ನೇ ಪ್ರತಿವಾದಿ ಶಂಕ್ರನಾರಾಯಣ ಸೋಮಯಾಜಿ], ಮತ್ತು ಸದ್ರಿ ತಾಲ್ಲೂಕ ಸದ್ರಿ ಗ್ರಾಮದಲ್ಲಿರುವ ಪುಟ್ಟಣ್ಣ ಸೋಮಯಾಜರ ಮಗ 3ನೇ ಪ್ರತಿವಾದಿ] ಸೀತಾರಾಮ ಸೋಮಯಾಜಿ, 1 ಕೂಡಾ 3 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ--

ಮೇಲಿನ ದಾವೆಯಲ್ಲಿ ಕೊಡೋಣಾದ ಲಿಮಿನರಿ ಡಿಕ್ರಿ ವಿಧಿಯಂತೆ ಡಿಕ್ರಿಯಲ್ಲಿ ಕಾಣುವ ಸ್ಥಿರಾಸ್ತಿ ಮಾರಾಟದ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಾದಿ ದಾಖಲು ಮಾಡಿದ ಮೇಲಿನ ಅರ್ಜಿ ತಾ 5-4 48 ತನಿಖೆಗೆ ಇಟ್ಟವೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಿ ಕೋರ್ಟ ಮುಂದೆ ಜ್ಯಾಹೀರು ಮಾಡತಕ್ಕದ್ದು.

. **A. N Rao.**

Advocate for Plaintiff

Coondapoor, 15-3-48.

ರೇಶನ್ ಕಾರ್ಡುಗಳು ದೊರೆಯುತ್ತವೆ,

ನವಯುಗ ಪ್ರೆಸ್, ಉಡುಪಿ.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**

Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.

Bombay Life Building,

Central Office, Udipi

Branches at:

Mangalore, Calicut, Trivandrum, Madura, Madras, Bangalore & Bombay,

The Vijaya Bank Limited.

All our good wishes for a happy and prosperous new year.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¼% per annum.

For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ನಿಮ್ಮಷ್ಟಕ್ಕೆ ನೀವು ಮನೆಯಲ್ಲಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1--8--0

ನವಭಾರತ ಬುಕ್ ಡಿಪೋ, ಉಡುಪಿ.

...ಗ್ರಾಪ್ರೆಸ್

ಅಳಿಯ ಸಂತಾನ ಮಸೂದೆಯು

ಪ್ರತಿಗಳು 0 2 0 ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ 0 3 0 ಸ್ಟಾಂಪನ್ನು ಕಳಿಸಿದ್ದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.

1 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು

2 ನವಯುಗ ಪ್ರೆಸ್, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ಹಿತ್ತಾಳೆ, ಬೆಳ್ಳಿ, ಕಂಚು, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ, ರಥಬೀದಿ, ಉಡುಪಿ.

ನವಯುಗದ ಸತ್ಯವಾರ್ತೆಯ ಮೇಲೆ ವಕ್ರ ಧಾಳಿ!

ನವಯುಗದ ತಾ 4-3-48ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ತಹಶೀಲ್ದಾರ್ ಶ್ರೀ ಎ. ಸದಾನಂದ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಟಿ. ರಮೇಶ ಪೈಗಳು ಶ್ರೀಮತಿ ಶೀಲಾಬಾಯಿಯವರಿಗೆ ತಾ 25-2-48ರಲ್ಲಿ ಉಡುಪಿಯ ಮುಕುಂದ ನಿವಾಸದಲ್ಲಿತ್ತಿದ್ದ ಸತ್ಕಾರ ಕೂಟದ ಪ್ರಯುಕ್ತದ ವಾರ್ತೆಯ ಕುರಿತು, ಒಂದು ವರ್ಗದಲ್ಲೀಗ ಹುಟ್ಟಿರುವ ಸಂಚು, ಹಂಚಿಕೆ, ಗೊಂದಲ ಕಳವಳಗಳು ಆಶ್ಚರ್ಯಕರವಾಗಿವೆ. ತಾ. 4ರಲ್ಲಿ ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಯನ್ನು ಅಲ್ಲಗಳೆದು ತಾ 19ರ ನಂತರವೇ ಉಡುಪಿಯ 'ಉದಯ ಭಾರತ' ಮಂಗಳೂರಿನ 'ನವಭಾರತ' 'ಪ್ರಭಾತ' 'ಸ್ವತಂತ್ರಭಾರತ' 'ಸ್ವದೇಶಾಭಿಮಾನಿ' ಪತ್ರಿಕೆಗಳಲ್ಲಿ ಭಿನ್ನಭಿನ್ನರೀತಿಯ ಸುದ್ದಿಗಳೂ ಟೀಕೆಗಳೂ ಪ್ರಕಟಿಸಲ್ಪಟ್ಟಿವೆ. ಆ ಸತ್ಕಾರ ಕೂಟದಲ್ಲಿ ತಹಶೀಲ್ದಾರ್ ಶ್ರೀ ಎ. ಸದಾನಂದ ಪೈಗಳು ಇಂದಿನ ಪ್ರಾಂತಿಕ ಕಾಂಗ್ರೆಸ್ ಸರಕಾರದ ರೀತಿನೀತಿಗಳನ್ನು ಸ್ಪಷ್ಟವಾಣಿಯಲ್ಲಿ ಟೀಕಿಸಿದ್ದಕ್ಕಾಗಿ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು ವಿಶೇಷ ನಿರ್ಣಯ ಮಾಡಿದ್ದು, ಅದೂ ತಾ 11-3-48ರ ನವಯುಗದಲ್ಲೂ ಮಂಗಳೂರಿನ ಕೆಲವು ಪತ್ರಿಕೆಗಳಲ್ಲೂ ಪ್ರಕಟವಾಗಿತ್ತು; ಆ ಕಾಂಗ್ರೆಸ್ ನಿರ್ಣಯದ ಕುರಿತೂ ನಾನಾ ವಿಧದ ಅಪಪ್ರಚಾರಗಳು ನಡೆದಿವೆ. ಒಂದು ಸತ್ಯಸ್ಥಿತಿಯನ್ನು, ತಮ್ಮವರಿಗೆ ಯಾವುದೇ ರೀತಿಯಿಂದ ಹಾನಿಕರವೆಂದು ತೋರಿ ಬಂದೊಡನೆ ಒಂದು ವರ್ಗದವರು, ಆ ಹಗಲನ್ನೇ ರಾತ್ರಿ ಮಾಡಿ ತೋರಿಸಲು ಎಂಥೆಂತಹ ಆಟಗಳನ್ನು ಹೂಡುವರು—ಸಾಮಾನ್ಯ ನಾಗರಿಕತೆಯನ್ನು ಕೂಡಾ ಬದಿಗೊತ್ತಿ ಯಾವುದಕ್ಕೂ ಹೇಸದೆ ಎಂತಹ ಕೃತಕ ನಿರ್ಮಾಣಗಳನ್ನಾದರೂ ಯಾವ ರೀತಿ ಮಾಡುತ್ತಾ ಹೋಗಬಲ್ಲರು—ಎಂಬುದಕ್ಕೊಂದು ಉತ್ತಮ ನಿದರ್ಶನವಿದು! ಇವೆಲ್ಲಾ ಆಟಗಳ ಮತ್ತೀ ಆಟಗಾರರ ಕಡೆಗೊಮ್ಮೆ ದೃಷ್ಟಿ ಬೀರಿದರೆ, ನಾವು ಪ್ರಕಟಿಸಿರುವ ಸತ್ಯ ವಾರ್ತೆಗೆ ಪೂರ್ಣಾನುಮೋದನೆ ಅಲ್ಲಿಯೇ ಇದೆ ಎಂಬುದನ್ನು, ನವನಿರ್ಮಾಣದಲ್ಲೇ ಮಗ್ನರಾಗಿರುವ ಈ ಪಂಗಡದವರಾರೂ ತಿಳಿದಂತಿಲ್ಲವಾದರೂ ಸಾರ್ವಜನಿಕರಿಗದು ಸರಿಯಾಗಿ ಮನದಟ್ಟಾಗುವಂತಿದೆ. ಮಾತ್ರವಲ್ಲ, ನಾವು ಯಾವ ಸಂಕುಚಿತ ಜಾತ್ಯಭಿಮಾನವನ್ನೇ ದ. ಕ. ಜಿಲ್ಲೆಯ ಜನಜೀವನದ ಮಹಾಶತ್ರುದ ಕಂಟಕವೆಂದು ಸಾರ್ವಜನಿಕರಿಗೆ ಎಚ್ಚರಿಕೆ ಕೊಡುತ್ತಾ ಬಂದಿರುವೆವೋ ಆ ಕಂಟಕದ ಒಂದು ಮಾದರಿಯನ್ನೇ ಸಾರ್ವಜನಿಕರ ಮುಂದೆ ಈ ಪಂಗಡದವರು ನಿರ್ಮಿಸಿ ತೋರಿಸಿ, ನಮಗು ಸಹಾಯಮಾಡಿದ್ದಾರೆ; ನಾವು 'ಸಂಗತಿ ಹೀಗಿದೆ' ಎಂದು ವರ್ಣಿಸಿ ತೋರಿಸಿದುದಕ್ಕೆ "ಹೌದು, ಹೀಗಿದ್ದೇವೆ" ಎಂದು ತಮ್ಮನ್ನೇ ತೋರಿಸಿಕೊಳ್ಳುವ ಮೂಲಕ ಸಾರ್ವಜನರಿಗೆ ಈ ಪಾಠ ಮಂದಟ್ಟಾಗುವಂತೆ ಈ ಪಂಗಡಿಗರು ಮಾಡಿದ್ದಾರೆ! ಇವರ ಈ ಕ್ಷುದ್ರ ಸಂಕುಚಿತ ಬುದ್ಧಿಗಾಗಿ ಕನಿಕರ ಪಡಬೇಕಾದರೂ, ನಮ್ಮಲ್ಲಿಯ ವಾತಾವರಣದಲ್ಲಿಂತಹ [illegible]ಗಳು ಸೇರಿಕೊಂಡಿವೆ ಎಂದು ದಿಗಿಲುಗೊಳ್ಳಬೇಕಾದರೂ, ವಸ್ತುಸ್ಥಿತಿಯು ನಿಜ ರೂಪದಲ್ಲೀ ರೀತಿ ಜನತೆಯ ಮುಂದೆ ಬಂದುದಕ್ಕಾಗಿ ಸಂತೋಷಿಸಬೇಕು.

ಇದೇ ತಾ 20ರ 'ಉದಯಭಾರತ'ದಲ್ಲಿ 'ನವಯುಗದ ನವಸೃಷ್ಟಿಯೇ?' ಎಂಬ ಲೇಖನವೊಂದು 'ಸಂಪಾದಕ' ಶಬ್ದ ಜೋಡಣೆಯೊಂದಿಗೆ ಪ್ರಕಟಗೊಂಡಿದೆ. ಅದರಲ್ಲಿ, ಸಂಬಂಧಪಟ್ಟ 'ಸಮಾರಂಭದಲ್ಲಿ ಭಾಗವಹಿಸಿದ ೩೯(?) ಮಂದಿಯಲ್ಲಿ ನವಯುಗದ ಶ್ರೀ ಹೊನ್ನಯ್ಯ ಶೆಟ್ರು ಮತ್ತು ಶ್ರೀ ಯು. ಸೀತಾರಾಮ ಭಟ್ಟರೂ ಇದ್ದರೆಂದು ತಿಳಿದುಬರುತ್ತದೆ ಪತ್ರಿಕಾಪ್ರತಿನಿಧಿಗಳಾದ ಇವರೀರ್ವರನ್ನು ಬಿಟ್ಟರೆ ಉಳಿದ ೩೭ ಮಂದಿ ಅತಿಥಿಗಳು ಸಭ್ಯರೂ ಸುಶಿಕ್ಷಿತರೂ ಇದ್ದು ಉಡುಪಿಯ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ನುರಿತ ದೇಶಾಭಿಮಾನಿಗಳೂ ಆಗಿರುವರು' ಎಂಬ ವಾಕ್ಯವಿದೆ. ಅಲ್ಪಬುದ್ಧಿಗೆ ಮೀಸಲಿರುವ ಈ ಪತ್ರಿಕೆಯ ಲೇಖಕರು ತಮ್ಮ ಆ ಮನೋವೃತ್ತಿಯಿಂದಲೇ ಆಳೆದಿಟ್ಟಿರುವ ತಮ್ಮ ಕಾಲಿನ ಬರವಣಿಗೆಗಳಾದ 'ಸಭ್ಯರು, ಸುಶಿಕ್ಷಿತರು' ಎಂಬುದನ್ನು ನಮ್ಮಿಬ್ಬರಿಗೆ ತಾಗಿಸದೆ ಬಿಟ್ಟುದಕ್ಕಾಗಿ ನಾವವರನ್ನು ಕೃತಜ್ಞತಾಪೂರ್ವಕವಾಗಿ ಅಭಿನಂದಿಸುತ್ತೇವೆ. ಆ ಲೇಖನದ ಕೆಳಗೆ 'ಸಂಪಾದಕ'ರಾಗಿ ತೋರಿರುವ ಉದಯಭಾರತದ ಸಂಪಾದಕರು, ಪಾಪ, ಅಂದಿನ ಸತ್ಕಾರ ಕೂಟಕ್ಕೆ ಆಮಂತ್ರಿಸಲ್ಪಟ್ಟಿರಲಿಲ್ಲ, ಹಾಜರಿರಲಿಲ್ಲ. ಎಲ್ಲಾ ಮುಗಿದು ಸುಮಾರು ಎರಡು ವಾರಗಳು ಕಳೆದ ಮೇಲೆ ಏನಗತ್ಯ ತೋರಿತೋ ಆ ಸಭೆಯಲ್ಲಿ ಭಾಗವಹಿಸಿದ್ದ ಕೆಲವರನ್ನು ವಿಚಾರಿಸಲು ಈ 'ಸಂಪಾದಕ'ರು ಹೋದರಂತೆ! ಅವರು "ಶ್ರೀ ಸದಾನಂದ ಪೈಗಳವರ ಭಾಷಣವನ್ನು ತಾವು ಅಮೂಲಾಗ್ರವಾಗಿ ಕೇಳಿರುವುದಾಗಿಯೂ ಅದರಲ್ಲಿ ಅವರು ಕಾಂಗ್ರೆಸ್ ಮಂತ್ರಿಮಂಡಲವನ್ನು ಟೀಕಿಸಲಿಲ್ಲವಾಗಿಯೂ ಹೇಳಿದರು" ಎಂದು ಈ 'ಸಂಪಾದಕರು' ಅಂದಿದ್ದಾರೆ. ನವಯುಗದ ಆ ವಾರ್ತೆಯನ್ನೂ ಆ ಸಂಬಂಧವಾಗಿ 'ಕಾಂಗ್ರೆಸ್ ಕಮಿಟಿಯು ಹೆಸರಲ್ಲಾದ ನಿರ್ಣಯ'ವನ್ನೂ ನಿವೇದಿಸುವಂತೆ ಆ ಕೆಲವರು ತನಗೆ ಸೂಚಿಸಿದ್ದರಿಂದ ತಾನಾ ಕೆಲಸಮಾಡುತ್ತಿದ್ದೇನೆಂದು ಉದಯ ಭಾರತದ 'ಸಂಪಾದಕ'ರು ಒಪ್ಪಿಕೊಂಡಿದ್ದಾರೆ. ತಾ. 21ರ 'ನವಭಾರತ'ದಲ್ಲಿ ಉಡುಪಿಯ ಆ ಸತ್ಕಾರಕೂಟವನ್ನು ಕರೆದಿದ್ದ ಶ್ರೀ ಟಿ. ರಮೇಶ ಪೈಗಳ ಒಂದು ದೀರ್ಘವರದಿ ಮತ್ತು ಟೀಕೆಗಳು ಪ್ರಕಟವಾಗಿವೆ. ತಾ.19ರ 'ಸ್ವದೇಶಾಭಿಮಾನಿ' ತಾ 22ರ 'ಪ್ರಭಾತ'ದಲ್ಲಿ ಆ ಸತ್ಕಾರಕೂಟದ ಸಂಬಂಧವಾಗಿ ಹೊಸ ಸುದ್ದಿ ಮತ್ತು ಟೀಕೆಗಳೂ ಆ ಸಂಬಂಧದ ನಿರ್ಣಯ ಮಾಡಿದ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯ ಕುರಿತು ಆಕ್ಷೇಪಗಳೂ ಬಂದಿವೆ. ಇವೆಲ್ಲವೂ ಒಂದು ನವನಿರ್ಮಾಣ ಚಳವಳಿಯ ವಿವಿಧಾಂಗಗಳಾಗಿರುವುದರಿಂದ ಅವೆಲ್ಲವುಗಳ ಸವಿವರವಾದ ವಿಮರ್ಶೆ ಅನಗತ್ಯ. ಆದರೆ ಎಂತಹ ಕುಹಕ ಚಾತುರ್ಯ ಪ್ರದರ್ಶಿಸಿದರೂ, ಒಂದೇ ಸತ್ಯವನ್ನು ಅಡಗಿಸುವ ಸಾಹಸವೆಂಬುದು ಇವೆಲ್ಲಾ ಗಲಿಬಿಲಿಯ ಮೇಲೆ ಸ್ಪಷ್ಟವಾಗುತ್ತಿದೆ ಎಂಬುದನ್ನು ಸಾರ್ವಜನಿಕರ ಅವಗಾಹನೆಗೆ ತರುವುದಕ್ಕಾಗಿ, ಈ ಕೃತಕ ನಿರ್ಮಾಣಾಸಕ್ತರ ವಾದಗಳ ಪೊಳ್ಳನ್ನಷ್ಟೇ ಈ ಕೆಳಗೆ ತೋರಿಸಿಕೊಡಲಾಗಿದೆ—

ಫೆಬ್ರವರಿ ತಾ 25ರ ಸತ್ಕಾರ ಕೂಟದಲ್ಲಿ ವಾರ್ತಾ ಪ್ರಕಟಣೆಗಾಗಿ ಆಮಂತ್ರಿಸಲ್ಪಟ್ಟು ಹಾಜರಿದ್ದ ಪತ್ರಿಕಾ ಪ್ರತಿನಿಧಿಗಳೆಂದರೆ ಅವರೇ ಒಪ್ಪಿಕೊಂಡಿರುವಂತೆ ನಾವು (ಶ್ರೀ ಕೆ. ಹೊನ್ನಯ್ಯ ಶೆಟ್ಟಿ, ಶ್ರೀ ಯು. ಸೀತಾರಾಮ ಭಟ್) ಇಬ್ಬರೇ. ಅಲ್ಲಿಯ ವಾರ್ತೆಯನ್ನು ನವಯುಗದ ಆ ಮೇಲಿನ ತಾ 4-3-48ರ ಸಂಚಿಕೆಯಲ್ಲೇ ಇದ್ದಂತೆ ಪ್ರಕಟಿಸಲಾಗಿತ್ತು. ಸತ್ಕಾರಕೂಟ ನಡೆದ ಮರುದಿನವೇ ಶ್ರೀ ಟಿ. ಮಾಧವ ಪೈಗಳ ಕಡೆಯ ಶ್ರೀ ಕೃಷ್ಣ ಕಿಣಿಯವರು ನವಯುಗ ಆಫೀಸಿಗೆ ಬಂದು ಶ್ರೀ ಎ. ಸದಾನಂದ ಪೈಗಳ ಭಾಷಣವನ್ನು ಪ್ರಕಟಿಸಬಾರದೆಂದು ಶ್ರೀ ಮಾಧವ ಪೈಗಳು ಹೇಳಿದ್ದಾರೆಂದು ತಿಳಿಸಿ ಹೋಗಿದ್ದರು. ನಾವೇನನ್ನು ಕೊನೆಗೆ ಪ್ರಕಟಿಸಿದೆವೋ ಆ ಸತ್ಯ ವಾರ್ತೆಯನ್ನು ಸ್ವತಃ ಒಪ್ಪಿ, ಅದನ್ನು ಪ್ರಕಟಿಸಬಾರದೆಂದನ್ನೇ ಶ್ರೀ ಕೃಷ್ಣ ಕಿಣಿಯವರು ತಿಳಿಸಿದ್ದರು. ಒಂದು ಸಭೆಯ ಅಧ್ಯಕ್ಷ ಭಾಷಣದ ಪ್ರಕಟಣೆಯ ಮಟ್ಟಿಗೂ ಸಂಬಂಧಪಡದ ಅನ್ಯವ್ಯಕ್ತಿಯ ಸೂಚನೆಯನ್ನು ಮನ್ನಿಸುವುದರಲ್ಲಿ ನ್ಯಾಯವಿಲ್ಲವೆಂದು ನೆನಸಿ, ನಾವು ಪತ್ರಿಕಾಧರ್ಮವನ್ನನುಸರಿಸಿ, ಅದನ್ನು ಪ್ರಕಟಿಸಿದ್ದೆವು. ಆ ಮೇಲೆ ಊರಲ್ಲೆಲ್ಲಾ 'ನವಯುಗ ಪತ್ರಿಕೆಯನ್ನೇ ನಿರ್ಮೂಲಿಸಬೇಕೆಂ'ಬ ಅಪಪ್ರಚಾರ ನಡೆದುದೊಂದನ್ನುಳಿದು, ನವಯುಗದ ಆ ಸುದ್ದಿ ತಪ್ಪೆಂಬ ಕುರಿತು ಸಂಬಂಧಪಟ್ಟವರಿಂದ ನಮಗಾವ ಸೂಚನೆ ಬಂದದ್ದೂ ಇಲ್ಲ. ಸುದ್ದಿಯೇ ಸುಳ್ಳಾಗಿದ್ದರೆ ಹೀಗೇಕೆ?

ತಾ.4ರ ನವಯುಗದ ವಾರ್ತೆಗೆ ವಿರೋಧವು ಉದಯಭಾರತದಲ್ಲಿ ಬಂದುದು ತಾ.20ರ ಸಂಚಿಕೆಯಲ್ಲಿ. ಹಾಗೆ ತಡವಾಗಲು ಅವರದರಲ್ಲಿ ಕೊಟ್ಟಿರುವ ಕಾರಣವು [illegible] ಕೂಡಲೇ ಮಂದಟ್ಟಾಗುವಂತಹದು. ಆ ಮೇಲೆ ಶ್ರೀ. ಟಿ. ರಮೇಶ ಪೈಗಳ ಉತ್ತರವು ನವಭಾರತದಲ್ಲಿ ಬಂದುದು ತಾ. 22ರಲ್ಲಿ. ಇವರಿಗೆ ಇಷ್ಟು ತಡವಾಗಲು ಕಾರಣ ಅವರು ಉಡುಪಿಯಲ್ಲಿಲ್ಲದಿದ್ದುದೆಂದು ತಿಳಿಸಲಾಗಿದೆ. ಒಂದು ಸಭಾಧ್ಯಕ್ಷನ ಭಾಷಣದ ತಪ್ಪುಗಳನ್ನು ತಿದ್ದಲು ಆ ಸಭೆ ಕರೆದವರೇ ಬಂದುಕೊಳ್ಳಬೇಕೆಂಬ ಕ್ರಮವು ಪ್ರಾಯಶಃ ಪ್ರಪಂಚದಲ್ಲೇ ಹೊಸತು! ಮಿಕ್ಕ ಪತ್ರಿಕೆಗಳಲ್ಲೂ ನವಯುಗದ ಸುದ್ದಿಗೆ ವಿರೋಧ ಪ್ರಕಟವಾದುದು ತಾ 19ರ ನಂತರವೇ. ಅಂತೂ ತಾ. 4ರಲ್ಲಿ ನವಯುಗದಲ್ಲಿ ಪ್ರಕಟವಾದ ಒಂದು ವಾರ್ತೆಯಲ್ಲಿರುವ ಸತ್ಯವನ್ನರಗಿಸಲು ಸುಮಾರು ಹದಿನೈದು ದಿನ [illegible] ಆ ಸತ್ಯವನ್ನೇ [illegible] ಯಾವುದೋ [illegible] ಪತ್ರಿಕೆಗಳಲ್ಲೂ [illegible] ಈ ಆಟ ಹೂಡಲಾಯಿತೆಂದೂ ಊಹಿಸಲು ಕಷ್ಟವಿದೆಯೆ?

ಶ್ರೀ. ಎ. ಸದಾನಂದ ಪೈಗಳು ತನ್ನ ಭಾಷಣದ ಕುರಿತು ನವಯುಗದ ಪ್ರಕಟಣೆ ತಪ್ಪೆಂದು ನಮಗೆಂದೂ ತಿಳಿಸಿದ್ದಿಲ್ಲ. ಅಧ್ಯಕ್ಷತೆ ವಹಿಸಿ ಭಾಷಣ ಮಾಡಲಾಗಿದ್ದ ಅವರಿಗೆ ತನ್ನಾ ಭಾಷಣದ ಸಂಬಂಧ ತಪ್ಪಾಗಿದ್ದಲ್ಲಿ ಅದನ್ನು ನಮಗೆ ತೋರಿಸಿಕೊಡುವುದು ಅಸಾಧ್ಯವಿತ್ತೆ? ಅಥವಾ ಸಂಬಂಧಪಟ್ಟ ಮೇಲಧಿಕಾರಿಗಳಿಗಾದರೂ ಅವರೀ ಸುದ್ದಿ ಪ್ರಕಟವಾದ ಕೂಡಲೇ ಏನನ್ನಾದರೂ ಸಕಾಲದಲ್ಲಿ ತಿಳಿಸಿರುವರೋ ಇಲ್ಲವೋ ನಮಗರಿಯದು. ಅಂದ ಮೇಲೆ ಸಮಯ ಮೀರಿ ಈ 'ನಕಾರ' ಚಳವಳಿ ಏಳಬೇಕಾದರೆ ಕೊನೆಗೇನೋ ಒಂದು ಕಾರಣ ಮಾಡಬೇಕೆಂಬುದು ಸ್ಪಷ್ಟವಲ್ಲವೆ?

ಪತ್ರಿಕಾ[illegible]ರಾದ ನಮ್ಮಲ್ಲಿ ಆ 'ಸತ್ಕಾರಕೂಟ'ದ ವಾರ್ತೆಯನ್ನು ಪ್ರಕಟಿಸುವ ಕರ್ತವ್ಯದೃಷ್ಟಿಯಿದ್ದುದರಿಂದ ಅಲ್ಲಿ ಆಡಿದ್ದುದನ್ನು ನಾವು ಯಥಾಸ್ಥಿತಿ ಸಂಗ್ರಹಿಸಿದ್ದೆವು. ಶ್ರೀ ಎ. ಸದಾನಂದ ಪೈಗಳ ಭಾಷಣವೆಂದು ಈಗ ಇನ್ನೇ ಉದ್ಧೃತ ಪ್ರಕಟಣ ಹೊರಡಿಸುತ್ತಿರುವವರು ನಿಜವಾಗಿಯೂ ಅಲ್ಲಿಯೇ ಅದನ್ನೆತ್ತಿಕೊಂಡಿದ್ದರೆ? ಎತ್ತಿಕೊಂಡಿದ್ದಾದರೆ ಯಾಕಾಗಿ? ಉದಯಭಾರತದ 'ಸಂಪಾದಕ'ರಾಗಲೀ ಮಿಕ್ಕ ಪತ್ರಿಕೆಯವರಾಗಲೀ ಅಲ್ಲಿ ಹಾಜರಿದ್ದವರಲ್ಲವಷ್ಟೆ?

ಉದಯಭಾರತದ ಲೇಖನದಲ್ಲಂತೂ ವಿಷಯಕ್ಕಾವ ಸಂಬಂಧವೂ ಇಲ್ಲದ ಶ್ರೀ. ಎ. ಸದಾನಂದ ಪೈಗಳ ತಹಶೀಲ್ದಾರಿಕೆಯನ್ನು ಬಹಳವಾಗಿ ಶ್ಲಾಘಿಸಲಾಗಿದೆ. ಅದರ ಉದ್ದೇಶವೇನು? ಶ್ರೀ. ಎ. ಸದಾನಂದ ಪೈಗಳನ್ನು ಹೇಗಾದರೂ ಸಮರ್ಥಿಸಿ, [illegible]

(೯ನೇ ಪುಟ ನೋಡಿರಿ)

ಪ್ರಕಟಣೆ

ಕುಂದಾಪುರ ತಾಲೂಕು ಹೆಸ್ಕುತ್ತೂರು ಗ್ರಾಮದಲ್ಲಿರುವ ಕೊಡನಳ್ಳಿ ಚೆನ್ನ ಬಸವಯ್ಯನ ಮಗ ವೀರಯ್ಯ ಯಾನೆ ಚೆನ್ನ ಬಸಯ್ಯನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ವಕೀಲ ಅನಂತ ಭಟ್ಟರು ಮಾಡಿದ ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ O. S. 502/1947ನೇ ದಾವೆಯಲ್ಲಿ ನನ್ನ ಕಡೆಯ [illegible] ಅರ್ಜಿಗಳನ್ನು ಕೊಡಿಸುವಂತಾದ್ದು ಅಗತ್ಯವುಂಟು ಯೆಂತ ನನ್ನನ್ನು ನಂಬಿಸಿ ಹೊಸ ನಗರದಲ್ಲಿರುವ [illegible] ವೆಂಕಟರಾಯರು ಮತ್ತು ಇವರ ತಮ್ಮ ರಾಮಕೃಷ್ಣಯ್ಯ ಕೂಡಾ 2ಜನರು ಖಾಲಿ ಕಾಗದದಲ್ಲಿ ಒಂದಾಣೆಯ 2 ಸ್ಟಾಂಪು ಅಂಟಿಸಿಕೊಂಡು ಅದರ ಮೇಲೆ ಮತ್ತು ಅದೇ ಕಾಗದದ ಹಿಂಬದಿಯಲ್ಲಿ ಒಂದು ಮತ್ತು ಬೇರೆ 3 ಖಾಲಿ ಕಾಗದಗಳ ಮೇಲೆ ಕೂಡಾ ನನ್ನ ಹೆಬ್ಬೆಟ್ಟುಗಳನ್ನು ಪಡೆದಿರುತ್ತಾರೆ. ನಾನು ತಾ. 18-3-1948ರಲ್ಲಿ ನನ್ನ ವಕೀಲರಲ್ಲಿ ಬಂದು ವಿಚಾರಿಸಿದಲ್ಲಿ ಅರ್ಜಿಕೊಡುವ ಅಗತ್ಯ ಇದ್ದದ್ದಿಲ್ಲವೆಂತಲೂ ನನಗೆ ಮೋಸಮಾಡಿ ರಿಕಾರ್ಡುಗಳನ್ನು ತಯಾರು ಮಾಡುವ ಇರಾದೆಯಿಂದ ಹೆಬ್ಬೆಟ್ಟುಗಳನ್ನು ಪಡೆದಿರಬೇಕೆಂತಲೂ ತಿಳಿಯುತ್ತದೆ. ನನಗೆ ಯಾವ ಕರಾರು ಸಾಲವಿಲ್ಲ. ನಾನು ಯಾರಿಗೂ ನೋಟು ಬರೆದು ಕೊಟ್ಟದ್ದಿಲ್ಲ. ಮೋಸದಿಂದ ನನ್ನ ದಸ್ಕತುಗಳನ್ನು ಪಡೆದ ಕಾಗದಗಳ ಮೇಲೆ ಯಾರ ಪೆನ್ನಿನಿಂದಲಾದರೂ ರಿಕಾರ್ಡು ನೋಟು ವಗೈರೆ ಯಾವತರದ ದಾಖಲೆ ಮಾಡಿಕೊಂಡರೂ ಅವು ನನ್ನ ಮೇಲೆ ಬಾಧಕವಲ್ಲವುಗಳೆಂದೂ ಅವು ಮೋಸದವುಗಳು. ಎಂಬ ಸಂಗತಿ ಈ ಮೂಲಕ ತಿಳಿಯಪಡಿಸುತ್ತೇನೆ.

|| ಈ ಗೆರೆ ಮತ್ತು ಎಡಹೆಬ್ಬೆಟ್ಟಿನ ಗುರುತು ವೀರಯ್ಯ ಯಾನೆ ಚೆನ್ನ ಬಸಯ್ಯನ ರುಜು

Date 18—3—48. Coondapoor

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಸ ಗಾರಿಕೆ [illegible]]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು, ರೂ ೧೦೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯ [illegible] ಲಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇವೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ [illegible]

೪ ರಿಂದ ೫ ತಿಂಗಳು ,, ,, [illegible]

೬ ರಿಂದ ೧ ತಿಂಗಳು ,, ,, [illegible]

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ [illegible]ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

ಇನ್ನೊಂದು ಯುದ್ಧಕ್ಕೆ ಇಕ್ಕಡೆಯ ತಯಾರಿ

ಕಳೆದ ವಾರದ ಘಟನೆಗಳು ಲೋಕ ಭವಿಷ್ಯದ ದೃಷ್ಟಿಯಲ್ಲಿ ಅತಿ ಮಹತ್ವವಾದವುಗಳು. ನಾವು ಕಳೆದ ಕೆಲವು ವಾರಗಳಲ್ಲಿ ತಪ್ಪದೆ ಪ್ರಸ್ತಾಪಿಸುತ್ತಾ ಬಂದಿದ್ದ ಇನ್ನೊಂದು ಮಹಾಯುದ್ಧದ ಭೀತಿಗೆ ಒಂದು ರೀತಿಯ ಸಾಕಾರವನ್ನು ಕಳೆದ ವಾರದ ಘಟನೆಗಳು ಕೊಟ್ಟಿವೆ. ದ್ವಿತೀಯ ಲೋಕ ಯುದ್ಧಾನಂತರ ಯಾವ ವಿಧದ ಶಾಂತಿ ಹವೆ ಸೇವನೆಯೂ ಪ್ರಪಂಚಕ್ಕೆ ಸಾಧ್ಯವಾಗಿರುವಾಗಲೇ, ಇನ್ನೊಂದು ಯುದ್ಧದ ಗಾಳಿ ಬೀಸಲಾರಂಭಿಸಿದೆ.

ರಶ್ಯವು ಝೆಕೊಸ್ಲೊವೇಕಿಯದಲ್ಲಿ ತನ್ನ ತತ್ವಧಾರೀ ಸರಕಾರವನ್ನು ಸ್ಥಾಪಿಸಿ, ಫಿನ್ಲೆಂಡಿನ ಮೇಲೆ ಒತ್ತಡವನ್ನಿಷ್ಟರಲ್ಲೇ ಹಾಕಹತ್ತಿ, ಅತ್ತ ಚೈನಾವನ್ನು ಒಂದೇ ಸವನೆ ಕಮ್ಯೂನಿಸ್ಟ ಸೇನೆಗಳಿಂದಾಕ್ರಮಣ ಮಾಡಿಸುತ್ತಾ ಹೋಗುವಾಗಲೇ ಈ ಕಡೆಯಿಂದ ಅಮೇರಿಕಾಧ್ಯಕ್ಷ ಟ್ರುಮೇನರು ಕಡ್ಡಾಯದ ಸೇನಾ ಸಂಗ್ರಹಕ್ಕೆದ್ದಿದ್ದಾರೆ. ಪಶ್ಚಿಮ ಯುರೋಪು ರಾಷ್ಟ್ರಗಳು ಒಂದೇ ಪಾಳಯವಾಗಿ ನಿಲ್ಲಲಣಿಯಾಗಿವೆ; ಅಮೇರಿಕವೇ ಪಾಳಯದೊಡನೆ ಸೇನಾಕರಾರು ಮಾಡಿಕೊಳ್ಳಲಿದ್ದಿದೆ. ಯುರೋಪು ರಾಷ್ಟ್ರಗಳ ಪುನರ್ರಚನಾ ಸಹಾಯ ಯೋಜನೆಯನ್ನು ಭರದಿಂದ ಮುಂದೊತ್ತಲು ಅಮೇರಿಕವು ಆತುರಿಸಹತ್ತಿದೆ. ಈ ರೀತಿ ಇಕ್ಕಡೆಗಳ ಈ ಪರಸ್ಪರ ಮೇಲಾಟಗಳು, ಇನ್ನೊಂದು ಹೋರಾಟದ ಮೊದಲ ರೂಪಗಳೇ. ಪ್ರಮುಖ ರಾಷ್ಟ್ರಗಳ ಈ ಚಲನವಲನಗಳು ನಿಜಕ್ಕೂ ಕಳೆದ ಯುದ್ಧದ ಸ್ವಲ್ಪ ಕಾಲಕ್ಕೆ ಮೊದಲಿನ ಪಹಿವಾಟುಗಳನ್ನೇ ಹೋಲುತ್ತಿವೆ. ಲೋಕದ ಪಾಲಿನ ಯುದ್ಧಾಪಾಯವನ್ನು ತಪ್ಪಿಸುವ ವಿಧಾನವೇ ಇಲ್ಲವೇ? ಮಾನವ ವರ್ಗದ ಶಾಂತಿ ಕಾಪಾಡಬಲ್ಲವರನ್ನು ಪ್ರಪಂಚವು ಪಡೆದುದೇ ಇಲ್ಲವೆ? ಇದೀಗ ನಿಜಕ್ಕೂ ಅತ್ಯಂತ ದುಃಖದ ಹಾಗೂ ಆಶ್ಚರ್ಯದ ಸಂಗತಿ.

ಈ ನವೀನ ವಿದ್ಯಮಾನವನ್ನನುಸರಿಸಿ ಇತರ ಒಳ ಸಮಸ್ಯೆಗಳ ಹಾಗೂ ಘೋರಣೆಗಳ ರೂಪವೂ ಬದಲಾಗಹತ್ತಿದೆ. ಅರಬ ಯೆಹೂದೀ ಜಗಳಕ್ಕಾಗಿ ಪೆಲಸ್ತೈನಿನ ವಿಭಜನೆಯನ್ನು ಸೂಚಿಸಿದ ಅಮೇರಿಕವೇ ಈಗ ಆ ತೀರ್ಮಾನವನ್ನು ಹಿಂದೆಗೆದಿದೆ. ಕಾಶ್ಮೀರದ ವಿವಾದ ಸಂಬಂಧವಾಗಿ ರಾಷ್ಟ್ರ ಭದ್ರತಾ ಕೌನ್ಸಿಲಿನಲ್ಲಿ ಹೊಸ ತೀರ್ಮಾನ ಮುಂದೆ ಬಂದಿದೆ.

ಭಾರತದ ರಾಜಕೀಯದಲ್ಲಿ ವಿಶೇಷಾಸಕ್ತಿದಾಯಕ ವಿದ್ಯಮಾನಗಳೇನೂ ಸಂಭವಿಸಿಲ್ಲ. ಹೈದರಾಬಾದ್ ತಂಟೆ ಇದ್ದಂತಿದೆ. ಪಾರ್ಲಿಮೆಂಟ್ ಮತ್ತು ಪ್ರಾಂತಿಕ ಶಾಸನ ಸಭೆಗಳ ಪರ್ಯಾಲೋಚನೆಗಳು ನಡೆದಿವೆ. ಭಾರತ ಕೇಂದ್ರದೊಳಗಣ ಲೀಗ್ ಪಕ್ಷ ಲೀಗ್ ಸಂಸ್ಥೆ ಇತ್ಯಾದಿಗಳನ್ನು ಬರ್ಖಾಸ್ತುಪಡಿಸಿಕೊಳ್ಳುವ ಭಾವನೆಯೇ ಹಿಂದೀ ಮುಸ್ಲಿಮರಲ್ಲಿ ಬಲಗೊಳ್ಳುತ್ತಿದೆ. ತುಸು ಹೆಚ್ಚಿನ ಸಂಗತಿಯೆಂದರೆ ನಾಸಿಕದಲ್ಲಿ ಸೇರಿದ ಅಖಿಲ ಭಾರತ ಸಮತಾವಾದಿಗಳ ಸಮ್ಮೇಳನವು ಕಾಂಗ್ರೆಸನ್ನು ತ್ಯಜಿಸಿ, ಹೊರಗಿದ್ದು ತಮ್ಮ ಧ್ಯೇಯ ಸಾಧನೆಗಾಗಿ ಹೋರಾಡಬೇಕೆಂಬ ನಿರ್ಧಾರ ಮಾಡಿರುವುದೇ. ಸ್ವಾರ್ಥಿ ಶ್ರೀಮಂತರು, ಸಂಕುಚಿತ ಜಾತ್ಯಭಿಮಾನಿಗಳು ಸ್ವಕಾರ್ಯ ಸಾಧನೆಗಾಗಿಯೇ ಕಾಂಗ್ರೆಸ್ ಸಂಸ್ಥೆಗಳೊಳಗೆ ಸೇರಿಕೊಂಡು ತಮ್ಮ ದುಷ್ಕಾರ್ಯಗಳಿಗೆ ಕಾಂಗ್ರೆಸ್ ಲೇಪ ಹಚ್ಚಿಕೊಂಡು ಹೊಸ ವೇಷಧಾರಿಗಳಾಗಿ ಮುಂದೆ ಬಂದಿರುವುದನ್ನು ಕಂಡು, ಸಮತಾವಾದಿಗಳು ಅಲ್ಲಿಂದ ದೂರ ನಿಂತೇ ಜನತಾ ಸೇವೆ ಮಾಡುವ ನಿರ್ಧಾರಕ್ಕೆ ಬಂದುದರಲ್ಲಿ ಯಾರೂ ಆಶ್ಚರ್ಯಗೊಂಡಿಲ್ಲ.

ಅಂತೂ; ಲೋಕದ ಪಾಲಿನ ಶಾಂತಿ ದೂರವಿದೆ ಎಂದಿದುವರೆಗಿದ್ದ ಬೇಸರವು ಈಗ ಆ ಶಾಂತಿಯೆಂಬುದು ಕಳೆದೇ ಹೋಯಿತೇನೋ ಎಂಬ ಆಧೈರ್ಯವಾಗಿ ಮಾರ್ಪಟ್ಟಿದೆ.

ಟ್ರುಮೇನ್ ಸೇನಾ ಧೋರಣೆ

ರಶ್ಯದ ಕಮ್ಯೂನಿಸಮ್ ಲೋಕಕ್ಕೇನೇ ಕಂಟಕವಿದ್ದು ಅದರ ಹಿಡಿತದಿಂದ ಜಗತ್ತನ್ನು ತಪ್ಪಿಸುವದಕ್ಕಾಗಿ ತಾವು ಮತ್ತೊಮ್ಮೆ ಶಸ್ತ್ರವೆತ್ತಲು ಸಿದ್ಧರೆಂಬುದನ್ನು ಅಮೇರಿಕಾಧ್ಯಕ್ಷ ಮಿ. ಹೆರ್ರಿ ಟ್ರುಮೇನರೇ ಬಾಯಿ ನಡುಬಿಗಿದು ಕೈ ಚಾಚಿ ತೋರಿಸಿದ್ದಾರೆ. ಅಮೇರಿಕದ ಕಾಂಗ್ರೆಸಿನ ಜತೆ ಅಧಿವೇಶನದಲ್ಲಿ ತಾತ್ಕಾಲಿಕ ಕಡ್ಡಾಯ ಸೇನಾ ಸಂಗ್ರಹದ ಶಿಫಾರಸನ್ನೂ ಯುರೋಪಿನ ಪುನರ್ಚೇತನಾ ಕಾರ್ಯವನ್ನು ತ್ವರಿತದಲ್ಲಿ ಮುಗಿಸಬೇಕೆಂಬ ಶಿಫಾರಸನ್ನೂ ಮುಂದಿಟ್ಟು ಜಾಗತಿಕ ಸೇನಾ ತಂಬೇತಿಯನ್ನು ಸೂಚಿಸಿ 'ಯುದ್ಧವನ್ನು ತಡೆಗಟ್ಟುವದಕ್ಕೂ ಶಾಂತಿ ಸಾಧನೆಗೂ ಇವು ಅತ್ಯವಸರದ ಹೆಜ್ಜೆ'ಗಳೆಂದು ಆತುರಪಡಿಸಿದ್ದಾರೆ. ಮಾತ್ರವಲ್ಲ; "ಯುರೋಪಿನ ರಾಷ್ಟ್ರಗಳು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪುನಃ ಸಂಪಾದಿಸಿಕೊಳ್ಳುವವರೆಗೆ, ಕಮ್ಯೂನಿಸಮ್ ಕಂಟಕವು ಪ್ರಜಾಸತ್ತೆಯ ಅಸ್ತಿತ್ವಕ್ಕೇನೇ ಅಪಾಯ ಬೀರುತ್ತಿರುವವರೆಗೆ, ಈ ಕಮ್ಯೂನಿಸ್ಟ ಹಕೋಟಿ ಮತ್ತು ಪೋಲಿಸ್ ರಾಜ್ಯದ ಭೀತಿ ಬಡಿದಿರುವ ಯುರೋಪು ರಾಷ್ಟ್ರಗಳನ್ನು ರಕ್ಷಿಸುವಷ್ಟು ಅಮೇರಿಕವು ಬಲಶಾಲಿಯಾಗಬೇಕು" ಎಂದು ಟ್ರುಮೇನರು ಸ್ಪಷ್ಟವಾಗಿ ನುಡಿದಿದ್ದಾರೆ. ೫೦ ವರುಷಗಳ ವರೆಗಿನ ಪರಸ್ಪರ ಆರ್ಥಿಕ ಹಾಗೂ ಸೇನಾಸಹಾಯದ ಕರಾರು ಮಾಡಿಕೊಂಡು ಒಗ್ಗಟ್ಟಾದ ಬೆಲ್ಜಿಯಮ್, ಫ್ರಾನ್ಸ್, ಲಕ್ಸೆಂಬರ್ಗ್, ನೆದರ್‌ಲೇಂಡ್ಸ್, ಬ್ರಿಟನ್-ಈ ಪಶ್ಚಿಮ ಯುರೋಪು ಪಂಚ ರಾಷ್ಟ್ರಗಳ ಕೂಟಕ್ಕೆ ಅಮೇರಿಕದ ಸರ್ವ ಸಹಾಯದ ಆಶ್ವಾಸನೆ ಕೊಡುತ್ತಾ ಅಧ್ಯಕ್ಷ ಟ್ರುಮೇನರಂದಿದ್ದಾರೆ: "ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕೆಂಬ ಯುರೋಪಿನ ಸ್ವತಂತ್ರ ರಾಷ್ಟ್ರಗಳ ನಿರ್ಧಾರಕ್ಕೆ ಜತೆಯಾಗಿ ನಾವೂ ಅದರ ಸಮಾನವಾದ ನಿರ್ಧಾರಪೂರ್ವಕವೇ ಅವರಿಗೆ ಸಹಾಯವಾಗುವೆವೆಂದು ನನಗೆ ಖಂಡಿತವಿದೆ. ಅಮೇರಿಕದ ಸ್ಥಾನವನ್ನು ಯಾವ ಸಂದೇಹವೂ ಇರದಂತೆ ಸ್ಪಷ್ಟಪಡಿಸುವ ಸಂದರ್ಭವೀಗ ಬಂದಿದೆ ಎಂದು ನನ್ನ ನಂಬಿಕೆ. ಶಂಕಿಸುತ್ತಾ ನಿಲ್ಲುವದಕ್ಕಿಂತ ಕಾರ್ಯ ಪ್ರವೃತ್ತರಾಗುವುದರಲ್ಲೇ ಜಾಣ್ಮೆಯಿರುವ ಸಂದರ್ಭಗಳು ಒಮ್ಮೊಮ್ಮೆ ಪ್ರಾಪಂಚಿಕ ಚರಿತ್ರೆಯಲ್ಲೊದಗುವದಿದೆ. ಈ ಕಾರ್ಯದಲ್ಲಿ ಕೆಲವು ಅಪಾಯಗಳೇನೋ ಇವೆ-ಅದಾವ ಕಾಲದಲ್ಲೂ ಇರುವಂತಹದೇ. ಅವರೆ ಕಾರ್ಯಕ್ಕಿಳಿಯದಿರುವುದರಿಂದ ಇದಕ್ಕಿಂತ ಎಷ್ಟೋ ಹೆಚ್ಚಿನ ಗಂಡಾಂತರಗಳಿವೆ" ಎನ್ನುತ್ತಾ ರಶ್ಯವು ಜಾಗತಿಕ ಸಂಘದಲ್ಲಿ ಮಾಡಿರುವ ಪಿಕಲಾಟಗಳನ್ನೂ ಯುರೋಪಿನಲ್ಲಿ ಮಾಡುತ್ತಾ ಒಂದಿರುವ ಆಕ್ರಮಣಗಳನ್ನೂ ಮುಚ್ಚುಮರೆಯಿಲ್ಲದೆ ಖಂಡತುಂಡ ಮಾತುಗಳಿಂದ ವರ್ಣಿಸಿದ್ದಾರೆ. 'ಸ್ವತಂತ್ರ ಜಗತ್ತಿನ ಮುಖ್ಯ ರಕ್ಷಕ'ನಾಗಿ ಅಮೇರಿಕವೇ ಕಮ್ಯೂನಿಸಮ್ ವಿರೋಧದ ಮುಂದಾಳುವಾಗಬೇಕಾಗಿದೆ ಎಂದು ಟ್ರುಮೇನರ ಕಂಠೋಕ್ತ ವಾಣಿ. ಅಮೇರಿಕಾಧ್ಯಕ್ಷರ ಈ ಘೋರಣೆ ಹಾಗೂ ಭಾಷಣವು ಇಡೀ ಪ್ರಪಂಚದ ವಾತಾವರಣವನ್ನೇ ಬದಲಾಯಿಸಿದೆ. ಈ ನವ ಧೋರಣೆಯನ್ನು ಅಮೇರಿಕದ ಸ್ಟೇಟ್ ಸೆಕ್ರೆಟರಿ ಮಿ. ಜೋರ್ಜ್ ಮಾರ್ಶಲರು ಸ್ಪಷ್ಟೀಕರಿಸುತ್ತಾ "ಸ್ವಾತಂತ್ರ್ಯ ಮತ್ತು ನಿರಂಕುಶಾಡಳಿತೆಗಳೊಳಗೆ ನಡೆದಿರುವ ಲೋಕವ್ಯಾಪೀ ಹೋರಾಟದಲ್ಲಿ ಅಮೇರಿಕವು ಸ್ಪಷ್ಟ ನಿರ್ಧಾರ ಮಾಡುವ ಅವಶ್ಯಗತ್ಯ ಬಂತು. ನಮ್ಮ ಹಸ್ತಗಳಿಗೆ ಹಾಗೂ ಹಿತಸಂಬಂಧಗಳಿಗೆ ಈಗ ತಟ್ಟಿರುವಷ್ಟು ದೊಡ್ಡ ಅಪಾಯಕಾರಿ ಲೋಕಸ್ಥಿತಿಯು ಹಿಂದೆಂದೂ ಇದ್ದಿಲ್ಲ"ವೆನ್ನುತ್ತಾ ಅದರೂ ಐಕ್ಯಕ್ಕೆ ಸಂಧಾನದ ಬಾಗಿಲನ್ನು ತೆರೆದಿಟ್ಟಿದ್ದೇವೆ; ಒಪ್ಪಂದದ ಅಸ್ತಿವಾರವನ್ನು ಕಂಡುಹಿಡಿಯುವ ಸಹಜಾತುರ ನಮ್ಮಲ್ಲಿದೆ ಎಂದು ತಿಳಿಸಿದ್ದಾರೆ. ರಕ್ಷಣಾ ಖಾತೆಗಳಲ್ಲಿ ಕಮ್ಯೂನಿಸ್ಟರಿಗೂ ಫೇಸಿಸ್ಟರಿಗೂ ಯಾವ ಉದ್ಯೋಗವನ್ನು ಕೊಡಕೂಡದೆಂದು ಬ್ರಿಟಿಷ್ ಸರಕಾರ ನಿರ್ಧರಿಸಿದೆ. "ದೊಡ್ಡ ರಾಷ್ಟ್ರಗಳು ಮನುಷ್ಯ—ಮನುಷ್ಯರಂತೆ ಮುಖಾಮುಖಿ ಮಾತಾಡಿಕೊಂಡು ಸರ್ವ ಸಮಸ್ಯೆಗಳನ್ನೂ ತೀರ್ಮಾನಿಸಿಕೊಳ್ಳಬೇಕು" ಎಂದು ಜನರಲ್ ಸ್ಮಟ್ಸರಂತಹ ಯುದ್ಧಪ್ರೇಮಿಗಳು ಕೂಡಾ ಬೋಧಿಸಹತ್ತಿದ್ದಾರೆ. ಇಡೀ ಪ್ರಪಂಚವು ಆತುರಕ್ಕೀಡಾಗಿದೆ.

ಪೆಲಸ್ತೈನ್--ಚೈನಾ

ಪೆಲಸ್ತೈನಿನ ಅರಬ-ಯೆಹೂದೀ ಜಗಳಕ್ಕೊಂದು ತೀರ್ಮಾನವಾಗಿ ಪೆಲಸ್ತೈನನ್ನು ವಿಭಜಿಸುವ ಯೋಜನೆಯನ್ನು ಜಾಗತಿಕ ಸಂಘವು ತಯಾರಿಸಿದ್ದು, ಅಮೇರಿಕವೇ ಅದರಲ್ಲಿ ಆಗ ಮುಖ್ಯ ಭಾಗವಹಿಸಿತ್ತು. ಆದರೆ ಮೊನ್ನೆ ತಾನೇ ಆ ವಿಭಜನೆಯ ಕಡೆಗಿನ ಅಮೇರಿಕದ ಬೆಂಬಲವನ್ನು ಹಿಂದೆಗೆದುಕೊಳ್ಳುವೆವೆಂದು ಅಮೇರಿಕನ್ ಪ್ರತಿನಿಧಿ ಜಾಹೀರು ಮಾಡಿ ಇಡೀ ಪೆಲಸ್ತೈನಿಗೊಂದು ಟ್ರಸ್ಟೀಶಿಪ ಆಡಳಿತೆಯ ಸೂಚನೆ ಮುಂದಿಟ್ಟುದರಿಂದ ವಿದ್ಯಮಾನವೂ ಈಗ ಬದಲಾಗಿದೆ. ಭದ್ರತಾ ... ಪ್ರತಿನಿಧಿಯು ... ಸೂಚನೆಗಿದುವರೆಗೆ ಸಮ್ಮತಿ ಕೊಟ್ಟಿಲ್ಲ. ಪೆಲಿಸ್ತೈನ್ ವಿಭಾಗಕ್ಕೆ ಕಟ್ಟುಗ್ರ ವಿರೋಧ ಪ್ರದರ್ಶಿಸುತ್ತಾ ಬಂದಿದ್ದ ಅರಬರಿಗೆ ಇದರಿಂದ ಆನಂದವಾಗಿದೆ. ಯೆಹೂದಿಗಳು ನಿರಾಶೆಗೊಂಡಿದ್ದಾರೆ. ಈ ನವೀನ ಪರಿಸ್ಥಿತಿಯಿಂದ ತನ್ನ ಪೆಲಸ್ತೈನ್ ಧೋರಣೆಯಲ್ಲಾವ ವ್ಯತ್ಯಾಸವೂ ಆಗುವದಿಲ್ಲವೆಂದೂ ಮೇ 15ರಲ್ಲಿ ಪೆಲಿಸ್ತೈನಿನ ಮೇಲಿನ ತನ್ನ ನಿಚಾರಾಧಿಕಾರವನ್ನೂ ಅಗೋಸ್ತು 1ರಲ್ಲಿ ಅಲ್ಲಿಂದ ತನ್ನ ಸೇನೆಯನ್ನೂ ಹಿಂದೆಗೆದು ಕೊಟ್ಟ ಮಾತಿನಂತೆ ವರ್ತಿಸುವದಾಗಿಯೂ ಬ್ರಿಟಿಷ್ ಸರಕಾರದ ಆಶ್ವಾಸನೆಯಿದೆ. ಬ್ರಿಟಿಷ್ ಆಡಳಿತೆಯು ಮೇ ತಾ 15ರಲ್ಲಿ ಬರ್ಖಾಸ್ತಾಗುವಾಗ ಅಖಿಲ ಪೆಲಸ್ತೈನಿನ ರಕ್ಷಣೆಗೆ ಸುಭದ್ರವಾದ ಒಂದು ಸರಕಾರ ಸ್ಥಾಪನೆಯಾಗುವ ಅಗತ್ಯವಿದೆಯೆಂದು ಈಗ ಅಮೇರಿಕವು ತನ್ನ ಧೋರಣೆ ಬದಲಾವಣೆಗೆ ಕಾರಣ ಕೊಟ್ಟಿದೆ. ಅರಬರೂ ಯೆಹೂದಿಗಳೂ ಆ 'ಟ್ರಸ್ಟೀಶಿಪ್ ಆಡಳಿತೆ'ಯೆಂಬ ಹೆಸರಿನ ಬೇರೊಬ್ಬರ ಅಧಿಕಾರವು ಪೆಲಸ್ತೈನಿನಲ್ಲಿ ಸ್ಥಾಪನೆಗೊಳ್ಳುವದಕ್ಕೆ ವಿರೋಧ

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೋ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸ್: ಶ್ರೀ ದುರ್ಗಾ ಭವನ, ಮೂಲ್ಕಿ.

ಯಂ. ಆರ್. ಭಟ್, (ಆರ್ಟಿಸ್ಟ್) ವ್ಯವಸ್ಥಾಪಕ.

NEO ROYAL CAFE,
Boarding & Lodging,
Santhekatte, UDIPI.

ಪೆಲಸ್ತೈನ್ ಕಾಶ್ಮೀರ ನವೀನ ಯೋಜನೆ

ಸೂಚಿಸಿದ್ದಾರೆ. ಅರಬ್ ನಾಯಕರು ಪೆಲಸ್ತೈನ್ ಸ್ವಾತಂತ್ರ್ಯವನ್ನು ಅಪೇಕ್ಷಿಸಿ ಯೆಹೂದಿಗಳೊಡನೆ ಸಂಧಾನ ಮಾಡಿಕೊಳ್ಳುವ ಬಯಕೆಯನ್ನು ಪ್ರದರ್ಶಿಸಿದ್ದಾರೆ.

ಇತ್ತ ಚೈನಾದಲ್ಲಿ ಕಮ್ಯೂನಿಸ್ಟ್ ಸೇನೆಗಳು ವಿಜಯದ ಮೇಲೆ ವಿಜಯಗಳನ್ನು ಪಡೆಯುತ್ತಾ ಆಯಕಟ್ಟಿನ ಸ್ಥಳಗಳನ್ನಾಕ್ರಮಿಸಿಕೊಳ್ಳುತ್ತಾ ಮುಂದೊತ್ತುವ ದೃಶ್ಯವು ಹಿಂದಿನ ಜಪಾನೀ ಆಕ್ರಮಣದ ನೆನಪನ್ನೇ ತರುತ್ತಿದೆ. ಹಲವು ನಗರಗಳು ಚೀನೀ ಸರಕಾರದ ಕೈ ಬಿಟ್ಟಿವೆ. ಯಾಂಗ್ಸೆಟೀ ಕೊಳ್ಳದ ಮಾರ್ಗವಾಗಿ ಸಾಗುತ್ತಾ ಬಂದಿರುವ ಕಮ್ಯೂನಿಸ್ಟ್ ಸೇನೆಗಳು ಒಂದೆಡೆ ನಾನ್ಕಿಂಗಿಗೂ ಮತ್ತೊಂದೆಡೆ ಷಾಂಘಾಯಿಗೂ ಕೆಲವೇ ಮೈಲುಗಳ ದೂರದಲ್ಲಿವೆಯೆಂದು ತಿಳಿದು ಬರುತ್ತದೆ. ಬಂಕೂ ವಿಶಾಲ ಚೈನಾದಲ್ಲಿ, ಇಂದಿನ ಸರಕಾರವನ್ನು ಸ್ಥಾನಚ್ಯುತಗೊಳಿಸುವುದು ಕಮ್ಯೂನಿಸ್ಟರಿಗೆ ಸಾಧ್ಯವಾದರೂ, ಸದ್ಯದ ಮೇಲಾಟ ಸ್ಥಿತಿಯಲ್ಲಿ ರಷ್ಯವು ಕಮ್ಯೂನಿಸ್ಟರ ಕೈ ಬಲಗೊಳಿಸಿ ಚೈನಾದ ಕೆಲಸವನ್ನು ತ್ವರಿತಗೊಳಿಸಹತ್ತಿದೆಯೆಂದು ಊಹಿಸಬಹುದು; ಆ ಕಡೆಯಿಂದ ಅಮೇರಿಕವು ಚೈನದ ಸರಕಾರಕ್ಕೆ ಸರ್ವ ಸಹಾಯಗಳನ್ನೊದಗಿಸುತ್ತಿದೆಯೆಂದೂ ಅಂತಃ ಕಲಹ ಪೀಡಿತ ಚೈನಕ್ಕೆ ಇವೆರಡು ಪ್ರಮುಖ ರಾಷ್ಟ್ರಗಳ ಸ್ಪರ್ಧಾತಾಂಡವದ ರಂಗವಾಗುವ ದುರ್ದೈವ ತಪ್ಪಿದ್ದಲ್ಲವೆಂದೂ ಊಹಿಸಬಹುದು.

ಇಟೆಲಿಯ ಪಾಲಿನದಾಗಿದ್ದು ಸ್ವತಂತ್ರವೆಂದು ದೊಡ್ಡ ಚತುರಾಷ್ಟ್ರಗಳಿಂದ ನಿರ್ಧರಿಸಲ್ಪಟ್ಟ ಟ್ರೀಸ್ಟೆಯನ್ನು ಇಟಲಿಗೇನೇ ಮರಳಿ ಒಪ್ಪಿಸಬೇಕೆಂದು ಈಗ ಅಮೇರಿಕ, ಇಂಗ್ಲಾಂಡು ಮತ್ತು ಫ್ರಾನ್ಸುಗಳು ರಷ್ಯಕ್ಕೆ ಸೂಚಿಸಿವೆ. ಸ್ವತಂತ್ರವೆಂದು ಚತುರಾಷ್ಟ್ರಗಳು ನಿರ್ಣಯಿಸಿದ್ದ ಯುಗೊಸ್ಲೋವೇಕಿಯದ ಪಾಲಿನ ಟ್ರೀಸ್ಟೆಯ ಭಾಗವನ್ನು ಯುಗೊಸ್ಲೇವಿಯವು ಎಲ್ಲಾ ರೀತಿಗಳಿಂದಲೂ ತನ್ನ ಸ್ವಂತ ಭಾಗವೆಂಬಂತೆಯೇ ವರ್ತಿಸಿರುವುದೆಂದೂ ಈ ತ್ರಿರಾಷ್ಟ್ರಗಳ ದೂರಿದೆ. ರಷ್ಯವು ಈ ಸೂಚನೆಗೊಪ್ಪುವ ಸಂಭವವಿಲ್ಲವಾದ್ದರಿಂದ ಇದೂ ಆಂಗ್ಲೋ-ಅಮೇರಿಕ-ಫ್ರಾನ್ಸ್ ಮತ್ತು ರಷ್ಯಗಳೊಳಗಿನ ಮಹಾ ವ್ಯಾಜ್ಯಕ್ಕೆ ಮತ್ತೊಂದು ಕಾರಣವಾಗಬಹುದು.

ಅತ್ತ ಬರ್ಲಿನಿನಲ್ಲಿ ಸೇರಿದ ಜರ್ಮನಿಯ ಆಡಳಿತೆಗಾಗಿ ಇರುವ ಮಿತ್ರ ರಾಷ್ಟ್ರೀಯ ಹತೋಟಿ ಕೌನ್ಸಿಲಿನ ಮಾರ್ಚಿ ತಾ. 20ರ ಸಭೆಯಲ್ಲಿ ರಷ್ಯದ ಪ್ರತಿನಿಧಿಗಳು ಹೊರ ನಡೆದಿದ್ದಾರೆ. ಜರ್ಮನಿಯನ್ನು ಜತೆಯಲ್ಲೊಳಿಸುವದಕ್ಕಾಗಿ ರಚಿಸಲ್ಪಟ್ಟಿರುವ ರಷ್ಯ, ಅಮೇರಿಕ, ಫ್ರಾನ್ಸ್, ಇಂಗ್ಲಾಂಡುಗಳ ಕೌನ್ಸಿಲ್ ಅದು. ಆದ್ದರಿಂದ ಈ ಚತುರಾಷ್ಟ್ರಗಳ ಜರ್ಮನಿಯ ಜತೆಯಾಡಳಿತೆ ಮುಂದು ಬೀಳುವ ಅಪಾಯವೆದ್ದಿದೆ; ಹಾಗಾದಲ್ಲಿ ಜರ್ಮನಿಯೂ ರಷ್ಯಾ ಮತ್ತಿತರ ಮೂರು ರಾಷ್ಟ್ರಗಳೊಗಿನ ಹೋರಾಟ ರಂಗವಾಗಬಹುದು. ಫಿನ್ಲೆಂಡಿನ ರಕ್ಷಣಾ ಕೋಣೆಯನ್ನು ರಷ್ಯವು ಹೊರುವ ಕರಾರಾಗುವುದರಲ್ಲಿದೆ.

ಈ ರೀತಿ ಪ್ರಾಪಂಚಿಕ ರಾಜಕಾರಣದಲ್ಲಿ ಭಯಜನ್ಯ ಮಂಥನ ನಡೆದಿದೆ. ಕಳೆದ ಮಹಾಯುದ್ಧಾಂದೋಲನದಲ್ಲೇ ಎಲ್ಲಾ ವಿಷವೂ ಹಟ್ಟಿ ಮುಗಿದು ಇನ್ನು ಅಮೃತವೊಂದೇ ಮೇಲೆ ಒಂದೀತೆಂದು ಕಟ್ಟಿಕೊಂಡಿದ್ದ ಆಶೆಯೆಲ್ಲಾ ನಿರರ್ಥವಾಗಿ ಪುನಃ ಇನ್ನಷ್ಟು ಕಠೋರವಾದ ಹಾಲಾಹಲವನ್ನೇ ನಿರ್ಮಿಸುವ ಮಂಥನ ನಡೆಯುತ್ತಿರುವಂತಿದೆ. ಮುಂದೆ ಹೇಗೋ!

ಕಾಶ್ಮೀರದ ಪ್ರಶ್ನೆ

ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನ ಪ್ಲೆಕ್ಕೋಳಿಯಹತ್ತು ತಿಂಗಳುಗಳೇ ಕಳೆದಿರುವ ಕಾಶ್ಮೀರದ ವಿವಾದದ ಮುಂದೀಗ ಹೊಸ ರೂಪೀ ತೀರ್ಮಾನ ಸೂತ್ರವೊಂದು ಬಂದಿದೆ. ಈ ಮೊದಲಿನ ತೀರ್ಪು ಸೂತ್ರಗಳು ಪಾಕಿಸ್ತಾನಕ್ಕನುಕೂಲವಾಗಿದ್ದಂತೆ ತೋರಿದ ಪರಿಮಾಣದಲ್ಲೇ ನವ ಸೂತ್ರಗಳು ಭಾರತಕ್ಕನುಕೂಲವಿರುವಂತೆ ಕಾಣುತ್ತಿವೆ. ಈ ತೀರ್ಮಾನ ಯೋಜನೆಯನ್ನು ಭದ್ರತಾ ಕೌನ್ಸಿಲಿನ ಮುಂದೆ ತಂದವರು ಚೈನಾದ ಪ್ರತಿನಿಧಿ ಡಾ| ಟಿ. ಎಫ್. ಟ್ಸ್ಯಾಂಗರು. ಅದರಲ್ಲಿರುವ ಶರ್ತಗಳ ಸಾರಾಂಶ ಹೀಗಿದೆ:— ಪಾಕಿಸ್ತಾನ್ ಸರಕಾರವು ಕಾಶ್ಮೀರದೊಳಗೆ ನುಗ್ಗಿ ಬಂದ ಗುಡ್ಡಗಾಡುಗಳವರನ್ನೂ ಪಾಕಿಸ್ತಾನ್ ಪ್ರಜೆಗಳನ್ನೂ ಹಿಂದೆಗೆದುಕೊಳ್ಳುವ ಪ್ರಯತ್ನ, ಮುಂದೆ ಅಂಥವರು ಪ್ರವೇಶಿಸದಂತೆ ಮತ್ತವರಿಗೆ ಶಸ್ತ್ರೋಪಕರಣ ಇತ್ಯಾದಿಗಳೊದಗದಂತೆ ಮಾಡುವ ಪ್ರಯತ್ನ, ಮತ್ತು ಕಾಶ್ಮೀರದ ಎಲ್ಲರಿಗೂ ಜಾತಿ ಮತ ಭೇದವಿಲ್ಲದೆ ರಕ್ಷಣೆಯಿರುವಂತೆಯೂ, ಸ್ವತಂತ್ರವಾಗಿಯೂ ನಿರಾತಂಕವಾಗಿಯೂ ಮತದಾನ ಕಾರ್ಯ ನಡೆಯುವಂತೆಯೂ ನೋಡುವ ಪ್ರಯತ್ನವನ್ನು ತನ್ನ ಸರ್ವಶಕ್ತಿಯಿಂದ ಮಾಡಬೇಕು. ಅದೇ ಕಾಲದಲ್ಲಿ ಭಾರತ ಸರಕಾರವು ಕಾಶ್ಮೀರದ ರಕ್ಷಣೆ ಮತ್ತು ವ್ಯವಸ್ಥೆಗಗತ್ಯವಿರದ ತನ್ನೆಲ್ಲಾ ಸೇನೆಗಳನ್ನೂ ಕ್ರಮಶಃ ಅಲ್ಲಿಂದ ಹಿಂತೆಗೆಯಬೇಕು; ಕಾಶ್ಮೀರೀ ಜನತೆಯನ್ನು ಪುಸಲಾಯಿಸುವ ಉದ್ದೇಶದಿಂದ ಅಂತಹ ಯಾವ ಸ್ಥಳಗಳಲ್ಲಿಯೂ ತನ್ನ ಸೇನೆಗಳನ್ನಿಡಕೂಡದು. ಕಾಶ್ಮೀರವು ಯಾವ ಕಡೆಗೆ ಸೇರಬೇಕೆಂಬುದನ್ನು ನಿರ್ಧರಿಸುವ ಜನಮತ ಸಂಗ್ರಹಕ್ಕಾಗಿ ಮತಗಣನೆಯ ಪೂರ್ಣಾಧಿಕಾರೀ ಆಡಳಿತೆಯೊಂದನ್ನು ಭಾರತ ಸರಕಾರ ಸ್ಥಾಪಿಸಬೇಕು. ಈ ಮತಗಣನಾಧಿಕಾರೀ ಆಡಳಿತೆಯಾಗಿ ಜಾಗತಿಕ ಸಂಘದ ಸೆಕ್ರೆಟರಿ ಜನರಲರು ಹೆಸರು ಕೊಡುವ ಓರ್ವ ಡೈರೆಕ್ಟರ್ ಮತ್ತು ಐದು ಮಂದಿ ಕ್ಷೇತ್ರವಾರು ಸಹಾಯಕ ಡೈರೆಕ್ಟರರು—ಹೀಗೆ ಆರು ಮಂದಿಯನ್ನು ಭಾರತ ಸರಕಾರವು ನೇಮಿಸಿಕೊಳ್ಳಬೇಕು. ಮತದಾನದಲ್ಲಿ ಯಾವುದೇ ವಿಧದ ಒತ್ತಾಯ, ದಬಾವು, ಭಯವಿರದಂತೆ ನೋಡುವ ಸರ್ವ ಕಾರ್ಯಗಳನ್ನೂ ಮಾಡಬೇಕು. ಕಾಶ್ಮೀರೀ ಸರಕಾರವು ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುವಂತೆಯೂ, ಯಾರಿಗೂ ಹಿಂದಿನ ತಪ್ಪುಗಳಿಗೆ ಶಿಕ್ಷೆ ಕೊಡದಂತೆಯೂ, ಗಲಭೆಯಲ್ಲಿ ಹೊರಗೋಡಿ ಹೋದ ಕಾಶ್ಮೀರಿಗಳೆಲ್ಲಾ ಮರಳಿ ಬರುವಂತೆ ಮಾಡುವಂತೆಯೂ, 1947ನೇ ಆಗೋಸ್ತು 15ರ ನಂತರ ಕಾಶ್ಮೀರದೊಳಗೆ ಪ್ರವೇಶಿಸಿರುವ ಕಾಶ್ಮೀರೇತರರೆಲ್ಲರೂ ಹೊರಗೆ ಹೋಗುವಂತೆಯೂ ಭಾರತ ಸರಕಾರ ಮಾಡಬೇಕು. ಕಾಶ್ಮೀರದ ನಡುಗಾಲ ಸರಕಾರದಲ್ಲಿ ಕಾಶ್ಮೀರದ ಎಲ್ಲಾ ಪಕ್ಷ ಪಂಗಡಗಳಿಗೂ ಪ್ರಾತಿನಿಧ್ಯ ದೊರೆಯುವಂತೆಯೂ, ಈ ಮಧ್ಯಾವಧಿಯಲ್ಲಿ ಅಂತರ್ರಾಷ್ಟ್ರೀಯ ಸಂಬಂಧೀ ಕಾರ್ಯಗಳನ್ನು ನೋಡಿಕೊಳ್ಳಲು ಒಬ್ಬ ಉಚ್ಚಾಧಿಕಾರಿಯನ್ನು ನೇಮಿಸುವಂತೆಯೂ ಹಿಂದೀ ಸರಕಾರ ಮಾಡಬೇಕು.

ಚೈನಾದ ಈ ರಾಜೀ ಯೋಜನೆಗೆ ಭದ್ರತಾ ಕೌನ್ಸಿಲಿನಲ್ಲಿ ವಿಶೇಷಾನುಕೂಲ ಅಭಿಪ್ರಾಯ ಪ್ರಕಟವಾಗಿದೆ. ಭದ್ರತಾ ಕೌನ್ಸಿಲಿನಲ್ಲಿ ಈ ನವಸೂಚನೆ ಮುಂದೆ ಬಂದೊಡನೆ ಪಾಕಿಸ್ತಾನದ ಪ್ರತಿನಿಧಿ ಸರ್. ಝಫರುಲ್ಲಾರು ದಿಗಿಲ ಸೂಚಿಸಿ ತನ್ನ ಸರಕಾರದ ಅಭಿಮತ ಕೇಳಿಕೊಂಡಮೇಲೆ ಸ್ವಾಭಿಪ್ರಾಯ ಕೊಡುವೆನೆಂದಿದ್ದಾರೆ. ಹಿಂದೀ ಸರಕಾರದ ಪ್ರತಿನಿಧಿ ಶ್ರೀ. ಎನ್. ಜಿ. ಅಯ್ಯಂಗಾರರು ಸಾಮೂಹಿಕವಾಗಿ ಈ ಯೋಜನೆಗೆ ಸಮ್ಮತಿ ಸೂಚಿಸಿದ್ದಾರೆ. ಕೆಲವು ವಿಷಯಗಳಲ್ಲಿ ಹಿಂದೀ ಸರಕಾರಕ್ಕೆ ತೊಂದರೆಗಳನ್ನೊಡ್ಡಲಾಗಿದೆಯೆಂದೂ ಯಾವುದಕ್ಕೂ ಕಾಶ್ಮೀರದ ಯುದ್ಧವು ಮುಂದಾಗಿ ನಿಲ್ಲಬೇಕಾದುದಗತ್ಯವೆಂದೂ ಶ್ರೀ ಅಯ್ಯಂಗಾರರು ಸೂಚಿಸಿದ್ದಾರೆ. ಎರಡೂ ಕಡೆಯ ಪ್ರತಿನಿಧಿಗಳು ಪಾಕಿಸ್ತಾನ್, ಭಾರತ ಸರಕಾರಗಳ ಅಭಿಮತ ಪಡೆಕೊಂಡು ಈ ವಾರದಲ್ಲಿ ಆ ರಾಜೀ ಸೂಚನೆಗಳು ಭದ್ರತಾ ಕೌನ್ಸಿಲಿನಲ್ಲಿ ಚರ್ಚೆಗೆ ಬಂದು ತೀರ್ಮಾನ ಹೊಂದಲಿವೆ.

ಭಾರತ ಪಾಕಿಸ್ತಾನ

ನಾಸಿಕದಲ್ಲಿ ಶ್ರೀ ತ್ರಿಕ.ಎಂ.ದಾಸರ ಅಧ್ಯಕ್ಷತೆಯಲ್ಲಿ ಇದೇ ತಾ 19-20ರಲ್ಲಿ ಸೇರಿದ ಅಖಿಲ ಭಾರತ ಸಮತಾವಾದಿಗಳ ಸಮ್ಮೇಲನವು ಏಪ್ರಿಲ್ ತಾ. 15ರೊಳಗೆ ಎಲ್ಲಾ ಸಮತಾವಾದಿ ಸದಸ್ಯರೂ ಕಾಂಗ್ರೆಸಿನ ಅಧಿಕಾರ ಸ್ಥಾನ ಮತ್ತು ಸಾಮಾನ್ಯ ಸದಸ್ಯತ್ವವನ್ನು ಬಿಡತಕ್ಕದ್ದೆಂಬ ನಿರ್ಧಾರ ಮಾಡಿದೆ. ಆ ನಿರ್ಣಯದಲ್ಲಿ ಕಾಂಗ್ರೆಸಿನ ಧೋರಣೆ ಮತ್ತು ಕಾರ್ಯಕ್ರಮಗಳನ್ನು ಟೀಕಿಸಿ ಕಮ್ಯೂನಿಸ್ಟರು ಭಾರತದ ಮಹಾಪಾಯದ ಕೇಂದ್ರಗಳೆಂದು ಎಚ್ಚರಿಸಲಾಗಿದೆ. ಹೈದರಾಬಾದಿನೊಡನೆ ಸಂಧಾನದ ನೆವದಿಂದ ಕಾಲ ಕಳೆಯುತ್ತಾ ಅದು ಇನ್ನಷ್ಟು ಬಲಗೊಳ್ಳಲು ಅವಕಾಶ ಮಾಡಿರುವ ಭಾರತ ಸರಕಾರದ ವರ್ತನೆಯನ್ನೂ ಖಂಡಿಸಲಾಗಿದೆ.

ಹೈದರಾಬಾದಿನ ಪ್ರತಿನಿಧಿಗಳು ಮುಂದಿನ ಮಾತುಕತೆಗಳಿಗಾಗಿ ಪುನಃ ನವದಿಲ್ಲಿಗೆ ಹೊರಟಿದ್ದಾರೆ. ತಿರುವಾಂಕೂರಿನಲ್ಲಿ ನವರಾಜ್ಯಾಂಗ ರಚನೆ ಮಾಡುವ ಘಟನಾ ಸಮಿತಿಯು ಇದೇ ತಾ 20ರಲ್ಲಿ ಪ್ರಾರಂಭಿಸಿದೆ.

ಇದುವರೆಗಿದ್ದ 'ಭಾರತ-ಪಾಕಿಸ್ತಾನ ಜತೆ ರಕ್ಷಣಾ ಸಮಿತಿಯು ವಿಸರ್ಜಿಸಲ್ಪಟ್ಟು ಪರಸ್ಪರ ಪರ್ಯಾಲೋಚನೆಗಳಿಗಾಗಿ ಇಕ್ಕಡೆಯ ಪ್ರಧಾನ ಮಂತ್ರಿಗಳೂ ಮಾಸಿಕ ಜತೆ ಸಂಧಾನಗಳನ್ನು ನಡೆಯಿಸುವ ನಿರ್ಧಾರವಾಗಿದೆ.

ಭಾರತ ಸರಕಾರಕ್ಕೆ ಅಧಿಕಾರೀ ದರ್ಜೆಗಾಗುವ ಜನರ ಕೊರತೆ ಬಿದ್ದಿದೆ ಎಂದು ತಿಳಿದುಬರುತ್ತದೆ. ಮೊದಲೇ ಇದ್ದ ಈ ಅಭಾವವು ರಾಷ್ಟ್ರ ವಿಭಜನಾನಂತರ ಭಾರತ ಸರಕಾರದ ಪಾಲಿಗೆ ಮತ್ತಷ್ಟು ಹೆಚ್ಚಿದೆ. ಈ ಅಭಾವವನ್ನು ನಿವಾರಿಸುವ ಯೋಜನೆಯೊಂದು ಸದ್ಯದಲ್ಲೇ ಸೇರಲಿರುವ ಸರ್ವ ಪ್ರಾಂತಿಕ ಪ್ರಮುಖ ಕಾರ್ಯದರ್ಶಿಗಳ ಸಮ್ಮೇಳನದಲ್ಲಾಗಲಿದೆಯೆಂದು ತಿಳಿದುಬರುತ್ತದೆ.

ಭಾರತ ಸರಕಾರವು ನೇಮಿಸಿದ್ದ 'ಸಂಬಳ ಸಮಿತಿ'ಯು ಶಿಫಾರಸುಗಳಿಗನುಸಾರವಾಗಿ ಎಲ್ಲಾ ಖಾತೆಗಳ ಅಧಿಕ ಸಂಬಳದ ನೌಕರರೆಲ್ಲರೂ ಸ್ವಯಂಪ್ರೇರಣೆಯಿಂದ ತಮ್ಮ ಸಂಬಳದಲ್ಲಿ ಕಡಿತವನ್ನು ತಾವಾಗಿ ಮಾಡಿಕೊಳ್ಳಬೇಕೆಂದು ಭಾರತ ಸರಕಾರವು ವಿಜ್ಞಾಪನೆ ಮಾಡಿಕೊಳ್ಳಲಿದೆಯೆಂದು ತಿಳಿದುಬರುತ್ತದೆ. ಸಂಬಳ ಸಮಿತಿಯು ಅತಿ ಹೆಚ್ಚೆಂದರೆ ಒಬ್ಬೊಗೆ ರೂ. 2000ಕ್ಕೆ ಮಿಕ್ಕ ಸಂಬಳವಿರಕೂಡದೆಂದು ಸೂಚಿಸಿದ್ದಿತು. ಆದರೆ ಸದ್ಯ ತಿಂಗಳಿಗೆ

(ಆನೇ ಪುಟ ನೋಡಿರಿ)

THE UDIPI BANK LIMITED

(Estd 1925)

Special Agents For

THE POPULAR INSURANCE COMPANY LIMITED

MANGALORE

Notice of declaration of Dividend

At the 23rd annual ordinary General meeting of the shareholders of the Bank held on 21st March 1948, dividend at the rate recommended by the Directors has been declared to be paid to all share-holders of the Bank.

Office of the Bank, UDIPI. Dated 22-3-1948

K. V. Prabhu.

Manager.

The Canara Banking Corporation Limited.
Estd: 1906.
(Incorporated in British India)
Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates.—
3 & 4 months — @ 2½ % p. a.
5 & 6 months — @ 2¾ % p. a.

ಗುರುವಾರ, ಉಡುಪಿ, ೨೫-೩-'೪೮

ಆಹಾರ ಸಂಬಂಧವಾಗಿ ಸರಕಾರದ ಭರವಸೆ

ಈ ವರುಷ ಭಾರತದಲ್ಲಿ ಮದ್ರಾಸೇ ವಿಶೇಷ ಆಹಾರಾಭಾವವಿರುವ ಪ್ರಾಂತ್ಯವಾಗಿದೆ. ಕೊಲೆಯಾಗುವ ದಿನದ ಮುಂಚಿನ ಎಲ್ಲಕ್ಕಿಂತ ಮೊದಲಾಗಿ ಗಾಂಧಿಜೀಯ ತಲೆಯಲ್ಲಿ ಮೂಡಿದ್ದ ಯೋಚನೆ ಕೂಡಾ 'ಮದ್ರಾಸ್ ಪ್ರಾಂತ್ಯದ ಆಹಾರಾಭಾವ ನಿವಾರಣೋಪಾಯ'ವೇ ಆಗಿದ್ದು, ಈ ಕುರಿತವರು ತನ್ನ ಕಾರ್ಯದರ್ಶಿ ಶ್ರೀ ಪ್ಯಾರೇಲಾಲರಿಗೆ ಸೂಚನೆಕೊಟ್ಟಿದ್ದರು ಇಷ್ಟು ವರುಷ ಬಹುಮುಖಿಯಾಗಿದ್ದ ಕೇಂದ್ರ ಸರಕಾರದ ಲಕ್ಷ್ಯ ಕೂಡಾ ಈ ಬಾರಿ ಮುಖ್ಯವಾಗಿ ಮದ್ರಾಸ್ ಪ್ರಾಂತ್ಯದ ಕಡೆಗೇನೇ ಬಿದ್ದಿದೆ. 'ಆಹಾರಾಭಾವಕ್ಕಾಗಿ ಹೆದರಬೇಡಿ; ನಾವು ನಿಮ್ಮನ್ನು ಆ ಸಂಕಷ್ಟದಿಂದ ಹೊರಗೆಳೆದು ಹಾಕುತ್ತೇವೆ" ಎಂದು ಭಾರತ ಸರಕಾರದ ಆಹಾರ ಮಂತ್ರಿಗಳು ಮದ್ರಾಸ್ ಜನತೆಗೆ ಆಶ್ವಾಸನೆ ಕೊಟ್ಟಿದ್ದಾರೆ. 'ತಿನ್ನವೆಲ್ಲಿ ಜಿಲ್ಲೆಯಲ್ಲಿರುವ ಬರಗಾಲ ಸ್ಥಿತಿ'ಯನ್ನು ಪರ್ಯಾಲೋಚಿಸುವದಕ್ಕಾಗಿ ಸಭಾ ಕಾರ್ಯಕ್ರಮಗಳನ್ನು ಮುಂದುವರಿಸಬೇಕೆಂದು ಇದೇ ತಾ 22ರಲ್ಲಿ ಮದ್ರಾಸ್ ಎಸೆಂಬ್ಲಿಯಲ್ಲಿ ಬಂದ ಸೂಚನೆಯೊಂದರ ಸಂಬಂಧವಾಗಿ ಮದ್ರಾಸ್ ಸರಕಾರದ ಆಹಾರ ಮಂತ್ರಿ ಡಾ|| ರಾಜನರು ಕೊಟ್ಟ ಆಶ್ವಾಸನೆಯೂ ಆಧರಿಸಲಾಗುವಂತಹದೇ. ಮಾನ್ಯ ಮಂತ್ರಿಗಳ ಮಾತಿನಿಂದ ಪ್ರಾಂತ್ಯದ ಆಹಾರ ಪರಿಸ್ಥಿತಿಯೆಲ್ಲಿಯೂ ಸರಕಾರದ ಕೈ ಮೀರಿ ಹೋಗಿಲ್ಲವೆಂದೂ, ಬರಗಾಲದ ಭಯ ಕಟ್ಟಿಕೊಳ್ಳುವುದು ಹುಚ್ಚುತನವೆಂದೂ ಅರ್ಥವಾಗುತ್ತದೆ. ಆಹಾರ ಮಂತ್ರಿಗಳು ತಿನ್ನವೆಲ್ಲಿ ಜಿಲ್ಲೆಯ ಸಂಬಂಧವಾಗಿ ಆಡಿರುವ ಈ ಕೆಳಗಿನ ಮಾತುಗಳು, ತಿನ್ನವೆಲ್ಲಿಯಷ್ಟೇ ಆಹಾರಾಭಾವದ ಕೂಗೆದ್ದಿರುವ, ಆದರೆ ತಿನ್ನವೆಲ್ಲಿಯ ಕಡೆಗೆ ಸರಕಾರದ ಲಕ್ಷ್ಯವಿದ್ದಷ್ಟು ಈ ಕಡೆಗೆ ಬೀಳದಿರುವ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಿತಿಗತಿಗಳಿಗೂ ಅನ್ವಯಿಸುತ್ತವೆ.

"ನಿಯಂತ್ರಣವನ್ನು ರದ್ದುಗೊಳಿಸಬೇಕೆಂಬ ಅಸಂಖ್ಯಾತ ಒತ್ತಾಯಗಳು ವ್ಯಕ್ತಿಗಳಿಂದ, ಸಾರ್ವಜನಿಕ ಸಂಘ ಸಂಸ್ಥೆಗಳಿಂದ, ನಗರ ಸಭೆಗಳಿಂದ, ಪಂಚಾಯತ್ ಬೋರ್ಡುಗಳಿಂದ ಬಂದಿದ್ದುವು. ಹಳ್ಳಿಗರು ಅಕ್ಕಿಯನ್ನಷ್ಟೇ ಅಪೇಕ್ಷಿಸುತ್ತಾರಲ್ಲದೆ, ಜೋಳ ಮತ್ತಿತರ ಧಾನ್ಯಗಳನ್ನು ಬಯಸುವದಿಲ್ಲವೆಂದು ಕಲೆಕ್ಟರರು ಬರೆದಿದ್ದಾರೆ. ಅಕ್ಕಿಯ ಸ್ಥಿತಿ ಅಷ್ಟು ಸಮಾಧಾನಕರವಿಲ್ಲವಾದ್ದರಿಂದ ಇದು ಮಾತ್ರ ಸಾಧ್ಯವಿಲ್ಲ. ಎರಡನೆಯದಾಗಿ ಭಾರತ ಸರಕಾರದಿಂದ ಬರುವ ಎಲ್ಲಾ ಆಮದುಗಳೂ ಜೋಳವೊಂದೇ. ಅರ್ಜೆಂಟಿನಾ, ಪೂರ್ವ ಪಂಜಾಬ್, ಮಧ್ಯಪ್ರಾಂತ್ಯ, ಬಿಹಾರ್ ಮೊದಲಾದ ಕಡೆಗಳ ಎಲ್ಲಾ ಉಳಿತಾಯಗಳನ್ನೂ ಭಾರತ ಸರಕಾರವು ಸಂಗ್ರಹಿಸುತ್ತಿದೆ, ಮತ್ತೆಲ್ಲಾ ಉಳಿತಾಯ ಸಂಗ್ರಹವನ್ನೂ ಮದ್ರಾಸ್ ಪ್ರಾಂತ್ಯಕ್ಕೆ ಮೀಸಲಿರಿಸಿ, ಈ ಕಡೆಗೆ ಸಾಗಿಸುತ್ತಿದೆ. ದಕ್ಷಿಣ ಭಾರತದ ಯಾವುದೇ ಕಡೆಗೆ ಆಹಾರ ಧಾನ್ಯಗಳನ್ನು ರವಾನಿಸುವದಕ್ಕಾಗಿ ಸುಮಾರು 100 ಗಾಡಿಗಳನ್ನು ಭಾರತ ಸರಕಾರವು ತಯಾರು ಮಾಡಿಟ್ಟಿದೆ. ಇಲ್ಲಿಯ ಅಭಾವವು ಮುಂದೊತ್ತಿದಲ್ಲಿ ತಾನು ಸ್ವತಃ ಬಂದು ಹಸಿವು ನಿವಾರಣೆಯನ್ನೂ ಆಹಾರ ಧಾನ್ಯಗಳ ಚಲನವಲನ ಹಾಗೂ ಸಂಗ್ರಹ ವ್ಯವಸ್ಥೆಯನ್ನೂ ಸಾಧಿಸಲು ನೋಡುವೆನೆಂದು ಭಾರತ ಸರಕಾರದ ಆಹಾರ ಮಂತ್ರಿಗಳು ಪಾರ್ಲಿಮೆಂಟಿನಲ್ಲಿತ್ತ ಹೇಳಿಕೆಯಲ್ಲಂದಿದ್ದಾರೆ. ಮದ್ರಾಸ್ ಸರಕಾರವು, ಇಲ್ಲಿಯ ಪರಿಸ್ಥಿತಿಯನ್ನು ಆಗಿಂದಾಗ ಭಾರತ ಸರಕಾರಕ್ಕೆ ಸರಿಯಾಗಿ ತಿಳಿಸುತ್ತಾ ಇದೆ. ಸಿವಿಲ್ ಸಪ್ಲೈಸ್ ಕಮಿಶನರರು ನಿನ್ನೆ ತಾನೇ ಡೆಲ್ಲಿಯಿಂದ ಇಲ್ಲಿಗೆ ಬಂದಿದ್ದಾರೆ. ಹೆಚ್ಚಿನ ಆಹಾರ ಧಾನ್ಯಗಳನ್ನು ಪಡೆಯುವದಕ್ಕಾಗಿ ಹೋಗಿದ್ದ ಅವರು, ಮುಂದಿನ ಮೂರು ತಿಂಗಳಲ್ಲಿ ಒಂದೂವರೆ ಲಕ್ಷ ಟನ್ ಆಹಾರ ಧಾನ್ಯಗಳನ್ನು ಈ ಪ್ರಾಂತ್ಯಕ್ಕೆ ಸಾಗಿಸುವ ವ್ಯವಸ್ಥೆಯಾಗಿದೆ ಎಂಬ ಸುವಾರ್ತೆ ತಂದಿದ್ದಾರೆ. ಸಂಗತಿ ಹೀಗಿರುವಾಗ ಯಾರೇ ಆದರೂ ಬರಗಾಲದ ಭೀತಿಪಡುವ ಆಗತ್ಯವೇನಿದೆಯೋ ನನಗರಿಯದು. ಸರಕಾರದ ಮಟ್ಟಿಗೆ, ಆಹಾರ ಪರಿಸ್ಥಿತಿಯ ಕುರಿತು ನಾವಾವ ಗೊಂದಲವನ್ನೂ ಪಡಬೇಕೆಂದಿಲ್ಲವೆಂದು ನಾವು ಹೇಳಬಲ್ಲೆವು".

ಈ ಆಶ್ವಾಸನೆಯಲ್ಲಿ ಅತಿಶಯೋಕ್ತಿ ಅಥವಾ ಅಸಂಬದ್ಧವಾವುದೂ ಇಲ್ಲವೆಂಬುದು ಖಂಡಿತ; ವಸ್ತುಸ್ಥಿತಿಯನ್ನು ಸರಿಯಾಗಿ ತಿಳಿದುಕೊಳ್ಳಲಾರದ ಕೆಲವು ನಿರಾಶಾವಾದಿಗಳು ಪ್ರಚಾರ ಮಾಡುತ್ತಿರುವ 'ಬಂಗಾಳದಂತಹ ಬರಗಾಲ'ದ ಭೀತಿಯಿಲ್ಲವೆಂಬುದೂ ನಿಜವೇ. ಆದರೆ ನಮ್ಮ ಆಹಾರಮಂತ್ರಿಗಳು ಚಿತ್ರಿಸಿ ತೋರಿಸಿರುವ ಸ್ಥಿತಿಚಿತ್ರವು ಕೇವಲ ನಮಗಿರುವ ಅನುಕೂಲತೆಯದು. ಆ ಅನುಕೂಲತೆಯ ವಿತರಣದ ರೀತಿನೀತಿಗಳ ಕುರಿತು ಭರವಸೆಯೇನೂ ಬಂದಿಲ್ಲ. ಅಧಿಕ ಹುಟ್ಟುವಳಿಯಿರುವ ಒಂದು ಕುಟುಂಬದ 'ಬಹುಸಂಖ್ಯಾಕ' ಮೆಂಬರರಿಗೆ ಏನೂ ದೊರೆಯದಿರುವ ನಿದರ್ಶನಗಳು ನಮ್ಮಲ್ಲಿ ಬೇಕಾದಷ್ಟಿವೆ. ಮದ್ರಾಸ್ ಪ್ರಾಂತ್ಯದ ಆಹಾರ ಸ್ಥಿತಿ ಸದ್ಯಕ್ಕೆ ಹಾಗಿಲ್ಲವೇ, ಎಂಬ ಸಂದೇಹವೆದ್ದಿದೆ. ಇಡೀ ಪ್ರಾಂತ್ಯದ ಉಪಯೋಗಕ್ಕೆಷ್ಟು ಬೇಕು ಎಂಬೊಂದು ಅಂದಾಜನ್ನು ಸರಕಾರವು ಕಟ್ಟಿಕೊಂಡಿರಬಹುದು; ಅಷ್ಟನ್ನು ಪಡೆಯುವ ಅನುಕೂಲತೆಯೊದಗಿರುವುದನ್ನು ಕಂಡು ಅದು ಸಮಾಧಾನದಿಂದಿರಬಹುದು. ಅದೇ ರೀತಿ ಪ್ರಾಂತ್ಯದೊಳಭಾಗಗಳ ಅಧಿಕಾರಿಗಳಲ್ಲೂ ತಂತಮ್ಮ ಕ್ಷೇತ್ರಕ್ಕೆ ಬೇಕಾಗುವ ಮತ್ತು ತಾವು ಸಂಗ್ರಹಿಸಿಕೊಳ್ಳಬಲ್ಲ ಆಹಾರಧಾನ್ಯಗಳ ಅಂದಾಜು ಅಂಕೆ ಸಂಖ್ಯೆಗಳಿರಬಹುದು. ಆ ಆಯವ್ಯಯವನ್ನು ಸರಿದೂಗಿಸಲು ಸಾಧ್ಯವಿದೆ ಎಂದು ಕಂಡುಬಂದಾಗ ಅವರೂ ಸಮಾಧಾನ ಪಡಬಹುದು. ಆದರೆ ಪೇಟೆ ಪಟ್ಟಣ ಮತ್ತು ಹಳ್ಳಿಮೂಲೆಗಳ ಸರ್ವಜನರಿಗೂ ಈ ಆಹಾರ ಧಾನ್ಯಗಳನ್ನು ಸರಿಯಾಗಿ ಹಂಚಲಾಗುವ ಪರಿಣಾಮಕಾರೀ ವ್ಯವಸ್ಥೆ ನಮ್ಮಲ್ಲಿ ಕಂಡುಬರುತ್ತಿದೆಯೆ? ಅಕ್ಕಿ ಮುಂತಾದ ಆಹಾರ ಧಾನ್ಯಗಳ ಬೆಲೆ ಮೀತಿಮೀರಿ ಏರಿಲ್ಲವೇ? ಎಲ್ಲರಿಗೂ ತಾನು ನಿರ್ಧರಿಸಿರುವ ಪರಿಮಾಣದಂತಾದರೂ ಹಂಚಲಾಗುವಷ್ಟು ಆಹಾರ ಧಾನ್ಯಗಳ ಸಂಗ್ರಹವು ಸರಕಾರದೊಡನಿದ್ದರೆ ಅವೆಲ್ಲವೂ ಸರಿಯಾಗಿ ವಿತರಣೆಯಾಗುವಂತಹ ಸುವ್ಯವಸ್ಥೆಯನ್ನೇಕೆ ತರಬಾರದು? ಸರಕಾರವು 'ರಕ್ಷಣಾ ಅಂಗಡಿ"ಗಳ ವ್ಯವಸ್ಥೆಯನ್ನೇನೋ ಜಾರಿಯಲ್ಲಿಟ್ಟಿದೆ. ಆದರೆ ಆ ವ್ಯವಸ್ಥೆಯಲ್ಲಿ ಇದುವರೆಗೆ ಉಳಿದಿರುವ ದೋಷಗಳು ಜನಸಾಮಾನ್ಯರಿಗೆ ವಿಶೇಷ ತ್ರಾಸದಾಯಕಗಳಾಗಿವೆ ಎಂಬುದನ್ನು ಮರೆಯಲಾಗದು. ನಿಜಕ್ಕೂ ಆಹಾರ ಧಾನ್ಯಗಳ ಸರಬರಾಯಿ ಸಾಕಷ್ಟಿರುವದಾದರೆ ನಾವು ಕಳದ ವಾರ ಸೂಚಿಸಿದಂತೆ, ನ್ಯಾಯ ಪ್ರಕಾರ ಅಗತ್ಯವುಳ್ಳ ಸರ್ವರಿಗೂ ಧಾನ್ಯ ಮಾರುವ ಕ್ರಮ ಬರುವುದು ಅಗತ್ಯ; ಸರಕಾರದ ರಕ್ಷಣಾ ಅಂಗಡಿಗಳನ್ನು ಹೆಚ್ಚಿಸಬೇಕಾದುದು ಮುಖ್ಯ. ಹಳ್ಳಿಗರಿಗೆ ನಿತ್ಯೋಪದ್ರವವಾಗದಂತೆ ಅವರು ಅಪೇಕ್ಷಿಸುವ ಅವಧಿಯ ಅಥವಾ ಕೊನೆಯ ಪಕ್ಷ ವಾರದ ಅಕ್ಕಿಯನ್ನಾದರೂ ಒಮ್ಮೆಗೇ ಕೊಡುವ ಪದ್ಧತಿಯಿರಬೇಕಾದುದು ಅವಶ್ಯ. ಅಕ್ಕಿ ಸಂಗ್ರಹಿಸಿಕೊಳ್ಳಬೇಕಾದುದೆಷ್ಟು ಮುಖ್ಯವೋ ಅದು ಸರ್ವರಿಗೂ ಸಮಾನವಾಗಿ ವಿತರಣೆಯಾಗುವಂತೆ ನೋಡಬೇಕಾದುದೂ ಅಷ್ಟೇ ಮುಖ್ಯವೆಂಬುದನ್ನು ಸರಕಾರವು ಮರೆಯಬಾರದು. ಇಡೀ ಪ್ರಾಂತ್ಯಕ್ಕೆ ಸಾಕಾಗುವಷ್ಟು ಅಕ್ಕಿಯು ಮದ್ರಾಸ್ ಸರಕಾರಕ್ಕೆ ತನ್ನ ಹಕ್ಕಿನದಾಗಿ ದೊರೆತ ಮಾತ್ರಕ್ಕೆ—ಅಥವಾ ಪ್ರಾಂತ್ಯದೊಳಗಡೆಯ ಕೆಲವು 'ಸ್ಟೋರು'ಗಳಲ್ಲೋ ಕೆಲವು ಸಂಗ್ರಹಗಾರರಲ್ಲೋ ಇದ್ದ ಮಾತ್ರಕ್ಕೆ—ಪ್ರಾಂತ್ಯದ ಜನತೆಯ ಊಟಕ್ಕದು ದೊರೆತಂತಾಗದು; ಜನಸಾಮಾನ್ಯರ ಪಾಲಿಗದು ಬಿಹಾರಿನಲ್ಲಿದ್ದರೆ ಹೇಗೋ ಈ ಕಡೆಗಳಲ್ಲಿದ್ದರೂ ಹಾಗೆಯೇ! ಈ ದೋಷದಿಂದಾಗಿಯೇ ಇತ್ತೀಚೆಗೆ ಹೊಸಗೇ ಪದ್ಧತಿರದ್ದಾಗಿರುವ ಉಡುಪಿ ನಿವಾಸಿಕರಲ್ಲಿ ಗಲಿಬಿಲಿಯೆದ್ದಿದೆ. ಇಲ್ಲಿ ತೆರೆಯಲ್ಪಟ್ಟಿರುವ ರಕ್ಷಣಾ ಅಂಗಡಿಗಳ ಸಂಖ್ಯೆ ಸಾಲದೆಂಬ ದೂರು ಹಾಗಿರಲಿ-ಪ್ರಾಯಸ್ಥನೊಬ್ಬನಿಗೆ 3 ಔನ್ಸ್ ಅಕ್ಕಿ, 3 ಔನ್ಸ್ ಜೋಳ ಮಾತ್ರ ದೊರೆಯುತ್ತಿದೆ; ಅದನ್ನು ಪಡೆಯುವ ಹಕ್ಕಿರುವುದು ಕೂಡಾ ಉತ್ಪನ್ನವು ಒಂದು ಮಿತಿಗಿಂತ ಕಡಿಮೆಯಿದ್ದವರಿಗೆ ಮಾತ್ರ. ಈ ದರ್ಜೆ ನಿರ್ಣಯಿಸುವವರಿಂದ ತಪ್ಪುಗಳಾಗಿವೆಯೆಂದೂ ಆ ನಿಯಮ ಪ್ರಕಾರ ಅಕ್ಕಿ ಪಡೆಯಲರ್ಹರಾದ ಕೆಲವರಿಗೆ ಅಕ್ಕಿ ದೊರೆಯದಂತಾಗಿದೆಯೆಂದೂ ದೂರುಗಳಿದ್ದಿವೆ. ಇನ್ನು, ಕೇವಲ ಆದಿಕಾಲಭಾಗಕ್ಕೆ ಸಹಜವಾದ ತಾತ್ಕಾಲಿಕ ಗೊಂದಲಗಳೆಂದೂ ಎಲ್ಲವೂ ಸರಿಯಾಗಿ ವ್ಯವಸ್ಥೆ ಹೊಂದುವವೆಂದೂ ಆಶಿಸುತ್ತೇವೆ. ಅಂತೆಯೇ ಎಲ್ಲಾ ಭಾಗಗಳ-ಮುಖ್ಯವಾಗಿ ಹಳ್ಳೀ ವಲಯಗಳ-ಜನಸಾಮಾನ್ಯರಿಗೆ ಆಹಾರ ಧಾನ್ಯವು ಸರಿಯಾಗಿ ವಿತರಣೆಗೊಳ್ಳುವಂತೆ ಮಾಡಲು ಸರಕಾರವು ಪೂರ್ಣ ಲಕ್ಷ್ಯ ಕೊಡುವದೆಂದು ಹಾರೈಸುತ್ತೇವೆ.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 544/1947

ಪದ್ದು ಪೂಜಾರಿ—ವಾದಿ
ಮತ್ತು
ಮೋನು ಪೂಜಾರಿ ಕೂಡಾ-ಪ್ರತಿವಾದಿರು
ಇವರೊಳಗೆ.

ಸದ್ರಿ 1ನೇ ಪ್ರತಿವಾದಿ-ಮೋನು ಪೂಜಾರಿ-ಚಂದು ಪೂಜಾರಿ ಮಗ, ಉಡ್ಪಿ ತಾಲೂಕು ಮೂಡುತೋನ್ಸೆ ಗ್ರಾಮಸ್ಥ-ಯವರಿಗೆ-ಈ ಮೂಲಕ ತಿಳಿಯಪಡಿಸುವದೇನಂದ್ರೆ:-

ವಾದಿಗೆ 1ನೇ ಪ್ರತಿವಾದಿಯು ತಾರೀಕು 1-8-1939ರಲ್ಲು ಬರಕೊಟ್ಟ ಚಾಲಗೇಣಿ ಉದುರ್ಗಡಿ ಆಧಾರದ ಮೇಲೆ ಪ್ರತಿವಾದೀರು ಅನುಭವಿಸಿದ ಆಸ್ತಿಯ ಬಾಬ್ತು ಕಳದ ತಾರೀಕು ಸಂ[illegible] ಹುಟ್ಟುವಳಿ ಸಮೇತ ಆಸ್ತಿ [illegible] ವಾದಿಯು ಮಾಡಿರುವ ಮೊಕದ್ದಮೆಯು ತಾರೀಕು 31-3 1948ಕ್ಕೆ ಬಿಟ್ಟಿರುವದ್ರಿಂದ ಉವಾಹರಣೆಯಿದ್ದಲ್ಲಿ ಆ ದಿವ್ಸ ಪೂರ್ವಾಹ್ನ ಘಂಟೆ 11ಕ್ಕೆ ಸದ್ರಿ ಕೋರ್ಟುಮುಂದೆ ಹಾಜರಾಗಿ ತಕ್ರಾರು ಮಾಡಿಕೊಳ್ಳತಕ್ಕದ್ದು-ತಪ್ಪಿದ್ರೆ, ಸದ್ರಿ ಪ್ರತಿವಾದಿಯ ಗೈರು ಹಾಜರಿಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವದು.

K. Ramakrishna Rao
Vakil for Plaintiff.

ಉಡ್ಪಿ, ತಾರೀಕು 17-3-1948.

ಅನೇಕ ಉಪಯುಕ್ತ ವಿಷಯಗಳಿಂದೊಡಗೂಡಿರುವ-ಶ್ರೀ. ಬೇಳೂರು ಶ್ರೀಪತಿ ನರಸಿಂಹ ಅಡಿಗರಿಂದ ಗಣಿಸಿ ಪರಿಶೋಧಿಸಲ್ಪಟ್ಟ

ಸರ್ವಧಾರಿ ಸಂವತ್ಸರದ

ಶ್ರೀಪತಿ ಪಂಚಾಂಗ

ಬೆಲೆ 0—8—0 ಪ್ರತಿಗಳು [illegible] ಏಜಂಟರಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ಶ್ರೀಪತಿ ನರಸಿಂಹ ಅಡಿಗ
ಬೇಳೂರು, P. O. ಕೋಟ.

ಈಗ ಪ್ರಕಟಿತವಾಗಿರುವ ಅಳಿಯಸಂತಾನ ಬಿಲ್ಲಿನ ವಿಷಯದಲ್ಲಿ ಶ್ರೀ. ಕೆ. ಜೆ. ಬಲ್ಲಾಳ್, ವಕೀಲ್, ಉಡುಪಿ, ಇವರು ಕೊಡಲಿರುವ ಸಾಕ್ಷ್ಯದ ಸಂಕ್ಷೇಪ ಸೂಚನೆಗಳು.

●

ಅಳಿಯ ಸಂತಾನ ಕಟ್ಟಳೆಯಲ್ಲಿ ಅದರ ವೈಶಿಷ್ಟ್ಯವಾದ ಗುಣಗಳೂ ಇವೆ, ದೋಷಗಳೂ ಇವೆ. ಆದರೆ ನಮ್ಮವರಲ್ಲಿ ಕೆಲವರು ಈ ಗುಣಗಳನ್ನು ಗಣಿಸದೆ ದೋಷಗಳನ್ನಷ್ಟೆ ಎತ್ತಿ ಹಿಡಿದು ಪ್ರೇತಭೂತವಾಗಿ ತೋರಿಸಿರುವುದು ನಮ್ಮ ದುರ್ದೈವ. ಈ ಕೆಲಸಕ್ಕೆ ಕೈಹಚ್ಚಿರುವವರಲ್ಲಿ ಹೆಚ್ಚಿನವರು ನಮ್ಮಲ್ಲಿ ವಿಶೇಷತಃ ನಿರುದ್ಯೋಗಿಗಳಾಗಿರುವ ಕಿರಿಯರು, ಮತ್ತು ಇಂಗ್ಲಿಷ್ ವಿದ್ಯಾಭ್ಯಾಸ ಹೊಂದಿ ತಮ್ಮ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಕುಟುಂಬದ ಮನೆ ಬಿಟ್ಟು ಪ್ರತ್ಯೇಕವಾಗಿರುವವರು—ಇವರಿಂದ ಈ ಸುಧಾರಣೆಯ ಚಳವಳವು ಕಳೆದ ೧೫ ವರುಷಗಳಿಂದ ಸಾಗುತ್ತಿರುವುದಾದರೂ ಈ ವಿಷಯದಲ್ಲಿ ಜನರಲ್ಲೊಂದು ಏಕಾಭಿಮತವಿನ್ನೂ ಉಂಟಾಗಿಲ್ಲ. ಕೆಲವರು ಈ ಕಟ್ಟಳೆಯಲ್ಲಿ ಯಾವತರದ ಬದಲಾವಣೆಗೂ ಬದ್ಧ ವಿರೋಧಿಗಳಾಗಿದ್ದಾರೆ. ಇನ್ನು ಕೆಲವರು ಈ ಕಟ್ಟಳೆಯನ್ನು ಸಂಪೂರ್ಣ ತೆಗೆದು ಹಾಕಬೇಕೆನ್ನುತ್ತಾರೆ—ಮತ್ತೆ ಕೆಲವರು ಈ ಕಟ್ಟಳೆಯ ಗುಣ ವೈಶಿಷ್ಟ್ಯವನ್ನೆಲ್ಲ ಇಟ್ಟುಕೊಂಡು ದೋಷಗಳೇನಿವೆಯೋ ಅವನ್ನಷ್ಟು ನಿವಾರಿಸಿಕೊಳ್ಳಲಾಗುವಷ್ಟು ಸುಧಾರಣೆಯಾದರೆ ಸಾಕೆನ್ನುತ್ತಾರೆ ಹೀಗೆ ಮೂರು ಪ್ರಧಾನ ಪಕ್ಷಗಳಿವೆ—ಪ್ರತಿಯೊಂದು ಪಕ್ಷವೂ ಸಂಖ್ಯಾಬಲದಲ್ಲಿ ಗಣನೀಯವೇ ಆಗಿದೆ—ಅಳಿಯ ಸಂತಾನ ಕಟ್ಟಿನ ವೈಶಿಷ್ಟ್ಯವಾದ ಗುಣಗಳನ್ನೆಲ್ಲ ಇಟ್ಟುಕೊಂಡು ದೋಷಗಳ ನಿವಾರಣೆಗಾಗಿ ಏನು ಮಾಡಬೇಕೋ ಅಷ್ಟನ್ನು ಮಾತ್ರ ತಿದ್ದಿ ಸುಧಾರಿಸಿಕೊಂಡರೆ ಸಾಕೆಂದು ಅಭಿಪ್ರಾಯ ಪಡುವ ಪಕ್ಷದವರಲ್ಲಿ ನಾನೊಬ್ಬ. ಕೆಳಗೆ ಸೂಚಿಸಲ್ಪಟ್ಟವುಗಳಿಗೆ ಅವಕಾಶಗೊಟ್ಟು ಬಿಟ್ಟರೆ ಪ್ರಕೃತಕ್ಕೆ ತಕ್ಕಷ್ಟು ಸುಧಾರಣೆಯಾದೀತೆಂದು ನನ್ನ ಅಭಿಪ್ರಾಯ:—

1. ನ್ಯಾಯವಿಧಾಯಕ ಸಭೆಯ ಮುಂದಿರಿಸಲ್ಪಟ್ಟದಕ್ಕಿಂತ ಮೊದಲು ಜನತೆಯ ಅವಗಾಹನೆಗಾಗಿ ಇಡಲ್ಪಟ್ಟಿದ್ದ ಮೂಲ ಮಸೂದೆಯಲ್ಲಿ ವಿವಾಹ, ವಿವಾಹ ವಿಚ್ಛೇದನ, ಮೃತ ಪತ್ರವಿಲ್ಲದ ಸಂದರ್ಭದ ಉತ್ತರಾಧಿಕಾರತ್ವ ಇವುಗಳ ವಿಷಯ ಹೇಗಿದ್ದವೋ ಹಾಗೆಯೇ ಇರಗೊಡಿಸುವುದು.

2. ಕುಟುಂಬದ ಸರ್ವೇಕ ಯಜಮಾನಿತಿಯ ಮರಣಾನಂತರ ಕುಟುಂಬದ ಸೊತ್ತುಗಳ ಅರ್ಧಾಂಶವನ್ನು ಕುಟುಂಬದ ಗಂಡು ಹೆಣ್ಣು ಮೆಂಬರರ ಸಂಖ್ಯಾನುಸಾರದಲ್ಲಿಯೂ ಮತ್ತುಳಿದ ಅರ್ಧಾಂಶವನ್ನು ಕವರುವಾರುಗಿಯೂ (Stirpes) ಆಧಾರದ ಮೇಲೆಯೂ ಕೆಳಗಿನ ಶರತುಗಳಿಗೊಳಗಾಗಿ ಹಿಸೆಯನ್ನೋ ಕೇವಲ ಒಸೆಯನ್ನೋ ಸಂದರ್ಭಾನುಸಾರ ಮಾಡಿಕೊಳ್ಳುವ ಹಕ್ಕು ಕೊಡಿಸುವುದು—

(a) ಸಂತಾನೋತ್ಪಾದಕ ವಯೋಮಿತಿಮಾರಿದ ಗಂಡಸು ಯಾ ಹೆಂಗಸಿಗೆ ಕೊಡುವ ಹಿಸೆಯೂ ಕೊಡುಗೆಯಲ್ಲಿ ಜೀವಾಂತ ಅನುಭೋಗದ ಹಕ್ಕು ಮಾತ್ರ ಇದ್ದು ಆ ಸೊತ್ತು ಅವರ ಮರಣಾನಂತರ ನ್ಯಾಯವಾದ ಹಕ್ಕುಳ್ಳ ಕವಲು ಯಾ ಕವಲುಗಳಿಗೆ ಮರಳಿ ಸೇರುವ ಸ್ವಭಾವದ್ದಿರತಕ್ಕದು.

(b) ಸಂತಾನ ಪ್ರಾಪ್ತಿಯ ವಯೋಮಿತಿಯೊಳಗಿರುವ ಹೆಂಗಸಿಗೆ ದೊರಕುವ ಹಿಸೆಯೂ ಕೊಡುಗೆಯು ಅವಳು ಮರಣಕಾಲದಲ್ಲಿ ನಿಸ್ಸಂತತಿಕಳಾಗಿದ್ದಲ್ಲಿ ನ್ಯಾಯವಾದ ಹಕ್ಕಿರುವ ಕವಲು ಯಾ ಕವಲುಗಳಿಗೆ ಮರಳಿ ಸೇರುವಂತಿರತಕ್ಕದು.

3. ಸಾಗುವಳಿ ಭೂಮಿಯು ನಿಷ್ಪ್ರಯೋಜಕವಾದ ಚೂರುಚೂರಾಗುವ ತನಕವೂ ಹಿಸೆಯಾಗುತ್ತಾ ಹೋಗದಂತೆ ಹಿಸೆಯ ರೀತಿ ನೀತಿಯಲ್ಲೊಂದು ಒಳ್ಳೆವಾದ ಮಿತಿಯಿರಗೊಡಿಸತಕ್ಕದು.

4. ಕೂಳೂರು ಮತ್ತು ಇತರ ಬೀಡು ಮನೆತನಗಳಂತಹ ಕೆಲವು ಪಟ್ಟದ ಅಥವಾ ಸ್ಥಾನದ ಕುಟುಂಬಗಳು ಈ ಮಸೂದೆಯನ್ವಯದಿಂದ ವಿನಾಯತಿ ಹೊಂದತಕ್ಕದು.

5. ಮೂಲ ಮಸೂದೆಯಲ್ಲಿ ಅವಿಭಕ್ತ ಕುಟುಂಬಗಳ ವಿಷಯವಾಗಿರುವ ಪ್ರಕರಣವು ಅಂತೆಯೇ ಇರಗೊಡಿಸಲ್ಪಡತಕ್ಕದು.

6. ಕುಟುಂಬದ ಯಜಮಾನತ್ವದ ಹೊಣೆಗಾರಿಕೆ ಕರ್ತವ್ಯ ಇತ್ಯಾದಿಗಳು ಸಾಧಾರಣ ಟ್ರಸ್ಟಿ (ಮೊಕ್ತೇಸರ) ಮಾದರಿಯವೆಂದು ಉಲ್ಲೇಖವಾದರೆ ಸಾಕು.

ಇವು ಮತ್ತು ಇತರ ವಿಷಯಗಳು ಸಾಕ್ಷ್ಯಕೊಡುವ ಸಂದರ್ಭದಲ್ಲಿ ಕೂಲಂಕಷವಾಗಿ ವಿವೇಚಿಸಲ್ಪಡುವವು.

(ಸಹಿ) ಕೆ. ಜೆ. ಬಲ್ಲಾಳ್,

ದಿನಾಂಕ ೨೧-೩-೪೮.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕುರಿತು ನಡೆದಿರುವ ಅಧಿಕ ಪ್ರಸಂಗದ ಟೀಕೆಗಳಿಗಾಗಿ ಒಂದು ಮಾತು

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ತಾ 9-3-48ರ ಸಭೆಯ ಕಾರ್ಯಕ್ರಮಗಳ ಮತ್ತು ನಿರ್ಣಯಗಳ ಕುರಿತಾಗಿಯೂ, ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಮೇಲೂ ಮಂಗಳೂರಿನ 'ಸ್ವದೇಶಾಭಿಮಾನಿ' 'ಪ್ರಭಾತ' 'ನವಭಾರತ' ಮತ್ತು ಉಡುಪಿಯ 'ಉದಯಭಾರತ' ಪತ್ರಿಕೆಗಳಲ್ಲಿ ಬಂದಿರುವ ವಿವಿಧ ರೀತಿಯ ಟೀಕೆಗಳು ನನ್ನ ಅವಗಾಹನೆಗೆ ಬಂದಿವೆ. ಕಾಂಗ್ರೆಸ್ ಕಾರ್ಯಕಲಾಪಗಳಿಗೂ ಸಾರ್ವಜನಿಕರಿಗೂ ನಿಕಟ ಸಂಬಂಧಗಳಿರಲೇಬೇಕಾದ್ದರಿಂದ ನ್ಯಾಯ, ಮತ್ತು ನಿಯಮೋಚಿತವಾದ ಪತ್ರಿಕಾ ವಿಮರ್ಶೆಗಳಿಗೆ ಕಾಂಗ್ರೆಸ್ ಸಮಿತಿಯ ಸ್ವಾಗತವಿದೆಯಾದರೂ ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿಯ ಕುರಿತು ಮೇಲ್ಗಡೆ ನಮೂದಿಸಿರುವ ಪತ್ರಿಕೆಗಳಲ್ಲಿ ಬಂದಿರುವ ಕೆಲವು ಆರೋಪಗಳು ಒಂದು ದುರುದ್ದೇಶವನ್ನೇ ಕಮಿಟಿಯಮೇಲೆ ಹೇರಲು ಪ್ರಯತ್ನಿಸಿರುವದನ್ನು ಕಂಡು ನಾನಾಶ್ಚರ್ಯಗೊಂಡಿದ್ದೇನೆ. ಮಾತ್ರವಲ್ಲ, ಆ ಕಮಿಟಿಯ ಅಧ್ಯಕ್ಷನಾದ ನನ್ನ ಪಾಲಿನ ಕರ್ತವ್ಯಗಳ ಕುರಿತೂ ಆಕ್ಷೇಪಕರ ಪ್ರಶ್ನೆಗಳು ಬಂದಿವೆ. ಸರ್ಕಲ್ ಕಾಂಗ್ರೆಸ್ ಕಮಿಟಿಯ ಸದಸ್ಯರಿಗೆ ಮತ್ತು ಅದರ ಮೇಲಧಿಕಾರೀ ಕಮಿಟಿಗಳಿಗೆ ಮಾತ್ರ ಸಂಬಂಧಿಸಿರುವ ವಿಷಯಗಳಲ್ಲಿ ಸತ್ಯಸ್ಥಿತಿಯನ್ನರಿಯದ ಮತ್ತು ಆ ಹಕ್ಕಿರದ ಹೊರಗಿನವರು ಯಾವುದೇ ಉದ್ದೇಶ ಸಾಧನೆಗಾಗಿ ಕೈಹಾಕುವ ಅಧಿಕ ಪ್ರಸಂಗ ನಡೆದಿರುವುದು ಅಕ್ಷಮ್ಯ ಅಪರಾಧವೆಂದಿಷ್ಟೇ ಈ ಸಂದರ್ಭದಲ್ಲಿ ಸೂಚಿಸಲಿಚ್ಛಿಸುತ್ತೇನೆ. ಸರ್ಕಲ್ ಕಾಂಗ್ರೆಸ್ ಕಮಿಟಿಯ ಕುರಿತು ಬಂದಿರುವ ಆರೋಪಗಳಿಗೆ ವಿವರವಾದ ಉತ್ತರವನ್ನು ಹಿಂದಿನಿಂದ ಕೊಡಲಾಗುವದು.

ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆ.
ಅಧ್ಯಕ್ಷ, ಉಡುಪಿ ಸರ್ಕಲ್
ಕಾಂಗ್ರೆಸ್ ಕಮಿಟಿ.

ಈ ವರ್ಗದವರ ಊಟಕ್ಕೇನು ಗತಿ?

ಇಡೀ ದಕ್ಷಿಣ ಕನ್ನಡ ಜಿಲ್ಲೆಯಂತೆಯೇ ಉಡುಪಿ ತಾಲೂಕಿನ ವರ್ಗದಾರರಲ್ಲಿದ್ದ ಅಕ್ಕಿಯನ್ನೆಲ್ಲಾ ಸರಕಾರವು ಮೊದಲೇ ರೆಕ್ವಿಶಿಶನ್ ಮಾಡಿ ಸ್ವಾಧೀನ ಪಡಿಸಿಕೊಂಡಿದ್ದಿತು. ಹಸುಗೆ ರದ್ದತಿಯ ಸೂಚನೆ ಯಾವುದೂ ಆ ಕಾಲದಲ್ಲಿ ಬಂದಿರಲಿಲ್ಲವಾದ್ದರಿಂದ ಕಾರ್ಡು ಅಕ್ಕಿ ಪಡೆಯಬಹುದೆಂಬ ಒಂದು ಧೈರ್ಯವಾದರೂ ಈ ವರ್ಗದಾರರಿಗಿದ್ದಿತು. ಈಗ ಹಸುಗೆ ರದ್ದಾಗಿದೆ. ಅಕ್ಕಿಯಿಲ್ಲದವರಿಗೆಂದು ತೆರೆಯಲ್ಪಟ್ಟಿರುವ ಸರಕಾರದ 'ರಿಲೀಫ್ ಶೋಪ್'ಗಳಿಂದ ವರ್ಗದಾರರಿಗೆ ಅಕ್ಕಿ ಕೊಡಕೂಡದೆಂಬ ನಿಯಮವಿದೆ ಇಂತಹ ಪರಿಸ್ಥಿತಿಯಲ್ಲಿ ಈ ವರ್ಗದವರು ತಮ್ಮ ನಿತ್ಯೋಪಯೋಗಕ್ಕೆ ಬೇಕಾ 'ಧಾನ್ಯವನ್ನೆ'ಲ್ಲಿಂದ ಸಂಪಾದಿಸಬೇಕು? ಇತ್ತೀಚೆಗೆ ಹಸುಗೆ ಪದ್ಧತಿ ರದ್ದಾಗಿರುವ ಉಡುಪಿ ನಗರದಲ್ಲಿ ವಾಸಿಸುತ್ತಿರುವ ವರ್ಗದಾರರಿಗಂತೂ ಈ ಕಟು ಅನುಭವವು ವಿಶೇಷರೀತಿಯಿಂದಾಗುತ್ತಿದೆ. ಹಳ್ಳೀ ವಲಯಗಳವರಿಗೆ ಯಾವ ರೀತಿಯಿಂದಾದರೂ ಅಕ್ಕಿ ಪಡಕೊಳ್ಳುವ ಅನುಕೂಲತೆಯಿರಬಹುದು. ಆದರೆ ಉಡುಪಿಯಂತಹ ನಗರಗಳಲ್ಲಿರುವವರೇನು ಮಾಡಬೇಕು?—ಎಂದು ಶ್ರೀ. ಪಿ. ಜೆ. ಆಚಾರ್ಯರು ಪ್ರಶ್ನಿಸುತ್ತಾರೆ.

ತಿದ್ದುಪಡಿ—ಇದೇ ಸಂಚಿಕೆಯ 'ನವಯುಗದ ಸತ್ಯವಾರ್ತೆಯ ಮೇಲೆ ಪಕ್ಷಪಾತ' ಎಂಬ ಲೇಖನದಲ್ಲಿ ನಮ್ಮ ವಾರ್ತೆಯ ಕುರಿತು ಟೀಕೆ ಬಂದಿರುವ ಮಂಗಳೂರಿನ ಪತ್ರಿಕೆಗಳ ಹೆಸರುಗಳ ಜತೆಯಲ್ಲಿ ಒಂದನೆ 'ಸ್ವತಂತ್ರ ಭಾರತ'ದ ಹೆಸರೂ ತಪ್ಪಾಗಿಬಿದ್ದಿದೆ. ಅದಲ್ಲವೆಂದು ತಿದ್ದಿಕೊಂಡು ಓದಬೇಕಾಗಿ ವಿನಂತಿ.

—ಸಂ. ನ.

ಕನ್ನಡನಾಡಿನ ಕತೆಗಾರರಿಗೊಂದು ಅಪೂರ್ವ ಸುಸಂದರ್ಭ!

ಕೃಷ್ಣಾ ಸ್ಮಾರಕ ಸಣ್ಣ ಕತೆಗಳ ಸ್ಪರ್ಧೆ.

ಪ್ರಥಮ ಬಹುಮಾನ ರೂ. ೩೦ ● ದ್ವಿತೀಯ ಬಹುಮಾನ ರೂ. ೧೦

ಕನ್ನಡನಾಡಿನ ಎಲ್ಲ ಕತೆಗಾರರೂ ಭಾಗವಹಿಸಬಹುದು. ಪ್ರವೇಶ ಧನವಿಲ್ಲ.

ವಿವರಗಳಿಗೆ 'ಪ್ರಕಾಶ' ಮಾಸಪತ್ರಿಕೆಯ ಎಪ್ರಿಲ್ (1948) ಸಂಚಿಕೆ—

— ನೋಡಿರಿ —

ವಿಳಾಸ:—'ಪ್ರಕಾಶ' ಕನ್ನಡ ಮಾಸಪತ್ರಿಕೆ, ಉಡುಪಿ.

ತಾರೀಕು 2—3—48ರಿಂದ

3ನೇ ವಾರ

ಕನ್ನಡ ಪ್ರಪಂಚಕ್ಕೊಂದು ಕೀರ್ತಿ ತಂದಿತು.

ಕರ್ನಾಟಕ ನಟನಟಿಯರಿಗೊಂದು ಸ್ಥಾನ ಕೊಟ್ಟಿತು.

ಕರ್ನಾಟಕ ಕಲಾವಿದರಿಗೊಂದು ಔತಣ ಉಣಿಸಿತು.

ಕನ್ನಡದಲ್ಲಿ ಮಹಾತ್ಮಾ ಕಬೀರ್

ಸುಬ್ಬಯ್ಯ ನಾಯ್ಡು, ನಾಗೇಂದ್ರ ರಾವ್, ಲಕ್ಷ್ಮಿ ಬಾಯಿ ಮೊದಲಾದವರು

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಉಡುಪಿ.

ಮುನಿಸಿಪಲ್ ಕೌನ್ಸಿಲಿನ ಸಭೆಯು ಇದೇ ತಾ 18ರಲ್ಲು ಸಂಜೆ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯಕ್, ಚೆಯರ್‌ಮೇನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ದೀಪದ ತೆರಿಗೆ, ವೃತ್ತಿ ತೆರಿಗೆ ಇವುಗಳ ಮಿತಿಯನ್ನು ಎಪ್ರಿಲ್ ತಿಂಗಳಾರಂಭದಿಂದ ಜಾಸ್ತಿಮಾಡುವ ಅಭಿಪ್ರಾಯ ಪ್ರಕಟನದ ಕುರಿತು ತೆರಿಗೆದಾರರಿಂದ ಬಂದ ಆಕ್ಷೇಪಗಳನ್ನು ಪರಿಶೀಲಿಸಲಾಯಿತು. ಅಂತೆಯೇ ಈಗ ಕೌನ್ಸಿಲಿನಲ್ಲಿರುವ 16ರ ಪೈಕಿ 15 ಮಂದಿ ಸದಸ್ಯರು ಈಗಿನ ರೀತಿಯಲ್ಲಿ ರಾಜ್ಯಭಕ್ತಿ ಪ್ರಮಾಣ ಮಾಡದುದರಿಂದ ಅವರು ಕೌನ್ಸಿಲರರಾಗಿ ಕುಳಿತು ತೆರಿಗೆ ಹೆಚ್ಚಿಸಲು ಅವರಿಗೆ ಅಧಿಕಾರವಿಲ್ಲ ವೆಂಬರ್ಥದಲ್ಲಿ ಆಕ್ಷೇಪವೆತ್ತಿದ ಎಡ್ವೋಕೇಟ್ ಶ್ರೀ ನವಶಿಂಪ ವಿರಲ ಕಾಮತರ ಪತ್ರವನ್ನು ಸಭೆ ಓದಲ್ಪಟ್ಟಿತು. ಆಕ್ಷೇಪ ಅರ್ಜಿಗಳಲ್ಲಿ ಸಕಾರಣಗಳು ಇಲ್ಲವೆಂದು ಅಭಿಪ್ರಾಯವಾಗಿ ತೆರಿಗೆ ಹೆಚ್ಚಿಸುವ ನಿರ್ಣಯವು ಪಾಸಾಯಿತು. ಮಿ। ಆರ್. ಎ. ಸ್ವಾಮಿನ್ನರ ಮಾತ್ರ ವಿರೋಧ ಮತವಿತ್ತರು. ಜಿಲ್ಲಾ ಪರಿಜನ ಸೇವಕ ಸಂಘದ ವಿನಂತಿಯಂತೆ ವಾರ್ಷಿಕ ರೂಪಾಯಿ 25 - ಧನ ಸಹಾಯಕೊಡುವರೆ ಕೌನ್ಸಿಲಿನ ಅನುಮತಿ ದೊರೆಯಿತು. ನಗರದ ವ್ಯಾಪಾರ ಕ್ಷೇತ್ರವನ್ನು ಪುಷ್ಟಿಯುತನಕ ವಿಸ್ತರಿಸುವ ಯೋಜನೆಯ ಕುರಿತು ಆಲೋಚಿಸಬೇಕಾಗಿ ಸೂಚಿಸಿದ ಆಫೀಸು ನೋಟನ್ನು ಓದಿ ಆ ಯೋಜನೆಯ ಆಗು ಹೋಗುಗಳನ್ನು ತಪ್ಪಿ ಸಿ ವರದಿ ಮಾಡುವರೆ ಒಂದು ಸಮಿತಿಯು ನೇಮಕವಾಯಿತು.

ಜಿಲ್ಲೆಯಲ್ಲಿರುವ ನಿಯಮಗಳಿಗೊಳಪಟ್ಟು ನಗರವಾಸಿಗಳು ಹೊಸ ಚಿಕ್ಕ ಪುಟ್ಟ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಕೌನ್ಸಿಲಿನ ಪ್ರೋತ್ಸಾಹವಿದೆಯೆಂದೂ ಅಂತಹ ಉದ್ಯಮಗಳನ್ನು ಸ್ವಾಗತೀಕರಿಸುವುದೆಂದೂ ಶ್ರೀ. ಟಿ. ರಮೇಶ ಪೈಗಳು ಒಂದು ನಿರ್ಣಯವನ್ನು ತಂದರು. ಠರಾವಿನಲ್ಲಿ ದೋಷಗಳಿವೆಯೆಂದು ಶ್ರೀ ಎ. ಮಂಜುನಾಥ ರಾಯರು ಪಾಯಿಂಟ್ ಒಫ್ ಆರ್ಡರು ಸೂಚಿಸಿದರು. ಚೆಯರ್‌ಮೆನರು ಅದನ್ನು ದೂರೀಕರಿಸಿದ ಬಳಿಕ ನಿರ್ಣಯವು ಪಾಸಾಯಿತು ಶ್ರೀ ಎ ಮಂಜುನಾಥ ರಾಯರು ಮಾತ್ರ ಸಮ್ಮತಿ ಕೊಡಲಿಲ್ಲ. ನಗರ ಕ್ಷೇತ್ರದಲ್ಲಿ ಸೀಮಾ ಪದ್ಧತಿಯು ಬರುವ ಅಕ್ಟೋಬರ್ ತಿಂಗಳವರೆಗೆ ಊರ್ಜಿತದಲ್ಲಿರಬೇಕಾಗಿ ಸರಕಾರವನ್ನು ವಿನಂತಿಸುವ ಮಿ। ಆರ್. ಎ. ಸ್ವಾಮಿನ್ನರ ನಿರ್ಣಯ ಪಾಸಾಯಿತು. ಶ್ರೀಮತಿ ಲೀಲಾಬಾಯಿ ಕಾಮತರು ಸಿನೇಟಿನ ಮೆಂಬರರಾದ ಬಗ್ಗೆ ಅವರನ್ನು ಅಭಿನಂದಿಸುವ ಶ್ರೀ ಕೆ. ಕಮಲಾಕ್ಷ ಪೈಗಳ ನಿರ್ಣಯ ಅಂಗೀಕರಿಸಲ್ಪಟ್ಟಿತು.

ಮಂತ್ರಿಗಳ ಆಗಮನ—ಅಳಿಯ ಸಂತಾನ ಮಸೂದೆಯು ಕರಡನ್ನು ವಿಮರ್ಶಿಸಲು ಸಿಲೆಕ್ಟ್ ಕಮಿಟಿಯು ನೇಮಕವಾಗಿತ್ತಷ್ಟೆ. ಈ ಕುರಿತು ಸಾಕ್ಷ್ಯಗಳನ್ನು ಪಡೆಯಲು ಮದ್ರಾಸಿನ ಮಂತ್ರಿಗಳಾದ ಡಾ। ಸುಬ್ರಾಯನ್, ಶ್ರೀಗಳಾದ ಮಾಧವ ಮೆನೋನ್ ಮತ್ತು ಎ. ಬಿ. ಶೆಟ್ಟರು, ಇದೇ ತಾ 31ಕ್ಕೆ ಮಂಗಳೂರಿಗೆ ಬರಲಿರುವರೆಂದೂ ಅಲ್ಲಿಯ ಸಾಕ್ಷ್ಯಗಳನ್ನು ಪಡಕೊಂಡು ಎಪ್ರಿಲ್ 3ಕ್ಕೆ ಉಡುಪಿಗೆ ಬಂದು ಮರುದಿನ ಪೂರ್ವಾಹ್ನ 11ಗಂಟೆಗೆ ಉಡುಪಿ ತಾಲೂಕು ಕಚೇರಿಯಲ್ಲಿ ಉಡುಪಿಯವರ ಸಾಕ್ಷ್ಯಗಳನ್ನು ಪಡೆಯಲಿರುವರೆಂದೂ ತಿಳಿಸಲಾಗುತ್ತದೆ.

ಶ್ರೀ ಜವಾಲಿ ತ್ರಿವಿಕ್ರಮ ಶೆಣೈ- ಬಿ. ಇ. (ಒನರ್ಸ್) ಮದ್ರಾಸ್, ಎಮ್. ಎಸ್. ಸಿ. (ಯು. ಎಸ್. ಎ) ಇವರು ಅಮೇರಿಕದಲ್ಲಿ ಎರಡುವರ್ಷಕಾಲ ಸುಧಾರಿತ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ವಿದ್ಯಾಭ್ಯಾಸ ಪೂರೈಸಿ ಇದೇ ತಾ 29ರಲ್ಲು ಲಂಡನ್ ಮಾರ್ಗವಾಗಿ ಸ್ವದೇಶಕ್ಕೆ ಹೊರಡುವರು. ವಿದೇಶದಲ್ಲಿ ವಿಶೇಷ ವಿದ್ಯಾರ್ಜನೆಮಾಡಲು ಮದ್ರಾಸ್ ಸರಕಾರದಿಂದ ಆರಿಸಲ್ಪಟ್ಟವರಲ್ಲಿ ಇವರೊಬ್ಬರಾಗಿದ್ದು ಅಮೇರಿಕಾದ ಪ್ರಿನ್ಸ್‌ಟನ್ ಯೂನಿವರ್ಸಿಟಿಯ ಎಮ್. ಎಸ್. ಸಿ. ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಪಾಸಾಗಿರುವರು. ಎರಡು ವರುಷದ ಅವಧಿಯಲ್ಲಿ ಅವರು ಅಮೇರಿಕಾ ದೇಶದ ಪ್ರಾಮುಖ್ಯ ಸ್ಥಳಗಳನ್ನು ಸಂದರ್ಶಿಸಿ ತುಂಬಾ ಅನುಭವಮಾಡಿಕೊಂಡಿರುವರು. ಶ್ರೀಯುತರು ಎಪ್ರಿಲ್ ತಿಂಗಳ ತಾ 7ಕ್ಕೆ ತನ್ನ ಹುಟ್ಟೂರಾದ ಉಡುಪಿಗೆ ಬರಲಿರುವರು. ಶ್ರೀಯುತರಿಗೆ ನಮ್ಮ ಹಾರ್ದಿಕ ಶುಭಾಶಯಗಳು.

ಹಾಲಾಡಿ—ಇದೇ ತಾ 27ಕ್ಕೆ ಕುಂದಾಪುರ ಧನಲಕ್ಷ್ಮೀ ಥಿಯೇಟರಿನಲ್ಲಿ ಹಾಲಾಡಿಯಲ್ಲಿ ಕಟ್ಟುವ ಮಹಾತ್ಮಾಜಿಯವರ ಸ್ಮಾರಕ ಕಟ್ಟಡದ ಸಹಾಯಾರ್ಥವಾಗಿ ನಡೆಯಲಿದ್ದ ಯಕ್ಷಗಾನವು ತಾ 24-4-48ನೇ ಶನಿವಾರಕ್ಕೆ ಮುಂದುವರಿಸಲ್ಪಟ್ಟಿರುವುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಮಂಗಳೂರು

ಫನ್ ಫೇರ್ ಪ್ರದರ್ಶನವು-ಇಗ್ಗೆ ಒಂದು ತಿಂಗಳಿಂದ ಮಂಗಳೂರು ನೆಹರೂ ಮೈದಾನದಲ್ಲಿ ಜರಗುತ್ತಿದ್ದುದು ತಾ ೧೪ರಂದು ಕೊನೆಗೊಂಡಿತು. ಅದರ ಸಮಾರೋಪ ಸಮಾರಂಭವು ನಮ್ಮ ಜಿಲ್ಲಾ ಕಲೆಕ್ಟರರಾದ ಶ್ರೀ। ಎಮ್. ಆರ್. ಕೈವಾರ್‌ರವರ ಧರ್ಮಪತ್ನಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರದರ್ಶನ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಪಿ. ಮೋಹನರಾಯರು ಸಮಾರಂಭದಲ್ಲಿ ಪ್ರದರ್ಶನದ ಮತ್ತು ಸಮಿತಿಯ ಧನ ಸಂಗ್ರಹದ ವರದಿಯೊಪ್ಪಿಸಿದರು. ೩೦ ದಿನದ ಆಟದಿಂದ ಸುಮಾರು ೩೯ ಸಾವಿರದಷ್ಟು ಹಣ ಸಂಗ್ರಹವಾಯಿತೆಂದರು. ಆ ಮೇಲೆ ಶ್ರೀಮತಿ ಕೈವಾರ್‌ರವರು ಪ್ರದರ್ಶನದಲ್ಲಿ ಭಾಗವಹಿಸಿದ ಸಂಸ್ಥೆಗಳಿಗೆ ಹಾಗೂ ಕಲಾವಿದರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ಹಂಚಿದರು. ಬಳಿಕ ಲಲಿತ ಕಲಾ ನಾಟಕ ಸಂಸ್ಥೆಯ ಶ್ರೀ. ಎಂ. ಎಸ್. ಮಾಧವರಾಯರು ಕಲೆ ಮತ್ತು ಕಲಾ ಪ್ರದರ್ಶನದ ಕುರಿತು ಮಾತನಾಡಿದರು. ಸಭಾಂತ್ಯದಲ್ಲಿ ಶ್ರೀ ಪುತ್ರನ್‌ರವರು ವಂದನೋಕ್ತಿಗಳನ್ನರ್ಪಿಸಿದ ಮೇಲೆ ಒಂದೆರಡು ನೃತ್ಯಗಳ ಮತ್ತು ಹಾಡುವಿಕೆಯ ವಿನೋದಗಳಾದುವು.

ಕೆನರಾ ವಾಣಿಜ್ಯ ಸಂಘ—ಪಶ್ಚಿಮ ಕರಾವಳಿಯಲ್ಲಿ ಒಂದು ಪ್ರಧಾನ ಬಂದರನ್ನು ನಿರ್ಮಿಸುವ ವಿಚಾರದಲ್ಲಿ ಮಂಗಳೂರು, ಭಟ್ಕಳ-ಇವುಗಳಲ್ಲಿ ಯಾವುದು ಪ್ರಧಾನ ಬಂದರಾಗಬೇಕೆಂಬ ವಾದಕ್ಕೆ ಎಡೆಯಾಗಿರುವುದರಿಂದ ಮಂಗಳೂರಿನ ಹಕ್ಕುಗಳನ್ನು ಮೈಸೂರಿನ ಪ್ರಧಾನ ಮಂತ್ರಿ ಶ್ರೀ. ಕೆ. ಚೆಂಗಲರಾಯ ರೆಡ್ಡಿಯವರಿದಿರು ಮಂಡಿಸಲು ಕೆನರಾ ವಾಣಿಜ್ಯ ಸಂಘದ ನಿಯೋಗ ಮಂಡಳಿಯೊಂದು ಶ್ರೀ ವಿ ಎಸ್. ಕುಡ್ವರ ನಾಯಕತ್ವದಲ್ಲಿ ದಿನಾಂಕ ೨೦ರಂದು ಬೆಂಗಳೂರಿಗೆ ತೆರಳಿದೆ.

(೫ನೇ ಪುಟದಿಂದ).

ರೂ 3000 ಮತ್ತು ಅದಕ್ಕೂ ಮಿಕ್ಕಿ ಸಂಬಳ ಪಡೆಯುವ ಅಧಿಕಾರಿಗಳು ಸುಮಾರು 200 ಮಂದಿಯಿದ್ದಾರೆಂದು ತಿಳಿದುಬರುತ್ತದೆ.

ಭಾರತ ಸರಕಾರದ ಈ ಬಾರಿಯ ಆರ್ಥಿಕ ಮಸೂದೆಯು ಪರಿಶೀಲನೆಗಾಗಿ ನೇಮಿಸಲ್ಪಟ್ಟಿದ್ದ 'ಸಿಲೆಕ್ಟ್ ಕಮಿಟಿ'ಯು ಹಲವು ಬದಲಾವಣೆಗಳನ್ನು ಸೂಚಿಸಿದೆ. ಆದಾಯ ತೆರಿಗೆ ಹೇರಬಹುದಾದ ಕನಿಷ್ಠ ಮಿತಿಯು ರೂ. 2500 ಎಂದಿದ್ದುದನ್ನು 3000ಕ್ಕೇರಿಸಿದೆ. ಅದೇ ರೀತಿ ಚಹಾ, ಕಾಫಿ ಮತ್ತು ವನಸ್ಪತಿ ತೈಲಗಳ ಮೇಲೆ ಹಾಕಬೇಕೆಂದು ನಿರ್ಧರಿಸಿದ್ದ ಹೊಸ ತೆರಿಗೆಯನ್ನೂ ತಗ್ಗಿಸಿದೆ ಕಾಫಿ, ಟೀಗಳ ಮೇಲಿನ ಸುಂಕವನ್ನು ದ್ವಿಗುಣಗೊಳಿಸುವುದರಲ್ಲಿ ನ್ಯಾಯವಿಲ್ಲವೆನ್ನುತ್ತಾ ಶೇಕಡಾ 50ರಷ್ಟೇ ಏರಿಸಲು ಸೂಚಿಸಿದೆ

ಪಾಕಿಸ್ತಾನದ ಗವರ್ನರ್ ಜನರಲ್ ಕಾಯಿದೇ ಆಝಾಮ್ ಜಿನ್ನಾರು ಢಾಕ್ಕಾದಲ್ಲಿತ್ತ ಸಾರ್ವಜನಿಕ ಭಾಷಣದಲ್ಲಿ "ಪೂರ್ವ ಬಂಗಾಳವನ್ನು ಹಿಂದುಸ್ಥಾನದೊಂದಿಗೆ ಸೇರಿಸುವ ಯೋಚನೆಯಲ್ಲಿರುವವರು ಸ್ವಪ್ನ ರಾಜ್ಯದಲ್ಲಿದ್ದಾರೆ. ಅವರು ಪಾಕಿಸ್ತಾನದ ವೈರಿಗಳು" ಎಂದು ಎಚ್ಚರಿಸಿ "ಇಂತಹ ದ್ರೋಹ ಮಾಡುವ ಮುಸಲ್ಮಾನರಾದರೂ ವೈರಿಗಳೇ ಎನ್ನುತ್ತಾ ತಾವೆಂದೂ ಪಂಚಮ ದಳದವರನ್ನು ಕ್ಷಮಿಸುವಂತಿಲ್ಲವೆಂದು ಎಚ್ಚರಿಸಿದ್ದಾರೆ. ಹಿಂದುಸ್ಥಾನದಲ್ಲಿರುವ ಅಲ್ಪ ಸಂಖ್ಯಾಕರಿಗಿಂತ ಪಾಕಿಸ್ತಾನದಲ್ಲಿರುವ ಅಲ್ಪ ಸಂಖ್ಯಾಕರು ಕ್ಷೇಮದಲ್ಲಿದ್ದಾರೆಂದು ಜಿನ್ನರ ಅಂಬೋಣ.

Notice

In The Court Of The Subordinate Judge Of S. Kanara.
A. S. No. 266-1947

Between:-
Venkat Rao — Appellant
And
Subba Kottari and Others — Respondents.

To
R1. Subba Kottari nephew of Manja Kottari. R2. Thimma Kottari, nephew of Manja Kottari. Residing in Kalthodu Village of Kundapur Taluk.

R7. Krishnamma Shedthi, wife of Yedthare Krishnappa Shetty, Residing in Yedthare Village, Kundapur Taluk

Please take notice that the appellant abovenamed has filed an appeal against the Decree and judgement in O. S. 119/1946 of D. M. C. Kundapur Dated 17-7 1947 and the same is posted on 6-4-48 for hearing. Your are hereby informed that you may appear either in person or by pleader on the said date. failing which the Court will decide Expaite.

G. Somashekher Rao,
Vakil for Appellant

Mangalore. Date 15-3-48

'ಕೇಶ ಕಲಾ'
ಹೇರ್ ಆಯಿಲ್

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಮಹಾ ಪಾಠಶಾಲೆಯ ಜ್ಯೋತಿಷ ಪಂಡಿತ ಕೆ. ನರಸಿಂಹ ಉಪಾಧ್ಯಾಯರಿಂದ ಗುಣಿಸಿ ಪರಿಶೋಧಿಸಲ್ಪಟ್ಟ

ಸರ್ವಧಾರಿ ಸಂವತ್ಸರದ
(1948-1949)
ನವಯುಗ ಪಂಚಾಂಗ

ನಿತ್ಯ ಪಂಚಾಂಗ ಮತ್ತು ಅಗತ್ಯವಿರುವ ಮಾಹಿತಿಗಳಿವೆ.

ಬೆಲೆ ಅಗ್ಗ 0-5-0 ಸಂಗ್ರಹ ಅಧಿಕ. ಪುಟ 56

0-6-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು

ವ್ಯಾಪಾರಿಗಳು ರಖಂ ದರಗಳಿಗೆ ಬರೆದುಕೊಳ್ಳಬಹುದು.

ಪ್ರತಿಯೊಬ್ಬನಿಗೂ ಸಾಕಷ್ಟು ವ್ಯವಹಾರ ಜ್ಞಾನವು ಬೇಕೇಬೇಕು

ಅನ್ಯರ ಸಹಾಯವಿಲ್ಲದೆ ಅನುದಿನದ ವ್ಯವಹಾರವನ್ನು ತಮ್ಮಷ್ಟಕ್ಕೆ ತಾವೇ ತಿಳಿದುಕೊಳ್ಳಲಿಕ್ಕಾಗುವ ಅತ್ಯುಪಯುಕ್ತ ಪುಸ್ತಕವೆಂದರೆ ಶ್ರೀ. ಯು. ಜಿ. ಗಣಪತಿನಾರಾಯಣ ಪ್ರಭುಗಳ

ವ್ಯವಹಾರಜ್ಞಾನದರ್ಪಣ

ಲೋಕವ್ಯವಹಾರ ಬೋಧಕವೆಯ ಇಂತಹ ಪುಸ್ತಕಗಳು ತೀರ ವಿರಳ:

ವಕೀಲ್ ಗುಮಾಸ್ತರು, ದಸ್ತಾವೇಜು ಬರೆಯುವವರು ಉಪಾಧ್ಯಾಯರು ಇವರಿಗಂತೂ ಅತ್ಯಂತ ಪ್ರಯೋಜನಕಾರಿ ಪುಸ್ತಕ

ದೊಡ್ಡ ಸೈಜಿನ 164ಪುಟಗಳು ಬೆಲೆ ರೂ **1-8-0**

ರೂ 1-12-0ನ್ನು ಕಳುಹಿಸಿದರೆ ಒಂದು ಪ್ರತಿಯನ್ನು ರವಾನಿಸಬಹುದು.

ನವಯುಗ ಪ್ರೆಸ್, ಉಡುಪಿ ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗದ ಸತ್ಯವಾರ್ತೆಯ ಮೇಲೆ ವಕ್ರ ಧಾಳಿ!

(೩ನೇ ಪುಟದಿಂದ).

ಣಿಕ ಅಧಿಕಾರಿಗಳು' ಎಂದು ತೋರಿಸುವ ಅಗತ್ಯವೇನೋ ಬಿದ್ದಿದೆ ಎಂಬುದಕ್ಕೆ ಇದೊಂದೇ ನಿದರ್ಶನ ಸಾಲದೆ? ಎಲ್ಲಾ ಕಟ್ಟುಕಥೆಗಳೂ ಇಷ್ಟಕ್ಕಾಗಿಯೇ ಹುಟ್ಟಿದುವು ಎಂಬುದನ್ನು ತಿಳಿಯಲು ಕಷ್ಟವಿದೆಯೆ? ಜತೆಯಲ್ಲೇ ಮದ್ರಾಸ್ ಸರಕಾರದ ಪೂರ್ವ ಮಂತ್ರಿ ಮಾನ್ಯ ಎ. ಬಿ. ಶೆಟ್ಟರನ್ನು ಬಹಳವಾಗಿ ಹೊಗಳಲಾಗಿದೆ. ಇವೆಲ್ಲವೂ, ಕಾಂಗ್ರೆಸ್ ಮಂತ್ರಿಮಂಡಲವನ್ನು ಶ್ರೀ. ಎ. ಸದಾನಂದ ಪೈಗಳು ಟೀಕಿಸಿದ್ದ ಕುರೂಪವನ್ನು ಮರೆಮಾಡುವದಕ್ಕಾಗಿ ಎಳೆದ ರೇಖೆಯೇ ಸೆರಗು ಎಂಬುದನ್ನರಿಯಲಾರದಷ್ಟು ಹೆಡ್ಡತನ ಸರಕಾರದಲ್ಲಾಗಲೀ ಜನತೆಯಲ್ಲಾಗಲೀ ಇರಬಹುದೆಂಬ ಉ. ಭಾ. ದ ಲೇಖಕರ ನಂಬಿಕೆಯು ಅತ್ಯಂತ ವಿನೋದಕರವಿದೆ. ಉದಯ ಭಾರತದ 'ಸಂಪಾದಕ'ರು ತನ್ನ ಲೇಖನದ ಮೂಲಕ ಶ್ರೀ ಎ. ಸದಾನಂದ ಪೈಗಳನ್ನೂ ಮಾನ್ಯ ಎ. ಬಿ. ಶೆಟ್ಟರನ್ನೂ ಒಟ್ಟೊಟ್ಟಿಗೆ ಹೊಗಳಿ, ಸಂಬಂಧ ನಿರ್ಮಿಸುವ ಒಂದು ಚಿತ್ರವನ್ನು ತನ್ನ ಮುಷ್ಟಿಗೆ ಗೀಚಿಕೊಂಡ ಮಾತ್ರಕ್ಕೇನೇ ಸತ್ಯಸ್ಥಿತಿಯೂ ಈ ಕಲ್ಪನಾಚಿತ್ರವಾಗಿ ಮಾರ್ಪಾಟಗೊಂಡೀತೆಂದು ಇವರ ಭ್ರಮೆಯೆ? ಇಂತಹ ಸಂಬಂಧಜೋಡಣೆಯನ್ನು ಕಲ್ಪಿಸಿ ತೋರಿಸಬೇಕಾದರೆ, ಆ ಪಂಗಡಿಗರಿಗಾವುದೋ ಒಂದು ಅಗತ್ಯ ಬಿದ್ದಿರಬೇಕೆಂಬುದು ಖಂಡಿತವಲ್ಲವೆ? ಇಲ್ಲವಾದರೆ ಒಂದು ಸಭೆಯ ವಾರ್ತೆಯಲ್ಲಿ ಈ ಜೀವನ ಚರಿತ್ರೆಯ ಅಗತ್ಯವೇನಿದೆ? ಒಂದು ಆವಶ್ಯಕತೆಯೋ ಇವೆಲ್ಲಾ ಕೃತಕನಿರ್ಮಾಣಗಳನ್ನು ಮಾಡಿಸುತ್ತಿದೆ ಎಂಬುದು ಸ್ಪಷ್ಟ ತಾನೆ?

ಹಿಂದೂ ಮಹಾಸಭಾ ಪತ್ರಿಕೆಯಾಗಿದ್ದು ಗಾಂಧಿಜೀಯನ್ನೂ ಕಾಂಗ್ರೆಸನ್ನೂ ಅಸಹ್ಯ ರೀತಿಯಿಂದ ಟೀಕಿಸಿ, ಕಟ್ಟುಗ್ರ ಹಾಗೂ ಹೇಯ ರೀತಿಯ ದ್ವೇಷನಿರ್ಮಾಣವದೊಂದನ್ನೇ ತನ್ನ ಧ್ಯೇಯವನ್ನಾಗಿ ಮಾಡಿಕೊಂಡಿದ್ದ 'ಉದಯ ಭಾರತ'ದ ಮೇಲೆ ಗಾಂಧಿಜೀಯ ಕೊಲೆಯೊಡನೆಯೇ ಜನತೆಯ ಅಸಹಕಾರ, ಬಹಿಷ್ಕಾರಾಸ್ತ್ರಗಳು ನಾಟಿದುದರಿಂದ ಆಗೊಮ್ಮೆ ಅದರ ಅಸ್ತಿತ್ವಕ್ಕೇನೇ ಅಪಾಯ ತಟ್ಟಿದ್ದಿತು. ಅದನ್ನು ನಿವಾರಿಸಿಕೊಂಡು ತನ್ನನ್ನು ತಾನೇ ರಕ್ಷಿಸಿಕೊಳ್ಳುವುದಕ್ಕಾಗಿ, ಪತ್ರಿಕಾ ಧರ್ಮದ ಪರಿಚಯ ಮೊದಲೇ ಇರದಿದ್ದ ಈ ಪತ್ರಿಕೆಯು ಅನುಕೂಲವಂತರ ಹಾಗೂ ಒಂದು ಕಡೆ ನೆಚ್ಚಸ್ಸಿರುವವರ ಆಶ್ರಯ ಸಂಪಾದನೆಗಾಗಿ ಈ ವಾದದಲ್ಲಿ ಆಸಕ್ತಿ ವಹಿಸಿ ಸೇರಿಕೊಂಡುದು ಅದರ ಸ್ಥಿತಿ ಮತ್ತು ರೀತಿ ನೀತಿಗಳ ಮೇಲಿಂದ ಸಹಜವಿದೆ, ಇದೂ ಒಂದು ಗಣಿಸಬಹುದಾದ ಪತ್ರಿಕೆಯೋ ಎಂಬುದನ್ನು ಸಾರ್ವಜನಿಕರು, ಅದು ಆಗಾಗ ಪ್ರಕಟಿಸುತ್ತಾ ಬಂದಿರುವ ಭಾವನೆಗಳನ್ನೇ ಒಂದರೊಡನೊಂದನ್ನು ತುಲನೆ ಮಾಡಿ ನೋಡಿದರೆ ಸಾಕು. ಈ ಪತ್ರಿಕೆ ಮತ್ತೀ ಪಂಗಡಗಳೊಳಗಿನ ಈ ಸಂಬಂಧವೇ ತೀರಿಸುತ್ತಿದೆ ಗಾಂಧಿಜೀಯ ಕೊಲೆಗೆ ಹೇತುವಾದ ಅಪಾಯಕಾರೀ ಮನೋವೃತ್ತಿಗೆ ನಮ್ಮ ಜಿಲ್ಲೆಯಲ್ಲಿ ಗಾಳಿಹಾಕುತ್ತಿರುವವರಾರು ಎಂಬುವನ್ನು!

ಶ್ರೀ. ಎ. ಸದಾನಂದ ಪೈಗಳ ಭಾಷಣದ ಸಂಬಂಧವಾಗಿ ನಿರ್ಧಾರವೊಂದನ್ನು ಮಾಡಿದ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕುರಿತು ಬಂದಿರುವ ಆರೋಪ ಮತ್ತು ಟೀಕೆಗಳು ಆ ಪಂಗಡಿಗರ ಸಂಕುಚಿತ ಜಾತೀಯತಾ ಕಲ್ಮಷವೆಷ್ಟು ಆಳದಲ್ಲಿದೆ ಎಂಬುದನ್ನು ಸರಿಯಾಗಿ ತೋರಿಸುತ್ತಿವೆ. ಆ ಸತ್ಕಾರ ಕೂಟದಲ್ಲಿ ಹಾಜರಿದ್ದು ನವಯುಗದ ವಾರ್ತೆ ಸುಳ್ಳೆಂಬುವನ್ನು ಒಪ್ಪಿದ್ದಾರೆಂದು ಹೇಳಲ್ಪಟ್ಟಿರುವವರಲ್ಲಿ ಅತ್ಯಧಿಕ ಸಂಖ್ಯೆಯವರು ಒಂದೇ ಕೋಮಿನವರು; ಉಳಿದ ಇಬ್ಬರಿಬ್ಬರು ಕೂಡಾ ಒಂದಲ್ಲೊಂದು ರೀತಿಯಿಂದ ಇವರ ಸಂಬಂಧ ಮತ್ತು ವರ್ಚಸ್ಸಿನೊಳಗಿರುವವರೇ. ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು ಇಂತಹ ಕೂಟದ ವಿರೋಧೀ ಪಕ್ಷವಾಗಿ ರಚನೆಗೊಂಡಿರುವ ಪ್ರತಿಕೂಟವೂ ಅಲ್ಲ—ಶ್ರೀ ಸದಾನಂದ ಪೈಗಳಂಥವರ ಭಾಷಣವನ್ನು ಖಂಡಿಸುವುದಕ್ಕಾಗಿ ಆಗ ತಾನೇ ನಿರ್ಮಾಣಗೊಂಡ ಸಮಿತಿಯೂ ಅಲ್ಲ. ಕಾಂಗ್ರೆಸ್ ನಿಬಂಧನೆಗಳಂತೆ ಕ್ರಮಬದ್ಧವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೇಲ್ವಿಚಾರಣೆಯಲ್ಲಿ ಸಕಾಲದಲ್ಲಿ ಸ್ಥಾಪನೆಗೊಂಡಿರುವ ಸಮಿತಿಯಿದು. ಜಾತೀಯ ಪ್ರಾತಿನಿಧ್ಯವನ್ನಾಧರಿಸಿ ಚುನಾಯಿಸಲ್ಪಟ್ಟಿರದ ಈ ಸಮಿತಿಯಲ್ಲಿ ಸರ್ವ ಜಾತಿಯವರೂ ಇದ್ದಾರೆಂಬುದನ್ನು ಬೇರೆ ಹೇಳಬೇಕೆಂದಿಲ್ಲ. ಈ ವಾದಕ್ಕೆ ಸಂಬಂಧಿಸಿದ ಅದರ ಸಭೆಯಾದರೂ ಆಕ್ಷೇಪಿಗಳ ವಾದವಿರುವಂತೆ 'ಅವಸರದ ಸಭೆ'ಯಾಗಿರಲೂ ಇಲ್ಲ, ಶ್ರೀ ಹೊನ್ನಯ ಶೆಟ್ಟರು ಒತ್ತಾಯಿಸಿ ಕರೆಯಿಸಿದುದೂ ಅಲ್ಲ. ಅದರ ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತರೇ ಎಂದಿನಂತೆ ಕರೆದಿದ್ದ ಸಾಮಾನ್ಯ ಸಭೆಯದು. 'ಅಲ್ಲಿ ನಿರ್ಣಯ ಹೇಗೆ ಬಂತು? ಹಾಜರಿದ್ದವರಾರು? ಸಹಿ ಹಾಕಿದವರಾರು? ಕಾರ್ಯಕ್ಷೇತ್ರವಾವುದು?'— ಎಂದೆಲ್ಲಾ ಕೇವಲ ಕಮಿಟಿಗೇನೇ ಸಂಬಂಧಿಸಿದ ವಿಷಯಗಳಲ್ಲಿ ಪ್ರಶ್ನೆಗಳನ್ನು ಛಡಾಯಿಸಿರುವ ಭ್ರಾಂತರು ತಾವಾರೆಂಬುದನ್ನು ತಾವೇ ಮರೆತಂತಿದೆ! ಸರ್ಕಲ್ ಕಾಂಗ್ರೆಸ್ ಕಮಿಟಿಯ ಕ್ರಮ ನಿಯಮಗಳನ್ನು ಪಾಲಿಸುವ ಹೊಣೆಯು ಸ್ವತ. ಅದರ ಅಧ್ಯಕ್ಷರ ಮತ್ತು ಕಮಿಟಿಯದಾಗಿದ್ದು, ಅವೆಲ್ಲವೂ ಕ್ರಮಪ್ರಕಾರವಾಗಿ ನಡೆದಿದ್ದವೆಂದೂ ಆದ್ದರಿಂದಲೇ ಅದರ ನಿರ್ಧಾರದಲ್ಲಿ ಈ ಜಾತೀಯತಾ ಭಾವಗಳ ಸಿಟ್ಟಿಗೆ ಅವಕಾಶ ದೊರೆಯಿತೆಂದೂ ಅಲ್ಲಿ ಹಾಜರಿದ್ದ ಅನುಭವದಿಂದಲೇ ಇಲ್ಲಿ ತಿಳಿಸಲಿಚ್ಛಿಸುತ್ತೇವೆ. ಇಂತಹ ಕಾಂಗ್ರೆಸ್ ಸಂಸ್ಥೆಯಲ್ಲೂ 'ಹಾಜರಿದ್ದ ಸದಸ್ಯರು ಯಾವ ಕೋಮಿನವರು' ಎಂಬ ಪ್ರಶ್ನೆ ಬಂದಿರುವುದನ್ನೂ, ಕೇವಲ ಕಾಂಗ್ರೆಸ್ ಸಮಿತಿಯ ಪಕ್ಕಾ ಕ್ರಮನಿಯಮಗಳ ಕುರಿತೂ ಬಾಯಿ ಹಾಕುವ ಅಧಿಕಪ್ರಸಂಗ ನಡೆದುದುವುದನ್ನೂ ನೋಡುವಾಗ, ಉಡುಪಿ ಕಾಂಗ್ರೆಸ್ ಕಮಿಟಿಯೂ ಅದೊಂದು ಸಂಕುಚಿತ ಜಾತೀಯತಾವಾದಿಗಳ ಕಪಟ ನಾಟಕದ ರಂಗವಾಗದಿರುವುದೊಂದೇ ಅದರ ಮಹಾಪರಾಧವಾಗಿ ಈ ಪಂಗಡಿಗರಿಗೆ ಕಾಣುತ್ತಿದೆ ಎಂಬುದು ಖಚಿತವಲ್ಲವೆ?

ಈ ರೀತಿ ನಮ್ಮ ವಿರುದ್ಧವಾದಿಗಳ ಇಷ್ಟೆಲ್ಲಾ ಕಪಟ ನಾಟಕಗಳಿಗೂ ಏನೋ ಕಾರಣವಿರಬೇಕೆಂಬುದು ಸ್ಪಷ್ಟ. ಆ ಕಾರಣಕ್ಕಾಗಿ ಸಂಕುಚಿತ ಜಾತ್ಯಭಿಮಾನದಿಂದ ಹಲವು ವಿಧದ ಸಂಚು ಹಂಚಿಕೆಗಳಾರಂಭವಾದುವೆಂಬುದೂ ಸರ್ವರಿಗೂ ವೇದ್ಯವಾಗುವಂತಹ ವಿಷಯ. ಆ ಸತ್ಕಾರ ಕೂಟದಲ್ಲಿ ಭಾಗಿಗಳಾಗಿದ್ದ ಕೆಲವು ಆಪ್ತ ಮಹನೀಯರು ನಮ್ಮ ವಾರ್ತೆಯ ಸತ್ಯವನ್ನು ಖಾಸಗೀ ಸಂಭಾಷಣೆಗಳಲ್ಲಿ ತಾವಾಗಿ ನಮ್ಮೊಡನೊಪ್ಪಿದ್ದರು. ನಮ್ಮ ಸತ್ಯಪ್ರಿಯತೆಗೆ ಮೆಚ್ಚಿದುದೂ ಇದೆ. ನಾವು ನಿಷ್ಪಕ್ಷಪಾತವಾಗಿ ಸತ್ಯವನ್ನೇ ಎತ್ತಿಕೊಂಡಿರುವೆವೆಂದು ಕೆಲವು ಆಪ್ತ ಮಹನೀಯರು ವ್ಯಕ್ತಿಗತ ಮಾತುಕತೆಗಳಲ್ಲಿ ಅಂತಃಕರಣ ಪೂರ್ವಕವಾಗಿ ನಮ್ಮೊಡನೀಗ ಕೂಡಾ ಒಪ್ಪಿಕೊಳ್ಳುತ್ತಿದ್ದಾರೆ; ಹಲವು ಸುಸಂಸ್ಕೃತರೀಗ ತಮ್ಮ ಮನಸ್ಸಾಕ್ಷಿಯು ತಮ್ಮನ್ನೊಂದು ಕಡೆಗೂ, ಹುಗು ಸಂಬಂಧಗಳು ವಿರುದ್ಧ ದಿಕ್ಕಿಗೂ ಎಳೆಯುವ ಸಮಸ್ಯೆಯಲ್ಲಿ ಸಿಕ್ಕಿಕೊಂಡು ಸಂಕಟ ಪಡುತ್ತಿದ್ದಾರೆಂಬುದೂ ನಮಗೆ ಗೊತ್ತಿದೆ. ತಹಶೀಲ್ದಾರ್ ಶ್ರೀ. ಎ. ಸದಾನಂದ ಪೈಗಳು ಕೆಲವರನ್ನು ಕಾರು ಕಳುಹಿಸಿ ತರಿಸಿಕೊಂಡೂ, ಇನ್ನು ಕೆಲವರಲ್ಲಿಗೆ ಕಾರುಹತ್ತಿ ಹೋಗಿಯೂ 'ನನ್ನನ್ನೀ ಸಂಕಟದಿಂದೊಮ್ಮೆ ರಕ್ಷಿಸಬೇಕು. ನಾನು ಆಗ ಮಾಡಿರುವ ಉಪಕಾರಕ್ಕೆ ಇದೊಂದು ಪ್ರತ್ಯುಪಕಾರವನ್ನು ಮಾಡಬೇಕು' ಎಂದು ಮುಂತಾಗಿ ಕೇಳಿಕೊಂಡದ್ದಿಲ್ಲವೆ? ಆಗ್ರಹ ಪಡಿಸಿದ್ದಿಲ್ಲವೆ? ಆದರೂ ಕೆಲವು ಆಪ್ತ ಮಹನೀಯರು ನಾವೆತ್ತಿಕೊಂಡ ಸತ್ಯವನ್ನೆತ್ತಿ ಹಿಡಿಯಲು ಸಿದ್ಧರಿದ್ದಾರೆನ್ನಲು ಸಂತೋಷಿಸುತ್ತೇವೆ. ಸಾರ್ವಜನಿಕ ನೀತಿ, ನಾಗರಿಕ ಯೋಗ್ಯ ನೇರವಾದ ಹಾದಿ—ಇವೆಲ್ಲಕ್ಕಿಂತ 'ನಮ್ಮವರು' ಎಂಬ ಸಂಕುಚಿತ ಅಭಿಮಾನವೇ ಹೆಚ್ಚೆಂದು ಗಣಿಸಿ, ತಮ್ಮ ಮನಸ್ಸಾಕ್ಷಿಯ ವಿರುದ್ಧ ತಾವೇ ದಂಗೆಯೆದ್ದಿರುವವರು ಸಾಧಿಸುವ ಮಹತ್ವವಾದರೂ ಏನು, ಎಂಬುದನ್ನು ನೆನಸಿ ನಾವು ನಿಜಕ್ಕೂ ಕೌತುಕಗೊಂಡಿದ್ದೇವೆ. ದಕ್ಷಿಣ ಕನ್ನಡದ ಜನಜೀವನದಲ್ಲಿ, ಇಂತಹ ಭೀಕರ ವಿಷವಿಷ್ಟು ಆಳದವರೆಗೂ ವ್ಯಾಪಿಸಿರುವ ಆ ಚಿತ್ರವು ನಿಜಕ್ಕೂ ಸರ್ವಜನ ಹಿತಾಕಾಂಕ್ಷಿಗಳನ್ನು ದಿಗಿಲುಗೊಳಿಸುವಂತಹದು. ಒಂದು ಸತ್ಯ ಹಾಗೂ ನ್ಯಾಯವನ್ನೆತ್ತಿ ಹಿಡಿದು ಮುಂದೊತ್ತುವಾಗ ದಕ್ಷಿಣಕನ್ನಡ ಜಿಲ್ಲೆಯ ಕೆಲಜಾತೀಯ ಸ್ವಾರ್ಥಿಗಳು ಇದಿರೊಡ್ಡುವ ಕಂಟಕಗಳೆಷ್ಟು ಕೆಳ ಮಟ್ಟದವುಗಳೆಂಬುದು ಹೃದಯದಾಳಕ್ಕೆ ನಾಟುತ್ತಿದೆ. ಇಂತಹ ಕಂಟಕ ಮನೋವೃತ್ತಿಗಳ ಕಡೆಗೆ ಬೆಳಕು ಬೀರುವ ನವಯುಗದ ಅಗ್ರಲೇಖನದ ಮೇಲೂ ಹೇಯ ಆರೋಪಗಳು ಬಂದಿವೆ. ಇವೆಲ್ಲವುಗಳಿಂದ ನಮಗಿಷ್ಟೇ ಯಾಕೆ, ಸರ್ವರಿಗೂ ಮನವರಿಕೆಯಾಗಿರುವ ಸಂಗತಿಗಳಿಷ್ಟು:...ಸಂಕುಚಿತ ಮರಾಠಿ ಹಿಂದೂ ಸ್ಫೂರ್ತಿಯನ್ನೇ ಈ ಜಿಲ್ಲೆಯ ವಿದ್ಯಮಾನಗಳಿಗೆ ಹೊಂದಿಕೆಯಾಗುವಂತೆ ಮಾರ್ಪಡಿಸಿಕೊಂಡು ಸರ್ವ ವಿಧದ ತಾಂಡವಕ್ಕಾರಂಭಿಸುವ ಜಾತಿ ಸ್ವಾರ್ಥ ಮನೋವೃತ್ತಿಯನ್ನು—ಜಿಲ್ಲೆಯ ಪಾಲಿನ ಸರ್ವ ಅಮಾಂಗಲ್ಯತೆಗಳನ್ನೂ ಅವ್ಯಕ್ತರೂಪದಿಂದೊಡನೆ ಹಾಕುವ ಜಾತೀಯತಾ ಬೀಜದೋಷಗಳನ್ನು—ನವಯುಗವು ತೋರಿಸಿಕೊಟ್ಟರೆ ಆ ಬೆರಳು ತಮ್ಮ ಮುಖದ ಕಡೆಗೆನ್ನುವವರು, ಅವರು ನಿಜಕ್ಕೂ ಹೇಗಿರಬೇಕು! ಒಂದೋ ನಮ್ಮ ವಾದದಲ್ಲಿ ತಪ್ಪಿರಬೇಕು; ಹಾಗೇನೂ ಹೇಳದೆ 'ಅದು ನಮಗಾಗಿರುವ ಖಂಡನೆ'ಯೆಂದು ತಾವಾಗಿ ಒಪ್ಪಿಕೊಳ್ಳುವವರಲ್ಲೇ ಆ ತಪ್ಪು ನಿಜಕ್ಕೂ ಇರಬೇಕು. ಜನತಾ ಹಿತ ಸಾಧಿಸುವ ಪತ್ರಿಕಾ ಧರ್ಮದಂತೆ 'ನವಯುಗ'ವು ಆ ತಪ್ಪು, ಕಲ್ಮಷವೆಲ್ಲಿದೆಯೋ ಅಲ್ಲಿ ಅದು ನಿರ್ನಾಮವಾಗಬೇಕೆಂದು ಖಂಡಿಸುತ್ತಾ ಹೋಗುವಾಗ ಆ ಕಲ್ಮಷವನ್ನಪ್ಪಿಕೊಂಡವರು ನೋವುಗೊಂಡು ಏನೇ ಕೂಗಿದರೂ, ಅಷ್ಟಕ್ಕಾಗಿಯೇ ತನ್ನ ಕರ್ತವ್ಯವನ್ನದು ಬಿಡಲಾರದು. ತಮ್ಮವರಿಗೆ ಬಾಧಕವಾಗುವ ಸತ್ಯ ಸತ್ಯವಲ್ಲ—ತಮ್ಮವರೇ ತುಂಬಿದ ಕಾಂಗ್ರೆಸ್ ಕಾಂಗ್ರೆಸ್ ಅಲ್ಲ—ತಮ್ಮ ಕೋರಿಕೆಗಳಿಗೆ ಸ್ವರ ಕೂಡಿಸಲಾರದವರು ನ್ಯಾಯವಾದಿಗಳಲ್ಲ—ಎಂಬ ಮನೋವೃತ್ತಿಯು ಸ್ವಾರ್ಥ ಪಿಶಾಚಪ್ರವೃತ್ತಿಯೆಂದು ಗಣಿಸಿ ಅದನ್ನು ನಿರ್ಮೂಲಿಸುವ ಬದಲಿಗೆ ಅದಕ್ಕೇನೇ ಬಗ್ಗುತ್ತಾ ಹೋದರೆ ಜಿಲ್ಲೆಯ ಸಾರ್ವಜನಿಕ ಜೀವನವೆಂಬುದು ನಿಜಕ್ಕೂ ನರಕ ಸದೃಶವಾದೀತು! ಈ ಮನೋವೃತ್ತಿಯು ಮಾಡುವ ಗಾಂಧಿಜೀಯ ತತ್ವಗಳ ಕೊಲೆಗೂ ನಾವು ಮೌನಸಮ್ಮತಿಕೊಟ್ಟಂತಾದೀತು! ಈ ಜಾಗರೂಕತೆ ವಹಿಸಿದುದರಿಂದೇ ನವಯುಗದ ತಪ್ಪಾಗಿ ತೋರಿ, ತಮ್ಮೀ ಧೋರಣೆಯನ್ನೇ ತಮ್ಮ ಸ್ವಭಾವಕ್ಕನುಸಾರವಾಗಿ 'ಮುಂದಿನ ಚುನಾವಣೆಯ ಸಿದ್ಧತೆ' 'ಒಂದು ಸಮಾಜದ ವಿದ್ಯಾಬುದ್ಧಿಗಾಗಿ ಪಡುವ ಮತ್ಸರ'—ಇತ್ಯಾದಿ ಆರೋಪಗಳ ರೂಪದಿಂದ ನವಯುಗದ ಮೇಲೆ ಚೆಲ್ಲಿದ್ದಾರೆ. ಈ ಆರೋಪಗಳಲ್ಲಿ ಒಡೆದು ತೋರುತ್ತಿರುವ ಅವರ ಬುದ್ಧಿ, ಮತ್ತವರ ದೂರದ ಆಲೋಚನೆಯಲ್ಲಿರುವ ಸ್ವಾರ್ಥ, ಮಾತ್ರವಲ್ಲ ಅಜ್ಞಾನ ಹಾಗೂ ಅಪ್ರಬುದ್ಧತೆಗಾಗಿ ಪರಿಹಾಸ್ಯದ ನಗೆಯೊಂದೇ ನಮ್ಮ ಉತ್ತರ. ಈ ಕಾಲಮಂತ್ರೀಗಿನ ಜನ ಜಾಗ್ರತಿ ಮಾತ್ರವಲ್ಲ; ಇವರೆಂದಿರುವ ಆ ಸಮಾಜ ಮತ್ತು ಮುಂದಿನ ಚುನಾವಣೆ ಹಾಗೂ ಆ ಶಾಸನ ಸಭೆ ಮತ್ತವರ ಸ್ಥಾನಗಳು ಕೂಡಾ ಇವರೀಗ ನೆನಸಿಕೊಂಡಿರುವಂತಿರಲಾರವು—ಇವರ ಆಸೆಯಿರುವಂತಾಗದು—ಎಂದು ನಾವವರಿಗೆ ಸ್ಪಷ್ಟ ಭರವಸೆ ಕೊಡುತ್ತೇವೆ. ಎಲ್ಲಾ ದುಶ್ಶಕ್ತಿಗಳನ್ನು ಕೇಂದ್ರೀಕರಿಸಿಕೊಂಡು, ಸರ್ವ ವಿಧದ ಚಾಣಕ್ಯ ತಂತ್ರಗಳನ್ನು ಪ್ರಯೋಗಕ್ಕೆ ಹಚ್ಚಿ, ಎಂತಹ ಕಪಟ ನಾಟಕವಾಡಿದರೂ, ಇಲ್ಲಿಯ ಈ ವಾದದಂತೆಯೇ ಪ್ರತಿಯೊಂದು ಸಾರ್ವಜನಿಕ ಕಾರ್ಯದಲ್ಲೂ ಕೊನೆಯಲ್ಲಿ ಸತ್ಯ ಮತ್ತು ನ್ಯಾಯ ಮಾತ್ರ ಜಯಿಸೀತೆಂದೂ ನಮ್ಮ ಸ್ಪಷ್ಟ ಭರವಸೆಯಿದೆ.

—ಸಂಪಾದಕ.

ಮದ್ರಾಸು ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿ ಮತ್ತು
ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ
ಸಂಭಾವನೆ ಪಡೆದ ಗ್ರಂಥ
ಡಾ| ವಿ ಆರ್. ಕೊರಡ್ಕಲ್ಲರ
'ಮನೆಮದ್ದು'-Home Remedies
ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ
ಬಾಣಂತಿಯರ ಮತ್ತು ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ
ನೀವೇ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ
ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.
'Ably written—Quite up-to-date—Valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ
ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ
ಕೊಂಡಾಡಿದ ಪುಸ್ತಕವಿದು.
ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.
ಬೆಲೆ ರೂಪಾಯಿ 2—0—0.] [ಟಪ್ಪಾಲು ದ್ವಾರಾ 2—6—0.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಪುಸ್ತಕಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ.
: ಉಡುಪಿ :

ಈ ಕಾಲಾನುಚಿತ ಅಸಹನೆ!

ಇಂದಿನ ಭಾರತ ರಾಜಕೀಯದಲ್ಲಿ ಕಂಡುಬರುತ್ತಿರುವ ವಿವಿಧ ರೀತಿಯ ಮನೋವೃತ್ತಿಗಳು ಭಾರತೀಯರೀಗ 'ಅಸಹನೆಯ ಅಂಕ'ದಲ್ಲಿದ್ದಾರೆಂಬುದರ ದ್ಯೋತಕಗಳಾಗಿವೆ. ಸ್ವತಂತ್ರ ರಾಷ್ಟ್ರವೊಂದರ ಜನತೆ ಹೇಗಿರಬೇಕೋ ಹಾಗೆ ಹಿಂದೀಯರಿಲ್ಲವೆಂಬುದು ಸ್ಪಷ್ಟವಿದೆ. ಸ್ವಾತಂತ್ರ್ಯ ಹೋರಾಟಗಳಿಗಾಗಿ ಮಹಾತ್ಮಾ ಗಾಂಧಿಯವರು ಹುಟ್ಟಿಸಿದ ಸ್ಫೂರ್ತಿ ಮತ್ತು ಸ್ವಾಭಿಮಾನವು, ಇಂದು ಕೂಡಾ ನಮ್ಮ ಜನತೆಯಲ್ಲಿ ಹಿಂದಿನ ಪರಿಮಾಣದಲ್ಲೇ ಉಳಿದಿದೆ; ಜತೆಯಲ್ಲಿ ಸ್ವಾತಂತ್ರ್ಯ ಭಾರ ಬಿದ್ದಿರುವ ಈ ಕಾಲದಲ್ಲಿ ಇರಬೇಕಾದ ಹೊಣೆಗಾರಿಕೆಯನ್ನು ಮಾತ್ರ ಜನತೆಯರಿತಿಲ್ಲ. ಹೀಗಾಗಿ, ಗತ ಕಾಲದ ಸ್ಫೂರ್ತಿಯು ಈಗ 'ಅಸಹನೆ'ಯಾಗಿ ಮಾರ್ಪಟ್ಟಿದೆ. ಇದಕ್ಕೆ, ಜಾತೀಯ ಜಗಳಗಳನ್ನು ಬಿಟ್ಟರೂ ಇತರ ಹಲವು ವಿಧದ ನಿದರ್ಶನಗಳು ಕಂಡುಬರುತ್ತಿವೆ.

ಸರ್ದಾರರ ರಾಜೀನಾಮೆ?

ಗಾಂಧಿಜೀಯ ಕೊಲೆಯ ನಂತರ ಸರ್ದಾರ್ ವಲ್ಲಭಭಾಯಿ ಪಟೇಲರು ವಿಶೇಷ ಸ್ಪದಮಾನಾ ತಪಸ್ಸನ್ನಾಚರಿಸಬೇಕಾಗಿ ಬಂದಂತೆ ಕಾಣುತ್ತದೆ. ಆರ್. ಯಸ್. ಯಸ್. ನಂತಹ ಜಾತೀಯತಾ ದಳಗಳಿಗೆ ತಾನು ಬೇರೆ ಕಾರಣಗಳಿಗಾಗಿ ಕೊಟ್ಟ ಸಲುಗೆಯು ಇಂದಿನ ಅನಾಹುತ ನಿರ್ಮಿಸುವಷ್ಟು ಅಪಾಯಕಾರಕ ಮನೋವೃತ್ತಿಯಾಗಿ ಬೆಳೆದುದನ್ನು ಕಂಡು ಸರ್ದಾರರು ಪಶ್ಚಾತ್ತಾಪದಿಂದ ಕುದಿಯಬೇಕಾದುದು ಸಹಜವೇ! ತನ್ನ ಅಂತ್ಯಾವಧಿಯಲ್ಲಿ ಗಾಂಧಿಜೀ ಆತುರಪಡುತ್ತಿದ್ದ ನೆಹರು-ವಲ್ಲಭಭಾಯಿ ಬಿಕ್ಕಟ್ಟೆಂಬುದೆಂದೂ ಉಂಟಾಗದಂತೆ ತಾನು ವರ್ತಿಸಬೇಕೆಂಬ ಜಾಗರೂಕತೆಯೂ ಅದರ ಜತೆಯಲ್ಲೇ ಸರ್ದಾರರಲ್ಲಿ ಮೂಡಿದೆ. ಮಹಾತ್ಮರ ಕೊಲೆಯೊಡನೆಯೇ ಸರ್ದಾರರ ಪ್ರಭಾವ ಕಡಿಮೆ ಮಾಡಬೇಕೆಂದು ಸಮತಾವಾದಿಗಳು ಕಾರಣ ಕೊಡಲು ಮುಂದಾದುದು—ಮತ್ತು ಭಾವನೆ ರಾಷ್ಟ್ರದ ಹಲವರಲ್ಲಿ ವ್ಯಾಪಿಸಿರುವುದು—ಪಟೇಲರ ಮನ ನೋಯಿಸಿದೆ. ನಾಯಕ ನೆಹರುಗಳ ಭಾವನಾವಾದವೂ ತನ್ನ ಕಟ್ಟುಗ್ರ ಕಾರ್ಯನಿಷ್ಠೆಯೂ ಆಗಾಗ ದೂರ-ದೂರಕ್ಕೆ ಹೋದಂತಾಗುವುದು ಸಹಜವೇ ಇದ್ದು, ಈ ಮೊದಲು ಅಂತಹ ಸಂದರ್ಭಗಳಲ್ಲಿ ಅವೆರಡನ್ನು ಒಂದುಗೂಡಿಸುತ್ತಿದ್ದ ಗಾಂಧಿಜೀ ಈಗ ಇಲ್ಲವಾದ್ದರಿಂದ ಹೇಗೆ ಮುಂದೊತ್ತುವದೆಂಬುದೇ ಸರ್ದಾರರಿಗೆ ತೋಚದಿದೆ. ಹೀಗಾಗಿ ಕಾರ್ಯಕ್ಕೆ ಕೈಯಿಕ್ಕುವದಕ್ಕಿಂತ ಹೆಚ್ಚಾಗಿ ಯೋಜನೆಗೆ ತಲೆಕೊಡಬೇಕಾಗಿ ಬಂದು, ಈಗ ಪಟೇಲರು ಕಾಹಿಲೆ ಬಿದ್ದಿರುವುದು ನಿಜಕ್ಕೂ ಶೋಚನೀಯ. ಸರ್ದಾರರು ಕೇಂದ್ರ ಸರಕಾರದ ತನ್ನ ಸ್ಥಾನಕ್ಕೇನೇ ರಾಜೀನಾಮೆಯೊಪ್ಪಿಸಲಿರುವರೆಂಬ ಸುದ್ದಿ ಸುಳಿದಾಡುತ್ತಿದೆ. ಇದು ನಿಜವಿರಬಹುದೆ?

ಹೀಗಾಗಬಾರದು!

ಸದ್ಯಸ್ಥಿತಿಯಲ್ಲಿ ಪಟೇಲರು ಭಾರತ ಮಂತ್ರಿಮಂಡಲದಿಂದ ಹೊರ ಬೀಳುವಂತಾಗುವದೆಂದು ನಾವು ನಂಬುವದಿಲ್ಲ. 'ಸರ್ದಾರರ ಜನ' ಎಂದು ಪ್ರಸಿದ್ಧರಿರುವ ಶ್ರೀ. ಸಿ. ಯಚ್. ಬಾಬಾ, ಅವರು ಇನ್ನರಲ್ಲೇ ಹಿಂದೀ ಮಂತ್ರಿ ಸಮಿತಿಯ ತನ್ನ ಸ್ಥಾನಕ್ಕೆ ರಾಜಿಯಿತ್ತಿರುವರೆಂದೂ ಅದು ಅಂಗೀಕರಿಸಲ್ಪಟ್ಟು 'ಬಜೆಟ್' ಅಧಿವೇಶನ ಮುಗಿಯುವ ವರೆಗೆ ಮಾತ್ರ ಶ್ರೀ. ಬಾಬಾ ಅಲ್ಲಿರುವರೆಂದೂ ವಾರ್ತೆಯಿದೆ. ಅಧಿಕೃತವಾಗಿ ತಿಳಿದು ಬಾರದೆ, ಇಂತಹ ಸುದ್ದಿಗಳನ್ನಾಧರಿಸಿ ಕಲ್ಪಿಸುವದು ತಪ್ಪಾದರೂ, ಸರ್ದಾರ್ ಪಟೇಲರಲ್ಲಿ ಹಾಗೂ ಅವರ ಮನೋವೃತ್ತಿಯವರಲ್ಲಿ ಮೊದಲಿನ ಬಿಗುತನವೀಗೀಗ ಕಂಡುಬರುತ್ತಿಲ್ಲವೆಂಬುದನ್ನೊಪ್ಪಬೇಕು. ದೇಶದ ಆರ್ಥಿಕ ಪುನರ್ವ್ಯವಸ್ಥೆಯ ಮಟ್ಟಿಗೆ ಪಟೇಲರ ಮನೋವೃತ್ತಿಯು ಸರಿಯಾದುದಲ್ಲವೆಂಬುದು ಸಮಾನತಾವಾದಿಗಳೆಲ್ಲರೂ ಒಪ್ಪುವಂತಹದೇ. ಆದರೆ ಇಂದಿನ ಕಾಲ ಕೂಡಾ ಸಮಾನತಾ ಸ್ಥಾಪನೆಯ ಪೂರ್ವರಂಗ ತಯಾರಿಯಲ್ಲೇ ಇದ್ದು, ಆರ್ಥಿಕ ಸಮಾನತೆಯ ಕಾಲ ಮುಂದಿದೆಯಾದ್ದರಿಂದ ಈ ಕಾಲದಲ್ಲಿ ಸರ್ದಾರರ ಮನೋವೃತ್ತಿ ಕ್ಷಮ್ಯವಿದೆ. ಸದ್ಯಕ್ಕೆ ಬೇಕಾದುದೆಂದರೆ, ಸ್ವರಾಜ್ಯ ಸ್ಥಾಪನಾರಂಭ ಕಾಲದ ಅಸ್ತವ್ಯಸ್ತತೆಗಳೆಲ್ಲವನ್ನೂ ಒಂದು ವ್ಯವಸ್ಥೆಗೆ ತರುವ ಬಲವಾದ ಕಾರ್ಯಶಕ್ತಿ; ನೆಲಸಮ ಮಾಡಬೇಕಾದುದನ್ನು ಮಾಡಿ, ಎಳೆದುಕೊಳ್ಳಬೇಕಾದುದನ್ನು ಎಳೆದುಕೊಳ್ಳಬಲ್ಲ ಗಜಬಲ. ಅದು ಈ ಉಕ್ಕಿನ ಮನುಷ್ಯ ಸರ್ದಾರರಲ್ಲಿದೆ ಎಂಬುದನ್ನಾರೂ ಅಲ್ಲಗಳೆಯಲಾರರು. ಅಂಥವರ ಅವಶ್ಯಕತೆಯಿರುವ ಈ ಕಾಲದಲ್ಲೇ ಯಾವ ಕಾರಣದಿಂದಾದರೂ ಅವರು ರಾಜೀ ಕೊಡುವಂತಾದರೆ ನಿಜಕ್ಕೂ ಅದು ರಾಷ್ಟ್ರದ ದೌರ್ಭಾಗ್ಯವೆನ್ನಬೇಕು. ಸರ್ದಾರರ ಕಾರ್ಯರೀತಿಗಳ ಕುರಿತು ಕೆಲವರು ಮಾಡುತ್ತಿರುವ ಟೀಕೆಗಳು ನಮ್ಮಲ್ಲಿರುವ ಕಾಲಾನುಚಿತ ಅಸಹಿಷ್ಣುತೆಯ ನಿದರ್ಶನಗಳು.

ರಾಜರನ್ನು ಹಾದಿಗೆ ತಂದವರು!

ಸಮತಾವಾದಿ ಪಕ್ಷೀಯರು ಸರ್ದಾರ್ ಪಟೇಲರ ಕೈಯಲ್ಲಿರುವ ಹಿಂದೀ ಸರಕಾರದ ಸಂಸ್ಥಾನಗಳ ಸಂಬಂಧವಾತೆಯ ಧೋರಣೆಯನ್ನು ಕಟುವಾಗಿ ಟೀಕಿಸಿದ್ದಾರೆ. ಹೈದರಾಬಾದಿನ ಸಂಬಂಧವಾಗಿ ಪಂಡಿತ ನೆಹರೂ ಮತ್ತು ಲೋರ್ಡ್ ಮೌಂಟ್ ಬೇಟನರ ಧೋರಣೆಗಿಂತ ಸರ್ದಾರ್ ಪಟೇಲರ ಧೋರಣೆಯು ಪ್ರತ್ಯೇಕವಾಗಿರುವುದರಿಂದಲೇ ಪಟೇಲರು ರಾಜೀನಾಮೆ ಕೊಡಬಹುದೆಂಬ ವದಂತಿಯಿದೆ. ಅದು ಹೇಗಿದ್ದರೂ ಸಂಸ್ಥಾನಗಳ ಕೆಲಸವನ್ನು ಸರ್ದಾರರು ಸಾಗಿಸಿದ ರೀತಿಯಲ್ಲಿ ದೌರ್ಬಲ್ಯವನ್ನು ಕಾಣುವವರು ನಿಜಕ್ಕೂ ವ್ಯವಹಾರಜ್ಞರಲ್ಲವೆನ್ನಬೇಕಾಗುವುದು. ಒಂದು ಕಾರ್ಯಸರಣಿಯ ಮಧ್ಯೆ ಗೊಣಸೊಂದನ್ನೆತ್ತಿ ತೋರಿಸಿಯೋ, ಮಧ್ಯಾವಧಿಯ ಒಂದು ತಾತ್ಕಾಲಿಕ ತೀರ್ಮಾನಕ್ಕೆ ಅನಗತ್ಯ ಪ್ರಾಮುಖ್ಯತೆ ಕೊಟ್ಟೋ ಆರೋಪ ಹೊರಿಸುವುದರಲ್ಲಿ ಅರ್ಥವಿಲ್ಲ. ಪಾಕಿಸ್ತಾನ್ ಭಾಗವು ಪ್ರತ್ಯೇಕಿಸಲ್ಪಟ್ಟ ಮೇಲೆ ಉಳಿದ ಮುಕ್ಕಾಲಂಶ ಭಾರತದಲ್ಲಿ ಸಣ್ಣ ದೊಡ್ಡ ಸಂಸ್ಥಾನಗಳ ರೂಪದಿಂದ ಶತ ಸಂಖ್ಯೆಯಲ್ಲಿದ್ದ ಒಳ ಬೇಲಿಗಳನ್ನು ಸರ್ದಾರ್ ಪಟೇಲರು ನಿವಾರಿಸಿ ಅಖಂಡ ಭಾರತವನ್ನು ಕಟ್ಟುತ್ತಾ ಬಂದ ರೀತಿಯನ್ನು ನಿಜಕ್ಕೂ ಶ್ಲಾಘಿಸಬೇಕು. ಪ್ರತ್ಯೇಕ ಅಸ್ತಿತ್ವವಿರದ ಅತಿ ಸಣ್ಣ ಸಂಸ್ಥಾನಗಳನ್ನೆಲ್ಲಾ ಹಿಂದೀ ಕೇಂದ್ರದೊಂದಿಗೆ ತಾದಾತ್ಮ್ಯಗೊಳಿಸಿ ಭಾರತ ನಕಾಶೆಯಿಂದಲೇ ಅವುಗಳನ್ನು ಉಜ್ಜಿ ತೆಗೆಯಲಾಗಿದೆ. ಸಣ್ಣ ಸಂಸ್ಥಾನಗಳ ಗುಂಪುಗಳೇ ಇದ್ದಲ್ಲಿ, ಅವುಗಳ ಪ್ರತ್ಯೇಕತೆಯನ್ನು ವಜಾ ಪಡಿಸಿ ಸೌರಾಷ್ಟ್ರ, ಮತ್ಸ್ಯ, ಮಾಳ್ವ, ರಾಜಸ್ಥಾನ, ವಿಂಧ್ಯ, ಪ್ರದೇಶ, ಪುಲ್ಕಿಯಾನ್—ಎಂಬ ಏಳು ಗುಂಪುಗಳನ್ನು ರಚಿಸಲಾಗಿದೆ. ಹಿಂದಿನಂತೆಯೇ ಪ್ರತ್ಯೇಕ ಸಂಸ್ಥಾನಗಳಾಗಿಯೇ ಈಗಲೂ ಉಳಿದಿರುವವುಗಳೆಂದರೆ ಕಾಶ್ಮೀರ, ಹೈದರಾಬಾದು, ತಿರುವಾಂಕೂರು, ಕೊಚ್ಚಿ, ಮೈಸೂರು, ಬರೋಡ, ಕಚ್, ಗ್ವಾಲಿಯರ್, ಇಂದೋರ್, ಭೋಪಾಲ, ಬಿಕಾನೀರ್, ಜೋಧ್‌ಪುರ, ಉದಯಪುರ, ಮಯೂರಭಂಜ, ಕೊಲ್ಹಾಪುರ, ಕೂಚ್‌ಬಿಹಾರ್, ತ್ರಿಪುರ, ಮಣಿಪುರ—ಮೊದಲಾದ 19 ಸಂಸ್ಥಾನಗಳು ಮಾತ್ರ. ಈ ಪೈಕಿ ಒಂದು ವರುಷದ ತಾತ್ಕಾಲಿಕ ಒಪ್ಪಂದದಲ್ಲಿರುವ ಹೈದರಾಬಾದ್ ಒಂದನ್ನು ಬಿಟ್ಟರೆ ಮಿಕ್ಕೆಲ್ಲಾ ಸಂಸ್ಥಾನಗಳೂ ಭಾರತ ಕೇಂದ್ರದೊಂದಿಗೆ ಸಂಪೂರ್ಣವಾಗಿ ಜೋಡಣೆಗೊಂಡಿವೆ. ರಾಜರುಗಳು ವರುಷಕ್ಕೆ 10 ಲಕ್ಷ ರೂಪಾಯಿಗಳಿಗೆ ಮಿಕ್ಕಿ ಸ್ವಂತಕ್ಕಿಟ್ಟುಕೊಳ್ಳಕೂಡದು—ಸ್ವತಃ ಸೇನೆ; ಇತ್ಯಾದಿಗಳನ್ನು ವಿನಿಯೋಗಿಸತಕ್ಕದ್ದಲ್ಲ—ಇತ್ಯಾದಿ ಹಲವು ಕಟ್ಟುನಿಟ್ಟುಗಳನ್ನು ಹಾಕಿ ಹಿಂದೀ ರಾಜರ ಥಳಕನ್ನೆಲ್ಲಾ ನಿವಾರಿಸಿ ಸಾಧ್ಯವಿದ್ದಷ್ಟು 'ಸಾದಾ'ಗೊಳಿಸಿಡಲು ಸರ್ದಾರರು ಶಕ್ತರಾಗಿದ್ದಾರೆ. ಹೀಗೆ ನೋವಾಗದಂತೆ ಅತ್ತಿತರರನ್ನು ಸವೆಯಿಸುತ್ತಾ ಹೋದಲ್ಲಿ, ಎಲ್ಲವೂ ಮಾಯವಾಗಿ ಅಖಂಡ ಭಾರತ ಸ್ಥಾಪನೆಯಾಗಲು ಬಹಳ ಕಾಲ ಹೋಗದು. ಸರ್ದಾರರ ಬದಲಿಗೆ ಶ್ರೀ ಜೈ ಪ್ರಕಾಶರಾಗಲೀ, ಶ್ರೀ. ಪಿ. ಸಿ. ಜೋಶಿಯವರಾಗಲೀ ಸಂಸ್ಥಾನಿಕ ಮಂತ್ರಿಯಾಗಿದ್ದರೆ ಇದಕ್ಕಿಂತ ಹೆಚ್ಚಿನದನ್ನು ಹೇಗೆ ಸಾಧಿಸುತ್ತಿದ್ದರೆಂದು ಅಂತಃಕರಣಪೂರ್ವಕ ಹೇಳಬಲ್ಲರೆ? ಒಮ್ಮೆಗೇ ಸಂಸ್ಥಾನಗಳನ್ನು ನಿರ್ಮೂಲಿಸಲೆದ್ದೊಡನೆ ಅವೇನೂ ನಾಶವಾಗುವಂತಿರಲಿಲ್ಲ.

ಸಮತಾವಾದಿಗಳ ಕಾಂಗ್ರೆಸ್ ತ್ಯಾಗ

ನಾಸಿಕದಲ್ಲಿ ಇದೇ ತಾ 19ರಲ್ಲಿ ಆರಂಭಿಸಿದ ಅಖಿಲ ಭಾರತ ಸಮತಾವಾದಿಗಳ ಆರನೇ ವಾರ್ಷಿಕಾಧಿವೇಶನವು ಕಾಂಗ್ರೆಸನ್ನು ಬಿಟ್ಟು ಹೊರಗೆ ಬಂದು ನಿರ್ಭೀತ ವಿರುದ್ಧ ಪಕ್ಷವಾಗಿ ರೂಪುಗೊಳ್ಳುವ ನಿರ್ಧಾರ ಮಾಡಿದೆ. ಈ ನಿರ್ಧಾರವೇ ಈ ಕಾಲದಲ್ಲಿ ತಪ್ಪೆಂದು ಯಾರೂ ಹೇಳಲಾರರು. ಆದರೆ ಅದರ ಅಧ್ಯಕ್ಷ ಶ್ರೀ ಪುರುಷೋತ್ತಮ್ ತ್ರಿಕುಮ್‌ದಾಸರ ಭಾಷಣದಲ್ಲಿ ಅಸಹಿಷ್ಣುತೆ ಕಂಡುಬಂದಷ್ಟು ಬೇರಾವುದೂ ಗೋಚರಿಸುತ್ತಿಲ್ಲ; ಇಂತಹ ಮನೋವೃತ್ತಿಯೇ ಮುಂದೆ ಆ ಪಕ್ಷದ ಕಾರ್ಯಕ್ರಮಗಳಲ್ಲಿ ಕಂಡುಬಂದರೆ ನಿಜಕ್ಕೂ ಹೆಚ್ಚಿನವರು ಅವರಿಂದ ನಿರೀಕ್ಷಿಸಿದ್ದ ಮಹತ್ಕಾರ್ಯಗಳು ಬಿಸಿಲ್ಗುದುರೆಗಳಾಗಬಹುದು. ಇಂತಹ ಅಸಹನೆಗಳೇ ಈಗ ಎಲ್ಲೆಲ್ಲೂ ಕಂಡುಬರುತ್ತಿವೆ. ಮದ್ರಾಸಿನ ಇಂದಿನ ಸರಕಾರವನ್ನು ಉರುಳಿಸುವತೆ ಕಳೆದ ವರುಷದ 'ಮದ್ರಾಸೀ ಆಟ'ವೇ ಈ ತಿಂಗಳ ತಾ 2?ರ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಸಭೆಯಲ್ಲಿ ನಡೆಯಲಿದೆಯೆಂದು ತಿಳಿದುಬರುತ್ತದೆ. ಕಳೆದ ವಾರ 'ಜಲ ಉಷಾ' ನೌಕೋದ್ಘಾಟನೆಗಾಗಿ ವಿಶಾಖಾ ಪಟ್ಟಣಕ್ಕೆ ಬಂದಿದ್ದ ನೆಹರುಗಳು ಆಂಧ್ರ [illegible] ಕಮಿಟಿಯ ಧೋರಣೆಯನ್ನು ಟೀಕಿಸಿ 'ಆಂಧ್ರ ಪ್ರಾಂತ್ಯದ ಗಡಿ ನಿರ್ಣಯ ಸಮಿತಿಯ ನೇಮಕವು, ಮುಂದಿನ ಘಟನಾ ಸಮಿತಿ ಅಧಿವೇಶನದಲ್ಲಿ ನೇಮಿಸಲ್ಪಡಲಿರುವ ಒಂದು ವಿಷಯ ಪರಿಶೀಲನಾ ಸಮಿತಿಯ ತೀರ್ಮಾನಗಳನ್ನು ಹೊಂದಿಕೊಂಡಿದೆ' ಎಂದುದರಿಂದ ಹಲವು ಆಂಧ್ರ ಕಾಂಗ್ರೆಸಿಗರು ರಾಜೀನಾಮೆ ಕೊಟ್ಟು ನೆಹರು ಸರಕಾರದ ವಿರುದ್ಧ ಆಂಧ್ರ ಪ್ರಾಂತ್ಯಕ್ಕಾಗಿ ಚಳವಳಿಸಲೆದ್ದಿದ್ದಾರೆ. ಈಗ ಸ್ವರಾಜ್ಯವಾದ್ದರಿಂದ ತಾವು ಹೇಳಿದ್ದಾಗಲೇ ಬೇಕೆಂದೆಲ್ಲರೂ ಒಂದೇ ಸಮನೆ ದುಡುಕುವದು ನಿಜಕ್ಕೂ ಶೋಚನೀಯ!

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years. Filaria is a dirty, disfiguring disease. And yet a little united effort on the part of the public could at very little cost wipe out these two evils. Please, watch this space.

Inserted by:

The Canara Mutual Assurance Company Limited.
ESTD. 1935
H. O. UDIPI.

ಎಲ್ಲತರದ
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ.
ಮದುವೆ ಕಾಗದಗಳನ್ನು
ಅಲ್ಪಾವಧಿಯಲ್ಲೇ ಮಾಡಿ
ಕೊಡಲಾಗುವುದು.

ದಕ್ಷಿಣ ಕನ್ನಡ

ಶಿರ್ತಾಡಿ— ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರ ಯೂನಿಯನಿನ ವಾರ್ಷಿಕ ಮಹಾಸಭೆಯು ತಾ 28-3-48ನೇ ಆದಿತ್ಯವಾರ ಅಪರಾಹ್ನ 2 ಗಂಟೆಗೆ ಮೈನ್ ಶಾಲೆಯಲ್ಲಿ ಜರಗಲಿರುವುದರಿಂದ ಸರ್ವ ಮೆಂಬರರು ಸದ್ರಿ ಸಭೆಗೆ ಹಾಜರಾಗಬೇಕಾಗಿ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ.

ಪೊಳಲಿ—ಶ್ರೀ ರಾಜರಾಜೇಶ್ವರಿ ಅಮ್ಮನವರ ದೇವಸ್ಥಾನದ ಕಾಲಾವಧಿ ಉತ್ಸವವು ಮೀನ ಸಂಕ್ರಮಣ ದಿವಸ ಧ್ವಜಾರೋಹಣವಾಗಿ ಪ್ರಾರಂಭವಾಗಿ ನಡೆಯುತ್ತಿದ್ದು, ಇದೇ ಬರುವ ಎಪ್ರೀಲ್ ತಾ 3ನೇ ಶನಿವಾರ ಚೆಂಡು ಆರಂಭವಾಗಿ ತಾ ೭ಕ್ಕೆ ಚಂದ್ರಮಂಡಲೋತ್ಸವ ತಾ ೭ನೇ ಬುಧವಾರ ಚಂಡಮುಂಡರ ಶಿರವನ್ನು ಚೆಂಡಾಡುವ ಕಡೆ ಚೆಂಡಿನ ಮಹೋತ್ಸವವೂ, ತಾ ೮ಕ್ಕೆ ಮಹಾರಥೋತ್ಸವ, ತಾ ೯ನೇ ಶುಕ್ರವಾರ ಅವಭೃತ ಮಂಗಳಸ್ನಾನವು ನೆರವೇರುವುದು. ಎಂದು ಅಡಳಿತ ಮೊಕ್ತೇಸರ ಉಳಿಪಾಡಿಗುತ್ತಿನ ರಮಾನಾಥ ಮಾಲ್ಲರು ತಿಳಿಸುತ್ತಾರೆ.

ಕುಂದಾಪುರ— ಇಲ್ಲಿಗೆ ಆರು ಮೈಲು ದೂರದ ತೆಕ್ಕಟ್ಟೆ ಪೇಟೆಯ ಬ್ರಹ್ಮ ದೈವಸ್ಥಾನದ ಎದುರು ತಾ 16-3-48ನೇ ರಾತ್ರೆ ಯಕ್ಷಗಾನದ ಸೌಕೂರು ಮೇಳದ ಆಟ ಆಗುವ ಸಮಯ ಬ್ರಹ್ಮಾವರ ಶ್ರೀ. ಮಂದಾರ ರಾಮಣ್ಣ ಶೆಟ್ಟರು ಚಾಕುವಿನಿಂದ ಇರಿಯಲ್ಪಟ್ಟು ಚಿಕಿತ್ಸೆ ನಡಿಸಿದರೂ ಪ್ರಯೋಜನ ಆಗದೆ ತಾ 17-3-48ರಂದು ಆಸ್ಪತ್ರೆಯಲ್ಲಿ ತೀರಿಹೋದರೆಂದೂ ಪೋಲೀಸರ ತನಿಖೆ ನಡೆಯುತ್ತಿದೆಯೆಂದೂ ತಿಳಿದುಬರುತ್ತದೆ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 523/1939. R. E. P. 66/1948.

ಅರ್ಜಿದಾರ-M. ವಿಶ್ವನಾಥ ನಾಯಕ.

ಎದುರು- ಕೃಷ್ಣಯ ಶ್ಯಾನುಭಾಗ ಕೂಡಾ. 2ನೇ ಎದುರು ಸಾಂತೇರಿ ಯಾನೆ ಪುಮಾಬಾಯಿ, ಪದ್ಮನಾಭ ಶ್ಯಾನುಭಾಗರ ಹೆಂಡತಿ, ಕುಂದಾಪುರ ಕಸಬಾ.

ಸದ್ರಿ O. S. 523/1939ನೇ ಡಿಕ್ರಿ ಹಕ್ಕು ತನಗೆ ಟ್ರಾನ್ಸ್‌ಫರ ಆಗಿ ಬಂದಿರುವದಂತೆ ಅರ್ಜಿದಾರನು ಸದ್ರಿ ಅಮ್ಲಜಾರಿ ಅರ್ಜಿ ದಾಖಲ್ಮಾಡಿರುವದ್ರಿಂದ ಆ ಕುರಿತು ನಿಮ್ಮ ದೇನಾದ್ರೂ ಆಕ್ಷೇಪ ಇದ್ದಲ್ಲಿ ತಾ 7-4-1948 ನೇ ದಿವ್ಸ ಹಗಲು 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಯೋಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸೋದಾಗುತ್ತದೆ.

K. Raghunath Shenai.
Pleader for Petitioner.
Coondapoor 18-3-1948.

ಟೆಂಡರುಗಳ ಬಗ್ಗೆ ನೋಟೀಸು

ಬರುವ 1948-49ನೇ ಒಂದು ವರ್ಷದ ಅವಧಿಗೆ ಮಾತ್ರ ಈ ಕೆಳಗಿನ ಗುತ್ತೆಗಳ ಬಗ್ಗೆ ಟೆಂಡರುಗಳನ್ನು ಕರೆದಿದೆ.

1. ಬಂಕೇರಕಟ್ಟೆ ಕಡವು
2. ಕಡೇಕಾರು ಉಪ್ಪಿನಕೋಟೆ ಮೀನ ಮಾರ್ಕೆಟು
3. ಕಡೇಕಾರು ಕಿನ್ನಿಮುಲ್ಕಿ ಮೀನು ಮಾರ್ಕೆಟು

1947--48ನೇ ವರ್ಷಕ್ಕೆ ಈ ಕಡವು ರೂ. 205/-ಕ್ಕೂ ಉಪ್ಪಿನಕೋಟೆ ಮೀನು ಮಾರ್ಕೆಟು ರೂ 35/-ಕ್ಕೂ ಕಿನ್ನಿಮುಲ್ಕಿ ಮೀನು ಮಾರ್ಕೆಟು ರೂ. 75/-ಕ್ಕೂ ಏಲಂ ಆಗಿದ್ದಿತು, ಅದಕ್ಕೂ ಹೆಚ್ಚು ಮೌಲ್ಯವು ಈ 1948-49ಕ್ಕೆ ಅಪೇಕ್ಷಿತವಾಗಿದೆ.

ಟೆಂಡರುಗಳನ್ನು ಪ್ರತ್ಯಪ್ರತ್ಯೇಕ ಪ್ರತಿ ಗುತ್ತೆಗೆ ರೂಪಾಯಿ 5ರ ಪ್ರಥಮ ಡಿಪಾಜಿಟ ನೊಂದಿಗೆ ಇದೇ ತಾ. 29-3-48 ಸಂಜೆ ಗಂಟೆ 6ರೊಳಗೆ ಈ ಆಫೀಸಿಗೆ ಮುಟ್ಟುವಂತೆ ಕಳುಹಿಸಬೇಕು. ಅನಂತರ ಮುಟ್ಟುವ ಟೆಂಡರುಗಳು ಸ್ವೀಕೃತವಾಗಲಾರವು. ಅತ್ಯಂತ ಅಧಿಕ ಮೌಲ್ಯದ ಯಾವುದಾದರೂ ಟೆಂಡರನ್ನು ಮಾತ್ರ ಬೋರ್ಡು ಸ್ವೀಕರಿಸಬಹುದಷ್ಟೇ. ತಾ. 30-3-1948ರ ಸಂಜೆ 5 ಗಂಟೆಗೆ ಬೋರ್ಡಿನ ಪ್ರೆಸಿಡೆಂಟ್- ಡೆಲಿಗೇಟರಿಂದ ಈ ಟೆಂಡರುಗಳು ಒಡೆದು ನೋಡಲ್ಪಡುವುವು.

ಕೆ. ರಾಮರಾವ್,
ಪ್ರೆಸಿಡೆಂಟ್- ಡೆಲಿಗೇಟ್ ಕಡೇಕಾರ ಪಂಚಾಯತ ಬೋರ್ಡು,
ಕಡೇಕಾರು, ತಾ. 22-3-1948

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 4 1948.

The Canara Land Investments Ltd Manipal —ವಾದಿ
And
M. Poovappa, is a pottery maistry, Divakar Tile Works. Coondapur ಪ್ರತಿವಾದಿ

ಸದರಿ ಪ್ರತಿವಾದಿಗೆ

ಪ್ರತಿವಾದಿಯು ವಾದಿ ಕಂಪೆನಿಯಿಂದ ಸಾಲವಾಗಿ ಪಡೆದ ಅಡ್ವಾನ್ಸಿನ ಪೈಕಿ ವಸೂಲು ಬಂದದ್ದು ಕಳೆದ ಬಾಕಿ ಬಡ್ಡಿ ಸಹಿತ ರೂ 454 11 0ಕ್ಕೆ ವಾದಿಯು ಪ್ರತಿವಾದಿಯಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 8 4 1948ಕ್ಕೆ ಇಡಲ್ಪಟ್ಟಿರುತ್ತದೆ. ಆ ದಿವ್ಸ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಸದರಿ ಕೋರ್ಟು ಮುಂದೆ ಹಾಜರಾಗದಿದ್ದಲ್ಲಿ—ಪ್ರತಿವಾದಿಯು ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸೋದಾಗಿಯದೆ.

M. Damodar Kamath
Advocate for Plff.
ಉಡುಪಿ, ದ. ಕ. ತಾರೀಕು 22-3-1948

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

The best preventive in epidemics of CHOLERA

"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಪುದಿನ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

— ಮಕ್ಕಳನ್ನು ಹಡೆಯುವುದು ಸಾಕು —

ಅರಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,--ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಜಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:— ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ ಬ್ಯಾಡಗಿ.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಘುಡು ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಜೇನು ಚೇಳು ಮುಂತಾದ ಜೀವಜಂತುಗಳ ಕಡಿತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.
REGD.
ಎಲ್ಲ ಊರುಗಳಲ್ಲಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.



Approved firm by the Govt. of Mysore Certified by the Agent of the Govt. of Cylone & Indian.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಸ್ವೀಕಾರ-ವಿಮರ್ಶೆ

'ಭಾರತ ವಿಭೂತಿ'—ಬೊಂಬಾಯಿಯ ಹೊಸ ವಾರಪತ್ರಿಕೆ ಸಂಪುಟ ೧. ಸಂಚಿಕೆಗಳು ೧ ಮತ್ತು ೨. ಸಂಪಾದಕರು ಸ್ವಾಮಿ ಸುರೇಶಾನಂದರು, ಸಹ ಸಂಪಾದಕರು- ಶ್ರೀ. ಭೋಜರಾಜ ಶೆಟ್ಟಿ ವಾರ್ಷಿಕ ಚಂದಾ ರೂ ೬೮೦, ಬಿಡಿಪ್ರತಿ ೨ ಆಣೆ, ವಿಳಾಸ 'ಭಾರತ ವಿಭೂತಿ' ಹಿಂದ್ ಮಾತಾ ಲೇನ್ ಬೊಂಬಾಯಿ ೧೨ 'ಭಾರತ ವಿಭೂತಿ'ಯು ತನ್ನದೇ ಆದ ಮುದ್ರಣಾಲಯವನ್ನು ಹೊಂದಲಾಗಿ ಅಳವಡಿಸಿಕೊಂಡು ಹೊರಟಿರುವುದರಿಂದ ಇದರ ಕ್ರಮವಾದ ಮುನ್ನಡೆಯಲ್ಲಿ ವಿಶೇಷ ಬಲ ಬರಲಾರದೆಂದು ನಂಬಲು ತುಂಬ ಅವಕಾಶವಿದೆ. ಆಂತೆಯೇ ಕ್ರೌನ್ ¼ ಪ್ರಮಾಣದ ಪುಟಗಳ ಮೊದಲ ಸಂಚಿಕೆಯೊಡನೆ ಬೆಳಕಿಗೆಬಂದ 'ಭಾರತ ವಿಭೂತಿ'ಯು ಎರಡು ಸಂಚಿಕೆಯಲ್ಲೇ ಎಂಟು ಪುಟಗಳ ವಿಸ್ತಾರವನ್ನು ಪಡೆದಿದೆ. 'ಭಾರತ ವಿಭೂತಿ'ಗೆ ನಮ್ಮ ಸುಸ್ವಾಗತ! ಯಶಸ್ವಿಯಾಗಿ ಮುನ್ನಡೆಯಲೆಂದು ಹಾರ್ದಿಕವಾದ ಹಾರೈಕೆ ವಿಶೇಷತಃ ನಮ್ಮ ಬೊಂಬಾಯಿಯ ಕನ್ನಡಿಗ ಸಹೋದರರು 'ಭಾರತ ವಿಭೂತಿ'ಗೆ ನೆರವು ಸಹಕಾರ ಆದರ ಪ್ರೋತ್ಸಾಹಗಳನ್ನಿತ್ತು ರಕ್ಷಿಸಿ ಬೆಳೆಯಿಸಿಕೊಳ್ಳುವುದು ಕರ್ತವ್ಯವಿದೆ.

'ಸಂಯುಕ್ತ ಭಾರತ'- ಬೆಂಗಳೂರಿನ ಹೊಸ ದೈನಿಕ ಪತ್ರಿಕೆ. ಕ್ರೌನ್ ½ ಪುಟವಾಕಾರದ ೪ ಪುಟಗಳು. ವಾರ್ಷಿಕ ಚಂದಾ ರೂ ೧೫- ಸಂಪಾದಕರು ಶ್ರೀ. ಎಚ್. ಶ್ರೀಕಂಠಯ್ಯ, 'ಸಂಸ್ಥಾನದ ವಾರ್ತೆಗಳು' ವಿವಿಧ ವಾರ್ತೆಗಳು ಇವುಗಳೊಂದಿಗೆ ಪ್ರಚಲಿತ ರಾಜಕೀಯ ಸಾಮಾಜಿಕ ವಿಚಾರಗಳ ಒಂದೆರಡು ಲೇಖನಗಳನ್ನಾದರೂ ಒಡಗೊಂಡಿರಬೇಕು ಪತ್ರಿಕೆ. ಆದರೆ ಎರಡು ಪುಟಗಳಿಂದ ಇಷ್ಟನ್ನಾದರೂ ಸಾಧಿಸಿ ಉಪಯುಕ್ತವಾದ ದೈನಿಕ ಪತ್ರಿಕೆಯೆನಿಸಿ ಮೈಸೂರು ಸೀಮೆಯ ಮಟ್ಟಿಗಾದರೂ ಯೋಗ್ಯ ಸೇವೆಯನ್ನು ಸಲ್ಲಿಸಲಾರದೀತೇ ಎಂಬುದು ಸಂದೇಹ.

'ಕರ್ನಾಟಕ ಜಯಹಿಂದ್'- ವಾರಪತ್ರಿಕೆ ಸಂಪುಟ ೧ ಸಂಚಿಕೆ ೨೬. ಎಂಟು ಪುಟಗಳು ವಾರ್ಷಿಕ ವರ್ಗಣಿ ರೂ ೬. ಸಂಪಾದಕರು ಶ್ರೀ. ಬಸಪ್ಪಾ ಚನ್ನಪ್ಪಾ ಜವಳಿಗೆ. ಜಮಖಂಡಿ. ಕನ್ನಡ ನಾಡಿನ ಗಡಿಯೂರುಗಳು ಎಚ್ಚತ್ತು ಕನ್ನಡತನವನ್ನು ಉಳಿಸಿಕೊಳ್ಳಬೇಕಾಗಿರುವ ಈ ದಿನದಲ್ಲಿ ಜಮಖಂಡಿಯಂತಹ ಗಡಿನಾಡಿನಲ್ಲಿ ಈ ಪತ್ರಿಕೆಯು ತಲೆಯೆತ್ತಿದುದು ತುಂಬ ಸಂತೋಷ. ಪ್ರಸ್ತುತ ಸಂಚಿಕೆಯ ಲೇಖನಗಳನ್ನು ಅವಲೋಕಿಸಿದರೆ 'ಕರ್ನಾಟಕ ಜಯಹಿಂದ್' ತನ್ನ ಕ್ಷೇತ್ರದ ಜನತೆಯಲ್ಲಿ ಪರಿಣಾಮಕಾರಿಯಾದ ಜಾಗ್ರತಿಯನ್ನುಂಟುಮಾಡೀತೆಂದು ನಂಬಲು ತುಂಬ ಅವಕಾಶವಿದೆ.

'ಕರ್ನಾಟಕ ಸೇವಾಸಂಘ'—ಮದರಾಸು—ದ್ವಿತೀಯ ವಾರ್ಷಿಕ ವರದಿ—ವರದಿಯನ್ನು ಅವಲೋಕಿಸಿದರೆ ಮದ್ರಾಸಿನ ಕನ್ನಡಿಗರು ಅತ್ಯುತ್ಸಾಹದಿಂದ ಕನ್ನಡದ ಸೇವೆಯಲ್ಲಿ ಕೈಯಿಕ್ಕಿದ್ದಾರೆಂದು ತಿಳಿಯುತ್ತೆ. ಶ್ರೀಗಳಾದ ಎ. ಎಸ್. ಕುಡ್ವಾ, ಸಿ.ಎ ಇ., ಐ. ಸಿ. ಯಸ್, ಇವರು ಸಂಘದ ಅಧ್ಯಕ್ಷರಾಗಿಯೂ, ಎಂ. ಮರಿಯಪ್ಪ ಭಟ್. ಎಂ.ಎ. ಎಲ್. ಟಿ., ಯು. ಸೀತಾರಾಮಾಚಾರ್, ಕುಲಕರ್ಣಿ ಶ್ರೀನಿವಾಸ್, ಬಿ. ಎ., ಮುದ್ರಾಡಿ ಜನಾರ್ದನಾಚಾರ್, ಬಿ ಅಣ್ಣಾಜಿರಾವ್ ಇವರುಗಳು ಉಪಾಧ್ಯಕ್ಷರಾಗಿಯೂ, ಡಾ। ಪಿ. ಕೃಷ್ಣರಾವ್ ಇವರು ಕೋಶಾಧ್ಯಕ್ಷರಾಗಿಯೂ, ಶ್ರೀ. ಪಿ. ಈಶ್ವರ ಭಟ್ ಮತ್ತು ಶ್ರೀ ಸಿ. ಕೆ. ತಿರುಮಲೇಶ ಇವರು ಜತೆ ಕಾರ್ಯದರ್ಶಿಗಳಾಗಿಯೂ ಇರುವರಲ್ಲದೆ ಶ್ರೀಮತಿ ಮಂದಾಕಿನಿ ಬಾಯಿ, ಬಿ. ಓ, ಎಲ್, ಶ್ರೀಗಳಾದ ಕೆ. ಸಂಜೀವ ಕಾಮತ್, ಬಿ.ಎ.,ಬಿ. ಎಲ್, ಕೈತಂಜೆ ಗೋವಿಂದ ಭಟ್, ಬಿ.ಎ., ಬಿ. ಎಲ್. ಮುಂತಾದ ಹಲವು ಪ್ರತಿಷ್ಠಾವಂತ ಉತ್ಸಾಹೀ ಕನ್ನಡಿಗರು ಸಮಿತಿಯ ಸದಸ್ಯರಾಗಿಯೂ ಇದ್ದು ಕನ್ನಡಿಗತನದ ಅಭಿಮಾನವನ್ನು ಹೊರನಾಡಿನಲ್ಲಿ ಕಾಯ್ದುಕೊಂಡು ಮೆರೆಯಿಸುತ್ತ ಕನ್ನಡದ ಕಡೆಗೆ ಹಿರಿದಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆನ್ನಲು ತುಂಬ ಸಂತೋಷವಾಗುತ್ತಿದೆ— 'ಕೊರಡ್ಕಲ್'

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ದಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-: ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ.8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MIS D. DEVEE, F DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S. No. 26/1948.

ಕಲ್ಯಾಣಕ ರಮಾನಾಥ ಮಂಜುನಾಥ ಪೈ ಯಿಂಡ್ ಕೊ, ಎಂಬ ಫರ್ಮಿನ ಪರವಾಗಿ ಕಲ್ಯಾಣಕ ಗಿರಿರಾಯ ಪೈ —ವಾದಿ.

ಮತ್ತು

B. ಶ್ರೀನಿವಾಸ ನಾಯ್ಕ, ಬಸ್ರೂರು ನಾಗಪ್ಪ ನಾಯ್ಕರ ಮಗ ಉಡುಪಿ ಕಸಬಾ ವಿಲೇಜು ಮಾರ್ಕೆಟು ಬಳಿಯಿರುವವ—

ಪ್ರತಿವಾದಿರು.

ವಾದಿರ ಫರ್ಮಿನಿಂದ ಪ್ರತಿವಾದಿಯು ತಾ 5-5-45ರ ವರೇಗೆ ನಡ್ಸಿದ ಲೇವಾದೇವಿ ಸೇರಿಗೆ ಪ್ರತಿವಾದಿಯಿಂದ ಬರಾ ಅಸಲು ವ ಬಡ್ಡಿ ಕೂಡಾ ರೂ 712-12-0ಕ್ಕೆ ವಾದಿಯು ಮೇಲ್ಕಂಡ ದಾವೆಯನ್ನು ಸದ್ರಿ ಕೋರ್ಟಿನಲ್ಲಿ ಮಾಡಿರುತ್ತಾರಾಗಿಯೂ, ಸದ್ರಿ ನಂಬ್ರವು ತಾ. 31-3-1948ಕ್ಕೆ ಪ್ರತಿವಾದಿಯ ಆಖೈರು ನೋಟೀಸಿನ ಬಗ್ಗೆ ತನ್ನಿಗೆ ಇಟ್ಟಿರುತ್ತದಾಗಿಯೂ, ಪ್ರತಿವಾದಿಯು ಸದ್ರಿ ದಾವೆಯಲ್ಲಿ ಉತ್ತರಿಸುವಂಥಾದ್ದು ಯಿದ್ದಲ್ಲಿ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನಲ್ಲಿ ಹಗಲು 10 ಗಂಟೆಗೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದೆಂತಲ್ಲ ಸಹಾ ಯಿ ಮೂಲ್ಯ ತಿಳಿಸೋಣಾಗಿಯದೆ.

K. Varadaraya Pai.
Advocate for Plaintiff.
Udipi, Date 17-3-48.

ಮಾರಾಟಕ್ಕಿದೆ

ಡೆಲ್ಕೊ ಲೈಟ್ ಮೋಡೆಲ್ 1286 ಸರ್ವೋಪಕರಣ ಎಂಜಿನುಗಳುಳ್ಳ 2½ ಎಚ್. ಪಿ. ಶಕ್ತಿಯುತವಾದ 32 ವಾಲ್ಟ ಪ್ರಮಾಣದ 1½ ಕೆಂಡಬ್ಲ್ಯು ಸೆಕೆಂಡ್ ಹೆಂಡ್ ಚಾಲೂಸ್ಥಿತಿಯಲ್ಲಿರುವ ಮೆಶಿನು. ಇದರ ಉಪಯೋಗದಿಂದ ಇಲೆಕ್ಟ್ರಿಸಿಟಿ ಇಲ್ಲದ ಸ್ಥಳದಲ್ಲಿಯೂ ಇಲೆಕ್ಟ್ರಿಸಿಟಿ ಪಡೆಯಬಹುದು. ಅಂದಾಜು ಕ್ರಯ ರೂಪಾಯಿ 900/. ಖಾಯಿಸಿಯುಳ್ಳವರು ಕೂಡಲೇ ವಿಚಾರಿಸಿರಿ:—

ರಾಮಕೃಷ್ಣ ಗುಂಡುನಾಯಕ್, ಮರ್ಚೆಂಟ್, ರಥಬೀದಿ, ಉಡುಪಿ.

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ, ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ ಹಲ್ಲು ಪುಡಿ

ಒಂದು ತೊಲೆ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಕೊ.
ಲಿಮಿಟೆಡ್,
ಕಾಸರಗೋಡು, ದ. ಇಂಡಿಯ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವ ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 1೧ ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ವಾಲಿ ಸಂಗ್ತಿ ಬರದಲ್ಲಿ ರೋಗಗಳಿಗೆ ತಕ್ಕುದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಪರಿಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಅದಿವಸಗಳಿಗೆ ಬರುವವು. ಅಂದರೆ ಕೇವಲ ೯ ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ಕೀಡಿಯೋ ಸಂಯೋಜನೆ— ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! **ಉತ್ತಮ ಉಪಚಾರ**

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟಿ ಮುಂತಾದುವುಗಳ ಆರ್ಡರಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,
Boarding & Lodging,
KATAPADI, S. K.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

1-4-1948

ನವಯುಗ

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

ವರ್ಷ ೨೮ / ವಾರ ೩೦

Vol. 28 / No. 30

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮೆನೇಜರ್,
ನವಯುಗ ಉಡುಪಿ.

ಶ್ರೀ. ಓಮಂದೂರರ ಮರು ಚುನಾವಣೆ

ತಾ. 26-3-48ರಲ್ಲಿ ಮದ್ರಾಸಿನಲ್ಲಿ ಸೇರಿದ ಮದ್ರಾಸ್ ನ್ಯಾಯವಿಧಾಯಕ ಸಭೆಗಳ ಕಾಂಗ್ರೆಸ್ ಪಕ್ಷದ ವಾರ್ಷಿಕ ಸಭೆಯಲ್ಲಿ ಈಗಿನ ಪ್ರಧಾನ ಮಂತ್ರಿಗಳಾದ ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರೇ ಪುನಃ ನಾಯಕರಾಗಿ ಆರಿಸಲ್ಪಟ್ಟಿದ್ದಾರೆ. ಅವರಿಗೆ 112 ಮತಗಳೂ ಅವರ ಪ್ರತಿಸ್ಪರ್ಧಿಗಳಾಗಿದ್ದ ಹಿಂದಿನ ಪ್ರಧಾನಮಂತ್ರಿ ಶ್ರೀ ಟಿ. ಪ್ರಕಾಶಮರಿಗೆ 84 ಮತಗಳೂ ದೊರೆತಿವೆ. ಈ ಚುನಾವಣೆಯು ಕಾಲದ ವರೆಗೂ ಇಡೀ ಪ್ರಾಂತ್ಯದಲ್ಲಿ ಹಬ್ಬಿದ್ದ-ಸ್ವತಃ ಹಲವು ಸದಸ್ಯರಲ್ಲಿದ್ದ-ಒಂದು ನಂಬಿಕೆಗೆ ವಿರುದ್ಧವಾದ ಪರಿಣಾಮವಿದು; ತುಸು ಆಶ್ಚರ್ಯಕರ ಫಲಿತಾಂಶವೆಂದೇ ಹೇಳಬಹುದು.

ಕಳೆದ ಬಾರಿಯ ಚುನಾವಣಾನಂತರ, ಶ್ರೀ. ಟಿ. ಪ್ರಕಾಶಮ್ ಮಂತ್ರಿಮಂಡಲದ ಸ್ಥಾಪನೆಯೊಂದಿಗೆ ಮದ್ರಾಸಿನಲ್ಲೆದ್ದಿದ್ದ ನಾಯಕತ್ವ ಸ್ಪರ್ಧೆಯು ಪರಿಸ್ಥಿತಿಗನುಸರಿಸಿ, ಸಡಿಲಗೊಂಡಿದ್ದರೂ ವಾತಾವರಣವಿದುವರೆಗೂ ಶಾಂತವಾದುದಿಲ್ಲ. ಭಾಷಾವಾರು ಪ್ರಾಂತ್ಯಗಳು ನಿರ್ಮಾಣಗೊಂಡು ನವ ರಾಜ್ಯಾಂಗಾನುಸಾರವಾಗಿ ಹೊಸ ಶಾಸನ ಸಭೆಗಳಾಗುವ ವರೆಗೂ ಈ ಭೇದ ಭಾವನೆಯು ಪೂರ್ತಿ ನಿವಾರಣೆಯಾಗುವಂತಹದಲ್ಲ. ಈ ರೀತಿ ಅಧಿಕಾರದಲ್ಲಿರುವ ಒಂದು ಪಕ್ಷದೊಳಗೇನೇ ಹೃದಯೈಕ್ಯತೆಯಿಲ್ಲದ್ದರಿಂದಾಗಿ, ಅಧಿಕಾರ ಸೂತ್ರಧಾರಿಗಳು ಅತಿರೇಕ ಮುಂಜಾಗರೂಕತೆ ವಹಿಸಬೇಕಾಗಿ ಬಂದು ಪ್ರಾಂತ್ಯದ ಆಡಳಿತೆಯಲ್ಲೂ ಅದರ ಪರಿಣಾಮವು ಕಂಡುಬರುವುದು ಸಹಜವಿದೆ. ಆದರಿದು ಬುದ್ಧಿ ಸುಧಾರಣೆಯ ಕೆಲಸ; ಮನೋಮಟ್ಟವನ್ನೇರಿಸಿಕೊಳ್ಳುವ ಕಾರ್ಯ; ಶಾಸನ ಮೂಲಕ ನಿರ್ಮಿಸುವಂತಹದಲ್ಲವಾದ್ದರಿಂದ ನಿರ್ವಾಹವಿಲ್ಲ!

ಕಳೆದ ವರುಷದ ವರೆಗೆ ಕಾಂಗ್ರೆಸ್ ಪಕ್ಷದ ನಾಯಕ ಮತ್ತು ಮೂಲಕ ಮದ್ರಾಸಿನ ಪ್ರಧಾನ ಮಂತ್ರಿಯಾಗಿದ್ದ ಶ್ರೀ. ಟಿ. ಪ್ರಕಾಶಮರ ಸ್ಥಾನವು 1947ನೇ ಮಾರ್ಚ ತಾ. 21ರಲ್ಲಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯಾರರಿಗೆ ದೊರೆತಿದ್ದಿತು. ಈ ಬದಲಾವಣೆಯ ಆಂದೋಲನದಲ್ಲಿ ವಿಶೇಷವಾದ ವಿವಾದಗಳಿದ್ದುವು. ಕೊನೆಗೆ ಕಾಂಗ್ರೆಸ್ ಅಧಿನಾಯಕರೂ ಈ ಜಗಳದ ಮಧ್ಯ ಪ್ರವೇಶಿಸಬೇಕಾಗಿ ಬಂದಿತ್ತು. ಅತಿರೇಕ ಎಳೆದಾಟಗಳ ನಡುವೆ, ನ್ಯಾಯನೀತಿ ಸೂತ್ರಗಳು ಅಲುಗಾಡಿಯಲುಗಾಡಿ ಕೊನೆಗೆ ಅವುಗಳನ್ನಾಧರಿಸಲು ಕಾಂಗ್ರೆಸ್ ಹೈಕಮಾಂಡ್ ಪ್ರವೇಶಿಸಿದ ಮೇಲೆ ಶ್ರೀ. ಓಮಂದೂರರು ಕ್ರಮಬದ್ಧವಾಗಿ ಚುನಾವಣೆಗೊಂಡಿದ್ದರು. ಇದೇ ಮಾರ್ಚ ತಾ. 26 ಓಮಂದೂರರ ಆಡಳಿತೆಗೆ ವರ್ಷತುಂಬಿದ ಅವಧಿ; ಈ ನಡುವೆ ಮೊದಲೇ ಇದ್ದ ಭಿನ್ನತೆಗಳಿಗೆ ಇನ್ನಷ್ಟು ಪುಷ್ಟಿ ದೊರೆತಂತೆ ತೋರಿದ್ದಿತು; 1947ನೇ ಮಾರ್ಚ 21ರಲ್ಲಿ ಶ್ರೀ. ಟಿ. ಪ್ರಕಾಶಮರಿಗೊದಗಿದ್ದ ಅದೃಷ್ಟವೇ 1948ನೇ ಮಾರ್ಚ ತಾ. 26ರಲ್ಲಿ ಶ್ರೀ ಓಮಂದೂರರನ್ನು ಕಾಯುತ್ತಿದೆ ಎಂಬಂತೆ ಕಾಣುತ್ತಿತ್ತು. ಈ ನಂಬಿಕೆಯನ್ನು ಬಲಗೊಳಿಸುವ ವಾರ್ತೆಗಳೂ, ಊಹಾಧರಿತ ಅಂಕೆ ಸಂಖ್ಯೆಗಳೂ ಪ್ರಾಂತ್ಯದ ಹಳ್ಳಿ ಮೂಲೆಗಳಿಗೂ ಹಬ್ಬಿದ್ದುವು. ಪದ್ಧತಿಯಂತೆ ವರುಷಕ್ಕೊಮ್ಮೆ ನಡೆಯಲೇಬೇಕಾದ ನಾಯಕ ಚುನಾವಣೆಯಲ್ಲೇ ಬದಲಾವಣೆಯ ತಯಾರಿ ನಡೆದಿದ್ದುದರಿಂದ 'ಅವಿಶ್ವಾಸ ಸೂಚನೆ'ಯ ಕಾಲದಲ್ಲಿದ್ದಂತಹ ಗೊಂದಲ, ಆವೇಶಗಳಾವುವೂ ಇರದಿದ್ದರೂ ಅಂತರ್ಗಾಮೀ ಚಳವಳವು ಈ ಬಾರಿ ಪ್ರಬಲವಾಗಿತ್ತೆಂದು ಊಹಿಸಬಹುದು; ಅವುಗಳ ಮೇಲಿಂದ ಶ್ರೀ. ಟಿ. ಪ್ರಕಾಶಮರೇ ಪುನಃ ಚುನಾಯಿಸಲ್ಪಡಬಹುದೆಂಬ ಆಶೆಯು ಕೊನೆಯ ಮುಹೂರ್ತದ ವರೆಗೂ ಪ್ರಬಲವಿದ್ದಿತು.

ಆ ಸಭೆಯಲ್ಲಿ

ಮದ್ರಾಸಿನ ಸರಕಾರೀ ಭವನದಲ್ಲಿ ನಿಶ್ಚಿತದಿನ ಮತ್ತು ಸಮಯ ತಾ. 26ನೇ ಅಪರಾಹ್ನ 5ಕ್ಕೆ ಸರಿಯಾಗಿ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಪಕ್ಷದ ಸಭೆಯು ಸೇರಿತು; 192 ಮಂದಿ ಸದಸ್ಯರು ಸಭೆಯಾರಂಭಿಸುವಾಗಲೇ ಹಾಜರಿದ್ದು, ಆ ಮೇಲೆ ಮತ್ತೈದು ಮಂದಿ ಬಂದುಸೇರಿದರು. ನಾಯಕ ಚುನಾವಣೆಯ ಆವೇಗ ವಿಶೇಷವಿದ್ದುದರಿಂದ ಜನಸಂದಣಿ ಅಧಿಕ ಸಂಖ್ಯೆಯಲ್ಲಿ ಹೊರಾಂಗಣ ತುಂಬಾ ಕೂಡಿದ್ದಿತು; ಎಲ್ಲರೂ ಆತ್ಯಾತುರಗೊಂಡಿದ್ದರು; ಇಕ್ಕಡೆಯ ಜನರೂ ಇಬ್ಬರು ಉಮೇದ್ವಾರಿಗಳ ಪರವಾಗಿ ಘೋಷಗಳನ್ನೆಬ್ಬಿಸುತ್ತಿದ್ದರು. ಪೋಲೀಸ್ ಬಂದೋಬಸ್ತು ವಿಶೇಷವಿದ್ದಿತು; ಹೆಬ್ಬಾಗಿಲಲ್ಲಿ ಸವಾರ ಪೋಲೀಸರ ಕಾವಲು ನಡೆದಿದ್ದಿತು. ಸಭಾಭವನದ ಬಾಗಿಲು ಹಾಕಿಕೊಂಡಿದ್ದರಲ್ಲದೆ, ಒಳಗಿನ ವರಾಂಡದಲ್ಲಿ ಪತ್ರಿಕಾವಾಲರು ಮತ್ತು ಪಹರೇ ಪೋಲೀಸರಿಗಲ್ಲದೆ ಬೇರಾರಿಗೂ ಪ್ರವೇಶವಿರಲಿಲ್ಲ. ಒಳಗಡೆ ಸಭೆ ನಡೆಯುತ್ತಿದ್ದಾಗ ಕೆಂಪು ಧ್ವಜಧಾರಿಗಳಾದ ಪ್ರದರ್ಶನಗಾರರ ತಂಡವು "ಪೋಲೀಸ್ ಅತಿಕ್ರಮ"ಗಳ ವಿರುದ್ಧ ಘೋಷಗಳನ್ನೂ "ಉತ್ಪನ್ನಗಳು ಅಧಿಕವಾಗಬೇಕು" ಇತ್ಯಾದಿ ಸೊಲ್ಲುಗಳನ್ನೂ ಎಬ್ಬಿಸುತ್ತಾ ಭವನದ ಸಮೀಪ ಬಂದಾಗ ಪೋಲೀಸರು ಅವರ ಮುಖ ತಿರುಗಿಸಿ ಆ ಕಡೆಯಿಂದತ್ತ ಸಾಗಿಸಿದರು. ಆ ಸಭೆ ಮುಗಿಯುವ ವರೆಗೂ ರಾತ್ರಿ 8 ಘಂಟೆಯ ತನಕ ಹೊರಗಿನ ಜನ ಸಂದಣಿ ಕಾಯುತ್ತಾ ನಿಂತಿದ್ದು ವಿಜಯೀ ಶ್ರೀ ಓಮಂದೂರರು ಹೊರ ಬಂದೊಡನೆಯೇ ಅವರ ಜಯಕಾರವೆದ್ದಿತು. ಕೆಲವರಂತೂ ಬ್ರಾಹ್ಮಣ ವಿರೋಧೀ ಘೋಷಗಳನ್ನೆಬ್ಬಿಸುತ್ತಾ ಮುಂದೊತ್ತಿದಾಗ, ಒಂದೆಡೆ ವರಾಂಡ ನುಗ್ಗದಂತೆ ಪೋಲೀಸರವರನ್ನು ತಡೆಗಟ್ಟಿದೊಡನೆ ಜನರು ಶಾಂತವಾಗಿ ಚದರಿದರು. ಸಭೆ ಮುಗಿಸಿ ಹೋದ ಪ್ರತಿಸ್ಪರ್ಧಿ ಶ್ರೀ. ಟಿ. ಪ್ರಕಾಶಮರು ತನ್ನ ನಿವಾಸದಲ್ಲಿ ಸೇರಿದ ಜನ ಸಂದಣಿಗೆ, ಕಾಂಗ್ರೆಸ್ ತತ್ವಗಳಂತೆ ನಡೆದು ಕಾಂಗ್ರೆಸ್ ಘನತೆಯನ್ನುಳಿಸಿ, ಮಹಾತ್ಮಾ ಗಾಂಧಿಯವರ ಬೋಧನೆಯಂತೆ ವರ್ತಿಸಬೇಕೆಂದು ಭಾಷಣವಿತ್ತರು.

ಸಭಾ ಕಾರ್ಯಕ್ರಮ

ಪದ್ಧತಿಯಂತೆ ಪಕ್ಷನಾಯಕ ಶ್ರೀ. ಓಮಂದೂರರ ಅಧ್ಯಕ್ಷತೆಯಲ್ಲಿ ಸೇರಿದ ಈ ಚುನಾವಣಾ ಸಭೆಯು ಗಾಂಧೀಜೀಯ ನಿಧನಾನಂತರದ ಪ್ರಥಮ ಸಭೆಯಾದುದರಿಂದ ಪ್ರಥಮತಃ ಮಹಾತ್ಮರ ಕೊಲೆಯ ಬಗ್ಗೆ ಅಧ್ಯಕ್ಷರ ಸೂಚನೆಯಂತೆ ದುಃಖ ಸೂಚಿಸುವ ನಿರ್ಧಾರವಾಯಿತು. ಆ ಮೇಲೆ, ಪಕ್ಷದ ಎಲ್ಲಾ ಸದಸ್ಯರೂ ತಮ್ಮ ಸದಸ್ಯ ವರ್ಗಣಿಯನ್ನಿತ್ತಿದ್ದಾರೆಂದೂ, ಈ ಬಾರಿಯ ವರ್ಗಣಿ ಸಂಗ್ರಹವು ಒಂದು ಹೊಸ ದಾಖಲೆಯೆಂದೂ ಪಕ್ಷದ ಕಾರ್ಯದರ್ಶಿ ಶ್ರೀ. ಎನ್. ಯಸ್. ವರದಾಚಾರಿಯವರು ತಿಳಿಸಿ, ಎಲ್ಲರೂ ಮತಕೊಡಲು ಹಕ್ಕುದಾರರೆಂದರು. ಆ ಮೇಲೆ ಪಕ್ಷನಾಯಕನ ಚುನಾವಣಾ ಕಾರ್ಯಾರಂಭ; ಸದಸ್ಯರ ಪಾಲಿನ ಆತ್ಯಾತುರದಾಯೀ ಸನ್ನಿವೇಶ. ಅಧ್ಯಕ್ಷರು ನಾಮಪತ್ರಗಳನ್ನು ಅಪೇಕ್ಷಿಸಿದೊಡನೆ ಡಾ|| ಟಿ. ಯಸ್. ಯಸ್. ರಾಜನರು ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರ ಹೆಸರನ್ನು ಸೂಚಿಸಿದರು. ಮದ್ರಾಸ್ ನಗರದ ಶ್ರೀ. ಎಮ್. ಕನ್ನಿಯಪ್ಪನ್ ಅದನ್ನು ಅನುಮೋದಿಸಿದರು. ಶ್ರೀ. ಟಿ. ಪ್ರಕಾಶಮರ ಹೆಸರನ್ನು ರಾಮನಾಡಿನ ಶ್ರೀ. ಆರ್. ವಿ. ಸ್ವಾಮಿನಾಥಮರು ಸೂಚಿಸಿ, ವಿಶಾಖಪಟ್ಟಮಿನ ಶ್ರೀ. ತೆನ್ನೆಟ್ಟಿ ವಿಶ್ವನಾಥಮರು ಅನುಮೋದಿಸಿದರು. ಬೇರೆ ಹೆಸರುಗಳು ಮುಂದೆ ಬಾರದ್ದರಿಂದ, ಕಾರ್ಯದರ್ಶಿಗಳು ಚುನಾವಣಾ ಸಂಬಂಧದ ಕ್ರಮ ನಿಯಮಗಳನ್ನು ಓದಿ ಹೇಳಿದ ಮೇ

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ, THE UNITED KARNATAK INSURANCE COMPANY, LIMITED.

ಗೆ ಎಲ್ಲಾ ಸದಸ್ಯರಿಗೂ 'ಮತ ಪತ್ರ'ಗಳು ಕೊಡಲ್ಪಟ್ಟವು. ಇಂಗ್ಲಿಷ್ ಬಾರದ ಸದಸ್ಯರುಗಳಿಗಾಗಿ ತೆಲುಗು ಮತ್ತು ತಮಿಳುಗಳಲ್ಲಿಯೂ ಮತ ಚೀಟಿಗಳನ್ನು ತಯಾರಿಸಲಾಗಿತ್ತು. ಹೆಸರು ಕರೆದ ಕ್ರಮದಂತೆ ಎಲ್ಲರೂ ಮತದಾನ ಮಾಡಿದರು. ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರು ಮಾತ್ರ ಮತ ಕೊಡಲಿಲ್ಲ. 7-30ರ ವರೆಗೆ ಮತದಾನ ನಡೆದು ಮತ್ತೊಂದು 20 ಮಿನಿಟು ಗಣನೆಯಾಯಿತು. ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರಿಗೆ 112 ಮತಗಳೂ ಶ್ರೀ. ಟಿ. ಪ್ರಕಾಶಮರಿಗೆ 84 ಮತಗಳೂ ಬಿದ್ದಿದ್ದು ಶ್ರೀ ರೆಡ್ಡಿಯಾರರು ನಾಯಕರಾದರೆಂದು ಜಾಹೀರಾಯಿತು. ಆ ಮೇಲೆ ಮರುಚುನಾವಣೆಗೊಂಡ ರೆಡ್ಡಿಯಾರರ ಅಭಿವಂದನಾ ಭಾಷಣಗಳಾದುವು. ಪ್ರಥಮತಃ ಅಭಿನಂದಿಸಿದವರೆಂದರೆ ಪ್ರತಿಸ್ಪರ್ಧಿಸಿದ ಶ್ರೀ. ಟಿ. ಪ್ರಕಾಶಮರೇ. ತನಗೆ ಬಹುಮತ ದೊರೆಯದೆ ಹೋದುದನ್ನೊಂದು ಪರಾಭವವೆಂದು ತಾನು ಭಾವಿಸುವದಿಲ್ಲವೆಂದೂ, ಬದಲಿಗೆ ಇದು ತನ್ನ ವಿಜಯವೆಂದೇ ಭಾವಿಸುತ್ತೇನೆಂದೂ ಶ್ರೀ. ಟಿ. ಪ್ರಕಾಶಮರೆಂದರು. ಇನ್ನೂ ಬಹುಮಂದಿಯ ಅಭಿವಂದನೆಗಳನ್ನು ಪಡೆದ ಶ್ರೀ. ಓಮಂದೂರರು ಇದು ವ್ಯಕ್ತಿಶಃ ತನಗಾದ ವಿಜಯವೇನೂ ಅಲ್ಲವೆನ್ನುತ್ತಾ, ಪಕ್ಷದ ಎಲ್ಲಾ ಸದಸ್ಯರು ಹಾಗೂ ಸಾರ್ವಜನಿಕರು ಹಾರ್ದಿಕ ಒಗ್ಗಟ್ಟಿನಿಂದ ಕೆಲಸ ಮುಂದೊತ್ತಲು ನೆರವಾಗಬೇಕೆಂದು ಎಲ್ಲರನ್ನೂ ವಿಜ್ಞಾಪಿಸಿಕೊಂಡರು. ಅಲ್ಲಿಗೆ ಅಧಿವೇಶನ ಮುಗಿಯಿತು. ಮದ್ರಾಸ್ ಕಾಂಗ್ರೆಸ್ ಪಕ್ಷದಲ್ಲಿ 104 ಮಂದಿ ತಮಿಳು ನಾಡಿನ ಸದಸ್ಯರೂ 79 ಮಂದಿ ಆಂಧ್ರದ ಸದಸ್ಯರೂ 18 ಮಂದಿ ಮಲಬಾರ್ ಮತ್ತು ದಕ್ಷಿಣ ಕನ್ನಡದವರೂ ಇದ್ದಾರೆ. ಈ ಪೈಕಿ ತಮಿಳು ನಾಡಿನ ಮತ್ತು ಆಂಧ್ರದ ಇಬ್ಬರಿಬ್ಬರು ಸದಸ್ಯರು ಅಂದಿನ ಸಭೆಗೆ ಬಂದಿರಲಿಲ್ಲ

ಈ ಭೇದ ಬುದ್ಧಿ

ಅಂತೂ ಇನ್ನೊಂದು ವರುಷದ ವರೆಗಿನ ಮದ್ರಾಸ್ ನಾಯಕತ್ವ ನಿರ್ಧಾರಗೊಂಡಿತು. ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ಶ್ರೀ ಓಮಂದೂರರು, ಸರ್ವರ ಹೃದಯೈಕ್ಯತೆಗಾಗಿ ಮಾಡಿಕೊಂಡ ವಿನಂತಿಯನ್ನು ಪ್ರಾಂತ್ಯದ ಹಿತಾಕಾಂಕ್ಷಿಗಳೆಲ್ಲರೂ ಅನುಮೋದಿಸಲೇಬೇಕು. ನವಭಾರತ ಚರಿತ್ರೆಯ ಶಾಸನ ಸಭಾಧ್ಯಾಯದಲ್ಲಿ ಮದ್ರಾಸ್ ವಿಭಾಗದಷ್ಟು 'ಬರೆಯುವ-ತಿದ್ದುವ' ಕೆಲಸ ನಡೆದ ಬೇರೊಂದು ಭಾಗವಿಲ್ಲ. ಪ್ರಥಮ ಬಾರಿ, ರಾಜಾಜೀಯನ್ನು ಬದಿಗೆ ತಳ್ಳಿ ಶ್ರೀ. ಟಿ. ಪ್ರಕಾಶಮರು ನಾಯಕತ್ವಕ್ಕೆ ಬಂದರು; ಒಂದು ವರುಷ ತುಂಬುವುದರೊಳಗೆ ಅವರು ಉರುಳಿ ಬಿದ್ದು ಶ್ರೀ. ಓಮಂದೂರರು ಮುಂದಾದರು; ಅದಾಗಿ ವರುಷ ತುಂಬಿದೊಡನೆ ಪುನಃ ತನ್ನ ಕಾಲನೇ ಬಂತೆಂದು ಶ್ರೀ. ಪ್ರಕಾಶಮರೊಮ್ಮೆ ಆಶಿಸುವಂತಹ ಪರಿಸ್ಥಿತಿಯೊದಗಿದ್ದಿತು. ಈ ಬಾರಿ ಆ ಪರ್ಯಾಯ ತಪ್ಪಿದರೂ ಒಂದು ಪಕ್ಷದ-ಅದರಲ್ಲೂ ಜನಸೇವೆಯೇ ತನ್ನ ಮುಖ್ಯ ಹೆಗ್ಗುರಿಯಾದ ಕಾಂಗ್ರೆಸ್ ಪಕ್ಷದೊಳಗಿನ ಸ್ಥಿತಿಗತಿಗಳು ಇರಬೇಕಾದ ಸ್ಥಿತಿಯಲ್ಲಿಲ್ಲವೆಂಬುದಂತೂ ಖಂಡಿತ. ಇಂತಹ ಪರಿಸ್ಥಿತಿಗೆ ಮುಂದೆ ಬಂದಿರುವ ಕಾರಣಗಳಾದರೋ ಯಾರೂ ಹೆಗ್ಗಳಿಕೆಪಡುವಂತಹವಲ್ಲ-ಬ್ರಾಹ್ಮಣ-ಬ್ರಾಹ್ಮಣೇತರ ಕಾಳಗ, ತಮಿಳು-ಆಂಧ್ರ ಜಗಳ, ಇತ್ಯಾದಿ ಇತ್ಯಾದಿಗಳೇ ಈ ಜಗಳ ಹೇತುಗಳು. ರಾಜಕೀಯತಃ ಭಿನ್ನ ಪಂಥಗಳಿಗೆ ಸೇರಿದವರು ತಂತಮ್ಮ ಕಾರ್ಯಕ್ರಮಗಳಿಗಾಗಿ ಪರಸ್ಪರ ಹೋರಾಟ ನಡೆಸುವುದನ್ನು ಕಾಣುವಂತಾಗುತಿದ್ದರೆ ಅದು ಪ್ರಜಾಸತ್ತಾ ಆಡಳಿತೆಯ ಸಲ್ಲಕ್ಷಣವೆಂದು ಸಮಾಧಾನ ಪಡಬಹುದಿತ್ತು; ಬದಲಿಗೆ ಜಾತಿ ಅಥವಾ ಭಾಷಾ ಭೇದಗಳನ್ನಾಧರಿಸಿರುವ ಇಂದಿನ ಭಿನ್ನ ಭಾವಗಳು ನಿಜಕ್ಕೂ ಕನಿಕರಾರ್ಹ ಸಂಗತಿಗಳು. ಆದರೆ ಇಷ್ಟಕ್ಕಾಗಿ ನಾವು ಎಲ್ಲವನ್ನೂ ಕಲಸು ಮೇಲೋಗರ ಮಾಡಬಾರದು; ಅಪ್ರಾಮುಖ್ಯ ಸಂಗತಿಗಳ ಮೇಲಾದರೂ ಅನಗತ್ಯ ಮಹತ್ವವನ್ನು ಆವಾಹನೆ ಮಾಡಬಾರದು. ಜಸ್ಟೀಸ್ ಪಕ್ಷವು ಜೀವಂತವಿದ್ದಾಗ ಮದ್ರಾಸ್ ಪ್ರಾಂತ್ಯದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಬ್ರಾಹ್ಮಣ-ಬ್ರಾಹ್ಮಣೇತರ ವೈಷಮ್ಯವೇ ತಾಂಡವವಾಡುತ್ತಿದ್ದರೂ ಇಂದು ಅದಕ್ಕೊಂದು ಸ್ಥಾನವಿಲ್ಲ. ಮದ್ರಾಸು ಈ ಬಾರಿ ವಿವಾದ ರಂಗವಾಗಲು ಮೂಲತಃ ಕಾರಣರಾದ ರಾಜಾಜಿ ಮತ್ತು ಶ್ರೀ. ಟಿ. ಪ್ರಕಾಶಂ, ಇಬ್ಬರೂ ಬ್ರಾಹ್ಮಣರೇ. ನಾಯಕತ್ವಕ್ಕಾಗಿ ಶ್ರೀ. ಟಿ. ಪ್ರಕಾಶಂರನ್ನು ಆ ಬಾರಿ ಸ್ಪರ್ಧಿಸಿದ್ದ ಬ್ರಾಹ್ಮಣೇತರ ಸದಸ್ಯರಿಗೆ, ಅಧಿಕ ಸಂಖ್ಯಾಕ ಬ್ರಾಹ್ಮಣೇತರ ಸದಸ್ಯರೇ ಇದ್ದ ಕಾಂಗ್ರೆಸ್ ಪಕ್ಷದಲ್ಲಿ ಬಹುಮತ ದೊರೆಯಲಿಲ್ಲ. ಕಳೆದ ವರುಷದ ಮಾರ್ಚ್ ತಾ. 21ರಲ್ಲಿ ಶ್ರೀ. ಓಮಂದೂರರನ್ನು ಮುಂತರುವುದಕ್ಕೂ ಈ ಬಾರಿ ಮಾರ್ಚ್ ತಾ. 26ರಲ್ಲಿ ಶ್ರೀ ಓಮಂದೂರರ ನಾಯಕತ್ವವೇ ಮುಂದುವರಿಯುವಂತೆ ಮಾಡುವುದಕ್ಕೂ ಎಲ್ಲರಿಗಿಂತ ಹೆಚ್ಚಿಗೆ ದುಡಿದವರೆಂದರೆ ಓರ್ವ ಬ್ರಾಹ್ಮಣ ಸದಸ್ಯರೇ ಆದ ಡಾ|| ಯಸ್. ಯಸ್. ರಾಜನರು. ಆದ್ದರಿಂದ ಈಗಲೂ ಮದ್ರಾಸ್ ರಾಜಕೀಯವು ಈ ಜಾತೀಯತೆಯನ್ನಾಧರಿಸಿ ನಿಂತಿದೆ ಎಂದು ಕಲ್ಮಷ ಪ್ರೇಮಿಗಳಲ್ಲದೆ ಬೇರಾರೂ ಹೇಳಲಾರರು. ಆದರೆ ಭಾಷಾವಾರು ಭಾಗಗಳೊಳಗಿನ ಹೋರಾಟ ಮಾತ್ರ ಸ್ಪಷ್ಟವಾಗಿ ಕಾಣುತ್ತಿದೆ. ರಾಜಾಜೀ-ಪ್ರಕಾಶಂ ಸ್ಪರ್ಧೆ, ಓಮಂದೂರು-ಪ್ರಕಾಶಂ ಹೋರಾಟಗಳಲ್ಲಿ ತಮಿಳು-ಆಂಧ್ರ ಪೈಪೋಟಿಯೊಂದೇ ಒಡೆದು ತೋರುತ್ತಿದೆ. ಇದು ಕೆಲ ಮಟ್ಟಿಗೆ ಸಹಜವೇ ಆದರೂ ಸದ್ಯಸ್ಥಿತಿಯಲ್ಲಿ ಶೋಚನೀಯ.

ಐಕ್ಯದ ಆವಶ್ಯಕತೆ

ಬ್ರಿಟಿಷ್ ಸರಕಾರವು ಇಲ್ಲಿಯ ಸ್ಥಿತಿಗತಿ ಸ್ವಭಾವ ಸಂಸ್ಕಾರವಾವುದನ್ನೂ ಗಣಿಸದೆ, ತನ್ನ ಆ ಕಾಲದ ಆಡಳಿತೆಗನುಕೂಲವಾಗುವಂತೆ ಎಂದೋ ನಿರ್ಮಿಸಿ ಹಾಕಿದ್ದ ಮದ್ರಾಸ್ ಪ್ರಾಂತ್ಯದಲ್ಲಿ ತಮಿಳು, ಆಂಧ್ರ, ಕರ್ನಾಟಕ, ಮಲೆಯಾಳ ಭಾಗಗಳ 'ಚದುರಂಗ' ವಿರುವುದರಿಂದಲೇ ಇಂತಹ ರಾಜಕೀಯ ಪಗಡೆಯಾಟ ಆಗಾಗ ನಡೆಯುತ್ತಿದೆ. ಈಗಿನ ಸದಸ್ಯರ ಪಟ್ಟಿಯಂತೆ ಮದ್ರಾಸಿನ ಕಾಂಗ್ರೆಸ್ ಶಾಸನ ಸಭಾ ಸದಸ್ಯರ ಒಟ್ಟು ಸಂಖ್ಯೆ 201ರಲ್ಲಿ 104 ಮಂದಿ ತಮಿಳು ನಾಡಿನವರೇ. ಉಳಿದ 79 ಮಂದಿ ಆಂಧ್ರದವರು. ದಕ್ಷಿಣ ಕನ್ನಡ ಮತ್ತು ಮಲಬಾರುಗಳ ಒಟ್ಟು ಸದಸ್ಯರ ಸಂಖ್ಯೆ 18 ಮಾತ್ರ. ಅಂದರೆ ಮದ್ರಾಸ್ ಪ್ರಾಂತ್ಯದಲ್ಲಿ ಮಿಕ್ಕೆಲ್ಲಾ ಭಾಗಗಳವರು ಒಟ್ಟಾದರೂ ತಮಿಳರದೇ ಬಹುಮತವಾಗುವದು. ಆ ಮೇಲೆ ಆಂಧ್ರದವರೇ ಅತ್ಯಧಿಕ ಸಂಖ್ಯಾಕರು. ಇವರಿಬ್ಬರನ್ನಲ್ಲದೆ ಬೇರೆಯವರನ್ನು ಲಕ್ಷ್ಯಿಸುವ ಅಗತ್ಯವೇ ಇಲ್ಲವೆಂಬಷ್ಟು ಅಲ್ಪ ಸಂಖ್ಯೆಯಲ್ಲಿ ಕೇರಳೀಯರೂ ಕನ್ನಡಿಗರೂ ಇದ್ದಾರೆ. ಆದ್ದರಿಂದಲೇ ಶಾಸನ ಸಭೆಗಳ ರಚನೆಯಾದಂದಿನಿಂದ ಇದುವರೆಗೂ ತಮಿಳುನಾಡವರೇ ಅಲ್ಲಿಯ ನಾಯಕರಾಗಿದ್ದಾರೆ. ಆಂಧ್ರದವರು ಶ್ರೀ ಪ್ರಕಾಶಮರಂತೆ ಕೆಲ ಮಂದಿ ತಮಿಳು ಸದಸ್ಯರ ಬೆಂಬಲದಿಂದ ನಾಯಕರಾಗಿ ಒಂದೊಮ್ಮೆಗೆ ಬಂದರೂ ಆ ನಾಯಕತ್ವದ ಬಾಳುವೆ ದೀರ್ಘವಾಗುವದಿಲ್ಲ. ಕನ್ನಡಿಗರಲ್ಲಿ ಮತ್ತು ಮಲೆಯಾಳಿಗಳಲ್ಲಿ ಎಂತಹ ಯೋಗ್ಯತೆಯಿದ್ದರೂ ಅವರನ್ನು ತಮ್ಮ ಬಾಲವಾಗಿ ಇಟ್ಟುಕೊಳ್ಳುವದಕ್ಕಲ್ಲದೆ ಬೇರಾವುದಕ್ಕೂ ಆ ಬಹುಸಂಖ್ಯಾಕರು ಆಹ್ವಾನಿಸಲಾರರು. ಆದ್ದರಿಂದಲೇ ಭಾಷಾವಾರು ಪ್ರಾಂತ್ಯಗಳ ರಚನೆಯಾಗಬೇಕೆಂಬ ಬೇಡಿಕೆಯಲ್ಲಿ ಈಗೀಗ ವಿಶೇಷ ಬಲ ಕಂಡುಬರುತ್ತಿದೆ; ಈ ಕುರಿತು ತಡವಾಗುತ್ತಿರುವ ಕಾರಣಗಳನ್ನು ಕೇಳುವ ಸಹನೆ ಕೂಡಾ ಸ್ವಾಭಾವಿಕವಾಗಿ ತಪ್ಪುತ್ತಿದೆ; ಭಾಷಾವಾರು ಪ್ರಾಂತ್ಯಗಳನ್ನು ರಚಿಸುವ ಕಾರ್ಯಾರಂಭಿಸುವುದರಲ್ಲಿದೆ. ಅಂತೂ ಸ್ವತಂತ್ರ ಭಾರತದ ಹೊಸ ರಾಜ್ಯಾಂಗದಲ್ಲಿ ಭಾಷಾವಾರು ಪ್ರಾಂತ್ಯಗಳ ನವೀನ ನಿರ್ಮಾಣವಿದ್ದು ಎಲ್ಲವೂ ಹೊಸತಾಗಿ ರೂಪುಗೊಳ್ಳುವವೆಂಬುದು ಖಂಡಿತ. ಈಗ 'ಮದ್ರಾಸ್ ಶಾಸನ ಸಭೆ'ಯಾಗಿರುವ ಗುಂಪು 'ತಮಿಳು ನಾಡು ಶಾಸನ ಸಭೆ' 'ಆಂಧ್ರ ದೇಶ ಶಾಸನ ಸಭೆ' 'ಕರ್ನಾಟಕ ಶಾಸನ ಸಭೆ' 'ಐಕ್ಯ ಕೇರಳ ಶಾಸನ ಸಭೆ'ಗಳಾಗಿ ಚತುರ್ಹೋಳುಗಳಾಗಲಿದೆ. ಮಾತ್ರವಲ್ಲ, ಪ್ರಾಯಸ್ಥರೆಲ್ಲರ ಮತದಾನದಿಂದ ಬಹುಶಃ ಲಕ್ಷಕ್ಕೊಬ್ಬನಂತೆ ಪ್ರತಿನಿಧಿಯು ಈ ಸಭೆಗಳಿಗಾರಿಸಲ್ಪಡಲಿದ್ದಾನೆ. ಇವೆಲ್ಲಾ ಕ್ರಮನಿಬಂಧನೆಗಳೂ ಈಗ ನಿರ್ಮಾಣಾಂಕದಲ್ಲಿರುವುದ ... ವುಗಳ ಸ್ಪಷ್ಟ ಚಿತ್ರವನ್ನೀಗಲೇ ಬಿಡಿಸುವುದಸಾಧ್ಯವಾದರೂ ಮುಂದಿನ ಚುನಾವಣೆ ಮತ್ತು ಸರಕಾರಗಳು ಈಗಿನದಕ್ಕಿಂತ ಪೂರ್ಣ ಭಿನ್ನ ರೀತಿಯವಾಗುವವೆಂಬುದಂತೂ ಖಂಡಿತ. ಇನ್ನೇನು, ಒಂದೆರಡು ವರುಷಗಳ ಮಾತು. ಅಂದ ಮೇಲೆ ಈ ಅಲ್ಪಾವಧಿಯಲ್ಲಿ ಈಗಿನ ಮದ್ರಾಸಿನ ಕಾಂಗ್ರೆಸಿಗರು, ಕೊನೆಯ ಅವಧಿಯ ಐಕ್ಯತೆ-ಅಗಲುವ ಕಾಲದ ಸೌಹಾರ್ದತೆ-ಬೇರೆಬೇರೆ ಮನೆ ಮಾಡಿಕೊಳ್ಳಲಿರುವ ಸಹೋದರರೊಳಗಿನ ಸಂಧಿ ಮಧ್ಯಾವಧಿಯ ಬಂಧು ಪ್ರೇಮ-ವನ್ನಾದರೂ ಪ್ರದರ್ಶಿಸುವದು ಬೇಡವೆ? ಇನ್ನಿರುವ ಅಲ್ಪಾವಧಿಯಲ್ಲಿ ಎಲ್ಲಾ ಭಿನ್ನ ಭೇದಗಳನ್ನೂ ಮರೆತು ಪ್ರಾಂತ್ಯದ ಉನ್ನತಿಯನ್ನು ಸಾಧಿಸಬಾರದೆ?

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**

Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.

Bombay Life Building,

Central Office, Udipi

Branches at:

Mangalore, Calicut, Trivandrum, Madura, Madras, Bangalore & Bombay,

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¼% per annum.

For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ರೇಶನ್ ಕಾರ್ಡುಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ವಿಚಿತ್ರ—ಆದರೆ ಸತ್ಯ

ಗಾಂಧೀಜೀಯ ಬರೋಣವನ್ನು ಕಾಯುವವ–

ಮಹಾತ್ಮಾಜೀ ಸತ್ತ ವಾರ್ತೆ ಕೇಳಿದೊಡನೆಯೇ ಬಿದ್ದು ಸತ್ತ ಕೆಲವರನ್ನಾದರೂ ಮರೆತಿರಲಾರರು. ಧಿಲ್ಲಿಯಲ್ಲಿ ಗಾಂಧೀಜೀ ಕೊಲೆಯಾದರೆಂಬ ಸುದ್ದಿ ಕೇಳಿದೊಡನೆ ಮದ್ರಾಸಿನಲ್ಲಿದ್ದ ಓರ್ವ ಸನ್ಯಾಸಿ ಅವರನ್ನು ತಾನು ಬದುಕಿಸುವೆನೆನ್ನುತ್ತ ಶ್ರೀ ಅಲಗಪ್ಪ ಚೆಟ್ಟಿಯಾರರ ವಿಮಾನ ಹತ್ತಿ ಧಿಲ್ಲಿಗೆ ಹೋಗಿ ಗಾಂಧೀಜೀಯ ಶವ ಮುಟ್ಟಿ ನಿರ್ಧಿಷ್ಟ ಮಂತ್ರಮಾಟ ನಡೆಸಿ ಆ ದುಃಖದಲ್ಲೂ ಒಂದು ವಿನೋದ ನಿರ್ಮಿಸಿದ್ದ ಸಂಗತಿಯು ಆಗಲೇ ಪ್ರಕಟವಾಗಿದ್ದಿತು. ಈಗ ಗಾಂಧೀಜೀ ಬರುತ್ತಾರೆಂದು ಅಂತಃಕರಣಪೂರ್ವಕವಾಗಿ ಕಾಯುತ್ತಾ ಇರುವ ಓರ್ವ ಮನುಷ್ಯನಿದ್ದಾನೆಂದು ತಿಳಿದುಬಂದಿದೆ. ಅವನೆಂದರೆ ಸೇವಾಗ್ರಾಮದಲ್ಲಿರುವ ಗಾಂಧೀಜೀಯ ಗುಡಿಸಲಿನ ಕಾವಲುಗಾರ. ಮಹಾತ್ಮರು ಮರಣಹೊಂದುವ ಎಷ್ಟೋ ಕಾಲಕ್ಕೆ ಮೊದಲೇ ಸೇವಾಗ್ರಾಮ ಬಿಟ್ಟಿದ್ದರು. ಮನೆಯ ಮೇಲ್ವಿಚಾರ ಈ ಮನುಷ್ಯನ ಕೈಯಲ್ಲೇ ಬಂದಿನಿಂದಿದು ವರೆಗೂ ಇದೆ. ಅವನೀಗ ಗಾಂಧೀಜೀಯ ಆ ಗುಡಿಸಲನ್ನು ನಿತ್ಯ ಗುಡಿಸುತ್ತಾನೆ; ಪುಸ್ತಕಗಳ ಮೇಲಿನ ಧೂಳನ್ನು ಯಥಾಪ್ರಕಾರ ಝಾಡಿಸುತ್ತಾನೆ. ಗಾಂಧೀಜೀಯ ಸ್ನಾನದ ಪಾತ್ರೆಗೆ ನೀರನ್ನು ತುಂಬಿಸಿಡುತ್ತಾನೆ. ಗುಡಿಸಲಿನೊಳಗೆ ಮಲಗಿರುವ ಮಹಾತ್ಮರೆದ್ದು ಬರುವಾಗ, ಅವರ ನಿತ್ಯಕೃತ್ಯಗಳಿಗೇನೇನು ಬೇಕೋ ಅದೆಲ್ಲವನ್ನೂ ಗಾಂಧೀಜೀ ಜೀವದಲ್ಲಿರುವಾಗ ಹೇಗೋ ಹಾಗೆಯೇ ಈಗಲೂ ಅಣಿ ಮಾಡಿಟ್ಟು ಕಾಯುತ್ತಾ ಇದ್ದಾನೆ; ಗಾಂಧೀಜೀ ಬಂದೇ ಬರುವರೆಂದು ಅವನ ನಂಬಿಕೆ. ವಾರ್ಧಾದಲ್ಲಿ ಇತ್ತೀಚೆಗೆ ಸೇರಿದ ಗಾಂಧೀ ಭಕ್ತರ ಸಮ್ಮೇಳನಕ್ಕೆ ಹೋಗಿದ್ದ ಪಂಡಿತ ಜವಾಹಿರಲಾಲರು ಸೇವಾಗ್ರಾಮದ ಈ ಗುಡಿಸಲಿಗೆ ಭೇಟಿಕೊಟ್ಟಿದ್ದರು. ಆಗ ಆ ಗುಡಿಸಲನ್ನೂ ಕಾವಲುಗಾರನ ಈ ವರ್ತನೆಯನ್ನೂ ನೋಡಿ ಪಂಡಿತಜೀಯ ಕಣ್ಣು ತುಂಬಿಬಂತು.

ಅಧ್ಯಾಪಕ-ವಿದ್ಯಾರ್ಥಿ ಸಮಾನತೆ

ಸ್ತ್ರೀಪುರುಷ ಸಮಾನತೆ, ಬಡವ ಶ್ರೀಮಂತ ಸಮಾನತೆ, ಇತ್ಯಾದಿ ಬಹುತೇಕವಾಗಿ ಎಲ್ಲಾ ವಿಧದ ಸಮಾನತೆಗಳನ್ನೂ ಕೇಳುವ ಕಾಲವಿದೇನೋ ನಿಜ. ಆದರೆ ಉಪಾಧ್ಯಾಯ ವಿದ್ಯಾರ್ಥಿ ಸಮಾನತೆಯಿರಬೇಕೆಂಬ ಚಳವಳವಿದ್ದರೆ ಹೇಗೆ? ಇದೊಂದು ವಿನೋದ ಅಥವಾ ಹುಚ್ಚಾಟವೆನ್ನುವವರೇ ಬಹಳ ಮಂದಿ. ಲಂಡನಿನ 'ಕಿಬ್ಲಾಸ್ಟ್ ಹಾಲ್ ಸ್ಕೂಲ್' ಮತ್ತು 'ಹೊಸ್ಲೇ ಹಾಲ್ ಸ್ಕೂಲ್' ಎಂಬೆರಡು ಶಾಲೆಗಳಲ್ಲಿ ಉಪಾಧ್ಯಾಯರು ಎಷ್ಟು ಅಧಿಕಾರಿಗಳೋ ವಿದ್ಯಾರ್ಥಿಗಳೂ ಅಷ್ಟೇ ಅಧಿಕಾರಿಗಳು. ಅಲ್ಲಿನ ವಿದ್ಯಾರ್ಥಿಗಳೆಲ್ಲಾ ಅಧ್ಯಾಪಕರಷ್ಟೇ ಸ್ವತಂತ್ರರು. ಅಲ್ಲಿ ವಿದ್ಯಾರ್ಥಿಗಳ ಶಿಸ್ತು, ವಿದ್ಯಾರ್ಥಿಗಳಿಗೆ ಶಿಕ್ಷೆ, ವಿದ್ಯಾರ್ಥಿಗಳಿಗೆ ಬೆತ್ತ ಪ್ರಹರ-ಇತ್ಯಾದಿಗಳಿಲ್ಲವೇ ಇಲ್ಲ. ೨ ವರುಷದಿಂದ 18 ವರುಷಗಳ ವರೆಗಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇಲ್ಲಿದ್ದಾರೆ. ಅವರು ತಮ್ಮ ಗುರುಗಳನ್ನು ಸಮಾನರೆಂತೆ ಕಾಣುತ್ತಾರೆ, ಹೊರತು ಭಯ ಭಕ್ತಿಯೆಂಬ ಪದಗಳೇ ಆ ಶಾಲೆಗಳ ನಿಘಂಟುವಿನಲ್ಲಿಲ್ಲ. ಇವೆರಡೂ ಶಾಲೆಗಳ ಸ್ಥಾಪಕರು ಮತ್ತು ಪ್ರಿನ್ಸಿಪಾಲರು ಮಿ. ರೋಬರ್ಟ್ ಕೋಪಿಂಗ್ ಎಂಬವರು. "ನಿಮ್ಮ ಸಂಪ್ರದಾಯಬದ್ಧ ಶಾಲೆಗಳಿಗಿಂತ ನನ್ನ ಶಾಲೆಯ ಶಿಕ್ಷಣ ಪರಿಣಾಮವು ಅತ್ಯುತ್ತಮವಾದುದು" ಎಂದು ಈ ಕೋಪಿಂಗ್ ಹೆಗ್ಗಳಿಕೆಯಿಂದ ಹೇಳುತ್ತಾರೆ. ಅಲ್ಲಿ ಪಾಠಪುಸ್ತಕಗಳಿಲ್ಲ; ಕಂಠಪಾಠದ ಬರೆಹಗಳಿಲ್ಲ; ವ್ಯಕ್ತಿಗತ ಬೋಧನೆಗಳಿಗೇನೇ ಅಲ್ಲಿ ಪ್ರಾಮುಖ್ಯತೆ. ಮಕ್ಕಳು ಶಾಲೆಗೆ ಬರುವಾಗ ತಿಂಡಿಗಳನ್ನು ಹಿಡಿದುಕೊಂಡು ಬಂದು ತರಗತಿಗಳಲ್ಲಿರುವಾಗಲೇ ತಿನ್ನಬಹುದು. ದುರ್ನಡತೆಯ ವಿದ್ಯಾರ್ಥಿಯು ಕ್ಲಾಸು ಬಿಟ್ಟು ಹೋಗಬೇಕೆಂಬ ಶಿಕ್ಷೆಯಿದೆ. ತನ್ನ ನಡತೆಯನ್ನು ತಿದ್ದಿಕೊಂಡಾಗ ಅವನು ತಾನಾಗಿ ಕ್ಲಾಸಿಗೆ ಮರಳಬಹುದು. ಉಪಾಧ್ಯಾಯನು ಹೇಳಿದ್ದನ್ನು ಆಕ್ಷೇಪಿಸಿದ್ದಕ್ಕಾಗಿ ಇಡೀ ತರಗತಿಯನ್ನೇ ಹೊರಗೆ ಕಳುಹಿಸುವ ಶಿಕ್ಷೆ ಜ್ಯಾರಿಯಾಗುವದಿದೆ; ಅಂತೆಯೇ ಉಪಾಧ್ಯಾಯನ ತಪ್ಪು ತಿಳಿದುಬಂದಾಗ ಕ್ಲಾಸಿನವರೇ ಉಪಾಧ್ಯಾಯನನ್ನು ಹೊರಗೆ ನಿಲ್ಲಿಸುವ ಶಿಕ್ಷೆ ಕೊಟ್ಟದ್ದೂ ಇದೆ!

ಚೈನಾದಲ್ಲಿ 'ರಾಶಿಗೆ ಡೋಲಿ'

ಚೈನಾದಲ್ಲಿ 'ಸಾಮೂಹಿಕ ವಿವಾಹ' ಕ್ರಮವು ಅತ್ಯಂತ ಜನಪ್ರಿಯವಾಗುತ್ತಾ ಬಂದಿದೆ. ಅಲ್ಲಿಯ 'ನವಜೀವನ ಚಳವಳ'ದವರು ಸುಮಾರು ೧೭ ವರುಷಗಳಿಗೆ ಮೊದಲು ಈ ಕ್ರಮವನ್ನು ಆರಂಭಿಸಿದ್ದರು. ಆದರೆ ಆರಂಭದಲ್ಲಿ ಅಪರೂಪವಾಗಿದ್ದ ಈ ವಿವಾಹಕ್ರಮವು ಯುದ್ಧಬಾಧಿತ ಹಾಗೂ ಅತಿವ್ಯಸರಣದ ರಾಹುಪೀಡಿತ ಚೈನಾದಲ್ಲಿ ಬರುಬರುತ್ತಾ ಸರ್ವವ್ಯಾಪಿಯಾಗಿದೆ. ವಿವಾಹ ವೆಚ್ಚವೇ ಮೊದಲಾದ ಅನಾನುಕೂಲತೆಗಳ ನಿವಾರಣೆಗಾಗಿ ಈ ಸುಲಭೋಪಾಯವನ್ನೇ ಚೈನೀಯರು ಅನುಕರಿಸಹತ್ತಿದ್ದಾರೆ. ವಿವಾಹವಾಗಬಿಚ್ಛಿಸುವ ಜತೆಯು ತಮ್ಮ ಅರ್ಜಿ ಮತ್ತು ಆರೋಗ್ಯ ಶಿಫಾರಸು ಪತ್ರಗಳನ್ನು ಮುನ್ಸಿಪಲ್ ಅಧಿಕಾರಿಗಳ ಮುಂದೆ ಹಾಜರುಪಡಿಸಿ, ಮದುವೆ ಸರ್ಟಿಫಿಕೇಟು, ಪತ್ರಿಕಾ ನೋಟೀಸು ಇತ್ಯಾದಿಗಳ ವರ್ಗಣಿಯಾಗಿ 250000 ಚೈನಾ ಡೋಲರುಗಳನ್ನು (ಕೇವಲ ಸುಮಾರು ೮ ರೂಪಾಯಿ) ತೆರಬೇಕು. ಆ ಜತೆಯು ವಿವಾಹಕ್ಕೆ ಹಾಜರಾಗಬೇಕಾದ ಸ್ಥಳ ಮತ್ತು ಸಮಯವನ್ನು ಅಧಿಕಾರಿಗಳು ತಿಳಿಸುವರು. ಇಂತಹ ಎಷ್ಟೋ ಜತೆಗಳು ಆ ಕಾಲದಲ್ಲಿ ಅದೇ ಸ್ಥಳದಲ್ಲಿ (ಹೆಚ್ಚಾಗಿ ಸಾರ್ವಜನಿಕ ಮಂದಿರಗಳಲ್ಲಿ) ವಿವಾಹಕ್ಕಾಗಿ ಒಟ್ಟಾಗುವರು. ನಗರಾಧ್ಯಕ್ಷ, ನಗರದ 'ಸಾಮಾಜಿಕ ಕಾರ್ಯ ಸಂಬಂಧೀ ಸಂಸ್ಥೆ'ಯ ಡೈರೆಕ್ಟರ್, ನವಜೀವನ ಚಳವಳ ಸಂಘದ ಕಾರ್ಯದರ್ಶಿ—ಇವರೂ ಅಧಿಕಾರಿಗಳು ಸಾಕ್ಷಿಗಾರರಾಗಿ ಅಂತಹ ಸಾಮೂಹಿಕ ಮದುವೆ ಸಮಾರಂಭಗಳಲ್ಲಿ ಹಾಜರಿರುವರು. ನಮ್ಮಲ್ಲಿ ವೆಚ್ಚದ ಭಾರ ಕಡಿಮೆ ಮಾಡಿಕೊಳ್ಳಲು ಮನೆಬಿಟ್ಟು, ಶಾಲೆ ದೇವಾಲಯ ಇತ್ಯಾದಿಗಳಲ್ಲಿ ವಿವಾಹಗಳನ್ನು ಜರಗಿಸುವ ಕ್ರಮ ಬಂದಿರುವಂತೆಯೇ ಚೈನಾದ ಮಧ್ಯಮ ವರ್ಗ ಹಾಗೂ ಕೆಳ ತರಗತಿಯವರಲ್ಲಿ ಇಂತಹ ಸಾಮೂಹಿಕ ವಿವಾಹ ಕ್ರಮವೇ ವಿಶೇಷವಾಗಿ ಜ್ಯಾರಿಯಲ್ಲಿದೆ.

ವಕೀಲರ ಇಂಜಕ್ಷನ್!

ವಕೀಲರು ತಮ್ಮ ಕಕ್ಷಿಗಾರರಲ್ಲಿ ವಿವಿಧ ರೀತಿಯ ಹುರುಪುಗಳನ್ನು ತುಂಬಿ, ಬಿರುಗಾಳಿಯಂತಹ ಅಡ್ಡ ಸವಾಲುಗಳ ಇದಿರಲ್ಲೂ ಬಂಡೆಯಂತೆ ಅಚಲರಾಗಿರುವಂತೆ ಮಾಡುವದೇನೂ ಹೊಸತಲ್ಲ. ಆದರೆ ತನ್ನ ಕಕ್ಷಿಗಾರರಿಗೆ 'ಇಂಜೆಕ್ಷನ್' ಕೊಡುವದೂ ವಕೀಲೀ ಸಂಪ್ರದಾಯಗಳಿಗೆ ಸೇರುತ್ತದೆಯೆ? ಆದರೆ ಇದ್ದಾರೆ—ದಾವೆಯ ಅನುಭವ, ಪ್ರೋತ್ಸಾಹ ಕೊಡುವ ಡಾಕ್ಟರರಿರುವಂತೆಯೇ ಇಂಜೆಕ್ಷನ್ ಕೊಡುವ ವಕೀಲರೂ ಇದ್ದಾರೆ! ಲೇಲಿ ಜೋನ್‌ಗ್ರಿಫಿನ್ ಎಂಬವರು ಲಂಡನಿನ ವಕೀಲ. ಸ. ಮಾರು ಇಪ್ಪತ್ತಾರು ವರುಷಗಳಿಂದ 'ಪ್ರೇಕ್ಟಿಸ್' ಮಾಡುತ್ತಿದ್ದವರು. ಈಗ ಒಬ್ಬ ಮಹಿಳಾ ಕಕ್ಷಿಗಾರಳಿಗೆ ಇಂಜೆಕ್ಷನ್ ಕೊಟ್ಟು, 'ಕಾನೂನು ಸಮಾಜದ ಶಿಸ್ತು ಸಮಿತಿ'ಯವರಿಂದ ಮೂರು ವರುಷಗಳ ವರೆಗೆ ವಕಾಲತ್ ನಡಿಸಕೂಡದೆಂಬ ಉದ್ಯೋಗ ಅಮಾನತು ಶಿಕ್ಷೆಹೊಂದಿದ್ದಾರೆ. ಈ ಸಮಿತಿಯ ಮುಂದೆ ದೂರುತಂದ ಕಕ್ಷಿಗಾರ ಮಹಿಳೆ ಶ್ರೀಮತಿ ಬೀಡ್ಲೆ ಯವಳ ಹೇಳಿಕೆಯ ಸಾರಾಂಶ ಹೀಗಿದೆ: ಒಂದು ದಾವೆಯ ಸಂಬಂಧವಾದ ಅನುಭವ ಪಡೆಯಲು ಬೀಡ್ಲೆ ಯು ವಕೀಲ್ ಗ್ರಿಫಿನ್‌ನ ಆಫೀಸಿನಲ್ಲಿದ್ದಳು; ಆಗ ಅವರಿಬ್ಬರೇ ಇದ್ದರು. "ಕೋರ್ಟಿನಲ್ಲಿ ಧೈರ್ಯದಿಂದ ದೃಢವಾಗಿ ನಿಲ್ಲಬಹುದುವಂತೆ ನಿಮಗೊಂದು ಇಂಜೆಕ್ಷನ್ ಕೊಡುವುದು ಹಿತಕರವೆನ್ನುತ್ತಾ ವಕೀಲರು ಉಪಕರಣಗಳನ್ನು ತೆಗೆದಾಗ 'ತೋಳಿಗೆ ಕೊಡುವಿರಷ್ಟೆ?' ಎಂದು ಬೀಡ್ಲೆ ಕೇಳಿದಳು. 'ತೊಡೆಗೆ ಕೊಡುವದುತ್ತಮ' ಎನ್ನುತ್ತಾ ಈ ವಕೀಲ್ ಮಹಾಶಯ ಅವಳ ಕಾಲುಗಳನ್ನು ಕೂಡಿಸಿ ಇಡಿಸಿ, ಕವಚ ಹಾರಿಸಿ ತೊಡೆಗೆ ಸೂಜಿ ಚುಚ್ಚಿದರು. ಆ ಮೇಲೆ ಆ ಸ್ಥಳವನ್ನು ಔಷಧ ಹಚ್ಚಿದ ಹತ್ತಿಯಿಂದ ಸರಿಯಾಗಿ ಉಜ್ಜಿದರು. 'ಮಹಿಳಾ ಸಾಕ್ಷಿಗಾರರು ಕೋರ್ಟು ಹತ್ತಿದಾಗ ತೀರಾ ಗಲಿಬಿಲಿಗೊಳ್ಳುವದಿದೆ. ನಾನು ಈ ಮೊದಲೂ ಕಕ್ಷಿಗಾರರಿಗೆ ಇಂಜೆಕ್ಷನ್ ಕೊಟ್ಟಿದ್ದೇನೆ' ಎಂದು ಈ ವಕೀಲರ ವಾದ. ಒಂದು ವಿಧದ ಕಾಮತೃಷೆಯ ತೃಪ್ತಿಗಾಗಿಯೇ ಇವರಿಗೆ ಆ ರೀತಿಯ ಇಂಜೆಕ್ಷನ್ ವಿಧಾನ ನಡೆಸಿದುದೆಂದು ಕೊನೆಗೆ ವಕೀಲರೊಪ್ಪಿಕೊಂಡರು.

ಚರ್ಚಿಲ್ ಸ್ಪರ್ಶಭಾಗ್ಯ!

ಮಹಾ ಮನುಷ್ಯರ ಪಾದಮುಟ್ಟಿ, ಸ್ಪರ್ಶಿಸಿ ಪುಣ್ಯಶಾಲಿಗಳಾಗುವೆವೆಂಬ ಭಾವನೆಯು ಹಿಂದೀಯರಲ್ಲಿ ಮಾತ್ರವೂ ಇದೆಯಷ್ಟೆ? ಇದಕ್ಕಾಗಿ ಭಾರತೀಯರ ಕುರುಡು ವಿಶ್ವಾಸಗಳನ್ನು ದೂರುವವರಿದ್ದಾರೆ. ಆದರೆ ಪಾಶ್ಚಿಮಾತ್ಯರಲ್ಲೂ ಇಂತಹ ಮೂಢವಿಶ್ವಾಸಗಳಿವೆ. ದೃಷ್ಟಾಂತಕ್ಕಾಗಿ ಈಗ ಚರ್ಚಿಲ್ಲರನ್ನು ಸ್ಪರ್ಶಿಸುವದು ಭಾಗ್ಯದಾಯಕವೆಂದು ಚರ್ಚಿಲ್ ಅನುಯಾಯಿಗಳು ಭಾವಿಸಿಕೊಳ್ಳಹತ್ತಿದ್ದಾರೆ. ಅದಕ್ಕಾಗಿ ಅವರು ಹೋದಲ್ಲೆಲ್ಲಾ ಅವರ ಸ್ಪರ್ಶಕ್ಕಾಗಿ ಸ್ಪರ್ಧೆನಡೆಯುತ್ತಿದೆ. ಇತ್ತೀಚೆಗೆ ಉಪಚುನಾವಣೆ ನಡೆದ ಉತ್ತರ ಕ್ರೊಯಿಡೆನ್ ಕ್ಷೇತ್ರಕ್ಕೆ ಚುನಾವಣಾ ಪ್ರಚಾರಕ್ಕಾಗಿ ಚರ್ಚಿಲ್ಲರು ಹೋಗಿದ್ದಾಗ ಅವರ ಸ್ಪರ್ಶಕ್ಕಾಗಿ ಹಲವರು 'ಕಂಬಳದ ಕೋಣ'ಗಳಂತೆ ಸ್ಪರ್ಧಿಸಿಕೊಂಡಿದ್ದರು. "ಭಾಗ್ಯಲಾಭಕ್ಕಾಗಿ ನಾನು ಚರ್ಚಿಲ್ಲರನ್ನು ಮುಟ್ಟಿದೆ" ಎಂದು ಅವರಲ್ಲೊಬ್ಬ ಕೃತಾರ್ಥನಾದೆನೆಂಬ ಭಾವನೆಯಿಂದ ಉದ್ಗರಿಸಿದ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊರಗಾಡಿ ಜಮಿತಿಸಲ್ಪಟ್ಟ ಇಡಿಯಾದಲ್ಲಿ ಸ್ವೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೦,೦೦೦ ಮತ್ತು ಅದಕ್ಕೆ ಮೇಲ್ಪಟ್ಟು ರೂ ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೬ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ,, ,, ೨।

೭ ರಿಂದ ೯ ತಿಂಗಳು ,, ,, ೨।

ರೂ ೧೦,೦೦೦ಕ್ಕಿಂತ ಕಡಿಮೆಯುಳ್ಳ ರೂ. ೨,೦೦೦ಗಳ ಕೆಳಗೆ ರೂ ೫೦೦೦ ಗುಣಾಕಾರ ಠೇವಣಿ ತಿಗಳ ಮೇಲಿನ ಬಡ್ಡಿಯ ದರಗಳನ್ನು ಸಮೀಪ ಸಂಬಂಧಪಟ್ಟ ರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD. 1906.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಾಂಡಿ ಮ್ಯಾಕಾಚಾರ್ಯ,

ರಥಬೀದಿ, ಉಡುಪಿ.

ಇನ್ನೊಂದು ಯುದ್ಧಕ್ಕಾಗಿ ರಶ್ಯವು ಆತುರಗೊಂಡಿಲ್ಲ?

ಕಳೆದ ವಾರದಲ್ಲೂ ಪ್ರಪಂಚವು ಯುದ್ಧದ ಕಡೆಗೆ ಮುಖ ಮಾಡಿ ಮುಂದೊತ್ತುತ್ತಿರುವ ದೃಶ್ಯಗಳೇ ಕಂಡುಬಂದಿವೆ. ಭಾರತದ ರಾಜಕೀಯವೂ ಬಹಳ ಮಟ್ಟಿಗೆ ಯಥಾಸ್ಥಿತಿಯಲ್ಲಿದೆ.

ಪಶ್ಚಿಮ ಯುರೋಪು ರಾಷ್ಟ್ರಗಳು ಒಕ್ಕೂಟ ರಚಿಸಿಕೊಂಡು ಸನ್ನದ್ಧರಾಗಿರುವುದು-ಬ್ರಿಟಿಷ್ ಸರಕಾರವು ತನ್ನ ರಕ್ಷಣೆ ಮತ್ತು ಗುಪ್ತ ಖಾತೆಗಳಲ್ಲಿ ಕಮ್ಯೂನಿಸ್ಟರನ್ನು ಹೊರಗಿಡಬೇಕೆಂದು ನಿರ್ಧರಿಸಿರುವುದು-ರಶ್ಯದ ರಣರಂಗಗಳಲ್ಲಿ ಹೋರಾಡಿ ಅನುಭವವಿರುವ ಜರ್ಮನ್ ಯುದ್ಧ ಕೈದಿಗಳನ್ನು ಬ್ರಿಟಿಷ್ ಸರಕಾರವು ತನ್ನ ಸಲಹೆಗಾಗಿ ಸ್ವೀಕರಿಸಿರುವುದು-ಅಮೇರಿಕವು ಪೆಲೆಸ್ತೈನ್ ವಿವಾದದಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕೂ ಯುದ್ಧಸಿದ್ಧತೆಗಳನ್ನು ಹೆಚ್ಚಿಸುವ ಮತ್ತು ಯುದ್ಧ ಸಾಮಾಗ್ರಿಗಳು ಹೊರಗೆ ಹೋಗದಂತೆ ನಿರ್ಬಂಧಿಸುವದಕ್ಕೂ ಅವಸರದ ಕಾರ್ಯಗಳನ್ನು ಕೈಕೊಂಡಿರುವುದು-ಇವೆಲ್ಲವೂ ಆತುರಸೂಚಕ ಘಟನೆಗಳೇ.

ಭಾರತ ಸಮೇತ ಇಡೀ ಪ್ರಪಂಚದ ಭಾವಾಂದೋಲನಗಳ ಕಡೆಗೊಮ್ಮೆ ದೃಷ್ಟಿ ಬೀರಿದರೆ ಮೂರು ಪಾಳಯಗಳು ಮೂಡಿರುವಂತೆ ಕಾಣುತ್ತಿದೆ. ಬಂಡವಾಳಶಾಹೀ ಹಾಗೂ ವ್ಯಾಪಾರೀ ಮನೋವೃತ್ತಿಯ ಅಮೇರಿಕವು ಇನ್ನೊಂದು ಯುದ್ಧಕ್ಕೆ ಆತುರಿಸುತ್ತಿರುವಂತೆಯೂ, ಅದು ಯುದ್ಧಕ್ಕೀಗ ಸಮಯ ಮತ್ತು ಅನುಕೂಲತೆಗಳಲ್ಲಿ ತಾನೇ ಮುಂದಿದ್ದೇನೆಂಬ ಆತ್ಮವಿಶ್ವಾಸದಿಂದಿರುವಂತೆಯೂ ಇಂಗ್ಲೆಂಡು, ಫ್ರಾನ್ಸು ಮುಂತಾದ ರಾಷ್ಟ್ರಗಳು ಅದರ ಬೆನ್ನು ಹಿಡಿಯುವ ನಿರ್ಣಯಕ್ಕೆ ಬಂದಂತೆಯೂ ತೋರುತ್ತಿದೆ. ಇದಿರುಗಡೆಯು ರಶ್ಯಕ್ಕೆ ತನ್ನ ಕಮ್ಯೂನಿಸಮನ್ನು ಯುದ್ಧವಿನಹ ಪ್ರಪಂಚವ್ಯಾಪಿಗೊಳಿಸಬಹುದೆಂಬ ವಿಶ್ವಾಸವಿದ್ದು ಅದು ಇನ್ನೊಂದು ಯುದ್ಧವನ್ನು ಆದಷ್ಟು ಹಿಂದೆ ಹಾಕಿ ಒಳವಿಧಾನಗಳಿಂದಲೇ ತನ್ನ ಕಾರ್ಯಸಾಧಕ ಚಳವಳಗಳನ್ನು ಸಾಗಿಸುವ ಆತುರದಿಂದಿರುವಂತಿದೆ. ಝೆಕೊಸ್ಲೊವೇಕಿಯಾದಂತಹ ಕೆಲವು ರಾಷ್ಟ್ರಗಳೂ ಚೈನಾದ ಕಮ್ಯೂನಿಸ್ಟರಂತೆ ಪ್ರತಿಯೊಂದು ರಾಷ್ಟ್ರದಲ್ಲೂ ಇರುವ ಕಮ್ಯೂನಿಸ್ಟ್ ಪಕ್ಷಗಳೂ ರಶ್ಯದ ಬೆನ್ನ ಹಿಂದಿವೆ. ಮೂರನೆಯದು ನ್ಯಾಯ ನೀತಿಗನುಸಾರವಾಗಿ ಸರ್ವ ಸಮಾನತೆ ಮತ್ತು ಲೋಕಶಾಂತಿದಾಯಕವಾದ ಪ್ರಜಾಪ್ರಭುತ್ವವನ್ನೇ ಗುರಿಯಾಗಿ ಇಟ್ಟುಕೊಂಡಿರುವ ಭಾರತದಂತಹ ರಾಷ್ಟ್ರಗಳ ಪ್ರತ್ಯೇಕ ಪಕ್ಷವೊಂದಿದೆ. ಆದರೆ ಪರಸ್ಪರ ಸ್ಪರ್ಧೆಗಾರಂಭಿಸಿ, ಇನ್ನೊಂದು ಹೋರಾಟದ ಪ್ರತ್ಯಕ್ಷ ಸಿದ್ಧತೆಯಲ್ಲೇ ನಿರತವಾಗಿರುವ ಮೊದಲಿನ ಎರಡು ಪಾಳಯಗಳ ದೆಸೆಯಿಂದ ಮತ್ತೊಂದು ಯುದ್ಧವು ದಿನದಿಂದ ದಿನಕ್ಕೆ ಸಮೀಪಿಸುತ್ತಿರುವಂತೆ ಭಾಸವಾಗುತ್ತಿದೆ. ಶಾಂತಿ ಸ್ಥಾಪನಾ ಪ್ರಯತ್ನವು ಹೊಸತಾಗಿ ತೋರಿಬರುವ ತನಕ ಇನ್ನೊಮ್ಮೆ ಆ ಘೋರ ಪ್ರಳಯವಾಗದು ಎಂಬ ವಿಶ್ವಾಸ ಕಟ್ಟಿಕೊಳ್ಳುವುದು ಅಸಾಧ್ಯವೇ ಸರಿ.

ಪ್ರಪಂಚಾಂದೋಲನ

ಸದ್ಯಕ್ಕಿರುವ ಅಮೇರಿಕದ ಸೇನಾಬಲ 1,392,000ಕ್ಕೆ 3,40,500 ಸೇನಾಧಿಕಾರಿಗಳು ಮತ್ತು ಜನರನ್ನು ಹೆಚ್ಚಿಗೆ ಸೇರಿಸಿಕೊಳ್ಳಲಾಗುವಂತೆ 3000 ಮಿಲಿಯ ಅಧಿಕ ಡೋಲರುಗಳನ್ನು ಆಯವ್ಯಯ ಪಟ್ಟಿಯಲ್ಲಿ ತೆಗೆದಿಡಬೇಕೆಂದು ಅಮೇರಿಕದ ರಕ್ಷಣಾ ಮಂತ್ರಿಗಳ ಬೇಡಿಕೆ ಮುಂದೆ ಬಂದಿದೆ. ಜರ್ಮನಿಯ ಚತುರ್ರಾಷ್ಟ್ರ ಆಡಳಿತೆ ಕೌನ್ಸಿಲಿನಲ್ಲಿ ರಶ್ಯ ಮತ್ತು ಬ್ರಿಟನ್, ಅಮೇರಿಕ, ಫ್ರಾನ್ಸುಗಳೊಳಗೆ ವಿವಾದವೆದ್ದು ಅದು ಒಡೆದು ಹೋಗುವುದರಲ್ಲಿರುವಾಗಲೇ ಆ ಕೌನ್ಸಿಲನ್ನು ಊರ್ಜಿತದಲ್ಲಿಡಬೇಕೆಂಬ ಬಯಕೆಯನ್ನು ರಶ್ಯವು ಪ್ರದರ್ಶಿಸಿರುವುದೆಂದು ತಿಳಿದುಬಂದಿದೆ. ಬರ್ಲಿನಿನಿಂದ ತಮ್ಮ ಅಧಿಕಾರಿಗಳನ್ನು ಹಿಂದೆಗೆಯುವ ಯೋಚನೆಯು ತಮಗಿಲ್ಲವೆಂದೂ ಅವರನ್ನು ಹೊರಗೆ ಹಾಕಲು ಪ್ರಯತ್ನಿಸಕೂಡದೆಂದೂ ಅಮೇರಿಕದ ಸ್ಟೇಟ್ ಸೆಕ್ರೆಟರಿ ಜೋರ್ಜ್ ಮಾರ್ಶಲರು ರಶ್ಯಕ್ಕೆ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ.

ಪೆಲೆಸ್ತೈನಿನಲ್ಲಿ ಅರಬಿ-ಯೆಹೂದಿಗಳು ಸಂಧಾನ ಮಾಡಿಕೊಳ್ಳಬೇಕೆಂದು ಆಗ್ರಹಪಡಿಸುತ್ತಾ, ಅಮೆರಿಕಾಧ್ಯಕ್ಷ ಟ್ರುಮೇನರು ಮೇ 15ಕ್ಕೆ ಬ್ರಿಟಿಷ್ ಮೇಲಧಿಕಾರವು ಅಂತ್ಯಗೊಳ್ಳುವಾಗ ಸಂಯುಕ್ತ ರಾಷ್ಟ್ರಗಳ ಆಡಳಿತೆಯೊಂದನ್ನು ಅಲ್ಲಿ ಸ್ಥಾಪಿಸಲಾಗುವದೆಂಬುದನ್ನು ಒತ್ತಿ ಹೇಳಿದ್ದಾರೆ. ಇದನ್ನು ಅರಬರು ವಿರೋಧಿಸುತ್ತಾ ಜೆರೂಸಲೇಮನ್ನು ವಶಪಡಿಸಿಕೊಳ್ಳುವ ಸಿದ್ಧತೆ ತೋರಿಸಿದ್ದಾರೆ.

ಟ್ರೀಸ್ಟೆಯನ್ನು ಇಟಲಿಗೆ ಬಿಟ್ಟುಕೊಡಬೇಕೆಂದು ಅಮೇರಿಕ, ಇಂಗ್ಲೆಂಡು, ಫ್ರಾನ್ಸುಗಳು ಕೊಟ್ಟಿದ್ದ ಸೂಚನೆಯನ್ನು ಯುಗೊಸ್ಲೇವಿಯದ ಪ್ರಧಾನಿ ಮಾರ್ಶಲ್ ಟಿಟೋರವರು ಟೀಕಿಸುತ್ತಾ ಇಟಲಿಯ ಜನತೆಯನ್ನು ವಂಚಿಸುವುದಕ್ಕಾಗಿ ತ್ರಿರಾಷ್ಟ್ರಗಳು ಹೂಡಿರುವ ಯುಕ್ತಿಯಿದು ಎಂದಿದ್ದಾರೆ.

ರಶ್ಯವೀಗ ಅಮೇರಿಕದೊಡನೆ ಯುದ್ಧವನ್ನು ಬಯಸುವದಿಲ್ಲವೆಂದೂ ಮಿತ್ರ ರಾಷ್ಟ್ರಗಳೊಡನೆ ಮೈತ್ರೀ ಸಹಕಾರದ ಮೂಲಕ ಶಾಂತಿಯಿಂದ ಮುಂದೊತ್ತುವದೇ ಅದಕ್ಕೆ ಬೇಕಾಗಿದೆಯೆಂದೂ ಅಮೇರಿಕದಲ್ಲಿರುವ ರಶ್ಯನ್ ರಾಯಭಾರಿಯು ತನ್ನೊಂದು ಭಾಷಣದಲ್ಲಿ ಅಭಿಪ್ರಾಯ ಸೂಚಿಸಿರುವರೆಂದು ತಿಳಿದುಬಂದಿದೆ.

ಅತ್ತ ಅಮೇರಿಕದ ದಡದಲ್ಲಿ ಒಂದು ಪರರಾಷ್ಟ್ರದ ಸಬ್‌ಮೇರಿನ್‌ಗಳು ಕಾಣಿಸಿವೆ ಎಂದು ಅಮೇರಿಕದ ನೌಕಾ ಕಾರ್ಯದರ್ಶಿ ತಿಳಿಸಿ ಹೆಸರೆತ್ತಿ ತಿಳಿಸದಿದ್ದರೂ ಅವು ರಶ್ಯದ ಸಬ್‌ಮೇರೀನುಗಳೆಂಬ ಅರ್ಥ ಬರುವಂತೆ ವರ್ಣಿಸಿದ್ದಾರೆ.

ಚೈನಾದಲ್ಲಿ ಅಲ್ಲಿಯ ಸರಕಾರ ಮತ್ತು ಕಮ್ಯೂನಿಸ್ಟರ ಕಾಳಗ ಯಥಾಪ್ರಕಾರ ಸಾಗಿದೆ. ಅಮೇರಿಕದ ಸೆನೇಟಿನ ವಿದೇಶ ಸಂಬಂಧ ಸಮಿತಿಯು ಚೈನಾಕ್ಕೆ ಸಹಾಯವಾಗಿ 463 ಮಿಲಿಯ ಡೋಲರುಗಳನ್ನು ಮಂಜೂರುಮಾಡಿರುವುದಾದರೂ ಜತೆಯಲ್ಲೇ ಚಿಯಾಂಗ್ ಸರಕಾರದ ಘೋರಣೆಯನ್ನು ಹೀಯಾಳಿಸುವ ಮಾತುಗಳನ್ನೂ ಮುಟ್ಟಿಸಿದೆ. ಸಯಾಮಿನ ಆಡಳಿತೆಯನ್ನು ಕಸಗೊಳ್ಳಲು ಚೈನೀಯರು ನಡೆಸಿದ್ದ ದೊಡ್ಡ ಪರಿಮಾಣದ ಹಂಚಿಕೆಯನ್ನು ಸಯಾಮಿನ ಪೋಲೀಸರು ಕಂಡುಹಿಡಿದಿದ್ದಾರೆ.

ಅತ್ತ ಅಟಂಶಕ್ತಿಸಂಬಂಧದ ಪರ್ಯಾಲೋಚನೆ ಹಾಗೂ ನಿರ್ಣಯಗಳಿಗಾಗಿ ರಚನೆಗೊಂಡಿರುವ ಮಿತ್ರ ರಾಷ್ಟ್ರೀಯ ಸಮಿತಿಯು ಕಳೆದ ಎರಡು ವರುಷಗಳಿಂದಲೂ ವ್ಯರ್ಥ ಕಾಲಹರಣ ಮಾಡಿರುವುದರಿಂದ, ರಶ್ಯವು ಬಹುಮತದಂತೆ ಒಪ್ಪಲು ಇನ್ನೂ ಸಿದ್ಧವಿಲ್ಲವಾದರೆ ಈ ಸಮಿತಿಯನ್ನೇ ಬರ್ಖಾಸ್ತುಪಡಿಸಲಾಗುವದೆಂದು ಈ ಬಾರಿ ರಶ್ಯಕ್ಕೆ ತಿಳಿಸಲು ಅದು ತಯಾರಾಗಿರುವದೆಂದು ತಿಳಿದುಬರುತ್ತದೆ.

ಜರ್ಮನಿಯ ತಮ್ಮ ಪಾಲಿನ ಭಾಗಗಳನ್ನು ಸಮಾವೇಶಗೊಳಿಸಿಕೊಳ್ಳುವ ಮೂಲಕ ಅಮೇರಿಕ ಬ್ರಿಟನು ಫ್ರಾನ್ಸುಗಳು ಪೋಟ್ಸ್‌ಡಾಮ್ ಒಪ್ಪಂದದ ವಿರುದ್ಧ ವರ್ತಿಸುವವೆಂಬ ರಶ್ಯದ ಆರೋಪ ಪತ್ರಕ್ಕೆ ಉತ್ತರವಾಗಿ ಅಮೇರಿಕವು ರಶ್ಯದ ಮೇಲೆ ಪ್ರತ್ಯಾರೋಪ ಮಾಲೆಯನ್ನು ರಶ್ಯದ ರಾಯಭಾರಿಗಿತ್ತಿದೆ. ಜರ್ಮನಿಯ ಆರ್ಥಿಕ ಹಾಗೂ ರಾಜಕೀಯ ವಿಭಜನೆಯು ಮುಂದುವರಿಯುವಂತಾಗಲು ರಶ್ಯವೇ ಕಾರಣವೆಂದು ಆರೋಪಿಸಿ, ಪೂರ್ವ ಯುರೋಪು ರಾಷ್ಟ್ರಗಳಲ್ಲಿ ಮಾನವ ಹಕ್ಕುಬಾಧ್ಯತೆಗಳನ್ನು ಹತ್ತಿಕ್ಕಿ ರಶ್ಯವು ಸರ್ವಾಧಿಕಾರೀ ಆಡಳಿತ ಸ್ಥಾಪಿಸಿದೆಯೆಂದೂ, ಪೋಟ್ಸ್‌ಡಾಮ್ ಒಪ್ಪಂದ ಕರಾರುಗಳನ್ನು ಮುರಿದು ಜರ್ಮನಿಯ ತನ್ನ ಕ್ಷೇತ್ರದಲ್ಲಿದ್ದ ಎಲ್ಲಾ ಉದ್ದಿಮೇ ಉಪಕರಣಗಳನ್ನೂ ಸಾಗಿಸಿದೆಯೆಂದೂ ಮಿಕ್ಕ ಭಾಗಗಳೊಡನೆ ನಿರ್ಧರಿಸಿದ್ದ ವ್ಯವಹಾರ ಸಂಬಂಧಗಳನ್ನು ಪಾಲಿಸಲಿಲ್ಲವೆಂದೂ ಅಮೇರಿಕವು ಆ ಪತ್ರದಲ್ಲಿ ಆರೋಪಿಸಿದೆ.

ಅತ್ತ ಜಿನೇವಾದಲ್ಲಿ ಪತ್ರಿಕಾ ಮತ್ತು ಸುದ್ದಿ ಸ್ವಾತಂತ್ರ್ಯ ಸಂಬಂಧದ ಜಾಗತಿಕ ಪರಿಷತ್ತು ಸೇರಿದೆ. "ಇನ್ನೊಂದು ಯುದ್ಧದ ಭೀಕರ ಚಿತ್ರವನ್ನು ಪತ್ರಿಕೆಗಳು ಚಿತ್ರಿಸಬಾರದೆಂದ." ಆ ಪರಿಷತ್ತಿನ ಅಧ್ಯಕ್ಷರು ಆಗ್ರಹದಿಂದ ಕೇಳಿಕೊಂಡಿದ್ದಾರೆ.

ಯುರೋಪು ರಾಷ್ಟ್ರಗಳ ಪುನರ್ರಚನೆಗಾಗಿ ಅಮೇರಿಕವು ತನ್ನ 'ಮಾರ್ಶಲ್ ಯೋಜನೆ'ಗನುಸಾರವಾಗಿ ಕೊಡುವ ಸಹಾಯವನ್ನು ಭಾರತದಂತಹ ಏಸ್ಯಾದ ರಾಷ್ಟ್ರಗಳಿಗೂ ಕೊಡುವಂತೆ ಮಾಡುವ ಪ್ರಯತ್ನಗಳು ಒಳಗಿಂದೊಳಗೆ ನಡೆಯುತ್ತಿವೆ. ಅಮೇರಿಕದ ಕೆಲಿಫೋರ್ನಿಯಾ ಕರಾವಳಿಗೆ 60 ಮೈಲು ದೂರದಲ್ಲಿ ವಿದೇಶೀ ಸಬ್‌ಮೇರೀನುಗಳು ಕಾಣಿಸಿದ ಶೋಧಕ್ಕಾಗಿ ವಿಮಾನಗಳು ಧಾವಿಸಿದ ವಾರ್ತೆಗಳು ಬರುತ್ತಿವೆ.

ಭಾರತದ ಕಮ್ಯೂನಿಸ್ಟರು

ರಶ್ಯವು ಆಸಕ್ತಿ ವಹಿಸುವ ಪ್ರತಿಯೊಂದು ವಿಶೇಷ ಸಂದರ್ಭದಲ್ಲೂ ಲೋಕದ ಸರ್ವ ರಾಷ್ಟ್ರಗಳ ಕಮ್ಯೂನಿಸ್ಟರಲ್ಲೂ ವಿಶೇಷ ಚಟುವಟಿಕೆಗಳು ತೋರಿಬರುವ ಸಂಪ್ರದಾಯ. ಅಂತೆಯೇ ರಶ್ಯದ ಪರೀಕ್ಷೆ ಸಮೀಪಿಸುತ್ತಿರುವ ಈ ಕಾಲದಲ್ಲೂ ಹಿಂದೂ ದೇಶದ ಎಲ್ಲಾ ಪ್ರಾಂತ್ಯಗಳ ಕಮ್ಯೂನಿಸ್ಟರೂ ಗೊಂದಲ ನಿರ್ಮಾಣಗಳಲ್ಲಿ ವಿಶೇಷಾಸಕ್ತರಾದಂತಿದೆ; ಮತ್ತು ಪ್ರತಿಯೊಂದು ಪ್ರಾಂತಿಕ ಸರಕಾರವೂ ಈ ಕುರಿತು ಮುಂಜಾಗ್ರತೆ ವಹಿಸಿದೆ. ಮದ್ರಾಸ್ ಪ್ರಾಂತ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಕಮ್ಯೂನಿಸ್ಟ್ ಕೆಲಸಗಾರರ ದಸ್ತಗಿರಿಗಳಾಗಿವೆ. ಪಶ್ಚಿಮ ಬಂಗಾಳದ ಸರಕಾರವಂತೂ ಈ ಕುರಿತು ಕಠೋರ ಕಾರ್ಯ ಕೈಕೊಳ್ಳುವ ಆವಶ್ಯಕತೆಯೊದಗಿದುದರಿಂದ, ಅಲ್ಲಿಯ ಸರಕಾರವು ಅಖಿಲ ಭಾರತ ಕಮ್ಯೂನಿಸ್ಟ್ ಪಕ್ಷವನ್ನೇ ತನ್ನ ಪ್ರಾಂತ್ಯದಲ್ಲಿ ಬೇಕಾಯದೆಶೀರಗೊಳಿಸಿ, ಅದರ ಕಾರ್ಯಾಲಯಗಳ ಜಪ್ತಿ ನಡಿಸಿ, ಕಾರ್ಯಕರ್ತರನ್ನೆಲ್ಲಾ ಬಂಧಿಸಿದೆ. ಕಮ್ಯೂನಿಸ್ಟ್ ಚಟುವಟಿಕೆಗಳನ್ನು ಪೂರ್ತಿ ಹತ್ತಿಕ್ಕಿದೆ. ಪ್ರಾಂತ್ಯದೊಳಗಡೆ ಶಾಂತಿದಾಯಕ ಆಡಳಿತೆಯನ್ನು ಅಸಾಧ್ಯಗೊಳಿಸುವ ಕಾರ್ಯವನ್ನಷ್ಟೇ ಕಮ್ಯೂನಿಸ್ಟರು ಮಾಡುತ್ತಿಲ್ಲ-ಜನಸೇವೆಯ ಪರದೆ ಹಾಕಿಕೊಂಡು ಭಾರತಸರಕಾರದ ನಡತೆಗೆ ಕಳಂಕ ಹಚ್ಚುವ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆನ್ನಬಹುದು. ಇದರ ಒಂದು ವಿಧ

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೋ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಶ್ರೀ ದುರ್ಗಾ ಭವನ, ಮೂಲ್ಕಿ.

ಯಂ. ಆರ್. ಭಟ್, (ಆರ್ಟಿಸ್ಟ್) ವ್ಯವಸ್ಥಾಪಕ.

NEO ROYAL CAFE,
Boarding & Lodging,
Santhekatte, UDIPI.

ಈ ರಾಷ್ಟ್ರೀಯ ವಾರದಲ್ಲಿ ಗಾಂಧೀ ನಿಧಿ ಸಂಗ್ರಹ

ಕರಣವು ಪಶ್ಚಿಮ ಬಂಗಾಳ ಸರಕಾರದ ಲಕ್ಷ್ಯಕ್ಕೆ ಬಂದಿದೆ. ಕಲ್ಕತ್ತದ ಬಳಿಯ ಚಂದ್ರನಾಗೋರ್ ಎಂಬುದು ಫ್ರೆಂಚರ ಆಡಳಿತಕ್ಕೊಳಪಟ್ಟಿರುವ ಸ್ವತಂತ್ರಭಾಗ. ಭಾರತದಲ್ಲಿರುವ ಫ್ರೆಂಚ್ ವಸಾಹತುಗಳ ಸಂಬಂಧವಾಗಿ ದಿಲ್ಲಿಯಲ್ಲೀಗ ಫ್ರೆಂಚ್ ಸರಕಾರದ ಮತ್ತು ಭಾರತ ಸರಕಾರದ ಪ್ರತಿನಿಧಿಗಳೊಳಗೆ ಸಂಧಾನ ಮಾತುಕತೆಗಳು ನಡೆದಿವೆ. ಈ ನಡುವೆ ಹಲವು ಕಮ್ಯೂನಿಸ್ಟರು ಜನಗುಂಪನ್ನು ಕಟ್ಟಿಕೊಂಡು ಚಂದ್ರನಾಗೋರಿನ ಆಡಳಿತಗಾರನ ಆಫೀಸಿಗೆ ಮುತ್ತಿಗೆ ಹಾಕಿ, ಅವನಿಂದ ತಾನು ಭಾರತ ಕೇಂದ್ರಕ್ಕೆ ಜೋಡಣೆಗೊಂಡೆನೆಂಬ ಪತ್ರಕ್ಕೆ ಬಲಾತ್ಕಾರದಿಂದ ಸಹಿ ಪಡೆದಿದ್ದಾರೆ. ಈ ಸುದ್ದಿ ಮುಟ್ಟಿದೊಡನೆಯೇ ಪಶ್ಚಿಮ ಬಂಗಾಳದ ಮಂತ್ರಿ ಶ್ರೀ ಕಾಳಿಪಾದ ಮುಖರ್ಜಿಯವರು ಆ ಸ್ಥಳಕ್ಕೆ ಧಾವಿಸಿ ಜನ ತಂಡವನ್ನು ಚದರಿಸಿದರು. ಪಶ್ಚಿಮ ಬಂಗಾಳದ ಸರಕಾರವು ಚಂದ್ರನಾಗೋರಿನ ಜುಲುಮೆಗಾಗಿ ಸಂತಾಪ ಸೂಚಿಸಿದೆ. ಅಂತೂ ಈ ಬಾರಿಯ ಸಮಾಜವಾದಿ ಸಮ್ಮೇಲನದಲ್ಲಿ ಶ್ರೀ ಜೈ ಪ್ರಕಾಶ ನಾರಾಯಣರಂತೆ ಭಾರತದಲ್ಲಿ ಕಮ್ಯೂನಿಸ್ಟರು ಮಹಾ ಕಂಟಕವಾಗಿರುವ ಅನುಭವವು ಈಗೀಗ ವಿಶೇಷ ರೀತಿಯಿಂದಾಗತೊಡಗಿದೆ.

ಈ ಬಾರಿಯ ರಾಷ್ಟ್ರೀಯ ವಾರ

ಪದ್ಧತಿಯಂತೆ ಇದೇ ಎಪ್ರಿಲ್ ತಾ. ೬ರಿಂದ ಎಪ್ರಿಲ್ ತಾ. 13ರ ವರೆಗೆ ನಡೆಯಲಿರುವ 'ರಾಷ್ಟ್ರೀಯ ವಾರ'ವನ್ನು ಈ ವರುಷ ಜಾತೀಯ ಸೌಹಾರ್ದತಾ ಸ್ಥಾಪನಾ ಪ್ರಯತ್ನದಲ್ಲೂ ಗಾಂಧಿ ನಿಧಿಗೆ ಹಣ ಸಂಗ್ರಹಿಸುವುದರಲ್ಲೂ ಉಪಯೋಗಿಸಬೇಕೆಂದು ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ವಿನಂತಿಸಿಕೊಂಡಿದ್ದಾರೆ. ರಾಷ್ಟ್ರಪತಿಯ ಆಜ್ಞೆಯನ್ನು ಪ್ರತಿಯೊಬ್ಬ ಹಿಂದೀಯನೂ ಪಾಲಿಸಲು ಬದ್ಧನಿರುವುದರಿಂದ ಅವರ ಹೇಳಿಕೆಯು ಸಾರ ಹೀಗಿದೆ: "ರಾಷ್ಟ್ರವು ಈ ರಾಷ್ಟ್ರೀಯ ವಾರವನ್ನು ಇಂದಿಗೆ ಸುಮಾರು 30 ವರುಷಗಳಿಂದಲೂ ಆಚರಿಸುತ್ತಾ ಬಂದಿದೆ. ಮಹಾತ್ಮಾ ಗಾಂಧಿಯವರು ಈ ದೇಶದ ಜನತೆಯ ಸ್ವಾಭಿಮಾನ ರಕ್ಷಣೆಗಾಗಿಯೂ ಸ್ವಾತಂತ್ರ್ಯಸಾಧನೆಗಾಗಿಯೂ ದೊಡ್ಡ ಪರಿಮಾಣದ ರಾಷ್ಟ್ರವ್ಯಾಪೀ ಚಳವಳವನ್ನು ಆರಂಭಿಸಿದುದು ಈ ವಾರದಲ್ಲೇ. ಸ್ವಾತಂತ್ರ್ಯವು ದೊರೆಯಬೇಕಾದರೆ ನಾವು ಅವರ ನಾಯಕತ್ವದಲ್ಲಿ ಹಲವು ಸತ್ಯಾಗ್ರಹ ಸಮರಗಳನ್ನು ಸಾಗಿಸಬೇಕಾಯಿತು. ನಾವು ಸತ್ಯಾಗ್ರಹ ಭಾಗಿಗಳಾಗಿರದ ಸಂದರ್ಭಗಳಲ್ಲೆಲ್ಲಾ ವಿಧಾಯಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಒಂದಲ್ಲೊಂದು ಕಾರ್ಯಗಳನ್ನು ಬಲಗೊಳಿಸುವದಕ್ಕಾಗಿಯೇ ಈ ವಾರವು ಮೀಸಲಿಡಲ್ಪಡುತ್ತಿತ್ತು. ಈ ವಾರಾಚರಣೆಯಲ್ಲಿ ಒಂದು ವೈಶಿಷ್ಟ್ಯವಿದೆ. ಅದ್ದರಿಂದ ಅದನ್ನು ಏಕಾಗ್ರತೆಯಿಂದ, ಅಂತೆಯೇ ಉತ್ಸಾಹಪೂರ್ವಕವಾಗಿ ಆಚರಿಸಬೇಕು.

ಎಲ್ಲಾ ಕಾಂಗ್ರೆಸ್ ಸಂಸ್ಥೆಗಳೂ ಇತರರೂ ಈ ಬಾರಿಯ ವಾರಾಚರಣೆಯನ್ನು ಎರಡೇ ವಿಷಯಗಳಿಗೆ ಮೀಸಲಿಡಬೇಕೆಂದು ವಿಜ್ಞಾಪನೆಯಿದೆ. ಜಾತೀಯ ಶಾಂತಿ ಮತ್ತು ಸೌಹಾರ್ದತೆಯ ಸ್ಥಾಪನೆಗಾಗಿ ರಾಷ್ಟ್ರವ್ಯಾಪೀ ಕಾರ್ಯ ಸಾಗಬೇಕು. ಭಿನ್ನಭಿನ್ನ ಜಾತಿಗಳವರ ನಡುವೆ, ಮುಖ್ಯತಃ ಹಿಂದು, ಮುಸ್ಲಿಂ, ಸಿಖ್ಖರ ನಡುವೆ ಪ್ರಚಾರ ಮೂಲಕ ಹಾಗೂ ಪರಸ್ಪರ ಸುಸಂಬಂಧ ನಿರ್ಮಿಸುವ ಚಟುವಟಿಕೆಗಳ ಮೂಲಕವೂ, ಗಲಭೆಗಳಿಗೆ ಹೇತುವಾಗಬಲ್ಲ ಸ್ಥಳೀಯ ಕಾರಣಗಳನ್ನು ನಿವಾರಿಸಿಕೊಳ್ಳುವ ಮೂಲಕವೂ ಈ ಕಾರ್ಯವನ್ನು ಸಾಧಿಸುವದು ಸಾಧ್ಯವಿದೆ.

'ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ'ಗೆ ಹಣ ಸಂಗ್ರಹಿಸುವದಕ್ಕಾಗಿಯೂ ಈ ವಾರವು ಮೀಸಲಿರಬೇಕು. ಕೇಂದ್ರ ಸಮಿತಿಯು ಇಷ್ಟರಲ್ಲೇ ಪ್ರಾಂತಿಕ ಹಾಗೂ ಸ್ಥಾನಿಕ ಸಮಿತಿಗಳನ್ನು ನೇಮಿಸಿದೆ. ಇವು, ಈ ವಾರಾರಂಭಿಸುವ ಮೊದಲೇ ಅಗತ್ಯವುಳ್ಳಲ್ಲೆಲ್ಲಾ ಸ್ಥಳೀಯ ಸಮಿತಿಗಳನ್ನೂ, ಅಧಿಕೃತ ಏಜೆಂಟರನ್ನೂ ಹಣ ಸಂಗ್ರಹಕ್ಕಾಗಿ ನೇಮಿಸಿಟ್ಟು ಆಣಿಯಾಗುವವೆಂದು ಆಶಿಸಲಾಗಿದೆ. ಪ್ರತಿಯೊಬ್ಬನೂ ಕೊನೆಯ ಪಕ್ಷ ತನ್ನ ಹತ್ತು ದಿನಗಳ ವರಮಾನವನ್ನಾದರೂ ಈ ನಿಧಿಗೆ ಕೊಡಬೇಕೆಂದು ಕೇಂದ್ರ ಸಮಿತಿಯು ಸರ್ವರಲ್ಲೂ ವಿಜ್ಞಾಪಿಸಿಕೊಂಡಿದೆ. ಇಡೀ ರಾಷ್ಟ್ರದ ಎಲ್ಲಾ ವ್ಯಕ್ತಿಗಳಿಂದಲೂ ಈ ಕೊಡುಗೆಯನ್ನು ಸಂಗ್ರಹಿಸುವ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಹಣ ಕೊಡುವವರು ಅಧಿಕೃತ ಸಂಗ್ರಹಣಕಾರರ ಕೈಯಲ್ಲಿ ಮಾತ್ರ, ರಶೀದಿ ದೊರೆವಾಗ ಮಾತ್ರ ಕೊಡಬೇಕು. ಈ ಸಂಬಂಧದ ಅಧಿಕಾರ ಪಡೆದಿರುವ ಮತ್ತಾ ಹೆಸರು ಪ್ರಕಟಗೊಂಡಿರುವ ಬೇಂಕುಗಳಲ್ಲಿ, ಸಂಗ್ರಹಕಾರರೂ ಸಮಿತಿಗಳೂ ತಮ್ಮ ಆಯಾಯಾ ದಿನದ ಸಂಗ್ರಹವನ್ನು ಆಯಾಯಾ ದಿನವೇ ಡಿಪೋಸಿಟ್ ಇಡತಕ್ಕದ್ದು.

ನಿಧಿಗೆ ಹಣ ಕೊಡಲಿಚ್ಛಿಸುವ ಎಲ್ಲರನ್ನೂ ಈ ವಾರದಲ್ಲೇ ಸಂದರ್ಶಿಸಿ ಸಂಗ್ರಹಿಸಲು ಆ ಕೆಲಸೋದ್ಯುಕ್ತರಾದ ಕೆಲಸಗಾರರಿಗಸಾಧ್ಯವಾಗಬಹುದು ಎಂಬ ಶಂಕೆಯಿದೆ. ಆದ್ದರಿಂದ ವಾಯಿದೆಯನ್ನು ದೀರ್ಘಗೊಳಿಸಬಹುದು; ಕೆಲಸವನ್ನು ಮುಂದೊತ್ತುವದಕ್ಕಾಗಿ 'ರಾಷ್ಟ್ರೀಯ ವಾರ'ದ ಬದಲಿಗೆ ನಾವೊಂದು 'ರಾಷ್ಟ್ರೀಯ ಪಕ್ಷ'ವನ್ನೇ ಆಚರಿಸಬಹುದು. ಸತ್ಯಕ್ಕೂ ಈ ಅವಧಿಯಲ್ಲಿ ಸಂಗ್ರಹಕಾರ್ಯವು ಮುಗಿಯದಿದ್ದರೂ, ರಾಷ್ಟ್ರೀಯ ವಾರವು ಈ ಕೆಲಸಕ್ಕೆ ಸುವ್ಯವಸ್ಥಿತ ಸುಗಮಾರಂಭವಾಗುವದೆಂದು ಆಶಿಸಲಾಗಿದೆ."

ಹಲವು ರಾಷ್ಟ್ರೀಯ ನಿಧಿಗಳನ್ನು ರಚಿಸಿ ಪಡೆದಿರುವ ಅನುಭವದ ಬಲದಿಂದ ಕಾಂಗ್ರೆಸ್ ಅಧ್ಯಕ್ಷರು ಗಾಂಧಿಜೀಯ ಸ್ಮಾರಕ ನಿಧಿಯು ಮಟ್ಟಿಗೂ ಅಂತಹ ಲೋಪದೋಷಗಳಾವುವೂ ಮೂಡದಂತೆ ನೋಡುವದಕ್ಕಾಗಿ ಸಂಗ್ರಹ ಯಂತ್ರದ ಎಲ್ಲಾ ಅಂಗಗಳನ್ನೂ ದುರಸ್ತಿಗೊಳಿಸಿ ಶುದ್ಧೀಕರಿಸಲು ಇಷ್ಟು ದಿನ ತಡ ಮಾಡಿದ್ದರು. ಈಗ ರಾಷ್ಟ್ರೀಯ ಪುಣ್ಯ ವಾರದಲ್ಲೀ ಆ ಕಾರ್ಯವು ಆರಂಭವಾಗಿ ಭರದಿಂದ ಮುಂದೊತ್ತಬೇಕೆಂದು ಹಾರೈಸಿದ್ದಾರೆ. ಸರ್ವ ಭಾರತೀಯರೂ ಅವರ ಈ ವಿಜ್ಞಾಪನೆಯಂತೆ ವರ್ತಿಸುವುದು ಅತ್ಯಗತ್ಯವಿದೆ.

ಸಂಸ್ಥಾನೀ ಸಮಸ್ಯೆ

ಮಾರ್ಚ ತಿಂಗಳ ಅಂತ್ಯದೊಳಗೆ ಹೈದರಾಬಾದ್ ಸಮಸ್ಯೆಯು ತೀರ್ಮಾನವಾಗಬಹುದೆಂಬ ನಿರೀಕ್ಷೆಯಿದ್ದರೂ ಈಗ ಹೈದರಾಬಾದು ಮತ್ತು ಭಾರತ ಸರಕಾರಗಳೊಳಗೆ ಕೆಲವು ಪ್ರಶ್ನೆಗಳ ಕುರಿತು ಗುಪ್ತ ಪತ್ರ ವ್ಯವಹಾರಗಳು ಮಾತ್ರ ನಡೆದಿವೆ. ಹೈದರಾಬಾದಿನ ಸಂಬಂಧ ಪೂರ್ಣವಾಗುವುದು ಎಂಬುದು ಇನ್ನು ಹೆಚ್ಚೆಂದರೆ ಎರಡು ವಾರಗಳೊಳಗೆ ಸ್ಪಷ್ಟವಾಗುವದು ಖಂಡಿತವೆಂದಾಗಿದೆ. ಇತ್ತ ಹೈದರಾಬಾದಿನ ಗಡಿಯ ಮದ್ರಾಸ್ ಪ್ರಾಂತ್ಯದ ಭಾಗಗಳಲ್ಲಿ ನಿಜಾಮ್ ಸರಕಾರದ ಪ್ರಜೆಗಳು, ಅದರಲ್ಲೂ ಮುಖ್ಯವಾಗಿ ರಝಾಕಾರ್ ಪುಂಡರು ಮಾಡಿರುವ ಧಾಳಿಯ ಕುರಿತು ಮದ್ರಾಸ್ ಸರಕಾರವು ಹೈದರಾಬಾದ್ ಸರಕಾರದೊಡನೆ ಸಂಧಾನ ಮಾತುಕತೆ ನಡೆಸುವುದು ನಿರರ್ಥಕವೆಂದು ಆಲೋಚನೆಯನ್ನೇ ಬಿಟ್ಟು ಸರಹದ್ದುಗಳಲ್ಲಿ ಬಲವಾದ ಸಶಸ್ತ್ರ ಪಹರೆಗಳನ್ನಿಟ್ಟಿದೆ. ಅಲ್ಲಿಯ ವಿದ್ಯಮಾನಗಳನ್ನು ತಾಸು ತಾಸಿಗೆ ತಮಗೆ ತಿಳಿಸುತ್ತಿರಬೇಕೆಂದು ಮದ್ರಾಸ್ ಸರಕಾರದ ಆಜ್ಞೆಯಿದೆ. ವಾರಂಗಾಲ್ ಜಿಲ್ಲೆಗಳಲ್ಲಿ ಕಮ್ಯೂನಿಸ್ಟರು ಹಾವಳಿಗಳನ್ನು ಮಾಡುತ್ತಿದ್ದಾರೆಂದು ನಿಜಾಮ್ ಸರಕಾರದ ದೂರು. ಅದರ ಅಲ್ಲಿಯ ಗೂಂಡಾಗ್ರಗಣ್ಯರಾದ ರಝಾಕಾರರು ಸರಕಾರವೇ ಶಸ್ತ್ರ ಸಹಾಯಗಳನ್ನೀಯುತ್ತಿದೆಯೆಂದೂ, ಅವರ ಸಂಘವನ್ನು ಬರ್ಖಾಸ್ತುಪಡಿಸಬೇಕೆಂದು ಕೇಳಿಕೊಂಡು ಹೈದರಾಬಾದಿನ ಹಲವು ಮಹಿಳೆಯರು ಉಪವಾಸ ಕೈಗೊಂಡಿರುವರೆಂದೂ ತಿಳಿದು ಬರುತ್ತದೆ. ರಝಾಕಾರರ ಹಾವಳಿ ಮತ್ತು ಜಾತೀಯ ಗಲಭೆಯ ಭೀತಿಯಿಂದ ಹೈದರಾಬಾದಿನ ಅಲಿಪುರ, ಕೋದೂರು, ಟಿ. ಗಾಲ್, ಜಗಸಿಪುರ, ಚಿಟ್ಟವಳ್ಳಿ, ಮಾಕರ್ಲ್ ಮೊದಲಾದ ಊರುಗಳವರು ಮದ್ರಾಸ್ ಪ್ರಾಂತ್ಯದ ಕರ್ನೂಲು, ಬೆಜವಾಡಾಗಳಿಗೆ ಓಡಿಬರುತ್ತಿದ್ದಾರೆ.

ಕಾಶ್ಮೀರದ ಸಂಬಂಧವಾಗಿ ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಚೀನೀಯ ಪ್ರತಿನಿಧಿಯು ಮುಂತಂದಿದ್ದ ರಾಜೀ ಸೂಚನೆಗಳಿಗೆ ಪಾಕಿಸ್ತಾನದ ವಿರೋಧ ಬಂದಿರುವುದರಿಂದ ರಾಜೀ ಮಾತುಕತೆಗಳು ಮುರಿದುಬೀಳುವ ಭಯವೆದ್ದಿದೆ. ಈ ಸಂಬಂಧದ ಚರ್ಚೆಯು ಇದೇ ತಾ 29ಕ್ಕೆ ಇಡಲ್ಪಟ್ಟಿರುವುದಾದರೂ ಇಕ್ಕಡೆಯವರಿಗೆ ಸಮಾಧಾನಕರವಾದ ಒಂದು ತೀರ್ಮಾನ ಕೊಡಲು ಭದ್ರತಾ ಕೌನ್ಸಿಲಿನಿಂದಾಗಬಹುದೆಂಬ ಆಶೆಗವಕಾಶ ತೋರುವದಿಲ್ಲ.

ಕಾಲತ್ ಎಂಬ ಪಾಕಿಸ್ತಾನ್ ವಲಯಕ್ಕೆ ಸಂಬಂಧಿಸಿದ ಸಂಸ್ಥಾನದ ಖಾನರು ತಾನು ಭಾರತ ಕೇಂದ್ರದೊಂದಿಗೆ ಜೋಡಣೆಗೊಳ್ಳುವೆನೆಂದು ಬಯಸಿದ್ದರೂ ಭಾರತ ಸರಕಾರವು ತಿರಸ್ಕರಿಸಿದ್ದಿತು. ಆದರೂ ಆ ಸಂಬಂಧವಾಗಿಯೂ, ಇತರ ಸಂಸ್ಥಾನಗಳ ವ್ಯವಹಾರಗಳ ಕುರಿತೂ ಭಾರತ ಸರಕಾರದ ಮೇಲೆ ನಡೆದಿರುವ ಟೀಕೆಗಳನ್ನು ಹಿಂದೀ ಸರಕಾರದ ಸಂಸ್ಥಾನ ಸಚಿವ ಖಾತೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನರು ಸಕಾರಣವಾಗಿ ಖಂಡಿಸಿದ್ದಾರೆ. ಆಗೋಸ್ತು 15ರ ಸುಮಾರಿಗೆ ತಾವು ಸ್ವತಂತ್ರರೆಂಬ ಘೋಷಣೆಯಿಂದಿದ್ದ 562 ಸಂಸ್ಥಾನಗಳನ್ನು ನ್ಯಾಯನೀತಿ ಮತ್ತು ಚಾತುರ್ಯದಿಂದ ಭಾರತ ಸರಕಾರವು ಕೂಡಿಕೊಂಡ ಆ ಭವ್ಯ ಚಿತ್ರವನ್ನು ಶ್ರೀ. ಮೆನನರು ಬಿಡಿಸಿತೋರಿಸಿದ್ದಾರೆ.



ಎಲ್ಲಿ ತರದ ದಂತರೋಗಗಳನ್ನು ನಷ್ಟಗೆ ಮಾಡಿ
ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
S. C. 642/1946 S. E. P. 110 1946
ವಾದಿ. ಕೃಷ್ಣ ಭಂಡಾರಿ.
ಪ್ರತಿವಾದಿ H. ಶೀನಪ್ಪ ಶೆಟ್ಟಿ.

ಕುಂದಾಪುರ ತಾಲ್ಲೂಕು ಸಿದ್ದಾಪುರ ಗ್ರಾಮದಲ್ಲಿರುವ ಹಾವರ್ಗಳ್ಳಿ ಗೋವಿಂದ ಶೆಟ್ರು ಅವರ ಯ ಪ್ರತಿವಾದಿ ಎಚ್. ಶೀನಪ್ಪ ಶೆಟ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ಮೇಲಿನ ಡಿಕ್ರಿ ಪ್ರಕಾರ ಬರತಕ್ಕ ಹಣ ಬರಮಾಡಿಕೊಳ್ಳುವದೆ ಅನುಲಕ್ಷಿಸಿ ವಾದಿಯು ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅಮಲ್ದಾರಿಯು ತಾ. 14-4-1948ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ತಾರೀಕಿಗೆ ಮೇಲಿನ ಕೋರ್ಟ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತದೆ.

M Authaya Shetty,
Advocate for Petr.
Date 23-3-48, Coondapoor.

The Canara Banking Corporation Limited.
Estd: 1906.
(Incorporated in British India)
Head Office: **UDIPI**, S. India.

SEASON DEPOSITS
for Rs 5000/- and over are now accepted at all Offices of the Bank at the following rates.—
3 & 4 months — @ 2¼ % p. a.
5 & 6 months — @ 2½ % p. a.

ನವಯುಗ

ಗುರುವಾರ, ಉಡುಪಿ, ೧-೪-'೪೮

ಇಲ್ಲಿಯ ಆಹಾರ ಸಮಸ್ಯೆ.

ಕಳೆದ ಎರಡು ವಾರಗಳಲ್ಲೂ ನಾವು ಈ ಹೊಟ್ಟೆಪಾಡಿನ ಪ್ರಶ್ನೆಯ ಕುರಿತೇ ವಾದಿಸಿದ್ದೆವಾದರೂ ಪರಿಸ್ಥಿತಿಯು ಮತ್ತೊಮ್ಮೆ ಈ ಸರ್ವಪ್ರಥಮ ಸಮಸ್ಯೆಯ ಕಡೆಗೇನೇ ಲಕ್ಷ್ಯವನ್ನೆಳೆದಿದೆ. ಜನತೆಯು ಲ್ಲಿಪ್ಪಿರುವ ಆಹಾರ ಬೊಬ್ಬೆಯಂತಹದು! ಹಳ್ಳೀ ಹಸುಗೆ ರದ್ದಾಗಿ ತಿಂಗಳುಗಳು—ಉಡುಪಿ ನಗರದ ಹಸುಗೆ ತೆಗೆದು ಹಾಕಲ್ಪಟ್ಟು ಇಂದಿಗೆ ಎರಡೂವರೆ ವಾರಗಳು—ಕಳೆದುವು. ಈ ರದ್ದತಿಗಳಾದರೋ ಜನತೆಗೆ ಆಹಾರಾನುಕೂಲತೆ ಕೊಟ್ಟಬೇಕೆಂಬ ದೃಷ್ಟಿಯಿಟ್ಟುಕೊಂಡು ನಡೆದುವಲ್ಲದೆ, ಜನರ ಹೊಟ್ಟೆಪಾಡಿನ ಕುರಿತು ಸರಕಾರದ ಮೇಲಿರುವ ಹೊಣೆಗಾರಿಕೆಯನ್ನು ಈ ಸಂಧಿಗ್ಧಾವಧಿಯಲ್ಲಿ ಜಾರಿಸಿಕೊಳ್ಳಬೇಕೆಂಬ ವಂಚಕ ಘೋಷಣೆಯಿಂದಲ್ಲವೆಂಬುದು ಸ್ಪಷ್ಟವಿರುವಾಗ, ಅಂತಹ ಸತ್ಪರಿಣಾಮದ ಚಿಹ್ನೆಗಳು ಇಷ್ಟರಲ್ಲೇ ತೋರಿಬರಬೇಕಿತ್ತೆಂಬುದು ಖಂಡಿತ. ಆದರೆ ಅಂತಹ ಸಲ್ಲಕ್ಷಣಗಳಿಲ್ಲವು. ವ್ಯತಿರಿಕ್ತವಾಗಿ ಪ್ರಥಮ ದಿನಗಳಲ್ಲಿ ಕಲವಟ್ಟಿನ ಅಸ್ತವ್ಯಸ್ತತೆ ಕಂಡುಬರುವುದು ಸಹಜವಾದರೂ ವಾರಾವಧಿ, ತಿಂಗಳುಗಟ್ಟಲೆ ಅದೇ ದುಸ್ಥಿತಿಯು ಮುಂದುವರಿದು ಬಂದಿರುವ ಈ ದೃಶ್ಯವು ಆಶಾದಾಯಕವಾಗಿ ಇಲ್ಲ; ಆಹಾರ ಸಂಬಂಧವಾಗಿ ಕೆಲವೆಡೆಗಳಲ್ಲಿದ್ದಿರುವ ಹಾಹಾಕಾರವು ಕರುಣಾಜನಕವಿದೆ; ಈಗ ಕಣ್ಣ ಮುಂದಿರುವ ಆಹಾರ ಪರಿಸ್ಥಿತಿಯ ಚಿತ್ರದಲ್ಲಿ ಅಸ್ಪಷ್ಟ ಭಾಗ ಮತ್ತು ಭೀತಿದಾಯಕ ಭಾಗಗಳೇ ಕಾಣಿಸುತ್ತಿವೆ ಎನ್ನದೆ ನಿರ್ವಾಹವಿಲ್ಲ. ಈ ಅಸ್ಪಷ್ಟತೆಯೇಕಿರಬೇಕು? ಜಿಲ್ಲೆಯ ಆಹಾರ ಪರಿಸ್ಥಿತಿ ಹೇಗಿದೆ ಎಂಬುದನ್ನು ತಾಲೂಕುವಾರಾಗಿ ವಿಭಾಗಿಸಿ ತಿಂಗಳಿಗೊಮ್ಮೆಯಾದರೂ ಸರಿಯಾದ ಅಂಕೆಸಂಖ್ಯೆಗಳನ್ನು ಅಧಿಕಾರಿಗಳೇಕೆ ಪ್ರಕಟಿಸಬಾರದು? ಇಂತಹ ಅಧಿಕೃತ ವಾರ್ತೆಗಳಾವುವೂ ಮುಂದೆ ಬಾರದ ಕಾರಣದಿಂದಾಗಿಯೇ ಜಿಲ್ಲೆಯ ಜನತೆಯಲ್ಲಿ ಭಯದಾಯಕ ಊಹಾಪೋಹಗಳೆದ್ದಿವೆ; ಅವುಗಳಲ್ಲಿ ಸತ್ಯಾಂಶವೆಷ್ಟು, ನಿರಾಧಾರೀ ಕಲ್ಪನೆಗಳೆಷ್ಟು ಎಂಬುದನ್ನು ತಿಳಿಯಲು ಬುದ್ಧಿವಂತರಿಗೂ ಕಷ್ಟವಾಗುತ್ತದೆ. ಮಂತ್ರಿಗಳು ಆಗಾಗ ಕೊಡುವ ಇಡೀ ಪ್ರಾಂತ್ಯದ ಆಹಾರ ಪರಿಸ್ಥಿತಿಯ ಯಥಾರ್ಥ ಪರಿಚಯಗಳು ಜನತೆಯಲ್ಲಿ ಕೆಲಮಟ್ಟಿನ ಭರವಸೆಯನ್ನು ಹುಟ್ಟಿಸುವಂತಹವಿವೆ. ಇದೇ ಮಾದರಿಯನ್ನು ಜಿಲ್ಲೆಯ ಹಾಗೂ ತಾಲೂಕಿನ ಅಧಿಕಾರಿಗಳೂ ಅನುಕರಿಸಿ, ತಂತಮ್ಮ ಕ್ಷೇತ್ರಗಳ ಆಹಾರ ಸ್ಥಿತಿಗತಿಗಳ ಅಧಿಕೃತ ಪರಿಚಯವನ್ನು ಜನತೆಗೆ ತಿಂಗಳಿಗೊಮ್ಮೆಯಾದರೂ ಮಾಡಿಕೊಡುವ ಕ್ರಮ ಬರುವುದು ಸದ್ಯದ ಕಬಡು ವಾತಾವರಣವನ್ನು ತಿಳಿಗೊಳಿಸುವ ಉತ್ತಮ ಸಾಧನವೆಂದು ನಮ್ಮ ಅಭಿಪ್ರಾಯ. ಎರಡನೆಯದಾಗಿ ಇಂದಿನ ಆಹಾರ ಸ್ಥಿತಿಚಿತ್ರದಲ್ಲಿ ಈ ರೀತಿಯ ಭೀತಿದಾಯಕ ಕರಿಛಾಯೆಯೇಕೆ ಕಾಣಿಸುತ್ತಿದೆಯೋ ನ್ಯಾಯವಾದ ಕಾರಣವಾವುದೂ ಹೊಳೆಯುವದಿಲ್ಲ. ನಾವು ಹಿಂದಿನ ವಾರದಲ್ಲಿ ಉಲ್ಲೇಖಿಸಿರುವಂತೆ ಮದ್ರಾಸ್ ಪ್ರಾಂತ್ಯದ ಆಹಾರ ಸ್ಥಿತಿಯ ಕುರಿತು ಗೊಂದಲಗೊಳ್ಳಲು ಯಾವ ಕಾರಣವೂ ಇಲ್ಲವೆಂದು ಆಹಾರಮಂತ್ರಿಗಳು ಸಾಧಾರ ಭರವಸೆಯಿತ್ತಿದ್ದಾರೆ. ಇಡೀ ಪ್ರಾಂತ್ಯದ ಮಟ್ಟಿಗೆ ಅದರ ಹೊಣೆ ಹೊತ್ತವರ ಬಾಯಿಯಿಂದ ಇಂತಹ ಆಶ್ವಾಸನೆಗಳನ್ನು ಕೇಳುವಾಗಲೇ ಪ್ರಾಂತ್ಯದೊಳ ಭಾಗವಾದ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಎಲ್ಲೆಡೆಗಳಲ್ಲೂ ಆಹಾರಾಭಾವದ, ಅಧಿಕ ಬೆಲೆಯ ಕೂಗುಗಳನ್ನು ಕೇಳುತಿದ್ದೇವೆ. ಹೀಗೇಕೆ? ಆಹಾರ ಧಾನ್ಯಗಳ ಸಂಗ್ರಹವಿದ್ದರೆ, ಸರಕಾರವು ನಿಶ್ಚಯಿಸಿರುವ ಕ್ರಮದಂತಾದರೂ ಸರ್ವರಿಗೂ ಸರಿಯಾಗಿ ವಿತರಣೆಯಾಗುವ ಸುವ್ಯವಸ್ಥೆ ಇನ್ನೂ ಕಂಡುಬರುವುದಿಲ್ಲವೇಕೆ?—ಎಂದು ಮತ್ತೊಮ್ಮೆ ಒತ್ತಿ ಕೇಳಬೇಕಾಗುತ್ತದೆ. ಅಕ್ಕಿಯ ಧಾರಣೆ ಯಾವ ನಿಯಂತ್ರಣವೂ ಇಲ್ಲವೆಂಬಂತೆ ಏರುತ್ತಾ ಹೋಗುತ್ತಿದೆ; ಕೊಂಡುಕೊಳ್ಳುವ ಅಕ್ಕಿಯಾಗಲೀ ಸರಕಾರೀ ಅಂಗಡಿಗಳಿಂದ ಅಕ್ಕಿ ಪಡೆಯುವ ಹಕ್ಕಾಗಲೀ ದೊರೆಯದವರ ದೂರಂತೂ ದೊಡ್ಡದಿದೆ. ಉಡುಪಿ ನಗರದಲ್ಲಿ 6 ಔನ್ಸ್ ಆಹಾರ ಧಾನ್ಯ ಪಡೆಯುವ ಕಾರ್ಡು ಸಿಕ್ಕಿದವರಿಗಾದರೂ ಆ ಪೈಕಿ ಸರೀ ಅರ್ಧಾಂಶದಷ್ಟು ದೊರೆಯುವ ಜೋಳವನ್ನೇನು ಮಾಡಬೇಕೆಂಬುದೇ ತಿಳಿಯುವದಿಲ್ಲ. ಸ್ಥಳೀಯ ಡಿಪೋಗಳಲ್ಲಿ ಇತ್ತೀಚೆಗಿನವರೆಗೂ ಸಹಸ್ರ ಸಂಖ್ಯೆಯಲ್ಲಿ ಅಕ್ಕೀ ಮುಡಿಗಳು ದಾಸ್ತಾನಿದ್ದುವೆಂದೂ, ಈಗ ಅವು ಮಾಯವಾಗಿವೆಯೆಂದೂ ಸುದ್ದಿ ಹಬ್ಬಿದ್ದು, 'ನಾವು ಉಪವಾಸವಿರುವಾಗಲೇ ನಮ್ಮ ನಡುವೆಯಿದ್ದ ಅಕ್ಕೀಮುಡಿಗಳು ಬೇರೆ ಕಡೆಗೆ ಹೋಗುವದೆಂದರೇನು?' ಎಂಬಂತಹ ಪ್ರಶ್ನೆಗಳೆದ್ದಿವೆ. ಹಸಿವು ಪೀಡೆಯಿರುವಲ್ಲಿ, ಆ ಪೀಡೆಗೊಳಗಾದವರ ಇಂತಹ ದೂರುಗಳು ಒಂದೊಮ್ಮೆಗೆ ಅಸಂಬದ್ಧವಾಗಿದ್ದರೂ ಕೂಡಾ ಕ್ಷಮಾರ್ಹವಿವೆಯೆಂಬುದನ್ನೂ ಹಸಿವು ನಿವಾರಣೆಗೆ ಗಮನಕೊಡುವದೊಂದೇ ಇವುಗಳಿಗೆ ಯೋಗ್ಯ ಉತ್ತರವೆಂಬುದನ್ನೂ ಸರಕಾರವು ಮರೆಯಬಾರದು. ಅಂತಹ ಶಮನಕಾರ್ಯವು ಆಗಬೇಕಾದಷ್ಟು ತೀವ್ರಗತಿಯಿಂದ, ಸುವ್ಯವಸ್ಥೆಯಿಂದ ಇನ್ನೂ ಆಗುತ್ತಿಲ್ಲವೇಕೆ, ಎಂಬುದೇ ಎಲ್ಲರ ಆಗ್ರಹದ ಪ್ರಶ್ನೆ. ಜನತೆಯ ಹೊಟ್ಟೆಪಾಡಿನ ಈ ಕಾರ್ಯದಲ್ಲೂ ಅಸಡ್ಡೆ ವಹಿಸುವದು ಅಥವಾ ನಿಧಾನಿಸುವದು ನಿಜಕ್ಕೂ ಅಪಾಯಕರವಿದೆ; ಅಕ್ಷಮ್ಯವಿದೆ. ಈ ಅಸಡ್ಡೆ ಮತ್ತು ಮಂದಗಾಮಿತ್ವಕ್ಕೆ ನಿದರ್ಶನವಾಗಿ ಉಡುಪಿ ನಗರದ ವಿದ್ಯಮಾನವೊಂದನ್ನೇ ನೋಡಿದರೆ ಸಾಕು. ಇಲ್ಲಿ ಅಕಸ್ಮಾತ್ತಾಗಿ ಹಸುಗೇ ರದ್ದಾಯಿತು; ಆ ಮೇಲಾದರೂ ರಕ್ಷಣಾ ಅಂಗಡಿಗಳನ್ನು ತೆರೆಯುವುದರಲ್ಲಾಗಲೀ, ನಿಜಕ್ಕೂ ಆಗತ್ಯವುಳ್ಳ ಸರ್ವರಿಗೂ ಆಹಾರ ಧಾನ್ಯ ದೊರೆಯುವಂತೆ ಮಾಡುವುದರಲ್ಲಾಗಲೀ ಪರಿಸ್ಥಿತಿಗೆ ಹೇಳಿಸಿದಂತಹ ಪರಿಣಾಮಕಾರೀ ವ್ಯವಸ್ಥೆಯಾಗಿಲ್ಲ; ಜನತೆಯ ದೂರುದೂಷಣೆಗಳೆದ್ದಿವೆ. ನಗರದ ಸರಕಾರೀ ಅಂಗಡಿಗಳಿಂದ ಅಕ್ಕಿ ಪಡೆಯುವ ಅಧಿಕಾರವಿಲ್ಲದೆ, ಹೊರಗಿನ ಊರುಗಳಿಂದ ಅಕ್ಕಿ ತರಿಸಿಕೊಳ್ಳುವ ಅನುಕೂಲತೆಯೂ ಇಲ್ಲದವರೆಷ್ಟೋ ಮಂದಿಯಿದ್ದಾರೆ. ಇಂಥವರು, ಅಕ್ಕಿ ಪಡೆಯಲಾಗುವ ತಮ್ಮ ಪಾಲಿನ ಎಲ್ಲಾ ದ್ವಾರಗಳೂ ಮುಚ್ಚಲ್ಪಟ್ಟು ದಿಗ್ಭ್ರಂಥನಗೊಂಡಂತಾಗಿದ್ದಾರೆ. ಕಾರ್ಡು ದೊರೆತ ಬಡವರಾಗಿರುವ ತೊಂದರೆಗಳಂತೂ ಅವರ ಮಟ್ಟಿಗೆ ಎಲ್ಲರಿಗಿಂತ ಹೆಚ್ಚಿನವೆಂಬುದನ್ನು ಮರೆಯಲಾಗುವದಿಲ್ಲ. ಹೀಗಿರುವುದು ಸಹನೀಯವೆ? ಹಸುಗೇ ಅಕ್ಕಿಯಿಂದ ಜೀವನ ಮಾಡುತಿದ್ದ ಇಪ್ಪತ್ತು ಸಾವಿರಕ್ಕೂ ಮಿಕ್ಕಿದ ಜನಸಂಖ್ಯೆಯಿರುವ ಉಡುಪಿಯ ಹಸುಗೇ ಕ್ರಮವನ್ನು ಥಕ್ಕನೆ ರದ್ದುಗೊಳಿಸುವಾಗ ಎಲ್ಲಾ ವ್ಯವಸ್ಥೆಯನ್ನೂ ಮುಂದಾಗಿ ಮಾಡಿಟ್ಟುಕೊಳ್ಳುವದು ಆಗತ್ಯವಿರಲಿಲ್ಲವೆ? ಇನ್ನಾದರೂ ಕುಂದಾಪುರ ಡಿವಿಜನಿನ ಅಕ್ಕಿಯು ಈ ಡಿವಿಜನಿನಲ್ಲೇ ಉಳಿದು ವಿನಿಯೋಗ ಹೊಂದುವ, ಮತ್ತಿಲ್ಲಿಗೆ ಕಡಿಮೆ ಬೀಳುವಂತಿದ್ದರೆ ಹೊರಗಿನಿಂದ ಸಕಾಲದಲ್ಲಿ ಆಮದು ಪಡಿಸಿಕೊಳ್ಳುವ ವ್ಯವಸ್ಥೆ ಮಾಡಬಾರದೆ? ಅಂತೆಯೇ ರಕ್ಷಣಾ ಅಂಗಡಿಗಳ ಸಂಖ್ಯೆಯನ್ನು ಆಗತ್ಯವಿರುವಷ್ಟು ಹೆಚ್ಚಿಸಿ ಕೊನೆಯ ಪಕ್ಷ ಎಲ್ಲರಿಗೂ 8 ಔನ್ಸ್ ಆಹಾರ ಧಾನ್ಯ (6 ಔನ್ಸ್ ಆದರೂ ಅಕ್ಕಿ) ದೊರೆಯುವಂತೆ ಮಾಡಬಾರದೆ? ಇಂತಹ ಕನಿಷ್ಠ ವಿತಿಯ ಶಮನವಾದರೂ ಕೂಡಲೇ ಆಗದಿದ್ದರೆ ಜನರ ಬೊಬ್ಬೆ ನಿಲ್ಲದು—ಜನತೆಯ ಆಹಾರ ಬೊಬ್ಬೆಯನ್ನು ಸಕಾಲದಲ್ಲಿ ಶಮನಿಸದಿದ್ದರೆ ಸರಕಾರವು ತನ್ನ ಕರ್ತವ್ಯ ನಿರ್ವಹಿಸಿದಂತಾಗದು—ಎಂದು ಮತ್ತೊಮ್ಮೆ ಆಗ್ರಹಪೂರ್ವಕ ಸೂಚಿಸುತ್ತೇವೆ.

ಉತ್ತಮ-ಮಧ್ಯಮ-ಅಧಮ

ಇಂದಿನ ಆರ್ಥಿಕ, ಸಾಮಾಜಿಕ, ಬೌದ್ಧಿಕ ಅಸಮಾನತೆಗಳ ದೆಸೆಯಿಂದಾಗಿ ಮನುಷ್ಯರ ಉತ್ತಮ-ಮಧ್ಯಮ-ಅಧಮ ತಂಗತಿಗೆ ಪರಿಚಯವು ಸಾಮಾನ್ಯ ಜನರಿಗಾಗದಂತಿದೆ. ಸೇವಾಬುದ್ಧಿಯ ತ್ಯಾಗಿಗಳು ನಿಕೃಷ್ಟರಾಗಿಯೂ ಕುಲಿಗೆ ಮನೋವೃತ್ತಿಯ ಸ್ವಾರ್ಥಿಗಳು ಉತ್ಕೃಷ್ಟರಾಗಿಯೂ ತೋರುವದಿದೆ. ಕೇವಲ ಬಣ್ಣದ ಬಲದಿಂದ ದೋಷವೇ ಗುಣವಾಗಿಯೂ ಗುಣವು ದೋಷವಾಗಿಯೂ ಗಣಿಸಲ್ಪಡುತ್ತಿದೆ. ಇಂತಹ ಅಜ್ಞಾನ ಮತ್ತು ವಂಚನೆಯಿರುವ ವರೆಗೆ ಜನಜೀವನವು ಸುಧಾರಿಸಲ್ಪಡುವುದು ಅಸಾಧ್ಯ; ಸರ್ವಸಮಾನತೆ, ನ್ಯಾಯ ನೀತಿಯನ್ನಾಧರಿಸಿದ ಜನತಾ ರಾಜ್ಯ ಸ್ಥಾಪನೆಯಾಗುವದು ಅಸಂಭವ. ಆದ್ದರಿಂದ ಸಾರ್ವಜನಿಕರು ಈ ಕೆಲವು ತಾರತಮ್ಯಗಳನ್ನಾದರೂ ಸರ್ವ ಸಂದರ್ಭಗಳಲ್ಲೂ ಲಕ್ಷ್ಯದಲ್ಲಿಟ್ಟಿರಬೇಕಾದುದು ಅಗತ್ಯ—

- ತನ್ನ ವ್ಯಕ್ತಿಗತ ಸ್ವಾರ್ಥ ಲಾಭಗಳನ್ನು ಸಂಪೂರ್ಣ ಮರೆತೇ ಬಿಟ್ಟು ಜನಹಿತಕ್ಕಾಗಿ ತ್ರಿಕರಣಪೂರ್ವಕ ಪೂರ್ವಕ ದುಡಿಯುವವನು ಉತ್ತಮ—ತನ್ನ ಹಿತಸಂಬಂಧಗಳ ಕಡೆಗೆ ಲಕ್ಷ್ಯವಿಟ್ಟು, ಅದೇ ಕಾಲದಲ್ಲಿ ಸಾರ್ವಜನಿಕ ಹಿತಗಳನ್ನೂ ಗಣಿಸುವವನು, ಆದರೆ ಅದನ್ನೂ ಇದನ್ನೂ ಪ್ರತ್ಯೇಕಿಸಿಕೊಂಡೇ ಕೆಲಸ ಮಾಡುತ್ತಾ ಹೋಗುವವನು ಮಧ್ಯಮ—ತನ್ನ ತಲೆತುಂಬಾ ಸ್ವಾರ್ಥವೊಂದನ್ನೇ ಕಟ್ಟಿಕೊಂಡು ಇಡೀ ಆಯುಷ್ಯದ ಇದುವರೆಗಿನ ಭಾಗವನ್ನು ಸ್ವಲಾಭ ಸಾಧನೆಗಾಗಿ ವ್ಯಯಿಸಿದ್ದು, ಉಳಿದ ಭಾಗವನ್ನು ಅದಕ್ಕಾಗಿಯೇ ವಿನಿಯೋಗಿಸುವ ಭೀಷ್ಮ ಪ್ರತಿಜ್ಞೆ ತೊಟ್ಟು ಆ ಸ್ವಂತ ಲಾಭ ಸಾಧನೆಗಾಗಿಯೇ ಸಾರ್ವಜನಿಕ ಕಾರ್ಯಗಳಲ್ಲಿ ಕೈಯಿಕ್ಕುವವನು ಅಧಮ.

ಅನ್ಯರ ಮನನೋಯಿಸದೇನೇ ಅವರಿಗೆ ಮಂದಟ್ಟಾಗುವಂತೆ ನ್ಯಾಯ, ನೀತಿ, ಸತ್ಯವನ್ನು ವಾದಿಸಿ, ವರ್ತಿಸಿ ತೋರಿಸಬಲ್ಲವನು ಉತ್ತಮ—ಅನ್ಯರಿಗೆ ನೋವಾದರೂ ಕಠೋರ ಸತ್ಯ [illegible] ನಿದಾಕ್ಷಿಣ್ಯವಾಗಿ ಆಡಿ ಮಾಡಿ ತೋರಿಸಬಲ್ಲವನು ಮಧ್ಯಮ—ಸ್ವಾರ್ಥಕ್ಕಾಗಿ ಅಸತ್ಯ ಮತ್ತು ಕಪಟಾಚರಣೆಗಳನ್ನು ಕೈಕೊಂಡಿದ್ದು, ಅದಾರಿಗೂ ತಿಳಿಯಬಾರದೆಂಬುದಕ್ಕಾಗಿಯೇ ಮಧುರ ಅಸತ್ಯ, ಕೃತಕ ಸೌಜನ್ಯ, ಧೃತರಾಷ್ಟ್ರಾಲಿಂಗನ, ಉಪಕಾರ ಬುದ್ಧಿ ಪ್ರದರ್ಶಿಸುವವನು ಅಧಮ.

ಯಾವ ಸಾರ್ವಜನಿಕ ಕಾರ್ಯದಲ್ಲಾದರೂ ಹಣವನ್ನೇ ತನ್ನ ಗುರಿಯಾಗಿ ಇಟ್ಟುಕೊಳ್ಳದೆ ಜನವನ್ನು ಗುರಿಯಾಗಿ ಇಟ್ಟುಕೊಳ್ಳುವವ ಉತ್ತಮ—ಜನಹಿತ ಸಾಧನೆಗಾವ ಬಾಧೆಯೂ ಇಲ್ಲದ ಧನ ಸಂಪಾದನೆಯನ್ನೇ ಧ್ಯೇಯವಾಗಿಟ್ಟುಕೊಂಡವನು ಮಧ್ಯಮ—ಧನ ಸಂಪಾದನೆಯೊಂದೇ ತನ್ನ ಗುರಿಯಾಗಿದ್ದು, ಅದಕ್ಕಾಗಿ ಮಾತ್ರವೇ ಜನತಾ ಸಂಬಂಧ ಸಾಧನೆಗೆ ಹೊರಡುವವನು ಅಧಮ.

ತನ್ನ ಸಹಜಾವಶ್ಯಕತೆಗಳಿಗೆ ಮಿಕ್ಕಿ, ಅಥವಾ ಮಿಕ್ಕವರ ಹಕ್ಕಿನದಾಗಿರುವದನ್ನು ತಾನು ಕೂಡಿಸಿಡಬಾರದೆಂಬ ಸಂಕಲ್ಪವಿರುವವನು ಉತ್ತಮ—ವ್ಯವಹಾರ

ಯೋಗ್ಯವಾಗಿ, ತನ್ನ ಸಹಜ ಯೋಗ್ಯತೆಗನುಸಾರವಾಗಿ ಸಾಧ್ಯವಿದ್ದಷ್ಟನ್ನು ಕೂಡಿಸಿಕೊಳ್ಳಲೇಬೇಕೆಂಬ ಸಾಹಸವಿರುವವನು ಮಧ್ಯಮ—ವ್ಯವಹಾರ ನೀತಿಯನ್ನೂ ತನ್ನ ಯೋಗ್ಯತೆಯನ್ನೂ ಕಡೆಗಣಿಸಿ ಎಲ್ಲಂ ಸಾಲಿನದಾಗಲಿರುವಂತಹದನ್ನಷ್ಟೇ ಅಲ್ಲ, ಮಿಕ್ಕವರದಾಗಿರುವದನ್ನು ಕೂಡಾ ಯಾವ ರೀತಿಯಿಂದಾದರೂ ಸುಲಿಯಬೇಕೆಂಬ ಇಚ್ಛೆಯಿಂದ ಹತ್ತು ಹಲವು ವೇಷಗಳನ್ನು ತೊಟ್ಟು ಹೊರಡುವವನು ಅಧಮ.

ಕೇವಲ ಮಾನವೀಯ ಬಂಧು ಪ್ರೇಮ ಅಥವಾ ದೇಶಾಭಿಮಾನವಿರುವವನು ಉತ್ತಮ—ಅಂತರಂಗ, ಬಹಿರಂಗವೆರಡರಲ್ಲೂ ಕೇವಲ ಸ್ವಜಾತಿ ಪ್ರೇಮ ಅಥವಾ ಸ್ವಹಿತ ಸಾಧನೆಯಿರುವವನು ಮಧ್ಯಮ—ಜನತಾ ಪ್ರೇಮ ಅಥವಾ ದೇಶಾಭಿಮಾನದ ನಟನೆಯಿಂದ ಜಾತಿ ಪ್ರೇಮ ಮತ್ತು ಸ್ವಾರ್ಥ ಸಾಧಿಸುವವನು ಅಧಮ.

ಬಡತನವಿದ್ದರೂ ತನ್ನ ಪಾಲಿನ ಕರ್ತವ್ಯಲೋಪ ಮಾಡಿಕೊಳ್ಳದೆ ಇದ್ದಷ್ಟರಿಂದಲೇ ತೃಪ್ತಿಪಟ್ಟು ಧನಿಕನಂತಿರುವವನು ಉತ್ತಮ—ಶ್ರೀಮಂತಿಕೆಯಿದ್ದು ತನಗುಚಿತವಾದ ವ್ಯವಹಾರಗಳಲ್ಲಿ ಮಾತ್ರ ನಿರತನಿದ್ದು ಧನಿಕನಾಗಿ ತೃಪ್ತಿಪಟ್ಟುಕೊಂಡಿರುವವನು ಮಧ್ಯಮ-ಶ್ರೀಮಂತಿಕೆಯಿದ್ದರೂ ಅಷ್ಟರಿಂದ ತೃಪ್ತಿಪಡದೆ, ಅದನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಆತುರದಿಂದ ಸಾಮಾನ್ಯರಿಂದಲೂ ಹಣ ಸುಲಿಯಲಾಗುವ ಕೃತಕ ಯೋಜನೆಗಳನ್ನು ತಯಾರಿಸಿ, ಜನರಿದಿರು ಬೊಗಸೆಯೊಡ್ಡುತ್ತ ಹೋಗುವ ತೃಪ್ತಿದರಿದ್ರನು ಅಧಮ.

ತನಗೆ ಇನ್ನೊಬ್ಬರಿಂದ ಅನ್ಯಾಯವಾದರೂ ಕೂಡಾ ಅಂತಹ ಅನ್ಯಾಯಕ್ಕೆ ಅವಕಾಶಕೊಟ್ಟ ತನ್ನ ದೌರ್ಬಲ್ಯವಾವುದೆಂಬುದನ್ನು ಶೋಧಿಸಿ ಅದರ ಶುದ್ಧೀಕರಣಕ್ಕೆ ತೊಡಗುವವನು ಉತ್ತಮ—ತನಗಾದ ಅನ್ಯಾಯವನ್ನು ಪ್ರತಿಭಟಿಸಿ ನಿರ್ಮೂಲಿಸುವದರಲ್ಲೇ ತನ್ನ ಶಕ್ತಿಯನ್ನು ವ್ಯಯಿಸುವವನು ಮಧ್ಯಮ—ತನಗಾಗಿ, ತನಗೆ ಹಿತ ಅಥವಾ ಲಾಭಮಾಡಿಕೊಡುವದಕ್ಕಾಗಿ ಇನ್ನೊಬ್ಬರು ನ್ಯಾಯವನ್ನು ಮುಚ್ಚಿಡಲಿಲ್ಲ, ಅಥವಾ ಅನ್ಯಾಯವನ್ನು ಮಾಡಲು ತಯಾರಿಲ್ಲವೆಂಬುದಕ್ಕಾಗಿ ಅಂಥವರ ಮೇಲೆ ಮುನಿದುಬೀಳುವವನು ಅಧಮ.

ತನ್ನ ಸ್ಥಿತಿ, ಗತಿ, ಮತಿ, ಈ ಮೂರೂ ಶುದ್ಧವಿದ್ದರೂ ಅನ್ಯರೆದಿರಲ್ಲಿ ಅವುಗಳ ಮಹತ್ವಿಕೆಯ ಪ್ರದರ್ಶನವೇನನ್ನೂ ಮಾಡಿ ತೋರಿಸದೆ ಇರುವವನು ಉತ್ತಮ—ಸ್ಥಿತಿ, ಗತಿ, ಮತಿ, ಇವು ಮೂರರಲ್ಲೂ ಗುಣ ದೋಷಗಳಿದ್ದು, ಅವುಗಳನ್ನು ಇದ್ದಂತೆ ಜನತೆಗೆ ಪ್ರದರ್ಶಿಸುವವನು ಮಧ್ಯಮ-ಸ್ಥಿತಿ, ಗತಿ, ಮತಿ, ಇವು ಮೂರರಲ್ಲೂ ಸುಳ್ಳಿನ, ಸ್ವಾರ್ಥ ಕಳಂಕಗಳೇ ತುಂಬಿದ್ದರೂ ಅವುಗಳಿಗೆ ಬಣ್ಣ ಹಚ್ಚಿ ತೋರಿಸಿ ಜನತೆಯನ್ನು ವಂಚಿಸುವವನು ಅಧಮ.

ಕಾರ್ಯಶಕ್ತಿ, ಕಾರ್ಯ ಸಾಧನಾ ಯೋಗ್ಯತೆಗಳಿದ್ದು ಅವುಗಳಿಗನುಗುಣವಾದ ಸದ್ಗುಣ, ಸದ್ಧೋರಣೆಗಳಿರುವವನು ಉತ್ತಮ-ಕಾರ್ಯ ಶಕ್ತಿ ಮತ್ತು ಯೋಗ್ಯತೆಗಳ ಅಭಾವವಿದ್ದರೂ ಸದ್ಧೋರಣೆ ಸದ್ಬುದ್ಧಿಯಿರುವವನು ಮಧ್ಯಮ—ಕಾರ್ಯಶಕ್ತಿಯೊಂದಿಗೆ ಕಾರ್ಯ ಸಾಧನಾ ಸ್ಥಾನಮಾನಗಳೂ ಇದ್ದು ಅವೆಲ್ಲವನ್ನೂ ತನ್ನ ಸ್ವಾರ್ಥ, ವಂಚಕ ಧೋರಣೆಗಳಿಗೆ ಜೋಡಿಸಿಕೊಂಡವನು ಅಧಮ.

ಉಡುಪಿ.

ಕಾಂಗ್ರೆಸ್ ಕಮಿಟಿಯ ಸಭೆ—ಮೂಲ ನಿರ್ಧಾರಕ್ಕೆ ಪ್ರಾಧಾನ್ಯತೆ- ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ವಿಶೇಷ ಸಭೆಯು ಕಳೆದ ತಾ. 25ರಲ್ಲು ಸಂಜೆ ಮೂರು ಘಂಟೆಗೆ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಾರ್ಯಾಲಯದಲ್ಲಿ ಜರಗಿತು. ಕಳೆದ ತಾ. 9ರಲ್ಲು ತಹಶಿಲ್ದಾರ್ ಶ್ರೀ ಎ. ಸದಾನಂದ ಪೈಗಳವರ ಕುರಿತು ಆದ ನಿರ್ಣಯವನ್ನು ಪುನರಾಲೋಚಿಸಬೇಕಾಗಿ ಶ್ರೀ ಪಿ. ಮಂಜುನಾಥ ನಾಯ್ಕರು ಬರೆದ ಪತ್ರವನ್ನು ಸಭೆಯ ಮುಂದೆ ಓದಿಹೇಳಲಾಯಿತು. ನಿರ್ಣಯವನ್ನು ಪುನರಾಲೋಚಿಸುವುದು ಬೇಕೋ ಬೇಡವೋ ಎಂಬ ವಿಷಯದಲ್ಲಿ ದೀರ್ಘ ಚರ್ಚೆನಡೆದು ಕೊನೆಗೆ ಓಟು ತೆಗೆಯಲಾಗಿ ಆರು ಮಂದಿ ಬೇಡವೆಂದೂ ಮೂರು ಮಂದಿ ಬೇಕೆಂದೂ ಮತವಿತ್ತುದರಿಂದ ನಿರ್ಣಯವನ್ನು ಪುನರಾಲೋಚಿಸುವುದು ಬೇಡವೆಂದೇ ಬಹುಮತದ ನಿರ್ಧಾರವಾಯಿತು.

ಶ್ರೀ ಗುರುರಾಜರ ಪುಣ್ಯದಿನದ— ಸಲುವಾಗಿ ಕಳೆದ ಶನಿವಾರ ಪರ್ಯಾಯ ಶ್ರೀ ಸೋದೆ ಸ್ವಾಮಿಗಳವರು ಸಾಧಾರಣ ಎರಡು ಸಾವಿರ ಬ್ರಾಹ್ಮಣರಿಗೆ ಶ್ರೀಕೃಷ್ಣ ಸನ್ನಿಧಿಯಲ್ಲಿ ಮಹಾ ಸಂತರ್ಪಣೆ ಮಾಡಿಸಿದರು. ಶ್ರೀ ಮಠದ ಶಿಷ್ಯರಾದ ದೈವಜ್ಞ ಬ್ರಾಹ್ಮಣ (ಸೊನೆಗಾರ ಶೇಟ್) ವೃಂದದವರು ಶ್ರೀಕೃಷ್ಣನಿಗೆ ಅಂದು ರಾತ್ರಿ ಬ್ರಹ್ಮರಥೋತ್ಸವ ಸೇವೆಯನ್ನು ಸಲ್ಲಿಸಿದರು.

ಹವಾಮಾನ— ದಿನೇದಿನೇ ಸೆಕೆ ಜಾಸ್ತಿಯಾಗುತ್ತಲಿದ್ದು ತಾ 29ರಲ್ಲು ಸಾಯಂಕಾಲ ಸಾಧಾರಣ ಅರ್ಧತಾಸು ಧಾರಾಕಾರ ಮಳೆ ಸುರಿಯಿತು. ಮರುದಿನದಿಂದ ಸೆಖೆ ಇನ್ನಷ್ಟು ಹೆಚ್ಚಿದೆ.

ಮುನ್ಸಿಪಲ್ ಕೌನ್ಸಿಲಿನ ಅರ್ಜಂಟ್ ಸಭೆಯು— ತಾ 30ರಲ್ಲು ಪೂರ್ವಾಹ್ನ ಹತ್ತು ಗಂಟೆಗೆ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಉಡುಪಿಪಟ್ಟಣ ಹಾಗೂ ಹಳ್ಳಿಹಳ್ಳಿಗಳಲ್ಲಿಯ ಆಹಾರ ಅಭಾವದ ಕುರಿತು ಪರಿಶೀಲಿಸಲಾಯಿತು. ರೇಶನಿಂಗ್ ಪದ್ಧತಿಯಿಂದ ಜನತೆಗೆ ತುಂಬಾ ಕಷ್ಟ ಒದಗಿರುವುದೆಂದೂ ಸರಕಾರವು ಕೂಡಲೇ ಈ ಕಡೆಗೆ ಗಮನನೀಯದಿದ್ದರೆ ಜನತೆಯು ಉಪವಾಸಬೀಳುವ ಪ್ರಸಂಗ ಒದಗಬಹುದೆಂದೂ ಸರಕಾರಕ್ಕೆ ತಂತಿಮೂಲಕ ತಿಳಿಸಬೇಕೆಂದಾಯಿತು. ಆರು ಔನ್ಸ್ ಆದರೂ ಅಕ್ಕಿ ರೂಪದಲ್ಲಿಯೇ ಜನತೆಗೆ ಸಿಗಬೇಕೆಂದೂ ನಿಯಮಿತ ದರದಲ್ಲಿ ಅಕ್ಕಿ ವಿತರಣೆಯಾಗುವ ಅಂಗಡಿಗಳು ಬೇಗನೆ ತೆರೆಯುವಂತಾಗಬೇಕೆಂದೂ ಸರಕಾರವನ್ನು ಪ್ರತ್ಯೇಕ ವಿನಂತಿಸಲಾಯಿತು. ಮಧ್ಯಾಹ್ನ ಕೌನ್ಸಿಲಿನ ಸಾಮಾನ್ಯಸಭೆಯೂ ಜರಗಿತು.

ಶ್ರೀ ಎಮ್. ವೆಂಕೋಬಾಚಾರ್ಯರ ನಿಧನ— ಶ್ರೀ ಅದಮಾರು ಮಠದ ಸಮರ್ಥ ಜನರಲ್ ಏಜಂಟರಾಗಿದ್ದ ಶ್ರೀ ಎಮ್. ವೆಂಕೋಬಾಚಾರ್ಯರು ಕಳೆದ ತಾ. 27ನೆ ಶನಿವಾರ ದಿನ ಅಪರಾಹ್ನ ತನ್ನ 55ನೆ ವಯಸ್ಸಿನಲ್ಲಿ ಪರಲೋಕ ವಾಸಿಗಳಾದರೆಂಬುವನ್ನು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಸರಳ ಜೀವನ, ಸೀದಾಮಾರ್ಗ, ಜನತಾ ಜನಾರ್ದನನ ಸೇವೆಯ ಆದರ್ಶ ಇತ್ಯಾದಿ ಗುಣಗಳಿಂದ ಕೂಡಿದ ಶ್ರೀ ಆಚಾರ್ಯರು ಉಡುಪಿ ಎಂಟು ಮಠಗಳ ಪಾರುಪತ್ಯಗಾರರಲ್ಲಿ ಅಗ್ರಸ್ಥಾನವನ್ನು ಪಡೆದಿದ್ದು ತರುಣ ಏಜಂಟರಿಗೆ ಮಾದರಿಯಾಗಿದ್ದರು. ಸರ್ವಜನಮಾನ್ಯ ಘನವಂತ ಸದ್ಗೃಹಸ್ಥರೆನ್ನಿಸಿದ್ದರು. ದಿವಂಗತರ ಆತ್ಮಕ್ಕೆ ಜಗದೀಶನು ಚಿರಶಾಂತಿಯನ್ನೀಯಲೆಂದು ಹಾರೈಸುವೆವು.

ಅಳಿಯಸಂತಾನ ಮಸೂದೆಯಲ್ಲಾಗಬೇಕಾದ ಕೆಲವೊಂದು ತಿದ್ದುಪಡಿಗಳನ್ನು ಸೂಚಿಸಿ ಮಂಗಳೂರಿನ ಡಾ|| ಕೆ. ಕೆ. ಹೆಗ್ಡೆಯವರು ಅಳಿಯಸಂತಾನ ಬಿಲ್ ಕಮಿಟಿಗೆ ಕಳುಹಿಸಿದ ಮನವಿಯು ಸ್ವಲ್ಪವೊಂದು ವಿಳಂಬವಾಗಿ ನಮ್ಮ ಕೈಸೇರಿದುದರಿಂದ ಈ ಬಾರಿ ಪ್ರಕಟಿಸಲಾಗಲಿಲ್ಲ. —ಸಂ.

ತಿದ್ದುಪಡಿ— ಕಳೆದವಾರ ಪ್ರಕಟವಾದ ಸುದ್ದಿಯಲ್ಲಿ ಸುಭಾಂತಿತ ಸಿವಿಲ್ ಇಂಜನೀಯರಿಂಗಿನಲ್ಲಿ ಅಮೇರಿಕದ ಶಿಕ್ಷಣ ಮುಗಿಸಿ ಸ್ವದೇಶಕ್ಕೆ ಮರಳಿದವರು 'ಶ್ರೀ ಜನಾಲಿ ತ್ರಿವಿಕ್ರಮ ಶೆಟ್ಟಿ' ಎಂದಿದ್ದುದನ್ನು 'ಶ್ರೀ. ಜವುಳಿ ತ್ರಿವಿಕ್ರಮ ಶೆಟ್ಟಿ' ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿ.

ಪ್ರಕಟಣೆ

ಉಡುಪಿ ತಾಲ್ಲೂಕು ಹಾಲಿ ಬೈಕಾಡಿ ಗ್ರಾಮದಲ್ಲಿರುವ ಬಿಳ್ಳಂಪಳ್ಳಿ ಗ್ರಾಮದ ಕುಣಜೂರು ಪಡುಮನೆ ನಾಗಮ್ಮ ಶೆಟ್ಟಿರ ಮೊಮ್ಮಕ್ಕಳು 1ನೇ ಗುಲಾಬಿ ಶೆಟ್ಟಿ, 2ನೇ ಗಿರಿಜ ಶೆಟ್ಟಿ ಕೂಡಾ ಎರಡು ಜನರು ಈ ಮೂಲಕ ಸರ್ವ ಜನರಿಗೆ ಪ್ರಕಟಪಡಿಸುವುದೇನೆಂದ್ರೆ- ನಮ್ಮ ಕುಟುಂಬದಲ್ಲಿ ಆದ ರಾಜಿ ಡಿಕ್ರಿ ವಿಧಿಪ್ರಕಾರ ನಮ್ಮ ಅಜ್ಜಿ ವ ಅವರ ಗಂಡು ವ ಹೆಣ್ಣು ಮಕ್ಕಳು ವ ನಮ್ಮ ಕವರಿನವರಿಗೆ ಅದನಾರ್ಥದ ಬಗ್ಗೆ ವಿಂಗಡಿಸಲ್ಪಟ್ಟ ಆಸ್ತಿಗಳ ಆಡಳ್ತೆಯನ್ನು ನಡಿಸಬೇಕಾದ ನಮ್ಮ ಅಜ್ಜಿಯು ಅವಳ ಕೆಲವು ಜನ ಮಕ್ಕಳ ದುರ್ಬೋಧನೆಗೆ ಸೇರಿ ಕೆಲವು ಸಾಲಮಾಡಿ ಕುಟುಂಬದ ಮೇಲೆ ಎರಡು ಡಿಕ್ರಿಗಳನ್ನು ಹೊಂದಿಸಿರುತ್ತಾರೆ. ಇದಲ್ಲದೆ ಸದ್ರಿ ಮುದುಕಿಯಾದ ನಮ್ಮ ಅಜ್ಜಿಯನ್ನು ವಂಚಿಸಿ ವ ದುರ್ಬೋಧಿಸಿ ಇನ್ನೂ ಕೆಲವು ಕಲ್ಪನೆಯ ನೋಟು, ಕರಾರು, ವ ಬೇರೆ ರಿಕಾರ್ಡುಗಳು ಕಲ್ಪಿಸಿ ಕುಟುಂಬಕ್ಕೆ ನಷ್ಟ ಉಂಟುಮಾಡುವುದರಲ್ಲಿ ಇದ್ದಾರೆಂಬಾಗಿ ತಿಳಿಯುತ್ತೇವೆ. ಆದರೆ ನಮ್ಮ ಕುಟುಂಬಕ್ಕೆ ಇರುವ ಆಸ್ತಿಯು ಉತ್ಪತ್ತಿಯು ನಮ್ಮ ಖರ್ಚಿಗೆ ಸಾಕಾಗುವಷ್ಟು ಇದ್ದು ನಮ್ಮ ಕೂಡುವಿಕೆಯ ವಿನಹ ಯಾವ ತರದ ಸಾಲ ಸನ್ನೈತ ಮಾಡಿದ್ರೆ ವ ಯಾವ ತರದ ರಿಕಾರ್ಡು ಸಹಾ ಕಲ್ಪಿಸಿಕೊಂಡರೆ ಅವುಗಳು ನಮ್ಮ ಕುಟುಂಬದ ಮೇಲಾಗಲೀ ನಮ್ಮ ಮೇಲಾಗಲೀ ಸಿಂಧವಾಗಬಾರದಂತಲೂ ಅವರ ಮೋಸದ ಕೆಲ್ಸಕ್ಕೆ ಯಾರೂ ಒಳಗಾಗಬಾರದಾಗಿಯೂ ಈ ಮೂಲ್ಕ ತಿಳಿಸೋಣಾಗಿಯದೆ.

ಗುಲಾಬಿ ಶೆಟ್ಟಿ ರುಜು.
ಗಿರಿಜ ಶೆಟ್ಟಿ ರುಜು.

ತಾರೀಕು 29-3-48
ಮೊಕ್ಕಾಂ ಬೈಕಾಡಿ.

ಪ್ರಕಟಣೆ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 241/1947 R.E.P. 69/1947

ವಾದಿ—ಪದ್ಮಮ ಜ್ಯೋಯ್ಸ.

ಪ್ರತಿವಾದಿ—ಮಹಾಲಿಂಗ ಜ್ಯೋಯ್ಸ, ಪರಮೇಶ್ವರ ಜ್ಯೋಯ್ಸರ ಮಗ, ಯಡ್ತರೆ ಗ್ರಾಮ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನಂದರೆ-

ಮೇಲಿನ ಅಮುಲ್ದಾರಿಯ ಜೊತೆಯಲ್ಲಿ ದಾಖಲು ಮಾಡಿದ ಯುಸ್ಟೆಂಟ್ರಿಯಾದ ಕಾಣುವ ಪಕ್ಷಗಾರರಿಂದ ನಿಮಗೆ ಈ ಸರ್ವಜಿತು ಸಾಲಕ್ಕೆ ಬರತಕ್ಕ ಗೇಣಿ ವಸೂಲು ಮಾಡುವ ಹಕ್ಕು ಜಪ್ತು ಮಾಡಿಸಿ ಅವುಗಳ ವಸೂಲಿ ಬಗ್ಗೆ ಒಬ್ಬ ರಿಸೀವರರನ್ನು ನೇಮಿಸಬೇಕಾಗಿ ಪ್ರಾರ್ಥನೆ ಕೇಳಿ ವಾದಿಯು ದಾಖಲು ಮಾಡಿದ ಮೇಲಿನ ಅಮುಲ್ದಾರಿಯನ್ನು ತಾ. 9-4-48ಕ್ಕೆ ತಕ್ಕಾಗಿ ಯಿಟ್ಟಿದ್ದಾರೆ ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ಸದ್ರಿ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬಸಂಗ್ತಿ ತಿಳಿಸಿರುತ್ತದೆ.

By order of the Court

Y. Tejappa Shetty
Advocate for Plaintiff

Coondapoor 28 3-48

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years. Filaria is a dirty, disfiguring disease. And yet a little united effort on the part of the public could at very little cost wipe out these two evils. **Please, watch this space.**

Inserted by:

The Canara Mutual Assurance Company Limited,
ESTD. 1935
H. O. UDIPI.

ತಾರೀಕು **2—3—48**ರಿಂದ
4ನೇ ವಾರ
ಕನ್ನಡ ಪ್ರಪಂಚಕ್ಕೊಂದು ಕೀರ್ತಿ ತಂದಿತು.
ಕರ್ನಾಟಕ ನಟನಟಿಯರಿಗೊಂದು ಸ್ಥಾನ ಕೊಟ್ಟಿತು.
ಕರ್ನಾಟಕ ಕಲಾವಿದರಿಗೊಂದು ಚಿತ್ರಣ ಉಳಿಸಿತು.
ಕನ್ನಡದಲ್ಲಿ ಮಹಾತ್ಮಾ ಕಬೀರ್
ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಲಕ್ಷ್ಮೀಬಾಯಿ ಮೊದಲಾದವರು
ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

—ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ—

ಕೆಲವು ಅಸಂಬದ್ಧ ಆರೋಪಗಳಿಗೆ ಪ್ರತಿಯಾಗಿ ಸತ್ಯಸ್ಥಿತಿಯ ಸ್ಪಷ್ಟೀಕರಣ.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು ತನ್ನ ತಾ 9-3-48ರ ಸಾಮಾನ್ಯ ಸಭೆಯಲ್ಲಿ ಉಡುಪಿಯ ತಹಶೀಲ್ದಾರರು ಸತ್ಕಾರಕೂಟವೊಂದರಲ್ಲಿ ಮಾಡ್ಪ್ರಾಸಿಸಿದ ಕಾಂಗ್ರೆಸ್ ಸರಕಾರದ ರೀತಿ ನೀತಿಗಳನ್ನು ಟೀಕಿಸಿರುವುದನ್ನು 'ಖಂಡಿಸುವ' ನಿರ್ಧಾರವೊಂದನ್ನು ಮಾಡಿದ್ದ ಕುರಿತು ಕೆಲವು ಪತ್ರಿಕೆಗಳಲ್ಲಿ ಬಂದಿರುವ ಟೀಕೆಗಳನ್ನು ಕಂಡು ನನಗೆ ಅತ್ಯಾಶ್ಚರ್ಯವಾಗುತ್ತಿದೆ. ಈ ಕುರಿತು ವಿವಾದಕ್ಕೆಳೆಯುವ ಇಚ್ಛೆ ನನಗಿಲ್ಲವಾದರೂ, ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಗೆ ಯಾವರೀತಿಯಲ್ಲೂ ಹೊಂದಿಕೆಯಾಗದ, ಮತ್ತಿಂತಹ ಆರೋಪಗಳು ಯಾರಿಂದಾದರೂ ಎಂದಾದರೂ ಬರಬಹುದೆಂದು ನಾವು ನಿರೀಕ್ಷಿಸಿರದ, ಅಕ್ರಮ ಹಾಗೂ ನಿರಾಧಾರ ಅಪವಾದಗಳು ಬಂದಿರುವುದರಿಂದಲೇ ಈ ಕುರಿತು ಉಡುಪಿ ಕಾಂಗ್ರೆಸಿನ ಸ್ಥಾನ ಧೋರಣೆಗಳಾವುವೆಂಬುದನ್ನು ಸ್ಪಷ್ಟೀಕರಿಸುವುದು ನನ್ನ ಪಾಲಿಗೆ ಅನಿವಾರ್ಯವಾಗಿದೆ. ಮಂಗಳೂರಿನ 'ನವಭಾರತ' 'ಸ್ವದೇಶಾಭಿಮಾನಿ' 'ಪ್ರಭಾತ' ಪತ್ರಿಕೆಗಳಲ್ಲೂ ಉಡುಪಿಯ 'ಉದಯಭಾರತ'ದಲ್ಲೂ ಕಾಂಗ್ರೆಸ್ ಕಮಿಟಿಯ ಅಂದಿನ ಸಭೆಯು 'ಅವಸರದ ಸಭೆ'ಯಾಗಿತ್ತೆಂಬ, ಸದಸ್ಯರಿಗೆ ಸಕಾಲದಲ್ಲಿ ನೋಟೀಸು ಹೋಗಿರಲಿಲ್ಲವೆಂಬ, ಸಭೆಯಲ್ಲಿ ಹಾಜರಿದ್ದವರು ಹೆಚ್ಚಾಗಿ ಒಂದೇ ಕೋಮಿನವರೆಂಬ, ಒಟ್ಟಿನ ಮೇಲೆ ಅದು ಅವಸರದ ಹಾಗೂ ಕ್ರಮಬಾಹಿರವಾದ ಸಭೆಯಾಗಿತ್ತೆಂದೂ ಅನ್ಯೋದ್ದೇಶವೊಂದನ್ನಿಟ್ಟುಕೊಂಡೇ ತಹಶೀಲ್ದಾರರ ವರ್ತನೆಯನ್ನದು ಖಂಡಿಸಿತೆಂದೂ ಅಭಿಪ್ರಾಯ ಮಾಡಿಸುವ ಹೇಳಿಕೆಗಳೂ ಪ್ರಶ್ನೆಗಳೂ ಬಂದಿವೆ. ಅಪ್ರತ್ಯಕ್ಷವಾಗಿ ಅದರ ಅತ್ಯಂತ ಹೇಯ ರೀತಿಯ ಆರೋಪಗಳು ಬೇರೆ ಪತ್ರಿಕೆ ಹಾಗೂ ವ್ಯಕ್ತಿಯಿಂದ ಮುಂದೆ ಬಂದಿರುವುದೂ ನನ್ನ ಅವಗಾಹನೆಗೆ ಬಂದಿದೆ. ಇದಕ್ಕಾಗಿ ವಾದಾಗ್ರಹಗೊಂಡು ಪ್ರತ್ಯೇಕವಾಗಿ ತರ್ಕಕ್ಕಿಳಿಯುವುದು ಕಾಂಗ್ರೆಸ್ ಕಮಿಟಿಯ ಘನತೆಗೆ ಶೋಭಿಸದಲ್ಲ; ಕಮಿಟಿಯ ಮೇಲೆ ಇಂತಹ ಆರೋಪ ಹೊರಿಸುವವರ ಉದ್ದೇಶವೇನೆಂಬುದು ಸಾರ್ವಜನಿಕರಿಗಿಷ್ಟರಲ್ಲೇ ಸ್ಪಷ್ಟವಾಗಿರುವುದರಿಂದ, ಆ ಕುರಿತು ಇನ್ನೂ ವಾದಿಸಿ ವಾತಾವರಣವನ್ನು ಮತ್ತಷ್ಟು ಕೆಡಿಸುವುದೂ ನ್ಯಾಯವಲ್ಲ, ಬದಲಿಗೆ ಕಾಂಗ್ರೆಸ್ ಸಮಿತಿಯು ಈ ಕುರಿತು ವಹಿಸಿದ್ದ ರೀತಿನೀತಿಗಳೇನು ಎಂಬುದನ್ನು ಸರ್ವರ ಅವಗಾಹನೆಗಾಗಿ ಇಲ್ಲಿ ತಿಳಿಸುತ್ತೇನೆ

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ತಾ 9-3-48ರ ಸಭೆಯು ಯಾರೊಬ್ಬರೂ 'ಒತ್ತಾಯಿಸಿ ಕರೆಯಿಸಿದ್ದ'ದೆಂತಲೂ ಅಲ್ಲ, ಅದು 'ಅವಸರದ ಸಭೆ' ಕೂಡಾ ಅಲ್ಲ, ನಿಯಮ ಪ್ರಕಾರ ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತರೇ ಕರೆದಿದ್ದ ಕಾಂಗ್ರೆಸ್ ಸಮಿತಿಯ ಸಾಮಾನ್ಯ ಸಭೆಯದು. ಅಲ್ಲಿ ಮಿಕ್ಕ ಕ್ರಾಮ್ಯ ಸೂಚನೆಗಳಂತೆಯೇ 'ತಹಶೀಲ್ದಾರರ ವರ್ತನೆಯನ್ನು ಖಂಡಿಸುವ' ಸೂಚನೆಯೂ ನಿಯಮ ಪ್ರಕಾರ ಮುಂಚೆ ಒಪ್ಪಿಸಲ್ಪಟ್ಟು, ಸವಿವರವಾಗಿ ಚರ್ಚಿಸಲ್ಪಟ್ಟಿದ್ದಿತು. ಆ ಸೂಚನೆಯನ್ನು ತಂದವರು ಸಂಬಂಧಪಟ್ಟ ಸತ್ಕಾರಕೂಟದಲ್ಲಿ ಸ್ವತಃ ಹಾಜರಿದ್ದ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿರುವ ಶ್ರೀ ಕೆ. ಹೊನ್ನಯ್ಯ ಶೆಟ್ಟರು. ಆ ಸತ್ಕಾರಕೂಟದಲ್ಲಿ ಹಾಜರಿದ್ದ ಮತ್ತೊಬ್ಬ ಸದಸ್ಯರಾದ ಕಮಿಟಿಯ ಕಾರ್ಯದರ್ಶಿಯಾಗಿರುವ ಶ್ರೀ. ಕೆ. ನರಹರಿ ಕಾಮತರೂ ಈ ಸಂಬಂಧದ ಪರಿಶೀಲನೆಯಲ್ಲಿ ಭಾಗವಹಿಸಿದ್ದರು. ಸಮಿತಿಯ ಸದಸ್ಯರಿಗೆ ಆ ಮೊದಲೇ ಮನನ ವಿಶದವಾಗಿದ್ದ ಈ ಸಂಬಂಧದ ಸತ್ಯಸ್ಥಿತಿಯು ಸಮಿತಿಯ ಪರ್ಯಾಲೋಚನೆಗಳಿಂದ ಸರಿಯಾಗಿ ಮನದಟ್ಟಾಯಿತು. ತಹಶೀಲ್ದಾರ್ ಶ್ರೀ ಎ. ಸದಾನಂದ ಪೈಗಳು ತನ್ನ ಆ ಭಾಷಣದಲ್ಲಿ ಹಾಗೆ ಹೇಳಿದ್ದಿಲ್ಲವೆಂಬ ವಾದವು ಅಲ್ಲಿ ಯಾರೊಬ್ಬರಿಂದಲೂ ಮುಂದೆ ಬಂದದ್ದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಆದ್ದರಿಂದಲೇ ಮುಖ್ಯ ಭಿನ್ನಾಭಿಪ್ರಾಯಗಳ ಪೂರ್ಣ ಪರಿಶೀಲನಾ ನಂತರ ತಹಶೀಲ್ದಾರರ ವರ್ತನೆಯನ್ನು ಖಂಡಿಸುವ ಆ ಸೂಚನೆಯು ಆ ಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾಗಿತ್ತು. ಆ ಮೇಲೆ ಕೆಲವು ದಿನಗಳ ನಂತರ ಈ ನಿರ್ಧಾರದ ಸಂಬಂಧವಾಗಿ ಬರಹತ್ತಿದ ಟೀಕೆಗಳನ್ನು ಕಂಡು ನಾವು ಆಶ್ಚರ್ಯಗೊಂಡೆವು. ಆ ನಿರ್ಣಯವನ್ನು ಪುನರಾಲೋಚಿಸಬೇಕೆಂದು ಶ್ರೀ. ಪಿ. ಮಂಜುನಾಥ ನಾಯ್ಕರಿಂದ ಪತ್ರ ಬಂದಾಗ, ಕಾಂಗ್ರೆಸ್ ನಿಬಂಧನೆಗಳಲ್ಲಿ ಒಮ್ಮೆ ಆದ ನಿರ್ಧಾರವೊಂದನ್ನು ಪುನಃ ಆಲೋಚನೆಗೆತ್ತಿಕೊಳ್ಳಬೇಕಾದ ಅವಧಿ ನಿಯಮವಿರುವುದರಿಂದ ಶ್ರೀ. ಮಂಜುನಾಥ ನಾಯ್ಕರ ಬೇಡಿಕೆಯನ್ನು ಅಲ್ಲಗಳೆಯುವ ಅವಕಾಶವಲ್ಲಿದ್ದರೂ, ಯಾವ ಕಾರಣದಿಂದಾದರೂ ಆಕ್ಷೇಪ ಬಂದಿರುವ ಒಂದು ವಿಷಯವನ್ನು ಪುನರಾಲೋಚಿಸುವುದೇ ಸೌಹಾರ್ದತೆಯ ನಿರ್ಮಾಣಕ್ಕನುಕೂಲವೆಂಬೊಂದೇ ಕಾರಣಕ್ಕಾಗಿ ನಾವಾ ಪುನರಾಲೋಚನೆಗೊಪ್ಪಿದ್ದೆವು; ಎಂದಿನಂತೆ ಕಾರ್ಯದರ್ಶಿ ಶ್ರೀ. ಕೆ. ನರಹರಿ ಕಾಮತರೇ ಈ ಪುನರಾಲೋಚನಾ ಸಭೆಯ ಸಂಬಂಧದ ಎಲ್ಲಾ ಕಾರ್ಯಗಳನ್ನೂ ಮಾಡಿದ್ದರು; ತಾ 25-3-48ರಲ್ಲಿ ಆ ಸಭೆ ಸೇರಿದಾಗ ಸಭೆ ಕರೆಯಲಪೇಕ್ಷಿಸಿದ್ದ ಶ್ರೀ. ಪಿ. ಮಂಜುನಾಥ ನಾಯ್ಕರ ವಾದವನ್ನೂ ಸತ್ಯಸ್ಥಿತಿ ಮತ್ತು ಸಂಬಂಧಪಟ್ಟ ಸರ್ವ ವಿದ್ಯಮಾನಗಳನ್ನೂ ಸರಿಯಾಗಿ ಪರ್ಯಾಲೋಚಿಸಿದ ನಂತರವೇ ಹಿಂದಿನ ಆ ನಿರ್ಧಾರದ ಪುನರಾಲೋಚನೆ ಮಾಡಬೇಕೋ ಬೇಡವೋ ಎಂಬುದನ್ನು ಸಭೆಯ ಅಭಿಮತಕ್ಕೇ ಬಿಟ್ಟಾಗ, ಆರು ಮತಗಳು ಪುನರಾಲೋಚಿಸುವುದು ಬೇಡವೆಂಬುದಕ್ಕೂ ಮೂರು ಮತಗಳು ಪುನರಾಲೋಚಿಸಬೇಕೆಂಬುದಕ್ಕೂ ದೊರೆತವು; ಇಬ್ಬರು ತಾಟಸ್ಥ್ಯ ವಹಿಸಿದ್ದರು. ಮಧ್ಯಾವಧಿಯ ಹೊಸ ವಿದ್ಯಮಾನಗಳೆಲ್ಲವನ್ನೂ ಪರ್ಯಾಲೋಚಿಸುವರೆ ವಿಶೇಷ ರೀತಿಯ ಸಮಯ ಸಂದರ್ಭಗಳೆಲ್ಲವೂ ದೊರೆತ ಮೇಲೂ ತಾನು ಸತ್ಯ ಮತ್ತು ನ್ಯಾಯವನ್ನಾಧರಿಸಿ ತಾ 9-3-48ರಲ್ಲಿ ಮಾಡಿದ್ದ ನಿರ್ಧಾರವನ್ನೇ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು ತಾ. 25-3-48ರ ತನ್ನ ಮತ್ತೊಂದು ಸಭೆಯಲ್ಲೂ ಕಾಯಂ ಪಡಿಸಿಕೊಂಡುದರಿಂದಾಗಿ "ಒತ್ತಾಯಿಸಿ ಅವಸರದ ಸಭೆ ಕರೆಯಿಸಿ ನಿರ್ಣಯ ಮಾಡಿಸಿಕೊಂಡರು" ಎಂಬ ಅರ್ಥದ ಎಲ್ಲಾ ಆರೋಪಗಳೂ ಸುಳ್ಳೆಂಬುದು ಸ್ವತಃ ಸಿದ್ಧವಾಗಿರುವುದರಿಂದ ಈ ಕುರಿತು ಹೆಚ್ಚಿನ ವಾದ ಅನಗತ್ಯ

ಕಾಂಗ್ರೆಸ್ ಸಮಿತಿಯ ಕ್ರಮನಿಯಮಗಳು, ಕಾರ್ಯಕ್ಷೇತ್ರ, ಮತ್ತದರ ಸದಸ್ಯರ ಜಾತಿ ಯಾವುದೆಂಬಂತಹ ವಿಷಯಗಳಲ್ಲೂ ಆರೋಪಾತ್ಮಕ ಪ್ರಶ್ನೆಗಳು ಬಂದುದಕ್ಕಾಗಿ ತೀವ್ರ ನಿಷೇಧ ಸೂಚಿಸಬೇಕಾಗುತ್ತದೆ. ತಾವು ಪರಿಶುದ್ಧರಿದ್ದರೂ ಕೂಡಾ ಕೇವಲ ತಮ್ಮ ಖಾಸಗೀ ವಿಷಯಗಳಲ್ಲೂ, ತಮ್ಮನ್ನು ಬಹಿರಂಗವಾದಕ್ಕೆಳೆಯುವ ಪುಂಡಾಟಿಕೆಯನ್ನು ಯಾರಾದರೂ ಪ್ರದರ್ಶಿಸಿದರೆ, ತಮಗೆ ಹೇಗಾಗುವದೆಂಬ ಕುರಿತು ಇಂತಹ ಪ್ರಶ್ನೆ ಕೇಳುವವರು ಆತ್ಮ ವಿಮರ್ಶೆ ಮಾಡಿಕೊಳ್ಳಲೆಂದು ಸೂಚಿಸುತ್ತೇನೆ. ಕೇವಲ ಕಾಂಗ್ರೆಸ್ ಸಂಸ್ಥೆಗೇನೇ ಸಂಬಂಧಿಸಿರುವ ಅದರ ಕ್ರಮ, ನಿಯಮ, ನಿಬಂಧನೆಗಳೂ, ಕಾರ್ಯಕ್ಷೇತ್ರವೂ ಅದರ ಒಳಗೆ ಮತ್ತು ಹೊರಗಿರಬಹುದಾದ ಯಾವ ಪಕ್ಷದ ಅನುಕೂಲತೆಗಾಗಿಯಾದರೂ ಬೇಕಾದಂತೆ ಬದಲಾಯಿಸುವಂತಹವಲ್ಲವೆಂಬುದನ್ನು ಸರ್ವರೂ ತಿಳಿದಿರಬೇಕು. ಕಾಂಗ್ರೆಸ್ ಸಂಸ್ಥೆಯೊಳಗಿನ ನಿಯಮಭಂಗವನ್ನು ತಡೆಗಟ್ಟುವ ಅಧಿಕಾರವು ಅಧ್ಯಕ್ಷನಿಗಿದೆ; ಅಧ್ಯಕ್ಷನು ಈ ಹೊಣೆಯನ್ನು ಸರಿಯಾಗಿ ನಿರ್ವಹಿಸುವಂತೆ ನೋಡುವ ಅಧಿಕಾರ ಅದರ ಪ್ರತಿಯೊಬ್ಬ ಸದಸ್ಯನಿಗೂ ಇದೆ; ಇದೀ ಸಮಿತಿಯೇ ಕ್ರಮವಿರುದ್ಧವಾಗಿ ವರ್ತಿಸಿದಲ್ಲಿ ಶಿಸ್ತು ಪಾಲಿಸುವ ಹೊಣೆಯು ಮೇಲಧಿಕಾರವುಳ್ಳ ಮೇಲಿನ ಕಾಂಗ್ರೆಸ್ ಸಂಸ್ಥೆಗಳ ಮೇಲೆ ಬೀಳುತ್ತದೆ. ಸರಳವಾಗಿ ಹೇಳುವದಾದರೆ ಕೇವಲ ಕಾಂಗ್ರೆಸ್ ಸಮಿತಿಗೇನೇ ಸಂಬಂಧಿಸಿದ ಇಂತಹ ವಿಷಯಗಳಲ್ಲಿ ಸತ್ಯಸ್ಥಿತಿಯನ್ನರಿಯದ ಮತ್ತು ಅಧಿಕಾರವಿಲ್ಲದ ಹೊರಗಿನವರು ಬಾಯಿ ಹಾಕುತ್ತಾರಾದರೆ ಅವರದರ ವಿರೋಧಿಗಳು ಹೊರತು ಬೇರಾರೂ ಅಲ್ಲ; ಅಂಥವರೊಡನೆ ಕಾಂಗ್ರೆಸ್ ಸಮಿತಿಗೆ ಸಂಬಂಧವಿಲ್ಲ. ಆದರೂ ತಮ್ಮ ಅಜ್ಞಾನ ಅಥವಾ ವೈರದ ಬಲೆಯಲ್ಲಿ ಸಾರ್ವಜನಿಕರನ್ನೂ ಹಾಕಿಕೊಳ್ಳುವ ದುಷ್ಟಯತ್ನವು ಕೆಲವು ಅಧಿಕಪ್ರಸಂಗಿಗಳಿಂದ ನಡೆಗಿರುವುದಕ್ಕಾಗಿ ವಿಷಾದಿಸುತ್ತೇನೆ. ಕಾಂಗ್ರೆಸ್ ಸಭೆಯ ಕಾರ್ಯಕ್ರಮಗಳೆಲ್ಲವೂ ಕ್ರಮಬದ್ಧವಾಗಿ ನಡೆದಿದ್ದುವೆಂದೂ, ಆಸಕ್ತಿಯುಳ್ಳವರು ಕಾಂಗ್ರೆಸ್ ಕಾರ್ಯಾಲಯದಲ್ಲಿ ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತರಿಂದಲೇ ನಿಯಮಕ್ಕೆ ವ್ಯತಿರಿಕ್ತವಾಗದ ರೀತಿಯಲ್ಲಿ ಎಲ್ಲಾ ಮಾಹಿತಿಗಳನ್ನೂ ಪಡೆದು ಪ್ರತ್ಯಕ್ಷ ನೋಡಿ ತಿಳಿಯಬಹುದೆಂದೂ ವಿನಂತಿಸಿಕೊಳ್ಳುತ್ತೇನೆ.

ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿಯ ಸದಸ್ಯರ ಕೋಮಿನ ಪ್ರಶ್ನೆ ಬಂದುದು ಅತ್ಯಂತ ಶೋಚನೀಯ. ಕಾಂಗ್ರೆಸ್ ಸಂಸ್ಥೆಯ ಕುರಿತು ಇಷ್ಟು ಅಲ್ಪಬುದ್ಧಿಯ ಅಪಹಾಸ್ಯಕರ ವಿಚಾರಗಳು ಬರಬಹುದೆಂದು ಯಾರೂ ಎಣಿಸಿರಲಿಕ್ಕಿಲ್ಲ. ಇಂತಹ ಆರೋಪಗಳನ್ನು [illegible]ಕಾಗಿ ಬಂದ ಸಂದರ್ಭ ಕೂಡಾ ಅಸಹ್ಯವಾಗಿ ತೋರುತ್ತಿದೆ. ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯೂ ಜಿಲ್ಲೆಯ ಮಿಕ್ಕೆಲ್ಲಾ ಸರ್ಕಲ್ ಕಾಂಗ್ರೆಸ್ ಕಮಿಟಿಗಳಂತೆಯೇ, ಅದೇ ರೀತಿನೀತಿ, ನಿಯಮ ನಿಬಂಧನೆಗಳಂತೆ, ಅದೇ ಕಾಲದಲ್ಲಿ ರಚನೆಗೊಂಡ 'ಕಾಂಗ್ರೆಸ್ ಸಮಿತಿ' ಎಂದಿಷ್ಟೇ ತಿಳಿಸುತ್ತೇನೆ. ಮಿಕ್ಕವರ ಮಾತು ಹಾಗಿರಲಿ—ಸ್ವತಃ ಕಾಂಗ್ರೆಸ್ ಅಧಿನಾಯಕರಿಗೇನೇ 'ಯಾವ ಯಾವ ಸಮಿತಿಯಲ್ಲಿ ಯಾವಯಾವ ಕೋಮಿನವರೆಷ್ಟು ಮಂದಿ?' ಎಂಬ ಖಾನೇಷುಮಾರಿ ತೆಗೆಯುವ ಸಂದರ್ಭವೆಂದಾದರೂ ಬರುತ್ತದಾದರೆ ಆಗ ಕಾಂಗ್ರೆಸಿನ ರಾಷ್ಟ್ರೀಯತಾ ಸ್ವರೂಪವೇ ಹೋಗಿಬಿಡುವುದು! ನನ್ನನ್ನು ಪ್ರಶ್ನಿಸುವವರು ದಕ್ಷಿಣಕನ್ನಡಾ ಜಿಲ್ಲೆಯ ಇತರ ಎಲ್ಲಾ ಕಾಂಗ್ರೆಸ್ ಸಮಿತಿಗಳ ಸದಸ್ಯರನ್ನು ಹೀಗೆಯೇ ಕೋಮುವಾರಾಗಿ ವಿಂಗಡಿಸಿ ನೋಡಿ ಸಂಖ್ಯೆ ಸಂಗ್ರಹಿಸಿರುವರೆ? ದಕ್ಷಿಣಕನ್ನಡದ ಅಷ್ಟರ ಬಾಯಿಯಲ್ಲಿ "ಇಲ್ಲಿಯದು. ...ರ ಕಾಂಗ್ರೆಸ್ ಅಲ್ಲವೆ?" ಎಂಬ ಮಾತು ಸಲಿದಾಡುತ್ತಿರುವುದು ಸಾರ್ವಜನಿಕರಿಗೆ ತಿಳಿದಿದೆ. ಇದೇ ಮಾದರಿಯ ಜಾತೀಯತಾ ಅಜ್ಞಾನವನ್ನು, ಕೇವಲ ಅಜ್ಞಾನವನ್ನಷ್ಟೇ ಅಲ್ಲ—ಒಂದು ದುರುದ್ದೇಶ ಮಿಶ್ರಿತ ಅಜ್ಞಾನವನ್ನು ಜವಾಬ್ದಾರಿಯುತವರು ಯಾರಾದರೂ ಕಟ್ಟಿಕೊಂಡಾರೆ?

ಕೊನೆಯದಾಗಿ, ಎಲ್ಲರಲ್ಲೂ ಒಂದು ವಿಜ್ಞಾಪನೆ. ಮೇಲ್ಗಡೆ ಸ್ಪಷ್ಟವಾಗಿರುವಂತೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು ನ್ಯಾಯ ಮತ್ತು ಸತ್ಯವನ್ನಾಧರಿಸಿ, ಬೇರಾವ ಉದ್ದೇಶವೂ ಇಲ್ಲದೆ ತನ್ನ ಕರ್ತವ್ಯ ಪಾಲನಾ ದೃಷ್ಟಿಯಿಂದ ಉಡುಪಿ ತಹಶೀಲ್ದಾರರ ಸಂಬಂಧದ ತನ್ನ ನಿರ್ಧಾರವನ್ನು ಮಾಡಿದ್ದಿತು. ಇದೇ ಧೋರಣೆ ಮತ್ತು ಇಲ್ಲಿಯ ಕ್ರಮನಿಯಮಗಳನ್ನೇ ಅನುಸರಿಸಿ ಉಡುಪಿ ಕಾಂಗ್ರೆಸ್ ಸಮಿತಿಯು ಈ ಮೊದಲು 'ಸರಕಾರೀ ನೌಕರರಲ್ಲಿ ಸಾಮಾನ್ಯವಾಗಿರುವ ಕೆಲವು ಅತಿರೇಕ ವರ್ತನೆಗಳನ್ನು ಖಂಡಿಸುವ'— 'ನೋನ್ ಗಝೆಟೆಡ್ ಸರಕಾರೀ ನೌಕರ ಮುಷ್ಕರವನ್ನು ಖಂಡಿಸುವ' ಮುಂತಾದ ಇತರ ನಿರ್ಧಾರಗಳನ್ನು ಆಗಾಗ ಮಾಡಿದ್ದುದು ಸಾರ್ವಜನಿಕರಿಗೆ ನೆನಪಿರಬಹುದು. ತಹಶೀಲ್ದಾರ್. ಶ್ರೀ ಎ. ಸದಾನಂದ ಪೈಗಳ ಭಾಷಣವನ್ನು ಖಂಡಿಸುವಾಗಲೂ ಕಾಂಗ್ರೆಸ್ ಸಮಿತಿಯಲ್ಲಿ ಅಂತಹ ಕರ್ತವ್ಯ ದೃಷ್ಟಿಯೊಂದೇ ಹೊರತು ಬೇರಾವುದೂ ಇರಲಿಲ್ಲ. ಈ ಕರ್ತವ್ಯ ದೃಷ್ಟಿಯಿಂದಲೇ ಕೆಲವು ಸಾರ್ವಜನಿಕ ಕಾರ್ಯಗಳಲ್ಲಿ ತಹಶೀಲ್ದಾರ್ ಶ್ರೀ ಎ. ಸದಾನಂದ ಪೈಗಳೊಡನೆ ಕಾಂಗ್ರೆಸ್ ಸಮಿತಿಯು ಪ್ರೀತಿಪೂರ್ವಕ ಸಹಕರಿಸಿದ್ದ ಸಂದರ್ಭಗಳಿವೆ. ಕಾಂಗ್ರೆಸ್ ತತ್ವಗಳನ್ನಾಧರಿಸಿ, ನ್ಯಾಯಾನ್ಯಾಯಗಳ ಮೇಲಿಂದ, ಉಡುಪಿ ಕಾಂಗ್ರೆಸ್ ಸಮಿತಿಯು ಸರಕಾರೀ ನೌಕರರೊಡನೆ ಆಗಾಗ ಸಹಕರಿಸಿದಂತೆಯೇ ಅವರ ವರ್ತನೆಗಳನ್ನು ಖಂಡಿಸಬೇಕಾಗಿಯೂ ಬಂದುದಿದೆ. ಇದೂ ಅಂತಹ ಸಂದರ್ಭಗಳಲ್ಲೊಂದು ಹೊರತು ಬೇರಲ್ಲ. ಉಡುಪಿ ಸರ್ಕಲ್ ಕಾಂಗ್ರೆಸ್ ಸಮಿತಿಯು ಸದಸ್ಯರೊಳಗಿದ್ದ ಒಗ್ಗಟ್ಟು ಹಿಮ್ಮತಗಳಂತೂ ಎಂಥವರಿಂದಲೂ ಶ್ಲಾಘನೆ ಪಡೆಯುವಂತಹದೆಂದು ಧೈರ್ಯವಾಗಿ ಹೇಳಬಲ್ಲೆ. ಅದು ಮಾಡಿರುವ ಕಾರ್ಯಗಳು ಸಾರ್ವಜನಿಕರ ಮುಂದಿವೆಯಾದ್ದರಿಂದ ನಾನಿಲ್ಲಿ ಯಾವ ವರ್ಣನೆಗೂ ಹೋಗಲಾರೆ. ಇಷ್ಟು ಶುದ್ಧವಾಗಿದ್ದ ವಾತಾವರಣವನ್ನು ಅನ್ಯೋದ್ದೇಶವನ್ನಿಟ್ಟುಕೊಂಡು ಅಲ್ಪನಾದ ಪುಸಿಕಾರಣವನ್ನು ಮುಂದೊಡ್ಡಿ ಕದಡಿಸಿದುದನ್ನು ತಿಳಿಗೊಳಿಸಲು ಸಂಬಂಧಪಟ್ಟವರು ಇನ್ನಾದರೂ ನೆರವಾಗಬೇಕೆಂದು ಅಗ್ರಹ ಪೂರ್ವಕ ವಿಜ್ಞಾಪಿಸಿಕೊಳ್ಳುತ್ತೇನೆ. ಅಭಿಪ್ರಾಯ ಮತ್ತು ವಾದ ಭಿನ್ನತೆಗಳಿರುವುದು ಸಹಜವಾದರೂ ಅವುಗಳಲ್ಲಿ ಪರಿಶುದ್ಧತೆಯಿರಬೇಕಾದುದು ಮುಖ್ಯ. ಗಾಂಧಿಜೀಯ ಸತ್ಯ, ಅಹಿಂಸೆ, ತ್ಯಾಗದ ಬೋಧೆಯನ್ನೂ ಎಪ್ರಿಲ್ ತಾ 6ಕ್ಕೆ ಸಂಬಂಧವಾಗಿರುವ 'ರಾಷ್ಟ್ರೀಯ ವಾರ'ಕ್ಕಾಗಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಮುಂದಿಟ್ಟಿರುವ ಕಾರ್ಯಕ್ರಮಗಳನ್ನೂ ಈ ಸಂದರ್ಭದಲ್ಲಿ [illegible] ಜ್ಞಾಪಿಸಿಕೊಳ್ಳಬೇಕೆಂದು ಮನಃಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತೇನೆ.

ಬಾಳ್ಕಟ್ಟೆಬೀಡು ಕೃಷ್ಣಯ್ಯ ಹೆಗ್ಡೆ
ಅಧ್ಯಕ್ಷ
ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ.
ತಾ. 28-3-48.

ಕನ್ನಡನಾಡಿನ ಕತೆಗಾರರಿಗೊಂದು ಅಪೂರ್ವ ಸುಸಂದರ್ಭ!

ಕೃಷ್ಣಾ ಸ್ಮಾರಕ ಸಣ್ಣ ಕತೆಗಳ ಸ್ಪರ್ಧೆ.

ಪ್ರಥಮ ಬಹುಮಾನ ರೂ. ೨೦ ● ದ್ವಿತೀಯ ಬಹುಮಾನ ರೂ. ೧೦

ಕನ್ನಡನಾಡಿನ ಎಲ್ಲ ಕತೆಗಾರರೂ ಭಾಗವಹಿಸಬಹುದು. ಪ್ರವೇಶ ಧನವಿಲ್ಲ.

ವಿವರಗಳಿಗೆ 'ಪ್ರಕಾಶ' ಮಾಸಪತ್ರಿಕೆಯ ಎಪ್ರಿಲ್ (1948) ಸಂಚಿಕೆ—

— ನೋಡಿರಿ —

ವಿಳಾಸ:—'ಪ್ರಕಾಶ' ಕನ್ನಡ ಮಾಸಪತ್ರಿಕೆ, ಉಡುಪಿ.

ಮಂಗಳೂರು

ಶ್ರೀ ಗೋಕರ್ಣನಾಥ ಕ್ಷೇತ್ರ ದಲ್ಲಿ—ಕಳೆದ ತಾ. ೨೦ರಲ್ಲಿ ಜರಗಿದ ಬಿಲ್ಲವ ಯೂನಿಯನ್ನಿನ ಪ್ರತಿನಿಧಿ ಸಭೆಯಲ್ಲಿ ಮಹಾತ್ಮಾಜಿಯವರ ನಿಧನದ ಕುರಿತು ಶ್ರೀ ಬಿ. ಆರ್. ಕರ್ಕೇರರು ಮಂಡಿಸಿದ ಸಂತಾಪ ಸೂಚಕ ನಿರ್ಣಯವು ಅಂಗೀಕೃತವಾಯಿತು. ಸಭಿಕರು ಎದ್ದು ನಿಂತು ಬಾಪೂಜಿಯವರ ಆತ್ಮಕ್ಕೆ ಶಾಂತಿ ಪ್ರಾರ್ಥನೆಯಿಂದ ಶ್ರದ್ಧಾಂಜಲಿಯನ್ನರ್ಪಿಸಿದರು.

ಲೇಂಡ್ ಮೋರ್ಗೇಜ್ ಬೇಂಕುಗಳ ವೃದ್ಧಿ ಕಾರ್ಯ—ಸಹಕಾರಿ ಸಂಘಗಳ ರಿಜಿಸ್ತ್ರಾರರಾದ ರಾ। ಬ। ಜೆ. ಸಿ. ರಾಯನ್ನರವರೂ ಮದ್ರಾಸಿನ ಕೇಂದ್ರ ಜಮೀನ್ ಅಡಮಾನ ಬೇಂಕಿನ ಉಪಾಧ್ಯಕ್ಷರಾದ ಶ್ರೀ ವಿ. ರಾಮಮೂರ್ತಿ ಪಂತಲು ಅವರೂ ತಾ. 22ರಲ್ಲಿ ಮಂಗಳೂರಿಗೆ ಬಂದು ಮರುದಿನ ಇಲ್ಲಿಯ ಸೆಂಟ್ರಲ್ ಸಹಕಾರಿ ಬೇಂಕಿನಲ್ಲಿ ಜರಗಿದ ಮಂಗಳೂರು, ಪುತ್ತೂರು, ಉಡುಪಿ ಅಡಮಾನ ಬೇಂಕುಗಳ ಪ್ರತಿನಿಧಿಗಳ ಸಭೆಗೆ ಬತ್ತ್ಯೈಸಿ ಈ ಮೂರೂ ಬೇಂಕುಗಳ ವ್ಯವಹಾರದ ವೃದ್ಧಿಗತಿಗಾಗಿ ನಡೆದ ಚರ್ಚೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆಗಳನ್ನಿತ್ತರು. ಅಡಮಾನ ಬೇಂಕುಗಳಿಗೆ ಮದ್ರಾಸಿನ ಬೇಂಕು ಸಾಲಕೊಡುವ ಧೋರಣೆ ಉದಾರವಾಗಬೇಕೆಂದೂ ಸಾಲಪಡೆಯುವವರಿಗೆ ಬಡ್ಡಿದರ ತಗ್ಗಿಸಬೇಕೆಂದೂ, ಭೂಮಿಯನ್ನು ಬೇಂಕಿನ ವಶನಿಂಸುವ ವರ್ಗದಾರರಿಗೆ ಸಾಲದೊರೆಯಬೇಕೆಂದೂ, ಮುನಿಸಿಪಾಲಿಟಿ ಮತ್ತು ಮೇಜರ್ ಪಂಚಾಯಿತಿಗಳಲ್ಲಿ ಕೊಡುವ ಸಾಲಗಳಲ್ಲಿ ಭದ್ರತೆಯಾಗಿ ತೋಟಗಳ ಸಹಿತವಾದ ಮನೆಗಳನ್ನು ಸ್ವೀಕರಿಸಬೇಕೆಂದೂ ಸೂಚನೆಗಳಿದ್ದುವು. ಈ ಜಿಲ್ಲೆಯ ಮೂರು ಅಡಮಾನ ಬೇಂಕುಗಳಲ್ಲಿ ಎರಡು ನಷ್ಟಬಾತೆಯಲ್ಲಿ ನಡೆಯುತ್ತಿಪ್ಪರೂ, ಆ ಮೂರು ಬೇಂಕುಗಳನ್ನು ಒಂದಾಗಿ ಮಾಡುವ ಯೋಜನೆಯನ್ನು ಮುಂದರಿಸಿಟ್ಟು ಮಂಗಳೂರು ಮತ್ತು ಪುತ್ತೂರು ಬೇಂಕುಗಳ ವ್ಯವಹಾರ ಉತ್ತಮಗೊಳ್ಳುವಂತೆ ಇನ್ನು ಒಂದು ವರ್ಷ ಸಮಯ ಕೊಡುವಂತೆಯೂ ಉಡುಪಿ ಬೇಂಕಿನ ವಿದ್ಯಮಾನಗಳನ್ನು ವೃದ್ಧಿಗೊಳಿಸುವ ಬಗ್ಗೆ ಒಬ್ಬ ಸ್ಪೆಶಲ್ ಸಹಕಾರಿ ಸಬ್ ರಿಜಿಸ್ತ್ರಾರರನ್ನು ಮೂರು ತಿಂಗಳ ಮಟ್ಟಿಗೆ ನೇಮಿಸುವಂತೆಯೂ ನಿರ್ಣಯವಾಯಿತು.

ಮುನಿಸಿಪಲ್ ಕೌನ್ಸಿಲು ಸಭೆಯು—ಕಳೆದ ತಾ. 22ರಲ್ಲು ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾ ಸಮಿತಿಯ ಶಿಫಾರಸಿನಂತೆ ಮಂಗಳೂರಲ್ಲಿ ವಯಸ್ಕರಿಗಾಗಿ ಮೂರು ಕೇಂದ್ರಗಳನ್ನು ತೆರೆಯುವ ನಿರ್ಧಾರವಾಯಿತು.

ಮುಸ್ಲಿಂ ಹುಡುಗಿಯರ ಹ್ಯಾಸ್ಕೂಲನ್ನು—ಮುಚ್ಚಬಾರದೆಂದೂ ಅದನ್ನು ಸಾಮಾನ್ಯ ಬಾಲಿಕಾ ಪ್ರೌಢ ಶಾಲೆಯಾಗಿ ಮಾರ್ಪಡಿಸಿ ಕನ್ನಡ ಮಾಧ್ಯಮಿಕದೊಡನೆ ಮುಸ್ಲಿಂ ಬಾಲಕಿಯರಿಗೆ ಉರ್ದು ಕಲಿಸುವ ವ್ಯವಸ್ಥೆಯಿರುವಂತೆ ಮಾಡಬೇಕೆಂದೂ ಸರಕಾರವನ್ನು ಕೇಳಿಕೊಳ್ಳಲು ಪೌರರ ಸಭೆಯೊಂದು ಕಳೆದ ತಾ. 20ರಲು ಶ್ರೀ ಎಲ್. ಸಿ ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು.

ದೋಣಿ ಕೆಲಸಗಾರರ ಮುಷ್ಕರವು—ತಾ. 23ರಲ್ಲು ರಾಜಿಯಲ್ಲಿ ತೀರ್ಮಾನವಾಯಿತು. ಮರುದಿನದಿಂದ ಮಜೂರರು ಕೆಲಸಕ್ಕೆ ಹೋಗುತ್ತಿದ್ದಾರೆ.

ಉಚ್ಚಿಲ-ಇಲ್ಲಿಯ ಬೋವಿ ಶಾಲೆಯಲ್ಲಿ ಸದರಿ ಶಾಲಾ ಸಹಾಯಾರ್ಥವಾಗಿ ತಾ. ೩೧ನೇ ಶನಿವಾರ ರಾತ್ರಿ ಗಂಟೆ ೯ಕ್ಕೆ ಶ್ರೀ ಕಿಲ್ಲೆಯವರೇ ಮೊದಲಾದ ಪ್ರಸಿದ್ಧ ಅರ್ಥಗಾರರಿಂದೊಡಗೂಡಿದ ಯಕ್ಷಗಾನವು ಜರಗಲಿದೆ. ವಿದ್ಯಾಭಿಮಾನಿಗಳು ಧನಸಹಾಯವಿತ್ತು ಪ್ರೋತ್ಸಾಹಿಸಬೇಕಾಗಿ ಕಾರ್ಯದರ್ಶಿ ತಿಳಿಸುತ್ತಾರೆ.

ಚಂದ್ರಿಕಾ

ಹಲ್ಲಿನ ರೋಗಿಗಳನ್ನೂ ಕ್ರಿಮಿಯನ್ನೂ ರೋಗಗೊಳಿಸಿ ತ ಚಿಪಡಿಸುವ ಹಲ್ಲು ಪುಡಿ

ಒಂದು ತೊಲೆ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಪಿ. ಲಿಮಿಟೆಡ್, ಕಾಸರಗೋಡು, ದ. ಇಂಡಿಯಾ.

ಮದ್ರಾಸ್ ಅಳಿಯ ಸಂತಾನ ಮಸೂದೆಯ

ಪ್ರತಿಗಳು 0 2 0 ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ 0 3 0 ಸ್ಟಾಂಪನ್ನು ಕಳಿಸಿದ್ದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.

1 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು

2 ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ.

ತಲೆನೋವು, ಶರೀರ ವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಪೀಡೆಗಳಿಗೂ, ಮೊದಲು ಮಾದರಾದ ಎಲ್ಲಾ ರೋಗಗಳಿಗೂ ಕಿರಿ, ಕುರುಕಳ್ಳಿ ಮದ್ದು ನಿಜ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಆಂಡವಾಯು, ಆಂಡವ್ಯಾಧಿ, ಪ್ಲ್ಯಾಲೇರಿಯಾ, ಇತ್ಯಾದಿಗಳಿಗೆ ಲೇಪನಬಗ್ಗೆ ದಿವ್ಯೌಷಧ.

1 ರಾತ್ತಲಿಗೆ ರೂಪಾಯಿ 25/, ½ ರಾತ್ತಲಿಗೆ ರೂಪಾಯಿ 12 8-0, ¼ ರಾತ್ತಲಿಗೆ ರೂಪಾಯಿ 6-4-0. ಕುಷ್ಠ ರೋಗಕ್ಕೆ ಶೀಸೆಯೊಂದರ ರೂಪಾಯಿ 3/-.

ಎಸ್. ಪಿ. ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ, 9.

S. P. Pharmaceuticel Works, Calcutta 9.



Approved firm by the Govt. of Mysore Certified by the Agent of the Govt. of Ceylone & Indian.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಹುಣ್ಣಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರಿಮೂತ್ರ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೂಲಿಕ ಟಿ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸೀಬಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ ಗದಗ

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೪೦ಂದ ೬ಬೊಟ್ಟು, ಸಣ್ಣಮಕ್ಕಳಿಗೆ ೧೦ಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರಕ್ಕೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಕು। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಶೈ, L.I.M.; ಡಾ। ವೆಂಕಟರಾವ್, ಕೊರಙ್ಗಲ್; ನವಭಾರತ ಬುಕ್ ಡಿಪೊ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಹೋಲಿಸುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೧—೦. ಪೋಸ್ಟ ಚಾರ್ಜ ೧೦ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ವಾನಪ್ಪ ಸಿದ್ಧಲಿಂಗಪ್ಪ, ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್ ಎಲ್ ಕಲಬುರ್ಗಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar, Vaidya.

ದಕ್ಷಿಣ ಕನ್ನಡ

ಬಳ್ನಾಡು—ಪುರಾತನ ಗ್ರಾಮದ "ಯಕ್ಷಗಾನ ಸಂಘ"ದವರಿಂದ ಮಾರ್ಚ ತಾ 20 ನೇ ದಿನ ರಾತ್ರೆ "ರಾಜಸೂಯ" ಎಂಬ ಯಕ್ಷಗಾನ ತಾಳಮದ್ದಳೆ ನಡೆಯಿತು. ಶ್ರೀ. ಅಗ್ರಾಳ ಪುರಂದರ ರೈಗಳು 'ಯಕ್ಷಗಾನ' ಎಂಬ ವಿಷಯವನ್ನೆತ್ತಿ ಭಾಷಣಮಾಡಿದರು.

ಸೆಡೂರು—ದೇವಸ್ಥಾನದ ಎದುರಿನ ಬಾಗಿಲ ಗದ್ದೆಯಲ್ಲಿ ತಾ ೨೮-೩-೪೮ರಲ್ಲಿ ಅಮೃತೇಶ್ವರಿ ಮತ್ತು ಸರ್ಡೂರು ಮೇಳದ ಜೋಡಾಟವಾಯಿತು. ಅದೇ ದಿನ ಕಾಲಿ ಮಂದ ಆಡುತ್ತಿದ್ದ ಸುಮಾರು ೧೨ ಜನರನ್ನು ಬ್ರಹ್ಮಾವರ ಸರ್ಕಲಿನ ಸಬ್ ಇನ್ಸ್ಪೆಕ್ಟರರು ಕೈದುಮಾಡಿರುತ್ತಾರಾಗಿ ತಿಳಿದುಬರುತ್ತದೆ.

ಗಂಗೊಳ್ಳಿ—ತಾ 21-3-48ರಲ್ಲಿ ಎಸ್. ವಿ. ಹೈಸ್ಕೂಲಿನ ವರ್ಧಂತ್ಯುತ್ಸವವು ಡಾ. ಟಿ. ಮಾಧವ ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಲ್ಲಿ ಜರಗಿತು. ಸಾಯಂಕಾಲ 5-30ಕ್ಕೆ ಬಹುಮಾನ ವಿತರಣೆಯ ಸಮಯದಲ್ಲಿ ಅಧ್ಯಕ್ಷರು ಶಾಲೆಯ ಕೆಲಸವನ್ನು ಪ್ರಶಂಸಿಸಿ ಭಾಷಣವಿತ್ತರು. ಶ್ರೀ ಎಸ್. ನಾಗೇಶ ನಾಯಕ್ ಬಿ ಎಸ್. ಸಿಯವರು ಹ್ಯಾಯರ್ ಎಲಿಮೆಂಟರಿ ಶಾಲೆಯಸ್ವಸ್ತಿವಾಚನವನ್ನು ಮಾಡಿದರು. ಶ್ರೀ ಸಿ ದೇವದಾಸ ನಾಯಕ್, ಎಲ್. ಎಲ್. ಬಿ. ಯವರು ಸ್ಕೂಲ್‌ಡೇ ಕಮಿಟಿಯ ಪರವಾಗಿ ಧನ್ಯವಾದಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು. ರಾತ್ರಿ 9-30ಕ್ಕೆ ವಿದ್ಯಾರ್ಥಿಗಳ ವಿನೋದಾವಳಿಗಳು ಯಶಸ್ವಿಯಾಗಿ ನಡೆದವು. ಅವುಗಳಲ್ಲಿ ಒಂದು ಮದ್ಯಪಾನ ನಿಷೇಧದ ಕುರಿತು ಬಯಲಾಟವಾಗಿತ್ತು.

ಘರಂಗಿಪೇಟೆ—ಇಲ್ಲಿಯ ಶ್ರೀ ರಾಮಾಶ್ರಮ ಎ. ಶಾಲೆಯ ಸಂಸ್ಥಾಪಕರೂ, ನಿವೃತ್ತ ಹೆಡ್ಮಾಸ್ಟರರೂ, ಮೆನೇಜರರೂ, ಶ್ರೀ ರಾಮಾ ಪಬ್ಲಿಕ್ ಲೈಬ್ರರಿಯ ಪ್ರೆಸಿಡೆಂಟರೂ ಘರಂಗಿಪೇಟೆ ಪೋಸ್ಟಾಫೀಸಿನ ಬ್ರಾಂಚ್ ಪೋಸ್ಟುಮಾಸ್ತರರೂ ಮತ್ತೂ ಇನ್ನಿತರ ಜನೋಪಕಾರಿ ಸಂಸ್ಥೆಗಳ ವ್ಯವಸ್ಥಾಪಕರೂ ಆಗಿದ್ದು ಜನಪ್ರೀತರಾಗಿದ್ದ ಶ್ರೀ ಎ. ರಾಮಚಂದ್ರ ಹೆಗ್ಡೆಯವರು ತಾ 22-3-48ನೇ ಸೋಮವಾರ ತಮ್ಮ 66ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ.

ಮೂಲ್ಕಿ—ಇಲ್ಲಿನ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಜರಗತಕ್ಕ ಕಾಲಾವಧಿ ಉತ್ಸವವು ಇದೇ ತಾ 24ರಲ್ಲಿ ಆರಂಭವಾದುದು ತಾ. 31ರಲ್ಲಿ ಮಹಾರಥೋತ್ಸವ, ಅವಭೃತಸ್ನಾನಾದಿಗಳಿಂದ ಯಶಸ್ವಿಯಾಗಿ ಜರಗಿತು.

ಮೂಲ್ಕಿಯಲ್ಲಿ ಗ್ರಾಮ್ಯ ವಸ್ತು ಪ್ರದರ್ಶನವೂ ವಿವಿಧ ವಿನೋದಾವಳಿಗಳೂ, ಭಾಷಣಗಳೂ, ಬಹುಮಾನ ವಿತರಣೆಯೂ ಅಲ್ಲಿಯ ನಾಲ್ಕುಪಟ್ಣ ಮೊಗವೀರ ಸಮಾಜ ಸೇವಾ ಸಂಘದ ಕಟ್ಟಡದಲ್ಲಿ ಕಳೆದ ತಾ. 23-24ರಲ್ಲಿ ಜರಗಿತು. ಶ್ರೀ. ಸಿ. ಎಲ್. ನಾಯ್ಕರು ವಸ್ತು ಪ್ರದರ್ಶನದ ಆರಂಭೋತ್ಸವವನ್ನು ಜರಗಿಸಿದರು. ಶ್ರೀ. ಎಮ್. ಆರ್. ಪೂಂಜರು ಅಧ್ಯಕ್ಷತೆ ವಹಿಸಿದ್ದರು. ಮರುದಿನದ ಸಭೆಯ ಅಧ್ಯಕ್ಷತೆಯನ್ನು ರಾ। ಬ। ಕೆ ಟಿ ಆಳ್ವರು ವಹಿಸಿದ್ದರು, ಅ। ಡಿವೆಲಪ್‌ಮೆಂಟ್ ಆಫೀಸರ್ ಶ್ರೀ ಸೂರ್ಯನಾರಾಯಣ ರಾಯರು ವರದಿಯನ್ನೋದಿದರು. ಜಿಲ್ಲಾ ಪ್ರೊಹಿಬಿಷನ್ ಆಫೀಸರ್ ಶ್ರೀ ಆರ್. ಶೇಷಗಿರಿ, ಶ್ರೀ ಎಚ್. ನಾರಾಯಣ ರಾವ್ ಮೊದಲಾದವರು ಭಾಷಣ ಮಾಡಿದರು

ಕುಂದಾಪುರ—ದ ಕ ಜಿಲ್ಲಾ ಫುಡ್ ಕಮಿಟಿ, ಸೆಂಟ್ರಲ್ ಬೇಂಕ್, ಕಾಂಗ್ರೆಸ್ ಕಮಿಟಿ ಇತ್ಯಾದಿ ಸಂಘ ಸಂಸ್ಥೆಗಳ ಸದಸ್ಯರಾದ ಶ್ರೀ ಬೈಂದೂರು ಸುಬ್ಬಣ್ಣ ಸೆಟ್ಟರು ಶ್ರೀಮತಿ ಪೈ ರತ್ನ ಎಂಬ ಕನ್ಯೆಯನ್ನು ತಾ 22ನೆ ಸೋಮವಾರ ದಿನ ವಿವಾಹಮಾಡಿಕೊಂಡರು. ಲಗ್ನ ಸಮಾರಂಭವು ಕುಂದಾಪುರ ಎಸ್. ಆರ್. ಎಸ್. ಭವನದಲ್ಲಿ ವಿಜೃಂಭಣೆಯಿಂದ ಜರಗಿತು. ನೂತನ ವಧೂವರರಿಗೆ ಶುಭಾಶಯಗಳು.

ಸೋದೆ (ಉ. ಕನ್ನಡ)—ಶ್ರೀ ಸೋದಾ ರಮಾ ತ್ರಿವಿಕ್ರಮದೇವರ ಸನ್ನಿಧಿಯಲ್ಲಿ ಕಾಲಂಪ್ರತಿ ಜರಗುವ ಉತ್ಸವವು ಫಾಲ್ಗುಣ ಶುದ್ಧ ನವಮಿ ಶುಕ್ರವಾರ ಅಂಕುರಾರ್ಪಣ, ಮೃತ್ತಿಕಾಹರಣ, ಭೇರಿತಾಡನ, ಕಂಕಣಬಂಧನದಿಂದ ಆರಂಭವಾಗಿ ಫಾಲ್ಗುಣ ಬಹುಳ ಪ್ರತಿಪತ್ ಶುಕ್ರವಾರ ಅವಭೃತಸ್ನಾನ,ಶಾಕೋತ್ಸವಗಳಿಂದ ಕೊನೆಗೊಂಡಿತು ಶನಿವಾರ ದಿನ ಶ್ರೀ ಗುರುರಾಜರ ಆರಾಧನೆಯೂ ಮರುದಿನ ಶ್ರೀ ವ್ಯಾಸರಾಜರ ಆರಾಧನೆಯೂ ನಡೆಯಿತು. ಬಹುಮಂದಿ ಭಕ್ತಾದಿಗಳು ಇಷ್ಟಾರ್ಥ ಸಿದ್ಧಿಗಾಗಿ ಆಗಮಿಸಿದ್ದರು.

ಶಿವಪುರ—ಈ ಗ್ರಾಮದ ಕೃಷಿಕ ಸಂಘದ ಮಹಾಸಭೆಯು ತಾ 27-3-48ರಲ್ಲು ಶ್ರೀ ಶ್ರೀನಿವಾಸ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಕೆ. ಪಿ. ರಾಮ ಪೋತುವಾಳರು ಹರಿಜನ ಮಂದಿರ ಪ್ರವೇಶ, ಪ್ರೌಢ ಶಿಕ್ಷಣ, ಕೃಷಿಕ ಸಂಘಟನೆ ಕುರಿತು ಭಾಷಣವಿತ್ತ ಬಳಿಕ ಅಧ್ಯಕ್ಷರಿಂದ ಗ್ರಾಮಾಭಿವೃದ್ಧಿಯ ಕುರಿತು ಹಲವಾರು ಸೂಚನೆಗಳು ಮುಗಿದ ಬಳಿಕ ಮಂಗಳಗೀತೆಯೊಡನೆ ಸಭಾಂತ್ಯವಾಯಿತು

ದಿ ಭಟ್ಕಳ ಇಲೆಕ್ಟ್ರಿಕ್ ಸಪ್ಲೈ ಎಂಡ್ ಇಂಡಸ್ಟ್ರೀಸ್ ಲಿಮಿಟೆಡ್—ಇಷ್ಟರೆತನಕ ಉಪಯೋಗವನ್ನು ಮಾಡದ ಸೃಷ್ಟಿಯ ಸ್ವಾಭಾವಿಕ ಸಲಕರಣೆಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಬೇಕಷ್ಟು ಇವೆ. ಭಟ್ಕಳ ಶಹರಿಗೂ ಉ. ಕನ್ನಡ ಜಿಲ್ಲೆಗೂ ವಿದ್ಯುತ್ತನ್ನು ಒದಗಿಸುವತೆಯೂ ಸಾಧ್ಯವಿರುವ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿಯೂ ದಿ ಭಟ್ಕಳ ಇಲೆಕ್ಟ್ರಿಕ್ ಸಪ್ಲೈ ಎಂಡ್ ಇಂಡಸ್ಟ್ರೀಸ್ ಲಿಮಿಟೆಡ್ ಎಂಬ ಕಂಪೆನಿಯು ಸ್ಥಾಪಿಸಲ್ಪಟ್ಟಿದೆ. 1913ನೆ ಇಸವಿಯ ಕಂಪೆನಿಸ್ ಆಕ್ಟಿನಂತೆ ಸಂಸ್ಥೆಯು ಈಗಾಗಲೇ ರಿಜಿಸ್ಟ್ರಿಮಾಡಲ್ಪಟ್ಟು ಡೈರೆಕ್ಟರರ ಮಂಡಲಿಯಲ್ಲಿ ಅನುಭವೀ ಅಥ್ಯ ಮಹನೀಯರಿರುವರು. ಸಂಸ್ಥೆಯ ಮುಖ್ಯ ಕಾರ್ಯಾಲಯವು ಭಟ್ಕಳದಲ್ಲಿರುವುದು.

ನೋಟೀಸು.

ಕುಂದಾಪುರ ಡಿ. ಮು ಕೋರ್ಟಿನಲ್ಲಿ.

O. S. 40/1948.

ವಾದಿ—ಸುಬ್ರಾಯ ಲಕ್ಷ್ಮಣ ಶೇಟ್.

ಪ್ರತಿವಾದಿರು ನರಸಿಂಹ ಕಾಮತ್ ಸಹಾ.

ಸದ್ರಿ ದಾವೆಯ 3 ಮತ್ತು 4ನೇ ಪ್ರತಿವಾದಿಗೆ ತಿಳಿಯಪಡಿಸಿದ್ದು. 3. ವಿಟ್ಠಲ ಕಂಮ್ತಿ, 4. ವಾಸುದೇವ ಕಂಮ್ತಿ, ಗೋವಿಂದ ಕಂಮ್ತಿರವ ಮಕ್ಕಳು, ಕುಂದಾಪುರ ತಾಲ್ಲೂಕ ಕೆಗಾರಲ ಗ್ರಾಮ.

ವಾದಿಯು ತನಗೆ ನೀವು ಕೂಡಾ ಪ್ರತಿವಾದಿರಿಂದ ಕಳೆದ ಪ್ರಮಾಥಿ ಸಂ।ರದ ಆಗ್ನೆಯಿಂದ ವ್ಯಯ ಸಂ।ರದ ಅಂತ್ಯದ ವರೇಗೆ ಬರತಕ್ಕ ಮೂಲಗೇಣಿ ಗೇಣಿ ಬಾಕಿ ಋವೇದು ರೂಪಾಯಿ 83-15-8ನ್ನು ಬರಮಾಡಿಕೊಳ್ಳುವರೇ ದಾಖಲು ಮಾಡಿದ ಮೇಲಿನ ದಾವೆ ತಾರೀಕು 8-4-48ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆ ಇದ್ದರೆ ಸದ್ರಿ ದಿವಸ ಬೆಳಿಗ್ಗೆ ಘಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Majaya Shetty,

Advocate for Plaintiffs.

ಮೊಕ್ಕಾಂ, ಕುಂದಾಪುರ, 20-3-48.

'ಕೇಶ ಕಲಾ'

ಹೇರ್ ಆಯಿಲ್

ಈ ಎಣ್ಣೆಯು, ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪ್ರೇರಣೆ ಕೊಟ್ಟು ಅವುಗಳನ್ನು ಬೆಳೆಸುವುದು ಇದಲ್ಲದೆ ಮೆದುಳನ್ನು ತಂಪಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಹಾಲಾಡಿ 'ಗಾಂಧಿ ಸ್ಮಾರಕ ಸಮಿತಿ'

ಯವರು ಕಟ್ಟಲಿರುವ

ಸ್ಮಾರಕ ಮಂದಿರದ

ಸಹಾಯಾರ್ಥವಾಗಿ ಪ್ರಚಂಡ ಯಕ್ಷಗಾನ

ಜಿಲ್ಲೆಯ ಅಗ್ರಗಣ್ಯ ಯಕ್ಷಗಾನ ಕಲಾಕೋವಿದರ ಕೂಡುವಿಕೆಯಿಂದ **ಇದೇ ತಾ.** 24-4 16ನೇ **ಶನಿವಾರ ರಾತ್ರಿ ಕುಂದಾಪುರದ ಶ್ರೀ ಧನಲಕ್ಷ್ಮೀಥಿಯೇಟರಿನಲ್ಲಿ** ಜರಗುವುದು. ಶ್ರೀಗಳಾದ ಕಲ್ಲೆಯರು, ಪೊಳಲಿ ಶಾಸ್ತ್ರಿಗಳು, ಮಲ್ಪೆ ಶಂಕರನಾರಾಯಣ ಸಾಮಗರು, ಮಂಗಳೂರಿನ ಎಡ್ವೋಕೇಟ್ ಬಾಲಕೃಷ್ಣರಾಯರು, ಪೊಳ್ಳ ದೇಜಪ್ಪ ಸೆಟ್ಟರು ಮೊದಲಾದ ಜಿಲ್ಲೆಯ ಸುಪ್ರಸಿದ್ಧ ಅರ್ಥಧಾರಿಗಳು ಭಾಗವಹಿಸುವರು. ಅಂತೆಯೇ ಪ್ರಸಿದ್ಧರಿರುವ ಶ್ರೀ. ಮೈಂದಪ್ಪ ರೈಗಳ ಹಾಡುವಿಕೆ, ಶ್ರೀ. ಈಶ್ವರ ಅಪ್ಪಯ್ಯನವರ ಮೃದಂಗವಾದನವಿರುವದು. ಸಾರ್ವಜನಿಕ ಬಂಧುಭಗಿನಿಯರೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಿ ಗಾಂಧಿಜೀಯ ಸ್ಮಾರಕಕ್ಕೆ ನೆರವಾದ ಪುಣ್ಯವನ್ನೂ ಮೇಲ್ವರ್ಗದ ಯಕ್ಷಗಾನ ಕಲಾನುಭವದ ಆನಂದವನ್ನೂ ಪಡೆಯಬೇಕಾಗಿ ವಿಜ್ಞಾಪನೆ.

ಹಾರ್ದಳ್ಳಿ ಹಿರಿಯಣ್ಣ ಸೆಟ್ಟಿ, ಅಧ್ಯಕ್ಷ. **ಯಚ್. ಭುಜಂಗ ಸೆಟ್ಟಿ,** ಉಪಾಧ್ಯಕ್ಷ

ಎಚ್. ಹಿರಿಯಣ್ಣ ನಾಯ್ಕ; ಕೆ. ಶಂಕರ ಸೆಟ್ಟಿ. ಕಾರ್ಯದರ್ಶಿಗಳು.

ಹಾಲಾಡಿ ಮಹಾಬಲ ಸೆಟ್ಟಿ, ಕೋಶಾಧಿಕಾರಿ.

ಟಿಕೇಟು ದರಗಳು:— I ಕ್ಲಾಸು 3-0-0. II ಕ್ಲಾಸು 2-0-0. III ಕ್ಲಾಸು 1-0-0 IV ಕ್ಲಾಸು 0-8-0.

ನಿಮ್ಮಷ್ಟಕ್ಕೆ ನೀವೇ ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.

ನವಭಾರತ ಬುಕ್ ಡಿಪ್ಪೊ, ಉಡುಪಿ.

ಅನೇಕ ಉಪಯುಕ್ತ ವಿಷಯಗಳಿಂದೊಡಗೂಡಿರುವ **ಶ್ರೀ. ಬೇಳೂರು ಶ್ರೀಪತಿ ನರಸಿಂಹ ಅಡಿಗರಿಂದ ಗಣಿಸಿ ಪರಿಶೋಧಿಸಲ್ಪಟ್ಟ**

ಸರ್ವಧಾರಿ ಸಂವತ್ಸರದ

ಶ್ರೀಪತಿ ಪಂಚಾಂಗ

ಬೆಲೆ 0—8—0 ... ಏಜಂಟರಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ಶ್ರೀಪತಿ ನರಸಿಂಹ ಅಡಿಗ

ಬೇಳೂರು, P. O. ಕೋಟ.

ಬಾಲಕರ ಆರೋಗ್ಯಕಾಯುರಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವ ಚಟಿಕೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೊ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

L. N. Sharma, Mangalore.

ಅಳಿಯ ಸಂತಾನ ಮಸೂದೆ

[ಶ್ರೀಮಾನ್ ಕೆ. ಎಸ್. ಹೆಗ್ಗಡೆ, ಎಮ್. ಎ., ಬಿ. ಎಲ್., ಎಡ್ವೋಕೇಟ್, ಗವರ್ನಮೆಂಟ್ ಪ್ಲೀಡರ್ ಮತ್ತು ಪಬ್ಲಿಕ್ ಪ್ರೊಸೆಕ್ಯೂಟರ್, ಮಂಗಳೂರು, ಇವರು ಜೋಯಿಂಟ್ ಸಿಲೆಕ್ಟ್ ಕಮಿಟಿಯವರ ಅನುಲಕ್ಷ್ಯಕ್ಕೆ ತರಲಿಕ್ಕಾಗಿ ತಯಾರಿಸಿದ ಬಿನ್ನಹದೋಲೆ (ಮೆಮೊರಾಂಡಮ್) ಮತ್ತು ಮಸೂದೆಯಲ್ಲಿಯ ಶಬ್ದವಾಚಕ ಒಕ್ಕಣೆಗಳಲ್ಲಾಗಬೇಕಾದ ತಿದ್ದುಪಡಿಗಳ ವಿವರ ಪಟ್ಟಿ ಸಹ ನಮ್ಮ ಕೈಸೇರಿವೆ. ಅವುಗಳನ್ನು ಯಥಾವತ್ತಾಗಿ ಪ್ರಕಟಿಸುವುದು ಯೋಗ್ಯವೆನಿಸಿದರೂ ಸುದೀರ್ಘವಾಗಿರುವ ಕಾರಣ ಸ್ಥಳಾಭಾವದಿಂದಾಗಿ ಅವುಗಳ ಮುಖ್ಯ ಮುಖ್ಯ ಭಾಗಗಳ ಸಾರಾಂಶವನ್ನಷ್ಟೆ ಕೆಳಗೆ ಕೊಡಲಾಗಿದೆ. ಸಂ.]

ಮಸೂದೆಯ ಆವಶ್ಯಕತೆ – ದಂಡಿನ ಕೆಲಸವೋ ಬೇಸಾಯವೋ ಪ್ರಧಾನ ಉದ್ಯೋಗವಾಗಿದ್ದ ಹಿಂದಿನ ಜನತೆಗೆ ಅಂದಿನ ಹಳ್ಳಿಯ ಜೀವನದ ರೀತಿನೀತಿಯಲ್ಲಿ ಅಳಿಯಸಂತಾನ ಕಟ್ಟಳೆಯು ಅನುಕೂಲವಾಗಿಯೂ ಕ್ಷೇಮಕಾರಿಯೂ ಆಗಿತ್ತು. ಆದರೆ ಈ ಶತಮಾನದ ಆದಿಯಿಂದ ವಿದ್ಯೆ, ಸರಕಾರಿ ನೌಕರಿ, ವ್ಯಾಪಾರ, ಉದ್ಯಮ, ಸ್ವತಂತ್ರ ಮನೋವೃತ್ತಿ, ಸ್ಥಾನಮಾನ ಧನಲಾಲಸೆ, ಇವುಗಳ ವರ್ಚಸ್ಸು ಅಳಿಯಸಂತಾನ ಕಟ್ಟಳೆಯ ತಿರುಳಿನ ಮೇಲೆಯೂ ತನ್ನ ಪ್ರಭಾವವನ್ನು ಬೀರುತ್ತ ಬಂತು. ಪರಿಣಾಮವಾಗಿ ಕುಟುಂಬದ ಹಿತಚಿಂತನೆಗಿಂತ ವ್ಯಕ್ತಿತ್ವದ ಕಡೆಗೆ ಹೆಚ್ಚಿನ ಲಕ್ಷ್ಯ ಹರಿಯತೊಡಗಿತು. ವ್ಯಕ್ತಿ, ವ್ಯಕ್ತಿಯ ಹೆಂಡತಿ ಮಕ್ಕಳು, ವ್ಯಕ್ತಿಯ ಸೊತ್ತು ಹಣಕಾಸು, ವೈಯಕ್ತಿಕ ಸಂಸಾರದ ಸುಖಜೀವನ ಸೌಕರ್ಯ ಸಾಧನೆ, ಇವು ಕುಟುಂಬದ ಯಜಮಾನನಲ್ಲಿ ಹೇಗೋ ಹಾಗೆಯೇ ಕುಟುಂಬದ ಮೆಂಬರರಲ್ಲಿಯೂ ಜಾಗ್ರತವಾಗಿ ಪ್ರತಿಯೊಂದು ಮನೆಯಲ್ಲೆಂಬಂತೆ ಗೃಹಕಲಹಗಳು ಏಳತೊಡಗಿದುವು. ಯಜಮಾನ ಮತ್ತು ಮೆಂಬರರೊಳಗಿನ ಅನೈಕ್ಯ, ಅಸಂತೃಪ್ತಿ, ಉಪೇಕ್ಷೆ, ಅಸಹಕಾರ, ದ್ವೇಷಾಸೂಯೆ, ಸ್ವಾರ್ಥ, ಇವುಗಳಿಂದಾಗಿ ವ್ಯಕ್ತಿಯ ಉತ್ಕರ್ಷೆಗೆ ವಿಘ್ನವಾಗುತ್ತ ಬಂತು. ಆಸ್ತಿ ಪಾಸ್ತಿಗಳ ಪರಿಸ್ಥಿತಿ ಕೆಡುತ್ತ ಬಂತು. ಸಿವಿಲ್ ಕ್ರಿಮಿನಲ್ ವ್ಯವಹರಣೆಗಳು ಹುಟ್ಟಿ ಇದ್ದ ಕಾಸೂ ಕೋರ್ಟು ಕಚೇರಿಗಳಲ್ಲಿ ಸುರಿದು ಹೋಗುತ್ತ ಬಂತು.

ಹೀಗಾಗಿ ಇಂದಿನ ನಮ್ಮ ಪರಿಸ್ಥಿತಿ ದಿಗಿಲುಗೆಡಿಸುವಂತಹದಾಗಿದೆ. ಈ ಜಿಲ್ಲೆಯಲ್ಲಿ ಪ್ರಧಾನ ಸಂಖ್ಯಾಕರಾದ ನಾವು ಇಂದು ಸಾಮಾಜಿಕ ಪರಿಸ್ಥಿತಿಯಲ್ಲಾಗಲೀ ಹಣಕಾಸಿನಲ್ಲಾಗಲೀ, ವಿದ್ಯೆ, ಸರಕಾರಿ ನೌಕರಿ, ವ್ಯಾಪಾರ, ಕಸಬು ಕೈಗಾರಿಕೆ ಇವು ಯಾವುದರಲ್ಲೇ ಆಗಲಿ ಬಹಳ ಹಿಂದುಬಿದ್ದಿದ್ದೇವೆ. ಹಿಂದೆ ನಮ್ಮದಾಗಿದ್ದ ಭೂಮಿ ಕಾಣಿಯೂ ಈಗ ಅರ್ಧಕ್ಕೂ ಮಿಕ್ಕಿ ಕುಂದಿದೆ. ಇಂದಿನ ಪರಿಸ್ಥಿತಿಯಲ್ಲಿ ಹೊಂದಿ ಬಾಳಿ ಏಳಿಗೆಯನ್ನು ಸಾಧಿಸಲಾಗದ ಈ ಅಳಿಯಸಂತಾನ ಕಟ್ಟನ್ನು ಬದಲಾಯಿಸಿಕೊಂಡು ಒಳ್ಳಿತಾಗಬೇಕು; ಇಲ್ಲವೆ ಹೀಗೆ ಇದ್ದು ಹಾಳಾಗಬೇಕು ಎಂಬಲ್ಲಿಗೆ ಮುಟ್ಟಿದ್ದುದರಿಂದ ಕೆಲವು ವರುಷಗಳಿಂದೀಚೆ ನಮ್ಮಲ್ಲಿಯ ಹಲವು ವಿಚಾರವಂತರಾದ ಮುಂದಾಳುಗಳು ಈ ಕಟ್ಟಳೆಯ ಬದಲಾವಣೆಗಾಗಿ ಚಳವಳಿ ನಡೆಯಿಸುತ್ತ ಬಂದಿದ್ದಾರೆ. ಶಾಸನ ಮಾಡಿಸಲು ಹಲವು ಪ್ರಯತ್ನಗಳಾಗಿ ವಿಫಲವಾಗಿ ಈಗ ಈ ಮಸೂದೆಯು ಮಂಡಿಸಲಾಗಿದೆ. ಇದು ಮುಂದೆ ಸೂಚಿಸಲ್ಪಡುವಂತೆ ಕೆಲವು ವಿಚಾರಗಳಲ್ಲಿ ತಿದ್ದುಪಡಿಯಾಗತಕ್ಕದು:-

1 ಮದುವೆಯ- ವಿಷಯವಾದ ಪ್ರಕರಣದಲ್ಲಿ ವಿಜಾತೀಯ ವಿವಾಹಕ್ಕೂ ಅವಕಾಶಗೊಟ್ಟು ಪ್ರೋತ್ಸಾಹಿಸತಕ್ಕದು. ಇದರಿಂದ ಇಂದಿನ ಜಾತೀಯತೆ ದ್ವೇಷ ಕಡಿಮೆಯಾದೀತು. ವರದಕ್ಷಿಣೆಯ ಧಾರಣೆಯೂ ಇಳಿದೀತು. ಸಗೋತ್ರ ವಿವಾಹ ವಿಷಯದ ನಿಬಂಧನೆಗಳು ಧಾವೆಗಳಿಗೆ ಅವಕಾಶಗೊಡಬಹುದು. ಅಂತಹ ವಿವಾಹ ಮಾಡುವುದೂ ಮಾಡದಿರುವುದೂ ವಿವಾಹಾಕಾಂಕ್ಷಿಗಳಾದ ಪಕ್ಷಗಳ ಆತ್ಮಸಂತೋಷಾನುಸಾರವಿರಲೆಂದು ಬಿಟ್ಟುಬಿಡುವುದೊಳ್ಳಿತು.

ವಿವಾಹ ವಿಚ್ಛೇದನದ ವಿಷಯವಾದ ನಿಬಂಧನೆಗಳು ಮಸೂದೆಯಲ್ಲಿದ್ದಂತೆಯೆ ಇರಗೊಡಿಸಬಹುದು.

2 ಹಿಸೆಯ. ವಿಧಾನದಲ್ಲಿ ಕವರುಗಳ ಲೆಕ್ಕ ಪ್ರಕಾರ ಅರ್ಧಾಂಶ ಆಸ್ತಿಯನ್ನೂ ಕುಟುಂಬದ ಜನಸಂಖ್ಯಾನುಪ್ರಕಾರ ಅರ್ಧಾಂಶವನ್ನೂ ವಿಭಜಿಸುವ ಮತ್ತು ಮಸೂದೆಯಲ್ಲಿರುವ ಶರತದ ಮಿತಿಯೊಳಗೆ ಖಡ್ಡಾಯವಾಗಿ ಹಿಸೆಯಾಗಲು ಅವಕಾಶಗೊಡುವ ನಿಯಮ ನಿಬಂಧನೆಗಳು ಮಾನ್ಯವಾಗತಕ್ಕವು.

3 ಕರಾರುಗಳು— ಕರಾರುಗಳ ಪ್ರಕಾರ ನಡೆದುಬರುತ್ತಿರುವ ಎಷ್ಟೋ ಕುಟುಂಬಗಳಿರುವ ಕಾರಣ ಅವನ್ನು ಮಸೂದೆಯು ಮನ್ನಿಸದೆ ತೊಡೆದು ಹಾಕಿದರೆ ಸುವ್ಯವಸ್ಥಿತವಾಗಿ ನಡೆದು ಬರುವ ಕುಟುಂಬಗಳಲ್ಲಿ ಅವ್ಯವಸ್ಥೆಯ ಗೊಂದಲಗಳನ್ನು ತುರುಕಿಸಿದಂತಾಗಲಿಲ್ಲವೇ ಎಂಬ ಆಕ್ಷೇಪದ ಪ್ರಶ್ನೆಗಳು ಕೇಳಬರುತ್ತಿವೆ. ಆದರೆ ಕರಾರುಗಳು ಯಾವುದಾದರೊಂದು ಏಕನಿಯಮಾನುಸಾರ ಏಕಪ್ರಕಾರ ಶಾಸನರೀತ್ಯಾ ನಡೆದವುಗಳಲ್ಲ. ವಿವಿಧ ಪರಿಸ್ಥಿತಿಯ ಒತ್ತಾಯದಿಂದ ವಿವಿಧ ತರದ ಕರಾರುಗಳು ಉಂಟಾಗಿವೆ. ಖಡ್ಡಾಯವಾಗಿ ಹಿಸೆಕೇಳುವ ಹಕ್ಕಿಲ್ಲದಿದ್ದ ಆ ಕಾಲದಲ್ಲಿ ಸ್ವಾರ್ಥಿಗಳಾದ ಪ್ರಬಲ ಕವರುಗಳು ಅಬಲ ಕವರುಗಳ ಮೇಲೆ ಮಾಡಿರುವ ಅನ್ಯಾಯದ ಸ್ಮಾರಕಗಳೆನ್ನಬಹುದಾದಂತಹ ಎಷ್ಟೋ ಕರಾರುಗಳಿವೆ. ಇವನ್ನು ಮನ್ನಿಸುವುದಾದರೆ ನಾವು ಯಾವ ಸುಧಾರಣೆಯನ್ನೂ ಮಾಡಿದಂತಾಗುವುದಿಲ್ಲ.

4 ಕುಟುಂಬದ ಆಡಳಿತೆ_ ಈ ವಿಷಯದಲ್ಲಿ ಯಜಮಾನನು ಕ್ರಮವಾದ ಲೆಕ್ಕ ಪತ್ರಗಳನ್ನಿಟ್ಟು ಕೇಳಿದ ಮೆಂಬರರಿಗೆ ತೋರಿಸಬೇಕೆಂಬ ನಿಬಂಧನೆಯನ್ನು ತೆಗೆದು ಹಾಕಬೇಕೆಂದು ನಮ್ಮ ಸೂಚನೆಯಿದೆ. ಆಡಳಿತೆಯ ವಿಚಾರ ಅಸಂತೃಪ್ತರಾದ ಕವರು ಯಾ ಮೆಂಬರರು ಹಿಸೆ ಅಥವಾ ಜೀವನಾಂಶವನ್ನು ಹೊಂದಲು ಮಸೂದೆಯಲ್ಲಿ ಅವಕಾಶಗೊಟ್ಟಿರುತ್ತದೆ. ಆದುದರಿಂದ ಬರಹವಿಲ್ಲದ ಅಥವಾ ಗುಮಾಸ್ತೆಯನ್ನಿಟ್ಟುಕೊಳ್ಳುವಷ್ಟು ಆದಾಯವಿಲ್ಲದ ಕುಟುಂಬದ ಯಜಮಾನನ ಮೇಲೆ ಕ್ರಮವಾದ ಲೆಕ್ಕಪತ್ರಗಳನ್ನಿಡಬೇಕೆಂಬ ನಿಬಂಧನೆಯನ್ನು ಹೊರಿಸಿ ಹಲವು ಅನವಶ್ಯಕವಾದ ವ್ಯವಹರಣೆಗಳಿಗೆ ಅವಕಾಶಗೊಡುವುದು ಯುಕ್ತವಲ್ಲ.

5 ಟೀಕೆ ಟಿಪ್ಪಣಿಗಳ ರೀತಿನೀತಿ— ಅಳಿಯಸಂತಾನ ಕಟ್ಟು ತಿದ್ದುಪಡಿಯಾಗಬೇಕೆಂಬ ವಿಷಯದಲ್ಲಿ ಪ್ರಬಲ ಬಹುಮತವಿದೆ. ಹೇಗೆ ತಿದ್ದುಪಡಿಯಾಗಬೇಕೆಂಬ ವಿಷಯದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿವೆ— ತಿದ್ದುಪಡಿಗಾಗಿ ತರಲ್ಪಟ್ಟಿರುವ ಈ ಮಸೂದೆಯನ್ನು ಪ್ರತಿಯೊಬ್ಬನು ಸ್ವಕೀಯ ಹಿತಗುಣ ಲಾಭಗಳ ದೃಷ್ಟಿಯಿಂದ ಪರಿಶೀಲಿಸಿ ತಿದ್ದುಪಡಿ ಸೂಚಿಸುವ ಮನೋವೃತ್ತಿಯುಳ್ಳವನಾಗಿರುವುದರಿಂದ ಟೀಕೆ ಟಿಪ್ಪಣಿಗಳು ಅಗಣಿತವಾಗಿವೆ. ಆದರೆ ಒಂದು ಶಾಸನವನ್ನು ಪರಿಶೀಲಿಸುವಾಗ ಈ ದೃಷ್ಟಿಯನ್ನಿಟ್ಟುಕೊಳ್ಳುವುದು ಯುಕ್ತವಲ್ಲ. ಸರಾಸರಿ ಜನರಿಗೆ ಪರಮಾವಧಿ ಪ್ರಯೋಜನವಾಗುವ ನೋಟದಿಂದ ನೋಡಬೇಕು. ಈ ನೋಟವೇ ಒಂದು ಶಾಸನ ಸೃಷ್ಟಿಗೆ ಯೋಗ್ಯವಾದುದು. ಕೆಲವು ಶ್ರೀಮಂತ ಕುಟುಂಬದ ಅಪ್ರಗತಿಕ ಮನೋವೃತ್ತಿಯ ಯಜಮಾನರು ಮಾತ್ರ ಯಾವ ತರದ ತಿದ್ದುಪಡಿಗೂ ವಿರೋಧಿಗಳಾಗಿದ್ದಾರೆ. ಇವರು ಸ್ಪಷ್ಟವಾದಿಗಳಾಗಿ ತಮ್ಮ ವಿರೋಧವನ್ನು ಸೂಚಿಸುತ್ತಾರೆ. ಅಳಿಯಸಂತಾನ ಕಟ್ಟಳೆಯು ಇಂದಿನ ಕಾಲ ಪರಿಸ್ಥಿತಿಯಲ್ಲಿ ತಿದ್ದುಪಡಿಯಿಂದ ಸುಧಾರಿಸಲ್ಪಡಲಾಗದಷ್ಟು ಕೆಟ್ಟು ಹೋಗಿರುವುದರಿಂದ ಅದನ್ನು ಸಮೂಲವಾಗಿ ಕಿತ್ತು ಹಾಕಬೇಕೆನ್ನುವ ಆದರ್ಶವಾದಿಗಳ ಪ್ರಬಲ ಪಕ್ಷವಿದೆ. ಆದರ್ಶವು ಒಳ್ಳೆಯದೇನೋ ನಿಜ. ವೈಯಕ್ತಿಕವಾಗಿ ನಾನೂ ಆ ಆದರ್ಶ ಪ್ರೇಮಿ. ಆದರೆ ಅಂತಹ ಆದರ್ಶಕ್ಕೆ ತಕ್ಕಂತೆ ನವನಿರ್ಮಾಣವನ್ನು ಮಾಡುವುದು ವ್ಯವಹಾರ್ಯವಾಗುವುದಿಲ್ಲ. ಆದರ್ಶವನ್ನು ವಾಸ್ತವಿಕತೆಗಿಳಿಸುವುದು ಸಾಧ್ಯವಾಗುವುದಿಲ್ಲ. ಅನುಷ್ಠಾನದ ದೃಷ್ಟಿಯಲ್ಲಿ ನೋಡುವಾಗ ಆದರ್ಶವನ್ನು ಭೂಮಿಗಿಳಿಸುವುದು ಕನಸಿನ ಮಂಡಿಗೆಯಾಗಿ ಕಾಣುತ್ತದೆ. ಆದುದರಿಂದ ಇದ್ದುದನ್ನು ತೊಡೆದುಹಾಕಿ ಸರ್ವರೀತ್ಯಾ ಆದರ್ಶವಾದುದನ್ನು ಆಸ್ಥಾನದಲ್ಲಿ ಪ್ರತಿಷ್ಠಿಸಲು ಸಾಧ್ಯವಿಲ್ಲದಿದ್ದಾಗ ಇದ್ದುದನ್ನು ತಿದ್ದಿ ಸುಧಾರಿಸಿಕೊಳ್ಳುವುದು ಸಮಾಜದ ಆರ್ಥಿಕ ರಚನೆಯ ವೈಶಿಷ್ಟ್ಯ ಬಹುಜನಾಭಿಪ್ರಾಯ ಇವುಗಳಿಗೆ ವಿಘಾತುಕವಾಗದ ಮತ್ತು ವಿವೇಕ ವಿಚಾರಕ್ಕೊಪ್ಪುವ ಮಧ್ಯಮಾರ್ಗವೆಂದು ನನ್ನ ವೈಯಕ್ತಿಕ ಅಭಿಪ್ರಾಯ. ಸಂಖ್ಯೆಯಲ್ಲಿ ಪ್ರಬಲರಲ್ಲದಿದ್ದರೂ ಸ್ವಾರ್ಥಿಗಳಾಗಿ ಅಪಾಯಕಾರಕ ಚಳವಳಿಯನ್ನೆಬ್ಬಿಸುವುದರಲ್ಲಿ ನಿಸ್ಸೀಮರಾದ ಮೂರನೆಯ ಪಕ್ಷವೊಂದು ಇದೆ. ಇವರು ಯಾವ ಸುಧಾರಣೆಯೂ ಬೇಡವೆನ್ನುವವರಾದರೂ ಹಾಗೆನ್ನುವ ಧೈರ್ಯದ ಬೆಂಗೋಲಿಲ್ಲದವರಾಗಿ ಆದರ್ಶವಾದಿಗಳ ಸೋಗಿನಿಂದ ಎಲ್ಲ ತರದ ಆಕ್ಷೇಪಗಳನ್ನೂ ಸಮರ್ಥಿಸಿ ಹುಯಿಲೆಬ್ಬಿಸುತ್ತಾರೆ. ಈ ಹುಯಿಲಿಂದಲಾದರೂ ಮಸೂದೆಯು ಬಿದ್ದುಹೋಗಲೆಂಬುದೇ ಇವರ ಅಂತರ್ಯ.

ಒಟ್ಟಿನಮೇಲೆ, ಈ ಬದಲಾವಣೆಗಳಿಗಾಗಿ ನಾವು ದೀರ್ಘಕಾಲದಿಂದ ಕಾಯುತ್ತಲಿದ್ದೇವೆ. ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಕಟ್ಟಳೆಯು ಹೊಂದಿಕೆ ಬಾರದ ಶಾಸನವಾಗಿದೆ. ಅದರಿಂದಾಗಿ ನಮಗೆ ಅತೀವ ಹಾನಿಯುಂಟಾಗಿದೆ. ಅವಕಾರಣ ಸುಧಾರಿಸುವುದರಲ್ಲಿ ಇನ್ನು ವಿಳಂಬ ಮಾಡುವುದು ಮತ್ತೂ ಅಪಾಯಕಾರಿಯಾಗುತ್ತದೆ. ಆದುದರಿಂದ ಜೋಯಿಂಟ್ ಸಿಲೆಕ್ಟ್ ಕಮಿಟಿಯೂ ನ್ಯಾಯವಿಧಾಯಕ ಸಭೆಯೂ ನಮ್ಮ ದುರವಸ್ಥೆಯ ಕಡೆಗೆ ಸಹಾನುಭೂತಿಯ ದೃಷ್ಟಿಯಿಟ್ಟು, ಸಹಾಯದ ಕೈ ನೀಡಿ ಅಳಿಯಸಂತಾನ ಕಟ್ಟನ್ನು ಶೀಘ್ರವಾಗಿ ಬದಲಾವಣೆಗೊಳಿಸಿಯಾರೆಂದು ಭರವಸೆಯಿಂದ ನಿರೀಕ್ಷಿಸುತ್ತಿದ್ದೇವೆ.

ಮಸೂದೆಯಲ್ಲಿ ತೊಡೆದು ಹಾಕಬೇಕಾದ, ತಿದ್ದಬೇಕಾದ, ಸೇರ್ಪಡೆ ಮಾಡಬೇಕಾದ ಕೆಲವು ಮುಖ್ಯ ಶಬ್ದವಾಚಕ ಒಕ್ಕಣೆಗಳ ವಿವರ.

ಪ್ರಕರಣ Iರಲ್ಲಿ—I (2) (a) ಮದ್ರಾಸು ಪ್ರಾಂತದ ಒಳಗೆ ಮತ್ತೆ ಹೊರಗೆ (and outside) ಇರುವ ಅಳಿಯ ಸಂತಾನಿಗರಿಗೆ ಅನ್ವಯಿಸತಕ್ಕದು ಎಂಬ ಅರ್ಥವಾಗುವಂತೆ (ಮತ್ತು ಹೊರಗೆ) ಎಂಬುದು ಸೇರ್ಪಡೆಯಾಗತಕ್ಕದು ಮತ್ತು ಈ ಸೇರ್ಪಡೆಯ ದೃಷ್ಟಿಯಿಂದ 2(b) ಯನ್ನು ತೆಗೆದುಹಾಕುವುದು. 3 (h) ಇದರಲ್ಲಿ 45 ವರುಷದ ಬದಲಿಗೆ 50 ವರುಷವೆಂದು ತಿದ್ದುಪಡಿ ಮಾಡುವುದು.

ಪ್ರಕರಣ IIರಲ್ಲಿ- ಸಂಬಂಧವೆಂಬ ಅರ್ಥವಾಗುವ Conjugal union ಎಂದಿರುವಲ್ಲಿ ವಿವಾಹ (marriage) ಎಂಬ ಶಬ್ದವನ್ನು ಪ್ರಯೋಗಿಸತಕ್ಕದು. 4 (1) (a) ತೆಗೆದು ಹಾಕತಕ್ಕದು. 4 (1) (b) (1) ರಲ್ಲಿ ಈಗಿರುವ ಒಳಕಲಮಿನ ಬದಲಿಗೆ 'ಈ ಆಕ್ಟು ಜ್ಯಾರಿಗೆ ಬರುವ ತಾರೀಕಿಗಿಂತ ಮುಂಚಿತವಾಗಿ ವಿಧ್ಯುಕ್ತವಾಗಿ ನೆರವೇರಲ್ಪಟ್ಟ' ಎಂಬುದನ್ನು ಸೇರಿಸಿಕೊಳ್ಳತಕ್ಕದು.

IV ನೇ ಪ್ರಕರಣದಲ್ಲಿ— 18 ಅಳಿಯಸಂತಾನಿಯ ಪ್ರತ್ಯೇಕವಾದ ಅಥವಾ ಸ್ವಾರ್ಜಿತವಾದ ಸೊತ್ತುಗಳು ಅವನ ಯಾ ಅವಳ ಮರಣಾನಂತರ 'ಇಂಡಿಯನ್ ಸಕ್ಸೆಶನ್ ಆಕ್ಟ್ (ಆಕ್ಟು XXXIX 1925) ಭಾಗ V ಪ್ರಕರಣ II ಸೆಕ್ಶನ್ 33ರಿಂದ [illegible] ವರೆಗಿನ ನಿಬಂಧನೆಗಳಿಗನುಸಾರ ಆ ಕ್ರಮದಲಿ ಉತ್ತರಾಧಿಕಾರಿಗಳಾದವರಿಗೆ ಸೇರತಕ್ಕದು.' ಸೆಕ್ಶನ್ 19ರಲ್ಲಿ 26ನ್ನು ತೆಗೆದುಹಾಕತಕ್ಕದು.

Vನೇ ಪ್ರಕರಣದಲ್ಲಿ- 27ನ್ನು ತೆಗೆದುಹಾಕತಕ್ಕದು. 30ರಲ್ಲಿ 'ಅಂತಹ ಮೆಂಬರನ ನ್ಯಾಯವಾದ ಆವಶ್ಯಕತೆಯ ದೃಷ್ಟಿಯಿಂದ' ಎಂಬ ವಾಚಕದ ಬದಲು 'ಈ ಆಕ್ಟಿನ VIನೇ ಪ್ರಕರಣದ ನಿಬಂಧನೆಗಳ ತತ್ವದೃಷ್ಟಿಯಿಂದ' ಎಂದು ಸೇರ್ಪಡೆಯಾಗತಕ್ಕದು.

ಮದ್ರಾಸು ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿ, ಮತ್ತು
ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ
ಸಂಭಾವನೆ ಪಡೆದ ಗ್ರಂಥ.
ಡಾ| ವಿ ಆರ್. ಕೊರಡ್ಕಲ್ಲರ
'ಮನೆಮದ್ದು'-Home Remedies
ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ
ಬಾಣಂತಿಯರ ಮತ್ತು ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ
ನೀವೇ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ
ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ
'Ably written-Quite up-to-date-Valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ
ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ
ಕೊಂಡಾಡಿದ ಪುಸ್ತಕವಿದು.
ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.
ಬೆಲೆ ರೂಪಾಯಿ 2—0—0.] [ಟಪ್ಪಾಲು ದ್ವಾರಾ 2—6—0.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.5/-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]
MIS D. DEVEE, F DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಸ್ವೀಕಾರ-ವಿಮರ್ಶೆ

'ಆದರ್ಶ'— ಮುಂಬಯಿಯ ಏಕಮಾತ್ರ ಕನ್ನಡ ಮಾಸಪತ್ರಿಕೆ. ಮೊದಲ ಸಂಪುಟ, ಮೊದಲ ಸಂಚಿಕೆ. ಸಂಪಾದಕರು— ಶ್ರೀ ಜಿ ವಿ ರಂಗಸ್ವಾಮಿ, ಸಹಕಾರರು— ಶ್ರೀ. ಎ. ಸುಬ್ಬರಾವ್, ಎಂ. ಎ; ವಾರ್ಷಿಕ ಚಂದಾ ೩ ೮ ೦ ಪ್ರಕಾಶಕರು—ಆದರ್ಶ ಕಾರ್ಯಾಲಯ, ಕಿಂಗ್ಸ್ ಸರ್ಕಲ್, ಮಾಟುಂಗ ಮುಂಬೈ ೧೯ 'ಆದರ್ಶ'ವು ತನ್ನದೇ ಆದ ಮುದ್ರಣಾಲಯವನ್ನು ಸ್ಥಾಪಿಸಿಕೊಂಡು ಕನ್ನಡ ಸೇವೆಗಾಗಿ ಉತ್ಸಾಹದಿಂದ ಹೊರಟಿದೆ ಸುಂದರವಾದ ಸಚಿತ್ರ ಮುಖಪತ್ರದಿಂದ ಶೋಭಾಯಮಾನವಾಗಿರುವ ೩೬ ಪುಟಗಳ ಕತೆ ಕವಿತೆ ಲೇಖನ ಮುಂತಾದ ಬರೆಹಗಳಿಂದ ಅಂದವಾದ ಮುದ್ರಣದಿಂದ ಸರ್ವಾಂಗ ತುಂಬಿ ಚೆಲುವಾಗಿದೆ. ವಿಶೇಷತಃ ಮುಂಬಯಿಯ ಮೂರುಲಕ್ಷ ಕನ್ನಡಿಗರು 'ಆದರ್ಶ'ವನ್ನು ಎತ್ತಿ ಹಿಡಿದು ಪ್ರೋತ್ಸಾಹಿಸುವುದು ಮೊದಲ ಕರ್ತವ್ಯವಿದೆ ಮೊದಲ ಸಂಚಿಕೆಯನ್ನೇ ಇಷ್ಟು ಉತ್ತಮವಾಗಿ ಪ್ರಕಟಿಸಿದ ಸಂಪಾದಕ ವರ್ಗಕ್ಕೆ ಅಭಿನಂದನೆಗಳು.

'ರೈತವಾಣಿ'—ವಾರ ಪತ್ರಿಕೆ. ಸಂಪುಟ ೧, ಸಂಚಿಕೆ ೧. ಸಂಪಾದಕರು ಶ್ರೀ. ಸಂದರಿಕೆ ವಿಟ್ಠಲದಾಸ್— ಪ್ರಕಾಶಕರು— ಉಡುಪಿ ತಾಲೂಕು ರೈತಸಂಘ. ಮುದ್ರಕರು ಮೊಜೆಸ್ಟಿಕ್ ಪ್ರೆಸ್ಸ್, ಉಡುಪಿ. 'ರೈತವಾಣಿ'ಯು ಧನಿ-ಒಕ್ಕಲು ಬಡವ-ಶ್ರೀಮಂತ ಈ ವರ್ಗಗಳೊಳಗಿನ ವಿಶ್ವಾಸವು ಕೆಡದಂತೆ ಶ್ರೀಮಂತರ ಸಿರಿಯನ್ನು ಆಕ್ರಮಣವಾಗಿ ಕಿತ್ತುಕೊಂಡು ಅವರನ್ನು ಧ್ವಂಸಮಾಡುವ ಪಂಚಿಕೆಯನ್ನು ಪ್ರತಿಭಟಿಸುತ್ತಲೇ ಬಡರೈತರ ಉದ್ಧಾರಕ್ಕೆ ಸಲಹೆಕೊಡುವ ಧ್ಯೇಯದಿಂದ ಹೊರಟಿದೆ. ಶ್ರೀಮಂತರನ್ನು ಭೂಸ್ವಾಮಿಗಳನ್ನು ಬಂಡವಳಗಾರರನ್ನು ಗುಡಿಸಲು ಸೇರಿಸೋಣ. ಗುಡಿಸಲಲ್ಲಿರುವವರನ್ನು ಅರಮನೆಗೆ ಹೊಗಿಸೋಣ ಎಂಬ ಕಮ್ಯೂನಿಸ್ಟ್ ಘೋಷಣೆ ಇದಕ್ಕಿಲ್ಲ. ಶ್ರೀಮಂತರೂ ಇರಲಿ, ಬಡವರೂ ಬದುಕಲಿ, ಎಂದು ಮಧ್ಯವರ್ತಿಯಾಗಿನಿಂತು ಪಕ್ಷಪ್ರಯಗಳ ಆಶ್ರಯ ಪ್ರೋತ್ಸಾಹಪಡೆದು ಉಭಯ ಪಕ್ಷಗಳಿಗೂ ಮಿತ್ರವಾಣಿಯಾಗಬೇಕೆಂಬುದು 'ರೈತವಾಣಿ'ಯ ಹಂಬಲ. ಪ್ರಸ್ತುತಸಂಚಿಕೆಯು 'ಅನುರಗಾಂಧಿ ವಿಶೇಷ ಸಂಚಿಕೆ'ಯಾಗಿರುವಕಾರಣ ತನ್ನ ಹಂಬಲವನ್ನು ಸಾಧಿಸುವ ರೀತಿ ನೀತಿಗಳು ಮುಂದಿನ ಸಂಚಿಕೆಗಳಲ್ಲಿ ಬಾರದಿರವು.

'ಕನ್ನಡ ಕುಮಾರ ಸಂಭವ'— (ಪ್ರಥಮಭಾಗ) ಕಾವ್ಯ- ಕವಿಗಳು- ಶ್ರೀ- ಅಮ್ಮೆಂಬಳ ಶಂಕರನಾರಾಯಣ, ವಿದ್ವಾನ್, ಪ್ರಕಾಶಕರು. ಸಾಹಿತ್ಯಾಂಜಲಿ ಗ್ರಂಥಮಾಲೆ, ಮಂಗಳಾದೇವಸ್ಥಾನ, ಬೋಳಾರ, ಮಂಗಳೂರು— ಕ್ರೌನ್ ¼ ಆಕಾರದ ೬೪ ಪುಟಗಳು ಬೆಲೆ ರೂ. ೧-೪-೦ ಕಾಳಿದಾಸ ಮಹಾಕವಿಯ ಕುಮಾರಸಂಭವವೆಂಬ ಮಹಾಕಾವ್ಯದ ಮೊದಲನೆಯ ೫ ಸರ್ಗಗಳನ್ನು ಪದ್ಯಪದ್ಧತಿಯಾಗಿ ಕನ್ನಡಕ್ಕೆ ಇಳಿಸಿರುವ ಸ್ತುತ್ಯ ಪ್ರಯತ್ನ. ಪಾರ್ವತಿಯ ಹುಟ್ಟು ಮತ್ತು ಯೌವನೋದಯ, ತಾರಕಾಸುರ ಪೀಡೆ, ಕಾಮದಹನ, ರತಿವಿಲಾಪ, ಬ್ರಹ್ಮಚಾರಿ. ಪಾರ್ವತೀ ಸಂವಾದ ಇವು ಕ್ರಮವಾಗಿ ೫ ಸರ್ಗಗಳ ಕಾವ್ಯ ವಿಷಯಗಳು. ಮಂಜೇಶ್ವರ ಗೋವಿಂದ ಪೈಗಳು ಇದಕ್ಕೆ ಬರೆದಿರುವ ಮುನ್ನುಡಿಯಲ್ಲಿ 'ಕಾಳಿದಾಸನನ್ನು ಕನ್ನಡಿಸುವುದೇನೂ ಚಿಲ್ಲರೆಯ ಕೆಲಸವಲ್ಲ. ಆ ಸಾಹಸಕ್ಕೆ ಶ್ರೀ. ಶಂಕರನಾರಾಯಣರು ತೊಡಗಿದ್ದಾರೆ. ಸದ್ಯಕ್ಕೆ ಇಂದಿನ ದೃಷ್ಟಿಯಿಂದ ನೋಡಿದರೆ ಈ ಅನುವಾದ ಚೆನ್ನಾಗಿದೆ. ಮತ್ತೀಯೂ ಅವರನ್ನು ಅಭಿನಂದಿಸುತ್ತೇನೆ' ಎಂದಿರುವ ನುಡಿಗೆ ನಾವೂ ಸ್ವರಗೊಡುತ್ತೇವೆ. ಸಾಮಾನ್ಯವಾಗಿ ಸಂಸ್ಕೃತ ಗ್ರಂಥವೊಂದನ್ನು ಕನ್ನಡಕ್ಕೆ ಅನುವಾದಿಸುವಾಗ ಮೂಲದ ಸಂಸ್ಕೃತ ಪದಗಳನ್ನೇ ಧಾರಾಳವಾಗಿ ಇಳಿಸಿಬಿಡುವುದುಂಟು. ಆದರೆ ಶ್ರೀ. ಅಮ್ಮೆಂಬಳರ ಈ ಅನುವಾದವು ಹಾಗಾಗದೆ ತಿಳಿಗನ್ನಡದ ಚೆಲುವಾದ ನುಡಿಗಳಿಂದಲೇ ಕಥನವು ಸರಾಗವಾಗಿ ಹರಿಯುತ್ತ ಸಾಗುತ್ತಿರುವುದು ಕೊಂಡಾಡತಕ್ಕ ವಿಷಯ.

—ಕೊರಡ್ಕಲ್.

In the Court of the District Munsif of Puttur.

O. P. 16'1948

In the matter of Bellippady Arai Rai —deceased

Uppinangady Sri Sahasralingeshwara Temple and allied Trusts and another Petitioners.

Notice is hereby given that on the 11th day of March 1948 application was made to this Court by the above petitioners for the grant to the 1st Petitioner of a certificate under Part X of the Succession Act 1925, with respect to certain securities of Bellippady Arai Rai, who died on the 10th day of June 1947, and that the 8th day of April 1948 has been appointed for the hearing thereof, when persons interested in opposing the same are at liberty to appear and oppose the same.

N. S Bhat,
Advocate for Petitioners.
Puttur, 22-3-48.

ಪೊಳಿನಾಪುರ ಮಹಾತ್ಮ್ಯೆ

ಕನ್ನಡ ವಚನ ಗ್ರಂಥ ಅಚ್ಚಿನಲ್ಲಿದೆ.

ಮೊದಲನೇ ಭಾಗದಲ್ಲಿ ದೇವಿ ಭಾಗವತಾಂತರ್ಗತ ಸುರಥ ವೈಶ್ಯರು ಮೃಣ್ಮಯಗಳಿಂದ ಪ್ರತಿಷ್ಠೆಮಾಡಿದ ದೇವಿ ಲೋಕದ ವಿಸ್ತಾರವಾದ ಸ್ಥಳ ಪುರಾಣವೂ—ಎರಡನೇ ಭಾಗದಲ್ಲಿ ಕೊಲ್ಲೂರು, ಕಟೀಲು, ಸುಬ್ರಹ್ಮಣ್ಯ ಮೊದಲಾದ ದೇವಿ ಅಂಶಗಳನ್ನೊಳಗೊಂಡ ಪೊಳಿನಾಪುರ ಸ್ಥಳ ಮಹಿಮೆಯೂ—ಮೂರನೇ ಭಾಗದಲ್ಲಿ ಅಶೋಕ ಚಕ್ರವರ್ತಿಯ ಕಾಲದಾರಭ್ಯ ಶಿಲಾಶಾಸನ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟ ತಾಮ್ರಶಾಸನ ಇತ್ಯಾದಿ ಆಧಾರಗಳಿಂದ ಬರದ ಚರಿತ್ರಸಾರವೂ ಇದೆ.

ಅಸ್ತಿಕರಾದ ದೇವಿಭಕ್ತರು ಮುಂದಾಗಿ ತಿಳಿಸಿದವರಿಗೆ ರೂ. ೧ ೮ ೦

೩ ಭಾಗಗಳ ಪುಸ್ತಕಕ್ಕೆ ಬೆಲೆ ರೂ. ೨-೮-೦

ಎನ್. ಎ. ಶೀನಪ್ಪ ಹೆಗ್ಡೆ,
ಅಮುಣಿಂಜೆ ಗುತ್ತು, ಪೊಳಲಿ,
Post. ಬೆಳ್ತೂರು, ದ. ಕ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.

ನೆನಪಿರಲಿ ಕೈಲಾಸ ಬೆಟ್ಟದ ಗಿಡ ಮೂಲಿಕೆಯ (ರಜಿಸ್ಟರ್ಡ್) ಒಂದು ಡೋಸ್ ಔಷಧವನ್ನು ತಾ. 23.4 48ನೆ ಶನಿವಾರ ಹುಣ್ಣಿಮೆ ದಿನ ಸೇವಿಸಿದರೆ ಎಂತಹ ಅಸ್ತಮ-ಗೂರು ಬ್ಬಸವು ಕಡಿಮೆಯಾಗುವುದು.

ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

Brambachari G. Das,
Shri Sidh Brambacharya,
Sewa Ashram,
P. O. Chitrakot (U. P.)

ಎಲ್ಲತರದ

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್, ಉಡುಪಿ,

ಮದುವೆ ಕಾಗದಗಳನ್ನು ಅಲ್ಪಾವಧಿಯಲ್ಲೇ ಮಾಡಿ ಕೊಡಲಾಗುವುದು.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ತಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ತಮೂನೆಯ ಔಷಧಿಗಳೂ ದೊರೆಯುತ್ತವೆ, ಕ್ವಾಲಿಟಿಗೆ ಬರದಕ್ಕೆ ರೋಗಕ್ಕೆ ತಕ್ಕ ಔಷಧ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಆ ಬಿನ್ನಿಸ ಬಾಟ್ಲಿಗಳು ಹೆಚ್ಚು ಕಡಿಮೆ ಕಲಬೆರಕೆಗೆ ಬರುವವು, ಅಂದರೆ ಕೇವಲ ೪ ರೂಪಾಯಿಗೆ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ವಿವರಕ್ಕೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ| ಬಿ. ಕೆ. ಶಿವರಾಮ ರಾವ್, ಕಾಂಚಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ— ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಚಾರ! ಉತ್ತಮ ಉಪಹಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,
Boarding & Lodging,
KATAPADI, S K.

Edited, Printed & Published by K. H. Shetty at the Navayuga Press Udipi, S. India.

ಎರಡಾಣೆ

Regd. No. M. 3618

8-4-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-1-
6 ತಿಂಗಳಿಗೆ ರೂ. 2-12-
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮ } ವಾರ ೩೧

NAVAYUGA WEEKLY, UDIPI.

FOUNDER: Hon'ble Mr. A. B SHETTY, Health Minister, Govt. of Madras.

Vol. 28 } No. 31

ಕರ್ನಾಟಕ ಪ್ರಾಂತೀಕರಣವೂ ಅದರೊಡನೆ ಮೈಸೂರಿನ ಸಮಾವೇಶವೂ

ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆ, ಅಧ್ಯಕ್ಷ, ಕರ್ನಾಟಕ ಏಕೀಕರಣ ಸಂಘ, ಮಂಗಳೂರು, ಇವರಿಂದ

ಇತ್ತೀಚೆಗೆ ಕರ್ನಾಟಕ ಏಕೀಕರಣ ಮತ್ತು ಪ್ರಾಂತೀಕರಣ ಪ್ರಶ್ನೆಗಳು ಬಂದಾಗಲೆಲ್ಲ ಒಂದು ಬಗೆಯ ತಪ್ಪು ತಿಳುವಳಿಕೆಯಿಂದ ಉಂಟಾದ ಕೆಲವು ವಿಚಾರಗಳು ಕೆಲ ಜನರನ್ನು ಭ್ರಾಂತಿಗೊಳಿಸುತ್ತಿರುವುದು. ಕರ್ನಾಟಕ ಪ್ರಾಂತ ಸ್ಥಾಪಿಸುವ ಕಾರ್ಯ ಚಳವಳವು ಬದಿಗೊತ್ತಲ್ಪಟ್ಟಿದೆಯೆಂಬ ಅಪಗ್ರಹಿಕೆಯು ಕೆಲವು ಕಡೆಯಲ್ಲಿದೆಯೆಂದು ತಿಳಿದುಬರುತ್ತದೆ.

ದಕ್ಷಿಣ ಸಂಸ್ಥಾನಗಳು ಮೈಸೂರು, ಮತ್ತು ಹೈದರಾಬಾದಿನ ಕನ್ನಡ ಭಾಗ ಇವುಗಳನ್ನು ಒಂದುಗೂಡಿಸಿ ಒಂದು ಬಲಿಷ್ಠ ಅಖಂಡ ಕರ್ನಾಟಕ ಪ್ರಾಂತವನ್ನು ಕಟ್ಟುವುದೇ ಅಖಿಲ ಕರ್ನಾಟಕ ಏಕೀಕರಣ ಸಂಘದ ಅಂತಿಮ ಧ್ಯೇಯ. ಅದನ್ನು ಯಾರೂ ಅಲ್ಲಗಳೆಯಲಾರರು. ಈ ನಮ್ಮ ಅಂತಿಮ ಗುರಿಯ ಕಡೆಗೆ ಪ್ರಥಮ ಹೆಜ್ಜೆಯಾಗಿ ಸಂಸ್ಥಾನಗಳನ್ನುಳಿದ ಇತರ ಕರ್ನಾಟಕ ಭಾಗಗಳನ್ನು ಒಟ್ಟುಗೂಡಿಸಿ ಒಂದು ಕರ್ನಾಟಕ ಪ್ರಾಂತ ಕಟ್ಟುವ ಯೋಜನೆಯು ಪ್ರತಿಪಾದನೆಯನ್ನು ೧೯೪೭ರಲ್ಲಿ ಪ್ರಾರಂಭಿಸಲಾಗಿತ್ತು.

೧೯೪೭ನೇ ಆಗೋಸ್ತು ೧೫ರಿಂದೀಚೆಗೆ ದೇಶದಲ್ಲಿ ಮತ್ತು ಕರ್ನಾಟಕದಲ್ಲಿ ವಿದ್ಯುದ್ವೇಗದಿಂದೆಂಬಂತೆ ರಾಜಕೀಯ ಬದಲಾವಣೆಗಳು ಹಿಂದಿನ ಕಲ್ಪನೆಯಲ್ಲಿ ಶತಮಾನದಲ್ಲಿಯೂ ಸಾಧ್ಯವಾಗದವು ಕೆಲವೇ ತಿಂಗಳುಗಳಲ್ಲಿ ಆಗಿಹೋಗಿರುವುವು. ದಕ್ಷಿಣ ಸಂಸ್ಥಾನಗಳ ವಿಲೀನೀಕರಣದಿಂದ ಕರ್ನಾಟಕ ಪ್ರಾಂತ ರಚನೆಯ ಕಾರ್ಯವು ಬಹುಮಟ್ಟಿಗೆ ಸುಗಮವಾಯಿತು. ಈ ಯಶಸ್ಸಿನಿಂದ ಹುರುಪುಗೊಂಡವರು ಈಗ ರಚಿತವಾಗಲಿರುವ ಕರ್ನಾಟಕ ಪ್ರಾಂತದಲ್ಲಿ ಅದರ ಘಟಕಗಳಾದ ಮೈಸೂರು ಮತ್ತು ಹೈದರಾಬಾದಿನ ಕನ್ನಡ ಭಾಗಗಳೂ ಕೂಡ ಈಗಲೇ ಸಮಾವೇಶವಾಗಬೇಕೆಂದು ಪ್ರತಿಪಾದಿಸತೊಡಗಿದ್ದಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮತ್ತು ಅಖಿಲ ಕರ್ನಾಟಕ ಏಕೀಕರಣ ಸಂಘದ ಆಶ್ರಯದಲ್ಲಿ ಕಾರ್ಯನಿರ್ವಹಿಸುವ ಕರ್ನಾಟಕ ಏಕೀಕರಣ ಮಹಾಸಮಿತಿಯವರು ಒಕ್ಕೂಟ ಕರ್ನಾಟಕ ಮತ್ತು ಮೈಸೂರು ಸಂಸ್ಥಾನವನ್ನು ಒಂದುಗೂಡಿಸುವುದಕ್ಕೆ ಸಾಧ್ಯವಿರುವ ಎಲ್ಲಾ ಉಪಾಯಗಳನ್ನು ಶೋಧಿಸುವುದಕ್ಕಾಗಿ ಒಂದು ಉಪ ಸಮಿತಿಯನ್ನು ನೇಮಿಸಿದ್ದರು. ಈ ಉಪಸಮಿತಿಯವರು ಮೈಸೂರಿನ ಮುಂದಾಳುಗಳೊಡನೆ ಚರ್ಚಿಸಿದುದರ ಪರಿಣಾಮವಾಗಿ ಕೆಳಗಿನ ವಿಷಯ ವಿವರಣೆಗಳು ಹೊರಬಿದ್ದಿರುತ್ತವೆ.

ಮೈಸೂರು ಭಾರತದ ಒಕ್ಕೂಟದ ಅಂಗವಾಗಿ ಪ್ರತ್ಯೇಕ ಸಂಸ್ಥಾನವಾಗಿರಲು ಭಾರತ ಸರಕಾರದ ಒಪ್ಪಿಗೆಯಿದೆ. ಸಂಸ್ಥಾನದ ಮಹಾರಾಜರು ಪ್ರಜೆಗಳಿಗೆ ಜವಾಬ್ದಾರೀ ಸರಕಾರ ಏರ್ಪಡಿಸುವುದೂ ಪ್ರಭುತ್ವವನ್ನಿಟ್ಟುಕೊಳ್ಳುವುದೂ ಘಟನಾಸಮಿತಿಯಲ್ಲಿ ಸ್ವೀಕೃತವಾದ ಉದ್ದೇಶ ನಿರ್ಣಯಕ್ಕೆ ವಿರೋಧವಿಲ್ಲವು. ಈ ನಿರ್ಣಯಕ್ಕೆ ಅಖಿಲಭಾರತ ಕೊಂಗ್ರೆಸ್ಸಿನ ವಿರೋಧವಿಲ್ಲ. ಮೈಸೂರು ಕೊಂಗ್ರೆಸ್ಸು ಅಖಿಲ ಭಾರತ ಕೊಂಗ್ರೆಸ್ಸಿಗೆ ಸೇರಿದ್ದು ಮಾತ್ರವಲ್ಲದೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಸಮಾವೇಶವಾಗಿದೆ. ಮೈಸೂರು ಕಾಂಗ್ರೆಸಿಗರು ಮೈಸೂರು ಮಹಾರಾಜರ ಅಧೀನವಾಗಿ ಅವರಿಂದ ಸ್ಥಾಪಿಸುವ ಜವಾಬ್ದಾರಿ ಸರಕಾರವನ್ನು ಸ್ವೀಕರಿಸುವುದಾಗಿ ಒಪ್ಪಿ ಅಧಿಕಾರ ಸ್ವೀಕರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಒಕ್ಕೂಟಕ್ಕೆ ಸೇರಿದ ಕರ್ನಾಟಕದೊಡನೆ ಮೈಸೂರನ್ನು ಸಮಾವೇಶಗೊಳಿಸಿ ಪ್ರಾಂತರಚನೆ ಮಾಡುವ ಕಾಲಕ್ಕೆ ಅಂತಹ ಪ್ರಾಂತ್ಯದಲ್ಲಿ ಮೈಸೂರು ಮಹಾರಾಜರ ಸ್ಥಾನಮಾನಗಳೇನೆಂಬುದು ನಿಶ್ಚಯವಾಗಬೇಕಾಗುತ್ತದೆ. ಇದನ್ನು ನಿಶ್ಚಯಗೊಳಿಸುವಲ್ಲಿ ಮೈಸೂರು ಮತ್ತು ಹಿಂದೀ ಒಕ್ಕೂಟ ಕರ್ನಾಟಕದ ಪ್ರತಿನಿಧಿಗಳ ಒಪ್ಪಿಗೆ ಮಾತ್ರವಲ್ಲದೆ ಮಧ್ಯವರ್ತಿ ಸರಕಾರದ ಮತ್ತು ಘಟನಾ ಸಮಿತಿಯ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ.

ಈ ಎಲ್ಲಾ ತಾಂತ್ರಿಕ ಪ್ರಶ್ನೆಗಳನ್ನು ಸಮರ್ಪಕವಾಗಿ ಬಗೆಹರಿಸುವುದಕ್ಕಾಗಿ ಮಾತುಕತೆಗಳನ್ನು ನಡೆಸಲು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯಿಂದ ಒಂದು ಉಪಸಮಿತಿಯನ್ನು ನೇಮಿಸಲಾಗಿದೆ. ಮೈಸೂರು ಕಾಂಗ್ರೆಸ್ಸು ಒಂದು ಉಪಸಮಿತಿಯನ್ನು ನೇಮಿಸುವುದು. ಆದರೆ ಈ ಮಾತುಕತೆಗಳು ಒಕ್ಕೂಟದ ಕರ್ನಾಟಕ ಭಾಗಗಳ ಏಕೀಕರಣವನ್ನೂ ಆ ಪ್ರದೇಶದ ಪ್ರಾಂತನಿರ್ಮಾಣವನ್ನೂ ಸ್ಥಗಿತಗೊಳಿಸುವುದಿಲ್ಲ. ಒಕ್ಕೂಟ ಕರ್ನಾಟಕ ಭಾಗಗಳ ಪ್ರಾಂತ ರಚನೆಗಾಗಿ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರ ಆದೇಶದಂತೆ ಒಂದು ಸೀಮಾ ಸಮಿತಿಯನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ತಾ. ೨೮-೩-೪೮ರಂದು ನೇಮಿಸಿರುತ್ತದೆ. ಅದರಂತೆ ಮಹಾರಾಷ್ಟ್ರ ಆಂಧ್ರ ಕಾಂಗ್ರೆಸ್ ಪ್ರಾಂ. ಸಮಿತಿಗಳೂ ತಮ್ಮ ಸೀಮಾ ಸಮಿತಿಗಳನ್ನು ನೇಮಿಸಿವೆ. ಕೇರಳ ತಮಿಳು ನಾಡುಗಳು ಶೀಘ್ರದಲ್ಲಿಯೇ ತಮ್ಮ ಸಮಿತಿಗಳನ್ನು ನೇಮಿಸಲಿರುವುವು. ಈ ಎಲ್ಲಾ ಸಮಿತಿಗಳು ತಮ್ಮ ತಮ್ಮೊಳಗೆ ಚರ್ಚಿಸಿ ತಮ್ಮ ನಿರ್ಣಯಗಳನ್ನು ಘಟನಾ ಸಮಿತಿ ತಿರುಗಿ ಪ್ರಾರಂಭವಾಗುವ ಮೊದಲು ರಾಷ್ಟ್ರಪತಿಗಳಿಗೆ ಒಪ್ಪಿಸಬಹುದೆಂದು ಆಶಿಸುವೆ.

ಮೈಸೂರು ಹೊರತು ಕರ್ನಾಟಕ ಪ್ರಾಂತದಲ್ಲಿ ಸೇರಲಿ ಸೇರದಿರಲಿ, ಭಾರತ ಒಕ್ಕೂಟಕ್ಕೆ ಈಗ ಸೇರಿರುವ ಕರ್ನಾಟಕದ ಇತರ ಭಾಗಗಳನ್ನೆಲ್ಲಾ ಒಂದೂಗೂಡಿಸುವುದಕ್ಕೆ ಯಾವ ತೊಂದರೆಯೂ ಇಲ್ಲ. ಒಂದು ಸ್ವತಂತ್ರ ಪ್ರಾಂತವಾಗಲು ಬೇಕಾಗುವ ಎಲ್ಲಾ ಅನುಕೂಲತೆಗಳೂ ಅದಕ್ಕಿವೆ. ಮತ್ತು ಈ ಪ್ರಾಂತೀಕರಣದ ಪ್ರಯತ್ನವನ್ನು ಎಡೆಬಿಡದೆ ಮುಂದರಿಸಲಾಗುವುದು. ಈ ಕಾರ್ಯದಲ್ಲಿ ಬೇರೆ ಯಾವ ವಿಚಾರಗಳಿಂದಲೂ ತೊಡಕು ಬರಲು ಕಾರಣವಿಲ್ಲ. ನಮ್ಮಲ್ಲಿರುವ ಸಾಧನ ಸಂಪತ್ತು ಈಗಾಗಲೇ ಸ್ವತಂತ್ರ ಪ್ರಾಂತಗಳಾಗಿರುವ ಕೆಲಕೆಲ ಪ್ರಾಂತಗಳಲ್ಲಿರುವುದಿಲ್ಲ. ಕರ್ನಾಟಕ ಪ್ರಾಂ. ಕಾಂ. ಕಮಿಟಿ ಮತ್ತು ಅಖಿಲ ಕ. ಏಕೀಕರಣ ಸಂಘಗಳು ಮೇಲೆ ಹೇಳಿರುವ ವಿಷಯಗಳನ್ನೆಲ್ಲಾ ಒಪ್ಪಿಕೊಂಡು ಕಾರ್ಯ ಪ್ರವೃತ್ತರಾಗಿದ್ದಾರೆ. ಅಷ್ಟರಲ್ಲಿ ಮೈಸೂರು ನಮ್ಮನ್ನು ಕೂಡಿಕೊಳ್ಳುವುದಾದರೆ ಅದು ಮತ್ತಷ್ಟು ಸಂತೋಷದ ಮಾತು. ಏನಿದ್ದರೂ ಕರ್ನಾಟಕದ ಪ್ರಾಂತೀಕರಣದ ಕಾರ್ಯವನ್ನು ಮೈಸೂರಿನ ಸೇರುವಿಕೆಗಾಗಿ ವಿಳಂಬಗೊಳಿಸಲಾಗದು. ಮೈಸೂರು ಸಮಾವೇಶವಾಗದೆ ಕರ್ನಾಟಕ ಪ್ರಾಂತವಾಗಲಾರದೆಂಬ ಭಾವನೆಗೆ ಆಧಾರವಿಲ್ಲ. ಮೈಸೂರು ಸ್ವತಂತ್ರ ಸಂಸ್ಥಾನವಾಗಿ ಉಳಿಯಬಲ್ಲುದಾದರೆ ಅದಕ್ಕಿಂತ ಹೆಚ್ಚು ಅನುಕೂಲತೆಗಳುಳ್ಳ ಕರ್ನಾಟಕದ ಇತರ ಭಾಗಗಳು ಒಂದುಗೂಡಿ ಒಂದು ಸ್ವತಂತ್ರ ಪ್ರಾಂತವಾಗಬಲ್ಲುವು. ಒಕ್ಕೂಟ ಕನ್ನಡಿಗರ ಭವಿಷ್ಯತ್ತು ಒಕ್ಕೂಟ ಕರ್ನಾಟಕದ ಪ್ರಾಂತ ನಿರ್ಮಾಣದಲ್ಲಿದೆ. ಕರ್ನಾಟಕ ಪ್ರಾಂತೀಕರಣದ ಪ್ರಯತ್ನವು ಸರಿದಾರಿಯಲ್ಲಿಯೇ ಇರುತ್ತದೆ.

ರೇಶನ್ ಕಾರ್ಡುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:- ಧಾರವಾಡ,

ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ, THE UNITED KARNATAK INSURANCE COMPANY, LIMITED.

ಡಾ। ಸುಬ್ಬರಾಯನರ ರಾಜೀನಾಮೆ

ಚತುರುಕು ತಲೆಯಿದ್ದರೂ ಶುದ್ಧ ಹೃದಯವಿಲ್ಲದೆ ಹೋದರೆ, ಅಂಥವರಿಗೆ ಪರಾಭವವೇ ಗತಿಯೆಂಬುದಕ್ಕೆ ಸಾರ್ವಜನಿಕ ಮತ್ತು ವ್ಯಕ್ತಿಗತ ಜೀವನಗಳಲ್ಲಿ ಹಲವು ನಿದರ್ಶನಗಳು ದೊರೆಯುತ್ತವೆ. ಮದ್ರಾಸಿನ ಕಾಂಗ್ರೆಸ್ ಪಕ್ಷದ ಇತ್ತೀಚಿನ ಘಟನೆಗಳೂ ಈ ಮಾತವನ್ನೇ ಮುಂದಿಟ್ಟು ಮಾಡುತ್ತವೆ ಎನ್ನಬಹುದು.

ಕಳೆದ ತಾ. ೨೬ರಲ್ಲಿ ಸೇರಿದ ಮದ್ರಾಸ್ ಕಾಂಗ್ರೆಸ್ ಪಕ್ಷೀಯ ಸಭೆಯ ಪರಿಣಾಮವಾಗಿ ನಡೆದ ಒಂದು ಗಣ್ಯ ಬದಲಾವಣೆಯೆಂದರೆ ಮದ್ರಾಸಿನ ಗೃಹ ಮಂತ್ರಿ ಮತ್ತು ಎಸೆಂಬ್ಲಿ ನಾಯಕನಾಗಿದ್ದ ಡಾ। ಸುಬ್ಬರಾಯನರ ರಾಜೀನಾಮೆ.

ಡಾ। ಸುಬ್ಬರಾಯನರ ಕೈಯಿಂದ ಹಿಂದೊಂದು ಬಾರಿ ಪೋಲೀಸ್ ಖಾತೆಯನ್ನು ತಪ್ಪಿಸಿ ಪ್ರಧಾನ ಮಂತ್ರಿ ಶ್ರೀ ಓಮಂದೂರರು ತನ್ನ ಕೈಗದನ್ನು ತೆಗೆದುಕೊಂಡಿದ್ದರು. ಆದರ ಬೆನ್ನಲ್ಲೇ ಡಾ। ಸುಬ್ಬರಾಯನರು ತನ್ನ ಮಂತ್ರಿಪದಕ್ಕೆ ರಾಜೀನಾಮೆಯೊಪ್ಪಿಸಿದ್ದರು. ಕೊನೆಗೆ ಆ ರಾಜೀನಾಮೆಯನ್ನು ಹಿಂತೆಗೆದುಕೊಳ್ಳುವುದರೊಂದಿಗೇನೇ ಪೋಲೀಸ್ ಖಾತೆಯು ಪುನಃ ಅವರ ಕೈಗೇನೇ ಹೋಗಿತ್ತು.

ಮಾರ್ಚ ತಾ. ೨೬ರ ಪಕ್ಷ ನಾಯಕ ಚುನಾವಣೆಯಲ್ಲಿ ಶ್ರೀ ಓಮಂದೂರರೂ ಶ್ರೀ ಟಿ. ಪ್ರಕಾಶಮರೂ ಸ್ಪರ್ಧಿಸಿಕೊಂಡು ಓಮಂದೂರರು ಮರು ಚುನಾವಣೆಗೊಂಡೊಡನೆಯೇ ಡಾ। ಸುಬ್ಬರಾಯನರು ರಾಜೀನಾಮೆಯೊಪ್ಪಿಸಿದರು. ಈ ಬಾರಿ ಪ್ರಧಾನ ಮಂತ್ರಿ ಶ್ರೀ ಓಮಂದೂರರೂ ಅದನ್ನು ಅಂಗೀಕರಿಸಿಕೊಂಡರು. ಕೆಲಕಾಲಕ್ಕೆ ಮೊದಲು ಓಮಂದೂರು ಮಂತ್ರಿ ಮಂಡಲದ ಪತನನಿಶ್ಚಯವೆಂದು ಏನೇನೋ ಕಥೆ ಕಟ್ಟುತ್ತಿದ್ದವರು, ಈಗ ಸುಬ್ಬರಾಯನರ ರಾಜೀನಾಮೆಯನ್ನೇ ತಮ್ಮ ಕಥಾವಸ್ತುವಾಗಿ ಎತ್ತಿಕೊಂಡು ವರ್ಣನೆಗಾರಂಭಿಸಿದ್ದಾರೆ. ಈ ಸಂಬಂಧದ ವಿದ್ಯಮಾನಗಳನ್ನು ಯಥಾವತ್ತಾಗಿ ಚಿತ್ರಿಸಿಕೊಳ್ಳುವುದು ವಾಸಿ.

ಡಾ। ಸುಬ್ಬರಾಯನ್

ಡಾ। ಸುಬ್ಬರಾಯನರು ಶಾಸನ ಸಭಾ ಕಾರ್ಯಗಳಲ್ಲಿ ನುರಿತವರು; ಆಡಳಿತೆಯಲ್ಲಿ ಸಮರ್ಥರು; ಸದಾಕಾಲ ಅಡ್ಡಿ, ಅಡ್ಡ ಸವಾಲುಗಳ ಸಣ್ಣ ದೊಡ್ಡ ಬಿರುಗಾಳಿಗಳಿಂದಲೇ ತುಂಬಿರುವ ಶಾಸನಸಭಾ ಶರಧಿಯಲ್ಲಿ ಆಡಳಿತ ನಾವೆಯ ಚುಕ್ಕಾಣಿಯನ್ನು ಜಯಶೀಲವಾಗಿ, ಚುರುಕಾಗಿ ತಿರುಗಿಸಬಲ್ಲವರು. ಅವರ ಈ ಯೋಗ್ಯತೆಗಾಗಿಯೇ ಶ್ರೀ ಓಮಂದೂರರು ನಾಯಕನಾಗಿ ಆರಿಸಲ್ಪಟ್ಟ ಕೂಡಲೇ, ಆ ತನಕ ಮದ್ರಾಸ್ ಶಾಸನಸಭೆಗಳಲ್ಲಿ ಯಾವುದರ ಸದಸ್ಯನೂ ಆಗಿರದ ಡಾ। ಸುಬ್ಬರಾಯನರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳಲಾಗಿತ್ತು. ಈ ರೀತಿ ಪ್ರಥಮತಃ ಮಂತ್ರಿಯಾಗಿ ನೇಮಿಸಿಕೊಂಡು ಆ ಮೇಲೆ ಕ್ರಮಪಾಲನೆಗಾಗಿ ಸದಸ್ಯನಾಗಿ ಚುನಾವಣೆ ಮಾಡಿಸಿಕೊಳ್ಳಲಾಗಿತ್ತು. ಪ್ರಧಾನಿ ಓಮಂದೂರರಿಗೆ ಶಾಸನಸಭಾ ಕಾರ್ಯಕಲಾಪಗಳಿಗೆ ಆಗತ್ಯವಿರುವಷ್ಟು ಇಂಗ್ಲಿಷು ಬಾರದ ದೆಸೆಯಿಂದಾಗಿಯೇ ಪ್ರಧಾನ ಮಂತ್ರಿಯ ಪಾಲಿನ ಹೆಚ್ಚಿನ ಕಾರ್ಯಕಲಾಪಗಳನ್ನು ಡಾ। ಸುಬ್ಬರಾಯನರೇ ನಿರ್ವಹಿಸುತ್ತಿದ್ದರು. ಆದರೆ, ತನ್ನೀ ಸ್ಥಾನವು ಡಾ। ಸುಬ್ಬರಾಯನರನ್ನು ಪೂರ್ಣ ತೃಪ್ತಿಪಡಿಸಿರಲಿಲ್ಲ; ಅವರಿಗೆ ಪೂರ್ಣ ಸಮಾಧಾನಕರವಾಗುವಂತೆ ನಾಯಕನ ಸ್ಥಾನವನ್ನೇ ಅವರಿಗೆ ಕೊಡುವ ಸ್ಥಿತಿಯಲ್ಲಿ ಮದ್ರಾಸಿನ ಕಾಂಗ್ರೆಸ್ ಪಕ್ಷವೂ ಇರಲಿಲ್ಲ. ಕಾರಣವೆಂದರೆ ಡಾ। ಸುಬ್ಬರಾಯನರು ಕಾಂಗ್ರೆಸ್ ನಿಯೋಜಿತ ಶಾಸನ ಸಭಾ ಕಾರ್ಯಕ್ರಮಗಳನ್ನು ಸಾಗಿಸುವದರಲ್ಲಿ ಚತುರರಿದ್ದಷ್ಟು ಕಾಂಗ್ರೆಸ್ ತತ್ವಪಾಲನಾ ನಿರತರಿರಲಿಲ್ಲ. ಅವರೊಂದು ಕಾಲದಲ್ಲಿ ಕಾಂಗ್ರೆಸ್ ಪಕ್ಷವಿದ್ದಾಗಲೇ ಸ್ವತಂತ್ರ ಪಕ್ಷದ ನಾಯಕನಾಗಿ ಮದ್ರಾಸಿನ ಪ್ರಧಾನ ಮಂತ್ರಿಯಾಗಿದ್ದವರು; ಕಳೆದ ಬಾರಿಯ 'ಕ್ವಿಟ್ ಇಂಡಿಯಾ' ಚಳವಳದಲ್ಲಾಗಲೀ, ಆ ಮೊದಲಿನ ಚಳವಳಗಳಲ್ಲಾಗಲೀ ಭಾಗವಹಿಸದೆ ದೂರವಿದ್ದವರು. ಆದರೆ ಶಾಸನಸಭಾ ಕಾರ್ಯಕ್ಷೇತ್ರದ ಮಟ್ಟಿಗೆ ಕಾಂಗ್ರೆಸಿನ ಪಾಲಿಗೆ ತತ್ವಪ್ರೇಮಿಗಳಂತೆಯೇ ಅಲ್ಲಿಯ ವಿಶಿಷ್ಟ ಕಾರ್ಯ ರೀತಿಗಳಲ್ಲಿ ನಿಪುಣತೆಯಿದ್ದವರೂ ಬೇಕೇಬೇಕು. ಚಾಣಾಕ್ಷ ರಾಜಾಜಿ ಇವೆರಡರಲ್ಲೂ ತೂಗಿ ನೋಡಿಯೇ ಡಾ। ಸುಬ್ಬರಾಯನರನ್ನು ತನ್ನ ಮಂಡಲಿಯಲ್ಲಾ ಬಾರಿ ಸೇರಿಸಿಕೊಂಡಿದ್ದರು. ಈಗಿನ ಎಸೆಂಬ್ಲಿ ಚುನಾವಣೆಯ ವೇಳೆಯಲ್ಲಿ ಡಾ। ಸುಬ್ಬರಾಯನರು ಮುಂದೆ ಬಾರದೆ ಬಹುತೇಕವಾಗಿ ಮದ್ರಾಸ್ ರಾಜಕೀಯದಿಂದಲೇ ಮರೆಯಾಗಿದ್ದರು. ಶ್ರೀ. ಟಿ. ಪ್ರಕಾಶಮರ ಮೇಲೆ ಅವಿಶ್ವಾಸ ಸೂಚನೆ ಮುಂದೆ ಬರುವಾಗಲೇ ಡಾ। ಸುಬ್ಬರಾಯನರ ಹೆಸರೂ ಮುಂದೆ ಬಂತು—ಶ್ರೀ ಓಮಂದೂರರಿಗೆ ಬೆಂಗೋಲಾಗಿ ಡಾ। ಸುಬ್ಬರಾಯನರಂತಹ ಸಮರ್ಥರು ಬೇಕೆಂಬುದಕ್ಕಾಗಿಯೇ. ಕಾಲ ಕಳೆದಂತೆ ಈ ಸಂಬಂಧದಲ್ಲಿ ಏನೋ ಬಿರುಕು ಬೀಳುತ್ತಾ ಬಂದಿರಬೇಕು. ಶುದ್ಧ ಗಾಂಧೀಭಕ್ತರೂ ಸೇವಾನಿಷ್ಠರೂ ಆಗಿರುವ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರ ವ್ಯಕ್ತಿ ಶುದ್ಧತೆಯ ಕುರಿತು ಯಾರ ಆಕ್ಷೇಪವೂ ಇಲ್ಲ. ಇಂತಹ ಸರಳ ಮಾರ್ಗಾನುವರ್ತಿಗೂ ಚಾತುರ್ಯವೇ ಬಲವೆಂದಿರುವ ಡಾ। ಸುಬ್ಬರಾಯನರಿಗೂ ಸ್ವಾಮಿತ್ವ–ಸಾರಥಿತ್ವ ಸಂಬಂಧ ಕೂಡಿಬಾರದೆ ಹೋದುದರಲ್ಲಿ ಆಶ್ಚರ್ಯವಿಲ್ಲ.

ಆದುದೇನು?

ಈ ಬಾರಿಯ ಡಾ। ಸುಬ್ಬರಾಯನರ ರಾಜೀನಾಮೆಯ ಕಾರಣಗಳು ಶ್ರೀ. ಎ. ವೈದ್ಯನಾಥ ಅಯ್ಯರರು ಹೊರಗೆಡಹಿದ ಸಂಗತಿಗಳಲ್ಲಿ ಮೂಡಿ ತೋರಿವೆ. ಶ್ರೀ. ಎ. ವೈದ್ಯನಾಥ ಅಯ್ಯರರು ಪ್ರಕಾಶಮರ ಪತನ ಮತ್ತು ಓಮಂದೂರರ ವಿಜಯಕ್ಕೆ ಕಾರಣರಾದವರಲ್ಲೊಬ್ಬರು; ಕೊನೆಗೆ ಶ್ರೀ ಓಮಂದೂರು ಸರಕಾರದ ರೀತಿನೀತಿಗಳಲ್ಲಿ ಭಿನ್ನಾಭಿಪ್ರಾಯಗೊಂಡು ಓಮಂದೂರು ಸರಕಾರಕ್ಕೆ ಬದ್ಧ ವಿರೋಧ ನಿಂತವರು. ಆದರೆ ತನ್ನ ಘೋಷಣೆಯಲ್ಲಿ ಅಚಲ ವಿಶ್ವಾಸವಿರುವ ಹಠವಾದಿಯೊರಟು ಹೇಗಾದರೂ ತನ್ನ ಧೋರಣೆಯ ವಿಜಯ ಸಾಧಿಸಿದರಾಯಿತೆಂಬ ಸಂದರ್ಭಸಾಧಕರಲ್ಲ. ಶ್ರೀ ಅಯ್ಯರರು ಬಹಿರಂಗಪಡಿಸಿದ ಕೆಲವು ಅಂತರ್ವಹಿವಾಟುಗಳು ಡಾ। ಸುಬ್ಬರಾಯನ್ ಸಮಸ್ಯೆಯ ಗುಟ್ಟನ್ನು ಹೊರಗೆಡಹಿವೆ.

ಮಾರ್ಚ ತಾ. ೨೬ರ ನಾಯಕ ಚುನಾವಣೆಗೆ ಮೊದಲು ಡಾ। ಸುಬ್ಬರಾಯನರು, ಶ್ರೀ ಎ ವೈದ್ಯನಾಥ ಅಯ್ಯರರಿಗೆ ಅವಸರದ ಕರೆಕಳುಹಿಸಿ ಶ್ರೀ ಟಿ ಪ್ರಕಾಶಮರು ಉಮೇದ್ವಾರಿಕೆಯನ್ನು ಹಿಂತೆಗೆದು ತನ್ನನ್ನು ಸಮರ್ಥಿಸುವಂತೆ ಮಾಡಬೇಕೆಂದೂ, ಹಾಗಾದಲ್ಲಿ ಶ್ರೀ ಓಮಂದೂರರೂ ಹಿಂದೆಗೆಯುವುದು ಬಹುಮಟ್ಟಿಗೆ ಖಂಡಿತವೆಂದೂ ತಿಳಿಸಿದ್ದರು. ಆದರೆ ಏನೇ ಆದರೂ ಶ್ರೀ ಟಿ. ಪ್ರಕಾಶಮರು ಹಿಂದೆಗೆಯಲು ಸಿದ್ಧರಿಲ್ಲವೆಂದು ತಿಳಿದು ಬಂದೊಡನೆ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕಾಮರಾಜ ನಾಡರರ ಸಹಾಯ ಪಡೆಯುವಂತೆ ಶ್ರೀ ಅಯ್ಯರರು ಡಾ. ಸುಬ್ಬರಾಯನರಿಗೆ ಸೂಚಿಸಿದರು. ಶ್ರೀ ಟಿ. ಪ್ರಕಾಶಮರು ನಿಲ್ಲುವದಿಲ್ಲವೆಂಬುದು ಖಂಡಿತವಾದಲ್ಲಿ ಮಾತ್ರ ಶ್ರೀ ಓಮಂದೂರರನ್ನೂ ಹಿಂದೆಗೆಯಿಸಿ ಡಾ। ಸುಬ್ಬರಾಯನರ ನಾಯಕತ್ವವು ಅವಿರೋಧವಾಗುವಂತೆ ಮಾಡಬಹುದಲ್ಲದೆ, ಶ್ರೀ. ಪ್ರಕಾಶಮರು ಸ್ಪರ್ಧಿಸುತ್ತಾರಾದರೆ ಶ್ರೀ ಓಮಂದೂರರೇ ನಿಲ್ಲಬೇಕಾಗುವದೆಂದು ಶ್ರೀ. ನಾಡರರ ವಾದವಿತ್ತು. ಪ್ರಕಾಶಮರು ನಿಂತರೂ ಅವರ ವಿರುದ್ಧವಾಗಿ ಓಮಂದೂರರ ಬದಲಿಗೆ ಡಾ। ಸುಬ್ಬರಾಯನರನ್ನು ನಿಲ್ಲಿಸುವ ಹಂಚಿಕೆಗೆ ಶ್ರೀ. ನಾಡರರು ಒಪ್ಪಲಿಲ್ಲ; ಶ್ರೀ. ಟಿ. ಪ್ರಕಾಶಮರಂತೂ ಯಾವುದು ಹೇಗಾದರೂ ತನ್ನ ಉಮೇದ್ವಾರಿಕೆ ಹಿಂತೆಗೆಯಲು ಸಿದ್ಧರಿರಲಿಲ್ಲ. ಕೊನೆಗೆ ಶ್ರೀ. ಟಿ. ಪ್ರಕಾಶಂ ಮತ್ತು ಡಾ। ಸುಬ್ಬರಾಯನರೊಟ್ಟಾಗಿ 'ತಮಿಳು ನಾಡಿನ ವಿಷಯವಾಗಿ ಯಾವ ಪ್ರಚಾರವನ್ನೂ ಶ್ರೀ. ಟಿ. ಪ್ರಕಾಶಮರು ಮಾಡಬಾರದು ಮತ್ತು ಆ ಸಂಬಂಧದ ವಿವಾದವನ್ನು ಗಡಿ ಸಮಿತಿಯ ತೀರ್ಮಾನಕ್ಕೇನೇ ಬಿಡಬೇಕು' ಎಂಬ ಶರ್ತ ಮತ್ತಿತರ ಶರ್ತಗಳಿಗೊಪ್ಪಿಕೊಂಡು ಡಾ। ಸುಬ್ಬರಾಯನರು ಶ್ರೀ. ಟಿ ಪ್ರಕಾಶಮರಿಗೇನೇ ಮತಕೊಡುವ ಒಪ್ಪಂದವಾಯಿತು. ಓಮಂದೂರು ಮಂಡಲಿಯಲ್ಲಿ ಓ[illegible]ಕೊಂಡೇ ಡಾ। ಸುಬ್ಬರಾಯನರು ಇಷ್ಟು ಕಲಹ ಮಾಡಿದ್ದರು. ಆ ಮೇಲೂ ಪುನಃ ಶ್ರೀ ಓಮಂದೂರರೇ ಆರಿಸಿಬಂದುದರಿಂದ, ಮತ್ತೆ ಮಂಡಲಿಯಲ್ಲಿರುವುದು ಅಸಹಜವಾಗಿ ತೋರಿ ಅವರು ಕೂಡಲೇ ರಾಜೀನಾಮೆಯೊಪ್ಪಿಸಿದರು. ಇಂಥವರನ್ನು ಮತ್ತೂ ಸಮಜಾಯಿಸಿಟ್ಟುಕೊಳ್ಳುವುದು ಅಪಾಯಕರವಾಗಿ ತೋರಿ ಶ್ರೀ. ಓಮಂದೂರರು ಈ ಬಾರಿ ಅವರ ರಾಜೀನಾಮೆಯನ್ನಂಗೀಕರಿಸಿದರು.

ಸಾರಾಂಶವಿಷ್ಟೇ: ಡಾ। ಸುಬ್ಬರಾಯನರಿಗೆ ನಾಯಕತ್ವವೇ ಬೇಕಾಗಿದ್ದಿತು; ಓಮಂದೂರ್ ಮತ್ತು ಪ್ರಕಾಶಮರಲ್ಲಿ ಇಬ್ಬರೂ ಅಥವಾ ಅವರಲ್ಲೊಬ್ಬನು ಉಮೇದ್ವಾರರಾಗದಿದ್ದಲ್ಲಿ ಮಾತ್ರ ಇದು ಸಾಧ್ಯವಿತ್ತು. ಆ ಪೈಕಿ ಪ್ರಕಾಶಮರು ಹಿಂದೆಗೆಯಲು ತಯಾರಿರಲಿಲ್ಲ; ಅವರ ವಿರುದ್ಧ ಓಮಂದೂರರ ವಿನಾ ಸುಬ್ಬರಾಯನರನ್ನು ಹಾಕಿ ಗೆಲ್ಲುವ ಧೈರ್ಯ ಮಿಕ್ಕವರಿಗಿರಲಿಲ್ಲ; ಈ ಆಂದೋಲನಗಳನ್ನೆಬ್ಬಿಸಿ, ಇದ್ದ ಸಂಬಂಧವನ್ನೂ ಕೆಡಿಸಿಕೊಂಡ ಡಾ. ಸುಬ್ಬರಾಯನರ ಇದ್ದ ಸ್ಥಾನವೂ ತಪ್ಪಿ ಹೋಯಿತು.

The 1946 Record Business proves the popularity
THE BOMBAY LIFE ASSURANCE COMPANY, LTD

Company's New Business in 1946— **3 28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India
Bombay Life Building,
Central Office, Udipi

Branches at:
Mangalore, Calicut, Trivandrum, Madura, Madras, Bangalore & Bombay,

ನಿಮ್ಮಷ್ಟಕ್ಕೆ ನೀವು ಮನೆಯಲ್ಲೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.
ನವಭಾರತ ಬುಕ್ ಡಿಪೊ, ಉಡುಪಿ.

ನಿರ್ಗತಿಕರು ತುಂಬಿ ತುಳುಕುತ್ತಿರುವ ಧಿಲ್ಲಿ!

ಪುರಾಣ ಹಾಗೂ ಚರಿತ್ರೆಯಲ್ಲಿ ಸು ಪ್ರಸಿದ್ಧವಾಗಿರುವ ಧಿಲ್ಲಿಯೀಗ 'ಇನ್ನೊಂದೇ ಒಂದು ಕಣ ನುಂಗಲು ಸಾಧ್ಯವಿಲ್ಲ' ಎಂಬಂತಾದ ಹೊಟ್ಟೆಯಂತೆ ಉಬ್ಬರಿಸಿ ಹೋಗಿದೆ: 'ಇನ್ನೊಂದೇ ಒಂದು ಜನವನ್ನು ಬರ ಮಾಡಿಕೊಳ್ಳುವುದು ಅಸಾಧ್ಯ' ಎಂಬಂತಹ ಸ್ಥಿತಿಗೆ ಬಂದಿದೆ. ಪಾಕಿಸ್ತಾನ್ ವಲಯದ ಗಲಭೆ ಪೀಡಿತ ಸ್ಥಳಗಳಿಂದ ಓಡಿ ಬಂದು ಅಲ್ಲಿ ತುಂಬಿ ಹೋಗಿರುವ ನಿರಾಶ್ರಿತರ ಸಂಖ್ಯೆಯಂತಹುದು, ಅವರ ಆರೈಕೆ ನೋಡುವ ಭಾರ ಅಷ್ಟು ದೊಡ್ಡದು!

"ಇನ್ನು ಧಿಲ್ಲಿಗೆ ಯಾರೂ ಬಾರದಿರಲಿ ಇನ್ನೂ ಇಲ್ಲಿಗೆ ಬರುವುದರಿಂದ ಅವರಿಗಾವ ವಿಧದ ಪ್ರಯೋಜನವೂ ಆಗದು. ನಿರಾಶ್ರಿತರ ಹೊಸ ದಳಗಳಿಗೆ ಆಶ್ರಯ ಹಾಗೂ ಆರೈಕೆ ನೀಡಲು ಇನ್ನು ಡಿಲ್ಲಿಯಿಂದಾಗದು. ಹೊಸ ದಳಗಳು ಬಂದರೆ ಅವರನ್ನು ಕುರುಕ್ಷೇತ್ರ ಅಥವಾ ಇತರ ಕಡೆಗಳಿಗೆ ಕಳುಹಿಸಬೇಕಾಗುವುದು. ಪಾಕಿಸ್ತಾನದಿಂದ ಇನ್ನಾವ ನಿರಾಶ್ರಿತರೂ ಧಿಲ್ಲಿಗೆ ಬರಕೂಡದೆಂದು ನಾನವರನ್ನು ಆಗ್ರಹಪೂರ್ವಕ ವಿಜ್ಞಾಪಿಸಿಕೊಳ್ಳುತ್ತೇನೆ. ಅಂಥವರು ಕೇವಲ ತಮ್ಮ ಸಂಕಷ್ಟಗಳನ್ನು ಹೆಚ್ಚಿಸಿಕೊಳ್ಳುತ್ತಾರಲ್ಲದೆ, ನಮ್ಮದನ್ನೂ ಹೆಚ್ಚಿಸುತ್ತಾರಷ್ಟೆ. ನಾವವರಿಗೆ ಇತರ ಕಡೆಗಳಲ್ಲಿ ಸಹಾಯ ಮಾಡಬಲ್ಲೆವು. ಮತ್ತು ಹಾಗೆ ಮಾಡುವ ಇಚ್ಛೆಯಿಂದಿರುವೆವು"–ಎಂದು ಇತ್ತೀಚೆಗೆ ಪಂಡಿತ ಜವಾಹರಲಾಲರು ವಿನಂತಿಸಿಕೊಂಡಿದ್ದರು. ಧಿಲ್ಲಿಯ ಪರಿಸ್ಥಿತಿ ಹಾಗಿದೆ.

ರಾಷ್ಟ್ರ ವಿಭಜನೆಯಾದಂದಿನಿಂದ ಸುಮಾರು 5 ಲಕ್ಷಕ್ಕೂ ಮಿಕ್ಕಿದ ನಿರಾಶ್ರಿತರು ಪಶ್ಚಿಮ ಪಾಕಿಸ್ತಾನದಿಂದ ಧಿಲ್ಲಿಗೋಡಿಬಂದಿರುವರೆಂದು ಅಂದಾಜು ಮಾಡಲಾಗಿದೆ. ಪ್ರಪಂಚದ ಅತಿ ದೊಡ್ಡ ನಗರಗಳಲ್ಲಿ ಯಾವ ನಗರಕ್ಕೂ ಅಕಸ್ಮಾತ್ತಾಗಿ ನುಗ್ಗಿ ಬರುವ ಇಂತಹ ಜನಪ್ರವಾಹವನ್ನು ತುಂಬಿಸಿಕೊಳ್ಳಲು ಸಾಧ್ಯವಿಲ್ಲ. ಹೊಸಾಗಮಿಗಳಿಗೆ ಮನೆಗಳ ವ್ಯವಸ್ಥೆ ಮಾಡುವದಷ್ಟೇ ಅಲ್ಲ, ನೀರು, ದೀಪ, ಇತ್ಯಾದಿಗಳ ಸರಬರಾಯಿಮಾಡುವ ಹೊಣೆಗಾರಿಕೆಯೂ ಇದೆ. ಈ ಅನುಕೂಲತೆಗಳ ವ್ಯವಸ್ಥೆಯು ಪರಮಾವಧಿಯು ಇಷ್ಟರಲ್ಲೇ ಆಗಿ, ಇನ್ನು ಬರುವವರಿಗಾಗಿ ಏನನ್ನು ಮಾಡುವದಕ್ಕೂ ಅಸಾಧ್ಯವಾಗಿರುವುದರಿಂದಲೇ "ಇನ್ನಾರೂ ಬಾರದಿರಲಿ" ಎಂದು ಅಧಿಕಾರಿಗಳು ಸ್ಪಷ್ಟವಾಗಿ ಎಚ್ಚರಿಸಿದ್ದಾರೆ. ಈ ಎಚ್ಚರಿಕೆಯು ದಾಕ್ಷಿಣ್ಯವಿದ್ದರೂ ದಾರಿಯಿಲ್ಲದವರ ನಿರಾಕರಣೆಯೆಂಬುದನ್ನು ಮರೆಯಬಾರದು.

ಪೂರ್ತಿ ತುಂಬಿದೆ.

ಧಿಲ್ಲಿಯೀಗ 'ಸೂಜಿ ಮೊನೆಯೂರಲಾಗದ' ಗಾದೇ ಮಾತಿನ ಸ್ಥಿತಿಗೆ ಬಂದಿದೆ ಎಂಬುದು, ಧಿಲ್ಲಿಯ ರೈಲ್ವೇ ನಿಲ್ದಾಣದಲ್ಲಿ ಇಳಿಯುವ ಯಾರಿಗಾದರೂ ಕೂಡಲೇ ಹೊಳೆಯುವಂತಿದೆ. ಸ್ಟೇಶನಿನ ಪ್ಲೇಟ್‌ಫೋರ್ಮಿನಲ್ಲಿ ಕಾಲಿಡಲಾಗದಷ್ಟು ಸಾಮಾನುಗಳು ಬಿದ್ದಿರುತ್ತವೆ-ಅವೆಲ್ಲಾ ಧಿಲ್ಲಿಗೆ ಹೊಸತಾಗಿ ಬಂದವರ ಸಾಮಾಗ್ರಿಗಳು. ಕುಳಿತುಕೊಳ್ಳಲಾಗುವ ಅಥವಾ ನಿಲ್ಲಲಾಗುವ ಜಾಗಗಳೆಲ್ಲಿ ಖಾಲಿಯಿವೆಯೋ ಅವೆಲ್ಲವೂ ಜನರಿಂದ 'ಜಗಜಗಿ'ಯೆನ್ನುತ್ತಲೇ ಇರುತ್ತವೆ. ಸ್ಟೇಶನಿನ ದ್ವಾರದಿಂದ ಹೊರಗೆ ಹೋಗಬೇಕಾದರೆ, ಜಾತ್ರೆಯಾರಾಧನೆ ನಡೆದಿರುವ ಹೊತ್ತಿನಲ್ಲೇ ಜಾತ್ರೆ ಸಂದಣಿಯಿಂದ ಹೊರಕ್ಕೆ ಹೋಗುವವನಷ್ಟೇ ಪ್ರಯಾಸ ಪಡಬೇಕಾಗುತ್ತದೆ–ಜನ ಸಂದಣಿಯ ನಡುವೆ ಹಾದಿ ಬಿಡಿಸಿಕೊಂಡೇ ಹೆಜ್ಜೆಯಿಡಬೇಕಾಗುತ್ತದೆ. ಈ ಗುಂಪಿಂದರೆ ಸಮೀಪದಲ್ಲೇ ಇರುವ 'ಫೌಜು ಗೃಹ'ಕ್ಕೆ ತಮ್ಮನ್ನು ಕರೆಯಿಸಿಕೊಳ್ಳುವ ಹೊತ್ತು ಯಾವಾಗ ಬರುವುದೋ ಎಂದು ತಾಳ್ಮೆಯಿಂದ ಕಾಯುತ್ತ, ನಿಂತ ನಿರಾಶ್ರಿತರದು. ನಿರಾಶ್ರಿತರ ರಕ್ಷಣೆ ಮತ್ತು ಜೀವನ ವ್ಯವಸ್ಥೆಗಾಗಿರುವ ಹಿಂದೀ ಸರಕಾರದ ಖಾತೆಯ ನೌಕರರು ಧಿಲ್ಲಿಗೆ ಬರುವವರ ಸರಿಯಾದ ಪರಿಚಯ ಮತ್ತು ಉದ್ದೇಶಗಳನ್ನೆಲ್ಲಾ ದಿನಂಪ್ರತಿ ಪಡಕೊಂಡು ಪತ್ರ ದಿ ಮಾಡುತಿದ್ದಾರಲ್ಲದೆ, ಅವರನ್ನು ಯೋಗ್ಯ ಸ್ಥಳಕ್ಕೆ ಸಾಗಿಸುವದೇ ಮೊದಲಾದ ಕೆಲಸಗಳಿಗಾಗಿ ಸ್ಥಳೀಯ ಅಧಿಕಾರಿಗಳೊಡನೆ ನಿಕಟ ಸಂಬಂಧವಿಟ್ಟುಕೊಂಡೇ ಕೆಲಸ ನಿರ್ವಹಿಸುತ್ತಿದ್ದಾರೆ. ತತ್ಪರಿಣಾಮವಾಗಿ ಧಿಲ್ಲಿ ಸ್ಟೇಶನಿನಲ್ಲಿ ಬಂದು ಬೀಳುವವರನ್ನು ವಿವಿಧ ರಕ್ಷಣಾ ನೆಲೆಗಳಿಗೆ ಹಂಚಿ ಹಾಕುವ ಕೆಲಸಗಳೀಗ ಮೊದಲಿಗಿಂತ ಕ್ಷಿಪ್ರಗತಿಯಲ್ಲಿ ನಡೆಯುತ್ತಿವೆ. ಹೀಗಾಗಿ ಮೊದಲು ಧಿಲ್ಲಿ ನಿಲ್ದಾಣಗಳಲ್ಲಿ 5ರಿಂದ 10 ಸಾವಿರದ ವರೆಗೆ ಕಾಯುವರಾಗಿ ಇದ್ದೇ ಇರುತ್ತಿದ್ದ ನಿರಾಶ್ರಿತರ ಸಂಖ್ಯೆಯೀಗ ಒಂದು ಸಾವಿರಕ್ಕಿಳಿದಿದೆ. ಈ ವ್ಯವಸ್ಥಾಧಿಕಾರಿಗಳು ನಗರದ ವಿವಿಧ ನಿರಾಶ್ರಿತರ ಶಿಬಿರಗಳಿಂದ 'ಇನ್ನು ಯಾರನ್ನೂ ತುಂಬಿಸಿಕೊಳ್ಳಲು ಸಾಧ್ಯವಿಲ್ಲ' ಎಂಬ ವರದಿಗಳನ್ನು ಪಡೆಯುತ್ತಲೇ ಇರುತ್ತಾರೆ; ಅದನ್ನು ಕೇಳಿಕೊಂಡೇ ಇನ್ನಷ್ಟು ಮಂದಿಯನ್ನು ಆ ಶಿಬಿರಗಳಿಗೆ ಒಳ ನುಗ್ಗಿಸುತ್ತಲೇ ಇದ್ದಾರೆ. ಬೇರೇನು ಮಾಡಬಲ್ಲರು?

ಅಸಹ್ಯ ಗದ್ದಲ

ಧಿಲ್ಲಿಗೆ ಸಂದರ್ಭಾನುಸಾರ ಭೇಟಿಕೊಟ್ಟವರಿಗೆ ಗುರುತವಿದ್ದ ವರಾಂಡದರೀಬಾಗ ಅದನ್ನು ಸಂದರ್ಶಿಸಿದರೆ ಅಲ್ಲಿಯ ಒಂದೊಂದು ರಸ್ತೆ, ಓಣಿಗಳೊಳಗೆ ಅಂತಹ ಹತ್ತತ್ತು ರಸ್ತೆ, ಓಣಿಗಳು ಸೇರಿಕೊಂಡಿರುವವೇನೋ ಎಂದು ದಿಗಿಲುಗೊಳ್ಳಬೇಕು. ಅಷ್ಟು ಬಿಡಾರ, ಅಂಗಡಿ, ಜನದೊತ್ತಡವೇರಿಹೋಗಿದೆ. ಸ್ಥಳೀಯ ನಗರ ಭವನದ ಮುಂಭಾಗದಿಂದ ಚಾಂದೀ ಚೌಕದತ್ತ ನಡೆದಾಡಿದರೆ–ಆತ ಹಿಂದಿನ ಅನುಭವದಿಂದ ಶಾಂತ ವಾತಾವರಣವನ್ನೇ ನಿರೀಕ್ಷಿಸಿಕೊಂಡು ಹೊರಟಿದ್ದರೆ–ಅಲ್ಲಿಯ ಗದ್ದಲಗಳಿಂದ ಒಮ್ಮೆಗೇ ಹಾರಿಬೀಳಬೇಕು. ಸಾವಿರ, ದಶಸಾವಿರ ಸಂಖ್ಯೆಯ ಸಾಮಾನು ಮಾರಾಟಗಾರರ ಕೂಗುಗಳು –ಕಾರುಗಳ ಮತ್ತು ಟಾಂಗಾವಾಲರ ಬೊಬ್ಬೆಗಳು– ಕಿವುಡುಗೊಳಿಸುವಂತಹವಿವೆ. ಎರಡು ಸಾಲುಗಳ ಕಾಯಂ ಅಂಗಡಿಗಳಲ್ಲದೆ ಮೂರು ಸಾಲುಗಳಲ್ಲಿ ರಸ್ತೇಯಂಗಡಿಗಳು ಬಿದ್ದಿರುವುದನ್ನೂ ನೋಡಬಹುದು. ಈ ನವೀನಾಂಗಡಿವಾಲರಲ್ಲಿ ಹೆಚ್ಚಿನವರ ಮನೆಯೂ ಅವರ ಅಂಗಡಿಯ ಭಾಗವೇ. ಧಿಲ್ಲಿ ನಗರಸಭೆಯು ಮನುಷ್ಯಸಾಧ್ಯ ಪ್ರಯತ್ನಗಳೆಲ್ಲವನ್ನೂ ಮಾಡುತ್ತಿದ್ದರೂ ಆ ಬೀದಿಗಳು ಸಹಜವಾಗಿ ಹೊಲಸಾಗಿರುತ್ತಿವೆ. ಈ ಹೊಸ ಗದ್ದಲವು ಚಾಂದಿಚೌಕದಲ್ಲಿ ಮಾತ್ರವಲ್ಲ; ಧಿಲ್ಲಿಯ ಸಣ್ಣ ದೊಡ್ಡ ಕೇರಿ ಮೂಲೆಗಳಲ್ಲೆಲ್ಲಾ ಇದ್ದೇ ಇದೆ. ಕಾಲ್ದಾರಿಯಲ್ಲಿ ಎಲ್ಲರಿಗೂ ನಡೆಯಲು ಅಗಲ ಸಾಲದ್ದರಿಂದಲೇ ವಾಹನ ರಸ್ತೆಗಳಲ್ಲಿ ಸಂಚರಿಸುವುದು ಅಲ್ಲೀಗ ರೂಢಿಯಾಗಿ ಹೋಗಿದೆ. ಒಂದು ಕುಟುಂಬಕ್ಕೆಂದೆಂದಿದ್ದ ಧಿಲ್ಲಿಯ ಪ್ರತಿಯೊಂದು ಮನೆಯೂ ಈಗ ಹಲವಾರು ಕುಟುಂಬಗಳ ಮನೆಯಾಗಿದೆ. ಕ್ಷುಲ್ಲಕ ಗುಡಿ ಧೇರೆಗಳಂತೂ ಎಲ್ಲೆಲ್ಲಿ ಆಗಲ ಸಾಧ್ಯವೋ ಅಲ್ಲೆಲ್ಲಾ ನೆಲ ಕೊಡೆಗಳಂತೆ ಮೂಡಿವೆ.

ಆ ಶಿಬಿರಗಳು

ಜನವರಿ ತಿಂಗಳಾರಂಭಿಸುವ ಹೊತ್ತಿನಲ್ಲಿ ಧಿಲ್ಲಿಯ ಮನೆಗಳಲ್ಲಿ ವಾಸಿಸುತ್ತಿದ್ದವರಿಗಿಂತ ರಸ್ತೆಗಳಲ್ಲಿ ವಾಸಿಸುತ್ತಿದ್ದವರ ಸಂಖ್ಯೆಯೇ ಹೆಚ್ಚಾಗಿತ್ತು. ಇದನ್ನು ಕಂಡ ನೆಹರೂಗಳು 'ಇನ್ನೊಂದೇ ವಾರದೊಳಗೆ ನಿಲ್ಲಲು ಮಾಡಿಲ್ಲದ ಒಬ್ಬನೇ ಒಬ್ಬ ಧಿಲ್ಲಿಯಲ್ಲಿಲ್ಲವೆಂದಾಗಬೇಕು' ಎಂದು ಶಪಥ ತೊಟ್ಟರು; ಆ ಶಪಥವನ್ನವರು ಈಡೇರಿಸಿಯೂ ಕೊಟ್ಟರು. ಕೂಡಲೇ ಧಿಲ್ಲಿಯ ಚರಿತ್ರೆಯಲ್ಲೇ(ಪುರಾಣ)ವಿಲ್ಲ 'ವನ್ನು ಮಹಾ ಆಶ್ರಿತ ನಿಲಯವಾಗಿ ಮಾರ್ಪಡಿಸಲು 700 ಕೆಲಸಗಾರರು ರಾತ್ರಿ ಹಗಲು ದುಡಿದರು. 300 ವಿಶಾಲ ಕೋಣೆಗಳನ್ನೂ ಇತರ ದೊಡ್ಡ ಧೇರೆಗಳನ್ನೂ ಕಟ್ಟಲಾಯಿತು. ಒಂದು ಸ್ವಾವಲಂಬಿ ವಸಾಹತಿನಲ್ಲೇನೇನಿಲ್ಲ ಇರಬೇಕೋ ಅವೆಲ್ಲವೂ ಅಲ್ಲಿ ನಿರ್ಮಾಣವಾದುವು. ಒಂದು ಆಹಾರ ಧಾನ್ಯ ರೇಶನ್ ಅಂಗಡಿ, ಬಟ್ಟೆಗೆ ದಾಸ್ತಾನು, ಎಣ್ಣೆಯಂಗಡಿ, ಒಂದು ಆಸ್ಪತ್ರೆ, ಒಂದು ಶಾಲೆ, ವಿದ್ಯುದ್ದೀಪ–ಇತ್ಯಾದಿಗಳ ವ್ಯವಸ್ಥೆ ಅಲ್ಲಿದೆ. ಇದು ಅನ್ಯಥಾ ಗತಿಯಿಲ್ಲದ ಕೀರ್ತಿ ನಿರ್ಗತಿಕರ ನಿಲಯ. ಇಲ್ಲಿ 10000 ಜನರ ಅನುಕೂಲತೆಯಿದ್ದರೂ ಸದ್ಯ 5400 ಮಂದಿ ಇದ್ದಾರೆ. ಇತರ ದೊಡ್ಡ ನಿರಾಶ್ರಿತ ಶಿಬಿರಗಳೆಂದರೆ 28520 ನಿರಾಶ್ರಿತರಿರುವ ಕಿಂಗ್ಸ್‌ವೇ ಶಿಬಿರ; ಇಲ್ಲಿಯವರಿಗೆ ರೇಶನ್ ಧಾನ್ಯ ಮತ್ತು ವಸ್ತ್ರಗಳು ಕೊಡಲ್ಪಡುತ್ತಿವೆ. ಇಡೀ ಭಾರತದಲ್ಲಿ ಎರಡನೇ ದೊಡ್ಡ ಶಿಬಿರವಿದು ಎನ್ನಬಹುದು. ಕಲ್ಯಾಣ ಶಿಬಿರದಲ್ಲಿ 1599 ನಿರಾಶ್ರಿತರಿದ್ದಾರೆ. ಆನಂದ ಪ್ರಭಾತ್ ಶಿಬಿರದಲ್ಲಿ 2000, ಬೇಲಾ ರಸ್ತೆಯ ಆಶ್ರಯ ಸ್ಥಾನದಲ್ಲಿ 1818 ಶ್ರೀಮಂತ ನಿರಾಶ್ರಿತರು–ಮುದ್ದು ಕೊಟ್ಟು ಪಡಕೊಳ್ಳುವವರು–ಇದ್ದಾರೆ. 'ನೇವೆಲ್ ಫೌಜು ಗೃಹ'ವೂ ಇಂತಹ ನಿರಾಶ್ರಿತ ಶಿಬಿರಗಳಲ್ಲೊಂದಾಗಿದ್ದರೂ, ಇದು ಆ ಜನರ ಆಮದು ರಫ್ತಿನ ನೆಲೆಯಾಗಿದೆ. ಗಾಂಧಿಜೀಯ ಶರ್ತದಂತೆ ಹಲವು ಮಸೀದಿಗಳಿಂದ ಹೊರ ಬಂದವರಿಗಾಗಿ ಟೆಸ್ ಹರ್ಝಾರಿಯಲ್ಲಿ ಹೊಸ ಶಿಬಿರವೊಂದು ತೆರೆಯಲಾಗಿದೆ. ಟಿಬ್ಯಾ ಕಾಲೇಜು, ಬೇಸಾಯ ಕಾಲೇಜು, ಕೊಂಲ್‌ಬಾಗಿನ ಕೆಲವು ಸರಕಾರೀ ನಿಲಯಗಳೂ ಅನಾಥಾಶ್ರಯ ನೆಲೆಗಳಾಗಿವೆ. ಅಂತೂ ಧಿಲ್ಲಿಯಲ್ಲೀಗ ಶಿಬಿರವಾಸಿಗಳಾಗಿರುವವರ ಸಂಖ್ಯೆ ಸುಮಾರು 40000 ವೆಂದು ಅಂದಾಜು. ಸರಿಯಾದ ಖಾನೇಶುಮಾರಿಯೀಗ ತೆಗೆಯಲ್ಪಡುತ್ತಿದೆ. ಧಿಲ್ಲಿಯ ಆಸುಪಾಸುಗಳಲ್ಲಿ 200000 ಜನರಿಗೆ ನಿವಾಸಿಸಲಾಗುವಂತೆ 1 'ನಗರ ವಲಯ'ಗಳನ್ನು ಕಟ್ಟುವ ಹಂಚಿಕೆಯನ್ನೀಗ ಸರಕಾರವು ಕೈಕೊಂಡಿದೆ. ಆದರೆ ಹೀಗೆ ಕೂಡಿಸಿಕೊಳ್ಳುವ ಭೂಮಿಗಳ ಮಾಲ್ಕರಿಗೆ 2 ತಿಂಗಳ ನೋಟೀಸು ಕೊಡಬೇಕಾದ್ದರಿಂದ ಈ ತನಕ ಆ ಕೆಲಸವಾಗಿಲ್ಲ. ನಿರಾಶ್ರಿತರಿಗಾಗಿ ಸ್ಥಳ ಕಾದಿಡಬೇಕೆಂಬುದಕ್ಕಾಗಿಯೆ ಶಾದಿಪುರ ವಿಸ್ತಾರ ಯೋಜನೆಯನ್ನೂ ಸರಕಾರವು ಕೈಗೊಂಡಿದೆ. ಅಂತೂ ಜನತೆಯಲ್ಲಿ ಮೂಡಿದ ಜಾತೀಯ ದುರ್ಭಾವನೆಯ ದುಷ್ಪರಿಣಾಮವು ಭಾರತದ ರಾಜಧಾನಿಯನ್ನೇ ಈಗ 'ಭೂಭಾರ'ದಿಂದ ಕುಸಿಯುನಂತೆ ಮಾಡಿದೆ!

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೩।

೪ ರಿಂದ ೫ ತಿಂಗಳು ,, ,, ೩।

೬ ರಿಂದ ೯ ತಿಂಗಳು ,, ,, ೩।

ರೂ ೧೦೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಿ ತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸನಿಹದಲ್ಲಿರುವ ಶಾಖೆಗೆ ಬರೆದು ತಿಳುಕೊಳ್ಳಬಹುದು

The Canara Bank Limited.

ESTD: 1906.

ಇನ್ನೊಂದು ಸಮರಕ್ಕಾಗಿ ರಶ್ಯಾ ಅಮೆರಿಕಾ ಸಿದ್ಧತೆ

ಪ್ರಪಂಚವು ಇನ್ನೊಂದು ಯುದ್ಧದ ಕಡೆಗೆ-ಭಾರತವು ಪ್ರಜಾಪ್ರಭುತ್ವದೆಡೆಗೆ ನಡೆಯುತ್ತಿರುವುದನ್ನೇ ಕಳೆದ ವಾರವು ಪ್ರದರ್ಶಿಸಿದೆ. ಅಮೇರಿಕ ಮತ್ತು ದರ ಹಿಂಬಾಲಕ ರಾಷ್ಟ್ರಗಳೂ ರಶ್ಯ ಮತ್ತು ದರ ಅನುಯಾಯೀ ಪಂಗಡಗಳೂ ಪರಸ್ಪರ ಮುಖಾಮುಖಿ ಪ್ರಯತ್ನ ಸ್ಪರ್ಧೆಗಳಲ್ಲೇ ತೊಡಗಿವೆ. ಭಾರತದ ಎಲ್ಲೆಡೆಗಳಲ್ಲೂ ಶಾಂತಿ ಪಾಲನಾ ದೃಷ್ಟಿಯಿಂದ ಕಮ್ಯೂನಿಸ್ಟರ ಬೇಟೆಯಾರಂಭಿಸಿದೆ.

ಈ ವರೆಗಿನ ಒಂದೊಂದು ವಾರವನ್ನೂ ಇನ್ನೊಂದು ಯುದ್ಧ ಜ್ವಾಲಾಮುಖಿಯ ಶಿಖರ ಸ್ಫೋಟವ ಒಂದೊಂದು ಗಡಿ ಕಲ್ಲೆನ್ನಬಹುದಾದ ಸ್ಥಿತಿಯಲ್ಲೇ ಲೋಕವು ಕಳೆಯುತ್ತ ಬಂದಿದೆ. ಮಧ್ಯದಲ್ಲೇ ತಡೆದು ಶಾಂತಿಬಯಲಿಗೆ ಪ್ರಪಂಚವನ್ನಿಳಿಸಿ ತರುವ ಪರಿಣಾಮಕಾರೀ ಪ್ರಯತ್ನವು ಯಾವ ಕಡೆಯಿಂದಲೂ ಈ ವರೆಗೆ ತೋರಿಬಂದಿಲ್ಲ. ಇದೇಕೆ ಹೀಗೆ? ಎಂದು ಶಾಂತಿಪ್ರೇಮಿಗಳು ಇನ್ನೂ ಗಾಬರಿಯಿಂದ ದೃಷ್ಟಿ ಹಾಕುತ್ತಲೇ ಇದ್ದಾರೆ.

ಬರ್ಲಿನ್ ವಿವಾದ

ರಶ್ಯಾ, ಅಮೇರಿಕ, ಇಂಗ್ಲೆಂಡು, ಫ್ರಾನ್ಸುಗಳೊಳಗೆ ನಾಲ್ಕು ಪಾಲಾಗಿ ಹಂಚಲ್ಪಟ್ಟು ಚತುರ್‍ರಾಷ್ಟ್ರೀಯ ಆಡಳಿತೆಗೊಳಗಾಗಿರುವ ಜರ್ಮನಿಯೇ ಈಗ ರಶ್ಯಾ ಮತ್ತು ಇತರ ದೊಡ್ಡ ರಾಷ್ಟ್ರಗಳೊಳಗಿನ ಘರ್ಷಣಾ ರಂಗವಾಗುವ ಅಪಾಯವೆದ್ದಿದೆ. ರಾಜಧಾನಿ ಬರ್ಲಿನ್ ನಗರವು ರಶ್ಯದ ಪಾಲಿನ ಕ್ಷೇತ್ರದಲ್ಲಿದೆ. ಆದರೂ ಇಡೀ ಜರ್ಮನಿಯ ಮೇಲ್ವಿಚಾರಕ್ಕೆಂದು ಸ್ಥಾಪಿಸಲ್ಪಟ್ಟಿರುವ ಚತುರ್‍ರಾಷ್ಟ್ರೀಯ ಮಂಡಳಿಯ ಬೈಠಕೆಯಲ್ಲಿ ಈ ನಗರವಿರಬೇಕೆಂದು ನಿರ್ಧಾರವಾಗಿತ್ತು. ಈ ಕುರಿತು ಈಗ ರಶ್ಯಾ ಮತ್ತು ಇತರ ತ್ರಿರಾಷ್ಟ್ರಗಳೊಳಗೆ ತೀವ್ರ ಭಿನ್ನಾಭಿಪ್ರಾಯಗಳೆದ್ದು, ಇಕ್ಕಡೆಯವರೂ ಪರಸ್ಪರರ ಮೇಲೆ ಸುಲಿಗೆ, ಅತ್ಯಾಚಾರ, ಅಕ್ರಮಗಳ ದೂರುಗಳನ್ನು ಹೇರುತ್ತಿದ್ದಾರೆ. ಬರ್ಲಿನಿನ ಜತೆಯಾಡಳಿತೆಯು ಇಷ್ಟರಲ್ಲೇ ಪೂರ್ತಿ ವಿನಾಶವಾಗದಿದ್ದರೆ ಕ್ಷಿಪ್ರದಲ್ಲೇ ಆಗುವದೆಂಬುದಂತೂ ಖಂಡಿತ. ಬರ್ಲಿನಿನಿಂದ ಮಿತ್ರ ರಾಷ್ಟ್ರೀಯರನ್ನು ಹೊರದಬ್ಬುವ ಹಂಚಿಕೆಯು ರಶ್ಯದ್ದು. ಅಲ್ಲಿಯ ರಶ್ಯನ್ ಅಧಿಕಾರಿಗಳು ಬರ್ಲಿನ್ ನಗರದ ವಾಹನ ಸಂಚಾರಗಳ ಮೇಲೆ ಹೊಸ ನಿರ್ಬಂಧಗಳನ್ನು ಜಾರಿಯ ಶಾಸನ ಜಾರಿಗೆ ತಂದಿದ್ದಾರೆ. ಬರ್ಲಿನ್ ರಾಜಧಾನಿಯಿಂದ ಪಾಶ್ಚಾತ್ಯ ರಾಷ್ಟ್ರಗಳನ್ನು ಹೊರಗಟ್ಟುವದು—ಇದೇ ತಿಂಗಳಲ್ಲಿ ನಡೆಯಲಿರುವ ಇಟಲಿ ಚುನಾವಣೆಯ ಕಾಲದಲ್ಲೇ ಈ ಮೂಲಕ ತನ್ನ ಪ್ರಭಾವವನ್ನು ತೋರಿಸಿ, ಅಲ್ಲಿಯ ಜನಮತವನ್ನು ತನ್ನ ಕಡೆಗೊಲಿಸಿಕೊಳ್ಳುವುದು—ಮುಂತಾದ ಇತರ ಉದ್ದೇಶ ಸಾಧನೆಗಾಗಿಯೇ ರಶ್ಯವು ಇಂತಹ ಕಾರ್ಯಕ್ರಮವನ್ನು ಕೈಕೊಂಡಿದೆ ಎಂದು ತಿಳಿದುಬರುತ್ತದೆ. ಇದೇ ರೀತಿ ಚತುರ್‍ರಾಷ್ಟ್ರೀಯ ಬೈಠಕೆಯಿರುವ ಮತ್ತೊಂದು ನಗರವಾದ ವಿಯೆನ್ನಾದಲ್ಲೂ ಇದೇ ಮಾದರಿಯ ಸಂಚಾರ ನಿರ್ಬಂಧಗಳನ್ನು ಹಾಕಿ ರಶ್ಯವು ಅಮೇರಿಕದ ಪ್ರತಿಷ್ಠೆಗೆ ತಾಡನ ಕೊಡಬಹುದೆಂದು ಊಹಿಸಲಾಗಿದೆ. ಅತ್ತ ಜರ್ಮನಿಯ ತನ್ನ ಭಾಗದ ಸರಹದ್ದುಗಳಲ್ಲೆಲ್ಲಾ ಸೋವಿಯಟ್ ಸೇನೆಗಳ ವಿಶೇಷ ಚಲನವಲನಗಳು ಕಂಡುಬಂದಿವೆ. ಇದರ ಉದ್ದೇಶವೇನು ಎಂಬ ಕುರಿತು ಸಹಜವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆತುರವೆದ್ದಿದೆ. ಅಮೇರಿಕದ ಕರಾವಳಿಯ ಸಮೀಪ ತೋರಿಬಂದ ಸಬ್‌ಮೆರೀನ್ ಕಥೆಗಳನ್ನು ರಶ್ಯವು ಅಲ್ಲಗಳೆದಿದೆ. ಜರ್ಮನಿಯ ರಶ್ಯನ್ ಕ್ಷೇತ್ರದ ಮೇಲೆ ಅಜ್ಞಾತ ವಿಮಾನವೊಂದು ಸಣ್ಣ ಬೋಂಬೊಂದನ್ನು ಹಾಕಿ ಹೋಯಿತೆಂದು ವರದಿಯಾಗಿದೆ. ಬರ್ಲಿನ್ ನಗರದ ಅಮೇರಿಕನ್ ಕ್ಷೇತ್ರದಲ್ಲಿರುವ ಸೋವಿಯೆಟ್ ರೈಲ್ವೇ ಕಟ್ಟೋಣದ ಸುತ್ತಲೂ ಅಮೇರಿಕವು ಬಲವಾದ ಸಶಸ್ತ್ರ ಪಹರೆಯನ್ನಿಟ್ಟದ್ದು, ಒಳಗಿನ ರಶ್ಯಾನರ ಭೇಟಿಗೆ ಹೊರಗಿನವರಾರೂ ಹೋಗದಂತೆ ತಡೆ ಹಾಕಿದೆ ಮಾತ್ರವಲ್ಲ, ಅಲ್ಲಿ ರಶ್ಯವು ನಿಲ್ಲಿಸಿರುವ ಸಶಸ್ತ್ರ ಕಾವಲನ್ನು ಕೂಡಲೇ ತೆಗೆಯತಕ್ಕದ್ದೆಂದು ತಿಳಿಸಿದೆ. ಬರ್ಲಿನಿನಲ್ಲಿ ರಶ್ಯವು ವಾಹನ ನಿರ್ಬಂಧ ಹಾಕಿದ್ದಕ್ಕಾಗಿ ಅಮೇರಿಕವು ವಿಮಾನ ಸರಬರಾಯಿಗಳನ್ನಾರಂಭಿಸಿದೆ.

ಇತರ ವಾದವಿವಾದ

ಇತ್ತ ರಶ್ಯವು ಹ್ಯಾಸಿಸ್ಟ್ ಪೂರ್ವ ಬ್ರಿಟಿಷ್-ಜರ್ಮನಿ ಮೈತ್ರಿ ಸಂಬಂಧದ ಗುಪ್ತ ದಾಖಲೆಗಳನ್ನು ಪ್ರಕಟಿಸಿ, ರಶ್ಯದ ವಿರುದ್ಧ ತಮ್ಮ ನಿಲ್ದಾಣವೆಂದು ಬ್ರಿಟಿಷ್ ಮುತ್ಸದ್ದಿಗಳು ನಾಜಿಗಳನ್ನು ಗಣಿಸುತಿದ್ದ ಗುಟ್ಟನ್ನೆಲ್ಲಾ ಬಹಿರಂಗಪಡಿಸಿದ. ಹಿಟ್ಲರನಿಗೆ ಬ್ರಿಟಿಷ್ ಅಧಿಕಾರಿಗಳು ಕೊಟ್ಟಿದ್ದ ವಿವಿಧ ರೀತಿಯ ಆಶ್ವಾಸನೆಗಳೂ ಪ್ರೋತ್ಸಾಹಗಳೂ ಆ ಮೂಲಕ ಪ್ರಕಟವಾಗಿವೆ.

ಯುರೋಪು ರಾಷ್ಟ್ರಗಳ ಪುನರ್ಜೀವನಾಸಹಾಯವಾಗಿ ಧನಕೊಡುವ ಮಾರ್ಶಲ್ ಯೋಜನೆಯಲ್ಲಿ ಯುದ್ಧಕಾಲದ ಫೇಸಿಸ್ಟ್ ರಾಷ್ಟ್ರವಾಗಿರುವ ಸ್ಪೈನನ್ನೂ ಸೇರಿಸಿಕೊಳ್ಳುವ ಸೂಚನೆಯು ಅಮೇರಿಕದ ಪ್ರತಿನಿಧಿ ಸಭೆಯ ಮುಂದೆ ಬಂದಿದ್ದರೂ ಅದನ್ನೀಗ ಆ ಯೋಜನೆಯಿಂದ ಹೊರಗಿಡಲಾಗಿದೆ. ಮಾರ್ಶಲ್ ಯೋಜನೆಯನ್ನು ಅಧಿಕೃತಗೊಳಿಸುವುದರೊಂದಿಗೆ ವಿದೇಶಗಳಿಗೆ ಸಹಾಯವಾಗಿ ೬,೨೦೦, ೦೦೦,೦೦೦ ಡೋಲರುಗಳನ್ನೀಯುವ ಮಸೂದೆಗೆ ಅಧ್ಯಕ್ಷ ಟ್ರುಮೇನರ ಸಹಿ ಬಿದ್ದಿದೆ.

ಅತ್ತ ಫಿನ್ಲೆಂಡಿನೊಂದಿಗೆ ಪರಸ್ಪರ ಯುದ್ಧ ಸಹಾಯವೇ ಮೊದಲಾದ ಕರಾರುಗಳನ್ನು ಮಾಡಿಕೊಳ್ಳಲು ರಶ್ಯವು ಆತುರಗೊಂಡಿದ್ದು ಈ ಕುರಿತು ಒನ್ನೊಂದು ಸರಕಾರದ ಮೇಲೆ ಒತ್ತಾಯ ಹಾಕುತ್ತಿದೆ. ಅಲ್ಲಿಯ ಕಮ್ಯೂನಿಸ್ಟರು ರಾಜಧಾನಿ ಹೆಲ್ಸಿಂಕಿಯ ಮೇಲೆ ಪ್ರಚಾರ ಧಾಳಿಯನ್ನಾರಂಭಿಸಿದ್ದಾರೆ.

ಪೆಲೆಸ್ತೈನಿನ ಜಗಳ ನಿವಾರಣೆಗಾಗಿ, ಟ್ರಸ್ಟೀಶಿಪ್ ಆಡಳಿತೆ ಸ್ಥಾಪಿಸುವ ಅಮೇರಿಕದ ಸೂಚನೆಯು ಭದ್ರತಾ ಕೌನ್ಸಿಲಿನಲ್ಲಿ ಮಾನ್ಯವಾಗಿ ಈ ಕುರಿತು ನಿರ್ಧರಿಸಲು ಜಾಗತಿಕ ಸಂಘದ ಸಾಮಾನ್ಯ ಮಹಾಧಿವೇಶನವು ಕರೆಯಲ್ಪಟ್ಟಿದೆ.

ಅಮೇರಿಕದಲ್ಲಿ ಸಾಮೂಹಿಕ ಸೇನಾ ತಯಾರಿಯನ್ನು ಕೈಕೊಂಡು ಪ್ರಾಯಃ 19 ರಿಂದ 20೦ ವರೆಗಿನ ಎಲ್ಲರಿಗೂ ಖಡ್ಡಾಯ ಸೇನಾ ತರಬೇತಿಯೀಯುವ ಸೂಚನೆಯ ಪರಿಶೀಲನೆಗಾಗಿ ನೇಮಿಸಲ್ಪಟ್ಟ ಅಮೇರಿಕನ್ ಕಾಂಗ್ರೆಸ್ ಸಮಿತಿಯ ಮುಂದೆ ಸಾಕ್ಷ್ಯ ಕೊಡುತ್ತಾ ಮಹಾಯುದ್ಧದ ಸುಪ್ರಸಿದ್ಧ ಸೇನಾನಿ ಜನರಲ್ ಈಸೆನೋವರರು ಈ ಸೂಚನೆಯನ್ನು ಬಲವಾಗಿ ಸಮರ್ಥಿಸಿದ್ದಾರೆ. "ಸರ್ವಾಧಿಕಾರಿತ್ವದ ಸಮುದ್ರವೇ ಸುತ್ತಲೂ ವ್ಯಾಪಿಸಿರುವಾಗ, ಅಮೇರಿಕವು ಪ್ರಜಾಪ್ರಭುತ್ವದೊಂದು ದ್ವೀಪವಾಗಿ ಉಳಿಯಲಾರದು." ಎಂದು ಈಸನೋವರರಂದಿದ್ದಾರೆ.

ಇರಾನಿನಲ್ಲಿ ಅಮೇರಿಕದ ಕೈವಾಡ ನಡೆದಿದೆಯೆಂದು ಆರೋಪಿಸಿ ರಶ್ಯವು ಕಳುಹಿಸಿದ ನಿಷೇಧ ಪತ್ರಕ್ಕೆ ಇರಾನ್ ಸರಕಾರವು ಉತ್ತರ ಕೊಡುತ್ತಾ, ಇಂತಹ ಆರೋಪವು ಇರಾನಿನ ಒಳ ವ್ಯವಹಾರಗಳಲ್ಲಿ ಕೈ ಹಾಕುವ ಉದ್ದೇಶ ಸೂಚಕವಿದೆಯೆಂದು ತಿಳಿಸಿ ತನಗೆ ರಶ್ಯದೊಡನೆ ಸ್ನೇಹ ಸಂಬಂಧದಿಂದಿರುವ ಬಯಕೆಯಿದೆಯೆಂದೂ ತಿ .

ಇತ್ತೀಚಿಗೆ ... ನಾವಣೆಗೊಂಡಿರುವ ಚೈನದ ರಾಷ್ಟ್ರೀಯ ಎಸೆಂಬ್ಲಿಯ ಅಧ್ಯಕ್ಷ ಸ್ಥಾನಕ್ಕಾಗಲೀ ಉಪಾಧ್ಯಕ್ಷ ಸ್ಥಾನಕ್ಕಾಗಲೀ ತಾನು ಉಮೇದ್ವಾರಿಯಾಗುವದಿಲ್ಲವೆಂದು ಇದುವರೆಗೆ ಅಧ್ಯಕ್ಷರಾಗಿದ್ದ ಜನರಲಿಸಮೊ ಚಿಯಾಂಗ್ ಕೈಶೇಕರು ಜಾಹೀರು ಮಾಡಿದ್ದಾರೆ. ಜಗಳ ಹಿಡಿತ ಚೈನಾದಲ್ಲಿ ಈ ಬದಲಾವಣೆಯ ಪರಿಣಾಮವೇನೆಂಬುದನ್ನು ನೋಡಬೇಕಿದೆ.

ಕಮ್ಯೂನಿಸ್ಟ್ ಬೇಟೆ

ಭಾರತ ರಾಜಕೀಯದಲ್ಲಿ ಕಳೆದ ವಾರ ನಡೆದ ಮಹತ್ವದ ಘಟನೆಯೆಂದರೆ ಕಮ್ಯೂನಿಸ್ಟರನ್ನು ಒಂದೇ ಸವನೆ ರಾಷ್ಟ್ರದ ಆ ಮೂಲೆಯಿಂದೀ ಮೂಲೆಯ ವರೆಗೂ ದಸ್ತಗಿರಿ ಮಾಡಲಾರಂಭಿಸಿರುವುದು. ಅಖಿಲಭಾರತ ಕಮ್ಯೂನಿಸ್ಟ್ ಪ್ರಮುಖರ ಹಾಗೂ ಪ್ರತಿಯೊಂದು ಪ್ರಾಂತ್ಯದ ಕಮ್ಯೂನಿಸ್ಟ್ ಕೆಲಸಗಾರರ ದಸ್ತಗಿರಿಗಳಾಗಿವೆ. ಜಾಗತಿಕ ಟ್ರೇಡ್ ಯೂನಿಯನ್ ಫಡರೇಶನಿನ ಕಾರ್ಯಕಾರೀ ಮಂಡಳಿಯ ಹಾಗೂ ಬೊಂಬಾಯಿ ಎಸೆಂಬ್ಲಿಯ ಸದಸ್ಯನಾಗಿರುವ ಶ್ರೀ ಯಸ್. ಎ. ಡಾಂಗೆ ಮತ್ತು ಅಖಿಲ ಭಾರತ ಟ್ರೇಡ್ ಯೂನಿಯನಿನ ಅಧ್ಯಕ್ಷ ಶ್ರೀ ಯಸ್. ಮಿರಾಜ್‌ಕರರು ದಸ್ತಗಿರಿಯಾಗಿದ್ದಾರೆ. ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಪಿ. ಸಿ. ಜೋಶಿಯವರಿಗೆ ವಾರಂಟ್ ಹೊರಟಿದ್ದರೂ ಅವರೀ ತನಕ ಸಿಕ್ಕಿಲ್ಲ. ರಣದಿವೆ, ಪಾಟು, ಅಧಿಕಾರಿ ಮೊದಲಾದ ಪ್ರಮುಖ ಕಮ್ಯೂನಿಸ್ಟರಿಗೂ ವಾರಂಟು ಹೊರಟಿದೆಯೆಂದೂ ಆದರೆ ಅವರೀ ತನಕ ಸಿಕ್ಕಿಲ್ಲವೆಂದೂ ತಿಳಿದುಬರುತ್ತದೆ. ಪ್ರತಿಯೊಂದು ಪ್ರಾಂತಿಕ ಸರಕಾರಗಳೂ ಸರ್ವೆಡೆಯ ಕಮ್ಯೂನಿಸ್ಟರನ್ನು ಕೈದು ಮಾಡಿವೆ, ಮಾಡುತ್ತಿವೆ. ಅವರ ಕಾರ್ಯಾಲಯಗಳ ಜಪ್ತಿ, ಮತ್ತವರ ಸಭೆ ಸಮಾರಂಭಗಳಿಗೆ ಬಹಿಷ್ಕಾರಗಳಾಗಿವೆ. ಕಮ್ಯೂನಿಸ್ಟರ ಚಟುವಟಿಕೆಗಳು ತುಸು ವಿಶೇಷ ಪರಿಮಾಣದಲ್ಲಿ ವ್ಯಾಪಿಸಿರುವ ಮದ್ರಾಸ್ ಪ್ರಾಂತ್ಯದ ಪ್ರತಿ ಒಂದು ನಗರದಲ್ಲೂ ಕಮ್ಯೂನಿಸ್ಟ್ ಕೆಲಸಗಾರರ ದಸ್ತಗಿರಿಗಳಾಗಿವೆ.

ಇತ್ತ ಮದ್ರಾಸ್ ಪ್ರಾಂತ್ಯಕ್ಕೆ ಬಂದಿರುವ ಸಮಾಜವಾದಿ ಪಕ್ಷದ ನಾಯಕ ಶ್ರೀ ಜೈಪ್ರಕಾಶ ನಾರಾಯಣರು, 'ಭಾರತದ ಜನತೆಯ ಗುರಿಯಾಗಿರುವ ತನ್ನ ಸಮತಾವಾದಿ ಪಕ್ಷಕ್ಕೂ ಪರದೇಶವೊಂದರ ಆಜ್ಞೆಯನ್ನು ಎಡೆಬಿಡದೆ ಪಾಲಿಸಿ ವರ್ತಿಸುತ್ತಿರುವ ಕಮ್ಯೂನಿಸ್ಟ್ ಪಕ್ಷಕ್ಕೂ ಯಾವ ಸಂಬಂಧವೂ ಇಲ್ಲ'ವೆಂದು ಸ್ಪಷ್ಟಪಡಿಸಿ, ಹಿಂದೀ ಜನತೆಯ ನ್ಯಾಯಯೋಗ್ಯ ಸಮಾನತೆ ಮತ್ತು ಅಭಿವೃದ್ಧಿ ಸಾಧನೆಯೇ ತಮ್ಮ ಗುರಿಯೆಂದು ತಿಳಿಸಿದ್ದಾರೆ. ಕಾಂಗ್ರೆಸಿನ ಕಾರ್ಯಗಳನ್ನು ಪ್ರಭಾವಶಾಲಿಯಾಗಿ ಮಾಡಿ ಮುಂದೊತ್ತುವುದೇ ಸಮತಾವಾದಿ ಪಕ್ಷದ ಧ್ಯೇಯವೆಂದೂ, ಅದೀಗ ಕಾಂಗ್ರೆಸಿನಿಂದ ಸಿಡಿದು ಪ್ರತ್ಯೇಕವಾಗಿರುವುದಾದರೂ ವೈರಿಯಾಗಿಲ್ಲವೆಂದೂ, ಸಮತಾವಾದಿ ಪಕ್ಷವು ಕಾಂಗ್ರೆಸಿನ ... ಆಗಿರುವುದರಿಂದ ಅವೆರಡರೊಳಗೆ ಏನಾದರೂ ಭಿನ್ನಾಭಿಪ್ರಾಯಗಳಿದ್ದರೂ ಅವು ತಂದೆ-ಮಕ್ಕಳೊಳಗಿನ ವಿವಾದಗಳಲ್ಲದೆ ಬೇರಲ್ಲವೆಂದೂ ಶ್ರೀಮತಿ ಅರುಣಾ ಅಸಫ್ ಅಲಿಗಳು ನಿವೇದಿಸಿಕೊಂಡಿದ್ದಾರೆ.

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs 1000 and over, in multiples of Rs 500 - at the following rates

For 3 months at 2½% per annum

For 6 months at 3½% per annum.

For further particulars you may apply or call at any of our following Offices

Branches: Kadri Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs

ಹಿಂದೀ ರಾಜಕೀಯದಲ್ಲಿ ಧಾರ್ಮಿಕತೆಗೆಡೆಯಿಲ್ಲ

ಕಾಲಾಟ್ ಸಂಸ್ಥಾನ

ಸರ್ವ ವಿಧಾನಗಳಿಂದಲೂ ಪಾಕಿಸ್ಥಾನದೊಂದಿಗೇನೇ ಜೋಡಣೆಗೊಳ್ಳಬೇಕಾಗಿದ್ದು ಅದರೊಡನೆ ಹೊಂದಿಕೊಂಡೇ ಇರುವ ಕಲಾಟ್ ಸಂಸ್ಥಾನವು ಪಾಕಿಸ್ಥಾನದೊಂದಿಗೆ ಸೇರಿಕೊಂಡಿದೆ. ಇದರಲ್ಲಾವ ಆಶ್ಚರ್ಯವೂ ಇಲ್ಲವಾದರೂ, ಈ ಸಂಬಂಧವಾದ ಒಂದು ಸುದ್ದಿಯು ಅತ್ಯಂತ ಆಶ್ಚರ್ಯಕರವಿದೆ. ಮಾರ್ಚ ತಾ. 27ನೇ ರಾತ್ರಿ ಡಿಲ್ಲಿಯಿಂದ ಅಖಿಲ ಭಾರತ ಆಕಾಶವಾಣಿಯು 'ಕಾಲಟ್ ಸಂಸ್ಥಾನವು ಹಿಂದುಸ್ಥಾನದೊಂದಿಗೆ ಜೋಡಣೆಗೊಳ್ಳುವೆನೆಂದು ಎರಡು ತಿಂಗಳ ಮೊದಲು ಭಾರತ ಸರಕಾರವನ್ನು ಕೇಳಿಕೊಂಡಿದ್ದರೂ ಭಾರತ ಸರಕಾರವು ನಿರಾಕರಿಸಿದ್ದಿತು' ಎಂಬ ಸುದ್ದಿಯನ್ನು ಪ್ರಕಟಿಸಿದ್ದಿತು. ಮಾರ್ಚ ತಾ. 28ರಲ್ಲಿ ಕಲಾಟ್ ಸಂಸ್ಥಾನವು ಪಾಕಿಸ್ಥಾನದೊಂದಿಗೆ ಸೇರಿಕೊಂಡಿತೆಂದು ಅದರ ರಾಜ ಮಿರ್ ಅಹಮ್ಮದ್ ಯಾರ್ ಖಾನರು ಜಾಹೀರನಾಮೆ ಹೊರಡಿಸುತ್ತಾ ಅಖಿಲಭಾರತ ಆಕಾಶವಾಣಿಯ ಸುದ್ದಿಯು ಪೂರ್ತಿ ಸುಳ್ಳೆಂದೂ, ತಾನೆಂದೂ ಭಾರತದೊಡನೆ ಸಂಬಂಧ ಯಾಚಿಸಿದ್ದಿಲ್ಲವೆಂದೂ ಕಾಲತ್ ಮತ್ತು ಪಾಕಿಸ್ತಾನಗಳೊಳಗೆ ನಡೆದಿದ್ದ ಸಂಧಾನ ಮಾತುಕತೆಗಳನ್ನು ಕೆಡಿಸುವುದಕ್ಕಾಗಿ ಮತ್ತು ತಾನು ಸಂಭಾವಿತನೆಂದು ಲೋಕದೆದುರು ತೋರಿಸಿಕೊಳ್ಳುವುದಕ್ಕಾಗಿ ಭಾರತ ಸರಕಾರವು ಅಂತಹ ಸುಳ್ಳು ಸುದ್ದಿಗಳನ್ನು ಹಬ್ಬಿಸಿದಬೇಕೆಂದೂ ದೂರಿದ್ದಾರೆ. ಆ ರೇಡಿಯೋ ಸುದ್ದಿಯಿಂದಾಗಿಯೇ ತಾನು ಕೂಡಲೇ ಪಾಕಿಸ್ತಾನದೊಡನೆ ಸೇರಿಕೊಳ್ಳಬೇಕಾಯಿತೆಂದು ಖಾನರ ಹೇಳಿಕೆಯು ಅರ್ಥ ಕೊಡುತ್ತಿದೆ. ಈ ಸಂಬಂಧವಾಗಿ ಭಾರತ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಕೇಳಲ್ಪಟ್ಟಾಗ ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಒಂದು ಸುದ್ದಿ ಪ್ರಮಾದಕ್ಕೋಸ್ಕರಾಗಿ ಅಖಿಲ ಭಾರತ ಆಕಾಶವಾಣಿಯು ಹಾಗೆ ಘೋಷಿಸಿದ್ದಕ್ಕಾಗಿ ಬಹಳ ಪಶ್ಚಾತ್ತಾಪ ಸೂಚಿಸಿದ್ದಾರೆ. ಆ ಮೇಲೆ ಆ ತಪ್ಪು ಸುದ್ದಿಗವಕಾಶ ದೊರೆತುದಕ್ಕಾಗಿ ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್ ಬೇಟನರೂ ಕಲಾಟಿನ ಖಾನರಿಗೆ ಪಶ್ಚಾತ್ತಾಪ ಸೂಚಕ ತಂತಿ ಕಳುಹಿದ್ದಾರೆ.

ಈ ಸಂಗತಿಯ ಗುಟ್ಟೇನು, ಎಂಬುದನ್ನು ಊಹಿಸುವುದು ಕಷ್ಟ. ಆಲ್ ಇಂಡಿಯಾ ರೇಡಿಯೋ ಆ ಸುದ್ದಿಯನ್ನು ಘೋಷಿಸುವ ಕೆಲವು ದಿನಗಳಿಗೆ ಮೊದಲೇ ಹಿಂದೀ ಸರಕಾರದ ಸಂಸ್ಥಾನ ಖಾತೆಯ ಕಾರ್ಯದರ್ಶಿ ಶ್ರೀ. ವಿ. ಪಿ. ಮೆನನ್ನರು, 'ಕಲಾಟಿನ ಖಾನರು ಭಾರತದೊಂದಿಗೆ ಜೋಡಣೆಗೊಳ್ಳಬಯಸಿದರೂ ಅದು ಪಾಕಿಸ್ತಾನಕ್ಕೆ ಸೇರಬೇಕಾದ ಸಂಸ್ಥಾನವೆಂಬುದರಿಂದ ಹಿಂದೀ ಸರಕಾರವು ಅದನ್ನು ನಿರಾಕರಿಸಿದ್ದಿತು' ಎಂದು ಪತ್ರಿಕಾ ಪ್ರತಿನಿಧಿಗಳ ಮುಂದೆ ಸ್ಪಷ್ಟವಾಗಿ ಹೇಳಿದ್ದರು. ವಿದೇಶೀ ಪತ್ರಿಕೆಗಳಲ್ಲಿ ಕಲಾಟ್ ಸಂಸ್ಥಾನಕ್ಕೆ ಭಾರತವು ಹಣ ಸಹಾಯ ಕೊಡುವುದೆಂದೂ, ಅಲ್ಲಿ ತನಗೊಂದು ವಿಮಾನ ನಿಲ್ದಾಣ ರಚಿಸಿಕೊಳ್ಳಲಿರುವುದೆಂದೂ ಏನೇನೋ ವಾರ್ತೆಗಳು ಪ್ರಕಟವಾಗಿದ್ದುವು. ಕಲಾಟಿನ ಖಾನರು ಭಾರತದೊಂದಿಗೆ ಸೇರಿಕೊಳ್ಳುವ ಆತುರದಿಂದಿದ್ದಾರೆಂಬುದು ಜನಜನಿತವಾಗಿತ್ತು. ಆದರೆ ಭೌಗೋಲಿಕ ಸ್ಥಿತಿಗತಿಗಳ ಮೇಲಿಂದ, ಅಥವಾ ಇತರ ಯಾವುದೇ ದೃಷ್ಟಿಯಿಂದ ಕಲಾಟ್ ಪಾಕಿಸ್ತಾನದೊಂದಿಗೆ ನ್ಯಾಯಪ್ರಕಾರ ಜೋಡಣೆಗೊಳ್ಳಬೇಕಾಗಿದ್ದ ಸಂಸ್ಥಾನವೆಂಬುದರಿಂದ ಹಿಂದೀ ಸರಕಾರವು ನೀತಿಯ ಎಲ್ಲೆ ಮೀರಿ ಅದನ್ನು ಕೂಡಿಕೊಳ್ಳಲು ತಯಾರಿರಲಿಲ್ಲ. ಅದು ಯಾವ ಆಶೆಯನ್ನು ತೋರಿಸದೆ ನಿರಾಕರಿಸಿ ಬಿಟ್ಟುದಷ್ಟೇ ಅಲ್ಲ; ಈ ಸಂಗತಿಯನ್ನು ಬಹಿರಂಗಪಡಿಸಿತು. ಇದರಿಂದ ಕಲಾಟಿನ ಖಾನರ ಮೂಗು ಕತ್ತರಿಸಿದಂತಾಗಿ ಪಾಕಿಸ್ತಾನದ ಹಾಗೂ ಮುಸ್ಲಿಂ ಜಗತ್ತಿನ ಕ್ರೋಧಕ್ಕೆ ತಾನು ಬಲಿಯಾದೆನೆಂಬ ಹೆದರಿಕೆ ಹಿಡಿದು ಅನ್ಯೋಪಾಯವಿಲ್ಲದ ಅವರು ಕೂಡಲೇ ಪಾಕಿಸ್ತಾನದೊಡನೆ ಸೇರಿಕೊಂಡುದಲ್ಲದೆ, ಅ. ಇಂ. ರೇಡಿಯೋದ ವಾರ್ತೆ ಕೂಡಾ ಶುದ್ಧ ಸುಳ್ಳೆಂದು ಘೋಷಿಸಿದರು. ಆ ಸಂಬಂಧದ ದಾಖಲೆಯಿಲ್ಲದ್ದರಿಂದಲೋ, ಇಂತಹ ನಿರಾಕರಣೆಯಿಂದ ಪಾಕಿಸ್ತಾನ್-ಕಲಾಟ್‌ಗಳ ಸಂಬಂಧ ಸುಗಮವಾಗುವದಾದರೆ ಆಗಲೆಂಬುದಕ್ಕಾಗಿಯೋ ಹಿಂದೀ ಸರಕಾರವು ಆ ಸುದ್ದಿ ಪ್ರಕಟಣೆಗಾಗಿ ಸಂತಾಪ ಸೂಚಿಸಿ ಸುಮ್ಮಗಾಗಿದೆ.

ರಾಜಕೀಯ ಮತ್ತು ಧರ್ಮ

'ಸರಿಯಾದ ಶಾಸನ ಮತ್ತು ಆಡಳಿತ ವಿಧಾನಗಳಿಂದ ರಾಷ್ಟ್ರದಲ್ಲಿರುವ ಜಾತೀಯತಾ ಸಂಸ್ಥೆಗಳನ್ನೆಲ್ಲಾ ನಿರ್ಮೂಲಿಸಬೇಕು' ಎಂದು ಶ್ರೀ ಅನಂತ ಶಯನಮ್ ಅಯ್ಯಂಗಾರರು ಹಿಂದೀ ಪಾರ್ಲಿಮೆಂಟಿನಲ್ಲಿ ತಂದು, ಪಂಡಿತ ನೆಹರು ಮತ್ತಿತರ ಪ್ರಮುಖರಿಂದ ಪ್ರಬಲ ಸಮರ್ಥನೆ ಪಡೆದು ಇದೇ ತಾ ೩ರಲ್ಲಿ ಮಂಜೂರಾದ ಠರಾವು ಅತಿ ಪ್ರಾಮುಖ್ಯವೆನ್ನಬಹುದು. ಈ ಸಂದರ್ಭದಲ್ಲಿ ಪಂಡಿತ ನೆಹರುಗಳಿತ್ತ ಭಾಷಣವು ಜನತೆಯ ಪಾಲಿನ ಮಾರ್ಗದರ್ಶಕ ನೀತಿ ಸೂತ್ರವೆನ್ನಬಹುದು. ಪಂಡಿತರೆಂದರು: 'ರಾಜಕೀಯವನ್ನೊಂದು ತತ್ವದ ಮಟ್ಟದಲ್ಲಿಡುವುದನ್ನು ಕಳೆದ ಹಲವು ದಶಮಾನಕ್ಕೂ ಮಿಕ್ಕಿ ಮಹಾತ್ಮಾ ಗಾಂಧಿಯವರು ನಮಗೆ ಕಲಿಸಿದ್ದರು. ನಾವಿದರಲ್ಲಿ ಎಷ್ಟರ ಮಟ್ಟಿನ ವಿಜಯ ಗಳಿಸಿದ್ದೇವೆಂಬುದನ್ನು ಜಗತ್ತೇ ತೀರ್ಮಾನಿಸಬೇಕು; ಮುಂದಿನ ಜನಾಂಗಗಳೇ ನಿರ್ಧರಿಸಬೇಕು. ಅಂತೂ, ಕೊನೆಯ ಪಕ್ಷ ನಾವು ಆ ಮಹಾ ಧ್ಯೇಯವನ್ನು ನಮ್ಮ ಕಣ್ಣ ಮುಂದಿಟ್ಟುಕೊಂಡು, ನಮ್ಮ ದುರ್ಬಲತೆ ಹಾಗೂ ತಡೆ ತೊಡಕುಗಳಿದ್ದ ಹೊತ್ತಿನಿಂದಾದರೂ ಅತ್ತ ಸಾಗಲು ಪ್ರಯತ್ನಿಸಿದ್ದೇವೆಂದಾದರೂ ಹೇಳಬಹುದು. ಆದರೆ ರಾಜಕೀಯದೊಡನೆ ಅತ್ಯಂತ ಸಂಕುಚಿತ ಧಾರ್ಮಿಕತೆಯನ್ನು ಬೆರೆಯಿಸಿ, ತತ್ಪರಿಣಾಮವಾದ ಜಾತೀಯತಾ ರಾಜಕೀಯವನ್ನು ನಿರ್ಮಿಸುವದಾದರೆ, ಈ ಬೆರಕುವಿಕೆಯು ಅತ್ಯಂತ ಅಪಾಯಕರವೆಂಬುದೂ ಅದನ್ನು ಅಂತ್ಯಗೊಳಿಸಲೇಬೇಕೆಂಬುದೂ ನಿಸ್ಸಂದೇಹ. ಅದು ಇಡೀ ದೇಶಕ್ಕೆ ಹಾನಿಕರ. ಅದು ಬಹುಸಂಖ್ಯಾತರಿಗೆಂತೂ ಹಾನಿಕರ; ಬಹುಶಃ ಅದರಿಂದಲೇ ಕೆಲವು ಅನುಕೂಲತೆಗಳನ್ನು ಪಡೆಕೊಳ್ಳಬಹುದೆಂದು ಹಾರೈಸುತ್ತಿರುವ ಅಲ್ಪ ಸಂಖ್ಯಾತರಿಗೆ ವಿಶೇಷ ಹಾನಿಕರ. ಭಾರತದ ಗತ ಚರಿತ್ರೆಯುಲ್ಲೂ ಈ ಪಾಠ ದೊರೆಯುತ್ತದೆಂದು ನನ್ನ ಯೋಚನೆ. ಹೇಗಿದ್ದರೂ ಒಂದು ಸ್ವತಂತ್ರ ರಾಷ್ಟ್ರದಲ್ಲಿ ಪ್ರತ್ಯೇಕವಾಗಿ ಇದ್ದುಕೊಳ್ಳಬಿಚ್ಛಿಸುವ ಅಲ್ಪಸಂಖ್ಯಾತ ಸಮಾಜವು ರಾಷ್ಟ್ರದ ಹಿತಕ್ಕೆ ಕೆಲವು ಆಘಾತಗಳನ್ನುಂಟುಮಾಡುತ್ತದೆ. ಆದರೆ ಎಲ್ಲಕ್ಕಿಂತ ಹೆಚ್ಚಿನದೆಂದರೆ, ಅದು ತನ್ನ ಸ್ವಂತ ಹಿತಗಳಿಗೇನೇ ವಿಶೇಷ ಧಕ್ಕೆಗಳನ್ನೀಯುವಂತಹದಿದೆ. ಯಾಕೆಂದರೆ ಆ ಮೂಲಕ ಅದು ತನಗೂ ಇತರರಿಗೂ ಮಧ್ಯ ಗಡಿಬೇಲಿಗಳನ್ನು ನಿರ್ಮಿಸಿಕೊಳ್ಳುತ್ತದೆ. ಆ ಗಡಿಗಳಾದರೋ ಧಾರ್ಮಿಕವಾಗಿರುವ ಬದಲಿಗೆ ರಾಜಕೀಯದಲ್ಲಿ, ಕೆಲವೊಮ್ಮೆ ಆರ್ಥಿಕ ಕ್ಷೇತ್ರದಲ್ಲೇ ಏಳುತ್ತವೆ. ಮತ್ತದಕ್ಕೆ ತನ್ನ ಪಾಲಿನದಾದ ಪ್ರಭಾವವನ್ನು ಅನ್ಯರ ಮೇಲೆ ಬೀರಲೆಂದಿಗೂ ಸಾಧ್ಯವಾಗದು." ಪಂಡಿತ ನೆಹರುಗಳು ಈ ಸೂಚನೆಯ ಸಂಬಂಧವಾಗಿ ಆಗತ್ಯವುಳ್ಳ ಎಲ್ಲಾ ಕಾರ್ಯಗಳನ್ನೂ ಕೈಕೊಳ್ಳುವುದಾಗಿ ಭರವಸೆಯಿತ್ತಿದ್ದಾರೆ

ಕಾಶ್ಮೀರ— ಹೈದರಾಬಾದು

ಕಾಶ್ಮೀರದ ಪ್ರಶ್ನೆಯು ಭದ್ರತಾ ಕೌನ್ಸಿಲಿನಲ್ಲಿ ಪುನಃ ನನೆಗುದಿಗೆ ಬಿದ್ದಿದೆ. ಭದ್ರತಾ ಕೌನ್ಸಿಲಿನ ಅಧ್ಯಕ್ಷತೆಯ ಸರದಿಯು ಚೈನಾದ ಪಾಲಿಗಿದ್ದಾಗ ಅಧ್ಯಕ್ಷ ಸ್ಥಾನದಿಂದ ಬಂದ ಸಂಧಾನ ಸೂಚನೆಗೆ ಪಾಕಿಸ್ತಾನದ ಒಪ್ಪಿಗೆ ಬರಲಿಲ್ಲ. ಈಗ ಅಧ್ಯಕ್ಷ ಪೀಠದ ಹಕ್ಕು ಕೊಲಂಬಿಯಾದ ಪಾಲಿಗೆ ಹೋಗಿದೆ; ಅವರು ಆ ಪೀಠದಿಂದ ತುಸು ಭಿನ್ನವಾದ ಸಂಧಾನ ಸೂಚನೆಗಳನ್ನು ಮುಂದಿಟ್ಟಿದ್ದಾರೆ. ಅದನ್ನು ಭಾರತ-ಪಾಕಿಸ್ತಾನ ಪ್ರತಿನಿಧಿ ನಾಯಕರಾದ ಶ್ರೀ. ಎನ್. ಜಿ. ಅಯ್ಯಂಗಾರ್ ಮತ್ತು ಸರ್. ಝಫರುಲ್ಲಾರು ತಂತಮ್ಮ ಸರಕಾರಗಳ ಅವಗಾಹನೆಗೆ ಮುಟ್ಟಿಸಿದ್ದಾರೆ. ಈ ಬಾರ ಇದರ ಭವಿಷ್ಯವೇನೆಂಬುದೂ ನಿಶ್ಚಯವಾಗಲಿದೆ. ಮುಖ್ಯ ಭಿನ್ನಾಭಿಪ್ರಾಯವಿರುವ ವಿಷಯವೆಂದರೆ ಕಾಶ್ಮೀರದ ನಡುಗಾಲ ಸರಕಾರವು ಯಾರದಿರಬೇಕೆಂಬುದೇ. ಶೇಖ್ ಅಬ್ದುಲ್ಲಾರ ಕೈಕೆಳಗಿನ ಸರಕಾರ ವಿನಹಾ ಬೇರೊಂದರ ಸ್ಥಾಪನೆಗೆ ಭಾರತ ಸರಕಾರ ತಯಾರಿಲ್ಲ. ಶೇಖ್ ಅಬ್ದುಲ್ಲಾ ಸರಕಾರವಿದ್ದಂತೆಯೇ ಸಂಧಾನ ಮಾಡಿಕೊಳ್ಳಲು ಪಾಕಿಸ್ತಾನ ಸಿದ್ಧವಿಲ್ಲ. ಅಂತೂ ಕಾಶ್ಮೀರದ ಪ್ರಶ್ನೆಯು ಹನುಮಾನ ಬಾಲದಂತೆ ಉದ್ದಕ್ಕೂ ಬೆಳೆಯುತ್ತಾ ಬಂದು, ಈಗ ಸರ್ವರಿಗೂ ಬೇಸರ ಬರಿಸುತ್ತಿದೆ.

ಹೈದರಾಬಾದಿನ ಸಮಸ್ಯೆಗೂ ಇದೇ ಅದೃಷ್ಟವೊದಗಿದೆ. ಘಟನಾತ್ಮಕ ವಿಷಯಗಳಲ್ಲಿ ನಿಜಾಮರ ಮೆದುಳಿನಂತಿರುವ ಸರ್. ವಾಲ್ಟರ್ ಮೋಂಕ್‌ಟನ್ನರು ಈ ಬಾರಿಯೂ ನಿಜಾಮರಿಗೆ ಆಲೋಚನೆ ಕೊಡುವುದಕ್ಕಾಗಿ ಲಂಡನಿನಿಂದ ಬಂದಿದ್ದು, ಭಾರತ ಸರಕಾರವು ಕಳುಹಿಸಿದ್ದ 'ಪ್ರಚಲಿತ ಒಪ್ಪಂದ" ಕರಾರುಗಳ ಸಂಬಂಧದ ಪತ್ರಕ್ಕೆ ಉತ್ತರ ತಯಾರಿಸಿಕೊಟ್ಟಿರುವರೆಂದೂ ಅದು ಭಾರತ ಸರಕಾರಕ್ಕೆ ಮುಟ್ಟಿದೆಯೆಂದೂ ತಿಳಿದು ಬರುತ್ತದೆ. ತಾ ೮ರಲ್ಲಿ ಮೋಂಕ್ಟನರು ಸ್ವತಃ ಡಿಲ್ಲಿಗೆ ಹೋಗಿ ಲೋರ್ಡ್ ಮೌಂಟ್‌ಬೇಟನ್ ಮತ್ತು ಇತರ ಭಾರತ ಸರಕಾರೀ ಪ್ರಮುಖರೊಡನೆ ಪರ್ಯಾಲೋಚನೆ ನಡೆಸಲಿದ್ದಾರೆ. ಹೈದರಾಬಾದು ಪಾಕಿಸ್ತಾನಕ್ಕೆ ಸಾಲವಾಗಿ ಭಾರತ ಸರಕಾರದೊಡನಿದ್ದ ತನ್ನ ಸೆಕ್ಯೂರಿಟಿಗಳನ್ನು ವರ್ಗಾಯಿಸಿದ್ದನ್ನು ಹಿಂದೆಗೆದುಕೊಂಡಿದೆಯೆಂದೂ, ಇದಕ್ಕೆ ಭಾರತ ಸರಕಾರದ ನಿಷೇಧ ಪತ್ರವೇ ಕಾರಣವೆಂದೂ ತಿಳಿದುಬರುತ್ತದೆ. ಇದೊಂದು ವಿಷಯವನ್ನು ಬಿಟ್ಟು ಭಾರತ ಸರಕಾರದ ಏಕ್ಕ ಯಾವ ಶರ್ತಗಳಿಗೂ ಒಪ್ಪಲು ನಿಜಾಮರೀಗ ಸಿದ್ಧರಿಲ್ಲ; ಪ್ರಚಲಿತ ಒಪ್ಪಂದದ ಕರಾರುಗಳನ್ನು ಹಿಂದೀ ಸರಕಾರವೇ ಮುರಿದಿದೆಯೆಂದೂ, ನಿಜಾಮ್ ಸರಕಾರದ ಪ್ರತಿಯೊಂದು ವರ್ತನೆಯನ್ನೂ ಭಾರತ ಸರಕಾರವು ಮಿತಿಮೀರಿದ ಸಂದೇಹದಿಂದ ಕಾಣುತ್ತಿದೆಯೆಂದೂ ಹೈದರಾಬಾದಿನ ದೂರು. ಭಾರತ ಸರಕಾರವು ತನಗೆ ಸಾಕಷ್ಟು ಶಸ್ತ್ರ ಸರಬರಾಯಿ ಮಾಡುತ್ತಿಲ್ಲವಾದ್ದರಿಂದ ಒಳಗಡೆಯ ಕಮ್ಯೂನಿಸ್ಟರ ಹಾಗೂ ಸರಹದ್ದು ತಂಟೆಕೋರರ ಹಾವಳಿಗಳನ್ನಡಗಿಸಲು ತನಗೆ ರಝಾಕಾರ ಸಂಸ್ಥೆಗಳಂಥವರ ಸಹಾಯ ಬೇಕಾಗುವುದರಿಂದ ಅವುಗಳನ್ನು ಬರ್ಖಾಸ್ತುಪಡಿಸಲಿಕ್ಕೂ ನಿಜಾಮರು ಸಿದ್ಧರಿಲ್ಲವೆಂದು ತಿಳಿದುಬರುತ್ತದೆ. ಇವೆಲ್ಲಾ ತೊಡಕುಗಳ ನಿವಾರಣೆಯಾಗದೆ ಶಾಶ್ವತ ಒಪ್ಪಂದದ ಮಾತುಕತೆಗಳನ್ನೇ ಎತ್ತಲಾರೆವೆಂದೂ ಹೈದರಾಬಾದು ಹಠ ತೊಟ್ಟಂತಿದೆ. ಹೈದರಾಬಾದಿನೊಳಗಡೆಯೀಗ ಸ್ಮಶಾನಶಾಂತಿ ವ್ಯಾಪಿಸಿರುವುದರಿಂದಲೂ, ಕಾಂಗ್ರೆಸ್ ಚಳವಳಿ ಪ್ರಭಾವವು ಕೂಡಾ ಅಷ್ಟೊಂದು ವಿಶೇಷವಿಲ್ಲವಾದ್ದರಿಂದಲೂ ಹೈದರಾಬಾದು ಈ ಬಾರಿ ಸಂಧಾನಕ್ಕೆ ಮುಂದಾಗದೆ ಸದರ್ಪ ಘೋಷಣೆ ಮಾಡುತ್ತಿರುವುದೆಂದು ತೋರುತ್ತದೆ. ಭಾರತ ಸರಕಾರವು ಮುಂದೇನು ಮಾಡುವುದೋ ನೋಡಲಿಕ್ಕಿದೆ.

ಮದ್ರಾಸ್
ಅಳಿಯ ಸಂತಾನ
ಮಸೂದೆಯ

ಪ್ರತಿಗಳು ೦-೨-೦ ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ ೦-೩-೦ ಸ್ಟಾಂಪನ್ನು ಕಳಿಸಿದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.

1 ಕಿನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು
2 ನವಯುಗ ಪ್ರೆಸ್, ಉಡುಪಿ.

The Canara Banking Corporation Limited.
Estd: 1906.
(Incorporated in British India)
Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates:—
3 & 4 months — @ 2¼ % p. a.
5 & 6 months — @ 2½ % p. a.

ಗುರುವಾರ, ಉಡುಪಿ, ೮-೪-'೪೮

ರಾಷ್ಟ್ರೀಯ ವಾರ

ನಾವೀಗ ರಾಷ್ಟ್ರೀಯ ವಾರದಲ್ಲಿದ್ದೇವೆ. ಪಂಜಾಬು ಅತ್ಯಾಚಾರವಾದಂದಿನಿಂದ ಈ ವರೆಗೂ-ಸುಮಾರು ೩೦ ವರುಷಗಳಿಂದ-ಎಪ್ರಿಲ್ ತಾ ೬ರಿಂದ ತಾ ೧೩ರ ವರೆಗಿನ ದಿನಗಳನ್ನು ನಾವು 'ರಾಷ್ಟ್ರೀಯ ವಾರ'ವಾಗಿ ಆಚರಿಸುತ್ತಾ ಬಂದಿದ್ದೇವೆ. ಈ ವರುಷದ ಅದರ ಆಚರಣೆಯಲ್ಲಿ ಒಂದು ವೈಶಿಷ್ಟ್ಯವಿದೆ. ಈ ವಿಶಿಷ್ಟತೆಗೆ ಹೊಂದಿಸಿದ ಕಾರ್ಯಕ್ರಮಗಳನ್ನೇ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ರಾಷ್ಟ್ರದ ಮುಂದಿಟ್ಟಿದ್ದಾರೆ. ಆ ಕಾರ್ಯಕ್ರಮಗಳು ಹಿಂದೀ ಸಾರ್ವಜನಿಕ ಪರೀಕ್ಷಾ ಪ್ರಶ್ನೆಗಳಂತಿವೆಯೆಂಬುದನ್ನೂ ಅವುಗಳನ್ನು ಜಯಶೀಲವಾಗಿ ನಿರ್ವಹಿಸುವ ಮೂಲಕವೇ ನಮ್ಮ ಯೋಗ್ಯತೆಯನ್ನು ಪ್ರದರ್ಶಿಸಬೇಕಾಗಿದೆ ಎಂಬುದನ್ನೂ ಯಾರೂ ಮರೆಯಬಾರದು. ಜಾತೀಯ ಐಕ್ಯತಾ ಸ್ಥಾಪನೆ-ಗಾಂಧೀ ಸ್ಮಾರಕ ನಿಧಿಗೆ ಹಣ ಸಂಗ್ರಹ-ಇವೆರಡೇ ಕಾರ್ಯಕ್ರಮಗಳನ್ನು ಈ ಬಾರಿಯ ರಾಷ್ಟ್ರೀಯ ವಾರಕ್ಕಾಗಿ ಕಾಂಗ್ರೆಸ್ ಅಧ್ಯಕ್ಷರು ಶಿಫಾರಸು ಮಾಡಿದ್ದಾರೆ.

ಬ್ರಿಟಿಷ್ ಸಾಮ್ರಾಜ್ಯಶಾಹಿತ್ವದ ಸಂಜ ಎಂತಹದೆಂಬುದನ್ನೂ ಆ ವಿಷಸರ್ಪಕ್ಕೆ ಹಿಂದೀ ಜನತೆಯು ಹೇಗೆ ಸಿಕ್ಕಿ ಕಷ್ಟಗೊಂಡಿತ್ತೆಂಬುದನ್ನೂ ಆ ಕಾಲದಲ್ಲಿ ಸರಿಯಾಗಿ ಪ್ರದರ್ಶಿಸಿ ಎಲ್ಲರ ಕಣ್ಣನ್ನೂ ತೆರೆಯಿಸಿದ್ದ ಘಟನೆಯೆಂದರೆ ಪಂಜಾಬು ಅತ್ಯಾಚಾರ. ಹಾಗೆ ಕಲಿತ ಪಾಠವನ್ನೇ ಮರೆಯದೆ ವಿಷಪೂರಿತ ಸಾಮ್ರಾಜ್ಯಶಾಹಿತ್ವವನ್ನೂ, ಭಾರತೀಯರ ನಿಸ್ಸಹಾಯಕ ಸ್ಥಿತಿಯನ್ನೂ ನಿವಾರಿಸಿಯೇ ಬಿಡಬೇಕೆಂಬುದಕ್ಕಾಗಿ ಪ್ರತಿ ವರುಷವೂ ಈ 'ರಾಷ್ಟ್ರೀಯ ವಾರ'ವು ಆಚರಣೆಯಲ್ಲಿದೆ. ಈ ವರುಷದ ಅದರ ರೂಪ ಬದಲಾಗಿರುವುದೆಂಬುದು ಸರ್ವರಿಗೂ ಮನವರಿಕೆಯಾಗಿರುವ ವಿಷಯ. ಮೊದಲನೆಯದಾಗಿ ಇಲ್ಲಿದ್ದ ಸಾಮ್ರಾಜ್ಯಶಾಹಿ ಓಟಸ್ಸುಗೊಂಡು ರಾಷ್ಟ್ರೀಯ ನಾವಾರಣೆಯ ಉದ್ದೇಶ ಫಲಿಸಿದೆ; ಎರಡನೆಯದಾಗಿ ಪಂಜಾಬು ಅತ್ಯಾಚಾರಗಳಿಗಿಂತ ದಶಪಾಲು ಘೋರತರವಾದ ಅತ್ಯಾಚಾರಗಳನ್ನು ರಾಷ್ಟ್ರೀಯರು ಅನುಭವಿಸಿದ್ದಾರೆ. ಹೀಗೆ ಇದರ ಮೊದಲ ಮೂಲಾಧಾರವು ಇಕ್ಕಡೆಗಳಿಂದಲೂ ಬದಲಾವಣೆಗೊಂಡಿರುವುದಾದರೂ, ಈ ಬದಲಾವಣೆಯು ರಾಷ್ಟ್ರೀಯವಾರದ ಪ್ರಾಮುಖ್ಯವನ್ನು ಇನ್ನಷ್ಟು ಹೆಚ್ಚಿಸಿದೆ. ಮೊದಲನೆಯದಾಗಿ ನಾವು ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡಿರುವೆವಾದರೂ ಅದನ್ನಿನ್ನೂ ಸಾಕ್ಷಾತ್ಕರಿಸಿಕೊಂಡಿಲ್ಲ; ಆ ಕೆಲಸಕ್ಕಿಂತಲೂ ಈ ಕೆಲಸವು ಪ್ರಯಾಸಕರ ಮತ್ತು ಗೊಂದಲದಾಯಿಯೆಂಬ ಅನುಭವ ಇಷ್ಟರಲ್ಲೇ ಸಾಕಷ್ಟಾಗಿದೆ. ಎರಡನೆಯದಾಗಿ ಪಂಜಾಬಿನ ಒಂದೆಡೆಯ ಜಾಲಿಯನ್ ವಾಲಾಬಾಗಿನಲ್ಲಾದ ಅತ್ಯಾಚಾರದ ಸ್ಮರಣೆಗಾಗಿ, ನಾವೀರೀತಿ ಒಂದು ವಾರವನ್ನೇ ಮೀಸಲಿಟ್ಟಿರುವಾಗ, ನಮ್ಮ ಜೀವಾವಧಿ ಇದೇ ರೀತಿ ಸ್ಮರಿಸಬೇಕಾದಷ್ಟು ಅತ್ಯಾಚಾರಗಳು ಈ ಬಾರಿ ದೇಶದ ಎಲ್ಲಾ ಕಡೆಗಳಲ್ಲೂ ನಡೆದಿವೆ. ಇವೆಲ್ಲಾ ದುರಂತಗಳ ಶಿಖರಪ್ರಾಯವಾಗಿ, ಈ ಸಂಬಂಧದ ಜಾಗ್ರತಿಯನ್ನು ಸಮರ್ಪಿಸಿದ ವಿಭೂತಿಪುರುಷ ಮಹಾತ್ಮ ಗಾಂಧಿಜಿಯೇ ಬಲಿ ಮಾಡಲ್ಪಟ್ಟಿದ್ದಾರೆ! ಅಂದ ಮೇಲೆ ನಾವೀ ಬಾರಿಯ ರಾಷ್ಟ್ರೀಯ ವಾರದಲ್ಲಿ ಹಿಂದಿಗಿಂತ ಎಷ್ಟು ಪಾಲು ಹೆಚ್ಚಿನದನ್ನು ಸ್ಮರಿಸಲಿಕ್ಕಿದೆ-ಎಷ್ಟು ಪಾಲು ಹೆಚ್ಚು ಕಾರ್ಯಗಳನ್ನು ಮಾಡಲಿಕ್ಕಿದೆ-ಎಂಬುದನ್ನು ಬೇರೆ ಹೇಳಬೇಕೆಂದಿಲ್ಲ. ಪರಿಸ್ಥಿತಿಗೆ ತಕ್ಕಂತೆ ರಾಷ್ಟ್ರೀಯ ವಾರವನ್ನು ಆಚರಿಸುವುದಾದಲ್ಲಿ ಸರ್ವರೂ ಸರ್ವಶಕ್ತಿಯಿಂದ ರಾಷ್ಟ್ರಪತಿಗಳಿಂದ ಸೂಚಿಸಲ್ಪಟ್ಟಿರುವ ಕಾರ್ಯಕ್ರಮಗಳನ್ನು ಜಯಶೀಲವಾಗಿ ನೆರವೇರಿಸಲೇ ಬೇಕು.

ನಾವು ನಿರ್ವಿಕಾರ ಬುದ್ಧಿಯಿಂದ ತುಲನೆಮಾಡಿದಲ್ಲಿ ಗಾಂಧಿಜೀಯ ಸ್ವಾತಂತ್ರ್ಯ ಹೋರಾಟಗಳ ಕಾಲಗಳಲ್ಲಿ ಹಬ್ಬಿಕೊಂಡ ರಾಷ್ಟ್ರೀಯತಾ ಭಾವನೆಗಿಂತಲೂ ಇತ್ತೀಚೆಗೆ ಹಿಂದೀಯರಲ್ಲಿ ಜಾತೀಯ ಭಾವನೆ ವ್ಯಾಪಿಸಿಕೊಂಡ ರೀತಿಯು ಅದ್ಭುತವಾದುದೆಂಬುದನ್ನೊಪ್ಪಬೇಕು. ಅದರಿಂದಾಗಿರುವ ಅನಾಹುತಗಳನ್ನು ಜ್ಞಾಪಿಸುವದು ಕೂಡಾ ಸಾಮಾನ್ಯ ಕಾಲದ ಅನಾಹುತಗಳ ಪ್ರತ್ಯಕ್ಷಾನುಭೋಗದಷ್ಟೇ ವೇದನಾತ್ಮಕವಾದುದು. ನಮ್ಮ ಸುತ್ತಲೂ ಯಾವುದೇ ರೀತಿಯಿಂದ ಕಂಡುಬರುವ ಯಾವ ವರ್ಗದ ಜಾತೀಯತಾ ಭಾವನೆಯನ್ನಾದರೂ ದ್ವೇಷಿಸಬೇಕೆಂಬ ಪ್ರೇರಣೆಯು ಇಂತಹ ಅಗಾಧ ಅನುಭವದಿಂದಲೂ ನಮಗೆ ಬಾರದೆ ಹೋದರೆ, ನಮ್ಮ ಮಾನುಷತ್ವವು ಸಂದೇಹಾಸ್ಪದವಾದುದೆಂಬುದು ನಿಸ್ಸಂದೇಹ. ಆದ್ದರಿಂದ ಈ ಸಂದರ್ಭದಲ್ಲಿ ದೂರದೂರದ ಸಿದ್ಧಾಂತಗಳ ಕಡೆಗೆ ದೃಷ್ಟಿಬೀರಿ, ತಂತಮ್ಮ ಮನೋಮಟ್ಟಕ್ಕನುಗುಣವಾಗಿ ಏನೇನೋ ಭಾವನೆ, ಕಲ್ಪನೆಗಳನ್ನು ಕಟ್ಟಿಕೊಳ್ಳುವದಕ್ಕಿಂತ ಎಲ್ಲರೂ ತಮ್ಮ ಕಾಲಡಿಯನ್ನು ನೋಡಿಕೊಂಡು ಸ್ವಂತ ಕ್ಷೇತ್ರಗಳನ್ನು ಶುದ್ಧೀಕರಿಸಿಕೊಳ್ಳುವದು ಅಗತ್ಯ. ಬಾಬು ರಾಜೇಂದ್ರ ಪ್ರಸಾದರು ಈ ಸಂಬಂಧದ ತನ್ನ ಸಂದೇಶದಲ್ಲಿ 'ಸರ್ವರೂ ಸ್ಥಳೀಯ ವಿದ್ಯಮಾನಗಳನ್ನು ಪರಿಶೋಧಿಸಿ ನೋಡಿ ಜಾತೀಯತಾ ದ್ವೇಷಕ್ಕೆ ಹೇತುವಾಗಬಲ್ಲ ಕಾರಣಗಳನ್ನು ನಿವಾರಿಸಿಕೊಳ್ಳಲು ಈ ವಾರದಲ್ಲಿ ಪ್ರಯತ್ನಿಸಬೇಕು' ಎಂದು ವಿನಂತಿಸಿಕೊಂಡಿದ್ದಾರೆ. ಈ ಉಪದೇಶವನ್ನು ರಾಷ್ಟ್ರೀಯತೆಯ ಪ್ರತಿನಿಧಿಯು ಸ್ವತಃ ತಮ್ಮನ್ನು ಸಮೀಕ್ಷಿಸಿ, ಆಗ್ರಹಪೂರ್ವಕ ಒತ್ತಿ ಹೇಳಿದ ಮಾತೆಂದು ಪ್ರತಿಯೊಬ್ಬರೂ ಗಣಿಸಿ, ತಮ್ಮ ಹೃದಯದಲ್ಲಿರುವ ಜಾತೀಯತಾ ಭಾವನೆಯ ಅಂಶವನ್ನು ಕೊಳೆದು ತೆಗೆದುಕೊಳ್ಳಬೇಕು; ಅದಾವ ಕಡೆಯಲ್ಲಿ ತೋರಿಬಂದರೂ ದಾಕ್ಷಿಣ್ಯವಿಡದೆ ಖಂಡಿಸಿ ತೆಗೆಯಬೇಕು.

'ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ'ಗೆ ಹಣ ಸಂಗ್ರಹಿಸುವ ಮತ್ತೊಂದು ಕಾರ್ಯಕ್ರಮದ ಕುರಿತು ಹಿಂದೀಯರನ್ನು ಯಾರೂ ವಿಜ್ಞಾಪಿಸಿಕೊಳ್ಳಬೇಕೆಂದಿಲ್ಲ. ರಾಷ್ಟ್ರಪಿತನ ಅಪಾರ ಋಣದ ಅಂಶ ಮಾತ್ರವನ್ನಾದರೂ, ತೀರಿಸಿಕೊಳ್ಳಲಾಗುವ ಸಂದರ್ಭವಾವುದು ದೊರೆತರೂ ಹಿಂದೀಯರು ಬಿಡಲಾರರು. ಭಾರತೀಯರಲ್ಲಿ ಬೇರಾವ ದೋಷವಿದ್ದರೂ ಕೃತಘ್ನತೆಯ ಅಪವಾದಕ್ಕೆ ಅವರು ಬಾಹಿರರು. 'ಪ್ರತಿಯೊಬ್ಬನೂ ಕೊನೆಯ ಪಕ್ಷ ತನ್ನ ಹತ್ತು ದಿನಗಳ ಉತ್ಪನ್ನವನ್ನಾದರೂ ಈ ನಿಧಿಗೆ ಕೊಡಲಿ" ಎಂದು ಕಾಂಗ್ರೆಸ್ ಅಧ್ಯಕ್ಷರು ಕೇಳಿಕೊಂಡಿದ್ದಾರೆ. ಗಾಂಧಿಜೀಯ ಮರಣದ ವಾರ್ತೆ ಕೇಳಿದೊಡನೆ ಪ್ರಾಣ ಕೊಟ್ಟವರಿದ್ದಾರೆ. ಗಾಂಧಿಜೀಯ ಆಯುಷ್ಯಕ್ಕೆ ಜೋಡಿಸಲಾಗುವ ವಿಧಾನವೊಂದಿರುತ್ತಿದ್ದರೆ ನಿಜಕ್ಕೂ ತಮ್ಮಾಯುಷ್ಯದ ಹತ್ತು ದಿನಗಳನ್ನು-ಹತ್ತು ಮಾಸಗಳನ್ನು-ಹತ್ತು ವರುಷಗಳನ್ನು ಇಡೀ ಆಯುಷ್ಯವನ್ನೇ-ಕೊಡಲು ತಯಾರಿದ್ದವರೆಷ್ಟೋ ಮಂದಿ ಇದ್ದಿರಬಹುದು. ಅಷ್ಟು ಪ್ರೀತಿಯ ರಾಷ್ಟ್ರಜನಕನ ಸ್ಮಾರಕ ನಿಧಿಗಾಗಿ ತಮ್ಮ ಪಾಲನ್ನೊಪ್ಪಿಸಲು ಯಾರೂ ಅಳುಕಲಾರರು. ಆ ನಿಧಿ ಸಂಗ್ರಹದ ವ್ಯವಸ್ಥೆಗಳೀಗ ಕಾಂಗ್ರೆಸ್ ಅಧಿನಾಯಕರಿಂದಾಗಿವೆ. ಈ ಬಾರಿ ರಾಷ್ಟ್ರೀಯ ವಾರಕ್ಕಾಗಿ ಮುಂದೆ ಬಂದಿರುವ ಇವೆರಡು ಕಾರ್ಯಗಳನ್ನೂ ಸರ್ವರೂ ತ್ರಿಕರಣಪೂರ್ವಕವಾಗಿ ಸಾಧಿಸಿ ಜಯಶೀಲಗೊಳಿಸಲೆಂದು ವಿಜ್ಞಾಪಿಸುತ್ತೇವೆ.

ಹೀಗಾದರೆ-ಹೇಗೆ?

ಹಳ್ಳೀ ರೈತರು, ಕೆಲಸಗಾರರು, ಜನಸಾಮಾನ್ಯರ ಕಾಯಕಷ್ಟದ ಹಣವನ್ನು ವಿವಿಧ ರೀತಿಯ ಮೋಸ ವಂಚನೆಗಳಿಂದಲೂ, ಕಳ್ಳಸಂತೆಗಳಿಂದಲೂ ಸುಲಿದು ಸಂಗ್ರಹಿಸಿಕೊಳ್ಳಲಾಗುವ ವ್ಯಾಪಾರ ವಹಿವಾಟುಗಳಿಗವಕಾಶವಿದ್ದರೆ—

ಹಾಗೆ ಸಂಗ್ರಹಿಸಿದ ಧನ ಮತ್ತು ಹಂಗ, ವರ್ಚಸ್ಸುಗಳ ಬಲದಿಂದ ತಮಗೆ ಬೇಕಾದ ಮಾದರಿಯ ಸಂಘಸಂಸ್ಥೆಗಳನ್ನೋ ಸೇನೆ ದಳಗಳನ್ನೋ ಕಟ್ಟಿಕೊಂಡು ಎಲ್ಲರನ್ನೂ ತಮ್ಮ ಅಂಕೆಯೊಳಗಿಟ್ಟುಕೊಳ್ಳಲಾಗುವಂತಿದ್ದರೆ—

ಸತ್ಯ ಮತ್ತು ನ್ಯಾಯವನ್ನೂ ಇಂತಹ ದುಡ್ಡನ್ನು ಕೊಟ್ಟೋ ಈ ಮಾದರಿಯ ವರ್ಚಸ್ಸನ್ನು ಪ್ರದರ್ಶಿಸಿಯೋ ಕೊಂಡುಕೊಳ್ಳಲಿಕ್ಕಾದರೆ—

ಕಾಂಗ್ರೆಸಿನಂತಹ ರಾಷ್ಟ್ರೀಯ ಸಂಸ್ಥೆಗಳೂ 'ಸ್ವಸಮಾಜ ಸೇವಾ ಸಂಸ್ಥೆ'ಯಾಗಿಯೇ ಇರಬಲ್ಲುವಾದರೆ—

ಅನಾಥಾಲಯ, ಉಚ್ಚ ಶಿಕ್ಷಣಾಲಯ, ಜನಸೇವಾನಿಲಯ, ಇತ್ಯಾದಿಗಳೂ ಲಾಭದಾಯಕವಿದ್ದು ತಮ್ಮ ವಸಾಹತನ್ನೇ ಬೆಳೆಸುವಂತಿದ್ದರೆ—

ಶ್ರೀಮಂತರು ತಮ್ಮೊಡನೆ ಸ್ವಕಾರ್ಯಸಾಧನೆಗಾಗಿಯಾದರೂ ಸರಸ ಸಲ್ಲಾಪ ಮಾಡುವುದೇ ಅವರ ಪಾಲಿನ ದೊಡ್ಡ ತ್ಯಾಗ ಮತ್ತು ಸಮಾನತಾಭಾವನೆಯೆಂದೂ, ಅಂತಹ ಮಹತ್ತಾದ ತ್ಯಾಗ ಮಾಡಿದ ಶ್ರೀಮಂತರಿಗೆ ಅವರಪೇಕ್ಷಿಸುವ ಸೇವೆ ಕಾಣಿಕೆಯೊಪ್ಪಿಸುವುದು ತಮ್ಮ ಕರ್ತವ್ಯವೆಂದೂ ಜನಸಾಮಾನ್ಯರು ಭಾವಿಸಿಕೊಂಡರೆ—

ತಾವು ಪ್ರತಿಯೊಂದು ದೊಡ್ಡ ಯೋಜನೆಗಳಿಂದಾರಂಭಿಸಿ, ಸಣ್ಣ ಅಗಣ್ಯ ಸಂಗತಿಗಳ ವರೆಗೂ ಜಾತೀಯತಾ ಭಾವನೆಯನ್ನೇ ಪ್ರವರ್ತಿಸುತ್ತಾ, ಅದಕ್ಕಾಗಿ ಸುಸ್ಥಿತಿಯನ್ನೇ ಅಡಿಮೇಲು ಮಾಡುತ್ತಾ ಹೋದರೂ, ಅವರ ಈ ಜಾತೀಯತಾ ಭಾವನೆಯ ಕಡೆಗೆ ಕೈ ತೋರಿಸಿದರೆ ತಾವೇ ಜಾತೀಯತಾ ಭಾವನೆ ಪ್ರದರ್ಶಿಸಿದಂತಾಗುವುದೇನೋ ಎಂಬ ಅಪವಾದ ಭೀತಿ ಬಡಿದು ಮಿಕ್ಕವರು ಸುಮ್ಮಗಿರುತ್ತಾರಾದರೆ—

ಕಲಿತನಕ್ಕೆ ಬಹಿಷ್ಕಾರ ಬಿದ್ದು ಕಪಟ ವರ್ತನೆಗಳಿಗೆ ಮಂಜೂರಾತಿದೊರೆತರೆ-ಬಹಿರಂಗವಾದ ವರ್ತನೆಗಳು ಬಹಿಷ್ಕರಿಸಲ್ಪಟ್ಟು ಅಂತರ್ಗಾಮೀ ವಹಿವಾಟುಗಳು ಮಾನ್ಯಗೊಂಡರೆ-ಜನತಾ ಸುಲಿಗೆಗೀಗ ಇರುವ ನೀತಿ ನಿರ್ಬಂಧಗಳೂ ಜಾರಿ ಹೋಗಿ [illegible] ಬೀಳ್ತವಾದರೆ—

ಅದೇ ಬಂದ. ಸಂಗಡದ ಪಾಲಿನ ಶಾಂತಿಸಾಮ್ರಾಜ್ಯ; ಸ್ವರಾಜ್ಯ; ರಾಮರಾಜ್ಯ! ಆದರೆ ಜನಸಾಮಾನ್ಯರ ಪಾಲಿಗದು ಮಾಯಾ ಪ್ರಪಂಚ, ಮಂಕು ರಾಜ್ಯ; ಅಭಿವೃದ್ಧಿಪಥದತ್ತ ಯಾವ ಬಾಗಿಲಿಂದಲೂ ಹೋಗಲು ಬಿಡದ ಚಕ್ರಬಂಧ ಕೋಟೆ—

ಬಹುಸಂಖ್ಯಾಕರಾದ ರೈತರ ಮತ್ತು ಕೆಲಸಗಾರರ ಅರ್ಥಾಭಿವೃದ್ಧಿಯಾಗದೆ ರಾಷ್ಟ್ರಾಭಿವೃದ್ಧಿಯಾಗದು; ಆದರೆ ಸರ್ವಸಾಮಾನ್ಯವಾಗಿ ಅಜ್ಞರಾಗಿರುವ ಈ ವರ್ಗದ ಜನತೆಗೆ ತಮ್ಮ ಕೈಯಿಂದ ಕಸಗೊಂಡುದು ಮಾತ್ರ ಸುಲಿಗೆಯೆಂದು ತಿಳಿದೀತು ಹೊರತು, ಕಣ್ಣು ತಪ್ಪಿಸಿ ಅಪಹರಿಸಿದುದೇ [illegible]ದಿಂದ ಆದ ಮಾಯಾಪ್ರಪಂಚದಿಂದ ಪಾರಾಗಲಾರರು.

ಜನತಾ ಸೇವೆಗಾಗಿ, ಧರ್ಮೋದ್ಧಾರಕ್ಕಾಗಿ ಎಂಬ ನೆವಹೇಳುತ್ತಾ ಮುಂದೆ ಬರುವ ಸಂಘ ಸಂಸ್ಥೆಗಳ ಅಥವಾ ನೇತಾರರುಗಳ ಗುರಿಯುದ್ದೇಶವನ್ನು ಆಕೆಯ

ಟ್ಟಿಕೊಳ್ಳುವುದೇ ಎಂಬ ಗುಟ್ಟು ಸಾಮಾನ್ಯರಿಗೆ ತಿಳಿಯದುದ್ದರಿಂದ ಅವುಗಳಿಂದ ಬಿಡುಗಡೆ ಹೊಂದಬೇಕೆಂಬ ಜಾಗ್ರತಿಯೇ ಮೊಳೆಯದೆ ಅವರೀ ಕೋಟೆಯಿಂದ ಪಾರಾಗಲಾರರು.

ತಮ್ಮ ಅಜ್ಞಾನ, ಅಶಕ್ತಿ, ಅಸಡ್ಡೆಯ ದೆಸೆಯಿಂದಾಗಿ ತಮ್ಮ ಪಾಲಿನದಾದ ತಮ್ಮ ದುಡಿಮೆಯ ಪ್ರತಿಫಲವೇ ತಮ್ಮ ತಿಳುವಳಿಕೆಗೆ ಬಾರದ ರೀತಿಯಲ್ಲಿ ಅವರ ಕಡೆಗೆ ಹೋಗಿ ಸೇರಿಕೊಂಡಿದೆಯೆಂಬುದನ್ನರಿಯದ ಜನಸಾಮಾನ್ಯರು ಈ ಅಂತರ್ಗಾಮೀ ಸುಲಿಗೆಗಾಗಿ ಅಪಕಾರ ಸ್ಮರಣೆ ಮಾಡುವ ಬದಲಿಗೆ, ತಮ್ಮಲ್ಲುಳಿದಿದ್ದ ಅಲ್ಪಾಂಶಗಳನ್ನೂ ಅಣುಸಮೇತ ಎಳೆದುಕೊಳ್ಳುವದಕ್ಕಾಗಿ ಗಾಳದ ರೂಪದಿಂದ ಪುನಃ ತಮ್ಮ ಮುಂದೆ ಬರುವ ಆ ಹಳೇ ಸ್ಥಿತಿಯಂಶಕ್ಕಾಗಿ ಉಪಕಾರ ಸ್ಮರಣೆಯನ್ನೇ ಮಾಡಿ ಸ್ವಸಂತೋಷದಿಂದಲೇ ಗಂಟಲೊಡ್ಡುತ್ತಿರುವದರಿಂದ ಬಾಳಲಾರರು.

ಹೀಗೆ ಸುಲಿಯಲ್ಪಟ್ಟು ತಮ್ಮ ಜೀವನ ಸರ್ವಕ್ಷಣವೇ ಪ್ರಯಾಸಕರವಾಗಿರುವ ಜನಸಾಮಾನ್ಯರಿಗೆ ವಿದ್ಯೆ, ಜ್ಞಾನ, ಸಾರ್ವಜನಿಕ ಜೀವನವೆಂದರೇನು ಎಂಬ ಕಡೆಗೆ ಗಮನ ಕೊಡುವದಕ್ಕೂ ಅವಕಾಶವಿಲ್ಲದಿರುವಾಗ, ಬೇರೆ ಪರು ಮಾಡಿದ್ದೆಲ್ಲಾ 'ಉದ್ಧಾರ'ವೇ ಎಂದು ಭಾವಿಸಿಕೊಂಡು ಅವರ ಒದಿಯ ವಂಚನೆಗಟ್ಟು ಅದನ್ನೇ ಸುಧಾರಿಸಲು ಪ್ರಯಾಸವಾಗುತ್ತದೆ.

ಇಂತಹ ಇಂದಿನ ಅನ್ಯಾಯ ಸಾಮಾಜಿಕ ಸ್ಥಿತಿಗತಿಗಳ ಸುಲಿಯುಕೊಳ್ಳುವಲ್ಲಿ 'ಅತಿರೇಕ'ಸಂಪತ್ತನ್ನೂ ಮಿಕ್ಕೆಲ್ಲರಲ್ಲಿ ಅಭಾವವನ್ನೂ ನಿರ್ಮಿಸಿರುವುದರಿಂದ ಆ 'ಅಪರೂಪ'ದ ವ್ಯಕ್ತಿಯೇ ಮಹಾಮಾನವನಾಗಿ ಎಲ್ಲರಿಗೂ ತೋರುತ್ತಾನೆ. ಆದ್ದರಿಂದ ಆತ ಹೇಳಿದ್ದೇ ಸತ್ಯ, ಮಾಡಿದ್ದೇ ಮಹತ್ಕಾರ್ಯವೆಂಬ ಸಮ್ಮತಿ ಜನಸಾಮಾನ್ಯರಿಂದ ದೊರೆಕೊಂತಾಗುತ್ತದೆ. ಆ ಧನಿಕನಂತೂ ಜನತೆಗಲ್ಲದೆ ತನ್ನನ್ನಾ ಸ್ಥಾನಕ್ಕೇರಿಸಿದ ಅಸತ್ಯ, ವಂಚನೆ, ಸುಲಿಗೆ ಧರ್ಮಕ್ಕಾದಿಗೂ ದ್ರೋಹ ಮಾಡಲಾರನಾದ್ದರಿಂದ ನ್ಯಾಯ ಮತ್ತು ಸತ್ಯ ಬಾಳ ದುಸ್ಸಾಧ್ಯವಾಗುತ್ತದೆ.

ಆದ್ದರಿಂದ ಸಾರ್ವಜನಿಕರೀಗ ಕಣ್ಣು ತೆರೆಯಬೇಕು. ತಮ್ಮ ನಿದ್ರೆಯ ದೆಸೆಯಿಂದಾಗಿ ನಿರ್ಮಾಣಗೊಂಡ ಸಂಕುಚಿತ ಬುದ್ಧಿಯು ಸುಲಿಗೆ(ಶ್ರೀಮಂತಿಕೆ)ಯು ತಮ್ಮ ಜಾಗ್ರತಿಯಿಂದಲೇ ನಿರ್ನಾಮವಾಗುವಂತೆ ಮಾಡಬೇಕು. ನಿಜವಾದ ಶಾಂತಿ ಸಾಮ್ರಾಜ್ಯ, ಸಮಾನತಾ ಸ್ವರ್ಗ, ರಾಮರಾಜ್ಯ ಅಥವಾ ಪ್ರೇಮ ರಾಜ್ಯ ಸ್ಥಾಪನೆಯಾಗುವುದು ಆಗಲೇ.



Approved firm by the Govt. of Mysore
Certified by the Agent of the Govt. of Ceylone & Indian.

ಪ್ರಪಂಚದ ಆಹಾರ ಸ್ಥಿತಿ

ಕೆಲವು ವರುಷಗಳಿಂದ ರಾಹು ಪ್ರಾಯವಾಗಿ ಪ್ರಪಂಚವನ್ನೇ ಹಿಡಿದುಕೊಂಡಿರುವ ಆಹಾರಾಭಾವವು ಈ ವರುಷ ಕೂಡಾ ಬಿಟ್ಟಿಲ್ಲವೆಂಬುದು 'ಜಾಗತಿಕ ಆಹಾರ ಹಾಗೂ ಬೇಸಾಯ ಸಮಿತಿ'ಯ ದ್ವಿತೀಯ ಅಧಿವೇಶನದ ಮುಂದೆ ಬರಲಿರುವ ವರದಿಯಿಂದ ಗೊತ್ತಾಗುತ್ತದೆ. ಒಟ್ಟಿನ ಮೇಲೆ ಇಡೀ ಪ್ರಪಂಚದ ಆಹಾರ ಪರಿಸ್ಥಿತಿಯು ಈ ವರುಷ ಏನೊಂದೂ ಸುಧಾರಿಸಿಲ್ಲವೆಂದೂ ತುಲನಾತ್ಮಕವಾಗಿ ನೋಡಿದರೆ ಕೆಲವಂಶ ಕೆಟ್ಟಿದೆಯೆಂದೂ ಹೇಳಬಹುದು.

ದೂರಪೂರ್ವ ರಾಷ್ಟ್ರಗಳ ಅಭಾವವಿರುವ ಕ್ಷೇತ್ರಗಳಲ್ಲಿ ಸರಬರಾಯಿಯು ಅಪಾಯಕರಸ್ಥಿತಿಯನ್ನು ಸಮೀಪಿಸಿದೆ. ಕಳೆದ ವರುಷದಲ್ಲಿದ್ದ ಮಟ್ಟ ಮತ್ತು ಕೆಲವು ಯುರೋಪು ರಾಷ್ಟ್ರಗಳಲ್ಲಿ ತಲೆದೋರಿದಾಗಿ ಖರ್ಚಾಗುತ್ತಿದ್ದುದು 1947ಕ್ಕಿಂತ ಈ ವರುಷ ತಗ್ಗಿದೆ. ಪ್ರಪಂಚದ ಹೆಚ್ಚಿನ ಕಡೆಗಳಲ್ಲಿ ಕಳೆದ ವರುಷದಲ್ಲಿದ್ದ ಅಸಮಾಧಾನಕರ ಆಹಾರ ಮಟ್ಟವಾದರೂ ಈ ವರುಷದಲ್ಲಿಲ್ಲವೆಂದು ತಿಳಿದುಬರುತ್ತದೆ

ಯುರೋಪ, ಉತ್ತರ ಅಮೇರಿಕ ಮತ್ತು ದೂರಪ್ರಾಚ್ಯ ರಾಷ್ಟ್ರಗಳ ಬೆಳೆಗಾಲದ ಧಾನ್ಯೋತ್ಪತ್ತಿಯು ಭವಿಷ್ಯದ ಕುರಿತು ಸಾಕಷ್ಟು ಆಶೆಯನ್ನು ನಿರ್ಮಿಸುವಂತಹದಿದೆ. ಉತ್ತರವಲಯಗಳಲ್ಲಿ ಬಿತ್ತುವಿಕೆ ಹೆಚ್ಚಿದೆಯಾದರೂ ಅವುಗಳ ಕಟಾವಿಗೆ ಇನ್ನೂ ಕೆಲವು ತಿಂಗಳುಗಳಿವೆಯಾದ್ದರಿಂದ, ಈ ಕಟಾವಿನ ಮುಂಚಿನ ಅವಧಿಯಲ್ಲಿ ಉತ್ಪನ್ನವು ಕಡಿಮೆಯೇ ಇರುವುದು.

ಪೂರ್ವ ರಾಷ್ಟ್ರಗಳಲ್ಲಿ ಅಕ್ಕಿ ಮತ್ತಿತರ ಧಾನ್ಯಗಳ ಉತ್ಪನ್ನವು 1947ರಲ್ಲಿ ಕೆಲವಂಶ ಹೆಚ್ಚಿದೆ; ಆದರೆ ಯುದ್ಧ ಪೂರ್ವ ಕಾಲಕ್ಕಿಂತ ಅದಿನ್ನೂ ಬಹಳ ಕಡಿಮೆಯಿದೆ. ಜತೆಯಲ್ಲಿ ಸಾಕಷ್ಟು ಹೆಚ್ಚಿರುವ ಜನಸಂಖ್ಯೆಯೂ ಅಪಾಯಕರ ಆಹಾರಾಭಾವದ ಮಟ್ಟಕ್ಕೆ ಬಲಿಯಾಗಬೇಕಾಗಿದೆ.

ಭಾರತವು ಪ್ರಪಂಚದಲ್ಲೇ ಎಲ್ಲಕ್ಕಿಂತ ಹೆಚ್ಚಿನ ಆಹಾರಾಭಾವವಿರುವ ಕ್ಷೇತ್ರ. ಇಲ್ಲಿಯ ಅಕ್ಕಿ ಮತ್ತು ಗೋದಿಯ ಉತ್ಪನ್ನವು 1946ಕ್ಕಿಂತ ಕಡಿಮೆ.

ಅಕ್ಕಿಯನ್ನು ಬಿಟ್ಟೇ ರಫ್ತು ಮಾಡಲು ಸಿಗುವ ಇತರ ಉಳಿತಾಯದ ಧಾನ್ಯಗಳು 34,500,000 ಮೆಟ್ರಿಕ್ ಟನ್ನುಗಳಾಗಬಹುದೆಂದೂ, ಇದು 1946-47ರಲ್ಲಿದ್ದುದಕ್ಕಿಂತ 4,500 000 ಟನ್ನುಗಳಷ್ಟು ಹೆಚ್ಚಾದರೂ, ಅಭಾವವಿರುವ ರಾಷ್ಟ್ರಗಳ ಈ ವರುಷದ ಆವಶ್ಯಕತೆಯೂ ಕೊನೆಯ ಪಕ್ಷ 8 000,000 ಟನ್ನುಗಳಷ್ಟಾದರೂ ಹೆಚ್ಚಾಗಿರುವುದರಿಂದ ಧಾನ್ಯಗಳ ಅಭಾವವು ಅತಿಯಾಗಿಯೇ ಇದೆಯೆಂದೂ ಆ ವರದಿಯಲ್ಲಿದೆ. ಅಕ್ಕಿಯ ರಫ್ತು ತುಸು ದಟ್ಟಿದೆಯಾದರೂ ಅಕ್ಕಿಯಾವಶ್ಯಕತೆ ಹೆಚ್ಚಿರುವ ಪರಿಮಾಣದನ್ನು ಹೆಚ್ಚಿಲ್ಲವಾದ್ದರಿಂದ ಅಕ್ಕಿಯ ಅಭಾವ ನೀಗುವದಕ್ಕಾಗಿ ಆಮದಿಗೆ ಕಾಯುವ ರಾಷ್ಟ್ರಗಳು ಸಂಧಾರಿಸುವ ಆಶೆ ಕಡಿಮೆಯೆಂದು ಆ ವರದಿಯಲ್ಲಿ ನಮೂದಿಸಲಾಗಿದೆ.

ಮಂಗಳೂರು

ಅಳಿಯಸಂತಾನ ಮಸೂದೆಯು— ವಿಚಾರಣಾ ಸಮಿತಿಯವರು ಇದೇ ತಾ. 2 ಮತ್ತು 3ರಲ್ಲು ಮಂಗಳೂರ ಕಚೇರಿಯಲ್ಲಿ ಅಳಿಯಸಂತಾನ ಮಸೂದೆಯ ಸಂಬಂಧ ಹಲವಾರು ಸಾಕ್ಷ್ಯಗಳ ಅಭಿಪ್ರಾಯಗಳನ್ನೂ ಹೇಳಿಕೆಗಳನ್ನೂ ಪಡೆಕೊಂಡರು.

ನಡಿಯುವ ಚಿತ್ರ.

— ಶ್ರೀ ವಳ್ಳಿ (ತಮಿಳು ಚಿತ್ರ) —

ಬರುವುದು

ಅಲ್ಲಿ ಇಲ್ಲಿ ಎಲ್ಲಿ ನೋಡಿದರೂ ನಳ್ಳಿಯನಳ್ಳಿಯರೇ!

— ಗೊಲ್ಲಭಾಮ —

ಅಂಜಲಿದೇವಿ, ಕೃಷ್ಣವೇಣಿ, ರಘುರಾಮಯ್ಯ ಮೊದಲಾದವರು

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years. Filaria is a dirty, disfiguring disease. And yet a little united effort on the part of the public could at very little cost wipe out these two evils. Please, watch this space

Inserted by

The Canara Mutual Assurance Company Limited,

ESTD. 1932

H. O. UDUPI.

ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು— ಇದೇ ತಾ 2ರಲ್ಲು ಸಂಜೆ ಎಸ್. ಆರ್. ಎಸ್. ಹೋಮಿನಲ್ಲಿ ಮಂತ್ರಿಗಳಾದ ಶ್ರೀ ಕೆ. ಮಾಧವ ಮೆನೊನ್ ಮತ್ತು ಶ್ರೀ ಎ. ಬಿ. ಶೆಟ್ಟರ ಸನ್ನಿಧಿಯಲ್ಲಿ ಒಂದು ಸಭೆಯನ್ನು ಒಟ್ಟಿಸಲಾಯಿತು. ಶ್ರೀಗಳಾದ ಕೆ ಬಿ. ಜಿನರಾಜ ಹೆಗ್ಡೆ, ಎಚ್. ನಾರಾಯಣ ರಾವ್, ಕೆ. ಕೆ. ಶೆಟ್ಟಿ, ಎಮ್. ಆರ್. ಪೂಂಜ, ಜಿಲ್ಲಾ ಕಲೆಕ್ಟರ್, ಜಿಲ್ಲಾ ಸರಬರಾಯಿ ಆಫೀಸರರೂ ಹಾಜರಿದ್ದರು. ಸಭೆಯಲ್ಲಿ ಜಿಲ್ಲೆಗೆ ಕನಿಷ್ಠಪಕ್ಷ ಕಡಿಮೆ ಬೀಳುವ ಹತ್ತುಸಾವಿರ ಮತ್ತು ನಾಲ್ಕುನೂರಿಗೆ ಕಡ ಕೊಟ್ಟ 6800 ಟನ್ ಅಕ್ಕಿಯನ್ನಾದರೂ ಕಳುಹಿಸಬೇಕು, ರಿಲೀಫ್ ಅಂಗಡಿಗಳಲ್ಲಿ ದೊರೆಯುವ 3 ಔನ್ಸ್ ಅಕ್ಕಿಯನ್ನು ಆರು ಔನ್ಸಿಗಾದರೂ ಹೆಚ್ಚಿಸಬೇಕು ಇತ್ಯಾದಿ ವಿಷಯಗಳು ಸೂಚಿಸಲ್ಪಟ್ಟವು.

ಕಾರ್ಕಳ—ಸ್ಥಳೀಕ ಮಾರಿಗುಡಿಯಲ್ಲಿ ನಡೆಯುತ್ತಾ ಬಂದ ಪ್ರಾಣಿಬಲಿಯನ್ನು ನಿಷೇಧಿಸುವ ಬಗ್ಗೆ ತಾ 4-4-48ರಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿ ಪ್ರಾಣಿಬಲಿ ನಿಷೇಧದ ಠರಾವು ಸರ್ವಸಮ್ಮತದಿಂದ ಸ್ವೀಕಾರವಾಗಿ ಈ ವರ್ಷ ನಡೆಯತಕ್ಕ ಮಾರಿಪೂಜೆಯ ಸಮಯದಲ್ಲಿ ಪ್ರಾಣಿಬಲಿಯನ್ನು ನಿಲ್ಲಿಸುವಂತೆ ಸರಕಾರವನ್ನು ಕೇಳಲಾಯಿತು ಮತ್ತು ಪ್ರಾಣಿವಧೆಯನ್ನು ನಿಲ್ಲಿಸುವ ಕುರಿತು ಬೇಕಾದ ಕೆಲಸ ಮಾಡುವ ಬಗ್ಗೆ ಪ್ರಾಣಿದಯಾಜ್ಞಾನ ಪ್ರಚಾರಕ ಸಂಘವೆಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟು ಅದಕ್ಕೆ ಕೆಲವು ಮಂದಿಸದಸ್ಯರನ್ನು ಒಳಗೊಂಡ ಒಂದು ಸಮಿತಿಯೂ ಆರಿಸಲ್ಪಟ್ಟಿತು

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು— ಕಾರ್ಯದರ್ಶಿ ಶ್ರೀ ಕೆ. ಯು ನ್ ಕಾಮತರಿಂದ, ಸ್ಥಳೀಯ ತಹಶೀಲ್ದಾರರ ಸಂಬಂಧವಾಗಿ ತಾ. 9-3 48ರ ಸಭೆಯಲ್ಲಿ ಕಾಂಗ್ರೆಸ್ ಕಮಿಟಿಯು ಮಾಡಿದ್ದ ನಿರ್ಣಯದ ಕುರಿತಾಗಿಯೂ ತಾ. 16-3-48ರಲ್ಲಿ ಶ್ರೀ. ಯು. ಮಂಜುನಾಥ ನಾಯ್ಕರು ಬರೆದಿದ್ದ ಪತ್ರವೂ, ತಾ. 25-3-48ರಲ್ಲಿ ತಾವು ಸರ್ಕಲ್ ಕಾಂಗ್ರೆಸ್ ಕಮಿಟಿಗೆ ಮಾಡಿದೆನೆನ್ನುವ ವರದಿಯೂ, ಆಧಾರವಿಲ್ಲದಿರುವಲ್ಲಿ ಅಸಂಬದ್ಧವನ್ನೇ ಆದರಿಸುವಂತಹ ಅಭಿಪ್ರಾಯಗಳೂ ನಮ್ಮಜೆಗೆ ಪ್ರಕಟಣೆಗಾಗಿ ಬಂದಿವೆ. ಅವು ಇಷ್ಟರಲ್ಲೇ ಪತ್ರಿಕೆಯಲ್ಲಿ ಪ್ರಕಟವಾಗಿರುವುದರಿಂದಲೂ, ಇಂತಹ ವಿಷಯದ ಹೇಳಿಕೆಗಳು ಬೇರೆ ರೀತಿಯಿಂದ ಮೊದಲೇ ಒಂದು ಮೂರು ಆಗಿಲ್ಲವನ್ನೂ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ಸರ್ಕಾರವಾಗಿ ಪ್ರಕಟಿಸಿರುವುದರಿಂದಲೂ, ಫನ ಅವುಗಳನ್ನು ಪ್ರಕಟಿಸುವ ಆವಶ್ಯಕತೆ ತೋರುವದಿಲ್ಲವಾದ್ದರಿಂದ ಪ್ರಕಟಿಸಿಲ್ಲ

ಸಂಪಾದಕ.

CHITRAKOT ASTHMA CURE
(Registered)
Widely renowned and a most Powerful highly effective remedy for curing Asthma completely by one dose to be taken on 23-4-1948 full moonnight. Trial is highly effective at the time of eclipse of the moon.
Apply at once in English.-
SRIMAHATMAYOGI BABA
Ayurvedic Buti Bhandar,
P. O. CHITRAKOT, U. P.

ಉಡುಪಿ.

ಮುದ್ರಾಸ್ ಮಾನ್ಯ ಮಂತ್ರಿಗಳ ಆಗಮನ—ಮದ್ರಾಸ ಸರಕಾರದ ಬೇಸಾಯ ಖಾತೆಯ ಮಾನ್ಯ ಮಂತ್ರಿ ಶ್ರೀ ಕೆ. ಮಾಧವ ಮೆನನ್ ಮತ್ತು ಪಬ್ಲಿಕ್ ಹೆಲ್ತ್ ಖಾತೆಯ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಇದೇ ತಾ 3ರಲ್ಲು ಸಂಜೆ ಉಡುಪಿಗೆ ಬಂದರು. ಮರುದಿನ ಬೆಳಿಗ್ಗೆ ತಾಲೂಕು ಕಚೇರಿಯಲ್ಲಿ ಅಳಿಯಸಂತಾನ ಮಸೂದೆಗೆ ಸಂಬಂಧಪಟ್ಟವರಿಂದ ಸಾಕ್ಷ್ಯಗಳನ್ನು ಪಡೆದರು. ನ್ಯಾಯವಿಧಾಯಕ ಸಭೆಯ ಈ ಜಿಲ್ಲೆಯ ಪ್ರತಿನಿಧಿಗಳೂ ಮಂಗಳೂರಿನ ಶ್ರೀ [illegible] ಮೆನನ್ನರವರೂ ಹಾಜರಿದ್ದರು. ಕುಂದಾಪುರ, ಕಾರ್ಕಳ ಮೊದಲಾದ ಕಡೆಗಳ ಅಳ್ವಆಳಿಯ ಸಂತಾನಿಗರು ಈ ಪರಿಶೀಲನಾ ಸಭೆಗಾಗಮಿಸಿ, ತಮ್ಮ ಸಾಕ್ಷ್ಯಗಳನ್ನಿತ್ತಿದ್ದರು. ಮಸೂದೆಯು ಕಲಮುವಾರಾಗಿ ಸವಿವರವಾಗಿ ಚರ್ಚಿಸಲ್ಪಟ್ಟಿತು.

ಬಿನ್ನವತ್ತಳೆ—ಮಧ್ಯಾಹ್ನ ಮುನಿಸಿಪಲ್ ಆಫೀಸಿನಲ್ಲಿ ನಗರಸಭೆಯ ಕಡೆಯಿಂದ ಶ್ರೀ ಮ. ಉಪೇಂದ್ರ ಶ್ರೀನಿವಾಸ ಸಾಯ್ಯರೂ ಸರ್ಕಲ್ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀ ಬಾಳ್ಕುಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರೂ ಮಂತ್ರಿಗಳಿಬ್ಬರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದರು. ಆಹಾ ಮಾಗಿದ ಬಳಿಕ ಶ್ರೀ ಮೆನನ್ನರು ದ. ಕ. ಜಿಲ್ಲೆಯಲ್ಲಿಯ ಆಹಾರ ಅಭಾವದ ಕುರಿತು ಪ್ರಸ್ತಾಪಿಸುತ್ತಾ ನಿಜವಾಗಿಯೂ ದ. ಕ. ಜಿಲ್ಲೆ[illegible] ಅಭಾವವಿದೆ ಎಂದು ಸೂಚಿಸಿದರು. ಈ ಕುರಿತು ತಾನು ಪ್ರಧಾನ ಮಂತ್ರಿಗಳಿಗೆ ಟೆಲಿಫೋನ್ ಮೂಲಕ ತಿಳಿಸಿರುವೆನೆಂದು ಸಹ ಹೇಳಿದರು. ಕಂಟ್ರೋಲುಗಳ ಕುರಿತು ಮಾತನಾಡುತ್ತಾ ಅವುಗಳನ್ನು ಪುನಹ ಸಜೀವಗೊಳಿಸಲು ಸಾಧ್ಯವಿಲ್ಲವೆಂದರು. ಏನೇ ಕೊರತೆಯಿರಲಿ, ಏನೇ ಕಷ್ಟಗಳು ಬರಲಿ, ಜನರು ಉಪವಾಸಬಿದ್ದು ಸತ್ತರು ಎಂಬ ಅಪಸ್ವರ ಹೊರಡಲು ಮದ್ರಾಸು ಸರಕಾರವು ಎಂದೂ ಅವಕಾಶಕೊಡಲಾರದೆಂದೂ ತಿಳಿಸಿ ಕಷ್ಟ ದಿನಗಳನ್ನು ಸುಧಾರಿಸುವುದರಲ್ಲಿ ಸರ್ವರ ಸಹಕಾರವನ್ನು ಕೋರಿದರು. ಆಹಾರ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿ ಜನರ ಸಹಕಾರವು ಅತ್ಯಗತ್ಯವೆಂದು ಮಾನ್ಯ ಶ್ರೀ ಎ. ಬಿ. ಶೆಟ್ಟರು ಸೂಚಿಸಿದರು. ಬಿನ್ನವತ್ತಳೆಯಲ್ಲಿ ಸೂಚಿಸಿದ ಇತರ ವಿಷಯಗಳ ಕುರಿತು ಮಾತನಾಡುತ್ತಾ ಸರಕಾರದೊಡನೆ ಹಣದ ಅಭಾವವಿರುವುದರಿಂದ ಸಂಸ್ಥಾನದ ಎಲ್ಲಾ ಮುನಿಸಿಪಾಲಿಟಿಗಳಲ್ಲಿ ಶುದ್ಧ ನೀರಿನ ಸರಬರಾಯಿ ಮೊದಲಾದ ಯೋಜನೆಗಳನ್ನು ಒಮ್ಮಿಂದೊಮ್ಮೆಗೇ ಮುಂದೊತ್ತಲು ಸಾಧ್ಯವಾಗುವುದಿಲ್ಲ. ಮುನಿಸಿಪಾಲಿಟಿಗಳೇ ಅವನ್ನು ಮಾಡಲು ಅವುಗಳಲ್ಲೂ ಹಣದ ಅಭಾವವಿದೆ. ಇಂತಹ ಪರಿಸ್ಥಿತಿಯಲ್ಲಿ ಉಡುಪಿ ಮುನಿಸಿಪಾಲಿಟಿಯ ಕೇಳಿಕೆಗಳನ್ನು ಪೂರೈಸುವುದಾದರೂ ಹೇಗೆ ಎಂದರು. ಒಂದುವೇಳೆ ನಗರಸಭೆಯವರೇ ಹಣದ ವ್ಯವಸ್ಥೆ ಮಾಡುವುದಾದರೆ ಅವರು ಕೇಳಿದ ಬೇಡಿಕೆಗಳನ್ನು ಕೂಡಲೇ ಕಾರ್ಯರೂಪಕ್ಕೆ ತರಲು ಆಲೋಚಿಸಲಾಗುವುದೆಂದರು. ಇದರ ಕುರಿತು ನಗರಸಭೆಯ ಚೆಯರ್‌ಮೆನರೂ ಇತರ ಸದಸ್ಯರೂ ಚೆನ್ನಾಗಿ ಪರಿಶೀಲಿಸಬೇಕೆಂದು ವಿನಂತಿಸಿದರು.

ಕೊಪರೇಟಿ 'ಹೌಸ್ ಬಿಲ್ಡಿಂಗ್ ಸೊಸೈಟಿಯ ಪಾಲುದಾರರ ಪ್ರಥಮ ಸಭೆಯು ತಾ ೬ರಲ್ಲು ಮುನಿಸಿಪಲ್ ಆಫೀಸಿನಲ್ಲಿ ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ್ ಶ್ರೀ ಎಮ್. ಶ್ರೀನಿವಾಸ ಸ್ವಾನುಭಾಗರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆ ಕರೆದುದರ ಉದ್ದೇಶವನ್ನು ತಿಳಿಸಿ ಸೊಸೈಟಿಯ ಮಾದರಿ ಉಪನಿಬಂಧನೆಗಳನ್ನು ಓದಿಹೇಳಿ ಸೊಸೈಟಿಗೆ ಇಲಾಖೆಯ ಓರ್ವ ಆಫೀಸರರೇ ಪ್ರಕೃತ ಕಾರ್ಯದರ್ಶಿಯರಾಗಿರತಕ್ಕದ್ದು, ಏಳುಜನ ಡೈರೆಕ್ಟರರು ಇಲಾಖಾ ರಿಜಿಸ್ಟ್ರರಿಂದಲೇ ನಾಮಕರಣಹೊಂದಿ ಅವರು ಐದು ವರುಷಗಳತನಕ ಅಧಿಕಾರದಲ್ಲಿರತಕ್ಕದ್ದು ಇತ್ಯಾದಿ ಪ್ರಾಮುಖ್ಯ ವಿಷಯಗಳನ್ನು ಅಧ್ಯಕ್ಷರು ವಿವರಿಸಿದರು. ಉಪನಿಬಂಧನೆ ರಿಜಿಸ್ಟ್ರಿಗೆ ಅರ್ಜಿ ಮಾಡುವರೆ ನಿರ್ಧಾರವಾಯಿತು. ವಸತಿಗೃಹ ನಿರ್ಮಾಣಯೋಜನೆ ಕಾರ್ಯರೂಪಕ್ಕೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇದೀಗ ಪ್ರಥಮಬಾರಿ ಬರುವಂತಹುದು.

ಸ್ವೀಕಾರ-ವಿಮರ್ಶೆ

'ವಿಜ್ಞಾನದ ವಿಚಿತ್ರಗಳು'-ಲೇಖಕರು_ಶ್ರೀ. ಕೆ. ವಿಟ್ಠಲ ಶೆಣೈ, ಬಿ. ಎ. ಎಲ್. ಟಿ.; ಪ್ರಕಾಶಕರು_ಶ್ರೀ. ಕೆ. ಆರ್. ಶೆಣೈ, ಕೋರ್ಟುರೋಡ್, ಉಡುಪಿ, ದ. ಕ. ಕ್ರೌನ್ ¼ ಆಕಾರದ ೧೪೮ ಪುಟಗಳ ಪುಸ್ತಕ. ಬೆಲೆ ರೂ ೨ ೪ 0 ಶ್ರೀ. ವಿಟ್ಠಲ ಶೆಣೈಯವರು ಈ ಪುಸ್ತಕವನ್ನು ಬರೆದು ಕನ್ನಡ ಜನತೆಗೆ ಮಹತ್ತಾದ ಉಪಕಾರವನ್ನು ಮಾಡಿದ್ದಾರೆ. ನಾವಿಂದು ವಿಜ್ಞಾನ ಯುಗದಲ್ಲಿ ಬಾಳುತ್ತಿದ್ದೇವೆ. ನಮ್ಮ ಅನುದಿನದ ಬಾಳಿನ ಒಳಹೊರಗೆಲ್ಲ ವಿಜ್ಞಾನವು ಹಾಸು-ಹೊಕ್ಕಾಗಿ ಹೊಸೆದುಕೊಂಡಿದೆ. ನಮ್ಮ ಹಲವು ಜೀವನಾವಶ್ಯಕ ವಸ್ತುಗಳು, ಸುಖ ಸಂತೋಷ ಸೌಕರ್ಯ ಸಾಧಕ ಸಲಕರಣೆಗಳು, ಚಿಕಿತ್ಸೆಯ ಸಾಧನಗಳು, ಉದ್ದಿಮೆಯ ವಿವಿಧ ಯಂತ್ರೋಪಕರಣಗಳು, ನೆಲಜಲಾಕಾಶಗಳಲ್ಲಿ ಶೀಘ್ರಸಾರಿಗೆಯ ವಾಹನಗಳು ಇವೆಲ್ಲ ವಿಜ್ಞಾನದ ಕೆಲವು ಮುಖ್ಯ ತತ್ವಗಳನ್ನಾದರಿಸಿ ರಚಿತವಾಗಿವೆ. ಅವುಗಳ ಪ್ರಯೋಗಗಳಲ್ಲಿಯೂ ವಿವಿಧ ತತ್ವಗಳು ಅಡಕವಾಗಿವೆ. ಆದರೆ ಇವುಗಳ ನಿರ್ಮಾಣ ಪ್ರಯೋಗಗಳು ವಿಜ್ಞಾನದ ಯಾವ ಯಾವ ಸೂತ್ರ ತಂತ್ರಗಳನ್ನಾಧರಿಸಿವೆ ಎಂಬ ಸಾಮಾನ್ಯ ತಿಳುವಳಿಕೆಯಾದರೂ ವಿದ್ಯಾವಂತರೆನಿಸಿಕೊಳ್ಳುವ ನಾಗರಿಕರೆನಿಸಿಕೊಳ್ಳುವ [illegible] ಎಷ್ಟುಮಂದಿಗಿದೆ? ಎಂದ ಮೇಲೆ ಈ ವಿಚಾರವಾಗಿ ಜನಸಾಮಾನ್ಯರ [illegible] ಅಜ್ಞಾನದ ಅಗಾಧತೆಯನ್ನು ಪ್ರತ್ಯೇಕ ಹೇಳಬೇಕೆ? ಇಂದು ಗ್ರಾಮೊಫೋನ್ ರೇಡಿಯೋ ಫೊಟೊಗ್ರಾಫಿ, ಸಿನೆಮಾ, ಟೆಲಿಫೋನ್, ಟ್ರೈನ್ ಟ್ರಾಮು, ಸ್ಟೀಮರ್, ಜಲಾಂತರ್ಗಾಮಿ, ವಿಮಾನ, ಎಕ್ಸ್‌ರೇ ಮುಂತಾದ ಎಷ್ಟೋ ವೈಜ್ಞಾನಿಕ ರಚನೆಗಳನ್ನು ನೋಡುತ್ತೇವೆ, ಕೇಳುತ್ತೇವೆ, ಅಥವಾ ಅನುದಿನ ಅವುಗಳನ್ನು ಬಳಸಿಕೊಳ್ಳುತ್ತೇವೆ. ಆದರೆ ಅವು ಏನು? ಹೇಗೆ? ಎಂಬ ಪ್ರಶ್ನೆಯನ್ನೆತ್ತಿದರೆ ಆಗ ನಮ್ಮ ಅಜ್ಞಾನದ ಆಳದ ಅರಿವಾಗಿ ನಾಚಿಕೆಯಾಗುತ್ತೆ. ಈ ಅಜ್ಞಾನದ ಮಾನದಲ್ಲಿ ನಾವೂ ಕಾಡಾಡಿಗಳೂ ಮಕ್ಕಳೂ ಒಂದೇ ಸಾಲಿನಲ್ಲಿದ್ದೇವೆ. ಒಂದು ದೃಷ್ಟಿಯಿಂದ ನೋಡಿದರೆ ನಮಗಿಂತ ಅವರೇ ಮೇಲು. ಹೇಗೆಂದರೆ ಈ ವಿಜ್ಞಾನದ ವಿಚಿತ್ರಗಳನ್ನು ತಿಳಿದುಕೊಳ್ಳಬೇಕೆಂಬ ಆತುರ ಕುತೂಹಲಗಳು ಅವರಲ್ಲಿವೆ. ಜ್ಞಾನಾರ್ಜನೆಗಾಗಿ ಪ್ರಕೃತಿಯಿತ್ತಿರುವ ಈ ಕುತೂಹಲತೆಯನ್ನು ಅವರು ಉಳಿಸಿಟ್ಟುಕೊಂಡು ಇವನ್ನು ಕಂಡಾಗಲೆಲ್ಲ ಇವು 'ಏನು? ಹೇಗೆ?' ಎಂದು ಕೇಳಿ ತಿಳಿದುಕೊಳ್ಳುವ ಆತುರವಾದರೂ ಅವರಲ್ಲಿದೆ. ನಾವೋ ಆ ಕುತೂಹಲತೆಯನ್ನು ವಿದ್ಯಾಭಿಮಾನದಿಂದಾಗಿ ಅದುಮಿ ಮುಚ್ಚಿಟ್ಟುಕೊಳ್ಳುತ್ತಲಿದ್ದೇವೆ. ಇದು ನಮ್ಮಲ್ಲಿರುವ ದೋಷ. ಇಂದಿನ ವಿಜ್ಞಾನಯುಗದಲ್ಲಿ ನಾಗರಿಕನೆನಿಸಿಕೊಳ್ಳಬೇಕಾದರೆ ಮೇಲೆ ಹೇಳಿದ ಹಲವು ವಸ್ತು ವಿಷಯಗಳ ಸಾಮಾನ್ಯ ತಿಳುವಳಿಕೆಯಾದರೂ ಬೇಕು. ಅವನ್ನೆಲ್ಲ ಶ್ರೀ. [illegible] ಯವರು ಸಾಧ್ಯವಿದ್ದಷ್ಟು ಸುಲಭವಾಗಿ, [illegible] ನ್ಯರೂ ತಿಳಿಯಲಾಗುವ ಮಾತಿನಲ್ಲಿ ಹೇಳಿದ್ದಾರೆ. [illegible] ಕನ್ನಡದಲ್ಲಿ [illegible] ಹೇಳುವುದು ಬಲು ಕಷ್ಟವಾಗಿರುವುದಾದರೂ ಶ್ರೀ. ಶೆಣೈಯವರು ಈ ಪ್ರಯತ್ನದಲ್ಲಿ ಅಸಾಧಾರಣ ವಿಜಯಿಗಳಾಗಿದ್ದಾರೆ. ಮೇಲಾಗಿ, ಕನ್ನಡದಲ್ಲಿ ವಿಜ್ಞಾನ ವಿಷಯಕವಾದ ಪುಸ್ತಕಗಳು ತೀರ ವಿರಳವಾಗಿರುವಲ್ಲಿ, ಇರುವವುಗಳೂ ಯಾವುದಾದರೊಂದು ಏಕ ವಿಷಯಕಗಳಾಗಿರುವಾಗ, ಶ್ರೀ. ವಿಟ್ಠಲಶೆಣೈಯವರು ವಿವಿಧ ವೈಜ್ಞಾನಿಕ ವಿಚಾರಗಳ [illegible] ಈ ಪುಸ್ತಕವನ್ನು ಬರೆದು ಕನ್ನಡ ಜನತೆಯ ಅದೊಂದು ಅವಶ್ಯಕತೆಯ ನೈಶಿಷ್ಟ್ಯವನ್ನು ಯಶಸ್ವಿಯಾಗಿ ಪೂರೈಸಿಕೊಟ್ಟಿದ್ದಾರೆ, ಎಂತಲೆ ನಾವು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಕನ್ನಡ ಜನಕ್ಕೆ, ಕನ್ನಡ ದೇಳಿಗೆಗಾಗಿ ದುಡಿಯುವ ವ್ಯಕ್ತಿ ಸಂಘಸಂಸ್ಥೆಗಳೆಲ್ಲ ಶ್ರೀ. ಶೆಣೈಯವರ ಈ ಕೃತಿಯನ್ನು ಪ್ರೋತ್ಸಾಹಿಸಿ ಅವರು [illegible] ಹಲವು ಪುಸ್ತಕಗಳನ್ನು ಬರೆಯುವಂತೆ ಅವರಿಗೆ ಉತ್ತೇಜನವನ್ನೀಯುವುದು ಕನ್ನಡ ನಾಡಿನ, ನುಡಿಯ, ಜನತೆಯ ಹಿತದೃಷ್ಟಿಯಿಂದ ಕರ್ತವ್ಯವಿದೆ.

—ಕೊರಡ್ಕಲ್

NOTICE

This is to remind you that under Sub-rule (1) of rule 11 of M. G. S. T. (T. O & A) Rules 1939, you are liable to submit a return in form A showing your gross and net turnover for the year ending 31-3-48 so as to reach this Office not later than 1st May 1948. The turnover derived from 1-4-47 to 31-12-47 and 1-1-48 to 31-3-48 should be shown separately in the A return. One A form is enclosed.

2. Under Sub-sections 1 and 3 of section 8A of M. G. S. T Act you are also required to pay a registration fees of Rs. 6/- for the year 1948-49 and submit the receipt to this office in token of having made the fees on or before 1-5-48.

3. You should continue to pay monthly tax for the year 1948-49 at the rates fixed for the last quarter of 47—48 pending provisional assessment for that year in accordance with rule 11(4) of M. G. S. T. (T. O & A) Rules 1939.

Note: Please note that failure to submit the A return in time or the submission of an incorrect return and failure to pay the registration fees by the time prescribed or to pay tax at the rates fixed will render you liable for penal action as they are offences under M. G. S. T. Act.

(Sd.) **M Ganapathy,**
Asst. Commercial Tax Officer, Udipi.
Date 1-4-'48

REGD.

ಅಮೃತಾಂಜನ.

ತಲೆನೋವು, ಶೀತದ ವೇದನೆ, ಕೆಮ್ಮು, ಶೀತ, ಗಂಟಲು ನೋವು, ಹಲ್ಲು ನೋವು ಮತ್ತು ಇತರ ಎಲ್ಲಾ ರೋಗಗಳಿಗೂ [illegible]

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೂ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಚಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಶ್ರೀ ದುರ್ಗಾ ಭವನ, ಮೂಲ್ಕಿ.

ಯಂ. ಆರ್. ಭಟ್ (ಆರ್ಟಿಸ್ಟ್) ವ್ಯವಸ್ಥಾಪಕ.

NEO ROYAL CAFE,
Boarding & Lodging,
Santhekatte, UDIPI.

ಎಲ್ಲ ತರದ ದಂತರೋಗಗಳನ್ನು ನೆಟ್ಟಗೆ ಮಾಡಿ
ಹುಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಉದಯಭಾರತದ ದುರವಸ್ಥೆ

ಉಡುಪಿಯ 'ಉದಯ ಭಾರತ'ದ ತಾ 27-3-48ರ ಸಂಚಿಕೆಯಲ್ಲಿ 'ನವಯುಗದ ಹರಿಶ್ಚಂದ್ರೋಪಾಖ್ಯಾನ' ಬಂದಿದ್ದರೆ ತಾ. 3-4-48ರ ಸಂಚಿಕೆಯಲ್ಲಿ 'ನವಯುಗದ ಶಕುನಿ ತಂತ್ರ' ಬಂದಿದೆ. ಈ ತಂತ್ರದ ಅಡಿಯಲ್ಲಿ 'ಉದ್ಯೋಗಪರ್ವ' 'ಸಂಧಾನಪರ್ವ' 'ಶಿಶುಪಾಲಲೀಲೆ' 'ಭಸ್ಮಾಸುರೀ ವೃತ್ತಿ' ಇತ್ಯಾದಿ ತಲೆಬರೆಹಗಳನ್ನು ಕೊಟ್ಟು, ಅವುಗಳಿಗನುಗುಣವಾಗಿ ಈ ಯುಗ ಮತ್ತೀ ಪ್ರಸಂಗಕ್ಕೇನೆ ಹೇಳಿಸದ ವಿಷಯಗಳನ್ನು ಯದ್ವಾತದ್ವಾ ಚೆಲ್ಲುವ ದುರವಸ್ಥೆಯು ಆ ಪತ್ರಿಕೆಗೆ ಬಂದಿರುವುದನ್ನು ಕಂಡು ಸತ್ಯಕ್ಕೂ ನಾವು ವಿನೋದಕ್ಕಿಂತ ಹೆಚ್ಚಾಗಿ ಕನಿಕರಗೊಂಡಿದ್ದೇವೆ. "ಈ ಮೊದಲು ಅನೇಕ ಬಾರಿ ನವಯುಗಕ್ಕೂ ನಮಗೂ ಅದ ವಾದದಲ್ಲಿ ನವಯುಗವು ನಿರುತ್ತರವಾಗಿತ್ತು" ಎಂದು ಉದಯ ಭಾರತವೇ ಚೀತ್ಕಾರ ಮಾಡಿರುವಂತೆ, ವಾದಯೋಗ್ಯ ವಿಷಯವಾವುದನ್ನೂ ಮುಂದಿಡದೆ ಸಿಕ್ಕಾಬಟ್ಟೆ ಕೂಗಾಟವೆಬ್ಬಿಸುವ ಮಟ್ಟಕ್ಕೆ ಬಂದ—ಕೇವಲ ಡಾಕ್ಟರರುಗಳ ಹಕ್ಕನಪಹಾರವನ್ನು ಬೆಳೆದು ಹೋದ 'ಕೇಸಿ'ನಿದಿರು ಮೌನ ವಹಿಸುವ ಪತ್ರಿಕಾ ಧರ್ಮ ನಮ್ಮದೇನೋ ನಿಜ. ಆದ್ದರಿಂದಲೇ ಹಿಂದಿನಂತೆ ಕಳೆದವಾರದ ಉದಯಭಾರತದ ಚೀತ್ಕಾರಕ್ಕೂ ನಾವು ಮೌನಧಾರಣೆ ಮಾಡಿದ್ದೆವು. ಆದರೆ, ಉದಯಭಾರತವನ್ನು 'ಸತ್ಕಾರಕಕ್ಕಾಗಬಿದ್ದರೂ ಸಂಗ್ರಾಮಕ್ಕಾಗುವ ಒಂದು ಉಪಕರಣ'ವೆಂದು ಎತ್ತಿಕೊಂಡವರಿರುವಾಗ ಅವರಾದರೂ ತಮ್ಮೀ ಆಯುಧವನ್ನು ಹೀಗೆ ತುಕ್ಕು ಹಿಡಿಯಲು ಬಿಡಬಾರದೆಂಬುದಕ್ಕಾಗಿಯೂ, ಸಾರ್ವಜನಿಕರೂ ಇದೊಂದು ಅಪಾಯದ ಕಡೆಗೆ ಸಾಕಷ್ಟು ಜಾಗರೂಕತೆಯಿಂದಿರಲಿ ಎಂಬುದಕ್ಕಾಗಿಯೂ, ಸಾಧ್ಯವಾದರೆ ಸ್ವತಃ ಉದಯಭಾರತವೇ ತನ್ನ ಮನೋರೋಗಬಾಧೆವುಟ್ಟದ್ದೆಂಬುದನ್ನು ತಾನೇ ತಿಳಿದುಕೊಳ್ಳಲೆಂಬುದಕ್ಕಾಗಿಯೂ ಇಲ್ಲಿ ಅದರ ಬುದ್ಧಿ ಅಸ್ತವ್ಯಸ್ತತೆಯನ್ನೊಂದಿಷ್ಟು ತೋರಿಸಿಕೊಡಬೇಕಾಗಿ ಬಂದಿದೆ. ಅಪಕ್ವ ಬುದ್ಧಿ ಮತ್ತು ಅಜ್ಞಾನವನ್ನು ಅದೊಂದು ಮಿತಿಯವರೆಗೆ ಕ್ಷಮಿಸಬಹುದು; ಬಾದಿಸಲರಿಯದ ಪೊಳ್ಳು ಮಾತುಗಳನ್ನೂ ಕಡೆಗಣಿಸಿಬಿಡಬಹುದು. ಆದರೆ ತನ್ನ ಅರಿವೇ ತನಗಿಲ್ಲದ 'ತಿರುಗ ಮುರುಗಾ' ರೋಗವು ಸಾರ್ವಜನಿಕರಿಗಸಹ್ಯ, ಸ್ವತಃ ಆ ರೋಗಿಗೆ ಅಪಾಯಕರ ಅದ್ದರಿಂದ ಎಲ್ಲರ ಹಿತದೃಷ್ಟಿಯಿಂದ ಉದಯ ಭಾರತದ ಅಸ್ವಸ್ಥವನ್ನಿಷ್ಟೇ ಇಲ್ಲಿ ತೋರಿಸಿಕೊಡಲಾಗಿದೆ. ಆದರ ಕನಿಕರಾರ್ಹ ಸ್ಥಿತಿಯು ಕಗಳ ಮೇಲಿಂದ, ಆಗು ಹಾಪ, ಯಾವ ಕಡೆಯಿಂದಲೋ ಆಯ್ದುಕೊಂಡು ಮೇಲಿಂದ ಮೇಲೆ ಉಚ್ಚರಿಸುತ್ತಿರುವ ಕೆಲವು 'ಅಮೂಲ್ಯ'ಪದಗಳ ಕುರಿತಾಗಲೀ, ಅದು ತನ್ನ ಮನೋಸ್ಥಿತಿಗನುಗುಣವಾಗಿ ಬೇರೆಯವರ ಮೇಲೆ ಚೆಲ್ಲುತ್ತೇನೆಂದು ನೆನೆಸಿಕೊಂಡು ತನ್ನ ಮುಖಕ್ಕೇನೆ ಬಳೆದುಕೊಂಡಿರುವ ಕಲ್ಮಷದ ಕುರಿತಾಗಲೀ, ಅದು ಸ್ವಸಮರ್ಥನೆಯೆಂಬ ಭ್ರಮೆ ಕಟ್ಟಿಕೊಂಡೇ ಸರ್ವರಿಗೂ ಗೊತ್ತಿರುವ ಸಂಗತಿಗಳನ್ನು ಬಚ್ಚಿಡುವ ಚೇಷ್ಟೆಗಿಳಿದು ಆತ್ಮಖಂಡನೆಮಾಡಿಕೊಂಡಿರುವ ಕುರಿತಾಗಲೀ ಪರಿಹಾಸ್ಯ ಮಾಡುವ ಬದಲಿಗೆ ಕನಿಕರಪಡಬೇಕನ್ನಿಸುತ್ತದೆ. ಇಂತಹ ದುರ್ದೈವಿಗಳು ಅಲ್ಲಲ್ಲಿ ಕಾಣಲು ಸಿಗುತ್ತಿರುವುದು ನಿಷ್ಪಾಪಕರವೆಂದೂ, ಕಾಂಗ್ರೆಸ್ ಸರಕಾರವು ಸಾರ್ವಜನಿಕ ಆರೋಗ್ಯದ ಕಡೆಗೆ ಕೊಟ್ಟ ಲಕ್ಷ್ಯವು ಸಾಕಾಗಲಿಲ್ಲವೆಂಬುದರ ನಿದರ್ಶನವೆಂದೂ ಸೂಚಿಸಲಿಚ್ಛಿಸುತ್ತೇನೆ.

ತಾ. 4-3-48ರ ನವಯುಗದಲ್ಲಿ ಬಂದಿದ್ದ ಒಂದು ವಾರ್ತೆಯ ಕುರಿತು ಉದಯಭಾರತವು ಪ್ರಥಮತಃ ಬಾಯಿ ಹಾಕಿದುದೇ ತಾ. 20-3-48ರ ತನ್ನ ಸಂಚಿಕೆಯಲ್ಲಿ. ಈ ಮಧ್ಯಾವಧಿಯಲ್ಲಿ ಅದರ ಎರಡು ಸಂಚಿಕೆಗಳು ಹೊರಬಿದ್ದಿದ್ದರೂ ಅವುಗಳಲ್ಲಿ ಈ ಹೊಸ ರೋಗದ ಚಿಹ್ನೆಯಾವುದೂ ತೋರಿರಲಿಲ್ಲ. ಬೇರೆ ಪತ್ರಿಕಾಲಯಗಳನ್ನು ಸಂಕ್ರಮಿಸಿ ತನಗಾಮಂತ್ರಣ ಕೊಡದಿದ್ದ ಒಂದು ಸತ್ಕಾರಕೂಟದ ಸುದ್ದಿಗಾಗಿ ಊರು ತುಂಬಾ ತಿರುಗಾಡಿಸುಳ್ಳನ್ನು ಸಂಗ್ರಹಿಸಿಕೊಳ್ಳಲು ಈ ಪತ್ರಿಕೆಗೆ ಸಾಚಿಕೆಯಾಗಲಿಲ್ಲವೇ, ಎಂಬ ಪ್ರಶ್ನೆಯನ್ನು 'ಊರಿಗೆ ದೊಡ್ಡವ'ನಾದ ಉದಯಭಾರತಕ್ಕೆ ಹಾಕಲಾಗುವದಿಲ್ಲ. ಅವರೆ ಆದರ ಅಸ್ವಾಸ್ಥ್ಯವೆಂತಹದೆಂಬುದನ್ನರಿಯಬೇಕಾದರೆ ತಾ 4-3-48ರಿಂದ ತಾ. 20-3-48ರ ವರೆಗಿನ ದಿನಗಳನ್ನು 'ಒಂಭತ್ತು ದಿನಗಳ ಅವಧಿ'ಎಂದು ಉದಯಭಾರತವು ಲೆಕ್ಕಿಸಿರುವುದನ್ನು ನೋಡಿದರೆ ಸಾಕು. ತಾ 25-2-48ರ ಸತ್ಕಾರಕೂಟದ ವಾರ್ತೆಯನ್ನು ನವಯುಗವು ಪ್ರಕಟಿಸಿದುದು ತಾ. 4-3-48ರ ಸಂಚಿಕೆಯಲ್ಲಿ. ಆದ್ದರಿಂದ ನವಯುಗವು ಒಂಭತ್ತು ದಿನ ತಡಮಾಡಿದೆ ಎಂದು ಉದಯಭಾರತದ ಮತ್ತೊಂದು ಲೆಕ್ಕಾಚಾರ. ತಾ 25-2-48ನೇ ಬುಧವಾರ ಆ ಸತ್ಕಾರಕೂಟ ಮುಗಿಯುವಾಗ ರಾತ್ರಿ ಸುಮಾರು 7½ಗಂಟೆಯಾಗಿತ್ತು, ತಾ. 26ನೇ ಗುರುವಾರ ಹೊರಡುವ ನವಯುಗ ಸಂಚಿಕೆಯು, ಪ್ರತಿ ವಾರದಲ್ಲೂ ಬುಧವಾರ ಅಪರಾಹ್ನವೇ ತಯಾರಾಗುವ ಸಂಪ್ರದಾಯದಂತೆ ಆ ದಿನವೂ ಆ ಸತ್ಕಾರಕೂಟದ ಮೊದಲೇ ತಯಾರಾಗಿತ್ತು, ಆ ಮೇಲಿನ ಸಂಚಿಕೆಯೇ ತಾ. 4-3-48ರದ್ದು. ಅಂದ ಮೇಲೆ ನವಯುಗವು ಆ ಸತ್ಕಾರಕೂಟದ ವಾರ್ತಾಪ್ರಕಟಣೆಗಾಗಿ ಮಧ್ಯದಲ್ಲೊಂದು ವಿಶೇಷ ಸಂಚಿಕೆಯನ್ನು ಹೊರಡಿಸಬೇಕಿತ್ತೆಂದು ಉದಯಭಾರತದ ಅಂಬೋಣವೆ?

ನವಯುಗದ ಲೇಖನದಲ್ಲಿ ಒಂದಿವೆ 'ಸ್ವತಂತ್ರ ಭಾರತ'ದ ಹೆಸರು ಪ್ರಮಾದವಶಾತ್ ಬಿದ್ದಿದ್ದರೆ ಅದೇ ಸಂಚಿಕೆಯ ಬೇರೊಂದೆಡೆಯಲ್ಲಿ ಸ್ಪಷ್ಟ ತಿದ್ದುಪಡಿ ಬಂದಿತ್ತು. ಅದರೆ ಉದಯಭಾರತದ ಯದ್ವಾತದ್ವಾ ದೃಷ್ಟಿಗೆ ಎಲ್ಲವೂ ಅಡಿಮೇಲಾಗಿ ತೋರಿ ಆ ತಿದ್ದುಪಡಿ ಕಾಣಿಸದೇ ಹೋಗಿ 'ಸ್ವತಂತ್ರ ಭಾರತದ ಹೆಸರು ಬಂದಂತೆ ಶ್ರೀ. ಎ ಸದಾನಂದ ಶೈಗರ ಭಾಷಣದ ವರದಿಯೂ ತಪ್ಪಾಗಿ ಬರೆದಿರಬೇಕು' ಎಂದದು ಹೇಳಿಬಿಟ್ಟಿದೆ! ಇದನ್ನು ಯಾರಾದರೂ ಒಪ್ಪಬೇಕಾದರೆ 'ಉದಯಭಾರತ'ದಂತೆಯೇ ಅವರಿಗೂ ಎಲ್ಲವೂ ತೋರದಿರಬೇಕು, ಅಥವಾ ಒಂದು ಸಂಚಿಕೆಯಲ್ಲಿ ತನ್ನ ಕಣ್ಣಿಗೆ ಬಿದ್ದುದನ್ನಷ್ಟೇ ನೋಡಿ, ಮುಕ್ಕದಿಗ ಕಣ್ಮುಚ್ಚಿಕೊಂಡು ಅರ್ಥೈಸುವ ಮನೋವೃತ್ತಿ ಅವರದೂ ಆಗಿರಬೇಕು. ಆದರೆ ಲೋಕದ ಇಂದಿನ ಬಹುಮಾನ ಸಾರ್ಗದಲ್ಲಿ 'ಉದಯಭಾರತ' ದಂಥವರ ಸಂಖ್ಯೆ ಹೆಚ್ಚಿದಂತಿದೆಯಾದರೂ ಲೋಕವೇ ಉದಯಭಾರತದಂತಾಗಿಲ್ಲವೆಂಬ ಸಮಾಧಾನ ನಮಗಿದೆ!

'ನವಯುಗದ ಸಂಪಾದಕರೊರ್ವರು ನಮ್ಮಬಳಿಗೆ ಸಂಧಾನಕ್ಕೆ ಬಂದಿದ್ದರು' ಎಂಬ ಉದಯಭಾರತದ ಆಣಕಾಟವು ಅದರ ಅಸ್ವಾಸ್ಥ್ಯಕ್ಕೊಂದು ಸ್ಪಷ್ಟ ನಿದರ್ಶನ. 'ಕೋಳದ ಮರ'ದೆಡೆಯಲ್ಲಿ ಕಾಲು ಸಿಕ್ಕಿಸಿಕೊಂಡಲ್ಲಿಯೇ "ಹಾಂ! ನನಗೆ ದೇವರು ಕಾಣಿಸುತ್ತಿದ್ದಾರೆ" ಎನ್ನುವವರಿದ್ದಾರೆ! ಇಂಥವರಲ್ಲೂ ಒಂದು ವಿಧದ ಜಾಡ್ಯವಿರುತ್ತದೆಂಬ ಅನುಭವವು ಕೆಲವರಿಗಿರಬಹುದು. ತನ್ನ ಬಳಿಗೆ ಸಂಧಾನಕ್ಕೆ ಬಂದರು, ಎಂದು ಸುಳ್ಳು ಬರೆದೊಡನೆ ನವಯುಗದ ಸಂಪಾದಕರಿಗೆ ವಿಶೇಷ ಅಪಮಾನ ಮಾಡಿದಂತಾಗುವುದು ಎಂಬಷ್ಟು ಜ್ಞಾನವು ಉದಯಭಾರತಕ್ಕೆ ಅದರ ಆ ಮನೋಸ್ಥಿತಿಯಲ್ಲಿ ಕೂಡಾ ಉಳಿದಿದ್ದುದು ಸೋಜಿಗವೇ ಸರಿ!

ಇಲ್ಲಿ ಸ್ಪಷ್ಟಪಡಿಸಿರುವಂತೆ ಉದಯಭಾರತದ ವಾದವು ಚಿಕಿತ್ಸೆಗೆ ಹೊರತು ಚರ್ಚೆಗರ್ಹವಾದುದಲ್ಲವಾದ್ದರಿಂದ ಬೇರಾವ ಪ್ರಸ್ತಾಪಕ್ಕೂ ಹೋಗದೆ ಅದಕ್ಕೆ ಪ್ರತ್ಯೂರ್ಣಕವಾಗಿ ಆರೋಗ್ಯವನ್ನು ಬಯಸುತ್ತೇವೆ.

—ಸಂಪಾದಕ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆಪದೆ ಋತುಸ್ರಾವವಾಗುವದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು, ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/- [ವಿ. ಪಿ. ಖರ್ಚು ಬೇರೆ]

Mrs P. DEVEE, F DS. (R. J.)
Tollygunge CALCUTTA,
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಹಾಲಾಡಿ 'ಗಾಂಧಿ ಸ್ಮಾರಕ ಸಮಿತಿ'
ಯವರು ಕಟ್ಟಲಿರುವ
ಸ್ಮಾರಕ ಮಂದಿರದ
ಸಹಾಯಾರ್ಥವಾಗಿ ಪ್ರಚಂಡ ಯಕ್ಷಗಾನ

ಜಿಲ್ಲೆಯ ಅಗ್ರಗಣ್ಯ ಯಕ್ಷಗಾನ ಕಲಾಕೋವಿದರ ಕೂಡುವಿಕೆಯಿಂದ **ಇದೇ ತಾ 24-4-48ನೇ ಶನಿವಾರ ರಾತ್ರಿ ಕುಂದಾಪುರದ ಶ್ರೀ ಧನಲಕ್ಷ್ಮೀ ಥಿಯೇಟರಿನಲ್ಲಿ** ಜರಗುವುದು. ಶ್ರೀಗಳಾದ ಕಿಲ್ಲೆಯರು, ಪೊಳಲಿ ಶಾಸ್ತ್ರಿಗಳು, ಮಲ್ಪೆ ಶಂಕರನಾರಾಯಣ ಸಾಮಗರು, ಮಂಗಳೂರಿನ ಎಡ್ವೊಕೇಟ್ ಬಾಲಕೃಷ್ಣ ರಾಯರು, ಪೊಳ್ಯ ದೇಜಪ್ಪ ಸೆಟ್ಟರು ಮೊದಲಾದ ಜಿಲ್ಲೆಯ ಸುಪ್ರಸಿದ್ಧ ಅರ್ಥಧಾರಿಗಳು ಭಾಗವಹಿಸುವರು. ಅಂತೆಯೇ ಪ್ರಸಿದ್ಧರಿರುವ ಶ್ರೀ. ಮೈಂದಪ್ಪ ರೈಗಳ ಹಾಡುವಿಕೆ, ಶ್ರೀ. ಈಶ್ವರ ಅಪ್ಪಯ್ಯನವರ ಮೃದಂಗವಾದನವಿರುವದು. ಸಾರ್ವಜನಿಕ ಬಂಧುಭಗಿನಿಯರೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಿ ಗಾಂಧೀಜೀಯ ಸ್ಮಾರಕಕ್ಕೆ ನೆರವಾದ ಪುಣ್ಯವನ್ನೂ ಮೇಲ್ವರ್ಗದ ಯಕ್ಷಗಾನ ಕಲಾನುಭವದ ಆನಂದವನ್ನೂ ಪಡೆಯಬೇಕಾಗಿ ವಿಜ್ಞಾಪನೆ.

ಹಾರ್ದಳ್ಳಿ ಹಿರಿಯಣ್ಣ ಸೆಟ್ಟಿ, ಅಧ್ಯಕ್ಷ
ಯಚ್. ಭುಜಂಗ ಸೆಟ್ಟಿ, ಉಪಾಧ್ಯಕ್ಷ
ಎಚ್ ಹಿರಿಯಣ್ಣ ನ್ಯಾಕ; ಕೆ. ಶಂಕರ ಸೆಟ್ಟಿ. ಕಾರ್ಯದರ್ಶಿಗಳು.
ಹಾ ಲಾಡಿ ಮಹಾಬಲ ಸೆಟ್ಟಿ, ಕೋಶಾಧಿಕಾರಿ.

ಟಿಕೇಟು ದರಗಳು:— I ಕ್ಲಾಸು 3-0-0 II ಕ್ಲಾಸು 2-0-0
III ಕ್ಲಾಸು 1-0-0 IV ಕ್ಲಾಸು 0-8-0.

ಅನೇಕ ಉಪಯುಕ್ತ ವಿಷಯಗಳಿಂದೊಡಗೂಡಿರುವ- ಶ್ರೀ. ಬೇಳೂರು ಶ್ರೀಪತಿ ನರಸಿಂಹ ಅಡಿಗರಿಂದ ಗಣಿಸಿ ಪರಿಶೋಧಿಸಲ್ಪಟ್ಟ
ಸರ್ವಧಾರಿ ಸಂವತ್ಸರದ
ಶ್ರೀಪತಿ ಪಂಚಾಂಗ
ಬೆಲೆ **0—8—0** ಪ್ರತಿಗಳು ನಿಮ್ಮೂರ ಏಜಂಟರಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ಶ್ರೀಪತಿ ನರಸಿಂಹ ಅಡಿಗ
ಬೇಳೂರು, P. O. ಕೋಟ.

ಅಂಡವಾಯು, ಅಂಡವ್ಯಾಧಿ ಮಲೇರಿಯಾ, ಇತ್ಯಾದಿಗಳಿಗೆ ಲೇಪನಬಗ್ಗೆ ದಿವ್ಯೌಷಧ
1 ಬಾಟ್ಲಿಗೆ ರೂಪಾಯಿ 25/. ½ಬಾಟ್ಲಿಗೆ ರೂಪಾಯಿ 12-8-0, ¼ಬಾಟ್ಲಿಗೆ ರೂಪಾಯಿ 6-4-0. ಕುಷ್ಠ ರೋಗಕ್ಕೆ ತೀನಯೆ..ಂದರ ರೂಪಾಯಿ 3/-.
ಎಸ್. ಪಿ ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ. 9
S. P. Pharmaceuticel Works. Calcutta 9.

ಸ್ವಾತಂತ್ರ್ಯ ಪ್ರಿಯರಿಗಾಗಿ
ನವೀನ ಪುಸ್ತಕ
ಸ್ವಾತಂತ್ರ್ಯವೀರ ಸಾವರ್ಕರ
ವಿಚಾರಕ್ರಾಂತಿಯನ್ನುಂಟುಮಾಡುವ (ಜೀವನ ಚರಿತ್ರೆ)

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಯಾಂಜಿ ವ್ಯಾಪಾರಾಲಯ,
ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಪೆರಡಾಲ : ಉಪವಾಸ ಸಂಕಷ್ಟ; ಸರಕಾರಕ್ಕೆ ದೂರು–ಪೆರಡಾಲ ಮತ್ತು ಆಸುಪಾಸಿನ ಗ್ರಾಮಗಳಲ್ಲಿ ಆಹಾರ ಅಭಾವದಿಂದಾಗಿ ಈಗಾಗಲೇ ಜನರು ಉಪವಾಸ ಬಿದ್ದಿರುವುದರಿಂದ, ಇದೇ ಪರಿಸ್ಥಿತಿ ಇನ್ನೂ ಮುಂದುವರಿದರೆ, ಬೇಗನೇ ಗಂಡಾಂತರವೊದಗುವುದು ನಿಶ್ಚಿತವಾದುದರಿಂದ ಈ ಬಗ್ಗೆ ಇಲ್ಲಿನ ಊರವರ ಸಂಕಷ್ಟದ ಪರಿಸ್ಥಿತಿಯನ್ನು ಸರಕಾರಕ್ಕೆ ಭಿನ್ನವಿಸತಕ್ಕ ಪರಿಹಾರ ಕಾರ್ಯಕ್ಕೆಕೊಳ್ಳುವ ಬಗ್ಗೆ ಒಂದು ಸಾರ್ವಜನಿಕ ಸಭೆಯು ತಾ. 31-3-48ರಂದು ಡಾ। ಪಿ. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿತು. ಆ ಸಭೆಯಲ್ಲಿ ಊರಲ್ಲಿ ಆಹಾರ ಅಭಾವ, ಉಪವಾಸ ಪರಿಸ್ಥಿತಿ, ಸರಕಾರದ ಅಲಕ್ಷ್ಯತೆ, ಬೇಗನೇ ಬರಲಿರುವ ಗಂಡಾಂತರ, ಆ ಕುರಿತು ಜನತೆ ಹಾಗೂ ಸರಕಾರದವರು ಕೈಕೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಶ್ರೀಗಳಾದ ಕೆ. ಕೃಷ್ಣರಾವ್, ಕಯ್ಯಾರ ಕಿಞ್ಞಣ್ಣ ರೈ, ಮುಳಿಯ ಶಂಕರ ಭಟ್ಟ, ಸರ್ಪಂಗಳ ಸುಬ್ಬಣ್ಣ ಭಟ್ಟ, ಕುಳಂತೋಡಿ ಕೃಷ್ಣ ಭಟ್ಟ ಇವರು ವಿವರಿಸಿ ಹೇಳಿದ ನಂತರ, ಸರಕಾರಕ್ಕೆ ಈ ಊರಿನ ಮೊರೆಯನ್ನು ತಿಳಿಸಬೇಕೆಂದೂ ಅದಕ್ಕೆ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದೂ ನಿರ್ಣಯವಾಯಿತು.

ಇದೇ ದಿನ ರಾತ್ರಿ ಬದಿಯಡ್ಕ ಮಾರ್ಗವಾಗಿ, ಮಲಬಾರಿಗೆ ಪುತ್ತೂರು ಮಾರ್ಗದಿಂದ ಬರುವ ಮೂರು ಗಾಡಿ ಅಕ್ಕಿಯನ್ನು ಇಲ್ಲಿನ ಗ್ರಾಮಾಧಿಕಾರಿಗಳು ತಡೆಹಿಡಿದಿದ್ದಾರೆ. ಇದುವರೆಗೆ ಈ ಮಾರ್ಗವಾಗಿ ಮಲಬಾರಿಗೆ ಲೋರಿಗಳಲ್ಲಿ ದಿನ ರಾತ್ರಿ ಸಾಗುತ್ತಾ ಇತ್ತೆಂದೂ ಈಗಲೂ ಕಳ್ಳಮಾರ್ಗವಾಗಿ ಸಾಗುತ್ತಿದೆಯೆಂದೂ ತಿಳಿದು ಬಂದಿದೆ. ಜನರು ಇಲ್ಲಿ ಉಪವಾಸಬಿದ್ದು ನರಳುತ್ತಿರುವಾಗ ಈಗ ಜಿಲ್ಲೆಯ ಹೊರಗಿನ ಬೇರೆ ಕಡೆಗೆ ಅಕ್ಕಿ ಒತ್ತಿಗಳನ್ನು ಕಳುಹಿಸುತ್ತಿರುವುದು ತುಂಬಾ ಶೋಚನೀಯವಿದೆ.

ಈಗ ಇಲ್ಲಿ ಸೇರು ಒಂದರ ರೂ 1-4-0 ರಷ್ಟು ಕ್ರಯವಾಗಿದ್ದು ಅದರೂ ಅಕ್ಕಿ ಸಿಗುವುದಿಲ್ಲ. ಇಲ್ಲಿನ ಕೆಲ ಗ್ರಾಮಗಳಿಗೆ ಒಂದು ರಿಲೀಫ್ ಅಂಗಡಿಯಿದ್ದು ಅದರಲ್ಲಿ ದಿನ ಒಂದರ ಒಬ್ಬನಿಗೆ ಮೂರು ಔನ್ಸು ಅಕ್ಕಿ ಮಾತ್ರ ಸಿಗುತ್ತದೆ. ಅದರೂ ಎಲ್ಲರಿಗೂ ಅದು ಸಿಗುವುದು ಅಸಾಧ್ಯವಾಗಿರುವುದು.

ಕಡಂದಲೆ—ಮಂಗಳೂರು ಕೃಷ್ಣ ಭವನದ ಮಾಲೀಕರಾದ ಶ್ರೀ ಕಡಂದಲೆ ಕೃಷ್ಣರಾಯರವರು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಹೊಸ ಕಟ್ಟಡದ ಬಗ್ಗೆ ರೂ. 1000 (ಒಂದು ಸಾವಿರ ರೂಪಾಯಿ) ಉದಾರ ಮನಸ್ಸಿನಿಂದ ದಾನಮಾಡಿರುವರು.

ಪಡುಬಿದ್ರಿ–ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ವ್ಯಾಯಾಮ ಮಂದಿರದ ಉದ್ಘಾಟನೆಯು ಮಾರ್ಚ ತಾ. 25ರಂದು ಶ್ರೀ ಸೂಳ್ಯ ದೇಜು ಶೆಟ್ರಿಂದ ನೆರವೇರಿಸಲ್ಪಟ್ಟಿತು. ಶ್ರೀಗಳಾದ ಜಿ. ಸೀತಾರಾಮ ರಾವ್, ಸಿ. ರೆಬೆಲ್ಲೊ, ಎಸ್. ಹೂವಯ್ಯ, ಎನ್. ನಾಗಪ್ಪ, ಪಿ. ವಾಸು ಸೆಟ್ಟಿ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು. ಸಭಾಧ್ಯಕ್ಷ ಶ್ರೀ. ದೇಜು ಶೆಟ್ರ ಭಾಷಣ, ಉಪಹಾರಗಳೊಂದಿಗೆ ಸಭಾಂತ್ಯವಾಯಿತು. ವ್ಯಾಯಾಮ ಮಂದಿರದ ಸ್ಥಾಪನೆಯಲ್ಲಿ ಶ್ರೀಗಳಾದ ಜಿ. ಸಿ. ಮಂಜಯ್ಯ ಶೆಟ್ಟಿ, ಎನ್. ನಾಗಪ್ಪ, ೭. ಕೆ. ಸಾಲಿಯಣ್ಣರು ಪ್ರಮುಖ ಭಾಗವಹಿಸಿರುವರು.

ಕುಂದಾಪುರ–ತಾ. 4-4-48ರಲ್ಲಿ ಮಾನ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ರು ಬಂದಾಗ ಶ್ರೀಗಳಾದ ಬಿ. ಸುಬ್ಬಣ್ಣ ಶೆಟ್ಟಿ, ಪುಂಡಲೀಕ ಕಾಮತ್, ಎ. ಪಿ. ಎಸ್. ಹೆಬ್ಬಾರ ಇವರು ತಾಲೂಕಿನ ಆಹಾರ ಪರಿಸ್ಥಿತಿಯನ್ನು ತಿಳಿಸಿ ಕಾರ್ಡುದಾರರಿಗೆ 8ಔನ್ಸ್ ಅಕ್ಕಿ ರೇಶನ್ ಸಿಗುವಂತಾಗಬೇಕೆಂದು ವಿನಂತಿಸಿದರು. ತಾಲೂಕಿನ ಬಡಜನರು ಉಪವಾಸ ಬಿದ್ದಿರುವ, ಎಷ್ಟು ಕ್ರಯಕೊಟ್ಟರೂ ಅಕ್ಕಿ ದೊರೆಯದಿರುವ ವಿಚಾರಗಳನ್ನೂ ಹೆಚ್ಚಿಗೆ ರಿಲೀಫ್ ಸ್ಟೋರುಗಳನ್ನು ತೆರೆಯಬೇಕಾದ ಆವಶ್ಯಕತೆಯನ್ನೂ ಮಂತ್ರಿಗಳಿಗೆ ನಿವೇದಿಸಲಾಯಿತು. ಸಾವಿರಾರು ಬಡಜನರು ಬಂಗ್ಲೆಗೆ ಬಂದು ಮಂತ್ರಿಗಳಿಗೆ ಮೊರೆಯಿಟ್ಟರು ಮಂತ್ರಿಗಳು ಮದ್ರಾಸಿಗೆ ಹೋದನೋಲೆ ರೇಶನ್ ಹೆಚ್ಚಿಸುವ ಬಗ್ಗೆ ಪ್ರಯತ್ನಿಸುವೆನೆಂದರು.

ಸುಬ್ರಹ್ಮಣ್ಯ-ಮೈಸೂರು ಸಂಸ್ಥಾನದ ಮುನಿಸಿಪಾಲಿಟಿಗಳ ಮತ್ತು ಮುಜರಾಯಿ ಮಂತ್ರಿಗಳಾದ ಮಾನ್ಯ ಪಾಮದಿ ಸುಬ್ಬರಾಮ ಶೆಟ್ಟರು ಹಾಸನ ಜಿಲ್ಲೆ ಡೆಪ್ಯುಟಿ ಕಮಿಶನರ್ ಮತ್ತು ಇತರ ಅಧಿಕಾರಿಗಳೊಂದಿಗೆ ಇದೇ ಮಾರ್ಚ ತಾ. ೨೯ರಲ್ಲಿ ಶ್ರೀ ಕ್ಷೇತ್ರಕ್ಕೆ ದಯಮಾಡಿಸಿದರು. ರಾತ್ರಿ ಕಟ್ಟೆಯಲ್ಲಿ ಶ್ರೀಮಠ, ದೇವಸ್ಥಾನಗಳ ಕಡೆಯಿಂದ ವಾದ್ಯಘೋಷದಿಂ ಅವರನ್ನು ಸ್ವಾಗತಿಸಲಾಯಿತು. ಮಾನ್ಯ ಮಂತ್ರಿಗಳು ಶ್ರೀ ಸುಬ್ರಹ್ಮಣ್ಯ, ಶ್ರೀ ಸಂಪುಟ ನರಸಿಂಹ ದೇವರುಗಳ ದರ್ಶನ ಮಾಡಿ ಶ್ರೀಮಠದ ಶ್ರೀ ವಿಶ್ವಜ್ಞ ತೀರ್ಥ ಶ್ರೀ ಶ್ರೀಪಾದಂಗಳವರ ಭೇಟಿ ಮಾಡಿ ಫಲ ಮಂತ್ರಾಕ್ಷತೆ ಸ್ವೀಕರಿಸಿ ಸಂಜೆ ೪ ಘಂಟೆಗೆ ಸಕಲೇಶಪುರಕ್ಕೆ ತೆರಳಿದರು.

ಮಂಗಳೂರು

ರೈಲು ಸಮಯ–ಇದೇ ಎಪ್ರಿಲ್ ತಾ. ೧೮ರಿಂದ ರೈಲುಗಳು ಮಂಗಳೂರಿನಿಂದ ಹೊರಡುವ ಹಾಗೂ ಇಲ್ಲಿಬಂದು ಸೇರುವ ವೇಳೆಯಲ್ಲಿ ಕೆಳಗಿನಂತೆ ಬದಲಾವಣೆಗಳಾಗಿವೆ. ಮೈಲು ಬೆಳಗ್ಗೆ ೬-೫೫ಕ್ಕೆ ಇಲ್ಲಿಂದ ಹೊರಡುವುದು; ಸಂಜೆ ೭ಕ್ಕೆ ಇಲ್ಲಿಗೆ ತಲುಪುವುದು. ಜೋಲಾರ್ಪೇಟೆ ಪೆಸೆಂಜರ್ ಪೂರ್ವಾಹ್ನ ೧೦-೩ಕ್ಕೆ ಇಲ್ಲಿಂದ ಹೊರಡುವುದು. ಸಂಜೆ ೪ ೪೦ಕ್ಕೆ ತಲಪುವದು. ಕಲ್ಲಿಕೋಟೆ ವರೆಗಿನದು ಅಪರಾಹ್ನ ೨-೪೦ಕ್ಕೆ ಹೊರಡುವುದು. ಅಪರಾಹ್ನ ೨-೩ಕ್ಕೆ ಇಲ್ಲಿಗೆ ತಲಪುವುದು. ಕಣ್ಣಾನೂರ್ ವರೆಗಿನ ಶಟ್ಲ್ ಸಂಜೆ ೫-೫೦ಕ್ಕೆ ಹೊರಡುವುದು. ಬೆಳಗ್ಗೆ ೮-೫೫ಕ್ಕೆ ತಲುಪುವುದು.

ಶ್ರದ್ಧಾನಂದ ಅನಾಥಾಶ್ರಮ—ಮಂಗಳೂರು. ಈ ಆಶ್ರಮಕ್ಕೆ ಎಪ್ರಿಲ್ ೩೦ರೊಳಗೆ ೧೧ ಮಂದಿ ಅನಾಥ ಮಕ್ಕಳನ್ನು ಜಾತಿಮತ ಭೇದವಿಲ್ಲದೆ ಹೊಸದಾಗಿ ಸೇರಿಸಿಕೊಳ್ಳಬಹುದಾಗಿ ಆಶ್ರಮದ ವ್ಯವಸ್ಥಾಪಕರು ತಿಳಿಸುತ್ತಾರೆ.

ವಿದ್ಯಾರ್ಥಿವೇತನ-ವಿಕ್ಟೋರಿಯ ಜುಬಿಲಿ ಸ್ಕಾಲರ್ಶಿಪ್ ಎಂಡೋಮೆಂಟ್ ಸಮಿತಿಯ ಅಧ್ಯಕ್ಷ ಜಿಲ್ಲಾ ಜಡ್ಜರು ಈ ಪ್ರಕಾರ ತಿಳಿಸುತ್ತಾರೆ.

೧೯೪೮-೪೯ರಲ್ಲಿ ಭಾರತದ ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡದ ಮೂವರು ವಿದ್ಯಾರ್ಥಿಗಳಿಗೆ ಕೆಳಗಿನ ವಿಭಾಗಗಳಲ್ಲಿ ಅಭ್ಯಾಸಂಗ ಮಾಡಲು ವಿದ್ಯಾರ್ಥಿವೇತನ ಕೊಡಲಾಗುವುದು (೧) ಸಿವಿಲ್, ಮುನ್ಸಿಪಲ್ ಎಲೆಕ್ಟ್ರಿಕಲ್ ಮೆಕೆನಿಕಲ್, ಮೆರೈನ್ ಅಥವಾ ಸೆನಿಟರಿ ಇಂಜನಿಯರಿಂಗ್ ವಿಭಾಗಗಳು. (೨) ಫಾರೆಸ್ಟ್. (೩) ವ್ಯವಸಾಯ ಮತ್ತು (೪) ವೆಟ್ನಿಸಿಂಗ್ ಮತ್ತು ಮೆಟ್ರಾಲ್ಲಜಿ.

(೧) ಬ್ರಾಹ್ಮಣ, (೨) ಅಬ್ರಾಹ್ಮಣ ಮತ್ತು (೩) ಮುಸಲ್ಮಾನ, ಹೀಗೆ ಮೂರು ವರ್ಗಗಳಿಗೆ ಒಂದೊಂದು ವಿದ್ಯಾರ್ಥಿ ವೇತನಗಳನ್ನು ಕೊಡಲಾಗುವುದು. ವೇತನಕ್ಕೆ ಉಮೇದ್ವಾರರನ್ನು ಗವರ್ನಮೆಂಟ್ ಕಾಲೇಜಿನಲ್ಲಿ ಜೂನ್ ೨೪-೨೫ರಂದು ನಡೆಯುವ ಕಾಂಪಿಟೀಟಿವ್ ಪರೀಕ್ಷೆಯ ಮೂಲಕ ಆರಿಸಲಾಗುವುದು. ಪರೀಕ್ಷೆಯ ಅರ್ಜಿಗಳನ್ನು ಜೂನ್ ೧೫ರ ವರೆಗೆ ಮಂಗಳೂರಿನ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸ್ವೀಕರಿಸಲಾಗುವುದು ಸ್ಥಾನಾರ್ಥಿಗಳು ಕೊನೆಯ S S L C ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ೧೬ರಿಂದ ೨೧ವರ್ಷ ಪ್ರಾಯದೊಳಗಿನವರಾಗಿರಬೇಕು. ಅರ್ಜಿಯ ಫಾರಮುಗಳನ್ನೂ ಇದಕ್ಕೆ ಸಂಬಂಧಿಸಿದ ನಿಯಮಗಳನ್ನೂ ಮಂಗಳೂರಿನ ಜಿಲ್ಲಾ ಜಡ್ಜರ ಆಫೀಸಿನಿಂದ ಪಡೆಯಬಹುದು.

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ ಹಲ್ಲು ಪುಡಿ

ಒಂದು ತೊಲೆ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಪಿ, ಲಿಮಿಟೆಡ್, ಕಾಸರಗೋಡು, ದ. ಇಂಡಿಯ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಸಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ. ಕ್ವಾಲಿಸಂಗ್ರಿ ಬರಪತ್ರಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಲಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಭಾನಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್,(3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ದಿನ್ನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳಲ್ಲಿ ಒಂದು ಬಾಣಂತನಕ್ಕೆ ಸಾಕಾಗುವದು ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ। ಬಿ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಚಾರ! ಉತ್ತಮ ಉಪಹಾರ,

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging,
KATAPADI, S K.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 68/1948.

ವಾದಿ – ರಾಮಚಂದ್ರ ಶ್ಯಾನುಭಾಗ.

ಪ್ರತಿವಾದಿ—ರಾಮರಾಯನ್ಯಾಕ.

ಉಡುಪಿ ತಾಲ್ಲೂಕು ಹೊಸಾಳ ಗ್ರಾಮದ ಬಾರಕೂರು ಪೇಟೆಯಲ್ಲಿರುವ ಶೀತ(ನ್ಯಾಕ ಸಾನಿ ಮಗ ರಾಮರಾಯ ನ್ಯಾಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:–

ಪ್ರತಿವಾದಿಯು ವಾದಿಗೆ ತಾರೀಕು 20-6-47ರಲ್ಲು ರೂ. 100-0-0ಕ್ಕೆ ಬರೆದುಕೊಟ್ಟ ಡಿಮಾಂಡು ನೋಟಿನ ಹಣ ಬಡ್ಡಿ ಕೂಡಾ ರೂ. 103-14-9ನ್ನು ಬರಮಾಡಿಕೊಳ್ಳುವಂತೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 12-4-1948ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah
Advocate for Plff.
Coondapoor, Date 1-4-48

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 119 45 R. I. A 161/48

ವಾದಿ—ತೆಂಕಬೆಟ್ಟು ಮಂಜಯ್ಯ ಸೆಟ್ಟಿ

ಪ್ರತಿವಾದಿರು–ಚಂದಮ್ಮ ಸೆಡ್ತಿ ಕೂಡಾ

ಪ್ರತಿವಾದಿಯು 3. ಪುಟ್ಟಮ್ಮ ಸೆಡ್ತಿ 4 ವೆಂಕಟ್ಟ ಸೆಟ್ಟಿ-ಸುಬ್ಬಿ ಸೆಡ್ತಿ ಮಕ್ಕಳು. 8 ಪರಿಯಣ್ಣ ಸೆಟ್ಟಿ. 1ನೇ ಪ್ರತಿವಾದಿ ಚಂದಮ್ಮ ಸೆಡ್ತಿ ಮಗ.

10. ಕುಷ್ಟಯ್ಯ ಸೆಟ್ಟಿ. ಮಂಜಮ್ಮ ಸೆಡ್ತಿ ಮಗ. 14 ಮ್ಯಾನರ ಕೊರಾತಿ, ಗಾರ್ಡಿಯನ್ ತಾಯಿ 3ನೇ ಪ್ರತಿವಾದಿಳು ಕುಂದಾಪುರ ತಾಲ್ಲೂಕು ನಾವಗ್ರಾಮದ ಕಣ್ಣೆಯಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಮೇಲಿನ ಡಿಕ್ರಿಯಲ್ಲಿ ಕಾಣುವ ಸ್ಥಿರಾಸ್ತಿಗಳ ಯೇಲಂನ್ನು ಬಗ್ಗೆ ವಾದಿಯು ಫ್ಯಾನಲ್ ಡಿಕ್ರಿ ಕೊಡಿಸಬೇಕಾಗಿ ದಾಕಲು ಮಾಡಿದ ಮೇಲಿನ R. I. A. 161/48ರ ತನ್ನಿಯನ್ನು ತಾ. 14-4-48ಕ್ಕೆ ಯಿಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

By Order of the Court
Y. Tejappa Shetty
Advocate for Plff.
Coondapoor, 30-3-1948.

ಬಾಲಕರು ಆರೋಗ್ಯಶಾಲಿಯಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು,

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಸುವಂತೆ ಮಾಡುವುದನ್ನು ಕಂಡುಕೊಳ್ಳಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೊ ಬ್ರಹ್ಮಾವರ. ದ. ಕ.

ಸ್ಟಾಕಿಸ್ಟರು:–
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. 13/1948

1. ಬಿ. ನಾರಾಯಣ ಹೊಳ್ಳ (ಕುಟುಂಬದ ಯಜಮಾನನಾಗಿ ಸಹ) 2. ಬಿ. ರಾಮಯ್ಯ ಹೊಳ್ಳ, 3. ಬಿ. ಕೃಷ್ಣ ಹೊಳ್ಳ, 4. ಬಿ. ವಾಸುದೇವ ಹೊಳ್ಳ, ಮ್ಯಾನರರು. ಕ್ಷೇಮಚಿಂತಕ 1ನೇ ಅರ್ಜಿದಾರ. 5. ವೆಂಕಮ್ಮ, 6. ಗಿರಿಜಾ

ಅರ್ಜಿದಾರರು

ಎಲ್ಲಾ ಅರ್ಜಿದಾರರು ಬಿ. ನಾಗಪ್ಪ ಹೊಳ್ಳರ ಮಕ್ಕಳು; ಪೈಕಿ 1ರಿಂದ 4ನೇ ವರೆಗಿನವರು ಉಡುಪಿ ತಾಲ್ಲೂಕು ಬೈಕಾಡಿ ಗ್ರಾಮದಲ್ಲಿರುವವರು, 5ನೇಯವರು ಮೈಸೂರು, ಕೊಪ್ಪ ತಾಲೂಕು ಮೇಗುಂದದಲ್ಲಿರುವವರು, ಮತ್ತು 6ನೇಯವರು ಕುಂದಾಪುರ ತಾಲೂಕು ಹಾಲಾಡಿ ಗ್ರಾಮದ ತಟ್ಟುವಟ್ಟುನಲ್ಲಿರುವವರು.

ಎಲ್ಲಾ ಅರ್ಜಿದಾರರ ತಂದೆ ತಾ. 21-10-47ರಲ್ಲು ಬೈಕಾಡಿ ಗ್ರಾಮದಲ್ಲಿ ಮೃತಪಟ್ಟ ಬಿ. ನಾಗಪ್ಪ ಹೊಳ್ಳರ ಬಾಬ್ತು ದ. ಕ. ಜಿಲ್ಲಾ ಬೋರ್ಡಿನಿಂದ ಶಿಕ್ಷಕಕ್ಕೆ ಪ್ರೊವಿಡೆಂಟ ಫಂಡಿನ ಐವೇಜು, ಮತ್ತು United India Life Assurance Co., Ltd. ನಲ್ಲಿಯ ನಂಬ್ರ 26376ನೇ ಪೋಲಿಸಿಯ ಬಾಬ್ತು ಐವೇಜು ಕೂಡಾ ಐವೇಜುಗಳನ್ನು ಅರ್ಜಿದಾರರ ಕುಟುಂಬದ ಕಡೆಯಿಂದ ಪಡೆಯಲು ತಾನು ಹಕ್ಕುದಾರನೆಂತಲೂ, ಆ ಕುರಿತು ಎಲ್ಲಾ ಅರ್ಜಿದಾರರ ಕಡೆಯಿಂದ ಹಾಗೆ ಪಡೆಯುವರೆ ತನಗೆ ವಂಶ ವಾರೀಸು ಸರ್ಟಿಫಿಕೇಟು ಕೊಡಬೇಕೆಂತಲೂ 1ನೇ ಅರ್ಜಿದಾರನು ಮನವಿಮಾಡಿಕೊಟ್ಟ ಮೇಲ್ಕಂಡ ಅರ್ಜಿಯು ತಾ 29-5-48ರಲ್ಲು ಸದ್ರಿ ಕೋರ್ಟಿನಲ್ಲಿ ತನ್ನಿಗ ಇಟ್ಟಿದ್ದೆಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

K Vittal Nayak,
Vakil for Petitioner
Udipi, 1-4-48

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ನಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರುಉರು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಎರಡನೆ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಬದಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Kalapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇಡತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾಲಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರಕೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಶಿವಮೊಗ್ಗ, ಹಾವೇರಿ, ಬ್ಯಾಡಗಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

"ಗಾಯವೊತ್ತಟ್ಟು ಮದ್ದೊತ್ತಟ್ಟು"

ಶ್ರೀ. ಕಯ್ಯಾರ ಕಿಞ್ಞಣ್ಣ ರೈ.

ಓದಿದ ಲೋಕೋಕ್ತಿಯುಂಟು.

"ಗಾಯವೊತ್ತಟ್ಟು,' ಮದ್ದು ಒತ್ತಟ್ಟು"- ಹೀಗೆಂದು ಗಾಯವಿರುವಲ್ಲಿಗೆ ಮದ್ದು ಹಚ್ಚದೆ ಎಲ್ಲೆಲ್ಲೋ ಮದ್ದು ಹಚ್ಚಿದರೆ ಹೀಗನ್ನುತ್ತಾರೆ. ಹೀಗಾಗಲು ಸಹಜವಾದ ಕಾರಣವೆಂದರೆ ಗಾಯವೆಲ್ಲಿದೆಯೆಂದು ವೈದ್ಯನಿಗೆ ತಿಳಿಯದೆ ಇರುವುದು ಅಥವಾ ಗಾಯಕ್ಕೆ ಅಗತ್ಯವುಳ್ಳ ಮದ್ದನ್ನು ವೈದ್ಯನು ಮಾಡದೆ ಇರುವುದು. ಹೀಗೆ ಎರಡೂ ಒತ್ತಟ್ಟಾಗುವುದರ ಪರಿಣಾಮ- ರೋಗಿಗೂ ಸುಖವಿಲ್ಲ; ವೈದ್ಯನಿಗೂ ಪ್ರಯೋಜನವಿಲ್ಲ-ಇಷ್ಟೆ!

ಗಾಂಧೀಜಿಯನ್ನು ಕೊಂದವನು ಆರ್. ಎಸ್. ಎಸ್. ಪಾಪಿಯೊಬ್ಬನು, ಹಿಂದೂ ಮಹಾಸಭೆಯ ನರಾಧಮನೋರ್ವನು. ಆದರೆ ನಿರ್ಬಂಧಿಸಲ್ಪಟ್ಟದ್ದು, ಜಪ್ತಿಯಾದದ್ದು ಕಾಂಗ್ರೆಸ್ ಸೇವಾದಲಗಳು; ಕ್ರಮವಾದುದಾಗಿ ಅಧಿಕಾರಿಗಳು ಬೆದರಿಸಿದುದು ಕಾಂಗ್ರೆಸ್ ಮುಂದಾಳುಗಳನ್ನು! ಆರ್. ಎಸ್. ಎಸ್. ಹಾಗೂ ಹಿಂದೂ ಮಹಾಸಭೆಯ ಚಟುವಟಿಕೆಗಳು ಮೊದಲಿನಂತೆ ಈಗಲೂ ಗುಪ್ತಗಾಮಿನಿಯಾಗಿಯೇ ನಡೆಯುತ್ತಾ ಇದ್ದುಕೊಂಡಿದೆ!

ಜಾತೀಯವಾದಿಗಳು ಗಾಂಧೀಜಿಯನ್ನು ಕೊಂದರು.

ಕಾಂಗ್ರೆಸಿನವರು ಜಾತೀಯ ವಾದಿಗಳನ್ನು ಮೊದಲಿನಿಂದಲೂ ವಿರೋಧಿಸಿದವರು!

ಪರಿಣಾಮ:-

ಜಾತೀಯವಾದಿಗಳಾದ ಆರ್. ಎಸ್. ಎಸ್. ಹಿಂದೂ ಮಹಾಸಭೆ ಮುಸ್ಲಿಂ ನೇಶನಲ್ ಗಾರ್ಡ್ ಮೊದಲಾದ ಸಂಸ್ಥೆಗಳ ಚಟುವಟಿಕೆ ತಡೆಯಿಲ್ಲದೆ ಗುಪ್ತಗಾಮಿನಿಯಾಗಿ ಸಾಗುತ್ತಲೇ ಇದೆ.

ಕಾಂಗ್ರೆಸಿನವರ ಜಪ್ತಿ, ನಿರ್ಬಂಧ, ಬಂಧನದ ಬೆದರಿಕೆ ಆಗಿದೆ!

ಗಾಯ ಎಲ್ಲಿ? ಮದ್ದು ಎಲ್ಲಿ?

ಹೀಗೆ ಏಕಾಗಬೇಕು?

oo oo oo

"ಬೊಂಬಾಯಿ ಕ್ರಾನಿಕಲ್" ವಾರ ಪತ್ರಿಕೆಯಲ್ಲಿ ಪ್ರಸಿದ್ಧ ಲೇಖಕರಾದ "ಕ್ರಾನಿಕಲರ್" 1948ನೇ ಫೆಬ್ರವರಿ 15ರಂದು ಒಂದು ಲೇಖನ ಬರೆದು ಪ್ರಕಟಿಸಿದ್ದರು. ಅವರ ಸಂಗ್ರಹ ಇಂತಿದೆ:

"ಮದ್ರಾಸು ಮತ್ತು ಬೊಂಬಾಯಿ ಸರಕಾರಗಳ ವರ್ತನೆ ವಿಚಿತ್ರವಾಗಿದೆ. ಕಮ್ಯುನಲ್ (ಜಾತೀಯ) ಸಂಸ್ಥೆಗಳನ್ನು ನಿರ್ಬಂಧಿಸತೊಡಗಿದ ಆ ಸರಕಾರಗಳು ಈಗ ಕಮ್ಯುನಿಸ್ಟ್ ಸಂಸ್ಥೆಗಳನ್ನು ತಡೆಗಟ್ಟಿವೆ!

".. ಮದ್ರಾಸ್ ಸರಕಾರವು ಈ ವಿಷಯದಲ್ಲಿ ಮುಂಬಯಿ ಸರಕಾರವನ್ನು ಮೀರಿಸಿದೆ. ಅದು ನೂರು ಕಮ್ಯುನಲ್ ಸಂಸ್ಥೆಗಳನ್ನು ನಿರ್ಬಂಧಿಸಿದ್ದು, ನಾಲ್ಕು ಕಮ್ಯುನಿಸ್ಟ್ ಸಂಸ್ಥೆಗಳನ್ನು ತಡೆಗಟ್ಟಿರುವುದು.

".. ಬೊಂಬಾಯಿ ಸರಕಾರವು ಆರ್. ಎಸ್. ಎಸ್. ಜತೆಯಲ್ಲಿ ಮುಸ್ಲಿಂ ನೇಶನಲ್ ಗಾರ್ಡನ್ನು ನಿರ್ಬಂಧಿಸಿ, ಅದರೊಡನೆ ಕಮ್ಯುನಿಸ್ಟ್ ಸಂಸ್ಥೆಯಾದ ರೆಡ್ ಗಾರ್ಡನ್ನು ತಡೆಹಾಕಿರುವುದು. ಬಹುಶ, ಗಾರ್ಡ್ ಎಂಬ ಪದದ ಮೇಲೆ ಸರಕಾರದ ಆಕ್ಷೇಪವಿದ್ದರೆ ಮುಂದೆ ಹೋಮ್ ಗಾರ್ಡ್ ಕೂಡಾ ನಿರ್ಬಂಧಿಸಲ್ಪಡಬಹುದು.

".. ಕಮ್ಯುನಿಸ್ಟರು ಬೇರೇನಾದರೂ ಅನ್ಯಾಯ ಮಾಡುತ್ತಾರೆಂದು ದೂರಬಹುದೇ ಹೊರತು, ಅದರ ಅವರು ಜಾತೀಯವಾದಿಗಳೆಂದು ಯಾರೂ ಹೇಳುವಂತಿಲ್ಲ. ಏಕೆಂದರೆ ಆರ್. ಎಸ್. ಎಸ್. ಹಿಂದೂ ಮಹಾಸಭೆಯಂತಹ ಗಾಂಧೀಜಿಯನ್ನು ಕೊಂದ ಮತ್ತು ಕಾಂಗ್ರೆಸ್ ಮುಖಂಡರನ್ನು ಕೊಲ್ಲಬಯಸಿದ ಜಾತೀಯ ಸಂಸ್ಥೆಗಳ ಕಟ್ಟಾವಿರೋಧಿಗಳವರು... ಬೇರೆ ಸಮಯಗಳಲ್ಲಿ ಕಮ್ಯುನಿಸ್ಟರು ಮಾಡುವ ಕಾನೂನುವಿರೋಧ ಕಾರ್ಯಗಳನ್ನು ನಿರ್ಬಂಧಿಸುವುದು ಎಷ್ಟೇ ಅಗತ್ಯವೇ ಇರಬಹುದಾದರೂ ಇಂದು ಎಲ್ಲಾ ರೀತಿಯಿಂದಲೂ ಜಾತೀಯತೆಯ ಕಳಂಕವನ್ನು ತೊಳೆದುಹಾಕುವ ಕಾರ್ಯದಲ್ಲಿ ನಮ್ಮ ಶಕ್ತಿಗಳನ್ನೆಲ್ಲಾ ಒಟ್ಟುಗೂಡಿಸಬೇಕಾದೀ ಸಂದರ್ಭದಲ್ಲಿ ಕಮ್ಯುನಿಸ್ಟ್ ಸಂಸ್ಥೆಗಳನ್ನು ನಿರ್ಬಂಧಿಸುವುದು ಉಚಿತವಾಗಲಾರದು"

oo oo oo

ಮದ್ರಾಸು ಬೊಂಬಾಯಿ ಸರಕಾರಗಳು ಕಮ್ಯುನಿಸ್ಟ್ ಸಂಸ್ಥೆಗಳನ್ನು ನಿರ್ಬಂಧಿಸಿದ ಅನುಚಿತ ಧೋರಣೆಯ ಕುರಿತು ಕ್ರಾನಿಕಲ್ ಪತ್ರಿಕೆಯಲ್ಲಿ ಬರೆದ ಹದಿನೈದು ದಿನಗಳನಂತರ, ಮದ್ರಾಸು ಸರಕಾರವು ಕಾಂಗ್ರೆಸಿನವರಿಂದ ಸಂಘಟಿತವಾಗಿರುವ ರಾಷ್ಟ್ರಸೇವಾದಲವನ್ನು ನಿರ್ಬಂಧಿಸಿತು!

ರಾಷ್ಟ್ರಸೇವಾದಲದ ಇತಿಹಾಸ ಹೀಗಿರುತ್ತದೆ. ಡಾ। ಹರ್ಡೀಕರರು ಕಾಂಗ್ರೆಸ್ ಸ್ವಯಂಸೇವಾದಳವಾಗಿ ಹಿಂದುಸ್ತಾನೀ ಸೇವಾದಲವನ್ನು ಪ್ರಾರಂಭಿಸಿದರು. ಅದು ಕೆಲಕಾಲ ಒಳ್ಳೆಯ ಕೆಲಸಗಳನ್ನು ಅನಂತರ ಮಾಡಿ ನಿಂತು ಹೋಯಿತು: 1942ರ ನಂತರ ಅದು ರಾಷ್ಟ್ರಸೇವಾದಲವೆಂಬ ಹೆಸರಿನಿಂದ ಪುನರುಜ್ಜೀವನಗೊಂಡಿತು, ಸದ್ಯ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಆದೇಶದಂತೆ ಅದೇ ಕಾಂಗ್ರೆಸ್ ಸೇವಾದಲವಾಗಿ ಮಾರ್ಪಟ್ಟಿದೆ.

ಇಂತಹ ಸೇವಾದಲಕ್ಕೆ ಮದ್ರಾಸು ಸರಕಾರದಿಂದ ನಿರ್ಬಂಧ ಬಿದ್ದಿದೆಯೆಂಬ ಸುದ್ದಿ ಕೇಳಿದ ಕೂಡಲೇ ಪೋಲೀಸರು ಅತ್ಯುತ್ಸಾಹದಿಂದ ಓಡಿಬಂದು ಕಾಂಗ್ರೆಸ್ ಮುಂದಾಳುಗಳ ವಸತಿ ಜಪ್ತಿ ಮಾಡಿದರು; ಲಾಠಿ ಲೇಜಿಮು ಕರಪತ್ರಗಳನ್ನು ಕೊಂಡು ಹೋದರು; ಬಂಧನದ ಬೆದರಿಕೆ ಹಾಕಿದರು!

ಸರಕಾರದ ಮತ್ತು ಅಧಿಕಾರಿಗಳ ಈ ವಿಚಿತ್ರ ವರ್ತನೆಯ ಕುರಿತು ಜನತೆ ಅಸಂತೋಷ ವ್ಯಕ್ತಪಡಿಸಿದೆ, ಕಾಂಗ್ರೆಸಿನವರ ಮನ ನೊಂದಿದೆ, "ಗಾಯವೆಲ್ಲಿ? ಮದ್ದು ಎಲ್ಲಿ?" ಎಂದು ಎಲ್ಲರೂ ಪ್ರಶ್ನಿಸುತ್ತಾರೆ

oo oo oo

ಜನತೆಯ ಈ ಅಸಮಾಧಾನವು ಪತ್ರಿಕೆಗಳ ಮೂಲಕ ಪ್ರಕಟವಾಗಿರುವುದು. ಮದ್ರಾಸು ಮತ್ತು ಬೊಂಬಾಯಿ ಪ್ರಾಂತಗಳ ಪ್ರಮುಖ ಪತ್ರಿಕೆಗಳು ಹೀಗೆ ವರದಿ ಮಾಡಿವೆ.

"ಈ ದಿನದ ಪತ್ರಿಕೆಯಲ್ಲಿ ರಾಷ್ಟ್ರ ಸೇವಾದಲವನ್ನು ಕಪ್ಪಂಗಿ ದಲದೊಡನೆ ಕಾನೂನು ಬಾಹಿರ ಮಾಡಿ ನಿರ್ಬಂಧಿಸಿದ ವಿಚಾರ ಓದಿ ಆಶ್ಚರ್ಯಗೊಂಡೆನು. ರಾಷ್ಟ್ರ ಸೇವಾದಲವು ದೇಶಕ್ಕೆ ಅಘಾತಕರವೆಂದು ಸರಕಾರ ಯೋಚಿಸಿದ್ದರೆ ಅದರ ಕುರಿತು ನಾನು ಮರುಕಪಡಬೇಕಾಗುತ್ತದೆ. 1946ರಂದು ಗಾಂಧೀಜಿ ಮದ್ರಾಸಿಗೆ ಬಂದಾಗ, ಅವರ ಪ್ರಾರ್ಥನಾ ಸಭೆಯಲ್ಲಿ ಶಾಂತತೆಯನ್ನು ಕಾಪಾಡಲು ಮುಖ್ಯ ಹೊಣೆ ಹೊತ್ತವರು ರಾಷ್ಟ್ರ ಸೇವಾದಲದವರು. ಇದು ಜಾತೀಯ ಸಂಸ್ಥೆಯಾಗಲಿ ಸೈನ್ಯ ತರಬೇತಿ ಸಂಸ್ಥೆಯಾಗಲಿ ಆಗಿಲ್ಲ. ಸರಕಾರವು ಯಾವುದು ಒಳ್ಳೆಯದು ಯಾವುದು ಕೆಟ್ಟದು ಎಂಬ ಬಗ್ಗೆ ಯೋಚಿಸದೆ ಇಂತಹ ಗಡಿಬಿಡಿ ಕಾರ್ಯ ಕೈಕೊಂಡ ಬಗ್ಗೆ ನಾನು ವಿಷಾದಿಸುತ್ತೇನೆ. ಹೀಗೆ ಮಾಡಿದರೆ ಮುಂದೆ ಸ್ಕೌಟು ದಳ, ವಿಶ್ವವಿದ್ಯಾಲಯ ತರಬೇತಿ ದಳ ಇವುಗಳನ್ನೂ ಸರಕಾರವು ನಿರ್ಬಂಧಿಸಬಹುದೆಂದು ತೋರುತ್ತದೆ."— ಹೀಗೆಂದು 1948ನೇ ಮಾರ್ಚ 4ರ "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆಯಲ್ಲಿ ತಮಿಳುನಾಡು ರಾಷ್ಟ್ರ ಸೇವಾದಲದ ದಳಪತಿ ಹೇಳಿಕೆ ಕೊಟ್ಟಿರುವರು.

ದಕ್ಷಿಣಕನ್ನಡದಲ್ಲಿ ಸೇವಾದಲಗಳನ್ನು ಜಪ್ತಿ ಮಾಡಿದ ಕ್ರಮ ಧೋರಣೆಗಳ ಕುರಿತು ಅದೇ ಇಂಡಿಯನ್ ಎಕ್ಸ್‌ಪ್ರೆಸ್ಸಿನ 1948ನೇ ಮಾರ್ಚ 26ರ ಸಂಚಿಕೆಯಲ್ಲಿ ಈ ರೀತಿ ವರದಿಯಾಗಿದೆ.

"ಕಾರ್ಕಳದಲ್ಲಿ ಪೋಲೀಸರು ಕಾಂಗ್ರೆಸ್ ಸೇವಾದಲ ಕಚೇರಿಗಳನ್ನು ಜಪ್ತಿಮಾಡಿ ಕೆಲವು ಲಾಠಿಗಳನ್ನು ಕೊಂಡೊಯ್ದರು: ಸರಕಾರದಿಂದ ನಿರ್ಬಂಧಿಸಲ್ಪಟ್ಟ ಸೇವಾದಲಕ್ಕೂ ನಮ್ಮ ಸೇವಾದಲಕ್ಕೂ ಸಂಬಂಧವಿಲ್ಲವೆಂದೂ, ನಮ್ಮ ಸಂಸ್ಥೆ ಕಾಂಗ್ರೆಸ್ ಸಂಸ್ಥೆಯ ಅಂಗ ಸಂಸ್ಥೆಯೆಂದೂ ತಿಳಿಸಿದರೂ ಅದು ನಿಷ್ಪ್ರಯೋಜಕವಾಯಿತು. ಹಾಗಾಗಿ ಸೇವಾದಲದ ಸಂಘಟಕರು ಈ ವಿಚಾರವನ್ನು ಮದ್ರಾಸ್ ಸರಕಾರದ ಗೃಹಮಂತ್ರಿಗಳಿಗೂ ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಇತರ ಕಾಂಗ್ರೆಸ್ ಮುಖಂಡರಿಗೂ ತಿಳಿಸಿದ್ದಾರೆ. ಇದೇರೀತಿ ಮಂಗಳೂರು ಪುತ್ತೂರು ಮೊದಲಾದ ಜಿಲ್ಲೆಯ ಇತರ ಸೇವಾದಲ ಕೇಂದ್ರಗಳಲ್ಲಿಯೂ ಜಪ್ತಿ ನಡೆದಿದೆ!

ಅದೇ ಇಂಡಿಯನ್ ಎಕ್ಸ್‌ಪ್ರೆಸ್ಸಿನ, 1948ನೇ ಮಾರ್ಚ 9ರ ಸಂಚಿಕೆಯ ವರದಿಯೊಂದರಲ್ಲಿ, ಫೆಬ್ರವರಿ 22ರಂದು ರಾಷ್ಟ್ರ ಸೇವಾದಲವು ತಮ್ಮಲ್ಲಿ ವಿಸರ್ಜಿಸಲ್ಪಟ್ಟಿದೆಯೆಂದು ಅಲ್ಲಿನ ಕಾಂಗ್ರೆಸ್ ಮುಖಂಡರೂ ಇತರರೂ ತಿಳಿಸಿದರೂ ಕೇವಲ ಬದಿಯಡ್ಕದಲ್ಲಿ ಕಾಸರಗೋಡಿನ ಸರ್ಕಲ್ ಇನ್ಸ್‌ಪೆಕ್ಟರರು, ಸಬ್ ಇನ್ಸ್‌ಪೆಕ್ಟರರು, ಪೋಲೀಸರು, ಮೆಜಿಸ್ಟ್ರೇಟರು ಸಹಿತ ಬಂದು ಜಪ್ತಿಮಾಡಿದರೆಂದು ಉಲ್ಲೇಖಿತವಾಗಿದೆ

"ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಮದ್ರಾಸ್ ಸರಕಾರದ ಗೃಹಮಂತ್ರಿಗಳಿಗೆ ಈ ರೀತಿ ಓಲೆ ಬರೆದಿದ್ದಾರೆ:

ಮಂಗಳೂರು ಜಿಲ್ಲೆಯ ಕಾಂಗ್ರೆಸ್ ಸೇವಾದಲದ ಕೇಂದ್ರಗಳನ್ನು ಪೋಲೀಸರು ಶೋಧಿಸಿ ಅಲ್ಲಿಯ ಲಾಠಿ ಮತ್ತು ಇನ್ನಿತರ ಕರಪತ್ರಗಳನ್ನು ವಶಪಡಿಸಿಕೊಂಡಿರುವರೆಂಬುದನ್ನು ಕೇಳಿ ವಿಷಾದವಾಯಿತು. ಪೂರ್ಣ ವಿಚಾರಿಸದೆ ಪೋಲಿಸರು ಈ ಕ್ರಮವನ್ನು ಕೈಕೊಂಡಂತಿದೆ. ಅವರು ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ವಿಚಾರಿಸಿದ್ದಲ್ಲಿ ಈ ಅಪರಾಧ ಆಗುತ್ತಿರಲಿಲ್ಲ. ಈ ಸಂಗತಿಯನ್ನು ಬೇಗನೆ ಸರಿಪಡಿಸಬೇಕಾಗಿ ಬಿನ್ನಹ"

—ಮೇಲಿನ ವರದಿಯು, "ಸಂಯುಕ್ತ ಕರ್ನಾಟಕ" ಪತ್ರಿಕೆಯ 1948ನೆ ಮಾರ್ಚ 16ರ ಸಂಚಿಕೆಯಲ್ಲಿ ಪ್ರಕಟವಾಗಿರುವುದು. ಅದೇ ಪತ್ರಿಕೆಯ 1948ನೇ ಮಾರ್ಚ 18ರ ಸಂಚಿಕೆಯಲ್ಲಿ ಪುನ ಈ ರೀತಿ ಸುದ್ದಿ ಬಂದಿರುವುದು.

"ಕ. ಪ್ರಾಂ. ಕಾಂಗ್ರೆಸ್ ಸಮಿತಿಯ ಮತ್ತು ಕ. ಪ್ರಾಂತ ಸೇವಾದಲ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ ಮಾಗಡಿಯವರು ಈ ಆಶಯದ ಒಂದು ಪ್ರಕಟಣೆ ಹೊರಡಿಸಿದ್ದಾರೆ.

ಮೊದಲಿನಿಂದಲೂ ರಾಷ್ಟ್ರ ಸೇವಾದಲವೆಂದು ನಡೆಸಲ್ಪಡುತ್ತಿದ್ದ ಸೇವಾದಲ ಕೇಂದ್ರಗಳನ್ನು ಅ. ಭಾ. ಕಾಂ. ಸಮಿತಿಯ ಆದೇಶದಂತೆ ಈಗ ಕರ್ನಾಟಕ ಕಾಂಗ್ರೆಸ್ ಸೇವಾದಲವೆಂದು ಮಾರ್ಪಡಿಸಲಾಗಿದೆ. ಆದರೂ ಮಂಗಳೂರ ಜಿಲ್ಲೆಯ ಸೇವಾದಲ ಕೇಂದ್ರಗಳನ್ನು ಪೋಲೀಸರು ಜಪ್ತಿ ಮಾಡಿ ಅನೇಕ ಕಾಗದ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆಂದು ವರದಿ ಬಂದಿದೆ. ಇದು ವಿಷಾದಕರ ಸಂಗತಿ. ಈ ಬಗ್ಗೆ ಈಗಾಗಲೇ ಮದ್ರಾಸು ಸರಕಾರಕ್ಕೆ ತಿಳಿಸಿದ್ದು ಸ್ಥಾನಿಕ ಅಧಿಕಾರಿಗಳು ಸಹ ನಿಜ ಸಂಗತಿಯನ್ನು ತಿಳಿದುಕೊಂಡು ವರ್ತಿಸಬೇಕೆಂದು ಬಿನ್ನಹ."

oo oo oo

ಮೇಲಿನ ಎಲ್ಲಾ ವರದಿ ಹೇಳಿಕೆ ಪ್ರಕಟಣೆಗಳಿಂದಲೂ, ಕಾಂಗ್ರೆಸ್ ಸರಕಾರವು ಕಾಂಗ್ರೆಸ್ ಸಂಘಟನೆಯನ್ನು ನಿರ್ಬಂಧಿಸಿ ಕಾಂಗ್ರೆಸಿನವರ ಹಾಗೂ ಕಾಂಗ್ರೆಸ್ ಸಮಿತಿಯವರ ಮನ ನೋಯಿಸಿದೆ ಎಂಬ ವಿಚಾರ ವ್ಯಕ್ತವಾಗುವುದು.

ಹೀಗೆಲ್ಲಾ ಆಗುವುದರ ಅರ್ಥವೇನು? ಜಾತೀಯ ಸಂಸ್ಥೆಯಾದ ಆರ್. ಎಸ್. ಎಸ್. ಮತ್ತು ಹಿಂದೂ ಮಹಾಸಭೆಯ ಸದಸ್ಯನೊಬ್ಬನು ಗಾಂಧೀಜಿಯನ್ನು ಗುಂಡಿಕ್ಕಿ ಕೊಂದನು!

ಜಾತೀಯತೆಯನ್ನು ತಡೆದು ಜನತೆಯಲ್ಲಿ ಐಕ್ಯವನ್ನುಂಟುಮಾಡುವ ಸಂಸ್ಥೆ ಸೇವಾದಲ.

ಸೇವಾದಲವು ಕಾಂಗ್ರೆಸಿನ ಅಂಗ ಸಂಸ್ಥೆ. ಕಾಂಗ್ರೆಸು ಗಾಂಧೀಜಿಯ ಪ್ರೀತಿಯ ಸಂಸ್ಥೆ. ಹಾಗಾದರೆ ಸೇವಾದಲವನ್ನು ನಿರ್ಬಂಧಿಸಬೇಕೆ?

ಒಂದೇ ಮಾತಿನಲ್ಲಿ ಹೇಳುವುದಿದ್ದರೆ: 'ಗಾಯವೊತ್ತಟ್ಟು, ಮದ್ದೊತ್ತಟ್ಟು"

ಹೀಗಾಗಬಾರದು, ಗುಣವಾಗಬೇಕಾದರೆ ಗಾಯಕ್ಕೇ ಮದ್ದು ಹಚ್ಚಬೇಕು. ಜಾತೀಯತೆಯ ಹುಟ್ಟಡಗಿಸಬೇಕು. ಜಾತೀಯತೆಯ ವಿರೋಧಿಗಳನ್ನು ಸದೆಬಡಿಯುವುದಲ್ಲ. ಕಮ್ಯುನಿಸ್ಟರ, ಸೋಶಿಯಲಿಸ್ಟರ ಕಾಂಗ್ರೆಸಿಗರ ಮನ ನೋಯಿಸುವುದಲ್ಲ

ಮದ್ರಾಸು ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿ, ಮತ್ತು
ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ
ಸಂಭಾವನೆ ಪಡೆದ ಗ್ರಂಥ.
ಡಾ। ವಿ. ಆರ್. ಕೊರಡ್ಕಲ್ಲರ
'ಮನೆಮದ್ದು'-Home Remedies
ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ
ಬಾಣಂತಿಯರ ಮತ್ತು ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ
ನೀವೇ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ
ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.
'Ably written-Quite up-to-date-Valuable service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ
ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ
ಕೊಂಡಾಡಿದ ಪುಸ್ತಕವಿದು.
ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.
ಬೆಲೆ ರೂಪಾಯಿ 2—0—0.] [ಟಪ್ಪಾಲು ದ್ವಾರಾ 2—6—0.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಎಲ್ಲತರದ
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ.
ಮದುವೆ ಕಾಗದಗಳನ್ನು
ಅಲ್ಪಾವಧಿಯಲ್ಲೇ ಮಾಡಿ
ಕೊಡಲಾಗುವುದು.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

ಎರಡಾಣೆ

Regd. No M 3613

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

15-4-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-8-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೩೨

NAVAYUGA WEEKLY, UDIPI.

FOUNDER: **Hon'ble Mr. A. B SHETTY,** Health Minister, Govt. of Madras.

Vol. 28
No. 32

ಸರ್ವೋದಯ-ಸಮಾಜ

ಕಳೆದ ತಿಂಗಳ ಮಧ್ಯಭಾಗದಲ್ಲಿ ಮಹಾತ್ಮ ಗಾಂಧಿಯವರ ಅನುಯಾಯಿಗಳ ಸಮ್ಮೇಲನವು ವಾರ್ಧಾದಲ್ಲಿ ಸೇರಿ ಮಾನವಬಾಂಧವ್ಯಕ್ಕಾಗಿ ಗಾಂಧೀಜಿಯ ತತ್ವ ಮತ್ತು ಕಾರ್ಯಕ್ರಮಗಳನ್ನು ಮುಂದೊತ್ತುವುದಕ್ಕಾಗಿಯೂ, ಮಹಾತ್ಮರಿಂದ ಸ್ಥಾಪನೆಗೊಂಡಿರುವ ವಿವಿಧ ಸಂಘ ಸಂಸ್ಥೆಗಳನ್ನು ನಡೆಸುವುದಕ್ಕಾಗಿಯೂ 'ಸರ್ವೋದಯ ಸಮಾಜ' ಎಂಬ ಹೆಸರಿನ ಸಂಘವೊಂದನ್ನು ಸ್ಥಾಪಿಸಿರುವರಷ್ಟೆ? ಇದರ ಪ್ರಾಮುಖ್ಯತೆಯು ಜನತೆಯ ಮನಸ್ಸಿಗೆ ನಾಟಬೇಕಾದಷ್ಟು ನಾಟಿದಂತೆ ತೋರುವುದಿಲ್ಲ; ಇದರ ಪ್ರಚಾರವಾದರೂ ಆಗಬೇಕಾದಷ್ಟು ಆದಂತಿಲ್ಲ. ಆದರೆ ಇಷ್ಟರಿಂದಲೇ ಈ ಸಮಾಜವು ಅಗಣ್ಯವೆಂದಾಗಲೀ, ಅಪಜಯದತ್ತ ಸಾಗಬಹುದೆಂದಾಗಲೀ ಭಯಪಡಬೇಕಾಗಿಲ್ಲ. ಒಂದನೆಯದಾಗಿ ಈ ಸಮಾಜವು ಕಾರ್ಯಪ್ರಧಾನವಾದುದು ಹೊರತು ಪ್ರಚಾರ ಪ್ರಧಾನವಾದುದಲ್ಲ; ಎರಡನೆಯದಾಗಿ ಅದರ ಕಾರ್ಯಕ್ರಮಗಳು ಕೂಡಾ ಜನತಾ ಹೃದಯದ ಮಧುರ ಮಾರ್ಪಾಟನ್ನು ಧರಿಸಿದ್ದು ನಿಧಾನವಾಗಿ ಮುಂದೊತ್ತಿ ಚಿರಸ್ಥಾಯಿಯಾಗುವಂತಹ ಕಲ್ಲಿದ್ದಲ ಕೆಂಡದಂತಿವೆ ಹೊರತು, ಒಮ್ಮೆಗೇ ಪ್ರಭಾವ ಬೀರಿ ಚಣದಲ್ಲೇ ನಂದಿ ಹೋಗುವ ಹುಲ್ಲ ಬೆಂಕಿಯಲ್ಲ. ಒಂದು ಕಾರ್ಯ ಅಥವಾ ಘಟನೆಯು ಜನತೆಯಲ್ಲಿ ಅಸಾಮಾನ್ಯ ಉದ್ವೇಗಾತುರಗಳನ್ನು ನಿರ್ಮಿಸುತ್ತಿದ್ದರೆ ಅದು ಹೇಗಿದ್ದರೂ ಅಲ್ಪಾಯುಷಿ. ಬದಲಿಗೆ ಜನಜಾಗ್ರತಿಯನ್ನು ಹುಟ್ಟಿಸಿ, ಜತೆಯಲ್ಲೇ ಜನತೆಯ ಹೃದಯವನ್ನೂ ಒಲಿಸಿಕೊಳ್ಳುವಂತಹದಿದ್ದರೆ ಅದು ನಿಜಕ್ಕೂ ಚಿರಂಜೀವಿ. ಗಾಂಧೀಜಿಯ ಕಾರ್ಯಕ್ರಮಗಳನ್ನು ಮುಂದೊತ್ತಲು ಸ್ಥಾಪನೆಗೊಂಡಿರುವ 'ಸರ್ವೋದಯ ಸಮಾಜ'ವು ಈ ಪೈಕಿ ಎರಡನೇ ವರ್ಗಕ್ಕೆ ಸೇರಿದ್ದೆಂಬುದನ್ನು ಮರೆಯಬಾರದು.

ಒಂದು ಕಾರಣ

ಈ ನೂತನ ಸಂಸ್ಥೆಯೂ ಹಳೇ ಮರ್ಜಿಯ ಹೆಸರನ್ನಿಟ್ಟುಕೊಂಡೇ ಜನ್ಮವೆತ್ತಿರುವುದರಿಂದ ಅದರ ಸ್ವಭಾವದಂತೆಯೇ ಅದರ ಹೆಸರೂ ಕೃತಕಾಕರ್ಷಣ ರಹಿತವಾಗಿದೆ. ಈ ಕಾಲದಲ್ಲಿ 'ಬ್ರಹ್ಮ ಸಮಾಜ' 'ಆರ್ಯ ಸಮಾಜ'ಗಳಿಂದಾರಂಭಿಸಿ ಫಲಾಹಾರ ಮಂದಿರಗಳವರೆಗಿನ ಪ್ರತಿಯೊಂದು ಜನಜೀವನ ವಿಭಾಗಗಳಲ್ಲೂ ಈ 'ಸಮಾಜ' ಪದ ಜೋಡಣೆಗೊಂಡಿದೆ. ಸರ್ವಸಾಮಾನ್ಯವಾಗಿ ಈ 'ಸಮಾಜ' ನಾಮಧಾರೀ ಧಾರ್ಮಿಕ, ಸಾಮಾಜಿಕ ಪಕ್ಷ, ಪಂಥ, ಸಂಘ ಸಂಸ್ಥೆಗಳಾವುವೂ ಜನತಾ ಹೃದಯದಲ್ಲಿ ಗಣ್ಯಸ್ಥಾನ ಸಂಪಾದಿಸಿಲ್ಲ. ಇವೆಲ್ಲವೂ ನವನಾಗರಿಕತೆಗೆ ಹೇಳಿಸದವುಗಳೆಂಬ ಭಾವನೆ ಜನತೆಯಲ್ಲಿ ಬೇರೂರಿದೆ. ಆದರಿಂದು 'ಸರ್ವೋದಯ ಸಮಾಜ'! ಜನತೆಯ ಪಾಲಿನ ಸರ್ವ ಅಮೂಲ್ಯತೆಗಳನ್ನೂ ಉದ್ಧರಿಸಿ, ಉದಯಗೊಳಿಸಿ, ಮಾನವ ಜನಾಂಗದ ಶಾಂತಿ ಮತ್ತು ಅಭಿವೃದ್ಧಿಯನ್ನು ಸಾಧಿಸುವ ಗುರಿಯಿಟ್ಟುಕೊಂಡಿರುವ ಸಮಾಜ. ಆದ್ದರಿಂದ ಅದಕ್ಕೀ ಹೆಸರೇ ಯೋಗ್ಯ; ಅದರ ಆ ಹೆಸರಿನಂತೆಯೇ ಗಾಂಧೀಜಿಯಿಂದ ನಿರ್ದೇಶಿಸಲ್ಪಟ್ಟಿರುವ ಅದರ ಸತ್ಯ, ಅಹಿಂಸೆ, ಬಂಧುತ್ವದಂತಹ ತತ್ವಗಳೂ, ನೂಲುವುದೇ ಮೊದಲಾದ ಕಾರ್ಯಕ್ರಮಗಳೂ ಅವ್ಯವಹಾರ್ಯವೆನ್ನಿಸಿ ಆಕರ್ಷಣೆ ಕಳಕೊಂಡಿವೆ. ಸ್ವತಃ ಮಹಾತ್ಮಾಜೀ ತನ್ನ ವಿಧಾಯಕ ಕಾರ್ಯಗಳನ್ನು ಮುಂದೊತ್ತುತ್ತಿದ್ದಾಗ ಕೂಡಾ ಅವು ಸ್ವಾತಂತ್ರ್ಯ ಸಮರದ ಅವರ ಹೋರಾಟ ಕಾರ್ಯಕ್ರಮಗಳಷ್ಟು ಜನತೆಯನ್ನು ಆಕರ್ಷಿಸಿದ್ದಿಲ್ಲವೆಂಬುದನ್ನು ಮರೆಯಬಾರದು. ಆಗ ಅವರ ವ್ಯಕ್ತಿ ಪ್ರಭಾವದಿಂದಾಗಿ, ಅವರ ವಿಧಾಯಕ ಕಾರ್ಯಕ್ರಮಗಳೂ ಭಾರತ ರಾಜಕೀಯದಲ್ಲಿ ಮಂಜೂರಾತಿ ಪಡೆದಿದ್ದುವು; ಮಂದಗಮನದಿಂದಾದರೂ ಮುಂದೆ ಮುಂದೆ ಸಾಗಿದ್ದುವು. ಈಗ ನಿರ್ದೇಶಕನನ್ನೇ ಕಳಕೊಂಡ ಗಾಂಧಿ ಕಾರ್ಯಕ್ರಮಗಳು ಒಂದು ರೀತಿಯಿಂದ ಹಿಂದೆ ದೂಡಲ್ಪಟ್ಟಂತಾಗಿವೆಯಾದರೂ, ಮತ್ತೊಂದು ರೀತಿಯಿಂದ ಮಹಾತ್ಮಾ ಗಾಂಧೀಜಿಯ ಮೇಲಿನ ಗೌರವದ ಗಣ್ಯಪಾಲನ್ನು ತಾವು ಪಡೆದು, ಗಾಂಧೀಜಿಯ ಸ್ಮಾರಕಗಳೆನ್ನಿಸುವ ನವೀನ ಯೋಗ್ಯತೆಯನ್ನು ಗಳಿಸಿ ಮುಂದೊತ್ತಲ್ಪಟ್ಟಿವೆ. ಇವೆರಡು ಸ್ಥಿತಿಗತಿಗಳ ತೂಕ ವ್ಯತ್ಯಾಸ ಹೇಗಿದ್ದರೂ 'ಸರ್ವೋದಯ ಸಮಾಜ'ವು ಸ್ಥಾಪನೆಗೊಂಡ ಆದಿ ಭಾಗದಲ್ಲಿ, ಅದರ ಯೋಗ್ಯತೆಗರ್ಹವಾದಷ್ಟೇ ಜನತಾಲಕ್ಷ್ಯ ಆ ಕಡೆಗೆ ಹರಿದಿದೆ ಎಂಬುದನ್ನೊಪ್ಪಬೇಕು.

ಈ ಗಾಂಧೀ ಶಿಷ್ಯರು

ವಾರ್ಧಾದಲ್ಲಿ ಸೇರಿದ್ದ ಗಾಂಧೀ ಭಕ್ತರ ಸಮ್ಮೇಲನವನ್ನು ಉದ್ಘಾಟಿಸಿದವರು ಪಂಡಿತ ನೆಹರುಗಳೇ; ಅದರ ಅಧ್ಯಕ್ಷತೆ ವಹಿಸಿದುದು ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು. ಮೌಲಾನಾ ಆಜಾದ್, ಕೃಪಾಲನಿ, ಶಂಕರರಾವ್ ದೇವೋ—ವಲ್ಲಭಾಯಿಗಳ ವಿನಹ ಮಿಕ್ಕೆಲ್ಲಾ—ಅಗ್ರಗಣ್ಯ ಕಾಂಗ್ರೆಸ್ ನಾಯಕರೂ ಅಲ್ಲಿದ್ದರು. ಆದರೆ ವಾರ್ಧಾ ಸಮ್ಮೇಲನದ ಜೀವಾಳವಾಗಿದ್ದವರೆಂದರೆ ತಮ್ಮ ಜೀವಮಾನದ ಪ್ರತಿಯೊಂದಂಗವನ್ನೂ ಗಾಂಧೀ ತತ್ವಗಳಂತೆ ರೂಪಿಸಿಕೊಂಡ ನಿಷ್ಠಾವಂತ ಗಾಂಧೀ ಶಿಷ್ಯರು. ರಾಜಕೀಯದಲ್ಲಿ ಗಾಂಧಿಜಿಯವರು ನೆಹರು, ವಲ್ಲಭಾಯಿ, ರಾಜೇಂದ್ರ ಪ್ರಸಾದರಂಥವರನ್ನು ನಿರ್ಮಿಸಿದಂತೆ ನಿತ್ಯಜೀವನದಲ್ಲಿ ತನ್ನ ತತ್ವವೇತ್ತರನ್ನಾಗಿ ಮಾರ್ಪಡಿಸಿದ್ದ ವಿನೋಬಾಭಾವೆ, ದಾದಾ, ಕಾಕಾ ಕಾಲೇಲ್ಕರ್, ಜಾಜೂಜೀ, ಮಶ್ರುವಾಲಾ, ಅಪ್ಪಾ ಪಟ್ವರ್ಧನ್, ಆಚಾರ್ಯ ಭಗವತ್ ಮುಂತಾದ ಮಹಾತ್ಮರ ಪಟ್ಟಶಿಷ್ಯರೇ ಸರ್ವೋದಯ ಸಮಾಜ ಸ್ಥಾಪಕಾ ಸಮ್ಮೇಲನದ ಕಾರ್ಯಕಲಾಪಗಳಲ್ಲಿ ಮುಖ್ಯ ಭಾಗವಹಿಸಿದ್ದರು. ಇನ್ನು ಆ ಸಮಾಜದ ಸೂತ್ರಧಾರಿಗಳಾಗಿ ಕಾರ್ಯಸಾಗಿಸತಕ್ಕವರೂ ಇಂತಹ ಶಿಷ್ಯರೇ ಹೊರತು ರಾಜಕೀಯ ಪ್ರಮುಖರಲ್ಲ. ಮಹಾತ್ಮರ ಸತ್ಯ, ಅಹಿಂಸೆಗಳನ್ನಾಧರಿಸಿ ಜಾತಿರಹಿತ ಮಾನವ ಬಂಧುತ್ವವನ್ನು ಸ್ಥಾಪಿಸುವದೊಂದನ್ನೇ ಮುಖ್ಯ ಗುರಿಯಾಗಿ ಇಟ್ಟುಕೊಂಡಿರುವ ಈ ಸಮಾಜವು ಯಾವ ವಿಧದಲ್ಲೂ ರಾಜಕೀಯರಂಗ ಪ್ರವೇಶಿಸದು; ಚುನಾವಣೆ ಇತ್ಯಾದಿಗಳಲ್ಲಿ ಭಾಗವಹಿಸದು. ಇಂತಹ ಕಲಶಕ್ಕರ್ಹರೆಂದರೆ ತಮ್ಮಾತ್ಮವನ್ನು ಮಹಾತ್ಮರ ತತ್ವವಾಗಿ ಮಾರ್ಪಡಿಸಿಕೊಂಡು ಜಗತ್ತಿನ ಸರ್ವಾತ್ಮಗಳನ್ನೂ ತಮ್ಮ ವರ್ಗಕ್ಕೇನೇ ಸೇರಿಸಿಕೊಳ್ಳಬೇಕೆಂಬ ಬಯಕೆಯಿರುವ ವಿನೋಬಾ, ದಾದಾರಂಥವರೇ. ನೆಹರುಗಳು ತನ್ನ ಹೃದಯದಲ್ಲಿ-ಬಾಬು ರಾಜೇಂದ್ರರು ತನ್ನ ಸ್ವಭಾವ ಮತ್ತು ಗುಣನಡತೆಗಳಲ್ಲಿಯೂ-ಗಾಂಧೀ ತತ್ವಗಳನ್ನು ತುಂಬಿಸಿಕೊಂಡಿರಬಹುದು; ಆದರೆ ಅವರು ಅದನ್ನು ಕಾರ್ಯಕ್ಕಿಳಿಸುವ ರಂಗ ರಾಜಕೀಯ. ಪಂಡಿತ ನೆಹರುಗಳೀಗ ಇಡೀ ಜಗತ್ತಿನ ರಾಜಕೀಯಕ್ಕೇನೇ [illegible] ತುಳುಕಿಸುತ್ತಿರುವಂತೆ ಗಾಂಧೀ ತತ್ವಗಳು ಲೋಕದ ರಾಜಕಾರಣದಲ್ಲೂ ಸ್ಥಾಪಿಸಿಕೊಳ್ಳಬಲ್ಲವು; ಹಾಗಾಗುವ ಕಾಲ ಬರಬಹುದು. ಆದರೆ ಆ ತತ್ವಗಳು ಇಂದಿನ ರಾಜಕಾರಣಕ್ಕೆ ಪರಿಚಿತವಾಗಿರುವಷ್ಟು ಲೋಕದ ಇತರ ರಾಷ್ಟ್ರೀಯ ರಾಜಕೀಯದೊಳಗೆ ಈ ತನಕ ಸೇರಿಲ್ಲ. ರಾಜಕಾರಣದ ಪಟ್ಟಿಗೆ ಮಹಾತ್ಮರ ಸತ್ಯ, ಅಹಿಂಸೆ, ನ್ಯಾಯಗಳನ್ನು ಅಂಶ ಬಿಡದೆ ಅ

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ, THE UNITED KARNATAK INSURANCE COMPANY, LIMITED.

ನ ಹರಿಸುತ್ತಿರುವವರೆಂದರೆ ಪಂಡಿತ ನೆಹರುಗಳು. ಆದರೆ ಪಂಡಿತಜೀಯ ವ್ಯಕ್ತಿಗತ ಸ್ವಭಾವವು ಅಗ್ರಗಣ್ಯ ಸೇನಾನಿಯದು ಹೊರತು ಅಹಿಂಸಾ ಯೋಧನದಲ್ಲವೆಂಬುದು, ಅವರು ಉದ್ವೇಗಿ ಸ್ವಭಾವದವರೆಂಬುದೂ ಖಚಿತವಿದೆ. ಬಾಬು ರಾಜೇಂದ್ರರ ಗುಣ ನಡತೆಗಳಲ್ಲೂ ಸತ್ಯಾಹಿಂಸೆ ಮತ್ತು ಶಾಂತ ಗಭೀರತೆ ತುಂಬಿ ತುಳುಕುತ್ತಿದ್ದರೂ ಅವರು ಕೂಡಾ ಅದನ್ನು ರಾಜಕೀಯದಲ್ಲಿ ಪ್ರಯೋಗಿಸುವವರೇ ಹೊರತು ಉಪವಾಸ, ಚರಕಾ, ಇತ್ಯಾದಿಗಳಲ್ಲಲ್ಲ. ಆದರೆ ವಿನೋಬಾ, ದಾದಾ, ಕಾಲೇಲ್ಕರ್ ಭಗವತಾಂಗನವರು ರಾಜಕೀಯವನ್ನು ಮರೆತು ಗಾಂಧೀ ತತ್ವಗಳನ್ನು ನಿತ್ಯ ಜೀವನಕ್ಕೆ ಹಚ್ಚಿಕೊಂಡವರು. ವಿಶಾಲ ರಾಜಕೀಯದಲ್ಲಿ ಮಹಾತ್ಮರ ತತ್ವವನ್ನೊಂದು ಮಾರ್ಗವಾಗಿ ತೋರಿಸುವುದು ಸುಲಭ; ಆದರೆ ವ್ಯಕ್ತಿ ಜೀವನದಲ್ಲಿ ಆ ತತ್ವವನ್ನೇ ತನ್ನ ಪ್ರಾಣ ತತ್ವನನ್ನಾಗಿ ಮಾರ್ಪಡಿಸಿಕೊಳ್ಳುವದು ಅತಿಪ್ರಯಾಸ. ಈ ದೃಷ್ಟಿಯಲ್ಲಿ ನೆಹರು ರಾಜೇಂದ್ರರಂತಹ ರಾಜಕೀಯ ಪ್ರಮುಖರಿಗಿಂತ ವಿನೋಬಾ, ದಾದಾರಂತಹ ಮಹಾತ್ಮರ ನಿಜ ಶಿಷ್ಯರೇ ಮುಖ್ಯ. ಮೊದಲನೆಯವರು ನಾಯಕರು, ಎರಡನೆಯವರು ತಪಸ್ವಿಗಳು. ಅವರು ಪ್ರಭಾವಿಗಳು; ಇವರು ಸಂಯಮಿಗಳು.

ವಾರ್ಧಾ ಸಮ್ಮೇಲನದಲ್ಲಿ

"ಅಹಿಂಸೆಯ ಮಹಾ ಪ್ರವಾದಿಯ ಶಿಷ್ಯರ ಈ ಸಮ್ಮೇಲನವು ಪೋಲೀಸರ ಪಹರೆಯಿಂದ ಸೇರಬೇಕಾಗಿ ಬಂದುದು ಒಂದು ವಿಲಕ್ಷಣ ವಿರೋಧಾಭಾಸವೇ ಸರಿ" ಎಂದು ಆಚಾರ್ಯ ವಿನೋಬಾ ಭಾವೆಯವರು ವಾರ್ಧಾ ಸಮ್ಮೇಲನದಲ್ಲಿ ಹೇಳಿದ ಮಾತು ಎಲ್ಲರ ಹೃದಯವನ್ನೂ ಸ್ಪರ್ಶಿಸಿದ್ದಿತು. "ಅದಕ್ಕಾಗಿ ನನಗೆ ನಾಚಿಕೆಯಾಗುತ್ತಿದೆ" ಎಂದ. ಪಂಡಿತ ನೆಹರುಗಳು ಹೃದಯ ತನಾಚದ್ದರು ನೂತನದಿಶ ಸ್ವತಂತ್ರಭಾರತದ ಪ್ರಧಾನಮಂತ್ರಿ—ಜನ ಸಾಮಾನ್ಯರ ಹೃದಯದ ಅಧಿದೇವತೆ—ಪಂಡಿತ ನೆಹರು ಗಳು ಪೋಲೀಸರ ಕಾವಲು ಮುತ್ತಿಗೆ ವಿನಾ ಸಂಚರಿಸಲು ಕಷ್ಟಗಳನ್ನು ಕಂಡಾ ಇತಿಹಾಸದ ಸ್ಥಿತಿಯು ಅಲ್ಲಿದ್ದುದನ್ನು ಕಂಡು ಸಮ್ಮೇಲನದಲ್ಲಿ ಸೇರಿದ್ದ ಎಲ್ಲರಿಗೂ ಆತ್ಯಂತ ಸಂತಾಪವಾಗಿದ್ದಿತು. ಆ ಸಮ್ಮೇಲನವು ಆದ ನಿರ್ಧಾರಗಳನ್ನು ಮಾಡಿದ್ದು ರಾಷ್ಟ್ರಜನಕನ ವಿಯೋಗದಿಂದಾದ ಅಗಾಧ ನಷ್ಟಕ್ಕಾಗಿ ಶೋಕಪ್ರದರ್ಶನ—ಶ್ರದ್ಧಾಂಜಲಿ—ಅವರ ಕಡೆಗೆ ಸಹಾನುಭೂತಿ ಸೂಚಿಸಿ ಅವರ ಲಕ್ಷ್ಯ ಕಾರ್ಯದಲ್ಲಿ ಕೇಂದ್ರ ಸರಕಾರಕ್ಕೆ ನೆರವನ್ನೀಯುವ ನಿರ್ಧಾರ—ಗಾಂಧಿಜೀಯ ವಿಧಾಯಕ ಕಾರ್ಯಕ್ರಮಗಳನ್ನು ಸಾಗಿಸುತಿದ್ದ ವಿವಿಧ ಸಂಘ ಸಂಸ್ಥೆಗಳನ್ನು ಒಂದುಗೂಡಿಸಿ ಸಂಯುಕ್ತ ಸಂಘದ ರಚನೆ ಹಾಗೂ ಶ್ರೀ ಜೆ. ಸಿ. ಕುಮಾರಪ್ಪನವರನ್ನು ಅದರ ಸಂಘಟಕರಾಗಿ ನೇಮಕ—ಒಂದು ಶಾಂತಿ ಸೇನಾರಚನಾ ನಿರ್ಧಾರ—ಜಾತೀಯತಾರಹಿತ, ಮೇಲು ಕೀಳುವಿರಹಿತ ಸರ್ವೋದಯ ಸಮಾಜ ರಚನೆ—ಮುಂತಾದುವುಗಳೇ ಆ ಸಮ್ಮೇಲನದಲ್ಲಾಗಿದ್ದ ನಿರ್ಣಯಗಳು. ಮಹಾತ್ಮರು ನಿರ್ಮಿಸಿಟ್ಟುಹೋಗಿರುವ ಈ ಕುಟುಂಬ ದಂತಿಯೇ ಅವರು ಮಾಡಿಬಿಟ್ಟು ಹೋಗಿರುವ ಸಂಘ ಸಂಸ್ಥೆಗಳು ಬಹಳವಿವೆ—ಇವೇ ಅವರ ಪಾಲಿನ ಮಾನಸಿಗೇ ಅಸ್ತಿಗಳು; ತಾಲಿಮಿಸಂಘ, ಚರಕಾಸಂಘ ಗ್ರಾಮೋದ್ಯೋಗ ಸಂಘ, ಹರಿಜನ ಸೇವಕ ಸಂಘ, ಮತ್ತಿಂತಹ ಇತರ ಗಾಂಧೀ ನಿರ್ಮಿತ ಸಂಘಗಳಿವೆ. ಇವೆಲ್ಲವುಗಳ ಶಕ್ತಿ ಮತ್ತು ಸಂಪತ್ತಿನ ಮೂಲಬಗ್ಗೆಯಾಗಿ ಗಾಂಧಿಜೀಯಿದ್ದರು; ಮಹಾತ್ಮರ ವಿಯೋಗದಿಂದ ಅವೆಲ್ಲವೂ ಈಗ ಅನಾಥವಾಗಿವೆ. ಇವುಗಳ ಆಡಳಿತೆಯನ್ನು ಕೇಂದ್ರೀಕರಿಸಿ ಅವುಗಳನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ವ್ಯವಸ್ಥೆಯು ವಾರ್ಧಾ ಸಮ್ಮೇಲನದಲ್ಲಾಗಿದೆ. ಇನ್ನು ಈ ಸರ್ವೋದಯ ಸಮಾಜವು ತನ್ನ ಗುರಿಯ ಕಡೆಗೆ ಜಯಶೀಲವಾಗಿ ಮುಂದೊತ್ತುವುದೊಂದನ್ನೇ ನೋಡಲಿಕ್ಕಿದೆ.

ಗಾಂಧೀ ಯುಗವೆ?

ಈಗಿನದು 'ಗಾಂಧೀ ಯುಗ'ವೆಂದೂ, ತತ್ಸ್ವರಾಧನೆಯಿಂದಲೇ ಲೋಕ ಶಾಂತಿ ಸಾಧ್ಯವೆಂದೂ ಮಹಾತ್ಮರ ಮರಣಾನಂತರ ಭಾರತೀಯರ ಸರ್ವ ಪ್ರಥಮ ನಾಯಕನಾಗಿರುವ ಪಂಡಿತ ನೆಹರುಗಳು ಸಾರಹತ್ತಿದ್ದಾರೆ. ತನ್ನ ನಾಯಕತ್ವದ ವಾರಿಸ್ದಾರ ಪಂಡಿತ ಜವಾಹರಲಾಲರಲ್ಲದೆ ಅನ್ಯರಲ್ಲವೆಂದು ಗಾಂಧಿಜಿ ಬದುಕಿದ್ದಾಗಲೇ ನೇಮಿಸಿದ್ದರು; ಮಹಾತ್ಮರ ವಿಯೋಗಾನಂತರ ಪಂಡಿತಜೀ ಅದಕ್ಕನುಗುಣವಾಗಿ ದ್ವಿತೀಯ ಗಾಂಧಿಯಾಗಿಯೇ ಮಾರ್ಪಟ್ಟಿದ್ದಾರೆ. ಮಹಾತ್ಮರ ವಿಯೋಗದಿಂದ ಅವರ ಶಾಂತಿ, ಸತ್ಯ, ಅಹಿಂಸಾತತ್ವಗಳು ಅನಾಥವಾದುವೆನ್ನಿಸಲು ಬಿಡಬಾರದೆಂದು ಈ ಉತ್ತರಾಧಿಕಾರಿ ಪಣತೊಟ್ಟಂತಿದೆ. ಗಾಂಧಿಜೀ ಬದುಕಿದ್ದಾಗ "ಈ ನೀತಿ ಸೂತ್ರಗಳ ಕಡೆಗೆ ಅಷ್ಟೊಂದು ಆಸಕ್ತಿಯನ್ನು ಪ್ರದರ್ಶಿಸದಿದ್ದ ಪಂಡಿತರೀಗ, ಪ್ರತಿಯೊಂದು ಸಂದರ್ಭದಲ್ಲೂ ಅವುಗಳನ್ನೇ ಮುಂದಿಡಹತ್ತಿದ್ದಾರೆ. ವಾರ್ಧಾದಲ್ಲಿ ಸೇರಿದ್ದ ಇತರ ಗಾಂಧೀ ಭಕ್ತರಿಗೂ ತಮ್ಮ ಜವಾಬ್ದಾರಿಯೀಗ ಹೆಚ್ಚಾದಂತೆ ಅನ್ನಿಸಿದ ಅನುಭವವಾಗಿದೆ. ಅವರ ದೃಷ್ಟಿಪಥದಲ್ಲಿ ಈ ಮೊದಲು ಬಾಪೂಜಿಯ ಅಭಿಪ್ರಾಯ ಮಾತ್ರವಿತ್ತು; ಈಗ ಬಾಪೂಜಿಯ ಆತ್ಮವೇ ಇದೆ. ತನ್ನ ಜೀವಮಾನದಲ್ಲಿ ಲೋಕದ ಇದುವರೆಗಿನ ಯಾವ ಮಹಾತ್ಮನೂ ಪಡೆಯದಿದ್ದಂತಹ ಕೀರ್ತಿಯನ್ನು ಗಳಿಸಿದ್ದ ಮಹಾತ್ಮಾ ಗಾಂಧಿಯವರು, ಮರಣಾನಂತರದ ವಿಜಯದಲ್ಲೂ ಮಿಕ್ಕ ಮಹಾತ್ಮರನ್ನು ಹಿಂದಿಕ್ಕಲಾರರೇ ಎಂದು ಪ್ರಪಂಚ ಹಿತೈಷಿಗಳು ಈ ಸರ್ವೋದಯ ಸಮಾಜದ ಕಡೆಗೆ ನೋಡುತಿದ್ದಾರೆ. ಕ್ರೈಸ್ತ, ಬುದ್ಧರ ಬೋಧನೆಗಳು ಅವರ ವಿಯೋಗಾನಂತರ ಶಿಷ್ಯರಿಂದಲೇ ಪ್ರಚಾರಿಸಲ್ಪಟ್ಟದ್ದು, ಲೋಕವ್ಯಾಪಕಗೊಂಡಿದ್ದುವು. ಮಹಾತ್ಮರೇನೋ ಆ ಕೆಲಸವನ್ನು ತನ್ನ ಶಿಷ್ಯರ ಪಾಲಿಗೆ ಪೂರ್ತಿ ಬಾಕಿಯಿಡದೆ ಬಹಳಾಂಶವನ್ನು ಸ್ವತಃ ತಾನೇ ಸಾಧಿಸಿದ್ದರು. ಅದನ್ನು ಮುಂದೊತ್ತಿ ಪೂರ್ಣಗೊಳಿಸುವ ಹೊಣೆ ಮಾತ್ರ ಗಾಂಧೀ ಶಿಷ್ಯಮಂಡಲಿಯ ಮೇಲಿದೆ. ಅವರೀ ಕೆಲಸವನ್ನು ಮಹಾತ್ಮರ ಘನತೆಗನುಗುಣವಾಗಿ ನಿರ್ವಹಿಸಲಾರರೆ? ಜಗತ್ತಿನ ಮಾನವ ವರ್ಗ, ವಿಶೇಷತಃ ಭಾರತೀಯರು ಮಹಾತ್ಮಾಜೀ ನಿಯೋಜಿತ ಕಾರ್ಯಕ್ರಮಗಳನ್ನು ಜಯಶೀಲಗೊಳಿಸಿ ಲೋಕಶಾಂತಿ ಮತ್ತು ಅಭಿವೃದ್ಧಿಯನ್ನು ಸಾಧಿಸಲಾರರೆ?

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— . 3.28 Crores

Our Chief Agency New business in 1946 about 54 Lakhs

Our experience of 37 years available to you for arranging Insurance investment It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India

Bombay Life Building,

Central Office, Udipi.

Branches at.

Mangalore, Calicut, Trivandrum, Madura, Madras, Bangalore & Bombay

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs 1000/ and over, in multiples of Rs. 500/- at the following rates:-

For 3 months at 2½% per annum

For 6 months at 3½% per annum.

For further particulars you may apply or call at any of our following Offices

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs

ನಿಮ್ಮಷ್ಟಕ್ಕೆ ನೀವು ಮನೆಯಲ್ಲೇ 'ಇಂಗ್ಲಿಷ್' ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

I

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0

ನವಭಾರತ ಬುಕ್ ಡಿಪೊ, ಉಡುಪಿ.

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ

ಹಲ್ಲು ಪುಡಿ

ಒಂದು ತೊಲೆ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಪಿ. ಲಿಮಿಟೆಡ್,

ಕಾಸರಗೋಡು, ದ. ಇಂಡಿಯ.

ಬಾಲಕರು ಆರೋಗ್ಯಶಾಲಿಗಳಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗಗಳಿಗೆ ತುತ್ತಾಗಿ, ದೇಹದಲ್ಲಿ ಒಡವಾಗಿ, ನಗೆಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೊ. ಬ್ರಹ್ಮಾವರ, ದ. ಕ

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ,

L. N. Sharma, Mangalore.

ಮದ್ರಾಸ್ ಅಳಿಯ ಸಂತಾನ ಮಸೂದೆಯ

ಪ್ರತಿಗಳು 0 3 0 ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ 0 3 0 ಸ್ಟಾಂಪನ್ನು ಕಳಿಸಿದ್ದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.

1 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು

2 ನವಯುಗ ಪ್ರೆಸ್, ಉಡುಪಿ.

ಈ ಮೂರು ಸಮಸ್ಯೆ ಮುಗಿಯುತ್ತಿಲ್ಲದೇಕೆ?

ಶ್ರೀ

ಸಂಧಾನಸಾಧ್ಯ ವಾತಾವರಣ ನಿರ್ಮಾಣಗೊಂಡು, ವಾದ ನಿರತ ಪಕ್ಷಗಳೂ ಸಂಧಾನ ಪ್ರಯತ್ನ ಭಾಗಿಗಳಾಗಿ ಕುಳಿತು, ತೀರ್ಮಾನವು ಸುಲಭವೆಂಬ ಆಶೆ ಹುಟ್ಟುವ ಪರಿಸ್ಥಿತಿಯಿದ್ದರೂ, ಎಷ್ಟಕ್ಕೂ ಸಂಧಾನಕ್ಕಾಗಿ ಬಾರದ ಕೆಲವು ವಿವಾದಗಳಿವೆ. ಜಗತ್ತಿನ ರಾಜಕೀಯದಲ್ಲಿ ಅಂತಹ ತೀರ್ಮಾನಾಸಾಧ್ಯ ಜಗಳಗಳು ಹಲವು ಕಂಡುಬರುತ್ತಿವೆ. ಆ ಪೈಕಿ ಕಳೆದ ಕೆಲವು ತಿಂಗಳುಗಳಿಂದ 'ಒಂದು ನಿರ್ಧಾರವಾಗುವುದರಲ್ಲಿದೆ—ಆಗದೆ ಹೋಯಿತು' ಎಂಬ ವಾರ್ತೆಗಳನ್ನು ನಾವು ಪ್ರತಿ ದಿನವೆಂಬಂತೆ ಕೇಳುತ್ತಾ ಬಂದಿರುವ ಮುಖ್ಯ ಮೂರು ವಿವಾದಗಳೆಂದರೆ ಪೆಲೆಸ್ಟೈನ್, ಹೈದರಾಬಾದು, ಕಾಶ್ಮೀರ. ಈ ಪೈಕಿ ಮೊದಲನೆಯದು ಮಿತ್ರ ರಾಷ್ಟ್ರಗಳಿಗೆ ಸಂಬಂಧಿಸಿದುದಾಗಿದ್ದರೆ ಉಳಿದೆರಡು ವಿವಾದಗಳು ಭೂತಪೂರ್ವ ಭಾರತದೊಳಗಿನದ್ದೇ. ಒಂದನೆಯದು ಮತ್ತು ಮೂರನೆಯದು ಇಷ್ಟರಲ್ಲೇ ಜಾಗತಿಕ ಸಂಘದ ಪರ್ಯಾಲೋಚನೆಗೆ ಒಡಲ್ಪಟ್ಟಿವೆ. ಎರಡನೆಯದೂ ಹಾಗಾಗುವ ಸಂದರ್ಭ ಬಂದರೂ ಬರಬಹುದು. ಅಂತೂ ನಮ್ಮೆಲ್ಲರಲ್ಲಿ ಯೋಚನೆಗೀಡುಮಾಡುವ ಒಂದೆರಡು ಸಂಗತಿಗಳಿವೆ. ಒಂದನೆಯದು ಭಾರತೀಯರಿಗೆ ಸಂಬಂಧಿಸಿದ ವಿವಾದಕ್ಕೊಂದು ನ್ಯಾಯ ತೀರ್ಮಾನ ಶೋಧಿಸುವುದು ಅತ್ಯಂತ ಪ್ರಯಾಸಕರವೆಂಬುದು. ಜಗಳಕ್ಕಂಟಿಕೊಂಡು ನಿಂತಾಡುವ ಹಿಂದೀಯರ ಅಭ್ಯಾಸವು ಅನಿರ್ವೇದ್ಯವೆಂದು ಪ್ರಪಂಚದ ವಿಚಾರಿಗಳು ಊಹಿಸಿದರೆ ತಪ್ಪಾಗದು. ಎರಡನೆಯದು ಏಸ್ಯಾ ಖಂಡದ ರಾಷ್ಟ್ರಗಳೊಳಗಿರುವ ಜಗಳಗಳನ್ನು ನಿವಾರಿಸುವುದರಲ್ಲಿ—ಜಾಗತಿಕ ಸಂಘವನ್ನು ಹಾಗೂ ಇದುವರೆಗೆ ಪ್ರಪಂಚದ ನಾಯಕತ್ವವನ್ನು ಕೂಡಾ ತಮ್ಮ ಕೈಯಲ್ಲಿಟ್ಟುಕೊಂಡಿರುವ ಪ್ರಮುಖ ಪಾಶ್ಚಾತ್ಯ ರಾಷ್ಟ್ರಗಳಿಗೆ ಉತ್ಸಾಹವಿಲ್ಲ, ಅಥವಾ ಅವುಗಳ ಗುಟ್ಟನ್ನರಿಯುವಷ್ಟು ಜಾಣ್ಮೆಯಿಲ್ಲವೆಂಬುದು. ಇಲ್ಲವಾದರೆ ಚೀನಾದ ಅಂತರ್ಯುದ್ಧ, ಇಂಡೋನೇಸಿಯದ ಸಮರ, ಪೆಲೆಸ್ಟೈನ್, ಹೈದರಾಬಾದು, ಕಾಶ್ಮೀರದ ಸಮಸ್ಯೆಗಳು ಹೀಗೇಕೆ?

ಪೆಲೆಸ್ಟೈನ್ ಸಮಸ್ಯೆ

ಪೆಲೆಸ್ಟೈನಿನಲ್ಲಿ ಅಲ್ಲಿಯ ನಿವಾಸಿಗಳಾದ ಅರಬ ಯೆಹೂದಿಯರೊಳಗಿನ ಕಾಳಗವು ಚೀನಾದ ರಾಷ್ಟ್ರೀಯ—ಕಮ್ಯೂನಿಸ್ಟ್ ಕಾಳಗದಂತೆಯೇ ಪುರಾತನವಾದುದು. ಕಳೆದ ಲೋಕ ಯುದ್ಧಾರಂಭದ ಮೊದಲೇ ಅದು ಹುಟ್ಟಿ ವ್ಯಾಪಿಸಿದ್ದಿತು. ಪೆಲೆಸ್ಟೈನಿನ ಮೂಲ ಹಕ್ಕುದಾರರು ತಾವೆಂದು ನ್ಯಾಯ ಪ್ರಕಾರ ಅರಬರ ವಾದವಿದೆ: ಆದರೆ ಅಲ್ಲಿ ಮೊದಲಿನಿಂದಲೂ ಇರುವ ಯೆಹೂದಿಗಳು ಅಲ್ಪಸಂಖ್ಯೆಯರಾಗಿರಲು ಅವರ ಆಕ್ಷೇಪವಿಲ್ಲ. ಹಿಟ್ಲರನು ಯೆಹೂದಿ ಬೇಟೆಯಾಡುತ್ತಿದ್ದ ಆ ಕಾಲದಲ್ಲಿ, ಅಲ್ಲಿಂದೋಡಿಬಂದ ಯೆಹೂದಿಗಳನ್ನು ಪೆಲೆಸ್ಟೈನಿನಲ್ಲಿ ನುಗ್ಗಿಸುವ ಯೋಜನೆಯನ್ನು ಮಿತ್ರರಾಷ್ಟ್ರಗಳು ಮಾಡಿದ್ದುವು; ಈ ಹೊಸಾಗಮನಗಳಿಗೆ ಅರಬರು ವಿರೋಧವಿದ್ದರು; ಸ್ವಭಾವ ಮತ್ತು ಸಂಸ್ಕಾರಗಳಲ್ಲೂ ಪರಸ್ಪರ ಪ್ರತಿಕೂಲರಾಗಿರುವ ಇವೆರಡು ಜನಾಂಗಗಳು ಅಲ್ಲಿ ಹೋರಾಡುತ್ತಾ ಬಂದುವು. ಕಳೆದ ಮಹಾಯುದ್ಧಾಗ್ನಿ ಪೆಲೆಸ್ಟೈನ್ ಜ್ವಾಲೆಯನ್ನೊಂದಿಷ್ಟು ತಣಿಸಿದರೂ ಒಳಗಿನ ಕೆಂಡವಾರದೆ ಯುದ್ಧ ಮುಗಿದೊಡನೆ ಪುನಃ ಹೊತ್ತಿಕೊಂಡಿತು——ದೊಡ್ಡ ರೂಪದಿಂದಲೇ ಭುಗುಭುಗಿಸಿತು. ಪ್ರಾಯದಲ್ಲಿ ತನಗಿಂತ ಎಷ್ಟೋ ಹಿರಿಯದಾದ ಈ ಸಮಸ್ಯೆಗೆ ಬುದ್ಧಿ ಕಲಿಸುವ ಕೆಲಸಕ್ಕೆ ಯುದ್ಧಾನಂತರ ಸ್ಥಾಪನೆಗೊಂಡ ಜಾಗತಿಕ ಸಂಘವು ಕೈಯಿಕ್ಕಿತು. ಅರಬ-ಯೆಹೂದಿಗಳೊಳಗೆ ಸಂಧಾನವಾಗುವ ಆಶೆತೋರದೆ ಇಕ್ಕಡೆಯವರೊಳಗೆ ಪೆಲೆಸ್ಟೈನನ್ನು ಪಾಲು ಮಾಡಿ ಹಾಕುವ ತೀರ್ಮಾನ ಮಾಡಿತು. ಇದರಿಂದ ಎರಡೂ ಕಡೆಯವರ-ವಿಶೇಷವಾಗಿ ಅರಬರ-ದ್ವೇಷಾಗ್ನಿ ಮತ್ತಷ್ಟು ಪ್ರಬಲಿಸಿತು. ಈ ನಡುವೆ ಭಾರತದ ಅಧಿಕಾರದಂತೆಯೇ ಪೆಲೆಸ್ಟೈನಿನ ಮೇಲಧಿಕಾರ ನಿರ್ವಹಣದ ಕಿರಿಕಿರಿ ಬೇಸರ ಹುಟ್ಟಿದ ಬ್ರಿಟನು ಇದೇ ಎಪ್ರಿಲ್ 15ರಲ್ಲಿ ತಾನು ಪೆಲೆಸ್ಟೈನಿನ ವ್ಯವಸ್ಥಾಧಿಕಾರವನ್ನು ಬಿಟ್ಟು ಹೊರಡುವದಾಗಿ ಜಾಹೀರು ಮಾಡಿ ಈದಿನದವರೆಗೂ ಆ ಮಾತಿಗಂಟಿಕೊಂಡಿದೆ. ಈ ನಡುವೆ ಪೆಲೆಸ್ಟೈನ್ ವಿಭಜನೆಗೆ ತನ್ನ ಅನುಮೋದನೆಯನ್ನು ಅಮೇರಿಕವು ನಿರಾಕರಿಸಿತು; ಎಪ್ರಿಲ್ 15ರ ನಂತರ, ಐಕ್ಯರಾಷ್ಟ್ರಗಳ 'ಟ್ರಸ್ಟೀಶಿಪ್' ಆಡಳಿತೆಯನ್ನು ಸ್ಥಾಪಿಸುವ ಸೂಚನೆ ಮುಂದಿಟ್ಟಿತು. ಬ್ರಿಟಿಷ್ ಯಜಮಾನಿಕೆ ಬರ್ಖಾಸ್ತಾದೊಡನೆ ತಾವು ಸ್ವತಂತ್ರರಾಗಬೇಕಲ್ಲದೆ 'ಟ್ರಸ್ಟೀಶಿಪ್' ಆಡಳಿತೆಯ ಹೆಸರಿನಿಂದ ಇನ್ನಷ್ಟು ಬಿಗಿಯಾದ ಬಂಧನಕ್ಕೆ ಈಡಾಗಬಾರದೆಂದು ಅರಬರೂ ಯೆಹೂದಿಗಳೂ ಸಂಕಲ್ಪಿಸಿದ್ದಾರೆ. ಹೀಗಾಗಿ ಇದೇ ಎಪ್ರಿಲ್ ತಾ 15ರ ನಂತರವೂ ಪೆಲೆಸ್ಟೈನಿನಲ್ಲಿ ಬ್ರಿಟಿಷ್ ಮೇಲ್ವಿಚಾರಣೆಯೇ ಇರಬೇಕೆಂದು ಭದ್ರತಾ ಕೌನ್ಸಿಲಿನ ಕೆಲವು ಸದಸ್ಯ ರಾಷ್ಟ್ರಗಳು ಒತ್ತಾಯಿಸಿವೆ. ಇದರ ಅರ್ಥವೆಂದರೆ ಪೆಲೆಸ್ಟೈನಿನ ವಾದವು ಯುದ್ಧಪೂರ್ವದಲ್ಲಿ ಹೇಗಿತ್ತೋ, ಹಾಗೆಯೇ ಇಷ್ಟು ಕಾಲ ಕಳೆದ ಮೇಲೂ, ಇಷ್ಟೆಲ್ಲಾ ಪ್ರಯತ್ನ ಸಂಭ್ರಮಗಳು ನಡೆದ ಮೇಲೂ ಇದೆ! ಇದೀಗ ಜಾಗತಿಕ ಸಂಘವು ವಿವಾದ ತೀರ್ಮಾನಿಸುವ ವಿಧಾನ! ಲೋಕಕ್ಕೆ ಶಾಂತಿ ಸ್ಥಾಪನೆಯ ಕುರಿತು ಇರುವ ಆತುರವೆಂತಹದು, ಎಂಬುದಕ್ಕೊಂದು ನಿದರ್ಶನ!

ಹೈದರಾಬಾದು ಮಾತುಕತೆ

ಎರಡನೆಯದಾಗಿ ಹೈದರಾಬಾದು ಮತ್ತು ಭಾರತ ಸರಕಾರಗಳೊಳಗೆ ಕಳೆದ ಆಗೋಸ್ತು 15ಕ್ಕೆ ಮೊದಲೇ ಪ್ರಾರಂಭವಾಗಿದ್ದ ಸಂಧಾನ ಮಾತುಕತೆಯು ಇನ್ನೂ ಒಂದು ನಿಶ್ಚಯಕ್ಕೆ ಬಂದಿಲ್ಲವೆಂಬುದು ಮತ್ತೊಂದು ಮಹಾ ಕೌತುಕ. ಹೈದರಾಬಾದು ಭಾರತದ ಇತರ ಎಲ್ಲಾ ಸಂಸ್ಥಾನಗಳಿಗಿಂತಲೂ ದೊಡ್ಡ ಸಂಸ್ಥಾನ; ಅದರ ನಿಜಾಮರ ತೂಕವು ಮಿಕ್ಕ ಮಹಾರಾಜರುಗಳಿಗಿಂತ ತುಸು ಹೆಚ್ಚಿನದು ಎಂಬುದೇನೋ ನಿಜ. ಅದಕ್ಕನುಗುಣವಾಗಿ, ಮಿಕ್ಕ ಯಾವ ಸಂಸ್ಥಾನಗಳಿಗೂ ಕೊಡದಿದ್ದಂತಹ ರಿಯಾಯಿತಿಗಳನ್ನು ಕೊಟ್ಟು ಕಳೆದ ಬಾರಿ ಒಂದು ವರುಷಾವಧಿಯ 'ಮಧ್ಯಪಂಚಾಯತಿಕೆ'ಯೊಂದನ್ನು ಭಾರತ ಸರಕಾರವು ಮಾಡಿಕೊಂಡಿದ್ದಿತು. ಈಗ ವಾಯಿದೆ ಸಮೀಪಿಸುತ್ತಿದೆ. ಕೈಕೈ ಹಿಡಿದುಕೊಳ್ಳುವ ಬದಲಿಗೆ ಬೆರಳಿಗೆ ಬೆರಳು ತಾಗಿಸಿಕೊಂಡಾದರೂ ಒಂದು ವರುಷವನ್ನು ದೂಡಿದ್ದಾಯಿತು-ಇನ್ನಾದರೂ ಶಾಶ್ವತ ಸಂಧಾನಮಾಡಿಕೊಳ್ಳೋಣವೆಂದರೆ ಈ ಮಧ್ಯಾವಧಿಯಲ್ಲಿ ಹೈದರಾಬಾದಿನ ರೇಂಕಾರವು ವಿಶೇಷ ಬೆಳೆದು ಹೋದಂತೆ ಕಾಣುತ್ತದೆ. ಅದು ಸಂಧಾನಕ್ಕೆ ತುರಿಸುವ ಬದಲಿಗೆ ಆತಂಕಿಸುವವರಾಗಿಯೇ 'ಪ್ರಚಲಿತ ಒಪ್ಪಂದದ ಶರ್ತಗಳನ್ನು ಭಾರತವು ಮುರಿದಿದೆ'ಯೆಂಬ ನೆವಹೇಳಿಕೊಂಡು, ಒಳಗಡೆಯಲ್ಲಿ ರಝಾಕರರಂತಹ ಪುಂಡರ ದಳಗಳಿಗೆ ಪ್ರತ್ಯಕ್ಷ ಪ್ರೋತ್ಸಾಹ ಕೊಡುತ್ತಿದೆ. ಹೈದರಾಬಾದಿನ ಮಜ್ಲೀಸ ನಾಯಕ ಮಿ. ಸಯ್ಯದ್ ಕಾಸಿಮ್ ರಾಜ್ವಿಯವರು ರಝಾಕಾರರ ಸಾಮೂಹಿಕ ರ್ಯಾಲಿಯೊಂದರಲ್ಲಿ ಅತ್ಯಂತ ಉದ್ರೇಕದಾಯೀ ಭಾಷಣವಿತ್ತಿದ್ದರು. ಈ ಭಾಷಣವು "ಬೇಜವಾಬ್ದಾರಿಯದು ಮಾತ್ರವಲ್ಲ ಹಿಂಸೆ ಮತ್ತು ಕೊಲೆಗಳಿಗೆ ಅಪ್ರತ್ಯಕ್ಷ ಪ್ರೇರಣೆಯಾಗಿರುವಂತಹದು. ಹೀಗಿರುವಾಗ ಹೈದರಾಬಾದು ಪ್ರಶ್ನೆಯನ್ನು ಅತೀವ ಜಾಗರೂಕತೆಯಿಂದ ನೋಡಬೇಕಾಯಿತು" ಎಂದು ಪಂಡಿತ ನೆಹರುಗಳೆಂದಿದ್ದರು. ಈಗ ರಾಜ್ವಿಯವರು ತಾನು ಹಾಗೆ ಹೇಳಿದ್ದೂ ಇಲ್ಲ; ಅಂತಹ 'ರ್ಯಾಲಿ' ನಡೆದದ್ದೂ ಇಲ್ಲ, ಎಂದು ಎಲ್ಲವನ್ನೂ ಹಾರಿಸಿಬಿಟ್ಟಿದ್ದಾರೆ. ಹೀಗಿದ್ದರೂ ಹೈದರಾಬಾದು ಈ ಬಾರಿ ಮೊದಲಿಗಿಂತಲೂ ಹೆಚ್ಚಿನ ದರ್ಪದಿಂದಿದೆ ಎಂಬುದು ನಿರ್ವಿವಾದ. ಅಂದ ಮೇಲೆ ಇದೇನನ್ನು ಸೂಚಿಸುತ್ತಿದೆ? ಬೇರೇನನ್ನು ಸೂಚಿಸದಿದ್ದರೂ ಹೈದರಾಬಾದಿಗೆ ನ್ಯಾಯಸಮ್ಮತವಾಗಿ ಭಾರತದೊಂದಿಗೆ ಜೋಡಣೆಗೊಳ್ಳಲು ಸರ್ವಥಾ ಇಷ್ಟವಿಲ್ಲವೆಂಬುದನ್ನು ಸೂಚಿಸುವುದಿಲ್ಲವೇ? ಹಸ್ತಲಾಘವಕ್ಕಾಗಿ ಚಾಚುವ ಭಾರತ ಸರಕಾರದ ಕೈಗೆ ಅಲ್ಲಿಯೇ ಕಚ್ಚುವವರಿದ್ದಾರೆ ಎಂಬ ಹೊಸಾನುಭವವು ಈ ಮೂಲಕ ಆಗಿದೆ!

ಕಾಶ್ಮೀರದ ವಿವಾದ

ಮೂರನೆಯದಾಗಿ ಕಾಶ್ಮೀರದ ಸಮಸ್ಯೆಯು ಭದ್ರತಾ ಕೌನ್ಸಿಲಿನಲ್ಲಿ ತಿಂಗಳುಗಟ್ಟಲೆ ಕೊರಗುತ್ತಾ ಬಂದದ್ದು ಈಗ ಕೊಳೆಯುತ್ತಿರುವ ಬೇರೊಂದು ಸೋಜಿಗ! ಕಾಶ್ಮೀರದ ವಿವಾದವು ಆರು ತಿಂಗಳಿನಿಂದ ಇರುವಂತಹದು. ಭದ್ರತಾ ಕೌನ್ಸಿಲಿಗೆ ದೂರನ್ನೊಯ್ದುದ್ದೇನೋ ಭಾರತ ಸರಕಾರವೇ; ಆದರೆ ಈಗ ಅದು ಅಲ್ಲಿ ಪಡೆದಿರುವ ರೂಪವನ್ನು ಕಾಣುವಾಗ ಹನುಮನ ಆಕಾರದಿಂದಾರಂಭಿಸಿದುದು ಗಣಪತಿಯ ರೂಪಕ್ಕೆ ಬಂದಂತಾಗಿದೆ! ಬಂಡಾಯಗಾರರಿಗೆ ಪಾಕಿಸ್ಥಾನ್ ಸರಕಾರವು ಕೊಡುತ್ತಿರುವ ಸಹಾಯವೊಂದರ ಕುರಿತೇ ಪಾಕಿಸ್ಥಾನ ಸರಕಾರಕ್ಕೆ ಬುದ್ಧಿ ಹೇಳಬೇಕೆಂದು ಭಾರತ ಸರಕಾರವು ಕೇಳಿಕೊಂಡಿದ್ದರೆ ಭದ್ರತಾ ಕೌನ್ಸಿಲು ತನ್ನ ಬುದ್ಧಿಗೆ ಹೊಳೆದುದನ್ನೆಲ್ಲಾ ಆಗಾಗ ಹೇಳುತ್ತಾ ಬಂದಿದೆ—ಯಾರೂ ಕೇಳುವವರಿಲ್ಲವೆಂದಾಗಿದೆ. ಭದ್ರತಾ ಕೌನ್ಸಿಲಿನ ಅಧ್ಯಕ್ಷತೆಯು ಪರ್ಯಾಯ ಕ್ರಮವುಳ್ಳದ್ದು; ಒಂದೊಂದು ಬಾರಿ ಒಂದೊಂದು ರಾಷ್ಟ್ರದ ಪ್ರತಿನಿಧಿ ಅಧ್ಯಕ್ಷನಾಗುವ ಸಂಪ್ರದಾಯ. ಪ್ರತಿಯೊಂದು ಬಾರಿಯ ಅಧ್ಯಕ್ಷನೂ ಕಾಶ್ಮೀರದ ವಿವಾದದ ಕುರಿತು ಹೊಸ ಹೊಸ ಸೂಚನೆಗಳನ್ನು ಕೊಡುತ್ತಾ ಬಂದಿದ್ದಾನೆ. ಒಬ್ಬನದು ಪಾಕಿಸ್ಥಾನದ ಕಡೆಗೆ ವಾಲಿದಂತಿದ್ದರೆ ಮತ್ತೊಬ್ಬನದು ಭಾರತದ ಕಡೆಗೆ ವಾಲಿದಂತಿತ್ತು; ಬೇರೊಬ್ಬನದು ಇಕ್ಕಡೆಗೂ ಆಕ್ಷೇಪಾರ್ಹವಾಗಿತ್ತು. ಈಗ ಆ ಒಬ್ಬೊಬ್ಬನ ಅಂಕವನ್ನು ಮುಗಿಸಿ ಈಗಿನ ಅಧ್ಯಕ್ಷ ಮತ್ತೀ ಮೊದಲಿನ ಮೂವರು ಅಧ್ಯಕ್ಷರು ಒಟ್ಟಿಗೆ ಕುಳಿತು 'ಚತುರ್ಮುಖ ಬ್ರಹ್ಮ'ರಾಗಿ ಭಾರತದ ಮತ್ತು ಪಾಕಿಸ್ಥಾನದ ಪ್ರತಿನಿಧಿಗಳನ್ನು ಕೂಡಿಕೊಂಡು ಕಾಶ್ಮೀರದ ಹಣೆಬರಹ ಬರೆಯಲಿದ್ದಾರೆ. ಇನ್ನು ಇದು ಹೇಗಾಗುವುದೋ ನೋಡಲಿಕ್ಕಿದೆ. ಇದರಿಂದ ತಿಳಿಯುವಂತಹದೇನು? ಕಾಶ್ಮೀರದ ಸಮಸ್ಯೆಯಲ್ಲಿ ಸೇರಿಕೊಂಡಿರುವ ಸಂಗತಿಗಳು ಹೆಚ್ಚಾದುವೆನ್ನಲೇ? ಈ ಭದ್ರತಾ ಕೌನ್ಸಿಲಿನ ನ್ಯಾಯಾಧೀಶರ ಮೆದುಳಲ್ಲಿ ಸೇರಿಕೊಂಡಿರುವ ವಿಷಯಗಳೇ ಹೆಚ್ಚಾದುವೆನಲೇ?

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಗೊಳಿಸಲ್ಪಟ್ಟು ಇಂಡಿಯಾದಲ್ಲಿ ಸಂಘಟಿಸಿದ್ದು]

ಮುದ್ದತಿ ಠೇವುಗಳು

ರೂ. ೧೨,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
೪ ರಿಂದ ೫ ತಿಂಗಳು ,, ,, ೨॥
೬ ರಿಂದ ೯ ತಿಂಗಳು ,, ,, ೨॥।

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

ಅಪಾಯ ನಿರ್ಮಾಪಕರಾರು?—ಅತಿ ಜಾಣರು ಮತ್ತು ಅತ್ಯಭಿಮಾನಿಗಳು

ಭಾರತದ ಇತ್ತೀಚಿನ ಎಲ್ಲಾ ಕಲಹಗಳಿಗೂ ಕೆಲವು ವ್ಯಕ್ತಿಗಳು ಹಾಗೂ ದಳಗಳೇ ಕಾರಣವೆಂಬುದು ಇಲ್ಲಿಯ ರಾಜಕೀಯದ ಒಳಗಡೆಗೆ ವಿಚಾರಾತ್ಮಕ ನೋಟ ಬೀರುವ ಸರ್ವರಿಗೂ ಮಂದಟ್ಟಾಗುವ ವಿಷಯ. ಸುಖಕರ ಸಂಧಾನೆಯೆಲ್ಲಿಯಾದರೂ ನಡೆದುದಿದ್ದರೆ ಅದಕ್ಕೆ ಮುಖ್ಯತಃ ಜನಮತವೇ ಕಾರಣ—ದುಃಖಕರ ದುರ್ಘಟನೆಗಳು ನಡೆದುದಕ್ಕೆ ಹೆಚ್ಚಾಗಿ ಕೆಲವು ದುರ್ಬುದ್ಧಿಯ ವ್ಯಕ್ತಿಗಳೂ ದಳಗಳೂ ಕಾರಣ. ನಿದರ್ಶನಕ್ಕಾಗಿ ಕೆಲವು ಮಾದರಿಗಳನ್ನು ಇಲ್ಲಿ ಕೊಡಲಾಗಿದೆ:—

ಸರ್. ಮೋಂಕ್ಟನ್

ಇಂದು ಹೈದರಾಬಾದು ಭಾರತದ ಪ್ರತಿಘಟನೆಗಾಗಿ ಶಸ್ತ್ರ ಹೊಡೆದು ತಯಾರಾಗುತ್ತಿದೆ ಎಂಬುದು ಸ್ಪಷ್ಟ. ಪ್ರಚಲಿತ ಒಪ್ಪಂದ ಮಾಡಿಕೊಂಡು ಒಂದು ವರುಷದ ಅವಧಿಯನ್ನು ಹೈದರಾಬಾದಿಗೆ ಕೊಟ್ಟುದರಿಂದ ಅದು ಹೋರಾಟಕ್ಕೆ ತಯಾರಾಗಲು ಅವಕಾಶ ದೊರೆತಂತಾಯಿತೆಂದು ಆಗಲೇ ಹೇಳಿದವರಿದ್ದರು; ಅಂಥವರನ್ನಾಗ ಕಡೆಗಣಿಸಲಾಗಿತ್ತು; ಈಗಿನ ವಿದ್ಯಮಾನಗಳನ್ನು ಕಾಣುವಾಗ ಅಂಥವರಾಡಿದ ಭವಿಷದ್ವಾಣಿ ಸತ್ಯವೆನ್ನಿಸುತ್ತಿದೆ. ಕಳೆದ ಆಗೋಸ್ತು 15ಕ್ಕೆ ಮೊದಲೇ ಆರಂಭಿಸಿ, ಇದುವರೆಗಿನ ನಿಜಾಮರ ವರ್ತನೆಗಳನ್ನು ಅವಲೋಕಿಸುವಾಗ ಅವರು ತುಸು ವಿಶೇಷರೀತಿಯ ದುಶ್ಚಾತುರ್ಯವನ್ನು ಪ್ರದರ್ಶಿಸಿದುದು ಕಂಡುಬರುತ್ತಿದೆ. ನಿಜಕ್ಕೂ ಇದು ನಿಜಾಮರ ಚಾತುರ್ಯವೆ? ಕಿರೀಟದಡಿಯ ಮಿಕ್ಕ ತಲೆಗಳಂತೆಯೇ ಹೈದರಾಬಾದು ನಿಜಾಮರ ತಲೆಯಲ್ಲೂ 'ಅರಸುತನ'ದ ಗಾಂಭೀರ್ಯಾಡಂಬರಗಳ ವಿನಹ ಬೇರೇನೂ ಇಲ್ಲ. ಆದರಿಂದ ಇಷ್ಟೆಲ್ಲಾ ಚಾತುರ್ಯವನ್ನು—ರಾಜಕೀಯ ಚದುರಂಗವನ್ನು—ಆಡಿಸುತ್ತಿರುವ ಒಂದಿರುವ ಶಕ್ತಿಯೆಂದರೆ ಓರ್ವ ಬ್ರಿಟಿಷನಾದ ಸರ್. ವಾಲ್ಟರ್ ಮೋಂಕ್ಟನ್. ಭಾರತವನ್ನು ಸ್ವತಂತ್ರಗೊಳಿಸುವ ಘೋಷಣೆಯನ್ನು ಬ್ರಿಟಿಷ್ ಸರಕಾರವು ಹೊರಡಿಸಿದೊಡನೆಯೇ ಹೈದರಾಬಾದನ್ನು ಸ್ವತಂತ್ರ ರಾಷ್ಟ್ರವಾಗಿಟ್ಟುಕೊಳ್ಳುವ ಯೋಚನೆಯನ್ನು ಸರ್. ಮೋಂಕ್ಟನರು ನಿಜಾಮರ ಬಾಯಿಯಿಂದ ಹೊರಡಿಸಿದ್ದರು. ಅಂದಿನಿಂದ ಇದುವರೆಗೂ ಭಾರತ ಸರಕಾರದೊಡನೆ ವ್ಯವಹರಿಸುವ ಪ್ರತಿಯೊಂದು ಸಂದರ್ಭದಲ್ಲೂ ನಿಜಾಮರು ಸರ್. ಮೋಂಕ್ಟನರ ಅಭಿಪ್ರಾಯ ಕೇಳಿಕೊಂಡಿದ್ದಾರೆ; ಅದನ್ನೇ ಅನುಸರಿಸಿ ನಡೆದಿದ್ದಾರೆ. ಈ ನಡುವೆ ಈ ಬ್ರಿಟಿಷ್ ತಂತ್ರಿ ಇಂಗ್ಲೆಂಡಿಗೆ ಹೋಗಿ ನಿಲ್ಲಬೇಕಾದ ಆವಶ್ಯಕತೆಯೊದಗಿದ್ದಿತು. ಆದರೆ ನಿಜಾಮರಿಗೆ ರಾಜಕೀಯ ಚಿಂತೆ ಒದಗಿದಾಗಲೆಲ್ಲಾ ಅವರು ಇವರನ್ನು ಕೂಡಲೇ ಲಂಡನಿನಿಂದ ತರಿಸಿಕೊಳ್ಳುತಿದ್ದರು. ಈ ಬಾರಿ ಭಾರತ ಸರಕಾರದ ಆರೋಪಗಳಿಗೆ ಉತ್ತರ ತಯಾರಿಸಿ ಕೊಟ್ಟುದೂ ಸರ್. ಮೋಂಕ್ಟನರು ಲಂಡನಿನಿಂದ ಓಡಿಬಂದೇ. ಆದ್ದರಿಂದ ಹೈದರಾಬಾದಿನ ತಲೆಯೀಗ ಕೊಳೆತಿದ್ದರೆ, ಅದಕ್ಕೆ ಕಾರಣ ಓರ್ವ ಬಿಳಿ ಶಕುನಿಯು ಆ ತಲೆಯೊಳಗೆ ಕುಳಿತಿರುವುದೇ.

ರಝಾಕಾರರು

ಹೀಗೆ ಲೋಕದ ಅಗ್ರಗಣ್ಯ ಶ್ರೀಮಂತನೆನ್ನಿಸಿದ್ದರೂ ಓರ್ವ ಬ್ರಿಟಿಷರವನಿಂದ ಬುದ್ಧಿಸಾಲ ಪಡೆದು ಬದುಕುತ್ತಿರುವ ಹೈದರಾಬಾದ್ ನಿಜಾಮರ ಮೇದುಳು ಸರ್. ಮೋಂಕ್ಟನರಾದರೆ ಅವರ ಭುಜ ರಝಾಕಾರ ದಳ. ಇದು ಇಲ್ಲಿಯ ಮಜ್ಲೀಸ ಇತ್ತೆಹಾದ್ ಮುಸ್ಲಿಮೀನ್ ಸಂಸ್ಥೆಯ ಶಸ್ತ್ರಧಾರೀ ಸ್ವಯಂಸೇವಕ ಸೇನೆ. ಕ್ರೂರ ಅತ್ಯಾಚಾರಗಳಲ್ಲಿ ಈ ದಳವನ್ನು ಸರಿಗಟ್ಟುವವರು ಬೇರಿರುವುದು ಅಸಂಭವ. ಮಾನಿನಿಯರ ಮಾನಹಾನಿ, ನಿರಪರಾಧಿಗಳ ಕೊಲೆ, ಕೊಳ್ಳೆ, ಸುಲಿಗೆಗಳಲ್ಲಿ ಈ ರಾಕ್ಷಸೀ ಸೇನೆಯು ಸಂಪಾದಿಸಿರುವಂತಹ ದಾಖಲೆಯು ಭಾರತದ ಬೇರಾವುದೇ ಹಿಂಸಾತ್ಮಕ ಜಾತೀಯ ಸೇನೆಗಳ ಪಾಲಿಗಿಲ್ಲದು. ನಿಜಾಮರು ಇದನ್ನೇ ತನ್ನ 'ಮೂಲ ಬಲ'ವಾಗಿ ಗಣಿಸಿ, ಅದಕ್ಕೆ ಸರ್ವ ವಿಧದ ಸಹಾಯ ಪ್ರೋತ್ಸಾಹಗಳನ್ನು ಕೊಡುತ್ತಿರುವಂತೆ ಕಾಣುತ್ತಿದೆ. ಹೈದರಾಬಾದ್ ಮಂತ್ರಿಗಳು ಈ ಸೇನಾ ಪ್ರದರ್ಶನಗಳಲ್ಲಿ ಪ್ರತ್ಯಕ್ಷ ಭಾಗವಹಿಸಿ, ಅದರ ಬೆನ್ನು ತಟ್ಟುವ ವರೆಗೂ ಅತ್ಯಾಚಾರೀ ಪರಮಾಪ್ತರಾಗಿ ಹೋಗಿದ್ದಾರೆ. ರಝಾಕಾರ್ ಯಾವುದಂಡನ್ನು ಬರ್ಖಾಸ್ತುಪಡಿಸಬೇಕೆಂದು ಭಾರತ ಸರಕಾರವು ಹಾಕಿದ ಶರ್ತಕ್ಕೆ, ಹೈದರಾಬಾದಿನ ಕಮ್ಯೂನಿಸ್ಟರ ನೊಬಲಾದವರ್ಗ ಉಪಟಳಗಳನ್ನು ನಿಲ್ಲಿಸಲು ತಮ್ಮ ರಕ್ಷಣೆಗಾಗಿ ಈ ಯೋಧರು ತಮಗೆ ಬೇಕೇಬೇಕೆಂದು ನಿಜಾಮ್ ಸರಕಾರವು ಉತ್ತರಿಸಿದೆಯಂತೆ! ಒಪ್ಪಂದಾನುಸಾರವಾಗಿ ಭಾರತ ಸರಕಾರವು ತನಗೆ ಬೇಕಾದಷ್ಟು ಶಸ್ತ್ರಸಾಮಾಗ್ರಿಗಳನ್ನು ಸರಬರಾಯಿ ಮಾಡಿಲ್ಲವಾದ್ದರಿಂದ ಈ ರಝಾಕಾರರ ಬಲದಿಂದ ಶಾಂತಿಸ್ಥಾಪಿಸಿಕೊಳ್ಳಬೇಕಾಗಿದೆಯೆಂದು ನಿಜಾಮ್ ಸರಕಾರದ ವಾದವಿದೆ. ಎಂತಹ ಸ್ವಾರಸ್ಯ! ಭಾರತದಲ್ಲಿ ಆರ್. ಯಸ್. ಯಸ್. ದಳಗಳಿಗೆ ಬೇಕಾದ ಶಸ್ತ್ರ ಸರಬರಾಯಿ ಮಾಡಿ "ಮುಸ್ಲಿಂ ಪಂಚಮ ದಳದ ನಿರ್ನಾಮಕ್ಕಾಗಿ ತನಗೆ ಬೇರೆ ಅನುಕೂಲತೆಗಳಿಲ್ಲವಾದ್ದರಿಂದ ಇವರನ್ನೇ ಆಧರಿಸಬೇಕಾಗಿದೆ" ಎಂದು ಹಿಂದೀ ಸರಕಾರ ಹೇಳಿದರೆ ಹೇಗಾದೀತು? ಹಾಗನ್ನಲು ತಲೆಯೆತ್ತಲಿಕ್ಕೇನೇ ಆಗದಷ್ಟು ನಾಚಿಕೆಯ ಭಾರ ಪಂಡಿತ ನೆಹರುಗಳ ಮೇಲೆ ಬಿದ್ದೀತು! ಆದರೆ ನಿಜಾಮರು ಈ ರಝಾಕಾರ್ ರಾಕ್ಷಸರೇ ತನ್ನ ರಕ್ಷಕರೆಂದು ಹೆಗ್ಗಳಿಕೆಯಿಂದಾಡುತಿದ್ದಾರೆ. ಈ ರೀತಿ ನಿಜಾಮರ ಮೆದುಳಾಗಿ ಓರ್ವ ವಿದೇಶೀಯ, ನಿಜಾಮರ ತ್ರಾಣವಾಗಿ ಈ ಪುಂಡರ ತಂಡ ನಿಂತು ಹೈದರಾಬಾದಿನ 1,70,00,000 ಪ್ರಜೆಗಳನ್ನು ದಮನಗೊಳಿಸುತಿದ್ದಾರೆ!

ಕಾಕ-ಪೋಕರು

ಹೈದರಾಬಾದಿನ ಬದ್ಧಿ ಹೀಗಾಗಲು ಸರ್. ಮೋಂಕ್ಟನರು ಹೇಗೆ ಕಾರಣವೋ, ಕಾಶ್ಮೀರದ ಸ್ಥಿತಿಯಷ್ಟು ಹಾಳಾಗಲು ಅಲ್ಲಿ ಪ್ರಥಮಭಾಗದಲ್ಲಿ ದಿವಾನರಾಗಿದ್ದ ಶ್ರೀ ಕಾಕಾ ಅವರೇ ಕಾರಣವೆನ್ನಬೇಕು. ಅದೇರೀತಿ ಹೈದರಾಬಾದಿನ ರಝಾಕಾರ ದಳಗಳಂತೆಯೇ ಕಾಶ್ಮೀರದ ಧಾಳಿಗಾರರು. ಮುಸ್ಲಿಂ ಜಾತ್ಯಂಧರ ದೃಷ್ಟಿಯಲ್ಲಿ ನಿಜಾಮರಿದ್ದಂತೆಯೇ ಹಿಂದೂ ಅಭಿಮಾನಾಂಧರ ದೃಷ್ಟಿಯಲ್ಲಿ ಕಾಶ್ಮೀರದ ರಾಜರು. ಇಬ್ಬರೂ ಕಾರ್ಯಾವಶ್ಯ ಪ್ರತಿಭೆ ಚಾತುರ್ಯಗಳಿದ್ದವರೇನೂ ಅಲ್ಲ. ಆದರೆ ಇಲ್ಲಿ ಮೋಂಕ್ಟನ್ ಇದ್ದಾಗ ಅಲ್ಲಿ ಕಾಕಾ ಇದ್ದರು. ಕಣ್ಣು ತೆರೆಯಬೇಕಾಗಿದ್ದ ಕಾಲದಲ್ಲಿ ಶೇಕ್ ಅಬ್ದುಲ್ಲಾರ ದಸ್ತಗಿರಿ, ರಾಷ್ಟ್ರೀಯ ಚಳವಳಿಯ ನಿರ್ನಾಮ, ನೆಹರುಗಳಂಥವರಿಗೆ ಪ್ರತಿಬಂಧ, ಇತ್ಯಾದಿ ಅತಿರೇಕಗಳನ್ನು ಕಾಶ್ಮೀರದ ಕಾಕಾ ಮಾಡಿಸಿದರು. ದಂಗೆಗಾರರು ಓಡಿಸಿಕೊಂಡು ಬಂದಾಗ ಅರಮನೆ ಬಿಟ್ಟೋಡುವ - ನೆಹರುಗಳಂಥವರು ಸ್ವತಃ ಬಂದು ಕರು ಹಚ್ಚಿಸಿ ಕರಕೊಂಡು ಬಂದಾಗ ಅರಮನೆಗೆ ಮರಳುವ—ಬುದ್ಧಿ ಪಂಚಿಕೆ ಮಾತ್ರವಿದ್ದ ಕಾಶ್ಮೀರರಸರು ಆದಿ ಭಾಗದಲ್ಲಿ ಪರಿಸ್ಥಿತಿಯನ್ನು ಪೂರ್ತಿ ಹಾಳುಮಾಡುವ ಅವಕಾಶವೊದಗಿಸಿಕೊಟ್ಟಿದ್ದರು. ಆದರ ದುಷ್ಪರಿಣಾಮವು ಈಗ ಕಂಡು ಬರುತ್ತಿದೆ. ಮಹಾರಾಜರು ಸಕಾಲದಲ್ಲಿ ಎಚ್ಚತ್ತು ಕಾರ್ಯಪ್ರವೃತ್ತರಾಗುತಿದ್ದರೆ ಇಂದು ಪರಿಸ್ಥಿತಿಯೇ ಬೇರಾಗುತಿತ್ತು.

ಎಲ್ಲಾ ಅನಾಹುತಗಳಿಗೆ-

ಇನ್ನು ಒಂದೆಡೆಯು 'ಮುಸ್ಲಿಂ ನೇಶನಲ್ ಗಾರ್ಡ್ಸ್'ಮತ್ತು ಇನ್ನೊಂದು ಕಡೆಯು ಆರ್. ಯಸ್. ಯಸ್., 'ಅಕಾಲಿ ಸ್ವಯಂ ಸೇವಕ ದಳ'ಗಳಂತಹ ಜಾತೀಯ ಸೇನೆಗಳೇ ಇಡೀ ರಾಷ್ಟ್ರದ ಇಂದಿನ ದುರವಸ್ಥೆಯ ನಿರ್ಮಾಪಕರೆಂಬುದು ಸರ್ವವಿದಿತ ವಿಷಯ. ಗಾಂಧೀ ದ್ವೇಷ, ಕಾಂಗ್ರೆಸ್ ಮತ್ಸರ ಕಟ್ಟಿಕೊಂಡ ಡಾ| ಖರೆಯಂಥವರು ಅಲ್ವರ್ ಮಹಾರಾಜರಂಥವರ ಬೆನ್ನ ಹಿಂದೆ ಸೇರಿಕೊಂಡು, ಏನೂ ಅರಿಯದ ಆ ಗೊಂಬೆಗಳ ಹೆಸರಿನಿಂದ ಎಂತೆಂತಹ ಸಂಚುಹಂಚಿಕೆಗಳನ್ನು ಹೂಡಿಸಬಲ್ಲರೆಂಬುದು ಇತ್ತೀಚೆಗೆ ಪ್ರಕಾಶಗೊಂಡಿವೆ. ಕೊಲ್ಹಾಪುರದ ಮಂತ್ರಿಗಳು ಮಹಾತ್ಮರ ಮರಣಾನಂತರ ತಮ್ಮ ಮನೋಪ್ರವೃತ್ತಿಗನುಸಾರವಾಗಿ ಎಂತಹ ವಾತಾವರಣ ನಿರ್ಮಿಸಿದ್ದರು—ಮೊದಲು ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ತಿರುವಾಂಕೂರು ಮಹಾರಾಜರಲ್ಲಿ ಆದಿಭಾಗದಲ್ಲೆಂತಹ ಎದಗಾರಿಕೆಯನ್ನು ಹುಟ್ಟಿಸಿದ್ದರು—ಸರ್. ರಾಮಸ್ವಾಮಿ ಮುದಲಿಯಾರರು ಮೈಸೂರು ಮಹಾರಾಜರ ಆಶ್ರಯದಲ್ಲಿ ಎಂತಹ ಮನೋವೃತ್ತಿಯನ್ನು ಪ್ರದರ್ಶಿಸಿದ್ದರು—ಅವರಿವರೆಂದೇನು, ಪ್ರತಿಯೊಂದು ಸಂಸ್ಥಾನದಲ್ಲೂ ಮುಕುಟ ಹೊತ್ತ ತಲೆಯಾರದು, ಕಾರ್ಯಸಾಧಕ ಮುದುಳಾರದು, ಎಂಬುದನ್ನು ಸೂಕ್ಷ್ಮವಾಗಿ ನೋಡುತ್ತಾ ಹೋದರೆ ಎಲ್ಲವೂ ಕೆಲವು ವಿಶೇಷ ಬುದ್ಧಿಯವರ ಅಥವಾ ವಿಪರೀತ ಬುದ್ಧಿಯವರ ಕಲಸಗಳೆಂಬುವು ಮಂದಟ್ಟಾಗುವುದು. ಈ ನೋಟದ ಮೇಲಿಂದ ವಿಶೇಷ ಬುದ್ಧಿವಂತರೆಂಬವರೇ ಇಲ್ಲದಂತಾದರೆ ಲೋಕ ಸುಭಿಕ್ಷೆಯಾದೀತು ಎಂಬ ಅಭಿಪ್ರಾಯಕ್ಕೆ ಬರುತ್ತೀವೆ; ನಿಜಕ್ಕೂ ವಿಪರೀತ ಬುದ್ಧಿವಂತರು ಮತ್ತು ಅತಿರೇಕ ಧನವಂತರೇ ಮಾನವ ಜನಾಂಗದ ಕಲ್ಯಾಣಕ್ಕೆ ಕಂಟಕಗಳು!

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years. Filaria is a dirty, disfiguring disease And yet a little united effort on the part of the public could at very little cost wipe out these two evils. **Please, watch this space.**

Inserted by:

The Canara Mutual Assurance Company Limited,
ESTD. 1935
H. O. UDIPI.

ಅಮೃತಾಂಜನ.
ತಲೆನೋವು, ಶೀತ, ನೆಗಡಿ, ಕೆಮ್ಮು, ಮೈಕೈನೋವು, ಸಂಧಿವಾತ, ನರಗಳ ವೇದನೆಗಳು, ಕೀಟಗಳ ಕಡಿತ, ಗಾಯಗಳು ಮುಂತಾದ ಎಲ್ಲಾ ರೋಗಗಳಿಗೂ
ಎಲ್ಲಾ ಔಷಧಿ ಅಂಗಡಿಗಳಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

The Canara Banking Corporation Limited.
Estd 1906.
(Incorporated in British India)
Head Office: **UDIPI**, S. India.

SEASON DEPOSITS
for Rs. 5000/- and over are now accepted at all Offices of the Bank at the following rates —
3 & 4 months — @ 2½ % p. a.
5 & 6 months — @ 2¾ % p. a.

ಗುರುವಾರ, ಉಡುಪಿ, ೮-೪-'೪೮

ಈ ಅನಾಚಾರಗಳು ನಿಲ್ಲಲಿ!

ಸುರತ್ಕಲ್ಲಿನಲ್ಲಿ ನಡೆದ ಪ್ರಾಣಿ ಬಲಿ ನಿಷೇಧ ಚಳವಳಿ ಮತ್ತದು ಪಡೆದ ವಿಜಯದ ವಾರ್ತೆಯು ಈ ಸಂಚಿಕೆಯ ಬೇರೊಂದೆಡೆಯಲ್ಲಿದೆ. ದಕ್ಷಿಣಕನ್ನಡಾ ಜಿಲ್ಲೆಯುಳ್ಳಿ—ಅಖಿಲ ಭಾರತದಲ್ಲೇ—ದೇವಿ ದೈವ ಭೂತಗಳಿಗೆ ರಕ್ತಾಹಾರವಾಗಿ ಎಷ್ಟು ಪ್ರಾಣಿ ಪಕ್ಷಿಗಳು ಕೊಲೆಯಾಗುತ್ತಿದೆ—ಇದೊಂದು ಪುಣ್ಯ ಕಾರ್ಯವೆಂಬ ಭಾವನೆಯಿಂದಲೇ ಬಹಿರಂಗವಾಗಿ ಎಂತಹ ಕ್ರೂರ ರೀತಿಯಿಂದ ಪ್ರಾಣಿ ಪಕ್ಷಿ ಹಿಂಸೆ ನಡೆಯುತ್ತಿದೆ, ಎಂಬುದಿಲ್ಲಿ ವರ್ಣಿಸುವುದು ಅನಗತ್ಯ. ಕೋಳಿಗಳೇ ಮೊದಲಾದ ಪಕ್ಷಿಗಳನ್ನು ತಲೆಯಡಿಗೆ ಮಾಡಿ ನೇತಾಡಿಸಿ ಕೊಂಡೊಯ್ಯುವಂತಹ ಸಾಮಾನ್ಯ ರೀತಿಯ ಮೃಗ ಪಕ್ಷಿ ಹಿಂಸೆಗಳನ್ನೂ ತಕ್ಸೀರಾಗಿ ಗಣಿಸುವ ಶಾಸನವಿದೆ ಎಂದು ತಿಳಿಯುತ್ತೇವೆ. ಅಂದ ಮೇಲೆ ಸಾರ್ವಜನಿಕ ಪ್ರದರ್ಶನವಾಗಿ ಮೃಗಪಕ್ಷಿಗಳ ಸಾಮೂಹಿಕ ಕೊಲೆ ನಡೆವುದು ...ವುದಾದರೂ ಹೇಗೆ? ಆಹಾರಕ್ಕಾಗಿ, ಅಂತೆಯೇ ದೈವದೇವಿಗಳಿಗೆ ಬಲಿಯಾಗಿ ಪ್ರಾಣಿಹತ್ಯೆ ನಡೆಸಬಹುದೆಂಬುದನ್ನ ಶಾಸನವು ಒಪ್ಪಿರುವಂತಿದೆ. ಹಿಂದುಗಳ ಅತಿಪುರಾತನ ಮೂಢ ನಂಬಿಕೆಗಳಲ್ಲೊಂದಾಗಿರುವ ಪ್ರಾಣಿಬಲಿಯಂತಹ ಆಚರಣೆಗಳು 'ಧಾರ್ಮಿಕ ವಿಭಾಗದಲ್ಲಿ ಕೈಹಾಕಲಾರೆವು' ಎಂಬ ವಚನಕೊಟ್ಟಿದ್ದ ಬ್ರಿಟಿಷ್ ಆಡಳಿತೆಯೊಳಗಾಗ ಅಬಾಧಿತವಾಗಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ಇಂದು ಹಾಗಲ್ಲ. ಜನಜೀವನದ ಸರ್ವ ವಿಭಾಗಗಳನ್ನೂ ಶುದ್ಧೀಕರಿಸಿ, ಸುಧಾರಿಸಿ, ಅಭಿವೃದ್ಧಿಪಥ ಹಿಡಿಸಲು ಬದ್ಧವಿರುವ ಜನಪ್ರತಿನಿಧಿ ಸರಕಾರಗಳು ಅಧಿಕಾರದಲ್ಲಿವೆ, ಈ ಸುಧಾರಣೆಗಾಗಿ ಜನಜೀವನದ ಪ್ರತಿಯೊಂದು ಕ್ಷೇತ್ರದೊಳಗೂ ಕೈಹಾಕುವ ಅಧಿಕಾರವು ಅವುಗಳಿಗಿದೆ. ಯಾವುದೇ ಒಂದು ಸ್ಥಿತಿ ಅಥವಾ ಸಂಪ್ರದಾಯದ ಹಿತಾಹಿತಗಳನ್ನು ತೂಗಿ ನೋಡಿ, ಅಪಾಯಕರವೆಂದು ತೋರುವ ಯಾವುದನ್ನೇ ಆದರೂ ನಿರ್ದಾಕ್ಷಿಣ್ಯವಾಗಿ ನಿರ್ಮೂಲಿಸಲು ಜನತಾ ಸರಕಾರಗಳು ಸಿದ್ಧವಿರಬೇಕು. ಈ ದೃಷ್ಟಿಯಿಂದ ಪ್ರಾಣಿ ಬಲಿ'ಯಂತಹ ಅನಾಚಾರಗಳನ್ನು ಇನ್ನೂ ನಡೆಯಲು ಬಿಡಬಹುದೆ? ಸಾಮಾನ್ಯ ಅಜ್ಞ ಜನರ ಕೊರಳಿಗಂಟಿ ಹೋಗಿರುವ ದೇವಿ, ಭೂತಗಳ ಹೆದರಿಕೆಯೊಂದರ ವಿನಹ ಈ ರಕ್ತಾಹಾರಗಳನ್ನು ಅನಿವಾರ್ಯಗೊಳಿಸುವ ನೀತಿ ನಿಯಮವಾವುದೂ ಇಲ್ಲ. ಈ ಜನರು ಒಂದಿಷ್ಟು ಧೈರ್ಯ ವಹಿಸಿದರೆ, ಅಥವಾ ಸರಕಾರವು ಆ ದೇವೀ ಭೀತಿಗಿಂತ ಮಿಗಿಲಾದ ಕಾನೂನಿನ ಭೀತಿಯನ್ನು ಹುಟ್ಟಿಸಿ ನಿಷೇಧ ಹಾಕಿದರೆ, ಪ್ರಾಣಿ ಬಲಿಯನ್ನು ನಿಲ್ಲಿಸುವುದರಿಂದಾಗಿ ಹುಟ್ಟಬಲ್ಲ ತೊಂದರೆ ಯಾವುದೂ ಇಲ್ಲವೆಂಬುದು ಅನುಭವದಿಂದಲೇ ಖಚಿತವಾಗಿದ. ನಿದರ್ಶನಕ್ಕಾಗಿ ಈಗ ಸುರತ್ಕಲ್ಲಿನಲ್ಲಾಗಿರುವಂತೆಯೇ ಪ್ರಾಣಿ ಬಲಿಗೆ ಪ್ರಸಿದ್ಧವಿದ್ದ ಕೆಲವು ಸ್ಥಳಗಳಲ್ಲಿದು ನಿಲ್ಲಿಸಲ್ಪಟ್ಟಿದ್ದರೂ, ದೇವಿ, ಭೂತಗಳು ಪ್ರತೀಕಾರೋನ್ಮತ್ತರಾಗಿ ಊರನ್ನು ಅಡಿಮೇಲು ಮಾಡಿದುದೆಲ್ಲಿಯೂ ಕಂಡುಬರುವುದಿಲ್ಲ. ಅಷ್ಟೇಕೆ? ಕಳೆದ ಸಪ್ಟೆಂಬರ್ ೩೦ರ ವರೆಗೆ ಸುರಾಪಾನವಿಲ್ಲದೇನೇ ತೃಪ್ತಿಪಡಲು ಯಾವ ಭೂತಕ್ಕಾದರೂ ಗೊತ್ತಿತ್ತೇ? ಈಗ ಆ ಭೂತಗಳೆಲ್ಲವೂ ಹುಳಿನೀರಿನ ಬದಲು ಎಳನೀರನ್ನು ಕುಡಿದು 'ಸಂತೋಷವಾಯಿತು! ಕೊಟ್ಟಂಥಾ ಸೇವೆಯನ್ನು ಅತಿ ಸಂತೋಷದಿಂದ ಸ್ವೀಕರಿಸಿದ್ದೇನೆ!' ಎಂದು ನೈಗೊಡುತ್ತಿಲ್ಲವೆ? ಒಂದು ಕಾಲದಲ್ಲಿ ಹಿಂದೀಯರಲ್ಲಿ 'ಮನುಷ್ಯ ಬಲಿ' 'ಸಹಗಮನ'ದಂತಹ ಪದ್ಧತಿಗಳೂ ಇದ್ದುವು; ಅವುಗಳನ್ನು ನಿಲ್ಲಿಸಿದುದರಿಂದ ಪ್ರಳಯವೇನೂ ಆಗದೆ, ಪ್ರಗತಿ ಮಾತ್ರ ಆಗಿದೆ. ಅದೇ ರೀತಿ, ಹಳೇ ಯುಗದ 'ಕಾಡು ತನಗಳ'ಯು ಆಚರಣೆಗಳ ಶೇಷಾಂಶವಾಗಿ ಈ ವರೆಗೂ ನಮ್ಮ ನಡುವೆ ಉಳಿದಿರುವ 'ಪ್ರಾಣಿ ಬಲಿ'ಯಂತಹ ದುರಾಚಾರಗಳನ್ನು ನಿಷೇಧಿಸುವ ಶಾಸನವನ್ನು ಸರಕಾರವು ಕೂಡಲೇ ಮುಂತರುವುದೆಂದು ನಂಬುತ್ತೇವೆ. ಇದರಿಂದ ಸಾಮಾನ್ಯ ಜನರ ಹೃದಯದಲ್ಲಿ ಬೇರು ಬಿಟ್ಟಿರುವ ಅಂಧ ಸಂಪ್ರದಾಯನಿಷ್ಠೆ ಮತ್ತು ಭೀತಿಯನ್ನು ನಿವಾರಿಸಿ, ಅವರಲ್ಲೊಂದು ನವಜಾಗ್ರತಿ ಮತ್ತು ಹೊಸ ಚೇತನವನ್ನು ನಿರ್ಮಿಸಿದಂತಾಗುವುದು; ಅದೇ ಕಾಲದಲ್ಲಿ ರೌದ್ರಪ್ರೇಮ, ರಕ್ತದಾಹದಂತಹ ರಾಕ್ಷಸೀ ತೃಷೆಗಳನ್ನು ನಿರ್ಮೂಲಿಸಿ ಸಾಮಾಜಿಕ ಜೀವನವನ್ನು ಶುದ್ಧಗೊಳಿಸಿದಂತಾಗುವುದು. ಇದು ಶಾಸನ ಮೂಲಕವೇ ಸಾಧ್ಯ ಮತ್ತು ನಿರಪಾಯಕಾರಿಯೆಂಬ ಅನುಭವವು ಪಾನನಿಷೇಧ ಕಾನೂನಿನಿಂದಾಗಿರುವ ಸತ್ಪರಿಣಾಮದ ಮೂಲಕ ಸರಕಾರಕ್ಕಾಗಿದೆ. ಆದ್ದರಿಂದ ಪ್ರಾಣಿ ಬಲಿ ನಿಷೇಧ ಶಾಸನವೂ ಕೂಡಲೇ ಜಾರಿಗೆ ಬರುವದೆಂದು ನಂಬುತ್ತೇವೆ.

ಇದೇ ರೀತಿ ದಕ್ಷಿಣ ಕನ್ನಡಾ ಜಿಲ್ಲೆಯ ಹಳ್ಳಿಮೂಲೆಗಳಲ್ಲೂ ವ್ಯಾಪಿಸಿದ್ದು, ಕೆಳವರ್ಗದ ಸಾಮಾನ್ಯ ಜನತೆಯ ಆಸಕ್ತಿ, ಅಭಿರುಚಿಗಳನ್ನು ಆಕರ್ಷಿಸಿಕೊಂಡಿರುವ 'ಕೋಳಿ ಅಂಕ'ದಂತಹ ಸಾಮೂಹಿಕ ದುಶ್ಚಟಗಳಿಗೂ ಕೂಡಲೇ ಪ್ರತಿಬಂಧ ಬೀಳಬೇಕು. ಅಶಿಕ್ಷಿತ, ಸಂಸ್ಕಾರರಹಿತ ಸಾಮಾನ್ಯ ಜನರಲ್ಲಿ ಸಹಜವಾಗಿರುವ ಬರ್ಬರತೆ, ರಕ್ತದಾಹಗಳ ದ್ಯೋತಕವಾಗಿದೆ ಈ ಕೋಳೀ ಅಂಕ. ಅಂತೆಯೇ ಇಂತಹದಕ್ಕೂ ಈ ತನಕ ನಿಷೇಧ ಬೀಳದಿರುವುದು, ಜನಸಾಮಾನ್ಯರ ಜೀವನ ಸುಧಾರಣೆಯ ಕುರಿತು ಸರಕಾರಕ್ಕೆಂತಹ ಅಸಡ್ಡೆಯಿದೆ ಎಂಬುದಕ್ಕೊಂದು ನಿದರ್ಶನ. ಪ್ರಾಣಿಪಕ್ಷಿಗಳ 'ಬಲಿ' ಮತ್ತು 'ಅಂಕ'ಗಳ ಮೂಲಕ ಮನುಷ್ಯನು ತನ್ನ ರಾಕ್ಷಸೀ ಅಭಿರುಚಿಗಳನ್ನು ಪೋಷಿಸಿಕೊಳ್ಳುವ ದುರಂತ ಆಟಗಳೆಲ್ಲವನ್ನೂ ಇನ್ನಾದರೂ ನಿಲ್ಲಿಸಲಿ; ಅದಕ್ಕಾಗಿ ಬೇಕಾದ ಶಾಸನಗಳನ್ನು ಮುಂತರಲು ಸರಕಾರವು ತಡಮಾಡದಿರಲಿ; ಸಂಸ್ಕೃತರೂ ಸಭ್ಯರೂ ಈ ಸುಧಾರಣಾ ಕಾರ್ಯಗಳಿಗೆ ನೆರವಾಗಲಿ, ಎಂದು ಕೇಳಿಕೊಳ್ಳುತ್ತೇವೆ.

ಜಾತಿ ಸ್ವಾರ್ಥ ಯಾರದು?

ಜಾತೀಯತೆಯ ಪ್ರದರ್ಶನ ಕಲೆಯಲ್ಲಿ ಅತಿ ನಿಪುಣರಿದ್ದು, ಅದು ಗುರೂಪವಾದುದೂ ಸಾಮಾನ್ಯ ಜನರಿಗೆ ಗೋಚರಿಸದಂತೆ ಮಾಡುವುದರಲ್ಲಿ ಚತುರರಿರುವ ಒಂದು ಪಂಗಡದವರು ತಮ್ಮ ನಿಜರೂಪದತ್ತ ಕೈತೋರಿಸುವವರನ್ನೇ 'ದ್ರೋಹಿಗಳು' 'ಶಾಂತಿ ಸೌಹಾರ್ದತಾ ವಿರೋಧಿಗಳು' ಎಂದು ಸಂಬೋಧಿಸಹತ್ತಿದ್ದಾರೆ. ಇಂಥವರು 'ಜಾತೀಯತಾ ನಿರ್ನಾಮ' ಸಾಧಕರನ್ನೇ 'ಜಾತೀಯತಾ ನಿರ್ಮಾಣ'ಕರ್ತರೆಂದು ತಿರುಗಾಮುರುಗಾ ಪ್ರಚಾರ ಮಾಡಿ, ತಮ್ಮ ಬೇಳೆ ಬೇಯಿಸಿಕೊಳ್ಳಲು ನೋಡುತ್ತಾರೆ.

ಬಣ್ಣ ಬದಲಾಯಿಸಿಯೇ, ವಂಚಿಸಿಯೇ, ಸಾರ್ವಜನಿಕರನ್ನು ತಮ್ಮ ಮಾಯಾಜಾಲಗಳಲ್ಲಿ ಸಿಕ್ಕಿಸಿಕೊಳ್ಳುವವರ ಸ್ವಭಾವಸಿದ್ಧ ಆಟವಿದು ಎಂದೇ ಅವರ ಈ ಮಾದರಿಯ ಅಪಪ್ರಚಾರಗಳನ್ನು ಜನರು ಗಣಿಸತಕ್ಕದ್ದು. ಜಾತೀಯತೆಯೆಂದರೇನ? ಶಾಂತಿ ಸೌಹಾರ್ದತಾ ಭಂಗವೆಂದರೇನು? ಎಂಬುದನ್ನು ತುಲನಾತ್ಮಕವಾಗಿ ವಿಚಾರಿಸಿ ತಿಳಿಯಬೇಕಲ್ಲದೆ, ರಾಷ್ಟ್ರಪ್ರೇಮ-ಸಾರ್ವಜನಿಕ ಹಿತಾಸಕ್ತಿ ಇತ್ಯಾದಿಗಳೆಲ್ಲವನ್ನೂ ಸ್ವಜಾತಿ ಪ್ರೇಮಪ್ರೂಂದಕ್ಕೇನೇ ನೇತಾಡಿಕೊಂಡವರ ಮಾತಿನ ಮೇಲಿನಿಂದಲ್ಲ.

ಇಂದು ಸಮತಾವಾದಿಗಳು ಶ್ರೀಮಂತಿಕೆಯ ವಿರುದ್ಧವಾಗಿ, ಅಸಮಾನತೆಯ ನಿವಾರಣೆಗಾಗಿ ಚಳವಳವೆಬ್ಬಿಸಿದರೆ ಶ್ರೀಮಂತ ವರ್ಗವು ಅದನ್ನೇ ಶಾಂತಿಭಂಗ, ವರ್ಗದ್ವೇಷವೆಂದು ಅಪಪ್ರಚಾರ ಮಾಡಬಹುದು. ಸಮತಾವಾದಿಗಳ ಮಾದರಿಯಲ್ಲೇ ಚಳವಳಗಳನ್ನು ಹೂಡುವ ಆವಶ್ಯಕತೆ ಯಾವುದೂ ಸದ್ಯಸ್ಥಿತಿಯಲ್ಲಿ ಈ ಶ್ರೀಮಂತ ವರ್ಗಕ್ಕಿಲ್ಲವಾದ್ದರಿಂದ, ಅವರು 'ಶಾಂತಿ ಪಾಲನೆ' 'ಸಂಭಾವಿತತನ'ಗಳ ಹೆಸರಿನಿಂದ ಪ್ರಚಲಿತ ಸ್ಥಿತಿಗತಿಗಳನ್ನು ಇದ್ದಂತೆ ಉಳಿಸಿಕೊಂಡರೇನೇ ಸ್ವಕಾರ್ಯ ಸಾಧಿಸಿದಂತಾಗುವುದು. ಆದರೆ ಈ ದುಸ್ಥಿತಿಯನ್ನು ಅಡಿಮೇಲು ಮಾಡಿ ನವರಚನೆಮಾಡಲಿಳಿದವರು ಪ್ರಚಲಿತ ಸ್ಥಿತಿಗತಿಗಳ ವಿರುದ್ಧವಾಗಿ ನ್ಯಾಯಬದ್ಧ ಬಂಡಾಯ ಹೂಡದೆ ಅನ್ಯಥಾ ಗತಿಯಿದೆಯೆ? ಅಂತಹ ಹೊಸ ಚಳವಳಗಳನ್ನು 'ಪುಂಡಾಟಿಕೆ'ಯೆಂದು ಕರೆದು ಅಪ್ರಿಯಗೊಳಿಸಿ, ಅಡಗಿಸಿಬಿಟ್ಟರೆ, ಮೊದಲೇ ಸ್ಥಾಪನೆಗೊಂಡು ಬೇರು ಬಿಟ್ಟಿರುವ ತಮ್ಮ ಸುಲಿಗೆ ಯಂತ್ರವು ಸದಾ ಕಾಲವೂ ನಿರಾತಂಕವಾಗಿ ನಡೆಯಲು ಅನುಕೂಲವಾಗುವದೆಂದೇ ಈ ಬಂಡಾಯಗಾರರು ಸಮತಾವಾದಿಗಳ ಕುರಿತು ಸಭ್ಯತೆಯ ಸೋಗಿನಿಂದ ಅಪಪ್ರಚಾರ ಮಾಡುತಿದ್ದಾರೆ. ಜನ ಜಾಗ್ರತಿಯೇ ಇಂಥವರ ದೃಷ್ಟಿಯಲ್ಲಿ ಅನಾಚಾರ, ಪುಂಡಾಟಿಕೆ!

ಅದೇ ರೀತಿ ಸುಲಿಗೆ, ವಂಚನೆ, ಅಂತರ್ಗಾಮೀ ವಹಿವಾಟು, ಕೃತಕೋಪಚಾರ ಬುದ್ಧಿ ಇತ್ಯಾದಿಗಳನ್ನೂ ಹುಟ್ಟುಗುಣವಾಗಿ ಪಡೆದುಬಂದು, ಆ ಮೂಲಕ ತಾವಿದ್ದಲ್ಲೆಲ್ಲಾ ಜಾತೀಯತಾ ಹಿತಾನ ಧರ್ಮ ಹಾಗೂ ಧನಾರ್ಜನಾ ಯಂತ್ರವನ್ನು ಎಂದೋ ಸ್ಥಾಪಿಸಿ ಚಾಲನಗೊಳಿಸಿಟ್ಟು ಅದರಿಂದ ಸಾಮಾನ್ಯಜನರ ಜೀವನವನ್ನು ಹಿಂಡುತ್ತಿರುವವರು, ತಮ್ಮೀ ಜಾತೀಯತಾ ಹಾಗೂ ಆಕ್ರಮಣದ ವಿರುದ್ಧ ಸೊಲ್ಲು ಎಲ್ಲಿಂದಾದರೂ ಕೇಳಬಂದೊಡನೆ ಉರಿದುಬೀಳುತ್ತಾರೆ. ಜಾಗ್ರತಿ ಸೂಚನೆಗಳನ್ನೇ 'ಜಾತೀಯತಾ' 'ಐಕ್ಯತಾ ಭಂಗ' 'ಶಾಂತಿನಿರೋಧ' ಎಂದು ಹೀಯಾಳಿಸಹತ್ತುತ್ತಾರೆ. ಸಾಮಾನ್ಯ ಜನರಲ್ಲಿ ಜಾಗ್ರತಿ ಮೊಳೆತರೆ ತಾವವರ ಮೇಲೆ ಬೀಸಿರುವ ಮಾಯಾ ಬಲೆಯನ್ನು ಹರಿದು ಎದ್ದಾರು—ಅವರೆದ್ದು ನಿಂತಲ್ಲಿ ಮಟ್ಟಲು ಮೇಲಂತಸ್ತು, ಅಟ್ಟಳಿಗೆ ಉಪ್ಪರಿಗೆಯಾಗಿ ಏರಿಸಿರುವ ತಮ್ಮ ಸ್ವಾರ್ಥಸಾಧನಾ ಕಟ್ಟಡವೇ ಕುಸಿದು ಬಿದ್ದೀತು—ಎಂಬ ಭೀತಿಯೇ ಇವರಿಂತಹ ಅಪಪ್ರಚಾರಕ್ಕಿಳಿಯಲು ಕಾರಣ.

ಆದ್ದರಿಂದ ಸಾರ್ವಜನಿಕರು ಈಗ ಮಿಕ್ಕೆಲ್ಲವನ್ನೂ ಮರೆತು ಒಮ್ಮೆ ತಮ್ಮನ್ನು ತಾವೇ ನೋಡಿಕೊಳ್ಳಲಿ; ರೈತರು, ಕಲಸುಗಾರರು ಹಾಗೂ ಜನಸಾಮಾನ್ಯರು ತಾವಾರಾಗಿದ್ದೇವೆ ಮತ್ತು ಈಗ ಹೇಗಿದ್ದೇವೆ ಎಂಬ ಸ್ವಂತ ಪರಿಚಯವನ್ನೇ ಮೊದಲಾಗಿ ಮಾಡಿಕೊಳ್ಳಲಿ, ರಾಷ್ಟ್ರದ ಅಥವಾ ಆಯಾಯಾ ಕ್ಷೇತ್ರ, ಆಯಾಯಾ ಜಿಲ್ಲೆಯ ಸಂಪತ್ತಿನ ಉತ್ಪಾದಕರಾದ ತಮ್ಮ ದುಡಿಮೆಯ ಪ್ರತಿಫಲದ ಪಾಲು ಜನತೆಯಲ್ಲಿ ಅತ್ಯಧಿಕ ಬಹುಸಂಖ್ಯಾಕರಾದ ತಮಗೆ ದೊರೆಯಬೇಕಾದಷ್ಟು ಪ್ರಮಾಣದಲ್ಲಿ ಈಗ ದೊರೆಯುತ್ತಿದೆಯೆ? ಇಲ್ಲವಾದರೆ ಯಾಕಿಲ್ಲ? ತಮ್ಮ ಪಾಲನ್ನು ಅಲ್ಪಸಂಖ್ಯಾಕರಾದ ಇತರರು ಯಾವ ಯಾವ ವಿಧಾನಗಳಿಂದ, ಎಂತೆಂತಹ ವಹಿವಾಟುಗಳಿಂದ ಹೇಗೆ ಪಡೆಯುತಿದ್ದಾರೆ? ಎಂಬುದನ್ನೊಮ್ಮೆ ತಾವು ತಮ್ಮೊಳಗೇ ಯೋಚಿಸಿ ಅರಿತುಕೊಳ್ಳಲಿ. ಈ ಯೋಚನೆಗೆ ಜ್ಞಾನ

ಕೂಲವಾಗುವಂತೆ ಮಾತ್ರ ಎಲ್ಲಾ ಕಡೆಯ ಪರ ಸರ್ವ ವಿಧದ ಪ್ರಚಾರಗಳನ್ನೂ ಸಂಚು ಹಂಚಿಕೆಗಳನ್ನೂ ಸರಿಯೇ ಲಿಸಿಕೊಳ್ಳಲಿ. ಆ ಮೇಲೂ, ಈಗ ನಮ್ಮಲ್ಲಿ ಬೇರೂರಿರುವ ಒಡೆದಾಡು ಪಂಗಡಿಗರ ಜಾತೀಯತೆಯೇ ಸರ್ವ ಸಮಾನತೆ, ಅವರ ಸ್ವಾರ್ಥಸಾಧಕ ಮಹಾಪಾಟುಗಳೇ ಜನಹಿತ ಸಾಧಕ ಕಾರ್ಯಗಳು, ಆ ಕಡೆಗೆ ಕೈ ತೋರಿಸುವವರೇ ಐಕ್ಯತಾ ವಿರೋಧಿಗಳು ಸ್ವಾತಂತ್ರ್ಯ ದ್ರೋಹಿಗಳು, ಎಂದು ಜನತೆಗೆ ತೋರುತ್ತದಾದರೆ ಹಾಗೆಯೇ ಮಾಡಲಿ!

ಅನ್ಯರ ಮನೆಗೆ ಬೆಂಕಿ ಹಚ್ಚುವ ಕಾರ್ಯವು ಮೌನವಾಗಿ, ಗುಟ್ಟಿನಿಂದಲೇ ನಡೆಯಬಲ್ಲದು-ಅದನ್ನು ನಂದಿಸುವ ಕಾರ್ಯದಲ್ಲಿ ಬಹಳ ಗೊಂದಲಗಳೇಳುತ್ತವೆ; ಮೊದಲನೆಯದು ಶಾಂತಿಪ್ರೇಮ, ಎರಡನೆಯದು ಶಾಂತಿಭಂಗವೇ? ಕಳವು ಮಾಡುವವನು ಗದ್ದಲವಿಲ್ಲದೇನೇ ಮಾಡುತ್ತಾನೆ, ಮಾಡಿದ ಪಾಪವನ್ನು ಗುರುತ ಹಚ್ಚಿ ಬೆನ್ನಟ್ಟುವಾಗ ಸಹಜವಾಗಿ ಗದ್ದಲವೇಳುತ್ತದೆ, ಮೊದಲನೆಯದು ಶಾಂತಿ, ಎರಡನೆಯದು ಶಾಂತಿಭಂಗವೆ? ಸ್ವಾರ್ಥಸಾಧನೆಯೊಂದೇ ಹುಟ್ಟುಗುಣವಾಗಿ ಜನತೆಗರಿವಾಗದಂತೆಯೇ ಅದರಿಂದ ಸುಲಿಯುವ ಕಲೆಯಲ್ಲಿ ನಿಪುಣರಿದ್ದು, ಪ್ರತಿಯೊಂದು ಸಣ್ಣ ದೊಡ್ಡ ಸ್ಥಿತಿಗತಿಗಳಲ್ಲೂ ಜಾತಿ ಪರಜಾತಿ ಭಾವವೊಂದನ್ನೇ ಆಧರಿಸುವವರ ಕಾರ್ಯಗಳು ಮೌನವಾಗಿಯೇ ಸಾಗುತ್ತವೆ-ಆದರೆ ಜನತೆಯಲ್ಲೇ ಕುರಿತು ಹಂಚಿರುವ ಅಸಹ್ಯ ಅಥವಾ ತಾಗಿರುವ ಮಂಕು ಬಾಡ್ಯದ ನಿವಾರಣೆಗಾಗಿ, ಜನಜಾಗೃತಿಗಾಗಿ ಎಚ್ಚರಿಕೆ ಕೊಡಬೇಕಾಗುತ್ತದೆ, ಇಲ್ಲಿ ಮೊದಲನೆಯದು ಸಭ್ಯತೆ, ಐಕ್ಯತಾ ಪ್ರೇಮ-ಎರಡನೆಯದು ಪುಂಡಾಟಿಕೆ, ಐಕ್ಯತಾ ಭಂಗವೇ? ಮೊದಲನೆಯದು ಸರ್ವ ಸಮಾನತೆ, ಎರಡನೆಯದು ಜಾತೀಯತೆಯೇ?

ಜನಸಾಮಾನ್ಯರು ರೈತರು, ಕೆಲಸಗಾರರೇ ಮೊದಲಾದ ಬಹುಸಂಖ್ಯಾತರು-ಇವರೇ ಇವೆರಡನ್ನೂ ತೂಗಿ ನೋಡಿ ನಿರ್ಧರಿಸಲಿ'

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O S 14/45

ವಾದಿದು-1 ಜೋಸೆಫ್ ಎವರ್, ಫೆರ್ನಾಂಡಿಸ್ 2 ಸ್ಟೇಫನ್ ಫೆರ್ನಾಂಡಿಸ್, ಮಾನುವೇಲ್ ಫೆರ್ನಾಂಡಿಸರ ಮಕ್ಕಳು 3 ಜುಲಿಯಾನ್ ಫೆರ್ನಾಂಡಿಸ್, 2ನೇಯವನ ಹೆಂಡ್ತಿ. ಕುಂದಾಪುರ ತಾಲ್ಲೂ ಹಡುಕೋಣೆ ಗ್ರಾಮದ ಕ್ರಿಶ್ಚನರು

ಪ್ರತಿವಾದಿ-ಶ್ರೀ ನಾರಾಯಣಗುರು ಏಕೆ [illegible] ಲಿಮಿಟೆಡ್ [illegible]

ಈ ಮೊಕದ್ದಮೆ ಸದ್ರಿ ಪ್ರತಿವಾದಿಗೆ [illegible]

ವಾದಿದು ಪ್ರತಿವಾದಿಯ ಮೇಲೆ [illegible] 9-2 45ರ [illegible] ಪ್ರಕಾರ ಬರತಕ್ಕ [illegible] ಮಾಡಿದ [illegible] 3-6 48ಕ್ಕೆ [illegible] 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ [illegible] ಪ್ರಕಾರ ತಿಳಿಸುತ್ತದೆ

M. M. Hegde

Advocate for Plaintiff

ತಾ. 9-4-48 ಮೊಕ್ಕಾಂ ಕುಂದಾಪುರ.

ಭಾರತದ ಉದ್ದಿಮೆ, ಅಭಿವೃದ್ಧಿ ಯೋಜನೆ

ರಾಷ್ಟ್ರದ ಸ್ವಾತಂತ್ರ್ಯಾಂತರ್ಗತ ವಿಭಜನೆಯು ಬೆನ್ನಲ್ಲಿದ್ದ ಜಾತೀಯತಾ ಗೊಂದಲಗಳಿಂದಾಗಿಯೂ, ಕಮ್ಯೂನಿಸ್ಟರಂತಹ ಅತಿರೇಕವಾದಿ ಪರಾನುಕರಣನಿಷ್ಟರು ರಾಷ್ಟ್ರದ ಎಲ್ಲೆಡೆಗಳಲ್ಲೂ ಹಬ್ಬಿಸಿರುವ ಮುಷ್ಕರಗಳೇ ಮೊದಲಾದ ಆತಂಕಗಳ ದೆಸೆಯಿಂದಲೂ, ಇತರ ಅವಸರದ ಬೇರೆ ಪ್ರಾಮುಖ್ಯ ಕಾರ್ಯಭಾರಗಳಿಂದಾಗಿಯೂ ಭಾರತದ ಔದ್ಯೋಗೀಕರಣದ ಅಭಿವೃದ್ಧಿ ಸಾಧಿಸಲು ಹಿಂದೆ ಸರಕಾರಕ್ಕಾಗಲಿಲ್ಲ. ಈಗ ವಿಭಜನೋತ್ತರದ ಹೆಚ್ಚಿನ ಕಾರ್ಯಗಳು ಮುಗಿದಿವೆ; ಜಾತೀಯ ಗಲಭೆಗಳೂ ನಿಂತು, ನಿರಾಶ್ರಿತರ ರಕ್ಷಣಾ ವ್ಯವಸ್ಥೆಯೂ ಬಹುಮಟ್ಟಿಗೆ ಸಾಂಗವಾಗಿದೆ, ಮುಷ್ಕರಪ್ರೇರಕ ಕಮ್ಯೂನಿಸ್ಟರನ್ನು ದೇಶದ ಅದ್ಯಂತವಾಗಿ ಬಂಧಿಸಲಾಗಿದೆ ಈ ರೀತಿ ವಾತಾವರಣವನ್ನು ಬಹುಮಟ್ಟಿಗೆ ಶುದ್ಧೀಕರಿಸಿಕೊಂಡು ಈಗ ನೆಹರು ಸರಕಾರವು ರಾಷ್ಟ್ರದ ಉದ್ದಿಮೆಗಳ ಪುನರ್ರಚನೆಯ ಕಡೆಗೆ ಲಕ್ಷ್ಯ ಹರಿಸಿದೆ. ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಅಲ್ಪಾವಧಿಯೊಳಗೆ 12 ಉದ್ದಿಮೆಗಳನ್ನು ಪುನರ್ರಚಿಸುವದಕ್ಕಾಗಿ ಮತ್ತು ಅವುಗಳಿಗೆ ಬೇಕಾಗುವ ಉಕ್ಕು, ಸಿಮೆಂಟು, ಇದ್ದಲು ಇತ್ಯಾದಿಗಳನ್ನು ಸಂಗ್ರಹಿಸಿಕೊಳ್ಳುವದಕ್ಕಾಗಿ ಮತ್ತು ಸಂಬಂಧಪಟ್ಟ ಚಲನವಲನಗಳ ವ್ಯವಸ್ಥೆಗಾಗಿ ಭಾರತ ಸರಕಾರವು ಯೋಜನೆಗಳನ್ನು ಕೈಕೊಂಡಿದ್ದು, ಅವುಗಳನ್ನು ಪರ್ಯಾಲೋಚನೆಗಾಗಿ ಹಿಂದೀ ಪಾರ್ಲಿಮೆಂಟಿನ ಮುಂದೆ ಉದ್ದಿಮೆ ಖಾತೆಯ ಮಂತ್ರಿ ಡಾ| ಶ್ಯಾಮಪ್ರಸಾದ ಮುಖರ್ಜಿಯವರು ಮಂಡಿಸಿದ್ದಾರೆ. ಈ ಕುರಿತು ಅಭಿಪ್ರಾಯ ಸೂಚಿಸುತ್ತಾ ''ಸದ್ಯ ಲೋಕದ ಹಾಗೂ ಭಾರತದ ಸ್ಥಿತಿಗತಿಗಳ ಮೇಲಿಂದ ಎಲ್ಲವನ್ನೂ ಒಮ್ಮೆಗೇ ಅಡಿಮೇಲು ಮಾಡಿ, ಸ್ಲೇಟನ್ನೊಮ್ಮೆ ಉಜ್ಜಿ ಹೊಸತಾಗಿ ಬರೆಯುವಂತ ನವೀನರಚನೆಯನ್ನು ಕೈಕೊಳ್ಳುವದು ಜನತೆಯ ದೃಷ್ಟಿಯಲ್ಲಿ ಅಪಾಯಕರ, ಆದ್ದರಿಂದ ಇದ್ದ ಸ್ಥಿತಿಯಲ್ಲೇ ಅಭಿವೃದ್ಧಿ ಸಾಧಿಸಬೇಕಾಗಿದೆ" ಎಂದು ಪಂಡಿತ ನೆಹರೂಗಳೆಂದಿದ್ದಾರೆ. ಅದಕ್ಕಾಗಿ ಮೂರು ವರ್ಷಾವಧಿಯ ಯೋಜನೆಗಳು ತಯಾರಾಗಿವೆ.

ಈ ಪುನರ್ರಚನಾ ಯೋಜನೆಗೊಳಪಟ್ಟ ಉದ್ದಿಮೆಗಳನ್ನು ಈ ಕೆಳಗಿನ ಮೂರು ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗುವುದು:—ಕೇವಲ ಸರಕಾರದ ಅಧೀನದಲ್ಲಿರುವವುಗಳು, ಸರಕಾರವು ತನ್ನ ನಿಯಂತ್ರಣವನ್ನು ಹಾಕಬಲ್ಲ ಬೇರೆಯವುಗಳು, ಖಾಸಗೀ ಸಂಸ್ಥೆಗಳವರ ಪಾಲಿಗೇನೇ ಬಿಡುವ ವಿಷಯವುಗಳು ಈ ಉದ್ದಿಮೆಗಳ ಧಂಧೆವಾಳ ಮತ್ತು ಕೆಲಸಗಳಲ್ಲಿ ಸಾಮರಸ್ಯವಿರುವಂತೆ, ಕಳೆದ ಡಿಸೆಂಬರದಲ್ಲಿ ಸೇರಿದ್ದ ಉದ್ದಿಮೆ ಸಮ್ಮೇಳನದಲ್ಲಾಗಿದ್ದ ನಿರ್ಣಯಕ್ಕನುಸಾರವಾಗಿ ಕೆಲಸಗಾರರಿಗೆ ನ್ಯಾಯವಾದ ಸಂಬಳ, ಹಕ್ಕು ಬಾಧ್ಯತೆಗಳನ್ನೀಯುವ ಘೋಷಣೆಯನ್ನು ಭಾರತ ಸರಕಾರವು ಮಾಡಿದೆ.

ಈ ಉದ್ದಿಮೆ ಯೋಜನೆಯನ್ನು ಜ್ಯಾರಿಗೆ ತರಲು ಕೂಡಲೇ ಒಂದು ಮಿಲಿಯ ಟನ್ನು ಉಕ್ಕನ್ನು ಆಮದುಪಡಿಸಿಕೊಳ್ಳಬೇಕಾಗಿದ್ದು ಸರಕಾರವು ಈ ಸಂಬಂಧವಾಗಿ ಇಷ್ಟರಲ್ಲೇ ಕಾರ್ಯಕೈಕೊಂಡಿದೆ. ಅದೇ ರೀತಿ ಇತರ ಹಲವು ಕಚ್ಚಾಮಾಲುಗಳ ಆವಶ್ಯಕತೆಯೂ ಅವಸರದ್ದಾಗಿದೆ. ನವ ಯೋಜನೆಯನ್ನಯ ಕಾರ್ಯಸಾಗಿಸುವದಕ್ಕೆ ಈಗಿನದಕ್ಕಿಂತ ಸುಮಾರು ಅರ್ಧ ಮಿಲಿಯ ಟನ್ ಹೆಚ್ಚಿನ ಕಲ್ಲಿದ್ದಲು 1949ರಿಂದ ಬೇಕಾಗಬಹುದು. ಈಗ ಹೆಚ್ಚಿನ ಇದ್ದಲು ರೈಲ್ವೆಗಳಿಗಾಗಿಯೇ ಖರ್ಚಾಗುತ್ತಿದ್ದು ಈ ವಿಭಾಗದಲ್ಲಿ ಯಾವ ರೀತಿಯ ಮಿತವ್ಯಯ ಮಾಡಬಹುದೆಂಬುದನ್ನೂ ಸರಕಾರವು ಶೋಧಿಸುತ್ತಿದೆ

ಪ್ರಕೃತ ಮೋಟರು ಕಾರುಗಳ ರಚನೆಯು ಭಾರತಕ್ಕೆ ಅತ್ಯಗತ್ಯವಿದ್ದು, ಅದಕ್ಕಾಗಿ ಎರಡು ಕಾರ್ಖಾನೆಗಳಿಗೆ ಇಷ್ಟರಲ್ಲೇ ಸರಕಾರವು ಅನುಮತಿಯಿತ್ತಿದೆ. ಇವೆರಡು ಕಾರ್ಖಾನೆಗಳು ವರುಷಕ್ಕೆ 30000 ಕಾರುಗಳನ್ನು ತಯಾರಿಸಬಲ್ಲವು 1918ರಲ್ಲಿ ರಾಷ್ಟ್ರದ ಬೇಡಿಕೆಯು ಇಷ್ಟೇ ಇರಬಹುದಾದರೂ 1919ರಲ್ಲಿ 36,000 ಮತ್ತು 1950ರಲ್ಲಿ 450,00 ಮೋಟರುಗಳ ಬೇಡಿಕೆ ಬರಬಹುದೆಂದು ಊಹಿಸಲಾಗಿದೆ ಅದಕ್ಕಾಗಿ ಮೂರನೆಯ ತಯಾರಿ ಕಾರ್ಖಾನೆಯೊಂದನ್ನಾರಂಭಿಸುವ ಆಲೋಚನೆಯು ಸರಕಾರಕ್ಕಿದೆ, ಅಂತೆಯೇ ಬೈಸಿಕಲ್ ತಯಾರಿಯು ಪ್ರಕೃತ ಇಲ್ಲಿಯ ಆವಶ್ಯಕತೆಯ ಶೇಕಡಾ 17ರಷ್ಟನ್ನು ಪೂರೈಸುವಷ್ಟೇ ಇದೆ. ಮುಂದಿನ 3 ವರುಷಗಳೊಳಗೆ ಇಲ್ಲಿಗೆ ಬೇಕಾಗುವಷ್ಟನ್ನು ಇಲ್ಲಿಯೇ ತಯಾರಿಸುವ ಗುರಿಯನ್ನು ಈ ನವಯೋಜನೆಯು ಇಟ್ಟುಕೊಂಡಿದೆ ಅದೇ ರೀತಿ ಇಲೆಕ್ಟ್ರಿಕ್ ಲೇಂಪು, ರೇಡಿಯೋ ರಿಸೀವರ್, ಕಾಗದ ತಯಾರಿ, ಇತ್ಯಾದಿ ಉದ್ದಿಮೆಗಳು, ಈ ತ್ರೈವಾರ್ಷಿಕಾವಧಿಯೊಳಗೆ 'ನಮ್ಮದು ನಮಗೆ' ಸಾಕಾಗುವ ಗುರಿ ಮುಟ್ಟಬೇಕೆಂದು ಭಾರತ ಸರಕಾರವು ನಿರ್ಧರಿಸಿ ಛಲದಿಂದ ಕಾರ್ಯಪ್ರವೃತ್ತವಾಗಿದೆ

[illegible] ಸಂಧಾನದ ಗತಿ

[illegible] ಪೂರ್ವ [illegible] ಸ್ಥಿತಿಯಾಗಿ ಗವ [illegible] ಹೈದರಾಬಾದ್ [illegible] ಬಂದು ಗವರ್ನರ್ ಜನರಲ್ ಮೌಂಟಬ್ಯಾಟನ್, ಎತ್ತು ಪ್ರಧಾನ ಮಂತ್ರಿ ನೆಹರುಗಳೊಂದಿಗೆ ಮಾತಾಡಿ 17 ಪುಟಗಳ ಉತ್ತರವನ್ನೊಪ್ಪಿಸಿದ್ದ ಸರ್ ಮೋಂಕ್ಟನರು ಈಗ ಹೈದರಾಬಾದಿಗೆ ಮರಳಿ ಮಧ್ಯಾವಧಿಯ ವರದಿಯನ್ನು ನಿಜಾಮರಿಗೂ ಅವರ ಮಂತ್ರಿಗಳಿಗೂ ಒಪ್ಪಿಸಿದ್ದಾರೆ ಮುಂದಿನ ವಾರದಲ್ಲಿ ಈ ಸಂಬಂಧದ ಮಾತುಕತೆಗಳು ಪುನಃ ಆರಂಭವಾಗಲಿರುವವಾದರೂ ಪರಿಸ್ಥಿತಿಯೇನೂ ಸುಧಾರಿಸಿಲ್ಲವೆಂದೂ, ಸಂಧಾನದ ಕುರಿತು ಈ ತನಕ ನಿರಾಶೆಯೇ ಕವಿದಿದೆಯೆಂದೂ ತಿಳಿದುಬರುತ್ತದೆ. ರಝಾಕಾರರಂತಹ ಹಿಂಸಾವಾದಿಗಳಿಗೆ ಬಹಿಷ್ಕಾರ ಹಾಕಬೇಕು- ಪ್ರಜಾ ಜವಾಬ್ದಾರಿ ಸರಕಾರ ಸ್ಥಾಪಿಸಬೇಕು, ಎಂಬ ಭಾರತ ಸರಕಾರದ ಮೂಲ ಬೇಡಿಕೆಗಳಿಗೆ ನಿಜಾಮರ ಸರಕಾರವೊಪ್ಪಿಗೆ ಕೊಟ್ಟಿಲ್ಲ, ಕೊಡುವ ಲಕ್ಷಣಗಳೂ ಕಾಣುವದಿಲ್ಲ

ಕೊಲಂಬಿಯಾ ಆಂದೋಲನ

ಕೊಲಂಬಿಯಾ ರಾಷ್ಟ್ರದಲ್ಲಿ ಸರಕಾರೀ ವಿರುದ್ಧ ಮಹಾ ಬಂಡಾಯವೆದ್ದು, ಅಲ್ಲಿಯ ಸರಕಾರವು ಪದಚ್ಯುತವಾಗಿ, ಈಗ ಸಮ್ಮಿಶ್ರ ಸರಕಾರ ಸ್ಥಾಪನೆಗೊಂಡಿದೆ. ಅಮೇರಿಕದ ಸ್ಟೇಟ್ ಸೆಕ್ರೆಟರಿ ಜೋರ್ಜ್ ಮಾರ್ಶಲರೇ ಮೊದಲಾದವರು ಈ ಬಂಡಾಯದೊಳಗೆ ಸಿಕ್ಕಿಬಿದ್ದಿದ್ದರೂ ಈಗ ಸುರಕ್ಷಿತರಾಗಿದ್ದಾರೆಂದು ತಿಳಿದುಬರುತ್ತದೆ. ಈ ಸಮ್ಮಿಶ್ರ ಸರಕಾರವು ಇಡೀ ಕೊಲಂಬಿಯಾದಲ್ಲಿಯೇ ಮಾರ್ಶಲ್ ಲಾ ಜ್ಯಾರಿಗೆ ತಂದು ಬಂಡುಗಾರರನ್ನು ಕಂಡೊಡನೆ ಗುಂಡಿಡಲಾಗುವದೆಂಬ ಎಚ್ಚರಿಕೆ ಕೊಟ್ಟಿದೆ

ಬರ್ಲಿನಿನಲ್ಲಿ

ಒಂದು ಬ್ರಿಟಿಷ್ ಮತ್ತು ಒಂದು ರಶ್ಯ ವಿಮಾನಗಳು ಕಳೆದ ವಾರ ಡಿಕ್ಕಿ ಹೊಡೆದುಕೊಂಡು ಇಕ್ಕಡೆಯವರ ಘರ್ಷಣೆಗೆ ನಿಂತ ದೂರಿತ್ತಿದ್ದರೂ, ವಿಷಯವು ವಿಚಾರಣೆಗೊಳಗಾಗಿದೆ. ಆದರೂ ಇಕ್ಕಡೆಯವರೂ ಈ ಸಂಬಂಧದ ತಪ್ಪನ್ನು ಪರಸ್ಪರ ಇನ್ನೊಬ್ಬರ ಮೇಲೆ ಹಾಕಿದ್ದಾರೆ. ಬರ್ಲಿನ್ ಕ್ಷೇತ್ರದಲ್ಲಿ ಆಂಗ್ಲೋ-ಅಮೇರಿಕನ್ ಸಂಚಾರ ವಹಿವಾಟುಗಳಿಗೆ ರಶ್ಯನ್ನರ ನಿರ್ಬಂಧಗಳನ್ನು ಇನ್ನಷ್ಟು ಬಿಗಿಗೊಳಿಸಿ ಆ ವಲಯದಲ್ಲಿರುವ ಬ್ರಿಟಿಷ್ ಅಮೇರಿಕಾ ಮೋಟಾರು ನಿಲ್ದಾಣಗಳೆಡನ್ನು ಮುಚ್ಚಬೇಕೆಂದು ರಶ್ಯ ಆಜ್ಞಾಪಿಸಿದೆ. ಅಮೇರಿಕನ್ ತಜ್ಞರಿಗೆ ಪ್ರವೇಶಪತ್ರವನ್ನು ಕೊಡಲು ರಶ್ಯ ನಿರಾಕರಿಸಿ, ಅಮೇರಿಕನ್ ಅಧಿಕಾರಿಗಳ ನಿಷೇಧಪತ್ರ ಪಡೆದಿದೆ. ಮಿತ್ರರಾಷ್ಟ್ರೀಯರೊಳಗಿನ ಮನಸ್ತಾಪ ಯಾವೀಗ ದಿನದಿಂದ ದಿನಕ್ಕೆ ಬಲಿಯು

ಹುಡುಗಿ ಗೊಲ್ಲತಿಯು, ಸಿಲುವು ಸಾಟ್ಯರಾಣಿಯದು, ಗೆಲವು ಗ್ರಾಮ ಲಕ್ಷ್ಮಿಯದು, ರೂಪವು ಅಪ್ಸರೆಯದು, ಆಶೆಯನ್ನು ಅಪೇಕ್ಷಿಸುವುದು ನೀವೇ, ನಾವೇ, ಅಲ್ಲವೇ ..ನಮಗೆ ಸಿಗದು, ನಮಗೆ ಭ್ರಮೆ, ಭಾಗ್ಯ ಮಾತ್ರ ರಾಜಕುಮಾರನ ಪಾಲಿಗೆ ಅವರ ಆನಂದಮಯ ಸುಂದರ ಕಥೆಯನ್ನು ನೋಡುವ ಸಂಯೋಗ ಮಾತ್ರ ನಮಗೆ

ಅಂಜಲೀದೇವಿ, ಕೃಷ್ಣವೇಣಿ, ರಘುರಾಮಯ್ಯ ಮೊದಲಾದ ತೆಲುಗು

ಗೊಲ್ಲಭಾಮ (ತೆಲುಗು ಚಿತ್ರ)

ತಾ 9—4—1948ರಿಂದ

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಮಂಗಳೂರು

ದ. ಕ. ಜಿಲ್ಲಾ ನಿ. ಭಾ. ಸಂಘದ ಕಾರ್ಯಭಾರಿಗಳೂ—ಶ್ರೀ ಜನರಾಜ ಶೆಟ್ಟಿಯವರೂ ಇದೇ ತಾ. 6ರಲ್ಲಿ ಮದ್ರಾಸ್ಸಿನ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರನ್ನು ಕಂಡು ಎಲೋಪತಿ ಪದ್ಧತಿಯ ಟಿಂಕ್ಚರ್‌ಗಳು ವಾಟರ್ ಬಡಿ ಕಂಪೌಂಡು ಮೊದಲಾದ ಔಷಧಗಳನ್ನು ಪಾನ ನಿರೋಧ ಕಾನೂನಿನಿಂದ ವಿರಹಿತ ಪಡಿಸಿದಂತೆಯೇ ಆಸವಾರಿಷ್ಟಗಳನ್ನು ಕೂಡಾ ವಿರಹಿತ ಪಡಿಸಬೇಕೆಂದೂ, ಅಷ್ಟರೊಳಗೆ ಜನರಿಗೆ ತೊಂದರೆಯಾಗದಂತೆ ಅವನ್ನು ಉಪಯೋಗಿಸಲೂ ರಫ್ತು ಮಾಡಲೂ ಬೇಕಾದ ಲೈಸೆನ್ಸು ಪರ್ಮಿಟುಗಳನ್ನು ವಿಳಂಬವಿಲ್ಲದೆ ಶೀಘ್ರದಲ್ಲೆ ಕೊಡುವ ಏರ್ಪಾಡಾಗಬೇಕೆಂದೂ ಮದ್ರಾಸ ಸರಕಾರವೂ ಬೊಂಬಾಯಿ ಮತ್ತು ಯು. ಪಿ. ಪ್ರಾಂತ್ಯಗಳಂತೆ ವೈದ್ಯರ ಹಕ್ಕು ಬಾಧ್ಯತೆಗಳನ್ನು ವಿಶದಪಡಿಸುವ ಕಾನೂನನ್ನು ಕೈಕೊಳ್ಳಬೇಕಾಗಿಯೂ ವಿನಂತಿಸಿದರು. ಮಂತ್ರಿಗಳು ಆಸವಾರಿಷ್ಟಗಳನ್ನು ಪಾನನಿರೋಧ ಕಾನೂನಿನಿಂದ ವಿರಹಿತ ಪಡಿಸುವ ವಿಷಯ ತಾನು ಆ ಖಾತೆಗೆ ಬರೆದಿರುವೆನೆಂದೂ ಮದ್ರಾಸಿನಲ್ಲಿ B ಕ್ಲಾಸು ರಿಜಿಸ್ಟ್ರಿಯಾದವರಲ್ಲಿ ಹಲವರು ನಿಜವೈದ್ಯರಲ್ಲದ ಕಾರಣ ಅವರ ಕಡೆಯ ಕೇಳಿಕೆ ಸಾಧ್ಯವಿಲ್ಲವೆಂದೂ ಇತರ ವಿಷಯಗಳನ್ನು ಆಲೋಚಿಸಲಾಗುವದೆಂದೂ ಉತ್ತರವಿತ್ತರು.

ಪತ್ರಿಕಾಪ್ರತಿನಿಧಿಗಳನ್ನು—ಮದ್ರಾಸ ಸಚಿವ ಶ್ರೀ ಎ. ಬಿ. ಶೆಟ್ಟರು ತಾ. 7ರಲ್ಲಿ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಕಂಡು ವಿಚಾರ ವಿನಿಮಯ ಮಾಡಿದರು. ದ. ಕ. ಜಿಲ್ಲೆಯು ಉಳಿತಾಯ ಜಿಲ್ಲೆ [illegible] ಅಭಿಪ್ರಾಯವನ್ನು ಸರಕಾರವು [illegible] ಒಡುವಂತಿಲ್ಲ. ಈ ಸಲ ಎರಡನೇ ಬೆಳೆ [illegible] ಸುಮಾರು ಸೇಕಡಾ ಮೂವತ್ತರಷ್ಟು ನಷ್ಟವಾಗಬಹುದೆಂದು ಸರಕಾರವು ಅಂದಾಜು ಮಾಡಿದೆ. ಪಡಿಯನ್ನು ರದ್ದುಗೊಳಿಸಿದ ಸ್ಥಳಗಳಲ್ಲಿ 'ರಿಲೀಫ್' ಅಂಗಡಿಗಳನ್ನು ಹೆಚ್ಚಿಸುತ್ತಿದ್ದಾರೆ. ಅಲ್ಲಿ ನಾಲ್ಕು ಔನ್ಸ್ ಅಕ್ಕಿ ನಾಲ್ಕು ಔನ್ಸ್ ಜೋಳ ಕೊಡಲಾಗುತ್ತಿದೆ.

'ನೇಶನಲ್ ಹೈವೇ'ಯವರು ಕನ್ಯಾಕುಮಾರಿಯಿಂದ ಬೊಂಬಾಯಿ ವರೆಗಿನ ರಸ್ತೆಯನ್ನು ಮಾಡಿಸಲು ಒಪ್ಪಿದ್ದರಿಂದಾಗಿ ಕೂಳೂರು ಸಂಕ, ಸಿರಿಯಾ ಮತ್ತು ಗುರುಪುರ ಅಣೆಕಟ್ಟುಗಳ ಕೆಲಸವೂ ಈ ವರ್ಷವೇ ಪ್ರಾರಂಭ ಆಗುವದೆಂದೂ ತಿಳಿಸಿದರು. ಪುತ್ತೂರು [illegible]ನಲ್ಲಿ ಮಲೇರಿಯಾ ನಿವಾರಣಾ ಕೇಂದ್ರಗಳು ತೆರೆಯಲ್ಪಟ್ಟಿವೆ. ಮಂಗಳೂರಿನ ಕಂಕನಾಡಿಯ 'ಎಸಿಬಿಯಂ' ಆಸ್ಪತ್ರೆಗೆ ಎಪ್ಪತ್ತೆಂಟು ಸಾವಿರ ರೂಪಾಯಿಗಳನ್ನು ಕಟ್ಟಡಗಳಿಗೆ ಸರಕಾರವಿತ್ತಿದೆ. ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು ತೆರೆಯಲು ಡಾಕ್ಟರರು ಸಿಗಲ್ಲವೆಂದೂ ತಿಳಿಸಿದರು.

ದ. ಕ. ಜಿಲ್ಲಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ—ಸಮಿತಿಯು ತಾ. 5ರಲ್ಲಿ ಶ್ರೀ ಕೆ. ಆರ್. ಕಾರಂತರ ನೇತೃತ್ವದಲ್ಲಿ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಪ್ರತಿ ತಾಲೂಕುಗಳಲ್ಲೂ ರಾಷ್ಟ್ರೀಯ ಸ್ಮಾರಕನಿಧಿ ಸಮಿತಿಯನ್ನು ನೇಮಿಸಬೇಕೆಂದಾಯಿತು.

ಪೋಪರ ಜನ್ಮದಿನವನ್ನು—ತಾ. 4ರಲ್ಲಿ ಮಿಲಾಗ್ರಿಸ್ ಚರ್ಚಿನ ವಠಾರದಲ್ಲಿ ಮಂಗಳೂರು ಬಿಶೋಪ್ ರೈಟ್ ರೆ। ಡಾ। ವಿ. ಆರ್. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ—ಮಹಾಸಭೆಯು ತಾ. 4ರಲ್ಲಿ ಡಿಪ್ರೆಸ್ಡ್ ಕ್ಲಾಸಸ್ ಮಿಶನಿನ ಕಟ್ಟಡದಲ್ಲಿ ಶ್ರೀಮತಿ ಕಲ್ಯಾಣಿ ಶೆಟ್ಟಿ, ನಗರ ಸಭಾ ಸದಸ್ಯೆ, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿ—ಯ ವರ್ಷಾವಧಿ ಮಹಾಸಭೆಯು ತಾ. 4ರಲ್ಲಿ ಶ್ರೀ ಬಿ. ಗಂಗಾಧರ ದಾಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ರುಜಾರಿಯೋ ಹೈಸ್ಕೂಲಿನ ವಾರ್ಷಿಕೋತ್ಸವವು—ತಾ. 5ರಲ್ಲಿ ದಿ। ಮತ್ತು ಸೆಶನ್ಸ್ ಜಡ್ಜರಾದ ಶ್ರೀ ಸಿ. ಕೃಷ್ಣಮೂರ್ತಿ, ಬಿ. ಎ., ಬಿ. ಎಲ್., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾಮುಖ್ಯೋಪಾಧ್ಯಾಯ ರೆ। ಫಾ। ಬಿ. ಎ. ಡಿ. ಸೋಜರು ಶಾಲಾ ವರದಿಯನ್ನೋದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಸ್ಕೃತದ ಶಿಕ್ಷಣದ ಪ್ರಾಮುಖ್ಯತೆ ಇತ್ಯಾದಿ ವಿಷಯಗಳನ್ನೆತ್ತಿ ಮಾತನಾಡಿದರು.

ಅತ್ತಾವರು ಶ್ರೀ ರಾಮ ಮಂದಿರದಲ್ಲಿ—ಸರ್ವಧಾರಿ ಸಂವತ್ಸರದ ಚೈತ್ರ ಶುದ್ಧ ಪ್ರತಿಪದೆಯಿಂದ ಚೈತ್ರ ಬಹುಳ ೧ ರವರೆಗೆ ತನಕ ಯಾವತ್ತು ಶ್ರೀ ರಾಮನವಮೀ ಉತ್ಸವವು ಜರಗಲಿರುವುದು. ಆಸ್ತಿಕ ಮಹಾಜನರು ಈ ಸಮಾರಂಭದಲ್ಲಿ ಭಾಗವಹಿಸಿ ಶ್ರೀಮದ್ದಿಗಂಧ ಪ್ರಸಾದ ಸ್ವೀಕರಿಸಿ ಶ್ರೀ ರಾಮದೇವರ ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಶ್ರೀ ಯು. ಕೃಷ್ಣ ಭಟ್ಟರು ಅಪೇಕ್ಷಿಸುತ್ತಾರೆ.

ಸಾಸ್ತಾನ—ತಾ. 9-4-48ರಲ್ಲಿ ಐರೋಡಿ ರೋಮನ್ ಕೆಥೋಲಿಕ್ ಚರ್ಚಿನ ರೆ. ಫಾ. ವಿಲ್ಲಿಯಮ್ ಡಿ. ಸೋಜರ ಗುರುಪಟ್ಟದ ರಜತೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರಗಿತು. ಶ್ರೀ. ಬಿ. ಆರ್. ಶೆಟ್ಟರ ನಿರ್ದೇಶಕತ್ವ, ಶ್ರೀ. ಜಿ. ರಾಮಪ್ಪನವರ ಹಾಡುಗಾರಿಕೆ ಶ್ರೀ. ಟಿ. ಶಾಂತಪ್ಪನವರ ಮೃದಂಗವಾದನದಿಂದ 'ಸ್ವರಾಜ್ಯವಿಜಯ' ಯಕ್ಷಗಾನ ನಾಟಕವನ್ನು ಸದ್ರಿ ಚರ್ಚ್ ಶಾಲೆಯ ವಿದ್ಯಾರ್ಥಿಗಳು ಅತ್ಯಂತ ಪ್ರೇಕ್ಷಣೀಯವಾಗಿ ಆಡಿತೋರಿಸಿ ಸುಮಾರು ಮೂರುಸಾವಿರದಷ್ಟು ಜನಸಂದಣಿಯ ಮನಸ್ಸನ್ನಾಕರ್ಷಿಸಿದರು. ಶ್ರೀಗಳಾದ ಜಿ. ಅನಂತಯ್ಯ ಶೆಟ್ಟಿ, ಬಿ. ಸುಬ್ಬಣ್ಣ ಹೆಗ್ಡೆ, ಪದ್ಮನಾಭ ಗೊಲ್ಲ, ಹೆಡ್ಮಾಸ್ತರ್ ಐತಾಳರೇ ಮೊದಲಾದವರು ಸಂದರ್ಭೋಚಿತ ಭಾಷಣಗಳನ್ನಿತ್ತರು. ರೆ. ಫಾ. ಡಿ. ಸೋಜರ ಧನ್ಯವಾದ, ರಾಷ್ಟ್ರಗೀತೆಗಳೊಂದಿಗೆ ಮುಕ್ತಾಯಗೊಂಡ ಆ ಸಮಾರಂಭವು ಈ ಆಸುಪಾಸಿನವರಿಗೆ ಚಿರಸ್ಮರಣೀಯವಾಗಲಿದೆ.

ನೋಟೀಸು

ಹಾಲಿ ಉಡುಪಿ ಕಸಬೆಗೆ ಬಂದಿರುವ ಮೈಸೂರು ಪ್ರಾವಿನ್ಸು ಶಿವಮೊಗ್ಗಾ ಡಿಸ್ಟ್ರಿಕ್ಟ್ ತೀರ್ಥಹಳ್ಳಿ ತಾಲೂಕು ಕಸಬೆಯ ವಾಸಸ್ಥ, ಗೌಡ ಸಾರಸ್ವತ ಬ್ರಾಹ್ಮಣ ಜಾತಿಯ ಮುಕ್ಕಾಮನೆ ಹವಳಿ ಶೀನಪ್ಪಯ್ಯನವರ ಮಗ ರಾಮಕೃಷ್ಣ ರಾವ್ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:–

ಉಡುಪಿ ಕಸಬೆಯಲ್ಲಿರುವ ಸದ್ರಿ ಜಾತಿಯ ಬುಡ್ಡೇ ಶೀನಪ್ಪ ಕಾಮತರ ಮಗ ಬುರ್ಡೆ ನರಹರಿ ಕಾಮತರನ್ನು ನನ್ನ 'ಜನರಲ್ ಪವರ್ ಓಫ್ ಎಟೊರ್ನಿ ಹೊಲ್ಡರ್' ನನ್ನಾಗಿ ನೇಮಿಸಿ, ಸದ್ರಿಯವರಿಗೆ ತಾ. 1-8 1933ರಲ್ಲಿ ರಿ. ನಿಶಿಂ. ಬರಕೊಟ್ಟ ಅಧಿಕಾರ ಪತ್ರವನ್ನು ಇದೇ ಸರ್ವಧಾರಿ ಸಂ ರದ ಆದಿ (10 4 48ರ)ಲ್ಲಾಗ್ಯಾತು ನಾನು ರದ್ದು ಮಾಡಿರುವ ಕಾರಣ, ಸದ್ರಿ ಅಧಿಕಾರ ಪತ್ರದಲ್ಲಿ ಕೊಟ್ಟಿರುವ ಯಾವತ್ತೂ ಅಧಿಕಾರಗಳನ್ನು ಚಲಾಯಿಸಲಿಕ್ಕೆ ಸದ್ರಿ [illegible] ಸದ್ರಿಯವರಿಗೆ ಇನ್ನು [illegible] ಸ್ವಾತಂತ್ರ್ಯವಿಲ್ಲವೆಂದಲೂ, ಸದ್ರಿ ಅಧಿಕಾರ ಪತ್ರವನ್ನು ಆಧರಿಸಿ ಇತರರು ಸದ್ರಿಯವರ ಕೂಡೆ ಯಾವತ್ತೂ ವ್ಯವಹಾರ, ಲೇವಾದೇವಿ ಪಗೈಸಿ ನಡಿಸಬಾರದಾಗಿಯೂ, ಇದಕ್ಕೆ ವಿರೋಧವಾಗಿ ನಡೆದಲ್ಲಿ ಸದ್ರಿಯವರುಗಳು ನನ್ನ ಮೇಲೆ ನಿಂದಲ್ಲವೆಂದಲೂ, ಈ ಬಾಬಿನಲ್ಲಿ ಸದ್ರಿಯವರಿಗೆ ನಾನು ಅಲ್ಲವಾದ ರಿ. ನೋಟೀಸು ಕೊಟ್ಟಿದ್ದೇನೆಂದಲೂ ಈ ಮೂಲಕ ಸರ್ವಜನರಿಗೆ ತಿಳಿಸಲಾಗುತ್ತದೆ.

M. J Ramakrishna Rao

ಉಡುಪಿ, ತಾ. 13 4-48

ಎಲ್ಲ ತರದ ದಂತರೋಗಗಳನ್ನು ನೆಟ್ಟಗೆ ಮಾಡಿ ಹಲ್ಲುಗಳ್ನು ಗಟ್ಟಿ ಹಾಗು ರುಚ್ರ ಮಾಡುತ್ತದೆ

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಉಡುಪಿಗೆ ಹೋಗಬೇಕು! ಅದರೆ ಉಳಿದುಕೊಳ್ಳುವುದೆಲ್ಲಿ?

ರಾ ಯ ಲ್ ಮ ಹಾ ಲಿ ನ ಲ್ಲಿ

ಬಸ್ ಸ್ಟೆಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಲ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇನ್ನುಳಿದ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್.— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI. S. Kanara

S. V. H. High School

(Residential)

Vishwendranagar, INNANJE

Wanted L. T.'s or B. T.'s in Mathematics, Science and Geography. Government scale of Pay and Dearness allowance. Advance increments for experience and ability.

Convenient and healthy locality. Quarters can be had in the School compound if required.

Apply to—

Correspondent



Approved firm by the Govt. of Mysore
Certified by the Agent of the Govt. of Ceylone & Indian

ಈಗಿನ ಕಾಲಕ್ಕೆ ಅತಿ ಅಗ್ಗವಾದ ಪುಸ್ತಕಗಳು.

೧ ಚಿಗುರು
೧೦ ಸಣ್ಣ ಕಥೆಗಳ ಸಂಕಲನ

೨ ಲೋಪಾಮುದ್ರೆ
ಕಾದಂಬರಿಯಂತೆ ಬರೆಯಲ್ಪಟ್ಟ ಕಾವೇರಿ ಮಹಾತ್ಮೆ

೩ ಪ್ರತೀಕಾರ
ಅರ್ಜುನನಿಂದ ತಿರಸ್ಕರಿಸಲ್ಪಟ್ಟ ಬಭ್ರುವಾಹನನ 'ಪ್ರತೀಕಾರ'ವನ್ನು ಚಿತ್ರಿಸುವ ನಾಟಕ.

೪ ಪಂಚಾರತಿ
ಐದು ಏಕಾಂಕ ನಾಟಕಗಳ ಸಂಗ್ರಹ.

75 ಪುಟಗಳಿಗೆ ಮಿಕ್ಕಿದ ಪ್ರತಿಯೊಂದು ಪುಸ್ತಕದ ಬೆಲೆ ಬರೇ 0 6 0

ನವಭಾರತ ಬುಕ್ ಡಿಪ್ಪೊ, ಉಡುಪಿ.

ರೇಶನ್ ಕಾರ್ಡುಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡದಲ್ಲಿ ಪ್ರಾಣಿಬಲಿ ನಿಷೇಧ

ದಕ್ಷಿಣ ಕನ್ನಡದ ಸುರತ್ಕಲ್‌ನಲ್ಲಿ ಮೂರು ಮಾರಿ ಗುಡಿಗಳಿವೆ. ಊರವರ ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಯವರ ವಿನಂತಿ ಮೇರೆಗೆ ಎರಡು ಮಾರಿ ಗುಡಿಗಳಲ್ಲಿ, ಪ್ರಾಣಬಲಿಯು ನಿಲ್ಲಿಸಲ್ಪಟ್ಟಿತು. ಕೇವಲ ಸಾತ್ವಿಕ ಪೂಜೆ ಮಾತ್ರ ನಡಿಸುವ ನಿರ್ಧಾರವಾಗಿರುವುದು ಅಭಿನಂದನೀಯವಿದೆ.

ಆದರೆ ಅಲ್ಲಿಯ ಪದ್ಮಶಾಲಿ ಸಮಾಜದವರ ಶ್ರೀ ವೀರಭದ್ರ ಮತ್ತು ಕಾಳಿಕಾಂಬ ಮಾರಿ ಗುಡಿಯವರು, ಊರವರ ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಯವರ ಕೇಳಿಕೆಯನ್ನು ಮನ್ನಿಸದೆ ಯಥಾಪ್ರಕಾರ ಇದೇ ತಾ 30ನೇ ರಾತ್ರಿ ಕುರಿ ಕೋಳಿ ಮಾತ್ರವಲ್ಲದೆ, ಕೋಣಗಳನ್ನು ಕೂಡಾ ಕಡಿದು ಬಲಿ ಕೊಡುವ ಪ್ರಬಲ ನಿರ್ಧಾರ ಮಾಡಿದ್ದರು.

ಸುರತ್ಕಲಿನ ಮಹಾಜನರ ವಿನಂತಿ ಮೇರೆಗೆ ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಸುರತ್ಕಲಿನಲ್ಲಿ ಪ್ರಾಣಬಲಿ ನಿಷೇಧ ಚಳವಳಿ ಮಾಡಿ, ಅದನ್ನು ಇಡೀ ಜಿಲ್ಲೆಗೊಂದು ಮಾದರಿಯಾಗಿ ನಡಿಸುವ ಏರ್ಪಾಡು ನಡಿಸಿದರು. ಇದರಲ್ಲಿ ಸುರತ್ಕಲ್ಲಿನ ಪ್ರಾಣ ಬಲಿ ನಿಷೇಧ ಸಮಿತಿಯವರೂ, ಸುರತ್ಕಲಿನವರೇ ಆಗಿ ಮಂಗಳೂರಲ್ಲಿರುವ ಶ್ರೀ. ಬಿ. ವಿ ರಾಮರಾಯರೂ ಜನರಿಗೆ ನೆರವಾಗಿ ನಿಂತರು.

ಇದೇ ಕಳೆದ ತಾ. 17ರಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸುರತ್ಕಲ್ಲಿನಲ್ಲಿ ದೊಡ್ಡ ಸಾರ್ವಜನಿಕ ಸಭೆಯು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಎನ್. ಎಸ್. ಕಿಲ್ಲೆಯವರು ಪ್ರಾಣಬಲಿ ನಿಷೇಧಿಸಿ ಸ್ಫೂರ್ತಿಯುತ ಹಾಗೂ ಬೋಧಪ್ರದ ಭಾಷಣವಿತ್ತರು. ಆ ವೇಳೆ ಪ್ರಾಣಬಲಿ ನಿಷೇಧಕ ಠರಾವು ಸರ್ವಸಮ್ಮತಿಯಿಂದ ಮಂಜೂರಾಗಿ ಅದಕ್ಕೆ ತಕ್ಕ ವ್ಯವಸ್ಥೆ ಮಾಡುವರೆ ಊರ ಪ್ರಮುಖರಿಂದ ಕೂಡಿದ ಒಂದು ಸಮಿತಿ ಸ್ಥಾಪಿಸಲಾಯಿತು.

ಈ ಸಮಿತಿಯವರು, ಪದ್ಮಶಾಲಿ ಮಾರಿ ಗುಡಿಯ ಮೊಕ್ತೇಸರರನ್ನು ಕಂಡು ಮಾತಾಡಲು ಹೋದಾಗ, ಅವರು ಕಾಣಲು ಕೂಡಾ ನಿರಾಕರಿಸಿ ಅವಮಾನಿಸಿದರು. ಮಾತ್ರವಲ್ಲದೆ ಮಂಗಳೂರಿನ ಒಳಯು ಕಂಕನಾಡಿಯಿಂದ ದೊಡ್ಡ ಕೋಣವೊಂದನ್ನು, ಬೇರೆ ನಾ[illegible] ಪಟ್ಟಣದ ನಡುವಿನಿಂದಲೇ ಮೆರವಣಿಗೆಯಿಂದ ಬಲಿಕೊಡಲು ಕೊಂಡು ಹೋದರು.

ಶ್ರೀಗಳಾದ ಎನ್. ಎಸ್. ಕಿಲ್ಲೆ, ಬಿ. ವಿ. ರಾಮರಾವ್ ಮತ್ತು ಕೆ. ಕೆ. ಶೆಟ್ಟಿ, ಪದ್ಮಶಾಲಿ ಸಮಾಜದ ಮೊಕ್ತೇಸರರಿಗೆ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ಮೊದಲಾಗಿ ತಿಳಿಸಿ ಇದೇ ತಾ 27ರಲ್ಲಿ ಗುಡಿಯ ಆವರಣದಲ್ಲಿ ಕರೆದು ಮಾತಾಡಲು ಅವರ ಮಾರಿಗುಡಿಗೆ ಹೋಗಿ, ದೇವಿಗೆ ಸಾತ್ವಿಕ ಪೂಜೆ ನಡಿಸಿ, ಗುಡಿಯ ಪರಿಸರದಲ್ಲೇ ದೊಡ್ಡ ಸಭೆ ನಡಿಸಿ, ಪ್ರಾಣಬಲಿಯು ಎಂತಹ ಅಸತ್ಯ ಅನಾಗರಿಕತೆಯ ಚಿಹ್ನೆ ಮತ್ತು ಧರ್ಮಶಾಸ್ತ್ರ ವಿರೋಧವಾದ ಅನಾಚಾರವೆಂಬುದನ್ನು ಮನಗಾಣಿಸಿ ಮಾತಾಡಿ, ಪೂಜ್ಯ ಬಾಪೂಜಿಯವರ ಅಸ್ಥಿಯನ್ನು ಭಕ್ತಿಯಿಂದ ವಿಸರ್ಜಿಸಿದ ಮತ್ತು ವಿದ್ಯೆ ಬುದ್ಧಿಯಲ್ಲಿ ಮುಂದುವರಿಯುತ್ತಿರುವ ಸುರತ್ಕಲ್ಲಿಗೆ ಇದೊಂದು ದೊಡ್ಡ ಕಳಂಕವೆಂದೂ, ಅದನ್ನು ಜನರ ಮನವನ್ನು ಅರಿಸಿ ಬಿಡುವಂತೆ ಮಾಡುವುದೇ ಶ್ರೇಯಸ್ಕರವೆಂದೂ, ಪದ್ಮಶಾಲಿ ಸಮಾಜದವರು ತಮ್ಮ ಸದುದ್ದೇಶ ಸಾಧನೆಗೆ ನೆರವಾಗಬೇಕೆಂದೂ ಬಹಳವಾಗಿ ವಿನಂತಿ ಮಾಡಿಕೊಂಡರು; ಕೈಜೋಡಿಸಿ ಬೇಡಿಕೊಂಡರು ಆದರೆ ಮೊಕ್ತೇಸರರು ಯಾವುದಕ್ಕೂ ಕಿವಿಗೊಡದೆ ತಮ್ಮ ಹಠಸಾಧನೆಗೆ ಮುಂದಾದರು.

ಆಗ ಜಿಲ್ಲಾ ಕಾಂಗ್ರೆಸ್ ಕಮಿಟಿಯವರೂ, ಸುರತ್ಕಲ್ಲಿನ ಊರ ಪ್ರಮುಖರೂ, ಶ್ರೀ ಬಿ ವಿ. ರಾಮರಾವ್, ಎನ್. ಎಸ್, ಕಿಲ್ಲೆಯವರೇ ಮೊದಲಾದವರೂ, ಸಂಬಂಧಪಟ್ಟ ಅಧಿಕಾರಿಗಳನ್ನೆಲ್ಲ ಕಂಡು ಪರಿಸ್ಥಿತಿ ತಿಳಿಸಿ, ಪ್ರಾಣಬಲಿ ನಿಲ್ಲಿಸಬೇಕೆಂದು ಒತ್ತಾಯಪಡಿಸಿದರು. ಪರಿಣಾಮವಾಗಿ ಸುರತ್ಕಲ್ಲಿನ ಪದ್ಮಶಾಲಿ ಮಾರಿ ಗುಡಿಯಲ್ಲಿ ಪ್ರಾಣಬಲಿಯನ್ನು ಸಂಪೂರ್ಣ ನಿಷೇಧಿಸಿ 144ನೇ ಸೆಕ್ಷನನ್ನು ಮಂಗಳೂರಿನ ಸಬ್ ಮೆಜಿಸ್ಟ್ರೇಟರು ಇದೇ ತಾ. 29ರಲ್ಲಿ ಜ್ಯಾರಿಗೆ ತಂದಿರುತ್ತಾರೆ.

ಇಡೀ ಮದ್ರಾಸ್ ಪ್ರಾಂತದಲ್ಲೇ ಪ್ರಾಣಬಲಿ ನಿಷೇಧ ಕಾನೂನನ್ನು ತರಬೇಕೆಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಮದ್ರಾಸ್ ಸರಕಾರವನ್ನು ಒತ್ತಾಯಪಡಿಸಿರುತ್ತಾರೆ. ಆದುದರಿಂದ ಇನ್ನು ಸ್ವಲ್ಪ ಸಮಯದಲ್ಲೇ ಈ ಅಮಾನುಷ ಅತ್ಯಾಚಾರವನ್ನು ನಿಲ್ಲಿಸುವ ಕಾನೂನು ಜ್ಯಾರಿಗೆ ಬರುವುದೆಂಬುದರಲ್ಲಿ ಸಂದೇಹವಿಲ್ಲ.

ಈ ನಡುವೆ ದಕ್ಷಿಣಕನ್ನಡ ಜಿಲ್ಲೆಯ ವಿದ್ಯಾವಂತ ಹಾಗೂ ಮುಂದುವರಿದ ಜನರು, ತಮ್ಮ ಹೆಸರಿಗೆ ದೊಡ್ಡ ಕಳಂಕವಾದ ಈ ಅನಾಚಾರವನ್ನು ನಿಲ್ಲಿಸುವಂತೆ ಸಂಘಟಿತ ಪ್ರಯತ್ನ ಮಾಡಿ ಜನಮತ ಜಾಗ್ರತಗೊಳಿಸಬೇಕೆಂದೂ, ಜಿಲ್ಲೆಯ ಮಾರಿ ಗುಡಿಗಳ ಮೊಕ್ತೇಸರರೂ, ಇತರ ಜನರೂ, ಧರ್ಮ ಮತ್ತು ದೇವರ ಹೆಸರಲ್ಲಿ ನಡೆಯುವ ಈ ಕ್ರೂರ ಹಿಂಸೆಯನ್ನು ತಾವಾಗಿ ನಿಲ್ಲಿಸಿ, ಇತರ ದೇವಸ್ಥಾನಗಳಂತೆ ಸಾತ್ವಿಕ ಪೂಜೆ ಪುರಸ್ಕಾರಗಳನ್ನೇ ಮಾರಿ ಗುಡಿಗಳಲ್ಲೂ ಜ್ಯಾರಿಗೆ ತರಬೇಕೆಂದೂ ವಿನಂತಿ.

ಕೆ. ಕೆ. ಶೆಟ್ಟಿ,
ಪ್ರಧಾನ ಕಾರ್ಯದರ್ಶಿ, ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/- ಸ್ಪೆಶಲ್ ರೂ. 5/- ಅಧಿಕಾಧಿಕ ಸ್ಪೆಶಲ್ ರೂ. 8/- [ವಿ. ಪಿ. ಖರ್ಚು ಪ್ರತ್ಯೇಕ]

MIS. D. DEVEE, F. DS. (N. J.)
Tollygunge CALCUTTA,
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ದಕ್ಷಿಣ ಕನ್ನಡ

ನೀಲಾವರ— ಮಹಿಷಮರ್ದಿನಿ ದೇವಸ್ಥಾನದ ರಥೋತ್ಸವಾದಿಗಳು ತಾ 21-4-48ರಿಂದ 28-4-48ರ ತನಕ ಜರಗುವುವು.

ಹಿರಿಯಡ್ಕ— ವೀರಭದ್ರ ದೇವಸ್ಥಾನದ ರಥೋತ್ಸವಾದಿ ಜಾತ್ರೆಯು ತಾ 23-4-48ರಿಂದ 28-4-48ರ ವರೆಗೆ ಜರಗಲಿರುವುದೆಂದೂ ಸಕಲ ಭಕ್ತಜನರೂ ಬಂದು ದೇವತಾ ಕಾರ್ಯವನ್ನು ನೆರವೇರಿಸಿಕೊಡಬೇಕೆಂದೂ ಟ್ರಸ್ಟಿ ಶ್ರೀ. ಎ. ಜಗಜ್ಜೀವ ಆಳ್ವರು ಅಪೇಕ್ಷಿಸುತ್ತಾರೆ.

ಕುಂದಾಪುರ— ತಾ. 17-4-1948ನೇ ಶನಿವಾರ ರಾತ್ರಿ ಗಂಟೆ 9½ಗೆ ಬನ್ನಾಡಿ ಶ್ರೀ ಪರಮಹಂಸ ಪ್ರೌಢ ಪ್ರಾಥಮಿಕ ಶಾಲಾ ಸಹಾಯಾರ್ಥವಾಗಿ ಶಾಕುಂತಳಾ ಎಂಬ ನಾಟಕವನ್ನು ಕುಂದಾಪುರದಲ್ಲಿ ಆಡಲಿರುವರು. ಜಿಲ್ಲೆಯ ಎರಡು ಮಟ್ಟುಗಳ ಯಕ್ಷಗಾನ ಕಲಾಭಿಮಾನಿಗಳಿಂದ ಪ್ರಶಂಸಿಸಲ್ಪಟ್ಟಿರುವ ಸದರಿ ಶಾಲಾ ಬಾಲಕರಿಂದ ಅಭಿನಯಿಸಲ್ಪಡುವ ಆ ಯಕ್ಷಗಾನ ನಾಟಕಕ್ಕೆ ವಿದ್ಯಾಭಿಮಾನಿಗಳೂ ಯಕ್ಷಗಾನ ಕಲಾಭಿಮಾನಿಗಳೂ ಪ್ರೋತ್ಸಾಹವಿತ್ತು ಧನಸಹಾಯ ಮಾಡಬೇಕಾಗಿ ವಿನಂತಿಸಲಾಗಿದೆ.

ಕಿನ್ನಿಗೋಳಿ— ಇಲ್ಲಿಯ ಲಿಟ್ಲ್ ಫ್ಲವರ್ಸ್ ಹೈಸ್ಕೂಲಿನ ಶಾಲಾ ವರ್ಧಂತಿಯು ತಾ 4ನೇ ಆದಿತ್ಯವಾರ ಮಂಗಳೂರು ಮುನ್ಸಿಪಲ್ ಚೇರ್‌ಮೇನರಾದ ಶ್ರೀ. ಎಲ್. ಸಿ. ಪಾಯಸ್ B. A. B. L. M. L. A. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ. ಕೆ. ಜಿ. ಶೆಟ್ಟಿ, ಬಿ. ಓ. ಯಲ್. ಇವರಿಂದ ವರದಿವಾಚನ, ಬಹುಮಾನ ವಿತರಣ, ವಿವಿಧ ವಿನೋದಾವಳಿಗಳನಂತರ ಅಧ್ಯಕ್ಷರ ಭಾಷಣವಾಗಿ ಸಭಾಂತ್ಯವಾಯಿತು.

ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿ ಮಂಗಳೂರು— ಇದರ ಮಹಾಸಭೆಯು ತಾ 4-4-48ರಲ್ಲಿ "ಡಿಸ್ಟ್ರಿಕ್ಟ್ ಕಾಂಗ್ರೆಸ್ ಬಿಲ್ಡಿಂಗ್ಸ್"ನ ಕಟ್ಟಡದಲ್ಲಿರುವ ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಕಚೇರಿಯಲ್ಲಿ ಸೇರಿಯಿತು. ಶ್ರೀಮಾನ್ ಕಲ್ಯಾಣ ಡಿ. ಶೆಟ್ಟಿ ಮುನಿಸಿಪಲ್ ಕೌನ್ಸಿಲರ್—ಇವರು ಅಧ್ಯಕ್ಷಾಸನವಹಿಸಿದ್ದರು. ಮಹಾಸಭೆಯಲ್ಲಿ 46–47ನೇ ವರ್ಷದ ವರದಿಯನ್ನು ಲೆಕ್ಕ ಪತ್ರಗಳನ್ನೂ ಸಮಿತಿಯ ಸಂಚಾಲಕ ಶ್ರೀ. ಎ. ಆರ್. ನಾವಡರು ಓದಿಹೇಳಿದಂತೆ ಮಂಜೂರುಮಾಡಿ 47–48ನೇ ವರ್ಷಕ್ಕೆ ಅಂದಾಜು ಆಯವ್ಯಯ ಪಟ್ಟಿಯನ್ನು ಮಂಜೂರು ಮಾಡಲಾಯಿತು. ಚಾಲ್ತಿ ವರ್ಷಕ್ಕೆ ಎ. ಉಮಾನಾಥರಾಯರನ್ನು ಗೌರವ ಲೆಕ್ಕ ಪರಿಶೋಧಕರನ್ನಾಗಿ ನೇಮಿಸಲಾಯಿತು. ಸಮಿತಿಯ ನಿಯಮಾವಳಿಯಲ್ಲಿ ಇತರ ತಿದ್ದುಪಡಿಗಳೊಂದಿಗೆ ಅದರ ಹೆಸರನ್ನು "ಮಂಗಳೂರು ಪ್ರಾದೇಶಿಕ ಹಿಂದುಸ್ತಾನೀ ಪ್ರಚಾರ ಸಮಿತಿ" ಎಂದು ಬದಲಾಯಿಸಲಾಯಿತು.

ಹೊಸವರ್ಷಕ್ಕೆ ಶ್ರೀ. ಕೆ. ವೆಂಕಟೇಶ ಪ್ರಭು–ಕಾರ್ಕಳ, (ಅಧ್ಯಕ್ಷರು) ಶ್ರೀ. ಕಲ್ಯಾಣ ಡಿ. ಶೆಟ್ಟಿ–ವಿ[illegible] ಮತ್ತು ಶ್ರೀ. ಯು. ಕೇಶವರಾವ್, ಬಿ. ಎ. ಎಲ್. ಟಿ. ಪಿರಾರದ (ಉಪಾಧ್ಯಕ್ಷರು) ವಾll ಯು. ಪಿ. ಮಲ್ಯ ಎಮ್. ಎಲ್ ಎ; (ಕೋಶಾಧ್ಯಕ್ಷರು) ಶ್ರೀ. ಕೆ. ಆರ್. ಸಂಜುಂಡನ್, ಬಿ. ಎ. ಎಲ್. (ಕಾರ್ಯದರ್ಶಿ) ಶ್ರೀ. ಎ. ಆರ್. ನಾವಡ, ವಿದ್ವಾನ್; ಸಂಚಾಲಕ (ಜತೆಕಾರ್ಯದರ್ಶಿ) ಯರಾಗಿಯೂ ಇತರ ಜನರನ್ನು ಸದಸ್ಯರನ್ನಾಗಿಯೂ ಆರಿಸಲಾಯಿತು.

ಕುಂದಾಪುರ— ಉಡುಪಿ ಮತ್ತು ಕುಂದಾಪುರ ತಾಲೂಕುಗಳಿಂದ ಎಸ್. ಕೆ. ಸಿ. ಸಿ. ಡಬ್ಲ್ಯು. ಸ್ಟೋರಿನವರು ಕಾಸರಗೋಡಿಗೆ 20,000 ಮುಡಿ ಅಕ್ಕಿಯನ್ನು ಒಯ್ಯಲಿರುವುದನ್ನು ನಿಲ್ಲಿಸಬೇಕೆಂದು ಜಿಲ್ಲಾ ಕಲೆಕ್ಟರಿಗೂ ಮದ್ರಾಸಿನ ಆಹಾರ ಮಂತ್ರಿಗಳಿಗೂ ಜಿಲ್ಲೆಯ ಶಾಸನ ಸಭಾ ಸದಸ್ಯರಿಗೂ ಜಿಲ್ಲಾ ಆಹಾರ ಸಮಿತಿಯ ಸದಸ್ಯರಾದ ಶ್ರೀ ಬಿ. ಸುಬ್ಬಣ್ಣ ಶೆಟ್ಟರು ಇದೇ ತಾ 8ರಲ್ಲಿ ಪತ್ರ ಬರೆದಿರುವರು. ಪಡಿ ಅಕ್ಕಿಯ ಮಿತಿಯನ್ನು ಏರಿಸಬೇಕೆಂದೂ, 'ರಿಲೀಫ್' ಅಂಗಡಿಗಳು ಜಾಸ್ತಿಯಾಗಬೇಕೆಂದೂ ಇನ್ನಿತರ ಜನತೆಯ ಆವಶ್ಯಕತೆಗಳನ್ನು ಸಹ ಪತ್ರದಲ್ಲಿ ಸೂಚಿಸಿರುವರು.

ಹಾಲಾಡಿ 'ಗಾಂಧಿ ಸ್ಮಾರಕ ಸಮಿತಿ'
ಯವರು ಕಟ್ಟಲಿರುವ

ಸ್ಮಾರಕ ಮಂದಿರದ

ಸಹಾಯಾರ್ಥವಾಗಿ ಪ್ರಚಂಡ ಯಕ್ಷಗಾನ

ಜಿಲ್ಲೆಯ ಅಗ್ರಗಣ್ಯ ಯಕ್ಷಗಾನ ಕಲಾಕೋವಿದರ ಕೂಡುವಿಕೆಯಿಂದ **ಇದೇ ತಾ. 24-4-48ನೇ ಶನಿವಾರ ರಾತ್ರಿ ಕುಂದಾಪುರದ ಶ್ರೀ ಧನಲಕ್ಷ್ಮೀಥಿಯೇಟರಿನಲ್ಲಿ** ಜರಗುವುದು. ಶ್ರೀಗಳಾದ ಕಿಲ್ಲೆಯವರು, ಪೊಳಲಿ ಶಾಸ್ತ್ರಿಗಳು, ಮಲ್ಪೆ ಶಂಕರನಾರಾಯಣ ಸಾಮಗರು, ಮಂಗಳೂರಿನ ಎಡ್ವೋಕೇಟ್ ಬಾಲಕೃಷ್ಣರಾಯರು, ಪೊಳ್ಯ ದೇಜಪ್ಪ ಶೆಟ್ಟರು ಮೊದಲಾದ ಜಿಲ್ಲೆಯ ಸುಪ್ರಸಿದ್ಧ ಅರ್ಥಧಾರಿಗಳು ಭಾಗವಹಿಸುವರು. ಅಂತೆಯೇ ಪ್ರಸಿದ್ಧರಿರುವ ಶ್ರೀ. ನ್ಯೆಂಬಪ್ಪ ರೈಗಳ ಹಾಡುವಿಕೆ, ಶ್ರೀ. ಉಪ್ಪೂರ ತಿಪ್ಪಯ್ಯನವರ ಮೃದಂಗವಾದನವಿರುವದು. ಸಾರ್ವಜನಿಕ ಬಂಧುಭಗಿನಿಯರೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಿ ಗಾಂಧೀಜೀಯ ಸ್ಮಾರಕಕ್ಕೆ ನೆರವಾದ ಪುಣ್ಯವನ್ನೂ ಮೇಲ್ಮಾರ್ಗದ ಯಕ್ಷಗಾನ ಕಲಾನುಭವದ ಆನಂದವನ್ನೂ ಪಡೆಯಬೇಕಾಗಿ ವಿಜ್ಞಾಪನೆ.

ಹಾರ್ದಳ್ಳಿ ಹಿರಿಯಣ್ಣ ಶೆಟ್ಟಿ, ಅಧ್ಯಕ್ಷ. **ಯಚ್. ಭುಜಂಗ ಶೆಟ್ಟಿ,** ಉಪಾಧ್ಯಕ್ಷ.
ಎಚ್. ಹಿರಿಯಣ್ಣ ನ್ಯಾಕ; ಕೆ. ಶಂಕರ ಶೆಟ್ಟಿ. ಕಾರ್ಯದರ್ಶಿಗಳು.
ಹಾಲಾಡಿ ಮಹಾಬಲ ಶೆಟ್ಟಿ, ಕೋಶಾಧಿಕಾರಿ.

ಟಿಕೇಟು ದರಗಳು:— I ಕ್ಲಾಸು 3-0-0 II ಕ್ಲಾಸು 2-0-0. III ಕ್ಲಾಸು 1-0-0. IV ಕ್ಲಾಸು 0-8-0.

ಅಂಡವಾಯು, ಅಂಡವೃದ್ಧಿ, ಫೈಲೇರಿಯಾ, ಇತ್ಯಾದಿಗಳಿಗೆ ಲೇಪನಬಗ್ಗೆ ದಿವ್ಯೌಷಧ.
1 ಬಾಟ್ಲಿಗೆ ರೂಪಾಯಿ 25/-, ½ ಬಾಟ್ಲಿಗೆ ರೂಪಾಯಿ 12-8-0, ¼ ಬಾಟ್ಲಿಗೆ ರೂಪಾಯಿ 6-4-0. ಕುಷ್ಟ ರೋಗಕ್ಕೆ ಶೀಸೆಯೊಂದರ ರೂಪಾಯಿ 3/-.
ಎಸ್. ಪಿ ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ, 9.
S. P. Pharmaceuticel Works, Calcutta 9.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಸ್ವೀಕಾರ-ವಿಮರ್ಶೆ

ಮೆಸೇಜ್ (Message)—ತ್ರೈಮಾಸಿಕ ಇಂಗ್ಲಿಷ್-ಕನ್ನಡ ಪತ್ರಿಕೆ. ಪುಸ್ತಕಾಕಾರದ ೬೪ ಪುಟಗಳು. ಸಂಚಿಕೆ ೧, ಸಂಪುಟ ೧, ಸಂಪಾದಕರು-ಜನಾಬ್ ಸೈಯದ್ ಅಬ್ದುಲ್ ರಹೀಮ್ ಇರ್ಫಾನ್ ಮತ್ತು ಜನಾಬ್ ಸೈಯದ್ ಅಹಮ್ಮದ್ ಶಾಹೀರ್. ಪ್ರಕಾಶಕರು-ಟಾಸ್ನೀಮ್ ಪಬ್ಲಿಕೇಶನ್ಸ್, ಮೈದಾನ್ ರೋಡ್, ಮಂಗಳೂರು. ವಾರ್ಷಿಕ ಚಂದಾ ರೂ ೩-೮-೦. ಬಿಡಿಪ್ರತಿಗೆ ೧೪ ಆಣೆ. ಉದಾತ್ತವಾದ ಧ್ಯೇಯ ವೈಶಿಷ್ಟ್ಯವನ್ನಿಟ್ಟುಕೊಂಡು ನಮ್ಮ ಮಂಗಳೂರ ಮುಸ್ಲಿಮ ಬಂಧುಗಳು ಪ್ರಕಟಿಸತೊಡಗಿರುವ ಈ ಪತ್ರಿಕೆಯ ಮೊದಲ ಸಂಚಿಕೆಯು ಅಂತರಂಗ ಬಹಿರಂಗ ಸುಂದರವಾಗಿ ಸರ್ವರೀತ್ಯಾ ಸ್ತುತ್ಯವಾಗಿದೆ. ಜಾತೀಯತೆಯ ಮನಃಕ್ಲೇಶಾಯದಿಂದ ಕಲುಷಿತವಾದ ಇಂದಿನ ವಾತಾವರಣವನ್ನು ತಿಳಿಯಾಗಿಸಲು ಸರ್ವಮಾನವ ಸೋದರತೆಯ (Message) ಸಂದೇಶವನ್ನು ಇಸ್ಲಾಮ್ ಧರ್ಮದ ಮುಖ್ಯ ಮುಖ್ಯ ಗ್ರಂಥಗಳಿಂದೆತ್ತಿ ಸಾರುವುದೂ ಇದೇ ನೋಟದಿಂದ ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಕತೆ ಕವಿತೆ ಮುಂತಾದ ಇತರ ಬಗೆಯ ಲೇಖನಗಳನ್ನೂ ಜನರೆಯ ಮುಂದಿಟ್ಟು ಪರಸ್ಪರ ಸೌಹಾರ್ದತೆಯನ್ನು ಸಾಧಿಸುವುದೂ ಈ ಪತ್ರಿಕೆಯ ಧ್ಯೇಯ ವೈಶಿಷ್ಟ್ಯ. ಈ ಧ್ಯೇಯವು ಕತೆ ಕವಿತೆಗಳಲ್ಲಿಯೂ ಅಡಕವಾಗಿದೆ. ನುಡಿಗಳು ಬಗೆಮುಟ್ಟುವಂತಿದ್ದು ಪರಿಣಾಮಕಾರಿಯಾಗಿವೆ. ಕನ್ನಡ ವಿಭಾಗದಲ್ಲಿ ಗೆಳೆಯರುಗಳಾದ ಬಿ. ಎಮ್. ಇದಿನಬ್ಬ, ಟಿ. ಉಬೈದ್, ಎ. ಆರ್. ಶಾಹೀನ್, ಎಸ್. ಎ. ಶಫೀಕ್, ಅಬೂಸ್-ಈಬ್-ಡಿ. ಅಬ್ದುಲ್ ಜಬ್ಬಾರ್, ಅಹಮ್ಮದ್ ನೂರಿ ಇವರು ಮೆಸೇಜದ ಧ್ಯೇಯ ಸಾಧಕಗಳಾದ ಲೇಖನ ಕಥೆ ಕವಿತೆಗಳನ್ನು ಬರೆದುದರೊಂದಿಗೆ ಕನ್ನಡ ನುಡಿಸೇವೆಯನ್ನೂ ಚೆನ್ನಾಗಿಯೇ ಮಾಡಿರುವುದು ಅಭಿನಂದನೀಯ. ಮೆಸೇಜದ ಸಂದೇಶವು ಹಿಂದೂ-ಮುಸ್ಲಿಮರೆಲ್ಲ ಓದಿ ಬಗೆಗಾಣಬೇಕು. ಬಗೆಗಂಡು ಎಲ್ಲ ಮೂಲೆಗಳಿಗೆಲ್ಲ ಸಾರಬೇಕು ಎನ್ನುವಂತಿದೆ ಈ ಪ್ರಥಮ ಸಂಚಿಕೆ.

'ಮನೆಗೆಬಂದ ಮಹಾಬಲಿ'—ಲೇಖಕರು-'ಭಾರತೀಸುತ' ಪ್ರಕಾಶಕರು. ಮನೋಹರ ಗ್ರಂಥ ಭಂಡಾರ, ಧಾರವಾಡ. ಕ್ರೌನ್ 1/16 ಆಕಾರದ ೨೭ ಪುಟಗಳ ಚಿಕ್ಕ ಪುಸ್ತಕ. ಬೆಲೆ ೫ ಆಣೆ. ಮಲೆಯಾಳಿಗಳ ನಾಡಹಬ್ಬವಾದ ಓಣದ ಮುಂಜಾನೆ ಬಡ ಕೃಷ್ಣಂಕುಟ್ಟಿಗೆ ಸ್ವಪ್ನದಲ್ಲಿಯೋ ಎಂಬಂತೆ ಬಲಿಚಕ್ರವರ್ತಿಯ ದರ್ಶನವಾಗಿ ಅವರೊಳಗೆ ನಡೆದ ಸಂಭಾಷಣೆಯ ರೀತಿಯ ಲೇಖನವಿದು. ತಾನು ರಾಜ್ಯವಾಳಿದ ರೀತಿನೀತಿ ರಾಜ್ಯದ ಪರಿಸ್ಥಿತಿಗಳ ಉನ್ನತದ ಧ್ಯೇಯದ ಮಟ್ಟದಿಂದ ಇಂದಿನವರು ಎಷ್ಟು ಕೆಳಗುರುಳಿ ತೊಳಲಾಡುತ್ತಿರುವರೆಂಬುದನ್ನು ಬಲಿಯು ಮರುಕಗೊಂಡು ಹೇಳಿದಂತೆ, ಅಲ್ಲದೆ ದೇವತೆಗಳು ವಾಮನ ಬಲಿಯ ಪಾತಾಳಗಮನ ಇತ್ಯಾದಿ ಪೌರಾಣಿಕ ಕಥೆಗಳ ಅಂತರಾರ್ಥ ವೇನಿರಬಹುದೆಂಬುದರ ಕಡೆಗೂ ಲೇಖಕರು ವಿಚಾರದ ಬೆಳಕು ಹರಿಯಿಸುವ ಪ್ರಯತ್ನ ಮಾಡಿದ್ದಾರೆ. ಇದುದರಿಂದ ವಿಷಯ ನಿರೂಪಣೆಯು ಬೇರೆ ಹಳೆಯ ಗೊಡ್ಡು ಕಥೆಯಂತಿರದೆ ಅದೊಂದು ತರದ ಹೊಸ ಸರಣಿಯೂ ಪ್ರಶ್ನೋತ್ತರಗಳ ರೀತಿಯೂ ವಿಚಾರವನ್ನು ಕುದುರಿಸಿ ವಾಚಕರನ್ನು ಸೆಳೆಯುತ್ತದೆ. ಶೈಲಿಯೂ ಸರಳವಾಗಿ ಸೊಗಸಾಗಿದೆ. 'ಮಗ್ಗಿ ಪುಸ್ತಕ'ದಾಕಾರದ ೨೭ ಪುಟಗಳ ಸಣ್ಣ ಕೃತಿಗೆ ೫ ಆಣೆ ಬೆಲೆ ಹೆಚ್ಚೆನಿಸುತ್ತದೆ.

'ಸುಬೋಧ'-ಸಂಪುಟ ೨೩ರ ೧ರಿಂದ ೬ರ ವರೆಗಿನ ಸಂಚಿಕೆಗಳು, ಸಂಪಾದಕರು ಎಮ್. ರಾಮರಾವ್, 'ಸುಬೋಧ ಪ್ರಕಟಣಾಲಯ' ಬೆಂಗಳೂರು ಸಿಟಿ. ಮಾಸಿಕ ಪತ್ರಿಕೆ, ಪ್ರತಿಯೊಂದು ಸಂಚಿಕೆಯೂ ಕ್ರೌನ್ ⅛ ಆಕಾರದ ೫೮ ಪುಟಗಳ ವಾಚನೀಯವಾದ ಲೇಖನಗಳನ್ನೊಳಗೊಂಡು ಚಿಕ್ಕ ಪುಸ್ತಕದಂತೆ ಸುಂದರವಾದ ರಕ್ಷಾಪತ್ರದಿಂದೊಡಗೂಡಿ ಒಳ ಹೊರಗು ಚೆನ್ನಾಗಿರುವುದರಿಂದ ಸಂಗ್ರಹ ಯೋಗ್ಯವಾಗಿದೆ ವಾರ್ಷಿಕ ಚಂದಾ ರೂ. ೩.

'ಪುಸ್ತಕ ಪ್ರಪಂಚ'-ಸಂಪುಟ ೨, ಸಂಚಿಕೆ ೮, ಗಾಂಧೀ ಸಂಚಿಕೆ. ಬೆಲೆ ಎಂಟಾಣೆ ಕ್ರೌನ್ ⅛ ಆಕಾರದ ೧೩ ಪುಟಗಳ ವಿಲೋಕ ಪುಸ್ತಕದಂತಿರುವ ಈ ಸಂಚಿಕೆಯು ಸಂಗ್ರಹಯೋಗ್ಯವಾಗಿದೆ, ಗಾಂಧೀಜೀಯ ವಿಷಯವಾಗಿ ತಿಳಿಯಬೇಕಾದುದು, ತಿಳಿದು ಮರೆಯದಿರಬೇಕಾಗಿರುವ ವಿವಿಧ ವಿಚಾರಗಳನ್ನೇ ಉದ್ದೇಶ ದೃಷ್ಟಿಯಿಂದ ಆಯ್ದು ಆಯ್ದು ಪುಟಗಳನ್ನು ತುಂಬಿಸಿರುವುದರಿಂದಲೂ ಬಲು ಸುಲಭವಾದ ತಿಳಿಗನ್ನಡದ ಶೈಲಿಯಲ್ಲೇ ಲೇಖನಗಳು ಬರೆಯಲ್ಪಟ್ಟಿರುವುದರಿಂದಲೂ ಸಂಚಿಕೆಗೆ ಒಂದು ಉತ್ತಮ ಗ್ರಂಥದ ಯೋಗ್ಯತೆ ಬಂದಿದೆ, ಕಳೆದೊಂದು ತಿಂಗಳಲ್ಲಿ ಪ್ರಕಟವಾದ 'ಗಾಂಧೀ ವಿಶೇಷ' ಸಂಚಿಕೆಗಳಲ್ಲಿ ಉತ್ತಮವೆನಿಸಿದವು ಕೆಲವೇ ಕೆಲವು. ಅಂತಹವುಗಳಲ್ಲಿ ಇದೊಂದು. ಪ್ರಕಾಶಕರು 'ಪಂಚಾಯತ ಶಿಕ್ಷಣ ಸಮಿತಿ' ಮೈಸೂರು.

'ಕೊರಡ್ಕಲ್'

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಒಳ್ಳೆದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಎಲ್ಲತರದ
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್,
ಉಡುಪಿ.
ಮದುವೆ ಕಾಗದಗಳನ್ನು
ಅಲ್ಪಾವಧಿಯಲ್ಲೇ ಮಾಡಿ
ಕೊಡಲಾಗುವುದು.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯುವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರುಉರು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ತೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು,

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯು ಗದಗ

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ·

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಜೀರಿಗೆ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಿಂದ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ। ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಿ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಯ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯು, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ಚನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮುಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಬ್ರ[illegible]ನ್ನು ಲೀಲಾಮಯ [illegible]ವನ್ನು ಸತ್ಯನೇನೆಂದಂತೆ [illegible] ಯಹೊಂದಿಸುವ ಪ್ರ[illegible] ಸರ್ವೋತ್ತಮಾತ್ಮಾ ಅಥವಾ [illegible] ಭೂವ್ಯಾಕಾಶಗಳ ತುಂ[illegible] ಏಕಪುರುಷನೆಂದು ವೇದಾಂತಗಳು ಸಾರುತ್ತಲಿವೆ. ಮತ್ತು ಕಾಂಡಾ[illegible] ಸಂಶೋಧನ, ಸಂಘಟನೆ ಮಾಡಿದ ಪರಮ ಪವಿತ್ರ ಸಂನ್ಯಾಸಿಗಳೆಂದೂ ಪರಮ ಸತ್ಯನೆಂದೂ ಬಣ್ಣಿಸಿ ಹೇಳಿದ್ದುಂಟು. ಅದು ಏನೇ ಇರಲಿ ಇಷ್ಟು ಮಾತ್ರ ನಿಜವಾಗಿಯೂ ನಿರ್ವಿವಾದದ ಮಾತು: ಸ್ವನಿರ್ಮಿತ, ನಿರಂತರ, ನಿಷ್ಪಕ್ಷವಾಗಿ ಮತ್ತು ನಾಶರಹಿತವಾಗಿ ನಿರಂತರ ಅಸ್ತಿತ್ವದಲ್ಲಿರುವ ಈ ಪ್ರಚಂಡ ಪ್ರಕಾಶಕ್ಕೆ ಜ್ಞಾನಿಗಳು ಬೇರೆಬೇರೆ ಹೆಸರುಗಳನ್ನು ಕೊಟ್ಟದ್ದುಂಟು. ಈ ಪ್ರಚಂಡ ಶಕ್ತಿಗೆ ಇಂಥದೇ ನಿಶ್ಚಿತ ರೂಪವಿದೆಯೆಂದು ಯಾರೂ ಎಂದೂ ಹೇಳಿಲ್ಲ. ಮಾನವನ ಭಾವನೆಯಲ್ಲಿ ನಿರಂತರವಾಗಿ ಚಿಂತಿಸಿದ ರೂಪವು ಮಾತ್ರ ಅವನ ಕಣ್ಣಿಗೆ ಬಿದ್ದೀತು. ಪರಮವೈರಾಗ್ಯಶೀಲರಾದ ಸಾಧು ಸಂತರ ದೃಷ್ಟಿಗೆ ಕೂಡ, ಅವರು ಸದಾ ಅನನ್ಯ ಭಾವ ಭಕ್ತಿಯಿಂದ ಚಿಂತಿಸಿದ ರೂಪವು ಕಣ್ಣಿಗೆ ಬಿದ್ದಿರುವದೆಂಬ ಸಂಗತಿಯನ್ನು ನಾವು ಪುರಾಣ ಪುಣ್ಯ ಕಥೆಗಳಲ್ಲಿ ಮಾತ್ರ ಓದುತ್ತೇವೆ, ಅಥವಾ ಕೇಳುತ್ತೇವೆ. [illegible] ಇಂಥದೇ ನಿಶ್ಚಿತವಿಲ್ಲವೆಂದಮೇಲೆ ಅ[illegible] ಸಚ್ಚಿದಾನಂದ ಪರಮಾತ್ಮನು ಅಥ

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

"ಜಾತೀಯತೆಯ-ನಿರ್ನಾಮ"

ಲೇ—ಶ್ರೀ. ಕಾಶೀನಾಥ ಕಾಶ್ಯಪ, ಗದಗ

ವಾ ನಿತ್ಯ ಸತ್ಯನು ನಿರಾಕಾರ ಅನಿಯಮಿತ ಶಕ್ತಿಯೆಂದೇ ಹೇಳಬಹುದು. ಅನನ್ಯವಾಗಿ ಅತುಲ ಭಕ್ತಿಯಿಂದ ಚಿಂತಿಸಿದ ರೂಪಧಾರಣ ಮಾಡುವವನೆಂದ ಮೇಲೆ ಸಾಕಾರನೆಂದೂ ಹೇಳಬಹುದು. ಇದು ಏನೇ ಇರಲಿ! ಜಗತ್ತೇ ದೇವರು, ದೇವರು ಎನ್ನುತ್ತಿರುವದರಿಂದ ಒಂದು ಪ್ರಚಂಡ ಅಮೋಘ ಶಕ್ತಿಯು ಮಾತ್ರ ನಿಜವಾಗಿಯೂ ಇದೆ ಎನ್ನುವ ಮಾತು ಸಿದ್ಧವಾದಂತಾಯಿತು. ಆದರೆ, ಆ ದೇವರ ಜಾತಿ ಯಾವದು? ಈ ಪ್ರಶ್ನೆಗೆ ಉತ್ತರ ದೊರಕುವದೇ? ಛೆ! ಎಂದೆಂದಿಗೂ ದೊರಕಲಿಕ್ಕಿಲ್ಲ!! ಅಂದಮೇಲೆ ಆತನಿಂದ ಜಾತಿಗಳು ನಿರ್ಮಿತವಾಗಿಲ್ಲ ಅನ್ನುವದು ಸೂರ್ಯ ಪ್ರಕಾಶದಷ್ಟು ಸ್ಪಷ್ಟ ಮತ್ತು ನಿಃಸಂದಿಗ್ಧವಾದ ಮಾತೇ ಸರಿ. ಹೀಗಿರಲು, ಮಾನವನು ಬೇರೆ ಬೇರೆ ಉದ್ಯೋಗ, ಗುಣಗಳ ಮೇಲೆ ಜಾತೀಯ ಭೂತಗಳನ್ನು ನಿರ್ಮಾಣ ಮಾಡಿದಂತೆ ತೋರುತ್ತಲೇ ಕಾಣುತ್ತದೆ. ಕಾಲಕಾಲಕ್ಕೆ ಜಾತೀಯ ಅನರ್ಥ ಪರಂಪರೆಗಳು ನಡೆದು ಬಂದಿರುವದರಿಂದ ಪರದಾಸ್ಯದಲ್ಲಿದ್ದ ಈ ರಾಷ್ಟ್ರಕ್ಕೂ ಸಮಾಜಕ್ಕೂ ವಿಪರೀತ ಹಾನಿ ತಟ್ಟಿ ಹೋಗಿದೆ. ಈ ಭಯಂಕರ ಜಾತೀಯ ದುರಂತಗಳನ್ನು ಇನ್ನು ಮೇಲಾದರೂ (ಅಂದರೆ ಸ್ವಾತಂತ್ರ್ಯ ಸಿಕ್ಕ ಮೇಲಾದರೂ) ತಪ್ಪಿಸುವದಕ್ಕೆ ಆಮರಣ ಉಗ್ರ ಉಪವಾಸಗಳಿಂದ ಮತ್ತು ಅಜಸ್ರ ಸತತ ಪ್ರಯತ್ನಗಳಿಂದ ಜಾತಿ ನಿರ್ಮೂಲನದ ಕಡೆಯ ಪ್ರಯತ್ನದಲ್ಲಿಯೇ ಮೊನ್ನೆಮೊನ್ನೆ ಮಹಾವಿಭೂತಿಯಾದ ಮಹಾತ್ಮರು ತಮ್ಮ ಅಮೌಲ್ಯ ಪ್ರಾಣಾರ್ಪಣ ಮಾಡಿದ್ದು ಜಗಪ್ರಸಿದ್ಧವಾದ ಮಾತೇ ಆಗಿದೆ. ಅದ್ದರಿಂದ, ಜಾತೀಯ ನಿರ್ನಾಮಕ್ಕೆ ಸರಕಾರವು ಉಗ್ರವಾದ ನಿಷ್ಠುರ ಕ್ರಮ ತೆಗೆದುಕೊಳ್ಳದೆ ಗತ್ಯಂತರವಿಲ್ಲ. ಮೂಲ ಹಳ್ಳಿಗಳಲ್ಲಿಯೂ, ಪಟ್ಟಣಗಳಲ್ಲಿಯೂ, ಜನನ ಮರಣ ರಿಜಿಸ್ಟರುಗಳಲ್ಲಿ ಈಗಿದ್ದ ಜಾತೀಯ ಕೋಷ್ಟಕವೇ ಸಮೂಲ ನಿರ್ಮೂಲವಾಗಬೇಕು. ಬರಿ ಗಂಡು, ಹೆಣ್ಣು, ಹೆಸರು, ಉದ್ಯೋಗ, ಧಂದೆ ಇದಿಷ್ಟೇ ಬರೆಯಲಿಕ್ಕೆ ಗ್ರಾಮಸ್ಥರಿಗೂ, ಮುನಿಸಿಪಾಲಿಟಿಗಳಿಗೂ ಸರಕಾರದಿಂದ ಕಟ್ಟಾಜ್ಞೆ ಆಗಬೇಕು. ಈ ರೀತಿಯಿಂದ ಜಾತೀಯ ಮೂಲ ಬೇರನ್ನೇ ಬೇರುಸಹಿತ ಕಿತ್ತಿ ಒಗೆದರೆ ಶಾಲೆ, ಕಾಲೇಜು, ಕೋರ್ಟು, ಕಚೇರಿಗಳಲ್ಲಿ ಈ ದುರಂತ ಭೂತದ ದರ್ಶನ ಕೂಡ ಆಗುವದಿಲ್ಲ. ಆ ಮೇಲೆ ಇದರ ಹೆಸರು ಉಳಿಯುವದಂತೂ ಶಕ್ಯವೇ ಇಲ್ಲ. ಮುಂದೆ, ಆ ಪ್ರಕಾರ ರಾಷ್ಟ್ರದ ಕಾಯಿದೆಗಳನ್ನಾದರೂ ಮಾರ್ಪಡಿಸಿ ಪ್ರತ್ಯಕ್ಷ ವ್ಯವಹಾರದಲ್ಲಿ ತರಬೇಕಾಗುವದು. ಹಿಂದುಸ್ಥಾನದಲ್ಲಿ ಹುಟ್ಟಿದವರೆಲ್ಲ ಹಿಂದೀಯರೇ ಅನ್ನುವ ಸಂಗತಿಯು ನಿಚ್ಚಳವಾಗಿ ಉಳಿಯುವದು. ರಾಷ್ಟ್ರದಲ್ಲಿ ಐಕ್ಯವೂ ನೆಲೆ ಊರುವದು. ರಾಜಕೀಯ ಸಂಗದಗಳು ಕೆಲಮಟ್ಟಿಗೆ [illegible] ಯಬಹುದು. ಅವು ರಾಷ್ಟ್ರಕ್ಕೆ ವಿಘಾತಕವಾಗದೆ ರಾಷ್ಟ್ರಪೋಷಕವಾಗಿ ಉಳಿಯಬಹುದೆಂಬ ನಂಬಿಗೆ ಅದೆ. ಸಮಾಜಗಳಲ್ಲಿಯ ಸಂಕುಚಿತ ಭಿನ್ನಭಿನ್ನ ಧೋರಣೆಗಳು ಮತ್ತು ಕಲ್ಮಷಗಳು ಮಾಯವಾಗುವವು. ಮತ್ತು ಸಮಾಜಗಳು ಅನ್ಯೋನ್ಯ ಕಲ್ಯಾಣಪ್ರದವಾದ ಧಾರ್ಮಿಕ ನೀತಿ ತತ್ವಗಳನ್ನು ಪ್ರತ್ಯಕ್ಷ ವ್ಯವಹಾರದಲ್ಲಿ ತರುವದರಿಂದ ಸಮಾಜವು ಒಂದೇ ಆಗಿ ಬಲಿಷ್ಠವಾಗುವದರಲ್ಲಿ ಸಂದೇಹವಿಲ್ಲ. ಈ ಮೇಲೆ ಕಾಣಿಸಿದ ದಿಶೆಯಲ್ಲಿ ಸರ್ವರೂ ಮನಮುಟ್ಟಿ ಪ್ರಯತ್ನ ಮಾಡಿದ್ದಾದರೆ ಕೆಲವೊಂದು ಅವಧಿಯಲ್ಲಿ ಈ ನಿಸ್ವಾರ್ಥ ಪ್ರಯತ್ನಕ್ಕೆ ಫಲವು ಸಿಕ್ಕೇ ತೀರುತ್ತದೆ. ಈ ಮಹತ್ವದ ಪ್ರಶ್ನೆಯನ್ನು ನಮ್ಮ ಜನಪ್ರಿಯ ಸರಕಾರವು ಕೂಲಂಕಷವಾಗಿ ವಿಚಾರ ಮಾಡಿ ಒಂದು ನಿರ್ಧಾರಕ್ಕೆ ಬಂದು, ಕಾಯಿದೆಯಿಂದಲೇ ಜಾತೀಯ ಭೂತಕ್ಕೆ ಮುಂಜು ಕೊಡಬೇಕು. ಸಂಕುಚಿತ ಭಾವನೆಯಿಂದಲೂ ಮತ್ತು ಕಾಲಕ್ಕೆ ಅನುಗುಣವಾದ ಸಾರಾಸಾರ ವಿಚಾರಗಳ ಅಭಾವದಿಂದಲೂ, ಈ ತತ್ವಕ್ಕೆ ವಿರುದ್ಧವಾಗಿ ವರ್ತಿಸಿದವರನ್ನು ಶಾಸನ ಭಯದಿಂದ ಸನ್ಮಾರ್ಗಕ್ಕೆ ತರುವ ನ್ಯಾಯ ನಿಷ್ಠುರ ವಿಧಾನವಾಗಬೇಕು. ಹೀಗೆ ಮಾಡುವದರಿಂದ ಜಾತೀಯ ಭೂತವು ನಿರ್ನಾಮವಾಗಿ ದೇಶದಲ್ಲಿ ಬಡವ, ಬಲ್ಲಿದರೆಂಬ ಭೇದವಿಲ್ಲದೆ ಸುಖ-ಸಂಪತ್ತುಗಳು ಯಾವತ್ತರಿಗೂ ನಿಶ್ಚಯವಾಗಿ ಲಭಿಸುವವು. ಮತ್ತು ಯೋಗ್ಯ ಶಾಸನಗಳಿಂದ ಸ್ವಲ್ಪಕಾಲದಲ್ಲಿ ಬದ್ಧಮೂಲವಿದ್ದರೆ— ಈ ತರಹದ ಜಾತೀಯ ದುರಂತಗಳು ನಮ್ಮ ರಾಷ್ಟ್ರದಲ್ಲಿ ಮೇಲಿಂದಮೇಲೆ ಉದ್ಭವಿಸವೆ ಇರವು. ನಮ್ಮ ರಾಷ್ಟ್ರೋನ್ನತಿಗೆ ವಿಘಾತಕವಾದ ಈ ದುರಂತಗಳನ್ನು ನಮ್ಮ ಸಮರ್ಥ ಸರಕಾರವು ಕಾಲ ವಿಳಂಬ ಮಾಡದೆ ಪತ್ತೆಕ್ಕಿ ಇವುಗಳನ್ನು ನಿರ್ಮಿಸುವ ವಿಷರೂಪಿಯಾದ ಜಾತೀಯತೆಯನ್ನು ಆದಷ್ಟು ತೀವ್ರವಾಗಿ ನಿರ್ಮೂಲ ಮಾಡುವದೆಂದು ನಮ್ಮ ನಂಬಿಗೆ ಆದೆ. (ಜಯಹಿಂದ್)

ಪುಳಿನಾಪುರ ಮಹಾತ್ಮೆ

ಕನ್ನಡ ವಚನ ಗ್ರಂಥ ಅಚ್ಚಿನಲ್ಲಿದೆ.

ಮೊದಲನೇ ಭಾಗದಲ್ಲಿ ದೇವಿ ಭಾಗವತಾಂತರ್ಗತ ಸುರಥ ವೈಶ್ಯರು ವ್ಯಾಘ್ರಾಯಗಳಿಂದ ಪ್ರತಿಷ್ಠೆಮಾಡಿದ ದೇವಿ ಲೋಕದ ವಿಸ್ತಾರವಾದ ಸ್ಥಳ ಪುರಾಣವೂ—ಎರಡನೇ ಭಾಗದಲ್ಲಿ ಕೊಲ್ಲೂರು, ಕಟೀಲು, ಸುಬ್ರಮಣ್ಯ ಮೊದಲಾದ ದೇವಿ ಅಂಶಗಳನ್ನೊಳಗೊಂಡ ಪೊಳಿನಾಪುರ ಸ್ಥಳ ಮಹಿಮೆಯೂ—ಮೂರನೇ ಭಾಗದಲ್ಲಿ ಅಶೋಕ ಚಕ್ರವರ್ತಿಯ ಕಾಲದಾರಭ್ಯ ಶಿಲಾಶಾಸನ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟ ತಾಮ್ರಶಾಸನ ಇತ್ಯಾದಿ ಆಧಾರಗಳಿಂದ ಒರದ ಚರಿತ್ರಾಸಾರವೂ ಇದೆ.

ಅಸ್ತಿಕರಾದ ದೇವಿಭಕ್ತರು ಮುಂದಾಗಿ ತಿಳಿಸಿದವರಿಗೆ ರೂ. ೧ ೮ ೧

೩ ಭಾಗಗಳ ಪುಸ್ತಕಕ್ಕೆ ಬೆಲೆ ರೂ. ೨–೪–೦

ಎಸ್. ಎ. ಶೀನಪ್ಪ ಹೆಗ್ಡೆ,
ಅಮುಣಿಂಜೆ ಗುತ್ತು, ಪೊಳಲಿ,
Post ಬೆಳ್ಳೂರು, ದ. ಕ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಪಿತ್ತಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಶುದ್ಧಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾರೆ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಹಾಗೆ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, ಬೊಂಬಾಯಿ ಏಜಂಟರು.—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುಜಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಟಿ. ಐ. ಬಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

[illegible] ಬಾಟ್ಲಿಗಳು [illegible] ಬರುವವು. ಅಂದರೆ [illegible] ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೋಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ| ಬಿ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟೀ ಮುಂತಾದುವುಗಳ ಆರ್ಡರಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,
Boarding & Lodging,
KATAPADI, S K.

Edited, Printed & Published by K. H. Shetty at the Navayuga Press Udipi, S. India.

ಎರಡಾಣೆ

Regd. No M. 3618

22 4-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೩೩

NAVAYUGA WEEKLY, UDIPI.

FOUNDER: **Hon'ble Mr. A. B SHETTY**, Health Minister, Govt. of Madras.

Vol 28
No. 33

ಒಂದೊಂದು ಮಾತು

●

'ಹರಿಜನ ಮುಖಂಡ ಡಾ॥ ಅಂಬೇಡ್ಕರ್ ಮತ್ತು ಸಾರಸ್ವತ ಬ್ರಾಹ್ಮಣ ಜಾತಿಯ ಡಾ॥ ಲಕ್ಷ್ಮೀಪತಿ ಕಬೀರರ ಮದುವೆ'-ಎಲ್ಲರ ಬಾಯಿಯಲ್ಲಿಯೂ.

ನಾಚಿಕೆಯಾಗುವವರು "ಡಾ॥ ಲಕ್ಷ್ಮೀಪತಿಯವರು ಮಾಡಿದ ಹರಿಜನೋದ್ಧಾರ ಕಾರ್ಯ" ಎಂದು ಬದಲಾಯಿಸಿ ಹೇಳಬಹುದಲ್ಲಾ!

oo oo oo

"ರಝಾಕಾರರ ನಾಯಕ ಸಯ್ಯದ್ ಕಾಸಿಮ್ ರಿಜ್ವಿಯು ರಾಯಲ ಸೀಮೆ, ಬಿರಾರ್ ಮತ್ತು ಮದ್ರಾಸ್ ಪ್ರಾಂತ್ಯದ ಮಸಲಿಪಟಾಮ್ ಬಂದರವನ್ನು ಕೇಳಿರುವದು ಅಪಹಾಸ್ಯಕರವಿದೆ. ರಝಾಕಾರರ ಮತ್ತು ಅವರ ನಾಯಕನ ಧುರೀಣತ್ವವನ್ನು ಅಂಗೀಕರಿಸಲು ಆಂಧ್ರರು ಪೂರ್ಣ ತಯಾರಿದ್ದಾರ ತನ್ನೀ ಫೇಸಿಸ್ಟ್ ಸಂಸ್ಥೆ ಮತ್ತದರ ಮರಿ ಹಿಟ್ಲರನನ್ನು ಹತೋಟಿಯಲ್ಲಿಟ್ಟುಕೊಳ್ಳಲು ನಿಜಾಮರಿಂದಾದೀತೆಂದು ನಿರೀಕ್ಷಿಸುವುದು ವ್ಯರ್ಥ"-ಆಂಧ್ರ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಎನ್. ಜಿ. ರಂಗರ ಮಾತು.

'ಅಂಧರ ಮತ್ತು ಆಂಧ್ರರ ಒಳಗಿನ ಕಾಳಗ' ಎನ್ನಬೇಕು ಇದನ್ನೇ!

oo oo oo

'ದಿಲ್ಲಿಯಲ್ಲಿ ದಿಗ್ಬಂಧನದಲ್ಲಿರಿಸಲ್ಪಟ್ಟಿದ್ದ ರೇವಾದ ಮಾಜೀ ಮಹಾರಾಜಾ ಸರ್. ಗುಲಾಬ್ ಸಿಂಗರು ದಿಲ್ಲೀ ಪೋಲೀಸರ ಕಣ್ಣು ತಪ್ಪಿಸಿಕೊಂಡು ತನ್ನ ಸಂಸ್ಥಾನಕ್ಕೆ ಮರಳಿದಾಗ ಪೋಲಿಸರು ಪುನಃ ಅವರನ್ನು ಹಿಡಿದು ದಿಲ್ಲಿಗೊಯ್ದರು'-ವಾರ್ತೆ.

ಸ್ವತಂತ್ರ ಭಾರತದಲ್ಲಿ ರಾಜ ಮಹಾರಾಜರುಗಳಿಗೆ ಸಿಗತಕ್ಕ ಬಿರುದುಗಳೆಂದರೆ ಬಹುಶಃ 'ಕ್ರಾಂತಿಕಾರರು' 'ಸ್ವಾತಂತ್ರ್ಯಕ್ಕಾಗಿ ಬಂಧನ ಪಾರಿ ವೀರರು' 'ಸ್ವಾಭಿಮಾನೀ ಆಂದೋಲನಗಾರರು' ಇತ್ಯಾದಿಗಳೇ.

oo oo oo

'ಭಾರತದಿಂದ ಪಾಕಿಸ್ತಾನದೊಳಗೆ ಹತ್ತೀ ಅರಿವೆಗಳು ಗಡಿ ಮಾರ್ಗವಾಗಿ ಸಾಗದಂತೆ ತಡೆಗಟ್ಟುವುದಕ್ಕಾಗಿ ಪಶ್ಚಿಮ ಬಂಗಾಳ ಮತ್ತು ಪೂರ್ವ ಪಂಜಾಬಿಗೆ ಹತ್ತೀ ಅರಿವೆಗಳು ರಫ್ತಾಗದಂತೆ ಪರ್ಮಿಟ್ ಕೊಡುವದನ್ನು ಕೂಡಲೇ ನಿಲ್ಲಿಸಬೇಕೆಂದು ಭಾರತ ಸರಕಾರ ನಿರ್ಧರಿಸಿದೆ'

ಪಾಕಿಸ್ತಾನ್-ಬಂಗಾಳದಲ್ಲಿ ಹೇರಳವಿರುವ ಕಿತ್ತನಾರಿನ ಪೋಷಾಕಿನಿಂದಲೇ ಪಾಕಿಸ್ತಾನ್ ವೀರರು ಶೋಭಿಸುವರೆಂದೂ 'ಹತ್ತು ಮಂದಿ ಭಾರತೀಯರಿಗೆ ಓರ್ವ ಪಾಕಿಸ್ತಾನಿ, ಹತ್ತಳೆ ಭಾರತ ದಾರಕ್ಕೆ ಒಂದು ಪಾಕಿಸ್ತಾನೀ ನೂಲು ಸಮಾನ' ಎಂದು ಹೆಗ್ಗಳಿಕೆಯಿಂದಿರುವರೆಂದೂ ನಂಬಬಹುದು.

THE POPULAR INSURANCE CO., LTD., MANGALORE.

ಹದಿನೆಂಟು ವರ್ಷಗಳ ಪ್ರಗತಿ

	1930	1934	1938	1943	1947
ಪೂರ್ಣಗೊಳಿಸಿದ ಹೊಸವಿಮೆ	3,00,500.	5,40,000	7,45,500.	10,39,700	**28,66,500.**
ವಾರ್ಷಿಕ ಆದಾಯ	14,120	54,969	84.830	1,62,006.	**4,70,151**
ವಿಮಾ ನಿಧಿ	3,709.	50 111.	1,38,915.	3,76,182	**10,70.907.**
ಜುಮ್ಲಾ-ಸೊತ್ತುಗಳು	28,008.	80,164.	1,73,823.	4,61,708	**11,94,091.**

1947ರಲ್ಲಿ ಪುನರ್ವ್ಯಯದ ಪ್ರಮಾಣ-12·7%

ಈ ಮೇಲಿನ ತುಲನಾತ್ಮಕ ಸಂಖ್ಯೆಗಳು, ಬೆಳೆದುಬರುವ ಕಂಪೆನಿಯ ಜನಾದರವನ್ನೂ ಬಲವನ್ನೂ ಸ್ಪಷ್ಟ ಸೂಚಿಸುತ್ತಿವೆ. ನಿಮ್ಮ ನಾಡಿನ ಒಂದು ಕಂಪೆನಿಯ ಈ ಅಭಿವೃದ್ಧಿಯು ನಿಮಗೆ ನಿಜವಾದ ತೃಪ್ತಿಯನ್ನು ಕೊಡಲೇ ಬೇಕು. ನಿಮ್ಮಿಂದ ತಕ್ಕ ಪ್ರೋತ್ಸಾಹವನ್ನು ಪಡೆಯಲೇ ಬೇಕು,

ಕಂಪೆನಿಯ ಕಾರ್ಯಕ್ಷೇತ್ರ ವಿಸ್ತರಣೆಯ ಹೊಸ ಯೋಜನೆಯಲ್ಲಿ, ಒರ್ಗನೈಝರರಾಗಿಯೂ ಇನ್ಸ್‌ಪೆಕ್ಟರುಗಳಾಗಿಯೂ ಏಜಂಟರಾಗಿಯೂ ಕೆಲಸಮಾಡಬಲ್ಲ, ವರ್ಚಸ್ಸುಳ್ಳ ಹಾಗೂ ಸಮರ್ಥರಿರುವ ತರುಣರಿಗೆ ನೇಮಕಗಳು ಕಾದಿವೆ.

ಇಂದೇ ಬರೆಯಿರಿ ಅಥವಾ ಸ್ವತಹಾ ಬಂದು ಮೆನೇಜಿಂಗ್ ಡೈರೆಕ್ಟರರನ್ನು ಕಾಣಿರಿ

ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
ಮಂಗಳೂರು. ದ. ಕನ್ನಡ.

(ಸ್ಥಾಪಿತ: 1929)

ಕರ್ನಾಟಕ ಪ್ರಾಂತ್ಯ ರಚನೆ

—ಒಂದು ಒಳನೋಟ—

ಭಾರತದ ಹೊಸ ರಾಜ್ಯಾಂಗ ರಚನೆಯ ವೇಳೆಗೆ ಬಲವಾಗಲೇ ಭಾಷಾವಾರು ಪ್ರಾಂತ್ಯಗಳು ಅಸ್ತಿತ್ವದಲ್ಲಿರುವಂತೆ ಮಾಡುವ ಗುರಿಯಿಟ್ಟುಕೊಂಡು ಕಾರ್ಯಕ್ರಮಗಳಾಗಬೇಕಾಗಿವೆ. ಅದ್ದರಿಂದ ಕರ್ನಾಟಕ ಪ್ರಾಂತ್ಯ ರಚನೆಯು ನಮ್ಮ ಕಣ್ಣ ಮುಂದಿದೆ ಎಂಬುದನ್ನು ಕನ್ನಡಿಗರೆಲ್ಲರೂ ಅರಿತಿರಬೇಕು. ಭಾಷಾವಾರು ಪ್ರಾಂತ್ಯ ರಚನೆಯನ್ನು ಒಪ್ಪಿ, ಅದಕ್ಕನುಗುಣವಾಗಿ ತನ್ನ ಕಾರ್ಯಕ್ರಮಗಳ ಪಟ್ಟಿಗೆ 'ಕರ್ನಾಟಕ ಪ್ರಾಂತ್ಯ'ವನ್ನೆಂದೋ ಜೋಡಿಸಿರುವ ಕಾಂಗ್ರೆಸಿನ ಕೈಯಲ್ಲೇ ರಾಜ್ಯ ರಚನಾ ಸೂತ್ರಗಳಿರುವುದರಿಂದಲೂ, ಅದೀಗ ಅಧಿಕೃತವಾಗಿ ಭಾಷಾವಾರು ಪ್ರಾಂತ್ಯಗಳನ್ನು ಕಟ್ಟಲು ನಡು ಬಿಗಿದಿರುವುದರಿಂದಲೂ ಕರ್ನಾಟಕ ಪ್ರಾಂತ್ಯವು ಸದ್ಯದಲ್ಲೇ ರಚನೆಗೊಳ್ಳಲಿದೆಯೆಂಬುದು ಸ್ವಯಂಸಿದ್ಧ.

ಈ ನವಪ್ರಾಂತ್ಯದಲ್ಲಿ ಮೈಸೂರು, ಈಗ ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತ್ಯದ ಭಾಗಗಳಾಗಿರುವ ಕೆಲವು ಜಿಲ್ಲೆಗಳು, ಹೈದರಾಬಾದಿನೊಳಗಿನ ಕೆಲವು ಭಾಗಗಳು ಹಾಗೂ ಈಗ ಬೊಂಬಾಯಿಯೊಂದಿಗೆ ಹೊಸದಾಗಿ ಸೇರಿಕೊಂಡಿರುವ ಕೆಲವು ಸಂಸ್ಥಾನಿಕ ಕ್ಷೇತ್ರಗಳು ಅಡಕವಾಗಿರಲು ಬದ್ಧವಿವೆ. ಕರ್ನಾಟಕದ ಹಕ್ಕಿನ ಯಾವ ಭಾಗವೂ ಕಳೆದುಹೋಗದೆ ಪೂರ್ಣ ಕರ್ನಾಟಕ-ಏಕರೂಪೀ ಕರ್ನಾಟಕ-ಅಖಂಡ ಕರ್ನಾಟಕ-ರಚಯಾಗಬೇಕಾದರೆ ಇವೆಲ್ಲವೂ ಏಕೀಕರಣಗೊಳ್ಳುವುದು ಅಗತ್ಯ.

ಅದೇನಿದ್ದು ಎಂದೋ ಬಿಚ್ಚಿ ಹಾಕಿ ಬಿಡಿ ಬಿಡಿ ಉಪಕರಣಗಳನ್ನು ಬೇರೆಬೇರೆ ಯಂತ್ರಗಳಿಗೆ ಜೋಡಿಸಿಟ್ಟು ಕಾಲ ಕಳೆದಿದ್ದ ಆ ಕಾಲದ ಯಂತ್ರ; ಈಗ ಅವೆಲ್ಲವನ್ನೂ ಪುನಃ ಅಲ್ಲಲ್ಲಿಂದ ಕಿತ್ತು ತೆಗೆದು, ಸಂಗ್ರಹಿಸಿ, ಜೋಡಿಸಿಟ್ಟು ಹೊಸತಾಗಿ ಕರ್ನಾಟಕ ಯಂತ್ರರಚನೆ ಮಾಡುವುದರಲ್ಲಿ ಸ್ವಾಭಾವಿಕವಾಗಿ ಪ್ರಯಾಸವಿದೆ; ತಡೆ ತೊಡಕುಗಳಿವೆ. ಆದರೆ, ಇವೆಲ್ಲವೂ ಹಕ್ಕು ಪ್ರಕಾರ ತಮ್ಮವು-ಕರ್ನಾಟಕ ಯಂತ್ರದ ಸಹಜ ಭಾಗಗಳೆಂದ ಅಷ್ಟುಗಳನ್ನು ಇನ್ನ ಯಂತ್ರಗಳಿಗೆ ತಾಗಲಿದ್ದರೂ ನೇತಾಡುತ್ತ ಎಷ್ಟೇ ಕಾಲ ಕಳೆದರೂ ಅವೆಲ್ಲವೂ ತಮ್ಮ ಮೂಲ ಭಾಗದೊಂದಿಗೆ ಸೇರಿಕೊಳ್ಳಲು ಒಪ್ಪುವವೆ-ಎಂದು ನ್ಯಾಯ ಪ್ರಕಾರ, ಹಟತೊಟ್ಟು ಶ್ರಮಿಸಿದರೆ ಅವು ಏಕಾಕಾರಕ್ಕೆ ಒಂದೇ ಕೀಲವವು. ಆಗ ಅಖಂಡ ಕರ್ನಾಟಕವು ಭಾರತದ ದೊಡ್ಡ ಪ್ರಾಂತ್ಯಗಳಲ್ಲೊಂದಾಗಿ ರಾಜಿಸಿ, ಕೆಲವೇ ಕಾಲಗಳೊಳಗೆ ಒಂದು ಕಾಲದಲ್ಲಿ ಬಂಗಾಳವು ಪಡೆದಿದ್ದ ಪ್ರಭಾವವನ್ನೇ ಬೀರಲಿರುವುದು.

ಈ ರೀತಿ ಭಾಷಾವಾರು ಪ್ರಾಂತ್ಯಗಳಾಗಿ ಪುನರ್ರಚನೆಗೊಳ್ಳಲಿರುವ ಈಗಿನ ಪ್ರಾಂತ್ಯಗಳೆಂದರೆ ಮದ್ರಾಸ್ ಮತ್ತು ಬೊಂಬಾಯಿ ಮಾತ್ರ-ದಕ್ಷಿಣ ಭಾರತದ ಭಾಗಗಳೇ. ಒಂದೊಮ್ಮೆಗೆ ಈ ಸಮಸ್ಯೆಯು ದಕ್ಷಿಣ ಭಾರತದಲ್ಲಿರುವ ಬದಲಿಗೆ ಉತ್ತರ ಭಾರತದಲ್ಲಿರುತ್ತಿದ್ದರೆ, ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆಯು ಈಗಿನಷ್ಟು ಹಿಂದೆ ಬೀಳುತ್ತಿರಲಿಲ್ಲವೆಂದು ಖಂಡಿತವಾಗಿ ಹೇಳಬಹುದು. ಆದರೆ ಇನ್ನೀ ಪ್ರಶ್ನೆಯನ್ನು ಯಾವ ಕಾರಣದಿಂದಾದರೂ ಹಿಂದೆ ಹಾಕುವದಸಾಧ್ಯ.

ಈ ವರೆಗೆ ಅಖಿಲ ಭಾರತದಲ್ಲಿ ಎಲ್ಲಕ್ಕಿಂತ ದೊಡ್ಡ ಪ್ರಾಂತ್ಯವಾಗಿರುವ ಮದ್ರಾಸು ಭಾಷಾವಾರು ಪ್ರಾಂತ್ಯ ರಚನೆಯಾಗುವಾಗ 'ತಮಿಳು ನಾಡು' ಆಂಧ್ರ ದೇಶ 'ಕನ್ನಡ ನಾಡು' 'ಐಕ್ಯ ಕೇರಳ ಪ್ರಾಂತ್ಯ'ವಾಗಿ ನಾಲ್ಕು ಹೋಳಾಗಲಿದೆ. ಈ ಪೈಕಿ ಮದ್ರಾಸ್ ಪ್ರಾಂತೇತರ ಹೆಚ್ಚಿನ ಭಾಗಗಳನ್ನು ಪಡೆಯಲಿರುವ ಪ್ರಾಂತ್ಯವೆಂದರೆ ಕರ್ನಾಟಕ.

ಈಗ ನಾವಿರುವ ಅಂಕವನ್ನು ಮುಗಿಸಿಕೊಂಡ ಮೇಲೆ ಆರಂಭಿಸಲಿರುವ ಆ ನವಾಧ್ಯಾಯವು ಸರ್ವ ವಿಧಾನಗಳಿಂದಲೂ ಹೊಸತೇ ಆಗಲಿದೆ. ಹೊಸ ಪ್ರಾಂತ್ಯಗಳು-ಪ್ರಾಯಸ್ಥರಿಗೆಲ್ಲಾ ಮತದಾನದ ಹಕ್ಕಿರುವ ಹೊಸ ಮಾದರಿಯ ಚುನಾವಣೆಗಳು-ಪ್ರತ್ಯೇಕ ಮತದಾನ ಪದ್ಧತಿಯೇ ರದ್ದಾಗಿ ಹೊಸ ರೀತಿಯ ಸ್ಥಾನ ಮಾನಗಳು-ಶಾಸನ ಸಭೆಗಳಿಗೆ ಹೊಸ ಮಾದರಿಯಲ್ಲೇ ಅಧಿಕಾರಗಳು, ಹೀಗೆ ಎಲ್ಲವೂ ಹೊಸತಾಗಲಿವೆ. ಆದ್ದರಿಂದ ಪ್ರಚಲಿತ ವಿದ್ಯಮಾನಗಳನ್ನೇ ಆಧರಿಸಿ 'ಮುಂದಿನ ಚುನಾವಣಾ ಸಿದ್ಧತೆ' ಎಂದೇನೇನೋ ಕಂಸ ಸ್ವಪ್ನಗಳನ್ನು ಕಾಣುವವರಿದ್ದರೆ ಅವರೀ ಅರುಣೋದಯದಲ್ಲಾದರೂ ಕಣ್ಣು ತೆರೆಯುವುದು ವಾಸಿ.

ಜಾತೀಯ ಸ್ವಾರ್ಥ, ವ್ಯಕ್ತಿಗತ ಸ್ವಾರ್ಥ ಇತ್ಯಾದಿ ಹೇಯ ಭಾವಗಳನ್ನೇ ಹೃದಯದೊಳಗೆ ಹುದುಗಿಟ್ಟುಕೊಂಡು, ತೋರುವಿಕೆಗೆ ಏನೇನೋ ಮಾಧುರ್ಯ ಪ್ರದರ್ಶನ ಮಾಡುತ್ತಿರುವ ಆತ್ಮವಂಚಕರಿಗೆ, ಆ ಹುಟ್ಟುಗುಣವನ್ನು ತ್ಯಜಿಸುವುದು ಯಾವ ಸಂದರ್ಭದಲ್ಲೂ ಅಸಾಧ್ಯವಾದ ಪಕ್ಷದಲ್ಲಿ, ಇನ್ನು ಮುಂದಿನ ಕಾಲದಲ್ಲಿ ತಾವೀ ಸ್ವಾರ್ಥ ಸಾಧನೆ ಮಾಡಬೇಕಾದ ರೀತಿ ನೀತಿಗಳಲ್ಲಾದರೂ ಬದಲಾವಣೆ ಮಾಡಬೇಕಾದುದಗತ್ಯವೆಂಬುದನ್ನು ತಿಳಿದಿರಬೇಕು. ನಿದರ್ಶನಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಈಗ ಮದ್ರಾಸ್ ಶಾಸನ ಸಭೆಗಳಲ್ಲಿರುವ ಸ್ಥಾನಗಳಿಗಿಂತ ಮುಂದಿನ ಕರ್ನಾಟಕ ಶಾಸನಸಭೆಯಲ್ಲಿ ಹೆಚ್ಚಿನ ಸ್ಥಾನಗಳು ದೊರೆಯಲಿವೆ; ಮುಸ್ಲಿಮರ ಪ್ರತ್ಯೇಕ ಮತದಾನ ರದ್ದಾಗಲಿದೆ; ಕೇವಲ ಅಕ್ಷರಜ್ಞರು ಮಾತ್ರವಲ್ಲ, ಪ್ರಾಯಸ್ಥರೆಲ್ಲರಿಗೂ ವೋಟಿನ ಹಕ್ಕು ದೊರೆತು, ಆ ಚುನಾವಣೆಯೆಂಬುದು ಕೆಲವೇ ಮಂದಿ ಪ್ರತಿಷ್ಠಾವಂತರ ಪ್ರಭಾವದೊಳಗಿನದಾಗದೆ ಜನಸಾಮಾನ್ಯರ ಹಕ್ಕಿನದಾಗಲಿದೆ. ತನ್ನ ಗುರಿ ಸಿದ್ಧಿ ಮಾಡಿಕೊಂಡು, ರೂಪ ಬದಲಾಯಿಸಿಕೊಳ್ಳಲಿರುವ ಕಾಂಗ್ರೆಸಿನ ಬಿಲ್ಲೆಯ ಬಲವನ್ನಾಧರಿಸಿಯೇ ಇನ್ನು ಮುಂದೆ ಕೆಲಸವಾಗದು. ದ. ಕ. ಜಿಲ್ಲೆಯ ಪ್ರಭಾವಶಾಲಿ ಮೂರು ಸಮಾಜಗಳವರೇ ಈ ತನಕ ಪ್ರತಿಬಾರಿಯೂ ಕಾಂಗ್ರೆಸಿನ ಆಶ್ರಯದಿಂದ, ಸಾಮಾನ್ಯರ ಸ್ಥಾನಗಳನ್ನು ತಮ್ಮ ಪಾಲಿನದಾಗಿ ಮಾಡಿಕೊಂಡಿದ್ದ ಅಂತರ್ಗಾಮೀ ಜಾತೀಯತೆಯ ಆಟಕ್ಕೆ ಇನ್ನು ಮುಂದೆ ಅವಕಾಶ ದೊರಕದೆ ಸಾರ್ವಜನಿಕ ಕಾರ್ಯ ಯೋಗ್ಯತೆಯೇ ಗಣಿಸಲ್ಪಡಲಿದೆ. ಮುಂದಿನ ಕರ್ನಾಟಕ ಶಾಸನ ಸಭೆಗಳಲ್ಲಿ ಒಂದೊಮ್ಮೆಗೆ ಜಾತಿ, ಪಕ್ಷ, ಪಂಗಡಗಳ ಸ್ವಾರ್ಥಕ್ಕೆಡೆ ದೊರೆತರೂ ಅದು ಈಗಿನ ಮದ್ರಾಸ್ ಶಾಸನ ಸಭೆಗಳಲ್ಲಿರುವ ಮಾದರಿಯಲ್ಲೇ ಎಂದೂ ಇರಲಾರದು. ಈಗ ಬೊಂಬಾಯಿ ಪ್ರಾಂತ್ಯದ ಭಾಗದಲ್ಲಿರುವ ಬ್ರಾಹ್ಮಣ-ಲಿಂಗಾಯತ ಪಕ್ಷ ಭೇದಗಳಂತಹವನ್ನು ಭೇದಿಸಿ ನಿವಾರಿಸುವ, ಅಥವಾ ಅವುಗಳಿಗೆ ಸೋತು ಅವುಗಳೊಡನೈಕ್ಯಗೊಳ್ಳುವ ಹೊಸ ಸನ್ನಿವೇಶಗಳು ಭಾವೀ ಕರ್ನಾಟಕ ನ್ಯಾಯ ವಿಧಾಯಕ ಕಾರ್ಯಗಳಲ್ಲಿ ದಕ್ಷಿಣ ಕನ್ನಡಿಗರ ಪಾಲಿಗೊದಗಬಹುದು.

ಈ ರೀತಿ ಕರ್ನಾಟಕ ಪ್ರಾಂತ್ಯವಾಗಲಿದೆ- ಕನ್ನಡಿಗರ ಪಾಲಿಗೆ ಸರ್ವ ವಿಧಾನಗಳಲ್ಲೂ ಹೊಸ ಕಾಲವೇ ಬರಲಿದೆ-ಎಂಬುದೇನೋ ಖಂಡಿತ. ಅದೆಂದು ನಾಳೆಯ ಮಾತಾಯಿತು: ಘಟನಾ ಸಮಿತಿಯ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರ ಅಭಿಮತದಂತೆ, ಬರುವ ಜೂನಿನೊಳಗೆ ಭಾರತದ ಹೊಸ ರಾಜ್ಯಾಂಗ ರಚನೆ ಪೂರ್ಣಗೊಂಡು ಆ ಮೇಲಿನ ಜೂನಿನೊಳಗೆ ಅದನ್ನಾಧರಿಸಿ ಸಾರ್ವತ್ರಿಕ ಚುನಾವಣೆ ನಡೆಯಬಹುದು. ಅರ್ಥಾತ್ ಸುಮಾರು ಹದಿನೈದು ತಿಂಗಳ ಅವಧಿಯಿರುವ ಮಾತಿದು. ಮತ್ತೂ ಕೆಲಕಾಲ ಹೆಚ್ಚಿಗೆ ಹಿಡಿದರೂ ಹಿಡಿಯಬಹುದು. ಹೇಗಿದ್ದರೂ ಈ ಬದಲಾವಣೆಯಲ್ಲಿರುವ ಮಹತ್ವದ ಮೇಲಿಂದ ಇನ್ನು ಒಂದೆರಡು ವರುಷದೊಳಗೆ ಬಹಳ ಕೆಲಸವಾಗಲಿದೆ ಎಂಬುದನ್ನು ನಾವು ಅರಿತಿರಬೇಕು. ಮಾರ್ಪಾಟಿನಂತರದ ಚಿತ್ರವನ್ನು ರೂಪಿಸುವದಕ್ಕಿಂತ ಈ ಸಂಧ್ಯಾವಧಿಯಲ್ಲಿ- ಈ ಸಂಕ್ರಾಂತಿ ಕಾಲದಲ್ಲಿ --ಆ ರೂಪಾಂತರಕ್ಕಗತ್ಯವುಳ್ಳ ಕಾರ್ಯಗಳ ಕಡೆಗೆ ಲಕ್ಷ್ಯವಿಡಬೇಕಾದ್ದು ಅನಿವಾರ್ಯವೆಂಬುದನ್ನು ಮರೆಯಲಾಗುವುದಿಲ್ಲ.

ಅಂದ ಮೇಲೆ ಈ ಕಾಲದಲ್ಲಿ ನಾವು ಕಣ್ಣಿಡಬೇಕಾದುದೆಲ್ಲಿಗೆ? ಮಾಡಬೇಕಾದುದೇನನ್ನು? ಮೈಸೂರಿಗೆ ಕರ್ನಾಟಕದಲ್ಲಾವ ಸ್ಥಾನ? ಹೈದರಾಬಾದಿನೊಳಗಿರುವ ಕರ್ನಾಟಕ ಭಾಗಗಳನ್ನು ಸೆಳೆದುಕೊಳ್ಳುವ ಬಗೆ ಹೇಗೆ- ಮುಂತಾದ ಸಮಸ್ಯೆಗಳಿವೆ. ಈ ಸಮಸ್ಯೆಗಳನ್ನಂತಹ ಕತ್ತಲೆ ಕವಿದುಕೊಂಡಿರುವುದಾದರೂ ಅವುಗಳನ್ನು ಭೇದಿಸಬಲ್ಲ ಪ್ರಕಾಶಗಳೂ ಇವೆ. ಮೊದಲನೆಯದಾಗಿ ಪ್ರತಿಯೊಂದೆಡೆಯಲ್ಲೂ ಪ್ರಜಾಪ್ರಭುತ್ವ ಸ್ಥಾಪನೆಯಾಗಲಿದೆ; ಎಂತಹ ಆತಂಕವಿದ್ದರೂ ಈ ಪ್ರಜಾ ಹಕ್ಕು ಮಾನ್ಯವಾಗಿಯೇ ತೀರುವುದೆಂಬುದು ಖಂಡಿತ. ಮೈಸೂರಿನಲ್ಲಿ ಪ್ರಜಾಧಿಕಾರೀ ತತ್ವ ಮಾನ್ಯ ಹೊಂದಿದೆ; ಹೈದರಾಬಾದಿನಲ್ಲಿ ಆ ಕುರಿತು ಚಳವಳಿ ನಡೆದಿದ್ದು, ಅದೂ ಯಾವ ರೀತಿಯಿಂದಾದರೂ ವಿಜಯ ಹೊಂದುವದು ಖಂಡಿತ. ಸಣ್ಣ ಕೆಲವು ಸಂಸ್ಥಾನಗಳಿಗೆ ಅಸ್ತಿತ್ವವಿಲ್ಲವೆಂಬ ಕಾರಣದಿಂದ ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತ್ಯಗಳೊಂದಿಗೆ ಮಿಲನಗೊಂಡ ಸಂ

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3 28 Crores**

Our Chief Agency New business in 1946 about **54 Lakhs**

Our experience of 37 years available to you for arranging Insurance investment It therefore pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.

Bombay Life Building,

Central Office, Udipi:

Branches at:

Mangalore, Calicut, Trivandrum, Madura, Madras, Bangalore & Bombay,

The Vijaya Bank Limited.

All our good wishes for a happy and prosperous new year

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.

For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಕರ್ನಾಟಕ ರಚನೆಗೊಂದು ಒಳಾತಂಕ

ಸ್ಥಾನೀ ಕನ್ನಡ ಭಾಗಗಳನ್ನು ಪ್ರತ್ಯೇಕವಾಗಿ ಇನ್ನೂ ಗಣಿಸಬೇಕೆಂದಿಲ್ಲ.

ಸಂಸ್ಥಾನಗಳಲ್ಲಿ ಪ್ರಜಾಪ್ರಭುತ್ವ ಬಂದ ಮೇಲೆ ಅದು ಅಭಿವೃದ್ಧಿಹೊಂದುತ್ತಾ ಹೋಗಿ, ಕಾಲಕ್ರಮೇಣ ಸಂಸ್ಥಾನವೆಂಬ ಭಿನ್ನತೆಯು ಚಿಹ್ನೆಯನ್ನೇ ಅದು ಕಳಚಿಕೊಂಡು ಮಿಕ್ಕ ಭಾಗಗಳೊಡನೆ ತಾದಾತ್ಮ್ಯ ಹೊಂದುವದೆಂಬುದನ್ನು ಪರೀಕ್ಷಿಸಬೇಕು; ಈ ಮಧ್ಯಾವಧಿಯಲ್ಲಾದರೂ ನೆರೆಯ ಪ್ರಾಂತ್ಯದೊಂದಿಗೆ ಒಂದು ಸಂಸ್ಥಾನವು ಜತೆಯಾಗಿಯೆ ನಡೆಸಲಾಗುವ ವ್ಯವಸ್ಥೆಯು ಹೊಸ ರಾಜ್ಯಶಾಸನದಲ್ಲಿ ಮೂಡಲಿದೆಯಾದ್ದರಿಂದ ಮೈಸೂರಿನಂತಹ ಸಂಸ್ಥಾನವು ಕರ್ನಾಟಕದೊಂದಿಗೆ ಸಂಪೂರ್ಣವಾಗಿ ಐಕ್ಯಗೊಳ್ಳಲಾಗದ ಸಂದರ್ಭದಲ್ಲಿ ಜತೆಯಾಡಳಿತೆಯ ನೊಗಕ್ಕಾದರೂ ಹೆಗಲೊಡ್ಡಿ ಆ ಮೂಲಕ ಕರ್ನಾಟಕದ ಏಕರೂಪ ಕಂಡುಬರಲು ಸಾಧ್ಯವಿದೆ.

ಇತರ ಸಂಸ್ಥಾನೀ ಪ್ರದೇಶಗಳನ್ನೊಳಗೊಂಡ ಬೊಂಬಾಯಿ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕಗಳು ಒಂದುಗೂಡಿದರೆ–ಪ್ರಜಾಪ್ರಭುತ್ವ ಬಂದಾಗ ಹೈದರಾಬಾದಿನ ಕೆಲವು ಭಾಗಗಳವರು ಜನಮತ ಸಂಗ್ರಹಿಸಿ ಆ ಮೂಲಕ ಕರ್ನಾಟಕಕ್ಕೆ ಸೇರಬೇಕೆಂಬ ನಿರ್ಧಾರವಾದಲ್ಲಿ, ಭಾರತ ಸರಕಾರವು ನಿರ್ದೇಶಕತ್ವ ವಹಿಸಿ ಅದನ್ನು ಜೋಡಿಸಿ ಕೊಟ್ಟರೆ–ಅದೇ ರೀತಿ ಆಂಧ್ರ ಕರ್ನಾಟಕ, ಮಹಾರಾಷ್ಟ್ರ ಕರ್ನಾಟಕ, ಕೇರಳ ಕರ್ನಾಟಕ ವಿವಾದಗಳಲ್ಲಿಯ ಭಾಗಗಳ ವಿಲಿನೀಕರಣವನ್ನೂ ಜನಮತ ಸಂಗ್ರಹಿಸಿಯೇ ಮಾಡಿದರೆ–ಎಲ್ಲಾ ನಿರ್ಣಯವೂ ನ್ಯಾಯ ಪ್ರಕಾರವಾಗುವುದು; ಸುಲಭವಲ್ಲಾಗುವುದು.

ಇವೆಲ್ಲಾ ಪ್ರಶ್ನೆಗಳೂ ಈಗ ಮುಂಭಾಗಕ್ಕೆ ಬಂದಿವೆ; ಪ್ರತ್ಯಕ್ಷ ರಂಗದಲ್ಲಿವೆ; ಪರ್ಯಾಲೋಚನೆಗೊಳಗಾಗಿವೆ. ಇಲ್ಲಿಯೂ ಅಪ್ರತ್ಯಕ್ಷವಾದ, ಅಡ್ಡಹಾದಿ ಹಿಡಿದ "ಬಂಡಾಯ" ಚಿಂತನೀಯವಾಗಿರುವ ಜಿಲ್ಲೆಯೆಂದರೆ ದಕ್ಷಿಣ ಕನ್ನಡವೆಂಬುದು ಅತ್ಯಂತ ಶೋಚನೀಯ.

ಮಲಬಾರಿನ ಶ್ರೀ ಕೇಳಪ್ಪನ್ ಅಂಥವರು ಗೋಕರ್ಣದ ವರೆಗಿನ ಭಾಗವು ಕೇರಳಕ್ಕೆ ಸೇರತಕ್ಕದ್ದೆಂದು ಘಂಟಾಘೋಷವಾಗಿ ಒಮ್ಮೆ ಸಾರಿದರು.–ದ. ಕ. ಜಿಲ್ಲೆಯನ್ನು ಒಳಗಡೆಗೆ ಸೇರಿಸಿಕೊಂಡು ಅಚೇಬದಿಯಲ್ಲಿ ತನ್ನ ಗಡಿಗೆರೆಯನ್ನೆಳೆದರು. ಆದರೆ ಇಂತಹ ಅನ್ಯಾಯ ಹಾಗೂ ಅಪಾಯಕಾರೀ ವಾದವನ್ನಾದರೂ ಶ್ರೀ ಕೇಳಪ್ಪನವರು ಬಹಿರಂಗವಾಗಿ ಮುಂದೊತ್ತಿದರೇ ಹೊರತು ಅಡಗಿಸಿಟ್ಟುಕೊಂಡು ಅಂತರ್ಗಾಮೀ ಆಟ ಹೂಡಿಲ್ಲ. ದಕ್ಷಿಣಕನ್ನಡಿಗರು ಪ್ರತಿಭಟಿಸಿದೊಡನೆ ಕೇರಳದವರ ಕೂಗು ನಿಂತಿತು.

ಇದೇ ಜಿಲ್ಲೆಯ ಉತ್ತರ ಕೊನೆಯ ... ದಕ್ಷಿಣ ... ವರೆಗಿನ ಭಾಗವು ... ಬೇಕೆಂಬ ಚಳವಳವು ಹಿಂದೊಮ್ಮೆ ನಡೆದಿದ್ದಿತು. ಈಗಲೂ ಕೆಲವರಲ್ಲಿ ಆ ... ಭಾಷೆಯೆಂಬುದನ್ನೇ ಆಧರಿಸಿ ಪ್ರಾಂತ್ಯ ರಚನೆ ಮಾಡುವದ ಗಿದ್ದ ...

ವರೆಗಿನ ವಿಸ್ತೀರ್ಣದ ಎಷ್ಟೋ ಸಂಸ್ಥಾನಗಳು ಇದುವರೆಗಿದ್ದಂತೆ ಈ ಕಾಲದಲ್ಲೂ ಇರಬಹುದೆಂದಾದರೆ–ನಿಜಕ್ಕೂ ದಕ್ಷಿಣಕನ್ನಡಾ ಜಿಲ್ಲೆಯು 'ತುಳುನಾಡು' ಆಗಿ ಪ್ರತ್ಯೇಕಗೊಳ್ಳಲು ಅರ್ಹವಿದೆ. ಆದರೆ ಈ ಕಾಲದಲ್ಲಿ ಇಂತಹ ಸಣ್ಣ ಪುಟ್ಟ ತುಂಡುಗಳಿಗೆ ಅಸ್ತಿತ್ವವಿಲ್ಲವೆಂದೇ ನೂರಾರು ವರುಷಗಳಿಂದ ಪ್ರತ್ಯೇಕವಿದ್ದ ಸಂಸ್ಥಾನಗಳನ್ನೆಲ್ಲಾ ಭಾರತದ ವಿವಿಧ ಪ್ರಾಂತ್ಯಗಳೊಂದಿಗೆ ಸೇರಿಸಿ ಬಿಟ್ಟಿರುವಾಗ, ಅಂತಹದೊಂದನ್ನು ಹೊಸತಾಗಿ ನಿರ್ಮಿಸುವೆನೆಂದು ಹೊರಡುವುದು ಹುಚ್ಚಾಟವೇ ಸರಿ. ನಿದರ್ಶನಕ್ಕಾಗಿ ಮೊನ್ನೆ ತಾನೇ ಹಿಮಾಲಯ ತಪ್ಪಲಿನ ಸುಮಾರು 11000 ಚದರ ಮೈಲಷ್ಟು ವಿಸ್ತೀರ್ಣದೊಳಗಿನ 24 ಸಂಸ್ಥಾನಗಳ ಅಸ್ತಿತ್ವವನ್ನೇ ವಜಾಪಡಿಸಿ 'ಹಿಮಾಚಲ ಪ್ರದೇಶ' ಪ್ರಾಂತ್ಯವಾಗಿ ಮಾಡಿ ಭಾರತದೊಂದಿಗೆ ಐಕ್ಯಗೊಳಿಸಿದುದನ್ನು ನೋಡಿದರೆ ಸಾಕು. ಹೀಗೆ 'ನಂದ ರಾಜು'ನ ಕಾಲದಿಂದಲೂ ಇದ್ದ ಗದ್ದೇ ಹುಣಿಯಂತಹ ಸಣ್ಣ ಕಿರುಕ್ಷೇತ್ರದ ಗಡಿಗಳನ್ನೆಲ್ಲಾ ಅಗೆದು ತೆಗೆಯುತ್ತಿರುವಾಗ ಅಂತಹದೊಂದು ಗಡಿಯನ್ನು ಈ ಕಾಲದಲ್ಲಿ ಹೊಸತಾಗಿ ಕಟ್ಟಲು ಹೊರಡುವವರನ್ನು ಯಾರೂ ಪ್ರೋತ್ಸಾಹಿಸಲಾರರು.

ಐಕ್ಯ ಕೇರಳದವರ ಸ್ಪಷ್ಟ ವರ್ತನೆ, ತುಳು ನಾಡು ವಾದಿಗಳ ಸಹಜಾಭಿಮಾನವಾವುದೂ ಇಲ್ಲದೆ, ಇವೆರಡಕ್ಕಿಂತಲೂ ಅಸ್ವಾಭಾವಿಕವಾದ ಅತ್ಯಂತ ನೀಚವಾದ ಅಪಾಯವೊಂದು ಬೇರೆ ಹೊಂಚುತ್ತಿದೆ. ಅದೆಂದರೆ ಉತ್ತರದಲ್ಲಿ ಬೊಂಬಾಯಿ, ದಕ್ಷಿಣದಲ್ಲಿ ಕೊಚ್ಚಿ ಗಡಿಯಾಗಿರುವ ವಿಶಾಲ ಕರಾವಳಿ ಭಾಗವನ್ನು 'ಕೊಂಕಣಿ ಪ್ರಾಂತ್ಯ'ವಾಗಿ ವಿಂಗಡಿಸಬೇಕೆಂದು ಉತ್ತರ ಕನ್ನಡದ್ದ ಕೊಂಕಣಿಗರ ದೀರ್ಘ ಕಾಲದಿಂದ ಅಂತರ್ಗಾಮಿ ಚಳವಳವಾರಂಭಿಸಿರುವುದೇ. ದಕ್ಷಿಣಕನ್ನಡದ ಕೆಲವು ಅಥ್ಯ ಕೊಂಕಣಿ ಭಾಷಾನುಯಾಯಿಗಳು ಇತ್ತ ರಲ್ಲೇ ಈ ಒಳಸಂಚಿನಲ್ಲಿ ಸೇರಿಕೊಂಡು, ಈ ನೆಲದಡಿ ಪ್ರವಾಹವು ಕರ್ನಾಟಕದ ಅಸ್ತಿವಾರ ಧಾರಗಳನ್ನು ಕೊರೆಯುತ್ತ ಕೊಂಡು ಥಿಲ್ಲಿಯ ವರೆಗೂ ಮುಟ್ಟಿದೆ ಎಂದು ತಿಳಿದುಬರುತ್ತದೆ. ಮಲೆಯಾಳಿಗಳು ಗೋಕರ್ಣದ ವರೆಗೆ ಕೇರಳ ಮಾಡಬೇಕೆಂದು–ಕೊಂಕಣಿಗರು ಕೊಚ್ಚಿಯ ವರೆಗೆ ಕೊಂಕಣೆ ಮಾಡಬೇಕೆಂದು–ದಕ್ಷಿಣಕನ್ನಡಿಗರನ್ನು ಆ ಕಡೆಗೂ ಈ ಕಡೆಗೂ ಎಳೆದು ಬೇಕಾದರೆ, ಇದೇನು ಆ ಇಕ್ಕಡೆಯ ಆಕ್ರಮಣಗಾರರ ತಲೆ ಕೆಟ್ಟ ಚಿಹ್ನೆಯೆ? ಅಥವಾ ದಕ್ಷಿಣಕನ್ನಡಿಗರ ಕಾಲು ಬಿಟ್ಟ ಲಕ್ಷಣವೆ?

ಕೇರಳದವರೀಗ ಬಾಯಿ ಮುಚ್ಚಿದಂತಿದೆ; ಅಥವಾ ಇಲ್ಲಿಯ ಕಾರ್ಯಕರ್ತರು ಕಣ್ಮುಚ್ಚಿ ಕುಳಿತರೂ ದಕ್ಷಿಣ ಕನ್ನಡದಲ್ಲಿ ಜನಮತ ತೆಗೆದರೆ, ಕೇರಳದ ಭ್ರಮೆ ಕೂಡಲೇ ನಿರಸನವಾದೀತು. ಆದರೆ ಈ 'ಕೊಂಕಣೀ ಪ್ರಾಂತ್ಯ'ದವರ ದಕ್ಷಿಣ ಕನ್ನಡಾಕ್ರಮಣ ಚಳವಳವು ಆದಿಯಿಂದಲೂ ಕಳ್ಳ ಹೆಜ್ಜೆಯಲ್ಲೇ ನಡೆದು ಬಂದಿದೆ; ಕೊಂಕಣೀ ಪ್ರಾಯಗಳಿಂದ ಆ ಕಡೆಗೆ ಜನರ ತಲೆ ತಿರುಗಿಸಬಲ್ಲವರು ದಕ್ಷಿಣ ಕನ್ನಡದಲ್ಲಿರುವಾಗ ಈ ಅಪಾಯದ ಕಡೆಗೆ ಈ ಜಿಲ್ಲೆಯವರು ಕಣ್ತೆರೆದೇ ಇರಬೇಕಾದುದು ಅತ್ಯಗತ್ಯ.

ಈ ಕೊಂಕಣೆ ಪ್ರಾಂತ್ಯದ ಆಸಕ್ತಿಗಾರರ ಮನೋವೃತ್ತಿಗೆ ನಿದರ್ಶನವಾಗಿ ಈ ಚಳವಳದ ಪ್ರವರ್ತಕರಲ್ಲೊಬ್ಬರಾದ ಕುಮಟೆಯ ಶ್ರೀ. ಎನ್. ಜಿ. ಶ್ಯಾನುಭಾಗರು, ಘಟನಾ ಸಮಿತಿಯ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರಿಗೂ, ಗೃಹ ಮಂತ್ರಿ ಸರ್ದಾರ್ ವಲ್ಲಭಾಯಿ ಪಟೇಲರಿಗೂ ಬರೆದಿದ್ದ ಪತ್ರದ ಕೆಲವು ವಾಕ್ಯಗಳನ್ನಷ್ಟೇ ಇಲ್ಲಿ ಅನುವಾದಿಸಿಕೊಟ್ಟಿದ್ದೇವೆ:—

"ಕರ್ನಾಟಕೀ ಮನೋವೃತ್ತಿಯೆಂಬುದು ಬಹಳಮಟ್ಟಿಗೆ ಪಾಕಿಸ್ತಾನೀ ಲೀಗ್ ಮನೋವೃತ್ತಿಯನ್ನೇ ಹೋಲುತ್ತಿದೆ. ಆದ್ದರಿಂದ ಪ್ರತ್ಯೇಕ ಕರ್ನಾಟಕ ಪ್ರಾಂತ್ಯ ರಚನೆಯಾಗುವ ಸಂದರ್ಭದಲ್ಲಿ ನಮ್ಮ ಜಿಲ್ಲೆಯು ಅದರೊಳಗೆ ಸೇರಿಕೊಳ್ಳಲಿಚ್ಛಿಸುವುದಿಲ್ಲ...ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತ್ಯಗಳೊಳಗೆ ವಿಭಾಗಿಸಲ್ಪಟ್ಟಿರುವ ಉತ್ತರ ಮತ್ತು ದಕ್ಷಿಣ ಕನ್ನಡಾ ಜಿಲ್ಲೆಗಳನ್ನು ಕನ್ನಡ ಮಾತಾಡುವ ಭಾಗಗಳೆಂದು ಗಣಿಸಲಾಗದು. ಕನ್ನಡದ ಪರಿಚಯ ಕೂಡಾ ಇರದ ತಾಲೂಕುಗಳು ನಮ್ಮ ಜಿಲ್ಲೆಯಲ್ಲಿವೆ. ಜನತೆಯಲ್ಲಿ ಕೊಂಕಣಿಯೇ ವಿಶೇಷವಾಗಿ ವ್ಯಾಪಿಸಿಕೊಂಡಿದೆ ...ಹೀಗಾಗಿ ಉತ್ತರ ಮತ್ತು ದಕ್ಷಿಣ ಕನ್ನಡಾ ಜಿಲ್ಲೆಗಳು ಮಿಶ್ರ ಪ್ರದೇಶಗಳಾಗಿದ್ದು, ಕೊಂಕಣಿಯೇ ಅಲ್ಲಿಯ ಸಾರ್ವಜನಿಕರ ಮುಖ್ಯ ಭಾಷೆಯಾಗಿದೆ. ಕನ್ನಡವನ್ನು ಸರಕಾರೀ ಭಾಷೆಯಾಗಿ ಮಾಡಿದ್ದರಿಂದಾಗಿ ಇಲ್ಲಿ ಕನ್ನಡವೂ ಸ್ವಲ್ಪ ಮಟ್ಟಿಗೆ ಕಾಲೂರುವಂತಾಗಿದೆ....ಕರ್ನಾಟಕ ಪ್ರಾಂತ್ಯ ರಚನೆಯಾದಲ್ಲಿ ಕೊಂಕಣಿ ಜನರೂ ಈ ತಾಳ್ಮೆರಹಿತ ಅತಿಗರ್ವಿ ಕನ್ನಡಿಗರ ದಬ್ಬಾಳಿಕೆಗೊಳಗಾಗಬೇಕಾಗುವದು. ಕರ್ನಾಟಕಿಗಳು ಗೋವೆಯನ್ನೂ ತಮ್ಮದೆಂದೇ ವಾದಿಸುತ್ತಿರುವರೆಂದು ನನಗೆ ತಿಳಿದುಬಂದಿದೆ. ಯಾವುದೊಂದು ಪ್ರಾಂತ್ಯದಲ್ಲಾದರೂ ಒಂದು ಭಾಗವನ್ನು ಸೇರಿಸಿಕೊಳ್ಳುವ ಸರಿಯಾದ ಒಂದು ಆಧಾರವು ಭಾಷೆಯೊಂದಾದರೆ ಗೋವೆಯು ಹಿಂದುಮಿರಲಿ, ಕ್ರೈಸ್ತನಿರಲಿ, ಕರ್ನಾಟಕದೊಂದೇ ಒಂದು ಪಾಕ ಬರುವ ಒಬ್ಬನೇ ಒಬ್ಬನಿಲ್ಲದಿರುವ ಗೋವೆಯನ್ನು ಕರ್ನಾಟಕಿಗಳು ಕೇಳುವದಾದರೂ ಹೇಗೆಂದು ನಾನು ಚಕಿತನಾಗಿದ್ದೇನೆ......ಆದ್ದರಿಂದ ಪ್ರತ್ಯೇಕ ಪ್ರಾಂತ್ಯದ ಚಳವಳವನ್ನು ನಿಲ್ಲಿಸಿ, ತಮ್ಮ ಕ್ಷೇತ್ರದಲ್ಲಿ ಶಾಂತಿ ಸ್ಥಾಪನೆ ಮಾಡುವ ಸರ್ವ ಪ್ರಯತ್ನ ಮಾಡಬೇಕೆಂದು ಕರ್ನಾಟಕದ ಎಲ್ಲಾ ನಾಯಕರಿಗೂ ನೀವು ನಿರ್ದೇಶಿಸ್ಯಬೇಕೆಂದು ನಾನು ನಿಮ್ಮನ್ನು ವಿನಂತಿಸಿಕೊಳ್ಳುತ್ತೇನೆ...ಕಳೆದ ಒಂದು ಶತಮಾನಕ್ಕೂ ಮಿಕ್ಕಿದ ಕಾಲದಿಂದಿರುವ ಇಂದಿನ ಸಂಬಂಧಗಳನ್ನು ಕಡಿದುಕೊಳ್ಳಲು ಯಾರೊಬ್ಬರೂ ಆತುರಪಡಬೇಕೆಂದಿಲ್ಲ.... ಸಂಗತಿ ಹೀಗಿದ್ದರೂ ಕರ್ನಾಟಕ ಧುರೀಣರು ಛಲ ತೊಟ್ಟು, ತಮ್ಮ ಧೋರಣೆಯನ್ನು ಮುಂದೊತ್ತುವ ದುರಂಹಂಕಾರವನ್ನು ಬಿಡಲಾರಾದರೆ, ಕನ್ನಡ ಮಾತಾಡುವ ಜಿಲ್ಲೆಗಳನ್ನು ಬೊಂಬಾಯಿ ಪ್ರಾಂತ್ಯದಿಂದ ಪ್ರತ್ಯೇಕಿಸಬಹುದೆಂದೂ, ಉತ್ತರದಲ್ಲಿ ಬೊಂಬಾಯಿ ದಕ್ಷಿಣದಲ್ಲಿ ಕೊಚ್ಚಿಯ ವರೆಗಿನ ಕರಾವಳಿ ಪ್ರಾಂತ್ಯವನ್ನು ಪ್ರತ್ಯೇಕ ಪ್ರಾಂತ್ಯವಾಗಿ ನಿರ್ಮಿಸಬೇಕೆಂದೂ ನನ್ನ ವಿಜ್ಞಾಪನ".

ಹೀಗಿದೆ ಈ ಕೊಂಕಣಿ ಭಾಷಾ ದುರಭಿಮಾನ! ಕನ್ನಡಿಗರು– ಮುಖ್ಯವಾಗಿ ದಕ್ಷಿಣ ಕನ್ನಡಿಗರು– ಈ ಅಪಾಯದ ಕಡೆಗೆ ಅಗತ್ಯ ಲಕ್ಷ್ಯವೀಯಲಿ! ಹುಟ್ಟು, ಸಂಸ್ಕಾರ, ಸಂಬಂಧ, ಭೂಸ್ಥಿತಿ, ಪರಿಸ್ಥಿತಿ, ಇವುಗಳಲ್ಲಾವುದರ ಆಧಾರವೂ ಇಲ್ಲದೆ, ಕೇವಲ ತಮ್ಮ ಸಂಚು ಹಂಚಿಕೆಯ ಬಲದಿಂದಲೇ ಬೊಂಬಾಯಿಯಿಂದ ಕೊಚ್ಚಿಯವರೆಗೊಂದು ಹೊಸ ರಾಜ್ಯವನ್ನು–ಕೊಂಕಣಿ ಪ್ರಾಂತ್ಯವನ್ನು– ದಕ್ಷಿಣ ಕನ್ನಡಿಗರ ಎದೆಮೆಟ್ಟಿ ಕಟ್ಟಿಕೊಳ್ಳಬೇಕೆಂದು ಬಗೆದಿರುವ, ಕಟ್ಟಿಕೊಳ್ಳಬಹುದೆಂಬ ಆಶೆಯಿಂದಿರುವ, ಈ ಅಪಾಯಕರ ಸಂಗಡಿಗರನ್ನು ಹೊಟ್ಟೆಯೊಳಗಿನ ಶೂಲೆಯೆಂದೇ ಗಣಿಸಿ ಕನ್ನಡಿಗರು– ಅದರಲ್ಲೂ ದಕ್ಷಿಣ ಕನ್ನಡಿಗರು– ಸಕಾಲದಲ್ಲಿ ಚಿಕಿತ್ಸೆ ಮಾಡಿಕೊಳ್ಳಲಿ!

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಗೊಳಿಸಲ್ಪಟ್ಟು ಇಂಡಿಯಾದಲ್ಲಿ ಸಂಘಟಿತವಾದದ್ದು]

ಮುದ್ದತಿ ಠೇವುಗಳು

ರೂ. ೧೨,೦೦೦ ಕ್ಕೂ ಅಧಿಕಕ್ಕೆ ಮೇಲ್ಪಟ್ಟ ರೂ. ೧೦೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಈಗ ಸ್ವೀಕರಿಸಲಾಗುತ್ತದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ,, ,, ೨॥

೬ ರಿಂದ ೯ ತಿಂಗಳು ,, ,, ೨॥।

ರೂ. ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೨೫,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ರೇಶನ್ ಕಾರ್ಡುಗಳು ದೊರೆಯುತವೆ.

ಇಡೀ ಪ್ರಪಂಚದ ಮತ್ತು ಪ್ರತ್ಯೇಕವಾಗಿ ಭಾರತದ ವಿದ್ಯಮಾನಗಳು ಕಳೆದ ವಾರವೂ ಬಹುತೇಕವಾಗಿ ಹಿಂದಿನಂತೆಯೇ ಇದ್ದುವೆನ್ನಬಹುದು. ಜಾಗತಿಕ ಕ್ಷೇತ್ರದಲ್ಲಿ ರಶ್ಯಾ ಮತ್ತು ಇತರ ಪ್ರಮುಖ ಮಿತ್ರ ರಾಷ್ಟ್ರಗಳೊಳಗಿನ ಘರ್ಷಣೆ—ಭಾರತ ರಂಗದಲ್ಲಿ ಹೈದರಾಬಾದು, ಕಾಶ್ಮೀರ ಸಮಸ್ಯೆ—ಇವೇ ಮುಖ್ಯವಾದುವುಗಳು. ಇವೆರಡೂ ಕಳೆದ ವಾರದಲ್ಲಿ ಮೊದಲಿನ ಸ್ಥಿತಿಯನ್ನೆ ಉಳಿಸಿಕೊಂಡಿದ್ದುವು.

ಅಮೇರಿಕ, ಇಂಗ್ಲಾಂಡು, ಫ್ರಾನ್ಸು ಮತ್ತು ರಶ್ಯಗಳೊಳಗೆ ನಡೆದಿರುವ ಘರ್ಷಣೆಗಳು ಇನ್ನೊಂದು ಮಹಾಯುದ್ಧದ ಗುರಿಮುಟ್ಟದೆ ಹೇಗೆ ಮುಕ್ತಾಯಗೊಳ್ಳಬಲ್ಲುವೋ ಅರ್ಥವಾಗುವುದಿಲ್ಲ. ಇವುಗಳ ಪ್ರಮುಖ ಮುತ್ಸದ್ದಿಗಳು ಒಟ್ಟಾಗಿ ಶಾಂತಿ ತೀರ್ಮಾನಗಳನ್ನು ಕಂಡುಕೊಳ್ಳಬೇಕೆಂಬ ಸೂಚನೆಗಳಿವೆಯಾದರೂ ಈ ಕಲ್ಪನದ ಮೂಲವೆಲ್ಲಿ ಎಂಬುದನ್ನರಿತರೆ ಇಂತಹ ಮಾತುಕತೆಗಳಿಂದ ಶಾಶ್ವತ ಸತ್ಫಲ ದೊರೆಯುವ ಭರವಸೆ ಮೂಡುವದಿಲ್ಲ. ಸಂಪೂರ್ಣವಾಗಿ ಜನಹಿತವೊಂದನ್ನೇ ಗಣಿಸುವ ಮಾದರಿಯ ಸರಕಾರೀ ರಚನೆಯಲ್ಲಿಯೂ ಆಗದ್ದೆ ಅಧಿಕಾರ ಸೂತ್ರಗಳು ಕೆಲವರ ಕೈಯೊಳಗೆ ಸೆರೆ ಸಿಕ್ಕಿದಂತೆ ಸಿಕ್ಕಿಕೊಂಡಿರುವುದೇ ಈ ಅಪಾಯಕ್ಕೆ ಕಾರಣವೆನ್ನಬಹುದು. ಅಮೇರಿಕದಂತಹ ಭಂಡವಾಳಶಾಹಿ ರಾಷ್ಟ್ರವು ಸಹಜವಾಗಿ ಶ್ರೀಮಂತ ವರ್ಗದ ಹಿತಾಕಾಂಕ್ಷೆಯೊಂದನ್ನೇ ಕಟ್ಟಿಕೊಂಡಿದೆಯಾದರೆ, ಸೋವಿಯಟ್ ರಶ್ಯಾದಂತಹ ಕೂಲಿಗಾರ ಪಕ್ಷಪಾತಿ ಸರಕಾರ ಕೂಡಾ ನಿರ್ದೋಷವಾಗಿಲ್ಲ. ಯುದ್ಧದ ಕಷ್ಟ ನಷ್ಟಗಳನ್ನನುಭವಿಸತಕ್ಕ ಜನಸಾಮಾನ್ಯರ ಯಥಾರ್ಥ ಪ್ರತಿನಿಧಿ ಸರಕಾರವಲ್ಲಿಯಾದರೂ ಇರುತಿದ್ದರೆ, ಇನ್ನೊಂದು ಯುದ್ಧದ ಮಾತು ಇಷ್ಟು ಬೇಗನೇ ಇಷ್ಟು ಬಲವಾಗಿ ಕೇಳಬರುತ್ತಿರಲಿಲ್ಲವೆಂಬುದು ನಿಸ್ಸಂದೇಹ.

ಆದರೆ, ಈಗ ಬರ್ಲಿನ್ ವಿಯೆನ್ನಾಗಳಂತಹ ನಗರಗಳಲ್ಲಿ ರಶ್ಯಾ ಮತ್ತಿತರ ಮಿತ್ರ ರಾಷ್ಟ್ರಗಳೊಳಗಿದ್ದಿರುವ ತಿಕ್ಕಾಟ—ಜಾಗತಿಕ ಸಂಘದಲ್ಲಿ ಇವೆರಡು ಪಕ್ಷಗಳೊಳಗೆ ನಡೆಯುವ ಸ್ಪರ್ಧೆ—ಲೋಕದ ಎಲ್ಲಾ ರಾಷ್ಟ್ರಗಳ ಮೇಲೂ ಈ ಎರಡು ಮುಖ್ಯ ಪಾಳಯಗಳು ಬೀಸುತ್ತಿರುವ ಬಲೆ—ಇವಾವುದರಿಂದಲೂ ಕೂಡಲೇ ಇನ್ನೊಂದು ಮಹಾಯುದ್ಧ ಸ್ಫೋಟಗೊಂಡೀತೆಂದು ನಿರೀಕ್ಷಿಸಲಾಗುವದಿಲ್ಲ. ಅಂತಹ ತಲೆಹೋಕತನವು ಯಾವ ಕಡೆಯಲ್ಲೂ ಇಲ್ಲ. ಮೇಲಾಗಿ ಕಳೆದ ಯುದ್ಧದ ಅನುಭವವು ಇಷ್ಟು ಬೇಗನೇ ಅಸ್ಪಷ್ಟವೂ ನೀರಸವೂ ಆಗಿ ಹೋಗ ತಕ್ಕದೂ ಅಲ್ಲ. ಈಗಿನ ಈ ಸ್ಪರ್ಧೆಗಳೆಂದರೆ, ತಾವು ಸಮರ್ಥರು, ಧೀರರು ಎಂಬುದನ್ನು ಇದಿರುವಾದಿಯ ಮನಸ್ಸಿಗೆ ಮುಟ್ಟಿಸಬೇಕೆಂದೇ ಇಕ್ಕಡೆಯವರೂ ಮಾಡುತ್ತಿರುವ ಪ್ರದರ್ಶನಗಳೆನ್ನಬಹುದು. ಆಶ್ಚರ್ಯದ ಹಾಗೂ ಸಂತಾಪದ ವಿಷಯವೆಂದರೆ ಒಂದು ಮಹಾ ಜಾಗತಿಕ ಪ್ರಳಯವು ಮುಗಿದು ಅದರ ಚಿಹ್ನೆಗಳು ಜನಜೀವನದಿಂದ ಇನ್ನೂ ಮಾಸದಿರುವಾಗಲೇ, ಅದಕ್ಕಿಂತಲೂ ಭೀಕರವಾದ ಇನ್ನೊಂದು ಮಹಾ ಪ್ರಳಯಕ್ಕೆ ತಾವು ತಯಾರೆಂಬುದನ್ನು ತೋರಿಸಿಕೊಳ್ಳುವ ಆಟದಲ್ಲೇ ಈ ರಾಷ್ಟ್ರಗಳು ನಿರತವಾಗಿರುವದು! ಇಂತಹ ಮೇಲಾಟವು ಇಂದಲ್ಲವಾದರೆ ನಾಳೆ, ಇನ್ನೊಂದು ಹೋರಾಟದಲ್ಲೇ ಅಂತ್ಯಗೊಳ್ಳಬೇಕಾಗುವದೆಂಬುದೂ ಖಂಡಿತ.

ಭಾರತದ ರಾಜಕೀಯದ ಕುರಿತೂ ಹೊಸ ಟಿಪ್ಪಣಿಯೇನನ್ನೂ ಬರೆಯುವ ಅಂಶ ಕಾಣುವದಿಲ್ಲ—ನಿತ್ಯದ ಬೇಸರಕ್ಕೆ ಹೊಸಹೊಸ ಭಾಗವು ಸೇರಿಕೊಳ್ಳುತ್ತಿದೆ ಎಂದಷ್ಟೇ ಹೇಳಬಹುದು.

ಕಾಶ್ಮೀರದ ಪ್ರಶ್ನೆಗೆ ಜಾಗತಿಕ ಸಂಘದಲ್ಲಿ ದೊರೆತಿರುವ ದುರವಸ್ಥೆ—ಹೈದರಾಬಾದಿನ ಸದರ್ ಘೋಷಣೆ—ಪಾಕಿಸ್ತಾನ್ ಪ್ರಾಂತ್ಯಗಳಿಂದ ನಿರಾಶ್ರಿತ ಹಿಂದುಗಳು ಪುನಃ ತಂಡ ತಂಡವಾಗಿ ಭಾರತಕ್ಕೋಡಿ ಬರುತ್ತಿರುವ ದುರಂತ—ಈ ಮೂರು ಮುಖ್ಯ ಸಮಸ್ಯೆಗಳೂ ಒಂದೇ ಪಂಗ್ತಿಯವಿದ್ದು ಭಾರತ-ಪಾಕಿಸ್ತಾನಗಳೊಳಗಿನ ಎಳೆದಾಟಗಳಾಗಿವೆ. ಶಾಂತ ತೀರ್ಮಾನಗಳನ್ನು ಹೊಂದಬಹುದೆಂಬ ಆಶೆಯು ಕಾರ್ಮುಗಿಲ ನಡುವಿನ ಮಿಂಚು ಪ್ರಕಾಶದಂತೆ ಆಗಾಗ ಹೊಳೆದರೂ ಕತ್ತಲೆ ಮಾತ್ರ ಕಳೆಯದೆ ಏರುತ್ತಾ ಬರುತ್ತಿದೆ. ಇದಾದರೂ ಗುರಿಮುಟ್ಟುವುದು ಹೇಗೆ? ಸಂಧಾನಕ್ಕಾಗಿ ಮನುಷ್ಯಸಾಧ್ಯ ಪ್ರಯತ್ನಗಳೆಲ್ಲವೂ ಈ ಮೊದಲೇ ನಡೆದು ನಿಷ್ಫಲಗೊಂಡಿರುವಾಗ ಇನ್ನಾವ ಶಾಂತಿದೂತ ಆಕಾಶದಿಂದಿಳಿದು ಎಲ್ಲವನ್ನೂ ಬಗೆಹರಿಸಿಯಾನೆಂದು ನಿರೀಕ್ಷಿಸಬಹುದು? ಭಾರತ-ಪಾಕಿಸ್ತಾನಗಳೊಳಗಿನ ಗಾಢ ವೈಮನಸ್ಸು ಮತ್ತು ದಿನಕಳೆದಂತೆ ಪ್ರತಿಯೊಂದು ಸಂಬಂಧವೂ ಸಮಸ್ಯೆಯ ರೂಪದಿಂದಲೇ ಮುಂದಾಗುತ್ತಿರುವ ಪರಿಸ್ಥಿತಿ, ಇವುಗಳ ಮೇಲಿಂದ, ಇಂದಲ್ಲವಾದರೆ ನಾಳೆ ಹೋರಾಟವಂತೂ ಖಂಡಿತವೆಂದು ಇಲ್ಲಿಯೂ ಖಚಿತವಾಗುವದಿಲ್ಲವೆ?

ಅಂತೂ ಇಡೀ ಪ್ರಪಂಚದಲ್ಲಿ ಶಾಂತಿಗೇಕೆ ಈ ರೀತಿ ರಾಹುಗ್ರಾಸವಾಗಿದೆಯೋ ಅರ್ಥವಾಗುವುದಿಲ್ಲ. ಲೋಕಶಾಂತಿ, ಸರ್ವಸಮಾನತೆ, ಭದ್ರಭವಿಷ್ಯ,—ಮುಂತಾದ ಅಮೂಲ್ಯ ತತ್ವಗಳನ್ನು ಪ್ರತಿದಿನ ಪಠಿಸುತ್ತಿರುವವರು, ಅದಕ್ಕನುಗುಣವಾದ ಸಾಹಸವಾವುದನ್ನೂ ಈ ಸಂದರ್ಭದಲ್ಲೂ ಮಾಡುತ್ತಿಲ್ಲವೇಕೆ ಎಂಬುದೇ ತಿಳಿಯುವದೀ. ಅದ್ದರಿಂದ ದುಃಖದ ವಿಷಯವಾದರೂ ಸತ್ಯಸ್ಥಿತಿಯೆಂದರೆ ಶಾಂತಿದೇವಿ ಭಜಕರಿಲ್ಲದೆ ಹಾಳುಬಿದ್ದ ಗುಡಿಯ ಮೂರ್ತಿಯಾಗಿದ್ದಾಳೆ!

★ ಈ ಮೇಲಾಟ—

ಇಟಲಿ ಚುನಾವಣೆ—ಪೆಲಸ್ತೈನ್ ವಿವಾದ—

ಇಟಲಿ ಚುನಾವಣೆ

ಇಟಲಿಯ ಸಾರ್ವತ್ರಿಕ ಚುನಾವಣೆಯು—ಆಂಗ್ಲೋ ಅಮೇರಿಕ ಮತ್ತು ರಶ್ಯವು ತಮ್ಮ ಶಕ್ತಿಪರೀಕ್ಷೆಯ ಒರೆಗಲ್ಲೆಂದು ಭಾವಿಸಿರುವ ಇಟಲಿಯ ಅಧಿಕಾರ ನಿರ್ಣಯವು—ಇದೇ ತಿಂಗಳ ತಾ. 18ರಲ್ಲಿ ನಡೆದಿದೆ. ಈ ಚುನಾವಣೆಯು ಲೋಕವ್ಯಾಪೀ ಆತುರವನ್ನೆಬ್ಬಿಸಿದ್ದಿತು. ಬರ್ಲಿನಿನಲ್ಲಿಯೂ ವಿಯೆನ್ನದಲ್ಲಿಯೂ ರಶ್ಯವು ಆಂಗ್ಲೋ ಅಮೇರಿಕನರ ವಾಹನಗಳಿಗೂ ಇತರ ವಹಿವಾಟುಗಳಿಗೂ ತಡೆಹಾಕಿ ತನ್ನ ಶಕ್ತಿ ಮತ್ತು ಎದೆಗಾರಿಕೆಯನ್ನು ಪ್ರದರ್ಶಿಸಿದುದು ಇಟಲಿಯ ಮತದಾರರು ತನ್ನ ಯೋಗ್ಯತೆಯನ್ನು ಕಂಡಾದರೂ ಕಮ್ಯೂನಿಸ್ಟ್ ಪಕ್ಷಕ್ಕೇನೇ ಮತಕೊಡಬೇಕೆಂಬುದಕ್ಕಾಗಿ ಎಂದು ನಂಬಲಾಗಿದೆ. ಈ ಚುನಾವಣೆಯ ಕುರಿತು ಇಕ್ಕಡೆಯ ಪ್ರಮುಖ ರಾಷ್ಟ್ರಗಳೂ ವಿಶೇಷ ಆಸಕ್ತಿ ವಹಿಸಿದ್ದುವು. ಚುನಾವಣೆಯಲ್ಲಿ ಇಟಲಿಯ ಸುಮಾರು 15 ರಾಜಕೀಯ ಪಕ್ಷಗಳು ಸ್ಪರ್ಧಿಸಿದ್ದರೂ ಮುಖ್ಯ ಪಕ್ಷಗಳೆಂದರೆ ಅಮೇರಿಕಾಂಗ್ಲರ ಪಕ್ಷಪಾತಿ ಡೀ ಗೇಸ್ಪೆರಿ, ಮತ್ತು ರಶ್ಯದ ಪಕ್ಷಪಾತಿ ಪಾಲ್ಮಿರೋ ಟೋಗ್ಲಿಯಾಟ್ಟೀ ಇವರಿಬ್ಬರದು. ಗೇಸ್ಪೆರಿಯವರ ಪಕ್ಷವು ಸ್ವತಂತ್ರ ವ್ಯಾಪಾರ ವಹಿವಾಟಿಗಾಸ್ಪದ ಕೊಡುವ ಹಾಗೂ ಅಮೇರಿಕದ ಮಾರ್ಶಲ್ ಯೋಜನೆಯ ಸಹಾಯ ಪಡೆದು ಅಭಿವೃದ್ಧಿ ಸಾಧಿಸುವ ಧೋರಣೆಯನ್ನಿಟ್ಟುಕೊಂಡಿದೆ. ಸಿಗ್ನರ್ ನೆನುಟ್ರೊ ನೆನ್ನಿಯವರ ಸಮತಾವಾದಿ ಪಕ್ಷದ ಹೆಚ್ಚಿನವರ ಸಮೇತ ಟೋಗ್ಲಿಯಾಟ್ಟಿಯವರ ಕಮ್ಯೂನಿಸ್ಟ್ ಪಕ್ಷವು 'ಜನತಾ ಪ್ರಜಾಪ್ರಭುತ್ವ ರಂಗ'ವಾಗಿ ರೂಪುಗೊಂಡು ಮಾರ್ಶಲ್ ಯೋಜನೆಯನ್ನು ಧಿಕ್ಕರಿಸಿ ಇಟಲಿಯಲ್ಲಿ ಸ್ವತಂತ್ರ ಸಮತಾ ರಾಜ್ಯಭಾರ ಕಟ್ಟುವ ಧೋರಣೆಯನ್ನಿಟ್ಟುಕೊಂಡಿವೆ. ಇಕ್ಕಡೆಯವರೂ ಸುಮಾರು 2 ಕೋಟಿ ಮತದಾರರ ನಡುವೆ ಅತಿ ಪ್ರಬಲ ರೀತಿಯ ಚುನಾವಣಾ ಪ್ರಚಾರಗಳನ್ನು ನಡೆಸಿದ್ದರು. ಕಮ್ಯೂನಿಸ್ಟರಿಗೆ ವಿಜಯ ದೊರಕುವುದು ಅಸಂಭವವೆಂದು ತಿಳಿದುಬಂದಿದೆ. ಕಮ್ಯೂನಿಸ್ಟರು ಮತದಾನವೇ ನಡೆಯದಂತೆ ಆತಂಕಿಸುವರೆಂದೋ, ಆಕ್ರಮಣ ಧಾಳಿ ಹೂಡುವರೆಂದೋ ಏನೇನೋ ಸುದ್ದಿಗಳು ಹಬ್ಬಿದ್ದುದರಿಂದ ಚುನಾವಣೆಯ ವೇಳೆ ವಿಶೇಷ ರೀತಿಯ ಸೇನಾ ಪಹರೆಗಳನ್ನಿಡಲಾಗಿತ್ತು. 3 50000 ಸೈನಿಕರನ್ನು ಹೋರಾಟಕ್ಕೆ ಸಜ್ಜುಗೊಳಿಸಿ ನಿಲ್ಲಿಸಲಾಗಿತ್ತು. ಆದರೆ ಕಮ್ಯೂನಿಸ್ಟರು ಬಂಡಾಯದ ಯೋಚನೆಯಲ್ಲೇ ತಾವಿಲ್ಲವೆಂದೂ ಮತದಾರರ ತೀರ್ಮಾನವನ್ನು ಶಿರಸಾವಹಿಸುವೆವೆಂದೂ ಸಾರಿದ್ದಾರೆ. ಬ್ರಿಟಿಷ್ ಮತ್ತು ಅಮೇರಿಕದ ಯುದ್ಧ ಹಡಗ ಹಾಗೂ ಆಕಾಶಯಾನಗಳು ಚುನಾವಣೆಯ ವೇಳೆ ಇಟಲಿಯ ಬಂದರ ಮತ್ತು ಆಕಾಶದಲ್ಲಿ ಕಾಣಿಸಿಕೊಂಡು ಅಲ್ಲಿಯ ಮತದಾರರನ್ನು ಬೆದರಿಸಿರುವವೆಂದೂ, ಇಟಲಿ ಚುನಾವಣೆಯಲ್ಲಿ ವಿದೇಶಗಳು ಕೈಹಾಕಿ ಅನ್ಯಾಯ ನಡೆಯುತೆಂದೂ ರಶ್ಯವು ಆರೋಪಿಸಿದೆ. ಚುನಾವಣೆಯ ಫಲಿತಾಂಶವು ಇಷ್ಟರೊಳಗೆ ಬಹಿರಂಗವಾಗಿರಬೇಕು.

ಪೆಲಸ್ತೈನ್ ಪ್ರಶ್ನೆ

ಪೆಲಸ್ತೈನಿನಲ್ಲಿ ಅರಬ-ಯಹೂದಿಗಳೊಳಗೆ ಇತ್ತೀಚೆಗೆ ಖಾಡಾಖಾಡಿ ಸಮರವೇ ನಡೆದಿದ್ದಿತು. ಈಗ ಭದ್ರತಾ ಕೌನ್ಸಿಲು ಎಲ್ಲಕ್ಕಿಂತ ಮೊದಲು ಅಲ್ಲಿಯ ಹೋರಾಟವನ್ನು ಮುಕ್ತಾಯಪಡಿಸಿಕೊಳ್ಳುವದಕ್ಕಾಗಿ ಒಂದು 'ಶಾಂತಿ ಒಪ್ಪಂದದ ನಿರ್ಣಯ' ಮಾಡಿದೆ. ಈ ನಿರ್ಣಯ ಪ್ರಕಾರ ಪೆಲಸ್ತೈನಿನ ಎಲ್ಲಾ ಹೋರಾಟಗಳು ಮತ್ತು ಹಿಂಸಾತ್ಮಕ ಕಾರ್ಯಾಚರಣೆಗಳು ಕೂಡಲೇ ನಿಲ್ಲತಕ್ಕದ್ದು—ಸಶಸ್ತ್ರ ಹಾಗೂ ಹೋರಾಟಗಾರ ಜನರು ಪೆಲಸ್ತೈನಿನೊಳಗೆ ನುಗ್ಗಿ ಬಾರದಂತೆ ತಡೆ ಹಾಕಬೇಕು—ಅರಬರ ಮತ್ತು ಯೆಹೂದಿಗಳ ಹಕ್ಕು ಬಾಧ್ಯತೆಗಳಿಗೆ ಹಾನಿಕರವಾದ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಬೇಕು—ವ್ಯವಸ್ಥೆ ಮತ್ತು ಮುಖ್ಯ ಕಾರ್ಯ ವಿಭಾಗಗಳನ್ನು ಸಾಗಿಸಲು ಬ್ರಿಟಿಷರೊಡನೆ ಸಹಕರಿಸಬೇಕು—ಪವಿತ್ರ ಸ್ಥಳಗಳನ್ನು ರಕ್ಷಿಸಬೇಕು—ಇತ್ಯಾದಿ ಶರ್ತಗಳಿವೆ. ಈ ಶರ್ತಗಳ ಪಾಲನೆಯ ಮೇಲ್ವಿಚಾರವನ್ನು ಈಗ ಬ್ರಿಟನು ಕೈಕೊಂಡಿದೆ. ಬ್ರಿಟಿಷ್ ಸರಕಾರವು ಮೇ ತಾ. 15ಕ್ಕೆ ಪೆಲಸ್ತೈನಿನ ತನ್ನ ಮೇಲಧಿಕಾರವನ್ನು ಬಿಟ್ಟುಬಿಡುವ ಹಾಗೂ ಆಗೋಸ್ತು 1ಕ್ಕೆ ಅಲ್ಲಿಂದ ತನ್ನ ಸೇನೆಗಳನ್ನು ಹಿಂದೆಗೆಯುವ ನಿರ್ಧಾರಕ್ಕೆ ಅಚಲವಾಗಿ ಅಂಟಿಕೊಂಡಿದೆ.

ಇತರ ಘಟನೆಗಳು

ರಶ್ಯವು ಫಿನ್ಲೆಂಡಿನೊಡನೊಂದು ಒಪ್ಪಂದವನ್ನು ಮಾಡಿಕೊಂಡಿದೆ. ಈ ಒ

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terrible diseases. Malaria if not promptly cured may disable a man for years, Filaria is a dirty, disfiguring disease. And yet a little united effort on the part of the public could at very little cost wipe out these two evils Please, watch this space.

inserted by:

The Canara Mutual Assurance Company Limited.
ESTD. 1933
H. O. UDIPI.

ಹೋರಾಟಗಳು ★

ಹೈದರಾಬಾದ್ ಸಮಸ್ಯೆ—ಕಾಶ್ಮೀರದ ತಂಟೆ

ಡಂಬಡಿಕೆಯ ಕುರಿತು ಮಾತಾಡುತ್ತಾ ಮಾರ್ಶಲ್ ಸ್ಟಾಲಿನರು ಪ್ರಪಂಚದ ಇತರ ದೊಡ್ಡ ರಾಷ್ಟ್ರಗಳ ರಾಜಕಾರಣಿಗಳು ಸಣ್ಣ ರಾಷ್ಟ್ರಗಳನ್ನು ಮೇಲಿನವರು ಕೆಳಗಿನವನನ್ನು ನೋಡುವ ದೃಷ್ಟಿಯಲ್ಲೇ ನೋಡುತಿದ್ದರೆಂದೂ ರಶ್ಯವು ಮಾತ್ರ ಸಮಾನತೆಯನ್ನು ಧರಿಸಿದೆಯೆಂದೂ ಸಾರಿದ್ದಾರೆ. ಪಶ್ಚಿಮ ಯುರೋಪು ಪಂಚ ರಾಷ್ಟ್ರಗಳ ಆಡಳಿತ ಮಂಡಲಿ ಮತ್ತು ಸೇನಾ ಮಂಡಲಿಯು ಲಂಡನ್ನಿನಲ್ಲಿ ಮುಖ್ಯ ಕಾರ್ಯಾಲಯ ಸ್ಥಾಪಿಸಿಕೊಂಡು ಭರದಿಂದ ಕಾರ್ಯ ಪ್ರವೃತ್ತವಾಗಿದೆ. ಚೈನದ ರಾಷ್ಟ್ರೀಯ ಎಸೆಂಬ್ಲಿಯು 'ಕಮ್ಯೂನಿಸಮಿನ ವ್ಯಾಪಕತೆಯನ್ನು ತಡೆಗಟ್ಟುವದಕ್ಕಾಗಿ ಆಗ್ನೇಯ ಏಶ್ಯಾದ ರಾಷ್ಟ್ರಗಳ ಸೇನಾ ಸಂಬಂಧ ನಿರ್ಮಿಸಿಕೊಳ್ಳಬೇಕೆಂದೂ 1939ರಲ್ಲಿ ರಶ್ಯದೊಡನೆ ಚೈನವು ಮಾಡಿಕೊಂಡಿರುವ ಆಕಾಶ ಸಂಬಂಧದ ಒಪ್ಪಂದವನ್ನು ಚೈನದ ವಿದೇಶ ಸಂಬಂಧ ಖಾತೆಯು ಮುರಿದುಕೊಳ್ಳಬೇಕೆಂದೂ ಠರಾಯಿಸಿದೆ. 17 ರಾಷ್ಟ್ರಗಳ 18 ಪ್ರತಿನಿಧಿಗಳು (ಜರ್ಮನಿಗಿಬ್ಬರು) ಪ್ಯಾರಿಸಿನಲ್ಲಿ ಸೇರಿ, ಅಮೇರಿಕದ ಮಾರ್ಶಲ್ ಯೋಜನೆಯನ್ವಯದ 1700 ಮಿಲಿಯ ಪೌಂಡಗಳನ್ನು ಪಡಕೊಂಡು ಯುರೋಪಿನ ಯುದ್ಧ ಪೀಡಿತ ರಾಷ್ಟ್ರಗಳ ಆರ್ಥಿಕ ಪುನರುದ್ಧಾರ ಸಾಧಿಸುವದಕ್ಕಾಗಿ ಒಂದು ಶಾಶ್ವತ ಸಂಘ ರಚಿಸಿಕೊಳ್ಳುವ ಕರಾರಿಗೆ ಸಹಿ ಮಾಡಿವೆ. ಇದೇ ರೀತಿಯ ಒಂದೋ ಅಮೇರಿಕ, ಅಥವಾ ರಶ್ಯಾ ಪಕ್ಷಪಾತತೆಯ ಕಾರ್ಯಾಂದೋಲನಗಳು ಯುರೋಪಿನ ಪ್ರತಿಯೊಂದು ರಾಷ್ಟ್ರದಲ್ಲೂ ಒಂದಲ್ಲೊಂದು ರೀತಿಯಿಂದ ನಡೆದಿವೆ.

ಹೈದರಾಬಾದು

ಇತ್ತ ಭಾರತ ಕೇಂದ್ರದ ಉದರ ಶೂಲೆ [illegible] ಯಾತನೆ ಕೊಡಹತ್ತಿದೆಯೆನ್ನಬಹುದು. ಸ್ವರಾಜ್ಯ ಸ್ಥಾಪನೆಯಾದ ಆಗೋಸ್ತು 15ಕ್ಕೆ ಮೊದಲೇ ಭಾರತ ಸರಕಾರವು ಹೈದರಾಬಾದು ಸಂಸ್ಥಾನದೊಡನೆ ಸಂಧಾನ ಮಾತುಕತೆಗಾರಂಭಿಸಿದ್ದು, ಅಂದಿನಿಂದಿದುವರೆಗೆ ಹಲವು ಕಂಟಕಗಳು ಹೊಸತಾಗಿ ಮೂಡಿವೆ ಹೊರತು, ಯಾವುದೇ ರೀತಿಯ ಸಮಾಧಾನಕರ ಒಮ್ಮತವಾಗಿಲ್ಲವೆಂಬುದು ಸಖೇದಾಶ್ಚರ್ಯಕರ ಸಂಗತಿ. ಕಳೆದ ವಾರದಲ್ಲಿ ಮತ್ತೊಮ್ಮೆ ದಿಲ್ಲಿಯಲ್ಲಾರಂಭಿಸಿದ್ದ ಸಂಧಾನ ಮಾತುಕತೆಗಳೂ ಮುಗಿದು ಭಾರತ ಹೈದರಾಬಾದು ಸಂಧಾನ ಚರಿತ್ರೆಯ ಒಂದು ಪ್ರಾಮುಖ್ಯ ಅಧ್ಯಾಯವು- ಈ ಚರಿತ್ರೆಯೇ ಏಕೆ ಮುಗಿಯಬಾರದೋ ತಿಳಿಯದು! ಮುಕ್ತಾಯಗೊಂಡಿದೆ. ಸ್ವತಃ ನಿಜಾಮರೇ ನವದೆಹಲಿಗೆ ಬರಲಿರುವರು... ಎಂದಿದ್ದರೂ ಈಗ ಅದು ರದ್ದಾಗಿದೆ. ನಿಜಾಮರ ಪ್ರಧಾನಿ ಮಿ. ಲಾಯಿಕ್ ಅಲಿ ಮತ್ತು ಸಲಹೆಗಾರ ಸರ್. ವಾಲ್ಟರ್ ಮೋಂಕ್ಟನ್ನರು ಲೋರ್ಡ್ ಮೌಂಟ್‌ಬೇಟನ್, ಪಂಡಿತ ನೆಹರು, ಸರ್ದಾರ್ ಪಟೇಲ್, ಶ್ರೀ ವಿ. ಪಿ. ಮೆನನ್ ಮೊದಲಾದ ಅಧಿಕಾರಿಗಳೊಂದಿಗೆ ಸವಿವರ ಪರ್ಯಾಲೋಚನೆ ನಡೆಸಿ ಭಾರತ ಸರಕಾರದ ಕೊನೆಯ ಸ್ಪಷ್ಟಾಭಿಪ್ರಾಯಗಳನ್ನು ಪಡೆದು ಹೈದರಾಬಾದಿಗೆ ಮರಳಿದ್ದಾರೆ. ಪರಿಸ್ಥಿತಿಯು ಇದ್ದಂತೆ ಇದ್ದು ನಿರಾಶಾಜನಕವಿದೆ ಎಂದೂಹಿಸಲಡ್ಡಿಯಿಲ್ಲ. ಹಿಂದೀ ಸರಕಾರವು ಇನ್ನು ವಿವರಿಸುವ ಅಥವಾ ತಿದ್ದುಪಡಿ ಮಾಡುವ ಆಕ್ಷೇಪವುದನ್ನೂ ಬಾಕಿಯಿಡದೆ ಎಲ್ಲವನ್ನೂ ಈ ಬಾರಿ ಸ್ಪಷ್ಟ ಮಾಡಿರುವದೆಂದು ತಿಳಿದು ಬರುತ್ತದೆ. ನಿಜಾಮರು ಕೂಡಲೇ ಪ್ರಜಾಪ್ರಭುತ್ವ ಸ್ಥಾಪನೆಗೊಪ್ಪಿ ಒಂದು ನಡುಗಾಲ ಸರಕಾರವನ್ನು ರಚಿಸಬೇಕು—ಮುಂದಿನ ಶಾಶ್ವತ ರಾಜ್ಯಾಂಗ ರಚನೆಗೆ ಒಂದು ಘಟನಾ ಸಮಿತಿಯನ್ನು ನೇಮಿಸಬೇಕು—ಶಾಂತಿಗೆ ವ್ಯತ್ಯಪ್ರದರಾದ ರಝಾಕಾರರಂತಹ ಹಿಂಸಾತ್ಮಕ ದಳಗಳನ್ನು ಒಡನೆಯೇ ಬರ್ಖಾಸ್ತುಗೊಳಿಸಬೇಕು—ಎಂಬುದೇ ಹಿಂದೀ ಸರಕಾರದ ಮುಖ್ಯಾಭಿಪ್ರಾಯ. ಈ ಪ್ರಮುಖ ಪ್ರಶ್ನೆಗಳಿದಿರಲ್ಲಿ ತಾತ್ಕಾಲಿಕ ಒಪ್ಪಂದ ನಿರೋಧಗಳಂತಹ ಇತರ ವಿಷಯಗಳು ಕಡೆಗಣಿಸಲ್ಪಟ್ಟಿವೆ. ನಿಜಾಮರು ಈ ಶರ್ತಗಳಿಗೊಪ್ಪಿಯಾರೆಂಬ ಭರವಸೆಯಿಲ್ಲ.

ಹೈದರಾಬಾದಿನ ಸಂಬಂಧವಾಗಿ ಇಡೀ ಭಾರತದಲ್ಲೇ ದ್ವೇಷ, ಜಿಗುಪ್ಸೆಗಳು ಮೊಳೆಯುವಂತೆ ಮಾಡಿದುದೆಂದರೆ ಅಲ್ಲಿಯ ಮಜ್ಲೀಸರ ಕ್ರೂರ ಇತ್ತೆಹಾದ್—ಉಲ್—ಮುಸ್ಲಿಮೀನ್ ಸಂಸ್ಥೆಯ ಸಶಸ್ತ್ರ ಸ್ವಯಂ ಸೇವಕ ದಳ ರಝಾಕಾರ ವ್ಯತ್ಯದಂಡಿನ ಕಾರ್ಯ ಮತ್ತು ಘೋರಣೆ. ಹೈದರಾಬಾದಿನಲ್ಲಿ ಬಹುಸಂಖ್ಯಾಕರಾಗಿರುವ ಮುಸ್ಲಿಮೇತರರನ್ನು ತಮ್ಮ ಆಯುಧ ಮತ್ತು ಅತ್ಯಾಚಾರಗಳ ಬಲದಿಂದ ದಮನಿಸಿ ಹಣ್ಣುಮಾಡಿ ನಿಜಾಮರ ಸಾರ್ವಭೌಮತ್ವವನ್ನು ಇದ್ದ ಮಟ್ಟಿಗೆ ಉಳಿಸಿಕೊಡುವುದಷ್ಟೇ ಅಲ್ಲ; ಅವರ ಸಾಮ್ರಾಜ್ಯವನ್ನು ವಿಸ್ತರಿಸಿಕೊಡಬೇಕೆಂಬ ಆಕ್ರಮಣ ಬುದ್ಧಿಯೂ ಈ ರಝಾಕಾರ್ ಸೇನೆಯದಿದೆ. ಅದಕ್ಕನುಸಾರವಾಗಿ ನಿರಪರಾಧಿ ಸ್ತ್ರೀಪುರುಷ ಮಕ್ಕಳ ಕೊಲೆ, ಸುಲಿಗೆ, ಮಾನಭಂಗ ಇತ್ಯಾದಿ ಅತ್ಯಾಚಾರಗಳನ್ನು ರಝಾಕಾರರು ಮಾಡುತ್ತಾ ಬಂದಿದ್ದಾರಲ್ಲದೆ ತಮ್ಮ ಸಾಮ್ರಾಜ್ಯಾಭಿಲಾಷೆಯನ್ನೂ ಆಡಿತೋರಿಸುವಷ್ಟು ಮುಂದುವರಿಯುತ್ತಿದ್ದಾರೆ. ಕಳೆದ ಮಾರ್ಚಿ 31ರಲ್ಲಿ ನಡೆದ 'ಆಯುಧಗಳ ವಾರ'ದಲ್ಲಿ ರಝಾಕಾರ್ ಸೇನಾಪ್ರದರ್ಶನವೊಂದರಲ್ಲಿ ಅವರ ನಾಯಕ ಮಿ. ಕಾಸಿಂ ರಿಜ್ವಿಯು ಮಾಡಿದ್ದ ಭಾಷಣವು ಹಿಂದೀಯರೆಲ್ಲರ ಕಣ್ಣನ್ನೂ ತೆರೆಯಿಸಿದ್ದಿತು—ಯಾಕೆ—ಕಣ್ಣಲ್ಲಿ ಕಿಡಿಯನ್ನೂ ಹಾರಿಸಿದ್ದಿತು! "ಹೈದರಾಬಾದಿನ ಸ್ವಾತಂತ್ರ್ಯ, ನಿಜಾಮರ ಸಾರ್ವಭೌಮತ್ವಗಳನ್ನು ಉಳಿಸಿಕೊಳ್ಳುವದಷ್ಟೇ ಅಲ್ಲ; ನಾವು ಕಳೆದುಕೊಂಡಿದ್ದ ಭೂಮಿಗಳನ್ನೂ 'ಪವಿತ್ರ ಹೋರಾಟ'ದ ಮೂಲಕ ಮರುಸಂಪಾದಿಸಿಕೊಳ್ಳಬೇಕು. ಬಿರಾರ್, ರಾಯಲಸೀಮೆಯಂತಹ ಸ್ಥಳಗಳನ್ನೂ ಮಸಲಿಪಟಮ್ ಬಂದರವನ್ನೂ ಸ್ವಾಧೀನಪಡಿಸಿಕೊಳ್ಳಬೇಕು. ಬಂಗಾಳ ಕೊಲ್ಲಿಯ ಅಲೆಗಳು ನಿಜಾಮ್ ಸಾರ್ವಭೌಮರ ಪಾದಗಳನ್ನು ತೊಳೆಯುವಂತೆ ಮಾಡಬೇಕು" ಎಂದು ರಿಜ್ವಿ ಗುಡುಗಿದ್ದಾನೆ. ಈ ಮಾತಿಗೆ ಪಂಡಿತ ನೆಹರುಗಳು ಗಮನ ಕೊಟ್ಟೊಡನೆಯೇ 'ಅಂತಹ ಪ್ರದರ್ಶನವೂ ನಡೆದಿಲ್ಲ; ತಾನು ಭಾಷಣವನ್ನೇ ಮಾಡಿಲ್ಲ' ಎಂದು ರಿಜ್ವಿ ನಿರಾಕರಿಸಿದ್ದನೆ. ಮಾತ್ರವಲ್ಲ, ಹೈದರಾಬಾದಿನ ಪ್ರಧಾನ ಮಂತ್ರಿ ಮಿ. ಲಾಯಿಕ್ ಅಲಿಗಳು ಕೂಡಾ ಎಲ್ಲವೂ ಸುಳ್ಳೆಂದು ಕೂಡಲೇ ನಿರಾಕರಿಸಿದ್ದರು. ಆದರೆ ಆ ದಿನ ಪ್ರದರ್ಶನವೂ ರಿಜ್ವಿಯ ಆ ಭಾಷಣವೂ ನಡೆದದ್ದಕ್ಕೆ ಜೀವಂತ ನಿದರ್ಶನಗಳಿವೆ. ಮಾತ್ರವಲ್ಲ; ಆ ಮೇಲೂ "ರಝಾಕಾರ ದಿನ"ದಂತಹ ಹಿಂಸರೂಪೀ ಸಶಸ್ತ್ರ ಪ್ರದರ್ಶನಗಳನ್ನು ರಝಾಕಾರರು ನಡೆಸುತ್ತಿದ್ದಾರಲ್ಲದೆ, ರಿಜ್ವಿಯಂಥವರು ಅದೇ ಮಾದರಿಯ ಅತ್ಯಾಚಾರ ಪ್ರೇರಕ ಭಾಷಣಗಳನ್ನೂ ಮಾಡುತ್ತಿದ್ದಾರೆ. ಮೌಲಾನಾ ಅಜಾದರೂ ಭಾರತದ ಇತರ ವಿಚಾರವಂತ ಮುಸ್ಲಿಂ ಪ್ರಮುಖರೂ ನಿಜಾಮರು ಕಾಲೋಚಿತವಾಗಿ ವರ್ತಿಸಿ ಪ್ರಜಾಪ್ರಭುತ್ವವನ್ನೀಯದಿದ್ದರೆ ಸಂಗತಿ ಕೈಮೀರಿಹೋಗಬಹುದೆಂದು ಎಚ್ಚರಿಕೆಯಿತ್ತಿದ್ದಾರೆ.

ಕಾಶ್ಮೀರ ವಿವಾದ

ಭದ್ರತಾ ಕೌನ್ಸಿಲಿನಲ್ಲಿ ಕಳೆದ ಮೂರು ತಿಂಗಳುಗಳಿಂದ ಏಕಪ್ರಕಾರ ಕೊಳೆಯುತ್ತಿರುವ ಕಾಶ್ಮೀರದ ಪ್ರಶ್ನೆಯು ಯಾವ ತೀರ್ಮಾನವನ್ನೂ ಪಡೆಯದೆ ಭಾರತ-ಪಾಕಿಸ್ತಾನ್ ಪ್ರತಿನಿಧಿಗಳು ಬರಿಗೈಯಿಂದಲೇ ಮರಳುವಂತಾಗುವದು ಸಂಭವನೀಯವೆಂದು ತೋರುತ್ತದೆ. ಹಲವು ವಿಧದ ರಾಜೀ ಸೂಚನೆಗಳು ಮುಂದೆ ಬಂದು ನಿಷ್ಫಲವಾದ ಮೇಲೆ ಈಗ ತಾನೇ ಕೊನೆಯದಾಗಿ ಮತ್ತೊಂದು ಸೂಚನೆ ಮುಂದಿಡಲ್ಪಟ್ಟಿದೆ. ಈ ನವ ಸೂಚನೆಯು ಬೆಲ್ಜಿಯಮ್, ಕೆನಡಾ, ಚೈನಾ, ಕೊಲಂಬಿಯಾ, ಬ್ರಿಟನ್, ಅಮೇರಿಕ ರಾಷ್ಟ್ರ ಪ್ರತಿನಿಧಿಗಳ ಜತೆ ನಿರ್ಮಾಣವಿದ್ದು ಈ ಮೊದಲು ಭದ್ರತಾ ಕೌನ್ಸಿಲಿನ ಅಧ್ಯಕ್ಷ ಸ್ಥಾನದಿಂದ ಚೈನಾದ ಪ್ರತಿನಿಧಿ ಮುಂದಿಟ್ಟಿದ್ದ ಸೂಚನೆಗಿಂತ ಕೆಲವು ವಿಷಯಗಳಲ್ಲಿ ಬದಲಾವಣೆಗಳುಳ್ಳದ್ದಾಗಿದೆ; ಮೊದಲಿನ ಸೂಚನೆಗೆ ವಿರೋಧ ಸೂಚಿಸಿದ ಪಾಕಿಸ್ತಾನದ ಮನವೊಲಿಸುವುದಕ್ಕಾಗಿಯೇ ಈ ಮಾರ್ಪಾಟುಗಳನ್ನು ಮಾಡಲಾಯಿತೆಂದು ಊಹಿಸಬಹುದು. ರಾಜೀ ಸೂಚನೆಯ ಸಾರಾಂಶವೆಂದರೆ ಕಾಶ್ಮೀರದ ಹೋರಾಟವನ್ನು ಇಕ್ಕಡೆಯವರೂ ನಿಲ್ಲಿಸಬೇಕು- ಭಾರತ ಸರಕಾರವು ಆ ಹೋರಾಟದ ತನ್ನ ಸೇನೆಗಳನ್ನು ಹಿಂದೆಗೆದುಕೊಳ್ಳಬೇಕು. ಪಾಕಿಸ್ತಾನವು ತನ್ನ ಸರ್ವಶಕ್ತಿಯನ್ನು ಉಪಯೋಗಿಸಿ ಧಾಳಿಗಾರರಿಂದಲೂ ಹಾಗೆ ಮಾಡಿಸಬೇಕು- ಭದ್ರತಾ ಕೌನ್ಸಿಲು ನೇಮಿಸುವ ಕಮಿಶನಿನ ಸೂಚನೆಯಂತೆ ಜನಮತಗಣನೆಯ ಒಂದು ವ್ಯವಸ್ಥಾಧಿಕಾರೀ ಸರಕಾರವನ್ನು ಭಾರತ ಸರಕಾರವು ನೇಮಿಸಿ, ಆ ಆಡಳಿತೆಯು ತನ್ನ ಕಾರ್ಯಕಲಾಪಗಳಿಗಾಗಿ ಅಪೇಕ್ಷಿಸುವ ಎಲ್ಲವನ್ನೂ ಪೂರೈಸಿಕೊಡಬೇಕು- ಇಂದಿನ ನಡುಗಾಲ ಸರಕಾರವನ್ನು ಕಾಶ್ಮೀರದ ಎಲ್ಲಾ ಪಂಗಡಗಳಿಗೂ ಸಮಾನ ಪ್ರಾತಿನಿಧ್ಯಕೊಟ್ಟು ಪುನರ್ರಚಿಸಿಕೊಳ್ಳಬೇಕು—ಎಂಬುದೇ. ಈ ಸೂಚನೆಯ ಅಂತರ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಾಶ್ಮೀರದಲ್ಲಿ ಪುಂಡಾಟಿಕೆಗಿಳಿದು ಪಾಕಿಸ್ತಾನವು ತನ್ನ ಅಭಿಲಾಷೆಯನ್ನು ಬಹುಮಟ್ಟಿಗೇ ಮೂಲಕ ಸಿದ್ಧಿಮಾಡಿಕೊಂಡಂತಾಗುವುದು. ಆದ್ದರಿಂದ ಭಾರತ ಸರಕಾರದ ಪ್ರತಿನಿಧಿಗಳು ಇದಕ್ಕೊಪ್ಪದೆ ಹೊರಟು ಬರುವರೆಂದು ತಿಳಿದುಬರುತ್ತದೆ. ಭದ್ರತಾ ಕೌನ್ಸಿಲಿನ ಆಲಸ್ಯಪೂರ್ಣ ಕಾರ್ಯಕಲಾಪಗಳಿಂದ ಜಿಗುಪ್ಸೆಗೊಂಡ ಹಿಂದೀ ಪ್ರತಿನಿಧಿಗಳು ಅಲ್ಲಿಂದ ಬಿಡಾರಕಿತ್ತು ಇದೇ ತಾ 20 ರೊಳಗೆ ನವದಿಲ್ಲಿಗೆ ಮುಟ್ಟಲಿರುವರೆಂದು ತಿಳಿದುಬಂದಿದ್ದರೂ ಈ ಸೂಚನೆಯ ಕುರಿತು ತಮ್ಮ ಅಭಿಪ್ರಾಯ ತಿಳಿಸಲು ಅವರು ಅಲ್ಲಿ ನಿಂತಿದ್ದಾರೆ. ಇದೇ ತಾ. 19ನೇ ಸೋಮವಾರ ಭಾರತ-ಪಾಕಿಸ್ತಾನ್ ಪ್ರತಿನಿಧಿಗಳ ಹೇಳಿಕೆಯು ಭದ್ರತಾ ಕೌನ್ಸಿಲಿನಲ್ಲಾಗಿದೆ.

ಇತ್ತ ಕಾಶ್ಮೀರ ರಣರಂಗದಲ್ಲಿ ಹಿಂದೀ ಸೇನೆಯು ಧಾಳಿಗಾರರಿಗೆ ಹಲವು ಪರಾಭವಗಳನ್ನೊಡ್ಡಿದೆ. ಧಾಳಿಗಾರರು ಹೆಚ್ಚಿನ ಪ್ರಾಣಹಾನಿಗೀಡಾಗಿದ್ದಾರೆ. ಆದರೆ ಗುಡ್ಡಗಾಡು ಜನರು ಪುನಃ ಪುನಃ ಇರುವೆ ಸಾಲುಗಳಂತೆ ನುಗ್ಗಿ ಬರುತ್ತಿದ್ದಾರೆಂದೂ, ಅವರ ಆಗಮನ ಪಥವು ಎಂದಿನಂತೆ ಪಾಕಿಸ್ತಾನದೊಳಗಡೆಯಲ್ಲೇ ಎಂದೂ ತಿಳಿದುಬರುತ್ತದೆ. ಹಿಂದೀ ವಿಮಾನಗಳು ಧಾಳಿಗಾರರ ಆಯಕಟ್ಟಿನ ಸ್ಥಳಗಳ ಮೇಲೆ ಆಕಾಶಧಾಳಿ ನಡೆಸುತ್ತಿವೆ. ಅಂತೂ ಕಾಶ್ಮೀರದ ಕಾಳಗ, ಕಾಶ್ಮೀರ ವಿವಾದ, ಅಂತೆಯೇ ಭಾರತ-ಪಾಕಿಸ್ತಾನ್ ಸಂಬಂಧದ ಎಲ್ಲಾ ಸಮಸ್ಯೆಗಳು ಸದ್ಯದಲ್ಲೇ ಒಂದು ದಡಮುಟ್ಟಬಹುದೆಂಬ ಆಶೆಗವಕಾಶವಿಲ್ಲ.

WANTED

Applications are invited for the following posts in the *National High School, Barkur, (S. K.)*

Graduate Assistants	Salary scale
L. T or B. T., Mathmetics & History perferred	Rs. 85-5-145
Drawing Teacher, Higher Grade	Rs 40-1½-70

Dearness allowance at Government rates extra.
Experienced Teachers will be given higher initial salary.
Graduates may also apply -Local Board scales & dearness allowance given candidates must be prepared to join duty from 1-6-48
Apply before 15-5-48 to

President
BARKUR EDUCATIONAL SOCIETY,
Barkur, (S. K.)

The Canara Banking Corporation Limited.
Estd 1906.
(Incorporated in British India)
Head Office: **UDIPI**, S. India.

SEASON DEPOSITS
for Rs. 5000/- and over are now accepted at all Offices of the Bank at the following rates:—
3 & 4 months — @ 2¼ % p. a.
5 & 6 months — @ 2¾ % p. a.

ನವಯುಗ

ಗುರುವಾರ, ೮ ಶ ಪಿ, ೨೨-೪-'೪೮

ಹೈದರಾಬಾದು

ಹೈದರಾಬಾದಿನೊಡನೆ ಸಂಧಾನವೆಂಬುದು ಭಾರತ ಸರಕಾರದ ಪಾಲಿಗೆ ಮಾಯಾ ವ್ಯಾಘವಾಗಿ ಪರಿಣಮಿಸಿದೆ—ಹಿಡಿಯೋಣವೆಂದು ಮುಂದೊತ್ತಿದಷ್ಟು ಸಲವೂ ಅದು ದೂರಕ್ಕೋಡುತ್ತಿದೆ. 'ನಿಜಾಮರು ನ್ಯಾಯವಾದ ಹಾದಿಗೆ ಬಾರದಿದ್ದರೆ ಜುನಾಗಾಡಿನ ನವಾಬರ ಭವಿಷ್ಯವೇ ಅವರನ್ನೂ ಕಾದಿದೆ' ಎಂದು ಕೆಲದಿನ ಬಾರಿ ಸರ್ದಾರ್ ಪಟೇಲರು ಎಚ್ಚರಿಕೆಕೊಟ್ಟ ಬೆನ್ನಲ್ಲೇ ಹೈದರಾಬಾದಿನೊಡನೆ ಒಂದು ವರ್ಷ ಅವಧಿಯ ಪ್ರಚಲಿತ ಒಪ್ಪಂದವನ್ನು ಮಾಡಿಕೊಂಡು ಹಲವರಲ್ಲಿ ಜುಗುಪ್ಸೆ ಹಾಗೂ ನಿರಾಶೆಯನ್ನು ನಿರ್ಮಿಸಿದ್ದರು. 'ಮಿಕ್ಕ ಸಂಸ್ಥಾನಗಳಿಗಿಂತ ಭಿನ್ನ ರೀತಿಯಲ್ಲಿ— ವಿಶೇಷ ರಿಯಾಯಿತಿಯಿಂದ- ಹೈದರಾಬಾದನ್ನು ಕಾಣಲು ಸಾಧ್ಯವಿಲ್ಲ' ಎಂದ ಸರ್ದಾರರು, ಆ ಮೊದಲಾಡಿದುದಿದ್ದರೂ ಸ್ವತಃ ಈ ಒಂದು ವರುಷ ಅವಧಿಯ ಒಪ್ಪಂದವೇ ಹೈದರಾಬಾದಿನ ಕಡೆಗೆ ತೋರಿಸಿದ ಪಕ್ಷಪಾತವಾಗಿದ್ದಿತು; ಅದರ ಶರ್ತಗಳು ಕೂಡಾ ಮಿಕ್ಕ ಸಂಸ್ಥಾನಿಕರಿಗಿಂತ ಹೆಚ್ಚಿನ ಸ್ವಾತಂತ್ರ್ಯಗಳನ್ನು ನಿಜಾಮರಿಗಿತ್ತಿದ್ದುವು. ರಾಜಕಾರಣದಲ್ಲಿ ಇಂತಹ ಪಂಕ್ತಿಭೇದಗಳಿರುವುದೇನೋ ಸಹಜವೇ, ಪ್ರಮಾಣವನ್ನು ಯೋಚಿಸಿ ನೋಡಿ, ಮಿಕ್ಕ ಆಶ್ರಿತ ರಾಜ್ಯಗಳಿಗಿಂತ ತುಸು ಹೆಚ್ಚಿನ ಸ್ಥಾನಮಾನ ಪ್ರಭಾವಗಳುಳ್ಳ ಹೈದರಾಬಾದಿನ ಸಂಬಂಧವಾಗಿ, ಭಾರತ ಸರಕಾರವು ಭಿನ್ನ ರೀತಿಯಿಂದ ವರ್ತಿಸಲು ಮುಂದಾದುದರಲ್ಲಿ ವ್ಯವಹಾರ ಜಾಣ್ಮೆಯಿದೆ ಹೊರತು ಹೇಡಿತನ ಅಥವಾ ಅನ್ಯಾಯವೇನೂ ಇಲ್ಲ. ಹೀಗಾಗಿ ಸಂಬಂಧನೊಗಕ್ಕೆ ಯಾವ ರೀತಿಯಿಂದಾದರೂ ತೆಗಲೊಡ್ಡುವದಕ್ಕೆ ಕಸಿವಿಸಿಮಾಡುತ್ತಿದ್ದ ಹೈದರಾಬಾದನ್ನು ಒಂದು ಬಾರಿ ಒಂದು ವರುಷದ ಪಟ್ಟಿಗೆಂದಾದರೂ ಸಮೀಪಕ್ಕೆಳೆದುಕೊಂಡಲ್ಲಿ, ಆ ಅವಧಿಯ ಅನುಭವ ಬಲದಿಂದ ಶಾಶ್ವತ ಒಪ್ಪಂದವೂ ಸಾಧ್ಯವಾದೀತೆಂಬ ದೂರದೃಷ್ಟಿಯಿಂದಲೇ ಹಿಂದೀ ಸರಕಾರವು ಆಗ ಈ ಲಘುಜೋಡಣೆಗೆ ಮುಂದಾಗಿದ್ದಿತು. ಆದರೆ ಸ್ನೇಹಾಭ್ಯಾಸಕ್ಕೆಂದು ಕೊಟ್ಟ ಈ ಅವಧಿಯಲ್ಲಿ ನಿಜಾಮ್ ಸರಕಾರವು ಕಠೋರತೆಯನ್ನೇ ಕಲಿತುಕೊಂಡಿತೆಂಬುದು ಈ ಬಾರಿಯ ಅಪ್ರತಿ ದರ್ಪಪೂರಿ ಧೋರಣೆಯಿಂದ ಸ್ಪಷ್ಟವಾಗುತ್ತಿದೆ. ಭಾರತ ಕೇಂದ್ರ ಮತ್ತು ಹೈದರಾಬಾದುಗಳೊಳಗಿನ ಮಾತುಕತೆಗಳೇ ತನಕ ಮುಗಿದಿಲ್ಲವಾದ್ದರಿಂದ—ನಿರಾಶೆಯ ಸ್ಪಷ್ಟ ಚಿಹ್ನೆಗಳು ಕಾಣಿಸುತ್ತಿರುವವಾದರೂ—ಕೊನೆಯ ತೀರ್ಮಾನದ ಕುರಿತು ಈಗಲೇ ಹೇಳಲಾಗುವದಿಲ್ಲ. ಆದರೆ ಹೈದರಾಬಾದಿನೊಳಗಡೆಯ ಭೀಕರ ಸ್ಥಿತಿಗತಿಗಳು ಮುಂದಿನ ಯಾವುದೇ ಸತ್ಸಂಬಂಧದ ಆಶೆಯಿಂದ ಸಹಿಸಿಕೊಳ್ಳಲಾಗುವಂತಹವಲ್ಲ. ರಝಾಕಾರರಂತಹ ಮುಸ್ಲಿಂ ಜಾತ್ಯಂಧ ಕ್ರೂರ ಸಶಸ್ತ್ರ ದಳವನ್ನೇ ನಿಜಾಮರು ತನ್ನ ರಕ್ಷಣಾಬಲವೆಂದು ಗಣಿಸಿ, ಈ ಮೃತ್ಯು ಸೇನೆಯ ಸುಳಿಗೆಗೆ ಸಂಸ್ಥಾನವನ್ನೊಪ್ಪಿಸಿಕೊಟ್ಟಂತಿದೆ. ರಝಾಕಾರ ದಳವು ಕಟ್ಟಿಕೊಂಡಿರುವ—ನಿಜಾಮ್ ಸಾಮ್ರಾಜ್ಯ ಸ್ಥಾಪಿಸುವ ಧ್ಯೇಯ ಮತ್ತು ಕ್ರೂರ ರೀತಿಯ ಹಿಂಸೆಯಿಂದಲೇ ಜನಮುಖವನ್ನು ತಲೆಯೆತ್ತಲು ಬಿಡದ ಕಾರ್ಯ- ಇವೆರಡೂ ರೋಮಾಂಚಕಾರಿಯಿವೆ. 'ಪ್ರಚಲಿತ ಒಪ್ಪಂದಾನುಸಾರವಾಗಿ ಭಾರತ ಸರಕಾರವು ನಮ್ಮ ರಕ್ಷಣೆಗಗತ್ಯವುಳ್ಳ ಶಸ್ತ್ರಾಸ್ತ್ರಗಳನ್ನು ಸರಬರಾಯಿಮಾಡದಿರುವುದರಿಂದ ಕಮ್ಯೂನಿಸ್ಟರೇ ಮೊದಲಾದವರ ಪುಂಡಾಟಿಕೆಗಳಿದಿರಾಗಿ ಈ ರಝಾಕಾರರನ್ನಾಧರಿಸದೆ ನಮಗೆ ಬೇರೆ ಗತಿಯಿಲ್ಲ'' ಎಂಬ ಅಭಿಪ್ರಾಯವನ್ನು ನಿಜಾಮ ಸರಕಾರವು ಮುಂದೊಡ್ಡಿದೆ, ಎಂದು ತಿಳಿದುಬರುತ್ತದೆ. ಪ್ರಚಲಿತ ಒಪ್ಪಂದದ ಶರ್ತಗಳನ್ನು ಭಂಗಿಸಿದವರಾರು—ಭಾರತವೋ ಹೈದರಾಬಾದೋ ಎಂಬುದೀ ವರೆಗೂ ತೀರ್ಮಾನವಾಗದ ವಿವಾದ. ಅದು ಹೇಗಿದ್ದರೂ ಸ್ವರಕ್ಷಣೆಗಾಗಿ ರಝಾಕಾರರಂತಹ ಪುಂಡರನ್ನು ಸಾಕಿಟ್ಟುಕೊಳ್ಳುವ ಸರಕಾರವು ಆ ಕಾಲದ ಸರಕಾರವೇ ಅಲ್ಲ; ಅದು ಸೈತಾನ್ನೀ ರಾಜ್ಯ! ಹಣದ ಅಭಾವವುಂಟೆಂಬ ಕಾರಣದಿಂದ ಕಳ್ಳರ ಆಶ್ರಯ ಪಡೆಯುವವನು ಕಳ್ಳರ ಗುರುವೇ ಹೊರತು ನಾಗರಿಕನೆನ್ನಿಸಲಾರ! ಭಾರತ ಸರಕಾರಕ್ಕೆ ರಾಷ್ಟ್ರೀಯ ಪುನರ್ರಚನೆ, ಕಾಶ್ಮೀರದ ಸಮಸ್ಯೆ ಮುಂತಾದ ತೊಡಕುಗಳೇ ಈಗ ಭಾರವಾದ ಹೊರೆಯಾಗಿರುವುದರಿಂದ ಹೈದರಾಬಾದಿನಲ್ಲಿ ಹೊಸ ಕಿಚ್ಚೊಂದು ನಿರ್ಮಾಣಗೊಳ್ಳದಂತೆ ಅದು ಜಾಣ್ಮೆಯಿಂದ ಕೆಲಸ ಮಾಡಬೇಕಾದ ಅಗತ್ಯವಿದೆಯೆಂಬುದೇನೋ ನಿಜ. ಆದರೆ ಎಂತಹ ಸಂದರ್ಭದಲ್ಲೂ ಹೈದರಾಬಾದಿನ ರಝಾಕಾರ್ ಧೋರಣೆಯನ್ನು ಕ್ಷಮಿಸಿ ಸಂಧಾನವೆಂಬುದಿರಲೇ ಬಾರದು. ಈಗ ಮದ್ರಾಸ್ ಪ್ರಾಂತ್ಯದ್ದಾಗಿರುವ ಬಂದರ ಮತ್ತು ಪ್ರದೇಶಗಳನ್ನೂ ಆಕ್ರಮಿಸಿಕೊಂಡು ಕ್ರಮಶಃ ಅಖಿಲ ಭಾರತದಲ್ಲೇ 'ನಿಜಾಮ್'ಶಾಹಿಯನ್ನು ಸ್ಥಾಪಿಸುವ ಗುರಿಯಿಟ್ಟುಕೊಂಡಿರುವ ರಝಾಕಾರರನ್ನು ನಿರ್ಮೂಲಿಸಿ, ಇಂತಹ ಆಕ್ರಮಣ ಬುದ್ಧಿಯು ಇನ್ನೆಂದಿಗೂ ಹುಟ್ಟದಂತಹ ಪಾಠವನ್ನು ಆ ಮೂಲಕ ಕಲಿಸಿ ಕೊಡದಿದ್ದರೆ ಭಾರತಕ್ಕೆ ಅಪಾಯ ತಪ್ಪದು. ಈ ಸಂಬಂಧದ ಹೆಚ್ಚಿನ ಹೊಣೆಗಾರಿಕೆಯು ಆಂಧ್ರರು, ಕನ್ನಡಿಗರು, ಮರಾಠರೇ ಮೊದಲಾದವರ ಮೇಲಿದೆ- ಮದ್ರಾಸ್ ಸರಕಾರದ ಮೇಲಿದೆ- ಎಂಬುದನ್ನು ಮರೆಯಬಾರದು. ಹೈದರಾಬಾದು ದಕ್ಷಿಣ ಭಾರತದ 'ಪಾಕಿಸ್ತಾನ'ವಾಗಿದೆ, ಮದ್ರಾಸ್ ಪ್ರಾಂತ್ಯಕ್ಕೆ ತಾಗಿಕೊಂಡಿದ್ದು ಗಡಿ ಘರ್ಷಣೆಗಳನ್ನು ಕೊಡುತ್ತಾ ಇದೆ. ಕನ್ನಡಿಗರ, ಆಂಧ್ರರ, ಮರಾಠ ರಾಷ್ಟ್ರೀಯರ ಹಕ್ಕಿನ ಭಾಗಗಳು ಹೈದರಾಬಾದ್ ಸಂಸ್ಥಾನದೊಳಗಿವೆ. ಹೈದರಾಬಾದಿನ ಪ್ರಥಮ ಆಕ್ರಮಣ ಹೆಜ್ಜೆಯೇ ಈಗಿನ ಮದ್ರಾಸ್ ಪ್ರಾಂತ್ಯದ ಮೇಲೆ ಎಂಬುದು ನೆನಪಿರಬೇಕು. ಆದ್ದರಿಂದಲೇ ರಝಾಕಾರ ಧುರವೀಳ್ಯಕ್ಕೆ ಕೈಯೊಡ್ಡಲು ಆಂಧ್ರರ ಪರವಾಗಿ ಪ್ರೊ|| ರಂಗರು ಮುಂದಾಗಿದ್ದಾರೆ. ಅದೇ ರೀತಿ ಕನ್ನಡಿಗರೂ ತಮ್ಮ ಶಕ್ತಿ ಪ್ರದರ್ಶನದ ಇಂತಹ ಸಂದರ್ಭಗಳನ್ನು ಕಳಕೊಳ್ಳಬಾರದು. ನ್ಯಾಯಪ್ರಕಾರ ನಿಜಾಮರಿಂದಲೇ ರಝಾಕಾರ್ ಮೃತ್ಯು ದಳವನ್ನು ಬರ್ಖಾಸ್ತು ಮಾಡಿಸಲು ಭಾರತ ಸರಕಾರಕ್ಕೆ ಸಾಧ್ಯವಾದರೆ ಎಲ್ಲವೂ ಸುಖಾಂತ್ಯಗೊಳ್ಳುವದು. ಇಲ್ಲವಾದರೆ ನಿಜಾಮ್ ಸರಕಾರಕ್ಕೆ ರಝಾಕಾರರಿರುವುದರ ಪ್ರತೀಕಾರವಾಗಿ ಭಾರತ ಸರಕಾರದ ಬೆಂಬಲಕ್ಕೆ ಕನ್ನಡಿಗಾಂಧ್ರ ಮರಾಠಾ ಯೋಧರೊದಗಬೇಕು; ಆ ಮೂಲಕ ಇತರ ಪ್ರಾಮುಖ್ಯ ಕಾರ್ಯಭಾರಗಳನ್ನು ಹೊತ್ತಿರುವ ಹಿಂದೀ ಸರಕಾರದ ಮೇಲೆ ಇದೊಂದು ಹೊಸ ಪರಿಶ್ರಮವು ಬೀಳದಂತೆ ಸಾಧಿಸಬೇಕು. ಏನೊಂದೂ ಆಶೆ ತೋರದ ಇಂದಿನ ವ್ಯರ್ಥ ಸಾಧಕ ಮಾತುಕತೆಗಳಲ್ಲಿ ಹಿಂದೀ ಸರಕಾರವು ವೃಥಾ ಕಾಲಕಳೆಯದೆ ಅದನ್ನು ಕೂಡಲೇ ಮುಗಿಸಿಕೊಂಡು ಹೈದರಾಬಾದ್ ಸರಕಾರಕ್ಕೆ ಅರ್ಥವಾಗಬಲ್ಲ ಪಾಠವನ್ನೇ ಕಲಿಸಲು ತಯಾರಾಗುವುದು ಅಗತ್ಯವೆಂದು ತೋರುತ್ತದೆ

ಮನೋಗತಿ, ಕಾಲಗತಿ ಹೀಗಿದೆ:

ಒಂದು ಕಾಲದಲ್ಲಿ, ಬೇರೆಬೇರೆ ವಿಧಾನದ ಕಾರ್ಯಗಳನ್ನು ಸಾಗಿಸುವ ಬೇರೆ ಬೇರೆ ತರಗತಿಯಾಗಿ—ಯುದ್ಧದ ಚತುರ್ವಿಧಾನಗಳಿಗಾಗಿ ಚತುರ್ಬಲಗಳನ್ನು ನಿರ್ಮಿಸಿಕೊಂಡಂತೆಯೇ— ಚತುರ್ವರ್ಣಗಳೋ ಜಾತಿ ಭೇದಗಳೋ ಬಂದಿರಬೇಕು; ಆದರೆ ಈಗ ಆ ಪಾಲುಗಾರಿಕೆಯಲ್ಲಿದ್ದ ಉಚ್ಚನೀಯವು ಸಂಪೂರ್ಣ ಮರೆತು ಹೋಗಿ, ಜಾತಿ ಭಿನ್ನತಾ ಭಾವವೊಂದೇ ವಿಪರೀತ ಬೆಳೆದು ಹೋಗಿ ಮೇಲು ಕೀಳು ಭಾವನೆ, ದ್ವೇಷ, ಮತ್ಸರಗಳೇ ಸರ್ವ ವ್ಯಾಪಿಯಾಗಿರುವುದರಿಂದ ಈ ಜಾತಿ ಭಿನ್ನತೆಯ ಅಸ್ತಿವಾರವನ್ನೇ ಅಡಿಮೇಲು ಮಾಡಿ ಸಮಾನತೆ ಸ್ಥಾಪಿಸುವುದು ಅಗತ್ಯ.

ಆಗಿನ ಕಾಲೋಚಿತ ಧರ್ಮ ನೀತಿಗಳನ್ನನುಸರಿಸಿಯೇ ಸತತ ಪ್ರಯಾಸಿ, ಕಾಯ ಯೋಗ್ಯ ಪ್ರತಿಫಲವಾಗಿ ಗಳಿಸಿದುದರಿಂದಲೇ ಆ ಕಾಲದ ಹಿರಿಯರು ಆಸ್ತಿ ಪಾಸ್ತಿಗಳನ್ನು ಮಾಡಿಟ್ಟುದಾಗಿರಬೇಕು; ಆದರೆ ಅವರ ವಂಶಸ್ಥರು ಹಾಗೂ ಅವರು ಮಾಡಿಟ್ಟ ಸಂಪತ್ತಿನ ಹಕ್ಕುದಾರರಿಂದ ಇಂದಿನವರಲ್ಲಿ ಆ ಸಂಪತ್ತನ್ನು ದುರ್ವ್ಯಯಗೊಳಿಸುವ ಆಡಂಬರ, ಅಹಂಕಾರ, ತೇಂಕಾರ, ಅತ್ಯಾಚಾರ, ಜಂಬ ಜೂಜು ಇತ್ಯಾದಿ ದುರ್ಬುದ್ಧಿಗಳೇ ವ್ಯಾಪಿಸಿಕೊಂಡಿವೆಯಲ್ಲದೆ ಸುಸಂಸ್ಕಾರ, ನೀತಿ ನಿಯಮ, ಪರಿಶ್ರಮ ಬುದ್ಧಿ ಮುಂತಾದುವು ಇಲ್ಲದಿರುವುದರಿಂದಲೂ, ಯಾವ ನಿರ್ಬಂಧ ಅಥವಾ ಮಿತಿ ನಿಯಮವಿಲ್ಲದೆ ಆಸ್ತಿ ಸೊತ್ತುಗಳು ಅನಗತ್ಯ ಕಡೆಗಳಲ್ಲಿ ಸೇರಿ ಹೋಗಿರುವುದರಿಂದಲೂ ಈ ಆಸ್ತಿಗಾರಿಕೆ ಪದ್ಧತಿಯನ್ನೇ ಒಮ್ಮೆ ನಿರ್ಮೂಲಿಸಿ ನ್ಯಾಯಬದ್ಧ ಸಮಾನ ವಿತರಣೆ ಆಗಬೇಕು.

ಹೊರಗಿನಿಂದ ಬಂದವರಿಗೆ ಉದರ ನಿರ್ವಹಣಕ್ಕೆ ಪರಂಪರಾಗತ ಸಂಪತ್ತಾವುದೂ ಇಲ್ಲದಿದ್ದುದರಿಂದ ವ್ಯಾಪಾರ, ಉದ್ದಿಮೆ ಕೈಗಾರಿಕೆ ಇತ್ಯಾದಿ ಮಹಿವಾಟು ಮಧ್ಯಸ್ಥಿಕೆಯಿಂದ ದಿನಹರಣ ಮಾಡಲಾಗುವ ಅವಕಾಶವನ್ನು ಆದಿ ಭಾಗದಲ್ಲಿ ಅಂಥವರಿಗೇಯು ಮಾಡಲಾಗಿತ್ತು; ಆದರೆ ಅವರು ತಮ್ಮ ಕೈಗೆ ದೊರೆತ ಈ ಉದರನಿರ್ವಾಹ ಹೋಪಕರಣವನ್ನೇ ಊಟ ಸುಲಿಗೆಯ ಉಪಕರಣವಾಗಿ ಬೆಳೆಯಿಸಿಕೊಂಡು ವಂಚನೆ, ಮೃದುರೂಪೀ ದಗೆ, ಕಪಟಾಚರಣೆಗಳಿಂದ ಎಲ್ಲವನ್ನೂ ಆಕ್ರಮಿಸಿಕೊಳ್ಳುತ್ತಿರುವುದರಿಂದ ಅಂತಹ ಶ್ರೀಮಂತಿಕೆಗಳನ್ನೂ ಮಹಿವಾಟು ಕ್ರಮವನ್ನೂ ಪೂರ್ಣ ನಿರ್ಮೂಲಿಸಿ, ಸಮಾನತಾ ತತ್ವವನ್ನಾಧರಿಸಿದ ಅತಿರೇಕ—ಅತ್ಯಲ್ಪಗಳ ಮಿತಿಯುಳ್ಳ ನವರಚನೆಯೇ ಬರಬೇಕು.

ಸಾರ್ವಜನಿಕ ಜೀವನ ಸಾಮಾಜಿಕ ಜೀವನಗಳ ಪರಿಚಯವೇ ಇರದ ಅನಾಗರಿಕ ಕಾಲದಲ್ಲಿ ಸರ್ವಜನ ಹಿತಾಕಾಂಕ್ಷೆಯಿಂದ ಮುಂದೆ ಬರುವವರು ಅತ್ಯಲ್ಪರೂ ಸವಿದ್ದರು; ಹಾಗೆ ಮುಂದಾದವರಲ್ಲಿ ಸ್ವಾರ್ಥವೇನೂ ಇರದೆ ಯಥಾರ್ಥತೆಯೇ ಇದ್ದಿತು. ಆದ್ದರಿಂದ ಸಹಜವಾಗಿ ಅಂಥವರಿಗೆ ಗೌರವಾದರಗಳು ದೊರಕುತ್ತಿದ್ದವು; ಆದರೆ ಅದು ಬೆಳೆದುಬಂದು ಸಾರ್ವಜನಿಕ ಯುಗವಾಗಿ ಮಾರ್ಪಟ್ಟಿರುವ ಈ ಕಾಲದಲ್ಲಿ ಕೇವಲ ತಮ್ಮ ಲಾಭ ಸಾಧನೆಯೊಂದನ್ನೇ ಜೀವನ ಧ್ಯೇಯವಾಗಿಟ್ಟುಕೊಂಡವರು ಅದಕ್ಕಾಗಿಯೇ ಸಾರ್ವಜನಿಕ ಕಾರ್ಯಗಳ ಸೋಗಿನಿಂದ ಸ್ವಾರ್ಥ ಸಾಧಿಸಿಕೊಳ್ಳುತ್ತಿರುವದರಿಂದ ದೊಡ್ಡ ಪರಿಮಾಣದ ಪ್ರತಿಯೊಂದು ಭಾಗದ ಜನತಾ ಕಾರ್ಯಗಳಿಗೂ ಆಯಾ ಕಾರ್ಯದಲ್ಲಿ ಅಭಿರುಚಿ, ಆಸಕ್ತಿ ಮತ್ತು ಯೋಗ್ಯತೆಯು ನಿಯೋ ಎಂಬ ಪರೀಕ್ಷೆ ಕೊಡುವ ಕ್ರಮ ಜ್ಯಾರಿಗೆ ಬರಬೇಕು. ಅಂತಹ ಪರೀಕ್ಷೆಯಲ್ಲಿ ಪಾಸಾಗದೆ ಕಾರ್ಯಕ್ಕಿಳಿಯುವವರನ್ನು 'ವಂಚನೆ'ಯ ಶಿಕ್ಷೆಗೊಳಪಡಿಸಬೇಕು.

ಸಾರಾಂಶತಃ ಸಂಗತಿ ಹೀಗಿದೆ:—

ಆಸ್ತಿಪಾಸ್ತಿ ಮತ್ತು ಪರಂಪರಾಗತ ಶ್ರೀಮಂತಿಕೆಯ ವರ್ಚಸ್ಸು, ಕಾರ್ಬಾರು, ದರ್ಬಾರು ನಡೆಸುವವರು ಅಥವಾ ಹಾಗೆಂದು ತಮ್ಮಷ್ಟಕ್ಕೆ ನೆನೆಸಿಕೊಂಡು ಒಣ ಠೆ

ಗ್ಗಳಿಕೆಯಿಂದಿರುವವರಿದ್ದಾರೆ. ಇಂಥವರ ಕಾಲ ಕಳೆದು ಕಾಲದ ತಪ್ಪುವ ಸ್ಥಿತಿಯೇ ಗ ಬಂದಿದ್ದರೂ ತೆರೆಯಲ್ಪಡದಿರುವದೆಂದರೆ ಅವರ ಕಣ್ಣು ಮಾತ್ರ! ಇಂಥವರಿಂದ ಅಕ್ರಮಗಳು ನಡೆಯುತ್ತಿವೆಯಾದರೂ ಆಕ್ರಮಣಗಳು ಇನ್ನು ನಡೆಯುವ ಅಪಾಯವಿಲ್ಲ. ಅಹಂಕಾರ ರೋಗಗಳಿಂದ ಇವರು ಮಾನಸಿಕ ಅಘಾತವೊದಗುತ್ತಿರುವರೇ ಹೊರತು ಸಾಂಪತ್ತಿಕ ಅಪಘಾತ ಮಾಡುತ್ತಿಲ್ಲ. ಸರ್ವಸಮಾನತಾ ವ್ಯವಸ್ಥೆಯೇ ಈ ಮಾನಸಿಕ ರೋಗ ನಿವಾರಣಾ ಚಿಕಿತ್ಸೆ.

ಹಿಂದಿನ ಕಾಲದ ಕಾರ್ಯಕಾರೀ ವಿಭಾಗಗಳನ್ನೇ ಜಾತೀಯತೆಯಾಗಿ ಬೆಳೆಯಿಸಿಕೊಂಡು ತಾವು ಮೇಲ್ಜಾತಿಯವರೆಂಬ ಹೀಯ ಭಿನ್ನಭಾವ ಕಟ್ಟಿಕೊಂಡವರಾದರೂ ಜನತೆಯ ಇಂದಿನ ಸ್ಥಿತಿಗತಿಗಳಲ್ಲಿ ತಾವೇ ಅಸ್ಪೃಶ್ಯರಾಗಿ ಕ್ರಮಶಃ ಪಾಲಿಪಾಲಾಗುತಿದ್ದಾರೆ. ಇಂಥವರ ಪ್ರಭಾವ ಕೂಡಾ ಕ್ಷಯಿಸುತ್ತಿದೆ ಹೊರತು ಇನ್ನು ಅಭಿವೃದ್ಧಿಹೊಂದುವ ಸಂಭವವಿಲ್ಲವೇ ಇಲ್ಲ; ಆರ್ಥಿಕ ಸಾಮಾಜಿಕ ಸಮಾನತೆ ಬಂದಾಗ ಇಂಥವರು ಸಹಜವಾಗಿ ಅಪರಾಧಿಸ್ಥಾನ ಸೇರುತ್ತಾರಾದ್ದರಿಂದ ಈ ಮನೋರೋಗ ನಿವಾರಣೆಗಾಗಿ ಬೇರೆ ಕಾರ್ಯ ಅನಗತ್ಯ.

ಆದರೆ ಪರಂಪರಾಗತ ಧನಸ್ಥಿತಿಯ ದುರಹಂಕಾರ, ಅಥವಾ ಈ ಧನಿಕರ ಮೇಲ್ಮೆಯ ಕ್ಷುದ್ರ ಹಿರಿತನವಾವುದೂ ಇಲ್ಲದೆ ಜನತೆಯ ದೌರ್ಬಲ್ಯ ಮತ್ತು ಅಸಡ್ಡೆಗಳೇ ತಮ್ಮ ಪಾಲಿನ ಅನುಕೂಲತೆಗಳೆಂದು ಗಣಿಸಿ ಕುಹಕೋಪಾಯಗಳಿಂದ ಧನಾರ್ಜನೆಗಳಿಸುವ ಮೂರನೇ ವರ್ಗದ ಮನೋವೃತ್ತಿಯೇ ಜನಜೀವನದ ಜೀವಂತ ಅಪಾಯ. ಮೊದಲಿನ ಎರಡು ವರ್ಗಗಳ ಅಪಾಯಕಾರೀ ಮನೋವೃತ್ತಿಗಳಿಗೆ ಕಾಲಬಾಧೆ ತಟ್ಟಿ ಅವು ಸಹಜವಾಗಿ ಅಸ್ತಮಿಸುತ್ತಿವೆಯಾದರೆ ಈ ಮೂರನೆಯ ವರ್ಗದ ಜನಜೀವನಾಪಾಯಕಾರೀ ಮನೋವೃತ್ತಿಯೇ ಅಭಿವೃದ್ಧಿಪಥದಲ್ಲಿದೆ; ಮೊದಲಿನ ಎರಡು ವರ್ಗಗಳ ಪಾಲಿನದಾಗಿದ್ದ ಹಾಗೂ ಎಲ್ಲರ [illegible] ಸರ್ವವನ್ನೂ ಈ ಮೂರನೆಯದು ಆಕ್ರಮಿಸಿಕೊಳ್ಳುವುದರಲ್ಲಿದೆ. ಇಂದಿನ ಕಂಟಕವೆಂದರೆ ಇದೇ.

ಅಂತೂ ಪರಂಪರಾಗತ ಶ್ರೀವಂತಿಕೆಯ, ಅವಶೇಷ-ಜಾತೀಯ ಮೇಲ್ಮೆಯ ಹಂಕಾರ, ಸುಲಿಗೆ ವಂಚಕ ಧೋರಣೆಯ ಪ್ರಭಾವ- ಇವೆಲ್ಲವನ್ನೂ ನಿರ್ಮೂಲಿಸಿ ಸರ್ವರ ಶಾಂತಿ, ಸೌಖ್ಯ, ಸಮಾನತೆಯನ್ನು ಸಾಧಿಸುವ ಆಂದೋಲನವೀಗ ನಡೆಯಬೇಕು. ಅದಕ್ಕಾಗಿ ಪ್ರಥಮತಃ ಜನಜಾಗ್ರತಿಯಾಗಬೇಕು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ.

ಮೈಸೂರು ಸರಕಾರ ಬೆಂಗಳೂರನ್ನು ಮಾರಿ ಭಟ್ಕಳವನ್ನು ಕೊಂಡು ಕೊಳ್ಳುವದೆ?

ಕರ್ನಾಟಕಕ್ಕೊಂದು ಮಹಾ ಬಂದರ ರಚಿಸುವ ಪ್ರಶ್ನೆಯು ದೀರ್ಘ ಕಾಲದಿಂದಿದ್ದ ಮಿಕ್ಕ ಪ್ರಶ್ನೆಗಳಂತೆಯೇ ಇದೂ ಈಗ ನಿರ್ಧಾರದ ಗಡಿಗೆ ಬಂದಿದೆ. ಈ ಮಹಾ ಬಂದರಕ್ಕಾಗಿ ಉತ್ತರ ಕನ್ನಡಾ ಜಿಲ್ಲೆಯ ಭಟ್ಕಳ, ದಕ್ಷಿಣ ಕನ್ನಡಾ ಜಿಲ್ಲೆಯ ಮಲ್ಪೆ ಮತ್ತು ಮಂಗಳೂರುಗಳೊಳಗೆ ಸ್ಪರ್ಧೆ ನಡೆದಿದೆ. ಹಿಂದೀ ಸರಕಾರದಿಂದ ನೇಮಿಸಲ್ಪಟ್ಟಿರುವ 'ಬಂದರ ಸಮಿತಿ'ಯವರು ಈ ಮೂರು ಬಂದರಗಳಿಗೂ ಪ್ರತ್ಯಕ್ಷ ಭೇಟಿ ಕೊಡಲು ಹೊರಟಿದ್ದ ವಾರ್ತೆಯಿದ್ದಿತು. ಈ ಸಮಿತಿಯ ಕಾರ್ಯವು ಈ ತಿಂಗಳಾಂತ್ಯದೊಳಗೆ ಮುಗಿಯುವದೆಂದೂ ಮೇ ತಿಂಗಳಾಂತ್ಯದೊಳಗೆ ಅದು ತನ್ನ ಶಿಫಾರಸುಗಳನ್ನು ಕೇಂದ್ರ ಸರಕಾರಕ್ಕೊಪ್ಪಿಸಲಿದೆಯೆಂದೂ ತಿಳಿದುಬರುತ್ತದೆ.

ಭಟ್ಕಳ-ಮಲ್ಪೆ-ಮಂಗಳೂರು ಬಂದರಗಳ ಪರವಾಗಿ ಈ ಕುರಿತು ಸಾಕಷ್ಟು ಚಳವಳ ಹಾಗೂ ಸ್ಪರ್ಧೆ ನಡೆದಿವೆಯಾದರೂ, ಮಲ್ಪೆಯ ಯೋಗ್ಯತೆ ಪ್ರಾಶಸ್ತ್ಯತೆ ಇದ್ದರೂ ಮೈಸೂರು ಸರಕಾರವೀಗ ಭಟ್ಕಳವನ್ನೇ ಬಯಸುತ್ತಿರುವದರಿಂದ ಮಂಗಳೂರು ಅಥವಾ ಮಲ್ಪೆಯ ಭವಿಷ್ಯದ ಕುರಿತು ವಿಶೇಷ ಆಸೆ ತೋರುವದಿಲ್ಲ. ಮಂಗಳೂರು ಬಂದರದ ಪರವಾಗಿ ಒಂದು ಶಿಷ್ಟಮಂಡಲಿಯು ಇತ್ತೀಚೆಗೆ ಮೈಸೂರು ಮಂತ್ರಿಗಳ ಭೇಟಿ ಪಡೆದಿದ್ದಿತು. ಆದರೆ ಮೈಸೂರಿನ ನಡುಗಾಲ ಸರಕಾರದ ಕಾನೂನು ಮತ್ತು ಕೂಲಿಗಾರ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಮರು ನವದಿಲ್ಲಿಗೆ ಹೋಗಿ ಭಟ್ಕಳವನ್ನು ಮೈಸೂರಿಗಾಗಿ ಪಡೆಕೊಳ್ಳುವ ಮಾತುಕತೆಗಳನ್ನೀಗ ನಡೆಸುತಿದ್ದಾರೆ. ಶ್ರೀ ಭಾಷ್ಯಮರು ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನರೊಡನೆಯೂ ಹಿಂದೀ ಸರಕಾರದ ಸಂಚಾರ ವಹಿವಾಟು ಖಾತೆಯ ಮಂತ್ರಿ ಡಾ. ಜೋನ್ ಮಥಾಯಿಗಳೊಡನೆಯೂ ಸವಿವರ ಪರ್ಯಾಲೋಚನೆ ನಡೆಸಿದ್ದಾರಲ್ಲದೆ ಪ್ರಧಾನ ಮಂತ್ರಿ ನೆಹರು ಮತ್ತು ಆಹಾರ ಮಂತ್ರಿ ಜೈರಾಮದಾಸ್ ದೌಲತರಾಮರೊಂದಿಗೂ ಮಾತುಕತೆ ನಡೆಸಿದ್ದಾರೆ.

ಭಟ್ಕಳವು ಮೈಸೂರುಗಡಿಗೆ ಕೇವಲ ಹದಿನೈದು ಮೈಲು ದೂರದಲ್ಲಿದೆ; ಬಂದರ ದಾರಿಯಿಂದ ಮೈಸೂರು ಸರಕಾರವು ಆ ಗಡಿ ತನಕ ರೈಲ್ವೆಯನ್ನು ನಿರ್ಮಿಸಿದೆ. ಭಟ್ಕಳವನ್ನು ಮೈಸೂರಿಗೆ ಬಿಟ್ಟುಕೊಟ್ಟರೆ ಭಾರತ ಸರಕಾರವು ಮೈಸೂರಿನ ಒಳಗಡೆಯ ಅಭಿವೃದ್ಧಿ ಸಾಧನೆಗೆ ನೆರವಾದಂತಾಗುವದೆಂದು ಶ್ರೀ ಭಾಷ್ಯಮರೆಂದಿದ್ದಾರೆ. ಈ ಮೊದಲು ಕೇಂದ್ರ ಸರಕಾರದ ಸೇನಾ ನಿಲ್ದಾಣವಾಗಿದ್ದ ಬೆಂಗಳೂರನ್ನು, ಪ್ರಥಮ ತರಗತಿಯ ಸೇನಾನಿಲ್ದಾಣವಾಗಿ ಮಾಡಿಕೊಳ್ಳುವಂತೆ ಪುನಃ ಭಾರತಕೇಂದ್ರ ಸರಕಾರಕ್ಕೆ ಬಿಟ್ಟುಕೊಡುವೆನಾಗಿ ಮೈಸೂರು ಸರಕಾರವು ತಿಳಿಸಿದೆಯೆಂಬ ಗುಟ್ಟನ್ನೂ ಶ್ರೀ. ಭಾಷ್ಯಮರು ಬಹಿರಂಗಗೊಳಿಸಿದ್ದಾರೆ. ಈ ರೀತಿ ಬೆಂಗಳೂರನ್ನು ಕೊಟ್ಟು ಭಟ್ಕಳವನ್ನು ಪಡೆಕೊಂಡು ಅದನ್ನು ಮಹಾ ಬಂದರಾಗಿ ರಚಿಸಿಕೊಂಡರೆ ಪಶ್ಚಿಮ ಕರಾವಳಿಯಲ್ಲಿ ಇನ್ನೊಂದು ಮಹಾ ಬಂದರಾಗುವ ಸಂಭವವಿಲ್ಲ. ಒಂದೊಮ್ಮೆಗೆ ಮೈಸೂರಿಗೆ ಬಿಟ್ಟುಕೊಡದಿದ್ದರೂ ಮೈಸೂರಪೇಕ್ಷಿಸುವ ಭಟ್ಕಳವನ್ನೇ ಮೈಸೂರಿನ ಪಾಲುಗಾರಿಕೆ ಅಥವಾ ನೆರವಿನಿಂದ ಭಾರತ ಸರಕಾರವು ಮಹಾ ಬಂದರಾಗಿ ಆರಿಸಿಕೊಂಡರೂ ಮಲ್ಪೆ, ಮಂಗಳೂರುಗಳ ಪಾಲಿನ ಸಂದರ್ಭವು ತಪ್ಪಿದಂತೆಯೇ. ಎಲ್ಲವೂ ಮೇ ಅಂತ್ಯದೊಳಗೆ ಸ್ಪಷ್ಟವಾಗಬಹುದು

ಪುತ್ತೂರು— ಶ್ರೀ. ಎಚ್. ಸಂಜೀವ ಶೆಟ್ಟಿ, ಎಡ್ವಕೇಟ್, ಅವರು ಪುತ್ತೂರಿನ ಗವರ್ನಮೆಂಟ್ ಪ್ಲೀಡರರಾಗಿ ನೇಮಕ ಹೊಂದಿರುವರೆಂದು ತಿಳಿದುಬರುತ್ತದೆ.

ಯಾತ್ರಾರ್ಥಿಗಳು ಗಂಗಾ ಯಮುನಾ ಸಂಗಮದಲ್ಲಿ ಸರ್ವಸ್ವತ್ಯಾಗ ಮಾಡುವ
ಮೊದಲು ಜೀವನ ಯಾತ್ರೆಯಲ್ಲಿ ತ್ಯಾಗಿಗಳಾಗಿಂದು ತಿಳಿದರೆ
ಚಿತ್ರ ತಯಾರಕರ ಶ್ರಮ ಫಲಿಸೀತು

ರಾಜಕಮಲದವರ

ಜೀವನಯಾತ್ರಾ

ನಯನತಾರಾ ಯಾಕೂಬ್, ಬಾಬುರಾವ್ ಪೆಂಡಾರ್ಕರ್, ಶಾಂತರಿನ್, ವೀಕ್ಷಿತ್ ಮೊದಲಾದವರು

ತಾ 24—4—1948ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ತಾ 24 ಮತ್ತು 25 4-48 ಶನಿವಾರ, ಆದಿತ್ಯವಾರ ಬೆಳಿಗ್ಗೆ 10-30ಕ್ಕೆ ಹಾಸ್ಯಮಯ
ಹಿಯರ್ ಕಮ್ಸ್ ದಿ ಕೊಯಿಡ್ಸ್
ಎಬಟ್ ಮತ್ತು ಕೊಸೆಲ್ಲೊ,

ಯಕ್ಷಗಾನ ಕಲಾಮಂಡಲ,
[ರಜಿಸ್ಟರ್ಡ್]
ಉಡುಪಿ.

ಇದೇ ತಿಂಗಳ ತಾ. 24ನೇ ಶನಿವಾರ ಸಾಯಂಕಾಲ ಘಂಟೆ 6ಕ್ಕೆ ಕಲಾಮಂಡಲದ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಉಡುಪಿ ಕುಂಜಿಬೆಟ್ಟಿನಲ್ಲಿರುವ ಸಂಘದ ಕಾರ್ಯಾಲಯದಲ್ಲಿ ಜರಗಲಿರುವುದು. ಸಂಘದ ಸದಸ್ಯರೆಲ್ಲರೂ ಸಕಾಲದಲ್ಲಿ ಬರಬೇಕಾಗಿ ಕಾರ್ಯದರ್ಶಿ ಕೆ. ನಾರಾಯಣ ಸೆಟ್ಟಿಯವರು ತಿಳಿಸುತ್ತಾರೆ.

ಪಿ. ಸೂ:— ಆ ದಿನ ರಾತ್ರೆ ಘಂಟೆ 9ಕ್ಕೆ ಭೀಷ್ಮವಿಜಯ ಎಂಬ ಪ್ರಸಂಗವು ಸುಪ್ರಸಿದ್ಧ ಬಡಗುತಿಟ್ಟಿನ ಅರ್ಥಧಾರಿಗಳಾದ ಶ್ರೀಯುತ [illegible]ಪ್ಪಯ್ಯನವರು [illegible], ಮಲ್ಪೆ ಸಾಮಗರು, ಪೊಳ್ಳ ದೇಜು ಸೆಟ್ಟರು, ಕೆ. ಪಿ. ರಾಮಕೃಷ್ಣ ತಂತ್ರಿಗಳು, ಮಲ್ಪೆ ಸುಬ್ಬರಾವ್, ಅಂಬಲಪಾಡಿ ಕೇರಿಯಣ್ಣಸೆಟ್ರು, ಶಿವಪುರ ಶ್ರೀನಿವಾಸ ಪಂಡಿತರು, ಸೀತಾನದಿ ಗಣಪಯ್ಯಸೆಟ್ರು, ಪಂದುಬೆಟ್ಟು ಸೀನಸೆಟ್ರು ಇವರೇ ಮೊದಲಾದ ಪ್ರಸಿದ್ಧ ಅರ್ಥಧಾರಿಗಳಿಂದಲೂ, ಕಾರ್ಯದರ್ಶಿ ಕೆ. ನಾರಾಯಣ ಸೆಟ್ರು ಮತ್ತು [illegible] ಸೀನಪ್ಪ ಹೆಗ್ಡೆಯವರ ಭಾಗವತಿಕೆ, ಶ್ರೀಯುತ ಮಟ್ಟಿ ಗೋವರ್ಧನ ರಾವ್ ಮತ್ತು ಸುಬ್ಬರಾವ್‌ರವರ ಮೃದಂಗವಾದನದೊಡನೆ ಜರಗುವುದು. ಸಾರ್ವಜನಿಕ ಬಂಧು-ಭಗಿನಿಯರೆಲ್ಲರೂ ಯಕ್ಷಗಾನದ ಕಲಾನುಭವದ ಆನಂದವನ್ನು ಪಡೆಯಬೇಕಾಗಿ ವಿಜ್ಞಾಪನೆ.

ಯನ್. ರಾಜಗೋಪಾಲಕೃಷ್ಣ ರಾವ್, ಅಧ್ಯಕ್ಷ
ಕೆ. ನಾರಾಯಣ ಸೆಟ್ಟಿ, ಕಾರ್ಯದರ್ಶಿ.

ಅಮೃತಾಂಜನ. ತಲೆವೇದನೆ, ತಿರುಗಿ [illegible], ಉಳುಕು, [illegible] ಭುಜ [illegible] ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ಮುಂತಾದ [illegible] ಕಚ್ಚುವಿಕೆ ಮೊದಲಾದ ಎಲ್ಲಾ ರೋಗಗಳಿಗೂ [illegible]

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.



Approved firm by the Govt. of Mysore Certified by the Agent of the Govt. of Ceylone & Indian.

ಮಂಗಳೂರು

ಪುತ್ತೂರು ತಾಲೂಕು ವ್ಯವಸಾಯಗಾರರ ಸಮಿತಿ — ಈ ಸಮಿತಿಯ ಮೀಟಿಂಗ್ ಕುರಿತಾಗಿ ಸಂಬಂಧಪಟ್ಟ ಸರಕಾರಿ ಇಲಾಖೆಗಳ ಅಧಿಕಾರಿಗಳ ಸೇರಿಕೆಯೊಡನೆ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಮಾಜಿ ರೆವಿನ್ಯೂ ಮಂತ್ರಿ ಶ್ರೀ ಕೆ. ಆರ್. ಕಾರಂತ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ತಾಲೂಕಿನಲ್ಲಿ ಬೇಗನೇ ಮಲೇರಿಯಾ ನಿವಾರಣೆಯ ಕೆಲಸಕ್ಕಾರಂಭಿಸಿ ಸದ್ಯ ೨೦ ಗ್ರಾಮಗಳಲ್ಲಿ ಅದರ ಪ್ರಯೋಗ ನಡೆಸಲಾಗುವುದೆಂದು ಜಿಲ್ಲಾ ಹೆಲ್ತ್ ಆಫೀಸರ್ ಡಾ. ರಾಮಚಂದ್ರರಾಯರೂ; ಕೊಕ್ಕಡದಲ್ಲಿ ಒಂದು ರೂರಲ್ ಡಿಸ್ಪೆನ್ಸರಿಯನ್ನು ಬರುವ ವರ್ಷ ತೆರೆದು, ಅದರೊಡನೆ ಸಂಚಾರದ ಆಸ್ಪತ್ರೆಗೂ ಅನುಕೂಲಪಡಿಸುವ ಯೋಜನೆ ಇದೆ; ಅದರ ಆರಂಭದ ವೆಚ್ಚ ರೂ. ೧೨೦೦೦, ವರ್ಷಾವಧಿ ಖರ್ಚು ರೂ. ೬೮೦೦, ಈ ಆಸ್ಪತ್ರೆಯ ಪರೀಕ್ಷೆ ಪುತ್ತೂರು ತಾಲೂಕಿನಲ್ಲಿ ಆಗುವುದು, ಜನರು ೧೦ ಸಾವಿರ ರೂಪಾಯಿಗಳಷ್ಟಾದರೂ ವಂತಿಗೆ ಮಾಡಿಕೊಡಲಿ, ಬೋರ್ಡ್ ಮತ್ತು ೧೦ ಸಾವಿರ ಹಾಕಿ ಈ ಆಸ್ಪತ್ರೆ ಕೆಲಸಕ್ಕೆ ತೊಡಗುವುದು ಎಂದು ಜಿಲ್ಲಾ ಬೋರ್ಡಿನ ಸ್ಪೆಶಲ್ ಆಫೀಸರರ ಪರ್ಸನಲ್ ಅಸಿಸ್ಟೆಂಟ್ ಶ್ರೀ. ಎಂ. ಸುಂದರರಾಯರೂ, ಕುಪೆಟ್ಟು ಗ್ರಾಮದಲ್ಲಿ ಆರಂಭವಾದ 'ಬ್ಲ್ಯಾಂಡ್ ಕೊಲೊನೈಜೇಶನ್' ಯೋಜನೆಯನ್ನು ಜ್ಯಾರಿಗೆ ತಂದು ಮುಂದೆ ವಿಸ್ತರಿಸಲಾಗುವುದೆಂದು ಜಿಲ್ಲಾ ಡೆವೆಲಪ್ಮೆಂಟ್ ಆಫೀಸರ್ ಶ್ರೀ. ಕೆ. ಸರ್ವೋತ್ತಮರಾವ್ ಅವರೂ, ಈ ತಾಲೂಕಿನ ಪಶು ಪಾಲನೆ ಸಜ್ಜನರ ಸಂಖ್ಯೆಯನ್ನು ಹೆಚ್ಚಿಸುವಂತೆ ತಾವು ಸರಕಾರಕ್ಕೆ ಶಿಫಾರಸು ಮಾಡಿ ಬರೆದಿರುವುದಾಗಿ ಜಿಲ್ಲಾ ವೆಟರ್ನರಿ ಆಫೀಸರ್ ಡಾ. ಎಸ್. ಸಿ. ಶಾಸ್ತ್ರಿಗಳವರೂ ಸುಬ್ರಹ್ಮಣ್ಯ-ಜಾಲೂರು- ದರ್ಬೆ-ಬೆಳ್ಳಾರೆ ಮೊದಲಾದ ಕಡೆಗಳ ರಸ್ತೆಗಳ ಯೋಜನೆಯೊಂದು ತಯಾರಾಗಿದ್ದು, ಅದಕ್ಕೆ ಅಂದಾಜು ವೆಚ್ಚ ಸುಮಾರು ೬॥ ಲಕ್ಷ ರೂ. ಗಳಷ್ಟಾಗಬಹುದೆಂದು ಪುತ್ತೂರು ತಾಲೂಕಿನ ಡಿವಿಜನಲ್ ಅಸಿ. ಇಂಜಿನಿಯರರೂ ತಿಳಿಸಿದರು.

ಅಧ್ಯಕ್ಷರು ಹಿಂದುಸ್ಥಾನ ಸರಕಾರದವರು ಇಂಥವೇ ಯೋಜನೆಯನ್ನು ತಾನೇ ಕೈಕೊಂಡದ್ದರಿಂದ ಈ ಅಧಿಪತ್ಯಕ್ಕೆ ಸುಮಾರು ೨೦ ಲಕ್ಷ ರೂಪಾಯಿಗಳಷ್ಟು ಉಳಿಯುತ್ತದೆ. ಅದರಲ್ಲಿ ... ಅಂಶವನ್ನು ಪುತ್ತೂರು ತಾಲೂಕಿನ ರಸ್ತೆಗಳ ಯೋಜನೆಗಾಗಿ ಸರಕಾರ ಖರ್ಚು ಮಾಡಬೇಕೆಂದರು.

ಮುಚ್ಚಿದ ಪ್ರದೇಶಗಳಿಗೆ ಕಲೆಕ್ಟರರ ಸಂದರ್ಶನ—ನಮ್ಮ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈನಾಡ್, ಎಂ. ... ಐ. ಸಿ. ಎಸ್. ಅವರು ಜಿಲ್ಲೆಯ ಮಲೆನಾಡಿನ ... ಬೆಳ್ತಂಗಡಿ ಪ್ರಾಂತಗಳಾದ ಧರ್ಮಸ್ಥಳ, ಮುಂಡಾಜೆ, ಚಾರ್ಮಾಡಿ ಗಡಿಗಳವರೆಗೂ ಈಚೆಗೆ ಸಂದರ್ಶನ ಕೊಟ್ಟು, ಮುಂಡಾಜೆಯಲ್ಲಿ ಇಂಡಿಯಾ ಸರಕಾರದವರಿಂದ ತಾತ್ಕಾಲಿಕವಾಗಿ ಸ್ಥಾಪಿತವಾದ "ಮಲೇರಿಯಾ ಯೂನಿಟ್ ಲೆಬರೇಟರಿ"ಯನ್ನು ನೋಡಿಕೊಂಡು ಬಂದರು. ಆ ಸಂಸ್ಥೆಯ ಅಧಿಕಾರಿಗಳೂ, ಮಲೇರಿಯಾ ಶಾಖೆಯ ಅಸಿ. ಡೈರೆಕ್ಟರರೂ ಆದ, ಡಾ. ಎಸ್. ಪಿ. ರಾಮಕೃಷ್ಣನ್ ಅವರು, ಆ ಸಂಸ್ಥೆಯ ಕಾರ್ಯಭಾಗಗಳನ್ನು ಕಲೆಕ್ಟರರಿಗೆ ವಿವರಿಸಿದರು.

ಉಡುಪಿ.

ಗಾಂಧಿ ಸ್ಮಾರಕ ನಿಧಿ ಸಂಗ್ರಹ—ದ ಸಲುವಾಗಿ ತಾಲೂಕು ಸಮಿತಿಯನ್ನು ನೇಮಿಸುವರೆ ಇತ್ತೀಚೆಗೆ ಮುನಿಸಿಪಲ್ ಮ್ಯೆನ್ ಶಾಲೆಯಲ್ಲಿ ಶ್ರೀ ಅಲಂಗಾರ್ ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲೊಂದು ಸಭೆ ಕೂಡಿತು. ಮುನಿಸಿಪಲ್ ಚಯರ್ಮನ್ ಶ್ರೀ. ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರು ಈ ಸಮಿತಿಯ ಅಧ್ಯಕ್ಷರಾಗಿಯೂ ಶ್ರೀ. ಕೆ ಸರಪು ಕಾಮತರು ಪ್ರಧಾನ ಕಾರ್ಯದರ್ಶಿ ಹಾಗೂ ಖಜಾನ್ಚಿಯರಾಗಿಯೂ ಆರಿಸಲ್ಪಟ್ಟರು. ಸಮಿತಿಯಲ್ಲಿ ತಾಲೂಕಿನ ಗ್ರಾಮ ಕೇಂದ್ರಗಳ ಸದಸ್ಯರಿರುವರು.

ನಗರ ಸಭೆಯು-ಈ ಗಲ್ಲಿ ಸಭೆ ಮುನಿಸಿಪಲ್ ವೈಸ್ ಚಯರ್ಮನ್ ಶ್ರೀ, ಎ. ಬಿ ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದ ಪೂರ್ವದಲ್ಲಿ ಮದ್ರಾಸು ಸಿನೇಟು ಮೆಂಬರರಾದ ಶ್ರೀಮತಿ ಲೀಲಾಬಾಯಿ ಕಾಮತರಿಗೆ ಶ್ರೀಗಳಾದ ಎ. ಬಿ ಕೃಷ್ಣರಾಜ ಮತ್ತು ಯು ವಾಸುದೇವ ಪ್ರಭುಗಳು ಉಪಹಾರ ಸತ್ಕಾರವನ್ನಿತ್ತರು, ಶ್ರೀಮತಿಯವರು ಅಭಾರ ಸೂಚಿಸಿದರು.

ಪೋಸ್ಟ್ಮೆನ್ ಮತ್ತು ಕೆಳತರಗತಿಯ ನೌಕರರ ಸಂಘದ ವಿಶೇಷ ಸಭೆ-ಇದೇ ತಾ 11-4-48ರಲ್ಲಿ ಈ ಸಭೆಯು ಶ್ರೀಮಾನ್ ಭಾಸ್ಕರ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಮುಖ ಪತ್ರಿಕೆಯಾದ ಪೋಸ್ಟ್ಮೆನ್ ಹೆರಾಲ್ಡನ್ನು ಕನ್ನಡದಲ್ಲಿ ಛಾಪಿಸಬೇಕಾಗಿಯೂ ಹೀಗೆ ನಮ್ಮ ಸಂಘದ ಚಟುವಟಿಕೆಗಳನ್ನು ತಿಳಿಯುವ ಸಲುವಾಗಿ ಇದನ್ನು ಪ್ರತಿ ಒಬ್ಬ ಸದಸ್ಯನು ತೆಗೆದುಕೊಳ್ಳಬೇಕಾಗಿಯೂ, ಮಂಜೂರಾಗಿರುತ್ತದೆ. ಎರಡನೆಯದಾಗಿ ಟೇಶನಿಂಗ್ ಪದ್ಧತಿಯು ಜಾರಿಯಲ್ಲಿ ಇರುವ ಸ್ಥಳಗಳಲ್ಲಿ ಅಕ್ಕಿಯು ಸಿಗುವಂತೆ, ರೇಶನಿಂಗ್ ಪದ್ಧತಿ ತೆಗೆದುಹಾಕಿದ ಸ್ಥಳಗಳಲ್ಲಿ ನಮಗೆ IV ವರ್ಗದವರಿಗೆ ಸಿಗದ ಪಕ್ಷದಲ್ಲಿ ಇದೇ ಮೇ 31 ರಲ್ಲು ಮುಷ್ಕರವನ್ನು ಹೂಡಲು ಸರಕಾರಕ್ಕೆ ನೋಟೀಸು ಕೊಡುವುದಾಗಿ ಮಂಜೂರಾಯಿತು.

'ಗೋಕುಲ ನಿವಾಸ'—. ಮುನ್ಸಿಫ್ ಕೋರ್ಟು, ತಾಲೂಕು ಕಚೇರಿ ಮುಂತಾದ ಉಡುಪಿಯ ವ್ಯವಹಾರಕ್ಷೇತ್ರದ ಕೇಂದ್ರ ಸ್ಥಳದಲ್ಲಿ ಆಧುನಿಕ ಸೌಕರ್ಯಗಳಿಂದೊಪ್ಪುವ ಊಟ ಉಪಹಾರ ವಸತಿಗೃಹವೊಂದನ್ನು ತೆರೆಯಬೇಕೆಂಬ ಸಂಕಲ್ಪದಿಂದ ಶ್ರೀ. ಎ. ಶ್ಯಾಮರಾಯರು ಕಟ್ಟಿದನಾರ ಮೇಲಿನ ಹೆಸರ ಭವನವನ್ನು ಶ್ರೀ. ಅರೂರು ಲಕ್ಷ್ಮೀನಾರಾಯಣರಾಯರ ಕೈಯಿಂದ ಉದ್ಘಾಟಿಸುವ ಸಮಾರಂಭವನ್ನು ಜರಗಿಸಿದರು. ಶ್ರೀ. ಆರೂರರವರು ಜನತಾಸೇವೆಯನ್ನು ಪ್ರಧಾನವಾಗಿಟ್ಟುಕೊಂಡು ತೆರೆಯುವ ಇಂತಹ ನೂತನ ಗೃಹಗಳು ಉಡುಪಿಗೆ ಆವಶ್ಯವಿವೆ ಎಂಬುವನ್ನು ಬಗೆಗಾಣಿಸಿ ಭವನಕ್ಕೆ ಯಶಸ್ಸನ್ನು ಕೋರಿದರು. ಶ್ರೀ- ಕೊಡ್ಗಲ್ ಶ್ರೀನಿವಾಸರಾಯರು ಶ್ರೀ. ಶ್ಯಾಮರಾಯರ ಪರಿಚಯವನ್ನು ಮಾಡಿಕೊಡುತ್ತ ಇಂತಹ ಭವನಗಳನ್ನು ಇತರ ಕಡೆಗಳಲ್ಲಿ ಯಶಸ್ವಿಯಾಗಿ ನಡೆಯಿಸಿದ ಅನುಭವಿಯಾದ ಶ್ರೀ. ಶ್ಯಾಮರಾಯರ ನೇತೃತ್ವದಲ್ಲಿ ಇದು ಜನಪ್ರೀತಿಪಾತ್ರವಾದ ಭವನವಾದೀತೆಂದು ಆಶ್ವಾಸನೆ ಇತ್ತರು. ಅತಿಥಿ ಅಭ್ಯಾಗತರ ಪರವಾಗಿ ಶ್ರೀ ಕೊಟ್ರಕಾರ್ ರಮಾನಾಥ ಪೈಗಳು ಧನ್ಯವಾದವನ್ನೀಯಲು ಉಪಹಾರಾದಿ ಸತ್ಕಾರಗಳಿಂದ ಸಮಾರಂಭವು ಮುಕ್ತಾಯವಾಯಿತು

ಜುಲ್ಮಾನೆ ರದ್ದು

ಉಡುಪಿ ಮುನಿಸಿಪಲ್ ಹಿಂದೂಸ್ಥಾನಿ ಶಾಲೆಯೊಳಗೆ ಅಕ್ರಮ ಪ್ರವೇಶ ಮಗ್ಗೆ ಮಾಡಿದರೆಂಬ ಆರೋಪದಿಂದಾಗಿ ಸಬ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಜನಾಬ್ ಯು ಎಸ್. ಅಬ್ದುಲ್ ಖಾದರ್ ಸಾಹೇಬರಿಗೆ ಆದ ಜುಲ್ಮಾನೆಯು ಕುಂದಾಪುರ ಸಬ್ ಕಲೆಕ್ಟರರ ಮುಂದೆ ಅಪೀಲು ಮಾಡಲಾಗಿ ಸಾಹೇಬರು ನಿರಪರಾಧಿಗಳೆಂದು ತೀರ್ಪು ಕೊಡಲಾಗಿದೆ ಯೆಂದು ಓರ್ವ ಬಾತ್ಮೀದಾರರು ಬರೆಯುತ್ತಾರೆ.

ಸ್ವೀಕಾರ-ವಿಮರ್ಶೆ

ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,-ಪ್ರಧಾನ ಕಾರ್ಯಾಲಯ, ಮಂಗಳೂರು. 1947ನೆಯ ವರುಷದ ಬಗ್ಗೆ ಪರಿಶೋಧಿತವಾದ ಆಯವ್ಯಯ ಸಹಿತ ವರದಿ-ಈ ವಿಮಾ ಕಂಪೆನಿಯು ಸ್ಥಾಪಿತವಾಗಿ 18 ವರುಷಗಳಾದುವು. ಇದೀಗ 18ನೆಯ ವರುಷದ ವರದಿ. ಕಂಪೆನಿಯ ಕಾರ್ಯಕಲಾಪಗಳ ವಿಷಯ ವಿವರ ಸೂಚಕವಾದ ಸ್ಪಷ್ಟ ಅಂಕೆ ಸಂಖ್ಯೆಗಳು ವರದಿಯಲ್ಲಿವೆ. ಅವನ್ನು ಪರಿಶೀಲಿಸಿದರೆ ಕಂಪೆನಿಯು ಸರ್ವಾಂಗ ಪ್ರಗತಿ ಸಾಧಿಸುತ್ತ ಬಂದಿರುವುದು ವ್ಯಕ್ತವಾಗುತ್ತದೆ. ವರದಿಯ ವರುಷದಲ್ಲಿ ಕಂಪೆನಿಯು ರೂ. 28,66,500 ಮೌಲ್ಯದ ಹೊಸ ವಿಮಾ ಪತ್ರಗಳನ್ನು ಕೊಟ್ಟಿದೆ. ಹಿಂದಿನ ವರುಷದ ವಿಮಾ ಕಾರ್ಯದೊಡನೆ ಇದನ್ನು ಹೋಲಿಸಿದರೆ ಇದು ರೂ. 7,33,400 ಅಧಿಕವಾಗಿದೆ.

ಪ್ರೀಮಿಯಮು ಬಡ್ಡಿ ಮುಂತಾಗಿ ಕಂಪೆನಿಯ ಆದಾಯವು ಹಿಂದಿನ ವರುಷದಲ್ಲಿ ರೂ 3,62,400 ಇದ್ದುದು ವರದಿಯ ವರುಷದಲ್ಲಿ ರೂ 4,70,151ಕ್ಕೆ ಏರಿದೆ. ಪ್ರವರ್ತಕ ವ್ಯಯ ಪ್ರಮಾಣವು ಸೇಕಡ 13 43 ಇದ್ದುದು ವರದಿಯ ವರುಷದಲ್ಲಿ ಸೇ. 12 72ಕ್ಕೆ ಇಳಿದಿರುವುದನ್ನು ಕಂಡರೆ ಕಂಪೆನಿಯು ವ್ಯಯ ಭಾಗದಲ್ಲಿ ಜಾಗರೂಕತೆಯ ನೋಟವಿಟ್ಟುಕೊಂಡೇ ಕಾರ್ಯ ನಡೆಯಿಸುತ್ತಿದೆ ಯೆಂಬುದಂ ಸೂಚಕವಾಗಿದೆ. ವಿಮಾ ಪತ್ರದಾರರಿಗೆ ಪ್ರಥಮ ಭದ್ರತೆಯಾಗಿರುವ ಲೈಫ್ ಎಶ್ಯೂರೆನ್ಸ್ ಫಂಡ್ (ಭದ್ರತಾ ನಿಧಿ) ಕಳೆದ ವರುಷಕ್ಕಿಂತ ರೂ. 2,50,339 ವೃದ್ಧಿಯಾಗಿ ವರದಿಯ ವರುಷದಲ್ಲಿ ರೂ. 10,70,907ಕ್ಕೆ ಏರಿದೆ. ಕಂಪೆನಿಯ ಹಣವು ಸರಕಾರದ ಭದ್ರತಾ ಪತ್ರ (ಸೆಕ್ಯುರಿಟಿ)ಗಳಲ್ಲಿಯೂ ಇತರ ಅನುಮೋದಿತವಾದ ಸೆಕ್ಯುರಿಟಿ ಮತ್ತು ಸಂಘ ಸಂಸ್ಥೆಗಳ ಪಾಲು (ಶೇರು)ಗಳಲ್ಲಿಯೂ ವಿನಿಯೋಗವಾಗಿ ಭದ್ರವಾಗಿದ್ದು ಒಳ್ಳೆಯ ವರಮಾನವನ್ನು ತರುತ್ತಿದೆ. ವಿಮಾ ಪತ್ರದಾರರ ಮರಣ ಕಾರಣದಿಂದಾಗಿ ಪತ್ರದ ಮೌಲ್ಯವನ್ನು ತೆರಬೇಕಾಗಿ ಬಂದುದರ ಒಟ್ಟು ಮೌಲ್ಯವು ಬರೇ ರೂ. 40,123 ಎಂಬುದನ್ನು ಪರ್ಯಾಲೋಚಿಸಿದರೆ ಕಂಪೆನಿಯು ವಿಮಾ ಪತ್ರ ಕೊಡುವಾಗ ವಿಶೇಷ ಜಾಗರೂಕತೆಯಿಂದ ಆಯ್ಕೆ ಮಾಡುತ್ತ ಬಂದಿದೆ ಎಂಬುದು ವ್ಯಕ್ತವಾಗುತ್ತದೆ. ಡೈರೆಕ್ಟರ ಮಂಡಳಿಯ ಸಮರ್ಥ ವ್ಯವಹಾರ ಚತುರರೂ ಜನತಾ ವಿಶ್ವಾಸಪಾತ್ರರೂ ಆಗಿರುವ ಮಹನೀಯರಿಂದ ಕೂಡಿದೆ ಈಗಾಗಲೇ ಈ ಕಂಪನಿಯು ಕಳೆದ ಐದು ವರುಷದ ಬಗ್ಗೆ ಮೌಲ್ಯನಿರ್ಧಾರದ(Actuarial Valuation) ಕಾರ್ಯವು ಪ್ರಸಿದ್ಧ ಎಕ್ಚ್ವೇರಿಗಳಿಂದ ನಡೆಯುತ್ತಲಿದೆ. ಅದರಲ್ಲಿಯೂ ಈ ಕಂಪೆನಿಯು ಉತ್ತಮ ಫಲಿತಾಂಶವನ್ನು ತೋರಿಸೀತೆಂದು ನಿರೀಕ್ಷಿಸಲು ತುಂಬ ಅವಕಾಶವಿದೆ. ಹೀಗೆ ಸರ್ವಾಂಗ ಪ್ರಗತಿ ಸಾಧಿಸುತ್ತ ಬರುತ್ತಿರುವ ಈ ಕಂಪೆನಿಯು ಜನತೆಯ ಇನ್ನೂ ಹೆಚ್ಚಿನ ಪ್ರೋತ್ಸಾಹಕ್ಕೆ ಅರ್ಹವಾಗಿದೆಯೆಂಬುದನ್ನಿಲ್ಲಿ ಒತ್ತಿ ಹೇಳಿದಿರುವ—"ಕೊರಡ್ಕಲ್"

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.
ನವಭಾರತ ಬುಕ್ ಡಿಪೊ. ಉಡುಪಿ.

ಬಾಲಕರ ಆರೋಗ್ಯಕಾಯರಾಗಲು
ಪ್ರಭೂಸ್ ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ
ಹಲವು ಬಗೆಯ ರೋಗಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿ ಕುಗ್ಗಿ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.
ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ಆಟೋಟಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.
ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:-
ನವಭಾರತ ಪುಸ್ತಕ ಭಂಡಾರ, ಉಡುಪಿ
L. N. Sharma, Mangalore.

ಉಡುಪಿಗೆ ಹೋಗಬೇಕೇ! ಅದರೆ ಉಳಿದುಕೊಳ್ಳುವುದೆಲ್ಲಿ?
ರಾ ಯ ಲ್ ಮ ಹಾ ಲಿ ನ ಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ,
ಕರೆದಾಗ ಓಗೊಡುವ ನೌಕರರ ವರ್ಗ!
ಜೋಡಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಬಿನ್ನಗಳ ಮಿಠಾಯಿ ಹೇಳಬೇಕೇ
ಪ್ರೊಪ್ರೈಟರ್:- ಕೆ ವೆಂಕಟ್ರಮಣ ಭಟ್.
For up-to-date Lodging & Boarding
ROYAL MAHAL,
UDIPI, S. Kanara.

ಎಲ್ಲ ತರದ
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್,
ಉಡುಪಿ.
ಮದುವೆ ಕಾಗದಗಳನ್ನು
ಅಲ್ಪಾವಧಿಯಲ್ಲೇ ಮಾಡಿ
ಕೊಡಲಾಗುವುದು.

ರಾಷ್ಟ್ರ ರಾಷ್ಟ್ರಗಳೊಳಗೆ ಯುದ್ಧ ಹೊಡ ದರೆ ಶತ್ರುವನ್ನು ಅಪಾರವಾದ ಶಕ್ತಿಯಿಂದ ಕೂಡಲೇ ಹತ್ತಿಕ್ಕುವುದರ ಸಲುವಾಗಿ ಅಟಂ ಬಾಂಬಿನ ಮಳೆಯನ್ನು ಸುರಿಸಬಹುದೆಂದು ಚರ್ಚ್ ಆಫ್ ಇಂಗ್ಲೆಂಡ್ ನೇಮಿಸಿದ ಕಮಿಶನ್‌ನವರು ಅಧಿಕೃತ ಹೇಳಿಕೆ ಹೊರಡಿಸಿದ್ದಾರೆ. ಅಲ್ಲದೆ ಸ್ವರಕ್ಷಣೆಗಾಗಿ ಮಾಡಿದ ಯಾವ ಹಾನಿಯೂ ಸಾಧುವೆಂದು ಅವರ ಅಭಿಮತ. ಸರಿ, ಪಾಶವೀಶಕ್ತಿಗೆ ಧಾರ್ಮಿಕತೆಯ ಅನುಮೋದನೆಯ ಮುದ್ರೆ ಒತ್ತಿದರು. ಇದರಲ್ಲಿ ಆಶ್ಚರ್ಯವೇನಿದೆ? ಹದಿನಾಲ್ಕನೇ ಶತಮಾನದಲ್ಲಿ ಯುರೋಪಿನ ಜನಾಂಗಗಳು ಬಿಲ್ಲು-ಬಾಣ ತೊರೆದು ಸಿಡಿಮದ್ದಿನ ಉಪಯೋಗ ಆರಂಭಮಾಡಿದಾಗ, ಸಿಡಿಮದ್ದಿನಿಂದ ಸಿಡಿವ ಬಾಂಬಿಗೆ, ಜಲಾಂತರ್ಗಾಮಿಗೆ, ವಿಮಾನದಾಳಿಗೆ- ಯುದ್ಧ ವಿಸ್ತಾರವಾದಾಗ, ಮನುಷ್ಯ ತನ್ನ ಶೋಣಿತೆಯ ಸೋಗನ್ನು ಕಿತ್ತುಹಾಕಿ ಪಶುವಿನ ಹಂತಕ್ಕೆ ಇಳಿಯುತ್ತ ಇಳಿಯುತ್ತ ಹೋದಾಗಲೆಲ್ಲ ಈ ಧರ್ಮೋದ್ಧಾರಕರ ತಂಡ ಸ್ವೈಗುಟ್ಟಿತೇ ಹೊರತು ವಿರುದ್ಧವಾಗಿ ಒಂದು ಮಾತನ್ನೆತ್ತಲಿಲ್ಲ ಮಾತೆತ್ತುವುದಾದರೂ ಹೇಗೆ? ಸ್ವತಃ ಧರ್ಮಗುರುಗಳೇ ರಾಜಕೀಯ ಕುಟಿಲ ನೀತಿಯನ್ನನುಸರಿಸಿ ರಾಷ್ಟ್ರ ರಾಷ್ಟ್ರಗಳೊಳಗೆ ಜಗಳ ಕಾಯಿಸಿದ್ದುಂಟು. ಇಟಲಿಯಲ್ಲಿ ಮುಸೋಲಿನಿಯ ಫೇಸಿಸ್ಟ್ ರಾಷ್ಟ್ರವನ್ನು ಹರಸಿದವರಾರು?—ಇದೇ ಧರ್ಮಗುರುಗಳು. ಟೆನ್ಸಿನ್ ಕ್ಯಾಂಪಿನಲ್ಲಿ ನಾತ್ಸೀಗಳು ಸಾವಿರಾರು ಜೀವಗಳನ್ನು ಕೊಂದು ಬಿಸುಟಾಗ ಪಟ್ಟದರಾಣಿಯನ್ನು ದೂರಿದರೇ ಧರ್ಮಗುರುಗಳು? ಇಲ್ಲ; ಬದಲು "ಧರ್ಮ ಬೇರೆ, ರಾಜಕೀಯ ಬೇರೆ" ಎಂದು ವೇದಾಂತ ಮಾಡಿದ್ದುಂಟು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 566/1946.

R. E. P. No. 136/1948

ವಾದಿ-ಸಾಲಿಗ್ರಾಮದ ಬಳ್ಕೂರು ವೆಂಕಟೇಶ ಮಂಜುನಾಥ ಪ್ರಭು ಉಡುಪಿ ಕುಂದಾಪುರ ತಾಲ್ಲೂಕು ಪಡುಕೋಣೆ ಗ್ರಾಮದಲ್ಲಿರುವ. ಅರ್ಜಿದಾರ ಡಿಕ್ರಿ, Post Coondapoor.

Defendant S. K. Syed yousif son of syed Abdul Muthalief Koya, Lucky collage, near Khoja-centorium Bombay, Post ... Bombay.

ಮೇಲಿನ ಡಿಕ್ರಿ ಸಮಾಧಾನದ ಬಗ್ಗೆ ನಡ್ಡಿದ ಸಡ್ಡಿ ಅಮಲ್ಜಾರಿಯಲ್ಲಿ ಯಿಸ್ತ್ಯಾರಿನ ದರ್ಜೆ ನಿರ್ಣಯದ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾ 11-6-1948ಕ್ಕೆ ತಕ್ಕಿಗೆ ಯಿದ್ದಾಗಿರುತ್ತದೆ. ಆ ವಿಷಯ ಪ್ರತಿವಾದಿಯು ಆಕ್ಷೇಪಣೆಯೇನಾದರೂ ಯಿದ್ದರೆ ಸಡ್ಡಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಆಕ್ಷೇಪ ಮಾಡತಕ್ಕದ್ದು. ತಪ್ಪಿದ್ದರೆ, ಸಡ್ಡಿ ಪ್ರತಿವಾದಿಯನ್ನು ಎಕ್ಸ್‌ಪಾರ್ಟಿ ಮಾಡಿ ಆತನ ಗೈರ ಹಾಜರಿಯಲ್ಲಿ ಸಡ್ಡಿ ಅಮಲ್ಜಾರಿಯನ್ನು ತೀರ್ಮಾನಿಸಲಾಗುತ್ತದೆಂತ ಈ ಮೂಲಕ ತಿಳಿಸಲಾಗುತ್ತದೆ.

M Mahabala Hebbar.

Advocate for Petitioner

ತಾರೀಕು 18-4-1948 }
ಮೊಕ್ಕಾಂ. ಕುಂದಾಪುರ. }

ಲೋಕಾಭಿರಾಮ

ಧರ್ಮದ ಪೂರ್ವೋತ್ತರ

ಶ್ರೀ. ಕು. ಶಿ. ಹರಿದಾಸ ಭಟ್ಟ

ನಾವು ಧರ್ಮ ಏಕೆ ಬೇಕೆಂದು ತುಸು ವಿಚಾರಿಸುವ. ಕಾಡುಜನರನ್ನು ತಿದ್ದಿ ನಾಡಿಗರನ್ನಾಗಿ ಮಾಡಿದ ಶ್ರೇಯಸ್ಸನ್ನು ನಾವು ಧರ್ಮಕ್ಕೆ ಸಲ್ಲಿಸೋಣ. ಆದರೆ ಧರ್ಮ ಬಾಹ್ಯಕೃತಕ್ಕಂತೆ ಬದಲಾಗುವುದು ಧರ್ಮದ ಸಹಜಧರ್ಮ. ಜನರ ಬಾಳುವೆ ಸಮಯಾನುಸಾರ ಬದಲಾಗುತ್ತಿರುತ್ತದೆ ಬಲಪಕ್ಷದವರು ಇಂಥ ಬದಲಾವಣೆ ಮಳೆಬಿದ್ದಹಾಗೆ ಸ್ವಾಭಾವಿಕವಾಗಿ ಆಗುತ್ತದೆ ಎನ್ನಬಹುದು; ಎಡಪಕ್ಷದ ಪುರೋಗಾಮಿಗಳು ಅದು ಸಮಾಜದ ಆಯಾ ಕಾಲದ ಆರ್ಥಿಕ ಪದ್ಧತಿಯನ್ನವಲಂಬಿಸಿದೆಯೆಂದು ನಂಬಬಹುದು. ಏನಿದ್ದರೂ ಸಮಾಜ ಪರಿವರ್ತನೆಗೊಳ್ಳುವುದು ನಿಶ್ಚಯ. ಸಮಾಜವೇ ಬದಲಾಗಿದೆ ಎನ್ನುವಾಗ ಅದನ್ನು ತಿದ್ದುವ ಧರ್ಮಕೂಡ ಅದಕ್ಕೆ ಹೊಂದಿ ನಡೆಯಬೇಕು. ಅಂದರೆ ಮೂಲತತ್ವವನ್ನು ತೊರೆಯಬೇಕೆಂದಲ್ಲ; ಧರ್ಮ ತನ್ನ ಮೂಲತತ್ವಕ್ಕೆ ಹೆಚ್ಚು ಹೆಚ್ಚು ಸರಿಯಹೋಗಲಿ. ಮೂಲತತ್ವವನ್ನು ಮರೆತು ಕಂದಬಟ್ಟೆಯಲ್ಲಿ ಕಾಲಿಟ್ಟುದರಿಂದಲೇ ಧರ್ಮಕ್ಕೆ ಧಕ್ಕೆ ಬಂದುದಲ್ಲದೆ ನಾಸ್ತಿಕರ ಉಪಟಳದಿಂದಲ್ಲ. ಹಾಗೆ ಕೇಳಹೋದರೆ ಧರ್ಮಹಾನಿ ಆಸ್ತಿಕರೆನಿಸುವವರಿಂದಲೇ ಆದಷ್ಟು ತೀರ ನಾಸ್ತಿಕರಿಂದ ಆದದ್ದಿಲ್ಲ. ಹೆದು, ಮೆಕ್ಸಿಕೋ ಮುಂತಾದ ಅಮೇರಿಕದ ರಾಜ್ಯಗಳಲ್ಲಿ ಬಳಿಯರು ಹೋಗುವ ಮೊದಲು ಉನ್ನತವಾದ ಸಂಸ್ಕೃತಿಯ ಜನರು ಅವರ ನಾಗರಿಕತೆ ಮೆರೆಯುತ್ತಿದ್ದವು. ಮೆಕ್ಸಿಕೋದ ಸಂಸ್ಕೃತಿಯನ್ನು ನಿರ್ನಾಮಗೊಳಿಸಿದ ಪರೋಡಿಗಾರ ಕೋರ್ಟೆಜ್ (ಸ್ಪೇನದೇಶದವ) ತನ್ನ ಜತೆಗೆ ಒಬ್ಬ ಪಾದ್ರಿಯನ್ನು ಒಯ್ದಿದ್ದನಂತೆ. ಅವರ ಮಂದಿರಗಳನ್ನು ಕೆಡವಿ, ಅವರ ಪುರೋಹಿತರಿಗೆ ದೀಕ್ಷೆಕೊಡಿಸುವ ಕೆಲಸ ಈ ಪಾದ್ರಿಯದು. ಮೋಸ, ಕಳ್ಳತನ, ವಂಚನೆ, ಸುಲಿಗೆ ಯಾವುದಕ್ಕೂ ಹಿಂಜರಿಯದ ಸಾಮ್ರಾಜ್ಯವಾದಿ ಕೋರ್ಟೆಜನ ಬಲಗೈ ಈ ಪಾದ್ರಿ. ನಮ್ಮ ಭಾರತದಲ್ಲಿ ಮುಸಲರ ಆಳಿಕೆಯ ಕಾಲ ಮುಲ್ಲರ ಪ್ರಭಾವ ಎಷ್ಟಿತ್ತೆಂಬುದಕ್ಕೆ ಸಜೀವ ಸಾಕ್ಷಿಗಳಾಗಿ ಭಾರತದ ಹತ್ತುಕೋಟಿ ಮುಸಲ್ಮಾನರಿರುವರಲ್ಲ! ಮೊನ್ನೆ ಮೊನ್ನೆ ನಡೆದ ಪಂಜಾಬ ದುರಂತದಲ್ಲಿ ಮುಲ್ಲರು, ಸೀಖಗುರುಗಳು, ಹಿಂದೂ ಧರ್ಮಾನುಯಾಯಿಗಳು ತಮ್ಮ ಯಥಾಶಕ್ತಿ ಒಬ್ಬರಿನ್ನೊಬ್ಬರ ತಲೆ ಒಡೆದು. ಒಡೆದುಕೊಳ್ಳುವುದಕ್ಕೆ ಧಾರಾಳವಾಗಿ ಅನುವಾಗಿದ್ದಾರೆ. ಭಾರತದ ಮೋಸಗಾರರಿಗೆ, ಅಂಡಮಾನದ ಕೋಲರಿಗೆ, ಬೃಹತ್ತರ ಭಾರತವೆನಿಸಿಕೊಂಡ ಸಯಾಮ, ಬ್ರಹ್ಮದೇಶ, ಮಲಯಾ, ಜಾವಾ ರಾಷ್ಟ್ರಗಳಿಗೆ ನಾವು ಕಿರುಮಂತ್ರ ಹಾಕಿದ ಆ ಸ್ವರ್ಣಯುಗದಲ್ಲಿ ಅಹಿಂಸಾ ಮಾರ್ಗವನ್ನೇ ಅನುಸರಿಸಿದ್ದೆವು ಎಂಬುದಕ್ಕೆ ಯಾವ ಪುರಾವೆಯೂ ಇಲ್ಲ. ಸರ್ವದೇಶ, ಸರ್ವಕಾಲ ಇವಕ್ಕೆ ಒದಗಿದ ಬಗ್ಗೆ ನಡೆದುಕೊಂಡು ಬಂದ ದರ್ಮವೊಂದೇ ಸಾಮ್ರಾಜ್ಯವಾದಿಗಳ ಬಣ್ಣಿಕೆಯ ಧರ್ಮ

ಜನವರಿ ಮೂವತ್ತನೆಯ ದಿನವನ್ನು ಸ್ಮರಿಸಿ; ಕಳೆದುಕೊಂಡ ತಂದೆಯನ್ನು ಸ್ಮರಿಸಿ; ಯಾಕೆ ಕಳೆದುಕೊಂಡೆವಾತನನ್ನು? ಯೋಚಿಸಿದ್ದೀರಾ? ಗೋಡಸೆಯನ್ನು ಸ್ಮರಿಸುವ ಅಗತ್ಯವಿಲ್ಲ. ಏಕೆಂದರೆ ಎಲ್ಲರ ಹೃದಯದಲ್ಲೂ 'ಗೋಡಸೇತನ' ಇದ್ದೇ ಇದೆ. ಸೈತಾನ ಚಿಕತೆಯ ಅಂಶ ತನ್ನಲಿಲ್ಲವೆಂದು ಎನಿಸಬಲ್ಲ ಮುಂದೆ ಬರುವವನು ಯಾರಿದ್ದಾನೆ? ಅಂಗೈನೋಡಲು ಕನ್ನಡಿ ಬೇಕೇನು? ಕನ್ನಡನಾಡಿನ ಕವಿ 'ಹಿಂಸೆ ಕೊನೆಗೆ ಹಿಂಸೆಯನ್ನು ಗುಂಡು ಹಾಕಿ ಕೊಂದಿತೋ!' ಎಂದು ಮರುಗಿದ್ದಾನೆ. ಹೌದು, ಹಿಂಸೆಗೆ ಅಹಿಂಸೆಯ ಮಾಹಾತ್ಮ್ಯವನ್ನು, ಅಹಿಂಸಾಮೂರ್ತಿಯನ್ನು ತಡೆಯಲಾಗಲಿಲ್ಲ. ತನ್ನ ಅನಾದಿ ನೀತಿಯನ್ನನುಸರಿಸಿ ಅಹಿಂಸೆಯ ಬಾಯನ್ನು ಕಟ್ಟಿಸಿತಲ್ಲವೆ? ಆದರೆ ಅಹಿಂಸೆಯ ಬಾಯನ್ನು ಶಾಶ್ವತವಾಗಿ ಕಟ್ಟಿಲಾಗುವುದಿಲ್ಲವೆಂಬುದಕ್ಕೆ ಯಾಜ್ಞವಲ್ಕ್ಯನಿಂದ ಹಿಡಿದು ಜನಿಸಿದ ಮಹಾತ್ಮರೇ ಸಾಕ್ಷಿ-ಬುದ್ಧ, ಮಹಾವೀರ, ಕೃಷ್ಣ, ಏಸು, ಪೈಗಂಬರ, ಗಾಂಧೀ......ಈ ಪ್ರವಾಹ ಹರಿದೇ ಇದೆ.

ಆದರೆ ಮಾನವನೀತಿ, ಮಾನವಧರ್ಮ ಕಾಡುನೀತಿಗಿಂತ ಒಂದು ಮೆಟ್ಟಿಲಾದರೂ ಮೇಲೇರಿದೆಯೇ? ಇಲ್ಲ. 'ಯಾಸೋ'ವನ್ನ ಪಠಿಸಿ, ಸತ್ಯವೀನನ್ನು...ಹರಹಿನ... ಅದನ್ನು ದೊಡ್ಡವೀನು .ಅದನ್ನು ..ನಡೆದಿಲ್ಲವೆ ಜೀವಿ ಜೀವಿಯ ತಿಂದು ಬದುಕುವ ಬಾಳಿನಾಟ? ಧರ್ಮದ ತವರೂರೆಂದು ಭಟ್ಟಂಗಿಗಳಂತೆ ಆತ್ಮಪ್ರಶಂಸೆಮಾಡಿಕೊಳ್ಳುವ ಭಾರತಭೂಮಿಯನ್ನ ನೋಡಿದರೆ ಸಾಲದೆ? ಧರ್ಮಕ್ಕಾಗಿ ಕೊಲೆ ಇದು ಮಧ್ಯಯುಗದ ನೀತಿ ಎಂದವರು ಚರಿತ್ರೆಯನ್ನೋದಲಿಲ್ಲ. ಕೊಟಿಯೇ ಸಾರ್ವಜನಿಕ ಧರ್ಮವಾಗಿರುವಾಗ ಧರ್ಮಕ್ಕೆ ಎಡೆಯೆಲ್ಲಿ? ಇರುವ ಸನಾತನ ಧರ್ಮ 'ಬಲವಂತನ ರಾಜ್ಯ' ಎಂಬುದು ಡಾರ್ವಿನನ ವಿಜ್ಞಾನದಿಂದಲೂ ಸಿದ್ಧವಾಗುತ್ತದೆ ಪ್ರಪಂಚದ ನಾನಾವಿಧದ ಪಿಡುಗಾಗಿಗಳ ನಡುವೆ ಧರ್ಮದ ಆಧಾರ ಬಹಳ ಶಿಥಿಲವಾದುದು ಎಂಬುದಕ್ಕೆ ಅಹಿಂಸಾ ಮೂರ್ತಿ ಏಸುವಿನ ಅನುಯಾಯಿಗಳಾದ ಈ ಚರ್ಚ್ ಕಮಿಶನಿನವರು ಮಾಡಿದ ನಿರ್ಣಯವೊಂದು ಸಾಲದೆ?

ಧರ್ಮಕೆ 'ಧರ್ಮs' ಎನಬೇಡಾ
ಕರ್ಮವು ಇದು ನೋಡಾ;
ಜಗದೊಳಗಿನ ನೋಗುಗಳು
ಅವುಗಳ ಕೂಗುಗಳು.

20-4-48. (ಚೇಂದ್ರ)

ಪುಸ್ತಕ ಪ್ರಪಂಚದಲ್ಲೊಂದು ಅಪೂರ್ವ ಸಾಹಸ!

ವಿಜ್ಞಾನದ ವಿಚಿತ್ರಗಳು

ಬರೆದವರು: ಶ್ರೀ. ಕೆ. ವಿಟ್ಠಲ ಶೆಣೈ, ಬಿ. ಎ., ಎಲ್. ಟಿ

ವಿಜ್ಞಾನವನ್ನು ಕಲಿಯದಿರುವ ಹೆಂಗುಸರು, ಮಕ್ಕಳು, ಹಳ್ಳಿಗರೇ ಮೊದಲಾದ ಎಲ್ಲರಿಗೆ ಅರ್ಥವಾಗುವಂತೆ-ಹಲವಾರು ಚಿತ್ರಗಳ ಸಹಿತ-ವಿಮಾನ, ರೇಡಿಯೊ, ಟೆಲಿವಿಶ್ಯನ್, ಪೆನ್ಸಿಲಿನ್, ಅಣು-ಬಾಂಬು ಮುಂತಾದ ನೂರಾರು ಆಧುನಿಕ ಅದ್ಭುತಗಳನ್ನು ಸ್ವಾರಸ್ಯವಾಗಿ ವರ್ಣಿಸುವ ಕನ್ನಡದ ಏಕಮಾತ್ರ ಗ್ರಂಥವಿದು!

ಪ್ರತಿಯೊಂದು ಪ್ರಕರಣವೂ ಒಂದು ಸೊಗಸಿನ ಕತೆಯಷ್ಟೇ ರಸವತ್ತಾಗಿದೆ!

೧೮೦ ಪುಟಗಳು-ಬಿಳಿ ಕಾಗದ-೬೦ ಚಿತ್ರಗಳು-ಹಲವು ಆರ್ಟ್ ಚಿತ್ರಗಳು-ಮುದ್ದಾದ ಮುದ್ರಣ-ವರ್ಣರಂಜಿತ ಮುಖಪತ್ರ.

ಇಷ್ಟಿದ್ದರೂ ಬೆಲೆ ಕೇವಲ ರೂ ೨ ೪ ೦, ವಿ. ಪಿ. ಮಾಡಲಾಗುವುದಿಲ್ಲ.

(ರೂ. ೨-೮-೦ ಕಳುಹಿದರೆ ಒಂದು ಪ್ರತಿ ಕಳಿಸಲಾಗುವುದು)

ವ್ಯಾಪಾರಿಗಳಿಗೆ ಯೋಗ್ಯ ಕಮಿಷನ್!

ಪ್ರತಿಗಳು ಮತ್ತು ವಿವರಗಳಿಗೆ ಬರೆಯಿರಿ:-

ಕೆ ಆರ್ ಶೆಣೈ, ಕೋರ್ಟ್ ರೋಡು, ಉಡುಪಿ, ದ. ಕ.

ಪ್ರಕಾಶಕರು,

ವಿ. ಸೂ:-ಪ್ರತಿಗಳು ಪ್ರಕಾಶಕರಲ್ಲಿಯೂ, ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ, ಮಂಗಳೂರಿನ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ಸಿಗುತ್ತವೆ

ಚಂದ್ರಿಕಾ

ಹಲ್ಲಿನ ರೋಗಗಳನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ

ಹಲ್ಲು ಪುಡಿ

ಒಂದು ತೊಲೆ ಕಟ್ಟು ೧೮ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಲಬಾರ್ ಸಿ ಎಂಡ್ ಪಿ. ಲಿಮಿಟೆಡ್,

ಕಾಸರಗೋಡು, ದ. ಇಂಡಿಯ.

ವಿಮೆ ಮಾಡಿಸಿ ಪ್ರಾಂತೀಯ ಸ್ವಾತಂತ್ರ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

-ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ-ಧಾರವಾಡ,

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ, THE UNITED KARNATAK INSURANCE COMPANY, LIMITED.

ಕೋಳಿ ಅಂಕ ಮತ್ತು ಜುಗಾರಿ

ಜಿಲ್ಲೆಯಲ್ಲಿ ಅವರ ನಿಷೇಧದ ಆವಶ್ಯಕತೆ

ಕೇವಲ ಹಳ್ಳಿಗರ ವಿನೋದದ ವೃತ್ತಿಯಾಗಿ ಅಲ್ಲಲ್ಲಿ ನಡೆಯುತ್ತಿದ್ದ ಕೋಳಿ ಆಟವು ಜಿಲ್ಲೆಯಲ್ಲಿ ಇಂದು ದೊಡ್ಡ ದುಂದುಗಾರಿಕೆಯಾಗಿ ಪರಿಣಮಿಸಿದೆ. ಅದರೊಂದಿಗೆ ನಾನಾ ತರದ ಜುಗಾರಿಗಳು ಸೇರಿವೆ. ಆದುದರಿಂದ ಇಂದು ಹಳ್ಳಿಗಳಲ್ಲಿ ನಡೆಯುತ್ತಿರುವ ಕೋಳಿ ಅಂಕ ಮತ್ತು ಜುಗಾರಿಗಳು ಅವನತಿಗೆ ಮುಖ್ಯವಾದೊಂದು ಕಾರಣವಾಗಿದೆಯೆಂದರೆ ತಪ್ಪಾಗಲಾರದು. ಈ ದುರ್ವ್ಯಸನವು ಕೃಷಿಕೈಗಾರಿಕೆಯ ಅಭಿವೃದ್ಧಿಗೂ ತೊಡಕಾಗಿದೆ. ಆದುದರಿಂದ ಅದನ್ನು ಕಾನೂನು ಪ್ರಕಾರ ನಿಷೇಧಿಸುವುದು ಅತ್ಯಗತ್ಯವಾಗಿದೆ. ಅದಕ್ಕಾಗಿ ಜಿಲ್ಲೆಯಲ್ಲೆಲ್ಲಾ ಚಳವಳ ನಡೆಯಬೇಕಾಗಿದೆ.

ಗ್ರಾಮಾಭಿವೃದ್ಧಿಯ ಕೇಂದ್ರವೆಂದು ಸರಕಾರವೇ ಆರಿಸಿರುವ ಕುಂಬಳೆ ಫಿರ್ಕಾದಲ್ಲಿ ಕೂಡಾ ಈ ದುಂದುಗಾರಿಕೆ ಮತ್ತು ಜುಗಾರಿಯು ನಿಲ್ಲಿಸಲ್ಪಡದಿರುವುದು ಶೋಚನೀಯವಿದೆ. ಕುಂಬಳೆ ಫರ್ಕಾ ಡೆವಲಪ್‌ಮೆಂಟ್ ಆಫೀಸರರು ಈ ಕುರಿತು ಇಷ್ಟರವರೆಗೆ ಗಮನಕೊಟ್ಟಂತಿಲ್ಲ.

ಶ್ರೀ ಬಾಡೂರು ಜಗನ್ನಾಥ ರೈಗಳೇ ಮೊದಲಾದ ಕೆಲಮಂದಿ ಕಾರ್ಯೋತ್ಸಾಹಿ ಕಾಂಗ್ರೆಸಿಗರ ಪ್ರಯತ್ನದಿಂದ ಕುಂಬಳೆ ಫಿರ್ಕಾದಲ್ಲಿ ಜರಗಲಿದ್ದ ದೊಡ್ಡ ಕೋಳಿ ಅಂಕದಲ್ಲಿ ಆದರ ಹಾನಿ ಮತ್ತು ತೊಂದರೆಗಳನ್ನು ಹಳ್ಳಿಗರಿಗೆ ಮನಗಾಣಿಸುವ ಪ್ರಚಾರಾರ್ಥವಾದ ದೊಡ್ಡ ಸಭೆಯೊಂದು ಇದೇ ತಾ. ೫ರಂದು ಅಂಚಿಲಚ್ಚದಲ್ಲಿ ನಡೆಯಿತು. ಮಾಜಿ ಕಾಂಗ್ರೆಸ್ ಜಿಲ್ಲಾ ಬೋರ್ಡ್ ಮೆಂಬರ್ರೂ ನಿಷ್ಠಾವಂತ ಕಾಂಗ್ರೆಸಿಗರೂ ಆದ ಶ್ರೀ ಬಂಬ್ರಾಣ ಗುಡ್ಡಪ್ಪ ರೈಗಳು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀ ಕೆ. ಕೆ ಶೆಟ್ಟಿ ಮತ್ತು ಶ್ರೀ ಎನ್. ಎಸ್. ಕಿಲ್ಲೆಯವರು ಈ ಸಭೆಗೆ ಹೋಗಿ ಭಾಷಣ ಮತ್ತು ಪ್ರಚಾರ ಕಾರ್ಯ ನಡೆಸಿದರು.

ದ. ಕ. ಜಿಲ್ಲೆಯ ಹಳ್ಳಿಗಳ ಸುಧಾರಣೆ ಮತ್ತು ಉನ್ನತಿ ಸಾಧನೆಗೆ ಹಾನಿಕರವೂ ಜನಸಾಮಾನ್ಯರ ಹಿತನಿಘಾತಕವೂ, ಮುಖ್ಯವಾಗಿ ಹಳ್ಳಿ ಕೃಷಿ ಕೈಗಾರಿಕೆಗಳಿಗೆ ಆತಂಕವೂ ಆಗಿರುವ ಕೋಳಿ ಅಂಕ ಮತ್ತು ಅದರೊಂದಿಗೆ ನಡೆಯುತ್ತಿರುವ ಜೂಜು, ಜುಗಾರಿ ಮೊದಲಾದವುಗಳನ್ನು ನಿಷೇಧಿಸುವ ಅವಶ್ಯಕತೆ ಜನಸಾಮಾನ್ಯರು ಬೆಂಬಲ ಕೊಡಬಾರದೆಂದು ಕೇಳಿಕೊಳ್ಳುವ ಅವನ್ನು ನಿಲ್ಲಿಸಲು ಕೂಡಲೇ ಸರಕಾರವು ಕಾನೂನು ಮಾಡಬೇಕೆಂದು ಒತ್ತಾಯಗೊಳಿಸುವ ನಿರ್ಣಯವು ಈ ಸಭೆಯಲ್ಲಿ ಸರ್ವಾನುಮತಗಳಲ್ಲಿ ಮಂಜೂರಾಯಿತು.

ಮದ್ರಾಸ ಸರಕಾರವು ಕುದುರೆ ಜೂಜನ್ನು ನಿಷೇಧಿಸಲು ತಂದಿರುವ ಕಾನೂನಿನಲ್ಲಿ ಕೋಳಿ ಅಂಕ ಮತ್ತು ಜೂಜನ್ನು ನಿಷೇಧಿಸುವ ಕಲಮನ್ನು ಸೇರಿಸಿ ಕಾನೂನು ಮಾಡಿದರೆ ಈ ದುರ್ವ್ಯಸನವು ನಿಂತುಹೋಗಲು ಸಾಧ್ಯವಿದೆ. ಆದ್ದರಿಂದ ಜಿಲ್ಲೆಯ ಕಾಂಗ್ರೆಸ್ ಕಮಿಟಿಗಳವರೂ ಇತರರೂ ಕೋಳಿ ಅಂಕ ಮತ್ತು ಜುಗಾರಿಯನ್ನು ನಿಷೇಧಿಸುವ ಠರಾವುಗಳನ್ನು ಮಾಡಿ ಮದ್ರಾಸ್ ಸರಕಾರಕ್ಕೂ ಮಾನ್ಯ ಮಂತ್ರಿ ಎ ಬಿ ಶೆಟ್ಟರಿಗೂ ನಮ್ಮ ಎಂ. ಎಲ್. ಎ. ಗಳಿಗೂ ಕಳುಹಿಸಬೇಕಾಗಿ ಕೇಳಿಕೊಳ್ಳುತ್ತೇನೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಮಂಗಳೂರು

ಶ್ರೀ ವಿ. ಎಸ್. ಹೆಜಮಾಡಿಯವರು—ಮದ್ರಾಸು ಸರಕಾರದ ಸಪ್ಲೈ ಖಾತೆಯ ಅಧಿಕಾರಿಗಳಾದ ಶ್ರೀ ವಿ. ಎಸ್. ಹೆಜಮಾಡಿಯವರು ಇದೇ ತಾ ೧೨ರಲ್ಲು ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಕೂಡಿದ ವಿಚಾರ ವಿನಿಮಯ ಗೋಷ್ಠಿಯಲ್ಲಿ ಭಾಗವಹಿಸಿದರು. ಆಹಾರ ಸಮಿತಿಯ ಸದಸ್ಯರೂ ಎಮ್. ಎಲ್. ಎ ಗಳೂ, ಸ್ಟೋರುಗಳ ಪ್ರತಿನಿಧಿಗಳೂ ಇತರ ನಾಗರೀಕರೂ ಈ ಸಭೆಗೆ ಬಂದಿದ್ದರು. ಜಿಲ್ಲೆಯಲ್ಲಿ ರೇಶನು ರದ್ದುಪಡಿಸಿದ ಇಂದಿನ ಪರಿಸ್ಥಿತಿಯನ್ನು ಕುರಿತು ವಿಚಾರ ವಿನಿಮಯ ನಡೆಯಿತು. ಇಷ್ಟರವರೆಗೆ ಕೊಟ್ಟಂತೆ ಇನ್ನುಮುಂದೆಯೂ ಈ ಜಿಲ್ಲೆಗೆ ಬೇಕಷ್ಟು ಅಕ್ಕಿಯನ್ನು ಸರಕಾರದವರು ಒದಗಿಸಿಕೊಡುವುದಾಗಿ ಅಧಿಕಾರಿಗಳು ಆಶ್ವಾಸನೆಯಿತ್ತರು.

ರಾಷ್ಟ್ರೀಯ ಸಪ್ತಾಹದ ಕಲುವಾಗಿ ಮಂಗಳೂರಿನ ೨೧ ಮುನಿಸಿಪಲ್ ಶಾಲೆಗಳ ಏಳು ಕೇಂದ್ರಗಳಲ್ಲಿ ನಡೆದ ಗಾಂಧೀಜಿಗೆ ಸಂಬಂಧಪಟ್ಟ ಸಾಹಿತ್ಯರಚನೆ, ವಾಚನ, ಭಾಷಣಾದಿಗಳ ಸ್ಪರ್ಧೆಯ ಕೊನೆಯ ತೀರ್ಮಾನದ ಸ್ಪರ್ಧೆಯು ತಾ ೧೪ರಲ್ಲು ಸೆಂಟ್ರಲ್ ವಾರ್ಡಿನ ಹಾ। ಎ। ಶಾಲೆಯಲ್ಲಿ ಶ್ರೀ ಬಿ. ಗಂಗಾಧರ ದಾಸರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮ ಬಹುಮಾನವು ಸೆಂಟ್ರಲ್ ವಾರ್ಡಿನ ಹಾ। ಎ। ಶಾಲೆಗೂ ದ್ವಿತೀಯ ಬಹುಮಾನ ರಥಬೀದಿಯ ಹುಡುಗಿಯರ ಶಾಲೆಗೂ ಮೂರನೆ ಬಹುಮಾನ ಅತ್ತಾವರ, ಮಣ್ಣಗುಡ್ಡೆ ಮತ್ತು ಸೆಂಟ್‌ಲಿಂಕಿನ ಶಾಲೆಗಳಿಗೂ ದೊರೆತವು. ಪಂಡಿತೋತ್ತಮರಾದ ಮೋ ಶ್ರೀಗಳಾದ ಎನ್. ಎಸ್. ಕಿಲ್ಲೆ, ಎಚ್. ಭೀಮರಾವ್, ಕೆ. ಸೂರ್ಯನಾರಾಯಣ ಅಡಿಗ, ಅಪ್ಪಯ್ಯ ಬೇಲಗದ್ದೆ ಅವರು ರಾಷ್ಟ್ರೀಯತೆ, ಇಂದಿನ ಸಂಕುಚಿತಭಾವ, ಗಾಂಧೀಜಿಯ ಆದರ್ಶಜೀವನ ಮೊದಲಾದ ವಿಚಾರಗಳ ಕುರಿತು ಮಾತನಾಡಿದರು. ಅಧ್ಯಕ್ಷ ಭಾಷಣವಾದಮೇಲೆ ಸಭೆಯು ಕೊನೆಗೊಂಡಿತು.

ಜಿಲ್ಲಾ ಕೈಗಾರಿಕೆ ಆಫೀಸರರ—ಕಚೇರಿಯನ್ನು ಇದೇ ತಾ ೧೫ರಿಂದ ಕಲ್ಲಿಕೋಟೆಯಿಂದ ತಲಚೇರಿಗೆ ವರ್ಗಾಯಿಸಲಾಗಿದೆ.

ಬಾರ್ಕೂರು—ಬಾರ್ಕೂರು ವಿದ್ಯಾಭಿವರ್ಧಿನಿ ಸಂಘದಿಂದ ನಡೆಸಲ್ಪಡುವ ನೇಶನಲ್ ಹೈಸ್ಕೂಲಿನಲ್ಲಿ ತಾ 1-6-48ರಿಂದ VIನೇ ಫಾರ್ಮನ್ನು ತೆರೆಯುವರೆ ಮಾನ್ಯ ವಿದ್ಯಾಖಾತೆಯ ಡೈರೆಕ್ಟರರಿಂದ ಅನುಮತಿ ಬಂದಿರುತ್ತದೆ. ಶಾಲೆಯ ಹೊಸ ಕಟ್ಟಡಗಳೂ ಪೂರ್ತಿಯಾಗುತ್ತಾ ಬಂದು ಜೂನ್ 1ರಿಂದ VIನೇ ಫಾರ್ಮ್ ತೆರೆಯಲ್ಪಡುತ್ತದೆ. ವಿದ್ಯಾಭಿಮಾನಿಗಳಾದ ಉದಾರಿಗಳು ಹೆಚ್ಚಿನ ಧನಸಹಾಯ ಮಾಡುವದರಮೂಲಕ ಸಂಘವನ್ನು ಪ್ರೋತ್ಸಾಹಿಸಿ ವಿದ್ಯಾದಾನದಲ್ಲಿ ಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇವೆ.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ—ಇದರ ವಾರ್ಷಿಕ ಮಹಾಸಭೆಯು ತಾ. 4-4-48ರಲ್ಲು ಮಂಡಳಿಯ ಅಧ್ಯಕ್ಷರಾದ ಶ್ರೀ. ಬಿ. ಶಿವಸಾಲಿಯಾನರ ಅಧ್ಯಕ್ಷತೆಯಲ್ಲಿ ಜರಗಿತು. 1947ನೇ ಇಸವಿಯ ಸಂಪೂರ್ಣ ಕಾರ್ಯಕಲಾಪಗಳನ್ನೊಳಗೊಂಡ ಆಯವ್ಯಯ ಮತ್ತು ಆಸ್ತಿಪಾಸ್ತಿಗಳ ವಿವರಯುಕ್ತ ನಾಲ್ವತ್ತೈದನೇ ವಾರ್ಷಿಕ ವರದಿಯು ಸರ್ವಾನುಮತದಿಂದ ಮಂಜೂರಾಯಿತು. 1948ನೇ ಇಸವಿಯ ಬಗ್ಗೆ ಲೆಕ್ಕ ಪರಿಶೋಧಕರನ್ನು ನೇಮಿಸಲಾಯಿತು. ಸಭಿಕರಲ್ಲಿ ಹಲವರೂ ಅಧ್ಯಕ್ಷರೂ ಮಂಡಳಿಯ ಅಭ್ಯುದಯದ ಸಲುವಾಗಿ ಯೋಗ್ಯ ಸೂಚನೆಗಳನ್ನಿತ್ತು ಮಾತಾಡಿದ ಬಳಿಕ ಲಘುಫಲಾಹಾರದೊಂದಿಗೆ ಸಭೆಯು ಸಮಾಪ್ತಿಗೊಂಡಿತು.

ಹಾಲಾಡಿ 'ಗಾಂಧಿ ಸ್ಮಾರಕ ಸಮಿತಿ'

ಯವರು ಕಟ್ಟಲಿರುವ

ಸ್ಮಾರಕ ಮಂದಿರದ

ಸಹಾಯಾರ್ಥವಾಗಿ ಪ್ರಚಂಡ ಯಕ್ಷಗಾನ

ಜಿಲ್ಲೆಯ ಅಗ್ರಗಣ್ಯ ಯಕ್ಷಗಾನ ಕಲಾಕೋವಿದರ ಕೂಡುವಿಕೆಯಿಂದ **ಇದೇ ತಾ. 24-4-48ನೇ ಶನಿವಾರ ರಾತ್ರಿ ಕುಂದಾಪುರದ ಶ್ರೀ ಧನಲಕ್ಷ್ಮೀ ಥಿಯೇಟರಿನಲ್ಲಿ** ಜರಗುವುದು. ಶ್ರೀಗಳಾದ ಕಿಲ್ಲೆಯವರು, ಪೊಳಲಿ ಶಾಸ್ತ್ರಿಗಳು, ಮಲ್ಪೆ ಶಂಕರನಾರಾಯಣ ಸಾಮಗರು, ಮಂಗಳೂರಿನ ಎಡ್ವೋಕೇಟ್ ಬಾಲಕೃಷ್ಣರಾಯರು, ಪೊಳ್ಯ ದೇಜಪ್ಪ ಶೆಟ್ಟರು ಮೊದಲಾದ ಜಿಲ್ಲೆಯ ಸುಪ್ರಸಿದ್ಧ ಅರ್ಥಧಾರಿಗಳು ಭಾಗವಹಿಸುವರು. ಅಂತೆಯೇ ಪ್ರಸಿದ್ಧರಿರುವ ಶ್ರೀ. ವೃಂದಪ್ಪ ರೈಗಳ ಹಾಡುವಿಕೆ, ಶ್ರೀ ಈಶ್ವರ ಅಪ್ಪಯ್ಯನವರ ಮೃದಂಗವಾದನವಿರುವನು. ಸಾರ್ವಜನಿಕ ಬಂಧುಭಗಿನಿಯರೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸಿ ಗಾಂಧಿಜೀಯ ಸ್ಮಾರಕಕ್ಕೆ ನೆರವಾದ ಪುಣ್ಯವನ್ನೂ ಮೇಲ್ಮರ್ಗದ ಯಕ್ಷಗಾನ ಕಲಾನುಭವದ ಆನಂದವನ್ನೂ ಪಡೆಯಬೇಕಾಗಿ ವಿಜ್ಞಾಪನೆ.

ಹಾರ್ದಳ್ಳಿ ಹಿರಿಯಣ್ಣ ಶೆಟ್ಟಿ, ಅಧ್ಯಕ್ಷ. **ಯಚ್. ಭುಜಂಗ ಶೆಟ್ಟಿ,** ಉಪಾಧ್ಯಕ್ಷ.

ಎಚ್. ಹಿರಿಯಣ್ಣ ನಾಯಕ; ಕೆ. ಶಂಕರ ಶೆಟ್ಟಿ, ಕಾರ್ಯದರ್ಶಿಗಳು.

ಹಾಲಾಡಿ ಮಹಾಬಲ ಶೆಟ್ಟಿ, ಕೋಶಾಧಿಕಾರಿ.

ಟಿಕೇಟು ದರಗಳು:— I ಕ್ಲಾಸು 3-0-0 II ಕ್ಲಾಸು 2-0-0 III ಕ್ಲಾಸು 1-0-0 IV ಕ್ಲಾಸು 0-8-0.

'ಕೇಶ ಕಲಾ'

ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಜಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ



ಎಲ್ಲ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ ಹುಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಅಂಡವಾಯು, ಅಂಡವೃದ್ಧಿ, ಹೈಡ್ರೋಸಿಲ್, ಇತ್ಯಾದಿಗಳಿಗೆ ಲೇಪನಬಗ್ಗೆ ದಿವ್ಯೌಷಧ.

1 ಬಾಟ್ಲಿಗೆ ರೂಪಾಯಿ 25/ ½ ಬಾಟ್ಲಿಗೆ ರೂಪಾಯಿ 12 8 0. ¼ ಬಾಟ್ಲಿಗೆ ರೂಪಾಯಿ 6-4-0. ಸ್ಯಾಂಪಲ್ ಶೀಶಿಯೊಂದರ ರೂಪಾಯಿ 3/-

ಎಸ್. ಪಿ ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ, ೯

S. P. Pharmaceuticel Works
Calcutta 9.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮುಖ್ಯರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಟ್ಟು ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.

ಕರ್ನಾಟಕ ಮಲೆನಾಡಿನ ಸಾಧಾರಣಾ ಪರಿಷತ್ತು

ಶಿಶಿಲ.

ಗೋಧನವೇ ಭಾರತದ ಧನ!

ಕಳೆದ ವರುಷ ಮುಂದಾಜೆಯಲ್ಲಿ ದಕ್ಷಿಣ ಭಾರತದ ಮಲೆನಾಡಿನ ಪ್ರಥಮ ಪರಿಷತ್ತು ಜರಗಿತು. ಇದೇ ಎಪ್ರಿಲ್ 25 ರವಿವಾರ ಪರಿಷತ್ತನ್ನು ಜರಗಿಸುವ ನಿಶ್ಚಯವಾಗಿದೆ. ಈ ಸಂದರ್ಭದಲ್ಲಿ, ಮಲೆನಾಡು ಯಾವ ಕಾರಣದಿಂದ ಅವನತಿಗಿಳಿದಿದೆ, ಅದರ ಪರಿಣಾಮವಾಗಿ ಲೋಕಕ್ಕೆ ಯಾವ ತರದ ಹಾನಿಯಾಗಿದೆ ಎಂಬುದನ್ನು ಜನತೆಯು ತಿಳಿಯಬೇಕಾಗಿದೆ.

ಹಿಂದಿನ ಕಾಲದಲ್ಲಿ ಈ ಮಲೆನಾಡು ಗೋಸಂವರ್ಧನೆಯ ಸ್ಥಳವಾಗಿದ್ದು ಜರಿಂದ ಜನರಿಗೆ ಅವಶ್ಯಕವಾದ ಸಂಪತ್ಸಮೃದ್ಧಿಯ ಸ್ಥಳವಾಗಿತ್ತು. ಪರಕೀಯರ ಆಳಿಕೆಯಲ್ಲಿ ಈ ಅರಣ್ಯ ಸಂವರ್ಧನೆಯು ಹೆಚ್ಚಿ ಕೃಷಿಕ್ಷೇತ್ರಗಳು ಕಾಡುಪಾಲಾದುವು. ಅದುದರಿಂದ ಈ ದೇಶದ ಕೃಷಿಯು ವರ್ಧಿಸುವುದರ ಬದಲು ಕುಂಠಿತವಾಯಿತು. ಇದರಿಂದ ದೇಶದ ಜನತೆಯು ಕೃಷಿ ಸಂವರ್ಧನೆಯ ತಿಳಿವನ್ನೇ ನಾಶಮಾಡಿದಂತಾಯಿತು. ಜನತೆಯು ಅನ್ನ ಬಟ್ಟೆಗಾಗಿ 'ಹಾ ಹಾ'ಕಾರಪಡುವಂತಾಯಿತು. ಈ ಹದಗೆಟ್ಟ ಪರಿಸ್ಥಿತಿ ಈಗ ಸರಕಾರದಿಂದ ಕೂಡ ನಿವಾರಿಸಲು ಕಷ್ಟವಾಗುವಷ್ಟು ವ್ಯಾಪಿಸಿ ರಾಷ್ಟ್ರ ಸಂಕಷ್ಟವಾಗಿ ಪರಿಣಮಿಸಿದೆ.

ಮನುಷ್ಯನಿಗೆ ಮೊದಲು ಆರೋಗ್ಯ ಮತ್ತು ಅನ್ನ ಬಟ್ಟೆಗಳು. ಇಂದು ಮಲೆನಾಡಿನಲ್ಲಿ ಇವುಗಳೇ ಹದಗೆಟ್ಟ ಸ್ಥಿತಿಯಲ್ಲಿವೆ. ಮಲೆನಾಡಿನ ಸಂಕಷ್ಟವನ್ನು ಪರ್ಯಾಲೋಚಿಸಿದರೆ, ಜನತೆಯ ನೀತಿಯು ಯಾವ ಮಟ್ಟಕ್ಕಿಳಿದು, ಪಶುವೃತ್ತಿಗೂ ಹೀನವಾಗಿ ನಡೆಯುವುದೆಂದು ತಿಳಿಯಬಹುದು. ಈ ಸಂಕಷ್ಟವು ಭಾರತದಲ್ಲಿಂದು ಹೆಚ್ಚುತ್ತಿರುವುದನ್ನು ಪ್ರತಿಯೊಬ್ಬ ದೇಶಭಕ್ತನು ಮನಗಂಡು, ಅದಕ್ಕೆ ತಡೆಯಾಕಬೇಕಾಗಿದೆ.

ಮಲೆನಾಡು ಈ ರೀತಿಯ ಕೀಳು ಪರಿವರ್ತನೆ ಹೊಂದಿ, ಸಂಕಷ್ಟಕ್ಕೀಡಾದ ಸಂದರ್ಭದಲ್ಲಿ ಇದರ ಪುನರುದ್ಧಾರಕ್ಕಾಗಿ, ಭಾರತದ ಏಳ್ಗೆಗಾಗಿ, ಜನತೆಯು ಈ ಆಘಾತದ ಪರಿಹಾರಕ್ಕಾಗಿ ಮಲೆನಾಡು ಪರಿಷತ್ತಿನಲ್ಲಿ ವಿವೇಚಿಸಿ ತಕ್ಕ ದಾರಿಯನ್ನು ಕಂಡುಕೊಂಡು ಮುಂದುವರಿಯಬೇಕಾಗಿದೆ.

ಭಾರತದಲ್ಲಿ ಒಂದೆಡೆಯಿಂದ ಮನುಷ್ಯರು ಗೋ[illegible] ಮತ್ತೊಂದೆಡೆಯಿಂದ ಅರಣ್ಯ ಸಂವರ್ಧನೆಯಿಂದ ವ್ಯಾಘ್ರಗಳಿಗೆ ತಮ್ಮ ಗೋವನ್ನು ಬಲಿಗೊಡುತ್ತಿರುವರು. ಇದಕ್ಕಾಗಿ ಕೇಂದ್ರ ಸರಕಾರದವರು ಗೋಸಂವರ್ಧನ ಕಮಿಟಿಯನ್ನು ನೇಮಕ ಮಾಡಿರುವರು. ಆದರೆ ಇದರ ಪ್ರಯೋಜನವನ್ನು ಮಲೆನಾಡಿನವರು ಪಡೆಯುವುದು ಅವರನ್ನೇ ಹೊಂದಿದೆ. ಆದ್ದರಿಂದ ಮಲೆನಾಡು ಪರಿಷತ್ತು ಈ ಕುರಿತು ನಮ್ಮ ಮಲೆನಾಡಿನ ಜನರಿಗೆ ಸರಿಯಾದ ಮಾರ್ಗದರ್ಶಕನಾಗಿ ಹುಲಿಗಳ ಬಾಯಿಯಿಂದ ನಮ್ಮ ದನಕರುಗಳನ್ನು ಉಳಿಸುವಂತೆ ಪ್ರಯತ್ನಿಸಬೇಕು. ಅಲ್ಲದೆ ಮಾನವನು ಮಾಡುತ್ತಿರುವ ಈ ಪೂರ್ವ ಪರ್ತನವನ್ನು ನಿರ್ಬಂಧಿಸಿ ಗೋಸಂವರ್ಧನೆಯನ್ನು ಮಾಡುವುದು ಸ್ತುತ್ಯಾರ್ಹ!

ಯತೇಚ್ಛವಾಗಿ ಬೆಳೆದಿರುವ ಈ ಕಾಡನ್ನು ಸಾಧ್ಯವಾದಷ್ಟು ಮಟ್ಟಿಗೆ ಕೃಷಿ ಪ್ರದೇಶವನ್ನಾಗಿ ಮಾರ್ಪಡಿಸಿ ಅಲ್ಲಿ ಗೋವುಗಳ ರಕ್ಷಣೆಯನ್ನು ಮಾಡಿದರೇನೇ ಜನರಿಗೆ ಪರಿಪುಷ್ಟವಾದ ಆಹಾರ, ಉತ್ತಮ ಕೃಷಿ, ದೇಶದ ಉನ್ನತಿ! ಎಷ್ಟರ ವರೆಗೆ ಗೋವುಗಳು ಉನ್ನತಿಯನ್ನು ಹೊಂದುವುದಿಲ್ಲವೋ, ಅಷ್ಟರ ವರೆಗೆ ದೇಶದ ಉನ್ನತಿ ಅಸಾಧ್ಯ!

ಒಂದು ಒಂದೂವರೆ ಶತಮಾನಗಳ ಹಿಂದೆ ಇಲ್ಲಿ ಗೋವುಗಳು ಹೇರಳವಾಗಿದ್ದುವು. ಜನರು ಈ ಸಂಪತ್ತಿನ ಪೂರ್ಣ ಪ್ರಯೋಜನವನ್ನು ಪಡೆದಿದ್ದರು. ಆದುದರಿಂದಲೇ ಆ ಕಾಲದಲ್ಲಿ ಜನರು ಅನ್ನಕ್ಕಾಗಿ ಹಾತೊರೆಯುತ್ತಿದ್ದಿಲ್ಲ. ಗೋವಿನ ಅವನತಿಯೋ ಮಲೆಗಳ ಉನ್ನತಿಯೋ ಈಗಿನ ಬರಗಾಲಕ್ಕೆ ಒಂದು ಕಾರಣವಾಗಿದೆ. ಮಾತ್ರವಲ್ಲ, ಈ ಕಾಡುಗಳೇ ಅಡಿಕೆ ಕೊಳೆರೋಗಕ್ಕೂ ಕೂಡ ಕಾರಣವಾಗಿವೆ. ಆದುದರಿಂದ ನಾವು ನಮ್ಮ ಕರ್ತವ್ಯವೆಂದು, ನಮ್ಮ ಜವಾಬ್ದಾರಿಯೆಂದು ಕೆಲಸ ಮಾಡಬೇಕು. ಜನಪ್ರಿಯ ಸರಕಾರವು ಈ ಕೆಲಸದಲ್ಲಿ ಕೈಯಿಕ್ಕುವಂತೆ ಸರಕಾರವನ್ನು ಪತ್ತಾಯಿಸಬೇಕು. ಈ ರಾಷ್ಟ್ರೀಯ ಪುನರ್ರಚನೆಗೆ ಮುಕ್ತಮನಸ್ಕರಾಗಿ ನೆರವಾಗಬೇಕು.

ಇದು ಸಂಶೋಧನಾ ವಿಚಾರವಲ್ಲದೆ ವ್ಯಾವಹಾರಿಕವಾಗಿ ಬೇಗನೇ ಹೊಳೆಯುವ ಸಂಗತಿಯಲ್ಲ. ಆದ್ದರಿಂದ ಆ ವಿಚಾರದಲ್ಲಿ ಪರಿಷತ್ತು ಮಲೆನಾಡು ಸಂಶೋಧನಾಕಾರ್ಯವನ್ನು ಕೈಕೊಳ್ಳಬೇಕಾಗುವುದು ಅಗತ್ಯ. ಈ ಸಂಶೋಧನೆಯ ಜ್ಞಾನವನ್ನು ಪಡೆಯುವುದೂ ಈಗಿನ ಸ್ವತಂತ್ರ ಭಾರತದ ಜನತೆಯ ಕರ್ತವ್ಯವಾಗಿದೆ. ಇದರಿಂದಾಗಿ ಭಾರತೀಯರ ಸಾಂಪತ್ತಿಕ, ಆರ್ಥಿಕ, ಸಾಮಾಜಿಕ ಜೀವನ ಮೇಲ್ಮಟ್ಟಕ್ಕೇರುವುದು, ಆರೋಗ್ಯ ವರ್ಧಿಸುವುದು, ಜನಾಂಗ ಶಕ್ತಿಶಾಲಿಯಾಗುವುದು.

ದೇಶದ ಹಿತಚಿಂತಕರೂ ಮುಖಂಡರೂ ನಮ್ಮ ಈ ನಿಜ್ಞಾಪನೆಯನ್ನು ಪರಾಂಬರಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಲ್ಲಿ ನಾವು ಅದನ್ನು ಸ್ವೀಕರಿಸಲು ಸಿದ್ಧರಿದ್ದೇವೆ. ಪತ್ರಿಕಾಕರ್ತರು ಕೂಡಾ ವಿವೇಚಿಸಿ ನಮ್ಮ ಅಭಿಪ್ರಾಯಕ್ಕೆ ಬೆಂಬಲಕೊಡಬೇಕಾಗಿ ನಾವು ಕೇಳಿಕೊಳ್ಳುತ್ತೇವೆ.

ಮಹಾಜನರು ಪರಿಷತ್ತಿಗೆ ಸಹಕರಿಸಬೇಕಾಗಿ ವಿಜ್ಞಾಪಿಸುತ್ತೇವೆ!

ಸ್ವಾಗತ ಸಮಿತಿ,
ಕರ್ನಾಟಕ ಮಲೆನಾಡು ಸಾಧಾರಣಾ ಪರಿಷತ್ತು,
ಪೋಸ್ಟು ಕೊಕ್ಕಡ, ದ. ಕ.

ಪತ್ತೂರು, ೨೨-೪-೧೯೪೮.

REGD.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕು, ಶೀತ, ಧುಮ ಹಲ್ಲು ವೇದನೆಗಳೂ ಎದೆನೋವು, ಗಾಯಗಳು ಬಾತುಕೊಳ್ಳುವದು, ಜೇನು ಕಡಿತ ಮುಂತಾದ ವೇದನೆಗಳಿಗೆ ... ಎಲ್ಲಾ ರೋಗಗಳಿಗೂ ...

ಎಲ್ಲಾ ಔಷಧ ಮಾರುವವರ ಬಳಿಯಲ್ಲಿ ದೊರೆಯುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ಈಗಿನ ಕಾಲಕ್ಕೆ ಅತಿ ಅಗ್ಗವಾದ ಪುಸ್ತಕಗಳು.

೧ ಚಿಗುರು
೧೦ ಸಣ್ಣ ಕತೆಗಳ ಸಂಕಲನ

೨ ಲೋಪಾಮುದ್ರೆ
ಕಾದಂಬರಿಯಂತೆ ಬರೆಯಲ್ಪಟ್ಟ ಕಾವೇರಿ ಮಹಾತ್ಮೆ

೩ ಪ್ರತೀಕಾರ
ಅರ್ಜುನನಿಂದ ತಿರಸ್ಕರಿಸಲ್ಪಟ್ಟ ಬಭ್ರುವಾಹನನ 'ಪ್ರತೀಕಾರ'ವನ್ನು ಚಿತ್ರಿಸುವ ನಾಟಕ.

೪ ಪಂಚಾರತಿ
ಐದು ಏಕಾಂಕ ನಾಟಕಗಳ ಸಂಗ್ರಹ.

75 ಪುಟಗಳಿಗೆ ಮಿಕ್ಕಿದ ಪ್ರತಿಯೊಂದು ಪುಸ್ತಕದ ಬೆಲೆ ಬರೀ
0 6 0

ನವಭಾರತ ಬುಕ್ ಡಿಪ್ಪೋ, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲೆ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ೬ರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ   ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ ೧೦೦ದ 8 ಬೊಟ್ಟು, ಸಣ್ಣ ಮಕ್ಕಳಿಗೆ 100ದ 2 ಬೊಟ್ಟು, ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮಸಿ; ಡಾ। ಕೆ। ಸೀತಾರಾಮ ... ನವಭಾರತ ಬುಕ್ ಡಿಪ್ಪೋ ... ಗಿರಿ ಶೈ, L I M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೋ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೦ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಚನಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ   ನಂಜುಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್   ಆರ್ ಎಲ್ ಕವಲದಾರ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ವರದಕ್ಷಿಣೆ

●

ಮನುಷ್ಯನ ಕಾಲವು ಸಮೀಪಿಸಿತು ಸಂಟ [illegible] ನಾನಾ ಕಥೆಗಳು ಎಲ್ಲೆಲ್ಲಿಯೂ ಭರದಿಂದ ನಡೆಯುತ್ತಿವೆ. ವರದಕ್ಷಿಣೆಯು ಸಂಬಂಧದಲ್ಲಿ ವಿಶೇಷ ವಿಜೃಂಭಣೆ ಹೆಣ್ಣಿನ ಕಡೆಯವರಿಗಂತೂ ವಿಶ್ರಾಂತಿಯೇ ಇಲ್ಲ. ಅವರು ಗಂಡನ್ನು ಹುಡುಕುತ್ತಾ ಇರುವುದು, [illegible] ಕಡೆಯವರು ತಮ್ಮ ಬೆಲೆಯನ್ನು [illegible], [illegible], ತಮ್ಮ ಬೆಲೆಯನ್ನು [illegible] ಕಾಲೇಜು [illegible] ಬೇಡ [illegible] ಅವರ [illegible] ಹೇಗೂ ಇದು [illegible] ಸಮಾಜದ ಮದುವೆಯ ಒಂದು [illegible] ಎಂದು ಹೇಳಿದರೆ ತಪ್ಪಾಗದು.

[illegible] ಯಾನೆ ನಾಡವರ ಸಮಾಜದಲ್ಲಿ [illegible] ಮದುವೆಗಳು [illegible] ಹೊತ್ತುಗಳು [illegible] ಕಾರ್ಯಗಳು [illegible] ಎನ್ನಬೇಕು. ಅದರಲ್ಲಿಯೂ ಮದುವೆಯ [illegible] ಅನೇಕರಿಂದ [illegible] [illegible] [illegible] ದಿವಸಗಳಿಂದ ಮದುವೆಗಳು, [illegible] ಮದುವೆಗಳು [illegible] ಬರೀ [illegible] ಸಿನೆಮಾ [illegible] ಒಂದು [illegible] ಮುಗಿದು ಬಿಡುವುದು. ಇದರಿಂದ ವ್ಯರ್ಥ ಖರ್ಚಾಗುವ ಹಣವು ಉಳಿಯಿತೆನ್ನಬಹುದು. ಅಂತೂ ಸಮಾಜದ ದೃಷ್ಟಿಯಲ್ಲಿಯೂ ಇದು ಕೆಲವು ಮಟ್ಟಿನ ಸುಧಾರಣೆ ಎನ್ನಬಹುದು.

ಆದರೆ ಈ ಮುಖ್ಯ ಒಂದು ಘೋರ ಪದ್ಧತಿಯು ಮಾತ್ರ ಒಳಗಿಂದೊಳಗೆ ಇಡೀ ಸಮಾಜವನ್ನೆ ನುಂಗುತ್ತಾ ಇದೆ. ಈ ಪದ್ಧತಿಯೇ ವರದಕ್ಷಿಣೆ. ಪದ್ಧತಿ ಪ್ರಕಾರ ವಿಚಾರಿಸಿದರೆ ವರದಕ್ಷಿಣೆ ಕ್ರಮಕ್ಕೆ ಹಿಂದೆ ಸಮಾಜದಲ್ಲಿ ಒಂದು ಅರ್ಥವಿತ್ತು. ಈಗಲೂ ಇದೆ. ಕೆಲವು ಜಾತಿಮತಗಳಲ್ಲಿ ಗಂಡಿನ ಕಡೆಯವರು ಹೆಣ್ಣಿಗೆ ಉಡುಗೆರೆಯನ್ನೂ, ಇನ್ನು ಕೆಲವರಲ್ಲಿ ಹೆಣ್ಣಿನ ಕಡೆಯವರು ಗಂಡಿಗೆ ಉಡುಗೊರೆ ಪುರಸ್ಕಾರಗಳನ್ನೂ ಕೊಡುವ ಕ್ರಮ ಉಂಟು. ಅದು ಹಾಗೆ ಇದ್ದರೂ ಅದೊಂದು ಸಮಾಜದ ಹಿತದೃಷ್ಟಿಯಿಂದ ನಡೆಯುತ್ತಿತ್ತು. ಅದಕ್ಕೆ ಒಂದು ಅಂದವಿತ್ತು. ಅದರಿಂದ ಸಂಬಂಧಿಕ ಹೊಂದುವ ಕುಟುಂಬದೊಳಗಿನ ಅನ್ಯೋನ್ಯ ಹಿತ ಬಾಂಧವ್ಯವು ಸಧಿಸಲ್ಪಡುತ್ತಿತ್ತು. ಆದರೆ ಇಂದು ಅದೇ ಪದ್ಧತಿಯು ಹದಕೆಟ್ಟು ಇಡೀ ಸಮಾಜಕ್ಕೆ ಒಂದು ಪ್ರಾಣನಾಶಕವಾಗಿ ಪರಿಣಮಿಸಿದೆ. ಸಂಬಂಧಿಕಗಳು ಹಣದ ಗಂಟಿನ ನಂಟಿಗಾಗಿ ನಡೆಯುತ್ತವೆಯೇ ಹೊರತು ಬೇರೆ ಕಾಣುವುದಿಲ್ಲ. ವಧುವರರೊಳಗಿನ ಪ್ರಾಯ, ಆರೋಗ್ಯ, ರೂಪ, ವಿದ್ಯೆ, ಸಂಸ್ಕೃತಿ ಇವೇ ಮೊದಲಾದುವುಗಳಲ್ಲಿ ಅನುಗುಣವು ಬೇಕೆಂದಿಲ್ಲ. ಸಾವಿರದ ಲೆಕ್ಕದಲ್ಲಿ ಹಣ ಸುರಿಸಿದರೆ ಸಾಕು. ಕಾಗೆಯು ಹಂಸವಾಗುತ್ತದೆ, ಅಥವಾ ಉತ್ತಮನೆನಿಸುತ್ತಾನೆ. ಕುಷ್ಠರೋಗಿಯೂ ಆಪ್ತನಾಗುತ್ತಾನೆ. ಹಣ ಕಂಡರೆ ಹೆಣ ಬಾಯಿ ಬಿಡುತ್ತದೆ ಎಂಬಂತೆ ಮೂರು ನಾಲ್ಕು ಸಾವಿರದಲ್ಲಿದ್ದ ವರದಕ್ಷಿಣೆಯು ಈಗ 10, 20 ಸಾವಿರಕ್ಕೆ ಹೋಗಿದೆ. ಅವರಲ್ಲಿಯೂ ಹೆಚ್ಚು ವರದಕ್ಷಿಣೆ ಪಡೆದುಕೊಂಡವರು ಹೋಟಲಿನ ಡಿಗ್ರಿಯವರೆಂಬ [illegible] ಆಡಂಬರ ಇದರಿಂದಾಗಿ ಮದುವೆ ಎಂಬುದೂ, ಸಂಬಂಧಿಕೆ ಹುಡುಕುವುದೆಂಬುದೂ ಬರೇ ಒಂದು ವ್ಯಾಪಾರಿ ಸಂತೆಗೆ ಇಳಿದಂತಯೇ ಎಂಬಲ್ಲಿಗೆ ಬಂದಿದೆ.

ವರದಕ್ಷಿಣೆಯ ಈ ದುಷ್ಟಟವು ಬಂಟರ ಯಾನೆ ನಾಡವರ ಸಮಾಜದಲ್ಲಿ ಇನ್ನಿತರ ಸಮಾಜಗಳಿಗಿಂತ ಹೆಚ್ಚು ವಿಕಾರಗೊಳ್ಳಲು ಅನೇಕ ಕಾರಣಗಳುಂಟು. ಅದು ಹೇಗಿದ್ದರೂ ಅದನ್ನು ಪ್ರಕೃತ ಸಮಾಜ ಘಾತಕವಾಗಿ ಬೆಳೆಯಲು ಎಂದೂ ಬಿಡಬಾರದು. ಹಾಗೆ ಬೆಳೆಯಲು ಬಿಟ್ಟರೆ ಅದು ಸಮಾಜದ ಅಂತರಂಗ ಜೀವನದ ಧ್ಯೇಯ ಯಾ ಮಟ್ಟವನ್ನು ಕಲುಷಿತಗೊಳಿಸುವುದಲ್ಲದೆ, ಜೀವನದ ಬಾಳೆಂಬುದನ್ನು ಬರೇ ಹಣದ ಗೋಳೆಂಬಲ್ಲಿಗೆ ಬಂದು ನಿಲ್ಲಿಸುವುದು.

ಆದುದರಿಂದ ಸಮಾಜದ ಮುಖಂಡರು ವರದಕ್ಷಿಣೆಯ ಸುಧಾರಣೆಗಾಗಿ ಯೋಗ್ಯವಾದ ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಅತಿ ಅಗತ್ಯ. ಕಳೆದ ಸಲ ಕುಂದಾಪುರದಲ್ಲಿ ನೆರೆದ ಬಂಟರ ಯಾನೆ ನಾಡವರ ಸಭೆಯಲ್ಲಿ ಈ ವರದಕ್ಷಿಣೆಯ ದುಷ್ಟಟದ ಕುರಿತು ಅದನ್ನು ಹೋಗಲಾಡಿಸುವುದಕ್ಕೆ ಸರಕಾರದವರು ಕೂಡಲೇ ತಕ್ಕುದಾದ ಕಾನೂನೊಂದನ್ನು ಜ್ಯಾರಿಗೆ ತರಬೇಕಾಗಿ ಒಂದು ಠರಾವನ್ನು ಮಾಡಿರುವರು. ಇತ್ತೀಚಿಗೆ ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೆ ನಿವಾಸಿಕರ ಸಂಘದವರು ಕೂಡಾ ಅದೇ ರೀತಿಯಲ್ಲಿ ಈ ಪದ್ಧತಿಯನ್ನು ಖಂಡಿಸಿ, ಇದರ ಚಟವನ್ನು ನಿವಾರಿಸುವುದಕ್ಕೆ ಆದಷ್ಟು ಪ್ರಚಾರ ಕಾರ್ಯವನ್ನು ಮಾಡಬೇಕೆಂಬದಾಗಿ ಅಭಿಪ್ರಾಯಪಟ್ಟಿರುವರು. ಅಂದರೆ ಬರ ಎರಡು ಭಾಷಣಗಳನ್ನು ಮಾಡಿ, ಎರಡು ಲೇಖನಗಳನ್ನು ಬರೆದು, ಎರಡು ಠರಾವುಗಳನ್ನು ಮಂಡಿಸಿದರೆ ಸುಧಾರಣೆಯಾಗುವುದೆಂಬ ಅರ್ಥವಲ್ಲ. ಆದರೆ ಜನಾಭಿಪ್ರಾಯವನ್ನು ಇದೇ ರೀತಿಯಿಂದ ಶಿಕ್ಷಿತಗೊಳಿಸಿದರೆ ಕ್ರಮೇಣ ಅನುಕೂಲ ವಾತಾವರಣವು ಉಂಟಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಸಮಾಜ ಸುಧಾರಕರಿಗೆ ತಕ್ಕುದಾದ ಕಾನೂನು ತಿದ್ದುಪಡಿಗಳನ್ನು ತರಲೂ ಅವಕಾಶವಾಗುತ್ತದೆ. ಅಳಿಯ ಸಂತಾನ ಬಿಲು ತರಲಿಕ್ಕೆ ಹೆಚ್ಚು ಕಾಲದಿಂದ ಹೇಳಿಕೆ ಬರುತ್ತಿದ್ದರೂ ಅದು ಈಗ ಮಾತ್ರ ಮುಂದೆ ಬರುತ್ತಿದೆ. ಹಾಗೆಯೇ ವರದಕ್ಷಿಣೆಯ ಕುರಿತಾಗಿ ಸುಧಾರಣೆ ಬೇಕೆಂದು ಜನರ ಅಭಿಪ್ರಾಯವು ಬಲವಾದರೆ ಅದಕ್ಕೊಂದು ಪ್ರತ್ಯೇಕ ಕಾನೂನು ತರಲು ಹೆಚ್ಚು ಕಷ್ಟವಿಲ್ಲ. ಕಾನೂನೊಂದನ್ನು ತರುವುದು ಹೇಗಿದ್ದರೂ ಸಮಾಜದ ಮುಖಂಡರು ಇದರ ಚಟವನ್ನು ನಿವಾರಿಸಲು ಬೇಕಾದ ಕಾರ್ಯಕ್ರಮಗಳನ್ನೂ ಇಟ್ಟುಕೊಳ್ಳುವುದು ಅಗತ್ಯ.

ಅಂದರೆ ಹೆಣ್ಣುಮಕ್ಕಳಿಗೆ ಆದಷ್ಟುಮಟ್ಟಿಗೆ ಯೋಗ್ಯವಾದ ವಿದ್ಯಾಭ್ಯಾಸವನ್ನು ಕೊಟ್ಟು ಅವರಿಗೊಂದು ಸ್ವತಂತ್ರ ಜೀವನೋಪಾಯದ ಸಂದರ್ಭಗಳನ್ನು ಒದಗಿಸಬೇಕು. ಇದರಿಂದ ಸ್ವಾಭಾವಿಕವಾಗಿ ಹೆಣ್ಣುಮಕ್ಕಳಿಗೆ ಒಂದು ಸ್ವಾತಂತ್ರ್ಯವೂ ಪ್ರಾಶಸ್ತ್ಯತೆಯೂ ಬರುವುದು. ವರದಕ್ಷಿಣೆಯ ಚಟವು ತನ್ನಷ್ಟಕ್ಕೆ ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ.

ಈ ಮೇಲಿನ ಕಾರ್ಯಕ್ರಮಗಳಿಗೆ ಅನುಕೂಲವಾಗಿ ಸಮಾಜದ ಮುಂದಾಳುಗಳು ತಾವೇ ತಮ್ಮ ಜೀವನದಲ್ಲಿ ಆದರ್ಶರೀತಿಯಿಂದ ವರ್ತಿಸುವುದು ಅಗತ್ಯ. ಇದನ್ನು ಬಿಟ್ಟು 'ಹೇಳುವುದು ಶಾಸ್ತ್ರ ಇಕ್ಕುವುದು ಗಾಳ' ಎಂಬಂತೆ ಮಾಡಿದರೆ ಸುಧಾರಣೆ ಬಂದರೂ ಅದು ಫಲಕಾರಿಯಾಗಲಿಕ್ಕಿಲ್ಲ. ಆದುದರಿಂದ ಸಮಾಜದ ಮುಂದಾಳುಗಳೂ, ಶಿಕ್ಷಿತರೂ ವಿದ್ಯಾವಂತರೂ ಆದವರು ಈ ಮಟ್ಟಿನ ಸುಧಾರಣೆಯ ಅಂಶದಲ್ಲಿ ತಾವೂ ತಮ್ಮಮಟ್ಟಿನ ಅಲ್ಪಸ್ವಲ್ಪದ ಸೇವೆಯನ್ನು ಮಾಡಿದರೆ ಸಮಾಜವು ಒಳ್ಳೆರೀತಿಯಿಂದ ಸುಧಾರಣೆಯ ಹಾದಿಯನ್ನು ಹಿಡಿಯುವುದರಲ್ಲಿ ಸಂಶಯವಿಲ್ಲ.

Joint Secretaries,
ರಾಮಕೃಷ್ಣ ವಿದ್ಯಾರ್ಥಿ ಭವನದ ಹಳೆ
ನಿವಾಸಿಕರ ಸಂಘ, ಮಂಗಳೂರು

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು ಪತ್ತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ, ರೂ 3/, ಸ್ಪೆಶಲ್ ರೂ 5, ಅಧಿಕಾಧಿಕ ಸ್ಪೆಶಲ್ ರೂ 8/ [ವಿ ಪಿ ಖರ್ಚು ಪ್ರತ್ಯೇಕ]

Mis P DEVEE, I DS (N I)
Tollygunge CALCUTTA
ಸ್ಟಾಕಿಸ್ಟರು ರಹಾಕಂಪೆನಿ ಮಂಗಳೂರು

ಮದ್ರಾಸ್ ಅಳಿಯ ಸಂತಾನ ಮಸೂದೆಯು

ಪ್ರತಿಗಳು 0 2 0 ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ 0 3 0 ಸ್ಟಾಂಪನ್ನು ಕಳಿಸಿದ್ದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.
1 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು
2 ನವಯುಗ ಪ್ರೆಸ್, ಉಡುಪಿ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವಿಕೆ, ಮಲಬದ್ಧತೆ, ಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಚವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ. ಹ್ಯಾರೆ ಸಂಗ್ರಿ ಬರದಲ್ಲಿ ರೋಗಗಳಿಗೆ ತಕ್ಕುದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು — ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು — ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಖಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಬಿ ಪಿ ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ನವಜೀವಾತು ಎಂಬ ಸೂತಿಕಾ ರಸಾಯನ

[illegible] ಬಾಟ್ಲಿಗಳು [illegible] ಬರುವವು. ಅಂದರೆ ಕೇವಲ [illegible] ಬಾಣಂತಿತನಕ್ಕೆ [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ. 5 ಕೊಡಿಯಾಲಬೈಲು, ದ. ಕ.
ಸ್ಟಾಕಿಸ್ಟರು — ಡಾ| ಬಿ ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—
ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಚಾರ! ಉತ್ತಮ ಉಪಚಾರ!
ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ
☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,
Boarding & Lodging,
KATAPADI, S K

Edited Printed & Published by K H Shetty at the Navayuga Press Udipi, S. India.

ಎರಡಾಣೆ

Regd. No M. 3618

29-4-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೩೪

NAVAYUGA WEEKLY, UDIPI.

FOUNDER: **Hon'ble Mr. A. B SHETTY,** Health Minister, Govt. of Madras

Vol. 28
No. 34

ದ. ಕ. ಜಿಲ್ಲೆಯ ಆಹಾರ ಸ್ಥಿತಿ

ಎಸೆಂಬ್ಲಿಯಲ್ಲಿ ಶ್ರೀ. ಕಾರಂತರ ನಿಲುವಳಿ ಸೂಚನೆಯ ಚರ್ಚೆ

ದ. ಕನ್ನಡಾ ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ತಾ.21-4-48ರ ಮದ್ರಾಸ್ ಎಸೆಂಬ್ಲಿ ಸಭೆಯಲ್ಲಿ ಸವಿವರ ಚರ್ಚೆ ನಡೆಯಿತು ಮಾಜೀ ಕಂದಾಯ ಮಂತ್ರಿ ಶ್ರೀ ಕೆ. ಆರ್. ಕಾರಂತರು ಈ ಸಂಬಂಧವಾಗಿ ನಿಲುವಳಿ ಸೂಚನೆಯೊಂದನ್ನು ತಂದು ದ. ಕ. ಜಿಲ್ಲೆಯ ಆಹಾರ ಸ್ಥಿತಿಯು ಎಸೆಂಬ್ಲಿಯಲ್ಲಿ ಎರಡು ತಾಸುಗಳ ತನಕ ವಿಮರ್ಶಿಸಲ್ಪಡುವಂತೆ ಮಾಡಿದರು. ಈ ಜಿಲ್ಲೆಯ ಮಟ್ಟಿಗೆ ಇದೊಂದು ಹೊಸ ದಾಖಲೆ ಮೇಲಾಗಿ ದಕ್ಷಿಣ ಕನ್ನಡದ ಧಾನ್ಯೋತ್ಪತ್ತಿ, ವ್ಯಯ, ಆಮದು ರಫ್ತು, ರಕ್ಷಣಾ ಅಂಗಡಿಗಳು, ಅಧಿಕಾರಿಗಳ ಧೋರಣೆ, ಜೋಳದ ಪಾಲು- ಇತ್ಯಾದಿ ಆಹಾರ ಸಂಬಂಧದ ಮುಖ್ಯ ವಿಷಯಗಳು ಆ ಚರ್ಚೆಯಲ್ಲಿ ಬಂದಿದ್ದುವು. ಶ್ರೀ ಕೆ. ಆರ್. ಕಾರಂತರ ಮತ್ತು ಆಹಾರ ಮಂತ್ರಿ ಡಾ ರಾಜನರ ವಾದ ಪ್ರತಿವಾದಗಳು ಜನಮತ ಮತ್ತು ಸರಕಾರೀ ಧೋರಣೆಯನ್ನು ಯಥಾರ್ಥವಾಗಿ ಬಿಂಬಿಸಿದ್ದುವು. ಸದ್ಯ ಸ್ಥಿತಿಯಲ್ಲಿ ದಕ್ಷಿಣ ಕನ್ನಡದ ಪ್ರತಿಯೊಬ್ಬನ ಪಾಲಿನ ಪ್ರಾಮುಖ್ಯ ಹಾಗೂ ವಿಶೇಷಾಸಕ್ತಿಯ ಪ್ರಶ್ನೆಯಾಗಿರುವ ಆಹಾರ ಸಮಸ್ಯೆಯ ಪರಿಶೀಲನೆಯಲ್ಲಿ ಮದ್ರಾಸ್ ಎಸೆಂಬ್ಲಿ ವ್ಯಯಿಸಿದ ಆ ಎರಡು ಘಂಟೆಗಳ ಸಾರವನ್ನಿಲ್ಲಿ ಕೊಡಲಾಗಿದೆ:-

ಶ್ರೀ ಕಾರಂತರ ಭಾಷಣ

'ದಕ್ಷಿಣ ಕನ್ನಡದಲ್ಲೀಗ ಒದಗಿರುವ ಭೀಕರ ಆಹಾರ ಸ್ಥಿತಿಯ ಕುರಿತು ಚರ್ಚಿಸುವದಕ್ಕಾಗಿ' ಸಭಾಕಾರ್ಯಕಲಾಪಗಳನ್ನು ಮುಂದುವರಿಸಬೇಕೆಂಬ ನಿಲುವಳಿ ಸೂಚನೆಯನ್ನು ಮುಂದಿಡುತ್ತಾ, ಶ್ರೀ. ಕೆ. ಆರ್. ಕಾರಂತರೆಂದರು: "ಹಲವು ವರುಷಗಳಿಂದ ದಕ್ಷಿಣ ಕನ್ನಡಾ ಜಿಲ್ಲೆಯು ವರುಷವೊಂದಕ್ಕೆ 18 ಸಾವಿರದಿಂದ 20 ಸಾವಿರ ಟನ್ನುಗಳ ವರೆಗೆ ಆಹಾರ ಧಾನ್ಯ ಕಡಿಮೆ ಬೀಳುವ ಜಿಲ್ಲೆಯಾಗಿಯೇ ಇದೆ. ಆಹಾರ ಮಂತ್ರಿಗಳು ಈ ಸತ್ಯ ಸ್ಥಿತಿಯನ್ನು ಒಪ್ಪಿದ್ದಾರೆ. ಹೀಗಿದ್ದರೂ, ಈ ಜಿಲ್ಲೆಯು ಉಳಿತಾಯದ ಜಿಲ್ಲೆಯೆಂಬ ಆಹಾರ ಕಾರ್ಯದರ್ಶಿಯ ಪತ್ರವೊಂದು ಫೆಬ್ರವರಿಯಲ್ಲಿ ನನಗೆ ದೊರೆತಾಗ ನಾನಾಶ್ಚರ್ಯಗೊಂಡೆ. 'ಸೆಕ್ರೆಟೇರಿಯೆಟ್'ನಲ್ಲಾಗಲೀ ರೆವಿನ್ಯೂ ಬೋರ್ಡಿನಲ್ಲಾಗಲೀ ಈ ಅಂಕೆಗಳನ್ನು ಹೇಗೆ ನಿರ್ಮಾಣ ಮಾಡಿದರೋ ನನಗರಿಯದು. ಈ ಸೂಚನಾ ಪತ್ರವು 1948ನೇ ಫೆಬ್ರವರಿ 4ರದಿದ್ದು "ದಕ್ಷಿಣ ಕನ್ನಡಾ ಜಿಲ್ಲೆಯು ಹಿಂದಾಗಲೀ ಇಂದಾಗಲೀ ಕೊರತೆಯ ಜಿಲ್ಲೆಯೆನ್ನುವುದು ಸರಿಯಲ್ಲ' ಎಂಬದರಲ್ಲಿ ಹೇಳಲಾಗಿತ್ತು. ಇದೇ ಕಾರ್ಯದರ್ಶಿಯಿಂದ 1948ನೇ ಫೆಬ್ರವರಿ 10ರಲ್ಲಿ ಆಹಾರ ಸಲಹೆ ಸಮಿತಿಗೆ ರವಾನಿಸಲ್ಪಟ್ಟದ್ದ ಸೂಚೀ ಪತ್ರದಲ್ಲಿ ಈ ಜಿಲ್ಲೆಯು ಸುಮಾರು 31000 ಟನ್ನುಗಳಷ್ಟು ಕೊರತೆಯಿರುವ ಜಿಲ್ಲೆಯೆಂದು ಸೂಚಿಸಲಾಗಿತ್ತು. ಒಂದು ಉಳಿತಾಯದ ಜಿಲ್ಲೆಯು ಒಂದೇ ವಾರದೊಳಗೆ 31000 ಟನ್ನುಗಳಷ್ಟು ಕೊರತೆಯ ಜಿಲ್ಲೆಯಾಗುವದು ಹೇಗೆ ಎಂದು ನಾನಾಶ್ಚರ್ಯಗೊಂಡಿದ್ದೇನೆ.

ನಿಯಂತ್ರಣ ರದ್ದತಿಯ ಪರಿಣಾಮ

1947ನೇ ದಶಂಬರ್ 28ರಲ್ಲಿ ನಿಯಂತ್ರಣ ರದ್ದುಪಡಿಸಿದ ದೆಸೆಯಿಂದ ದ. ಕ. ಜಿಲ್ಲೆಗೆ ಮಹದನ್ಯಾಯವಾಗಿದೆ. ಬೆಳೆಯುತ್ಪನ್ನವೆಲ್ಲವನ್ನೂ ಸ್ವತಂತ್ರ ವಹಿವಾಟಿಗೆ ಬಿಡುವ ನಿಯಂತ್ರಣ ರದ್ದತಿಗಾದರೆ ಒಂದು ಅರ್ಥವಿದೆ ಆದರೆ ಬೆಳೆಯ ಎಲ್ಲಾ ಉತ್ಪತ್ತಿಯನ್ನೂ ಸ್ವಾಧೀನ ಪಡಿಸಿಕೊಂಡು ಆ ಮೇಲೆ ನಿಯಂತ್ರಣ ರದ್ದುಗೊಳಿಸುವದರಲ್ಲಾವ ಅರ್ಥವೂ ಇಲ್ಲ ಜಿಲ್ಲೆಯ ಮುಖ್ಯ ಬೆಳೆಯು ಒಕ್ಟೋಬರಿನಲ್ಲಿ ಕಟಾವಾಗಿದ್ದಿತು. ಇದರ ಒಟ್ಟು ಉತ್ಪನ್ನ 40000 ಟನ್ನುಗಳ ಪೈಕಿ 37000 ಟನ್ನುಗಳನ್ನು ದಶಂಬರ್ 28ರೊಳಗೆ ಸಂಗ್ರಹಿಸಿಕೊಳ್ಳಲಾಗಿತ್ತು; ಹೀಗಾಗಿ ಸ್ವತಂತ್ರ ವಹಿವಾಟಿಗೆ ಬಿಟ್ಟಿದ್ದುದರಿ ಕೇವಲ 3000 ಟನ್ನುಗಳನ್ನು ಮಾತ್ರ. ಸಾಮಾನ್ಯವಾಗಿ 20000ಟನ್ನುಗಳಷ್ಟು ಬರುತ್ತಿದ್ದ ಎರಡನೇ ಬೆಳೆಯು ಈ ವರುಷ ಪೂರ್ತಿ ಹಾಳಾಗಿದ್ದಿತು. ಹೀಗಾಗಿ ಸ್ವಂತ ಸಾಗುವಳೀದಾರರ ಎಲ್ಲಾ ಆಹಾರವನ್ನೂ ಕಸಗೊಂಡು, ದಶಂಬರ್ 28ರ ನಂತರ ಅವರ ಕೈಯಲ್ಲಿ ಕಾರ್ಡು ಕೊರತು ಹೊಟ್ಟೆಗೇನೂ ಉಳಿಯದಂತೆ ಮಾಡಲಾಗಿತ್ತು. ಜಿಲ್ಲೆಗೆ ಸರ್ವಸಾಮಾನ್ಯವಾಗಿ ವಾರವೊಂದಕ್ಕೆ 1300ರಿಂದ 1500 ಟನ್ನುಗಳ ವರೆಗೆ ಆಹಾರ ಧಾನ್ಯ ಬೇಕಾಗುತ್ತದೆ. ನಿಯಂತ್ರಣ ರದ್ದಾಗುವಾಗ ಜನರು ತಮ್ಮ ಅದೃಷ್ಟವನ್ನು ತಾವೇ ನೋಡಿಕೊಳ್ಳುವಂತೆ ಬಿಡಲಾಯಿತು. ಆಗ ಇದು ಸರಿಯಲ್ಲವೆಂದೂ ರೇಶನನ್ನು ಜಾರಿಗೊಳಿಸಬೇಕೆಂದೂ ನಾನು ಸರಕಾರಕ್ಕೆ ಬರೆದೆ. ನನ್ನ ಮಾತು ಮನ್ನಿಸಲ್ಪಡಲಿಲ್ಲ. 1948ನೇ ಜನವರಿಯಲ್ಲಿ ನಾನು ಕಲೆಕ್ಟರಿಗೆ ಬರೆದೆ ಕಲೆಕ್ಟರರು ತನ್ನ ಉತ್ತರದಲ್ಲಿ ದಕ್ಷಿಣ ಕನ್ನಡದ ಮಟ್ಟಿಗೆ ನಿಯಂತ್ರಣ ರದ್ದತಿಯಿಂದ ಗಣ್ಯ ಅಪಾಯವಿದೆ ಎಂಬ ನನ್ನ ವಾದಕ್ಕೊಪ್ಪಿಗೆ ಸೂಚಿಸಿದ್ದರು. ತನ್ನೀ ವಾದವನ್ನು ಇನ್ನಷ್ಟು ಒತ್ತಿಹೇಳಿ ಸುದೀರ್ಘ ವರದಿಯೊಪ್ಪಿಸಿದ್ದೇನೆಂದೂ ಅವರು ತಿಳಿಸಿದ್ದರು. "ಈ ಜಿಲ್ಲೆಯು ಸಹಜವಾಗಿ 15000 ಟನ್ನುಗಳಷ್ಟು ಕೊರತೆಯುಳ್ಳದ್ದು-ಎರಡನೇ ಬೆಳೆ ಹಾಳಾದುದರಿಂದಾಗಿ ಈ ವರುಷ 30000 ಟನ್ನುಗಳನ್ನು ಸರಬರಾಯಿ ಮಾಡುವಂತೆ ನಾನು ಕೇಳಿಕೊಂಡಿದ್ದೇನೆ' ಎಂದೂ ಕಲೆಕ್ಟರರು ಬರೆದಿದ್ದರು.

ಈಗಲೂ ಹೊರಗೆ ಹೋಗುತ್ತಿದೆ

ಸ್ಥಿತಿ ಹೀಗಿರುವಾಗ 6800 ಟನ ಅಕ್ಕಿಯನ್ನು ಈ ಜಿಲ್ಲೆಯಿಂದ ಮಲಬಾರಿಗೆ ಕಳುಹಿಸಲಾಯಿತು. ಇಷ್ಟು ಮಾತ್ರವಲ್ಲ, ಬೇಕಾಯದೇಶೀರವಾಗಿ ಸಾವಿರಾರು ಟನ್ನು ಅಕ್ಕಿಯು ಇಲ್ಲಿಂದ ಮಲಬಾರಿಗೆ ಹೋಗಿದೆ ಮಲಬಾರಿನಲ್ಲಿರುವ 6 ಔನ್ಸ್ ರೇಶನು ಎಷ್ಟಕ್ಕೂ ಸಾಕಾಗದಿರುವುದೇ ಹೀಗಾಗಲು ಕಾರಣ ಮುಡಿಗೆ 12 ರೂಪಾಯಿಯೆಂದು ಧಾರಣೇ ನಿರ್ಣಯವಿದ್ದ ಅಕ್ಕೀ ಮುಡಿಯು ರೂ. 20ರಿಂದ 22ರ ವರೆಗೆ ಮಾರಾಟವಾಗುತ್ತಿದೆ. 100 ಮುಡಿಗಳ ಒಂದು ಲೋರಿ ಅಕ್ಕಿಯು ಸುಮಾರು 1000 ರೂಪಾಯಿಯ ಲಾಭ ತರುತ್ತಿದೆ. ಅಧಿಕಾರಿಗಳು ಪೂರ್ಣ ಅಸಡ್ಡೆಯಿಂದಿದ್ದು, ಈ ಬೇಕಾಯದೇಶೀರ ವಹಿವಾಟುಗಳಿಗೆ ತಡೆಹಾಕಲೇನನ್ನೂ ಮಾಡುತ್ತಿಲ್ಲವೆಂಬುದೇ ನನ್ನ ದೂರು ಸರಕಾರದ 'ರಕ್ಷಣಾ ಅಂಗಡಿ' ಪದ್ಧತಿಯಾದರೋ ಸಂಕಟದಾಯಿಯಾಗಿ ಪರಿಣಮಿಸಿದೆ. ಇಂತಹ ಒಂದು ಅಂಗಡಿಯು ಎರಡು ಹಳ್ಳಿಗಳಿಗೆ ಬೇಕಾದುದನ್ನಷ್ಟೇ ಪೂರೈಸುತ್ತಿದೆ. ಉಳಿದ ಎಂಟು ಗ್ರಾಮಗಳವರು ಅತ್ಯಧಿಕ ಬೆಲೆಗೆ ಆಹಾರ ಧಾನ್ಯಗಳನ್ನು ಪಡಕೊಂಡೇ ಬಾಳಬೇಕಾಗಿದೆ, ನಿಜಕ್ಕೂ 1500 ಟನ್ನುಗಳಷ್ಟು ಧಾನ್ಯಗಳು ಬೇಕಾಗುವ ಕ್ಷೇತ್ರದಲ್ಲಿ ಈ ರಿಲೀಫ್ ಸ್ಟೋರುಗಳು 300ರಿಂದ 350 ಟನ್ನಷ್ಟು ಧಾನ್ಯವನ್ನು ಮಾತ್ರ ಮಾರುತ್ತಿವೆ. ಹೀಗಾಗಿ ಸಾವಿರಾರು ಜನರಿಗೆ ಯಾವ ರಕ್ಷಣೆಯೂ ದೊರೆಯುತ್ತಿಲ್ಲ- ಜನರು ಬೆಳೆಸಿದುದನ್ನೆಲ್ಲಾ ಅಪಹರಿಸಿ ಕಡೆಗೆ ಪ್ರಾಯಸ್ಥರಿಗೆ ಕೇವಲ 3 ಔನ್ಸಿನಂತೆ ವಾರಾವಧಿ ಕೊಡುವ ಮಾರ್ಗವು ಯಾವ ಸರಕಾರಕ್ಕೂ ಹೇಳಿಸಿದ್ದಲ್ಲ.

ಇಂತಹ ಸ್ಥಿತಿಯಲ್ಲಿ-

ಹಸುಗೆ ಇದ್ದ ದಿನಗಳಲ್ಲಿ ವಾರಕ್ಕೆ 1500 ಟನ್ನು ಅಥವಾ ತಿಂಗಳಿಗೆ 6000 ಟನ್ನುಗಳಷ್ಟು ಧಾನ್ಯವು ಸಂಗ್ರಹದಿಂದ ಖರ್ಚಾಗುತ್ತಿತ್ತು ಈಗ ಸಂಗ್ರಹದೊಳಗಿರುವ ಧಾನ್ಯವು 11000 ಟನ್ನುಗಳೆಂದೂ ಅದು ಮೂರುವರೆ ತಿಂಗಳುಗಳಿಗೂ ಮಿಕ್ಕಿ ಸಾಕಾಗಬಹುದೆಂದೂ ಹೇಳಲಾಗಿದೆ. ಒಳ್ಳೆಯದು; ಬೀಗ ಹಾಕಿ ಭದ್ರವಾಗಿಟ್ಟುಬಿಟ್ಟರೆ, ಅದು ಎರಡು ವರುಷಗಳಿಗೂ ಸಾಕಾಗಬಹುದು.'(ಸಭೆಯ

ನಿಮ್ಮ ಕುಟುಂಬಕ್ಕೆ ಪೂರಾ ಸ್ವಾತಂತ್ರ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪಟ್ಟಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ

ಪ್ರಧಾನ ಕಾರ್ಯಾಲಯ:-ಧಾರವಾಡ,

THE UNITED KARNATAK INSURANCE COMPANY, LIMITED.

ದಕ್ಷಿಣ ಕನ್ನಡವು ಉಳಿತಾಯದ ಜಿಲ್ಲೆಯೋ, ಕೊರತೆಯದೊ?

೧೧,೦೦೦ ಟನ್ ಪಾಕಿಸ್ತಾನದ ಅಕ್ಕಿ ಬಂದಿದೆ—೧೦೦೦೦ ಟನ್ ಬೇರೆ ಹೊರಟಿದೆ—೨೭೬ ಹಳ್ಳಿಗಳಿಗೆ ೧೬೩ ರಕ್ಷಣಾ ಅಂಗಡಿಗಳಿವೆ—೮ ಔನ್ಸ್ ಹಸುಗೆಯಲ್ಲಿ ೪ ಔನ್ಸ್ ಅಕ್ಕಿ—ಜಿಲ್ಲೆಯ ಉತ್ಪನ್ನ ೨,೨೬,೦೦೦ ಟನ್ನಿನಲ್ಲಿ ಸ್ವಾಧೀನಮಾಡಿಕೊಂಡುದು ೩೨೦೦೦ ಟನ್ ಮಾತ್ರ!

ಲ್ಲಿ ನಗು) ಜಿಲ್ಲೆಯ ಜನರು ಇಂತಹ ತೊಂದರೆಯಲ್ಲಿರುವಾಗಲೂ ಹೆಚ್ಚಿನ ಸಂಗ್ರಹ ಭಾಗಗಳನ್ನು ಹೊರಗಡೆಗೆ ಹೋಗಲು ಬಿಡಲಾಗುತ್ತಿದೆ, ಎಂಬುದನ್ನಿಲ್ಲಿ ಒತ್ತಿಹೇಳಲಿಚ್ಛಿಸುತ್ತೇನೆ. ಜಿಲ್ಲೆಯಿಂದ ಆಹಾರ ಧಾನ್ಯಗಳನ್ನು ಹೊರಗೆ ಕಳುಹಿಸುವ ಸ್ಪೆಶ್ಯಲ್ ಪರ್ಮಿಟುಗಳು ಕೂಡಾ ಕಲೆಕ್ಟರರಿಂದ ಕೊಡಲ್ಪಟ್ಟಿವೆ. ಮುಡಿಗೆ 12 ರೂಪಾಯಿಯೆಂಬ ನಿಶ್ಚಿತ ಧಾರಣೆಯು ಕಾಗದದಲ್ಲಿ ಮಾತ್ರ ಉಳಿದಿದೆ; ಜನರಿಗಂತೂ 30 ಅಥವಾ 35 ರೂಪಾಯಿಗಳಿಗಾದರೂ ಅಕ್ಕಿ ಪಡೆಕೊಳ್ಳುವುದು ಕಷ್ಟವಾಗಿದೆ. ನಾಗರಿಕ ಸರಬರಾಯಿ ಕಮಿಶನರರು ಬಿಡಿಸಿ ತೋರಿಸಿರುವ ಚಿತ್ರವೇನೋ ಅದಕ್ಕಿಂತ ಮೊದಲು ಕಾರ್ಯದರ್ಶಿಯವರು ತೋರಿಸಿದಂತಹದೇ ಇದ್ದು "ಬಹಳ ಸುಖಕರವಾದದ್ದು', ಆದರೆ ಸತ್ಯಸ್ಥಿತಿಯೆಂದರೆ ದಕ್ಷಿಣ ಕನ್ನಡಾ ಜಿಲ್ಲೆಯು ಕೊರತೆಯ ಜಿಲ್ಲೆಯೆಂಬುದು ಅಧಿಕಾರೀ ದಾಖಲೆಗಳಲ್ಲಿ ಕೂಡಾ ಒಪ್ಪಲ್ಪಟ್ಟಿದೆ. ಹೀಗಿದ್ದೂ, ಯಾರಿಗೆ ಸರಬರಾಯಿ ಮಾಡಲು ಇಲ್ಲಿಯ ಅಕ್ಕಿಯನ್ನು ವಶಪಡಿಸಿಕೊಳ್ಳಲಾಯಿತೋ ಆ ನೆರೆಯ ಜಿಲ್ಲೆಯವರಿಗೆ 6 ಔನ್ಸು ಅಕ್ಕಿ ದೊರೆಯುತ್ತಿರುವಾಗ, ಇಲ್ಲಿಯದನ್ನೆಲ್ಲಾ ಕಿತ್ತುಕೊಂಡು ಇಲ್ಲಿಯವರಿಗೆ ಕೇವಲ 4 ಔನ್ಸು ಅಕ್ಕಿಯನ್ನು ಕೊಡಲಾಗುತ್ತಿದೆ".

ಕೊನೆಯಲ್ಲಿ ಶ್ರೀ. ಕಾರಂತರು ಹಸಿವೆ ಸಾವುಗಳಾಗದಂತೆ ಮಾಡಬೇಕಾದರೆ ಸರಕಾರವು ಜಿಲ್ಲೆಯ ಈ ಸಂಬಂಧದ ಇಡೀ ಯಂತ್ರವನ್ನೇ ಬದಲಾಯಿಸಬೇಕೆಂದೂ, ಹಸಿವೆಯಿಂದಲೇ ಸಾಯದಿದ್ದರೂ ಅರೆಹೊಟ್ಟೆ, ವಿಷಮಾಹಾರ ಪೀಡೆಗಳಿಂದಲೂ ಮರಣಗಳಿವೆಯೆಂದೂ ಸೂಚಿಸಿದರು. ಅಕ್ಕಿಯನ್ನು ಸಂಗ್ರಹಿಸಿಕೊಂಡಿಟ್ಟು ಅಧಿಕ ಬೆಲೆಗೆ ಮಾರುವವರ ಸಂಗ್ರಹವನ್ನು ಸರಕಾರವು ಸ್ವಾಧೀನಪಡಿಸಿಕೊಳ್ಳಬೇಕೆಂದು ಒತ್ತಾಯಿಸಿದರು.

ಶ್ರೀ. ಕಾರಂತರ ಸೂಚನೆಯನ್ನು ಅನುಮೋದಿಸುತ್ತಾ ದ. ಕ. ಜಿಲ್ಲೆಯ ಆಹಾರಸ್ಥಿತಿ ಸುಧಾರಣೆಗೆ ಸರಕಾರವು ಮಾಡಿದ್ದೇನೂ ಸಾಲದೆಂದು ಮಿ. ಎಲ್. ಸಿ. ಪಾಯಿಸ್—ಆಹಾರ ಮಂತ್ರಿಗಳು ಜಿಲ್ಲೆಯ ಆಹಾರಾಭಾವದ ನೆಲೆಗಳನ್ನು ಸ್ವತಃ ಸಂದರ್ಶಿಸಿ ನೋಡಲಿ, ಎಂದು ಮಿ. ಯು. ಜೆ. ಯಸ್. ಹುಸ್ಸೇನ್—ದಕ್ಷಿಣ ಕನ್ನಡದ ಭೌಗೋಲಿಕ ಹಾಗೂ ಇತರ ಸ್ಥಿತಿಗತಿಗಳೂ ವಾಹನಾನುಕೂಲತೆಗಳೂ ತೊಡಕಿನವಿರುವವೆಂದೂ ಸರಕಾರವು ಹೆಚ್ಚಿನ ರಕ್ಷಣಾ ಅಂಗಡಿಗಳನ್ನು ತೆರೆದು ರಸ್ತೆ, ರೈಲು, ಜಲಮಾರ್ಗಗಳಲ್ಲಿ ಆಹಾರ ಸರಬರಾಯಿ ಮಾಡಿಸತಕ್ಕದ್ದೆಂದೂ ಶ್ರೀ. ಯುಸ್. ಯಸ್. ವರದಾಚಾರಿ—ಉತ್ತರ ಅರ್ಕಾಟಿನಲ್ಲಿಯೂ ದಕ್ಷಿಣ ಕನ್ನಡದ ಸ್ಥಿತಿಯೇ ಇದೆ ಎಂದು ಮಿ. ಎನ್. ಎಮ್. ಅನ್ವಾರ್—ಸದ್ಯಸ್ಥಿತಿಗೆ ಇಲಾಖೆಯ ಧೋರಣೆಯೇ ಕಾರಣವೆಂದು ಶ್ರೀ. ವಿ. ರಾಘವಯ್ಯ—ಸೂಚನೆಗಳನ್ನಿತ್ತರು.

ಡಾ| ರಾಜನರ ಉತ್ತರ

ಆ ಮೇಲೆ ಆಹಾರಮಂತ್ರಿ ಡಾ. ಟಿ. ಯಸ್. ಯಸ್. ರಾಜನರು ಉತ್ತರಕೊಡುತ್ತಾ ಹೀಗೆಂದರು: "ಇಲ್ಲೀಗ ಹಲವು ಕಠೋರ ಮಾತುಗಳು ಕೇಳಿಬಂದುವು; ಆದರೆ ಆಹಾರಕ್ಕೆ ಸಂಬಂಧಿಸಿದ ವಿಷಯದಲ್ಲಿ ನಾನಿದನ್ನು ಗ್ರಹಿಸಬಲ್ಲೆ; ಮಾತ್ರವಲ್ಲ, ಈಗ ಪ್ರಯೋಗಿಸಲ್ಪಟ್ಟುದಕ್ಕಿಂತಲೂ ಕಠಿಣವಾದ ಭಾಷೆಯನ್ನು ಕೂಡಾ ನಿರೀಕ್ಷಿಸಬಹುದು. ದಕ್ಷಿಣ ಕನ್ನಡಕ್ಕೆ ಮಾತ್ರವಲ್ಲ, ಪ್ರತಿಯೊಂದು ಜಿಲ್ಲೆಗೂ ನಮ್ಮ ಲಕ್ಷ್ಯವನ್ನೀಯುವ ಹಕ್ಕಿದೆ ಮತ್ತದನ್ನವು ಪಡೆಯಬಲ್ಲುವು ಎಂದು ಸರಕಾರವು ಈ ಸಭೆಗಾಶ್ವಾಸನೆ ಕೊಡುತ್ತದೆ. ನಾನು ಅಧಿಕಾರೀ ಏಜನ್ಸಿಯನ್ನೇ ಆಧರಿಸಿಕೊಂಡಿದ್ದೇನೆಂದು ಮಾಜೀ ಕಂದಾಯ ಮಂತ್ರಿ ಶ್ರೀ ಕಾರಂತರು ಆರೋಪಿಸಿದ್ದಾರೆ. ಆ ಏಜನ್ಸಿಯೆಂಬುದು ಶ್ರೀ ಕಾರಂತರು ರೆವಿನ್ಯೂ ಮಂತ್ರಿಯಾಗಿರುವಾಗ ಇದ್ದ ಏಜನ್ಸಿಯೇ. ಯಂತ್ರವೇನೋ ಈಗಲೂ ಹಿಂದಿನದೇ ಎಂದ ಮೇಲೆ, ಯಂತ್ರ ಕೆಟ್ಟದ್ದಲ್ಲ, ಮಂತ್ರಿ ಮಾತ್ರ ಅಸಮರ್ಥ, ಎಂಬುದೇ ಆ ಸೂಚನೆಯ ಅರ್ಥವಾಗಿರಬೇಕು. ಇದೇ ಯಂತ್ರದಿಂದ ಹೆಚ್ಚಿನದನ್ನು ಸಾಧಿಸಲು ಈ ಮೊದಲು ಶ್ರೀ ಕಾರಂತರಿಂದಾಗಿದ್ದರೆ, ಒಳ್ಳೇದೇ, ದೇಶಕ್ಕೆ ಎಷ್ಟೋ ಹೆಚ್ಚಿನ ಸೇವೆ ಸಲ್ಲಿಸಿದ ಆನಂದವನ್ನು ಅವರನುಭವಿಸಿಕೊಂಡಿರಲಿ ಎಂದೇ ನನ್ನ ಇಚ್ಛೆ. ನನ್ನ ಮಟ್ಟಿಗೆ ನನಗಿರುವ ಆಡಳಿತಾಧಿಕಾರ ಮತ್ತು ಮೇಲ್ವಿಚಾರಣ ಹಕ್ಕನ್ನಷ್ಟೇ ಉಪಯೋಗಿಸಿ ನಾನು ಮುಂದೊತ್ತುವವನಿದ್ದೇನೆ. ಆದರೆ ನಾನು ಒಂದು ಸಂಗತಿಯನ್ನು ಒತ್ತಿಹೇಳಬೇಕಾಗಿದೆ. ಸ್ಥಿತಿಚಿತ್ರವು ಒಂದು ಕಡೆಗೆ ಸರಕಾರದಿಂದ ನೋಡಲಾಗುವ ರೀತಿಯಲ್ಲೇ ನೋಡಲು ಕೆಲವೇ ಮಂದಿ ಸದಸ್ಯರಿಂದ ಮಾತ್ರ ಸಾಧ್ಯ. ಆಹಾರಾಭಾವವೆಂಬುದು ಇಡೀ ಪ್ರಾಂತ್ಯದಲ್ಲಿರುವಂತಹದು. ಆದ್ದರಿಂದ, ಸರಬರಾಯಿ ಕೊರತೆ, ಮಳೆಯ ಅಭಾವ, ಸಂಗ್ರಹದೋಷ ಮತ್ತು ಎಷ್ಟೇ ಎಚ್ಚರಿಕೆ ಕೈಕೊಂಡರೂ ಅಸ್ತಿತ್ವದಲ್ಲಿರುವ ಕಳ್ಳಸಂತೆ ಹಾಗೂ ದುರ್ವ್ಯಾಪಾರೀ ಏಜನ್ಸಿಗಳು, ಇವೆಲ್ಲವನ್ನೂ ಯೋಚಿಸಿ ಇಡೀ ಪ್ರಾಂತ್ಯದ ಹಂಚಿಕೆಯನ್ನೇ ನಾವು ಕೈಕೊಳ್ಳಬೇಕಾಗಿದ್ದಿತು. ಆದರೂ ಇತರ ಜಿಲ್ಲೆಗಳಿಗಿಂತ ಕೆಲವಂಶ ಹೆಚ್ಚಿನ ಲಕ್ಷ್ಯವನ್ನು ಈ ಸರಕಾರವು ದಕ್ಷಿಣ ಕನ್ನಡಾ ಜಿಲ್ಲೆಯ ಕಡೆಗಿತ್ತಿದೆ ಎಂದು ನಾನು ಸಾರಿಹೇಳುತ್ತೇನೆ. ಅಲ್ಲಿ ಕೆಲವು ತೊಂದರೆಗಳುಂಟಾದುದು ಇತ್ತೀಚೆಗೆ ಮಾತ್ರ."

ದಕ್ಷಿಣ ಕನ್ನಡದ ಉತ್ಪನ್ನ

ಈ ಸಂದರ್ಭದಲ್ಲಿ ಶ್ರೀ| ಕಾರಂತರೇನನ್ನೋ ಹೇಳಲೆದ್ದಾಗ, ಮಧ್ಯದಲ್ಲಿ ತನ್ನನ್ನು ತಂಕಿಸಕೂಡದೆಂದೂ, ತಾನು ತನಗೆ ಸರಿಕಂಡುದನ್ನಷ್ಟೇ ಹೇಳುತ್ತೇನೆಂದೂ ಡಾ| ರಾಜನರಂದರು. ಕಳೆದೆಲ್ಲಾ ವರುಷಗಳಲ್ಲಿ ರೇಶನಿಂಗ್ ಪದ್ಧತಿಯನ್ನು ಸಾಕಷ್ಟು ಸಮಾಧಾನಕರವಾಗಿ ನಿರ್ವಹಿಸಿದ್ದ ಆಹಾರಖಾತೆಯು ಮುಂದಿಟ್ಟ ಸೂಚನೆಗಳನ್ನು ಆಧರಿಸಿಯೇ ತನ್ನೀ ಹೇಳಿಕೆ ಮತ್ತು ಅಂಕೆಸಂಖ್ಯೆಗಳು ತಯಾರಿಸಲ್ಪಟ್ಟಿವೆಯೆನ್ನುತ್ತಾ ಡಾ| ರಾಜನರಂದರು: "ದಕ್ಷಿಣ ಕನ್ನಡದಲ್ಲಿ 5,89,000 ಎಕ್ರೆಗಳಷ್ಟು ಭತ್ತಸಾಗುವಳಿಯಾಗುವ ಭೂಮಿಗಳಿವೆ. ಅವುಗಳಲ್ಲಾಗುವ ಸಾಮಾನ್ಯ ಭತ್ತೋತ್ಪತ್ತಿ 2,46,000 ಟನ್ನುಗಳಷ್ಟು. ಅಲ್ಲಿರುವ ಪ್ರಾಯಸ್ಥರ ಸಂಖ್ಯೆ 12,93,400 ಹೀಗಾಗಿ ತಲೆಯೊಂದಕ್ಕೆ ವರ್ಷವೊಂದಕ್ಕೆ 424 ಪೌಂಡುಗಳಷ್ಟು ಉತ್ಪನ್ನವಾಗುತ್ತಿದೆ. ಅನುಕ್ರಮವಾಗಿ 428 ಮತ್ತು 363 ಪೌಂಡುಗಳ ತಲೆವಾರು ಉತ್ಪನ್ನವಿರುವ ತಿರುಚಿನಾಪಳ್ಳಿ ಮತ್ತು ದಕ್ಷಿಣ ಅರ್ಕಾಟು ಜಿಲ್ಲೆಗಳೊಂದಿಗೇನೇ ದ. ಕ. ಜಿಲ್ಲೆಯನ್ನೂ ಹೋಲಿಸಬಹುದು."

ಶ್ರೀ| ಕಾರಂತ:-' ಈ ಅಂಕೆಗಳಿಗೆ ಆಧಾರವೇನು?'

ಡಾ| ರಾಜನ್:-"ಗತಕಾಲದಲ್ಲಿ ನನ್ನೀ ಮಿತ್ರರು ಆಡಳಿತೆ ನಡೆಯಿಸಿದ್ದ ರೆವಿನ್ಯೂ ಬೋರ್ಡಿನದ್ದೇ ಆಧಾರ. ಸಾಮಾನ್ಯವಾಗಿ ದಕ್ಷಿಣ ಅರ್ಕಾಟು ಮತ್ತು ತಿರುಚಿನಾಪಳ್ಳಿ ಜಿಲ್ಲೆಗಳನ್ನು ಉಳಿತಾಯದ ಜಿಲ್ಲೆಗಳೆಂದು ಗಣಿಸಿ ಕೊರತೆಯಿರುವ ಜಿಲ್ಲೆಗಳಿಗೆ ಅವುಗಳಿಂದ ಅಕ್ಕಿಯನ್ನು ಸಾಗಿಸಲಾಗುತ್ತಿದೆ. ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ, ಎರಡನೇ ಬೆಳೆ ಹಾಳಾದುದನ್ನು ಗಣಿಸಿಯೂ ಪ್ರಚಲಿತ ವರುಷದ ಉತ್ಪನ್ನವು ಕೊನೆಯ ಅಂಕೆಸಂಖ್ಯೆಗಳಂತೆ 2,20,000 ಟನ್ನುಗಳೆಂದು ಅಂದಾಜು ಮಾಡಲಾಗಿದೆ. ತಹಶೀಲ್ದಾರರು ಕಾಲ ಕಾಲಕ್ಕೊಪ್ಪಿಸಿರುವ ಸ್ಥಿತಿ ನಿರೂಪಕ ರಿಪೋರ್ಟುಗಳ ಆಧಾರದಿಂದ, ಎರಡು ಬೆಳೆಗಳನ್ನೂ ಕೂಡಿಸಿ ಹೇಳುವುದಾದರೆ ಈ ವರುಷದ ಸ್ಥಿತಿಯು ಸಾಮಾನ್ಯ ಸ್ಥಿತಿಯ ಸೇ. 86 ರಷ್ಟಿದೆ. ಕಲೆಕ್ಟರರ ಅಭಿಮತಾನುಸಾರವಾಗಿ ಅದು ಸೇ. 87 ಇದ್ದರೆ, ರೆವಿನ್ಯೂ ಬೋರ್ಡಿನವರು ಕಟ್ಟಕಡೆಗೆ ಕಂಡುಹಿಡಿದಂತೆ ಸೇ 82. ಜಿಲ್ಲೆಯ ಎಗ್ರಿಕಲ್ಚರಲ್ ಆಫೀಸರರು ಕಟ್ಟಿರುವ ಅಂದಾಜಿನಂತೆ ದ. ಕ.ದ ಪ್ರಥಮ ಬೆಳೆಯು ಸಾಮಾನ್ಯ ಸ್ಥಿತಿಯ ಸೇ. 95ರಷ್ಟು, ಎರಡನೇ ಬೆಳೆಯು ಸಾಮಾನ್ಯ ಸ್ಥಿತಿಯ ಸೇ. 80 ರಷ್ಟು. ರೆವಿನ್ಯೂ ಬೋರ್ಡಿನ ಅಂದಾಜೇ ತೀರಾ ಮಿತವಾಗಿರುವಾಗ, ಮತ್ತು ಇತರ ಜಿಲ್ಲೆಗಳ ಕುರಿತು ಅದು ಕಟ್ಟಿರುವ ಅಂದಾಜು ಸರಿಯೆಂದು ಕಂಡುಬಂದಿರುವಾಗ, ಅದನ್ನೇಕೆ ಅಂಗೀಕರಿಸಿಕೊಳ್ಳಬಾರದೋ ತಿಳಿಯದು.

ಇತರ ಸಂಖ್ಯೆ—ಸಂಗತಿ

ಪ್ರಚಲಿತ ವರುಷದ ಅಂದಾಜು ಉತ್ಪನ್ನದ ಆಧಾರದಿಂದ ನೋಡಿದರೆ ಸಾಮಾನ್ಯ ಸ್ಥಿತಿಯಲ್ಲಿ ತಲೆಗೆ 424 ಪೌಂಡುಗಳಿದ್ದ ವಾರ್ಷಿಕ ಹುಟ್ಟು ಈ ವರ್ಷ 379 ಪೌಂಡುಗಳಾಗಿವೆ, ಇದರಿಂದ ಪ್ರಾಯಸ್ಥನೊಬ್ಬನಿಗೆ ದಿನವೊಂದಕ್ಕೆ 1 ಪೌಂಡಿಗೂ ಮಿಕ್ಕಿ ಮೂಲೋತ್ಪನ್ನವೇ ಇದೆಯೆಂದಾಯಿತು. ಇತರ ಹೆಚ್ಚಿನ ಜಿಲ್ಲೆಗಳಿಗಿಂತ ದಕ್ಷಿಣ ಕನ್ನಡದ ಸ್ಥಿತಿಯು ಉತ್ತಮವೆಂಬುದನ್ನು ಅಲ್ಲಗಳೆಯಲಾಗುವದಿಲ್ಲ. ಹಿಂದಿನ ವರುಷಗಳಲ್ಲೆಲ್ಲಾ ಈ ಜಿಲ್ಲೆಯು ಹೊರಗಿನಿಂದ ಆಹಾರ ಧಾನ್ಯ ಆಮದುಪಡಿಸಿಕೊಳ್ಳುತ್ತಿತ್ತೆಂಬವಾದವು ತಪ್ಪು. 1945-46 ಲ್ಲಿ ದ. ಕನ್ನಡವು 3629 ಟನ್ನು ಧಾನ್ಯವನ್ನು ಆಮದುಪಡಿಸಿಕೊಂಡಿದ್ದರೆ 10000 ಟನ್ನುಗಳಷ್ಟನ್ನು ಹೊರಗೆ ಕಳುಹಿಸಿದ್ದಿತು. ಆ ವರುಷದ ಐನ್ ರಫ್ತು 1300 ಟನ್ನುಗಳಾಗಿದ್ದರೆ ಮರುವರುಷದ ಐನ್ ಆಮದು ಅಕ್ಕಿ, ಗೋಧಿ ಮತ್ತು ಮೆಕ್ಕೆ ಜೋಳ ಸಮೇತ ಸುಮಾರು 8000 ಟನ್ನುಗಳು. ದಕ್ಷಿಣ ಕನ್ನಡದಲ್ಲಿ ನಿಯಂತ್ರಣ ರದ್ದಾದುದು ಆ ಕಾಲದಲ್ಲೇನೂ ಅಲ್ಲ. 1947ನೇ ಒಕ್ಟೋಬರಿನಲ್ಲಾದ

(೯ನೇ ಪುಟ ನೋಡಿರಿ)

The 1946 Record Business proves the popularity
THE BOMBAY LIFE ASSURANCE COMPANY, LTD.
Company's New Business in 1946— 3 28 Crores
Our Chief Agency New business in 1946 bout 54 Lakhs
Our experience of 37 years available to you for arranging Insurance investment. It therefore, pays you to consult us to Insure or to represent
MESSRS. KOCHIKAR BROTHERS, LIMITED,
Chief Agents for South India
Bombay Life Building,
Central Office, Udipi
Branches at:
Mangalore, Calicut, Trivandrum, Madura, Madras, Bangalore & Bombay,

ಜಾಗತಿಕ ವಹಿವಾಟು

ಇಟಲಿ ಚುನಾವಣೆಯಲ್ಲಿ

ಇಟಲಿಯಲ್ಲಿ ಕಳೆದ ವಾರ ನಡೆದ ಚುನಾವಣೆಯಲ್ಲಿ ಅಲ್ಲಿಯ ಕಮ್ಯೂನಿಸ್ಟರು ಪರಾಭವಕ್ಕೀಡಾಗಿದ್ದಾರೆ. ಕ್ರಮಾನುಕ್ರಮವಾಗಿ ರಶ್ಯಾ ಮತ್ತು ಅಮೇರಿಕ ಇಂಗ್ಲೆಂಡುಗಳ ಪಕ್ಷಪಾತಿಗಳಾದ ಕಮ್ಯೂನಿಸ್ಟರ ಜನಮುಖ ಮತ್ತು ಕ್ರಿಶ್ಚಿಯನ್ ಪ್ರಜಾಸತ್ತಾವಾದಿಗಳೊಳಗೆ ವಿಶೇಷ ಹೋರಾಟ ನಡೆದ ಈ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ 7,955,229 ಮತಗಳೂ ಕ್ರಿಶ್ಚಿಯನ್ ಪ್ರಜಾಸತ್ತಾವಾದಿಗಳಿಗೆ 10,740,131 ಮತಗಳೂ ದೊರೆತು ಎರಡನೆಯವರೇ ಗೆದ್ದಿದ್ದಾರೆ. ವಿಜಯೀ ಪಕ್ಷದ ನಾಯಕ, ಇಟಲಿಯ ಪ್ರಧಾನ ಮಂತ್ರಿ ಗೇಸ್ಪರಿಯವರೇ ಪುನಃ ಅಲ್ಲಿಯ ಸರಕಾರದ ಸೂತ್ರಚಾಲಕರಾಗಿದ್ದಾರೆ. ಇದು ರಶ್ಯದ ವಿರುದ್ಧವಾಗಿ ಬ್ರಿಟಿಷ್ ಅಮೇರಿಕಗಳು ಗಳಿಸಿದ ವಿಜಯವೆನ್ನಬಹುದು.

ಮುಂದಕ್ಕೂ ಈ ಪಕ್ಷಗಳು ಇಂತಹ 'ವೋಟ್'ನ ಹೋರಾಟಕ್ಕಲ್ಲದೆ ಏಟಿನ ಯುದ್ಧಕ್ಕಿಳಿಯದಿದ್ದರೆ ಸಾಕು!

ಪೆಲಿಸ್ಟೈನಿನಲ್ಲಿ

ಪೆಲಸ್ಟೈನಿನ ಅರಬ-ಯಹೂದೀ ಜಗಳದ ಕುರಿತು ಭದ್ರತಾ ಕೌನ್ಸಿಲು ಮಾಡಿದ ಶಾಂತಿ ನಿರ್ಣಯವನ್ನು ಕಾರ್ಯಕ್ಕಿಳಿಸಲು ಫ್ರೆಂಚ್, ಬೆಲ್ಜಿಯಮ್, ಅಮೇರಿಕಗಳ ತ್ರಿರಾಷ್ಟ್ರೀಯ ಕಮಿಶನ್ ಒಂದನ್ನು ಭದ್ರತಾ ಸಮಿತಿ ನೇಮಿಸಿದೆ. ಇತ್ತ ಪೆಲಸ್ಟೈನಿನ ದೊಡ್ಡ ಬಂದರ ಹೈಫಾದಲ್ಲಿದ್ದ ಅರಬ-ಯೆಹೂದೀ ತಿಕ್ಕಾಟಗಳನ್ನು ಸಹಿಸಲಾರದೆ 'ನೀವು ನೀವೇ ಖಾದಾಖೂದಿ ಹೋರಾಡಿಕೊಂಡು ತೀರ್ಮಾನಿಸಿಕೊಳ್ಳಿ' ಎನ್ನುತ್ತಾ ಬ್ರಿಟಿಷರು ತಮ್ಮ ಸೇನೆಗಳನ್ನಲ್ಲಿಂದ ಅಕಸ್ಮಾತ್ ತೆಗೆದೊಡನೆಯೇ ಯೆಹೂದೀ ದಂಡು ಅರಬರಿಗೆ ವಿಶೇಷ ಹಾನಿಯೊಡ್ಡಿ ಹೈಫಾವನ್ನು ಸ್ವಾಧೀನಪಡಿಸಿಕೊಂಡಿದೆ. ಜೆರುಸಲೇಮನ್ನು ವಶಪಡಿಸಿಕೊಳ್ಳುವ ಹಂಚಿಕೆಯಿಂದ ಯೆಹೂದಿಗಳು ಅಲ್ಲಿಯ ಅರಬ್ ವ್ಯೂಹದ ಮೇಲೆ [illegible] ಸಿದ್ದಾರೆ. ಅರಬರು ಮತ್ತು ಇಡೀ ಮುಸ್ಲಿಂ ಜಗತ್ತು ಪೆಲಸ್ಟೈನ್ ಕಾಳಗಕ್ಕೆ ದೀರ್ಘಕಾಲದ ಸಿದ್ಧತೆ ನಡೆಸುತ್ತಿದ್ದುದು ಪ್ರಕಟಗೊಂಡಿದ್ದರೂ ಯೆಹೂದಿಗಳು ಇಷ್ಟು ಪ್ರಬಲರಿರುವರೆಂದು ಈ ವರೆಗೂ ಗೊತ್ತಿರಲಿಲ್ಲ.

'ಆಡದೇ ಮಾಡುವನು ರೂಢಿಯೊಳಗುತ್ತಮನು'?

ರಾಷ್ಟ್ರಗಳ ಜತೆ ವಹಿವಾಟು

ಇಂಗ್ಲೆಂಡು, ಫ್ರಾನ್ಸು ಮತ್ತು ಬೆನೆಲೆಕ್ಸ್ ರಾಷ್ಟ್ರಗಳ ಪಂಚರಾಷ್ಟ್ರೀಯ ಸಮಿತ್ರಕೂಟವು ಮೊದಲೇ ರಚನೆಗೊಂಡಿದ್ದು ಈಗ ತಮ್ಮ ಜತೆ ರಕ್ಷಣೆಗಾಗಿ ಅವು ಒಂದು ಶಾಶ್ವತ ಬೋರ್ಡನ್ನು ರಚಿಸಿಕೊಂಡಿವೆ. ಅವು ಅಮೇರಿಕದ ಗ್ಯಾರಂಟಿದೊರೆಯುವುದನ್ನೀಗ ಕಾಯುತ್ತಿವೆ. [illegible] ದು ರೀತಿಯ ಸಮತಾವಾದಿ ಒಕ್ಕೂಟಯಿರುವ ಬ್ರಿಟನ್, ಫ್ರಾನ್ಸ್, ಆಸ್ಟ್ರಿಯಾ, ಜರ್ಮನಿ, ಬೆಲ್ಜಿಯಮ್, ಡೆನ್ಮಾರ್ಕ್, ನೋರ್ವೆ, ಸ್ವೀಡನ್, ಸ್ವಿಜರ್ಲೆಂಡ್, ಲಕ್ಸೆಂಬರ್ಗ್, ಇಟಲಿ, ಹೊಲ್ಲೆಂಡ್ ಟ್ರೀಸ್ಟೆ–ಈ 13 ರಾಷ್ಟ್ರಗಳು ಸಂಯುಕ್ತವಾಗಿ ಫೇಸಿಸ್ಟ್ ಅಥವಾ ಕಮ್ಯೂನಿಸ್ಟ್ ಸರ್ವಾಧಿಕಾರವನ್ನು ವಿರೋಧಿಸಬೇಕೆಂಬ ಕುರಿತು ಪ್ಯಾರಿಸಿನಲ್ಲಿ ಮಾತುಕತೆಗಳಾರಂಭಿಸಿವೆ.

ಸಂಗತಿ ಹೀಗಿದ್ದರೂ ಮಿ. ಜಿನ್ನರಂತಹ ವಿಭಜನಾ ಚತುರನೊಬ್ಬನು ಸೋವಿಯಟ್ ರಶ್ಯದ ಸಹಾಯಕ್ಕೆ ದೊರೆತರೆ ಮತ್ತದಕ್ಕೆ ಭಯವಿರದು.

ಶಾಂತಿಹೀನ ರಾಷ್ಟ್ರಗಳಲ್ಲಿ

ಡಚ್ಚರ ಆಕ್ರಮಣ ಧೋರಣೆಯಿಂದಾಗಿ ದೀರ್ಘಾವಧಿಯಿಂದ ಗೊಂದಲಗಳಿಗೀಡಾಗಿರುವ ಇಂಡೋನೇಶಿಯಾದ ವಿವಿಧ ಭಾಗಗಳನ್ನು ಸಂಯುಕ್ತ ರಾಷ್ಟ್ರವಾಗಿ ಜೋಡಿಸುವ ಸೂತ್ರರಚನೆಗಾಗಿ ಇಂಡೋನೇಶಿಯಾದ ಪ್ರತಿನಿಧಿಗಳ ಸಮ್ಮೇಲನವು ಮೇ ತಿಂಗಳ ಮಧ್ಯಾವಧಿಯಲ್ಲಿ ಸೇರಲಿದೆಯೆಂದು ಡಚ್ ಸರಕಾರದ ಪರವಾಗಿ ಹೇಳಿಕೆಯಾಗಿದೆ. ಇತ್ತ ಡಿಲ್ಲಿಯಲ್ಲಿರುವ ಅಮೇರಿಕದ ರಾಯಭಾರಿಯು ವ್ಯಾಪಾರ ಮತ್ತು ಹಡಗ ಚಲಾವಣೆ ಇತ್ಯಾದಿಗಳ ಕುರಿತು ಭಾರತ-ಅಮೇರಿಕ ಒಪ್ಪಂದಮಾಡಿಕೊಳ್ಳಲು ಒಂದು ಕರಡು ಸೂಚನೆಯನ್ನು ಮುಂದಿಟ್ಟಿದ್ದು ಈಗ ಆ ಕುರಿತು ಎರಡೂ ರಾಷ್ಟ್ರಗಳ ಪರವಾಗಿ ಪರ್ಯಾಲೋಚನೆಗಳು ನಡೆಯುತ್ತಿವೆ.

ಅಂತೂ ರಶ್ಯಾ–ಅಮೇರಿಕಗಳು ಪರಸ್ಪರ ಸಿಟ್ಟಾಗಿರುವಾಗಲೇ ಲೋಕದ ಆ ಮೂಲೆಯಿಂದೀ ಮೂಲೆಯ ವರೆಗೂ ಪರಸ್ಪರ ಒಪ್ಪಂಗುವ ಮಾತೇ ಕೇಳಬರುತ್ತಿರುವುದರಿಂದ ನಿಜಕ್ಕೂ ಈ 'ಒಕ್ಕಟ್ಟಿನಲ್ಲಿ 'ಬೆಂಬಲ'ವಿದೆ'!

ಭದ್ರತಾ ಸಮಿತಿ–ಕಾಶ್ಮೀರ

ನಾಲ್ಕು ತಿಂಗಳುಗಳಿಂದ ಜಾಗತಿಕ ಸಂಘವು ಚರ್ವಿತಚರ್ವಣ ಮಾಡಿರುವ ಕಾಶ್ಮೀರ ವಿವಾದದ ಕುರಿತು ಕೊನೆಗಕೊಟ್ಟ ತೀರ್ಮಾನ ಕೂಡಾ ಭಾರತ ಮತ್ತು ಪಾಕಿಸ್ತಾನ ಇವೆರಡರ ಅಸಮ್ಮತಿಗೂ ಒಳಗಾಗಿದೆ. ಭದ್ರತಾ ಕೌನ್ಸಿಲು ಮಾಡಿದ ನಿರ್ಣಯವೆಂದರೆ-ಕಾಶ್ಮೀರದ ಧಾಳಿಗಾರರನ್ನು ಹಿಂದೆಗೆದುಕೊಳ್ಳುವಂತೆ ಪಾಕಿಸ್ತಾನವನ್ನೂ ಯುದ್ಧಕ್ಕಾಗಿ ಜೋಗಿಸಿದ ಸೇನೆಗಳನ್ನೆಲ್ಲಾ ಹಿಂದೆಗಮಕೊಳ್ಳುವಂತೆ ಭಾರತವನ್ನೂ ಕೇಳಿಕೊಂಡುದು. ಮಧ್ಯಾವಧಿ ಸರಕಾರದಲ್ಲಿ ಕಾಶ್ಮೀರದ ಎಲ್ಲಾ ಪಕ್ಷೀಯರಿಗೂ ಪ್ರಾತಿನಿಧ್ಯಕೊಟ್ಟು ಪುನರ್ರಚಿಸಬೇಕೆಂದು ಸೂಚಿಸಿದುದು: ಕಾಶ್ಮೀರವು ಭಾರತಕ್ಕೆ ಸೇರಬೇಕೋ ಪಾಕಿಸ್ತಾನಕ್ಕೋ ಎಂಬುದನ್ನು ನಿರ್ಣಯಿಸುವ ಜನಮತ ಸಂಗ್ರಹದ ಮೇಲ್ವಿಚಾರಕ್ಕಾಗಿ ಪಂಚ ರಾಷ್ಟ್ರೀಯ ಸಮಿತಿಯೊಂದನ್ನು ಕಾಶ್ಮೀರಕ್ಕೆ ಕೂಡಲೇ ಬೀಳ್ಕೊಡಲು ನಿರ್ಧರಿಸಿದುದು.

ಲೋಕದ ರಾಜಕೀಯದಲ್ಲೂ 'ಪರ್ವತ ಪ್ರಸವ'ಗಳಿವೆ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನವು ಬೇರೇನಾದರೂ ಬೇಕೆ?

ಭಾರತದ ವಿದೇಶ ಧೋರಣೆ

ಇದೇ ತಾ 24ರಲ್ಲಿ ಬೊಂಬಾಯಿಯ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಹಿಂದೀ ಸರಕಾರದ ವಿದೇಶ ಸಂಬಂಧ ಧೋರಣೆಯನ್ನು ಸ್ಪಷ್ಟೀಕರಿಸುತ್ತಾ ಪಂಡಿತ ನೆಹರುಗಳೆಂದರು; "ಈಗ ದುರ್ದೈವವಶಾತ್ ಲೋಕವು ಇಕ್ಕಡೆಯಾಗುತ್ತಿರುವ ರಶ್ಯಾ ಮತ್ತು ಅಮೇರಿಕದೆರಡು ಪಾಳಯಗಳೊಳಗೂ ತಾನು ಸೇರಿಕೊಳ್ಳದಂತೆ ಭಾರತವು ತನ್ನ ಸರ್ವ ಶಕ್ತಿಯಿಂದ ನೋಡುವುದು. ಕಾಶ್ಮೀರ ಸಂಬಂಧವಾಗಿ ಭದ್ರತಾ ಕೌನ್ಸಿಲು ಮಾಡಿದ ನಿರ್ಣಯವು ತಪ್ಪು ಮತ್ತು ಅಸಂಬದ್ಧ. ನಿಜಾಮ್ ಸರಕಾರವು ಇತ್ತೆಹಾದ್ ನಾಯಕನ ಬೇಜವಾಬ್ದಾರೀ ಭಾಷಣವನ್ನು ಪ್ರತಿಬಂಧಿಸುವ ಬದಲಿಗೆ, ನಿಜಕ್ಕೂ ಅಲ್ಲಿ ನಿಜಾಮ್ ಸರಕಾರವೆಂಬುದಿದೆಯೋ ಅಥವಾ ಪರದೆಯ ಹಿಂದೆ ಬೇರೊಂದು ಸರಕಾರವೇ ಕೆಲಸಮಾಡುತ್ತಿದೆಯೋ ಎಂಬಂತೆ ವರ್ತಿಸುತ್ತಿದೆ".

ಕಾಶ್ಮೀರದಲ್ಲೂ ಪರದೆಯ ಹಿಂದಿನಿಂದ ದರೋಡೆಗಾರರಿಗೆ ಪಾಕಿಸ್ತಾನದ ಸಹಾಯ—ಹೈದರಾಬಾದಿನಲ್ಲೂ ಪರದೆಯೊಳಗೊಂದು ಸರಕಾರ—ಎಂದ ಮೇಲೆ 'ಪವಿತ್ರ ಪರ್ದಾ ಕ್ರಮ'ವು ಮುಸ್ಲಿಂ ಸರಕಾರಗಳ ಮುಖದ ಮೇಲೂ ಬಂತೆ?

ನಿಜಾಮರ ಫರ್ಮಾನ್

'ಎಸೆಂಬ್ಲಿಯ ಅಧಿಕಾರವನ್ನು ಸಾಕಷ್ಟು ವಿಸ್ತಾರಗೊಳಿಸಲಾಗುವಂತೆ ರಾಜ್ಯಾಂಗವನ್ನು ತಿದ್ದುವದಕ್ಕಾಗಿ ಸೂಚನೆಗಳನ್ನು ತಯಾರಿಸುವರೆ ಪ್ರಧಾನ ಮಂತ್ರಿಗಳಿಗೆ ನೆರವಾಗಲು ಒಂದು ಸಮಿತಿ ರಚಿಸಲ್ಪಡಬೇಕು. ಈ ಸಮಿತಿಯಲ್ಲಿ ಜನರ ಸರಿಯಾದ ಪ್ರಾತಿನಿಧ್ಯವಿರಬೇಕು. ಮುಖ್ಯ ಪಕ್ಷಗಳಿಗೆ ಅದರಲ್ಲಿ ಸಮಾನ ಪ್ರಾತಿನಿಧ್ಯವಿರಬೇಕು. ಇದರಿಂದ ಹೈದರಾಬಾದಿನ ವೈಶಿಷ್ಟ್ಯ ಮತ್ತು ಘನತೆಗೆ ಭಂಗ ಬರಕೂಡದು'ಎಂಬ ಅಭಿಪ್ರಾಯದ ಫರ್ಮಾನ್ ಒಂದನ್ನು ಹೈದರಾಬಾದು ನಿಜಾಮರು ಹೊರಡಿಸಿದ್ದಲ್ಲದೆ ಹಲವು ಕಾಂಗ್ರೆಸ್ ಕೈದಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿಸಿದ್ದಾರೆ.

ನಿಜಾಮರ ಈ 'ಫರ್ಮಾನ'ನ್ನು ಕಾಂಗ್ರೆಸಿಗರೆಲ್ಲರೂ ನಿಜಾಮರ "ಪರವಾನ್ನ"ವೆಂದೇ ಭಾವಿಸಿದ್ದಾರೆ!

ನೆಹರುಗಳ ಖಂಡತುಂಡ ಮಾತು

'ಹೈದರಾಬಾದಿನ ಮುಂದೀಗ ಎರಡೇ ದ್ವಾರಗಳಿವೆ — ಯುದ್ಧ ಅಥವಾ ಭಾರತದೊಂದಿಗೆ ಜೋಡಣೆ. ಯುದ್ಧವೆಂಬುದು ದೀರ್ಘಾವಧಿಯ ಕೆಲಸ. ನಾವದಕ್ಕಿಳಿದು ಬಿಟ್ಟರೆ ಹಲವು ಹೊಸ ಸಮಸ್ಯೆಗಳೂ ಹುಟ್ಟಿಕೊಳ್ಳುತ್ತವೆ ಆದ್ದರಿಂದ ಹೈದರಾಬಾದ್ ಸಮಸ್ಯೆಯನ್ನು ಸಂಧಾನದಿಂದಲೇ ತೀರಿಸಿಕೊಳ್ಳಲು ನಾವು ಪ್ರಯತ್ನಿಸುತ್ತಿದ್ದೇವೆ. ಆದರೆ ಇದಕ್ಕೆ ಯುದ್ಧ ಪಥ ಹಿಡಿಯಲು ನಾವು ಹೆದರುತಿದ್ದೇವೆ ಎಂಬ ಅರ್ಥವೇನೂ ಇಲ್ಲ. ಮಧ್ಯಯುಗದ ಮಾದರಿಯ ಸರಕಾರೀ ಕ್ರಮವು ಹೈದರಾಬಾದಿನಲ್ಲಿ ಮುಂದುವರಿಯಲಿನ್ನು ಸಾಧ್ಯವಿಲ್ಲ. ಒಂದು ತತ್ವವಾಗಿ ಹೈದರಾಬಾದಿನಲ್ಲಿ ಪ್ರಜಾ ಜವಾಬ್ದಾರೀ ಸರಕಾರ ಸ್ಥಾಪನೆಯಾಗಲೇಬೇಕು. ಇತ್ತೆಹಾದ್ ನಾಯಕನ ಉದ್ರೇಕದಾಯೀ ಮಾತುಗಳಿಂದ ಹೈದರಾಬಾದನ್ನೀಗ ಆಳುತ್ತಿರುವವರಾರು ಎಂಬ ಪ್ರಶ್ನೆಯೇಳುತ್ತಿದೆ"— ಅ. ಭಾ. ಕಾಂಗ್ರೆಸ್ ಸಭೆಯಲ್ಲಿ ಪಂಡಿತ ನೆಹರುಗಳ ಮಾತು.

ಈ ನಿಯೋಜಿತ ಯುದ್ಧಕ್ಕೆ 'ಹೈದರಾಬಾದ್ ಹೋರಾಟ' ಎಂದು ಹೆಸರಿಡಬಹುದೋ, ಅಥವಾ 'ಹಿಂದುಸ್ತಾನ್-ಪಾಕಿಸ್ತಾನ್ ಸಮರ'ವೆನ್ನಬೇಕಾಗುವುದೋ?

ಪುಳಿನಾಪುರ ಮಹಾತ್ಮ್ಯ

ಕನ್ನಡ ವಚನ ಗ್ರಂಥ ಅಚ್ಚಿನಲ್ಲಿದೆ.

ಮೊದಲನೇ ಭಾಗದಲ್ಲಿ ದೇವಿ ಭಾಗವತಾಂತರ್ಗತ ಸುರಥ ವೈಶ್ಯರು ವೃತ್ತಾಂತಗಳಿಂದ ಪ್ರತಿಷ್ಠೆಮಾಡಿದ ದೇವಿ ಲೋಕದ ವಿಸ್ತಾರವಾದ ಸ್ಥಳ ಪುರಾಣವೂ–ಎರಡನೇ ಭಾಗದಲ್ಲಿ ಕೊಲ್ಲೂರು, ಕಟೀಲು, ಸುಬ್ರಮಣ್ಯ ಮೊದಲಾದ ದೇವಿ ಅಂಶಗಳನ್ನೊಳಗೊಂಡ ಪುಳಿನಾಪುರ ಸ್ಥಳ ಮಹಿಮೆಯೂ—ಮೂರನೇ ಭಾಗದಲ್ಲಿ ಅಶೋಕ ಚಕ್ರವರ್ತಿಯ ಕಾಲದಾರಭ್ಯ ಶಿಲಾಶಾಸನ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟ ತಾಮ್ರಶಾಸನ ಇತ್ಯಾದಿ ಆಧಾರಗಳಿಂದ ಬರದ ಚರಿತ್ರ್ಯಸಾರವೂ ಇವೆ.

ಆಸ್ತಿಕರಾದ ದೇವಿಭಕ್ತರು ಮುಂದಾಗಿ ತಿಳಿಸಿದವರಿಗೆ ರೂ. ೧ ೮ ೦

೩ ಭಾಗಗಳ ಪುಸ್ತಕಕ್ಕೆ ಬೆಲೆ ರೂ. ೨-೮-೦

ಎಸ್. ಎ. ಶೀನಪ್ಪ ಹೆಗ್ಡೆ,
ಅಮುಂಜೆ ಗುತ್ತು, ಶಿರ್ವ,
Post ಬೆಳ್ಮಣ್ಣು, ದ. ಕ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬.

[ಮಂಗಳೂರಿನಲ್ಲಿ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾರ್ವಜನಿಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೨,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ,, ,, ೨॥

೬ ರಿಂದ ೯ ತಿಂಗಳು ,, ,, ೨॥।

ರೂ. ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

ಲೋಕಾಭಿರಾಮ ೨

ಕಮ್ಯೂನಿಝಂ (ಗೆ; ನಿಂದ) ಗಂಡಾಂತರವೆ?

ಶ್ರೀ ಕಾ. ಕಿ. ಹರಿದಾಸ ಭಟ್ಟ.

ಔದ್ಯೋಗಿಕ ರಂಗದಲ್ಲಿ 'ಕಮ್ಯೂನಿಝಂ' ಎಂದರೆ ಒಂದು ಪ್ರಳಯಕ್ಕೆ ಸೇರಬಹುದಾದ ಹಾದಿ ಎನ್ನುವವರ ತಂಡವೊಂದು; 'ಕಮ್ಯೂನಿಝಂ'ನಿಂದಲೇ ಭೂಮಿಯಲ್ಲಿ ದೇವರ ರಾಜ್ಯ ಸೃಷ್ಟಿಯಾಗುವುದು ಎಂದು ಸಿದ್ಧಾಂತಿಸಿ, ಅದಕ್ಕಾಗಿ ಪ್ರಾಣವನ್ನು ತೆರುವುದಕ್ಕೂ, ತೆಗೆಯುವುದಕ್ಕೂ ಹಿಂಜರಿಯದ ನಂಬಿಗಸ್ಥರ ಬಣವೊಂದು. ಇವು ಎರಡು ಯುದ್ಧ ಶಿಬಿರಗಳು. ಬಂಡವಲುಗಾರರ ನೆಲೆಮನೆಯಾದ ಅಮೇರಿಕವೂ, ಗದ್ದೆಶ್ರೀನ ಬಾಲ ಹಿಡಿದು ದಿನ ನೂಕಬೇಕಾದ ಬ್ರಿಟಿಷ ಜನಾಂಗವೂ, ಇತ್ತೀಚಿಗೆ ಔದ್ಯೋಗೀಕರಣದಲ್ಲಿ ಮುಂದಾಗಿ ವ್ಯಾಪಾರ ಸಾಮುಗ್ರಿಗಳನ್ನು ಹೆಚ್ಚು ಹೆಚ್ಚು ಉತ್ಪಾದನೆ ಮಾಡುತ್ತಾ, ಅವನ್ನು ಮಾರುವುದರ ಸಲುವಾಗಿ 'ಮಾರ್ಕೆಟು'ಗಳಿಗಾಗಿ ಕಾತರಿಸುವ ಕೆನಡಾ, ಆಸ್ಟ್ರೇಲಿಯಾ ಮುಂತಾದ ರಾಷ್ಟ್ರಗಳೂ, ಕಮ್ಯೂನಿಝಂನ ನಿರ್ನಾಮಕ್ಕಾಗಿ ಟೊಂಕ ಕಟ್ಟಿ ನಿಂತಿವೆ. ಇವರಿಗೆ ಇದಿರಾಳಿಗಳಾಗಿ ಜಗತ್ತಿನ ಆರನೇ ಒಂದಂಶ ಭಾಗವನ್ನಾವರಿಸಿರುವ ರಶಿಯಾ ದೇಶವೂ, ಪೂರ್ವ ಯುರೋಪದ ಚಿಕ್ಕದೊಡ್ಡ ಜನಾಂಗಗಳೂ, ತಮಗೆ ಕೀಳಾದಮಟ್ಟಿಗೆ ತಮ್ಮ ಪಡೆಯನ್ನು ಬಲಗೊಳಿಸುತ್ತಿವೆ. ಹೋದ ವರ್ಷ ಹುಟ್ಟಿದ 'ಕಾಮಿನ್‌ಫಾರ್ಮ್' ಎಂಬುದು ಕಮ್ಯೂನಿಸ್ಟರನ್ನೊಂದುಗೂಡಿಸುವುದಕ್ಕಾಗಿ ಹುಟ್ಟಿಯಾದ ಸಂಸ್ಥೆ.

ಈ ದ್ವಂದ್ವ ಸೃಷ್ಟಿಯಲ್ಲಿ ಯಾರು ಹೆಚ್ಚು ಬಲಶಾಲಿಗಳೆಂದು ಕಾದಾಡದೆ ನಿರ್ಣಯಿಸುವುದು ಕಷ್ಟವಾದರೂ ಮಿತ್ರರಾಷ್ಟ್ರಗಳೇ ಗೆದ್ದು ಬರುವುದರಲ್ಲಿ ಸಂದೇಹವಿಲ್ಲ. ಆ ಯುದ್ಧ ಮುಗಿದ ಬಳಿಕ ಶಾಂತಿಕಾಲದಲ್ಲಿ ಗೆಲ್ಲುವುದು ಮಾತ್ರ ಕಮ್ಯೂನಿಝಮ್ಮೇ ಎಂಬ ಮಾತು ನಿರ್ವಿವಾದ. ಇಂದು ಪೂರ್ವ ಯುರೋಪದ ರಾಷ್ಟ್ರಗಳ ಗತಿಯನ್ನೂ, ಪ್ರಗತಿಯನ್ನೂ ಅವಲೋಕಿಸಿದರೆ ಸಾಕು. ಯುದ್ಧಕಾಲದಲ್ಲಿ ಕಂಟ್ರೋಲ್-ರೇಶನ್-ವಾಕ್ಸ್ವಾತಂತ್ರ್ಯಕ್ಕೆ ಮುಟ್ಟುಗೋಲು-ಇವನ್ನೆಲ್ಲ ಅನುಭವಿಸಿದ ಜನ ಕೇಂದ್ರೀಕೃತವಾದ ಯಾವುದೇ ಬಲಶಾಲಿ ಸರಕಾರಕ್ಕೆ ಬಗ್ಗಿಕೊಂಡಿರಲು ತಯಾರಾಗಿಯೇ ಇದೆ. ನೂರಾರು ಪಾರ್ಟಿಗಳು ಮಾಡಿದ ಹಾವಳಿಯನ್ನು 1919ರಿಂದ 1939ರ ವರೆಗೆ ಬೇಕಾದಷ್ಟು ಸಹಿಸಿ ನೊಂದು ಸುಣ್ಣವಾದ ಮತದಾರರಿಗೆ ಒಂದೇ ಪಾರ್ಟಿಯ ಆಳಿಕೆಯಲ್ಲಿ ಏನಾದರೂ ಸದ್ಯ ಕೆಲ ವರ್ಷವಾದರೂ ಶಾಂತಿ ಉಳಿದೀತು. ಇಡಿಯ ಜನಾಂಗವೇ ಯುದ್ಧದಲ್ಲಿ ಹೋರಾಡಿದ್ದರಿಂದ ಬಡವ ಬಲ್ಲಿದ, ಬಂಡವಲುಗಾರ ಕೂಲಿಕಾರ ಎಂಬ ಭೇದಗಳೂ ಹಿಂದಿನಷ್ಟು ತೀವ್ರವಾಗಿ ಕಣ್ಣಿಗೆ ಹೊಡೆಯುವುದಿಲ್ಲ. ಯುದ್ಧವು ಜನರ ಮನೋವೃತ್ತಿಯನ್ನು ಎಡಕ್ಕೆ ತಿರುಗಿಸಿದೆ ಎಂದರೆ ತಪ್ಪಿಲ್ಲ.

ಈ ಎಲ್ಲಾ ವಿಷಯಗಳನ್ನರಿತ ನಮ್ಮ ಮಿತ್ರರು ವಿಚಾರ ಪದ್ಧತಿಯನ್ನು ತಡೆಗಟ್ಟುವುದಕ್ಕೆ ಭಗೀರಥಯತ್ನ ಮಾಡುತ್ತಿದ್ದಾರೆ. ಪೂರ್ವಕಾಲದಲ್ಲಿ ಚೀನಾ ಅರಸನೊಬ್ಬ 'ಮಂಗೋಲ'ರು ರಾಜ್ಯದೊಳಗೆ ಕಾಲಿಡದಂತೆ ಗಡಿಯುದ್ದಕ್ಕೂ ಚೀನೀಗೋಡೆಯನ್ನು ಕಟ್ಟಿಸಿದನಂತೆ; ಆದರೆ ಮಂಗೋಲರ ದಾಳಿ ತಪ್ಪಲಿಲ್ಲ. ಕೈಕಾಲು ಕಟ್ಟಿ ಇರುವವನಿಗೆ ಎಂಥ ಗೋಡೆಯೂ ಅಡ್ಡಿಯಾಗಲಾರದೆಂದೋ, ಕಡಲಿನ ಕಡೆಯಿಂದ ಎಲ್ಲೋ ಕೆಲವು ತಕರಾರುಗಳ ಮೇಲಾದರೂ ದಾಳಿ ಬಿಟ್ಟಾರೆಂದೂ ಆತ ಕನಸಿನಲ್ಲೂ ಎಣಿಸಲಿಲ್ಲ. ಪಾಪ, ಅಷ್ಟು ದೂರದೃಷ್ಟಿ ಎಲ್ಲಿದ್ದೀತು ಅವನಿಗೆ? ಅಮೇರಿಕ ಬ್ರಿಟನುಗಳು ಸಾಮ್ಯವಾದವನ್ನು ಹತ್ತಿಕ್ಕಲು ಮಾಡಿದ ಯೋಜನೆ ಚೀನೀಗೋಡೆಯನ್ನು ಹೋಲುತ್ತಿದೆ. ಯುದ್ಧಮಾಡಿ ರಶಿಯಾವನ್ನು ಬಗ್ಗು ಬಡಿದರೆನ್ನಿ, ಏನು ಪ್ರಯೋಜನವಾಯಿತು? ಸಾಮ್ಯವಾದದ ರುಚಿ ಕಂಡು, ಹಲವಾರು ವರ್ಷ ಸೋವಿಯಟ್ ಸರಕಾರದ ಛತ್ರದಡಿ ಸಾಗಿಸಿದ ಜನತೆಯ ಮನಸ್ಸನ್ನು ಹೇಗೆ ಬಲಿಸಲು ಇದ್ದೀತು? ಬಂಡವಲುಗಾರರಿಗೆ, ಚಕ್ರವರ್ತಿ ವ್ಯಾಪಾರಿಗಳಿಗೆ, ಜಮೀನುದಾರರಿಗೆ ಮರಳಿ ಪ್ರೋತ್ಸಾಹ ಕೊಡುವರೆ? ಕೊಟ್ಟರೂ ಆ ರಾಜ್ಯ ಎಷ್ಟು ದಿನ ಉಳಿದೀತು? ರಶಿಯಾದ ಜನತೆ 'ಕುರಿತನ'ವನ್ನು ನೀಗಿ ಎಷ್ಟೋ ವರ್ಷವಾಯಿತು. ಇಂಥ ವಂಚನೆಗೆ ಇನ್ನಲ್ಲಿ ಎಡೆಯಿಲ್ಲ. ಎಲ್ಲಿಯೂ ಇರಲಾರದು.

ಬಂಡವಲಶಾಹಿ ಮತ್ತು ಸಾಮ್ರಾಜ್ಯವಾದದ ಕಾಲ ಮುಗಿಯುತ್ತಾ ಬರುತ್ತಿದೆ ಎನ್ನುವುದಕ್ಕೆ ಅವು ದೀರ್ಘಶ್ವಾಸಕ್ಕಾರಂಭಿಸಿದ್ದೇ ಸಾಕ್ಷಿ. ಅಮೇರಿಕ-ಬ್ರಿಟನ್ನಿನ ಅರ್ಥಶಾಸ್ತ್ರಜ್ಞರೇ ಹಾಗೆ ಅಭಿಪ್ರಾಯ ಪಡುತ್ತಾರೆ; ಹತ್ತೊಂಭತ್ತನೇ ಶತಮಾನದಲ್ಲಾದರೆ ನಡೆಯಬಹುದಿತ್ತು ನಿಮ್ಮ ಆಟ. ಆಗ ಹೊಸದಾಗಿ ಕಾಲು ಹರಡಿಸುವುದಕ್ಕೆ ಇನ್ನೂ ಅಭಿವೃದ್ಧಿಗೊಳ್ಳದ ಪ್ರದೇಶಗಳು ಬೇಕಾದಷ್ಟಿದ್ದುವು; ಉತ್ಪಾದಕ ಶಕ್ತಿ ಎಷ್ಟು ಹೆಚ್ಚಿಸಿದರೂ ಸಾಮುಗ್ರಿಗಳನ್ನುಪಯೋಗಿಸಿಕೊಳ್ಳುವುದಕ್ಕೆ ಜನರೂ, ರಾಷ್ಟ್ರಗಳೂ ಇದ್ದವು. ಔದ್ಯೋಗೀಕರಣ 1914ರ ವರೆಗೆ ನಿರಾತಂಕವಾಗಿ ಸಾಗಿತು-ಇಂಥ ಅನುಕೂಲ ವಾತಾವರಣದಲ್ಲಿ. ಈಗ ಸನ್ನಿವೇಶವೇ ಬದಲಾಗಿದೆ. ಕೆನಡಾ, ಆಸ್ಟ್ರೇಲಿಯಾ ಮುಂತಾದ ರಾಷ್ಟ್ರಗಳು ತಮಗೆ ಬೇಕಾದಷ್ಟನ್ನೆ ಮಾತ್ರ ತಯಾರಿಸುವುದಲ್ಲದೆ, ಜಗತ್ತಿನ ಬಾಜಾರುಗಳಲ್ಲಿ ಬಂಡವಲಶಾಹಿಯ ತವರ್ಮನೆಗಳಂತಿರುವ ಅಮೇರಿಕ-ಬ್ರಿಟನುಗಳ ಜತೆ ಸ್ಪರ್ಧಿಸಲುವಷ್ಟು ಪ್ರಬುದ್ಧವಾಗಿವೆ. ಯಂತ್ರೋಪಕರಣಗಳ ನಿಂತಿಸಿದಾರಿ ವಸ್ತುಗಳನ್ನ ಉತ್ಪಾದಿಸುತ್ತವೆ. ಯುದ್ಧದ ದೆಸೆಯಿಂದ ನಾಲ್ಕು-ಎಂಟು ಪಾಲು ಹೆಚ್ಚಿದ ಉತ್ಪಾದಕ ಶಕ್ತಿಯನ್ನು ಈಗ ತಡೆಹಿಡಿಯುವುದು ಹೇಗೆಂದು ಅರಿಯದೆ ತಬ್ಬಿಬ್ಬಾಗಿದೆ ಅಮೇರಿಕ. ಸಾಮಾನುಗಳ ಬೆಲೆಯನ್ನು ಕೃತಕವಾಗಿ ನಿಲಿಸಿಟ್ಟದ್ದರಿಂದ ಕೆಲಗಾಲ ನೂಕಬಹುದು; ಬ್ರಿಟನ್, ಫ್ರಾನ್ಸ್, ಜರ್ಮನಿಗಳ ಅಧಿಕಾರ ಪಡೆಯ 'ಇಳಿಮುಖವಾಗ'ರುವದರಿಂದ ಅವುಗಳನ್ನು ಪ್ರಪಂಚದ ಮಾರ್ಕೆಟ್ಟಿನಿಂದ ಹೊಡೆದೋಡಿಸಿ ಮತ್ತೆ ಕೆಲಗಾಲ ನೂಕಬಹುದು; ಯುದ್ಧಮಾಡಿ ಜನರಿಗೆ ಹುಚ್ಚುಹಿಡಿಸಿ ಹಾಗೆ ಇನ್ನು ಕೆಲವುವರ್ಷ ಮೆರೆಯಬಹುದು. ಅನಂತರ? ಈ 'ಅನಂತರ' ತಪ್ಪಿದ್ದೇ ಅಲ್ಲ! 1930ರ ಅನುಭವ ಶೀಘ್ರದಲ್ಲೇ ಬಾಯ್ದೆರೆದು ಕೂತಿದೆ. ನಿರುದ್ಯೋಗ, ಬೆಲೆಯಿಳಿತ, ಗಿರಣಿಗಳಿಗೆ ಕೆಲಸವಿಲ್ಲ, ಜನತೆಯಲ್ಲಿ ಅಶಾಂತಿ-ಈ ದೆಸೆ ಕಟ್ಟಿಟ್ಟದ್ದು. ಅದ್ದರಿಂದ ಯುದ್ಧ ಅನಿವಾರ್ಯ! ಯಾರಮೇಲೆ? ಹಿಟ್ಲರ ಸತ್ತಾಯಿತು. ಇನ್ನು ಗತ್ಯಂತರವೇ ಇಲ್ಲ ರಕ್ತವನ್ನು ಹುಡುಕಿದೆ. ಹುಡುಕುವುದಕ್ಕೆ ಬಹುದೂರ ಹೋಗುವುದೂ ಬೇಡ. ಹೋದ ಯುದ್ಧ ಮುಗಿದಕೂಡಲೆ ರಶಿಯಾ ಪೂರ್ವ ಯುರೋಪಿನಲ್ಲಿ ವಿಸ್ತರಿಸಿದ ಪರಿಯನ್ನು ನೋಡಿದರೆ ಸಾಕು. ಮೊನ್ನೆ ಮೊನ್ನೆ ನಡೆದ ಜೆಕೊಸ್ಲಾವಕಿಯಾದ ಮಿಂಚಿನ ಕ್ರಾಂತಿ, ಅದಕ್ಕೂ ಹಿಂದೆ ಹಂಗರಿಯಲ್ಲಿ ನಾಗೀ ಸರಕಾರವನ್ನು ಕಿತ್ತೊಗೆದ ನವನವೀನ ಹಾದಿ-ಒಂದೊಂದೇ ಸಾಕು ಮೂರನೇ ಮಹಾಯುದ್ಧದ ಆರಂಭಕ್ಕೆ.

ಯುದ್ಧ ನಡೆದರೆ ಯಾರೂ ಬೆಚ್ಚಿಬೀಳುವುದಿಲ್ಲ; ಯುದ್ಧ ಈ ತನಕ ಬರದಿದ್ದದ್ದೇ ಆಶ್ಚರ್ಯ!

ಇಂದು ಬಂಡವಲಶಾಹಿಗೆ ಬೇಗೆ ಸಂಧಿಕಾಲವೂ, ಅಂತೆಯೇ ಕಮ್ಯೂನಿಝಂ ಕೂಡ ಗಂಡಾಂತರದಲ್ಲಿದೆ. ಯಾವದೇಶದಲ್ಲಿ ನೋಡಿದರೂ ಕಮ್ಯೂನಿಸ್ಟರು ಜೈಲಿನೊಳಗಿಲ್ಲದೆ ಇಲ್ಲ. ಅವರು ಮಾಡುವ ಕೆಲಸವೂ ಅಂಥಾದ್ದೇ. ಇದಿರಾಗಿ ಹೋರಾಡುವುದನ್ನು ಬಿಟ್ಟು ಕೃತ್ರಿಮ ಸಂಥವನ್ನವಲಂಬಿಸುವುದೇ ಹೆಚ್ಚು. ಬರ್ಮದಲ್ಲಿ ಕೈಲುಬುಳಿಸಿದರೆ ಯಾರಿಗೆ ಉಪಕಾರವಾದಂತಾಯಿತು? ಚೀನದಲ್ಲಿ ಯಾವಾಗ ಯುದ್ಧವಲ್ಲದೆ ಬೇರೆ ಹಾದಿಯಾ ಇಲ್ಲವೇ ಜನತೆಯ ಉದ್ಧಾರಕ್ಕೆ? ಭಾರತದಲ್ಲಿ ರಾಗಿಯಂಥ ಪ್ರತಿಯೊಂದು ಕೂಲಿಕಾರ ಸಮಸ್ಯೆಯನ್ನೂ ಬೆಟ್ಟವಾಗಿ ಮಾಡಿತೋರಿಸುವುದೇಕೆ? ಆದರೆ 'ಕಮ್ಯೂನಿಝಂ'ನ ಒಂದು ತತ್ವವೇ ಹೀಗಿದೆ: ಅಶಾಂತಿಯಿಂದಲೇ ಶಾಂತಿ ಇನಿಸುವುದಂತೆ. ಕೂಲಿಕಾರರಿಗೆ ವರ್ಗ ಮನೋವೃತ್ತಿ ಉಂಟುಮಾಡುವುದಕ್ಕೆ ಕಟ್ಟುಪಟ್ಟೊಂದಲ್ಲದೆ ಬೇರೆ ಅನೇಕ ಹಾದಿಗಳಿವೆ. ಅವನ್ನೇಕೆ ಅನುಸರಿಸಬಾರದು ನಮ್ಮ ಕಾಮ್ರೇಡರು? ನೆಹರೂ ಸರಕಾರದ ಕೈಗೆ ನಿಜವಾದ ಅಧಿಕಾರ ಸೂತ್ರ ಬಂದು ಇನ್ನೂ ಒಂದುವರ್ಷವಾಗಿಲ್ಲ. ಏನು ಅವಸರ, ಭಂಗದ ಮಳೆ ಸುರಿಸಿ, ಕೂಲಿಕಾರರನ್ನು ಅಂಬುನನಿಯೋಜಿಸಬೇಕೆ? ಧನವುಳ್ಳವರೊಡನೆ ಜಗಳ ಕಟ್ಟಿಕೊಂಡು ಇದ್ದ ಗಿರಣಿ-ಕಾರ್ಖಾನೆಗಳನ್ನೂ ಮುಚ್ಚಿ ಇದ್ದ ಉತ್ಪಾದಕ ಸಲಕರಣೆಗಳಿಗೂ ತುಕ್ಕು ಹಿಡಿಸಬೇಕೆ? ದೇಶೀಯ ನರೇಶರ ತಲೆಕಡಿದು ಜಂಡಾವಿ ನಲಿವಾದಬೇಕೆ? ಇವನ್ನೆಲ್ಲ ಮಾಡಿದರೂ ನೆಹರೂ ಸರಕಾರ ಕಮ್ಯೂನಿಸ್ಟರಿಂದ 'ಸೈ' ಎನಿಸಿಕೊಳ್ಳುತ್ತಿಂಬುದಕ್ಕೆ ಗ್ಯಾರಂಟೀ ಎಲ್ಲಿ? ಕೂಲಿಕಾರರ ಹಿತಸಾಧನೆ ಮಾಡುವ ಇವರಿಗೆ ಇಡಿಯ ದೇಶಕ್ಕೆ ಬಂದ ಗಂಡಾಂತರದ ಅರಿವೇಕಿಲ್ಲ? ಅತ್ತ ಕಾಶ್ಮೀರ ಇತ್ತ ಹೈದರಾಬಾದು. ಆಹಾರಕ್ಕಾಗಿ ವರ್ಷಕ್ಕೆ ನೂರುಕೋಟಿ ರೂಪಾಯಿ ಬಜೆಟ್-ಅನ್ನ ಇಲ್ಲ-ಬಟ್ಟೆ ಇಲ್ಲ. ಇಂದು ಕಮ್ಯೂನಿಸ್ಟರೇ ದಿಲ್ಲೀ ಸಿಂಹಾಸನವನ್ನೇರಿದರೆ ಸ್ಟ್ಯಾಲಿನ್ನಿಂದ ಉಂಟುಮಾಡುತ್ತಿದ್ದರೇ ಅಷ್ಟಾ ಅವನ್ನು? 'ಕೂಲಿಕಾರರೇ ಒಟ್ಟಾಗಿ' ಎಂದ ಕೂಡಲೇ ಕಾರ್ಖಾನೆಯಿಂದ ವಿಮಾನ ಹೊರ ಬರುವುದೆ? ಪಂಡಿತ ನೆಹರೂನವನ್ನೇ ಪ್ರತಿಗಾಮಿ. ಅಧಿಕಾರಕ್ಕೆ ಮಾರುಹೋದ ನಾರುಳ ವಿಲ್ಲಾನ ಕೈಗೊಂಬೆ ಎಂದು ಹೊತ್ತುಗೊತ್ತಿಲ್ಲದೆ ಮೇಲೆ ಮಾರಿ ಹಳಿವ ಜನರು ತಮ್ಮನ್ನು ತಾವೇ ನಂಬುತ್ತಾರೋ ಎನ್ನುವುದೇ ಸಂದೇಹಾಸ್ಪದ. ಇವರ ಪ್ರಯತ್ನವನ್ನೆಲ್ಲಾ ನೋಡಿದಾಗ ಹೊಸ ಚುನಾವಣೆಗೆ ಮುನ್ನ ಒಂದುಬಾರಿ ನೆಹರೂ ಸರಕಾರಕ್ಕೂ ಕಾಂಗ್ರೆಸಿಗೂ ಮಸಿಹಚ್ಚಿಬಿಟ್ಟರೆ, ಕೆಲಸ ಸುಲಭವಾಗುತ್ತದೆ ಎಂದಿವರೆಣಿಸಿದಂತೆ ತೋರುತ್ತದೆ. ದೇಶದಲ್ಲಿ ಇಷ್ಟು ಅಶಾಂತಿ ಸಾಲದು, ಇನ್ನೂ ಹೆಚ್ಚಾಗಬೇಕು, ಇದೇ ಇವರ ಉದ್ದೇಶ ಇರಬೇಕು.

ಇತ್ತ ಕಾಂಗ್ರೆಸಿಗೂ ಅಂಜಿಕೆಯುಂಟಾಗಿದೆ. ಹೊಸ ಚುನಾವಣೆಯಲ್ಲಿ ಎಡಪಕ್ಷಗಳ ಪ್ರಚಂಡ ಪ್ರಚಾರದ ನಡುವೆ ಗಾಂಧೀ ನಾಮ ಸಂಕೀರ್ತನೆಯನ್ನೂ, ಸರ್ವೋದಯ ಸಮಾಜದ ಗುಣಗಾನವನ್ನೂ ಮಾಡಿದರೆ ಜನ ಮೆಚ್ಚಲಾರರೆಂಬುದು ಖಂಡಿತ. ಕಾಂಗ್ರೆಸ್ಸಿನ ಈ 60 ವರ್ಷ ಕಾರುಭಾರಿನಲ್ಲಿಯೂ ಅದು ಜನತೆಯ ಸಂಸ್ಥೆಯಾಗಲಿಲ್ಲ; ಜನರನ್ನು ಮುಟ್ಟಲಿಲ್ಲ. ಕೆಲಸಗಾರರೂ ಅಷ್ಟೇ, ಸೋಶಲಿಸ್ಟರು-ಕಮ್ಯೂನಿಸ್ಟರು-ಇವರ ನಾಯಕರು ಎಂಥವರೇ ಆದರೂ, ಸಾಮಾನ್ಯ ಸೋಶಲಿಸ್ಟನಾಗಲೀ ಒಬ್ಬ ಸಾಧಾರಣ ಕಮ್ಯೂನಿಸ್ಟನಾಗಲೀ ಕಾಂಗ್ರೆಸಿಗರೆಂದು ನೆರೆದಾವ ಜನರಿಗಿಂತ ವಿಶ್ವಾಸ ಪಾತ್ರತೆಯಲ್ಲಿ, ಆತ್ಮ (ಯಲ್ಲಿ) ಧೈರ್ಯ-ಸ್ಥೈರ್ಯಗಳಲ್ಲಿ ಎಷ್ಟೋ ಮಿಗಿಲು. ಸಂಘಟನೆ, ಶಿಸ್ತು-ಇವು ಎಡಪಕ್ಷದವರ ಮೂಲ ಮಂತ್ರ. ಕಾಂಗ್ರೆಸ್ ಮಂತ್ರಿಮಂಡಲಗಳು ಜಮೀನ್ದಾರೀ ನಿರ್ಮೂಲನೆಗೆ ತೊಡಗಿ ವರ್ಷವೆರಡಾದರೂ ಇನ್ನೂ ಕಾರ್ಯಕ್ಕೆ ಬರಲಿಲ್ಲ. ಆ ಯೋಜನೆ ಕೆಲವು ಪ್ರಾಂತ್ಯಗಳು ಜಮೀನ್ದಾರರಿಗೆ ಕೊಡಬೇಕೆಂದು ನಿರ್ಣಯಿಸಿದ 'ಕಾಂಪೆನ್ಸೇಶನ್' ಧನರಾಶಿಯನ್ನು ಗಮನಿಸಿದರೆ ಇವು ಜನತಾ ಸರಕಾರಗಳೇ? ಎನಿಸುವಷ್ಟು ಸಂಶಯ ಬರುತ್ತದೆ. ಕಂಟ್ರೋಲ್ ಕಂಟ್ರೋಲ್ ಸಾಗಿದೆ ಇವುಗಳನ್ನ. ಮಂತ್ರಿಗಳಮೇಲೆ ಜನಕ್ಕೆ ದಿನದಿಂದ ದಿನಕ್ಕೆ ಸಂಶಯ ಹೆಚ್ಚುವುದಕ್ಕೆ ಕಾರಣಗಳೊದಗಿ ಬರುತ್ತಿವೆ. ಹೀಗಿರುವುದರಿಂದ ವರ್ಷಾಂತ್ಯದೊಳಗೆ ಬರುವ ಚುನಾವಣೆಯಲ್ಲಿ ತಮ್ಮ ಮಂತ್ರಿತ್ವದ ಚರಿತ್ರೆಯನ್ನು ಜನರ ಮುಂದೆ ಎತ್ತಿಟ್ಟುಕೊಂಡು ಓಡುವ ಹಾಗಿಲ್ಲ. ಅದರಿಂದ ಸಕ್ಷನ್ 107,144, ಪಬ್ಲಿಕ್ ಸೇಫ್ಟಿ ಏಕ್ಟ್-ಮುಂತಾದವುಗಳ ನೆರವು ಪಡೆಯಬೇಕಾಗಿದೆ. ಕಮ್ಯೂನಿಸ್ಟರೂ ಸೋಶಲಿಸ್ಟರೂ ಚುನಾವಣೆಯ ಸಮಯ ಜೈಲಿನೊಳಗಿದ್ದರೇ ಕ್ಷೇಮವೆಂದು ಕಾಂಗ್ರೆಸಿಗರೆಣಿಸಿದರೆ ತಪ್ಪಿಲ್ಲ.

—ಅಂತೂ ಸಂಘರ್ಷ ನಡೆದೇ ಇದೆ.

—ಗಂಡಾಂತರದ ಕಾಲ—ಕಮ್ಯೂನಿಝಂಗೂ, ಪ್ರತಿಗಾಮಿಗಳಿಗೂ.

—ಯಾರು ಉಳಿದು ಬರುತ್ತಾರೆಂಬುದು ಭವಿಷ್ಯದ ಗರ್ಭದಲ್ಲಡಗಿದೆ.

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terribel diseases. Malaria if not promptly cured may disable a man for years. Filaria is a dirty, disfiguring disease And yet a little united effort on the part of the public could at very little cost wipe out these two evils.

Please watch this space.

Inserted by:

The Canara Mutual Assurance Company, Limited.

ESTD. 1935.

H. O. **UDIPI.**

ಎಲ್ಲ ತರದ

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್,

ಉಡುಪಿ.

ಮದುವೆ ಕಾಗದಗಳನ್ನು ಅಲ್ಪಾವಧಿಯಲ್ಲೇ ಮಾಡಿ ಕೊಡಲಾಗುವುದು.

The Canara Banking Corporation Limited.
Estd: 1906.
(Incorporated in British India)
Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates:—
3 & 4 months — @ 2¼ % p. a.
5 & 6 months — @ 2½ % p. a.

ನವಯುಗ

ಗುರುವಾರ, ಉಡುಪಿ, ೨೯-೪-'೪೮

ಲೋಕದ ಗತಿ

ಒಂದು ಅನಾಹುತದಿಂದ ಕಲಿತ ಪಾಠದಿಂದ ಮಾನವ ಜನಾಂಗದ ಬುದ್ಧಿ ಸುಧಾರಣೆ ಹೊಂದುವಂತಿದ್ದರೆ, ಎರಡನೇ ಲೋಕ ಯುದ್ಧವು ಕಲಿಸಿದ ಪಾಠವು ಮುಂದಿನ ಸಂತಾನ ಪರಂಪರೆಗಳಿಗೂ ಸಾಕಾಗುವಂತಹದೇ. ಆದರೆ ಕಳೆದ ಮಹಾ ಯುದ್ಧವು ನಡೆದಿದ್ದಷ್ಟು ಕಾಲವು ಅದು ಮುಗಿದು ಈ ತನಕ ಕಳೆದಿಲ್ಲ; ಇಷ್ಟರಲ್ಲೇ ಇನ್ನೊಂದು ಯುದ್ಧದ ಮಾತುಗಳು ಕೇಳಿಬರುತ್ತಿವೆ. ಅಮೇರಿಕ ಮತ್ತು ರಶ್ಯಗಳ ಈಗಿನ ಸರ್ವ ಪ್ರಯತ್ನಗಳೂ ಭಾವೀ ಘರ್ಷಣೆಯನ್ನು ಕಣ್ಣ ಮುಂದಿಟ್ಟುಕೊಂಡೇ ನಡೆದಿರುವಂತೆ ಕಾಣುತ್ತಿದೆ. ಇವೆರಡು ಪಕ್ಷಗಳೂ ಪ್ರಪಂಚದ ಪ್ರತಿಯೊಂದು ರಾಷ್ಟ್ರವನ್ನೂ ತಂತಮ್ಮ ಪಾಳಯದೊಳಗೆ ಸೇರಿಸಿಕೊಳ್ಳಲು ಸ್ಪರ್ಧಿಸುತ್ತಿವೆ. ಶಾಂತಿ ಪ್ರೇಮಿಗಳನ್ನು ಅತ್ಯಾಶ್ಚರ್ಯ, ವಿಶೇಷ ಯಾತನೆ ಮತ್ತು ಗಾಢ ಯೋಚನೆಗೀಡು ಮಾಡಿರುವ ಸಂದಿಗ್ಧ ಕಾಲವಿದು. ಲೋಕಾಭ್ಯುದಯಕ್ಕಾಗಿ, ಸಾರ್ವಪ್ರಪಂಚಿಕ ಶಾಂತಿಗಾಗಿ ಕೆಲಸ ಮಾಡುವವರಿದ್ದರೆ, [illegible] ಪಾಲಿನದೇ. ಇದೀಗ ಶಾಂತಿ ಸಂಧಾನಗಳು ಕೇಳಿಸಿದ ಸಂದರ್ಭ. ಒಂದು ಯುದ್ಧದ ಆಯಾಸವಿನ್ನೂ ನಿವಾರಣೆಯಾಗಿಲ್ಲ; ಈ ಸ್ಥಿತಿಯಲ್ಲೇ ಅಲ್ಲಲ್ಲಿ ಇನ್ನೊಂದು ಯುದ್ಧದ ಆಲಾಪ ಕೇಳಿಬರುವುದೇಕಾಗಿ? ಸತ್ಯಸ್ಥಿತಿಯೆಂದರೆ ಪ್ರಥಮಲೋಕ ಯುದ್ಧ ನಡೆದಂದಿನಿಂದ ಇದುವರೆಗೂ ಪ್ರಪಂಚವು ಯುದ್ಧಾಘಾತದ ನೋವಿನಿಂದ ಬಿಡುಗಡೆಗೊಂಡುದಿಲ್ಲ. ಮೊದಲನೇ ಯುದ್ಧವು ಮಾಡಿದ್ದ ಜಖಮು ಎರಡನೇ ಯುದ್ಧಾರಂಭಿಸುವ ತನಕವೂ ಇದ್ದಿತು; ಹುಣ್ಣಿನ ಮೇಲಿದ್ದ ಆ ಬೊಕ್ಕೆಯು ಒಡೆದರೂ ಈ ತನಕವೂ ಅದರ ಕೀವುನೋವು ನಿಂತಿಲ್ಲ; ಇಷ್ಟರಲ್ಲಿಯೇ ಅದರ ಮೇಲೆ ಇನ್ನೊಂದು ಕುರುವೇಳುವದಾದರೆ ಅದನ್ನು ಹೇಗೆ ಸಹಿಸಬೇಕೋ, ಆ ಮೇಲೂ ಲೋಕದ ಆಯುರಾರೋಗ್ಯವನ್ನು ಹೇಗೆ ರಕ್ಷಿಸಬೇಕೋ, ತಿಳಿಯುವದಿಲ್ಲ. ಈ ಸ್ಥಿತಿಯೇನನ್ನು ಸೂಚಿಸುತ್ತಿದೆ? ಸುಮಾರು ಮೂವತ್ತೈದು ವರುಷಗಳಿಂದ ಪ್ರತ್ಯಕ್ಷ ಯುದ್ಧ ಅಥವಾ ಯುದ್ಧ ವಾತಾವರಣವಿಲ್ಲದೆ ಒಂದೇ ಒಂದು ದಿನವನ್ನೂ ಕಳೆಯದಿದ್ದ ಪ್ರಪಂಚಕ್ಕೆ ಯುದ್ಧವೇ ಸ್ವಭಾವವಾಗಿ ನೆಲೆಗೂಡಿದೆಯೆನ್ನಬಹುದೇ? ಅಥವಾ ಈ ಹೋರಾಟದ ಮೇಲೆ ಪೂರ್ಣ ಜಿಗುಪ್ಸೆ ಹುಟ್ಟಿ ಇನ್ನೆಂದಿಗೂ ಯುದ್ಧವೇ ಇಲ್ಲದಂತೆ ಮಾಡುವುದಕ್ಕಾಗಿ ಅದರ ಮೂಲ ಕಾರಣಗಳನ್ನು ಮೂಲೋತ್ಪಾಟನ ಮಾಡುವ ಕೊನೆಯ ಕೆಲಸಕ್ಕದು ಹವಣಿಸುತ್ತಿದೆ ಎನ್ನಬಹುದೇ? ಯುದ್ಧಬೀಜದ ನಿರ್ಮೂಲನಕ್ಕಾಗಿಯೇ ಯುದ್ಧನೆಂಬ ಮಾತು, ಮರವಾಗಿ ಬೆಳೆಸಿದರೆ ಬೀಜ ನಾಶವಾಗುವದೆಂಬಂತೆಯೇ! ಒಂದು ಯುದ್ಧವು ಅದಕ್ಕಿಂತ ಮಿಗಿಲಾದ ಇನ್ನೊಂದು ಯುದ್ಧಕ್ಕೆ ಕಾರಣಗಳನ್ನು ನಿರ್ಮಿಸಿಟ್ಟೇ ಮುಗಿಯುತ್ತಾ ಬಂದಿದೆ ಎಂಬುದು ಇದುವರೆಗಿನ ಅನುಭವ. ಊಹನೆಗಸಾಧ್ಯವಿರುವಷ್ಟು ಭೀಕರವಾಗಲಿರುವ ಮೂರನೇ ಯುದ್ಧವಾದರೂ ಇದಕ್ಕಪವಾದವಾಗದು. ಆದ್ದರಿಂದ ಪೂರ್ವಾಪರವೆಲ್ಲವನ್ನೂ ವಿಚಾರಿಸಿ ನೋಡುವಾಗ ಇಂದು ಲೋಕವು ಪಾತಾಳಾಭಿಮುಖವಾಗಿರುವುದು, ಪ್ರತ್ಯಕ್ಷ ಪ್ರಳಯದತ್ತ ಸಾಗಿರುವದು ಸ್ಪಷ್ಟವಾಗಿ ಕಾಣಿಸುತ್ತಿದೆ. ತಡೆಹಾಕುವೆಂತಿದ್ದರೆ, ಅಂಥವರಿದ್ದಾರಾದರೆ, ಆ ತಡೆಬೇಗ ಬೇಕಾದುದೀಗಲೇ. ಪೆಲೆಸ್ತೈನ್, ಕಾಶ್ಮೀರದಂತಹ ವಿವಾದಗಳಲ್ಲಿ ತಿಂಗಳುಗಟ್ಲೆ ತಡವರಿಸುತ್ತಾ ಬಂದಿರುವ ಜಾಗತಿಕ ಸಂಘದ ಮೇಲೆಯೇ ಲೋಕದ ಇಂತಹ ಘರ್ಷಣೆಗಳನ್ನೂ ನಿವಾರಿಸುವ ಹೊಣೆಗಾರಿಕೆಯಿದೆ. ಆದರೆ ಅದರಿಂದ ಯಾವುದೂ ಆಗುವಂತಿಲ್ಲವೆಂಬುದು ಸ್ವತಃ ಸಿದ್ಧ. ಪ್ರಥಮ ಯುದ್ಧಾನಂತರವೆದ್ದ ಪರಿಸ್ಥಿತಿಯೇ ಈ ದ್ವಿತೀಯ ಯುದ್ಧೋತ್ತರ ಕಾಲದಲ್ಲೂ ಎದ್ದಿರುವಂತೆಯೇ, ಆ ಯುದ್ಧಾನಂತರವಿದ್ದ 'ಲೀಗ್ ಓಫ್ ನೇಶನ್ಸ್'ನ ಸ್ಥಿತಿಯಲ್ಲೇ ಈ ಯುದ್ಧಾನಂತರದ ಈ 'ಯುನೈಟೆಡ್ ನೇಶನ್ಸ್' ಸಂಸ್ಥೆಯಿದೆ ಹೊರತು ಬೇರಲ್ಲ. ಅಂದಮೇಲೆ ಈಗಿನ ಪ್ರಶ್ನೆ, ಲೋಕಕ್ಕೇನು ಗತಿಯೆಂಬುದೇ? ಸೂಕ್ಷ್ಮವಾಗಿ ವಿಚಾರಿಸಿದರೆ ಇನ್ನೊಂದು ಯುದ್ಧವು ಅನಿವಾರ್ಯವೇನೂ ಅಲ್ಲ; ನ್ಯಾಯಬದ್ಧ ತೀರ್ಮಾನಕ್ಕವಕಾಶವಿರದ ವಿವಾದವೆಂಬುದು ಎಲ್ಲಿಯೂ ಯಾವ ಕಾಲದಲ್ಲೂ ಹುಟ್ಟದಿಲ್ಲ. ನ್ಯಾಯದ ಬದಲಿಗೆ ವಿಜಯ ಗಳಿಸಬೇಕೆಂಬ ಸ್ಪರ್ಧೆಯೊಂದೇ ವಿವಾದಗಳಿಗೆ ಅಥವಾ ಯುದ್ಧಗಳಿಗೆ ಕಾರಣ. ಇಂದಾದರೂ ಸರಿಯೇ--ಯುದ್ಧವು ಅಪೇಕ್ಷಿಸಲ್ಪಟ್ಟಿದೆ ಹೊರತು ಅನಿವಾರ್ಯವಾಗಿಲ್ಲ. ನಿದರ್ಶನಕ್ಕಾಗಿ ಕಳೆದ ಯುದ್ಧಕಾಲದಲ್ಲಿ ಕೇಳಿಬರುತ್ತಿದ್ದ ಲೋಕಶಾಂತಿ ಘೋಷಣೆಗಳನ್ನು ಈಗ ನಾವು ಯಾರ ಬಾಯಿಯಿಂದಲೂ ಕೇಳುತ್ತಿಲ್ಲ. ಆಗ ಶಾಂತಿ ಮಂತ್ರಪಠನೆಯ ಮುಖ್ಯ ಪೌರೋಹಿತ್ಯ ವಹಿಸಿದ್ದ ಅನೇಕರೆದ್ದೇ ಈಗ ರಣಘರ್ಜನೆಯ ಮೂಲ

ಆ ಕಾಲದಲ್ಲಿ ಮತ್ತೀಕಾಲದಲ್ಲಿ

ಇಂದಿನ ವಿಜ್ಞಾನ ಯುಗದಲ್ಲಿ ಇಡೀ ಪ್ರಪಂಚದ ಮತ್ತು ಪ್ರಪಂಚದೊಳಗಿನ ಪ್ರತಿಯೊಂದು ಭಾಗದ ಸ್ಥಿತಿಗತಿ ಹೇಗಿದೆಯೆಂಬುದನ್ನೂ ಅದಕ್ಕೆ ಹೊಂದಿಕೆಯಾಗಬೇಕಾದರೆ ತಮ್ಮ ಮನೋಗತಿ ಹೇಗಿರಬೇಕೆಂಬುದನ್ನೂ ಲಂಡನ್, ವಾಷಿಂಗ್ಟನ್, ಮೋಸ್ಕೋದಲ್ಲಿರುವವರೇ ಯೋಚಿಸಿಕೊಂಡರೆ ಸಾಲದು. ಡಿಲ್ಲಿ ಅಥವಾ ಮದ್ರಾಸಿನಲ್ಲಿರುವ ನಮ್ಮ ಮಂತ್ರಿಗಳು ಮಾತ್ರ ಯೋಚಿಸಿದರೂ ಸಾಕಾಗದು. ಪ್ರತಿಯೊಬ್ಬರೂ ಸ್ವತಃ ಯೋಚಿಸಿ, ತಿಳಿದುಕೊಂಡು ಅದರಂತೆ ವರ್ತಿಸಬೇಕಾದುದು ಅಗತ್ಯ.

ಒಂದು ಕಾಲದಲ್ಲಿ ಕಲ್ಲು ಮರ, ಬಿಲ್ಲುಬಾಣಗಳ ಯುದ್ಧಗಳು ನಡೆದಿದ್ದುವು-ಈಗ ಅಟಂ ಬೋಂಬಿನ ಯುಗಾರಂಭಿಸಿದೆ.

ಒಂದು ಕಾಲದಲ್ಲಿ ತುಂಡು ತುಂಡು ರಾಜ್ಯಗಳು ಸ್ವತಂತ್ರ ರೀತಿಯಿಂದ ರಾಜ್ಯಭಾರಮಾಡುತ್ತಿದ್ದುವು — ಈಗ ಭೌಗೋಲಿಕ ಸ್ಥಿತಿ, ಭಾಷೆ, ಸಂಸ್ಕೃತಿ, ಅಥವಾ ಇತರ ಸಾಮೂಹಿಕ ತತ್ವಗಳನ್ನಾಧರಿಸಿ ರಾಷ್ಟ್ರೀಯ ನೀತಿ ನಿಂತಿದೆ.

ಒಂದು ಕಾಲದಲ್ಲಿ ಒಂದು ತುಂಡು ರಾಜ್ಯವು ಇನ್ನೊಂದು ತುಂಡು ರಾಜ್ಯವನ್ನು ಆಕ್ರಮಿಸಿ ಅಧೀನ ರಾಜ್ಯವಾಗಿ ಮಾಡಿಟ್ಟುಕೊಳ್ಳುವದೇ ಹೆಬ್ಬಯಕೆಯಾಗಿತ್ತು-ಈ ಕಾಲದಲ್ಲಿ 'ಸಂಯುಕ್ತ ರಾಷ್ಟ್ರ ಗುಂಪು'ಗಳ ರಚನೆಯಾಗುತ್ತಿದೆ; ಮಾತ್ರವಲ್ಲ, 'ಒಂದೇ ಜಗತ್ತು' 'ಜಾಗತಿಕ ಸರಕಾರ' ಸ್ಥಾಪನೆಯೇ ನೆಹರುಗಳಂತಹ ನಾಯಕರ ಹೆಬ್ಬಯಕೆಯಾಗಿದೆ.

ಒಂದು ಕಾಲದಲ್ಲಿ ಸಂಚಾರ, ವ್ಯಾಪಾರ, ವಿದ್ಯೆ, ಸಂಬಂಧ ಸುದ್ದಿ ಇತ್ಯಾದಿ ಎಲ್ಲವೂ ಒಬ್ಬರಿಂದಿನ್ನೊಬ್ಬರಿಗೆ, ಒಂದೂರಿಂದಿನ್ನೊಂದೂರಿಗೆ, ರಾಜ್ಯದಿಂದ ನೆರೆ ರಾಜ್ಯಕ್ಕೆ ಮಾತ್ರವಿದ್ದುವು-ಈ ಕಾಲದಲ್ಲಿ ಇವೆಲ್ಲವೂ ಲೋಕದ ಆ ಮೂಲೆಯಿಂದೀ ಮೂಲೆಯ ವರೆಗಾಗಿವೆ; ಎಲ್ಲವೂ ಏಕಪ್ರಕಾರವಾಗುವ ಗುರಿಯ ಕಡೆಗೆ ಸಾಗಿವೆ

ಸ್ವರ! ಅಂದಮೇಲೆ ಜಗತ್ತಿನ ಪ್ರಮುಖ ಸೂತ್ರಧಾರಿಗಳಿಗೆ ಯುದ್ಧವೇ ಬೇಕಾಗಿದೆ—ಶಾಂತಿ ಸಮಾನತೆ ಬೇಕಾಗಿರುವ ಸಾಮಾನ್ಯರ ಕೈಗೆ ಅದನ್ನು ಸಾಧಿಸಲಾಗುವ ಅಧಿಕಾರ ಅಥವಾ ಅನುಕೂಲತೆ ಇನ್ನೂ ಬಂದಿಲ್ಲ-ಎಂಬುದು ಖಂಡಿತ. ಇನ್ನೊಂದು ಯುದ್ಧದ ಮಾತಾಡುತ್ತಿರುವವರು ಅದಕ್ಕೆಂತಹ ನೀತಿಯ ಲೇಪ ಹಚ್ಚಿದರೂ ಜನತೆಯ ದೃಷ್ಟಿಯಲ್ಲಿ ಅನ್ಯಾಯಗಾರರೇ. ಇಂತಹ ಅನ್ಯಾಯವನ್ನು ಮೂಲದಲ್ಲೇ ನಿವಾರಿಸಿ ಲೋಕವನ್ನು ಉಳಿಸುವ ಯಥಾರ್ಥ ಬಯಕೆಯಿರುವವರು ಈಗಲೇ ಆ ಕಾರ್ಯಕ್ಕಿಳಿಯುವುದು ಸಮಂಜಸ. ಭಾರತದ ಪ್ರಧಾನಿ ಪಂಡಿತ ನೆಹರುಗಳಂತೆ, ಈ ಯುದ್ಧ ವಿರೋಧೀ ತಾಟಸ್ಥ್ಯವನ್ನಾದರೂ ಎಲ್ಲರೂ ಪ್ರದರ್ಶಿಸಿದರೆ ಒಂದು ಮಹಾ ಗಂಡಾಂತರದ ಭೀತಿ ದೂರವಾಗುತ್ತಾ ಹೋಗಬಹುದು; ಇಲ್ಲವಾದರೆ ಅದು ಪ್ರತಿ ಸಲವೂ ಸಮೀಪವಾಗಲಿದೆ; ಆಗುತ್ತಾ ಇದೆ.

ಈ ರೀತಿ ಆ ಕಾಲದಲ್ಲಿ ಮನುಷ್ಯನ ಬುದ್ಧಿ ಮತ್ತು ಹೃದಯವು ಎಲ್ಲಾ ವಿಧಾನಗಳಲ್ಲೂ ತಾನು ಮತ್ತು ತನ್ನ ಆಸುಪಾಸಿನ ಮಟ್ಟಿಗೆ ಮಾತ್ರ ಬೆಳೆದಿದ್ದರೆ, ಈ ಕಾಲದಲ್ಲದು ವಿಕಾಸಗೊಂಡು ಪ್ರಪಂಚ ವ್ಯಾಪಿಯಾಗಿದೆ. ಆದ್ದರಿಂದ ಯಾವ ಕಡೆಯ ಯಾರೇ ಆದರೂ ಆ ಗತಕಾಲಕ್ಕಿನ್ನೊಮ್ಮೆ ಕಾಲಿಡುವುದು ಹೇಗೆ ಅಸಾಧ್ಯವೋ ಹಾಗೆಯೇ ಆ ಗತಕಾಲದ ಬುದ್ಧಿಯನ್ನು ಕಟ್ಟಿಕೊಂಡು ಇರಲ್ಲಿಕೆ ಗಳಿಸುವುದೂ ಅಸಾಧ್ಯ.

ಆದುದರಿಂದ ಕಾಲೋಚಿತನಾಗಿ ಬಿಡಬೇಕಾದುದು ಮತ್ತು ಹಿಡಿಯಬೇಕಾದುದು ಯಾವುದೆಂಬುದನ್ನು ಪ್ರತಿಯೊಬ್ಬನೂ ಪ್ರತಿಯೊಂದು ಸಂದರ್ಭದಲ್ಲೂ ಈ ಕೆಳಗಿನಂತೆ ನೋಡಿಕೊಳ್ಳಬೇಕಾದುದು ಅಗತ್ಯ:—

ಕಲ್ಲುಗುರು ಅಥವಾ ಬಿಲ್ಲು ಬಾಣಗಳ ಕಾಲದ ದೇಹದಾರ್ಢ್ಯತೆ, ಶಕ್ತಿ ಅನುಕೂಲತೆಗಳ ಬಲದಿಂದ ಅನ್ಯರನ್ನು ಹಣ್ಣು ಮಾಡಿ, ಹೆದರಿಸಿ ತಾನು ಮೇಲು ಎಂದಿರುವ ಮನೋವೃತ್ತಿಯನ್ನು ಬಿಡಬೇಕು-ಸರ್ವಸಮಾನತೆ, ಸಹೋದರತೆ, ಕಾರ್ಯಯೋಗ್ಯತೆಯಿಂದ ಮನವೊಲಿಸುವ ಧೋರಣೆಯನ್ನು ಹಿಡಿಯಬೇಕು.

ಇಡೀ ಲೋಕದ ಮತ್ತು ಲೋಕದ ಪ್ರತಿಯೊಂದೆಡೆಯ ವಿದ್ಯಮಾನವು ಎಲ್ಲರನ್ನೂ ಮಾನವ ಜನಾಂಗದ ಹಿತ ಸಾಧನೆಯ ಕಡೆಗೆ, ಸರ್ವಸಮಾನತೆಯ ಕಡೆಗೆ ಬಲವಾಗಿ ಸೆಳೆಯುತ್ತಿರುವಾಗ, ಆ ಸ್ವಾರ್ಥಕ್ಕಿದಿರಾಗಿ ತನ್ನ ಮತ್ತು ತನ್ನ ಜಾತಿಯ ಹಿತ ಸಾಧಿಸುವ ಕಡೆಗೇನೇ ಎಲ್ಲವನ್ನೂ ಎಳೆದುಕೊಳ್ಳಬಹುದೆಂಬ ಹುಚ್ಚಾಟವನ್ನು ಬಿಡಬೇಕು—ಆ ಕಾರ್ಯ ಶಕ್ತಿಯನ್ನು ಮಹಾ ಶಕ್ತಿಯಿದಿರು ಧಿಕ್ಕಿ ಹೊಡೆಯಲು ಮುಂದೆ ಮಾಡಿ ನಾಶಗೊಳಿಸುವ ಬದಲಿಗೆ, ಅದನ್ನು ಪ್ರಾಪಂಚಿಕ ಶಕ್ತಿಯ ಅನುಯಾಯಿಯಾಗಿ ಮಾಡಿ ಅಭಿವೃದ್ಧಿ ಪಥ ಹಿಡಿಸಬೇಕು.

ಸಂಕುಚಿತ ಜಾತೀಯತೆ, ಸಂಕುಚಿತ ಗಡಿ ಪ್ರೇಮ, ಪಂಗಡ ಪ್ರೇಮ, ಕೋಲು ದೊಣ್ಣೆ ಕುಸ್ತಿ, ವ್ಯಾಯಾಮ ಬಲಗಳನ್ನು ಹೆಚ್ಚಿಸಿಕೊಂಡು ತಮ್ಮ ಜಾತಿ, ಪಂಥ ಪಕ್ಷದ ವಿಜಯ ಸಾಧಿಸಬಹುದೆಂಬ ಸಂಕೋಚ ಬುದ್ಧಿಯ ಸಾಧನೆ, ಇವೆಲ್ಲವೂ ಗತಕಾಲದ ಮನೋವೃತ್ತಿಗಳಾದ್ದರಿಂದ ಸಂಪೂರ್ಣ ಬಿಟ್ಟುಬಿಡಬೇಕು- ಬದಲಿಗೆ ಇಂತಹ ಸಂಕೋಚ ಬುದ್ಧಿ ಬೆಳೆದು ಬಲಗೊಂಡು ಸಹಿಷ್ಣುತೆಗಸಾಧ್ಯವಾಗುವಷ್ಟು ಗಡಿ ಮೀರಿ ಹೋಗಿದ್ದಲ್ಲಿ ಅದನ್ನು ಬಗ್ಗುಬಡಿಯುವ ಸಾಮೂಹಿಕ ಸಾಹಸ ಅಥವಾ ಸರಕಾರೀ ಪ್ರಯತ್ನದಲ್ಲಿ ಸೇರಿಕೊಳ್ಳಬೇಕು.

ವರ್ಚಸ್ಸನ್ನು ಉಪಯೋಗಿಸಿ, ವಂಚಿಸಿ ಧನಸ್ಥಾನಮಾನಗಳನ್ನು ಸಂಪಾದಿಸಿಕೊಳ್ಳುವ ಗತಕಾಲದ ಮನೋವೃತ್ತಿಯನ್ನು ಅದರ ನವನಾಗರಿಕತೆಯ ಪಂಡಿಸನೇತ ಹರಿದುಹಾಕಿಕೊಳ್ಳಬೇಕು—ತನ್ನ

(೬ನೇ ಪುಟ ನೋಡಿರಿ).

ಬೊಂಬಾಯಿಯಲ್ಲಿ ಅ. ಭಾ. ಕಾಂಗ್ರೆಸ್ ಸಮಿತೀ ಸಭೆ

ಕಾಂಗ್ರೆಸ್ ನವಘಟನೆಯ ಸ್ವೀಕಾರ

ಗುಪ್ತ ಸಭೆಯಲ್ಲಿ ಹೈದರಾಬಾದ್ ಚರ್ಚೆ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯು ಇದೇ ತಾ. 24ರಲ್ಲಿ ಬೊಂಬಾಯಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಮತ್ತು ವಿಶೇಷ ವಿಜೃಂಭಣೆಯಿಂದ ಜರಗಿತು. ಕಾಂಗ್ರೆಸಿನ ಹೊಸ ಘಟನೆಯನ್ನು ಅಂಗೀಕರಿಸಿಕೊಂಡ ಚಾರಿತ್ರಿಕ ನಿರ್ಧಾರವೇ ಈ ಬಾರಿಯ ಸಭೆಯ ಮುಖ್ಯ ನಿರ್ಣಯವೆನ್ನಬಹುದು. ಸಭಾ ಸದನದಲ್ಲಿ 60000 ಜನರಿಗೆ ಕುಳಿತುಕೊಳ್ಳುವಷ್ಟು ಸ್ಥಳಾನುಕೂಲತೆಯಿಂದ ರಚಿಸಲ್ಪಟ್ಟಿದ್ದ ಭವ್ಯಸಭಾಭವನವು ಪೂರ್ಣ ತುಂಬಿದ್ದುದಲ್ಲದೆ, ಹೊರವಳಯದಲ್ಲೆಲ್ಲಾ ಜನಸಂಗ್ಘಟ ನಡೆದಿದ್ದಿತು. ಸ್ವಯಂಸೇವಕ ಸೇವಕಿಯರ ಎಷ್ಟು ಪಾಲನ-ಧುರೀಣರಾಗಮನದವೇಳೆ ಇಡೀ ಸಭೆ ಪ್ರದರ್ಶಿಸಿದ ಭಕ್ತಿ-ವಿಧೇಯತೆಯ ಭಾವಗಳು ಮತ್ತು ಕಾಂಗ್ರೆಸ್ ಮಂತ್ರಿಗಳೇ ಮೊದಲಾದ ಜನನಾಯಕರಿಂದ ಶೋಭಿಸುತ್ತಿದ್ದ ಆ ವೇದಿಕೆ—ಕಾಂಗ್ರೆಸಿನ ವಿಶಿಷ್ಟ ರಾಷ್ಟ್ರೀಯತೆಗಳಿಂದ ಆಕರ್ಷಣೀಯನಾಗಿದ್ದ ಸಭಾಂಗಣ ಇತ್ಯಾದಿ ದೃಶ್ಯಗಳು ಪ್ರೇಕ್ಷಕರ ಹೃದಯಾಪಟಲದಿಂದ ಮಾಸುವಂತಹವಿರಲಿಲ್ಲ.

ಅಧ್ಯಕ್ಷ ಭಾಷಣ—ಸರ್ದಾರರ ಸಂದೇಶ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ತಮ್ಮ ಪ್ರಾರಂಭ ಭಾಷಣದಲ್ಲಿ ರಾಷ್ಟ್ರದ ಸ್ಥಿತಿಗತಿಗಳನ್ನೆಲ್ಲಾ ವಿವರಿಸಿ, ಮಧ್ಯಾವಧಿಯ ದುರ್ಘಟನೆಗಳು ದುಃಖ ಮತ್ತು ಲಜ್ಜೆಯನ್ನು ಬರಿಸುವಂತಹವೆನ್ನುತ್ತಾ "ಗಾಂಧಿಯವರು ನಮ್ಮ ಮುಂದೆ ಹಾಕಿಟ್ಟಿರುವ ಹಾದಿಯು ನಮಗೀಗ ಸ್ಪಷ್ಟವಾಗಿ ಕಾಣಿಸುತ್ತಿದೆ" ಎಂದರು. ನಿರಾಶ್ರಿತ ಸಮಸ್ಯಾ ನಿವಾರಣೆಯ ಸಂಕಷ್ಟಗಳನ್ನು ವಿವರಿಸಿ, ಆದಷ್ಟು ಸಹನೆ ವಹಿಸಬೇಕೆಂದು ಕೇಳಿಕೊಳ್ಳುತ್ತಾ "ಇಂದು ಜನರು ಮತ್ತು ಸರಕಾರವು ಬೇರೆ ಬೇರೆ ಅಲ್ಲ. ಆದ್ದರಿಂದ ಸರಕಾರವನ್ನೆದುರಿಸಿರುವ ಅಸಾಧ್ಯ ಸಂಕಟಗಳ ನಿವಾರಣೆಗೆ ಜನತೆ ಪೂರ್ಣ ಮನಸ್ಸಿನಿಂದ ನೆರವಾಗಬೇಕು. ವಿಮರ್ಶೆಗಳು ವಿಧಾಯಕವಾಗಿರಬೇಕು" ಎಂದು ಆಗ್ರಹದಿಂದ ಕೇಳಿಕೊಂಡರು. ಆರೋಗ್ಯ ಸಾಧನಾ ವಿಶ್ರಾಂತಿಗಾಗಿ ಡೆಹರಾಡನ್ನಿನಲ್ಲಿರುವ ಸರ್ದಾರ್ ವಲ್ಲಭಾಯಿಗಳು ಕಾಂಗ್ರೆಸ್ ಸಮಿತಿ ಸಭೆಗೆ ಕಳುಹಿಸಿದ್ದ ಸಂದೇಶವು ಮನಮುಟ್ಟುವಂತಹದಿತ್ತು. ಸರಕಾರದ ಮತ್ತು ಜನತೆಯ ಮೇಲೆ ಬಿದ್ದಿರುವ ಜವಾಬ್ದಾರಿಯನ್ನು ತಿಳಿಸಿ, ಭಾರತ ಸರಕಾರವು ಎಲ್ಲಾ ಸಮಸ್ಯೆಗಳನ್ನೂ ಸರಿಯಾಗಿ ಬಗೆಹರಿಸಿಕೊಂಡೇ ಕೆಲಸಮಾಡುತ್ತಿದೆಯೆಂದೂ ಎಲ್ಲರೂ ಒಮ್ಮತದಿಂದ ಒಕ್ಕಟ್ಟಾಗಿ ತೂಕತಪ್ಪದ ಮಾತು ವರ್ತನೆಗಳಿಂದ ಸರಕಾರಕ್ಕೆ ಸಹಾಯವೀಯಬೇಕೆಂದೂ ಸರ್ದಾರರು ಕೇಳಿಕೊಂಡಿದ್ದರು. ಹೈದರಾಬಾದಿನ ಪ್ರಶ್ನೆಯ ಕಡೆಗೆ ವಿಶೇಷ ಲಕ್ಷ್ಯವನ್ನೆಳೆದು, ಅದನ್ನು ತೀರ್ಮಾನಿಸಿಯೇ ಸಿದ್ಧವೆಂಬ ದೃಢ ಸಂಕಲ್ಪವನ್ನು ಸಾರಿ "ನಮ್ಮ ಅಪೇಕ್ಷೆಯ ಸಮಾಧಾನಕರ ಹಾಗೂ ಗೌರವಾರ್ಹವಾದ ತೀರ್ಮಾನವೊಂದನ್ನುಳಿದು ಬೇರಾವುದನ್ನೂ ನಾವೀ ವಿಷಯಕ್ಕೆ ಅಂಗೀಕರಿಸಲಾರೆವೆಂದು ನಾನು ಆಶ್ವಾಸನೆ ಕೊಡಬಲ್ಲೆ" ಎಂದು ಗೃಹ ಮಂತ್ರಿ ಪಟೇಲರು ತಮ್ಮ ಸಂದೇಶದಲ್ಲಿ ತಿಳಿಸಿದ್ದರಲ್ಲದೆ, ಗಾಂಧಿಜೀ ನಾಯಕತ್ವದ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿದ್ದಂತೆಯೇ ಕಾಂಗ್ರೆಸ್ ಈಗಲೂ ತ್ಯಾಗ, ದೇಶಭಕ್ತಿ, ಧೈರ್ಯ ಸ್ಥೈರ್ಯ, ಒಕ್ಕಟ್ಟನ್ನು ಪ್ರದರ್ಶಿಸಬೇಕೆಂದು ಕೇಳಿಕೊಂಡಿದ್ದರು. ಪ್ರಥಮ ದಿನದ ಸಭೆಯಲ್ಲಿ ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಭಾರತ ಸರಕಾರದ ವಿದೇಶ ಸಂಬಂಧ ಧೋರಣೆ, ಹೈದರಾಬಾದು ಮತ್ತು ಕಾಶ್ಮೀರಗಳ ಸಂಬಂಧದ ವರ್ತನೆಗಳನ್ನು ವಿವರಿಸಿ ಕೊಟ್ಟ ಭಾಷಣವು ಅಮೋಘವಿದ್ದಿತು. ಪಂಡಿತರ ಆ ಭಾಷಣವು ಯುದ್ಧ ಕಾರ್ಯಗಳಲ್ಲೇ ನಿರತರಿರುವ ಲೋಕದ ಪ್ರಮುಖ ರಾಷ್ಟ್ರಗಳ ನಾಯಕರ ಕಣ್ಣಿಗೆ ಅಂಜನಪ್ರಾಯವಾಗಿತ್ತು. ಮಾತ್ರವಲ್ಲದೆ ಹೈದರಾಬಾದ್ ಸರಕಾರದದುರ್ತರ್ಕಕ್ಕೊಂಬು ಧುರವೀಳ್ಯವಾಗಿಯೂ ಜಾಗತಿಕ ಸಂಘದ ನ್ಯಾಯಬುದ್ಧಿಯನ್ನು ಪರೀಕ್ಷಿಸಿ ತೋರಿಸಿದ ಬರೆಗಲ್ಲಾಗಿಯೂ ಪರಿಣಮಿಸಿದೆ.

ಕಾಂಗ್ರೆಸಿನ ನವಧೋರಣೆ

ಈ ಕಾಲಕ್ಕನುಸಾರವಾಗಿ ಕಾಂಗ್ರೆಸಿನ ಧ್ಯೇಯ ಮತ್ತು ಘಟನೆಗಳನ್ನು ಬದಲಾಯಿಸಿಕೊಳ್ಳಲು ಕಾಂಗ್ರೆಸು ನೇಮಿಸಿದ್ದ ಸಮಿತಿಯ ಸೂಚನೆಗಳು ತಾ. 25ರ ಎರಡನೇ ದಿನದ ಅಧಿವೇಶನದಲ್ಲಿ ಸವಿವರವಾಗಿ ಚರ್ಚಿಸಲ್ಪಟ್ಟು ಮಂಜೂರಾದುವು. ಕಲವು ವಾರಗಳ ಈ ನವ ಘಟನೆಯು ಸಭೆಯಲ್ಲಿ ವಿಮರ್ಶಿಸಲ್ಪಟ್ಟುದಲ್ಲದೆ ಕೆಲವೆಡೆ ತಿದ್ದುಪಡಿಗಳೂ ಮಂಜೂರಾದುವು. ಗಾಂಧಿಜೀ ಸಾಯುವ ದಿನವೇ ಬರೆದಿಟ್ಟಿದ್ದ ಕಾಂಗ್ರೆಸಿನ ಭವಿಷದ್ರೂಪದ ಸೂಚನೆಗಳ ಮೂಲತತ್ವಗಳನ್ನು ಈ ಮೂಲಕ ಅಂಗೀಕರಿಸಿಕೊಳ್ಳಲಾಗಿದೆ. ಮಹಾತ್ಮರು ಸ್ವತಃ ನಾಯಕತ್ವ ವಹಿಸಲಿರುತ್ತಿದ್ದರೆ, ಅವರು ಸೂಚಿಸಿದ್ದಂತೆ ಅಕ್ಷರಶಃ "ಲೋಕಸಭೆ"ಯಾಗಿ ಕಾಂಗ್ರೆಸು ಮಾರ್ಪಡುತ್ತಿತ್ತೇನೋ. ಕಾರ್ಯಕಾರೀ ಸಮಿತಿಯ ಸದಸ್ಯರ ಸಂಖ್ಯೆಯನ್ನು 20ಕ್ಕೇರಿಸಿ ಅದರಲ್ಲಿ ಮೂರನೇ ಒಂದಂಶಕ್ಕೆ ಮಿಕ್ಕದಷ್ಟೇ ಸರಕಾರೀ ಮಂತ್ರಿಗಳಿರಬಹುದೆಂಬ ತಿದ್ದುಪಡಿಯಾಗಿದೆ. ಅಂತೆಯೇ ಕಾಂಗ್ರೆಸ್ ಸಂಸ್ಥೆಯೊಳಗಿನ ಕ್ರಮನಿಯಮಗಳೆಲ್ಲವೂ ಗಣ್ಯ ಬದಲಾವಣೆಗೊಂಡಿವೆ. ಸದಸ್ಯತನ-ಪ್ರಾಂತಿಕ ಹಾಗೂ ಅದರೊಳಗಿನ ಕಾಂಗ್ರೆಸ್ ಸಮಿತಿಗಳು-ಮತದಾನ ಪದ್ಧತಿ-ಮತ್ತಿತರ ಎಲ್ಲಾ ವಿಧಾನಗಳನ್ನೂ ಳಗೊಂಡ ಈ ಘಟನಾ ಕರಡು 28 ವಿಧಾನಗಳಿಂದ ಕೂಡಿದ್ದು ಕೂಲಂಕುಷವಾಗಿ ಪರಿಶೀಲಿಸಲ್ಪಟ್ಟು ಕೆಲವು ಬದಲಾವಣೆಗಳ ಸಮೇತ ಮಂಜೂರಾಯಿತು. ಪಾಕಿಸ್ತಾನದ ಕಾಂಗ್ರೆಸನ್ನು ಬಿಟ್ಟುಬಿಡಲಾಯಿತು.

ಗುಪ್ತ ಸಭೆ

ತಾ. 24 ಮತ್ತು 25ರಲ್ಲಿ ಬಹಿರಂಗಾಧಿವೇಶನ ನಡೆದ ಮೇಲೆ ಹೈದರಾಬಾದಿನ ಸಮಸ್ಯೆಯ ಕುರಿತು ಪರ್ಯಾಲೋಚಿಸುವದಕ್ಕಾಗಿ ತಾ. 26ರಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿಯ ಗುಪ್ತಸಭೆ ಸೇರಿದ್ದಿತು. ಈ ಸಭೆ ಎರಡೂವರೆ ತಾಸುಗಳ ಕಾಲ ನಡೆಯಿತು. ಪ್ರಧಾನ ಮಂತ್ರಿ ಪಂಡಿತ ನೆಹರುಗಳು 50 ಮಿನಿಟು ಭಾಷಣವಿತ್ತು ಹೈದರಾಬಾದಿನ ಸ್ಥಿತಿಗತಿಗಳನ್ನೂ ಭಾರತ ಸರಕಾರದ ಧೋರಣೆಯನ್ನೂ ಸ್ಪಷ್ಟಪಡಿಸಿದರೆಂದು ತಿಳಿದುಬರುತ್ತದೆ. "ಹೈದರಾಬಾದಿನಲ್ಲಿ ನಡೆಯುತ್ತಿರುವ ಆಂದೋಲನ ಮತ್ತಿದರ ಕಠೋರತೆಗಳೆಲ್ಲವೂ ಸರಕಾರಕ್ಕೆ ಸರಿಯಾಗಿ ತಿಳಿದಿದೆ. ತನ್ನ ಸ್ಥಿತಿ ಮತ್ತು ಘನತೆಗನುಗುಣವಾದ ಯಾವ ಕಾರ್ಯ ಕೈಕೊಳ್ಳುವ ಸಂದರ್ಭವೊದಗಿದರೂ ಭಾರತಸರಕಾರವದಕ್ಕೆ ಎಳ್ಳಷ್ಟು ಹಿಂಜರಿಯುವಂತಿಲ್ಲ. ಹೈದರಾಬಾದ್ ಜನತೆಯ ಹಿತದೃಷ್ಟಿಯೊಂದನ್ನೇ ಕಣ್ಣಮುಂದಿಟ್ಟುಕೊಂಡು ಸರಕಾರವು ತನ್ನ ಸರ್ವ ಲಕ್ಷ್ಯವನ್ನು ಆ ಕಡೆಗೆ ಹರಿಸುವಾಗ ಅದನ್ನು ಅಕಡೆಗೆಳೆಯುವ ಅಧಿಕಪ್ರಸಂಗಗಳನ್ನು ಯಾರೂ ನಿರ್ಮಿಸಕೂಡದು. ಹೈದರಾಬಾದಿನೊಳಗಿನ ಮತ್ತು ಗಡಿವಲಯಗಳ ಗಲಭೆಗಳ ಕುರಿತು ಭಾರತ ಸರಕಾರವು ನೆರೆಯ ಪ್ರಾಂತಿಕ ಸರಕಾರಗಳೊಡನೆ ಹೊಂದಿಕೊಂಡೇ ಕಾರ್ಯನಿರ್ವಹಣಕ್ಕಳಿದಿದೆ. ಪ್ರತಿ ದಿನದ ಘಟನೆಗಳನ್ನೂ ಸರಕಾರವು ಪೂರ್ಣ ಲಕ್ಷ್ಯದಿಂದ ನಿರೀಕ್ಷಿಸುತ್ತಿದೆ' ಎಂದು ಪಂಡಿತಜೀ ಕಾಂಗ್ರೆಸ್ ಸಮಿತಿಯ ಮುಂದೆ ಸ್ಪಷ್ಟ ಚಿತ್ರವನ್ನು ಮಂಡಿಸಿದರೆಂದು ತಿಳಿದುಬರುತ್ತದೆ. ಸರಕಾರದ ಘನತೆಗನುಗುಣವಾದ ಸಮಾಧಾನಕರ ತೀರ್ಮಾನಕ್ಕಲ್ಲದೆ ಬೇರಾವುದಕ್ಕೂ ತಾವೊಪ್ಪಲಾರೆವೆಂದೂ, ಕಾಂಗ್ರೆಸಿಗರು ತುಸು ತಾಳ್ಮೆ ವಹಿಸಿ, ಸರಕಾರದ ಮೇಲೆ ವಿಶ್ವಾಸವಿಟ್ಟು ತಮ್ಮ ಕಾರ್ಯ ನಿರೀಕ್ಷೆ ಮಾಡಬೇಕೆಂದೂ ಪಂಡಿತರು ಕಾಂಗ್ರೆಸ್ ಸಭೆಯನ್ನು ಆಗ್ರಹ ಪೂರ್ವಕ ಕೇಳಿಕೊಂಡರೆಂದು ತಿಳಿದುಬರುತ್ತದೆ.

ಮಹಾತ್ಮಾ ಗಾಂಧಿಯವರ ಸ್ಥಾನವನ್ನೀಗ ನೆಹರುಗಳೇರಿದ್ದಾರೆಂಬುದನ್ನು ಅ. ಭಾ. ರಾಷ್ಟ್ರಸಭಾ ಸಮಿತಿ ಸಭೆಯು ಸ್ಪಷ್ಟವಾಗಿ ಪ್ರದರ್ಶಿಸಿತು. ಬಾಪೂಜಿಯವರಿಗೆ ಸಲ್ಲುತ್ತಿದ್ದ ಗೌರವಗಳೇ ಅಲ್ಲಿ ಪಂಡಿತಜೀಯ ಮಾತುಗಳಿಗೆ ದೊರೆತಿದ್ದುವು. ಆದಿಯಿಂದಲೂ ಚುರುಕಿನ ಮಟ್ಟಿಗೆ ಎಲ್ಲಾ ಮುಖಂಡರನ್ನೂ ಮಿಕ್ಕಿದ್ದ ಮಹಾತ್ಮಾ ಗಾಂಧಿಜೀಯರ ಸ್ಥಾನದ ಗೌರವಾದರಗಳನ್ನು ಪಡೆಯುತಿದ್ದ ಪಂಡಿತ ಜವಾಹಿರಲಾಲರು ಈಗ ಎಲ್ಲದರಲ್ಲೂ ಸರ್ವ ಪ್ರಥಮನಾಯಕನಾಗಿ ರಾಜಿಸಿದ್ದರು. ಕಾಂಗ್ರೆಸ್ ಸಭೆಗೆ ನೆಹರೂವಾಣಿ ವೇದವಾಕ್ಯವಾಗಿತ್ತು.

((೫ನೇ ಪುಟದಿಂದ).

ಕಾರ್ಯಕ್ಕಾಗಿ ಸಾರ್ವಜನಿಕರಿಗೆ ತ್ಯಾಗ ಸಹನೆ, ಔದಾರ್ಯಗಳನ್ನು ಕಲಿಸಲು ಹೋಗುವ ಬದಲಿಗೆ ಸಾರ್ವಜನಿಕರಿಗಾಗಿ ತಾನೇ ಅವುಗಳನ್ನು ಪ್ರಯತ್ನಪಟ್ಟು ಅಭ್ಯಾಸ ಮಾಡಿಕೊಳ್ಳಬೇಕು.

ತನ್ನ ಹೃದಯವು ಲೋಕಸ್ಥಿತಿಗನುಸಾರವಾಗಿ ವಿಕಾಸಗೊಳ್ಳಬೇಕಲ್ಲದೆ, ಲೋಕಸ್ಥಿತಿ ತನ್ನ ಮನೋಗತಿಗನುಸಾರವಾಗಿ ಸಂಕೋಚಗೊಳ್ಳದೆಂಬುದನ್ನು ಪ್ರತಿಯೊಬ್ಬನೂ ತಿಳಿದಿರಬೇಕು.

ಶ್ರೀಮಂತಿಕೆಯೆಂಬುದು ಜನ ಜೀವನದ ನಂ. 1ನೇ ಸ್ಥಾನಿಯೆಂದೇ ಈ ಕಾಲದ ಪ್ರತೀತಿಯಾಗಿರುವಾಗ ಕೇವಲ ಶ್ರೀಮಂತಿಕೆಯ ಬಲದಿಂದ ತಾನೆಲ್ಲಾ ಕಾರ್ಯರಂಗಗಳಲ್ಲೂ ಎಲ್ಲಾ ಕಾಲಗಳಲ್ಲೂ ಮೆರೆದಾಡಬಹುದೆಂಬ ಮುಚ್ಚಾಟವನ್ನು ಬಿಡಬೇಕು. ತಾವಿನ್ನು ಹೊಸಾಶ್ರಿತ ಮನಕ್ಕೆಳೆಯುವ ಮಾತಂತಿರಲಿ, ಸ್ವರಕ್ಷಣಾ ಯುದ್ಧದಲ್ಲಿ ಕೂಡಾ ಗೆಲ್ಲಲಾರೆವೆಂಬುದನ್ನು ಎಲ್ಲಾ ವರ್ಗದ ಶ್ರೀಮಂತರೂ ತಿಳಿದಿರಬೇಕು.

ಉಡುಪಿ

ಕಳೆದ ಸಂಚಿಕೆಯ 8ನೇ ಪುಟದಲ್ಲಿ ಪ್ರಕಟವಾದ ಗಾಂಧಿ ಸ್ಮಾರಕ ನಿಧಿ ಸಂಗ್ರಹದ ಸುದ್ದಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಂಬುದು ಜತೆ ಕಾರ್ಯದರ್ಶಿ ಎಂದಾಗಬೇಕು. (ಸಂ. ಸ.)

ಜೀವನವು ತಡೆಯಿಲ್ಲದೆ ತೀವ್ರಗತಿಯಿಂದಲೇ ಸಾಗುತ್ತಲಿದೆ. ಅದರೊಂದಿಗೆ ಸ್ಪರ್ಧಿಸಲು ಜನರು ಹೊರಟರೆ ಹೊಟ್ಟೆ ಬಟ್ಟೆಯ ಪ್ರಶ್ನೆ ಬರುವುದು ಸಹಜ. ಈ ಪ್ರಶ್ನೆಯು ಪ್ರತಿಕೂಲವಾಗುವಾಗ ದೇವರೆ, ಉದ್ಧರಿಸು ಎಂಬ ಮಾತು. ಉದ್ಧರಿಸುವ ದೇವರು ಕಾಲಚಕ್ರದಲ್ಲಿ ಕಾಣದಾಗ, ಮಾತ್ರ ಕಾಶಿ ರಾಮೇಶ್ವರ ಕಣ್ಣ ಮುಂದೆ. ಇದು ಯಾತ್ರೆ ಇಂತಹ ಯಾತ್ರೆಯೇ ರಾಜಕಮಲದವರ ನಡೆಯುವ ಚಿತ್ರ

ಜೀವನಯಾತ್ರೆ

ಶಾಂತಾರಾಮರು ನಿರ್ಮಾಣಮಾಡಿ, ವಿನಾಯಕರು ದಿಗ್ದರ್ಶಿಸಿ, ನಯನ್ ತಾರಾ, ಪ್ರತಿಮಾದೇವಿ, ಲತಾ, ಶಾಂತಾರಿನ್, ಸುನಾಲಿನಿ ದೇವಿ, ವಿಜಯಾ, ಯಾಕೂಬ್, ಬಾಬುರಾವ್ ಪೆಂಢಾರ್‌ಕರ್, ದೀಕ್ಷಿತ್, ಚಂದ್ರಕಾಂತ, ದಾಮುಣ್ಣ ಮಾಲ್ವಣ್‌ಕರ್, ಪರಶುರಾಮ್, ಜಾನಕಿದಾಸ್, ವಿಕಾಸ್ ಮೊದಲಾದ ಮಹಾ ನಟರಿಂದ ಸಾಮರ್ಥ್ಯ ಶೋಭೆಗೊಂಡ ಚಿತ್ರ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಮುಂದಿನ ಬದಲಾವಣೆ:

'ಬಾಪು'

ಉಡುಪಿ.

ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ನಿವಿಷ್ಟಭಾರತೀಯ ವೈದ್ಯರ ಸಂಘಸ್ಥಾಪನೆ- ಉಡುಪಿ ತಾಲೂಕು ದೇಶೀ ವೈದ್ಯರ ಸಭೆಯು ತಾ 18-4-48ರಲ್ಲಿ ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಇವರ ಆಫೀಸಿನಲ್ಲಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು-ಸಭೆಯ ಪ್ರಾರಂಭದಲ್ಲಿ ಪೂಜ್ಯ ಬಾಪೂಜಿಯವರ ನಿಧನಕ್ಕಾಗಿ ಸಂತಾಪ ಸೂಚಕ ಠರಾವನ್ನು ಮಾಡಲಾಯಿತು. ಉಡುಪಿ ತಾಲೂಕು ದೇಶೀ ವೈದ್ಯರ ಸಂಘಟನೆಯು ಅವಶ್ಯವಿರುವುದರಿಂದ ಆಯುರ್ವೇದ ವೈದ್ಯರ ಸಂಘವನ್ನು ಸ್ಥಾಪಿಸಬೇಕಾಗಿ ನಿರ್ಣಯಿಸಲಾಯಿತು. ಈ ಸಂಘದ ನಿಯಮನಿಬಂಧನೆಗಳನ್ನು ತಯಾರಿಸಿ ಬರುವ ತಾ 10-5-48ರ ಒಳಗೆ ತಾಲೂಕಿನ ಆಯುರ್ವೇದ ವೈದ್ಯರ ಮಹಾಸಭೆಯನ್ನು ಜರುಗಿಸಲು ಶ್ರೀಗಳಾದ ಪಾಂಗಾಳ ಜನಾರ್ಧನ ನಾಯಕ್, ಟಿ. ಎಸ್. ಕೇಳು ನಂಬಿಯಾರ್ ಮತ್ತು ಕೆ. ರಾಮರಾಯ ಪುರಾಣಿಕ ಇವರಿಗೆ ಅಧಿಕಾರ ನೀಯಲಾಯಿತು. ಮದರಾಸು ಸರಕಾರದ ಪಾನ ನಿರೋಧ ಶಾಸನವು ಆಯುರ್ವೇದದ ಪ್ರಗತಿಗೆ ಪ್ರತಿಬಂಧವಾಗಿ ಪರಿಣಮಿಸಿರುವುದರಿಂದ ಅದರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಆಯುರ್ವೇದಕ್ಕೆ ಪ್ರೋತ್ಸಾಹನೀಯುವಂತೆ ಪ್ರಾಂತಿಕ ಸರಕಾರದೊಡನೆ ಪತ್ರವ್ಯವಹಾರವನ್ನು ಮಾಡಲು ಶ್ರೀ ಟಿ. ಎಸ್. ಕೇಳು ನಂಬಿಯಾರರಿಗೆ ಅಧಿಕಾರವನ್ನು ಕೊಡಲಾಯಿತು.

ಉಡುಪಿ ಯಕ್ಷಗಾನ ಕಲಾಮಂಡಲದ ವತಿಯಿಂದ ತಾ. 24ನೇ ಶನಿವಾರ ರಾತ್ರಿ ಕಡಿಯಾಳಿ ಪಾ. ಎ. ಶಾಲಾ ಭವನದಲ್ಲಿ 'ಭೀಷ್ಮವಿಜಯ' ಪ್ರಸಂಗದ ಯಕ್ಷಗಾನ ಕಾಲಕ್ಷೇಪವು ಜಯಶೀಲವಾಗಿ ಜರಗಿತು. ಶ್ರೀಗಳಾದ ಪಿ. ವೇಜುಸೆಟ್ಟಿ, ಕಾಡಪ್ಪಯ್ಯ ಬಿ. ಓ ಯುಲ್, ಶ್ರೀ- ಕೆ. ಪಿ- ರಾಮಕೃಷ್ಣ ತಂತ್ರಿ, ಎಮ್. ಸುಬ್ಬರಾವ್, ಎ. ಹರಿಯಣ್ಣ ಸೆಟ್ಟಿ, ಓ. ಸೀನಸೆಟ್ಟಿ, ಮೊದಲಾದ ಪ್ರಸಿದ್ಧ ಅರ್ಥಧಾರಿಗಳಿಂದಲೂ ಶ್ರೀಗಳಾದ ಕಾರ್ಯದರ್ಶಿ ಕ. ನಾರಾಯಣ ಸೆಟ್ಟಿ, ಯಚ್. ಸೀನಪ್ಪ ಹೆಗ್ಡೆ (ಹಾಡುವಿಕೆ) ಎಮ್. ಗೋವರ್ಧನರಾವ್, ಎಮ್. ಸುಬ್ಬರಾವ್ [ಮೃದಂಗ] ಇವರ ಹಿಮ್ಮೇಳದಿಂದಲೂ 'ಕಾಲಕ್ಷೇಪ'ವು ಜನಮನರಂಜನೆ ಮಾಡಿತು.

ನಗರ ಸಭೆಯು ತಾ ೨೭ರಲ್ಲು ಸಂಜೆ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದ ಮೊದಲು ಶ್ರೀ ಟಿ. ಹರಿಶ್ಚಂದ್ರ ರಾಯರು ತನಗೆ ಮುನಿಸಿಪಲ್ ಕಮಿಶನರ್ ಹುದ್ದೆ ಕಾಯಂ ಮಾಡಲ್ಪಟ್ಟ ಸಂತೋಷ ಸೂಚನಾರ್ಥವಾಗಿ ಚಹಾ ಸತ್ಕಾರವನ್ನಿತ್ತರು. ಇದಾದ ಬಳಿಕ ಮಿ। ಆರ್ ಎ. ಸ್ವಾಮಿನ್ನರ ಪ್ರಶ್ನಾವಳಿಗೆ ಜವಾಬು ಕೊಡಲ್ಪಟ್ಟಿತು. ಕೆಲವು ಸರಕಾರಿ ಜಿ. ಓ. ಗಳು ರಿಕಾರ್ಡು ಮಾಡಲಾದುವು- ಆದಿಉಡುಪಿ ಹಾ। ಎ। ಶಾಲೆಗೆ ಆದಿಉಡುಪಿ ಮೈದಾನದ ಒಂದು ಎಕ್ರೆ ಜಾಗವನ್ನು ಕೊಡುವರೆ ಕೌನ್ಸಿಲಿನ ಒಪ್ಪಿಗೆಯಿದೆ ಎಂದು ತಹಶಿಲ್ದಾರರಿಗೆ ತಿಳಿಸಬೇಕೆಂದಾಯಿತು. ಅಕ್ಕಿರೇಶನ್ ನೀತಿಯನ್ನು ಆರು ಔನ್ಸಿಗಾದರೂ ಏರಿಸುವಂತೆ ಮತ್ತು ಜೋಳವನ್ನು ಕಡ್ಡಾಯವಾಗಿ ಕೊಂಡುಹೋಗಲೇಬೇಕೆನ್ನುವ ಕಾನೂನನ್ನು ಸಡಿಲಿಸಬೇಕೆಂದು ಮದ್ರಾಸು ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು.

ಸುರತ್ಕಲ್ಲಿನ ಮಾರಿಪೂಜೆ ಮತ್ತೆ ನಿಂತಿತು— ತಾ. 20ಕ್ಕೆ ಎರಡನೇ ಬಾರಿಯಾಗಿ ಸುರತ್ಕಲಿನ ನಡೆಯಬೇಕೆಂದು ನಿಶ್ಚಯವಾಗಿದ್ದ ಮಾರಿಪೂಜೆ ಹಾಗೂ ಕೋಣ ಬಲಿಯೂ ತಿರುಗಿ ನಿಲ್ಲಿಸಲ್ಪಟ್ಟಿರುವುದು. ಸ್ಪೇ। ಸ। ಮೆಜಿಸ್ಟ್ರೇಟರು ಅಲ್ಲಿಯ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಯಾರೂ, ಕಾಂಗ್ರೆಸಿನವರಾದರೂ ಸಭೆ ಮೆರವಣಿಗೆ ಇತ್ಯಾದಿ ನಡಸದಂತೆ ಮೇ ತಾ. 4ರ ತನಕ ತಿರುಗಿ 144ನೇ ಪ್ರಕರಣ ಜಾರಿಗೆ ತಂದಿರುವರು.

ಪಡು ಪಣಂಬೂರು— ಬೋ। ಹಾ। ಎ. ಶಾಲಾ ವರ್ಧಂತಿಯು ತಾ 16-4-48ರಲ್ಲಿ ಶ್ರೀ. ಬಿ. ವಿ. ರಮಣ, ಎಂ. ಎ- ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ. ಬಿ. ವಿ. ಶೆಟ್ಟಿ, B. Com ಅವರು ಸ್ವಸ್ತಿವಾಚನ ಮಾಡಿದರು. ಶ್ರೀಗಳಾದ ಎಂ. ಆರ್. ಪೂಂಜ, ವೆಂಕಟರಾವ್ ಮೊದಲಾದವರು ಶಾಲಾಭಿವೃದ್ಧಿಯನ್ನು ಕೋರಿ ಭಾಷಣಮಾಡಿದರು, ನಾಟಕ, ವಿವಿಧ ವಿನೋದಾವಳಿಗಳಾದ ಮೇಲೆ ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನಿತ್ತರು.

ಕುಂದಾಪುರದಲ್ಲಿ— ತಾ 24-4-48ರಲ್ಲಿ ಕುಂದಾಪುರ ಧನಲಕ್ಷ್ಮಿ ಥಿಯೇಟರಿನಲ್ಲಿ ಶ್ರೀ ಯಡಕೊರೆ ಮಂಜಯ್ಯ ಶೆಟ್ಟರ (ವಕೀಲ್) ಅಧ್ಯಕ್ಷತೆಯಲ್ಲಿ ಭೀಷ್ಮಾರ್ಜುನರ ಕಾಳಗವೆಂಬ ಯಕ್ಷಗಾನ ತಾಳಮದ್ದಲೆಯು ಈ ಕೆಳಗಿನ ಪಾತ್ರವರ್ಗದವರಿಂದ ಯಶಸ್ವಿಯಾಗಿ ಜರಗಿತು. ಕೆ ಬಾಲಕೃಷ್ಣ ರಾಯರು ಎಡ್ವೋಕೇಟ್ ಮಂಗಳೂರು (ಕೌರವ) ನಾರಾಯಣಕಿಲ್ಲೆಯವರು. (ಭೀಷ್ಮ) ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು (ಕೃಷ್ಣ) ಬಸವನವರು, ಉಡುಪಿ (ಭೀಮ) ಶೇಷ ಹೆಗ್ಗಡೆ ಮತ್ಯಾಡಿ (ದ್ರೋಣ) ಎಚ್॥ ಡಿ॥ ಸಂಜು ಹಾಲಾಡಿ (ಧರ್ಮರಾಯ) ಮಲ್ಪೆ ಶಂಕರನಾರಾಯಣ ಸಾಮಗರು (ಅರ್ಜುನ) ವೆಂಕಪ್ಪ ಶೈಗಳ ಹಾಡುವಿಕೆ ಈಶ್ವರಪ್ಪನವರ ಮೃದಂಗ ವಾದನ ಈ ಕಾರ್ಯದಲ್ಲಿ ಭಾಗವಹಿಸಿ ಸಹಕರಿಸಿದವರಿಗೆ ಹಾಲಾಡಿ ಗಾಂಧಿ ಸ್ಮಾರಕ ಸಮಿತಿಯವರು ಧನ್ಯವಾದವನ್ನು ಅರ್ಪಿಸುತ್ತಾರೆ.

ಇದೇ ಬರುವ ಮೇ ತಿಂಗಳ ಕೊನೆವಾರದಲ್ಲಿ ಕುಂದಾಪುರದಲ್ಲಿ ನಡೆಯುವ ದಕ್ಷಿಣ ಕನ್ನಡ ತರುಣ ಸಮಾಜವಾದಿ ಸಮ್ಮೇಳನದ ಸ್ವಾಗತ ಸಮಿತಿಗೆ ಶ್ರೀ. ಕೆ ಶ್ರೀನಿವಾಸ ಉಪಾಧ್ಯರು ಅಧ್ಯಕ್ಷರಾಗಿಯೂ ಶ್ರೀ- ಎಸ್- ಎಸ್- ಕೊಳ್ಕೆಬೈಲ್; ಎಡ್ವಕೇಟ್ ಇವರು ಕೋಶಾಧ್ಯಕ್ಷರಾಗಿಯೂ ಶ್ರೀ. ಜಗನ್ನಾಥ ಮೂಡ್ಲಕಟ್ಟೆಯವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಹೇರಂಜಾಲು— ಕುಂದಾಪುರ ತಾಲೂಕು ಹೇರಂಜಾಲು ಗ್ರಾಮದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ರಥೋತ್ಸವವು ತಾ 23-4-48ನೇ ಶುಕ್ರವಾರ ಬಹು ವಿಜೃಂಭಣೆಯಿಂದ ಜರಗಿತು.

ಬೊಂಬಾಯಿ- ಕಾಂದೇವ್ ಶ್ರೀ ಕೃಷ್ಣ ಭಜನಾ ಮಂಡಳಿಯಲ್ಲಿ ತಾ. 4-4-48ರಲ್ಲಿ ನಿತ್ಯಾನಂದ ಹರಿದಾಸರಿಂದ ಭಕ್ತಸುಧಾಮ ಹರಿಕೀರ್ತನೆಯು ಎಡ್ವಕೇಟ್ ಜಾದೇವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀಗಳಾದ ಬುಜಂಗ ಶೆಟ್ಟಿ, ಸುಂದರ ಶೆಟ್ಟಿ, ಸಂಜಪ್ಪ ಶೆಟ್ಟಿ, ತಿಮ್ಮಪ್ಪ ಗೌಡ, ಸಂಜೀವ ಕೋಟ್ಯಾನ್ ಇವರು ಸಂಘದ ಸಂಘಟನೆಯ ಕುರಿತು ಭಾಷಣ ಮಾಡಿದರು. ತಾ 6ರಲ್ಲಿ ಶ್ರೀ ಸಂಜಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಸಭೆಜರಗಿ ಹಲವರ ಭಾಷಣಗಳಾದುವು.

ಬಾಲಕರು ಆರೋಗ್ಯಕಾಯರಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜೆಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರ ಸೇವನೆಯಿಂದ ತುಂಬಾ ಗುಣಹೊಂದಿ ನ... ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೋ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ,

L. N. Sharma, Mangalore.



Approved firm by the Govt. of Mysore Certified by the Agent of the Govt. of Ceylone & Indian

ನಿಮ್ಮಷ್ಟಕ್ಕೆ ನೀವು ಮನೆಯಲ್ಲೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.

ನವಭಾರತ ಬುಕ್ ಡಿಪ್ಪೊ, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾ ಯ ಲ್ ಮ ಹಾ ಲಿ ನ ಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಮದ್ರಾಸು ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸೈಟಿ, ಮತ್ತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಸಂಭಾವನೆ ಪಡೆದ ಗ್ರಂಥ.

ಡಾ। ವಿ ಆರ್. ಕೊರಡ್ಕಲ್ಲರ

'ಮನೆಮದ್ದು'-Home Remedies

ಎಂಬ ಪುಸ್ತಕ ನಿಮ್ಮಲ್ಲಿದ್ದರೆ ಮಕ್ಕಳ ಹೆಂಗಸರ ಗರ್ಭಿಣಿಯರ ಬಾಣಂತಿಯರ ಮತ್ತು ಇತರರ ಸಾಮಾನ್ಯ ಎಲ್ಲ ಕಾಹಿಲೆಗಳಿಗೆ ನೀವೇ ಮದ್ದುಮಾಡಿ ಗುಣಪಡಿಸಿಕೊಳ್ಳಲಿಕ್ಕಾಗುವ ಸುಲಭಸಾಧ್ಯವಾದ ಮದ್ದುಗಳನ್ನು ಹೇಳಿದೆ.

'Ably written—Quite up-to-date—Valuable service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲರಾಗಿದ್ದ ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿಯವರು ಮುನ್ನುಡಿಯಲ್ಲಿ ಕೊಂಡಾಡಿದ ಪುಸ್ತಕವಿದು.

ಹೆರಿಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿಯದೆ.

ಬೆಲೆ ರೂಪಾಯಿ 2—0—0.] [ಟಪ್ಪಾಲು ದ್ವಾರಾ 2—6—0.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ.

ಈಗಿನ ಕಾಲಕ್ಕೆ ಅತಿ ಅಗ್ಗವಾದ ಪುಸ್ತಕಗಳು.

೧ ಚಿಗುರು

೧೦ ಸಣ್ಣ ಕತೆಗಳ ಸಂಕಲನ

೨ ಲೋಪಾಮುದ್ರೆ

ಕಾದಂಬರಿಯಂತೆ ಬರೆಯಲ್ಪಟ್ಟ ಕಾವೇರಿ ಮಾಹಾತ್ಮ್ಯೆ.

೩ ಪ್ರತೀಕಾರ

ಅರ್ಜುನನಿಂದ ತಿರಸ್ಕರಿಸಲ್ಪಟ್ಟ ಬಭ್ರುವಾಹನನ 'ಪ್ರತೀಕಾರ'ವನ್ನು ಚಿತ್ರಿಸುವ ನಾಟಕ.

೪ ಪಂಚರಾತ್ರಿ

ಐದು ಏಕಾಂಕ ನಾಟಕಗಳ ಸಂಗ್ರಹ.

75 ಪುಟಗಳಿಗೆ ಮಿಕ್ಕಿದ ಪ್ರತಿಯೊಂದು ಪುಸ್ತಕದ ಬೆಲೆ ಬರೇ 0 6 0

ನವಭಾರತ ಬುಕ್ ಡಿಪ್ಪೊ, ಉಡುಪಿ.

ದಕ್ಷಿಣ ಕನ್ನಡ

ಅಲೆವೂರು—ಅಲೆವೂರು ಸುತ್ತುಮುತ್ತಲಿನ ಗ್ರಾಮನಿವಾಸಿಕರಲ್ಲಿ ಶ್ರೀ ರಾಮನಾಮದ ಮಹತ್ವವನ್ನು ಪ್ರಚಾರಪಡಿಸುವ ಸದುದ್ದೇಶದಿಂದ ಸ್ಥಾಪಿಸಲ್ಪಟ್ಟ ಶ್ರೀ ರಾಮಮಂದಿರದಲ್ಲಿ ಹಿಂದಿನ ವರುಷಗಳಿಂದ ನಡೆದು ಬಂದ ಪದ್ಧತಿ ಪ್ರಕಾರ ಈ ವರುಷವೂ ಶ್ರೀ ರಾಮಭಜನ ಸಪ್ತಾಹೋತ್ಸವವು ಇದೇ ತಾ. ೧೦ರಲ್ಲಿ ಆರಂಭವಾಗಿ ತಾ. ೧೭ರಲ್ಲಿ ಅವಭೃತ ಸ್ನಾನ ತಾ. ೧೮ರಲ್ಲಿ ಸಂಜೆ ಪುರಜನ ಸಂಕೀರ್ತನಾ ಮೆರವಣಿಗೆ, ವಸಂತಪೂಜೆ, ಮಂಗಲಾರತಿಗಳಿಂದ ಯಶಸ್ವಿಯಾಗಿ ಕೊನೆಗೊಂಡಿತು. ಸಪ್ತಾಹದ ದಿವಸಗಳಲ್ಲಿ ಶ್ರೀಕಾಲಕ್ಷೇಪ, ಭಾಷಣ, ಸಂಗೀತ, ಸ್ಥಳೀಯ ಸು... ಶಾಲಾ ಅಧ್ಯಾಪಕರಾದ ಶ್ರೀಯುತರು ರಾಮಸೆಟ್ಟಿ ಮತ್ತು ಬಿ. ಬಿ. ಸೆಟ್ಟರ ನೇತೃತ್ವದಲ್ಲಿ 'ಸ್ವರ್ಣಮೂರ್ತಿ', ಎಂಬ ಪೌರಾಣಿಕ ನಾಟಕ ಮತ್ತು ಸಾಮಾಜಿಕ ನಾಟಕಗಳ ಪ್ರದರ್ಶನ ಕಾರ್ಯಕ್ರಮಗಳಿದ್ದುವು. ಮಂಗಲಾಚರಣ ಕಾಲದಲ್ಲಿ ಅರ್ಚಕ ಶ್ರೀಯುತ ಕೃಷ್ಣಭಟ್ಟರು ಲೋಕ ಕಲ್ಯಾಣಾರ್ಥವಾಗಿ ಶ್ರೀರಾಮನನ್ನು ಪ್ರಾರ್ಥಿಸಿ ಸಪ್ತಾಹಕ್ಕೆ ಸಹಕಾರವಿತ್ತ ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು.

ಮುಜೂರು, ಕರೆಂದಾಡಿ—ಶಾಲಾ ವಾರ್ಷಿಕೋತ್ಸವವು ತಾ. 17-4-48ರಂದು

ಅಮೃತಾಂಜನ.
ತಲೆನೋವು, ಸಿಡಿತ, ನೋವು, ಉಳುಕು, ಶೀತ, ಕೆಮ್ಮು, ಮೈಕೈ ನೋವುಗಳಿಗೂ ಎದೆನೋವು, ಗಾಯಗಳು ಚೇಳು ಕಡಿತ ಮುಂತಾದ ವೇದನೆ ಶಮನ ಮಾಡುವ ಪ್ರಸಿದ್ಧ ಔಷಧ.
REGD.
ಎಲ್ಲಾ ಕಡೆಗಳಲ್ಲಿ ಮಾರಾಟವಾಗುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ಉಡುಪಿ ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರಾದ, ಶ್ರೀ ವೈ. ಗೋಪಾಲ್, B. A. L. T. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು—ಶಾಲಾ ಬಾಲಕಿಯರು, "ಮಾಧವಿ ಮನೋರಮಾ" ಎಂಬ ಸಂಗೀತನಾಟಕವನ್ನೂ, ಬಾಲಕರು "ಮಾರ್ವಾಡಿ ಲಾ ಬಲ್ಲಿ" ಎಂಬ ತುಳು ನಾಟಕವನ್ನೂ ಆಡಿ ತೋರಿಸಿ ಸಭಿಕರನ್ನು ಆನಂದಗೊಳಿಸಿದರು.

ಮಂಗಳೂರು

ರಾಷ್ಟ್ರೀಯ ಸ್ಮಾರಕ ನಿಧಿಯ ಮಂಗಳೂರು ನಗರ ಸಮಿತಿಯು ತಾ ೧೨ರಲ್ಲಿ ಶ್ರೀರಂಗ ಭವನದಲ್ಲಿ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ರಚಿಸಲ್ಪಟ್ಟಿತು. ಈ ಸಮಿತಿಗೆ ಶ್ರೀ ಎಲ್. ಎಸ್ ಪಾಯಸರು ಅಧ್ಯಕ್ಷರಾಗಿಯೂ ಡಾ। ಯು. ಪಿ. ಮಲ್ಯ ಮತ್ತು ಶ್ರೀ ಬಿ. ಆರ್. ಕರ್ಕೇರರು ಉಪಾಧ್ಯಕ್ಷರಾಗಿಯೂ ಶ್ರೀ ಡಿ. ಮೋಹನರಾಯರು ಕಾರ್ಯದರ್ಶಿ ಮತ್ತು ಖಜಾಂಚಿಯರಾಗಿಯೂ, ಶ್ರೀ ದೇವಿದಾಸ ಗಿರಿಧರ ಬಾಲಚಂದ್ರರು ಜತೆ ಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟರು.

ಭಾರತ ಸರಕಾರದ ತಾಳೆಬೆಲ್ಲ ತಜ್ಞರಾದ ಶ್ರೀ ಗಜಾನನ ನಾಯ್ಕರು ದಕ್ಷಿಣ ಸಂಸ್ಥಾನಗಳಿಗಾಗಿ ಒಂದು ತಾಳೆಬೆಲ್ಲ ಕೈಗಾರಿಕೆಯ ತರಬೇತಿ ಕೇಂದ್ರವನ್ನು ಈ ಜಿಲ್ಲೆಯಲ್ಲಿ ತೆರೆಯುವುದಕ್ಕಾಗಿ ಅನುಕೂಲವಾದ ಕೇಂದ್ರಸ್ಥಳದ ಆಯ್ಕೆಗಾಗಿ ತಾ ೧೭ರಲ್ಲಿ ಮಂಗಳೂರಿಗೆ ಬಂದಿದ್ದು ತಾ ೧೮ರ ತನಕ ಜಿಲ್ಲೆಯಲ್ಲಿ ಸಂಚರಿಸಿ ಅಲ್ಲಲ್ಲಿ ಬೆಲ್ಲ ತಯಾರಿಸುವುದನ್ನು ನೋಡಿದರು. ತಾ ೧೯ರಲ್ಲಿ ಜಿಲ್ಲಾ ಬೋರ್ಡಿನ ಆಫೀಸಿನಲ್ಲಿ ಜರಗಿದ ಸಭೆಯಲ್ಲಿ ಶ್ರೀಯುತರು ಬೆಲ್ಲ ತಯಾರಿಕೆಯ ಕುರಿತು ಸೂಚನೆಗಳನ್ನು ಕೊಟ್ಟರು.

ಕಾಸರಗೋಡು ಸಾಹಿತ್ಯ ಸಮ್ಮೇಳನದ ಸ್ವಾಗತಸಮಿತಿಯ ಕಾರ್ಯಕಾರಿ ಸಮಿತೀ ಸದಸ್ಯರ ಸಭೆಯು ತಾ ೧೧ರಲ್ಲಿ ಶ್ರೀ ಕಡಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಬಿ. ಶ್ರೀಧರ ಶಕ್ತಿಯಾಯರು ಸಮ್ಮೇಳನದ ಲೆಕ್ಕಪತ್ರಗಳನ್ನು ಸಭೆಯ ಮುಂದಿಡಲಾಗಿ ಸಭಿಕರು ಅದನ್ನು ಸ್ವೀಕರಿಸಿದರು. ಅನಂತರ ಲೆಕ್ಕ ಪರಿಶೋಧನಾ ಕಾರ್ಯಕ್ಕೆ ಶ್ರೀ ಪಿ. ಎನ್. ಹೆಗ್ಡೆಯವರನ್ನು ನೇಮಿಸುವುದೆಂದು ನಿರ್ಣಯಿಸಲಾಯಿತು.

ದೇವಾಲಯ ಪ್ರವೇಶ ಕಾಸರಗೋಡಿನ ಅತಿ ಪ್ರಾಮುಖ್ಯ ಮಧೂರು ಶ್ರೀ ಮಹಾ ಗಣಪತಿ ದೇವಾಲಯದಲ್ಲಿ ಈ ವರುಷ ಹರಿಜನರಿಗೆ ಪ್ರವೇಶಕೊಟ್ಟು ದೇವರ 'ದರ್ಶನ'ದಿಂದ ಗಂಧ ಪ್ರಸಾದವನ್ನು ಸಲ್ಲಿಸಿರುವರು ಎಂದು ತಿಳಿದುಬರುತ್ತದೆ

ಶ್ರೀ ಭಗವತೀ ನೃತ್ಯಕಲಾ ಮಂದಿರ ಮುಂಬಯಿ—ಇವರು ತಾ 16-4-48ರಲ್ಲಿ ಕಲ್ಬಾದೇವಿ ರೋಡಿನಲ್ಲಿರುವ ಭಾಂಗವಾಡಿ ಥಿಯೇಟರಿನಲ್ಲಿ "ಮಾರ್ಕಂಡೇಯ" ಎಂಬ ಪೌರಾಣಿಕ ಕನ್ನಡ ನಾಟಕವನ್ನು ಶ್ರೀ ಉಮಾನಾಥ, ಜಿ. ಪುತ್ತಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಅಭಿನಯಿಸಿದರು. ಶ್ರೀಯುತರು ನಾಟಕ ಕಲೆಗಳ ವಿಷಯ ಮಾತಾಡಿದರು. ಅಧ್ಯಕ್ಷ ಶ್ರೀ. ಪುತ್ತಿಯವರು ಶ್ರೀ ಭಗವತೀ ನೃತ್ಯಕಲಾ ಮಂದಿರಕ್ಕೆ ಒಂದು ಹೊಸ ಶೀಲ್ಡನ್ನೂ ಉತ್ತಮ ಅಭಿನಯಕಾರರಿಗೆ ಬೆಳ್ಳಿಯ ಪದಕಗಳನ್ನೂ ಬಹುಮಾನವಿತ್ತರು ಶ್ರೀ ಭಗವತೀ ನೃತ್ಯಕಲಾ ಮಂದಿರದ ಸ್ಥಾಪಕ ಶ್ರೀ. ಎ. ಆರ್. ತಪ್ಪ ಭಂಡಾರಮನೆಯವರು ಉತ್ತಮಾಭಿನಯಗಳಿಗೆ ಪಾರಿತೋಷಕಗಳನ್ನಿತ್ತರು. ನಾಟಕಕ್ಕೆ ಸಹಾಯಮಾಡಿದ ಪ್ರತಿಯೊಬ್ಬ ಮಹನೀಯರಿಗೂ ಧನ್ಯವಾದಗಳನ್ನರ್ಪಿಸಲಾಯಿತು. ತಾ 18-4-48ರಲ್ಲಿ ಸಂತೋಷದ ಫಲಹಾರ ಕೂಟವು ಶ್ರೀ. ಯು ಜಿ. ಪುತ್ತಿಯವರ ಅಧ್ಯಕ್ಷತೆಯಲ್ಲಿಯೇ ಜರಗಿ ನಾಟಕ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳನ್ನರ್ಪಿಸಿ ಸಭೆಯ ಭಾವಚಿತ್ರವನ್ನು ತೆಗೆಯಲಾಯಿತು.

ಬೆಂಗಳೂರು

ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ—ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ಪ್ರಾಂತ ಸಮಿತಿಯವರು ಶ್ರೀ ಕಡಂಗೋಡ್ಲು ಶಂಕರಭಟ್ಟರಿಗೆ ತಾ ೧೫ರಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು. ಶ್ರೀ ಭಟ್ಟರು ಅಲ್ಲಿ ಕೆಲವು ಮಾತುಗಳನ್ನಾಡುತ್ತಾ ಹಿರಿಯ ಕಿರಿಯ ಸಾಹಿತಿಗಳೊಳಗಿರಬೇಕಾದ ಸಂಬಂಧವನ್ನು ವಿವರಿಸಿ ಹೇಳಿದರು.

ಮದ್ರಾಸು

ರೇಡಿಯೋ ಭಾಷಣ—ಶ್ರೀ ಕಡಂಗೋಡ್ಲು ಶಂಕರಭಟ್ಟರು ಏಪ್ರಿಲ್ ೧೬ರಲ್ಲಿ ಮದ್ರಾಸು ರೇಡಿಯೋ ಕೇಂದ್ರದಿಂದ 'ನಿಸರ್ಗದರ್ಶನ' ಎಂಬ ವಿಷಯದಲ್ಲಿ ಭಾಷಣ ನಿತ್ತರು.

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ
R. I. A. 552/48 O. P. 92/47
ಸರಸ್ವತಿ ಅಮ್ಮ—ಅರ್ಜಿದಾರಳು
ಎದ್ರಿರು ಯಿಲ್ಲಾ.

ಅರ್ಜಿದಾರಳ ಗಂಡ ಮೃತ ವೆಂಕಪ್ಪಯ್ಯನಿಗೆ ಹೊರಗಿನಿಂದ ಬರತಕ್ಕ ಹಣಗಳನ್ನು ವಸೂಲು ಮಾಡುವರೆ ತಾನು ವಾರಿಸ್‌ದಾರಳೆಂತ ಕೊಟ್ಟ ಅರ್ಜಿಯು ತಾ 2-6-48ಕ್ಕೆ ಮುಟ್ಟಿದೆ. ಯಾರಾದರೂ ಆಕ್ಷೇಪಯಿದ್ದವರು ಸದ್ರಿ ದಿವ್ಸ ಹಗಲು 11 ಗಂಟೆಗೆ ಸ್ವತಹಾ ವ ವಕೀಲರದ್ವಾರಾ ದಾಖಾಸ್ತಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡಿಸಿಯದೆ.

G. Sanjiva Rao
Vakil for Petr.
Kundapur Date 16-4-48

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ:
ಕಲ್ಮಾಂಜಿ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯರೋಗ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ತಕ್ಕಂತಹ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಜಾಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್.(3)ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರಪ್ರದ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುತ್ತವೆ, ಅಂದರೆ ಕೇವಲ ೪ ರೂಪಾಯಿಗಳಿಂದ ಒಂದು ಬಾಣಂತಿತನಕ್ಕೆ ಸಾಕಾಗುವದು ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು— ಡಾ। ಬಿ. ಕೆ ಶಿವರಾಮ ರಾವ್, ಕಿಂಜಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—
ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging,
KATAPADI, S K.

(೩ನೇ ಪುಟದಿಂದ).

ಮುಖ್ಯ ಬೆಳೆ ಕಟಾವಿನ ಉತ್ಪನ್ನವು ಹೆಚ್ಚು ಕಡಿಮೆ ಸರ್ವಸಾಮಾನ್ಯವಾಗಿತ್ತು. ೨ನೇ ಬೆಳೆಕಟಾವು೪೮ರ ಫೆಬ್ರವರಿಯಲ್ಲಾಗುವ ನಿರೀಕ್ಷೆಯಿತ್ತು. ನಿಯಂತ್ರಣ ರದ್ದಾದುದು ಅದಕ್ಕಿಂತ ಸರೀ ಆರು ವಾರಗಳಿಗ ಮೊದಲೇ. 1947-48ರ ಅಂದಾಜು ಉತ್ಪನ್ನವು 2,26,000 ಟನ್ನುಗಳೆಂದಿದ್ದರೂ, 40,000 ಟನ್ನು ಧಾನ್ಯವನ್ನಷ್ಟೇ ಸಂಗ್ರಹಿಸಿಕೊಳ್ಳುವ ಗುರಿಯನ್ನಿಟ್ಟುಕೊಳ್ಳಲಾಗಿತ್ತು. ಹೀಗೆ ಗುರಿಯಾಗಿ ಇಟ್ಟುಕೊಂಡದ್ದೇ ಉತ್ಪನ್ನವಾಗಿದ್ದುದರ1/5ನೇ ಅಂಶಕ್ಕೂ ಕಡಿಮೆಯುದನ್ನು. ಆದರಲ್ಲೂ ಸಂಗ್ರಹಿಸಿಕೊಂಡುದು 32,000 ಟನ್ನುಗಳನ್ನು ಮಾತ್ರ. ಇದು ಹಿಂದಿನ ವರುಷದ ಸಂಗ್ರಹಕ್ಕಿಂತ ಕಡಿಮೆ. ಆದ್ದರಿಂದ ಉತ್ಪನ್ನವೆಲ್ಲವನ್ನೂ ಸಂಗ್ರಹಿಸಿಕೊಳ್ಳಲಾಯಿತೆಂಬುದು ಸರಿಯಲ್ಲ; ನಿಯಂತ್ರಣ ರದ್ದತಿಯನ್ನು ಕಣ್ಮುಚ್ಚಿಕೊಂಡು ಜ್ಯಾರಿಗೆ ತರಲಾಯಿತೆಂಬುದು ಕೂಡಾ ಸರಿಯಲ್ಲ. ದ.ಕ.ಜಿಲ್ಲೆಯಲ್ಲಿ ಅದನ್ನು ತೆಗೆದುಹಾಕುವ ಹೊತ್ತಿನಲ್ಲಿ 23,963ಟನ್ ಅಕ್ಕಿ,77 ಟನ್‌ಗೋಧಿ,7ಟನ್ ಮೆಕ್ಕೇಜೋಳ ದಾಸ್ತಾನಿತ್ತು. ನಿಯಂತ್ರಣ ರದ್ದತಿಯ ನಂತರದ ಯಾವ ವಾರದಲ್ಲೂ ಆ ಜಿಲ್ಲೆಯ ದಾಸ್ತಾನು 10000 ಟನ್ನುಗಳಿಗಿಂತ ಕಡಿಮೆಯಿದ್ದುದಿಲ್ಲ. ಕಂಟ್ರೋಲು ಪದ್ಧತಿಯ ಕಾಲದಲ್ಲಿದ್ದ ಸಂಗ್ರಹವು ಎರಡು ತಿಂಗಳುಗಳಿಗೆ ಸಾಕಾಗುವ ನಿರೀಕ್ಷೆಯಿತ್ತು. ಹೀಗಿದ್ದಮೇಲೆ ಸಂಗ್ರಹದ ಕೊರತೆಯಿದ್ದಾಗಲೇ ನಿಯಂತ್ರಣವನ್ನು ರದ್ದುಮಾಡಲಾಯಿತೆಂಬುದು ಸರಿಯಲ್ಲ

ರಕ್ಷಣಾ ಅಂಗಡಿಗಳು

ನಿಯಂತ್ರಣ ರದ್ದತಿಯ ಸ್ವಾಭಾವಿಕ ಪರಿಣಾಮವಾಗಿ ಬೆಲೆಯೇರುವದೆಂದು ಸರಕಾರಕ್ಕೆ ಗೊತ್ತೇ ಇತ್ತು. ಆದ್ದರಿಂದ ಆಗತ್ಯತೋರುವಷ್ಟು ರಕ್ಷಣಾ ಅಂಗಡಿಗಳನ್ನು ಹಳ್ಳೀವಲಯಗಳಲ್ಲಿ ತೆರೆಯತಕ್ಕದ್ದೆಂದು ದ.ಕ.ದ ಕಲೆಕ್ಟರರ ಸಮೇತ ಎಲ್ಲಾ ಜಿಲ್ಲಾ ಕಲೆಕ್ಟರರಿಗೂ ಅಜ್ಞಾಕೊಟ್ಟಿತ್ತು. ನೆಳೆ ಕಟಾವಿನ ಕಾಲ ಸಮೀಪಿಸುತ್ತಿದ್ದುದರಿಂದ ದಕ್ಷಿಣ ಕನ್ನಡದ ಕಲೆಕ್ಟರರು ಅಂತಹ ಅಂಗಡಿಗಳನ್ನು ತೆರೆಯಲು ಮುಂದಾಗಲಿಲ್ಲ. ಆದರೆ ದ್ವಿತೀಯ ಬೆಳೆಯು ಹಾಳಾಗಿ, ಆಹಾರಾಭಾವವು ತೋರಿಬಂದೊಡನೆ ರಕ್ಷಣಾ ಅಂಗಡಿಗಳನ್ನು ತೆರೆಯುವ ವ್ಯವಸ್ಥೆಯನ್ನು ಕೈಕೊಳ್ಳಲಾಯಿತು. 276 ಹಳ್ಳಿಗಳಿಗಾಗಿ 163 ಅಂಗಡಿಗಳೀಗ ತೆರೆಯಲ್ಪಟ್ಟಿವೆ; ಆಗತ್ಯಬಿದ್ದರೆ ಇನ್ನೂ ಹೆಚ್ಚು ಅಂಗಡಿಗಳನ್ನು ತೆರೆಯಲಾಗುವದು. ಪ್ರಾಯಸ್ಥನೊಬ್ಬನಿಗೆ 6 ಔನ್ಸಿನ ರೇಶನ್ ಸಾಕಾಗದೆಂಬುದು ಸರಕಾರಕ್ಕೆ ಗೊತ್ತಿದೆ. ಆದರೆ ರೇಶನ್ ರದ್ದಾಗಿರುವಲ್ಲಿ ಸಿಕ್ಕಿದಲ್ಲಿಂದ ಕೊಂಡುಕೊಳ್ಳುವ ಸ್ವಾತಂತ್ರ್ಯ ಕೂಡಾ ಜನರಿಗಿದೆ. ತಾವು ಜೋಳವನ್ನು ಸ್ಪರ್ಶಿಸುವುದಿಲ್ಲವೆಂದೂ ಹಂದಿಗಳಿಗೂ ಜಾನುವಾರುಗಳಿಗೂ ಹಾಕುತ್ತೇವೆಂದೂ ದಕ್ಷಿಣ ಕನ್ನಡದ ಕಲೆಕ್ಟರರು ತಿಳಿದುಕೊಳ್ಳುವಂತೆ ಅಲ್ಲಿಯ ಜನರು ಮಾಡಿದ್ದಾರೆ.

ಕಪುದಾಗುವ ಧಾನ್ಯ

ಜನರು ಉಪವಾಸ ಬೀಳದಂತೆ ಮಾಡಬೇಕೆಂಬುದಕ್ಕಾಗಿ ನಾವು ದಕ್ಷಿಣ ಅಮೇರಿಕೆಯಿಂದ ಜೋಳವನ್ನು ಪಡಕೊಂಡಿದ್ದೇವೆ ನಿಜಕ್ಕೂ ಜೋಳದಲ್ಲಿ ಅಕ್ಕಿಗಿಂತ ಹೆಚ್ಚಿನ ಆಹಾರ ಯೋಗ್ಯತೆಯಿದೆ. 3 ಔನ್ಸ್ ಜೋಳವು 8 ಅಥವಾ 10 ಔನ್ಸ್ ಅಕ್ಕಿಗೆ ಸಮಾನ. ಅಕ್ಕಿಯಾಹಾರದ ಅಭ್ಯಾಸವಿದ್ದು ಪ್ರಥಮತಃ ಜೋಳವನ್ನು ತಿರಸ್ಕರಿಸುತಿದ್ದ ಕ್ಷೇತ್ರಗಳೀಗ ಹೆಚ್ಚು ಹೆಚ್ಚಾಗಿ ಜೋಳವನ್ನು ಉಪಯೋಗಿಸುತ್ತಿವೆಯೆನ್ನಲಾನಂದವಾಗುತ್ತದೆ. ಇಂತಹ ಕಡೆಗಳಲ್ಲೀಗ ದಿನಕ್ಕೆ 3000 ಟನ್ನುಗಳಷ್ಟು ಜೋಳ ಖರ್ಚಾಗುತ್ತಿದೆ. ಆದಿಭಾಗದಲ್ಲಿ ಜೋಳದ ಉಪಯೋಗವು ಪ್ರಯಾಸಕರವಾಗಿ ತೋರಿದರೂ, ತಾವು ಒಂದು ಸಂಧಿಗ್ಧಕಾಲವನ್ನು ದಾಟುವುದರಲ್ಲಿದ್ದೇವೆಂದೂ, ಆಹಾರಾಭಾವ ನಿವಾರಣೆಗಾಗಿ ಸರಕಾರವು ವಿಶೇಷ ಬೆಲೆ ತೆತ್ತು ಜೋಳವನ್ನು ಆಮದುಪಡಿಸಿಕೊಳ್ಳುತ್ತಿದೆಯೆಂದೂ ಜನರು ಅರಿತಿರಬೇಕು. ಇದಕ್ಕಾಗಿ ಸರಕಾರವು ಶ್ಲಾಘನೆಗರ್ಹವಿದೆ ಹೊರತು ಟೀಕೆಗಲ್ಲ. ಪಾಕಿಸ್ತಾನದಿಂದ 11000 ಟನ್ ಅಕ್ಕಿಯನ್ನು ದಕ್ಷಿಣ ಕನ್ನಡಕ್ಕಾಗಿ ಕಲ್ಲಿಕೋಟೆಯಲ್ಲೀಗ ಇಳಿಸಲಾಗುತ್ತಿದೆ. ಇನಲ್ಲಾ ತಿಂಗಳುಗಳಲ್ಲೂ ದೊರೆತ ಎಲ್ಲಾ ಅಂಶಗಳನ್ನೂ ಒಂದೋ ದಕ್ಷಿಣ ಕನ್ನಡ ಇಲ್ಲವೇ ಮಲಬಾರಿಗೆ ರವಾನಿಸಲಿದ್ದೇವೆ. ಭಾರತ ಸರಕಾರದ ಪ್ರಕಟಣೆ ಮತ್ತು ಭಾರತ ಸರಕಾರದ ಪ್ರಧಾನಮಂತ್ರಿಯ ಹೇಳಿಕೆಗಳನ್ನೋದಿದವರಿಗೆ, ಆಹಾರಾಭಾವದಿಂದ ಯಾರೊಬ್ಬನನ್ನೂ ಸಾಯಲು ಸರಕಾರವು ಬಿಡುವಂತಿಲ್ಲವೆಂಬುದು ಮನದಟ್ಟಾದೀತು. ಈ ಪ್ರಾಂತ್ಯದಲ್ಲಿ ಮರಣವೇ ಆಗದಂತೆ ನೋಡುವ ಕಾರ್ಯವೇನೂ ಸರಕಾರದ್ದಲ್ಲ. ಆದರೆ ಮರಣದ ಹಾದಿಯಾಗಿರುವ ಹಸಿವು ಪೀಡೆಗವಕಾಶವಿತ್ತಿದ್ದೇವೆ ಎಂಬ ಆರೋಪವನ್ನು ನಾನೊಪ್ಪಿಕೊಳ್ಳಲಾರೆ. ಹಸಿವು ಮರಣದ ಅನುಮಾನವಿದ್ದಲ್ಲಿಂದ 24 ತಾಸುಗಳೊಳಗೆ ಸರಕಾರಕ್ಕೆ ಸುದ್ದಿ ಬಂದೇ ಇರುವುದು. ಮರಣದ ಹೇತುವನ್ನು ತಿಳಿಸಲು ಡಾಕ್ಟರರ ವ್ಯವಸ್ಥೆಮಾಡಲಾಗಿದೆ. ಮಾತನ್ನು ಯಾವ ಮಾರ್ಗದಲ್ಲಿಯೂ ಕೊಂಡುಹೋಗಬಹುದು; ಆದರೆ ಸತ್ಯಸ್ಥಿತಿ ಬದಲಾಗದು.

ದಕ್ಷಿಣ ಕನ್ನಡಕ್ಕೆ ಜೋಳ

ದಕ್ಷಿಣ ಕನ್ನಡದ ಮೇಲೆ ಮಾತ್ರವೇ ಜೋಳವನ್ನು ಹೊರಿಸಿದ್ದಾರೆಂಬರ್ಥದ ಮಾತುಗಳು ಬಂದಿವೆ. ಇತರ ಜಿಲ್ಲೆಗಳಿಗಾದ ಸರಬರಾಯಿಗಳೊಡನೆ ಹೋಲಿಸಿದರೆ ದ. ಕ ಕ್ಕೆ ಕಳುಹಿಸಿದ ಜೋಳದ ಪರಿಮಾಣವು ಬಹಳ ಕಡಿಮೆಯೆಂಬುದು ತಿಳಿದೀತು. ಭಾರತ ಸರಕಾರವು ವಾಗ್ದಾನಮಾಡಿದ 400000 ಟನ್ ಆಹಾರಧಾನ್ಯಗಳ ಪೈಕಿ 1,50,000 ಟನ್ನುಗಳು ಮಾತ್ರ ಅಕ್ಕಿಯ ರೂಪದಿಂದ ಬರಲು ಸಾಧ್ಯವಾಯಿತು. ಉಳಿದುವೆಲ್ಲವೂ ಜೋಳವೇ. ಆದ್ದರಿಂದ ಕೊರತೆಯುಳ್ಳ ಇತರ ಜಿಲ್ಲೆಗಳಂತೆಯೇ ದಕ್ಷಿಣ ಕನ್ನಡವೂ ನ್ಯಾಯಪ್ರಕಾರ ಜೋಳದ ಪಾಲನ್ನು ಪಡೆಯಬೇಕಾಗಿದೆ. ಇತ್ತೀಚೆಗೆ ಹಸುಗೇ ಪರಿಮಾಣವನ್ನು 8 ಔನ್ಸಿಗೇರಿಸಲಾಗಿದೆ. ಆ ಪೈಕಿ 5 ಔನ್ಸ್ ಜೋಳ, ಮೆಕ್ಕೇ ಜೋಳ ಇತ್ಯಾದಿಗಳು; ದಕ್ಷಿಣ ಕನ್ನಡದ ಮಟ್ಟಿಗೆ ಅಕ್ಕಿಯ ಅಂಶವನ್ನು 4 ಔನ್ಸಿನಷ್ಟು ಹೆಚ್ಚಿಸಲಾಗಿದೆ. ಪುನಃ 10000 ಟನ್ ಅಕ್ಕಿಯನ್ನು ದ. ಕ. ಜಿಲ್ಲೆಗೆ ಕೊಡಲಾಗಿದ್ದು ಅದಿನ್ನು ಎರಡು ಮೂರು ದಿನಗಳೊಳಗೆ ಅಲ್ಲಿಗೆ ಮುಟ್ಟಲಿದೆ. ಜೋಳವನ್ನು ಹಿಟ್ಟಾಗಿ ಮಾರ್ಪಡಿಸುವಂತೆ ಎಲ್ಲಾ ಕಲೆಕ್ಟರರಿಗೂ ತಿಳಿಸಲಾಗಿದೆ. ಸತ್ಯಸ್ಥಿತಿಯೆಂದರೆ ಪ್ರಾಂತ್ಯದ ಬೇರಾವುದೇ ಅಭಾವ ಕ್ಷೇತ್ರಗಳಿಗಿಂತಲೂ ದಕ್ಷಿಣ ಕನ್ನಡದ ಕಡೆಗೆ ಹೆಚ್ಚಿನ ರಿಯಾಯಿತಿಯನ್ನು ತೋರಿಸಿದ್ದೇವೆ. 1947ನೇ ದಶಂಬರದಲ್ಲಿ ಮಲಬಾರಿನ ಧಾನ್ಯಸಂಗ್ರಹ ಸ್ಥಿತಿಯೊಮ್ಮೆ ಭೀಕರಾವಸ್ಥೆಗಿಳಿಯಿತು. ಆ ಕಾಲದಲ್ಲಿ ದಕ್ಷಿಣ ಕನ್ನಡದಲ್ಲಿ 24000 ಟನ್ನು ಅಕ್ಕಿ ಸಂಗ್ರಹವಿತ್ತು. ಆದ್ದರಿಂದ ಆ ಪೈಕಿ 10,000ಟನ್ನನ್ನು ಮಲಬಾರಿಗೆ ಕಳುಹಿಸಬೇಕೆಂದು ಆಜ್ಞಾಪಿಸಿದ್ದರೂ ನಿಜಕ್ಕೂ ಅಲ್ಲಿಂದ ಹೋಗಿದ್ದುದು 6855 ಟನ್ನುಗಳು. ವರುಷದಾದಿ ಭಾಗದಲ್ಲಿ ದಕ್ಷಿಣ ಕನ್ನಡವೂ ಅಂತಹ ಕಷ್ಟದಲ್ಲಿದ್ದಾಗ ಅದೇ ರೀತಿ ಮಲಬಾರಿನಿಂದ ಅಲ್ಲಿಗೆ ಅಕ್ಕಿಯನ್ನು ರವಾನಿಸಿದ್ದಿದೆ. ಅಂದ ಮೇಲೆ ದ. ಕ. ಜಿಲ್ಲೆ ಕೂಡಾ ಅದೇ ರೀತಿ ಕಷ್ಟಕಾಲದಲ್ಲಿ ಮಲಬಾರಿಗೆ ಸಹಾಯವಾಗುವುದು ಬೇಡವೇ?"

ಕೊನೆಯಲ್ಲಿ ಡಾ|| ರಾಜನರು ಕಾಸರಗೋಡು ಮತ್ತು ಮಂಗಳೂರಿಗೆ ಮೊನ್ನೆ ಸಿವಿಲ್ ಸಪ್ಲೈಸ್ ಕಮಿಶನರರು ಹೋಗಿಬಂದಿದ್ದಾರೆಂದೂ ಜಿಲ್ಲಾ ಆಹಾರ ಸಮಿತಿಯೊಡನೆ ಪರ್ಯಾಲೋಚಿಸಿದ್ದಾರೆಂದೂ, ರಕ್ಷಣಾ ಅಂಗಡಿಗಳನ್ನು ಪರೀಕ್ಷಿಸಿ ಸಮಾಧಾನಗೊಂಡಿದ್ದಾರೆಂದೂ ತಿಳಿಸಿದರು. ದಕ್ಷಿಣ ಕನ್ನಡದ ಸ್ಥಿತಿಯ ಕಡೆಗೆ ತನ್ನ ಲಕ್ಷ್ಯವನ್ನೆಳೆದುದಕ್ಕಾಗಿ ಶ್ರೀ|| ಕಾರಂತರಿಗೆ ಧನ್ಯವಾದಕೊಪ್ಪಿಸು ಸರಕಾರದ ಧಾನ್ಯ ಸಂಗ್ರಹವೀಗ ಹೆಚ್ಚಿದೆಯೆಂದೂ 100,000 ಟನ್ ಅಕ್ಕಿ ಮತ್ತು ಹೇರಳ ಜೋಳವೀಗ ದಾಸ್ತಾನಿದೆಯೆಂದೂ ಭರವಸೆಯಿಂಬಾಡಿದರು. ಮುಂದಿನ ಕಷ್ಟಕರವಾದ ಕೆಲವು ತಿಂಗಳುಗಳನ್ನು ಸುಗಮವಾಗಿ ದಾಟಬಹುದೆಂಬ ಅಗತ್ಯವಿದ್ದ ಎಲ್ಲಾ ಸಹಾಯಗಳನ್ನೂ ದಕ್ಷಿಣ ಕನ್ನಡಕ್ಕೆ ಕೊಡಲಾಗುವದೆಂಬ-ಭರವಸೆಯನ್ನಿತ್ತರು.

ಶ್ರೀ ಕಾರಂತರ ಉತ್ತರ

ಶ್ರೀ ಕಾರಂತರು ಉತ್ತರ ಕೊಡುತ್ತಾ ಆಹಾರ ಪರಿಸ್ಥಿತಿಯು ಭೀಕರವಿದೆಯೆಂಬುದನ್ನೊಪ್ಪಿ 'ಆದರೆ ದಕ್ಷಿಣ ಕನ್ನಡದಲ್ಲೂ ಬೇರೆ ಕಡೆಗಳಲ್ಲೂ ವ್ಯವಸ್ಥೆಯಲ್ಲಿ ದೋಷಗಳಿವೆ ಎಂಬುದನ್ನು ಮರೆಯಬಾರದು'.ಎಂದರು. 'ಬೇಕಾಯಿದೇಶೀರ ಅಕ್ಕಿಯ ರವಾನೆಯ ಸುದ್ದಿಯನ್ನು ಅಧಿಕಾರಿಗಳಿಗೆ ಮುಟ್ಟಿಸಿದಾಗ ಅವರೇನನ್ನೂ ಮಾಡದೆ ಸುಮ್ಮಗಿದ್ದುದಿದೆ. ಅಕ್ಕಿ ಕೊಂಡೊಯ್ಯುವ ಲೋರಿಗಳನ್ನು ತಡೆದು ನಿಲ್ಲಿಸಲು ಸದಸ್ಯರ ಬೆಂಬಲಕ್ಕೆ ಪೋಲಿಸರಿಲ್ಲ. ಇವೆಲ್ಲಕ್ಕೂ ಹಸುಗೇ ಆಡಳಿತೆಯ ದೌರ್ಬಲ್ಯಗಳೇ ಕಾರಣ. 3ಔನ್ಸಿನಷ್ಟ ಅಕ್ಕಿಯ ಪರಿಮಾಣವನ್ನು 4ಔನ್ಸಿಗೆ ಏರಿಸಿದ ಮಾತ್ರಕ್ಕೆ ಜನರೇನೂ ಉಪಕೃತರಾಗುವಂತಿಲ್ಲ. ಇನ್ನೆರಡೌನ್ಸ್ ಹೆಚ್ಚಿಗೆ ಕೊಡುವ ಆಶ್ವಾಸನೆ ಬಂದರೆ ಮಾತ್ರ ಸಮಾಧಾನವಾಗಬಹುದು. ಜೋಳವು ಒಳ್ಳೆಯದೆಂಬುದನ್ನು ಹೇಳುವದೇನೋ ಚಂದ. ನಮ್ಮ ಮಂತ್ರಿಗಳು ಎಷ್ಟು ಜೋಳವನ್ನು ಉಪಯೋಗಿಸುತಿದ್ದಾರೆಂಬುದನ್ನು ನಾನು ತಿಳಿಯಲಿಚ್ಛಿಸುತ್ತೇನೆ" ಎಂದು ಶ್ರೀ| ಕಾರಂತರು ಹೇಳಿದಾಗ, ತಾನು ಜೋಳದಿಂದ ಮಾಡಿದ ಬ್ರೆಡ್ಡನ್ನೇ ಉಪಯೋಗಿಸುತಿದ್ದೇನೆಂದೂ ಅಕ್ಕೀ ಕಾರ್ಡನ್ನೇ ಪಡಕೊಂಡಿಲ್ಲವೆಂದೂ ಡಾ| ರಾಜನರೆಂದರು. ಕೂಡಲೇ ಶ್ರೀ. ಕಾರಂತರು ಮರುನುಡಿದರು:- 'ಡಾ| ರಾಜನರಿಗೆ ತನ್ನ ಸ್ವಂತ ಆಸ್ತಿಯ ಉತ್ಪನ್ನ ಅಕ್ಕಿಯನ್ನು ಪಡೆಯಲು ಸಾಧ್ಯವಿರುವುದರಿಂದ ಅವರು ಅಕ್ಕೀ ಕಾರ್ಡನ್ನೇ ಪಡೆದಿಲ್ಲ. ದಕ್ಷಿಣ ಕನ್ನಡದಲ್ಲೀಗ ನಡೆಯುತ್ತಿರುವ ಕಳ್ಳ ವಹಿವಾಟನ್ನು ನಿಲ್ಲಿಸಬೇಕೆಂದೇ ಸರಕಾರದೊಡನೆ ನನ್ನ ವಿಜ್ಞಾಪನೆ. ನನ್ನ ದೋಷಾರೋಪಣೆಯು ದುರಾಡಳಿತೆಯ ಮೇಲೆ ಮಾತ್ರ. ತಂಜಾವೂರಿನಲ್ಲಿ ನಿಶ್ಚಿತಧಾರಣೆಗೂ ಕಡಿಮೆ ಬೆಲೆಯಲ್ಲಿ ಒಳ್ಳೇ ಅಕ್ಕಿ ಸಿಕ್ಕುತ್ತಿದೆ ಎಂದು ತಿಳಿದುಬರುತ್ತಿದೆ''

ಇಷ್ಟರಲ್ಲಿ ಈ ಸಂಬಂಧದ ಸಭೆ ಮುಕ್ತಾಯಗೊಂಡಿತು.

ನಮ್ಮ ದಂತ ಮಂಜನ
जय हिंद दंतमंजन
ಜಯಹಿಂದ ದಂತಮಂಜನ
कर्नाटक आयुर्वेद विद्यापीठ फार्मसी बेलगांम.
ಎಲ್ಲಾ ತರದ ದಂತರೋಗಗಳನ್ನು, ಸೆಟ್ಟಿಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ. ಬೆಳಗಾಂವ

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶೆಲ್ ರೂ.6/ [ವಿ. ಪಿ. ಖರ್ಚು ಪ್ರತ್ಯೇಕ]
Mrs. P. DEVEE. (N. J.)
Tollygunge CALCUTTA,
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

WANTED

Two Secondary Grade Trained Lady Teachers for the Airody St. Antonys' Girls' School, Sastan Post, (S. Kanara) on Rs. 45/- per month.

Apply sharp to the Manager'

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗತ್ರಿಮುಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನು ಸಾಧಿಸುತ್ತಿರುವುದು.

The Moolky Bank Ltd.
Moolky, S K.

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ ಹಲ್ಲು ಪುಡಿ

ಒಂದು ತೊಲೆ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಪಿ ಲಿಮಿಟೆಡ್, ಕಾಸರಗೋಡು, ದ. ಇಂಡಿಯಾ.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾಡಿದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮೃದುವ ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

WANTED

Applications are invited from Higher Elementary Trained Teachers whose age should not be more than 30 years on 1-7-'48 for employment in the schools under the management of the Labour Department in South Kanara District. The scale of pay will be Rs. 30-1-50 with the usual dearness allowance. Preference will be given in the following order:

1. Harijans or the members of the eligible communities who are ex-army men or women.
2. Harijans or members of the eligible communities who are other than ex-army personnel.
3. Other communities who are ex-army personnel
4. Other communities who are other than ex-army personnel.

Applications should reach the District Harijan welfare Officer, South Kanara, Mangalore, by 31-5-'48 together with (1) the training Certificate and (2) discharge certificate in the case of ex-army.

Sd. **S. R. Kaivar,**
Collector,
S. Kanara Collector's Office,
MANGALORE.

Date 16—4—48

ಮದ್ರಾಸ್ ಅಳಿಯ ಸಂತಾನ ಮಸೂದೆಯು

ಪ್ರತಿಗಳು 0 2 0 ಬೆಲೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಿಗುತ್ತವೆ. ಅಥವಾ 0 3 0 ಸ್ಟಾಂಪನ್ನು ಕಳಿಸಿದ್ದಲ್ಲಿ ಪ್ರತಿಗಳು ಕಳಿಸಲ್ಪಡುತ್ತವೆ.

1 ಕೆನರಾ ಪ್ರಿಂಟಿಂಗ್ ವರ್ಕ್ಸ್, ಮಂಗಳೂರು
2 ನವಯುಗ ಪ್ರೆಸ್, ಉಡುಪಿ.

ಅಂಡವಾಯು, ಅಂಡವ್ಯಾಧಿ, ಹ್ಯಾಲೇರಿಯಾ, ಇತ್ಯಾದಿಗಳಿಗೆ ಲೇಪನಬಗ್ಗೆ ದಿವ್ಯೌಷಧ.

1 ರಾತ್ಲಿಗೆ ರೂಪಾಯಿ 25/, ½ ರಾತ್ಲಿಗೆ ರೂಪಾಯಿ 12-8-0, ¼ ರಾತ್ಲಿಗೆ ರೂಪಾಯಿ 6-4-0.
ಕುಷ್ಠ ರೋಗಕ್ಕೆ ಶೀಸೆಯೊಂದರ ರೂಪಾಯಿ 3/-.

ಎಸ್. ಪಿ. ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ, 9.
S. P. Pharmaceuticel Works.
Calcutta 9.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕ್ಷಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಸೆರಗು ಹೋಗುತ್ತಿದ್ದರೆ, ಕೊಲಿಕಟ್ಟುಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

The Vijaya Bank Limited.

All our good wishes for a happy and prosperous new yer

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಿ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕವಟೇಕಾರ, ಕೆಮಿಸ್ಟ, ಹಾವೇರಿ ಟ್ಯಾಕಿ.

Nambiar's

ARYA VAIDYA SALA
UDIPI
Ideal House for Ayurvedic Treatment.

T. N. Kelu Nambiar,
Vaidya

Regd. No. M. 3618

6-5-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

ವರ್ಷ ೨೮ } ವಾರ ೩೫

Vol. 28 } No. 35

ಹಿಂದೀಯರಿಗೆ ಪ್ರಜಾಸತ್ತೆ ಸಲ್ಲದೆ?

ಭಾರತದ ರಾಜಕೀಯ ಸ್ಥಿತಿಯಲ್ಲಿ–ಭಾರತೀಯರ ಇಂದಿನ ರಾಜಕೀಯ ಮನೋವೃತ್ತಿಯಲ್ಲಿ–ಪ್ರಜಾಪ್ರಭುತ್ವ ಪದ್ಧತಿಗೆ ಸ್ಥಾನವಿಲ್ಲವೆ? ಸರ್ವಾಧಿಕಾರೀ ಕ್ರಮ ಕೊನೆಯ ಪಕ್ಷ ಹಿಂದೀರಾಜಕೀಯವೊಂದು ಮಟ್ಟಕ್ಕೆ ಬರುವ ವರೆಗಾದರೂ ಯೋಗ್ಯನೊಬ್ಬನಿಗೆ ನಿರಂಕುಶಾಧಿಕಾರ ಕೊಡುವುದೇ ಯೋಗ್ಯವೆ?

ಮೇಲಿನ ಪ್ರಶ್ನೆಯೊಂದು ಹಲವು ವಿಚಾರಿಗಳ ತಲೆಯಲ್ಲಿ ಸುತ್ತುತ್ತಿದೆ. ಪ್ರಜಾಸತ್ತೆಯ ಪರಮಭಕ್ತರು ಕೂಡಾ ಹಿಂದೀ ರಾಜಕೀಯದಲ್ಲೆದ್ದಿರುವ ಬೇಯ ಸ್ಪರ್ಧೆಗಳನ್ನೂ ಅಧಿಕಾರಲಾಲಸೆಗಳನ್ನೂ ಕಂಡು ಯಾವುದಾದರೊಂದು ರೀತಿಯ ಸರ್ವಾಧಿಕಾರವೇ ಈ ರೋಗಕ್ಕೊಂದು ಚಿಕಿತ್ಸೆಯಾಗಬಲ್ಲುದೋ ಏನೋ ಎಂದು ಚಿಂತಿಸಹತ್ತಿದ್ದಾರೆ.

ಆದರೆ ಸತ್ಯಸ್ಥಿತಿಯೇನು? ಹಿಂದೀಯರ ಮನೋವೃತ್ತಿಯು ಪ್ರಜಾಪ್ರಭುತ್ವ ನೀತಿಯ ಕಾಲುವೆಯತ್ತ ಹರಿದಷ್ಟು ಬೇರಾವ ಪದ್ಧತಿಯ ಕಡೆಗೂ ಒಸರಿಲ್ಲ; ಪ್ರಜಾಸತ್ತಾತ್ಮಕ ನೀತಿಯು ಹುಟ್ಟು ಸ್ವಭಾವದಲ್ಲೇ ಉಡಕವಾಗಿರುವ ಒಂದು ಜನಾಂಗವು ಲೋಕದಲ್ಲಿದೆಯಾದರೆ, ಅದು ಹಿಂದೀಯರೆಂದು ಮನೋಶಾಸ್ತ್ರಜ್ಞರನ್ನಬಹುದು. ಆದರೆ ಅದು ಪ್ರಜಾಪ್ರಭುತ್ವ ಸರಕಾರವನ್ನು . . . ಸ . . ಾಗಿರುವಷ್ಟು ವಿಕಾಸಗೊಂಡಿಲ್ಲ, ಅದಕ್ಕೆ ಕಾರಣವೆಂದರೆ ಅಂತಹ ಅನುಕೂಲತೆ ಮೊನ್ನೆಯ ವರೆಗೂ ಇರದಿದ್ದುದೇ.

ಸುಮಾರು ಎರಡು ಶತಮಾನಗಳ ವರೆಗಿದ್ದ ದಾಸ್ಯವು ಹಿಂದೀಯರ ಹೋರಾಟಗಾರ ಮನೋವೃತ್ತಿಯನ್ನು ಮಣ್ಣಡಿಗೆ ಸೇರಿಸಿಬಿಟ್ಟಿದ್ದಿತು. ಈ ಗುಲಾಮ ಯುಗದ ಕೊನೆಯ ಭಾಗದಲ್ಲಿ ಬ್ರಿಟಿಷರು ಪ್ರಜಾಪ್ರಭುತ್ವಾಧಿಕಾರದ ಕೆಲವಂಶಗಳನ್ನು ಅನುಕ್ರಮವಾಗಿ ಕೊಡುತ್ತಾ ಬಂದಿದ್ದರೂ, ಅವು ಭಾರತ ರಾಜಕೀಯವನ್ನು ತ್ರಿಶಂಕು ಸ್ಥಾನದಲ್ಲಿರಿಸಿದ್ದುವು ಹೊರತು ಪ್ರಗತಿಪಥಹಿಡಿಸಿರಲಿಲ್ಲ.

ಸ್ವಾಧಿಕಾರ ದೊರೆತಿರುವುದು ಈಗ ಮಾತ್ರವಾದ್ದರಿಂದ ನಾವಿಂದು ಪ್ರಜಾಸತ್ತಾ ಶಿಕ್ಷಣದ ಮೂಲ ಪಾಠವನ್ನಷ್ಟೇ ಅಭ್ಯಸಿಸುತಿದ್ದೇವೆ. ಈವರೆಗಿನ ಕಾಲಗಳಲ್ಲಿ ಗುಲಾಮಗಿರಿ ಮತ್ತು ಸ್ವಾಧಿಕಾರವನ್ನು ಎರಡು ತಾಳಗಳಾಗಿ ಮಾಡಿ ಬಾರಿಸುತ್ತಾ ದಿನದೂಡುವ ಪವ್ಯಾಸವೊಂದೇ ನಮಗೊದಗಿದ್ದರೆ, ಈಗ ಆದಿಭಾಗದಲ್ಲೇ ನಮ್ಮ ಸ್ವಾಧಿಕಾರವನ್ನು ಶಾಂತಿ ಪಾಲನೆಯ ಒರೆಗಲ್ಲಿಗೆ ತಿಕ್ಕಿ ತೋರಿಸಬೇಕಾದ ಪರೀಕ್ಷೆಗೊಳಗಾಗಿದ್ದೇವೆ.

ಅರ್ಥಾತ್ ಪ್ರಜಾಸತ್ತೆಯನ್ನು ಸುಗಮ ಆವಾಹನೆಮಾಡಿಕೊಂಡು ಅನುಷ್ಠಾನದಲ್ಲಿ ತರುವ ಸಂದರ್ಭವು ಇದು ವರೆಗೂ ನಮಗೊದಗಿರಲಿಲ್ಲ. ನಾವು ಸ್ವಭಾವತಃ ಪ್ರಜಾಸತ್ತಾವಾದಿಗಳಿರುವುದರಿಂದಾಗಿಯೆ ಈ ವರೆಗೂ ಅದನ್ನು ಬಿಟ್ಟಿಲ್ಲ. ಇಂತಹ ಸ್ಥಿತಿಯಲ್ಲಿ ಪ್ರಜಾಪ್ರಭುತ್ವ ಪದ್ಧತಿಯ ಬದಲಿಗೆ ಸರ್ವಾಧಿಕಾರೀ ಕ್ರಮವು ನಮ್ಮ ನಡುವೆ ತೂರಲ್ಪಡುತ್ತಿದ್ದರೆ ಅದರ ಪರಿಣಾಮವು ಈಗಿನದಕ್ಕಿಂದ ಶತಪಾಲು ಅಧಿಕವಾಗುತ್ತಿತ್ತೆಂಬುವನ್ನು ಮರೆಯಬಾರದು.

ಇದು ವರೆಗೂ ನಾವು ದುರ್ದೈವಿಗಳೇ–ಈ ಮಟ್ಟಿಗಿಂತಹ ದುರ್ದೈವ ಪ್ರಾಯಶಃ ಪ್ರಪಂಚದ ಯಾವ ರಾಷ್ಟ್ರಕ್ಕೂ ಇಲ್ಲ; ಆದರೆ ಈ ದುರ್ದೈವದ ನಡುವೆಯೂ ನಮ್ಮ ಪಾಲಿಗಿರುವ ಒಂದು ಸುದೈವವು ಪ್ರಾಯಶಃ ಪ್ರಪಂಚದ ಬೇರಾರಿಗೂ ಇಲ್ಲ. ಅದೆಂದರೆ ಈ ಕತ್ತಲೆಯಲ್ಲೂ ಪ್ರಜಾಪ್ರಭುತ್ವದ ದೀವಿಗೆಯನ್ನು ಎತ್ತಿಹಿಡಿಯಬಲ್ಲ–ಎಂತಹ ಆತಂಕಗಳಿದ್ದರೂ ಅಜೇಯರಾಗಿರಬಲ್ಲ–ಕೆಲಮಂದಿ ಧುರೀಣರಾದರೂ ನಮಗಿದ್ದಾರೆಂಬುದು. ಸ್ಪಷ್ಟವಾಗಿ ಹೇಳುವದಾದರೆ ಹಿಂದೀ ಜನಸಾಮಾನ್ಯರ ಮನೋಮಟ್ಟವು ಲೋಕದಿತರ ಕೆಲವು ಜನಾಂಗಗಳೊಡನೆ ಹೋಲಿಸುವಾಗ ಹೇಗೆ ತಗ್ಗಿನಲ್ಲಿದೆಯೋ ಹಾಗೆಯೇ ಹಿಂದೀ ಧುರೀಣರ ಧೈರ್ಯಸ್ಥೈರ್ಯ ಸಂಸ್ಕೃತಿಯು ಪ್ರಪಂಚದ ಯಾವ ರಾಷ್ಟ್ರ ನಾಯಕರೊಡನೆ ಹೋಲಿಸಿದರೂ ಎಲ್ಲಕ್ಕಿಂತ ಮೇಲ್ಮಟ್ಟದಲ್ಲಿದೆ. ಇದೀಗ ಪಾತಾಳಕ್ಕೊತ್ತುವ ದೌರ್ಭಾಗ್ಯದ ನಡುವಿನಿಂದ ನಮ್ಮನ್ನು ಆಕಾಶಕ್ಕೇರಿಸಬಲ್ಲ ಒಂದು ಸೌಭಾಗ್ಯ!

ನಿದರ್ಶನಕ್ಕಾಗಿ ಪ್ರಜಾಪ್ರಭುತ್ವ ನೀತಿಯ ಮಟ್ಟಿಗೆ ನಮ್ಮಲ್ಲಿ ನಡೆಯುತ್ತಾ ಬಂದ ಕೆಲವು ಸ್ಮರಣಾರ್ಹ ಪ್ರಮಾದಗಳನ್ನೂ ಅವುಗಳಿಗಾಗಾಗಲೇ ನಡೆದ ಪರಿಹಾರಗಳನ್ನೂ ಇಲ್ಲಿ ನೆನಪಿಗೆ ತರಲಾಗಿದೆ.

ನರಿಮನ್ ಪ್ರಕರಣ

ಬೊಂಬಾಯಿಯ ವೀರ ನರಿಮನರು ಒಂದು ಕಾಲದಲ್ಲಿ ನೆಹರು, ಸುಭಾಸರ ಪಂಗ್ತಿಯಲ್ಲೇ ರಾಜಿಸುತಿದ್ದ ಉಜ್ವಲ ಭವಿಷ್ಯವುಳ್ಳ ತರುಣ ಮುಖಂಡನನ್ನಿಸಿದ್ದರು. ಆ ಕಾಲದಲ್ಲ ಅವರ ಮೇಲಿಟ್ಟಿದ್ದ ನಿರೀಕ್ಷೆ ನಿಜವಾಗುತಿದ್ದರೆ, ಬೊಂಬಾಯಿ ಪ್ರಧಾನಿ ಅವರಾಗಬೇಕಿದ್ದಿತು. ಈಗಲಂತೂ ವೀರ ನರಿಮನರು ಪಂಡಿತ ನೆಹರುಗಳ ಒಟ್ಟಿನಲ್ಲಿ ಭಾರತ ಸರಕಾರದ ಮಂತ್ರಿಮಂಡಲದಲ್ಲಿ ರಾಜಿಸುತ್ತಿರಬೇಕಿದ್ದಿತು. ಬೊಂಬಾಯಿಗೆ ಸಮುದ್ರ ವಲಯವನ್ನು ಸೇರಿಸಿ ಕಟ್ಟಿದ 'ಬೇಕ್ ಬೇ ಯೋಜನೆ'ಯಲ್ಲಿ, ಬ್ರಿಟಿಷ್ ತಜ್ಞರು ನಡೆಸಿದ ವಂಚನೆಗಳನ್ನೆಲ್ಲಾ ಧೈರ್ಯದಿಂದ ಬೆಳಕಿಗೆಳೆದು, ಆ ಸಂಬಂಧದ ದಾವೆಯನ್ನಿದಿರಿಸಿ 'ಬೇಕ್ ಬೇ ಯೋಜನೆಯ ವೀರ' ಎಂದು ಪ್ರಸಿದ್ಧಿ ಪಡೆದವರವರು. ಆ ದಿನಗಳಲ್ಲಿ ಬೊಂಬಾಯಿಯ ಕಾಂಗ್ರೆಸ್ ನಾಯಕತ್ವವೆಂದರೆ ನರಿಮನರ ವ್ಯಕ್ತಿತ್ವವೇ ಆಗಿದ್ದಿತು. ಇಂತಹ ನರಿಮನರಲ್ಲಿದ್ದ ಕೆಲವು ಖಾಸಗೀ ದೋಷಗಳು ಅವರ ಕಾಂಗ್ರೆಸ್ ಕಾರ್ಯಕಲಾಪಗಳಲ್ಲೂ ಸೇರಿಕೊಂಡವೆಂದು ತೋರಿಬಂದೊಡನೆ, ಕಾಂಗ್ರೆಸಿನ ಪಾರ್ಲಿಮೆಂಟರಿ ನಾಯಕ ಸರ್ದಾರ್ ಪಟೇಲರು ಕ್ರಮಬದ್ಧ ಕಾರ್ಯಗಳಿಗೆ ಕೈಹಾಕಿ ದಿನ ಕಳೆಯುವುದರೊಳಗೆ ನರಿಮನರನ್ನು ಉರುಳಿಸಿ ಶ್ರೀ ಖೇರರನ್ನು ನಾಯಕತ್ವಕ್ಕೇರಿಸಲು ಹಿಂಜರಿಯಲಿಲ್ಲ. ಆ ಸಂಬಂಧವಾಗಿ 'ನರಿಮನ್ ಪ್ರಕರಣ' ಎಂಬ ಹೆಸರಿನಿಂದ ಕೆಲಕಾಲ ನಡೆದಿದ್ದ ಆಂದೋಲನವು ಹೆಚ್ಚಿನವರಿಗೆ ನೆನಪಿರಬಹುದು. ಇದರಿಂದ ನರಿಮನರಂತಹ ಧೀರ ನಾಯಕನ ತೇಜೋವಧೆ ಮಾಡಿಯಾದರೂ ಪ್ರಜಾಸತ್ತಾ ರೀತಿ ಹಾಗೂ ಕಾಂಗ್ರೆಸ್ ನೀತಿಯನ್ನು ರಕ್ಷಿಸುವ ಕೈನಮ್ಮಲ್ಲಿದೆಯೆಂಬ ಹೆಗ್ಗಳಿಕೆಯನ್ನು ಪಡುವಂತಾಯಿತಲ್ಲದೆ ರಾಷ್ಟ್ರವು ಲಜ್ಜಿಸುವಂತಾಗಲಿಲ್ಲ. ಹಾಗೆ ಹಿಂದೆ ಬಿದ್ದ ವೀರ ನರಿಮನರು ಆ ನಂತರ ಬಹುತೇಕವಾಗಿ ರಾಜಕೀಯದಿಂದಲೇ ಅದೃಶ್ಯರಾಗಿದ್ದಾರೆ. ಅದರೆ ಒಂದು ತತ್ವಪಾಲನೆಯಾದ ಲಾಭದಿದಿರಲ್ಲಿ ನರಿಮನ್‌ರ ಅಭಾವದ ನಷ್ಟ ಅಗಣ್ಯ.

ಖರೆ ಪ್ರಕರಣ

ಒಮ್ಮೆ, ಮಧ್ಯ ಪ್ರಾಂತ್ಯದ ಕಾಂಗ್ರೆಸ್ ಪ್ರಧಾನ ಮಂತ್ರಿಯಾಗಿದ್ದ ಡಾ| ಎನ್. ಬಿ. ಖರೆಯವರು ಪ್ರಜಾಸತ್ತಾತ್ಮಕ ಪಕ್ಷವಿಧೇಯತೆಯ ಬದಲಿಗೆ ಸರ್ವಾಧಿಕಾರೀ ಸ್ವೇಚ್ಛಾವರ್ತನೆಗೆ ತೊಡಗಿದೊಡನೆ ಸರ್ದಾರ್ ಪಟೇಲರ ನಾಯಕತ್ವದಲ್ಲಿದ್ದ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡು ಅವರನ್ನು ಪ್ರಧಾನಿ ಹುದ್ದೆಯಿಂದಲೇ ಕಿತ್ತೆಸೆಯಿತು. ಡಾ| ಖರೆಯವರು ಸಮರ್ಥ ಕಾಂಗ್ರೆಸ್ ಕೆಲಸಗಾರರಾಗಿದ್ದರು. ಪ್ರತಿಭೆ ಮತ್ತು ಪ್ರತಿಷ್ಠೆಯುಳ್ಳ ಜನ ನಾಯಕರಿದ್ದರು. ಆದರೆ ಹಿಂದೀಯರಲ್ಲಿ ಸಾಮಾನ್ಯರಿಂದ ಹಿಡಿದು ನಾಯಕರ ವರೆಗಿನ ಎಲ್ಲರಲ್ಲೂ ಸಹಜವಾಗಿ ಹುಟ್ಟಿದ್ದ ಪರಕೀಯ ನಿಯಮ ನಿರ್ಬಂಧಗಳನ್ನು ಕಡೆಗೆಣಿಸುವ 'ಜುರುಮು' ಸ್ವಕೀಯ ನಿಯಮಗಳೊಡನೆಯೂ ಒಮ್ಮೊಮ್ಮೆ ಧಕ್ಕೆ ಹೊಡೆಯುವದಿದೆ; ಸ್ವಾತಂತ್ರ್ಯ ದ್ವಾರಕ್ಕಾಗಿ ನಿರ್ಮಿಸಲ್ಪಟ್ಟಿದ್ದ ಸ್ವಾಭಿಮಾನವೇ ವ್ಯಕ್ತಿಗತ ಅಹಂಕಾರವಾಗಿ ಕೊಳೆತು ಹೋದ ನಿದರ್ಶನಗಳು ಬೇಕಾದ

ವಿಮೆಮಾಡಲಿಕ್ಕೆ, ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:–ಧಾರವಾಡ.

ಪೋಸ್ಟು ಬಾಕ್ಸ್ ನಂಬ್ರ 16, ಉಡುಪಿ.

THE UNITED KARNATAK INSURANCE COMPANY, LIMITED.

ಹಿಂದೀ ಪ್ರಜಾಸತ್ತೆಯ ಕೆಲವು ಪ್ರಮಾದ ಮತ್ತು ಪರಿಹಾರಗಳು

ಸ್ಟಿನೆ. ಮಧ್ಯ ಪ್ರಾಂತ್ಯದ ಡಾ! ಖರೆಯವರು ಕಾಂಗ್ರೆಸ್ ತತ್ವಕ್ಕೂ ಕಾಂಗ್ರೆಸ್ ಹೈಕಮಾಂಡಿನ ಆಜ್ಞೆಗೂ ವಿರುದ್ಧ ಹೋದರು. ಈ ತಪ್ಪಿಗಾಗಿ ಕ್ಷಮೆಯೊದಗಿಸಲು ಅವರ ಮುಖ್ಯವ ಯೋಗ್ಯತೆಯೂ ಸಾಕಾಗಲಿಲ್ಲ. ಕಾಂಗ್ರೆಸಿನ ಶಿಸ್ತುಜಾರಿಗೊಳಗಾದರು. ಆ ವೇಳೆ ಅವರು ಕ್ರಮಶಃ ಆಗಿನ ಸರಕಾರೀ ಪಕ್ಷಪಾತಿ-ಹಿಂದೂ ಭಕ್ತ-ಅಂತೂ ಕಾಂಗ್ರೆಸಿನ ವಿರೋಧ ಪಾಳಯಾನುಯಾಯಿಯಾದರು ಕಾಂಗ್ರೆಸ್ ಮತ್ತು ಗಾಂಧೀಜೀಯನ್ನು ಕಠಿಣ ಮಾತುಗಳಿಂದ ಟೀಕಿಸುವವರ ಮುಂದಾಳುತ್ವ ವಹಿಸಿದರು. ಗಾಂಧಿಜೀಯು ಕೊಲೆಯಾಗುವ ಕಾಲದಲ್ಲಿ ಅಲ್ವಾರ್ ಸಂಸ್ಥಾನದ ಪ್ರಧಾನ ಮಂತ್ರಿಯಾಗಿ ನಿಂತು, ಅದನ್ನು 'ಆರ್. ಯಸ್. ಯಸ್.' ನೊಂದು ಕೇಂದ್ರ ಶಿಬಿರವಾಗಿ ಮಾರ್ಪಡಿಸಿದ್ದರು ಡಾ। ಖರೆ. ಮಹಾತ್ಮಾಜೀಯ ಕೊಲೆಯಲ್ಲಿ ಅಲ್ವಾರ್ ಆರ್. ಯಸ್. ಯಸ್., ಈ ಪ್ರಧಾನಿ ಮತ್ತು ಅಲ್ವಾರ್ ಮಹಾರಾಜರ ಕೈಯಿರಬೇಕೆಂಬ ಅನುಮಾನ ಹುಟ್ಟಿ ಡಾ। ಖರೆ ಸಮೇತ ಹಲವು ಅಲ್ವಾರ್ ಮುಖ್ಯಾಧಿಕಾರಿಗಳು ಡಿಸ್‌ಮಿಸ್ ಮತ್ತು ದಿಗ್ಬಂಧನಕ್ಕೊಳಗಾಗಿ ಈಗ ವಿಚಾರಣೆಯಲ್ಲಿದ್ದಾರೆ. ಈ ಸಂಬಂಧದ ಶೋಧನೆ ಮತ್ತು ತನಿಖೆ ಮುಗಿಯುವ ವರೆಗೆ ಸಂಸ್ಥಾನ ಪ್ರವೇಶಿಸಕೂಡದೆಂದು ಅಲ್ವಾರ್ ಮಹಾರಾಜರನ್ನು ಹಿಂದೀ ಸರಕಾರವು ಹೊರಗಟ್ಟಿ ನಿರ್ಬಂಧ ಹಾಕಿದ್ದರೂ ಈಗ ಅವರು ವ್ಯಕ್ತಿಶಃ ನಿರಪರಾಧಿಗಳೆಂದು ಸಿದ್ಧವಾಗಿರುವುದರಿಂದ ಸಂಸ್ಥಾನದೊಳಗೆ ಬಿಡಲ್ಪಟ್ಟಿದೆ. ಡಾ। ಖರೆಯಂತಹ ಸಂದರ್ಭಸಾಧಕ ಕಠಿಣ .ಹೃದಯಿಗಳು ಕಾರ್ಯಶಕ್ತಿ ಹಾಗೂ ವರ್ಚಸ್ಸಿನ ಬಲದಿಂದ ಒಂದೊಮ್ಮೆಗೆ ಕಾಂಗ್ರೆಸಿನಲ್ಲಿ ಸ್ಥಾನ ಗಳಿಸಿಕೊಂಡರೂ, ಅವರು ಆ ನಂತರವಾದರೂ ತತ್ವವಿಧೇಯರಾಗಿ ಪಾರ್ಟಿಗೆ ಬಾಳಬಲ್ಲರು ಹೊರತು ತತ್ವಭಂಜಕರಾಗಿ ಗೆದ್ದು ಬರಲಾರರೆಂಬುದಕ್ಕೆ ಈ ಪ್ರಕರಣವೊಂದು ನಿದರ್ಶನ. ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಜಖಂಗೊಳಿಸುವವರಿರುವಂತೆಯೇ ಅದಕ್ಕೆ ಚಿಕಿತ್ಸೆ ಮಾಡುವವರಿದ್ದಾರೆ; ಅದನ್ನು ಡೊಕ್ಕುರುಳಿಸುವ ಕಾಲುಗಳಿದ್ದರೆ ಆಧರಿಸಿ ನಿಲ್ಲಿಸುವ ಕೈಗಳೂ ಇವೆ.

ಮದ್ರಾಸ್, ಬಂಗಾಳಾ

ವ್ಯಕ್ತಿತ್ವ ಮತ್ತು ಪ್ರಜಾಪ್ರಭುತ್ವಗಳೊಳಗಿನ ಘರ್ಷಣೆಯ ಮತ್ತೊಂದು ದೃಷ್ಟಾಂತವಾಗಿ ಈ ಬಾರಿಯ ಮದ್ರಾಸ್ ಮಂತ್ರಿಮಂಡಲವನ್ನೇ ತೋರಿಸಬಹುದು. ರಾಜಾಜಿ-ಪ್ರಕಾಶಂ-ಓಮಂದೂರು ಚಕ್ರ ಸುತ್ತು ಪ್ರಜಾಸತ್ತಾತ್ಮಕ ರಥದ ಗಾಲಿಯ ಸುತ್ತಿಗೆ ಪ್ರತಿಕೂಲ ಗತಿಯದೆಂಬುದೇನೋ ನಿಜ; ಆದರೆ ಅಲ್ಲಿ ಅವಘಡವಾಗದಂತೆ ಕಣ್ಣಿಟ್ಟು ಕಾಯುತ್ತಾ ಅದನ್ನು ಸರಿಯಾದ ಪಥ ಹಿಡಿಸಿಬಿಟ್ಟಿರುವ ಕಾಂಗ್ರೆಸ್ ಹೈಕಮಾಂಡ್ ಇದ್ದೇ ಇದೆ. ಇಂದಿನ ಮದ್ರಾಸ್ ಕಾಂಗ್ರೆಸ್ ಪಕ್ಷದೊಳಗೇನೇ ಪಕ್ಷಗಳಿವೆ; ಅವುಗಳೊಳಗಿರುವ ವಿರೋಧವು ಹಸಿ ಬಿಸಿಯಾದುದು. ಆದರೆ ಕಾಂಗ್ರೆಸಿನ ತತ್ವ ಮತ್ತು ಶಿಸ್ತು ಈಗಲೂ ಅವರನ್ನು ಒಂದೇ ಪಕ್ಷವಾಗಿ ಒಂದೆಡೆ ಕೂಡಿಸಿಟ್ಟಿದೆ. ಆ ಗಡಿಬೇಲಿಯನ್ನು ದಾಟಿ ಯಾವ ಕಡೆಯವರು ಮುಂದುವರಿದರೂ, ಇದಿರುವಾದಿಗಳ ಮೇಲೆ ಬೀಳುವ ಚೇತನವು ಮತ್ತೂ ಅವರಲ್ಲಿ ಉಳಿಯುವದಸಾಧ್ಯ. ಕಾಂಗ್ರೆಸ್ ಬಲವೇ ಮೂಲ ಬಲವಾಗಿರುವವರು ಕಾಂಗ್ರೆಸಿನ ಶಿಸ್ತು ಭಂಗ ಮಾಡಿದರೆ ಆತ್ಮದ್ರೋಹ ಮಾಡಿದಂತಾಗುವುದೇ ಹೊರತು ಪ್ರತಿಸ್ಪರ್ಧಿಗಳ ಮೇಲೆ ಹಠ ಸಾಧಿಸುವ ಅನುಕೂಲತೆಯಾಗಲೀ ಶಕ್ತಿಯಾಗಲೀ ಮತ್ತೆ ಉಳಿಯದು.

ಮದ್ರಾಸ್ ಮಾದರಿಯ ವಿವಾದವೇ, ದೇಶ ವಿಭಜನಾನಂತರದ ಪಶ್ಚಿಮ ಬಂಗಾಳದ ಕಾಂಗ್ರೆಸ್ ಮಂತ್ರಿಮಂಡಲದಲ್ಲೆದ್ದಿದೆ. ಪೂರ್ವ-ಪಶ್ಚಿಮ ಬಂಗಾಳಗಳು ವಿಂಗಡಿಸಲ್ಪಟ್ಟು ಪಾಕಿಸ್ತಾನ್-ಹಿಂದುಸ್ಥಾನಕ್ಕೆ ಸೇರಿದೊಡನೆ ಪಶ್ಚಿಮ ಬಂಗಾಳದ ಪ್ರಧಾನ ಮಂತ್ರಿಯಾಗಿ ಆರಿಸಲ್ಪಟ್ಟವರು ಡಾ। ಪಿ. ಸಿ. ಘೋಷ್; ಆ ಮೇಲೆ ಮದ್ರಾಸ್ ಮಾದರಿಯ ಪಕ್ಷಾಂದೋಲನವೇ ಪಶ್ಚಿಮ ಬಂಗಾಳದ ಕಾಂಗ್ರೆಸ್ ಪಕ್ಷದಲ್ಲೂ ನಡೆದು ಡಾ। ಘೋಷರ ಬದಲಿಗೆ ಡಾ। ಬಿ. ಸಿ. ರೋಯಿಗಳು ಪಕ್ಷನಾಯಕ ಮತ್ತು ಪ್ರಧಾನ ಮಂತ್ರಿಯಾಗಿ ಆರಿಸಲ್ಪಟ್ಟರು. ಈಗ 'ಪಕ್ಷದ ಸಭೆ ಕರೆಯುವುದಿಲ್ಲ; ಮಂತ್ರಿಮಂಡಲದಲ್ಲಿ ಕಾಂಗ್ರೆಸೇತರರನ್ನು ತೆಗೆದುಕೊಂಡಿದ್ದಾರೆ; ಬಹುಸಂಖ್ಯಾಕ ಸದಸ್ಯರಿಗೆ ಈ ಮಂತ್ರಿಮಂಡಲದಲ್ಲಿ ವಿಶ್ವಾಸವಿಲ್ಲ' ಇತ್ಯಾದಿ ಆರೋಪಗಳನ್ನು ಹೊರಿಸಿ ಡಾ। ರೋಯಿಗಳ ಮಂತ್ರಿಮಂಡಲವನ್ನು ಬದಲಾಯಿಸಬೇಕೆಂಬ ಚಳವಳಿಯು ಅಲ್ಲಿ ಭರದಿಂದ ಸಾಗಿದೆ. ಒಂಭತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಕಾರ್ಯದರ್ಶಿಯರು ಈಗಿನ ಪಶ್ಚಿಮ ಬಂಗಾಳ ಸರಕಾರದಲ್ಲಾವ ಬದಲಾವಣೆಯನ್ನೂ ಮಾಡಕೂಡದೆಂದು ವಾದಾಗ್ರಹಕ್ಕೆ ಮುಂದಾಗಿದ್ದಾರೆ. ಭಾರತದ ಬಂಗಾಳವೂ ಈಗ ಮದ್ರಾಸಿನಂತೆಯೇ ಅಧಿಕಾರಾಂದೋಲನಾ ರೋಗ ಪೀಡೆಯಲ್ಲಿದೆ.

ಸಾರಾಂಶವೆಂದರೆ, ನೀತಿ ಮತ್ತು ನಿಯಮ ನಿಬಂಧನೆಗಳು ಅಲ್ಲವೆ; ಕೆಲವರ ಸ್ವಾರ್ಥ, ಸ್ವಾಭಿಮಾನಗಳು ಅವುಗಳನ್ನು ಮುರಿದೋ ಮೀರಿಯೋ ಮುಂದೊತ್ತೋಣವೆಂದು ಆಗಾಗ ಬರುತ್ತಿವೆಯಾದರೂ ಅಂತಹ ಅಕ್ರಮಗಳಿಗವಕಾಶ ಕೊಡದೆ ಪ್ರಜಾಸತ್ತಾ ನೀತಿ ನಿಯಮಗಳನ್ನು ಕಾಪಾಡುವ ಪಹರೆಗಾರರಿದ್ದಾರೆ-ಕಾಂಗ್ರೆಸ್ .ಅಧಿನಾಯಕರು. ಆದ್ದರಿಂದ ಈ ಅಕ್ರಮಾಂದೋಲನಗಳೆಲ್ಲವೂ ಹೃದಯಾಂದೋಲನಗಳಂತೆಯೇ ಕೇವಲ ಒಳ ಮಿಡಿತಗಳಾಗಿ ಉಳಿಯಬೇಕಲ್ಲದೆ,ಬೇರಿಲ್ಲ.

ಖುಹ್ರೋ ಪ್ರಕರಣ

ಈಗತಾನೇ ಪಾಕಿಸ್ತಾನದಲ್ಲಿ ನಡೆದು ಹೋದ ಖುಹ್ರೋ ಪ್ರಕರಣವು 'ಹದ್ದು ಮೀರಿದಲ್ಲೆಲ್ಲಾ ಹತೋಟಿಯಿದ್ದೇ ಇದೆ' ಎಂಬುದಕ್ಕೆ ಮತ್ತೊಂದು ನಿದರ್ಶನ. ಪಾಕಿಸ್ತಾನದ ರಾಜಧಾನಿ ಪ್ರಾಂತ್ಯವಾದ ಸಿಂಧಿನ ಪ್ರಧಾನ ಮಂತ್ರಿಯಾಗಿದ್ದರು ಮಿ. ಮಹಮ್ಮದ್ ಆಯೂಬ್ ಖುಹ್ರೋ. ಹಿಂದೊಮ್ಮೆ ಸಿಂಧ್ ಪ್ರಾಂತ್ಯದಲ್ಲಿ ಪ್ರಧಾನ ಮಂತ್ರಿಯಾಗಿದ್ದ ಶುದ್ಧ ರಾಷ್ಟ್ರೀಯವಾದಿ ಮಿ. ಅಲ್ಲಾಭಕ್ಷರು ಕೊಲೆ ಮಾಡಲ್ಪಟ್ಟಾಗ ಅದರಲ್ಲಿ ಇವರ ಕೈಯಿತ್ತೆಂಬ ಅನುಮಾನದಿಂದ ಮಿ. ಖುಹ್ರೋರು ದಸ್ತಗಿರಿ ಮತ್ತು ವಿಚಾರಣೆಗೂ ಒಳಗಾಗಿದ್ದರು. ಆ ಖಟ್ಲೆಯಲ್ಲಿ ಮಿ. ಖುಹ್ರೋರ ವಿರುದ್ಧ ಸಾಕ್ಷ್ಯಕ್ಕೆ ಮುಂದಾಗವರಿಗೊದಗಿದ್ದ ಪ್ರಾಣ ಭೀತಿ ಮತ್ತು ಅಪಾಯಗಳ ಕಥೆಗಳನೇಕ ಕೇಳಿ ಬಂದಿದ್ದುವು. ಸಿಂಧಿನ ಅತಿ ದೊಡ್ಡ ಜಮೀನ್ದಾರ ಮತ್ತು ದುಶ್ಶಕ್ತಿಯ ವಿಶೇಷ ಪ್ರಭಾವವಿದ್ದ ಮಿ. ಖುಹ್ರೋ ಆ ಕೊಲೆಯ ಆರೋಪದಿಂದ ಬಿಡುಗಡೆ ಹೊಂದಿದ್ದರು. ಪಾಕಿಸ್ತಾನ್ ಸಿಂಧ ಪ್ರಾಂತ್ಯದ ಪ್ರಧಾನ ಮಂತ್ರಿಯಾಗಿಯೂ ಇದ್ದರು. ಈಗ ದುರಾಡಳಿತೆ, ಅಧಿಕಾರದ ದುರುಪಯೋಗ ಮತ್ತು ಭೀಕರ ರೀತಿಯ ದುರ್ನಡತೆಗಳಿಗಾಗಿ ಪಾಕಿಸ್ತಾನದ ಗವರ್ನರ್ ಜನರಲ್ ಕಾಯಿದೇ ಅಝಮ್ ಜಿನ್ನರು ಮಿ. ಖುಹ್ರೋರನ್ನು ಪ್ರಧಾನಿತ್ವದಿಂದ ಡಿಸ್‌ಮಿಸ್ ಮಾಡಿದ್ದಾರೆ; ಮಾತ್ರವಲ್ಲ, ಅವರ ಅಪರಾಧಗಳ ವಿಚಾರಣೆಗಾಗಿ ಒಂದು ವಿಚಾರಣಾ ಮಂಡಲಿ ಕೂಡಾ ನೇಮಿಸಲ್ಪಟ್ಟಿದೆ.

ಇವೆಲ್ಲವುಗಳಿಂದ ಸ್ಪಷ್ಟವಾಗುವದಿಷ್ಟೆ: ಹಿಂದೀ ಜನಸಾಮಾನ್ಯರ ಹಾಗೂ ಸಾಮಾನ್ಯ ನಾಯಕರ ಬುದ್ಧಿ ಸುಧಾರಣೆಯಾಗುವ ಅಂಶ ಬಹಳವಿದೆ. ಪ್ರಜಾಸತ್ತಾ ನೀತಿಯನ್ನಾಧರಿಸಿದ ಸ್ವಾಡಳಿತೆ ದೊರೆತ ಆದಿಭಾಗದಲ್ಲಿ ಅಂಥವರಿಂದಾಗುತ್ತಿರುವ ತಪ್ಪುಗಳು ಎಲ್ಲೆಲ್ಲಿಯೂ ಕಾಣಲು ಸಿಗುತ್ತಿವೆ. ಆದರೆ ಅವುಗಳನ್ನು ಕೂಡಲೇ ತಿದ್ದುವ ಅಗ್ರಗಣ್ಯ ಪ್ರಮುಖರಿದ್ದಾರೆ; ಅವರು ಪರಿಶುದ್ಧರು ಮತ್ತು ಸರ್ವ ಶಕ್ತರಿದ್ದಾರೆ. ಹೀಗಾಗಿ ಇಲ್ಲಿ ಪ್ರಜಾಸತ್ತೆಗೆ ನೋವಿದ್ದರೂ ಸಾವಿಲ್ಲ! ಇಲ್ಲಿಯದು ಅರುಣೋದಯ ಕಾಲದ ಅರೆ ಜಾಗ್ರತೆ ಹೊರತು ಅಸ್ತಮಯ ಕಾಲದ ನಿದ್ರಾಭಿಮುಖವೇನೂ ಅಲ್ಲ.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3 28 Crores**
Our Chief Agency New business in 1946 bout **54 Lakhs**

Our experience of 37 years available to you for arranging Insurance investment It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India.
Bombay Life Building,
Central Office, Udipi

Branches at:
Mangalore, Calicut, Trivandrum, Madura, Madras, Bangalore & Bombay,

For Better Public Health

Malaria and Filaria which were at one time practically unknown or negligible in S. Kanara are now rampant throughout the District. Both are terribel diseases. Malaria if not promptly cured may disable a man for years, Filaria is a dirty, disfiguring disease And yet a little united effort on the part of the public could at very little cost wipe out these two evils. **Please, watch this space.**

Inserted by:

The Canara Mutual Assurance Company Limited,
ESTD, 1935.
H. O. **UDIPI**.

CHITRAKOT ASTHMA CURE
(Registered)

Widely renowned and a most Powerful highly effective remedy for curing Asthma completely by one dose to be taken on 23-5-1948 full moonnight. Trial is highly effective at the time of eclipse of the moon.

Apply at once in English:-
SRI MAHATMAYOGI BABA
Ayurvedic Buti Bhandar,
P. O CHITRAOKT, U.P.

ಆಟಂ ಶಕ್ತಿ ಮತ್ತು ಭಾರತದ ಸಿದ್ಧತೆ

ಮೂರನೇ ಜಾಗತಿಕ ಯುದ್ಧದ ಮಾತುಕತೆಗಳು ಈಗ ಪ್ರತ್ಯಕ್ಷ ಸಿದ್ಧತೆಗಳಾಗಿ ಮಾರ್ಪಟ್ಟಿವೆ. ಪೆಲಸ್ಟೈನಿನಲ್ಲಿ ಯೆಹೂದಿ ಮತ್ತು ಅರಬ್ ಜನಾಂಗಗಳೊಳಗೆ ಹಾಡಾಹಾಡಿ ಸಮರವೇ ನಡೆದಿದೆ. ಯೆಹೂದಿಗಳಿಗೆ ಅಮೇರಿಕವು ಬೆಂಬಲವಾಗುವದೂ, ಇರಾನ್, ಅಫ್ಘಾನಿಸ್ಥಾನಗಳ ಗಡಿ ಮತ್ತು ಒಳಗೂ ಕಾಲೂರಿಕೊಂಡೇ ಇರುವ ರಶ್ಯವು ಈ ಮುಸ್ಲಿಂ ರಾಷ್ಟ್ರಗಳ ಮೂಲಕ ಅರಬರನ್ನು ಸಮರ್ಥಿಸುವದೂ ಸಂಭವನೀಯ. ಅಥವಾ ಸ್ವಕಾರ್ಯ ಸಾಧನೆಗಾಗಿ ರಶ್ಯವು ಯೆಹೂದಿಗಳಿಗೆ, ಮಿತ್ರರಾಷ್ಟ್ರಗಳು ಅರಬರಿಗೆ ಬೆಂಬಲವಾಗಲೂಬಹುದು ಇಂತಹ ಹೋರಾಟಗಳು ಮೊದಲಿನಿಂದಲೂ ಚೈನಾ ಮುಂತಾದ ರಾಷ್ಟ್ರಗಳಲ್ಲಿ ನಡೆಯುತ್ತಿದ್ದು, ಅಲ್ಲಿಯೂ ಇಕ್ಕಡೆಗಳವರ ಮೇಲೆ ಅಮೇರಿಕ-ರಶ್ಯಾ ಸಹಾನುಭೂತಿಯು ಇಕ್ಕಡೆಯಾಗಿ ಸೇರಿಕೊಂಡುದಿದ್ದರೂ ಅದು ಇನ್ನೊಂದು ಮಹಾ ಯುದ್ಧಕ್ಕೆ ಹೇತುವಾಗಲಿಲ್ಲವೆಂಬ ವಿಶ್ವಾಸವಿರುವದೇನೋ ನಿಜ. ಆದರೆ ಈ ಕಾಲದಲ್ಲಿ ಈ ಪ್ರಮುಖ ರಾಷ್ಟ್ರಗಳೊಳಗಿನ ದ್ವೇಷಾಸೂಯೆಯು ಇನ್ನೊಂದು ಯುದ್ಧಕ್ಕಿಳಿಗುವಷ್ಟು ಪಕ್ವವಾಗಿದೆಯಾದ್ದರಿಂದ ಈಗ ನೆಪ ದೊರೆತರೆ ಸಾಕು. ಹೀಗಾಗಿ ಪೆಲಸ್ಟೈನ್ ಜಗಳದ ಕುರಿತು ಹಿಂದಿನಂತಹ ನಿರ್ಲಕ್ಷ್ಯವನ್ನೇ ತಳೆದುಕೊಳ್ಳಲಾಗುವದಿಲ್ಲ. ಸದ್ಯದ ಯುದ್ಧಾಹಂಕಾರಕ್ಕೆ ರೂಪುಗೊಡಲು ಪೆಲಸ್ಟೈನ್ ಇಲ್ಲವಾದರೆ ಬೇರೆ ಕಾರಣಗಳೂ ಸಾಲಾಗಬಹುದು.

ಆಟಂ ಯುಗ

ಮೂರನೇ ಯುದ್ಧದ ಒಂದು ಅದ್ಭುತ ಹಾಗೂ ಅಗ್ರಗಣ್ಯ ಆಯುಧವಾಗಿ ಆಟಂ ಬೋಂಬಿನ ಪ್ರಯೋಗವಾಗಲಿದೆಯೆಂಬುದು ಖಂಡಿತ. ಯುದ್ಧೋನ್ಮತ್ತ ರಾಷ್ಟ್ರಗಳ ಬಲಾಬಲವನ್ನರಿಯಲಾಗುವ ತಕ್ಕಡಿಯೂ ಅದೇ-ಆಟಂ ಬೋಂಬಿನ ಅನುಕೂಲತೆಯಲ್ಲಿ ಯಾರು ಮಿಗಿಲೆಂಬುದೇ. ಅಂತೂ ಮುಂದಿನದು ಆಟಂ ಯುಗ; ಆಟಂ ಯು[illegible]ಕೊಟ್ಟಿ ಮಿಕ್ಕ ಯುದ್ಧೋಪಕರಣಗಳೇ ಮಾನವನ ಪ್ರಾಣದ ಬೆಲೆಯನ್ನು ಕಡಿಮೆ ಮಾಡಿವೆ. ಮನುಷ್ಯನ ಆತ್ಮ ಬಲ, ಮನೋಬಲ, ದೇಹ ಬಲಗಳೆಲ್ಲವೂ ಈ ವೈಜ್ಞಾನಿಕೋಪಕರಣಗಳ ಬಲದಿದಿರು ಹುಸಿಗೊಂಡಿವೆ. ಮುಂದಿನ ಆಟಂ ಯುಗದಲ್ಲಂತೂ ಮನುಷ್ಯ ಜೀವಕ್ಕಾವ ಬೆಲೆಯೂ ಇರದು; ಪ್ರಪಂಚದ ಯಾವ ಅಮೂಲ್ಯ ವಸ್ತು ಮತ್ತು ವಿಷಯಗಳೂ ಶಾಶ್ವತವಲ್ಲ ಸಹಾರವು. ನಿರ್ಮಾಣ ಶಕ್ತಿ ಮತ್ತು ನಿರ್ನಾಮ ಶಕ್ತಿಗಳೊಳಗಿರುವ ಈ ವರೆಗಿನ ತಾರತಮ್ಯವೆಲ್ಲವೂ ಅಡಿಮೇಲಾಗಿ ನಿರ್ನಾಮ ಶಕ್ತಿಯು ಸಾವಿರದೊಂದು ಪಾಲಷ್ಟು ಕೂಡಾ ನಿರ್ಮಾಣ ಶಕ್ತಿ ಇಲ್ಲವೆನ್ನುವ ಕಾಲ ಬರಬಹುದು. ಇಂತಹ ವಿನಾಶ ಕಾಲಕ್ಕೆ ಪ್ರಪಂಚವಿಂದು ಧಾವಿಸುತ್ತಿದೆ; ಅಮೇರಿಕ ಮತ್ತು ರಶ್ಯಗಳು ಲೋಕರಥದ ಎರಡು ಗಾಲಿಗಳಾಗಿ ಆ ಪ್ರಳಯದ ಕಡೆಗೇನೇ ರಭಸದಿಂದ ತಿರುಗಹತ್ತಿವೆ. ಪಂಡಿತ ಜವಾಹರಲಾಲರು, ಇವೆರಡು ಪಾಳಯದೊಳಗೂ ಸೇರಿಕೊಳ್ಳದೆ ಭಾರತವು ತಾಟಸ್ಥ್ಯ ವಹಿಸುವದೆಂದೂ ಶಕ್ತಿ ಮೀರಿ ಶಾಂತಿ ಯತ್ನ ಮಾಡುವದೆಂದೂ ಆಶ್ವಾಸನೆಯಿತ್ತಿದ್ದಾರೆ. ಇನ್ನೊಂದು ಯುದ್ಧವಾದೀತೆಂಬುದನ್ನು ನಂಬಲಾರದಷ್ಟು ಅವರ ಹೃದಯದಲ್ಲಿ ಶಾಂತಿಯಾತುರ ತುಂಬಿದೆ. ಆದರೆ ಯುದ್ಧವು ಸಂಭವಿಸಿದಲ್ಲಿ ಅದರ ಗಂಧಗಾಳಿಗೆ ಹೋಗದೆ ದೂರ ನಿಲ್ಲಲು ಸಾಧ್ಯವಾದೀತೆಂಬ ಧೈರ್ಯವು ಪಂಡಿತ ನೆಹರುಗಳಲ್ಲಿ ಕೂಡಾ ಇಲ್ಲ.

ಸದ್ವಿನಿಯೋಗವಾದರೆ—

ಪಂಡಿತಜೀ ಭಾರತ ಮಹಾಸಭಾ ಪಾರ್ಲಿಮೆಂಟಿನಲ್ಲಿ ಇಲ್ಲಿಯ ಆಟಂ ಶಕ್ತಿಯ ಸಂಗ್ರಹ ಮತ್ತು ವಿನಿಯೋಗದ ಕುರಿತು ಇತ್ತೀಚೆಗೆ ಮನನೀಯ ಹೇಳಿಕೆಯೊಂದನ್ನಿತ್ತಿದ್ದರು. ವಿಜ್ಞಾನವು ದಾನ ಮಾಡಿದ ಪರಮಾವಧಿ ಪ್ರತಾಪದ ಶಕ್ತಿಯೆಂದರೆ ಆಟಂ ಶಕ್ತಿ. ಅಣು ಬೋಂಬಿನಂತಹ ವಿನಾಶಕ ಕಾರ್ಯಗಳಿಗೆ ಉಪಯೋಗಿಸಿದರೂ ಔದ್ಯೋಗೀಕರಣಗೊಳಿಸಿ ವಿಧಾಯಕ ರೀತಿಯ ವಿನಿಯೋಗಕ್ಕೆ ಹಚ್ಚಿದರೂ ಇಂದಿನ ಪ್ರಪಂಚದಲ್ಲಿ ಎಲ್ಲಕ್ಕಿಂತ ಮೇಲಾದ ಮಾತ್ರವಲ್ಲ, ಅದ್ಭುತವಾದ ಶಕ್ತಿಯೆಂದರೆ ಆಟಂ ಶಕ್ತಿ. ಸಾಮಾನ್ಯ ಸ್ಫೋಟಕಗಳಂತೆಯೇ ಈ 'ಅಸಾಮಾನ್ಯ' ಶಕ್ತಿಯೂ ಸಮರ ಅಥವಾ ಅಭ್ಯುದಯ, ಇವೆರಡರ ಸಾಧನೆಗೂ ಬೇಕುವಂತಹದಿದೆ. ವಿಜ್ಞಾನವು ಪ್ರಗತಿಪಡೆದಂತೆಯೇ ಮಾನವನ ಮನೋವೃತ್ತಿಯೂ ಸುಧಾರಿಸಲ್ಪಟ್ಟು, ಕ್ರೂರತೆಯು ಪರಮಾವಧಿಯಾದ ಸಮರವೇ ನಿಲ್ಲಿಸಲ್ಪಡುತಿದ್ದರೆ ವಿಜ್ಞಾನವು ಆಟಂ ಶಕ್ತಿಯನ್ನು ಕಂಡುಹಿಡಿದುದಕ್ಕಾಗಿ ಲೋಕವಾನಂದಪಡುತ್ತಿತ್ತು. ಹೊರತು ಇಂದಿನಂತೆ ಹೆದರಬೇಕೆಂದಿರಲಿಲ್ಲ. ಆದರೆ ಮನುಷ್ಯನೆಲ್ಲಿದ್ದಾನೆ? ಆತ ಮುಂದುವರಿದುದು ಬಹಳ ಕಡಿಮೆ; ಕ್ರೂರತೆಯಲ್ಲೇ ಹಿಂದಿಗಿಂತ ಎಷ್ಟೋ ಪಾಲು ಮುಂದುವರಿದಿದ್ದಾನೆಂದರೂ ಸಲ್ಲುವದು. ಹಿಂದಿನ ಯುಗಗಳ ಬಿಲ್ಲು ಬಾಣಗಳ ಯುದ್ಧದ ಮುಖ್ಯ ಭಾಗವಾಗಿ ಎರಡೂ ಕಡೆಗಳ ನಾಯಕರೇ ತಮ್ಮೊಳಗೆ ಹೋರಾಡಿಕೊಂಡು ಸೋಲು ಗೆಲವನ್ನು ನಿರ್ಧರಿಸುವ ಕ್ರಮವಿತ್ತು. ಆದರೆ ಕಳೆದ ಯುದ್ಧದಲ್ಲಿ ಚರ್ಚಿಲ್-ಹಿಟ್ಲರರು ಪರಸ್ಪರ ಇದಿರಾಗಿ ಗುಂಡು ಹಾರಿಸಿಕೊಂಡದ್ದೂ ಇಲ್ಲ; ಇನ್ನೊಂದು ಯುದ್ಧವಾದರೆ ಟ್ರೂಮೇನ್-ಸ್ಟಾಲಿನರು ವ್ಯಕ್ತಿಶಃ ಹೋರಾಡಿಕೊಳ್ಳುವಂತೆಯೂ ಇಲ್ಲ. ಇದನ್ನು ಸುಧಾರಣೆಯೆನ್ನೋಣವೆ? ಹಿಂದಿನ ಕಾಲಗಳವರ ಸೇನೆ-ಸೇನೆಗಳು ಮಾತ್ರ ಹೋರಾಡಿಕೊಂಡಿದ್ದರೆ ಈಗಿನವರು ಹೆಂಗಸರು ಮಕ್ಕಳೆಂಬು ನೋಡದೆ ಊರೂರುಗಳನ್ನೇ ಧ್ವಂಸ ಮಾಡಿಸುತಿದ್ದಾರೆ ಇಲ್ಲಿ ಬರ್ಬರತೆ ಬೆಳೆದುದೇ ಕಾಣಿಸುತ್ತಿದೆ ಹೊರತು ನಾಗರಿಕತೆಯಲ್ಲ. ಮುಂದಿನ ಆಟಂ ಯುದ್ಧದ ಕ್ರೌರ್ಯವಂತೂ ವರ್ಣನಾತೀತವಾಗಬಹುದು. ಇದೀಗ ವಸ್ತುಸ್ಥಿತಿ ಅದ್ದರಿಂದ ಆಟಂ ಶಕ್ತಿಯ ದುರುಪಯೋಗವಾಗದಂತೆ ಪ್ರತಿಬಂಧಿಸುವದು, ಮತ್ತಂತಹ ಪ್ರಯೋಗಕ್ಕೆ ತಯಾರಾಗುವವರನ್ನು ಖಂಡಿಸುವದು ಪ್ರಪಂಚದ ಧರ್ಮ. ಆದರೆ ಆಟಂ ಶಕ್ತಿ ದುರ್ವಿನಿಯೋಗದ ಬರಿಯ ಅವಹೇಳನ ಮಾತ್ರದಿಂದ ಈ ಕಾಲದಲ್ಲಿ ಯಾವ ರಾಷ್ಟ್ರವೂ ಸುರಕ್ಷಿತವಾಗಲಾರದು. ಆಟಂ ಶಕ್ತಿಯ ಅನುಕೂಲತೆ ತನ್ನಲ್ಲೆಷ್ಟಿದೆ, ಎಂಬುದನ್ನು ಪ್ರತಿಯೊಂದು ರಾಷ್ಟ್ರವೂ ಈಗ ಅಗತ್ಯವಾಗಿ ನೋಡಿಕೊಳ್ಳಬೇಕಾಗಿದೆ; ನೋಡಿಕೊಳ್ಳುತ್ತಿವೆ.

ಭಾರತದಲ್ಲಿ—

ಭಾರತವೂ ತನ್ನ ಪಾಲಿನ ಕರ್ತವ್ಯದ ಕಡೆಗೆ ಕಣ್ಣಿಟ್ಟಿದೆ. ಆದರೆ ಶಾಂತಿ ಪ್ರೇಮೀ ರಾಷ್ಟ್ರವು ಆಟಂ ಸತ್ವವನ್ನು ತನ್ನ ಔದ್ಯೋಗಿಕ ಹಾಗೂ ವೈಜ್ಞಾನಿಕ ಕಾರ್ಯಗಳಿಗಾಗಿಯೇ ಸಂಗ್ರಹಿಸಿಕೊಳ್ಳುವ ಪ್ರಯತ್ನಕ್ಕೆಳೆದಿದೆ. ಅಖಿಲ ಭಾರತದಲ್ಲೇ ಆಟಂ ಸತ್ವಗಳ ಅನುಕೂಲತೆ ವಿಶೇಷವಿರುವ ಕ್ಷೇತ್ರವೆಂದರೆ ತಿರುವಾಂಕೂರು ಸಂಸ್ಥಾನ. ತಿರುವಾಂಕೂರಿನ 150 ಮೈಲುದ್ದದ ಕರಾವಳಿಯಲ್ಲೆಲ್ಲಾ 'ಥೋರಿಯಮ್' ಸತ್ವ ಮಿಶ್ರಿತ ಹೊಯಿಗೆಯೇ ಹರಡಿದೆ. ಈ ಹೊಯಿಗೆಯಿಂದ ಥೋರಿಯಮ್ ನೈಟ್ರೇಡನ್ನು ಪ್ರತ್ಯೇಕಿಸುವ ಅತಿ ಸುಲಭವಾದ ಹೊಸ ವಿಧಾನವನ್ನು ಹಿಂದೀ ವೈಜ್ಞಾನಿಕರು ಬೊಂಬಾಯಿಯ 'ಲೆಬೋರೇಟರಿ'ಯೊಂದರಲ್ಲಿ ಕಂಡುಹಿಡಿದ್ದಾರೆ. ಈ ಥೋರಿಯಮ್ ಮಿಶ್ರಿತ ಹೊಯಿಗೆ ಮತ್ತಿಂತಹ ಇತರ ಖನಿಜಗಳಿಗಾಗಿ ಕೇಂದ್ರ ಸರಕಾರವೀಗ ತಿರುವಾಂಕೂರು ಸರಕಾರದೊಡನೆ ಮಾತುಕತೆಗಳನ್ನು ನಡೆಸುತಿದ್ದು ತಿರುವಾಂಕೂರಿನ ಆ ಕರಾವಳಿ ಹೊಯಿಗೆಯ ಸರ್ವ ಹಕ್ಕನ್ನೂ ಭಾರತ ಸರಕಾರವೇ ಪಡೆಯುವ ಪ್ರಯತ್ನದಲ್ಲಿದೆ. ಇನ್ನು ಮುಂದೆ ಪರದೇಶಗಳಿಗೆ ಆ ಸುಟು ಅಂತರ್ಗತ ಥೋರಿಯಮನ್ನು ರಫ್ತು ಮಾಡಿಸುವಂತಿಲ್ಲವೆಂದು ತಿರುವಾಂಕೂರು ಸರಕಾರವು ಕಳೆದ ಬೇಸಿಗೆಯಲ್ಲೇ ಜಾಹೀರು ಮಾಡಿದೆ. ಇದರ ಶೋಧನ, ಶುದ್ಧತೆ, ತಯಾರಿ ಇತ್ಯಾದಿ ವಿವಿಧ ಕಾರ್ಯಗಳಿಗಾಗಿ ಬೊಂಬಾಯಿ, ಬೆಂಗಳೂರು, ತಿರುವಾಂಕೂರು ಮೊದಲಾದ ಕಡೆಗಳಲ್ಲಿ ಕಾರ್ಖಾನೆ ಮತ್ತು ಕಂಪೆನಿಗಳಿವೆ. ಹಿಂದುಸ್ಥಾನದ ಖನಿಜಗಳ ರಸಾಯನಿಕ ಹಾಗೂ ವೈಜ್ಞಾನಿಕ ಶೋಧನೆಗಳಿಗಾಗಿ ಹಿಂದೀ ಸರಕಾರವು ಬೆಂಗಳೂರಿನ 'ಇಂಡಿಯನ್ ಎಕಾಡೆಮಿ ಓಫ್ ಸೈನ್ಸ್' ಸಂಸ್ಥೆಗೆ 300,000 ರೂ. ಗಳ ಗ್ರಾಂಟನ್ನು ಕೊಟ್ಟಿದೆ. ಅಂತರಿಕ ಉಷ್ಣ ವಿಕಾಸ ಇಂಜನೀಯರಿಂಗಿನಲ್ಲಿ ಹೆಚ್ಚಿನ ಜ್ಞಾನವನ್ನು ಸಂಪಾದಿಸಿಕೊಂಡು ಬರಲು 15 ಮಂದಿಯನ್ನು ಹೊರದೇಶಗಳಿಗೆ ಹಿಂದೀ ಸರಕಾರ ಕಳುಹಿಸಲಿದೆ. ಇದೇ ರೀತಿ ಎಲ್ಲಾ ವ್ಯವಸ್ಥೆಗಳೂ ಜಾಗರೂಕತೆ ಹಾಗೂ ದೂರದೃಷ್ಟಿಯಿಂದ ನಡೆದಿವೆ. ಭಾರತ ಸರಕಾರವು ಆಟಂಶಕ್ತಿಯ ಸಂಗ್ರಹ ಮತ್ತು ಸಂಘಟನೆಗೀಗ ತೊಡಗಿರುವುದು ರಾಷ್ಟ್ರದ ಉತ್ಪಾದನೆಯನ್ನು ಅಭಿವೃದ್ಧಿಪಡಿಸುವ ವಿಧಾಯಕ ದೃಷ್ಟಿಯಿಂದಲೇ; ಆದರೆ ಅನಿವಾರ್ಯ ಸಂದರ್ಭವೊದಗಿದಲ್ಲಿ ಈ ತಯಾರಿಯು ಆಲೋಚಿತವಾದ ಸಾಹಸಕ್ಕೂ ಬೇಕಬಹುದು. ಇಂದಿನ ಆಟಂ ಯುಗದಲ್ಲಿ, ಹಿಂದೀ ಸರಕಾರವು ತನ್ನ ದೈನಂದಿನ ಅಡಚಣೆಗಳಲ್ಲೇ ಮುಳುಗಿಹೋಗದೆ ದೂರದೃಷ್ಟಿಯಿಂದ ಕಾರ್ಯ ಪ್ರವೃತ್ತವಾಗಿರುವುದು ಸ್ತುತ್ಯವಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಗೊಳಿಸಲ್ಪಟ್ಟು ಇಂಡಿಯಾದಲ್ಲಿ ಸಂಘಟಿಸಲ್ಪಟ್ಟದ್ದು]

ಮುದ್ದತಿ ಠೇವುಗಳು

ರೂ. ೧೫,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।
೪ ರಿಂದ ೫ ತಿಂಗಳು ,, ,, ೨॥
೬ ರಿಂದ ೯ ತಿಂಗಳು ,, ,, ೨॥।

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

ನೆನಪಿರಲಿ ಕೈಲಾಸ ಬೆಟ್ಟದ ಗಿಡ ಮೂಲಿಕೆಯ (ರಿಜಿಸ್ಟರ್ಡ್) ಒಂದು ಡೋಸ್ ಔಷಧವನ್ನು ತಾ. 22-5-48ನೆ ಶನಿವಾರ ಹುಣ್ಣಿಮೆ ದಿನ ಸೇವಿಸಿದರೆ ಎಂತಹ ಅಸ್ತಮ-ಗೂರು ಬ್ಯಸವು ಕಡಿಮೆಯಾಗುವುದು.

ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

Brambachari G. Das,
Shri Sidh Brambacharya,
Sewa Ashram,
P. O. Chitrakot (U. P.)

ಪೆಲಸ್ತೈನ್ ಸಮರ ಮಹಾಯುದ್ಧವಾದೀತೆ

ಸ್ನೇಹಕಾರದ ಬದಲು ಹಾಹಾಕಾರ- ಎಂಬುದೇ ಕಳೆದ ವಾರದ ಪ್ರಾಪಂಚಿಕ ವಿದ್ಯಮಾನಗಳ ತಿರುಳು. ಒಂದೇ ಮಾತಿನಲ್ಲಿ ಹೇಳುವುದಾದರೆ ಮೊಳಕೆ ರೂಪದಿಂದಿದ್ದ ಲೋಕದ ಎಲ್ಲಾ ಕಂಟಕಗಳೂ ಕಳೆದ ವಾರ ಸಾಕಷ್ಟು ಬೆಳೆದು ಮಧ್ಯ ಪ್ರಾಯಕ್ಕೆ ಬಂದಂತಾಗಿವೆ.

ಪೆಲಸ್ತೈನಿನಲ್ಲಿ ನಿಜಕ್ಕೂ ಪ್ರತ್ಯಕ್ಷ ಯುದ್ಧವೇ ನಡೆದಿದೆ-ಚೀನದ ಅಂತರ್ಯುದ್ಧವು ಪ್ರಬಲಿಸಿದೆ-ಸಯಾಮಿನಲ್ಲಿ ಒಂದು ಪಂಗಡವು ಬಂಡಾಯವೆದ್ದಿದೆ- ಅಮೇರಿಕದ ಮಾರ್ಶಲ್ ಯೋಜನೆಯನ್ನು ಯುದ್ಧ ಸಹಾಯವು ಏಶ್ಯದ ರಾಷ್ಟ್ರಗಳಿಗೂ ದೊರೆಯುವ ಸಂಭವ ಕಾಣುತ್ತಿದೆ.

ಭಾರತ ಮತ್ತು ಪಾಕಿಸ್ತಾನಗಳೊಳಗೆ ಅಂತರ್ವಸಾಹತು ಒಪ್ಪಂದಗಳಾದುದು ಸಂತೋಷದ ಸಂಗತಿ-ಹೈದರಾಬಾದಿನ ಪ್ರಶ್ನೆ ಮಾತ್ರ ಈಗ ಪೂರ್ತಿ ನಿರಾಶಾಜನಕವಾಗಿದೆ-ಕಾಶ್ಮೀರದಲ್ಲಿನ್ನು ಕಾದಾಟವೇ ತೀರ್ಮಾನ ತರಬೇಕೆಂಬ ಪರಿಸ್ಥಿತಿಯೊದಗಿದೆ-ಭಾರತ ಪಾಕಿಸ್ತಾನಗಳೆರಡೂ ತಂತಮ್ಮ ಅಂತರ್ವ್ಯವಸ್ಥಾಪಾಲನೆಗಾಗಿ ವಿಶೇಷ ತ್ರಾಸದಾಯಕ ಹೊಣೆಗಾರಿಕೆಗಳನ್ನು ನಿರ್ವಹಿಸುತ್ತಿವೆ.

ಅಂತೂ ಇಡಿಯ ಜಗತ್ತಿಗೂ, ಪ್ರತ್ಯೇಕವಾಗಿ ಭಾರತಕ್ಕೂ ಪರಮಾವಧಿ ಸಂಕಟದಾಯಿಯಾದ ಕೆಡುಗಾಲವಿದು; ಪರೀಕ್ಷಾ ಕಾಲವಿದು; ಪ್ರಾಯಶಃ ಈಗ ಜೀವದಲ್ಲಿರುವವರು ಕಂಡಷ್ಟು ಅನುಭವಿಸಿದಷ್ಟು ಅದ್ಭುತಾಶ್ಚರ್ಯಗಳನ್ನು ಹಿಂದಿನ ಯಾವ ಕಾಲದ ಯಾವ ಜನಾಂಗವೂ ತನ್ನ ಜೀವಮಾನದಲ್ಲಿ ಅನುಭವಿಸಿರಲಾರದು. ಇಷ್ಟೂ ಸಾಲದೆಂದೇನೋ-ಎಲ್ಲಕ್ಕಿಂತ ಎಷ್ಟೋ ಪಾಲು ಹೆಚ್ಚಿನ ಮತ್ತೊಂದು ಪ್ರಳಯವನ್ನು ಈಗಿನ ಜನಾಂಗವೇ ಕಾಣುವಂತಾಗುವ ಸಂಭವವು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಾ ಬರುತ್ತಿದೆ! ಈಗಲಂತೂ ಮನುಷ್ಯನ ವಿವೇಕ ಬುದ್ಧಿ ಮತ್ತು ವಿನಾಶ ಬುದ್ಧಿಗಳು ವಿಜಯಕ್ಕಾಗಿ ಪರಸ್ಪರ ಸ್ಪರ್ಧಿಸಿಕೊಳ್ಳುತ್ತಿರುವ ಸಂದಿಗ್ಧ ಕಾಲ.

ಪೆಲಸ್ತೈನ್ ಸಮರ

ಪೆಲಸ್ತೈನಿನಲ್ಲಿ ಅರಬ-ಯೆಹೂದೀ ವಿವಾದವು ಕಳೆದ ಯುದ್ಧಾರಂಭಕ್ಕೂ ಮೊದಲಿನ ಕಾಲದಿಂದಲೂ ಇದ್ದದ್ದೇ. ಆ ವಾದವನ್ನು ತೀರ್ಮಾನಿಸುವ ಯಥಾರ್ಥ ಆತುರವನ್ನು ಅಲ್ಲಿಯ ಮೇಲಧಿಕಾರೀ ಬ್ರಿಟನ್ನಾಗಲೀ ಲೋಕದ ಇತರ ಪ್ರಮುಖ ರಾಷ್ಟ್ರಗಳಾಗಲೀ ತೋರಿಸದಿದ್ದುದರಿಂದ ಅದು ಬೆಳೆಯುತ್ತಾ ಬಂದು ಹತೋಟಿ ಮೀರಿ ಹೋಗಿದೆ. ಕಳೆದ ಕೆಲವು ತಿಂಗಳುಗಳಿಂದ ಪೆಲಸ್ತೈನಿನ ಅರಬ್ ಮತ್ತು ಯೆಹೂದಿಗಳೊಳಗೆ ಪ್ರತ್ಯಕ್ಷ ಹೋರಾಟವೇ ನಡೆದಿದೆ, ಪೆಲಸ್ತೈನ್ ವಿವಾದ ತೀರ್ಮಾನಕ್ಕೆ ಜಾಗತಿಕ ಸಂಘವು ಕೈಹಾಕಿ, ಐದು ತಿಂಗಳ ಮೊದಲು ಭಾರತದಂತೆಯೇ ಪೆಲಸ್ತೈನನ್ನೂ ವಿಭಜಿಸುವ ನಿರ್ಧಾರ ಮಾಡಿದ್ದಿತು. ಆದರೆ ಅದು ಯೆಹೂದಿಗಳಿಗೂ ಅಷ್ಟೊಂದು ಸಮಾಧಾನಕರವಾಗಿರಲಿಲ್ಲ; ಅರಬರಂತೂ ವಿಭಜನೆಗೆ ಬದ್ಧ ವಿರೋಧವಿದ್ದರು. ಆದ್ದರಿಂದ ಪೆಲಸ್ತೈನ್ ವಿಭಾಗದ ನಿರ್ಣಯದ ಅನುಮೋದನೆಯನ್ನು ಅಮೇರಿಕವು ಹಿಂದೆಗೆಯಿತು; ಜಾಗತಿಕ ಸಂಘದಲ್ಲದು ನಿರ್ಜೀವವಾಯಿತು. ಇದೇ ಮೇ ತಾ. 15ರಲ್ಲಿ ಪೆಲಸ್ತೈನಿನಲ್ಲಿ ತನಗಿರುವ ಮೇಲಧಿಕಾರವನ್ನು ಬಿಟ್ಟುಬಿಡುವದಾಗಿ ಬ್ರಿಟನು ಈ ಮೊದಲೇ ಸಾರಿದ್ದಿತು; ಅಲ್ಲಿಯ ಪರಿಸ್ಥಿತಿಯು ಅಸಹ್ಯ ರೀತಿಯಿಂದ ಕೆಡುತ್ತಾ ಬಂದರೂ ಬ್ರಿಟನು ತನ್ನೀ ನಿರ್ಧಾರದಿಂದ ಹಿಂದೆಗೆಯಲು ತಯಾರಿಲ್ಲ. ಭಾರತದಲ್ಲಿ ಹುಟ್ಟಿದ್ದಂತಹ ವೈರಾಗ್ಯವೇ ಬ್ರಿಟನಿಗೆ ಪೆಲಸ್ತೈನಿನಲ್ಲೂ ಮೂಡಿದೆಯಾದ್ದರಿಂದ ಅದಲ್ಲಿಂದ ಕಾಲ್ತೆಗೆಯುವ ಸಿದ್ಧತೆಯೊಂದನ್ನೇ ಈಗ ನಡೆಯಿಸುತ್ತಿದೆ. ಅತ್ತ ಅರಬ ಯೆಹೂದೀ ಜಗಳಕ್ಕೊಂದು ತೀರ್ಮಾನವೂ ಇಲ್ಲ, ಇತ್ತ ಬ್ರಿಟಿಷ್ ವ್ಯವಸ್ಥಾಧಿಕಾರವೂ ಇಲ್ಲವೆಂದಾದೊಡನೆ ಪೆಲಸ್ತೈನಿನಲ್ಲಿ ತನ್ನ ವಿರೋಧಿಯ ಆಟಕ್ಕವಕಾಶ ದೊರೆಯುವುದೋ ಎಂಬ ಭೀತಿಯಿಂದ ಅಮೇರಿಕವು ಮೇ ತಾ 15ರ ನಂತರ ಜಾಗತಿಕ ಸಂಘದ 'ಟ್ರಸ್ಟೀಶಿಪ್' ಆಡಳಿತೆಯನ್ನು ಪೆಲಸ್ತೈನಿನಲ್ಲಿ ಸ್ಥಾಪಿಸಲು ಮುಂದಾಗಿದೆ; ಅದನ್ನು ಜಾಗತಿಕ ಸಂಘವೂ ಅಂಗೀಕರಿಸಿಕೊಂಡು ಪ್ರಕೃತ ಅರಬ ಯೆಹೂದಿಗಳಿಗಾಗಿ ಒಂದು 'ಶಾಂತಿ ಕರಾರ'ನ್ನು ಮಂಜೂರು ಮಾಡಿಕೊಂಡಿದೆ. ಆದರೆ ಯಾವ ರಮ್ಯ ಹೆಸರಿನಿಂದಾದರೂ ಪೆಲಸ್ತೈನಿನಲ್ಲಿ ಮೇ 15ರ ನಂತರವೂ ಪರಕೀಯ ಆಡಳಿತೆಯಿರುವದಕ್ಕೆ ಅರಬ್ ಮತ್ತು ಯೆಹೂದಿಗಳಿಬ್ಬರೂ ಬದ್ಧ ವಿರೋಧವಿದ್ದಾರೆ. ಹೀಗಾಗಿ ಯಾವ ವಿಧದ ಶಾಂತಿ ಪಥವೂ ಪೆಲಸ್ತೈನ್ ವಿವಾದಕ್ಕೆ ತೋರದೆ ಅಲ್ಲಿಯ ಇಕ್ಕಡೆಯವರು ಹೋರಾಡಿಯೇ ಅದನ್ನು ತೀರ್ಮಾನಿಸಿಕೊಳ್ಳಲು ಮುಂದಾಗಿದ್ದಾರೆ. ಲೋಕದ ಪ್ರಮುಖ ರಾಷ್ಟ್ರಗಳು ಪರಿಸ್ಥಿತಿಯು ತಮಗೆ ಪ್ರತಿಕೂಲವಾಗಬಾರದೆಂಬ ಜಾಗ್ರತೆಯೊಂದನ್ನು ಮಾತ್ರ ವಹಿಸಿ ಯೆಹೂದೀ-ಅರಬರೀ ಕಾಳಗ ದೃಶ್ಯದಲ್ಲಿ ಹೋರೀ ಕಾಳಗವನ್ನು ಕಾಣುವ ಆನಂದವನ್ನೇ ಅನುಭವಿಸುತ್ತಾ ನಿಂತಿದ್ದಾರೆ!

ಸಮರ ಸಮೀಪಿಸುತ್ತಿದೆ

ಈಗಲೇ ಪೆಲಸ್ತೈನಿನಲ್ಲಿ ಖಾಡಾಖಾಡಿ ಸಮರ-ಪ್ರತ್ಯಕ್ಷ ಹೋರಾಟ-ನಡೆಯುತ್ತಿದೆಯಾದರೂ ಅಧಿಕೃತ ಯುದ್ಧವು ಇದೇ ತಾ. 15ರ ನಂತರ ಆರಂಭವಾಗಲಿದೆ. ಅದಕ್ಕಾಗಿ ಎಲ್ಲಾ ಅರಬ್ ರಾಷ್ಟ್ರಗಳೂ ಪ್ರಚಂಡ ಸಿದ್ಧತೆ ನಡೆಸಿವೆ. ಇದು ಎರಡು ಜನಾಂಗಗಳೊಳಗಿನ ಯುದ್ಧವಾಗಲಿದೆ. ಯೆಹೂದಿಗಳು ವಿಶೇಷ ಶಸ್ತ್ರಶಾಲಿಗಳು ಮತ್ತು ಚತುರರು. ಮೇಲಾಗಿ ನಾಜೀಕಾಲದಾರಭ್ಯದಿಂದ ಈವರೆಗೂ ವಿಶೇಷ ರೀತಿಯ ಕಷ್ಟ ನಷ್ಟ ಅಪಮಾನಗಳನ್ನವರು ಅನುಭವಿಸುತ್ತಾ ಬಂದು ಈಗ ಪಾಷಾಣ ಹೃದಯಿಗಳಾಗಿ ಮಾರ್ಪಟ್ಟಿದ್ದಾರೆ. ಪ್ರಪಂಚದ ಅತ್ಯಂತ ಮೇಧಾವಿ ಹಾಗೂ ಸಾಹಸಿ ಜನಾಂಗವಾದ ಯೆಹೂದಿಗಳು ಪೆಲಸ್ತೈನಿನಲ್ಲಿ ಅತ್ಯಾಧುನಿಕ ಶಸ್ತ್ರೋಪಕರಣಗಳೆಲ್ಲವನ್ನೂ ತಯಾರಿಸಿಟ್ಟು ಸುಸಜ್ಜಿತ ಸೇನೆಗಳನ್ನು ರಚಿಸಿಕೊಂಡು ಒಂದು ಸಶಕ್ತ ಸರಕಾರದಂತೆಯೇ ಮಾತಿಲ್ಲದೆ ಯುದ್ಧ ಸಿದ್ಧತೆ ನಡೆಸಿದ್ದಾರೆ. ಇತ್ತ ಈಜಿಪ್ತ್, ಸಿರಿಯಾ, ಲೆಬನಾನ್, ಇರಾಕ್, ಇರಾನ್, ಟ್ರಾನ್ಸ್‌ಜೋರ್ಡನ್, ಸೌದೀ ಅರೇಬಿಯಾ, ಮಾತ್ರವಲ್ಲ, ಅಫ್ಘಾನಿಸ್ಥಾನ್, ಪಾಕಿಸ್ಥಾನದ ವರೆಗಿನ ಎಲ್ಲಾ ಮುಸ್ಲಿಂ ರಾಷ್ಟ್ರಗಳೂ ಯೆಹೂದಿಗಳನ್ನು ನಿರ್ಮೂಲಿಸಿ ಪೆಲಸ್ತೈನಿನಲ್ಲಿ ಅರಬ್ಬೀ ರಾಜ್ಯ ಸ್ಥಾಪಿಸಲು ನಡು ಬಿಗಿದಿವೆ. ಅರಬ್ಬೀ ರಾಷ್ಟ್ರಗಳೊಂದಾಗಿ ಸ್ಥಾಪಿಸಿಕೊಂಡಿರುವ ಅರಬ್ ಲೀಗೇ ಪೆಲಸ್ತೈನ್ ಯುದ್ಧದಲ್ಲಿ ಅರಬರ ಮೂಲ ಕೇಂದ್ರವಾಗಿದೆ. ಇತ್ತ ಬ್ರಿಟಿಷ್ ಸೇನೆಗಳು ಕಾಲ್ತೆಗೆದೊಡನೆಯೆ ಜಾಫಾದಂತಹ ಬಂದರವನ್ನು ಮಿಂಚುವೇಗದಿಂದ ಆಕ್ರಮಿಸಿಕೊಂಡು ಯೆಹೂದಿಗಳು ಅರಬರನ್ನು ಬಡಿದೋಡಿಸಿದುದೂ, ಪವಿತ್ರ ನಗರ ಜೆರುಸಲೇಮಿನ ಅರಬ್ ಕ್ಷೇತ್ರಗಳ ಮೇಲೆ ಅಸಾಧ್ಯ ಧಾಳಿ ನಡಿಸಿರುವುದೂ ಎಲ್ಲೆಲ್ಲೂ ಯೆಹೂದಿಗಳ ಅತ್ಯಾಧುನಿಕ ಶಸ್ತ್ರೋಪಕರಣಗಳೆದುರು ಅರಬರು ಮುಗ್ಗರಿಸುತ್ತಿರುವುದೂ ಯೆಹೂದಿಗಳ ಪ್ರಚಂಡ ಸಿದ್ಧತೆ ಮತ್ತು ಶಕ್ತಿ ಸಾಹಸಕ್ಕೆ ನಿದರ್ಶನಗಳು. ಆದರೆ ಇದು ಇನ್ನೂ ಪೀಠಿಕೆ ಮಾತ್ರ. ನಿಜವಾದ ಸಮರವು ಆರಂಭವಾಗಲುಳಿದಿದೆ; ಈಗ ತಾನೇ ಪೆಲಸ್ತೈನಿನ ಗಡಿಗೆ ಕೆಲವೆಡೆ ಒಳಗಡೆಗೂ ಅದು ಬಂದಿದೆ. ಟ್ರಾನ್ಸ್‌ಜೋರ್ಡನ್ ರಾಷ್ಟ್ರವು ಯೆಹೂದಿಗಳ ಮೇಲೆ ಯುದ್ಧ ಜಾಹೀರುಮಾಡಿ ಪೆಲಸ್ತೈನಿನೊಳಗಡೆ ಐದು ಮೈಲಿಗೂ ಮಿಕ್ಕಿ ಆಕ್ರಮಿಸಿಕೊಂಡಿತೆಂದೂ, ಇತರ ಅರಬ್ ರಾಷ್ಟ್ರಗಳು ಬೇರೆ ಎರಡು ದಿಕ್ಕುಗಳಿಂದ ಪೆಲಸ್ತೈನಿನೊಳಗೆ ಒಂದೇ ಬಾರಿ ನುಗ್ಗಬೇಕೆಂಬ ನಿರ್ಧಾರವಾಗಿದೆಯೆಂದೂ ಕಳೆದ ತಾ 26ರ ವಾರ್ತೆಯಿದ್ದರೆ, ಸಿರಿಯಾ ಮತ್ತು ಲೆಬನಾನ್ ರಾಷ್ಟ್ರದ ಸೇನೆಗಳು ಪೆಲಸ್ತೈನ್ ಗಡಿಯೊಳಗೆ ನುಗ್ಗಿ ಮೂರು ಯೆಹೂದೀ ನೆಲೆಗಳನ್ನು ಸುತ್ತುಗಟ್ಟಿದ ವಾರ್ತೆಯು ಇದೇ ತಾ 1ರಲ್ಲಿ ಬಂದಿದೆ. ಈ ಅರಬ್ ರಾಷ್ಟ್ರಗಳ ಸ್ವಯಂಸೇವಕ ದಳಗಳು ಈ ಮೊದಲೇ ಪೆಲಸ್ತೈನಿನಲ್ಲಿ ಹೋರಾಡುತ್ತಿರುವಾಗ ಈಗ ಕ್ರಮಬದ್ಧ ಸೇನೆಗಳೇ ಆಕ್ರಮಣಕ್ಕಿಳಿದಿವೆ. ಅರಬ್ ನಾಯಕ ಅಝಾಮ್ ಪಾಶಾರು ಯೆಹೂದಿಗಳು ಆದಿ ಭಾಗದಲ್ಲಿ ಗೆದ್ದರೂ ಕೊನೆಗೆ ಅರಬ್ಬೀ ನೆರೆಯಿಂದ ಕೊಚ್ಚಿ ಹೋಗಲಿರುವರೆಂದೂ ಮೇ 15ರಲ್ಲಿ ಬ್ರಿಟಿಷ್ ಅಧಿಕಾರ ಬರ್ಖಾಸ್ತಾದೊಡನೆಯೇ ಪೆಲಸ್ತೈನ್ ಮರುಭೂಮಿಯಾಗಲಿದೆಯೆಂದೂ ಎಚ್ಚರಿಸಿದ್ದಾರೆ. ಅರಬ್ ರಾಷ್ಟ್ರ ನಾಯಕರ ಯುದ್ಧಾಲೋಚನಾ ಸಭೆಯು ಅಮ್ಮಾನ್‌ನಲ್ಲಿ ನಡೆದು ಯುದ್ಧ ಯೋಜನೆ ತಯಾರಾಗಿದೆ. ಮೇ 15ರವರೆಗೆ ಅರಬ್ ಆಕ್ರಮಣವನ್ನು ತಾವು ಇದಿರಿಸುವೆವೆಂದು ಬ್ರಿಟಿಷರಂದಿದ್ದಾರೆ. ಈಗ ಜೆರುಸಲೇಮ್, ಜಾಫಾ ಮೊದಲಾದ ಕಡೆಗಳಲ್ಲಿ ಬಿರುಗಾಳಿ ವೇಗದಿಂದ ಮುಂದೊತ್ತಿ ಬಂದ ಯೆಹೂದೀ ಸೇನೆಗಳನ್ನು ಬ್ರಿಟಿಷ್ ಸೇನೆಗಳು ತಡೆಗಟ್ಟಿ ಬಿರುಸಾದ ಯುದ್ಧ ನಡಿದಿದೆ. ಇದುವರೆಗಿನ ವಿದ್ಯಮಾನಗಳ ಮೇಲಿಂದ, ಬ್ರಿಟಿಷ್ ಸೇನೆಗಳಿಲ್ಲವಾದರೆ ಯೆಹೂದಿಗಳು ಪೆಲಸ್ತೈನಿನೊಳಗಿನ ಅರಬರಿಗೆ ಇಷ್ಟರೊಳಗೇನೇ ಕುದಿ ನೀರು ಹೊಯ್ಯುತ್ತಿದ್ದರೆನ್ನಬಹುದು. ಮೇ 15ರ ನಂತರ ಪೆಲಸ್ತೈನಿನ ಹೋರಾಟವು ಯಾವ ರೂಪಕ್ಕೆ ತಿರುಗುವುದು- ಯಾರಾರನ್ನೆಳೆದುಕೊಳ್ಳುವುದು-ಎಂಬುದನ್ನೀಗ ಲೋಕವೇ ಆತುರದಿಂದ ನಿರೀಕ್ಷಿಸುತ್ತಿದೆ.

ಜಾಗತಿಕ ಸಮಸ್ಯೆಗಳು

ಇತ್ತ ಪ್ರಪಂಚದ ಪ್ರತಿಯೊಂದು ರಾಷ್ಟ್ರದಲ್ಲೂ ರಶ್ಯಾ-ಅಮೇರಿಕ ತಿಕ್ಕಾಟಗಳ ಪ್ರತಿ ಛಾಯೆಯೂ ಗೃಹಸಮಸ್ಯೆಗಳಿಂದಾಗಿ ಗೊಂದಲಗಳೂ ಕಾಣಿಸಿಕೊಂಡಿವೆ. ಚೈನಾದ ಯುದ್ಧವು ಕಳೆದ ವಾರದಲ್ಲೊಮ್ಮೆ ಭೀಕರ ರೂಪಕ್ಕೆ ತಿರುಗಿದ್ದಿತು. ಸಯಾಮಿನಲ್ಲಿ ಮುಸ್ಲಿಮರೊಂದೆಡೆ ಬಂಡಾಯವೆದ್ದು ಅಲ್ಲಿಯ ಪೋಲೀಸರೊಡನೆ ಗೊರಿಲ್ಲಾ ಯುದ್ಧ ಕೊಟ್ಟಿದ್ದರು. ಗ್ರೀಕ್ ಮಂತ್ರಿಯೊಬ್ಬರಿಗೆ ಗುಂಡು ಹಾರಿಸಲ್ಪಟ್ಟು ಅವರು ಜಖಂಗೊಂಡು ಅಥೆನ್ಸ್ ನಗರದಲ್ಲಿ ಮಾರ್ಶಲ್‌ಲಾ ಜ್ಯಾರಿಗೆ ಬಂದಿದೆ. ಈಜಿಪ್ತಿನ ವಾಫ್ದ್ ಪಕ್ಷ ನಾಯಕ ನಾಹಾಸ್ ಪಾಶಾರನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ಕೈರೋದ ಗೃಹದ ಮುಂದ ಸಿಡಿಮದ್ದು ತುಂಬಿಸಿದ ಕಾರೊಂದನ್ನು ಸ್ಫೋಟಗೊಳಿಸ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾ ಯ ಲ್ ಮ ಹಾ ಲಿ ನ ಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಬಿಸಿನೀರು ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಅವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ನಿಜಾಮ್ ಸಮಸ್ಯೆ ಸಮರ ನಿರ್ಧರಿಸಬಹುದೆ

ದ್ದರೂ ಅಪಾಯವಾಗಲಿಲ್ಲ. ಜಾಗತಿಕ ಸಂಘದ ಭದ್ರತಾ ಕೌನ್ಸಿಲು ಜುನಾಗಢ್, ಝೆಕೊಸ್ಲೊವೇಕಿಯಾದಂತಹ ಅವಧಿ ಬಾಧೆ ತಟ್ಟಿದ ಪ್ರಶ್ನೆಗಳನ್ನೆತ್ತಿಕೊಂಡು ಚರ್ಚೆ ನಡೆಸುತ್ತಾ ಕುಳಿತಿದೆ.

ಇತ್ತ ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟ್ ವಿರೋಧ ಚಟುವಟಿಕೆಗಳು ಇಡೀ ಪ್ರಪಂಚದ ಪ್ರತಿಯೊಂದು ರಾಷ್ಟ್ರದ ರಾಜಕೀಯದಲ್ಲೂ ವಿಶೇಷ ರೂಪದಿಂದ ಕಾಣುತ್ತಿವೆ. ಮಿತ್ರ ರಾಷ್ಟ್ರಗಳಲ್ಲೆಲ್ಲಾ ಕಮ್ಯೂನಿಸ್ಟರ ಬಂಧನ, ಬಹಿಷ್ಕಾರ, ನಿಷೇಧಗಳು ಬಿದ್ದಿವೆ. ಅಂತೆಯೇ ಪ್ರತಿಯೊಂದು ರಾಷ್ಟ್ರದ ಕಮ್ಯೂನಿಸ್ಟರೂ ಸದ್ಯದ ವಿಶೇಷ ವಿದ್ಯಮಾನಗಳಿಗನುಗುಣವಾಗಿ ತಮ್ಮ ಒಳಾಂದೋಲನಗಳನ್ನು ಬಿಗುಗೊಳಿಸಿದ್ದಾರೆ. ಪ್ರಪಂಚದ ಎಲ್ಲೆಡೆಗಳಲ್ಲೂ 'ಮೇ ದಿನಾಚರಣೆ'ಯು ಸಂಭ್ರಮದಿಂದ ನಡೆದಿದೆ. ಮೋಸ್ಕೋದಲ್ಲಿ ಆ ದಿನ ನಡೆದ ಸೇನಾ ಪ್ರದರ್ಶನ ಮತ್ತು ಸ್ಟಾಲಿನರಿಗೆ ಸಂದ ಮಿಲಿಟರಿ ವಂದನೋತ್ಸವದಲ್ಲಿ ಹಾಜರಿದ್ದ ಭಾರತದ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು "ಅಲ್ಲಿಯ ಸಂಘಟಿತ ಶಿಸ್ತು, ಧ್ವಜ ಸಮೂಹಗಳ ಭವ್ಯ ದೃಶ್ಯ, ಆ ಸೇನಾಂವ ಮತ್ತು ಜನತೆಯ ಅಮೋಘ ಉತ್ಸಾಹ, ಇವುಗಳೆಲ್ಲಾ ನನ್ನ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನು ಉಂಟುಮಾಡಿವೆ. ಆದೊಂದು ಮುಹೂರ್ತದಲ್ಲಿ ನನ್ನ ಅಹಿಂಸಾತ್ಮಕ ರಕ್ತ ಕೂಡಾ ಕುದಿದುಹೋಯಿತು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಮನಸ್ಸಿಗೆ ಹೊಳೆದುದೆಂದರೆ ನಾವು ಶಾಂತಿಯನ್ನು ವಿಶೇಷಾಲಂಕಾರಗಳಿಂದ ಶೃಂಗರಿಸಿ ತೋರಿಸಿದರೆ ಯುದ್ಧ ತೊಲಗಿ ಹೋದೀತು; ಶಾಂತಿಯು ನಮ್ಮ ನಡುವಿನಿಂದ ಯುಕ್ತಿಪೂರ್ವಕವಾಗಿ ನುಸುಳಿಕೊಳ್ಳುವುದು ನಿಂತೀತು" ಎಂದಿದ್ದಾರೆ. ಬ್ರಿಟಿಷ್ ಪ್ರಧಾನ ಮಂತ್ರಿ ಮಿ. ಅಟ್ಲೀಯವರು ಮೇ ದಿನಾಚರಣೆಯೊಂದರಲ್ಲಿ ರಶ್ಯದ ಕಮ್ಯೂನಿಸಮನ್ನು ಸ್ಪಷ್ಟವಾಣಿಯಿಂದ ಖಂಡಿಸಿ ಕೊಟ್ಟ ಭಾಷಣವೇ ಕಳೆದ ವಾರದ ಪ್ರಾಮುಖ್ಯ ಹೇಳಿಕೆಯೆನ್ನಬಹುದು. ಕಮ್ಯೂನಿಸ್ಟ್ ತತ್ವವೆಂಬುದು ತೀರಾ ಸಂಕುಚಿತವಾದ ಯದಸ್ತುತದ್ವಾ ಸಮತಾವಾದವೆಂದೂ, ಯುರೋಪಿನ ತೀರಾ ಹಿಂದುಳಿದ ರಾಷ್ಟ್ರಗಳಲ್ಲಿ ಮಾತ್ರ ಅದರ ವರ್ಚಸ್ಸು ಬಿದ್ದಿದೆಯೆಂದೂ ಹೇಗಳೆಯುತ್ತಾ ಮಿ. ಅಟ್ಲೀಯೆಂದರು: "ನನ್ನ ಎಳೇ ಪ್ರಾಯದಲ್ಲಿ ರಶ್ಯವು ಪೋಲೀಸ್ ರಾಜ್ಯಭಾರದ ಪರಮಾವಧಿಯ ಒಂದು ಮಾದರಿಯಾಗಿತ್ತು. ಭಯ ಮತ್ತು ದಬ್ಬಾಳಿಕೆಯ ಬೀಡಾಗಿ, ವಾಕ್ಸ್ವತಂತ್ರ್ಯ ಪತ್ರಿಕಾ ಸ್ವಾತಂತ್ರ್ಯ ಯೋಚನಾ ಸ್ವಾತಂತ್ರ್ಯಗಳಿಗೆ ಬಹಿಷ್ಕಾರಪಟ್ಟ ನಾಡಾಗಿ ಇತ್ತು. ಈಗ ಕೂಡಾ ಅದು ಆಗಿನಂತೆಯೇ ಇದೆ. ವ್ಯತ್ಯಾಸವೆಂದರೆ ಈಗ ಆಳುತ್ತಿರುವ ಪಂಗಡ ಮಾತ್ರ ಬೇರೆ. ಪಾಶ್ಚಾತ್ಯ ನಾಗರೀಕತೆಯಲ್ಲಿ ತನ್ನ ಚಿಹ್ನೆಗಳನ್ನೆತ್ತುವ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ರಶ್ಯಕ್ಕಿನ್ನೂ ಹಲವು ಶತಮಾನಗಳು ಬೇಕಾಗಬಹುದು. ರಷ್ಯಾ ಹಿಂದಿನ ಕಾಲದಲ್ಲಿ ಏಶ್ಯದ ವರೆಗೆ ಕಾಲು ಚಾಚಿ ಮತ್ತೂ ಮುಂದೆ ನೋಡುತ್ತಿದ್ದ ಸಾಮ್ರಾಜ್ಯವಾಗಿತ್ತು. ಈ ದಿನ ಕೂಡಾ ಅದು ಹಾಗೆಯೇ ಇದೆ. ಈಗ ಹೊಸ ವಿಧಾನಗಳನ್ನೇನೋ ಅದು ಅಂಗೀಕರಿಸಿಕೊಂಡಿದೆಯಾದರೂ ಪರಿಣಾಮವು ಹಿಂದಿನದೇ. ಪೂರ್ವ ಯುರೋಪಿನ ರಾಷ್ಟ್ರಗಳು ಅದರ ಸಾಮ್ರಾಜ್ಯಲಾಲಸೆಗೆ ಬಲಿಯಾಗಿವೆ. ಆದರೂ 'ಸೋಶಿಯಾಲಿಸ್ಟ್ ಸೋವಿಯೆಟ್ ರಿಪಬ್ಲಿಕ್ ಯೂನಿಯನ್' ಎಂದು ಹೆಸರಿಟ್ಟುಕೊಂಡಿರುವ ರಶ್ಯಕ್ಕೆ ಸಾಮ್ರಾಜ್ಯಾಭಿಲಾಷೆಯಿಲ್ಲವೆಂದೂ, ಅದಿರುವುದು ಇಂಗ್ಲೆಂಡಿಗೆ ಮಾತ್ರವೆಂದೂ ಭಾವಿಸಿಕೊಂಡಿರುವ ಭ್ರಾಂತರು ಕೆಲವರಿದ್ದಾರೆ. ಈ ಸ್ತುತಿಪಾಠಗಳಿಂದ ನಾವು ವಂಚಿಸಲ್ಪಡದಿರೋಣ" ಈ ರೀತಿ ಖಂಡತುಂಡ ಮಾತುಗಳಿಂದ ಮಿ. ಅಟ್ಲೀ ರಶ್ಯವನ್ನು ಹೀನೈಸಿದ್ದಾರೆ. ಇಟೆಲಿಯ ಚುನಾವಣೆಯ ವೇಳೆ ಅಲ್ಲಿಯ ಕಮ್ಯೂನಿಸ್ಟ್ ಪಕ್ಷಪಾತಿಯಾದ ಸಮತಾವಾದಿ ನಾಯಕ ಪೀಟ್ರೋ ನೆನ್ನಿಗೆ ವಿಜಯ ಪ್ರಾರ್ಥಿಸಿ ತಂತಿ ಕೊಟ್ಟಿದ್ದ ಬ್ರಿಟಿಷ್ ಕೂಲಿಗಾರಪಕ್ಷದ ಸದಸ್ಯ ಜೋನ್ ಪ್ಲೇಟ್ಸ್ ಮಿಲ್ಸರನ್ನು ಪಕ್ಷದಿಂದ ತೆಗೆದು ಹಾಕಲಾಗಿದೆಯಲ್ಲದೆ ಇತರ 21 ಸದಸ್ಯರಿಗೆ ಸ್ಪಷ್ಟ ಎಚ್ಚರಿಕೆ ಕೊಡಲಾಗಿದೆ. ಇಂದು ಬ್ರಿಟಿಷ್ ಮಾದರಿಯ ಪ್ರಜಾಪ್ರಭುತ್ವ ಮತ್ತು ರಶ್ಯನ್ ಮಾದರಿಯ ಕಮ್ಯೂನಿಸಮ್ ಪಕ್ಷಾನುಯಾಯಿಗಳೊಳಗೆ ಇರುವ ಮನಕಷಾಯವು ಇಂತಹದು!

ಹೈದರಾಬಾದ್ ಸಮಸ್ಯೆ

ಭಾರತದ ರಾ...ಯು ಗಗನವನ್ನು ಕವಿದಿದ್ದ ಹೆಚ್ಚಿನ ಕಾರ್ಮೋಡಗಳೀಗ ಚದರಿವೆಯಾದರೂ ಹೈದರಾಬಾದ್ ಸಮಸ್ಯೆಯೊಂದು ದಿನದಿಂದದಿನಕ್ಕೆ ಬಿಗಿಗೊಳ್ಳುತ್ತಾ ಬಂದು ಈಗ ಸಹನೆ ತಪ್ಪಿಸುತ್ತಿದೆ. ಪಾಕಿಸ್ತಾನ್ ಸ್ಥಾಪನೆಯ ಮೊದಲು ಲೀಗ್ ಮುಸ್ಲಿಮರು ಪ್ರತಿಭಟಿಸಿದ ಶಾಂತಿ ಸೂಚನೆಗಳನ್ನೂ ದರ್ಪ ಮತ್ತು ಕುಯುಕ್ತಿಗಳಿಂದ ಹುಸಿಗೊಳಿಸುತ್ತಾ ಬಂದಿದ್ದ ಮಾದರಿಯಲ್ಲೇ ನಿಜಾಮ್ ಸರಕಾರವು ಹಿಂದೀ ಸರಕಾರದ ಒಡಂಬಡಿಕೆಯಾತುರದಿದಿರು ಕಪಟ ನಾಟಕಗಳನ್ನು ಆಡುತ್ತಾ ಇದೆ. ಬಿಸಿಲ್ಗುದುರೆಯಂತಹ ಸುಧಾರಣಾ ಚಿತ್ರಗಳನ್ನು ಮುಂದಿಟ್ಟು ಹೈದರಾಬಾದಿನ ನಿಜಾಮರು ಹೊರಡಿಸಿದ್ದ ಫರ್ಮಾನು ಅವರ ದುರುದ್ದೇಶವೆಷ್ಟು ಆಳವಾಗಿದೆಯೆಂಬುದನ್ನು ಪ್ರದರ್ಶಿಸಿತೇ ಹೊರತು ಜನರಿಂದಾವ ಸಹಾನುಭೂತಿಯನ್ನೂ ಗಳಿಸಿಲ್ಲ. ಕೆಲವು ಕಾಂಗ್ರೆಸಿಗರನ್ನು ನಿಜಾಮ್ ಸರಕಾರವು ಬಿಡುಗಡೆ ಮಾಡಿರುವುದಾದರೂ ಸ್ವಾಮಿ ರಮಾನಂದ ತೀರ್ಥರಂತಹ ನಾಯಕರನ್ನು ಬಿಟ್ಟಿಲ್ಲ. ಇತ್ತ ರಝಾಕಾರರ ಉಪಟಳವು ಏಕ ಪ್ರಕಾರ-ನಿರಾತಂಕವಾಗಿ-ಸಾಗಿದೆ; ಗಡಿ ಘರ್ಷಣೆಗಳಾಗುತ್ತಲೇ ಇವೆ. ಇವೆಲ್ಲಾ ವಿದ್ಯಮಾನಗಳೂ ಕ್ಷಮಾತೀತವಾಗುವಷ್ಟು ಮೇರೆ ಮೀರಿ ಹೋಗಿರುವುದರಿಂದಲೇ ಬೊಂಬಾಯಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಗುಪ್ತಾಧಿವೇಶನ ಸೇರಿ ಹೈದರಾಬಾದ್ ಕಂಟಕದ ಕುರಿತು ಗಾಢ ಪರ್ಯಾಲೋಚನೆ ನಡೆಸಿದ್ದಿತು. 'ಇನ್ನು ಸಹಿಸಲು ನಮ್ಮಿಂದ ಸಾಧ್ಯವಿಲ್ಲ. ಹೈದರಾಬಾದಿನ ಮುಂದೆ ಭಾರತದೊಂದಿಗೆ ಜೋಡಣೆ ಅಥವಾ ಯುದ್ಧ ಎಂಬೆರಡೇ ಹಾದಿಗಳಿವೆ. ರಝಾಕಾರರನ್ನು ತಡೆದಿಡಲು ನಿಜಾಮ್ ಸರಕಾರದಿಂದಾಗದಿದ್ದರೆ ನಾವು ನೋಡುವೆವು. ಪ್ರಜಾಪ್ರಭುತ್ವ ಕೊಡದೆ ಮಧ್ಯಯುಗದ ಮರ್ಜಿಯಿಂದಲೇ ಇನ್ನೂ ಆಳಬಹುದೆಂಬ ಭ್ರಮೆಯು ನಿಜಾಮ್ ಸರಕಾರಕ್ಕಿದ್ದರೆ ಅದಕ್ಕುಳಿಗಾಲವಿಲ್ಲ' ಎಂದು ಪಂಡಿತ ನೆಹರುಗಳೀಗ ಸ್ಪಷ್ಟವಾಗಿ ಹೇಳಹತ್ತಿದ್ದಾರೆ.

ತಮ್ಮ ದುಶ್ಚೇಷ್ಟೆಗಳಿಂದ ಹಿಂದೀ ಸರಕಾರದ ಕಣ್ಣು ಕೆಂಪೇರಹತ್ತಿರುವುದನ್ನು ಕಂಡ ನಿಜಾಮ್ ಸರಕಾರದ ಪ್ರಧಾನಿ ಮಿ. ಲಾಯಿಕ್ ಅಲಿಗಳು ಹೈದರಾಬಾದು ಎಸೆಂಬ್ಲಿಯ ಮುಂದೆ ದರ್ಪ ಪರದೆಯೊಳಗಿಂದ ದೈನ್ಯತೆಯು ಅಲ್ಲಲ್ಲಿ ಮಾಡಿತೋರುವಂತಹ ಅಸಂಬದ್ಧ ಭಾಷಣವನ್ನಿತ್ತಿದ್ದಾರೆ. "ಭಾರತ ಮತ್ತು ಪಾಕಿಸ್ತಾನವೆರಡಕ್ಕೂ ಬೇರಡೆ ಹೈದರಾಬಾದು ಸ್ವತಂತ್ರವಾಗಿರಬೇಕೆಂಬುದೇ ಆದಿಕಾಲದಿಂದಲೂ ನಿಜಾಮರ ದೃಢೋದ್ದೇಶ. ಆದರೆ ರಾಜಕೀಯವಾಗಿ ಮತ್ತು ಭೌಗೋಲಿಕವಾಗಿ ಹೈದರಾಬಾದ್ ಭಾರತಕ್ಕೆ ಹೊಂದಿಕೊಂಡಿರುವುದರಿಂದ ರಕ್ಷಣೆ, ವಿದೇಶ ಸಂಬಂಧ ಮತ್ತು ವ್ಯವಹಾರ ಜೋಡಣೆಗಳ ಮಟ್ಟಿಗೆ ಇವೆರಡರೊಳಗೆ ನಿಕಟ ಸಂಬಂಧವಿರಬೇಕೆಂದೇ ಹೈದರಾಬಾದಿನ ಉತ್ಕಟೇಚ್ಛೆ. ಹೀಗಿದ್ದರೂ ಹೈದರಾಬಾದಿನ ಮಂತ್ರಿತರ ನಾಯಕರ ವಿರುದ್ಧವಾಗಿ ಬಲಪ್ರಯೋಗ ಮಾಡುವ ಯೋಚನೆಯನ್ನೇ ಭಾರತ ಸರಕಾರವು ಸದಾ ಕಾಲವೂ ಪ್ರದರ್ಶಿಸುತ್ತಾ ಬಂದುದರಿಂದಾಗಿ ಶಾಂತಿಸಾಧನೆಯು ಆತುರವೆಷ್ಟಿದ್ದರೂ ಹೈದರಾಬಾದಿಗೆ ಭಾರತದೊಡನೆ ಸ್ನೇಹ ಸಂಬಂಧಕ್ಕೆ ಬರಲಾಗದಿದ್ದುದು ಶೋಚನೀಯ. ಇನ್ನಾದರೂ ಕೊನೆಯ ಮುಹೂರ್ತದ ವರೆಗೂ ಶಾಂತಿಯನ್ನು ರಕ್ಷಿಸಿಕೊಳ್ಳಬೇಕೆಂಬುದೇ ನಮ್ಮ ಉತ್ಕಟಾಭಿಲಾಷೆ. ನಮ್ಮೀ ಶಾಂತಿಯತ್ನಕ್ಕೆ ಪ್ರತಿಯಾಗಿ ನಮ್ಮ ಮೇಲೆ ಬಲ ಪ್ರಯೋಗವಾದಲ್ಲಿ, ನಾವಪೇಕ್ಷಿಸದಿದ್ದರೂ ಅಂತಹ ಸಂದರ್ಭವು ಅನಿವಾರ್ಯವಾಗಿ ನಮಗೊದಗಿಬಂದಲ್ಲಿ ಕೊನೆಯ ಪರಿಣಾಮವನ್ನು ದೇವರ ಕೈಗೆ ಬಿಟ್ಟು ನಮ್ಮ ಸರ್ವಶಕ್ತಿಯಿಂದ ಧೈರ್ಯ ಸ್ಥೈರ್ಯ ಮತ್ತು ಘನತೆಯನ್ನಾಧರಿಸಿ ಅದನ್ನಿದಿರಿಸುವದೇ ಸರಿ. ನಾವು ದುರ್ಬಲರಿರಬಹುದು, ನಿಸ್ಸಹಾಯಕರಿರಬಹುದು; ಆದರೆ ನಾವು ಹಿಡಿದ ಹಾದಿ ನ್ಯಾಯವಾದುದು; ಸರ್ವ ಶಕ್ತನ ಮೇಲೆ ನಮಗಿರುವ ನಂಬಿಕೆ ಅಚಲವಾದುದು" ಎಂದು ಮಿ. ಲಾಯಕ್‌ಅಲಿಗಳೆಂದಿದ್ದಾರೆ. ಇದುವರೆಗೂ ಅಸಾಧಾರಣ ತಾಳ್ಮೆಯಿಂದ ಹೈದರಾಬಾದ್ ಸರಕಾರದ ಅತಿರೇಕಗಳನ್ನು ಹೃದಯದಲ್ಲಿಯೇ ಜೀರ್ಣಿಸಿಕೊಳ್ಳುತ್ತಾ ಹೇಗಾದರೂ ಶಾಂತಿಯಿಂದಲೇ ಹೈದರಾಬಾದ್ ಸಮಸ್ಯೆಯನ್ನು ತೀರ್ಮಾನಿಸೋಣವೆಂದು ಪ್ರಯತ್ನಿಸುತ್ತಾ ಬಂದ ಭಾರತ ಸರಕಾರದ ಧೋರಣೆಗೆ ನಿಜಾಮರ ಪ್ರಧಾನಿಯಿಂದ ದೊರೆತ ಉಡುಗೊರೆಯಿದು!

ನೆಹರುಗಳ ಖಂಡತುಂಡ ಮಾತು

ಹೈದರಾಬಾದಿನ ಕಲಸು ಮೇಲೋಗರದ ಕಲ್ಮಷವನ್ನು ಪಂಡಿತ ನೆಹರುಗಳು ಇದೇ ತಾ 1ರಲ್ಲಿತ್ತ ಸ್ಪಷ್ಟ ಹೇಳಿಕೆಯಲ್ಲಿ ತೋರಿಸಿಕೊಟ್ಟಿದ್ದಾರೆ. 'ಇನ್ನು ಯಾವ ವಂಚನೆಗೂ ಅವಕಾಶವಿಂದ ಯಥಾರ್ಥ ಧೋರಣೆಯೊಂದನ್ನೇ ನಿಜಾಮ್ ಸರಕಾರವು ಅಂಗೀಕರಿಸಬೇಕು, ಇಲ್ಲವೇ ಹಿಂದೀ ಸರಕಾರವದನ್ನು ಕಲಿಸಿಬಿಡಬೇಕು,' ಎಂಬುದನ್ನು ಭಾರತ ಪ್ರಧಾನಿ ಮುಚ್ಚುಮರೆಯಿಲ್ಲದೆ ಜಾಹೀರುಮಾಡಿದ್ದಾರೆ. ಪಂಡಿತಜೀಯ ಭಾಷಣದ ಸಾರ ಹೀಗಿದೆ "ಹೈದರಾಬಾದಿನ ಮುಂದೀಗ ಎರಡೇ ಮಾರ್ಗಗಳಿವೆ. ಒಂದು ಹಿಂದೀ ಕೇಂದ್ರದ ಭಾಗವಾಗಿ ಜೋಡಣೆಗೊಂಡು ಪಾಲುಗಾರನಾಗಿರುವುದು; ಮತ್ತೊಂದು ಹಿಂದೀ ಕೇಂದ್ರದ . ಉಪಭಾಗವಾಗಿ ನಿಶ್ಚಿಸಲ್ಪಟ್ಟು ಹಕ್ಕು ಕಳಕೊಂಡಿರುವುದು. ಮೊದಲನೆಯದರಲ್ಲಿ ದೇಶರಕ್ಷಣೆ, ವಿದೇಶ ಸಂಬಂಧ ಮತ್ತು ಸಂಚಾರ ವಹಿವಾಟು ಪಾ

(೬ನೇ ಪುಟ ನೋಡಿರಿ.)

Navayuga Enterprise Ltd.,
UDIPI.
NOTICE

The register of members and share transfer books of the Company will remain closed from the 20th May 1948 to 10th June 1948 (both days inclusive.)

(By order of the Board)

Office of the Company
Palkote, Udipi
2—5—1948

K. Konnayya Shetty.
Managing Director

The Canara Banking Corporation Limited.
Estd. 1906.
(Incorporated in British India)
Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates:—
3 & 4 months — @ 2½ % p. a.
5 & 6 months — @ 2¾ % p. a.

ನವಯುಗ
ಗುರುವಾರ, ಉಡುಪಿ, ೬-೫-'೪೮

ಕಮ್ಯೂನಿಸ್ಟ ಗೊಂದಲ

ಕಮ್ಯೂನಿಸ್ಟ ಸರಕಾರವಿಲ್ಲದ ಪ್ರತಿಯೊಂದು ರಾಷ್ಟ್ರದಲ್ಲೂ ಈಗ ಕಮ್ಯೂನಿಸ್ಟರ ಬಂಧನಗಳಾಗುತ್ತಿವೆ; ಅವರ ಚಟುವಟಿಕೆಗಳಿಗೆ ಬಹಿಷ್ಕಾರ ಬೀಳುತ್ತಿದೆ. ಭಾರತದ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳೂ ಈ ಮಟ್ಟಿಗೆ ಹಿಂದಿಲ್ಲ. ಮದರಾಸಿನಂತಹ ಕೆಲವು ಪ್ರಾಂತಿಕ ಸರಕಾರಗಳಿಗೆ ಸ್ವರಕ್ಷಣಾ ದೃಷ್ಟಿಯಿಂದ ಕಮ್ಯೂನಿಸ್ಟರ ಮೇಲೆ ಕೈಯೆತ್ತಬೇಕಾಗಿ ಬಂದಷ್ಟು ಬೇರಾವ ಸಂಘಟನನ್ನೂ ದಮನಿಸುವ ಆವಶ್ಯಕತೆ ಬಿದ್ದುದಿಲ್ಲ. ಇದಕ್ಕೆ ಕಾರಣಗಳಿವೆ. ಗಾಂಧಿಜೀಯ ಅಹಿಂಸಾತ್ಮಕ ಚಳವಳಗಳು ಹುಟ್ಟುವ ಮೊದಲು ಉತ್ತರ ಭಾರತವೇ ಕಮ್ಯೂನಿಸ್ಟರ ಅಥವಾ ಕ್ರಾಂತಿಕಾರರ ಚಟುವಟಿಕೆಗಳ ಕ್ಷೇತ್ರವಾಗಿದ್ದಿತು. ಆ ಮೇಲೆ ಈ ವರೆಗೂ ಅನುಕ್ರಮವಾಗಿ ಮಹಾತ್ಮರ ಸತ್ಯಾಹಿಂಸಾ ಪ್ರಭಾವ, ಜಾತೀಯತಾ ಗೊಂದಲಗಳು ಅಲ್ಲಿಯ ವಾತಾವರಣವನ್ನು ಸ್ವಾಧೀನಪಡಿಸಿಕೊಂಡು ಕಮ್ಯೂನಿಸ್ಟರನ್ನು ಸಂಪೂರ್ಣ ಹಿಂದಕ್ಕೆ ತಳ್ಳಿವೆ. ಹೀಗೆ, ಉತ್ತರ ಭಾರತದಲ್ಲಿ ಬಹುತೇಕವಾಗಿ ಅಡಗಿದ ಕಮ್ಯೂನಿಸ್ಟ ಗೊಂದಲಗಳು ದಕ್ಷಿಣ ಭಾರತದಲ್ಲಿ ತಲೆಯೆತ್ತಿವೆ. ಮದ್ರಾಸ ಪ್ರಾಂತ್ಯದಲ್ಲಿ-ಮುಖ್ಯವಾಗಿ ಪಶ್ಚಿಮ ಕರಾವಳಿಯೊತ್ತಿನ ಕೆಲವು ಜಿಲ್ಲೆಗಳಲ್ಲಿ-ಒಂದೆರಡು ವರುಷಗಳಿಂದ ನಡೆಯುತ್ತಾ ಬಂದಿರುವ ಕಮ್ಯೂನಿಸ್ಟ ಹಾವಳಿಯು ನಿಜಕ್ಕೂ ಅಸಹ್ಯವಿದೆ. ಕೊಲೆ ಗದ್ದೆ-ಬೆಳೆ ಪೈರುಗಳ ಆಕ್ರಮಣ ಸ್ವಕಾರ್ಯಸಾಧನೆಗಾಗಿ ಬಲ ಪ್ರಯೋಗ, ಇತ್ಯಾದಿ ಹಿಂಸಾತ್ಮಕ ಚಟುವಟಿಕೆಗಳ ಘೋರ ವಾರ್ತೆಗಳು ಆ ಕಡೆಗಳಿಂದ ಆಗಾಗ ಬರುತ್ತಿವೆ. ತಾವು ಹೀಗೆ ಗೊಂದಲವೇಳುವ ಕಾರಣಗಳಾಗಿ ಕಮ್ಯೂನಿಸ್ಟರು ಮುಂದಿಡುತ್ತಿರುವ ಬೇಡಿಕೆಗಳನ್ನು ಪೂರೈಸಿಕೊಡಲು, ಒಂದೊಮ್ಮೆಗೆ ಕಮ್ಯೂನಿಸ್ಟ ಸರಕಾರವಿಲ್ಲಿರುತ್ತಿದ್ದರೆ ಅದಕ್ಕೂ ಅಸಾಧ್ಯವಾಗುತ್ತಿತ್ತೆಂಬುದೂ ಕಮ್ಯೂನಿಸ್ಟರ ಇಂತಹ ಹಿಂಸಾತ್ಮಕ ಚಟುವಟಿಕೆಗಳನ್ನು ಸ್ವತಃ ಕಮ್ಯೂನಿಸ್ಟ ಸರಕಾರವೇ ಕಠೋರ ರೀತಿಯಿಂದ ದಮನಿಸುತ್ತಿತ್ತೆಂಬುದೂ ಖಂಡಿತ. ಆದ್ದರಿಂದ 'ಬೇಜವಾಬ್ದಾರೀ ಷಂಡಾಟಿಕೆ'ಯೆಂದಲ್ಲದೆ ಇಲ್ಲಿಯ ಕಮ್ಯೂನಿಸ್ಟರ ಈ ಕಾಲದ ಚಟುವಟಿಕೆಗಳನ್ನು ಬೇರಾವ ದೃಷ್ಟಿಯಿಂದಲೂ ಕಾಣುವದಸಾಧ್ಯ. ದಕ್ಷಿಣಕನ್ನಡದ ಗಡಿಯಲ್ಲೇ ಇರುವ ಮಲಬಾರಿಗೆ ಸೇರಿದ ಅರಣ್ಯ ಪ್ರದೇಶದಲ್ಲಿ ಅಡಗಿದ್ದ ಕಮ್ಯೂನಿಸ್ಟರ ಧಾಳಿಗೆ ಹೋದ ಮಲಬಾರ್ ಸ್ಪೆಶ್ಯಲ್ ಪೋಲೀಸ್ ದಳಕ್ಕೂ ಕಮ್ಯೂನಿಸ್ಟರಿಗೂ ಇದೇ ತಾ 1ರಲ್ಲಿ ಪ್ರತ್ಯಕ್ಷ ಯುದ್ಧವೇ ನಡೆದು ಇಕ್ಕಡೆಯವರೂ ಗುಂಡು ಹಾರಿಸಿಕೊಂಡರೆಂದೂ ಐದುಮಂದಿ ಕಮ್ಯೂನಿಸ್ಟರು ಮಡಿದುಬಿದ್ದರೆಂದೂ ತಿಳಿದುಬಂದಿದೆ. ಹದಿನೇಳುಮಂದಿ ಕಮ್ಯೂನಿಸ್ಟರೊಂದಿಗೆ ಕೋವಿ, ಕತ್ತಿ, ಮದ್ದುಗುಂಡುಗಳೂ ಪೋಲಿಸರಿಗೆ ಸಿಕ್ಕಿವೆಯಂತೆ. ಮರುದಿನ ತಳಿಪರಂಬದ ಬಳಿಯ ಕಾಡೊಂದರಲ್ಲಿ ಕಮ್ಯೂನಿಸ್ಟರಿಗೂ ಗ್ರಾಮಸ್ಥರಿಗೂ ಹೋರಾಟವಾಗಿ ಒಬ್ಬಿಬ್ಬರು ಜಖಂಗೊಂಡ ಸುದ್ದಿಯಿದೆ. ಮದ್ರಾಸ್ ಸರಕಾರವು ಕಮ್ಯೂನಿಸ್ಟರ ಬಹಿರಂಗ ಚಟುವಟಿಕೆಗಳಿಗೆ ಬಹಿಷ್ಕಾರ ಹಾಕಿದ್ದರಿಂದ ಅವರೀಗ ಗೊರಿಲ್ಲಾ ಹೋರಾಟ ಕ್ರಮಕ್ಕಿಳಿದಂತೆ ತೋರುತ್ತಿದೆ.

'ಸಮತಾವಾದಿ ಸರಕಾರ' 'ಕೂಲಿಗಾರರ ಅಧಿಕಾರ' 'ಜನತಾ ರಾಜ್ಯಭಾರ' ಇತ್ಯಾದಿ ಶಬ್ದ ಸಮಷ್ಟಿ ಹೇಗಿದ್ದರೂ ಅಭಾವಾತಿರೇಕಗಳಿರುವ ಪ್ರಚಲಿತ ಸ್ಥಿತಿಯ ಅಸ್ತಿವಾರವನ್ನೇ ಅಡಿಮೇಲು ಮಾಡಿ ನ್ಯಾಯೋಚಿತ ಸರ್ವಸಮಾನತಾ ನವವ್ಯವಸ್ಥೆಯನ್ನು ನಿರ್ಮಿಸಬೇಕೆಂಬ ಕುರಿತು ನ್ಯಾಯವಾದಿಗಳ ಆಕ್ಷೇಪವಿರಲಾರದು. ಈ ಗುರಿಯ ಮಟ್ಟಿಗೆ ಮಿಕ್ಕ ಸಮತಾವಾದಿಗಳೊಡನೆ ಕಮ್ಯೂನಿಸ್ಟರಿಗಿರುವ ಭಿನ್ನಾಭಿಪ್ರಾಯವೂ ಕ್ಷಮ್ಯವಾದುದು. ಅಕ್ಷಮ್ಯವಾದ ಹಾಗೂ ಜಿಗುಪ್ಸೆ ನಿರ್ಮಿಸುವ ವಿಷಯವೆಂದರೆ ಕಮ್ಯೂನಿಸ್ಟರ ಧೋರಣೆ ಮತ್ತು ವರ್ತನೆಯೇ. 'ಏಕ ಜಗತ್ತು-ಜಾಗತಿಕ ಸರಕಾರ'ವೆಂಬುದು ಒಂದು ಗುರಿಯಾಗಿರಬಹುದು., ಆದರೆ ಆ ಜಗತ್ತನ್ನು ನಾವೀಗಲೇ ನಿರ್ಮಿಸಿ ಬಿಡುತ್ತೇವೆ, ಅಥವಾ ಆ ಜಗತ್ತಿನಲ್ಲೇ ಇದ್ದೇವೆ ಎಂಬ ಭ್ರಮೆ ಕಟ್ಟಿಕೊಂಡು ರಾಷ್ಟ್ರೀಯ ಹಿತಕ್ಕೆ ವಿರೋಧ ಹೋಗುವದು ಅಕ್ಷಮ್ಯಾಪರಾಧವೇ ಸರಿ. 'ಸ್ವತಃ ಸೋವಿಯೆಟ್ ಸರಕಾರವೇ ಈ ಭಾವನೆಯನ್ನೆಳ್ಳಷ್ಟೂ ತೋರಿಸದೆ ಸ್ವಹಿತ ಸಾಧನೆಯಲ್ಲಿರುವಾಗ ರಷ್ಯದ ಅನುಯಾಯಿಗಳಾಗಿ ಇತರ ರಾಷ್ಟ್ರಗಳ ಕಮ್ಯೂನಿಸ್ಟರು ಮಾತ್ರ ಇಂತಹ ಧೋರಣೆಯನ್ನು ಪ್ರದರ್ಶಿಸುವದೆಂದರೆ ರಷ್ಯಕ್ಕನುಕೂಲವಾಗಿ ಸ್ವರಾಷ್ಟ್ರ ದ್ರೋಹ ಸಾಧಿಸುವದೆಂದೇ ಅರ್ಥ. ಎರಡನೆಯದಾಗಿ ಕಾಳಪ್ರೇರಕರಿಗೆ ಮಾತ್ರ ಹೇಳಿಸಿದ ಹಿಂಸಾತ್ಮಕ ವರ್ತನೆ ಮತ್ತು ಅಶ್ಲೀಲ ಮಾತುಗಳನ್ನೇ ತಮ್ಮ ಇಚ್ಛಾಸಾಧಕ ಉಪಕರಣಗಳಾಗಿ ಉಪಯೋಗಿಸುವ ಇಲ್ಲಿಯ ಕಮ್ಯೂನಿಸ್ಟರನ್ನು ಕ್ಷಮಿಸಲು ನಾಗರಿಕತೆ ಹಾಗೂ ನ್ಯಾಯವನ್ನು ಮನ್ನಿಸುವವರಿಂದ ಎಷ್ಟಕ್ಕೂ ಆಗದ ಮಾತು. ದೇಶ ಹಿತ ಮತ್ತು ನಾಗರಿಕಪಥ, ಇವೆರಡಕ್ಕೂ ಹಾನಿಕರವಾದ ಮೇಲಿನ ಎರಡು ಪ್ರಬಲ ದೋಷಗಳಿಂದ ಕಮ್ಯೂನಿಸ್ಟರು ನಿಜಕ್ಕೂ ಜನಸಾಮಾನ್ಯರ ಶತ್ರುಗಳಾಗಿದ್ದಾರೆ; ಇಂಥವರ ಮೇಲೆ ಸರಕಾರವು ಕೈಕೊಂಡಿರುವ ಕಠಿಣ ಕಾರ್ಯಕ್ರಮಗಳಿಗೆ ಜನತೆಯ ಅನುಮೋದನೆಯಿದೆ. ಆದರೆ ಇಷ್ಟರಿಂದಲೇ ಕಮ್ಯೂನಿಸ್ಟ ಕಂಟಕದ ಮೂಲೋತ್ಪಾಟನೆಯಾಗಲು ಸಾಧ್ಯವಿಲ್ಲ. ಅವಿದ್ಯಾವಂತ, ಅಸಂಸ್ಕೃತ ಹಾಗೂ ಅಜ್ಞಾನೀ ಕೆಲಸಗಾರರಾಗಿರುವ ಇಂದಿನ ಅಸಹಾಯಕತೆ—ಇವೇ ಈ ಕೆಲಸಗಾರ ವರ್ಗವನ್ನು ಕಮ್ಯೂನಿಸ್ಟ ನೆಗಳಿನ ಬಾಯಿಗೆ ತಳ್ಳಿವೆ. ಕೆಲಸಗಾರರಿಗೆ ನ್ಯಾಯದಾನ ಮಾಡುವ ಮೂಲಕ ಹಾಗೂ ನಿಜಕ್ಕೂ ಅವರ ಹಿತಸಾಧಿಸಬಲ್ಲ ಪ್ರತ್ಯೇಕ ಕೆಲಸಗಾರ ಸಂಘಗಳನ್ನು ಸ್ಥಾಪಿಸುವ ಮೂಲಕ ಇಂದಿನ ಕಮ್ಯೂನಿಸ್ಟ ಹಿಡಿತದಿಂದ ಕೂಲಿಗಾರ ವರ್ಗವನ್ನು ತಪ್ಪಿಸುವದೊಂದೇ ಈ ಕಂಟಕನಿವಾರಣೆಗಿರುವ ಪರಿಣಾಮಕಾರೀ ಉತ್ತಮೋಪಾಯ. ನಮ್ಮಲ್ಲಿಯ ಸಮತಾವಾದಿಗಳು ಅಥವಾ ಕಾಂಗ್ರೆಸಿಗರು ಸೇವೆ ಶ್ರಮ ಸಾಹಸಗಳ ಮಟ್ಟಿಗೆ ಕಮ್ಯೂನಿಸ್ಟರನ್ನೇ ಮಾದರಿಯಾಗಿ ಇಟ್ಟುಕೊಂಡು ಕೆಲಸಗಾರರ ಸಂಘಟನೆ, ಸಂಘಸ್ಥಾಪನೆ, ಸಂಕಟನಿವಾರಣೆಗೆ ಇನ್ನಾದರೂ ತ್ರಿಕರಣ ಪೂರ್ವಕವಾಗಿ ದುಡಿಯಬಾರದೇಕೆ?

—ವಿಚಾರಾರ್ಹ ಪ್ರಶ್ನೆಗಳು—

ಹಿಂದೂ ಮುಸ್ಲಿಂ ಜಾತ್ಯಂಧತಾ ಭಾವನೆಯು ಬಹಿರಂಗವಾಗಿ, ಗಾಂಧಿಜೀ ಅದನ್ನು ನಿವಾರಿಸಬೇಕೆಂದು ಪ್ರಯತ್ನಿಸುತ್ತಿದ್ದಂತೆ ಕಣ್ಣೆದಿರಲ್ಲೇ ಬೆಳೆಯುತ್ತಾ ಹೋದುದರಿಂದ ಅವರು ಆ ಪ್ರಯತ್ನದಲ್ಲಿ ಪ್ರಾಣಕೊಡುವಂತಾಯಿತು; ಅದರಿಂದಾದರೂ ಆ ಅಗ್ನಿ ಭಗ್ಗನೇ ನಂದಿ ಹೋಯಿತು. ಆದರೆ ನಮ್ಮಲ್ಲಿಯ ಕೆಲವು ಜಾತಿಗಳಲ್ಲಿರುವ ಸಂಕುಚಿತ ಜಾತ್ಯಭಿಮಾನವು ಅಷ್ಟೇ ಬೆಳೆದಿದ್ದರೂ ಬಹಿರಂಗಕ್ಕೆ ಬಿದ್ದಿದೆಯೆ? ಹಲವು ಮಹಾತ್ಮರ ಪ್ರಾಣ ಬಲಿಕೊಟ್ಟರೂ ಈ ಜಾತ್ಯಂಧತೆ ನಿರ್ಮೂಲಿಸುವ ಮಾದರಿಯಿಲ್ಲದಿದೆಯೆ?

ಭಾರತದಲ್ಲಿ ಬ್ರಿಟಿಷ್ ಆಡಳಿತೆಯಿದ್ದಾಗ ಹಿಂದೀಯರನ್ನು ಕೆಳದರ್ಜೆಯವರೆಂದು ಭಾವಿಸಿ, ಗುಲಾಮಗಿರಿಯಲ್ಲಿಟ್ಟದ್ದ ಅಪರಾಧಕ್ಕಾಗಿ ಬ್ರಿಟಿಷರನ್ನು ಲೋಕದೆದುರು ಹಂಗಿಸಲು ನಮಗೆ ಸಾಧ್ಯವಾಯಿತು; ಬ್ರಿಟಿಷರ ಅಂತಹ ಒಣ ಹೆಮ್ಮೆಯನ್ನು ಸಂಪೂರ್ಣವಾಗಿ ಭಂಗಿಸಿ ಬೀಳ್ಕೊಡಲು ನಮ್ಮಿಂದಾಯಿತು. ಆದರೆ ನಮ್ಮ ನಡುವೇ ಇರುವ ಮೇಲ್ಜಾತಿ-ಕೀಳ್ಜಾತಿ ಮತ್ತು ಅಸ್ಪೃಶ್ಯತಾ ಭಾವನೆಯು ಲೋಕಕ್ಕೇನೇ ಅಸಹ್ಯ ಕಂಡರೂ ಅದನ್ನು ಪೂರ್ತಿ ನಿವಾರಿಸಿಕೊಳ್ಳುವ ಮನಸ್ಸು ನಮಗಿದೆಯೆ? ಆ ಹುಚ್ಚು ಹೆಮ್ಮೆಯನ್ನು ಬಿಡಲು ನಮ್ಮಿಂದ ಸಾಧ್ಯವಿದೆಯೆ?

"ಹಿಂದೂ ಬಹುಮತದ ಆಳ್ವಿಕೆಯಿರುವ ಯಾವ ಮಾದರಿಯ ರಾಜ್ಯಭಾರ ಬಂದರೂ ಮುಸ್ಲಿಮರಿಗದು ಸಹ್ಯವಾಗದು. ಮುಸ್ಲಿಮರ ಹಕ್ಕುಬಾಧ್ಯತೆಗಳು ನ್ಯಾಯಪ್ರಕಾರ ಪಾಲಿಸಲ್ಪಡಲಾರವು" ಎಂದು ಈ ಮೊದಲು ಮಿ. ಜಿನ್ನರಾಡುತಿದ್ದಾಗ ಅದು ಅತಿ ದೊಡ್ಡ ಅಸಂಬದ್ಧ ಆರೋಪವೆಂದು ಗಣಿಸಲ್ಪಡುತ್ತಿತ್ತು; ಆದರೆ ನಮ್ಮೊಳಗಿನ ಒಂದು ಜಾತಿಯವರು ಯಾವುದೇ ಸ್ಥಾನಮಾನಗಳಲ್ಲಿ ಪ್ರಬಲರಾದ ಮಾತ್ರಕ್ಕೆ ಇನ್ನೊಂದು ಜಾತಿಯವರು "ಅಸಹ್ಯ, ಅನ್ಯಾಯ"ವೆಂದು ಒಳಗಿಂದೊಳಗೆ ತಳಮಳಿಸುವ ಚಳವಳಿಸುವ ಹವ್ಯಾಸಗಳು ಎಲ್ಲೆಲ್ಲೂ ಕಂಡು ಬರುತ್ತಿಲ್ಲವೆ?

"ಪ್ರತಿ ಬ್ರಿಟಿಷರವನಿಗೆ ಅವನ ದುಷ್ಕೃತ್ಯಗಳ ಪರಿಣಾಮವಾಗಿಯಾದರೂ ಯಾವುದೇ ವಿಧದ ಹಾನಿಯೊದಗದಂತೆ ಬ್ರಿಟಿಷ್ ಸರಕಾರವು ನೋಡುವದೆಂದರೇನು?" 'ಸರ್. ಖಾನ್‌ನೂನ್, ಅಬ್ದುಲ್ ಕ್ವಯೂಮರಂಥವರು ಆಡುವ ಅಂತಹ ಅಶ್ಲೀಲ ಮಾತುಗಳನ್ನೂ ಮಿ. ಜಿನ್ನರು ಅಥವಾ ಮುಸ್ಲಿಂ ಲೀಗು ಎತ್ತಿ ಹಿಡಿಯುವದೆಂದರೇನು?' ಎಂದೆಲ್ಲಾ ಆ ಕಾಲಗಳಲ್ಲಿ ಪಕ್ಷಪಾತತೆಯ ಆರೋಪಗಳಾಗುತಿದ್ದುವು. ಆದರೆ ಕೇವಲ 'ತಮ್ಮವನೆಂಬ' ಕಾರಣಕ್ಕಾಗಿ ಇಂತಹ ಪಕ್ಷಪಾತತೆ ಮತ್ತು ಸಂಚುಹಂಚಿಕೆಗಳು ಈಗ ನಮ್ಮಲ್ಲೆಷ್ಟು ನಡೆಯುತ್ತಿಲ್ಲ?

'ಪಾಕಿಸ್ತಾನದಲ್ಲಿ ಕುಹೋರ ವಿರುದ್ಧ ಬಂಡಾಯ ಹೂಡಿದ್ದಾನೆ; ಪೂರ್ವ ಬಂಗಾಳದವರು ಭಾಷಾಭಿಮಾನದ ಮುಷ್ಕರಕ್ಕಿಳಿದಿದ್ದಾರೆ; ಗಡಿನಾಡಿನವರಲ್ಲಿ ಅತೃಪ್ತಿ ವ್ಯಾಪಿಸಿದೆ; ಪಾಕಿಸ್ತಾನ್ ಸರಕಾರವು ಒಳಗಿಂದೊಳಗೇನೇ ಸೋತು ಸಣ್ಣವಾಗುವದು ಖಂಡಿತ'-ಎಂದು ಈಗಲೂ ನಿರೀಕ್ಷಿಸುವವರಿದ್ದಾರೆ. ಆದರೆ ಇಂತಹ ಒಳಸಂಕಟಗಳು ಹಿಂದುಸ್ಥಾನದೊಳಗೂ ಬೇಕಾದಷ್ಟಿವೆಯೆಂದೂ, ಇವುಗಳೆಲ್ಲಾ ವುವೂ ಯಾವ ರಾಷ್ಟ್ರದ ಭವಿಷ್ಯವನ್ನಾದರೂ ಕೆಡಿಸಲಾರವೆಂದೂ ನಾವೇಕೆ ಸ್ಮರಿಸುವದಿಲ್ಲ? ಅರ್ಥಾತ್ ನಮ್ಮ ಅಭಿವೃದ್ಧಿ ಸಾಧನೆಯ ಕಡೆಗಲ್ಲದೆ, ಅನ್ಯರ ಅವನತಿ ನಿರೀಕ್ಷೆಯತ್ತ ದೃಷ್ಟಿಯಿಡುವುದು ನಮ್ಮ ಕರ್ತವ್ಯವಲ್ಲವೆಂಬುದನ್ನೇಕೆ ತಿಳಿದುಕೊಂಡಿಲ್ಲ?

ಗಾಂಧಿಜೀ ಕೊಲೆಯಾದಾಗ ದುಃಖ ಪ್ರದರ್ಶನ ಸಮಾರಂಭಗಳಲ್ಲಿ ಎಲ್ಲರಿಗಿಂತ ಹೆಚ್ಚು ಮುಂದೆ ಬಂದಿದ್ದ 'ಶ್ರೀಮಂತರು ದ್ಯಾರಷ್ಟು?' ಅವರು ಆಗ ಪ್ರದರ್ಶನ ರೂಪದಿಂದ ಕಣ್ಣೀರು ಸುರಿಸಿದ್ದ ಪರಿಮಾಣಕ್ಕನುಸಾರವಾಗಿ ಈಗ 'ಗಾಂಧೀ ಸ್ಮಾರಕ ನಿಧಿ'ಗೆ ಹಣ ಸುರಿಸುವುದು ಕಂಡುಬರುತ್ತಿದೆಯೆ?

ಮಹಾತ್ಮರ ಬಲಿದಾನವಾದೊಡನೆ ಎಲ್ಲೆಲ್ಲೂ ಪ್ರದರ್ಶಿಸಲ್ಪಟ್ಟ ಆತ್ಮಸಂಯಮನ, ಆವೇಗ, ಐಕ್ಯತಾ ಸಾಧನಾ ಯತ್ನ, ಜಾತೀಯತಾ ಸಂಸ್ಥೆಗಳ ಮೇಲಿನ ತಿರಸ್ಕಾರ, ಇವುಗಳ ಆವಿರದೊಂದು ಪಾಲ

...ಷ್ಟಾದರೂ ಈಗ ಎಲ್ಲಿಯಾದರೂ ತೋರಿ ಬರುತ್ತಿದೆಯೇ? ಅದರೆ ಸ್ವತಃ ನಮಗೆ, ಆ ಗವಾ 'ನಮ್ಮವರಿಗೆ' ನಮ್ಮ ದೃಷ್ಟಿಯಿಂದ ಯಿಂದಾದರೂ ಹಾನಿಯೊದಗಿದುದಿದ್ದರೆ, ಹಾಗೆ ಮಾಡಿದವರನ್ನು ನಾವು ಇಷ್ಟು ಬೇಗನೇ ಈ ರೀತಿ ಮರೆತು ಬಿಡುತ್ತಿದ್ದೆವೇ? ಹಿಂದ ಮೇಲೆ ಗಾಂಧಿಜೀ ಕೊಲೆಯನ್ನು ಸ್ವತಃ ನಮಗಾದ ಹಾನಿಯೆಂದು ನಾವು ಅಂತಃಕರಣ ಪೂರ್ವಕ ಭಾವಿಸಿರುವೆಂವೆ ಬುದಕ್ಕೆ ಆಧಾರವೇನು?

ಬ್ರಿಟಿಷ್ ಆಡಳಿತೆಯಿರುವಾಗ ವ್ಯಾಪಾರ ವಹಿವಾಟು, ವಿತ್ತೀಕರ ಒಳದ್ವಾರಗಳಿಂದ ಭಾರತದ ಸಂಪತ್ತನ್ನು ಸುಲಿಯುತ್ತಿದ್ದಾರೆಂಬುದೇ ನಾವು ಅವರ ಮೇಲೆ ಮಾಡುತ್ತಿದ್ದ ಮುಖ್ಯ ಆರೋಪ; ಆದರೆ ಇಂದು ನಮ್ಮೊಳಗಿನವರೇ ಸಾಮಾನ್ಯ ಜನತೆಯ ಸಂಪತ್ತೆಲ್ಲವನ್ನೂ ಬ್ರಿಟಿಷರಿಗೂ ಮಿಕ್ಕಿದ ಚಾತುರ್ಯ ಮತ್ತು ವಂಚನೆಗಳಿಂದ ಸುಲಿಯುತ್ತಿಲ್ಲವೇ? ಅದು ಅನ್ಯಾಯವೆಂದಮೇಲೆ ಇದೂ ಅನ್ಯಾಯವೇ ಹೊರತು ನ್ಯಾಯವಾದೀತೇ?

ಆ ಕಾಲದಲ್ಲಿ 'ಶುದ್ಧ ಆರ್ಯರಾದ ಜರ್ಮನ್ ಜನಾಂಗವೇ ಎಲ್ಲರಿಗಿಂತ ಮೇಲು" ಎಂಬ ಸ್ವಜನಾಂಗಾಭಿಮಾನವನ್ನಾಧರಿಸಿ ಕಟ್ಟಲ್ಪಟ್ಟಿದ್ದ ನಾಜೀ ಪಂಥವನ್ನು ಮಿಕ್ಕವರಿಗಿಂತ ಕಠಿಣವಾಗಿ ಖಂಡಿಸುತ್ತಿದ್ದರು ಇಲ್ಲಿಯವರು. ಆದರೆ ಅದೇ ನಾಜೀನೀತಿಯನ್ನಾಧರಿಸಿ ಸ್ವಧರ್ಮ ಅಥವಾ ಸ್ವಜಾತೀ ನೇಲ್ಮೆಯ ಸಾಧನೆಗಾಗಿ ಜಾತೀಯ ದಳಗಳನ್ನು ಇಲ್ಲಿಯವರೇ ನಿರ್ಮಿಸಿ, ಪೋಷಿಸುತ್ತಾ ಬಂದಿಲ್ಲವೇ?

"ಶಾಂತಿ, ವ್ಯವಸ್ಥಾಪಾಲನೆ" ಎಂದು ಹೇಳಿಕೊಂಡೇ ತಮ್ಮ ಆಡಳಿತೆಯಿರುವಾಗ ಎಲ್ಲಾ ಸ್ವಾತಂತ್ರ್ಯಾಂದೋಲನಗಳನ್ನೂ ಬ್ರಿಟಿಷರು ದಮನಿಸುತ್ತಿದ್ದರು; ತಳವೂರಿ ನಿಂತಿದ್ದ ತಮ್ಮ ಸ್ವಾರ್ಥಸಾಧಕಯಂತ್ರಕ್ಕೆ ಬೀಳುವ ಧಕ್ಕೆಯನ್ನು 'ಶಾಂತಿಭಂಗ' ವೆಂದು ಕರೆಯಲು ಅವರಿಗೆ ಸಾಧ್ಯವಾಗಿತ್ತು. ಅದೇ ರೀತಿ ಜನತೆಯ ಸೂರೆ ಸುಲಿಗೆ ಮತ್ತು ಜಾತಿಹಿತಸಾಧಿಸುವ ತಮ್ಮ ಪದ್ಧತಿ ಬೇರು ಬಿಟ್ಟು ಹೋಗಿರುವುದರಿಂದ ಅದರ ಖಂಡನೆಯಲ್ಲಿಯಾದರೂ

ಉಡುಪಿ ತಾಲೋಕು
ದೇಶೀ ವೈದ್ಯರ ಮಹಾಸಭೆ

ಇದೇ ಬರುವ ತಾ. 8-5-48ನೇ ಶನಿವಾರ ಅಪರಾಹ್ನ ಗಂಟೆ 4ಕ್ಕೆ ಉಡುಪಿ ಸಂತೆಕಟ್ಟೆ ಬಳಿಯಲ್ಲಿರುವ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಇವರ ಆಫೀಸಿನಲ್ಲಿ ಜರಗಲಿರುವ ಮಹಾಸಭೆಗೆ ಉಡುಪಿ ತಾಲೂಕಿನ ಎಲ್ಲ ವೈದ್ಯ ಬಂಧುಗಳು ಹಾಜರಾಗಿ ಪ್ರೋತ್ಸಾಹಿಸಬೇಕಾಗಿ ಸವಿನಯ ವಿನಂತಿ.

ಕಾರ್ಯಕ್ರಮಗಳು:

1. ಉಡುಪಿ ತಾಲೋಕು ಸನಿಷ್ಠ ಭಾರತೀಯ ವೈದ್ಯ ಸಂಘದ ನಿಯಮಾವಳಿಯ ಅಂಗೀಕಾರ.

2. ಕಾರ್ಯಕಾರೀ ಸಮಿತಿಯ ಸದಸ್ಯರ ಚುನಾವಣೆ.

3. ಅಧ್ಯಕ್ಷರ ಅನುಮತಿಯಿಂದ ಬರುವ ಇತರ ಸೂಚನೆಗಳು.

ಕಾ. ರಾ. ಪುರಾಣಿಕ.

ಈ ಮೂರು ಸಮ್ಮೇಲನಗಳು

ಭಾರತದ ಸದ್ಯಸ್ಥಿತಿಯಲ್ಲಿ ಗಣ್ಯವಾದ ಮೂರು ಸಮ್ಮೇಲನಗಳು ಕಳೆದ ತಿಂಗಳಾಂತ್ಯ ಭಾಗದಲ್ಲಿ ನಡೆದಿದ್ದುವು. ಒಂದು ನವದಿಲ್ಲಿಯಲ್ಲಿ ಎಪ್ರಿಲ್ 28ರಲ್ಲಿ ಸೇರಿದ್ದ ಪ್ರಾಂತಿಕ ಮಂತ್ರಿಗಳ ಆಹಾರ ಸಮ್ಮೇಲನ; ಮತ್ತೊಂದು ಎಪ್ರಿಲ್ 25ರಲ್ಲಿ ಲಕ್ನೋದಲ್ಲಿ ಸೇರಿದ ಹರಿಜನರ ಅಖಿಲ ಭಾರತ 'ಶೆಡ್ಯೂಲ್ಡ್ ಕ್ಲಾಸಸ್ ಫೆಡರೇಶನ್' ವಾರ್ಷಿಕ ಸಮ್ಮೇಳನ; ಮೂರನೆಯದು ಬೊಂಬಾಯಿಯಲ್ಲಿ ಎಪ್ರಿಲ್ 26ರಲ್ಲಿ ಸೇರಿದ 'ಜಮಾಯಿತ್-ಉಲ್-ಉಲೇಮಾ ಹಿಂದ್'ನ ಮಹಾಧಿವೇಶನ. ಈ ಮೂರೂ ಮೂರು ದೃಷ್ಟಿಯಿಂದ ಪ್ರಾಮುಖ್ಯವಿವೆ.

ಆಹಾರ ಸಮ್ಮೇಲನ

ಭಾರತದ ಎಲ್ಲಾ ಪ್ರಾಂತ್ಯಗಳ ಪ್ರಧಾನ ಮಂತ್ರಿಗಳ ಮತ್ತು ಆಹಾರ ಮಂತ್ರಿಗಳ ಹಾಗೂ ಸಂಸ್ಥಾನಗಳ ಮುಖ್ಯಾಧಿಕಾರಿಗಳ ಸಮ್ಮೇಳನವೊಂದು ಕೇಂದ್ರ ಸರಕಾರದ ಆಹಾರ ಮಂತ್ರಿಯ ಆಮಂತ್ರಣದಂತೆ ರಾಷ್ಟ್ರದ ಆಹಾರ ಸ್ಥಿತಿಯ ಪರ್ಯಾಲೋಚನೆಗಾಗಿ ನವದಿಲ್ಲಿಯಲ್ಲಿ ಸೇರಿದ್ದಿತು. ಹಿಂದೀಸರಕಾರದ ಪ್ರಧಾನಮಂತ್ರಿ ಪಂಡಿತ ನೆಹರುಗಳು ಈ ಸಮ್ಮೇಲನವನ್ನು ಉದ್ಘಾಟಿಸಿದ್ದರಲ್ಲದೆ ಆಹಾರ ಮಂತ್ರಿ ಜೈರಾಮ್ ದಾಸ್ ದೌಲತರಾಮರು ಅಧ್ಯಕ್ಷತೆ ವಹಿಸಿದ್ದರು. ದೇಶದ ಆಹಾರಸ್ಥಿತಿಯ ಕೂಲಂಕುಶ ವಿಚಾರ—ಅಭಾವ ನಿವಾರಣೋಪಾಯ ಶೋಧನೆ—ನಿಯಂತ್ರಣಪದ್ಧತಿಯ ಕಡೆಗೆ ಇನ್ನೂ ಮೊದಲ ಹೆಜ್ಜೆಗಳನ್ನಿಡುವುದು—ಮುಂತಾದ ವಿಷಯಗಳು ಅಲ್ಲಿ ಪರ್ಯಾಲೋಚಿಸಲ್ಪಟ್ಟುವು. ಒಂಭತ್ತು ಕಾಂಗ್ರೆಸ್ ಪ್ರಾಂತಿಕ ಪ್ರಧಾನಿಗಳ ಪೈಕಿ ಆರುಮಂದಿ ಹಾಜರಿದ್ದರಲ್ಲದೆ, ಬಹುತೇಕವಾಗಿ ಎಲ್ಲಾ ಪ್ರಾಂತ್ಯದ ಆಹಾರಮಂತ್ರಿಗಳೂ ಎಲ್ಲಾ ಸಂಸ್ಥಾನಗಳ ಪ್ರತಿನಿಧಿಗಳೂ ಬಂದಿದ್ದರು. ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರು ತನ್ನ ಪ್ರಾಂತ್ಯದ ಸ್ಥಿತಿಗತಿಗಳನ್ನು ವಿವರಿಸಿ, ತಮಗೆ ಕೇಂದ್ರಸರಕಾರವು ಇನ್ನೂ ಹೆಚ್ಚಿನ ಧಾನ್ಯ ಸರಬರಾಯಿ ಮಾಡಬೇಕೆಂದು ಕೇಳಿಕೊಂಡು ಮಾಡಿದ ಭಾಷಣವು ಪರಿಣಾಮಕಾರಿಯಿದ್ದಿತು. '25 ಮೈಲಿಯಿಂದ 30 ಮೈಲಿಯದವರೆಗಿನ ಜನರಿಗೆ ಆಹಾರ ಧಾನ್ಯ ಒದಗಿಸುವ ಹೊಣೆಗಾರಿಕೆಯು ನನ್ನ ಸರಕಾರದ ಮೇಲೆ ಬಿದ್ದಿದೆ, ಆದ್ದರಿಂದ ಈಗ ಮದ್ರಾಸಿಗೆಂದು ತೆಗೆದಿಟ್ಟ 400000 ಟನ್ನನ್ನು ಇನ್ನೂ ಹೆಚ್ಚಿಸಬೇಕು' ಎಂದು ಮದ್ರಾಸ್ ಪ್ರಧಾನಿ ಕೇಳಿಕೊಂಡರು. ನಿಯಂತ್ರಣ ರದ್ದತಿಯು ತಮ್ಮ ಮೇಲೆ ಅತಿ ಹೆಚ್ಚಿನ ಭಾರವನ್ನು ಹೊರಿಸಿದೆಯೆಂಬ ಮಟ್ಟಿಗೂ, ಬೇಸಾಯ ಸುಧಾರಣೆ ಮತ್ತು ಬೇಸಾಯೋಪಕರಣಗಳ ಸಹಾಯದ ಮಟ್ಟಿಗೆ ಕೇಂದ್ರ ಸರಕಾರವು ತಮಗೆ ಕೊಟ್ಟ ಸಹಾಯವು ಸಾಲದೆಂಬ ಕುರಿತೂ ಎಲ್ಲಾ ಪ್ರಾಂತಿಕ ಹಾಗೂ ಸಂಸ್ಥಾನಗಳ ಪ್ರತಿನಿಧಿಗಳೂ ಏಕಾಭಿಮತವುಳ್ಳವರಾಗಿದ್ದರು. ಕಳ್ಳಪೇಟೆ, ಕಳ್ಳಸಂತೆಗಳ ನಿವಾರಣೋಪಾಯಗಳೂ ಅಲ್ಲಿ ಚರ್ಚೆಗೆ ಬಂದಿವೆ. ಅಂತೂ ಆಹಾರಸಮ್ಮೇಲನದಿಂದಾಗಿ ದೇಶದ ಆಹಾರ ಸ್ಥಿತಿ ಚಿತ್ರವೊಮ್ಮೆ ಅಧಿಕಾರಿಗಳ ಕಣ್ಣಮುಂದೆ ಸ್ಪಷ್ಟವಾಗಿ ಮೂಡುವಂತಾಗಿದೆ.

ದಳಿತ ವರ್ಗಗಳ ಸಮ್ಮೇಲನ

ಲಕ್ನೋದಲ್ಲಿ ಡಾ। ಅಂಬೇಡ್ಕರರ ನೇತೃತ್ವದಲ್ಲಿ ಸೇರಿದ 'ದಳಿತ ವರ್ಗದ ಫೆಡರೇಶನಿನ ಸಮ್ಮೇಲನದಲ್ಲಿ ಡಾ। ಅಂಬೇಡ್ಕರರು ಹರಿಜನರ ದುಸ್ಥಿತಿಯನ್ನೂ ತಾನು ಕಾಂಗ್ರೆಸ್ ಕೇಂದ್ರ ಮಂತ್ರಿಮಂಡಲದಲ್ಲಿ ಸೇರಿಕೊಂಡ ಕಾರಣಗಳನ್ನೂ ವಿವರಿಸಿ, ಸಾಧ್ಯವಿದ್ದಷ್ಟು ಪ್ರಯೋಜನಗಳನ್ನು ದಳಿತ ವರ್ಗಕ್ಕೆ ದೊರಕಿಸಿಕೊಳ್ಳುವದಕ್ಕಾಗಿಯೇ ತಾನು ಅಧಿಕಾರ ಸ್ವೀಕರಿಸಿರುವೆನಲ್ಲದೆ ಕಾಂಗ್ರೆಸಿನೊಂದಿಗೆ ಐಕ್ಯಗೊಂಡಿಲ್ಲವೆಂದರು. 'ಹರಿಜನರು ಪ್ರತ್ಯೇಕ ಪಕ್ಷವಾಗಿ ನಿಂತು ತಮ್ಮ ಹಿತ ಸಾಧನೆಗಾಗಿ ಹೋರಾಡಬೇಕಲ್ಲದೆ ಕಾಂಗ್ರೆಸಿನೊಂದಿಗೆ ಸೇರಿಕೊಳ್ಳಬಾರದು. ಕಾಂಗ್ರೆಸಿನೊಳಗೇನೇ ಪಕ್ಷ ಪಂಗಡಗಳುಂಟಾಗಿವೆ. ಸರಕಾರಕ್ಕೊಂದು ವಿರುದ್ಧ ಪಕ್ಷವಿಲ್ಲದೆ ಹೋದರೆ ಅದು ಸರ್ವಾಧಿಕಾರಕ್ಕೆ ಮಾರ್ಗದಬಹುದು. ನಾನು ಹೇಳುವವರೆಗೆ ನೀವು ಕಾಂಗ್ರೆಸನ್ನು ಸೇರಿಕೊಳ್ಳಲೇಬಾರದು' ಎಂದೇ ಹರಿಜನರಿಗೆ ಡಾ। ಅಂಬೇಡ್ಕರರ ಉಪದೇಶ. ಅಂಬೇಡ್ಕರರದು ದುರ್ಬೋಧನೆಯೆಂದೂ, ಕಾಂಗ್ರೆಸಿನೊಳಗೆ ಸೇರಿಕೊಳ್ಳುವುದರಿಂದಲೇ ಹರಿಜನರಿಗೆ ಪ್ರಯೋಜನವಿದೆಯೆಂದೂ ರಾಷ್ಟ್ರದ ಹರಿಜನ ಕಾಂಗ್ರೆಸ್ ಮುಖಂಡರನೇಕರು ಡಾ। ಅಂಬೇಡ್ಕರರನ್ನು ಖಂಡಿಸಲು ಮುಂದಾಗಿದ್ದಾರೆ "ನಾವು ಇತ್ತೀಚೆಗೆ ಗಳಿಸಿಕೊಂಡಿರುವ ಸ್ವಾತಂತ್ರ್ಯಕ್ಕೆ ಒಳಗಿಂದ ಧಕ್ಕೆ ಕೊಡುವಂತಹ ಭಾಷಣ ಡಾ। ಅಂಬೇಡ್ಕರರದು. ಬ್ರಿಟಿಷ್ ಆಡಳಿತೆಯಿದ್ದಾಗ ಡಾ। ಅಂಬೇಡ್ಕರರು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಉಪಕರಣವಾಗಿದ್ದುಕೊಂಡು ಎಲ್ಲಾ ವಿಧದ ಆಟಗಳನ್ನೂ ಆಡಿದ್ದರು. ರಾಷ್ಟ್ರೀಯತೆಗೆ ಯಾವಾಗಲೂ ದೂರವಿದ್ದು, ಹರಿಜನರನ್ನು ಅಡ್ಡಹಾದಿ ಹಿಡಿಸುವ ಕೆಲಸವೊಂದನ್ನೇ ಅವರು ಮಾಡುತ್ತಾ ಬಂದಿದ್ದರು. ಬ್ರಿಟಿಷರಿಂದೂ ಹಿಂದುಸ್ಥಾನ ಬಿಡಲಾರರೆಂಬ ಭರವಸೆಯಿದ್ದ ಅಂಬೇಡ್ಕರರನ್ನು ನಡುನೀರಿನಲ್ಲಿ ಕೈಬಿಟ್ಟು ಬ್ರಿಟಿಷರು ಹೋದುದರಿಂದ.ಈ ಸಂದರ್ಭ ಸಾಧಕನೀಗ ಕೇಂದ್ರ ಸರಕಾರದಲ್ಲಿ ಸೇರಿಕೊಂಡಿದ್ದಾರೆ, ಅವರು ಆ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಈ ಕಾಲದಲ್ಲಾದರೂ ಕಣ್ಣುಬಿಟ್ಟು, ಹರಿಜನರಿಗೆ ಸದ್ದಾರಿ ತೋರಿಸುವುದರಲ್ಲಿ ಶ್ರೀ ಜಗಜ್ಜೀವನರಾಮರಿಗೆ ನೆರವಾಗಬೇಕು" ಎಂದು ಪೂರ್ವ ಪಂಜಾಬಿನ ಹರಿಜನ ಮಂತ್ರಿ ಪೃಥ್ವಿಸಿಂಗ್ ಆಜಾದರು ಆಗ್ರಹದಿಂದ ಕೇಳಿಕೊಂಡಿದ್ದಾರೆ.

ಜಮಾಯತ್ ಮುಸ್ಲಿಂ ಸಮ್ಮೇಲನ

ಮೌಲಾನಾ ಹುಸ್ಸೇನ್ ಅಹಮ್ಮದ್ ಮದಾನಿಯವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ಸೇರಿದ ಜಮಾಯತ್ ಉಲ್ ಉಲೇಮಾದ 15ನೇ ವಾರ್ಷಿಕಾಧಿವೇಶನವು ಹಿಂದೀ ಮುಸ್ಲಿಮರಿಗೆ ಸದ್ದಾರಿಯನ್ನು ತೋರಿಸಿಕೊಟ್ಟಿದೆ. ಮೌಲಾನಾ ಅಜಾದರು ಅದನ್ನು ಉದ್ಘಾಟಿಸಿದ್ದರಲ್ಲದೆ, ಪಂಡಿತ ನೆಹರುಗಳೂ ಭಾಷಣವಿತ್ತಿದ್ದರು. ಜಾತೀಯತೆಯನ್ನಾಧರಿಸಿದ ರಾಜಕೀಯ ಪಕ್ಷಗಳೇ ಇರಬಾರದೆಂದು ನಿರ್ಧರಿಸಿ ಮುಂದಕ್ಕೆ ಸಂಸ್ಥೆಯು ಕೇವಲ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯರಂಗಗಳಲ್ಲಿ ಮಾತ್ರ ದುಡಿಯತಕ್ಕದ್ದೆಂದು ನಿರ್ಣಯಿಸಿದೆ.

...ನಡೆದೊಡನೆ 'ಶಾಂತಿಭಂಗ, ಜಾತಿದ್ವೇಷ, ಅಸ್ಪೃಶ್ಯ ನಿರ್ಮಾಣ' ಎಂದು ಕರೆದು ತಮ್ಮ ಶಾಶ್ವತ ಸ್ವಾರ್ಥಯಂತ್ರವನ್ನು ಇದ್ದಂತೆ ಉಳಿಸಿಕೊಳ್ಳುವ ಪ್ರಯತ್ನ ನಡೆಯಿಸುವ ಜಾತೀಯ ದುರಭಿಮಾನಿಗಳೂ ಶ್ರೀಮಂತವರ್ಗವೂ ಈಗ ನಮ್ಮಲ್ಲಿಲ್ಲವೇ?

ನಡಿಯುವ ಚಿತ್ರ

ನರಂಗ್, ರೇಣುಕಾ, ಶಾರದಾ, ಪ್ರಾಣ್
ಮೊದಲಾದವರು ನಟಿಸಿದ

ಸಹಾರಾ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಬರುವ ಚಿತ್ರಗಳು:—ಔರತ್, ಗೋಪಾಲಕೃಷ್ಣ. ಪ್ರತಿಜ್ಞಾ ಇತ್ಯಾದಿ.



ಎಲ್ಲಾ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ
ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಉಡುಪಿ.

ಆಟದ ಹಬ್ಬ—ಉಡುಪಿ ಮುನಿಸಿಪಲ್ ಕ್ಷೇತ್ರದಲ್ಲಿಯ ಎಲ್ಲಾ ಪ್ರಾಥಮಿಕ ಶಾಲಾ ಮಕ್ಕಳ ಆಟದ ಹಬ್ಬವು(PLAY FESTIVAL) ಇದೇ ತಾ ೧೧ರಲ್ಲು ಬೋರ್ಡ್ ಹೈಸ್ಕೂಲ್ ವಠಾರದಲ್ಲಿ ಆ ಶಾಲೆಯ ಹೆಡ್ಮಾಸ್ತರ್ ಮಿ। ಆರ್. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು.

ಶಾಲಾ ವರ್ಧಂತಿ—ಕಡಿಯಾಳಿ ಪಾ। ಪಾ। ಶಾಲಾ ವರ್ಧಂತಿಯು ಇದೇ ತಾ ೨ರಲ್ಲು ಡಾ। ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ವಿ. ಶ್ರೀನಿವಾಸ ಭಟ್ಟರಿಂದ ಶಾಲಾ ವರದಿವಾಚನ, ಅಧ್ಯಕ್ಷರಿಂದ ಬಹುಮಾನ ಹಂಚೋಣ, ವಿದ್ವಾನ್ ಶ್ರೀಪತಿ ಆಚಾರ್ಯರಿಂದ ಶಾಲಾ ಶ್ರೇಯ ಪ್ರಾರ್ಥನೆಗಳಾದ ನಂತರ ಶ್ರೀ ಆರ್. ಆರ್ ಕುಂಜೂರರು ಸಭಿಕರ ಪರವಾಗಿ ಕೆಲವು ಹಿತೋಕ್ತಿ ಸಲಹೆಗಳನ್ನಿತ್ತು ಮಾತನಾಡಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ, ಶಾಲಾ ಮಕ್ಕಳನ್ನು ವರ್ಷಕೊಮ್ಮೆಯಾದರೂ ಡಾಕ್ಟರರಿಂದ ಪರೀಕ್ಷಿಸುವ ಅವಶ್ಯಕತೆಯನ್ನೆತ್ತಿ ಸೂಚಿಸಿ ಈ ಹಾ। ಎಲಿಮೆಂಟರಿ ಶಾಲೆಯು ಬೇಗನೆ ಹೈಸ್ಕೂಲಾಗಲೆಂದು ಕೋರಿದರು. ಮಕ್ಕಳ ವಿವಿಧ ವಿನೋದಾವಳಿಗಳ ಪ್ರದರ್ಶನದೊಂದಿಗೆ ಶಾಲಾ ವರ್ಧಂತಿ ಕೊನೆಗೊಂಡಿತು.

ಏಣಗುಡ್ಡೆ—ಶ್ರೀ ದುರ್ಗಾ ಪರಮೇಶ್ವರಿ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವವು ಉಡುಪಿ ತಾಲೂಕು ಶಾಲೆಗಳ ಪರೀಕ್ಷಾಕರ್ತರಾದ ಶ್ರೀ ವೈ. ಗೋಪಾಲರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಕಳೆದ ತಾ 2-5-48ನೇ ಆದಿತ್ಯವಾರ ದಿನ ಜರಗಿತು. ಶಾಲಾ ಮನೇಜರ್ ಶ್ರೀ ವೈ ನಂಜಪ್ಪ ಹೆಗ್ಡೆಯರಿಂದ ವರದಿವಾಚನ, ಶ್ರೀ ವೈ. ಶಿವಣ್ಣ ಹೆಗ್ಡೆಯರಿಂದ ಸ್ವಸ್ತಿವಾಚನ ಮತ್ತು ಶ್ರೀಗಳಾದ ಪಿ. ಡಿ. ನಾಯಕ್, ವೈ. ಯಸ್. ಭಟ್, ವೈ. ಯಸ್. ಭಟ್, ಎಮ್. ಎಸ್. ರಾವ್ ಮೊದಲಾದವರ ಭಾಷಣಗಳಾದುವು. ಶಾಲಾ ಬಾಲಕಿಯರಿಂದ 'ಗುರುದಾಸ'ವೆಂಬ ಸಂಗೀತ ನಾಟಕವೂ, ಹಳೆ ವಿದ್ಯಾರ್ಥಿಗಳಿಂದ 'ಸರೋಜನ ಮದ್ವೆ'ಎಂಬ ತುಳು ಪ್ರಹಸನವೂ, 'ಗಾಂಧೀ ಸಾವು ಅಥವಾ ಅಪ್ಪನಬೊಟ್ಟೆ' ಎಂಬ ಪಾದ್ದನವೂ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟವು. ಇತರ ವಿನೋದಾವಳಿಗಳೂ ಇದ್ದವು.

ಸ್ವೀಕಾರ-ವಿಮರ್ಶೆ

'ರತ್ನ ರಾಶಿ'-ಲೇಖಕರು ಶ್ರೀ ಕಯ್ಯಾರ ಕಿಞ್ಞಣ್ಣ ರೈ, ವಿದ್ವಾನ್, ನವಜೀವನ ಹೈಸ್ಕೂಲ್, ಪೆರ್ಡಾಲ. ಪ್ರಕಾಶಕರು—ಮಂಗಳೂರು ಪ್ರಿಂಟಿಂಗ್ ಎಸೋಸಿಯೇಷನ್, ಮಂಗಳೂರು. ಕ್ರೌನ್ 1 8 ಆಕಾರದ ೧೧೩ ಪುಟಗಳ ಪುಸ್ತಕ. ಬೆಲೆ ೧೪ ಆಣೆ- ಶ್ರೀ ರೈಗಳು ಕನ್ನಡ ಸಾಹಿತ್ಯದ ಯಾವ ಅಂಗವು ಬಡವಾಗಿರುವುದೋ ಅದನ್ನು ತುಂಬಿಕೊಡಲು ಈ ಗ್ರಂಥದ ಮೂಲಕ ಒಳ್ಳೆಯ ಕೆಲಸ ಮಾಡಿದ್ದಾರೆ. ಕಳೆದ ಸುಮಾರು ಒಂದು ನೂರು ವರುಷಗಳಿಂದ ಭಾರತದ ಪುನರುದ್ಧಾರಕ್ಕಾಗಿ ಧಾರ್ಮಿಕ ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಹಲವು ಮಹಾವ್ಯಕ್ತಿಗಳು ತ್ಯಾಗಪೂರ್ಣವಾದ ಪರಿಣಾಮಕಾರಿಯಾದ ಸೇವೆಯನ್ನರ್ಪಿಸಿ ಜನ ಜಾಗ್ರತಿಯನ್ನುಂಟುಮಾಡಿರುವುದಲ್ಲದೆ ವಿದೇಶಗಳಲ್ಲಿಯೂ ಭಾರತೀಯ ಜನಾಂಗವು ನಾಗರಿಕತೆಯಲ್ಲಿ ಸಂಸ್ಕೃತಿಯಲ್ಲಿ ಹಿರಿದಾದುದೆಂಬ ಗೌರವವನ್ನು ನೆಲೆಗೊಳಿಸಿದ್ದಾರೆ. ನಮ್ಮನ್ನು ನಾವು ತಿಳಿದುಕೊಂಡು ನಮ್ಮಲ್ಲಿ ಪರಾಕ್ರಮಣದಿಂದ ನೆಲೆಯಾಗಿದ್ದ ಸ್ವಯಂನಿಕೃಷ್ಟತಾಭಾವವನ್ನು ನಿರ್ಮೂಲನಗೊಳಿಸಿ ಎಲ್ಲ ಬಗೆಯಲ್ಲಿಯೂ ನಾವು ಪ್ರಪಂಚದ ಗಣನೀಯ ಜನಾಂಗಗಳ ಮೊದಲ ಸಾಲಿನಲ್ಲಿ ನಿಲ್ಲಲರ್ಹತೆಯುಳ್ಳವರೆಂಬ ಸ್ವಾಭಿಮಾನದಿಂದ ತಲೆಯೆತ್ತಿ ಮುನ್ನಡೆದು ನಮ್ಮ ಉತ್ಕರ್ಷೆಯನ್ನು ನಾವೇ ಸಾಧಿಸಿಕೊಳ್ಳುವ ಶಕ್ತಿ ಸ್ಫೂರ್ತಿಗಳು ನಮ್ಮಲ್ಲಿ ಉದ್ಭವಿಸುವಂತೆ ತಮ್ಮ ಜೀವನದಲ್ಲಿ ನಡೆದು ನುಡಿದು ತೋರಿಸಿಕೊಟ್ಟಿದ್ದಾರೆ. ಅಂತಹರ ಅವಿಶ್ರಾಂತ ಸಾಹಸ ಪರಿಶ್ರಮದಿಂದಾಗಿ ಇಂದು ನಮ್ಮ ಭಾರತವು ಸ್ವಾತಂತ್ರ್ಯವನ್ನು ಹೊಂದಿದೆ. ಹಲವು ಬಗೆಗಳಲ್ಲಿ ಜಗತ್ತಿಗೇ ಆದರ್ಶವನ್ನು ತೋರುವ ಜ್ಯೋತಿಯಾಗಿ ವಿಶ್ವದ ದೃಷ್ಟಿಯನ್ನು ಭಾರತದ ಕಡೆಗೆ ತಿರುಗಿಸಿದೆ. ಇಂತಹ ಮಾನನೀಯರ ಬಾಳಿನ ರೀತಿನೀತಿಗಳು ನಮ್ಮ ಜೀವನ ಪಥದಲ್ಲಿ ಧ್ರುವತಾರೆಯಾಗಿರಬೇಕು. ಎಂತಲೇ ಶ್ರೀ. ರೈಗಳು ಇಂತಹರ ಜೀವನೇತಿಹಾಸಗಳನ್ನು ಸಂಗ್ರಹವಾಗಿ ಈ ಪುಸ್ತಕದಲ್ಲಿ ಕೊಟ್ಟು ಕನ್ನಡ ಜನತೆಯ ಹಿರಿಯ ಕಿರಿಯರೆನ್ನದೆಲ್ಲರಿಗೂ ದೊಡ್ಡ ಉಪಕಾರ ಮಾಡಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ರಾಜಾರಾಮ ಮೋಹನರಾಯ, ಗೋಖಲೆ, ತಿಲಕ, ಶಾಸ್ತ್ರಿ, ಚಿತ್ತರಂಜನದಾಸ್, ರವೀಂದ್ರ, ಜಗದೀಶ ಚಂದ್ರ ಬೋಸ್, ನೇತಾಜಿ, ಮಹಾದೇವ ದೇಸಾಯಿ, ನೆಹರು, ಗಾಂಧೀ, ಪಟೇಲ್, ಆಜಾದ್, ಗಡಿನಾಡ ಗಾಂಧೀ, ಜಯಪ್ರಕಾಶ್, ಕಾರ್ನಾಡ ಸದಾಶಿವರಾವ್ ಇತ್ಯಾದಿ ೨೨ ಮಹಾವ್ಯಕ್ತಿಗಳ ಜೀವನ ಚರಿತ್ರೆಗಳನ್ನು ಪ್ರತ್ಯೇಕವಾಗಿ ಚುಟುಕಾಗಿ ಸರಳವಾಗಿ ಬಗೆಮುಟ್ಟುವಂತೆ ಸ್ಫೂರ್ತಿದಾಯಕವಾಗಿ ಬರೆದಿದ್ದಾರೆ ಈ 'ರತ್ನ ರಾಶಿ'ಯು ಹೆಂಗಸು ಗಂಡಸರೆನ್ನದೆ ಹಿರಿಯ ಕಿರಿಯರೆನ್ನದೆ ಎಲ್ಲರ ಹೃದಯದಲ್ಲಿಯೂ ತನ್ನ ಸುಪ್ರಭೆಯನ್ನು ಬೀರುವಂತಿದೆ. ಕನ್ನಡಿಗರು ಅಗ್ಗವಾಗಿ ದೊರಕುವ ಈ 'ರತ್ನ ರಾಶಿ'ಯನ್ನಿಟ್ಟುಕೊಂಡು ಮನೆಯನ್ನು ಮನವನ್ನು ಬೆಳಗಿಸಿಕೊಂಡು ಬಾಳುವೆಯನ್ನು ಸಾರ್ಥಕ್ಯದ ಹಾದಿಯಲ್ಲಿ ಸಾಗಿಸಲು ಕಲಿಯಬೇಕು. ಅಧ್ಯಾಪಕರು ವಿದ್ಯಾರ್ಥಿಗಳ ಕೈಯಲ್ಲಿ ಈ 'ರತ್ನ ರಾಶಿ'ಯನ್ನಿತ್ತು ಉತ್ತಮ ಆದರ್ಶವನ್ನು ತೋರಿಸಬೇಕು. ಪ್ರತಿಯೊಂದು ಪುಸ್ತಕ ಭಂಡಾರವೂ ಈ 'ರತ್ನ ರಾಶಿ'ಯಿಂದ ಶೋಭಿಸತಕ್ಕದ್ದು. ಶ್ರೀ ರೈಗಳು ಈ ತರದ ಗ್ರಂಥಗಳನ್ನು ಇನ್ನೂ ಬರೆಯುವಂತೆ, ಇನ್ನೂ ಚೆನ್ನಾಗಿ ಬರೆಯುವಂತೆ ಕನ್ನಡ ಜನ ಈ ಕೃತಿಯನ್ನು ಆದರಿಸಿ ಪ್ರೋತ್ಸಾಹಿಸಬೇಕು.

'ಕೊರಡ್ಕಲ್'

ಬಾಲಕರು ಆರೋಗ್ಯಶಾಲಿಯರಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹಶಕ್ತಿ ಬಡವಾಗಿ, ಜೀರ್ಣಶಕ್ತಿ ಕುಂದಿ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ [illegible]ಗಳನ್ನು ಮಕ್ಕಳು ಮುದ್ದಿಡುವ [illegible] ಮಾಡುತ್ತಿರುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೊ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ.
L. H. Sharma, Mangalore.

(೫ನೇ ಪುಟದಿಂದ.)

ತೆಗಳನ್ನು ಭಾರತ ಕೇಂದ್ರಕ್ಕೊಪ್ಪಿಸಿಕೊಟ್ಟು ಅವುಗಳ ಆಡಳಿತೆಯಲ್ಲಿ ಪಾಲುಗಾರಿಕೆ ವಹಿಸಬಹುದು; ಎರಡನೆಯದರಲ್ಲೂ ಈ ಮೂರು ವಿಭಾಗಗಳನ್ನು ಒಪ್ಪಿಸಿ ಕೊಡಬೇಕಾದರೂ ಅದರ ಅಭಿಮತಕ್ಕಲ್ಲಿ ಬೆಲೆ ಬಾರದು. ಹೈದರಾಬಾದು ಸ್ವತಂತ್ರವೆಂಬ ಮಾತು ಕೇಳಬರುತ್ತಿದೆ. ಸ್ವಾತಂತ್ರ್ಯದ ಲಕ್ಷಣವೆಂದರೆ ದೇಶ ರಕ್ಷಣೆ, ವಿದೇಶ ಸಂಬಂಧದಂತಹ ವಿಷಯಗಳಲ್ಲಿ—ಯುದ್ಧದಲ್ಲಿ— ಸ್ವತಂತ್ರವಾಗಿರುವುದೇ. ಇಂತಹ ಸ್ವಾತಂತ್ರ್ಯವನ್ನು ಪಡೆಯದಿದ್ದರೆ ಹೈದರಾಬಾದು ಸ್ವತಂತ್ರವೆನ್ನಿಸದು. ದೇಶದೊಳಗಡೆ ಅಥವಾ ಗಡಿಗಳಲ್ಲಿ ಇಂತಹ ಸ್ವಾತಂತ್ರ್ಯ ಪಡೆದು, ಯಾವದೇ ಭಾಗವಾದರೂ ವಿದೇಶಗಳ ಯುದ್ಧ ನಿಲ್ದಾಣವಾಗುವದನ್ನು ಹಿಂದೀ ಕೇಂದ್ರ ಸರಕಾರವೆಂದಿಗೂ ಸಹಿಸದು. ಒಂದು ವರುಷಕ್ಕೆ ಮೊದಲು ಭಾರತದ ಚಿತ್ರ ಹೇಗಿದ್ದರೂ ಈ ದಿನ ಹೈದರಾಬಾದೊಂದರ ವಿನಹಾ ಪ್ರಜಾಶಕ್ತಿ ಜ್ಯಾರಿಗೆ ಬಾರದ ಅಥವಾ ಬರುವದಲ್ಲಿರದ ಯಾವ ಸಂಸ್ಥಾನ ಅಥವಾ ಭಾಗ ಭಾರತದಲ್ಲಿಲ್ಲ. ಹೈದರಾಬಾದಿನ ವಿನಹ ಮಿಕ್ಕವೇರೆಲ್ಲಿಯೂ ನಿರಂಕುಶಾಡಳಿತೆಯು ಉಳಿದಿಲ್ಲ. ಪ್ರಕೃತ ಹೈದರಾಬಾದು ಮಾತ್ರ—ಕೇವಲ ಅದೊಂದೇ ಸಂಸ್ಥಾನ—ಅಪವಾದವಾಗಿ ನಿಂತು, ನಿರಂಕುಶಾಡಳಿತೆ ಮತ್ತು ದಬ್ಬಾಳಿಕೆಯನ್ನವಲಂಬಿಸಿ ತೀರಾ ಹಿಂದೆ ಬಿದ್ದುಕೊಂಡಿದೆ. ಇಂತಹ ಸ್ಥಿತಿಯೇ ಹೈದರಾಬಾದು ಮತ್ತು ಅದರ ಸುತ್ತುಮುತ್ತಣ ಭಾರತ ಕ್ಷೇತ್ರಗಳೊಳಗೆ ಘರ್ಷಣೆಯನ್ನು ನಿರ್ಮಿಸಲು ಬದ್ಧವಿದೆ. ಆದ್ದರಿಂದ ಎಲ್ಲಕ್ಕಿಂತ ಮುಖ್ಯವಾದ ಹಾಗೂ ಅತ್ಯವಸರದಿಂದಾಗಬೇಕಾದ ಕೆಲಸವೆಂದರೆ ಹೈದರಾಬಾದಿನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆ. ಇಲ್ಲಿ ಸರ್ವಪ್ರಥಮವಾದ್ದದ ಸಂಗತಿಯೆಂದರೆ ಹೈದರಾಬಾದಿನೊಳಗಡೆಯಲ್ಲೂ ಗಡಿವಲಯಗಳಲ್ಲೂ ಶಾಂತಿ ಸ್ಥಾಪನೆಯಾಗಬೇಕಾದುದು. ಈ ಶಾಂತಿ ವಿನಹ ಪ್ರಜಾಪ್ರಭುತ್ವ ಬಾರದು. ಕಳೆದ ಕೆಲವು ತಿಂಗಳುಗಳಲ್ಲಿ ಭಾರತದ ಗಡಿಯಲ್ಲಿ ಹೈದರಾಬಾದಿನವರು ಅಗಣಿತ ಸಣ್ಣ ಘರ್ಷಣೆಗಳನ್ನೂ ಕೆಲವು ಮಹಾ ದುರಂತಗಳನ್ನೂ ನಿರ್ಮಿಸಿದ್ದಾರೆ. ರಝಾಕಾರರೂ ಹೈದರಾಬಾದ್ ಪೋಲೀಸರೂ ಭಾರತದ ಗಡಿಯೊಳಗೆ ನುಗ್ಗಿ ಬಂದು ಗುಂಡು ಹಾರಿಸಿದ್ದಾರೆ; ಹಳ್ಳಿಗಳನ್ನು ಸುಟ್ಟು ಹಾಕಿದ್ದಾರೆ. ನಿದರ್ಶನಕ್ಕಾಗಿ ಕಳೆದ ಮಾರ್ಚಿಯಲ್ಲಿ ನಡೆದ ಒಂದು ಭೀಕರ ಘಟನೆಯನ್ನು ಕೊಡಬಹುದು. ಭಾರತದ ನಾಗರಿಕ ಪ್ರಜೆಗಳನ್ನು ಇಪ್ಪತ್ತರ ಸಾಲುಗಳನ್ನಾಗಿ ಮಾಡಿ ನಿಲ್ಲಿಸಿ ಭಾರತದ ಕ್ಷೇತ್ರದಲ್ಲಿ ಗುಂಡಿಟ್ಟು ಕೊಂದುಹಾಕಲಾಯಿತು. ಹೈದರಾಬಾದಿನೊಳಗಡೆಯಲ್ಲಿ ಕೂಡಾ ಒಂದೆರಡು ನಗರಗಳನ್ನು ಬಿಟ್ಟರೆ ಹಳ್ಳೀ ವಲಯಗಳಲ್ಲೆಲ್ಲಾ ಪೂರ್ಣ ಅರಾಜಕತೆ ವ್ಯಾಪಿಸಿದೆ. ನಿರಪರಾಧಿಗಳಿಗೆ ಗುಂಡೆಸೆತ, ಸುಲಿಗೆ, ಬೆಂಕಿ ಇತ್ಯಾದಿ ಅನಾಚಾರಗಳು ಭೀಕರ ರೀತಿಯಿಂದ ನಡೆದಿವೆ. ಈ ದುಷ್ಕೃತ್ಯಗಳನ್ನು ನಡೆಸುವ ರಝಾಕಾರರನ್ನು ಸದೆಬಡಿಯಲೇ ಬೇಕು. ಅಂತರ್ರಾಷ್ಟ್ರೀಯ ಭಾಷೆಯಂತೆ ಹೈದರಾಬಾದಿನ ಈ ರಝಾಕಾರ್ ಖಾಸಗೀ ಸೇನೆಯೆಂಬುದು ಭಾರತ ಸರಕಾರದೆದಿರಿನ 'ವಿರುದ್ಧ ಕೃತ್ಯಗಳು'. ಹೈದರಾಬಾದು ಈ ವಿರುದ್ಧಾಚರಣೆಯನ್ನು ಅನುಮೋದಿಸಿಕೊಂಡು ಕುಳಿತಲ್ಲಿ ಅಥವಾ ಅದನ್ನು ದಮನಿಸಲು ಅದರಿಂದ ಅಸಾಧ್ಯವಾದರೆ ಭಾರತ ಸರಕಾರವು ತನ್ನ ಗಡಿಯಲ್ಲಿ ಧಾಳಿನಡಿಸುವ ಈ ಆಕ್ರಮಣಗಾರರ ಮೇಲೆ ಅತ್ಯಂತ ಕಠಿಣ ಕಾರ್ಯಕೈಕೊಳ್ಳಬೇಕಾಗುವದು".

ಇತರ ಸಮಸ್ಯೆಗಳು

ಕಾಶ್ಮೀರದ ಜಗಳದ ಕುರಿತು ಭದ್ರತಾ ಕೌನ್ಸಿಲು ಮಾಡಿದ ನಿರ್ಣಯದ ಕೆಲವು ಭಾಗಗಳು ಭಾರತ ಸರಕಾರದ ಮೂಲತತ್ವ ಮತ್ತು ಧೋರಣೆಗೂ ಕಾಶ್ಮೀರೀ ಜನತೆಗೆ ಕೊಟ್ಟಿರುವ ಆಶ್ವಾಸನೆಗಳಿಗೂ ಬದ್ಧ ವಿರೋಧವಿರುವುದರಿಂದ ಅದನ್ನೆಂದಿಗೂ ಹಿಂದೀ ಸರಕಾರವೊಪ್ಪಲಾರದೆಂದು ಪಂಡಿತ ನೆಹರುಗಳು ಸ್ಪಷ್ಟವಾಗಿ ಹೇಳಿದ್ದಾರೆ. ಈ ಪ್ರಶ್ನೆಯೀಗ ತೊಡಕಿನಿಂದ ತುಂಬಿರುವದಾದರೂ, ಜಾಗತಿಕ ಸಂಘದ ಮುಂದಿನ ಹೆಜ್ಜೆಯೇನೇ ಇದ್ದರೂ ಭಾರತವು ಯಾವ ಕೆಲಸವನ್ನೂ ಅರೆಮನಸ್ಸಿನಿಂದ ಮಾಡಬಾರದೆಂದು ತಿಳಿಸಿ, ಕಾಶ್ಮೀರದಲ್ಲಿ ಒಬ್ಬನೇ ಒಬ್ಬ ಧಾಳಿಗಾರನೂ ಉಳಿಯದಂತೆ ಮಾಡುವದಕ್ಕಾಗಿ ಯುದ್ಧದ ಪ್ರಾಬಲ್ಯ ಮತ್ತು ತೀವ್ರತೆಯನ್ನು ಹೆಚ್ಚಿಸಿ ಶಾಂತಿ ಸ್ಥಾಪಿಸಿಕೊಂಡು ನಂತರವೇ ಆ ಮೇಲಿನ ಕಾರ್ಯಗಳನ್ನು ಕೈಕೊಳ್ಳುವೆವೆಂದು ಪಂಡಿತರು ಖಚಿತ ಪಡಿಸಿದ್ದಾರೆ.

ಭಾರತದ ಔದ್ಯೋಗಾಭಿವೃದ್ಧಿ ಯೋಜನೆಗನುಸಾರವಾಗಿ ಬೇಕಾಗುವ ಕಚ್ಚಾ ಮಾಲುಗಳನ್ನು ವಿದೇಶಗಳಿಂದ ತರಿಸಿಕೊಳ್ಳುವ ಮಾತುಕತೆಗಳನ್ನು ಈಗ ಹಿಂದೀ ಸರಕಾರ ಕೈಕೊಂಡಿದೆ. ಜಾಪಾನಿನಿಂದ ಅಂತಹ ಸಾಮಾನುಗಳ ವ್ಯಾಪಾರ ನಡೆಸುವ ಒಪ್ಪಂದಕ್ಕೆ ತೊಡಗಿದ್ದು ಜಾಪಾನಿನ ವ್ಯಾಪಾರೀ ಸಮಿತಿಯೀಗ ಕಲ್ಕತ್ತಕ್ಕೆ ಬಂದು ಪರ್ಯಾಲೋಚನೆಗಾರಂಭಿಸಿದೆ.

ಅಮೇರಿಕದ ಹಿಡಿತ ಮತ್ತು ಹಂಗಿನೊಳಗೆ ಕೆಡಹುವ ಸಾಲ ಅಥವಾ ದಾನದ ರೂಪದಿಂದಾವ ಸಹಾಯವನ್ನೂ ಪಡೆಯದೆ, ಏಸ್ಯಾದ ರಾಷ್ಟ್ರಗಳ ಪುನರ್ರಚನೆಗೆ ಬೇಕಾಗುವ ಕೆಲವು ಸಾಮಾನುಗಳನ್ನು ಮುಖ್ಯವಾಗಿ ಅಮೇರಿಕದಿಂದ ಪಡಕೊಳ್ಳುವ ಯೋಜನೆಯನ್ನು ಭಾರತ ಸರಕಾರವು ತಯಾರಿಸಿದ್ದು ಅಮೇರಿಕವೂ ಅದಕ್ಕೆ ಸಮ್ಮತಿಸಿದೆ ಎಂದು ತಿಳಿದು ಬರುತ್ತಿದೆ. ಈ ಸಂಬಂಧದ ಪರ್ಯಾಲೋಚನೆಗಾಗಿ ಏಶ್ಯಾದ ರಾಷ್ಟ್ರಗಳ ಸಮ್ಮೇಳನವೊಂದು ಭಾರತದಲ್ಲಿ ಸೇರುವುದು ಸಂಭವನೀಯ.

ಪಾಕಿಸ್ಥಾನ ಮತ್ತು ರಶ್ಯವು ಪರಸ್ಪರ ರಾಯಭಾರಿಗಳನ್ನು ನೇಮಿಸಿಕೊಳ್ಳುವ ವ್ಯವಸ್ಥೆಯಾಗಿದೆ. ಹೈದರಾಬಾದು ಮತ್ತು ಕಾಶ್ಮೀರ ಸಮಸ್ಯೆಗಳೆರಡನ್ನು ತೀರ್ಮಾನಿಸಿಕೊಂಡಲ್ಲಿ ಮತ್ತೆ ಭಾರತವು ಸ್ವರಾಜ್ಯ ಪ್ರಸವದ ಕಾಹಿಲೆಗಳೆಲ್ಲವುಗಳಿಂದಲೂ ಪಾರಾಗಿ ನವಜೀವನವನ್ನಾರಂಭಿಸಲು ಅಡ್ಡಿಯಿಲ್ಲ. —

ಅತ್ಯಂತ ಉಪಯುಕ್ತ ಪುಸ್ತಕ

ವ್ಯವಹಾರ ಜ್ಞಾನದರ್ಪಣ

ಶ್ರೀ. ಯು. ಜಿ. ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ

ಲೋಕ ವ್ಯವಹಾರ ಬೋಧಿನಿ

ಬೆಲೆ ರೂ 1—8—0 ಮಾತ್ರ

ಪ್ರತಿಗಳು ಸಿಗುವ ಸ್ಥಳಗಳು:—(1) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು; (2) ಎಂ. ಎಸ್. ಮಯ್ಯ, ಪುತ್ತೂರು; (3) ನವಭಾರತ ಬುಕ್ ಡಿಪೋ, ಉಡುಪಿ; (4) ಪಾವಂಜೆ ಗುರುರಾವ್, ಉಡುಪಿ; (5) ಯು. ಆರ್. ಶೆಣೈ & ಸನ್ಸ್, ಮಂಗಳೂರು.

ದಕ್ಷಿಣ ಕನ್ನಡ

ಸುಬ್ರಹ್ಮಣ್ಯ—ವರ್ಷಾವಧಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ. 20-5-48ರಿಂದ 24-5-48ರ ತನಕ ಜರಗಲಿರುವುದು

ಪಡುಬಿದ್ರಿ—ಇಲ್ಲಿಯ ವರ್ಗದಾರರಲ್ಲೊಬ್ಬರೂ, ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ವ್ಯಾಯಾಮ ಮಂದಿರದ ಸ್ಥಾಪಕರೂ, ಕೃಷಿಕರ ಸಂಘದ ಅಧ್ಯಕ್ಷರೂ ಆಗಿರುವ ಶ್ರೀ ಬೋಳ ಮಂಜಯ ನಂದ್ಯಪ್ಪ ಶೆಟ್ರು, ಇಲ್ಲಿಯ ಮದ್ರಾಸು ಹಿಂದೂ ರಿಲಿಜೀಯಸ್ ಎಂಡೋಮೆಂಟು ಬೋರ್ಡಿನಿಂದ ಮೊಕ್ತೇಸರರಾಗಿ ನೇಮಕ ಹೊಂದಿರುತ್ತಾರೆ.

ನಾಡ್ಪಾಲು—ಬೊ. ಎ. ಶಾಲಾ ವರ್ಧಂತಿ ಉತ್ಸವವು ಕಳೆದ ತಾ 24ರಲ್ಲಿ ಡಿ. ಇನ್ಸ್‌ಪೆಕ್ಟರ್ ಶ್ರೀ ಪಿ ಮಹಾಬಲ ಚೌಟ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮಕ್ಕಳಿಂದ ವಿವಿಧ ವಿನೋದಾವಳಿಗಳು ಪ್ರದರ್ಶಿತವಾದ ನಂತರ, ರತಿಕಲ್ಯಾಣವೆಂಬ ಯಕ್ಷಗಾನ ನಾಟಕವು ಶಾಲಾ ಬಾಲಕಿಯರಿಂದಲೂ ಹಳೇ ವಿದ್ಯಾರ್ಥಿಗಳಿಂದಲೂ ಅಭಿನಯಿಸಲ್ಪಟ್ಟಿತು.

'ಕೇಶ ಕಲಾ' ಹೇರ್ ಆಯಿಲ್

ಈ ಎಣ್ಣೆಯು, ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇವಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಅಮೃತಾಂಜನ.

ತಲೆವೇದನೆ, ತಿರೋವೇದನೆ, ಉಳುಕು, ಶೀತ್ರಗೆ, ಘಟು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಹೇಳು ವಿಷ ಮುಂತಾದ ಹೇಳಿ ಹಲ್ಲು ಕಾಟ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

ಸಿಕ್ಕ, ಮಾತಿಶಿಕ್ಷ ಮದ್ದು ಸಕಲ ಪಮ್ಮಕ್ಕೂ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತೆ.

ಕೊನೆಗೆ ಧನ್ಯವಾದ ಸಮರ್ಪಣೆಯಾದ ನಂತರ ಮಂಗಲಾರತಿಯೊಡನೆ ಸಭೆ ಚದರಿತು.

ಮಂಗಳೂರು.

ದ. ಕ. ಜಿಲ್ಲಾ ವಾಣಿಜ್ಯ ನೌಕರರ ಸಂಘದ—ವಾರ್ಷಿಕ ಮಹಾ ಸಭೆಯು ದಿನಾಂಕ ೨೫ರಂದು ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಉಳ್ಳಾಲ ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪದ್ಮನಾಭ ಭಟ್ಟರು ಸಂಘದ ಗತವರ್ಷದ ವರದಿಯನ್ನು ಓದಿಹೇಳಿದರು. ಆ ಮೇಲೆ "ಮೇದಿನ"ವನ್ನು ಎಲ್ಲಾ ವಾಣಿಜ್ಯ ನೌಕರರು ಆಚರಿಸಬೇಕೆಂಬ ನಿರ್ಣಯವು ಸ್ವೀಕರಿಸಲ್ಪಟ್ಟಿತು. ಆ ಮೇಲೆ ಸಭಿಕರಪೈಕಿ ಶ್ರೀಗಳಾದ ಎ. ಜಿ. ಕಾರಂತ, ಎಸ್. ಎಮ್. ರಾಮಕೃಷ್ಣ ರಾವ್, ಬಿ. ದಾಮೋದರ ಬಾಳಿಗ, ಯು. ಎಸ್. ಶ್ರೀನಿವಾಸ ಭಟ್ಟ, ಕೆ ಕೇಶವ ಕಾಮತ್, ಆರ್. ಎ. ಬಿಜೂರು ಮೊದಲಾದವರು ಭಾಷಣಗಳನ್ನಿತ್ತರು. ಹೊಸ ವರ್ಷಕ್ಕೆ ಕೆ. ಶಶಿಧರ ರಾವ್, ಇವರು ಅಧ್ಯಕ್ಷರಾಗಿಯೂ, ಸುಬ್ರಾಯ ಪೈಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ವಂದನಾರ್ಪಣೆಗಳೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶ್ರೀ ಸುಬ್ರಹ್ಮಣ್ಯ ಸಭಾ-ಮಂಗಳೂರು—ಇದರ ವಾರ್ಷಿಕ ಮಹಾ ಸಭೆಯು ದಿನಾಂಕ ೨೫ರಂದು ವಕೀಲ್ ಶ್ರೀ ಎಸ್ ಎಸ್. ನಾರಾಯಣ ರಾವ್, ಇವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿಗಳಾದ ಶ್ರೀ ಭುಜಂಗರಾಯರು ಗತವರ್ಷದ ವರದಿಯನ್ನು ಓದಿಹೇಳಿದರು. ಆ ಮೇಲೆ ಗಾಂಧಿಜಿಯವರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವು ಮುಂದಿಸಲ್ಪಟ್ಟು ಸ್ವೀಕರಿಸಲ್ಪಟ್ಟಿತು. ಡಾ| ಎಮ್. ವಿ ಶಾಸ್ತ್ರಿ, ಎಸ್ ಎಲ್. ಉಪಾಧ್ಯಾಯ, ಮುಂಬಯಿಯ ಕೃಷ್ಣರಾವ್ ಮಡಿಕೇರಿಯ ಪಿ. ಎಲ್. ಎಸ್. ಶಾಸ್ತ್ರಿ ಮೊದಲಾದವರು ಸಭಿಕರ ಪರವಾಗಿ ಭಾಷಣವಿತ್ತರು ವಂದನಾರ್ಪಣೆಗಳೊಡನೆ ಸಭೆಯು ಅಂತ್ಯವಾಯಿತು.

ದ ಕ. ಜಿಲ್ಲಾ ನಿವಿಷ್ಟ ಭಾರತೀಯ ವೈದ್ಯ ಸಂಘದ—ಪತ್ತನೆಯ ವಾರ್ಷಿಕ ಮಹಾ ಸಭೆಯು ದಿನಾಂಕ ೨೫ರಂದು ಜರಗಿತು. ಪ್ರಾರ್ಥನೆ, ಮಹಾತ್ಮಾಜಿಯವರ ನಿಧನದ ಬಗ್ಗೆ ದುಃಖ ಸೂಚಿಸುವ ಮತ್ತು ವ್ಯತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ ಠರಾವಾಗಿ ವಾರ್ಷಿಕ ವರದಿ ಲೆಖ್ಖಗಳು ಚರ್ಚಿಸಲ್ಪಟ್ಟು ಬಹುಮತದಿಂದ ಸ್ವೀಕೃತವಾದವು. ಬರುವ ವರ್ಷಕ್ಕೆ ಹಿಂದಿನ ಆಡಳಿತ ಮಂಡಳಿಯನ್ನೇ ಪುನಃ ಚುನಾಯಿಸಲಾಗಿ ವೈದ್ಯರುಗಳಾದ ಕೃಷ್ಣನ್ ಅರ್ನ್ಸ್, ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಯಸ್. ಕೆ. ಶೇಖರನ್ ಮತ್ತು ಎ. ವೆಂಕಪ್ಪಯ್ಯ, ಯು. ಆರ್. ಜೋಶಿರುಗಳು ಕ್ರಮವಾಗಿ ಅಧ್ಯಕ್ಷ ಉಪಾಧ್ಯಕ್ಷ, ಖಜಾಂಚಿ ಮತ್ತು ಜತೆ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಧನ್ಯವಾದಗಳೊಡನೆ ಸಭೆಯು ಅಂತ್ಯವಾಯಿತು.

The Vijaya Bank Ltd., Koondapur

ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹಸೀಯರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದೆ ಇರುವುದರಿಂದ ಸದ್ರಿಯವರಿಗೆ ಕ್ರಮ ಪ್ರಕಾರ ರಿಜಿಸ್ಟ್ರಿ ನೋಟೀಸನ್ನು ಕಳುಹಿಸಿದಲ್ಲಿ ಸದ್ರಿ ಸಾಲದ ಅಸಲು, ಬಡ್ಡಿ ವಗೈರೆ ಆವೇಜನ್ನು ಕೊಡದೆ ಇನ್ನೂ ಬಾಕಿ ಇಟ್ಟುಕೊಂಡಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ :

ನೀವು ನಮ್ಮ ಬೇಂಕಿಗೆ ಸಲ್ಲಿಸಲಿಕ್ಕಿರುವ ಅಸಲು, ಬಡ್ಡಿ, ನೋಟೀಸುಗಳ ಖರ್ಚು ವಗೈರೆ ಆವೇಜನ್ನು ಇದೇ ಮೇ ತಿಂಗಳ ತಾ 12ರ ಒಳಗೆ ನಮ್ಮ ಬೇಂಕಿಗೆ ಪಾವತಿ ಮಾಡದಿದ್ದಲ್ಲಿ ತಾ. 18 ಹಗಲು ಗಂಟೆ 3 30ಕ್ಕೆ ಯೂ ಬೇಂಕಿಗೆ ಯುಕ್ತ ತಂಡ ದಿನದಲ್ಲಿ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸ್ಲು ಮೊಬಲಗು ರೂ.	ಅ	ಪೈ
149/42.3	ಶ್ರೀ ಜಿ ಎಸ್. ಮಂಜುನಾಥ, ಸುಬ್ರಾಯ ಸೇರಿಗಾರ್ರ ಮಗ, C/o ಬಾಬುರಾಯ, ಪ್ರೊಸೆಸ್ ಸರ್ವರ, ಡಿ ಮು ಕೋರ್ಟು, ಕುಂದಾಪುರ.	42	4	0
156/43 4	ಶ್ರೀ ಕೆ. ಎಲ್. ಮಂಜೈ ಸೆಟ್ಟಿ, ಎಸ್ ಲಕ್ಷ್ಮಣ ಸೆಟ್ಟರ ಮಗ, ಅಕ್ಕಿ ವ್ಯಾಪಾರಿ, ಮುಳ್ಳುಗುಡ್ಡೆ, ತಾವಾರ್‌ಡಿ ಗ್ರಾಮ, ಕಂಡ್ಲೂರು	500	0	0
351/43-4	ಶ್ರೀ ಮಹಾಬಲ ಸೇಟ್, ಮಗ್ಗೈ ಸೇಟರ ಮಗ, ಚಿನಿವಾರ ಕಾರ್ವಿಕೇರಿ, ಕುಂದಾಪುರ.	11	0	0
383/43-4	ಶ್ರೀ ಎಮ್ ಲಕ್ಷ್ಮಣ ಶೆಣೈ, ವೈಕುಂಠ ಶೆಣೈರ ಮಗ, ಹೊಲಿಗೆಯವ, ಕುಂದಾಪುರ	25	0	0
19/44-5	ಶ್ರೀ ಪೀಟರ್ ಲ್ಯೂಸ್, ಗ್ರೆಗರಿ ಲ್ಯೂಸರ ಮಗ, ಪಾಲ್‌ಕುದ್ರು ಗ್ರಾಮ, ಹಂಗಾರಕಟ್ಟೆ.	90	0	0
437/43-4	ಶ್ರೀ ಎಮ್. ರಂಗೈ ಸೆಟ್ಟಿ, ಮಾದೈ ಸೆಟ್ಟಿ ಅಳಿಯ ಮೂಡಬೈಲು, ಕರ್ಕುಂಜೆ ಗ್ರಾಮ, ಕರ್ಕುಂಜೆ	100	0	0
104/44-5	ಶ್ರೀ ಕೆ. ಎಲ್ ಮಂಜೈ ಸೆಟ್ಟಿ, ಎಸ್ ಲಕ್ಷ್ಮಣ ಸೆಟ್ಟರ ಮಗ, ಅಕ್ಕಿ ವ್ಯಾಪಾರಿ, ಕಂಡ್ಲೂರು.	1400	0	0
347/44-5	ಶ್ರೀ ಸಿ ಕೃಷ್ಣಪ್ಪ ಸೆಟ್ಟಿ, ಎಜ್ರ ಗೋವಿಂದ ಸೆಟ್ಟಿ ಮಗ, ವ್ಯಾಪಾರಿ, ನೇರಳಕಟ್ಟೆ, ಕರ್ಕುಂಜೆ	30	0	0
574/44-5	ಶ್ರೀ ಜಗನ್ನಾಥ ಸೆಟ್ಟಿ, [illegible] ಸೆಟ್ಟಿ [illegible] ಕುಂಬಳಗದ್ದೆ ಮೊಳಹಳ್ಳಿ, ಶಂಕರನಾರಾಯಣ ಪೋಸ್ಟ್	15	0	0

ಕುಂದಾಪುರ, 30-4-1948

K. Narayana Shetty.
ಏಜಂಟ

NOTICE

Sealed tenders are invited for the supply of midday meals in the 42 labour schools of this district named below during the year 1948-49 commencing on or about the 1st July 48 to 31st March 49 to the pupils of communities eligible for help by the Labour Department. The rice to be used for each meal is ¼ seer of rice (4 oz) with adequate quantity of Sambar prepared of 5 tolas of vegetables. Hither to supply of meals are being made on an adhoc basic by labour school teachers. Cost has not exceeded Re. 0-1-9 (one annas and nine-pies) Sealed tenders are therefore invited from persons who are willing to supply food for a single or group of schools at the rates not exceeding Re. 0-1-9 per meal so as to reach the Collector's office Mangalore on or before the 25th May 48 The covers should be superscribed Tenders for the supply of midday meals to Harijan Schools and addressed to the Collector.

Further particulars or information may be obtained from the District Harijan Welfare Officer on all working days during office hours.

S R. KAIWAR Esq, I C S.
Collector of South Kanara

S. Kanara Collector's office
Mangalore dated, 24-4-1948

List of Schools

KASARAGOD TALUK

1 Pilicode, 2 Shirivagilu, 3 Manjeshwar, 4 Kumbla, 5 Hosdrug, 6 Bare, 7 South Tricarpur, 8 Kodakat, 9 Bombrana 10 Mangalpadi, 11 Nileshwar, 12 Chervathur, 13 Kasaragod, 14 Palekere, 15 Narampady, 16 Kunija, 17 Koyampadi.

PUTTUR TALUK

18 Sullia, 19 Ujre, 20 Kidumata, 21 Ragikumaru.

MANGALORE TALUK

22 Bolur. 23 Bolar, 24 Mulky, 25 Haleangady, 26 Paduperar, 27 Kapekadu, 28 Kannori, 29 Souterpetah.

UDIPI TALUK

30 Udyavar, 31 Brahmavar, 32 Kota, 33 Malpe. 34 Barkur, 35 Hangarkatta, 36 Tonse West.

COONDAPUR TALUK

37 Vodorhobli, 38 Gangolli, 39 Nagodi

KARKAL TALUK

40 Moodabidri, 41 Bailur. 42 Mudukonaje.

(Sd) **S. R. Kaiwar,**
Collector

ಸ್ತನ್ಯ ಮತ್ತು ಮಗುವಿನ ಬೆಳವಣಿಗೆ

ವೈದ್ಯ, ವಿನಾಯಕರಾವ್ ಚಾಪಟೆ, L. A. M. S. ಕಾಳಗಪ್ಪ.
ಶಿವಮೊಗ್ಗ.

ತಾಯಿಯ ಹಾಲು ಮಗುವಿಗೆ ದೈವದತ್ತವಾದ ಆಹಾರ, ಸ್ತನ್ಯಪಾನ ಮಾಡುವುದು ಅದರ ಹಕ್ಕು. ಶಿಶುವು, ಗರ್ಭಾವಸ್ಥೆಯ ಕಾಲದಲ್ಲಿ ತಾಯಿಯ ಶರೀರದೊಳಗೇ ಬೆಳೆದಿರುವುದರಿಂದಲೂ, ಮತ್ತು ತಾಯಿಯ ರಕ್ತದಿಂದಲೇ ಅಭಿವೃದ್ಧಿಯಾಗಿರುವುದರಿಂದಲೂ, ತಾಯಿಯ ಹಾಲು ಶಿಶುವಿನ ಶರೀರದ ಪೋಷಣೆಗೆ ಅನುಗುಣವಾದ ಹಾಗೂ ಅತಿ ಶ್ರೇಷ್ಠವಾದ ಆಹಾರವಾಗಿದೆ. ಆಡಿನ ಹಾಲು, ಹಸುವಿನ ಹಾಲು, Glaxo, Harlicks ಇತ್ಯಾದಿಗಳು ಕೇವಲ ಅಭಾವ ದ್ರವ್ಯಗಳೇ ಹೊರತು, ಎಂದಿಗೂ ತಾಯಿಯ ಹಾಲಿಗೆ ಸರಿಸಮವಾಗಲಾರವು.

ಆದರೆ ದುರ್ದೈವದಿಂದ ಈಚೀಚೆಗೆ ನಮ್ಮಲ್ಲಿಯ ಅನೇಕ ತರುಣಿಯರು ನಾನಾತರಹದ ಅಜ್ಞಾನ ಹಾಗೂ ಮೋಹಗಳಿಗೊಳಗಾಗಿ, ತಮ್ಮ ಮಕ್ಕಳಿಗೆ ಮೊಲೆಯುಣಿಸಲು ಹಿಂಜರಿಯುತ್ತಾರೆ, ಹಾಗೂ ಅಭಾವ ದ್ರವ್ಯವಾದ ಆಕಳ ಹಾಲು, Glaxo, ಇತ್ಯಾದಿಗಳ ಕೃತಕ ರೂಪದಾದದೊಂದು ಆಹಾರವನ್ನು ಕೊಡುತ್ತಾರೆ. ಇದಕ್ಕೆ ಪೂರಕವಾಗಿ ಪಾಶ್ಚಾತ್ಯ ವ್ಯಾಪಾರಿಗಳ ಬಲೆಗೆ ಬಿದ್ದ ನಮ್ಮ ಕೆಲವು ವೈದ್ಯರು ಸಹಾ Glaxo, Harlicks ಇತ್ಯಾದಿ ಅಭಾವ ದ್ರವ್ಯಗಳು ತಾಯಿಯ ಹಾಲಿಗಿಂತಲೂ ಶ್ರೇಷ್ಠ ಎಂದು ಪ್ರತಿಪಾದಿಸುತ್ತಿದ್ದಾರೆ. ಇವರ ಮಾತು ಎಷ್ಟು ಸತ್ಯ ಎಂಬುದು, ಪಾಶ್ಚಾತ್ಯ ದೇಶದ ಹತ್ತು ಜನ ವಿಖ್ಯಾತ ವೈದ್ಯರು ಬರೆದ Midwifery, (by Ten Teachers) ಎಂಬ ಗ್ರಂಥದಿಂದ ಸ್ಪಷ್ಟವಾಗುತ್ತದೆ. ಅವರು ಹೇಳುವುದೇನೆಂದರೆ,

"our Knowledge regarding lactation, normal and abnormal, and of the practicle management of mother and infant, is of an clmentary order".

ಇದಕ್ಕೆ ವಿರೋಧವಾಗಿ, ನಮ್ಮ ಹಿಂದಿನ ವಿಜ್ಞಾನಿಗಳು ಶಿಶುವಿನ ಬೆಳವಣಿಗೆಯ ದೃಷ್ಟಿಯಿಂದ-ಶಾರೀರಿಕ ಹಾಗೂ ಬೌದ್ಧಿಕ-ಮೊಲೆ ಹಾಲು ಅತಿ ಶ್ರೇಷ್ಠವಾದ ಆಹಾರ ಎಂಬುದನ್ನು ನಿರ್ಧರಿಸಿದ್ದಾರೆ.

ಮಗುವಿಗೆ ಸ್ತನ್ಯಪಾನದಿಂದಾಗುವ ವಿಶೇಷ ಲಾಭಗಳು.

ಸ್ತನ್ಯಪಾನ ಮಾಡುವಾಗ ಮಗುವು ಹಾಲನ್ನು ನೇರವಾಗಿ ಮೊಲೆಗಳಿಂದ ಚೀಪುತ್ತದೆ. ಮೊಲೆ ಹಾಲು ಹೀಗೆ ಹೊರಗಿನ ಗಾಳಿಯ ಜೊತೆಗೆ ಸಂಪರ್ಕವಾಗದೆ ಇರುವುದರಿಂದ ಅದು ಯಾವ ರೀತಿಯಲ್ಲಿಯೂ ಬಾಹ್ಯ ಕ್ರಿಮಿಗಳಿಂದ ದೂಷಿಸಲ್ಪಡುವುದಿಲ್ಲ. ಮೊಲೆ ಹಾಲು ದೇಹದ ಕಾವಿನಷ್ಟೇ ಬಿಸಿಯಾಗಿರುವುದರಿಂದ ಶಿಶುವು ಇದನ್ನು ಹೆಚ್ಚು ಸಂತೋಷದಿಂದ ಕುಡಿಯುತ್ತದೆ. ಸ್ತನ್ಯಪಾನ ಮಾಡುವಾಗ ಸ್ತನಗಳಲ್ಲಿರುವ ನರಗಳು ಉತ್ತೇಜಿತವಾಗುತ್ತವೆ. ಈಗ ಸ್ತನ ಚೂಚುಕಗಳನ್ನು ಚೀಪುವುದರಿಂದಲೂ, ಮತ್ತು ಉಬ್ಬಿಕೊಂಡು ಮೃದುವಾಗಿರುವ ಸ್ತನಗಳನ್ನು ಶಿಶುವು ತನ್ನ ಪುಟ್ಟ ಕೈಗಳಿಂದ ಒತ್ತಿ ಹಿಡಿದುಕೊಳ್ಳುವುದರಿಂದಲೂ, ಅದಕ್ಕೆ ವರ್ಣಿಸಲು ಅಸಾಧ್ಯವಾದ ಒಂದು ತರಹದ ಸಂತೋಷವೂ, ಸುಖವೂ ಉಂಟಾಗಿ, ಅದು ತನ್ನ ಬಾಧ್ಯ ಕಷ್ಟ ಮತ್ತು ದುಃಖಗಳೆಲ್ಲವನ್ನೂ ಮರೆತು, ಪ್ರಸನ್ನವಾದ ಒಂದೇ ಮನಸ್ಸಿನಿಂದ ತನ್ನ ಆಹಾರವನ್ನು ಸೇವಿಸುತ್ತದೆ. ಹಸುವಿನ ಹಾಲನ್ನಾಗಲೀ ಇತರ ಹಾಲನ್ನಾಗಲೀ, ಸೇವಿಸುವಾಗ ಈ ಸೌಲಭ್ಯಗಳಿರುವುದಿಲ್ಲ.

ಹಸುವಿನ ಹಾಲನ್ನು ಹಿಂಡಿದಲಾಗಾಯಿತು, ಅದನ್ನು ಕಾಯಿಸಿ, ಮಗುವಿಗೆ ಕುಡಿಯಿಸುವ ವರೆಗೂ ಅದು ಹೊರಗಿನ ಗಾಳಿಯಲ್ಲಿರುವ ಕ್ರಿಮಿಗಳಿಂದ ದೂಷಿಸಲ್ಪಡಬಹುದಾದ ಸಂಭವವುಂಟು. ಈ ಹಾಲು ಒಂದೇ ವಿಧವಾದ ಶಾಖದಲ್ಲಿರದೆ, ಕುಡಿಯುವಾಗಲೆ ಆರಿಹೋಗುತ್ತದೆ. ಅಲ್ಲದೆ ಪ್ರತಿನಿತ್ಯವೂ ಹಾಲನ್ನು ಕುಡಿಸುವಾಗ ಒಂದೊಂದು ದಿವಸ ಒಂದೊಂದು ರೀತಿಯ ಉಷ್ಣದಲ್ಲಿರಬಹುದು. ಮೇಲಾಗಿ ಹಾಲಿಗೆ ನೀರು ಮತ್ತು ಸಕ್ಕರೆಯನ್ನು ಸೇರಿಸುವಾಗ, ಪ್ರಮಾಣದಲ್ಲಿ ಹೆಚ್ಚು ಯಾ ಕಡಿಮೆಯಾಗಿ ರುಚಿಯು ಬಿಡಲಾಯಿಸಬಹುದು. ಈ ನ್ಯೂನತೆಗಳನ್ನು ಸರಿಪಡಿಸಬಹುದೆಂದು ತೋರಿದಾಗ್ಯೂ, ಕಾರ್ಯದೃಷ್ಟಿಯಿಂದ ಎಲ್ಲರಿಗೂ ಸಾಧ್ಯವಿಲ್ಲ. ಸೀಸೆಯಿಂದ ಹಾಲು ಕುಡಿಸುವಾಗ ಎಷ್ಟೇ ಉತ್ತಮವಾದ ಬುಡ್ಡಿಯನ್ನು (Teat) ಹಾಕಿದಾಗ್ಯೂ, ಅದರಿಂದ ಮಗುವಿಗೆ ಸ್ತನ್ಯಪಾನ ಮಾಡಿದಷ್ಟು ಹಿತವೂ, ಸುಖವೂ, ಮತ್ತು ತದೇಕಧ್ಯಾನವೂ ಉಂಟಾಗಲಾರದು. ಈ ಎರಡೂ ಹಾಲುಗಳಲ್ಲಿರುವ ಸ್ವಾಭಾವಿಕ ದ್ರವ್ಯಗಳ ಸಂಯೋಗದಿಂದ ಸಹ ತಾಯಿಯ ಹಾಲೇ ಶ್ರೇಷ್ಠವಾದದ್ದೆಂದು ಸಿದ್ಧವಾಗಿದೆ. ಹಸುವಿನ ಹಾಲಿನಲ್ಲಿ, ತಾಯಿಯ ಹಾಲಿಗಿಂತಲೂ ಕೊಬ್ಬು ಮತ್ತು ಪ್ರೋಟೀನಗಳು ಹೆಚ್ಚಾಗಿರುವುದು ನಿಜ, ಯಾವುದೇ ಪಾಲಾಗಲೀ ಹೊಟ್ಟೆಯೊಳಕ್ಕೆ ಹೋದಕೂಡಲೆ ಮೊಸರಾಗುತ್ತದಷ್ಟೆ. ಹಸುವಿನ ಹಾಲಿನಿಂದಾಗುವ ಮೊಸರು ತಾಯಿಯ ಹಾಲಿನಿಂದಾಗುವ ಮೊಸರಿಗಿಂತಲೂ ಹೆಚ್ಚು ದಪ್ಪಗೂ, ಗಟ್ಟಿಯಾಗಿಯೂ ಇರುತ್ತದೆ. ಹಸುವಿನ ಕರುವು ಇದನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲುದಾದರೂ, ಮಗುವು ಮಾತ್ರ ಸುಲಭವಾಗಿ ಜೀರ್ಣಿಸಿಕೊಳ್ಳಲಾರದು.

ಚಿಕ್ಕ ಮಕ್ಕಳಿಗೆ ಉಂಟಾಗುವ ರೋಗಗಳ ಪೈಕಿ ಜೀರ್ಣಾವಯವಗಳಿಗೆ ಸಂಬಂಧಪಟ್ಟ ವ್ಯಾಧಿಗಳು, ಹಾಗೂ ಕ್ರಿಮಿ ಸಾಂಕರ್ಯ ಇವು ಮುಖ್ಯವಾಗಿವೆ. ಹಸುವಿನ ಹಾಲನ್ನು ಉಪಯೋಗಿಸುವಾಗ ಈ ಎರಡೂ ರೋಗಗಳುಂಟಾಗಬಹುದಾದ ಸಂಭವವು ಹೆಚ್ಚಾಗಿದೆ. ಆದರೆ ಮಗುವು ತಾಯಿಯ ಹಾಲನ್ನು ಕುಡಿಯುತ್ತಿರುವಾಗ ಈ ವ್ಯಾಧಿಗಳ ಭಯವು ಸ್ವಲ್ಪವೂ ಇಲ್ಲ. ಅಲ್ಲದೆ ಮಗುವು ತಾಯಿಯ ಹಾಲಿನ ಮುಖಾಂತರ ತಾಯಿಯ ರೋಗ ನಿರೋಧಕ ಶಕ್ತಿಯನ್ನೂ ಸಂಪಾದಿಸಬಹುದಾದ ಸಂಭವವುಂಟು. ಸೀಸೆಯಿಂದ ಹಾಲು ಕುಡಿಯುವ ಮಕ್ಕಳು ಸ್ತನ್ಯಪಾನ ಮಾಡುತ್ತಿರುವ ಮಕ್ಕಳಿಗಿಂತ ಹೆಚ್ಚಾಗಿ ಜೀರ್ಣಾವಯಗಳಿಗೆ ಸಂಬಂಧಪಟ್ಟ ವ್ಯಾಧಿಗಳಿಂದ ನರಳುತ್ತವೆ ಎಂಬುದು ಅನುಭವ ಸಿದ್ಧವಾದ ಮಾತು. ಕೆಲವು ಮಕ್ಕಳು ಪ್ರಾರಂಭದಿಂದಲೂ ಸ್ತನ್ಯಪಾನ ಮಾಡದೆ, ಹಸುವಿನ ಇಲ್ಲವೆ ಒಣಗಿದ ಹಾಲನ್ನೇ ಕುಡಿದು ಪುಷ್ಟಿಯಾಗಿ ಬೆಳೆದಿರುವುದುಂಟು. ಆದರೆ ಅದೇ ಮಗುವು ಮೊದಲಿನಿಂದಲೂ ತಾಯಿಯ ಹಾಲನ್ನೇ ಕುಡಿಯುತ್ತಾ ಬಂದಿದ್ದಲ್ಲಿ ಅದು ಇನ್ನೂ ಹೆಚ್ಚು ಆರೋಗ್ಯಕರವಾಗಿರಬಹುದಿತ್ತು.

ತಾಯಿಗೆ ಆಗುವ ಲಾಭಗಳು

ಸ್ತನ್ಯಪಾನ ಮಾಡಿಸುವುದರಿಂದ ತಾಯಿಗೂ ಲಾಭವುಂಟು. ಸ್ತನ್ಯಪಾನ ಮಾಡಿಸುವುದರಿಂದ ತಾಯಿಗೆ ಆನಂದವುಂಟಾಗುತ್ತದೆ. ಗರ್ಭಕೋಶ ಮತ್ತು ಇತರ ಜನನೇಂದ್ರಿಯಗಳು ಸುಲಭವಾಗಿಯೂ, ಜಾಗ್ರತೆಯಾಗಿಯೂ ಮೊದಲಿನ ಸ್ಥಿತಿಗೆ ಬರುತ್ತವೆ. ಅವಳಿಗೆ ತನ್ನ ಮಗುವಿನ ಜೊತೆಗೆ ಹೆಚ್ಚು ಬಳಕೆಯುಂಟಾಗಿ ಮಗುವಿನ ಮೇಲಿನ ವಾತ್ಸಲ್ಯವು ಹೆಚ್ಚುತ್ತದೆ. ಮಗುವು ಸ್ತನ್ಯಪಾನ ಮಾಡಿದಾಗಲೆಲ್ಲಾ ತಾಯಿಗೆ ಸೌಖ್ಯವೂ ಆನಂದವೂ ಉಂಟಾಗುತ್ತದೆ. ಇದರಿಂದ ತಾಯಿ ಮಕ್ಕಳಲ್ಲಿರುವ ಕೇವಲ ಶಾರೀರಿಕ ಸಂಬಂಧವಲ್ಲದೆ ಮಾನಸಿಕ ಹಾಗೂ ನೈತಿಕ ಸಂಬಂಧವು ಸಹ ಬೆಳೆಯಲು ಸಹಾಯವಾಗುತ್ತದೆ. ಅಲ್ಲದೆ ತಾಯಿಗೆ ನಿಜವಾದ ತಾಯ್ತನದಿಂದ ಲಭಿಸಬೇಕಾದ ಶಾಂತತೆ, ತಾಳ್ಮೆ, ಶಿಶುವಾತ್ಸಲ್ಯ ಇತ್ಯಾದಿ ಸದ್ಗುಣಗಳು ಸಹ ಪ್ರಾಪ್ತಿಯಾಗುತ್ತವೆ.

ಸ್ತನ್ಯ ಸ್ರಾವವಾಗುವ ವಿಧಾನ

ಪ್ರತಿಯೊಂದು ಸ್ತನಗಳಲ್ಲಿಯೂ ಅನೇಕ ಸ್ತನ್ಯಸ್ರಾವಕ ಗ್ರಂಥಿಗಳಿವೆ. ಇವು ಸ್ರವಿಸಿದ ಹಾಲು ಸಣ್ಣ ಸಣ್ಣ ಕಾಲುವೆಗಳ ಮುಖಾಂತರ ಹರಿದುಬಂದು ಸ್ತನ ಚೂಚುಕಗಳ ಸುತ್ತಲೂ ಇರುವ ಸಣ್ಣ ದ್ವಾರಗಳ ಮುಖಾಂತರ ಹೊರಕ್ಕೆ ಬರುತ್ತದೆ.

ತಾಯಿಯು ಹಡೆದ ಮೂರು ಅಥವಾ ನಾಲ್ಕನೆಯ ದಿವಸ ಸಾಮಾನ್ಯವಾಗಿ ಮೊಲೆಗಳಲ್ಲಿ ಹಾಲು ಬರುತ್ತದೆ. ಆದಾಗ್ಯೂ ಕೆಲವರಿಗೆ ಹಡೆಯುವ ಸಮಯಕ್ಕೇ ಹಾಲು ಬರುವುದೂ ಉಂಟು. ಹೀಗೆ ಹಾಲು ಬರುವಾಗ-ಅಂದರೆ ಹಡೆದ ಮೂರನೆಯ ದಿವಸ ಸಾಮಾನ್ಯವಾಗಿ ಜ್ವರ ಬರುತ್ತದೆ ಮತ್ತು ತಾನಾಗಿಯೇ ಇಳಿಯುತ್ತದೆ. ಇದು ಸ್ವಾಭಾವಿಕವಾದುದು. ಆದರೆ ಹೀಗೆ ಜ್ವರ ಬಂದು ಇಪ್ಪತ್ತು ನಾಲ್ಕು ಗಂಟೆಗಳು ಕಳೆದಾಗ್ಯೂ ಜ್ವರವು ಇಳಿಯದಿದ್ದರೆ ವೈದ್ಯರ ಸಲಹೆಯನ್ನು ಪಡೆಯಬೇಕು.

ಸ್ತನ್ಯಪಾನ ವಿಧಾನ

ಹಡೆದನಂತರ, ಸುಮಾರು 8–10 ಗಂಟೆಗಳೊಳಗಾಗಿ ಬಾಣಂತಿಯು ತನ್ನ ಮಗುವಿಗೆ ಮೊದಲನೆಯ ಬಾರಿ ಸ್ತನ್ಯಪಾನ ಮಾಡಿಸಬೇಕು. ಈಗ ಮೊಲೆಗಳಲ್ಲಿ ಹಾಲಿಲ್ಲದಿದ್ದಾಗ್ಯೂ ಸ್ತನ ಚೂಚುಕಗಳನ್ನು ಮಗುವಿನ ಬಾಯಿಯಲ್ಲಿಟ್ಟು ಅದು ಚೀಪುವಂತೆ ಮಾಡಬೇಕು. ಇದರಿಂದ ಎರಡು ತರಹದ ಲಾಭವುಂಟು. ಒಂದು ಮಗುವು ಸ್ತನ್ಯಪಾನ ಮಾಡಲು ಕಲಿಯುತ್ತದೆ; ಇನ್ನೊಂದು ಶಿಶುವು ಸ್ತನಗಳನ್ನು ಚೀಪುವುದರಿಂದ ಗ್ರಂಥಿಗಳು ಉದ್ರೇಕಗೊಂಡು, ಜಾಗ್ರತೆಯಾಗಿ ಹಾಲನ್ನು ಸ್ರವಿಸಲು ಪ್ರಾರಂಭಿಸುತ್ತವೆ. ಆದರೆ ಮಗುವು ಒಂದೇ ಮೊಲೆಯನ್ನು ಎರಡು ನಿಮಿಷಗಳಿಗಿಂತಲೂ ಹೆಚ್ಚು ಕಾಲ ಚೀಪಲು ಬಿಡಬಾರದು. ಏಕೆಂದರೆ ಈಗ ಮಗುವು ಎಷ್ಟೇ ಶ್ರಮ ಪಟ್ಟಾಗ್ಯೂ ಹಾಲು ಬಾರದೆ ಇರುವುದರಿಂದ ಮುಂದೆ ನಿರಾಶೆಗೊಂಡು ಸ್ತನ್ಯಪಾನ ಮಾಡಲು ಹಿಂಜರಿಯಬಹುದು. ಆರೋಗ್ಯವಂತಳಾಗಿರುವ ಹಾಗೂ ನಾಗರೀಕತೆಯ ದುಷ್ಪಟಗಳಿಗೆ ಬಲಿಯಾಗದಿರುವ ಪ್ರತಿಯೊಬ್ಬ ತಾಯಿಯ ಸ್ತನಗಳಲ್ಲಿಯೂ ತನ್ನ ಮಗುವಿಗೆ ಬೇಕಾಗುವಷ್ಟು ಹಾಲಿರುತ್ತದೆ. ಆದರೆ ನಾಗರೀಕತೆಯ ಬಲೆಗೆ ಬಿದ್ದ ಅನೇಕ ಆಧುನಿಕ ತರುಣಿಯರ ಸ್ತನಗಳಲ್ಲಿ ಸಾಕಷ್ಟು ಹಾಲು ಇರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಮೊಲೆಹಾಲು ಬತ್ತುವ ಅಥವಾ ವೃದ್ಧಿಯಾಗದಿರುವ ಕಾರಣಗಳನ್ನು ಕಂಡುಹಿಡಿದು ಆ ಕಾರಣಗಳನ್ನು ತ್ಯಜಿಸಬೇಕು. ಮತ್ತು ಯೋಗ್ಯ ಚಿಕಿತ್ಸೆಯನ್ನು ಪಡೆಯಬೇಕು.

ಮೊಲೆಯುಣಿಸುವ ಶಕ್ತಿ ಮತ್ತು ಸ್ತನ್ಯನಾಶದ ಕಾರಣ

ಆರೋಗ್ಯವಾಗಿರುವ ಪ್ರತಿಯೊಬ್ಬ ಹೆಂಗಸೂ ಹಡೆದನಂತರ, ಅವಳು ಇಷ್ಟಪಟ್ಟಲ್ಲಿ ತನ್ನ ಮಗುವಿಗೆ ಸ್ತನ್ಯಪಾನ ಮಾಡಿಸಬಲ್ಲಳು. ಮಗುವಿನ ಹಿತದೃಷ್ಟಿಯಿಂದಲೂ, ಮತ್ತು ತಾಯಿಯ ನೈತಿಕ ದೃಷ್ಟಿಯಿಂದಲೂ ಇದೊಂದು ದೈವದತ್ತವಾದ ಸ್ವಾಭಾವಿಕ ಶಕ್ತಿ. ಆದರೆ ದುರದೃಷ್ಟವಶಾತ್, ಅನೇಕ ಮಹಿಳೆಯರಿಂದ ಸ್ವಾಭಾವಿಕ ಹಾಗೂ ಪವಿತ್ರವಾದ ಈ ಕಾರ್ಯವು ಪೂರೈಸಲ್ಪಡುತ್ತಿಲ್ಲ. ಹಳ್ಳಿಯಲ್ಲಿರುವ ಹಾಗೂ ಬಡತನದಲ್ಲಿರುವ ಅನೇಕ ತಾಯಂದಿರ ಸ್ತನಗಳಲ್ಲಿ ತಮ್ಮ ಮಕ್ಕಳಿಗೆ ಸಾಕಾಗುವಷ್ಟು ಹಾಲು ದೊರೆಯುತ್ತಿದ್ದಾಗ್ಯೂ, ಪಟ್ಟಣವಾಸಿಗಳಾದ ಹಾಗೂ ಧನಾಢ್ಯರಾದ ಅನೇಕ ಮಹಿಳೆಯರ ಸ್ತನಗಳಲ್ಲಿ ಹಾಲು ಕಡಿಮೆಯಾಗಿರುವುದು ಕಂಡುಬರುತ್ತದೆ. ಇದನ್ನು ಸೂಕ್ಷ್ಮವಾಗಿ ವಿವೇಚಿಸಿದರೆ ಅವರ ಜೀವನ ವಿಧಾನವೇ ಇದಕ್ಕೆ ಮುಖ್ಯ ಕಾರಣವೆಂದು ಗೊತ್ತಾಗುತ್ತದೆ.

ತಾಯಿಗೆ ಸಾಕಷ್ಟು ಪೌಷ್ಟಿಕ ಆಹಾರವು ಸಿಕ್ಕದಿರುವಾಗಲೂ, ಹಾಗೂ ಅವಳು ರೋಗದಿಂದ ಕ್ಷೀಣಳಾಗಿರುವಾಗಲೂ ಸಹಾ ಅವಳ ಸ್ತನಗಳಲ್ಲಿ ಸಾಕಷ್ಟು ಹಾಲಿರುವುದನ್ನು ನೋಡಬಹುದು. ಇದು ವೈದ್ಯಶಾಸ್ತ್ರೀಯ ಆಶ್ಚರ್ಯಕರವಾದುದು. ನೋಡೋಣವೃದ್ಧಿಯಾಗಿ ಸ್ಥೂಲವಾಗಿರುವ ಹೆಂಗಸರಿಗಿಂತ ಕೃಶವಾಗಿರುವ ಹೆಂಗಸರಲ್ಲಿ ಹೆಚ್ಚು ಹಾಲಿರುತ್ತದೆ. ಇತರ ಜೀವನದ ಅನೇಕ ಶಾರೀರಿಕ ಹಾಗೂ ಮಾನಸಿಕ ಕಾರಣಗಳಿಂದ ಸಹ ಸ್ತನ್ಯನಾಶವಾಗುತ್ತದೆ.

ತಾಯಿಯ ಮೊಲೆಗಳಲ್ಲಿ ಸಾಕಷ್ಟು ಹಾಲು ಇಲ್ಲದಿರುವ ಕಾರಣಗಳನ್ನು 'ಸಹಜ ಕಾರಣ' ಮತ್ತು 'ಅಸಹಜ ಕಾರಣ' ಎಂದು ಎರಡು ವಿಭಾಗಗಳಾಗಿ ವಿಂಗಡಿಸಬಹುದು.

ಸಹಜ ಕಾರಣ

ವಾತ ಪ್ರಕೋಪದಿಂದಲೂ, ನಾನಾ ರೋಗಗಳ ಪರಿಣಾಮದಿಂದುಂಟಾದ ದೌರ್ಬಲ್ಯದಿಂದಲೂ, ಸ್ತನಗಳಲ್ಲಿ ಸಾಕಷ್ಟು ಹಾಲು ಉತ್ಪನ್ನವಾಗುವುದಿಲ್ಲ. ಒಂದು ವೇಳೆ ಹಾಲು ಇದ್ದಾಗ್ಯೂ, ಈಗ ಸ್ತನ್ಯಪಾನ ಮಾಡಿಸುವುದರಿಂದ ತಾಯಿಗೆ ದೌರ್ಬಲ್ಯವು ಇನ್ನೂ ಹೆಚ್ಚಾಗುತ್ತದೆ. ಇದೇ ರೀತಿಯಾಗಿ ಸ್ತನ ಚೂಚುಕಗಳಲ್ಲಿ ಬಿರುಕುಗಳುಂಟಾಗಿದ್ದರೆ ಸ್ತನ್ಯಪಾನ ಮಾಡಿಸುವುದರಿಂದ ವೇದನೆಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ತಾಯಿಯು ಮಗುವಿಗೆ ಮೊಲೆಯುಣಿಸಲು ಹಿಂಜರಿಯುತ್ತಾಳೆ.

ಅಸಹಜ ಕಾರಣ

ಮೇಲೆ ಹೇಳಿದ ಕಾರಣಗಳಿಂದ ಉಂಟಾಗುವ ಅಸಮರ್ಥತೆಯಲ್ಲಿ ತಾಯಿಯ ದೋಷವೇನೂ ಇಲ್ಲ. ಆದರೆ ತನ್ನ ದುರ್ನಡತೆಗಳಿಂದ ಸಂಪಾದಿಸಿದ ದುರ್ಬಲತೆಯಲ್ಲಿ ಮಾತ್ರ

ಜೈಹಿಂದ್!
ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!
ನ್ಯೋ ರೋಯಲ್ ಕೇಫ್
ಸಂತೆಕಟ್ಟೆ, ಉಡುಪಿ.
ಉಡುಪಿ ಬ್ರಾಹ್ಮಣರ
ಉಪಹಾರ ಮತ್ತು ಭೋಜನ ಗೃಹ.
ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!
ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.
ಹೆಡ್ ಆಫೀಸು: ಯಂ. ಆರ್. ಭಟ್, (ಆರ್ಟಿಸ್ಟ್)
ಶ್ರೀ ದುರ್ಗಾ ಭವನ, ಮುಲ್ಕಿ. ವ್ಯವಸ್ಥಾಪಕ.
NEO ROYAL CAFE,
Boarding & Lodging,
Santhekatte, UDIPI.

ಅವಳ ವರ್ತನೆಯು ಖಂಡನೀಯವಾದುದು. ಈಗಿನ ನಾಗರೀಕ ತರುಣಿಯರು ತಮ್ಮ ಬಾಹ್ಯ ಸೌಂದರ್ಯದ ಕಡೆಗೆ ಹೆಚ್ಚು ಗಮನವನ್ನು ಕೊಟ್ಟು, ತಮ್ಮ ಕುಚಗಳು ಬಿಗಿಯಾಗಿಯೂ, ದುಂಡಗೂ ಕಾಣಬೇಕೆಂಬ ಆಸೆಯಿಂದ, ಕಾರಸೆಟ್, ಬಾಡಿಸ್‌ಗಳೆಂಬ ಒಂದು ವಿಧವಾದ ಬಿಗಿಯು ಕುಪ್ಪಸಗಳಿಂದ ಸ್ತನಗಳನ್ನು ಬಿಗಿದು ಕಟ್ಟಿಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ಸ್ತನಗಳ ಮತ್ತು ಸ್ತನ್ಯ ಸ್ರಾವಕ ಗ್ರಂಥಿಗಳ ಪೂರ್ಣ ಬೆಳವಣಿಗೆಗೆ ತಡೆಯುಂಟಾಗುತ್ತದೆ. ಹೀಗಾದಲ್ಲಿ ಮುಂದೆ ಅವಳು ತಾಯಿಯಾದ ನಂತರ ಸ್ತನ್ಯ ಸ್ರಾವಕ ಗ್ರಂಥಿಗಳು ಸರಿಯಾಗಿ ಹಾಲನ್ನು ಸ್ರವಿಸಲಾರವು. ಇದರಿಂದ ಮಗುವಿಗೆ ಹಾಲಿನ ಕೊರತೆಯುಂಟಾಗುತ್ತದೆ. ಬಿಗಿಯಾದ ಬಟ್ಟೆಗಳಿಂದ ಸ್ತನಗಳನ್ನು ಬಿಗಿದು ಕಟ್ಟಿದರೆ ಈ ರೀತಿಯ ಹಾನಿಯಾಗುತ್ತದೆಂದು ಬಹುಶಃ ಅನೇಕ ತರುಣಿಯರಿಗೆ ತಿಳಿದಿರುವುದಿಲ್ಲ. ಈ ವಿಚಾರವು ಮೊದಲೇ ತಿಳಿದಿದ್ದರೆ ಎಷ್ಟೋ ತರುಣಿಯರು ಇದರ ಗೊಡವೆಗೆ ಹೋಗುತ್ತಿರಲಿಲ್ಲ. ಒಂದು ವೇಳೆ ಮೊದಲು ಹೀಗೆ ಬಿಗಿಯುತ್ತಿದ್ದಾಗ್ಯೂ, ಮುಂದೆ ಅವಳು ಗರ್ಭಿಣಿಯಾಗಿ ಹೊಟ್ಟೆಯಲ್ಲಿ ಪಿಂಡವು ಬೆಳೆಯಲು ಪ್ರಾರಂಭಿಸಿದ ಮೇಲಾದರೂ, ತಾನು ಮುಂದೆ ತನ್ನ ಸ್ತನ್ಯದಿಂದ ತನ್ನ ಪ್ರೇಮ ಪುತ್ಥಳಿಯನ್ನು ಪೋಷಿಸಬೇಕೆಂಬ ಅಭಿಲಾಷೆಯಿಂದಾದರೂ ಈ ಅಭ್ಯಾಸವನ್ನು ಬಿಡುತ್ತಿದ್ದಳು. ಆದುದರಿಂದ ಈ ವಿಷಯದಲ್ಲಿ ಸರಿಯಾದ ಶಿಕ್ಷಣವು ಅವಶ್ಯಕ. ಮೇಲಾಗಿ ಸ್ತನಗಳನ್ನು ಯಾವಾಗಲೂ ಬಿಗಿದು ಕಟ್ಟುವುದರಿಂದ ಸ್ತನಗಳು ಚೆಂಡಿನಂತೆ ದುಂಡಗೆ ನಿಲ್ಲುತ್ತವೆಂದು ಹೇಳಲಿಕ್ಕಾಗುವುದಿಲ್ಲ. ಸರಿಯಾದ ಪೋಷಣೆ ಮತ್ತು ವ್ಯಾಯಾಮದಿಂದ ಶರೀರದ ಇತರ ಅವಯವಗಳು ಪುಷ್ಟಿಗೊಂಡಂತೆ ಸ್ತನಗಳೂ ಪುಷ್ಟಿಗೊಳ್ಳುತ್ತವೆ.

ಮತ್ತೆ ಕೆಲವು ಹೆಂಗಸರಲ್ಲಿ ಸ್ತನ್ಯ ಸ್ರಾವಕ ಗ್ರಂಥಿಗಳು ಚೆನ್ನಾಗಿ ಬೆಳೆದು ಸಾಕಷ್ಟು ಹಾಲನ್ನು ಸ್ರವಿಸುತ್ತವೆ. ಆದರೂ ಕೆಲವು ದುಷ್ಟ ಸ್ವಭಾವದ ಹೆಂಗಸರು ತಮ್ಮ ಸೊಡ್ಡಸ್ತಿಕೆಯ ಅಥವಾ ನಾಗರೀಕತೆಯ ಸೋಗಿನಿಂದ, ಇಲ್ಲವೆ ಸ್ತನ್ಯ ಪಾನ ಮಾಡಿಸಿದರೆ ತಮ್ಮ ಮೊಲೆಗಳು ಜೋಲು ಬೀಳುತ್ತವೆ ಎಂಬ ತಪ್ಪು ಭಾವನೆಯಿಂದ ಮೊಲೆಯುಣಿಸಲು ಹಿಂಜರಿಯುತ್ತಾರೆ. ಇವರು ತಮ್ಮ ಮಕ್ಕಳನ್ನು ಪಶುವಿನ ಹಾಲು ಇಲ್ಲವೆ ಒಣಗಿದ ಹಾಲಿನಿಂದ ಬೆಳೆಸುತ್ತಾರೆ. ಈ ರೀತಿಯಾಗಿ ಎಷ್ಟೇ ದಕ್ಷತೆಯಿಂದ ಪೋಷಣೆ ಮಾಡಿದಾಗ್ಯೂ, ಸ್ತನ್ಯ ಪಾನ ಮಾಡುವುದರಿಂದ ಮಗುವಿಗೆ ಲಭಿಸುವ ತಾಯಿಯ ಪ್ರೀತಿ, ವಾತ್ಸಲ್ಯ, ಮತ್ತು ಆನಂದವು ದೊರಕುವುದಿಲ್ಲ. ಈ ಹಾಲಿನಿಂದ ಬೆಳೆದ ಮಕ್ಕಳು ಮುಂದೆ ಸಂಕುಚಿತ ಸ್ವಭಾವದವರೂ, ದುರ್ಬುದ್ಧಿಯವರೂ ಆದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಒಂದು ಮನೆಯಲ್ಲಿ ಅಜ್ಜಿಯು ಹೊಯ್ದ ಹಾಲಿನಿಂದ, ಈ ರೀತಿಯಾಗಿ ಮಗುವನ್ನು ಸಾಕಿದರೆ ಅದನ್ನು ನೋಡಿಕೊಂಡು ಅವಳ ಮಗಳೂ, ಅನಂತರ ಮೊಮ್ಮಗಳೂ ಇದೇ ರೀತಿಯ ದುರಭ್ಯಾಸಕ್ಕೊಳಗಾಗಬಹುದು. ಹೀಗೆ ೨-೩ ಪೀಳಿಗೆಯು ಕಳೆದ ನಂತರ ಮುಂದಿನ ಪೀಳಿಗೆಯ ಹೆಂಗಸಿಗೆ ಮೊಲೆಯುಣಿಸಲಿರುವ ಅಸಮರ್ಥತೆಯು ತನ್ನ ಮನೆತನಕ್ಕೆ ಅಂಟಿಕೊಂಡು ಬಂದ ರೋಗವೆಂತಲೂ, ತಾನೂ ಸಹಾ ಮೊಲೆಯುಣಿಸಲು ಅಸಮರ್ಥಳೆಂತಲೂ ಮನವರಿಕೆಯಾಗುತ್ತದೆ. ಹೀಗಾದಲ್ಲಿ ಅವಳು ತನ್ನ ಮಗುವಿಗೆ ಮೊದಲಿನಿಂದಲೂ ಸ್ತನ್ಯ ಪಾನ ಮಾಡಿಸದೆ ಬೇರಾವುದಾದರೂ ಆಹಾರವನ್ನು ಕೊಡುತ್ತಾಳೆ. ಇದರಿಂದ ಮುಂದೆ ಅವಳ ಸ್ತನಗಳಲ್ಲಿಯ ಹಾಲು ಬತ್ತಿ ಅವಳು ನಿಜವಾಗಿಯೂ ಸ್ತನ್ಯ ಪಾನ ಮಾಡಿಸಲು ಅಸಮರ್ಥಳಾಗುತ್ತಾಳೆ.

ಈ ತರಹದ ಹೆಂಗಸರ ನಡತೆಯನ್ನು ತೀವ್ರವಾಗಿ ಖಂಡಿಸಲೇ ಬೇಕು. ಅಮೃತತುಲ್ಯವಾದ ಮೊಲೆಹಾಲನ್ನು ತಪ್ಪಿಸಿ ಬೇರೆ ಹಾಲಿನಿಂದ ಮಕ್ಕಳನ್ನು ಸಾಕಿದರೆ ಮುಂದೆ ಅವರು ಶಾರೀರಕ ಹಾಗೂ ಮಾನಸಿಕ ದುರ್ಬಲರೂ, ನೀತಿಬಾಹಿರರೂ ಆಗಿ, ಸಮಾಜದಲ್ಲಿ ಕಳಂಕಪ್ರಾಯರಾಗಿ ಪರಿಣಮಿಸಿದರೆ ಅದರಲ್ಲಿ ಆಶ್ಚರ್ಯವೇನು? ಈ ಮಕ್ಕಳಿಗೆ ಹೊರಗಿನ ಎಷ್ಟೇ ಸುಖ ಸೌಲಭ್ಯಗಳು ದೊರೆತರೂ, ಆ ಎಲ್ಲ ಸೌಖ್ಯಗಳಿಗಿಂತ ಮಿಗಿಲಾದ ಮಾತೃ ಸೌಖ್ಯ ಹಾಗೂ ಸ್ತನ್ಯಪಾನ ಸೌಖ್ಯವು ಇಲ್ಲದಿರುವುದರಿಂದ ಅವರು ನಿಜವಾಗಿಯೂ ಹತಭಾಗ್ಯರೇ ಸರಿ.

ಸ್ತನ್ಯಪಾನ ವಿಧಾನ

ಮೊಲೆಯುಣಿಸುವ ಮೊದಲು ಶಿಶುವಿನ ಬಾಯಿಯನ್ನೂ, ಸ್ತನ ಚೂಚುಕಗಳನ್ನೂ, ಒದ್ದೆ ಬಟ್ಟೆಯಿಂದ ಚೊಕ್ಕಟವಾಗಿ ಒರೆಯಬೇಕು. ಸ್ತನ್ಯಪಾನ ಮಾಡಿಸಿದ ನಂತರವೂ ಹೀಗೆ ಮಾಡುವುದು ಒಳ್ಳೆಯದು. ಮೊಲೆಯುಣಿಸುವಾಗ ತಾಯಿಯು ಸುಖಾಸನದಲ್ಲಿ ಕುಳಿತಿರಬೇಕು. ಚಕ್ಕಳ ಮಕ್ಕಳ ಕುಳಿತುಕೊಳ್ಳುವುದು ಹಿತಕರ. ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡಾಗಲೀ, ನೆಲದ ಮೇಲೆ ಮಲಗಿಸಿಕೊಂಡಾಗಲೀ ಮೊಲೆಯುಣಿಸಬಾರದು. ತೊಡೆಯಮೇಲೆ ಮಗುವನ್ನು ಸರಿಯಾಗಿ ಮಲಗಿಸಿಕೊಂಡು ಅದರ ತಲೆಯ ಬುಡಕ್ಕೆ ಆಧಾರವಾಗುವಂತೆ ತನ್ನ ಕೈಯನ್ನು ಇರಿಸಿ ತಲೆಯನ್ನು ಸ್ವಲ್ಪ ಎತ್ತಿ ಹಿಡಿದು ಸ್ತನ್ಯ ಪಾನ ಮಾಡಿಸಬೇಕು. ಮೊಲೆಯುಣಿಸುವಾಗ ಒಂದೇ ಕಡೆಯ ಮೊಲೆಯನ್ನು ಕೊಡದೆ ಅದಲು ಬದಲು ಮಾಡಬೇಕು. ಒಂದು ಕಡೆಯ ಸ್ತನ್ಯ ಪಾನ ಮಾಡಿಸುವಾಗ, ಕೆಲವರಿಗೆ ಇನ್ನೊಂದು ಕಡೆಯ ಸ್ತನವು ತೊಟ್ಟಿಕ್ಕುತ್ತಾ ಬರಿದಾಗುತ್ತದೆ. ಇದು ನರಗಳ ದೌರ್ಬಲ್ಯದಿಂದಾಗತಕ್ಕದ್ದು. ಇಂತಹ ಸಂದರ್ಭಗಳಲ್ಲಿ ಆ ಸ್ತನವನ್ನು ಬಿಗಿದು ಕಟ್ಟಬೇಕು. ತಾಯಿಗೆ ಸ್ತನಗಳು ಭಾರವಾದಂತೆ ತೋರಿದರೆ ಸ್ತನಗಳ ಬುಡದಲ್ಲಿ ಬಿಗಿಯಾಗಿರುವ ಮತ್ತು ಸ್ತನಗಳನ್ನು ಎತ್ತಿಹಿಡಿಯುವಂತಹ ಕುಪ್ಪಸವನ್ನು ಉಪಯೋಗಿಸಬಹುದು. ಈ ದೃಷ್ಟಿಯಿಂದ ಗಂಟುಹಾಕುವ ಕುಪ್ಪಸವು ಅನುಕೂಲ. ತಾಯಿಯು ಆಹಾರದಲ್ಲಿ ಎಣ್ಣೆ, ಖಾರ, ಮತ್ತು ಉತ್ತೇಜಕ ಪದಾರ್ಥಗಳನ್ನೂ, ಕಾಫಿ, ಟೀ ಇತ್ಯಾದಿ ಪೇಯಗಳನ್ನೂ ಸಾಧ್ಯವಿದ್ದ ಮಟ್ಟಿಗೂ ತ್ಯಜಿಸಬೇಕು.

ಶಿಶುವು ಚಿಕ್ಕದಾಗಿರುವಾಗ ಅಂದರೆ ಮೂರು ತಿಂಗಳು ವಯಸ್ಸಾಗುವವರೆಗೂ ಅದಕ್ಕೆ ಪ್ರತಿ ಎರಡು ತಾಸಿಗೊಮ್ಮೆ ಮೊಲೆಯುಣಿಸಬೇಕು. ರಾತ್ರಿ ಸುಮಾರು ಹತ್ತು ಗಂಟೆಯ ನಂತರ ಬೆಳಗಾಗುವ ವರೆಗೆ ಒಂದು ಸಾರಿ ಮೊಲೆಯುಣಿಸಿದರೆ ಸಾಕು. ಮೂರು ತಿಂಗಳು ತುಂಬಿದನಂತರ ಹಗಲಿನಲ್ಲಿ ಸುಮಾರು ಮೂರು ಗಂಟೆಗಳಿಗೊಂದು ಬಾರಿ ಮೊಲೆಯುಣಿಸಬೇಕು. ರಾತ್ರಿಯಲ್ಲಿ ಹತ್ತು ಗಂಟೆಯ ನಂತರ ಶಿಶುವು ನಿದ್ರಿಸಿದ್ದರೆ ಮೊಲೆಯುಣಿಸಬೇಕಾಗಿಲ್ಲ. ಹೀಗೆ ಕ್ಲುಪ್ತ ಕಾಲಗಳಲ್ಲಿ ಮೊಲೆಯುಣಿಸಿದರೆ ಶಿಶುವು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳುತ್ತದೆ. ತಾಯಿಗೆ ದೌರ್ಬಲ್ಯವುಂಟಾಗುವುದಿಲ್ಲ.

ಸ್ತನ ಚೂಚುಕಗಳು

ಗರ್ಭಿಣಿಯಾಗಿರುವಾಗ ಸ್ತನ ಚೂಚುಕಗಳ ಬೆಳವಣಿಗೆಯ ಕಡೆಗೆ ಲಕ್ಷ್ಯವನ್ನು ಕೊಡದೆ ಇದ್ದರೆ ಚೂಚುಕಗಳು ಊರ್ಧ್ವಮುಖವಾಗಿರಬಹುದು. ಇಲ್ಲವೆ ಗಿಡ್ಡಾಗಿ ಸ್ತನಗಳೊಳಗೆ ಹೊಕ್ಕಿಕೊಂಡಿರಬಹುದು. ಈ ಎರಡೂ ತರಹದ ಚೂಚುಕಗಳೂ ಸ್ತನ್ಯಪಾನ ಮಾಡುವ ಶಿಶುವಿನ ಪಕ್ಕೋಟಿಗೆ ಸಿಕ್ಕದೆ ತೊಂದರೆಯನ್ನುಂಟುಮಾಡುವುದರಿಂದ ಶಿಶುವು ಸರಿಯಾಗಿ ಸ್ತನ್ಯಪಾನ ಮಾಡುವುದಿಲ್ಲ. ಹೀಗಾದಲ್ಲಿ ಶಿಶುವಿಗೂ ಸರಿಯಾದ ಪೋಷಣೆಯಾಗುವುದಿಲ್ಲ. ತಾಯಿಗೆ ವೇದನೆಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಈಗಲಾದರೂ ಚೂಚುಕಗಳಿಗೆ ಸ್ವಲ್ಪ ತುಪ್ಪವನ್ನು ಹಚ್ಚಿ, ಮೃದುವಾಗಿ ಮರ್ದನಮಾಡಿ ಮೆತ್ತಗಾದ ಮೇಲೆ, ಚೂಚುಕವು ಚಿಕ್ಕದಾಗಿದ್ದರೆ ಮುಂದಕ್ಕೂ, ಊರ್ಧ್ವಮುಖವಾಗಿದ್ದರೆ ಕೆಳಕ್ಕೂ ಜಗ್ಗಬೇಕು.

ಯಾರು ಸ್ತನ್ಯಪಾನ ಮಾಡಿಸಬಾರದು?

ತಾಯಿಗೆ ಬಲನಾಶಕ ರೋಗಗಳಿಂದ ದೌರ್ಬಲ್ಯವುಂಟಾಗಿರುವಾಗಲೂ ಕ್ಷಯರೋಗ, ಅಪಸ್ಮಾರ ಇತ್ಯಾದಿ ರೋಗಗಳಿರುವಾಗಲೂ, ಮಾನಸಿಕ ರೋಗಗಳಿದ್ದಾಗಲೂ, ಅಥವಾ ಸಿಟ್ಟು, ಈರ್ಷ್ಯೆ, ದ್ವೇಷ, ಶೋಕ, ಇತ್ಯಾದಿ ಕಾರಣಗಳಿಂದ ಮನಸ್ಸು ಉದ್ವೇಗಗೊಂಡಿರುವಾಗಲೂ, ಹಾಗೂ ಜ್ವರವಿರುವಾಗಲೂ, ಶಿಶುವಿಗೆ ಮೊಲೆಯುಣಿಸಬಾರದು.

ಮೈಥುನ ನಿರೋಧ

ಮೊಲೆಯುಣಿಸುತ್ತಿರುವ ಹೆಂಗಸು ಪುರುಷನೊಡನೆ ಸಂಭೋಗವನ್ನಾಚರಿಸುತ್ತಿರುವುದರಿಂದ ಅವಳ ಮೊಲೆ ಹಾಲು ಸ್ವಲ್ಪ ದಪ್ಪವಾಗುತ್ತದೆ. ಈಗ ಅವಳು ಆಕಸ್ಮಾತ್ ಪುನಃ ಗರ್ಭಿಣಿಯಾದರೆ ಈ ಹಾಲು ಇನ್ನೂ ವಿಷವಾಗುತ್ತದೆ. ಈ ಹಾಲನ್ನು ಕುಡಿಯುವ ಮಗುವಿಗೆ ಅಜೀರ್ಣ ಸಂಬಂಧದ ರೋಗಗಳುಂಟಾಗುವ ಹಾಗೂ 'ಲೀವರ್' ಎಂಬ ರೋಗವುಂಟಾಗುವ ಸಂಭವವುಂಟು. ಆದುದರಿಂದ ಸಾಧ್ಯವಿದ್ದ ಮಟ್ಟಿಗೂ ಈ ಕಾಲದಲ್ಲಿ ಸಂಭೋಗವನ್ನಾಚರಿಸದಿರುವುದು ಒಳ್ಳೆಯದು. ಕೊನೆಯಪಕ್ಷದಲ್ಲಿ ಶಿಶುವು ಮೊಲೆಯುಣ್ಣುವುದನ್ನು ಬಿಡುವವರೆಗಾದರೂ ಆ ಹೆಂಗಸು ಪುನಃ ಗರ್ಭವನ್ನು ಧರಿಸದಂತೆ ಎಚ್ಚರಿಕೆಯಿಂದಿರಬೇಕು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟೆಲಾಗು ಬರದಲ್ಲಿ ರೋಗಕ್ಕೆ ತಕ್ಕಂಥ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183. ಸುಖಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಬಾಣಂತಿಯರ ಹಲು ರೋಗಿಯೋ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧಿಯ ಬಾಟ್ಲಿಗಳು ಹತ್ತು ಕಡಿಮೆ ಕ್ರಯದಲ್ಲಿ ಎಲ್ಲರಿಗೆ ಸಿಗುವವು. ಆದರೆ ಕೇವಲ ೧ ರೂಪಾಯಿಗೆ ಒಂದು ಬಾಣಂತಿತನಕ್ಕೆ ಸಾಕಾಗುವದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು—ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಹೊಸ ವ್ಯವಸ್ಥೆ—ಆಧುನಿಕ ಸಲಕರಣೆ, ರೇಡಿಯೋ ಸಂಯೋಜನೆ—

ಎಲ್ಲಿ?

ನೇತಾಜಿ ಲಂಚ್ ಹೋಮ್

ಕಟಪಾಡಿ, ಇಲ್ಲಿಯೆ.

ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆ.

ಯೋಗ್ಯ ಉಪಹಾರ! ಉತ್ತಮ ಉಪಚಾರ!

ಊಟ ಮತ್ತು ನಿವಾಸದ ವ್ಯವಸ್ಥೆಯೂ ಇದೆ

☞ ಟೀಪಾರ್ಟಿ ಮುಂತಾದುವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

Nethaji Lunch Home,

Boarding & Lodging,
KATAPADI. S K.

ಪ್ರಕಟಣೆ

ಉಡುಪಿ ತಾಲ್ಲೂ ಕಳ್ತೂರು ಗ್ರಾಮದ ಬಂಬೆಟ್ಟುಯಲ್ಲಿರುವ ಉಪ್ಪಾಲಗುತ್ತು ಕೋರಂ ಶೆಟ್ಟಿ ಮಗಳು ಕೇಶವ್ವ ಶೆಡ್ತಿಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ -

ನಮ್ಮ ಕುಟುಂಬದ ಸೊತ್ತಿನ ಆಡಳ್ತೆ ಮೃತರಾದ ಕೃಷ್ಣಮ್ಮ ಶೆಡ್ತಿಯು ಮೃತಪಟ್ಟ ತರುವಾಯ ನಾನು ಕುಟುಂಬದಲ್ಲಿ ಅತ್ಯಂತ ಹಿರಿಯಳಾಗಿ ಕುಟುಂಬದ ಆಡಳ್ತೆ ಹೊಂದಿರುತ್ತೇನೆ. ಹೀಗಿರುವಲ್ಲಿ ನನ್ನ ತಮ್ಮ ತೇಜಪ್ಪ ಶೆಟ್ಟಿಯು ನನ್ನ ಆಡಳ್ತೆಗೆ ಒಳಪಟ್ಟ ನಕ್ಲೂರು ಗೇ... ಮನೆಗೆ ಅತಿಕ್ರಮಿಸಿ ನಾನಾತರದ ಅಭ್ಯಂತರಗಳನ್ನುಂಟುಮಾಡುವದಲ್ಲದೆ ಮೊನ್ನೆ ತಾ 10-4-1948ರಲ್ಲಿ ನನ್ನ ಗಂಡು ಮಕ್ಕಳು ಯಾರೂ ನನ್ನ ಒಟ್ಟಿಗೆ ಮನೆಯಲ್ಲಿ ಇಲ್ಲದ ಸಮಯ ನನ್ನ ತಮ್ಮ ಸದ್ರಿ ತೇಜಪ್ಪ ಶೆಟ್ಟಿಯು ಮನೆಗೆ ಬಂದು ನಯ ಭಯ ವ ಮೋಸದಿಂದ ಖಾಲಿ ಕಾಗದಗಳ ಮೇಲೆ ನನ್ನ ಕೆಲವು ಹೆಬ್ಬೆಟ್ಟುಗಳನ್ನು ಪಡಕೊಂಡು ಹೋಗಿರುತ್ತಾನೆ. ಸದ್ರಿ ಹೆಬ್ಬೆಟ್ಟುಗಳಿಂದ ನನ್ನ ತಮ್ಮ ಸದ್ರಿ ತೇಜಪ್ಪ ಶೆಟ್ಟಿಯು ಒಳಸಂಚಿನಿಂದ ರಶೀದಿ ನೋಟು ಮಗ್ತೆರೆ ಯಾವ ತರದ ರಿಕಾರ್ಡು ಮಾಡಿಕೊಂಡರೂ ಅವುಗಳು ನನ್ನನ್ನು ಬಾಧಿಸುವದಿಲ್ಲವೆಂಬ ಸಂಗತಿ ಈ ಮೂಲಕ ಜಾಹೀರು ಮಾಡಿರುತ್ತೇನೆ

ನಾನು ಈವರೇಗೆ ಯಾವ ವಕ್ತಿಗೂ ರಶೀದಿ ಬರಕೊಟ್ಟದ್ದಾಗಲೀ ಯಾರಿಂದಲಾದರೂ ಸಾಲ ಪಡೆದು ನೋಟು ಬರಕೊಟ್ಟದ್ದಾಗಲೀ ಇರುವದಿಲ್ಲ, ನಾನು ರಿಜಿಸ್ಟ್ರಿ ಆಪ್ಸು ಯಾವ ರಿಕಾರ್ಡುಗಳನ್ನು ಮಾಡುವದಿದ್ದರೂ ಅವುಗಳಿಗೆ ನನ್ನ ಮಗ ವಿಟ್ಠಲ ಶೆಟ್ಟಿಯು ಸಾಕ್ಷಿಸಹಿ ಮಾಡುವುದಲ್ಲದೆ ವಿನಹಾ ಮಾಡು ಬಾಧಿಲ್ಲವೆಂಬ ಸಂಗ್ತಿ ಸಹ ಈ ಮೂಲಕ ಜಾಹೀರು ಮಾಡಿರುತ್ತೇನೆ-

III ಈ ಮೂರು ಗೆರೆ ಮತ್ತು ಎಡ ಹೆಬ್ಬೆಟ್ಟಿನ ಗುರ್ತು ಕೇಶವ್ವ ಶೆಡ್ತಿ ರುಜು ಆಗಿರುತ್ತದೆ.

ಈ ಬಗ್ಗೆ ಸಾಕ್ಷಿ ವಿಟ್ಠಲ ಶೆಟ್ಟಿ ಸಾಕ್ಷಿ

ಕಳ್ತೂರು, ಒಪ್ಪಂಪ್ಪೆಲು

ತಾ 12-4-1948

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಇತರ ಪ್ರಯೋಜನವನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.



Approved firm by the Govt. of Mysore Certified by the Agent of the Govt. of Celone & India.

WANTED

Applications are invited from Higher Elementary Trained Teachers whose age should not be more than 30 years on 1-7-'48 for employment in the schools under the management of the Labour Department in South Kanara District. The scale of pay will be Rs. 30-1-50 with the usual dearness allowance. Preference will be given in the following order:

1. Harijans or the members of the eligible communities who are ex-army men or women.
2. Harijans or members of the eligible communities who are other than ex-army personnel.
3. Other communities who are ex-army personnel
4. Other communities who are other than ex-army personnel.

Applications should reach the District Harijan welfare Officer, South Kanara, Mangalore by 31-5-'48 together with (1) the training Certificate and (2) discharge certificate in the case of ex-army.

Sd. **S. R Kaivar,**
Collector,
S. Kanara Collector's Office,
MANGALORE.

Date 16—4—48

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ
ಹಲ್ಲು ಪುಡಿ
ಒಂದು ತೊಲೆ ಕಟ್ಟು 1ರ 0 1 0
ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.
ದಿ ಮಹಾಜನ ಸಿ ಎಂಡ್ ಪಿ. ಲಿಮಿಟೆಡ್,
ಕಾಸರಗೋಡು, ದ. ಇಂಡಿಯಾ.

ಋತುಸ್ರಾವ ನಿಂತಿತು

'ಕುಮಾರಿ' ದಿಲ್ಲೆಗಳನ್ನು ಉಪಯೋಗಿಸದರೆ ತಪ್ಪದೆ ಋತುಸ್ರಾವವಾಗುವುದು ಪತೋಟಿಗ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, P. DS. (N. J.)
Tollygunge CALCUTTA
ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋಷರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟುಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ!

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

The Vijaya Bank Limited.

All our good wishes for a happy and prosperous new yer

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/ at the following rates:-

For 3 months at 2¼% per annum.
For 6 months at 3½% per annum.

For further particulars you may apply or call at any of our following Offices

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀನಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಸ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ ಆರ್ ಎಲ್ ಕಮಲದಾಸ, ಕೆಮಿಸ್ಟ, ಹಾವೇರಿ ಬ್ಯಾಡಗಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. R. Kelu Nambiar,
Vaidya.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

13-5-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೩೬

NAVAYUGA WEEKLY, UDIPI.
FOUNDER: **Hon'ble Mr. A. B. SHETTY,** Health Minister, Govt. of Madras.

Vol. 28
No. 36

ಅಮೇರಿಕದಲ್ಲಿ ಚುನಾವಣೆಯ ಸಮರ ಸನ್ನಾಹ

ಬರೆದವರು: **ಶ್ರೀ. ಕು. ಶಿ. ಹರಿದಾಸ ಭಟ್ಟ.**

"......... that tumultous conglomeration of humanity, distracted by so many conflicting interests, so lost in world's confusion, so wistful of good, so cocksure on the outside, so diffident within, so kind, so hard, so trustful and so cagey, so mean and so generous, which is the people of the United States"

—Somerset Mangham in "RAZOR's EDGE"

ಅಮೇರಿಕದ ಸಂ. ರಾ. ದ ಜನ ಎಂದರೆ ಅದೊಂದು ಅಪರಿಮಿತ ಗಲಭೆಯ ಜನ ಜಂಗುಳಿ; ಅಗಣಿತವಾದ ತಿಕ್ಕಾಟ, ಸಂಘರ್ಷಗಳಿಂದ ಕೂಡಿದ್ದಾಗಿಯೂ, ಜಗತ್ತಿನ ಯಾವತ್ತು ಕಲ್ಲೋಲ ಕಲ್ಲೋಲಗಳೊಳಗೆ ಲೀನವಾಗಿಯೂ, ಒಳ್ಳೆತರ ಕಡೆಗೆ ಮನಸೋ ಒಂದು ಇಷ್ಟು ತೀರದ ಬಯಕೆಯನ್ನು ತೋರಿಸುತ್ತಲೂ, ಬಹಿರಂಗದಲ್ಲಿ ಧೈರ್ಯಪೂರ್ಣವಾಗಿದ್ದರೂ ಅಂತರಂಗದಲ್ಲಿ ತನ್ನ ನೆಲೆಯನ್ನು ತಾನೇ ಅರಿಯದೆಯೂ, ಒಮ್ಮೆ ಕರುಣೆಯ ಕಡಲಿನಂತಿದ್ದರೂ ಮತ್ತೊಮ್ಮೆ ಕಲ್ಲಿನಷ್ಟು ಕಠಿಣವಾಗಿಯೂ, ಒಮ್ಮೆ ವಿಶಾಲ ಹೃದಯದಿಂದ ನಂಬಿಕೆಯನ್ನು ... ಇನ್ನೊಮ್ಮೆ ಅಮಾನುಷ ಕ್ರೂರಗಳನ್ನೊಳಕ್ಕೆ ಸೆಳೆದುಕೊಳ್ಳುತ್ತಲೂ, ಒಮ್ಮೆ ಅಲ್ಪತನವನ್ನು ಒಮ್ಮೆ ಔದಾರ್ಯವನ್ನು ಪ್ರದರ್ಶಿಸುತ್ತಲೂ ಇರುವ ಜನಸಮುದಾಯವದು.

ಸಾಮರ್‌ಸೆಟ್ ಮಾಮ್, 'ರೇಜರ್ಸ್ ಎಜ್'ನಲ್ಲಿ

೦೦ ೦೦ ೦೦

ಚುನಾವಣೆಯ ತಂತ್ರ ಪ್ರಜಾಪ್ರಭುತ್ವದ ಕಳಶವಿದೆ. ಮಧ್ಯಯುಗದ ನಿರಂಕುಶ ಪ್ರಭುತ್ವವನ್ನು ಬಹಿಷ್ಕರಿಸಲು ಜನಸಾಮಾನ್ಯರು ಹೂಡಿದ ಅನೇಕ ಸಂಗ್ರಾಮಗಳ ಫಲವಾಗಿ ಇಂದು ಲೋಕದಲ್ಲೆಲ್ಲ ಚುನಾವಣೆಯ ಕಾರುಬಾರು ನಡೆದಿದೆ. ರಾಜರು—ಸಮ್ರಾಟರುಗಳ ಮೇಲೆ ಯಾವಾಗ ಜನರಿಗೆ ನಂಬಿಕೆ ತಪ್ಪಿತೋ, ಅವರ ವಿಲಾಸದಿಂದ ಬಡವಾಗುತ್ತಿದ್ದ ಜನತೆ ಯಾವಾಗ ತನ್ನ ಹಕ್ಕು ಸ್ಥಾಪನೆಗಾಗಿ ತನ್ನ ಮಹಾರಾಜಾಧಿರಾಜರುಗಳವರ ತಲೆಯನ್ನು ಬೀಳಿಸುವುದಕ್ಕಾರಂಭಿಸಿತೋ (ಉದಾ: ಇಂಗ್ಲೆಂಡಿನ ಚಾರ್ಲ್ಸ್ ದೊರೆ, ಫ್ರಾನ್ಸಿನ ರಾಜ ಕುಟುಂಬ) ಅಂದಿನಿಂದ ಆಳಿದುಳಿದ ಚಕ್ರವರ್ತಿಗಳು ತಾವಾಗಿ ಮುಂದೆಬಂದು ಜನರಿಗೆ ಅಧಿಕಾರ ಪ್ರದಾನ ಮಾಡಿದರು. ಆ ಅಧಿಕಾರ ಪ್ರದಾನದ ತಂತ್ರನೆಂದರೆ ಈ ಚುನಾವಣೆ.

ಕ್ರಿಸ್ತಪೂರ್ವ ಶತಮಾನಗಳಲ್ಲಿ ಈ ಚುನಾವಣೆಯಿಂದ ನಡೆವ ರಾಜ್ಯಗಳನೇಕ ಗ್ರೀಸ್ ದೇಶದಲ್ಲಿಯೂ, ಭಾರತದಲ್ಲಿಯೂ ಇದ್ದವು. ಆದರೆ ಅವು ಅತ್ಯಂತ ಪ್ರಚಾರಕ್ಕೆ ಬಂದುದು ೧೬ನೆಯ ಶತಮಾನದ ಉತ್ತರಾರ್ಧದಿಂದ. ಸಿಡಿಮದ್ದನ್ನು ಅಂಕೆಯೊಳಗಿರಿಸಿಕೊಂಡ ನಿರಂಕುಶ ಸಾಮ್ರಾಜ್ಯವಾದಿಗಳು ಅಸಂಖ್ಯಾತ ಜನಸಮೂಹವನ್ನು ಬೆದರಿಕೆ ಹುಟ್ಟಿಸಿಯೇ ಅಂಕೆಯೊಳಗಿರಿಸಿಕೊಳ್ಳಬಹುದಿತ್ತು. ಆದರೆ ಸಿಡಿಮದ್ದಿನ ತಂತ್ರ ಅರಸರಿಂದ, ದರಬಾರಿಗಳಿಗೂ ಜಮೀನ್ದಾರ ಸೇನಾನಾಯಕರಿಗೂ, ಜನಸಾಮಾನ್ಯರಿಗೂ ತಿಳಿದ ಮೇಲೆ, ಅರಸರ ಸಿಂಹಾಸನ ಹೊಂಗುವುದಕ್ಕೆ ತೊಡಗಿತು. ವಿರೋಧಿಗಳಾದ ಬಲಶಾಲಿಗಳನ್ನು ತೃಪ್ತಿಪಡಿಸುವುದಕ್ಕೋಸ್ಕರ ಅರಸರು ನಿರ್ವಾಹವಿಲ್ಲದೆ ತಮ್ಮ ಅಧಿಕಾರವನ್ನು ತುಸುತುಸುವೇ ಅಗಿ ಬಿಡುತ್ತಾ ಬಂದು, ಈಗ ಜನರ ಕೈಗೊಂಬೆಗಳಾಗುವ ಕಾಲ ಬಂದಿದೆ. ಅಜ್ಞಾಪಿಸುವ ಕಾಲ ಹೋಗಿ, ಪ್ರಜೆಗಳ ... ಮಾಡುವ ಸಮಯವಿದು. ಭಾರತದ ಸೂರಾಲ. ಮುಂದಿ ದೊರೆಗಳು 'ನಾನು ಮುಂದೆ, ತಾನು ಮುಂದೆ' ಎಂದುಕೊಂಡು ಅಧಿಕಾರ ತ್ಯಾಗ ಮಾಡಿ ಹೆಸರನ್ನಾದರೂ ಉಳಿಸಿಕೊಂಡುದನ್ನು ನೋಡಬಾರದೆ? ನಿಜಾಮನಂಥ ಫ್ಯಾಸಿಸ್ಟ ಅರಸನೂ ಜವಾಬುದಾರೀ ಸರಕಾರಕ್ಕೆ ಒಪ್ಪಿಗೆ ಕೊಟ್ಟದ್ದು ಏತಕ್ಕಾಗಿ?—ಜನತಾ ಸರಕಾರದ ನೊಗ ಹಾಕಿಕೊಳ್ಳದಿದ್ದರೆ ಉಳಿಗಾಲವಿಲ್ಲವೆಂಬುದನ್ನು ಅರಿತುಕೊಂಡಿದ್ದರಿಂದಲೇ ಅಲ್ಲವೆ?

ಚುನಾವಣೆಯಿಂದ ಜನತೆ ಅಧಿಕಾರ ಪಡೆಯುವುದು ನಿಜವಾದರೂ, ಜನತೆಗೆ ಸಂಪೂರ್ಣ ಅಧಿಕಾರ ಬರುವುದಿಲ್ಲ, ಜನತೆಯಿಂದ ಆರಿಸಿ ಹೋದ ಪ್ರತಿನಿಧಿಗಳು ಐದಾರು ವರ್ಷ ನಿರಾತಂಕವಾಗಿ ದರ್ಬಾರಿಕೆ ನಡೆಸಿದರೆ ಎಸೆಂಬ್ಲಿಯಲ್ಲಿ ಎಮ್. ಎಲ್. ಎ.ಗಳು ಪಂಚವಾದ್ಯ ಊದುವುದೊಂದೇ ಉಪಾಯ ಉಳಿದೀತು. ಸ್ವಿಟ್ಜರ್ಲೆಂಡಿನಂಥ ಚಿಕ್ಕ ರಾಷ್ಟ್ರದಲ್ಲಿ ತಪ್ಪು ಮಾಡಿದ ಪ್ರತಿನಿಧಿಯನ್ನು ಬಹುಮತದ ಪ್ರಕಾರ ಹಿಂದಕ್ಕೆ ಕರೆಯುವ ಅಧಿಕಾರ ಜನತೆಗಿದೆ. ಆದರೆ ಆ ಪದ್ಧತಿ ದೊಡ್ಡ ರಾಜ್ಯಗಳಲ್ಲಿ ಸುಗಮವಾಗಿ ನಡೆಯಲಾರದು. ಆದ್ದರಿಂದ ದೊಡ್ಡ ರಾಷ್ಟ್ರಗಳಿಗೆ ಇದೊಂದು ಗಂಡಾಂತರ ಚುನಾವಣೆಯ ಅಸ್ತ್ರವಿದ್ದೂ ತಪ್ಪಲಾರದು.

ಇನ್ನು ಚುನಾವಣೆಯ ಕಾಲದ ಗದ್ದಲವೋ? ಒಟ್ಟಾರೆ ನೋಡಿದರೆ ಬಲ ಇದ್ದವನ ಕಾರ್ಯ. ಚಾಣಾಕ್ಷ ನೀತಿಯನ್ನನುಸರಿಸಿದವರು ಗೆಲ್ಲುತ್ತಾರೆ; ಸತ್ಯಂಭಟ್ಟರು ಸೋಲುತ್ತಾರೆ. ರೊಕ್ಕಪ್ಪಗಳು ಮೇಲೆ ಬೀಳುತ್ತಾರೆ; ಸತ್ಯಪೂರ್ವಕ ಕಾರ್ಯ ಮಾಡುವವರು ಹಾರಿ ಹೋಗುತ್ತಾರೆ. ಮೊನ್ನೆಮೊನ್ನೆ ನಡೆದ ಇಟಲಿಯ ಚುನಾವಣೆಯಲ್ಲಿ ಕ್ರಿಶ್ಚನ್ ಡೆಮೊಕ್ರೆಟ ಪಾರ್ಟಿಯವರು ಗೆಲ್ಲಲು ಕಾರಣವೇನು ಗೊತ್ತೆ? ಸಂ. ರಾ. ಅಮೇರಿಕದ ಬಲವಾದ ಬೆಂಬಲ; ಟ್ರೀಯೆಸ್ಟ ಪ್ರದೇಶದ ಆಸೆ ತೋರಿಸಿ, ಮಾರ್ಶಲ್ ಯೋಜನೆಯನ್ನು ತೀರ ನಿಸ್ಸಿನವಾದ ಫ್ಯಾಸಿಸ್ಟ ಇಟಲಿಗನ್ವಯಿಸಿ, ಉದ್ಧಾರ ಮಾಡಲು ಮುಂದೆ ಬಂದವರಂತೆ ತೋರಿಸಿಕೊಂಡು ಅನೇಕಾನೇಕ ಕುಟಿಲ ನೀತಿಗಳನ್ನು ಪ್ರಯೋಗಿಸಿ, ಎಡ ಪಕ್ಷದವರು ಮೇಲೆ ಬೀಳದಂತೆ ನೋಡಿಕೊಂಡಿತು ಅಮೇರಿಕ. ದಕ್ಷಿಣ ಅಮೇರಿಕದ ಚಿಕ್ಕ ಚಿಕ್ಕ ಜನಾಂಗಗಳಲ್ಲಿ ಈ ಚುನಾವಣೆಗೆ ಅರ್ಥವೇ ಇಲ್ಲ. ವಾರಕ್ಕೊಮ್ಮೆ ಕ್ರಾಂತಿ! ವಾರಕ್ಕೊಂದು ಹೊಸ ಮಂತ್ರಿಮಂಡಲ! ಎಸೆಂಬ್ಲಿ ಭವನದೊಳಗೆ ಕುರ್ಚಿ ಬೆಂಚುಗಳೇ ಆಯುಧವಾಗಿ ಉಳ್ಳ ಪ್ರತಿನಿಧಿಗಳ ಕೈಕಾಳಗ! ಈ ಪರಿಪಾಟಿ 1919ರಿಂದಲೂ ಗಡೆದುಬಂದದೆ, ಇನ್ನೂ ಮುಗಿಯಲಿಲ್ಲ. ರಶಿಯಾ ಏಕಪಕ್ಷ ರಾಷ್ಟ್ರ. ಸರಕಾರಕ್ಕೇ ಪ್ರಚಾರ ಸಾಧನದ ಗುತ್ತಿಗೆ ಇರುವುದರಿಂದ ಬೇರೆ ಪಕ್ಷದವರು ಅಲ್ಲಿ ಬದುಕುವ ಹಾಗೆಯೇ ಇಲ್ಲ. 'ಚೂ' ಎಂದು ಅಡ್ಡ ಮಾತನಾಡಿದವನು ಮರುದಿನ ಮರೆಯಾಗಿ ಬಿಡುತ್ತಾನೆ—ಅಂಥ ಸಮರ್ಥವಾದ ಆಡಳಿತೆ! ಈ ಏಕಪಕ್ಷ ಪದ್ಧತಿ ನಿಧಾನವಾಗಿ ಪಶ್ಚಿಮ ಯುರೋಪಿಗೆ ಹಬ್ಬುತ್ತಿದೆ.

ಅಮೇರಿಕದಲ್ಲಿ ಚುನಾವಣೆಯೆಂದರೆ ಒಂದು ದೊಡ್ಡ ನಾಡ ಹಬ್ಬ. ಚುನಾವಣೆಯ ತಾರೀಕಿನ ವರ್ಷಗಟ್ಟಲೆ ಮೊದಲೇ ಪ್ರಚಾರಾರಂಭ. ಅಟ್ಲಾಂಟಿಕದ ಕರೆಯಿಂದ ಫೆಸಿಫಿಕ ಸಾಗರದ ತೀರದ ವರೆಗೆ ಉಮೇದ್ವಾರರ ಬಿರುಗಾಳಿಯ ಪ್ರವಾಸವೇನು? ಇದ್ದ ಎರಡು (ಈಗ ಮೂರು; ಹೆನ್ರಿವಾಲೇಸನ 'ಥರ್ಡ್ ಪಾರ್ಟಿ') ಪಕ್ಷಗಳೊಳಗೆ ಧೋರಣೆಯಲ್ಲಿ ಏನೊಂದೂ ವ್ಯತ್ಯಾಸವಿಲ್ಲದಿದ್ದರೂ ಅದು ಉಂಟೆಂದು ತೋರಿಸುವ ಮೋಜೇನು? ಲಕ್ಷಗಟ್ಟಲೆ ಡಾಲರ್ ಇಲೆಕ್ಷನ್ ಕಾರ್ಯಕ್ಕಾಗಿ ವಿನಿಯೋಗ ಮಾಡುವುದೇನು? ಅಮೇರಿಕದಲ್ಲಿ ಆಕಾಶವಾಣಿ ಸರಕಾರದ ಗುತ್ತಿಗೆಯಲ್ಲ. ಹಲವಾರು ಬ್ರೊಡ್‌ಕಾಸ್ಟಿಂಗ್ ಕಾರ್ಪೊರೇಶನ್‌ಗಳಿವೆ. ಒಂದೊಂದರಿಂದಲೂ ಹಗಲು ರಾತ್ರಿಯೆನ್ನದೆ, ಮತದಾರರಿಗೆ ಕಿರುಮಂತ್ರ ಹಾಕುವುದೇನು? ಇದಿರುಪಕ್ಷದ ಉಮೇದುವಾರನಿಗೆ ಸಾಮ-ದಾನ-ಭೇದ-ದಂಡ ಎಂಬ ಚತುರುಪಾಯಗಳಿಂದ ಹಿಂಜರಿಯುವಂತೆ ಮಾಡುವುದೇನು? ಮಾಮ್ ಮೇಲೆ ಹೇಳಿದ ಸ್ವಭಾವದ ಜನರು ಹೀಗೆ ವರ್ತಿಸದೆ ಇನ್ನಷ್ಟು ವರ್ತಿಸಬೇಕು?

ಸಧ್ಯ ಅಮೇರಿಕದ ಜನರ ತಲೆಯನ್ನು ಕಾಡಿಸುವ ಪ್ರಶ್ನೆಗಳು ಎರಡು: ೧. ಮುಂದಿನ ಪ್ರೆಸಿಡೆಂಟ್ ಯಾರು? ೨. ರಶಿಯದೊಡನೆ ಯುದ್ಧ ಮಾಡದೆ ಸಾಧ್ಯವೆ? ಒಬ್ಬ ಸಾಮಾನ್ಯ ಅಮೇರಿಕನ್ನನಾದರೂ ಸರಿಯೆ, ದಿನವಿಡೀ ಪ್ರತಿಸ್ಪರ್ಧಿ ಉಮೇದುವಾರರ ಗುಣದೋಷ ವಿಮರ್ಶೆ ಮಾಡುವುದಕ್ಕೆ ಸಿದ್ಧ. ಟ್ರೂಮನ್ ಡೆಮೊಕ್ರಟಿಕ್ ಉಮೇದುವಾರನಾಗಿ ನಿಂತರೆ ಸೋಲುವುದು ಖಂಡಿತ ಎಂಬುದನ್ನೊಂದು ಬಿಟ್ಟು ಬಾಕಿ ಯಾವ ವಿಷಯದಲ್ಲೂ ಏಕಮತವೆಂಬುದಿಲ್ಲ. ಆತ ಹಿಂಜರಿದು ಐಸೆನ್‌ಹಾವರಿಗೆ ಎಡೆಗೊಡಬೇಕಾದರೆ ಜಗತ್ತು ಬುಡಮೇಲಾಗಬೇಕಾದೀತು; ಜಸ್ಟಿಸ್ ಡೂಗ್ಲಾಸ್ ನಿಂತರೆ ಡೆಮೊಕ್ರೆಟ್ ಓಟುಗಳು ಅವನಿಗೇ ಬೀಳುವುದರಲ್ಲಿ ಸಂಶಯವಿಲ್ಲ. ಆದರೆ ಟ್ರೂಮನ್ ಬಿಟ್ಟಾರಲ್ಲವೆ? ಟ್ರೂಮನ್ ನಾಮಪತ್ರವನ್ನು ಹಿಂತೆಗೆದುಕೊಳ್ಳುವಂತೆ ಅವನ ಮನವೊಲಿಸುವುದು ಹೇಗೆಂದು ಎಲ್ಲರಿಗೂ ಚಿಂತೆ. ಎಡಪಕ್ಷದ ಹಲವು ಬುದ್ಧಿಜೀವಿಗಳೂ ಡೂಗ್ಲಾಸ್‌ಗೆ ಮತ ಕೊಡುವುದಕ್ಕೆ ಒಪ್ಪಿಯಾರು. ಐಸೆನ್‌ಹಾವರ್ ನಿಲ್ಲುವುದಿಲ್ಲ ಎಂಬುದನ್ನೇ ಗಟ್ಟಿಮಾಡುವವನಾದರೆ, ಅವನ ಪ್ರಖ್ಯಾತನಾಮವನ್ನುಪಯೋಗಿಸಿ,

(೧೦ನೇ ಪುಟ ನೋಡಿರಿ)

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ನಿಯೋಜಿತ ಗವರ್ನರ್ ಜನರಲ್-ರಾಜಾಜಿ

ರಾಜಾಜಿ ಭಾರತದ ಮುಂದಿನ ಗವರ್ನರ್ ಜನರಲ್ ಎಂದು ನಿಶ್ಚಯವಾಗಿದೆ. ಇದೇ 1948ನೇ ಜೂನ್ ತಾ 21ಕ್ಕೆ ಇಂದಿನ ಗವರ್ನರ್ ಜನರಲ್ ಲೋರ್ಡ್ ಲುಯಿಸ್ ಮೌಂಟ್ ಬೇಟನರು ತನ್ನ ಅಧಿಕಾರದ ಅವಧಿ ಮುಗಿದು ನಿವೃತ್ತರಾಗುವ ದಿನವೇ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಭಾರತ ವಸಾಹತಿನ ಗವರ್ನರ್ ಜನರಲ್ ಹುದ್ದೆಗೇರಲಿದ್ದಾರೆ.

ರಾಜಕುವರಿಯ ಮದುವೆಗಾಗಿ ಲೋರ್ಡ್ ಮೌಂಟ್‌ಬೇಟನರು ಕೆಲವು ದಿನಗಳ ರಜೆಯಲ್ಲಿ ಲಂಡನಿಗೆ ಹೋಗಿದ್ದಾಗ ತಾತ್ಕಾಲಿಕ ಗವರ್ನರ್ ಜನರಲರಾಗಿದ್ದವರು ರಾಜಾಜಿಯೇ. ಆ ಬಾರಿ ರಾಜಾಜಿಯ ಹೊರತು ಬೇರೆ ಹೆಸರು ಮುಂದೆ ಬಂದಿರಲಿಲ್ಲ; ಆದರೆ ಈ ಬಾರಿ ರಾಜೇಂದ್ರ ಪ್ರಸಾದ್ ಮತ್ತು ಬೇರೆ ಒಂದೆರಡು ಹೆಸರುಗಳ ಕಡೆಗೂ ಕಣ್ಣು ಬಿದ್ದಿತ್ತು. ಕೊನೆಯಲ್ಲಿ ಭಾರತ ಸರಕಾರವು ಆಚಾರ್ಯರನ್ನೇ ಆರಿಸಿಕೊಂಡಿತು. ಲಂಡನ್ನಿನ ಬಕ್ಕಿಂಗ್ಹಾಮ್ ಅರಮನೆಯಿಂದ ಅವರ ನೇಮಕದ ಪ್ರಕಟಣೆ ಹೊರಟಿತು. ಬರುವ ಜೂನ್ 21ರ ನಂತರ ರಾಜಾಜೀ ಗವರ್ನರ್ ಜನರಲ್-ಭಾರತಕ್ಕೊಬ್ಬ ಭಾರತೀಯನೇ ಪ್ರಮುಖಾಧಿಕಾರಿ.

ಈ ನೇಮಕ ವೈಶಿಷ್ಟ್ಯ

ರಾಜಾಜೀ ನೇಮಕದಲ್ಲಿ ಒಂದು ವೈಶಿಷ್ಟ್ಯವಿದೆ. ಭಾರತದಲ್ಲಿ ಸರ್ವ ಪ್ರಥಮವಾಗಿ ಹಿಂದೀಯನಿಗೆ ದೊರೆತ ಅಗ್ರಪೂಜೆಯಿದು. ಭಾರತ ವಿಭಜನೆಯೊಂದಿಗೆ ಸ್ವಾತಂತ್ರ್ಯ ದೊರೆತಾಗ ಪ್ರಥಮ ಭಾಗದಲ್ಲಿ ಇಕ್ಕಡೆಗೂ ಗವರ್ನರ್ ಜನರಲರಾಗಿ ಲೋರ್ಡ್ ಮೌಂಟ್ ಬೇಟನರೇ ಇರಬಹುದೆಂದು ಭಾರತದ ಪರವಾಗಿ ಧುರೀಣರೊಪ್ಪಿಗೆ ಕೊಟ್ಟರು—ಪಾಕಿಸ್ತಾನದ ಧುರೀಣರು ಮುಂದಾಗಿ ಅದಕ್ಕೆ ಸಮ್ಮತಿ ಸೂಚಿಸಿದ್ದರಿಂದ. ಆದರೆ ಬೆನ್ನಲ್ಲೇ ಪಾಕಿಸ್ತಾನವು ತನ್ನ ಮಟ್ಟಿಗೆ ಜಿನ್ನರೇ ಗವರ್ನರ್ ಜನರಲರಾಗಬೇಕೆಂದು ಹೆಜ್ಜೆ ಹಿಂದಿಟ್ಟರೂ ಭಾರತವು ತನ್ನ ಮೊದಲ ಮಾತನ್ನೇ ಗಟ್ಟಿ ಹಿಡಿದು ಲೋರ್ಡ್ ಮೌಂಟ್‌ಬೇಟನರನ್ನು ಉಳಿಸಿಕೊಂಡಿತು; ಆದಿಭಾಗದ ಹಲವು ತೊಡಕುಗಳನ್ನು-ಮುಖ್ಯವಾಗಿ ಸಂಸ್ಥಾನಗಳ ಸಂಬಂಧದ ಸಮಸ್ಯೆಗಳನ್ನು-ಬಗೆಹರಿಸಿಕೊಳ್ಳಲು ಈ ಬಿಳಿ ಗವರ್ನರ್ ಜನರಲ್ ವಿಶೇಷ ಸಹಕಾರಿಯಾದರು. ನಿಜಕ್ಕೂ ಲೋರ್ಡ್ ಮೌಂಟ್‌ಬೇಟನರನ್ನು ಕೊಟ್ಟು ಬ್ರಿಟನು ಕೆಲಕಾಲ ಭಾರತಕ್ಕೆ ನೆರವು ಕೊಟ್ಟಂತಾಯಿತೇ ಹೊರತು ಭಾರವಿಟ್ಟಂತಾಗಲಿಲ್ಲ. ಈಗ ಲೋರ್ಡ್ ಮೌಂಟ್ ಬೇಟನರ ವಾಯಿದೆ ಮುಗಿಯುತ್ತಾ ಬಂದಿದೆ. ಸಂಸ್ಥಾನೀ ಸಂಬಂಧದ ಸಮಸ್ಯೆಯೂ ಕೊನೆಮುಟ್ಟುತ್ತಾ ಬಂದಿದೆ. ಭಾರತವು ತನ್ನವನನ್ನೇ ಅಗ್ರಪೀಠಾಧಿಕಾರಿಯಾಗಿ ನೇಮಿಸಿಕೊಳ್ಳಬೇಕಾದ ಕಾಲದಲ್ಲಿ ರಾಜಾಜಿಯನ್ನು ನೇಮಿಸಿಕೊಂಡಿದೆ. ಆದಿ ಭಾಗದಲ್ಲಿ ಬಿಳಿಯರ ಸಂಬಂಧ ಬಿಡಲಾರದವರೆಂದು ಕಾಂಗ್ರೆಸಿಗರನ್ನು ಹಂಗಿಸಿದ್ದ ಲೀಗಿನವರು ಅಂಕದ ಈ ಕೊನೆಯ ಭಾಗದಲ್ಲಿ ಒಳಗಿಂದೊಳಗೆ ಪಶ್ಚಾತ್ತಾಪ ಪಡುವಂತಾಗಿರಬಹುದು- ಹೇಗಿದ್ದರೂ ಕಾಂಗ್ರೆಸಿಗರು ನಾಚುವಂತಾಗಿಲ್ಲವೆಂಬುದಂತೂ ಖಂಡಿತ. ಅದಕ್ಕಾಗಿ ಲೋರ್ಡ್ ಮೌಂಟ್ ಬೇಟನಂಗೆ ಶ್ಲಾಘನೆ ಸಲ್ಲಬೇಕು.

ರಾಜಾಜಿ ವ್ಯಕ್ತಿತ್ವ

ಬರುವ ತಿಂಗಳ ಮೂರನೇ ವಾರದ ನಂತರ ಭಾರತ ವಸಾಹತಿನ ಗವರ್ನರ್ ಜನರಲ್ ಆಗಿ ಸರಕಾರದ ನಿರ್ದೇಶಕತ್ವ ವಹಿಸಲಿರುವ ರಾಜಾಜೀ ಸರ್ವರ ಪಾಲಿಗೂ ಒಂದು ರೀತಿಯ ವಿಚಿತ್ರ ಮನುಷ್ಯ; ವಿಶಿಷ್ಟ ವ್ಯಕ್ತಿತ್ವವುಳ್ಳ ಜನ. ಬಹಿರಂಗವಾಗಿ ಯಾವ ಚಿಹ್ನೆಗಳನ್ನೂ ತೋರಗೊಡದೆ ಅಪಾಯವೊಡ್ಡಬಲ್ಲ ಮನುಷ್ಯನೆಂಬ ಅರ್ಥದಲ್ಲಿ 'ಹುಲ್ಲಿನೊಳಗಿನ ಹಸುರು ಹಾವು' ಎಂಬ ಬಿರುದನ್ನು ಇವರಿಗೊಮ್ಮೆ ಬಿರುದುದಾನ ಪ್ರವೀಣೆ ಶ್ರೀಮತಿ ಸರೋಜಿನಿಯವರಿತ್ತಿದ್ದರು. ಗಾಂಧಿಜೀಯ ತತ್ವಗಳಿಗೆ ವಿರೋಧವಾಗಿ 'ಸ್ವರಾಜ್ಯ ಪಕ್ಷ'ವನ್ನು ಸ್ಥಾಪಿಸಲು ಹೊರಟ ದೇಶಬಂಧು ಚಿತ್ತರಂಜನದಾಸರು ಆ ಕಾಲದಲ್ಲಿ ಕಾಂಗ್ರೆಸಿನೊಳಗೆ ಆಚಾರ್ಯರು ತನಗೊಡ್ಡಿದ ಸೋಲನ್ನು ಸ್ಮರಿಸಿಕೊಂಡು ಒಂದು ಸಂಭಾಷಣೆಯ ನಡುವೆ ಹೇಳಿದ್ದರು: "ಬೇರಾರಿಗೂ ಅಲ್ಲ; ಈ ಅಂತರ್ಗಾಮೀ ಘೋರಣೆಯ ಮಹಾ ಬುದ್ಧಿವಂತನಿಗೆ ನಾನು ಹೆದರುತ್ತೇನೆ" ಎಲ್ಲರ ಅಭಿಮತವೂ ಬಹುಮಟ್ಟಿಗೆ ಹೀಗೆಯೇ. 'ಕಪಟ ರಾಜಕಾರಣಿ' 'ತುದಿ ಬಾಡಿದುದೇ ಗೊತ್ತಾಗಬೇಕು ಹೊರತು ಬುಡ ಕತ್ತರಿಸಿದುದು ತಿಳಿಯದು' 'ಆವೇಗ ಪ್ರದರ್ಶಿಸದೇನೆ ಆಶ್ಚರ್ಯ ನಿರ್ಮಿಸಬಲ್ಲ ಮನುಷ್ಯ' 'ಎಲ್ಲರ ಗುಟ್ಟನ್ನೂ ಹಿಡಿಯಬಲ್ಲ, ತನ್ನ ಗುಟ್ಟನ್ನೆಂದಿಗೂ ಕೊಡಲಾರ'-ಎಂದೆಲ್ಲಾ ರಾಜಾಜೀ ವ್ಯಕ್ತಿತ್ವವು ವಿವಿಧ ರೀತಿಗಳಿಂದ ಚಿತ್ರಿಸಲ್ಪಟ್ಟಿದೆ. ಹತ್ತು ಮಂದಿ ಹಾರಿ ಬಿದ್ದರೆ ಕೊನೆಗೆ ಹಗ್ಗ ಕೂಡಾ ಹಾವಾಗುತ್ತದೆ, ಎಂಬಂತೆ ರಾಜಾಜಿಯು ಹಲವೆಡೆ ಇಂತಹ ಸಂಭಾವನೆಗಳನ್ನೇ ಗಳಿಸಿದ್ದರಿಂದ ಎಲ್ಲರೂ 'ಆಳದ ಅಂದಾಜು ಕೊಡದ ಜನ' ಎಂದೇ ಅವರನ್ನು ಭಾವಿಸಿಕೊಂಡಿದ್ದಾರೆ. ನಿಜಕ್ಕೂ ರಾಜಾಜಿ 'ಏನೂ ಮಾಡಿಯರೆ?' ಇಲ್ಲ, ಏನ್ನಕ್ಕೂ ಮಾಡಲಾರರು. ತನಗೆ ತಪ್ಪೆಂದು ತೋರಿದುದನ್ನೆಂದಿಗೂ ಅವರು ಮಾಡುವವರಲ್ಲ; ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಕಂಡುಹಿಡಿಯುವುದರಲ್ಲೂ ಯಾವ ಸಂದರ್ಭದಲ್ಲಾದರೂ ಅವರು ತಪ್ಪಿ ಬೀಳುವವರಲ್ಲ. ಮೇಲಾಗಿ, ಆಧುನಿಕ ಜಗತ್ತಿನ, ಅದರಲ್ಲೂ ಬ್ರಿಟಿಷ್ ರಾಜಕಾರಣದ ಮರ್ಮವಂತಂತೆಯೇ ಭಾರತದ ಸಂಸ್ಕೃತಿ ಮತ್ತು ರೀತಿನೀತಿಗಳ ಸಾರವನ್ನೂ ಗ್ರಹಿಸಿಕೊಂಡಿರುವ-ರಾಜಕೀಯ, ಸಾಮಾಜಿಕಗಳಂತೆಯೇ ಆಧ್ಯಾತ್ಮಿಕತೆಯನ್ನು ಅಭ್ಯಾಸಿಸಿರುವ-ಸರಳ, ಸೌಮ್ಯ, ಸಾದಾ ವರ್ತನೆಗಳಿಂದಲೇ ಅಸಾಧಾರಣ ಚಾತುರ್ಯವನ್ನೂ ಪ್ರದರ್ಶಿಸಬಲ್ಲ-ಹಿಂದೀ ಮುಖಂಡರಲ್ಲಿ ರಾಜಾಜೀ ಮಹಾತ್ಮಾ ಗಾಂಧಿಗೆರಡನೆಯವರು. ಅವರ ಬುದ್ಧಿಯು ಸಾಮಾನ್ಯ ಅಳತೆಗೆ ಸಿಗದಷ್ಟು ಆಳವಾದುದು, ಸೂಕ್ಷ್ಮವಾದುದು; ಅವರ ಸಂಸ್ಕಾರವು ಒಂದು ಹೊಸ ಅಭಿರುಚಿಗೆ ತಿರುಗುವಷ್ಟು ವಿಶೇಷ ಪಕ್ವವಾದುದು, ಅವರು ಅನುಭೋಗಿಸಿ ಮತ್ತು ಆಲೋಚಿಸಿ ಪಡೆದಿರುವ ಅನುಭವವು ಮೇರೆ ತೋರದಷ್ಟು ಅಪಾರವಾದುದು; ಹೀಗೆ ಎಲ್ಲದರಲ್ಲೂ ಅಸಾಮಾನ್ಯನಿರುವ ಈ ಕಿರಿ ಮೂರ್ತಿಯ ಘೋರಣೆ ವರ್ತನೆಗಳೂ ಸಾಮಾನ್ಯ ಮನುಷ್ಯನಿಗಿಂತ ಭಿನ್ನ ರೀತಿಯವಿರುವದರಿಂದಾಗಿಯೇ ಸಂಶಯವನ್ನು ನಿರ್ಮಿಸುತ್ತಿವೆ. ಸೂಕ್ಷ್ಮವಾಗಿ ವಿವೇಚಿಸಿದರೆ, ವಿಮರ್ಶಕರ ಆದೂರ ದೃಷ್ಟಿಯಿಂದಾಗಿ, ರಾಜಾಜಿಯ ಅಸಾಮಾನ್ಯ ಪ್ರತಿಭೆಯಿಂದಾಗಿ, ರಾಜಾಜಿ ಅನುಮಾನಾಸ್ಪದ ನಾಯಕನಾಗಿದ್ದಾರೆ ಹೊರತು ಬೇರಲ್ಲ. ಕೆಲವರಲ್ಲಿ ಸೂಕ್ಷ್ಮ ಬುದ್ಧಿ ಮತ್ತು ವಿವೇಚನಾ ಶಕ್ತಿಯ ಬಲ ಅಪಾರವಿದ್ದರೂ ಅದೇ ಪರಿಮಾಣದಲ್ಲಿ ಆತ್ಮ ವಿಶ್ವಾಸವಿರುವದಿಲ್ಲ. ಆದರೆ ರಾಜಾಜಿಯ ಸ್ವಯಂ ವಿಶ್ವಾಸ ಕೂಡಾ ಅಜೇಯವಾದುದೇ. ಗಾಂಧಿಜೀಯಂತೆ ಆಚಾರ್ಯರೂ ಕಾರ್ಯಕ್ಷೇತ್ರದಲ್ಲಿ ವ್ಯವಹಾರ ಜಾಣ್ಮೆಯ ಬದಲು ಆತ್ಮ ಬಲವನ್ನೇ ಆಧರಿಸುತ್ತಿದ್ದರೆ ನಿಜಕ್ಕೂ ಇವರೇ ಅಖಿಲ ಭಾರತದ ದ್ವಿತೀಯ ಗಾಂಧಿಯಾಗುತ್ತಿದ್ದರು. ತಪಸ್ಸು ಅನುಯಾಯಿಗಳನ್ನು ಗಳಿಸುತ್ತದೆ; ಬುದ್ಧಿವಂತಿಕೆ ಅನುಮಾನವನ್ನೇ ಗಳಿಸುತ್ತದೆ. ಗಾಂಧಿಜೀ ಮೊದಲನೆಯದನ್ನು ಹಿಡಿದರೆ ರಾಜಾಜೀ ಎರಡನೆಯ ಪಥ ಹಿಡಿದರು. ಇಬ್ಬರ ಗುರಿಯೂ ಒಂದೇ.

ಬುಡ ಮತ್ತು ತುದಿ ಇವರೇ!

ಭಾರತದ ಪಾಲಿನ ಪ್ರಥಮ ಹಿಂದೀ ಗವರ್ನರ್ ಇವರಾದಂತೆಯೇ ಬ್ರಿಟಿಷ್ ರಾಜ್ಯಭಾರದೊಂದಿಗಾರಂಭವಾಗಿದ್ದ ಭಾರತದ ಗವರ್ನರ್ ಜನರಲ್ ಸರಪಣಿಯಲ್ಲಿ ಕೊನೆಯ ಕೊಂಡಿಯೂ ಬಹುಶಃ ರಾಜಾಜಿಯೇ ಆಗಲಿದ್ದಾರೆ. ಭಾರತದ ಹೊಸ ರಾಜ್ಯಾಂಗ ರಚನೆಯು ಜಾರಿಗೆ ಬರುವಾಗ ಗವರ್ನರ್ ಜನರಲ್ ಹುದ್ದೆಯೇ ಬರ್ಖಾಸ್ತಾಗಿ ಆ ಸ್ಥಾನದಲ್ಲಿ ಅಧ್ಯಕ್ಷ ಹುದ್ದೆ ಮೂಡಲಿದೆ. ಹಿಂದೀ ಕೇಂದ್ರ ಯೂನಿಯನಿನ ಪ್ರಥಮಾಧ್ಯಕ್ಷನಾಗುವ ಸುಯೋಗವೂ ರಾಜಾಜಿಗೇನೇ ಒದ... ಬಹುದು. ತನ್ನ ಗವರ್ನರ್ ಜನರಲ್ ಅಧಿಕಾರದ ಅವಧಿಯಲ್ಲೇ ಮುಂದಿನ ಅಧ್ಯಕ್ಷತನದ ಹುದ್ದೆಗೆ ತಾನೇ ಬೇಕು ಅನ್ನಿಸುವಷ್ಟು ಕಾರ್ಯಗಳು ರಾಜಾಜಿಯಿಂದಾಗವೆಂಬುದು ನಿರ್ವಿವಾದ. ಒಮ್ಮೆ ಹಿಡಿದದನ್ನು ಹಿಡಿತದಲ್ಲಿಟ್ಟುಕೊಳ್ಳದವರು ರಾಜಾಜಿಯಲ್ಲ-ಮದ್ರಾಸ್ ರಾಜಕೀಯ ಮಾತ್ರ ಇದಕ್ಕಪವಾದ. ರಾಜಾಜಿಯಿಂದ ... ಲಸ ಹಾಳಾದುದಿಲ್ಲವೇ, ಎಂಬ ಪ್ರಶ್ನೆ ... ರಬಹುದು; ಹಾಳಾಗಿದ್ದರದು ಸಿಹಿ ... ಚ್ಚಾದ ಪಾಯಸದಂತೆ, ವೇಗ ಹೆಚ್ಚಾ... ವಿಮಾನದಂತೆ, ರಾಜಾಜೀ ಚಾತುರ್ಯ ... ಚ್ಚಾಗಿ ರಾಜಾಜೀ ಪ್ರತಿಭೆಗೆ ಅವಕಾ... ಕಡಿಮೆಯಾಗಿ ಹೊರತು ಅದರ ಅಭಾ... ದಿಂದಲ್ಲ.

ರಾಜಾಜೀ ನೇಮಕದ ಕುರಿತು ಎಲ್ಲೆಲ್ಲೂ ಸಮಾಧಾನ ವ್ಯಾಪಿಸಿದೆ, ಎಂಬು... ಕ್ಕೆ ಕೆಲವರ ಉದ್ಗಾರಗಳೇ ಸಾಕ್ಷಿ:—

'ರಾಜಾಜೀ ಖಾಸಗಿಯಾಗಿ ನನ್ನ ... ರಮಾಪ್ತನಾಗಿರುವುದು ಮಾತ್ರವಲ್ಲ; ಭಾರತದ ಅಗ್ರಗಣ್ಯ ನಾಗರಿಕರಲ್ಲಿ ಅತಿ ವಿ... ಣರಲ್ಲೊಬ್ಬರೆಂದು ಗಣಿಸಲ್ಪಟ್ಟಿದ್ದಾರೆ ... ವರ ನೇಮಕದಿಂದ ನನಗತ್ಯಾನಂದವಾ... ದೆ"- ಭಾರತದ ಹಿಂದಿನ ಸ್ಟೇಟ್ ಸೆಕ್ರೆಟ... ಲೋರ್ಡ್ ಪೆಥಿಕ್ ಲಾರೆನ್ಸ್

"ಈ ಪ್ರಥಮ ಗೌರವ ತಮಿಳುನಾಡಿ... ದೊರೆತುದೊಂದು ದೊಡ್ಡ ಮರ್ಯಾದೆ. ...ಷ್ಟಕಾಲದಲ್ಲಿ ಮಹತ್ವಾದ ಭಾರವು ರಾಜಾಜಿ ಹೆಗಲ ಮೇಲೆ ಬಿತ್ತು. ಆದರೆ ಅವ... ಭುಜಗಳು ಕೂಡಾ ಆ ಭಾರ ಹೊರಲ... ಗುವಷ್ಟು ವಿಶಾಲವಿವೆ"-ಮದ್ರಾಸಿನ ... ಧಾನಿ ಶ್ರೀ ಓಮಂದೂರು.

ಮದ್ರಾಸಿನ ಸರ್. ಮುತ್ತಯ ಚೆಟ್ಟಿ... ಯಾರ್, ಸರ್ ಮಹಮ್ಮದ್ ಉಸ್ಮಾನ್, ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಶ್ರೀ ಕಾಮರಾಜ ನಾಡರ್, ಡಾ. ಸುಬ್ಬ... ರಾಯನ್ ಮುಂತಾದ ವಿವಿಧ ಪಕ್ಷ... ಪ್ರಮುಖರೂ ಬ್ರಿಟಿಷ್ ಪ್ರಧಾನಿ ಅಟ್ಲೀ... ಕಾಯಿದೆ ಆಝಾಮ್ ಜಿನ್ನಾರಂಥವ... ವಿದೇಶಗಳ ಪತ್ರಿಕೆಗಳು ಮತ್ತು ಮುಖ್ಯ... ಗಳೂ ರಾಜಾಜಿ ನೇಮಕದ ಕುರಿ... ಆನಂದ ಪ್ರದರ್ಶಿಸಿದ್ದಾರೆ.

ಅತ್ಯಂತ ಉಪಯುಕ್ತ ಪುಸ್ತಕ
ವ್ಯವಹಾರ ಜ್ಞಾನದರ್ಪಣ
ಶ್ರೀ. ಯು. ಜಿ. ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ
ಲೋಕ ವ್ಯವಹಾರ ಬೋಧಿನಿ
ಬೆಲೆ ರೂ 1—8—0 ಮಾತ್ರ
ಪ್ರತಿಗಳು ಸಿಗುವ ಸ್ಥಳಗಳು:-(1)ಸ್ಕೂಲ್ ಬುಕ್ ಕಂಪೆನಿ, ಮಂಗಳೂರು;(2)ಎಂ. ಎಸ್. ಪಾಯ್ಸ್, ಪುತ್ತೂರು; (3) ನವಭಾರತ ಬುಕ್ ಡಿಪೋ, ಉಡುಪಿ; (4) ಪಾವಂಜೆ ಗುರುರಾವ್, ಉಡುಪಿ; (5) ಯು. ಆರ್. ಶೆಣೈ & ಸನ್ಸ್, ಮಂಗಳೂರು.

ರಾಜಕೀಯ ಪದಾರ್ಥ!

ಚರ್ಚಿಲ್ಲರ 'ಯುರೋಪು ಏಕೀಕರಣ'

ಕಳೆದ ವಾರ ಹೇಗ್ಯೂನಲ್ಲಿ ಸೇರಿದ ಯುರೋಪಿನ ಹದಿನಾರು ರಾಷ್ಟ್ರಗಳ ಕಾಂಗ್ರೆಸಿನಲ್ಲಿ ಭಾಷಣವೀಯುತ್ತಾ ಬ್ರಿಟನಿನ ಯುದ್ಧನಾಯಕ ಮಿ. ಚರ್ಚಿಲ್ಲರೆಂದರು: "ನಾವಿಲ್ಲಿ ಯುರೋಪು ರಾಷ್ಟ್ರಗಳ . ಏಕಸ್ವರವನ್ನೊಮ್ಮೆ ಎಬ್ಬಿಸಿ ಬಿಟ್ಟರೆ ಸಾಲದು. ಆ ಸ್ವರವು ಜಗತ್ತಿನ ಎಲ್ಲಾ ಸ್ವತಂತ್ರ ರಾಷ್ಟ್ರಗಳಿಗೂ ಅಂಗೀಕಾರಾರ್ಹವಾಗುವಂತೆ ಮತ್ತು ಎಡೆಬಿಡದೆ ಕೇಳಬರುವಂತೆ ಒಂದಲ್ಲೊಂದು ರೀತಿಯ 'ಯುರೋಪಿಯನ್ ಎಸೆಂಬ್ಲಿ'ಯೊಂದರ ಸ್ಥಾಪನೆಯ ನಿರ್ಧಾರವನ್ನು ಇಲ್ಲಿಯೇ ಈಗಲೇ ಮಾಡಬೇಕು. ಅರಾಜಕತೆಯ ವಿರುದ್ಧವಾದ ಗಂಡುಗಲಿತನವು ಈ ಮೂಲಕ ರೂಪುಗೊಂಡು ಕೊನೆಗದು ಲೋಕಮಾನ್ಯವಾಗಬೇಕು"

ಕಳೆದ ಯುದ್ಧದಂತೆ ಮುಂದಿನ ರಶ್ಯದ ಯುದ್ಧದಲ್ಲೂ ಏಕಾಕಿಯಾಗಿ ಕೆಲಕಾಲದ ವರೆಗಾದರೂ ಹೋರಾಡಲು ಇಂಗ್ಲೆಂಡಿಗೆಷ್ಟಕ್ಕೂ ಅಸಾಧ್ಯವಾದ್ದರಿಂದ ಯುರೋಪಿನ ಎಲ್ಲಾ ರಾಷ್ಟ್ರಗಳೂ ಅದರ ಸುತ್ತಮುತ್ತ ಪಹರೆಗೆ ನಿಲ್ಲಬೇಕೆಂಬುದೇ ಇದರ ಅರ್ಥ.

ಜಿನ್ನರ ಸ್ನೇಹ ಯೋಜನೆ

ಶ್ರೀ ಸಿ. ರಾಜಗೋಪಾಲಾಚಾರ್ಯರು ಭಾರತದ ಗವರ್ನರ್ ಜನರಲರಾಗಿ ನೇಮಕಗೊಂಡುದಕ್ಕೆ ಅವರನ್ನು ಅಭಿನಂದಿಸುತ್ತಾ ಪಾಕಿಸ್ತಾನದ ಗವರ್ನರ್ ಜನರಲ್ ಕಾಯಿದೇ ಅಝಾಮ್ ಜಿನ್ನರು ಬಿಟ್ಟ ತಂತಿ: 'ಭಾರತ ವಸಾಹತಿನ ಗವರ್ನರ್ ಜನರಲ್ ಆಗಿ ನೇಮಕಗೊಂಡ ತಮಗೆ ನನ್ನ ಹೃತ್ಪೂರ್ವಕ ಅಭಿವಂದನೆಗಳು. ತಮ್ಮ ನಿರ್ದೇಶಕತ್ವದಲ್ಲೇ ಎರಡು ವಸಾಹತುಗಳೊಳಗೆ ನಿಜವಾದ ಮೈತ್ರಿ ಸ್ಥಾಪನೆಯಾಗುವದೆಂದು ಆಶಿಸುತ್ತೇನೆ. ಅದರ ಆವಶ್ಯಕತೆಯು ಪಾಕಿಸ್ತಾನಕ್ಕಿಂತ ಭಾರತಕ್ಕೇನೂ ಕಡಿಮೆಯಿಲ್ಲ."

ಈಗ ಪಾಕಿಸ್ತಾನವು ಕೇಳಿದ್ದನ್ನೆಲ್ಲಾ ಭಾರತವು ಕೊಡದಿರುವುದರಿಂದಾಗಿಯೇ ಇವೆರಡು ವಸಾಹತುಗಳೊಳಗೆ ಯಥಾರ್ಥ ಮೈತ್ರಿ ಸ್ಥಾಪನೆಯಾಗಲಿಲ್ಲವಾದ್ದರಿಂದ, ಹಿಂದೊಮ್ಮೆ 'ಮುಸ್ಲಿಂ ಲೀಗ್ ಕೇಳುವಂತೆ ವಿಭಜನೆಗೊಪ್ಪಬೇಕು" ಎಂದು ಛಲ ಹಿಡಿದಿದ್ದ ರಾಜಾಜೀ ಮುಂದಕ್ಕೂ ಹಾಗೆಯೇ ಮುಷ್ಕರ ಹಿಡಿದು ತನ್ನ ಕೆಲಸ ಮಾಡಿಕೊಡಬೇಕೆಂದೇ ಇಲ್ಲಿ ಮಿ. ಜಿನ್ನರ ಅಂತರ್ಯ!

ರಾಜಾಜಿಯ 'ಸ್ನೇಹ ದಾನ'

ಮಿ. ಜಿನ್ನರಿಗೆ ಉತ್ತರವಾಗಿ ರಾಜಾಜಿ ಕೊಟ್ಟ ತಂತಿ: "ತಮ್ಮ ಸಂದೇಶಕ್ಕಾಗಿ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳು. ಭಾರತ ಮತ್ತು ಪಾಕಿಸ್ತಾನಗಳೊಳಗೆ ಅತ್ಯುನ್ನತ ಮೈತ್ರಿ ಮತ್ತು ಪರಸ್ಪರ ಸಹಕಾರವಿರುವದು ಅಗತ್ಯವೆಂಬ ಕುರಿತು ನನ್ನಲ್ಲಿ ಅನುಮಾನವೇ ಇಲ್ಲ. ಇಷ್ಟೊಂದು ಸ್ಪಷ್ಟವಾಣಿಗಳಿಂದ ತಾವದನ್ನು ಎತ್ತಿ ಹಿಡಿದುದಕ್ಕಾಗಿ ನನಗಾನಂದವಾಗುತ್ತದೆ. ಪರಸ್ಪರ ನಂಬಿಕೆ ಮತ್ತು ಸಹಕಾರದಿಂದಲೇ ಯಥಾರ್ಥ ಒಮ್ಮತ ಹುಟ್ಟಿಕೊಳ್ಳುವುದು. ಭಾರತ ಮತ್ತು ಪಾಕಿಸ್ತಾನ ಎರಡಕ್ಕೂ ಒಂದಕ್ಕಿನ್ನೊಂದರ ಪೂರ್ಣ ಆವಶ್ಯಕತೆಯಿದೆ. ತಮ್ಮ ಸಂದೇಶದಿಂದ ನನ್ನ ಹೃದಯ ಉಬ್ಬಿತು!"

ಯಾವಾಗಲೂ 'ಅಡ್ಡ ಸವಾಲು'ಗಳನ್ನು ಛಡಾಯಿಸುವ ಮನೋವೃತ್ತಿಯನ್ನೇ ಪ್ರದರ್ಶಿಸುತ್ತಾ ಬಂದಿರುವ ನಿಮಗೆ ಈಗಲಾದರೂ ಯಥಾರ್ಥ ಮೈತ್ರಿಯ ಅಗತ್ಯ ಕಂಡುಬಂತೇ ಎಂದಿಲ್ಲಿ ಮಿ. ಜಿನ್ನರನ್ನು ರಾಜಾಜೀ ಹಂಗಿಸಿ, ಸ್ವಾಗತಿಸಿದ್ದಾರೆ!

ಸರ್. ಝಫರುಲ್ಲಾರ ದೂರು

ಇನ್ನೂ ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳ ವಿಚಾರಣೆಯಲ್ಲಿರುವ ಜಾಗತಿಕ ಸಂಘದ ಭದ್ರತಾ ಕೌನ್ಸಿಲಿನ ಮುಂದೆ ಪಾಕಿಸ್ತಾನದ ರಾಯಭಾರಿ ಸರ್. ಮಹಮ್ಮದ್ ಝಫರುಲ್ಲಾರು ಮೇ. ತಾ. 7ರಲ್ಲಿ ಪುನಃ ಹೇಳಿದರು: "ಕಾಶ್ಮೀರದ ವಿನಹ ಮತ್ತೆ ಮೂರು ಪ್ರಶ್ನೆಗಳುಳಿದಿವೆ ಜುನಾಗಾಢ್, ಮಾನವದಾರ್ ಮತ್ತು ಮಂಗ್ರೋಲ್ ಸಂಸ್ಥಾನಗಳು ಯಾವ ಕಡೆ ಸೇರಬೇಕೆಂಬುದೊಂದು; ಪೂರ್ವ ಪಂಜಾಬ್ ಮೊದಲಾದ ಕಡೆಗಳಲ್ಲಿ ಮುಸ್ಲಿಮರ ಮೇಲೆ ಹಿಂದೂ ಮತ್ತು ಸಿಖ್ಖರಿಂದ ಆಗುತ್ತಿರುವ ಅತ್ಯಾಚಾರಗಳು ಮತ್ತೊಂದು; ವಿಭಜನೆಯಲ್ಲಿ ಪಾಕಿಸ್ತಾನದ ಪಾಲಿಗೆ ಬಂದಿರುವ ಮಿಲಿಟರಿ ಮತ್ತು ಟೆಲಿಗ್ರಾಫ್ ಸಂಬಂಧದ ಸಾಮಾನು ಸಂಗ್ರಹಗಳನ್ನು ಭಾರತವು ಕೊಡದೆ ಇಟ್ಟುಕೊಂಡಿರುವುದು ಬೇರೊಂದು".

ಒಟ್ಟಿನ ಮೇಲೆ ಒಂದೇ ಒಂದು-ಪಾಕಿಸ್ತಾನವು ಕೇಳಿದ್ದನ್ನೆಲ್ಲಾ ಕೇಳಿದಷ್ಟು ಬೇಗನೇ ಕೊಟ್ಟು ಬಿಡಲು ಭಾರತ ಸರಕಾರದಿಂದ ಆಗದಿರುವುದೊಂದೇ-ಝಫರುಲ್ಲಾರ ದೂರಿನ ನಿಜಾರ್ಥ.

ಶ್ರೀ ವೆಲ್ಲೋಡಿಯವರ ಉತ್ತರ

ಭದ್ರತಾ ಕೌನ್ಸಿಲಿನ ಮುಂದೆ ಸರ್. ಝಫರುಲ್ಲಾರ ಆರೋಪಗಳಿಗೆ ಉತ್ತರವಾಗಿ ಭಾರತದ ಪ್ರತಿನಿಧಿ ಶ್ರೀ ಎಮ್. ಕೆ. ವೆಲ್ಲೋಡಿಯವರೆಂದರು: "ಸರ್. ಝಫರುಲ್ಲಾರ ವಾದಗಳಲ್ಲಿ ಅಸಂಬದ್ಧತೆ, ಅತಿಶಯೋಕ್ತಿ ಮತ್ತು ಅಧಿಕ ಪ್ರಸಂಗಗಳೇ ತುಂಬಿವೆ. ಸೇನೋಪಕರಣ ಸಂಗ್ರಹದ ಪಾಲಿನ ವ್ಯವಸ್ಥೆಯ ಕುರಿತು ಭಾರತ-ಪಾಕಿಸ್ತಾನಗಳೊಳಗೆ ಎಡಬಿಡದೆ ಮಾತುಕತೆ ಸಾಗಿದೆ. ಅದು ಆ ಎರಡು ವಸಾಹತುಗಳೊಳಗಿನ ಮನೆವಾರ್ತೆ ಹೊರತು ಜಾಗತಿಕ ಸಂಘವು ವಿಚಾರಿಸತಕ್ಕಂತಹ ಲೋಕ ಶಾಂತಿಗಪಾಯಕಾರಿ ತುವಾದ ವಿವಾದವೇನೂ ಅಲ್ಲ. ಭಾರತವು ತಾತ್ಕಾಲಿಕ ಪ್ರಯೋಗಗಳಿಗಾಗಿ ಮೂಲ ತತ್ವಗಳನ್ನು ಬಿಡಲಾರದು. ಕಳೆದ 25 ವರುಷಗಳಿಂದ ಮುಸ್ಲಿಂ ಲೀಗ್ ಬೋಧಿಸುತ್ತಾ ಬಂದ ಜಾತಿದ್ವೇಷ ಪ್ರಚಾರಗಳೇ ಜಾತೀಯ ಗಲಭೆಗಳಿಗೆ ಹೆಚ್ಚಿನಂಶ ಕಾರಣವಾದುವು"

'ಡಿಕ್ರಿ' ಕೊಡಬಲ್ಲುದಾದರೂ 'ಅಮಲ್ದಾರಿ' ಹುಕುಂ ಹೊರಡಿಸುವ ಹಕ್ಕಿಲ್ಲದ ಭದ್ರತಾ ಕೌನ್ಸಿಲ್ ನ್ಯಾಯಸ್ಥಾನವೆಂದರೆ ವಾಗ್ವಾಭ್ಯಾಸದ ತಂಬೇಕಿ ಶಾಲೆಯೆಂದೇ ಭಾರತ ಪಾಕಿಸ್ತಾನಗಳ ವಕೀಲರುಗಳು ಭಾವಿಸಿದ್ದಾರೆಂದು ಇಕ್ಕಡೆಯವರ ವಾದಗಳಿಂದ ಅರ್ಥವಾಗುತ್ತಿದೆ.

ಡಾ। ರಾಜನರ ತಕ್ಕಡಿ

ಮದ್ರಾಸಿನ ಆಹಾರ ಮಂತ್ರಿ ಡಾ। ರಾಜನರು ಪತ್ರಿಕಾ ಸಮ್ಮೇಲನವೊಂದರಲ್ಲಿ ಮದ್ರಾಸಿನ ಆಹಾರ ಧಾನ್ಯ ಧಾರಣೆಯನ್ನು ತುಲನೆ ಮಾಡಿ ತೋರಿಸುತ್ತಾ ಹೀಗಂದಿದ್ದಾರೆ: "ನಿಯಂತ್ರಣ ರದ್ದತಿಯಾದೊಡನೆ ಆಹಾರ ಧಾನ್ಯಗಳ ಬೆಲೆ ಒಮ್ಮೆಯೇ ಏರುವದೆಂಬುದನ್ನು ನಿರೀಕ್ಷಿಸಲಾಗಿತ್ತು. ಕೆಲಮಟ್ಟಿಗೆ ಅದು ಸಂಭವಿಸಿದೆ ಆದರೆ ತುಲನಾತ್ಮಕವಾಗಿ ಹೇಳುವದಾದರೆ ಈ ವಿಷಯದಲ್ಲಿ ಮದ್ರಾಸ್ ಪ್ರಾಂತ್ಯದ ಸ್ಥಿತಿ ಮಿಕ್ಕ ಪ್ರಾಂತ್ಯಗಳಿಗಿಂತ ವಾಸಿ. ನಿದರ್ಶನಕ್ಕಾಗಿ ಬೊಂಬಾಯಿಯಲ್ಲಿ ಆಹಾರ ಧಾನ್ಯದ ಬೆಲೆ ಸೇ. 300ರಷ್ಟು ಏರಿರುವಾಗ ಮದ್ರಾಸಿನಲ್ಲಿ ಹೆಚ್ಚೆಂದರೆ ಸೇ. 115ರಷ್ಟೆ ಮಾತ್ರ ಏರಿದೆ, ನೋಕ್ಕೆ ನೂರ ಹದಿನೈದು ಬೆಲೆಯೇರುವುದು ಹೆಚ್ಚೇ ಆದರೂ ಬರಗಾಲ ನಿರ್ಮಿಸುವಷ್ಟು ಅದು ಹೆಚ್ಚಲ್ಲವೆಂಬುದೇ ನನ್ನ ಅಭಿಮತ".

ಮುಡಿಗೆ ರೂ. 10 ನಿಶ್ಚಿತ ಧಾರಣೆಯಿರುವ ಅಕ್ಕಿಗೆ ರೂ. 30ರಿಂದ 40ರ ವರೆಗೆ ಧಾರಣೆಯಿರುವ (ಸೇ. 200 ರಿಂದ 300ರ ವರೆಗಿನ ಹೆಚ್ಚಳ) ದಕ್ಷಿಣಕನ್ನಡಾ ಜಿಲ್ಲೆಯು ಮದ್ರಾಸ್ ಪ್ರಾಂತ್ಯಕ್ಕೆ ಈ ತನಕವಾದರೂ ಸೇರಿಕೊಂಡಿಲ್ಲವೇ, ಎಂದು ಇಲ್ಲಿಯವರು ಡಾ। ರಾಜನರ ಮಾತಿಗೆ ಅರ್ಥ ಕೇಳುತಿದ್ದಾರೆ.

ಪಾಕಿಸ್ತಾನದ ಆಕ್ಷೇಪ

ಕಾಶ್ಮೀರದ ಸಂಬಂಧವಾಗಿ ಭದ್ರತಾ ಕೌನ್ಸಿಲು ಮಾಡಿದ ನಿರ್ಧಾರಕ್ಕೆ ಪಾಕಿಸ್ತಾನದ ಆಕ್ಷೇಪವನ್ನು ಜಾಹೀರು ಮಾಡುತ್ತಾ ಪ್ರಧಾನಿ ಮಿ. ಲಿಯಾಖತ್ ಅಲಿ ಖಾನರು ಕಾರಣ ಕೊಟ್ಟಿದ್ದಾರೆ. 'ಭಾರತದ ಅತಿ ದೊಡ್ಡ ಸೇನೆಯು ಕಾಶ್ಮೀರದಲ್ಲಿರುವುದರಿಂದ ಅದು ಅಲ್ಲಿಂದ ಸೇನೆಗಳನ್ನು ಕ್ರಮಶಃ ಹಿಂದೆಗೆದುಕೊಳ್ಳುವುದೆಂದರೆ ಇನ್ನೂ ದೀರ್ಘಾವಧಿ ಆದರ ಸೇನೆಗಳು ಅಲ್ಲಿಯೇ ಇರುವಂತಾಗುತ್ತದೆ. ಪಾಕಿಸ್ತಾನದ ಸೇನೆಗಳನ್ನು ಉಪಯೋಗಿಸುವ ಅವಕಾಶ ಕೊಟ್ಟಿಲ್ಲವಾದ್ದರಿಂದಲೂ ಪ್ರತಿಯೊಬ್ಬ ಪಾಕಿಸ್ತಾನಿಗೂ ಗುಡ್ಡಗಾಡು ಜನರ ಮೇಲೆ ಹಾರ್ದಿಕ ಸಹಾನುಭೂತಿಯಿರುವುದರಿಂದಲೂ ಆ ಗುಡ್ಡಗಾಡುಗಳವರನ್ನು ತಡೆಗಟ್ಟುವುದು ಪಾಕಿಸ್ತಾನಕ್ಕಸಾಧ್ಯ. ಕಾಶ್ಮೀರಿಗಳೇ ಅಧಿಕ ಸಂಖ್ಯೆಯಲ್ಲಿದ್ದು ಅಲ್ಲಿಗೆ ನುಗ್ಗಿರುವ ಗುಡ್ಡಗಾಡುಗಳವರು ಅಲ್ಪ ಸಂಖ್ಯಾಕರಾದುದರಿಂದಲೂ, ಅವರ ವರ್ತನೆ ತಪ್ಪೆಂದು ಸ್ವತಃ ಪಾಕಿಸ್ತಾನಕ್ಕೇನೇ ತೋರದಿರುವುದರಿಂದಲೂ ಅವರಿಗಂತಹ ಬೋಧನೆ ಕೊಡಲು ಪಾಕಿಸ್ತಾನಕ್ಕೆ ಸಾಧ್ಯವಿಲ್ಲ."

ಅರ್ಥಾತ್ ಕಾಶ್ಮೀರದಲ್ಲಿ ತಮ್ಮ ಪೂರ್ಣ ವಿಜಯ ಅಥವಾ ಕೊನೆಯವರೆಗೂ ಕಾಳಗ ಹೊರತು ಪಾಕಿಸ್ತಾನಕ್ಕೆ ಬೇರೇನೂ ಬೇಕಾಗಿಲ್ಲ.

ರಕ್ಷಣಾ ಮಂತ್ರಿಯ ಆಶ್ವಾಸನೆ

ಭಾರತದ ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗರು ಪೂನೆಯಲ್ಲಿ ಭಾಷಣವೀಯುತ್ತಾ ಹೇಳಿದರು: "ಜಾಗತಿಕ ಸಂಘವೇನೇ ಹೇಳಿದರೂ ಭಾರತ ಸರಕಾರದ ಕಾಶ್ಮೀರ ಘೋಷಣೆ ಸುಸ್ಪಷ್ಟವಾಗಿದೆ, ಸುದೃಢವಾಗಿದೆ. ಕೊನೆಯ ಧಾಳಿಗಾರನ ನ್ನಟ್ಟುವ ವರೆಗೂ ಹಿಂದೀ ಸೇನೆಗಳು ಅಲ್ಲಿಂದ ಕಾಲು ಕೀಳುವಂತಿಲ್ಲ. ನಾವು ಯಾರನ್ನಾದರೂ ಹೆದರಿಸುವುದಕ್ಕಾಗಲೀ ಯಾರಿಗಾದರೂ ಹೆದರುವುದಕ್ಕಾಗಲೀ ತಯಾರಿಲ್ಲ. ಹೈದರಾಬಾದನ್ನು ಈ ದಿನ ಆಳುತ್ತಿರುವವನಾರು, ನಿಜಾಮರೋ, ರಝ್ವಿಯ ರಾಜ್ಯವೋ ಎಂಬುದನ್ನರಿಯುವುದು ಕಷ್ಟ. ಹೈದರಾಬಾದಿನೊಳಗೆ ನುಗ್ಗುವ ಅಥವಾ ನಿಜಾಮರ ಮೇಲೆ ಒತ್ತಾಯ ಹಾಕಿ ಎಳೆದುಕೊಳ್ಳುವ ಬಯಕೆ ನಮ್ಮದಲ್ಲ. ನಿಜಾಮರು ತನ್ನ ಪ್ರಜೆಗಳಿಗೆ ನ್ಯಾಯದಾನ ಮಾಡಬೇಕು; ಸ್ವತಂತ್ರ ಭಾರತವು ತನ್ನ ಗಡಿಯಲ್ಲಾಗುವ ಅಕ್ರಮಗಳ ಕಡೆಗೆ ದೀರ್ಘ ಕಾಲ ಮೌನವಾಗಿರಲಾರದಾದ್ದರಿಂದ ಗಡಿಯಲ್ಲಿ ಗಲಭೆ ನಿರ್ಮಿಸಬಾರದು".

ಭಾರತ ಸರಕಾರದಲ್ಲಿ ನ್ಯಾಯ ಮತ್ತು ಶಕ್ತಿ ಎರಡೂ ಇವೆಯೆಂದೂ, ಎಲ್ಲಾ ಸಂದರ್ಭಗಳಲ್ಲೂ ಮೊದಲನೆಯದನ್ನು, ಅನಿವಾರ್ಯವಾದರೆ ಎರಡನೆಯದನ್ನು ಪ್ರಯೋಗಿಸಲು ಅದು ತಯಾರಿದೆಯೆಂದೂ ಸರ್ದಾರರ ಮಾತಿನ ಅರ್ಥ.

The 1946 Record Business proves the popularity
THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 bout **54 Lakhs**

Our experience of 37 years available to you for arranging Insurance investment It therefore pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India.
Bombay Life Building,
Central Office, Udipi

Branches at:
Mangalore, Calicut, Trivandrum, Madura, Madras, Bangalore & Bombay,

ಪ್ರಾಪಂಚಿಕ ರಾಜಕೀಯ ರಥ ಢಿಕ್ಕಿ ಹೊಡೆಯಲಿದೆಯೆ?

ಪೆಲಸ್ಟೈನ್–ಕೊರಿಯಾ–ಕಾಶ್ಮೀರ–ಹೈದರಾಬಾದ್ ಸಮಸ್ಯೆಗಳು.

ಕಳೆದ ವಾರದ ಪ್ರಾಪಂಚಿಕ ವಿದ್ಯಮಾನಗಳಲ್ಲಿ ಯಥಾಸ್ಥಿತಿಯೇ ಕಂಡುಬಂದಿದೆ. ಮುಖ್ಯವಾಗಿ, ಹಾಗೂ ಪ್ರಾಪಂಚಿಕ ರಾಜಕೀಯದ ಒಳತಿರುಳಾಗಿ ಅಮೇರಿಕಾ–ರಶ್ಯಾ ಪಕ್ಷಗಳೊಳಗಿನ ಮೇಲಾಟವಿದ್ದರೆ, ಪ್ರತ್ಯಕ್ಷ ರಂಗದಲ್ಲಿ ಸಶಸ್ತ್ರ ಹಾಗೂ ಚುನಾವಣಾ ಸಮರಗಳು–ಪರಸ್ಪರ ದೋಷಾರೋಪಣೆಗಳು-ತಂತಮ್ಮ ಕೈಯನ್ನು ಬಲಗೊಳಿಸುವುದಕ್ಕಾಗಿ ಉಚ್ಚ ಧ್ಯೇಯದ ಪರದೆಯೊಳಗೆ ಹೂಡುತ್ತಿರುವ ಹಂಚಿಕೆಗಳು–ಇತ್ಯಾದಿಗಳು ಕಾಣಿಸುತ್ತಿವೆ.

ಇನ್ನೊಂದು ಮಹಾಯುದ್ಧದ ಮಾತು ಬೆಳೆದು ಬಂದುದು ಹೆಚ್ಚಾಯಿತೆಂದು ಮುಂಗಂಡ ಕೆಲವು ಮುತ್ಸದ್ದಿಗಳು 'ಯಾರಿಗೂ ಯುದ್ಧ ಬೇಕಾಗಿಲ್ಲ, ಯುದ್ಧವಾಗುವಂತಿಲ್ಲ' ಎಂದು ಸ್ವರ ಹೊರಡಿಸಹತ್ತಿರುವದೇನೋ ಅಲ್ಲಲ್ಲಿಂದ ಕೇಳಿ ಬರುತ್ತಿದೆ. ಆದರೆ ಸ್ಥಿತಿಗತಿಗಳು ಹಾಗೂ ಮುಖ್ಯ ರಾಷ್ಟ್ರಗಳ ಸೂತ್ರಧಾರಿಗಳ ಧೋರಣೆಗಳು ಇನ್ನೊಂದು ಅಗ್ನಿ ಪರೀಕ್ಷೆ ಕೊಟ್ಟು ವಿಜಯಿಗಳಾಗಬೇಕೆಂಬ ಗುರಿಯ ಕಡೆಗೇನೇ ಸಾಗುತ್ತಿವೆ.

ಭಾರತದ ವಿದ್ಯಮಾನಗಳೂ ಹಿಂದಿನವೇ; ಹೆಚ್ಚೆಂದರೆ ಇದುವರೆಗೆ ಒಂದು ವಿಧದ ಸಾವಧಾನತೆ ಮತ್ತು ಸಂದೇಹವು ತೋರಿಬರುತ್ತಿದ್ದ ಕಾಶ್ಮೀರ, ಹೈದರಾಬಾದುಗಳ ಕಡೆಗಿನ ಹಿಂದೀ ಧೋರಣೆಯಲ್ಲಿ ಈಗ ಸ್ಪಷ್ಟತೆ, ದೃಢತೆ ಮತ್ತು ಕ್ಷಿಪ್ರತೆ ಕಾಣಿಸುತ್ತಿದೆ

ಜಾಗತಿಕ ಸಮಸ್ಯೆ

ಕ್ರಮಬದ್ಧ ಯುದ್ಧಕ್ಕೆ ಭರದಿಂದ ತಯಾರಾಗುತ್ತಾ, ಈಗಲೂ ಹೋರಾಡಿಕೊಂಡೇ ಇರುವ ಪೆಲಸ್ಟೈನಿನ ಅರಬ್ಬರು ಹಾಗೂ ಯಹೂದಿಗಳ ಸಮರ ಕಾರ್ಯಗಳು ನಿರಾತಂಕವಾಗಿ ಹಾಗೂ ರಭಸದಿಂದ ಸಾಗಿವೆ. ಸಿರಿಯಾ ಮತ್ತು ಟ್ರಾನ್ಸ್‌ಜೋರ್ಡನ್ ರಾಷ್ಟ್ರಗಳ ಅರಬೀ ಸೇನೆಗಳ ಚಲನವಲನಗಳು ಪೆಲಸ್ಟೈನಿನೊಳಗೆ ಇಷ್ಟರಲ್ಲೇ ಆರಂಭಿಸಿದಂತಿದೆಯಾದರೂ, ಅಲ್ಲಿ ಈ ತನಕ ಅಧಿಕಾರ ಸೂಣೆ ನಿರ್ವಹಿಸುತ್ತಿರುವ ಬ್ರಿಟನು ನಿಜವಾದ ಯುದ್ಧವು ರೂಪುಗೊಳ್ಳದಂತೆ ತಡೆಯಾಗಿದೆ. ಈ ತನಕ ಯಹೂದಿಗಳೇ ಪೆಲಸ್ಟೈನಿನಲ್ಲಿ ಸಂಪೂರ್ಣ ಮೇಲ್ಮೈಯವರಾಗಿದ್ದು ಇದೇ ಮೇ ತಾ. 15ರಲ್ಲಿ ಬ್ರಿಟಿಷ್ ಮೇಲಧಿಕಾರ ಮುಕ್ತಾಯವಾದ ಮರುದಿನ ಮೇ ತಾ. 16ರಲ್ಲೇ ಪೆಲಸ್ಟೈನಿನಲ್ಲಿ ಸ್ವತಂತ್ರ ಯಹೂದೀ ರಾಷ್ಟ್ರ ಸ್ಥಾಪನೆಯ ಘೋಷಣೆ ಹೊರಡಿಸಲು ನಡುಬಿಗಿದಿದ್ದಾರೆ. ಯಹೂದಿ ಸರಕಾರದ ಯಂತ್ರ ರಚನೆ ಇಷ್ಟರಲ್ಲೇ ಆಗಿ ಅಧಿಕೃತ ಸ್ಥಾಪನಾ ಮುಹೂರ್ತವನ್ನು ಮಾತ್ರ ಕಾಯುತ್ತಿರುವಂತೆ ಕಾಣುತ್ತಿದೆ. ಪೆಲಸ್ಟೈನಿನ ಮೇಲಧಿಕಾರವನ್ನು ಈಗಲೇ ಬಿಟ್ಟುಕೊಡಬಾರದೆಂಬ ಅಮೇರಿಕವೇ ಮೊದಲಾದ ಭದ್ರತಾ ಕೌನ್ಸಿಲಿನ ರಾಷ್ಟ್ರಗಳ ಬೇಡಿಕೆಗೆ ಬ್ರಿಟನು ಕಿವಿಗೊಟ್ಟಿಲ್ಲ. ಆದರೂ ಮೇ 15ರಲ್ಲಾರಂಭಿಸಿದ ಅಧಿಕಾರ ಬರ್ಖಾಸ್ತು ಕಾರ್ಯವನ್ನು ಬ್ರಿಟನು ಸಾವಧಾನದಿಂದ ನಿರ್ವಹಿಸಬಹುದೆಂಬ ಲಕ್ಷಣಗಳು ಈಗೀಗ ಕಾಣಿಸುತ್ತಿವೆ. ಈ ಮೊದಲೇ ಪೆಲಸ್ಟೈನಿನಲ್ಲಿ ಒಂದು ತಾಟಸ್ಥ್ಯಾಧಿಕಾರವನ್ನು ಸ್ಥಾಪಿಸಬೇಕೆಂದು ಭದ್ರತಾ ಕೌನ್ಸಿಲು ನೇಮಿಸಿರುವ ಉಪ ಸಮಿತಿಯು ಶತ ಪ್ರಯತ್ನ ಮಾಡುತ್ತಿದೆ. ಅರಬರಿಗೂ ಯಹೂದಿಗಳಿಗೂ ಪವಿತ್ರ ನಗರವಾದ ಜೆರುಸಲೇಮಿನ ಮಟ್ಟಿಗೆ ಯುದ್ಧ ನಿವಾರಕ ಒಪ್ಪಂದವನ್ನು ಇಕ್ಕಡೆಯವರೊಳಗೂ ಮಾಡಿಸಲು ಬ್ರಿಟಿಷ್ ಹೈಕಮಿಶನರರಿಗೆ ಸಾಧ್ಯವಾಗಿದೆಯೆಂದೂ ಇದೇ ತಾ. 8ರಲ್ಲಿ ಅಲ್ಲಿ ಗುಂಡು ಹಾರಾಟವು ನಿಂತಿದೆಯೆಂದೂ ತಿಳಿದು ಬರುತ್ತದೆ

ಕೊರಿಯಾ ದ್ವೀಪದಲ್ಲೀಗ ಪ್ರತಿನಿಧಿ ಎಸೆಂಬ್ಲಿಯ ಚುನಾವಣೆಯಾರಂಭವಾಗಿದ್ದು ಅಮೇರಿಕೆ ಮತ್ತು ರಶ್ಯಗಳಿಗೆ ಇಟಲಿಯ ಚುನಾವಣೆಯಲ್ಲಿದ್ದಂತಹ ಆಸಕ್ತಿಯೇ ಇಲ್ಲಿಯೂ ಇರುವಂತಿದೆ. ದಕ್ಷಿಣ ಕೊರಿಯವು ಅಮೇರಿಕದ ವಶದಲ್ಲಿಯೂ ಉತ್ತರ ಕೊರಿಯವು ರಶ್ಯದ ವಶದಲ್ಲಿಯೂ ಇದೆ. ಅಮೇರಿಕದ ಪಾಲಿನ ಕೊರಿಯದಲ್ಲಿ ಚುನಾವಣಾ ಸಂಬಂಧದ ಹೋರಾಟಗಳಾಗಿ, ಒಂದೆಡೆಯ ತಿಕ್ಕಾಟದಲ್ಲಿ 16 ಮಂದಿ ಮಡಿದ ಸುದ್ದಿಯಿದೆ. ಕಳೆದ ಮೂರು ತಿಂಗಳುಗಳಲ್ಲಿ ಚುನಾವಣಾ ಸಂಬಂಧವಾಗಿಯೇ ಪೋಲೀಸರ ಮೇಲೆ 500 ಧಾಳಿಗಳಾದುವೆಂದೂ ಸುಮಾರು 400 ಮಂದಿ ಮಡಿದರೆಂದೂ 939 ಉಮೇದ್ವಾರಿಗಳ ಪೈಕಿ 5 ಮಂದಿ ಉಮೇದ್ವಾರಿಗಳು ಸತ್ತರೆಂದೂ ತಿಳಿದು ಬರುತ್ತದೆ. ರಶ್ಯವೀಗ ಕೊರಿಯಾದಲ್ಲಿರುವ ತನ್ನ ಸೇನೆಗಳನ್ನು ಕೂಡಲೇ ಹಿಂದೆಗೆದುಕೊಳ್ಳುವ ನಿರ್ಧಾರ ಮಾಡಿದ್ದು ಇದನ್ನನುಸರಿಸಿ ಅಮೇರಿಕವೂ ಅಲ್ಲಿಂದ ತನ್ನ ಸೇನೆಗಳನ್ನು ಹಿಂದೆಗೆಯುವದೆಂದು ನಿರೀಕ್ಷಿಸುತ್ತಿದೆ.

ಹೇಗ್ಯುನಲ್ಲಿ ಸೇರಿದ ಯುರೋಪಿಯನ್ ರಾಷ್ಟ್ರಗಳ ಕಾಂಗ್ರೆಸು ಯುರೋಪು ರಾಷ್ಟ್ರಗಳ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಏಕೀಕರಣ ಕೇಂದ್ರ ಮಂಡಲಿಯೊಂದನ್ನು ರಚಿಸುವ ವಿಶೇಷ ಸನ್ನಾಹ ಮಾಡುತ್ತಿದೆ. ಇದೂ ರಶ್ಯದ ವಿರುದ್ಧ ನಿರ್ಮಾಣಗೊಳ್ಳುತ್ತಿರುವ ಸಂಚು ಕೂಟಗಳಲ್ಲೊಂದು.

ಅಮೇರಿಕದಲ್ಲಿ ಮುಂದಿನ ಅಧ್ಯಕ್ಷ ಚುನಾವಣೆಯ ಗಾಳಿ ಬೀಸಹತ್ತಿ ಅಲ್ಲಿಯ ವಾತಾವರಣವು ಹೊಸ ರೂಪುಗೊಳ್ಳುತ್ತಿದೆ. ಈ ಚುನಾವಣಾ ಗದ್ದಲಗಳಿಂದ ಅಮೇರಿಕದ ವಿದೇಶ ಧೋರಣೆಗೆ ಬಾಧೆ ತಟ್ಟೀತೆಂದು ಅಧ್ಯಕ್ಷ ಟ್ರುಮನ್ನರು ತನ್ನ ಜನತೆಗೆ ಎಚ್ಚರಿಕೆ ಕೊಟ್ಟಿದ್ದಾರೆ ಅಮೇರಿಕದ ವಿಮಾನ ಬಲವನ್ನು ಹೆಚ್ಚಿಸಲು ಅಧ್ಯಕ್ಷರ ಪರವಾನಗಿ ದೊರೆತಿದೆ.

ಚೈನಾದಲ್ಲಿ ಸರಕಾರ ಮತ್ತು ಕಮ್ಯೂನಿಸ್ಟರ ಕಾಳಗವು ತೀವ್ರ ಗತಿಯಿಂದ ಸಾಗಿದೆ. ಚೀನೀ ಸರಕಾರದ ಆರ್ಥಿಕ ಸ್ಥಿತಿಯು ಬಹುತೇಕವಾಗಿ ದಿವಾಳಿಯಾಗಿದ್ದು, ಈ ದುಸ್ಥಿತಿಯು ಅದಕ್ಕೆ ಸಹಾಯ ಕೊಡುತ್ತಾ ಬಂದಿರುವ ಅಮೇರಿಕದ ಮತ್ತು ಬ್ರಿಟನುಗಳಿಗೆ ತಲೆಶೂಲೆ ನಿರ್ಮಿಸಿದೆ. ಇತ್ತ ಗ್ರೀಸಿನಲ್ಲಿಯೂ ಮಂತ್ರಿಮಂಡಲದ ಬಿಕ್ಕಟ್ಟಿದ್ದು ಆ ಮೂಲಕ ಅಮೇರಿಕದ ಹೃದಯಕದಡುವ ಮತ್ತೊಂದು ಸಂಗತಿ ಸಂಭವಿಸಿದೆ.

ಕಳೆದ ಜುಲಾಯಿಯಲ್ಲಿ ಬರ್ಮದ ಅತಿ ಸಮರ್ಥ ಪ್ರಧಾನ ಮಂತ್ರಿ ಮತ್ತು ನಾಯಕನಾಗಿದ್ದಯು ಆಂಗ್‌ಸೇನ್ ಮತ್ತು ಇತರ ಆರು ಮಂದಿ ಮಂತ್ರಿಗಳನ್ನು ಕೊಲೆ ಮಾಡಿದ್ದ ಸಂಬಂಧವಾಗಿ ಹಿಂದಿನ ಪ್ರಧಾನ ಮಂತ್ರಿ ಯು. ಸಾರನ್ನು ಬರ್ಮದ ಇನ್ಸೀನ್ ಜೈಲಿನೊಳಗೆ ತಾ. 8ನೇ ಮುಂಜಾನೆ 5-30 ಘಂಟೆಗೆ ಗಲ್ಲಿಗೇರಿಸಿದ್ದಾರೆ. ಅವರ ಪತ್ನಿಗೆ ಗಂಡನ ಕೊನೆಯ ಸಂದರ್ಶನ ದೊರೆತಿದ್ದಿತು; ಆ ದಿನವಿಡೀ ಯು. ಸಾರ ವಿಧವೆ ತನ್ನ ಗೃಹದಲ್ಲಿ ಏಕಾಂತವಾಸಲದಲ್ಲಿದ್ದು ಯಾರಿಗೂ ಭೇಟಿ ಕೊಟ್ಟಿರಲಿಲ್ಲ. ಯು. ಸಾರೊಂದಿಗೆ ಫಾಶೀ ಶಿಕ್ಷೆಗೊಳಗಾಗಿದ್ದ ಇತರ ಐದು ಮಂದಿ ಆರೋಪಿಗಳೂ ಅದೇ ದಿನ ಗಲ್ಲಿಗೇರಿಸಲ್ಪಟ್ಟಿದ್ದಾರೆ. ಮಿಕ್ಕ ನಾಯಕರನ್ನೆಲ್ಲಾ ಬರ್ಮಾ ಸರಕಾರವು ಬಿಡುಗಡೆಮಾಡಿದೆಯಲ್ಲದೆ, ಬಾಕಿಯಿರುವ ವಿಚಾರಣೆಗಳನ್ನು ಹಿಂದೆಗೆದುಕೊಳ್ಳುವ ಯೋಚನೆಯಲ್ಲಿದೆ.

ಭಾರತ-ಪಾಕಿಸ್ತಾನ

ಕಾಶ್ಮೀರದ ವಿವಾದ ಸಂಬಂಧವಾಗಿ ಭದ್ರತಾ ಕೌನ್ಸಿಲು ರಚಿಸಿರುವ 'ಪಂಚ ಸದಸ್ಯ ಸಮಿತಿ'ಯ ಐದನೇ ಸದಸ್ಯನಾಗಿ ಅಮೇರಿಕವು ನೇಮಕಗೊಂಡಿದೆ. ಉಳಿದ ಸದಸ್ಯರೆಂದರೆ ಅರ್ಜೆಂಟಿನಾ, ಕೊಲಂಬಿಯಾ, ಬೆಲ್ಜಿಯಮ್ ಮತ್ತು ಝೆಕೊಸ್ಲೋವೇಕಿಯಾ. ಈ ಸಮಿತಿಯು ಕಾಶ್ಮೀರಕ್ಕೆ ಹೊರಡುವ ದಿನವೀ ತನಕ ತಿಳಿದುಬಂದಿಲ್ಲ. ತಾನಾಕ್ಷೇಪ ಸೂಚಿಸಿರುವ ವಿಷಯಗಳನ್ನು ಬಿಟ್ಟು ಉಳಿದ ಕಾರ್ಯಗಳಲ್ಲಿ ಈ ಕಮಿಶನಿನೊಡನೆ ಭಾರತ ಸರಕಾರವು ಅಗತ್ಯವುಳ್ಳ ಎಲ್ಲಾ ರೀತಿಗಳಿಂದಲೂ ಸಹಕರಿಸಲಿದೆ. ಆದರೆ ಪಾಕಿಸ್ತಾನದ ಪ್ರಧಾನಿ ಮಿ. ಲಿಯಾಖತ್ ಅಲಿಗಳ ಹೇಳಿಕೆಯಂತೆ ಪಾಕಿಸ್ತಾನವು ಗುಡ್ಡಗಾಡುಗಳ ಆಕ್ರಮಣಗಾರರನ್ನು ತಡೆಗಟ್ಟಲು ಯಾವ ಕಾರ್ಯವನ್ನೂ ಮಾಡಲಾರದೆಂಬುದೂ ಈ ಸಮಿತಿಗೆ ಯಾವ ಸಹಾಯವನ್ನೂ ಕೊಡಲಾರದೆಂಬುದೂ ಖಚಿತವಾಗಿದೆ. ಈ ಪಂಚವರ ಸಮಿತಿಯಲ್ಲಿ ಸೇರಿಕೊಂಡ ಅಮೇರಿಕದ ವರ್ಚಸ್ಸೇ ಈ ಸಂಬಂಧದ ಎಲ್ಲಾ ಕಾರ್ಯಗಳಲ್ಲೂ ತೋರಿಬರಬಹುದೆಂದು ಊಹಿಸಲಾಗಿದೆ. ಇತ್ತ ಕಾಶ್ಮೀರದ ಕಾಳಗವು ಯಥಾಪ್ರಕಾರ ಸಾಗುತ್ತಿದ್ದು ಹಿಂದೀ ಸೇನೆಗಳು ಕೆಲವು ಗುಡ್ಡಗಾಡು ಪ್ರದೇಶಗಳನ್ನು ಆಕ್ರಮಿಸಿಕೊಂಡಿವೆ. ಕಾಶ್ಮೀರದ ಜನರು ಇದೇ ತಾ ೪ರಿಂದ 'ಸ್ವಾತಂತ್ರ್ಯ ವಾರ'ವನ್ನು ವಿಜೃಂಭಣೆ ಮತ್ತು ಅತ್ಯುತ್ಸಾಹದಿಂದ ಆಚರಿಸುತಿದ್ದಾರೆ. ಕಳೆದ ಹದಿನೇಳು ವರುಷಗಳಿಂದ ಅವಿಶ್ರಾಂತವಾಗಿ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಾ ಬಂದ ಕಾಶ್ಮೀರೀ ಜನತೆಯ ಬಯಕೆಯು ಈಗ ತಾನೇ ಸಿದ್ಧಿಸಿರುವುದರಿಂದ ಅಲ್ಲೆಲ್ಲಾ ಉತ್ಸಾಹಾಮೋದಗಳು ಕಂಡುಬಂದಿವೆ.

ಹೈದರಾಬಾದಿನ ಪ್ರಶ್ನೆಯು ಕುರಿತು ಇನ್ನು ಒಂದೆರಡು ವಾರಗಳೊಳಗೆ ಸ್ಪಷ್ಟ ನಿರ್ಧಾರವಾಗಿಯೇ ತೀರುವುದೆಂದು ಖಚಿತವಾಗಿ ತಿಳಿದುಬಂದಿದೆ. ಹೈದರಾಬಾದಿನಲ್ಲಿ ಭಾರತ ಸರಕಾರದ ಏಜೆಂಟ್ ಜನರಲರಾಗಿರುವ ಶ್ರೀ ಕೆ. ಎಮ್. ಮುನ್ಶಿಗಳು ನವಡಿಲ್ಲಿಗೆ ಬಂದಿದ್ದು ರಕ್ಷಣಾಮಂತ್ರಿ ಸರ್ದಾರ್ ಬಲದೇವಸಿಂಗರೊಂದಿಗೆ ಪರ್ಯಾಲೋಚನೆ ನಡೆಸಿದ್ದಾರಲ್ಲದೆ ಸಂಸ್ಥಾನಿಕ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನರನ್ನು ಕೂಡಿಕೊಂಡು ಮುಸ್ಸೋರಿಯಲ್ಲಿ ವಿಶ್ರಾಂತಿಯನುಭವಿಸುತ್ತಿರುವ ಸರ್ದಾರ್ ಪಟೇಲರ ಭೇಟಿಗೂ

(೭ನೇ ಪುಟ ನೋಡಿರಿ)

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

The Canara Banking Corporation Limited.
Estd: 1906.
(Incorporated in British India)
Head Office: UDIPI, S. India.

SEASON DEPOSITS

for Rs. 5000/- and over are now accepted at all Offices of the Bank at the following rates.—
3 & 4 months — @ 2¼ % p. a.
5 & 6 months — @ 2½ % p. a.

ನವಯುಗ

ಗುರುವಾರ, ಉಡುಪಿ, ೧೩-೫-'೪೮

ಅಕ್ಕಿಯ ಬೆಲೆ

'ಮುಡಿಗೆ ಮುವ್ವತ್ತು ಅಥವಾ ಮೂವತ್ತೆರಡು ಕೊಡುತ್ತೇನೆಂದರೂ ಅಕ್ಕಿ ದೊರೆಯುವದಿಲ್ಲವಲ್ಲಾ'! ಎಂಬುದೇ ದಕ್ಷಿಣ ಕನ್ನಡದಲ್ಲಿ ಕೇಳಬರುತ್ತಿರುವ ರೋದನ. ಆದರೂ ಮದ್ರಾಸಿನ ಆಹಾರ ಮಂತ್ರಿ ಡಾ। ರಾಜನರು ಇತ್ತೀಚೆಗೆ ಕೊಟ್ಟ ಪತ್ರಿಕಾ ಹೇಳಿಕೆಯಲ್ಲಿ ಬಂದ ಕೆಲವು ಅಂಕೆ ಸಂಖ್ಯೆಗಳನ್ನು ಕಾಣುವಾಗ ಆಶ್ಚರ್ಯವಾಗುತ್ತಿದೆ. ಕಳೆದ ಬಾರಿ ಶ್ರೀ ಕಾರಂತರ ನಿಲುವಳಿ ಸೂಚನೆಯ ಮೇಲೆ ನಡೆದ ವಾದಗಳಿಗುತ್ತರ ಕೊಡುತ್ತಾ ಡಾ। ರಾಜನರು ದಕ್ಷಿಣ ಕನ್ನಡದ ಆಹಾರ ಸ್ಥಿತಿಯು ಸರಕಾರದ ಲಕ್ಷ್ಯದಲ್ಲಿದೆ ಎಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಅವರ ಈ ಬಾರಿಯ ಹೇಳಿಕೆಯು ಅದನ್ನು ಸಮರ್ಥಿಸುವಂತಹದಾಗಿಲ್ಲ. ಈ ಜಿಲ್ಲೆಯ ಆಹಾರ ಸ್ಥಿತಿಯು ಸರಕಾರದ ಕಣ್ಣ ಮುಂದಿರುತ್ತಿದ್ದರೆ 'ಮದ್ರಾಸ್ ಪ್ರಾಂತ್ಯದಲ್ಲಿ ನಿಯಂತ್ರಣ ರದ್ದತಿಯಿಂದಾಗಿ ಆಹಾರ ಧಾನ್ಯಗಳ ಬೆಲೆ ಏರಿಕೆಯಾಗುವುದು, ಹೆಚ್ಚೆಂದರೆ ಶೇಕಡಾ 115ರಷ್ಟು ಮಾತ್ರ' ಎಂದು ಡಾ। ರಾಜನರೆಂದಿಗೂ ಹೇಳುತ್ತಿರಲಿಲ್ಲ. 'ಮದ್ರಾಸ್ ಪ್ರಾಂತ್ಯ' ಎಂಬುದಿರುವವರೆಗೆ ದಕ್ಷಿಣ ಕನ್ನಡವೂ ಆ ಪ್ರಾಂತ್ಯದೊಂದು ಭಾಗವೇ. ಭಾಷಾವಾರು ಪ್ರಾಂತ್ಯ ರಚನೆಯಾಗಿ 'ತಮಿಳುನಾಡು' 'ಆಂಧ್ರ ದೇಶ' 'ಕೇರಳ ಪ್ರಾಂತ್ಯ' 'ಕರ್ನಾಟಕ ಪ್ರಾಂತ್ಯ'ಗಳಾದ ಮೇಲೆ ನಿಜಕ್ಕೂ 'ಮದ್ರಾಸ್ ಪ್ರಾಂತ್ಯ'ದ ಸ್ಥಿತಿಗತಿಗಳನ್ನು ಡಾ। ರಾಜನರು ನಿವರಿಸಲಾರರು; ಅಗ ಡಾ। ರಾಜನರ ವಿವರಣೆಯನ್ನು ವಿಮರ್ಶಿಸಲು ದಕ್ಷಿಣ ಕನ್ನಡಿಗರೂ ಮುಂದಾಗಲಾರರು. ಆದರೆ ಈಗ ಹಾಗಲ್ಲ. ಮದ್ರಾಸ್ ಸರಕಾರದ ನಾಯಕರು ಬಿಡಿಸಿ ತೋರಿಸುವ ಯಾವುದೇ ಸ್ಥಿತಿಚಿತ್ರದಲ್ಲಿ ತಾವು ಇದ್ದೇವೋ, ಎಂದು ದ. ಕನ್ನಡಿಗರು ನೋಡಿಕೊಳ್ಳಲೇಬೇಕಾಗಿದೆ. ಮೊನ್ನೆ ಆಹಾರಸ್ಥಿತಿ ಚಿತ್ರವನ್ನು ಬಿಡಿಸುವಾಗ ಡಾ। ರಾಜನರು ಈ ಜಿಲ್ಲೆಯ ಸ್ಥಿತಿಯನ್ನು ನಿಜಕ್ಕೂ ಮರೆತಂತಿದೆ. ಇಲ್ಲಿ ಅಕ್ಕಿಯ ಬೆಲೆಯೇರಿರುವುದು ಶೇ. 115ರಷ್ಟೇ ಅಲ್ಲ—ಇಷ್ಟೇ ಎಂಬಾದರೆ ಸರ್ವಸಾಮಾನ್ಯವಾಗಿ ರೂ. 10 ನಿಶ್ಚಿತ ಬೆಲೆಯಿರುವ ಅಕ್ಕಿ ಮುಡಿಯು ರೂ. 22ರ ಒಳಗಿನ ಕ್ರಯಕ್ಕೆ ಸಿಗಬೇಕಿತ್ತು. ಆದರೆ ಕೆಲವು ದಿನಗಳಿಗೆ ಮೊದಲು ರೂ. 30ರ ಗಡಿಯೊಳಗಿದ್ದ ಅಕ್ಕೀ ಮುಡಿಯ ಕ್ರಯವು ಈಗ ಆ ಗಡಿಮೀರಿಯೂ ಬೆಳೆದಂತಿದೆ. ಸರ್ವಸಾಮಾನ್ಯವಾಗಿ ಇಲ್ಲಿ ಶೇ. 200-225ರಷ್ಟು ಧಾರಣೆಯೇರಿದೆಯೆನ್ನಬಹುದು. ಡಾ। ರಾಜನರ ಲೆಕ್ಕಚಾರ ಪ್ರಮಾದವು ದಕ್ಷಿಣಕನ್ನಡದ ಮಟ್ಟಿಗೆ ಮಾತ್ರ ಆದುದಲ್ಲ. 'ಇಲ್ಲಿಯ ಸ್ಥಿತಿ ರಾಮ್ನಾಡು, ಕೊಯಮುತ್ತೂರು ಜಿಲ್ಲೆಗಳಲ್ಲೂ ಇದೆಯೆಂಬುದೂ ಡಾ। ರಾಜನರು ಹಾಕಿರುವ ಶೇ. 115ರಷ್ಟು ಹೆಚ್ಚಳವೆಂಬ ಪರಮಾವಧಿ ಗಡಿಯನ್ನೂ ಮಿಕ್ಕಿ ಮದ್ರಾಸ್ ಪ್ರಾಂತ್ಯದ ಸುಮಾರು ಮುವ್ವತ್ತು ಕಡೆಗಳಲ್ಲಿ ಧಾನ್ಯಗಳ ಧಾರಣೆಗಳು ಮುಂದೆ ಹೋಗಿವೆ ಎಂಬುದೂ ಸರಕಾರದ ಸುದ್ದಿ ನಿರ್ದೇಶಕರ ಇತ್ತೀಚಿನ ಪ್ರಕಟಣೆಯಿಂದಲೇ ಸ್ಪಷ್ಟವಾಗುತ್ತಿದೆ. ಈಗಲೇ ಹೀಗಿದೆ—ಮುಂದಿನದು ಸಾಮಾನ್ಯ ವರುಷಗಳಲ್ಲಿ ಕೂಡ ಅಕ್ಕಿಗೆ 'ತೇಜಿ' ಬರುತ್ತಿದ್ದ ಋತು. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಬರುವ ಮಳೆಗಾಲದಲ್ಲಿ ಧಾರಣೆ ಯಾವ ಮಟ್ಟಕ್ಕೇರುವುದೋ ಊಹಿಸುವುದಸಾಧ್ಯ. ಆದರೆ ಈ ಮಟ್ಟಿಗೆ ಡಾ। ರಾಜನರು ಕೊಟ್ಟಿರುವ ಭರವಸೆಯಲ್ಲಿ ಪೂರ್ಣ ವಿಶ್ವಾಸವಿಡುತ್ತೇವೆ. 'ನಮ್ಮಲ್ಲೀಗ ಇರುವ ದಾಸ್ತಾನು ಮತ್ತು ನಿರೀಕ್ಷಿಸಿರುವ ಹೊರಗಿನ ಆಮದುಗಳ ಆಧಾರದಿಂದ, ಮುಂದಿನ ಭೀಕರವಾದ ನಾಲ್ಕು ಅಥವಾ ಐದು ತಿಂಗಳುಗಳನ್ನು ಸಹನೀಯವಾಗಿ ಪಾರಾಗಬಹುದೆಂದು ನಾವು ಜನತೆಗೆ ಯಥಾರ್ಥ ಆಶ್ವಾಸನೆ ಕೊಡುತ್ತೇವೆ" ಎಂದು ಡಾ. ರಾಜನರು ಲಕ್ಷ್ಯಪೂರ್ವಕತೂಗಿ ಹೇಳಿರುವ ಮಾತು ಅಕ್ಷರಶಃ ನಿಜವಾಗಲು ಸಾಧ್ಯವಿದೆ. ಆಹಾರ ಧಾನ್ಯಗಳ ಅಭಾವವಿರುವ ಎಲ್ಲಾ ಕ್ಷೇತ್ರಗಳಲ್ಲೂ ಸರಕಾರವು ರಕ್ಷಣಾ ಅಂಗಡಿಗಳನ್ನು ತೆರೆದು, ತನ್ನಲ್ಲಿರುವ ದಾಸ್ತಾನು ಮತ್ತು ತನಗೆ ಬರಲಿರುವ ಸರಬರಾಯಿಗಳನ್ನು ಜನಸಾಮಾನ್ಯರ ನಡುವೆ ಸರಿಯಾಗಿ ವಿತರಣೆ ಮಾಡುವ ವ್ಯವಸ್ಥೆ ಮಾಡಿದರೆ ಮಾತ್ರವೇ ಹಾಗಾಗಲು ಸಾಧ್ಯ; ಆಹಾರ ಧಾನ್ಯಗಳ ಧಾರಣೆಯಿಳಿಸುವುದಕ್ಕಾಗಿ ಸರಕಾರವು ಪ್ರತ್ಯೇಕ ಕಾರ್ಯವಾವುದನ್ನೂ ಮಾಡಬೇಕೆಂದಿಲ್ಲ. "ಬಡ ಜನರ ಸರ್ವಸಾಧಾರಣ ಸಂಪಾದನೆಯ ಮಟ್ಟ ಮತ್ತು ಇತರ ಸಾಮಾಗ್ರಿಗಳ ಸಾರ್ವತ್ರಿಕ ಧಾರಣೆಗಳ ಏರಿಕೆಯನ್ನು ನೋಡಿದರೆ ಆಹಾರ ಧಾನ್ಯಗಳ ಬೆಲೆಯ ಹೆಚ್ಚಳವೂ ನ್ಯಾಯವೆಂದು ತೋರುತ್ತಿತು'ಎಂಬ ಡಾ। ರಾಜನರ ಮಾತಿನಲ್ಲಿ ಸತ್ಯಾಂಶಗಳಿಲ್ಲವೆಂದಲ್ಲ. ಮಿಕ್ಕ ಸಾಮಾಗ್ರಿಗಳಂತೆಯೇ ನಿಯಂತ್ರಣ ಸಡಿಲಾದೊಡನೆ ಅರಿವೆಗಳ ಧಾರಣೆಯೂ ಮಿತಿಮೀರಿ ಏರಿದೆ. ಆದರೆ ಜೀವನಾವಶ್ಯ ಸರ್ವ ಸಾಮಾಗ್ರಿಗಳ ಧಾರಣೆಯಂತೆಯೇ ಬಡವರ ಉತ್ಪನ್ನದ ಮಟ್ಟವೂ ಏರಿದೆ ಎಂಬ ಆತ್ಮಸಮಾಧಾನವು ತುಲನಾತ್ಮಕ ಬುದ್ಧಿಯ ಕೊರತೆಯನ್ನು ಸೂಚಿಸುತ್ತಿದೆ. ಸಾಮಾನ್ಯರ ಕೇವಲ ಜೀವನ ನಿರ್ವಹಣದ ಅನಿವಾರ್ಯವಾದ ವ್ಯಯದ ಮಟ್ಟವೇರಿರುವ ಪರಿಮಾಣದಲ್ಲೇ ಅವರ ಆಯವೂ ಹೆಚ್ಚಾಗಿದೆಯೇ? ಕಾಲೋಚಿತವಾಗಿ ಎಲ್ಲವುಗಳ ಧಾರಣೆಯೂ ಎಲ್ಲರ ವರಮಾನವೂ ಒಂದಲ್ಲೊಂದು ಪರಿಮಾಣದಲ್ಲಿ ಏರಿವೆ—ಏರಲೇ ಬೇಕು. ಆದರೆ ಎಲ್ಲಕ್ಕೂ ಒಂದು ಮಿತಿಯಿರಬೇಕು. ಜನಸಾಮಾನ್ಯರಲ್ಲಿ ಹೆಚ್ಚಿನವರ ವರಮಾನವು ಈ ಮಿತಿಯ ಮಟ್ಟಕ್ಕಿಂತ ಕೆಳಗಿರುವಾಗ ಅಕ್ಕಿ ಮತ್ತಿತರ ಜೀವನಾವಶ್ಯ ಸಾಮಾಗ್ರಿಗಳ ಧಾರಣೆಗಳು ಆ ಗಡಿಯನ್ನು ಮೀರಿ ಮುಂದೆ ಹೋಗಿವೆ; ಅಲ್ಲಿಯೂ ಸ್ವೇಚ್ಛಾ ಸ್ವಾತಂತ್ರ್ಯ ನಡೆದು ಮುಂದೊತ್ತುತ್ತಾ ಇವೆ. ನಿಯಂತ್ರಣ ರದ್ದಾದರೂ ಈ ಕಾಲದಲ್ಲಿ ಜನತೆಯ ಜೀವನಾವಶ್ಯ ಸಾಮಾಗ್ರಿಗಳ ಧಾರಣೆಗಳಿಗೆ ಮೇಲೂ ಕೆಳಗೂ ಒಂದೊಂದು ಗಡಿ ಹಾಕಿಟ್ಟು ಏರಿಳಿತಗಳಿಗೆ ಮಿತಿಯಿರುವಂತೆ ನೋಡಬೇಕಾದುದು ಅಗತ್ಯ. ಅಂತೆಯೇ ಅವು ಎಲ್ಲರಿಗೂ ಸಮಾನ ವಿತರಣೆಯಾಗುವಂತೆ ಮಾಡಬೇಕಾದುದೂ ಮುಖ್ಯ. ನಾವು ಮೊದಲೇ ಹೇಳಿರುವಂತೆ ಅಭಾವವಿರುವ ಕಡೆಗಳಿಗೆಲ್ಲಾ ಸರಬರಾಯಿ ಮಾಡುವ ತನ್ನ ಹೊಣೆಯನ್ನು ಸರಕಾರವು ಚಾಚೂ ತಪ್ಪದೆ ನಿರ್ವಹಿಸಿದರೆ ಆಹಾರ ಧಾನ್ಯಗಳ ಸಂಬಂಧದ ಧಾರಣೆ ವಿತರಣೆ, ಇವೆರಡರ ನ್ಯಾಯವೂ ಪಾಲಿಸಲ್ಪಡುವುದು. ಬದಲಿಗೆ ಮದ್ರಾಸಿನ ಆಹಾರ ಮಂತ್ರಿಗಳಂತೆ, ತಮ್ಮ ವಾದಸರಣಿಗನುಕೂಲವಾಗದ ದಕ್ಷಿಣ ಕನ್ನಡದಂತಹ ಭಾಗಗಳ ಸ್ಥಿತಿಗತಿಗಳನ್ನು ಮರೆತೇಬಿಟ್ಟು ಆತ್ಮಸಮಾಧಾನ ಪ್ರದರ್ಶಿಸುವದರಲ್ಲಿ ನ್ಯಾಯವಿಲ್ಲವೆನ್ನುತ್ತೇವೆ.

ಆಧುನಿಕ ನಾಣ್ಣುಡಿಗಳು

ಎಂಟು ನೂರು ಕೂಡೆಯುವವನಿಗೆ ಎಂಟಾಣೆ ಪಡೆಯುವವನ ಮೇಲೆ ಕಣ್ಣು.

ಬಕ ಪಕ್ಷಿಯ ಮತ್ತು ಭಾಗ್ಯಾಕಾಂಕ್ಷಿಯ ಧ್ಯಾನ ಸ್ವಹಿತ ಮಾಡುವದಕ್ಕಲ್ಲದೆ ಪರ ಸುಖ ಸಾಧನೆಗಾಗಿ ಅಲ್ಲ.

ಎಲ್ಲವನ್ನೂ ಎಳಕೊಳ್ಳುವುದೊಂದನ್ನೇ ಕಲಿತವನು ಒಂದೆರಡನ್ನು ಎತ್ತಿ ಹಿಡಿದಾನೆಂದು ನಂಬಬಹುದೇ?

ಮಹಾರಾಜರ ಕಿರೀಟಗಳುರುಳಿದರೂ ಮನೆ ತೆಗೆಯುವವರ ಕೀಟಲೆಗಳುಳಿದಿವೆ.

ಪರಕೀಯರ ಅಧಿಕಾರ ತಪ್ಪಿದರೂ ಪರಾಧೀನತೆ ತಪ್ಪಿಲ್ಲ.

ಬ್ರಿಟನಿನ ಪ್ರತಿನಿಧಿಗಳು ಜನಮತದ ಒರೆಗಲ್ಲು; ನಮ್ಮಲ್ಲಿಯವರು ಜನತೆಯ ಹೊರೆಕಲ್ಲು.

ಹಿಂದಿನವರು ಮಾಡಿಟ್ಟ ಸತ್ಸಂಪ್ರದಾಯದ ಇಂದಿನವರು ಮದೋನ್ಮತ್ತತೆಯಿಂದ ನಾಯಿಹಿಡಿದ್ದಾರೆ.

ಸಂತತಿಗೆ ಹುಟ್ಟುವಳಿ ಗಳಿಸಿಟ್ಟು ಹೋದರೋ—ಹುಚ್ಚುಚಾಳಿ ಕಲಿಸಿಕೊಟ್ಟೇ ಹೋದರು.

ಸನಿಕರಾಗುತ್ತಾ ಹೋಗುವವರೊಟ್ಟಾದರೆ ದೌಲತ್ತು ಪ್ರದರ್ಶಿಸುತ್ತಾ ಹೋಗುವವರು ಬೇರೊಬ್ಬರು.

ಕಣ್ಣು ಬಿಡುವಾಗಲೇ ಕಪಟ- ಹುಟ್ಟಿ ಬರುವಾಗಲೇ ಹುಚ್ಚು ಅಹಂಕಾರ- ಉಸಿರಾಡುವುದರೊಂದಿಗೇನೇ ಉದ್ಧಟತನ- ಧರಿಗಿಳಿವಾಗಲೇ ದರ್ಪ- ಕಲಿತುಕೊಂಡವರಿಂದ ಲೋಕ ತುಂಬಿದೆ.

ಸ್ವಾರ್ಥಸಾಧಕ ಮನೆ ತೆಗೆಯುತ್ತಾನೆ ನಿರ್ಜೀವಿ ಮಾನ ತೆಗೆಯುತ್ತಾನೆ.

ಭಂಡಾರ ಸೇವೆ ಮತ್ತು ಜನತಾ ಸೇವೆ ಒಬ್ಬನಿಂದಲೇ ಏಕಕಾಲದಲ್ಲಾಗಲಾರದು.

ದೂರು ಕೇಳಿಯಾದರೂ ದುಡ್ಡು ಕೂಡಿಸಬಹುದಾದರೂ ಧುರೀಣನಾಗುವದಸಾಧ್ಯ.

ಸ್ವಾರ್ಥಿಗಳ ಕೈಗೆ ಹೋದ ಸಾರ್ವಜನಿಕ ಕಾರ್ಯ—ಗಾಣಕ್ಕೆ ಸಿಕ್ಕಿಕೊಂಡ ಗಂಟಲು—ಒಂದೇ.

ಅನುಯಾಯಿಗಳ ಬಲವಿಲ್ಲದವ ಧುರೀಣನಾಗಲಾರ; ಅನ್ಯರನ್ನು ತುಳಿಯದವ ದುಡ್ಡಿದ್ದವನಾಗುವದಿಲ್ಲ.

ಬುದ್ಧಿಯಿಲ್ಲದವರಿದಿರು ಬೂದಿ ಬಳಿದುಕೊಂಡು ಸನ್ಯಾಸಿಯೆನ್ನಿಸಬಹುದು; ವಿಚಾರವಿಲ್ಲದವರಿದಿರು ವಿನಯ ಪ್ರದರ್ಶನ ಮಾತ್ರದಿಂದ ಸಜ್ಜನನೆನ್ನಿಸಬಹುದು.

'ಜೈ ಶಂಕರ್!' ಎನ್ನುವವರೆಲ್ಲಾ ದೇವ ಭಕ್ತರಲ್ಲ; 'ಜೈ ಹಿಂದ್!' ಎನ್ನುವವರೆಲ್ಲಾ ದೇಶ ಭಕ್ತರಲ್ಲ.

ಕಾಶ್ಮೀರದ ಕತೆ ಹೇಳುವವರಿರುವಷ್ಟು ಕಾಲಡಿಯ ಸ್ಥಿತಿ ನೋಡುವವರಿಲ್ಲ.

ಬೆಂಕಿಯ ಧಾಳಿಯಂತೆಯೇ ಟೋರ್ಪಿಡೋ ಹೊಡೆತದಿಂದಲೂ ಹಾನಿಯಿದೆ; ಜಾತೀಯ ಗಲಭೆಗಳಂತೆಯೇ ಜಾತೀಯತಾ ಒಳದಗೆಗಳೂ ಹೇಯವಿವೆ.

ಮುಕುಟಗಳನ್ನು ಕೂಡಾ ತಲೆಯಿಂದಿಳಿಸಿಕೊಳ್ಳುವ ಕಾಲವಿದು; ಮನುಷ್ಯರನ್ನು ತಲೆಯ ಮೇಲೇರಿಸಿಕೊಳ್ಳಲಾಗದು.

ವಿಮರ್ಶಿಗನವಳಾಕ ಕೊಡಪ ವಿಷಯದಲ್ಲಿ ಏನೋ ವಿಲಕ್ಷಣವಿರಬೇಕು; ವಿಚಾರಕ್ಕೆ ಅನುಕೂಲನಾಗದವನು ಯಾವುದೋ ವಿರೋಧ ಕಟ್ಟಿಕೊಂಡಿರಬೇಕು.

ಉಪದೇಶಿಸುವ, ಉಳಿಸುವ, ಉದ್ಧರಿಸುವ ಸರ್ವ ಯೋಗ್ಯತೆಯೂ ತನ್ನಲ್ಲಿದೆ ಎಂದು ತೋರಿಸಿಕೊಳ್ಳುವವನು ತನ್ನನ್ನು ಸರ್ವಾಧಿಕಾರಿ ಸ್ಥಾನಕ್ಕೇರಿಸಿಕೊಳ್ಳುತ್ತಾನೆಂದೇ ಅರ್ಥ.

ಹೃದಯ ವಿಷ-ಸ್ವಾರ್ಥವೇ ನಿಶ್ವಾಸ-ಮದುಳು ವಿಶೇಷ-ಹೀಗಿರುವವ ಸಾರ್ವಜನಿಕರ ನಂ. 1ನೇ ವೈರಿ

ಲೋಕವ್ಯಾಪೀ ಕಮ್ಯೂನಿಸ್ಟ್ ಪ್ರಭಾವ!

ಈಗ ಬಹುತೇಕವಾಗಿ ಇಡೀ ಪ್ರಪಂಚವೇ ಅಮೇರಿಕದಂತಹ ಬಂಡವಾಳಶಾಹಿ ಧೋರಣೆ ಅಥವಾ ರಶ್ಯದ ಕಮ್ಯೂನಿಸ್ಟ್ ಪಂಥದ ಅನುಯಾಯಿಗಳ ಎರಡು ಪಕ್ಷಗಳಾಗಿ ವಿಭಜನೆಗೊಂಡಿದೆ. ಇನ್ನೊಂದು ಮಹಾಯುದ್ಧದ ಮಾತುಗಳು ಒತ್ತೊತ್ತಾಗಿ ಕೇಳಿ ಬರಲು ಕಾರಣವೆಂದರೆ ಇವೆರಡು ಭಿನ್ನಾಭಿಪ್ರಾಯಗಳೇ. ಈ ಬಿಕ್ಕಟ್ಟಿನ ಬಲಾಬಲಗಳನ್ನೀಗ ಅಟಂ ಶಕ್ತಿ, ಮತ್ತಿತರ ಸೇನೋಪಕರಣಗಳ ಸಾಮರ್ಥ್ಯದ ಮೇಲಿಂದ ತೂಗಿ ನೋಡಲಾಗುತ್ತಿದೆ; ಈ ತೂಕದ ಆಧಾರದಿಂದ ಅಮೇರಿಕದ ಪಕ್ಷವೇ ಈ ತನಕ ಮೇಲ್ಗೈಯಾಗಿದೆ ಎಂದು ಹೆಚ್ಚಿನವರ ಊಹೆಯಿದೆ. ಆದರೆ ಪ್ರತಿಯೊಂದು ರಾಷ್ಟ್ರದ ಒಳಗಡೆಯ ಸ್ಥಿತಿಗತಿಗಳನ್ನು ನೋಡಿದರೆ, ರಶ್ಯದ ವಿರೋಧಿ ರಾಷ್ಟ್ರಗಳಲ್ಲೂ ರಶ್ಯದ ಪ್ರಬಲ ಅನುಯಾಯಿಗಳು ತುಂಬಿ ಹೋಗಿರುವುದು ಕಾಣಿಸುತ್ತಿದೆ. ಇವರೆಲ್ಲರೂ ಕೆಲವೆಡೆ ವಿರೋಧಿಪಾಳಯದೊಳಗೆ ರಶ್ಯವು ಹೊಗಿಸಿರುವ ಸಶಸ್ತ್ರ ಸೇನೆಯಂತಿದ್ದರೆ, ಉಳಿದೆಡೆಗಳಲ್ಲಿ ರಶ್ಯವು ನಿರ್ಮಿಸಿಟ್ಟಿರುವ ಪಂಚಮದಳಗಳಂತಿದ್ದಾರೆ. ಪ್ರಪಂಚದ ಕಡೆಗೊಮ್ಮೆ ದೃಷ್ಟಿಯೋಡಿಸಿದರೆ ಸಾಕು- ಇದರ ನಿದರ್ಶನಗಳು ಸಾಲು ಸಾಲಾಗಿ ಕಣ್ಣಿಗೆ ಬೀಳುತ್ತವೆ.

ಅಂತರ್ಯುದ್ಧಗಳು

ಚೈನಾದಲ್ಲಿ ಪ್ರತ್ಯಕ್ಷ ಸೋವಿಯೆಟ್ ಸೇನೆಯಂತೆಯೇ ಇರುವ ಕಮ್ಯೂನಿಸ್ಟ್ ಸೇನೆಗಳು ದೀರ್ಘಾವಧಿಯಿಂದ ಹೋರಾಡುತ್ತಲೇ ಇವೆ. ಅಲ್ಲಿಯ ಹಲವು ಪ್ರಮುಖ ನಗರಗಳೂ ಆಯಕಟ್ಟಿನ ಸ್ಥಳಗಳೂ ಕಮ್ಯೂನಿಸ್ಟ್ ಸೇನೆಯ ವಶವಾಗಿವೆ. ಈಗಲಂತೂ ಮುಕ್ಡೆನ್ ನಗರಕ್ಕೇನೇ ಕಮ್ಯೂನಿಸ್ಟ್ ದಾಹು ಸೋಂಕಿದೆ. ಇತ್ತೀಚಿಗಿನ ಅಲ್ಲಿಯ ಯುದ್ಧಗತಿಗಳನ್ನು ಕಾಣುವಾಗ ಸರಕಾರವು ಕಮ್ಯೂನಿಸ್ಟರ ವಿರುದ್ಧ ರಕ್ಷಣಾಯುದ್ಧಗಳನ್ನೇ ಕೊಡಬೇಕಾಗಿ ಬಂದಿರುವುದು ಸ್ಪಷ್ಟವಿದೆ. ಅತ್ತ ಮೊನ್ನೆ ನಡೆದ ಇಟೆಲಿಯ ಮಹಾ ಚುನಾವಣೆಯಲ್ಲಿ ಕಮ್ಯೂನಿಸ್ಟರ ವಿರುದ್ಧವಾಗಿ ಬಲ ಪಕ್ಷದವರು ಗೆದ್ದರೂ, ಅಲ್ಲಿಯ ಕಮ್ಯೂನಿಸ್ಟರ ಶಕ್ತಿ ಸಾಹಸಗಳನ್ನು ಊಹಿಸುವಾಗ ತಮ್ಮ ವಿರೋಧಿ ಸರಕಾರವಾವುದನ್ನೂ ಸುಗಮವಾಗಿ ಚಾಲೂಗಲು ಅವರು ಬಿಡಲಾರರೆಂಬುದು ಖಚಿತವಾಗುವುದು. ಫ್ರಾನ್ಸಿನ ಸ್ಥಿತಿ ಕೂಡಾ ಇದಕ್ಕಿಂತ ವಿಶೇಷ ಭಿನ್ನವಾಗಿಲ್ಲ. ಅಲ್ಲಿಯ ಕಮ್ಯೂನಿಸ್ಟರೂ ಅಧಿಕಾರ ಕಿತ್ತುಕೊಳ್ಳಲು ಅನಿಶ್ಚಿತ ಸಾಹಸಗಳನ್ನು ಮಾಡುತ್ತಲೇ ಇದ್ದಾರೆ. ಇಟೆಲಿ ಮತ್ತು ಫ್ರಾನ್ಸುಗಳು ಈಗಲೇ ಸಶಸ್ತ್ರವಾಗಿ ಅಲ್ಲವಾದರೂ ಅತ್ಯುಗ್ರವಾದ ದ್ವೇಷ ಭಾವನೆಗಳ ಅಂತರ್ಯುದ್ಧದಲ್ಲೇ ಇವೆ. ನಾಳೆ ಜಾಗತಿಕ ಸಮರ ಹುಟ್ಟಿಕೊಂಡರೆ ಅವುಗಳೊಳಗೆ ಹೊಸ ಸೇನೆಗಳು ಪ್ರವೇಶಿಸಿಯೇ ಯುದ್ಧನಿರ್ಮಿಸುವ ಅವಶ್ಯಕತೆಬೀಳದು. ಅತ್ತ ಕೊರಿಯಾದಲ್ಲೂ ಇದಕ್ಕೂ ಹೆಚ್ಚಿನ ಗಲಭೆ. ಅಮೇರಿಕದ ಆಧಿಪತ್ಯದಲ್ಲಿರುವ ದಕ್ಷಿಣ ಕೊರಿಯಾದಲ್ಲಿ ಈಗ ತಾನೇ ನಡೆದಿರುವ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಾದ ಗೊಂದಲಗಳನ್ನು ನೋಡಿದರೆ ಚುನಾವಣೆಯಲ್ಲಿ ಗೆದ್ದರೂ ಅಲ್ಲಿಯ ಅಶಾಂತಿಯನ್ನು ಸೋಲಿಸಲು ಸಾಧ್ಯವೇ ಎಂಬ ಪ್ರಶ್ನೆಯೇಳುತ್ತಿದೆ. ಕೊರಿಯಾದಲ್ಲಿರುವ ತನ್ನ ಸೇನೆಯನ್ನು ಹಿಂದೆಗೆದುಕೊಳ್ಳುವೆನಾದ್ದರಿಂದ ಅಮೇರಿಕವೂ ಹಾಗೆಯೇ ಮಾಡಬೇಕೆಂದು ರಶ್ಯವು ಅಲ್ಲಿ ಕೊಟ್ಟಿರುವ ಆಹ್ವಾನದಿಂದ, ತನ್ನ ನಿಜ ಸೈನಿಕರಷ್ಟೇ ವಿಶ್ವಾಸವನ್ನದು ಕೊರಿಯಾದಲ್ಲಿರುವ ತನ್ನ ಅನುಯಾಯಿಗಳ ಮೇಲಿಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ.

ಅಂತರ್ವಹಿವಾಟುಗಳು

ಇನ್ನು ಒಳಗಡೆಯಿಂದಲೇ ಅಜೇಯ ಚಳವಳಿಗಳನ್ನು ಹೂಡಿ ಅಧಿಕಾರದಲ್ಲಿರುವ ಪ್ರತಿಪಕ್ಷಿಗಳಿಗೆ ಜೀವನವೇ ಅಸಹ್ಯವಾಗುವಂತೆ ಮಾಡುವ ಕಮ್ಯೂನಿಸ್ಟರ ಆಟವಿಲ್ಲದ ರಾಷ್ಟ್ರವೇ ಇಲ್ಲವೆನ್ನಬಹುದು. ನಿದರ್ಶನಕ್ಕಾಗಿ ಮೊನ್ನೆ ತಾನೇ ರಶ್ಯವು ಒಂದು ಒಪ್ಪಂದಮಾಡಿಕೊಂಡು 'ಸಮಾನತೆಯಿಂದ ಸೌಹಾರ್ದತೆಯಿಂದ ನಡೆಕೊಳ್ಳುವೆವು" ಎಂಬು ಸ್ಟಾಲಿನರು ಭರವಸೆ ಕೊಟ್ಟಿದ್ದ ಫಿನ್ಲೆಂಡಿನ ಅಧಿಕಾರಿಗಳಿಗೂ ಅಲ್ಲಿಯ ಕಮ್ಯೂನಿಸ್ಟ್ ತಂಟೆಗಳಿಂದ ತಲೆ ಸಿಡಿತವೆದ್ದಿದೆ. ಫಿನ್ಲೆಂಡಿನ 78 ವರುಷದ ಮುದಿ ಅಧ್ಯಕ್ಷ ಡಾ. ಜುಹೋ ಪಾಸಿಕಿವಿಯವರು ಕಮ್ಯೂನಿಸ್ಟರ ಮೇಲೆ ಕಠಿಣ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ತನ್ನ ಮಂಡಲಿಯಲ್ಲೇ ಇರುವ ಒಳಗಡೆ ಖಾತೆಯ ಕಮ್ಯೂನಿಸ್ಟ್ ಮಂತ್ರಿಯ ಹೊಣೆಗಾರಿಕೆಗಳನ್ನು ಇಡೀ ಸಮಿತಿಯ ಜತೆ ಜವಾಬ್ದಾರಿಯಾಗಿ ಮಾರ್ಪಡಿಸಿ ಆ ಕಮ್ಯೂನಿಸ್ಟ್ ಮನುಷ್ಯನಿಗೆ ಪ್ರತ್ಯೇಕ ಅಧಿಕಾರವಾವುದೂ ಉಳಿಯದಂತೆ ಮಾಡಿದ್ದಾರೆ. ಫಿನ್ಲೆಂಡಿನ ಸರಕಾರವನ್ನೇ ಅಡಿಮೇಲು ಮಾಡಲು ಕಮ್ಯೂನಿಸ್ಟರು ಒಳಗಿಂದೊಳಗೆ ಸಿದ್ಧತೆಯಲ್ಲಿರುವರೆಂಬುದಕ್ಕೆ ಆಧಾರಗಳು ಸಿಕ್ಕಿದುದರಿಂದ ಫಿನ್ಲೆಂಡಿನಲ್ಲಿ ವಿಶೇಷ ಮುಂಜಾಗ್ರತೆ ತೆಗೆದುಕೊಳ್ಳಲಾಗಿದೆ. ಇತ್ತ ಬರ್ಮದಲ್ಲೂ ಮೊದಲಿನಿಂದಲೂ ಇದ್ದ ಕಮ್ಯೂನಿಸ್ಟ್ ಚಳವಳಿವು ಈಗ ಉಗ್ರ ರೂಪಕ್ಕೆ ತಿರುಗಿದೆ. ನೇಲ್ಯಾಗಡ ಜಿಲ್ಲೆಗಳಲ್ಲಿ ಸಶಸ್ತ್ರ ಬರ್ಮೀ ಕಮ್ಯೂನಿಸ್ಟ್ ದಳಗಳ ಚಟುವಟಿಕೆಗಳು ಕಂಡುಬಂದಿರುವುದರಿಂದ ಬರ್ಮೀ ಸರಕಾರವು ಸೇನೆಗಳನ್ನು ಮಾತ್ರವಲ್ಲ, ವಿಮಾನಗಳನ್ನು ಕೂಡಾ ಆ ಕಡೆಗಳಿಗಾಗಿ ಕಳುಹಿಸಬೇಕಾಗಿ ಬಂದಿದೆ. ಮಿಕ್ಕ ರಾಷ್ಟ್ರಗಳ ಮಾತು ಹಾಗಿರಲಿ, ಪ್ರತ್ಯಕ್ಷ ಬ್ರಿಟನಿನ ಕೂಲಿಕಾರ ಪಕ್ಷದೊಳಗಡೆಯಲ್ಲೇ ರಶ್ಯದ ಪಕ್ಷಪಾತಭಾವನೆ ಹಬ್ಬಿದುದರಿಂದ ಬಿಕ್ಕಟ್ಟು ನಿರ್ಮಾಣಗೊಳ್ಳಹತ್ತಿದೆ- ಇಟೆಲಿಯ ಕಮ್ಯೂನಿಸ್ಟ್ ಪಕ್ಷಪಾತಿ ನಾಯಕ ನೆನ್ನಿಗೆ ಬ್ರಿಟನಿನ ಕೂಲಿಕಾರಪಕ್ಷದ ಕೆಲವು ಸದಸ್ಯರು ಸಹಾನುಭೂತಿಯ ತಂತಿ ಬಿಟ್ಟು ಶಿಸ್ತು ಕ್ರಮಕ್ಕೊಳಗಾದುದೇ ಮೊದಲಾದ ಕಾರಣಗಳಿಂದಾಗಿ ಕೂಲಿಗಾರ ಪಕ್ಷದೊಳಗೇನೇ ಪಂಗಡ ಭೇದ ಬಲಿತು ಇದೇ ತಾ. 17ಕ್ಕೆ ಸೇರಲಿರುವ ಅದರ ವಾರ್ಷಿಕಾಧಿವೇಶನದಲ್ಲಿ ಈ ಭಿನ್ನತೆಯ ಸ್ಪಷ್ಟ ಪ್ರದರ್ಶನವಾಗಲಿದೆಯೆಂದು ತಿಳಿದು ಬಂದಿದೆ. ಇತ್ತ ಆಟ್ಲಿ, ಬೆವಿನರಂಥವರು ರಶ್ಯವನ್ನು ಬಹಿರಂಗವಾಗಿ ಜರೆಯಹತ್ತಿದಂತೆಯೇ ರಶ್ಯವೂ ತಾನಾಚರಿಸಿದ 'ಯುರೋಪು ವಿಜಯೋತ್ಸವ'ದ ಸಂದರ್ಭದಲ್ಲಿ ಬ್ರಿಟನು ಮತ್ತು ಅಮೇರಿಕಗಳು ದ್ವಿತೀಯ ರಂಗ ನಿರ್ಮಾಣದ ಕುರಿತು ಕೊಟ್ಟಿದ್ದ ಮಾತನ್ನು ಮುರಿದುಕೊಂಡು ಕಳೆದ ಯುದ್ಧದಲ್ಲಿ ರಶ್ಯವು ಸೋತು ಹಣ್ಣಾಗಬೇಕೆಂದು ಸಾಧಿಸಿದ್ದವೆಂದು ಜಾಹೀರಾಗಿ ಆರೋಪಿಸಹತ್ತಿದೆ.

ಭಾರತ-ಪಾಕಿಸ್ತಾನಗಳ ಗತಿ

ಈ ರೀತಿ ಎಲ್ಲೆಲ್ಲೂ ತೋರಿಬರುತ್ತಿರುವ ಕಮ್ಯೂನಿಸ್ಟ್ ಪ್ರಭಾವದ ಸೌಮ್ಯ ಸ್ವರೂಪವು ಭಾರತದಲ್ಲೂ ಇದ್ದೇ ಇದೆ. ಇಲ್ಲಿಯ ಸರಕಾರದ ಈಗಿನ ಮುಖ್ಯ ಸಮಸ್ಯೆಯು ಒತ್ತಿನಲ್ಲಿ ಹೊಸತಾಗಿ ನಿರ್ಮಾಣಗೊಂಡ ಪಾಕಿಸ್ತಾನದ ಮತ್ತು ಒಳಗಡೆಯ ಹೈದರಾಬಾದಿನ ಸಂಬಂಧದ್ದು. ಆದರೂ ಈ ವಿವಾದಗಳು ಬೆಳೆದು, ಹೊರಗಿನ ರಾಷ್ಟ್ರಗಳು ಕೈಹಾಕಲಾಗುವ ರೂಪಕ್ಕೆಲ್ಲಿಯಾದರೂ ತಿರುಗಿದರೆ ಲೋಕದ ಇತರ ರಾಷ್ಟ್ರಗಳನ್ನು ಬಲಿಗೊಂಡಿರುವ ಪ್ರಮುಖ ರಾಷ್ಟ್ರಗಳ ಪಕ್ಷಾಂದೋಲನವೇ ಇಲ್ಲಿಗೂ ರಾಹುಪ್ರಾಯವಾಗಿ ಸೋಂಕಬಹುದು. ಆಗ ಮಿಕ್ಕವರಂತೆಯೇ ಇಲ್ಲಿಯ ಸರಕಾರಗಳೂ ಮುಖ್ಯವಾಗಿ ಒಳಗಡೆಯ ಕಮ್ಯೂನಿಸ್ಟರ ಮೇಲೆ ಕಣ್ಣಿಡಬೇಕಾಗುವದೆಂಬುದು ಖಂಡಿತ. ನಿಯೋಜಿತ ಗವರ್ನರ್ ಜನರಲ್ ರಾಜಾಜಿ ಮೊನ್ನೆ ತಾನೇ ಪಶ್ಚಿಮ ಬಂಗಾಳದ ಜಾಲ್ಪಾಯಿಗುರಿಯಲ್ಲಿತ್ತ ಭಾಷಣದಲ್ಲಿ ಹೇಳಿರುವಂತೆ "ಜನತಾ ಜೀವನವೆಂದರೆ ಒಂದು ಸಾಮಾನ್ಯ ಕುಟುಂಬ ಜೀವನದಂತೆಯೇ. ಪರಸ್ಪರ ಪ್ರೀತಿ ಗೌರವಗಳಿದ್ದರೆ ಮಾತ್ರ ಸುಖ ಜೀವನ. ಭೀತಿ ಅಪನಂಬಿಕೆಗಳು ವ್ಯಾಪಿಸಿಕೊಂಡರೆ ಬರೇ ನರಕ". ಕುಟುಂಬದೊಳಗೆ ಅಪನಂಬಿಕೆ ಹುಟ್ಟಿ ಕಮ್ಯೂನಿಸ್ಟರಂತಹ ಒಂದು ಕಮರಿನವರು ಹೊರಗಿನವರ ಕೈಗೊಂಬೆಗಳಾದರೆ ಮೂರನೆಯವರು ತಲೆ ಹೊಗಿಸಲು ಅವಕಾಶ ದೊರೆತು ಸರ್ವನಾಶ! ಲೋಕದ ಇವೆಲ್ಲಾ ಸ್ಥಿತಿಗತಿಗಳ ಮೇಲಿಂದ, ಅಮೇರಿಕವು ತನ್ನಲ್ಲಿ ಸಂಗ್ರಹಿಸಿರಬಹುದಾದ 'ಅಟಂ ಬೋಂಬಿ'ಗಿಂತಲೂ ರಶ್ಯವು ಪ್ರತಿಯೊಂದು ರಾಷ್ಟ್ರದಲ್ಲೂ ಇರಿಸಿರುವ 'ಆತ್ಮೀಯ ಬೋಂಬು' ದೊಡ್ಡದಲ್ಲವೇ?

ಉಡುಪಿ

ಮುನಿಸಿಪಲ್ ಕೌನ್ಸಿಲು ಮೀಟಿಂಗು—ಇದೇ ತಾ. ೧೧ರಲ್ಲಿ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾತಂತ್ರ್ಯದಿನಾಚರಣೆ ಕಮಿಟಿಯವರು ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಕಟ್ಟಿಸಿದ ಅಶೋಕ ಧ್ವಜಸ್ತಂಭವನ್ನು ಮುನಿಸಿಪಾಲಿಟಿಗೆ ಬಿಟ್ಟುಕೊಡುವರೆ ಬರೆದ ಪತ್ರವನ್ನು ಓದಿ ಅದನ್ನು ಸ್ವೀಕರಿಸಿ ಸ್ವಾಧೀನ ಪಡಿಸಿಕೊಳ್ಳಬಹುದೆಂದಾಯಿತು. ಅಂತೆಯೇ ಬಡವಿದ್ಯಾರ್ಥಿ ವೇತನದ ಸಲುವಾಗಿ ಅದೇ ಕಮಿಟಿಯವರು ಕೊಟ್ಟ ರೂಪಾಯಿ ಒಂದು ಸಾವಿರದ ಸರಕಾರಿ ಕಾಗದವನ್ನು ಸಹ ಸ್ವೀಕರಿಸಲಾಯಿತು.

ಎಂಟು ಕಮ್ಯೂನಿಸ್ಟರ ವಿಚಾರಣೆಯು ಇದೇ ತಾ. ೬ರಿಂದ ೮ರ ತನಕ ಸಬ್ ಕಲೆಕ್ಟರರ ಉಡುಪಿ ಮೊಕ್ಕಾಮಿನಲ್ಲಿ ನಡೆದು ೧೭ ಸಾಕ್ಷ್ಯಗಳ ವಿಚಾರಣೆ ನಡೆಯಿತು. ಹೆಚ್ಚಿನ ವಿಚಾರಣೆ ಇದೇ ತಾ. ೨೦ಕ್ಕೆ ಕಾರ್ಕಳ ಮೊಕ್ಕಾಮಿನಲ್ಲಿಡಲಾಗಿದೆ. ಸರಕಾರೀ ಕಡೆಯಿಂದ ಶ್ರೀ ವಿ. ಕೆ. ಸೆಟ್ಟಿ ಅಸಿಸ್ಟೆಂಟ್ ಪಬ್ಲಿಕ್ ಪ್ರೊಸಿಕ್ಯೂಟರ್ ಅವರೂ ಕಮ್ಯೂನಿಸ್ಟರ ಪರವಾಗಿ ಮಂಗಳೂರಿನ ಎಡ್ವೋಕೇಟ್ ಶ್ರೀ ಕೆ. ಭಾಸ್ಕರ ರೈಗಳೂ ವಕಾಲತ್ತು ನಡೆಸಿದರು.

ಮೇ ದಿನಾಚರಣೆ— ಉಡುಪಿಯ ಬೀಡಿ ಮತ್ತು ಮಗ್ಗ ಕೆಲಸಗಾರ ಸಂಘಗಳ ವತಿಯಿಂದ ಮೇ 1ರಲ್ಲಿ ಮೆರವಣಿಗೆ ಮತ್ತು ರಥಬೀದಿಯಲ್ಲಿ ಸಾರ್ವಜನಿಕ ಸಭೆಗಳ ಮೂಲಕ ಮೇ ದಿನವಾಚರಿಸಲ್ಪಟ್ಟಿತು.

ಉದಿಯಾವರ— ತಾ. 28-4-48ರಲ್ಲಿ ಸ್ವಜಾತಿಯಿಂದ ಬಹಿಷ್ಕರಿಸಲ್ಪಟ್ಟಿದ್ದ ದಿವಂಗತ ತಿಮ್ಮಪ್ಪ ಪೂಜಾರಿಯ ಮಕ್ಕಳಾದ ಸೇಸಿ, ಮೀನಾಕ್ಷಿ ಮತ್ತವರ ಮಕ್ಕಳನ್ನು ಇಲ್ಲಿಯ ಬಿಲ್ಲವ ಮಹಾಜನ ಸಂಘದ ಕಟ್ಟಡದಲ್ಲಿ ಬಿಲ್ಲವ ಜಾತಿ ವಿಧಿಪ್ರಕಾರ ಶುದ್ಧೀಕರಿಸಿ ಸ್ವಜಾತಿಗೆ ಸೇರಿಸಿಕೊಂಡಿರುತ್ತಾರೆ.

ನಡಿಯುವ ಚಿತ್ರ

ಮೆಹಬೂಬರ ಅಮರಕೃತಿ

ಔರತ್

ಅರುಣ, ಯಾಕೂಬ್, ಸುರೇಂದ್ರ, ಜ್ಯೋತಿ, ಸರ್ದಾರ್ ಅಖ್ತರ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾ. 14—5—1948ರಿಂದ

ಕನ್ನಡದ ಕಲಾವಿದರ ಕೀರ್ತಿಜ್ಯೋತಿ

ಭಕ್ತ ರಾಮದಾಸ (ಕನ್ನಡದಲ್ಲಿ)

ವಿದ್ಯಮಾನಗಳು ಭಾರತವನ್ನು ಎತ್ತ ಎಳೆಯುತ್ತಿವೆ?

[೪ನೇ ಪುಟದಿಂದ]

ಹೋಗಲಿರುವರೆಂದು ತಿಳಿದುಬರುತ್ತದೆ. ಹಿಂದೀ ಸರಕಾರದ ಮುಂದಿನ ಹೆಜ್ಜೇ ನಿರ್ಣಯದ ಆಸ್ಪಿವಾರವಾಗಿಯೇ ಈ ಪರ್ಯಾಲೋಚನೆ ನಡೆದಿದೆಯೆನ್ನಬಹು ದು. ಇತ್ತ ಹೈದರಾಬಾದಿನೊಳಗಡೆಯ ಲ್ಲಿ ರಝಾಕಾರರ ವಿಕಟ ತಾಂಡವವು ಏಕ ಪ್ರಕಾರ ನಡೆದಿದೆ. ನಿಜಾಮರ ಮಂತ್ರಿ ಗಳು ಒಬ್ಬಿಬ್ಬರು ರಝಾಕಾರ್ ಪ್ರದರ್ಶನ ಗಳಲ್ಲಿ ಭಾಗವಹಿಸಿ, ಅದರ ಸಂಖ್ಯೆಯನ್ನು ಹೆಚ್ಚಿಸುವ ಆವಶ್ಯಕತೆಯನ್ನು ಒತ್ತಿ ಹೇಳಿ ಬಹಿರಂಗವಾಗಿ ಬೆಂಬಲ ಕೊಡಹತ್ತಿದ್ದಾರೆ. ಈ ನಡುವೆ ಹಲವು ವರ್ಷಗಳಿಂದ ಕಮ್ಯೂನಿಸ್ಟರ ಮೇಲೆ ಹಾಕಿದ್ದ ಬಹಿಷ್ಕಾರವನ್ನು ಹೈದರಾಬಾದು ಸರಕಾರವು ತೆಗೆದು ಹಾಕಿ ಕಾಂಗ್ರೆಸ್ಸಿಗೆ ವಿರುದ್ಧವಾಗಿ ರಝಾಕಾರರನ್ನೂ ಕಮ್ಯೂನಿಸ್ಟರನ್ನೂ ಒಂದುಗೂಡಿಸುವ ಹಂಚಿಕೆ ಗಳದಂತಿದೆ. ಕಮ್ಯೂನಿಸ್ಟರು ಈ ವಾ ದವನ್ನು ಅಲ್ಲಗಳೆದು ತಾವು ರಝಾಕಾರರ ಬಲೆಯಲ್ಲಿ ಬಿದ್ದಿಲ್ಲವೆಂದಿದ್ದಾರೆ. ನಿಜಾಮ್ ಅಧಿಕಾರದ ಅಂಶವನ್ನೂ ಇಡದೆ ಹೈದ ರಾಬಾದಿನಲ್ಲಿ ಪ್ರಜಾ ಪ್ರಭುತ್ವ ಸ್ಥಾಪನೆ ಮಾಡಲು ತಾವು ಹೋರಾಡುವೆವೆಂದು ಕ ಮ್ಯೂನಿಸ್ಟ ಪಕ್ಷದ ಹೇಳಿಕೆಯಿದೆ.

ಇತ್ತ ಇಂಗ್ಲೆಂಡಿನಿಂದ ಬರತಕ್ಕ ಸ್ಟ ರ್ಲಿಂಗ್ ಸಾಲಗಳನ್ನು ಪಡಕೊಳ್ಳುವ ಕುರಿತು ಈ ವರುಷದ ಉತ್ತರಾರ್ಧದ ಅವಧಿಗೂ ಭಾರತ ಪಾಕಿಸ್ತಾನಗಳೊಳಗೆ ಸಮಾಧಾನಕರ ಒಪ್ಪಂದವಾಗಿದೆ.

ಜಪಾನಿನ ವ್ಯಾಪಾರೀ ಸಮಿತಿಯು ಭಾರತಕ್ಕೆ ಬಂದಾಗ ಅದನ್ನು ಸ್ವಾಗತಿ ಸುತ್ತಾ, ಪ್ರಧಾನಿ ನೆಹರುಗಳು ಭಾರತಕ್ಕೂ ಜಪಾನಿಗೂ ಪೂರ್ವಕಾಲದಿಂದಲೂ ಇದ್ದ ಸಂಬಂಧಗಳ ಜ್ಞಾಪಕಮಾಡಿ ಇನ್ನು ಮುಂದಕ್ಕೂ ಜಾಪಾನಿನೊಂದಿಗೆ ವ್ಯಾಪಾ ರ, ಆರ್ಥಿಕ ಮತ್ತು ಸಾಂಸ್ಕೃತಿಕ ನಿಕಟ ಸಂಬಂಧವನ್ನು ಇಟ್ಟುಕೊಳ್ಳಲು ಭಾರತದ ಅಪೇಕ್ಷೆಯಿದೆ ಎಂದಿದ್ದಾರೆ.

ಪೂರ್ವ ಪಂಜಾಬಿನ ಪಾಟಿಯಾಲಾ ಮ ತ್ತಿತರ ಸಂಸ್ಥಾನಗಳು ಏಕ ಕೇಂದ್ರವಾಗಿ ಮಿಲನಗೊಂಡುದರಿಂದ ಭಾರತದೊಳಗಡೆ ಇಷ್ಟರೊಳಗೇನೇ ಸಂಯುಕ್ತವಾದ ಸ ಣ್ಣ ಸಂಸ್ಥಾನಗಳ ಏಕಕೇಂದ್ರ ಗಳ ಪಂಗ್ತಿಗೆ ಮತ್ತೊಂದು ಗೌರವಾರ್ಹ ಸಂಖ್ಯೆ ಸೇರಿದಂತಾಗಿದೆ. ಇದೇ ರೀತಿ ರಜಪುತಾನ ಸಂಸ್ಥಾನಗಳೂ ಏಕೀಕರಣ ಗೊಳ್ಳಬೇಕೆಂಬ ಚಳವಳಿಗಳೆದ್ದಿವೆ.

ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ಮ ದ್ರಾಸ್ ಪ್ರಾಂತ್ಯದ ಮಲಬಾರಿನ ಕೆಲವು ಕಡೆಗಳಲ್ಲಿ ಕಮ್ಯೂನಿಸ್ಟರು ಅಡಗಿ ಕುಳಿತು ಪೋಲೀಸರೊಡನೆ ಮತ್ತು ಜನರೊಡನೆ ಕೊಡುತ್ತಿರುವ ಘರ್ಷಣೆಗಳು ತುಸು ಉ ಗ್ರಸ್ವರೂಪಕ್ಕೇರಿವೆ. ಈ ಕುರಿತು ಮ ದ್ರಾಸ್ ಮಂತ್ರಿಮಂಡಲವು ಗಾಢಯೋ ಚನೆ ನಡೆಸಿ ವಿಶೇಷ ಕಾರ್ಯಕ್ರಮಗಳ ನ್ನು ಕೈಕೊಂಡಿದೆ. ಇತ್ತ ಮಾಯಾವರ ಮಿನ ಡ್ರೈವರರು ಮತ್ತು 'ಫಯರ್‌ಮೆನ' ರು ತಮಗೆ ದಿನಕ್ಕೆಂಟು ಗಂಟೆಗಳ ಕೆಲಸ ವನ್ನೇ ಕೊಡತಕ್ಕದ್ದೆಂದು ಮೇ ತಾ. 7 ರಿಂದ ಮುಷ್ಕರ ಹೂಡಿದ್ದು ಅವರೊಡನೆ ಸಹಾನುಭೂತಿ ಸೂಚಿಸಲು 'ಸೌತ್ ಇಂ ಡಿಯನ್ ರೈಲ್ವೆ'ಯ ಎಲ್ಲಾ ಕೆಲಸಗಾರ ರೂ ಮೇ ತಾ. 9ನೇ ಮಧ್ಯರಾತ್ರಿ ಯಿಂದ ಒಂದು ದಿನದ ಮುಷ್ಕರ ಹೂ ಡಿದ್ದಾರೆ. ಹೈದರಾಬಾದಿನ ಗಡಿಗಳ ಲ್ಲಿ ನಡೆದಿರುವ ಘರ್ಷಣೆಗಳ ಸಂಬಂಧ ವಾಗಿ ಮದ್ರಾಸ್ ಸರಕಾರದೊಂದಿಗೆ ಭಾ ರತ ಸರಕಾರವು ಪರ್ಯಾಲೋಚನೆ ನಡೆ ಸಿದ್ದು, ಯುದ್ಧವು ಅನಿವಾರ್ಯವಾದಲ್ಲಿ ಹೆಚ್ಚಿನ ಕಾರ್ಯಭಾರವು ಮದ್ರಾಸ್ ಸರ ಕಾರ ಮತ್ತು ಗಡಿಯ ಮದ್ರಾಸ್ ದಳ ಯಗಳ ಮೇಲೇನೇ ಬೀಳಲಿದೆ.

ಈ ಶಕುನಗಳು

ಸದ್ಯದ ಪ್ರಾಪಂಚಿಕ ವಿದ್ಯಮಾನಗ ಳೊಳಗಡೆಯ ವಿದ್ಯುತ್ ಪ್ರವಾಹದ ರೀತಿ ಗಳನ್ನು ಕಾಣುವಾಗ ಭಾರತ ಸರಕಾರವು ವಿಶೇಷ ಜಾಗರೂಕತೆ ಮತ್ತು ಸಿದ್ಧತೆ ವ ಹಿಸಬೇಕಾದುದು ಅಗತ್ಯವೆಂದು ತೋರು ತ್ತದೆ.

ಇಂದಿನ ಸ್ಪರ್ಧೆಯಲ್ಲಿ ರಶ್ಯದ ಪಕ್ಷ ಪಾತಿ ಮತ್ತು ಅಮೇರಿಕನ್ ಪಕ್ಷಪಾತಿ ರಾಷ್ಟ್ರಗಳಾವುವೆಂಬುದು ಬಹುಮಟ್ಟಿಗೆ ಖಚಿತವಾಗಿದೆ. ಆ ಪೈಕಿ ತಾನಾವಕಡೆಗೂ ಸೇರಲಾರೆನೆಂದು ಕಂಠೋಕ್ತವಾಗಿ ಹೇಳ ರುವ ಒಂದು ದೊಡ್ಡ ರಾಷ್ಟ್ರವೆಂದರೆ ಭಾ ರತ. ಈ ಕುರಿತು ಸ್ಪಷ್ಟ ಮಾತಾಡುವ ರಾಷ್ಟ್ರಾಧಿಕಾರಿಯೆಂದರೆ ಪಂಡಿತ ನೆಹರು ಗಳೇ. ಪಾಕಿಸ್ತಾನದ ಪ್ರಮುಖರು ವಿ ದೇಶಸಂಬಂಧವಾದ ತಮ್ಮ ಧೋರಣೆ ಯ ಕುರಿತು ತುಟಿ ಬಿಚ್ಚುವದಿಲ್ಲ. ಲೋಕ ದ ಮುಸ್ಲಿಂ ರಾಷ್ಟ್ರಗಳ ಸಾಲನ್ನು ಹಿಡಿ ಯುವದೊಂದೇ ಅದರ ವಿದೇಶ ಸಂಬಂಧೀ ಧೋರಣೆಯೆಂಬಂತೆ ಕಾಣುತ್ತದೆ.

ಈ ನಡುವೆ ಅನ್ಯೈಚ್ಛಿಕವಾಗಿ ಹಿಂದೀ ಸರಕಾರವು ಅಮೇರಿಕದತ್ತ ವಾಲುವಂ ತಾಗುವುದೋ ಎಂಬ ಸಂದೇಹಕ್ಕೆಡೆಯಿ ದೆ. ಕಾರಣಗಳು:-

ಪೆಲಸ್ತೈನ್ ವಿವಾದದ ಕುರಿತು ಕಾಂ ಗ್ರೆಸಿಗರೂ, ಜಾಗತಿಕ ಸಂಘದಲ್ಲಿ ಹಿಂದೀ ಸರಕಾರದ ಪ್ರತಿನಿಧಿಗಳೂ ಸ್ಪಷ್ಟವಾಗಿ ಅರಬರ ಪಕ್ಷ ಹಿಡಿದಿದ್ದರೂ ಅರಬ್ ರಾಷ್ಟ್ರಗಳು ಪಾಕಿಸ್ತಾನದ ಮೇಲಿನ ಆತ್ಮೀ ಯತೆಯಿಂದ ಭಾರತವನ್ನು ದ್ವೇಷದ ನೋಟದಿಂದಲೇ ನೋಡುತ್ತಿವೆ. ಟ್ರಾ ನ್ಸ್‌ಜೋರ್ಡನಿನ ರಾಜಾ ಅಬ್ದುಲ್ಲರು, ಕಾಶ್ಮೀರದ ಧಾಳಿಗಾರರ ಕೂಟವಾದ 'ಆ ಝಾದ್ ಕಾಶ್ಮೀರ್ ಸರಕಾರಕ್ಕೆ' ತನ್ನ ಪೂರ್ಣ ಬೆಂಬಲ ಸೂಚಿಸಿರುವುದೇ ಇದ ಕ್ಕೆ ನಿದರ್ಶನ.

ಇತ್ತ ಪಾಕಿಸ್ತಾನವು ಒಳಗಿಂದೊಳಗೆ ರಶ್ಯದ ಸಹಾಯ ಪಡೆಯುವ ಹಂಚಿಕೆ ನಡೆಸುತ್ತಿದೆ ಎಂಬ ಸುದ್ದಿಯಿದೆ. ಇದ ಕ್ಕಾಧಾರವಿಲ್ಲವೆಂದು ಅಮೇರಿಕ ಮತ್ತು ಬ್ರಿಟನುಗಳ ಮುತ್ಸದ್ದಿಗಳೆಂದಿರುವರಾದ ರೂ, ಸಹಾಯದ ಆವಶ್ಯಕತೆಯಿರುವ ಪಾ ಕಿಸ್ತಾನವು ರಶ್ಯದೊಡನೆ ಅದನ್ನು ಪಡೆ ಯುವ ನಿರ್ಧಾರಕಾಕೆ ಕಟ್ಟಿಕೊಳ್ಳಬಾರದೆಂ ದಿಲ್ಲವೆಂಬುದನ್ನು ಅವರೂ ಒಪ್ಪುತ್ತಾರೆ.

ಕಾಶ್ಮೀರ ಯುದ್ಧದಲ್ಲಿ ಧಾಳಿಗಾರರ ಕೈ ಯಲ್ಲಿ ರಶ್ಯದ್ದಾದ ನವೀನ ಆಯುಧೋಪ ಕರಣಗಳಿದ್ದುದು ಈ ಮೊದಲೇ ಬೆಳಕಿಗೆ ಬಂದಿದೆ. ಕಾಶ್ಮೀರ ಮತ್ತು ಅಫ್ಘಾನಿಸ್ಥಾ ನದ ಗಡಿಯಲ್ಲಿದ್ದುಕೊಂಡು ರಶ್ಯವು ಕಾಶ್ಮೀ ರದ ಜಗಳ ಮತ್ತು ಗಡಿನಾಡಿನ ವಿವಾದ ಗಳಲ್ಲಿ ಆಸಕ್ತಿ ವಹಿಸಿದೆ ಎಂಬುದು ಖಚಿತ ವಾಗಿದೆ. ಈ ಬಾರಿ ಭದ್ರತಾ ಕೌನ್ಸಿಲು ಕಾಶ್ಮೀರಕ್ಕಾಗಿ ನೇಮಿಸಿರುವ 'ಪಂಚ ಸದ ಸ್ಯ ಸಮಿತಿ'ಯಲ್ಲಿ ಅಮೇರಿಕವಿದ್ದು ಅದರ ಪ್ರಭಾವವೇ ಅಲ್ಲಿ ನಡೆಯಲಿರುವದರಿಂದ ಕಾ ಶ್ಮೀರದಲ್ಲೂ ರಶ್ಯಾ ಅಮೇರಿಕ ಮೇಲಾಟ ... ಸುವುದು ಸಂಭವನೀಯ.

ತನ್ನಲ್ಲಿಯ ಔದ್ಯೋಗಿಕ ಪುನರ್ರಚನೆ ಗಾಗಿ ಭಾರತ ಸರಕಾರವು ಅಮೇರಿಕದಿಂ ದ "ಮಾರ್ಶಲ್ ಯೋಜನೆ"ಯಂತಹದರ ಸಹಾಯ ಪಡೆಯುವ ಯೋಚನೆಯಲ್ಲಿದೆ. ಇತ್ತ ಅಮೇರಿಕದ ಮೇಲಧಿಕಾರವಿರುವ ಜಾಪಾನಿನೊಡನೆ ಸಮೀಪ ಸಂಬಂಧ ನಿ ರ್ಮಿಸಿಕೊಳ್ಳುವುದಕ್ಕೂ ಭಾರತ ಸರಕಾ ರ ಮುಂದಾಗಿದೆ. ಯಾವ ಕಾರಣದಿಂದಾ ದರೂ ಅಮೇರಿಕದತ್ತ ಭಾರತದ ಒಲವು ಮೊಳೆದಂತೆ ತೋರಿದರೆ ಅದು ತನ್ನಿಂದ ದೂರವಾದಂತೆ ಎಂದು ರಶ್ಯವು ಅನುಮಾನಿಸುವುದು ಸ್ವಾ ಭಾವಿಕ.

ಇತ್ತ ಭಾರತ ಮತ್ತು ಪಾಕಿಸ್ತಾನಗಳ ಗೊತ್ತಿನ ಅಫ್ಘಾನಿಸ್ತಾನ ಮತ್ತು ಇರಾನ ನಂತಹ ಮುಸ್ಲಿಂ ರಾಷ್ಟ್ರಗಳ ಮೇಲೆ ಪಾಶ್ಚಾತ್ಯ ರಾಷ್ಟ್ರಗಳಿಗಿಂತ ರಶ್ಯದ ವರ್ಚ ಸ್ಸೇ ಅಧಿಕವಿದೆ. ಪೆಲಸ್ತೈನಿನಲ್ಲಿ ಯ ಹೂದಿಗಳು ರಶ್ಯದ ಬೆಂಬಲ ಪಡೆಯುವ ಹವಣಿಕೆಯಲ್ಲಿದ್ದಾರೆಂದು ಅರಬ್ ಪ್ರಮು ಖರ ಆರೋಪವಿದ್ದರೂ ರಶ್ಯವು ಯಾವ ಕಡೆಯೆಂಬುದು ಇನ್ನು ತಾನೇ ಸ್ಪಷ್ಟ ವಾಗಬೇಕಾಗಿದೆ.

ಭಾರತದಲ್ಲೀಗ ಕಮ್ಯೂನಿಸ್ಟರ ಮೇಲೆ ಬಿದ್ದಿರುವಂತಹ ಪ್ರಹಾರಗಳು ಪಾಕಿಸ್ತಾ ನದಲ್ಲಿ ಬಿದ್ದಿಲ್ಲ; ಮಾತ್ರವಲ್ಲ, ಬ್ರಿಟಿಷ್ ರಾಜಕಾರಣದ ಛಾಯೆಯನ್ನೇ ಭಾರತದ ವಹಿವಾಟುಗಳಲ್ಲಿ ರಶ್ಯವೀಗ ಕಾಣುತ್ತಿರ ಬಹುದು.

ಆದ್ದರಿಂದ ಲೋಕದ ಪ್ರಮುಖ ರಾಷ್ಟ್ರ ಗಳ ಸ್ವಾರ್ಥಿಗಳಾಶಯಗಳೊಳಗೆ ಭಾರತ ಮತ್ತು ಪಾಕಿಸ್ತಾನಗಳು ಸೇರಿಕೊಳ್ಳ ದಂತೆ ಅಥವಾ ಜಾರಿ ಬೀಳದಂತೆ—ಅಂತಹ ಅವಘಡ ಕಾಲವು ಅನಿವಾರ್ಯವಾಗುತ್ತ ದಾದರೆ ಆ ಸಂದರ್ಭದಲ್ಲಿ ಹೇಗೆ ವರ್ತಿಸ ತಕ್ಕದ್ದೆಂದು-ಭಾರತ ಸರಕಾರವು ಈಗಲೇ ಯೋಚಿಸಬೇಕಾದುದು ಅಗತ್ಯ.

ಅಮೃತಾಂಜನ.
ತಲೆನೋವು, ಶಿರೋವೇದನೆ, ಉಳುಕು, ಕತ್ತಿಗೆ, ಭುಜ ಹುಲ್ಲು ವೇದನೆಗಳು ಎದೆನೋವು, ಘಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ತಕ್ಷಣ ಮೊದಿಸು ವೇದನಾದಿ ಎಲ್ಲಾ ರೋಗಗಳಿಗೂ ಸಿದ್ಧ
REGD.
ಕಫ, ಕುಳುಕನ್ನಿ ಮತ್ತು ಸಕ ಪನ್ನಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ವಿವಿಧ ಪಾತ್ರೆಗಳು

ಯಾವತ್ತೂ ವಿಧ ದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗ ಳ ವಿವಿಧ ಪಾತ್ರೆ ಗಳೂ ಸಾಮಾನು ಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ.

'Christain High School'
Udipi, South Kanara.
Wanted trained Graduates in Natural Science Mathematics and History. Salary according to experience in the Scale Rs 60-5-160 with D.A at Govt rates. Apply with particulars to the Correspondent.

ಲಗ್ನ ಪತ್ರಿಕೆಗಳನ್ನು

ಸುಲಭ ದರದಲ್ಲಿ
ಶೀಘ್ರವಾಗಿ
ಮುದ್ರಿಸಿ ಕೊಡ ಲಾಗುವುದು.
ಇತರ ಎಲ್ಲತರದ ಮುದ್ರಣ ಕಾರ್ಯಗಳನ್ನೂ ಸ್ವೀಕರಿಸ ಲಾಗುವುದು.
ನವಯುಗ ಪ್ರೆಸ್,
ಉಡುಪಿ.



Approved firm by the Govt. of Mysore
Certified by the Agent of the Govt. of Cylone & Indian.

ದಕ್ಷಿಣ ಕನ್ನಡ

ಸಾಲಿಗ್ರಾಮ-ಮೇ ತಿಂಗಳ ತಾ ೧ರ ದಿನ ಸಾಯಂಕಾಲ ಕಾರ್ಕಡ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ಕಾರ್ಕಡ, ಕೋಟ, ಚಿತ್ರಪಾಡಿ ಮೊದಲಾದ ಶಾಲಾ ವಿದ್ಯಾರ್ಥಿಗಳ "ಆಟದ ಹಬ್ಬ"ವು ಡಾಕ್ಟರ್ ಯು. ಎಸ್. ಕಲ್ಕೂರರವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳು ತಮ್ಮ ವಿವಿಧ ಚಟುವಟಿಕೆಗಳಿಂದ, ಕೂಡಿದ ಮಹನೀಯರ ಮನಸ್ಸನ್ನು ಸೂರೆಗೊಂಡರು. ಕೊನೆಯಲ್ಲಿ ಅಧ್ಯಕ್ಷರು "ಆಟದ ಹಬ್ಬ"ವನ್ನು ಆಚರಿಸುವ ಅಗತ್ಯದ ಕುರಿತು ಭಾಷಣವನ್ನಿತ್ತ ಮೇಲೆ ಲಘೂಪಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಪೆರ್ಡೂರು-ಮಿಶನ್ ಶಾಲಾ ವರ್ಧಂತಿ ಉತ್ಸವವು ಇದೇ ತಾ 2ರಲ್ಲಿ ಉಡುಪಿ ರೇಂಜಿನ ಸೀನಿಯರ್ ಡಿಪ್ಯುಟಿ ಇನ್ಸ್ಪೆಕ್ಟರರಾದ ಶ್ರೀ ವೈ. ಗೋಪಾಲ್ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಫ್. ಎಸ್. ಕೋಟ್ಯಾನರು ಶಾಲಾ ವರದಿಯನ್ನೊಪ್ಪಿಸಿದ ಬಳಿಕ ಶಾಲಾ ಹಳೆ ವಿದ್ಯಾರ್ಥಿ ಶ್ರೀ ಪಿ. ಭೋಜ ಶೆಟ್ಟಿ B. E. ಯವರು ಶಾಲಾ ಸ್ವಸ್ತಿ ವಾಚನವನ್ನು ಮಾಡಿದರು. ಬಳಿಕ ಮಕ್ಕಳ ವಿವಿಧ ವಿನೋದಾವಳಿ ಪಾರಿತೋಷ ವಿತರಣವಾದ ಮೇಲೆ ಅಧ್ಯಕ್ಷರು ಶಾಲೆಯ ಮಹತ್ವ, ರಕ್ಷಕರ ಕರ್ತವ್ಯ ಆದಿ ಗಂಭೀರ ವಿಷಯಗಳ ಕುರಿತು ವಿಚಾರಗರ್ಭಿತ ಭಾಷಣ ಮಾಡುತ್ತಾ, ಇಲ್ಲಿ ಒಂದು ಹ್ಯಾಸ್ಕೂಲಿಗೆ ಎಲ್ಲರೂ ಪ್ರಯತ್ನಿಸಬೇಕೆಂದು ತಿಳಿಸಿದರು. ಕೊನೆಗೆ ವಿದ್ಯಾರ್ಥಿಗಳು "ಕಳ್ಳಸಂತೆ" ಎಂಬ ಸಾಮಾಜಿಕ ಸಂಗೀತ ನಾಟಕವನ್ನು ಆಡಿ ತೋರಿಸಿದ ಮೇಲೆ ಶ್ರೀ ಎ. ವಿ ಕಲ್ಯಾಣಿಯವರು ಧನ್ಯವಾದವನ್ನಿತ್ತರು.

ಮಂಗಳೂರು

ಮೇ ದಿನಾಚರಣೆ-ಯು ಮಂಗಳೂರಲ್ಲಿ ದಿನಾಂಕ ೧ರಲ್ಲು ಸೋಶಿಯಲಿಸ್ಟ್ ಮತ್ತು ಕಮ್ಯೂನಿಸ್ಟ್ ಪಕ್ಷಗಳ ನೇತೃತ್ವದಲ್ಲಿ ಪ್ರತ್ಯಪ್ರತ್ಯೇಕವಾಗಿ ಆಚರಿಸಲ್ಪಟ್ಟಿತು. ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಸಮಾಜವಾದಿ ಪಕ್ಷದ ಕಡೆಯಿಂದ ಜರಗಿದ ಸಭೆಯ ಅಧ್ಯಕ್ಷಸ್ಥಾನ ವಹಿಸಿದ್ದರು. ಶ್ರೀಗಳಾದ ಎಮ್. ಡಿ. ಅಧಿಕಾರಿ, ಡಾ॥ ಸಂಜೀವನಾಥ್ ಮತ್ತು ಗೋವಿಂದನ್ ಅವರು ಭಾಷಣವಿತ್ತರು. ಕಮ್ಯೂನಿಸ್ಟ್ ಪಕ್ಷದ ಸಭೆಗೆ ಶ್ರೀ. ಎಮ್. ಕೇಶವ ಕಾಮತರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಎಮ್. ಮೋನಪ್ಪ ಶೆಟ್ಟಿ, ಪಿ. ಭಾಸ್ಕರ, ಸಂಕಪ್ಪ ಪೂಜಾರಿಯವರು ಮಾತನಾಡಿದರು.

ಮಜೂರರ ಮೇಲೆ ಲಾಠಿಪ್ರಹಾರ

ಮಂಗಳೂರಿನ ಗ್ರೇಟ್ ಇಂಡಿಯನ್ ಬೀಡಿ ವರ್ಕ್ಸ್‌ನಲ್ಲಿ ಒಬ್ಬ ಕಾನ್‌ಸ್ಟೇಬಲ್ ಮತ್ತು ಐದು ಮಂದಿ ಪೋಲಿಸರು 'ಡ್ಯೂಟಿ'ಯಲ್ಲಿದ್ದ ಸಮಯದಲ್ಲಿ ದಿನಾಂಕ ೧ರಲ್ಲು ರಾತ್ರಿ ಸಾಧಾರಣ ಒಂಭತ್ತು ಗಂಟೆಯ ಸಮಯಕ್ಕೆ ಸುಮಾರು ನೂರುಮಂದಿ ಬೀಡಿ ಕೆಲಸಗಾರರು ಪೋಲೀಸರ ಮೇಲೆ ಕಲ್ಲುಗಳನ್ನೆಸೆದರು. ಇದರಿಂದಾಗಿ ಒಬ್ಬ ಪೋಲೀಸು ಜವಾನನಿಗೆ ತಲೆಗೆ ಪೆಟ್ಟಾಯಿತು. ಈ ಸುದ್ದಿಯನ್ನು ತಿಳಿದ ಪೋಲೀಸ್ ಇನ್ಸ್‌ಪೆಕ್ಟರರು ರಿಜರ್ವ್ ದಳದೊಂದಿಗೆ ಗಲಭೆ ನಡೆದ ಸ್ಥಳಕ್ಕೆ ಬಂದರು. ಕೆಲಸಗಾರರಿಗೆ ಚದರಲು ಆಜ್ಞೆ ಮಾಡಿದರೂ ಅವರು ಚದರಲಿಲ್ಲ. ಆದುದರಿಂದ ಇವರ ಮೇಲೆ ಪೋಲಿಸ್ ದಳದವರು ಲಾಠಿ ಪ್ರಯೋಗ ಮಾಡಬೇಕಾಗಿ ಬಂತು. ಕೆಲವರಿಗೆ ಅಲ್ಪಸ್ವಲ್ಪ ಗಾಯಗಳಾಗಿವೆ. ಮಜೂರರ ಪೈಕಿ ಏಳು ಜನರನ್ನು ಅದೇ ದಿನ ಬಂಧಿಸಲಾಗಿದೆ. ನಂತರ ಅವರನ್ನು ಜಾಮೀನಿನ ಮೇಲೆ ಬಿಡಲಾಗಿದೆ—ಎಂದು ತಿಳಿದು ಬರುತ್ತದೆ.

ಜಿಲ್ಲಾ ಹೋಟೆಲ್ ಮಾಲಕರ ಮಹಾ ಸಭೆಯು-ಇದೇ ತಾ ೨ರಲ್ಲು ಸಂಘದ ಅಧ್ಯಕ್ಷ ಶ್ರೀ ಕೆ. ಎಸ್. ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿಯಾದ ಶ್ರೀ ರಾಮಚಂದ್ರರಾಯರಿಂದ ವರದಿಓದಲ್ಪಟ್ಟಿತು. ಕರ್ನಾಟಕ ಏಕೀಕರಣ ನಿಧಿಗೆ ರೂಪಾಯಿ ೨೦೧/-ಸಹಾಯ ಧನ ಕೊಡುವಂತೆ ನಿರ್ಧಾರವಾಯಿತು.

ಹೆಚ್ಚು ಆಹಾರ ಬೆಳೆಸಿರಿ-ದ. ಕ. ಜಿಲ್ಲಾ ಎಡ್ವಾನ್ಸ್‌ಮೆಂಟ್ ಸೊಸೈಟಿ ಮತ್ತು ಮಂಗಳೂರು ಸೇವಾ ಸಮಿತಿಯ ಆಶ್ರಯದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರ್, ಅವರ ಅಧ್ಯಕ್ಷತೆಯಲ್ಲಿ 'ಹೆಚ್ಚು ಆಹಾರ ಬೆಳೆಸಿರಿ' ಇದರ ವಿಷಯವಾಗಿ ವಿಚಾರ ವಿನಿಮಯ ನಡೆಸಲು ಗವರ್ನಮೆಂಟ್ ಕಾಲೇಜಿನಲ್ಲಿ ಇದೇ ತಾ ೧ರಲ್ಲು ಸಾರ್ವಜನಿಕ ಸಭೆ ಸೇರಿತು.

ಕಳ್ಳ ನೋಟುಗಳಿದ್ದ ಸಂಶಯದಿಂದ ಬಂಧನ-ಕೊಯಮುತ್ತೂರಲ್ಲಿ ಕಳೆದ ತಾ ೨೯ರಲ್ಲು ಮಂಗಳೂರಿನ ಅಹಮ್ಮದ್ ಮೋನು ಎಂಬವರನ್ನು ಅವರೊಡನೆ ಹತ್ತು ರೂಪಾಯಿಗಳ ಕೃತ್ರಿಮ ನೋಟುಗಳಿದ್ದ ಸಂಶಯದಿಂದ ಸಬ್ ಇನ್ಸ್‌ಪೆಕ್ಟರ್ ಶ್ರೀ ಆರ್. ಎಮ್ ಸ್ವಾಮಿನಾಥನ್ ಎಂಬವರು ಬಂಧಿಸಿದರು. ಶ್ರೀ ನರಸಪ್ಪ ಎಂಬವರೂ ಬಂಧಿಸಲ್ಪಟ್ಟರು. ಶ್ರೀ ಸಚ್ಚಿದಾನಂದ ರಾವ್ ಎಂಬವರು ಕೊಯಮುತ್ತೂರು ರೈಲ್ವೆ ಸ್ಟೇಶನಿನಲ್ಲಿ ಬಂಧಿಸಲ್ಪಟ್ಟರು. ಬೊಂಬಾಯಿ ಕಡೆಯಿಂದ ಈ ಮೂವರಿಗೆ ಕೃತ್ರಿಮ ನೋಟುಗಳು ಬರುತ್ತಿದ್ದುವೆಂದು ವರದಿಯಾಗಿದೆ.

WANTED

Applications are invited from Higher Elementary Trained Teachers whose age should not be more than 30 years on 1-7-'48 for employment in the schools under the management of the Labour Department in South Kanara District. The scale of pay will be Rs. 30-1-50 with the usual dearness allowance. Preference will be given in the following order:

1. Harijans or the members of the eligible communities who are ex-army men or women.
2. Harijans or members of the eligible communities who are other than ex-army personnel
3. Other communities who are ex-army personnel
4. Other communities who are other than ex-army personnel.

Applications should reach the District Harijan welfare Officer, South Kanara; Mangalore by 31-5-'48 together with (1) the training Certificate and (2) discharge certificate in the case of ex-army.

Sd. S. R. Kaivar,
Collector,
S. Kanara Collector's Office
MANGALORE.

Date 16—4—48

ಪುಳಿನಾಪುರ ಮಹಾತ್ಮೆ

ಕನ್ನಡ ವಚನ ಗ್ರಂಥ ಅಚ್ಚಿನಲ್ಲಿದೆ.

ಮೊದಲನೇ ಭಾಗದಲ್ಲಿ ದೇವಿ ಭಾಗವತಾಂತರ್ಗತ ಸುರಥ ವೈಶ್ಯರು ಮೃಣ್ಮಯಗಳಿಂದ ಪ್ರತಿಷ್ಠೆಮಾಡಿದ ದೇವಿ ಲೋಕದ ವಿಸ್ತಾರವಾದ ಸ್ಥಳ ಪುರಾಣವೂ—ಎರಡನೇ ಭಾಗದಲ್ಲಿ ಕೊಲ್ಲೂರು, ಕಟೀಲು, ಸುಬ್ರಮಣ್ಯ ಮೊದಲಾದ ದೇವಿ ಅಂಶಗಳನ್ನೊಳಗೊಂಡ ಪೊಳಿನಾಪುರ ಸ್ಥಳ ಮಹಿಮೆಯೂ—ಮೂರನೇ ಭಾಗದಲ್ಲಿ ಅಶೋಕ ಚಕ್ರವರ್ತಿಯ ಕಾಲದಾರಭ್ಯ ಶಿಲಾಶಾಸನ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟ ತಾಮ್ರಶಾಸನ ಇತ್ಯಾದಿ ಆಧಾರಗಳಿಂದ ೭ರದ ಚರಿತ್ರಸಾರವೂ ಇದೆ.

ಆಸ್ತಿಕರಾದ ದೇವಿಭಕ್ತರು ಮುಂದಾಗಿ ತಿಳಿಸಿದವರಿಗೆ ರೂ. ೧ ೮ ೦

೩ ಭಾಗಗಳ ಪುಸ್ತಕಕ್ಕೆ ಬೆಲೆ ರೂ. ೨-೪-೦

ಎನ್. ಎ. ಶೀನಪ್ಪ ಹೆಗ್ಡೆ
ಅಮುಣಿಂಜೆ ಗುತ್ತು, ಪೊಳಲಿ,
Post ಬೆಳ್ಳೂರು, ದ. ಕ.

WANTED

Applications from Secondary Trained and Higher Grade Trained Teachers to serve in the Sarasvathi Vidyalaya Higher Elementary School, Ganguli.

Applications stating the qualifications, experience if any, may be sent before 24-5-1948 to—

The Manager,
S. V. H. E. School.,
GANGULI (S. Kanara)

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ,

O. S. 192/44 R. I. A. 268/45

ಅರ್ಜಿದಾರ— ಕೃಷ್ಣ ಭಂಡಾರಿ

ಎದುರು— ಲಚ್ಚಮ್ಮ ಸೆಡ್ತಿ ಕೂಡಾ

ಕುಂದಾಪುರ ತಾಲ್ಲೂಕು ಕೆರಾಡಿ ಗ್ರಾಮದಲ್ಲಿರುವ ದಾರಮ್ಮ ಸೆಡ್ತಿ ಮಗ 4ನೇ ಎದುರು ರಾಮಯ್ಯ ಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹರಣೆಯಲ್ಲಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 11-6-1948ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ

(Sd) M. ANTHAYA SHETTY,
Advocate for Petr.
Coondapoor, Date 1-5-48.

ಜಯ ಹಿಂದ ದಂತ ಮಂಜನ

जयहिंद दंतमंजन

ಜಯ ಹಿಂದ ದಂತಮಂಜನ

कर्नाटक आयुर्वेद विद्यापीठ फार्मसी बेलगांव.

ಎಲ್ಲ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೨,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು „ „ ೨॥

೬ ರಿಂದ ೯ ತಿಂಗಳು „ „ ೨॥।

ರೂ. ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

ರೇಶನ್ ಕಾರ್ಡುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡ

ಹೆಜಮಾಡಿ–ಹೆಜಮಾಡಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯು, ತಾ 1-5-48ರಲ್ಲು, ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ M. L. C. ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಸುಮಾರು 5-6 ಸಾವಿರ ಜನರು ಕಿಕ್ಕಿರಿದು ನೆರೆದಿದ್ದರು. ಶಾಲಾ ವರದಿವಾಚನವು ಹೆಡ್ಮಾಸ್ಟರ್ ಶ್ರೀ. ಪಿ. ಮಹಾಲಿಂಗ ಶೆಟ್ಟರಿಂದ ಓದಲ್ಪಟ್ಟು, ಸಭಿಕರ ಭಾಷಣಗಳಾಗಿ, ಅಧ್ಯಕ್ಷರಿಂದ ಮಕ್ಕಳಿಗೆ ಇನಾಮು ಹಂಚಿದ ನಂತರ, ಮಂಗಳೂರು ರೇಂಜಿನ ಸೀನಿಯರ್, ಡಿಪ್ಯುಟಿ ಇನ್ಸ್ಪೆಕ್ಟರಾದ ಶ್ರೀ. ಬಿ. ವಿ. ರಮಣ, M. A. L. T. ಇವರು ಶಾಲಾಭಿವೃದ್ಧಿಯನ್ನು ಹಾರೈಸಿ, ಇಡೀ ಜಿಲ್ಲೆಯಲ್ಲಿ ಒಂದನೇ ಸ್ಥಾನವನ್ನು ಪಡೆದು ಕೆಲಸ ಮಾಡುತ್ತಿರುವ, ಸುಮಾರು ಒಂಭು ಸಾವಿರ ಮಕ್ಕಳಿರುವ ಈ ಹಾಯರ್ ಎಲಿಮೆಂಟರಿ ಶಾಲೆಯು, ಶೀಘ್ರದಲ್ಲಿಯೇ ಹೈಸ್ಕೂಲಾಗಿ ಮಾರ್ಪಡುವಂತೆ, ಗ್ರಾಮಸ್ಥರೂ, ಸರಕಾರವೂ ಕೆಲಸ ನಿರ್ವಹಿಸಬೇಕೆಂದು ಕೇಳಿಕೊಂಡರು.

ಅಲ್ಲದೆ, ಮಾನ್ಯ ಅಧ್ಯಕ್ಷರು ಆ ದಿನದ ಕಾರ್ಯಕಲಾಪಗಳನ್ನು ಕೊಂಡಾಡಿ, ಈ ಶಾಲೆಯು ಇದೇ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಾ ಹೋದರೆ, ಬರೇ ಹೈಸ್ಕೂಲು ಮಾತ್ರ ಆಗುವುದಲ್ಲದೆ, ಕಾಲೇಜು ಕೂಡ ಆಗುವ ಯೋಗ್ಯತೆಯನ್ನು ಪಡೆಯಬಹುದೆಂದು ಅರ್ಥಗರ್ಭಿತವಾದ ಭಾಷಣವನ್ನು ಮಾಡಿ, ಶಾಲಾ ಹೊಸ ಕಟ್ಟಡದ ನಿಧಿಗೆ ಉದಾರ ಧನ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದರು.

ಅಧ್ಯಕ್ಷರ ಭಾಷಣದ ನಂತರ, ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳೂ, ಹೆಮ್ಮಕ್ಕಳಿಂದ "ಸಿರಿಯಾಳ" ನಾಟಕವೂ, ಹುಡುಗರಿಂದ "ದೀಪಾವಳಿ" ನಾಟಕವೂ ಅಭಿನಯಿಸಲ್ಪಟ್ಟು, ಧನ್ಯವಾದಗಳನ್ನರ್ಪಿಸಿ, ರಾಷ್ಟ್ರಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

ಸುರತ್ಕಲ್ಲಿನ ಮತ್ತು ಆಸುಪಾಸಿನ ಗ್ರಾಮಗಳ ಜನರ ಮಹಾಸಭೆ. ನಿರ್ಣಯಗಳು–1 ಸುರತ್ಕಲ್ಲು ಮತ್ತು ಆಸುಪಾಸಿನ ೧೬ ಗ್ರಾಮ ನಿವಾಸಿಗಳ ಅತಿ ಹೆಚ್ಚಿನ ಜನಸಾಮಾನ್ಯರ ಪ್ರಚಂಡ ವಿರೋಧವನ್ನು ಧಿಕ್ಕರಿಸಿ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಬಾರಿಬಾರಿಯ ಕೇಳಿಕೆಗಳನ್ನು ಅಲಕ್ಷಿಸಿ, ಎರಡೆರಡು ಸಲ 144 ನೇ ಸೆಕ್ಷನ್ ಜ್ಯಾರಿಗೆ ತಂದು ಸರಕಾರವು ಕೋಣ ಬಲಿಯನ್ನು ನಿಲ್ಲಿಸುವಂತೆ ಮಾಡಿದರೂ, ಕಾಳಿಕಾಂಬ ಮಹಾಮಾಯಿ ಮಾರಿಗುಡಿಯ ಮೊಕ್ತೇಸರರ ಹೃದಯದಲ್ಲಿ ಒಂದಿಷ್ಟಾದರೂ ಬದಲಾವಣೆಯಾಗದೆ, ತಮ್ಮ ಛಲವನ್ನೇ ಹಿಡಿದು ಇನ್ನಾದರೂ ಕೋಣಬಲಿ ಕೊಟ್ಟೇ ತೀರಬೇಕೆಂಬ ಹವ್ಯಾಸದಲ್ಲಿರುವ ಈ ಧೋರಣೆಯು ಸ್ವಾಭಾವಿಕ ಹಾಗೂ ಗಂಡಾಂತರದ್ದಿರುವುದರಿಂದ, ಇಂತಹ ಧೋರಣೆಯನ್ನು ಅವರು ಬಿಟ್ಟುಕೊಟ್ಟು, ಊರ ಮಹಾಜನರ ಹಾಗೂ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸೌಹಾರ್ದಪರ ಸಹಕಾರದಿಂದ ಶ್ರೀ ದೇವಿಯ ಪೂಜೆಯನ್ನು ಸಾತ್ವಿಕ ವಿಧಾನಗಳಿಂದ ನಡೆಯಿಸಿ, ಊರಿನ ಕ್ಷೋಭೆಯನ್ನು ನಿವಾರಿಸಿ, ಶಾಂತ ಹಾಗೂ ಪ್ರೇಮಪರ ವಾತಾವರಣವನ್ನು ಸುರತ್ಕಲ್ಲಿನಲ್ಲಿ ಸ್ಥಾಪಿಸಲು ನೆರವಾಗಬೇಕೆಂದು ಈ ಸಭೆಯು ಸದ್ರಿ ಕಾಳಿಕಾಂಬ ಮಾರಿ ಗುಡಿಯ ಮೊಕ್ತೇಸರರನ್ನು ಪುನಃ ಒತ್ತಾಯಪಡಿಸಿ ಕೇಳಿಕೊಳ್ಳುತ್ತದೆ.

2. ಊರವರ ಮತ್ತು ಕಾಂಗ್ರೆಸ್ ಕಮಿಟಿಯ ಕೊನೆಯ ಕೇಳಿಕೆಯನ್ನು ಕೂಡಾ ಸದ್ರಿ ಮೊಕ್ತೇಸರರು ಧಿಕ್ಕರಿಸಿ, ತಮ್ಮ ಹಠವನ್ನೇ ಸಾಧಿಸಲು ಮುಂದಾದರೆ, ಈ ಪ್ರಾಣಿ ಬಲಿಯು ನಿರಂತರವಾಗಿ ನಿಲ್ಲಿಸಲ್ಪಡುವಂತೆ, ನಮ್ಮ ಜನತಾ ಸರಕಾರವು ಯುಕ್ತವಾದ ಕಾರ್ಯ ಭಾಗವನ್ನು ಕೂಡಲೇ ಕೈಕೊಳ್ಳಬೇಕೆಂದೂ, ಈ ಪ್ರಶ್ನೆಯನ್ನು ಈಗಿನಂತೆ ಕ್ಷೋಭೆಯ ಸ್ಥಿತಿಯಲ್ಲಿ ಇನ್ನು ಮುಂದೆ ಇರಿಸಬಾರದೆಂದೂ, ಅದರಿಂದಾಗಿ ಪರಿಸ್ಥಿತಿಯು ವಿಷಮವಾಗಿ ಕೈ ಮೀರಿ, ಅನಿರೀಕ್ಷಿತ ಪರಿಣಾಮಗಳು ಸಂಭವಿಸಲಿರುವುವೆಂದೂ, ಈ ಸಭೆಯು ಅಭಿಪ್ರಾಯವನ್ನು ಏಕಕಂಠವಾಗಿ ಸೂಚಿಸುತ್ತದೆ.

ಈ ಮೇಲಣ ನಿರ್ಣಯಗಳನ್ನು ಜಿಲ್ಲಾ ಕಲೆಕ್ಟರರವರಿಗೂ, ಮದ್ರಾಸ್ ಸರಕಾರದ ಪ್ರಧಾನ ಮಂತ್ರಿಗಳಿಗೂ, ಜಿಲ್ಲೆಯ ಶಾಸನ ಸಭೆಯ ಸದಸ್ಯರೆಲ್ಲರಿಗೂ, ಕಾಳಿಕಾಂಬ ಮಾರಿಗುಡಿಯ ಮೊಕ್ತೇಸರರಿಗೂ ಕಳುಹಿಸಬೇಕೆಂದು ನಿರ್ಣಯಿಸಲಾಯಿತು. ಹಾಗೆ ಕಳುಹಿಸಿಕೊಡಲು, ಇಂದಿನ ಸಭಾಧ್ಯಕ್ಷರನ್ನು ಅಧಿಕರಿಸಲಾಯಿತು.

ಶ್ರೀ. ಯು. ವಾಸುದೇವ ಭಟ್,
ಅಧ್ಯಕ್ಷರು.

ಸುರತ್ಕಲ್ ತಾ. 4-5-48.

ಮಣಿಪುರ:– ಇಲ್ಲಿಯ ಬೋರ್ಡು ಪ್ರಾಥಮಿಕ ಶಾಲಾ ವರ್ಧಂತ್ಯುತ್ಸವವು ತಾ. 30-4-48ರಲ್ಲು ಶ್ರೀ. ವೈ ಗೋಪಾಲ್, ಬಿ. ಎ., ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಸ್ವಾಗತಗೀತೆ, ವರದಿ ವಾಚನ, ಬಹುಮಾನ ವಿತರಣೆ, ಸಭಿಕರ ಭಾಷಣಗಳು ನಡೆದ ನಂತರ ಶಾಲಾ ಬಾಲಬಾಲಕಿಯರು 'ಉತ್ತರೆಯ ಪರಿಣಯ' ಎಂಬ ಸಂಗೀತ ನಾಟಕವನ್ನು ಮನೋರಂಜಕವಾಗಿ ಅಭಿನಯಿಸಿದರು. ಬಹುಮಾನ ವಿತರಣೆಯಾದ ಮೇಲೆ ವಿದ್ಯೆಯ ಮಹತ್ವಿಕೆಯ ಕುರಿತು ಅಧ್ಯಕ್ಷರು ಬೋಧಪ್ರದ ಭಾಷಣವನ್ನಿತ್ತರು. ('ಬಭ್ರುವಾಹನ ಕಾಳಗ' ಎಂಬ ಯಕ್ಷಗಾನ ಬಯಲಾಟವು ಉತ್ತಮವಾಗಿ ಅಭಿನಯಿಸಲ್ಪಟ್ಟಿತು. ಧನ್ಯವಾದ ಸಮರ್ಪಣೆ ಮಂಗಲಗೀತೆಯೊಂದಿಗೆ ಸಭೆಯು ಚದರಿತು.

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ
ಹೋಗಗೊಳಿಸಿ ಶುಚಿಪಡಿಸುವ
ಹಲ್ಲು ಪುಡಿ
ಒಂದು ತೊಲೆ ಕಟ್ಟು 1ರ 0 1 0
ಏಜಂಟರಿಗೆ ಧಾರಾಳ ಕಮಿಶನ್
ಕೊಡಲಾಗುವುದು.
ದಿ ಮಹಾಜನ ಸಿ ಎಂಡ್ ಕೊ.
ಲಿಮಿಟೆಡ್,
ಕಾಸರಗೋಡು, ದ. ಇಂಡಿಯ.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶೀ... ...ಸ್ಖಲನ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳೆನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಸಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರೆದಲ್ಲಿ ರೋಗಗಳ, ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್.(3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೋ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ
ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಶ್ರೀ ದುರ್ಗಾ ಭವನ, ಮೂಲ್ಕಿ. ಯಂ. ಆರ್. ಭಟ್, (ಆರ್ಟಿಸ್ಟ್) ವ್ಯವಸ್ಥಾಪಕ.

NEO ROYAL CAFE,
Boarding & Lodging,
Santhekatte, UDIPI,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯವಂತರಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಟಿಪ್ಪಿನ ಬಾಟ್ಲಿಗಳು ಹೆಚ್ಚು ಕಡಿಮೆ ಆರಿದಿವಸಗಳಿಗೆ ಬರುವವು. ಅಂದರೆ ಕೇವಲ ೯ ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಥಾನಿಕರು– ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

[೧ನೇ ಪುಟದಿಂದ]

ಟ್ರೂಮನ್‌ನ್ನು ಹಿಂತೆಗೆಯಿಸಿ, ಆಸೋಲೆ ಡೂಗ್ಲಾಸಿಗೆ ಪಟ್ಟಗಟ್ಟಬೇಕಾಗಬಹುದೆಂದೂ ಕೆಲವರ ಮತ. ಹೆನ್ರಿವಾಲೇಸನ ಉಪಟ್ಯಾಪದ ದೆಸೆಯಿಂದ 'ರಿಪಬ್ಲಿಕನ್' ಉಮೇದುವಾರನು ಅಧ್ಯಕ್ಷನಾಗುವುದನ್ನು ತಪ್ಪಿಸುವುದಕ್ಕೆ ಇದೊಂದೇ ದಾರಿ; ಅನ್ಯಥಾ ಶರಣಂ ನಾಸ್ತಿ......

'ರಿಪಬ್ಲಿಕನ್' ರಿಗೆ ಐಸೆನ್‌ಹಾವರ್ ಎಂದರೆ ಎದೆನಡುಕ; ಅವನು ಮುಂದೆಬರದಿದ್ದರೆ ತಮಗೆ ಜಯ ಖಂಡಿತವೆಂದು ಅವರೂ ನಂಬಿದ್ದಾರೆ. ಪ್ರಗತಿಶೀಲ ರಿಪಬ್ಲಿಕನರ ಮತ ವಾಲೇಸ್‌ಗೆ ಹೋಗುವುದು ಅಸಂಭವ; ಆದರೆ ಆತ ಟ್ರೂಮನ್ನಿನ ಮತಗಳಲ್ಲಿ ಎಳೆಂಟು ಮಿಲಿಯ ದಾಟಿಸಿ ಬಿಟ್ಟರೆ ತಮಗನುಕೂಲವೇ. 'ಟಾಫ್ಟ್‌'ಗೆ ಆಸೆಯೇ ಇಲ್ಲ. ಓಟಿನ ವ್ಯಾಪಾರ ಸುರುವಾದೊಡನೆ ಸಿನೇಟರ್ 'ವ್ಯಾಂಡೆನ್ ಬರ್ಗ್'ನೇ ಗೆದ್ದರೂ ಆಶ್ಚರ್ಯವಿಲ್ಲ. ಅವನ ಮಧ್ಯಮಾರ್ಗ ಮಾಲಿಕರಿಗೂ, ಕೂಲಿಕಾರವರ್ಗಕ್ಕೂ ಇದ್ದುದರಲ್ಲಿ ಕ್ಷೇಮಕರವೆನಿಸೀತು. ಅಲ್ಲದೆ ಕ್ರಮಶಃ 'ಟಾಫ್ಟ್' ಮತ್ತು 'ಸ್ಟ್ಯಾಸನ್' ಕೂಡ ತಮ್ಮ ಓಟನ್ನು ಅವನಿಗೇ ಬಿಟ್ಟುಕೊಟ್ಟರೆ, 'ಡ್ಯೂಯಿ'ಯ ಕತೆ ಮುಗಿದಹಾಗೆಯೆ.

ವಾಲೇಸ್‌ನ ಹರಿತವಾದ ಮಾತುಗಳನ್ನು ಕೇಳಿ ಮರುಗದವರಿಲ್ಲ; ಅವನ ಬೆಂಬಲಕ್ಕೆ ನಿಂತಿರುವ ಒಳ- ವಲಯ (ಕಮ್ಯೂನಿಸ್ಟ್ ಸಹಿತ ವಲಯ) ವನ್ನು ನೋಡಿ ನಗುವ ಮರಿಯದವರಿಲ್ಲ. ಜನಸಾಮಾನ್ಯರಿಗೆ ಅವನ ಮಾತು ಕೇಳಲು, ಕೇಳಿದ ಮೇಲೆ ಬಹಳ ಹುಮ್ಮಸ್ಸು. ಯುವಕರಿಗೆ ಆತನೇ ಆರಾಧ್ಯ ದೇವತೆ. ಟ್ರೂಮನ್ನನ ಖ್ಯಾತಿ ಇಳಿದ ಹಾಗೆ ವಾಲೇಸನ ಬಲವರ್ಧಿಸುವುದರಲ್ಲಿ ಶಂಕೆ ಇಲ್ಲ. ಮೊನ್ನೆ ಫೆಬ್ರವರಿಯ ವರೆಗೆ ನಗುತ್ತಿದ್ದ "ಡೆಮೊಕ್ರಟ್"ರಿಗೆ ನ್ಯೂಯಾರ್ಕ್ ನಗರದಲ್ಲಿ ವಾಲೇಸನ "ಥರ್ಡ್‌ಪಾರ್ಟೀ" ಉಮೇದುವಾರನಾದ "ಇಸಾಕ್‌ಸನ್" ಡೆಮಾಕ್ರಟ್ ಇದಿರಾಳಿಯನ್ನು 22,697 ವಿರುದ್ಧ 12,578 ಮತಗಳಿಗೆ ಸೋಲಿಸಿದ ಮೇಲೆ, ಎದೆ ನಡುಕಹುಟ್ಟಿದೆ. ನ್ಯೂಯಾರ್ಕ್ ನಗರದ ಜನಪ್ರಿಯ ಮೇಯರನಾದ ಓಡಾಯರ ಮತ್ತು ಸತಿ ರೂಸ್‌ವೆಲ್ಟ್ ಅವರ ಬೋಧನೆಯೂ ವಿಫಲವಾದದ್ದನ್ನು ನೋಡಿ ಅವರ ನಂಬುಗೆ ಹೆಚ್ಚಿದೆ. ಯಾಕೆಂದರೆ ಈ ನ್ಯೂಯಾರ್ಕ್ ವಿಜಯದಲ್ಲಿ ಕೆಲವೊಂದು ಗೂಢಗಳಿವೆ: (೧) ಇತರ ನಗರಗಳಲ್ಲಿ ಗೆಲವು ಸುಲಭವಾಗುತ್ತೆ. (2) ನ್ಯೂಯಾರ್ಕಿನ ೪೭ ಇಲೆಕ್ಟೋರಲ್ ಮತಗಳಿಲ್ಲದೆ ಟ್ರೂಮನ ಮೇಲೆ ಬರಲಾರ. (3) ಈ ವಿಜಯದ ಮೇಲೆಯೇ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷ ಮೆಕ್‌ಗ್ರಾತ್ ವಾಲೇಸನ್ನು ಬಹಿರಂಗವಾಗಿ ಆಕಾಶವಾಣಿಯ ಮೂಲಕ ಮರಳಿ ತನ್ನ ಹಿಂದಿನ ಪಕ್ಷವನ್ನೇ ಸೇರಬೇಕೆಂದು ಕಳಕಳಿಯಿಂದ ಕರೆಗೊಟ್ಟದ್ದು. ಆದರೆ ಹೆನ್ರಿವಾಲೇಸ್ ಆಡುದೆನ್ನಲೂ ಇಲ್ಲ, ಅಲ್ಲೆನ್ನಲೂ ಇಲ್ಲ.

ಅಲ್ಲದೆ ದಕ್ಷಿಣದ ಸ್ಟೇಟ್ಸ್‌ಗಳು ಟ್ರೂಮನ್ನನ 'ಫೆಡರಲ್ ಫೇರ್ ಎಂಪ್ಲೋಯ್‌ಮೆಂಟ್ ಪ್ರೇಕ್ಟಿಸಸ್' ಕಮಿಶನ್ ಮತ್ತು 'ಎಂಟೀ ಲಿಂಚಿಂಗ್' [ಅಂದರೆ ನಿಗ್ರೋಗಳ ಚಿತ್ರವಧೆ ನಿಲ್ಲಿಸುವ ಕಾಯಿದೆ] ಕಾಯಿದೆಗಳ ದೆಸೆಯಿಂದಾಗಿ ಅವನ ಮೇಲೆ ರೇಗಿ ಬಿಟ್ಟಿವೆ. ಎಷ್ಟರಮಟ್ಟಿಗೆ ಎಂದರೆ 'ಅರ್ಕಾನ್ಸಸ್'ನಲ್ಲಿ ಮೊನ್ನೆ ಒಂದು ಡಿನ್ನರ್‌ಪಾರ್ಟಿಯ ಸಮಯ ಟ್ರೂಮನ್ನನ ಆಕಾಶವಾಣಿ ಭಾಷಣ ಧ್ವನಿವರ್ಧಕದಲ್ಲಿ ಕೇಳಿಸಿದೊಡನೆ ಅರ್ಧಕ್ಕರ್ಧ ಜನರು ರೋಷದಿಂದ ಹೊರ ನಡೆದರು. ಜನರಹಿತವಾದ ಮೇಜುಗಳೂ ಟ್ರೂಮನ್ನನ ಮೇಲಿನ ಅಸಂತೋಷವನ್ನು ಘೋಷಿಸುತ್ತಿದ್ದವು. ಹೀಗಾಗಿ ಅತ್ತ ಡೆಮಾಕ್ರಟಿಕ್ ಪಕ್ಷದ ಬಲಭಾಗವೂ, ಇತ್ತ ಎಡಭಾಗವೂ, ಏಕಕಾಲದಲ್ಲಿ ಛಿಶ್ಶಕ್ತರಾಗಿವೆ. ಕೊನೆಯದಾಗಿ ರಿಪಬ್ಲಿಕನರ ಒಂದು ಚಾಟೂಕ್ತಿಯನ್ನವಲೋಕಿಸೋಣ: 'ಬೆಂಜಮಿನ್ ಫ್ರಾಂಕ್ಲಿನ್ ಸುಳ್ಳು ಹೇಳಲೇ ಇಲ್ಲ. ರೂಸ್‌ವೆಲ್ಟ್ ಸತ್ಯ ನುಡಿಯಲಿಲ್ಲ. ಟ್ರೂಮನ್‌ಗೆ ಸುಳ್ಳು-ಸತ್ಯಗಳ ಭೇದವೇ ಗೊತ್ತಿಲ್ಲ.' ಹೇಗಿದೆ?

ಒಳ್ಳೆಯ ಡೆಮೊಕ್ರಟರೂ, ಒಳ್ಳೆಯ ರಿಪಬ್ಲಿಕನರೂ ಇಬ್ಬರೂ 'ವಾಲೇಸ್'ನನ್ನು ದ್ವೇಷಿಸುತ್ತಾರೆ. ಅವನು ಕಮ್ಯೂನಿಸ್ಟರ ಸೆರೆಯಾಳೆಂದು ತಿಳಿಯುತ್ತಾರೆ. ಅಲ್ಲವಾದರೆ ಲಾಸ್ಕಿ ಹೇಳುವಂತೆ ಅವನು ಜೋಕೊಸ್ಲೊವಾಕಿಯಾದ ಕುರಿತು ಮಾಡಿದ ಬೇಜವಾಬ್ದಾರೀ ಹೇಳಿಕೆಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಅವನಲ್ಲಿ ಅಜರಂಜಿಯಂಥ ಗುಣಗಳಿದ್ದರೂ, ತಾನು ನೋಡಬೇಕೆಂದಿರುವುದನ್ನೇ ಕಾಣುವ ಅವನ ಸ್ವಭಾವ, ತನ್ನ ದೃಷ್ಟಿಕೋನಕ್ಕೆ ಸ್ವಗುಡದವರ ಮೇಲೆ ಅಯಾಚಿತವಾದ ಕೋಪ, ಇವುಗಳನ್ನೂ, ಲೆಕ್ಕ ಹಿಡಿಯಬೇಕು. ಆದರೆ 'ಯುದ್ಧಜ್ವರ'ದ ವಿರೋಧಿಗಳು ಬೆಳೆದ ಹಾಗೆ ವಾಲೆಸನಿಗೆ ಮಿಲಿಯಗಟ್ಟಲೆ ಮತ ಸಿಗುತ್ತವೆ. ಹಾಗೆ ವಾಲೇಸ್ ಒಂದು ಪಕ್ಷ ತಾನು ಬಯಸಿದ್ದನ್ನು ದೊರಕಿಸಿಕೊಳ್ಳದಿದ್ದರೂ, ಟ್ರೂಮನ್ನನಿಗೆ ದಾರಿ ತೋರಿಸುವುದರಲ್ಲಿ ಸಂಶಯವೇ ಇಲ್ಲ.

ದಿ ಮುಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ.8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MRS. P. DEVEE, P. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಬಾಲಕರು ಆರೋಗ್ಯಶಾಲಿಯರಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜೆಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸ ದಾ ಅಳುತ್ತ ಕಳೆಗುಂದಿರುವ ಮಕ್ಕಳು.

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಸುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಜಿಸ್ಟರ್ಡ್)

ಕುಂಜಾಲು, ಪೊ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:-

ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. Sharma, Mangalore.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂಬೆಕ್ಕೆ ಸರಿಯದಿದ್ದರೆ, ಶರೀರದ ಸುಟ್ಟಿ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಕೀರು ಇಳಿದಿದ್ದರೆ, ಉಡುಪು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟುಗರ್ಭಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

The Vijaya Bank Limited.

All our good wishes for a happy and prosperous new yer

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3½% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಚನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕಿಮ್ಮತ್ತ, ಹಾವೇರಿ ಬ್ಯಾಡಗಿ.

Nambiar's

ARYA VAIDYA SALA
UDIPI

Ideal House for Ayurvedic Treatment.

T. N. Kelu Nambiar,
Vaidya.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

20-5-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೩೭

NAVAYUGA WEEKLY, UDIPI.
FOUNDER: Hon'ble Mr. A. B. SHETTY, Health Minister, Govt. of Madras.

Vol. 28
No. 37

ಕಾಲೋಚಿತ ಪ್ರಸಿದ್ಧರು.

ದೇಶ, ಸ್ಥಳ, ಅಥವಾ ವ್ಯಕ್ತಿಯ ಪ್ರಾಮುಖ್ಯತೆಯು ಎಲ್ಲಾ ಕಾಲಗಳಲ್ಲಿಯೂ ಏಕ ಪ್ರಕಾರವಿರುವುದಿಲ್ಲ. ಒಮ್ಮೆ ಹಿಟ್ಲರನ ಯುಗವಿದ್ದಿದ್ದರೆ, ಮತ್ತೊಮ್ಮೆ ಚರ್ಚಿಲ್ಲರ ಕಾಲ ಬಂದಿತ್ತು. ಒಂದು ಕಾಲದಲ್ಲಿ ಜರ್ಮನಿಯ ಕಡೆಗೆಲ್ಲರೂ ನೋಡುತ್ತಿದ್ದರೆ, ಈಗ ಪ್ರತಿಯೊಬ್ಬರೂ ಅಮೇರಿಕದ ಕಡೆಗೆ ನೋಡುವಂತಾಗಿದೆ. ಝೆಕೋಸ್ಲೋವೇಕಿಯ, ಪೋಲೆಂಡ್, ಫಿನ್ಲೆಂಡ್, ವರ್ಸೇಲ್ಸ್, ಡಾನ್ಜಿಗ್, ರೈನ್ ಹೊಳೆ, ಸಿಗ್‌ಫ್ರೈಡ್ ಮೆಜಿನೋ ಗೋಡೆಗಳು ಇತ್ಯಾದಿ ಬೇರೆ ಬೇರೆ ದೇಶ ಮತ್ತು ಊರುಗಳೂ ಹೊಳೆ ಸಂಕಗಳೂ ಒಂದೊಂದು ಕಾಲದಲ್ಲಿ, ಒಂದೊಂದು ಕಾರಣದಿಂದ ಲೋಕ ಪ್ರಸಿದ್ಧಿ ಪಡೆದಿದ್ದುವು. ಅಂತೆಯೇ ವ್ಯಕ್ತಿಗಳ ಭಾಗ್ಯಚಕ್ರ ಕೂಡಾ. ಚರ್ಚಿಲ್, ಸ್ಟಾಲಿನ್, ಹಿಟ್ಲರ್, ಮುಸಲಿನಿ, ರೂಸವೆಲ್ಟ್, ಈಸನ್‌ಹೋವರ್, ಮೊಂಟಗೋಮೆರಿ, ಚಿಯಾಂಗ್-ಕೈ-ಶೇಕ್, ಅಟ್ಲಿ, ಈಡೆನ್, ಬೆವಿನ್,-ಮುಂತಾದವರ ಕೀರ್ತಿ ಎಲ್ಲಾ ಕಾಲಗಳಲ್ಲೂ ಏಕ ಪ್ರಕಾರವಿರಲಿಲ್ಲ. ಭಾರತದಲ್ಲಾದರೂ ವಿಸೆಂಟರ ಕಾಲ, ತಿಲಕರ ಅವಧಿ, ಗಾಂಧೀ ಯುಗ, ನೇತಾಜೀ ಯುಗವೆಂದು ಕಾಲಾನುಗುಣವಾಗಿ ಭಿನ್ನ ವ್ಯಕ್ತಿ ಪ್ರಭಾವ ತೋರಿ ಬಂದುದಿದೆ; ಕಳೆದ ಒಂದೆರಡು ವಾರಗಳಲ್ಲಿ "ಮದ್ರಾಸಿನ ನರಿ" ಯೆಂಬುದರಿಂದಾರಂಭಿಸಿ 'ಲೋಕದ ಅತಿ ಚತುರ ರಾಜಕಾರಣಿಗಳಲ್ಲೊಬ್ಬ' ಎಂಬಲ್ಲಿವರೆಗೂ ಇಡೀ ಪ್ರಪಂಚದಲ್ಲಿ ಮಿಕ್ಕ ಹಿಂದೀ ನಾಯಕರಿಗಿಂತ ಹೆಚ್ಚಾಗಿ ನಾಮಸ್ಮರಣೆಯಾದುದು ರಾಜಾಜಿಯದು. ಆ ... ಕೊಡಲು ಭಾರತೀಯರಿಗೆ ನಾಮ ಪರಿಚಯವೂ ಇಲ್ಲದಿದ್ದ 'ಇಂಫಾಲ್' ಮೈದಾನಿನ ಹೆಸರು ಯುದ್ಧಕಾಲದಲ್ಲೊಮ್ಮೆ ನೇತಾಜೀ ಬೋಸರ ಸೇನೆಯಲ್ಲಿಗೆ ನುಗ್ಗಿದಾಗ ಎಲ್ಲರ ನಾಲಿಗೆಯಲ್ಲೂ ನಲಿದಾಡುತಿತ್ತು; ಹಾಗೆಯೇ ಮರೆತು ಹೋಗಿದ್ದ ಕೆಂಪು ಕೋಟೆಯ ಹೆಸರಿಗೂ ಒಮ್ಮೆ ತೇಜ ಬಂದುದಿದೆ. ಗಾಂಧಿಜೀಗೆ ಗುಂಡಿಕ್ಕುವ ಮೊದಲು ನಾಥೂರಾಮ್ ಗೋಡ್ಸೆಯೆಂಬ ಮನುಷ್ಯನಿದ್ದಾನೆಂಬುದು ಆತನ ಸಂಗಡಿಗರಿಗೆ ಮಾತ್ರ ಗೊತ್ತಿದ್ದಿರಬಹುದು. ಈಗ ಈ ಹೆಸರಿನ ಒಂದು ಭೀಕರ ಕಾರ್ಕೋಟಕವಿದೆಯೆಂಬುದು ಲೋಕಕ್ಕೇನೇ ತಿಳಿದಿಲ್ಲವೆ?

ಹಿಂದೀಯರ ಪಾಲಿಗೆ

ಗಾಂಧಿಜೀಯ ಕೊಲೆಯ ಸಂಬಂಧವಾಗಿ ಈಗ ತಾನೆ ವಿಚಾರಣೆಗೆ ನಿಲ್ಲಲಿರುವ ಒಂಭತ್ತು ಮಂದಿಯ ಹೆಸರುಗಳು ಇನ್ನು ಕೆಲಕಾಲ ಹಿಂದೀಯರೆಲ್ಲರ ನಾಲಿಗೆಯಲ್ಲೂ ನಲಿದಾಡಲಿವೆ. 1. ನಾಥೂರಾಮ್ ವಿನಾಯಕ ಗೋಡ್ಸೆ, 2 ನಾರಾಯಣ ದತ್ತಾತ್ರೇಯ ಆಪ್ಟೆ, 3 ವಿಷ್ಣು ರಾಮ ಕರ್ಕರೆ, 4 ದಿಗಂಬರ ರಾಮಚಂದ್ರ ಬಾಡ್ಗೆ, 5. ಮದನಲಾಲ್, 6. ಶಂಕರ್, 7. ಗೋಪಾಲ ವಿನಾಯಕ ಗೋಡ್ಸೆ, 8. ವಿನಾಯಕ ದಾಮೋದರ ಸಾವರ್ಕರ್, 9. ದತ್ತಾತ್ರೇಯ ಸದಾಶಿವ ಪರ್ಚುರೆ.- ಈ ಒಂಭತ್ತು ಮಂದಿಯ ಪೈಕಿ ಒಂದು ಕಾಲದಲ್ಲಿ ಎಲ್ಲಕ್ಕಿಂತ ಮುಂದಾಗಿ ನಾಮೋಚ್ಚಾರಣೆಯಾಗಿದ್ದ ಹೆಸರೊಂದಿದೆ - ವಿನಾಯಕ ದಾಮೋದರ ಸಾವರ್ಕರರದು ಎರಡನೆಯದಾಗಿ, ಪ್ರಳಯದಲೆಯಂತ ಘಕ್ಕನೊಮ್ಮೆ ಲೋಕವ್ಯಾಪಿಯಾಗಿದ್ದ ನಾಥೂರಾಮ್ ವಿನಾಯಕ ಗೋಡ್ಸೆಯ ಹೆಸರನ್ನು ಬಿಟ್ಟರೆ, ಆ ಮೊದಲು ಗಾಂಧಿಜೀಯ ಪ್ರಾರ್ಥನಾಸಭೆಯಲ್ಲಿ ಬೋಂಬಿಟ್ಟವನೆಂದು ಕೇಳಿ ಬಂದಿದ್ದ ಮದನಲಾಲನ ಮೂರನೇ ಹೆಸರಿದೆ. ಈ ಮೂವರ ವಿನಹ ಮಿಕ್ಕ ಹೆಸರುಗಳು ವಿಶೇಷ ಪ್ರಸಿದ್ಧಿಗೆ ಬಂದಿರುವುದು ಈ ಬಾರಿ ಹೊಸತಾಗಿ. ಆದ್ದರಿಂದ ಕೇವಲ "ಹೆಸರುಗಳಿಸುವದು" ಅಷ್ಟೊಂದು ಪ್ರಯಾಸದ್ದೇನೂ ಅಲ್ಲವೆಂಬ ಭರವಸೆಯನ್ನು ಕೀರ್ತಿಕಾಮಿಗಳು ಈ ಮೂಲಕ ಹೊಂದಬಹುದು. ಬೊಂಬಾಯಿಯಲ್ಲಿ ಶ್ರೀ ಖೇರರ ಹೆಸರನ್ನು, ಮದ್ರಾಸಿನಲ್ಲಿ ಶ್ರೀ ಓಮಂದೂರರ ಹೆಸರನ್ನು, ಅವರು ಪ್ರಧಾನಿಗಳಾಗುವ ಮೊದಲು ಬಹಳ ಮಂದಿ ಅರಿತಿರಲಿಲ್ಲ, ಅಂತೆಯೇ ಇವರಿಗಿಂತ ಮೊದಲು ಕೇಳಿ ಬರುತ್ತಿದ್ದ ಹೆಸರುಗಳು ಈಗ ಎಲ್ಲಿವೆ ಎಂಬುದನ್ನು ಹುಡುಕಿಯೇ ಕಂಡುಹಿಡಿಯಬೇಕು. ಹೀಗಿದೆ ಸಾರ್ವಜನಿಕ ಮನೋವೃತ್ತಿ; ಇಷ್ಟಿದೆ ಜನತೆಯ ಜ್ಞಾಪಕ ಶಕ್ತಿ! ಒಬ್ಬನು ಯಾವುದಾದರೊಂದು ಸ್ಥಾನಕ್ಕೇರುವುದಾಗಲೀ, ಧ್ಯಾನಕ್ಕೇನೇ ಬಾರದೆ ಹೋಗುವದಾಗಲೀ ಸುಲಭ ಚರಜೀವಿಯಾದುದು ಈ ಪ್ರಪಂಚದಲ್ಲೇ ಇಲ್ಲ.

ಕಾಲಾನುಗುಣ ವ್ಯತ್ಯಾಸ

ಹೌದು, 'ಅಳಿವುದು ಕಾಯ, ಉಳಿವುದು ಕೀರ್ತಿ' ಎಂಬ ಗಾದೆಗಳೂ ವಾದಗಳೂ ಇರುವುದೇನೋ ನಿಜ. ಆದರೆ ಆ ಉಳಿತಾಯ ಕೂಡಾ ಎಲ್ಲಿ ವರೆಗೆ, ಮತ್ತೆಷ್ಟು ಎಂಬ ಪ್ರಶ್ನೆಯಿದ್ದೇ ಇದೆ. 'ಗತ ವೈಭವದ ಸ್ಮರಣೆ ಮತ್ತು ಗತಕಾಲದ ಆಗುಹೋಗುಗಳನ್ನು ಮರೆತುಬಿಟ್ಟು ನವಜೀವನವನ್ನಾರಂಭಿಸೋಣ' ಎಂಬುದೇ ಈಗ ಎಲ್ಲೆಲ್ಲ ಕೇಳಿಬರುತ್ತಿರುವ ಉಪದೇಶ. ಅಂದ ಮೇಲೆ ಹಿಂದಾಗಿ ಹೋದ ಕಾರ್ಯಗಳೂ ಕಾರಣಕರ್ತರೂ ಮನೋಪಟಲದಿಂದ ಮರೆಯಾಗಬೇಕೆಂಬುದೇ ನೀತಿ. ಮೇಲಾಗಿ ಮಾತು ಬರೆಹಗಳು ಚುಟುಕಾಗಿದ್ದರೇನೇ ಕೇಳುವಷ್ಟು ಓದುವಷ್ಟು ಸಹನೆ ಮಾತ್ರವಿರುವ ಜನ ಈಗಿನವರು. ಅವರ ಬುದ್ಧಿಶಕ್ತಿಗೆ ಬೇಕಾದಷ್ಟು ಕೆಲಸ ಕೊಡಲು ಪ್ರಚಲಿತ ಸಮಸ್ಯೆಗಳೇ ಸಾಕಾಗಿವೆ. ಆದ್ದರಿಂದ ಕಳೆದುಹೋದ ಕೀರ್ತಿವಂತರೂ ಆಗಿಹೋದ ಮಹತ್ಕಾರ್ಯಗಳೂ ಈಗ 'ಅಜ್ಞಾತ'ಗಳ ಪಂಕ್ತಿಗೆ ಸೇರಿವೆ. ಇದಕ್ಕೇನೇ "ಶಾಶ್ವತ ಕೀರ್ತಿ" ಎಂಬ ಹೆಸರು ಕೊಡಬಹುದಾದರೆ ಕೀರ್ತಿ ಉಳಿಯುದೆಂಬ ಸಮಾಧಾನ ಸತ್ಯವಾದುದು. ಆದರೂ ಹಿಂದಿನ ಕಾಲದ ಯಶಸ್ಸಿನ ಪರಿಮಾಣವು ಈ ಕಾಲದಲ್ಲಿ ಬೇರೊಂದು ರೀತಿಯಲ್ಲಿ ತುಂಬುತ್ತಿದೆಯೆಂಬುದನ್ನು ಮರೆಯಲಾಗದು. ಹಳೇ ಕಾಲದಲ್ಲಿ ಅತಿ ಪ್ರಯಾಸದ ಮಹತ್ಕಾರ್ಯಗಳ ಸಾಧನೆಯಿಂದ ಕೈಗೂಡುತ್ತಿದ್ದ ಕೀರ್ತಿಯಾದರೋ ಕಿರಿ ಕ್ಷೇತ್ರದಲ್ಲಿ ಮಾತ್ರ ವ್ಯಾಪಿಸುತಿತ್ತು; ಆದರದು ಚಿರಕಾಲ ಬಾಳುತಿತ್ತು. ಆಧುನಿಕ ಯುಗದ ಕೀರ್ತಿಯ ಆಯುರ್ಮಾನವು ಈಗಿನ ಮಾನವರ ಆಯುಷ್ಯದಂತೆ ಗಿಡ್ಡವಾದರೂ ಆ ಕೀರ್ತಿಯ ಸಂಪಾದನೆ ಸುಲಭವಿರುತ್ತದೆ; ವ್ಯಾಪನೆಯ ರಂಗವಿಸ್ತಾರವಿರುತ್ತದೆ. ಅರ್ಥಾತ್ ಗತಕಾಲಗಳಲ್ಲಿ ಯಶಸ್ಸಿನಾಯುಷ್ಯ ಉದ್ದವಿದ್ದರೆ ಈ ಕಾಲದಲ್ಲಿ ಯಶಸ್ಸಾಂಗಣ ದೊಡ್ಡದಿದೆ. ಈಗಿನಂತೆ ಲೋಕವ್ಯಾಪೀ ಕೀರ್ತಿಯನ್ನುಗಳಿಸಲು ಹಿಂದಿನವರಿಗಸಾಧ್ಯವಿದ್ದಿತು. ಈಗಲಾದರೋ ಪರ್ಯಾಯ ಪ್ರಕಾರ ಇಡೀ ಲೋಕದ 'ಕಾಲಪುರುಷ'ರಾಗಿ ಒಂದೊಂದು ಕಡೆಯವರೊಮ್ಮೊಮ್ಮೆ ಮುಂಬರುವದಿದೆ. ನಿದರ್ಶನಕ್ಕಾಗಿ ಗಾಂಧಿಜಿಯ 'ಸ್ವಾತಂತ್ರ್ಯ ಹೋರಾಟ'ಗಳ ವೇಳೆ ಮತ್ತವರ ಮರಣ ಕಾಲದಲ್ಲಿ ಅವರೇ ಇಡೀ ಪ್ರಪಂಚದ ಮನಾಕರ್ಷಿಸುವದರಲ್ಲಿ ಅಗ್ರಗಣ್ಯರಾಗಿದ್ದರು; ನಾಜೀ ಪ್ರಭಾವದ ವೇಳೆ ಲೋಕದ ಎಲ್ಲರ ಮೇಲೆ ಎಲ್ಲರಿಗಿಂತ ಹೆಚ್ಚಿನ ಪ್ರಭಾವವನ್ನು ಹಿಟ್ಲರ್ ಬೀರಿದ್ದ. ಹಿರೋಶಿಮಾ ನಗರದಲ್ಲಿ ಆಟಂ ಸ್ಫೋಟವಾದಾಗ ಜಪಾನಿನಂತೆಯೇ ಲೋಕವೂ ಒಮ್ಮೆ ದಿಗಲುಗೊಂಡಿದ್ದಿತು. ಸ್ಟಾಲಿನ್‌ಗ್ರಾಡ್, ಡಂಕರ್ಕ್, ಬರ್ಲಿನ್‌ನಂತಹ ಊರು ಯುದ್ಧಗಳ ಕಡೆಗೆ ತಮ್ಮ ಅದೃಷ್ಟ ನಿರ್ಣಾಯಕ ಸಮರವೆಂಬ ಭಾವನೆಯಿಂದ ಜಗತ್ತಿನ ಪ್ರತಿಯೊಂದು ಕಡೆಯವರೂ ನೋಡಿದ್ದರು. ಅದೇ ರೀತಿ ಎರಡನೆ ಲೋಕಯುದ್ಧದ ನಂತರ ಇದೀಗ ಸರ್ವ ಪ್ರಥಮವಾಗಿ ಪ್ರಪಂಚವನ್ನು ಆತುರಕ್ಕೀಡುಮಾಡಿರುವ ಯುದ್ಧ ಮೂಡಿರುವದೆಂದರೆ ಪೆಲಸ್ತೈನ್‌ನಲ್ಲಿ. ಪೆಲಸ್ತೈನ್ ಹೋರಾಟದಲ್ಲಿ ಬೀಜ ರೂಪದಿಂದ ಭಾವೀ ಪ್ರಪಂಚದ ಅದೃಷ್ಟ ಅಡಗಿರಬಹುದು. ಆದ್ದರಿಂದ

ವಿಮೆಮಾಡಲಿಕ್ಕೆ, ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:- ಧಾರವಾಡ,

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ. THE UNITED KARNATAK INSURANCE COMPANY, LIMITED.

ಪೆಲಸ್ಟೈನೇ ಈ ದಿನಗಳಲ್ಲಿ ಲೋಕ ಪ್ರಾಮುಖ್ಯತೆ ಗಳಿಸಿದೆ.

ಪೆಲಸ್ಟೈನ್ ಸಮರ

ಇದೇ ತಾ. 14ನೇ ರಾತ್ರಿ 12 ಘಂಟೆ ಕಳೆದು ಒಂದು ಮಿನಿಟಾಗುವಾಗ ಪೆಲಸ್ಟೈನಿನಲ್ಲಿದ್ದ ಬ್ರಿಟಿಷ್ ಮೇಲಧಿಕಾರ ಬರ್ಖಾಸ್ತಾಗಿದೆ. ಅದೇ ಗಳಿಗೆ ಪೆಲಸ್ಟೈನನ್ನು "ಇಸ್ರಾಯೇಲ್" ನಾಮಾಂಕಿತ ಯಹೂದೀ ರಾಜ್ಯವಾಗಿ ಮಾರ್ಪಡಿಸಿ, ಯೆಹೂದಿಗಳು ಸ್ವಂತ ಸರಕಾರ ಸ್ಥಾಪನೆಯ ಸಾರೋದ್ಘೋಷ ಹೊರಡಿಸಿದ್ದಾರೆ. 3000 ವರುಷಗಳ ನಂತರ ಇದೀಗ ಇಸ್ರಾಯೇಲ್ ರಾಜ್ಯದ ಪುನರುತ್ಥಾನವಾಯಿತೆನ್ನುತ್ತ ಯೆಹೂದೀ ಸರಕಾರದ ಘೋಷಣಾಪತ್ರವು ತನ್ನ ಧ್ಯೇಯ ಧೋರಣೆಗಳನ್ನು ತಿಳಿಸಿದೆ. ಅಮೇರಿಕಾ ಅಧ್ಯಕ್ಷ ಟ್ರುಮೇನರು ಈ ನವೋದಿತ ಯೆಹೂದೀ ಸರಕಾರಕ್ಕೆ ಕೂಡಲೇ ಮಂಜೂರಾತಿ ಕೊಟ್ಟು ಇಡೀ ಪ್ರಪಂಚವನ್ನೂ ಸ್ವತಃ ಅಮೇರಿಕಾನರನ್ನೂ ಚಕಿತಗೊಳಿಸಿದ್ದಾರೆ. ಯೆಹೂದಿಗಳಿಗೆ ರಶ್ಯದ ಬೆಂಬಲವಿರುವದನ್ನು ಕಂಡು ರಶ್ಯವು ಈ ಯೆಹೂದೀ ರಾಜ್ಯಕ್ಕೆ ಸಮ್ಮತಿ ಸೂಚಿಸುವುದನ್ನು ನಿರೀಕ್ಷಿಸಿ ಆ ಗುರಿ ಮುಟ್ಟುವದರಲ್ಲಿ ಅಧ್ಯಕ್ಷ ಟ್ರುಮೇನರು ಸ್ಟಾಲಿನರನ್ನು ಹಿಂದೆ ಹಾಕಬೇಕೆಂದೇ ಈ ರೀತಿ ಮುಂದಾದರೆಂದು ತಿಳಿಯಲಾಗಿದೆ. ಬೆನ್ನಲ್ಲೇ ಆಸುಪಾಸಿನ ಐದು ಅರಬ ರಾಷ್ಟ್ರಗಳು ಪೆಲಸ್ಟೈನಿನ ಮೇಲೆ ಯುದ್ಧ ಸಾರಿದ ವಾರ್ತೆಯೂ ಯೆಹೂದಿಗಳ ರಾಜಧಾನಿ ಟೆಲ್ ಅವಿವಿನ ಮೇಲೆ ವಿಮಾನ ಧಾಳಿ ನಡೆಯುತ್ತಿದೆ ಹಾಗೂ ಇಜಿಪ್ತ ಸೇನೆಗಳು ಪೆಲಸ್ಟೈನಿನೊಳಗೆ ನುಗ್ಗಿ ಹೋದ ಸುದ್ದಿಯೂ ಬಂದಿದೆ.

ತಾ.14ಕಳೆದು 15ಹಿಡಿಯುವ ಒಂದೇ ದಿನದಲ್ಲಿ-ಪೆಲಸ್ಟೈನ್ ಘಟನೆಗಳು ಚಲಚ್ಚಿತ್ರದ ದೃಶ್ಯಗಳಂತೆ ಮಿಂಚು ವೇಗದಿಂದ ಮಾರ್ಪಾಟಗೊಂಡಿವೆ ಈ ಮಾರ್ಪಾಟವು ಜಗತ್ತಿನ ಭವಿಷ್ಯ ಬದಲಾವಣೆಯ ಮೂಲವಾಗಬಹುದಾದ್ದರಿಂದ ಈ ಆಂದೋಲನದ ಸೂತ್ರಧಾರಿಗಳೇ ಇಂದಿನ ಪ್ರಮುಖ ವ್ಯಕ್ತಿಗಳು. ಲೋಕದ ದೃಷ್ಟಿಯೆಂದು ಈ ನಾಯಕರ ಕಡೆಗೆ ಬಿದ್ದಿದೆ; ಅವರಲ್ಲಿ ಕೆಲವರ ಅಲ್ಪ ಪರಿಚಯ ಇಲ್ಲಿದೆ:-

ಇಕ್ಕಡೆಯ ನಾಯಕರು

ಈಗ ಹೋರಾಟ ನಿರತರಾಗಿರುವ ಅರಬ ಯೆಹೂದಿಗಳಿಬ್ಬರಿಗೂ ಪುಣ್ಯಭೂಮಿಯಾಗಿರುವ ಪೆಲಸ್ಟೈನು ಒಂದು ವಿಚಿತ್ರ ಭೂಮಿಯಾಗಿರುವಂತೆಯೇ ಇಕ್ಕಡೆಯ ಯುದ್ಧ ನಾಯಕರೂ ವಿಚಿತ್ರ ಮನುಷ್ಯರೇ ಆಗಿದ್ದಾರೆ; ಆದ್ದರಿಂದ ಪೆಲಸ್ಟೈನ್ ಯುದ್ಧವು ಅನಿರೀಕ್ಷಿತ, ಆಶ್ಚರ್ಯಕರ ಸಂಗತಿಗಳನ್ನು ನಿರ್ಮಿಸಬಹುದು: ಇಷ್ಟರಲ್ಲೇ ಅಂತಹ ಒಂದೆರಡು ಆಶ್ಚರ್ಯಗಳನ್ನು ಕಾಣುವಂತಾಗಿದೆ. ಒಂದನೆಯದು ಯೆಹೂದಿಗಳು ಪೆಲಸ್ಟೈನಿನ ಎಲ್ಲಾ ಮರ್ಮ ಸ್ಥಳಗಳನ್ನೂ ನಿರಾಯಾಸ ನಿರಾಡಂಬರದಿಂದ ಕೈವಶಪಡಿಸಿಕೊಂಡು, ನೆರೆಯ ಅರಬ ರಾಷ್ಟ್ರಗಳಿಂದ ಹೊರತು ಒಳಗಿನ ಅರಬರಿಂದೇನೂ ಆಗದಂತೆ ಮಾಡಿ ಬಿಟ್ಟದ್ದು; ಯೆಹೂದಿಗಳಲ್ಲಿ ಇಂತಹ ಶಕ್ತಿ ಸಂಘಟನೆಯನ್ನು ಹೆಚ್ಚಿನವರು ನಿರೀಕ್ಷಿಸಿರಲಿಲ್ಲ. ಎರಡನೆಯದು ಇಸ್ರಾಯೇಲ್ ರಾಜ್ಯ ಸ್ಥಾಪನೆಯೊಂದಿಗೇನೇ ಅಮೇರಿಕವು ಅದಕ್ಕೆ ಸಮ್ಮತಿ ಕೊಟ್ಟದ್ದು; ಇದೂ ಎಲ್ಲರ ಪಾಲಿಗೂ ಆಶ್ಚರ್ಯವೇ. ಯುದ್ಧನಿರತ ಇಕ್ಕಡೆಗಳವರ ನಾಯಕರೂ ಅದ್ಭುತಾಶ್ಚರ್ಯಗಳನ್ನು ನಿರ್ಮಿಸಬಲ್ಲವರೇ.

ಡಾವಿದ್ ಬೆನ್ ಗುರಿಯನ್

ಇವನೇ ನವೋದಿತ ಇಸ್ರಾಯೇಲ್ ಸರಕಾರದ ಪ್ರಧಾನ ಮಂತ್ರಿಯಾಗಿದ್ದಾನೆ. 62 ವರುಷಗಳಿಗೆ ಮೊದಲು ಪೋಲೆಂಡಿನಲ್ಲಿ ಹುಟ್ಟಿದ್ದ 'ಯೆಹೂದೀ ಏಜನ್ಸಿ' ಯ ಕಾರ್ಯಕಾರೀ ಮಂಡಲಿಯ ಅಧ್ಯಕ್ಷ. 1900ರಲ್ಲಿ ಪೆಲಸ್ಟೈನಿಗೆ ಬಂದಿದ್ದ. ಪ್ರಥಮತಃ ಹೊಲಗದ್ದೆಗಳಲ್ಲಿ ಕೂಲಿ ಮಾಡಿಕೊಂಡು ಕಾವಲುಗಾರನಾಗಿ ಕೆಲಸ ನೋಡಿ ದಿನ ತೆಗೆಯುತ್ತಿದ್ದ. 1915ರಲ್ಲಿ ಪೆಲಸ್ಟೈನಿನಿಂದ ಹೊರಗಟ್ಟಲ್ಪಟ್ಟಾಗ ಅಮೇರಿಕಕ್ಕೋಡಿ ಹೋಗಿ ಅಲ್ಲಿ ಯೆಹೂದೀ ಸೇನಾ ಸಂಗ್ರಹ ಕಾರ್ಯ ಮಾಡಿದ್ದ. 1920ರಿಂದ ಪೆಲಸ್ಟೈನಿನಲ್ಲಿದ್ದುಕೊಂಡು ಅಲ್ಲಿಯ ಯೆಹೂದೀ ಕೂಲಿಗಾರ ಚಳವಳದ ಜೀವಾಳವಾಗಿದ್ದ. ಮೊನ್ನೆ ತಾ. 14ರಲ್ಲಿ ಟೆಲ್ಅವಿವ್‌ನಲ್ಲಿ ಇವನು ಇಸ್ರಾಯೇಲ್ ರಾಜ್ಯೋದಯದ ಸಿರಿಕಾಭಾಷಣ ಕೊಡುತ್ತಿದ್ದಾಗ ಅರಬ್ಬೀ ವಿಮಾನಗಳು ಅದಕ್ಕೆ ಬೋಂಬು ಧಾಳಿಯ ಸ್ವರ ಕೂಡಿಸಿದ್ದವು. ಇವನ ಮಗನೂ ಯೆಹೂದೀ ಸೇನೆಯಲ್ಲೊಬ್ಬ ಮೇಜರ್. ಯುದ್ಧದಲ್ಲಿ ಜಖಂಗೊಂಡು ಆಸ್ಪತ್ರೆ ಸೇರಿದಲ್ಲಿ ತನ್ನಾರೈಕೆ ಮಾಡಿದ ಬ್ರಿಟಿಷ್ ನರ್ಸ್ ಒಬ್ಬಳನ್ನು ಮದುವೆ ಮಾಡಿಕೊಂಡಿದ್ದಾನೆ.

ಡಾವಿದ್ ಯೆಲ್ಲಿನ್

ಯೆಹೂದಿಗಳ ಮತ್ತೊಬ್ಬ ಪ್ರಭಾವಿ ಹಾಗೂ ಮಹಾ ಯುಕ್ತಿಶಾಲಿ ನಾಯಕನೀತ. ಯೆಹೂದೀ ಕಟ್ಟುಗ್ರ 'ಭಯದಾಯಕ ದಳ'ದ ಮುಂದಾಳು ಈ ದಾವಿದ್ ಯೆಲ್ಲಿನ್. ಪೆಲಸ್ಟೈನ್ ಯುದ್ಧದಲ್ಲಿ ಯೆಹೂದಿಗಳ ಮುಖ್ಯಸೇನಾನಿಯೂ ಈತನೇ ಆಗುವದು ಅಸಂಭವವಲ್ಲ. ಈತನು ವೈಜ್ಞಾನಿಕ ವಿದ್ಯಾರ್ಥಿಯಾಗಿದ್ದವ; ವಿಜ್ಞಾನದ ಆಳವಾದ ಪ್ರತಿಭಾವಂತ. ಹಿಂದೊಮ್ಮೆ ಇವನನ್ನು ಹಿಡಿದು ಕೊಟ್ಟವರಿಗೆ 5000 ಪೌಂಡುಗಳ ಉಡುಗೊರೆಯಿದೆಯೆಂದು ಪೆಲಸ್ಟೈನ್ ಸರಕಾರವು ಜಾಹೀರು ಮಾಡಿದ್ದಿತು. ಈತ ಅತ್ಯಂತ ಚತುರ; ಅತಿ ಚುರುಕಿನವ; ಮೇಧಾವಿ; ಕಾರ್ಯೋಪಾಯಗಳಲ್ಲಿ ಅಸಾಮಾನ್ಯ ನಿಪುಣ.

ಮೋಶೆ ಶೆಟೋಕ್

ನವೋದಿತ ಇಸ್ರಾಯೇಲ್ ಯೆಹೂದೀ ಸರಕಾರದ ವಿದೇಶ ಮಂತ್ರಿಯಿವ. 54 ವರುಷದ ಈತ ಓರ್ವ ಸಮತಾವಾದಿ. ಪೆಲಸ್ಟೈನಿನ 'ಯೆಹೂದಿತ್ವ'ದ ರಾಜಕೀಯ ಮೆದುಳಾಗಿ ಇರುವ ಮನುಷ್ಯ. ಈತ 12 ವರುಷದ ಹುಡುಗನಾಗಿದ್ದಾಗ ಇವನ ಕುಟುಂಬ ರಶ್ಯದಿಂದ ಪೆಲಸ್ಟೈನಿಗೆ ಬಂದಿತ್ತು. ಲಂಡನ್ನಿನ ಶಾಲೆಗಳಲ್ಲಿ ಅರ್ಥಶಾಸ್ತ್ರವನ್ನು ಕಲಿತವ. ಕಳೆದ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳ ಕಡೆ ಹಿಡಿಯುವಂತೆ ಪೆಲಸ್ಟೈನ್ ಯೆಹೂದಿಗಳನ್ನು ಸಂಘಟಿಸುವುದರಲ್ಲಿ ವಿಶೇಷ ಕೆಲಸ ಮಾಡಿದವ.

ಹಾಜ್ ಅಮೀನ್ ಉಲ್ ಹುಸ್ಸೇನಿ

'ಜೆರುಸಲೇಮಿನ ಫಕೀರ' ಎಂಬ ಹೆಸರಿನಿಂದ ಈ ಮನುಷ್ಯ ಮೊದಲೇ ಲೋಕಪ್ರಸಿದ್ಧ 'ಮಾಯಗಾರ'ಮಹಾ ಪ್ರವಾದಿ' ಎಂದು ಲೋಕದ ಎಲ್ಲಾ ಮುಸ್ಲಿಮರು ಜೆರುಸಲೇಮಿನ ಈ ಮುಫ್ತಿಯನ್ನು ವಿಶೇಷ ಗೌರವಿಸುತ್ತಾರೆ. ಮಹಮ್ಮದ್ ಪೈಗಂಬರರ ಏಕಮಾತ್ರ ಪುತ್ರಿ ಫಾತಿಮಾಳ ವಂಶಜನಿವನೆಂದು ನಂಬಲಾಗಿದೆ. ಯುದ್ಧ ಕಾಲದಲ್ಲಿ ಪೆಲಸ್ಟೈನಿನಲ್ಲಿ ಅರಬರ ಹಿಂಸಾತ್ಮಕ ಚಳವಳಗಳನ್ನು ಸಂಘಟಿಸಿ, ನಾಜೀ ಏಜಂಟನಾಗಿ ಕೆಲಸ ಮಾಡಿ ಆ ಮೇಲೆ ತಲೆತಪ್ಪಿಸಿಕೊಂಡು ಜರ್ಮನಿಗೆ ಓಡಿ ಹೋಗಿದ್ದ. 1946ರಲ್ಲಿ ಪ್ಯಾರಿಸಿನ ನಿರ್ಬಂಧಗಳಿಂದ ಹೇಗೋ ತಲೆ ತಪ್ಪಿಸಿಕೊಂಡು ಈಜಿಪ್ತಿಗೋಡಿ ಹೋಗಿ ಅಲ್ಲಿಯ ಅರಸನಾತಿಥ್ಯಾಶ್ರಯದಿಂದ ಇದ್ದ. ಪೆಲಸ್ಟೈನಿನ ಸಮರದಲ್ಲಿ ಅರಬರ ಗುರು ಮತ್ತು ಮಾರ್ಗದರ್ಶಕ ಇವನೇ. ವಿಚಿತ್ರ ರೀತಿಯಿಂದ ಮಾಯವಾಗುವ ತನ್ನ ಚಾತುರ್ಯದಿಂದ ಲೋಕವನ್ನೇ ಬೆರಗುಗೊಳಿಸಿರುವ ಮುಫ್ತಿ ಈತ.

ಜಮಾಲ್ ಹುಸ್ಸೇನಿ

ಅರಬರ ಮತ್ತೊಬ್ಬ ಜನಪ್ರಿಯ ನಾಯಕ. ಹುಸ್ಸೇನಿ ಜೆರುಸಲೇಮಿನ ಮುಫ್ತಿಯ ದಾಯಾದಿ. ಅರಬ್ ಮುಖ್ಯ ಸಮಿತಿಯ ಉಪಾಧ್ಯಕ್ಷ. ಯುದ್ಧ ಕಾಲದಲ್ಲಿ-ಈತನನ್ನೂ ದಿಗ್ಬಂಧನದಲ್ಲಿಡಲಾಗಿತ್ತು. ಪ್ರಾಯ ೫೨ರ ಹುಸ್ಸೇನಿ ದರ್ಶನಮಾತ್ರದಿಂದ ದಂಗು ಬಡಿಸುವ ಅತಿ ಕಾಯದ ಅರಬ. ಇವನಿಗೆ ಇಂಗ್ಲಿಷ್ ಭಾಷೆ ನೀರಿನಂತಿದೆ.

ಜೋನ್ ಬಾಗೋಟ್

'ಗ್ಲಬ್‌ಪಾಶಾ' ಹೆಸರಿನಿಂದ ಈತ ಅರಬರ ನಡುವೆ ಆಕರ್ಷಣೀಯ ನಾಯಕ. ಬ್ರಿಗೇಡಿಯರ್. ಅರಬ್ ದಳಗಳ ಪೈಕಿ ಅತ್ಯಂತ ಶಕ್ತಿಶಾಲಿಯಾದ ಟ್ರಾನ್ಸ್‌ಜೋರ್ಡನಿನ ರಾಜಾ ಅಬ್ದುಲ್ಲಾನ ಅರಬ್ಬೀ ಸೇನಾತುಕಡಿಯನ್ನು ತರಬೇತುಗೊಳಿಸಿದವನು ಇವನೇ. ವ್ಯಕ್ತಿಶಃ ಈತನು ಅತ್ತ ಅರಬನೂ ಅಲ್ಲ; ಇತ್ತ ಯೆಹೂದಿಯೂ ಅಲ್ಲ. ಈ ಬಾರಿ ಯಾವ ಸ್ಥಾನಕ್ಕೇರುವನೆಂಬ ನಿಶ್ಚಯವೂ ಇಲ್ಲ. ತನ್ನ ಹೆಂಡತಿ, 9 ವರುಷದ ಮಗ, ದತ್ತು ಪಡೆದ ಅರಬ್ಬೀ ಮಗಳೊಬ್ಬಳೊಂದಿಗೆ ಇವನೀಗಲೂ ಟ್ರಾನ್ಸ್‌ಜೋರ್ಡನಿನ ರಾಜಧಾನಿ ಅಮ್ಮಾನ್‌ನಲ್ಲೇ ಇದ್ದಾನೆ.

ಇಸ್ಮಾಯಿಲ್ ಸಾಫ್ವಾತ್ ಪಾಶಾ

ಪೆಲಸ್ಟೈನಿನೊಳಗಿನ "ಅರಬ್ ಸ್ವಾತಂತ್ರ್ಯ ಸೇನೆ"ಯ ಸೇನಾನಿಯಾಗಿದ್ದವ ಜನರಲ್ ಸಾಫ್ವಾತ್ ಪಾಶಾ. ಇದೇ ತಾ. 13ರಲ್ಲಿ ಇರಾಕಿನ ಸೇನಾನಿ ಮಂಡಲದ ಮುಖ್ಯಸ್ಥನ ಸ್ಥಾನಕ್ಕೆ ಇವನ ಬದಲಿಗೆ ನೂರುದ್ದೀನ್ ಮಹಮ್ಮದನ ನೇಮಕವಾಗಿದೆ ಯೆಹೂದಿಗಳೆದುರು ನಿಲ್ಲುವಷ್ಟು ಬಲಶಾಲಿಯಾಗಿ ತನ್ನ ಸೇನೆಯಿಲ್ಲವೆಂದೇ ಈತ ರಾಜೀನಾಮೆಯಿತ್ತನೆಂದು ತಿಳಿದುಬರುತ್ತದೆ.

ಫಾಜ್ವೀ ಬೇಕಾವುಕ್ಜೀ

ಅರಬ್ ಕ್ರಾಂತಿಯ ಅನನ್ಯ ನಾಯಕ. ಪೆಲಸ್ಟೈನಿನಲ್ಲಿ ಅಂದಿನಿಂದಿದುವರೆಗೂ ಹೋರಾಡುತ್ತಿರುವ ಅರಬ್ಬೀ ಸೇನೆಯ ಅಧಿಪತಿಯಿವ. 1936ರ ಪೆಲಸ್ಟೈನ್ ಅರಬ್ ದಂಗೆಯ ನಾಯಕನಾಗಿದ್ದವನೂ ಇವನೇ. 1941ರಲ್ಲಿ ಜರ್ಮನಿಗನುಕೂಲವಾಗಿದ್ದ. ಇರಾಕೀ ಬಂಡಾಯದಲ್ಲೂ ಮುಖ್ಯ ಭಾಗ ವಹಿಸಿದ್ದ. ಕಳೆದ ವರುಷವೇ ಬೇಸರ ಬಂದು ಪ್ಯಾರಿಸಿನಿಂದ ಪೆಲಸ್ಟೈನಿಗೆ ಮರಳಿದ್ದ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಪಡಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು.]

ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು, ರೂ. ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ.

೩ ತಿಂಗಳು ನೂರಕ್ಕೆ ವರ್ಷಕ್ಕೆ ೨॥
೪ ರಿಂದ ೫ ತಿಂಗಳು ,, ,, ೨॥
೬ ರಿಂದ ೯ ತಿಂಗಳು ,, ,, ೨॥।

ರೂ. ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ರಣರಂಗವಾಗಿರುವ ಪೆಲಸ್ಟೈನ್

ಇದರ ಅದೃಷ್ಟವೂ ಬಹುತೇಕವಾಗಿ ಭಾರತದ್ದೇ!

ಇಂದು ಲೋಕದ ಅದೃಷ್ಟ ನಿರ್ಮಾಣದೊಂದು ಕೈಯ್ಯಾಗಿ, ಪ್ರಾಪಂಚಿಕ ಆಂದೋಲನಗಳ ಪೈಕಿ ಪ್ರಾಮುಖ್ಯದ್ದಾಗಿ ತೋರುತ್ತಿರುವ ಪೆಲಸ್ಟೈನು ಹಲವು ವಿಧಾನಗಳಿಂದ ಭಾರತದ ಯಥಾ ಪ್ರತಿಯಾಗಿದೆ.

ಸುಮಾರು ಎರಡು ಶತಮಾನಗಳಲ್ಲಿ ಭಾರತದಲ್ಲಿದ್ದ ಬ್ರಿಟಿಷ್ ಆಡಳಿತೆಯು 1947ನೇ ಆಗೋಸ್ತು 15 ಹಿಡಿಯುವ ರಾತ್ರಿ 12 ಘಂಟೆ ಕಳೆದು ಒಂದು ಮಿನಿಟಾಗುವಾಗ ಬರ್ಖಾಸ್ತುಗೊಂಡಂತೆಯೇ, ಪೆಲಸ್ಟೈನಿನಲ್ಲಿ ಕಳೆದ 31 ವರುಷಗಳಿಂದಿದ್ದ ಬ್ರಿಟಿಷ್ ಸಂಬಂಧವು 1948ನೇ ಮೇ 15 ಹಿಡಿಯುವ ರಾತ್ರಿ 12 ಘಂಟೆ ಕಳೆದು ಒಂದು ಮಿನಿಟಾಗುವಾಗ ಬರ್ಖಾಸ್ತುಗೊಂಡಿದೆ.

ಭಾರತಲ್ಲಿ ಹಿಂದೂ ಮುಸ್ಲಿಂ ಪ್ರಶ್ನೆಯಿರುವಂತೆ ಪೆಲಸ್ಟೈನಿನಲ್ಲಿ ಅರಬ್-ಯೆಹೂದೀ ಜಗಳವಿದ್ದು ದೀರ್ಘಾವಧಿಯಿಂದ ಇಲ್ಲಿಯೂ ಅಲ್ಲಿಯೂ ಜಾತೀಯ ಹೋರಾಟಗಳು ನಡೆದುಬಂದಿವೆ. ಕಳೆದ ಆಗೋಸ್ತು 15ರಿಂದೊಮ್ಮೆ ಭಾರತದಲ್ಲಿ ಈ ಜಾತೀಯ ಗಲಭೆ ದೊಡ್ಡ ಪರಿಮಾಣದಲ್ಲಿ ಎದ್ದಂತೆ ಇದೇ ಮೇ 15ರಿಂದ ಪೆಲಸ್ಟೈನಿನಲ್ಲಿ ಪ್ರತ್ಯಕ್ಷ ಸಮರವೇ ಆರಂಭಿಸಿದೆ. ಇಲ್ಲಿಯೂ ಅಲ್ಲಿಯೂ ಬ್ರಿಟಿಷರು ಗಲಭೆ ನಿರ್ಮಿಸಿಟ್ಟೇ, ಆಡಳಿತೆಯನ್ನು ನಡೆಸುವುದಸಾಧ್ಯವಾಗಿಯೇ ಬಿಟ್ಟು ಹೋದರು.

ಹಿಂದುಸ್ಥಾನದಲ್ಲಿ ಹಿಂದೂ ಮುಸ್ಲಿಂ ಗಲಭೆಯೊಂದೇ ಪರಕೀಯಾಡಳಿತೆಗೆ ಅಷ್ಟು ದೀರ್ಘಾಯುಷ್ಯವನ್ನು ಕೊಟ್ಟದ್ದಂತೆ ಪೆಲಸ್ಟೈನಿನಲ್ಲೂ ಅರಬ ಯೆಹೂದೀಗಳಗವೇ ಬ್ರಿಟಿಷ ಮೇಲಧಿಕಾರದ ಹಕ್ಕನ್ನು ಇದುವರೆಗೂ ಉಳಿಸಿದ್ದಿತು. ಎರಡು ರಾಷ್ಟ್ರಗಳಿಗೂ ಆದಿಯಿಂದಲೂ ಸ್ವಾತಂತ್ರ್ಯದ ಆವಶ್ಯಕತೆಯಿದ್ದರೂ ಈ ಮಟ್ಟಿಗೆ ಭಾರತ ಮತ್ತು ಪೆಲಸ್ಟೈನ್ ಘೋರಣೆಗಳೊಳಗೆ ವ್ಯತ್ಯಾಸವಿದೆ.

ಭಾರತದಲ್ಲಿ ಹಿಂದೂ ಕಾಂಗ್ರೆಸಿಗರು ಪರಕೀಯಾಡಳಿತೆಯ ನಿರ್ನಾಮವನ್ನೇ ಮುಖ್ಯ ಗುರಿಯಾಗಿ ಇಟ್ಟುಕೊಂಡಿದ್ದರಲ್ಲದೆ, ಇದಿರುವಾದಿಗಳಾದ ಮುಸ್ಲಿಮರ ದ್ವೇಷವನ್ನಲ್ಲವಾದ್ದರಿಂದ ಜಾತೀಯ ಹಿತಕ್ಕಿಂತ ರಾಷ್ಟ್ರೀಯ ಸ್ವಾತಂತ್ರ್ಯವು ಪ್ರಥಮ ಸ್ಥಾನ ಗಳಿಸಿದ್ದಿತು. ಆದರೆ ಪೆಲಸ್ಟೈನಿನ ಅರಬರೂ ಯೆಹೂದಿಗಳೂ ತಮ್ಮ ನಾಡಿನ ಸ್ವಾತಂತ್ರ್ಯಕ್ಕಿಂತಲೂ ಒಬ್ಬರನ್ನೊಬ್ಬರು ಸೋಲಿಸಿ ತಂತಮ್ಮ ರಾಜ್ಯಭಾರ ಸ್ಥಾಪಿಸುವದನ್ನೇ ಮುಖ್ಯವೆಂದಿಟ್ಟುಕೊಂಡುದರಿಂದ ಅಲ್ಲಿ ರಾಷ್ಟ್ರೀಯತೆಗಿಂತ ಜಾತೀಯತೆ ಮುಂದಾಯಿತು.

ತತ್ಪರಿಣಾಮವಾಗಿ ಭಾರತದಲ್ಲಿ ಕಾಂಗ್ರೆಸು ರಾಷ್ಟ್ರ ವಿಭಜನೆಗೊಪ್ಪಿದರೂ, ಪೆಲಸ್ಟೈನಿನ ಅರಬರು ತಮ್ಮ ದೇಶ ವಿಭಜನೆಗೊಪ್ಪಲಿಲ್ಲ. ಭಾರತದಲ್ಲಿ ಸ್ವಾತಂತ್ರ್ಯಾನಂತರ ಹಿಂದೂ-ಮುಸ್ಲಿಂ ಜಗಳವು ಒಮ್ಮೆ ಪ್ರಬಲಿಸಿ ಕೊನೆಗೆ ಕ್ರಮಶಃ ನಿಲ್ಲುತ್ತಾ ಬಂದರೂ ಪೆಲಸ್ಟೈನಿನಲ್ಲಿ ಸ್ವಾತಂತ್ರ್ಯಾನಂತರ ಅದು ಯುದ್ಧವಾಗಿ ಮಾರ್ಪಟ್ಟಿದೆಯಲ್ಲದೆ, ಇನ್ನು ಒಂದೋ ಯೆಹೂದಿಗಳ ಇಲ್ಲವೇ ಅರಬರ ರಾಜ್ಯ ಸ್ಥಾಪನೆಯಾಗಿಯೇ—ಏಕ ಜಾತೀಯ ಆಡಳಿತೆ ನೆಲೆಗೊಂಡೇ,—ಅದು ಮುಕ್ತಾಯ ಹೊಂದಬೇಕಾಗಿದೆ.

ಪೆಲಸ್ಟೈನ್ ಚರಿತ್ರೆಯಲ್ಲಿ 1917ರಿಂದ 1948ರ ವರೆಗಿನ ಅತಿ ಪ್ರಾಮುಖ್ಯ ಅಧ್ಯಾಯದ ಮುಖ್ಯ ಘಟನೆಗಳು ಹೀಗಿವೆ:—

1917ರಲ್ಲಿ ಲೋರ್ಡ್ ಅಲ್ಲೆನ್‌ಬರಿಯು ಟರ್ಕಿಯ ಹಿಡಿತದಿಂದ ಪೆಲಸ್ಟೈನನ್ನು ತಪ್ಪಿಸಿ ಸ್ವತಂತ್ರಗೊಳಿಸಿದ; ಆ ವರೆಗಿನ 400 ವರುಷಗಳಲ್ಲಿಯೂ ಪೆಲಸ್ಟೈನನ್ನು ಟರ್ಕಿ ಆಳಿಕೊಂಡಿತ್ತು.

ಬ್ರಿಟಿಷ್ ವಿದೇಶ ಕಾರ್ಯದರ್ಶಿ ಆರ್ಥರ್ ಜೇಮ್ಸ್ ಬೇಲ್‌ಫೋರನು ಒಂದು ವಿಚಿತ್ರ ಜಾಹೀರುನಾಮೆ ಹೊರಡಿಸಿ ಪೆಲಸ್ಟೈನಿನ ಅರಬರಿಗೆ ಸ್ವಾತಂತ್ರ್ಯ-ಯೆಹೂದಿಗಳಿಗಲ್ಲಿ ರಾಷ್ಟ್ರೀಯತಾ ನಿಲಯವೆಂಬ ಇಬ್ಬಾಯಿಯ ಕತ್ತಿ ಬೀಸಿದ್ದರಿಂದ ದೊಡ್ಡ ವಿವಾದವೆದ್ದಿತು. ಅರಬರಿದನ್ನು ಧಿಕ್ಕರಿಸಿದರು, ಯೆಹೂದಿಗಳು ತಮ್ಮ ಸ್ವರಾಜ್ಯ ಸ್ಥಾಪನೆಗೆ ಹಾಕಿಕೊಟ್ಟ ಅಸ್ತಿವಾರವಿದು ಎಂದು ಭಾವಿಸಿಕೊಂಡರು.

1920ರಲ್ಲಿ ಮಿತ್ರರಾಷ್ಟ್ರಗಳ ಪ್ರಮುಖಾಧಿಕಾರಿ ಮಂಡಲಿಯು ಪೆಲಸ್ಟೈನ್ ಮೇಲಧಿಕಾರವನ್ನು ಬ್ರಿಟಿಷರಿಗೊಪ್ಪಿಸಿಕೊಟ್ಟಿತು. ಯೆಹೂದೀ ವಿರೋಧ ದಂಗೆಗಳೇಳಲಾರಂಭ.

1922ರಲ್ಲಿ ಪೆಲಸ್ಟೈನಿನ ಬ್ರಿಟಿಷ್ ಆಡಳಿತೆಗೆ ಲೀಗ್ ಓಫ್ [illegible]ನ ಸಮ್ಮತಿ ದೊರೆಯಿತು. ಅರಬರಿದಕ್ಕೊಪ್ಪದೆ ಸ್ವಾತಂತ್ರ್ಯ ಯಾಚನೆ ಮಾಡಿದರು.

1923ರಲ್ಲಿ ಪೆಲಸ್ಟೈನಿನಲ್ಲಿ ಬ್ರಿಟಿಷ್ ಅಧಿಕಾರ ಜ್ಯಾರಿಗೆ ಬಂದಿತು.

1929ರಲ್ಲಿ ದೊಡ್ಡ ಪರಿಮಾಣದ ಅರಬ-ಯೆಹೂದೀ ದಂಗೆಯು ಪ್ರಥಮ ಸ್ಫೋಟ. 133 ಯೆಹೂದಿಗಳ ಮತ್ತು 116 ಅರಬರ ಮರಣ.

1933ರಲ್ಲಿ ಪೆಲಸ್ಟೈನ್ ಸರಕಾರದ ವಿರುದ್ಧ ಅರಬರ ಬಂಡಾಯಾರಂಭವಾಗಿ 1936ರಿಂದ 39ರ ವರೆಗೆ ನಾಜೀ ಪ್ರಚಾರ ಮತ್ತು ನಿಧಿಯ ಸಹಾಯದಿಂದ ಅರಬ್ ದಂಗೆಯ ಪ್ರಚಂಡತೆ, ಸುಮಾರು 4000ಕ್ಕೂ ಮಿಕ್ಕಿ ಮರಣ; ಸೂರೆ, ಸುಲಿಗೆ, ಬ್ರಿಟಿಷರ ಕಠಿಣ ಪಟ್ಟಾಳಿಕೆ.

1937ರಿಂದ, ಪೆಲಸ್ಟೈನ್ ಸಮಸ್ಯೆಯ ತೀರ್ಮಾನ ಶೋಧಕ ಕಮಿಟಿ, ಕಮಿಶನುಗಳ ನೇಮಕಕ್ಕಾರಂಭ. ಲೋರ್ಡ್ ಪೀಲರ ನಾಯಕತ್ವದ ಸಮಿತಿಯಿಂದ ಪೆಲಸ್ಟೈನನ್ನು ವಿಭಜಿಸುವ, ಅದು ಅಸಾಧ್ಯವಾದಲ್ಲಿ ಮುಂದಿನ 5 ವರುಷಗಳ ತನಕ ವರುಷಾವಧಿ 12000ಕ್ಕಿಂತ ಹೆಚ್ಚು ಯೆಹೂದಿಗಳು ಹೊರಗಿನಿಂದ ಬರಕೂಡದೆಂಬ ನಿರ್ಬಂಧ ಸೂಚನೆಗಳು. ವಿಭಜನೆಗೆ ಬ್ರಿಟಿಷ್ ಸರಕಾರದ ನಕಾರ.

1939ರಲ್ಲಿ ಅರಬ್ ಮತ್ತು ಯೆಹೂದಿಗಳ ಪಾಲುಗಾರಿಕೆಯುಳ್ಳ ಸ್ವಾತಂತ್ರ್ಯವನ್ನು 10 ವರುಷಗಳೊಳಗೆ ದಾನ ಮಾಡುವದಾಗಿ ಬ್ರಿಟಿಷ್ ಸರಕಾರದ ಜಾಹೀರುನಾಮೆ. ಅಂತೆಯೇ 5 ವರುಷಗಳೊಳಗೆ 75,000 ಯೆಹೂದಿಗಳನ್ನು ಹೊಗಿಸಿದ ಮೇಲೆ ಮತ್ತಾರನ್ನೂ ಹೊಗಿಸುವದಿಲ್ಲವೆಂಬ ಆಶ್ವಾಸನೆ. ಅರಬರ ಭೂಮಿಯನ್ನು ಯೆಹೂದಿಗಳಿಗೆ ಮಾರದಂತೆ ನಿರ್ಬಂಧ. ಯೆಹೂದಿಗಳಿದನ್ನು ವಿರೋಧಿಸಿ ಪ್ರಚಂಡ ಗೊಂದಲ. ಅದೇ ವರುಷದ ಲಂಡನ್ ಸಮ್ಮೇಲನದ ನಿರ್ಧಾರಕ್ಕೆ ಅರಬ — ಯೆಹೂದಿಗಳಿಬ್ಬರಿಂದಲೂ [illegible]ಕಾರ.

1944ರಲ್ಲಿ ಅರಬ್ ಲೀಗಿನ ಸ್ಥಾಪನೆ 1945ರಲ್ಲಿ ಯುದ್ಧಾಂತ್ಯದ ದೆಸೆಯಿಂದ ಸ್ಥಿತಿ ಮತ್ತಷ್ಟು ವಿಷಮಗೊಂಡು ನಿರ್ವಸಿತ ಯೆಹೂದಿಗಳ ಪೈಕಿ 1,00,000 ಮಂದಿಗೆ ಪೆಲಸ್ಟೈನಿನಲ್ಲಿ ಆಶ್ರಯಕೊಡಬೇಕೆಂದು ಅಮೇರಿಕಾಧ್ಯಕ್ಷ ಟ್ರೂಮೇನರ ಬೋಧನೆ

1946ರಲ್ಲಿ ಆಂಗ್ಲೋ ಅಮೇರಿಕನ್ ಕಮಿಟಿಯ ವಿಚಾರಣೆ, ಜಾಗತಿಕ ಸಂಘದ 'ಟ್ರಸ್ಟೀಶಿಪ್'ಬರುವ ವರೆಗೆ ಬ್ರಿಟಿಷ್ ವ್ಯವಸ್ಥಾಡಳಿತೆ ಮುಂದುವರಿಯಬೇಕೆಂದೂ 1,00,000 ಯೆಹೂದಿಗಳನ್ನು ಬರಮಾಡಿಸಿಕೊಳ್ಳಬೇಕೆಂದೂ ಸೂಚನೆ.

1947ರಲ್ಲಿ ಸ್ವಾತಂತ್ರ್ಯದ ಪೀಠಿಕೆಯಾಗಿ ಐದು ವರುಷಗಳ ತನಕ ಕ್ಷೇತ್ರವಾರು ಟ್ರಸ್ಟೀಶಿಪ್ ಆಡಳಿತೆ ನಿರ್ವಹಿಸಲು ಬ್ರಿಟನಿನ ಒಪ್ಪಿಗೆ ಸೂಚನೆ. ಇದಕ್ಕೂ ಅರಬ್—ಯೆಹೂದಿಗಳಿಬ್ಬರಿಂದಲೂ ಧಿಕ್ಕಾರ. ಆ ಮೇಲೆ ಪೆಲಸ್ಟೈನನ್ನು ವಿಭಜಿಸಬೇಕೆಂದು ಭದ್ರತಾ ಕೌನ್ಸಿಲಿನ ನಿರ್ಧಾರ. ಇದಕ್ಕೆ ಅರಬರ ಧಿಕ್ಕಾರ; ಯೆಹೂದಿಗಳ ಸ್ವಾಗತ. ಪೆಲಸ್ಟೈನಿನ ಎರಡು ಪಕ್ಷಗಳಿಗೊಪ್ಪಿಗೆಯಾಗದ ಯಾವ ಯೋಜನೆಯನ್ನೂ ಜಾರಿಗೆ ತರುವಂತಿಲ್ಲವೆಂದೂ 1948ನೇ ಮೇ 15ರಲ್ಲಿ ಪೆಲಸ್ಟೈನಿನ ತನ್ನ ಮೇಲಧಿಕಾರವನ್ನು ಬರ್ಖಾಸ್ತುಗೊಳಿಸಿ ಅದೇ ಆಗೋಸ್ತಿನೊಳಗೆ ಅಲ್ಲಿಂದ ತನ್ನ ಎಲ್ಲಾ ಸೇನೆಯನ್ನೂ ಹಿಂದೆಗೆಯುವೆನೆಂದೂ ಬ್ರಿಟನಿನ ಘೋಷಣೆ.

1948ರಲ್ಲಿ ಜಾಗತಿಕ ಸಂಘದ ಕಮಿಶನ್ ನೇಮಕ; ಸೇನಾ ಬೆಂಬಲ ವಿನಹ ಪೆಲಸ್ಟೈನ್ ಆಡಳಿತೆ ವಹಿಸಲು ತಮ್ಮಿಂದ ಅಸಾಧ್ಯವೆಂದು ಅವರವರದಿ. ವಿಭಜನೆಯ ಅನುಮೋದನೆಯನ್ನು ಹಿಂದೆಗೆದುಕೊಂಡೆನೆಂಬ ಅಮೇರಿಕದ ಆಕಸ್ಮಿಕ ಸೂಚನೆ ಜಾಗತಿಕ ಸಂಘದ ವಿಶೇಷ ಮಹಾಸಭೆ ಸೇರಿ ನಡೆಸಿದ ಪರ್ಯಾಲೋಚನೆಯ ನಿರ್ರ್ಥಕತೆ.

1948ನೇ ಮೇ ತಾ. 14ನೇ ಆಪರಾಹ್ನ ಯೆಹೂದೀರಾಷ್ಟ್ರ "ಇಸ್ರಯೇಲ್" ಜನನವಾಯಿತೆಂದೂ ಲೋಕದ ಎಲ್ಲಾ ಯೆಹೂದಿಗಳಿಗೂ ಅಲ್ಲಿ ಆಶ್ರಯವಿದೆಯೆಂದೂ ಟೆಲಿಅವಿವ್ ನಗರವನ್ನು ರಾಜಧಾನಿ ಮಾಡಿ ತಾತ್ಕಾಲಿಕ ಯೆಹೂದೀ ಸರಕಾರ ಸ್ಥಾಪಿಸಿ, ಅಲ್ಲಿಯ ಯೆಹೂದೀ ರಾಷ್ಟ್ರೀಯ ಕೌನ್ಸಿಲಿನಲ್ಲಿ ಜಾಹೀರುನಾಮೆ ಕೂಡಲೇ ಅಮೇರಿಕದಿಂದ ಅಂಗೀಕಾರ.

ತಾ. 15 ಹಿಡಿಯುವ ಮಧ್ಯರಾತ್ರಿ ಕಳೆದು ಮಿನಿಟಾಗುವಾಗ ಬ್ರಿಟಿಷ್ ವ್ಯವಸ್ಥಾಧಿಕಾರ ಬರ್ಖಾಸ್ತಾಗಿ ಅಲ್ಲಿಂದ, ಕೊನೆಯ ಬ್ರಿಟಿಷ್ ಹೈಕಮಿಶನರ್ ಸರ್. ಅಲೆನ್ ಕನ್ನಿಂಗ್ಹಾಮರ ನಿರ್ಗಮನ. ಯೆಹೂದಿಗಳಿಂದ ಜೆರುಸಲೇಮ್ ನಗರದ ಮೇಲೆ ಪ್ರಚಂಡ ಧಾಳಿ; ಆಯಕಟ್ಟಿನ ಸ್ಥಳಗಳ ಆಕ್ರಮಣ.

ತಾ 15ರಿಂದ ಇಜಿಪ್ಟ್, ಟ್ರಾನ್ಸ್ ಜೋರ್ಡನ್, ಸಿರಿಯಾ, ಯೆಮೆನ್, ಸಾವುದಿ ಅರೇಬಿಯಾ, ಇರಾಕ್, ಲೆಬನಾನ್ ಮೊದಲಾದ ಎಲ್ಲಾ ಅರಬ್ ರಾಷ್ಟ್ರಗಳ ಸೇನೆಗಳೂ ಮೂರು ದಿಕ್ಕುಗಳಿಂದ, ಪೆಲಸ್ಟೈನಿನೊಳಗೆ ಪ್ರವೇಶಿಸಿ, ಟೆಲಿಅವೀವಿನ ಕಡೆಗೆ ಈಜಿಪ್ಟ್ ಸೇನೆಯ ಧಾಳಿ; ಬೋಂಬು ಹೊಡೆತ; ಪ್ರಚಂಡ ಸಮರ....? ? ? ?

The 1946 Record Business proves the popularity
THE BOMBAY LIFE ASSURANCE COMPANY, LTD.
Company's New Business in 1946— **3 28 Crores**
Our Chief Agency New business in 1946 bout **54 Lakhs**
Our experience of 37 years available to you for arranging Insurance investment It therefore, pays you to consult us to Insure or to represent
MESSRS. KOCHIKAR BROTHERS, LIMITED,
Chief Agents for South India.
Bombay Life Building,
Central Office, Udipi
Branches at:
Mangalore, Calicut, Trivandrum, Madura, Madras, Bangalore & Bombay.

ದಿವಂಗತ ಸಾಂತ್ಯಾರು ಅನಂತಪದ್ಮನಾಭ ಭಟ್ಟರು

ಶ್ರೀ ಸಾಂತ್ಯಾರು ಅನಂತ ಪದ್ಮನಾಭ ಭಟ್ಟರು- 'ಉಡುಪಿ ಗಾಂಧಿ'- ಇದೇ ತಾ 13-5-48ನೇ ಪೂರ್ವಾಹ್ನ 11 ಘಂಟೆಗೆ ಉಡುಪಿಯಲ್ಲಿ, ತನ್ನ 65ನೇ ವಯಸ್ಸಿನಲ್ಲಿ ಹೃದ್ರೋಗದಿಂದ ಇಹಯಾತ್ರೆ ಮುಗಿಸಿಕೊಂಡರೆನ್ನಲು ವಿಷಾದವಾಗುತ್ತದೆ. ಗಾಂಧೀ ತತ್ವಗಳಿಗೆ ಪೂರ್ಣ ಮೀಸಲಿದ್ದ -ಗಾಂಧೀ ಮೂರ್ತಿಯನ್ನು ಸದಾಕಾಲವೂ ಪ್ರತಿಷ್ಠಿಸಿಕೊಂಡಿದ್ದ— ಆ ಹೃದಯದ ಪರಿಚಯವಿದ್ದವರಿಗೆ ಇವರನ್ನು ಬಲಿಕೊಟ್ಟ ಹೃದ್ರೋಗದ ಕಾರಣ ಬೇಕಾಗದು: ಆ ಗುರು ಹೊರಟು ಸುಮಾರು ನಾಲ್ಕೂವರೆ ತಿಂಗಳ ನಂತರ ಈ ಶಿಷ್ಯನೂ ಪಯಣ ಮಾಡಿದುದರಲ್ಲಿ ಆಶ್ಚರ್ಯ ಕಾಣದು.

ಶ್ರೀಯುತ ಭಟ್ಟರದು ದೊಡ್ಡ ವರ್ಗದಾರ ಮನೆತನ. ಇಡೀ ತಾಲೂಕಿನಲ್ಲೇ ಗೌರವ ಗಳಿಸಿರುವ ಪ್ರಸಿದ್ಧ ಕುಲ. ಶ್ರೀಮಂತ ಸಹಜ ಘನತೆ, ಗೌರವಾರ್ಹ ನಡತೆ, ಶ್ರೀಮದ್ಗಾಂಭೀರ್ಯಗಳಿಗೆ ಹೆಸರಾಗಿದ್ದ ಇವರ ತಂದೆಗೆ ಉಡುಪಿಯ ಅಷ್ಟಮಠಗಳಲ್ಲೊಂದರ ಪಾರುಪತ್ಯವೂ ಇದ್ದಿತು. ಸಾಂತ್ಯಾರಿನ ಪಟೇಲಿಕೆಯು ಈ ಮನೆಯ ವಾರೀಸು ಹಕ್ಕಿನದು. ಶ್ರೀ ಅನಂತ ಪದ್ಮನಾಭ ಭಟ್ಟರು ತಂದೆಗೊಬ್ಬನೇ ಮಗ. ಆದರೆ ಮಹಾತ್ಮಾ ಗಾಂಧಿಜೀಯ ಸ್ವಾತಂತ್ರ್ಯ ಸಮರದ ಪ್ರಥಮ ಕಹಳೆ ಕೇಳಬಂದ 1920ರಿಂದ ಸಾಯುವ ವರೆಗೂ ತನ್ನಾಯುಷ್ಯವಿಡೀ ಅವರು ದೇಶಮಾತೆಯ ವಿಲಾಪದ ಕಡೆಗೆ ಕಿವಿಗೊಟ್ಟಿದ್ದರೇ ಹೊರತು ಶ್ರೀಮಂತಿಕೆಯ ವಿಲಾಸದ ಕಡೆಗೆ ಮನ ಕೊಟ್ಟವರಲ್ಲ. ದೇಶಭಕ್ತ ಭಟ್ಟರ ಹೃದಯ ಮಾತು', ವರ್ತನೆ, ವೇಷ, ಸಮಯ- ಇವೆಲ್ಲವೂ ಸಂಪೂರ್ಣವಾಗಿ "ಗಾಂಧಿತ್ವ"ಕ್ಕೆ ಮಾರ್ಪಟ್ಟಿದ್ದುವು; ಅವರು ಅದರಲ್ಲೇ ಲೀನವಾಗಿದ್ದರು. ಇಂತಹ ಮತಾಂತರಕ್ಕೆ ಸಹಜವಾದ ಕಷ್ಟನಷ್ಟಗಳೆಲ್ಲವನ್ನೂ ಅನುಭವಿಸಿದ್ದರು. ಸಂಪತ್ತಿದ್ದೂ ಸಾದಾತನ—ಭೋಗಿಯೆನ್ನಿಸುವಷ್ಟು ಅನುಕೂಲತೆಗಳಿದ್ದೂ ತ್ಯಾಗೀ ಜೀವನ ನಡೆಸುವ ಆತ್ಮಸಂಯಮನ—ಸ್ಥಾನ ಪ್ರತಿಷ್ಠೆಯ ಬದಲು ಸೇವಾನಿಷ್ಠೆ, ಇವುಗಳಿಂದ ಶ್ರೀ ಸಾಂತ್ಯಾರು ಅನಂತಪದ್ಮನಾಭ ಭಟ್ಟರು ನೆಹರು ಪಟೇಲರಂತಹ ಅಗ್ರಗಣ್ಯ ರಾಷ್ಟ್ರಪ್ರಮುಖರ ಪ್ರತಿಛಾಯೆಯಾಗಿದ್ದರು. ಅಂತೆಯೇ ನೂಲುವುದು, ನೇಯುವುದು, ಅಸ್ಪೃಶ್ಯತಾ ನಿವಾರಣೆ, ಗ್ರಾಮೋದ್ಧಾರ- ಇತ್ಯಾದಿ ಗಾಂಧಿಜೀಯ ವಿಧಾಯಕ ಕಾರ್ಯಕ್ರಮಗಳಲ್ಲಿ ಹಾಗೂ ಅಹಿಂಸೆ, ಮನೋನಿಗ್ರಹ ಇತ್ಯಾದಿ ಗಾಂಧಿ ತತ್ವಗಳ ಅನುಕರಣೆಯಲ್ಲಿ ಶ್ರೀಯುತ ಭಟ್ಟರು ವಿನೋಬಾ ಭಾವೆಯಂತಹ ಗಾಂಧೀ ಶಿಷ್ಯರ ಪಂಗ್ತಿಗೆ ಸೇರಿದ್ದರು. 'ಸ್ಥಳೀಯ ಗಾಂಧಿ' 'ಕಿರಿಗಾಂಧಿ'ಯಾಗಿದ್ದ ಶ್ರೀಯುತ ಭಟ್ಟರಿರುವ ವರೆಗೆ ಗಾಂಧಿತ್ವ ಹಾಗೂ ರಾಷ್ಟ್ರೀಯತೆಯ ಉಚ್ಚಾದರ್ಶವೊಂದು ಈ ಭಾಗದವರ ಕಣ್ಣ ಮುಂದಿತ್ತು.

ದೇ.ಭ. ಸಾಂತ್ಯಾರು ಅನಂತಪದ್ಮನಾಭ ಭಟ್ಟರು ಒಮ್ಮೆ ಕಾರಾಗೃಹವನ್ನನುಭವಿಸಿದ್ದರು. ಸ್ವಾತಂತ್ರ್ಯ ಚಳವಳಿಯ ಅಪ್ಪಷ್ಟದ ಇಳಿತ ಭರತಕ್ಕನುಸರಿಸಿ ಎರಡು ಬಾರಿ ಪಟೇಲಿಕೆಗೆ ರಾಜೀನಾಮೆ ಕೊಟ್ಟು ಎರಡು ಬಾರಿ ಅದನ್ನು ಮರಳಿ ಪಡೆದಿದ್ದರು. ಉಡುಪಿಯಲ್ಲಿ ಸ್ವಾತಂತ್ರ್ಯ ಚಳವಳಿಗಳ ಬೆಂಗೋಲಾಗಿದ್ದುದಲ್ಲದೆ, ತನ್ನ ಗ್ರಾಮದಲ್ಲಿ ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಿ, ಮಿಕ್ಕ ಕಡೆಗಳ ಈ ಮಾದರಿಯ ಶಾಲೆಗಳು ನಿಂತರೂ ಕೊನೆಯ ವರೆಗೂ ಅದನ್ನು ನಡೆಸಿಕೊಂಡು ಬಂದಿದ್ದರು. ತನ್ನೀ ಸಂಸ್ಥೆ, ತನ್ನ ಬೆನ್ನನ್ನೇ ಹಿಡಿಯದ ವ್ಯವಸ್ಥೆ ಮಾಡಿಟ್ಟೇ ಹೋಗಿದ್ದಾರೆ. ಹರಿಜನರಿಗಾಶ್ರಯವಾಗಿ ಆಶ್ರಮ ಸ್ಥಾಪಿಸಿದ್ದರು. ಖಾದಿ ಮಗ್ಗಗಳನ್ನಿಟ್ಟಿದ್ದರು. ತಕ್ಲಿಯು ಶ್ರೀಯುತ ಭಟ್ಟರ ಆರನೇ ಬೆರಳಾಗಿತ್ತು; ಅದರ ತಿರುಗುವಿಕೆಗೆ ಸಂದರ್ಭ ಸಮಯದ ನಿರ್ಬಂಧವೇ ಇರಲಿಲ್ಲ. ತಾನೇ ನೂತ ನೂಲಿನ ಅರಿವೆಯನ್ನಲ್ಲದೆ ಶ್ರೀ ಭಟ್ಟರು ಅನ್ಯಥಾ ಉಡುತ್ತಿರಲಿಲ್ಲ; ಸ್ವಂತ ಅಡುಗೆಯ ಆಹಾರ- ಸ್ವಂತ ನೂಲಿನ ಪೋಷಾಕು- ತಾನು ಮಾಡಬಲ್ಲ ಕಾರ್ಯಗಳ ಕುರಿತೇ ಮಾತು—ಈ ತ್ರಿವಿಧ ಪರಿಶುದ್ಧತೆಯಲ್ಲಿ ಶ್ರೀಯುತ ಭಟ್ಟರಂಥವರು ಅಖಿಲ ಭಾರತದಲ್ಲೇ ಬಹಳ ಮಂದಿಯಿರಲಾರರು. ಗಂಭೀರ ಹಸನ್ಮುಖದಿಂದ, ತನ್ನ ಬೇನೆ ಬೇಸರಿಕೆಯನ್ನಾಗಲೀ, ತನ್ನಿದಿರುವವರ ಸ್ಥಿತಿಮತಿಗಳ ವಿರಳಿತದ ವ್ಯತ್ಯಾಸಗಳನ್ನಾಗಲೀ ಗಣಿಸದ ಗಾಂಧೀ ತತ್ವ ಬೋಧೆ ಮಾಡುವ ಕಲೆಯು ಭಟ್ಟರ ಮೈಗೂಡಿತ್ತು. ತಾನೇ ತಕಲೀ ತಿರುಗಿಸಿ ತಯಾರಿಸಿಕೊಂಡ ಅರಿವೆಯಿಂದ-ಮೊಣಕಾಲವರೆಗೊಂದು ಬೈರಾಸು- ಬಿಳಿ ಶರ್ಟು--ಟೋಪಿ--ಒಮ್ಮೊಮ್ಮೆ ಕಂಠಕ್ಕೊಂದು ಬೈರಾಸು; ಋತುಭೇದಾನುಸಾರವಾಗಿ ಓಲೇ ಕೊಡೆ, ಇಷ್ಟಿದ್ದರಾಯಿತು. ಈ ವೇಷದಿಂದ ಕೋರ್ಟು ಕಚೇರಿಗಳ ಬಾಗಿಲಿನಿಂದ ಹಿಡಿದು, ಕೋಳಿಗೂಡುಗಳಂತಹ ಗುಡಿಸಲುಗಳ ಮುಂಭಾಗದ ವರೆಗೂ ಗಾಂಧೀತತ್ವ ಬೋಧೆ ಮಾಡಿದವರು ಶ್ರೀಯುತ ಭಟ್ಟರು. ಉಡುಪಿ ತಾಲೂಕಿನಲ್ಲಿ ಇವರ ಹೆಸರು ಮನೆಮಾತಾಗಿದೆ. ಗಾಂಧೀಭಕ್ತ, ಕಾಂಗ್ರೆಸಿನ ವಿಧಾಯಕ ಕಾರ್ಯಕರ್ತನೆಂದು ಅಖಿಲ ಕರ್ನಾಟಕದಲ್ಲೇ ಇವರು ಪ್ರಸಿದ್ಧರು; ಕೀರ್ತಿಯ ಮೇಲವರಿಗೆ ಜಿಗುಪ್ಸೆ— ಆದರೂ ಜನತೆ ಸ್ವಪ್ರಯತ್ನದಿಂದಲೇ ಇವರಿಗೆ ತಮ್ಮ ಹೃದಯದಲ್ಲೊಂದು ಸ್ಥಾನಕೊಟ್ಟಿದೆ. ಮರಣ ಸನ್ನಿಹಿತವಾದಾಗಲೂ ಶ್ರೀ ಸಾಂತ್ಯಾರು ಅನಂತ ಪದ್ಮನಾಭ ಭಟ್ಟರಲ್ಲಿ ಜನತಾಸೇವಾಪ್ರಜ್ಞೆಯುಳಿದಿತ್ತು. ಅವರು ತನ್ನ ಮರಣ ಶಾಸನದಲ್ಲಿ ತನ್ನ ತಿಲಕಾಶ್ರಮ ಶಾಲೆಯನ್ನು ಕಟ್ಟಡ, ಸಾಮಾನು ಮತ್ತು ೫ ಎಕ್ರೆ ಸ್ಥಳ ಸಮೇತ ಸಾರ್ವಜನಿಕ ಹಕ್ಕಾಗಿ ದಾನ ಮಾಡಿಟ್ಟಿದ್ದಾರೆ. ತನ್ನ ಬೈರಂಪಳ್ಳಿ ಗ್ರಾಮದಲ್ಲಿ ಓರ್ವ ಮಿಡ್‌ವೈಫನ್ನು ಇಡುವದಕ್ಕೆ ವರುಷಕ್ಕಿಪ್ಪತ್ತು ಮುಡಿ ಅಕ್ಕಿಯನ್ನು ಸರಕಾರಕ್ಕೆ ಅಥವಾ ಆದರಿಂದ ಅಧಿಕಾರ ಹೊಂದುವ ಸಂಸ್ಥೆಗೆಂದು ಬಿಟ್ಟಿದ್ದಾರೆ. ಹರಿಜನೋದ್ಧಾರ ಕಾರ್ಯಕ್ಕಾಗಿ ಉಪಯೋಗಿಸುವಂತೆ 'ಗಾಂಧೀ ಸ್ಮಾರಕ ನಿಧಿ'ಗೆ 7½ ಎಕ್ರೆ ಜಮೀನನ್ನು ಬರೆದಿಟ್ಟಿದ್ದಾರೆ. ತನ್ನ ನಿಷ್ಠಾವಂತ ಅನುಯಾಯಿಯಾಗಿದ್ದ ತಿಲಕಾಶ್ರಮದ ಅಧ್ಯಾಪಕ ಶ್ರೀ. ಬಲ್ಲಾಳರಿಗೆ ನಗದಿಯಾಗಿ 700 ರೂಪಾಯಿ ಅಥವಾ ವರುಷಾವಧಿ 10 ಮುಡಿ ಅಕ್ಕಿಯಂತೆ ಕೊಡತಕ್ಕದೆಂದೂ ವಿಧಿಸಿದ್ದಾರೆ. ಜನತಾಜನಾರ್ದನನಿಗೀಮೂಲಕ ತನ್ನ ಕೊನೆಯ ಕಾಣಿಕೆ ಸಲ್ಲಿಸಿಯೇ ಹೊರಟು ಹೋಗಿದ್ದಾರೆ. ಶ್ರೀ ಭಟ್ಟರಿಗೆ ಶ್ರೀ ಕೃಷ್ಣರಾಜ, ಕವಿ ಶ್ರೀ ವೆಂಕಟರಾಜ, ಇಬ್ಬರು ಮಕ್ಕಳು; ಸಹಧರ್ಮಿಣಿಯಿದ್ದಾರೆ.

ಈ ದೇಶಭಕ್ತನ--ಸೇವಾಜೀವಿಯ-- ಶ್ರೀ ಅನಂತ ಪದ್ಮನಾಭ ಭಟ್ಟರ—ಆತ್ಮಕ್ಕೆ ಶಾಂತಿಯಿರಲಿ.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ,ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಸುವುದು ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಎಲ್ಲ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ
ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

THE VIJAYA BANK LIMITED.

Season deposits are now accepted at the Head Office and Branches of the Bank in sums of Rs 1000/ and over, in multiples of Rs 500/- at the following rates:

For 3 months at 2½% per annum.
For 6 months at 3½% per annum.

For further particulars you may apply or call at any of our following Offices

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಅಂಡವಾಯು, ಅಂಡವ್ಯಾಧಿ,
ಫ್ಯಾಲೇರಿಯಾ, ಇತ್ಯಾದಿಗಳಿಗೆ
ಲೇಪನಬಗ್ಗೆ ದಿವ್ಯೌಷಧ.

ರಾತ್ರಿಗೆ ರೂಪಾಯಿ 25/, ½ ರಾತ್ರಿಗೆ ರೂಪಾಯಿ 12-8-0, ¼ ರಾತ್ರಿಗೆ ರೂಪಾಯಿ 6-4-0. ಕುಷ್ಠ ರೋಗಕ್ಕೆ ಶೀಸೆಯೊಂದರ ರೂಪಾಯಿ 3/-.

ಎಸ್. ಪಿ. ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ, 9
S. P. Pharmaceuticel Works
Calcutta 9.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವದು ಹತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3/, ಸ್ಪೆಶ್ಯಲ್ ರೂ. 5-, ಅಧಿಕಾಧಿಕ ಸ್ಪೆಶ್ಯಲ್ ರೂ.೬/-[ವಿ. ಪಿ. ಖರ್ಚು ಪ್ರತ್ಯೇಕ]

Mrs. D. DEVEE, P. DS. (N. J.)
Tollygunge CALCUTTA
ಸ್ಟಾಕಿಸ್ಟರು: ಕರ್ನಾಟಕ ಕಂಪೆನಿ, ಮಂಗಳೂರು

The Canara Banking Corporation Limited.

Estd 1906.

(Incorporated in British India)

Head Office: **UDIPI**, S. India.

SEASON DEPOSITS

for Rs. 5000/- and over are now accepted at all Offices of the Bank at the following rates:—

3 & 4 months — @ 2½ % p. a.

5 & 6 months — @ 2¾ % p. a.

ನವಯುಗ

ಗುರುವಾರ, ಉಡುಪಿ, ೨೩-೯-'೪೮

ರಝಾಕಾರ್

"ಹೈದರಾಬಾದನ್ನೀಗ ಆಳುತ್ತಿರುವವರಾರು--ನಿಜಾಮರೋ ಸಯ್ಯದ್ ಕಾಸಿಮ್ ರಜ್ವಿಯೋ? ಎಂಬ ಅನುಮಾನ ಬರುತ್ತಿದೆ" ಎಂದು ಪಂಡಿತ ನೆಹರು, ಸರ್ದಾರ್ ಬಲದೇವಸಿಂಗರಂತಹ ಹೊಣೆಹೊತ್ತ ನಾಯಕರೇ ಆಶ್ಚರ್ಯ ಸೂಚಿಸಿದ್ದಾರೆ. ಇತ್ತೀಚಿನ ಸ್ಥಿತಿಗತಿಗಳನ್ನು ಕಾಣುವಾಗ ಹೈದರಾಬಾದು ರಝಾಕಾರರ ಕೈಯಲ್ಲಿದೆ ಎಂಬ ಕುರಿತು ಅನುಮಾನವೇ ಉಳಿದಿಲ್ಲ. ಲೋರ್ಡ್ ಮೌಂಟ್ ಬೇಟನರಿಂದ ಸಂಸ್ಥಾನಿಕ ತೀರ್ಮಾನಗಳಿಗೆ ಸಹಾಯವಾದೀತೆಂಬ ನಿರೀಕ್ಷೆಯಿಂದಲೇ ನೆಹರು ಮಂಡಲಿಯು ಅವರಿಗೆ ಗವರ್ನರ್ ಜನರಲ್ ಹುದ್ದೆಯನ್ನೊಪ್ಪಿಸಿದ್ದಿತೆಂಬುದೂ ಲೋರ್ಡ್ ಮೌಂಟ್ ಬೇಟನರು ಅನಿರೀಕ್ಷೆಯನ್ನು ಹೆಚ್ಚಿನಂಶ ಸಾರ್ಥಕಗೊಳಿಸಿರುವರೆಂಬುದೂ ಸಂತೋಷದ ಸಂಗತಿ, ಹೈದರಾಬಾದೊಂದು ಉಳಿಯಿತು-ತಾನು ಹೋಗುವ ಮೊದಲು ಅದನ್ನೂ ತೀರ್ಮಾನಿಸಬೇಕೆಂದು ರಾಜರಕ್ತ ಸಹಜವಾದ ಕೀರ್ತಿಯಾಸೆಯಿಂದ ಲೋರ್ಡ್ ಮೌಂಟ್‌ಬೇಟನರೀಗ ಚಡಪಡಿಸುತ್ತಿರುವುದು ಕಂಡು ಬರುತ್ತಿದೆ. ಸ್ವತಃ ನಿಜಾಮರನ್ನೇ ಇಂಗ್ಲೆಂಡಿಗಾಮಂತ್ರಿಸಿ, ಅದು ನಿರರ್ಥಕವಾದರೂ ನಿಜಾಮರಿಂದ ತನಗೆ ಬಂದ ಆಮಂತ್ರಣಕ್ಕೆ ಧಿಕ್ಕಾರ ಸೂಚಿಸಿ, ಈ ನಡುವೆ ತನ್ನ ಪ್ರತಿನಿಧಿಯನ್ನು ಹೈದರಾಬಾದಿಗೆ ಬೀಳ್ಕೊಟ್ಟು ಭಾರತದ ಗವರ್ನರ್ ಜನರಲರು ಭಾರತ-ಹೈದರಾಬಾದು ಸಂಬಂಧ ನಿರ್ಮಾಣಕ್ಕಾಗಿ ಸರ್ವಶಕ್ತಿಯಿಂದ ಪ್ರಯತ್ನಿಸುತಿದ್ದಾರೆ. ಆದರೆ ಈ ನಿಜಾಮ್-ಗವರ್ನರ್ ಜನರಲ್ ವ್ಯವಹಾರ ನಾಟಕದ ನಿರ್ದೇಶಕರು ಬೇರೆಯೇ ಇದ್ದಾರೆ ಎಂಬುದನ್ನು ಮರೆಯಲಾಗದು. ಕ್ರಮ ಪ್ರಕಾರ ನೆಹರೂ ಸರಕಾರದ ಅಭಿಮತಕ್ಕೆ ವಿರುದ್ಧವಾಗಿ ಲೋರ್ಡ್ ಮೌಂಟ್ ಬೇಟನರು ಹೋಗಲಾರರು; ರಝಾಕಾರರ ಅಭಿಪ್ರಾಯ ಮೀರಿ ಹೆಜ್ಜೆ ಮುಂಬಡಲು ನಿಜಾಮರಿಂದ ಸಾಧ್ಯವಿಲ್ಲ. ಇದ್ದರಿಂದ ಈ ಸಂಧಾನ ಮಾತುಕತೆಗಳು ಲೋರ್ಡ್ ಮೌಂಟ್‌ಬೇಟನರಿಗೂ ಅವರ ಯೋಚನೆಗಳಿಗೂ ಕೊಟ್ಟ ವಿದಾಯ ಸತ್ಕಾರಕೂಟಗಳಾಗಿ ಮುಕ್ತಾಯಗೊಂಡರೆ ಆಶ್ಚರ್ಯವಿಲ್ಲ, ಆದರಿಲ್ಲಿ ಆಶ್ಚರ್ಯಹಾಗೂ ಅತ್ಯಂತ ಜಿಗುಪ್ಸೆ ನಿರ್ಮಿಸುವ ವಿಷಯವೆಂದರೆ ನಿಜಾಮರು ರಝಾಕಾರರ ಕೈಯಲ್ಲಿ ಹೀಗಾಗಿರುವುದೇ! ರಝಾಕಾರರಂತಹ ರಾಕ್ಷಸರ ಗರ್ಭಾಂತರ್ಗತ ಮುಕುಟಧಾರಿಯೊಬ್ಬನು ಇಂದಿನ ಹೈದರಾಬಾದಿನಲ್ಲಲ್ಲದೆ ಪ್ರಪಂಚದ ಚರಿತ್ರೆಯಲ್ಲೇ ಬೇರೆ ಕಾಣಲು ಸಿಗುವದಿಲ್ಲ! ರಝಾಕಾರರ ಪೂರ್ವಜರಿದ್ದರು-ಜರ್ಮನಿಯ ನಾಜಿಗಳು.ಒಂದಲ್ಲೊಂದು ರೀತಿಯಿಂದ ರಝಾಕಾರರನ್ನು ಹೋಲುವ ಮುಸ್ಲಿಂ ನೇಶನಲ್‌ಗಾರ್ಡ್ಸ್, ಆರ್.ಎಸ್.ಎಸ್. ನಂತಹ ಸೇನಾ ಸದೃಶ ಜಾತಿಯತಾ ದಳಗಳ ಅನುಭವವೂ ಇಲ್ಲಿಯವರಿಗಿದೆ. ಆದರೆ ಇಂತಹ ಪುಂಡರ ಸೂತ್ರದಲ್ಲಿರುವ ಗೊಂಬೆಯೊಂದರ ತಲೆಯ ಮೇಲೆ ಒಂದು ದೊಡ್ಡ ಸಂಸ್ಥಾನದ ಕಿರೀಟನಿಂತಿರುವ ಈ ದೃಶ್ಯ ಮಾತ್ರ ಅನ್ಯಾದೃಶ್ಯವಾದುದು; ಅಸಹ್ಯವಾದುದು! ಲೋಕದ ಯಾವ ಭಾಗದ ಯಾವ ದುರಾಡಳಿತೆಯತ್ತ ನೋಡಿದರೂ ಒಂದಲ್ಲೊಂದು ರೀತಿಯ ಗೌರವಾರ್ಹ ಅಂಶವು ಅದರಲ್ಲಿ ಕಂಡುಬಂದೀತು-ಆದರೆ ರಝಾಕಾರರ ಅಂಕೆಯಲ್ಲಿರುವ ನಿಜಾಮ್ ಆಡಳಿತೆಯಲ್ಲಿ ಅದರ ಅಣುವೂ ಗೋಚರಿಸುವದಿಲ್ಲ. 'ವ್ಯವಸ್ಥಿತ ಅರಾಜಕತೆ'ಯೆಂದಲ್ಲದೆ ಈ ರಾಜ್ಯ ನಿಜಾಮ್ ಆಳ್ವಿಕೆಯನ್ನು ಬೇರೆ ಹೆಸರಿನಿಂದ ಕರೆಯುವದಸಾಧ್ಯ. ಹೈದರಾಬಾದಿನೊಳಗಡೆಯಲ್ಲಿ-ಮದ್ರಾಸ್, ಬೊಂಬಾಯಿ, ಪ್ರಾಂತ್ಯಗಳ ಸರಹದ್ದುಗಳಲ್ಲಿ-ರಝಾಕಾರರು ನಡೆಸುತ್ತಿರುವ ಅತ್ಯಾ[illegible]ರೋಮಾಂಚನಕಾರಿಯಿವೆ. ಕೊಲೆ, ಕೊಳ್ಳಿ, ಸುಲಿಗೆ, ಮಹಿಳೆಯರ ಮಾನಾಪಹಾರ ಇತ್ಯಾದಿಗಳೇ ರಝಾಕಾರರ ನಿತ್ಯಾಚರಣೆಗಳಾಗಿವೆ. ಎಷ್ಟೋ ಹೊಯ್ದು ಸಜೀವದಹನಮಾಡಿದ ಸಂಗತಿಗಳೂ ತಿಳಿದು ಬಂದಿವೆ! ಇಂತಹ ಕೆಲಸಗಳನ್ನು ಇನ್ನೂ ಹೆಚ್ಚಿಸುವುದಕ್ಕಾಗಿ ಕೆಲವು ತಿಂಗಳುಗಳ ಮೊದಲು 50000 ದಷ್ಟಿದ್ದ ರಝಾಕಾರ್ ಸೈನಿಕರ ಸಂಖ್ಯೆ ಈಗ 1 ಲಕ್ಷಕ್ಕೂ ಮಿಕ್ಕಿದೆ. ನಿಜಾಮ್ ಸರಕಾರದ ಪ್ರಧಾನ ಮಂತ್ರಿಯೇ ರಝಾಕಾರರ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಪ್ರದರ್ಶನವೊಂದರಲ್ಲಿ ಜಾಹೀರುಮಾಡಿದ್ದ. ಹೈದರಾಬಾದಿನಲ್ಲಿ ಸಾರ್ವಜನಿಕರಿಗೆ ಸಿಗದ ಪೆಟ್ರೋಲು, ರಝಾಕಾರರಿಗೆ ಬೇಕಾದಷ್ಟು ದೊರೆಯುತ್ತಿದೆ; ವಾಹನಗಳ ಹಾಗೂ ಶಸ್ತ್ರಾಸ್ತ್ರಗಳ ಕೊರತೆಯಾವುದೂ ಅವರಿಗೊದಗದಂತೆ ನೋಡಿಕೊಳ್ಳಗುತ್ತಿದೆ. ಇತ್ತೀಚೆಗೆ ದೊಡ್ಡ ಪ್ರಮಾಣದಲ್ಲಿ ಎಲ್ಲೆಲ್ಲೂ ಆವರಾರಂಭಿಸಿರುವ ಹತ್ಯಾಕಾಂಡಗಳ ಮೊದಲೇ ವ್ಯವಸ್ಥೆಯಿಂದ ಅವರು ನಡೆಸಿದ ದರೋಡೆಗಳು 200ಕ್ಕೂ ಮಿಕ್ಕಿ ಗಣನೆಗೆ ದೊರೆತಿವೆ. ಹೈದರಾಬಾದಿನಲ್ಲಿ ಅವರ ಹಲವು [illegible]ಪತ್ರಿಕೆಗಳೂ ಏಳು ದಿನ ಪತ್ರಿಕೆಗಳೂ ಪೂರ್ಣ ಸ್ವಾತಂತ್ರ್ಯ ಪಡೆದು ಚಾಲಿನಲ್ಲಿವೆ. ಆದರೆ ರಝಾಕಾರರ ಚಟುವಟಿಕೆಗಳ ಕುರಿತು ಟೀಕಿಸಬಾರದೆಂಬ ನಿರ್ಬಂಧವು ಮಿಕ್ಕ ಪತ್ರಿಕೆಗಳಿಗಿದ್ದು ಈ ನಿಯಮ ಮೀರಿದವುಗಳನ್ನು ಹತ್ತಿಕ್ಕಲಾಗುತ್ತಿದೆ. ಈಗಿನ ನಿಜಾಮ್ ಮಂತ್ರಿಮಂಡಲವು ಸಂಪೂರ್ಣವಾಗಿ ರಝಾಕಾರರ ಪ್ರಭಾವದೊಳಗಿದೆಯಲ್ಲದೆ, ಸೇನೆ, ಪೋಲೀಸ್, ಮತ್ತಿತರ ಸರ್ವ ಖಾತೆಗಳಲ್ಲೂ ರಝಾಕಾರರೂ ಅವರ ಪಕ್ಷಪಾತಿಗಳೂ ತುಂಬಿಕೊಂಡಿದ್ದಾರೆ. ಒಂದೊಮ್ಮೆಗೆ ನಿಜಾಮರು ಭಾರತ ಕೇಂದ್ರದೊಂದಿಗೆ ಜೋಡಣೆಗೊಂಡರೆ, ಅಥವಾ ಪ್ರಜಾಪ್ರಭುತ್ವವಿತ್ತರೆ, ಕೂಡಲೇ ತಮ್ಮ ಪ್ರತಿ ಸರಕಾರ ಸ್ಥಾಪಿಸಿ "ರಝಾಕಾರ್ ರಾಜ್ಯ" ಕಟ್ಟುವ ಯೋಜನೆಯೂ ತಯಾರಿದೆಯೆಂದು ತಿಳಿದು ಬರುತ್ತದೆ. ಒಟ್ಟಿನಲ್ಲಿ ಹೈದರಾಬಾದಿನ ಕಿರೀಟವು ನಿಜಾಮರ ತಲೆಯಲ್ಲಿದ್ದರೂ ರಾಜದಂಡವು-ಮುಸ್ಲಿಮೇತರ ಅಧಿಕ ಸಂಖ್ಯಾಕ ಪ್ರಜೆಗಳನ್ನು ಸದೆಬಡಿಯುವ ಫೇಸಿಸ್ಟ್ ದಂಡವು-ಪ್ರಜಾಸತ್ತೆಯ ತಲೆಯ ಮೇಲಿನ ಗದೆಯು-ರಾಜ್ವಿಯ ಕೈಯಲ್ಲೇ ಇದೆ!

ಈ ರಾಜ್ವೀ ರಾಜಕೀಯದಲ್ಲೂ ರಾಜಿಗಾಸ್ಪದವಿದ್ದೀತೆಂಬ ಆಶೆಯು ಮರುಭೂಮಿಯ ಮರೀಚಿಕೆಯೇ ಸರಿ! ಈ ಸಂಗತಿಯೀಗ ಕೇಂದ್ರ ಸರಕಾರಕ್ಕೆ ಮಂದಟ್ಟಾಗುತ್ತಾ ಬಂದ ಪರಿಮಾಣದಲ್ಲೇ ರಝಾಕಾರರ ಪಾಪದ ಕೊಡವೂ ತುಂಬುತ್ತಾ ಬಂದಿದೆ. ಮುಂದಿನದು ಪ್ರತ್ಯಕ್ಷ ಕಾರ್ಯಕ್ಕಿಳಿಯಬೇಕಾದ ಕಾಲವೆಂಬುದು ನಿರ್ವಿವಾದ. ಅನಿವಾರ್ಯವಾದುದನ್ನು ಆದಷ್ಟು ಬೇಗನೇ ಅನುಭವಿಸಿ ಮುಗಿಸುವದು ವಾಸಿಯಾದ್ದರಿಂದ ಹೈದರಾಬಾದ್ ಸಂಬಂಧದ ಇಂದಿನ ಅನಿಶ್ಚಿತ ಸ್ಥಿತಿಯು ಇನ್ನೂ ಮುಂದುವರಿಯದೆಂದೂ ಕೆಲವೇ ದಿನಗಳೊಳಗೆ ಭಾರತ ಸರಕಾರದ ಸ್ಪಷ್ಟನಿರ್ಧಾರವನ್ನು ಕಾಣುವಂತಾಗುವದೆಂದೂ ನಂಬುತ್ತೇವೆ.

ರಾಜಕೀಯ ನಾಣ್ನುಡಿಗಳು

ಕೈಲಾಗದೆಂದು ತೋರಿದಲ್ಲಿ ಕಾಲೂರಿ ನಿಲ್ಲುವವರು ಬ್ರಿಟಿಷರಲ್ಲ; ತಗಾದೆಯಿರುವಲ್ಲಿ ತಂಟೆ ನಿರ್ಮಿಸದೆ ಬಿಡುವವರು ರಶ್ಯನರಲ್ಲ; ಅಡಚಣೆಯಿದ್ದವರನ್ನು ಆಕರ್ಷಿಸದೆ ಬಿಡುವವರು ಅಮೆರಿಕನರಲ್ಲ.

೦೦ ೦೦ ೦೦

ನಿಜಾಮರಿರುವ ವರೆಗೆ ನಿರಂಕುಶಾಡಳಿತೆ ತಪ್ಪದು; ರಝಾಕಾರರಿರುವ ತನಕ ರೌರವ ತಪ್ಪದು.

೦೦ ೦೦ ೦೦

ಹುಚ್ಚು ನಾಯಿಯ ಕಾಟ ಮುಗಿಯದಿರುವಾಗಲೇ ಹುಲಿ ಬೇಟೆಗೆ ಹೊರಡಬೇಕಾಗಿ ಬಂದರೆ? ಕಾಶ್ಮೀರದ ಕಾಳಗ ನಡೆದಿರುವಾಗಲೇ ಕಾಸಿಮ್ ರಾಜ್ವಿಯ ಮೇಲೆ ಬೀಳಬೇಕಾಗಿ ಬಂದಲ್ಲಿ?

೦೦ ೦೦ ೦೦

ಕಲ್ಲು ಬೀಳುವದು ನಿಲ್ಲುವ ವರೆಗೆ ಕೈಕಾಲು ಬಿಟ್ಟು ಕಿರುಗುವುದು ಕಷ್ಟ; ಅಂತಃಕಲಹವಡಗುವ ತನಕ ಅಭ್ಯುದಯ ಸಾಧನೆ ಅಸಾಧ್ಯ.

೦೦ ೦೦ ೦೦

ಮಿಕ್ಕವರದು ಹೋಳಾಗುವಂತಹದೆನ್ನುವವರೇ ತಮ್ಮದು ಮಾತ್ರ ಹೋಳಾಗುವಂತಹದಲ್ಲವೆನ್ನುತ್ತಾರೆ; ಪಾಕಿಸ್ತಾನದ ಅಧಿಕಾರ ಕೇಳಿದವರೇ ಪಾಲಿಸ್ತಾನ ಅಖಂಡವೆನ್ನುತ್ತಾರೆ.

೦೦ ೦೦ ೦೦

ಮಗನಿಗೆ ಬುದ್ಧಿ ಬರಬೇಕೋ--ಮನೆಯೊಡೆಯ ತೀರಿಹೋಗಬೇಕು. ಮುದಾಂಧರಿಗೆ ಬುದ್ಧಿ ಬರಬೇಕಾದರೆ ಮಹಾತ್ಮ ಮರಣ ಹೊಂದಬೇಕಾಯಿತು.

೦೦ ೦೦ ೦೦

ಪಾಲಿಸ್ತಾನದಲ್ಲಿ ರಕ್ತ ಸುರಿಯುವುದನ್ನು ಕಂಡು ಪ್ರಮುಖ ರಾಷ್ಟ್ರಗಳ ನಾಲಿಗೆಯಿಂದ ಜೊಲ್ಲು ಸುರಿಯುತ್ತಿದೆ.

೦೦ ೦೦ ೦೦

ಏನೂ ಅಧಿಕಾರ ದೊರೆಯದಾಗ ಏಕಾದಶೀ ಮಂತ್ರ ಜಪಿಸಿದರಾಯಿತು; ಅಸಾಧ್ಯಗೊಂದಲವೆದ್ದಾಗ ಅಧಿಕಾರ ಬಿಟ್ಟು ಬಂದರಾಯಿತು.

೦೦ ೦೦ ೦೦

ತನ್ನ ಮನೆಯೂ ಸೋರುತ್ತಿರುವಾಗ ಅನ್ಯರ ಮಾಡಿನ ರಿಪೇರಿಗೆ ಹೋದಾರೇ? ಇಂಗ್ಲಾಂಡಿನ ಸಮಸ್ಯೆಯೇ ದೊಡ್ಡದಾಗಿರುವಾಗ 'ಇಸ್ರಾಯೇಲಿ'ನ ಸಮರಕ್ಕೆ ನಿಂತಾರೆ?

೦೦ ೦೦ ೦೦

ಕಾಶ್ಮೀರದ ಕಾಳಗ ಕಾಲವನ್ನು ನುಂಗುತ್ತಿದೆಯಾದರೆ, ನಿಜಾಮರ ನಿಯಮಗಳು ನೀತಿಯನ್ನೇ ನುಂಗುತ್ತಿವೆ.

೦೦ ೦೦ ೦೦

ಆಗ ಪಾಕಿಸ್ತಾನವಾದರೆ ಈಗ ಪಾಲಿಸ್ತಾನ-ಇಲ್ಲಿ ಪುಂಡರ ಹಾವಳಿಯಾದರೆ ಅಲ್ಲಿ ಸೇನಾ ಧಾಳಿ.

೦೦ ೦೦ ೦೦

ಗೆದ್ದಲು ಹಿಡಿದಲ್ಲಿ ಗೆರೆಯೆಳೆದು ಬರುವದನ್ನು ಪೆಲಸ್ತೈನ್ ಬಿಟ್ಟ ಬ್ರಿಟನಿನಿಂದ ಕಲಿಯಬೇಕು; ಗೆದ್ದ ಎತ್ತಿನ ಬಾಲ ಹಿಡಿಯುವದನ್ನು ಇಸ್ರಾಯೇಲಿಗೆ ಸಮ್ಮತಿ ಕೊಟ್ಟ ಅಮೇರಿಕದಿಂದ ಕಲಿಯಬೇಕು.

೦೦ ೦೦ ೦೦

ಈ ಮೊದಲು ಕಾಯಿದೇ ಆಝಾಮ್ ಜಿನ್ನರ ಕಾಲವಿದ್ದರೆ, ಈಗ ಕಾಸಿಮ್ ರಾಜ್ವಿಯ ಉಪಟಳ.

೦೦ ೦೦ ೦೦

ದೇಶಬಂಧುಗಳ ಪ್ರಾಣದ ಬೆಲೆಗೊತ್ತಿಲ್ಲದವರಿಗೂ ಜೆರುಸಲೇಮಿನ ಪಾವಿತ್ರ್ಯ ತಿಳಿದಿದೆ

ಉಡುಪಿ

ಉಡುಪಿ ತಾಲೂಕು ನಿಖಿಲ ಭಾರತೀಯ ವೈದ್ಯರ ಎರಡನೇ ಸಭೆ- ತಾ. ೩-5-48ರಲ್ಲಿ [illegible] ಕ್ಲಿನಿಕಿನ್ [illegible] ಉಡುಪಿ ಆಫೀಸಿನಲ್ಲಿ ಶ್ರೀ ಓ. ವ್ಹಿ. [illegible] ಗುರುಳರ್, ಇವರ ಅಧ್ಯಕ್ಷತೆಯಲ್ಲಿ ಜರಗಿ, ಹಿಂದಿನ ಸಭೆಯ [illegible] ಅಧಿಕೃತರಿಂದ [illegible] ತಿದ್ದುಪಡಿಗೆ [illegible] ದಿನ ಸಭೆಯನ್ನು ತಾ 30 5 48ನೇ [illegible] ಗಂಟೆಗೆ [illegible] ಆಫೀಸಿನಲ್ಲಿ [illegible] ಮುಂದಿನ ಸಭೆಗೆ [illegible] ತಾಲೂಕಿನ ಸಕಲ ವೈದ್ಯ [illegible] ಕರೆಕರಿಸಬೇಕಾಗಿ [illegible]

ಯಕ್ಷಗಾನ ಕಲಾಮಂಡಲದ— [illegible] ತಾ 15ನೇ [illegible] ಶ್ರೀ [illegible] ಎಂ. ಎ. ಎಲ್ ಟಿ, [illegible] ಅಧ್ಯಕ್ಷತೆಯಲ್ಲಿ ಕವಿಯಾಕ [illegible] ಜರಗಿತು. [illegible] ಶ್ರೀ [illegible] ನಾರಾಯಣ [illegible] [illegible] ಶ್ರೀ [illegible] ಕುಪ್ಪ [illegible] ಶೆಟ್ಟಿ [illegible] ಉಡುಪಿ ಕಲಾಮಂಡಲದ ಕಾರ್ಯಕಲಾಪಗಳ ಕುರಿತು ಭಾಷಣ [illegible] ತಮ್ಮ [illegible] ಭಾಷಣದಲ್ಲಿ ಕೆಲವು ಹಿತ ಸೂಚನೆಗಳನ್ನಿತ್ತರು. ಆ ಮೇಲೆ ಶ್ರೀ ಸುಂದರರಾವ್ ಮತ್ತು [illegible] ಗಾಯನವಾಗಿ, ಮಂಡಲದವರಿಂದ '[illegible] ಸಂಧಾನ' ಪ್ರಸಂಗವು ಯಶಸ್ವಿಯಾಗಿ ಜರಗಿ, ಶ್ರೀ ಎಮ್. ಸುಬ್ರಾಯರ ಧನ್ಯವಾದಗಳಾದುವು.

ಬಂದರ ಸಮಿತಿ ಸದಸ್ಯರಾದ:- ಶ್ರೀ ಕೆ. ಮಿತ್ತರ್ ಮತ್ತು ಶ್ರೀ ಜೆ. ಬಿ. ಮುತ್ತ್ರಿಯವರು ಇದೇ ತಾ 14ರಲ್ಲಿ ಸಂಜೆ ಉಡುಪಿಗೆ ಬಂದರು, ಸಂಜೆ ಕಹರಿನ ಪ್ರಾಮುಖ್ಯ ಸ್ಥಳಗಳನ್ನು ನೋಡಿದರು.

ಮರುದಿನ ಮಲ್ಪೆ ಬಂದರವನ್ನೂ ಸ್ಯೇಂಟ್ ಮೇರೀಸ್ ದ್ವೀಪವನ್ನೂ ಸಂದರ್ಶಿಸಿ ಮಲ್ಪೆ ಪಂಚಾಯತ ಬೋರ್ಡಿನ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಅಪರಾಹ್ನ ಮೂರು ತಾಸಿಗೆ ಉಡುಪಿ ಮ್ಯೆನ್ ಶಾಲೆಯಲ್ಲಿ ಮುನಿಸಿಪಾಲಿಟಿ ಪರವಾಗಿ ಚೆಯರ್‌ಮೆನ್ ಶ್ರೀ ಪಿ. [illegible] ಶ್ರೀನಿವಾಸ ನಾಯ್ಕರು ಅರ್ಪಿಸಿದ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಮಲ್ಪೆ [illegible] ದೊಡ್ಡ ಬಂದರವನ್ನಾಗಿ ಮಾಡುವದೆ ಅಲ್ಲಿಯ ಸಮುದ್ರದ ಆಳ ಮತ್ತು [illegible] ಕಲ್ಲುಗಳೇ ಮೊದಲಾದುವನ್ನು ಪರೀಕ್ಷಿಸಬೇಕಾಗಿದೆ ಎಂದರು. ಶ್ರೀ ಮುತ್ತ್ರಿಯವರು.

[illegible] ಮುಖಪುಟ ಪತ್ರಿಕ ಕನ್ನಡ [illegible] ಕ [illegible] ನ [illegible] ತೇರಿಯಾದ [illegible] ತಾ 23 5 48ನೇ [illegible] ತ [illegible] 30ಕ್ಕೆ [illegible]



Approved firm by the Govt. of Mysore
Certified by the Agent of the Govt. of
Cylone & Indian.

ಪ್ರಾಪಂಚಿಕ ವಿದ್ಯಮಾನಗಳು

ಜಾಗತಿಕ ರಾಜಕೀಯ ರಂಗದ ಒಂದು ವಿಲಕ್ಷಣ ಘಟನೆಯೆಂದರೆ ರಶ್ಯಾ ಮತ್ತು ಅಮೇರಿಕಗಳೊಳಗೆ ಸಖ್ಯ ಭಾವನೆ ನಿರ್ಮಿಸಲಾಗುವ ಮಾತುಕತೆ ನಡೆಯಬೇಕೆಂಬ ಸೂಚನೆ ಮುಂದೆ ಬಂದು, ಅಂತರ್ಧಾನಗೊಂಡುದು. ಇಂತಹ ಸಂಧೀ ಸಂಭಾಷಣೆಯ ಸೂಚನೆಯನ್ನು ಅಮೇರಿಕವು ಮೋಸ್ಕೋದಲ್ಲಿದ್ದ ತನ್ನ ರಾಯಭಾರಿಯ ಮೂಲಕ ರಶ್ಯಕ್ಕಿತ್ತಿದ್ದಿತು. ರಶ್ಯದ ವಿದೇಶ ಮಂತ್ರಿಯಿದನ್ನು ಸ್ವಾಗತಿಸಿದರೂ, ಅವರಿದರ ಜತೆಯಲ್ಲಿ ಪ್ರಕಟಿಸಿರುವ ಅಭಿಪ್ರಾಯಗಳು ಆಕ್ಷೇಪಾರ್ಹವೆಂದೂ, ಇಂತಹ ಸ್ಥಿತಿಯು 'ಸ್ನೇಹ ನಿರ್ಮಾಣ ಮಾತುಕತೆ ನಡೆಸುವದಕ್ಕೆ ಆಧಾರವಾಗಲಾರ'ದೆಂದೂ ಅಮೇರಿಕವು ತಿಳಿಸಿ ಈಗ ಸಂಧಾನ ಯೋಚನೆಯನ್ನೇ ಬಿಟ್ಟಿದೆ. ಮುಂದಿನ ಅಮೇರಿಕಾಧ್ಯಕ್ಷ ಸ್ಥಾನದ ಓರ್ವ ಉಮೇದ್ವಾರಿಯಾದ ಹೆನ್ರಿವೆಲ್ಲಾಸರು ಸ್ಟಾಲಿನರಿಗೊಂದು ಬಹಿರಂಗ ಪತ್ರ ಬರೆದು ರಶ್ಯಾ ಅಮೇರಿಕಾ ಸೌಹಾರ್ದ ಸಂಬಂಧವಾಗಿ ಕೆಲವು ಸೂಚನೆಗಳನ್ನು ಕೊಟ್ಟಿದ್ದರು. ಅವುಗಳಲ್ಲಿ ಹಲವು ತಮಗೆ ಅಸಮ್ಮತವಾಗಿದ್ದರೂ ಒಟ್ಟಿನ ಮೇಲೆ ವೆಲ್ಲಾಸರ ಸೂಚನೆಗಳು "ವ್ಯವಹಾರ್ಯವಿವೆ ಮತ್ತು ತರ್ಕ ಶುದ್ಧವಿವೆ" ಎಂದು ರಶ್ಯದ ಪತ್ರಿಕೆಗಳು ಸ್ವಾಗತಿಸಿವೆ. ಇತ್ತ ರಶ್ಯದ ಬೆಂಬಲವಿರುವದೆಂದು ಊಹಿಸಿಯೇ ಅದಕ್ಕಿಂತ ಮುಂದಾಗಿ ಪೆಲಸ್ತೈನಿನಲ್ಲಿ ಯೆಹೂದಿಗಳ 'ಇಸ್ರಾಯೇಲ್' ರಾಜ್ಯಕ್ಕೆ ಅಮೇರಿಕವು ಒಪ್ಪಿಗೆಯನ್ನು ಕೊಟ್ಟಿರುವದರಿಂದ ಸ್ವಕಾರ್ಯ ಸಾಧನೆಗಾಗಿ ಅದೇನನ್ನು ಮಾಡುವುದಕ್ಕೂ ಸಿದ್ಧವಿದೆ ಎಂಬುದು ಖಚಿತವಾಗಿದೆ; ಹೆಚ್ಚಿನವರಲ್ಲಿ ಈ ಕುರಿತು ಜಿಗುಪ್ಸೆ ಮೊಳೆತಿದೆ. ಪೆಲಸ್ತೈನಿನ ವಿಭಜನೆಯ ಸೂಚನೆಯನ್ನು ಆದಿಯಲ್ಲಿ ಮುಂದಿಟ್ಟಿದ್ದೇ ಅಮೇರಿಕ. ಆದರೆ ಅದಕ್ಕೆ ಅರಬರು ಬದ್ಧವಿರೋಧವಿದ್ದಾರೆಂದೂ ಸಶಸ್ತ್ರ ಸೇನಾಬಲದಿಂದಲ್ಲದೆ, ಆ ವಿಭಜನೆಯನ್ನು ಜಾರಿ ಮಾಡಲು ಸಂಯುಕ್ತ ರಾಷ್ಟ್ರ ಸಂಘಕ್ಕೆ ಸಾಧ್ಯವಿಲ್ಲವೆಂದೂ ಖಚಿತವಾದೊಡನೆ ಅಮೇರಿಕವು ಅಕಸ್ಮಾತ್ ತನ್ನ ಧೋರಣೆಯನ್ನು ಬದಲಾಯಿಸಿಬಿಟ್ಟಿತು. ಇದಕ್ಕೆ ಕಾರಣವೆಂದರೆ ತಾನು ಮಧ್ಯ ಪೂರ್ವದ ಎಣ್ಣೇ ಸಂಪತ್ತುಳ್ಳ ಮುಸ್ಲಿಂ ರಾಷ್ಟ್ರಗಳ ದ್ವೇಷ ಕಟ್ಟಿಕೊಂಡಲ್ಲಿ, ರಶ್ಯಕ್ಕನುಕೂಲವಾದ ವಾತಾವರಣವು ಅಲ್ಲಿ ನಿರ್ಮಾಣಗೊಂಡೀತೆಂಬ ಭೀತಿ. ಆ ಮೇಲೆ ಪೆಲಸ್ತೈನ್‌ನಲ್ಲಿ ಯೆಹೂದೀ ರಾಜ್ಯ ಸ್ಥಾಪನೆಯಾದೊಡನೆಯೇ ಅದಕ್ಕೆ ಮಂಜೂರಾತಿ ಸೂಚಿಸಿದ್ದಲ್ಲದೆ ಆ ಕಡೆಗಿರುವ ಶಸ್ತ್ರಾಸ್ತ್ರ ಸರಬರಾಯಿಯ ಪ್ರತಿಬಂಧಗಳನ್ನೂ ತೆಗೆದು ಹಾಕುವ ಯೋಜನೆಯನ್ನು ಅಮೇರಿಕವು ಮಾಡುತ್ತಿದೆ. ಇಸ್ರಾಯೇಲಿನೊಡನೆ ರಾಯಭಾರಿ ಸಂಬಂಧ ನಿರ್ಮಿಸುವ ಯೋಚನೆಯಲ್ಲಿ ಅಮೇರಿಕವಿದೆಯಲ್ಲದೆ, ಹೊರದೇಶಗಳಲ್ಲಿರುವ ಯೆಹೂದಿಗಳು ಅನಿರ್ಬಂಧವಾಗಿ ಪೆಲಸ್ತೈನಿನೊಳಗೆ ನುಗ್ಗುವಂತೆ ವಿಶೇಷಾನುಕೂಲತೆಗಳನ್ನೂ ಒದಗಿಸಿದೆ. ತತ್ಪರಿಣಾಮವಾಗಿ ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿದ್ದ ಯೆಹೂದಿಗಳು-ಮುಖ್ಯವಾಗಿ ಸಮರ ಯೋಗ್ಯ ಪ್ರಾಯ ಶಾಯದವರು-ಈಗ ಸಹಸ್ರ ಸಂಖ್ಯೆಯಲ್ಲಿ ಪೆಲಸ್ತೈನಿನೊಳಗೆ ಹೊಗುತಿದ್ದಾರೆ. ಅಮೇರಿಕದ ಈ ಪ್ರೋತ್ಸಾಹದಿಂದ ಹುರುಪುಗೊಂಡ ಇಸ್ರಾಯೇಲ್ ಸರಕಾರವು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯನಾಗಿ ತನ್ನನ್ನು ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡಿದೆಯಲ್ಲದೆ, ಅರಬರ ಇಂದಿನ ಧಾಳಿಯನ್ನು ತಡೆಗಟ್ಟಬೇಕೆಂದು ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟಿದೆ. ಯೆಹೂದಿಗಳು ಸುಸಂಘಟಿತರಿದ್ದು ಆಧುನಿಕ ಶಸ್ತ್ರ ಸಜ್ಜಿತರಿರುವರಾದರೂ ಕಳೆದೆರಡು ವರುಷಗಳಿಂದ ಈ ಯುದ್ಧಕ್ಕಾಗಿಯೇ ಪ್ರಚಂಡ ಸಿದ್ಧತೆ ನಡೆಸಿದ್ದ ಐದು ಅರಬ್ಬೀ ರಾಷ್ಟ್ರಗಳ ಧಾಳಿಯು ಈಗಷ್ಟೇ ಆರಂಭವಾಗಿರುವದರಿಂದ ಪೆಲಸ್ತೈನ್ ಯುದ್ಧದ ಭವಿಷ್ಯವೇನಾಗುವದೆಂಬುದನ್ನಾಗಲೀ, ಮಧ್ಯಪೂರ್ವದಲ್ಲಿ ಕೆಲಕಾಲದಿಂದ ವಿಶೇಷ ಸ್ವಾರ್ಥಾಸಕ್ತಿಯನ್ನು ಪ್ರದರ್ಶಿಸುತ್ತಾ ಬಂದಿರುವ ಪ್ರಮುಖ ರಾಷ್ಟ್ರಗಳ ಮೇಲೆ ಇದರಿಂದಾದ ಪರಿಣಾಮವಾಗಿ ಎಂತಹ ಕಾಲ ಬರಬಹುದೆಂಬುದನ್ನಾಗಲೀ ಈಗ ಊಹಿಸುವದು ಅಸಾಧ್ಯ. ಆದರೆ ಅತ್ತ ಪೆಲಸ್ತೈನ್ ಪ್ರಶ್ನೆಯ ಪರ್ಯಾಲೋಚನೆಗಾಗಿ ಸಂಯುಕ್ತ ರಾಷ್ಟ್ರ ಸಂಘದ 'ಸಾಮಾನ್ಯ ಸಭೆ ಸೇರಿರುವಾಗಲೇ ಇತ್ತ ಪೆಲಸ್ತೈನಿನ ಸ್ಥಿತಿ ಹೀಗಾದುದು ಲೋಕ ಶಾಂತಿ ಹಾರೈಸುವವರ ಕಣ್ಣ ಮುಂದೆ ಮೂಡಿರುವ ಮಹಾ ದುಶ್ಶಕುನ!

ಭಾರತದ ರಾಜಕೀಯದ ಸ್ಥಿತಿಗತಿಗಳಲ್ಲಿಯೂ ಹಿಂದಿನ ವಾರ ಮುಖ್ಯವಾಗಿ ಹೈದರಾಬಾದಿನ ಸಂಬಂಧದ ಪ್ರಶ್ನೆಯೀಗ ನಿಜಕ್ಕೂ ಕೊನೆಯ ಗಡಿಗೆ ಮುಟ್ಟಿದೆ. ಸಹನೆಯ ಕೊನೆಯ 'ಗಡಿಯನ್ನು'--ಪರ್ಯಾಲೋಚನೆಯ ಪರಮಾವಧಿಯನ್ನು ಹಿಂದೀ ಸರಕಾರವೀಗ ತಲಪಿದಂತಾಗಿದೆ. ಇನ್ನು 'ಒಂದೋ ಹಾಗೆ, ಇಲ್ಲವೇ ಹೀಗೆ' ಎಂಬ ಖಂಡ ತುಂಡ ನಿರ್ಧಾರವೇ ಗತಿ. ಸ್ಥಿತಿಗತಿಗಳ ಮೇಲಿಂದ ಹೈದರಾಬಾದು ಸಂಬಂಧ ಪೂರ್ತಿ ಕಡಿದುಹೋಗುವುದು ಖಂಡಿತವೆಂದು ತೋರುತ್ತಿದೆ. ಆದ್ದರಿಂದ ಭಾರತದಿಂದ ತನಗೆ 'ಆರ್ಥಿಕ ದಿಗ್ಬಂಧನ' ಬೀಳಬಹುದೆಂದು ಹೈದರಾಬಾದ್ ಸರಕಾರವು ಇಷ್ಟರೊಳಗೆನೇ 1 ಕೋಟಿ ರೂ. ಗಳ ಅರಿವೆಗಳನ್ನು ಪಡಕೊಂಡಿಟ್ಟದೆಯಲ್ಲದ ಇತರ ಸಿದ್ಧತೆಗಳನ್ನೂ ಭರದಿಂದ ನಡೆಸಿದೆ. ಕಾಶ್ಮೀರದಲ್ಲಿ ನಡೆದ 'ಸ್ವಾತಂತ್ರ್ಯ ವಾರಾಚರಣೆ' ಮತ್ತು ಪಂಡಿತ ನೆಹರುಗಳು ಅಲ್ಲಿ ಹಾಜರಾಗಿ ಕೊಟ್ಟ ಪ್ರೇರಣೆ ಮತ್ತು ಭರವಸೆಗಳಿಂದ ಕಾಶ್ಮೀರದ ಜನತೆಗೆ ಹೊಸ ಜೀವ ಬಂದಂತಾಗಿದೆ. ಅಲ್ಲಿಯ ಯುದ್ಧವು ಯಥಾಪ್ರಕಾರ ಸಾಗಿದೆ; ಸಣ್ಣ ಸಂಸ್ಥಾನಗಳ ಒಕ್ಕೂಟ ರಚನೆ--ಅಸ್ರಿತ ರಾಜ್ಯಗಳಲ್ಲಿ ಪ್ರಜಾಪ್ರಭುತ್ವದ ಪ್ರಗತಿ--ಹಿಂದೀ ಸರಕಾರದ ಪುನರ್ರಚನಾ ಯೋಜನೆ--ಈ ಕ್ಷೇತ್ರಗಳಲ್ಲೆಲ್ಲಾ ಹೆಚ್ಚಿನ ಅಭಿವೃದ್ಧಿಯಾಗಿದೆ. ಮದ್ರಾಸ್ ಪ್ರಾಂತ್ಯದ ಮುಖ್ಯ ಸಮಸ್ಯೆಯಾದ ಆಹಾರ ಸ್ಥಿತಿಯ ಕಡೆಗೆ ಕೇಂದ್ರ ಸರಕಾರದ ಸಹಬರಾಯಿ ವಾಗ್ದಾನದಿಂದ ಹೆಚ್ಚಿನ ಆಶಾಕಿರಣ ಬಿದ್ದಿದೆ.

ಭಕ್ತಿಗೆ ಮಿಗಿಲಾದ ಭಗವಂತನು ಬಡವ ಬಲ್ಲಿದರೆಂಬ ಭೇದವಿಲ್ಲದೆ ನುಟ್ಟದವರೆದುರು ಹುಚ್ಚು ಹುಚ್ಚಾಗಿ ಕುಣಿಯುವನೆಂದು ಅಚ್ಯುತರಿಂದ ಮೊದಲಾಗಿ ಹಾರನರ ವರೆಗೆ ಸಾರಿದ ಸಂತನೊಬ್ಬನ ಸರಸ ಕತೆ.

ತಾ. 21—5—1948ರಿಂದ 2ನೇ ವಾರ

ಭಕ್ತ ರಾಮದಾಸ (ಕನ್ನಡದಲ್ಲಿ)

ಮಹಾತ್ಮಾದವರು ತಯಾರಿಸಿ ಶಿಂಪರಾಜರು ದಿಗ್ದರ್ಶಿಸಿದರು.
ನಿಮ್ಮನನ್ನೂರು ನಟನಟಿಯರು ಪಾತ್ರವಹಿಸಿ ಕನ್ನಡಕ್ಕೆ ಕೀರ್ತಿತಂದರು. ಪ್ರತಿಮಾ, ಸುಮತಿ, ಶಿಂಪರಾಜ್, ರಾಘವೇಂದ್ರ ರಾವ್, ಮುರಿರಾವ್, ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ

OS No- 90 1948

ತಿರಿಮಾಲು ಯಾನೆ ಎಂಮಾಲು ಹೆಂಗಸು -ವಾದಿ

1. ಚಾಕು ಹೆಂಗಸು ಮತ್ತು ಪೂಜಾರಿ ಸೊಸೆ. 2. ಸಧ್ಯಾಯ 1ನೇ ಪ್ರತಿವಾದಿ ಮಗ —ಪ್ರತಿವಾದಿರು.

ಪುತ್ತೂರು- ತಾಲ್ಲೂಕು ಬಾಯಾಳ ಗ್ರಾಮದ ಸುಂಬಾಜೆ ಎಂಬಲ್ಲಿ.

ಸದ್ರಿ ಪ್ರತಿವಾದಿರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ.ವಾದಿಯು ನಿಮ್ಮ ಮೇಲೆ ದಾಖಲು ಮಾಡಿ ಮೇಲ್ಕಂಡ್ಯ ದಾವೆಯು ತನ್ನ ಬಗ್ಗೆ ತಾ. 8-6-1948ಕ್ಕೆ ಇಟ್ಟಿರುವುದರಿಂದ, ಸದ್ರಿ ದಿನ್ನ ನೀವು ಸ್ವತಹ ಯಾ ವಕೀಲರದ್ವಾರ ನಿಮ್ಮ ಉಜುರಣೆಗಳಿದ್ರೆ ದಾಖಲು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತಿರ್ಮಾನಿಸಲಾದೀತು, ತಿಳಿದಿರಲಿ.

(sd) Y. RAVIRAJ
Advocate for pltf.

Puttur, 26-4-1948

ಮಂಗಳೂರು

ಜಿಲ್ಲಾ ಆಹಾರ ಸಮಿತಿಯ ಸಭೆಯು:-ಇದೇ ತಾ ೧೨ರಲ್ಲಿ ಶ್ರೀ ಎಸ್. ಆರ್. ಕೈವಾರ್, ಜಿಲ್ಲಾ ಕಲೆಕ್ಟರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಲ್ಲಿಯ ಆಹಾರ ಪರಿಸ್ಥಿತಿಯ ಕುರಿತು ವಿಮರ್ಶಿಸಲ್ಪಟ್ಟು ಹಳ್ಳಿಗಳಲ್ಲಿಯ ರಿಲೀಫ್ ಅಂಗಡಿಗಳಲ್ಲಿ ೪ ಔನ್ಸು ಅಕ್ಕಿ ಕೊಡುವುದನ್ನು ಹೆಚ್ಚಿಸಬೇಕೆಂದೂ, ಜೋಳ ಕಡ್ಡಾಯ ಮಾಡಬಾರದೆಂದೂ ಕೆಲವು ಸದಸ್ಯರು ವಾದಿಸಿದರು. ಜಿಲ್ಲೆಯಲ್ಲಿ ತೆರೆಯಬೇಕಾದ ೪೯೦ ರಿಲೀಫ್ ಅಂಗಡಿಗಳಲ್ಲಿ ಈಗಾಗಲೇ ೩೮೯ ಅಂಗಡಿಗಳನ್ನು ತೆರೆದಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ:ಭಾಗವಹಿಸಿ ಕಷ್ಟ ನಷ್ಟಗಳಿಗೀಡಾದವರಿಗೆ ಭೂಮಿ ಹಂಚಿ ಕೊಡುವ ಮದ್ರಾಸು ಸರಕಾರದ ಯೋಜನೆಗನುಸಾರವಾಗಿ ರಚಿಸಲ್ಪಟ್ಟ ತಜ್ಞರ ಕಮಿಟಿ ಸಭೆಯು ಇದೇ ತಾ ೬ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಭೂಮಿಯನ್ನು ಹಂಚುವ ವಿಚಾರ, ಸಾಮೂಹಿಕ ಕೃಷಿ ಮಾಡುವಿಕೆಯ ಪ್ರಯೋಗ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟವು.

೧೪೪ನೆ ಸೆಕ್ಷನ್ ಜ್ಯಾರಿ:ದೇಶದ ಹಾಗೂ ಜಿಲ್ಲೆಯ ತೆಂಕಣ ಭಾಗದಲ್ಲಿ ಮತ್ತು ಮಂಗಳೂರಲ್ಲಿ ಆದ ಕಮ್ಯೂನಿಸ್ಟ್ ಕಾರ್ಯಕರ್ತರ ಬಂಧನದಿಂದ ಮುಷ್ಕರ ಸಂಘಟನೆಗಳು, ಸಭೆ ಮೆರವಣಿಗೆಗಳಿಂದ ಸಾರ್ವಜನಿಕ ಶಾಂತಿಗೆ ಭಂಗ ಬರಬಹುದೆಂಬ ನಿರೀಕ್ಷೆಯ ಮೇಲೆ ಇದೇ ತಾ ೧೧ರಿಂದ ೨೫ರ ವರೆಗೆ ಮಂಗಳೂರು ನಗರ ಮತ್ತು ಅದರ ನೆರೆಕರೆಯಲ್ಲಿ ೧೪೪ನೆ ಸೆಕ್ಷನ್ ಜ್ಯಾರಿಯಾಗಿದೆ

ಶ್ರೀ ಶಂಕರ ಜಯಂತಿ: ಸಮಾರಂಭವು ಇದೇ ತಾ ೧೩ರಲ್ಲಿ ದ. ಕ. ಅದ್ವೈತ ಸಮಿತಿಯ ಆಶ್ರಯದಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ವಿಪುಲಾನಂದಜೀಯವರ ಅಧ್ಯಕ್ಷತೆಯಲ್ಲಿ ಜರಗಿತು. ವೈದ್ಯ ಭೂಷಣ ಎಮ್. ವಿ. ಶಾಸ್ತ್ರಿ ಮೊದಲಾದವರ ಭಾಷಣಗಳಾದುವು.

ದಸ್ತಗಿರಿ:ದ. ಕ. ಜಿಲ್ಲಾ ಬೋರ್ಡಿನ ಮಾಜಿ ಸದಸ್ಯರೂ ಮಜೂರ ಸಂಘದ ನಾಯಕರೂ ಆದ ಶ್ರೀ. ಕೋಟೆಕಾರ್ ಕೃಷ್ಣ ಶೆಟ್ಟರನ್ನು ಇದೇ ತಾ ೭ರಲ್ಲಿ ಮದ್ರಾಸು ಸಾರ್ವಜನಿಕ ಭದ್ರತಾ ಕಾನೂನಿನನ್ವಯ ದಸ್ತಗಿರಿ ಮಾಡಿ ಮರುದಿವಸವೇ ವೆಲ್ಲೂರು ಜೈಲಿಗೊಯ್ದಿರುವರು.

ದ. ಕ. ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರ ಪ್ರಕಟಣೆ

ಮದ್ರಾಸು ಆಹಾರ ಧಾನ್ಯಗಳ ಕಂಟ್ರೋಲ್ ಆರ್ಡರಿನನ್ವಯ ಲೈಸೆನ್ಸು ಪಡೆದವರು, ಎರಡು ವಾರಕ್ಕೊಮ್ಮೆ ಕಳುಹಿಸುವ ವರದಿಗಳನ್ನು ತಹಶೀಲ್ದಾರರಿಗೂ ಡಿಪ್ಯುಟಿ ತಹಶೀಲ್ದಾರರಿಗೂ ಸರಿಯಾಗಿ ಕಳುಹಿಸುವುದಿಲ್ಲ. ಇದನ್ನುಲ್ಲಂಘಿಸಿದವರ ಲೈಸೆನ್ಸುಗಳನ್ನು ರದ್ದುಗೊಳಿಸಲಾದೀತೆಂದು ಎಚ್ಚರಿಕೆ ಕೊಡಲಾಗಿದೆ.

ಉಪ್ಪು ಮಾರಾಟದ ಪರಮಾವಧಿ ಕ್ರಯ:ಇದೇ ತಾ 10ರಿಂದ ಈ ಕೆಳಗಿನಂತೆ ಟ್ಯುಟಿಕೋರಿನ್‌ದಿಂದ ಬಂದ ಉಪ್ಪಿನ ಮೇಲೆ ಪರಮಾವಧಿ ಕ್ರಯ ಹೊರಿಸಬಹುದು:

ಕುಂದಾಪುರ ಮತ್ತು ಕಾಸರಗೋಡುಗಳಲ್ಲಿ ನೇರವಾಗಿ ತಯಾರಿಸಿದ ಉಪ್ಪನ್ನು ಕಂಡದ್ದರೆ ಸೇರಿಗೆ 0-1-1; ಇಲ್ಲವೆ 0-1 3. ಕಾರ್ಕಳದಲ್ಲಿ 0 1-4, ಪುತ್ತೂರು ತಾಲೂಕಿನ ಪುತ್ತೂರು, ವಿಟ್ಲ, ಬೆಳ್ತಂಗಡಿ ಮತ್ತು ಉಪ್ಪಿನಂಗಡಿಗಳಲ್ಲಿ 0 1 4, ಬೆಳ್ಳಾರೆಯಲ್ಲಿ 0 1-5; ಸುಳ್ಯದಲ್ಲಿ 0-1-7, ಮಂಗಳೂರು ಮತ್ತು ಉಡುಪಿ ತಾಲೂಕುಗಳಲ್ಲಿ ನೇರವಾಗಿ ಕಂಡಿರುವ ಉಪ್ಪು ಸೇರಿಗೆ 0-1-1 ಇಲ್ಲದಿದ್ದರೆ 0-1-2.

ಮುಂಬಯಿ

ಉತ್ತರ ಮುಂಬಾಯಿ ಹೋಟೇಲು ಕಾಮಗಾರ ಯೂನಿಯನಿನ ಆಶ್ರಯದಲ್ಲಿ ಮುಂಬಯಿಯ ಎಲ್ಲಾ ಹೋಟೇಲು ಕೆಲಸಗಾರರ ಸಾರ್ವಜನಿಕ ಸಭೆಯು ತಾ26-5 48 ನೇ ಬುಧವಾರ ರಾತ್ರಿ ಘಂಟೆ 9ಕ್ಕೆ ಸರಿಯಾಗಿ ಪರೇಲಿನಲ್ಲಿರುವ ದಾಮೋದರ ಹಾಲಿನಲ್ಲಿ ಶ್ರೀ ಯಂ. ನಾಥವನ್‌ರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಪೂಜ್ಯ ಸಾನೇಗುರುಜಿ ಮತ್ತು ಜಿ. ಜಿ ಮೆಹೆತ, ಸಾಥಿನಾಯರ್, ಸಾಥಿ ವೆಂಕಟೇಶ್ ಶೆಟ್ಟಿ ಮುಂತಾದ ಮಹನೀಯರು ಹೋಟೇಲು ಕೆಲಸಗಾರ ಸಂಘಟನೆಯ ಕುರಿತು ಭಾಷಣ ಮಾಡಲಿರುವರು. ಪ್ರತಿಯೊಬ್ಬ ಹೋಟೇಲು ಕೆಲಸಗಾರನೂ ತಪ್ಪದೆ ಬರಬೇಕಾಗಿ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

WANTED

Applications from candidates for the following appointments as prevocational full time Instructors to teach the following subjects in Board Higher Elementary schools under the South Kanara District Board.

Spinning & Weaving- Government Technical Teacher's certificate of the Lower Grade in weaving or the Certificate of the Madras Government Textile Institute

Carpentry-Industrial School Certificate in carpentry

Book Binding Government Technical Teachers' Certificate of the Lower Grade in Book Binding.

Agriculture Government Technical Teachers' Certificate of the Lower Grade in Agriculture.

Tailoring— Government Technical Teacher's Certificate of the Lower Grade in Tailoring.

Needle Work-Government Technical Teacher's Certificate of the Lower Grade in Needle work and fress making

Toy making - Industrial School Certificate in Toy making

Scale of pay- 30-1-45 plus dearness allowance

The following information should be furnished in the application 1 Father's name 2 Cast 3 date of birth 4 Place of residence 5 General Educational qualifications 6 Previous experience if any.

Each application should be accompanied by a Treasury or money order reciept for annas four being the prescribed application fee paid to the credit of this District Board.

All applications should reach the Special Officer. District Board, South Kanara before 31-5-1948

Sd. **M. Sundar Rao,**
For Special Officer

S. K. District Board Office,
11-5-1948

The Canara Banking Corporation Ltd.,

ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ಲಿಮಿಟೆಡ್ ಮಲ್ಪೆ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೇ ಇರುವುದರಿಂದ ಅವರಿಗೆ ಕಳುಹಿಸಿದ ರಿಜಿಸ್ಟ್ರಿ ನೋಟೀಸು ಸದ್ರಿಯವರು ಮೃತಪಟ್ಟಿರುವರೆಂದು ವಾಪಾಸು ಬಂದಿರುವದರಿಂದ ಈ ಮೂಲಕ ಅವರಿಗೆ ಯಾ ಅವರ ವಾರಿಸ್ದಾರರಿಗೆ ತಿಳಿಸುವುದೇನೆಂದರೆ ಸದ್ರಿ ನಗಗಳ ಬಾಬ್ತು ಅಸಲು, ಬಡ್ಡಿ, ಬಡ್ಡಿಯ ಬಡ್ಡಿ, ಇತರ ಮತ್ತು ಈ ನೋಟೀಸುಗಳ ಖರ್ಚು ಅಲ್ಲದೆ ಮುಂದಿನ ವಸೂಲಿವರೆಗಿನ ಬಡ್ಡಿ ಸಮೇತ ತಾ 12-6 1948ರ ಒಳಗೆ ಬ್ಯಾಂಕಿಗೆ ಬಂದು ಕೊಟ್ಟು ಬಿಡಿಸಿಕೊಂಡು ಹೋಗಬೇಕು. ಹಾಗೆ ಕೊಂಡು ಹೋಗಲಿಕ್ಕೆ ತಪ್ಪಿದರೆ ಸದ್ರಿ ನಗಗಳನ್ನು ತಾ. 19—6 1948ನೇ ಶನಿವಾರ ಮಧ್ಯಾಹ್ನ ಒಂದು ಗಂಟೆಗೆ ಯಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿನಗಳಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹಲಂ ಮಾಡಿ ಸದ್ರಿ ಹಲಂನಿಂದ ಹುಟ್ಟಿ ಬಂದ ಐವೇಜಿನಲ್ಲಿ ಹಲಂ ಖರ್ಚು ಕಳೆದು ಬಾಕಿ ಉಳಿಯುವ ಐವೇಜನ್ನು ಸದ್ರಿಯವರ ಲೆಕ್ಕಕ್ಕೆ ಜಮಾ ಮಾಡಿ ನಂತರ ಸದ್ರಿಯವರ ಮೇಲೆ ಇನ್ನೂ ಬಾಕಿಯಾಗಬಹುದಾದ ಐವೇಜಿಗೆ ಅಗತ್ಯವುಳ್ಳ ವ್ಯವಹಾರ ನಡಿಸಲಾದೀತು. ಆ ಸಂ[illegible] ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ನಷ್ಟ ತೆರಲಿಕ್ಕೆ ಕೂಡಾ ಸದ್ರಿಯವರು ಜವಾಬ್ದಾರರಾಗುತ್ತಾರೆ.

ಅಂಕ ಸಂಖ್ಯೆ 1. ಸಾಲದ ಸಂಖ್ಯೆ 451 45
ಹೆಸರು ಕಿದಿಯೂರು ಗ್ರಾಮದ ಪಡುಕರೆ [illegible]
ಸರಿಯ ಪೂಜಾರಿಯ ಅಳಿಯ [illegible] ಅಸಲು ರೂಪಾಯಿ 250

ಬ್ಯಾಂಕಿನ ಆಫೀಸು
ಮಲ್ಪೆ ತಾ. 17-5-1948

ಟಿ ಅನಂತರಾವ ಕಲ್ಕೂರ
ಏಜಂಟ್.

ಅತ್ಯಂತ ಉಪಯುಕ್ತ ಪುಸ್ತಕ

ವ್ಯವಹಾರ ಜ್ಞಾನದರ್ಪಣ

ಶ್ರೀ. ಯು. ಜಿ. ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ
ಲೋಕ ವ್ಯವಹಾರ ಬೋಧಿನಿ
ಬೆಲೆ ರೂ 1—8—0 ಮಾತ್ರ

ನಿಜವಾದ ಜನತಾ ಸಾಹಿತ್ಯ—
ಶ್ರೀ ಎಂ ವಿ. ಹೆಗ್ಡೇರ

ಸ್ವಾತಂತ್ರ್ಯ ವಿಜಯ

ಯಕ್ಷಗಾನ ಪದ್ಯ-ಅರ್ಥಗಳಲ್ಲಿ ಸ್ವಾತಂತ್ರ್ಯ ವಿಜಯದ ಕತೆ
ಬೆಲೆ 0 8 0

ಪ್ರತಿಗಳು ಸಿಗುವ ಸ್ಥಳಗಳು (1)ಸ್ಕೂಲ್ ಬುಕ್ ಕಂಪೆನಿ, ಮಂಗಳೂರು;(2)ಎಂ ಎಸ್. ಮಯ್ಯ, ಪುತ್ತೂರು; (3) ನವಭಾರತ ಬುಕ್ ಡಿಪ್ಪೋ, ಉಡುಪಿ; (4) ಪಾಪಂಜೆ ಗುರುರಾವ್, ಉಡುಪಿ, (5) ಯು. ಆರ್. ಶೆಣೈ & ಸನ್ಸ್, ಮಂಗಳೂರು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ
ಕ್ರಮಸಂಖ್ಯೆ 30 1948 RIA 151 1948
ಅಂಬಪ್ಪ ಗೌಡ- ವಾದಿ ಮತ್ತು ಅಂಮು ಗೌಡ— ಪ್ರತಿವಾದಿ

ಪ್ರತಿವಾದಿ ಅಂಮುಗೌಡ—ಪುಟ್ಟಗೌಡನ ಮಗ ಪುತ್ತೂರು ತಾಲ್ಲೂಕು ಎಡಮಂಗಲ ಗ್ರಾಮ — ಇವರಿಗೆ

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಗೇಣಿ ಬಾಕಿ ರೂಪಾಯಿ 284 11-0ನ್ನು ವಸೂಲು ಮಾಡುವರೆ ದಾಖಲ್ಲು ಮಾಡಿದ ಮೊಕದ್ದಮೆ ನ್ಯಾಯವು ಬರುವ ಜೂನ್ ತಾರೀಕು 2ಕ್ಕೆ ತಪ್ಪಗಿಟ್ಟಿರುವದ್ರಿಂದ ಈ ಕುರಿತು ಆಕ್ಷೇಪಣೆಗಳಿದ್ದರೆ ಆ ದಿವಸ ಬೆಳಿಗ್ಗೆ ಘಂಟೆ 10 ಕ್ಕೆ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು. ತಪ್ಪಿದಲ್ಲಿ ಯಕ್ಸ್‌ಪಾರ್ಟಿಯಿಂದ ತೀರ್ಮಾನಿಸಲ್ಪಡುವದು ಯೆಂಬದಾಗಿ ಈ ಮೂಲಕ ತಿಳಿಸಿಯದೆ.

B CHIDANANDA RAO,
Vakil for plaintiff

ಪುತ್ತೂರು ತಾ 6-4-48.

ಲಗ್ನ ಪತ್ರಿಕೆಗಳನ್ನು
ಸುಲಭ ದರದಲ್ಲಿ
ಶೀಘ್ರವಾಗಿ
ಮುದ್ರಿಸಿ ಕೊಡಲಾಗುವುದು.
ಇತರ ಎಲ್ಲತರದ ಮುದ್ರಣ ಕಾರ್ಯಗಳನ್ನೂ ಸ್ವೀಕರಿಸಲಾಗುವುದು.
ನವಯುಗ ಪ್ರೆಸ್,
ಉಡುಪಿ.

ಲೋಕಾಭಿರಾಮ ೪

ಬೆಳೆಯಿರಿ ಇಲ್ಲವೆ ಅಳಿಯಿರಿ

ಬರೆದವರು: ಶ್ರೀ ಕು. ಶಿ. ಹರಿದಾಸ ಭಟ್ಟ.

ಭಾರತದ ಭಿನ್ನ ಭಿನ್ನವಾದ ರಾಜಕೀಯ ಪಕ್ಷಗಳ ಕಾದಾಟ, ಕೆಣಕಾಟಗಳ ನಡುವೆ ನಮ್ಮ ಮುಖ್ಯ ಸಮಸ್ಯೆಯನ್ನೇ ನಾವು ಮರೆತಂತೆ ಕಾಣುತ್ತದೆ. ನೂರೈವತ್ತು ವರ್ಷಗಳ ಗುಲಾಮಗಿರಿಯ ಅನುಭವವನ್ನು ನಾನಿನ್ನೂ ಸಂಪೂರ್ಣ ತೊರೆದಂತಿಲ್ಲ. ಈಗ ಹೊಸ ನಂಬುಗೆ, ಹೊಸ ವಿಚಾರ ಪದ್ಧತಿ, ಹೊಸ ಪಕ್ಷ-ಪ್ರತಿಪಕ್ಷಗಳು ನಾವು ಕುರಿಗಳಂತೆ ಅವು ಅವುಗಳ ನಾಯಕರನ್ನು ಅನುಸರಿಸಬೇಕೆಂದು ಬೇಡುತ್ತಿವೆ. ನಮ್ಮ ಇಂದಿನ ಮುಖ್ಯ ಸಮಸ್ಯೆ ಬಿರ್ಲಾ ತಾತಾ ತಲೆ ಕತ್ತರಿಸುವುದೂ ಅಲ್ಲ; ಕಮ್ಯೂನಿಸ್ಟರ ಸದ್ದಡಗಿಸುವುದೂ ಅಲ್ಲ. **ಲಕ್ಷಾಂತರ ಹಳ್ಳಿಗಳ ಏಳ್ಗೆ, ಔದ್ಯೋಗಿಕ ಅಭಿವೃದ್ಧಿ ಹೇಗೆ ಸಾಧಿಸಬಹುದೆಂಬುದೇ ಆ ಪ್ರಶ್ನೆ.**

ಈ ಸಮಸ್ಯೆಗೆ ನಮ್ಮ ಇಂದಿನ ಸರಕಾರ ಒಂದು ಬಗೆಯಾಗಿ ಉತ್ತರ ಕೊಡುತ್ತಿದೆ; ಕಾಂಗ್ರೆಸು ತನ್ನ ಆರ್ಥಿಕ ಯೋಜನೆಯನ್ನು ಮುಂದೊಡ್ಡಿ, ಸರಕಾರ ಅದನ್ನನುಸರಿಸುವಂತೆ ಒತ್ತಾಯಿಸುತ್ತಿದೆ; ಸೋಶಲಿಸ್ಟರೂ ಕಮ್ಯೂನಿಸ್ಟರೂ ರಾಷ್ಟ್ರೀಕರಣ ಆಗದೆ ಔದ್ಯೋಗಿಕ ಉನ್ನತಿ ಅಸಾಧ್ಯವೆಂದೂ, ಗ್ರಾಹಕನಿಗೂ ಉತ್ಪಾದಕನಿಗೂ ಅಡ್ಡ ಬರುವ ಮಧ್ಯಸ್ಥರನ್ನು ನಿರ್ಮೂಲಮಾಡದೆ ಬೆಳೆ ಹೆಚ್ಚುವುದಸಂಭವವೆಂದೂ, ತಮ್ಮ ಎಡ ಪಕ್ಷದ ಧೋರಣೆಯನ್ನು ಸಾರುತ್ತಿವೆ. ನೆಹರೂ ಸರಕಾರಕ್ಕೆ ಈ ಬಲ ಪಕ್ಷದ ಗಾಂಧೀ ಯೋಜನೆಯನ್ನೂ, ಎಡಪಕ್ಷದ ಸಮಾಜವಾದೀ ಧೋರಣೆಯನ್ನೂ, ಸಮನ್ವಯಿಸುವ ಕಾರ್ಯ ಒದಗಿಬಂದಿದೆ.

ನೆಹರೂ ಸರಕಾರ ಮೊನ್ನೆ ತನ್ನ ಔದ್ಯೋಗಿಕ ಧೋರಣೆ (POLICY)ಯನ್ನು ಸಾರಿತು; ಬಂಡವಾಳಗಾರರಿಗೆ ಮೀಸಲಾಗಿ ಹಲವಾರು ಕ್ಷೇತ್ರಗಳನ್ನು ತೆಗೆದಿಟ್ಟು, ಸರಕಾರ ವಶಪಡಿಸಿಕೊಳ್ಳುವ ಕ್ಷೇತ್ರದ ಪರಿಸರಕ್ಕೆ ಗಡಿ ನಿರ್ಮಿಸಿಕೊಂಡು, ಬಿರ್ಲಾ ತಾತಾಗಳಿಗೆ ಹತ್ತು ವರ್ಷಾವಧಿ ಉದ್ದವಾದ ಹಗ್ಗ ಕೊಟ್ಟಿತು. ಕಾಂಗ್ರೆಸ್ 'ಇಲೆಕ್ಷನ್ ಮೆನಿಫೆಸ್ಟೋ'ದಲ್ಲಿ ಉಲ್ಲೇಖಿಸಿದಂತೆ ಅಧಿಕಾರ ಸೂತ್ರವ ಹಿಡಿದೊಡನೆ ಇದ್ದ ಕೈಗಾರಿಕೆಗಳನ್ನೆಲ್ಲ ರಾಷ್ಟ್ರೀಕರಿಸಲಿಲ್ಲ, ಜಮೀನುದಾರಿ ಪದ್ಧತಿಯನ್ನು ಕಿತ್ತೊಗೆಯುವುದರಲ್ಲಿ ಆ ಘೋಷಣೆಯಲ್ಲಿದ್ದಷ್ಟೇ ಉತ್ಸಾಹ ತೋರಿಸುತ್ತಿಲ್ಲ. ಜಮೀನುದಾರರ ಮತ್ತು ಬಂಡವಾಳಗಾರರ ಮನನೋಯದಂತೆ ಎಷ್ಟು ದೂರ ಬೇಕಾದರೂ ಹೋಗುವುದಕ್ಕೆ ಸಿದ್ಧವಾಗಿದೆ ಎಂಬಾಗ **ನೆಹರೂ ಸರಕಾರದ ಕಾವಳಿದು ಸಪ್ಪೆಯಾದ ಧೋರಣೆ ರೈತ-ಕೂಲಿಕಾರರಿಗೆ ಸಂತುಷ್ಟಿಯನ್ನುಂಟುಮಾಡಿಲ್ಲ.**

ಈ ಹತ್ತು ವರುಷದ ಉತ್ಪತ್ತಿಸ್ವಾತಂತ್ರ್ಯ, ವ್ಯಾಪಾರ ಸ್ವಾತಂತ್ರ್ಯ ಗಳಿಸಬೇಕಾದರೆ ಬಿರ್ಲಾ-ತಾತಗಳು ಎಂಥೆಂಥ ತಂತ್ರ ಹೂಡಿದರು ಗೊತ್ತೇ? ಯುದ್ಧ ಕಾಲದಲ್ಲಿ ಉತ್ಪಾದಿಸುತ್ತಿದ್ದುದಕ್ಕಿಂತ ಲಕ್ಷಾಂತರ ಟನ್ನು ಕಬ್ಬಿಣ-ಉಕ್ಕು ಕಡಿಮೆ ತಯಾರಾದುವು ತಾತಾ ಕಾರ್ಖಾನೆಯಲ್ಲಿ. ಬಟ್ಟೆಯ ಗಿರಣಿಗಳಲ್ಲಿಯೂ ಅದೇ ತೆರನಾಗಿ ಕಡಿಮೆ ಮಾಡಿ ಸರಕಾರಕ್ಕೆ ಗಾಬರಿ ಹುಟ್ಟಿಸಿದರು. 'ನಾವೇನು ಮಾಡುವುದು, ಇದೆಲ್ಲ ಕೂಲಿಕಾರರ ಸಂಪಿನ ದೆಸೆಯಿಂದಾಗಿ, ಕೂಲಿಕಾರ ನಾಯಕರ ಉಪಟಳದಿಂದಾಗಿ' ಎಂದು ಕೂಲಿಕಾರರ ಕಡೆ ಬೆಟ್ಟು ತೋರಿಸಿ ತಮ್ಮ ಜವಾಬುದಾರಿಯನ್ನು ಮರೆ ಮಾಡಿದರು. ಸರಕಾರವು ಇದಕ್ಕೆ ತಲೆದೂಗಿತು. ದೂರು ಹೊರಿಸುವುದಕ್ಕೆ ಕಮ್ಯೂನಿಸ್ಟರು ಹೇಗೂ ಇದ್ದಾರಲ್ಲ? ಈ ಕಮ್ಯೂನಿಸ್ಟರೇ ಈ ಪೀಕಲಾಟಕ್ಕೆ ಕಾರಣವೆಂದು ಎಣಿಸಿ, ಬಂಡವಾಳಗಾರರಿಗೆ ಅನುಕೂಲವಾಗುವಂಥ ಧೋರಣೆಯನ್ನೇ ವಹಿಸಿತು. ಕೂಲಿಕಾರರಿಗೆ ಬಾಯಿ ನೀರೂರಲೆಂದು 10 ಮಿಲಿಯ ಗೃಹ ನಿರ್ಮಾಣದ ಭವಿಷ್ಯ ಯೋಜನೆಯನ್ನು ಜಗಜೀವನರಾಮರು ಸೃಷ್ಟಿಸಿದ್ದಾಯಿತು, ಕೂಲಿಕಾರ-ಮಾಲಿಕರ ಜಗಳ ತೀರ್ಮಾನಕ್ಕೆ 'ಇಂಡಸ್ಟ್ರಿಯಲ್ ಟ್ರಿಬ್ಯೂನಲ್'ನ ರಚನೆ ಆಯಿತು; 'ಕಡ್ಡಾಯದ ಮಧ್ಯ ಪಂಚಾಯತಿಕೆ' (Compulsory Arbitration) ಯನ್ನು ಕಾಯಿದೆಯ ಮೂಲಕ ಜಾರಿ ಮಾಡಲಾಯಿತು; ಅಲ್ಲದೆ ಕೆಲಕೆಲವು ಕಾರ್ಖಾನೆಗಳಲ್ಲಿ ಕೆಲಸಗಾರರಿಗೂ ಪಾಲು ಕೊಡುವುದೆಂದು ನಿರ್ಣಯಿಸಿತು. ಇವೆಲ್ಲ **ನೇರವಾಗಿ ರಾಷ್ಟ್ರೀಕರಣಕ್ಕೆ ಕೈಯಿಕ್ಕಲಾರದೆ, ಸಮಾಧಾನ, ಸಂತವಿಕೆ, ಪಂಚಾತಿಗೆ ಮುಂತಾದ ದಾರಿಯಲ್ಲಿ ಕಾಲಿಟ್ಟುದರ ಪರಿಣಾಮ.**

ಇನ್ನು ಕೃಷಿಕ್ಷೇತ್ರದಲ್ಲಿ ಮುಖ್ಯವಾದ ಕಂಟಕ ನಿರ್ಮೂಲನ ಕಾರ್ಯದಲ್ಲಿ ಪ್ರಾಂತಗಳು ತೊಡಗಿದ್ದರೂ ಇನ್ನೂ ಅವು ಚರ್ಚೆಯ ಅವಸ್ಥೆಯನ್ನು ದಾಟಿಲ್ಲ. ದಿವಸ ಕಳೆದಂತೆ ಭೂಮಾಲಿಕರಿಗೆ ಕೊಡುವ **'ಕಂಪೆನ್ಸೇಶನ್' ಧನ ಹೆಚ್ಚುತ್ತಲೂ,** ರೈತನ ಉನ್ನತಿಯಲ್ಲಿ ಆಸಕ್ತಿ ಇಳಿಯುತ್ತಲೂ ಹೋಗುತ್ತಿದೆ.

ಎಂದಿನ ವರೆಗೆ **ರೈತನಿಗೆ ಭೂಮಿಯ ಮೇಲೆ ಸ್ವತಂತ್ರಾಧಿಕಾರ** ಬರುವುದಿಲ್ಲವೋ, ಅಂದಿನ ವರೆಗೆ 'ಗ್ರೋ ಮೋರ್ ಫುಡ್' (ಹೆಚ್ಚು ಆಹಾರ ಬೆಳೆಸಿರಿ) ಎಂಬ ಗುಲ್ಲು ವ್ಯರ್ಥವೇ ಸರಿ; ಅಂತೆಯೇ ಎಂದಿನ ವರೆಗೆ ಗಿರಣಿಗಳ ಮೇಲೆ ಲಾಭಬಡಕರ ಅಧಿಕಾರ ತಪ್ಪಿ, ಕೂಲಿಕಾರರಿಗೆ **'ಗಿರಣಿ ತಮ್ಮದೆಂ'ಬ ಅಭಿಮಾನ** ಉಂಟಾಗುವುದಿಲ್ಲವೋ ಅಂದಿನತನಕ 'ಪ್ರೊಡ್ಯೂಸ್ ಆರ್ ಪೆರಿಶ್' (ಉತ್ಪಾದಿಸಿರಿ ಇಲ್ಲವೇ ಅಳಿಯಿರಿ) ಎಂಬ ಘೋಷಣೆಯೂ ವ್ಯರ್ಥವೇ.

ಆದರೆ ಒಮ್ಮಿಂದೊಮ್ಮೆಗೇ ಇಂಥ ಕ್ರಾಂತಿಯ ಯೋಜನೆಗಳು ಮುಂದೆ ಬರಲಾರವು; ಕಾಲ ಅವಶ್ಯವಾಗಿಯೂ ಕಳೆಯಬೇಕು, **ದೇಶ ಇಂದು ಗಂಡಾಂತರದಲ್ಲಿದೆ,** ಇನ್ನೂ ಒಂದು ಸ್ಥಿಮಿತಕ್ಕೆ ಬಂದಿಲ್ಲ. ಒಂದೆಡೆ ಅನ್ನದ ಹಾಹಾಕಾರ, ಇನ್ನೊಂದೆಡೆ ಜಾತೀಯತೆಯನ್ನೊಳಗೊಳಗಿಂದಲೇ ಹೊಡೆದೆಬ್ಬಿಸುವ ದುರಭಿಮಾನಿಗಳ ಝೇಂಕಾರ, ಮತ್ತೊಂದೆಡೆ ತೆರೆಮರೆಯನ್ನೋ ಸರಿಸಿ ತಮ್ಮ ನಿಜ ವೇಷವನ್ನು ಪ್ರಕಟಿಸುತ್ತಿರುವ ಕಮ್ಯೂನಿಸ್ಟರ ಹಿಂಸಾತ್ಮಕ ಚಟುವಟಿಕೆಗಳ ಠೇಂಕಾರ—ಇವು ಈ ಸಂಧಿ ಕಾಲದಲ್ಲಿ ದೇಶ ಇನ್ನೂ ಗಂಡಾಂತರದ ಹದ್ದು ಮೀರಿಲ್ಲ ಎಂಬುದರ ಸೂಚಕಗಳೆಂದು ಕೂಲಿಕಾರರೂ, ಕೂಲಿಕಾರರ ನಾಯಕರೂ, ಹಿಂದೂ ಧರ್ಮೋದ್ಧಾರಕರೂ ಮನಗಾಣಬೇಕು. ವರ್ಷಂಪ್ರತಿ ನೂರು ಕೋಟಿ ರೂಪಾಯಿಯನ್ನು ಆಹಾರಕ್ಕಾಗಿ ವೆಚ್ಚ ಮಾಡುವ ಧೋರಣೆ ಬಹುಕಾಲ ನಡೆದರೆ ನಮ್ಮ ಆರ್ಥಿಕ ಅಭ್ಯುದಯ ಬೇಗನೇ ಸಾಧಿಸಲಾರೆವು. ಕೂಲಿಕಾರರಲ್ಲಿ ಅಸಂತುಷ್ಟಿ ಇದೆ; ಇರಲು ಚೆನ್ನಾದ ಗುಡಿಸಲಿಲ್ಲ. ಹೊಟ್ಟೆ ತುಂಬ ಉಣುವಷ್ಟು ಸಂಪಾದನೆ ಇಲ್ಲ; ಹೆಚ್ಚು ಉತ್ಪಾದಿಸುವ ಎಂಬ ಹುರುಪಿಲ್ಲ, ನಿಜ. ಆದರೆ ಇವೆಲ್ಲವನ್ನೂ **ಮಿಂಚಿನ ವೇಗದಿಂದ ಸರಿಪಡಿಸುವುದು ಯಾವ ಸರಕಾರಕ್ಕೂ ಸಾಧ್ಯವಿಲ್ಲ.** ಆದ್ದರಿಂದ **ಸಹನೆ, ತಾಳ್ಮೆ ಅತ್ಯಗತ್ಯವಾಗಿದೆ.** ಬ್ರಿಟನ್ನಿನ ಉಕ್ಕಿನ ಕೆಲಸಗಾರರು ವರ್ಷಕ್ಕೆ 15,283,000 ಟನ್ ಉಕ್ಕು ತಯಾರು ಮಾಡುವಸ್ಥಿತಿಗೆ ಮುಟ್ಟಿದ್ದಾರೆ. ಈ ಉತ್ಪನ್ನ ಈ ವರೆಗಿನ ಉತ್ಪನ್ನದ ಪ್ರಮಾಣವನ್ನು 166000 ಟನ್‌ಗಳಿಗೆ ಮೀರಿದೆ. ಅಲ್ಲದೆ ಈಗ ಬ್ರಿಟನ್ನಿನಲ್ಲಿ ರಶಿಯಾ ಪಂಚವಾರ್ಷಿಕ ಯೋಜನೆಯ ಸಮಯ ಅನುಸರಿಸಿದ 'ಸ್ಟಾಖನೋವೈಟ್' ಮಾರ್ಗವನ್ನು ಹಿಡಿದಿದ್ದಾರೆ. ಯಾರಾದರೂ ಒಬ್ಬ ಕೂಲಿಕಾರ ಯಾವುದಾದರೂ ಕೆಲಸದಲ್ಲಿ ದಿನಕ್ಕೆ ಅತಿಹೆಚ್ಚು ಉತ್ಪಾದನೆ ಮಾಡಿ ಹಿಂದಿನ 'ಪರಮಾವಧಿ'ಯನ್ನು ಮೀರುತ್ತಾನೋ ಅವನಿಗೆ ವಿಶೇಷ ಸವಲತ್ತು, ಹೆಚ್ಚಿನ ಸಂಬಳ ಕೊಡುವುದು ಮಾತ್ರವಲ್ಲದೆ ಅವನ ಚಿತ್ರವನ್ನು ನಾಡಿನ ಎಲ್ಲೆಡೆಯಲ್ಲೂ ಜಾಹೀರುಪಡಿಸುತ್ತಾರೆ. ಈಗ ಲಂಡನ್ನಿನ ಬೀದಿಗಳಲ್ಲಿ ಸಿನಿಮಾ ನಟರ ನೋಟೀಸುಗಳೊಂದಿಗೆ ಇಂಥ 'ಕಾರ್ಯವೀರ'ರ ದೊಡ್ಡದೊಡ್ಡ ಚಿತ್ರಗಳನ್ನು ಕಾಣಬಹುದಂತೆ. ಬ್ರಿಟನ್ನಿಗೂ ಇದು ಸಂಧಿ ಕಾಲ. ಹೇಗೆ ಅಧಿಕಾಧಿಕ ಡಾಲರು ಸಂಪಾದನೆ ಮಾಡುವುದೆಂಬುದೊಂದೇ ಕ್ರಿಪ್ಸನ ತಲೆ ಕಾಡುವ ಸಮಸ್ಯೆ. ಕೂಲಿಕಾರರಾದರೂ ಸರಕಾರಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಏಕೆಂದರೆ **ಸರಕಾರ ಅವರದು, ಅವರ ಸ್ವಾರ್ಥವನ್ನು ಕಾಪಾಡುವುದು ಎಂಬ ನಂಬಿಕೆ ಇದೆ.**

ಕೃಷಿಕ್ಷೇತ್ರದಲ್ಲಾದರೂ ಹಾಗೆಯೇ; ಯುದ್ಧಾವಸರದಲ್ಲಿ ಹಿಂದಿಗಿಂತ ಇಮ್ಮಡಿ ಬೆಳೆಸಿದರೆ, ಈಗ ಅದಕ್ಕೂ ಇಮ್ಮಡಿ ಬೆಳೆಸಿ ಅದಷ್ಟು ಡಾಲರು ಉಳಿಸಿಕೊಳ್ಳಬೇಕೆಂಬ ಹವಣಿಕೆ. ಕಡಲಡಿಯ ಭೂಮಿಯನ್ನಾದರೂ ಮೇಲೆ ತಂದೇವು, ಕಡಲ ನೀರನ್ನು ಬತ್ತಿಸಿಯೇವು ಎಂಬ ಎದೆಗಾರಿಕೆ! ನಾಳಿದು ಸೆಪ್ಟಂಬರ ಬರುವುದರೊಳಗಾಗಿ ೯೦೦ ಎಕ್ರೆ ಜಮೀನನ್ನು, ಕಡಲಿಗೆ ಐದೂವರೆ ಮೈಲುದ್ದದ ಗೋಡೆ ಕಟ್ಟಿ, ಪಡೆಯಬೇಕೆಂದು ಬರೇ ಹದಿನೇಳು ರೈತರೂ ಕೆಲ ಇಂಜನಿಯರುಗಳೂ ಸೇರಿ ನಿರ್ಧರಿಸಿದ್ದಾರೆ. ಸಮಯದೊಡನೆಯೂ ಕಡಲಿನ ಏರಿಳಿತದೊಡನೆಯೂ ಕಾದಾಡುವ ಸಾಹಸ ಅವರದು. ಬರಿಯ ೧೭ ವಾರಗಳಲ್ಲಿ ಈ ಕೆಲಸ ನಡೆಯಬೇಕು. ೧೫ ಅಡಿ ಎತ್ತರಕ್ಕೆ ಗೋಡೆ ಬಂದೊಡನೆ, ಮತ್ತೆ ನೀರಿಳಿಸಿ ಮಣ್ಣು ತುಂಬಿಸುವ ಕೆಲಸ ನಡೆಯುತ್ತದೆ. ಎರಡನೇ ವರ್ಷದಲ್ಲಿ ಬೆಳೆಗೆ ಆರಂಭ. ಇಂಥ ಅಸೀಮ ಸಾಹಸಕ್ಕೆ ಸರಕಾರದ ಪ್ರೋತ್ಸಾಹವೂ ಇದೆ. ಆ ರೈತರ ಈಗಿನ ಭೂಮಿಯ ಹತ್ತಿರದಲ್ಲಿರುವ ಈ ಕಡಲ ಭೂಮಿಯಲ್ಲಿ ಪ್ರತಿಯೊಬ್ಬನಿಗೂ ಅವನವನ 'ತದ್ಗತಿ' ಭೂಮಿ ಸಿಕ್ಕುವುದು. ಆದ್ದರಿಂದಲೇ ಅಂಥ ಉತ್ಸಾಹ.

ಇನ್ನು ಅನೇಕದ ಕಥೆಯೋ! 'ಮೊನ್ನೆ ಮೊನ್ನೆ ೧೫೦ ಎಕರೆ ಬಂಜರು ಭೂಮಿಯನ್ನು ಬೆಳೆಗೆ ಯೋಗ್ಯವಾಗಿ ಮಾಡಲು ಕೆಲಸ ಆರಂಭವಾಯಿತು. 'ಬುಲ್ ಡೋಜರ್' 'ಟ್ರಾಕ್ಟರ್' ಮುಂತಾದ ಯಂತ್ರಗಳ ನೆರವಿನಿಂದ ಮುಂಜಾನೆ ನೆಲವನ್ನು ಸರಿಪಡಿಸುವುದಕ್ಕೂ ಕಳೆ ಕೀಳುವುದಕ್ಕೂ ತೊಡಗಿದರೆ, ಸಂಜೆ ನಸುಕು ಹರಿದು ಕತ್ತಲಾಗುವುದರೊಳಗೆ ಆ ಇಡಿ ೧೫೦ ಎಕರೆ ಸ್ಥಳದಲ್ಲಿಯೂ ಬೀಜ ಬಿತ್ತಿ ಆಗಿತ್ತು.

ನಮ್ಮ ನಾಡಿನಲ್ಲೂ **ಇಂಥ ಯೋಜನೆಗಳು ಅವಶ್ಯ.** ಸರಕಾರವೂ ಆ ಕಡೆಗೆ ಮನಸ್ಸು ಮಾಡಿದೆ. ದಾಮೋದರ ಯೋಜನೆ ಭಾರತದ ಟಿ. ವಿ. ಎ. ಯೋಜನೆಯಾಗುವುದರಲ್ಲಿ ಸಂಶಯವಿಲ್ಲ. ತುಂಗಭದ್ರಾ, ರಾಮಪಾದಸಾಗರ, ಹಿರಾಕುಡ, ಕೋಸಿ ಮುಂತಾದ ನೀರಾವರಿ ಮತ್ತು ವಿದ್ಯುಚ್ಛಕ್ತಿಯ 'ವಿವಿಧೋದ್ದೇಶ ಸಾಧಕ ಯೋಜನೆ'(MULTI PURPOSE PROJECTS)ಗಳು ಲಕ್ಷಾಂತರ ಎಕರೆ ಜಮೀನಿಗೆ ನೀರನ್ನೂ, ಅನೇಕಾನೇಕ ಹೊಸ ಕೈಗಾರಿಕೆಗಳಿಗೆ ಬೇಕಾದ ಶಕ್ತಿಯನ್ನೂ ಒದಗಿಸಿ, ನಮ್ಮ ಒಟ್ಟು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುವು. ಇಂಥ ದೊಡ್ಡ ಯೋಜನೆಗಳಲ್ಲದೆ **ಚಿಕ್ಕಚಿಕ್ಕ ಯೋಜನೆಗಳೂ ಅವಶ್ಯ** ಎಂಬುದನ್ನು ಸರಕಾರ ಮನಗಾಣಬೇಕು.

ಎಲ್ಲ ರಾಜಕೀಯ ಪಕ್ಷಗಳೂ ಶುದ್ಧ ರಾಜಕೀಯದಿಂದ ತುಸು ದೂರ ಸರಿದು ನಾಡನ್ನುಳಿಸುವ, ನಾಡು ಕಟ್ಟುವ ಕಾರ್ಯದಲ್ಲಿ ನೆರವಾಗಬೇಕು. ಅಂಥ ಯೋಜನೆಯನ್ನು ಯಾರೇ ಮಾಡಲಿ, ಅದಕ್ಕೆ ಹೆಗಲು ಕೊಡಬೇಕು. ಸರಕಾರವು ರೈತನಿಗೆ ಹುರುಪು ಹುಟ್ಟುವ ಹಾಗೆ ಅವನಿಗೆ ಭೂಮಿಯ ಅಧಿಕಾರ ಶೀಘ್ರಾತಿಶೀಘ್ರ ಕೊಡಿಸಬೇಕು; ಕೂಲಿಕಾರನೊಬ್ಬನಿಂದಲೇ ಉತ್ಪನ್ನದ ಅಂಕೆಗಳು ಏರುವುವಲ್ಲ. ಎರಡು ಹಸ್ತಗಳಲ್ಲದೆ ಚಪ್ಪಾಳೆಯ ಸದ್ದು ಹುಟ್ಟುವುದಿಲ್ಲ ಎಂಬುದನ್ನು ನಮ್ಮ ಸರಕಾರ ತಿಳಿದಿರಬೇಕು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಅಮೃತಾಂಜನ.

ತಲೆಬೇನೆ, ಶೀತ ವೇದನೆ, ಉಳುಕು, ಕತ್ತಿಗೆ, ಛಳಿ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಜಂತು ಕಡಿತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಮುಳುಕತ್ತಿ ಮತ್ತು ಸಕಲ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ನಮ್ಮ ಜಿಲ್ಲೆಯಲ್ಲಿ ಪ್ರೌಢ ವಿದ್ಯಾಭ್ಯಾಸ

S. S. L. C.ಯ ಫಲಿತಾಂಶ ಬಂದ ಕೂಡಲೆ ನಮ್ಮ ವಿದ್ಯಾರ್ಥಿಗಳ ಕಾಲೇಜು ಪ್ರವೇಶದ ಸಮಸ್ಯೆಯು ಬರುತ್ತದೆ. ಜಿಲ್ಲೆಯಲ್ಲಿ ಅನೇಕ ಹೈಸ್ಕೂಲುಗಳಿದ್ದರೂ ಕಾಲೇಜುಗಳು ಎರಡೇ ಇವೆ. ಅವೆರಡೂ ಮಂಗಳೂರಿನಲ್ಲಿ. ವಿದ್ಯಾರ್ಥಿಯು ದೊಡ್ಡ ಪಟ್ಟಣಗಳಿಗೆ ಹೋಗಿ ಸುಲಿಕವನಲ್ಲವಾದುದರಿಂದ ಅವನಿಗೆ ಕಾಲೇಜಿನಲ್ಲಿ ಪ್ರವೇಶ ದೊರಕಿಸುವುದಕ್ಕಾಗಿ, ಅವನ ರಕ್ಷಕನೂ ಅವನೊಂದಿಗೆ ತಕ್ಕ ಸಮಯದಲ್ಲಿ ಮಂಗಳೂರಿಗೆ ಹೋಗಬೇಕಾಗುತ್ತದೆ. ಮತ್ತು ವಿದ್ಯಾರ್ಥಿಯು ಅಲ್ಲಿರುವ ಎರಡು ಕಾಲೇಜುಗಳಲ್ಲಿ ಒಂದಲ್ಲದಿದ್ದರೆ ಒಂದು ಕಡೆ ಪ್ರವೇಶ ಸಿಕ್ಕಬಹುದೆಂಬ ಆಶೆಯಿಂದ ಅರ್ಜಿ ಹಾಕಬೇಕಾಗುತ್ತದೆ. ಈ ಅರ್ಜಿ ಕೊಡಲಿಕ್ಕೆ ಯಾವ ತಪ್ಪವಿಲ್ಲ. ನಾಕಷ್ಟು ಫೋರ್ಮುಗಳು ಕಾಲೇಜಿನಲ್ಲಿ ದೊರೆಯುತ್ತವೆ. ಅರ್ಜಿಯೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯು ರೂಪಾಯಿ ೩ರಂತೆ ಪ್ರವೇಶ ಧನ ಕೊಟ್ಟು ಬಿಟ್ಟರಾಯಿತು. ಕಾಲೇಜ ಅಧಿಕಾರಿಗಳ ಕೂಡೆ ಮಾತಾಡಿದರೆ "ನೀವು ಇನ್ನು ಏನೂ ಮಾಡತಕ್ಕದ್ದಿಲ್ಲ. ಮನೆಗೆ ಹೋಗಬಹುದು. ವಿದ್ಯಾರ್ಥಿಯ ಮಾರ್ಕು ನೋಡಿ ಯಾರುಯಾರಿಗೆ ಸೀಟು ಸಿಕ್ಕುವುದೆಂಬುದನ್ನು ತೀರ್ಮಾನ ಮಾಡುತ್ತೇವೆ ಫಲಿತಾಂಶವನ್ನು ನಿಮಗೆ ತಿಳಿಸಲಿಕ್ಕಾಗಿ ಒಂದು ವಿಳಾಸ ಬರೆದು ಕಾರ್ಡು ಕೊಟ್ಟು ಹೋಗಿ" ಎಂದು ಉತ್ತರ ದೊರೆಯುವುದು. ಈ ಮಾತನ್ನು ನಂಬಿ ಇಬ್ಬರೂ ಮನೆಗೆ ತೆರಳುತ್ತಾರೆ ಮತ್ತು ಟಪ್ಪಾಲು ಕಾಯುತ್ತಾ ಕುಳಿತಿರುತ್ತಾರೆ. ಕಾಲೇಜು ಅಧಿಕಾರಿಗಳು ಸಂಪೂರ್ಣ ನಿಷ್ಪಕ್ಷಪಾತಿಗಳೂ, ನ್ಯಾಯಬದ್ಧರೂ, ಮೊದಲೇ ತಯಾರಿಸಿಟ್ಟ ನಿಯಮಕ್ಕನುಸಾರವಾಗಿ ಪ್ರವೇಶ ಕೊಡುವವರೂ ಎಂಬ ನಂಬಿಕೆ ವಿದ್ಯಾರ್ಥಿಯಲ್ಲಿರುವುದು ಸಹಜವೇ.

ಆದರೆ ಅಷ್ಟೊಂದು ಕ್ರಮಬದ್ಧವಾಗಿ ಯಾವುದೂ ನಡೆಯುವುದಿಲ್ಲ ಎಲ್ಲರಿಗೂ ಒಂದೇ ತರದ ನಿಯಮವೂ ಇಲ್ಲ. ಜಾತೀಯ ಕಾಲೇಜುಗಳಲ್ಲಂತೂ ಬೇಕಾದಷ್ಟು ತಾರತಮ್ಯವಿದೆ. ತಮ್ಮ ಕಾಲೇಜಿನಲ್ಲಿ ಉತ್ತೀರ್ಣನಾದ ವಿದ್ಯಾರ್ಥಿಗೆ ಮತ್ತು ಇತರ ಕಾಲೇಜು ಅಥವಾ ಹೈಸ್ಕೂಲುಗಳಲ್ಲಿ ಉತ್ತೀರ್ಣನಾದ ವಿದ್ಯಾರ್ಥಿಗೆ ಪ್ರವೇಶಕ್ಕೆ ಒಂದೇ ನಿಯಮವಿಲ್ಲ. ತಮ್ಮ ಜಾತಿಯ ಮತ್ತು ಅನ್ಯ ಜಾತಿಯ ವಿದ್ಯಾರ್ಥಿಗಳಿಗೆ ನಿಯಮ ಒಂದೇ ಅಲ್ಲ. ವಿದ್ಯಾರ್ಥಿಗಳಿಗೆ S. S. L. C. ಯಲ್ಲಿ ಸಿಕ್ಕಿದ ಒಟ್ಟು ಮಾರ್ಕುಗಳನ್ನು ನೋಡಿ ಅದರ ಪ್ರಕಾರ ಪ್ರವೇಶ ಕೊಡುವುದೂ ಅಲ್ಲ. ಯಾವ ಐಚ್ಛಿಕ ವಿಭಾಗವನ್ನು (optional group) ವಿದ್ಯಾರ್ಥಿಯು ಬಯಸುತ್ತಾನೋ ಆ ವಿಭಾಗದಲ್ಲಿ ಅವನಿಗೆ ಎಷ್ಟು ಮಾರ್ಕು S. S. L. C.ಯಲ್ಲಿ ಸಿಕ್ಕಿದೆ ಎಂದು ನೋಡುವ ಕ್ರಮವೂ ಇಲ್ಲ. ಒಟ್ಟಾಗಿ ನೇಕಡಾ ಇಷ್ಟು ಮಾರ್ಕು ಸಿಕ್ಕಬೇಕು. ಅಲ್ಲದೆ ಅಂಗ್ಲ ಭಾಷೆಯಲ್ಲಿ ಇಂತಿಷ್ಟಕ್ಕೆ ಕಡಿಮೆಯಾಗಕೂಡದು ಎಂಬ ಒಂದು ವಿಚಿತ್ರ ನಿಯಮವು, ತಮ್ಮ ಕಾಲೇಜಿನವನಲ್ಲದ ಮತ್ತು ಜಾತಿಯವನಲ್ಲದ ಇತರರೆಲ್ಲರಿಗೂ ಅನ್ವಯಿಸುತ್ತದೆ ಎಂಬುದು ಪ್ರಥಮತಃ ತೋರಿಬರುತ್ತದೆ. ಪ್ರವೇಶದ ತೀರ್ಮಾನವಾದರೂ ಒಮ್ಮೆಯೇ ಆಗುವುದಿಲ್ಲ. ಒಂದನೆಯ ಪಟ್ಟಿ ತಯಾರಿಸಿದಾಗ ಸಾಕಷ್ಟು ವಿದ್ಯಾರ್ಥಿಗಳು ಸಿಗದಿದ್ದರೆ ಮೇಲಿನ ನಿಯಮಗಳನ್ನು ಕೊಂಚ ಸಡಲಿಸಿ ಕೆಲವು ದಿವಸಗಳ ನಂತರ ಎರಡನೇ ಪಟ್ಟಿ ತಯಾರಾಗುವುದು. ಆದರಲ್ಲಿಯೂ ವಿದ್ಯಾರ್ಥಿಗಳು ಸಾಕಷ್ಟು ಸಿಗದಿದ್ದರೆ ಮೂರನೆಯ ಪಟ್ಟಿ ತಯಾರಾಗುತ್ತದೆ. ಒಂದು ಕಾಲೇಜಿನಲ್ಲಿ ಪ್ರವೇಶ ದೊರೆಯದಿದ್ದರೆ ಎರಡನೇ ಕಾಲೇಜಿನಲ್ಲಿ ಪ್ರಯತ್ನ; ಎರಡನೆಯ ಕಾಲೇಜಿನಲ್ಲಿ ಪ್ರವೇಶ ಸಿಗಲು ಸಂಶಯ ತೋರಿಬಂದರೆ ಪುನಃ ಮೊದಲಿನ ಕಾಲೇಜಿನಲ್ಲಿ ಯಾಚನೆ ಹೀಗೆ ಎರಡು ತಿಂಗಳುಗಳ ವರೆಗೆ ವಿದ್ಯಾರ್ಥಿಯೂ, ಅವನ ರಕ್ಷಕನೂ ಮಂಗಳೂರಿನಲ್ಲಿಯೇ ಹೋಟೇಲುಗಳಲ್ಲಿ ವಸತಿ ಮಾಡಿಕೊಂಡು ಬೆಳಗ್ಗಿನಿಂದ ಸಂಜೆಯ ವರೆಗೂ ಒಂದು ಕಾಲೇಜಿನಿಂದ ಇನ್ನೊಂದಕ್ಕೆ ತಿರುಗುತ್ತಾ ಇರಬೇಕು. ಆಂಗ್ಲ ಭಾಷೆಯ ಪ್ರಾಮುಖ್ಯತೆಯು ದೇಶದಲ್ಲಿ ಕಡಿಮೆಯಾಗುತ್ತಾ ಬಂದರೂ ನಮ್ಮ ಕಾಲೇಜು ಅಧಿಕಾರಿಗಳ ಗಮನಕ್ಕೆ ಅದು ಇನ್ನೂ ಬಂದಿಲ್ಲ. ಎಲ್ಲಾ ಪಾಠಗಳಲ್ಲಿಯೂ ಅತ್ಯಧಿಕ ಮಾರ್ಕು ಪಡೆದವನು ಕೂಡ ಆಂಗ್ಲ ಭಾಷೆಯಲ್ಲಿ ಕಾಲೇಜು ಅಧಿಕಾರಿಗಳು ನಿರ್ಣಯಿಸಿದಷ್ಟು ಮಾರ್ಕು ಪಡೆದಿಲ್ಲವಾದರೆ ಅವನಿಗೆ ಆ ಕಾಲೇಜಿನಲ್ಲಿ ಪ್ರವೇಶವಿಲ್ಲ. (ಆದರೆ ತನ್ನ ಪ್ರವೇಶದ ಫಲಿತಾಂಶವನ್ನು ಮುಂದಾಗಿ ತಿಳಿದು ಕಾಲೇಜ ಅಧಿಕಾರಿಗಳ ಬೆನ್ನು ಹಿಡಿದು ಅತ್ಯಂತ ನಮ್ರತೆಯಿಂದ ಪದೇಪದೇ ಯಾಚಿಸುತ್ತಿರುವ ವಿದ್ಯಾರ್ಥಿಯ ವಿಷಯ ಬೇರೆ.)

ಪ್ರವೇಶದ ವಿಷಯದಲ್ಲಿ ಈ ರೀತಿಯ ಅವ್ಯವಸ್ಥೆ ಇರುವುದು ಯಾವ ವಿದ್ಯಾ ಸಂಸ್ಥೆಗೂ ಭೂಷಣವಲ್ಲ. ವಿದ್ಯಾರ್ಥಿಯು ತನ್ನ ಮನೆಯಲ್ಲಿಯೇ ಇದ್ದು ತನ್ನ ಅರ್ಜಿಯನ್ನೂ, S. S. L. C.ಯ ಮಾರ್ಕು ಪುಸ್ತಕವನ್ನೂ ಕಳುಹಿಸುವಂತಿರಬೇಕು. ಯಾವುದೊಂದು ದಯ ದಾಕ್ಷಿಣ್ಯವಿಲ್ಲದೇ ಎಲ್ಲಾ ಪಾಠಗಳಲ್ಲಿ ದೊರೆತ ಒಟ್ಟು ಮಾರ್ಕುಗಳಿಗನುಸಾರವಾಗಿ ಅಥವಾ ವಿದ್ಯಾರ್ಥಿಯು ಸೇರಬಿಚ್ಛಿಸುವ ಐಚ್ಛಿಕ ವಿಭಾಗದಲ್ಲಿ ಸಿಕ್ಕಿದ ಮಾರ್ಕುಗಳಿಗನುಸರಿಸಿ ಪ್ರವೇಶ ದೊರೆಯುವಂತಾಗಬೇಕು ಯಾವ ಹೈಸ್ಕೂಲಿನಲ್ಲಿ ಅಥವಾ ಕಾಲೇಜಿನಲ್ಲಿ ತೇರ್ಗಡೆ ಹೊಂದಿದವನು? ಯಾವ ಜಾತಿಗೆ ಸೇರಿದವನು? ಆಂಗ್ಲ ಭಾಷೆಯಲ್ಲಿ ಸಿಕ್ಕಿದ ಮಾರ್ಕೆಷ್ಟು? ಈ ಎಲ್ಲಾ ಅರ್ಥವಿಲ್ಲದ ಮತ್ತು ಕುಹಕದ ಪ್ರಶ್ನೆಗಳು ಕಾಲೇಜ ಅಧಿಕಾರಿಯನ್ನು ಪೀಡಿಸಬಾರದು ಪ್ರವೇಶ ದೊರೆಯುವ ಮತ್ತು ದೊರೆಯದ ಎಲ್ಲಾ ವಿದ್ಯಾರ್ಥಿಗಳಿಂದ ರೂಪಾಯಿ ೩ರಂತೆ ಪ್ರವೇಶಧನವೆಂಬ ಹೆಸರಿನಿಂದ ಅನ್ಯಾಯವಾಗಿ ದಂಡನೆ ಪಡೆದು ಅಕ್ರಮ ಲಾಭ ಹೊಂದುವ ನಿಯಮವು ನಿಲ್ಲಬೇಕು. ಸರಕಾರ ಮತ್ತು ಸಾರ್ವಜನಿಕರ ಹಣ ಮತ್ತು ಸಹಾಯದಿಂದ ನಡೆಯುತ್ತಿರುವ ಸಂಸ್ಥೆಯು ಒಂದು ಜಾತಿಯ ಸಂಸ್ಥೆ ... ... ಹಾಗೆ ಎನಿಸಲ್ಪಡುವ ಯಾವ ಸಂಸ್ಥೆಗೂ ... ಕಾರದಿಂದ ಮತ್ತು ಸಾರ್ವಜನಿಕರಿಂದ ಯಾವತ್ತೂ ಸಹಾಯವೂ ದೊರೆಯಕೂಡದು ಸಹಾಯ ಬೇಕಾದಾಗ ಮತ್ತು ಪಡೆಯುವಾಗ ಇದು ಸಾರ್ವಜನಿಕ ಸಂಸ್ಥೆ, ಪ್ರವೇಶ ಕೊಡುವಾಗ ಮಾತ್ರ ಇದು ಜಾತೀಯ ಸಂಸ್ಥೆ, ಇದರಲ್ಲಿ ಸಾರ್ವಜನಿಕರಿಗೆ ಏನೂ ಹಕ್ಕಿಲ್ಲ ಎನ್ನುವ ಮನೋವೃತ್ತಿಗೆ ಅವಕಾಶವಿರಕೂಡದು ಎಲ್ಲಾ ರಂಗಗಳಲ್ಲಿಯೂ ಜಾತೀಯತೆಯನ್ನು ನಿರ್ಮೂಲಗೊಳಿಸಬೇಕೆಂದು ಕೂಗು ಕೇಳುತ್ತಿರುವಾಗ ಪವಿತ್ರವಾದ ವಿದ್ಯಾ ಸಂಸ್ಥೆಗಳಲ್ಲಿ ಅದು ಇನ್ನೂ ಬದುಕಿರಬೇಕೇ? ಈ ವಿಷಯಗಳನ್ನು ಅರಿತು ದೀರ್ಘದರ್ಶಿತ್ವ ಇರುವ ನಮ್ಮ ವಿದ್ಯಾಮಂತ್ರಿಗಳು ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ಸಂಪೂರ್ಣ ಸ್ವಾತಂತ್ರ್ಯವು ಕಾಲೇಜ ಅಧಿಕಾರಿಗಳಿಗೆ ಮಾತ್ರ ಇರಕೂಡದು, ಇದಕ್ಕಾಗಿ ಸಾರ್ವಜನಿಕ ಸಮಿತಿಯೊಂದಿರಬೇಕು ಎಂದು ಸೂಚಿಸಿದ್ದರು. ಇದು ಖಾಸಗಿ ಕಾಲೇಜುಗಳ ಅಧಿಕಾರಿಗಳಿಗೆ ರುಚಿಸಲಿಲ್ಲ. ಅವರ ಅಪ್ರತ್ಯಕ್ಷ ಪ್ರಯತ್ನದಿಂದಾಗಿ ಈ ಯೋಜನೆ ಸ್ವಲ್ಪ ಹಿಂದೆ ಬಿದ್ದಂತೆ ಕಾಣುತ್ತದೆ ವಿದ್ಯಾಮಂತ್ರಿಗಳ ಸೂಚನೆಯು ಅತ್ಯಂತ ಶ್ಲಾಘನೀಯವಿದೆ. ಸಾರ್ವಜನಿಕ ಸಮಿತಿಯೊಂದಿದ್ದರೆ ಅದು ಮಂಗಳೂರಿನ ನಾಲ್ಕಾರು ಜನ ಸಿರಿವಂತ ಮತ್ತು ನಿವೃತ್ತ ಮಹನೀಯರಿಂದಲೇ ಕೂಡಿರಕೂಡದು ಪ್ರತಿ ತಾಲೂಕಿನಿಂದಲೂ ವಿದ್ಯಾರ್ಥಿಗಳ ಹಿತದೃಷ್ಟಿ ಇರುವ, ಕಾಲೇಜು ಅಧಿಕಾರಿಗಳ ಜಂಗಿಗೆ ಬಲಿಬೀಳದ ಸ್ವತಂತ್ರ ಮಹನೀಯರಿಂದ ಕೂಡಿದ ಸಮಿತಿಯಾಗಿರಬೇಕು.

ಇನ್ನು ಕೆಲವೇ ದಿನಗಳಲ್ಲಿ ನಮ್ಮ ಜಿಲ್ಲೆಯ S. S. L. C. ವಿದ್ಯಾರ್ಥಿಗಳ ಫಲಿತಾಂಶ ಬರಲಿದೆ ಕಾಲೇಜು ಪ್ರವೇಶದ ಪ್ರಶ್ನೆಯು ಅವರನ್ನು ಭಯಂಕರ ರೀತಿಯಲಿ ಕಾಡಲಿಕ್ಕಿರುವುದು ವಿದ್ಯಾ ಇಲಾಖೆಯವರೂ, ಸಾರ್ವಜನಿಕರೂ, ಈ ವಿಷಯವನ್ನು ಸಾಕಷ್ಟು ದಕ್ಷತೆಯಿಂದ ಪರಿಶೀಲಿಸಿ ಇದೇ ವರ್ಷದ ಕಾಲೇಜು ಪ್ರವೇಶದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ನ್ಯಾಯ ದೊರೆಯುವಂತೆ ಪ್ರಯತ್ನಿಸಬೇಕು. ನಮ್ಮ ಜಿಲ್ಲೆಯ ಎಲ್ಲಾ ಹೈಸ್ಕೂಲುಗಳೂ, ಜಿಲ್ಲೆಯ ವಿದ್ಯಾರ್ಥಿ ಸಂಘವೂ ಇತ್ತ ಕಡೆಗೆ ಗಮನಿಸುವುದು ಅತಿ ಅಗತ್ಯವಾಗಿದೆ. ಈ ವಿಷಯದಲ್ಲಿ ಅಭಿಪ್ರಾಯವಿರುವವರು ಪತ್ರಿಕೆಗಳ ಮೂಲಕ ಆದಷ್ಟು ಬೇಗನೆ ಅವುಗಳನ್ನು ಪ್ರಕಟಿಸಬೇಕು. ಮತ್ತು ಈ ಚಳವಳವು ಯಶಸ್ವಿಯಾಗುವಂತೆ ವಿದ್ಯಾಭಿಮಾನಿಗಳೆಲ್ಲರೂ ಅನುಕೂಲ ವಾತಾವರಣವನು, ಕಲ್ಪಿಸಬೇಕು

ಇತಿ

"ಉಪಾಧ್ಯಾಯ"

ಬಾಲಕರು ಆರೋಗ್ಯಶಾಲಿಗಳಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜೆಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೋ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

L. N. Sharma, Mangalore.

ರೇಶನ್ ಕಾರ್ಡುಗಳು

ದೊರೆಯುತ್ತವೆ,

ನವಯುಗ ಪ್ರೆಸ್, ಉಡುಪಿ.

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೂ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಶ್ರೀ ದುರ್ಗಾ ಭವನ, ಮೂಲ್ಕಿ.

ಯಂ. ಆರ್. ಭಟ್, (ಆರ್ಟಿಸ್ಟ್) ವ್ಯವಸ್ಥಾಪಕ

NEO ROYAL CAFE,

Boarding & Lodging,

Santhekatte, UDIPI.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ ೧ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ ೧ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು ೧ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ತರಹೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ತರಹೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ಗಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, ಬೊಂಬಾಯಿ ಏಜಂಟರು:— ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್.(3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ದಕ್ಷಿಣ ಕನ್ನಡ

ಕುಂದಾಪುರ-ದಕ್ಷಿಣ ಕನ್ನಡ ಜಿಲ್ಲಾ ತರುಣ ಸನಾತನವಾದೀ ಸಂಘದ ಪ್ರಥಮ ಸಮ್ಮೇಳನವು ತಾ. 22 ಮತ್ತು 23-5 48 ನೇ ಶನಿವಾರ ಮತ್ತು ಆದಿತ್ಯವಾರ 'ಹಲ್ಲ ವಾಡು ಸೂರಪ್ಪಯ್ಯ' ನಗರ ಕುಂದಾಪುರ, ಇಲ್ಲಿ ಶ್ರೀ. ಎಮ್. ವಿ. ಅಧಿಕಾರಿ ಯವರ ಅಧ್ಯಕ್ಷತೆಯಲ್ಲಿ ಶ್ರೀ. ಎಸ್. ನಾಗಭೂಷಣರವರ ಉದ್ಘಾಟನೆಯಲ್ಲಿ ಶ್ರೀ. ಸಿ. ಎಮ್. ಕುಂಜ್ಞರಾಮನ್ ರವರ ಆರಂಬ ಭಾಷಣದಲ್ಲಿ ಜರಗಲಿದೆ. ಇದೇ ಆಹ್ವಾನವೆಂದು ತಿಳಿದು ಎಲ್ಲರೂ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಹಳೆನಾಡು—ತಾ 10ರಲ್ಲಿ ರಾತ್ರಿ 8 ಗಂಟೆಗೆ, ಸೇವಾದಳ ಕಲಸಗಾರರಾದ ಶ್ರೀ ಎಂ. ಶಿವರಾಮ ಹೆಗ್ಡೆಯವರು ನಿರಕ್ಷರಿಗಳ ನ್ನು ಅಕ್ಷರಸ್ಥರನ್ನಾಗಿ ಮಾಡುವ ಉದ್ದೇಶ ದಿಂದ ಒಂದು ರಾತ್ರಿ ಶಾಲೆಯನ್ನು ತೆರೆದಿರು ವರು.

ಪಡುಬಿದ್ರೆ—ವರ್ತಕರೂ, ವಂತ ವೈದ್ಯರೂ ಆಗಿರುವ ಶ್ರೀ. ಬೇಚ ಬಿ. ಅಮೀನರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮೊಕ್ತೇಸರರಾಗಿ ಹಿಂದೂ ರಿಲಿಜಿಯಸ್ ಎಂಡೋವ್‌ಮೆಂಟು ಬೋರ್ಡಿನವರಿಂದ ನೇಮಕ್ರ ರುಹೊಂದಿರುತ್ತಾರಾಗಿ ತಿಳಿದುಬರುತ್ತದೆ.

ಸುರತ್ಕಲ್—ಗಂಗಯ ಸ್ಮಾರಕ ಫಂಡಿನ ತೃತೀಯ ವಾರ್ಷಿಕೋತ್ಸವವು ತಾ 8 ರಂದು ರಾತ್ರಿ ಶಾಲೆಯ ಮುಂದುಗಡೆಯ ಮೈದಾನಿನಲ್ಲಿ ರಚಿಸಿರುವ ಭವ್ಯ ಮಂಟಪದಲ್ಲಿ ಶ್ರೀ ಮುಳ್ಕ ಲಕ್ಷ್ಮೀನಾರ್ಣಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಗತವರ್ಷದ ವರದಿ ವಾಚನ, ರಾತ್ರಿ ಶಾಲೆಯ ಮಕ್ಕಳಿಗೆ ಇನಾಂ ಹಂಚೋಣ ಮತ್ತು ಸಭಿಕರ ಭಾಷಣಾನಂತರ ಸುರತ್ಕಲ್ ಹರಿದಾಸ್ ಶ್ರೀ ಭೋಜರಾಯರ 'ಚಂದ್ರಹಾಸ'ವೆಂಬ ಹರಿಕಥಾ ಕಾಲಕ್ಷೇಪದೊಂದಿಗೆ ಸಭೆ ಮುಕ್ತಾಯವಾಯಿತು.

ಉಜ್ಜಿಲ—ಜೀರ್ಣೋದ್ಧಾರವಾದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮಹಾ ಕುಂಭಾಭಿಷೇಕವು ತಾ. 30 5-48ಕ್ಕೆ ಜರಗಲಿದೆ.

ಪಣಂಬೂರು— ಇಲ್ಲಿಯ ಜನತಾ ಸೇನಾ ಸಂಘದ ಪ್ರಾರಂಭೋತ್ಸವವು ತಾ10-5 48ರಲ್ಲಿ ಪಣಂಬೂರು ಗಾಂಧಿ ಮೈದಾನದಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಕೆ ಕೆ ಶೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಿನ ಕಾರ್ಯಕ್ರಮಗಳ ಬಳಿಕ ಸಭಿಕರಲ್ಲಿ ಶ್ರೀ ನಾರಾಯಣ ಕಿಲ್ಲೆ, ಜನಾಬ್ ಪಿ. ಬಾಷರ ಸಾಹೇಬ್, ಶ್ರೀ ಅನಂತಕೃಷ್ಣ ರಾವ್, ಶ್ರೀ ಅಚ್ಯುತ ವಿ. ಪುತ್ರನ್, ಆ. ಪೂ. ಕರುಣಾಕರ್, ಶ್ರೀ. ಯಂ ಗೋಪಾಲ, ಶ್ರೀ ವೆಂಕಟೇಶ ಪೈ, ಶ್ರೀ ಬಿ. ಕೆ. ವೆಂಕಪ್ಪ ಮೊದಲಾದವರು ಸಂಘದ ಯಶಸ್ಸನ್ನು ಕೋರಿ ಯೋಗ್ಯ ರೀತಿಯಲ್ಲಿ ಭಾಷಣವಿತ್ತ ಬಳಿಕ ಅಧ್ಯಕ್ಷರು ಸಂಘದ ಏಳಿಗೆಯನ್ನು ಬಯಸಿ ಸಾರಸವಾದ ಭಾಷಣವಿತ್ತರು.

ಅಂದೇ ರಾತ್ರಿ ಗಂಟೆ 9-30ಕ್ಕೆ ಕೂಳೂರು ನವಜ್ಯೋತಿ ನಾಟಕ ಮಂಡಳಿಯವರು ವ್ಯಭಿಚಾರ ಯಾರು ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಿ ಸಭಿಕವೃಂದವನ್ನು ಸಂತೋಷಗೊಳಿಸಿದರು. ಶ್ರೀಮಾನ್ ನಾರಾಯಣ ಕಿಲ್ಲೆಯವರ ಭೋಧಪ್ರದವಾದ ಭಾಷಣ ಹಾಗೂ ದೇವತಾ ಪ್ರಾರ್ಥನೆಯೊಂದಿಗೆ ಸಭಾಂತ್ಯವಾಯಿತು.

ಸ್ವೀಕಾರ-ವಿಮರ್ಶೆ

'ಹಳಮೊಗಳು'-ಲೇಖಕರು, ಶ್ರೀ ಸೇಡಿಯಾಪು ಕೃಷ್ಣಭಟ್ಟರು, ವಿದ್ವಾನ್, ಕನ್ನಡ ಪಂಡಿತರು, ಸೈಂಟ್ ಎಲೋಶಿಯಸ್ ಕಾಲೇಜು, ಮಂಗಳೂರು. ಪ್ರಕಾಶಕರು-ವಸಂತ ಸ್ತ್ರೀವಿಮಂಡಲ, ಕೊಡಿಯಾಲಬೈಲು, ಮಂಗಳೂರು. ಕ್ರೌನ್ ¼ ಪ್ರಮಾಣದ ೮೪ ಪುಟಗಳ ಕಥಾ ಪುಸ್ತಕ. ಬೆಲೆ ೧೪ ಆಣೆ. ಇದರಲ್ಲಿ 'ಚಿನ್ನದ ಚೇಳು' 'ಚೆನ್ನಮಜ' 'ಧರ್ಮಮ್ಮ' 'ನಾಗರಬೆತ್ತ' ಎಂಬ ನಾಲ್ಕು ಚಿಕ್ಕ ಕತೆಗಳಿವೆ. 'ಚಿಕ್ಕ ಕತೆಗಳೇ'? ಎಲ್ಲಿ ಯಾವ ಪುಸ್ತಕದಂಗಡಿಗೆ ಹೋದರೂ ಯಾವ ಪತ್ರಿಕೆಯನ್ನೆತ್ತಿದರೂ ಚಿಕ್ಕ ಕತೆಗಳೇ! ಯಾಕೆ ಬರೆಯುತ್ತಾರೋ! ಯಾಕೆ ಪ್ರಕಟಿಸುತ್ತಾರೋ! ಮಡ್ಡು ಕೊಟ್ಟು ತಲೆ ಸಿಡಿತ ಕೊಂಡುಕೊಳ್ಳುವಂತಾಗಿದೆ ಇಂದಿನ ಹಲವು ಕತೆಗಳನ್ನೋದಿದರೆ!' ಎಂದು ಎಷ್ಟೋ ಜನ ಕತೆ ಪುಸ್ತಕವನ್ನು ಕಂಡೊಡನೆ ಮೂಗು ಮುರಿಯುವುದುಂಟು. ಎರಡು ಪುಸ್ತಕಗಳನ್ನೋದಿದೊಡನೆ ತನ್ನ ಬರೆಹವನ್ನೂ ಅಚ್ಚಿನಲ್ಲಿ ನೋಡಬೇಕೆಂಬ ಹುಚ್ಚು ಹಲವರಲ್ಲಿ ಇರುವವರೆಗೆ ಉಚಿತವಾಗಿ ದೊರೆತರೆ ಪುಟ ತುಂಬಿಸೋಣ, ಪುಸ್ತಕ ಮಾಡೋಣ, ಎಂಬ ಮನೋವೃತ್ತಿಯ ಪತ್ರಿಕಾಕರ್ತರೋ ಪ್ರಕಾಶಕರೋ ಇರುವ ತನಕ ಚಿಕ್ಕ ಕತೆಗಳ ಪಾಡು ಕೆಡುತ್ತ ಹೋಗುವುದೂ ಕಥಾರಾಶಿಯಲ್ಲಿ ಮುಳ್ಳಾಲು ಮೂರುವೀಸ ಜಳ್ಳೇ ಬೆರೆದುಬರುವುದೂ ಸಹಜವೇ. ಆದರೆ ಪ್ರಸ್ತುತ ಪುಸ್ತಕವು ಇಂದಿನ ಅಂತಹ ಆಧುನಿಕ (ಹೊಸವೆ!) ಗಳನ್ನೊಳಗೊಂಡಿಲ್ಲ. ಇದರ ಕತೆಗಳು ಇಂದಿನ 'ಗಿಲೀಟು' ಒಡವೆಗಳಲ್ಲ, ಇವು ಹಿಂದಿನ ಅಚ್ಚ ಪುತ್ಥಳಿಯ ನಗಗಳಂತಿರುವ 'ಪಳಮೆ'ಗಳು. ಒಂದೈವತ್ತು ನೂರು ವರುಷಗಳ ಹಿಂದಿನ ಜನಜೀವನದ ಕೆಲವು ದೃಶ್ಯಗಳು ನಮ್ಮ ಕಣ್ಣೆದುರು ಎದ್ದು ಬರುವಂತೆ ಹಿತ ಮಿತವಾದ ಮಾತುಗಳಿಂದ ಚೆಲುವಾಗಿ ಬರೆದ ನುಡಿ ಚಿತ್ರಗಳಿವು. ಯಾವ ಕತೆಯನ್ನು ಒಂದೊಮ್ಮೆ ಓದಿದರೆ ಮತ್ತೆಂದಿಗೂ ಮರೆಯಲಾಗದಂತೆ ತಿರುತಿರುಗಿ ನೆನಪಿಗೆ ಬರುತ್ತ ಆನಂದವನ್ನೀಯುವುದು ಮಾಡುವುದೋ ಅದೇ ಉತ್ತಮ ಕತೆ ಈ ಒರೆಗಲ್ಲಿ ಈ ನಾಲ್ಕು ಕತೆಗಳೂ ಕಥಾ ಪುತ್ಥಳಿಗಳೆನಿಸುವಷ್ಟು ಉತ್ಕೃಷ್ಟವಿವೆ. ಪ್ರತಿಯೊಂದು ಮಾತೂ ತಿಳಿಗನ್ನಡದ ಸರಳ ಸುಂದರ ಮೃದು ಮಧುರ ಶೈಲಿಯ ಮನಮೋಹಕ ಸೊಬಗನ್ನು ಬೀರುತ್ತ 'ಕನ್ನಡ ಕತ್ತುರಿಯಲ್ತೆ?' ಎಂದೆನ್ನಿಸುತ್ತೆ. ಚೆಲುವಾಗಿ ಕನ್ನಡ ಬರೆಯಬೇಕೆಂಬ ಹಂಬಲುಳ್ಳವರು ಇದನ್ನು ತಿರುತಿರುಗಿ ಪಠಿಸಬೇಕು. ಚೆಲುವಾದ ಕನ್ನಡವನ್ನೋದಬೇಕೆಂಬಾತುರವುಳ್ಳವರು ಇದನ್ನು ಕೈಗೆತ್ತಿಕೊಳ್ಳಬೇಕು. ಒಳ್ಳೆಯ ಕಥಾ ಸಂಗ್ರಹವೊಂದು ಬೇಕೆಂಬವರು ಇದನ್ನು ಕೊಂಡುಕೊಳ್ಳಬೇಕು. ಇಂತಹ ಉತ್ತಮ ಕತೆಗಳನ್ನು ಬರೆದು ಕನ್ನಡ ಸಾಹಿತ್ಯದ ಹಿರಿಮೆಯನ್ನು ಮೆರೆಯಿಸಿರುವ ಶ್ರೀ. ಸೇಡಿಯಾಪುರವರಿಗೆ ಹಾರ್ದಿಕ ಅಭಿನಂದನೆಗಳು.

—'ಕೊರಡ್ಕಲ್'

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ
ಹೋಗಗೊಳಿಸಿ ಶುಚಿಪಡಿಸುವ
ಹಲ್ಲು ಪುಡಿ
ಒಂದು ತೊಲೆ ಕಟ್ಟು 1ರ 0 1 0
ಏಜಂಟರಿಗೆ ಧಾರಾಳ ಕಮಿಶನ್
ಕೊಡಲಾಗುವುದು.
ದಿ ಮಹಾಜನ ಸಿ ಎಂಡ್ ಪಿ.
ಲಿಮಿಟೆಡ್,
ಕಾಸರಗೋಡು, ದ. ಇಂಡಿಯ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಳುಕು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ, ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲವಾಣಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಎಂ.ಪಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಥಾಪಕರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

27-5-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-1-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮ } ವಾರ ೩೮ }

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

{ Vol. 28 { No. 38

ನಿರಾಶ್ರಿತ ಮಹಿಳೆಯರ

ಮಾನ ಪ್ರಾಣ ಪಾಲನಾ ಯತ್ನ

ಕಥೆ, ಕಾದಂಬರಿ, ನಾಟಕ ಇತ್ಯಾದಿಗಳಲ್ಲಿರುವ ಕಲ್ಪನಾತ್ಮಕ ಘಟನೆಗಳಿಗಿಂತಲೂ ಕರುಣಾಜನಕ ಸತ್ಯಕಥೆಗಳನ್ನು ಭಾರತದ ವಿಭಜನಾ ನಂತರ ನಡೆದ ಜಾತೀಯ ಗೊಂದಲಗಳು ನಿರ್ಮಿಸಿವೆ. ಪಂಜಾಬು ಮತ್ತು ಬಂಗಾಳಗಳಲ್ಲಿ ಗಲಭೆ ಪೀಡಿತ ಪ್ರತಿಯೊಂದು ಮನೆಯ ಆಗುಹೋಗುಗಳನ್ನೆತ್ತಿಕೊಂಡರೆ, ಪ್ರತಿಯೊಂದರಲ್ಲೂ ಒಂದೊಂದು ಮಹಾ ಕಾದಂಬರಿಗೆ ಸಾಕಾಗುವಷ್ಟು ಕಥಾವಸ್ತು ದೊರೆತೀತು; ಆ ಭಾಗದ ಪ್ರತಿಯೊಬ್ಬನ ಮತ್ತು ಪ್ರತಿಯೊಬ್ಬಳ ಜೀವನ ಕಥೆಯೂ ಒಂದೊಂದು ಹೃದಯಸ್ಪರ್ಶೀ ಕಥೆಯ ವಸ್ತುವಾಗುವಂತಹದೇ. ಮುಖ್ಯವಾಗಿ ಮಹಿಳಾ ವರ್ಗವನ್ನು ಬಲಿಗೊಂಡ ದುರ್ದೈವದ ಕಥೆಗಳನ್ನು ಅರಿತವರ ಸಂತಾನ ಪಾರಂಪರ್ಯವೂ ಮರೆಯುವಂತಿಲ್ಲ. ಮನುಷ್ಯನ ದುಃಖಸಹನಾ ಶಕ್ತಿಯು ಮಿತಿಯುಳ್ಳದ್ದು; ಎಂತಹ ಬಹಿರಂಗವಾದಿಯಾದರೂ ಒಬ್ಬನು ಗುಟ್ಟು ಮಾಡಲೇಬೇಕಾದ ಕೆಲವು ಸಂಗತಿಗಳಿವೆ; ಹೀಗಾಗಿ ಪಂಜಾಬು ಮುಂತಾದ ಕಡೆಗಳಲ್ಲಿ ನಡೆದ ದುರಂತಗಳ ಸವಿವರ ವರ್ಣನೆಗಳಿಗೆ ಅವಕಾಶ ಕೊಡಲ್ಪಟ್ಟಿಲ್ಲ; ಕೆಲವನ್ನು ಮಾನಧನರು ಹೊರಗೆ ಬಿಟ್ಟಿಲ್ಲ. ನಡೆದ ಎಲ್ಲಾ ಸಂಗತಿಗಳೂ ಬೆಳಕಿಗೆ ಬೀಳುತ್ತಿದ್ದರೆ ಅವುಗಳ ಶ್ರವಣ ಮಾತ್ರದಿಂದ ಭಾರತೀಯರ ಹೃದಯ ಹೇಗಾಗುತಿತ್ತೊ! ಸಂಭವಿಸಿದ್ದ ಎಲ್ಲಾ ದುರಂತಗಳ ಆ ಭೀಕರ ಚಿತ್ರವು ಸಾಕಾರಗೊಂಡು ತೋರುತಿದ್ದರೆ ಆ ನೋಟಮಾತ್ರದಿಂದ ಹಿಂದೀಯರಲ್ಲಿ ಎಂತಹ ಭಾವನೆ ಏಳುತಿತ್ತೊ!

ಸದ್ಯದ ಸಮಸ್ಯೆಗಳು

ಗಾಂಧಿಜೀಯ ಬಲಿದಾನವು ರಾಷ್ಟ್ರದ 'ಗೊಂದಲಾಗ್ನಿ'ಯನ್ನು ಒಮ್ಮೆಗೇ ನಂದಿಸಿ ಬಿಟ್ಟಿದೆ. ಆದರೆ ಈಗಲೂ ಉಳಿದಿರುವ ನಿರಾಶ್ರಿತರ ರಕ್ಷಣಾ ವ್ಯವಸ್ಥೆಯ ಭಾರವು ಬೆಂಗೋಲು ದುರ್ಬಲವಿರುವ ಯಾವ ಸರಕಾರವಾದರೂ ಮುಗ್ಗರಿಸಿ ಬೀಳುವಂತೆ ಮಾಡುವಂತಹದೇ! ಭಾರತ ಸರಕಾರದಂತೆ ಲಕ್ಷಾವಧಿ ಜನರನ್ನು ಒಂದೆಡೆಯಿಂದ ಇನ್ನೊಂದೆಡೆಗೆ-ಒಂದು ರಾಜ್ಯದಿಂದಿನ್ನೊಂದು ರಾಜ್ಯಕ್ಕೀನೇ-ಕರೆಯಿಸಿಕೊಳ್ಳುವ ಮತ್ತು ಕಳುಹಿಕೊಡುವ ಅಪಾರ ಆಮದು ರಫ್ತು ವಹಿವಾಟನ್ನು ನಡೆಯಿಸಿದ ಮತ್ತೊಂದು ಸರಕಾರವು ಈ ಪ್ರಪಂಚದಲ್ಲೇ ಇಲ್ಲ. ವಂಶಪಾರಂಪರ್ಯವಾಗಿ ಒಂದೆಡೆಯಲ್ಲಿ ವಾಸಿಸಿಕೊಂಡು ಬಂದು, ಮುಂದಿನ ವಂಶಪರಂಪರೆಯ ಜೀವನಕ್ಕೆಂದು ಕೂಡಿಸಿಟ್ಟಿದ್ದ ಎಲ್ಲವನ್ನೂ ಗೊಂದಲಕ್ಕಾಹುತಿ ಕೊಟ್ಟು ಜೀವ ಮಾತ್ರ ಹಿಡಿದುಕೊಂಡು ಓಡಿಬಂದ ಸಹಸ್ರಾರು ಕುಟುಂಬಗಳ ಜೀವನ ನಿರ್ವಹಣಕ್ಕಾಗಿ ಎಲ್ಲವನ್ನೂ ಹೊಸತಾಗಿ ವ್ಯವಸ್ಥೆ ಮಾಡಿಕೊಡುವ ಅಗಾಧ ಹೊಣೆಗಾರಿಕೆಯು ಹಿಂದೀ ಸರಕಾರದ ಮೇಲೆ ಬಿದ್ದಂತೆ ಬೇರೊಂದು ರಾಷ್ಟ್ರದ ಮೇಲೆ ಬಿದ್ದ ನಿದರ್ಶನವು ಪ್ರಪಂಚದ ಚರಿತ್ರೆಯಲ್ಲೇ ಇಲ್ಲ. ಅದ್ದರಿಂದಲೇ ಇಂದಿನ ಭಾರತ ಸರಕಾರಕ್ಕೆ ಕಾಶ್ಮೀರ ಪ್ರಶ್ನೆಗಿಂತ ಇದು ದೊಡ್ಡದಾಗಿದೆ, ಇದೇ ಮುಖ್ಯವಾಗಿದೆ. ಪ್ರಾಣದ ಪ್ರಶ್ನೆ, ಮಾನದ ಪ್ರಶ್ನೆ-ಅದೂ ಲಕ್ಷಾವಧಿ ಮಂದಿಯದು! ಇದರಲ್ಲೂ ಮಹಿಳೆಯರ ಮಾನ ಪ್ರಾಣಗಳ ಪ್ರಶ್ನೆಯು ಮಹತ್ತಾದುದು; ಅತ್ಯಂತ ಗಹನವಾದುದು. ಭಾರತದ ರಾಜಧಾನಿ ದಿಲ್ಲಿಯ ವಾತಾವರಣದಲ್ಲೀಗ ಮಹಾತ್ಮರ ಬಲಿದಾನ ಮತ್ತು ಮಹಿಳಾ ವರ್ಗದ ಮಾನದ ಪ್ರಶ್ನೆಯೇ ಕದಡಿಹೋಗಿದೆ.

ಒಂದು ನಿದರ್ಶನ

ಕೆಲವೇ ದಿನಗಳ ಮೊದಲ ಮಾತು. ಓರ್ವ ನಿರಾಶ್ರಿತ ಮಹಿಳೆ ಕಣ್ಣೀರು ತುಂಬಿಕೊಂಡೇ ಪಂಡಿತ ನೆಹರುಗಳ ಮನೆಗೆ ಹೋಗಿ ಅವರೆದುರು ನಿಂತು ಅಳಹತ್ತಿದಳು. 'ನನಗೊಂದು ಕೆಲಸ ಕೊಡಿಸಿ' ಎಂಬುದೇ ಅವಳ ಮೊರೆ. ರಾಷ್ಟ್ರ ವಿಭಜನೆಯಾಗುವ ಮೊದಲು ಪಾಕಿಸ್ತಾನದಲ್ಲಿದ್ದ ಶ್ರೀಮಂತ ಕುಟುಂಬವೊಂದರ ಮಹಿಳೆಯೀಕೆ. ಆದರೀಗ ಆಕೆಗೆ ಮನೆಯಿಲ್ಲ; ಬಂಧುಬಾಂಧವರಿಲ್ಲ, ಕಣ್ಣೀರೊರಸುವ ಜನರಾಗಲೀ ಹೊಟ್ಟೆ ತುಂಬಿಸಲು ಹಣವಾಗಲೀ ಇಲ್ಲ. ಅವಳ ಏಕಮಾತ್ರ ಆಶೆಯೆಂದರೆ ಭಾರತದ ಪ್ರಧಾನಿ ಪಂಡಿತ ನೆಹರು. ಇಂತಹ ನಿರಾಶ್ರಿತ ಮಹಿಳೆಯರ ರಕ್ಷಣೆಗಾಗಿ ಪುನರ್ವ್ಯವಸ್ಥಾ ವಿಭಾಗವು ಮಹಿಳಾ ಶಾಖೆಯೊಂದನ್ನು ಪ್ರತ್ಯೇಕತೆರೆದಿದೆ. ಕಣ್ಣೀರಿನೊಂದಿಗೆ ಕೆಲಸ ಯಾಚಿಸಿದ ಈ ಮಹಿಳೆಗೆ ಒಂದು ನೂಲುವ ಯಂತ್ರವನ್ನು ಕೊಡುವಂತೆ ಪಂಡಿತ ನೆಹರುಗಳು ಆ ಮಹಿಳಾ ಶಾಖೆಗೆ ಶಿಫಾರಸು ಮಾಡಿದರು. ಮಾತ್ರವಲ್ಲದೆ ತನ್ನ ಕಿಸೆಯಿಂದ 20 ರೂಪಾಯಿಗಳನ್ನಾಕೆಯ ಸದ್ಯದ ಖರ್ಚಿಗೆ ಕೊಟ್ಟರು. ಪ್ರತಿದಿನವೂ ಇಂತಹ 'ಭಿಕ್ಷುಕಿ'ಯರ ಮೊರೆ ಕೇಳುವ ಹಾಗೂ ಭಿಕ್ಷೆ ನೀಡುವ ಕಾರ್ಯವು ಪ್ರಧಾನಿ ನೆಹರುವಿಗೆ ತಪ್ಪಿದ್ದಲ್ಲ. ಗಂಡ, ಅಣ್ಣ, ತಮ್ಮ, ತಾಯಿ, ತಂದೆ, ಮಗ, ಸಹೋದರರನ್ನು ಕಳಕೊಂಡ ಕರುಳ ವೇದನೆಯೊಂದಿಗೆ 'ಪಂಡಿತ ನೆಹರುಗಳನ್ನಾದರೂ ಕಾಣಲಿಕ್ಕಾಗದೆ ಹೋಯಿತಲ್ಲಾ!' ಎಂಬ ಪಶ್ಚಾತ್ತಾಪದಿಂದ ಕುದಿಯುತ್ತಿರುವ ನೂರಾರು ನಿರ್ಗತಿಕ ಮಹಿಳೆಯರು ಈಗ ಭಾರತದಲ್ಲಿದ್ದಾರೆ!

ಕನಿಕರಾರ್ಹ ಸಮಸ್ಯೆ

ಎಷ್ಟೆಂದರೂ ಮಾನವನ ಉದ್ರೇಕ ಬುದ್ಧಿಯು ಮಾಡಿದ ಅಪಕಾರವನ್ನಡಗಿಸಲು ಉಪಕಾರ ಬುದ್ಧಿಯಿಂದಾಗದು; ಮಾನವನಲ್ಲಿರುವ-ರಾಕ್ಷಸತ್ವವು ಮಾಡಿದ ತಪ್ಪನ್ನು ಪೂರ್ತಿ ಸರಿಗೊಳಿಸಲು ಆತನಲ್ಲಿರುವ ದೇವತ್ವದಿಂದ ಅಸಾಧ್ಯ. ಗತಿಹೀನ ಮಹಿಳೆಯರಿಗಾಗಿ ಸರಕಾರದ ಪುನರ್ವ್ಯವಸ್ಥಾ ವಿಭಾಗದ ಮಹಿಳಾ ಶಾಖೆಯವರು ರಕ್ಷಣಾ ಕೇಂದ್ರಗಳನ್ನೂ ಮನೆ ಗುಡಿಸಲುಗಳನ್ನೂ ನಿರ್ಮಿಸಿದ್ದಾರೆ. ಆದರೆ 'ಇದಕ್ಕೇನು ಮಾಡಲಿ?' ಎಂದು ಆ ಶಾಖೆ ಕೂಡಾ ತಲೆ ಕೆರದು ಮಾಡಿಕೊಳ್ಳಬೇಕಾಗಿ ಬರುವ ಹಲವು ಸಮಸ್ಯೆಗಳಿವೆ. ಗಂಡ ಮತ್ತು ಮಗ ಗುಂಡಿಗಾಹುತಿಯಾಗಿ, ಮಗಳು ಪುಂಡರಿಂದ ಅಪಹರಿಸಲ್ಪಟ್ಟಿದ್ದ ಓರ್ವ ಮಹಿಳೆ ಇತ್ತೀಚೆಗೆ ಮಹಿಳಾ ಶಾಖೆಯ ಕಾರ್ಯಾಲಯಕ್ಕೆ ಬಂದು ಸಹಾಯ ಯಾಚಿಸಿದಳು. ಅವಳಿಗೆ ಊಟದ ಧಾನ್ಯ ಮತ್ತು ಪಾತ್ರೆಗಳನ್ನು ಕೊಟ್ಟು ಉಳಕೊಳ್ಳಲು ಮನೆ ತೋರಿಸಿದಾಗ ಆಕೆ "ಈ ಪಾತ್ರೆಗಳನ್ನು ಹಿಡಿದುಕೊಂಡು ಹೋಗಿ ನಾನೇನು ಮಾಡಲಿ? ಈ ಕೈಗಳಿಂದ ನಾನು ಅಡುಗೆ ಮಾಡಿ ಉಣ್ಣುವದಾದರೂ ಹೇಗೆ?"-ಎಂದು ಬಲತೋಳನ್ನು ಮುಂದೆ ಮಾಡಿದಳು. ಆಕೆಯ ಬಲಕೈ ಅರ್ಧ ತುಂಡಾಗಿ ಹೋಗಿತ್ತು-ಮಹಿಳೆಯೊಬ್ಬಳ ಕೈ ಕತ್ತರಿಸಿ ತೆಗೆಯುವುದೂ ದೇಶವನ್ನು ಕತ್ತರಿಸಿ ಪಡೆದಷ್ಟೇ ಭೂಷಣಪ್ರಾಯವೆಂದು ಆ ಪುಂಡರು ಭಾವಿಸಿದ್ದರೇನೊ! ಕೊಲೆಯಾದವರನ್ನು ಮರಳಿ ತರಲಾಗದ ದುಃಖ ಬೇರಿದ್ದರೂ ಅವರಿಗಾಗಿ ಮಾಡತಕ್ಕ ಕರ್ತವ್ಯವುಳಿದಿಲ್ಲವೆಂಬ ನೆಮ್ಮದಿಯಾದರೂ ಇದೆ. ಅಂಗ ಕಳೆದುಹೋಗಿ ಪ್ರಾಣವುಳಿದಿರುವ ಹಲವರಿದ್ದಾರೆ-ಈ ಕನಿಕರಾರ್ಹ ಜೀವಗಳಿಗೆ ಗತಿಯೇನ?

ಉದ್ಯೋಗದ ಪ್ರಶ್ನೆ

ಮಹಿಳೆಯರಿಗೆ ಜೀವನ ನಿರ್ವಹಣದ ವ್ಯವಸ್ಥೆ ಮಾಡಿಕೊಡುವುದರಲ್ಲಿರುವಷ್ಟು ಸೂಕ್ಷ್ಮ ವಿಚಾರಗಳು ಬೇರೊಂದರಲ್ಲಿಲ್ಲ. ಗಂಡಸರಿಗೆ ಯಾವ ಉದ್ಯೋಗವನ್ನಾದರೂ ಕೊಡಬಹುದು: ಎಲ್ಲಿಗಾದರೂ ಬೀಳ್ಕೊಡಬಹುದು. ಆದರೆ ಹಿಂದೀ ಮಹಿಳೆಯನ್ನೂ ಅದೇ ರೀತಿ ನೋಡಲು ಸಾಧ್ಯವೆ? ನೋಡಿದರೆ, ತಮಗೆ ಪಾಕಿಸ್ತಾನದಲ್ಲಿ

ವಿಮೆ ಮಾಡಿಸಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ದ ಅತ್ಯಾಚಾರಗಳ ಸಣ್ಣ ಪ್ರತಿ ಅನಾಚಾರಗಳು ಇಲ್ಲಿಯೂ ತಪ್ಪಿದ್ದಲ್ಲವೆಂದು ಅವರಿಗೆ ತೋರದೆ? ಬವಲಿಗೆ ಸ್ತ್ರೀ ಸಹಜ ಉದ್ದಿಮೆಗಳನ್ನೇ ದೊರಕಿಸಿಕೊಡೋಣವೆಂದರೆ ಅದಕ್ಕೂ ತೊಡಕುಗಳಿವೆ. ಪಾಕಿಸ್ತಾನ್ ವಲಯಗಳಿಂದೋಡಿ ಬಂದು ದಿಲ್ಲಿಯಲ್ಲಿ ನಿರಾಶ್ರಿತರಾಗಿರುವ ಮಹಿಳೆಯರಲ್ಲಿ ಹೆಚ್ಚಿನವರು ಅವಿದ್ಯಾವಂತರು. ಮನೆಯಲ್ಲೇ ಇದ್ದು ಗಂಡ, ತಂದೆ ಅಥವಾ ಇತರ ಕುಟುಂಬಿಕ ಪುರುಷರು ಸಂಪಾದಿಸಿ ಹಾಕಿದುದನ್ನುಂಡೇ ದಿನ ತೆಗೆಯುತ್ತಿದ್ದವರು. ಇನ್ನೊಂದು ವರ್ಗವೆಂದರೆ ವಿದ್ಯಾವಂತೆಯರು. ಈ ವರ್ಗದವರಲ್ಲಿ, ಪಾಕಿಸ್ತಾನದಲ್ಲಿರುವಾಗ ಅಧ್ಯಾಪಕಿ ಅಥವಾ ದಾದಿ ಉದ್ಯೋಗ ನಿರ್ವಹಿಸುತ್ತಿದ್ದವರೇ ಹೆಚ್ಚಿಗೆ. ಆದರೆ ದಿಲ್ಲಿಗೆ ಬಂದ ಮೇಲೆ ಮೊದಲಿನ ಅವಿದ್ಯಾವಂತ ವರ್ಗಕ್ಕೆ ಯಾವುದಾದರೊಂದು ಕಸುಬನ್ನು ಕಲಿಸಿಯೇ ಅವರನ್ನು ಉದ್ಯೋಗಕ್ಕೆ ಹಚ್ಚಬೇಕಾಯಿತು. ಇವರಲ್ಲಿ ಅತ್ಯಧಿಕ ಸಂಖ್ಯೆಯರಿಗೆ ಹೊಲಿಗೆ ಕೆಲಸವೊಂದೇ ಹಿಡಿದಿದೆ. ಮಹಿಳಾ ಶಾಖೆಯು ಪ್ರತಿಯೊಂದರಲ್ಲೂ ಇಂತಹ 400 ಮಂದಿ ಮಹಿಳೆಯರಿರುವ 6 ರಕ್ಷಣಾ ಕೇಂದ್ರಗಳನ್ನು ನವ ದಿಲ್ಲಿಯಲ್ಲಿ ತೆರೆದು ಹೊಲಿಗೆ ಯಂತ್ರಗಳನ್ನು ಸಾಧ್ಯವಿದ್ದಷ್ಟು ಸರಬರಾಯಿ ಮಾಡಿದೆ. ಆದರೆ ಹೊಲಿಗೆ ಯಂತ್ರದ ಕೊರತೆ ಬಹಳವಿರುವುದರಿಂದ ಎಲ್ಲರಿಗೂ ಕೆಲಸವೊದಗಿಸಲೀವರೆಗಾಗಿಲ್ಲ. ಬೇಕಾದಷ್ಟು ಯಂತ್ರ ತೆಗೆದುಕೊಳ್ಳೋಣವೆಂದರೆ ಮಹಿಳಾ ಶಾಖೆಯ ನಿಧಿಯಲ್ಲೇ ಕೊರತೆ ಬಿದ್ದಿದೆ. ಎರಡನೇ ವರ್ಗ ವಿದ್ಯಾವಂತೆಯರ ಹಕ್ಕಿನ "ಟೀಚರ್" ಮತ್ತು 'ನರ್ಸ್' ವಿಭಾಗಗಳಲ್ಲಿ ಸ್ಥಾನಗಳೇ ಖಾಲಿಯಿಲ್ಲವಾಗಿದೆ. ಹೀಗಾಗಿ ನಿರಾಶ್ರಿತ ಮಹಿಳೆಯರ ನಿರುದ್ಯೋಗ ಸಮಸ್ಯೆ ಉಳಿದಿದೆ. ಮಹಿಳಾ ಶಾಖೆಯು ಸಾಕಷ್ಟು ವಿಜಯಗಳಿಸಿರುವುದೆಂದರೆ ನಿರಾಶ್ರಿತ ಮಕ್ಕಳ ವ್ಯವಸ್ಥೆಯಲ್ಲಿ. ಮಕ್ಕಳಿಗೆ ಬೇಕಾಗುವಷ್ಟು ಶಾಲೆಗಳನ್ನು ದಿಲ್ಲಿಯಲ್ಲಿ ಅದು ತೆರೆದಿದೆ. ಆ ಪೈಕಿ 'ಪುರಾನಾ ಖಿಲಾ'ದಲ್ಲಿರುವ ಶಾಲೆಯೊಂದರಲ್ಲೇ ೫೦೦ ಮಕ್ಕಳಿದ್ದಾರೆ.

ಮದುವೆ ಬೇಡವೆ?

'ಜೀವಾಧಾರ ತಪ್ಪಿದರೂ ಭಾವಾಂದೋಲನ ನಿಲ್ಲದು' ಎಂಬ ಮಾತಿದೆ. ಆಶ್ರಯಹೀನಳಾದರೂ ಆಗಬೇಕಾದುದು ಆಗಲೇಬೇಕಷ್ಟೆ' ಮಾತ್ರವಲ್ಲ; ನಿರಾಶ್ರಿತ ಯುವತಿಯರೆಲ್ಲರಿಗೂ ಮದುವೆ ಮಾಡಿಕೊಟ್ಟಲ್ಲಿ ಅವರ ಜೀವನ ವ್ಯವಸ್ಥೆಯ ಹೊಣೆಯೂ ಸರಕಾರದಿಂದ ತಪ್ಪುತ್ತದೆ. ಆದರೆ ಎಲ್ಲಕ್ಕಿಂತ ಹೆಚ್ಚು ಕಠಿಣ ಕಾರ್ಯ ಹಾಗೂ ಕಷ್ಟದ ಕಾರ್ಯವೆಂದರೆ ನಿರಾಶ್ರಿತ ಯುವತಿಯರಿಗೆ ವಿವಾಹ ಮಾಡಿಕೊಡುವುದು. ಪಾಕಿಸ್ತಾನ ವಲಯದ ಮುಸ್ಲಿಂ ಪುಂಡರಿಂದ ಅಪಹರಿಸಲ್ಪಟ್ಟು ಅಥವಾ ಜುಲುಮೆಯಿಂದ ಕೆಡಿಸಲ್ಪಟ್ಟು ಹೇಗೂ ಪಾರಾಗಿ ಬಂದ ಮಹಿಳೆಯರನ್ನು ವರಿಸಬೇಕೆಂಬ ಹಠ ಮತ್ತು ವಿಶಾಲ ಮನೋವೃತ್ತಿಯು ಭಾರತದ ಯುವಕ ಜನಾಂಗದಲ್ಲೀಗ ಮೂಡಿರುವುದು ಸತ್ಯವಾದರೂ ಅಂತಹ ಯುವತೀ ವರ್ಗವನ್ನು ಮಹಿಳಾ ಸಹಜ 'ಮರ್ಯಾದೆಯ ಭೀತಿ' ಬಿಟ್ಟಿಲ್ಲವೆಂದು ಕಾಣುತ್ತಿದೆ. ನಿರಾಶ್ರಿತ ರಕ್ಷಕ ಮಹಿಳಾ ಶಾಖೆಯು ಶ್ರೀಮತಿ ಹಾಂಡೂ ಇವರ ನೇತೃತ್ವದಲ್ಲಿ ನವದಿಲ್ಲಿಯ 'ಚಾಮ್ಸ್‌ಫರ್ಡ್ ಮಂಜಿಲ್'ನಲ್ಲಿ 'ವಿವಾಹ ಕಚೇರಿ'ಯ ಮುಖ್ಯ ಕಾರ್ಯಾಲಯವನ್ನು ತೆರೆದು ವಿವಾಹಯೋಗ್ಯ ಮಹಿಳೆಯರೆಲ್ಲರೂ ಒಂದೊಂದು ಕೈಹಿಡಿಯುವಂತೆ ತನ್ನ ಶಕ್ತಿಮೀರಿ ಪ್ರೋತ್ಸಾಹಿಸುತ್ತಾ ಪ್ರಯತ್ನಿಸುತ್ತಾ ಇದೆ. "ದಯವಿಟ್ಟು ನನಗೊಬ್ಬ ಪತ್ನಿಯನ್ನು ಒದಗಿಸಿಕೊಡಿ" ಎಂಬ ಅರ್ಜಿಗಳು ಯುವಕರಿಂದ ಬರುತ್ತಾ ಇವೆ. ಆದರೆ ಈ ಅರ್ಜಿದಾರ ವರರ ಸಂಖ್ಯೆಗೆ ಸರಿಯಾಗಿ ಅರ್ಜಿದಾರ ವಧುಗಳ ಸಂಖ್ಯೆ ಮುಂದೆ ಬಂದಿಲ್ಲ. 'ನನಗೊಂದು ಪತಿ ಬೇಕು' ಎಂದು ಮೇ ಮೂರನೇ ವಾರದವರೆಗೆ ಬಂದಿದ್ದ ಸುಮಾರು 1000 ಅರ್ಜಿಗಳಲ್ಲಿ 900 ಅರ್ಜಿಗಳು 'ವಧು ಬೇಕು' ಎಂದು ಬೇಡುತ್ತಿದ್ದರೆ, ಉಳಿದ 100 ಮಾತ್ರ 'ವರಬೇಕು' ಎನ್ನುತ್ತಿದ್ದುವಂತೆ. ಈ ಹೆಚ್ಚು-ಕಡಿಮೆಗಳನ್ನು ಜತೆಗೂಡಿಸುವುದೆಂದರೆ ಹೇಗೆ? ಪಂಚಪಾಂಡವರಿಗೊರ್ವ ದ್ರೌಪದಿಯು ಆ ಯುಗದಲ್ಲಿದ್ದಳೆಂದು ಈ ಕಾಲದಲ್ಲಿ ಒಂಭತ್ತು ಕೈಗಳಿಗೆ ಒಂದು ಹೆಣ್ಣನ್ನು ಕೊಡಲು ಸಾಧ್ಯವೆ? ಹುಟ್ಟಿಗೆ ಗತಿಯಿಲ್ಲ-ತನ್ನವರೆಂಬವರಿಲ್ಲ-ಆದರೂ ಮದುವೆಯ ಅರ್ಜಿಕೊಡುವುದೆಂದರೆ ಹಿಂದೂ ಸ್ತ್ರೀತ್ವ ನಾಚುತಿದೆ ಎಂಬುದನ್ನು ಕಾಣುವಾಗ, ಅದರ ಘನತೆಯೆಂತಹದೆಂಬುದೂ ಅದನ್ನು ಭಂಗಿಸಿದವರ ಪಾಪವೆಷ್ಟು ದೊಡ್ಡದೆಂಬುದೂ ಮುಂದಟ್ಟಾಗುವುದು. ಸಹಜವಾಗಿ 'ಹೆಣ್ಣು ನಾಚುತ್ತದೆ'. ಅದರಲ್ಲೂ ದಿಲ್ಲಿಯ ನಿರಾಶ್ರಿತ ಯುವತಿಯರನ್ನು ಬೇರೆ ಕೆಲವು ಕಾರಣಗಳೂ ಚುಚ್ಚುತ್ತಿವೆ. ಮೊದಲನೆಯದಾಗಿ ತಾವು ಪಾಕಿಸ್ತಾನ್ ಪುಂಡರ ಕೈಯಲ್ಲಿ ಮರ್ಯಾದೆ ಕಳಕೊಂಡವರೆಂಬ ಅಂಜಿಕೆ ಹಾಗೂ ಸ್ವಯಂನಿಕೃಷ್ಟತಾಭಾವನೆ; ಎರಡನೆಯದಾಗಿ ತಮ್ಮ ಆತ್ಮೀಯರನ್ನು ಕಳಕೊಂಡು, ಅದ್ಭುತ ಭೀಕರ ದೃಶ್ಯಗಳನ್ನು ಕಣ್ಣಾರೆ ಕಂಡು ಪ್ರಪಂಚವೇ ಬೇಡವೆನ್ನಿಸಿರುವ ಈ ಮಹಿಳೆಯರಿಗೆ ಮದುವೆ ಹೇಗೂ ಬೇಡವಾಗಿರುವುದು. ಮೂರನೆಯದಾಗಿ ಪಾಕಿಸ್ತಾನದಲ್ಲಿ ಅವರ ಹೆಣ್ತನವು ಪಡೆದ ಪುರುಷ ಸಂಬಂಧದ ಭೀಕರತೆಯು ಹೃದಯಕ್ಕೆ ನಾಟಿ ಹೋಗಿರುವುದರಿಂದ ಪರಸ್ಥಳದಲ್ಲಿ ಪರಕೀಯ ಪುರುಷನ ಸಂಬಂಧವೆಂದೊಡನೆಯೇ ಅದರಲ್ಲಿ ಹೆದರಿಕೆಯೇಳುತ್ತಿರುವುದು; ಇಂತಹ ಕೆಲವು ಕಾರಣಗಳಿಂದ ದಿಲ್ಲಿಯಲ್ಲಿರುವ ನಿರಾಶ್ರಿತ ಯುವತಿಯರು ಮದುವೆಗೆ ಅಂಜುತಿದ್ದಾರೆ.

ಒಂದು ಮಾದರಿ

ಆದರೆ ಇತ್ತೀಚೆಗೆ ದಿಲ್ಲಿಯಲ್ಲಿ ಇಂಥವರ ಮೂರು ಮಾದರೀ ಮದುವೆಗಳು ನಡೆದುಹೋದುವು. ಮೂವರು ವಧುಗಳೂ ಪಾಕಿಸ್ತಾನದಲ್ಲಿ ಪುಂಡರಿಂದಪಹರಿಸಲ್ಪಟ್ಟವರು; ಭಾರತದ ಸೇನೆ ಮತ್ತು ಸಾರ್ವಜನಿಕ ಕೆಲಸಗಾರರಿಂದ ಕಟ್ಟಕಡೆಗೆ ಶೋಧಿಸಲ್ಪಟ್ಟು ನವದಿಲ್ಲಿಗೆ ತರಲ್ಪಟ್ಟವರು. ಇವರ ಕೈಹಿಡಿಯುವ ಉತ್ಸಾಹಿ ವರರಿದ್ದರು. ಆ ಪೈಕಿ ಒಬ್ಬಳು ೧೯ ವರ್ಷ ಪ್ರಾಯದ ವಿಮಲೆ ಪಂಜಾಬಿನ ಓರ್ವ ನಿರಾಶ್ರಿತ ಪದವೀಧರ ಸತ್ಯಮೂರ್ತಿ ಸೇಟ್ ಎಂಬವನು ಅವಳ ಕೈಹಿಡಿದಿದ್ದಾನೆ. ವಿಮಲೆ ಮೊದಲು ಪಶ್ಚಿಮ ಪಂಜಾಬಿನಲ್ಲಿದ್ದವಳು. ಭಾರತಕ್ಕೋಡಿಬಂದಿದ್ದ ಅವಳ ಮಲತಾಯಿಯೊಬ್ಬಳು ಮಾತ್ರ ಇಲ್ಲಿದ್ದಾಳೆ ಹೊರತು ವಿಮಲೆಯ ಸಂಬಂಧಿಕರಾರೂ ಉಳಿದಿಲ್ಲ. ಪಶ್ಚಿಮ ಪಂಜಾಬಿನಲ್ಲಿ ಪುಂಡರು ಈಕೆಯನ್ನು ಅಪಹರಿಸಿ ವೇಶ್ಯಾವಠಕ್ಕೆ ಕೊಂಡೊಯ್ದು ಇಟ್ಟುಕೊಂಡಿದ್ದರು. ವ್ಯಾಘ್ರ ಗವಿಯೊಳಗೆ ಸಿಕ್ಕಿಕೊಂಡ ಗೋವಿನಂತಾದ ವಿಮಲೆ ಮಾನವನ್ನು ಸೂರೆಗೊಟ್ಟು ನರಕ ಜೀವನವನ್ನು ಅನುಭವಿಸುತಿದ್ದಳು. ಹಿಂದೀ ಸ್ವಯಂಸೇವಕರು ಅವಳನ್ನು ಅಲ್ಲಿಂದ ಬಿಡಿಸಿ ದಿಲ್ಲಿಗೆ ತಂದರು. ಪ್ರಥಮತಃ ಅವಳ ಮಲತಾಯಿ ಮತ್ತು ಇತರ ದೂರದ ಸಂಬಂಧಿಕರಿದ್ದಲ್ಲಿಗೆ ಕಳುಹಿಸಿದಾಗ ಈ 'ಭ್ರಷ್ಟವಾದ ವಸ್ತು'ವನ್ನು ಒಳಗೆ ತೆಗೆದುಕೊಳ್ಳಲು ಅವರಾರೂ ಒಪ್ಪಲಿಲ್ಲ. ಅನಿವಾರ್ಯವಾಗಿ ಪುಂಡರ ಕೈಯಲ್ಲಿ ಆತ್ಮದಮನವನ್ನೂ, ಆ ಕಾರಣದಿಂದಲೇ ತನ್ನವರಿಂದ ತಿರಸ್ಕಾರವನ್ನೂ ಹೊಂದಿದ ವಿಮಲೆಗೆ ಇನ್ನೀ ಜೀವವನ್ನು ಇಟ್ಟುಕೊಳ್ಳಬಾರದೆಂದು ತೋರಿತು. ಜೀವನ ನಿರಾಶೆಗೊಂಡ ವಿಮಲೆ ಆತ್ಮಹತ್ಯೆ ಮಾಡಿಕೊಳ್ಳುವುದರಲ್ಲಿದ್ದಾಗ ಮಹಿಳಾ ಶಾಖೆಯವರು ಅವಳಲ್ಲಿ ಧೈರ್ಯ ತುಂಬಿ, ಇದೇ ಮೇ ತಾ. 2ರಲ್ಲಿ ಸತ್ಯಮೂರ್ತಿ ಸೇಟ್‌ಗೆ ಶಾಸನಬದ್ಧ ವಿವಾಹ ಮಾಡಿ ಕೊಟ್ಟರು. ಅಂದಿನಿಂದೀವರೆಗೆ ವಿಮಲೆ ಆದರ್ಶ ಪತ್ನಿಯಾಗಿದ್ದಾಳೆಂದೂ, ಅವರಿಬ್ಬರ ಅತ್ಯಂತ ಸುಖಿ ದಾಂಪತ್ಯ ಜೀವನವೆಂದೂ ತಿಳಿದು ಬಂದಿದೆ. ಎಲ್ಲಿಯಾದರೂ ತನ್ನ ಹಿಂದಿನ ದುರಂತಗಳ ದೃಶ್ಯ ಕಣ್ಣಿದಿರು ಬಂದು ವಿಮಲೆಯ ಮುಖ ಕಂದಿದಾಗ ಅವಳನ್ನು ಸಂತೈಸಲು ಸತ್ಯಮೂರ್ತಿಯೇ ಇದ್ದಾನೆ. ವಿಮಲೆಯ ವಿವಾಹವು ಮಿಕ್ಕ ನಿರಾಶ್ರಿತ ಯುವತಿಯರಿಗೊಂದು ಪ್ರೇರಣೆಯಾಗಿ ಪರಿಣಮಿಸಿದಂತಿದೆ. ಇನ್ನಿದನ್ನು ಅನುಕರಿಸಿ ಎಲ್ಲರೂ ವಿವಾಹವಾಗಬಹುದೆಂದು ನಿರೀಕ್ಷಿಸಲಾಗಿದೆ.

The 1946 Record Business proves the popularity
THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 bout **54 Lakhs**

Our experience of 37 years available to you for arranging Insurance investment It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India
Bombay Life Building,
Central Office, Udipi

Branches at:
Mangalore, Calicut, Trivandrum, Madura, Madras, Bangalore & Bombay.

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¼% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಲಗ್ನ ಪತ್ರಿಕೆಗಳನ್ನು
ಸುಲಭ ದರದಲ್ಲಿ
ಶೀಘ್ರವಾಗಿ
ಮುದ್ರಿಸಿ ಕೊಡಲಾಗುವುದು.
ಇತರ ಎಲ್ಲತರದ ಮುದ್ರಣ ಕಾರ್ಯಗಳನ್ನೂ ಸ್ವೀಕರಿಸಲಾಗುವುದು.
ನವಯುಗ ಪ್ರೆಸ್,
ಉಡುಪಿ.

ಹೈದರಾಬಾದ್ ಕಂಟಕ ಮತ್ತು ಪೆಲೆಸ್ತೈನ್ ಕಾಳಗ

ಭಾರತದ ರಾಜಕೀಯದಲ್ಲಿ ಹೈದರಾಬಾದ್ ಗೊಂದಲ - ಜಾಗತಿಕ ರಂಗದಲ್ಲಿ ಪೆಲಸ್ತೈನ್ ಕಾಳಗ-ಇವೇ ಈ ದಿನ ಮುಖ್ಯವಿವೆ. ಮಿಕ್ಕ ಸಮಸ್ಯೆಗಳೆಲ್ಲವೂ ಬಹುತೇಕವಾಗಿ ಯಥಾಸ್ಥಿತಿಯಲ್ಲಿವೆ; ಇನ್ನೂ ಕೆಲಕಾಲವನ್ನು ಈ ಸ್ಥಿತಿಯಲ್ಲೇ ನೂಂಗುವಂತೆ ಕಾಣುತ್ತಿವೆ. ಆದರೆ ಹೈದರಾಬಾದು ಮತ್ತು ಪೆಲಸ್ತೈನ್ ತಿಕ್ಕಾಟಗಳು ದಿನದಿಂದ ದಿನಕ್ಕೆ ಹೊಸ ಕಠೋರತೆ ಮತ್ತು ಆಶ್ಚರ್ಯಾಘಾತಗಳನ್ನು ನಿರ್ಮಿಸಹತ್ತಿವೆ.

ಹೈದರಾಬಾದು ಕಂಟಕ

ಹೈದರಾಬಾದಿನ ಸಂಬಂಧದ ಕೊನೆಯ ಸ್ಪಷ್ಟ ನಿರ್ಧಾರವನ್ನು ಮಾಡಲು ಹಿಂದೀ ಕೇಂದ್ರ ಸರಕಾರದ ಮಂತ್ರಿ ಮಂಡಲದ ಸಭೆಯು ಇದೇ ತಾ 2೬ರಲ್ಲಿ ಸೇರಿದೆ. ಹೈದರಾಬಾದಿನ ಭಾವೀ ಸಂಬಂಧ ನಿರ್ಧಾರದ ಅಧಿಕಾರವೀಗ ಭಾರತದ ಸಂಸ್ಥಾನ ಖಾತೆಯ ಮಂತ್ರಿಯೊಬ್ಬರದಾಗಿ ಉಳಿದಿಲ್ಲ. ವಿದೇಶ, ಹಣಕಾಸು, ವ್ಯಾಪಾರ, ಮತ್ತು ಸಂಚಾರ ಮಹಾಪಾಟು ಖಾತೆಗಳ ಮಂತ್ರಿಗಳ ಕಾರ್ಯಕ್ಷೇತ್ರದೊಳಗೂ ಅದು ವ್ಯಾಪಿಸಿದೆ, ಅಂತೆಯೇ ಇಡೀ ರಾಷ್ಟ್ರದ ಪ್ರಶ್ನೆಯಾಗಿ ಮಾರ್ಪಟ್ಟಿದೆ. ಅದ್ದರಿಂದ ಹೈದರಾಬಾದು ಸಂಬಂಧದ ನಿರ್ಣಯಕ್ಕಾಗಿ ಭಾರತ ಸರಕಾರದ ಮಂತ್ರಿ ಸಮಿತಿಯ ವಿಶೇಷ ಸಭೆ ಸೇರಿ ಎಲ್ಲಾ ವಿಷಯಗಳ ಸೂಕ್ಷ್ಮ ಹಾಗೂ ಆಳವಾದ ಪರ್ಯಾಲೋಚನೆ ನಡೆಸಿದೆ. ಈ ಮೊದಲೇ, ಕೊನೆಯದಾಗಿ ಹೈದರಾಬಾದಿನ ಅಂತಿಮ ನಿರ್ಧಾರವನ್ನು ಪಡೆಯುವುದಕ್ಕಾಗಿ ನಿಜಾಮ್ ಸರಕಾರದ ಪ್ರಧಾನ ಮಂತ್ರಿ ಮಿ. ಲಾಯಕ್‌ಆಲಿಗಳನ್ನು ಪಂಡಿತ ನೆಹರುಗಳು ಡಿಲ್ಲಿಗಾಮಂತ್ರಿಸಿದ್ದರು. ಮಿ. ಲಾಯಕ್‌ಅಲಿಗಳು ತನ್ನ ಸರಕಾರದ ಮುಖ್ಯ ಕಾರ್ಯದರ್ಶಿ ಮಿ. ಮುಶಾಹೀರ್ ಅಹಮ್ಮದರೊಂದಿಗೆ ತಾರೀಖು ೨೪ರಲ್ಲು ವಿಮಾನ ಹತ್ತಿ ಡಿಲ್ಲಿಗೆ ಬಂದಿದ್ದಾರೆ. ಈ ನಿರ್ಣಯಾತ್ಮಕ ದಿನ ನೋಡಿ-ಇದೇ ಮೇ ತಾ 22ರಲ್ಲಿ—ಮದ್ರಾಸಿನಿಂದ ಬೊಂಬಾಯಿಗೆ ಹೊರಟಿದ್ದ 'ಬೊಂಬಾಯಿ ಮೈಲ್'ನ ಮೇಲೆ ಹೈದರಾಬಾದು ಗಡಿಯೊಳಗಿನ ಚಂಗಪುರ್ ಸ್ಟೇಶನಿನಲ್ಲಿ ರಝಾಕಾರರು ಧಾಳಿ ನಡೆಸಿ ಪ್ರಯಾಣಿಕರನ್ನು ಹೊಡೆದು ಜಖಂಗೊಳಿಸಿ ಕೆಲವು ಸ್ತ್ರೀಯರನ್ನೂ ಮಕ್ಕಳನ್ನೂ ಅದೃಶ್ಯಗೊಳಿಸಿರುವ ಭೀಕರ ಅತ್ಯಾಚಾರವು ಉರಿವ ಬೆಂಕಿಗೆ ಎಣ್ಣೆ ಹೊಯ್ದಿದೆ. ಸಮವಸ್ತ್ರಧಾರಿಗಳಾದ ರಝಾಕಾರರೊಂದು ದಳವು ವಸ್ತ್ರಧಾರಿಗಳಾಗಿ ಟ್ರೈನಿನ ಮೇಲೆ ಬೀಳುವಾಗ ನೂರಾರು ನಿಶಸ್ತ್ರ ರಝಾಕಾರರು ಮುಂದಿನ ಘಟನೆಗಳನ್ನು ನಿರೀಕ್ಷಿಸುತ್ತಾ ಹಿನ್ನೆಲೆಯಲ್ಲಿ ತಯಾರಿದ್ದರೆಂದು ತಿಳಿದುಬರುತ್ತದೆ. ಚಂಗಪುರ ಧಾಳಿಯಲ್ಲಿ ಒಂಭತ್ತು ಮಂದಿ ಜಖಂಗೊಂಡು ಆರು ಮಂದಿ ಸ್ತ್ರೀಯರೂ ಮಕ್ಕಳೂ ಅಪಹರಿಸಲ್ಪಟ್ಟಿದ್ದಲ್ಲದೆ ಮಕ್ಕಳು ಹೆಂಗಳೆಯರ ಸಮೇತ ಇಪ್ಪತ್ತೆರಡು ಮಂದಿ ಕಾಣೆಯಾಗಿರುವರೆಂದು ತಿಳಿದು ಬರುತ್ತದೆ. ಈ ವಾರ್ತೆ ಸಿಡಿಲು ಬಡಿದೊಡನೆ ಮದ್ರಾಸ್ ಬೊಂಬೇ ರೈಲ್ವೇ ಸಂಚಾರ ನಿಲ್ಲಿಸಲ್ಪಟ್ಟಿದೆ; ಈ ಭಾಗದ ರೈಲ್ವೆಗಳ ಸಂಚಾರದ ಸಮಯ ಮತ್ತು ಸ್ಥಳಗಳಲ್ಲಿ ವ್ಯತ್ಯಾಸ ಮಾಡಲಾಗಿದೆ. ಮದ್ರಾಸ್ ಮಂತ್ರಿ ಮಂಡಲದ ಅವಸರದ ಸಭೆ ಸೇರಿ 'ಮುಂದೇನು?' ಎಂಬುದನ್ನು ಪರ್ಯಾಲೋಚಿಸಿದೆ.

ಇತ್ತ ಹೈದರಾಬಾದಿನಲ್ಲಿ ಪ್ರಜಾಪ್ರಭುತ್ವ, ಅಥವಾ ರಝಾಕಾರರ ಮೇಲೆ ನಿರ್ಬಂಧವಾವುದನ್ನೂ ಜಾರಿಗೆ ತರುವಂತಿಲ್ಲವೆಂದು ನಿಜಾಮ್ ಸರಕಾರವು ಕೌರವ ಶಪಥವನ್ನೇ ತೊಟ್ಟಿದೆಯಾದರೂ ಈಗ ಮಿ. ಲಾಯಿಕ್‌ಆಲಿಗಳು ಡಿಲ್ಲಿಗೋಡಿರುವುದು ವಿನೋದವನ್ನೆಬ್ಬಿಸಿದೆ. ಪೂರ್ವ ನಿಶ್ಚಯದಂತೆ ಹೈದರಾಬಾದಿನ ಸರ್ವ ರಾಜಕೀಯ ಪಕ್ಷಗಳಿಗೆ ಸಮ್ಮತವಾಗುವ ಒಪ್ಪಂದವನ್ನು ಹೈದರಾಬಾದ್ ಪ್ರಧಾನರು ಮಾಡಿಕೊಳ್ಳುವುದೂ, ನಿಜಾಮ್ ಸಲಹೆಗಾರ ಸರ್. ಮೋಂಕ್ಟನರು ಡಿಲ್ಲಿಗೆ ಬಂದು ಭಾರತ ಸರಕಾರದೊಡನೆ ಸಂಧಾನ ಮಾಡಿಕೊಳ್ಳುವದೂ ಇದೇ ಮೇ ತಿಂಗಳೊಳಗೆ ನಡೆಯಬೇಕಿತ್ತು. ಇವೆರಡೂ ನಡೆದಿಲ್ಲ ಮಾತ್ರವಲ್ಲ, ನಿಜಾಮ್ ಸರಕಾರವು ಆ ಗೊಡವೆಯಲ್ಲೇ ಇಲ್ಲ. ಆದರೂ ಹೈದರಾಬಾದ್ ಪ್ರತಿನಿಧಿಗಳು ಪ್ರತಿಸಲವೂ ನವಡಿಲ್ಲಿಗೋಡಿ ಬಂದಲ್ಲೊಂದು ನೆವವನ್ನು ಮುಂದೊಡ್ಡಿ ಸಮಯ ತೆಗೆಯುವುದರ ಉದ್ದೇಶವೆಂದರೆ, ಏಕ ವರ್ಷಾವಧಿಯ ಒಪ್ಪಂದದ ಮಾಯಿದೆ ಮುಗಿಯುವ ಬರುವ ನವಂಬರಿನ ವರೆಗೆ ಹಿಂದೀ ಸರಕಾರವು ಯಾವ ನಿಶ್ಚಿತ ನಿರ್ಧಾರಕ್ಕೂ ಬಾರದಂತೆ ವಂಚಿಸಬೇಕೆಂಬುದೇ. ಆ ಮೇಲೆ ಪಾಕಿಸ್ತಾನ ಮತ್ತು ಕೆಲವು ಬ್ರಿಟಿಷ್ ಮಿತ್ರರ ಸಹಾಯದಿಂದ ಹೈದರಾಬಾದ್ ಸ್ವತಂತ್ರ ರಾಷ್ಟ್ರವೆಂದು ಸಾರಿ, ಜಗತ್ ಸಂಘವೇ ಮೊದಲಾದ ಅಂತರ್ರಾಷ್ಟ್ರೀಯ ಕ್ಷೇತ್ರಗಳಲ್ಲಿ ಭಾರತ ಸರಕಾರದ ವಿರುದ್ಧ ದೂರು ಕೊಡುವ ಸಿದ್ಧತೆಯಿದು ಎಂದು ನಂಬಲಾಗಿದೆ. ಲೋರ್ಡ್ ಮೌಂಟ್ ಬೇಟನರು ತನ್ನ ಪ್ರತಿನಿಧಿಯ ಮೂಲಕ ನಿಜಾಮರು ಡಿಲ್ಲಿಗೆ ಬರುವಂತೆ ಕಳುಹಿಸಿದ ಎರಡನೇ ಆಮಂತ್ರಣವೂ ತಿರಸ್ಕರಿಸಲ್ಪಟ್ಟಿವೆಯಾದರೂ, ಭಾರತ–ಹೈದರಾಬಾದುಗಳು ಎಂದಿಗೂ, ಕೊನೆಯ ಪಕ್ಷ ತಾನಿಲ್ಲಿಂದ ಹೊರಡುವ ಇದೇ ಜೂನಿನ ವರೆಗಾದರೂ ಘರ್ಷಿಸಿಕೊಳ್ಳದಂತಾಗಬೇಕೆಂದು ಲೋರ್ಡ್ ಮೌಂಟ್‌ಬೇಟನರ ಉತ್ಕಟೇಚ್ಛೆಯಿದೆ. ಇತ್ತ ಹೈದರಾಬಾದಿನೊಳಗೆ ಪಠಾಣರು ಮತ್ತು ಹೊರಗಡೆಯ ಇತರ ಮುಸ್ಲಿಮರು ಪ್ರತಿ ದಿನವೂ ಹಿಂಡು ಹಿಂಡಾಗಿ ಪ್ರವೇಶಿಸಿ ರಝಾಕಾರ್ ದಳ ಅಥವಾ ನಿಜಾಮರ ಮೂಲ ಸೇನೆಯೊಳಗೆ ಸೇರಿಕೊಳ್ಳುತಿದ್ದಾರೆ. ಇವೆಲ್ಲಾ ವಿದ್ಯಮಾನಗಳನ್ನೂ ಸರಿಯಾಗಿ ಜೀರ್ಣಿಸಿಕೊಂಡಿರುವ ಹಿಂದೀ ಸರಕಾರವು ಈ ಬಾರಿ ಸ್ಪಷ್ಟ ನಿರ್ಧಾರಕ್ಕೆ ಬರಲಿದೆ. ಪ್ರಥಮತಃ ಹೈದರಾಬಾದಿನ ಮೇಲೆ ವ್ಯಾಪಾರ ಮತ್ತಿತರವೆಲ್ಲಾ ಸಂಬಂಧಗಳ ದಿಗ್ಬಂಧನಗಳನ್ನು ಹಾಕಲಾಗುವದೆಂದು ಊಹಿಸಲಾಗಿದೆ.

ಪೆಲಸ್ತೈನ್ ಕಾಳಗ

ಅತ್ತ ಪೆಲಸ್ತೈನ್ ಸಮರವು ಸಮಸ್ಯಾತ್ಮಕ ಹಾಗೂ ಅಪಾಯದಾಯಕವಾಗಿ ಸಾಗಿದೆ ಈ ಅರಬ್ಬಿ ಯೆಹೂದೀ ಕಾಳಗವು ಲೋಕದ ಪ್ರಮುಖ ರಾಷ್ಟ್ರಗಳಲ್ಲೂ ಪಂಕ್ತಿ ವ್ಯತ್ಯಾಸವನ್ನು ಒಡ್ಡಿದಂತಿದೆ. ಪೆಲಸ್ತೈನಿನಲ್ಲಿ ಯೆಹೂದಿಗಳು ಮೇ ೧೪ರಲ್ಲಿ ತಮ್ಮ 'ಇಸ್ರಾಯೇಲ್' ರಾಜ್ಯ ಸ್ಥಾಪನೆಯ ಜಾಹೀರನಾಮೆ ಹೊರಡಿಸಿದೊಡನೆಯೇ ಅಮೇರಿಕವು ಅದಕ್ಕೆ ಅನುಮತಿ ಸೂಚಿಸಿತಲ್ಲದೆ ಸಂಪೂರ್ಣವಾಗಿ ಯೆಹೂದೀ ಪಕ್ಷಪಾತಿಯಾಗಿ ಮಾರ್ಪಟ್ಟಿತು ಬೆನ್ನಲ್ಲೇ ರಶ್ಯವೂ ಇಸ್ರಾಯೇಲನ್ನು ಅಮೇರಿಕಕ್ಕಿಂತಲೂ ತುಸು ಸ್ಪಷ್ಟ ರೀತಿಯಿಂದ ಒಪ್ಪಿಕೊಂಡಿತು. ಹೀಗೆ ರಶ್ಯ-ಅಮೇರಿಕಗಳೆರಡೂ ಯೆಹೂದೀ ಅಧಿಕಾರಕ್ಕೆ ಸಮ್ಮತಿಸಿದರೂ ಅದು ಪರಸ್ಪ[illegible]ದಲೇ ಕೊಟ್ಟ ಸಮ್ಮತಿಯಾದ್ದರಿಂದ ಇವೆರಡು [illegible]ದಿ ರಾಷ್ಟ್ರಗಳು ಇಲ್ಲಿ ಏಕಪಂಗ್ತಿ ಹಿಡಿದವೆಂದು ಭಾವಿಸಬಾರದು. ಆದರೆ ಇಂಗ್ಲಾಂಡು ಇನ್ನೂ ಇಸ್ರಯೇಲನ್ನು ಒಪ್ಪಿಕೊಂಡಿಲ್ಲ, ಒಪ್ಪಿಗೆ ಕೊಡುವ ಲಕ್ಷಣವೂ ತೋರುತ್ತಿಲ್ಲ. ಅದು ಈಜಿಪ್ಟ್, ಇರಾಕ್, ಟ್ರಾನ್ಸ್‌ಜೋರ್ಡನ್ ಮೊದಲಾದ ಅರಬ್ ರಾಷ್ಟ್ರಗಳೊಡನೆ ಮಾಡಿಕೊಂಡ ಒಪ್ಪಂದವಿದೆ. ಆ ಒಪ್ಪಂದಾನುಸಾರವಾಗಿ ಅದೀಗಲೂ ಅವುಗಳಿಗೆ ಬೇಕಾದ ಸಹಾಯವನ್ನು ಒದಗಿಸುತ್ತಲೇ ಇದೆ. ಟ್ರಾನ್ಸ್‌ಜೋರ್ಡನ್ ಗಡಿಯ ಸೇನೆಗೆ ವರುಷಂಪ್ರತಿ ೮,೦೦೦,೦೦೦ ಪೌಂಡುಗಳನ್ನೂ ಬ್ರಿಟಿಷ್ ಸೇನಾಧಿಕಾರಿಗಳನ್ನೂ ಬ್ರಿಟನ್ ಸರಬರಾಯಿ ಮಾಡುತ್ತಿದೆ ಎಂದು ತಿಳಿದುಬರುತ್ತದೆ. ಬ್ರಿಟಿಷ್ ಸೇನೆಗಳು ಪೆಲಸ್ತೀನಿನಿಂದ ಕಾಲ್ದೆಗೆಯುವ ವಾಯಿದೆಯು ಕೂಡಾ ಬರುವ ಅಗೋಸ್ತಿನ ವರೆಗಿದೆ. ಇಸ್ರಾಯೇಲಿಗೆ ಶಸ್ತ್ರಾಸ್ತ್ರ ಸರಬರಾಯಿ ಮಾಡುವ ಕುರಿತಿರುವ ನಿರ್ಬಂಧಗಳನ್ನು ತೆಗೆದು ಹಾಕಿ ಯೆಹೂದಿಗಳ ಕೈಯನ್ನು ಬಲಗೊಳಿಸುವ ಅಮೇರಿಕದ ಹವಣಿಕೆಯು ಜಾರಿಗೆ ಬಂದರೆ, ಪೆಲಸ್ತೈನಿನ ಸಂಬಂಧವಾಗಿ ಈಗಲೇ ಬೆಳೆದಿರುವ ಅಮೇರಿಕ ಇಂಗ್ಲಾಂಡುಗಳೊಳಗಿನ ಭಿನ್ನಾಭಿಪ್ರಾಯವು ತುತ್ತತುದಿಗೆ ಮುಟ್ಟಬಹುದು. ಆದ್ದರಿಂದಲೇ 'ಪೆಲಸ್ತೈನ್ ಕಾಳಗವು ಅಂತರ್ರಾಷ್ಟ್ರೀಯ ಶಾಂತಿಗೆ ಅಪಾಯಕರ'ವೆಂದು ಅಮೇರಿಕವು ಭದ್ರತಾ ಕೌನ್ಸಿಲಿನಲ್ಲಿ ತಂದ ಸೂಚನೆಗೆ ರಶ್ಯ, ಉಕ್ರೈನ್, ಫ್ರಾನ್ಸ್, ಕೊಲಂಬಿಯಾ ರಾಷ್ಟ್ರಗಳು ಬೆಂಬಲ ಕೊಟ್ಟರೂ ಬ್ರಿಟನು ಪ್ರಬಲವಾಗಿ ವಿರೋಧಿಸಿ ಅದು ಬಿದ್ದು ಹೋಯಿತು. ಇದೇ 21ನೇ ಪೂರ್ವಾಹ್ಣದಿಂದ ಪೆಲಸ್ತೈನಿನಲ್ಲಿ ಗುಂಡು ಹಾರಾಟ ನಿಲ್ಲತಕ್ಕದ್ದೆಂದು ಭದ್ರತಾ ಕೌನ್ಸಿಲು ನಿರ್ಧರಿಸಿ ಅರಬರಿಗೂ ಯೆಹೂದಿಗಳಿಗೂ ತಿಳಿಸಿದೆ. ಭದ್ರತಾ ಕೌನ್ಸಿಲು ಇಂದಿನ ಯುದ್ಧದ ಸಂಬಂಧವಾಗಿ ಕೇಳಿದ ಪ್ರಶ್ನಾವಳಿಗೆ 'ಇಸ್ರಾಯೆಲ್ ರಾಜ್ಯ ಉಳಿದಿರುವ ವರೆಗೆ ಯೆಹೂದಿಗಳೊಡನೆ ರಾಜಕೀಯ ಮಾತುಕತೆಯಿಲ್ಲ' ಎಂದು ಈಜಿಪ್ಟ್, ಇರಾಕ್, ಸಿರಿಯಾ, ಲೆಬನಾನ್ ರಾಷ್ಟ್ರಗಳು ಉತ್ತರ ಕೊಟ್ಟಿವೆ. ಟ್ರಾನ್ಸ್‌ಜೋರ್ಡನ್ ಉತ್ತರಿಸುವುದಕ್ಕೂ

[೧೯ನೇ ಪುಟ ನೋಡಿರಿ]

ದಿ ಕೆನರಾ ಬ್ಯಾಂಕ್, ಲಿಮಿಟೆಡ್.
ಸ್ಥಾಪಿತ: ೧೯೦೬
[ಸೌ. ಕೆನರಾದಲ್ಲಿ [illegible]ಸಲ್ಪಟ್ಟು, ಇಂಡಿಯಾದಲ್ಲಿ [illegible]]
ಮುದ್ದತಿ ಠೇವುಗಳು
ರೂ. ೧೦,೦೦೦ ಮತ್ತು ಅದಕ್ಕೆ ಮೇಲ್ಪಟ್ಟು ರೂ ೧೦೦೦೦ [illegible] ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಲ್ಲಿ ಈಗ ಸ್ವೀಕರಿಸಲಾಗುತ್ತದೆ
೩ ತಿಂಗಳು ನೂರಕ್ಕೆ ವರ್ಷಕ್ಕೆ [illegible]
೪ ರಿಂದ ೫ ತಿಂಗಳು ,, ,, [illegible]
೬ ರಿಂದ ೯ ತಿಂಗಳು ,, ,, [illegible]
ರೂ ೧೦,೦೦೦ಕ್ಕಿಂತ ಕಡಿಮೆಯಿದ್ದ ಠೇ. [illegible] ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು [illegible] ರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.
The Canara Bank Limited.
ESTD: 1906

ಬಾಲಕರು ಆರೋಗ್ಯಕಾಯರಾಗಲು
ಪ್ರಭೂಸ್ ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ
ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ [illegible] ಕಳೆಗುಂದಿರುವ ಮಕ್ಕಳು
ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ [illegible]ಗಳನ್ನು ಮಕ್ಕಳು [illegible] ಮಾಡುವುದನ್ನು ಕಂಡುಕೊಳ್ಳುವಿರಿ
ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಬಾಳು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:-
ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. Sharma, Mangalore.

The Canara Banking Corporation Limited.
Estd: 1906.
(Incorporated in British India)
Head Office: **UDIPI**, S. India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves	Rs. 8,00,400

BANKING BUSINESS OF EVERY DESCRIPTION TRANSACTED
V. R. Kamath, B.A., LL.B., General Manager.

ಗುರುವಾರ, ಉಡುಪಿ, ೨೭-೫-'೪೮

ಕಮ್ಯುನಿಸ್ಟ್ ಕಂಟಕ

ದಕ್ಷಿಣ ಕನ್ನಡದ ಸರಹದ್ದಿನಲ್ಲಿ ಇತ್ತೀಚೆಗೆ ಮಲಬಾರಿನ ಕಮ್ಯೂನಿಸ್ಟರ ದೆಸೆಯಿಂದಾಗಿ ನಡೆದ ಗೊಂದಲದ ಸುದ್ದಿ ಬಂದು ಹೆಚ್ಚು ಕಾಲ ಕಳೆಯದಿರುವಾಗಲೇ ಮಂಜೇಶ್ವರ ರೈಲ್ವೇಸ್ಟೇಶನಿನಲ್ಲಿ ನಡೆದ ಕಮ್ಯೂನಿಸ್ಟ್ ಗಲಭೆಯ ಸುದ್ದಿಯು ದಕ್ಷಿಣ ಕನ್ನಡಿಗರ ಹೃದಯದಲ್ಲೀಗ ಮಾರ್ದನಿಸುತ್ತಿರಬೇಕು. ಆ ದುರಂತದ ಸವಿವರವಾದ ವಿಮರ್ಶೆಗೆ ನಾವಿಲ್ಲಿ ಹೋಗುವದಿಲ್ಲ. ಆದರೆ ಜಿಲ್ಲೆಯ ಹಿತಾಕಾಂಕ್ಷಿಗಳ---ಮುಖ್ಯವಾಗಿ ಜನ ಸಾಮಾನ್ಯರ---ಕಣ್ಣು ತೆರೆಯಿಸುವಂತಹ ಘಟನೆಯದು. ನೀಚತರಗತಿಯ ಮಾತು ವರ್ತನೆ, ಹೊಡೆತ, ಇರಿತಗಳಿಂದಲೇ ತಮ್ಮ ಉದ್ದೇಶ ಸಾಧಿಸಿಕೊಳ್ಳಲು ಹೊರಟವರ ಕೈಯಲ್ಲಿ, ದುರ್ದೈವವಶಾತ್ ಅದಕ್ಕನುಗುಣವಾದ ಅಜ್ಞಾನ, ಅಸಂಸ್ಕಾರ, ಅನನುಭವಗಳಿಂದ ಕೂಡಿರುವವರೇ ಅಧಿಕ ಸಂಖ್ಯಾತರಿರುವ ಕೂಲಿಗಾರ ವರ್ಗ ಸಿಕ್ಕಿಕೊಂಡಲ್ಲಿ ಎಂತಹ ಅನಾಹುತಗಳಾಗಬಹುದೆಂಬುದನ್ನು ಮಂಜೇಶ್ವರದ ದುರಂತವು ಪ್ರಮಾಣಿಸುತ್ತಿದೆ. ಇಲ್ಲಿ ಯಾವುದೇ 'ಇಸಮ್'ಯಾ 'ವಾದ'ದ ಮಾತಿನ ಪ್ರಶ್ನೆಯೇ ಇಲ್ಲಿಲ್ಲ. ಎಂತಹ ಧ್ಯೇಯವನ್ನು ಹಾಕಿಕೊಂಡರೂ ಹಿಂಸೆಯಿಂದ ಪ್ರಮಾಣಗಳನ್ನು ಮುರಿಯುವವನ್ನು 'ಗೂಂಡಾಇಸಮ್' ಅಥವಾ 'ರಾಕ್ಷಸೀಯತೆ' [illegible] ಜನತೆ ಗಣಿಸಬೇಕಾದ [illegible] ಇಲ್ಲವೆಂಬುದನ್ನು ಪ್ರಥಮತಃ ತಿಳಿಯಬೇಕು. ಜನತಾ ರಾಜ್ಯ ಅಥವಾ ಸಮಾಜವಾದೀ ಸರಕಾರಸ್ಥಾಪನೆಯೇ ಕಮ್ಯುನಿಸ್ಟರ ಗುರಿಯಾಗಿದ್ದಲ್ಲಿ ಅವರು ತಿಳಿದಂತೆ ಬಹುಸಂಖ್ಯಾತರಾಗಿರುವ ರೈತ ಕೂಲಿಗಾರರ ಮನವೊಲಿಸಿ, ಮತ ಪಡೆದು ಅಂತಹ ಬದಲಾವಣೆ ತರಲು ಬೇಕಾದಷ್ಟು ಕಾಲವು ಕಮ್ಯುನಿಸ್ಟರ ಮುಂದಿದೆ; ಆ ಸಂದರ್ಭ ಬರುವ ವರೆಗೆ ಕಾಯುವುದು ಕೂಡಾ ಅನಾಯಕರ ಮತ್ತು ಅಸಾಧ್ಯವೇ? ಭಾರತದಲ್ಲಿ ಕಮ್ಯುನಿಸ್ಟರು ಹೀಗೆ ದುಡುಕುತಿದ್ದಾರೆ? ಭಾರತದಲ್ಲಿ ಸ್ವಾಧಿಕಾರ ಸ್ಥಾಪನೆಯಾಗಿ ತತ್ಸಂಬಂಧದ ಸಮಸ್ಯೆಗಳುಳಿದಿರುವ ಈ ಕಾಲದಲ್ಲಿ ಎಂತಹ ಸಂಘಟಿತ ಹಿಂಸೆಯಿಂದಾದರೂ ಸರ್ಕಾರದ ಆಡಳಿತೆಯನ್ನು ಒಮ್ಮೆಗೇ ಅಡಿಮೇಲು ಮಾಡಿ ಕಮ್ಯೂನಿಸ್ಟ್ ಸರಕಾರ ಸ್ಥಾಪಿಸುವುದು ಈ ಭಯೋತ್ಪಾದಕ ಭಗೀರಥರಿಂದ ಎಷ್ಟಕ್ಕೂ ಆಗಲೊಲ್ಲದ ಕಾರ್ಯ. ಈ ರಾಷ್ಟ್ರದ ಸ್ಥಿತಿಗತಿಗನುಗುಣವಾದ ಜನತಾ ರಾಜ್ಯಭಾರ ಸ್ಥಾಪಿಸುವ ಗುರಿಯೇ ಇಲ್ಲಿಯ ಕಮ್ಯುನಿಸ್ಟರಿಗಿಲ್ಲವೆಂಬುದಕ್ಕೆ ಜನಮನವನ್ನೊಲಿಸುವ ಕಡೆಗಾಗಲೀ, ಜನಹಿತ ಸಾಧಕವಿಧಾನಗಳ ಕಡೆಗಾಗಲೀ ಅವರೇನೊಂದೂ ಲಕ್ಷ್ಯ ಕೊಡದೆ, ರಷ್ಯಕ್ಕನುಕೂಲವಾಗಿ ಇತರ ರಾಷ್ಟ್ರಗಳ ಕಮ್ಯುನಿಸ್ಟರೆಬ್ಬಿಸುತ್ತಿರುವ ಗೊಂದಲಗಳನ್ನೇ ಕಣ್ಮುಚ್ಚಿ ಅನುಕರಿಸುತ್ತಿರುವ ಇದೊಂದೇ ನಿದರ್ಶನ ಸಾಕು. ಪರರಾಷ್ಟ್ರವೊಂದರ ಪಂಚಮದಳದವರಾಗಿರುವ ಈ ಕಮ್ಯುನಿಸ್ಟರು ಇಲ್ಲಿಯ 'ಜನತೆಯ ಹಿತ ಸಾಧನೆ' 'ರೈತ ಕೂಲಿಗಾರರ ಉದ್ಧಾರ'—ಇತ್ಯಾದಿ ಘೋಷಗಳನ್ನೆಬ್ಬಿಸುತ್ತಿರುವದು ದೊಡ್ಡ ಸ್ವಪರವಂಚನೆ ಬೇರೊಂದಿರಲಾರದು. ಧ್ಯೇಯ ಧೋರಣೆಗಳ ಮಾತು ಹೀಗಿದ್ದರೆ, ಮೊನ್ನೆ ಮಂಜೇಶ್ವರದಲ್ಲಿ ನಡೆದಂತಹ ಅಕ್ರಮ ಪಲಾಯನ, ಅತ್ಯಾಚಾರಗಳಂತಹವೇ ಈ ಪಕ್ಷದ ಕಾರ್ಯಕ್ರಮಗಳಾಗಿ ಈಗ ಕಾಣಿಸಹತ್ತಿವೆ. ಈ ರೀತಿ 'ಅಡ್ಡ ಹಾದಿಯಲ್ಲಿ ತಲೆಯೊಡೆಯುವ' ಕಾರ್ಯಕ್ರಮವನ್ನಿಟ್ಟುಕೊಳ್ಳುವ ಒಂದು ರಾಜಕೀಯ ಪಕ್ಷವು ಕಾಡುಕ್ರೂರಿಗಳ ಪಂಗಡವನ್ನಲ್ಲದೆ ಹೊರತು ಬೇರಲ್ಲ; ಇನ್ನೂ ಹೇಯ ರೀತಿಯಿಂದ ಹೇಡಿತನದಿಂದ ಪಲಾಯನ ಹರಿಸಿ, ತನ್ನ ನಿರಪರಾಧಿ ಅನುಯಾಯಿಗಳನ್ನೂ ಜನಸಾಮಾನ್ಯರನ್ನೂ ಸಂಕಷ್ಟಗಳಿಗೀಡು ಮಾಡುವವನು ದೇಶ ರಕ್ಷಣೆಯೊಂದೇ ತನ್ನ ಜೀವನತತ್ವವಾಗಿರುವ ಜಂತುವನ್ನಲ್ಲದೆ ಹೊರತು ಜನ ನಾಯಕನಾಗಲಾರ. ಯಾರ ಸರಕಾರವಿದ್ದರೂ, ಯಾವ ಮಾದರಿಯ ಶಾಸನವೇ ಆದರೂ ಅದನ್ನೀರೀತಿ ಮುರಿಯಲು ಸಾಧ್ಯವೇ? ಇಂತಹ ಪುಂಡಾಟಿಕೆಗಳಿಂದ ಕಮ್ಯುನಿಸ್ಟರು ಜನತೆಯನ್ನೆಂತಹ ಕಷ್ಟನಷ್ಟಗಳಿಗೀಡುಮಾಡುತ್ತಿರುವರೆಂಬ ಮಾತು ಹಾಗಿರಲಿ---ಸ್ವತಃ ಕಮ್ಯುನಿಸ್ಟರ ಕಾರ್ಯಗಳಿಗಾದರೂ ಇದು ಅನುಕೂಲವೇ?

ಅಬಕೀಗ ಕಮ್ಯುನಿಸ್ಟ್ ಪುಂಡಾಟಿಕೆಯನ್ನು ವಿಮರ್ಶಿಸುತ್ತಾ ಕುಳಿತು ಫಲವಿಲ್ಲ. ನೀತಿ ಬೋಧಿಸಿ ತಿದ್ದುವದಸಾಧ್ಯವಾಗುವಷ್ಟು ಅನಾಹುತದ ಹಾದಿಯಲ್ಲಿ ಅವರು ಮುಂದೊತ್ತಿ ಆಗಿದೆ. ಕಮ್ಯುನಿಸ್ಟ್ ತಂಟೆಕೋರತನದ ಪ್ರಭಾವವು ದಕ್ಷಿಣ ಕನ್ನಡದಲ್ಲಿ ಕೂಡಾ ಹೇಗಿದೆ ಎಂಬುದಕ್ಕೆ ಇನ್ನು ನಿದರ್ಶನ ಬೇಕಾಗಿಲ್ಲ. ಸರ್ವಸಾಮಾನ್ಯವಾಗಿ ಕಾಸರಗೋಡಿನಿಂದ ಉಡುಪಿಯ ವರೆಗಿನ ಪೇಟೆಪಟ್ಟಣಗಳ ಕೆಲಸಗಾರರೆಲ್ಲಾ ಕಮ್ಯುನಿಸ್ಟರ ಕೈಯೊಳಗಿದ್ದಾರೆ. ಹೀಗೆ ಬಲಿಬಿದ್ದವರ ಸಂಖ್ಯೆ ಹತ್ತು-ಹನ್ನೆರಡು ಸಾವಿರಗಳಿಗೆ ಕಡಿಮೆಯಿಲ್ಲ. ಅವಿದ್ಯಾವಂತ, ಅಸಂಸ್ಕೃತ ಜನರನ್ನು ಕೂಡಿಕಟ್ಟಿ ತಲೆಕೆಡಿಸಿ ಪ್ರೇರೇಪಿಸಿ ಬಿಟ್ಟಲ್ಲಿ, ಹಿಂದುಮುಂದಿನ ಯೋಚನೆಯಿಲ್ಲದ ಅವರು ನೂಕಿ ಬಿಟ್ಟತ್ತ ಹೋಗಿ ಢಿಕ್ಕಿ ಹೊಡೆಯುವುದು ಖಂಡಿತ. ಈ ಘರ್ಷಣೆಯಿಂದ ಆ ಕಮ್ಯೂನಿಸ್ಟ್ ಕಂಟಕವೇ ನುಚ್ಚು ನೂರಿಯಾಗಬೇಕಾದರೆ ಅದನ್ನು ಇದಿರಿಸಶಕ್ಯ ಸರಕಾರ ಅಥವಾ ಜನತೆ ಸಶಕ್ತವಿರಬೇಕು. ಹೇಗಿದ್ದರೂ ಸುಸಂಘಟಿತ ಕಮ್ಯೂನಿಸ್ಟ್ ದುಶ್ಶಕ್ತಿಯು ಹಾಗೆ ಢಿಕ್ಕಿ ಹೊಡೆದು ಸ್ವನಾಶ ಹೊಂದುವಾಗ ಇದಿರುಗಡೆಯೂ ಹಾನಿಗೀಡಾಗಬೇಕಾಗುತ್ತದೆಂಬುದನ್ನು ಮರೆಯಲಾಗುವದಿಲ್ಲ. ಮೇಲಾಗಿ ಇಂದಿನ ನಿಸ್ಸಹಾಯಕ ಸ್ಥಿತಿಯಲ್ಲಿ ಕೆಲಸಗಾರ ವರ್ಗಕ್ಕೊಂದು ಆಶ್ರಯ ಬೇಕೇ ಬೇಕು. ಆದ್ದರಿಂದ ಕಮ್ಯೂನಿಸ್ಟರ ಆ ಕಟ್ಟನ್ನೊಡೆದು, ಕೆಲಸಗಾರ ವರ್ಗವನ್ನು ಅವರ ಬೆಂಗಡೆಯಿಂದ ತಪ್ಪಿಸಿ ಸದ್ಮಾರ್ಗಕ್ಕೆ ಕರೆದೊಯ್ಯುವದೇ ಈ ಕಂಟಕ ನಿವಾರಣೆಗಿರುವ ಉತ್ತಮೋಪಾಯ. ಅಂತಹ ಕೆಲಸ ನಡೆದಿದೆಯೆ? ಅಜ್ಞ, ಸಹಾಯರಹಿತ ಕೆಲಸಗಾರರ ಸ್ಥಿತಿಗತಿ ಮತ್ತು ಹೃದಯದ ಪರಿಚಯ ಹಾಗೂ ಸಂಬಂಧವನ್ನು ಕಮ್ಯೂನಿಸ್ಟ್ ಕಾರ್ಯಕರ್ತರಂತೆ ನಮ್ಮಲ್ಲಿ ಬೇರಾರು ಮಾಡಿಕೊಂಡಿದ್ದಾರೆ? ಕಾಂಗ್ರೆಸಿಗರಲ್ಲಿ ಹೆಚ್ಚಿನವರು, ಆ ಕಾಲದ ತ್ಯಾಗ, ಕಷ್ಟ ಸಹನೆಯ ಮೂಲಕ ಕಾಂಗ್ರೆಸ್ ಗಳಿಸಿಟ್ಟುದನ್ನು ವ್ಯಯಿಸುವ ಸೋಮಾರಿಗಳಾಗಿದ್ದಾರೆ ಹೊರತು ಈಗ ಏನೂ ದುಡಿಯುತ್ತಿಲ್ಲ. ಹೆಚ್ಚಿನ ಸಮತಾವಾದಿಗಳಲ್ಲಿ ಆ ತನಕ ಕಾಂಗ್ರೆಸ್ಸಿನ ಈ ಮನೋವೃತ್ತಿಯೂ ಕಮ್ಯೂನಿಸ್ಟರ ಕೆಲವು ಅಭಿಪ್ರಾಯಗಳೂ ಮಿತ್ರಗೊಂಡಂತೆ ತೋರುತ್ತಿದೆಯೇ ಹೊರತು ಬೇರಿಲ್ಲ. ಕೆಲಸಗಾರ ವರ್ಗದಲ್ಲಿರುವ ಅಜ್ಞಾನ ಮತ್ತು ನಿಸ್ಸಹಾಯಕ ಸ್ಥಿತಿಯಂತೆಯೇ, ಈ ಪಕ್ಷಗಳಲ್ಲಿರುವ ದೌರ್ಬಲ್ಯವೂ ಕಮ್ಯೂನಿಸ್ಟ್ ದುಷ್ಪ್ರಭಾವಕ್ಕೆ ಕಾರಣವೆಂಬುದನ್ನು ಮರೆಯಬಾರದು. ಆದ್ದರಿಂದ ಬಹುಸಂಖ್ಯಾತರಾದ ರೈತಕೂಲಿಗಾರರ ರಾಜ್ಯಸ್ಥಾಪನೆಯ ಗುರಿ ಹಾಗೂ ಹಿತಸಾಧನಾ ಕಾರ್ಯಕ್ರಮಗಳನ್ನಿಟ್ಟುಕೊಂಡು ಅವರನ್ನು ಸಂಘಟಿಸಿ ಸದ್ಮಾರ್ಗ ಹಿಡಿಸುವ ಕಾರ್ಯವೀಗ ಭರದಿಂದ ನಡೆಯುವದೊಂದೇ ಬೇಕಾಗಿದೆ; ಹೀಗೆ ಮಾತ್ರ ಬಲ್ಲ ಪಕ್ಷವಾವುದೋ ಅದೇ ಆಗಬಹುದು-ಹೊರತು ಯಾವುದಾದರೊಂದು ಪಕ್ಷಕ್ಕಾಗಿ ರೈತ ಕೂಲಿಗಾರ ಸಂಘಟನೆಯೆಂಬುದಿರಲೇ ಬಾರದು. ಇಂತಹ ವಿಚಾರಿಗಳು ನಿಷ್ಠಾವಂತ ಕೆಲಸಗಾರರು ಕಾಂಗ್ರೆಸಿಗರಲ್ಲಿ ಮತ್ತು ಸಮತಾವಾದಿಗಳಲ್ಲಿ ಕೆಲವರಾದರೂ ಇದ್ದಿರಬಹುದು. ಅಂಥವರೀಗ ಹಿಂದೆ ನಿಲ್ಲಬಾರದು. ಕಮ್ಯೂನಿಸ್ಟರ ದುಷ್ಕ್ರಿಯೆಗಳ ಪ್ರತಿಫಲವಾಗಿ ಅವರಿಗೆ ಕಡೆಬಿದ್ದಿರುವ ಈ ಕಾಲದಲ್ಲೇ—ಕಮ್ಯೂನಿಸ್ಟ್ ಕಹಿ ಅನುಭವಗಳು ರೈತ ಕೂಲಿಗಾರರಿಗೂ ಜನ ಸಾಮಾನ್ಯರಿಗೂ ಆಗಿರುವ ಈ ಸಂದರ್ಭದಲ್ಲೇ—ರೈತ ಕೂಲಿಗಾರರನ್ನು ಅವರ ಕೈಯಿಂದ ತಪ್ಪಿಸಿ, ಸಂಘಟಿಸಿ, ಸಂಕಟಗಳಿಂದಲೂ ಪಾರುಮಾಡುವ ಕೆಲಸ ನಡೆಯಬೇಕು. ಹಾಗಾಗದೆ ಹೋದರೆ ಸರಕಾರೀದಬ್ಬಾಳಿಕೆಯಿಂದ ತಾತ್ಕಾಲಿಕ ಶಮನವಾದರೂ ಕಮ್ಯುನಿಸ್ಟ್ ಕಂಟಕ ಮುಂದೆತ್ತಿದರೂ ತಪ್ಪಿದ್ದಲ್ಲವೆಂಬುದು ನೆನಪಿರಬೇಕು.

ನುಡಿ ಮುತ್ತುಗಳು

ಕಾಳಗದಲ್ಲಿ ಸೋತೆನೆಂಬುದನ್ನು ತೋರಿಸಲು ಬಿಳಿಪತಾಕೆಯೇರಿಸುತ್ತಾರೆ; ಕಾಳನಂತೆಯಲ್ಲಿ ಗೆದ್ದೆನೆಂಬುದರ ಪ್ರದರ್ಶನವಾಗಿ ಬಿಳಿ ಟೋಪಿ ಯೇರಿಸುತ್ತಾರೆ

* *

ಹತ್ತು ಪುಂಡರನ್ನು ಕಟ್ಟಿಕೊಂಡು ಹಾವಳಿ ಮಾಡಬಲ್ಲವ ಪುಢಾರಿ; ಹತ್ತು ಮಂತ್ರ ಜಗಿದು ಹಣ ಮಾಡಬಲ್ಲವ ಪೂಜಾರಿ; ಹಲವರ ಮನೆ ತೆಗೆದು ಹಕ್ಕು ಸ್ಥಾಪಿಸಬಲ್ಲವ ಅಧಿಕಾರಿ.

* *

ಕಾಗೆಯ ಪಾಲಿಗೆ ಪಿಂಡವಿಟ್ಟವನೇ ಪಿತಾರೋಪಿ; ಕಾಕಪೋಕರ ಪಾಲಿಗೆ ದುಡ್ಡು ಕೊಟ್ಟವನೇ ಧುರೀಣ.

* *

ಹಂಸಕ್ಕೆ ಸರೋವರ-ಹಂದಿಗೆ ಚರಂಡಿ; ವಿಮರ್ಶಕನದು ಅವಲೋಕನೆ-ವಿಧೇಯನದು ಅನುಸ್ರಹ ಯಾಚನೆ.

* *

ಅರಿವೇ ಹೊದಿಸಿದ ಮುಳ್ಳುಕಂಭವನ್ನು ಆಲಿಂಗಿಸಿದರೆ ತಿಳಿದೀತು; ಆಡಂಬರ ಪ್ರದರ್ಶಿಸುವ ಮೂರ್ಖ ಬುದ್ಧಿಯವನನ್ನು ಆಶ್ರಯಿಸಿದರೆ ತಿಳಿದೀತು.

* *

ಕತ್ತೆಗೆಂತಹ ಬಣ್ಣ ಹಚ್ಚಿದರೂ ಕುದುರೆ ಹೊರತು ಜೋಡಿಸಲಾರದು; ಸ್ವಾರ್ಥಿಯೆಂತಹ ವೇಷ ಹಾಕಿದರೂ ಸುಲಿದಾನು ಹೊರತು ಸುಖ ಕೊಡಲಾರ.

* *

ಸಾಂಬಾರದ ಹುಳಿಖಾರವನ್ನು ಸವಿದೇ ತಿಳಿಯಬೇಕು; ಸಂಭಾವಿತರನ್ನಿಸುವವರ ಹುಳುಕನ್ನು ಸವಾಲು ಹಾಕಿಯೇ ಅರಿಯಬೇಕು.

* *

ಗೊಬ್ಬರ ಕಲ್ಮಷಗಳಿಂದಲೇ ಸಸಿ ಪುರವಾಗಿ ಹಬ್ಬುತ್ತದೆ; ದಗೆ ವಂಚನೆಗಳ ಬಲದಿಂದಲೇ ಸಾಮಾನ್ಯನು ಮಾನ್ಯನಾಗಿ ಕೊಬ್ಬುತ್ತಾನೆ.

ಮುಖ್ಯ ವಾರ್ತೆ

ಸಂಯುಕ್ತರಾಷ್ಟ್ರ ಸಂಘದ ನಿರ್ಧಾರವನ್ನು ಮನ್ನಿಸಿ ಇಸ್ರಾಯೇಲಿನ ಎಲ್ಲಾ ರಣಮುಖದಲ್ಲೂ ಗುಂಡಾಟವನ್ನು ನಿಲ್ಲಿಸುವಂತೆ ಯೆಹೂದಿ ಸರಕಾರವು ಇದೇ ತಾ. ೨೬ನೇ ರಾತ್ರಿ ತನ್ನ ಸೈನಿಕರಿಗಾಜ್ಞೆಯಿತ್ತಿದೆ ಅದರೆ ಅರಬರದಕ್ಕಿನೂ ಒಪ್ಪಿಗೆ ಕೊಟ್ಟಿಲ್ಲ. ತೋಪುಗಳ ಪ್ರಯೋಗವನ್ನು ನಿಷೇಧಿಸುವದು ಅವರಿಗೂ ಸಮ್ಮತವಾದರೂ ಯುದ್ಧ ನಿಲ್ಲಿಸಲು ಅವರು ಸಮ್ಮತಿಸಿಲ್ಲ.

ಇದೇ ತಾ 2೬ನೇ ರಾತ್ರಿ ಹೈದರಾಬಾದಿನೊಳಗಡೆಯ ಯೆರುವಾಲಯಮ್ ನಿಲ್ದಾಣದೊಳಗೆ ಬಂದ ರೈಲನ್ನು ರಝಾಕರರು ಲುಟಾಯಿಸಿ ಪ್ರಯಾಣಿಕರನ್ನು ಹೊಡೆದು ಸುಲಿದರೆಂದು ವಾರ್ತೆ ಬಂದಿದೆ. ಇದು ಎರಡೇ ದಿನಗಳಲ್ಲಿ ನಡೆದ ಎರಡನೇ ರೈಲು ಧಾಳಿ. ಹೈದರಾಬಾದ್—ಭಾರತದೊಳಗಿನ ಬಿಕ್ಕಟ್ಟು ಪ್ರಬಲವಾಗಿದೆ. ನಿರ್ಧಾರದ ಪ್ರಸವ ವೇದನೆ ಕಾಣುತ್ತಿದೆ. ಮಿ. ಲಾಯಿಕ್ ಅಲಿಗಳು ಇದೇ ತಾ 2೮ರಲ್ಲಿ ಹೈದರಾಬಾದಿಗೆ ಮರಳಿ ಮುಖ್ಯ ಹೇಳಿಕೆಯೊಂದನ್ನು ಕೊಡಲಿದ್ದಾರೆ.

ಈ ಹೋರಾಟ ಮೇಲಾಟಗಳ ತುದಿಯೆಲ್ಲಿ?

[೪ನೇ ಪುಟದಿಂದ]

ನಿರಾಕರಿಸಿತು. ಜೆರುಸಲೇಮ್ ನಗರ ಮತ್ತು ಪೆಲೆಸ್ಟೈನಿನ ಪುಣ್ಯ ಸ್ಥಳಗಳ ಕುರಿತು ಕೂಡಲೇ ನಿಶ್ಚಿತ ಒಪ್ಪಂದವೊಂದಕ್ಕೊಪ್ಪಲು ತಾವು ಸಿದ್ಧರಿದ್ದೇವೆಂದು ಯೆಹೂದಿಗಳ ಪ್ರತಿನಿಧಿ ಘೋಷಿಸಿದ್ದಾನೆ. ಅಮೇರಿಕವು ಯೆಹೂದಿಗಳಿಗೆ ಶಸ್ತ್ರಾಸ್ತ್ರ ಸರಬರಾಯಿ ಮಾಡಿಸಿದರೆ ಬ್ರಿಟನು ತನ್ನ ಅರಬ್ ರಾಷ್ಟ್ರಗಳ ಒಡಂಬಡಿಕೆಯ ನೀತಿಯನ್ನು ಮೀರಿಯೂ ಅರಬರಿಗೆ ಶಸ್ತ್ರ ಸರಬರಾಯಿ ಮಾಡಬೇಕಾಗುವದೆಂಬ ಭೀತಿಯೆದ್ದಿದೆ. ಈ ಸಂಬಂಧವಾಗಿ ಆಂಗ್ಲೋ-ಅಮೇರಿಕಾದ ಪ್ರತಿನಿಧಿಗಳೊಳಗೆ ಮಾತುಕತೆಗಳು ನಡೆದಿವೆ.

ಪ್ರತ್ಯಕ್ಷ ಪೆಲೆಸ್ಟೈನ್ ರಣರಂಗದಲ್ಲಾದರೂ ತಕ್ಕಡಿಯು ಯಾವ ಕಡೆಗೆ ಜಗ್ಗಬಹುದೆಂದು ಈಗಲೇ ಹೇಳಲಾಗುವ ಸ್ಥಿತಿ ಮೂಡಿಲ್ಲ. ಹಳೆ ಮತ್ತು ಹೊಸ ಜೆರುಸಲೇಮು ನಗರದ ಮೇಲೆ ಆಕ್ರಮಿಸುವರ ಮುತ್ತಿಗೆಯ ಮೇಲೆ ಮುತ್ತಿಗೆ ಬಿದ್ದು, ಅಲ್ಲಿ ಅತಿ ಭಯಂಕರ ಹೋರಾಟ ನಡೆದಿದೆ. ಜೆರುಸಲೇಮ್ ಹಳೇ ನಗರವನ್ನು ಮಿಂಚಿನ ವೇಗದಿಂದೆಂಬಂತೆ ಮುಟ್ಟಿ ಅರಬರಾಕ್ರಮಿಸಿಕೊಂಡು ಒಳಗೆ ಸುಮಾರು 1000 ಯೆಹೂದಿಗಳನ್ನು ಗೂಡಿನೊಳಗೆ ಸಿಕ್ಕಿಸಿ ಹಾಕಿದ್ದಾರೆ. ಅವರ ಬಿಡುಗಡೆಗಾಗಿ ಯೆಹೂದಿಗಳು ಅತ್ಯಾಧುನಿಕ ಯುದ್ಧೋಪಕರಣಗಳೊಂದಿಗೆ ಬಾರಿಬಾರಿಗೂ ಧಾಳಿಯಿಡುತ್ತಿದ್ದಾರೆ. ಜೆರುಸಲೇಮ್ ಹೊಸ ನಗರದಲ್ಲಿ ಸುದೃಢ ಯೆಹೂದೀ ರಕ್ಷಣೆಯಿದ್ದರೂ ಅದೂ ಅರಬರ ಹೊಡೆತದಿಂದ ಧ್ವಂಸವಾಗುತ್ತಿದೆ. ಇಡೀ ಜಗತ್ತಿನ ಕ್ರೈಸ್ತ ಧರ್ಮದ ಮೂಲಬುಗ್ಗೆಯಂತಿರುವ ಜೆರುಸಲೇಮಿನ ಮಧ್ಯ ಸ್ಥಳ—ಕ್ರೈಸ್ತ ಸ್ವಾಮಿಯನ್ನು ಹೂತ ಹಾಗೂ ಆತ ಪುನರುತ್ಥಾನಗೊಂಡ ಸ್ಥಳದಲ್ಲಿ ಕಟ್ಟಲ್ಪಟ್ಟಿರುವ ಪವಿತ್ರ ಇಗರ್ಜಿಯ—ಸುತ್ತಲೂ ಯುದ್ಧಜ್ವಾಲೆಯು ನಾಲಿಗೆ ಚಾಚಹತ್ತಿದೆ; ರಕ್ತ ಪ್ರವಾಹ ಹರಿಯಹತ್ತಿದೆ. ಜೆರುಸಲೇಮ್ ಕೇಂದ್ರಕ್ಕೆ ಐದು ಮೈಲು ದೂರದ ಬೆತ್ಲೆಹೇಮು ಈಜಿಪ್ಟ್ ಸೇನೆಗಳ ಕರಗತವಾಯಿತೆಂದು ತಿಳಿದು ಬಂದಿದೆ. ಇಸ್ರಾಯೇಲಿನ ರಾಜಧಾನಿ ಟೆಲ್ ಅವೀವನ್ನು ವಶಪಡಿಸಿಕೊಳ್ಳಲಾಗುವ ಆಯಕಟ್ಟಿನ ಸ್ಥಳದತ್ತ ಒಂದೆಡೆಯಿಂದ ಮಿಕ್ಕ ಅರಬ್ ರಾಷ್ಟ್ರಗಳ ಸೇನೆಗಳು ಧಾವಿಸುತ್ತಿರುವಾಗ ಇನ್ನೊಂದೆಡೆಯಿಂದ ಅದೇ ಸ್ಥಳಕ್ಕೆ ಈಜಿಪ್ಟಿನ ಪ್ರಬಲ ಸೇನೆಗಳು ಮುಂದೊತ್ತುತ್ತಿವೆ. ಇವೆರಡೂ ಅಲ್ಲಿ ಗೊಣಸುಗೂಡಿದಾಗ ಪೆಲೆಸ್ಟೈನ್ ಸಮರದ ಅದೃಷ್ಟ ನಿರ್ಣಾಯಕ ಮಹಾ ಹೋರಾಟವು ಟೆಲ್ ಅವೀವ್ ರಣರಂಗದಲ್ಲಿ ನಡೆಯುವ ನಿರೀಕ್ಷೆಯಿದೆ. ಚಾಣಾಕ್ಷರಾದ ಯೆಹೂದಿಗಳು ಇದಕ್ಕಾಗಿ ತಮ್ಮ ಮೂಲ ಬಲ ಮತ್ತು ಉಪಕರಣಗಳನ್ನು ಕಾಯ್ದಿಟ್ಟುಕೊಂಡು ಅಣಿಯಾಗಿದ್ದಾರೆ. ಒಂದು ವಾರದ ಪೆಲೆಸ್ಟೈನ್ ಸಂಗ್ರಾಮದಲ್ಲಿ ಯಾವ ಕಡೆಯೂ ವಿಜಯಿಯಾಗಿಲ್ಲವಾದರೂ ಅರಬರು ಎಲ್ಲಾ ವಿಧಾನಗಳಲ್ಲೂ ಮೇಲ್ಗೈಯಾಗಿದ್ದಾರೆಂದೂ, ಆದರೆ ಅತ್ಯಂತ ಜಾಗರೂಕತೆಯಿಂದ ಮುಂದೊತ್ತುತ್ತಿದ್ದಾರೆಂದೂ ಊಹಿಸಲೆಡೆಯಿದೆ.

ಅಮೇರಿಕ-ರಶ್ಯಾ ವಿವಾದ

ಇತ್ತ ಜಗತ್ತಿನ ವಿವಾದರಂಗದಲ್ಲಿ ಅತಿ ಮುಖ್ಯವಾಗಿರುವ ರಶ್ಯಾ—ಅಮೇರಿಕ ಭಿನ್ನಾಭಿಪ್ರಾಯಗಳು ಒಂದಲ್ಲೊಂದು ಕಾರಣದಿಂದ ಗಡಿಮೀರಿ ಬೆಳೆಯುತ್ತಲೇ ಹೋಗಿವೆ. ಒಂದು ಆಕಸ್ಮಿಕವಾಗಿ ಮುಂದೆಬಂದ ರಶ್ಯಾ-ಅಮೇರಿಕ ಸಂಧಾನ ಮಾತುಕತೆಯ ಸೂಚನೆ ಕೂಡಾ ವೈಷಮ್ಯವನ್ನು ಪುಷ್ಟೀಕರಿಸುವ ಕುತರ್ಕವಾಗಿ ಪರಿಣಮಿಸಿರುವುದು ಶೋಚನೀಯವಿದೆ. ರಾಮ ಮೂರ್ತಿ ನಿರ್ಮಾಣಕ್ಕಾರಂಭಿಸಿದರೆ ರಾವಣ ಮೂರ್ತಿಯಾಗುತ್ತಾ ಹೋಯಿತೆಂಬಂತೆ ಈ ಸಂಧಾನ ಸೂಚನೆಯ ಗತಿಯಾಗಿದೆ! ಪ್ರಥಮತಃ ಅಮೇರಿಕದ ರಾಯಭಾರಿ ಸ್ಮಿತ್ತರು ಶಾಂತಿ ಸೂಚನೆ ಮುಂದಿಟ್ಟಾಗ ಅದಕ್ಕೆ ರಶ್ಯದ ವಿದೇಶ ಮಂತ್ರಿ ಮೊಲಟೊವರು ಉತ್ತರ ಕೊಟ್ಟರು. ಅದು ಅಸಮಾಧಾನಕರವೆಂದು ಅಮೇರಿಕವು ತಿರಸ್ಕರಿಸಿದಾಗ ಅಮೇರಿಕದ ಪ್ರಗತಿಶೀಲ ನಾಯಕರಾಗೂ ಮುಂದಿನ ಅಧ್ಯಕ್ಷತೆಯ ಹುರಿಯಾಳು ಹೆನ್ರಿವೆಲ್ಲಾಸರು ಕೆಲವು ಶಾಂತಿ ಶರ್ತಗಳನ್ನು ನಮೂದಿಸಿ ಸ್ಟಾಲಿನರಿಗೊಂದು ಬಹಿರಂಗ ಪತ್ರ ಬರೆದರು. ಇದನ್ನು ಉತ್ತರಿಸುತ್ತಾ, ರಶ್ಯದ ನಾಯಕ ಮಾರ್ಶಲ್ ಸ್ಟಾಲಿನರು, ವೆಲ್ಲಾಸರ ಸೂಚನೆಗಳು ವಿಧಾಯಕ ರೀತಿಯವುಗಳೆಂದೂ ಚರ್ಚಾಸ್ಪದವಾದವುಗಳೆಂದೂ ಅಂಗೀಕಾರ ಸೂಚಿಸಿ, ಇವುಗಳನ್ನಾಧರಿಸಿ ಎರಡು ರಾಷ್ಟ್ರಗಳು ಸಂಧಾನ ಮಾತುಕತೆಗಿಳಿಯಬಹುದೆನ್ನುತ್ತಾ ಸೂಚನೆಗಳನ್ನು ಮುಂದೆ ಮಾಡಿದ್ದರು. ಸ್ಟಾಲಿನರ ಸೂಚನೆಗೆ ಅಮೇರಿಕದ ಗೃಹಖಾತೆಯ ಉತ್ತರವಾಗಿ ಕಾರ್ಯದರ್ಶಿ ಜೋರ್ಜ್ ಮಾರ್ಶಲರು ಈ ಸಂಬಂಧದ ಸಂಧಾನ ಮಾತುಕತೆಗಳ ಬಿಕ್ಕಟ್ಟಿಗೆ ರಶ್ಯವೇ ಕಾರಣವೆಂದು ಆರೋಪಿಸಿದ್ದಾರೆ. "ಜಗತ್ತಿಗೀಗ ಬೇಕಾಗಿರುವುದೆಂದರೆ ರಶ್ಯವು ವಿಧಾಯಕ ಹಾಗೂ ಚಿಕಿತ್ಸಾತ್ಮಕ ಧೋರಣೆ ವಹಿಸಬೇಕಾದದ್ದು. ವಿಶೇಷತಃ ಜರ್ಮನಿ, ಆಸ್ಟ್ರಿಯಾ ಮತ್ತು ಕೊರಿಯಾದಂತಹ ಸ್ಥಳಗಳಲ್ಲಿ ರಶ್ಯದ ಈ ಧೋರಣೆಯ ಆವಶ್ಯಕತೆಯಿದೆ" ಎಂದಿದ್ದಾರೆ. ಅಮೇರಿಕವು ತನ್ನಲ್ಲಿ ರಶಿಯನ್ನರಿಗೆ ಕೊಟ್ಟಿರುವಂತಹ ಸ್ವಾತಂತ್ರ್ಯವನ್ನೇ ರಶ್ಯವು ತನ್ನಲ್ಲಿರುವ ಅಮೇರಿಕನ್ನರಿಗೆ ಕೊಡಲಿ, ಎಂದೂ ಜೋರ್ಜ್ ಮಾರ್ಶಲರು ಕೇಳಿಕೊಂಡಿದ್ದರು. ಈಗ ರಶ್ಯವು ಈ ಆರೋಪಗಳನ್ನೆಲ್ಲಾ ಮರಳಿ ಅಮೇರಿಕದ ಮುಖದ ಮೇಲೆಯೇ ಚೆಲ್ಲಿದೆ. ಜಾಗತಿಕ ಸಂಘರ್ಷದ ಬಿಕ್ಕಟ್ಟಿಗೆ—ಶಸ್ತ್ರಾಸ್ತ್ರ, ಅಣುಶಕ್ತಿ, ಜರ್ಮನಿ ಮತ್ತು ಜಪಾನುಗಳ ಸಂಬಂಧದ ವಿದೇಶ ಮಂತ್ರಿಗಳ ಸಮ್ಮೇಲನಗಳ ನಿಷ್ಫಲತೆಗೆ—ಕೊರಿಯಾ ಸ್ವಾತಂತ್ರ್ಯ ತಡವಾದುದಕ್ಕೆ—ಅಮೇರಿಕದ ಧೋರಣೆಯೇ ಕಾರಣವೆಂದು ರಶ್ಯದ ಅಧಿಕಾರೀ ವಾರ್ತಾವಾಹಕ ಸಂಸ್ಥೆಯು ಸವಿವರವಾದ ಆಪಾದನಾ ಪಟ್ಟಿಯನ್ನು ಪ್ರಕಟಿಸಿದೆ. ಈ ರೀತಿ ಶಾಂತಿ ಸೂಚನೆಯಾಗಿ ಜನ್ಮಗೊಂಡುದು ಆರೋಪಾವಳಿಯಾಗಿ ಬೆಳೆಯಹತ್ತಿದೆ. ಮುಂದೆ ಹೇಗೋ!

ಉಡುಪಿ

ಮುಖ್ಯ ಸೂಚಕ ಸಭೆ—ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು ಇದೇ ತಾ 19ರಲ್ಲು ಶ್ರೀ ಬಾಳ್ಕಟ್ಟುಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ನಿಷ್ಠಾವಂತ ಕಾಂಗ್ರೆಸ್ ಮುಂದಾಳು ಶ್ರೀ ಸಾಂತ್ಯಾರು ಅನಂತಪದ್ಮನಾಭ ಭಟ್ಟರ ನಿಧನದ ನಿಮಿತ್ತವಾಗಿ ದುಃಖ ಪ್ರದರ್ಶಿಸಿತು. ಕೋಟ್ಯಂತರವನ್ನು ನಿಲ್ಲಿಸುವ ಮದ್ರಾಸು ಸರಕಾರವು ತಕ್ಕ ಕಾರ್ಯವನ್ನು ಕೈಕೊಳ್ಳಬೇಕೆನ್ನುವ, ಶ್ರೀ ಸಿ. ರಾಜಗೋಪಾಲಾಚಾರ್ಯರು ಗವರ್ನರ್ ಜನರಲರಾಗಿ ಚುನಾಯಿಸಲ್ಪಟ್ಟುದಕ್ಕೆ ಅವರನ್ನು ಅಭಿನಂದಿಸುವ ನಿರ್ಣಯಗಳೂ ಆದುವು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳು, ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಠೇವಣಿಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳಿಗೆ ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

The New Karnataka Provident Insurance Company, Limited

UDIPI (South Kenara)

has pleasure in informing the Shareholders and also the public that the Company has been registered in accordance with the Insuarnce Act 1938. *The Company will commence Insurance business very shortly.*

K. Shiva Rao, *Mg.* Director.
B. B. Shetty, Advocate, Chairman.

ದಿ ನ್ಯೂ ಕರ್ನಾಟಕ ಪ್ರಾವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಉಡುಪಿ.

ಈ ಸಂಸ್ಥೆಯು 1938ನೆಯ ವಿಮಾ ಕಾನೂನಿನಂತೆ ತಾ. 17—5—48ರಲ್ಲಿ ರಿಜಿಸ್ಟ್ರ ಮಾಡಲ್ಪಟ್ಟು ವಿಮಾ ಕಾರ್ಯ ಮಾಡುವರೆ ಸರ್ಟಿಫಿಕೇಟು ಪಡೆದಿರುತ್ತದೆಂದು ತಿಳಿಸುವರೆ ಆತ್ಮಾನಂದವಾಗುತ್ತದೆ. ಸಧ್ಯದಲ್ಲೇ ಕಂಪೆನಿಯು ವಿಮಾ ವ್ಯವಹಾರವನ್ನು ಪ್ರಾರಂಭಿಸಲಿರುವುದು.

ಕೆ. ಶಿವರಾವ್, ಮೆ. ಡೈರೆಕ್ಟರ್.
ಬಿ. ಬಿ. ಶೆಟ್ಟಿ, ಎಡ್ವೊಕೇಟ್, ಚೆಯರ್‌ಮ್ಯಾನ್

ಭಕ್ತಿಗೆ ಮೆಚ್ಚಿದ ಭಗವಂತನು ಬಡವ ಒಕ್ಕಲಿಗನ ... ರೆದುರು ಹುಚ್ಚು ಹುಚ್ಚಾಗಿ ಕುಣಿಯುವನೆಂದು ... ರವರ ಪತೇಗೆ ಸಾರಿದ ಸಂತನೊಬ್ಬನ ಸರಸ ಕಥೆ.

ತಾ. 21—5—1948ರಿಂದ 2ನೇ ವಾರ

ಭಕ್ತ ರಾಮದಾಸ (ಕನ್ನಡದಲ್ಲಿ)

ಮಹಾತ್ಮಾ ... ತಯಾರಿಕೆ ...
... ನಟನಟಿಯರು ಪಾತ್ರವಹಿಸಿ ಕನ್ನಡಕ್ಕೆ ಕೀರ್ತಿ ... ಸುಮತಿ, ... ರಾಘವೇಂದ್ರ ರಾವ್, ... ಮೊದಲಾದವರು

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.



Approved firm by the Govt. of Mysore Certified by the Agent of the Govt. of Cylone & Indian.

ದಕ್ಷಿಣ ಕನ್ನಡ

ಸಾಣೂರು–ಡಿಸ್ಟ್ರಿಕ್ಟ ಬೋರ್ಡು ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾ 15 5 49ರಲ್ಲಿ, ಶ್ರೀ ಕೈಯ್ಯೂರ ಶಂಭು ಶೆಟ್ಟಿ, ವಕೀಲ್ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶಾಲಾ ವರದಿ ವಾಚನವು ಶ್ರೀ ಕೆ. ...ದಣ್ಣ ಶೆಟ್ಟರಿಂದ ಓದಲ್ಪಟ್ಟು ಸಭಿಕರ ಭಾಷಣಗಳಾಗಿ, ಅಧ್ಯಕ್ಷರಿಂದ ಮಕ್ಕಳಿಗೆ ಬಹುಮಾನ ಹಂಚಿದ ನಂತರ, ಪೆರ್ಣ ಸತ್ಯನಾರಾಯಣ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಸಿ. ಕೃಷ್ಣ ಶಾಸ್ತ್ರಿ ಎಂ.ಎ. ಬಿ. ಟಿ. ಇವರು 'ಇಂದಿನ ಕರ್ತವ್ಯ' ಎಂಬುದರ ಕುರಿತು ಸುದೀರ್ಘ ಭಾಷಣ ಮಾಡಿದ ತರುವಾಯ, ಈ ಶಾಲೆಯು ಒಂದು ಹಯರ್ ಎಲಿಮೆಂಟರಿ ಶಾಲೆಯಾಗಿ ತ್ವರೆಯಲ್ಲಿ ಮಾರ್ಪಡುವಂತೆ ಗ್ರಾಮಸ್ಥರೂ ಸರಕಾರವೂ ಕೆಲಸ ನಿರ್ವಹಿಸಬೇಕೆಂದು ಕೇಳಿಕೊಂಡರು.

ಕಾಂತಾವರ–ತಾ 16-5-48ರಲ್ಲಿ ಕಾಂತಾವರ ಬೇಸಿಕ್ ಟ್ರೈನಿಂಗ್ ಶಾಲಾ ಹೊಸ ಕಟ್ಟಡದ ಪ್ರವೇಶೋತ್ಸವವು ಮಂಗಳೂರ್ ವಕೀಲ್ ಶ್ರೀ ಟಿ. ನರ್ಸಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು.

ದ. ಕ. ಜಿಲ್ಲಾ ತರುಣ ಸಮಾಜವಾದೀ ಸಂಘದ ಪ್ರಥಮ ಸಮ್ಮೇಳನವು –ಕುಂದಾಪುರದಲ್ಲಿ ಇದೇ ತಾ. 22-23ರಲ್ಲಿ ಕಲ್ಯಾಣ ಸಾರಸ್ವತ್ಯ ನಗರದಲ್ಲಿ ಶ್ರೀ ಎಂ. ಗಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಎರಡು ದಿನಗಳಲ್ಲೂ ಪ್ರಭಾತಫೇರಿ, ಧ್ವಜವಂದನೆ, ವಿಷಯ ನಿರೂಪಕ ಸಭೆಗಳು ಜರಗಿದುವಲ್ಲದೆ ಸಂಘದ ನಿಯಮನಿಬಂಧನೆಗಳು ತಯಾರಾದುವು. ತಾ 22ರಲ್ಲಿ ಅಪರಾಹ್ನ ಪುರ ಮೆರವಣಿಗೆಯಾಗಿ ಬಹಿರಂಗ ಅಧಿವೇಶನ ಸೇರಿತು. ಪ್ರಾರ್ಥನೆ, ಶ್ರೀ ಕೆ. ಶ್ರೀನಿವಾಸ ಉಪಾಧ್ಯರಿಂದ ಸ್ವಾಗತ ಭಾಷಣವಾದ ಮೇಲೆ, ಶ್ರೀ ಎಂ. ವಿ. ಅಧಿಕಾರಿಗಳು ದೇಶದ ಸ್ಥಿತಿಗತಿ, ಕಾಂಗ್ರೆಸಿನ ಮುಂದಣಾವೀ ಧೋರಣೆ, ತರುಣ ಸಮಾಜವಾದಿಗಳ ಕರ್ತವ್ಯ ಇತ್ಯಾದಿಗಳನ್ನು ವಿವರಿಸಿ ಅಧ್ಯಕ್ಷ ಭಾಷಣವಿತ್ತರು. ಶ್ರೀ ಜಗನ್ನಾಥ ಮಾಡ್ಲಕಟ್ಟೆಯವರು ಸಂದೇಶಗಳ ವಾಚನಮಾಡಿದರು. ಆ ಮೇಲೆ ಗಾಂಧಿಜಿಯ ಮರಣಕ್ಕಾಗಿ ದುಃಖಸೂಚನೆ— ಕಾಶ್ಮೀರದ ಜನತಾ ಹೋರಾಟಕ್ಕೆ ಸಹಾನುಭೂತಿ— ಕಾಂಗ್ರೆಸಿನಿಂದ ಹೊರಬೀಳುವಂತೆ ತರುಣ ಸಮಾಜವಾದಿಗಳಿಗೆ ಕರೆ— ಏಕತಂತ್ರ ಕರ್ನಾಟಕದಲ್ಲಿ ನ್ಯಾಯಾಂಗದ... ಪ್ರಮುಖರನ್ನಾಗಿ ಇಡುವ ಪ್ರಯತ್ನದ ನಿಷೇಧ— ಕಮ್ಯೂನಿಸ್ಟ ಪಕ್ಷದ ಅತ್ಯಾಚಾರಗಳ ಖಂಡನೆ - ರಾಷ್ಟ್ರಸೇವಾದಳಕ್ಕೆ ಬಿದ್ದ ಬಹಿಷ್ಕಾರದ ಖಂಡನೆ ಮತ್ತದನ್ನು ಹಿಂತೆಗೆದುಕೊಳ್ಳುವಂತೆ ವಿಜ್ಞಾಪನೆ— ಸರಕಾರದ ಆಹಾರ ಧೋರಣೆಯ ಖಂಡನೆ ಮತ್ತಿಂದಿನ ದುಃಸ್ಥಿತಿ ನಿವಾರಣೆಗೆ ಸೂಚನೆಗಳು— ಹೈದರಾಬಾದ್ ಸರಕಾರದ ತೀವ್ರ ಖಂಡನೆ ಮತ್ತಲ್ಲಿ ಕೂಡಲೇ ಹೋರಾಟಹೂಡಬೇಕೆಂಬ ಸೂಚನೆ— ಜಾತೀಯತೆಯ ನಿಷೇಧ ಮತ್ತದರ ನಿವಾರಣೆಗಾಗಿ ಪ್ರಚಾರ ವಿಧಾನಗಳು. ಜೂಜು ಜುಗಾರಿ ಪಶುಬಲಿ, ಜಾತೀವಾರು ಸಂಘಸಂಸ್ಥೆಗಳ ನಿಷೇಧ—ಕಾಂಗ್ರೆಸು ರೈತ ಕೂಲಿಕಾರರಿಗೆ ಕೊಟ್ಟ ಮಾತಿನಂತೆ ನಡೆದಿಲ್ಲವಾದ್ದರಿಂದ ಕೆಲಸಗಾರರ ರಾಜ್ಯಸ್ಥಾಪನೆಗಾಗಿ ಸತತ ದುಡಿತ —ಇತ್ಯಾದಿ ನಿರ್ಣಯಗಳು ಮಂಜೂರಾದುವು. ಶ್ರೀ ನಾಪಡರೇ ಮೊದಲಾದವರ ಭಾಷಣಗಳಿದ್ದುವು. ಅಧ್ಯಕ್ಷರ ಮುಕ್ತಾಯ ಭಾಷಣ, ಧನ್ಯವಾದಗಳಾಗಿ 'ಸಮಾಜವಾದ' ಎಂಬ ನಾಟಕವು ಅಭಿನಯಿಸಲ್ಪಟ್ಟಿತು. ದ. ಕ. ತರುಣ ಸಮಾಜವಾದೀ ಸಂಘದ ಅಧಿಕಾರೀ ವರ್ಗವು ಚುನಾಯಿಸಲ್ಪಟ್ಟಿದೆ.

ಪಡುಬಿದ್ರೆ—ಅಖಿಲಭಾರತ ಚರಖಾ ಸಂಘದ ಮಂತ್ರಿಗಳಾದ ಶ್ರೀ ಕೃಷ್ಣದಾಸ ಗಾಂಧಿಯವರು ಪತ್ನೀ ಸಮೇತರಾಗಿ ಇದೇ ತಾ. ೨೨ರಲ್ಲು ಸಂಜೆ ಪಡುಬಿದ್ರೆಗೆ ಆಗಮಿಸಿ ಅಲ್ಲಿಯ ನೂಲುವ ಮತ್ತು ಖಾದೀ ಚಟುವಟಿಕೆಗಳನ್ನು ಪರಿಶೀಲಿಸಿದರು. ಕೆಲವು ಉತ್ತರೋಕ್ತಿಗಳನ್ನಾಡಿದರು. ಶ್ರೀ ನ ಳಾ ಪ ಎಚ್ ನಾರಾಯಣರಾವ್ ಮತ್ತು ವಡವಿಯವರು ಸಹ ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಕೆ. ಕರಿಯಣ್ಣ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಮೂಡಬಿದ್ರೆ—ತಾ. ೨೩-೫-೪೮ರಲು ಸಾನಿಟರಿ ಮಾ ಸ್ಕೂಲು ಬೋರ್ಡು ಮತ್ತು ಪೇಪರ್ ಮಿಲ್ಸಿನ ಪ್ರಾರಂಭೋತ್ಸವವು ಶಾ- ಯು. ಪಿ. ಮಲ್ಯ, ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು.

ಪುನಃ ಶ್ರೀ ಎಸ್ ಎನ್ ಹೊಳ್ಳರ ಬಂಧನ? —ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಮುಖಂಡರಾದ ಶ್ರೀ ಎಸ್. ಎನ್. ಹೊಳ್ಳರು ಇದೇ ತಾ 20ರಲ್ಲು ಜೆಪ್ಪಿನಲ್ಲಿ ಸೆರೆಹಿಡಿಯಲ್ಪಟ್ಟು ಮರುದಿನ ಬೆಳಗ್ಗೆ ಮ್ಯಾಲಾಗಾಡಿಯಲ್ಲಿ ವೆಲ್ಲೂರಿಗೆ ಪೋಲೀಸ್ ಪಹರೆಯೊಂದಿಗೆ ಕೊಂಡೊಯ್ಯುವಾಗ ಮಂಜೇಶ್ವರ ಸ್ಟೇಶನಿನಲ್ಲಿ ರೈಲು ನಿಂತೊಡನೆ ಜನರ ಗುಂಪೊಂದು ಪೋಲೀಸರ ಮೇಲೆ ಬಿದ್ದು ಅವರನ್ನು ಹೊಡೆಯಿತೆಂದೂ ಶ್ರೀ ಹೊಳ್ಳರು ರೈಲಿನಿಂದ ತಪ್ಪಿಸಿಕೊಂಡರೆಂದೂ ಮರುದಿನ ಮಂಜೇಶ್ವರದ ನೆರೆಗ್ರಾಮದಲ್ಲಿ ಶ್ರೀ ಹೊಳ್ಳರನ್ನು ಪುನಃ ದಸ್ತಗಿರಿ ಮಾಡಲಾಗಿದೆಎಂದೂ ಗಾಯಗೊಂಡ ಪೋಲೀಸರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ ತಿಳಿದುಬರುತ್ತದೆ. ಮರು ದಸ್ತಗಿರಿಯಾಗಿಲ್ಲವೆಂದು ಪುನಃ ವಾರ್ತೆ.

ಅಮೃತಾಂಜನ, ತಲೆನೋವನ್ನು, ಶಿರೋವೇದನೆ, ಉಳುಕು ಶೀತ, ಕೆಮ್ಮು, ಹಲ್ಲು ವೇದನೆಗಳು ಎದೆನೋವು, ಗಾಯಗಳು ಬಾತುಕೊಳ್ಳುವುದು, ಹೀಗೆ ವಿಷ ಜಂತುಗಳ ಕಡಿತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

REGD.

ಔಷಧ ಶಾಲೆಗಳಲ್ಲಿ ಮತ್ತು ಸಕಲ ವರ್ತಕರಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಲಾಡಿಸಿ ಶುಚಿಪಡಿಸುವ

ಹಲ್ಲು ಪುಡಿ

ಒಂದು ಕೊಳವೆ ಕಟ್ಟಿ 1ಕ್ಕೆ 0 1 0

ಏಜಂಟರಿಗೆ ಭಾರೀ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಕಿ ಲಿಮಿಟೆಡ್,

ಕಾಸರಗೋಡು, ದ. ಇಂಡಿಯಾ.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಸುಗಳನ್ನು ಉಪಯೋಗಿಸಿದರೆ ಪದೇ ಪದೇ ಋತುಸ್ರಾವವಾಗುವುದು ಸಕಲೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಜಂಟಿಗೆ ಖಾತ್ರಿ ಗುಣವಾಗಿದೆ. ಪೆಲ್: ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ.೬/- [ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, DB. (N. J.)
Tellygange CALCUTTA

ಸ್ಟಾಕಿಸ್ಟರು. ಶರಾಕಂಪನಿ, ಮಂಗಳೂರು

WANTED

Applications are invited from candidates possessing the following qualifications for appointment as teachers in Board Ele· Schools under the South Kanara Dt· Board·

(1) Secondary Grade trained teacher's certificates·

(2) Higher Ele-grade trained teacher's certificates· (Urdu, Kannada & Malayalam)

The application should contain the following information·

1· Father's name, 2 Community, 3· Date of brith, 4· Place of permanent residence, 5· Educational qualifications and the number and date of Teacher's certificates, 6· Date of completion of certifiate, 7 Previous experience as teacher·

Each application should be accompanied by a Treasury or money order receipt for annas four only being the prescribed application fee·

Applications should reach the Special Officer, Dt· Board, South Kanara before 15-6-1948·

S K. District Board Office, Mangalore d/ 21 5-1948.

(Sd) **M. Sundar Rao.**
FOR SPECIAL OFFICER

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೋ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಯಂ ಆರ್. ಭಟ್, (ಆರ್ಟಿಸ್ಟ್)

ಶ್ರೀ ದುರ್ಗಾ ಭವನ, ಮುಲ್ಕಿ. ವ್ಯವಸ್ಥಾಪಕ.

NEO ROYAL CAFE,

Boarding & Lodging,

Santhekatte, UDIPI.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ· ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಶ್ ಸಂಗ್ರಿ ಬರಹಕ್ಕೆ ರೋಗಿಗಳಿಗೆ ಅಗ್ಗವಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ, ಬೊಂಬಾಯಿ ಏಜಂಟರು:—ಪ್ರಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸಂಡಾರಿ ಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಮಂಗಳೂರು

ಚೌಕಿದಾರರಿಗೆ ಮತ್ತು ಸಾರ್ವಜನಿಕರಿಗೆ—ಆಹಾರ ಧಾನ್ಯಗಳನ್ನು ಕಳ್ಳಸಂತೆಯಿಂದ ಸಾಗಿಸುವುದನ್ನು ತಪ್ಪಿಸುವುದಕ್ಕಾಗಿ ನಿರ್ಮಿಸಲ್ಪಟ್ಟ ಯಾವುದೇ ಚೌಕಿಯಲ್ಲಿರುವ ಚೌಕಿದಾರರಿಗೆ ಮಾರ್ಗದಲ್ಲಿ ಏನನ್ನಾದರೂ ಅಡ್ಡ ಕಟ್ಟಿ ಅದಾರಿಯಾಗಿ ಹೋಗುವ ವಾಹನಗಳನ್ನು ಮತ್ತು ಪ್ರಯಾಣಿಕರನ್ನು ತನಿಖೆ ಮಾಡುವ ಅಧಿಕಾರವಿದೆ. ಅಡ್ಡ ಕಟ್ಟಿದ ಸ್ಥಳದಲ್ಲಿ ಒಂದು ಎಚ್ಚರಿಕೆಯ ಬೋರ್ಡನ್ನು ತೂಗಾಡಿಸತಕ್ಕದ್ದು ರಾತ್ರಿ ಸಮಯದಲ್ಲಾದರೆ 'ಭಯಸೂಚಕ' ದೀಪವನ್ನಿಡತಕ್ಕದ್ದು. ಸಾರ್ವಜನಿಕರು ತನಿಖೆ ನಡೆಸುವುದಕ್ಕಾಗಿ ವಾಹನಗಳನ್ನು ಚೌಕಿಯ ಸಮೀಪದಲ್ಲಿ ನಿಲ್ಲಿಸಬೇಕಾಗಿ ಜಿಲ್ಲಾಧಿಕಾರಿಗಳು ತಿಳಿಸುತ್ತಾರೆ

ಮದ್ರಾಸು ಸರಕಾರದ ಗೃಹನಿರ್ಮಾಣ ಯೋಜನೆಯನ್ನು ಅಮಲಿಗೆ ತರುವುದಕ್ಕಾಗಿ ಮಂಗಳೂರಲ್ಲಿ ಒಂದು ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆ. ಈ ಸಹಕಾರ ಸಂಘದ ಆಶ್ರಯದಲ್ಲಿ 'ಪದವು ಕೊ-ಒಪರೇಟಿವ್ ಹೌಸ್ ಬಿಲ್ಡಿಂಗ್ ಸ್ಕೀಮ್' ಎಂಬ ಯೋಜನೆಯೊಂದನ್ನು ತಯಾರಿಸಲಾಗಿದೆ. ಯೋಜನೆಯು ಈ ಕೆಳಗಿನಂತಿದೆ.—

ಮಂಗಳೂರು ಮುನಿಸಿಪಾಲಿಟಿಯಿಂದ ಹೊರಗೆ ಪದವು ಗ್ರಾಮದಲ್ಲಿ ೮೦೦ ಎಕ್ರೆ ಭೂಮಿಯನ್ನು ಕೊಂಡುಕೊಳ್ಳುವುದು. ಅಲ್ಲಿಗೆ ಯೋಗ್ಯ ರಸ್ತೆಗಳನ್ನು ಮಾಡಿ ವಿದ್ಯುತ್ ನೀರಾವರಿ ಇತ್ಯಾದಿಗಳ ಸರಬರಾಯಿಯ ವ್ಯವಸ್ಥೆಯಾದ ಮೇಲೆ ಕೊಂಡುಕೊಂಡ ಭೂಮಿಯನ್ನು ಈ ಕೆಳಗಿನಂತೆ ವಿಭಾಗಿಸಲಾಗುವುದು. (೧) ೫೦ ಸೆಂಟ್ಸ್‌ಗಳ ೨೦೦ ತುಂಡುಗಳು (೨) ೨೫ ಸೆಂಟ್‌ಗಳ ೧೨೦೦ ತುಂಡುಗಳು. (೩) ೧೨½ ಸೆಂಟ್‌ಗಳ ೨೪೦೦ ತುಂಡುಗಳು, ಈ ತುಂಡುಗಳನ್ನು ಕ್ರಮವಾಗಿ ಪ್ರತಿಯೊಂದಕ್ಕೆ ರೂ. ೨೫೦೦, ರೂ. ೧೨೫೦ ರೂ ೬೨೫ರಂತೆ ಸಾರ್ವಜನಿಕರಿಗೆ ವಿಕ್ರಯಿಸಲಾಗುವುದು. ಸದಸ್ಯರು ಸಹಕಾರ ಸಂಘದಲ್ಲಿ ಪಾಲುಗಳನ್ನು ತೆಗೆದುಕೊಳ್ಳಬೇಕು. ಒಂದು ಪಾಲಿಗೆ ರೂ ೫/- ಪ್ರತಿಯೊಬ್ಬನು ಪಟ್ಟಿಯಂತೆ ೨೦೦ ಕಡಿಮೆಯೆಂದರೆ ೫ ಪಾಲುಗಳನ್ನು ತೆಗೆದುಕೊಳ್ಳಬಹುದು. ಸಹಕಾರ ಸಂಘವು ಮನೆ ಕಟ್ಟುವುದಕ್ಕಾಗಿ ರೂ ೧೦,೦೦೦ಗಳವರೆಗೆ ಲೋನುಗಳನ್ನು ಕೊಡುವುದು. ಈ ಲೋನುಗಳನ್ನು ತಿಂಗಳ ಕಂತಿನಲ್ಲಿ ೨೦ ವರ್ಷಗಳಲ್ಲಿ ಸಲಾಯಿಸಬೇಕು. ಈ ಸಹಕಾರ ಸಂಘದ ಆಶ್ರಯದಲ್ಲಿ ಪದವಿನಲ್ಲಿಯೇ ಸಂತೆ, ಶಾಲೆ, ಆಸ್ಪತ್ರೆ ಇತ್ಯಾದಿಗಳನ್ನು ಕಟ್ಟಿಸಲಾಗುವುದು. ಅಲ್ಲಿಗೆ ಪದವಿನಿಂದ ಹಂಪನಕಟ್ಟೆಯವರೆಗೆ ಒಂದು ಮೋಟರ್ ಸಾರಿಗೆಯನ್ನೂ ಏರ್ಪಡಿಸಲಾಗುವುದು.

ವಸ್ತ್ರ ಸ್ವಾವಲಂಬನೆ—ಅಖಿಲ ಭಾರತ ಚರಖ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೃಷ್ಣದಾಸ ಗಾಂಧಿಯವರು ದಿನಾಂಕ ೨೦ರಂದು ಬೆಳಗ್ಗೆ ಮಂಗಳೂರಿಗೆ ಮಡಿಕೇರಿಯಿಂದ ಬಂದಿಳಿದರು. ಅವರು ಆ ದಿನ ಅಪರಾಹ್ನ ಮೂಲ್ಕಿ, ಪಡುಬಿದ್ರಿ, ಕಟಪಾಡಿ, ಉಡುಪಿ, ಮಣಿಪಾಲ, ಓರಿಯಡ್ಕ ಮುಂತಾದ ಖಾದಿ ಕೇಂದ್ರಗಳನ್ನು ನೋಡಿಕೊಂಡು ರಾತ್ರಿ ಮಂಗಳೂರಿಗೆ ಬಂದರು. ಮರುದಿನ ೧೧ ಗಂಟೆಗೆ ಮಂಗಳೂರಿನ ಬೆಸೆಂಟ್ ಮಂದಿರದಲ್ಲಿ ಸೇರಿದ ಖಾದಿ ಕೆಲಸಗಾರರ ಸಭೆಯಲ್ಲಿ ಅಖಿಲ ಭಾರತ ಚರಖ ಸಂಘದ ಹೊಸ ಧೋರಣೆಯನ್ನು ವಿವರಿಸಿದರು. ಈ ಸಭೆಗೆ ಡಾ। ಯು. ಪಿ. ಮಲ್ಯ, ಎಂ. ಎಲ್. ಎ, ಫಿರ್ಕಾ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಾಬುಶೆಟ್ಟಿಯವರು, ಕೇರಳ ಚರಖ ಸಂಘದ ಕಾರ್ಯದರ್ಶಿ ಆರ್. ಶ್ರೀನಿವಾಸನ್, ಮೊದಲಾದವರು ಬಂದಿದ್ದರು ಶ್ರೀ ಕೃಷ್ಣದಾಸಗಾಂಧಿಯವರು ಹಿಂದಿಯಲ್ಲಿ ಮಾತಾಡಿದುದನ್ನು ಕರ್ನಾಟಕ ಪ್ರಾಂತಿಕ ಚರಖ ಸಂಘದ ಕಾರ್ಯದರ್ಶಿ ಶ್ರೀ ರಾಮಚಂದ್ರ ವಡವಿಯವರು ಕನ್ನಡಕ್ಕೆ ಭಾಷಾಂತರಿಸಿದರು 'ಇಷ್ಟು ಕಾಲವಾದರೂ ಜನ ಖಾದಿ ತತ್ವ ತಿಳಿದಿಲ್ಲ. ಖಾದಿ ಮಾರಾಟದ ವಸ್ತುವಲ್ಲ. ಅದು ಉತ್ಪತ್ತಿಯಾದಲ್ಲೇ ಮಾರಾಟವಾಗುವ ವಸ್ತು. ಹಾಗೆಂದು ಬೇರೆಡೆಗೊಯ್ಯಬಾರದೆಂಬ ನಿಯಮವಿಲ್ಲ ಆದರೆ ವಸ್ತ್ರ ಸ್ವಾವಲಂಬನವೇ ಖಾದಿಯ ಗುರಿ. ಇದಕ್ಕಾಗಿ ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ವಿಕೇಂದ್ರೀಕರಣವಾಗುತ್ತಿದೆ. ಹೊಸ ಸಮಾಜರಚನೆಯೇ ಖಾದಿಯ ಗುರಿಯಾದ್ದರಿಂದ ಪ್ರತಿಯೊಬ್ಬ ಖಾದಿ ಪ್ರೇಮಿಯೂ ನೂತು ಧರಿಸಬೇಕೆಂದರಲ್ಲದೆ ನೂಲು ತೆಗೆಯುದವರಿಗೂ ಖಾದಿ ಕೊಡುವಂತೆ ಚರಖ ಸಂಘವು ಪ್ರೋತ್ಸಾಹಿಸುತ್ತದೆಂದರು. ಶ್ರೀ ವಡವಿಯವರ ಭಾಷಣವಾದ ಮೇಲೆ ಶ್ರೀ ಎಚ್. ನಾರಾಯಣರಾಯರು ಅಭಿನಂದಿಸಿದರು.

೧೬ನೆಯ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ—ಇದೇ ಜೂನ್ ತಿಂಗಳ ೩೦ ಮತ್ತು ೩೧ನೆಯ ದಿನ ೧೬ನೇ ನಿ. ಕ. ಆ. ಸಮ್ಮೇಳನವೂ ಸಿದ್ಧೌಷಧಿ, ಮೂಲಿಕಾ, ಉಪಕರಣಾದಿಗಳ ಪ್ರದರ್ಶನವೂ ಬೆಳಗಾವಿಯಲ್ಲಿ ನಡೆಯುವುದು. ಸ್ಥಳಗಳಿಗೆಲ್ಲಾ ವಿದ್ಯುದ್ದೀಪದ ವ್ಯವಸ್ಥೆ ಮಾಡಲಾಗಿದೆ ಸಮ್ಮೇಲನ ಮತ್ತು ಪ್ರದರ್ಶನಕ್ಕಾಗಿ ಸಕಲ ಸಿದ್ಧತೆಗಳೂ ನಡೆದಿವೆ. ಜನಗಳ ಮುಖ್ಯ ವಿಹಾರ ಸ್ಥಳದಲ್ಲಿಯೇ "ಲಲಿತ ಕಲಾ ಪ್ರದರ್ಶನ" "ಶಿಶು ಸಂಗೋಪಪಾರ" ಮತ್ತು ಆಯುರ್ವೇದ ಸಮ್ಮೇಲನವೂ ಪ್ರದರ್ಶನವೂ ನಡೆಯುವುದರಿಂದ ಮೇ ೨೮ರಿಂದ ಜೂನ್ ೧ನೆಯ ದಿನದವರೆಗೆ ಪ್ರದರ್ಶನಕ್ಕೆ ಅವಕಾಶ ಕೊಡಲಾಗಿದೆ ಎಲ್ಲವನ್ನೂ ಬಹು ಯಶಸ್ವಿಯಾಗಿ ನಡೆಸಲು ಸ್ವಾಗತ ಸಮಿತಿಯವರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸ್ವಾಸ್ಥ್ಯ ದಂತ ಸೌಂದರ್ಯ

जयहिंद दंतमंजन

ಜಯಹಿಂದ ದಂತಮಂಜನ

कर्नाटक आयुर्वेद विद्यापीठ फार्मसी बेलगांव.

ಎಲ್ಲ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮಂಗಳೂರು ಊಟ ... ಬ್ರಾಹ್ಮಣ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಅತ್ಯಂತ ಉಪಯುಕ್ತ ಪುಸ್ತಕ

ವ್ಯವಹಾರ ಜ್ಞಾನದರ್ಪಣ

ಶ್ರೀ. ಯು. ಜಿ. ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ

ಲೋಕ ವ್ಯವಹಾರ ಬೋಧಿನಿ

ಬೆಲೆ ರೂ 1—8—0 ಮಾತ್ರ

ನಿಜವಾದ ಜನತಾ ಸಾಹಿತ್ಯ—

ಶ್ರೀ ಎಂ. ವಿ ಹೆಗ್ಡೇರ

ಸ್ವರಾಜ್ಯ ವಿಜಯ

ಯಕ್ಷಗಾನ ಪದ್ಯ-ಅರ್ಥಗಳಲ್ಲಿ ಸ್ವರಾಜ್ಯ ವಿಜಯದ ಕತೆ

ಬೆಲೆ: 0 8 0

ಪ್ರತಿಗಳು ಸಿಗುವ ಸ್ಥಳಗಳು:-(1) ಕನ್ನಡ ಬುಕ್ ಕಂಪೆನಿ, ಮಂಗಳೂರು;(2) ಎಲ್. ಎಸ್, ಮಯ್ಯ, ಪುತ್ತೂರು; (3) ನವಭಾರತ ಬುಕ್ ಡಿಪ್ಪೋ, ಉಡುಪಿ; (4) ಪಾಪಂಜೆ ಗುರುರಾವ್, ಉಡುಪಿ; (5) ಯು. ಆರ್. ಶೆಣೈ & ಸನ್ಸ್, ಮಂಗಳೂರು.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು,

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಜಾಹೀರು

ಎಗ್ರಿಕಲ್ಚರಿಸ್ಟ್ಸ್ ಲೋನ್ಸ್ ಆಕ್ಟು ಮತ್ತು ಲೇಂಡ್ ಇಂಪ್ರೂವ್‌ಮೆಂಟ್ ಆಕ್ಟು ಪ್ರಕಾರ ಈ ಕೆಳಗಿನ ಕಾಮಗಾರೀ ಬಗ್ಗೆ ಸರಕಾರದವರು ಸಾಲ ಕೊಡತಿರುವರು. ಸಾಲ ಪಡಕೊಳ್ಳುವವರು ತಕ್ಕುದಾದ ಜವಾಬ್ದಾರೀ ಕೊಡಬೇಕು. ಮತ್ತು ಸರ್ಕಾರದವರು ನಿಶ್ಚಯಿಸಿದ ಬಡ್ಡಿ ಸಹಾ ಕೊಡಬೇಕು.

ಕಾಮಗಾರಿಕೆಗಳು

1. ಬಾವಿ ಅಥವಾ ಕೆರೆಗಳನ್ನು ತೋಡಿಸಲಿಕ್ಕೆ ಮತ್ತು ಅದರ ದುರಸ್ತಿ ಬಗ್ಗೆ.
2. ಬಂಜರು ಸ್ಥಳಗಳನ್ನು ದುರಸ್ತಿ ಪಡಿಸಿ ಕೃಷಿಗೆ ಯೋಗ್ಯವಾಗಿ ಮಾಡುವಂತಾದ್ದು.
3. ಜಮೀನನ್ನು, ನೆರೆಯಿಂದಲೂ, ಹೊಳೆ ಮುಂತಾದುವುಗಳಿಂದಲೂ ಕೊರೆದು ಹೋಗದಂತೆ ರಕ್ಷಿಸಲು ಬೇಕಾದ ವ್ಯವಸ್ಥೆ ಮಾಡಲಿಕ್ಕೆ.
4. ಕೃಷಿ ಬಗ್ಗೆ ಜಾನುವಾರುಗಳನ್ನು ಕೊಂಡುಕೊಳ್ಳಲಿಕ್ಕೆ, ಮುಂತಾದುವುಗಳು.

ಸಾಲಗಳನ್ನು ಕಂತು ಮೂಲಕ ವಸೂಲು ಮಾಡಲಾಗುವುದು. ಸಾಲ ಬೇಕಾದವರು ಈ ಆಫೀಸಿಗಾಗಲೀ ತಮ್ಮ ತಮ್ಮ ತಾಲೋಕು ತಹಶಿಲ್ದಾರರಿಗಾಗಲೀ ಅರ್ಜಿ ಮಾಡಿ ಹೆಚ್ಚಿನ ಮಾಹಿತಿಯನ್ನು ಪಡಕೊಳ್ಳಬಹುದು.

(Sd) S. Koteeswara Rao,
Revenue Divisional Officer,
Coondapur

ಒಳ್ಳೆ ಮನೆ ಬಾಡಿಗೆಗೆ ಇದೆ.

ಉಡುಪಿ ಪೇಟೆಯ ನಡುವೆ-ಗಾಳಿ ಬೆಳಕು ವಿದ್ಯುದ್ದೀಪಗಳ ಸೌಕರ್ಯವುಳ್ಳ - ನೀರಿನ ಅನುಕೂಲತೆಯುಳ್ಳ ಮನೆಯೊಂದು ಬಾಡಿಗೆಗೆ ದೊರೆಯುತ್ತದೆ. ವಾಸಯೋಗ್ಯ ಸ್ಥಳಗಳಿಗಿದ್ದು ತಿಂಗಳಿಗೆ 25ರಂತೆ ಬಾಡಿಗೆ ತೆರಲು ಶಕ್ತರಾದವರು ಸಮಕ್ಷಮ ಭೇಟಿಯಾಗಬಹುದು. ನೋಡಲು ಭೇಟಿಗೆ ನೋಡಲು ಮನ್ನಣೆ.

Udipi, "R"
24-5-48 C/o Navayuga, Udipi

ಸ್ವೀಕಾರ-ವಿಮರ್ಶೆ

'ಧರ್ಮಬೋಧ' ಮಾಸಪತ್ರಿಕೆ. ಸಂಪುಟ ೧. ೧ನೇ ಮತ್ತು ೨ನೇ ಸಂಚಿಕೆಗಳು. ಸಂಪಾದಕರು ಶ್ರೀ ಬಿ ಶ್ರೀನಿವಾಸ ಭಟ್ಟ, ಶಿರೋಮಣಿ, ಪ್ರಕಾಶಕರು ಶ್ರೀ ಕಾಪು ಸುಬ್ರಾಯ ಪುರಾಣಿಕ, ಶಿರೋಮಣಿ. ಡೆಮಿ ೧/೪ ಪ್ರಮಾಣದ ៤೨ ಪುಟಗಳ ಸಂಚಿಕೆ. ವಾರ್ಷಿಕ ಚಂದಾ ರೂ. ೩. ಪತ್ತೆ—ಧರ್ಮಬೋಧ ಕಾರ್ಯಾಲಯ, ಸಂಸ್ಕೃತ ಕಾಲೇಜು, ಉಡುಪಿ. ಉಡುಪಿ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲಾ ಪ್ರಾಕ್ತನ ವಿದ್ಯಾರ್ಥಿ ಸಂಘದ ವತಿಯಿಂದ ಪ್ರತಿ ಸಂಕ್ರಮಣ ಪ್ರಕಟವಾಗುವ ಧಾರ್ಮಿಕ ವಿಷಯ ವೈಶಿಷ್ಟ್ಯವುಳ್ಳ ಮಾಸಪತ್ರಿಕೆ. ಉಡುಪಿಯಂತಹ ಪ್ರಸಿದ್ಧ ಧಾರ್ಮಿಕ ಕ್ಷೇತ್ರದಿಂದ 'ಧರ್ಮಬೋಧ'ದಂತಹ ಧಾರ್ಮಿಕ ವಿಚಾರಗಳಿಗೆ ಮೀಸಲಾದ ಒಂದು ಪತ್ರಿಕೆಯು ಪ್ರಕಟವಾಗುವದು ಸಮಂಜಸ. ಅಷ್ಟಮಠಗಳೇ ಕರ್ತವ್ಯಸಾಮಾನ್ಯ ದೃಷ್ಟಿಯಿಂದ ಇಂತಹ ವಿಷಯದಲ್ಲಿ ಸಂಘಟಿತರಾಗಿ ವಿಶಾಲ ಕ್ಷೇತ್ರದಲ್ಲಿ ಧರ್ಮಪ್ರಚಾರಕ್ಕೆ ಸುಲಭಸಾಧ್ಯವಾದ ಪತ್ರಿಕಾ ಪ್ರಕಟನೆಯ ಕಾರ್ಯವನ್ನು ಎಂದೋ ಕೈಗೊಳ್ಳಬೇಕಾಗಿತ್ತು. ಇಂದಾದರೂ ಅವರ ಪ್ರಧಾನ ಪೋಷಕತ್ವದಿಂದ ನಡೆಯುತ್ತಿರುವ ಸಂಸ್ಕೃತ ಮಹಾಪಾಠಶಾಲೆಯ ಪ್ರಾಕ್ತನ ವಿದ್ಯಾರ್ಥಿ ಸಂಘವು ಅದರ ಈಗಿನ ಅಧ್ಯಕ್ಷರಾದ ಧರ್ಮಾಭಿಮಾನಿಗಳೂ ಉದಾರಿಗಳೂ ಆಗಿರುವ ಶ್ರೀ ಕಲ್ಮಂಜೆ ವ್ಯಾಸಾಚಾರ್ಯರ ಉತ್ತೇಜನದಿಂದಲೂ ಪಾಠಶಾಲೆಯ ಹಲವು ಸಮರ್ಥ ಪಂಡಿತರ ಸಂಪಾದಕ ಮಂಡಳಿಯ ಉತ್ಸಾಹದಿಂದಲೂ ಹೊರಟಿರುವ 'ಧರ್ಮಬೋಧ'ವನ್ನು ಅಷ್ಟಮಠಗಳವರು ತಮ್ಮದೆಂದೇ ಭಾವಿಸಿ ಧಾರಾಳವಾಗಿ ನೆರವಿನ ಕೈ ನೀಡಿ ಪರಿಪೋಷಿಸಿ ಅದು ನೂರಾರು ಪುಟಗಳ ಆದರ್ಶ ಧಾರ್ಮಿಕ ಪತ್ರಿಕೆಯೆಂದೆನಿಸುವಂತೆ ಸಗಿದರೆ ಅವರಿಗೂ ಕೀರ್ತಿ, ಉಡುಪಿಗೂ ಕೀರ್ತಿ. ಧರ್ಮಾಭಿಮಾನಿಗಳೆಲ್ಲ ಈ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸುವುದೂ ಪ್ರಾಕ್ತನ ವಿದ್ಯಾರ್ಥಿವರ್ಗಕ್ಕೆ ಸೇರಿದವರು ಎಲ್ಲೇ ಇರಲಿ, ಸಂಪಾದಕ ಮಂಡಳಿಯ ನೆರವಿನ ಕರೆಗೆ ಓಗೊಟ್ಟು ಉದಾರ ಸಹಾಯವನ್ನೀಯುವುದೂ ಕರ್ತವ್ಯವಿದೆ.

'ಸಂಘಟನೆಯ ಗುಟ್ಟು' ಲೇಖಕರು— ಡಾ. ನಾ. ಸು ಹರ್ಡೀಕರ್. ಕ್ರೌನ್ ೧/೮ ಪ್ರಮಾಣದ ៤೨ ಪುಟಗಳ ಪುಸ್ತಕ. ಬೆಲೆ ೧೨ ಆಣೆ. ಪ್ರಕಾಶಕರು ರಂ. ಬಾ. ಮನಗೋಳಿ, ಹಾಜಿಬಾಪೇಟೆ, ಹುಬ್ಬಳ್ಳಿ. ಹಿಂದುಸ್ಥಾನೀ ಸೇವಾದಲದ ಜನಕರೂ ನೇತಾರರೂ ಆಗಿರುವ ಶ್ರೀ ಹರ್ಡೀಕರರ ಹೆಸರನ್ನು ಕೇಳದವರು ವಿರಳ. ಸ್ವಯಂಸೇವಕ ದಳದ ಶಿಕ್ಷಕ ಶಿಬಿರಗಳನ್ನು ನಡೆಯಿಸಿದ ಅವರ ಅನುಭವವು ದೇಶದ ಸರ್ವ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸೇವಾದಲ ನಿರ್ಮಾಣವಾಗಬೇಕೆಂಬ ಇಂದಿನ ದಿನದಲ್ಲಿ ಅಂತಹ ಸೇವಾದಲ ಶಿಬಿರವನ್ನು ನಡೆಯಿಸುವವರಿಗೂ ಅದರಲ್ಲಿ ಶಿಕ್ಷಣ ಹೊಂದುವವರಿಗೂ ಅತ್ಯವಶ್ಯ ಬೇಕು ಎಂಬಲೇ ಅವರು ಸ್ವಯಂಸೇವಕರಿಗೂ ಶಿಬಿರದ ನೇತಾರರಿಗೂ ಉಪಯುಕ್ತವಾಗುವಂತೆ ಸಂಘಟನೆಯ ಗುಟ್ಟನ್ನು ಕೂಲಂಕುಷ ವಿವರಕ್ಕೆ ವಿಶೇಷ ಪ್ರಾಧಾನ್ಯವಿತ್ತು ಈ ಪುಸ್ತಕದಲ್ಲಿ ಬರೆದಿದ್ದಾರೆ. ಶ್ರೀ ಹರ್ಡೀಕರರು ದೀರ್ಘಕಾಲದ ಕಾರ್ಯಾನುಭವದಿಂದ ಕೊಟ್ಟಿರುವ ಪ್ರತಿಯೊಂದು ಸೂಚನೆ ಸಲಹೆಯೂ ಸೇವಾದಲ ನಡೆಯಿಸುವವರಿಗೂ ಸ್ವಯಂಸೇವಕರಿಗೆ ಅಮೂಲ್ಯವಿದೆ. ಆದುದರಿಂದ ಸೇವಾದಲಕ್ಕೆ ಸಂಬಂಧಪಟ್ಟವರು ಸೇವಾದಲವನ್ನು ನಡೆಯಿಸಬೇಕೆಂದಿರುವವರು, ಈ ಪುಸ್ತಕವನ್ನು ಕೈಪಿಡಿ (guide)ಯಾಗಿ ಉಪಯೋಗಿಸಿದರೆ ಸಂಘಟನೆಯ ಯಶಸ್ವಿಯೂ ಪ್ರಯೋಜನಕಾರಿಯೂ ಆಗುವುದಕ್ಕೆ ವಿಶೇಷ ಸಹಕಾರಿಯಾದೀತೆಂಬುದರಲ್ಲಿ ಸಂಶಯವಿಲ್ಲ.

—"ಕೊರಡ್ಕಲ್"

ಪ್ರಕಟಣೆ

ಮಾನ್ಯ ಮದ್ರಾಸು ಸರಕಾರದವರು ತಮ್ಮ G. O. Ms. No. 604, ರೆವಿನ್ಯೂ ತಾರೀಕು 18-3-48ನೇ ಹುಕುಮಿನಲ್ಲಿ ಈ ಕೆಳಗೆ ನಮೂದಿಸಿದ ಕೆರೆಗಳ ದುರಸ್ತಿಯ ಎಸ್ಟಿಮೇಟನ್ನು ಮಂಜೂರು ಮಾಡಿರುತ್ತಾರೆ.

ನಮ್ಮ ಜಿಲ್ಲೆಯ ಇನ್ನಿತರ ಕಡೆಗಳಲ್ಲಿ ಹೀಗೆ ಕೆರೆಗಳನ್ನು ದುರಸ್ತಿ ಮಾಡಿದ್ದಲ್ಲಿ ಅದರ ಅಯಕಟ್ಟುದಾರರು, ಅಂದರೆ ಕೆರೆಯನ್ನು ದುರುಸ್ತಿ ಮಾಡುವುದರಿಂದ ಲಾಭ ಹೊಂದುವವರು ತಾವಾಗಿಯೇ ಈ ಕಾಮಗಾರೀ ಬಗ್ಗೆ ಸರಕಾರಕ್ಕೆ ವಂತಿಗೆ ರೂಪದಿಂದ ತಮ್ಮ ಯಥಾನಶಕ್ತಿ ಧನ ಸಹಾಯ ಮಾಡುವರಾಗಿ ವಾಗ್ದಾನ ಮಾಡಿರುತ್ತಾರೆ. ಹೀಗೆ ವಾಗ್ದಾನ ಮಾಡಿದ ಹಣ ಅಂದಾಜು ವೆಚ್ಚದ ಕೆಲವಂಶವಾಗಿರುತ್ತದೆ.

ಹೀಗೆಯೇ ದಿನಿಜಿನ ಈ ಕೆಳಗಿನ ಕೆರೆಗಳ ಅಯಕಟ್ಟುದಾರರು, ತಮ್ಮ ಯಥಾನಶಕ್ತಿ ಹಣವನ್ನು ವಂತಿಗೆ ರೂಪದಿಂದ ಸರಕಾರಕ್ಕೆ ಕೆರಾತ್ರೇವಾಗ ವಾಗ್ದಾನ ಮಾಡಿದ್ದಲ್ಲಿ ಕೆಲಸವು ಕೂಡಲೆ ಮಂಜೂರು ಮಾಡಲ್ಪಟ್ಟು, ಪ್ರಾರಂಭಿಸಲ್ಪಡುತ್ತದೆ. ಹೀಗೆ ಸರಕಾರದವರು ಕೆಲಸವನ್ನು ಪೂರ್ತಿ ಮಾಡಿದ್ದಲ್ಲಿ ಅಯಕಟ್ಟುದಾರರು ಅದರ ಮುಂದಿನ ಯೋಗ್ಯವಾದ ನಿಗಾವಣೆಯನ್ನು ಮಾಡಲಿಕ್ಕೆ ಜವಾಬ್ದಾರರಾಗುತ್ತಾರೆ. ಈ ಕೆರೆಗಳ ಅಯಕಟ್ಟುದಾರರು ತಾರೀಕು 31-5-48ರ ವಳಗೆ ತಮ್ಮ ವಂತಿಗೆಯ ಅರ್ಜಿಯನ್ನು ತಮ್ಮ ತಹಶಿಲ್ದಾರರಿಗೆ ಕಳಿಸಬೇಕು.

ಉಡುಪಿ ತಾಲ್ಲೂಕು

ಗ್ರಾಮ	ಸರ್ವೆನಂಬ್ರ	ಅಂದಾಜು ವೆಚ್ಚ ರೂ.
ಮೂಡೂರು	39-8	1000
,,	69-1	2000
,,	263-4	1000
ಗೀಳಿಯಾರ	202-6	4000
ಐರೋಡಿ	24-6	3000
,,	102-8	4000
,,	72-10	5000
ಬಾಳಕುದ್ರು	12-2A	1000
,,	74-17	1000
,,	78-15	3000
ಹೊಸಾಳ	22-0	1500
,,	9/0	1000
,,	48-2	1000
ಕಚೂರು	13-0	1000
ಹನೆಹಳ್ಳಿ	112-0	5000
ಹೆರಾಡಿ	91-1	2000
ಹಿರಿಯಾಣ	77-1	3000
ಹೆರೂರು	81-19	1000
ಅಲೆವೂರು	48-1B	2000
,,	92-0	3000
ಮೂಡು ತೋನ್ಸೆ	183-0	1000
ಬೆಳ್ಳೆ	4-40	1500
,,	45-2	1500
,,	135-3	2000
ಶಿರ್ವ	233-7A	3000
,,	367-7	1000
,,	192-42	1500
ಬಡಾ	55-17	5000
,,	102-0	1500
ಯೆಲ್ಲೂರು	430-3	5000
ಕಲ್ಯಾ ರು	180-1	1000
,,	168-4	2000
ಪಿಳಾರ	262-2	1000
ಸಾಂತೂರು	136-0	1500

ಕಾರ್ಕಳ ತಾಲೂಕು

ಗ್ರಾಮ	ಸರ್ವೆನಂಬ್ರ	ಅಂದಾಜು ವೆಚ್ಚ ರೂ.
ನೆಲ್ಲೂರು	18/1	1000
ಪಳ್ಳಿ	33/1 B1	2000
,,	66-0	1000

ಈ ಕೆರೆಗಳಲ್ಲದೆ ಬೇರೆ ಯಾವುದಾದರೂ ಸಾಗುವಳಿಗೆ ಉಪಯೋಗವಾಗುವ ಸಾರ್ವಜನಿಕ ಕೆರೆಯ ಬಗ್ಗೆ ತಮ್ಮ ಯಥಾನಶಕ್ತಿ ಧನ ಸಹಾಯ ಮಾಡಲಿಕ್ಕೆ ಯಾರಾದರೂ ಸಿದ್ಧರಿದ್ದರೆ, ಸರ್ಕಾರದವರು ಸದ್ರಿ ಕೆರೆಯ ದುರುಸ್ತಿ ಕೈಕೊಳ್ಳುವವರಿದ್ದಾರೆ.

S. Koteeswara Rao.
Revenue Divisional officer
Coondapur.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಬಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಹುಜು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯ, ವದಾ ಸ್ತ್ರೀಯರ ಬಿಳಿಯಂಪು ಸೆರಗು ಹೋಗುತ್ತಿದ್ದರೆ, ಕೊಲಿಕ ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ರೋಗಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊರಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ, ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ, ಕೆರಿಯಪ್ಪ, ಹಾವೇರಿ ಬ್ಯಾಡಗಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಚ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಎಲ್ಲಾ ಜಿಲ್ಲೆಗಳ ನಾಡುಗಳಲ್ಲಿಯೂ ದೊರೆಯುತ್ತದೆ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ವಾತಿಶ್ವರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

ಎರಡಾಣೆ

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

3-6-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೩೯

NAVAYUGA WEEKLY, UDIPI.

FOUNDER: **Hon'ble Mr. A. B. SHETTY**, Health Minister, Govt. of Madras.

Vol. 28
No. 39

ಈ ಮಾತು-ಕೃತಿಗಳು

ಅಮೇರಿಕದ ಗೃಹ ಕಾರ್ಯದರ್ಶಿ ಜೋರ್ಜ್ ಮಾರ್ಶಲರು ಮೇ 28ನೇ ರಾತ್ರಿ ರಶ್ಯಕ್ಕೊಂದು ಆಗ್ರಹದ ವಿಜ್ಞಾಪನೆ ಮಾಡಿಕೊಂಡು ಹೇಳಿದರು: "ಒಂದು ಜಾಗತಿಕ ವ್ಯವಸ್ಥೆಗಾಗಿ ಯಥಾರ್ಥ ಸಂಧಾನ ನಡೆಸುವ ಅಮೇರಿಕದ ಘನ ಗಂಭೀರ ಪ್ರಯತ್ನಗಳ ಕುರಿತು ಉದ್ದೇಶಪೂರ್ವಕ ಅಪಪ್ರಚಾರ ನಡೆಸುವುದನ್ನು ನಿಲ್ಲಿಸಿರಿ. ರಶ್ಯಾ ಸರಕಾರವು ಹೀಗೆ ಮಾಡಿದರೆ ಅದೊಂದು ನೂತನ ಅಂತರ್ರಾಷ್ಟ್ರೀಯ ವಾತಾವರಣ ನಿರ್ಮಿಸಿದಂತಾಗುವುದು; ಮತ್ತು ಸಂಬಂಧವಾದ ಯಾವ ಅನಾದರವೂ ನನ್ನ ಸರಕಾರದಲ್ಲಿಲ್ಲವೆಂಬುದನ್ನದು ಕಾಣಬಹುದು."

ಹೆಸರು, ವಿಳಾಸಗಳನ್ನಷ್ಟೇ ಬದಲಾಯಿಸಿ ಈ ಮಾತುಗಳನ್ನೇ ಈ ಮಾತುಗಳ ಉತ್ತರವಾಗಿ ರಶ್ಯವು ಅಮೇರಿಕಕ್ಕೆ ಕಳುಹಿಸಲು ಸಾಧ್ಯವಿದೆ!

○○

"ಜಾಪಾನಿನ ಯುದ್ಧ ಕಾಲದ ಪ್ರಧಾನಿ ಜನರಲ್ ಟೋಜೋನ ಮೇಲೆ ಮರಣದಂಡನೆ ಜ್ಯಾರಿಯಾಗುವ ಕಾಲದಲ್ಲಿ-ಜಪಾನ್ ಸೋತು ಶರಣಾದ ವರ್ಧಂತಿ ಮುಹೂರ್ತದಲ್ಲಿ-ಬರುವ ಆಗೋಸ್ತು 15 ರಲ್ಲಿ ಜಾಪಾನಿನ ಚಕ್ರವರ್ತಿ ಹೀರೋಹಿಟೋರು ತನ್ನ ಚಕ್ರವರ್ತಿ ಸ್ಥಾನಕ್ಕೆ ರಾಜೀನಾಮೆ ಕೊಡುವುದು ಖಂಡಿತ"-ಕಳೆದ ಮೇ ತಾ 6ರಲ್ಲಿ ಚಕ್ರವರ್ತಿಗಳು ಜನರಲ್ ಮೇಕರ್ಥರರಿಗೆ ಭೇಟಿ ಕೊಟ್ಟಂದಿನಿಂದ ಜಾಪಾನ್ ರಾಜಧಾನಿ ಟೋಕಿಯೋದಲ್ಲಿ ಬಲವಾದ ವಾರ್ತೆ.

ದೇವಾಂಶವೆಂದು ಜಾಪಾನರೆಲ್ಲರಿಂದ ಪೂಜಿಸಲ್ಪಡುತಿದ್ದ ಹೀರೋಹಿಟೋನ ಕುರಿತೇ ಇಂತಹ ವಾರ್ತೆ ಹಬ್ಬಿದ ಮೇಲೆ ರಷ್ಯಕಾರರ ಖುದಾಸಮಾನ ನಿರ್ಝಾಮರು ಟರ್ಕಿಗೋಡಲಿರುವರೆಂದು ಸುದ್ದಿ ಹುಟ್ಟಿದುದೇನೂ ಹೆಚ್ಚಲ್ಲ.

○○

"ಚಕ್ರವರ್ತಿ ಹೀರೋಹಿಟೋ ಪದತ್ಯಾಗ ಮಾಡುವರೆಂದು ವಿದೇಶ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಾರ್ತೆಗಳು ಅಬದ್ಧವಿವೆ. ನಾವು ಇಂತಹ ಪ್ರಶ್ನೆಗಳ ಕುರಿತು ತರ್ಕಿಸುವ ಸ್ಥಿತಿಯಲ್ಲಿಲ್ಲವಾದರೂ, ಜಪಾನಿನ ಪುನರ್ರಚನೆಗಾಗಿ ಚಕ್ರವರ್ತಿಗಳು ತನ್ನ ವರ್ಚಸ್ಸನ್ನೆಲ್ಲಾ ಉಪಯೋಗಿಸಲಿರುವರೆಂದು ನಾವೀ ಸಂದರ್ಭದಲ್ಲಿ ಹೇಳಬಲ್ಲೆವು"--ಜಾಪಾನೀ ಚಕ್ರವರ್ತಿ ಗೃಹ ಸಂಬಂಧದ ಓರ್ವ ಮುಖ್ಯ ಅಧಿಕಾರಿಯ ಹೇಳಿಕೆ.

ರಷ್ಯಕಾರ್ ನಾಯಕ ರಾಝ್ವಿಯ ಹೇಳಿಕೆಗಳು ಟೋಕಿಯೋದ ಅರಮನೆಯವರಿಗೂ ಓದಲು ದೊರೆತಿವೆಯೆಂದು ಇದರಿಂದ ಊಹಿಸಬಹುದು.

○○

"ಅರಬರ ಪರವಾಗಿ ಪೆಲೆಸ್ತೈನಿನಲ್ಲಿ ಯುದ್ಧ ಮಾಡಲು ಪಾಕಿಸ್ತಾನದ ರಾಜಧಾನಿ ಕರಾಚಿಯಲ್ಲಿ ಸ್ವಯಂಸೇವಕರ ತರಬೇತಿ ನಡೆಯುತ್ತಿದೆ. ಪಾಕಿಸ್ಥಾನದಲ್ಲಿ ಸಾವುದೀ ಅರೇಬಿಯದ ಏಜಂಟನಾಗಿರುವ ಹಾಜಿ ಯೂಸುಫ್ ಜಾಸಿಮುಲ್ ಮರ್ಝೀದನು ಅರಬರ ಕುರಿತು ಪಾಕಿಸ್ತಾನ್ ಪ್ರಜೆಗಳು ಪ್ರದರ್ಶಿಸುತ್ತಿರುವ ಸಹಾನುಭೂತಿಗಾಗಿ ಕೃತಜ್ಞತೆ ಸಲ್ಲಿಸಿದ್ದಾನೆ"--ಕರಾಚಿ ವಾರ್ತೆ.

ಹಿಂದುಸ್ಥಾನದಲ್ಲುಳಿದಿರುವ ಪಾಕಿಸ್ತಾನದ ಯುದ್ಧಕ್ಕಾಗಿ ಇಂತಹ ತರಬೇತಿ ನಡೆಯದೆ ಪಾಲಿಸ್ತಾನ್ ಸಮರಕ್ಕಾಗಿಯೇ ನಡೆದಿರುವುದರಿಂದ ಹೈದರಾಬಾದಿನಲ್ಲಿರುವ ಭಾರತದ ರಾಯಭಾರಿ ಶ್ರೀ. ಕೆ. ಎಮ್. ಮುನ್ಶಿಗಳೂ ಪಾಕಿಸ್ತಾನಿಗಳಿಗೆ ಕೃತಜ್ಞತೆ ಸಲ್ಲಿಸುವರೆಂದು ನಿರೀಕ್ಷಿಸಬಹುದು.

○○

ಲಂಡನಿಗೆ ಹೋಗಿರುವ ಹಿಂದೀ ವಾರ್ತಾ ಪತ್ರಿಕೆಗಳ ಕಾರ್ಯನಿರ್ವಾಹಕ ಸಮಿತಿಯ ಶಿಷ್ಟಮಂಡಲಿಗೆ ಅಲ್ಲಿತ್ತ ಸತ್ಕಾರಕೂಟದಲ್ಲಿ ಲಂಡನಿನ ಪ್ರಸಿದ್ಧ ಪತ್ರಿಕಾ ಪಾಲಕರಲ್ಲೊಬ್ಬರಾದ ಲೋರ್ಡ್ ಕೇಟನರು ಹಿಂದೀ ಪತ್ರಿಕೋದ್ಯಮಕ್ಕಿರುವ ಭವ್ಯ ಭವಿಷ್ಯವನ್ನೂ, ಆ ಸುವರ್ಣ ಸಂದರ್ಭಗಳನ್ನು ಕೈವಶ ಮಾಡಿಕೊಳ್ಳಬಲ್ಲ ಅದರ ಯೋಗ್ಯತೆಯನ್ನೂ ಕೊಂಡಾಡಿ "ನವಭಾರತ ಮತ್ತದರ ನವರಚನೆಗನುಗುಣವಾಗಿ ನಮ್ಮ-ನಿಮ್ಮೊಳಗಿನ ಸಂಬಂಧವೂ ನವೀಕರಣ ಹೊಂದಬೇಕಾಗಿದೆ" ಎಂದರು.

ಭಾರತ-ಇಂಗ್ಲೆಂಡುಗಳೊಳಗಿನ ಇದುವರೆಗಿನ ಸಂಬಂಧ ಜೀವನದ ಸುಸ್ಮರಣಗಳಾಗಿ ವಿಚಿತ್ರುಸಿದ್ದಿಗಳ ಬ್ರಹ್ಮರಸ್ಫೋಟಂದಿ ಹುಟ್ಟಿರುವಾಗ ಇನ್ನಾ ಸಂಬಂಧವ ನವೀನತೆಯಿಂದ ಯಾವ ನವೀನ ಪಾಕಿಸ್ತಾನ್ ಬ್ರಹ್ಮರ ಜನನವಾಗದೆಯೋ!

○○

"ಡೈಲಿ ಹೆರಾಲ್ಡ್" ಪತ್ರಿಕೆಗೆ 'ಅತಿ ಮುಂಭಾಗದ ಅಪ್ರಬುದ್ಧತೆ' ಎಂಬ ತಲೆನಾಮೆಯಲ್ಲಿ ಲೋಕಪ್ರಸಿದ್ಧ ಇಂಗ್ಲಿಷ್ ನಾಟಕಕಾರ ಜೋರ್ಜ್ ಬರ್ನಾರ್ಡ್ ಶಾರು ಬರೆದುದರಲ್ಲಿ ಉಲ್ಲೇಖಿಸಿದ್ದಾರೆ: "ಬ್ರಿಟಿಷ್ ಕೂಲಿಕಾರ ಪಕ್ಷದ ನಾಯಕರಾದ ಮಿ ಅಟ್ಲಿ ಮತ್ತು ಬೆವಿನರು ಸಮಾತಾವಾದಕ್ಕೆ ದ್ರೋಹ ಮಾಡುತಿದ್ದಾರೆ: ತಮ್ಮ ವಿಚಾರಶೂನ್ಯ ವಾಗ್ಬಾರಿಗಳಿಂದ ಯುರೋಪು ರಾಷ್ಟ್ರಗಳಲ್ಲಿ ತಪ್ಪಭಿಪ್ರಾಯ ನಿರ್ಮಿಸುತಿದ್ದಾರೆ. ತಂಟೇಖೋರರೆಂದರೆ ಅಟ್ಲಿ ಮತ್ತು ಬೆವಿನರೇ"

'ಅದರೆ ಅಟ್ಲಿ, ಬೆವಿನರಂತೆ ಜೆ. ಬಿ ಶಾರಂಥವರೂ ಇದ್ದಾರಾದರೂ ಎಲ್ಲರ ಮಾತು ಕೃತಿಗಳಿಂದಲೂ ಲೋಕದ ತಂಟೇಖೋರತನ ಹೆಚ್ಚುತ್ತಾ ಹೋಗಿದೆ ಹೊರತು ಕಡಿಮೆಯಾದುದು ಕಾಣುವುದಿಲ್ಲ

○○

"ಆಂಧ್ರ ದೇಶ ಮತ್ತು ಹೈದರಾಬಾದಿನ ಗಡಿಯ ಹಳ್ಳಿಗಳ ಕಮ್ಯೂನಿಸ್ಟ ಕಂಟಕಗಳನ್ನು ಕಿತ್ತೊಗೆಯಲು ಸರಕಾರವು ಕೈಕೊಳ್ಳುವ ಪ್ರಯತ್ನಗಳಲ್ಲಿ ಸಹಕರಿಸಿರಿ. ಹೈದರಾಬಾದ್ ಮತ್ತು ಆಂಧ್ರದ ಗಡಿ ವಲಯಗಳ ಗಲಭೆಗಳಿಗೆ ಮುಖ್ಯ ಕಾರಣವೆಂದರೆ ಹೈದರಾಬಾದ್ ಕಮ್ಯೂನಿಸ್ಟರಿಗೆ ಸಹಕಾರಿಯಾಗಿ ಆಂಧ್ರ ಕಮ್ಯೂನಿಸ್ಟ ಪಂಚಮ ದಳದವರು ನಡೆಸಿರುವ ಅತ್ಯಾಚಾರಗಳೇ"- ವಿಜಯವಾಡದಲ್ಲಿ ಭಾಷಣಮಾಡುತ್ತಾ, ಮದ್ರಾಸಿನ ಕಂದಾಯ ಮಂತ್ರಿ ಶ್ರೀ ಕಲಾ ವೆಂಕಟರಾಯರು ತೆಲುಗರಲ್ಲಿ ಮಾಡಿಕೊಂಡ ವಿಜ್ಞಾಪನೆ.

'ಮಲಬಾರಿಗೆ ತಾಗಿರುವ ದಕ್ಷಿಣ ಕನ್ನಡದ ಅರ್ಧ ಭಾಗದ ವರೆಗೆ ಹಬ್ಬಿರುವ ಕಮ್ಯೂನಿಸ್ಟ ಕಂಟಕ ನಿವಾರಣೆಗೆ ದಕ್ಷಿಣ ಕನ್ನಡಿಗರೆಲ್ಲಾ ಸಹಕರಿಸಿರಿ; ಮಲಬಾರಿನ ಕಮ್ಯೂನಿಸ್ಟರನ್ನು ಇಲ್ಲಿಯವರೂ ಅನುಕರಿಸುತ್ತಿರುವುದೇ ಇಲ್ಲಿಯ ಗಲಭೆಗಳಿಗೆ ಮುಖ್ಯ ಕಾರಣ'

○○

"ತಮಿಳುನಾಡಿನ ಏಕಮಾತ್ರ ಸಂಸ್ಥಾನವಾದ ಪುದುಕೋಟೆವು ಅಲ್ಲಿಯ ಜನತೆಯ ಅಭಿಮತ ಪಡೆಯದೆ ಭಾರತದೊಳಗೆ ಸೇರಿಕೊಂಡುದರ ವಿರುದ್ಧವಾಗಿ ಸತ್ಯಾಗ್ರಹವನ್ನು ಕೈಕೊಳ್ಳಬೇಕು"-ಮೇ 27ರಲ್ಲಿ ಪುದುಕೋಟೆದ ಅಲಮಾಲವಾಂ ಎಂಬಲ್ಲಿ ಸೇರಿದ 'ತಮಿಳು ಇಕ್ಕಿಯಾ ಸಂಘಮ್'ದ ನಿರ್ಣಯ.

ಪುದುಕೋಟೆದ ವಿಲೀನಕ್ಕೊಪ್ಪಿಗೆಯಿಲ್ಲದವರು ಅಲ್ಲಿಯೇ ನಿಂತು ಸತ್ಯಾಗ್ರಹ ಹೂಡುವದುತ್ತಮವೋ? ಅಲ್ಲಿಂದ ಸವಾರಿ ಹೊರಡುವುದೇ ವಾಸಿಯೋ?

○○

'ಕಳೆದ ಮಹಾಯುದ್ಧದಲ್ಲಿ ಇಂಗ್ಲೆಂಡು ನಾಶವಾಗುವಂತಿದ್ದರೆ ಕೊನೆಯವರೆಗೂ ಅಲ್ಲೇ ಉಳಿದು ಅದರೊಂದಿಗೆ ಧ್ವಂಸವಾಗಬೇಕೆಂದೇ ರಾಜ ಕುಟುಂಬ ಮತ್ತು ಚರ್ಚಿಲ್ ಸರಕಾರದ ಸಂಕಲ್ಪವಿತ್ತು'- ಇತ್ತೀಚಿಗಿನ ಶೋಧ

ಚರ್ಚಿಲ್ಲರು ಇನ್ನೊಂದು ಯುದ್ಧಕ್ಕಾಗಿ ಹಾತೊರೆಯುತ್ತಿರುವುದು ಈ ಸಂಕಲ್ಪ ಸಿದ್ಧಿಗಾಗಿ?

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,

THE UNITED KARNATAK INSURANCE COMPANY, LIMITED

ಹೈದರಾಬಾದ್ ಘರ್ಷಣೆ ಕೆಂಪು ಕೋಟೆ ವಿಚಾರಣೆ

ಭಾರತ ರಾಜಕೀಯದಲ್ಲಿ ಕಳೆದ ವಾರ ಮತ್ತು ಈ ವರೆಗೂ ಮುಖ್ಯವಾದ ಹಾಗೂ ಉದ್ವೇಗಜನಕವಾದ ಪ್ರಶ್ನೆಯಾಗಿ ಉಳಿದಿರುವುದೆಂದರೆ ಕೆಲಕಾಲದಿಂದ ಈ ಸ್ಥಾನದಲ್ಲಿ ಅಚಲವಾಗಿರುವ ಹೈದರಾಬಾದ್ ಸಮಸ್ಯೆಯೇ. ರಾಜಕೀಯ ದೃಷ್ಟಿಯಲ್ಲಿ ಅಗಣ್ಯವಾದರೂ ಹಿಂದೀಯರ ಮನಸ್ಸನ್ನಾಕರ್ಷಿಸಿರುವ ಮತ್ತು ಸರ್ವರೂ ಆತುರದಿಂದ ನಿರೀಕ್ಷಿಸುವ ಒಂದು ಘಟನೆಯೆಂದರೆ, ಗಾಂಧಿಜೀಯ ಕೊಲೆಯ ಆರೋಪಿಗಳಾದ ಶ್ರೀ ಸಾವರ್ಕರ್, ಗೋಡ್ಸೆ ಮೊದಲಾದ ಒಂಭತ್ತು ಮಂದಿಯ ವಿಚಾರಣೆಯ ಪೀಠಿಕೆಯು ನವದಿಲ್ಲಿಯ ಕೆಂಪು ಕೋಟೆಯಲ್ಲಾಗಿರುವುದು. ಕಾಶ್ಮೀರದ ಕಾಳಗ—ಮಧ್ಯಭಾರತ ಸಂಸ್ಥಾನೀ ಕೂಟಂತನೆ—ಭಾಷಾವಾರು ಪ್ರಾಂತ್ಯರಚನೆಯ ಪ್ರಶ್ನೆ—ಮತ್ತಿತರ ಹಲವು ಸಣ್ಣದೊಡ್ಡ ಆಕಾರ ಭಾರಗಳು ಬೇರೆ ಉಳಿದಿವೆ. ಜಾಗತಿಕ ರಾಜಕೀಯದಲ್ಲಿ ಮುಖ್ಯತಃ ಪೆಲೆಸ್ಟೈನ್ ಕಾಳಗ ಮತ್ತು ಸಂಬಂಧದ ಪ್ರಮುಖ ರಾಷ್ಟ್ರಗಳ ಗತಿವಿನ್ಯಾಸಗಳು ಮುಂಭಾಗದಲ್ಲಿವೆ. ದಕ್ಷಿಣಾಫ್ರಿಕಾ ಚುನಾವಣೆಯಲ್ಲಿ ಜನರಲ್ ಸ್ಮಟ್ಸ್ ಮತ್ತು ಅವರ ಪಕ್ಷಕ್ಕಾದ ಪರಾಭವ—ರಶ್ಯಾ ಅಮೇರಿಕ ವಿವಾದ—ಫಿನ್ಲೆಂಡು ಸರಕಾರದಲ್ಲಿದ್ದ ಬಿಕ್ಕಟ್ಟಿನ ತೀರ್ಮಾನ—ಹೈನಾದ ಹೋರಾಟ—ಇಂಡೋನೇಶಿಯಾ ಮತ್ತಿತರ ಸಮಸ್ಯೆ—ಮುಂತಾದ ಘಟನೆಗಳು ಲೋಕರಂಗದಲ್ಲಿ ಎದ್ದು ಕಾಣುತ್ತಿವೆ.

ಒಟ್ಟಿನ ಮೇಲೆ ಯಾರ ಯಾವ ಧೋರಣೆಯ ಮೇಲೂ, ಯಾವ ರೀತಿನೀತಿ ಸಂಪ್ರದಾಯಗಳ ಮೇಲೂ ವಿಶ್ವಾಸವನ್ನಿಡಲಾಗದ ವಾತಾವರಣವೀಗ ಉಳಿದಿದೆ. ಲೋಕದ ಜನತೆಗೆ ಅಥವಾ ಯಾವುದಾದರೊಂದು ರಾಷ್ಟ್ರದವರಿಗೆ ಯಾವ ಕಾಲದಲ್ಲಿ ಎಂತಹ ಸಂದರ್ಭ ಬರಬಹುದೆಂಬುದನ್ನು ಖಂಡಿತವಾಗಿ ಹೇಳಲಾಗದಂತಹ ಸ್ಥಿತಿ—ಯಾರು ಯಾವ ಉದ್ದೇಶ ಕಟ್ಟಿಕೊಂಡು ಎಂತಹ ಕಾರ್ಯಕ್ಕಿಳಿದಾರು ಎಂಬುದನ್ನು ಸ್ಪಷ್ಟವಾಗಿ ನಿರೀಕ್ಷಿಸಲಾಗದಂತಹ ವರ್ತನೆ—ಇಂದು ಎಲ್ಲಾ ಕಡೆಗಳಲ್ಲೂ, ಎಲ್ಲದರಲ್ಲೂ! ಯಾವುದೂ ಸುರಕ್ಷಿತವಲ್ಲ; ಶಾಶ್ವತವಲ್ಲ; ಮಾನವ ಯೋಗ್ಯ ನ್ಯಾಯನೀತಿಗಳ ಅಸ್ತಿತ್ವವೂ ಎಷ್ಟೋ ಕಡೆ ಕಾಣದೆ ಪರಸ್ಪರ ಮಾತ್ಸರ್ಯ ವಿಷವಾಗಿ ನಿಂತ ದೃಶ್ಯವೇ ಕಣ್ಣಿಗೆ ಬೀಳುತ್ತಿದೆ.

ಹೈದರಾಬಾದ್ ಹಾವಳಿ

ಭಾರತ ಮತ್ತು ಹೈದರಾಬಾದುಗಳೊಳಗಿನ ಸಂಬಂಧದ ಪ್ರಶ್ನೆಯು ಸಮಾಧಾನ, ಸುವಿಕೆ ಮತ್ತು ಸಹನೆಯ ಕೊನೆಯ ಗಡಿಯನ್ನು ತಲ್ಪಿ, ಈಗ 'ಮುಂದೇನು' ಎಂಬ ಕುರಿತಾದ ಹಿಂದೀಯರ ನಿರೀಕ್ಷಣಾ ಶಕ್ತಿಯನ್ನು ಕೂಡಾ ಬರಿದು ಮಾಡಿದೆ. ಇಷ್ಟರೊಳಗೆ ಭಾವೀ ಸಂಬಂಧದ ಒಂದು ನಿರ್ಧಾರವಾಗಿರಬಹುದು. ಹೈದರಾಬಾದಿನ ಪ್ರಧಾನ ಮಂತ್ರಿ ಮಿ: ಲಾಯಿಕ್ ಅಲಿಗಳು ಈ ಬಾರಿ ದಿಲ್ಲಿಗೆ ಬಂದು ಹೋದುದು ದಿಲ್ಲಿಯಲ್ಲಿರುವ ನಿಜಾಮತ್ ಸರಕಾರದ ಏಜಂಟ್ ಜನರಲರ ಆಗ್ರಹದ ಅಪೇಕ್ಷೆಯಿಂದಲ್ಲದೆ, ಪಂಡಿತ ನೆಹರುಗಳ ಆಮಂತ್ರಣದಿಂದಲ್ಲವೆಂದು ತಿಳಿದುಬರುತ್ತದೆ. ಮಿ. ಲಾಯಿಕ್ ಅಲಿಗಳು ದಿಲ್ಲಿಗೆ ಬಂದ ವೇಳೆ ಪಂಡಿತ ನೆಹರುಗಳು ಮುಸ್ಸೋರಿಗೆ ಹೋಗಿ ಸರ್ದಾರ್ ಪಟೇಲರೊಡನೆ ಸಂಭಾಷಿಸಿ ಬಂದುದೂ, ಅವರು ಮರಳಿ ಬರುವ ವರೆಗೆ ಮಿ. ಲಾಯಿಕ್ ಅಲಿಗಳು ದಿಲ್ಲಿಯಲ್ಲಿ ಕಾಯುತ್ತಿದ್ದುದೂ ಹಲವು ಕಟ್ಟು ಕಥೆಗಳಿಗಾಸ್ಪದವಿತ್ತಿದೆ. ನಿಜಸ್ಥಿತಿಯೆಂದರೆ ಪಂಡಿತಜೀಯ ಮುಸ್ಸೋರಿ ಪಯಣವು ಮೂರು ವಾರಗಳ ಮೊದಲೇ ನಿಶ್ಚೈಸಲ್ಪಟ್ಟಿದ್ದಿತು. ಅಲ್ಲಿಯ ಚರ್ಚೆಯಲ್ಲಿ ಹೈದರಾಬಾದಿನ ಪ್ರಶ್ನೆಯು ಮುಖ್ಯವಾಗಿದ್ದರೂ ಇತರ ಸಂಸ್ಥಾನಗಳ ಸಂಬಂಧದ ಹಾಗೂ ಬೇರೆ ವಿಷಯಗಳ ಪರ್ಯಾಲೋಚನೆಗಳೂ 'ಗಾಂಧೀ ಸ್ಮಾರಕ ನಿಧಿ ಸಂಗ್ರಹ'ಸಂಬಂಧದ ಕೆಲಸಗಳೂ ಅಲ್ಲಿ ಆಗಿದ್ದವು. ಪಂಡಿತ ನೆಹರುಗಳ ಜತೆಯಲ್ಲಿ ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗ್, ಸಂಸ್ಥಾನೀ ಖಾತೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್, ಕಾಂಗ್ರೆಸ್ ಅಧ್ಯಕ್ಷ ರಾಜೇಂದ್ರ ಪ್ರಸಾದರಂತಹ ಹೊಣೆ ಹೊತ್ತವರೂ ಮುಸ್ಸೋರಿಯಲ್ಲಿ ಸೇರಿ ಸರ್ದಾರ್ ಪಟೇಲರೊಡನೆ ಗಾಢ ಸಂಭಾಷಣೆ ನಡೆಸಿದ್ದರಿಂದ ಮುಸ್ಸೋರಿಯಲ್ಲಿ ಹೈದರಾಬಾದ್ ಮತ್ತಿತರ ವಿಷಯಗಳ ಸಂಬಂಧವಾಗಿ ಹಿಂದೀ ಸರಕಾರದ ಸ್ಪಷ್ಟ ನಿರ್ಣಯಗಳಾಗಿವೆ ಎಂದೂಹಿಸಬಹುದು. ಪಂಡಿತ ನೆಹರುಗಳು ನವದಿಲ್ಲಿಗೆ ಮರಳಿದೊಡನೆ ಮಿ. ಲಾಯಿಕ್ ಅಲಿಗಳಿಗೆ ಹಿಂದೀ ಸರಕಾರದ ಕನಿಷ್ಠ ಸೂಚನೆಗಳನ್ನು ತಿಳಿಸಿದರು; ಮಿ. ಲಾಯಿಕ್ ಅಲಿ ಅವನ್ನು ಗ್ರಹಿಸಿಕೊಂಡು ಹೈದರಾಬಾದಿಗೆ ಮರಳಿದ್ದಾರೆ.

ಘರ್ಷಣೆಯೇ ಗತಿ!

ಹೈದರಾಬಾದಿನ ರಝಾಕಾರರೇ ಮೊದಲಾದ ಪುಂಡರು ಸಂಸ್ಥಾನದೊಳಗಡೆಯಲ್ಲೂ ಮದ್ರಾಸ್, ಬೊಂಬಾಯಿ ಮಧ್ಯಪ್ರಾಂತ್ಯದ ಗಡಿಗಳಲ್ಲಿಯೂ ನಡೆಸುತ್ತಿರುವ ಅತ್ಯಾಚಾರ—ಪೂರ್ಣ ಪ್ರಜಾ ಪ್ರಭುತ್ವ ಸ್ಥಾಪನೆಯ ಕಂರೋಕ್ಕ ಜಾಹೀರುನಾಮೆ ಹೊರಡಿಸಿ, ಅದರ ಪೂರ್ವಭಾವಿಯಾಗಿ ಕೂಡಲೇ ಮಾಧ್ಯಮವಧಿ ಸರಕಾರ ಸ್ಥಾಪಿಸಬೇಕೆಂಬ ಹಿಂದೀ ಸರಕಾರದ ಸೂಚನೆಗೆ ನಿಜಾಮರ ಸ್ಪಷ್ಟ ನಕಾರ—ಕೊನೆಯ ಮಾತುಕತೆಗಳು ನಡೆದಿರುವಾಗಲೇ ಈ ಕಡೆಯ ರೈಲ್ವೆಗಳು ಹೈದರಾಬಾದು ಗಡಿಯೊಳಗೆ ಬಂದಾಗ ರಝಾಕಾರರು ಧಾಳಿ ನಡೆಯಿಸಿ ಈಗ ಸಶಸ್ತ್ರ ಮಿಲಿಟರಿ ಪಹರೆಯಿಂದಲ್ಲದೆ ಇಲ್ಲಿಯ ರೈಲ್ವೇಗಾಡಿಗಳ ಸಂಚಾರ—ಇತ್ಯಾದಿ ಖಾರಣ ಗಳಿಂದಾಗಿ ಭಾರತ-ಹೈದರಾಬಾದ್ ಒಮ್ಮತವು ಅಸಾಧ್ಯವೆಂಬುದು ಖಚಿತವಾಗಿದೆ. ಇನ್ನು ಮುಂದೆ ಈ ಸಂಧಾನ ಮಾತುಕತೆಯು ಹನುಮನ ಲಾಂಗೂಲವಾಗದಂತೆ ನಿಜಾಮರ ಕೊನೆಯ ಉತ್ತರವನ್ನು ಹಿಡಿದುಕೊಂಡು ಬರುವವನಾರೇ ಇದ್ದರೂ ಆತನು ಪೂರ್ಣಅಧಿಕೃತನಿರಬೇಕೆಂದು ಭಾರತ ಸರಕಾರ ಹೇಳಿದೆ. ಮಿ. ಲಾಯಿಕ್ಅಲಿಗಳು ತಾ. 29ರಲ್ಲಿ ದಿಲ್ಲಿಗೆ ಪುನಃ ಮರಳುವರೆಂದಿದ್ದರೂ ಅವರು ನಿಜಾಮರ, ನಿಜಾಮ್ ಮಂತ್ರಿಮಂಡಲದ ಹಾಗೂ ರಝಾಕಾರರ ಅಭಿಮತ ಸಂಗ್ರಹಿಸುತ್ತಾ ಇನ್ನೂ ಹೈದರಾಬಾದಿನಲ್ಲೇ ಇದ್ದಾರೆ. ಮೊದಲನೆಯದಾಗಿ ಹಿಂದೀ ಕೇಂದ್ರದೊಡನೆ ಜೋಡಣೆ—ಎರಡನೆಯದಾಗಿ ಜವಾಬ್ದಾರೀ ಸರಕಾರ ಸ್ಥಾಪನೆ—ಮೂರನೆಯದಾಗಿ ಜನಮತ ಸಂಗ್ರಹ, ಈ ಮೂರರಲ್ಲಿ ತನಗೆ ಸರಿತೋರಿದ ಯಾವುದನ್ನಾದರೂ ನಿಜಾಮರು ಅಂಗೀಕರಿಸಿದರಾಯಿತೆಂಬುದೇ ಭಾರತ ಸರಕಾರದ ಕನಿಷ್ಠ ಬೇಡಿಕೆಯೆಂದು ತಿಳಿದು ಬರುತ್ತದೆ. ರಝಾಕಾರ್ ರಾಕ್ಷಸದಳದ ಮೂಲ ಸಂಸ್ಥೆಯಾದ ಮಜ್ಲೀಸರ ಇತ್ತೆಹಾದ್ ಇವುಗಳಲ್ಲಾವುದಕ್ಕೂ ಒಪ್ಪುವದಿಲ್ಲವೆಂದು ಪುನಃ ತಿಳಿದು ಬಂದಿದೆ. "ಭಾರತವು ಹೈದರಾಬಾದಿನ ಮೇಲೆ ಬೀಳುವ ಮನಸ್ಸು ಮಾಡುವದೆಂದರೆ ಸಾಯಲು ಮನಸ್ಸು ಮಾಡಿದಂತೆಯೇ ಸರಿ!" ಎಂಬಂತಹ ಅತಿಗರ್ವದ ಖಿಲಾಡೀ ಭಾಷೆಯಲ್ಲೇ ರಝಾಕಾರ್ ನಾಯಕ ರಿಝ್ವಿ ಈಗಲೂ ಆಣಕಿಸುತಿದ್ದಾನೆ. ರಝಾಕಾರರು ಆ ಕಾಲದ ನಾಜಿಗಳ 'ಬಿರುಗಾಳಿ ದಳ'ದ ಮಾದರಿಯಲ್ಲಿ 'ಸಾವು ನಿರೋಧೀ ದಳ'ವೆಂಬ ಅತ್ಯುಗ್ರ ಸೇನಾವಿಭಾಗವೊಂದನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ ಇತ್ತ ಗಡಿ ದಾಟಿ ಬಳ್ಳಾರಿಯೇ ಮೊದಲಾದ ಕಡೆಗಳಿಗೆ ನುಗ್ಗಿ ಒಂದು ಕುರಿಗಳನ್ನು ಕದ್ದುಕೊಳ್ಳುವದರಿಂದಾರಂಭಿಸಿ ಮಕ್ಕಳು ಮಹಿಳೆಯರನ್ನಪಹರಿಸುವ ವರೆಗೂ—ಹಾದಿಯಲ್ಲಿ ಕಟ್ಟೆ ಹಿಂದುಗಳನ್ನು ಹೊಡೆಯುವದರಿಂದಾರಂಭಿಸಿ ಹಿಂದುಗಳ ಗ್ರಾಮಗ್ರಾಮಗಳಲ್ಲಿ ಕೊಲೆ ಕೊಳ್ಳೆ ಸುಲಿಗೆಗಳನ್ನು ನಡೆಸುವ ವರೆಗೂ—ರಝಾಕಾರ್ ಅತ್ಯಾಚಾರ ಹಬ್ಬಿದೆ. ನಿಜಾಮರ ಕೊನೆಯ ಉತ್ತರ ಬರುವುದನ್ನೇ ಭಾರತ ಸರಕಾರವೂ ಅಖಿಲ ಭಾರತೀಯರೂ ಈಗ ಅತ್ಯಾತುರದಿಂದ ನಿರೀಕ್ಷಿಸುತಿದ್ದಾರೆ. ಅಧಿಕೃತವಾಗಿ ಈ ತನಕ ಏನೂ ತಿಳಿದುಬಂದಿಲ್ಲವಾದರೂ ಹಿಂದೀ ಸರಕಾರದ ಶರ್ತಗಳ ರೂಪರೇಷೆಗಳಿಗೆ ನಿಜಾಮರ ಒಪ್ಪಿಗೆಯಿದೆಯೆಂದೂ ಕೆಲವು ಒಳ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ಅವುಗಳನ್ನು ತೀರ್ಮಾನಿಸಿಕೊಳ್ಳಬಹುದೆಂದೂ ಈ ವಾರಾಂತ್ಯದೊಳಗೆ ಭಾರತ—ಹೈದರಾಬಾದು ಒಪ್ಪಂದವಾಗಬಹುದೆಂದೂ ಆಶೆ ನೋಳಿತಿದೆ. ಆದರೆ ಯಾವುದೂ ನಂಬಿಕೆಗರ್ಹವಲ್ಲವೆನ್ನುವದೆ ವಿಧಿಯಿಲ್ಲ.



ಎಲ್ಲ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ
ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

The 1946 Record Business proves the popularity
THE BOMBAY LIFE ASSURANCE COMPANY, LTD.
Company's New Business in 1946— **3 28 Crores**
Our Chief Agency New business in 1946 about **54 Lakhs**
Our experience of 37 years available to you for arranging Insurance investment It therefore pays you to consult us to Insure or to represent
MESSRS. KOCHIKAR BROTHERS, LIMITED,
Chief Agents for South India.
Bombay Life Building,
Central Office, Udipi
Branches at:
Mangalore, Calicut, Trivandrum, Madura, Madras, Bangalore & Bombay,

ಪೆಲೆಸ್ತೈನಿನ ಹೋರಾಟ
ರಶ್ಯಾ ಅಮೆರಿಕ ತಿಕ್ಕಾಟ

ಗಾಂಧೀ ಕೊಲೆ ಮೊಕದ್ದಮೆ

ಹಿಂದೀಯರೆಲ್ಲರ ಆತುರದ ನಿರೀಕ್ಷೆಯ ಮೊಕದ್ದಮೆಯ ಪೂರ್ವಪೀಠಿಕೆಯು ನವ ದಿಲ್ಲಿಯಲ್ಲಾಯಿತು, ಭಾರತೀಯರೆಲ್ಲರಿಗೂ ಸ್ವತಃ ಆದಂತಿರುವ ಅನ್ಯಾಯವೊಂದರ ಅಪಾದಿತರು ಮೇ ತಾ. 27ರಲ್ಲಿ ಪ್ರಥಮ ಬಾರಿ ನವದಿಲ್ಲಿಯ ಚಂತ್ರಾರ್ ಕೆಂಪು ಕೋಟೆಯ ಸ್ಪೆಶ್ಯಲ್ ಕೋರ್ಟಿನ ಮುಂದೆ ಹಾಜರು ಮಾಡಲ್ಪಟ್ಟರು. ಮಹಾತ್ಮಾ ಗಾಂಧಿಯವರ ಕೊಲೆಯ ಸಂಬಂಧವಾಗಿ ಆರೋಪಿಗಳಾದ ನಾಥೂರಾಮ್ ವಿನಾಯಕ ಗೋಡ್ಸೆ, (ಗಾಂಧೀಜೀಗೆ ಗುಂಡಿಟ್ಟ ಆರೋಪಿ) ನಾರಾಯಣ ದತ್ತಾತ್ರೇಯ ಆಪ್ಟೆ, ವಿಷ್ಣು ರಾಮಕೃಷ್ಣ ಕರ್ಕರೆ, ದಿಗಂಬರ್ ರಾಮಚಂದ್ರ ಬಡ್ಗೆ, ಮದನಲಾಲ್ (ಗಾಂಧೀಜೀ ಕೊಲೆಯ ಕೆಲವು ದಿನಗಳ ಮೊದಲು ಬಿರ್ಲಾ ಭವನದಲ್ಲಿ ಬಾಂಬಿಟ್ಟ ಆರೋಪಿ) ಗೋಪಾಲ ವಿನಾಯಕ ಗೋಡ್ಸೆ, ಶಂಕರ್, ಕಿಷ್ಟಯ್ಯ, ವಿನಾಯಕ ದಾಮೋದರ ಸಾವರ್ಕರ್, (ಹಿಂದೂ ಮಹಾಸಭಾ ನಾಯಕ) ಡಿ. ಯಸ್. ಪರ್ಚುರೆ—ಈ ಒಂಭತ್ತು ಮಂದಿಯ ವಿಚಾರಣೆಯನ್ನು ಸ್ಪೆಶಲ್ ಜಡ್ಜ್ ಶ್ರೀ ಆತ್ಮಚರಣರವರು ದಿಲ್ಲಿಯ 'ಆಜಾದ್ ಹಿಂದ್ ಕೈದಿಗಳ ವಿಚಾರಣಾ' ಪ್ರಸಿದ್ಧಿಯ ಕೆಂಪುಕೋಟೆಯಲ್ಲಿ ಮೊದಲು ಮಿಲಿಟರಿ ಪೋಲೀಸರ ಮುಖ್ಯ ಕಚೇರಿಯಿದ್ದ ೧೦೦ ಅಡಿ ಉದ್ದ ೨೬ ಅಡಿ ಅಗಲದ ಸಮ ಚತುಷ್ಕೋಣಾಕೃತಿಯ ಕೋಣೆಯಲ್ಲಿ ಮೇ ತಾ. ೨೭ರಲ್ಲಿ ಪ್ರಾರಂಭಿಸಿದರು. ಆ ದಿನ ಮೊಕದ್ದಮೆಯ ಕಾರ್ಯರೀತಿಯ ಕುರಿತು ವಿವಾದಗಳ ಚರ್ಚೆ ನಡೆದ ಮೇಲೆ ಜಡ್ಜರು ಕೋರ್ಟನ್ನು ಜೂನ್ ತಾ. ೧೪ಕ್ಕೆ ಮುಂದುವರಿಸಿದ್ದರು. ಆರೋಪಿಗಳ 'ಡಿಫೆನ್ಸ್' ಅನುಕೂಲತೆಗಳ ಪರ್ಯಾಲೋಚನೆಗಾಗಿ ಮಾತ್ರ ಜೂನ್ ತಾ. ೨ರಲ್ಲೊಮ್ಮೆ ಕೋರ್ಟು ಸೇರಲಿದೆ. ಆದರೆ ತಾ. ೧೪ರಲ್ಲಿ 'ಚಾರ್ಜ್' ತಯಾರಿಸಲ್ಪಟ್ಟು ಅಂದಿನಿಂದ ದಿನಂಪ್ರತಿ ವಿಚಾರಣೆ ನಡೆಯಲಿದೆ.

ಮೇ ತಾ. ೨೭ರ ದೃಶ್ಯ

ಉದ್ವೇಗದಾಯಿ 'ಗಾಂಧೀ ಕೊಲೆಯ ಮೊಕದ್ದಮೆ' ಯಾದ್ದರಿಂದ ಮೇ ತಾ. 27ರಲ್ಲಿ ದಿಲ್ಲೀ ಕೆಂಪುಕೋಟೆಯ ಕೋರ್ಟು ಆವರಣದ ಸುತ್ತಲೂ ಸರಿಗೇಬೇಲಿ ಮತ್ತು ಶಸ್ತ್ರಧಾರೀ ಪಹರೆಗಾರರನ್ನಿಡಲಾಗಿತ್ತು. ಎಲ್ಲಾ ಹಾದಿಗಳಲ್ಲೂ ಬಲವಾದ ಸಶಸ್ತ್ರ ಪಹರೆಯಿದ್ದಿತು. ಬೊಂಬಾಯಿ ಸ್ಪೆಶ್ಯಲ್ ಪೋಲೀಸು ದಳವೊಂದು ಕೂಡಾ ಕಾವಲಿಗಾಗಿ ಇರಿಸಲ್ಪಟ್ಟಿದ್ದಿತು. ಕೋರ್ಟಿಗೆ ಬರುವ ಎಲ್ಲಾ 'ಟೈಪ್‌ರೈಟರ್' ಮತ್ತು 'ಕೆಮರಾ' ಯಂತ್ರಗಳನ್ನೂ ಬಿಚ್ಚಿ ಶೋಧಿಸಿ ಬಿಡಲಾಗುತಿತ್ತಲ್ಲದೆ, ಕೋರ್ಟು ಸಂದರ್ಶಕರನ್ನೆಲ್ಲಾ ಸರಿಯಾಗಿ ತಪಾಸಿ ಮಾಡಿಯೇ ಮುಂದೆ ಹೋಗಲು ಬಿಡುತಿದ್ದರು. ಪತ್ರಿಕೆಗಳಿಗಾಗಿ ಭಾವ ಚಿತ್ರವೆತ್ತುವವರ, ಕೆಮರಾವಾಲರ ದಳಗಳಲ್ಲದೆ ಪತ್ರಿಕೋದ್ಯಮಿಗಳು ನೂರಕ್ಕೂ ಮಿಕ್ಕಿ ಹಾಜರಿದ್ದರು. ಬೇರಾವ ಸಂದರ್ಶಕನೂ ಆ ದಿನ ಕೋರ್ಟಿನಲ್ಲಿರಲಿಲ್ಲ. ಪೂರ್ವಾಹ್ನ ಘಂಟೆ ಹತ್ತಾಗುವ ಕೆಲವು ನಿಮಿಷಗಳಿಗೆ ಮೊದಲು ಆರೋಪಿಗಳನ್ನು ಕೋರ್ಟಿಗೆ ತರಲಾಯಿತು. ಗಾಂಧಿಜೀಗೆ ಗುಂಡಿಟ್ಟ ಆರೋಪಿ, ಕೃಶಶರೀರಿ ಗೋಡ್ಸೆ ಆರ್ಥರ್‍ಸ್ನೆಯ ಕಟಕಟ್ಟಾಕಿಕೊಂಡು ಪ್ರಥಮತಃ ಕೈದೀ ನಿಲ್ದಾಣಹತ್ತಿ ಆಸನ ಸ್ವೀಕರಿಸಿದ; ಅನುಕ್ರಮವಾಗಿ ಎಲ್ಲಾ ಆರೋಪಿಗಳೂ ಕೈದೀ ಗೂಡಿನೊಳಗೇರಿ ಮೂರುಸಾಲುಗಳಾಗಿ ಕುಳಿತುಕೊಂಡರು. ಹಿಂದೂ ಮಹಾಸಭಾನಾಯಕ ಶ್ರೀ ಸಾವರ್ಕರರು ತುಸು ಅಸ್ವಸ್ಥವಿದ್ದುದರಿಂದ ಅವರಿಗೆ ದಿಂಬಿನ ಆಸನಕೊಡಬೇಕೆಂದು ಅವರ ವಕೀಲರಾದ ಶ್ರೀ ಯಲ್. ಬಿ. ಭೋಪಟಕರರು (ಹಿಂದೂ ಮಹಾಸಭಾಧ್ಯಕ್ಷ) ಕೇಳಿಕೊಂಡುದರಿಂದ ಹಾಗೆಯೇ ಮಾಡಲಾಯಿತು. ಆರೋಪಿಗಳೆಲ್ಲರೂ ಉತ್ಸಾಹದಲ್ಲಿದ್ದರಲ್ಲದೆ, ಗೋಡ್ಸೆ ಮತ್ತು ಸಾವರ್ಕರರಿಬ್ಬರ ವಿನಹಾ ಮಿಕ್ಕವರು ವಿಚಾರಣೆಯ ವೇಳೆ ತಂತಮ್ಮೊಳಗೆ ಮಾತಾಡಿಕೊಳ್ಳುತಿದ್ದರು; ಗೋಡ್ಸೆ ಗಂಭೀರ ಮೌನದಲ್ಲಿದ್ದ; ಸಾವರ್ಕರರು ವಿಚಾರಣಾ ತರ್ಕಗಳನ್ನು ನಿರೀಕ್ಷಿಸುತಿದ್ದರು. ವಿಚಾರಣಾರಂಭದ ಮೊದಲು ಫೋಟೋ ತೆಗೆಯುವ ಸಮ್ಮತಿ ಸಿಕ್ಕಿತು; ಒಮ್ಮೆ ಕೆಮರಾಗಳ ಟಿಕ್‌ಟಿಕ್ ಶಬ್ದ ಕೋರ್ಟಿನಲ್ಲಿ ಹರಡಿತು. ಘಂಟೆ ೧೦ಕ್ಕೆ ಕೋರ್ಟು ಪ್ರಾರಂಭಿಸಿ ಪ್ರೊಸಿಕ್ಯೂಶನಿನ ಮುಖ್ಯ ವಕೀಲ್, ಬೊಂಬಾಯಿಯ ಎಡ್ವೊಕೇಟ್ ಜನರಲ್ ಶ್ರೀ ಸಿ. ಕೆ. ದಫ್ತಾರಿಯವರು ಆರೋಪದ ಸಾರವನ್ನು ಮುಂದಿಟ್ಟರು. ಕೊಲೆ, ಕೊಲೆಯ ಒಳಸಂಚು, ಕೊಲೆಗೆ ಪ್ರೇರಣೆ ಮತ್ತು ಬೇರಾಯಿದೇತೀರ ಶಸ್ತ್ರ ಹಾಗೂ ಸ್ಫೋಟಕಗಳನ್ನು ಇಟ್ಟುಕೊಂಡ ಆರೋಪಗಳಿದ್ದುವು. ಜಡ್ಜರು ಆರೋಪಿಗಳನ್ನವರ ಡಿಫೆನ್ಸ್ ವ್ಯವಸ್ಥೆಯ ಕುರಿತು ಪ್ರತ್ಯಪ್ರತ್ಯೇಕವಾಗಿ ವಿಚಾರಿಸಿದಾಗ ಶ್ರೀ ಡಿ. ಆರ್. ಬಡ್ಗೆ ಮತ್ತು ಮದನಲಾಲ್ ಇವರಿಬ್ಬರು ತಮಗಾವ ಡಿಫೆನ್ಸ್ ವಕೀಲನೂ ಬೇಕಾಗಿಲ್ಲವೆಂದರು. ಗೋಡ್ಸೆ, ಮತ್ತಿತರ ಆರು ಮಂದಿ ಆರೋಪಿಗಳು ತಾವು ಶ್ರೀ ಭೋಪಟ್ಕರರ ಮೂಲಕ ಸ್ವಂತ ವಕೀಲರನ್ನು ನೇಮಿಸಿಕೊಳ್ಳುವೆವೆಂದರು. ಮದನಲಾಲನಂತೂ, ತನ್ನ ಹೇಳಿಕೆ ಕೊಡುತ್ತೇನೆಂದು ಮೂರು ಬಾರಿ ಮೈಕ್ರೋಫೋನಿನ ಮುಂದೆ ಹೋಗಿದ್ದ. ತಾನು ಸ್ವತಃ ಜಡ್ಜರಲ್ಲಿಯೇ ಗುಪ್ತವಾಗಿ ಹೇಳಿಕೆ ಕೊಡುವೆನೆಂದು ಮದನಲಾಲ್ ಪ್ರಥಮತಃ ಹೇಳಿದಾಗ, ಏನಿದ್ದರೂ ರಿಜಿಸ್ಟ್ರಾರರಲ್ಲಿಯೇ ಕೊಡಬೇಕೆಂದೂ ಅವನು ತನಗಿಡನ್ನೊಪ್ಪಿಸುವರೆಂದೂ ಜಡ್ಜರೆಂದರು. ಆತ ಮೂರನೇ ಬಾರಿ ವಾಗ್ಮೂಲ ಕೊಡಲು ಪ್ರಯತ್ನಿಸಿದಾಗ ಜೂನ್ 14ರಲ್ಲಿ ಕ್ರಮಬದ್ಧ ವಿಚಾರಣೆಯಾರಂಭಿಸಿದ ಮೇಲೆ, ಮದನಲಾಲನಿಗಾ ಸಂದರ್ಭ ಕೊಡಬಹುದೆಂದು ಜಡ್ಜರು ತಿಳಿಸಬೇಕಾಯಿತು. ಆರೋಪಿಗಳ ಪೈಕಿ ಕರ್ಕರೆ ಮತ್ತು ಬಡ್ಗೆಯವರು ತಮಗೆ ಮರಾಠಿ ವಿನಹ ಬೇರೆ ಭಾಷೆ ಬರುವದಿಲ್ಲವೆಂದುದರಿಂದ ಇವರಿಬ್ಬರ ಮಟ್ಟಿಗೆ ಶ್ರೀ ಭೋಪಟ್ಕರರು ಭಾಷಾಂತರಕಾರರಾದರು. ಶಂಕರ ಕಿಷ್ಟಯ್ಯನಿಗೆ ತೆಲುಗು ಮಾತ್ರ ಬರುತ್ತದೆಂದುದರಿಂದ ಕೋರ್ಟಿನಲ್ಲಿ ಹಾಜರಿದ್ದ ಒರ್ವ ಪತ್ರಿಕೋದ್ಯಮಿಯು ಭಾಷಾಂತರಕಾರನಾಗಿ ನೇಮಿಸಲ್ಪಟ್ಟ. ಸಾವರ್ಕರರ ಪರವಾಗಿ ಅವರ ವಕೀಲ್ ಶ್ರೀ ಭೋಪಟ್ಕರರು ಮೊಕದ್ದಮೆಯನ್ನು ಎರಡು ತಿಂಗಳು ಮುಂದುವರಿಸುವಂತೆ ಕೇಳಿಕೊಂಡಿದ್ದರಲ್ಲದೆ, ಮೊಕದ್ದಮೆಯ ಸ್ವರೂಪ ಸಂಬಂಧವಾಗಿ ಒಂದು ಆಕ್ಷೇಪವನ್ನು ಮುಂದೊಡ್ಡಿದ್ದರು. ಆದರೆ ಜಡ್ಜರು ಜೂನ್ ತಾ. ೧೪ಕ್ಕೆ ಕೋರ್ಟನ್ನು ಮುಂದರಿಸಿಟ್ಟು ಆಕ್ಷೇಪವನ್ನು ತೆಗೆದುಹಾಕಿದರು. ಸರಕಾರೀ ಮುಖ್ಯ ವಕೀಲರಾಗಿ ಶ್ರೀ ದಫ್ತಾರಿಯವರಿದ್ದು ಸಹಾಯಕ ವಕೀಲರಾಗಿ ಶ್ರೀಗಳಾದ ಯನ್. ಕೆ. ಪೆಟಿಗಾರಾ, ಎಂ. ಜಿ. ವ್ಯವಹಾರಕರ್, ರಾಯ್ ಬಹದ್ದೂರ್ ಜ್ವಾಲಾಪ್ರಸಾದ್, ಪಂಡಿತ ಥಾಕೂರ್ ದಾಸರಿದ್ದಾರೆ. ಬೊಂಬಾಯಿ ಪೋಲೀಸ್ ಡೆಪ್ಯುಟಿ ಕಮಿಷನರರೂ, ಈ ಮೊಕದ್ದಮೆಯ ಮುಖ್ಯ ಪತ್ತೇ ಅಧಿಕಾರಿಯೂ ಆದ ಜೆ. ಸಿ. ನಾಗರ್ವಾಲರೂ ಕೋರ್ಟಿನಲ್ಲಿ ಹಾಜರಿದ್ದರು. ಆರೋಪಿಗಳ ಕಡೆಯಿಂದ ಆ ದಿನ ಹಾಜರಿದ್ದ ವಕೀಲರೆಂದರೆ ಶ್ರೀಗಳಾದ ಭೋಪಟ್ಕರ್, ಪಿ. ಬೆನರ್ಜಿ, ಜಮುನಾದಾಸ್ ಮೆಹತಾ, ಗಣಪತ್‌ರಾಯ್ ಮತ್ತು ಇನಾಮ್‌ದಾರರು. ಸರಕಾರಿ ಕಡೆಯಿಂದ ೨೫೦ ಸಾಕ್ಷಿಗಾರರ ವಿಚಾರಣೆಯಾಗಲಿದೆ ಎಂದು ತಿಳಿದುಬರುತ್ತದೆ.

ಅತ್ಯಂತ ಉಪಯುಕ್ತ ಪುಸ್ತಕ

ವ್ಯವಹಾರ ಜ್ಞಾನದರ್ಪಣ

ಶ್ರೀ. ಯು. ಜಿ ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ

ಲೋಕ ವ್ಯವಹಾರ ಬೋಧಿನಿ

ಬೆಲೆ ರೂ **1—8—0** ಮಾತ್ರ

ನಿಜವಾದ ಜನತಾ ಸಾಹಿತ್ಯ—

ಶ್ರೀ ಎಂ ವಿ ಹೆಗ್ಡೆಯರ

ಸ್ವರಾಜ್ಯ ವಿಜಯ

ಯಕ್ಷಗಾನ ಪದ್ಯ-ಅರ್ಥಗಳಲ್ಲಿ ಸ್ವರಾಜ್ಯ ವಿಜಯದ ಕಥ

ಬೆಲೆ: **0 8 0**

ಪ್ರತಿಗಳು ಸಿಗುವ ಸ್ಥಳಗಳು:-(1) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು; (2) ಎಂ. ಎಸ್. ಮಯ್ಯ, ಪುತ್ತೂರು; (3) ನವಭಾರತ ಬುಕ್ ಡಿಪೋ, ಉಡುಪಿ; (4) ಪಾಂಗಾಳ ಗುರುರಾವ್, ಉಡುಪಿ; (5) ಯು. ಆರ್. ಶೆಣೈ & ಸನ್ಸ್, ಮಂಗಳೂರು.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಜೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಮುದ್ದತಿ ಠೇವುಗಳು

ರೂ. ೧೫,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ. ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟೆಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೨।

೪ ರಿಂದ ೫ ತಿಂಗಳು ,, ,, ೨॥

೬ ರಿಂದ ೯ ತಿಂಗಳು ,, ,, ೨॥।

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ ೧೦,೦೦೦ಗಳ ವರೆಗೆ ರೂ ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪವಿರುವ ಶಾಖೆಗೆ ಬರೆದು ತಿಳಿದುಕೊಳ್ಳಬಹುದು.

The Canara Bank Limited.

ESTD: 1906

ಇತರ ಹಿಂದೀ ಘಟನೆಗಳು

ಕಾಶ್ಮೀರದ ಹೋರಾಟವು ಯಥಾಪ್ರಕಾರ ಸಾಗಿದೆ. ಧಾಳಿಗಾರರನ್ನಿದಿರಿಸಿ ಸೋಲನ್ನೊಡ್ಡುತ್ತಾ ಬಂದಿರುವ ಹಿಂದೀ ಸೇನೆಗಳ ಸಾಹಸಗಳನ್ನು ರಕ್ಷಣಾ ಮಂತ್ರಿ ಸರ್ದಾರ್ ಬಲದೇವ ಸಿಂಗರು ಶ್ಲಾಘಿಸಿ "ಪಾಕಿಸ್ಥಾನ್ ಸೇನೆಯು ಧಾಳಿಗಾರರ ಹಿಂಗಡೆಯಲ್ಲಿದ್ದರೂ ಹಿಂದೀ ಸೇನೆಯು ಕೊನೆಯ ಧಾಳಿಗಾರನನ್ನು ಒದೆದು ಹೊರಡಿಸುವ ಕಾಲವು ದೂರವಿಲ್ಲ" ಎಂದಿದ್ದಾರೆ.

[೫ನೇ ಪುಟ ನೋಡಿರಿ]

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

Capital Authorised ..	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves....	Rs. 8,00,400

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ನವಯುಗ

ಗುರುವಾರ, ಉಡುಪಿ, ೨೭-೫-'೪೮

ಸ್ವಾತಂತ್ರ್ಯಯೋಧರಿಗೆ ಭೂದಾನ

ಗಾಂಧಿಜೀಯ ನಾಯಕತ್ವದಲ್ಲಿ ರಾಷ್ಟ್ರಸಭೆಯು ಕಾಲಾನುಗುಣವಾಗಿ ಹೂಡಿದ್ದ ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಿ ಕಷ್ಟನಷ್ಟಗಳಿಗೀಡಾಗಿದ್ದವರಿಗೆ ಮದ್ರಾಸ್ ಸರಕಾರವು ಭೂದಾನ ಮಾಡಲು ಮುಂದಾಗಿದೆ. ಒಬ್ಬನಿಗೆ ಬಯಲುಭೂಮಿ ೫ ಎಕ್ರೆ, ಗುಡ್ಡವಾದರೆ ೧೦ ಎಕ್ರೆ, ಇಲ್ಲವೆ ಇದಕ್ಕೆ ಸಮಾನವಾದ ಬೇರೆ ರೂಪದ ಉಡುಗೊರೆಯೆಂಬುದೇ ಸರಕಾರವು ಈ ಸಂಬಂಧವಾಗಿ ಜಾಹೀರು ಮಾಡಿರುವ ನಿರ್ಧಾರ. ಅರ್ಜಿ ಸ್ವೀಕಾರಗಳಾಗಿ ಈಗ ಸಂಬಂಧಪಟ್ಟ ಸಂಗತಿಗಳ ಪರಿಶೀಲನೆ ನಡೆಯುತ್ತಿರುವುದೆಂದು ತಿಳಿದುಬರುತ್ತದೆ ಈ ಸಂದರ್ಭದಲ್ಲಿ ಲಕ್ಷ್ಯದಲ್ಲಿಡಬೇಕಾದ ಕೆಲವು ಸಂಗತಿಗಳಿವೆ.

ರಾಜಕೀಯ ಕಷ್ಟನಷ್ಟಾನುಭವಿಗಳಿಗೆ ಸಂಭಾವನೆ ಕೊಡುವುದರಲ್ಲಿ ಕಾಂಗ್ರೆಸ್ ಸರಕಾರದ ರಾಷ್ಟ್ರೀಯ ಮನೋವೃತ್ತಿ ಮತ್ತು ಕೃತಜ್ಞತಾಭಾವನೆಯೇ ಒಡೆದು ಕಾಣುತ್ತಿದೆಯಲ್ಲದೆ ಬೇರಲ್ಲ; ಈ ಕೊಡುಗೆಗಾಗಿ ಸರಕಾರಕ್ಕೆ 'ವಿಜ್ಞಾಪನೆ' 'ಒತ್ತಾಯದ ಬೇಡಿಕೆ' 'ಮುಷ್ಕರದ ನೋಟೀಸು' ಹೋದುದೇನೂ ಇಲ್ಲ. ಸ್ವಯಂಪ್ರೇರಣೆಯಿಂದ ಇಂತಹ ಉದಾರ ಹಾಗೂ ಸತ್ಪಾತ್ರ ದಾನಕ್ಕೆ ಇಳಿದಿರುವ ಮದ್ರಾಸಿನ ಕಾಂಗ್ರೆಸ್ ಸರಕಾರದ ಕಾರ್ಯವು ಸ್ತುತ್ಯವಿದೆ. ಕಾಂಗ್ರೆಸಿನ ಸ್ವಾತಂತ್ರ್ಯ ಹೋರಾಟ ಕುಂಡಕ್ಕೆ ಧುಮುಕಿ ಧಾವಾ ಜೀವನಾಧಾರಗಳನ್ನೂ ಕಳೆಟಿಸಿಕೊಂಡ ಸಾಮಾನ್ಯ ಸ್ವಯಂಸೇವಕರು ಬಹಳ ಮಂದಿಯಿದ್ದಾರೆ. ಸ್ವಾತಂತ್ರ್ಯ ರಣಕಣಕ್ಕೆ ನುಗ್ಗಿ ತಮ್ಮ ರಕ್ತ ಚೆಲ್ಲಿಕೊಟ್ಟು, ಮತ್ತು ರಕ್ತಪೂಣಗಿಸಿಕೊಂಡ ಯೋಧರಲ್ಲಿ ಅತ್ಯಧಿಕ ಸಂಖ್ಯಾಕರು ಬಡವರೇ ಹೊರತು ಶ್ರೀಮಂತರಲ್ಲ. ಈ ವರ್ಗ ಮತ್ತಿವರಿಂದಾಗಿರುವ ಆ ತ್ಯಾಗದೊಡನೆ ಸರಕಾರದ ಇಂದಿನ ಕೊಡುಗೆಯನ್ನು ಹೋಲಿಸಿದರೆ ಇದು ಕೇವಲ ಒಂದು 'ನೆನಪು ಚಿಹ್ನೆ' ಹೊರತು ಪ್ರತಿಫಲವಲ್ಲವೆಂಬುದು ನಿಶ್ಚಯ. ಇಂತಹ ಕಷ್ಟಾನುಭೋಗಿಗಳಲ್ಲಿ ಹೆಚ್ಚಿನವರು ಸರಕಾರದ ಕೊಡುಗೆಯ ಸ್ವೀಕಾರಕ್ಕೆ ಒಪ್ಪಿರುವುದಾದರೂ ಇದೊಂದು ಪ್ರತಿಫಲವಲ್ಲವೆಂಬ ಭಾವನೆಯಿಂದಲೇ; ಇಲ್ಲವಾದರೆ—ದೇಶಪ್ರೇಮದಿಂದ ದುಡಿದಿದ್ದ ತಮ್ಮ ಯಶಸ್ಸಿಗೆ ಕಟ್ಟಿದ ಬೆಲೆಯೇ ಇದೆಂದು ಅವರಿಗೆ ತೋರುತ್ತಿದ್ದಲ್ಲಿ—ಅವರಲ್ಲಿ ಹೆಚ್ಚಿನವರು ಇದರ ಸ್ವೀಕಾರ ಕೊಳ್ಳುವುತ್ತಿರಲಿಲ್ಲವೆನ್ನಬಹುದು. ರಾಷ್ಟ್ರದ ಸ್ವಾತಂತ್ರ್ಯವೇ ಅವರ ತ್ಯಾಗದಪ್ರತಿಫಲ. ಆ ಸ್ವಾತಂತ್ರ್ಯದ ಆದಿಭಾಗದಲ್ಲಿ ಅಧಿಕಾರದಲ್ಲಿರುವ ಪ್ರಾಂತಿಕ ಕಾಂಗ್ರೆಸ್ ಸರಕಾರಕ್ಕೆ ಈ ಸ್ವಾತಂತ್ರ್ಯ ಯೋಧರ ಸ್ಮರಣೆ ಬರುವುದೂ ಈ ಸ್ಮಾರಕ ರಚನೆಗದು ಮುಂದಾಗುವುದೂ ಸ್ವಾಭಾವಿಕ. ಅಂತೂ ಇದು ಮದ್ರಾಸ್ ಸರಕಾರವುಕೊಡುವ ಸ್ವರಾಜ್ಯೋತ್ಸವದೊಂದು ಉಡುಗೊರೆ ಮಾತ್ರ; ಸ್ವೇಚ್ಛೆಯಿಂದ ಕೈಕೊಂಡ ಒಂದು ಪುಣ್ಯಕಾರ್ಯ ಹೊರತು ಸರಕಾರದ ಪಾಲಿನ ನಿಯಮಬದ್ಧ ಕರ್ತವ್ಯವೇನೂ ಅಲ್ಲ ಇಂತಹ ಸತ್ಕಾರ್ಯದಲ್ಲೂ ಪ್ರಮಾದ ಅಥವಾ ಪಕ್ಷಪಾತದ ಪಾಪತಟ್ಟದಂತೆ ಸರಕಾರವು ಜಾಗರೂಕತೆ ವಹಿಸಬೇಕಾದುದು ಆಗತ್ಯ ಜೀನಾಲಯಗಳ ಕಜ್ಜಾಯ ವಿತರಣೆಯಂತೆ ಮುಂದೆ ಬಂದ ಕೈಗಳಿಗೆ ಮಾತ್ರ ಮುಷ್ಟಿಯಳತೆ ಪ್ರಕಾರ ಹಾಕುತ್ತಾ ಹೋಗುವ ಕ್ರಮ ಇಲ್ಲಿರಬಾರದು; ಕೈ ಮೇಲೆ ನೀಡುವುದಸಾಧ್ಯವಾಗಿ, ಮತ್ತು ಮೇಲಾಟಕ್ಕೆ ಅಳುಕಿ ಹಿಂದೆನಿಂತವರಿದ್ದರೆ ಅಂಥವರನ್ನು ಬಿಡಬಾರದು ನಿಂಕ್ಕ ಕ್ಷೇತ್ರಗಳಲ್ಲಿ ಇಂತಹ ಸಂದರ್ಭಗಳಲ್ಲಿರುವಂತಹ ಮೇಲಾಟವು-ನಿಸ್ವಾರ್ಥ ಸೇವೆ'ತ್ಯಾಗ'ಎಂಬ ನಂಬಿಕೆತಟ್ಟಿಕೊಂಡೇ ಕಾಂಗ್ರೆಸ್ ಚಳವಳಗಳಲ್ಲಿ ಕಷ್ಟನಷ್ಟಗಳನ್ನನುಭವಿಸಿದ್ದವರಲ್ಲೂ ಈ ಕೊಡುಗೆಯು ತಮ್ಮ ಪಾಲನ್ನು ಪಡೆಯುವದರಲ್ಲಿ ಕಂಡುಬಂದೀತೆಂದು ಸರಕಾರವು ನಿರೀಕ್ಷಿಸಬಾರದು; ಯಾರು ಆ ದಾನಕ್ಕರ್ಹರೆಂಬುದನ್ನು ಸ್ವತಃ ಶೋಧಿಸಿಯೂ ಈ ಪುಣ್ಯಕಾರ್ಯವನ್ನು ಪೂರ್ಣಗೊಳಿಸಿಕೊಳ್ಳುವುದು ಸರಕಾರದ ಕರ್ತವ್ಯವಿದೆ. ಅಂತೆಯೇ ಜೈಲಿಗೆ ಹೋದಂತಹ ಮಾದರಿಯ ದಾಖಲೆಯಾವುದೂ ಇಲ್ಲದೆ, ಆದರೂ ಹೆಚ್ಚಿನ ಕಷ್ಟನಷ್ಟಗಳಿಗೀಡಾದವರಿರಬಹುದು — ತಮ್ಮಾತ್ರಿತರನ್ನು ನಿರ್ಗತಿಕರನ್ನಾಗಿ ಮಾಡಿಟ್ಟು ಮಡಿದವರಿರಬಹುದು—ಬೇರೆ ಬೇರೆ ವಿಧಾನಗಳಿಂದ ಕಾಂಗ್ರೆಸ್ ಚಳವಳಗಳಲ್ಲಿ ತಮ್ಮ ಆತ್ಮ ಹಾಗೂ ಆಯುಷ್ಯಾರ್ಪಣೆ ಮಾಡಿದ ಅಜ್ಞಾತರಿರಬಹುದು; ಇಂಥವರಾರನ್ನೂ ಸರಕಾರವು ಮರೆಯಬಾರದು, ಆದರೆ ಸ್ವತಃ ಶ್ರೀಮಂತರಾಗಿರುವವರ ಮಟ್ಟಿಗೂ ಇದೇ ರೀತಿಯನ್ನು ಪಾಲಿಸಿ, ಗುಡ್ಡೆಗೆ ಮಣ್ಣು ಹೊತ್ತುಹಾಕುವ ಅನಾವಶ್ಯಕವೂ ಬೇಕೊಂದು. ಅಂತೂ ಈ ಕೊಡುಗೆಯ ಮಟ್ಟಿಗೆ ನಿಯಮ ನಿರ್ಬಂಧಗಳನ್ನಾಗಲೀ ಕಾಲ ಪರಿಮಿತಿಯನ್ನಾಗಲೀ ಗಣಿಸದೆ ಯಾವ ಕಾಲದಲ್ಲಾದರೂ, ಎಲ್ಲಿ ಹೇಗಿದ್ದರೂ ನ್ಯಾಯವನ್ನು ಎತ್ತಿಹಿಡಿಯಲೇಬೇಕೆಂದೂ ಪ್ರಮಾದ ಅಥವಾ ಪಕ್ಷಪಾತವಾವುದೂ ಇಲ್ಲದೆ 'ಸತ್ಪಾತ್ರರಿಗೆ ಮಾತ್ರ ದಾನ—ಸತ್ಪಾತ್ರರಾದವರಲ್ಲಿ ಯಾರನ್ನೂ ಬಿಡದೆ ದಾನ'ವೆಂಬುದನ್ನು ಮೂಲಮಂತ್ರವಾಗಿ ಇಟ್ಟುಕೊಂಡು ವರ್ತಿಸಬೇಕೆಂದೂ ಸರಕಾರಕ್ಕೆ ನಮ್ಮ ಸೂಚನೆ.

ಈ ತಾರತಮ್ಯ ಗೊತ್ತೇ?

ನಿಜಾಮ್ ಸರಕಾರವು ರಝಾಕಾರ್ ರಾಕ್ಷಸ ದಳಕ್ಕೆ ಆಶ್ರಯ ಕೊಟ್ಟಂತೆ ಹಿಂದೀ ಸರಕಾರವು ತದ್ವಿರೋಧೀ ಜಾತೀಯತಾ ದಳಗಳನ್ನು ಪ್ರೋತ್ಸಾಹಿಸಿಬಿಡುತ್ತಿದ್ದರೆ ರಝಾಕಾರರದು ಮಾತ್ರವಲ್ಲ, ಭಾರತೀಯ ಮುಸ್ಲಿಮರ ಗತಿ ಕೂಡಾ ಹೇಗಾಗುತಿತ್ತೆಂಬುದನ್ನು ಆ ಮತಭ್ರಾಂತರು ಊಹಿಸಿರುವರೆ?

ತಾನು ತನ್ನ ಆಯುಷ್ಯವಿಡೀ ರಾಷ್ಟ್ರಕ್ಕಾಗಿ ದುಡಿದು ದಣಿದಿರುವೆನಾದ್ದರಿಂದ ಈಗಿನ ಹೊಣೆಯ ಹೊರೆ ತರುಣ ಮುಖಂಡರ ಹೆಗಲ ಮೇಲಿರಲಿ, ಎಂದೀ ಕಾಲದಲ್ಲೇ ಪಂಡಿತ ನೆಹರುಗಳು ವಿರಾಮ ಸುಖವನುಭವಿಸುತ್ತಿದ್ದರೆ ರಾಷ್ಟ್ರದ ಅದೃಷ್ಟ ಹೇಗಾಗುತಿತ್ತೆಂಬ ಕುರಿತು ನೆಹರೂ ಸರಕಾರವನ್ನು ಟೀಕಿಸುತ್ತಿರುವ ಸ್ವಪ್ನಜೀವಿಗಳು ಎಂದಾದರೂ ಯೋಚಿಸಿದ್ದಿದೆಯೆ?

ಸರ್ವಸಮಾನತೆ ಬಂದಲ್ಲಿ ತಾವು ಉದ್ಧಾರಕರನ್ನಿಸಬೇಕೆಂಬ ಇಚ್ಛೆಯಿಂದಲೇ 'ಬಡಜನೋದ್ಧಾರ' 'ಹರಿಜನೋದ್ಧಾರ' ಇತ್ಯಾದಿ ಉದ್ಧಾರ ಕಾರ್ಯಗಳಲ್ಲಿ ತೊಡಗಿರುವವರು ನಿರುದ್ಯೋಗಿಗಳೂ ನಿಷ್ಪ್ರಭರೂ ಆಗುತ್ತಾರಾದ್ದರಿಂದ, ಬಡತನ, ಅಸ್ಪೃಶ್ಯತೆಗಳ ಉಳಿಗಾಲವೇ ಈ ಉದ್ಧಾರಕರಿಂದ ಎಂಬ ಗುಟ್ಟು ಗೊತ್ತಿದೆಯೆ?

ತಾವು ವಿವಿಧೋಪಾಯಗಳಿಂದ ಸುಲಿಯಲ್ಪಟ್ಟೆವು ಎಂಬ ಪಶ್ಚಾತ್ತಾಪವು ಜನತೆಯಲ್ಲೆಂದಾದರೂ ಮೂಡಿದರೆ ತಕ್ಷಣವೇ ತಮ್ಮ ಸುಲಿಗೆ ಕಾರ್ಯಗಳಿಗೆ ಸೊನ್ನೆ ಬೀಳುವದೆಂಬ ಹೆದರಿಕೆಯಿಂದಲೇ ಕೆಲವು ಸ್ವಾರ್ಥಿ ಶ್ರೀಮಂತರು, ತಮ್ಮ ಮಟ್ಟಿಗೆ ಜನತೆಯಲ್ಲಿ 'ಇವರಿಂದಾಗಿ ತಾವು ಸುಖಿಗಳಾದೆವು' ಎಂಬ ಕೃತಕ ಭಾವನೆಯನ್ನು ಮೂಡಿಸುವುದಕ್ಕಾಗಿ ಚತುರೋಪಾಯಗಳನ್ನು ಹೂಡುತಿದ್ದಾರೆಂಬುದು ಗೊತ್ತೆ?

ಕೇವಲ ಹತ್ತಿಪ್ಪತ್ತು ಸಾವಿರ ಜನರಿರುವ ಒಂದು ಸಣ್ಣ ನಗರವನ್ನು ದೃಷ್ಟಾಂತಕ್ಕಾಗಿ ತೆಗೆದುಕೊಂಡರೂ, ಅಲ್ಲಿಯ ಹತ್ತಿಪ್ಪತ್ತು ಮಂದಿ ಸುಲಿಗೇ ಶ್ರೀಮಂತರ ದೈನಿಕಾದಾಯವು ಮಿಕ್ಕೆಲ್ಲರ ಜುಮ್ಲಾ ಆದಾಯಕ್ಕೆ ಸಮಾನವಾಗುವಷ್ಟಿದೆ ಎಂಬುದು ಹೆಚ್ಚಿನವರಿಗೆ ಗೊತ್ತಿದೆಯೆ?

ಪಶು ಬಲವನ್ನು ಉಪಯೋಗಿಸಿ ಒಂದು ಕೊಲೆ ಮಾಡಿದವನೂ ಮರಣದಂಡನೆಗರ್ಹನೆಂದಿರುವಾಗ, ವಂಚನೆ, ವಶೀಕರಣಗಳಿಂದ ಸಾವಿರಾರು ಜನರ ಜೀವಹಿಂಡುವವನನ್ನು ಮಾತ್ರ ಮಾನಾರ್ಜನಕ್ಕಾಗಿ ಮಾಡಿಟ್ಟಿರುವ ವಿಷಮ ಸ್ಥಿತಿಯಿಂದಿನದೆಂಬುದು ಜನರಿಗೆ ಸಾಕಷ್ಟು ಹೊಳೆದಿದೆಯೆ?

ಕಾಯಕಷ್ಟಕ್ಕೆ, ಬುದ್ಧಿಶ್ರಮಕ್ಕೆ ಇಷ್ಟೇ ಪ್ರತಿಫಲವೆಂಬ ಇತಿಮಿತಿಯಿರುವಾಗ ವಂಚನೆ ಸುಲಿಗೆಗಳ ಪ್ರತಿರೂಪೀ ಸಂಪಾದನೆಗಳ ಮಟ್ಟಿಗೆ ಯಾವ ನಿರ್ಬಂಧವೂ ಇಲ್ಲದೆ, ಅವು ರಾಶಿ ರಾಶಿಗಳಾಗುತ್ತಿರುವ ಶೋಚನೀಯ ವಿದ್ಯಮಾನವು ಮುಂದಟ್ಟಾಗಿದೆಯೆ?

ಹಿಂಸೆ, ಅನಾಚಾರ, ಕಳ್ಳತನಗಳಿಂದ ಲೇಕ್ರಮ ಕಾನೂನು ಮುರಿಯುವವರ ಕುರಿತು ಅಂತರಿಕ ಸಹಾನುಭೂತಿ ಪಡುವವರಿರಬಹುದು; ಇಂತಹ ಅತ್ಯಾಚಾರಗಳಿಗೆ ಗುಪ್ತಾನುಮೋದನೆ ಅಥವಾ ಮೌನಸಮ್ಮತಿ ಕೊಟ್ಟರೂ ಅರಾಜಕತೆಯನ್ನು ಅಪೇಕ್ಷಿಸಿದಂತೆಂಬುದೂ, ಇಂಥವರು ತಮ್ಮನ್ನೇ ತಾವು ಅರಿತಿಲ್ಲವೆಂಬುದೂ ಮನಸ್ಸಿಗೆ ಹೊಳೆದಿದೆಯೆ?

ಇದೇ ಜೂನ್ ಮಧ್ಯಾವಧಿಯೊಳಗೆ ಅರಿವೆಗಳ ಧಾರಣೆಯು ನ್ಯಾಯವಾದ ಮಟ್ಟಕ್ಕಿಳಿಯದಿದ್ದಲ್ಲಿ ಗಿರಾಕಿಗಳಿಗೆ ಯೋಗ್ಯ ಬೆಲೆಗೆ ಅರಿವೆ ದೊರೆಯುವಂತೆ ಮಾಡಲು ಸರಕಾರವು ಪುನಃ ನಿಯಂತ್ರಣವನ್ನು ಜಾರಿಗೆ ತಂದು ಎಲ್ಲಾ ದಾಸ್ತಾನುಗಳನ್ನು ವಶಪಡಿಸಿಕೊಳ್ಳಬೇಕಾದೀತೆಂದು ಕೇಂದ್ರ ಸರಕಾರವು ಈಗಲಾದರೂ ಪ್ರಾಂತಿಕ ಸರಕಾರಗಳಿಗೆ ತಿಳಿಸಿದ್ದಕ್ಕಾಗಿ ಸಂತೋಷಿಸಬೇಕೋ? ಅಂದೇ ಬಾಯಿ ಬಿಟ್ಟಿದ್ದ ಕಾಲದಲ್ಲಿ ಬೆಲೆಯೇರಲು ಬಿಟ್ಟು ಬಾಯಿಸಿ ಇಳಿಯುವಾಗ ಮಾತ್ರ ಕ್ರಯವನ್ನು ಇಳಿಸಲು ಮುಂದಾಯಿತೆಂದು ದುಃಖಿಸಬೇಕೋ?

ವಿವಿಧ ಪಾತ್ರೆಗಳು



ಯಾವತರ, ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ

ಅಂಡವಾಯು, ಅಂಡವ್ಯಾಧಿ, ಫೈಲೇರಿಯಾ, ಇತ್ಯಾದಿಗಳಿಗೆ ಲೇಪನಬಗ್ಗೆ ದಿವ್ಯೌಷಧ.

ರಾತ್ಲಿಗೆ ರೂಪಾಯಿ 25/, ½ ರಾತ್ಲಿಗೆ ರೂಪಾಯಿ 12-8-0, ¼ರಾತ್ಲಿಗೆ ರೂಪಾಯಿ 6-4-0.

ಕುಷ್ಠ ರೋಗಕ್ಕೆ ಶೀಸೆಯೊಂದರ ರೂಪಾಯಿ 3/-.

ಎಸ್. ಪಿ ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ, 9.

S. P. Pharmaceuticel Works
Calcutta 9.

[೩ನೇ ಪುಟದಿಂದ]

ಸಂಯುಕ್ತ ರಾಷ್ಟ್ರ ಸಂಘವು ನೇಮಿಸಿರುವ ---ಅರ್ಜೆಂಟಿನಾ, ಬೆಲ್ಜಿಯಂ, ಕೊಲಂಬಿಯಾ, ಝೆಕೊಸ್ಲೊವೇಕಿಯಾ, ಅಮೇರಿಕ-- ಸಂಯುಕ್ತ ರಾಷ್ಟ್ರೀಯ "ಕಾಶ್ಮೀರ ಕಮಿಶನ್"ನ ಪ್ರಥಮ ಸಭೆಯು ಜೂನ್ ತಾ. 15ರಲ್ಲಿ ಜಿನೇವದಲ್ಲಿ ಸೇರಲಿದೆಯೆಂದೂ, ಆ ಮೇಲೆಯೇ ಅದು ಅಲ್ಲಿಂದ ಕಾಶ್ಮೀರಕ್ಕೆ ಬರಲಿದೆಯೆಂದೂ ತಿಳಿದು ಬರುತ್ತದೆ.

ಏಶ್ಯಾದ ಹಾಗೂ ಪೂರ್ವ ಪ್ರಾಚ್ಯ ಸಂಯುಕ್ತ ರಾಷ್ಟ್ರಗಳ ಆರ್ಥಿಕ ಸಮಿತಿ ಸಭೆಯು ಮದ್ರಾಸ್ ಪ್ರಾಂತ್ಯದ ಸುಪ್ರಸಿದ್ಧ ಗಿರಿಧಾಮಕ ಸ್ಥಳವಾದ ಉಟಕಮಂಡಿನಲ್ಲಿ ಸೇರಲಿದ್ದು ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಆಗಮಿಸುತಿದ್ದಾರೆ. ಪಂಡಿತ ನೆಹರುಗಳು ಈ ಸಭೆಯಾರಂಭದಲ್ಲಿ ಹಿಂದಿಯಲ್ಲಿ ಭಾಷಣ ಮಾಡಲಿದ್ದಾರೆ.

ಗ್ವಾಲಿಯರ್, ಇಂದೋರು ಮತ್ತು ಮಾಳ್ವ ಸಂಸ್ಥಾನಗಳು ಸಮ್ಮಿಶ್ರಗೊಂಡ "ಮಧ್ಯಭಾರತ ಸಂಯುಕ್ತ ಕೂಟ"ದ ಅನಾವರಣವನ್ನು ಪ್ರಧಾನಿ ಪಂಡಿತ ನೆಹರುಗಳು ಮೇ ತಾ. 28ರಲ್ಲಿ ನೆರವೇರಿಸಿದರು. ಇದುವರೆಗೆ ನಿರ್ಮಾಣಗೊಂಡ ಆಶ್ರಿತ ರಾಜ್ಯಗಳ ಸಂಯುಕ್ತ ಮಂಡಲಿಯ ಪೈಕಿ ಈ "ಮಧ್ಯ ಭಾರತ ಯೂನಿಯನ್" ದೊಡ್ಡದೂ 47,000 ಚದರ ಮೈಲು ವಿಸ್ತೀರ್ಣ ಹಾಗೂ ಏಳು ಮಿಲಿಯಕ್ಕೂ ಮಿಕ್ಕಿದ ಜನ ಸಂಖ್ಯೆಯುಳ್ಳದ್ದೂ ಆಗಿದೆ. ಇದರ ಉದ್ಘಾಟನೋತ್ಸವದ ಭಾಷಣದಲ್ಲಿ ಪಂಡಿತ ನೆಹರುಗಳು ಗಾಂಧಿಜೀ ಹಾಕಿಕೊಟ್ಟ ಹಾದಿಯನ್ನೇ ತುಳಿಯುವಂತೆ ಜನರನ್ನು ಕೇಳಿಕೊಂಡರಲ್ಲದೆ ಸರ್ದಾರ್ ಪಟೇಲರ ಕಾರ್ಯಗಳನ್ನು ಶ್ಲಾಘಿಸಿದರು, 'ಒಕ್ಕಟ್ಟು ನಮ್ಮ ಮೂಲಮಂತ್ರವಾಗಿರಲಿ' ಎಂದು ಸರದಾರ್ ಪಟೇಲರು ಸಂದೇಶ ಕಳುಹಿಸಿದ್ದರು.

'ಸೌತ್-ಇಂಡಿಯನ್ ರೈಲ್ವೆ'ಯ ಡ್ರೈವರರು ಹಾಗೂ ಫಯರ್‌ಮೇನರು ಕೆಲದಿನಗಳಿಂದ ಮುಷ್ಕರ ಹಿಡಿದಿದ್ದು, ರೈಲ್ವೆ ಸಂಚಾರಗಳಿಗೆ ತೊಡಕು ಉಂಟಾಗಿದ್ದಿತು. ಈಗೀಗ ಹೆಚ್ಚಿನ ಮುಷ್ಕರಗಾರರು ಕೆಲಸಕ್ಕೆ ಹಾಜರಾಗಹತ್ತಿದ್ದಾರೆ.

ಈ ಆಂದೋಲನಗಳ ಗುರಿ ಯಾವುದು?

ಮದ್ರಾಸು ಗವರ್ನರರು ಹೊಸದೊಂದು ಆರ್ಡಿನೆನ್ಸ್ ಹೊರಡಿಸಿದ್ದಲ್ಲದೇ ಮದ್ರಾಸಿನ ಸಾರ್ವಜನಿಕ ವ್ಯವಸ್ಥಾ ರಕ್ಷಣಾ ಓರ್ಡಿನೆನ್ಸನ್ನು ಇನ್ನಷ್ಟು ಬಿಗುಗೊಳಿಸಿದ್ದಾರೆ. ಈ ಹೊಸ ಶಾಸನದನ್ವಯ ದಸ್ತಗಿರಿಗೆಸಿಗದೆ ತಲೆತಪ್ಪಿಸಿಕೊಂಡವರಿಗೆ ಆಶ್ರಯ ಕೊಡುವುದೂ ದಂಡನಾರ್ಹ ತಪ್ಪಾಗಿದೆ.

ಪೆಲೆಸ್ಟೈನ್ ಸಮರ

ಅತ್ತ ಕೂಡಲೇ ಒಮ್ಮೆ ಯುದ್ಧ ನಿಲ್ಲಿಸಬೇಕೆಂದು ಭದ್ರತಾ ಕೌನ್ಸಿಲು ಕೇಳಿಕೊಂಡುದಕ್ಕೆ ಯೆಹೂದ್ಯರ ಸಮ್ಮತಿ ದೊರೆತರೂ ಅರಬರು ತಾವಾ ಸೂಚನೆಯನ್ನು ೪೮ ತಾಸುಗಳೊಳಗೆ ಪರ್ಯಾಲೋಚಿಸುವೆವೆಂದರೂ ಪೆಲೆಸ್ಟೈನಿನ ಕಾಳಗವೇನೋ ಯಥಾಪ್ರಕಾರ ಸಾಗಿದೆ. ಜೆರುಸಲೇಮ್ ಹಳೇ ನಗರದಲ್ಲಿ ಹನ್ನೆರಡು ದಿನಗಳ ಅತಿ ಭೀಕರ ಹೋರಾಟ ಕೊಟ್ಟರೂ ಫಲಬಾರದೆ ಅಲ್ಲಿ ಉಳಿದಿದ್ದ ಯೆಹೂದಿಗಳು ಕಟ್ಟಕಡೆಗೆ ಇದೇ ಮೇ ತಾ. 28ರಲ್ಲಿ ಅರಬರಿಗೆ ಶರಣು ಬಂದಿದ್ದಾರೆ. ಈ ವಿಜಯೋತ್ಸವದ ಮತ್ತು ವಿಶೇಷ ಯುದ್ಧೋಪಕರಣಗಳ ಸೌಲಭ್ಯ ದೊರೆತ ಅರಬರೀಗ ಜೆರುಸಲೇಮ್ ಹೊಸ ನಗರದ ಮೇಲೆ ಹುರುಪಿನಿಂದ ಧಾಳಿ ನಡಿಸಹತ್ತಿದ್ದಾರೆ. ಜರುಸಲೇಮು ಹೊಸ ನಗರದಲ್ಲಿರುವ ತಮ್ಮವರಿಗೆ ಸಹಾಯ ಮುಟ್ಟಿಸುವದಕ್ಕಾಗಿ ಪ್ರಥಮತಃ ಲೇಟ್ರನ್ ಎಂಬಲ್ಲಿಯ ಅರಬ್ ವ್ಯೂಹವನ್ನು ಭೇದಿಸಲು ಯೆಹೂದಿಗಳು ವಿಮಾನ ಮತ್ತು ವಿಶೇಷ ಶಸ್ತ್ರಸಜ್ಜಿತ ಸೇನೆಗಳನ್ನು ಮುಂದೊಡ್ಡಿದ್ದಾರೆ. ಜೆರುಸಲೇಮಿನ ಹದಿನೈದು ಮೈಲು ದೂರದಲ್ಲಿ ಅರಬ್-ಯೆಹೂದಿಗಳೊಳಗೀಗ ಅತಿ ಕಠೋರ ಕಾಳಗ ನಡೆದಿದೆ. ಅತ್ತ ಯೆಹೂದಿಗಳ ರಾಜಧಾನಿ ಟೆಲ್ ಅವೀವಿನ ಮೇಲೂ ಅಂಬರ ಗುಂಡಿನ [illegible] ಮಳೆಯಾಗುತ್ತಿದೆಯಲ್ಲದೆ ಆ ಕಡೆಗೆ ಅರಬ್ ಸೇನೆಗಳು ಕತ್ತರೀ ಧಾಳಿಯಾಗಿ ಇಕ್ಕಡೆಗಳಿಂದ ಧಾವಿಸಿ ಬರುತ್ತಿವೆ. ಯೆಹೂದೀ ಕ್ಷೇತ್ರವನ್ನೇ ಇಬ್ಭಾಗ ಮಾಡಿ ಹಾಕಿ ಪರಸ್ಪರ ಜೋಡಣಾ ಸಂಬಂಧವಿರದಂತೆ ಮಾಡುವ ಆಕ್ರಮಧಾಳಿಯೂ ನಡೆದಿದೆ.

ಅತ್ತ ಸಂಯುಕ್ತರಾಷ್ಟ್ರ ಸಂಘದ ಭದ್ರತಾ ಕೌನ್ಸಿಲಿನಲ್ಲಿ ಪೆಲಸ್ಟೈನ್ ಯುದ್ಧ ನಿವೃತ್ತಿಯ ಕುರಿತು ತೀವ್ರ ಚರ್ಚೆನಡೆಸಿ ವಿವಿಧ ಸೂಚನೆಗಳು ಮುಂದೆಬಂದು ಕೊನೆಗೆ ಬ್ರಿಟನ್ ಸೂಚನೆಯೇ ಕೆಲವು ತಿದ್ದುಪಡಿಗಳೊಡನೆ ಮಂಜೂರಾಗಿದೆ. ಈ ಸೂಚನೆಯನ್ವಯ ನಾಲ್ಕು ವಾರಗಳ ವರೆಗೆ ಹೋರಾಟ ನಿಲ್ಲಿಸಬೇಕೆಂದು ಭದ್ರತಾ ಕೌನ್ಸಿಲ್ ಅರಬರನ್ನೂ ಯಹೂದಿಗಳನ್ನೂ ಮೇ ತಾ. ೨೯ರಲ್ಲಿ ಕೇಳಿಕೊಂಡಿದೆ. ನಾಲ್ಕು ವಾರಗಳ ತನಕ ಪೆಲಸ್ಟೈನ್ ಮತ್ತು ಅರಬ್ ಲೀಗ್ ರಾಷ್ಟ್ರಗಳಿಗೆ ಯುದ್ಧೋಪಕರಣಗಳನ್ನು ಕಳುಹಿಸಕೂಡದೆಂದೂ ಬಹಿಷ್ಕಾರ ಹಾಕಿದೆ. ಈ ಸಂಬಂಧದ ಪರ್ಯಾಲೋಚನೆಯ ವೇಳೆ ರಶ್ಯಾ—ಇಂಗ್ಲಂಡು ಪ್ರತಿನಿಧಿಗಳೊಳಗೆ ತೀವ್ರ ವಾಗ್ಯುದ್ಧ ನಡೆಯಿತು. ರಶ್ಯದ ಪ್ರತಿನಿಧಿ ಎಮ್. ಆಂಡ್ರೆಲ್ ಗ್ರೋಮ್ಯಿಕೋ ಬ್ರಿಟನಿನ ಸೂಚನೆಯು ಅರಬ್ ಪಕ್ಷಪಾತದ್ದಿದ್ದು ನಿರರ್ಥಕವೆಂದು ಆಕ್ಷೇಪಿಸುತ್ತಾ ಕಠಿಣ ಶಬ್ದಗಳನ್ನು ಪ್ರಯೋಗಿಸಿ ಬ್ರಿಟಿಷ್ ಧೋರಣೆಯನ್ನು ಖಂಡಿಸಿದ್ದರು. "ಬ್ರಿಟನು ಆದಿಯಿಂದಲೂ ಪೆಲೆಸ್ಟೈನಿನ ಕುರಿತು ಕೇವಲ ಕಪಟಾಚರಣೆಯನ್ನೇ ಕೈಕೊಂಡಿದ್ದಿತು. ಪೆಲಸ್ಟೈನಿನಲ್ಲಿ ಸ್ವತಂತ್ರ ರಾಷ್ಟ್ರವೊಂದು ಸ್ಥಾಪನೆಯಾಗಿ ಪ್ರಜಾಹಿತ ಸರಕಾರವೊಂದು ನೆಲೆಸಿಲ್ಲದಂತೆ ಮಾಡಿದ ಬ್ರಿಟನಿನ ಆಟವು ಬರ್ಬರವಾದುದು" ಎಂದು ಗ್ರೋಮ್ಯಿಕೋ ಟೀಕಿಸಿದಾಗ ಬ್ರಿಟನಿನ ಪ್ರತಿನಿಧಿ ಸರ್. ಅಲೆಕ್ಸಾಂಡರ್ ಕೆಡೋಗಾನರೂ ಅದೇ ಮಾದರಿಯ ಉತ್ತರವಿತ್ತಿದ್ದರು "ಕಾಡು ರೀತಿಯ ನಿಂದೆ, ದುರುದ್ದೇಶದ ಆರೋಪ ಮತ್ತು ಸಾರ್ವತ್ರಿಕ ದೂಷಣೆಗೆ ಗ್ರೋಮ್ಯಿಕೋ ಇಳಿದಿದ್ದಾರೆ ತನ್ನ ನೆಲೆ ಯಾವುದೆಂಬ ದೃಢವಿಲ್ಲದ ನ್ಯಾಯವಾಗಿ ವಾದಿಸುವಂತಹದೇನೂ ತನ್ನಲ್ಲಿಲ್ಲದ ಗ್ರೋಮ್ಯಿಕೊ ಹೀಗೆ ಮಾಡಬೇಕಾದ.ದು ಸ್ವಾಭಾವಿಕವೇ" ಎಂದು ಸರ್ ಅಲೆಕ್ಸಾಂಡರರು [illegible] ನಾಗವನ್ನು ಸಮರ್ಥಿಸುವಾಗ ರಶ್ಯದ ಪ್ರತಿನಿಧಿಯನ್ನು ಚುಚ್ಚಿ ಮಾತನಾಡಿದ್ದರು

ವಿವಿಧ ಘಟನೆಗಳು

ದಕ್ಷಿಣಾಫ್ರಿಕದಲ್ಲಿ ಮೇ ತಿಂಗಳಾಂತ್ಯದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನರಲ್ ಸ್ಮಟ್ಸರ ಸಂಯುಕ್ತ ಪಕ್ಷವು ಸೋತು ವಿರುದ್ಧ ಪಕ್ಷವಾದ ಡಾ। ಡಿ. ಮಲನರ ರಾಷ್ಟ್ರೀಯ ಪಕ್ಷವು ವಿಜಯಿಯಾಗಿದೆ. ಜನರಲ್ ಸ್ಮಟ್ಸರ ಅಧಿಕಾರ ಹೋದುದು ಮಾತ್ರವಲ್ಲ; ಅವರು ತನ್ನ ಮತದಾರ ಕ್ಷೇತ್ರದಿಂದ ಶಾಸನ ಸಭೆಗೇನೇ ಆರಿಸಲ್ಪಡದೆ ಸೋತು ಹೋಗಿದ್ದಾರೆ. ಪ್ರಥಮ ಲೋಕ ಯುದ್ಧಕ್ಕೂ ಮೊದಲೇ ರಾಜಕಾರಣದಲ್ಲಿ ದುಡಿಯುತ್ತಿದ್ದ, ಲೋಕದ ಹಿರಿಯ ರಾಜಕಾರಣಿ ಹಾಗೂ ಯುದ್ಧ ಚತುರರಲ್ಲೊಬ್ಬನೆಂದು ಗಣಿಸಲ್ಪಟ್ಟಿದ್ದ, ದಕ್ಷಿಣಾಫ್ರಿಕದ ಹಿಂದೀಯರ ವಿರೋಧ ಧೋರಣೆಯಿಂದ ಭಾರತೀಯರೆಲ್ಲರಿಗೂ ಕಹಿಸ್ಮರಣೆಯಂತಿರುವ ಜನರಲ್ ಸ್ಮಟ್ಸರಿಗೆ ಇಂತಹ ಪರಾಭವ ಒದಗಿದುದು ತನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ಇದು ಎರಡನೇ ಬಾರಿಯೆಂದು ತಿಳಿದು ಬರುತ್ತದೆ. ರಾಷ್ಟ್ರೀಯ ಪಕ್ಷಕ್ಕೆ 70 ಸ್ಥಾನಗಳೂ ಆ ಪಕ್ಷದ ಸಮರ್ಥಕರಾದ ಆಫ್ರಿಕನ್ ಪಕ್ಷಕ್ಕೆ 9 ಸ್ಥಾನಗಳೂ ದೊರೆತು ಒಟ್ಟಿಗೆ 79 ಸದಸ್ಯರಿರುವಾಗ ಜನರಲ್ ಸ್ಮಟ್ಸರ ಸಂಯುಕ್ತ ಪಕ್ಷಕ್ಕೆ 65 ಸ್ಥಾನಗಳೂ ಅವರ ಸಮರ್ಥಕರದೊಟ್ಟಿಗೆ 9 ಸ್ಥಾನಗಳೂ ಸೇರಿ ಜುಮ್ಲಾ 74 ಸದಸ್ಯರಾಗುತ್ತಾರೆ. ಆದ್ದರಿಂದ ಜನರಲ್ ಸ್ಮಟ್ಸರು ರಾಜಿ ಯಿತ್ತಿದ್ದಾರೆ. ಡಾ। ಮಲನರ ಮಂತ್ರಿಮಂಡಲ ರಚನೆಗಾಹ್ವಾನಿಸಲ್ಪಟ್ಟಿದ್ದಾರೆ. ಈಗ ಅಧಿಕಾರಕ್ಕೇರಿರುವ ದಕ್ಷಿಣಾಫ್ರಿಕದ ರಾಷ್ಟ್ರೀಯ ಪಕ್ಷವು ತನ್ನ ಚುನಾವಣಾ ಘೋಷಣೆಯಲ್ಲಿ ಹಿಂದೀಯರನ್ನೂ ಆಸ್ಯಾನರನ್ನೂ ಇನ್ನಷ್ಟು ಕಠೋರ ರೀತಿಯಿಂದ ಕಂಡು ಅವರನ್ನು ದಕ್ಷಿಣಾಫ್ರಿಕದಿಂದಲೇ ಓಡಿಸಿಬಿಡುವ ಆಶ್ವಾಸನೆಯನ್ನು ಬಿಳಿ ಮತದಾರರಿಗಿತ್ತಿದ್ದರೂ, ಅದರ ಕಾರ್ಯರೀತಿ ಹೇಗಿದೆ ಎಂಬುದನ್ನು ಹಿಂದೀ ಸರಕಾರದವರೂ ದಕ್ಷಿಣಾಫ್ರಿಕದ ಭಾರತೀಯರೂ ನಿರೀಕ್ಷಿಸುತಿದ್ದಾರೆ

ರಶ್ಯದೊಡನೆ ಸಂಧಾನ ಮಾತುಕತೆಗಳನ್ನು ಪುನರುದ್ಧರಿಸಬೇಕೆಂದೂ ಸಣ್ಣ ವಿವಾದಗಳನ್ನು ಪ್ರಥಮತಃ ಅನುಕ್ರಮವಾಗಿ ಎತ್ತಿಕೊಂಡು ಚರ್ಚಿಸಿ ರಶ್ಯದ ಧೋರಣೆ ಹೇಗಿದೆ ಎಂಬುದನ್ನು ಅಮೇರಿಕ ಪರೀಕ್ಷಿಸಲಿದೆ. ಚೈನಾದ ಯುದ್ಧದಲ್ಲಿ ಇತ್ತೀಚೆಗಿನ ಕೆಲವು ದಿನಗಳಲ್ಲಿ ರಾಷ್ಟ್ರೀಯ ಸೇನೆಗಳೇ ವಿಜಯಿಗಳಾಗುತಿದ್ದು ಒಂದೊಂದೇ ನಗರವನ್ನು ಕಮ್ಯೂನಿಷ್ಟರಿಂದ ಕಸಗೊಳ್ಳುತ್ತಿವೆ. ಫಿನ್ಲೆಂಡಿನ ಸರಕಾರದೊಳಗೂ ಹೊರಗೆ ಕೆಲಸಗಾರರ ಸಾರ್ವತ್ರಿಕ ಮುಷ್ಕರ ರೂಪದಲ್ಲೂ ಐದು ದಿನ ಬಿಕ್ಕಟ್ಟು ವ್ಯಾಪಿಸಿದ್ದಿತು. ಆದರೆ ಅಲ್ಲಿಯ ಅಧ್ಯಕ್ಷರು ಮಂತ್ರಿ ಮಂಡಲದಲ್ಲಿ ಖಾಲಿಯಿದ್ದ 3 ಸ್ಥಾನಗಳನ್ನು ಕಮ್ಯೂನಿಸ್ಟ್-ಸೋಶಿಯಲಿಸ್ಟ್ ಮಿಶ್ರ ಎಡಪಕ್ಷದವರಿಗೆ ಕೊಟ್ಟುದರಿಂದ ಈ ಬಿಕ್ಕಟ್ಟೀಗ ನಿವಾರಣೆಗೊಂಡಿದೆ.

ಅಂತೂ ಲೋಕ ಸಾಂಗತ್ತಿದೆ-ಅವನತಿಯ ಕಡೆಗೋ ಅಭಿವೃದ್ಧಿಯತ್ತಲೋ ಎಂದು ಹೇಳುವದಸಾಧ್ಯ !

ಬಾಲಕರು ಆರೋಗ್ಯಶಾಲಿಗಳಾಗಲು

ಪ್ರಭೂಸ್ ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನೆಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳು,

ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

-(ರಜಿಸ್ಟರ್ಡ್)

ಕುಂಜಾಲು, ಪೋ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ,

L. N. Sharma, Mangalore.

ನಡಿಯುವ ಚಿತ್ರ

ಸನ್‌ರೈಸ್‌ನವರ "ಧನ್ ವಾನ್"

ಸಾರೂ, ಜೈರಾಜ್, ಅನ್‌ಜಾನ, ಭಗವಾನ್ ಮೊದಲಾದವರು

ಮುಂದಿನ ಚಿತ್ರ

ನಾಡಿಯಾದವರ 'ಅಮರ್ ರಾಜ್'

(ತ್ರಿಲೋಕ್ ಕಪೂರ್, ಕುರ್ಶೀದ್ ಜೂನಿಯರ್)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಮುಗ್ಗಿ ಪುಸ್ತಕ

ತಯಾರಾಗಿದೆ.

ಪ್ರತಿ	1ಕ್ಕೆ	0	1	0
,,	50ಕ್ಕೆ	2	10	0
,,	100ಕ್ಕೆ	5	0	0

ನವಯುಗ ಪ್ರೆಸ್, ಉಡುಪಿ.

ರುಚಿಕರವೂ ಮಧುರವೂ ಆದ **ಕೃಷ್ಣಾ ಶುಗರ್ ಬರ್ಫಿ**

ಹನ್ನೆರಡು ತುಂಡುಗಳ ಪೆಕೆಟುಗಳಲ್ಲಿ ದೊರೆವುದು

ಪುಷ್ಟಿಕರವಾದ, ಗೇರುಬೀಜ ಮೊದಲಾದುವನ್ನು ಉಪಯೋಗಿಸಿ ತಯಾರಿಸಿದ ಪ್ರತಿಯೊಬ್ಬನೂ ಮೆಚ್ಚುವ ಒಂದು ಉತ್ಕೃಷ್ಟ ತಿಂಡಿ

ಕೃಷ್ಣಾ ಕೆಶ್ಯು ಕರ್ನೆಲ್ಸ್ ಅಥವಾ ಸಕ್ಕರೆ ಗೇರುಬೀಜ

ಕೇಸರಿ ಮೊದಲಾದ ಪರಿಮಳಯುಕ್ತ ವಸ್ತುಗಳನ್ನು ಉಪಯೋಗಿಸಿ, ಸಕ್ಕರೆಯ ಪಾಕದಲ್ಲಿ ತಯಾರಿಸಿದ ಗೇರುಬೀಜದ ಮಿಠಾಯಿ

ಅರ್ಧ ಮತ್ತು ಕಾಲು ರಾತ್ತಲಿನ ಪೆಕೆಟುಗಳಲ್ಲಿ ದೊರೆವುವು.

ಶ್ರೀ ಕೃಷ್ಣಾ ಟೋಫಿ ವರ್ಕ್ಸ್,
ರಥಬೀದಿ, ಮಂಗಳೂರು

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¼% per annum.
For 6 months at 3¼% per annum.

For further particulars you may apply or call at any of our following Offices

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬ್ಬರ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಒಗೊಡುವ ನೌಕರರ ವರ್ಗ!
ನೇರಾಗಿ ಊಟಕ್ಕೆ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?
ಪ್ರೊಪ್ರೈಟರ್:— **ಕೆ. ವೆಂಕಟ್ರಮಣ ಭಟ್.**

For up-to-date Lodging & Boarding
ROYAL MAHAL,
UDIPI, S. Kanara.

ಅಮೃತಾಂಜನ.
ತಲೆವೇದನೆ, ತಿರೋವೇದನೆ, ಉಳುಕು ಶಕ್ತಿಗೆ, ಛುಳ ಹಲ್ಲು ವೇದನೆಗಳಿಗೂ ಎದೆನೋವು, ಛಾಯೆಗಳು ಬಾಳು ಕೊಳ್ಳುವುದು, ಜೇನು ಹುಳ ಮುಂತಾದ ಚೇಳು ಕಚ್ಚಿದಾಗ. ಮೊದಲು ನೋವಿದ್ದರೆ ಎಲ್ಲಾ ರೋಗಗಳಿಗೂ.

REGD.
ಅಧ, ಮಕ್ಕಳಿಗೆ ಮತ್ತು ಜನ ಸಮೃದ್ಧಿ ಸಮ್ಮಕ್ಷತ

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.



Approved firm by the Govt. of Mysore
Certified by the Agent of the Govt. of Cylone & Indian.

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಕಳೆದ ತಾ 30ರಲ್ಲು ಶ್ರೀ ಎಚ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಮಹಾತ್ಮಾ ಗಾಂಧಿಜಿ, ದೇಶಭಕ್ತ ಶ್ರೀ ಸಾಂತ್ಯಾರು ಅನಂತಪದ್ಮನಾಭ ಭಟ್ ಮತ್ತು ಶ್ರೀ ಎನ್. ಸುಬ್ಬರಾಯರ ನಿಧನದ ಬಗ್ಗೆ ದುಃಖ ಸೂಚಕ ಗೊತ್ತುವಳಿಯಾಯಿತು. ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ನಾಲ್ಕು ಸ್ಥಳಗಳಿಗೆ ಶ್ರೀಗಳಾದ ಕೆ. ಈಶ್ವರ, ಜಿ. ಮಾಧವಪೈ, ಕೆ. ಪದ್ಮನಾಭ ಶೆಣೈ ಮತ್ತೂ ಬೈಂದೂರು ಸುಬ್ಬಣ್ಣ ಸೆಟ್ಟರು ಆರಿಸಲ್ಪಟ್ಟರು

ಹೊಸವರುಷದ ಅಧಿಕಾರಿವರ್ಗದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ದಾಮೋದರ ಬಾಳಿಗ ಮತ್ತು ಎಮ್. ಉಮೇಶರಾಯರ ಹೆಸರುಗಳು ಸೂಚಿಸಲ್ಪಟ್ಟು ಮೊದಲನೆಯವರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀಗಳಾದ ಕೆ. ಈಶ್ವರ, ಹಾಜಿ ಹಸನ ಹಕೀಮ್ ಇವರುಗಳು ಉಪಾಧ್ಯಕ್ಷರಾಗಿಯೂ ಶ್ರೀ ಪಿ. ಶ್ರೀನಿವಾಸರಾಯರು ಕಾರ್ಯದರ್ಶಿಗಳಾಗಿಯೂ ಶ್ರೀ ಬಿ ಸುಬ್ಬಣ್ಣ ಸೆಟ್ಟರು ಜತೆ ಕಾರ್ಯದರ್ಶಿಯರಾಗಿಯೂ ಶ್ರೀ ಜಿ. ಮಾಧವ ಪೈಗಳು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಗೋವಿಂದನಾಯಕ್, ವೇಣುಗೋಪಾಲನಾಯಕ್, ಕರಿಯಣ್ಣ ಸೆಟ್ಟಿ ಮತ್ತು ಮಹಾಬಲ ಸೆಟ್ಟಿಯವರು ಆರಿಸಲ್ಪಟ್ಟರು.

ಶ್ರೀ ಎಸ್. ಎನ್. ಹೊಳ್ಳರು ಮಂಜೇಶ್ವರ ರೈಲ್ವೆ ಸ್ಟೇಶನಿನಿಂದ ತಪ್ಪಿಸಿಕೊಂಡು ಹೋದವರ ದಸ್ತಗಿರಿಗಾಗಿ ಪೋಲೀಸ್ ಪಡೆಯು ಮಂಜೇಶ್ವರದ ನೆರೆಗ್ರಾಮಗಳಲ್ಲಿ ಧಾಳಿ ನಡಿಸುತ್ತಿದರೂ ಅವರ ಪತ್ತೆಯಾಗಲಿಲ್ಲವೆಂಬ ವರ್ತಮಾನ.

144ನೆ **ಪ್ರಕರಣವು** ಮಂಗಳೂರಲ್ಲಿ ಜ್ಯಾರಿಯಲ್ಲಿದ್ದುದನ್ನು ಕಳೆದ ತಾ 25ರಿಂದ ಒಂದು ತಿಂಗಳು ಮುಂದುವರಿಸಲಾಗಿದೆ.

ಕಮ್ಯೂನಿಸ್ಟ್ ಪಕ್ಷದವರನ್ನು ದಸ್ತಗಿರಿ ಮಾಡಲಾಗುತ್ತಿದೆ.

ದಕ್ಷಿಣ ಕನ್ನಡ

ಮುಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಹದಿನಾಲ್ಕನೆ ವಾರ್ಷಿಕ ಮಹಾಸಭೆಯು ಕಳೆದ ತಾ 23ರಲ್ಲು ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾಪ್ರಾರ್ಥನೆ, ಕಾರ್ಯದರ್ಶಿಯಿಂದ ವರದಿ ವಾಚನ ಮತ್ತು ಸಂದೇಶ ಓದೋಣ ಕಾರ್ಯಗಳಾಗಿ ಶ್ರೀಯುತರಾದ ಎಚ್. ಸುಬ್ಬಣ್ಣ, ಕೆ. ವಿಟ್ಟಪ್ಪ, ಕೆ. ಪಿ ಸಿದ್ದು, ಎಸ್. ಟಿ. ಸುವರ್ಣ, ಎಮ್. ಕೆ. ಎಲ್ಲಪ್ಪ, ಎಮ್ ಬಾಬು ಮೊದಲಾದವರು ಸಮಾಜದೇಳಿಗೆಯ ಕುರಿತು ಭಾಷಣವಿತ್ತರು.

ಮೂರೂರು ಕಡ್ಡಾಂತು ಅಂತಯ್ಯ ಸೆಟ್ಟರು ಬೈಲೂರು ಬಿ. ಇ. ಎಮ್. ಶಾಲೆಯ ಅಧ್ಯಾಪಕರಾಗಿದ್ದು ಕಳೆದ ತಾ 25ರಲ್ಲು ದೈವಾಧೀನರಾದರು. ಶ್ರೀಯುತರು ಮೂರೂರು ಶಾಲೆಯ ಟೀಚರ್ ಮೇನೇಜರರಾಗಿಯೂ ಹತ್ತುವರ್ಷ ಕಾಲ ವಿದ್ಯಾಕ್ಷೇತ್ರದಲ್ಲಿ ಕೆಲಸಮಾಡಿದ್ದರು.

ಮುಂಡ್ಕೂರು ಈ ಕೇಂದ್ರದ ರೈತರ ಸಭೆಯು ಕಳೆದ ತಾ 18ರಲ್ಲು ಶ್ರೀ ಎಮ್. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಭೂಮಾಲಿಕರು ತಮ್ಮ ಗೇಣಿ ಒಕ್ಕಲುಗಳಿಂದ ಬಿಟ್ಟಿಕೆಲಸ, ಹಸ್ರುವಾಣಿ ಹೊರೆ ಇತ್ಯಾದಿಯನ್ನು ಬಲಾತ್ಕಾರವಾಗಿ ಪಡಕೊಳ್ಳುವುದನ್ನು ಕಂಡು ವ್ಯಸನ ಸೂಚಿಸಿ ಗೇಣಿ ಒಕ್ಕಲುಗಳಿಂದ ಕೆಲವು ಧನಿಗಳು ಗೇಣಿ ಪಡೆದು ರಶೀದಿ ಕೊಡದೆ ಅನ್ಯಾಯಮಾಡುತ್ತಿರುವ ವರ್ತನೆಯನ್ನು ನಿಷೇಧಿಸಲಾಯಿತು. ಕೋಳಿಯಂಕ, ಜುಗಾರಿ ಮುಂತಾದ ಅತ್ಯಾಚಾರಗಳನ್ನು ತಡೆಗಟ್ಟುವಂತಹ ಕಾನೂನನ್ನು ಬೇಗನೆ ಜ್ಯಾರಿಗೆ ತರುವಂತೆ ಮದ್ರಾಸು ಸರಕಾರವನ್ನು ಕೇಳಿಕೊಳ್ಳಲಾಯಿತು.

ಉಡುಪಿ

ಶ್ರೀ ಎನ್. ಸುಬ್ಬರಾಯರ ನಿಧನ

ಶ್ರೀ ಎನ್ ಸುಬ್ಬರಾವ್, ಎಮ್. ಎ. ಬಿ. ಎಲ್, ಇವರು ಕಳೆದ ತಾ 20ರಲ್ಲು ಮಧ್ಯರಾತ್ರಿ ರಕ್ತದ ಒತ್ತಡದಿಂದ ದೈವಾಧೀನರಾದರು ಇವರು ವನಸ್ಪತಿ ಶಾಸ್ತ್ರದಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದರು, ಮಾತ್ರವಲ್ಲದೆ ಉತ್ತಮ ಸಂಶೋಧಕರಾಗಿದ್ದರು ಆಸ್ಟ್ರೇಲಿಯಾ ದೇಶದಲ್ಲಿ ಬೆಳೆದ ಅದೊಂದು ಬಗೆಯ ಹತ್ತಿಯ ವಿಷಯದಲ್ಲಿ ಸಂಶೋಧನೆ ನಡಿಸಿ ನಮ್ಮ ದೇಶದಲ್ಲೂ ಅಂತಹ ಬಗೆಯ ಹತ್ತಿಯನ್ನು ಚೆನ್ನಾಗಿ ಬೆಳೆಸಬಹುದಾಗಿಯೂ ಅದರಿಂದ ಉತ್ತಮ ಜಾತಿಯ ವ್ಯಾರಚೂಟ್ ಶಿಲ್ಕಿನಂಥ ದತ್ತಿಯನ್ನು ತಯಾರಿಸಿ ಉತ್ತಮ ಪ್ರತಿಫಲವನ್ನು ಪಡೆದು ಸರಕಾರದ ಆದಾಯವನ್ನು ಹೆಚ್ಚಿಸಲು ಸಾಧ್ಯವಿದೆ ಎಂದೂ ಇವರು ಸ್ಪಷ್ಟೀಕರಿಸಿದ್ದರು ಇವರ ನಿಧನದಿಂದ ಉತ್ತಮ ಸಂಶೋಧಕರನ್ನು ನಮ್ಮ ಕರ್ನಾಟಕವು ಕಳಕೊಂಡಂತಾಗಿದೆ.

ನೋಟೀಸು

ಕುಂದಾಪುರ. ಡಿ. ಮು. ಕೋರ್ಟಿನಲ್ಲಿ

O. S- 67/48

ವಾದಿರು- ಶೇಶಿ ಸೆಡ್ತಿ ಕೂಡಾ,
ಪ್ರತಿವಾದಿರು. ಅಟ್ಟಕ್ಕ ಸೆಡ್ತಿ ಸಹಾ.

ಸದ್ರಿದಾವೆಯ 7ನೇ ಪ್ರತಿವಾದಿಗೆ ಈ ಮೂಲ್ಯ ತಿಳಿಯಪಡಿಸುವದೇನೆಂದ್ರೆ.

7ನೇ ಪ್ರತಿವಾದಿ ತೇಜಪ್ಪ ಸೆಟ್ಟಿ, ನಾಗಮ್ಮ ಸೆಡ್ತೀರ ಮಗ. ಕುಂದಾಪುರ ತಾಲ್ಲು ತಾಲ್ಲೊಡು ಗ್ರಾಮದ ವಳಗಿನಮನೆ.

ವಾದಿರು ತಮಗೆ ಬರತಕ್ಕ ಅಪನಾರ್ಥದ ಬ್ಯಾಲೇಜು ರೂಪಾಯಿ 653-13-6ನ್ನು ಬರಮಾಡಿಕೊಳ್ಳುವರೇ ದಾಖಲು ಮಾಡಿದ ಮೇಲಿನ ದಾವೆಯು ತಾ. 10-6-48ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದ ಹಾಜ್ರಾಗಿ ತಿಳಿಸತಕ್ಕದ್ದು.

Y Manjaya Shetty
Advocate for Plff
ತಾ 27-5-48- ಮೊಕ್ಕಾಂ. ಕುಂದಾಪುರ

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ
ಹಲ್ಲು ಪುಡಿ
ಒಂದು ತೊಲೆ ಕಟ್ಟು 1ರ 0 1 0
ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.
ದಿ ಮಹಾಜನ ಸಿ ಎಂಡ್ ಪಿ ಲಿಮಿಟೆಡ್,
ಕಾಸರಗೋಡು. ದ. ಇಂಡಿಯ.

ಋತುಸ್ರಾವ ನಿಂತಿತು

'ಕುಮಾರಿ' ದಿಲ್ಲೆಗಳನ್ನು ಉಪಯೋಗಿಸಿದರೆ ಸದಕಪ್ಪಿ ಋತುಸ್ರಾವವಾಗುವುದು ಪತೋಟಿಗೆ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5; ಅಧಿಕಾಧಿಕ ಸ್ಪೆಶ್ಯಲ್ ರೂ.6/- [ಪಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MIS. P. DEVEE, F 08 (R. J.)
Tollygunge CALCUTTA
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಉಡುಪಿ

ಕುಲಾಲರ ಮಹಾಸಭೆ—ದ. ಕ ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿ, ಮಂಗಳೂರು (ರಿಜಿಸ್ಟರ್ಡ್) ಇದರ ಶಾಖೆಯೊಂದನ್ನು ಉಡುಪಿಯಲ್ಲಿ ತೆರೆಯುವ ಸಲುವಾಗಿ ಕಳೆದ ತಾ. 23ರಲ್ಲಿ ಕಾಡುಬೆಟ್ಟು ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಕುಲಾಲ ಸಮಾಜದ ಮಹಾಸಭೆಯು ಶ್ರೀ. ಎ. ನಕ್ರಮಾಸ್ತರರ ಅಧ್ಯಕ್ಷತೆಯಲ್ಲಿ ಜರಗಿತು. ಸಾಧಾರಣ ಮುನ್ನೂರಕ್ಕೂ ಮೇಲ್ಪಟ್ಟು ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳಿಂದ ಪ್ರತಿನಿಧಿಗಳೂ ಜನರೂ ಬಂದಿದ್ದರು. ಪೂಜ್ಯ ಗಾಂಧೀಜಿಯವರ ಅಕಾಲ ನಿಧನದ ಬಗ್ಗೆ ಸಭೆಯು ಎದ್ದು ನಿಂತು ಸುಖಸೂಚಿಸಿದ ಬಳಿಕ ಸಮಿತಿಯ ಮಾಜಿ ಕಾರ್ಯದರ್ಶಿ—ಶ್ರೀ. ಯಂ. ಶಾಂತಪ್ಪನವರು ಸಭಿಕರನ್ನು ಸ್ವಾಗತಿಸಿ ಸಮಿತಿಯು ಅಂದಿನವರೆಗೆ ಕೈಕೊಂಡ ಕಾರ್ಯಕಲಾಪಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾ ಉಡುಪಿಯಲ್ಲಿ ಸಮಿತಿಯ ಶಾಖೆಯನ್ನು ತೆರೆಯುವ ಅವಶ್ಯಕತೆಯ ಕುರಿತು ಮಾತನಾಡಿದರು. ಹಿತಸಂದೇಶಗಳನ್ನು ಸಭೆಯ ಮುಂದೆ ಓದಿದ ತರುವಾಯ ಶ್ರೀ. ಟಿ. ಕೆ. ಚಂದಪ್ಪನವರು, ಸಮಾಜ ಸಂಘಟನೆಯ ವಿಷಯ ಮಾತನಾಡಿ ಕುಲಾಲ ಸಮಾಜವು ವಿದ್ಯೆಯಲ್ಲಿ ತೀರಾ ಹಿಂದುಳಿದ ಸಮಾಜವಾದುದರಿಂದ ನಿರಕ್ಷರತೆಯನ್ನು ಹೋಗಲಾಡಿಸುವುದಕ್ಕೆ ಮೊದಲು ಪ್ರಯತ್ನಿಸುವುದು ಅಗತ್ಯವೆಂದು ಸೂಚಿಸಿದರು. ಶ್ರೀಗಳಾದ ಬಿ. ಹೂವಯ್ಯ, ಬಿ ಚಿಕ್ಕಯ್ಯ, ಎ. ಬಾಬು, ಟಿ ಎ. ತಾಂಬ್ರಕಜೆ, ಯು ಗುರುವಪ್ಪ; ಕೆ. ಬಿ. ಬಂಗೇರ ಮೊದಲಾದವರು ಸಮಾಜದ ಉದ್ಧಾರಕ್ಕಾಗಿ ಕೈಕೊಳ್ಳಬೇಕಾದ ಕಾರ್ಯಭಾಗಗಳನ್ನು ವಿವರಿಸಿ ಭಾಷಣ ಮಾಡಿದರು. ಸಮಿತಿಯ ಶಾಖೆಯನ್ನು ಉಡುಪಿಯಲ್ಲಿ ತೆರೆಯುವ ನಿರ್ಣಯವಾಗಿ ಕಾರ್ಯಕಾರಿ ಸಮಿತಿಗೆ ಶ್ರೀಗಳಾದ, ಎಟ್ ವಮದ್ದ ಕುಲಾಲ (ಅಧ್ಯಕ್ಷ) ಪಪ್ಪ ಕುಲಾಲ, (ಉಪಾಧ್ಯಕ್ಷ) ಬಿ. ಚಿಕ್ಕಯ್ಯ, (ಕಾರ್ಯದರ್ಶಿ) ವಿ. ನಕ್ರಮಾಸ್ತರ್, [ಕೋಶಾಧಿಕಾರಿ] ಮೊದಲಾದ 15 ಮಂದಿ ಸದಸ್ಯರನ್ನು ಚುನಾಯಿಸಲಾಯಿತು. ಅಧ್ಯಕ್ಷರ ಭಾಷಣವಾದ ನಂತರ ಶ್ರೀ. ಯಂ. ಶಾಂತಪ್ಪನವರು ಧನ್ಯವಾದಗಳನ್ನಿತ್ತರು. ಕೂಡಿದ ಸ್ವಜಾತಿ ಮಹನೀಯರನ್ನೂ ಮಹಿಳೆಯರನ್ನೂ ಊಟೋಪಚಾರಗಳಿಂದ ಸತ್ಕರಿಸಿದ ಬಳಿಕ ಸಭಾಂತ್ಯವಾಯಿತು.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S K.

ಎಲ್ಲ ತರದ

ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್,
ಉಡುಪಿ.

ಮದುವೆ ಕಾಗದಗಳನ್ನು ಅಲ್ಪಾವಧಿಯಲ್ಲೇ ಮಾಡಿ ಕೊಡಲಾಗುವುದು.

ಮಂಗಳೂರಿನ ಬೋಳಾರ ಮಾರಿಗುಡಿಯಲ್ಲಿ ಪ್ರಾಣಬಲಿ ನಿಲ್ಲಿಸಲ್ಪಟ್ಟಿತು

—ಮಂಗಳೂರು ಬೋಳಾರ ಮಾರಿಗುಡಿಯು ಜಿಲ್ಲೆಯಲ್ಲೆಲ್ಲ ಪ್ರಖ್ಯಾತವಾದುದು, ಅತಿ ಪುರಾತನವಾದ್ದು ಮತ್ತು ಬಹಳ ಪ್ರಭಾವದ್ದು. ಇಲ್ಲಿ ಪ್ರತಿ ದಿನ ದರ್ಶನವಿರುವುದು ಮಾತ್ರವಲ್ಲದೆ ವಾರಕ್ಕೆರಡು ಸಲ ಮಂಗಳವಾರ ಮತ್ತು ಶುಕ್ರವಾರ ನೂರಾರು ಕೋಳಿ, ಕುರಿ ಹಂದಿ ಮೊದಲಾದುವು ದೇವಿಗೆ ಬಲಿಕೊಡಲ್ಪಡುತ್ತವೆ.

ಈ ಮಾರಿಗುಡಿಯ ಈಗಿನ ಆಡಳಿತೆ ಮೊಕ್ತೇಸರರಾದ ಶ್ರೀ ಬಿ. ತಿಮ್ಮಪ್ಪ ಶೆಟ್ರು, ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ವಿನಂತಿಯ ಮೇರೆಗೆ ಕಾಲಸ್ಥಿತಿಗನುಕೂಲವಾಗಿ ಇದೇ ತಾ.28 ರಿಂದ ಪ್ರಾಣಿಬಲಿಯನ್ನು ಸಂಪೂರ್ಣ ನಿಲ್ಲಿಸಿ ಸಾತ್ವಿಕಪೂಜೆ ನಡೆಸುವ ನಿರ್ಧಾರ ಮಾಡಿರುವರೆಂಬುದು ಅಭಿನಂದನೀಯವಿದೆ.

ಇದೇ ತಾ. 25ನೇ ಅಪರಾಹ್ನ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀಗಳಾದ ಕೆ. ಕೆ. ಶೆಟ್ಟಿ, ಕೆ. ಕೆ ಪಿ. ರಾಮ ಪೊತುವಾಳ್, ಪಿ. ರಾಮದಾಸ ನಾಯಕ್ ಮತ್ತು ಶ್ರೀ ಐ. ವಿ ರಾಮರಾಯರು ಬೋಳಾರ ಮಾರಿಗುಡಿಗೆ ಹೋಗಿ ನೆರೆದ ಜನರಿಗೆಲ್ಲ ಪ್ರಾಣಿಬಲಿ ನಿಲ್ಲಿಸಿದ ಕುರಿತು ತಿಳಿಸಿ ಅದರ ಅವಶ್ಯಕತೆಯ ಕುರಿತು ಭಾಷಣಗಳನ್ನಿತ್ತರು. ಆಡಳಿತೆ ಮೊಕ್ತೇಸರರಾದ ಶ್ರೀ. ಬಿ. ತಿಮ್ಮಪ್ಪ ಶೆಟ್ರು ಮಾರಿಗುಡಿಯಲ್ಲಿ ಇನ್ನು ಮುಂದೆ ಪ್ರಾಣಿಬಲಿಯು ಸಂಪೂರ್ಣ ನಿಲ್ಲಿಸಲ್ಪಟ್ಟು ಅದರ ಬದಲಿಗೆ ಕೋಳಿ ಒಂದರ ರೂ 1, ಕುರಿ ಒಂದರ ರೂ 10 ಮತ್ತು ಹಂದಿಯೊಂದರ ರೂ 5ರಂತೆ ಕಾಣಿಕೆ ಸ್ವೀಕರಿಸಲಾಗುವುದೆಂದೂ ಭಕ್ತರು ಪ್ರಾಣಿಬಲಿಯ ಬದಲಿಗೆ ಇಷ್ಟದ ಸಾತ್ವಿಕ ಪೂಜಾದಿಗಳನ್ನು ನಡೆಸಬಹುದೆಂದೂ ಬೂದಿ ಗುಂಬಳಕಾಯಿ ಮೊದಲಾದುವನ್ನು ಕಡಿಯಬಹುದೆಂದೂ ಒಂದು ವೇಳೆ ಕೋಳಿಯೇ ಒಪ್ಪಿಸಲ್ಪಟ್ಟರೂ ಅದನ್ನು ಸ್ವೀಕರಿಸಿ ಸಾರ್ವಜನಿಕವಾಗಿ ಏಲಮ್ ಹಾಕಿ ಮಾರಲಾಗುವುದೆಂದೂ ಜಾಹೀರುಪಡಿಸಿದರು

ಸ್ವೀಕಾರ-ವಿಮರ್ಶೆ

'ಕೃಷಿಕನ ಕೈಪಿಡಿ'—ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು ಇವರಿಂದ ಪ್ರಕಟಿತವಾದ [illegible] ಪುಟಗಳ [illegible] ಬೆಲೆಯ ಚಿಕ್ಕ ಪುಸ್ತಕ. ಇದರಲ್ಲಿ ಗಾಂಧೀಜಿ ಕೃಷಿಕರಿಗೆ ಸಲ್ಲಿಸಿದ [illegible] ಮತ್ತು ಕೃಷಿಕರ ಇಂದಿನ ಕರ್ತವ್ಯ ಎಂಬ [illegible] ಕೆ. ಕೆ. ಶೆಟ್ಟರ ಲೇಖನವೂ 'ಕೃಷಿಕ ಬಾಂಧವರಿಗೆ ದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕರೆ' ಎಂಬ ಭಾಗದಲ್ಲಿ ವಿಶೇಷತಃ ಗೇಣಿ ಒಕ್ಕಲುವರ್ಗದ ವಿವಿಧ ಸಂಕಷ್ಟಗಳನ್ನು ಕ್ರೋಢೀಕರಿಸಿ ಸರಕಾರದ ಮುಂದಿಡಲು ಕಮಿಟಿಯ ಕಾರ್ಯಕರ್ತರು ಮಾಡುತ್ತಿರುವ ಪ್ರಯತ್ನಕ್ಕೆ ಇತರರು ಯಾವ ಬಗೆಯಲ್ಲಿ ನೆರವಾಗಬೇಕೆಂಬ ವಿಚಾರವೂ ಕೃಷಿಕ ಸಂಘಟನೆಗಾಗಿ ದುಡಿಯುತ್ತಿರುವ ಕಾಸರಗೋಡಿನ ವಕೀಲ್ ಶ್ರೀ ಉಮೇಶರಾಯರು ಮದರಾಸು ಸರಕಾರದ ಮುಂದಿಡಲು ತಯಾರಿಸಿದ 'ಒಕ್ಕಲು ಹಿತ ಮಸೂದೆ'ಯ ವಿವರಗಳೂ ಈ ಮಸೂದೆ ಮತ್ತು ಸರ್ವಸಾಮಾನ್ಯ ಕೃಷಿಕ ಹಿತಸಾಧನೆಯ ಬಗ್ಗೆ ಕೃಷಿಕರು ಕಾಂಗ್ರೆಸ್ ಕಮಿಟಿಗೆ ಯಾವಯಾವ ವಿಷಯದಲ್ಲಿ ಅನುಭವವನ್ನು ಕೊಡಬೇಕೆಂಬುದಕ್ಕೆ ಪ್ರಶ್ನಾವಳಿಗಳೂ ಸೇರಿವೆ. ಈ ಪುಸ್ತಕವನ್ನು ಗೇಣಿಯ ಒಕ್ಕಲುಗಳು ಮಾತ್ರ ತರಿಸಿಕೊಂಡು ಪರಿಶೀಲಿಸುವುದಲ್ಲದೆ, ಧನಿಗಳೂ ಕೊಂಡುಕೊಂಡು ನೋಡಿ ಮಧಿಸಿ ಧನಿಯೊಕ್ಕಲುಗಳ ನಡುವೆ ಹಿತಕಾರಿಯಾಗುವ ವಿಚಾರ ವಿನಿಮಯ ಮಾಡಿಕೊಂಡು ಮುಂದೆ ಉಭಯ ಪಕ್ಷಗಳಿಗೂ ನ್ಯಾಯ ಸಮ್ಮತವಾಗುವ ಮಸೂದೆಯು ಬರುವಂತೆ ಈಗಿಂದೀಗಲೇ ಈ ವಿಷಯಕ್ಕೆ ಗಮನ ಕೊಡುವುದೊಳ್ಳಿತು.

—'ಕೊರಗ್ಯಲ್'

ಶ್ರೀ ಭಗವತೀ ನೃತ್ಯಕಲಾ ಮಂದಿರ,
ಮುಂಬಯಿ.

ಈ ಮಂದಿರದಲ್ಲಿ ಭರತನಾಟ್ಯ, ಕಥಕ್, ಕಥಕಳಿ, ಮಣಿಪುರಿ, ಮೊದಲಾದ ನೃತ್ಯಗಳನ್ನು, ವೀಣ, ಫಿಟೀಲು, ಸಿತಾರ್, ದಿಲ್‌ರುಬ, ಜಲತರಂಗ, ಕೊಳಲು, ಹಾರ್ಮೋನಿಯಮ್, ತಬ್ಲ, ಓಕಲ್‌ಮ್ಯುಸಿಕ್ ಇತ್ಯಾದಿ ವಾದನ ಗಾಯನಗಳನ್ನೂ ಉತ್ತಮ ರೀತಿಯಲ್ಲಿ ಕಲಿಸಲ್ಪಡುತ್ತದೆ. ಹೆಣ್ಣು ಮಕ್ಕಳಿಗೆ ಅರ್ಧ ದರದಲ್ಲಿ ಕಲಿಸಲ್ಪಡುವುದು. ಮಂದಿರದಲ್ಲಿ ಕಲಿಯಲು ಇಚ್ಛಿಸಿದುವ ಯುವಕರು, ಯುವತಿಯರೂ, ಮಂದಿರಕ್ಕೆ ಬಂದು ಅಧ್ಯಕ್ಷರನ್ನು ಕಂಡು ಮಾತನಾಡಿ, ಎಲ್ಲಾ ವಿಷಯದಲ್ಲಿಯೂ ಅನುಭವ ಪಡೆಯಬಹುದು.

ಈ ಮಂದಿರದ ಸಹಾಯಾರ್ಥವಾಗಿ ಅಸ್ಥಾನ್ ವಿದ್ವಾನ್ ಬೆಳ್ಳಾವೆ ನರಹರಿ ಶಾಸ್ತ್ರಿಯವರಿಂದ ಬರೆಯಲ್ಪಟ್ಟ "ಜಲಂಧರ" ಎಂಬ ಪೌರಾಣಿಕ ಕನ್ನಡ ನಾಟಕವನ್ನು ಭಾಂಗವಾಡಿ ಥಿಯೇಟರ್‌ನಲ್ಲಿ ಶೀಘ್ರದಲ್ಲಿಯೇ ಅಭಿನಯಿಸಲಿಕ್ಕಿರುವೆವು.

ಮಂದಿರದ ಉಪಾಧ್ಯಾಯರ ಹೆಸರು.

ಭರತನಾಟ್ಯ ವಿದ್ವಾನ್, ಶ್ರೀಮಾನ್, ಕೆ. ಲಕ್ಷ್ಮೀನಾರಾಯಣ ಭಟ್. ಹಾರ್ಮೋನಿಯಮ್ ವಾದನ, ಶ್ರೀ. ಡಿ. ಯೆಸ್. ಅಮೀನ್ (ತಂಜೋರು ಬಾಪು) ತಬ್ಲಾವಾದನ, ಶ್ರೀ. ದತ್ತಾತ್ರೇಯ.

ವಿಳಾಸ —

Shree Bhagawati Nratyakala Mandira,
Mahavir Building. 3rd Floor Room No 41,
Homji Street, Fort, Bombay.

ಎ. ಐತಪ್ಪ ಭಂಡಾರಮನ,
ಸ್ಥಾಪಕ ಮತ್ತು ಅಧ್ಯಕ್ಷ.

ಜೈಹಿಂದ್!

ಉತ್ತಮ ತಿಂಡಿ ತಿನಸು! **ಸುವ್ಯವಸ್ಥಿತ ವಿಹಾರಾಲಯ!**

ನ್ಯೋ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಶ್ರೀ ದುರ್ಗಾ ಭವನ, ಮೂಲ್ಕಿ.

ಯಂ ಆರ್. ಭಟ್, (ಆಟ ಸ್ಸ್) ವ್ಯವಸ್ಥಾಪಕ.

NEO ROYAL CAFE,
Boarding & Lodging,
Santhekatte, UDIPI.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಮ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ವ್ಯಾಧಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ದಕ್ಷಿಣ ಕನ್ನಡ

ಅಜೆಕಾರ—ಅಸಿಸ್ಟ್ಯಾಂಟ್ ಡೆವಲಪ್‌ಮೆಂಟ್ ಆಫೀಸರರಾದ ಶ್ರೀ. ಕೆ. ಕಾಳಪ್ಪ ಸೆಟ್ಟಿ ಇದೇ ಕಳೆದ ತಾ 23-5-48ರಲ್ಲಿ ಒಂದು ಗ್ರಾಮಸಂಘವನ್ನು ಸ್ಥಾಪಿಸಿ, ಐಂಭತ್ತು ಸದಸ್ಯರ ಕಾರ್ಯಕಾರಿ ಸಮಿತಿಯನ್ನು ರಚಿಸಿ, ಸಂಘದ ಉದ್ದೇಶಗಳನ್ನು ಪಾಲಿಸುವಂತೆ ತಕ್ಕ ಏರ್ಪಾಡು ಮಾಡಿರುವುದು ತುಂಬಾ ಸಂತೋಷಕರ.

ಮಣಿಪುರ—ಬಿಲ್ಲವ ಯೂನಿಯನಿನ ವಾರ್ಷಿಕೋತ್ಸವವು ತಾ 19-5-48ರಲ್ಲಿ ಶ್ರೀ ಬಿ. ಆರ್. ಕರ್ಕೇರರವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನಿನ ವರದಿವಾಚನ, ಸಭಿಕರಿಂದ ಭಾಷಣಗಳಾದನಂತರ ವ್ಯಭಿಚಾರಿಯಾರು? ಎಂಬ ನಾಟಕವನ್ನು ಅಭಿನಯಿಸಲಾಯಿತು. ಸಾಧಾರಣ ಒಂದುಸಾವಿರಕ್ಕೆ ಮಿಕ್ಕ ಜನರು ನೆರೆದಿದ್ದರು. ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಟ್ಟನಂತರ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ವಿವಿಧ ವಿನೋದಾವಳಿಗಳನ್ನು ಏರ್ಪಡಿಸಲಾಯಿತು. ಮಂಗಳೂರಿಂದ ಮತ್ತು ಇನ್ನಿತರ ಪರಿಸರಗಳಿಂದ ಚಿತ್ತೈಸಿದ ಮಹನೀಯರು ಯೂನಿಯನಿನ ಪಲು ತೆರೆಯಬೇಕೆಂದಿದ್ದ ವಾಚನಾಲಯಕ್ಕೆ ಧನಸಹಾಯವನ್ನು ಕೂಡ ಕೊಟ್ಟರುವರು. ಮತ್ತು ಅದರ ಅಭಿವೃದ್ಧಿಗೆ ತನ್ನ ಪ್ರೋತ್ಸಾಹವನ್ನು ಕೊಡುವುದಾಗಿ ಭರವಸೆಯಿತ್ತರು.

ಕಾಸರಗೋಡು ಕಾರ್ಯಹಳ್ಳಿ ರಾಮಕೃಷ್ಣ ಶೆಟ್ಟರ ಸ್ಮಾರಕ ಸಮಿತಿಯ ಸದಸ್ಯರ ಸಭೆಯೊಂದು ತಾ 27-5-48ರಂದು ಶ್ರೀ. ಯಲ್ಲೂರು ಉಮೇಶರಾಯರ ಅಧ್ಯಕ್ಷತೆಯಲ್ಲಿ ಸೇರಿ ಕಾರ್ಯಹಳ್ಳಿಯ ಪುಸ್ತಕ ಪ್ರಕಟಣೆಯ ವಿಚಾರದಲ್ಲಿ ಸಮಿತಿಯವರು ಮುಂದೆ ಮಾಡಬೇಕಾದ ಕಾರ್ಯಕ್ರಮದ ವಿಚಾರ ಚರ್ಚೆಯಾಗಿ, ಈ ವರೆಗೆ ಸಂಗ್ರಹವಾದ ಹಣವನ್ನು ಸಮಿತಿಯ ಹೆಸರಿನಲ್ಲಿ ಸದ್ಯ ಬೇಂಕಿನಲ್ಲಿ ಇರಿಸುವ ಮತ್ತು ಸದ್ಯದಲ್ಲೇ ಪ್ರಕಟಿಸಲಿರುವ ಕಥಾ ಸಂಗ್ರಹದ ಮುದ್ರಣ ಕಾರ್ಯದಲ್ಲಿ ಮುಂದುವರಿಯಲು ಶ್ರೀಗಳಾದ ಕಾ. ವಿಟ್ಠಲ ಶೆಟ್ಟಿ ಮತ್ತು ಯಲ್ಲೂರು ಉಮೇಶರಾಯರು ಇವರಿಬ್ಬರಿಗೆ ಅಧಿಕಾರ ಕೊಡುವ ಎರಡು ಠರಾವುಗಳು ಶ್ರೀ. ಕಯ್ಯಾರ ಕಿಞ್ಞಣ್ಣ ರೈ ಅವರಿಂದ ಸೂಚಿತವಾಗಿ ಮಂಜೂರಾಯಿತು.

ಸಾಂತೂರು— ಈ ಗ್ರಾಮದಲ್ಲಿ ವಾರ ಸಂತೆ ಇಲ್ಲದೆ ಗ್ರಾಮಸ್ಥರಿಗೂ, ನೆರೆಹೊರೆಯ ಇತರ ಗ್ರಾಮಗಳ ಜನರಿಗೂ ತುಂಬಾ ಅನಾನುಕೂಲತೆ ಉಂಟಾಗಿತ್ತು. ಸಾಂತೂರು ಪಂಚಾಯ್ತ ಬೋರ್ಡಿನವರ ಹಲವು ವರ್ಷಗಳ ಪರಿಶ್ರಮದ ಫಲವಾಗಿ ಈ ಗ್ರಾಮದ ಮುಡರಂಗಡಿ ಪೇಟೆಯಲ್ಲಿ ಇನ್ನುಮುಂದೆ ಪ್ರತೀ ಶನಿವಾರ 'ವಾರಸಂತೆ' ಜರಗಲಿರುವುದು ಎಂಬದಾಗಿಯೂ, ಇದರ ಆರಂಭೋತ್ಸವವನ್ನು ಇದೇ ತಾ 12-6-48ರಲ್ಲಿ ಜಿಲ್ಲಾ ಪಂಚಾಯತ ಆಫೀಸರವರಾದ ಶ್ರೀ ಕೆ. ಶೀನ ಶೆಟ್ಟಿ B. A. ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲಿರುವರೆಂಬದಾಗಿಯೂ ತಿಳಿದುಬರುತ್ತದೆ.

ನೋಟೀಸು

ಕುಂದಾಪುರ ಡಿ. ಮು. ಕೆ. ಕೋರ್ಟಿನಲ್ಲಿ.

R. E. A. 127 1948
R. E. P 323 1947
Os. 294/37.

ಅರ್ಜಿದಾರ—ಬಿ. ತ್ರಿವಿಕ್ರಮ ಸೆಟ್ಟಿ

ಎದುರು—1 ಗಣೇಶರಾವ್, ಹಾಡ್ಯದ ಗರಡಿ ಮನೆ. ಕುಂದಾಪುರ ತಾಲ್ಲೂಕು ಬಿಜಾಡಿ ಗ್ರಾಮದಲ್ಲಿರುವವ.

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲಿನ ಅಮಲ್ದಾರಿಯಲ್ಲಿ ಯೀಲಂ ಆಗಿ ಕೋರ್ಟ ಡಿಪೋಜಿಟನಲ್ಲಿ ಹಾಲೀ ಬಾಕಿ ಉಳಿದಿರುವ ಹಣವನ್ನು ಅರ್ಜಿದಾರನಿಗೆ ಕೊಡಿಸಬೇಕಾಗಿ ದಾಖಲು ಮಾಡಿದ ಮೇಲಿನ ಅರ್ಜಿ ತಕ್ಸೀರನ್ನು ತಾ 15-6-48ಕ್ಕೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿಯನ್ನು ಸಹಾ ತಿಳಿಸಿರುತ್ತದೆ.

By order of the court.
K. Venkappa Shetty.
Pleader for Petitioner.
Coondapoor, 28-5-48.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ಈ ಮೇಲಿನ ಎಸೋಸಿಯೇಶನಿನಿಂದ ವಿದ್ಯಾರ್ಥಿವೇತನವನ್ನು ಪಡೆಯಲಿಚ್ಛಿಸುವ ಬಡ ವಿದ್ಯಾರ್ಥಿಗಳು ಅರ್ಜಿಯನ್ನು ಜುಲ್ಯಾ ತಿಂಗಳ ತಾರೀಕು 15ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಪಡಕೊಳ್ಳಬೇಕಾಗಿ ಈ ಮೂಲಕ ತಿಳಿಸೋಣಾಗುತ್ತಿದೆ. ವಿದ್ಯಾರ್ಥಿವೇತನ ಪಡೆಯುತ್ತಿರುವ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಪರೀಕ್ಷೆಯ ಫಲಿತಾಂಶ ಸೊಡನೆ ಮುಂದುವರಿಸುವ ಬಗ್ಗೆ ಅರ್ಜಿಯನ್ನು ಕಳಿಸಬೇಕು. ಪ್ರಕೃತ ಹೈಸ್ಕೂಲು ವಿದ್ಯಾಭ್ಯಾಸದ ವರೆಗೆ ಮಾತ್ರ ವಿದ್ಯಾರ್ಥಿವೇತನವನ್ನು ಕೊಡಲಾಗುವುದು.

ಆನರಾರಿ ಜನರಲ್ ಕಾರ್ಯದರ್ಶಿ
ಬಿಲ್ಲವರ ಎಸೋಸಿಯೇಶನ್
17, ರಘುನಾಥ ದಾದಾಜಿ ರಸ್ತೆ,
ಫೋರ್ಟ್ ಮುಂಬಾಯಿ.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು.- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಘಳಿಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲದಾಳ, ಕೆಮಿಸ್ಟ, ಹಾವೇರಿ ಬ್ಯಾಡಗಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗದುವುದು.

ನವಜೀವಾತು ಎಂಬ ಸೂತಿಕಾ ರಸಾಯನ

[illegible] ಹೆಚ್ಚು [illegible] ದಿವಸಗಳಿಗೆ ಬರುವದು. ಅಂಬರ ಕೇವಲ [illegible] ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರೀ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

ಎರಡಾಣೆ

Regd. No. M. 3018

ಅಂತರಂಗ
ಅಖಿಲ ಕರ್ನಾಟಕದ
ಹೊಸ ನಮೂನೆಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

10-6-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

NAVAYUGA WEEKLY, UDIPI.

ವರ್ಷ ೨೮ ವಾರ ೪೦ — FOUNDER: Hon'ble Mr. A. B. SHETTY, Health Minister, Govt. of Madras. — Vol. 28 No. 40

ಕಾಶ್ಮೀರದ ಮಂತ್ರಿಗಳು

ಕಾಶ್ಮೀರದ ವಿವಾದ ತೀರ್ಮಾನದ ಸಲುವಾಗಿ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲು ನೇಮಿಸಿರುವ 'ಕಮಿಶನ್' ಈಗ ಹೊರಟಿದೆ. ಜಿನೇವಾದಲ್ಲಿ ತನ್ನ ಪ್ರಥಮ ಸಭೆ ಜರಗಿಸಿ, ಆ ಮೇಲೆ ಕಾಶ್ಮೀರಕ್ಕದು ಬರಲಿದೆ. ಅಗತ್ಯ ತೋರಿದಾಗ ಜುನಾಗಾಡಿನ ಜನಮತ ಸಂಗ್ರಹದ ಪ್ರಶ್ನೆ ಮತ್ತು ಭಾರತದಲ್ಲಿ ಮುಸ್ಲಿಮರ ಮರ್ದನವು ರಾಷ್ಟ್ರೀಯ ಧೋರಣೆಯಾಗಿಯೇ ನಡೆಯಿತೇ ಎಂಬ ಪ್ರಶ್ನೆಗಳನ್ನು ವಿಚಾರಿಸುವ ಅಧಿಕಾರವನ್ನೂ ಭದ್ರತಾ ಕೌನ್ಸಿಲು ಈ ಕಮಿಶನಿಗಿತ್ತುದು; ಅಧಿಕ ಪ್ರಸಂಗಿಕ್ಕೆ ಇದೆ! ಈ ಕುರಿತು ಪಂಡಿತ ನೆಹರುಗಳು ಹಿಂದೀ ಸರಕಾರದ ಸ್ಪಷ್ಟ ನಿಷೇಧ ಸೂಚನೆಯನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೊಪ್ಪಿಸಿದ್ದಾರೆ.

ಕಾಶ್ಮೀರ ಸಂಬಂಧದ ಭದ್ರತಾ ಕೌನ್ಸಿಲಿನ ತೀರ್ಮಾನಕ್ಕೆ ಭಾರತ ಮತ್ತು ಪಾಕಿಸ್ತಾನಗಳೆರಡೂ ಪೂರ್ಣವಾಗಿ ಒಪ್ಪಿಲ್ಲ. ಈ ಭಿನ್ನಾಭಿಪ್ರಾಯಗಳ ಮೂಲ ಕಾರಣವೆಂದರೆ ಕಾಶ್ಮೀರದಲ್ಲಿರುವ ಈಗಿನ ಪ್ರಜಾಧಿಕಾರ; ಶೇಕ್ ಅಬ್ದುಲ್ಲಾರ ಸರಕಾರ.

ಈ ಕಾಲದಲ್ಲೂ ಜಾತೀಯತೆಯುಳ್ಳ ಘರ್ಷಣೆಗೆ ನ್ಯಾಯ ನೀತಿ ಮತ್ತು ಸಮಾನ ಬಾಂಧವ್ಯ ಹಾಗೂ ಶುದ್ಧ ರಾಷ್ಟ್ರೀಯತೆಯನ್ನಾಧರಿಸಿರುವ ಮಂತ್ರಿಮಂಡಲ ಕಾಶ್ಮೀರದ್ದು; ಮುಸ್ಲಿಂ ಬಹುಸಂಖ್ಯಾಕ ಪ್ರಜೆಗಳಿದ್ದೂ ಸರ್ವ ಸಮಾಜಗಳ ಸಮಾನ ವಿಶ್ವಾಸಕ್ಕೆ ಪಾತ್ರನಾದ ಮುಸ್ಲಿಮನೊಬ್ಬನ ನಾಯಕತ್ವದ ಒಂದು ಸರಕಾರವಿರುವುದಾದರೆ ಅದು ಕಾಶ್ಮೀರದ ಶೇಕ್ ಅಬ್ದುಲ್ಲಾರ ಸರಕಾರ. ಸ್ವಧರ್ಮೀಯ ಕೊಲೆಗಡುಕ ದಂಡುಗಳನ್ನು ರಾಷ್ಟ್ರಕ್ಕಾಗಿ ಅಸಾಧಾರಣ ಧೈರ್ಯ ಸ್ಥೈರ್ಯ ತ್ಯಾಗ ಸಹನೆಗಳಿಂದ ಇದಿರಿಸುವಂತೆ ಜನತೆಯನ್ನು ಪ್ರೇರೇಪಿಸಿ ನಿಲ್ಲಿಸಿರುವ ಒಂದು ಉಜ್ವಲ ಮಾದರಿಯೇ ಇಂದಿನ ಶೇಕ್ ಅಬ್ದುಲ್ಲಾ ಮಂತ್ರಿಮಂಡಲ; ಆ ಮಂಡಲಿಯ ಸದಸ್ಯರ ಅಲ್ಪ ಪರಿಚಯವು ಇಲ್ಲಿದೆ.

ಶೇಕ್ ಅಬ್ದುಲ್ಲಾ

'ಶೇರ್-ಇ-ಕಾಶ್ಮೀರ್' (ಕಾಶ್ಮೀರದ ಹುಲಿ)ಯೆಂದರೇನೇ 'ಶೇಕ್ ಮಹಮ್ಮದ್ ಅಬ್ದುಲ್ಲಾ' ಎಂದುದಕ್ಕಿಂತ ಬೇಗನೇ ಕಾಶ್ಮೀರಿಗಳಿಗೆ ಅರ್ಥವಾದೀತು. ರಾಜಧಾನಿ ಶ್ರೀನಗರಕ್ಕೆ ಬಹಳ ದೂರವಿಲ್ಲದ ಸೌರಾ ಎಂಬ ಹಳ್ಳಿಯಲ್ಲಿ 1905ರಲ್ಲಿ ಹುಟ್ಟಿದವರಿವರು. ಕುಲ ಕಸಬಾಗಿದ್ದ ಕಾಶ್ಮೀರೀ ಶಾಲಿನ ವ್ಯಾಪಾರವು ಇವರಿಗೆ ಹಿಡಿಯದೆ ವಿದ್ಯಾಭ್ಯಾಸಕ್ಕೆ ಮನಸ್ಸು ಕೊಟ್ಟರು. ಜಮ್ಮು ಕಾಲೇಜು, ಆ ಮೇಲೆ ಲಾಹೋರು ಕಾಲೇಜಿನಲ್ಲಿ ಕಲಿತು ಕೊನೆಗೆ ಅಲಿಘರ್ ವಿಶ್ವವಿದ್ಯಾಲಯದ ಎಮ್.ಎಸ್.ಸಿ. ಪದವೀಧರರಾದರು. ವಿದ್ಯಾರ್ಥಿ ದಸೆಯಲ್ಲಿಯೇ ಕೆಲಸಗಾರ ಸಂಘ ಮತ್ತು ವಿದ್ಯಾರ್ಥಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ಆ ಮೇಲೆ ಕೆಲ ಕಾಲ ಕಾಶ್ಮೀರದ ಹೈಸ್ಕೂಲೊಂದರಲ್ಲಿ ವಿಜ್ಞಾನಾಧ್ಯಾಪಕರಾಗಿದ್ದರು. ಜನತೆಯ ಸಂಕಷ್ಟಗಳಿಗೆ ಹೃದಯ ಮರುಗಿ ಹೋಗಿ ... ಕಿಗಳು. ಪ್ರಥಮತಃ ಕೆಲವು ಮಿತ್ರರನ್ನು ಕಟ್ಟಿಕೊಂಡು ಪ್ರಚಾರ ಮಾಡಿ 1931ರಲ್ಲಿ 'ಮುಸ್ಲಿಂ ಸಮ್ಮೇಲನ'ವನ್ನು ಸ್ಥಾಪಿಸಿಕೊಂಡು ಕಾಶ್ಮೀರದ ಸ್ವಾತಂತ್ರ್ಯ ಚಳವಳಿ ನಡೆಸಿದರು. ಆ ವರುಷವೇ ಶೇಕ್ ಸಾಹೇಬರ ಮತ್ತವರ ಅನುಯಾಯಿಗಳ ದಸ್ತಗಿರಿಯಾಯಿತು. ಚಳವಳದ ಪ್ರಭಾವ ಹಬ್ಬಿತು. 1938ರಲ್ಲಿ 'ಮುಸ್ಲಿಂ ಸಮ್ಮೇಳನ'ವನ್ನು 'ರಾಷ್ಟ್ರೀಯ ಸಮ್ಮೇಳನ'ವಾಗಿ ಮಾರ್ಪಡಿಸಿ, ಉಗ್ರ ಸ್ವಾತಂತ್ರ್ಯ ಹೋರಾಟ ಹೂಡಿ ಪುನಃ ಕೈದಾದರು. 1939ರಲ್ಲಿ ಬಿಡುಗಡೆಗೊಂಡು ಜವಾಬ್ದಾರೀ ಸರಕಾರ ಸಾಧನೆಗಾಗಿ ಕಾಶ್ಮೀರದ ಮೂಲೆ ಮೂಲೆಯನ್ನು ಚೇತನಗೊಳಿಸಿ ಕೊನೆಯದಾಗಿ "ಕ್ವಿಟ್ ಕಾಶ್ಮೀರ" ಚಳವಳಿ ಹೂಡಿ ಮತ್ತೊಮ್ಮೆ ದಸ್ತಗಿರಿಗೊಳಗಾದರು. ಆ ಮೇಲೆ 1947ರಲ್ಲಿ ಸ್ವರಾಜ್ಯದಾನಾನಂತರ ನಡೆದ ಮಹಾ ಮಹಾ ಘಟನೆಗಳ ಚಕ್ರಸುತ್ತು ಶೇಕ್ ಅಬ್ದುಲ್ಲಾರ ಇಚ್ಛಾಪೂರ್ತಿಗೊಳಿಸಿತು. 1948ನೇ ಮಾರ್ಚಿಯಲ್ಲಿ ಸ್ಥಾಪಿತವಾದ ಕಾಶ್ಮೀರದ ನಡುಗಾಲ ಸರಕಾರದ ಪ್ರಧಾನ ಮಂತ್ರಿಯೂ ಕಾಶ್ಮೀರದ ನವ ಜೀವದಾತನೂ ಆಗಿದ್ದಾರೆ ಶೇಕ್ ಸಾಹೇಬ್. ಕಾಶ್ಮೀರಿ ಜನರಿಗೆ ಶೇರ್-ಇ-ಕಾಶ್ಮೀರರು ಪ್ರಾಣದಷ್ಟೇ ಪ್ರಿಯ. ಪಂಡಿತ ನೆಹರುಗಳ ಖಾಸಗೀ ಪ್ರಾಣಸಖ.

ಗುಲಾಮು ಮುಹಮ್ಮದ್ ಭಕ್ಷಿ

ಇವರು ಕಾಶ್ಮೀರದ ಉಪ ಪ್ರಧಾನ ಮಂತ್ರಿ. ಶೇಕ್ ಸಾಹೇಬ್ ಕಾಶ್ಮೀರದ ನೆಹರುವಾಗಿದ್ದರೆ ಭಕ್ಷಿ ಸಾಹೇಬ್ ಕಾಶ್ಮೀರದ ಸರ್ದಾರ್. 1907ರಲ್ಲಿ ಜನನ. ನೆಹರುಗಳಿಗೆ ಹಿಮ ಸವಾರೀ ಕಲಿಸಿದ ಗುರು ಇವರು ಕಾಶ್ಮೀರದ ರಾಷ್ಟ್ರೀಯ ಚಳವಳದ ಜನ್ಮದಾರಭ್ಯ ಅದರ ಸೂತ್ರಧಾರಿಗಳಲ್ಲೊಬ್ಬರಾಗಿದ್ದರು. ಹುಡುಗ ಪ್ರಾಯದಲ್ಲೇ ವಿದೇಶೀ ವಸ್ತು ಬಹಿಷ್ಕಾರ ಚಳವಳದಲ್ಲಿ ಸೆರೆ ಶಿಕ್ಷೆಯನುಭವಿಸಿದ್ದರು. ಕಳೆದ 18 ವರುಷಗಳಲ್ಲಿ ನಾಲ್ಕು ಬಾರಿ ಜೈಲುವಾಸವನುಭವಿಸಿದ್ದಾರೆ. ಸಂಘಸ್ಥಾಪನೆ, ಸಂಘಟನಾ ಕಾರ್ಯಗಳಲ್ಲಿ ಇವರು ಅನುಪಮರು. ಕಳೆದ 'ಕ್ವಿಟ್ ಕಾಶ್ಮೀರ' ಚಳವಳದಲ್ಲಿ ಶೇಕ್ ಅಬ್ದುಲ್ಲಾ ಬಂಧನದಲ್ಲಿದ್ದಾಗ ಇವರಲ್ಲಿಂದ ತಲೆ ತಪ್ಪಿಸಿಕೊಂಡು ಭಾರತಕ್ಕೆ ಬಂದು ಕಾಶ್ಮೀರದ ಹೋರಾಟವನ್ನು ಮುನ್ನಡೆಯಿಸಿದ್ದರು; ಜೈಪ್ರಕಾಶ್ ಪ್ರತಾಪ ತೋರಿಸಿದ್ದರು. ಆ ಮೊದಲಿನ 1938ರ ಚಳವಳದಲ್ಲಿ ಕಾಶ್ಮೀರದಲ್ಲಿದ್ದುಕೊಂಡೇ ತೆರೆಯ ಮರೆಯಿಂದ ಅಸಾಧ್ಯ ಸಾಹಸ ಕಾರ್ಯ ನಡೆಯಿಸುತ್ತಿದ್ದರೂ ಸಂಸ್ಥಾನೀ ಪೋಲಿಸರಿಗೆ ಇವರನ್ನು ಹಿಡಿಯಲಾಗಿರಲಿಲ್ಲ ಈ ಬಾರಿಯ ಪುಂಡರ ಧಾಳಿಯನ್ನೆದುರಿಸುವ ಸಂಘಟನೆಯಲ್ಲಿ ಭಕ್ಷಿಯವರ ಕೈ ಜಾದುಬ್ರಹ್ಮನ ಕೈಯಂತೆ ಆಶ್ಚರ್ಯಗಳನ್ನೇ ನಿರ್ಮಿಸಿದೆ. ಅವರು ಕಾರ್ಯ ಪ್ರವೀಣ- ಮಾತಿನವರಲ್ಲ, ಆಕಾಶಜೀವಿಯಲ್ಲ. ನೀವವರಿಂದಿರು ಕುಳಿತುಕೊಂಡು ತಾಸುಗಟ್ಟಲೆ ಯಾವುದಾದರೊಂದು 'ಇಸಮ್'ನ ಸ್ತುತಿ ಮಾತಾಡಿ; ಸಮಯವಿದ್ದರೆ ಕುಳಿತು ಕೇಳುವರು. ಆದರೆ ಕೊನೆಗೇರುವಾಗ ಅಷ್ಟು ಹೊತ್ತಿನಲ್ಲೂ ಭಕ್ಷಿ ನಿಮಗಿಂತ ಬಹು ದೂರದಲ್ಲಿದ್ದರೆಂಬುದನ್ನರಿಯುವಿರಿ. ಅಗಾಧ ಸಂಘಟನಾ ಶಕ್ತಿ, ಅಪಾರ ಧೈರ್ಯ, ಅನನ್ಯ ಶಿಸ್ತುಪ್ರೇಮ–ಇವೇ ಭಕ್ಷಿಗಳ ಜೀವನಾಧಾರ ಸೂತ್ರಗಳು. ಇವರೇ ಅಬ್ದುಲ್ಲಾರ ಬಲಗೈ; ಕಾಶ್ಮೀರದ ಗೃಹಮಂತ್ರಿ

ಮಿರ್ಝಾ ಅಫ್ಝಲ್ ಬೇಗ್

ಶೇಕ್ ಅಬ್ದುಲ್ಲಾರ ಪ್ರಾಣಾಪ್ತ ಅನುಯಾಯಿಗಳಲ್ಲೊಬ್ಬರು ಮಿರ್ಝಾ ಮಹಮ್ಮದ್ ಅಫ್ಝುಲ್ ಬೇಗ್. ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಬೇಗರಷ್ಟು ಜನಪ್ರಿಯ ಬೇರಿಲ್ಲ. 1908ರಲ್ಲಿ ರೈತ ಕುಟುಂಬವೊಂದರಲ್ಲಿ ಜನನ ಇವರೂ ಅಲಿಘರ್ ವಿಶ್ವವಿದ್ಯಾಲಯದ ಪದವೀಧರ. 1931ರಿಂದಲೂ ಕಾಶ್ಮೀರದ ಚಳವಳದ ಆಧಾರ ಸ್ತಂಭಗಳಲ್ಲೊಬ್ಬರಾಗಿದ್ದರಲ್ಲದೆ 1934ರಲ್ಲಿ ಆಗಿನ 'ಮುಸ್ಲಿಂ ಸಮ್ಮೇಳನ'ದ ಮುಖ್ಯ ಕಾರ್ಯದರ್ಶಿಯಾಗಿದ್ದರು. ಆ ಮೇಲದು 'ರಾಷ್ಟ್ರೀಯ ಸಮ್ಮೇಲನ'ವಾಗುವಂತೆ ಮಾರ್ಪಡಲು ನೆರವಾದರಲ್ಲದೆ, ಅದರ ಪ್ರಥಮ ಚಳವಳದಲ್ಲಿ ಅಗ್ರ ಭಾಗದಲ್ಲಿ ನಿಂತು ಹೋರಾಡಿ ಒಂದು ವರುಷ ಶಿಕ್ಷೆಗೊಳಗಾಗಿದ್ದರು. ಕಾಶ್ಮೀರದ ಪ್ರಮುಖ ವಕೀಲನಾಗಿ ಹೆಸರು ಪಡೆದಿದ್ದ ಮಿರ್ಝಾ ಬೇಗ್ಗರು ನಾಲ್ಕು ಬಾರಿ ಕಾಶ್ಮೀರದ ಲೆಜಿಸ್ಲೇಟಿವ್ ಎಸೆಂಬ್ಲಿಗೆ ತನ್ನ ಸಂಸ್ಥೆಯ ಪರವಾಗಿ ಅವಿರೋಧವಾಗಿ ಆರಿಸಲ್ಪಟ್ಟಿದ್ದರು. 1943ರಲ್ಲಿ ಮಹಾರಾಜರು ನೇಮಿಸಿದ ಸುಧಾರಣಾ ಕಮಿ

[ಅನೇ ಪುಟದಿಂದ]

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:-ಧಾರವಾಡ,
ಪೋಸ್ಟು ಬಾಕ್ಸ ನಂಬ್ರ 10, ಉಡುಪಿ. THE UNITED KARNATAK INSURANCE COMPANY, LIMITED.

ಉದಕಮಂಡಲದಲ್ಲಿ ಏಶ್ಯಾ ರಾಷ್ಟ್ರಗಳ ಸಭೆ

ಊಟಕಮಂಡಿನಲ್ಲಿ ಏಶ್ಯಾ ಹಾಗೂ ದೂರ ಪ್ರಾಚ್ಯ ರಾಷ್ಟ್ರಗಳ ಸಂಯುಕ್ತ ರಾಷ್ಟ್ರಸಂಘದಾರ್ಥಿಕ ಸಮಿತಿಯ ಅಧಿವೇಶನ ಸೇರಿದುದು ಭಾರತ ಮತ್ತು ಏಸ್ಯಾದ ಪಾಲಿನ ಪ್ರಾಮುಖ್ಯ ಘಟನೆ. ಹೈದರಾಬಾದಿನ ಸಮಸ್ಯೆಯು ದ್ವಿಪಕ್ಷ ಸಮ್ಮತವಾಗಿ ತೀರ್ಮಾನಗೊಳ್ಳುವುದು ಅಸಾಧ್ಯವೆಂದು ಪುನಃ ಖಚಿತವಾದರೂ, ಆ ಸಂಸಂಬಂಧದ ಸ್ಪಷ್ಟ ನಿರ್ಧಾರವು ಈ ವರೆಗೂ ಆಗದಿರುವುದೊಂದು ಆಶ್ಚರ್ಯವೇ ಸರಿ. ಕಾಶ್ಮೀರ ವಿವಾದದ ಕುರಿತು ಭದ್ರತಾ ಕೌನ್ಸಿಲು ನೇಮಿಸಿರುವ 'ಕಮಿಶನ್' ಈಗ ಅಲ್ಲಿಂದ ಹೊರಟಿರುವುದರಿಂದಲೂ, ಕಾಶ್ಮೀರದ ರಣಕಣದಲ್ಲಿ ಹೆಚ್ಚಿನ ಬಿಗುತನ ತೋರಿಬರುತ್ತಿರುವುದರಿಂದಲೂ ಆ ಕಡೆಗೆ ತುಸು ವಿಶೇಷ ರೀತಿಯ ಬೆಳಕು ಬಿದ್ದಿದೆ. ಗಾಂಧಿಜೀ ಕೊಲೆಯ ಆರೋಪಿಗಳು ಮತ್ತೊಂದು ಬಾರಿ ಕೋರ್ಟಿನ ಮುಂದೆ ಬಂದರು. ಮಿ. ಸುಹ್ರವರ್ದಿಗಳ ಪ್ರಚಾರ ಕಾರ್ಯಕ್ಕಾಗಿ ಒಂದು ಕಾಲದ ಮುಖ್ಯಾಧಿಕಾರಿಯಾಗಿದ್ದ ಅವರೇ ಪೂರ್ವ ಬಂಗಾಳದಲ್ಲಿ ದಿಗ್ಬಂಧನಕ್ಕೊಳಗಾದುದನ್ನು ಕಾಣುವಾಗ ಪಾಕಿಸ್ತಾನದೊಳಗಿನ ಸ್ಥಿತಿ, ಮತಿಯರಷ್ಟೂ ಸುಖಕರವಾಗಿಲ್ಲವೆಂದು ಹೊಳೆಯುತ್ತಿದೆ.

ಜಾಗತಿಕ ರಂಗದಲ್ಲಿ ಪೆಲಸ್ತೈನಿನ ಸಮರ ಶಮನ ಪ್ರಯತ್ನ-ಚೈನಾದ ಕಾಳಗ-ಮತ್ತಿತರ ಪ್ರಚಲಿತ ವಿದ್ಯಮಾನಗಳೇ ಒಡೆದು ಕಾಣುತ್ತಿವೆ.

ಅಂತೂ ಕಳೆದ ವಾರದಲ್ಲೂ ಕವಿದ ಮೋಡ ಚದರಿದುದಿಲ್ಲ; ಅಲ್ಲಲ್ಲಿ ಆಗಾಗ ಕೋಲ್ಮಿಂಚುಗಳ ಬೆಳಕು ಮಾತ್ರ ಚೆಲ್ಲಿದಂತಿತ್ತು. ಈ ಮಿಂಚುಗಳು ಕತ್ತಲೆಯನ್ನು ನಿವಾರಿಸುವಂತಹವೆಂಬ ಆಶೆ ಹುಟ್ಟಿಸುವುದಕ್ಕಿಂತಲೂ ಸಿಡಿಲೆರಗಿಸಿಯಾವೆಂಬ ಭೀತಿ ಹುಟ್ಟಿಸುವುದು ಸ್ವಾಭಾವಿಕ. ಆದರೂ ನಿರಾಶಾವಾದದ ಕಾಲ ಇದಲ್ಲವೆನ್ನಬಹುದು. ಎಲ್ಲಾ ಕಡೆಯವರೂ ಎಂತೆಂತಹ ಉನ್ಮತ್ತತೆಯನ್ನು ಪ್ರದರ್ಶಿಸುವವರಂತೆ ತೋರಿಸಿಕೊಂಡರೂ ಈವರೆಗಿನವುಗಳಿಗೆ ಪ್ರದರ್ಶನ ಮೌಲ್ಯಕ್ಕಿಂತ ಹೆಚ್ಚಿನ ಬೆಲೆ ಕೊಡುವುದಸಾಧ್ಯ. ಈಗಲೇ ಇನ್ನೊಂದು ಮಹಾಯುದ್ಧಕ್ಕೆಳಸುವ ಹುರುಪು ಅಥವಾ ಹಂಗೋಲು ಯಾರಲ್ಲಿಯೂ ಇಲ್ಲದ್ದ, ಅದುಂಟೆಂಬುದನ್ನು ಪರಸ್ಪರ ತೋರಿಸಿಕೊಳ್ಳುವ ಆಟವಷ್ಟೇ ನಡೆದುತ್ತಿದೆ. ಆದರೆ ಅತಿ ದೀರ್ಘ ಕಾಲದ ಆಟವು ಅಭ್ಯಾಸವಾಗಿ ಮಾರ್ಪಡುವುದಿದೆ. ಆದ್ದರಿಂದ ಈಗಿನ ಸ್ಥಿತಿಗತಿಗಳು ಸಮಾಧಾನಕರವಲ್ಲ.

ಏಶ್ಯಾದ ಆರ್ಥಿಕ ಸಭೆ

ಸಂಯುಕ್ತ ರಾಷ್ಟ್ರ ಸಂಘದ ಏಶ್ಯಾ ಮತ್ತು ಪೂರ್ವ ಪ್ರಾಚ್ಯ ರಾಷ್ಟ್ರಗಳ ಆರ್ಥಿಕ ಕಮಿಶನಿನ ಮೂರನೇ ಅಧಿವೇಶನವು ಜೂನ್ ತಾ 1ರಲ್ಲಿ ಊಟಯಲ್ಲಿ ಪ್ರಾರಂಭಿಸಿತು. ಯುದ್ಧ ಹಾನಿಗಳಿಂದ ಮುಗ್ಗರಿಸಿರುವ ಹದಿನೆಂಟು ರಾಷ್ಟ್ರಗಳ ಸುಮಾರು ನೂರು ಕೋಟಿ ಜನತೆಯ ಆರ್ಥಿಕ ಸ್ಥಿತಿಯ ಪುನರ್ವ್ಯವಸ್ಥೆ ಮತ್ತು ಪುನರುದ್ಧಾರವನ್ನು ಸಾಧಿಸುವುದಕ್ಕಾಗಿ ಸೇರಿರುವ ಸಮ್ಮೇಲನವಿದು. ಊಟಕಮಂಡ್ ನಗರದ ಎರಡು ಮೈಲು ದೂರದಲ್ಲಿರುವ ಜೋಧ್‌ಪುರ ಮಹಾರಾಜರ ಭವ್ಯ ಅರಮನೆಯಲ್ಲಿ ವಿವಿಧ ರಾಷ್ಟ್ರಗಳ ಈ ಪ್ರತಿನಿಧಿ ಸಮ್ಮೇಲನವು ಸೇರಿದ್ದಿತು. ಭಾರತದ ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಸಮ್ಮೇಳನವನ್ನು ಉದ್ಘಾಟಿಸಿದರು. ಪ್ರಥಮತಃ ಮದ್ರಾಸ್ ಗವರ್ನರ್ ಸರ್. ಆರ್ಚಿಬಾಲ್ಡ್ ನೈಯವರು ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಐದೇ ಮಿನಿಟಿನ ಸರಸ ಭಾಷಣವಿತ್ತರು.

ಪಂಡಿತ ನೆಹರುಗಳ ಭಾಷಣ

ಸಮ್ಮೇಳನವನ್ನು ಉದ್ಘಾಟಿಸುತ್ತಾ ಭಾರತ ಪ್ರಧಾನಿ ಪಂಡಿತ ನೆಹರುಗಳಿತ್ತ 35 ಮಿನಿಟುಗಳ ಭಾಷಣವು ಅಮೋಘವಿದ್ದಿತು. ಸರ್ವರ ಶ್ಲಾಘನೆಗರ್ಹವಾಯಿತು. ಏಶ್ಯಾ ಮತ್ತು ಪೂರ್ವ ಪ್ರಾಚ್ಯ ರಾಷ್ಟ್ರಗಳ ಪೈಕಿ ತೀರಾ ಹಿಂದೆ ಬಿದ್ದಿರುವ ರಾಷ್ಟ್ರಗಳಿಗೆ ನಿಶೇಷ ಮುಂದುವರಿದ ರಾಷ್ಟ್ರಗಳು, ಯಾವ ಆರ್ಥಿಕಾಧಿಕಾರವನ್ನೂ ಹೇರಲು ನೋಡದೆ ಮುಖ್ಯ ಸಾಮಾನುಗಳ ಹಾಗೂ ಮಾರ್ಮಿಕ ನೈಪುಣ್ಯದ ಸಹಾಯವನ್ನು ಸಲ್ಲಿಸಲು ಬದ್ಧವಿವೆಯೆಂದು ನೆಹರುಗಳು ಆಗ್ರಹದಿಂದ ನಿವೇದಿಸಿಕೊಂಡರು. 'ಈ ಸಮಿತಿಯ ಕಾರ್ಯಕಲಾಪಗಳಲ್ಲಿ ಭಾರತದ ಪೂರ್ಣ ಸಹಕಾರವಿದೆಯೆಂದು ಆಶ್ವಾಸನೆ ಕೊಡುತ್ತೇನೆ. ಏಸ್ಯದ ಪ್ರತಿಯೊಂದು ರಾಷ್ಟ್ರವೂ ರಾಜಕೀಯವಾಗಿ ಸ್ವತಂತ್ರವಿರಬೇಕು. ಯಾವುದೇ ಹೊರ ರಾಷ್ಟ್ರವು ಬಲುಮೆಯಿಂದ ಅಧಿಕಾರಹೇರುವ ಯಾವುದೇ ಪ್ರಯತ್ನಕ್ಕೆಳೆದಲ್ಲಿ ಈ ಕ್ಷೇತ್ರದ ಯಾವ ಭಾಗಕ್ಕೂ ಶಾಂತಿಯೆಂಬುದಿರಲಾರದು. ಭಾರತವು ಏಶ್ಯಾದ ನಾಯಕ ಸ್ಥಾನ ವಹಿಸುವದೆಂಬಂತಹ ಮಾತುಗಳು ಖಂಡನೀಯವಿವೆ. ಇಂತಹ ಲಘು ಮಾತಾಡುವುದನ್ನು ನಿಲ್ಲಿಸಬೇಕು. ಪರಸ್ಪರ ಸಹಕಾರ ಮತ್ತು ಸಹಾಯದ ಮನೋವೃತ್ತಿಯೇ ನಮ್ಮದಾಗಿರಬೇಕು" ಎಂದರು ನೆಹರು. ಇಂಡೋನೇಶಿಯದ ರಿಪಬ್ಲಿಕ್ ಸರಕಾರವೂ ತನ್ನ ಪ್ರತಿನಿಧಿಯನ್ನು ಕಳುಹಿಸುವಂತೆ ಆಮಂತ್ರಿಸುವಂತಾಗಬೇಕೆಂಬ ಆಶೆಯು ತನ್ನದೆಂದು ತಿಳಿಸಿ ಏಶ್ಯಾದ ಅತಿ ಬಡ ಹಾಗೂ ಅತಿ ಶ್ರೀಮಂತ ರಾಷ್ಟ್ರಗಳಲ್ಲಿ ಅದೊಂದು, ಎಂದರು. ಸಮ್ಮೇಳನವು ತನ್ನ ಶಾಶ್ವತ ಮುಖ್ಯ ಕಚೇರಿಯನ್ನು ಭಾರತದಲ್ಲಿ ಸ್ಥಾಪಿಸಬೇಕೆಂದು ಕೇಳಿಕೊಂಡು, ಅಂತಹ ಸಂದರ್ಭದಲ್ಲಿ ಸರ್ವಾನುಕೂಲತೆಗಳನ್ನೊದಗಿಸಿಕೊಡಲು ಭಾರತ ಸರಕಾರವು ಸಿದ್ಧವಿದೆಯೆಂದೂ, ಅದರ ಕಚೇರಿ ಎಲ್ಲಿಯೇ ಸ್ಥಾಪನೆಗೊಂಡರೂ ಭಾರತದ ಪೂರ್ಣ ಸಹಕಾರವಂತೂ ಇದ್ದೇ ಇದೆಯೆಂದೂ ಸ್ಪಷ್ಟಪಡಿಸಿದರು. "ಏಶ್ಯಾದ ಹಲವು ರಾಷ್ಟ್ರಗಳು ತಮ್ಮ ರಾಜಕೀಯ ಸಮಸ್ಯೆಗಳನ್ನೇ ಪೂರ್ಣ ತೀರ್ಮಾನಿಸಿಕೊಂಡಿಲ್ಲ. ಭಾರತ ಮತ್ತಂತೆಯೇ ಇಡೀ ಏಸ್ಯಾ ಕ್ಷೇತ್ರವು ಜನ ಮತ್ತು ಸಾಮಗ್ರಿಗಳ ಅಪಾರ ಸಂಪತ್ಸಮೃದ್ಧಿಯುಳ್ಳದ್ದಾಗಿದೆ. 40 ಕೋಟಿ ಜನರುಳ್ಳ ಭಾರತವು ಈ ಕ್ಷೇತ್ರದ ಸೇ. 40ರಷ್ಟಿರುವ ಮುಖ್ಯ ಭಾಗ. ಭಾರತವು ಅಮಿತ ಜನಸಂಖ್ಯೆಯುಳ್ಳ ರಾಷ್ಟ್ರವೆಂಬ ಆರೋಪವಿದೆ. ಇದು ತಪ್ಪು. ಗಂಗಾ ಬಯಲಿನಂತಹ ಕೆಲವು ಭಾಗಗಳಲ್ಲಿ ಜನದೊತ್ತಡವಿದ್ದರೂ, ಹಲವು ದೊಡ್ಡ ಭಾಗಗಳಲ್ಲಿ ಜನರೇ ಇಲ್ಲದಿರುವುದರಿಂದ ಭಾರತವು ಜನಸಂಖ್ಯೆಯ ಕೊರತೆಯುಳ್ಳ ದೇಶವೆಂದು ನನ್ನ ಅಭಿಮತ" ಎಂದು ವರ್ಣಿಸಿ, ಹೈಡ್ರೋ ಇಲೆಕ್ಟ್ರಿಕ್ ಪವರ್ ಮತ್ತಿತರ ಉದ್ದಿಮೆಗಳಿಗಾಗಿ ನದೀ ಪಲಯಗಳನ್ನು ಸರಕಾರವೇ ಪಡೆಕೊಂಡು ಕಾರ್ಯಯೋಜನೆ ಕೈಕೊಂಡಿರುವುದನ್ನು ತಿಳಿಸಿ ಹೇಳಿದರು. "ಸಂಯುಕ್ತ ರಾಷ್ಟ್ರಸಂಘವು ಇದುವರೆಗೆ ರಾಜಕೀಯ ರಂಗದಲ್ಲಿ ವಿಜಯವಾಗಿಲ್ಲ. ಆದರದು ಆರ್ಥಿಕ ಕ್ಷೇತ್ರದಲ್ಲಿ ಜಯಶಾಲಿಯಾಗುವದೆಂದು ನನ್ನಾಶೆ. ನಾವು ಆರ್ಥಿಕ ರಂಗದಲ್ಲಿ ಗೆದ್ದೆವಾದರೆ ರಾಜಕೀಯ ರಂಗದಲ್ಲೂ ಗೆಲ್ಲಬಲ್ಲೆವು" ಎಂದು ನೆಹರುಗಳ ಮಾತು.

ಸಮ್ಮೇಳನ ಕಾರ್ಯಗಳು

ಭಾರತ ಸರಕಾರದ ಔದ್ಯೋಗಿಕ ಮಂತ್ರಿಯಾಗಿರುವ ಡಾ। ಜಾನ್ ಮಥಾಯಿಗಳು ಏಶ್ಯಾ ಮತ್ತಿತರ ಪೂರ್ವ ಪ್ರಾಚ್ಯ ರಾಷ್ಟ್ರಗಳ ಸಂಯುಕ್ತರಾಷ್ಟ್ರೀಯ ಸಂಘದ ಆರ್ಥಿಕ ಸಮಿತಿಗೆ ೧೯೪೮ನೇ ಇಸವಿಗಧ್ಯಕ್ಷರಾಗಿ ಊಟಿ ಸಮ್ಮೇಳನದಲ್ಲಿ ಸರ್ವಾನುಮತದಿಂದಾರಿಸಲ್ಪಟ್ಟರು. ಬರ್ಮದ ವೋಂಗ್‌ಮಿಟ್ ಸಾವ್‌ಬ್ವಾರವರು ಉಪಾಧ್ಯಕ್ಷರಾದರು. ಇಂಡೋನೇಶಿಯದ ರಿಪಬ್ಲಿಕ್ ಸರಕಾರಕ್ಕೆ ಸಹಾಯಕ ಸದಸ್ಯ ಸ್ಥಾನ ಕೊಡುವ ಕುರಿತು ಅಧಿವೇಶನದಲ್ಲಿ ವಿಶೇಷ ರೀತಿಯ ಚರ್ಚೆ ನಡೆದಿದೆ. ಡಚ್ ಪ್ರತಿನಿಧಿಗಳು ಅದಕ್ಕೆ ವಿರೋಧವಿದ್ದಾರಲ್ಲದೆ, ಕಾನೂನು ನಿಯಮಗಳ ಆಕ್ಷೇಪಗಳೂ ಮುಂದೆ ಬಂದು, ಈ ವಿಷಯವು ಇದೇ ತಾ. 9ಕ್ಕೆ ಮುಂದುವರಿಸಲ್ಪಟ್ಟಿದೆ. ನೇಪಾಳಕ್ಕೆ ಸದಸ್ಯತ್ವವು ಕೊಡಲ್ಪಟ್ಟಿತು. ಏಸ್ಯಾದ ರಾಷ್ಟ್ರಗಳ ಔದ್ಯೋಗಿಕ ಪುನರ್ಜೀವನಕ್ಕಾಗಿ ದೊಡ್ಡ ರಾಷ್ಟ್ರಗಳ ಸಹಾಯ ಪಡೆಯುವ ಕುರಿತು ಸವಿವರ ಚರ್ಚೆ ನಡೆಸಿ ಔದ್ಯೋಗಿಕ ಪುನರುದ್ಧಾರದ ಯೋಜನೆ ನಿರೂಪಿಸಲು ಕಳೆದ ವರುಷದ ಅಧಿವೇಶನದಲ್ಲೇ ನೇಮಿಸಲ್ಪಟ್ಟಿದ್ದ ಕಾರ್ಯಕಾರೀ ಪಕ್ಷವು ಕಳೆದ ಆರು ವಾರಗ

WANTED

immediately on Government revised scales of pay for POMPEI HIGH SCHOOL & H. Ele. School.

(1) L T's or B T's in Science or History (for High School) (2) Secondary Grade Trained Teachers (for H. Ele. School) (3) Kannada Pundit (for High School & H. Ele School) (4) Physical Training Instructor (for High School-Y. M. C. A. Higher) (5) Drawing Master, Higher Grade (for High School) (6) Bookbinding Instructor (for High School)

Graduates for suitable jobs may also apply.

The Correspondent,
Pompei High School,
Talipady, Aikala Post (via) Mulki (S. Kanara)

The 1946 Record Business proves the popularity
THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 bout **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India.
Bombay Life Building,
Central Office, Udipi:

Branches at:
Mangalore, Calicut, Trivandrum, Madura, Madras, Bangalore & Bombay,

ಹೈದರಾಬಾದ್ ರಾಜಿ ಯತ್ನ
ಪೆಲೆಸ್ತೈನ್ ಶಮನ ಪ್ರಯತ್ನ

ಳಿಂದ ಅವಿಶ್ರಾಂತವಾಗಿ ಸಭೆ ಸೇರಿದ್ದರೂ, ಯಾತ ಕಾರ್ಯಕ್ರಮ ಗೊಳಿಸುವದೂ ಅದಕ್ಕೆ ಅಸಾಧ್ಯವಾಗಿರುವ್ವದರಿಂದ, ಉದಕಮಂಡಲದ ಅಧಿವೇಶನವು ಅದರ ಮಧ್ಯಾವಧಿ ವರದಿಯನ್ನು ಪರಿಶೀಲಿಸಿ, ಸ್ಪಷ್ಟ ನಿರೂಪಣಾ ವರದಿ ತಯಾರಿಸಲು ಇತೀ ಸಭೆಯ ಸಣ್ಣ ಸಮಿತಿಯೊಂದಕ್ಕದನ್ನು ಒಪ್ಪಿಸಿ ಕೊಟ್ಟಿದೆ. ಅಧಿವೇಶನದ ಕಾರ್ಯಕಲಾಪಗಳು ಪರಿಣಾಮಕಾರಿಯಾಗಿ ಸಾಗುತ್ತಿವೆ.

ಹೈದರಾಬಾದ್ ತಂಟೆ

ಭಾರತ ಹೈದರಾಬಾದಿನೊಳಗಿನ ಸಂಧಾನ ಮಾತುಕತೆಗಳು ಕೊನೆಯ ಕಡೆವೇಗಡಿಗೆ ಬಿದ್ದಿವೆ ಎಂಬುದು ಇಷ್ಟರಲ್ಲೇ ಇಕ್ಕಡೆಯ ಸೂತ್ರಧಾರಿಗಳಿಗೂ ಮಂದಟ್ಟಾಗಿರಬೇಕು; ಸಾಮಾನ್ಯರಿಗೂ ಇದನ್ನೂಹಿಸಿ ತಿಳಿಯಲು ಸಾಧ್ಯವಿದೆ. ಹಿಂದೀ ಸರಕಾರದ ಕೊನೆಯ ಸೂಚನೆಗಳ ರೂಪರೇಖೆಗೊಪ್ಪಿಗೆ ಸೂಚಿಸುತ್ತಾ, ವಿವರಗಳ ಮಟ್ಟಿಗೆ ಹೈದರಾಬಾದು ಬದಲು ಸೂಚನೆಗಳನ್ನು ಒಪ್ಪಿಸಿದ್ದಿತೆಂದೂ, ಉದಕಮಂಡಲದಿಂದ ಮರಳುವಾಗ ಹೈದರಾಬಾದಿಗೆ ಬಂದು ಹೋಗಬೇಕೆಂದು ಪಂಡಿತ ಜವಾಹರಲಾಲರನ್ನು ನಿಜಾಮು ಸರಕಾರವಾಮಂತ್ರಿಸಿದ್ದರೂ ಪಂಡಿತರದನ್ನು ಧಿಕ್ಕರಿಸಿದ್ದರೆಂದೂ ತಿಳಿದುಬರುತ್ತದೆ. ಉದಕಮಂಡಲದ ಸಭೆಯೊಂದರಲ್ಲಿ ಭಾಷಣವೀಯುತ್ತಾ ಪಂಡಿತ ಜವಾಹರಲಾಲರು ಹೈದರಾಬಾದಿನ ಕುರಿತು ಮತ್ತೊಮ್ಮೆ ಕೆಲವು ಸ್ಪಷ್ಟವಾದಿಗೆಳನ್ನಾಡಿದರು. ಹಿಂದೀ ಸರಕಾರದ ಹೃದಯ ಮತ್ತು ಶಲಿಯೊಳಗೆ ಮೂಡಿ ನಿಂತಿರುವ ಚಿತ್ರವಾವುದೆಂಬುದರ ಪರಿಚಯ ಮಾಡಿಕೊಟ್ಟರು. "ಹಿಂದುಸ್ತೀಮರ್ಗನವಾಗಿಲೇ ಬೇಕು. ಮತ್ತು ಹೇಗಿದ್ದರೂ ಭಾರತದೊಂದಿಗೆ ಹೈದರಾಬಾದು ಜೋಡಣೆಗೊಳ್ಳಲೇಬೇಕು, ಎಂಬುದನ್ನು ನಾವು ಹೈದರಾಬಾದಿಗೆ ಸಂಪೂರ್ಣ ಸ್ಪಷ್ಟಗೊಳಿಸಿದ್ದೇವೆ. ಆ ವಿನಹ ಬೇರೆ ಹಾದಿಯಿಲ್ಲ; ಹೈದರಾಬಾದು ಭಾರತ ಬಿಟ್ಟು ಹೊರಗೆ ನಡೆಯಲು ಸಾಧ್ಯವಿಲ್ಲ. ಹೈದರಾಬಾದಿನಲ್ಲಿ ಈಗ ಇರುವಂತಹ ಮಧ್ಯಕಾಲದ ಮಾದರಿಯ ಸರಕಾರವನ್ನು ಇರಗೊಳಿಸುವದು ಈ ಕಾಲದಲ್ಲಿ ಅಸಮಗಸಾಧ್ಯವಾದ್ದರಿಂದ ಅಲ್ಲಿ ಪ್ರಜಾಧಿಕಾರ ಸ್ಥಾಪನೆಯಾಗುವದು ಸಂಭವನೀಯ. ನಾವು ಹಲವು ತೊಂದರೆಗಳನ್ನು ಅನುಭವಿಸಿದವರು; ಹೈದರಾಬಾದು ಸಂಸ್ಥಾನವೀಗ ಕೊನೆಯ ತಂಟೆಯಾಗಿ ಪರಿಣಮಿಸುತ್ತಿದೆ. ಹೈದರಾಬಾದಿನ ಭೌಗೋಲಿಕ ಹಾಗೂ ಆರ್ಥಿಕ ಸ್ಥಿತಿ ಗತಿ ಹೇಗಿದೆಯೆಂದರೆ ಭಾರತದಿಂದ ಹೊರಗಿದ್ದು ಅದು ಬಾಳಲಾರದು. ಹೈದರಾಬಾದಿನ ಕುರಿತು ಹಿಂದೀ ಸರಕಾರವು ದುರ್ಬಲ ಧೋರಣೆ ವಹಿಸಿದೆಯೆಂದು ಕೆಲವರೂ, ದೊಡ್ಡ ದೊಣ್ಣೆಯನ್ನು ಉಪಯೋಗಿಸುತ್ತಿದೆ ಎಂದು ಇನ್ನು ಕೆಲವರೂ ಟೀಕಿಸುತ್ತಿದ್ದಾರೆ. ನಾವು ಇವೆರಡನ್ನೂ ಮಾಡುತ್ತಿಲ್ಲ. ನಾವು ಮಾಡುತ್ತಿರುವುದೆಂದರೆ ಹೈದರಾಬಾದ್ ಸಮಸ್ಯೆಯನ್ನು ನಾಗರಿಕತೆ ಹಾಗೂ ದೃಢತೆಯಿಂದ ಬಿಡಿಸಿಕೊಳ್ಳುವ ಕೆಲಸವನ್ನೇ. ನಾಗರಿಕತೆ ನಿಷ್ಫಲವಾದಾಗ ನಾವು ದೃಢತೆಯನ್ನು ಪ್ರಯೋಗಿಸಲಿದ್ದೇವೆ. ಹೈದರಾಬಾದನ್ನು ಬಲಪ್ರಯೋಗಿಸಿ ಸೇರಿಸಿಕೊಳ್ಳುವ ಇಚ್ಛೆ ನಮ್ಮದಲ್ಲ; ಆದರೆ ಭದ್ರತೆಗೆ ಹಾನಿಕರವಾದ ಪರಿಸ್ಥಿತಿ ನಿರ್ಮಾಣಗೊಂಡಲ್ಲಿ ನಾವು ನಿರುಪಾಯರಾಗಿ ಹಾಗೆ ಮಾಡಬೇಕಾದೀತು. ಹೈದರಾಬಾದ್ ಸ್ಥಿತಿಗತಿಗಳ ಕುರಿತು ಮದ್ರಾಸಿನ ಜನತೆಯಲ್ಲಿರುವ ಅಸಹ್ಯಯಂತಹದೆಂಬುದನ್ನು ನಾನರಿತಿದ್ದೇನೆ; ಅದನ್ನು ಶ್ಲಾಘಿಸುತ್ತೇನೆ. ಆದರೆ ಉದ್ರೇಕಗೊಳ್ಳಬಾರದೆಂದೂ ಶಾಂತರಾಗಿರಬೇಕೆಂದೂ ಅವರಿಗೆ ನನ್ನ ಸಲಹೆಯಿದೆ. ಬ್ರಿಟಿಷ್ ಸೇನೆ ಮತ್ತು ಪೋಲಿಸರು ಕಾಂಗ್ರೆಸಿಗೆ ವಿರೋಧವಿದ್ದ ಆ ಕಾಲದಲ್ಲೂ ನಾವು ಹೆದರಿದುದಿಲ್ಲ. ಅಂದ ಮೇಲೆ ಈಗೇಕೆ ಹೆದರಬೇಕು? ಕಾಶ್ಮೀರದಲ್ಲಿ ಮದ್ರಾಸೀ ಸೇನೆ ಮಾಡಿದ ಸಾಹಸದ ಕಾರ್ಯಗಳನ್ನು ಶ್ಲಾಘಿಸುತ್ತೇನೆ. ಇಲ್ಲಿ ಜಾತೀಯತೆಯ ಪ್ರಶ್ನೆಯೇ ಇಲ್ಲ" ಎಂದು ಮುಂತಾಗಿ ಪಂಡಿತ ನೆಹರು ಸ್ಪಷ್ಟೀಕರಿಸಿದ್ದಾರೆ.

ಹಿಂದೀ ಶರ್ತಗಳೇನು?

ಭಾರತ ಸರಕಾರವು ಹೈದರಾಬಾದಿಗೆ ಕೊಟ್ಟ ಕೊನೆಯ ಸೂಚನೆಗಳ ಸಾರ ಈ ಕೆಳಗಿನಂತಿದೆಯೆಂದು ತಿಳಿದುಬಂದಿದೆ:- ರಕ್ಷಣಾ ಸಂಬಂಧವಾಗಿ ಸಂಯುಕ್ತ ಭಾರತದಲ್ಲಿ ಚಾಲ್ತಿಯಲ್ಲಿರುವ ಮತ್ತು ಕಾಲಕಾಲಕ್ಕೆ ಜ್ಯಾರಿಗೆ ಬರುವ ಶಾಸನಗಳನ್ನೇ ಹೈದರಾಬಾದು ಶಾಸನ ರಚನಾ ಮೂಲಕ ತನ್ನೊಳಗೆ ಅಮಲಿನಲ್ಲಿಡತಕ್ಕದ್ದು; ಹೈದರಾಬಾದು ಹಾಗೆ ಮಾಡದೆ ಹೋದಲ್ಲಿ ಭಾರತ ಸರಕಾರದ ಶಾಸನವೇ ಹೈದರಾಬಾದಿನೊಳಗೆ ಅಮಲಿನಲ್ಲಿರಲು ಬದ್ಧವಿದೆ. ಹೈದರಾಬಾದ್ ಶಾಸನಸಭೆಯಲ್ಲಿ ಏನಾದರೂ ಬದಲಾವಣೆಗೊಂದಿಗೆ ಅಂತಹ ಶಾಸನಗಳು ತಯಾರಾದ ಸಂದರ್ಭದಲ್ಲಿ, ಅಂತಹ ಬದಲಾವಣೆಗಳನ್ನು ವಜಾಗೊಳಿಸಿ, ಅವುಗಳ ಸ್ಥಾನದಲ್ಲಿ ಭಾರತ ಸರಕಾರದ ಶಾಸನ ಭಾಗಗಳೇ ಜ್ಯಾರಿಗೆ ಬರಬೇಕು. ಹೈದರಾಬಾದಿನ ಸ್ವಂತ ಸೇನೆಯ ಸಂಖ್ಯೆ 20000ವಿರಬೇಕಲ್ಲದೆ, ಹೈದರಾಬಾದಿನ ಹೋರಾಟದ ಸೇನೆ 18000 ಇರಬೇಕು. ಸಂಧಾನಕ್ಕೆ ಸಹಿಯಾದ ಕೂಡಲೇ ಹೈದರಾಬಾದ್ ಸಂಸ್ಥಾನದೊಳಗಿನ ಸೇನಾ ಸ್ವರೂಪದ ಎಲ್ಲಾ ಸಂಸ್ಥೆಗಳು ಬರ್ಖಾಸ್ತಾಗಬೇಕು. ಬ್ರಿಟಿಷ್ ಸರಕಾರವು 1939ರಲ್ಲಿ ನೇಮಿಸಿದ್ದ ಸೇನಾ ಕಮಿಶನಿನ ಶಿಫಾರಸುಗಳಿಗನುಸರಿಸಿ ಹೈದರಾಬಾದಿಗೆ ಶಸ್ತ್ರೋಪಕರಣಗಳನ್ನು ಹಿಂದೀ ಸರಕಾರವು ಸರಬರಾಯಿ ಮಾಡುವುದು. ಹೈದರಾಬಾದ್ ಸೇನೆಗಳನ್ನು ಆಗಾಗ ತನ್ನ ಸೈನಿಕ ಪ್ರತಿನಿಧಿಗಳಿಂದ ಪರೀಕ್ಷೆ ಮಾಡಿಸುವ ಅಧಿಕಾರವೂ, ಭಾರತಕ್ಕೆ ಅಗತ್ಯಬಿದ್ದಾಗ ಹೈದರಾಬಾದಿನಲ್ಲಿ ತನ್ನ ಸೇನೆಗಳನ್ನಿಡುವ ಅಧಿಕಾರವೂ ಹಿಂದೀ ಸರಕಾರಕ್ಕಿದೆ. ಅದಕ್ಕಾಗಿ ಹೈದರಾಬಾದು ಕೊಡುವ ಸ್ಥಳಾನುಕೂಲತೆಗಳ ನ್ಯಾಯಬದ್ಧ ವೆಚ್ಚವನ್ನು ಭಾರತ ಸರಕಾರವು ಕೊಡಲಿದೆ. ರಕ್ಷಣಾ ಸಂಬಂಧ ಹೇಗೋ ಹಾಗೆ ವಿದೇಶ ಸಂಬಂಧ ಸ್ವರೂಪದ ಎಲ್ಲಾ ಅಧಿಕಾರವೂ ಭಾರತದ್ದೇ ಹೊರತು ಹೈದರಾಬಾದಿನದಲ್ಲ. ಭಾರತ ಸರಕಾರದ ಪರೀಕ್ಷೆಗೊಳಪಟ್ಟು ತನ್ನ ವ್ಯಾಪಾರೀ ಏಜೆಂಟರನ್ನು ಲೋಕದ ಎಲ್ಲ ಕಡೆಗಳಲ್ಲೂ ನೇಮಿಸಬಹುದು. ಕಳೆದ ಆಗೋಸ್ತು ಹದಿನೈದರ ಮೊದಲು ಭಾರತ ಮತ್ತು ಹೈದರಾಬಾದುಗಳೊಳಗಿನ ಸಂಚಾರ ಸಂಬಂಧ ವ್ಯವಸ್ಥೆ ಮತ್ತು ಅಧಿಕಾರಗಳು ಹೇಗಿದ್ದವೋ ಹಾಗೆಯೇ ಮುಂದಕ್ಕೂ ಇರತಕ್ಕದ್ದು. ಒಂದು ಸಂಸ್ಥಾನವು ಹಿಂದೀ ಕೇಂದ್ರಕ್ಕೊಪ್ಪಿಸತಕ್ಕ ರಕ್ಷಣೆ, ವಿದೇಶಸಂಬಂಧ, ಸಂಚಾರ ಸಂಬಂಧ ತ್ರಿವಿಭಾಗಗಳ ಕುರಿತು ಹಿಂದೀ ಸರಕಾರವು ಮೇಲಿನ ಸೂಚನೆಗಳನ್ನಿತ್ತಂತೆಯೇ ಹೈದರಾಬಾದಿನೊಳ ವ್ಯವಸ್ಥೆಯ ಕುರಿತೂ ಶರ್ತಗಳನ್ನು ಹಾಕಿದೆ. ಅದರಂತೆ ಹೈದರಾಬಾದಿನ ಯಾವುದೇ ದೀರ್ಘಾವಧಿ ಘಟನೆಯಲ್ಲಾದರೂ ಮುಸ್ಲಿಮೇತರರಿಗೆ ನೇಕಡಾ 60ಕ್ಕಿಂತ ಕಡಿಮೆ ಸ್ಥಾನಗಳಿರಬಾರದೆಂದಿದೆ. ಹೈದರಾಬಾದ್ ಸರಕಾರವು ಕೂಡಲೇ ಒಂದು ನಡುಗಾಲಸರಕಾರ ರಚಿಸಬೇಕು. ಆ ಸರಕಾರದಲ್ಲಿ ಸೇ. 50 ಕ್ಕೆ ಕಡಿಮೆಯಾಗದಷ್ಟು ಪ್ರಾತಿನಿಧ್ಯವು ಮುಸ್ಲಿಮೇತರರಿಗಿರಬೇಕು. ಈ ಸರಕಾರವು ಭಾವೀ ರಾಜ್ಯಾಂಗ ರಚನೆಗಾಗಿ ಪ್ರಾಯಸ್ಥರ ಮತದಾನದ ನ್ಯಾಯದಿಂದ ಕ್ಷೇತ್ರವಾರು ಚುನಾವಣೆಗೊಳ್ಳುವ ಘಟನಾ ಸಮಿತಿಯನ್ನು ರಚಿಸಬೇಕು; ಅದರಲ್ಲಿ ಮುಸ್ಲಿಮೇತರರ ಪಾಲು ಸೇ. 60ಕ್ಕೆ ಕಡಿಮೆಯಾಗಕೂಡದು. ಹೀಗಾದ ಮೇಲೆ ಘಟನಾ ಸಮಿತಿಯು ಭಾವೀ ರಾಜ್ಯಾಂಗ ರಚನೆ ಮಾಡತಕ್ಕದ್ದು. ಅಧಿಕಾರಕ್ಕೆ ಬಂದ ಸರಕಾರವು ಐದು ವರುಷಗಳೊಳಗೆ ಹೈದರಾಬಾದಿನ ಸೇನೆ, ಪೋಲೀಸು, ಸಿವಿಲ್ ಮತ್ತಿತರ ಎಲ್ಲಾ ಖಾತೆಗಳಲ್ಲೂ ಸೇ. 60ಕ್ಕೆ ಕಡಿಮೆಯಾಗದಷ್ಟು ಮುಸ್ಲಿಮೇತರರಿರುವಂತೆ ಮಾಡತಕ್ಕದ್ದು. ಮುಸ್ಲಿಮರ ಧಾರ್ಮಿಕ ವಿಷಯಗಳಿಗಾಗಿ ರಕ್ಷಣೆಗಳಿರಬೇಕು; ಈ ಧಾರ್ಮಿಕ ವಿಷಯಗಳ ಕುರಿತು ಭಿನ್ನಾಭಿಪ್ರಾಯಗಳಿದ್ದಾಗ ನಿಜಾಮರ ತೀರ್ಮಾನಕ್ಕೆ ಬಿ

[೫ನೇ ಪುಟ ನೋಡಿ]

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣುಪಾಲಾಗುತ್ತದೆ.

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ, ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಆದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ, ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಕನ್ನಿ, ಮಲವಿರೋಧ, ಸ್ತನಗಳ ಬೀಗು, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ. ವೈದ್ಯ, ಡಾಕ್ಟರ, ಸರ್ಜನರ ವರೆಗೆ ಕರೆಸಿ ನೂರಾರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆ ಮೇಲೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ '**ಪ್ರಸೂತಾಮೃತ**'ದ ೧ ಬಾಟ್ಲಿ ಮತ್ತು ೧ ಡಜನು '**ಪ್ರಸೂತ ಕಲ್ಯಾಣ ವಟಿ**'ಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ **ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.**

ಆಯುರ್ವೇದೀಯ ಔಷಧಿಗಳ ಶಾಸ್ತ್ರೀಯ ಮತ್ತು ಅನುಭವಿಕ ಗುಣಧರ್ಮ, ರೋಗಾನುಪಾನ ಪ್ರಮಾಣ, ಕ್ರಿಯೆ, ಇತ್ಯಾದಿ ಯುಕ್ತ 96 ಪುಟಗಳ ಸೂಚೀಪತ್ರ 1ಕ್ಕೆ 0-8-0. 9 ಆಣೆಯ ಸ್ಟಾಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವದು.

Swadeshi Oushadhi Bhandara, (REGD.)
Kunjal P. O. Brahmavar, S. K.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬
[ಹೊಣೆಗಾರಿಕೆ ಪರಿಮಿತಗೊಳಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]
ಮುದ್ದತಿ ಠೇವುಗಳು

ರೂ. ೧೦,೦೦೦ ಯಾ ಅದಕ್ಕೆ ಮೇಲ್ಪಟ್ಟು ರೂ ೧೦೦೦ರ ಗುಣಕಗಳಲ್ಲಿ ೩೦ನೇ ಸಪ್ಟಂಬರ, ೧೯೪೮ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರದಂತೆ ಇದೀಗ ಸ್ವೀಕರಿಸಲಾಗುತ್ತಿದೆ

೩ ತಿಂಗಳು ನೂರಕ್ಕೆ ವರ್ಷಕ್ಕೆ ೩।
೪ ರಿಂದ ೫ ತಿಂಗಳು ,, ,, ೩॥
೬ ರಿಂದ ೯ ತಿಂಗಳು ,, ,, ೩॥।

ರೂ ೧೦೦೦ಕ್ಕಿಂತ ಕಡಿಮೆಯಲ್ಲದ ರೂ. ೧೦,೦೦೦ಗಳ ಕೆಳಗೆ ರೂ. ೫೦೦ರ ಗುಣಕದ ಠೇವಣಾತಿಗಳ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸಮೀಪದಲ್ಲಿರುವ ಶಾಖೆಗೆ ಬರೆದು ತಿಳಿಯಕೊಳ್ಳಬಹುದು.

The Canara Bank Limited.
ESTD: 1906

The Canara Banking Corporation Limited.
Estd 1906.
(Incorporated in British India)
Head Office: **UDIPI**, S. India.

Capital Authorised	Rs 25,00,000
Capital Issued & Subscribed	Rs. 20,00,000
Capital Paid up	Rs 19,87,300
Reserves....	Rs. 8,00,400

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ಗುರುವಾರ, ಉಡುಪಿ, ೧೦-೬-'೪೮

ರೈತ್ವಾರಿ ಪದ್ಧತಿ

ಬೊಂಬಾಯಿ ಸರಕಾರವು ಒಕ್ಕಲುತನ ಪದ್ಧತಿಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ಮಾಡುವ ಮಸೂದೆಯನ್ನು ಸದ್ಯದಲ್ಲೇ ತರಲಿದೆಯೆಂಬುದು, ಅಲ್ಲಿಯ ಶಾಸನ ಸಭಾ ಕಾಂಗ್ರೆಸ್ ಪಕ್ಷದ ವಾರ್ಷಿಕ ಅಧಿವೇಶನದ ಮುಂದೆ ಗೃಹ ಮತ್ತು ರೆವಿನ್ಯೂ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ಬಿಡಿಸಿ ತೋರಿಸಿದ ಚಿತ್ರದಿಂದ ತಿಳಿಯುತ್ತದೆ. ಆ ಮಸೂದೆಯ ಸ್ಪಷ್ಟ ರೂಪರೇಖೆಗಳೇ ತನಕ ಮುಂದೆ ಬಂದಿಲ್ಲ. ನಿರೀಕ್ಷಿತ ಸುಧಾರಣೆಯು ಕೆಲವಂತೆ ಆಸ್ತಿಗಳನ್ನು ರಾಷ್ಟ್ರೀಕರಣಗೊಳಿಸುವ ಮತ್ತು ದೊಡ್ಡ ವರ್ಗದಾರಿಕೆಗಳನ್ನು ಬರ್ಖಾಸ್ತುಗೊಳಿಸುವ ಗುರಿಯಿಟ್ಟುಕೊಂಡಿದೆ ಎಂದು ಜಾಹೀರಾಗಿದೆ. ಯಾವುದೇ ಖಾಸಗೀ ಪಟ್ಟೆಯೊಳಗೆ 50 ಎಕ್ರೆಗಳಿಗೆ ಮಿಕ್ಕಿ ಗೇಣಿಭೂಮಿಯಿರಕೂಡದೆಂಬ ನಿರ್ಬಂಧವು ಆ ಮೂಲಕ ಬೀಳಲಿದೆ. ಹಲವು ವಿಷಯಗಳ ಸ್ಪಷ್ಟೀಕರಣದ ಅವಶ್ಯಕತೆ ಕಾಣುತ್ತಿರುವ ಈ ನಿಯೋಜಿತ ಮಸೂದೆಯಲ್ಲಡಕವಾಗಿರುವ ಸುಧಾರಣೆಗಳೆಂದರೆ:-50 ಎಕ್ರೆಗಳಿಗೆ ಮಿಕ್ಕಿ ಗೇಣಿ ಆಸ್ತಿಯಿಟ್ಟುಕೊಳ್ಳುವ ಹಕ್ಕಿಲ್ಲ; ಇದಕ್ಕಿಂತ ಹೆಚ್ಚಿಗೆ ಸಾಗುವಳಿ ಭೂಮಿಯಿದ್ದ ಮಾಲಕರು ಅದನ್ನು ಮಾರತಕ್ಕದ್ದು. ಭೂಮಿಯನ್ನು ಯಾರು ಸಾಗುವಳಿಮಾಡುತ್ತಿದ್ದಾರೋ ಅವರಿಗೇನೇ ಅದನ್ನು ಮಾರಬೇಕು; ಆ ಒಕ್ಕಲು ಅದನ್ನು ಪಡಕೊಳ್ಳಲು ತಯಾರಿಲ್ಲವಾದರೆ ಸಮೀಪದವರಿಗೆ ಮಾರತಕ್ಕದ್ದು; ಆದರೆ ಯಾವ ಸಂದರ್ಭದಲ್ಲಾದರೂ ಸ್ವಂತ ಸಾಗುವಳಿ ಮಾಡುವವನಿಗೆ ಮಾತ್ರ ಮಾರಾಟವೇ ಕು. ಆರು ವರುಷಗಳಿಂದ ಒಂದಾಸ್ತಿಯನ್ನು ಸಾಗುವಳೀ ಮಾಡುತ್ತಿದ್ದ ಒಕ್ಕಲಿಗನಿಗೆ ಅದನ್ನು ಪಡಕೊಳ್ಳುವ ಹಕ್ಕು ಬರುತ್ತದೆ; 50 ಎಕ್ರೆಗೆ ಮಿಕ್ಕಿ ಇದ್ದ ತನ್ನ ಭೂಮಿಯನ್ನು ಹಾಗೆ ಮಾರದಿರುವುದು ಮೂಲಕನ ತಪ್ಪಾಗುತ್ತದೆ. ಇಂತಹ ಆಸ್ತಿಯ ಧಾರಣೆ ನಿರ್ಣಯಕ್ಕಾಗಿ ಸರಕಾರವೇ 'ಸ್ಪೆಶ್ಯಲ್ ನ್ಯಾಯಾಧೀಶ'ರನ್ನು ನೇಮಿಸಲಿದೆ. ಜಾಹೀರುಗಳು, ಇನಾಮ್‌ಗಳು ಮತ್ತು ತಾಲೂಕುದಾರೀ ಹಳ್ಳಿಗಳ ಮೇಲಧಿಕಾರವನ್ನು ಸರಕಾರವೇ ವಹಿಸಿಕೊಂಡು ಉಳಿತಾಯಾಂಶವನ್ನು ಮಾಲಕರಿಗೆ ಕೊಡಲಿದೆ. ತಾಲೂಕುದಾರಿ, ಕೋತಿ ಮತ್ತಿತರ ರೀತಿಯ ಒಡೆತನಗಳು ಬಹುಶ: ರದ್ದಾಗುವವು. ಸದ್ಯ ಸಾಗುವಳಿಯಾಗದಿರುವ ಬೇಸಾಯ ಯೋಗ್ಯ ಆಸ್ತಿಗಳೆಲ್ಲವನ್ನೂ ಸರಕಾರವು ಸ್ವಾಧೀನಪಡಿಸಿಕೊಂಡು ಭೂಕಂದಾಯ ಮಾತ್ರ ಹೇರಿ ಸ್ವತ. ಸಾಗುವಳಿಮಾಡುವವರಿಗೆ ಕೊಡಲಿದೆ. ಆಸ್ತಿ ಅಡವು ಬೇಂಕು ಮತ್ತು ಸಹಕಾರೀ ಬೇಂಕುಗಳಿಂದ ಸಾಗುವಳೀದಾರರಿಗೆ ಸಹಾಯ ದೊರೆಯಲಿದೆ.

ಮೇಲಿನ ಸಾಮಾನ್ಯ ರೂಪವು ಹಲವು ಸಂದೇಹಗಳಿಗಾಸ್ಪದವೀಯುತ್ತದೆ. 50 ಎಕ್ರೆಗಳಿಗೆಮಿಕ್ಕಿ ಇರುವ ಆಸ್ತಿಗಳನ್ನು ಮಾರಲೇಬೇಕೆಂದು ಶಾಸನಮೂಲಕ ನಿರ್ಬಂಧಿಸಬಹುದಾದರೂ, ನಿಶ್ಚಿತ ಬೆಲೆ ತೆರಲಸಾಧ್ಯವಾದ ಬಡರೈತರು ಅವುಗಳನ್ನು ಕೊಂಡುಕೊಳ್ಳಲೇ ಬೇಕೆಂದು ವಿಧಿಸಲು ಸಾಧ್ಯವೇ? ಒಂದು ವರ್ಗದಲ್ಲಿ ಐವತ್ತೆಕ್ರೆಯೊಳಗಿರಬೇಕೆಂಬ ಮಿತಿ ಹಾಕುವಾಗ ಆ ವರ್ಗದಾರ ಕುಟುಂಬದಲ್ಲಿ ಇಂತಿಷ್ಟೇ ಜನವಿದ್ದರೆ-ಎಂಬ ನಿಯಮವೂ ಇರಲೇಬೇಕಷ್ಟೆ? ಬೊಂಬಾಯಿ ಸರಕಾರವು ಇಂತಹ ಸಮಸ್ಯೆಗಳನ್ನೂ ತನ್ನೀ ನವಘೋಷಣೆಗನುಸಾರವಾಗಿ ಭೂಮಿಗಳನ್ನು ಹಂಚಿ ಹಾಕುವುದರಲ್ಲಿರುವ ಹಲವು ತೊಂದರೆಗಳನ್ನೂ ಸರಿಯಾಗಿ ಆಲೋಚಿಸಿಕೊಂಡೇ ಈ ಯೋಜನೆ, ತಯಾರಿಸುತ್ತಿರಬೇಕೆಂಬುದು ಸ್ಪಷ್ಟವಿದೆ. 'ಈ ಅಂದಾಜಿಗೆ ಮಿಕ್ಕಿದ ನಿಮ್ಮ ಆಸ್ತಿಗಳನ್ನೆಲ್ಲಾ ಇಂಥವರಿಗೆ ಈ ಬೆಲೆಗೆ ಮಾರಬೇಕು' ಎಂಬ ಮಾರಾಟದೊತ್ತಾಯವೊಂದು ಮಾತ್ರ ದೊಡ್ಡ ವರ್ಗದಾರರ ಮೇಲೆ ಈ ಮೂಲಕ ಬೀಳಲಿದೆ ಹೊರತು ಉಪಕಾರವೆನ್ನಲಾಗುವಂತಹದೇನೂ ಇಲ್ಲಿಲ್ಲ. ಆಹಾರಾಭಾವ ನಿವಾರಣೋದ್ದೇಶದಿಂದ ಧಾನ್ಯ ನಿಯಂತ್ರಣ ಮತ್ತು ವಿತರಣೆ ಬಂದಿದ್ದ ಮಾದರಿಯಲ್ಲೇ, ಆಸ್ತಿಯ ಅನುಭೋಗದ ಅಸ್ತವ್ಯಸ್ತತೆಯ ನಿವಾರಣೆಗಾಗಿ ಈ ಆಸ್ತಿ ನಿಯಂತ್ರಣ ಮತ್ತು ವಿತರಣಾ ಕ್ರಮ ಬರಲಿದೆ. ಇದು ನ್ಯಾಯ ಮತ್ತು ಅಗತ್ಯವೆಂಬ ಕುರಿತು ರೈತೋದ್ಧಾರಕರಲ್ಲಿ ಭಿನ್ನಾಭಿಪ್ರಾಯವಿರಲಾರದು. ಮದ್ರಾಸ್ ಪ್ರಾಂತ್ಯದಲ್ಲಿಯೂ, ಇಲ್ಲಿಯ ಸ್ಥಿತಿಗತಿಗನುಗುಣವಾದ ಇಂತಹ ಸುಧಾರಣೆಯು ಬೇಗನೇ ಬರಬಹುದೆಂದು ಅಧಿಕ ಸಂಖ್ಯಾಕರು ಹಾರೈಸುತಿದ್ದಾರೆ. ಯೋಗ್ಯ ಪ್ರತಿಫಲ ಕೊಟ್ಟು ತನ್ನಲ್ಲಿಯ ಜಮೀನ್ದಾರೀ ಹಿಡುವಳಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಮದ್ರಾಸ್ ಸರಕಾರ ಮುಂದಾಗಿದೆ. ಅಂತೆಯೇ ರೈತ್ವಾರೀ ಕ್ಷೇತ್ರಗಳಲ್ಲೂ ಸಾಗುವಳೀದಾರರ ಹಕ್ಕು ಸ್ಥಾಪನಾ ಸುಧಾರಣೆಯು ಆದಷ್ಟು ಬೇಗನೇ ಬರಬೇಕಾದುದು ಅಗತ್ಯ. ಜಾತೀಯ ಗಲಭೆಗಳಂತಹ ದುರಂತಗಳನ್ನಿದಿರಿಸಬೇಕಾಗಿದ್ದ ನೆರೆಯ ಬೊಂಬಾಯಿ ಸರಕಾರ ಕೂಡಾ ಸಾಗುವಳೀದಾರರ ಅಭಿವೃದ್ಧಿ ಸಾಧನೆಗವಕಾಶ ದೊರಕಿಸಿಕೊಂಡಿರುವಾಗ ಮದ್ರಾಸೇಕೆ ಹಿಂದುಳಿಯಬೇಕೋ ಅರ್ಥವಾಗುವುದಿಲ್ಲ. ಅದಿನ್ನು ತಡ ಮಾಡಲಾಗದೆಂದು ನಂಬುತ್ತೇವೆ. ಜನ ಸಾಮಾನ್ಯರ ಜೀವನ ಮಟ್ಟವನ್ನು ಮೇಲೆತ್ತುವುದು ಅತಿ ಮುಖ್ಯವೆಂದು ಗಣಿಸಿ ಭೂಮಿಯೊಡೆತನದಂತೆಯೇ, ವ್ಯಾಪಾರ, ಬೇಂಕಿಂಗ್, ಇನ್ಶೂರೆನ್ಸ್ ಮುಂತಾದ ಎಲ್ಲಾ ಉದ್ದಿಮೆ, ವಹಿವಾಟುಗಳಲ್ಲೂ ಸರ್ವರ ಪಾಲಿನದಾದ ಸಂಪತ್ತು ಕೆಲವೇ ಮಂದಿಯಲ್ಲಿ ಜಮೆಯಾಗದಂತೆ ಮಾಡುವ ಇತಿಮಿತಿಗಳನ್ನು ಹಾಕಿ ಸಮಾನಾಭಿವೃದ್ಧಿ ಪಥ ಹಿಡಿಸಲು ಕೇಂದ್ರ ಮತ್ತು ಎಲ್ಲಾ ಪ್ರಾಂತಿಕ ಸರಕಾರಗಳು ದೃಢತೆ ಹಾಗೂ ಚುರುಕಿನಿಂದ ಈಗ ಮುಂದಾಗಬೇಕಾದುದು ಅಗತ್ಯ.

ನೋಟೀಸು

ಉಡುಪಿ ಡಿ. ಮು ಕೋರ್ಟಿನಲ್ಲಿ.

O. S, 80/1948

ಕೇಶವ ಕಾಮ್ತ —ವಾದಿ

ಮತ್ತು

ಬೊಮ್ಮಯ್ಯ ಶೆಟ್ಟಿ —ಪ್ರತಿವಾದಿ

ಇವರೊಳಗೆ–

ಸದ್ರಿ ಪ್ರತಿವಾದಿಯಾದ ಉಡುಪಿ ತಾಲೂಕು ಕಡೆಕಾರು ಗ್ರಾಮದ ಕಿನ್ನಿಮೂಲ್ಕಿ ಸಮೀಪದಲ್ಲಿರುವ ಮುತ್ತಯ್ಯ ಶೆಟ್ರ ಅಳಿಯ ಬೊಮ್ಮಯ್ಯ ಶೆಟ್ಟಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ –

ವಾದಿಗೆ ಪ್ರತಿವಾದಿಯು ತಾ 6 3 1945 ರಲ್ಲಿ ರೂಪಾಯಿ 300 0 0ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವರೆ ವಾದಿಯು ಮಾಡಿರುವ ಮೇಲ್ಕಂಡ ದಾವೆಯು ತಾ 18 6-48 ಕ್ಕೆ ಇಟ್ಟಿರುವದ್ರಿಂದ ಉದಾಹರಣೆಯಿದ್ದರೆ ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು- ತಪ್ಪಿದ್ರೆ ಪ್ರತಿವಾದಿಯ ಗೈರು ಹಾಜರಿಯಿಂದ ತೀರ್ಮಾನಿಸಲ್ಪಡುವದು.

K Ramakrishina Rao
Vakil for Plaintiff

ಉಡುಪಿ- ತಾ. 7-6-48

ಬಹಳ ಅಗ್ಗ

ಡಿಕ್ಸನೆರಿಗಳು (ಇಂಗ್ಲಿಷ್ ಕನ್ನಡ ಮತ್ತು ಕನ್ನಡ ಇಂಗ್ಲಿಷ್) ಪುಸ್ತಕಗಳು (ಚಿಕ್ಕ ಮಕ್ಕಳ ಪದ್ಯಾವಳಿ) ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ತ್ರಗಳು, ಮಂತ್ಲಿ ರಿಟರ್ನ್, ರಿಕಾರ್ಡ್ ಶೀಟ್, ಎಲ್ಲಾ ತರದ ಕೋರ್ಟುಫಾರ್ಮುಗಳು, ಸೊಸೈಟಿ ಫಾರ್ಮು ಮತ್ತು ರಶೀದಿಗಳು ಇತ್ಯಾದಿ ಇತ್ಯಾದಿ

ನವಯುಗ ಪ್ರೆಸ್, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.



Approved firm by the Govt. of Mysore
Certified by the Agent of the Govt. of Cylone & Indian.

ನಡಿಯುವ ಚಿತ್ರ

ವಾಡಿಯಾದವರ 'ಅಮರ್ ರಾಜ್'

(ತ್ರಿಲೋಕ್ ಕಾಪೂರ್, ಕುರ್ಶೀದ್ ಜೂನಿಯರ್)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

"ತಾರಾನಾಥ ಇಂಡಿಯನ್ ಮೆಡಿಕಲ್ ಇನ್ಸ್ಟಿಟ್ಯೂಟ್"

ಬಳ್ಳಾರಿ.

ಇದರ ದ್ವಿತೀಯ ವರ್ಷದ ಆರಂಭವು ಇದೇ ಬರುವ ಜುಲೈ 15ನೇ ತಾರೀಕಿಗೆ ಆಗುವುದಿದೆ. ಅಭ್ಯರ್ಥಿ ವಿದ್ಯಾರ್ಥಿಗಳ ಅರ್ಜಿಯು ತಾ. 1-7-48ರ ಒಳಗೆ ಕಾರ್ಯದರ್ಶಿಗಳಿಗೆ ಮುಟ್ಟತಕ್ಕದ್ದು. ವಿವರಗಳಿಗೆ ಆಣೆ 4ರ ಸ್ಟಾಂಪ್ ಇಟ್ಟು ಬರೆಯತಕ್ಕದ್ದು.

[೩ನೇ ಪುಟದಿಂದ]

ಡಬೇಕು, ಹೊಸ ಘಟನೆಯಂತೆ ಅಧಿಕಾರಕ್ಕೆ ಬರುವ ಸರಕಾರವು ಐದು ವರುಷಗಳ ನಂತರ ರಾಜ್ಯಾಂಗ ಘಟನೆಯನ್ನು ಪುನರ್ನಿರ್ಮಾಣ ಮಾಡತಕ್ಕದ್ದು. ಸರಕಾರವು ಜನತೆಗೆ ಜವಾಬ್ದಾರಿಯಾಗಿರಬೇಕು

ಸಂಧಾನ ಸಾಧ್ಯವೆ?

ಹೈದರಾಬಾದಿನ ಮಂತ್ರಿ ಸಮಿತಿಯ ಸಭೆಯು ಇದೇ ತಾ 5 ಮತ್ತು 6ರಲ್ಲಿ ಸೇರಿ ಭಾರತ ಸರಕಾರದ ಸೂಚನೆಗಳ ಗಾಢ ಪರ್ಯಾಲೋಚನೆ ನಡೆಸಿತು. ಅದರ ನಿರ್ಣಯಕ್ಕನುಸಾರವಾಗಿ ಪ್ರಧಾನ ಮಂತ್ರಿ ಮಿ. ಲಾಯಿಕ್ ಅಲಿ, ಉಪಪ್ರಧಾನಿ ವೆಂಕಟರಾಮರೆಡ್ಡಿ, ಕಾಮಗಾರಿ ಮಂತ್ರಿ ಅಬ್ದುರ್ ರಾವೋಫರುಳ್ಳ ಪ್ರತಿನಿಧಿ ಸಮಿತಿಯು ನಿಜಾಮರ ಘಟನಾ ಸಲಹೆಗಾರ ಸರ್. ವಾಲ್ಟರ್ ಮೋಂಕ್ಟನ್, ಮತ್ತು ವಿದೇಶ ಸಂಬಂಧ ಕಾರ್ಯದರ್ಶಿ ಝುಹೀರ್ ಅಹಮ್ಮದರೊಂದಿಗೆ ನವದಿಲ್ಲಿಗೆ ಧಾವಿಸಿದೆ. ಅಲ್ಲಿ ಕೊನೆಯ ಮಾತುಕತೆಗಳು ನಡೆದಿವೆಯೆಂದು ತಿಳಿದು ಬರುತ್ತದೆ. ಜನಸಂಖ್ಯೆಯ ಶೇಕಡಾ 17ರಷ್ಟೇ ಇರುವ ಮುಸ್ಲಿಮರು ಈವರೆಗೂ ಹೈದರಾಬಾದಿನ ಎಲ್ಲಾ ಖಾತೆಗಳಲ್ಲೂ ಶೇ 75ಕ್ಕೂ ಮಿಕ್ಕಿದ ಸ್ಥಾನಗಳನ್ನಾಕ್ರಮಿಸಿಕೊಂಡಿರುವಾಗ ಇನ್ನೈದೇ ವರುಷಗಳೊಳಗೆ ಅವರ ಸ್ಥಾನಗಳನ್ನು ಶೇ. 40ಕ್ಕಿಳಿಸತಕ್ಕದ್ದೆಂಬ ಶರ್ತವು ಹೈದರಾಬಾದಿಗೆ ವಿಶೇಷ ಕಹಿಯಾದಂತಿದೆ. ಹೆಚ್ಚೆಂದರೆ ಹಿಂದೂ-ಮುಸ್ಲಿಮರಿಗೆ ಎಲ್ಲದರಲ್ಲೂ ಸಮಪ್ರಾತಿನಿಧ್ಯವಿರಬೇಕೆಂದು ನಿಜಾಮ್ ಸರಕಾರದ ಅಭಿಮತ. ಇತರ ಭಿನ್ನಾಭಿಪ್ರಾಯಗಳೂ ನಿಜಾಮ್ ಸರಕಾರಕ್ಕಿವೆಯೆಂದೂ ಆದರೂ ಅವುಗಳನ್ನೊಂದು ಒಪ್ಪಂದಮೂಲಕ ತೀರ್ಮಾನಿಸುವ ಆತುರವೀಬಾರಿ ನಿಜಾಮರದ್ದೆಂದೂ ಸುದ್ದಿಯಿದೆ. "ಹೈದರಾಬಾದನ್ನು ಒತ್ತಾಯಿಸಲು ಭಾರತಕ್ಕೆ ಸಾಧ್ಯವಿಲ್ಲ" ಎಂದು ಅತ್ತ ಜಿನ್ನರು ಗಾಳಿಯೂದಿದ್ದಾರಾದರೂ ಪ್ರತ್ಯಕ್ಷ ಸಹಾಯವೇನನ್ನೂ ಪಾಕಿಸ್ತಾನದಿಂದ ಹೈದರಾಬಾದು ನಿರೀಕ್ಷಿಸುವುದು ಕಷ್ಟ. ನಿಜಾಮ್ ಪ್ರತಿನಿಧಿ ಮಂಡಲಿಯಲ್ಲಿ ರಝಾಕಾರ ಪ್ರತಿನಿಧಿ ಅಬ್ದುಲ್ ರಾವೋಫನೂ ಈ ಬಾರಿ ಪ್ರತ್ಯಕ್ಷ ಸೇರಿಕೊಂಡಿದ್ದಾನೆ. ಇತ್ತ ಪ್ರಾಯಸ್ಕರ ಮತದಾನ ತತ್ವವನ್ನಾಧರಿಸಿರಬೇಕಲ್ಲದೆ ಮುಸ್ಲಿಮರಿಗೆ ಶೇ 40ರಷ್ಟು ಸ್ಥಾನ ಕೊಡಬಾರದೆಂದು ಈ ಸೂಚನೆಗೆ ಹೈದರಾಬಾದ್ ಕಾಂಗ್ರೆಸೂ ಅತೃಪ್ತಿ ಸೂಚಿಸಿದೆ ರಝಾಕಾರ್ ರಾಕ್ಷಸರು ಈ ಮಿತವಾದ ಶರ್ತಗಳಿಗೂ ಬದ್ಧ ವಿರೋಧವಿದ್ದಾರೆ. ಆದರಿಂದ ಕೊನೆಯ ಮಾತುಕತೆಯೆಂದೂ, ಇನ್ನೊಂದೆರಡು ದಿನಗಳೊಳಗೆ ಎಲ್ಲವೂ ಸ್ಪಷ್ಟವಾಗುವದು ಖಂಡಿತವೆಂದೂ ತಿಳಿದಿದೆ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

O P- No- 21/1948

ಕಲ್ಯಾಣ ಯಾನೆ ಶಾಂತೇರಿಬಾಯಿ ಕೆ. ಪದ್ಮನಾಭ ಕಾನುಭಾಗರ ಹೆಂಡ್ತಿ ಉಡುಪಿತಾಲೂಕು ಮೂಡುತೋನ್ಸೆ ಗ್ರಾಮದ ಕಲ್ಯಾಣಪುರದಲ್ಲಿರುವವಳು —ಅರ್ಜಿದಾರಳು

ಸದ್ರಿ ಅರ್ಜಿದಾರಳ ಮಗ— ತಾ 15-11-1947ಲ್ಲಿ ಮೃತಪಟ್ಟ— ಕೆ ದೇವದಾಸ ಪಿ ಶೆಣೈರು— ದಿ ಬೊಂಬಾಯಿ ಲೈಫ್ ಏಶೂರೆನ್ಸ ಕಂಪೆನಿ ಲಿಮಿಟೆಡ್, ಬೊಂಬಾಯಿ-ಯಿಂದ್ರಲ್ಲಿ ಪಡದ ನಂಬ್ರ 136024ನೇ ಪೋಲಿಸಿಯ ಬಾಬ್ತು ಬಹಾ ರುಪಾಯಿ 985-4 0 ಮತ್ತು ನಂಬ್ರ 136025ನೇ ಪೋಲಿಸಿಯ ಬಾಬ್ತು ಬಹಾ ರುಪಾಯಿ 1000 0-0 ಸಹಾ ವಸೂಲು ಪಡಿಯುವರೆ ತಾನು ಹಕ್ಕುದಾರಳೆಂತಲೂ ಆಬಗ್ಗೆ ತನ್ನ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಸಹಾ ಅರ್ಜಿದಾರಳು ಬರಕೊಂಡ ಸದರಿ ಅರ್ಜಿಯು ತಾರೀಕು 3-7-1948ಕ್ಕೆ ತನಿಖೆಗೆ ಇಡೋಣಾಗಿಯದೆ ಯೀ ಕುರಿತು ಯಾರಾದ್ರೂ ಆಕ್ಷೇಪಿಸುವವರು ಯಿದ್ರೆ ಸದರಿ ತಾರೀಕಿನ ದಿವಸ ಮೇಲ್ಕಂಡ ಕೋರ್ಟುಮುಂದೆ ಹಾಜರಾಗಿ ತಂಮ್ಮ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದೆಂತ ಯೀಮೂಲಕ ಸಮಸ್ತರಿಗೆ ತಿಳಿಯಪಡಿಸೋಣಾಗಿಯದೆ.

M. Damodar Kamath
Advocate for Petitioner
ಉಡುಪಿ, ದ ಕನ್ನಡಾ. ತಾ 5-6-1948

ಜಾಗತಿಕ ಸ್ಥಿತಿಗತಿ

ಪೆಲಸ್ತೈನಿನಲ್ಲಿ ನಾಲ್ಕು ವಾರಗಳ ತನಕ ಯುದ್ಧ ನಿಲ್ಲಿಸಬೇಕೆಂಬ ಭದ್ರತಾ ಕೌನ್ಸಿಲಿನ ಸೂಚನೆಗೆ ಅರಬ ಯಹೂದಿಗಳೆರಡು ಕಡೆಯವರೂ ಒಪ್ಪಿಗೆ ಸೂಚಿಸಿದ್ದರೂ ಅರಬರು ಜೆರುಸಲೇಮ್ ಹೊಸ ನಗರದ ಮೇಲೆ ಬಲವಾದ ಧಾಳಿ ನಡೆಸಿದ್ದಾರೆ. ಯಹೂದಿಗಳು ಪ್ರತಿಭಟಿಸುತ್ತಿದ್ದಾರೆ. ಅಂತೆಯೇ ಇಲ್ಲಿಯ ಇತರ ರಣರಂಗಗಳೂ ಈ ತನಕ ಗುಂಡಿನ ಸದ್ದನ್ನೆಬ್ಬಿಸುತ್ತಲೇ ಇವೆ; ಸಜೀವವಿನೆ ಭದ್ರತಾ ಕೌನ್ಸಿಲ್ ನಿರ್ಣಯದಂತೆ ಪೆಲಸ್ತೈನ್ ಯುದ್ಧಪ್ರವೃತ್ತ ರಾಷ್ಟ್ರಗಳಿಗೆ ಶಸ್ತ್ರೋಪಕರಣ ಸರಬರಾಯಿಯನ್ನು ನಿಜಕ್ಕೂ ನಿಲ್ಲಿಸಿರುವುದು ಬ್ರಿಟನ ಮಾತ್ರ. ಇತ್ತ ಪೆಲಸ್ತೈನಿನಲ್ಲಿ ಶಾಂತಿ ಸ್ಥಾಪಿಸಲು ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿಯಾಗಿ ಅಲ್ಲಿಗೆ ಬಂದಿರುವ ಕೌಂಟ್ ಫ್ಲೋಕೇ ಬೆರ್ನಾಡೊಟ್ಟೆಯವರು ಇಜಿಪ್ತ ಪ್ರಧಾನಿಯೊಡನೆ ಮಾತಾಡಿದ್ದಾರೆ. ಆ ಕುರಿತು ಶತಪ್ರಯತ್ನ ನಡೆಸುತ್ತಿದ್ದಾರೆ.

ಫ್ರಾಂ[illegible] —[illegible]ನಿನೊಳಗೆ ಇಂಡೋಚೈನಿಸ್ ರಿಪಬ್ಲಿಕಿಗೆ ಸ್ವಾತಂತ್ರ್ಯ ಕೊಡುವದಕ್ಕೆ ಫ್ರಾನ್ಸ್ ಒಪ್ಪಿ, ಆ ಸಂಬಂಧದ ಮಾತುಕತೆ ನಡೆಸುವ ಒಪ್ಪಂದವು ಫ್ರಾನ್ಸ್ ಮತ್ತು ವಿಟ್‌ನಾಮ್‌ಗಳೊಳಗಾಗಿದೆ.

ಉಡುಪಿ
ನಗರಾಡಳಿತೆಯ ವಿಮರ್ಶೆ—

ಸ್ಥಳೀಯ ನಗರಸಭೆಯ ೧೯೪೪-೪೭ನೇ ವರುಷದ ಆಡಳಿತ ವರದಿಯನ್ನು ಮದರಾಸು ಸರಕಾರವು ವಿಮರ್ಶಿಸಿ ಈ ಕೆಳಗೆ ಸೂಚಿಸಿದ ಅಭಿಪ್ರಾಯ ಕೊಟ್ಟಿರುವುದು

ನಗರ ಕ್ಷೇತ್ರದ ರಸ್ತೆಗಳ ರಿಪೇರಿ ವಗೈರೆ ಬಗ್ಗೆ ರೂ. ೧೫,೭೩೬ ಖರ್ಚು ಮಾಡಲಾಗಿದೆ ಸೆಕೆಕಾಲ ಧೂಳಿನ ಹಾವಳಿ ಜಾಸ್ತಿ ಅದರ ನಿವಾರಣೋಪಾಯಗಳನ್ನು ಕೈಕೊಳ್ಳಬೇಕು ರಸ್ತೆಗಳಿಗೆ ನೀರು ಸತತ ಹಾಕುತ್ತಿರಬೇಕು ಸ್ಥಳಾಕ್ರಮಣಗಳ ಸಂಖ್ಯೆಯು ತೃಪ್ತಿಕರವಿಲ್ಲ ಟೌನ್ ಸರ್ವೆ ಕಾರ್ಯವು ಬೇಗನೆ ಪ್ರಾರಂಭವಾಗಬೇಕು ನಗರ ಕ್ಷೇತ್ರದಲ್ಲಿ ಗಂಡುಮಕ್ಕಳ ಕಡ್ಡಾಯ ಶಿಕ್ಷಣ ಯೋಜನೆಯನ್ನು ಕಾರ್ಯರೂಪದಲ್ಲಿ ತರುವ ಕುರಿತು ಆಲೋಚಿಸಬೇಕಾಗಿದೆ. ಕಮಿಷನರರು ಶಾಲೆಗಳನ್ನು ಹೆಚ್ಚಾಗಿ ಸಂದರ್ಶಿಸಿ ಮೇಲ್ವಿಚಾರದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಬೇಕಾಗಿದೆ. ಶಿಶು ಮರಣ ಸಂಖ್ಯೆ ಗತ ವರುಷದಲ್ಲಿ ಸೇಕಡಾ ೮೭ರಷ್ಟು ಇದ್ದುದು ವರದಿ ವರುಷದಲ್ಲಿ ಸೇಕಡಾ ೧೦೬ಕ್ಕೆ ಏರಿದ ಸೂಲಗಿತ್ತಿಯರು ತ್ರೈಮಾಸಿಕದಲ್ಲಿ ಸರಾಸರಿ ಇಂತಿಷ್ಟೇ ಕೇಸುಮಾಡುವಂತೆ ಕನಿಷ್ಠಮಿತಿ ಕಮಿಷನರು ನಿರ್ಧರಿಸಬೇಕು. ಮದ್ರಾಸ್ ಪಬ್ಲಿಕ್ ಹೆಲ್ತ್ ಆಕ್ಟಿಗನುಗುಣವಾಗಿ ನಗರ ಕ್ಷೇತ್ರದ ಪ್ರಾಂತ ನೆಗೊಂದು ಹಾಯಿಖಾನೆಯಿರುವಂತಾಗಬೇಕು ಟೇಕ್ಸ್ ವಸೂಲಿ ಕೆಲಸ ಚಲೋದು ಆಡಳಿತ 'ಫೇರ್'.

ಪತ್ರವ್ಯವಹಾರ

ಒಂದು ಅಸಹ್ಯ ದೃಶ್ಯ!—ಇದೇ ತಾ ೬ನೇ ಆದಿತ್ಯವಾರ ಅಪರಾಹ್ನ ಉಡುಪಿಯ ಶ್ರೀ ಶೀರೂರು ಮಠದ ಹೊರದ್ವಾರದಲ್ಲಿ ಬ್ರಾಹ್ಮಣ ಯುವತಿಯೊಬ್ಬಳು ರೋದಿಸುತ್ತಾ ತನ್ನ ಆತ್ಮಕಥೆ ಬಿಚ್ಚುತ್ತಿದ್ದಳು ಆ ಮಠಾಧಿಪತಿಗಳಿಂದ ತಾನೀಗ ಅನಾಥಳಾದೆನೆಂದು ಆ ಯುವತಿಯು ದುಃಖ ಮತ್ತು ಕ್ರೋಧಾವೇಗದಿಂದ ವರ್ಣಿಸುತ್ತಿದ್ದಳು. ಈ ದೃಶ್ಯವು ಬಹಳ ಮಂದಿಯನ್ನಾಕರ್ಷಿಸಿ ಮಠದೆದುರು ಜನಗುಂಪು ನೆರೆದಿದ್ದಿತು ಮಾನವ ಸಹಜ ದೌರ್ಬಲ್ಯಗಳು ಈಕಾಲದ ಮಠಾಧಿಪತಿಗಳಲ್ಲಿ ವಿಶೇಷರೂಪದಿಂದಿರುವ ಕತೆಗಳು ಜನಜನಿತವಿವೆಯಾದರೂ, ಊರು,ಪರವೂರವರ ಸಾಷ್ಟಾಂಗ ಪ್ರಣಾಮ, ಕಾಣಿಕೆ ಪೂಜೆಗಳನ್ನು ಪಡೆಯತಕ್ಕವರು ಜನತೆಗೆ ಆದರ್ಶಪ್ರಾಯರಾಗಿರುವ ಮಾತು ಹಾಗಿರಲಿ-ಸಾಮಾನ್ಯರು ಕೂಡಾ ಹೇಸುವಂತಹ ಹೇಯ ಅಪವಾದಗಳಿಗಾದರೂ ಅಳುಕುವುದಿಲ್ಲವೇಕೆಂಬುದೇ ಆಶ್ಚರ್ಯದ ಹಾಗೂ ಅತ್ಯಂತ ಶೋಚನೀಯ ವಿಷಯವೆಂದು ಪ್ರತ್ಯಕ್ಷ ದರ್ಶಿಯೊಬ್ಬರು ಬರೆಯುತ್ತಾರೆ.

ಅತ್ಯಂತ ಉಪಯುಕ್ತ ಪುಸ್ತಕ
ವ್ಯವಹಾರ ಜ್ಞಾನದರ್ಪಣ
ಶ್ರೀ. ಯು. ಜಿ ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ
ಲೋಕ ವ್ಯವಹಾರ ಬೋಧಿನಿ
ಬೆಲೆ ರೂ 1--8--0 ಮಾತ್ರ
ನಿಜವಾದ ಜನತಾ ಸಾಹಿತ್ಯ—
ಶ್ರೀ ಎಂ ವಿ ಹೆಗ್ಡೇರ
ಸ್ವರಾಜ್ಯ ವಿಜಯ
ಯಕ್ಷಗಾನ ಪದ್ಯ-ಅರ್ಥಗಳಲ್ಲಿ ಸ್ವರಾಜ್ಯ ವಿಜಯದ ಕತೆ
ಬೆಲೆ 0 8 0
ಪ್ರತಿಗಳು ಸಿಗುವ ಸ್ಥಳಗಳು:-(1)ಸ್ಕೂಲ್ ಬುಕ್ ಕಂಪೆನಿ, ಮಂಗಳೂರು,(2)ಎಂ. ಎಸ್. ಮಯ್ಯ, ಪುತ್ತೂರು, (3) ನವಭಾರತ ಬುಕ್ ಡಿಪೋ, ಉಡುಪಿ; (4) ಪಾವಂಜೆ ಗುರುರಾವ್, ಉಡುಪಿ; (5) ಯು ಆರ್. ಶೆಣೈ & ಸನ್ಸ್, ಮಂಗಳೂರು.

ನೋಟೀಸು

ಆಹಾರ ಧಾನ್ಯಗಳನ್ನು ಬೆಳೆಸಲು ಉತ್ತೇಜನ ಕೊಡಲಿಕ್ಕೆ ಮಾನ್ಯ ಮದರಾಸು ಸರಕಾರದವರು ಈ ಕೆಳಗಿನ ಯೋಜನೆಯನ್ನು ಮಾಡಿರುತ್ತಾರೆ.

ನೀರಾವರಿಬಾವಿಗಳನ್ನು ತೋಡಲಿಕ್ಕೂ ಕೆರೆಗಳನ್ನು ತೋಡಲಿಕ್ಕೆ ವ ದುರಸ್ತಿ ಮಾಡಲಿಕ್ಕೂ ಇರುವ ಯೋಜನೆಯನ್ನು ತಾರೀಕು ೧-೪-೧೯೪೮ರಿಂದ ೧ ವರ್ಷ ಮುಂದುವರಿಸಿರುತ್ತಾರೆ ಈ ಯೋಜನೆಯ ಸಾರಾಂಶವು ಸಂಕ್ಷಿಪ್ತವಾಗಿ ಹೀಗಿದೆ

ನೀರಾವರಿ ಬಾವಿ ಕೆರೆಗಳನ್ನು ತೋಡಿಸಲಿಕ್ಕೂ, ವ ಹಳೆಯ ಕೆರೆಗಳನ್ನು ದುರಸ್ತಿ ಪಡಿಸಲಿಕ್ಕೂ ತಗಲುವ ಖರ್ಚಿನಲ್ಲಿ ಸರ್ಕಾರದವರು ಸೇಕಡಾ ೫೦ರಷ್ಟು ಖರ್ಚನ್ನು ಧರ್ಮಾರ್ಥವಾಗಿ ಕೊಡಲಿರುವರು ಹೀಗೆ ಸರ್ಕಾರದವರು ಕೊಡುವ ಹಣವು ಈ ಕೆಳಗೆ ತೋರಿಸಿದ ಪರಮಾವಧಿಗೆ ಮೀರಕೂಡದು.

ಕಾಮಗಾರಿ	ಸರ್ಕಾರದ ಸಹಾಯ	ಮಂಜೂರು ಮಾಡುವ ಅಧಿಕಾರವುಳ್ಳವರು
ಬಾವಿಯನ್ನು ತೋಡುವುದು	ರೂ. 300	ತಹಶೀಲ್ದಾರರು
ಕೆರೆಗಳನ್ನು ತೋಡುವುದು ಯಾ ದುರಸ್ತಿ ಮಾಡುವುದು	ರೂ.500	ತಾಲೂಕು ತಹಶೀಲ್ದಾರರು
	ರೂ 1000	ಜಿಲ್ಲಾ ಕಲೆಕ್ಟರರು
	ರೂ 2000	ರೆವಿನ್ಯೂ ಬೋರ್ಡಿನವರು

ಹೀಗೆ ಸರಕಾರದವರು ಕೊಡುವ ಹಣವು ಕೆಲಸವು ಸಂಪೂರ್ಣವಾಗುವ ತನಕ ಸಾಲವಾಗಿ ಪರಿಗಣಿಸಲ್ಪಡುವುದು. ತಾರೀಕು 30-9-48ರ ವಳಗೆ ಸಂಪೂರ್ಣವಾದಲ್ಲಿ ಈ ಹಣವು ಧರ್ಮಾರ್ಥ ಹಣವೆಂದು ಗಣಿಸಲಾಗುವುದು ಹೀಗೆ ಸಂಪೂರ್ಣವಾಗದಿದ್ದಲ್ಲಿ ಯಾ ಯಾವುದಾದರೂ ಶರ್ತಗಳನ್ನು ವ್ಯತಿರಿಕ್ತವಾಗಿ ನಡೆದರೆ ಈ ಹಣವು 'ಲೇಂಡ್ ಇಂಪ್ರೂವ್‌ಮೆಂಟ್' ಆಕ್ಟಿನ ಪ್ರಕಾರ ಸಾಲವು ವಸೂಲುಮಾಡುವ ವಿಧಾನದಲ್ಲಿ ವಸೂಲು ಮಾಡಲ್ಪಡುವುದು

ಈ ಯೋಜನೆಯ ಮುಖ್ಯಶರ್ತ.

ಬಾವಿಗಳ ಬಗ್ಗೆ:--ಹೀಗೆ ತೋಡಿದ ಬಾವಿಯ ನೀರಿನಿಂದ ಪ್ರತಿ ವರುಷ ಕನಿಷ್ಠಪಕ್ಷ ಒಂದು ಎಕ್ರೆ ಭೂಮಿಯಲ್ಲಿ ಆಹಾರಬೆಳೆಗಳನ್ನು ಬೆಳೆಸಬೇಕು.

ಕೆರೆಗಳ ಬಗ್ಗೆ—ಹೀಗೆ ತೋಡಿದ ಅಥವಾ ಜೀರ್ಣೋದ್ಧಾರ ಮಾಡಿದ ಕೆರೆಗಳ ನೀರಿನಿಂದ ಕನಿಷ್ಠಪಕ್ಷ ಹತ್ತು ಎಕ್ರೆ ಭೂಮಿಯಲ್ಲಿ ಆಹಾರ ಬೆಳೆಗಳನ್ನು ಬೆಳೆಸಬೇಕು

ಹೆಚ್ಚಿನ ಮಾಹಿತಿ ಬಗ್ಗೆ ತಾಲೂಕು ತಹಶೀಲ್ದಾರರಿಗೆ ಬರೆದುಕೊಳ್ಳಿ

ಅಂಡವಾಯು, ಅಂಡವ್ಯಾಧಿ, ಫೈಲೇರಿಯಾ, ಇತ್ಯಾದಿಗಳಿಗೆ ಲೇಪನಬಗ್ಗೆ ದಿವ್ಯೌಷಧ.
ರಾತ್ಲಿಗೆ ರೂಪಾಯಿ 25/, ½ ರಾತ್ಲಿಗೆ ರೂಪಾಯಿ 12-8 0, ¼ ರಾತ್ಲಿಗೆ ರೂಪಾಯಿ 5-4-0.
ಕುಷ್ಠ ರೋಗಕ್ಕೆ ತೀಸೆರೊಂದರ ರೂಪಾಯಿ 3/-
ಎಸ್. ಪಿ ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ, ೯
S. P. Pharmaceuticel Works
Calcutta 9.

ಚಂದ್ರಿಕಾ
ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಗೊಳಿಸಿ ಶುಚಿಪಡಿಸುವ
ಹಲ್ಲು ಪುಡಿ
ಒಂದು ತೊಲೆ ಕಟ್ಟು 1ರ 0 1 0
ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.
ದಿ ಮಹಾಜನ ಸಿ ಎಂಡ್ ಪಿ ಲಿಮಿಟೆಡ್,
ಕಾಸರಗೋಡು. ದ. ಇಂಡಿಯ.

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೂ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಯಂ. ಆರ್. ಭಟ್, (ಆರ್ಟಿಸ್ಟ್)

ಶ್ರೀ ದುರ್ಗಾ ಭವನ, ಮುಲ್ಕಿ. ವ್ಯವಸ್ಥಾಪಕ.

NEO ROYAL CAFE,

Boarding & Lodging,

Santhekatte, UDIPI.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅವಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ.)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಲಿನಿಕ್ ಸಂಗ್ರಹಿ ಬರವಣಿ ರೋಗಗಳಿಗೆ ತಕ್ಕ ಜಾಡ ಔಷಧಿ ದವಾಖಾನೆಯಲ್ಲಿ ದೊರೆಯುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜಂಟರು:—ಪ್ರೋಗ್ರೆಸಿವ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಗಳ ದೇಹಸ್ಥಿತಿಯನ್ನು ಲಕ್ಷ್ಯಕ್ಕೆ ತಂದು ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಈ ದಿವ್ಯೌಷಧಿಯನ್ನು ಸಿಗುವ ಸ್ಥಳಗಳು ... ಅಂತಲೆ ಕೇವಲ ಈ ದವಾಖಾನೆಯಲ್ಲಿ ... ಪ್ರಯೋಜನ ... ಬರೆದು ಕೇಳಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಶಾಖೆ:— ಡಾ| ಬಿ. ಕೆ. ಶಿವರಾಮ ರಾವ್, ಸಂತೆಕಟ್ಟೆ, ಉಡುಪಿ.

ದಕ್ಷಿಣ ಕನ್ನಡ

ಕೋಟೇಶ್ವರ—ಕೋಟೇಶ್ವರ ಇಸ್ಲಾಮಿಯಾ ಲೈಬ್ರೇರಿ ಸಂಘ, ತಿನ್ನಾಡಿ ಕುಂದಾಪುರ, ಇದರ 7ನೇ ವಾರ್ಷಿಕೋತ್ಸವವು ತಾ. 27-5-48ರಲ್ಲು ಸಂಘದ ಕಾರ್ಯಾಲಯದಲ್ಲಿ ಶ್ರೀ. ಜಿ. ಶ್ರೀನಿವಾಸ ರಾವ್, ಬಿ. ಎ; ಬಿ. ಟಿ.; ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ಮುಂಡ್ಕೂರು ಅಜ್ಜನ ಸಂಕಲಕರಿಯ ಎಯಿಡೆಡ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ 28-5-48ರಲ್ಲಿ ಶ್ರೀ. ಕೊಡಂಗಳೂರು ಬಾಬು ಶೆಟ್ರವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ವಿವಿಧ ಚಟುವಟಿಕೆಗಳೂ, ಇನಾಮು ಹಂಚೋಣವೂ ನಡೆದಬಳಿಕ ಜರಾಸಂಧ ವಧೆ ಎಂಬ ಕನ್ನಡ ಪ್ರಹಸನವು ಅಭಿನಯಿಸಲ್ಪಟ್ಟಿತು.

ಪೆರ್ಡೂರು—ಶ್ರೀ. ಅನಂತ ಪದ್ಮನಾಭ ದೇವಸ್ಥಾನ ಶಾಲೆಯ ವಾರ್ಷಿಕೋತ್ಸವವು ತಾ 30-5-48ರಲ್ಲಿ ಡಾ. ಪದ್ಮನಾಭ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತವಾದ ಮೇಲೆ ದಿವಂಗತ ಸಾಂತ್ವಾರು ಅನಂತ ಪದ್ಮನಾಭ ಭಟ್ಟರ ನಿಧನಕ್ಕಾಗಿ ದುಃಖ ವ್ಯಕ್ತಪಡಿಸಲಾಯಿತು. ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನೋದಿದ ಮೇಲೆ ಶ್ರೀ ಎ. ಪಿ. ಕಲ್ಯಾಣಿಯವರು ಶಾಲಾ ಸ್ವಸ್ತಿವಾಚನ ಮಾಡಿದರು. ಶ್ರೀ. ರಮೇಶ ಅಡಿಗ, ಶಿರೋಮಣಿ, ಶ್ರೀ ಮಾಧವರಾವ್ ಹರಿದಾಸ, ಶ್ರೀ ಸಿ. ಎಚ್. ಶೆಟ್ಟಿ, ಮೊದಲಾದವರು ಸಮಯೋಚಿತ ಭಾಷಣವಿತ್ತರು. ಪಾರಿತೋಷಕ ವಿತರಣವಾದ ಮೇಲೆ ಶಾಲಾ ಮಕ್ಕಳು ಯಕ್ಷಗಾನ ಮತ್ತು ನಾಟಕವನ್ನು ಅಭಿನಯಿಸಿದರು.

ಅಲೆವೂರು—ಸ್ಥಳೀಯ ಶ್ರೀ ಸುಬೋಧಿನಿ ಶಾಲೆಯು ಇದೇ ತಾ ೧೮ರಿಂದ ಹಾಯರ್ ಎಲಿಮೆಂಟರಿ ಶಾಲೆಯಾಗಿ ಪರಿವರ್ತಿಸಲ್ಪಟ್ಟಿತು. ಹಾಯರ್ ತರಗತಿಯ ಉದ್ಘಾಟನಾ ಸಮಾರಂಭವು ಶ್ರೀ. H. ನರಹರಿರಾವ್ B. Com. ಇವರಿಂದ ನೆರವೇರಿಸಲ್ಪಟ್ಟಿತು. ಸಂಜೆ ಶ್ರೀ. ವೈ. ಗೋಪಾಲ್, B. A. L. T. ಇವರ ಅಧ್ಯಕ್ಷತೆಯಲ್ಲ ವಿಶೇಷ ಸಭೆಯು ಜರಗಿ ಹಲವರ ಸಂದರ್ಭೋಚಿತ ಭಾಷಣಗಳಾದುವು ಮಕ್ಕಳ ವಿವಿಧ ವಿನೋದಾವಳಿಗಳಾದ ಮೇಲೆ ಶಾಲಾ ಸಂಚಾಲಕ ಶ್ರೀ. ಯುವರ್, ಲಕ್ಷ್ಮಣ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಮುಂಬಯಿ—ಉತ್ತರ ಮುಂಬಯಿ ಹೊಟೇಲು ಕಾಮಗಾರ ಯೂನಿಯನ್, ಪರೇಲ್, ಇದರ ವಾರ್ಷಿಕ ಮಹಾಸಭೆಯು ತಾ 26-5-48ರಲ್ಲಿ ದಾಮೋದರ್ ಹಾಲಿನಲ್ಲಿ ಶ್ರೀ. ಯಂ. ಮಾಧವನರ ಅಧ್ಯಕ್ಷತೆಯಲ್ಲಿ ಜರಗಿತು. 3000ದ ಮೇಲೆ ಕೆಲಸಗಾರರು ಹಾಜರಿದ್ದರು. ಅಧ್ಯಕ್ಷರು ಕೆಲಸಗಾರ ಸಂಘಟನೆ ಕುರಿತು ಮಾತನಾಡಿದರು. ಶ್ರೀ. ಸಾಧಿತೆಣ್ಣಯನರ ಭಾಷಣವಾದ ಮೇಲೆ 47ನೇ ವಾರ್ಷಿಕವರದಿಯು ಸರ್ವಾನುಮತದಿಂದ ಮಂಜೂರಾಯಿತು. ಮುಂದಿನ ವರ್ಷದ ಬಗ್ಗೆ ಶ್ರೀಗಳಾದ ಯಂ ಮಾಧವನ್ [ಅಧ್ಯಕ್ಷ] ಎಸ್. ಎಸ್. ನಾಯ್ಕ [ಉಪಾಧ್ಯಕ್ಷ] ಕೆ. ಪಿ. ಸಾಯರ್ [ಕಾರ್ಯದರ್ಶಿ] ಕೆ. ಸಂಜೀವ ಶೆಟ್ಟಿ, ಕೃಷ್ಣ ಶೆಟ್ಟಿ, ಬಿ. ಯಂ. ಅಬ್ದುಲ್ ರೈಮನ್ [ಜತೆ ಕಾರ್ಯದರ್ಶಿಗಳು] ಎಚ್ ಜಗನ್ನಾಥ ಶೆಟ್ಟಿ [ಕೋಶಾಧಿಕಾರಿ] ಮತ್ತು ಒಟ್ಟು 16 ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ದುಃಖ ಸೂಚನೆ—ಹಲವು ವರ್ಷಗಳಿಂದ ಮುಂಬಯಿಯಲ್ಲಿ ಕನ್ನಡ ಕಲಾ ಸೇವೆಗಳನ್ನು ಮಾಡುತ್ತಿದ್ದು, ಕನ್ನಡ ಸಂಗೀತ ಸಭೆಯನ್ನು ನಡಿಸಿಕೊಂಡು ಬರುತ್ತಿದ್ದ, ಶ್ರೀ. ಬೋಳಾರ ಗೋಪಾಲ ನ್ಯಾಕರು ಮುಂಬಯಿಯಲ್ಲಿ ಕಾಯಿಲೆಯಿಂದಿದ್ದು, ತಾ 20.5.48ರಲ್ಲಿ ಜೆ. ಜೆ. ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾಗಿರುವುದು ವಿಷಾದಕರ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿನೆಟ್ಟು ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾಕಿದಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MIS. D. DEVEE, F DS. (N. J.)

Tollygunge CALCUTTA

ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು

ಅಮೃತಾಂಜನ. ತಲೆನೋವು, ಶೀತ, ಮೈಕೈನೋವು, ಉಳುಕು, ಕೆಮ್ಮು, ಜ್ವರ, ಹಲ್ಲು ನೋವುಗಳಿಗೆ ಎದೆನೋವು, ಗಾಯಗಳು ಬಾವು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಳ್ಳಕಾಶ, ನೋವಿನ ಸೊಪಡಾರೆ ಎಲ್ಲಾ ರೋಗಗಳಿಗೂ ಸರ್ವ, ಹುಳುಕಡ್ಡಿ ಮತ್ತು ನಸ ನಿಶ್ಶಕ್ತಿ ಸಿಕ್ಕಾರೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ನೆನಪಿರಲಿ ಕೈಲಾಸ ಬೆಟ್ಟದ ಗಿಡ ಮೂಲಿಕೆಯ (ರಿಜಿಸ್ಟರ್ಡ್) ಒಂದು ಡೋಸ್ ಔಷಧವನ್ನು ತಾ. 21-6-48ನೆ ಶನಿವಾರ ಹುಣ್ಣಿಮೆ ದಿನ ಸೇವಿಸಿದರೆ ಎಂಥಹ ಅಸ್ತಮ-ಗೂರು ಬ್ಬಸವು ಕಡಿಮೆಯಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Bramhachari C. Das,

Shri Sidh Bramhacharya,

Sewa Ashram,

P. O. Chitrakot (U. P.)

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

O. S. 410/1947.

ವಾದಿ—ಪಟೇಲ ಶಂಕ್ರಭಟ್ಟ.

ಪ್ರತಿವಾದಿರು—ಪರಮೇಶ್ವರಿ ಹೆರೆಗಾಕ ಶೂದ್ರ.

4 ಬೀಜಾಡಿ ಗಣೇಶರಾವ್, ಪಾಂಡುರಂಗರಾಯರ ಮಗ. ಕುಂದಾಪುರ ತಾಲೂಕು ಬೀಜಾಡಿ ಗ್ರಾಮ

6 ಸಬಿನಾಬಿ, ಮೇಗುಂದ ಅಬ್ದುಲಕರ ಸಾಹೇಬರ ಹೆಂಡತಿ. ಕುಂದಾಪುರ ತಾಲ್ಲೂಕು ಏಡ್ತರೆ ಗ್ರಾಮ.

ಸದ್ರಿ ಪ್ರತಿವಾದಿರಿಗೆ—

ವಾದಿಯು ಮೂಲಗೇಣ ಗೇಣಿಬಾಕಿ ಬಗ್ಗೆ ಮಾಡಿದ ಸದ್ರಿ ದಾವೆಯಲ್ಲಿ ನಿಮ್ಮನ್ನು ಸಸ್ಪೆಂಟ ... 4-6ನೇ ಪ್ರತಿವಾದಿರನ್ನಾಗಿ ಸೇರಿಸಬೇಕಾಗಿ R. I. A 298/1948ನೇಗೆ ಅರ್ಜಿ ಕೊಟ್ಟಿರುವದ್ರಿಂದಲೂ ಮತ್ತು ಕೈಪೇಕು ದುರಸ್ತಿಪಡಿಸಬೇಕಾಗಿ R. I. A. 299/48ನೇಗೆ ಅರ್ಜಿ ಕೊಟ್ಟಿರುವದ್ರಿಂದಲೂ, ಅ ಕುರಿತು ಆಕ್ಷೇಪಣೆ ಇದ್ದಲ್ಲಿ ವ ದಾವೆಯಲ್ಲಿ ವಿಚಾರಣೆ ಇದ್ದಲ್ಲಿ ತಾ. 18-6-48ನೇ ದಿವ್ಸ ಹಗಲು 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು, ಎಂಬ ಸಂಗ್ತಿ ಯಿಂ ಮೂಲ್ಕ ತಿಳಿಸಲಾಗುತ್ತದೆ.

K. Raghunath Shenai.

Pleader for Plaintiff.

Coondapoor, 28-5-1948.

ಮಂಗಳೂರು

ಅಳಿಯ ಸಂತಾನ ಮಸೂದೆಯ ಸಮಿತಿಯ ಸಭೆ—ಮೇಲ್ಕಾಣಿಸಿದ ಸಮಿತಿಯ ಸಭೆಯೊಂದು ಕಳೆದ ತಾ 28, 29ರಲ್ಲಿ ಮಂಗಳೂರಲ್ಲಿ ಜರಗಿದಾಗ ಅಳಿಯಸಂತಾನ ಸುಧಾರಣಾ ಮಸೂದೆಯ ಕರಡುಪ್ರತಿಯ ಎಲ್ಲಾ ಅಂಶಗಳನ್ನು ಚರ್ಚಿಸಲಾಯಿತು. ಮದ್ರಾಸು ಸರಕಾರದ ಕೃಷಿ ಇಲಾಖೆಯ ಮಾನ್ಯ ಸಚಿವ ಶ್ರೀ ಮಾಧವ ಮೆನೊನರು ಸಭೆಯ ಅಧ್ಯಕ್ಷಸ್ಥಾನವಹಿಸಿದ್ದರು. ಆರೋಗ್ಯ ಶಾಖಾಮಂತ್ರಿ ಮಾನ್ಯಶ್ರೀ ಎ. ಬಿ ಶೆಟ್ಟರೂ, ಪಾಲ್ಘಾಟಿನ ಶ್ರೀ ಎಂ. ನಾರಾಯಣ ಮೆನೊನ್, ಶ್ರೀಗಳಾದ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ಎಲ್ ಸಿ. ಪಾಯ್ಸ್, ಜನಾಬ್ ಎಚ್. ಎಸ್. ಹುಸೇನ ಸಾಹೇಬ್ ಮತ್ತು ಶ್ರೀ ಕೆ. ಈಶ್ವರನವರು ಸಭೆಯಲ್ಲಿ ಭಾಗವಹಿಸಿದ್ದರು. ಸಮಿತಿಯ ಕಾರ್ಯದರ್ಶಿ ಶ್ರೀ ರಾಘವ ವರ್ಮರೂ ಹಾಜರಿದ್ದರು.

ದ. ಕ. ಜಿಲ್ಲಾ ಹರಿಜನ ಪರಿಷತ್ತು—ದ. ಕ. ಜಿಲ್ಲೆಯ ಹರಿಜನ ಪರಿಷತ್ತೊಂದು ಮಂಗಳೂರಿನ ಕೆನರಾ ಹೈಸ್ಕೂಲಿನ ಭುವನೇಂದ್ರ ಭವನದಲ್ಲಿ ಇದೇ ತಾ. ೨೯-೫-೪೮ನೇ ಶನಿವಾರ ಗಂಟೆ ೪ಕ್ಕೆ ಮಂಗಳೂರು ನಗರ ಸಭೆಯ ಚೆಯರ್ಮೇನರಾದ ಶ್ರೀಮಾನ್ ಎಲ್. ಸಿ. ಪಾಯಸ್, ಬಿ ಎ. ಬಿ. ಯಲ್. ಎಂ. ಎಲ್. ಎ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪರಿಷತ್ತಿನ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಎಸ್. ಗೋಪಾಲ ಸಾಲೆನ್ನರು ಸ್ವಾಗತ ಭಾಷಣವಿತ್ತ ಮೇಲೆ ಮದ್ರಾಸಿನ ವ್ಯವಸಾಯ ಮಂತ್ರಿ ಶ್ರೀಮಾನ್ ಮಾಧವ ಮೆನನರು ಪರಿಷತ್ತನ್ನು ಉದ್ಘಾಟನೆ ಮಾಡಿದರು. ಆ ವೇಳೆ ಮಂಗಳೂರು ನಗರ ಸಭೆಯ ಸದಸ್ಯರಾದ ಶ್ರೀಮತಿ ಮೇರಿ ಬ್ರಿಟೊ, ಶ್ರೀಯುತರುಗಳಾದ ಡಿ. ಕೃಷ್ಣ, ಬಿ ಎ ಮಂಗಳೂರು, ನಗರ ಸಭೆಯ ಸದಸ್ಯರೂ, ಹರಿಜನ ಸೇವಕರೂ ಆದ ಶ್ರೀ. ಎನ್. ಯಸ್. ನಾರಾಯಣ ತಿಲ್ಲೆಯವರೂ ಮತ್ತು ಶ್ರೀ ಬೊಟ್ಟು ಕೊರಗಮೇಸ್ತ್ರಿಯವರೂ ಭಾಷಣವಿತ್ತರು. ಅನಂತರ ಹಲವು ಅಧ್ಯ ಮಹನೀಯರಿಂದ ಬಂದ ಸಂದೇಶಗಳನ್ನು ಸ್ವಾಗತ ಸಮಿತಿಯ ಕಾರ್ಯದರ್ಶಿಯವರು ಓದಿ ಹೇಳಿದ ನಂತರ ಧನ್ಯವಾದಗಳನ್ನರ್ಪಿಸಲಾಯಿತು. ಅನಂತರ ರಾತ್ರಿ ಗಂಟೆ ೮-೩೦ಕ್ಕೆ ಸರಿಯಾಗಿ ಪ್ರತಿನಿಧಿಗಳ ಸಭೆ ಸೇರಿ ವಿಷಯ ನಿಯಾಮಕ ಸಮಿತಿಯನ್ನು ಆರಿಸಲಾಗಿ, ಪರಿಷತ್ತಿನ ಅಂದಿನ ಕಾರ್ಯಕ್ರಮವು ಅಂತ್ಯವಾಯಿತು.

ಹರಿಜನ ಮಜೂರರ ಸಮ್ಮೇಳನ

ದ. ಕ. ಜಿಲ್ಲೆಯ ಹರಿಜನ ಪರಿಷತ್ತಿನ ಆಶ್ರಯದಲ್ಲಿ ಜಿಲ್ಲಾ ಹರಿಜನ ಮಜೂರರ ಸಭೆಯೊಂದು ಮಂಗಳೂರು ನಗರ ಸಭೆಯ ಉಪಾಧ್ಯಕ್ಷರಾದ ಶ್ರೀಮಾನ್ ಬಿ. ಗಂಗಾಧರದಾಸ, ಬಿ. ಎ., ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶ್ರೀಮಾನ್ ಯಸ್. ಗೋಪಾಲ್ ಸಾಲೆನ್ನ, ಯು. ಲಕ್ಷ್ಮಣ, ಬಂಡಿಗ ಮುಖಾರಿ ಮೊದಲಾದವರು ಭಾಷಣ ಕೊಟ್ಟ ಮೇಲೆ ಚಾ ಮತ್ತು ಕಾಫಿ ತೋಟಗಳ ಮಜೂರರ ಸಂಕಷ್ಟ ನಿವಾರಣೆಯ ಅವಶ್ಯಕತೆ, ಜಿಲ್ಲಾ ಬೋರ್ಡ್, ಪಂಚಾಯತ ಬೋರ್ಡ್, ಮತ್ತು ಮುನಿಸಿಪಾಲಿಟಿಗಳಲ್ಲಿ ಕೆಳತರಗತಿಯ ನೌಕರಿಯಲ್ಲಿ ಹೆಚ್ಚಾಗಿ ಹರಿಜನರಿರುವುದರಿಂದ ಇವರಿಗೆ ಪ್ರೊವಿಡೆಂಟ್ ಫಂಡ್, ಹೆಂಗಸರಿಗೆ ಹೆರಿಗೆಯ ಕಾಲದಲ್ಲಿ ರಜೆಯಲ್ಲಿದ್ದ ಸಂಬಳ ಮತ್ತು ಜಿಲ್ಲೆಗೊಂದು ಮಜೂರ ಸಂಘದ ಅವಶ್ಯಕತೆ ಇತ್ಯಾದಿಗಳ ವಿಷಯ ಠರಾವುಗಳು ಮಂಜೂರಾದಮೇಲೆ ಲಘು ಫಲಾಹಾರ ಸತ್ಕಾರದೊಂದಿಗೆ ಸಭಾಂತ್ಯವಾಯಿತು.

ಪರಿಷತ್ತಿನ ಮಹಾಧಿವೇಶನ—ಈ ಅಧಿವೇಶನವು ಸಂಜೆ ಗಂಟೆ ೩ಕ್ಕೆ ಸರಿಯಾಗಿ ಶ್ರೀಮಾನ್ ಯಲ್ ಸಿ ಪಾಯ್ಸರವರು ಸ್ವಂತ ಕಾರ್ಯದ ನಿಮಿತ್ತ ಬಾರದಿದ್ದ ಕಾರಣ ಶ್ರೀಮಾನ್ ಎಂ. ಮಾಧವ ರಾವ್, ಬಿ. ಎ ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಭವನದಲ್ಲಿ ಜರಗಿತು. ಪ್ರತಿನಿಧಿಗಳಿಂದ ಬಂದ ಠರಾವುಗಳ ಮೇಲೆ ದೀರ್ಘ ಚರ್ಚೆಗಳು ನಡೆದ ಮೇಲೆ ಈ ಕೆಳಗೆ ಕೊಟ್ಟ ಠರಾವುಗಳು ಮಂಜೂರಾದವು.

ಠರಾವುಗಳು——ಹೈದರಾಬಾದಿನಲ್ಲೂ ಪಾಕಿಸ್ಥಾನದಲ್ಲೂ ಹರಿಜನರ ಕಡೆಗಿನ ವರ್ತನೆಯನ್ನು ಬದಲಾಯಿಸಬೇಕೆಂದೂ, ಅಳಿಯ [illegible] ಕಾಯಿದೆಯನ್ನು ಜಾರಿಗೆ ತರಬೇಕೆಂದೂ, ಹರಿಜನ ಕೃಷಿಕರಿಗೆ ಸರಕಾರವು ಭೂಮಿಯನ್ನೂ, ಅದರ ಸಾಗುವಳಿಗೆ ಧನ ಸಹಾಯವನ್ನೂ ಮಾಡಬೇಕೆಂದೂ, ಹರಿಜನ ಒಕ್ಕಲುಗಳಿಗೆ ವರ್ಗದಾರರು ಕಷ್ಟಕೊಡುವುದನ್ನು ನಿಲ್ಲಿಸಲು ಒಂದು ಶಾಸನವನ್ನು ಜಾರಿಮಾಡಬೇಕೆಂದೂ ಹರಿಜನರ ಬಗ್ಗೆ ಸರಕಾರದ ವಿವಿಧ ಕಾಯಿದೆಗಳನ್ನು ಹಳ್ಳಿಗಳಲ್ಲಿ ತಿಳಿಯುವುದಕ್ಕಾಗಿ ಪ್ರಚಾರಮಾಡುವುದು ಅವಶ್ಯವೆಂದೂ, ಚಾ ಮತ್ತು ಕಾಫಿ ತೋಟಗಳ ಮಜೂರರು ಹಾಗೂ ಮುನಿಸಿಪಾಲಿಟಿ, ಜಿಲ್ಲಾ ಬೋರ್ಡ್, ಪಂಚಾಯತ್ ಬೋರ್ಡುಗಳ ಕೆಳತರಗತಿಯ ನೌಕರರ ಸಂಕಷ್ಟಗಳನ್ನು ವಿಚಾರಿಸಿ ತಕ್ಕ ಪರಿಹಾರವನ್ನು ಮಾಡುವುದು ಆವಶ್ಯವೆಂದೂ, ಅಂತರ್ಜಾತೀಯ ವಿವಾಹ, ಮಿಶ್ರಭೋಜನ ಮೊದಲಾದುವುಗಳನ್ನು ಪ್ರೋತ್ಸಾಹಿಸಬೇಕೆಂಬ ಹಲವಾರು ಠರಾವುಗಳು ಪಾಸಾದುವು. ಅನಂತರ ಶ್ರೀ ಯಚ್. ಜಿ. ಸಾಲೆನ್ನರು ಬಂದವರನ್ನೆಲ್ಲಾ ಅಭಿನಂದಿಸಿ ಪರಿಷತ್ತಿನ ಮಹಾಧಿವೇಶನವು ಕೊನೆಗೊಂಡಿತು. ಪರಿಷತ್ತಿನ ಸಮಯ ಮನೋರಂಜನ ಸ್ಪರ್ಧೆಯ ಏರ್ಪಾಡೂ ಇತ್ತು

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ-ಫಾರ್ಮಸಿ, ಬೆಳಗಾಂವ

ಟಿಕರವೂ ಸಾಧುರವೂ ಆದ **ಕೃಷ್ಣಾ ಶುಗರ್ ಬರ್ಫಿ**

ಹನ್ನೆರಡು ತುಂಡುಗಳ ಪೆಟ್ಟಿಗೆಗಳಲ್ಲಿ ದೊರೆವುದು

ಪುಷ್ಟಿಕರವಾದ, ಗೇರುಬೀಜ ಮೊದಲಾದುವನ್ನು ಉಪಯೋಗಿಸಿ ತಯಾರಿಸಿದ ಪ್ರತಿಯೊಬ್ಬನೂ ಮೆಚ್ಚುವ ಒಂದು ಉತ್ಕೃಷ್ಟ ತಿಂಡಿ.

ಕೃಷ್ಣಾ ಕೆಶ್ಯು ಕರ್ನೆಲ್ಸ್ ಅಥವಾ ಸಕ್ಕರೆ ಗೇರುಬೀಜ

ಕೇಸರ ಮೊದಲಾದ ಪರಿಮಳಯುಕ್ತ ವಸ್ತುಗಳನ್ನು ಉಪಯೋಗಿಸಿ, ಸಕ್ಕರೆಯ ಪಾಕದಲ್ಲಿ ತಯಾರಿಸಿದ ಗೇರುಬೀಜದ ಮಿಠಾಯಿ.

ಅರ್ಧ ಮತ್ತು ಕಾಲು ರಾತ್ತಲ ಪೆಟ್ಟಿಗೆಗಳಲ್ಲಿ ದೊರೆವುವು.

ಶ್ರೀ ಕೃಷ್ಣಾ ಟೊಫಿ ವರ್ಕ್ಸ್,

ರಥಬೀದಿ, ಮಂಗಳೂರು

THE VIJAYA BANK LIMITED.

Season deposits are now accepted at the Head Office and Branches of the Bank in sums of Rs 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanbangad & Mercara

Total Resources Exceed 36 lacs.

ಉಡುಪಿಗೆ ಹೋಗಬೇಕು! ಆದರೆ ಇಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿತ್ಯ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ!

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಎಲ್ಲ ತರದ ದಂತರೋಗಗಳನ್ನು ನಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಕಾಶ್ಮೀರದ ಮಂತ್ರಿಗಳು

[೧ನೇ ಪುಟದಿಂದ]

ಶನಿನಲ್ಲಿ ರಾಷ್ಟ್ರೀಯ ಸಮ್ಮೇಳನದ ಪರವಾಗಿ ಸೇರಿಕೊಂಡ ಇಬ್ಬರು ಪ್ರತಿನಿಧಿಗಳಲ್ಲಿ ಬೇಗ್ ಸಾಹೇಬರೊಬ್ಬರು. ಅಂತೆಯೇ ಮಹಾರಾಜರು 1944ರಲ್ಲಿ ಮಂತ್ರಿಮಂಡಲಿಗಿಬ್ಬರು ಜನ ಪ್ರತಿನಿಧಿಗಳನ್ನಾರಿಸಿ ಕೊಂಡಾಗ ಆ ಇಬ್ಬರಲ್ಲೊಬ್ಬರು ಈ ಸಾಹೇಬರೇ. ಮಂತ್ರಿಯಾಗಿದ್ದುಕೊಂಡು ಜನತೆಯ ಪರವಾಗಿ ಹೋರಾಡಿ, ಆ ಮೇಲೆ ರಾಜಿ ಕೊಟ್ಟು 'ಕ್ವಿಟ್ ಕಾಶ್ಮೀರ' ಚಳವಳದಲ್ಲಿ ತನ್ನಂತೆಯೇ ತನ್ನ ಮತದಾರ ಕ್ಷೇತ್ರವೂ ಎಲ್ಲಕ್ಕಿಂತ ಮುಂಭಾಗದಲ್ಲಿರುವಂತೆ ಮಾಡಿದ್ದರು. ಈಗ ಕಾಶ್ಮೀರದ ಕಂದಾಯ ಮಂತ್ರಿಯಾಗಿದ್ದಾರೆ.

ಗುಲಾಮ್ ಮಹಮ್ಮದ್ ಸಾದಿಕ್

ಸಾದಿಕರು ದೊಡ್ಡ ಹಾಗೂ ದೇಶಭಕ್ತಿಗೆ ಹೆಸರಾದ ಕುಟುಂಬದವರು. ಗುಲಾಮ್ ಮಹಮ್ಮದರು 12ನೇ ವಯಸ್ಸಿನ ಶಾಲಾವಿದ್ಯಾರ್ಥಿಯಾಗಿದ್ದಾಗಲೇ ಗಾಂಧಿಜೀ ಮತ್ತು ಮಹಮ್ಮದಾಲಿಗಳ ಜತೆ ಭಾವಚಿತ್ರವಿದ್ದ ಬಿಲ್ಲೆಯನ್ನು ಹರಹಿಡಿದು ತೊಟ್ಟು ಇಂಗ್ಲಿಷ್ ಪ್ರಿನ್ಸಿಪಾಲರಿಂದ ಬೆತ್ತದ ಹೊಡೆತ ತಿಂದಿದ್ದರು. ಭಗತ್ ಸಿಂಗರಿಗೆ ಫಾಶಿಯಾದಾಗ ಅವರ ತತ್ವಬೋಧೆಗಳನ್ನು ಸ್ವತಃ ಬರೆದ ಹಸ್ತಪ್ರತಿಗಳನ್ನು ಎಲ್ಲೆಲ್ಲೂ ಹಬ್ಬಿಸಿ, ಆಗ ೧೮ ವರುಷದ ಹುಡುಗನಾಗಿದ್ದ ಇವರು ಪೋಲೀಸರಿಗೆ ತನ್ನ ಕುರಿತು ಅನುಮಾನ ಮೂಡದಂತೆ ವರ್ತಿಸಿ ಜನತಾಭಾವನೆಯಲ್ಲಿ ಕ್ರಾಂತಿಯೆಬ್ಬಿಸಿದ್ದರು. ಕಾಲೇಜಿನಲ್ಲಿರುವಾಗ ಅಲ್ಲಿಯ ವಿದ್ಯಾರ್ಥಿ ಸಭಾಕೂಟದಲ್ಲಿ ಗಾಂಧಿಜೀ ತತ್ವಗಳನ್ನೆತ್ತಿ ಮಾತಾಡಿದ್ದಕ್ಕಾಗಿ ಅಧ್ಯಕ್ಷ ಪ್ರಿನ್ಸಿಪಾಲರು ಅಲ್ಲಿಂದೋಡಿದಾಗ ಸಾದಿಕರೇ ಅಧ್ಯಕ್ಷಸ್ಥಾನಕ್ಕೇರಿದ್ದರು. ಗಾಂಧಿಜಿಯ ದಸ್ತಗಿರಿಯ ನಿಷೇಧಾರ್ಥವಾಗಿ ೧೯೩೨ರಲ್ಲಿ ವಿದ್ಯಾರ್ಥಿಗಳ ಪ್ರಚಂಡ ಮೆರವಣಿಗೆ ಹೊರಡಿಸಿ ಪೋಲೀಸರಿಂದ ಹಡೆಗಟ್ಟೆಲ್ಪಟ್ಟಿದ್ದರೂ ಗೆದ್ದಿದ್ದರು. 1931ರಿಂದಲೂ ಶೇಖ್ ಅಬ್ದುಲ್ಲಾರ ಸ್ವತಂತ್ರ ಕಾಶ್ಮೀರ ಚಳವಳಗಳಲ್ಲಿವರು ಹುರುಪಿನ ಯೋಧರಾಗಿ ದುಡಿದಿದ್ದಾರೆ. 1934ರಲ್ಲೇ ವಕೀಲರಾಗಿ ಇವರು ಅಲೀಘರ್ ಯುನಿವರ್ಸಿಟಿಯಿಂದ ಮರಳಿದುದು; ರಾಷ್ಟ್ರೀಯ ಸಮ್ಮೇಲನದ ಪ್ರಥಮ ಬಾರಿಯ ಎಂ. ಎಲ್. ಎ.ಗಳಲ್ಲಿ ಇವರೊಬ್ಬರು. 1944ರಲ್ಲಿ ಆ ಪಕ್ಷದ ಉಪನಾಯಕನೂ ಆಗಿದ್ದರು. 1938ರ ಚಳವಳದಲ್ಲಿ ಆರು ತಿಂಗಳ ಶಿಕ್ಷೆಗೊಳಗಾಗಿದ್ದರು. ಕೊನೆಯ ಕ್ವಿಟ್ ಕಾಶ್ಮೀರ ಚಳವಳದಲ್ಲಿ ಕಾಶ್ಮೀರದಿಂದ ತಲೆತಪ್ಪಿಸಿಕೊಂಡು ಹೊರಗೆ ಬಂದು ಗುಲಾಮ್ ಭಕ್ಷಿಯೊಂದಿಗೆ ಕೂಡಿ ಹೋರಾಟ ನಾಗಿಸಿದ್ದರು. ಈಗ ಶೇಕ್ ಅಬ್ದುಲ್ಲಾ ಮಂಡಲಿಯಲ್ಲಿ ಅಭಿವೃದ್ಧಿ ಖಾತೆಯ ಮಂತ್ರಿಗಳಾಗಿದ್ದಾರೆ.

ಸದಾರ್ರ್ ಬುಧಸಿಂಗ

ಹುಟ್ಟು ಯೋಧ, ಮುಸ್ಲಿಮೇತರರ ನಾಯಕನಿವರು, ಆದಿಯಿಂದಲೂ ಶೇಕ್ ಅಬ್ದುಲ್ಲಾರ ರಾಷ್ಟ್ರೀಯ ಚಳವಳಕ್ಕೆ ಪೂರ್ಣ ಬೆಂಬಲವಾಗಿದ್ದವರು, ಜೆಂಗೋಲೀ ಆಗಿದ್ದವರು. ಈಗ ಇವರ ಪ್ರಾಯ 72. ಕಾಶ್ಮೀರ ಚಳವಳದ 'ಬಾಪೂ' ಈ ವೃದ್ಧ. ನವ ತರುಣರ ಉತ್ಸಾಹದಿಂದ ಈಗಲೂ ಕ್ರಾಂತಿ ಕಿಡಿಗಳನ್ನು ಸೂಸುತಿದ್ದಾರೆ. ಆದಿಯಲ್ಲಿ ರೆವಿನ್ಯೂ ಆಫೀಸರರಾಗಿದ್ದರು. ಆಗಲೂ ರೈತೋದ್ಧಾರವನ್ನೇ ತನ್ನ ಧ್ಯೇಯವಾಗಿಟ್ಟುಕೊಂಡಿದ್ದರು. ಉದ್ಯೋಗ ನಿವೃತ್ತರಾದ ಮೇಲೆ ಗ್ರಾಮೋದ್ಧಾರಕ್ಕೆ ತೊಡಗಿ ಹರಿಜನರೊಂದಿಗೇನೇ ಊಟ ಕೂಟ ನಡೆಯಿಸಿಕೊಂಡು ಅಸ್ಪೃಶ್ಯತಾ ನಿವಾರಣೆಯನ್ನೂ ಮಾಡಿದ್ದರು. ಆ ಮೇಲೆ ಸ್ವಾತಂತ್ರ್ಯ ಚಳವಳಾರಂಭದಿಂದಲೂ ಅದರಲ್ಲಿದ್ದು 1938ರಲ್ಲಿ ಒಂದು ವರುಷ ಶಿಕ್ಷೆಯನುಭವಿಸಿದ್ದರು. ಕ್ವಿಟ್ ಕಾಶ್ಮೀರ ಚಳವಳದಲ್ಲಿ ಒಂದೂವರೆ ವರುಷ ಶೇಕ್ ಅಬ್ದುಲ್ಲಾರ ಜತೆಯಲ್ಲೇ ಬಂಧನದಲ್ಲಿದ್ದರು. ಈಗ ಆರೋಗ್ಯ ಖಾತೆಯ ಮಂತ್ರಿಯಾಗಿದ್ದಾರೆ.

ಶ್ಯಾಮಲಾಲ್ ಸರಾಫ್

ಕಾಶ್ಮೀರೀ ಪಂಡಿತರ ಕುಟುಂಬದವರಿವರು. ಕಾಲೇಜು ಬಿಟ್ಟಂದಿನಿಂದಲೂ ಸ್ವತಂತ್ರ ಉದ್ಯೋಗ ನಡೆಸುತಿದ್ದರಲ್ಲದೆ ಆದಿ ಭಾಗದಲ್ಲಿ ತನ್ನ ಪಂಡಿತ ಸಮಾಜದ ಸಂಸ್ಥೆಯೊಂದನ್ನು ಸ್ಥಾಪಿಸಿಕೊಂಡು ದುಡಿದಿದ್ದರು. ಆ ಮೇಲೆ ಶೇಕ್ ಅಬ್ದುಲ್ಲಾರ ಧೋರಣೆ ಮೆಚ್ಚಿಗೆಯಾಗಿ ಅದರೊಡನೆ ತಲ್ಲೀನಗೊಂಡಿದ್ದಾರೆ. ೧೯೩೮ರಲ್ಲಿ ಜೈಲುವಾಸವನ್ನನುಭವಿಸಿದ್ದರು. ಕ್ವಿಟ್ ಕಾಶ್ಮೀರಾಂದೋಲನದಲ್ಲಿ ವಿಶ್ವಾಸದ್ರೋಹದ ಅಪಾದನೆಗೊಳಗಾಗಿದ್ದರು. ಈಗ ಆಹಾರ ಮತ್ತು ನಾಗರಿಕ ಸರಬರಾಯಿ ಮಂತ್ರಿಯಾಗಿದ್ದಾರೆ. ಮುಸ್ಲಿಮೇತರರನ್ನು ಶೇಕ ಅಬ್ದುಲ್ಲಾರ ಹಿಂಬದಿನಿಲ್ಲಿಸಿದ್ದ ಕೀರ್ತಿ ಬುಧಸಿಂಗ ಮತ್ತು ಶ್ಯಾಮಲಾಲ ಸರಾಫರಿಗೆ ಸಲಬೇಕು.

ಕರ್ನಲ್ ಪೀರ್ ಮಹಮ್ಮದ

೧೮೯೩ರಲ್ಲಿ ಹುಟ್ಟಿದವರಿರುವರು.೩೦ ವರುಷ ಕಾಶ್ಮೀರ ಸಂಸ್ಥಾನದ ಸೇನೆಯಲ್ಲಿದ್ದು 1943ರಲ್ಲಿ ನಿವೃತ್ತರಾಗುವಾಗ ಮಿಲಿಟರಿ ಫೋರ್ಸುಗಳ ಡೈರೆಕ್ಟರರಾಗಿದ್ದರು. ಅಂದಿನಿಂದ ಸಾಮಾಜಿಕ ರಾಜಕೀಯ ಕಾರ್ಯಮಗ್ನರಾಗಿದ್ದು ಎಡೆಬಿಡದೆ ನಾಲ್ಕು ವರುಷ ಜಮ್ಮುವಿನ ಅಂಜುಮಾನೀ ಇಸ್ಲಾಮಿಯಾದ ಅಧ್ಯಕ್ಷನಾಗಿದ್ದರು. ಕಾಶ್ಮೀರದ ಮೇಲೆ ಪುಂಡರ ಆಕ್ರಮಣಾರಂಭವಾದಾಗ ಇವರ ಯೋಧ ರಕ್ತ ಕುದಿಯಿತು. ಶೇಕ್ ಅಬ್ದುಲ್ಲಾರು ಸಹಾಯಕನಾಗಿ ರಕ್ಷಣಾ ಸಂಘಟನೆಯಲ್ಲಿ ಅಮೂಲ್ಯ ಕೆಲಸ ಮಾಡಿದರು. ಈಗ ವಿದ್ಯಾ ಮಂತ್ರಿಯಾಗಿದ್ದಾರೆ.

ಗಿರಿಧರಲಾಲ್ ದೋಗ್ರಾ

ಜಮ್ಮು ಪ್ರಾಂತ್ಯದವರು ಈ ದೋಗ್ರಾ. ಆ ಭಾಗದಲ್ಲಿ ರಾಷ್ಟ್ರೀಯ ಸಮ್ಮೇಳನದ ಪ್ರಭಾವವೇ ಹರಡದಿದ್ದ ಕಾಲದಿಂದಲೂ ಅದಕ್ಕಾಗಿ ದುಡಿಯುತ್ತಾ ಬಂದವರು. ಕ್ವಿಟ್ ಕಾಶ್ಮೀರ ಚಳವಳದಲ್ಲಿ ಭಕ್ಷಿ ಮತ್ತು ಸಾದಿಕರೊಂದಿಗೆ ಹೊರಗೆ ನಿಂತು ಕೆಲಸ ನಾಗಿಸಿದವರಿವರು. ಮುಸ್ಲಿಮೇತರ ಅಗ್ರಗಣ್ಯ ಕಾಶ್ಮೀರೀ ನಾಯಕರಲ್ಲಿ ಇವರೊಬ್ಬರು. ಜಮ್ಮುವಿನ ಸುಪ್ರಸಿದ್ಧ ವಕೀಲರಾಗಿರುವ ಇವರ ಕೈಯಲ್ಲೇ ಕಾಶ್ಮೀರದ ಅರ್ಥ ಖಾತೆಯಿದೆ.

ಅಂತೂ ಇಂದಿನ ಕಾಶ್ಮೀರದ ಮಂತ್ರಿಮಂಡಲಿಯೆಂಬುದು ಈ ಮೊದಲಿನ ಕಾಶ್ಮೀರ ಸ್ವಾತಂತ್ರ್ಯ ಸಮರದ ಸೇನಾನೀ ಮಂಡಲಿಯೇ—ಹೈದರಾಬಾದಿನ ಲಾಯಿಕ್ ಅಲಿಯಂತಹ ರಝಾಕಾರ್ ಬಾಲಬಡುಕ ಸ್ವಾರ್ಥೀ ಪುಂಡರ ಕೂಟವಲ್ಲ!

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:— ಟಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ-ಔಷಧಾಲಯ, ಗದಗ-ಸಿಟಿ-

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ— ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಪಾನಿ, ಕೆಮಿಸ್ಟ, ಹಾವೇರಿ ಬ್ಯಾಡಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಷ್ಟಹೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ಏಳು ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:— ಗದಗ:— ಗದಗ ಫಾರ್ಮಸಿ, ಹುಬ್ಬಳ್ಳಿ:— ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್-ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ, ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಪುಳಿನಾಪುರ ಮಹಾತ್ಮೆ

ಕನ್ನಡ ವಚನ ಗ್ರಂಥ ಅಚ್ಚಿನಲ್ಲಿದೆ.

ಮೊದಲನೇ ಭಾಗದಲ್ಲಿ ದೇವಿ ಭಾಗವತಾಂತರ್ಗತ ಸುರಥ ವೈಶ್ಯರ ವೃತ್ತಾಂತಗಳಿಂದ ಪ್ರತಿಷ್ಠೆಮಾಡಿದ ದೇವಿ ಲೋಕದ ವಿಸ್ತಾರವಾದ ಸ್ಥಳ ಪುರಾಣವೂ-ಎರಡನೇ ಭಾಗದಲ್ಲಿ ಕೊಲ್ಲೂರು, ಕಟೀಲು, ಸುಬ್ರಮಣ್ಯ ಮೊದಲಾದ ದೇವಿ ಅಂಶಗಳನ್ನೊಳಗೊಂಡ ಪುಳಿನಾಪುರ ಸ್ಥಳ ಮಹಿಮೆಯೂ— ಮೂರನೇ ಭಾಗದಲ್ಲಿ ಅಶೋಕ ಚಕ್ರವರ್ತಿಯ ಕಾಲದಾರಭ್ಯ ಶಿಲಾಶಾಸನ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟ ತಾಮ್ರಶಾಸನ ಇತ್ಯಾದಿ ಆಧಾರಗಳಿಂದ ಬರೆದ ಚರಿತ್ರಾಸಾರವೂ ಇದೆ.

ಅಸ್ತಿಕರಾದ ದೇವಿಭಕ್ತರು ಮುಂದಾಗಿ ತಿಳಿಸಿದವರಿಗೆ ರೂ. ೧ ೮ ೦

೩ ಭಾಗಗಳ ಪುಸ್ತಕಕ್ಕೆ ಬೆಲೆ ರೂ. ೨-೮-೦

ಎನ್. ಎ. ಶೀನಪ್ಪ ಹೆಗ್ಡೆ

ಅಮುಣಂಜೆ ಗುತ್ತು, ಪೊಳಲಿ,

Post ಬೆಳ್ವೂರು, ದ. ಕ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.

ರೇಶನ್ ಕಾರ್ಡುಗಳು

ದೊರೆಯುತ್ತವೆ,

ನವಯುಗ ಪ್ರೆಸ್, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

ಎರಡಾಣೆ

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

17-6-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮ ವಾರ ೪೧

NAVAYUGA WEEKLY, UDIPI.
FOUNDER: Hon'ble Mr. A. B. SHETTY, Health Minister, Govt of Madras.

Vol. 28 No. 41

ನಂ. 1ನೆ ಕೇಡಿ- ಕಾಸಿಮ್ ರಜ್ವಿ

ಸಯ್ಯದ್ ಕಾಸಿಮ್ ರಜ್ವಿ- ಭಾರತದ ಪಾಲಿಗೆ 1948ರ ಜಿನ್ನ! ಹೈದರಾಬಾದಿನ ಅಧಿಕ ಸಂಖ್ಯಾಕ ಮುಸ್ಲಿಮೇತರರು ಅಪಮೃತ್ಯುವಿಗಿಂತಲೂ ಹೆಚ್ಚಾಗಿ ಅಂಜುತ್ತಿರುವ ಮನುಷ್ಯ. 'ಹೈದರಾಬಾದನ್ನು ಆಳುತ್ತಿರುವದು ನಿಜಾಮರಲ್ಲ, ಈತ' ಎಂಬ ಪ್ರಭಾವ ಪಡೆದಿರುವಾತ! ಸಂಕುಚಿತ ಹಾಗೂ ಕಟ್ಟುಗ್ರ ಮತಾಂಧತೆಯನ್ನು ಅಸಾಧಾರಣ ಸಂಘಟನಾ ಶಕ್ತಿ ಮತ್ತು ಎದೆಗಾರಿಕೆ ಜತೆಗೂಡಿದರೆ, ಅದೆಂತಹ ವಿನಾಶಕ ಶಕ್ತಿಯಾಗುವದೆಂಬುದಕ್ಕೆ ಇಡೀ ಪ್ರಪಂಚಕ್ಕೇನೇ ನಿದರ್ಶನವಾಗಬಲ್ಲ ಮೂರ್ತಿ! ಭಾರತದಲ್ಲೆಲ್ಲಾ ನಿಜಾಮ್ ಸಾಮ್ರಾಜ್ಯ ಹರಡಿಸಿ, ಬಂಗಾಳ ಸಮುದ್ರವು ನಿಜಾಮರ ಪವಿತ್ರ ಪಾದಗಳನ್ನು ತೊಳೆಯುವಂತೆಯೂ, ಡಿಲ್ಲಿಯ ಕೆಂಪು ಕೋಟೆಯ ಮೇಲೆ ನಿಜಾಮ್ ಧ್ವಜ ಹಾರಾಡುವಂತೆಯೂ ಮಾಡುವ ಕಂಸ ಸ್ವಪ್ನ ಕಾಣುತ್ತಿರುವ ಜನ! ಮೊನ್ನೆ ತಾನೇ ಭಾರತ [illegible] ಹೈದರಾಬಾದುಗಳೊಳಗಿನ ಸಂಧಾನ ಮಾತುಕತೆ ನಿಷ್ಫಲಗೊಂಡು ಮುಗಿಯಿತೆಂದೂ, 'ಭಾರತದ ಗಡಿ ದಾಟಿ ನುಗ್ಗಿಬರುವ ಧಾಳಿಗಾರ ಪುಂಡರನ್ನೋಡಿಸಿಕೊಂಡು ಹೈದರಾಬಾದಿನಾಳಕ್ಕೂ ಹೊಡೆದಟ್ಟಿ ಹೋಗಬಹುದೆಂದು ಹಿಂದೀ ಸರಕಾರ ಸೇನಾಜ್ಞೆ ಕೊಟ್ಟಿತೆ'. ನು ಕೇಳಿದೊಡನೆ ಅಪಹಾಸ್ಯದಿಂದ ಹಿಗ್ಗಿ "ಈ ವರೆಗಿನ ಸಂದೇಹಾಸ್ಪದ ಸ್ಥಿತಿಯೀ ರೀತಿ ಅಂತ್ಯಗೊಂಡುದಕ್ಕಾಗಿ ಸಂತೋಷಿಸುತ್ತೇನೆ. ಹೈದರಾಬಾದಿನೊಳಗಡೆಗೂ ಅಟ್ಟಿಕೊಂಡು ಬರುತ್ತೇವೆನ್ನುವ ತಮ್ಮ ಒಣ ಬೆದರಿಕೆಯ ಮಾತನ್ನು ಅವರು ಕಾರ್ಯತಃ ಜ್ಯಾರಿಗೆ ತರಲಿ ಎಂದು ಆಹ್ವಾನಿಸುತ್ತೇನೆ. ಆದರೆ ಅವರು ಹಾಗೆ ಮಾಡುವದಿಲ್ಲವೆಂದು ನನಗೆ ಗೊತ್ತು!" ಎಂದು ಹಂಗಿಸಿ ಮಾತಾಡಿರುವ ಮದೋನ್ಮತ್ತ. "ಹೈದರಾಬಾದಿನ ಮೇಲೆ ಅವರು ಬಿದ್ದಲ್ಲಿ, ಎಲ್ಲೆಲ್ಲೂ ಇನ್ನೊಮ್ಮೆ ಪಾಣಿಪತ್ ಹೋರಾಟವೇ ನಡೆಯಲಿದೆ. ಸಂಯುಕ್ತ ಭಾರತವು ಹೈದರಾಬಾದನ್ನು ನುಂಗುತ್ತೇನೆಂದು ಹೊರಟು ತನ್ನ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳಲಿದೆ"- ಎಂದು ಈ ಪ್ರಪಂಚದಲ್ಲೇ ಇಲ್ಲದವನಂತೆ ತನ್ನ ತಲೆಯನ್ನು ಅಪಾಯದ ಗುಡಾಣದೊಳಗೆ ತುರುಕಿಸಿಕೊಂಡು ಆರ್ಭಟಿಸಿರುವ ಹುಚ್ಚ! ಇಂತಹ ಒಬ್ಬ ಪುಂಡನಿಗೆ, ಒಂದು ಘನರಾಷ್ಟ್ರ ಮತ್ತೊಂದು ಸಂಸ್ಥಾನಕ್ಕೆ ಸಂಬಂಧಿಸಿದಂಥಾ ರಾಜಕೀಯ ಕ್ಷೇತ್ರದಲ್ಲಿ ಇಷ್ಟೊಂದು ಪ್ರಾಮುಖ್ಯತೆ ದೊರೆತಿರುವದೇ ಲೋಕದ ಒಂದು ಆಶ್ಚರ್ಯ! ಉನ್ಮತ್ತತೆ-ಕಠೋರತೆ-ಕನಸುಗಳೇ ಸಾಕಾರಗೊಂಡ ರಜ್ವಿಯಂತಹ ಭೇತಾಳನು ನಾಗರಿಕ ಯುಗವನ್ನಿಸುವ ಈ ಕಾಲದಲ್ಲೂ ಇಪ್ಪತ್ತನಾಲ್ಕು ತಾಸುಗಳಿಗಿಂತ ಹೆಚ್ಚಿಗೆ ಬದುಕಿರುವುದೇ ಒಂದು ಸೋಜಿಗ; ಮಾನವ ನಾಗರಿಕತೆಗೆ ಪ್ರಬಲಾಕ್ಷೇಪ! ಈ ದರ್ಬಾರ್ ರಾಕ್ಷಸಪತಿಯ ಭೇಟಿಗೊಮ್ಮೆ ಹೋಗಿದ್ದ ಪತ್ರಿಕೋದ್ಯಮಿ ಸಿ ಯಚ್. [illegible] ಅವರು ಆತನ ವ್ಯಕ್ತಿ ಚಿತ್ರವನ್ನು ಸ್ವಲ್ಪ [illegible] ತೋರಿಸಿದ್ದಾರೆ. ಅದರ ಯಥಾನುವಾದ ಕೆಳಗಿದೆ. ಆಟಂ ಬೋಂಬಿನ ಮುಚ್ಚಳ ಕೂಡಾ ಮುಚ್ಚಲಾಗುವಂತಹದೇ, ವಿಷದ ಬಾಟ್ಲಿಗಾದರೂ ಕೊರ [illegible] ಹೋಲಿದೆ; ಇದೂ ರಜ್ವಿ ವ್ಯಕ್ತಿತ್ವದ ಹೊರ ನೋಟ ಮಾತ್ರ:-

ಂಂ ಂಂ

"ಸ್ವಲ್ಪ ಸ್ಪಷ್ಟವಾಗಿ ಮಾತಾಡಿರಿ ನಡು ದಂಡೆಯಲ್ಲಿರುವ ಮತ್ತು ಸರ್ವಸಾಮಾನ್ಯವಾದ ಪ್ರಶ್ನೆಗಳಿಗೆ ಉತ್ತರ ಕೊಡಲು ನಾನಿಚ್ಛಿಸುವದಿಲ್ಲ" ಹೈದರಾಬಾದಿನ ಕುರಿತು ನಾನು ಹಾಕಿದ ಪ್ರಥಮ ಸವಾಲಿಗೆ ಸಯ್ಯದ್ ಕಾಸಿಮ್ ರಜ್ವಿಯಿಂದ ಬಂದ ಪ್ರತಿ ಸವಾಲಿದು.

ಸಮಯ-ಪೂರ್ವಾಹ್ನ 10 ಘಂಟೆ. ಸ್ಥಳ-ಹೈದರಾಬಾದ್ ರಝಾಕಾರ್ ಸಂಸ್ಥೆಯ ಮುಖ್ಯ ಕಾರ್ಯಾಲಯ; ಮುಂಗಡೆ ವಿಸ್ತಾರ ಭವನಗಳಿರುವ ಆ ಕಟ್ಟಡದ ಒಂದು ಸಣ್ಣ ಕೋಣೆ. ಬಟ್ಟಬಯಲಾಗಿರುವ ಕಂಪೌಂಡಿನೊಳಗೆ ಎರಡು ಕಮಾನುಗಳೆದ್ದು ಕಾಣುತ್ತಿವೆ—ರಝಾಕಾರರ ದಳ ಮೇಳಕ್ಕಾಗಿರಬೇಕು.

ನಾಜೂಕು ಖಾಕಿಯ ಸಮವಸ್ತ್ರಧಾರಿ ತರುಣ ರಝಾಕಾರನೊಬ್ಬನು ನನ್ನ 'ಸಂದರ್ಶನ ಚೀಟಿ'ಯನ್ನು ತೆಗೆದುಕೊಂಡು, ನಿಜಾಮರ ಸಮೇತ ಸರ್ವರಿಂದಲೂ ವಿಶೇಷವಾಗಿ ನಾಮಸ್ಮರಣೆಯಾಗುತ್ತಿರುವ ಈ ಮನುಷ್ಯನಿದ್ದಲ್ಲಿಗೆ ಒಯ್ದಾಗಲೇ ಅಲ್ಲಿಯ ವಾತಾವರಣದ ಮನೋಗತಿ ಹೇಗೆಂಬುದು ಸ್ಪಷ್ಟವಾಗಿತ್ತು.

ಆ ಕೋಣೆಯ ಸುತ್ತಲೂ ನಾನೊಮ್ಮೆ ದೃಷ್ಟಿಯೋಡಿಸಿದೆ. ಗೋಡೆಯಲ್ಲಿ ಚಿತ್ರಿಸಿದ್ದ ಕಾಯಿದೇ ಆಝಮ್ ಜಿನ್ನರ ದೊಡ್ಡ ಚಿತ್ರವು ಕೋಣೆಯ ಬಹು ಭಾಗವನ್ನು ಆಕ್ರಮಿಸಿದ್ದಿತು. ಅದರ ಜತೆಯಲ್ಲಿ ಏನೂ ಎದ್ದು ತೋರದ ಮತ್ತೊಂದು ಸಜೀವ ಚಿತ್ರ-ಗಡ್ಡಧಾರೀ ಸುಪ್ರಸಿದ್ಧನದು. ನಾನೊಂದು ಕುರ್ಚಿಯನ್ನು ಹಿಡಿದುಕೊಂಡಾಗ "ಕುಳಿತುಕೊಳ್ಳೋಣಾಗಲಿ" ಎಂದ ಮೆಲ್ಲಗೆ ಮೆತ್ತಗಿನ ಸ್ವರದಲ್ಲಿ ಸಯ್ಯದ್ ಕಾಸಿಮ್ ರಜ್ವಿ. ವಿಲಕ್ಷಣಪೂರ್ಣ ಆ ಬಡಕಲು ಶರೀರದಲ್ಲಿ ಗಡ್ಡಕ್ಕಿಂತಲೂ ವಿಶೇಷ ಆಕರ್ಷಣೀಯವಾಗಿ ತೋರುವ ಅಂಗವೆಂದರೆ ಸ್ವಮತಭ್ರಾಂತಿಯ ಉಜ್ವಲಪ್ರಕಾಶ ಬೀರುತ್ತಿರುವ ಆ ಕಣ್ಣುಗಳು. ಮೇಲ್ಮೇಲೆ ಮಾತ್ರ ಅವಲೋಕಿಸುವವನಿಗೆ ಕೂಡಾ ರಜ್ವಿಯನ್ನು ಕಂಡೊಡನೆ ಈತನೊಂದು ಪ್ರಚಂಡ ಉದ್ದೇಶ ಸಾಧನೆಗಾಗಿ ಇರುವ ಮನುಷ್ಯನೆಂಬುದು ಹೊಳೆಯಲೇಬೇಕು. [ಲೋಕದ ಕೆಲವೇ ಮಂದಿ ನಿಶ್ಚಿತಾಭಿಪ್ರಾಯವುಳ್ಳವರಲ್ಲಿ ಈತನೊಬ್ಬ. ನಿಮ್ಮ ಹೃದಯವನ್ನು ಭೇದಿಸಿ ಬಿಡುವಂತಹ ಕ್ಷ-ಕಿರಣದಂತಹ ಅವನ ನೋಟದಲ್ಲಿ ಅರೇಬಿಯಾದ ಕರ್ನಲ್ ಲಾರೆನ್ಸನ ಛಾಯೆಯಿದೆ; ಅಂತೆಯೇ ಅವನ ಏಕಾಗ್ರತಾ ಬುದ್ಧಿಯು ಆತನು ವಿಶೇಷಗೌರವಿಸುತ್ತಿರುವ ಕಾಯಿದೇ ಆಝಮ್ ಜಿನ್ನರನ್ನೇ ನೆನಪಿಗೆ ತರುತ್ತದೆ. ಸರಿ; ಆ ಮೇಲೆ ಆತನ ಕುಟುಂಬ ಚರಿತ್ರೆಯಿಂದಾರಂಭಿಸಿ. ಸಂಯುಕ್ತ ಭಾರತದ ಕೂಡಾಟ ಮುಕ್ತಾಯ ಸಂಭವದ ವರೆಗಿನ ವಿಷಯಗಳ ಕುರಿತು ನಾನು ಭಡಾಯಿಸಿದ ಪ್ರಶ್ನಾಮಾಲಿಕೆಗಳನ್ನು ಹೆಚ್ಚಿನ ತಡೆ ತಡವೇನೂ ಇಲ್ಲದೆ 50 ನಿಮಿಷಗಳ ವರೆಗೆ ರಜ್ವಿ ಉತ್ತರಿಸಿದ.

"ಹೌದು. ಹೈದರಾಬಾದ್ ಎಸೆಂಬ್ಲಿಯ ವಿರುದ್ಧ ಪಕ್ಷದ ನಾಯಕ ನಾನಾಗಿದ್ದೇನೆ. ಜವಾಬ್ದಾರಿ ಸರಕಾರದ ಕುರಿತು ಇಂದು ನಡೆದಿರುವ ಕಿರಿಚಾಟಗಳ ಅರ್ಥವೇ ನನಗಾಗುವದಿಲ್ಲ. ಹೈದರಾಬಾದ್ ಸರಕಾರದ ಕಾರ್ಯಕಾರೀ ಸಮಿತಿಯಲ್ಲಿ ಜನಪ್ರತಿನಿಧಿಗಳಾದ ಎಂಟು ಮಂದಿ ಸದಸ್ಯರಿದ್ದಾರೆ. ಸರಕಾರದಿಂದ ನಾಮಕರಣ ಪಡೆದಿರುವ ಇತರ ನಾಲ್ಕು ಮಂದಿ ಕೂಡಾ ಜನತೆಯ ಅಭಿಮತವೇನೆಂಬುದನ್ನು ತಿಳಿದೊಡನೆ, ಇದೇ ಪಂಕ್ತಿ ಹಿಡಿಯತಕ್ಕವರು. ಹೀಗಿದ್ದರೂ ಕೂಡ ಮುಸ್ಲಿಮರಿಗೆ ಮತ್ತು ಹಿಂದುಗಳಿಗೆ ಸಮಪ್ರಾತಿನಿಧ್ಯ ಕೊಡುವುದಾದರೆ ಜನತೆಯ ಬೇಡಿಕೆ ಬೊಬ್ಬೆಗಳನ್ನು ಸಂತೈಸಲು ನಾವು ಸಿದ್ಧರಿದ್ದೇವೆ" ಎಂದ ರಜ್ವಿ; ಅವನ ಸ್ವರವು ಕಾಯಿದೇ ಆಝಮ್ ಜಿನ್ನರ ಸ್ವರದಂತೆಯೇ ತೋರುವದು ನಿಜಕ್ಕೂ ವಿಚಿತ್ರವೆನ್ನಬೇಕು!

ಹೈದರಾಬಾದ್ ಕಾಂಗ್ರೆಸಿಗರು ಹೊರಗಿನಿಂದ ಆಜ್ಞೆಗಳನ್ನು ಪಡೆಯುತ್ತಿದ್ದಾರೆ ಎಂದು ವರ್ಣಿಸುವಾಗ ರಜ್ವಿಗೆ ಕಾಂಗ್ರೆಸಿನ ಮೇಲಿರುವ ಕಟ್ಟುಗ್ರ ದ್ವೇಷವು

[೮ನೇ ಪುಟ ನೋಡಿರಿ]

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ .

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,

THE UNITED KARNATAK INSURANCE COMPANY, LIMITED.

ಹೈದರಾಬಾದಿನ ದರ್ಪ ಜ್ವರಕ್ಕೊಂದು ಕಹಿ ಗುಳಿಗೆ!

ಹೈದರಾಬಾದಿನೊಡನೆ ಹಿಂದೀ ಕೇಂದ್ರವು ಒಂದು ಒಪ್ಪಂದಕ್ಕೆ ಬರುವುದು ಅಸಾಧ್ಯವೆಂದು ಮೊದಲೇ ನಿರೀಕ್ಷಿಸಲ್ಪಟ್ಟದ್ದನ್ನು ನಿಜವನ್ನಿಸಿದುದೇ ಹಿಂದೀ ರಾಜಕೀಯದಲ್ಲಿ ಕಳೆದವಾರ ನಡೆದ ಮುಖ್ಯ ಘಟನೆ; ಅದರಲ್ಲೂ ಭಾರತಸರಕಾರದ ನಾಯಕರೀಬ್ಬರಿ ಅಖಿಲಭಾರತೀಯರು ಹೆಗ್ಗಳಿಕೆಪಡುವಂತಹ ನ್ಯಾಯನಿಷ್ಠುರತೆ ಮತ್ತು ಖಂಡತುಂಡ ಧೋರಣೆ ಪ್ರದರ್ಶಿಸಿದ್ದುದು ಸಂತೋಷಕರ. ಈ ತನಕ ಭಾರತಸರಕಾರವು ಸಹನೆ ಹಾಗೂ ಶಾಂತಿಪ್ರೇಮ ಪ್ರದರ್ಶಿಸಿದಷ್ಟು ಸಲವೂ ಅಹಂಕಾರ ಮತ್ತು ವಂಚನೆಗಳನ್ನೇ ಮುಂದೊಡ್ಡುತ್ತಿದ್ದ ಹೈದರಾಬಾದು ಈ ಬಾರಿಯು ಭಾರತದ ದೃಢಧೋರಣೆಗೆ ಹೆದರಿರುವ ಸ್ಪಷ್ಟ ಚಿಹ್ನೆಯಿದ್ದರೂ ಸ್ಥಿತಿಗತಿಯರಿಯಬೇಕಾದ ಮಟ್ಟಕ್ಕೇನೇ ಇಳಿಗಲಾದರೂ ಬಂತೆಂಬ ಆತ್ಮಸಮಾಧಾನವನ್ನಿದು ನಿರ್ಮಿಸುತ್ತಿದೆ. ಹೈದರಾಬಾದು ಹೆದರಿ ಹಾದಿಗೆ ಬರಲಿದೆಯೆಂದಾಗಲೀ, ಅದರಿಂದ ಗಣ್ಯ ಅಪಾಯವಾವುದನ್ನೂ ನಿರೀಕ್ಷಿಸಬೇಕಾಗಿಲ್ಲವೆಂದಾಗಲೀ ಆತ್ಮ ಭ್ರಮಣೆ ಮಾಡುವದಿಲ್ಲ. ಆದರೆ ತಾನಾರು, ಕೇಂದ್ರ್ರಭಾರತವಾರು ಎಂಬ ತಾರತಮ್ಯವು ಹೈದರಾಬಾದಿನ ಮನಸ್ಸಿಗೀಗ ತಾನೇಹೊಳೆದಂತಿದೆ; ಸದ್ಯಕ್ಕಿಷ್ಟಾಗಿದೆ!

ಕಾಶ್ಮೀರದ ವಿವಾದ ಶೋಧನೆಗಾಗಿ ಹೊರಟಿರುವ ಸಂಯುಕ್ತ ರಾಷ್ಟ್ರಸಂಘದ ಸಮಿತಿ ಮತ್ತು ದರ ಕಾರ್ಯರೀತಿಗಳ ಕುರಿತು ಲಿಯಾಖತ್ ಅಲಿ, ನೆಹರುಗಳೊಳಗೆ ನಡೆದ ವಾಗ್ವಾದ–ಲಂಡನಿನಲ್ಲಿ ಭಾರತದ ಸ್ಟರ್ಲಿಂಗ್ ಸಾಲಗಳಕುರಿತು ನಡೆದಿರುವ ಮಾತುಕತೆಗಳು–ಉದಕಮಂಡಲದಲ್ಲಿ ನೆರೆದಿದ್ದ ಏಶ್ಯಾ ರಾಷ್ಟ್ರಗಳ ಆರ್ಥಿಕ ಸಮ್ಮೇಲನದ ಮುಕ್ತಾಯ–ಎಲ್ಲಾ ಪ್ರಾಂತ್ಯಗಳಲ್ಲೂ ಆಯಾ ಪ್ರಾಂತಿಕ ಸರಕಾರಗಳು ಕೈಕೊಳ್ಳುತ್ತಿರುವ ವಿವಿಧ ಕಾರ್ಯಕಲಾಪಗಳು–ಇತ್ಯಾದಿ ಘಟನೆಗಳು ಭಾರತ ರಾಜಕೀಯಾಕಾಶದ ಉಜ್ವಲತಾರೆಗಳಂತಿವೆ.

ನೆರೆಯ ಪಾಕಿಸ್ತಾನ ಸರಕಾರಕ್ಕೆ ಸುಹ್ರವರ್ದಿ ಅಡ್ಡಗಾಲು, ಖುದ್ರೋಬಂಡಾಯದಂತಹ ಸಮಸ್ಯೆಗಳೂ, ಕರಾಚಿಯನ್ನು ಪ್ರತ್ಯೇಕಿಸ ವ ಪಾಕಿಸ್ತಾನ ಘಟನಾಸಮಿತಿಯ ನಿರ್ಣಯದಿಂದ ಸಿಂಧ ಪ್ರಾಂತ್ಯದ ಜನತೆ ಹಾಗೂ ಮುಸ್ಲಿಂಲೀಗಿನಲ್ಲಿ ಉಂಟಾಗಿರುವ ಕ್ಷೋಭ, ಗಡಿನಾಡು ಪ್ರಾಂತೀಯರ ಭಿನ್ನ ದೃಷ್ಟಿಯಂತಹ ಸಂಕಟಗಳೂ ಉದ್ಯೋಗ ಸದ್ಯರನಾಗಿ ದಿನ ಕಳೆದಂತೆ ವಿರೋಧಿಯಿಂದ ಪೀಡಿಸಹತ್ತಿವೆ.

ಜಾಗತಿಕ ರಂಗದಲ್ಲಿ ಮೇ 15ರಿಂದ ಪ್ರತ್ಯಕ್ಷ ಯುದ್ಧವಾಗಿ ಜ್ವಲಿಸಹತ್ತಿರುವ ಪೆಲೆಸ್ಟೈನ್ ತಂಟೆಯನ್ನು ನಾಲ್ಕು ವಾರಗಳ ಮಟ್ಟಿಗಾದರೂ ನಿಂದಿಸಿಡಲು ನಿರ್ಧರಿಸಿ ಸಂಯುಕ್ತ ರಾಷ್ಟ್ರಸಂಘವು ರಾಜಕೀಯನ್ನು ಜ್ಯಾರಿಗೆ ತಂದು ಪ್ರತಿನಿಧಿಯನ್ನು ಕಳುಹಿಸಿ ಒದಗಿಸಿಡಿಸುತ್ತಿರುವ ಘಟನೆಯೇ ಮುಖ್ಯವಾದುದು. ಇನ್ನು ಅವೇರಿಕೆಯಲ್ಲಿ ತನ್ನ ಅಪಪ್ರಚಾರ ನಡೆದಿರುವ ಕುರಿತು ಸೋವಿಯೆಟ್ ರಶ್ಯದ ಆಕ್ಷೇಪ–ಪಶ್ಚಿಮ ಜರ್ಮನಿಯ ಆಡಳಿತ ವ್ಯವಸ್ಥಾ ಪ್ರಯತ್ನ–ದೀರ್ಘಾವಧಿಯಿಂದ ನಡೆದಿರುವ ಚೈನಾದ ಅಂತರ್ಯುದ್ಧ–ಭಾರತ ಸಮೇತ ಅಖಿಲ ಜಗತ್ತಿನಲ್ಲಿ ಸಮಯ ನೋಡಿ ನಡೆದಿರುವ ಕಮ್ಯೂನಿಸ್ಟ ಗೊಂದಲ, ಇತ್ಯಾದಿಗಳು ಅಂತರ್ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಒಡೆದು ತೋರುತ್ತವೆ.

ಒಟ್ಟಿನ ಮೇಲೆ ಲೋಕದ ಅಸಮಾಧಾನಕರ ಪರಿಸ್ಥಿತಿ ಇದ್ದಂತೆಯೇ ಇದೆ; ಅಲ್ಲಲ್ಲಿ ಕೆಲವು ಏರು ತಗ್ಗುಗಳು ನಡೆದಿವೆ. ಲೋಕ ಶಾಂತಿ ಮತ್ತು ಸುರಕ್ಷಿತತೆ ಸ್ಥಾಪಿಸುವ ಯಥಾರ್ಥ ಹಾಗೂ ವಿಶ್ವಾಸಾರ್ಹ ಪ್ರಯತ್ನವಾವುದೂ ನಡೆಯದಿರುವ ಅಪಾಯಕರ ಅಭಾವವೊಂದು ಹಾಗೆಯೇ ಉಳಿದಿದೆ!

ಹೈದರಾಬಾದ್ ತಕರಾರಂತ್ಯ

ಕಳೆದ ವಾರ ಪ್ರಕಟಿಸಿದಂತೆ ಭಾರತ ಕೇಂದ್ರದೊಡನೆ ಮಾತುಕತೆ ನಡಿಸಲು ನಿಜಾಮ್ ಸರಕಾರದ ಪ್ರಧಾನಿ ಮಿ. ಲಾಯಿಕ್ ಅಲಿಗಳ ಮುಂದಾಳುತ್ವದಲ್ಲಿ, ನವ ದಿಲ್ಲಿಗೆ ಹೋಗಿದ್ದ ಹೈದರಾಬಾದ್ ಪ್ರತಿನಿಧಿಗಳು ಮಾತುಕತೆ ಫಲಿಸದೆ ಮರಳಿದ್ದಾರೆ. ಈ ಸಂಬಂಧವಾಗಿ ಜೂನ್ 9ರಲ್ಲಿ ನವದಿಲ್ಲಿಯಿಂದ ಹೊರಟ ಸರಕಾರೀ ಹೇಳಿಕೆ ಚುಟುಕಾಗಿತ್ತು: 'ಭಾರತ ಮತ್ತು ಹೈದರಾಬಾದು ಪ್ರತಿನಿಧಿಗಳೊಳಗಿನ ಮಾತುಕತೆಗಳು ಈ ದಿನ ಮುಕ್ತಾಯಗೊಂಡವು, ಎರಡು ಪಕ್ಷಗಳೊಳಗೊಂದು ಒಪ್ಪಂದವಾಗಬೇಕಾದರೆ, ಅದರ ಆಧಾರ ಮೂಲಗಳಾಗಿ ಹೈದರಾಬಾದಿನ ರಕ್ಷಣೆ, ವಿದೇಶ ಸಂಬಂಧ ಮತ್ತು ಸಂಚಾರ ವಹಿವಾಟು ಖಾತೆಗಳನ್ನು ಭಾರತ ಕೇಂದ್ರಕ್ಕೊಳಪಡಿಸುವದು ಹಾಗೂ ಸಂಸ್ಥಾನದೊಳಗೆ ಪ್ರಜಾಜವಾಬ್ದಾರಿ ಸರಕಾರ ಸ್ಥಾಪಿಸುವದನ್ನು ಪ್ರಥಮತಃ ಅಂಗೀಕರಿಸುವದಗತ್ಯನೆಂಬುದನ್ನು ಹೈದರಾಬಾದ್ ಪ್ರತಿನಿಧಿಗಳಿಗೆ ಸ್ಪಷ್ಟಪಡಿಸಲಾಯಿತು: ಇದನ್ನೊಪ್ಪಿದಲ್ಲಿ ಈ ಗುರಿ ಸೇರುವಂತಹ ಪೂರ್ವಭಾವಿ ಸೌಕರ್ಯಗಳಾಗಿ ಮಧ್ಯಾವಧಿವ್ಯವಸ್ಥೆಗಳನ್ನು ಸಮಾಧಾನಕರವಾಗಿ ಮಾಡಿಕೊಳ್ಳಲು ಅನುಕೂಲತೆಯೊದಗುವದು. ಹೇಗಿದ್ದರೂ ಶಾಂತ ಹಾಗೂ ಭದ್ರತೆಯ ಪರಿಸ್ಥಿತಿಯನ್ನು ನಿರ್ಮಿಸಿಕೊಳ್ಳುವದು ಮುಖ್ಯವಾದ್ದರಿಂದ ರಝಾಕಾರರಂತಹ ಖಾಸಗೀಸೇನೆಗಳನ್ನು ಬರ್ಖಾಸ್ತುಗೊಳಿಸಿ, ಜನಪ್ರತಿನಿಧಿ ಮಧ್ಯಾವಧಿ ಸರಕಾರವನ್ನು ಸ್ಥಾಪಿಸಬೇಕಾದುದು ಅಗತ್ಯ. ಭಾರತದ ಗಡಿಯಲ್ಲಿ ನಡೆದಿರುವ ಘಟನೆಗಳ ಕುರಿತೂ ಭಾರತ ಕ್ಷೇತ್ರದೊಳಗೆ ಅನುಕ್ರಮವಾಗಿ ನಡೆಯುತ್ತಲೇ ಇರುವ ಅಕ್ರಮಗಳ ಕುರಿತೂ–ಭಾರತ ಸರಕಾರವು ಕಠಿಣ ಭಾವನೆ ವಹಿಸುತ್ತದೆ. ಮತ್ತು ಇನ್ನು ಮುಂದೆ ಧಾಳಿಗಾರರನ್ನೋಡಿಸಿಕೊಂಡು ತನ್ನ ಪೋಲಿಸರು ಮತ್ತು ಸೈನಿಕರು ಹೈದರಾಬಾದಿನೊಳಕ್ಕೂ ನುಗ್ಗಿ ಹೋಗುವರೆಂದೂ, ತನಗಾದ ನಷ್ಟದ ಪೂರ್ಣ ಪರಿಹಾರವನ್ನು ಕೇಳಲಿದ್ದೇವೆಂದೂ ಭಾರತ ಸರಕಾರವು ಸುಸ್ಪಷ್ಟವಾಗಿ ತಿಳಿಸಿದೆ' ಎಂಬುದೇ ಹಿಂದೀ ಸರಕಾರವು ಹೊರಗೆಡಹಿದ ಹೈದರಾಬಾದ್ ಸಂಭಾಷಣೆಯ ಫಲ ಶ್ರುತಿ.

ಇಕ್ಕಡೆಯ ಶರ್ತಗಳೇನು?

ಭಾರತ ಸರಕಾರದ ಸಂಸ್ಥಾನ ಖಾತೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್, ಹೈದರಾಬಾದಿನ ಪ್ರಧಾನಿ ಮಿ. ಲಾಯಿಕ್ ಅಲಿ, ಹಾಗೂ ಭಾರತ ಮತ್ತು ಹೈದರಾಬಾದುಗಳ ಇತರ ವಕ್ತಾರರ ಹೇಳಿಕೆಗಳಿಂದ ಸ್ಪಷ್ಟವಾಗಿರುವ ಭಾರತದ ಮತ್ತು ಹೈದರಾಬಾದಿನ ಸೂಚನೆಗಳು ಈ ಕೆಳಗಿನಂತಿವೆ. ಭಾರತ ಸರಕಾರ ಕೇಳಿದುದು:–ದೇಶರಕ್ಷಣಾ ವಿದೇಶಸಂಬಂಧ, ಸಂಚಾರ ಸಮಾಚಾರ ಖಾತೆ, ಇವು ಮೂರನ್ನು ಹೈದರಾಬಾದು ಹಿಂದೀ ಕೇಂದ್ರದ ಅಧೀನಪಡಿಸತಕ್ಕದ್ದು. ಆದಕಾರಣ ರಕ್ಷಣಾ ಖಾತೆಯ ಸೇನಾ ಸಂಬಂಧವಾಗಿ ಭಾರತದ ಪಾರ್ಲಿಮೆಂಟು ಮಾಡುವ ಶಾಸನಗಳನ್ನೇ ಹೈದರಾಬಾದು ಶಾಸನಸಭೆಯು ಮಾಡಿಕೊಳ್ಳಬೇಕು ಹಾಗೆ ಮಾಡಲು ಅದು ತಪ್ಪಿದರೆ ಭಾರತ ಪಾರ್ಲಿಮೆಂಟಿನಲ್ಲಾದ ಶಾಸನವೇ ಹೈದರಾಬಾದಿನೊಳಗೆ ತಾನಾಗಿ ಜಾರಿಗೆ ಬರಲು ಬದ್ಧವಿದೆ, ವಿದೇಶಗಳ ಸಂಬಂಧದ ಪೂರ್ಣಾಧಿಕಾರವು ಭಾರತ ಸರಕಾರದ್ದು; ಆದರೆ ಹಿಂದೀ ಸರಕಾರದ ಸಂಪೇಲನೆಗೊಳಪಟ್ಟು ಹೈದರಾಬಾದು ಸರಕಾರವು ವ್ಯಾಪಾರೇತ್ಯಾದಿಗಳಿಗಾಗಿ ಯಾವ ದೇಶದಲ್ಲೂ ತನ್ನ ಸ್ವಂತ ಏಜೆಂಟರನ್ನು ನೇಮಿಸಬಹುದು. ಸಂಚಾರ ಸಮಾಚಾರ ಖಾತೆಗಳ ಸಂಬಂಧವಾಗಿ 1947ನೇ ಆಗೋಸ್ತು 15ರ ಮೊದಲು ಭಾರತ ಮತ್ತು ಹೈದರಾಬಾದುಗಳೊಳಗ ಯಾವ ವ್ಯವಸ್ಥೆಯಿದ್ದಿತೋ ಆ ವ್ಯವಸ್ಥೆಯೇ ಮುಂದಕ್ಕೂ ಊರ್ಜಿತದಲ್ಲಿರತಕ್ಕದ್ದು. ದೀರ್ಘಾವಧಿ ಸಂಬಂಧದ ರೂಪರೇಷೆ ಹೀಗಿದ್ದರೆ ಸದ್ಯದ ಪ್ರಜಾ ಜವಾಬ್ದಾರೀ ಸರಕಾರ ರಚನೆಗಾಗಿ ಹೈದರಾಬಾದಿನಲ್ಲಿ ಮುಸ್ಲಿಮೇತರ ಬಹುಸಂಖ್ಯೆಯುಳ್ಳ ಜನಪ್ರತಿನಿಧಿ ನಡುಗಾಲ ಮಂತ್ರಿಮಂಡಲವನ್ನು ರಚಿಸತಕ್ಕದ್ದು; ಶಾಶ್ವತ ರಾಜ್ಯಾಂಗ ರಚನೆಗಾಗಿ ಪ್ರಾಯಸ್ಥರ ಮತದಾನದಿಂದ ಘಟನಾ ಸಮಿತಿಯೊಂದನ್ನು ರಚಿಸಬೇಕು. ಎಲ್ಲದರಲ್ಲೂ ಮುಸ್ಲಿಮರಿಗೆ ಸೇ. 40ರಷ್ಟೂ ಮುಸ್ಲಿಮೇತರರಿಗೆ ಸೇ. 60ರಷ್ಟೂ ಸ್ಥಾನಗಳಿರತಕ್ಕದ್ದು. ಸರಕಾರೀ ಖಾತೆಗಳಲ್ಲೂ ಮುಂದಿನ 5 ವರುಷಗಳೊಳಗೆ ಈ ಸೇಕಡಾಂಶ ಪದ್ಧತಿಯೇ ಜಾರಿಗೆ ಬರುವಂತೆ ನೋಡತಕ್ಕದ್ದು. ಇದಕ್ಕೆ ಪ್ರತಿಯಾಗಿ ಹೈದರಾಬಾದು ಸರಕಾರ ಮುಂದಿಟ್ಟುದು:–ಸೇನೆಗಳ ಸಂಬಂಧವಾಗಿ ಭಾರತವು ತಯಾರಿಸುವ ಶಾಸನವನ್ನೇ ಹೈದರಾಬಾದು ತಯಾರಿಸಿ ಜಾರಿಗೆ ತರಬೇಕೆಂಬ ಕುರಿತು ಆಕ್ಷೇಪವಿಲ್ಲ; ಆದ

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— 3.28 Crores

Our Chief Agency New business in 1946 bout 54 Lakhs

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.
Bombay Life Building,
Central Office, Udipi.

Branches at:

Mangalore, Calicut, Trivandrum, Madura, Madras, Bangalore & Bombay.

ಲಲಿತಕಲಾ ಕರ್ನಾಟಕ ನಾಟಕ ಸಭಾ, ಮುಂಬಯಿ

ಇ ವ ರು

ಶ್ರೀಯುತ ಬೋಳಾರ ಸುಂದರ ನಾಯ್ಕ್ ಇವರಿಂದ ಬರೆಯಲ್ಪಟ್ಟ

ಸಂಸಾರ ಸಾಗರ

ಎಂಬ ಸಾಮಾಜಿಕ ಕನ್ನಡ ನಾಟಕವನ್ನು ಶೀಘ್ರದಲ್ಲಿಯೇ ಪರೇಲಿನಲ್ಲಿರುವ
ದಾಮೋದರ್ ಠಾಕರ್ಸಿ ಹೋಲಿನಲ್ಲಿ ಅಭಿನಯಿಸಲಿರುವರು.
ಕನ್ನಡ ಕಲಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ವಿನಂತಿ.
ನಾಟಕದ ತಾರೀಕನ್ನು ನಿರೀಕ್ಷಿಸುತ್ತಿರಿ.

U. G. Puthli,
Chairman, L. K. N. Sabha.

P. R. Bolar,
B. S. Naik,
Founders, L. K. N. Sabha.

★ ರಜ್ವೀ ದಂಡಿನ ರಕ್ತ ದಾಹಕ್ಕೊಂದು ★

ಕಟು ಕಷಾಯ!

★

ಹಾಗೆ ತಾರದ ಸಂದರ್ಭಗಳಲ್ಲಿ ಭಾರ ಶಾಸನಗಳು ಹೈದರಾಬಾದಿನೊಳ ತವಾಗಿ ಜಾರಿಗೆ ಬರತಕ್ಕದ್ದೆಂ ವಿಶೇಷಾಧಿಕಾರ ಭಾರತಕ್ಕಿರಕೂಡ ಮಿಕ್ಕೆರಡು ಖಾತೆಗಳ ಕುರಿತು ಹ ಭಿನ್ನಾಭಿಪ್ರಾಯವಿಲ್ಲವಾದ್ದರಿಂ ಇರುವ ಆಕ್ಷೇಪಗಳನ್ನು ಸಭಿವ ಚರ್ಚೆಯಲ್ಲಿ ತೀರ್ಮಾನಿಸಿಕೊಳ್ಳಬ ದು. ಪ್ರಜಾಪ್ರಭುತ್ವ ಸ್ಥಾಪನೆಯ ಪ್ರ ಮು ಹೈದರಾಬಾದಿನೊಳಗಿನ ಖಾಸಗೀ ಶ್ನೆ; ಆ ಕುರಿತು ಭಾರತವು ಯಾವ ಪ್ರಾಯವನ್ನೂ ಹಾಕತಕ್ಕದ್ದಲ್ಲ. ಕೊನೆ ಹೇಗಿದ್ದರೂ, ಹೆಚ್ಚೆಂದರೆ ಹಿಂದೂ ಸ್ಲಿಂ ಸಮಪ್ರಾತಿನಿಧ್ಯವನ್ನು ಕೊಡ ಹುದೇ ಹೊರತು ಮುಸ್ಲಿಂ ಸ್ಥಾನಗಳ ಸೇ. 40ಕ್ಕಿಳಿಸಲು ಸಾಧ್ಯವೇ ಇಲ್ಲ ತಿದ್ದುಪಡಿಗಳು ಭಾರತ ಸರಕಾರಕ್ಕೆ ಮ್ಮತವೆಂದಾದರೆ, 'ಹೈದರಾಬಾದು ರತಕೇಂದ್ರದೊಳಗೆ ಸೇರಬೇಕೋ ಸ್ವ ತ್ರವಾಗಿರಬೇಕೋ?' ಎಂಬುದನ್ನು ಯಸ್ಕರೆಲ್ಲರ ಮತದಾನದ ತೀರ್ಮಾನ ಬಿಡಬಹುದು. ಆ ಮತಸಂಗ್ರಹವನ್ನು ಯುಕ್ತ ರಾಷ್ಟ್ರಸಂಘದಂತಹ ನಿಷ್ಪ ಕ್ಷಪಾತೀ ಅಧಿಕಾರ ಮಂಡಲಿಯೇ ನಡೆಸ ಹುದು.

ಹಿಂದೀ ಪ್ರಮುಖರ ಅಚಲ ನಿರ್ಧಾರ

ಮೇಲ್ಗಡೆ ನಮೂದಿಸಿರುವ ಹೈದರಾ ದಿನ ಪ್ರತಿಸೂಚನೆಗಳು ಅಷ್ಟೇನೂ ಯುಲ್ಲವೆಂದು ತೋರಬಹುದು. ಆದರ ಆ ಸಂಸ್ಥಾನವು ಹಿಂದೀ ಕೇಂದ್ರ ಂದಿಗೆ ಸೇರಬೇಕೋ ಸ್ವತಂತ್ರವಾಗಿರ ಕೋ ಎಂಬುದನ್ನು ನಿರ್ಧರಿಸುವ ಅಧಿ ವನ್ನು ನಿಜಾಮರು ತನ್ನ ಪ್ರಜೆಗಳಿ ಕೊಡಲು ತಯಾರಾದುದು ಹಲವರಲ್ಲಿ ಶ್ಚರ್ಯವನ್ನು ನಿರ್ಮಿಸಿದೆ; ಅಂತೆಯೇ ರತ ಸರಕಾರವು ಅದಕ್ಕೊಪ್ಪದಿರಲು ರಣವೇನೆಂಬುದೂ ಕೆಲವರಿಗೊಂದು ಸ್ಯೆಯಾಗಿ ಕಾಣುತ್ತಿದೆ. ಇ ಅಂತರ್ಯವಿಷ್ಟೆ: ಹೈದರಾಬಾದಿಗೆ ರತದೊಂದಿಗೆ ಜೋಡಣೆಗೊಳ್ಳುವ ವಿ ಾ ಮತ್ತೊಂದು ಭವಿಷ್ಯವಿರುವುದು ಂದಿಗೂ ಅಸಾಧ್ಯ. ಇದು ನಿಜಾಮ್ ಕಾರಕ್ಕೆ ಮನದಟ್ಟಾಗಿದೆ. ಆದರೆ ಭಾರ ನಾಯಕರು ಪ್ರದರ್ಶಿಸುತ್ತಾ ಬಂದ ತಿ ಪ್ರೇಮವನ್ನು ತನ್ನ ಅನುಕೂಲತೆ ಗಿ ಉಪಯೋಗಿಸಿಕೊಂಡು ವಂಚನೆ ಂದಲೇ ಆದಷ್ಟು ಸಮಯ ತೆಗೆಯಬೇ ಮ ನಿಜಾಮರ ಸಂಕಲ್ಪ. ಜನಮತ ಹನೆಗೆ ಎಲ್ಲಿಲ್ಲೆಂದರೂ ಇನ್ನೊಂದು ವ ಷ ಕಳೆಯಬೇಕು. ಒಳ ವ್ಯವಸ್ಥೆಯ ಹೆಸರಿನಿಂದ ಪ್ರಸ್ತಾಪಿಸುವ ಹಕ್ಕು ಭಾರತ ಕ್ಕಿನ್ನೆನ್ನುತ್ತಾ ಸರ್ವಶಕ್ತರಾಗಿರುವ ರ ಜಾಕಾರರನ್ನು ಸರ್ವೆಡೆಗಳಿಗೆಳಸಿಬಿಟ್ಟರೆ ಜನಕ ಆನತೆಗಂಕುಶ ಹಾಕಿದಂತೆಯೇ ಮತಕ್ಕೂ ತಡೆಗಟ್ಟಿ ಹಾಕಿ ಅದ್ದಿ ಹಿಡಿಸಬಹುದು. ಈಗಲೇ ಹೈದ ಬಾದಿನ ಬಹಳ ಮಂದಿ ಹಿಂದುಗಳು ಹರಗೋಡ್ಡಿ ಅಲ್ಪಸಂಖ್ಯೆಯಲ್ಲಿ ಹೊರ ಮುಸಲ್ಮಾನರು ಹೈದರಾಬಾದಿನೊಳ

ಗೆ ತುಂಬಿಕೊಂಡಿದ್ದಾರೆ. ಆದ್ದರಿಂದ ನಿಜಾ ಮರು ತಮ್ಮೀ ಸಂದರ್ಭ ಸಾಧನೆಗೇನೇ 'ಜನಮತದ ತೀರ್ಮಾನಾಧೀನ'ವೆಂಬ ಹೆ ಸರುಕೊಟ್ಟು ಲೋಕದಿದಿರು ತಾನು ಸಂ ಭಾವಿತನೆಂದು ತೋರಿಸಿಕೊಳ್ಳಲು ಹವಣಿ ಸಿದ್ದಾರೆ. ಭಾರತವು ತನ್ನೊಡನೆ ಘರ್ಷಿಸು ವ ಸಂದರ್ಭಬಂದಲ್ಲಿ, ಸಂಯುಕ್ತ ರಾಷ್ಟ್ರ ಸಂಘದಂತಹ ಪ್ರಾಪಂಚಿಕ ಮುತ್ಸದ್ದಿಗಳ ಕೂಟದ ಮುಂದೆ ದೂರಿಡುವ ಹೊರತು ನಿಜಾಮರಿಗೆ ಬೇರೆ ಗತಿಯಿರದು. ಪಾಕಿ ಸ್ತಾನದಿಂದಾಗಲೀ ಇತರ ಮುಸ್ಲಿಂ ಅಥ ವಾ ಬೇರೆ ರಾಷ್ಟ್ರಗಳಿಂದಾಗಲೀ ಹೈದರಾ ಬಾದಿಗಾವ ಪ್ರತ್ಯಕ್ಷ ಬೆಂಬಲವೂ ಸಿಕ್ಕ ಲಾರದು. ಆದ್ದರಿಂದಲೇ ಲೋಕದಿದಿರು ತಾನು ನ್ಯಾಯವಾದಿಯೆಂದು ತೋರಿಸಿ ಕೊಳ್ಳೋಣವೆಂದು ನಿಜಾಮರೀ 'ಜನಮ ತ ಸಂಗ್ರಹ'ದ ಆಟ ಹೂಡಿದ್ದಾರೆ; ಸಂ ಯುಕ್ತ ರಾಷ್ಟ್ರ ಸಂಘದ ಸದಸ್ಯತ್ವಕ್ಕಾಗಿ ಹೈದರಾಬಾದ್ ಅರ್ಜಿ ಹಾಕಲಿದೆಯೆಂದೂ ತಿಳಿದುಬರುತ್ತದೆ. ಹೈದರಾಬಾದು ಸುಮಾ ರು ಒಂದು ವರುಷದಿಂದಲೂ ಆಡ ತ್ತಾ ಬಂದಿರುವ ಕಪಟನಾಟಕಗಳಿಂದ ಸಹಜ ವಾಗಿ ಸಹನೆ ಕಳಕೊಂಡಿರುವ ಭಾರತವು ಇನ್ನಿಂತಹ ಮಾಯಾಜಾಲವಾವುದಕ್ಕೂ ಮನಸೋಲಬಾರದೆಂದು ದೃಢನಿರ್ಧಾರ ಮಾಡಿದೆ. ಹೈದರಾಬಾದೆಂದರೆ ರಜ್ವಿಯೂ ಅಲ್ಲ, ನಿಜಾಮರೂ ಅಲ್ಲ, ಅಲ್ಲಿಯ ಜನತೆ ಯೇ! ಆ ಜನತೆಯು ಇರಬೇಕಾದ ಸ್ಥಾನ ದಲ್ಲಿರುತ್ತಿದ್ದರೆ-ಜನ ಪ್ರತಿನಿಧಿ ಸರಕಾರವೇ ಅಲ್ಲಿರುತ್ತಿದ್ದರೆ-ಯಾವ ತೀರ್ಮಾನಾಧಿಕಾ ರವನ್ನಾದರೂ ಜನಮತಕ್ಕೆ ಬಿಡುವ ಕುರಿ ತು ಆಕ್ಷೇಪವಿರುತ್ತಿದ್ದಿಲ್ಲ. ಆದರೆ ಅಲ್ಲಿರು ವುದ ... ಇತ್ತನೇ ...ಗಳಂಗಂತೆ ಓರ್ವ ವ್ಯಕ್ತಿಯ ಅಧಿಕಾರ, ಅದೂ ಮಧ್ಯಯುಗ ದ ಮಾದರಿಯದು;ಅದರಾಶ್ರಯದಲ್ಲಿ ರ

ಝಾಕಾರರಂತಹ ಮದೋನ್ಮತ್ತರ ಪ್ರಳಯ ತಾಂಡವ! ಇಂತಹ ಸ್ಥಿತಿಯಿರುವಲ್ಲಿ ಜನ ಮತ ಸಂಗ್ರಹವೆಂಬುದಕ್ಕರ್ಥವಿದೆಯೆ? ಆದ್ದರಿಂದ ಪ್ರಥಮತಃ ಜನ ಪ್ರತಿನಿಧಿ ಸ ರಕಾರ ಅಲ್ಲಿದ್ದುಕೊಳ್ಳಲಿ-ಹೈದರಾಬಾದು ನಿಜವಾದ ಅಸ್ತಿತ್ವವನ್ನು ಮುಂದಾಗಿ ದೊ ರಕಿಸಿಕೊಂಡ ಮೇಲಲ್ಲವೇ ಅದರ ಅಭಿ ಮತ ಕೇಳುವ ಮಾತು, ಎಂದು ಹಿಂದೀ ಸರಕಾರದ ಪ್ರಶ್ನೆ. ಹೀಗಾಗಿ 'ಪ್ರಜಾ ಸರಕಾರ' ಸ್ಥಾಪನೆಯ ಪ್ರಶ್ನೆಯನ್ನು ಒ ತ್ತಟ್ಟೆಗಿಟ್ಟು, ಭಾರತದೊಂದಿಗೆ ಜೋಡ ಣೆಗೊಳ್ಳುವ ಸಂಬಂಧವಾಗಿ ಹೈದರಾಬಾ ದಿನಲ್ಲಿ ಜನಮತ ಸಂಗ್ರಹಿಸುವದೊಂದ ಕ್ಕೇನೇ ಒಪ್ಪಿಗೆಕೊಡಲು ಭಾರತ ನಾಯ ಕರೆಷ್ಟುಕ್ಕೂ ಸಿದ್ಧರಿಲ್ಲ.

ಹೈದರಾಬಾದು ಹೆದರಿದೆ?

ನಿಜಾಮ್ ಸರಕಾರವಂತೂ ಈ ಬಾರಿ ಆಟ ನಿಲ್ಲಿಸಿ ಅಪನ್ನಿವಾರಣಾ ಒದ್ದಾಟದ ಲ್ಲಿ ಬಿದ್ದಿದೆ. 'ಹಿಂದೀ ನಾಯಕರು ತಾ ವದು ವರೆಗೆ ಅನುಸರಿಸಿದ್ದ ಹಾದಿಯನ್ನು ಬಿಟ್ಟು ಅಕಸ್ಮಾತ್ ನಿಷ್ಠುರ ಧೋರಣೆ ವ ಹಿಸಿದ್ದರಿಂದ ಈ ಬಾರಿಯ ಡಿಲ್ಲೀ ಮಾತು ಕತೆಗಳು ಮುಕ್ತಾಯಗೊಳ್ಳಬೇಕಾಯಿ ತೆಂದೂ, ಇನ್ನೂ ಸಂಧಾನ ಮಹಿವಾಟುಗ ಳಿರುವುದರಿಂದ ಯಾರೂ ಬಿರುಸು ಮಾತು ಗಳನ್ನಾಡಬಾರದೆಂದೂ ಹೈದರಾಬಾದ್ ಪ್ರಧಾನಿ ಮಿ. ಲಾಯಕ್ ಅಲಿಗಳೆಂದಿದ್ದಾ ರೆ. ಗಡಿಯಲ್ಲಿ ಸಿದ್ಧತೆಗಳನ್ನು ಮಾಡಿ ಟ್ಟೀ ಪುಂಡರನ್ನಟ್ಟಿಕೊಂಡು ಹೈದರಾಬಾ ದಿನೊಳಕ್ಕೂ ನುಗ್ಗಿ ಹೋಗುವ ಅಜ್ಞೆಯು ಹಿಂದೀ ಪೋಲೀಸರಿಗೂ ಸೈನಿಕರಿಗೂ ದೊರೆತಿರುವುದರಿಂದ ರಝಾಕಾರ್ ರೂ ಪಾಟದೀ ದಿನಗಳಲ್ಲಿ ಹೈದರಾಬಾದ್ ಯು ಪ್ಪವೇಳಲು ತಡವಾಗದು. ಈ ಅಪಾಯವ ನ್ನೂ ಹಿಸಿಯೇ ಹೈದರಾಬಾದ್ ಸರಕಾರವು ತನ್ನ ಸೇನೆಯು ಭಾರತದ ಗಡಿಯಿಂದ ಮೂರು ಮೈಲೊಳಗಡೆಗೆ ಹಿಂದೆಗೆದು ನಿ ಲ್ಲುವಂತೆ ಆಜ್ಞಾಪಿಸಿದೆ; ಹೆಜ್ಜೆ ಹಿಂದಿಟ್ಟಿ ದೆ- ಈ ಮಟ್ಟಿಗೂ ಯಾವ ದರ್ಪವನ್ನೂ ಪ್ರದರ್ಶಿಸದೆ ...ಸಂರಾಧಿಗಳನ್ನೋಡಿಸಿ

ಕೊಂಡು ಒಂದು ರಾಜ್ಯದವರಿನ್ನೊಂದು ರಾಜ್ಯಕ್ಕೆ ನುಗ್ಗುವ ಸಂಪ್ರದಾಯವು ಇಲ್ಲಿ ಮೊದಲಿನಿಂದಲೂ ಕ್ಷಮ್ಯವಾಗಿತ್ತು. ಒಂ ದೂವರುಷದ ಪ್ರಚಲಿತ ಒಪ್ಪಂದಾನುಸಾ ರವಾಗಿಯೂ ಹಾಗೆ ಮಾಡುವ ಹಕ್ಕಿದ ಯಾದ್ದರಿಂದ ಸಂಗತಿ ದೊಡ್ಡದಲ್ಲ' ಎಂ ದು ಹೈದರಾಬಾದ್ ಸರಕಾರವು ತನ್ನನ್ನು ತಾನೇ ಸಂತೈಸಿಕೊಂಡಿದೆ. ಮಧ್ಯಪ್ರಾಂ ತ್ಯದ ಪೋಲಿಸರು ರಝಾಕಾರರನ್ನಟ್ಟಿಕೊಂ ಡು ಒಂದೆಡೆ ಹೈದರಾಬಾದಿನೊಳಗೆ ನುಗ್ಗಿ ಹೋದ ವಾರ್ತೆ—ಅತ್ತ ರಝಾಕಾರರೂ ಭಾರತ ಕ್ಷೇತ್ರದೊಳಗೆ ಧಾಳಿನಡೆಸಿದಸುದ್ದಿ -ಹೈದರಾಬಾದಿನೊಳಗಡೆಯ ಹಿಂದುಗಳು ಹೆದರಿ ಭಾರತಕ್ಕೋಡಿಬರುತ್ತಿರುವ ಹಾ ಗೂ ರಝಾಕಾರರು ಹಿಂದುಗಳ ಮೇಲೆ ವಿ ಶೇಷ ರೀತಿಯ ಅತ್ಯಾಚಾರಕ್ಕಾರಂಭಿಸಿರುವ ವರ್ತಮಾನ-ಇತ್ಯಾದಿಗಳಿಂದ ಭಾರತ ಹೈದರಾಬಾದ್ ದೂಡಾಟಗಳೀಗಲೇ ಆ ರಂಭಿಸಿದಂತಿವೆ; ಇನ್ನದು ಹೋರಾಟವಾಗಿ ಮಾರ್ಪಡುವುದೊಂದೇ ಬಾಕಿ! ಈ ನ ಡುವೆ ನಿಜಾಮರ ಘಟನಾತ್ಮಕ ಸಲಹೆ ಗಾರ ಸರ್. ಮೋಂಕ್ಟನರು ದೇಶ ಸಂ ಬಂಧ ಖಾತೆಯ ಕಾರ್ಯದರ್ಶಿಯನ್ನು ಕಟ್ಟಿಕೊಂಡು ಹೊಸ ಸೂಚನೆಗಳೊಡನೆ ಪುನಃ ಡಿಲ್ಲಿಗೆ ಹಾರಿದರು. ಅಲ್ಲಿ ಮಾತು ಕತೆ ನಡಿಸಿ ಅದರ ಫಲಿತಾಂಶವನ್ನು ಹೈ ದರಾಬಾದ್ ಸರಕಾರಕ್ಕೆ ಅಲ್ಲಿಂದಲೇ ತಿಳಿ ಸಿದೊಡನೆ ಪ್ರಧಾನಿ ಮಿ. ಲಾಯಕ್ ಅ ಲಿ, ಉಪಪ್ರಧಾನಿ ಶ್ರೀ ಪಿಂಗಳ ವೆಂಕಟ ರಾಮ ರೆಡ್ಡಿ, ಸಾರ್ವಜನಿಕ ಮಂತ್ರಿ, ಹಾ ಗೂ ರಝಾಕಾರ್ ಪ್ರತಿನಿಧಿ ಅಬ್ದುರ್ ರಾ ವೂಫರುಳ್ಳ ಹೈದರಾಬಾದ್ ಸಮಿತಿ ಪುನಃ ಡಿಲ್ಲಿಗೆ ಹಾರಿ ಪರ್ಯಾಲೋಚನೆ ನಡೆಸಿ ಇದೇ ತಾ 15ರಲ್ಲಿ ಹೈದರಾಬಾದಿ ಗ ಮರಳಿದ್ದಾರೆ. ನಿಜಾಮರ ಒಡೆತನವನ್ನು ತುಸು ದೂರಕೊಯ್ದು,ಅಷ್ಟಿಷ್ಟು ಕಾಯ್ದು ಕೊಳ್ಳಲಾಗುವಂತಹ ಕುಹಕ ಪ್ರತಿ

[೫ನೇ ಪುಟ ನೋಡಿರಿ]

ಋತುಸ್ರಾವ ಚಿಂತಿತರು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪಡೆತಪ್ಪಿ ಋತುಸ್ರಾವವಾಗುವುದು ಪಡೆಯೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣವೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5; ಅಧಿಕಾಧಿಕ ಸ್ಪೆಶ್ಯಲ್ ರೂ.8/- [ವಿ. ಪಿ. ಖರ್ಚು ಬೇರೆ ಪ್ರತ್ಯೇಕ]

MIS P. DEVEE, P. DS. (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ಪ್ರಾಸಾದ ಪ್ರಾಬೂ ವಾಪ ಬಯಸಿ
ರಥಬೀದಿ, ಉಡುಪಿ.

ದಿ. ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘಿಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರಕಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಖ್ಖಣದ ಅರಳೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವೃಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯುಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಕಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮ ವಿಶಿಷ್ಟ ಅವಶ್ಯಕತೆ ಗಳಿಗೆ ಹೊಂದಿಸಿಕೊಳ್ಳಬಹುದು ಅದರಿಂದ ನಿಮಗೆ ಸಮಯವೂ, ಹಣವೂ ಉಳಿ ವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಕಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

The Canara Banking Corporation Limited.

Estd: 1906.
(Incorporated in British India)
Head Office: UDIPI, S. India.

Capital Authorised .... Rs 25,00,000
Capital Issued & Subscribed .... Rs. 20,00,000
Capital Paid up .... Rs. 19,87,300
Reserves.... .... Rs. 8,00,400

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ನವಯುಗ

ಗುರುವಾರ, ಉಡುಪಿ, ೧೭-೬-'೪೮

ಉಡುಪಿ ಶ್ರೀಕೃಷ್ಣ ದೇವಾಲಯ

ದೇಶ ಪ್ರಸಿದ್ಧಿಯ ಉಡುಪಿ ಶ್ರೀಕೃಷ್ಣ ಮಂದಿರವು ಖಾಸಗೀ ಮಠವಲ್ಲ, ಹರಿಜನರ ಸಮೇತ ಸರ್ವ ಹಿಂದುಗಳಿಗೂ ಪ್ರವೇಶವಿರಬೇಕಾದ ಸಾರ್ವಜನಿಕ ದೇವಾಲಯವೆಂದು ಮದ್ರಾಸ್ ಸರಕಾರವು ತಿಳಿಸಿದೆ. ಇಂತಹ ದೇವಾಲಯಗಳಿಗೆ ಜಾತಿಭೇದವಿಲ್ಲದೆ ಸರ್ವ ಹಿಂದುಗಳಿಗೂ ಪ್ರವೇಶವಿರತಕ್ಕದ್ದೆಂಬ ಶಾಸನ ಬಂದೊಡನೆ ದಕ್ಷಿಣ ಭಾರತದ ಹಲವು ದೇವಾಲಯಗಳಲ್ಲಿ ಹರಿಜನ ಪ್ರವೇಶೋತ್ಸವ ನಡೆದಿದ್ದಿತು. ಆ ವಾತಾವರಣ ಸ್ಫೂರ್ತಿಯಿಂದ ಸ್ಥಳೀಯ ಕಾಂಗ್ರೆಸ್ ಕಮಿಟಿ ಹಾಗೂ ಹರಿಜನ ಸಂಸ್ಥೆಯೊಂದು ಉಡುಪಿಯ ಶ್ರೀ ಕೃಷ್ಣ ದೇವಾಲಯಕ್ಕೂ ಹರಿಜನರಿಗೆ ಪ್ರವೇಶ ಯಾಚಿಸಿದಾಗ, ಅದು ಖಾಸಗಿ ಹೊರತು ಸಾರ್ವಜನಿಕ ದೇವಾಲಯವಲ್ಲವೆಂದು ಅಗಿನ ಆಡಳಿತೆಯಿಂದ ಉತ್ತರ ಬಂದಿದ್ದಿತು. ಈ ವಿವಾದದ ಕಡೆಗೆ ಸರಕಾರದ ಲಕ್ಷ್ಯವನ್ನೆಳೆದಾಗ ಸರಕಾರವು ಎಲ್ಲವನ್ನೂ ಪರಿಶೀಲಿಸಿ ಉಡುಪಿ ಶ್ರೀ ಕೃಷ್ಣ ದೇವಸ್ಥಾನವು ಸರ್ವ ಹಿಂದುಗಳಿಗೂ ಪ್ರವೇಶವಿರಬೇಕಾದ 'ಸಾರ್ವಜನಿಕ ದೇವಾಲಯ'ವೆಂದು ತೀರ್ಮಾನಿಸಿದೆ. ಅಸ್ಪೃಶ್ಯರು, ಈ ತನಕ ಪ್ರವೇಶವಿಲ್ಲದಿದ್ದವರು, ಎಂಬ ಕಾರಣದಿಂದ ಇನ್ನು ಯಾವುದೇ ಜಾತಿಯ ಹಿಂದುವನ್ನಾದರೂ ದೇವಸ್ಥಾನ ಪ್ರವೇಶಿಸದಂತೆ ತಡೆಯುವವರು ತಪ್ಪಿತರಾಗುವರು.

ಉಡುಪಿ ಶ್ರೀ ಕೃಷ್ಣ ದೇವಸ್ಥಾನ ಪ್ರವೇಶಾಧಿಕಾರದ ಪ್ರಶ್ನೆಯು ಶಾಸನಾನುಸಾರ ತೀರ್ಮಾನಗೊಂಡಿತು; ಸಂಗತಿ ಸ್ಪಷ್ಟವಾಯಿತು. ಆದರೆ ಸಂಬಂಧಪಟ್ಟ ಸರ್ವರ ಹೃದಯ ಶುದ್ಧೀಕರಣವಾಗದೆ ಸತ್ಪರಿಣಾಮವಾಗುವಂತಿಲ್ಲ. ಹರಿಜನರೇ ಮೊದಲಾದವರು ದೇವಾಲಯ ಹೊಗದಿದ್ದುದು ಕಾನೂನಿನ ಹೆದರಿಕೆಯಿಂದಲ್ಲ— ಸಂಪ್ರದಾಯಕ್ಕಂಜಿ; ತಮಗಾ ಅಧಿಕಾರವೇ ಇಲ್ಲವೆಂಬ ಭಾವನೆಯಿಂದ. ಹಿಂದೂದೇವಾಲಯಗಳ ಅಧಿಕಾರಿಗಳಾದರೂ ಹಿಂದೂ ಸಮಾಜದ ಗಣ್ಯರಾಗಕ್ಕೆ ಪ್ರವೇಶಕೊಡದಿದ್ದುದು ಕಾನೂನಿನ ಬೆಂಬಲದಿಂದಲೇ ಅಲ್ಲ— ಪರಂಪರಾಗತ ಪದ್ಧತಿಯ ಬಲದಿಂದಲೇ. ಅಂತೂ ಇಲ್ಲಿ ಮುಖ್ಯಾಪರಾಧಿ ಸಂಪ್ರದಾಯವೇ ಹೊರತು ಇಕ್ಕಡೆಯವರೂ ಅಲ್ಲ. ಆದರೀಕಾಲದಲ್ಲಿ ಎರಡೂ ಕಡೆಯವರ ಭಯ ಮತ್ತು ಮೂಢನಂಬಿಕೆಯನ್ನು ನಿವಾರಿಸುವ ಕೆಲಸ ಸಾಕಷ್ಟು ನಡೆದಿದೆ. ಅಸ್ಪೃಶ್ಯತಾನಿವಾರಣೆಗಾಗಿ ದೀರ್ಘಾವಧಿಯಿಂದ ನಡೆದಿರುವ ಪ್ರಚಾರ ಕಾರ್ಯ—ಹಲವು ಸುಪ್ರಸಿದ್ಧ ದೇವಾಲಯಗಳಿಗಾದ ಹರಿಜನ ಪ್ರವೇಶ—ಇತ್ಯಾದಿಗಳು ಪ್ರವೇಶವಿಲ್ಲವೆನ್ನುವವರ ಮೂಢ ನಂಬಿಕೆಯಂತೆಯೇ ಪ್ರವೇಶಿಸಲೊಲ್ಲೆವೆನ್ನುವವರ ಹೆದರಿಕೆಯನ್ನೂ ನಿವಾರಿಸುವಂತಹವಿವೆ. ಹೀಗೆ ಕಲ್ಮಷ ಪರಿಹರಿಸಿಕೊಂಡ ಹೃದಯಗಳು ಹುರುಪುಗೊಂಡು ಮುಂದೊತ್ತಲಾಗುವಂತೆ ದೇವಾಲಯ ಪ್ರವೇಶದ ಹಕ್ಕು ಸ್ಥಾಪಿಸುವ ಶಾಸನವೂ ಬಂದಿದೆ. ಇಷ್ಟೆಲ್ಲಾ ನಡೆದ ಮೇಲೂ ಪ್ರವೇಶಕ್ಕಾಕ್ಷೇಪಿಸುವದೂ ಅಂಜುವದೂ, ಬೇಡವಾದ ಭಾವನೆಯನ್ನು ಬಿಡಲಾರೆವೆಂದು ಹೂಡುವ ಮುಷ್ಕರವೇ ಆಗುತ್ತದಾದ್ದರಿಂದ ನಿಜಕ್ಕೂ ಅಕ್ಷಮ್ಯ ಅಪರಾಧ. ಇಂತಹ ಅಪರಾಧವು ಉಡುಪಿಯ ಶ್ರೀ ಕೃಷ್ಣ ದೇವಾಲಯದ ಅಧಿಕಾರಿಗಳಿಂದ ಆಗಲಾರದೆಂದು ನಂಬುತ್ತೇವೆ. ಅವರು ಸಂಪ್ರದಾಯಬದ್ಧರಾಗಿ ಸಾಕಷ್ಟು ಹೋರಾಡಿದ್ದಾರೆ. ಕೊನೆಯ ಪ್ರಯತ್ನವಾಗಿ ತಮ್ಮದು 'ಖಾಸಗಿ'ಯೆಂದು ವಾದಿಸಿಯೂ ನೋಡಿಯಾಯಿತು. ಇನ್ನಿದು ಅನಿವಾರ್ಯ ಆಪದ್ಧರ್ಮ— ಎಂದಾದರೂ ಭಾವಿಸಿ ಮನಃಪೂರ್ವಕವಾಗಿ ಶ್ರೀಕೃಷ್ಣ ದೇವಸ್ಥಾನದೊಳಗೆ ಹರಿಜನರನ್ನು ಸೇರಿಸಿಕೊಳ್ಳುವರೆಂದು ನಂಬುತ್ತೇವೆ. ಎಲ್ಲಾ ಅಧಿಕಾರಗಳು ತಪ್ಪಿದ ಮೇಲೂ 'ಹೊಲೆಯರು ಒಳಗೆ ಬಂದರೆ ಮುಖ್ಯಪ್ರಾಣ ಮುರಿದು ಹಾಕಿಯಾನು' ಎಂಬಂತಹ ಬೆದರಿಕೆ ಬೀರಿ— ಸಂಪ್ರದಾಯ ಮಹಾತ್ಮೆಯನ್ನು ಸ್ಥಾಪಿಸಿ— ತಮ್ಮ 'ಪಾವಿತ್ರ್ಯ'ವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರೆ ಒಮ್ಮೆ ಫಲ ಬಾರದೆಂದಲ್ಲ. ಬ್ರಹ್ಮಚಾರಿ— ಗಂಡನಿಂದ ಅಪಹೃತಳಾದ ಸ್ತ್ರೀಯ ಮಾನ ರಕ್ಷಣೆಗಾಗಿ ತನ್ನನ್ನೇ ಅರ್ಪಿಸಿಕೊಂಡ ಮಹಾತ್ಮ— "ಹನುಮದೇವ"ನ ಕಣ್ಣ ಮುಂದೆ ಈಗ ನಡೆಯುತ್ತಿರುವುದೇನು ಎಂಬುದು ಜನಜನಿತವಿದೆ! ಹಿಂದಿನ ಕಾಲದಲ್ಲಿ ನಿರ್ಮಾಣಗೊಂಡಿದ್ದ ಆಚಾರ ನಿಯಮಗಳನ್ನೆಲ್ಲಾ ಪೂರ್ಣ ವಿರುದ್ಧ ಗತಿ ಹಿಡಿಸಿದಂತೆಯೇ ಆ ಯುಗದ ಜೀವಂತ ಶ-ದಳಿತ ರಕ್ಷಕ-ಬ್ರಹ್ಮಚಾರಿ-ಹನುಮಂತನನ್ನೂ 'ಪರಸ್ತ್ರೀಅಪಹಾರ ಮತ್ತು ಅನಾಚಾರ ಪ್ರೋತ್ಸಾಹಕ-ದಳಿತೋದ್ಧಾರ ಭಂಜಕ'ನಾಗಿ ಮಾರ್ಪಡಿಸಿ ತೋರಿಸುವ ಸಾಹಸಕ್ಕಾರೂ ಹೋಗಬಾರದು. ಅಂತೆಯೇ ಈ ತನಕ ಅಸ್ಪೃಶ್ಯರನ್ನಿಸಿದ್ದವರೂ ಇವೆಲ್ಲಾ ನ್ಯಾಯಗಳನ್ನಾಧರಿಸಿ, ತಮ್ಮ ಸ್ವಭಾವಸಿದ್ಧ ಭಯಸಂಕೋಚಗಳನ್ನು ಬದಿಗಟ್ಟಿ ದೇವಾಲಯ ಪ್ರವೇಶಕ್ಕೆ ಮುಂದಾಗುವರೆಂದು ನಿರೀಕ್ಷಿಸುತ್ತೇವೆ. ಸಾರ್ವಜನಿಕರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಅವರನ್ನು ಮುನ್ನಡೆಸುವದಕ್ಕೂ ಬೆಂಬಲಕ್ಕೂ ಒದಗಿ, ಶೀಘ್ರದಲ್ಲಿಯೇ ಉಡುಪಿ ಶ್ರೀ ಕೃಷ್ಣ ದೇವಸ್ಥಾನಕ್ಕೆ ಹರಿಜನ ಪ್ರವೇಶವಾಗಲಿ-ಅದನ್ನನುಸರಿಸಿ ಜಿಲ್ಲೆಯ ಎಲ್ಲಾ ದೇವಾಲಯಗಳೂ ಹರಿಜನರಿಗೆ ತೆರೆಯಲ್ಪಡಲಿ—ಎಂದು ನಮ್ಮ ಆಗ್ರಹದ ವಿನಂತಿ.

ಕಂಬನಿ

ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು ಇದೇ ತಾ. 15ನೇ ಮಂಗಳವಾರ ಅಪರಾಹ್ನ 4½ ತಾಸಿಗೆ ತನ್ನ ಇಹಯಾತ್ರೆಯನ್ನು ಮುಗಿಸಿಕೊಂಡರೆನ್ನಲು ವೇದನೆಯಾಗುತ್ತಿದೆ. ಸಾಯುವಾಗ ರಾಯರಿಗೆ ಸುಮಾರು 55 ವರುಷ ಪ್ರಾಯ; ಕೆಲವು ದಿನಗಳಿಂದ ಅವರಿಗೆ ಸೋಂಕಿದ್ದ ವಿಷಮ ಜ್ವರವು ಪ್ರಬಲಿಸಿ ಕೊನೆಗೆ ಕಳೆದ ಮಂಗಳವಾರ ಹಲವು ರಂಗಗಳ ಮೇಲೊಂದು ಕರಿಛಾಯೆ ಚೆಲ್ಲಿತು. ಕನ್ನಡ ಸಾಹಿತ್ಯದೇವಿಯ ಹಿರಿಮಣಿಯೊಂದು ಉದುರಿಬಿತ್ತು;

ರಾಯರು ಗ್ರಂಥಕರ್ತರು— ನಾಟಕಕಾರರು— ಕವಿ— ಕತೆಗಾರ— ಲೇಖಕ— ವಾಗ್ಮಿ— ಶಿಕ್ಷಕ, ಎಲ್ಲದರಲ್ಲೂ ಮೇಲ್ಮಟ್ಟದಲ್ಲಿದ್ದರು. ಕನ್ನಡ ಸಾಹಿತ್ಯದ ವಿವಿಧಾಂಗಗಳಿಗೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ಅವರ ಹಲವು ಗ್ರಂಥಗಳು ವಿಶೇಷ ಪ್ರಚಾರದಲ್ಲಿವೆ. ಉಡುಪಿಯಲ್ಲಂತೂ 'ಕೊರಡ್ಕಲ್' ಮನೆ ಮಾತು; ಹೊಸ ಬರೆಹಗಾರರ ಒಂದು ಆದರ್ಶ. ಉಡುಪಿ ಮತ್ತು ಆಸುಪಾಸಿನ ಸಾಹಿತಿಕ, ಸಾಮಾಜಿಕ, ಸಾರ್ವಜನಿಕ ಸಭೆ ಸಮ್ಮೇಲನಗಳಲ್ಲಿ ಜೀವಾಳಸದೃಶ ವಕ್ತೃತ್ವ ಕೊರಡ್ಕಲ್ಲರದೆಂದಿತ್ತು; ಹಿರಿಯ ಸಾಹಿತಿಯೊಬ್ಬನ ಆಶ್ರಯ ಬೇಕಾದಾಗ ಕೊರಡ್ಕಲ್ಲರಿದ್ದರು-ಆ ಆಧಾರ ತಪ್ಪಿತು. ಸ್ಮಾರಕ ಸಂದರ್ಭಗಳಲ್ಲಿ ಮಾತ್ರವಲ್ಲ, ಗೌರವಕ್ಕಾಗಿಯೇ ಅಲ್ಲ, ಆವಶ್ಯಕತೆಯೊದಗಿಯೇ ಕೊರಡ್ಕಲ್ಲರನ್ನು ಆಗಾಗ ಸ್ಮರಿಸಬೇಕಾದ ಅಭಾವದ ಅರಿವು ಉಡುಪಿಯ ಸಾರ್ವಜನಿಕ ಕ್ಷೇತ್ರದಲ್ಲಿ ಚಿರಕಾಲ ಉಳಿದೀತು.

ರಾಯರು ಆದಿಯಿಂದಲೂ ಅಧ್ಯಾಪಕ ವೃತ್ತಿಯಲ್ಲಿದ್ದವರು. ಉಡುಪಿ ಬೋರ್ಡ್ ಹೈಸ್ಕೂಲಿನ ನಾಮಾಂಕಿತ ಅಧ್ಯಾಪಕರು. ಅವರ ಶಿಷ್ಯವರ್ಗ ದೊಡ್ಡದಿದೆ. ಬಹುಮುಖದ ಸಾರ್ವಜನಿಕ ಸೇವೆಯಿಂದ ಸರ್ವಜನ ಪ್ರಿಯರಾಗಿದ್ದ ಮಹಾನುಭಾವರಿವರು. ಉಡುಪಿ ಕೋಪರೇಟಿವ್ ಯೂನಿಯನಿನ ಕಾರ್ಯದರ್ಶಿಯಾಗಿಯೂ ಉಡುಪಿ ಸಂಸ್ಕೃತ ಪಾಠಶಾಲೆಯ ಆಡಳಿತ ಸಮಿತಿ ಸದಸ್ಯರಾಗಿಯೂ ಇದ್ದರು. ಉಡುಪಿಯ 'ಕರ್ನಾಟಕ ಸಂಘ'ದ ಸ್ಥಾಪಕರಲ್ಲೊಬ್ಬರಾಗಿದ್ದು, ಅದರ ಪ್ರಧಾನ ಕಾರ್ಯದರ್ಶಿಯಾಗಿ ದುಡಿದಿದ್ದರು. 'ಉಡುಪಿಯ ಲೇಖಕ', ಉಡುಪಿಯ ಪರಿಸ್ಥಿತಿ ಎಂದಾಗ ಮುಂದಾಗಿ ಒರುತ್ತಿದ್ದುದು ಕೊರಡ್ಕಲ್ಲರ ಹೆಸರು. ವಿದ್ವತ್ತು ಮತ್ತು ... ಲಾವಣ್ಯಪೂರ್ಣದಂತೆಯೇ ತೂಕವುಳ್ಳ ಮಾತು ವರ್ತನೆಗಳಿಂದ— ಘನತೆ, ಗತಿಶುದ್ಧತೆಯಿಂದ—ರಾಯರು ಸರ್ವರ ಗೌರವಾದರಗಳಿಗೆ ಪಾತ್ರರಾಗಿದ್ದರು; ಜನಪ್ರಿಯರಿದ್ದರು. ಪ್ರತಿಭೆ, ಪಾಂಡಿತ್ಯ ಮತ್ತು ಘನ... ಶಕ್ತಿಗಳು ಈ ರೀತಿ ಒಂದೆಡೆ ಮಿಲನಗೊಂಡ ಸನ್ಮಾನ್ಯನಿದರ್ಶನಗಳು ಸಾಹಿತಿ ವರ್ಗದಲ್ಲಿ ಅಪರೂಪವೆನ್ನಬಹುದು. ಪ್ರಾಚೀನಾಚಾರದ ಬಂಧನ, 'ಹೊಸತನ'ದ ಆವೇಶಗಳಿಂದ ಕಾಲೋಚಿತ ಪಥಬಿಟ್ಟು ಹಿಂದೆ ಮುಂದೆ ಹೋಗದ ಒಬ್ಬ ಸಾಹಿತಿ—ಸದ್ವರ್ತನೆ, ಸದ್ವ್ಯವಹಾರ, ಸತ್ಸಂಬಂಧಗಳಿಂದ ಸಾರ್ವಜನಿಕ ವ್ಯಕ್ತಿಯೆನ್ನಿಸಿದ್ದ ಓರ್ವ ಘನವಂತ-ಅದೃಶ್ಯನಾದ. ... ಸ್ಥಾನವು ಬರಿದಾಯಿತು.

"ನವಯುಗ" "ಅಂತರಂಗ" ಮತ್ತು "ನವಭಾರತ ಪ್ರಕಟಣಾಲಯ"ಗಳು ತಮ್ಮ ಆತ್ಮೀಯನೊಬ್ಬನನ್ನು—ಸಹಕಾರಿ ಬಂಧುವನ್ನು—ಕಳಕೊಂಡಿವೆ; ರಾಯರ ಕುಟುಂಬಿಕರೊಡನೆ ಕಂಬನಿ ಪಾಲುಗಾರರಾಗಿ ಸಹಸಂತಾಪ ಸೂಚಿಸುತ್ತೇವೆ. ಕೊರಡ್ಕಲ್ ಶ್ರೀನಿವಾಸರಾಯರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ.

ಕುಂದಾಪುರ ಡಿ. ಮು. ಕೋರ್ಟನಲ್ಲಿ.

S. C. 141/48

ವಾದಿ- ರಿಸಿವರ ಕೂರಪ್ಪ ಸೆಟ್ಟಿ, ಕೊಳ್ಕೆಬೈಲು, ಎಡ್ವೋಕೇಟ್, ಕುಂದಾಪುರ.

ಪ್ರತಿವಾದಿರು. ಗೌರಿ ಆಚಾರ್ತಿ, ಸಾಲಿಕೇರಿ ಸುಬ್ಬಣ್ಣ ಆಚಾರಿ ವಿಧವೆ.

2 ರಾಧಾ ಆಚಾರ್ತಿ, 1ನೇ ಪ್ರತಿವಾದಿಯ ತಂಗಿ ಕುಂದಾಪುರ ತಾಲ್ಲೂಕು ಬೀಜಾಡಿ ಗ್ರಾಮದಲ್ಲಿರುವವರು.

ಸದ್ರಿ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ,

ವಾದಿಗೆ ನಿಮ್ಮಿಂದ ಬರ ಮೂಲಗೇಣಿ ಬಾಕಿ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 23-6-1948ಕ್ಕೆ ತನಿಖೆಗೆ ಬಿಟ್ಟಿರುತ್ತದೆ. ಆ ಕುರಿತು ನಿಮ್ಮ ಉದಾಹರಣೆಯಿದ್ರೆ, ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪಿಸಬೇಕು. ಮಾಡಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತೆಂಬುದಾಗಿ ಈ ಕೋರ್ಟು ಹುಕ್ಕುಂಪ್ರಕಾರ ತಿಳುಹಿಸಲಾಗಿದೆ.

M Anthaya Shetty
Advocate for Plaintiff

ತಾ. 7-6-48. ಮೊಕ್ಕಾಂ ಕುಂದಾಪುರ

ನಡಿಯುವ ಚಿತ್ರ

ಮಾಯೆ ಇಲ್ಲದೆ ಜಗತ್ತಿಲ್ಲ—ಮೋಹವಿಲ್ಲದೆ ಮನುಷ್ಯನಿಲ್ಲ.
ಮಾಯಾ ಮೋಹಗಳೆರಡು ಮಿಲನವಾಗಿರುವ

ಮಾಯಾನಗರಿ (ವಿಷ್ಣು ಚಿತ್ರ)

ಬರುವ ಚಿತ್ರ:— ವಾಲ್ಮೀಕಿ (ತೆಲುಗು)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

[೨ನೇ ಪುಟದಿಂದ]

ಸೂಚನೆಗಳು ಇವರ ಜೇಬಿನಲ್ಲಿದ್ದುವೆಂದೂ, ಭಾರತದ ನಾಯಕರು ಅವುಗಳಿಗೊಪ್ಪುವಂತಿಲ್ಲವೆಂದೂ ಊಹಿಸಬಹುದು. ಈ ಸಂಬಂಧವಾಗಿ ಹಿಂದೀ ಸರಕಾರದ ಹೇಳಿಕೆ ಹೊರಡಲಿದೆ. ಇತ್ತ, ಹೈದರಾಬಾದಿನೊಳಗೆ ಯೋಧರಸಂಗ್ರಹ, ಖಾಸಗೀ ಮೋಟಾರುಬಂಡಿಗಳ ಒತ್ತಾಯದಸಂಗ್ರಹ, ಅತ್ಯಭಾವವಿರುವ ಪೆಟ್ರೋಲ್ ದಾಸ್ತಾನು ಇತ್ಯಾದಿ ಸಿದ್ಧತೆಗಳು ನಡೆಯುತ್ತಿವೆ. ಒಂದೋ ಹೈದರಾಬಾದು ಕೂಡಲೇ ಹಾದಿಗೆ ಬರಲಿದೆ. ಇಲ್ಲವೇ ನಿರೀಕ್ಷಿತ ಸ್ಫೋಟವು ಇಂದೋ ನಾಳೆಯೋ ಆಗಲಿದೆ!

ಕಾಶ್ಮೀರದ ಸಮರ

ಕಾಶ್ಮೀರ ವಿವಾದದ ಪರಿಶೀಲನೆಗಾಗಿ ಭದ್ರತಾ ಕೌನ್ಸಿಲು ತಾನು ನೇಮಿಸಿರುವ ಸಮಿತಿಗೆ ಹಾಕಿಕೊಟ್ಟಿರುವ ಕಾರ್ಯಕ್ರಮಗಳಲ್ಲಿರುವ ಅಧಿಕಪ್ರಸಂಗಗಳಿಗಾಗಿ ಸ್ಪಷ್ಟ ನಿಷೇಧವನ್ನು ಸೂಚಿಸಿ, ಸಮಿತಿಯ ಕಾರ್ಯರೀತಿಗಳನ್ನು ಮುಂದಾಗಿ ತಿಳಿಸಬೇಕೆಂದು ಕೇಳಿಕೊಂಡು ಪಂಡಿತ ನೆಹರುಗಳು ಬರೆದಿದ್ದ ಪತ್ರಕ್ಕೆ ಭದ್ರತಾ ಕೌನ್ಸಿಲು ಉತ್ತರ ತಯಾರಿಯಲ್ಲಿದೆ.] ಪಂಡಿತ ನೆಹರುಗಳ ಆಕ್ಷೇಪವನ್ನು ಅಣಕಿಸುತ್ತಾ ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಅಲೀಖಾನರು, ತನ್ನ ಅನ್ಯಾಯಕ್ಕೆ ಆಧಾರ ದೊರೆಯದ ಭಾರತವೀಗ ಕಾಶ್ಮೀರದಲ್ಲಿ ಬಲಪ್ರಯೋಗದಿಂದಲೇ ಗೆಲ್ಲಲು ಮುಂದಾಗಿದೆಯೆಂದು ಟೀಕಿಸಿದ್ದಾರೆ. ತಾನಾಗಿ ದೂರುಕೊಟ್ಟಿದ್ದ ಭಾರತವೇ ಭದ್ರತಾ ಕೌನ್ಸಿಲಿನ ತೀರ್ಮಾನ ಸ್ವೀಕಾರಕ್ಕೆ ಹಿಂದೆಗೆಯುತ್ತಿರುವುದರಿಂದ ಅದರ ವಾದದ ಟೊಳ್ಳುತನವು ಜಗಜ್ಜಾಹೀರಾಯಿತೆಂದೂ ಪಾಕಿಸ್ತಾನದ ಗಡಿಯಲ್ಲೂ ಭಾರತವು ಆಕ್ರಮಗಳನ್ನು ನಡೆಸುತ್ತಿರುವದನ್ನು ಕೂಡಲೇ ನಿಲ್ಲಿಸತಕ್ಕದ್ದೆಂದೂ ಲಿಯಾಖತ್ ಹೂಂಕರಿಸಿದ್ದಾರೆ. ಇದಕ್ಕುತ್ತರವಾಗಿ ಪಂಡಿತನೆಹರುಗಳು ಪಾಕಿಸ್ತಾನದ್ದ ಅತಿರೇಕಾಕ್ರಮಗಳನ್ನು ಸ್ನೇಹಾಚಾರದಾಸೆಯಿಂದ ಭಾರತ ಸರಕಾರವು ಕ್ಷಮಿಸುತ್ತಾ ಬಂದುದನ್ನು ಜ್ಞಾಪಕಕ್ಕೆ ತಂದು ತಮ್ಮಲ್ಲಾವ ಗುಪ್ತ ವರ್ತನೆಯೂ ಇಲ್ಲವೆಂದೂ ಇಂತಹ ಸ್ಥಿತಿಯಲ್ಲಿ ಲಿಯಾಕತ್ ಅಲಿಗಳ ಅಸಂಬದ್ಧ ಆರೋಪಗಳು ಅನರ್ಥಕಾರಿ ಎಂದೂ ಉತ್ತರಿಸಿದ್ದಾರೆ. ಭದ್ರತಾ ಕೌನ್ಸಿಲಿನ ಕಾಶ್ಮೀರಸಮಿತಿಯು ಜೂನ್ ಅಂತ್ಯಕ್ಕೆ ಭಾರತಕ್ಕೆ ಬರಲಿದೆ.

ಇತ್ತ ಹಿಮಕಾಲ ಕಳೆದಿರುವುದರಿಂದ ಕಾಶ್ಮೀರ ರಣರಂಗದಲ್ಲಿ ಹಿಂದೀ ಸೇನೆಗಳು ಮೇಲಿಂದ ಮೇಲೆ ವಿಜಯ ಸಂಪಾದಿಸುತ್ತಿವೆ. ಕಳೆದ ಮೂರೇ ವಾರಾವಧಿಯಲ್ಲಿ ಮೇಜರ್ ಜನರಲ್ ತಿಮ್ಮಯ್ಯನವರ ಸೇನೆಗಳು ೩೫,೦೦೦ ಚದರ ಮೈಲುಗಳಷ್ಟು ಸ್ಥಳವನ್ನು ಆಕ್ರಮಣಗಾರರಿಂದ ಕಸಿಗೊಂಡು ಕಾಶ್ಮೀರ ಕಂದರದ ಅಪಾಯವನ್ನು ಸಂಪೂರ್ಣ ನಿವಾರಿಸಿವೆ. 'ಆಝಾದ್ ಕಾಶ್ಮೀರ'ನಾಮಾಂಕಿತ ಪುಂಡುಗಾರರ ಸರಕಾರವು ಕುಸಿದುಬಿದ್ದಿದೆಯೆಂದೊಂದು ವಾರ್ತೆ.

ಭಾರತದಲ್ಲಿರುವ ಪಾಂಡಿಚೆರಿ ಮುಂತಾದ ಫ್ರೆಂಚ್ ವಸಾಹತುಗಳ ಜನಮತವನ್ನು ಗಣಿಸಿಯೇ ಫ್ರಾನ್ಸಿನೊಡನೆ ಅವುಗಳ ಸಂಬಂಧ ಹೇಗಿರತಕ್ಕದ್ದೆಂಬುದನ್ನು ನಿರ್ಧರಿಸಲಾಗುವದೆಂದು ಫ್ರೆಂಚ್ ಎಸೆಂಬ್ಲಿಯಲ್ಲಿ ಸರಕಾರೀ ಹೇಳಿಕೆಯಾಗಿದೆ.

ಸ್ಟರ್ಲಿಂಗ್ ಸಾಲಗಳ ನಿವೃತ್ತಿ ಸಂಬಂಧದ ಮಾತುಕತೆಗಳು ಇಂಗ್ಲಾಂಡು, ಭಾರತ, ಪಾಕಿಸ್ತಾನ ಪ್ರತಿನಿಧಿಗಳೊಳಗೆ ಲಂಡನಿನಲ್ಲಿ ಭರದಿಂದ ನಡೆದಿವೆ.

ಜಾಗತಿಕ ಸ್ಥಿತಿಗತಿ

ಒಂದು ಒಪ್ಪಂದ ತೀರ್ಮಾನ ಮಾಡಲಾಗುವಂತೆ ಪೆಲೆಸ್ತೈನಿನಲ್ಲಿ ನಾಲ್ಕು ವಾರಗಳ ವರೆಗೆ ಯುದ್ಧ ನಿಲ್ಲಿಸತಕ್ಕದ್ದೆಂಬ ಭದ್ರತಾ ಕೌನ್ಸಿಲಿನ ಶಾಂತಿ ತೀರ್ಮಾನವನ್ನು ಜಾರಿಗೆ ತರಲು ಸಂಯುಕ್ತ ರಾಷ್ಟ್ರ ಸಭೆ ಕಳುಹಿದ್ದ ಕೌಂಟ್ ಫೋಕೆ ಬರ್ನಾಡೊಟ್ಟೆಯವರು ಶ್ಲಾಘನೀಯ ಪ್ರಯತ್ನ ಮಾಡಿ ಜೂನ್ ತಾ. ೧೧ರಲ್ಲಿ ಇಕ್ಕಡೆಯವರಿಂದಲೂ ಗುಂಡು ಹಾರಾಟ ನಿಲ್ಲಿಸುವ ಶಾಂತಿ ಶರ್ತಕ್ಕೆ ಒಪ್ಪಿಗೆ ಪಡೆದರು. ಆದರೆ ಯಾಗಾಗಿ 24 ಘಂಟೆಗಳು ದಾಟಿದೊಡನೆಯೇ ಜೂನ್ ತಾ. 12ನೇ ಮಧ್ಯ ರಾತ್ರಿ ಪುನಃ ಯುದ್ಧಸ್ಫೋಟಗೊಂಡು ಈಗ ಖಾಡಾಖಾಡಿ ಹೋರಾಟ ಸಾಗಿದೆ ಇದಕ್ಕಾಗಿ ಯೆಹೂದಿಗಳೂ ಅರಬರೂ ಪರಸ್ಪರರನ್ನು ಆರೋಪಿಸಿಕೊಳ್ಳುತಿದ್ದಾರೆ.

ಅಮೇರಿಕದಲ್ಲಿ ರಶ್ಯದ ವಿರುದ್ಧವಾಗಿ ಯುದ್ಧ ಪ್ರಚಾರ ರೂಪದಿಂದ 'ಥಂಡಾ ಹೋರಾಟ'ವೇ ನಡೆಯುತ್ತಿದೆಯೆಂಬ ರಶ್ಯದ ಆರೋಪಕ್ಕೆ ಅಮೇರಿಕಾಧ್ಯಕ್ಷ ಟ್ರುಮೇನರು ಉತ್ತರ ಕೊಡುತ್ತಾ, ಅಮೇರಿಕವು ರಶ್ಯದ ಕುರಿತಾದ ದ್ವೇಷಪೂರಿತ ಹಂಚಿಕೆಯನ್ನೂ ಕಟ್ಟಿಕೊಂಡಿಲ್ಲವೆಂದು ಆಶ್ವಾಸನೆಯಿತ್ತಿದ್ದಾರೆ. ರಶ್ಯವು ತನ್ನ ಜುಲುಮೆ ಹಾಗೂ ಒಳಹೊರಂಗ ಒಂಡಾಯದ ಧೋರಣೆಯನ್ನು ನಿಲ್ಲಿಸತಕ್ಕದ್ದೆಂದೂ, ತನ್ನ ಯುದ್ಧ ಕಾಲದ ಸ್ನೇಹಿತರೊಂದಿಗೆ ಶಾಂತಿ ಸಾಧನೆಗಾಗಿ ದುಡಿಯಲು ರಶ್ಯವು ತಿರಸ್ಕರಿಸುತ್ತಿರುವದೇ ತಮ್ಮ ಕಾಲದ ಅತಿ ಕಠೋರವಾದ ನಿರಾಶೆಯೆಂದೂ ಟ್ರುಮೇನರ ಉದ್ಗಾರ.

ಅಂತೂ ಭಾರತದ ರಾಜಕೀಯದಲ್ಲೂ, ಜಾಗತಿಕ ರಾಜಕೀಯದಲ್ಲೂ ಕಾರ್ಯಕ್ಕಿಂತ ಹೆಚ್ಚಾಗಿ—ಅವಶ್ಯಕತೆಗೆ ಮಿಕ್ಕಿ—ಮಾತಿನ ಭರಭರಾಟೆ ನಡೆದಿದೆ!

ಉಡುಪಿ

ಕಮ್ಯೂನಿಸ್ಟರಿಗೆ ಶಿಕ್ಷೆ:—ಕೃಷ್ಣ ಮಣಿಯಾಣಿ, ದಾಸ ಸೇರಿಗಾರ, ಅನಂತಕೃಷ್ಣ ಐತಾಳ, ಅಬ್ದುಲ್ ರ್ಹಮಾನ್ ಸಾಹೇಬ್, ಮುತ್ತೋಲಿ ಬ್ಯಾರಿ, ಚೀಂಕ್ರ, ಇವರು ಜ್ಯಾಮೀನು ಮುಚ್ಚಳಿಕೆ ಕೊಡಲು ಅಸಮರ್ಥರಾದುವರಿಂದ ಪ್ರತಿಯೋರ್ವರಿಗೂ ಒಂದೊಂದು ವರ್ಷ ಶಿಕ್ಷೆ ವಿಧಿಸಲಾಗಿದೆ. ಸರಕಾರಿ ಕಡೆಯಿಂದ ಆ। ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ವಿ. ಕೆ. ಶೆಟ್ಟರೂ ಕಮ್ಯೂನಿಸ್ಟರ ಕಡೆಯಿಂದ ಮಂಗಳೂರಿನ ಶ್ರೀ ಕೆ ಭಾಸ್ಕರ ರೈಗಳೂ ವಕಾಲತ್ತು ವಹಿಸಿದ್ದರು

ಉಡುಪಿಯ ಮತ್ತೋರ್ವ ಕಮ್ಯೂನಿಸ್ಟ್ ಶೀನನಾಯ್ಕರನ್ನು ಇದೇ ತಾ ೧೪ರಲ್ಲಿ ದಸ್ತಗಿರಿ ಮಾಡಲಾಗಿದೆ. ಇಷ್ಟರತನಕ ಇವರು ವೇಷಪಲ್ಲಟದಿಂದ ಇದ್ದರೆಂದು ಹೇಳಲಾಗಿದೆ. ಇವರ ಮೇಲಣ ಆರೋಪಗಳು ಇನ್ನು ವಿಚಾರಣೆಯಾಗತಕ್ಕದ್ದಿದೆ.

ಮಹಾತ್ಮಾಗಾಂಧಿ ಸ್ಮಾರಕ ಪ್ರಾರ್ಥನಾಮಂದಿರವು ಕಳೆದ ತಾ 28ರಲ್ಲಿ ಕಾಪುಬೆಟ್ಟಿನಲ್ಲಿ ಸ್ಥಾಪಿಸಲಾಯಿತು. ದಲಿತವರ್ಗದಲ್ಲಿರುವ ಕುಂದುಕೊರತೆಗಳನ್ನು ನೀಗಲಾಡಿಸಿ ಅವರನ್ನು ಓದುಬರಹ ಬಲ್ಲವರನ್ನಾಗಿ ಮಾಡುವುದು ಇತ್ಯಾದಿ ಕಾರ್ಯಗಳನ್ನು ಸಾಧಿಸಲಿದೆ.

ಶ್ರೀಮತಿ ಲಲಿತಾಬಾಯಿಯವರ ನಿಧನ ಮಂಗಳೂರಿನ ಪ್ರಸಿದ್ಧ ವಕೀಲರಾಗಿದ್ದ ದಿವಂಗತ ಶ್ರೀ ವೆಂಕಟ್ರಾಯ ಬಾಳಿಗರ ಸುಪುತ್ರಿಯೂ ಉಡುಪಿಯ ಜನಪ್ರೀತ ಡಾಕ್ಟರ್ ಶ್ರೀ ಪಿ ಆರ್. ನಾಯ್ಕರ ಧರ್ಮಪತ್ನಿಯೂ ಆದ ಶ್ರೀಮತಿ ಲಲಿತಾಬಾಯಿಯವರು ಕಳೆದ ಆರೇಳು ತಿಂಗಳುಗಳಿಂದ ಕ್ಷಯರೋಗ ಪೀಡಿತರಾಗಿದ್ದು ಕೊಯಮುತ್ತೂರಿಗೆ ಹವಾ ಬದಲಾವಣೆಗಾಗಿ ಹೋದವರು ಅಲ್ಲಿಯೇ ಇದೇ ತಾ ೧೦ರಲ್ಲಿ ಅಕಾಲ ನಿಧನ ಹೊಂದಿದರು ಎಂಬುದನ್ನು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಶ್ರೀಮತಿಯವರ ಅಗಲುವಿಕೆಯಿಂದ ಅವರ ಕುಟುಂಬಕ್ಕೆ ... ಆದಾರ ದುಃಖದಲ್ಲಿ ನಮ್ಮ ಸಹಸಂತಾಪವನ್ನು ಸೂಚಿಸುವೆವು

ನೋಟೀಸು

ಉಡುಪಿ ಕಬ್ಬು ವ್ಯವಸಾಯಗಾರರ ಸಹಕಾರ ಯೂನಿಯನ್ನಿನ Udipi Sugarcane growers Union) ಸದಸ್ಯರ ಮಹಾಸಭೆಯು ತಾ. 11-7-1948ನೆ ಆದಿತ್ಯವಾರ ಅಪರಾಹ್ನ 2 ಗಂಟೆಗೆ ಬಡಗಬೆಟ್ಟು ಸಹಕಾರ ಸಂಘದ ಆಫೀಸಿನಲ್ಲಿ ಜರಗುವುದು ಮೆಂಬರರೆಲ್ಲರೂ ಸಕಾಲದಲ್ಲಿ ಹಾಜರಿರಬೇಕಾಗಿ ವಿನಂತಿ

ಕಾರ್ಯಕ್ರಮ

1 ಯೂನಿಯನ್ ಕಾರ್ಯಕಲಾಪಗಳನ್ನು ಮುಂದೊತ್ತ ಬೇಕೆಂದೇ ಬೇಡವೋ ಎಂಬ ಪ್ರಶ್ನೆಯ ಇತ್ಯರ್ಥ.

2 ಯೂನಿಯನ್ ಇರಗೊಡಿಸಬೇಕೆಂದಾದರೆ ಉಪ ನಿಬಂಧನಗಳಿಗನುಸಾರವಾಗಿ ನಾಯಕಮಂಡಳಿಗೆ ಹೊಸ ಡೈರೆಕ್ಟರರ ಚುನಾವಣೆ.

3 ಯೂನಿಯನ್ನಿನ ಈತನಕದ ಆಡಿಟ್ ರಿಪೋರ್ಟುಗಳ ಪರಿಶೀಲನೆಮತ್ತು ಸ್ವೀಕಾರ

4 ಚಾಲ್ತಿ ಸಹಕಾರಿ ವರುಷದಬಗ್ಗೆ ಬಜೆಟು ಮಂಜೂರಾತಿ.

5 ಅಧ್ಯಕ್ಷರ ಅನುಮತಿಯಿಂದ ಮಹಾಸಭೆಯ ಮುಂದೆಬರಬಹುದಾದ ಇತರ ಪ್ರಾಮುಖ್ಯ ವಿಷಯಗಳು.

ಉಡುಪಿ, ತಾ 15-6-48 } (ಸಹಿ) ಕೆ. ಜೆ. ಬಲ್ಲಾಳ್ ಅಧ್ಯಕ್ಷ.

The Vijaya Bank, Limited,

BRAHMAVAR

ದಿ ವಿಜಯ ಬ್ಯಾಂಕ್, ಲಿಮಿಟೆಡ್, ಬ್ರಹ್ಮಾವರ.

NOTICE

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಸಾಲವನ್ನು ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ ಬಾಪತಿ ಮಾಡದೆ ಬಡ್ಡಿ ಸಹಾ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ: ತಾ 22 6-48ರ ವಳಗೆ ಸದ್ರಿ ಸಾಲವನ್ನು ಅಸಲು ಬಡ್ಡಿ ಸಮೇತ ಕೊಡದಿದ್ದರೆ ಸದ್ರಿ ನಗಗಳನ್ನು ತಾ. 26ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅದೇ ದಿವಸ ಏಲಂ ಆಗದಿದ್ದರೆ ಬೇಂಕಿಗೆ ಯುಕ್ತ ಕಂಡ ದಿವಸ ಮುಂದುವರಿಸಲಾದೀತು.

ನಂಬ್ರ	ಹೆಸರು	ಮೊಬಲಗು
136 / 43-4	ಅಗಸ್ಟಿನ್ ಡಾಲ್ಮೇದ, S/o ಬಜಲ್ ಕೈತಾನ ಡಾಲ್ಮೇದ, ಕಜ್ಕೆ ಗ್ರಾಮ, ಬಾರಕೂರು.	Rs. 150/-
313 / 44 5	ಅಚ್ಲಾಡಿ ತೇಜಪ್ಪ ಶೆಟ್ಟಿ, ಪಟೇಲ್ ಅಚ್ಲಾಡಿ ಗ್ರಾಮ, ಪೋಸ್ಟ್ ಬಾರಕೂರು	,, 35/-
669 / 45 6	K, M, ಹಸನ್ ಸಾಹೇಬ, S/o ಇಬ್ರಾಹಿಮ್ ಸಾಹೇಬ, ಬೆಂಗ್ರಿ, ಕೋಡಿ ಗ್ರಾಮ, ಪೋ ಹಂಗಾರಕಟ್ಟೆ,	,, 12/-
137 / 46 7	ಮಹಾಬಲ ಶೆಟ್ಟಿ, G, s/o ವಾಸಪ್ಪ ಶೆಟ್ಟಿ, ಅಡಾರ ಮನೆ, ಅಚ್ಲಾಡಿ ಗ್ರಾಮ, ಪೋ. ಬಾರಕೂರು,	,, 310/-
202 / 46 7	ಅಚ್ಲಾಡಿ ತೇಜಪ್ಪ ಶೆಟ್ಟಿ, ಪಟೇಲ್, ಅಚ್ಲಾಡಿ ಗ್ರಾಮ, ಪೋ. ಬಾರಕೂರು,	,, 75/-
211 / 46 7	U, ಮಹಮ್ಮದ ಸಾಹೇಬ, s/o ಕಾದಿರ್ ಸಾಹೇಬ, ಬಸಪಟ್ಣ, ಹಾರಾಡಿ ಗ್ರಾಮ, ಪೋ. ಸಾಲಿಕೇರಿ,	,, 10/-
438 / 46-7	ಗಣಪಯ್ಯ ಶೆಟ್ಟಿ, s/o ಗೋವಿಂದ ಶೆಟ್ಟಿ, ತೆಂಕ ಮನೆ, ಹೆರೂರು ಗ್ರಾಮ, ಪೋ ಬ್ರಹ್ಮಾವರ,	,, 30/-
545 / 46 7	do do	,, 12/-

Vijaya Bank Ltd, Brahmavar, 7-6-48 } **K. Nandyappa Shetty.** Agent



Approved firm by the Govt. of Mysore Certified by the Agent of the Govt. of Cylone & Indian

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ ಹೋಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ವಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕವಲದಾರ, ಕೆಮಿಸ್ಟ, ಹಾವೇರಿ ಬ್ಯಾಡ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳದಿದ್ದರೆ, ಉರುಉರು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರದು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದ, ನಂಜೇರುತ್ತದೆ ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸನ್ನಿ, ಮಲವಿರೋಧ, ಸ್ತನಗಳ ಬೀಗು, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ವರೆಗೆ ಕರೆಸಿ ನೂರಾರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ● ಮೇಲೂ ದೈವೇಚ್ಛೆ ಎಂದು ಅಪ್ಪಷ್ಟ ಸರೀ ಪ್ಪೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಆಯುರ್ವೇದೀಯ ಔಷಧಿಗಳ ಶಾಸ್ತ್ರೀಯ ಮತ್ತು ಅನುಭವಿಕ ಗುಣಧರ್ಮ ರೋಗಾನುಪಾನ ಪ್ರಮಾಣ, ಕ್ರಿಯ, ಇತ್ಯಾದಿ ಯುಕ್ತ 96 ಪುಟಗಳ ಸೂಚೀಪತ್ರ 1ಕ್ಕೆ 0 8 0 9 ಆಣೆಯ ಸ್ಟಾಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವೆವು

Swadeshi Oushadhi Bhandara, (REGD)

Kunjal P. O. Brahmavar, S. K.

"ತಾರಾನಾಥ ಇಂಡಿಯನ್ ಮೆಡಿಕಲ್ ಇನ್ಸ್ಟಿಟ್ಯೂಟ್"

ಬಳ್ಳಾರಿ.

ಇದರ ದ್ವಿತೀಯ ವರ್ಷದ ಆರಂಭವು ಇದೇ ಬರುವ ಜುಲೈ 15ನೇ ತಾರೀಕಿಗೆ ಆಗುವುದಿದೆ. ಅಭ್ಯರ್ಥಿ ವಿದ್ಯಾರ್ಥಿಗಳ ಅರ್ಜಿಯು ತಾ. 1-7-48ರ ಒಳಗೆ ಕಾರ್ಯದರ್ಶಿಗಳಿಗೆ ಮುಟ್ಟತಕ್ಕದ್ದು. ವಿವರಗಳಿಗೆ ಆಣೆ 4ರ ಸ್ಟಾಂಪ್ ಇಟ್ಟು ಬರೆಯುತಕ್ಕದ್ದು.

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

R. E P. 53/48 S C. 133/47

ಯೂಸೂಫ್ಬಿ ಮುಹಮ್ಮದ್ ಹುಸೇನ್ ಸಾಹೇಬ.

ವಾದಿ—ಅರ್ಜಿದಾರ

ಗಣೇಶರಾವ್ ಸಹಾ-ಎದುರು.

1 ಗಣೇಶರಾವ್-ಬಿಜೂರು ಪಾಂಡುರಂಗ ರಾಯರ ಮಗ- ಬಿಜೂರುಗ್ರಾಮ

1ನೇ ಎದುರಿಗೆ ಅರ್ಜಿದಾರನ ಕಡೆಯಿಂದ ಈ ಮೂಲಕ ತಿಳಿಸುವುದೇನೆಂದ್ರೆ

ಸದ್ರಿ ಅಮ್ಲಜಾರಿಯಲ್ಲಿ 1ನೇ ಎದುರಿಬಾಬ್ತು ಸ್ಥಿರಾಸ್ತಿಯನ್ನು ಲೈಲಾಂ ಮಾಡಿಸುವಗೋಸ್ಕರ ಜಪ್ತು ಮಾಡಿಸಿಯದೆ. ಸದ್ರಿ ಜಪ್ತಿಯು ಕಾಯಂ ಮಾಡಿಸುವಗೋಸ್ಕರ ತಾ.28-6-48 ಕ್ಕೆ ಅಪ್ಪೈರೆ ತನ್ನಗೆ ಯಿಡೋಣಾಗಿಯದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

G. Sanjiva Rao

Pleader for Petitioner

Kurdapur Date 8—6—48

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 105/48

ವಾದಿ— ಗಣಪತಿಭಟ್ಟ,

ಪ್ರತಿವಾದಿ—ಅಕ್ಕಿ ಅಂಗಡಿ ಶೇಷಪ್ಪ

ಪ್ರತಿವಾದಿ ಅಕ್ಕಿ ಅಂಗಡಿ ಶೇಷಪ್ಪ, ಅಪ್ಪಯ್ಯ ಬಗ್ಗಯ್ಯ ಕೆರೆಗಾರರ ಮಗ, ಖಡುಸಂ ವಾಸಸ್ತ. ಹಾಲಿ ತಿರ್ಥಪೇಟೆಯಲ್ಲಿ ಅಕ್ಕಿ ಅಂಗಡಿ ವ್ಯಾಪಾರಸ್ತ

ವಾದಿಯು ನಿಂಮ ಮೇಲೆ ಗೇಣಬಾಕಿ ರೂ. 50-7-10ಕ್ಕೆ ಮಾಡಿದ ದಾವೆಯನ್ನು ತಾರೀಕು 28-6-48ಕ್ಕೆ ಕುಂದಾಪುರ ಡಿ ಮು. ಕೋರ್ಟಿನಲ್ಲಿ ತನ್ನಿಗೆ ಯಿಟ್ಟದೆ ಅದಿನ್ನ ಪೂರ್ವಾಹ್ನ 11 ಘಂಟೆವಳಗೆ ನೀವು ಕೋರ್ಟಿಗೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಉತ್ತರಿಸಲಿಕ್ಕೆ ತಪ್ಪಿದ್ರ ನಿಂಮನ್ನು ಎಕ್ಸಪಾರ್ಟಿಮಾಡಿ ತೀರ್ಮಾನಿಸಲಾದೀತೆಂಬ ಸಂಗ್ತಿ ಮೂಲಕ ತಿಳಿಸೋಣಾಗುತ್ತದೆ. ತಾ 11-6 48

ಹೆಗ್ಡೆ ಗಣೇಶರಾವ್ ವಕೀಲ್

ಕುಂದಾಪುರ, 11-6-48

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. E. P. 192/48- S. C. 650/46

ವಾದಿ— ಟಿ. ಶಂಕರರಾವ್

ಪ್ರತಿವಾದಿರು 1-ನರಸಿಂಹಾಚಾರಿ 2 ಗಣಪಯ್ಯಾಚಾರಿ. ಅನಂತಾಚಾರಿ ಮಕ್ಕಳು.

ಕುಂದಾಪುರ ತಾಲೂಕು ಕಾಳಾವರ ಗ್ರಾಮದ ಸಾರ್ಣಪುರ 2ನೆ ಪ್ರತಿವಾದಿ ಗಣಪಯ್ಯಾಚಾರ್ರಿಗೆ.

ವಾದಿಯು ನಿಂಮ ಮೇಲ ಪಡದ ಗೇಣಬಾಕಿ ಮೇಲಣ ಡಿಕ್ರಿಯ ಅಮಲಜಾರಿಬಗ್ಗೆ ವಾದಿಯು ನಿಂಮ ಮೇಲೆ ಈ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದಾನೆ. ಅದ್ದರಿಂದ ಅಮಲಜಾರಿ ಯಾಕೆ ನಡಿಸಕೂಡದೆಂಬ ಸಬಬು ತೋರಿಸಲಿಕ್ಕೆ 1948ನೆ ಇಸ್ವಿ ಜೂನ್25ನೆ ತಾರಿಕಿನಲ್ಲಿ ಸದ್ರಿ ಕೋರ್ಟಿನ ಮುಂದೆ ನೀವು ಹಾಜರ ಆಗಬೇಕು ಎಂತ ಯಿದರಿಂದ ನಿಮಗೆ ನೋಟಿಸು ಕೊಡೋಣಾಗುತ್ತದೆ

ಹೆಗ್ಡೆ ಗಣೇಶರಾವ್, ವಕೀಲ

ಕುಂದಾಪುರ ತಾ 11-6-48

ಅಂಡವಾಯು, ಅಂಡವ್ಯಾಧಿ, ಪ್ಲೇರಿಯಾ, ಇತ್ಯಾದಿಗಳಿಗೆ ಲೇಪನಬಗ್ಗೆ ದಿವ್ಯೌಷಧ.

ಬಾಟ್ಲಿಗೆ ರೂಪಾಯಿ 25/, ½ ಬಾಟ್ಲಿಗೆ ರೂಪಾಯಿ 12-8-0, ¼ ಬಾಟ್ಲಿಗೆ ರೂಪಾಯಿ 6-4-0

ಕುಷ್ಠ ರೋಗಕ್ಕೆ ಶೀಸೆಯೊಂದರ ರೂಪಾಯಿ 3/-.

ಎಸ್. ಪಿ ಫಾರ್ಮಸ್ಯೂಟಿಕಲ್ ವರ್ಕ್ಸ್, ಕಲಕತ್ತಾ, 9.

S. P. Pharmaceuticel Works,

Calcutta 9.

ಮಂಗಳೂರು

ಸಂಗೀತ ವಿದ್ವಾನ್ ಪಿಟೀಲು ಕೃಷ್ಣರಾಯರು-ಇದೇ ತಾ 5ರಲ್ಲು ದೈವಾಧೀನರಾದರು. ಶ್ರೀಯುತರು ಉಡುಪಿ ತಾಲೂಕಿನ ಬಡಾನಿಡಿಯೂರು ಗ್ರಾಮದಲ್ಲಿ ಜನಿಸಿದರು. ಊರು ಪರವೂರುಗಳಲ್ಲಿ ಇವರ ಹೆಸರನ್ನು ಅರಿಯದವರು ತೀರ ವಿರಳ. ಇವರ ನಿಧನದಿಂದ ದ. ಕ. ಜಿಲ್ಲೆ ಹಾಗೂ ಕರ್ನಾಟಕವು ಸಂಗೀತ ರತ್ನವೊಂದನ್ನು ಕಳಕೊಂಡಂತಾಯಿತು. ಶ್ರೀಯುತರ ಆತ್ಮಕ್ಕೆ ಚಿರಶಾಂತಿಯೊದಗಲಿ.

ಮಹಾತ್ಮ ಗಾಂಧಿ ರಾಷ್ಟ್ರೀಯ ಸ್ಮಾರಕನಿಧಿಯು—ಮಂಗಳೂರು ನಗರ ಶಾಖೆಯು ರಚಿಸಲ್ಪಟ್ಟಿರುತ್ತದೆ. ಈ ನಿಧಿಗೆ ಸರ್ವರೂ ಕನಿಷ್ಠಪಕ್ಷ ಹತ್ತು ದಿವಸಗಳ ತಂತಮ್ಮ ಉತ್ಪತ್ತಿಯನ್ನು ಕೊಡುವರೆಂದು ಆಶಿಸಲಾಗಿದೆ. ಮಂಗಳೂರಿನ ಮಹಾಜನರು ಆದಷ್ಟುಬೇಗನೆ ಈ ನಿಧಿಗೆ ಧನ ಸಹಾಯವನ್ನು ಶ್ರೀ ಡಿ. ಮೋಹನರಾವ್, ಗೋಪಾಲಕೃಷ್ಣ ಟೆಂಪ್ಲ್ ರೋಡ್ ಇವರಲ್ಲಿಗೆ ಕಳುಹಿಸಿಕೊಟ್ಟು ನಿಧಿ ಸಂಗ್ರಹದ ಕಾರ್ಯವನು ಆದಷ್ಟು ತ್ವರಿತದಲ್ಲೇ ಪೂರೈಸಿಕೊಡಬೇಕಾಗಿ ವಿನಂತಿ. ಹಣವನ್ನು ಪಾವತಿಮಾಡಿದ್ದಕ್ಕೆ ಅಧಿಕೃತ ರಶೀದಿಗಳು ಕೊಡಲ್ಪಡುವವು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪೆಟ್ರೋಲಿನ ಪೀಪೆಗಳು-ಕುಂಬಳೆಯ ಸಮೀಪದ ಮೊಗ್ರಾಲ್ ಗ್ರಾಮಗಳ ಸಮುದ್ರ ದಂಡೆಯಲ್ಲಿ ತೆರೆಗೆ ತೇಲಿಬಂದವು ಸಿಕ್ಕಿವೆ. ಅಧಿಕಾರಿ ವರ್ಗವು ಅದರ ಶೋಧನೆಯಲ್ಲಿದೆ.

ಶ್ರೀ ಮುಳಿಯ ತಿಮ್ಮಪ್ಪಯ್ಯನವರಿಗೆ ಸತ್ಕಾರ-ಒಮ್ಮೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವೇರಿದ್ದ ಕನ್ನಡನಾಡಿನ ಕವಿ ಹಾಗೂ ಪಂಡಿತರಾದ ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರು ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನ ಕನ್ನಡ ಪ್ರಧಾನಾಧ್ಯಾಪಕಸ್ಥಾನದಿಂದ ಇದೇ ಜೂನ್ ತಿಂಗಳಿಂದ ನಿವೃತ್ತರಾದರು. ಅವರನ್ನು ಸತ್ಕರಿಸುವ ವಿದಾಯ ಸಮಾರಂಭವು ದಕ್ಷಿಣ ಕನ್ನಡ ಪಂಡಿತಸಂಘದ ನೇತೃತ್ವದಲ್ಲಿ ಆಯುರ್ವೇದ ಭೂಷಣ ಶ್ರೀ ಎಮ್. ವಿ. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಮೇಲೆ ಕಾರ್ಯದರ್ಶಿ ಶ್ರೀ ಯಡುಕೇಳ ಶಂಭಟ್ಟರು ಪೂರ್ವ ಪೀಠಿಕಾ ರೂಪದಲ್ಲಿ ಕೆಲವು ಮಾತುಗಳನ್ನಾಡಿದರು. ಶ್ರೀಗಳಾದ ಕೆ. ಆರ್, ಆಚಾರ್ ಎಮ್ ರಾಮಪ್ಪ, ಬಿ. ವಿ. ರಮಣ, ನಂಜುಂಡಸ್ವಾಮಿ, ಎಚ್ ಭೀಮರಾವ್, ಮೊದಲಾದವರು ಸನ್ಮಾನ್ಯ ಅತಿಥಿಯ ಪಾಂಡಿತ್ಯವನ್ನು ಪ್ರಶಂಸಿಸಿ ಭಾಷಣವಿತ್ತರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 122/1948

ವಾದಿ—ಬಿಜೀವರ ವೈ. ಶೇಷಪ್ಪಸೆಟ್ಟಿ

ಪ್ರತಿವಾದಿ—ನೆಂಕು ಪೆಂಗನ್ಸು, ಬಿಲ್ಲನಾಗಿ ಪೆಂಗ್ಸಿನ ಮಗಳು, ಕುಂದಾಪುರ ತಾಲೂಕು ಹೆಮ್ಮಾಡಿ ಗ್ರಾಮದ ಕಳಿಸಕಟ್ಟೆ, ಒತ್ತಲ್ಲಿರುವವಳು.

ವಾದಿಯು ಪ್ರತಿವಾದಿಳ ಮೇಲೆ ಕಾಲಗೇಣಿ ಗೇಣಿ ಬಾಕಿಬಗ್ಗೆ ಸದ್ರಿದಾವಾ ಮಾಡಿರುವದ್ರಿಂದ ಆ ಕುರಿತು ನಿಮ್ಮದೇನಾದ್ರೂ ಉಜಾಹರಣೆಇದ್ದಲ್ಲಿ ತಾ. 21-6-1948ನೇ ದಿವಸ ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. Raghunath Shenai,

Pleader for Plaintiff

Coondapoor 1-6-1948

ದಕ್ಷಿಣ ಕನ್ನಡ

ಕುಂದಾಪುರ—ವೈದ್ಯ ಶ್ರೀ ಕೆ. ವಿ. ಕೆ. ನಂಬಿಯಾರರ ಅಧ್ಯಕ್ಷತೆಯಲ್ಲಿ ತಾ 9-6-48 ರಲ್ಲಿ ಆಯುರ್ವೇದ ವೈದ್ಯರ ಸಭೆಜರಗಿ ಈ ಕೆಳಗಿನ ನಿರ್ಣಯಗಳಾದವು.

ತಾಲೂಕಿನ ಬೇರೆ ಬೇರೆ ಭಾಗಗಳಲ್ಲಿರುವ ಆಯುರ್ವೇದ ವೈದ್ಯರು ಸಂಘಟಿತರಾಗಿ ದುಡಿದು ಆಯುರ್ವೇದದ ಅಭಿವೃದ್ಧಿ ಹಾಗೂ ಅದರ ಪ್ರಚಾರಕ್ಕೆ ಪ್ರಯತ್ನಿಸಬೇಕು

ಮತ್ತು ಅದಕ್ಕಾಗಿ ಈ ತಾಲೂಕಿನಲ್ಲಿರುವ ಎಲ್ಲಾ ಆಯುರ್ವೇದ ವೈದ್ಯರ ಸಮ್ಮೇಳನವನ್ನು ಇದೇ ತಾ 20-6-48 ನೇ ಆದಿತ್ಯವಾರ ಅ.ಪ. ಘಂ. 4ಕ್ಕೆ ಬಸರೂರು ಹಿಂದೂ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸುವದಾಗಿ ನಿರ್ಣಯಿಸಲ್ಪಾಯಿತು. ಆ ಬಗ್ಗೆ ಸ್ವಾಗತಸಮಿತಿಯೊಂದು ರಚಿಸಲ್ಪಟ್ಟಿತು.

ಮಣಿನಾಲ್ಕೂರು ಬೋರ್ಡು ಎಲಿಮೆಂಟರೀ ಶಾಲೆಯ—ಪೆತ್ತವರ ಸಭೆಯು ತಾ. 3-6-48ರಲ್ಲಿ ಶ್ರೀ. ಜಿ. ಪಿ. ಪೂವಣಿಯವರ ಅಧ್ಯಕ್ಷತೆಯಲ್ಲಿ ಜರಗಿತು

ಕಾರ್ಕಳ—ಇಲ್ಲಿಯ ಹ್ಯಾಸ್ಕೂಲಿನಿಂದ ಕಳದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ 71 ವಿದ್ಯಾರ್ಥಿಗಳಲ್ಲಿ 50 ಮಂದಿ ಪಾಸಾಗಿರುತ್ತಾರೆ. ಜಿಲ್ಲೆಯ ಬೋರ್ಡು ಹ್ಯಾಸ್ಕೂಲುಗಳಿಂದ ಕಳುಹಲ್ಪಟ್ಟು ಪಾಸಾದವರ ಸಂಖ್ಯೆಯಲ್ಲಿ ಪ್ರಥಮಸ್ಥಾನವು ಕಾರ್ಕಳ ಹ್ಯಾಸ್ಕೂಲಿಗೆ ದೊರೆತಿದೆ ಎಂದು ತಿಳಿದು ಬರುತ್ತದೆ.

ಶ್ರೀ ರಜಕ ಸಂಘ, ಮುಂಬಾಯಿ

ರಜಕ ಜಾತಿಯ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿದ್ಯಾರ್ಥಿ ವೇತನವನ್ನು ಬಯಸಿ ಅರ್ಜಿಗಳನ್ನು ಕಳುಹಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಶೀಲಿಸಿ ಒಂದನೇ ಕ್ಲಾಸಿನಿಂದ ಮೆಟ್ರಿಕ್ಯುಲೇಶನಿನ ವರೇಗೆ ವಿದ್ಯಾರ್ಥಿ ವೇತನವನ್ನು ಕೊಡಲಾಗುವುದು. ಅರ್ಜಿಗಳನ್ನು ತಾ 31-7-1948ರ ಮೊದಲು ಕಳುಹಿಸಿಕೊಡಬೇಕಾಗಿ ವಿನಂತಿ.

ಎಲ್ಲ ತರದ

ಮುದ್ರಣ ಕೆಲಸಗಳಿಗೆ

ನವಯುಗ ಪ್ರೆಸ್,

ಉಡುಪಿ.

ಮದುವೆ ಕಾಗದಗಳನ್ನು ಅಲ್ಪಾವಧಿಯಲ್ಲೇ ಮಾಡಿ ಕೊಡಲಾಗುವುದು.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 372/43 R. E. P. 465/46
R. E. A. 80/48

ಅರ್ಜಿದಾರ— ಆನಂದ ಸೆಟ್ಟಿ.

ಎದ್ರಿರು. 1 ಅನಂತಸೆಟ್ಟಿ, ಮುತ್ತಕ್ಕ ಸೆಟ್ಟಿರ ಮಗ, 2. ಗಿರಿಯಮ್ಮ ಸೆಟ್ಟಿ, ಮುತ್ತಕ್ಕ ಸೆಟ್ಟಿ ಮಗಳು,6 ಮಿಣಕ್ಕ ಸೆಟ್ಟಿ, 8. ಸುಬ್ಬಣ್ಣ ಸೆಟ್ಟಿ-2ನೇ ಎದ್ರಿಳ ಮಕ್ಕಳು, ಅನಗಳ್ಳಿ ಗ್ರಾಮ.

ಸದ್ರಿ ಎದ್ರಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ.

ಸದ್ರಿ ವ್ಯವಹರಣೆಯ ಷ್ಯೆಡ್ಯುಲ್ 6, 7, 8ನೆ ನಾಡಿಗೆ ಬರತಕ್ಕ ಹಣವನ್ನು ವಸೂಲು ಮಾಡುವ ಹಕ್ಕನ್ನು ಅರ್ಜಿದಾರನು ತಾ. 27-11-47ರಲ್ಲು ಟ್ರಾನ್ಸ್ಫರ್ ಹೊಂದಿ, ಸದ್ರಿ ಟ್ರಾನ್ಸ್ಫರ್ ರುಜುವಾತಿನ ಬಗ್ಗೆ ವಾಕ್ಲು ಮಾಡಿದ ಮೇಲಿನ ಅರ್ಜಿ ತಾ 25-6-48ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನ್ನಿಗೆ ಯಿಡೋಣಾಗಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

B. S. Shetty
Vakil for Petitioner

Coondapoor, Date 9-6-48

'ಕೇಶ ಕಲಾ' ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಚಂದ್ರಿಕಾ

ಹಲ್ಲಿನ ಕೊಳೆಯನ್ನೂ ಕ್ರಿಮಿಯನ್ನೂ ಹೋಗಲಾಡಿಸಿ ರುಚಿಪಡಿಸುವ ಹಲ್ಲು ಪುಡಿ

ಒಂದು ತೊಲೆ ಕಟ್ಟು 1ರ 0 1 0

ಏಜಂಟರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ದಿ ಮಹಾಜನ ಸಿ ಎಂಡ್ ಕಿ ಲಿಮಿಟೆಡ್,

ಕಾಸರಗೋಡು, ದ. ಇಂಡಿಯ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 363/46 R. E. P. 76/1948

ಅರ್ಜಿದಾರ—ವಾಸುದೇವ ಕಲ್ಕೂರ.

ಎದ್ರಿ—ಅಂತಯ್ಯ ಹೆಗ್ಡೆ.

ಉಡ್ಪಿತಾಲ್ಲೂ ಪನೆಹಳ್ಳಿಗ್ರಾಮದಲ್ಲಿರುವ ದುಕ್ಕಿಣ ಹೆಗ್ಡೆಡ್ತಿ ಮಗ ಅಂತಯ್ಯ ಹೆಗ್ಡೆಗೆ ಈ ಮೂಲಕ ತಿಳಿಯಪಡಿಸುವುದೇನಂದರೆ.

ಸದ್ರಿ ಅಮಲ್ದಾರಿಯಲ್ಲಿ ಪ್ರತಿವಾದಿಯ ಪಕ್ಕನ ಸ್ಥಿರಾಸ್ತಿ ಯೇಲಂಮಾಡುವ ಬಗ್ಗೆ ದಾಖ್ಲುಮಾಡಿದ ಯೇಲಂ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸುವ ಬಗ್ಗೆ ತಾ25 6 48ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುಂತು ಆಕ್ಷೇಪಣೆಗಳಿದ್ದರೆ ಸದ್ರಿ ತಾರೀಕಿಗೆ ಮೇಲಿನ ಕೋರ್ಟುಮುಂದೆ ಹಾಜ್ರಾಗಿ ಜ್ಯಾಹೀರುಪಡಿಸಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

N. S. Parameshwariah
Advocate for Petr.

Date 11-6-48. Coondapoor

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೋ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು

ಹೆಡ್ ಆಫೀಸು: ಶ್ರೀ ದುರ್ಗಾ ಭವನ, ಮೂಲ್ಕಿ.

ಯಂ. ಆರ್. ಭಟ್, (ಆರ್ಟಿಸ್ಟ್) ವ್ಯವಸ್ಥಾಪಕ.

NEO ROYAL CAFE,
Boarding & Lodging,
Santhekatte, UDIPI.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾರೆ ಸಂಗ್ತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೋ, ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ... ಜಿ. ... ನೈಲೆ ವರ್ಕ್ ಶೋಪ್ ಎದುರುಗಡೆ, ಪರೇಲ್,(3)ಜನರಲ್ ಸ್ಟೋರ್ಸ್, ಕೆಮಿಸ್ಟ್, ... ಜಿ. ಪಿ. ಮಾಟುಂಗಾ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಇದರ ಸೇವನೆಯಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಬಿಲ್ಲಿನ ಬಾಟ್ಲಿಗಳು ಹೆಚ್ಚು ಕಡಿಮೆ ಆದಿನವಸಗಳಿಗೆ ಬರುವುದು. ಅಂದರೆ ಕೇವಲ ೪ ರೂಪಾಯಿಗಳಲ್ಲಿ ಒಂದು ಬಾಣಂತಿತನಕ್ಕೆ ಸಾಕಾಗುವದು ವಿಶೇಷ ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

ಸ್ಟಾಕಿಸ್ಟರು—ಡಾ| ಪಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ನಂ. 1ನೆ ಕೇಡಿ ಕಾಸಿಮ್ ರಾಜ್ವಿ

|೧ನೇ ಪುಟದಿಂದ|

ಒಡೆದು ತೋರುತ್ತಿತ್ತು. "ಇಲ್ಲಿ ಬ್ರಿಟಿಷರ ಅಥವಾ ಬನಿಯಾ ಆಳುವುದು ನಮಗೆ ಬೇಕಾಗಿಲ್ಲ" ಎನ್ನುವಾಗ ರಜ್ವಿಯ ಕಣ್ಣು ಕಾಂತಿ ಮತ್ತಷ್ಟು ಪ್ರಕಾಶಮಾನವಾಯಿತು. ಆಮೇಲೆ ಅವನ ಶುವಿ ಹೃದಯದಿಂದ ಬಿಸಿದ್ರಾವಕ ಬಿಂದುಗಳು ಒಂದೇ ಸಮನೆ ಚಿಮ್ಮಿದವು. ಭಾರತದ ಕಾಂಗ್ರೆಸ್ ನಾಯಕರು ತಮ್ಮ ಸ್ವಂತ ಕರ್ತವ್ಯದ ಕಡೆಗೇನೇ ಮನಸ್ಸಿಡಬೇಕಾದ ಕಾಲವಿದು ಎನ್ನುತ್ತಾ "ಅಲ್ಲಿ ಆಡಳಿತೆ ಎಲ್ಲಿದೆ? ತಮ್ಮ ವಸಾಹತಿನ ಒಂದೇ ಒಂದು ಸಮಸ್ಯೆಯನ್ನಾದರೂ ತೀರ್ಮಾನಿಸಿಕೊಳ್ಳಲು ಅವರಿಂದಾಗಿದೆಯೇ? ಆಹಾರ ಮತ್ತು ಅರಿವೇ ಸಂಬಂಧದ ಆಗಲಿಬಿಲಿಗಳನ್ನು ನೋಡಿರಿ" ಎಂದ ರಜ್ವಿ ಅಣಕಾಟದ ಮುಖಮುದ್ರೆಯಿಂದ. ನಮ್ಮ ಸಂಭಾಷಣೆಯು ಭಾರತದಿಂದ ಹೈದರಾಬಾದಿನೊಳಕ್ಕೆ ಬಂದಾಗ, ಹೈದರಾಬಾದು ಭಾರತ ಕೇಂದ್ರದೊಂದಿಗೆ ಜೋಡಣೆಹೊಂದುವುದನ್ನು ತಾನು ಮತ್ತು ತನ್ನ ಅನುಯಾಯಿಗಳು ಮಾತ್ರವಲ್ಲ, ಹೈದರಾಬಾದಿನ ಇಡೀ ಜನತೆಯೇ ಪ್ರತಿಭಟಿಸಲಿದೆ, ಎಂದುಬಿಟ್ಟ ರಜ್ವಿ. "ಒಂದೊಮ್ಮೆಗೆ ಬಲುಮೆಯಿಂದ ಅಂತಹ ಜೋಡಣೆ ಬಿದ್ದಲ್ಲಿ ನಾವದನ್ನಿದಿರಿಸಿ ನಮ್ಮ ಸರ್ವಶಕ್ತಿಯಿಂದ ಹೋರಾಡುವೆವು" ಎಂದು ಒತ್ತಿ ಹೇಳಿದ. "ನಾನು ಸಾಯಲಿಚ್ಛಿಸುತ್ತೇನೆ— ಪ್ರತಿಯೊಬ್ಬ ರಝಾಕಾರನೂ ಹಾಗೆಯೇ. ನಾವು ಅಧಿಕಾರಾಶ್ರಯಿಸಿಕೊಳ್ಳಲು ಹೊರಟಿಲ್ಲ; ಆದರೆ ಸಂಸ್ಥಾನದ ಸಂಪೂರ್ಣತೆಯನ್ನು ಉಳಿಸಿಕೊಡುವದಕ್ಕೂ ಮುಸ್ಲಿಮರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವುದಕ್ಕೂ ನಡುಬಿಗಿದಿದ್ದೇವೆ. ಶತಸಂಖ್ಯೆಯ ಹಿಂದುಗಳು ಮತ್ತು ದಳಿತವರ್ಗದವರು ನನ್ನ ಸಂಸ್ಥೆಯನ್ನು ಸೇರಿಕೊಂಡಿದ್ದಾರೆ. ಇತ್ತೀಚೆಗೆ ಸಂಸ್ಥಾನದೊಳಗೆ ಸಂಚರಿಸಿದಾಗ ನಾನು ಹಿಂದುಗಳಿಂದ ಕೃಷ್ಣನಂತೆ ಪೂಜಿಸಲ್ಪಟ್ಟಿದ್ದೇನೆ." ಎಂದನಾತ. ರಜ್ವಿ ಏರುತ್ತಾ ಹೋದಂತೆ, ಅವನನ್ನು ತಗ್ಗಿಸಿ ಶಾಂತತೆಗೆ ತರುವುದಕ್ಕಾಗಿ ನಾನು ಸಂಭಾಷಣೆಯ ನಡುವೆ 'ಪಾಕಿಸ್ತಾನ'ವನ್ನು ತುರುಕಿಸಿದೆ. "ಹೌದು. ನಾವು ಪಾಕಿಸ್ತಾನದ ಕುರಿತು ಗಾಢ ಆಸಕ್ತಿವಹಿಸಿದ್ದೇವೆ. ಆದರೆ ಹೈದರಾಬಾದು ಪಾಕಿಸ್ತಾನದೊಂದಿಗೆ ಜೋಡಣೆಹೊಂದುವ ಪ್ರಶ್ನೆಯೇ ಇಲ್ಲ" ಎಂದ ಸಯ್ಯದ್ ಕಾಸಿಮ್ ರಜ್ವಿ. "ನಮ್ಮನ್ನು ನಾವು ಹೇಗೆ ನೋಡಿಕೊಳ್ಳಬಲ್ಲೆವೋ ಹಾಗೆಯೇ ಪಾಕಿಸ್ತಾನವು ತನ್ನ ಜಾಗ್ರತೆಯನ್ನು ತಾನೇ ನೋಡಿಕೊಳ್ಳಬಲ್ಲುದು. ಆದರೆ ಮುಸ್ಲಿಂಹಿತಕ್ಕೆ ಎಲ್ಲೆಲ್ಲಿ ಧಕ್ಕೆ ಬೀಳುತ್ತದೋ, ಅವೆಲ್ಲಾ ಕಡೆಗಳಿಗೂ ನಮ್ಮ ಸಹಾನುಭೂತಿ ಹೋಗಿಯೇ ಹೋಗುತ್ತದೆ. ನಿಜಕ್ಕೂ ಈ ತತ್ವವು ಪೆಲೆಸ್ತೈನಿಗೂ ಅನ್ವಯಿಸುತ್ತದೆ" ಎಂದಾತ ಹೃದಯ ಬಿಚ್ಚಿದ.

"ಕಾಯಿದೇ ಅಝಮ್ ಜಿನ್ನರ ಕುರಿತು ನಿಮ್ಮ ಅಭಿಪ್ರಾಯವೇನು?" ಎಂದು ನಾನು ಕೇಳಿದೆ. ಅವನ ಉತ್ತರ ಬಂತು. "ಭಾರತದ ಮುಸ್ಲಿಮರ ನಾಯಕನೆಂಬುದರಿಂದ ನನಗವರ ಮೇಲೆ ಗೌರವವಿದೆ." ತನ್ನಿದಿರು ಗೋಡೆಯ ಮೇಲಿದ್ದ ಜಿನ್ನರ ದೊಡ್ಡ ಭಾವಚಿತ್ರದ ಕಡೆಗೊಮ್ಮೆ ಅರ್ಥಗರ್ಭಿತ ನೋಟಬೀರಿ ಮುಂದುವರಿಸಿದ. "ಜಿನ್ನರ ಘಟನಾತ್ಮಕ ಹಾಗೂ ಕಾಯಿದೇ ಕಾನೂನು ಬುದ್ಧಿಮತ್ತೆಯನ್ನು ನಾನು ಶ್ಲಾಘಿಸುತ್ತೇನೆ. ನನಗೆಂದಾದರೂ ಸಂದೇಹಮೂಡಿದಾಗ ಸಲಹೆಗಾಗಿ ನಾನು ಅವರನ್ನಾಶ್ರಯಿಸುತ್ತೇನೆ. ನನಗೆ ಬೇಕಾದ ಆಲೋಚನೆ ಕೊಡಲು ಅವರೆಂದೂ ಶಂಕಿಸಿದುದಿಲ್ಲ"

ಲಖ್ನೋ ಮತ್ತು ಅಲಿಘರ್ ವಿಶ್ವವಿದ್ಯಾಲಯಗಳ ನಿರ್ಮಾಣವಾಗಿರುವ ತಾನು ಕಾನೂನಿನ ಕಡೆಗೆ ಬೆನ್ನುಹಾಕಿ ರಾಜಕೀಯದಲ್ಲಿ ಧುಮುಕಿದ ಕತೆಗಳನ್ನೆಲ್ಲಾ ರಜ್ವಿ ನನಗೆ ಹೇಳಿದ.

ಈ ತೆಳ್ಳಗಿನ, ಬಡಕಲು ಪ್ರಕೃತಿಯ ಓಜಸ್ವೀ ಮನುಷ್ಯ ಹೈದರಾಬಾದ್ ಜನತೆಯ ಅದೃಷ್ಟವನ್ನು ತನ್ನ ಕೈಯಲ್ಲಿಟ್ಟುಕೊಂಡಿದ್ದಾನೆ.

ತರ್ಕ ವಿತರ್ಕ ಹಾಗೂ ದ್ವೇಷ ಕಠೋರತೆಗಳನ್ನು ನಿರ್ಮಿಸಿದ್ದ ಅಂದಿನ ಆ ಯುದ್ಧಪ್ರೇರಕ ಭಾಷಣವನ್ನು ತಾನು ತನ್ನ ಅನುಯಾಯಿಗಳ ಪ್ರಚಂಡ ಸಭೆಯಲ್ಲಿ ಕೊಟ್ಟದ್ದು ಹೌದೆಂದು ರಜ್ವಿ ಒಪ್ಪಿದ. "ಪ್ರತಿ ಸರಕಾರ ನಿರ್ಮಾಣದಂತಹ ಹಂಚಿಕೆಯಲ್ಲಿ ನೀವಿರುವುದು ಹೌದೆ?" ಎಂಬ ಉದ್ರೇಕ ಬರಿಸುವ ಸವಾಲನ್ನು ನಾನು ಛಡಾಯಿಸಿದಾಗ ರಜ್ವಿಯೆಂದ: "ವ್ಯಕ್ತಿಶಃ ನನಗೆ ನಿಜಾಮರೊಡನಿರುವ ಸಂಬಂಧವು ಅತ್ಯಂತ ಹಾರ್ದಿಕವಾದುದು. ಅವರನ್ನು ಅಧಿಕಾರದಲ್ಲಿಡಲು ನಾವು ಸಾಧ್ಯವಿದ್ದುದನ್ನೆಲ್ಲಾ ಮಾಡಲಿದ್ದೇವೆ".

ಚರಿತ್ರೆಯಲ್ಲಿ ರಜ್ವಿಯ ಸ್ಥಾನವಾವುದು ಎಂಬುದನ್ನು ಅಳೆಯಲಾಗದಷ್ಟು ಅತಿ ಸಮೀಪವರ್ತಿಗಳಾಗಿ ಈಗ ನಾವಿದ್ದೇವೆ. ಈಗ ಪೂರ್ಣ ಸಂಭವನೀಯವಾಗಿ ಕಾಣುತ್ತಿರುವಂತೆ ಹೈದರಾಬಾದ್ ಪ್ರದರ್ಶನಾಂಕ ಮುಗಿದುಬಿದ್ದಲ್ಲಿ, ಹೈದರಾಬಾದನ್ನೊಂದು ಶಾಂತಸ್ಥಿತಿಗೆ ತರುವ ಮೊದಲು ಈ ಮತಭ್ರಾಂತ ಮುಂಡಾಗ್ರಣಿಯು ಸಹಸ್ರಾರು ಜನರನ್ನು ಅಗ್ನಿಕುಂಡಕ್ಕೆಳಸಲಿದ್ದಾನೆ; ರಕ್ತದ ಭಯಂಕರ ಪ್ರವಾಹವನ್ನು ಹರಿಸಲಿದ್ದಾನೆ."

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅಪಾರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ರೇಶನ್ ಕಾರ್ಡುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ರುಚಿಕರವೂ ಮಧುರವೂ ಆದ

ಕೃಷ್ಣಾ ಶುಗರ್ ಬರ್ಫಿ

ಹನ್ನೆರಡು ತುಂಡುಗಳ ಪೆಕೆಟುಗಳಲ್ಲಿ ದೊರೆವುದು

ಪುಷ್ಟಿಕರವಾದ, ಗೇರುಬೀಜ ಮೊದಲಾದುವನ್ನು ಉಪಯೋಗಿಸಿ ತಯಾರಿಸಿದ ಪ್ರತಿಯೊಬ್ಬನೂ ಮೆಚ್ಚುವ ಒಂದು ಉತ್ಕೃಷ್ಟ ತಿಂಡಿ

ಕೃಷ್ಣಾ ಕೆಶ್ಯು ಕರ್ನೆಲ್ಸ್ ಅಥವಾ ಸಕ್ಕರೆ ಗೇರುಬೀಜ

ಕೇಸರಿ ಮೊದಲಾದ ಪರಿಮಳಯುಕ್ತ ವಸ್ತುಗಳನ್ನು ಉಪಯೋಗಿಸಿ, ಸಕ್ಕರೆಯ ಪಾಕದಲ್ಲಿ ತಯಾರಿಸಿದ ಗೇರುಬೀಜದ ಮಿಠಾಯಿ.

ಅರ್ಧ ಮತ್ತು ಕಾಲು ರಾತ್ತಿನ ಪೆಕೆಟುಗಳಲ್ಲಿ ದೊರೆವುವು.

ಶ್ರೀ ಕೃಷ್ಣಾ ಟೋಫಿ ವರ್ಕ್ಸ್,
ರಥಬೀದಿ, ಮಂಗಳೂರು

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2½% per annum.
For 6 months at 3½% per annum.

For further particulars you may apply or call at any of our following Offices

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನಾಕರರ ವರ್ಗ!

ನುರಿತ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding
ROYAL MAHAL,
UDIPI, S. Kanara.



ಎಲ್ಲ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

Edited, Printed & Published by K. H. Shetty at the Navayuga Press Udipi, S. India.

ಎರಡಾಣೆ

Regd. No. M. 3618

24-6-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-1-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೪೨

NAVAYUGA WEEKLY, UDIPI.
FOUNDER: Hon'ble Mr. A. B. SHETTY, Health Minister, Govt. of Madras.

Vol. 28
No. 42

ಹೈದರಾಬಾದ್ ಚರ್ಚೆಯ ಇಕ್ಕಡೆಯ ಪ್ರಮುಖರು

ಹೈದರಾಬಾದ್ ಮಾತುಕತೆ ಮುರಿದು ಹೋಯಿತು; ಇನ್ನು ದಿಲ್ಲಿ ಹೈದರಾಬಾದುಗಳ ನಡುವೆ ಓಡಾಟ, ಉದ್ವಿಗ್ನ ಚರ್ಚೆಗಳಿಲ್ಲ. 'ಕೂಡಲೇ ಯುದ್ಧವಿಲ್ಲ; ಸದ್ಯಕ್ಕೆ ಸರಹದ್ದು ನುಗ್ಗುವ ಪುಂಡರನ್ನೋಡಿಸಿಕೊಂಡು ಹೋಗಿ ನಿರ್ನಾಮ ಮತ್ತು ಹೈದರಾಬಾದಿನ ಮೇಲೆ ಆರ್ಥಿಕ ದಿಗ್ಬಂಧನ!' ಹೈದರಾಬಾದಿನ ಕುರಿತು ಮತಭ್ರಾಂತ ಹಿಂದೂ ಮಹಾಸಭಾವಾದಿ, ಅಥವಾ ಕಟ್ಟುಗ್ರ ಸಮತಾವಾದಿಯೋರ್ವ ಬಯಸುವಂತಹ ಹೋರಾಟ ಇನ್ನು ಯಾವ ಮುಹೂರ್ತದಲ್ಲೂ ಸ್ಫೋಟಗೊಳ್ಳಬಹುದು!

ಇನ್ನೇನೇ ಆಗಲಿ—ಶಾಂತಿಪ್ರಯತ್ನ ಮಾಡಿ, ಅನ್ಯಾದೃಶ ಸಹನೆಯನ್ನು ಪ್ರದರ್ಶಿಸಿ, ಕ್ಷಮಾದಾರ್ಯಗಳ ಪರಮಾವಧಿಯನ್ನು ಮುಟ್ಟಿ ಮುಗಿಸಿಕೊಂಡುದರಿಂದ, ಇನ್ನೆಂತಹ ಸಂದರ್ಭವೊದಗಿದರೂ 'ಶಾಂತಿಗಾಗಿ ಇದೊಂದನ್ನು ಪ್ರಯತ್ನಿಸದೆ ಪ್ರಮಾದ ಮಾಡಿದೆವಲ್ಲಾ' ಎಂಬ ಪಶ್ಚಾತ್ತಾಪ ಪಡದಂತಾಯಿತು, ಕೊನೆಯಬಾರಿ ಸಂಧಾನದ ಅಂಶವಾವುದನ್ನೂ ಬಾಕಿ ಬಿಡದೆ ಪ್ರಯತ್ನನಡೆಯಿತು; ನಿಷ್ಫಲವಾಯಿತು! ಈ ಸಂಧಾನ ಪ್ರಯತ್ನದಲ್ಲಿ ಕ್ಷಮೆ, ದಮೆ, ಸಹನೆ, ಅಸಾಧಾರಣ ಬುದ್ಧಿಮತ್ತೆಯನ್ನು ಪ್ರದರ್ಶಿಸಿದ ಮುಖಂಡರನ್ನು ಶ್ಲಾಘಿಸಬೇಕು.

ಲೋರ್ಡ್ ಮೌಂಟ್‌ಬೇಟನ್

ಇದೇ ತಾ 21ರಲ್ಲಿ ಭಾರತದ ಗವರ್ನರ್ ಜನರಲ್ ಹುದ್ದೆಯಿಂದ ನಿವೃತ್ತರಾಗಿರುವ ಲೋರ್ಡ್ ಮೌಂಟ್‌ಬೇಟನರಿಗೆ ಮಿಕ್ಕೆಲ್ಲಾ ಸಂಸ್ಥಾನಗಳ ಸಂಬಂಧ ಜೋಡಿಸಿದಂತೆಯೇ ಹೈದರಾಬಾದ್ ಪ್ರಶ್ನೆಯನ್ನೂ ತೀರ್ಮಾನಿಸಿಯೇ ಬಂದೆನೆಂಬ ಹೆಗ್ಗಳಿಕೆಯನ್ನು ಇಂಗ್ಲಾಂಡಿಗೆ ಮರಳುವಾಗ ಕಟ್ಟಿಕೊಂಡೊಯ್ಯಬೇಕೆಂಬ ಆಶೆ ಬಹಳವಿತ್ತು; ಈ ಆಶೆಗನುಗುಣವಾಗಿ ಅವರು ಅಸಾಮಾನ್ಯ ಪ್ರಯತ್ನವನ್ನೂ ಮಾಡಿದರು. ಕಳೆದಬಾರಿ ರಿಯಾಯತಿಯುಳ್ಳ ಒಂದು ವರುಷಾವಧಿಯ ಒಪ್ಪಂದವನ್ನು ಹೈದರಾಬಾದಿಗೆ ದಾನ ಮಾಡಿಸಿದವರು ಲೋರ್ಡ್ ಮೌಂಟ್ ಬೇಟನರೇ. ಈಬಾರಿಯೂ ವಿಶೇಷ ರಿಯಾಯತಿಯ ಕೊನೆಯ ಶರ್ತುಗಳನ್ನು ಕೊನೆಯ ಮುಹೂರ್ತದಲ್ಲಿ ಹೈದರಾಬಾದಿನ ಮುಂದಿಡಿಸಿದವರೂ ಇವರೇ. ಆದಕ್ಕಾಗಿ ಸರ್ದಾರ್ ವಲ್ಲಭಭಾಯಿಗಳಿದ್ದಲ್ಲಿಗೆ ಸ್ವತಃ ಹೋಗಿದ್ದರು. ನಿಜಾಮರ ಹೃದಯದಲ್ಲಿ ಬ್ರಿಟಿಷರ ಮೇಲೆ ಹಾಗೂ ಬ್ರಿಟಿಷ್ ರಾಜಮನೆತನದ ಮೇಲಿರುವ ಗೌರವವನ್ನು ಸ್ಪರ್ಶಿಸಿ, ಪುಟಗೊಟ್ಟಾದರೂ ತನ್ನೀ ಕೆಲಸ ಸಾಧಿಸಿಕೊಳ್ಳಲು ನೋಡಿದರು. ಆದರೆ ಎಲ್ಲವೂ ನಿರರ್ಥಕವಾಯಿತು. ಲೋರ್ಡ್ ಮೌಂಟ್‌ಬೇಟನರು ತನ್ನ ಗವರ್ನರ್ ಜನರಲ್ ಹುದ್ದೆಯ ಅವಧಿಯಲ್ಲಿ ಪಡೆದ ಪ್ರಬಲ ಪರಾಭವವೆಂದರೆ ಇದೇ—ಅದೂ ಹೊರಡುವ ಮುಹೂರ್ತದಲ್ಲೇ. ಈ ಗವರ್ನರ್ ಜನರಲ್ ಬಂದೊಡನೆ ಮಾಡಬೇಕಾಗಿ ಬಂದಿದ್ದುದು ದೇಶದ ವಿಭಜನೆಯನ್ನು; ಹೋಗ... [illegible] ಬಂದುದೂ ಹೈದರಾಬಾದಿನ ಪ್ರತ್ಯೇಕತೆಯನ್ನೇ!

ಹೈದರಾಬಾದ್ ನಿಜಾಮ್

ದಿಲ್ಲಿ—ಹೈದರಾಬಾದುಗಳೊಳಗಿನ ಸಂಧಾನದ ಅಂಕವು ಸುಮಾರು ಒಂದು ವರುಷದ ಪೂರ್ವದಿಂದ ಮೊನ್ನೆಯವರೆಗೂ ನಡೆದುಬಂದಿತ್ತು. ಈನಡುವೆ. ವ್ಯಕ್ತಿಶಃ ನಿಜಾಮರ ಹೃದಯವೆಂತಹದೆಂಬುದು ಹೆಚ್ಚಿನವರಿಗೆ ತಿಳಿದಿರಲಿಲ್ಲ. ರಝಾಕಾರರ ಅಂಕೆಯೊಳಗೆ ಸಿಕ್ಕಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿದ್ದರೂ, ಆ ದುಸ್ಥಿತಿಯು ಅವರಪಾಲಿಗೆ ಅನಿವಾರ್ಯವಾಯಿತೋ, ಅವರ ಅಪೇಕ್ಷೆಯೇ ಹಾಗಿತ್ತೋ ಎಂಬ ಗುಟ್ಟು ತಿಳಿದುಬಂದಿರಲಿಲ್ಲ. ಈಬಾರಿ ಅದು ತಿಳಿಯಿತು. ಭಾರತಸರಕಾರವು ಕೊನೆಯಬಾರಿ ಮುಂದಿಟ್ಟ ಕನಿಷ್ಠ ಬೇಡಿಕೆಗಳಿಗೆ ಲಾಯಿಕ್ ಅಲಿ ನೇತೃತ್ವದ ಹೈದರಾಬಾದ್ ಸಮಿತಿಯು ದಿಲ್ಲಿಯಲ್ಲಿ ಒಪ್ಪಿಗೆ ಕೊಟ್ಟಿದ್ದರೂ ನಿಜಾಮರದನ್ನು ತಿರಸ್ಕರಿಸಿದರು; ಈ ಮೊದಲಿನ ಪ್ರತಿಯೊಂದು ಸಲವೂ ನಡೆದುದು ಹೀಗೆಯೇ: ದಿಲ್ಲಿಯಲ್ಲಿ ಭಾರತ–ಹೈದರಾಬಾದು ಪ್ರತಿನಿಧಿಗಳು ಸಂಧಾನ ಕರಾರು ಬರೆಯುವುದು, ನಿಜಾಮರದನ್ನು ತೊಡೆದುಹಾಕುವುದು, ಈ ಆಟವೇ! ಅವರು ರಜ್ವಿಯನ್ನು ನಂಬಿದಷ್ಟು ಬೇರಾರನ್ನೂ ನಂಬುವದಿಲ್ಲ; ರಝಾಕಾರರ ಮೇಲೆ ಭರವಸೆಯಿರುವಷ್ಟು ಬೇರಾವ ನೀತಿ ಅಥವಾ ಶಕ್ತಿಯ ಮೇಲೆ ನಿಜಾಮರಿಗೆ ನಂಬಿಕೆಯಿಲ್ಲ. ಬಹುಶಃ ಪೂರ್ವಪಶ್ಚಿಮ ಸಮುದ್ರಗಳ ಅಲೆಗಳು ತನ್ನ ಪಾದಕ್ಕೆ ಬಡಿಯುವ ರಜ್ವೀ ನಿರ್ಮಿತ ಭಾವನಾತೆರೆಗಳಲ್ಲಿ ಇವರೂ ತೇಲಾಡುತ್ತಿರಬೇಕು; ರಕ್ತದೋಕುಳಿಯನ್ನು ಮರೆತೇ ಬಿಟ್ಟಿರಬೇಕು!

ಪಂಡಿತ ನೆಹರು

ಹೈದರಾಬಾದ್ ಒಪ್ಪಂದ ಮುರಿತದ ವಾರ್ತೆಗಳನ್ನು ಇದೇ ತಾ 15ರಲ್ಲಿ ನವದಿಲ್ಲಿಯಲ್ಲಿ ಸವಿವರವಾಗಿ ವರ್ಣಿಸುವಾಗ, ಆ ಪರಾಭವವನ್ನು ಕಂಡೊಡನೆ ಕೆರಳುವ ವ್ಯಕ್ತಿಗೆ ಲೋಕದಲ್ಲೇ ಅಗ್ರಗಣ್ಯ ನಾಯಕನಾದ ಪಂಡಿತ ನೆಹರು ಪ್ರದರ್ಶಿಸಿದ್ದ ಆತ್ಮ ಸಂಯಮವು ನೆರೆದಿದ್ದ ಪತ್ರಿಕಾವಾಲರೆಲ್ಲರನ್ನೂ ದಂಗು ಬಡಿಸಿದ್ದಿತು. ಹೈದರಾಬಾದ್ ಮಾತುಕತೆ ಮುರಿದುಬಿದ್ದು, ಮುಂದಿನಸಂಭವಗಳ ಭೀಕರಚಿತ್ರ ದೃಷ್ಟಿಪಥದಲ್ಲಿ ಮೂಡಿದಾಗ ಪಂಡಿತಜೀ ಎಷ್ಟೊಂತಹೆಚ್ಚಾಗಿ ಮಹಾತ್ಮಾ ಗಾಂಧಿಯವರನ್ನು ನೆನಪುಮಾಡಿಕೊಂಡಿರಬೇಕು! ಸರ್ದಾರ್ ವಲ್ಲಭಭಾಯಿಗಳು ಪ್ರತ್ಯಕ್ಷ ಹಾಜರಿಲ್ಲದವೇಳೆ ಪಂಡಿತನೆಹರುಗಳಮೇಲೆ ಬಿದ್ದಿದ್ದ ಹೈದರಾಬಾದ್ ಚರ್ಚೆಯ ಹೊಣೆಗಾರಿಕೆ ದೊಡ್ಡದು; ಅನ್ಯಾಯವನ್ನು ಬುಡಸಮೇತ ಕಿತ್ತೊಗೆಯಲು ಆತುರಿಸುವ ತನ್ನ ಆತುರವನ್ನು ದಮನಿಸಿಕೊಂಡು ಪಂಡಿತಜೀ ಹೈದರಾಬಾದಿನ ಕುರಿತು ತಾಳ್ಮೆಯಿಂದ ಸೂಕ್ಷ್ಮವಾಗಿ ವ್ಯವಹರಿಸಿದ್ದ ರೀತಿಯು ನೆಹರೂ ವ್ಯಕ್ತಿತ್ವದ ಸರ್ವ ವ್ಯಾಪಕತೆಗೊಂದು ನಿದರ್ಶನ. "ಇದೇ ನಮ್ಮ ಕೊನೆಯ ಸೂಚನೆ. ಇನ್ನು ಮಾತುಕತೆಗಾಗಿ ನಾವಾರನ್ನೂ ಕಾಯುವಂತಿಲ್ಲ; ಇನ್ನೀ ಸಂಬಂಧವಾಗಿ ಏನು ಮಾಡಬೇಕೆಂದು ನಮಗೆ ತೋರುವುದೋ ಅದನ್ನು ಮಾಡುತ್ತಾ ಹೋಗುತ್ತೇವೆ. ನಮ್ಮೀ ಸೂಚನೆಗಳು ಅಂಗೀಕೃತವಾಗಲಿಲ್ಲವೆಂದು ನಾನಾವ ಚಿಂತೆಯನ್ನೂ ಕಟ್ಟಿಕೊಂಡಿಲ್ಲ; ಈ ಕುರಿತು ರವಷ್ಟೂ ಉದ್ರೇಕಗೊಂಡಿಲ್ಲ. ನಿಜಾಮರು ಯಾವಾಗಬೇಕಾದರೂ ಒಪ್ಪಿಕೊಳ್ಳಲಾಗುವಂತೆ 'ತೆರೆದ ಬಾಗಿಲ್' ಧೋರಣೆಯನ್ನನುಸರಿಸಿ ಈ ಸೂಚನೆಗಳನ್ನು ಮುಂಭಾಗದಲ್ಲೇ ಇಟ್ಟುಬಿಡುತ್ತೇವೆ——ಹಿಂದೆಗೆದುಕೊಳ್ಳುವದಿಲ್ಲ. ಇಂದಿನ ಸ್ಥಿತಿ ಬದಲಾವಣೆಗನುಗುಣವಾಗಿ ಭಾರತ ಸರಕಾರವು ಸ್ವಾಭಾವಿಕವಾಗಿ ದೃಢ ಹೆಜ್ಜೆಯನ್ನಿಡುತ್ತಾ ಹೋಗುವುದು. ಆರ್ಥಿಕ ದಿಗ್ಬಂಧನ–ಸರಹದ್ದುಗಳ ರಕ್ಷಣಾ ವ್ಯವಸ್ಥೆಯನ್ನು ಇನ್ನಷ್ಟು ಬಿಗುಗೊಳಿಸುವುದು–ಧಾಳಿಗಾರರನ್ನು ಹೈದರಾಬಾದ್ ಕ್ಷೇತ್ರದೊಳಗೂ ಬೆನ್ನಟ್ಟಿಕೊಂಡು ಹೋಗುವುದು, ಇವೆಲ್ಲಾ ಭಾರತ ಸರಕಾರದ ಹೆಜ್ಜೆಗಳು"–ಎಂದು ಅಕ್ಷರಶಃ ಫಲಿಸಲಿರುವ ತೂಕದ ಮಾತುಗಳನ್ನೇ ಪಂಡಿತಜೀ ನಿರ್ವಿಕಾರ ಬುದ್ಧಿಯಿಂದಾಡಿದ್ದಾರೆ.

ಮಿ. ಲಾಯಿಕ್ ಆಲಿ

ಭಾರತ ಪ್ರಧಾನಿ ಪಂಡಿತ ನೆಹರುಗಳಂತೆಯೇ ಹೈದರಾಬಾದ್ ಪ್ರಧಾನಿ ಮಿ. ಲಾಯಿಕ್ ಅಲಿಗಳ ಕೆಲಸವೂ ಗತ ಮಾತುಕತೆಗಳಲ್ಲಿ ದೊಡ್ಡದಿತ್ತು. ಜನ್ಮತಃ ವ್ಯಾಪಾರೀ ಬುದ್ಧಿಯ–ಚಿಕ್ಕಾಸು ಲೆಕ್ಕ

[ಆನೇ ಪುಟ ನೋಡಿರಿ]

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:–ಧಾರವಾಡ.

THE UNITED KARNATAK INSURANCE COMPANY, LIMITED.

★ ಲೋಕದ ಮತ್ತು ಪಾಕಿಸ್ತಾನದ ★ ಒಳರೋಗಗಳು

★

ಭಾರತ ರಾಜಕೀಯದಲ್ಲಿ ದೀರ್ಘಾವಧಿಯಿಂದಲೂ ಕಡಿಕೊಂಡು ಮುಂದುಗೇಳುತ್ತಾ ಇದ್ದ ಒಂದು ಪ್ರಶ್ನೆ ಕಳೆದ ವಾರದಲ್ಲಿ ಸೇರಿಕೆ-ಸ್ಥಿತಿ ಮತ್ತೆ ಆಂದೋಲನಗಳಿಗಾಸ್ಪದವಿತ್ತಿದ್ದ ಹೈದರಾಬಾದ್ ಮಾತುಕತೆ ಮುಕ್ತಾಯಗೊಂಡಿತು. ಆ ಸಂಬಂಧವಾಗಿ ಮುಂದಿನ ಅತಿಪ್ರಯಾಸದ, ಅಪಾರ ಕೆಲಸವುಳಿದಿದೆ; ಆ ಮಹತ್ಕಾರ್ಯದ ಜಯಾಪಜಯವನ್ನವಲಂಬಿಸಿ ಭಾರತದ ಭಾವೀ ಸ್ಥಾನಮಾನವಿದೆ. ಸದ್ಯ ಸಮಾಧಾನ ಕೊಡುವ ವಿಷಯವೆಂದರೆ, ನಡುವಂದೆಯಲ್ಲಿದ್ದು ಆಚೆಗೊಮ್ಮೆ ಈಚೆಗೊಮ್ಮೆ ಓಲಾಡುತ್ತಾ ಅತಿ ನಿರಾಶೆಗಳನ್ನು ನಿರ್ಮಿಸುತ್ತಿದ್ದ ಪ್ರಕ್ರಿಯೆ ಈಗ ಒಂದು ಪಕ್ಕಕ್ಕೆ ಬಿತ್ತು; ಎಲ್ಲವೂ ಸ್ಪಷ್ಟವಾಯಿತು.

ಮತ್ತೊಂದು ಅತಿ ಮುಖ್ಯ ಘಟನೆ, ಸ್ವತಂತ್ರ ಭಾರತವು ತನ್ನ ಚರಿತ್ರೆಯಲ್ಲಿ ಹೊಸಾಧ್ಯಾಯವೊಂದನ್ನು ಇದೇ ತಾ. 21ರಲ್ಲಿ ಆರಂಭಿಸಿರುವುದು:- ಪ್ರಥಮ ಹಿಂದೀ ಗವರ್ನರ್ ಜನರಲ್ ಅಧಿಕಾರ ವಹಿಸಿರುವುದು. ಹಿಂದೀಯರ ಪೈಕಿ ಈ ಮೊದಲನೆಯ ಮರ್ಯಾದೆಯನ್ನು ಪಡೆವ ಭಾಗ್ಯ ಮದ್ರಾಸಿನ ನಾಯಕ ರಾಜಾಜಿಗೆ ದೊರೆತಿದೆ. ಅಂತೆಯೇ ಸುಮಾರು ಎರಡು ಶತಮಾನಗಳ ಹಿಂದಿರುವ ಗವರ್ನರ್ ಜನರಲ್ ಸರಪಣೀ ಬುಡದ ತುದಿಯ ಕೊಂಡಿಯಾಗುವ ಯೋಗವೂ ಪ್ರಾಯಶಃ ರಾಜಾಜಿಗೇನೇ. ಸದ್ಯದಲ್ಲೇ ಹೊಸ ರಾಜ್ಯಘಟನೆ ಜಾರಿಗೆ ಬರಲಿದೆ-ಆಗ ಗವರ್ನರ್‌ಜನರಲ್ ಹುದ್ದೆಯೆಂಬುದೇ ಇಲ್ಲ ಇರದೆ ಬದಲಿಗೆ ಸಂಯುಕ್ತ ಭಾರತದ ಅಧ್ಯಕ್ಷ ಸ್ಥಾನ ಮೂಡಲಿದೆ. ಸ್ವರಾಜ್ಯ ಸ್ಥಾಪನೆಗೆ ಬಂದ-ರಾಷ್ಟ್ರ ವಿಭಜನೆ ಮಾಡಿದ-500ಕ್ಕೂ ಮಿಕ್ಕಿದ ಸಂಸ್ಥಾನಗಳನ್ನು ಕೇಂದ್ರದೊಂದಿಗೆ ಜೋಡಿಸಿಕೊಳ್ಳುವುದರಲ್ಲಿ ವಿಶೇಷ ರೀತಿಯಿಂದ ನೆರವಾದ-ಕೊನೆಯ ಬ್ರಿಟಿಷ್ ಗವರ್ನರ್ ಜನರಲ್ ಲೋರ್ಡ್ ಮೌಂಟ್ ಬೇಟನರ ಕೀರ್ತಿದಾಯಕ ಅವಧಿ ಇದೇ ತಾ 21ರಲ್ಲಿ ಮುಗಿಯಿತು.

ಜಾಗತಿಕ ಸಮಸ್ಯೆಗಳು

ಲೋಕದ ರಾಜಕೀಯದತ್ತ ನೋಡುವಾಗ ಬಹುತೇಕವಾಗಿ ಈ ಮೊದಲಿನ ಕಂಟಕಗಳೇ ಉಳಿದು ಎದ್ದು ತೋರುತ್ತಿವೆ; ಎಲ್ಲರೂ ನ್ಯಾಯದ ಹೆಸರಿನಿಂದ, ಅಭಿವೃದ್ಧಿ ಮತ್ತು ಶಾಂತಿ ಸಾಧಕರ ವೇಷದಿಂದ ಸ್ವಾರ್ಥಸಾಧನೆ ಮಾಡುತ್ತಿರುವುದು ನಡೆದಿದೆ.

ಪೆಲೆಸ್ಟೈನಿನಲ್ಲಿ ನಾಲ್ಕು ವಾರಾವಧಿಯ ತಾತ್ಕಾಲಿಕ ಶಾಂತಿ ಸ್ಥಾಪಿಸಿ ಈ ಅವಧಿಯುಳ್ಳೊಂದು ಶಾಶ್ವತ ತೀರ್ಮಾನ ಕಂಡುಹಿಡಿಯಲು ಸಂಯುಕ್ತ ರಾಷ್ಟ್ರ ಸಂಘದಿಂದ ನೇಮಿಸಲ್ಪಟ್ಟಿದ್ದ ಕೌಂಟ್ ಫೋಕೇ ಬೆರ್ನಾಡೊಟ್ಟೆಯವರು ತನ್ನ ಅವಿಶ್ರಾಂತ ಹಾಗೂ ಸ್ತುತ್ಯ ಪ್ರಯತ್ನಗಳಿಂದ ಸದ್ಯಕ್ಕೊಮ್ಮೆ ಪೆಲೆಸ್ಟೈನ್ ಗುಂಡು ಹಾರಾಟವನ್ನು ನಿಲ್ಲಿಸಿದಂತಿದೆ. ಆದರೀಗಲೂ ಇಕ್ಕಡೆಯವರು ಯುದ್ಧ ಸಿದ್ಧತೆಯಲ್ಲಿದ್ದಷ್ಟು ಶಾಂತಿಯಾತುರದಲ್ಲಿಲ್ಲ. ಬೆರ್ನಾಡೊಟ್ಟೆಯವರು ಅರಬ್ ಮತ್ತು ಯೆಹೂದೀ ತಜ್ಞರನ್ನು ಕೂಡಿಕೊಂಡು ರೋಡ್ಸ್ ದ್ವೀಪಕ್ಕೆ ಹೋಗಿ ಅಲ್ಲಿ ನಿರ್ಣಯವೊಂದನ್ನು ಕಂಡುಹಿಡಿಯುವ ಶೋಧನೆಯಲ್ಲಿದ್ದಾರೆ. ಈಗ ದೊರೆತಿರುವ 28 ದಿನಗಳ ಅವಧಿಯು ಈ ತೀರ್ಮಾನ ರಚನೆಗೆ ಸಾಕಾಗದಿದ್ದರಿಂದ ಮತ್ತೂ ಕೆಲಕಾಲ ಶಾಂತತೆಯುಳಿಸಿಕೊಡಬೇಕೆಂದು ಅವರು ಅರಬರನ್ನೂ ಯೆಹೂದಿಗಳನ್ನೂ ಕೇಳಿಕೊಳ್ಳಲಿದ್ದಾರೆ. ಅಥವಾ ಕೆಲವು ತಿಂಗಳುಗಳವರೆಗೆ ಪೆಲಸ್ಟೈನಿನಲ್ಲಿ "ಟ್ರಸ್ಟೀಶಿಪ್" ಆಡಳಿತೆ ಸ್ಥಾಪಿಸಬೇಕೆಂದು ಜಾಗತಿಕ ಸಂಘಕ್ಕೇನೇ ತಿಳಿಸಲಿದ್ದಾರೆ. ಪೆಲಸ್ಟೈನನ್ನು ವಿಭಜಿಸುವುದಕ್ಕಾಗಲೀ, ಯೆಹೂದಿಗಳಿಗೊಂದು ರಾಜ್ಯವನ್ನು ರಚಿಸಿ ಕೊಡುವದಕ್ಕಾಗಲೀ ಅರಬರ ವಿರೋಧ ಅಚಲವಿದೆ. ಇಕ್ಕಡೆಯವರೂ ಮತ್ತೊಮ್ಮೆ ಪ್ರಚಂಡ ಯುದ್ಧವನ್ನೇ ನಿರೀಕ್ಷಿಸುತಿದ್ದು ಭರದಿಂದ ಅಣಿಯಾಗುತಿದ್ದಾರೆ.

ಚೈನಾದಲ್ಲಿ ಒಮ್ಮೆ ತಡೆಗಟ್ಟಲ್ಪಟ್ಟಿದ್ದ ಕಮ್ಯೂನಿಸ್ಟ ಸೇನೆಗಳು ಪುನಃ ಪ್ರಚಂಡ ವೇಗದ ಧಾಳಿಗಾರಂಭಿಸಿ ಹೊನಾನ್ ಪ್ರಾಂತ್ಯದ ರಾಜಧಾನಿಯನ್ನು ಕಬಳಿಸಲು ಮುಂದುವರಿದಿವೆ. ಆಗಾಗ ಅತ್ತಿತ್ತ ಸರಿಯುತ್ತಾ ಬಂದಿರುವ ಜಯಶ್ರೀ ಈ ಬಾರಿ ಕಮ್ಯೂನಿಸ್ಟರನ್ನು ತುಸು ಬಿಗಿಯಾಗಿ ಆಲಿಂಗಿಸಿಕೊಂಡಂತಿದೆ!

ಮಲಯದಲ್ಲಿ ಯುರೋಪಿಯನ್ ಹಾಗೂ ಚೀನೀ ತೋಟ ಮಾಲಕರ ವಿರುದ್ಧ ಚೀನೀ ಕೆಲಸಗಾರರು ಬಂಡಾಯವೆದ್ದು ಹಲವು ಮಾಲಕರು ವಧೆ ಮಾಡಲ್ಪಟ್ಟಿದ್ದಾರೆ. ಆಡಳಿತೆಯನ್ನೇ ಅಡಿಮೇಲು ಮಾಡುವ ಗೊರಿಲ್ಲಾ ಯುದ್ಧವೇಳುವ ಸಂಭವವಿದೆ.

ಫ್ರಾನ್ಸಿನಲ್ಲಿ ತಾ. 19ರಲ್ಲಿ ಕಮ್ಯೂನಿಸ್ಟ್ ನಾಯಕತ್ವದಲ್ಲಿರುವ 30 ಲಕ್ಷ ಕೆಲಸಗಾರರು ಒಂದು ತಾಸಿನ ಮುಷ್ಕರ ಪ್ರದರ್ಶನ ನಡೆಸಿ ಪೋಲೀಸರೊಂದಿಗೆ ಘರ್ಷಣೆ ನಡೆದಿದೆ.

ಟರ್ಕಿ ಮತ್ತು ಗ್ರೀಸುಗಳಿಗೆ ಅಮೇರಿಕವು ಕೊಡುತ್ತಿರುವ ಹಣ ಮತ್ತು ಸೇನಾ ಸಹಾಯವು ಕಮ್ಯೂನಿಸ್ಟ್ ಆಕ್ರಮಣವನ್ನು ಸದೆ ಬಡಿಯುವುದಕ್ಕೆಂದು ಅಮೆರಿಕಾಧ್ಯಕ್ಷ ಟ್ರೂಮೇನರು ಅಲ್ಲಿಯ ಕಾಂಗ್ರೆಸಿಗೆ ಸ್ಪಷ್ಟ ವರದಿ ಮಾಡಿದ್ದಾರೆ. ಯುರೋಪು ರಾಷ್ಟ್ರಗಳಿಗೆ ಸಹಾಯವಾಗಿ ಅಪಾರ ನಿಧಿ ವಿನಿಯೋಗಿಸುವ ಮಾರ್ಶಲ್ ಯೋಜನೆಗೆ ಅಮೇರಿಕದ ಕಾಂಗ್ರೆಸ್ ಸಮ್ಮತಿ ಕೊಟ್ಟು ಕೊನೆಯ ಅಧಿಕಾರವನ್ನು ಟ್ರೂಮೇನರಿಗೊಪ್ಪಿಸಿದೆ.

ಜರ್ಮನಿಯ ಆಡಳಿತೆಯ ಸಂಬಂಧವಾಗಿ ರಶ್ಯಾ ಮತ್ತಿತರ ತ್ರಿರಾಷ್ಟ್ರಗಳೊಳಗೆದ್ದ ಭಿನ್ನಾಭಿಪ್ರಾಯವು ಈಗ ತುತ್ತತುದಿಗೆ ಮುಟ್ಟಿ, ಆ ಸಂಬಂಧದ 'ಪೋಟ್ಸ್‌ಡಾಮ್ ಕರಾರು' ಸಂಪೂರ್ಣ ಮುರಿದು ಹೋದಂತಾಗಿದೆ. ಅಮೇರಿಕ, ಇಂಗ್ಲಾಂಡು, ಫ್ರಾನ್ಸುಗಳ ಪಾಲಿನ ಪಶ್ಚಿಮ ಜರ್ಮನಿಯಲ್ಲಿ ಈ ತ್ರಿರಾಷ್ಟ್ರಗಳು ಈಗ ತಾನೇ ಜಾರಿ ಮಾಡಿರುವ ಕರೆನ್ಸಿ ಸುಧಾರಣೆಯು ಜರ್ಮನಿಯ ಹಳೇ ನಾಣ್ಯಗಳನ್ನೆಲ್ಲಾ ವಜಾ ನಡಿಸುವಂತಹದಿರುವುದರಿಂದ ಆ ಭಾಗದ ಜರ್ಮನರಲ್ಲಿ ಹಾಹಾಕಾರ ವೆದ್ದಿದೆ. ನಿರುದ್ಯೋಗ ವ್ಯಾಪಿಸಹತ್ತಿದೆ. ಇನ್ನಾ ಹಳೇ ನಾಣ್ಯಗಳ ಪ್ರವಾಹವು ತನ್ನ ಗಡಿಯೊಳಗೆ ನುಗ್ಗದಂತೆ ರಶ್ಯವು ಮುಂಜಾಗ್ರತೆ ವಹಿಸಿದೆ.

ಅಂತೂ ಲೋಕ ಕ್ಷೇಮದಿಂದಿಲ್ಲ!

ಪಾಕಿಸ್ತಾನದಲ್ಲಿ ಸರ್ವಾಧಿಕಾರ!

ಭಾರತದ ಜತೆ ರಾಷ್ಟ್ರ ಪಾಕಿಸ್ತಾನವು ಅಕ್ಷರಶಃ ನಾಜೀ ಆಡಳಿತೆಯಾಗಿದೆಯೇ ಎಂಬ ಶಂಕೆ ಮೂಡಿಸುವ ವಿಶೇಷ ಘಟನೆಗಳು ಅಲ್ಲಿ ನಡೆದಿವೆ. ಮಿ. ಸುಹ್ರವರ್ದಿಗಳಂತಹ, ಒಂದು ಕಾಲದ ಪ್ರಮುಖ ಲೀಗ್ ನಾಯಕನನ್ನೇ ಪ್ರಚಾರ ಮಾಡದಂತೆ ದಿಗ್ಬಂಧಿಸಿರುವ ಆವಶ್ಯಕತೆಯು ಪಾಕಿಸ್ತಾನ್ ಸರಕಾರಕ್ಕೊದಗಿದ್ದಿತು; ಅಂತೆಯೇ ಒಂದು ಕಾಲದಲ್ಲಿ ಪಾಕಿಸ್ತಾನ್ ಸಾಧನೆಗಾಗಿ ಹಿಂದುಗಳ ರಕ್ತ ಹರಿಯಿಸಿರಬಹುದಾದ ಪೂರ್ವ ಬಂಗಾಳದ ಲೀಗ್ ಸ್ವಯಂಸೇವಕರ ನಾಯಕನನ್ನೂ ಅದು ಬಂಧಿಸಿದೆ. ಸಿಂಧಿನ ಪ್ರಧಾನ ಮಂತ್ರಿಯಾಗಿದ್ದ ಕುಹ್ರೋ ಲಂಚ, ದಗಾಖೋರತನ, ಮುಂತಾದ ಮುತ್ತುತ್ಯಗಳ ಭೀಕರಾರೋಪಗಳಿಗೆ ತಲೆ ಕೊಟ್ಟು ಈಗ ವಿಚಾರಣೆಗೊಳಗಾಗಿದ್ದಾರೆ. ಸಿಂಧ್ ಎಸೆಂಬ್ಲಿಯ ವಿರುದ್ಧ ಪಕ್ಷದ ನಾಯಕ ಮತ್ತು ಹೊಸತಾಗಿ ಸ್ಥಾಪನೆಗೊಂಡ 'ಅಖಿಲ ಪಾಕಿಸ್ತಾನ್ ಜನತಾ ಸಂಘ'ದ ಕಾರ್ಯದರ್ಶಿ ಮಿ. ಜಿ. ಯಮ್., ಸಯ್ಯದರೂ ಈಗ ಬಂಧನದಲ್ಲಿದ್ದಾರೆ. ಎಲ್ಲಕ್ಕಿಂತ ಹೆಚ್ಚಿನದೆಂದರೆ, ಗಡಿನಾಡಿನ ಅದ್ವಿತೀಯ ರಕ್ಷಕ ಮತ್ತು ನಾಯಕನಾಗಿದ್ದ ಖಾನ್ ಅಬ್ದುಲ್ ಗಫಾರ್‌ಖಾನರ ಬಂಧನ. ಅಖಿಲ ಭಾರತದ ಸನ್ಮಾನ್ಯ ಶಾಂತಿದೂತ ಖಾನ್ ಅಬ್ದುಲ್ ಗಫಾರ್ ಖಾನರನ್ನೇ ಜೈಲೊಳಗೆ ಹಾಕಿ, ಆ ಕುರಿತು ಹುಸಿ ನೆವಗಳನ್ನು ಹೇಳಿ ಪಾಕಿಸ್ತಾನ್ ಸರಕಾರವು ತನ್ನ ಒಳಗಿನ ಸ್ಥಿತಿ ಆಶಾದಾಯಿಯಾಗಿಲ್ಲವೆಂಬ ಗುಟ್ಟನ್ನು ಲೋಕದಿದಿರು ಬಿಚ್ಚಿದಂತಾಗಿದೆ. "ಗಫಾರ್ ಖಾನರು ಆದಿಯಿಂದಲೂ ಪಾಕಿಸ್ತಾನಕ್ಕೆ ವಿರೋಧವಿದ್ದರು. ಈ ಬಾರಿ ದಸ್ತಗಿರಿ ಮಾಡುವಾಗ ಅವರು ಇಪಿಫಕೀರನೊಂದಿಗೆ ಸೇರಿಕೊಂಡು ಸರಹದ್ದು ಪ್ರಾಂತ್ಯದಲ್ಲಿ ಗೊಂದಲ ನಿರ್ಮಿಸಲು ಹೊರಡುತಿದ್ದರೆಂದು ತಿಳಿದು ಬರುತ್ತದೆ. ಅವರು ಪಾಕಿಸ್ತಾನ್

ಕನ್ನಡ ರಂಗಭೂಮಿಯ ಶತಮಾನೋತ್ಸವ

ಇದರ ಅಂಗವಾಗಿ

ವಸ್ತುಕಲಾ ಪ್ರದರ್ಶನ Exhibition

ಏರ್ಪಡಿಸಲಾಗಿದೆ

ಆಳುವ ಮೈಸೂರು ಶ್ರೀಮಾನ್ ಮಹಾರಾಜರು

ಉತ್ಸವದ ಆರಂಭೋತ್ಸವವನ್ನು ನೆರವೇರಿಸಲು ಅನುಮತಿ ದಯಪಾಲಿಸಿದ್ದಾರೆ.

ಮೈಸೂರು ದಸರಾ ವಸ್ತು ಪ್ರದರ್ಶನಾಲಯದಲ್ಲಿ

ತಾ. 26-7-1948 ರಿಂದ ಒಂದು ವಾರ ಪರ್ಯಂತ

ಕೈಗಾರಿಕೆ, ವಾಣಿಜ್ಯ, ಉದ್ಯೋಗ, ಕುಶಲಕಲೆ, ಮೊದಲಾದುವುಗಳ ಪ್ರಚಂಡ ಪ್ರಚಾರಕ್ಕೆ ಇದೇ ಸಮಯ

ಉತ್ಸವದಲ್ಲಿ ಏರ್ಪಡಿಸಿರುವ ಸಂಗೀತ, ನಾಟ್ಯ, ನಾಟಕ, ಬೈಲಾಟ, ಯಕ್ಷಗಾನ, ಚಿತ್ರಪ್ರದರ್ಶನ ಮೊದಲಾದ ವಿಧವಿಧ ವಿನೋದ ವಿಲಾಸಗಳು ತಂಡತಂಡವಾಗಿ ಜನರನ್ನು ಆಕರ್ಷಿಸುತ್ತವೆ. ಇಂತಹ ಸುಸಂಧಿ ಪ್ರದರ್ಶಕರಿಗೆ ಬೇರೊಂದು ದೊರೆಯಲಾರದು. ಈಗಲೇ ನಮಗೆ ಬರೆದು ಸ್ಥಳವನ್ನು ಕಾಯ್ದಿರಿಸಿಕೊಳ್ಳಿರಿ.

1- ಮಳಿಗೆಗಳಿಗೆ [Stalls] ಬಾಡಿಗೆಯನ್ನು ಮನ್ನಾ ಮಾಡಿದೆ

2 ಪ್ರದರ್ಶನಕ್ಕೆ ತರತಕ್ಕ ವಸ್ತುಗಳನ್ನು ಪ್ರದರ್ಶಿಸಿಕೊಂಡು ಹಿಂತೆಗೆದುಕೊಂಡು ಹೋಗುವಾಗ ಮಟ್ಟಿಗೆ ರೈಲ್ವೇ ವೆಚ್ಚವನ್ನು ಕೊಡಬೇಕಾಗಿಲ್ಲವೆಂದು ಮೈಸೂರು ಸ್ಟೇಟ್ ರೈಲ್ವೆಯವರು ವಿನಾಯತಿಕೊಟ್ಟಿದ್ದಾರೆ.

ಈ ಸಂದರ್ಭದಲ್ಲಿ ಕನ್ನಡ ರಂಗಭೂಮಿಯ ಶತಮಾನೋತ್ಸವ ಸ್ಮಾರಕ ಗ್ರಂಥ ಪ್ರಕಟವಾಗಲಿದೆ! ಕನ್ನಡದ ಹಾಗೂ ವಿಶ್ವದ ರಂಗಭೂಮಿಯ ವಿಷಯಕವಾದ ವಿದ್ವತ್ಪೂರ್ಣ ಲೇಖನಗಳನ್ನೊಳಗೊಂಡ ತ್ರಿವರ್ಣರಂಜಿತ ಕಲಾಪೂರ್ಣ ಸಂಚಿಕೆ!

ಕ್ರೌನ್ ¼ ಆಕಾರ **೩೫೦ ಪುಟಗಳು**

ನಿಮ್ಮ ಜಾಹಿರಾತಿಗಾಗಿ ಸಂಚಿಕೆಯಲ್ಲಿ ಸ್ಥಳವನ್ನು ಕಾದಿರಿಸಿಕೊಳ್ಳಿ!!

ವಿವರಗಳಿಗಾಗಿ ಬರೆಯಿರಿ:-

ಪ್ರಧಾನ ವ್ಯವಸ್ಥಾಪಕ,

ಕನ್ನಡ ರಂಗಭೂಮಿಯ ಶತಮಾನೋತ್ಸವ ಸಮಿತಿ ಕಛೇರಿ,

ದಸರಾ ವಸ್ತು ಪ್ರದರ್ಶನಾಲಯ, ಮೈಸೂರು

★ ಭಾರತ ಮತ್ತು ಹೈದರಾಬಾದು ★ ಮಾತು ಮುಕ್ತಾಯ

★

ಸರಕಾರದ ವಿರೋಧವಾಗಿ 'ಜನತಾಪಕ್ಷ' ವೊಂದನ್ನು ಕಟ್ಟಿಕೊಂಡು ಎಲ್ಲಾ ಹಳೇ ಕಾಂಗ್ರೆಸಿಗರನ್ನು ಅದರಲ್ಲಿ ಸೇರಿಸಿಕೊಂಡು ಉಪದ್ರವಿಸಲು ಮುಂದಾಗಿದ್ದಾರೆ. ಭಾರತದ ಸೇನೆಯು ಗಡಿನಾಡಿನತ್ತ ಧಾಳಿಯಿಡುವುದನ್ನು ಕಾಯುತ್ತಾ, ಅದಕ್ಕನುಕೂಲ ಕಾರ್ಯ ಕೈಕೊಳ್ಳಲಿದ್ದಿದ್ದಾರೆ" ಎಂದು ಮುಂತಾದ ಅಸಂಬದ್ಧಾರೋಪಗಳನ್ನೇ ಗಡಿನಾಡು ಪ್ರಾಂತಿಕ ಸರಕಾರವು ಗಫಾರ್ ಖಾನ್ ದಸ್ತಗಿರಿಗೆ ಕಾರಣಗಳಾಗಿ ಮುಂದಿಟ್ಟಿದೆ. ಇತ್ತ ಪಾಕಿಸ್ತಾನ್ ರಾಜಧಾನಿಯಾದ ಕರಾಚಿಯನ್ನು ಸಿಂಧ ಸ್ವಾತಂತ್ರ್ಯದಿಂದ ಪ್ರತ್ಯೇಕಿಸಿಡುವ ನಿರ್ಣಯದ ನಿಷೇಧಾರ್ಥವಾಗಿ ಇಡೀ ಸಿಂಧಿನಲ್ಲಿ ಹರತಾಳ, ನಿಷೇಧ ಪ್ರದರ್ಶನಗಳನ್ನು ನಡಿಸುವ ಸಿದ್ಧತೆಯಾಗಿದೆ;ಸಿಂಧೀಯರ ಅಭಿಮಾನಕ್ಕೇನೇ ಕಾದ ಬರೆಯನ್ನೆಳೆದಂತಾಗಿದೆ. ಪಾಕಿಸ್ತಾನ್ ಸರಕಾರದ ಎಲ್ಲಾ ಖಾತೆಗಳಲ್ಲೂ ನೌಕರರಿಗೆ ಯೋಗ್ಯ ಸಂಬಳ ದೊರೆಯದೆ ಸರ್ವತ್ರ ಅಶಾಂತಿ ಹೆಚ್ಚಿರುವ ಕಳವಳಜನಕ ವಾರ್ತೆಗಳು ಬರುತ್ತಿವೆ. ಪಾಕಿಸ್ತಾನದ ಕೇಂದ್ರ ಕಂದಾಯ ಕಚೇರಿಯ ನಾನ್‌ಗಜೆಟೆಡ್ ನೌಕರರ ಸಭೆಯೊಂದು ಇದೇ ತಾ 19ರಲ್ಲಿ ಸೇರಿದಾಗ ಮುಖ್ಯ ಚೌಕೀದಾರನು ಅಲ್ಲಿಯೇ ಬೀಗದ ಕೈಯ ಗೊಂಚಲುಗಳನ್ನು ಬಿಸಾಡಿ ತಾನು ಅಂದಿನಿಂದಲೇ ಕೆಲಸ ಬಿಟ್ಟನೆಂದು ಘೋಷಿಸಿದ. ಅವನನ್ನು ಅನುಸರಿಸಿ 700 ಮಂದಿ ನೌಕರರು ಆಗಲೇ ರಾಜೀನಾಮೆಯೊಪ್ಪಿಸಿದ್ದಾರೆ. ಈ ರೀತಿ ಪ್ರತಿ ಪಕ್ಷ ರಚಿಸುವ, ಅಥವಾ ಭಿನ್ನಾಭಿಪ್ರಾಯ ಸೂಚಿಸುವ ಪ್ರಜಾಸತ್ತಾಧಿಕಾರವನ್ನು ನಾಯಕರಿಗೂ, ಸರಿಯಾದ ಸಂ[illegible]ವನ್ನು ನೌಕರರಿಗೂ ಕೊಡದೆ ಸರ್ವಾಧಿಕಾರವನ್ನೂ ದಾರಿದ್ರ್ಯವನ್ನೂ ಒಟ್ಟೊಟ್ಟಿಗೆ ಸ್ಥಾಪಿಸಿ 'ಪಾಕಿಸ್ತಾನ್ ಝಿಂದಾಬಾದ್'! ಗೊಳಿಸಲು ಅಲ್ಲಿಯ ನಾಯಕರು ಮುಂದಾಗಿದ್ದಾರೆ! ಇಂತಹ ಪಾಕಿಸ್ತಾನ ಬೇಕೆನ್ನುವವರು ಈಗೆಷ್ಟು ಮಂದಿಯೋ!

ಹೈದರಾಬಾದಾಂಕ ಸಮಾಪ್ತಿ

ವಿಚಾರಿಗಳೆಲ್ಲರ ನಿರೀಕ್ಷೆಯಿದ್ದಂತೆ, ಭಾರತದ ಭವಿಷ್ಯಕ್ಕಿದು ಒಳ್ಳೆಯ ಆಯಿತೆನ್ನಲಾಗುವಂತೆ, ಭಾರತ-ಹೈದರಾಬಾದುಗಳೊಳಗಿನ ಮಾತುಕತೆಗಳು ಸಂಪೂರ್ಣ ಮುರಿದು ಹೋದುವು. ಈವರೆಗಿನ ಅವಧಿಯಲ್ಲಿ, ಇಷ್ಟು ಬಾರಿ ನಡೆದ ಓಡಾಟ, ಸಂಭಾಷಣೆಗಳ ಅಂತ್ಯದಲ್ಲಿ ಭಾರತ ಮತ್ತು ಹೈದರಾಬಾದುಗಳೆರಡೂ 1947ನೇ ಇಸವಿ [illegible] ಯಾವ ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದವೋ ಅವನ್ನೇ ಈಗಲೂ ಗಟ್ಟಿ ಬಿಗಿದುಕೊಂಡಿರುವುದನ್ನು ಕಾಣುವಾಗ 'ಈ ತರ್ಕ ಮಾಡಿದುದೇನು, ಮತ್ತೇಕೆ?' ಎಂಬ ಆಶ್ಚರ್ಯ ಮೊಳೆಯುತ್ತಿದೆ. ಅಕ್ಷರಕ್ಷರ ಮಂಥನ, ತಿದ್ದುಪಡಿಗಳ ಚರ್ವಿತ ಚರ್ವಣಗಳು ನಡೆದ ಮೇಲೆ ಒಂದು ಬಾರಿ ಕೊನೆಯದೆಂದಿದ್ದ ತಮ್ಮ ಶರ್ತಗಳನ್ನು ಪುನಃ ಮೃದುಗೊಳಿಸಿಕೊಂಡು ಭಾರತ ಸರಕಾರದ ಪ್ರತಿನಿಧಿಗಳು ಕಟ್ಟಕಡೆಯದಾಗಿ-ನಿಜಕ್ಕೂ ಕೊನೆಯದಾಗಿ--- ಮುಂದಿಟ್ಟಿದ್ದ ಆಶ್ವಾಸನೆ ಸಾಲುಗಳು ಡಿಲ್ಲಿಯಿಂದ ತಾ 17ರಲ್ಲಿ ಅಧಿಕೃತವಾಗಿ ಪ್ರಕಟಿಸಲ್ಪಟ್ಟಿವೆ.

ಅವುಗಳ ಸಾರ :- ೧. ದೇಶ ರಕ್ಷಣೆ ಹಾಗೂ ಸೇನೆ ಮತ್ತು ಸಂಬಂಧದ ಎಲ್ಲಾ ವಿಷಯಗಳು ೨. ವಿದೇಶ ಸಂಬಂಧ ಮತ್ತು ದಕ್ಕೆ ಸಂಬಂಧಿಸಿದ ಸರ್ವ ಸಂಗತಿಗಳು. ೩. ರೈಲ್ವೆ, ಟಪಾಲು, ತಂತಿ, ಟೆಲಿಫೋನ್, ಆಕಾಶವಾಣಿ ಮತ್ತಿತರ ಸಂಚಾರ ಮಾರ್ಗ ಸಂಬಂಧಗಳು ಮತ್ತು ವುಗಳ ಎಲ್ಲಾ ಉಪ ಭಾಗಗಳು-ಈ ಮೂರು ಖಾತೆಗಳ ಮಟ್ಟಿಗೆ ಭಾರತ ಸರಕಾರವು ತಯಾರಿಸುವ ಶಾಸನಗಳನ್ನೇ ಹೈದರಾಬಾದು ತನ್ನ ಶಾಸನ ಸಭೆಯಲ್ಲಿ ಮಂಜೂರು ಮಾಡಿಸಿಕೊಳ್ಳತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ನಿಜಾಮರು ಸ್ವತಃ ಒರ್ಡಿನೆನ್ಸ್ ಹೊರಡಿಸಿ ಜಾರಿಗೆ ತರತಕ್ಕದ್ದು. ನಿಜಾಮ್ ಸರಕಾರವು 20,000ಕ್ಕಿಂತ ಹೆಚ್ಚಿಗೆ ಸೇನೆಗಳನ್ನಿಟ್ಟುಕೊಳ್ಳಕೂಡದು ಸಂಸ್ಥಾನೀ ಸೇನೆಗಳ ಸಂಬಂಧದ 1939ರ ಭಾರತ ಯೋಜನೆಯನ್ವಾಧರಿಸಿ ಈ ಸೇನೆಗೆ ಬೇಕಾಗುವ ಎಲ್ಲಾ ಆಯುಧೋಪಕರಣಗಳನ್ನು ಭಾರತ ಸರಕಾರ ಸರಬರಾಯಿ ಮಾಡಲಿದೆ;ಈ ಸೇನೆಗಳನ್ನು ಆ ಸಂಬಂಧದ ಸರ್ವ ವಿಷಯಗಳ ಸಮೇತ ಆಗಾಗ ತನಿಖಿ ಮಾಡುವ ಅಧಿಕಾರವು ಭಾರತ ಸರಕಾರಕ್ಕಿದೆ. ಇಂತಹ ತನಿಖಿಗೆಎಲ್ಲಾ ವಿಧದ ಸೌಕರ್ಯಗಳನ್ನೂ ಮತ್ತದಕ್ಕಗತ್ಯ ಬೇಳುವ ಸರ್ವ ದಾಖಲೆಗಳನ್ನೂ ಭಾರತ ಸರಕಾರಕ್ಕೊದಗಿಸಲು ಹೈದರಾಬಾದು ಬದ್ಧವಿದೆ. ಪ್ರದರ್ಶನೋತ್ಸವ ಭಾಗಿಗಳು ಹಾಗೂ ಅರಮನೆ ಕಾವಲುಗಾರರಾದ ಪಹರೇ ಸೈನಿಕರ ಹೊರತು ಇತರ ಕ್ರಮಬದ್ಧವಲ್ಲದ ತನ್ನ ಸೇನೆಗಳ ಸಂಖ್ಯೆಯನ್ನು 8,000ದ ಮಿತಿಯೊಳಗಿಳಿಸಿಕೊಳ್ಳಲು ಹೈದರಾಬಾದು ಒಪ್ಪತಕ್ಕದು. ಸೇನಾ ಮರ್ಜಿಯ ಇತರ ಎಲ್ಲಾ ವಿಧದ ದಳಗಳನ್ನೂ ಹೈದರಾಬಾದು ಸರಕಾರವು ಬರ್ಖಾಸ್ತುಗೊಳಿಸಬೇಕು. ಅನುಕ್ರಮ ಹೆಜ್ಜೆಯನ್ನನುಸರಿಸಿ ಮೂರು ತಿಂಗಳೊಳಗೆ ರಝಾಕಾರ ಸಂಸ್ಥೆಯನ್ನು ವಿಸರ್ಜಿಸಿಕೊಳ್ಳಬೇಕು, ರಝಾಕಾರರ ದಳಧಾಳಿಗಳನ್ನು, ಪ್ರದರ್ಶನಗಳನ್ನು, ಭಾಷಣಗಳನ್ನು ಈಗಿಂದೀಗಲೇ ನಿಲ್ಲಿಸತಕ್ಕದ್ದು. ಹಿಂದೀ ಸರಕಾರವು ಹೈದರಾಬಾದಿನೊಳಗಡೆಯಲ್ಲಿ ತನ್ನ ಸೇನೆಯನ್ನಿಡುವದಿಲ್ಲ. ಆದರೆ ವಿಶೇಷ ಪರಿಸ್ಥಿತಿಗೀಡಾಗಿ ಹೈದರಾಬಾದಿನೊಳಗೆ ಸೇನೆಯನ್ನಿಡಲು ಭಾರತ ಸರಕಾರವಿಚ್ಛಿಸಿದರೆ ಹಾಗೆ ಮಾಡುವ ಅಧಿಕಾರವು ಭಾರತಕ್ಕಿರತಕ್ಕದ್ದು. ಅಗ ತಾನು ಉಪಯೋಗಿಸುವ ಕಟ್ಟಡಗಳಿಗೆ ನ್ಯಾಯವಾದ ಮೌಲ್ಯ ಮತ್ತಿತರ ಖರ್ಚುವೆಚ್ಚಗಳನ್ನು ಭಾರತ ಸರಕಾರವು ಹೈದರಾಬಾದಿಗೆ ಕೊಡಲಿದೆ. ಇಂತಹ ಯಾವುದೇ ವಿಶೇಷ ಸಂದರ್ಭಗಳಲ್ಲಿ ಹೈದರಾಬಾದಿನೊಳಗಡೆ ನಿಲ್ಲಿಸಲ್ಪಡುವ ಹಿಂದೀ ಸೇನೆಗಳು ಭಾರತ ಮಹಾಹಿಂದೀ ಸೇನಾ ಸಂಬಂಧದ ಶಾಸನಗಳಿಗಾಧೀನವಾಗಿಯೇ ಇರತಕ್ಕದ್ದು. ಹೈದರಾಬಾದ್ ಮತ್ತು ಯಾವುದೇ ಪರದೇಶಗಳೊಳಗಿನ ಸಂಬಂಧವು ಭಾರತ ಸರಕಾರದ ಅಧೀನವಿದ್ದೇ. ವ್ಯಾಪಾರ, ಆರ್ಥಿಕ ಸಂಬಂಧ ನಿರ್ಮಾಣಕ್ಕಾಗಿ ಪರದೇಶಗಳಲ್ಲಿ ತನ್ನ ಸ್ವಂತ ವ್ಯಾಪಾರೀ ಏಜೆನ್ಸಿಗಳನ್ನು ನಿರ್ಮಿಸಿಕೊಳ್ಳುವ ಸ್ವಾತಂತ್ರ್ಯ ಹೈದರಾಬಾದಿಗಿರುವುದಾದರೂ, ಈ ಏಜನ್ಸಿಗಳು ಹಿಂದೀ ಸರಕಾರದ ಮೇಲ್ತನಿಖಿಗೊಳಗಾಗಿ ಮತ್ತದರೊಡನೆ ಸಹಕರಿಸಿಕೊಂಡೇ ಇರತಕ್ಕದ್ದು. ಹೈದರಾಬಾದಿಗೆ ಬೇರಾವುದೇ ರಾಷ್ಟ್ರದೊಡನೆ ಸ್ವಂತ ರಾಜಕೀಯ ಸಂಬಂಧ ನಿರ್ಮಿಸಿಕೊಳ್ಳುವ ಹಕ್ಕಿಲ್ಲ. ಇಕ್ಕಡೆಗೂ ಸಂಬಂಧಿಸಿದ ಪ್ರಚಲಿತ ಒಪ್ಪಂದ ಹಾಗೂ ವ್ಯವಸ್ಥೆಗಳು, ಮೇಲಿನ ಕಲಮುಗಳಿಗನುಸಾರವಾಗಿ ಇದುವರೆಗಿನಂತೆ ಜಾರಿಯಲ್ಲಿರತಕ್ಕದ್ದು. 1947ನೇ ನವಂಬರ್ 29ರಲ್ಲಾಗಿದ್ದ ಪ್ರಚಲಿತ ಒಪ್ಪಂದ ಕರಾರಂತೆ ಅವುಗಳು 1948ನೇ ನವಂಬರ್ 29ರ ಮೊದಲು ರದ್ದಾಗುವಂತಹವಲ್ಲ.

ಮಧ್ಯಾವಧಿ ವ್ಯವಸ್ಥೆಯ ಫರ್ಮಾನ್

'ಭಾರತದೊಂದಿಗೆ ಜೋಡಣೆಗೊಳ್ಳುವ ಸಂಬಂಧವಾಗಿ ಮೇಲಿನ ಶರ್ತಗಳನ್ನು ಅಂಗೀಕಾರಕ್ಕಾಗಿ ನಿಜಾಮರಿಗೊಪ್ಪಿಸಿದಂತೆಯೇ, ಜವಾಬ್ದಾರೀ ಸರಕಾರ ರಚನೆ ಮತ್ತು ಮತಗಣನೆಯ ಕುರಿತು ನಿಜಾಮರು ಸ್ವತಃ ಕೂಡಲೇ ಹೊರಡಿಸ

[೫ನೇ ಪುಟ ನೋಡಿರಿ]

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3 28 Crores**

Our Chief Agency New business in 1946 bout **54 Lakhs**

Our experience of 37 years available to you for arranging Insurance investment It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.

Bombay Life Building,

Central Offic Udipi

Branches at:

Mangalore, Calicut, Trivandrum, Madura, Madras, Bangalore & Bombay,

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಜೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಘೋಷಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗು[illegible], ವೃಕ್ಷನಾಟಿಕೆಗಳಿರುವಲ್ಲಿ. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ, ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮ [illegible] ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರಕುವುದು.

The Canara Bank Limited.

ESTD: 1906

ಕ್ಷಯರೋಗದಿಂದ ನರಳುವಿರೇಕೆ?

"ಮಹಾಜನ" ಇವರ

"ಭೃಂಗರಾಜ" ವನ್ನು

ಸೇವಿಸಿರಿ.

ಪತ್ರವ್ಯವಹಾರಕ್ಕೆ ವಿಳಾಸ:-

ದಿ ಮಹಾಜನ ಕೆಮಿಕಲ್ಸ್ ಮತ್ತು ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್, ಕಾಸರಗೋಡು, ದ. ಇಂಡಿಯಾ.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves....	Rs. 8,00,400

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ಗುರುವಾರ, ಉಡುಪಿ, ೨೪-೬-'೪೮

ಹೊಸ ಯುಗ

ಇದೇ ಜೂನ್ ತಾ 21ರಲ್ಲಿ ಭಾರತದ ಕೊನೆಯ ಬ್ರಿಟಿಷ್ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನರು ಗದ್ದುಗೆಯಿಂದಿಳಿದು ಪ್ರಥಮ ಹಿಂದೀ ಗವರ್ನರ್ ಜನರಲ್ ಶ್ರೀ. ಸಿ. ರಾಜಗೋಪಾಲಾಚಾರ್ಯರು ಅದನ್ನೇರಿದರು; ಭಾರತದ ಚರಿತ್ರೆಯಲ್ಲಿ ಹಳೇ ಅಧ್ಯಾಯವೊಂದು ಮುಗಿದು ಹೊಸತು ಆರಂಭಿಸಿತು. ಭಾರತದಲ್ಲಿ ಬ್ರಿಟಿಷ್ ಅಧಿಕಾರ ಬಂದಂದಿನಿಂದ ಮೊನ್ನೆಯ ವರೆಗೂ ಈ ಮುಖ್ಯಾಧಿಕಾರ ಬಿಳಿಮನುಷ್ಯರ ಹಕ್ಕಿನದಾಗಿತ್ತು-ಬ್ರಿಟಿಷ್ ಆಡಳಿತೆ ಬರ್ಖಾಸ್ತಾಗಿ ಹತ್ತು ತಿಂಗಳು ಒಂದು ವಾರ ಕಳೆಯುವ ವರೆಗೂ ಅದರ ಕಳಶವಿಲ್ಲಿ ಉಳಿದಿತ್ತು. ಈಗ ಅದನ್ನೂ ಬದಲಾಯಿಸಿಕೊಂಡಿದ್ದೇವೆ. ಏನಿಲ್ಲೆಂದರೂ ಈ ದಿನ, ನಮ್ಮವನೊಬ್ಬನ ಕೈಕೆಳಗೆ ನಾವಿದ್ದೇವೆ, ಎಂಬ ಹೊಸ ಅಭಿಮಾನವೊಂದು ಮೂಡಿದೆ.

ಲೋರ್ಡ್ ಮೌಂಟ್ ಬೇಟನ್ ಹೋಗಿ ರಾಜಾಜೀ ಬಂದರು; ಭಾರತದ ಗವರ್ನರ್ ಜನರಲ್ ಹುದ್ದೆಯೂ 'ಹಿಂದೀಕರಣ'ಗೊಂಡಿತು; ಇನ್ನದು 'ರಾಷ್ಟ್ರೀಕರಣ'ಗೊಳ್ಳಲಿದೆ-'ಅಧ್ಯಕ್ಷ'ಸ್ಥಾನವೇ ಅಲ್ಲಿ ತೋರಲಿದೆ. ಈರೀತಿ ಲೋರ್ಡ್ ಮೌಂಟ್‌ಬೇಟನರು ಕೊನೆಯ ಬ್ರಿಟಿಷ್ ಗವರ್ನರ್ ಜನರಲನಾದರೆ, ರಾಜಾಜೀ ಪ್ರಥಮ ಹಿಂದೀ ಗವರ್ನರ್ ಜನರಲ್; ಅಂತೆಯೇ ಕೊನೆಯ ಗವರ್ನರ್ ಜನರಲ್.

ಹಿಂದುಸ್ಥಾನ ಬಿಟ್ಟು ಹೋಗಿರುವ ಲೋರ್ಡ್ ಲುಯಿಸ್ ಮೌಂಟ್ ಬೇಟನರನ್ನು ಈ ರಾಷ್ಟ್ರವು ಮರೆಯುವಂತಿಲ್ಲ-ಅವರೂ ಈ ರಾಷ್ಟ್ರವನ್ನು ಮರೆಯದಂತಾಗಿದೆ. ಈ ಥೋರೆಯ ಅಧಿಕಾರಾವಧಿ ಹದಿನೈದು ತಿಂಗಳು ಮಾತ್ರ—ಗವರ್ನರ್ ಜನರಲ್ ಸರಪಣಿಯಲ್ಲಿ ಅತ್ಯಂತ ಗಿಡ್ಡವಾದ ಕೊಂಡಿಯೆಂದರೆ ಪ್ರಾಯಶಃ ಇದೇ. ಆದರೆ ಐದು ವರುಷಾವಧಿಯ ಬೇರಾವ ಗವರ್ನರ್ ಜನರಲನ ಪಾಲಿಗೂ ಬಾರದಿದ್ದಷ್ಟು ಕೆಲಸ ಇವರ ಮುಂದಿತ್ತು. ಇವರದನ್ನು ಮಾಡಿಮುಗಿಸಿದ್ದಾರೆ. ಈ ಹೊಣೆಗಾರಿಕೆ ದೊಡ್ಡದಿದ್ದಂತೆಯೇ ಅದನ್ನು ನಿರ್ವಹಿಸಿದ ಅವರ ಯೋಗ್ಯತೆಯೂ ವಿಶೇಷದ್ದೇ. ಹೈದರಾಬಾದ್ ಪ್ರಶ್ನೆಯಂಥದರಲ್ಲಿ ಅವರು ಪರಾಭವಗೊಂಡಿರಬಹುದು. ಆ ಸಂಬಂಧದ ಪರಾಜಯವು ನಿವೃತ್ತಿಯ ಮೊದಲನೇ ಇವರಾಗಿದ್ದರೆಂಬ ಆಪವಾದಕ್ಕೂ ಈಡಾಗಬಹುದು. ಆದರೆ, ಎಲ್ಲಾ ಕಾರ್ಯಗಳಲ್ಲೂ ಮುಖ್ಯವಾಗಿ ತನ್ನನ್ನಿಟ್ಟುಕೊಂಡಿರುವ ಹಿಂದುಸ್ಥಾನದ ಹಿತವೊಂದನ್ನೇ ಗಣಿಸಿ, ಅದಕ್ಕಾಗಿಯೇ ತನ್ನ ಮಧುರ ವ್ಯಕ್ತಿತ್ವ, ಉಚ್ಚ ನಾಗರಿಕತೆ, ಸರಳತೆ ಮತ್ತು ಸರ್ವಶಕ್ತಿಯನ್ನು ಉಪಯೋಗಿಸಿದ್ದರೆಂಬ ಕುರಿತು ಅನುಮಾನವಿಲ್ಲ. ಬ್ರಿಟಿಷ್ ಪುಡಾರಿಗಳು ಹೇಗೆ ನಿರಂಕುಶಾಧಿಕಾರಿಗಳಾಗಿರಬಲ್ಲರೋ ಹಾಗೆಯೇ ನಿಜಾನುಯಾಯಿಗಳಾಗಿಯೂ ಇರಬಲ್ಲರೆಂಬುದನ್ನು ಹಿಂದೀಯರು ಲೋರ್ಡ್ ಮೌಂಟ್‌ಬೇಟನರಿಂದ ಕಲಿತರು. ಎರವಿಗೆ ಕೊಟ್ಟಂತೆ ಸ್ವರಾಜ್ಯಾನಂತರದ ಹತ್ತು ತಿಂಗಳುಗಳ ವರೆಗೆ ಲೋರ್ಡ್ ಮೌಂಟ್ ಬೇಟನರನ್ನು ಇಲ್ಲಿಯೇ ಬಿಟ್ಟುದರಿಂದ, ತಾವು ತಮ್ಮ ರಾಜಕಾರಣಕ್ಕೆ ಭಾರತದಲ್ಲಿಟ್ಟಿದ್ದ ಕೊಳೆಯನ್ನು ಬಹುಮಟ್ಟಿಗೆ ತೊಳೆದುಕೊಂಡಂತಾಯಿತೆಂದು ಬ್ರಿಟಿಷ್ ಮುತ್ಸದ್ದಿಗಳು ಸಮಾಧಾನಪಡಬಹುದು. ಬಿಳಿ ಜನಾಧಿಕಾರದ ಈ ಕೊನೆಯ ಶೇಷಾಂಶವು ತಮಗೆ ಊರುಗೋಲಿನಂತಹ ಆಧಾರವಾಗಿದ್ದಿತು ಹೊರತು ಬಂಧನಗೂಟವಾಗಿರಲಿಲ್ಲವೆಂದು ಭಾರತೀಯರೊಪ್ಪುತ್ತಾರೆ; ಲೋರ್ಡ್ ಮೌಂಟ್‌ಬೇಟನರಿಗೆ ಕೃತಜ್ಞತೆ ಸಲ್ಲಿಸುತ್ತಾರೆ.

ಬ್ರಿಟಿಷ್ ಸರಕಾರದ 1947ನೇ ಜನವರಿ 26ರ ಘೋಷಣೆಯಂತೆ, ಭಾರತಕ್ಕೆ ಸ್ವರಾಜ್ಯ ದಾನವಾಗಬೇಕಾಗಿದ್ದ ಅವಧಿ ಇದೇ-ಈ 1948ನೇ ಜೂನ್. ಲೋರ್ಡ್ ಮೌಂಟ್‌ಬೇಟನರ 'ಖಂಡತುಂಡ ಧೋರಣೆ' ಮತ್ತು ಕ್ಷಿಪ್ರ ಗತಿಯ ದೆಸೆಯಿಂದ ಈ ಕೆಲಸ ಹತ್ತು ತಿಂಗಳು ಮುಂದಾಗಿ ನಡೆದು ಹೋಯಿತು. ಮೊದಲ ಯೋಚನೆಯಂತಾಗುತ್ತಿದ್ದರೆ, ಸ್ವರಾಜ್ಯ ದಾನವಾಗಬೇಕಾಗಿದ್ದ ಕಾಲದಲ್ಲೀಗ ಸ್ವಂತ ಗವರ್ನರ್ ಜನರಲ್ ಬರುವ ಉತ್ಸವ ನಡೆದಿದೆ; ರಾಜಾಜೀ ಪೀಠಾರೋಹಣವಾಗಿದೆ. ಭಾರತೀಯರ ಹೃದಯ ಪೀಠದಲ್ಲಿರುವ ಮನುಷ್ಯನೇ ಅಧಿಕಾರ ಪೀಠಕ್ಕೂ ಎಂದ ಮೇಲೆ ಬೇರೆ ಮಾತು ಅನಗತ್ಯ. ಅಗಾಧ ಜಾಣ್ಮೆ, ಅಸಾಮಾನ್ಯ ಬುದ್ಧಿಭಂಡಾರ, ಸಂಸ್ಕಾರ, ಅನ್ಯಾದೃಶ ದೂರದೃಷ್ಟಿ ಮತ್ತು ಸಮತೋಲನಾ ಬುದ್ಧಿಯಿರುವ ಜನ ಇವರು-ಇವನ್ನೂ ಬೇಕಾಗಿರುವ ಸ್ಥಾನ ಅದು. ರಾಜಾಜಿಯ ಗವರ್ನರ್ ಜನರಲ್‌ತನವು ಭಾರತದ ಒಂದು ವಿಜಯ ಮತ್ತು ಹೆಗ್ಗಳಿಕೆ; ರಾಜಾಜೀ ನಿರ್ದೇಶಕತ್ವದಲ್ಲಿ ಭಾರತದ ಎಲ್ಲಾ ಸಮಸ್ಯೆಗಳೂ ನಿವಾರಣೆಗೊಂಡು, ಅದು ಸರ್ವತೋಮುಖ ಪ್ರಗತಿ ಹೊಂದಲೆಂದು ಆಶಿಸುತ್ತೇವೆ.

ಗವರ್ನರ್ ಜನರಲ್

ಲೋರ್ಡ್ ಮೌಂಟ್‌ಬೇಟನರ ನಿರ್ಗಮನ ಮತ್ತು ಸಿ. ಆರ್. ಅಧಿಕಾರಾರೋಹಣದ ಹೃದಯಸ್ಪರ್ಶೀ ಉತ್ಸವವು ತಾ 21ರಲ್ಲಿ ನವದಿಲ್ಲಿಯಲ್ಲಿ ನಡೆಯಿತು. ತಾ. 20ನೇ ಅಪರಾಹ್ನ ಕಲ್ಕತ್ತದಿಂದ ಸ್ಪೆಶಲ್ ವಿಮಾನದಲ್ಲಿ ಬಂದು ರಾಜಾಜೀ ನವದಿಲ್ಲಿಯಲ್ಲಿಳಿಯುವಾಗ ಸ್ವಾಗತ ಸುಮವೃಷ್ಟಿಯೆಂಬಂತೆ ಮಳೆ ಸುರಿದಿತ್ತು. ನಿಲ್ದಾಣದಲ್ಲಿ ಪ್ರಧಾನಿ ನೆಹರು ಮತ್ತಿತರ ಅಧಿಕಾರಿಗಳಿಂದ ಅಧಿಕಾರಬದ್ಧ ಸ್ವಾಗತ ಮತ್ತು ಸೇನಾವಂದನೆಗಳನ್ನು ಪಡೆದು, ಪರಿಚಯಗಳಾಗಿ, ನಿಯೋಜಿತ ಗವರ್ನರ್ ಜನರಲರು ದರ್ಬಾರ್ ಹಾಲಿಗೆ ತೆರಳಲ್ಪಟ್ಟಾಗ ಕೊನೆಯ ಮೆಟ್ಟಲಲ್ಲಿ ಮೌಂಟ್‌ಬೇಟನ್ ದಂಪತಿಗಳು ಹಿಂದೂ ಪದ್ಧತಿಯಂತೆ ಕೈಮುಗಿದು ಸೆಲ್ಯೂಟ್ ಕೊಟ್ಟು, ಆ ಮೇಲೆ ಕೈಕುಲುಕಿ ಸ್ವಾಗತಿಸಿದರು. ನೆರೆದಿದ್ದ ಜನ ಸಂದಣಿ ಪದ್ಧತಿ ಮೀರಿದು ಕ್ರೀಡಾಭವನದ ವರೆಗೂ ಇವರ ಹಿಂದೆ ಹೋಗಿದ್ದಿತು.

ತಾ. 21ನೇ ಮುಂಜಾನೆ ಲೋರ್ಡ್ ಮೌಂಟ್ ಬೇಟನರನ್ನು ದಿಲ್ಲೀ ಜನತೆ ಬೀಳ್ಕೊಟ್ಟ ದೃಶ್ಯವು ಹೃದಯಸ್ಪರ್ಶಿಯಿದ್ದಿತು; ಇಂತಹ ವಿದಾಯ ಗೌರವವು ಬೇರಾವ ಗವರ್ನರ್ ಜನರಲನಿಗೂ ದೊರೆತುದಿಲ್ಲ. ಸಿಂಹಾಸನ ಕೋಣೆಯಿಂದ ತನ್ನ ಪತ್ನಿ ಪುತ್ರಿ ಮತ್ತು ನೆಹರು, ರಾಜಾಜಿಯೊಂದಿಗೆ ಲೋರ್ಡ್ ಮೌಂಟ್‌ಬೇಟನರು ಹೊರಬಂದಾಗ 'ಸೇನಾ ವಂದನೆ'ಗಳಾದುವು. ಕೊನೆಯ ದರ್ಶನಕ್ಕೆ ಬಂದಿದ್ದ ಜನಸಂದಣಿ ಉತ್ಸಾಹರವವೆಬ್ಬಿಸಿತು; ಬೇಂಡು ವಾಲಗಗಳು ಇಂಗ್ಲಿಷ್ ಮತ್ತು ಭಾರತ ರಾಷ್ಟ್ರ ಗೀತೆಗಳನ್ನು ಹಾಡುತಿದ್ದುವು. ಆರು ಕುದುರೆಗಳ ರಾಜ ರಥವನ್ನೇರಿ, ಜನತಂಡದ ಜಯೋದ್ಗಾರಗಳಿಗೆ ಪ್ರತಿವಂದನೆಗಳನ್ನು ಕೊಡುತ್ತಾ ಮೌಂಟ್‌ಬೇಟನ್ ಕುಟುಂಬವು ಮುಖ್ಯದ್ವಾರಕ್ಕೆ ಬಂದು, ಅಲ್ಲಿಂದ ಕಾರು ಹತ್ತಿ ಪಲಾಮ್ ವಿಮಾನ ನಿಲ್ದಾಣಕ್ಕೆ ಹೋಗುವಾಗ ಮೈಲುದ್ದಕ್ಕೂ ನಿಕ್ಕಿ ಇಕ್ಕಡೆಯಲ್ಲೂ ಸೈನಿಕರು ನಿಂತು ವಂದನೆ ಸಲ್ಲಿಸಿದರು ಜನರು ಉತ್ಸಾಹಧ್ವನಿಯೆಬ್ಬಿಸಿದರು. ನಿಲ್ದಾಣದಲ್ಲಿ ಸೇನಾ ವಂದನೆಯಾಯಿತು. ನೆಹರು, ರಾಜಾಜಿ ವಿಮಾನದೊಳಕ್ಕೂ ಹೋಗಿ ಬೀಳ್ಕೊಂಡರು. ಮೌಂಟ್‌ಬೇಟನ್ ದಂಪತಿಗಳ ಕೈಕುಲುಕಿಯಾದ ಮೇಲೆ ಅವರ ಪುತ್ರಿ ಲೇಡಿ ಪಮೇಲಾ ಮೌಂಟ್‌ಬೇಟನ್ನರನ್ನು ಪಂಡಿತ ನೆಹರು ಅತ್ಯಂತ ಮಮತೆಯಿಂದ ಚುಂಬಿಸಿದರು. ಮೌಂಟ್‌ಬೇಟನರಿದ್ದ ವಿಮಾನವು ಘೂಂಕರಿಸ ಹತ್ತಿದೊಡನೆ ವಿಮಾನಗಳ ಸಾಲು ಕೆಳಮೊಗವಾಗಿ ಹಾರಿ ವಿದಾಯ ವಂದನೆ ಕೊಟ್ಟಿತು. ಮೌಂಟ್‌ಬೇಟನ್ ವಿಮಾನ ಮೇಲೇರುತ್ತಿದ್ದಾಗ ವಂದನಾರೂಪವಾಗಿ 31 ಗನ್ನುಗಳು ಸಿಡಿದುವು.

ಭಾರತ ಮಂತ್ರಿಮಂಡಲವು ತನ್ನ ಹೃತ್ಪೂರ್ವಕ ಧನ್ಯವಾದಗಳ ಕೃತಜ್ಞತಾ ಪತ್ರವೊಂದನ್ನು ಲೋರ್ಡ್ ಮೌಂಟ್‌ಬೇಟನರಿಗೆ ಕೊಟ್ಟಿದೆ. ತಾ. 20ರಲ್ಲಿ ದಿಲ್ಲಿಯ ನಗರ ಸಭಾಸಮಿತಿಯೇರ್ಪಡಿಸಿದ್ದ ಸಾರ್ವಜನಿಕ ವಿದಾಯಸಭೆಯಲ್ಲಿ 1 ಲಕ್ಷಕ್ಕೂ ಮಿಕ್ಕಿದ ಜನ ಸೇರಿ ಗೌರವ ಸಲ್ಲಿಸಿದ್ದರು. ಲೋರ್ಡ್ ಮೌಂಟ್‌ಬೇಟನರು ಹಿಂದಿಯಲ್ಲಿ ಮಾತಾಡಿದ್ದರು. ತಾ. 20ರಲ್ಲಿ ಆಕಾಶವಾಣಿ ಮೂಲಕ ರಾಷ್ಟ್ರಕ್ಕೆ ವಿದಾಯ ಭಾಷಣವೀಯುತ್ತಾ "ಭಾರತವು ಲೋಕದಲ್ಲೇ ಗಣ್ಯ ಸ್ಥಾನ ಪಡೆಯಲಿದೆಯಾದ್ದರಿಂದ, ಹೊಸ ರಾಜ್ಯ ಘಟನೆಗರ್ಹರನ್ನಿಸಬೇಕೆಂದು" ಹಿಂದೀಯರನ್ನು ವಿನಂತಿಸಿಕೊಂಡಿದ್ದರು. ತಾ 19ರಲ್ಲಿ ಲೇಡಿ ಮೌಂಟ್‌ಬೇಟನರು ಆಕಾಶವಾಣಿ ಭಾಷಣವಿತ್ತು "ಗಾಂಧಿಜಿಯ ತತ್ವಗಳಂತೆ ವರ್ತಿಸಿ" ಎಂದು ವಿಜ್ಞಾಪಿಸಿಕೊಂಡಿದ್ದರು.

ಬ್ರಿಟಿಷ್ ಮತ್ತು ಭಾರತ ರಾಷ್ಟ್ರಗೀತೆ ಬಾರಿಸುವ ಬೇಂಡು-ಉತ್ಸವನಾದ-31 ಗನ್ನುಗಳ ಹಾರಾಟ-ಮೂರು ಅಶೋಕ ಸಿಂಹಗಳ ಚಿತ್ರದ ಕೆಳಗಡೆ 'C. R.' ಎಂಬ ವರ್ತುಳಾಕಾರದ ಅಕ್ಷರಗಳನ್ನು ಕೆತ್ತಿದ ನೀಲವರ್ಣದ ಗವರ್ನರ್ ಜನರಲ್ ಧ್ವಜದ ಆರೋಹಣ-ರಾಜ ಮಹಾರಾಜರು, ಭಾರತದ ಮಂತ್ರಿಗಳು ಹಾಗೂ ಇತರ ಪ್ರಮುಖರ ಒಡ್ಡೋಲಗ-ಇತ್ಯಾದಿ ಸಂಭ್ರಮಗಳ ನಡುವೆ ಇದೇ ತಾ 21ನೇ ಪೂರ್ವಾಹ್ನ 10-30 ತಾಸಿಗೆ ಶ್ರೀ. ಸಿ. ರಾಜಗೋಪಾಲಾಚಾರ್ಯರು ಪ್ರತಿಜ್ಞಾಬದ್ಧರಾಗಿ ಗವರ್ನರ್‌ಜನರಲ್ ಪೀಠವೇರಿದರು. ಎಲ್ಲರನ್ನೂ ಅಭಿನಂದಿಸಿ, "ಜಾತಿ, ಮತ, ವರ್ಗ ಭೇದವಾವುದೂ ಇಲ್ಲದೆ ತನ್ನ ಗಡಿಯೊಳಗಿನ ಪ್ರತಿಯೊಬ್ಬನೂ ಇಲ್ಲಿಯ ಪ್ರಜೆಯಾಗಿರುವುದರಲ್ಲಿ ಹೆಗ್ಗಳಿಕೆ ಮತ್ತು ಆನಂದದಿಂದಿರುವಂತೆ ಮಾಡಬೇಕೆಂಬುದೇ ಭಾರತದ ಅಚಲನಿರ್ಧಾರ" ಎಂಬ ಮೂಲ ಮಂತ್ರವನ್ನು ಸಾರಿದರು.

NOTICE

Tenders are invited up to 3-0 P. M on 25-6-1948 for the purchase of old watering lorry without the water tank owned by the municipal Council. Intending tenderer should deposit a sum of Rs 25/- as earnest money which will be refunded after the sale only in the case of unsuccessful tenderers. The lorry can be inspected near the Municipal Library at any time during office hours on working days. The Contract Committee or the Council reserves the right of rejecting all or any of the tenders without assigning any reason for so doing. Further particulars can be had from the Municipal Office, Udipi, duridg office hours on working days. The successful bidder should deposit the entire sum as soon as the sale is over.

Municipal Office, Udipi.
Date 9—6—1948

T. Harischandra Rao,
Commissioner, U. M.

[೩ನೇ ಪುಟದಿಂದ]

ತಕ್ಕದ್ದೆಂದು ' ಫರ್ಮಾನ್ ' ಒಂದನ್ನು ಭಾರತ ಸರಕಾರ ಬರೆದುಕೊಟ್ಟಿದ್ದಿತು. ಅದರ ಸಾರ ಹೀಗಿದೆ: 'ದೀರ್ಘ ಪರ್ಯಾಲೋಚನೆಯ ನಂತರ ನಾನು ಈ ಕೆಳಗಿನ ಸ್ಪಷ್ಟ ಧೋರಣೆ ವಹಿಸಿದ್ದೇನೆ. ಹೈದರಾಬಾದು ಭಾರತಕ್ಕೆ ಸೇರಬೇಕೋ ಎಂಬುದರ ಕುರಿತು ನಾನೀಗ ನನ್ನ ಜನತೆಯ ಅಭಿಮತ ತಿಳಿಯಲು ನಿರ್ಧರಿಸಿದ್ದೇನೆ. ಅದಕ್ಕಾಗಿ ನಾನು ಪ್ರಾಯಸ್ಥರೆಲ್ಲರಿಗೆ ಮತದಾನದ ಹಕ್ಕಿರುವದನ್ನು ಧರಿಸಿ ಮತ ಸಂಗ್ರಹಿಸುತ್ತೇನೆ. ಈ ಮತಗಣನೆಯು ಯೋಗ್ಯ ರೀತಿಯಿಂದಾಗುವಂತೆ ನೋಡಲು ಅದು ನಿಷ್ಪಕ್ಷಪಾತಿ ಸ್ವತಂತ್ರ ಸಂಸ್ಥೆಯೊಂದರ ಕೈಕೆಳಗೇನೇ ನಡೆಯುವಂತೆ ಮಾಡುತ್ತೇನೆ. ಮತ ಸಂಗ್ರಹದ ಪರಿಣಾಮವೇನೇ ಆದರೂ ಅದನ್ನು ನಾನು ಅಂಗೀಕರಿಸುತ್ತೇನೆ. ಆದರೆ ಶಾಂತಿ ಮತ್ತು ಸುರಕ್ಷಿತತೆಗಾಗಿ ಮತ ಸಂಗ್ರಹಕ್ಕಿಂತಲೂ ಹೆಚ್ಚಿನ ಕೆಲಸವಾಗಬೇಕಾಗಿದೆ, ಎಂಬ ಕುರಿತು ನನಗೆ ಸಮಾಧಾನವಾಗಿದೆ. ಆದ್ದರಿಂದ ಈ ಕೆಳಗಿನ ತತ್ವಗಳಂತೆ ಕಾರ್ಯ ಕೈಕೊಳ್ಳ ತಕ್ಕದ್ದೆಂದು ನಾನು ನನ್ನ ಸರಕಾರಕ್ಕೆ ಸೂಚಿಸುತ್ತೇನೆ. ಇವುಗಳಿಂದಾಗಿ ಭಾರತ ಮತ್ತು ಹೈದರಾಬಾದುಗಳೊಳಗಾಗುವ ಯಾವುದೇ ಕರಾರು ಶರ್ತಗಳಿಗಿಂತಲೂ ಇಕ್ಕಡೆಯವರೊಳಗೆ ಸೌಹಾರ್ದತೆಯಿರಬೇಕಾದುದೇ ಮುಖ್ಯವಾದುದೆಂಬ ನನ್ನ ಧೋರಣೆಯನ್ನವರು ಗ್ರಹಿಸಿಕೊಳ್ಳುವರೆಂದು ನಂಬುತ್ತೇನೆ. ಅವುಗಳೆಂದರೆ:- ಹೈದರಾಬಾದಿನಲ್ಲಿ ಪ್ರಜಾ ಜವಾಬ್ದಾರೀ ಸರಕಾರ ಸ್ಥಾಪನೆಯೇ ನನ್ನ ಉದ್ದೇಶವಿದ್ದು ಈ ಗುರಿ ಸಾಧನೆಗಾಗಿ 1949ರ ಆದಿಭಾಗದಲ್ಲೇ ಘಟನಾ ಸಮಿತಿಯೊಂದನ್ನು ರಚಿಸತಕ್ಕದ್ದು. ಆ ಮಧ್ಯಾವಧಿಯೊಳಗೆ ನನ್ನ ಸರಕಾರದ ಪುನರ್ರಚನೆಯಾಗಬೇಕಾದ್ದರಿಂದ ಕೂಡಲೇ ಪ್ರಮುಖ ರಾಜಕೀಯ ಪಕ್ಷಗಳ ನಾಯಕರ ಅಭಿಮತ ಪಡಕೊಂಡು ಹೊಸ ನಡುಗಾಲ ಸರಕಾರ ರಚನೆಯಾಗಬೇಕು. ಮತ ಸಂಗ್ರಹದ ಮೊದಲಿನ ನಡುಗಾಲಾವಧಿಗಾಗಿ ಭಾರತ ಸರಕಾರದೊಡನೊಂದು ಒಪ್ಪಂದಕ್ಕೆ ಬರಲು ನನ್ನ ಸರಕಾರವು ಸಮರ್ಥವಾಗಿದೆ. ಆ ಒಪ್ಪಂದ ಕರಾರಿನ ಪ್ರತ್ಯೇಕ ದಾಖಲೆಯಿದರೊಂದಿಗಿದೆ."

ಹೈದರಾಬಾದಿನ ತಿರಸ್ಕಾರ

ಮೇಲಿನ ಕರಾರುಪತ್ರ ಮತ್ತು ಫರ್ಮಾನಿನ ಕುರಿತು ನಿಜಾಮರಿಗೆ ಬುಡದಿಂದ ತುದಿಯ ವರೆಗೂ ಆಕ್ಷೇಪಗಳಿದ್ದುದರಿಂದ ಅವರದನ್ನು ನಿರಾಕರಿಸಿದ್ದಾರೆ. ಪುನ: ಮಾತುಕತೆ ನಡಿಸಬೇಕೆಂದು ಹೈದರಾಬಾದಿನಿಂದಲೇ ನಿಜಾಮ್ ಸರಕಾರದ ನಾಯಕರು ಸೂಚನೆ ಕಳುಹಿದ್ದರೂ ಭಾರತ ಸರಕಾರವು ಈ ಕುರಿತು ಬೇರೆ ಮಾತಿಲ್ಲವೆಂದು ಮೊದಲೇ ತಿಳಿಸಿಟ್ಟುದರಿಂದ ಒಪ್ಪದೆ, ಪಂಡಿತ ನೆಹರುಗಳು ಇನ್ನೇ ಮಾತುಕತೆ ಮುಗಿಯಿತೆಂದು ತಾ 17ರಲ್ಲಿ ನವಡಿಲ್ಲಿಯ ಪತ್ರಿಕಾ ಸಮ್ಮೇಲನದಲ್ಲಿ ವಿವರವಾಗಿ ತಿಳಿಸಿ ಮೇಲಿನ ಶರ್ತ ಪತ್ರಗಳನ್ನು ಪ್ರಕಟಣೆಗೆ ಕೊಟ್ಟರು. ಹೈದರಾಬಾದಿನ ಪ್ರಧಾನಿ ಮಿ. ಲಾಯಿಕ್ ಅಲಿಗಳು ಆಕಾಶವಾಣೀ ಭಾಷಣ ಕೊಟ್ಟು ತಮ್ಮ ಕೃತಕ ವಿನಯವನ್ನು ಪ್ರದರ್ಶಿಸಿದ್ದಾರಲ್ಲದೆ, ಹೈದರಾಬಾದಿನ ಜನತೆ ಒಗ್ಗಟ್ಟಾಗಿ ತ್ಯಾಗಕ್ಕೆ ಸಿದ್ಧರಾಗಬೇಕೆಂದು ಕೇಳಿಕೊಂಡು ಸಂಸ್ಥಾನದ ವಿರುದ್ಧಾಚರಣೆಗಿಳಿಯುವವರನ್ನು ಕಠಿಣವಾಗಿ ಶಿಕ್ಷಿಸಲಾಗುವದೆಂದು ಎಚ್ಚರಿಸಿದ್ದಾರೆ. ರಝಾಕಾರ್ ನಾಯಕ ರಜ್ವಿಯಂತೂ "ಭಾರತ ಸರಕಾರಕ್ಕೆ ಯುದ್ಧ ಬೇಡವಾಗಿದ್ದರೆ ನಮಗೂ ಬೇಕಾಗಿಲ್ಲ. ರಝಾಕಾರರಾರೂ ಭಾರತದ ಗಡಿದಾಟದಂತೆ ನಾವು ನೋಡಿಕೊಳ್ಳುತ್ತೇವೆ. ಆದರೆ ಅವರ ಒಬ್ಬನೇ ಒಬ್ಬ ಸೋಲ್ಜರ್ ಹೈದರಾಬಾದ್ ನೆಲದೊಳಗೆ ಕಾಲಿಟ್ಟರೆ ನಾಕ:- 5 ಲಕ್ಷ ರಝಾಕಾರರು ಭಾರತದೊಳಗೆ ದಾಳಿಯಿತ್ತಿದವರು ಎತ್ತೆಲ್ಲಿ ನಿಂತಾರೆಂದು ಹೇಳಲು ನನ್ನಿಂದ ಸಾಧ್ಯವಿಲ್ಲ. ಅವರು ಮುಸಲಿಪಟ್ಟಣ ಮತ್ತಿತರ ಸ್ಥಳಗಳಿಗೆ ಸೇರುವದಂತೂ ಖಂಡಿತ" ಎಂದು ಆರ್ಭಟಿಸಿದ್ದಾನೆ. ಭಾರತ-ಹೈದರಾಬಾದುಗಳ ಗಡಿಗಳಲ್ಲಿ ಹೊಸ ರೂಪದ ಘರ್ಷಣೆಗಳು ನಡೆಯುತ್ತಿರುವ ಸುದ್ದಿಗಳು ಬರುತ್ತಿವೆ. ಮುಂದೇನು?

ನಡಿಯುವ ಚಿತ್ರ
ಶೋರೆಯವರ
ಶಾಲಿಮಾರ್
ಮನೋರಮಾ, ಚಂದ್ರಮೋಹನ್, ಅಲ್‌ನಾಸಿರ್
ಮುಂದಿನ ಚಿತ್ರ
ಪ್ರಭಾತ್‌ದವರ ಹಮ್ ಏಕ್ ಹೈಂ
ಕಮಲಾ ಕೊಟ್ನಿಸ್, ದುರ್ಗಾಖೋಟೆ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಉಡುಪಿ

ವಯಸ್ಕರ ಶಿಕ್ಷಣ ತರಬೇತಿ ಶಾಲೆ-ಯ ಉದ್ಘಾಟನಾ ಸಮಾರಂಭವು ಈ ಜೇ ತಾ 12ರಲ್ಲು ಟ್ರೈನಿಂಗ್ ಶಾಲಾ ಹೆಡ್ಮಾಸ್ತರ್ ಶ್ರೀ ಕೆ. ಸಂಜೀವಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವಯಸ್ಕರ ಶಿಕ್ಷಣ ತರಬೇತಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ. ಲಕ್ಷ್ಮೀನಾರಾಯಣ ರಾಯರು ಸ್ವಾಗತ ಭಾಷಣವಿತ್ತರು. ಶ್ರೀ ಕೆ. ನರಹರಿ ಕಾಮತರವರು ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು.

ಅಭಿನಂದನೆ--ಸ್ಥಳೀಯ ಬಾರ್ ಎಸೋಸಿಯೇಶನಿನವರು ತಾ 21ರಲ್ಲಿ ಶ್ರೀ ಸಿ. ರಾಜಗೋಪಾಲಾಚಾರ್ಯರು ಗವರ್ನರ್ ಜನರಲ್ ಪದವಿಯನ್ನೇರಿದ ಮುಹೂರ್ತದಲ್ಲಿ ಅವರನ್ನು ಅಭಿನಂದಿಸಿ ಶ್ರೇಯಸ್ಸನ್ನು ಕೋರುವ ಠರಾವುಮಾಡಿ ತಂತಿ ಕಳಿಸಿರುವರು.

ವೈದ್ಯ ಸಂಘದ ಸಭೆ--ಉಡುಪಿ ತಾಲೂಕು ನಿಖಿಲ ಭಾರತೀಯ ವೈದ್ಯ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯು ತಾ. 20-6 1948ರಲ್ಲಿ ಶ್ರೀ ಭುವನೇಂದ್ರ ಫ್ಲಾರ್ಮಸ್ಯನ ಉಡುಪಿ ಅಫೀಸಿನಲ್ಲಿ ಶ್ರೀ. ಪಾಂಗಾಳ ಲಕ್ಷ್ಮೀನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ಜರಗಿ ಅಧಿಕಾರಿ ವರ್ಗದ ಚುನಾವಣೆ ಜರಗಿ ಮದ್ರಾಸು ಸರಕಾರದ ಮದ್ಯಪಾನ ನಿರೋಧದ ಧೋರಣೆಯಿಂದ ಭಾರತೀಯ ವೈದ್ಯ ವರ್ಗಕ್ಕೆ ಉಂಟಾದ ತೊಂದರೆಗಳ ನಿವಾರಣೆಯನ್ನು ಮಾಡದೆ ಈ ವರೆಗೆ ಧರಿಸಿದ ತಟಸ್ಥ ಧೋರಣೆಯನ್ನು ವಿರೋಧಿಸುವ ಮತ್ತು ಈಗಲಾದರೂ ಅಧಿಕಾರವರ್ಗದವರು ಈ ಕುರಿತು ತಕ್ಕ ವ್ಯವಸ್ಥೆಯನ್ನು ಶೀಘ್ರದಲ್ಲಿಯೇ ಮಾಡಬೇಕೆನ್ನುವ ಠರಾವಾಯಿತು

ಕ. ಕಮ್ಯೂನಿಸ್ಟ್ ನಾಯಕನಾಗಿದ್ದು ದೀರ್ಘಾವಧಿಯಿಂದ ತಲೆಮರೆಸಿಕೊಂಡಿದ್ದ ಶ್ರೀ ಕೆ. ರಾಘವನರನ್ನು ಉಡುಪಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಮಿ. ಆರ್. ಯಸ್. ಅಮ್ಮನ್ನ ಹಾಗೂ ಶ್ರೀ ಎಮ್. ಮಂಜುನಾಥ್ ಮತ್ತು ಶ್ರೀ ಬಾಬು, ಇವರು ಇದೇ ತಾ 16ರಲ್ಲಿ ಸೋಮೇಶ್ವರದಲ್ಲಿ ದಸ್ತಗಿರಿಮಾಡಿದ್ದಾರೆ. ಈ ಸಂಬಂಧವಾಗಿ ಪೋಲೀಸ್ ಶ್ರೀ ಎಮ್. ಮಂಜುನಾಥರ ಸಾಹಸಕ್ಕಾಗಿ ಡಿ. ಯಸ್. ಪಿ. ಯವರು 10 ರೂ. ಬಹುಮಾನನೀಡಿರುವರೆಂದೂ ಈ ಮೊದಲು ತಲೆತಪ್ಪಿಸಿಕೊಂಡಿದ್ದ ಶ್ರೀ ಸೀನನಾಯ್ಕರನ್ನೂ ಶೋಧಿಸಿ ಕೈದುಮಾಡಿದ ಪ್ರಯತ್ನವು ಮಿ. ಅಮ್ಮನ್ನ ಮತ್ತು ಶ್ರೀ ಮಂಜುನಾಥರದ್ದೆಂದೂ ತಿಳಿಯಬರುತ್ತದೆ.

ವಿನಂತಿ- ಉಡುಪಿಯ ಗಣ್ಯನಾಗರಿಕರೂ ಪ್ರತಿಭಾವಂತ ಸಾಹಿತಿಗಳೂ ಆದ ಶ್ರೀ ಕೂಡ್ಲಿಕಲ್ ಶ್ರೀನಿವಾಸರಾಯರು ಬದುಕಿದ್ದಾಗ ನಾಡಿಗೆ-ನುಡಿಗೆ ಸಲ್ಲಿಸಿದ ಸೇವೆಯು ಗುರುತು ಚಿರಕಾಲ ಉಳಿವಂತೆ ಒಂದು ಸೂಕ್ತ ಸ್ಮಾರಕ ಯೋಜನೆಯನ್ನು ಪರ್ಯಾಲೋಚಿಸುವರೆ ತಾ 24-6-48ರಲ್ಲಿ ಬೋರ್ಡ್ ಹೈಸ್ಕೂಲಿನಲ್ಲಿ ಸಂಜೆ ಘಂಟೆ 5ಕ್ಕೆ ಒಂದು ಸಭೆ ಜರುಗಿಸಬೇಕೆಂದು ಅವರ ಮಿತ್ರಮಂಡಳಿ ನಿಶ್ಚಯಿಸಿದೆ. ಈ ವಿಚಾರದಲ್ಲಿ ಆಸಕ್ತಿಯುಳ್ಳವರೆಲ್ಲ ಆ ಸಭೆಗೆ ಸಕಾಲಕ್ಕೆ ದಯಮಾಡಿಸಿ ಸೂಕ್ತ ಸಲಹೆಗಳನ್ನಿತ್ತು ಸಹಕರಿಸಬೇಕೆಂದು ಕೋರಿದೆ.

ಬೈಲೂರು ವಾಸುದೇವರಾವ್,
ಕೆ ವಿಠಲಶೆಟ್ಟಿ,
ಕೆ. ಹೊನ್ನಯ ಶೆಟ್ಟಿ,
ಬನ್ನಂಜೆ ರಾಮಾಚಾರ್ಯ.



ಉಡುಪಿ ಡಿ. ಮು. ಕೋರ್ಟಿನಲ್ಲಿ,

O. P. No. 24/1948

1 ರೂಪಿಬಾಯಿ-ನಾರು ಯಾನೆ ನಾರಾಯಣ ನಾಯ್ಕರ ವಿಧವೆ, 2. ಗುಂಡನಾಯ್ಕ, 3. ನಾಗು ನಾಯ್ಕ, ನಾರು ಯಾನೆ ನಾರಾಯಣ ನಾಯ್ಕರ ಮಗಂದಿರು ಉಡುಪಿ ತಾಲ್ಲೂಕು ಹೆರ್ಗ ಗ್ರಾಮದ ಕೊಡಂಗೆ—ಅರ್ಜಿದಾರರು

ಮತ್ತು

ಕಮಲ ಯಾನೆ ನೇತ್ರು—ಬಡಗಬೆಟ್ಟು ಅಪ್ಪಯ್ಯ ನಾಯ್ಕರ ಮಗಳು-ಸದ್ರಿ ಹೆರ್ಗ ಗ್ರಾಮದ ಪಾಕಳ—ಯೆದ್ರಿಳು

ಇವರೊಳಗೆ

ಸದ್ರಿ ಯೆದ್ರಿಳಿಗೆ ಮತ್ತು ಇತರ ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ.

1ನೇ ಅರ್ಜಿದಾರಳ ಮಗ, 2, 3ನೇ ಅರ್ಜಿದಾರರ ಸಹೋದರ ಮತ್ತು ಯೆದ್ರಿಳ ಮೊದ್ಲಿನ ಗಂಡ ಸದ್ರಿ ಹೆರ್ಗ ಗ್ರಾಮದ ಕೊಡಂಗೆಯಲ್ಲಿ ತಾ. 2-5-47ಲ್ಲಿ ಮೃತಪಟ್ಟ ಲಕ್ಷ್ಮಣ ನಾಯ್ಕನು "The Bombay Cooperative Insurance Society, Ltd., Bombay" ಯೆಂಬ ಕಂಪೆನಿಯಲ್ಲಿ ಪಡೆದ ನಂ. 7397ನೇ ಪೋಲಿಸಿ ಬಾಬ್ತು ಬರತಕ್ಕ ರೂಪಾಯಿ 50/0-ನ್ನು ವಸೂಲು ಮಾಡುವರೆ 1ನೇ ಅರ್ಜಿದಾರಳಿಗೋಸ್ಕರ 2ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರರು ದಾಖಲು ಮಾಡಿದ ಸದ್ರಿ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾರೀಕು 7-7-48ಕ್ಕೆ ತನಿಖೆಗೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನಿಖೆಯು ಸದ್ರಿ ಕೋರ್ಟು ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ವ್ಯಾಖ್ಯಾನಿಸಿಕೊಳ್ಳಬೇಕಾಗಿ ಈ ಮೂಲಕ ಸದ್ರಿ ಯೆದ್ರಿಳು ಮತ್ತು ಇತರ ಸಮಸ್ತರಿಗೆ ಸಹಾ ತಿಳಿಯಪಡಿಸಲಾಗುತ್ತದೆ.

Haradi Ramanatha Pai
Advocate for Petitioners
Udipi, South Kanara. Date 16-6-1948

ದಕ್ಷಿಣ ಕನ್ನಡ

ಸಾಂತೂರು—ಇದೇ ತಾ 12ರಲ್ಲಿ ಸಾಂತೂರು ಪಂಚಾಯತ ಬೋರ್ಡಿನ ನೇತೃತ್ವದಲ್ಲಿ ಮುದರಂಗಡಿಯಲ್ಲಿ ಸಂತೆ ಮಾರ್ಕೆಟನ್ನು ಜಿಲ್ಲಾ ಪಂಚಾಯತ ಆಫೀಸರ್ ಶ್ರೀ. ಕೆ. ಶೀನ ಸೆಟ್ಟರು ಉದ್ಘಾಟನೆ ಮಾಡಿದರು. ಬೋರ್ಡಿನ ಅಧ್ಯಕ್ಷರಾದ ಶ್ರೀ ಎಸ್. ಸುಂದರ ಸೆಟ್ಟರು ಹೊಸ ಸಂತೆಯ ಏರ್ಪಾಡಿನ ಕುರಿತು ಬೋರ್ಡಿನ ಕಡೆಯಿಂದ ನಡೆದ ಕಾರ್ಯಕಲಾಪಗಳನ್ನು ವಿವರಿಸಿದರು. ಶ್ರೀಗಳಾದ ವಿದ್ವಾನ್ ವೈ. ಕಾಳಪ್ಪಸೆಟ್ಟಿ, ಕೆ. ವೆಂಕಟ್ರಾಯ ಪೈ ಮತ್ತು ಪಿ ರಾಮರಾಯ ಪ್ರಭುಗಳವರು ಸಂದರ್ಭೋಚಿತ ಮಾತುಗಳನ್ನಾಡಿದರು. ರಾತ್ರಿ ಹರಿಕಥಾ ಕಾಲಕ್ಷೇಪದಿಂದ ಅಂದಿನ ಸಮಾರಂಭ ಕೊನೆಗೊಂಡಿತು.

ಮೂಡಬಿದ್ರೆ—ಇದೇ ಬರುವ ಜುಲಾಯಿ ತಿಂಗಳ ಪ್ರಥಮವಾರದಲ್ಲಿ ಹುಡುಗಿಯರಿಗಾಗಿ ಒಂದು ಸೆಕೆಂಡರಿ ಶಾಲೆಯು ಮೂಡಬಿದ್ರಿ ಎಜ್ಯುಕೇಶನಲ್ ಟ್ರಸ್ಟಿನ ಆಶ್ರಯದಲ್ಲಿ ತೆರೆಯಲ್ಪಡುವುದು.

ಬೈಲೂರು—ಇದೇ ತಾ. 13ರಲ್ಲಿ ಸೇರಿದ ಕಾಂಗ್ರೆಸ್ ಸೇವಾದಳದ ಸಭೆಯಲ್ಲಿ ಕೀರ್ತಿಶೇಷ ಸಾಂತ್ಯಾರು ಅನಂತಪದ್ಮನಾಭ ಭಟ್ಟರ ನಿಧನಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವಾಯಿತು, ಶ್ರೀ ಬಿ. ಕೇಶವ ಕಿಣಿಯವರು ದಿವಂಗತರು ಗ್ರಾಮಾಂತರಗಳಲ್ಲಿ ಮಾಡಿದ ಸೇವೆಯನ್ನು ಪ್ರಸ್ತಾಪಿಸಿ ಭಾಷಣವಿತ್ತರು. ಬೈಲೂರು ಕೇಂದ್ರದ ಅಧ್ಯಾಪಕ ಸಂಘದ ಸಭೆಯು ತಾ 12ರಲ್ಲಿ ಶ್ರೀ. ಡಿ. ಡಿ. ಅಶ್ವಾಲರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೆ. ಅಂತಯ್ಯ ಸೆಟ್ಟರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚಿಸಿತು.

ಪೆರ್ಡೂರ—ಶ್ರೀ. ಅನಂತಪದ್ಮನಾಭ ದೇವಸ್ಥಾನ ಶಾಲೆಯ ನೂತನ ಕಟ್ಟಡ ಪ್ರವೇಶೋತ್ಸವವು ಇದೇ ತಾ 16ರಲ್ಲಿ ಜರಗಿತು. ಶ್ರೀಗಳಾದ ಅನಂತಪದ್ಮನಾಭ ಅಡಿಗ, ಸಿ. ಎಚ್. ಸೆಟ್ಟಿ, ಎ. ಪಿ. ಕಲ್ಯಾಣಿ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಕಂಡ್ಲೂರು—ಸ್ಥಳೀಯ 'ವಿದ್ಯಾವರ್ಧಕ ಸಂಘ'ವು ಹೊಸತಾಗಿ ತೆರೆದಿರುವ 'ನೇತಾಜಿ ಎಲಿಮೆಂಟರಿ ಶಾಲೆ'ಯು ಹಾಯರ್ ಎಲಿಮೆಂಟರಿ ಶಾಲೆಯಾಗಿ ಪರಿವರ್ತನೆಗೊಂಡಿದೆ. ತತ್ಸಂಬಂಧವಾದ ಶಾಲಾ ಆರಂಭೋತ್ಸವವು ತಾ 12-6-48ರಲ್ಲಿ ಕುಂದಾಪುರ ರೇಂಜಿನ ಶಾಲಾ ಇನ್ಸ್‌ಪೆಕ್ಟರರಾದ ಸನ್ಮಾನ್ಯ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಶ್ರೀಗಳಾದ ಡಾ। ರಾಜೀವ ಸೆಟ್ಟಿ, ಎಚ್. ಸೂರಪ್ಪ ಸೆಟ್ಟಿ, ವೇಣಪ್ಪ ಹೆಗ್ಡೆ, ನಾರಾಯಣ ಸೆಟ್ಟಿ, ಶಂಕರರಾವ್ ಭಂಡಾರಕರ್ ಮೊದಲಾದವರು ಶಾಲೆಯು ದಿನೇ ದಿನೇ ಅಭಿವೃದ್ಧಿಹೊಂದಲೆಂದು ಹರಸಿ ಮಾತನಾಡಿದರು.

ಬಸ್ರೂರು—ತಾ 20-6-48ರಲ್ಲಿ ಹಿಂದೂ ಎಯ್ಡೆಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕುಂದಾಪುರ ತಾಲೂಕು ಆಯುರ್ವೇದ ವೈದ್ಯರ ಪ್ರಥಮ ಸಮ್ಮೇಳನವು ಶ್ರೀ ಕೆ. ವಿ. ಕೆ. ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯನಿರ್ವಾಹಕ ಕಮಿಟಿಯು ರಚಿಸಲ್ಪಟ್ಟು ಆಯುರ್ವೇದ ವೈದ್ಯರಿಗೆ ಅತ್ಯಗತ್ಯವಿರುವ ಕೆಲವು ವಿಷಯಗಳ ಕುರಿತು ಚರ್ಚೆಯಾಗಿ ನಿರ್ಧಾರಗಳಾದುವು.

ಬಾರ್ಕೂರು ಬಿಲ್ಲವರ ಚಾರಿಟಿ ಸಂಘ. ಮುಂಬಾಯಿ—ಈ ಸಂಘದಿಂದ ಸಮಾಜದ ಬಡ ವಿದ್ಯಾರ್ಥಿಗಳು, ವಿದ್ಯಾರ್ಥಿವೇತನವನ್ನು ಪಡೆಯಲಪೇಕ್ಷಿಸುವವರು ಜುಲಾಯಿ ತಿಂಗಳ ತಾ. 30ರೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಬರೆದು ಪಡಕೊಳ್ಳಬೇಕಾಗಿ ಈ ಮೂಲಕ ತಿಳಿಸಲಾಗಿದೆ. ತೇರ್ಗಡೆಹೊಂದಿದ ವಿದ್ಯಾರ್ಥಿಗಳು ಪರೀಕ್ಷೆಯ ಫಲಿತಾಂಶದೊಡನೆ ಮುಂದುವರಿಸುವ ಬಗ್ಗೆ ಅರ್ಜಿಯನ್ನು ಕೊಡಬೇಕು. ಮಾ. ಜ. ಕಾರ್ಯದರ್ಶಿ ಬಾರ್ಕೂರು ಬಿಲ್ಲವರ ಚಾರಿಟಿ ಸಂಘ ಅಲ್ಲಿ ಛೇಂಬರ್ಸ್, 2ನೇ ಮಾಳಿಗೆ, ನೆ ಡೋಸ್ ರಸ್ತೆ, ಕೋಟೆ, ಮುಂಬಾಯಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 175/48

ಲಕ್ಷ್ಮಣ ರಾವ್, ಬಿಜೂರು—ವಾದಿ

ಸುಬ್ಬಿಹೆಂಗ್ಸು ಸಹಾ. ಪ್ರತಿವಾದಿರು.

2 ನಾಗ-ಸುಬ್ಬಿಹೆಂಗ್ಸಿನ ಮಗ. ಬಿಜೂರು ಗ್ರಾಮ, ವಾದಿಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದರೆ

ವಾದಿಗೆ ಪ್ರತಿವಾದಿಯಿಂದ ಬರತಕ್ಕ ಕಳೆದ ವಾರ್ಷಿಕ ಮತ್ತು ವ್ಯಯ ಸಂಗರಗಳ ಚಾಲಗೇಣಿ ಗೇಣಿಬಾಕಿ ಬಗ್ಗೆ ಮಾಡಿದ ದಾವೆಯು ತಾರೀಕು 5-7-48ಕ್ಕೆ ಆಖೈರ ತನಿಖೆಗೆ ಇಡೋಣಾಗಿದೆ. ಆ ಕುರಿತು ನಿಮ್ಮದೇನಾದರೂ ಉದಾಹರಣೆಯಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಸ್ವತಹಾ ವ ವಕೀಲರದ್ವಾರಾ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

G. Sanjiva Rao,
Pleader for Plff

Kundapur Date 16-6-48

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಸರಿಹೊತ್ತಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.5/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs P. DEVEE, F DS. (N. J.)
Tollygunge CALCUTTA
ಸ್ಟಾಕಿಸ್ಟರು: ಶರ್ಮಾಕಂಪೆನಿ, ಮಂಗಳೂರು



Approved firm by the Govt. of Mysore Certified by the Agent of the Govt. of Cylone & Indian.

ಎಲ್ಲ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ
ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
'ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding
ROYAL MAHAL,
UDIPI. S Kanara.

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ರುಚಿಕರವೂ ಮಧುರವೂ ಆದ
ಕೃಷ್ಣಾ ಶುಗರ್ ಬರ್ಫಿ

ಹನ್ನೆರಡು ತುಂಡುಗಳ ಪೆಕೆಟುಗಳಲ್ಲಿ ದೊರೆವುದು
ಪುಷ್ಟಿಕರವಾದ, ಗೇರುಬೀಜ ಮೊದಲಾದುವನ್ನು ಉಪಯೋಗಿಸಿ ತಯಾರಿಸಿದ ಪ್ರತಿಯೊಬ್ಬನೂ ಮೆಚ್ಚುವ ಒಂದು ಉತ್ಕೃಷ್ಟ ತಿಂಡಿ

ಕೃಷ್ಣಾ ಕೆಶ್ಯು ಕರ್ನೆಲ್ಸ್ ಅಥವಾ ಸಕ್ಕರೆ ಗೇರುಬೀಜ

ಕೇಸರಿ ಮೊದಲಾದ ಪರಿಮಳಯುಕ್ತ ವಸ್ತುಗಳನ್ನು ಉಪಯೋಗಿಸಿ, ಸಕ್ಕರೆಯ ಪಾಕದಲ್ಲಿ ತಯಾರಿಸಿದ ಗೇರುಬೀಜದ ಮಿಠಾಯಿ.
ಅರ್ಧ ಮತ್ತು ಕಾಲು ರಾತ್ಲಿನ ಪೆಕೆಟುಗಳಲ್ಲಿ ದೊರೆವುವು.

ಶ್ರೀ ಕೃಷ್ಣಾ ಟೋಫಿ ವರ್ಕ್ಸ್,
ರಥಬೀದಿ, ಮಂಗಳೂರು.

ಜೈಹಿಂದ್!

ಉತ್ತಮ ತಿಂಡಿ ತಿನಸು! ಸುವ್ಯವಸ್ಥಿತ ಏರ್ಪಾಡು!

ನ್ಯೋ ರೋಯಲ್ ಕೇಫ್

ಸಂತೆಕಟ್ಟೆ, ಉಡುಪಿ.

ಉಡುಪಿ ಬ್ರಾಹ್ಮಣರ

ಉಪಹಾರ ಮತ್ತು ಭೋಜನ ಗೃಹ.

ದಯವಿಟ್ಟು ಒಮ್ಮೆ ಸಂದರ್ಶಿಸಿ ಸಂತುಷ್ಟರಾಗಿರಿ!

ವಿ. ಸೂ.—ಉಪಹಾರ ಸಮಾರಂಭಗಳ ಏರ್ಪಾಡು ಕೈಕೊಳ್ಳುವೆವು.

ಹೆಡ್ ಆಫೀಸು: ಶ್ರೀ ದುರ್ಗಾ ಭವನ, ಮೂಲ್ಕಿ.

ಯಂ. ಆರ್. ಭಟ್, (ಆರ್ಟಿಸ್ಟ್) ವ್ಯವಸ್ಥಾಪಕ.

NEO ROYAL CAFE,
Boarding & Lodging,
Santhekatte, UDIPI.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ; ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳೂ ದೊರೆಯುತ್ತವೆ, ಕ್ಯಾರಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ಸರಬರಾಜಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು - ಪ್ರಾಗ್ರೆಸ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್‌ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವಾದ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಅಂಗಡಿಗಳಿಗೆ ಬರುವವು. ಅಂದರೆ ರೇವಾ ರಯಬ್ರಾರ ಒಂದು ಬಾಣಂತಿಗೆ ಸಾಕಾಗುವಷ್ಟು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು—ಡಾ| ಬಿ. ಕೆ. ಶಿವರಾಮ ರಾವ್, ಕಾಂಚಿಬೆಟ್ಟು, ಉಡುಪಿ.

ಮಂಗಳೂರು

ಬೆಲ್ಲದ ಸೊಸ್ಯಾಟಿಗಳು ಪ್ರಸ್ತುತ ಜಿಲ್ಲೆಯಲ್ಲಿ 55 ಸಹಕಾರಿ ಬೆಲ್ಲದ ಸೊಸ್ಯಾಟಿಗಳನ್ನು ಸ್ಥಾಪಿಸಲಾಗಿದೆ. ಅವುಗಳಲ್ಲಿಯ ಮೂರ್ತೆದಾರ ಸದಸ್ಯರ ಸಂಖ್ಯೆಯು 4277 ಇದ್ದು ಆ ಮೂಲಕ 8 ಲಕ್ಷ ರಾತ್ತಲು ಬೆಲ್ಲ ತಯಾರಿಸಲ್ಪಟ್ಟಿದೆ. ಅದರ ಒಟ್ಟು ಬೆಲೆಯು ರೂಪಾಯಿ 16,000/–

ಫಸ್ಟ್‌ಗ್ರೇಡ್ ಕಾಲೇಜು ಸ್ಥಳೀಯ ಗವರ್ನಮೆಂಟು ಕಾಲೇಜು ಫಸ್ಟ್‌ಗ್ರೇಡಿಗೇರಿಸಲ್ಪಟ್ಟು ಬಿ. ಎ. ಮತ್ತು ಬಿ. ಕಾಂ. ತರಗತಿಗಳನ್ನು ತೆರೆಯುವ ಏರ್ಪಾಡಾಗಿದೆ. ಕಾಲೇಜಿಗೆ ಹೊಸತಾಗಿ ಬಂದ ಪ್ರಿನ್ಸಿಪಾಲ್ ಜನಾಬ್ ಹಸೀಮ ಬಿ. ಎ. (ಆನರ್ಸ್) ಲಂಡನ್, ಅವರಿಗೆ ವಿದ್ಯಾರ್ಥಿಗಳು ಮನವಿ ಕಳುಹಿಸಬೇಕೆಂದು ಕೋರಲಾಗಿದೆ.

ಹೊಸ ಡಿ. ಎಸ್. ಪಿಯವರು ಶ್ರೀ ಎಮ್. ಸಿಂಗಾರವೇಲು ಅವರು ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್‌ರಾಗಿ ವರ್ಗಾಯಿಸಲ್ಪಟ್ಟು ಈಗ ಚಾರ್ಜು ವಹಿಸಿದ್ದಾರೆ.

ಬೆಲ್ಲ ತಯಾರಿಸುವ ಶಿಕ್ಷಣ ಕೇಂದ್ರ ಮಾಪಟಿಬಿದ್ರೆಯಲ್ಲಿ ತಾಳೆಯ ಬೆಲ್ಲ ತಯಾರಿಸುವುದನ್ನು ಕಲಿಸುವುದಕ್ಕಾಗಿ ಒಂದು ಶಿಕ್ಷಣ ಕೇಂದ್ರವನ್ನು ತೆರೆಯಲು ಭಾರತ ಸರಕಾರದ ಆಹಾರ ಮತ್ತು ಕೃಷಿಖಾತೆಯು ನಿಶ್ಚಯಿಸಿರುತ್ತದೆ. ಈ ಕುರಿತು ತಕ್ಕ ವ್ಯವಸ್ಥೆ ಮಾಡಲು ಭಾರತ ಸರಕಾರದ ತಾಳೆಬೆಲ್ಲ ತಜ್ಞರಾದ ಶ್ರೀ ಎಸ್. ಪಿ. ಕಾಮತರು ಇಲ್ಲಿಗೆ ಬಂದಿದ್ದು ಕೇಂದ್ರತೆರೆಯಲು ತಕ್ಕ ವ್ಯವಸ್ಥೆ ಮಾಡುತ್ತಿದ್ದಾರೆ.

ಪ್ರಧಾನರ ಕಾರ್ಯದರ್ಶಿ ನಮ್ಮ ಜಿಲ್ಲೆಯವರಾದ ಶ್ರೀ ಎ. ವಿ. ಪೈ ಐ.ಸಿ.ಎಸ್. ಅವರು ಭಾರತದ ಪ್ರಧಾನಮಂತ್ರಿ ಪಂಡಿತ ನೆಹರೂರವರ ಡೆಪ್ಯುಟಿ ಕಾರ್ಯದರ್ಶಿಗಳಾಗಿ ನೇಮಕ ಹೊಂದಿರುವರು.

ರೇಶನ್ ಚೌಕಿ ರದ್ದು ಜಿಲ್ಲೆಯ ರೇಶನ್ ಚೌಕಿಗಳನ್ನು ರದ್ದು ಮಾಡುವಂತೆ ಮದ್ರಾಸು ಸರಕಾರದ ಆಜ್ಞೆ ಹೊರಟಿರುವುದು

ನಗರ ಸಭೆಯು ಇದೇ 12ರಲ್ಲಿ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ನಗರಸಭೆಯ ಆರೋಗ್ಯ ಸಿಬ್ಬಂದಿಯ ಖರ್ಚು ಹೆಚ್ಚಾದುದರಿಂದ ಉತ್ಪತ್ತಿಯನ್ನು ಹೆಚ್ಚಿಸುವರೆ ಗಂಧಕ ಕರಗಿಸುವ, ಬಣ್ಣ ಹಾಕುವ, ಹಂಚು ಇಟ್ಟಿಗೆ ತಯಾರಿಸುವ, ಕಟ್ಟಿಗೆ, ಹುಲ್ಲು, ಮರಮುಟ್ಟು ಮಾರುವ, ಗೇರುಬೀಜ ಹುರಿಯುವ, ಸುಣ್ಣ ಮಾರುವ ಕೈಗಾರಿಕೆಗಳಿಗೆ ಲೈಸೆನ್ಸು ದರವನ್ನು ಏರಿಸಬೇಕೆಂದು ನಿಶ್ಚಯಿಸಲಾಯಿತು.

ಕಮ್ಯುನಿಸ್ಟ್ ನಾಯಕರ ಬಂಧನ ಮಂಗಳೂರಿನ ಕಮ್ಯುನಿಸ್ಟ್ ನಾಯಕರಾದ ಶ್ರೀ ಶಾಂತಾರಾಮ ಪೈಗಳನ್ನು ಚಿಕ್ಕಮಂಗಳೂರಲ್ಲಿ ಅಲ್ಲಿಯ ಪೋಲೀಸರು ಬಂಧಿಸಿದ್ದಾರೆ ಈಗಾಗಲೇ ಅವರನ್ನು ಮಂಗಳೂರಿಗೆ ತಂದಿದ್ದಾರೆಂದು ವಾರ್ತೆ

ಎಳ್ಳು ಮತ್ತು ತೆಂಗಿನ ಹಿಂಡಿಗಳ ವ್ಯಾಪಾರಕ್ಕೆ ಇನ್ನುಮುಂದೆ ಲೈಸೆನ್ಸು ತೆಗೆದು ಹಾಕಿ ಅವರ ವ್ಯಾಪಾರವು ಸರಾಗವಾಗಿ ನಡೆಯುವಂತೆ ಸರಕಾರವು ಮಾಡಿದೆಯೆಂದು ಮಂಗಳೂರಿನ ವಣಿಜ ಸಂಘಕ್ಕೆ ತಿಳಿದುಬಂದಿದೆ

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ... ನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ನೋಟೀಸು

ಕುಂದಾಪುರ ಡಿ. ಮುಂ. ಕೋರ್ಟಿನಲ್ಲಿ.

ಉಡುಪಿ ಡಿ.ಮು.ಕೋರ್ಟು S.C. 267/1946
S. E. P. 234/1948

ವಾದಿ—ಪಟ್ಟಣಸೆಟ್ಟಿ ಪುತ್ರಪ್ಪ

ಪ್ರತಿವಾದಿರು. ವೀರಭದ್ರನ್ಯಾಕ ವಗೈರಾ

1ನೇ ಪ್ರತಿವಾದಿ. ವೀರಭದ್ರ ನ್ಯಾಕ, ಬ್ರಹ್ಮಾವರ ಮಟಪಾಡಿ ನಾರಾಯಣ ನ್ಯಾಕನ ಮಗ, ಶಾಲಿ ಕುಂದಾಪುರ ತಾಲೂಕು ತ್ರಾಸಿ ಗ್ರಾಮದಲ್ಲಿರುವವ.

ವಾದಿಯು ಸದರಿ ಡಿಕ್ರಿಮೇಲೆ ಅಮ್ಲುಜಾರಿ ನಡಿಸಿ 1ನೇ ಪ್ರತಿವಾದಿಗೆ ಕೈಹಿಡಿ ವಾರಂಟು ಹುಕುಂ ಕೊಡಿಸಬೇಕಾಗಿ ಅಪೇಕ್ಷಿಸಿರುವದ್ರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪ ಇದ್ದಲ್ಲಿ ತಾ 2-7-1948ನೇ ದಿವ್ಸ ಸದ್ರಿ ಕೋರ್ಟಿನಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರ್ಮಾಡಿಕೊಳ್ಳಬೇಕು ತಪ್ಪಿದಲ್ಲಿ ನಿಮ್ಮ ಗೈರುಹಾಜರಾತಿಯಲ್ಲಿ ಮುಂದಿನ ಹುಕುಂಮಾಡಲಾದೀತು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

K. Raghunath Shenai,
Pleader for Plaintiff
Coondapoor 13-6-1948

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. NO. 22/1948

1. ಎ. ಶ್ರೀನಿವಾಸ ಮೂರ್ತಿ
2. V. A. ಗೋಪಾಲಕೃಷ್ಣರಾವ್
3. V. A. ವಾಸುದೇವರಾವ್

—ಅರ್ಜಿದಾರರು

ಮೇಲ್ಕಂಡ ಅರ್ಜಿಯಲ್ಲಿ ಹೇಳಿದ ಮೃತ ಶ್ರೀಂಗಾರಮ್ಮನು ಸಿ. ಬಿ. ಸಿ. ಕಂಪನಿಯಲ್ಲಿ ನಂಬ್ರ 4026; 6290 to 6293; 14855 to 14864ನೇ 15 ಶೇರುಗಳ ಅಸಲನ್ನ, ಆ ಬಾಬ್ತು ಡಿವಿಡೆಂಡ್ ಕೂಡಾ ವಸೂಲ್‌ಪಡಿಯುವರೆ ಅರ್ಜಿದಾರರು ಹಕ್ಕುದಾರರಾಗಿ ಎಲ್ಲಾ ಅರ್ಜಿದಾರರ ಕಡೆಯಿಂದ 1ನೇ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವಂತೆ ಕೊಟ್ಟ ಅರ್ಜಿಯು ತಾರೀಕು 7-7-1948ಕ್ಕೆ ತನಿಖೆಗೆ ಇಟ್ಟಿರುವದ್ರಿಂದ ಆಕ್ಷೇಪ ಹೇಳತಕ್ಕವರು ಆ ದಿನ ಬೆಳಿಗ್ಗೆ ಕೋರ್ಟಿನಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Sd **P Padmanabha Rao,**
Vakil for Petitioners
ತಾ 10-6-1948 ಮೊಕ್ಕಾಂ-ಉಡುಪಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 139/48 O. S. 331/35

ಸಂಜೀವ ಶೆಟ್ಟಿ ಕೊಳ್ಕೆಬೈಲು—ಅರ್ಜಿದಾರ

ಶ್ರೀನಿವಾಸ ಹತ್ವಾರ(ಸೌತಿ)ಸಹಾ ಎದ್ರುರು

9 ರಾಮಚಂದ್ರ ಹತ್ವಾರ—ಸೆಂಕಟಾಚಲ ಹತ್ವಾರರ ಮಗ, ತೆಕ್ಕಟ್ಟೆ ಗ್ರಾಮ.

ಅರ್ಜಿದಾರನು ಈ ಮೂಲಕ ತಿಳಿಯಪಡಿಸುವದೇನಂದ್ರೆ

ಸದ್ರಿ ಅಮ್ಲುಜಾರಿಯಲ್ಲಿ ಎದ್ರುರ ಬಾಬ್ತು ಸ್ಥಿರಾಸ್ತಿಯನ್ನು ಜಪ್ತಿಮಾಡಿಸಿದುದರ ಕುರಿತು ಸದ್ರಿ ಜಪ್ತಿ ಕಾಯಂಮಾಡಿಸುವಗೋಸ್ಕರ ತಾ 6-7-48ಕ್ಕೆ ಅದ್ನರ ತನಿಖೆ ಮುಂದೋಡಾಗಿಯದೆ, ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ರೆ ಸದ್ರಿ ದಿವ್ಸಮೇಲ್ಕಂಡ ಕೋರ್ಟು ಮುಂದೆ ಹಗ್ಲು 11 ಗಂಟೆಗೆ ಸ್ವತಹಾ ವ ವಕೀಲರದ್ವಾರಾ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿದೆ.

G. Sanjiva Rao
Pleader for Petitioner
Kundapur Date 16-6-48

ಹೈದರಾಬಾದ್ ಚರ್ಚೆಯ

ಇಕ್ಕಡೆಯ ಪ್ರಮುಖರು

[೧ನೇ ಪುಟದಿಂದ]

ಚಾರದ—ಮನುಷ್ಯ ಲಾಯಿಕ್‌ಅಲಿ. ಹೈದರಾಬಾದಿನ ಪ್ರಧಾನಿ ಪಟ್ಟಕ್ಕಡರಿ, ಖಾಸಗೀ ಜಣ ನಮ್ಮಕ್ಕೀಡಾಗಿದ್ದಾರೆ. ಡಿಲ್ಲಿಯೊಡನೆ ನಡೆಸಿದ ರಾಜಕೀಯ ಕೊಡಕೊಂಡದಲ್ಲೂ ಲಾಯಿಕ್ ಅಲಿ ವ್ಯಾಪಾರೀ ಜಾಣ್ಮೆಯನ್ನೇ ಹೆಜ್ಜೆಹೆಜ್ಜೆಗೆ ಪ್ರದರ್ಶಿಸಿದ್ದರು. ಭಾರತ ಸರಕಾರದ ಕೊನೆಯ ಶರ್ತಗಳ ಲೆಕ್ಕಾಚಾರಗಳನ್ನು ಅಕ್ಷರಶಃ ಹಾಕಿನೋಡಿಯೇ ಡಿಲ್ಲಿಯಿಂದ ಅದನ್ನು ಎತ್ತಿಕೊಂಡು ನಿಜಾಮರ ಸಮ್ಮತಿಗಾಗಿ ಹೋಗಿದ್ದರು. ನಿಜಾಮರು ಆಕ್ಷೇಪಿಸಿದಾಗ ಲಾಯಿಕ್ ಅಲಿ ಅವರ ಬುದ್ಧಿ ಮಾರ್ಪಡಿಸಲು ವಿಧೇಯತಾಭಂಗವಾಗದ ರೀತಿಯಲ್ಲಿ ಪ್ರಯತ್ನಿಸಿರಲೂ ಬಹುದು. ಆದರೆ ಫಲಬಾರದೆ ಹೋದಮೇಲೆ ಈಗ ಎಲ್ಲಾ ತಪ್ಪನ್ನೂ ಭಾರತ ಸರಕಾರದ ತಲೆಯ ಮೇಲೆ ಹೇರಲು ನೋಡಿದ್ದಾರೆ; 'ಬಂದುದೆಲ್ಲಾ ಬರಲಿ-ದೇವರ ದಯೆಯಿಂದ ನೋಡಿಕೊಳ್ಳುವೆವಂತೆ!' ಎಂದು ಕೃತಕ ಧೈರ್ಯ ಪ್ರದರ್ಶನಕ್ಕೂ ಮುಂದಾಗಿದ್ದಾರೆ. ಪಂಡಿತ ನೆಹರುಗಳ ಕೂಡದ ಹಾಗೂ ಭಾರತದ ಸ್ಥಿತಿವಂತಿಗಳಿಗೆ ಮಾತ್ರ ಸಂಬಂಧಿಸಿದ ಮಾತುಗಳೊಡನೆ ಮಿ. ಲಾಯಿಕ್‌ಅಲಿ ಮತ್ತು ಕಾಸಿಮ್ ರಜ್ವಿಯ ಧ್ವಾತದ್ವಾ ನುಡಿಗಳನ್ನು ಹೋಲಿಸುವಾಗ, ಇಂತಹ ಕಳವಳವಿರುವ ಹೈದರಾಬಾದಿಗೆ, ಭಾರತದ ಅತ್ಯುಪಕಾರೀ ಕೊಡುಗೆಯನ್ನು ತಿರಸ್ಕರಿಸುವ ಹುಸಿ ರೋಷಾವೇಶ ಬೇಡವಿತ್ತು ಅನ್ನಿಸುತ್ತದೆ. "ಸ್ವತಂತ್ರ ಭಾರತವು ಸಮರ್ಥ ರಾಷ್ಟ್ರವೆಂಬುದು ಹೈದರಾಬಾದಿಗೆ ಗೊತ್ತಿದೆ. ಅದು ಭೌಗೋಲಿಕವಾಗಿಯೂ ಆರ್ಥಿಕವಾಗಿಯೂ ಅತ್ಯನುಕೂಲಸ್ಥಿತಿಯಲ್ಲಿದ್ದು ಎಲ್ಲಾ ವಿಧಾನಗಳಲ್ಲೂ ಮೇಲ್ಮೈಯಾಗಿದೆ. ಈವಿಶೇಷತೆಗಳನ್ನು ಇದಿರಿಸಲು ಹೈದರಾಬಾದಿಗೆ ಅನುಕೂಲತೆ ಸಾಲದೆಂಬುದೇನೋ ಖಚಿತವೇ. ಆದರೆ ಹೈದರಾಬಾದಿಗೆ ಸತ್ಯ ಮತ್ತು ಗೌರವವನ್ನು ಆಧರಿಸಿರುವ ಅದರ ಅಗಾಧ ನೈತಿಕಬಲವಿದೆ. ಹೈದರಾಬಾದಿಗಿರುವ ಈ ಅಗಾಧ ನೈತಿಕಶಕ್ತಿ ಹಾಗೂ ನ್ಯಾಯ ಮತ್ತು ಗೌರವವನ್ನು ಎತ್ತಿಹಿಡಿಯಬೇಕೆಂಬ ಆದರ ದೃಢ ಸಂಕಲ್ಪ ಹಾಗೂ ಸರ್ವಶಕ್ತ ಭಗವಂತನ ಮೇಲಿರುವ ಅಚಲ ವಿಶ್ವಾಸ ಇವನ್ನು ಸುಲಭದಲ್ಲಿ ಗೆಲ್ಲಲು ಯಾವ ರಾಷ್ಟ್ರದಿಂದಲೂ ಆಗಲಾರದೆಂದು ನನಗೆ ಖಂಡಿತವಿದೆ" ಎಂದೀ ವ್ಯಾಪಾರಿಯು ನ್ಯಾಯ, ನೀತಿ, ಮತ್ತು ದೇವರನ್ನು ಕೂಡಾ ಮಾರ್ಪಡಿಸಿ ತೋರಿಸುವ ದುರ್ವ್ಯಾಪಾರಕ್ಕಿಳಿದಿದ್ದಾರೆ.

ಶ್ರೀ. ವಿ. ಪಿ. ಮೆನನ್

ಈ ಸಂದರ್ಭದಲ್ಲಿ ಹಿಂದೀ ಸರಕಾರದ ಸಂಸ್ಥಾನ ಖಾತೆಯ ಕಾರ್ಯದರ್ಶಿ ಶ್ರೀ. ವಿ. ಪಿ. ಮೆನನರ ಘಟನಾ ಚಾತುರ್ಯ, ಸೂಕ್ಷ್ಮಬುದ್ಧಿ, ಸರ್ವವ್ಯಾಪೀ ಜಾಣ್ಮೆಯನ್ನು ವೈರಿಯಾದರೂ ಕೊಂಡಾಡಬೇಕು. 500ಕ್ಕೂ ಮಿಕ್ಕಿದ ಸಂಸ್ಥಾನಗಳನ್ನು ಹಿಂದೀ ಕೇಂದ್ರದೊಂದಿಗೆ ಪೋಣಿಸಿದ ದಾರಗಳೆಲ್ಲವನ್ನೂ ಹೆಣೆದವರು ಶ್ರೀ ಮೆನನರೇ. ಹೈದರಾಬಾದ್ ಶರ್ತಗಳ ಅರ್ಥಾನರ್ಥ, ಒಳ್ಳಿತು ಒಳನೋಟಗಳೆಲ್ಲವುಗಳನ್ನೂ ಲಕ್ಷ್ಯದಲ್ಲಿಟ್ಟುಕೊಂಡೇ ಅವನ್ನು ರೂಪಿಸಿದವರು ಇವರು. ಸೂಕ್ಷ್ಮ ವಿವೇಚನೆ ನಡೆಯುವ ಪ್ರತಿಯೊಂದು ಮಾತುಕತೆಯ ವೇಳೆಯಲ್ಲೂ ಶ್ರೀ ಮೆನನರು ಭಾರತ ಸರಕಾರದ ಮೆದುಳಾಗಿ ಹಾಜರಿದ್ದೇ ಇದ್ದರು. ಆಶೆ ನಿರಾಶೆ, ಆವೇಗ ಆಡಂಬೊಗಗಳ ಏರಿಳಿತವಿಲ್ಲದೆ ಬುದ್ಧಿಮತ್ತೆಯೇ ರೂಪುಗೊಂಡಂತಿದ್ದ ಮೆನನರಿದ್ದುದರಿಂದಲೇ ನಿಜಾಮರಿಂದ ಲಕ್ಷಗಟ್ಟಲೆ ರುಸುಂ ಹೊಡೆದು ಎಂತಹ ಕರಾರಿನಲ್ಲೂ ಅಡ್ಡ ಕೀಲಿಯೊಂದನ್ನಿಡಲು ಸಮರ್ಥರಿದ್ದ ಸರ್. ಮೋಂಕ್ಟನಂಥವರ ಅಸಾಧಾರಣ ಮೆದುಳಿನ ಆಟಕ್ಕೆ ಅವಕಾಶ ದೊರೆಯದೆ ಹೋಯಿತು. ಸರ್ದಾರ್ ವಲ್ಲಭಾಯಿಗಳು ಸಂಸ್ಥಾನ ಖಾತೆಯ ಮಂತ್ರಿಯಾಗಿ, ಶ್ರೀ. ವಿ. ಪಿ. ಮೆನನರು ಅದರ ಕಾರ್ಯದರ್ಶಿಯಾಗಿ ಇರುವಷ್ಟು ಕಾಲ, ಬೇರೇನೇ ಆದರೂ 'ನಾವು ತಪ್ಪಿ ಬಿದ್ದೆವು' ಎನ್ನುವಂತಾಗಲಾರದೆಂದು ಭರವಸೆಯಿಡಬಹುದು.

ಸರ್ ವಾಲ್ಟರ್ ಮೋಂಕ್ಟನ್

ನಿಜಾಮರ ಘಟನಾತ್ಮಕ ವಕೀಲನಾಗಿ ಈ ಬಿಳಿ ಮನುಷ್ಯ ಆದಿಯಿಂದೀ ತನಕ ತನ್ನ ತಲೆಗಾಗಿ ಪಡೆದ ರುಸುಮನ್ನು ಲೆಟ್ಟ ಹೇರಿದರೆ, ಸ್ವತಃ ಆ ತಲೆಯಿಂದ ಹೊರಲಾಗುವದು ಅಸಾಧ್ಯವೆನ್ನಬಹುದು! ಈ ಬಾರಿಯ ಸಲಹೆಗಾಗಿ ಸರ್. ಮೋಂಕ್ಟನರಿಗೆ ಇತರ ಖರ್ಚು ವೆಚ್ಚಗಳ ವಿನಹಾ ಒಂದು ಲಕ್ಷಪೌಂಡು ನಿಜಾಮರಿಂದ ಸಂದಾಯವಾಗಿದೆಯೆಂದು ಸುದ್ದಿಯಿದೆ. ಬ್ರಿಟಿಷರು ಸ್ವಾತಂತ್ರ್ಯ ದಾನ ಮಾಡುವರೆಂಬಾದೊಡನೆಯೇ ನಿಜಾಮರ ತಲೆಯೊಳಗಿಂದಿನ ಮುಷ್ಕರಬೀಜ ಬಿತ್ತಿದವರು ಈ ಮೋಂಕ್ಟನರೇ. ಆ ಮೇಲೆ ನಡನಡುವೆ ಲಂಡನಿಗೆ ಹೋಗಿ ಬಂತರೂ, ಭಾರತ ಸರಕಾರದೊಡನೆ ವ್ಯವಹಾರಕ್ಕಿಳಿಯುವ ಪ್ರತಿ ಸಂದರ್ಭದಲ್ಲೂ ಇವರನ್ನು ನಿಜಾಮರು ತರಿಸಿಕೊಂಡೇ ಮುಂದೊತ್ತುತ್ತಿದ್ದರು. ವಕೀಲೀ ಮರ್ಜಿಗನುಸಾರವಾಗಿ ಸ್ವಪಕ್ಷಸಮರ್ಥನೆಯ ಕ್ರಮ ಕಾನೂನುಗಳನ್ನೇ ಕಲಿಸಿ, ಸೌಹಾರ್ದತೆ ಶಾಂತಿಪ್ರೇಮವೆಂದಿಗೂ ಮೊಳೆಯದಂತೆ ನೋಡಿಕೊಂಡು, 'ನಿಜಾಮರ ಕಿರೀಟದೊಳಗೆ ಮೋಂಕ್ಟನ್ ಮೆದುಳು' ಎಂಬ ಗಾದೆಯನ್ನೇ ನಿರ್ಮಿಸಿದ್ದರು. ಆದರೆ ಕೊನೆಯ ಬಾರಿ ಹೇಗಾದರೂ ಮತ್ತೆ ತನಗೆ ಕೆಲಸವಿಲ್ಲವೆಂಬುದನ್ನು ಊಹಿಸಿಯೋ, ಲೋರ್ಡ್‌ಮೌಂಟ್‌ಬೇಟನರ ಅಂತಿಮಾಶೆಯೊಂದನ್ನು ಪೂರೈಸಿ ಕೊಡೋಣವೆಂಬ ಸ್ವಜನಾನುರಾಗದಿಂದಲೋ, ಹಿಂದೀ ಸರಕಾರದ ಸೂಚನೆಗಳಿಗೊಪ್ಪುವಂತೆ ನಿಜಾಮರ ಹೃದಯ ಮಾರ್ಪಡಿಸಲು ಪ್ರಯತ್ನಿಸಿದ್ದರೆಂದು ತಿಳಿದುಬರುತ್ತದೆ. ಅದು ನಿಷ್ಫಲವಾದಾಗ ತಾ 18ರಲ್ಲಿ ಲಂಡನಿಗೆ ಹಾರುವ ಮುನ್ನ ಡಿಲ್ಲಿಗೆ ಬಂದು, ಪತ್ರಿಕಾ ಸಮ್ಮೇಲನಕ್ಕೆ ಹೊರಟಿದ್ದ ನೆಹರುಗಳನ್ನು ಅರ್ಧ ಘಂಟೆ ತಡ ಮಾಡಿಸಿ "ರಝಾಕರಾಧೀನ ನಿಜಾಮ ನನ್ನ ಸಲಹೆಗೊಪ್ಪಲಿಲ್ಲ" ಎಂದು ಪಂಡಿತಜೀಗೆ ತಿಳಿಸಿಯೇ ಹೋಗಿದ್ದರು. ಪ್ರಾಯಶಃ ಇನ್ನೊಮ್ಮೆ ಬರಲಾರರು!

— ಮಕ್ಕಳನ್ನು ಹಡೆಯುವುದು ಸಾಕ —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ರೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲದಾಸಿ, ಕೆಮಿಸ್ಟ, ಹಾವೇರಿ ಬ್ಯಾಡಿ

ಗೊನೋರಿಯಾ ಸರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಜುಳುಜುಳು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆಂಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸನ್ನಿ, ಮಲವಿರೋಧ, ಸ್ತನಗಳ ಬೀಗು, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ಸರಿಗೆ ಕರೆಸಿ ನೂರಾರು ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ '**ಪ್ರಸೂತಾಮೃತ**'ದ ೧ ಬಾಟ್ಲಿ ಮತ್ತು ೧ ಡಜನು '**ಪ್ರಸೂತ ಕಲ್ಯಾಣ ವಟಿ**' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ **ತಮ್ಮ ಗೃಹಲಕ್ಷ್ಮಿಯು** ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ

ಆಯುರ್ವೇದೀಯ ಔಷಧಿಗಳ ಶಾಸ್ತ್ರೀಯ ಮತ್ತು ಅನುಭವಿಕ ಗುಣಧರ್ಮ ರೋಗಾನುಪಾನ ಪ್ರಮಾಣ, ಕ್ರಯ, ಇತ್ಯಾದಿ ಯುಕ್ತ 96 ಪುಟಗಳ ಸೂಚೀಪತ್ರ 1ಕ್ಕೆ 0-8-0 9 ಆಣೆಯ ಸ್ಟಾಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವದು

Swadeshi Oushadhi Bhandara, (REGD.)

Kunjal P. O. Brahmavar, S. K.

"ತಾರಾನಾಥ ಇಂಡಿಯನ್ ಮೆಡಿಕಲ್ ಇನ್ಸ್ಟಿಟ್ಯೂಟ್"

ಬಳ್ಳಾರಿ.

ಇದರ ದ್ವಿತೀಯ ವರ್ಷದ ಆರಂಭವು ಇದೇ ಬರುವ ಜುಲೈ 15ನೇ ತಾರೀಕಿಗೆ ಆಗುವುದಿದೆ. ಅಭ್ಯರ್ಥಿ ವಿದ್ಯಾರ್ಥಿಗಳ ಅರ್ಜಿಯು ತಾ. 1-7-48ರ ಒಳಗೆ ಕಾರ್ಯದರ್ಶಿಗಳಿಗೆ ಮುಟ್ಟತಕ್ಕದ್ದು. ವಿವರಗಳಿಗೆ ಆಣೆ 4ರ ಸ್ಟ್ಯಾಂಪ್ ಇಟ್ಟು ಬರೆಯತಕ್ಕದ್ದು.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

1-7-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೪೩

NAVAYUGA WEEKLY, UDIPI.
FOUNDER: Hon'ble Mr. A. B. SHETTY, Health Minister, Govt. of Madras.

Vol. 28
No. 43

ಗಾಂಧೀ ಕೊಲೆಯ ಒಳಸಂಚು ಕಥೆ.

ಗಾಂಧೀಜೀ ಕೊಲೆಯ ಸಂಬಂಧದ ಮೊಕದ್ದಮೆಯು ನವದಿಲ್ಲಿಯ ಕೆಂಪು ಕೋಟೆಯಲ್ಲಿ, ಸ್ಪೆಶ್ಯಲ್ ಜಡ್ಜ್ ಶ್ರೀ ಆತ್ಮಚರಣ್ ಐ. ಸಿ. ಯಸ್. ಇವರಿಂದ ಜೂನ್ ತಾ 22ರಿಂದ–ಮಹಾತ್ಮರ ಕೊಲೆಯಾಗಿ ನಾಲ್ಕು ತಿಂಗಳು ಮೂರು ವಾರಗಳು ಸಂದ ಮೇಲೆ – ಕ್ರಮಪ್ರಕಾರ ಪ್ರಾರಂಭಿಸಿದೆ.

ಒಂಭತ್ತು ಮಂದಿ ಆರೋಪಿಗಳ ಪೈಕಿ ದಿಗಂಬರ ದತ್ತಾತ್ರೇಯ ಬಡ್ಗೆಯು ಕ್ಷಮಿಸಲ್ಪಟ್ಟು ಮಾಫಿ ಸಾಕ್ಷಿಯಾಗಲೊಪ್ಪಿದ್ದಾನೆ.

ಈಗ ತನಿಖೆಗೊಳಗಾಗಿರುವ ಆರೋಪಿಗಳು: 1 ನಾತುರಾಮ್ ವಿನಾಯಕ ಗೋಡ್ಸೆ, (ಪ್ರಾಯ 37;) 2. ನಾರಾಯಣ ಡಿ. ಆಪ್ಟೆ, (34); 3. ವಿಷ್ಣು ಆರ್. ಕರ್ಕರೆ,(37); 4. ಮದನಲಾಲ್ ಕೆ. ಪಾಹ್ವಾ (20) 5. ಶಂಕರ್ ಕಿಷ್ಟಯ್ಯ (20); 6. ಗೋಪಾಲ ವಿ. ಗೋಡ್ಸೆ (27) 7. ದತ್ತಾತ್ರೇಯ ಯಸ್. ಪರಚುರೆ (19) 8. ವಿನಾಯಕ ಡಿ ಸಾವರ್ಕರ್ (65)

ಈ ಮೊಕದ್ದಮೆಯಲ್ಲಿ ಸರಕಾರದ ಮುಖ್ಯ ವಕೀಲನಾಗಿರುವ, ಬೊಂಬಾಯಿಯ ಎಡ್ವೊಕೇಟ್ ಜನರಲ್ ಶ್ರೀ. ಸಿ. ಕೆ. ದಫ್ತಾರಿಯವರು ವಿಚಾರಣಾರಂಭದಲ್ಲಿ ನಿವರಿಸಿದಂತೆ 'ಗಾಂಧೀ ಕೊಲೆಯ ಒಳಸಂಚು' ಕೆಳಗಿನಂತಿದೆ:—

ಆರೋಪಿಗಳ ವ್ಯಕ್ತಿ ಚಿತ್ರ

ಮೊದಲಿನ ಮೂವರು ಆರೋಪಿಗಳು–ನಾತುರಾಮ್ ವಿ. ಗೋಡ್ಸೆ, ನಾರಾಯಣ ಡಿ. ಆಪ್ಟೆ, ವಿಷ್ಣು ಆರ್. ಕರ್ಕರೆ–ಗುರಿ ಮತ್ತು ಸ್ವಭಾವ ಸಾಮ್ಯತೆಯಿಂದ ಮೊದಲಿನಿಂದಲೂ ಸೂಡಿ ಕಟ್ಟಿಕೊಂಡೇ ಇದ್ದವರು; ಹಿಂದೂ ಅಭಿಮಾನದ ಹೆಸರಿನಲ್ಲಿ ಮಾನುಷತ್ವವನ್ನು ತಿವಿಯುವ ಪ್ರಕೊಲೆದಂತಿದ್ದರೆನ್ನಬಹುದು. ಪ್ರಥಮಾರೋಪಿ ಗೋಡ್ಸೆ ಪತ್ರಿಕಾ ಸಂಪಾದಕನಾಗಿದ್ದ. 1938ರಲ್ಲಿ ಹೈದರಾಬಾದ್ ಸತ್ಯಾಗ್ರಹದಲ್ಲಿ ಭಾಗ ವಹಿಸಿದವ; ಆರ್. ಯು ಸ್. ಎಸ್. ಸಂಘದ ಕಾರ್ಯಕರ್ತನಾಗಿಯೂ ಇದ್ದ; ಆ ವೇಳೆ ಆದಕ್ಕಿಂತಲೂ ಕಠೋರ ಕಾರ್ಯ ಕೈಕೊಳ್ಳಬೇಕೆಂದು 'ಹಿಂದೂ ರಾಷ್ಟ್ರದಳ"ವೆಂಬ ಸೇನಾ ಮಜಿಯ ಸಂಸ್ಥೆ ರಚಿಸಿಕೊಂಡ; ಅದರ ಪ್ರಚಾರಾರ್ಥವಾಗಿ 1944ನೇ ಮಾರ್ಚಿಯಲ್ಲಿ 'ಅಗ್ರಾಣಿ' ಎಂಬ ಮರಾಠಿ ದಿನ ಪತ್ರಿಕೆಯನ್ನು ತಾನೇ ಸಂಪಾದಕನಾಗಿ ಹೊರಡಿಸಿ ನಡೆಸಿಕೊಂಡು ಬಂದಿದ್ದ. ಸಾವರ್ಕರರು ಈ ಪತ್ರಿಕೆಗೆ 15,000 ರೂಪಾಯಿ ಕೊಟ್ಟಿದ್ದರು.

"ಹಿಂದೂತ್ವ"ದ ವಿಜಯ ಹಾರೈಕೆಯನ್ನುತ್ತಾ, ಗಾಂಧೀಜೀ ಮತ್ತು ಕಾಂಗ್ರೆಸಿನ ಕುರಿತು ಈ ಪತ್ರಿಕೆಯಲ್ಲಿ ಕಠೋರ ಟೀಕೆಗಳು ಬರುತಿದ್ದುವು. ನಾತೂರಾಮ್ ಗೋಡ್ಸೆಯ ಕ್ಷುಬ್ಧ ಸಮುದ್ರದಂತಹ ಹೃದಯದಲ್ಲಿ ಮಿಕ್ಕ ಭಾವನಾ ತೆರೆಗಳೆಲ್ಲವನ್ನೂ ಅಡಿಗೆ ಹಾಕಿ ಪ್ರಳಯ ತೆರೆ ಭೋರ್ಗರೆಯುತಿತ್ತು. ಎರಡನೇ ಆರೋಪಿ ಆಪ್ಟೆ ಅತಿ ಬುದ್ಧಿವಂತ; ಅತ್ಯಂತ ಸ್ವಾಭಿಮಾನಿ; ಆದ್ದರಿಂದ ಅಪಾಯಕರ ವ್ಯಕ್ತಿ. ಆರೇಳು ವರ್ಷ ಅಹಮ್ಮದ್ ನಗರದಲ್ಲಿ ಅಧ್ಯಾಪಕನಾಗಿದ್ದವ; 1943ರಲ್ಲಿ ಕೆಲವು ತಿಂಗಳು ಸೇನೆಗೂ ಸೇರಿದ್ದ; ಆ ಮೊದಲೇ 'ಹಿಂದೂ ರಾಷ್ಟ್ರ ದಳ' ರಚನೆಯಲ್ಲಿ ಗೋಡ್ಸೆಯೊಂದಿಗಿದ್ದನಲ್ಲದೆ ಆ ವೇಳೆ 'ಅಗ್ರಾಣಿ'ಯನ್ನು ಹೊರಡಿಸುವುದರಲ್ಲೂ ಪಾಲುಗಾರನಾಗಿದ್ದ; ಅದರ ಮೆನೇಜರನಾಗಿದ್ದ. ಮೂರನೇ ಆರೋಪಿ ಕರ್ಕರೆ ದುಡ್ಡಿದ್ದ ಮನುಷ್ಯ; ಅಹಮ್ಮದ್ ನಗರದಲ್ಲಿ ಕೆಲವು ಊಟದ ಹೊಟೆಲುಗಳ ಮಾಲಕನಾಗಿದ್ದ; ವರ್ಚಸ್ಸೂ ಇದ್ದಿತು. ಹೈದರಾಬಾದ್ ಸತ್ಯಾಗ್ರಹದಲ್ಲಿ ಭಾಗ ವಹಿಸಿದವ; ಕೆಲಕಾಲ ಹಿಂದೂ ಮಹಾ ಸಭೆಯ ಕಾರ್ಯದರ್ಶಿಯಾಗಿಯೂ ಇದ್ದ; ತನ್ನ ಹೋರಾಟ ಗುಣ ಮತ್ತು ಹಣ ಬಲದಿಂದ ಮೊದಲಿನ ಇಬ್ಬರೊಡನೆ ಪೂರ್ಣ ಮಿಲನಗೊಂಡಿದ್ದ. ಗಾಂಧೀಜೀಯ ಪ್ರಾರ್ಥನಾ ಸಭೆಯಲ್ಲಿ ಬೋಂಬಿಟ್ಟಿದ್ದ ನಾಲ್ಕನೇ ಆರೋಪಿ ಮದನಲಾಲ ಆವೇಶದ ಮುದ್ದೆ; ಬಿಸಿರಕ್ತವು ಕೀವಿನಂತೆ ನೋವು ಕೊಡುತ್ತಿದ್ದ ತರುಣ; ಪಂಜಾಬಿನಿಂದ ಬಂದ ನಿರಾಶ್ರಿತ. ಐದನೇ ಆರೋಪಿ ಶಂಕರ ಕಿಷ್ಟಯ್ಯ, ಈಗ ಮಾಫಿ ಸಾಕ್ಷಿದಾರನಾಗಿರುವ ಪೂನೆಯ ಆಯುಧದಂಗಡಿ ಮಾಲಕ ಬಡ್ಗೆಯ ಕೆಲಸದವ; ಗೊತ್ತಿದ್ದೇ ಮಹಾತ್ಮರ ಕೊಲೆ ಕೃತ್ಯಕ್ಕೆ ನೆರವಾದವ. ಆರನೇ ಆರೋಪಿ ಗೋಪಾಲ ಗೋಡ್ಸೆ ನಾತೂರಾಮ್ ಗೋಡ್ಸೆಯ ತಮ್ಮ–ಒಂದೇ ಕರುಳನ್ನೊಡೆದು ಬಂದಂತೆಯೇ ಅದೇ ಕರುಳನ್ನು ಪಡೆದೂ ಬಂದ ಸಹೋದರ; ಆವ ಕಿರ್ಕಿಯಲ್ಲಿ ಸರಕಾರೀ ನೌಕರನಾಗಿದ್ದ. ಏಳನೇ ಆರೋಪಿ ಪರಚುರೆ ಗ್ವಾಲಿಯರಿನಲ್ಲಿದ್ದವ; ಗಾಂಧಿಜೀಗೆ ಗುಂಡಿಡುವ ಪಿಸ್ತೂಲನ್ನು ಸಂಪಾದಿಸಿಕೊಟ್ಟವ; ತಾನು ತಲೆ ಮರೆಸಿಕೊಂಡಿದ್ದೇ ತನಗಾಗದವರ ತಲೆ ಹಾರಿಸುವುದನ್ನು ಕಾಣುವ ಸ್ವಭಾವದ ಮನುಷ್ಯ. ಎಂಟನೇ ಆರೋಪಿ ವಿ. ಡಿ. ಸಾವರ್ಕರ ಪರಿಚಯವಿದ್ದದ್ದೇ; ಹಿಂದೂ ಮಹಾಸಭೆಯ ಮಾಜೀ ಅಧ್ಯಕ್ಷ; ಅವರ ಪಾಲಿನ 'ಹಿಂದೂ ರಾಷ್ಟ್ರಪತಿ'. ನಾತೂರಾಮ್ ಗೋಡ್ಸೆ, ಮತ್ತು ಆಪ್ಟೆಗೆ ಸಾವರ್ಕರರೆಂದರೆ ಗುರು, ನಾಯಕ, ನಿರ್ದೇಶಕ, ದೇವಸಮಾನ! "ಅಗ್ರಾಣಿ" ಪತ್ರಿಕೆ ಹೊರಟುದು ಇವರ ಆಶೀರ್ವಾದದಿಂದಲೇ. ಅದರ ಪ್ರತಿದಿನದ ಸಂಚಿಕೆಯಲ್ಲೂ ಮುಂಭಾಗದಲ್ಲಿ ಸಾವರ್ಕರರ ಭಾವಚಿತ್ರ. ಸಾವರ್ಕರರು ಪ್ರಯಾಣ ಹೊರಟಾಗಲೆಲ್ಲಾ ಗೋಡ್ಸೆ ಅಥವಾ ಆಪ್ಟೆ ಜಯವಿಜಯರು ಅವರೊಂದಿಗಿದ್ದೇ ಇರುವ ಸಂಪ್ರದಾಯ. ಬೊಂಬಾಯಿಯ ದಾದರಿನಲ್ಲಿರುವ ಸಾವರ್ಕರರ ಮನೆಗೆ ಇವರಿಬ್ಬರೂ ಆಗಾಗ ಹೋಗಿಬರುತಿದ್ದರು.

ಕೊಲೆಯ ಒಳಸಂಚು

ಹಿಂದೂ ಮಹಾಸಭಾವಾದಿಗಳ ಮನೋವೃತ್ತಿಯೆಂತಹದೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ದೇಶದ ವಿಭಜನೆ. ಬಂಗಾಳಾ ಪಂಜಾಬು ಜಾತೀಯ ಅತ್ಯಾಚಾರಗಳು. ಈ ಕಾಲದಲ್ಲೇ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಗಾಂಧಿಜೀ ಮಾಡುತ್ತಿದ್ದ ಸಂಚಾರ, ಉಪದೇಶ, ಉಪವಾಸ ಇತ್ಯಾದಿಗಳಿಂದ ಮಹಾರಾಷ್ಟ್ರದ ಮಹಾಸಭಾವಾದಿಗಳ ಉರಿನಂಜು ಬೆಳೆದು ಕರಾಳ ವಿಷವಾಗಿ ಮಾರ್ಪಟ್ಟಿದ್ದಿತು. ಸಂಕುಚಿತ ಹಾಗೂ ಕಟ್ಟುಗ್ರ ಹಿಂದೂ ಮತಾಭಿಮಾನಿಗಳಲ್ಲಿ, ಆಗಿನ ವಿದ್ಯಮಾನಗಳು ನಿರ್ಮಿಸಿದ್ದ ಪ್ರತೀಕಾರೋನ್ಮತ್ತತೆ, ಅಸಹನೆ, ಮತ್ತು ಕಟ್ಟುಗ್ರ ದ್ವೇಷಗಳೇ ಮೂರ್ತಿಭವಿಸಿದಂತಿದ್ದ ಗೋಡ್ಸೆ, ಆಪ್ಟೆ, ಕರ್ಕರೆ, ಈ ಮೂವರು ಗಾಂಧಿಜೀಯನ್ನು ಕೊಲೆ ಮಾಡುವದೊಂದೇ ತಮ್ಮ ಸಂಕಟಕ್ಕೆ ಪ್ರಥಮ ಚಿಕಿತ್ಸೆಯೆಂದು ಸಂಕಲ್ಪಿಸಿದರು. ಸಾವರ್ಕರರೊಡನೆ ಸಂಬಂಧವಿಟ್ಟುಕೊಂಡಿದ್ದಂತೆಯೇ 1947ನೇ ದಶಂಬರಾಂತ್ಯ ಅಥವಾ 48ನೇ ಜನವರಿ ಆರಂಭ ದಿನದಲ್ಲಿ ಅವರೇ ನಿರ್ಣಯ ಮಾಡಿರಬೇಕು. ಈ ಮೊದಲೇ 1947 ನೇ ನವಂಬರಿನಲ್ಲಿ ಮುಸ್ಲಿಂ ಅತ್ಯಾಚಾರ ಪೀಡಿತ ಪಂಜಾಬಿನಿಂದ ನಿರಾಶ್ರಿತ ಮದನಲಾಲ್ ಬೊಂಬಾಯಿಗೋಡಿ ಬಂದಿದ್ದ. ಮಾಟುಂಗಾದ ಕಾಲೇಜಿನ ಓರ್ವ ಪ್ರೊಫೆಸರ್ ಜೈನಿಯೆಂಬವರನ್ನು ಆತ ಭೇಟಿಯಾಗಿ ತನ್ನ ಕತೆ ಹೇಳಿಕೊಂಡಾಗ, ಅವರು ತನ್ನ ಕೆಲವು ಪುಸ್ತಕಗಳನ್ನು ಮಾರಾಟ ಮಾಡುವ ಕೆಲಸ ಕೊಟ್ಟರು. ಮದನಲಾಲ್ ಸ್ವಲ್ಪ ದಿವಸ ಅದನ್ನು ಮಾಡಿದ. ೮

(೬ನೇ ಪುಟ ನೋಡಿರಿ.)

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯ:–ಧಾರವಾಡ,
THE UNITED KARNATAK INSURANCE COMPANY, LIMITED.

ಅದೇ ವಾದ:- ಪೆಲೆಸ್ಟೈನ್, ಬರ್ಲಿನ್.

ಜಾಗತಿಕ ಹಾಗೂ ಭಾರತೀಯ ಸ್ಥಿತಿಗತಿಗಳು, ನಿಶ್ಚಯ ಭವಿಷ್ಯವನ್ನು ಊಹಿಸಲವಕಾಶ ಕೊಡದಂತಿರುವುದೇ ಈ ಕಾಲದ ವೈಶಿಷ್ಟ್ಯವೆನ್ನಬೇಕು. ಮುಂದೇನು? ಎಂಬುದನ್ನು ಖಂಡಿತವಾಗಿ ಹೇಳಲಾಗದಂತಹ ತ್ರಿಶಂಕುಗತಿಯಲ್ಲೇ ಪ್ರತಿಯೊಂದು ಪ್ರಶ್ನೆಯೂ ಇದೆ; ಯುದ್ಧವೋ ಶಾಂತಿಯೋ? ಅಭಿವೃದ್ಧಿಯೋ ಅವನತಿಯೋ? ಜಯವೋ ಅಪಜಯವೋ?-ಎಂಬ ಗುಟ್ಟು ಹೊಳೆಯುವಂತಹ ಸಮಸ್ಯೆ ಇಂದಿನ ಪ್ರತಿಯೊಂದೂ. ರಷ್ಯಾ ಅಮೇರಿಕ ಜಗಳದಿಂದ ಹಿಡಿದು, ಭಾರತ ಹೈದರಾಬಾದ್ ವಿವಾದಗಳ ವರೆಗಿನ ಎಲ್ಲವೂ 'ಯುದ್ಧ ಸಮೀಪಿಸಿತು' ಎನ್ನುವಂತೆ ಇಕ್ಕಡೆಯವರ ಭುಜ-ಭುಜ ತಿಕ್ಕಿ ಹೊಡೆಯುವ ಆತುರವನ್ನು ಮೂಡುವಾಗಲೇ, ಇಬ್ಬರ ಕೈಗಳೂ ಸ್ನೇಹ ಕುಲುಕಾಟಕ್ಕೆ ಮುಂದೆ ಬರುವ ದೃಶ್ಯ ಅದರ ಬೆನ್ನಲ್ಲೇ! ಅಂತೂ ಲೋಕದ ರಾಜಕೀಯ ರಂಗದಲ್ಲಿ ನಾಟಕ ನಡೆದಂತಿದೆ; ಅದು ಸುಖಾಂತ್ಯವೋ ದುಃಖಾಂತ್ಯವೋ ಎಂಬುದನ್ನು ಕಾಣಬೇಕಿದೆ.

ಜಾಗತಿಕ ಸಮಸ್ಯೆಗಳು

ಪೆಲಸ್ಟೈನಿನಲ್ಲಿ ಒಂದು ಮಾಸಾವಧಿಯ ಶಾಂತಿ ಪಾಲನೆಗೆ ನಿಂತಿರುವ ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿ ಬೆರ್ನಾಡೊಟ್ಟೆಯವರ ಕೆಲಸಗಳಿಗೆ ಮೇಲಿಂದಮೇಲೆ ವಿಘ್ನಗಳು ಬರುತ್ತಿವೆ. ಶಾಂತಿ ಶರ್ತಗಳಿಗೆ ವ್ಯತಿರಿಕ್ತವಾಗಿ ಪೆಲಸ್ಟೈನಿನ ಯೆಹೂದೀ ಸರಬರಾಯಿಗಳನ್ನು ಈಜಿಪ್ಟ್ ಸೇನೆಗಳು ಆತಂಕಿಸಿರುವುದಲ್ಲದೆ, ಸಂಯುಕ್ತ ರಾಷ್ಟ್ರ ಸಭೆಯ ವಿಮಾನವೊಂದಕ್ಕೂ ಗುಂಡಿಟ್ಟರೆಂದು ತಿಳಿದುಬರುತ್ತದೆ. ಈಜಿಪ್ಟಿನ ಈ ಕಾರ್ಯೋದ್ದೇಶದ ಕಡೆಗೆ ಕೌಂಟ್ ಬೆರ್ನಾಡೊಟ್ಟೆಯವರು ಜಾಗತಿಕ ಸಂಘದ ಲಕ್ಷ್ಯವನ್ನೆಳೆದಿದ್ದಾರೆ. ಇತ್ತ ಇಸ್ರಾಯೇಲ್ ರಾಜಧಾನಿ ಟೆಲ್‌ಅವೀವಿನೊಳಗೆ ಯೆಹೂದಿಗಳ ಎರಡು ಪಕ್ಷಗಳೊಳಗೇನೇ ಹೋರಾಟವಾಗಿ ಆ ನಗರದಲ್ಲಿ ಕರ್ಫ್ಯೂ ಆಜ್ಞೆಯೊಮ್ಮೆ ಜಾರಿಗೆ ಬಂದಿತ್ತು. ಪೆಲಸ್ಟೈನಿನಲ್ಲಿ ಶಾಂತಿ ಸ್ಥಾಪನೆಯಾಗಬಹುದೆಂಬ ಆಶೆ ಪೂರ್ಣ ಕುಸಿದಿದೆ. ತಮ್ಮ ಆಸ್ತಿಬಂಧಿತಾಧಿಕಾರವನ್ನು ಎಳ್ಳಷ್ಟು ಕಡಿಮೆ ಮಾಡುವ ಯಾವ ಒಪ್ಪಂದಕ್ಕೂ ತಾವು ಒಪ್ಪಲಾರೆವೆಂದು ಅರಬರು ಘೋಷಿಸುತಿದ್ದಾರೆ.

ಇತ್ತ ಜರ್ಮನಿಯ ಆಡಳಿತೆಯ ಕುರಿತು ರಶ್ಯಾ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳೊಳಗೆದ್ದಿರುವ ಬಿಕ್ಕಟ್ಟು ಈಗ ನಿಜಕ್ಕೂ ಪರಮಾವಧಿಗೆ ಮುಟ್ಟಿದೆ. ರಶ್ಯದ ಪಾಲಿನ ಪೂರ್ವ ಜರ್ಮನಿಯ ಪುನರ್ವ್ಯವಸ್ಥೆಗಾಗಿ ರಶ್ಯಾ ಮತ್ತದರ ಪಕ್ಷಗಳೊಳಗಿರುವ ಮಧ್ಯ ಹಾಗೂ ಪೂರ್ವ ಯುರೋಪ ರಾಷ್ಟ್ರಗಳ ವಿದೇಶ ಮಂತ್ರಿಗಳ ಪರ್ಯಾಲೋಚನಾ ಸಭೆಯು - ರಶ್ಯಾ, ಅಲ್ಬೇನಿಯಾ, ಬಲ್ಗೇರಿಯಾ, ಝೆಕೊಸ್ಲೋವೇಕಿಯ, ಯುಗೋಸ್ಲೇವಿಯಾ, ಪೋಲೆಂಡ, ರುಮೇನಿಯಾ, ಹಂಗೇರಿ ರಾಷ್ಟ್ರಗಳ ಕೂಟ-ವಾರ್ಸಾದಲ್ಲಿ ಸೇರಿ ಪೂರ್ವ ಜರ್ಮನಿಗೆ ಪ್ರತ್ಯೇಕ ಸರಕಾರ ಸ್ಥಾಪಿಸಿ, ಅಲ್ಲಿಯ ಜನತೆಯ ಸ್ಥಿತಿಯನ್ನೂ ವ್ಯವಸ್ಥೆಯನ್ನೂ ಉತ್ತಮಗೊಳಿಸಿ, ಅಮೇರಿಕ, ಬ್ರಿಟನ್, ಫ್ರಾನ್ಸ್ ರಾಷ್ಟ್ರಗಳ ಅಂಕೆಯಲ್ಲಿರುವ ಪಶ್ಚಿಮ ಜರ್ಮನಿಗಿಂತ ಶ್ರೇಷ್ಠ ಹಾಗೂ ಮೇಲ್ಮಟ್ಟದ ಸ್ಥಾನ ಗಳಿಸಿಕೊಳ್ಳುವ ನಿರ್ಧಾರಮಾಡಿರುವುದು ಅಂತೆಯೇ ತನ್ನ ಅಂಕೆಯೊಳಗಿನ ಬರ್ಲಿನ್ ನಗರದಲ್ಲಿ ರಶ್ಯಾ ಹಾಕಿರುವ ಕಟ್ಟುಗಳ ಬಹಿಷ್ಕಾರಗಳಿಂದಾಗಿ ಬರ್ಲಿನ್‌ನಿಗೆ ಪೂರ್ಣ ದಿಗ್ಬಂಧನದೊಳಗಿರುವಂತಾಗಿದೆ. ಬರ್ಲಿನಿನೊಳಗಿನ ಬ್ರಿಟಿಷ್, ಫ್ರೆಂಚ್, ಅಮೇರಿಕ ಕ್ಷೇತ್ರ್ಯಗಳೆಲ್ಲಾ ಪೂರ್ತಿ ನಿಂತುಹೋಗಿವೆ. ಆ ಜರ್ಜರಿತ ನಗರವೀಗ ಆಂಗ್ಲೋ ಅಮೇರಿಕನ್ ಫ್ರಂಚರ ಪಾಲಿಗೆ 'ಕತ್ತಲೇ ಕೋಣೆ'ಯಾಗಿ ಮಾರ್ಪಟ್ಟು ಉಸಿರುಕಟ್ಟಿಸುತ್ತಿದೆ. ತಮ್ಮನ್ನು ತೆರಗಿಸಿ ಕೊರಗಿಸಿ ಬರ್ಲಿನಿನಿಂದೋಡಿಸುವ ರಶ್ಯದ ಹಂಚಿಕೆಗೆ ಉಗ್ರ ಪ್ರತೀಕಾರ ಕೈಕೊಳ್ಳಬೇಕೆಂದು ಅಮೇರಿಕ, ಇಂಗ್ಲಾಂಡು ಮತ್ತು ಫ್ರಾನ್ಸ್ ಸರಕಾರಗಳೊಳಗೀಗ ಗಂಭೀರ ಆಲೋಚನೆ ನಡೆಯುತ್ತಿದೆ.

ಮಲಯದಲ್ಲೆದ್ದ ಜನತಾ ಬಂಡಾಯವು ಉಗ್ರರೂಪ ತಾಳಿ, ಬ್ರಿಟಿಷ್ ತೋಟ ಮಾಲಕರ ಮತ್ತು ಅವರ ಪಕ್ಷಪಾತಿಗಳ ಕೊಲೆಗಳಾಗುತ್ತಿವೆ. ಅಲ್ಲಿಯ ಮುಖ್ಯ ಬಂಡಾಯಗಾರರಾದ ಕಮ್ಯೂನಿಸ್ಟರು, ಪೋಲೀಸ್ ಮುಖ್ಯಾಧಿಕಾರಿಯು ತನ್ನ ಬಲಗಳ ಸಮೇತ ಶಾಳಗಕ್ಕೆ ನಿಲ್ಲಲೆಂದು ಧರ್ಮಾಹ್ವಾನ ಕೊಟ್ಟಿದ್ದಾರಲ್ಲದೆ ಆ ಮುಖ್ಯಾಧಿಕಾರಿಯನ್ನೇ ಕೊಲೆ ಮಾಡುವ ಭಯ ಬೀರಿದ್ದಾರೆ.

ಚೈನಾದಲ್ಲಿ, ಒಮ್ಮೊಮ್ಮೆ ಸರಕಾರೀ ಸೇನೆಗಳು ಸುಧಾರಿಸಿ ನಿಂತಂತೆ ತೋರಿದರೂ ಕಮ್ಯೂನಿಸ್ಟ್ ಸೇನೆಗಳ ಕೈ ಮೇಲಾಗುತ್ತಲೇ ಹೋಗಿದೆ. ಹೊನಾನಿನ ರಾಜಧಾನಿಯು ತಮ್ಮ ಕೈ ಬಿಟ್ಟಿತೆಂದು ಚೀನೀ ಸರಕಾರವೊಪ್ಪಿದೆ.

ಗ್ರೀಸಿನ ಸರಕಾರವು ಅಮೇರಿಕದ ಬೆಂಬಲದಿಂದ ಅಲ್ಲಿಯ ಕಮ್ಯೂನಿಸ್ಟ್ ಸೇನೆಗಳನ್ನು ಸೋಲಿಸಿ ಅವರ ಆಶ್ರಯ ನೆಲೆಯನ್ನೇ ಆಕ್ರಮಿಸಿ ಓಡಿಸಿದೆ.

ಅಮೇರಿಕದಲ್ಲಿ ಬರುವ ನವಂಬರಿಗಾಗಲಿರುವ ಅಧ್ಯಕ್ಷ ಚುನಾವಣೆಯ ಆವೇಗವೇರಿರುವ ಕಾಲವಿದು. ರಿಪಬ್ಲಿಕನ್ ಪಕ್ಷದ ಉಮೇದ್ವಾರಿಯಾಗಿ ನ್ಯೂಯೋರ್ಕಿನ ಗವರ್ನರ್ ಥೋಮಸ್ ದಿವೇಯವರು ಆ ಪಕ್ಷದಿಂದಾರಿಸಲ್ಪಟ್ಟಿದ್ದಾರೆ. ಅಧ್ಯಕ್ಷ ಟ್ರುಮೇನರ ಡೆಮೊಕ್ರೆಟಿಕ್ ಪಕ್ಷದ ದುರ್ಬಲ ಘೋರಣೆಯಿಂದಾಗಿ ಈ ಬಾರಿ ತಾವು ವಿಜಯಿಗಳಾಗುವೆವೆಂದು ರಿಪಬ್ಲಿಕನರ ನಂಬಿಕೆಯಿದೆ.

ಪಾಕಿಸ್ತಾನದ ಪ್ರತಾಪ?

ಸಿಂಧ ಪ್ರಾಂತಿಕ ರಾಜಧಾನಿಯಾಗಿದ್ದ ಕರಾಚಿಯನ್ನು ಅದರಿಂದ ಪ್ರತ್ಯೇಕಿಸಿ ಕೇಂದ್ರ ಪಾಕಿಸ್ತಾನದ ಆಧಿಕಾರದೊಳಗೆ ಸೇರಿಸಿಕೊಂಡು ಪಾಕಿಸ್ತಾನ್ ರಾಜಧಾನಿ ಮಾಡಿಟ್ಟುಕೊಳ್ಳುವ ಯೋಜನೆಯಿಂದ ಸಿಂಧಿನಲ್ಲೆಲ್ಲಾ ಆಕ್ಷೇಪ, ಹಾಗೂ ನಿಷೇಧ ಸೂಚಕ ಪ್ರದರ್ಶನಗಳೆದ್ದಿವೆ. ಇವುಗಳನ್ನು ನಿವೇದಿಸಿಕೊಂಡು, ಗವರ್ನರ್ ಜನರಲರ ಸ್ವಂತಾಭಿಪ್ರಾಯ ತಿಳಿಯಲು ಕಾಯಿದೇ ಆಝಾಮ್ ಜಿನ್ನಾರಲ್ಲಿಗೆ ಸಿಂಧ್ ಎಸೆಂಬ್ಲಿ ಲೀಗ್ ಪಕ್ಷದ ಶಿಷ್ಟ ಮಂಡಳಿಯೊಂದು ಹೋಗಿದ್ದಿತು. ಮಿ. ಜಿನ್ನರು ಅವರ ಹೇಳಿಕೆಗಳಿಗೆ ಬೆಲೆಕೊಡದೆ, ಅವರದು "ಕ್ಷಣಿಕಾವೇಶ, ಅರ್ಥರಹಿತ ಅಭಿಮಾನ'ವೆಂದೂ 'ನೆರಳನ್ನು ಹಿಡಿಯಲು ಒದ್ದಾಡದೆ ತಿರುಳನ್ನು ಹಿಡಿಯಬೇಕಾದ್ದೆಂದೂ', ಕರಾಚಿ ಪ್ರತ್ಯೇಕೀಕರಣವೇ ಸಿಂಧ ಪ್ರಾಂತ್ಯಕ್ಕೆ ಹಿತಕರವೆಂದೂ ಹೇಳಿ ಮುಖಭಂಗ ಮಾಡಿ ಕಳುಹಿಸಿದ್ದಾರೆ.

'ಗಡಿನಾಡಿನ ಗಾಂಧಿ" 'ಬಾದಶಹಾ' ಖಾನ್ ಅಬ್ದುಲ್ ಗಫರ್‌ಖಾನರನ್ನು ದಸ್ತಗಿರಿ ಮಾಡಿ ಮೂರು ವರುಷ ಸಶ್ರಮ ಸಜೆ ವಿಧಿಸಿದ ಪಾಕಿಸ್ತಾನ ಸರಕಾರದ ಕೃತ್ಯವು ದೇಶ ವಿದೇಶಗಳಲ್ಲಿ ಅಸಮಾಧಾನವನ್ನೆಬ್ಬಿಸಿದೆ. ಅವರ ಬಿಡುಗಡೆಗಾಗಿ ಪರದೇಶಗಳಿಂದಲೂ ಭಾರತದ ಮುಸ್ಲಿಮರಿಂದಲೂ ಒತ್ತಾಯದ ಬೇಡಿಕೆಗಳು ಹೋಗಿವೆ. ಖಾನ್ ಸಹೋದರರ ಪಾಕಿಸ್ತಾನ್ ವಿರೋಧ ಚಟುವಟಿಕೆಗಳ ಕುರಿತು ಗಡಿನಾಡಿನ ಪ್ರಧಾನ ಮಂತ್ರಿ ಮಿ. ಅಬ್ದುಲ್ ಕ್ವಯಮ್‌ಖಾನರು ಮಾಡಿದ ಹೇಯ ಆರೋಪಗಳಿಗೆ ಉತ್ತರ ಕೊಡುತ್ತಾ, ಮಾಜೀ ಪ್ರಧಾನಿ ಡಾ। ಖಾನ್ ಸಾಹೇಬರು "ಗಡಿನಾಡು ಸರಕಾರದ ಹೆದರಿಕೆಗಳಿಗೆ ಸೊಪ್ಪು ಹಾಕದೆ, ಈ ಮೊದಲು ನಾವು ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಹೋರಾಡಿದಂತೆಯೇ, ನಿಜವಾದ ಸ್ವಾತಂತ್ರ್ಯದ ಗುರಿಯತ್ತ ಬಡ ಸಾರ್ವಜನಿಕರನ್ನು ಕೊಂಡೊಯ್ಯುವ ನಮ್ಮ ಕೆಲಸವನ್ನು ಅವಿಶ್ರಾಂತವಾಗಿ ಸಾಗಿಸುವೆವು" ಎಂದಿದ್ದಾರೆ.

ಪಾಕಿಸ್ತಾನ ಮತ್ತು ಭಾರತಗಳೊಳಗೆ ವಿಮಾನ ಸಂಚಾರ ಸಂಬಂಧದ ಒಂದು ಕರಾರಾಗಿ ಇಕ್ಕಡೆಯ ಸಹಿ ಬಿದ್ದಿದೆ.

ಹೈದರಾಬಾದಿಗೇನು?

ಇತ್ತ ಹೈದರಾಬಾದಿನೊಳಗಡೆಯಲ್ಲಿ ರಝಾಕಾರರು ಮಾಡುತ್ತಿರುವ ಅತ್ಯಾಚಾರದ ವಾರ್ತೆಗಳು ದಿನದಿನವೂ ಬರುತ್ತಿವೆ. ಭಾರತದ ಗಡಿಯೂರುಗಳಿಂದಲೂ ರಝಾಕಾರ್ ರಾಕ್ಷಸ ಕೃತ್ಯಗಳ ದುರ್ವಾರ್ತೆಗಳಾಮದು ಇದ್ದೇಇದೆ. ಇತ್ತ ಪಾಕಿಸ್ತಾನ್ ರಾಜಧಾನಿ ಕರಾಚಿಯಿಂದ ಆಯುಧೋಪಕರಣಗಳನ್ನು ಹೊತ್ತ ವಿಮಾನಗಳು ಹೈದರಾಬಾದಿನ ಬಿದರ್ ನಿಲ್ದಾಣಕ್ಕೆ ಕಳೆದ ಕೆಲವು ವಾರಗಳಿಂದಲೂ ಅವಿಶ್ರಾಂತವಾಗಿ ಹಾರಾಟ ನಡೆಸುತ್ತಿವೆಯೆಂದು ಲಂಡನಿನ 'ಡೈಲಿಗ್ರಾಫ್' ಪತ್ರಿಕೆಗೆ ಕರಾಚಿ ಬಾತ್ಮೀದಾರನು ವರದಿ ಮಾಡಿದ್ದಾನೆ. ಈ ಕಡೆಗೆ ಭಾರತ ಸರಕಾರದ ಲಕ್ಷ್ಯ ಹರಿದು ಅದೀಗ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದೆಯೆಂದು ತಿಳಿದುಬರುತ್ತದೆ. ಭಾರತ ಹೈದರಾಬಾದುಗಳೊಳಗಿನ ಜಗಳದಲ್ಲಿ ಬ್ರಿಟನು ಮಧ್ಯಸ್ಥಗಾರನಾಗಿ ಕೈಹಾಕಬೇಕೆಂದು ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ತಂದ ಸೂಚನೆಯನ್ನು ಬ್ರಿಟಿಷ್ ಸರಕಾರದ ವಸಾಹತುಸಂಬಂಧ ಕಾರ್ಯದರ್ಶಿ ಮಿ. ನೋಯೆಲ್ ಬೇಕರರು ತಿರಸ್ಕರಿಸಿ "ಈಗೊಂದು ಯಥಾಸ್ಥಿತಿ ಒಪ್ಪಂದವಿದೆ. ಮುಂದಕ್ಕೂ ರಾಜಿಯ ಆಶೆಯಿದೆ. ಬ್ರಿಟನಿಗೆ ಆ ಸಂಬಂಧದ ಹೆಂಗು ಹಕ್ಕು ಬಾಧ್ಯತೆಯೇನೂ ಇಲ್ಲ" ಎಂದು ಸ್ಪಷ್ಟಪಡಿಸಿದ್ದಾರೆ. ನಿಜಾಮ್ ಸರಕಾರವೀಗ ಒಳಗಿಂದೊಳಗೆ ವಿಶೇಷ ರೀತಿಯ ಕಲುಷೀ ತಂತ್ರಗಳಲ್ಲಿ ನಿರತವಾದ ವಾಸನೆ ಬರುತ್ತಿದೆ. ನಿಜಾಮರ ಸಲಹೆಗಾರ ಸರ್. ವಾಲ್ಟರ್ ಮೋಂಕ್ಟನ್ನರು ಪಾಕಿಸ್ತಾನದ ವಿದೇಶ ಮಂತ್ರಿ ಸರ್. ಝುಫರುಲ್ಲಾರೊಡನೆ ದೀರ್ಘ ಪರ್ಯಾಲೋಚನೆ ನಡಿಸಿದ್ದು ಭದ್ರತಾ ಕೌನ್ಸಿಲಿನಲ್ಲಿ ಹೈದರಾಬಾದಿ

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಜೊತೆಗಾರರ ಜವಾಬ್ದಾರಿ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘಟಿತಗೊಂಡಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆಯ ಕ್ಷೇತ್ರಗಳಲ್ಲಿ-ತಮಿಳುನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮ ವಿಶಿಷ್ಟ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಅದರಿಂದ ನಿಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

ಹಳೇ ರೋಗ:- ಹೈದರಾಬಾದ್ ಕಾಶ್ಮೀರ

★

ಗೊಂದು ಸ್ಥಾನ ದೊರಕಿಸುವ ಪ್ರಯತ್ನ ಕ್ಕಾಗಿ ಅವರು ಸದ್ಯದಲ್ಲೇ ನ್ಯೂಯೋರ್ಕಿಗೆ ಹೋಗಲಿರುವರೆಂದು ತಿಳಿದುಬರುತ್ತದೆ. ಹೈದರಾಬಾದು ಪಾಕಿಸ್ತಾನದ ಬೆಂಬಲದಿಂದ ಅರ್ಜಿಹಾಕಿ ಭದ್ರತಾ ಕೌನ್ಸಿಲಿನ ಸ್ಥಾನಸಂಪಾದನೆಗೆ ಪ್ರಯತ್ನಿಸುವುದು ಖಂಡಿತವೆನ್ನಬಹುದು. ಇವೆಲ್ಲಾ ವಿದ್ಯಮಾನಗಳನ್ನೂ ಭಾರತ ಸರಕಾರವು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸುತ್ತಿದೆ. ಲಕ್ನೋವಿನಲ್ಲಿ ಒಂದು ಲಕ್ಷಕ್ಕೂ ಮಿಕ್ಕಿದ ಜನಸಂದಣಿಗೆ ಭಾಷಣವೀಯುತ್ತಾ ಪಂಡಿತ ನೆಹರುಗಳು "ಹೈದರಾಬಾದು ಭಾರತವನ್ನು ಬಿಟ್ಟೋಡುವೆನೆಂದರೆ ಅದೆಂದೂ ಸಾಧ್ಯವಿಲ್ಲ. ನಾವು ಮುಂದಿಟ್ಟ ಕೊನೆಯ ಶರ್ತಗಳಲ್ಲಿ ಇನ್ನಾವ ವ್ಯತ್ಯಾಸವನ್ನೂ ಮಾಡಲಾರೆವು. ಆದರೆ ಕೆಲವು ಬೇಜವಾಬ್ದಾರೀ ಮನುಷ್ಯರ ಟೀಕಾಟೂಕೆಗಳನ್ನು ತಲೆಗೆ ಹಚ್ಚಿಕೊಂಡು ಹೈದರಾಬಾದಿನ ಮೇಲೆ ಬೀಳುವ ಅವಸರವನ್ನು ನಾವು ಮಾಡುವಂತಿಲ್ಲ; ತತ್ಪರಿಣಾಮವಾಗಿ ಏಳಲಿರುವ ಅಂತರ್‌ರಾಷ್ಟ್ರೀಯ ಸಮಸ್ಯೆಗಳನ್ನೂ ಗ್ರಹಿಸಿಕೊಳ್ಳಲಿಕ್ಕಿದೆ" ಎಂದು ಸ್ಪಷ್ಟಪಡಿಸಿದ್ದಾರೆ.

ಇತ್ತ ರಾಜಾಜೀ ಗವರ್ನರ್ ಜನರಲರಾದೊಡನೆ ನಿಜಾಮ್ ಪ್ರತಿನಿಧಿಗಳ ಪುನರೋಡಾಟವಾರಂಭವಾದುದು ಕಾಣಿಸುತ್ತಿದೆ. ಈ ಬಾರಿಯ ಸರದಿ ನಿಜಾಮರ ಏಜೆಂಟ್ ಜನರಲನಾಗಿ ಡೆಲ್ಲಿಯಲ್ಲಿರುವ ನವಾಬ್ ಝುಬೇರ್ ಯಾರ್ ಜಂಗರದು. "ಕೊನೆಯ ಶರ್ತಗಳನ್ನೇ ಆಧರಿಸಿ ಸ್ವಲ್ಪ 'ಅಚೆ ಈಚೆ' ಮಾಡಿ ಭಾರತ ಹೈದರಾಬಾದುಗಳೊಳಗೆ ಸ್ನೇಹದಲ್ಲೇ ಒಂದು ಒಪ್ಪಂದವಾಗುವಂತೆ ಮಾಡುವ ಆಶೆ ನನಗಿದೆ" ಎಂದು ಈ ನವಾಬ್ ಜಂಗರೆಂದಿದ್ದಾರೆ. ಅದಕ್ಕಾಗಿ ನೆಹರು, ಮತ್ತು ರಾಜಾಜಿಯೊಂದಿಗೆ ಪುನಃ ಇವರ ಮಾತುಕತೆಗಳು ನಡೆಯಲಿವೆ. ಆದರೆ ಹೈದರಾಬಾದ್ ಸರಕಾರವು ಭಾರತದ ಬಹಿಷ್ಕಾರಕ್ಕಂಜಿ ಸಂಸ್ಥಾನದ ಹಿಂದುಗಳ ಮೇಲೆ ಉಗ್ರ ಕಾರ್ಯಕ್ರಮಗಳನ್ನು ಕೈಕೊಂಡಿರುವುದೂ ಗಡಿಗಳಲ್ಲಿ ರಝಾಕಾರರ ಆಕ್ರಮಣಗಳು ನಡೆದೇ ಇರುವುದೂ ಪರಿಸ್ಥಿತಿಯನ್ನು ದಿನದಿಂದ ದಿನಕ್ಕೆ ಕೆಡಿಸುತ್ತಿದೆ.

ಕಾಶ್ಮೀರ ಸಮಿತಿ

ಕಾಶ್ಮೀರ ವಿವಾದದ ಕುರಿತು ಭದ್ರತಾ ಕೌನ್ಸಿಲು ನೇಮಿಸಿದ್ದ ಕಮಿಶನು ಇನ್ನು ಕೆಲವೇ ದಿನಗಳೊಳಗೆ ಡೆಲ್ಲಿಗೆ ಬಂದಿಳಿದು ಕಾಶ್ಮೀರಕ್ಕೆ ಹೋಗಲಿದೆ. ಆ ಸಂಬಂಧದ ಪೂರ್ವ ವ್ಯವಸ್ಥೆಗಾಗಿ ಭದ್ರತಾ ಕೌನ್ಸಿಲಿನ ಕಾರ್ಯದರ್ಶಿಯ ಸಲಹೆಗಾರ ಮಿ. ಡಿ. ಹಿರ್ಷ್ ಸ್ವಾಮೊಂಡ್ಸರು ಜುಲಾಯಿ 4 ಡೆಲ್ಲಿಗೆ ಬರಲಿದ್ದಾರೆ. ಈಗ ಪ್ರಯಾಣಾಪಥದಲ್ಲಿರುವ ಕಾಶ್ಮೀರ ಕಮಿಶನಿನಿಂದ ಭಾರತ ಸರಕಾರಕ್ಕೆ ಮೂರು ಸವಿವರ ನಿವೇದನಾ ಪತ್ರಗಳು ಬಂದಿವೆ. 'ಕಾಶ್ಮೀರದ ವಿದ್ಯಮಾನಗಳನ್ನು ಪ್ರತ್ಯಕ್ಷ ಪರೀಕ್ಷಿಸುವುದು ಮತ್ತು ಭಾರತ ಪಾಕಿಸ್ತಾನಗಳೊಳಗಿನ ಭಿನ್ನಾಭಿಪ್ರಾಯಗಳನ್ನು ಕಡೆದು ತೆಗೆದು ನಿವಾರಿಸುವುದು' ತಮ್ಮ ಉದ್ದೇಶವೆಂದು ಸಮಿತಿಯು ತನ್ನ ಗುರಿ ನಿರೂಪಣೆ ಮಾಡಿದೆ. ಭಾರತವು ಸಮಿತಿಯ ನೇಮಕ ಮತ್ತು ಅದರ ಕಾರ್ಯಕ್ರಮಗಳ ಕುರಿತು ಮೊದಲೇ ಮಾಡಿದ್ದ ಆಕ್ಷೇಪಗಳನುಸಾರವಾಗಿ ಈ ಕಮಿಶನಿಗಾವ ಸ್ವಾಗತ ಅಥವಾ ಸಹಕಾರವನ್ನೂ ಕೊಡದೆ, ಅದು ತನ್ನೊಡನೆ ಕೇಳುವ ಸುದ್ದಿ ಮತ್ತು ಅನುಭವಗಳನ್ನು ಮಾತ್ರ ಕೊಡಲಿದೆ. ಅದಕ್ಕಾಗಿಯೇ ಗದೇಶ ಸಂಬಂಧ ಖಾತೆಯಲ್ಲಿ ಶ್ರೀ ಎಚ್. ಕೆ. ವೆಲ್ಲೋಡಿಯವರು ಕಾರ್ಯದರ್ಶಿ ಪಟ್ಟದಲ್ಲಿ ನೇಮಿಸಲ್ಪಟ್ಟಿದ್ದಾರೆ. ಆದರೆ ಅತ್ತ ಪಾಕಿಸ್ತಾನ್ ಸರಕಾರವು ಈ ಕಾಶ್ಮೀರ ಸಮಿತಿಗೆ ಸಹಕಾರ ಮತ್ತು ಸುದ್ದಿ ಮತ್ತು ಅನುಭವವೆಲ್ಲವನ್ನೂ ಒದಗಿಸುವುದಕ್ಕಾಗಿ ಪಾಕಿಸ್ತಾನ್ ಘಟನಾ ಸಮಿತಿ ಭವನದಲ್ಲಿ ಒಂದು ಪ್ರತ್ಯೇಕ ಕಚೇರಿಯನ್ನೇ ತೆರೆದಿದೆಯಲ್ಲದೆ ಮಿ. ಮಹಮ್ಮದ್ ಆಯುಬ್ ಐ. ಸಿ. ಎಸ್., ಇವರನ್ನು ಕಾಶ್ಮೀರ ಸಮಿತಿ ಸಂಬಂಧಾಧಿಕಾರಿಯನ್ನಾಗಿಯೂ ನೇಮಿಸಿದೆ. ಪಾಕಿಸ್ತಾನ ಸರಕಾರದ ಪ್ರಮುಖ ಕಾರ್ಯದರ್ಶಿ ಮಿ. ಚೌಧರಿ ಮಹಮ್ಮದಾಲಿಯವರು ಈ ಕಚೇರಿಯ ಮೇಲ್ವಿಚಾರಕರಾಗಿದ್ದಾರೆ. ಪಂಡಿತ ನೆಹರು, ಸರದಾರ್ ಬಲದೇವ ಸಿಂಗ್, ಎನ್. ಜಿ. ಅಯ್ಯಂಗಾರ್, ವಿ. ಪಿ. ಮೆನನ್, ಮತ್ತು ರಕ್ಷಣಾ ಕಾರ್ಯದರ್ಶಿ ಯಚ್. ಯಮ್. ಪಟೇಲ್ ಮೊದಲಾದ ಭಾರತ ಸರಕಾರದ ಮುಖ್ಯ ತಲೆಗಳು ಕಾಶ್ಮೀರಕ್ಕೆ ಹೋಗಿ ಎಲ್ಲವನ್ನೂ ಯೋಜಿಸಿ ಬಂದಿದ್ದಾರೆ. ಸಮಿತಿಯು ಸ್ವತಃ ಸಂದರ್ಶಿಸುವಾಗ ಶೇಕ್ ಅಬ್ದುಲ್ಲಾರ ವಿರೋಧಿಗಳನ್ನು ಹೆದರಿದುಂಬಿಸಿ, ಪಾಕಿಸ್ತಾನ್ ಸಂಚುಗಾರರು ಕಾಶ್ಮೀರದಲ್ಲಿ ಪ್ರದರ್ಶನ, ಗಲಭೆಗಳನ್ನು ಎಬ್ಬಿಸಬಹುದೆಂಬ ಶಂಕೆ ಮೂಡಿದೆ.

ಇತರ ವಿಷಯಗಳು

ಸಂಯುಕ್ತ ಪ್ರಾಂತ್ಯದ ಎಸೆಂಬ್ಲಿಯ ಕೆಲವು ಸ್ಥಾನಗಳಿಗೆ ಈಗ ಉಪ ಚುನಾವಣೆಗಳಾಗಲಿವೆ. ಕಾಂಗ್ರೆಸ್ ಹುರಿಯಾಳುಗಳನ್ನು ಆಚಾರ್ಯ ನರೇಂದ್ರ ದೇವರಂತಹ ಪ್ರಸಿದ್ಧ ಸಮತಾವಾದಿಗಳು ಇದಿರಿಸಿ ನಿಂತು ಚುನಾವಣಾ ಹೋರಾಟವು ಭರದಿಂದ ನಡೆದಿದೆ. ಅದ್ದರಿಂದಲೇ 'ಕಾಂಗ್ರೆಸಿಗೆ ಮತ ಕೊಡದಿದ್ದರೆ ನೆಹರೂ ಪಟೇಲರಂತಹ ದೇಶೋದ್ಧಾರಕರ ನಾಯಕತ್ವದ ಮೇಲೆ ಅವಿಶ್ವಾಸ ಪ್ರದರ್ಶಿಸಿದಂತಾಗುವುದು' ಎಂದು ಪಂಡಿತ ಪಂತರು, "ಕೇವಲ ವಿರೋಧವೊಂದನ್ನೇ ಕಟ್ಟಿಕೊಂಡಿರುವ ಸಮತಾವಾದಿಗಳಿಗೆ ರಾಷ್ಟ್ರದ ಸದ್ಯಸ್ಥಿತಿಯಲ್ಲಿ ಸ್ಥಾನವಿಲ್ಲ" ಎಂದು ಪಂಡಿತ ನೆಹರುಗಳು ಅಲ್ಲಿಯ ಮತದಾರರನ್ನೆಚ್ಚರಿಸಿದ್ದಾರೆ "ಈ ಕಾಲದಲ್ಲಿ ಕಾಂಗ್ರೆಸಿಗೆ ವಿರೋಧವಿರುವುದು ರಾಷ್ಟ್ರಕ್ಕಪಾಯ. ಒಕ್ಕಟ್ಟೊಂದೇ ನಮ್ಮ ಮೂಲ ಮಂತ್ರ. ಕಾಂಗ್ರೆಸಿನ ಛತ್ರದಡಿಯಲ್ಲಿ ಒಟ್ಟಾಗಿ ಸಮತಾವಾದಿಗಳನ್ನು ಜಾಡಿಗೆ ಹಚ್ಚಿ" ಎಂದು ಸರ್ದಾರ ಪಟೇಲರೂ ಸಂದೇಶವಿತ್ತಿದ್ದಾರೆ. "ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಅಪಾಯ ಪೂದಗುವ ಸಂದರ್ಭದಲ್ಲಿ ಸಮತಾವಾದಿಗಳು ಕಾಂಗ್ರೆಸಿನೊಂದಿಗಿದ್ದೇ ಇದ್ದಾರೆ. ಆದರೆ ಜನತಾ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸನ್ನು ಚುನಾವಣೆಯಲ್ಲಿ ವಿರೋಧಿಸುವುದೂ ಅನ್ಯಾಯ ಕೃತ್ಯವೆನ್ನುವುದು ತಪ್ಪು" ಎಂದು ಅಚ್ಯುತ ಪಟ್ವರ್ಧನರಂತಹ ಸಮತಾವಾದಿ ಪ್ರಮುಖರೂ ಪ್ರಚಾರಕ್ಕಾರಂಭಿಸಿದ್ದಾರೆ.

ಗಾಂಧೀ ಕೊಲೆ ಮೊಕದ್ದಮೆಯು ತಾ. 22ರಲ್ಲಿ ಆರಂಭಿಸಿ 'ಚಾರ್ಜ್' ಓದಲ್ಪಟ್ಟು, ಸರಕಾರೀ ವಕೀಲರ ವರ್ಣನೆಯಾದ ಮೇಲೆ ಸರಕಾರೀ ಕಡೆಯ ಸಾಕ್ಷಿ ವಿಚಾರಣೆಗಳಾಗುತ್ತಿವೆ. ನಡುವೆ ಕೋರ್ಟಿನ ಸಮ್ಮತಿಯಿಂದ ನಾಲ್ವರು ಆರೋಪಿಗಳು ತಮ್ಮ ವಕೀಲರ ಸಮೇತ ಬಿರ್ಲಾ ಭವನವನ್ನೂ ನೋಡಿ ಬಂದರು.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಚಿಹ್ನೆಯುಳ್ಳ ಬಾಟ್ಳಿಗಳು ಹೆಚ್ಚು ಕಡಿಮೆ ಅನೇಕ ಊರುಗಳಿಗೆ ಬರುವವು. ಅಂದರೆ ಕೇವಲ ಈ ರಸಾಯನಕ್ಕೆ ಒಂದು ಬಾಣಂತಿಗೆ ಸಾಕಾಗುವಷ್ಟು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ವಾತಿಕ್ಸರು- ಡಾ|| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಜಲಜಿಹ್ವೆಗೆ ಶಕ್ತಿ... ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯಾದಿ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ. ಸ್ತ್ರೀ ಸಂಗ್ರಹ ಬರವಣಿಗೆ ರೋಗಗಳಿಗೆ ತಕ್ಕ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪ್ಪೋ, ಬೊಂಬಾಯಿ ಏಜಂಟರು:— ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್ ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಕ್ಷಯರೋಗದಿಂದ ನರಳುವಿರೇಕೆ?

"ಮಹಾಜನ" ಇವರ

"ಭೃಂಗರಾಜ" ವನ್ನು

ಸೇವಿಸಿರಿ.

ಪತ್ರವ್ಯವಹಾರಕ್ಕೆ ವಿಳಾಸ:-

ದಿ ಮಹಾಜನ ಕೆಮಿಕಲ್ಸ್ ಮತ್ತು ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್, ಕಾಸರಗೋಡು, ದ. ಇಂಡಿಯಾ.

ರೇಶನ್‌ಕಾರ್ಡುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

The Canara Banking Corporation Limited.
Estd: 1906.
(Incorporated in British India)
Head Office: **UDIPI**, S. India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,87,300
Reserves....	Rs. 8,00,400

BANKING BUSINESS OF EVERY DESCRIPTION TRANSACTED

V. R. Kmath, B.A., LL.B.,
General Manager.

ಗುರುವಾರ, ಉಡುಪಿ, ೧-೭-'೪೮

ಭಾರತದ ನವರೂಪ

ಕಳೆದ ವರುಷದ ಈಗಿನ ಅವಧಿಯು, ಸ್ವರಾಜ್ಯಸ್ಥಾಪನಾ ದಿನ ಆಗೋಸ್ತು 15ನ್ನು ನಿರೀಕ್ಷಿಸುವ ಆನಂದದಂತೆಯೇ ರಾಷ್ಟ್ರದ ವಿಭಜನೆಯು ನಿರ್ಧಾರಕ್ಕಾಗಿ ಭಾರತೀಯರು ಶೋಕಾವೇಗಕ್ಕೀಡಾಗಿದ್ದ ಕಾಲವಾಗಿತ್ತು. ಒಂದು ವರುಷ ಕಳೆದಿದ್ದೇವೆ-ಅಂದು ನಾವು ನಿರೀಕ್ಷಿಸಿದ್ದ ಆ ಆನಂದ ಮತ್ತು ದುಃಖ, ಎರಡರ ಮಿರುಗೂ ಪ್ರತ್ಯಕ್ಷಾನುಭವದಲ್ಲಿರಲಿಲ್ಲವೆಂದು ಈಗ ಖಂಡಿತವಾಗಿ ಹೇಳಬಹುದು. ಸ್ವರಾಜ್ಯದ ಆನಂದವನ್ನು ಅದನ್ನನುಸರಿಸಿ ಬಂದ ದುರಂತ ಪರಂಪರೆಗಳು ಮಸಕುಗೊಳಿಸಿದವು; ದೇಶ ವಿಭಜನೆಯ ದುಃಖವನ್ನು, ಮುಕ್ಕಾಲಂಶ ಭಾರತವು ತನ್ನೊಳಗಿನ ಎಲ್ಲಾ ಗಡಿ ಬೇಲಿಗಳನ್ನೂ ಕಳಚಿ ಹಾಕಿ ಅಖಂಡ ರೂಪಕ್ಕೆ ಬಂದ ಹೆಗ್ಗಳಿಕೆಯು ಮರೆ ಮಾಡಿತು. ಇದು ಈವರೆಗಿನ ಅನುಭವ; ಈ ಮಟ್ಟಿಗೆ ಸುಖ ದುಃಖಗಳು ಸಮಾನ. ಆದರೆ ಇನ್ನು ಮುಂದೆ, ಇದುವರೆಗನುಭವಿಸಿದ ರಾಷ್ಟ್ರೀಯ ಗಲಭೆಯಂತಹ ದುರಂತಗಳಿಗವಕಾಶವಿರದು; ಅಖಂಡ 'ಭಾರತವನ್ನು ಪ್ರಗತಿಪಥ ಹಿಡಿಸುವ ಅನುಕೂಲತೆಗಳು ಮಾತ್ರ ಕಾದಿವೆ, ಆದ್ದರಿಂದ ಭವಿಷ್ಯದ ಕಡೆಗೆ ಭರವಸೆಯಿಂದ ನೋಡಬಹುದು.

ಪಾಕಿಸ್ತಾನವಾಗಿ ಪ್ರತ್ಯೇಕಿಸಲ್ಪಟ್ಟಿರುವ ಭಾಗ ಸಮೇತ ಅಖಿಲ ಭಾರತವು, ಬ್ರಿಟಿಷ್ ಆಳಿಕೆ ವಿನಹಾ ಬೇರಾವ ಕಾಲದಲ್ಲೂ ಏಕಾತ್ಮತೆಯೊಳಗಿದ್ದುದಿಲ್ಲ. ಬ್ರಿಟಿಷ್ ಯುಗದಲ್ಲಿ ಕೂಡಾ 'ಬ್ರಿಟಿಷ್ ಭಾರತ' ಮತ್ತು 'ಆಶ್ರಿತ ರಾಜ್ಯಗಳು' ಭಿನ್ನಾಡಳಿತೆಯೊಳಗೇನೇ ಇದ್ದುವು; ಸಂಸ್ಥಾನಿಕರು ನೇರಾಗಿ ಬ್ರಿಟನಿನ ಸಾರ್ವಭೌಮರಿಗೆ ಬಾಧ್ಯಸ್ಥರಾಗಿದ್ದರಲ್ಲದೆ ಭಾರತ ಕೇಂದ್ರಾಧಿಕಾರದೊಳಗಿರಲಿಲ್ಲ. ಆದರೆ ತನ್ನೊಳಗಿಡೆಯು ಅಂತಹ ಅಷ್ಟ ಮಾಗಾರಗಳನ್ನೆಲ್ಲಾ ನೆಲಸಮ ಮಾಡಿಕೊಂಡ, ಅಥವಾ ಕಟ್ಟಹಿಡೆ ಮಟ್ಟಕ್ಕೆ ತಗ್ಗಿಸಿಕೊಂಡ ಭಾರತದ ಇಂದಿನ ಚಿತ್ರವು ಹೊಸತು! ಸುಮಾರು 150 ವರುಷಗಳಿಂದಿದ್ದ 'ಸಾಂಸ್ಥಾನಿಕ' ಪದ್ಧತಿಯೇ ಈಗ ಬದಲಾಗಿದೆ. ಕಳೆದ ವರುಷದ ಜುಲಾಯಿಯಲ್ಲಿದ್ದ ಭಾರತ ನಕಾಶೆಯು ಆಗೋಸ್ತು ತಾ. 15ರ ನಂತರವಾಗಿರಲಿಲ್ಲ-ಕಾಲಂಶ ಪಾಕಿಸ್ತಾನವಾಗಿ ಬೇರೆಯಾಗಿದ್ದಿತು. ಅಂತಿಯೇ ಕಳೆದ ಆಗೋಸ್ತು 15ರ ಸುಮಾರಿನಲ್ಲಿದ್ದ ಭಾರತ ನಕಾಶೆ ಕೂಡಾ ಈಗ ಆಗುವಂತಿಲ್ಲ-ಸಂಸ್ಥಾನಗಳೆಷ್ಟೋ ಅದೃಶ್ಯವಾಗಿವೆ. ಆ ಕಾಲದಲ್ಲಿ ಸುಮಾರು 600 ಸಂಸ್ಥಾನಗಳಿದ್ದುವು; ಅವೀಗ ಕೇಂದ್ರ ಭಾರತದೊಂದಿಗೆ ತಾದಾತ್ಮ್ಯಗೊಳ್ಳುವ ಅಥವಾ ಹಲವು ತುಂಡುಗಳು ಎರಕಗೊಂಡು ಒಂದಾಗುವ ಮೂಲಕ ಕೇವಲ 30ರ ಸಂಖ್ಯೆಗಿಳಿದಿವೆ. ಸದ್ಯ ಹೈದರಾಬಾದೊಂದನ್ನು ಬಿಟ್ಟು ಭಾರತಕ್ಕೆ ಸಂಬಂಧಿಸಿದ ಮಿಕ್ಕೆಲ್ಲವೂ ಕೇಂದ್ರ ಭಾರತದೊಂದಿಗೆ ಜೋಡಣೆಗೊಂಡಿವೆ. ಹಿಂದಿನ ಭಾರತದಲ್ಲಿ ನಾಲ್ಕನೇ ಒಂದಷ್ಟು ಪಾಕಿಸ್ತಾನವಿದ್ದರೆ, ಮೂರನೇ ಒಂದಂಶಕ್ಕೂ ಮಿಕ್ಕಿ ಈ ಸಂಸ್ಥಾನ ಪ್ರದೇಶಗಳಿದ್ದುವು. ಹಠಮಾರೀ ಮುಸ್ಲಿಂ ಲೀಗಿಗೆ ಪಾಲು ಕೊಟ್ಟು ದೂರ ಕಳುಹಿಸದಿರುತ್ತಿದ್ದರೆ, ಅದರ ಹೋರಾಟ ಬುದ್ಧಿಯು ಅಖಿಲ ಭಾರತದ ವ್ಯವಸ್ಥೆಯನ್ನು ಆತಂಕಿಸುವುದರಲ್ಲೇ ಪ್ರಯೋಗಿಸಲ್ಪಡುತ್ತಿದ್ದಿತು; ಮುಕ್ಕಾಲು ಪಾಲು ಭಾರತದ ಇಂದಿನ ಏಕರೂಪವಸಾಧ್ಯವಾಗುತಿತ್ತು. ಆದ್ದರಿಂದ ಆ 'ಪಾಕಿಸ್ತಾನೀ ನಷ್ಟ' ಮತ್ತು ಈ 'ಸಂಸ್ಥಾನೀ ಲಾಭ'ಗಳನ್ನು ಸರಿದೂಗಿಸಿ ನೋಡುವಾಗ ಇಂದು ಯಾರೂ ಪಶ್ಚಾತ್ತಾಪ ಪಡಲಾರರು.

ಈಗ ಹೈದರಾಬಾದು ಸಮಸ್ಯೆ ಉಳಿದಿದೆ. ಕಾಶ್ಮೀರದ ಕಾಳಗವಿದ್ದೆಯಾದರೂ ಅದು ಭಾರತ ಕೇಂದ್ರದೊಂದಿಗೆ ಜೋಡಣೆಗೊಂಡಿರುವುದರಿಂದ ಭಾರತ ಸರಕಾರವು ಆ ಸಂಬಂಧದ ಕಾರ್ಯಕ್ಕೆ ಕೈಹಾಕಿ ಅದನ್ನು ನಿರ್ವಹಿಸುತ್ತಿದೆ. ಸದ್ಯ ಏಕಮಾತ್ರ ಅಪವಾದ-"ಬೆಕ್ಕಿನ ಬಿಡಾರ"ದ ವಾದ—ಹೈದರಾಬಾದಿನದ್ದೇ. ಪಂಡಿತ ನೆಹರುಗಳು ಹಲವು ಬಾರಿ ಒತ್ತಿ ಹೇಳಿರುವಂತೆ "ಹೈದರಾಬಾದು ಭಾರತವನ್ನು ಬಿಟ್ಟೇ ಬದುಕಬಲ್ಲುದೆಂಬ ಭ್ರಮೆ ಸುಳ್ಳು!" ಭೂಗೋಲಿಕವಾಗಿ, ಆರ್ಥಿಕವಾಗಿ ಭಾರತ ಕಂಕುಳಡಿಯಲ್ಲಿರುವಂತೆ ಇರುವ ಸಂಸ್ಥಾನವದು; ಪಾಲದುದಕ್ಕೆ ಒಳಗಿನ ಪ್ರಜೆಗಳಲ್ಲಿ ಅತ್ಯಧಿಕ ಸಂಖ್ಯಾಕರು ಭಾರತದೊಂದಿಗೆ ಐಕ್ಯತೆಯಿರುವವರು; ಇಂತಹ ಒಂದು ಸಂಸ್ಥಾನದ ಒಂದು ನಿರಂಕುಶಾಡಳಿತೆಯು, ಅಂದಿನಿಂದಿದು ವರೆಗೂ-ಇನ್ನೂ-ಭಾರತವನ್ನು ಅಣಕಿಸಿ, ವಂಚಿಸಿ ಬಾಳಬಹುದೆಂಬ ಆಶೆ ಕಟ್ಟಿಕೊಂಡಿರುವುದು ನಿಜಕ್ಕೂ ಈ ಕಾಲದ ಒಂದು ಸೋಜಿಗ! ಕೊನೆಯ ಬಾರಿಯ ರಾಜೀ ಮಾತುಕತೆ ಮುಗಿದ ಮೇಲೂ ಹಿಂದೀ ಸರಕಾರವು ಹೈದರಾಬಾದಿನ ಕುರಿತು ಕೈಹಿಂದಕ್ಕೆಳೆದು ನೋಡುತ್ತಾ ಇ

ಸಂಗತಿಯೊಳಗಿನ ಸಾರ

ಭಧ್ರತಾ ಕೌನ್ಸಿಲು ನೇಮಿಸಿದ್ದ 'ಕಾಶ್ಮೀರ ಸಮಿತಿ'ಯು ತನ್ನ ದ್ವಿತೀಯ ಕರ್ತವ್ಯವಾಗಿ ಜುನಾಗಾಢ್, ಮಾನವದಾರ್ ಮತ್ತು ಮಾಂಗ್ರೋಲ್ ಸಂಸ್ಥಾನಗಳ ಪ್ರಶ್ನೆಯನ್ನೂ ಪರ್ಯಾಲೋಚಿಸುವ ಅಧಿಕಾರವನ್ನು ಇಟ್ಟುಕೊಂಡೇ ಬರುತ್ತಿದೆ; ಇವು ಮೂರೂ ಒಮ್ಮೆ ಪಾಕಿಸ್ತಾನದ ಬಗಲಿಗೆ ಬಿದ್ದಿದ್ದು, ಈಗ ಭಾರತದೊಂದಿಗೆ ಸೇರಿಕೊಂಡಿರುವ ಕಾಥಿಯಾವಾರ್ ಸಂಸ್ಥಾನಗಳು. ಈಗ ಭಾರತ ಸರಕಾರವು ಮಾನವದಾರ್ ಮತ್ತು ಮಾಂಗ್ರೋಲ್ ಸಂಸ್ಥಾನಗಳ ಆಡಳಿತೆಯನ್ನು ತಾತ್ಕಾಲಿಕವಾಗಿ ಸೌರಾಷ್ಟ್ರ ರಾಜಕೂಟಕ್ಕೆ ಒಪ್ಪಿಸಿ ಕೊಟ್ಟಿದೆ. ಇದು 'ಕಾಶ್ಮೀರ ಸಮಿತಿ'ಯ ಅಧಿಕಾರಸಂಗತಿಕ್ಕೊಂದು ಪ್ರತಿಭಟನೆಯೆಂದು ತಿಳಿಯಬಹುದು.

೦೦ ೦೦ ೦೦

ಹೈದರಾಬಾದಿನ ಮೇಲೆ ಭಾರತವು ಯುದ್ಧ ಸಾರದರೇನಾಗಬಹುದು ಎಂಬುದು ಸದ್ಯಕ್ಕೆ ಊಹಾತೀತ ಸಂಗತಿ. ಸರ್. ಮೋಂಕ್ಟನರು ಅಂತರ್ರಾಷ್ಟ್ರೀಯ ಸಂಬಂಧ ನಿರ್ಮಾಣದ ಕೆಲಸ ಮಾಡಬಲ್ಲವರಾದರೆ, ಕಾಸಿಮ್ ರಿಜ್ವಿಯು ಪಾಕಿಸ್ತಾನ್ ಮೂಲಕ ಎಲ್ಲಾ ಮುಸ್ಲಿಂ ರಾಷ್ಟ್ರಗಳ ಸಹಯೋಗ ಸಂಪಾದಿಸಬಲ್ಲವ. ಆದ್ದರಿಂದ ವಾದ ಮತ್ತು ಕಾದಾಟ ಎರಡರಲ್ಲೂ ಹೈದರಾಬಾದೊಂದನ್ನೇ ತನ್ನಿದಿರು ಕ್ಷೇತ್ರವೆಂದು ಗಣಿಸದೆ ಭಾರತ ಸರಕಾರವು ಅದು ವಿಸ್ತಾರವಾಗಿ ಹಬ್ಬಲಿರುವ ಸಂಭವವನ್ನೂ ನೋಡಿಕೊಂಡೇ ಕೆಲಸ ಮಾಡಬೇಕು. ಅತ್ತ ಕಾಶ್ಮೀರದಲ್ಲಿ ತನ್ನ ಸೇನೆಗಳನ್ನು ಇದಿರೊಡ್ಡಿರುವ ಪಾಕಿಸ್ತಾನವು 'ಹೈದರಾಬಾದು ಬಿಕ್ಕಟ್ಟಿನ' ಪ್ರತಿ ಸಂದರ್ಭದಲ್ಲೂ ತನ್ನ ಗಡಿಯಲ್ಲಿ ಹಿಂದೀ ಸರಕಾರ ಅತ್ರಮಣಗಳನ್ನು ನಡೆಸಿದೆ ಎಂದು ದೂರಿಡಲೇಳುವುದು ಕಂಡುಬಂದಿದೆ. ಭಾರತವು ಹೈದರಾಬಾದಿನ ಮೇಲೆ ಬೀಳುವಾಗಲೇ ಅತ್ತ ಕಾಶ್ಮೀರದಲ್ಲಿ ಇತ್ತ ತನ್ನ ಗಡಿಯಲ್ಲಿ ತಾನು ನಿಜವೇಷದಿಂದಲೇ ಭಾರತವನ್ನಿದಿರಿಸಲೇಳುವ ಹಂಚಿಕೆಯಲ್ಲಿ ಪಾಕಿಸ್ತಾನವಿರಲೂಬಹುದು. ಭಾರತದ ಅಪಾರ ಶಕ್ತಿಯಿದಿರುರುವ ದೃಶ್ಯದಲ್ಲಿ, 'ತುಂಟ ಹುಡುಗನೆನ್ನು ಥಳಿಸಿ ಕಟ್ಟಿ ಹಾಕಲೋ, ಬೋಧಿಸಿ ಕಲಿಸಲಾದೀತೋ?' ಎಂಬ ಯೋಚನೆಯು ಹಿರಿತನ ಕಾಣುತ್ತದೆ ಹೊರತು ಹೇಡಿತನವಲ್ಲ. ಆ ಕುರಿತು ಭಾರತವು ದೂರಕ್ಕೂ ದೃಷ್ಟಿಯೋಡಿಸಿ ಎಲ್ಲವನ್ನೂ ನೋಡಿಕೊಂಡೇ ಮುಂದಿನ ಹೆಜ್ಜೆಯಿಡಬೇಕಾಗಿದೆ. ಅಂತಹ ದೂರದೃಷ್ಟಿಯ ಅವಕಾಶವಿರದ ಸಾರ್ವಜನಿಕರು ಈ ಕುರಿತಾವ ಅಧಿಕ ಪ್ರಸಂಗಕ್ಕೂ ಹೋಗದೆ, ಈ ಮಟ್ಟಿಗೆ ತಮ್ಮ ಕರ್ತವ್ಯವು ಭಾರತ ನಾಯಕರ ನಿರ್ದೇಶದಂತೆ ವರ್ತಿಸುವದೇ ಹೊರತು ತಾನೇ ಅವರ ನಿರ್ದೇಶಕತ್ವ ವಹಿಸುವದಲ್ಲನೆಂಬುದನ್ನು ತಿಳಿದಿರಬೇಕಾದುದು ಅಗತ್ಯ. ಹಾಗಾದಲ್ಲಿ ಈ ಕೊನೆಯ ಕಂಟಕವೂ ನಿವಾರಣೆಗೊಂಡು, ತನ್ನ ಸರ್ವತೋಮುಖ ಅಭಿವೃದ್ಧಿ ಮತ್ತು ಸಮಾನತೆ ಸ್ಥಾಪಿಸುವ ಕರ್ತವ್ಯ ಭಾರವೊಂದೇ ಉಳಿಯುವ ಏಕರೂಪೀ ಭಾರತವನ್ನು ಕಾಣುವ ಕಾಲ ದೂರವಿಲ್ಲ.

ಯಾವುದೂ ಗಣ್ಯವಲ್ಲವಾದರೂ ಇವೆಲ್ಲವನ್ನೂ ನಿರೀಕ್ಷಿಸಿಯೇ ಅದು ಕಾರ್ಯಕ್ಕೆ ಕೈ ಹಚ್ಚಬೇಕಾಗಿದೆ. ಅಂತಹದೇನನ್ನೂ ಮಾಡದೆ, ಎಲ್ಲಾ ಕಡೆಗಳಿಂದಲೂ ತನ್ನಿಂದಾವರಿಸಲ್ಪಟ್ಟಿರುವ ಹೈದರಾಬಾದಿನ ಮೇಲೆ ವ್ಯಾಪಾರಾರ್ಥಿಕ ಬಹಿಷ್ಕಾರ ಹಾಕಿದರೂ ಕೆಲಕಾಲದೊಳಗೆ ನಿಜಾಮರ ಉಸಿರು ಕಟ್ಟುವದು ಖಂಡಿತ ಆದರೆ ಈ ಅಪ್ರತ್ಯಕ್ಷ ಶಿಕ್ಷೆಯ ಕೊನೆಯ ಪರಿಣಾಮದ ವರೆಗೆ ಕಾಯುವಷ್ಟು ಭಾರತದ ಜನತೆಯಲ್ಲಿ ಸಹನೆ ಬೇಕು. ನಿಜಾಮರೀಗಾಗಲೆ ತನ್ನ ಇಚ್ಛೆಯಂತಿರುವ ಹಕ್ಕು ಹೈದರಾಬಾದಿಗಿದೆ, ಹೈದರಾಬಾದೆಂದರೆ ಅಲ್ಲಿಯ ಜನತೆ ಹೊರತು ನಿಜಾಮರಲ್ಲವೆಂಬುದು ನಿಜವಾದರೂ, ಒಂದಲ್ಲೊಂದು ರೀತಿಯ ಜನಮತಸಂಗ್ರಹಕ್ಕೆ ನಿಜಾಮರೊಪ್ಪುತ್ತಾರೆ, ಆದ್ದರಿಂದ ಲೋಕದಿದಿರು ತಾನು ಅನ್ಯಾಯಿಯೆನ್ನಿಸದಂತೆ ಭಾರತ ಸರಕಾರವು ಒಮ್ಮೆಯೇ ದುಡುಕದೆ ನಿಂತಿದೆ. ರಝಾಕಾರರ ಅತ್ಯಾಚಾರಗಳು, ಹಿಂದೀ ಸೈನಿಕರನ್ನು ಹೈದರಾಬಾದಿನೊಳಕ್ಕೆಳೆದರೂ ಆ ಹೋರಾಟದ ಗುರಿಯೇ ಪ್ರತ್ಯೇಕವೆನ್ನಿಸಿ, ರಾಜಕೀಯ ತೀರ್ಮಾನವನ್ನದು ತರುವದು ಅಸಂಭವ.

ಬಿನ್ನಹ

ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳೂ ಉಡುಪಿಯ ಗಣ್ಯ ನಾಗರಿಕರೂ ಆದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಬದುಕಿದ್ದಾಗ ನಾಡಿಗೂ ನುಡಿಗೂ ಸಲ್ಲಿಸಿದ ಸೇವೆಯ ನೆನಪು ಚಿರಕಾಲ ಉಳಿವಂತೆ ಒಂದು ಸೂಕ್ತ ಸ್ಮಾರಕವನ್ನು ರಚಿಸಬೇಕೆಂದು 'ಕೊರಡ್ಕಲ್ ಸ್ಮಾರಕ ಸಮಿತಿ'ಯು ನಿಶ್ಚಯಿಸಿದೆ. ತೈಲಚಿತ್ರ ಅನಾವರಣ, ಸ್ಮಾರಕ ಗ್ರಂಥಪ್ರಕಾಶನ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ವ್ಯವಸ್ಥೆ, ವಿವಿಧ ಪಾರಿತೋಷಕಗಳ ವಿತರಣೆ ಇವು ಮೊದಲಾದುವನ್ನೇ ಸಮಿತಿ ಉದ್ದೇಶವಾಗಿಟ್ಟುಕೊಂಡಿದೆ. ಶ್ರೀ ಕೊರಡ್ಕಲ್ ಶ್ರೀನಿವಾಸರಾಯರನ್ನು ಬಲ್ಲವರೂ, ಶಿಷ್ಯವೃಂದದವರೂ, ಗೆಳೆಯರೂ, ಅಭಿಮಾನಿಗಳೂ ಈ ಸತ್ಕಾರ್ಯಕ್ಕೆ ಉದಾರವಾದ ಸಹಾಯವನ್ನು ನೀಡಿ ನಮ್ಮೊಡನೆ ಸಹಕರಿಸಬೇಕೆಂದು ವಿನಂತಿ.

ಡಾ। ಸುಂದರರಾವ್ ಪೈ,
ಅಧ್ಯಕ್ಷ.
ಬೈಲೂರು ವಾಸುದೇವರಾವ್,
ಉಪಾಧ್ಯಕ್ಷ ಮತ್ತು ಕೋಶಾಧಿಕಾರಿ.
ಕೆ. ಹೊನ್ನಯ್ಯ ಶೆಟ್ಟಿ,
ಕಾರ್ಯದರ್ಶಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 17/1948.

ಕೊರಾಪಿ ಶೆಡ್ತಿ: ಅರ್ಜಿದಾರಳು.

ಮತ್ತು

1. ವ್ಯಾಸಂಪು ಶೆಡ್ತಿ—ಚಂದಂಪು ಶೆಡ್ತಿ ತಂಗಿ, 2. ಲಕ್ಷ್ಮಿ ಶೆಡ್ತಿ, 3. ಕೊರಾಪಿ ಶೆಡ್ತಿ ಚಂದಂಪು ಶೆಡ್ತಿ ಮಕ್ಕಳು ಕೆಂಜೂರು ಗ್ರಾಮದಲ್ಲಿರುವವರು, ಇವರೊಳಗೆ:

ಮೃತ ಕೆ. ರಾಮಣ್ಣಶೆಟ್ಟಿಯ ಬಾಬ್ತು: ಉಡುಪಿ ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರ್ ಒಫ್ ಸ್ಕೂಲ್ ನಿಂದ ಸಿಕ್ಕತಕ್ಕ ರೂ. 290/ ಮತ್ತು ನವಯುಗ ಎಂಟರ್‌ಪ್ರ್ಯಾಸ್ ಲಿಮಿಟೆಡ್. ಉಡುಪಿಯ ನಂಬ್ರ 154ನೇ ಶೇರ್ ಮೇಲ್ನ ಬಾಬ್ತು ರೂ. 10/-ನ್ನು ಸಹಾ ವಸೂಲು ಪಡಿಯುವರೆ ಅರ್ಜಿದಾರಳ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ದಾಖಲ್ಮಾಡಿದ ಮೇಲ್ಕಂಡ ಅರ್ಜಿಯು ತಾ 3-7-48ಕ್ಕೆ ತನ್ನಿಗೆ ಇಟ್ಟಿದೆ. ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವಸ 11 ಗಂಟೆಗೆ ಕೋರ್ಟುಮುಂದೆ ಹಾಜರಾಗಿ ತಕ್ಕರಾರು ಮಾಡಿಕೊಳ್ಳತಕ್ಕದ್ದು.

B. S. Hegde

ವ್ಯಕ್ತಿ-ಸಂಗತಿ-ಪರಿಚಯ

ಮದ್ರಾಸ್ ಸರಕಾರದ ಪಾನ ನಿರೋಧ ಮಂತ್ರಿಯಾಗಿದ್ದ ಮಿ. ಡೇನಿಯಲ್ ಥೋಮಸರ ನಿಧನದಿಂದ ಖಾಲಿಯಾದ ಮದ್ರಾಸ್ ಮಂತ್ರಿಮಂಡಲದ ಒಂದು ಸ್ಥಾನಕ್ಕೆ ಡಾ। ಯಸ್. ಗುರುಬಾತಮರು ನೇಮಿಸಲ್ಪಟ್ಟಿದ್ದಾರೆ. ಇವರು ವೆಲ್ಲೂರಿನಲ್ಲಿ ಕಣ್ಣಿನ ಸರ್ಜನರಾಗಿದ್ದವರು; 'ಇಂಡಿಯನ್ ಕ್ರಿಶ್ಚನ್'. ವೆಲ್ಲೂರಿನಲ್ಲಿದ್ದ ಡಾ। ಗುರುಬಾತಮರನ್ನು ಜೂನ್ ತಾ 25ರಲ್ಲಿ ಪ್ರಧಾನ ಮಂತ್ರಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯಾರರು ಮದ್ರಾಸಿಗೆ ತರಿಸಿಕೊಂಡು, ಮಂತ್ರಿಯಾಗಿ ನೇಮಿಸಿಕೊಂಡರು. ಡಾ. ರು ಮರುದಿನವೇ ಸರಕಾರೀಭವನದಲ್ಲಿ ಗವರ್ನರ್ ನೈಯವರ ನಿರ್ದೇಶಕತ್ವದಲ್ಲಿ ಮಂತ್ರಿ ಪ್ರತಿಜ್ಞೆ ಸ್ವೀಕರಿಸಿ, ತನ್ನ ಖಾಸಗೀ ಕಾರ್ಯಗಳ ವ್ಯವಸ್ಥೆಗಾಗಿ ಕೆಲದಿನಗಳ ಮಟ್ಟಿಗೆ ವೆಲ್ಲೂರಿಗೆ ಮರಳಿದ್ದಾರೆ; ಪುನಃ ಮದ್ರಾಸಿಗೆ ಬಂದ ಮೇಲೆ ಅವರಿಗಾವ ಖಾತೆಯೆಂಬುದು ನಿಶ್ಚಯವಾಗಲಿದೆ. ಇವರು ಮದ್ರಾಸ್ ಮಂತ್ರಿಮಂಡಲದ 12ನೇ ಮಂತ್ರಿ. ಶ್ರೀ. ಟಿ. ಪ್ರಕಾಶಂರ ಪ್ರಧಾನಿತ್ವದಿಂದಾರಂಭಿಸಿ, ಶ್ರೀ ಓಮಂದೂರರ ಅವಧಿಯ ಪೂರ್ವಾರ್ಧದಲ್ಲೂ 13 ಮಂತ್ರಿಗಳಿದ್ದರು. ಡಾ। ಸುಬ್ಬರಾಯನರ ರಾಜೀನಾಮೆಯಿಂದ ಆ ಸಂಖ್ಯೆ ಹನ್ನೆರಡಕ್ಕಿಳಿಯಿತು. ಆಚಾರ, ಸತ್ಸಂಪ್ರದಾಯನಿಷ್ಠೆಯ ಓಮಂದೂರರು ಅನಿಷ್ಟ ಸಂಖ್ಯೆ 13ನ್ನು ಮೆಚ್ಚುವುದಿಲ್ಲವಾದ್ದರಿಂದ ಅವರ ಮಂತ್ರಿಮಂಡಲದಲ್ಲಿ ಹನ್ನೆರಡೇ ಮಂದಿಯುಳಿಯುವರೆಂದು ತಿಳಿದುಬರುತ್ತದೆ.

ಡಾ। ಗುರುಬಾತಮರು ಕೊಯಮುತ್ತೂರಿನವರು 'ನೋಸೆಸ್ ಗ್ಲಾನಪರ್ವ್ ಕಣ್ಣಾಸ್ಪತ್ರೆ'ಯನ್ನು ಕೊಯಮುತ್ತೂರಿನಲ್ಲಿ ಸ್ಥಾಪಿಸಿ, ಹಲವು ವರುಷಗಳ ವರೆಗೆ ತಾನೇ ಅದನ್ನು ನಡೆಸಿಕೊಂಡಿದ್ದರು. ಕೆಲಕಾಲ ವೈದ್ಯಕೀ ಉದ್ಯೋಗವನ್ನೇ ಬಿಟ್ಟು ಚಿತ್ತೂರು ಜಿಲ್ಲೆಯ ಕುಪ್ಪಮ್ ಸಮೀಪದಲ್ಲಿ ದೊಡ್ಡ ಪ್ರಮಾಣದಲ್ಲಿ ಬೇಸಾಯ ಮಾಡಿಸಿದ್ದರು. ಕೊನೆಗೆ ಇವರು ವೆಲ್ಲೂರಿಗೆ ಬಂದು ಅಲ್ಲಿ ಕಣ್ಣು ಚಿಕಿತ್ಸೆಯ ತಜ್ಞ ಡಾಕ್ಟರನಾದರು. ಆ ಮೇಲೆ "ಅಮೇರಿಕನ್ ಮಿಶ್ಯನ್ ಮಹಿಳಾ ಮೆಡಿಕಲ್ ಕಾಲೇಜು"ನಲ್ಲಿ ಅಕ್ಷಿರೋಗ ಸಂಬಂಧದ ಪ್ರೊಫೆಸರಾದರು. ಡಾ. ಗುರುಬಾತಮರು ಹಲವು ವರುಷಗಳಿಂದ ಶುದ್ಧ ಕಾಂಗ್ರೆಸ್ ಮನೋವೃತ್ತಿಯವರಾಗಿದ್ದಾರಲ್ಲದೆ, 1938ರಲ್ಲಿ ಕಾಂಗ್ರೆಸ್ ಉಮೇದ್ವಾರಿಯಾಗಿ ಕೊಯಮುತ್ತೂರು ನಗರ ಸಭೆಯ ಒಂದು ಸ್ಥಾನಕ್ಕೆ ಸ್ಪರ್ಧಿಸಿದ್ದರು. ಡಾ. ಗುರುಬಾತಮ್ ಈ ತನಕ ಮದ್ರಾಸ್ ನ್ಯಾಯವಿಧಾಯಕ ಸಭಾ ಸದಸ್ಯನಾಗಿರಲಿಲ್ಲ. ಆದರೆ ಕಾನೂರಿನ ಕರ್ನಲ್ ಕೆ. ಆರ್. ಕೆ. ಅಯ್ಯಂಗಾರರ ನಿಧನದಿಂದ ಖಾಲಿ ಬಿದ್ದ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಸ್ಥಾನಕ್ಕೆ ಈಗ ನಾಮಕರಣಗೊಂಡಿದ್ದಾರೆ.

೦೦ ೦೦ ೦೦

ಈಗ ಕಾಶ್ಮೀರದ ಸ್ಥಿತಿ ವಿಚಾರಣೆಗೆ ಹೊರಟಿರುವ ಭದ್ರತಾ ಕೌನ್ಸಿಲಿನ ಕಾಶ್ಮೀರ ಸಮಿತಿಯಲ್ಲಿರುವ ಸದಸ್ಯರು:—ಎಮ್. ರಿಚಾರ್ಡೊ ಜೆ.-ಸಿರಿ, ಅಧ್ಯಕ್ಷ (ಅರ್ಜೆಂಟೈನಾದ ಪ್ರತಿನಿಧಿ) ಎಮ್. ಎಗ್ಬರ್ಟ್ ಗ್ರೈಫೆ (ಬೆಲ್ಜಿಯಮ್) ಹೇರ್ರಿ ಗ್ರೈಫೆ (ಅವರ ಬದಲು ಸದಸ್ಯ) ಅಲ್ಫ್ರೆಡೊ ಲೋಝಾನೊ (ಕೊಲಂಬಿಯಾ) ಹೆರ್ನಾಂಡೊ ಸೇಂಪರ್ (ಅವರ ಪ್ರತಿ ಸದಸ್ಯ) ಎಮ್. ಜೋಸೆಫ್ ಕೋರ್ಬೆಲ್ (ಝೆಕೊಸ್ಲೊವೇಕಿಯಾ) ಜೆ. ಕ್ಲಾರ್ಕ್ ಹಡ್ಲಿ (ಅಮೇರಿಕ) ಸಿ ಹಾವ್ಲೆ ಓಕೆಸ್ (ಅವರ ಬದಲಿಗೆ) ಮೇಜರ್ ಫ್ರಾನ್ಸಿಸ್ ಎಮ್. ಸ್ಮಿತ್ (ಅಮೇರಿಕದ ಸಲಹೆಗಾರ) ಜೆ. ಸೆಕ್ಲೆ ಅದಮ್ಸ್ (ಜೂನಿಯರ್ ಸಲಹೆಗಾರ) ಹೆರ್ರಿಸನ್ ಟ್ರೂಪ್ (ಕಾರ್ಯದರ್ಶಿ—ಸ್ಟೆನೊಗ್ರಾಫರ್) ವಿಲ್ಲಿಯಮ್ ಗೂಡೆ (ಸೆಕ್ರೆಟರಿಯೇಟಿನ ಕಾರ್ಯದರ್ಶಿ—ಸ್ಟೆನೊಗ್ರಾಫರ್) ಎರಿಕ್ ಕೋಲ್ಬನ್ (ಜಾಗತಿಕ ಸಂಘದ ಮುಖ್ಯ ಕಾರ್ಯದರ್ಶಿಯ ಖಾಸಗೀ ಪ್ರತಿನಿಧಿ), ಡ॥ ಅರ್ನೋಲ್ಡ್ ವಿ. ಕುನ್ಸ್ಟ್ (ಪ್ರಮುಖ ಕಾರ್ಯದರ್ಶಿ), ಡಾ। ಹೆನ್ರಿಯಸ್. ಬ್ಲೋಷ್ (ಡಿಪ್ಯುಟಿ ಪ್ರಮುಖ ಕಾರ್ಯದರ್ಶಿ), ರಿಚಾರ್ಡ್ ಸ್ಯಮನ್ಸ್ (ಸೆಕ್ರೆಟರಿ ಜನರಲರ ಖಾಸಗೀ ಕಾರ್ಯದರ್ಶಿಯ ಸಲಹೆಗಾರ), ಅಲೀ ಅಫಾಕೀ (ಸಹಾಯಕ ಕಾರ್ಯದರ್ಶಿ), ಅರ್ಥರ್ ಜಿ. ಕೇಂಪ್ ಬೆಲ್ (ಸಹಾಯಕ ಕಾರ್ಯದರ್ಶಿ), ವಿಲ್ಲಿಯಮ್ ಎಫ್ ಫೆಲ್ಲರ್ (ಪತ್ರಿಕಾಧಿಕಾರಿ), ಡಾ। ಸ್ಲೇವೋ ಮಿರ್ ಎಫ್. ಬ್ರಾಝುಕ್ (ಆಡಳಿತ ಮತ್ತು ಆರ್ಥಿಕ ಸಲಹೆಗಾರ), ಐದು ಮಂದಿ ಮಹಿಳಾ ಸ್ಟೆನೊಗ್ರಾಫರರೂ ಇದ್ದಾರೆ. ಅವರೆಂದರೆ ಮಿಸ್. ಎಲ್. ಎ. ಕ್ರಾವ್ ಫೋರ್ಡ್, ಮಿಸ್. ಮೇರಿಯರ್ ವಿಲ್ಲಿನ್ ಟನ್, ಮಿಸ್ ಸೆಸಿಲ್ ಲಿಫೋರ್ತ್, ಮಿಸೆಸ್ ಮ್ಯೂರಿಯಲ್ ಹನ್ನಾಲೆವಿಸ್, ಮಿಸ್. ಪಾವ್ಲಿನ್ ಪೆರಿನ್.

೦೦ ೦೦ ೦೦

ಆಹಾರಾಭಾವ ನಿವಾರಣೆಗಾಗಿ ಅದರ ಹೊಣೆ ಹೊತ್ತ ಮಂತ್ರಿಯೊಬ್ಬನು ಗಾಂಧೀ ತತ್ತ್ವಾನುಸಾರ ಉಪವಾಸ ಮಾಡಿದ ಹೊಸ ದಾಖಲೆಯೊಂದು ಈಗ ತಾನೇ ನಿರ್ಮಾಣಗೊಂಡಿದೆ; ಅದನ್ನು ನಿರ್ಮಿಸಿದವರು ಅಸ್ಸಾಮಿನ ಆಹಾರ ಮಂತ್ರಿ ಶ್ರೀ ಓಮಿಯೋ ಕುಮಾರದಾಸರು. ಅಸ್ಸಾಮಿನಲ್ಲಿ ಆಹಾರಾಭಾವ ಮಿತಿಮೀರಿದುದನ್ನು ಕಂಡು ಸಾಮಾನ್ಯ ಜನತೆಯೊಂದಿಗೆ ಹಸಿವು ಪಾಲುಗಾರನಾಗಬೇಕೆಂದೇ ಕಾಂಗ್ರೆಸ್ ಮಂತ್ರಿ ಶ್ರೀ ಕುಮಾರದಾಸರು ಅನಶನ ಕೈಕೊಂಡಿದ್ದರು. 144 ಘಂಟೆಗಳ ತನಕ ಈ ಉಪವಾಸ ವ್ರತವನ್ನು ನಿಷ್ಠೆಯಿಂದ ಪಾಲಿಸಿ ಎಲ್ಲಾ ಕಡೆಗಳಿಂದಲೂ ಆಹಾರ ಸ್ಥಿತಿ ಸುಧಾರಿಸಿದ ಅಭಯ ದೊರೆತ ಮೇಲೆ ಇದೇ ತಾ 26ನೇ ರಾತ್ರಿ ತನ್ನ ವ್ರತ ಮುಕ್ತಾಯಗೊಳಿಸಿದ್ದಾರೆ.

೦೦ ೦೦ ೦೦

ರಾಜಾಜಿ ಗವರ್ನರ್ ಜನರಲರಾಗಿ ನೇಮಕಗೊಂಡೊಡನೆಯೇ ಪ್ರಪಂಚದ ಎಲ್ಲಾ ಗಣ್ಯ ವಿಚಾರಿಗಳೂ ಆನಂದ ಸೂಚಿಸಿದ್ದರು. ವಿಶೇಷವೆಂದರೆ ಕಾಯಿದೇ ಆಝಮ್ ಜಿನ್ನರು, ತನ್ನ ಉದ್ದೇಶಸಾಧನೆಗವಕಾಶ ದೊರಕಿಸಿಕೊಡುವ ಜನವಿದ್ದು'ಎಂಬ ಸ್ವಂತಭಾವನೆ ಇತರರಿಗರ್ಥವಾಗುವ ಮಾದರಿಯಲ್ಲಿ ಶುಭ ಕೋರಿದ್ದುದು ರಾಜಾಜಿ ಪೀಠವೇರಿದ ಮುಹೂರ್ತದಲ್ಲಿ ದೇಶ ವಿದೇಶಗಳಿಂದ ಬಂದ ಅಭಿನಂದನೆಗಳು ಅಗಣಿತ. ಆ ಪೈಕಿ ಹೈದರಾಬಾದಿನ ನಿಜಾಮರು ರವಾನಿಸಿದ ಶುಭಾಶಯದಲ್ಲಿ ಮಿ. ಜಿನ್ನರ ಬಯಕೆಯಲ್ಲಿದ್ದಂತೆಯೇ ಒಂದು ಗೂಢಾರ್ಥವಿದೆ. 'ನಿಮ್ಮಿಂದಾಗಿ ಭಾರತದ ಗೊಂದಲ ಮತ್ತು ದುರ್ಗತಿ ನಿವಾರಣೆಯಾದೀತು" ಎಂದು ರಾಜಾಜಿಯ ಮುಖ ನೋಡಿ ನಿಜಾಮರೆಂದಿದ್ದಾರೆ. ಭಾರತದ ಈ ರೋಗವನ್ನು ಗುಣಪಡಿಸುವದಕ್ಕಾಗಿಯೇ ಕಳೆದ ಒಂದು ವರುಷದಿಂದಲೂ ನಿಜಾಮ್ ಪ್ರತಿನಿಧಿ ಡಾಕ್ಟರುಗಳು ಡಿಲ್ಲಿಗೆ ಹೋಗಿಬರುತಿದ್ದುದೇನೋ! ಹಿಂದುಸ್ಥಾನದಲ್ಲಿ ದುರವಸ್ಥೆಯಿರುವುದೊಂದೇ ನಿಜಾಮರ ಕಣ್ಣಿಗೆ ಕಾಣಿಸುತ್ತಿದೆಯಲ್ಲದೆ, ಹೈದರಾಬಾದನ್ನು ಹಾದಿಗೆ ಹಚ್ಚಬಲ್ಲ ಶಕ್ತಿಯು ಅದಕ್ಕಿದೆಯೆಂಬುದು ಇನ್ನೂ ಗೋಚರಿಸುತ್ತಿಲ್ಲ! ಇದು ಅಪಾಯಕರ.

೦೦ ೦೦ ೦೦

ಜನನಾಯಕರಾದವರು ಶಕುನ ಪ್ರೇಮ ಪ್ರದರ್ಶಿಸುವುದನ್ನೋ, ಪ್ರಕೃತಿಯ ಕೆಲಸಕ್ಕೂ ಮನುಷ್ಯ ಮರ್ಜಿಗೂ ಗಂಟು ಹಾಕಿ ಬಿಡುವುದನ್ನೋ ಕಾಣುವಾಗ ಜನತಾ ಭಾವನೆಯಲ್ಲಿ ಒಂದು ರೀತಿಯ ಆಂದೋಲನವೇಳುವದಿದೆ. ಹಿಂದೆ ಕ್ವೆಟ್ಟಾ ಭೂಕಂಪವಾದಾಗ "ಇದು ಅಸ್ಪೃಶ್ಯತೆಯ ಪಾಪಕ್ಕಾಗಿ ದೇವರಿಂದ ದೊರೆತ ಶಿಕ್ಷೆ" ಎಂದು ಗಾಂಧಿಜೀ ಹೇಳಿ ಭಾರತೀಯರ ಹೃದಯಕ್ಕೊಂದು ಬರೆಯನ್ನೇ ಎಳೆದಿದ್ದರು. ಗಾಂಧೀ ಭಕ್ತರಾದ ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ. ಓ. ಪಿ. ರಾಮಸ್ವಾಮಿ ರೆಡ್ಡಿಯಾರರು ಜೂನ್ ತಾ. 27ರಲ್ಲಿ ವೆಲ್ಲೂರಿನಲ್ಲಿ ಉತ್ತರ ಆರ್ಕಾಟು ಜಿಲ್ಲಾ ರಾಜಕೀಯ ಸಮ್ಮೇಲನವನ್ನು ಉದ್ಘಾಟಿಸುತ್ತಾ ಹೇಳಿದ ಕೆಲವು ಮಾತುಗಳೂ ಮಹಾತ್ಮರ ಅಂದಿನ ಆ ವಾಣಿಯ ಶಿಷ್ಯಸ್ಥಾನದಲ್ಲೇ ಇವೆ. "ಜನತೆಯು ಎಸಗಿರುವ ಅತಿರೇಕ ಪಾಪಗಳಿಗೊಂದು ರೀತಿಯ ಶಿಕ್ಷೆಯಾಗಿಯೇ ಈಗ ಮಳೆ ಬರುತ್ತಿಲ್ಲವೆಂಬುದನ್ನು ನೀವು ನೆನಸಿಕೊಳ್ಳಬೇಕು. ಜಮೀನ್ದಾರರು, ವ್ಯಾಪಾರಿಗಳು, ಕಾರ್ಖಾನೆವಾಲರು ಮತ್ತು ಉತ್ಪಾದಕರು ತೀರಾ ಪಾಪಿಗಳು. ಹಿಂದಿನ ಕಾಲದಲ್ಲಿ ಜನರು ಸದ್ಗುಣವಂತರಾಗಿದ್ದುದರಿಂದಲೇ ತಿಂಗಳಲ್ಲಿ ಮೂರು ದಿನಗಳಂತೆ ಸದಾ ಕಾಲ ಮಳೆಯದ್ದಿತೆಂದು ನಂಬಲಾಗಿದೆ. ಆಗಿನವರು ಸ್ವಲ್ಪದರಿಂದಲೇ ತೃಪ್ತರಿದ್ದರು. ಆದರೆ ಈ ದಿನ ಪ್ರತಿಯೊಬ್ಬನನ್ನೂ ಅವನವನ ಧನಲಾಲಸೆಯೇ ಹಿಡಿದು ತಿನ್ನುತ್ತಿದೆ" ಹೀಗೆಂದ ಪ್ರಧಾನ ಮಂತ್ರಿಗಳು "ಉತ್ತರ ಆರ್ಕಾಟು ಮತ್ತು ಸೇಲಂ ಜಿಲ್ಲೆಗಳಲ್ಲಿ ಕಳ್ಳ ಸಾರಾಯಿ ತಯಾರಿಸುತ್ತಿರುವವರನ್ನು ಊರವರು ಪತ್ತೆ ಹಚ್ಚಿಕೊಟ್ಟು, ಒಂದು ತಿಂಗಳೊಳಗೆ ಈಗಿನ ಆ ದುರ್ವ್ಯಾಪಾರಗಳೆಲ್ಲಾ ನಿಲ್ಲದಿದ್ದರೆ ಇಡೀ ಹಳ್ಳಿಯ ಮೇಲೆಯೇ ಸಾಮೂಹಿಕ ದಂಡ ಹೇರುವ ಶಾಸನವನ್ನು ಸರಕಾರವು ತರಬೇಕಾಗುವದು" ಎಂದೂ ಎಚ್ಚರಿಸಿದ್ದಾರೆ. ಜನರ ಪಾಪಕ್ಕೆ 'ಮಳೆ ತಡೆಯುವ' ದೇವರ ಶಿಕ್ಷೆಯೇ ಇರುವಾಗ ಸರಕಾರಕ್ಕೇಕೆ ಈ ಚಿಂತೆಯೆಂಬ ಪ್ರಶ್ನೆಯೇಳಬಹುದು. "ಅ ಪಾಪಿಯಿದ್ದ ಊರಲ್ಲಿ ಮಳೆ ಬರಲಿಕ್ಕಿಲ್ಲ!" ಎಂಬ ಮಾತು ನಮ್ಮಲ್ಲೂ ವಾಡಿಕೆಯಲ್ಲಿದೆ. ಇದೇನೂ ಹೊಸ್ತು ಮಾತಲ್ಲ—ಪ್ರಧಾನ ಮಂತ್ರಿಗಳ ಅಮೃತವಾಣಿಯೂ ಇದೇ!

The 1946 Record Business proves the popularity
THE BOMBAY LIFE ASSURANCE COMPANY, LTD.
Company's New Business in 1946— **3.28 Crores**
Our Chief Agency New business in 1946 bout **54 Lakhs**
Our experience of 27 years available to you for arranging Insurance investment. It therefore, pays you to consult us to Insure or to represent
MESSRS. KOCHIKAR BROTHERS, LIMITED,
Chief Agents for South India
Bombay Life Building,
Central Office, Udipi.
Branches at:
Mangalore, Calicut, Trivandrum, Madura, Madras, Bangalore & Bombay,

ನಡೆಯುವ ಚಿತ್ರ
ಪಾರಮೌಂಟಿನವ ಪ್ರಖ್ಯಾತ ವರ್ಣಚಿತ್ರ
ಬ್ಲ್ಯೂಸ್ಕೈಸ್
ಬಿಂಗ್ ಕ್ರೊಸ್ ಬೀ, ಇರ್ ವಿಂಗ್ ಬರ್ಲಿಲಿನ್ 32 ಹಾಡುಗಳುಳ್ಳ
ತಾ 2—7—48ರಿಂದ
ಹಂಚೋಲಿಯವರ, ಕೊಂಚವೂ ಹಂಚನೆಯಿಲ್ಲದ ಚರಿತ್ರಾರ್ಹ ಚಿತ್ರ
ಧನಿಷ್ಠ
ರಾಗಿಣಿ, ಅಲ್ ನಸೀರ್,
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತನಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—ದಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ. ದಾವಣಗೇರಿ:—ದಾವಣಗೇರಿ ಪ್ರೆಸ್ಸ ಆರ್ ಎಲ್ ಕತಲಿವಾಲಿ, ಶಿಗ್ಗಾಂವ, ಹಾವೇರಿ, ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ೬ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಗರ್ಭಚೀಲದ ಯಾ ಅದರ ಅಂಗ ಊತವು ಜ್ವರ ಬರುತ್ತವೆ, ನಂಜೇರುತ್ತವೆ, ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸನ್ನಿ, ಮಲವಿರೋಧ, ಸ್ತನಗಳ ಬೇನೆ, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ವರೆಗೆ ಕರೆಸಿ ನೂರಾರು ರೂಪಾಯಿ ಖರ್ಚ ಮಾಡಬೇಕಾಗುತ್ತದೆ. ಆ ಮೇಲೂ ವೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣವಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಪ್ಪು ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ

ಆಯುರ್ವೇದೀಯ ಔಷಧಿಗಳ ಶಾಸ್ತ್ರೀಯ ಮತ್ತು ಅನುಭವಿಕ ಗುಣವರ್ಣ, ರೋಗಾನುಪಾನ ಪ್ರಮಾಣ, ಕ್ರಯ, ಇತ್ಯಾದಿ ಯುಕ್ತ 96 ಪುಟಗಳ ಸೂಚೀಪತ್ರ 1ಕ್ಕೆ 0-8 0 9 ಆಣೆಯ ಸ್ಟಾಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವೆವು

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ಉಡುಪಿ

ಕೊರಡ್ಕಲ್ ಸ್ಮಾರಕ ಸಮಿತಿ— ತಾ 24-6-48ರಂದು ಉಡುಪಿ ನಾಗರಿಕರ ಸಭೆಯೊಂದು ಬೋರ್ಡ್ ಹೈಸ್ಕೂಲ್ ಪೀಸ್ಲೀ ಹಾಲಿನಲ್ಲಿ ಜರಗಿ ದಿವಂಗತ ಕೊರಡ್ಕಲ್ ಶ್ರೀನಿವಾಸರಾಯರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚಿಸಿತು. ಡಾ। ಎಸ್. ಆರ್. ಪೈಗಳು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಹೊನ್ನಯ ಸೆಟ್ಟಿ, ಆರ್. ಆರ್. ಕುಂಜೂರು, ಕೆ. ವಿಠಲಶೆಣೈ, ಬನ್ನಂಜೆ, ಯು. ಪಿ. ಶೆಣೈ, ಬಿ. ವಾಸುದೇವರಾವ್, ಮುಂತಾದವರು ಅವರ ಗುಣಕಥನ ಮಾಡಿ ಮಾತಾಡಿ ಅವರು ಮಾಡಿದ ಒಳ್ಳೆಯ ಕೆಲಸವು ಸ್ಥಿರವಾಗಿ ಉಳಿವಂತೆ ಒಂದು ಸ್ಮಾರಕವನ್ನು ರಚಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ತದನಂತರ ಡಾ। ಎಸ್. ಆರ್. ಪೈಗಳು ಅಧ್ಯಕ್ಷರಾಗಿಯೂ ಶ್ರೀ. ಹೊನ್ನಯ್ಯ ಸೆಟ್ಟಿಯವರು ಕಾರ್ಯದರ್ಶಿಗಳಾಗಿಯೂ ಶ್ರೀ ಬೈಲೂರು ವಾಸುದೇವರಾಯರು ಖಜಾನ್ಜಿಗಳಾಗಿಯೂ ಉಳ್ಳ ಒಂದು 'ಕೊರಡ್ಕಲ್ ಸ್ಮಾರಕ ಸಮಿತಿ' ರಚನೆಯಾಗಿದೆ. ಇದಕ್ಕೆ ಶ್ರೀಗಳಾದ ಪಿ. ನಾರಾಯಣ ಪ್ರಭು, ಆರ್. ಆರ್. ಕುಂಜೂರು, ಎಸ್ ರಾಜಗೋಪಾಲ ಕೃಷ್ಣರಾಯರು, ಎಂ. ಎಸ್. ಶಿರಾಲಿ, ಶಿವರಾಯ ಬಾಳಿಗ, ಬನ್ನಂಜೆ, ಟಿ. ಗಣಪಯ ಸೆಟ್ಟಿ, ಅನೂಪರಾಂ ಪಾಂಡ್ಯ, ಶೀನಸೆಟ್ಟಿ, ಕೊಚ್ಚಿಕಾರ್ ಪದ್ಮನಾಭ ಪೈ, ಟಿ. ಎ. ಪೈ, ಪದ್ಮನಾಭ ಶೇಟ್ ವ್ಯಾಕರ್, ಪಿ ಶ್ರೀಪತಿ ಆಚಾರ್ಯ, ಡಾ। ಕೆ. ಎಲ್. ಬಿತಾಳ, ಜನಾಬ್ ಇಮಾಂ ಸಾಹೇಬ್ ಇವರು ಸದಸ್ಯರು.

ಸ್ಮಾರಕ ಸಮಿತಿ ಸಭೆ ತಾ 27 4 48 ರಲ್ಲಿ ಕೊರಡ್ಕಲ್ ಸ್ಮಾರಕ ಸಮಿತಿಯ ಸಭೆಯೊಂದು ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ನೆರೆದು ಕಾರ್ಯಕ್ರಮಗಳನ್ನು ವೇಗದಲ್ಲಿ ಮುಂದುವರಿಸಲು ತೀರ್ಮಾನಿಸಿ ಒಂದು ನಿಧಿ ಸಂಗ್ರಹ ಸಮಿತಿಯೂ ಒಂದು ಸ್ಮಾರಕ ಗ್ರಂಥ ಪ್ರಕಾಶನ ಸಮಿತಿಯೂ ರಚಿಸಲ್ಪಟ್ಟವು. ದಿವಂಗತರ ಮಿತ್ರರೂ, ಶಿಷ್ಯವೃಂದದವರೂ ವಿದ್ಯಾರ್ಥಿಗಳೂ ಎಲ್ಲರೂ ಸಹಾಯ ಮಾಡಬೇಕೆಂದು ಕೋರಲಾಗಿದೆ.

St. Mary's Secondary School,

Shirva, S. K.

Wanted urgently— 2Secondary-grade Trained Teachers; 1 Hindi Pandit,

Apply

The Manager.

ಜರೂರಾಗಿ ಬೇಕಾಗಿದ್ದಾರೆ.—

2 ಸೆಕೆಂಡ್ರಿ ಗ್ರೇಡ್ ತರಬೇತಾದ ಉಪಾಧ್ಯಾಯರು, 1 ಹಿಂದೀ ಪಂಡಿತ.

ಕೂಡಲೇ ಬರೆಯಿರಿ—ದಿ ಮೆನೇಜರ್

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

R. E. P. ನಂ. 723/1947

ಬಿ. ರಾಕೂರ ಶಿಂಗರಾಯ ಯಿವರ ಪವರ್ ಆಫ್-ಯಟೊರ್ನಿ ಹೋಲ್ಡರ್ ಯು. ನಾರಾಯಣ ಭಟ್ಟ —ಅರ್ಜಿದಾರ

ಮತ್ತು

1. 1ನೇ ಪಾಡಿ ಲಿಂಗಯ್ಯ, 2. 2ನೇ ಪ್ರತಿವಾದಿ ಚೆನ್ನಬಸವಯ್ಯ, ರುದ್ರಯ್ಯನ ಮಕ್ಕಳು, ಮಂಗಳೂರು ಕೈಹಾರ ಬಸವನಗುಡಿ ಸಮೀಪದಲ್ಲಿರುವವರು. — ರೆಸ್ಪೋಂಡೆಂಟರು

ಯಿವರೊಳಗೆ

ಮೇಲ್ಕಂಡ ಅಮಲ್ಜಾರಿಯಲ್ಲಿ ಜಗದಕ್ತ ಸ್ಥಿರಆಸ್ತಿಗಳ ಏಲಮ್ಮಿನ ವಿವರವು ರೆಸ್ಪಾಂಡೆಂಟರು ಕೂಡಾ ತಿಳಿಯತಕ್ಕಬಗ್ಗೆ ಆದ ನೋಟಿಸಿನ ವ್ಯಾಜ್ಯವು ತಾ. 12-7-1948 ನೇ ಹಗಲು 11 ಘಂಟೆಗೆ ಯಿ ಕೋರ್ಟಿನಲ್ಲಿ ತನ್ಕಿಗೆ ಯಿಟ್ಟಿರುವದರಿಂದ ಆಕ್ಷೇಪಯಿದ್ದವರು ಮನವಿ ಮಾಡಿಕೊಳ್ಳಬೇಕಾಗಿಯೂ ತಪ್ಪಿದರೆ ಅವರ ಗೈರುಹಾಜರಿನಿಂದ ತೀರ್ಮಾನಿಸಲಾಗುವದೆಂಬದು ಯಿ ಮೂಲಕ ತಿಳಿಸಲಾಗುತ್ತದೆ.

ಕೆ ಆರ್. ದಂಡಿಲ್ಲಾಯರವರು,

ಅರ್ಜಿದಾರನ ಕಡೆ ವಕೀಲ್

ತಾ. 27-6-1948, ಕಾಸರಗೋಡು.

ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯುರೆನ್ಸ್ ಕಂಪೆನಿಯ ವಿಮಾ ವ್ಯವಹಾರ ಪ್ರಾರಂಭೋತ್ಸವವು ತಾ 4-7-48ನೇ ಆದಿತ್ಯವಾರ 4 ಗಂಟೆಗೆ ಬೋರ್ಡ್ ಹೈಸ್ಕೂಲಿನ ಪೀಪ್ಲ್ಸ ಹಾಲಿನಲ್ಲಿ ಜನಾಬ್ ಎಚ್. ಎಸ್. ಹುಸೇನ್ ಸಾಹೇಬ್ ಬಹದ್ದೂರ್. ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಜರಗಲಿದೆ. ಡಾ। ಟಿ. ಮಾಧವ ಪೈಗಳು ಉದ್ಘಾಟನೆ ಮಾಡಲಿರುವರು.

ಬೈಂದೂರು—ಇಲ್ಲಿಯ ಬೋರ್ಡ್ ಹೈಸ್ಕೂಲಿನ ಪ್ರಾರಂಭೋತ್ಸವವು ತಾ 27-6-48ರಂದು ಶ್ರೀ. ಎಮ್. ರಾಧಾಕೃಷ್ಣ ಕಿಣಿ ಬಿ. ಎ. ಬಿ. ಎಲ್. ಡಿಸ್ಟ್ರಿಕ್ಟ್ ಮುನಸೀಫ್, ಕುಂದಾಪುರ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಶ್ರೀ. ಎಡ್ತರ ಮಂಜಯ್ಯ ಶೆಟ್ರು ಅಧ್ಯಕ್ಷರ ಪರಿಚಯ ಭಾಷಣ ಮಾಡಿದಮೇಲೆ ಶಾಲೆಯ ವರದಿಯನ್ನು ಮುಖ್ಯ ಉಪಾಧ್ಯಾಯ ಶ್ರೀ ಕೆ. ಸಂಜೀವ ಶೆಟ್ರು ಹೇಳಿದರು. ಹೈಸ್ಕೂಲು ಕಮಿಟಿಯ ವರದಿಯನ್ನು ಶ್ರೀ. ಬಿ. ಸುಬ್ಬಣ್ಣ ಶೆಟ್ರು ವಿವರಿಸಿದರು. ಶ್ರೀ. ಎಸ್. ಎಸ್. ಪರಮೇಶ್ವರಯ್ಯ, ಶ್ರೀ ಎಚ್. ಕೋಟಿಯಣ್ಣ ಶೆಟ್ರು ಶಾಲೆಯ ಶ್ರೇಯಸ್ಸನ್ನು ಬಯಸಿ, ಹಾಗೂ ಹೈಸ್ಕೂಲು ಕಮಿಟಿಯವರ ಸಾಹಸ ಪ್ರಯತ್ನಗಳನ್ನು ಕೊಂಡಾಡಿ ಭಾಷಣವಿತ್ತರು. ಶ್ರೀ. ಡಿ. ಆರ್. ಕುಂಬಳೆ ಇವರು ಶುಭ ಸಂದೇಶಗಳನ್ನು ಓದಿದರು. ಸಬ್ ಡಿಪ್ಯುಟಿ ಕಲೆಕ್ಟರ್ ಎಂ. ಕೆ. ಶೇಕ್ ಉಮ್ಮರ್ ಸಾಹೇಬರವರು ಶಾಲೆಯ ಮೇಲ್ಮೆಗಾಗಿ ಹೆರವರ ಕರ್ತವ್ಯ ಏನೆಂಬುದನ್ನು ವಿವರಿಸಿದರು. ಸಭಾಧ್ಯಕ್ಷರು ಕಾಲೋಚಿತವೂ ಸುರಸವೂ ಆದ ಭಾಷಣ ಮಾಡಿದತರುವಾಯ ಧನ್ಯವಾದ, ಉಪಹಾರಗಳಾದುವು.

ನೋಟೀಸು

ಮೂಲ್ಕಿ ಹೊಸ್ಪಿಟಲ್ ಪೂವರ್ ಫಂಡಿನ (Hospital Poor fund, Mulki) ವರ್ಷಾವಧಿ ಮಹಾಸಭೆಯು ಇದೇ ಬರುವ ತಾರೀಕು 15-8-1948ನೇ ಶನಿವಾರ ಅಪರಾಹ್ನ ಘಂಟೆ 4ಕ್ಕೆ (L. F. Hospital) ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಜರಗಲಿರುವುದು.

ಎಲ್ಲಾ ಮೆಂಬರರೂ ಹಿತೇಚ್ಛುಗಳೂ ದಯವಿಟ್ಟು ಕ್ಲಪ್ತ ಸಮಯಕ್ಕೆ ಉಪಸ್ಥಿತರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ.

M. R. Punja, B Bhoja Rao

President, Hon. Secretary

(Hospital Poor Fund,) Mulki, S. K.

28th June 1948.



Approved firm by the Govt. of Mysore Certified by the Agent of the Govt. of Ceylon & Indian

ಮಂಗಳೂರು

ಹಿಂದುಸ್ಥಾನ ಸ್ಕೌಟು ಸಂಸ್ಥೆಯ ಜಿಲ್ಲಾ ಕಮೀಶನರು--ಹುಡುಗರ ವಿಭಾಗದ ಶ್ರೀ ಎಮ್. ಎಸ್. ಏಕಾಂಬರ ರಾವ್ ಮತ್ತು ಹುಡುಗಿಯರ ವಿಭಾಗದ ಶ್ರೀಮತಿ ಎಮ್. ಎಸ್. ಲೀಲಾಬಾಯಿಯವರು ತಮ್ಮ ಸ್ಥಾನದಿಂದ ನಿವೃತ್ತರಾದ ಪ್ರಯುಕ್ತ ಅವರನ್ನು ಬೀಳ್ಕೊಡುವ ಸತ್ಕಾರಕೂಟವೊಂದು ತಾ ೨೧ರಂದು ಬೆಳಿಗ್ಗೆ ಜಿಲ್ಲಾ ಹಿಂದುಸ್ಥಾನ ಸ್ಕೌಟ್ ಸಂಘದ ಆಶ್ರಯದಲ್ಲಿ ಜರಗಿತು. ಶ್ರೀ ಎಮ್. ಎಸ್. ಮಾಧವರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಚ್. ಭೀಮರಾವ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು, ಮಾನ್ಯ ಅತಿಥಿಗಳು ಸದುತ್ತರವಿತ್ತರು. ಶ್ರೀ ವೆಂಕಟೇಶ ಪೈಗಳವರು ಧನ್ಯವಾದಗಳನ್ನರ್ಪಿಸುತ್ತ ನಿವೃತ್ತರಾಗುವ ಕಮೀಶನರಿಬ್ಬರಿಗೂ ಅಲಹಾಬಾದಿನ ರಾಷ್ಟ್ರೀಯ ಕೇಂದ್ರದಿಂದ ಮೆಚ್ಚುಗೆಯ ಪದಕಗಳು ಬಂದಿವೆಯೆಂದು ತಿಳಿಸಿದರು.

ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರ ನಿಧನಕ್ಕಾಗಿ ದುಃಖ ಸೂಚಕ ಸಭೆಯು—ಕನ್ನಡ ಸಾಹಿತ್ಯ ಪರಿಷತ್ತಿನ ಪ್ರದೇಶ ಸಮಿತಿಯ ನೇತೃತ್ವದಲ್ಲಿ ದಕ್ಷಿಣ ಕನ್ನಡ ಪಂಡಿತ ಸಂಘದ ಸಹಕಾರದಲ್ಲಿ ತಾ ೨೦ರಲ್ಲಿ ಶ್ರೀ ಎಚ್. ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕನ್ನಡಕ್ಕಾಗಿ ಕೆಲಸ ಮಾಡುವರಿಲ್ಲದ ಕಾಲದಲ್ಲಿ ಶ್ರೀ ಕೊರಡ್ಕಲ್ಲರು ಮುಂದೆಬಂದು ಎಲ್ಲಾ ವಿಧಗಳಿಂದಲೂ ಕನ್ನಡಕ್ಕೆ ಸೇವೆ ಸಲ್ಲಿಸಿದ ಮಹನೀಯರೆಂದು ಅಧ್ಯಕ್ಷರೂ ಉಡುಪಿಯಲ್ಲಿ ಕನ್ನಡ ಚಟುವಟಿಕೆಯ ಜೀವಾಳವೇ ಶ್ರೀ ಕೊರಡ್ಕಲ್ಲರೆಂದು ಶ್ರೀ ಯದುರ್ಕಳ ಶಂಭುಭಟ್ಟರೂ ದಿವಂಗತರ ಗುಣಗಾನಮಾಡಿದರು. ಪ್ರದೇಶ ಸಮಿತಿಯ ಕಾರ್ಯದರ್ಶಿ ಶ್ರೀ ಪಿ. ಕೆ. ನಾರಾಯಣನವರು ಶ್ರೀ ಕೊರಡ್ಕಲ್ಲರ ಮರಣದಿಂದ ಕರ್ನಾಟಕಕ್ಕೂ ಕನ್ನಡ ಸಾಹಿತ್ಯಕ್ಕೂ ಆದ ನಷ್ಟವನ್ನು ತಿಳಿಸಿ ದುಃಖಸೂಚಕ ಠರಾವನ್ನು ಸಭೆಯ ಮುಂದಿಟ್ಟರು. ಸಭೆಯು ಎದ್ದು ನಿಂತು ಅದನ್ನು ಸ್ವೀಕರಿಸಿತು.

ಹಿಂದೀ ಪ್ರಚಾರಕ ಶ್ರೀ ಎ. ರಾಮಕೃಷ್ಣ ನಾವಡರು-ಹೆಚ್ಚಿನ ಹಿಂದೀ ಅಭ್ಯಾಸಕ್ಕಾಗಿ ಅಲ್ಲಹಾಬಾದಿಗೆ ಹೋಗುವವರನ್ನು ಬೀಳ್ಕೊಡುವ ಸಮಾರಂಭವೊಂದು ತಾ 17ರಲ್ಲಿ ಮಂಗಳೂರಿನ ಹಿಂದೀ ಪ್ರೇಮಿಗಳ ಆಶ್ರಯದಲ್ಲಿ ಹಿಂದೀ ಪ್ರಚಾರ ಸಮಿತಿಯ [illegible]ಯಲ್ಲಿ ಶ್ರೀ ಪಿ. ರಾಮರಾವ್, ಸರಕಾರಿ ವಕೀಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಆರ್. ಕಾರಂತ, ಎಮ್. ಆರ್. ಕಾಮತ್ ಮೊದಲಾದವರು ನಾವಡರ ಹಿಂದೀ ಪ್ರಚಾರದ ಕುರಿತು ಮಾತನಾಡಿದರು.

ನಿಧನ-ಶ್ರೀ ಮೂಲ್ಕಿ ಸುಬ್ಬರಾವ್ (ನಿವೃತ್ತ ತಹಶಿಲ್ದಾರ್) ಪೆಂಟ್ಲೆಂಡ್ ಪೇಟೆಯಲ್ಲಿರುವ ತಮ್ಮ ಮನೆಯಲ್ಲಿ ಕಳೆದ ತಾ 16ರಲ್ಲಿ ದಿವಂಗತರಾದರು. ಇವರ ನಿಧನದಿಂದ ಸಾಹಿತ್ಯ ಪ್ರಪಂಚಕ್ಕೆ ನಷ್ಟವೆನಿಸಿದೆ. ದಿವಂಗತರ ಆತ್ಮಕ್ಕೆ ಶಾಂತಿಯಿರಲಿ!

ಅಮೃತಾಂಜನ.
ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಥಂಡಿ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಜೀವ [illegible] ಮೊದಲಾದ ಎಲ್ಲಾ ರೋಗಗಳಿಗೂ

REGD,

[illegible]

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ದಕ್ಷಿಣ ಕನ್ನಡ

ಬೈಲೂರು-20-6-48ರಲ್ಲಿ ನೀರೆ ಬ್ರಾಂಚ್ ಶಾಲೆಯಲ್ಲಿ ಶ್ರೀ. ಡಿ. ಡಿ. ಅಶ್ವಾಲರ ಅಧ್ಯಕ್ಷತೆಯಲ್ಲಿ ಊರ ಪ್ರಮುಖರ ಸಭೆ ಜರಗಿ ಕೊರಡ್ಕಲ್ ಶ್ರೀನಿವಾಸರಾಯರ ನಿಧನಕ್ಕಾಗಿ ದುಃಖ ಸೂಚಿಸಲಾಯಿತು. ಶ್ರೀಗಳಾದ ಕೆ. ಗಣಪತಿ ಭಟ್, ಬಿ. ಕೇಶವಕಿಣಿ, ಎಮ್. ಅಪ್ಪುರಾವ್, ಎನ್. ಸಂಜೀವ ಶೆಟ್ಟರು ದಿವಂಗತರ ಕುರಿತು ಭಾಷಣಮಾಡಿದರು. ಅಧ್ಯಕ್ಷರು ಕೊರಡ್ಕಲರ ನಿಧನದಿಂದಾಗಿ ಸಾಹಿತ್ಯ ಕ್ಷೇತ್ರನಲ್ಲಾದ ನಷ್ಟ, ಉಡುಪಿ ಸಾರ್ವಜನಿಕ ಕಾರ್ಯಕ್ಕುಂಟಾದ ಧಕ್ಕೆ ಇವೇ ಮುಂತಾದ ಅವರ ಕಾರ್ಯಗಳನ್ನು ಸ್ಮರಿಸಿ ದಿವಂಗತರ ಆತ್ಮಕ್ಕೆ ಶಾಂತಿಕೋರಿ [illegible]ಡಿದರು.

ಕೋಟೇಶ್ವರ-ತಾ- 23-6-48ರಂದು ಕೋಟೇಶ್ವರ ಬೋರ್ಡ್ ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ಒಂದು ಮಹಾಸಭೆ ಜರಗಿ 1949ನೇ ಇಸ್ವಿ ಎಪ್ರಿಲ್ ತಿಂಗಳಲ್ಲಿ ಈ ಶಾಲೆಯ 'ರಜತೋತ್ಸವ'ವನ್ನು ಜರಗಿಸುವುದೆಂತ ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟಿತು. ಆ ಸಂಬಂಧ ಅಗತ್ಯವಿರುವ ರಜತೋತ್ಸವ ಸಮಿತಿಯೂ ರಚಿಸಲ್ಪಟ್ಟಿತು.

ಫಲಿಮಾರು-ತಾ 24-6-48ರಲ್ಲಿ ಸ್ಥಳೀಕ ಬೋ. ಹಾ. ಎ. ಶಾಲೆಯಲ್ಲಿ ಫಲಿಮಾರು ಗ್ರಾಮಸ್ಥರ ಮಹಾಸಭೆಯೊಂದು ಶ್ರೀ. ಪಿ. ಸಿ. ದಂಡಿಲ್ಲಾಯ B. A. B. L. ಇವರ ಅಧ್ಯಕ್ಷತೆಯಲ್ಲಿ ಸೇರಿದಾಗ ಉಡುಪಿ ತಾಲ್ಲೂಕು ವೆಲ್‌ಫೇರ್ ಆಫೀಸರ್ ಶ್ರೀ ಯಂ. ಕಾಂತಪ್ಪನವರು ಗ್ರಾಮಾಭಿವೃದ್ಧಿಯ ಸಲುವಾಗಿ ಸರಕಾರದ ಘೋಷಣೆಯನ್ನು ವಿವರಿಸಿದಮೇಲೆ 12 ಜನ ಸದಸ್ಯರುಳ್ಳ ಒಂದು ಗ್ರಾಮಸಂಘ ಸ್ಥಾಪಿಸಲ್ಪಟ್ಟು ಅದಕ್ಕೆ ವಕೀಲ ಶ್ರೀ. ಪಿ. ಸಿ. ದಂಡಿಲ್ಲಾಯರು ಅಧ್ಯಕ್ಷರಾಗಿಯೂ, ಡಾ| ಕುಮಾರನ್ ನಂಬಿಯಾರರು ಕೋಶಾಧಿಕಾರಿಯಾಗಿಯೂ ಶ್ರೀಗಳಾದ ವಿದ್ವಾನ್ ವೈ. ಕಾಳಪ್ಪ ಸೆಟ್ಟಿ ಮತ್ತು ಡಿ. ಯಂ. ಜೆ. ಪಿರೇರ ಇವರು ಜತೆ ಕಾರ್ಯದರ್ಶಿಗಳಾಗಿಯೂ ಸರ್ವಾನುಮತದಿಂದ ಚುನಾಯಿಸಲ್ಪಟ್ಟರು. ಅಧ್ಯಕ್ಷರ ಭಾಷಣವಾದಮೇಲೆ ಶ್ರೀ ನಾರಾಯಣ ಪ್ರಭುಗಳು ನೆರೆದ ನೂರಾರು ಸಭಿಕರಿಗೆ ಉತ್ತಮವಾದರೀತಿಯ ಉಪಾಹಾರವನ್ನಿತ್ತು ಸತ್ಕರಿಸಿದರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C No 197/1948.

ಕೃಷ್ಣಪ್ಪ ಶೆಟ್ಟಿ —ವಾದಿಯು.

ಮಂಜೈಶೆಟ್ಟಿ, ಕೊಂಬಾಟ ಸಂಕಯ್ಯ ಶೆಟ್ರ ಮಗ—ಆಲಬಾಡಿಗ್ರಾಮದ್ದು ಕಟಾರಡಿಯಲ್ಲಿರುವವ —ಪ್ರತಿವಾದಿ.

ಸದ್ರಿ ಪ್ರತಿವಾದೀಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ವಾದೀಯು ನಿಮ್ಮಮೇಲೆ ಡಿಮಾಂಡ್ ನೋಟಿನ ಅಸಲು ಬಡ್ಡಿ ರೂ 118-11-0ನ್ನು ಬರಮಾಡಿಕೊಳ್ಳುವರೇ ಮೇಲಿನ ಕೋರ್ಟಿನಲ್ಲಿ ದಾಖಲುಮಾಡಿದ ಸದ್ರಿ ದಾವೆಯು ತನ್ನಿಗೆ ತಾ 12-7-1948ಕ್ಕೆ ಇಟ್ಟಿರುವುದರಿಂದ ಈ ದಾವಿನಲ್ಲಿ ನಿಮ್ಮ ಉದಾಹರಣೆ ಇದು ವಹಕ್ಕಕ್ಕೆ ತನ್ನಿದಿವಸ ಪೂರ್ವಾಹ್ನ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕ್ಸ್ ಪಾರ್ಟಿಯಾಗಿ ನಿಮ್ಮ ಮೇಲೆ ಡಿಕ್ರಿ ಆಗುವುದು ಎಂಬ ಸಂಗ್ತಿ ಕೋರ್ಟು ಹುಕ್ಕುಂಪ್ರಕಾರ ತಿಳಿಸೋಣಾಗುತ್ತದೆ.

V. Srinivasa Shetty,
Advocate for Plaintiff

ಕುಂದಾಪುರ ತಾ. 24-6-48

ರುಚಿಕರವೂ ಮಧುರವೂ ಆದ **ಕೃಷ್ಣಾ ಶುಗರ್ ಬರ್ಫಿ**

ಹನ್ನೆರಡು ತುಂಡುಗಳು: ಪೆಕೆಟುಗಳಲ್ಲಿ ದೊರೆವುದು

ಪುಷ್ಟಿಕರವಾದ, ಗೇರುಬೀಜ ಮೊದಲಾದುವನ್ನು ಉಪಯೋಗಿಸಿ ತಯಾರಿಸಿದ ಪ್ರತಿಯೊಬ್ಬನೂ ಮೆಚ್ಚುವ ಒಂದು ಉತ್ಕೃಷ್ಟ ತಿಂಡಿ.

ಕೃಷ್ಣಾ ಕೆಶ್ಯು ಕರ್ನೆಲ್ಸ್ ಅಥವಾ ಸಕ್ಕರೆ ಗೇರುಬೀಜ

ಕೇಸರಿ ಮೊದಲಾದ ಪರಿಮಳಯುಕ್ತ ವಸ್ತುಗಳನ್ನು ಉಪಯೋಗಿಸಿ, ಸಕ್ಕರೆಯ ಪಾಕದಲ್ಲಿ ತಯಾರಿಸಿದ ಗೇರುಬೀಜದ ಮಿಠಾಯಿ.

ಅರ್ಧ ಮತ್ತು ಕಾಲು ರಾತ್ಲಿನ ಪೆಕೆಟುಗಳಲ್ಲಿ ದೊರೆವುವು.

ಶ್ರೀ ಕೃಷ್ಣಾ ಟೋಫಿ ವರ್ಕ್ಸ್,
ರಥಬೀದಿ, ಮಂಗಳೂರು

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¾% per annum.
For 6 months at 3¼% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಎಲ್ಲಾ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ
ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಗಾಂಧೀ ಕೊಲೆಯ ಒಳಸಂಚಿನ ಕಥೆ

[೧ನೇ ಪುಟದಿಂದ]

ಮೇಲೆ ಅಹಮ್ಮದ್ ನಗರಕ್ಕೆ ಬಂದು ಅಲ್ಲಿ ತ್ರಿಮೂರ್ತಿಗಳಲ್ಲೊಬ್ಬನಾದ ಹೋಟೆಲು ಮಾಲಕ ಕರ್ಕರೆಯ ಆಶ್ರಯ ಬೇಡಿದ. ಅವನೊಂದು ಸಣ್ಣ ವ್ಯಾಪಾರ ಮಾಡುವಂತೆ ಕರ್ಕರೆ ಸಹಾಯ ಮಾಡಿದ. ಆದರೆ ಆಗ ಕರ್ಕರೆಯ ರಾಜಕೀಯ ಚಟುವಟಿಕೆ ವಿಶೇಷವಿದ್ದುದರಿಂದ ಇಪ್ಪತ್ತರ ಎಳೆಪ್ರಾಯದ ಹುಚ್ಚುಸ್ಫೂರ್ತಿಯ ಹುಡುಗ ಮದನಲಾಲನು ಕರ್ಕರೆಯ ಕಾರ್ಯಗಳಲ್ಲಿ ಭಾಗವಹಿಸುವುದನ್ನೇ ತನ್ನ ಉದ್ಯೋಗವಾಗಿ ಮಾಡಿಕೊಂಡ. ಮುಸ್ಲಿಮರಿಂದೋಡಿಸಲ್ಪಟ್ಟ ನಿರಾಶ್ರಿತ ಹಿಂದುಗಳಿಗೆ ಆಶ್ರಯ ಕೊಡುವುದೇ ಮೊದಲಾದ ಚಟುವಟಿಕೆಗಳಿಂದ ಕರ್ಕರೆಯು ಅಹಮ್ಮದ್ ನಗರದಲ್ಲಿ ಒಬ್ಬ ಧುರೀಣನೆನಿಸಿದ್ದುದರಿಂದಲೇ ಮದನಲಾಲನು ಆತನಿಗೆ ಗಂಟು ಬೀಳಲು ಕಾರಣ. ಮಹಾತ್ಮಾ ಗಾಂಧಿಯವರು ನವಖಾಲಿಗೆ ಹೋಗಿದ್ದಾಗ ಈ ಕರ್ಕರೆಯೂ ಅಲ್ಲಿಯ ಗುಟ್ಟನ್ನರಿತುಕೊಳ್ಳುವದಕ್ಕಾಗಿ ಹೋಗಿದ್ದ. ಈ ರೀತಿ, ಪ್ರಥಮಾರೋಪಿತ್ರಯರ ಪೈಕಿ ಒಬ್ಬನ ಸಂಬಂಧವು ಮದನಲಾಲನಿಗೆ ಕಳೆದ ನವಂಬರದಲ್ಲೇ ಆಗಿದ್ದರೂ ಗೋಡ್ಸೆ ಮತ್ತು ಆಪ್ಟೆಯ ಪರಿಚಯವಾದುದು ಜನವರಿ ಆದಿಭಾಗದಲ್ಲಿ ಅಹಮ್ಮದ್ ನಗರದಲ್ಲೇ. ಎದೆಗಾರಿಕೆಯಲ್ಲಿ, ಸಿಡುಕು ದುಡುಕಿನಲ್ಲಿ ಪ್ರತ್ಯಕ್ಷ ಬೋಂಬಿನ ಮರಿಯಂತಿದ್ದ ಮದನಲಾಲನು ತಮ್ಮ ಕೆಲಸಕ್ಕೆ ಹೇಳಿಸಿದವನೆಂದು ಗೋಡ್ಸೆ, ಆಪ್ಟೆ, ಕರ್ಕರೆ ನಿರ್ಧರಿಸಿ, ಅವನನ್ನೂ ಅಣಿಗೊಳಿಸಿರಬೇಕು.-ಉಬ್ಬುಮೆಯ ಹುಡುಗ ಈತನನ್ನಂತೂ ವಿಶೇಷ ಉಬ್ಬಿಸಬೇಕೆಂದೇ ಇರಲಿಲ್ಲ. ಇವನ ಸ್ವಭಾವದ ಪರಿಚಯವು ಅಷ್ಟರಲ್ಲೇ ಆ ಊರಿನವರಿಗಾಗಿತ್ತು; ಜನವರಿ ತಾ. 5ರಲ್ಲಿ ಅಹಮ್ಮದ್ ನಗರದಲ್ಲಿ ಸೇರಿದ್ದೊಂದು ಸಭೆಯಲ್ಲಿ ಈತ ಭಾಷಣ ಕೊಡಲು ವೇದಿಕೆಗೇರಿದುದನ್ನು ಕಂಡೊಡನೆ ಇವನ ಮಾತನ್ನು ಕೇಳುವ ಪಾಪಕಟ್ಟಿಕೊಳ್ಳಲೊಪ್ಪದೆ ಸಭೆ ಚದರಿತ್ತು.

ಪ್ರಥಮ ಪ್ರಯತ್ನ

ಜನವರಿ ತಾ 9ರಲ್ಲಿ ಕರ್ಕರೆ ಮತ್ತು ಮದನಲಾಲರು ಪೂನೆಗೆ ಹೋಗಿ ಗೋಡ್ಸೆ ಮತ್ತು ಆಪ್ಟೆಯನ್ನು ಕೂಡಿಕೊಂಡರು. ಅಲ್ಲಿ ಎಲ್ಲಾ ಯೋಜನೆಯೂ ನಿರ್ಧರಿಸಲ್ಪಟ್ಟಿತ್ತು. ಅಲ್ಲಿ ಕರ್ಕರೆ ಮತ್ತು ಮದನಲಾಲ್ ಬಡ್ಗೆಯ ಆಯುಧೋಪಕರಣಗಳ ಅಂಗಡಿಗೆ ಬಂದು ಕೈಬೋಂಬುಗಳನ್ನೂ ಸಿಡಿಮದ್ದಿನ ತುಣುಕುಗಳನ್ನೂ ಪರೀಕ್ಷಿಸಿಟ್ಟರು; ತಾ 10ರಲ್ಲಿವರು ಬೊಂಬಾಯಿಗೆ ಬಂದು ಸಾವರ್ಕರರನ್ನು ಭೇಟಿಯಾದರು-ಅಂತೆಯೇ ಕರ್ಕರೆ ಮತ್ತು ಮದನಲಾಲರಿಬ್ಬರೂ, ಮದನಲಾಲನಿಗೆ ಪುಸ್ತಕ ಮಾರಲು ಕೊಟ್ಟಿದ್ದ ಪ್ರೊಫೆಸರ್ ಜೈನರನ್ನೂ ಭೇಟಿಯಾದರು. ಜನವರಿ ತಾ 12ರಲ್ಲಿ ಮದನಲಾಲನು ತಾನು ಢಿಲ್ಲಿಗೆ ಹೋಗಲಿರುವ ಉದ್ದೇಶದ ಗುಟ್ಟನ್ನು ಬಿಟ್ಟಾಗ ಪ್ರೊ. ಜೈನ್, ಇದು 'ಆಗುವ ಹೋಗುವ ಕೆಲಸವಲ್ಲ'ವೆಂದು ತಾತ್ಸಾರ ಮಾಡಿದರಲ್ಲದೆ ಆ ಹುಚ್ಚು ಕಲ್ಪನೆ ಬಿಟ್ಟುಬಿಡುವಂತೆ ಮದನಲಾಲನಿಗೆ ಉಪದೇಶಿಸಿದರು.

ಇತ್ತ ಪೂನೆಯಲ್ಲಿದ್ದ ನಾಥೂರಾಮ್ ಗೋಡ್ಸೆ ಜನವರಿ ತಾ 13ರಲ್ಲಿ ತನ್ನ 2000 ರೂ. ಇನ್ಸೂರೆನ್ಸ ಹಕ್ಕುದಾರಳಾಗಿ ಆಪ್ಟೆಯ ಹೆಂಡತಿಯನ್ನು ನೇಮಿಸಿದ. ತಾ 14ರಲ್ಲಿ ಗೋಡ್ಸೆ ಮತ್ತು ಆಪ್ಟೆಯರು ಬೊಂಬಾಯಿಗೆ ಬಂದು, ಸೀದಾ ಸಾವರ್ಕರರ ಮನೆಗೆ ಹೋಗಿ ಮಾತುಕತೆ ನಡೆಸಿದರು. ಆ ದಿನವೇ ನಾಥೂರಾಮನು ತನ್ನ ಮತ್ತೊಂದು 3000 ರೂ. ಇನ್ಸೂರೆನ್ಸ ಬಾಧ್ಯತೆಯನ್ನು ತನ್ನ ತಮ್ಮ ಗೋಪಾಲ ಗೋಡ್ಸೆಯ ಹೆಂಡತಿಯ ಹೆಸರಿಗೆ ಬರೆದಿಟ್ಟ. ಆಗ ಬಡ್ಗೆ ಮತ್ತು ಶಂಕರ ಕಿಸ್ತಯ್ಯನೂ ಬೊಂಬಾಯಿಗೆ ಬಂದಿದ್ದರು. ಬಡ್ಗೆ ಬರಿ ಕೈಯಿಂದ ಬಾರದೆ ಮೊದಲೇ ನಿಶ್ಚಯಿಸಿದ್ದಂತೆ ಚೀಲವೊಂದರಲ್ಲಿ ಐದು ಕೈಬೋಂಬುಗಳನ್ನೂ ಎರಡು ಸ್ಫೋಟಕ ತುಣುಕುಗಳನ್ನೂ ತುಂಬಿಸಿಕೊಂಡು ತಂದಿದ್ದ. ಅದನ್ನೊಂದು ಪ್ರತ್ಯೇಕ ಸ್ಥಳದಲ್ಲಿಟ್ಟು ಅವರೆಲ್ಲರೂ ಒಟ್ಟಾದರು. ಇತ್ತ ನಾಥೂರಾಮನ ತಮ್ಮ ಸಿವಿಲ್ ಸ್ಟೋರ್ಸ್ ಕೀಪರ್ ಕೆಲಸದಲ್ಲಿದ್ದ ಗೋಪಾಲ ಗೋಡ್ಸೆಯೂ ತಾ 15ರಲ್ಲಿ ಒಂದು ವಾರದ ರಜೆಗೆ ಬರೆಕೊಂಡ; ತಾ 17ರಿಂದ 23ರ ವರೆಗೆ ಅವನಿಗೂ ರಜೆ ಸಿಕ್ಕಿತು. ತಾ 15ರಲ್ಲಿ ನಾಥೂರಾಮ್ ಗೋಡ್ಸೆ, ಆಪ್ಟೆ, ಕರ್ಕರೆ, ಮದನಲಾಲರೊಟ್ಟಾಗಿ ಸಿಡಿಮದ್ದಿನ ಚೀಲವಿಟ್ಟಲ್ಲಿಗೆ ಹೋದರು. ಕರ್ಕರೆ ಮತ್ತು ಮದನಲಾಲರಂದಿನವೇ ಪೇಶಾವರ ಎಕ್ಸ್‌ಪ್ರೆಸ್ಸಿನಲ್ಲಿ ಢಿಲ್ಲಿಗೆ ಹೊರಟರು. ಹೊರಡುವ ಮುನ್ನ ಮದನಲಾಲನು ಶ್ರೀಮತಿ ಮೋದಿ ಎಂಬವಳೊಡನೆ ತಾವೊಂದು ದೊಡ್ಡ ಕೆಲಸ ಸಾಧಿಸಲು ಢಿಲ್ಲಿಗೆ ಹೊರಟಿದ್ದೇವೆ. ಎಂದು ಜಂಭವಾಡಿದುದಿದೆ. ತಾ 17ರಲ್ಲಿ ಬೊಂಬಾಯಿಯಿಂದ ಢಿಲ್ಲಿಗೆ ಹೋಗಲಿರುವ ವಿಮಾನದ ಎರಡು ಟಿಕೇಟುಗಳನ್ನು ಕರ್ಮಾಕರ್ ಮತ್ತು ಎಸ್. ಮರಾಠೆಯೆಂಬವರಿಗೆಂದು ತಾ 15ರಲ್ಲೇ ಪಡೆಕೊಂಡಿದ್ದರು-ಅವರಿದು ನಾಥೂರಾಮ್ ಗೋಡ್ಸೆ ಮತ್ತು ಆಪ್ಟೆಗಾಗಿಯೇ. ಇವರೆಲ್ಲರೂ ಗುರುತಹತ್ತದಂತೆ ಬೇರೆಬೇರೆ ಹೆಸರನ್ನಿಟ್ಟುಕೊಂಡೇ ತಿರುಗುತಿದ್ದರು. ಅಂತೂ ಕರ್ಕರೆ ಮತ್ತು ಮದನಲಾಲರು ರೈಲಿನಲ್ಲಿ ಢಿಲ್ಲಿಗೆ ಮುಟ್ಟಿದ ತಾ 17ರಲ್ಲೇ ನಾಥೂರಾಮ್ ಗೋಡ್ಸೆ ಮತ್ತು ಆಪ್ಟೆ ವಿಮಾನದಲ್ಲಿ ಢಿಲ್ಲಿಗಿಳಿದಿದ್ದರು. ಬಡ್ಗೆ ಮತ್ತು ಶಂಕರ್ ಬೊಂಬಾಯಿಯಿಂದ ಢಿಲ್ಲಿಗೆ ತಾ 18ರಲ್ಲಿ ಹೊರಟವರು ತಾ 19ರಲ್ಲಿ ಮುಟ್ಟಿದರು. ಅದೇ ದಿನ ರಾತ್ರಿ ಗೋಪಾಲ ಗೋಡ್ಸೆಯೂ ಢಿಲ್ಲಿ ಸೇರಿದ. ನವಢಿಲ್ಲಿಯಲ್ಲಿ ನಾಥೂರಾಮ್ ಗೋಡ್ಸೆಯು 'ದೇಶಪಾಂಡೆ' ಮತ್ತು ಆಪ್ಟೆ 'ಎಸ್. ದೇಶಪಾಂಡೆ' ಎಂದು ಹೆಸರು ಬದಲಾಯಿಸಿಕೊಂಡು ಹೊಟೆಲೊಂದರಲ್ಲಿ ನಿಂತರು. ಕರ್ಕರೆ 'ವ್ಯಾಸ'ನಾಗಿ, ಮದನಲಾಲ್ ಸ್ವಂತ ಹೆಸರಿನಿಂದಲೇ ಮತ್ತೊಂದು ಹೊಟೇಲಲ್ಲಿದ್ದರು. ಅಂತೂ ತಾ. 19ನೇ ರಾತ್ರಿ ಸಾವರ್ಕರ್ ಮತ್ತು ಪರ್ಚುರೆ ಹೊರತು ಉಳಿದ ನಾಥೂರಾಮ್ ಗೋಡ್ಸೆ, ಆಪ್ಟೆ, ಕರ್ಕರೆ, ಮದನಲಾಲ್, ಬಡ್ಗೆ, ಶಂಕರ್, ಗೋಪಾಲಗೋಡ್ಸೆ-ಈ ಏಳು ಆರೋಪಿಗಳೂ ನವಢಿಲ್ಲಿಯಲ್ಲಿದ್ದರು.

ಬೋಂಬುಸ್ಫೋಟ

ಜನವರಿ ತಾ. 20ನೇ ಮುಂಜಾನೆ ಆಪ್ಟೆ, ಶಂಕರ್ ಮತ್ತು ಬಡ್ಗೆ ಬಿರ್ಲಾಭವನದ ಪ್ರಾರ್ಥನಾಂಗಣವನ್ನೆಲ್ಲಾ ಸರಿಯಾಗಿ ನೋಡಿಕೊಂಡು ಗುರಿತಪ್ಪದೆ ಬೋಂಬನ್ನಿಡಲಾಗುವಂತೆ ಗಾಂಧೀಜೀ ಪ್ರಾರ್ಥನೆಗೆ ಕುಳಿತುಕೊಳ್ಳುವ ಸ್ಥಳವನ್ನು ಗೊತ್ತುಹಚ್ಚಿಕೊಂಡು ಬಂದಿದ್ದರು. ಅಂದು ಅಪರಾಹ್ನ ತಾವು ತಂದ ಸಿಡಿಮದ್ದುಗಳನ್ನು ಹಂಚಿಕೊಂಡರು. ಒಂದು ಕೈಬೋಂಬು ಮತ್ತೊಂದು ಸ್ಫೋಟಕ ತುಣುಕು ಮದನಲಾಲನಿಗೆ-ಒಂದು ಕೈಬೋಂಬು ಮತ್ತೊಂದು ಗನ್ನು ಬಡ್ಗೆಗೆ-ಒಂದೊಂದು ಕೈಬೋಂಬು ಶಂಕರ್, ನಾಥೂರಾಮ್ ಗೋಡ್ಸೆ, ಮತ್ತು ಕರ್ಕರೆಗೆ ಪಾಲಾಯಿತು. ಪ್ರಥಮತಃ ಮದನಲಾಲ, ತನ್ನ ಸಿಡಿಮದ್ದು ತುಣುಕನ್ನು ಸ್ಫೋಟಗೊಳಿಸಬೇಕು; ಆ ಗೊಂದಲದಲ್ಲಿ ಸಭೆ ಕಕ್ಕಾಬಿಕ್ಕಿಯಾಗುವಾಗ ಎಲ್ಲರೂ ತಮ್ಮ ಕೈಬೋಂಬುಗಳನ್ನೊಗೆಯಬೇಕು ಎಂದು ಅವರ ಹಂಚಿಕೆಯಿದ್ದಿತು. ಆದರೆ ಗಾಂಧೀಜೀಯ ಪ್ರಾರ್ಥನಾ ಸಭೆಯಲ್ಲಿ ಇದರ ಪೂರ್ವಾರ್ಧವೇನೋ ಜ್ಯಾರಿಯಾಯಿತು-ಮದನಲಾಲ್ ಸಿಡಿಮದ್ದನ್ನು ಸ್ಫೋಟಗೊಳಿಸಿದನಾದರೂ ಉತ್ತರಾರ್ಧ ಕೈಗೂಡಲಿಲ್ಲ. ಅಲ್ಲಿಯ ಜನರು ತಪ್ಪಿಬಿದ್ದುದು ಪಾಲಿದೆಂದೋ, ಪರಿಸ್ಥಿತಿ ತಮಗನುಕೂಲವಿಲ್ಲವೆಂದೂ ಅವರಿಗೆ ತೋರಿರಬೇಕು.-ಮಿಕ್ಕವರು ಬೋಂಬು ಚೆಲ್ಲದ ಅಲ್ಲಿಂದ ಪಲಾಯನ ವರಿಸಿದರು. ಮದನಲಾಲ್ ಸಿಕ್ಕಿಬಿದ್ದ. ಪ್ರಥಮತಃ ಅಲ್ಲಿಂದೋಡಿಬಿಟ್ಟವ ಕರ್ಕರೆ; ಅವನ ಬೆನ್ನಲ್ಲೇ ಆಪ್ಟೆ, ನಾಥೂರಾಮ್, ಶಂಕರ್, ಬಡ್ಗೆ, ಗೋಪಾಲ ಗೋಡ್ಸೆ ಟೇಕ್ಸಿ ಹತ್ತಿ ತಲೆ ತಪ್ಪಿಸಿಕೊಂಡರು. ತಾ. 20ನೇ ರಾತ್ರಿ ಮತ್ತು ತಾ 21ನೇ ಮುಂಜಾನೆಯೊಳಗೆ ಇವರೆಲ್ಲರನ್ನೂ 'ಅವರೆಬ್ಬಿಸಿದ ಸಿಡಿತಧ್ವನಿಯೇ ಹೆದರಿಸಿ ಢಿಲ್ಲಿಯಿಂದೋಡಿಸಿದ್ದಿತು, ಆದರೆ ಹೊರಡುವ ಮೊದಲು ಉಳಿದಿದ್ದ ಸಿಡಿಮದ್ದಿನ ಚೀಲವನ್ನು ಅಲ್ಲಿಯ ಹಿಂದೂ ಮಹಾ ಸಭಾ ಭವನದ ವಠಾರದಲ್ಲಿ ಹುಗಿದು ಹೋಗಿದ್ದರು.

ಫಲಿಸಿದ ದ್ವಿತೀಯ ಪ್ರಯತ್ನ

ತಾ 20ನೇ ರಾತ್ರಿಯಲ್ಲಿಯೇ ನಾಥೂರಾಮ್ ಗೋಡ್ಸೆ ಮತ್ತು ಆಪ್ಟೆ ಢಿಲ್ಲಿಯಿಂದ ಹೊರಟು ಕಾನ್ಪುರಕ್ಕೆ ಹೋಗಿ ಅಲ್ಲಿಂದ ಬೊಂಬಾಯಿಗೆ ಮುಟ್ಟಿದರು; ಕರ್ಕರೆ ಮತ್ತು ಗೋಪಾಲಗೋಡ್ಸೆ ತಾ 21ರಲ್ಲಿ ಹೊರಟರು; ಮೊದಲನೆಯವ ಮಥುರಾಕ್ಕೆ ಹೋಗಿ ಆ ಮೇಲೆ ಬೊಂಬಾಯಿಗೆ ಬಂದ. ಬೊಂಬಾಯಿಯ ಥಾಣಾದಲ್ಲಿದ್ದ ಸ್ನೇಹಿತನೊಬ್ಬನ ಮನೆಯಲ್ಲಿ ನಾಥೂ, ಆಪ್ಟೆ, ಕರ್ಕರೆ, ಗೋಪಾಲರೊಟ್ಟಾದರು. ಜನವರಿ ತಾ 27ನೇ ಮುಂಜಾನೆ ನಾಥೂರಾಮ್ ಗೋಡ್ಸೆ ಮತ್ತು ಆಪ್ಟೆ ಪುನಃ ವಿಮಾನಹತ್ತಿ ಅಂದು ಮಧ್ಯಾಹ್ನ ಢಿಲ್ಲಿಯಲ್ಲಿಳಿದು, ಆ ಅಪರಾಹ್ನವೇ ಗ್ವಾಲಿಯರಿಗೆ ಹೊರಟು ರಾತ್ರಿ ಅಲ್ಲಿ ಮುಟ್ಟಿದರು. ಅಲ್ಲಿಯ ಡಾ। ಪರಚುರೆ (ಎಂಟನೇ ಆರೋಪಿ) ಗೋಡ್ಸೆಯ ಪರಿಚಯದವ. ಮಹಾತ್ಮರ ಎದೆ ಸೀಳಬಲ್ಲ ಪಿಸ್ತೂಲೊಂದನ್ನು ಡಾ। ಪರಚುರೆಯಿಂದ ಪಡೆಯುವದಕ್ಕಾಗಿಯೇ ಇವರು ಹೋದುದು. ಹೋಗುವಾಗ ಇವರೊಡನೊಂದು ಪಿಸ್ತೂಲಿತ್ತಾದರೂ ಅದು ಅಷ್ಟೊಂದು ನಂಬಿಕೆಯದಲ್ಲವೆಂದು ಇವರು ಬೇರೊಂದರ ಸಂಪಾದನೆಗೆ ಹೋಗಿದ್ದರು. ಡಾ। ಪರಚುರೆಯ ಹತ್ತಿರ ಸ್ವಂತ ಪಿಸ್ತೂಲಿದ್ದರೂ ಆತ ಮುಂಜಾಗ್ರತೆಯಿಂದ ಅದನ್ನು ಕೊಡದೆ ಬೇರೊಬ್ಬರಿಂದ ಏಳು ತೋಟೆಗಳ ಪಿಸ್ತೂಲೊಂದನ್ನು-ಎಲ್ಲರಿಗೂ ಗೊತ್ತಿರುವಂತೆ ಜನವರಿ ತಾ 30ರಲ್ಲಿ ಒಂದು ಆಟಂಬೋಂಬಿನ ಅನಾಹುತವನ್ನೇ ಸಾಧಿಸಿದ್ದನ್ನು!- ಇವರಿಗೆ ಕೊಟ್ಟ. ಇವರಿಬ್ಬರೂ ತಾ 28ರಲ್ಲಿ ಗ್ವಾಲಿಯರಿನಲ್ಲೇ ಇದ್ದು ತಾ. 29ರಲ್ಲಿ ನವಢಿಲ್ಲಿಗೆ ಮರಳುವಾಗ ಮುಂಚಿನ ದಿನ ಢಿಲ್ಲಿಗೆ ಬಂದಿದ್ದ ಕರ್ಕರೆಯೂ ಇವರನ್ನು ಸೇರಿಕೊಂಡ. ಮೂವರೂ ಒಟ್ಟಿಗೆ ಆ ಪಿಸ್ತೂಲಿನ ಪರೀಕ್ಷಾರ್ಥ ಪ್ರಯೋಗ ಮಾಡಿನೋಡಿ ಸಮಾಧಾನಪಟ್ಟರು. ಮರುದಿನ—ಜನವರಿ ತಾ. 30-ಅಪರಾಹ್ನ ಆ ಪಿಸ್ತೂಲು ಸಮೇತ ಈ ಮೂವರೂ ಬಿರ್ಲಾಭವನದ ಬೇಟೆಗೆ ಹೊರಟರು. ಆ ಮೇಲೆ ನಡೆದುದೇನೆಂಬುದು ಲೋಕಕ್ಕೇ ಗೊತ್ತಿದೆ; ಸರ್ವರ ಹೃದಯದಲ್ಲೂ ಸಿಡಿಯುತ್ತಿದೆ; ಮುಂದಿನ ತಲೆತಲಾಂತರಕ್ಕೂ ಅದು ಗೊತ್ತಿರುವಂತಹದೇ!

ದಿ ಮೂಲ್ಕಿ ಬೇಂಕ್,
ಲಿಮಿಟೆಡ್
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.
Moolky. S. K.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಮಂಜೆ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ.

ಋತುಸ್ರಾವ ನಿಂತಿತು
'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/; ಸ್ಪೆಶಲ್ ರೂ. 5, ಅಧಿಕಾಧಿಕ ಸ್ಪೆಶಲ್ ರೂ.8/- [ಪಿ. ಪಿ. ಖರ್ಚು ಪ್ರತ್ಯೇಕ]
MRS. D. DEVEE, F. DS (N. J.)
Tollygunge CALCUTTA.
ಸ್ಟಾಕಿಸ್ಟರು: [illegible], ಮಂಗಳೂರು

EDITED, PRINTED & PUBLISHED BY K. U. SHETTY AT THE NAVAYUGA PRESS UDIPI, S. INDIA.

ಏರಣಾಣ

Regd. No. M. 3618

8-7-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-1-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮ ವಾರ ೪೪

NAVAYUGA WEEKLY, UDIPI.

FOUNDER: **Hon'ble Mr. A. B. SHETTY,** Health Minister, Govt. of Madras.

Vol. 28 No. 44

ಲೋಕಕ್ಕೇ ದೊಡ್ಡವ-ಜೋಸೆಫ್ ಸ್ಟಾಲಿನ್

[ಲೋಕಪ್ರಸಿದ್ಧ ಬರೆಹಗಾರ ಲುಯಿ ಫಿಶ್ಶರ್, ಇವರಿಂದ]

ಜೋಸೆಫ್ ಸ್ಟಾಲಿನ್,---ಈತನೇ ಲೋಕದ ಅತ್ಯಂತ ಪ್ರಭಾವಶಾಲೀ ವ್ಯಕ್ತಿ. 190 ಮಿಲಿಯ ಸೋವಿಯೆಟ್ ನಾಗರಿಕರ ಪಾಲಿಗೆ ಅವನ ಮಾತು ಮತ್ತು ಸನ್ನೆಯೆಂದರೆ ಶಾಸನ. ಅವನ ಅಧಿಕಾರೀ ಬಿರುದು "ವೋಝ್ದ್" ಅಂದರೆ ಫುರಾರ್ ಅಥ್ವಾ ನಾಯಕ. ಆದರೆ ಪಾಗಾರದೊಳಗಿನ ಕ್ರೆಮ್ಲಿನಿನಲ್ಲಿರುವ ಈ ಕೆಂಪು ಜನಕನ ಶಕ್ತಿಗೆ ಹಿಟ್ಲರನಾಗಲೀ ಝಾರನಾಗಲೀ ಸಾಟಿಯಾಗಲಾರರು. ಸೋವಿಯೆಟ್ ಸೇನೆ, ಗುಪ್ತ ಪೋಲೀಸ್, ಉದ್ದಿಮೆಗಳು, ರೈಲ್ವೆಗಳು, ರೇಡಿಯೋ, ಪುಸ್ತಕ ಪ್ರಕಟಣೆಗಾರರು, ಪತ್ರಿಕೆಗಳು, ಗಣಿಗಳು, ಗದ್ದೆಗಳು, ಕೂಲಿಗಾರ ಸಂಘಗಳು, ಸೆರೆಮನೆಗೃಹಗಳು-ಇವೆಲ್ಲವೂ ಸ್ಟಾಲಿನನ ಆಜ್ಞಾಧೀನವಾಗಿರಬೇಕು. ಬಹಿರಂಗವಾಗಿ ಆತನೊಡನೆ ಭಿನ್ನಾಭಿಪ್ರಾಯ ಸೂಚಿಸುವ ಅಥವಾ ವಿಮರ್ಶಿಸುವ ಜನ ಅಲ್ಲಿಲ್ಲವೇ ಇಲ್ಲ.

ನಿರಂಕುಶಾಧಿಕಾರಿ—ನಿರ್ಮಾಪಕ

ಹೇಗಿದ್ದರೂ, ಸ್ಟಾಲಿನನು ಅಖಿಲ ರಶ್ಯದ ನಿರಂಕುಶ ಪ್ರಭುವಾಗಿರುವುದು ಮಾತ್ರವಲ್ಲ; 1939ರಿಂದ ಆತನು ವಿಸ್ತಾರವಾದೊಂದು ಸಾಮ್ರಾಜ್ಯವನ್ನೇ ಕಟ್ಟಿದ್ದಾನೆ; ಸದ್ಯಕ್ಕದು ಪೋಲೆಂಡ್, ಝೆಕೊಸ್ಲೊವೇಕಿಯಾ, ರುಮೇನಿಯಾ, ಬಲ್ಗೇರಿಯಾ, ಹಂಗೇರಿ, ಯುಗೊಸ್ಲೇವಿಯಾ ಮತ್ತು ಅಲ್ಬೇನಿಯಗಳನ್ನೊಳಗೊಂಡಿದೆ. ಸ್ಟಾಲಿನನು ತಮಗಾಗಿ ಎಳೆದ ಗೆರೆಯಲ್ಲಿಯೇ ಈ ರಾಷ್ಟ್ರಗಳ ಸರಕಾರಗಳು ತುದಿಗಾಲಲ್ಲಿ ನಿಲ್ಲುತ್ತಿವೆ. ವಸ್ತುತಃ ನೋರ್ವೆಯಿಂದ ಶಾಂತ ಸಮುದ್ರದವರೆಗೆ, ಆರ್ಕ್ಟಿಕಿನಿಂದ ಬಿಸಿ ಅಡ್ರಿಯಾಟಿಕ್ ವರೆಗೆ ಪಸರಿಸಿರುವ ವಿಸ್ತಾರ ಭೂಮಿಯ ನಿಯೋಗಿ ಚಕ್ರವರ್ತಿಯೀತ. ಇಡೀ ಭೂಮಿಯ ಐದನೇ ಒಂದು ಭಾಗವು ಆತನಿಗೆ ಸ್ವಾಮಿಭಕ್ತಿಯನ್ನು ಸಲ್ಲಿಸುತ್ತಿದೆ. ಮಾತ್ರವಲ್ಲ, ಸೋವಿಯೆಟ್ ಸಾಮ್ರಾಜ್ಯದ ಹೊರಗಿರುವ ಮಿಲಿಯಾವಧಿ ಸ್ಟಾಲಿನಿಸ್ಟರೂ ಅವನನ್ನು ತಮ್ಮ ನಾಯಕನೆಂದು ಭಾವಿಸಿಕೊಂಡಿದ್ದಾರೆ. ಜಾವಾ ಮತ್ತು ಚಿಲೆಯಲ್ಲಿರಲಿ—ನ್ಯೂಯೋರ್ಕಿನಲ್ಲಿರುವವರು ಹೇಗೋ ಬೊಂಬಾಯಿಯಲ್ಲಿರುವವರೂ ಹಾಗೆಯೇ-ಜ್ಯೂನದವರಂತೆ ಇಂಗ್ಲಾಂಡಿನವರೂ—ಅವರೆಲ್ಲರೂ ಸ್ಟಾಲಿನನ ಧೋರಣೆಗೆ ಹೊಂದಿಕೆಯಾಗುವಂತೆಯೇ ತಮ್ಮ ಧೋರಣೆಗೆ 'ಸ್ವಿಚ್' ಹಾಕಿಕೊಳ್ಳುತ್ತಿದ್ದಾರೆ. ಅವನ ಉದ್ದೇಶವನ್ನು ಸಾಧಿಸಿಕೊಡಲು ಲೋಕದ ಮೂಲೆಮೂಲೆಗಳಲ್ಲೂ ಮುಷ್ಕರ, ಗಲಭೆ,ಗೊಂದಲ ಮತ್ತು ಚುನಾವಣಾ ಆಂದೋಲನಗಳನ್ನು ಇವರೆಬ್ಬಿಸುತ್ತಿದ್ದಾರೆ. ಮನುಷ್ಯನ ಉಗಮದಿಂದೀವರೆಗಿನ ಕಾಲದಲ್ಲಿ, ಬೇರಾರೊಬ್ಬನಿಂದಲೂ ಅಗದಷ್ಟು ಜೀವಗಳನ್ನು ತನ್ನ ಅಚ್ಚಿನಲ್ಲಿ ರೂಪಿಸುತ್ತಿರುವವನು ಪ್ರಾಯಶಃ ಸ್ಟಾಲಿನನೇ. ಇಂತಹ ಮನುಷ್ಯ ಎಂತಹ ನಡತೆಯವ?

ಅವನ ವ್ಯಕ್ತಿತ್ವ

ಸ್ಟಾಲಿನನು ಸಾಮಾನ್ಯ ಮನುಷ್ಯನಂತೆ ತೋರುತ್ತಾನೆ. ಅವ ಐದಡಿ ಐದಿಂಚು ಎತ್ತರವಿರುವ ಮನುಷ್ಯ. ಜಗ್ಗಿದ ಭುಜಗಳು, ಗಿಡ್ಡ ಕುತ್ತಿಗೆ ಮತ್ತು ಉರುಟು ತಲೆಯ ಮೂರ್ತಿ. ಅವನ ಬಲಕೈಗಿಂತ ಎಡ ಕೈ ಗಿಡ್ಡವೆಂದು ದರ್ಶನ ಮಾತ್ರದಿಂದ ತಿಳಿಯುತ್ತದೆ. ಎರಡು ಕೈಗಳೂ ಉದ್ದ ಮತ್ತು ಬಲವುಳ್ಳವುಗಳೇ. ಪ್ರಾಯ ಸಂದಂತೆ ಅವನಲ್ಲಿ ಏನೋ ಸ್ವಲ್ಪ ಬೊಜ್ಜು ಬಂದಂತಿದೆಯಾದರೂ, ಅವನೀಗಲೂ ಚುರುಕಾಗಿ ಚಲಿಸಬಲ್ಲ. ನಾನು ಸೋವಿಯೆಟ್ ರಶ್ಯದಲ್ಲಿದ್ದ 14 ವರುಷಗಳಲ್ಲಿ ಹಲವು ಬಾರಿ ಸ್ಟಾಲಿನನನ್ನು ನೋಡಿದ್ದೇನೆ. ಸಭೆಗಳಲ್ಲಿ, ಥಿಯೇಟರ್ ಪ್ರದರ್ಶನಗಳಲ್ಲಿ, ದಳಧಾಳೀ ದರ್ಶನಗಳಲ್ಲಿ, ಅಂತ್ಯವಿಧಿ ಮತ್ತು ಆಕಾಶಯಾನ ಸಮಾರಂಭಗಳಲ್ಲಿ, ವಿವಿಧ ಸ್ಥಳಗಳಲ್ಲಿ ಕಂಡಿದ್ದೇನೆ; ಆತ ನಿಂತುಕೊಂಡಿದ್ದಾಗ, ಕುಳಿತುಕೊಂಡಿದ್ದಾಗ, ನಡೆಯುತಿದ್ದಾಗ ನೋಡಿದ್ದೇನೆ; ಒಂದು ಸಲ ಸಶಸ್ತ್ರ ಕಾರಿನಲ್ಲಿ ಡ್ರೈವರನೊಬ್ಬನೇ ಇದ್ದಾಗ ತನ್ನ ಕಪ್ಪು ನೆಗೆ ಶಾಸನದಲ್ಲಿದ್ದು ಕ್ರೆಮ್ಲಿನಿನ ಕಡೆಗೆ ವೋರ್ಸ್ಡಿಝುಂಕಾ ರಸ್ತೆಯಲ್ಲಿ ಧಾವಿಸುತ್ತಿದ್ದಾಗ ಅವನನ್ನು ನೋಡಿದ್ದೆ. ಸ್ಟಾಲಿನನ ಮುಖವನ್ನು ಸರಿಯಾಗಿ ಪರೀಕ್ಷಿಸಿ ನೋಡುವ ಉತ್ತಮ ಸಂದರ್ಭ ನನಗೊದಗಿದುದು ಆತನೊಡನೆ ಆರೂಕಾಲು ತಾಸುಗಳ ಸಂಭಾಷಣೆಗೆ ಕುಳಿತಲ್ಲಿಯೇ. ಯಾಲೆಯ ದೈವಶಾಸ್ತ್ರ ಶಾಲೆಯ ಪ್ರೊಫೆಸರ್ ಡೇವಿಸ್, ಸುಪ್ರಸಿದ್ಧ ಅರ್ಥ ಶಾಸ್ತ್ರಜ್ಞ ಸ್ಟುವರ್ಟ್ ಚೇಸ್, ಚಿಕಾಗೋದ ಪ್ರೊಫೆಸರ್ ಪಾಲ್ ಡಗ್ಲಸ್, ಅನಂತರ ಗವರ್ನರನಾದ ಜಿ. ಟಗ್ವೆಲ್ ಜಾನ್ ಬ್ರೋಫಿ, ಜೇಮ್ಸ್ ಮೌರರ್, ಮತ್ತಿತರ ಹಲವು ಅಮೇರಿಕನರಿಗೆ 1927 ನೇ ಸೆಪ್ಟೆಂಬರ್ ತಾರೀಖಿನಲ್ಲಿ ಜೋಸೆಫ್ ಸ್ಟಾಲಿನನೊಡನೆ ಸಂಭಾಷಿಸುವ ಸಮಯಾವಕಾಶ ದೊರಕಿತ್ತು. ತಮ್ಮೊಡನೆ ಬರಬೇಕೆಂದು 'ನ್ಯೂಯೋರ್ಕ ಟೈಮ್ಸ್'ನ ಶ್ರೀಮತಿ ಅನ್ನೆ ಓಹೆರ್ ಕೋರ್ಮಿಕ್ ಮತ್ತು ನನ್ನನ್ನು ಅವರು ಕೇಳಿಕೊಂಡಿದ್ದರು. ಆ ಕೂಟ ಸಂಭಾಷಣೆಯು ಕ್ರೆಮ್ಲಿನಿಗೆ ತಾಗಿ ಒತ್ತಿನಲ್ಲೇ ಇರುವ ಕಮ್ಯೂನಿಸ್ಟ್ ಪಕ್ಷದ ಮುಖ್ಯ ಕಚೇರಿಯ ಸ್ಟಾಲಿನನ ಆಫೀಸಿನಲ್ಲಿ ನಡೆಯಿತು.

ಆರು ತಾಸಿನ ಸಂಭಾಷಣೆ

ಆಫೀಸು ಮುನ್ನೂರು ಅಥವಾ ನಾಲ್ನೂರು ಜನರು ಕುಳಿತುಕೊಳ್ಳುವಂತಹದಿತ್ತು. ನಾವು ಒಳಗೆ ಹೋಗುವಾಗ ಅಪರಾಹ್ನ 1 ಘಂಟೆ; ಅಗ ಹೋದವರು ಅಪರಾಹ್ನ 7-15 ಆಗುವ ವರೆಗೂ ಸ್ಟಾಲಿನನೊಂದಿಗಿದ್ದೆವು. ಈ ಆರೂಕಾಲು ಘಂಟೆಯ ಅವಧಿಯಲ್ಲಿ ಅವನೊಂದು ಬಾರಿಯಾದರೂ ಕೋಣೆಯಿಂದ ಹೊರಗೆ ಹೋದುದಿಲ್ಲ; ಅವನಿಗೊಂದು ಚೀಟಿ ಒಳಗೆ ಬಂದುದಾಗಲೀ ಅವನೇನನ್ನಾದರೂ ಹೊರಗೆ ಕಳುಹಿದುದಾಗಲೀ ಇಲ್ಲ. ಅವನ ಮೇಜಿನ ಮುಂದೆ ಟೆಲಿಫೋನು ಇರಲಿಲ್ಲ ಆತ ಉದ್ದೇಶಪೂರ್ವಕವಾಗಿ ತನ್ನೊಡನೆ ಬೇರಾರಿಗೂ, ಬೇರಾವುದಕ್ಕೂ ಸಂಬಂಧವಿಲ್ಲದಂತೆ ಮಾಡಿಕೊಂಡಿದ್ದ; ತಾನೂ, ತನ್ನ ಸಂದರ್ಶಕರೊಡನೆ ಸಂಪೂರ್ಣವಾಗಿ ತಲ್ಲೀನತೆ ಹೊಂದಲಾಗುವಂತೆ ಆತ ಅಂತಹ ವ್ಯವಸ್ಥೆ ಮಾಡಿಟ್ಟಿದ್ದ. ಇಂತಹ ಕೇಂದ್ರೀಕೃತ ಲಕ್ಷ್ಯವು ಸ್ಟಾಲಿನನ ಕಾರ್ಯವಿಧಾನಗಳಲ್ಲಿರುವ ಒಂದು ವೈಶಿಷ್ಟ್ಯ. ನಮ್ಮೀ ದೀರ್ಘ ಸಂಭಾಷಣೆಯ ನಡುವೆ, ವಿವಿಧ ತಿಂಡಿ ಹಾಗೂ ಚಹಾ ಪಾತ್ರೆಗಳನ್ನು ಹಿಡಿದುಕೊಂಡು ವಿಶಿಷ್ಟ ಮರ್ಜಿಯ ರಶ್ಯನ್ ರೈತ ಸ್ತ್ರೀಯೊಬ್ಬಳು ಎರಡು ಬಾರಿ ನಮ್ಮ ಕೋಣೆಯೊಳಗೆ ಬಂದಿದ್ದಳು. ಆ ಕೋಣೆಗಾ ಅವಧಿಯಲ್ಲಿ ಕಾಲಿಟ್ಟವಳೆಂದರೆ ಅವಳೊಬ್ಬಳೇ. ಸ್ಟಾಲಿನ ಆಕೆಯೊಡನೊಂದೇ ಒಂದು ಶಬ್ದವುಚ್ಚರಿಸಲಿಲ್ಲ. ಸ್ಟಾಲಿನನೂ ತಿಂದ; ನಾವೂ ತಿಂದೆವು; ಆದರೆ ಆ ಫಲಾಹಾರವು ನಮ್ಮ ಮಾತುಕತೆಗಳಿಗೇನೂ ಅಡ್ಡ ಬಂದುದಿಲ್ಲ.

ಆ ಬೇಟೆಯ ನೋಟ

ನಾವು ಬಂದೊಡನೆಯೇ ಸ್ಟಾಲಿನ ನಮ್ಮಲ್ಲಿ ಪ್ರತಿಯೊಬ್ಬನನ್ನೂ ಮೂಳೆ ಸಡಿಲಿಸುವಷ್ಟು ಬಲವಾಗಿ ಕೈಕುಲುಕಿದ; ಹಸುರು ಉಣ್ಣೆ ಹಾಸಿದ ಮೇಜಿನ ಸುತ್ತಲಿದ್ದ ಕಮಾನುಬೆನ್ನಿನ ಮೆತ್ತಗಿನ ಕುರ್ಚಿಗಳಲ್ಲಿ ಮಂಡಿಸುವಂತೆ ನಮ್ಮನ್ನು ಅಪ್ಪಣೆ ಕೊಟ್ಟ... ತ್ರಿಸಿದ. ಆತ ನಾಗರಿಕ ಸುಜ್ಞಿನ್ಯಯ ಮಾ

[೧೦ನೇ ಪುಟ ನೋಡಿರಿ]

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ:— ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ ನಂಬ್ರ 10, ಉಡುಪಿ. **THE UNITED KARNATAK INSURANCE COMPANY, LIMITED.**

ಬರ್ಲಿನಿನ ಮತಭೇದ ಪರಮಾವಧಿಗೇರಿತು!

ಜಾಗತಿಕ ರಂಗದಲ್ಲಿ ಮುಖ್ಯವಾಗಿ ಬರ್ಲಿನ್ ಮತ್ತು ಪೆಲಸ್ತೈನ್ ಸಮಸ್ಯೆಗಳು —ಭಾರತದ ಪಾಲಿಗೆ ಹೈದರಾಬಾದ್ ಮತ್ತು ಕಾಶ್ಮೀರ ಕಂಟಕಗಳು—ಇವೇ ಕಳೆದ ವಾರದಲ್ಲಿ ಕೂಡಾ.

ಒಂದು ಚಿಕ್ಕ ಕುಟುಂಬ ಜೀವನದಂತೆಯೇ ಪ್ರಾಪಂಚಿಕ ವಿದ್ಯಮಾನಗಳಲ್ಲೂ ವಿವಾದಗಳು, ಮತಭೇದಗಳು ಇರುವುದು ಸಹಜವೇ; ಆದರೆ ಅವು ನ್ಯಾಯ ಅಥವಾ ಸದ್ವ್ಯವಹಾರವೆಂಬ ಸೂರ್ಯಬಿಂಬವನ್ನು ಮುಸುಕಿದ ಮೋಡಗಳಂತೆ ಅಥವಾ ಅಲ್ಪಾವಧಿಗೆ ಮಾತ್ರ ಸೋಂಕಿದ ರಾಹುವಿನಂತೆ ಇರಬೇಕು-ಮರುಕ್ಷಣದಲ್ಲಿ ಬಿಟ್ಟುಹೋಗಬೇಕು! ಬದಲಿಗೆ ಇಂದಿನ ಪೆಲಸ್ತೈನ್, ಬರ್ಲಿನ್, ಹೈದರಾಬಾದ್, ಕಾಶ್ಮೀರ ಸಮಸ್ಯೆಗಳಂತೆ ಅನಿಶ್ಚಿತಾವಧಿಯ ವರೆಗೂ ನ್ಯಾಯ ಸೂರ್ಯನನ್ನು ಮರೆ ಮಾಡಿಯೇ ಇಟ್ಟಲ್ಲಿ ನ್ಯಾಯದ ಅಸ್ತಮಯವಾಯಿತೋ ಎಂಬ ಭೀತಿ ಹುಟ್ಟುವದು ಸ್ವಾಭಾವಿಕ, ಇಂದಿನ ಸ್ಥಿತಿಗತಿಗಳು ಅಂತಹ ಭಯಬೀರುತ್ತಿವೆ!

ಪೆಲಸ್ತೈನ್ ಕಾಳಗ

ಮೊದಲೇ ಮಾತುಕೊಟ್ಟಂತೆ ಪೆಲಸ್ತೈನಿನಲ್ಲಿದ್ದ ಕೊನೆಯ ಬ್ರಿಟಿಷ್ ಸೇನೆಗಳೂ ಈಗ ಅಲ್ಲಿಂದ ಹೊರಟು ಹೋಗಿವೆ. ಹೈಫಾಬಂದರವನ್ನು ಯೆಹೂದಿಗಳ ಕೈಗೆ ಬಿಟ್ಟಿವೆ ಇತ್ತ ಸಂಯುಕ್ತ ರಾಷ್ಟ್ರಸಂಘದ ರಾಯಭಾರಿಯಾಗಿ ಪೆಲಸ್ತೈನಿನಲ್ಲಿ ರಾಜಿ ನಿರ್ಮಿಸಲು ಬಂದಿರುವ ಕೌಂಟ್ ಬೆರ್ನಾಡೊಟ್ಟೆಯವರು ತನ್ನ ಸಂಧಾನ ತೀರ್ಮಾನಗಳನ್ನು ಅರಬರು ಮತ್ತು ಯೆಹೂದಿಗಳಗೊಪ್ಪಿಸಿದ್ದಾರೆಂದು ತಿಳಿದುಬರುತ್ತದೆ. ಆ ತೀರ್ಪಿನ ಕುರಿತು ಇಕ್ಕಡೆಯವರೂ ಗಾಢ ಪರ್ಯಾಲೋಚನೆ ನಡೆಸುತ್ತಿದ್ದು, ಅರಬರು ಇಷ್ಟರಲ್ಲೇ ತಮ್ಮ ಆಕ್ಷೇಪ ಸೂಚಿಸಿ ಧಿಕ್ಕರಿಸಿದ್ದಾರೆ, ಬೆರ್ನಾಡೊಟ್ಟೆ ತೀರ್ಮಾನಗಳ ಸಾರ ಹೀಗಿದೆ:— ವ್ಯವಸ್ಥಾಧಿಕಾರದ ಮೂಲದಲ್ಲಿದ್ದಂತೆ ಪೆಲಸ್ತೈನಿನ ಯೆಹೂದೀ ಮತ್ತು ಅರಬ್ ರಾಜ್ಯಗಳನ್ನು ಒಂದು ಕೇಂದ್ರಾಧಿಕಾರದೊಳಗೆ ಸೇರಿಸಬೇಕು. ಈ ಸಂಯುಕ್ತ ಕ್ಷೇತ್ರವನ್ನು ಒಂದು ಸ್ವತಂತ್ರ ಯೆಹೂದಿ ರಾಜ್ಯ ಮತ್ತು ಒಂದು ಸ್ವತಂತ್ರ ಅರಬ್ಬೀ ರಾಜ್ಯವಾಗಿ ವಿಂಗಡಿಸಬೇಕು; ಸಂಯುಕ್ತರಾಷ್ಟ್ರಸಂಘದಿಂದ ಯೆಹೂದಿಗಳಿಗೆ ಮಂಜೂರು ಮಾಡಲ್ಪಟ್ಟಿರುವ ನೆಗೆಬ್ ಮರುಭೂಮಿಯೊಂದನ್ನು ಅರಬರಿಗೆ ಬಿಟ್ಟುಕೊಟ್ಟು ಉಳಿದೆಲ್ಲಾ ಭಾಗಗಳನ್ನೂ ಯೆಹೂದೀ ರಾಜ್ಯವೊಳಗೊಂಡಿರತಕ್ಕದ್ದು; ನೆಗೆಬನ್ನು ಬಿಟ್ಟುದಕ್ಕೆ ಪ್ರತಿಯಾಗಿ ಇಡೀ ಗಾಲಿಲೀಕ್ಷೇತ್ರವನ್ನು ಯೆಹೂದಿಗಳಿಗೆ ಕೊಡತಕ್ಕದ್ದು; ಹೈಫಾವನ್ನು ಸ್ವತಂತ್ರ ಬಂದರಾಗಿ, ಲಿಡ್ಡಾವನ್ನು ಸ್ವತಂತ್ರ ವಿಮಾನಕೇಂದ್ರವಾಗಿ ಇಡಬೇಕು; ಜಾಫಾದ ಸ್ಥಾನವನ್ನು ಕೊನೆಗೆ ನಿರ್ಣಯಿಸಲಾಗುವದು; ಜೆರುಸಲೇಮು ಅರಬರಿಗೆ ಸೇರಬೇಕು. ಅರಬರೂ ಯೆಹೂದಿಗಳೂ ಒಟ್ಟಿಗೊಂದು ಕೇಂದ್ರ ಸಮಿತಿಯನ್ನು ರಚಿಸಿಕೊಳ್ಳಬೇಕು; ಈ ಸಮಿತಿಯೇ ಎರಡೂ ರಾಷ್ಟ್ರಗಳ ವಿದೇಶ ಸಂಬಂಧ, ರಕ್ಷಣೆ ಮತ್ತು ಆರ್ಥಿಕ ವಿಚಾರಗಳ ಅಧಿಕಾರ [illegible]

ಮೇಲಿನ ಸೂಚನೆಗಳೇನೋ ನ್ಯಾಯೋಚಿತವಾಗಿ ತೋರಿದರೂ, ಅರಬ್ ಯೆಹೂದಿಗಳೊಳಗಿನ ವೈಷಮ್ಯವನ್ನು ಗಣಿಸುವಾಗ, ಬ್ರಿಟಿಷ್ ಮಂತ್ರಿ ಸಮಿತಿಯು ಭಾರತ ವ್ಯವಸ್ಥೆಯ ಕುರಿತು ಪ್ರಥಮ ಬಾರಿ ಕೊಟ್ಟಿದ್ದ ತೀರ್ಮಾನದ ಅದೃಷ್ಟವೇ ಬೆರ್ನಾಡೊಟ್ಟೆ ತೀರ್ಪಿಗೂ ದೊರೆಯುವುದು ಸಂಭವನೀಯವಾಗಿ ಕಾಣಿಸುತ್ತದೆ.

ಬರ್ಲಿನ್ ವಿವಾದ

ಬರ್ಲಿನ್ ನಗರಾಡಳಿತೆಯ ಕುರಿತು ರಶ್ಯ ಮತ್ತು ಬ್ರಿಟನ್, ಅಮೇರಿಕ, ಫ್ರಾನ್ಸುಗಳೊಳಗೆ ದೀರ್ಘ ಕಾಲದಿಂದಿದ್ದ ವಿವಾದದಲ್ಲಿ ಈತನಕ ಇದ್ದ ಸೂಕ್ಷ್ಮ ಸಂಬಂಧಸೂತ್ರಗಳು ಕೂಡಾ ಈಗ ಪೂರ್ಣ ಕಡಿದುಹೋಗಿವೆ; ಎರಡು ಸರೀ ತುಂಡುಗಳಾಗಿವೆ. ಬರ್ಲಿನಿನ ಆಡಳಿತೆಯ ಕುರಿತು ಮೂರು ವರುಷಗಳಿಂದಿದ್ದ 'ಚತುರಾಷ್ಟ್ರೀಯ ಮೇಲಧಿಕಾರ'ವು ಇನ್ನಿಲ್ಲವೆಂದು ರಶ್ಯವು ಕಂಠೋಕ್ತವಾಗಿ ಜಾಹೀರು ಮಾಡಿದೆ. ಅತ್ತ ಜರ್ಮನರ ಕೈಗೇನೇ ತಮ್ಮ ಪಾಲಿನ ಜರ್ಮನಿಯ ಜವಾಬ್ದಾರೀ ಸರಕಾರ ಕೊಡುವ ಯೋಜನೆಯ ಪ್ರಥಮ ಹೆಜ್ಜೆಯಾಗಿ ರಾಜ್ಯಾಂಗ ಶಾಸನ ರಚಿಸಿಕೊಳ್ಳಲು ಅಮೇರಿಕ, ಬ್ರಿಟನ್, ಫ್ರಾನ್ಸ್ ರಾಷ್ಟ್ರಗಳು ಆಯಾಯ ಭಾಗಗಳ ಜರ್ಮನ್ ಪ್ರಧಾನಿಗಳಿಗೆ ಎರಡು ತಿಂಗಳ ಅವಧಿ ಕೊಟ್ಟಿವೆ. ಇವೆರಡು ಕೃತ್ಯಗಳು ರಶ್ಯದ ಪಾಲಿನ ಪೂರ್ವ ಜರ್ಮನಿಯನ್ನೂ, ಪಾಶ್ಚಾತ್ಯ ತ್ರಿರಾಷ್ಟ್ರಗಳ ಪಾಲಿನ ಪಶ್ಚಿಮ ಜರ್ಮನಿಯನ್ನೂ ಸಂಪೂರ್ಣವಾಗಿ ವಿಂಗಡಿಸಿ ಹಾಗೆ, ಭಾರತ-ಪಾಕಿಸ್ತಾನದ ಸ್ವರೂಪವೇ ಜರ್ಮನಿಗೂ ಒದಗಿದಂತಾಗಿದೆ! ಇತ್ತ ಬರ್ಲಿನಿನೊಳಗೆ ರಶ್ಯವು ಮೊದಲೇ ಹಾಕಿರುವ ಸಂಚಾರ ನಿರ್ಬಂಧಗಳ ದೆಸೆಯಿಂದ ಪಾಶ್ಚಾತ್ಯ ತ್ರಿರಾಷ್ಟ್ರಗಳು ವಿಮಾನ ಮೂಲಕವೇ ತಮ್ಮ ಭಾಗಗಳಿಗೆ ಸರಬರಾಯಿ ಮಾಡುತ್ತಿವೆ; ಹೀಗಾಗಿ ಬರ್ಮಾ ಯುದ್ಧದ ನಂತರ ಬೇರೆಲ್ಲಿಯೂ ಎಂದೂ ತೋರಿಬಾರದಷ್ಟು ಅಧಿಕ ಸಂಖ್ಯೆಯ ವಿಮಾನ ಸಾಲುಗಳು ಈಗ ಬರ್ಲಿನ್ ನಗರದಲ್ಲಿ ಹಾರಾಡುತ್ತಿವೆ.

"ನಮ್ಮನ್ನ ಹೊರ ಕಳುಹುವಂತೆ ಮಾಡುವ ಪ್ರಯತ್ನ ನಡೆದಿದೆ; ಆದರೆ ಅಂತಹ ಚಿಹ್ನೆ ತೋರದು; ನಾವು ಬರ್ಲಿನ್ ಬಿಟ್ಟು ಬರುವಂತಿಲ್ಲ; ನಾವು ಸೋಲಲೊಪ್ಪುವದಿಲ್ಲ!" ಎಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವಿದೇಶ ಮಂತ್ರಿ ಬೆವಿನರು ಪೌರುಷವಾಡಿದ್ದಾರೆ; ಇತ್ತ ರಶ್ಯವು ಹಾಕಿರುವ ಬರ್ಲಿನ್ ದಿಗ್ಬಂಧನಗಳ ಕುರಿತು ಅಲ್ಲಿಯ, ಅಮೇರಿಕ, ಬ್ರಿಟಿಷ್, ಫ್ರೆಂಚ್ ಮಿಲಿಟರಿ ಗವರ್ನರರುಗಳು ರಶ್ಯದ ಮಿಲಿಟರಿ ಗವರ್ನರನೊಡನೆ ನಡೆಸಿದ ಮಾತುಕತೆಗಳು ಮತ್ತೊಮ್ಮೆ ಮುರಿದು ಬಿದ್ದಿವೆ. "ಜರ್ಮನಿಯನ್ನು ಛಿದ್ರಗೊಳಿಸುವ ಪಾಶ್ಚಾತ್ಯ ತ್ರಿರಾಷ್ಟ್ರಗಳ ಧೋರಣೆಯೇ ಇಂದಿನ ಬರ್ಲಿನ್ ಸಂಕಟಗಳನ್ನು ನಿರ್ಮಿಸಿತು" ಎಂದು ಬರ್ಲಿನಿನ ರಶ್ಯನ್ ಸೇನಾನಿ ಆರೋಪಿಸಿದ್ದಾನೆ. ಈಗ ತಮ್ಮ ಭಾಗಗಳಿಗೆ ಪ್ರತ್ಯೇಕ ವಿಶ್ವಾಡಳಿತೆ ಸ್ಥಾಪಿಸುವ ಯೋಜನೆಯನ್ನು ಪಾಶ್ಚಾತ್ಯ ತ್ರಿರಾಷ್ಟ್ರಗಳು ಕೈಕೊಂಡಿವೆ.

ಇತರ ಸಮಸ್ಯೆಗಳು

ಯುಗೊಸ್ಲೇವಿಯಾದಲ್ಲಿ ಅಧಿಕಾರದಲ್ಲಿರುವ ಅಲ್ಲಿಯ ಕಮ್ಯೂನಿಸ್ಟ್ ಪಕ್ಷ ಮತ್ತದರ ನಾಯಕ ಮಾರ್ಶಲ್ ಟಿಟೋನ ಮೇಲೆ ರಶ್ಯದ ಸೂತ್ರಧಾರಿತ್ವದಲ್ಲಿರುವ ಒಂಭತ್ತು ರಾಷ್ಟ್ರಗಳ 'ಕಮಿನ್‌ಫೋರ್ಮ್' ಅಪರಾಧ ಸ್ಥಾಪನೆ ಮಾಡಿ ಬಹಿಷ್ಕಾರ ಹಾಕಿದೆ. ಈ ಆರೋಪಗಳನ್ನು ಯುಗೊಸ್ಲೇವಿಯದ ಕಮ್ಯೂನಿಸ್ಟ್ ಪಕ್ಷವು ಅಲ್ಲಗಳೆದು ಬಲವಾಗಿ ಪ್ರತಿಭಟಿಸಿ, ಮಾರ್ಶಲ್ ಟಿಟೋ, ನ್ಯಾಯದಾನ ಮಾಡುವಂತೆ ಮಾರ್ಶಲ್ ಸ್ಟಾಲಿನರನ್ನು ಕೇಳಿಕೊಂಡಿದ್ದರೂ ವೈಷಮ್ಯ ಬೆಳೆಯುತ್ತಾ ಹೋಗಿದೆ. ರಶ್ಯದ ಕೈಗೊಂಬೆ ಅಲ್ಬೇನಿಯವು ಇಷ್ಟರಲ್ಲೇ ಯುಗೊಸ್ಲೇವಿಯದ ಮೇಲೆ ಪ್ರತ್ಯಕ್ಷ ಪ್ರತಿಕ್ರಿಯೆ ಕೈಕೊಂಡು ಅದರೊಡನೆ ಮಾಡಿಕೊಂಡಿರುವ ಎಲ್ಲಾ ಆರ್ಥಿಕ ಒಪ್ಪಂದಗಳನ್ನೂ ರದ್ದುಗೊಳಿಸಿದೆಯಲ್ಲದೆ, ಅಲ್ಬೇನಿಯಕ್ಕೆ ಭ್ರಾತೃಭಾವದ ಸಹಾಯ ಕೊಡುವುದಕ್ಕಾಗಿ ಕಳುಹಿಸಲ್ಪಟ್ಟಿದ್ದ ಯುಗೊಸ್ಲೇವಿಯದ ಎಲ್ಲಾ ತಜ್ಞರು, ಪ್ರೊಫೆಸರರು ಮತ್ತು ನಾಗರಿಕರು ಕೂಡಾ 48 ಘಂಟೆಗಳೊಳಗೆ ಅಲ್ಬೇನಿಯ ಬಿಟ್ಟು ಹೋಗತಕ್ಕದ್ದೆಂದು ಅಲ್ಲಿಯ ಸರಕಾರವಾಜ್ಞಾಪಿಸಿದೆ. ಅಲ್ಬೇನಿಯದ ಆರೋಪಗಳನ್ನು ಅಲ್ಲಗಳೆದು ಯುಗೊಸ್ಲೇವಿಯದ ನಿಷೇಧ ಪತ್ರ ಹೋಗಿದೆ.

ಪಶ್ಚಿಮ ಯುರೋಪಿನ ಪಂಚರಾಷ್ಟ್ರಗಳ ಕೂಟಕ್ಕೆ ಸೇನಾಸಹಾಯ [illegible] ಲ್ಲಿಸುವ ಒಪ್ಪಂದ ಮಾಡಿಕೊಳ್ಳಲು ಅಮೇರಿಕವು ಅಣಿಯಾಗಿ[illegible] ಯೆಂಬುದನ್ನು ಅಮೇರಿಕದ ಗೃಹ ಕಾರ್ಯದರ್ಶಿ ಜೋರ್ಜ್ ಮಾರ್ಶಲರು ಬಹಿರಂಗಪಡಿಸಿದ್ದಾರೆ.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ

ಲಿಮಿಟೆಡ್, ಮಂಗಳೂರು. No. 3901

ನೋಟೀಸು

1948ನೇ ಇಸವಿ ಜುಲಾಯಿ ತಿಂಗಳ ತಾರೀಕು 25ನೇ ಆದಿತ್ಯವಾರ ಅಪರಾಹ್ನ ಘಂಟೆ 2-30ಕ್ಕೆ ಪುತ್ತೂರು ಸಹಕಾರಿ ಕಟ್ಟಡದಲ್ಲಿ ಈ ಸಂಘದ ಮಹಾಸಭೆಯು ಈ ಕೆಳಗಿನ ವಿಷಯಗಳನ್ನು ತೀರ್ಮಾನಿಸುವುದಕ್ಕಾಗಿ ಸೇರುವುದೆಂತ ಈ ಮೂಲಕ ನೋಟೀಸು ಕೊಡಲಾಗಿದೆ. ಸಂಘದ ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ.

ವಿ. ಸೂ:—ಸದಸ್ಯ ಸಂಘದವರು ತಮ್ಮ ಪ್ರತಿನಿಧಿಯವರನ್ನೂ ಅವರನ್ನು ನೇಮಿಸಿದ ನಿರ್ಣಯದ ನಕಲನ್ನೂ ಎಂದಿನಂತೆ ಕಳುಹಿಸಬೇಕಾಗಿದೆ.

(ಆಡಳಿತೆ ಮಂಡಳಿಯ ಅಪ್ಪಣೆ ಪ್ರಕಾರ)

ಸಂಘದ ಆಫೀಸು,
ಮಂಗಳೂರು—
ಬಂದರ,
ತಾ. 27-6-1948

ಪಿ. ಲಕ್ಷ್ಮೀನಾರಾಯಣ ರಾವ್,
ಕಾರ್ಯದರ್ಶಿ.

ಸೂಚಿ ಪತ್ರ.

1. ಈ ಸಂಘದ ಬಾಬ್ತು 1947—47ನೇ ವರುಷದ ಲೆಕ್ಕಗಳನ್ನು ಪರಿಶೋಧಿಸಿ ಡಿಪ್ಯೂಟಿ ರಜಿಸ್ಟ್ರಾರವರು ಕೊಟ್ಟ ಸರ್ಟಿಫಿಕೇಟು ಮತ್ತು ಆ ವರುಷದ ಬಗ್ಗೆ ಆಡಳಿತೆ ಮಂಡಳಿಯವರು ಮಹಾಸಭೆಗೆ ಒಪ್ಪಿಸುವ ವರದಿ.

2. 1947-48ನೇ ವರ್ಷದ ಜಮಾ ಖರ್ಚುಗಳ ದುರಸ್ತಿ ಅಂದಾಜು ಪಟ್ಟಿ ಮತ್ತು 1948-49ನೇ ವರುಷದ ಜಮಾ ಖರ್ಚುಗಳ ಅಂದಾಜು ಪಟ್ಟಿ.

3. ಆಡಳಿತೆ ಮಂಡಳಿಯ ಸದಸ್ಯರ ಚುನಾವಣೆ.

4. ಲೆಕ್ಕದಿಂದ ವಜಾ ಬರೆಯುವ ಬಾಬುಗಳು. ಇವುಗಳ ವಿವರದ ಪಟ್ಟಿ ಸಂಘದ ಆಫೀಸಿನಲ್ಲಿ (ಮಂಗಳೂರು) ಮೆಂಬರರ ಪರಿಶೋಧನೆಯ ಬಗ್ಗೆ ಆಫೀಸು ಸಮಯದಲ್ಲಿ ಇಡಲಾಗುವುದು.

5. ಸಂಘದ ಉಪಕ್ರಮಗಳ ತಿದ್ದುಪಡಿ—ಈಗಿನ 2(7)ನೇ ಉಪನಿಬಂಧನೆಯ ಬದಲಿಗೆ ಕೆಳಗಿನಂತೆ ದುರಸ್ತಿ ಮಾಡುವುದು:—"2(7) ಸ್ವಂತ ಮೋಟಾರು ಲೋರಿಗಳನ್ನು ಇಟ್ಟು ಅವುಗಳನ್ನು ಮುಖ್ಯವಾಗಿ ಮೆಂಬರರ ಉಪಯೋಗಕ್ಕಾಗಿ ಚಲಾವಣೆ ಮಾಡುವುದು."

ವಿ. ಸೂ:—ಮಹಾಸಭೆಯಲ್ಲಿ ಚುನಾಯಿಸಲಾಗುವ ಹೊಸ ಆಡಳಿತೆ ಮಂಡಳಿಯ ಸಭೆಯು ಮಹಾಸಭೆ ಮುಗಿದೊಡನೆ ಅದೇಸ್ಥಳದಲ್ಲಿ ಸೇರಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯನಿರ್ವಾಹಕ ಇತರ ಮೆಂಬರರನ್ನು ಚುನಾಯಿಸುವುದಲ್ಲದೆ, ಕಾರ್ಯನಿರ್ವಾಹಕ ಮಂಡಳಿಗೆ ವಹಿಸಿಕೊಡುವ ಅಧಿಕಾರಗಳ ಕುರಿತು ತೀರ್ಮಾನಿಸಲಾಗುವುದು.

ಹೈದರಾಬಾದಿನ ಮೇಲೆ ಆರ್ಥಿಕ ಬಹಿಷ್ಕಾರಾಸ್ತ್ರ!

★

ಚೈನಾದ ಕಾಳಗವೂ, ಮಲಯದ ಬಂಡಾಯವೂ ಯಥಾ ಪ್ರಕಾರ ಸಾಗಿವೆ. ಇಂಡೋನೇಶಿಯದಲ್ಲಿ ಶಾಂತಿ ಸ್ಥಾಪಿಸುವದಕ್ಕಾಗಿ ಕಠಿಣ ಕಾರ್ಯಕೈಕೊಳ್ಳುವ ಚರ್ಚೆಯು ಜಾಗತಿಕ ಸಂಘದಲ್ಲಿ ನಡೆದಿದೆ.

ಹೈದರಾಬಾದಿಗೆ ತಡೆ

ನವದಿಲ್ಲಿಯಲ್ಲಿರುವ ಹೈದರಾಬಾದಿನ ಹೈಕಮಿಶನರರು ತಾನೇ ತನ್ನಷ್ಟಕ್ಕೆ ಹೊತ್ತಿಸಿಕೊಂಡ ಸಂಧಾನದಾಶೆ ಅಲ್ಲಿಯೇ ನಂದಿ ಹೋಗಿದೆ. ತಮ್ಮ ಕೊನೆಯ ಸೂಚನೆಗಳಲ್ಲಿನ್ನು ಅಕ್ಷರ ಬದಲಾವಣೆಯೂ ಅಸಾಧ್ಯವೆಂಬ ಭಾರತ ಸರಕಾರದ ಸುದೃಢ ನಿರ್ಧಾರದೊಳಗೆ ಸೂಜಿ ಹೊಗಿಸಲು ಹೈದರಾಬಾದಿನ ಹೈಕಮಿಶನರರಿಗಾಗದೆ ಹೋಗಿರಬೇಕು. ಇತ್ತ ಭಾರತದ ಗಡಿ ಬಿಟ್ಟು ಮೂರು ಮೈಲು ಹಿಂದಕ್ಕೆ ತನ್ನ ಸೇನೆಗಳನ್ನು ಕರೆಯಿಸಿಕೊಳ್ಳುವೆನೆಂಬ ಹೈದರಾಬಾದ್ ಸರಕಾರದ ಮಾತು ಕೂಡಾ ವಂಚನೆ ಮಾತ್ರವೆಂದೂ ಅದರ ಸೇನೆಗಳು ಈಗಲೂ ಸರಹದ್ದುಗಳಲ್ಲೇ ನಿಂತಿವೆಯೆಂದೂ ತಿಳಿದುಬರುತ್ತದೆ. ರಝಾಕಾರರು, ಮತ್ತು ಹೈದರಾಬಾದ್ ಸೈನಿಕರು, ಪೋಲಿಸರು, ಅಂತೆಯೇ ಅಲ್ಲಿಯ ಕಮ್ಯೂನಿಸ್ಟರು ಭಾರತದ ಗಡಿ ಮೀರಿ ಬಂದು, ತಿಕ್ಕಾಟ, ಗುಂಡು ಹಾರಾಟಗಳ ವಾರ್ತೆಗಳು ತಪ್ಪದೆ ಬರುತ್ತಿವೆ. ಭಾರತದೊಳಗಡೆಯಲ್ಲಿ ನಿಜಾಮ್ ಸರಕಾರದ ಪಂಚಮದಳದವರಾಗಿ ಕೆಲಸ ಮಾಡುತ್ತಿರುವರೆಂದು ತಿಳಿದುಬಂದ ಮುಸ್ಲಿಮರ ದಸ್ತಗಿರಿ ಅಲ್ಲಲ್ಲಿ ನಡೆದಿದೆ. ಹೈದರಾಬಾದ್ ಮಜ್ಲೀಸ ಇತ್ತೆಹಾದ್ ಉಲ್ ಮುಸ್ಲಿಮೀನ್ ಸಮ್ಮೇಳನವು ಜರಗಿ, ರಜ್ವಿಯ ಅಧ್ಯಕ್ಷ ಭಾಷಣದ ನಂಜುಮಿಶ್ರಿತ ಶೈಲಿಯಲ್ಲಿಯೇ ಭಾರತ ಸರಕಾರದ ಧೋರಣೆಗಳನ್ನು ಖಂಡಿಸುವ, ಯುದ್ಧ ಘರ್ಜನೆ ಕೊಡುವ ನಿರ್ಣಯಗಳನ್ನು ಮಾಡಿದೆ. ಭಾರತ ಸರಕಾರವು ಇವೆಲ್ಲವನ್ನೂ ಗಮನಿಸಿ ಪ್ರತಿಕ್ರಿಯೆಗಳನ್ನು ಸಾವಧಾನವಾಗಿಯಾದರೂ ದೃಢವಾಗಿ ಕೈಕೊಳ್ಳುತ್ತಿದೆ; 'ರಕ್ತೋದ್ರೇಕಕ್ಕೆ ಹೊಟ್ಟೆ ಚಿಕಿತ್ಸೆ'ಯೆಂಬಂತೆ ಹೈದರಾಬಾದಿನ ದುರಹಂಕಾರಕ್ಕೆ ಆರ್ಥಿಕ ಬಹಿಷ್ಕಾರಾಸ್ತ್ರವನ್ನು ಅದೀಗ ಮುಂದಾಗಿ ಪ್ರಯೋಗಿಸಿದೆ. ಆ ಹೊಡೆತದ ನೋವನ್ನು ಹೈದರಾಬಾದು ಈಗಲೇ ಅನುಭವಿಸುತ್ತಿರುವ ದೃಶ್ಯ ಕಣ್ಣ ಮುಂದಿದೆ.

'ಸೆಕ್ಯೂರಿಟಿ'ಗಳಿಗೆ ಪ್ರತಿಬಂಧ

ಭಾರತ ಸರಕಾರದ ಮೊದಲನೇ ಹೊಡೆತವು ಜುಲಾಯಿ ತಾ. 1ರಲ್ಲಿ ಒಂದು ವಿಶೇಷಶಾಸನ ರೂಪದಿಂದ ಬಿದ್ದಿದೆ. ಆ ಮೂಲಕ, ಭಾರತ ಸರಕಾರದ ವಶದಲ್ಲಿ ನಿಜಾಮರ, ಅವರ ಸರಕಾರದ ಅಥವಾ ಹೈದರಾಬಾದ್ ಸಂಸ್ಥಾನ ಬೇಂಕಿನ ಹೆಸರಿನಲ್ಲಿರುವ ಭದ್ರತಾನಿಧಿಗಳನ್ನು ವರ್ಗಾಯಿಸಕೂಡದೆಂದೂ, ಅವರ ಪರವಾಗಿ 'ಸೆಕ್ಯೂರಿಟಿ'ಗಳುಳ್ಳ ಯಾರೇ ಆದರೂ, ಅವುಗಳ ಪ್ರಸಿದ್ಧ ಪತ್ರವನ್ನು ಹದಿನೈದೇ ದಿನಗಳೊಳಗೆ ಭಾರತದ ರಿಜರ್ವ್ ಬೇಂಕಿಗೆ ಒಪ್ಪಿಸತಕ್ಕದ್ದೆಂದೂ ಭಾರತ ಸರಕಾರ ವಿಧಿಸಿದೆ. ಈ ಓರ್ಡಿನೆನ್ಸು ಸುಮಾರು 90ರಿಂದ 100 ಕೋಟಿ ರೂಪಾಯಿ ಮೌಲ್ಯದ ಭದ್ರತಾನಿಧಿಗಳಿಗೆ ಲಗಾವಾಗುವಂತಹದು. ನಿಜಾಮ್ ಸರಕಾರವು ಈ ಮೊದಲೇ ಪಾಕಿಸ್ತಾನ್ ಸರಕಾರಕ್ಕೆ ವರ್ಗಾಯಿಸಿರುವ 20 ಕೋಟಿ ರೂಪಾಯಿ ಮೌಲ್ಯದ 'ಸೆಕ್ಯೂರಿಟಿ'ಗಳೂ ಈ ಶಾಸನದ ಹತೋಟಿಯೊಳಗಾಗುವವು ಎಂದು ತಿಳಿದು ಬರುತ್ತದೆ. ಈ ಸಂಬಂಧವಾಗಿ ಹಿಂದೀ ಸರಕಾರದ ಸಂಸ್ಥಾನಿಕಖಾತೆ ಕೊಟ್ಟಿರುವ ಹೇಳಿಕೆಯಲ್ಲಿ ಹೀಗಿದೆ: "ಪ್ರಚಲಿತ ಒಪ್ಪಂದದ ಶರ್ತಗಳಿಗೆ ವಿರೋಧವಾಗಿ ಹೈದರಾಬಾದು ತನ್ನ ಪಾಲಿನ 20 ಕೋಟಿ ರೂ.ಗಳ ಭದ್ರತಾ ಹಣವನ್ನು ಪಾಕಿಸ್ತಾನಕ್ಕೆ ವರ್ಗಾಯಿಸಿದುದು ತಿಳಿದು ಬಂದಾಗಲೇ ಭಾರತ ಸರಕಾರವದನ್ನು ಪ್ರತಿಭಟಿಸಿದ್ದಿತು; ಆ ಭದ್ರತಾ ನಿಧಿಯನ್ನು ಮಾರ್ಕೆಟಿಗೆ ಹಾಕದಂತೆ ತಾನೀಗ ಪಾಕಿಸ್ತಾನ ಸರಕಾರದೊಡನೆ ವ್ಯವಸ್ಥೆ ಮಾಡಿರುವೆನೆಂದು ನಿಜಾಮ್ ಸರಕಾರವು ಆನಕ್ಯುತ್ತರ ಕೊಟ್ಟಿದ್ದಿತು. ಆದರೆ ಇತ್ತೀಚೆಗೆ ಆ ನಿಧಿಯ ಕೆಲವಂಶವನ್ನು ಪ್ರೊಮಿಸರಿ ನೋಟುಗಳಾಗಿ ಮಾರ್ಪಡಿಸುವ ಅರ್ಜಿಯೊಂದು ಪಾಕಿಸ್ತಾನ್ ಸರಕಾರದ ಪರವಾಗಿ ರಿಜರ್ವ್ ಬೇಂಕ್ ಓಫ್ ಇಂಡಿಯಾಕ್ಕೆ ಬಂದಿರುವುದು ಹಿಂದೀ ಸರಕಾರದ ತಿಳುವಳಿಕೆಗೆ ಬಂದಿದೆ. ಇಂತಹ ಮಾರ್ಪಾಟು ಸೆಕ್ಯೂರಿಟಿಗಳನ್ನು ವಟಾಯಿಸುವ ಉದ್ದೇಶದ್ದೆಂಬುದು ಖಚಿತವಿದ್ದು, ಇದು ಹೈದರಾಬಾದ್ ಸರಕಾರವು ಮಾಡಿದ ಒಪ್ಪಂದ ಭಂಗದ ಮತ್ತೊಂದು ದೃಷ್ಟಾಂತ ಮಾತ್ರವಲ್ಲ; ತನ್ನೆಲ್ಲಾ ವಿಧದ ಉಳಿತಾಯಗಳನ್ನೂ ಯುದ್ಧೋಪಕರಣಗಳಿಗಾಗಿಯೇ ಹೈದರಾಬಾದು ವಿನಿಯೋಗಿಸಲಿದೆಯೆಂಬ ಕುರಿತು ಹಿಂದೀ ಸರಕಾರಕ್ಕೆ ಸಾಕಷ್ಟು ಪುರಾವೆಗಳು ದೊರೆತಿವೆ; ಇದು ಘರ್ಷಣೆ ನಿರ್ಮಿಸಲು ಬದ್ಧವಿದೆ. ಆದ್ದರಿಂದ ತನ್ನ ಹಿತರಕ್ಷಣೆಗಾಗಿ ಈ ಕಾರ್ಯಾಚರಣೆ ಕೈಕೊಳ್ಳುವುದು ಹಿಂದೀ ಸರಕಾರಕ್ಕೆ ಮೇಲಿಂದ ಮೇಲೆ ಅನಿವಾರ್ಯವಾಯಿತು."

ಭಂಗಾರ ರಫ್ತಿಗೆ ಪ್ರತಿಬಂಧ

ಸೆಕ್ಯೂರಿಟಿ ವರ್ಗಾವರ್ಗಿಗೆ ತಡೆಹಾಕಿದ ಮರುದಿನವೇ ಭಾರತವು ಹೈದರಾಬಾದಿಗೆ ಭಂಗಾರ, ಆಭರಣ ಮತ್ತು ಬೆಲೆಯುಳ್ಳ ಯಾವುದೇ ಹರಳುಗಳು ಹಾಗೂ ಭಾರತದ ಕರೆನ್ಸಿ ನೋಟುಗಳು, ಬೇಂಕ್ ನೋಟುಗಳು, ಅಥವಾ ನಾಣ್ಯಗಳು, ವಿದೇಶಿ ಬದಲಾವಣೆಗಳು ಹೋಗದಂತೆ ಪ್ರತಿಬಂಧ ಹಾಕಿದೆ. ಭಾರತದ ರಿಜರ್ವ್ ಬೇಂಕಿನ ಈ ಸಂಬಂಧದ ಸೂಚನಾ ಪತ್ರ ಇದೇ ತಾ 2ರಲ್ಲಿ ಭಾರತ ಸರಕಾರದ ವಿಶೇಷ ಗಝೆಟ್‌ನಲ್ಲಿ ಪ್ರಕಟಗೊಂಡಿದೆ. 1947ನೇ ಡಿಸಂಬರದಲ್ಲೇ ಹೈದರಾಬಾದ್ ಎರಡು ಓರ್ಡಿನೆನ್ಸುಗಳನ್ನು ಹೊರಡಿಸಿ, ಭಂಗಾರ, ಆಭರಣ ಮತ್ತಿತರ ಬೆಲೆಯುಳ್ಳ ಕಲ್ಲುಗಳು ಹೈದರಾಬಾದಿನಿಂದ ಹೊರಗೆ ಹೋಗದಂತೆಯೂ, ಭಾರತದ ಕರೆನ್ಸಿಯನ್ನು ಸಂಸ್ಥಾನದೊಳಗುಪಯೋಗಿಸದಂತೆಯೂ ಬಹಿಷ್ಕಾರ ಹಾಕಿದ್ದಿತು. ಈ ಓರ್ಡಿನೆನ್ಸುಗಳು ಭಾರತದೊಂದಿಗಿರುವ ಪ್ರಚಲಿತ ಒಪ್ಪಂದ ಶರ್ತಗಳಿಗೆ ವಿರೋಧವಿದ್ದು, ಹಿಂದೀ ಸರಕಾರವು ತನ್ನ ಆಕ್ಷೇಪ ಸೂಚಿಸಿದರೂ ಹಿಂತೆಗೆದುಕೊಳ್ಳಲ್ಪಟ್ಟಿರಲಿಲ್ಲ. ಅದಕ್ಕೆ ತನ್ನ ಪ್ರತೀಕಾರವಾಗಿ ಭಾರತ ಸರಕಾರವೀಗ ಈ ಹೊಸ ಶಾಸನವನ್ನು ಜ್ಯಾರಿಗೆ ತರಬೇಕಾಯಿತು. ಆದರೂ ವ್ಯಕ್ತಿಗತ ಅನಾನುಕೂಲತೆಗಳೊದಗದಂತೆ ನಿರ್ಬಂಧಕ ಪ್ರಯಾಣಿಕರಲ್ಲಿ ಪ್ರಾಯಪ್ರಬುದ್ಧನೊಬ್ಬನು ನಗದಿ ರೂ. 150 ಮತ್ತು 16 ವರುಷದ ಕೆಳಗಿನವನಾದರೆ ರೂ. 75 ತನ್ನೊಡನೆ ಹಿಡಿದುಕೊಂಡು ಹೋಗಲಡ್ಡಿಯಿಲ್ಲ.

ಹೈದರಾಬಾದಿನ ಪ್ರತಿಕ್ರಿಯೆ

ಈ ರೀತಿ ಜುಲಾಯಿ ಆರಂಭದೊಡನೆ ಹೈದರಾಬಾದಿಗೆ ಬುದ್ಧಿ ಬರಿಸಲು ಭಾರತ ಸರಕಾರವು ಕಲಿಸುವ ಪಾಠಗಳೂ ಕ್ರಮಶಃ ಪ್ರಾರಂಭಿಸಿವೆ! ಮೇಲಿನ ಎರಡು ಆರ್ಥಿಕ ನಿರ್ಬಂಧಗಳಿಂದ ಹೈದರಾಬಾದು ಉರಿದು ಬಿದ್ದಿದೆ. ನಿಜಾಮ್ ಸಂಸ್ಥಾನದ ವ್ಯಾಪಾರ ವಹಿವಾಟು ರಂಗದಲ್ಲಿ ಆಂದೋಲನ, ಯದ್ವಾತದ್ವಾಗಳಾಗುತ್ತಿವೆ. "ನಮ್ಮ ಸೆಕ್ಯೂರಿಟಿಗಳನ್ನು ಭಾರತ ಸರಕಾರದೊಡನೆ ವಿಚಾರಿಸದೇನೇ ನಮ್ಮಿಚ್ಛೆಯಂತೆ ವರ್ಗಾಯಿಸುವ ಹಕ್ಕು ಈ ಮೊದಲೂ ನಮಗಿದ್ದಿತಾದ್ದರಿಂದ ಪಾಕಿಸ್ತಾನಕ್ಕೆ ನಮ್ಮ 20 ಕೋಟಿ ರೂ.ಗಳ ಭದ್ರತಾ ನಿಧಿಯನ್ನು ವರ್ಗಾಯಿಸಿದುದು ಪ್ರಚಲಿತ ಒಪ್ಪಂದಕ್ಕೆ ವಿರುದ್ಧವಲ್ಲ. ಆದರೂ ಭಾರತ ಸರಕಾರದ ಭದ್ರತಾನಿಧಿಗೆ ಧಕ್ಕೆ ಬೀಳದಂ ಒಡಂಬಡಿಕೆಯ ಅವಧಿ ವರೆಗೆ ಅದನ್ನು ವಟಾಯಿಸದಂತೆ ನಾವು ಪಾಕಿಸ್ತಾನ್ ಸರಕಾರದೊಡನೆ ವ್ಯವಸ್ಥೆ ಮಾಡಿದ್ದೆವು. ಈಗ ಪಾಕಿಸ್ತಾನ್ ಸರಕಾರವು ಆ ನಿಧಿಯಲ್ಲಿ ಕೆಲವಂಶವನ್ನು ವಟಾಯಿಸಲು ಬಂದಿತ್ತೆಂಬ ಸಂಗತಿ ನಮ್ಮ ತಿಳುವಳಿಕೆಗೆ ಬಂದಿಲ್ಲ. ಹೈದರಾಬಾದು ತನ್ನ ನಿಧಿಯನ್ನು ಶಸ್ತ್ರೋಪಕರಣಗಳನ್ನು ತರಿಸಿಕೊಳ್ಳಲು ವಿನಿಯೋಗಿಸುತ್ತಿದೆಯೆಂಬುದು ಕೇವಲ ಗಾಳೀ ಮಾತು." ಎಂದೆಲ್ಲಾ ನಿಜಾಮ್ ಸರಕಾರವು ಆರೋಪಿಸಿ, ಪ್ರತೀಕಾರರೂಪದಿಂದ ತನ್ನೊಳಗಿನ ನಿಧಿಗಳು ಸಂಸ್ಥಾನದ ಹೊರಗೆ ಹೋಗದಂತೆ ಹೊಸ ನಿರ್ಬಂಧಗಳನ್ನು ಹೇರಿದೆ. ನಿಜಾಮ್ ಸರಕಾರವು ಭಾರತ ಸರಕಾರಕ್ಕೆ ನಿಷೇಧಸೂಚನೆ ಮಾಡಿದೆಯೆಂದೂ ತಿಳಿದು ಬರುತ್ತದೆ. ಇತ್ತ ಹೈದರಾಬಾದು ವಿಮಾನ ಮೂಲಕ ತನ್ನೊಳಗೆ ಯುದ್ಧ ಸಾಮಗ್ರಿಗಳನ್ನು ಕಳ್ಳತನದಿಂದಾಮದು ಪಡಿಸಿಕೊಳ್ಳುತ್ತಿರುವ ಪುರಾವೆದೊರೆತೊಡನೆಯೇ ಭಾರತ ಸರಕಾರವು ಹೈದರಾಬಾದ್ ಸಂಬಂಧದ "ಡೆಕ್ಕನ್, ಆಕಾಶಯಾನ ಸರ್ವೀಸ"ನ್ನು ಅಮಾನತು ಪಡಿಸಿದೆಯಲ್ಲದೆ, ಹೈದರಾಬಾದಿನ ಮೇಲೆ ಹಾದುಹೋಗುವ ವಿಮಾನಗಳು ಅಲ್ಲಿ ತಳವೂರಕೂಡದೆಂದು ಇತರ ಎರಡು ವಿಮಾನ ಕಂಪನಿಗಳಿಗೂ ವಿಧಿಸಿದೆ. ಈ ಕುರಿತಾದ ಭಾರತ ಸರಕಾರದ ಆರೋಪಗಳನ್ನೂ ಹೈದರಾಬಾದ್ ಸರಕಾರವು ಅಲ್ಲಗಳೆದಿದೆ. ಭಾರತ ಸನಾತನ ಇವೆಲ್ಲಾ ಕೃತ್ಯಗಳೂ ಹೈದರಾಬಾದಿನ ಜನಜೀವನವನ್ನು ಅಸಾಧ್ಯಗೊಳಿಸಿ, ಅದನ್ನು ಬಗ್ಗಿಸಿ ತನಗೆ ಶರಣು ಬರುವಂತೆ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾರೆಸಂಗ್ಟಿ ಬರದಕ್ಕ ರೋಗಗಳಿಗೆ ತಕ್ಕಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸಂಡಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಹೈದರಾಬಾದ್ ಕಾಶ್ಮೀರಗಳ ಭವಿಷ್ಯವೇನು ?

ಮಾಡಬೇಕೆಂಬ ಏಕೋದ್ದೇಶದ್ದಿವೆಯೆಂದು ನಿಜಾಮ್ ಸರಕಾರದ ಆರೋಪ.

ಪಟೇಲರ ವಾಗ್ಬಾಣ

ಹೈದರಾಬಾದ್ ಸಂಬಂಧವಾಗಿ ಪ್ರಶ್ನೆಯೆತ್ತುತ್ತಾ, ಬ್ರಿಟನಿನ ಟೋರಿ ನಾಯಕ ಚರ್ಚಿಲ್ಲರು ಭಾರತ ಸರಕಾರದ ಮೇಲೆ ಕುತ್ಸಿತಾರೋಪಗಳನ್ನು ಮಾಡಿರುವ ಕುರಿತು ಸರ್ದಾರ್ ಪಟೇಲರಿತ್ತಿರುವ ಖುಸ್ಪಷ್ಟ ಹೇಳಿಕೆಯು ಬ್ರಿಟನಿನ ಮುತ್ಸದ್ದಿಗಳೆಲ್ಲರ ಕಣ್ಣನ್ನೂ ತೆರೆಯಿಸುವಂತಹುದಿದೆ; ಬ್ರಿಟನ್ ಮತ್ತು ಭಾರತಗಳೊಳಗಿನ ಭಾವೀ ಸಂಬಂಧ ಹೇಗಿರಬೇಕೆಂಬ ಪ್ರಶ್ನೆಯು ತಕ್ಕಡಿಯಲ್ಲಿಡಲ್ಪಟ್ಟಿರುವ ಈಸಂದಿಗ್ಧ ಕಾಲದಲ್ಲಿ ಬ್ರಿಟಿಷ್ ಸರಕಾರಕ್ಕೆ ಕೊಟ್ಟ ಎಚ್ಚರಿಕೆಯಂತಿದೆ. "ಬ್ರಿಟನಿಗೆ ಭಾರತದ ಸ್ನೇಹ ಸಂಬಂಧವನ್ನು ಉಳಿಸಿಕೊಳ್ಳಬೇಕೆಂಬ ಮನಸ್ಸಿದ್ದರೆ, ಮಿ. ಚರ್ಚಿಲ್ಲರ ಮಾತುಗಳಂತಹ ಅಲ್ಪ ಬುದ್ಧಿಯ ದ್ವೇಷಪೂರಿತ ನಂಜು ಮಾತುಗಳು ಭಾರತದ ಮೇಲೆ ಬೀಳದಂತೆ ಅವರು ನೋಡಿಕೊಳ್ಳಬೇಕು" ಎಂದು ಎಚ್ಚರಿಕೆ ಕೊಟ್ಟು, ಈಗಲೂ ಮಧ್ಯ ಯುಗದ ಸಾಮ್ರಾಜ್ಯಾಕಾಂಕ್ಷೆಯನ್ನು ಕಟ್ಟಿಕೊಂಡಿರುವ ಚರ್ಚಿಲ್ ಮನೋವೃತ್ತಿಯ ಕುರೂಪಗಳನ್ನೆಲ್ಲಾ ಬಹಿರಂಗಪಡಿಸಿ ಸರ್ದಾರರು ಕಠಿಣವಾಣಿಯ ಖಂಡತುಂಡ್ಯಟೀಕೆಮಾಡಿದ್ದಾರೆ. ಭಾರತದಮನೆಯೊಳಗಿನ ಪ್ರಶ್ನೆಗಳಾದ್ಯಹೈದರಾಬಾದ್,ಕಾಶ್ಮೀರಗಳಂತಹ ವಿಷಯಗಳಲ್ಲೂ, ಗತ ಕಾಲದ ಮನೋವೃತ್ತಿಯನ್ನು ಜ್ಞಾಪಿಸಿಕೊಂಡು ಬ್ರಿಟಿಷ್ ಮುತ್ಸದ್ದಿಗಳು ಅಧಿಕಪ್ರಸಂಗಿಕ್ಕಿಳಿದರೆ ಭಾರತವು ಬ್ರಿಟನಿನ ಸಂಬಂಧವನ್ನೇ ಕಡಿದುಕೊಳ್ಳಬಹುದೆಂಬ ಗೂಢಾರ್ಥವು ಬ್ರಿಟನಿಗೀ ಮೂಲಕ ಮುಂದಟ್ಟಿಗಿರಬೇಕು. 'ಚರ್ಚಿಲ್ಲರೇನೋ ತನ್ನ ಪದ್ಧತಿ ಪ್ರಕಾರ ಬ್ರಿಟಿಷ್ ಕಾರ್ಮಿಕ ಸರಕಾರವನ್ನು ಟೀಕಿಸುವುದಕ್ಕಾಗಿ ಹಾಗೆಂದುದಲ್ಲದೆ ಅದಕ್ಕಾವ ಗಣ್ಯಾರ್ಥವೂ ಇಲ್ಲ'ಎಂದು ಬ್ರಿಟಿಷ್ಅಧಿಕಾರೀ ವರ್ಗದ ಅಭಿಪ್ರಾಯ. ಸರ್ದಾರ್ ಪಟೇಲರ ಮಾತಿಗುತ್ತರಕೊಡಲು ಸ್ವತಃ ಚರ್ಚಿಲ್ಲರೇ ನಿರಾಕರಿಸಿದ್ದಾರೆ.ಭಾರತದಿಂದ ಮರಳಿದ ಲೋರ್ಡ್ ಮೌಂಟ್ ಬೇಟನ್ ಲಂಡನಿನಲ್ಲಿ ಈಗಿನ ಹಿಂದೀ ಸರಕಾರದ ಅಸಾಮಾನ್ಯ ಯೋಗ್ಯತೆಯನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. "ಇಂಗ್ಲೆಂಡಿನ ಕುರಿತು ಈಗ ಭಾರತದಲ್ಲಿರುವಂತಹ ಸೌಹಾರ್ದತೆ ಹಿಂದೆಂದೂ ಇದ್ದದ್ದಿಲ್ಲ. ಇಂತಹ ಅತ್ಯಮೂಲ್ಯ ಹೃದಯ ಸಂಬಂಧವನ್ನು ಇಲ್ಲಿಯ ಕೆಲವರ ತಪ್ಪೀಯುದಾಯೀ ರಂಪಾಟಗಳು ಕಡಿದುಹಾಕಬೇಕಲ್ಲದೆ ಅನ್ಯಥಾ ಅಸಾಧ್ಯ'' ಎಂದು ಮಾಜೀ ಗವರ್ನರ್ ಜನರಲ್ ಮೌಂಟ್ ಬೇಟನರು-ತನ್ನ ದೇಶೀಯರ ಕಣ್ಣು ತೆರೆಯಿಸಿದ್ದಾರೆ.

ಇತರ ಪ್ರಶ್ನೆಗಳು

ಭದ್ರತಾ ಕೌನ್ಸಿಲಿನ ಕಾಶ್ಮೀರ ಸಮಿತಿಯು ಹೊರಟಿರುವ ಈ ಕಾಲದಲ್ಲಿ ಕಾಶ್ಮೀರ ಯುದ್ಧರಂಗದ ಪ್ರತಾಪವೇರಿದೆ. ಹಿಂದೀ ಸೇನೆಗಳು ಅಸಾಮಾನ್ಯ ಸಾಹಸ ಮತ್ತು ಅವಿಶ್ರಾಂತ ಪರಿಶ್ರಮದಿಂದ ಧಾಳಿಗಾರರನ್ನು ಎಲ್ಲಾ ಯುದ್ಧಮುಖಗಳಲ್ಲೂ ತಡೆಗಟ್ಟಿ, ವಿರೋಧಿಗಳಿಗೆ ವಿಶೇಷ ಹಾನಿಯೊಡ್ಡಿ ಈ ತನಕ ಅಪಾಯದ ನೆಲೆಗಳಾಗಿದ್ದ ಹಲವು ರಂಗಗಳ ಶನಿ ಪೀಡೆಯನ್ನು ಶಾಶ್ವತವಾಗಿ ಬಿಡಿಸಿವೆ. ಜಮ್ಮುವಿಗೆ 160 ಮೈಲು ದೂರದಲ್ಲಿ ಕಾಶ್ಮೀರದ ಭಂಡಾರಾ ಕಂದರದಲ್ಲಿರುವ ಕಿರ್ಸ್ಟವಾರ್‌ಎಂಬಲ್ಲಿಗೆ ಹಿಂದೀ ಸೇನಾನಿ ಜನರಲ್ ಕೆ. ಎಮ್. ಕರಿಯಪ್ಪನವರು ಭೇಟಿ ಕೊಟ್ಟರು.ಆ ಕ್ಷೇತ್ರವನ್ನು ಓರ್ವ ಸೇನಾನಿ ಸಂದರ್ಶಿಸಿದುದು ಇದೇ ಮೊದಲು. ಅಲ್ಲಿಗೆ ಸುಮಾರು 50 ಮೈಲಷ್ಟು ಕಾಲ್ನಡೆಯಿಂದ ಅಥವಾ ಕತ್ತೆಯ ಬೆನ್ನೇರಿಯೇ ಹೋಗಬೇಕಲ್ಲದೆ, ಮೋಟಾರು ಹೋಗುವದಸಾಧ್ಯ.ಕಾರ್ಯಪ್ಪನವರಿಗೆ ಆ ಊರವರ ಸಂಭ್ರಮದ ಸ್ವಾಗತ ದೊರೆಯಿತು. ಭಾರತದ ಭೂಮಿ ಮತ್ತು ಕಾಶ್ಮೀರದ ಜಮ್ಮುವನ್ನು ಜೋಡಿಸುವ ಹೊಸರಸ್ತೆಯನ್ನು ತೆರೆಯುವದಕ್ಕಾಗಿ ಇದೇ ತಾ. 7ರಲ್ಲಿ ಪಂಡಿತ ನೆಹರೂಗಳು ಅಲ್ಲಿಗೆ ಹೋಗಿದ್ದಾರೆಂದು ತಿಳಿದು ಬರುತ್ತದೆ.

ಲಂಡನಿನಲ್ಲಿ ಸ್ಟರ್ಲಿಂಗ್ ಸಾಲದ ಕುರಿತು ಬ್ರಿಟಿಷ್ ಸರಕಾರದ ಪ್ರತಿನಿಧಿಗಳೊಡನೆ ಮಾತುಕತೆ ನಡಿಸಲು ಅರ್ಥಿಕ ಮಂತ್ರಿ ಶ್ರೀ. ಷಣ್ಮುಗಂ ಚೆಟ್ಟಿಯಾರರ ನೇತೃತ್ವದಲ್ಲಿ ಹೋಗಿದ್ದ ಭಾರತ ಸರಕಾರದ ಪ್ರತಿನಿಧಿಗಳು ಬ್ರಿಟನಿನೊಡನೆ ಆ ಸಂಬಂಧವಾಗಿ ಮೂರು ವರುಷಾವಧಿಯ ಒಂದು ಮಧ್ಯಾವಧಿ ಒಪ್ಪಂದವನ್ನು ಮಾಡಿಕೊಂಡಿದ್ದು ಭಾರತ ಸರಕಾರವು ಅದನ್ನು ಅಂಗೀಕರಿಸಿದೆ. ಈ ಸಂಬಂಧದ ಕರಾರು ಪತ್ರಕ್ಕೆ ಷದ್ಯದಲ್ಲೇ ಸಹಿಯಾಗಲಿದೆಯೆಂದು ತಿಳಿದುಬರುತ್ತದೆ.

ಸಂಯುಕ್ತ ಪ್ರಾಂತಿಕ ಎಸೆಂಬ್ಲಿಯ ಕೆಲವು ಸ್ಥಾನಗಳ ಉಪಚುನಾವಣೆಯು ಈ ಗತ.ನೇ ನಡೆದು ಮುಗಿದಿದೆ. ಎಲ್ಲಾ ರಂಗಗಳಲ್ಲೂ ಕಾಂಗ್ರೆಸ್ ಮತ್ತು ಸಮತಾವಾದಿ ಉಮೇದ್ವಾರಿಗಳು ಸ್ಪರ್ಧಿಸಿದ್ದು ಅಲ್ಲಿಯ ಚುನಾವಣೆಯ ಫಲಿತಾಂಶವನ್ನು ಇಕ್ಕಡೆಯವರ ಬಲ ಪರೀಕ್ಷಿಸುವ ಒರೆಗಲ್ಲೆನಂತೆ, ಇಡೀ ರಾಷ್ಟ್ರವು ಆತುರದಿಂದ ನಿರೀಕ್ಷಿಸಿದ್ದಿತು. ಪಂಡಿತನೆಹರೂಗಳು ತನ್ನ ಇಂದಿನ ಕಾರ್ಯಾವಸರದಲ್ಲೂ ಕಾಂಗ್ರೆಸ್ ಪ್ರಚಾರಕ್ಕಾಗಿ ಸ್ವತಃ ಹೋಗಿದ್ದರಲ್ಲದೆ, ಅರೋಗ್ಯ ಸಾಧನೆಯಲ್ಲಿದ್ದ ಸರ್ದಾರ್ ಪಟೇಲರೂ ಮತದಾರರಿಗೆ ವಿಜ್ಞಾಪನೆ ಹೊರಡಿಸಿದ್ದರು. ಪಂಡಿತ ಗೋವಿಂದ ವಲ್ಲಭ ಪಂತರಂತಹ ಕಾಂಗ್ರೆಸ್ ಮುಖಂಡರೀ ಕಡೆಯಿಂದಲೂ, ಜೈಪ್ರಕಾಶ್ ನಾರಾಯಣ, ಅಚ್ಯುತ ಪಟ್ವರ್ಧನರಂತಹ ಸಮತಾವಾದಿ ಪ್ರಮುಖರಾ ಕಡೆಯಿಂದಲೂ ಅವಿಶ್ರಾಂತ ಪ್ರಚಾರ ನಡೆಸಿದ್ದರು. ಉಪ ಚುನಾವಣೆ ನಡೆದ 15 ಸ್ಥಾನಗಳ ಪೈಕಿ ಈ ತನಕ ಫಲಿತಾಂಶ ತಿಳಿದುಬಂದ ಏಳು ಸ್ಥಾನಗಳೂ ಕಾಂಗ್ರೆಸಿಗೆ ದೊರೆತಿವೆ. ಒಂದು ಸ್ಥಾನಕ್ಕೆ ಓರ್ವ ಸಮತಾವಾದಿ ಅವಿರೋಧವಾಗಿ ಆರಿಸಲ್ಪಟ್ಟಿದ್ದರು. ವಿಶೇಷ ಮೇಲಾಟವಿದ್ದ ಫೈಝಾಬಾದ್ ನಗರ ವಲಯ ಮತದಾರ ಕ್ಷೇತ್ರದಲ್ಲಿ ಸಮತಾವಾದಿ ನಾಯಕ ಆಚಾರ್ಯ ನರೇಂದ್ರ ದೇವರಿಗೆ 4080 ಮತಗಳೂ, ಕಾಂಗ್ರೆಸ್ ಉಮೇದ್ವಾರಿ ಬಾಬಾ ರಾಘವದಾಸರಿಗೆ 5392 ಮತಗಳೂ ದೊರೆತು ಕಾಂಗ್ರೆಸು ಒಂದು ಗಣ್ಯ ವಿಜಯ ಗಳಿಸಿದೆ.

ಗಾಂಧಿಜೀ ಕೊಲೆ ಸಂಬಂಧದ ಮೊಕದ್ದಮೆಯಲ್ಲಿ ಈಗ ಸರಕಾರೀ ಕಡೆಯ ಸಾಕ್ಷ್ಯಗಳಾಗುತ್ತಿವೆ.

ಭಾವೀ ಸಂಭವಗಳು

ಭಾರತ ರಾಜಕೀಯವು ಈಗ ಬಹಳ ಮಟ್ಟಿಗೆ ತಿಳಿಯಾಗಿರುವುದರಿಂದ ಸದ್ಯಕ್ಕೆ ಇದಿರಿಸಬೇಕಾಗಿರುವ ಒಂದೆರಡು ಸಮಸ್ಯೆಗಳ ಕಡೆಗೆ ಸಂಪೂರ್ಣ ಲಕ್ಷ್ಯ ಕೊಡಲು ಈಗ ಕೇಂದ್ರ ಸರಕಾರಕ್ಕೆ ಅವಕಾಶವೊದಗಿದೆ,

ಈಗ ಉಳಿದಿರುವ ಕಂಟಕಗಳೆಂದರೆ ಕಾಶ್ಮೀರ ಮತ್ತು ಹೈದರಾಬಾದು ಎರಡೇ.ಸೂಕ್ಷ್ಮ ರೀತಿಯ ತುಲನೆಮಾಡಿನೋಡುವಾಗ ಇವೆರಡರ ಪೈಕಿ ಕಾಶ್ಮೀರದ್ದು ತೊಡಕಿನ ಪ್ರಶ್ನೆ ಹೈದರಾಬಾದಲ್ಲವೆಂದು ತೋರುತ್ತದೆ.

ಹೈದರಾಬಾದಿನ ಮೇಲೆ ಕೂಡಲೇ ಪ್ರತ್ಯಕ್ಷ ಧಾಳಿ ಹೂಡಿ, ಮೂರನೆಯವರ ದೃಷ್ಟಿಗಿದು ಆಕ್ರಮಣವಲ್ಲವೇ ಎಂದು ತೋರಿಸಿಕೊಂಡು, ಹೋರಾಟದ ಅನಾಹುತಗಳನ್ನು ಹೈದರಾಬಾದ್ ಆಪರಾಧಿಗಳು ಅನುಭವಿಸುವದಕ್ಕಿಂತಲೂ ಹೆಚ್ಚಾಗಿ ಅಲ್ಲಿ ಒಳಗಿರುವ ಬಹು ಸಂಖ್ಯಾತ ಹಿಂದೂ ಪ್ರಜೆಗಳು ಅನುಭೋಗಿಸುವಂತೆ ಮಾಡುವದಕ್ಕಿಂತ ಆರ್ಥಿಕ ಬಹಿಷ್ಕಾರ ಹಾಗೂ ಸರ್ವ ವಿಧಧ ದಿಗ್ಬಂಧನಗಳಿಂದ ಹೈದರಾಬಾದನ್ನು ಪಕ್ವಗೊಳಿಸಿ ಸದ್ದಾರಿಗೆ ತರುವದು ನ್ಯಾಯೋಚಿತ ಮತ್ತು ಅನಪಾಯಕಾರಿಯಿದೆ. ಆದರೆ ನಿಜಾಮ್ ಸರಕಾರದ ಮತ್ತು ರಝಾಕಾರರ ಆಕ್ರಮಣಗಳು ಮುಂದುವರಿದರೆ ಹೋರಾಟ. ಯಾವ ಮುಹೂರ್ತದಲ್ಲೂ ದೊಡ್ಡ ಪರಿಮಾಣದಲ್ಲಿ ಸ್ಫೋಟಗೊಳ್ಳಬಹುದು.

ಹೇಗಿದ್ದರೂ ಸದ್ಯಕ್ಕಿರುವಂತೆ ಹೈದರಾಬಾದ್ ಪ್ರಶ್ನೆಯಲ್ಲಿ ಸಂದೇಹಾಸ್ಪದ ತೊಡಕುಗಳಾವುವೂ ಹುಗಿದಿಲ್ಲ. ಇನ್ನದು ಒಳಗಿಂದೊಳಗೆ ಪಾಕಿಸ್ತಾನದೊಡನೆ ಮತ್ತು ಅಂತರಾಷ್ಟ್ರೀಯ ಕ್ಷೇತ್ರಕ್ಕೆಂದು ಮಾಡಿಟ್ಟಿರುವ ಸಂಚು ಹಂಚಿಕೆಗಳು ಮುಂದೆಬರುವಾಗ ಗಲಿಬಿಲಿಗಳೇಳಬಹುದಾದರೂ ಭಾರತ ಸರಕಾರಕ್ಕವುಗಳನ್ನಿದಿರಿಸಲು ಸುಲಭ ಸಾಧ್ಯವಿದೆ.

ಅಂತೂ ಹೈದರಾಬಾದ್ ಒಂದಲ್ಲೊಂದು ದಿನ ಭಾರತವಪೇಕ್ಷಿಸಿದಲ್ಲಿಗೆ ಬರುವದೆಂಬುದು ಖಂಡಿತ.

ಆದರೆ ಕಾಶ್ಮೀರದ ಭವಿಷ್ಯಗರ್ಭದಲ್ಲಿ ಕೆಲವು ಭೇತಾಳ ಮೊಟ್ಟೆಗಳಡಗಿವೆ ಎಂಬುದನ್ನು ಮರೆಯಬಾರದು.

ಜಾತೀಯ ಭಾವನೆಗೆ ಎಲ್ಲಾ ವಿಧದ ಸಿಂಧುತ್ವ ದೊರೆತಿರುವೀ ಕಾಲದಲ್ಲಿ–ಪಾಕಿಸ್ತಾನೀ ಪಕ್ಷಪಾತಿಗಳಿಂದ ದೊಡ್ಡ ಪರಿಮಾಣದ ಅಂತರಂಗ ಬಹಿರಂಗ ಪ್ರಚಾರ ನಡೆದಿರುವೀ ಸಂದರ್ಭದಲ್ಲಿ–ಶೇಖ್ ಅಬ್ದುಲ್ಲಾನ ಹಿಡಿತವನ್ನೆರವಷ್ಟು ಸಡಲಿಸಿದರೂ, ಅಧಿಕ ಸಂಖ್ಯಾಕ ಮುಸ್ಲಿಮರುಳ್ಳ ಕಾಶ್ಮೀರದಲ್ಲಿ ಜನಮತ ಸಂಗ್ರಹಿಸಿದರೆ ಹೇಗಾದೀತೆಂದು ಹೇಳಲಾಗುವದಿಲ್ಲ.

ಕಾಶ್ಮೀರದ ಸ್ಥಿತಿಗತಿ ಮತ್ತವಕ್ಕೆ ಹೊಂದಿಕೆಯಾಗಿರುವ ಅಖಿಲ ಭಾರತದ ವಿದ್ಯಮಾನಗಳ ಜ್ಞಾನವಾಗಲೀ, ಆ ಸಂಬಂಧದ ಆಸಕ್ತಿ ಅಧಿಕಾರಗಳಾಗಲೀ ಇಲ್ಲದ ಕಾಶ್ಮೀರ ಸಮಿತಿಯು–ಸಂಗತಿಯರಿಯದ ಮೂರನೆಯವರು–ಕೊಡುವ ಯಾವ ತೀರ್ಮಾನವಾದರೂ ಸದ್ಯಸ್ಥಿತಿಯಲ್ಲಿ ಭಾರತಕ್ಕೆ ಪ್ರತಿಕೂಲವಾಗಬಹುದೆಂಬುದನ್ನು ಈಗಲೇ ನಿರೀಕ್ಷಿಸಬಹುದು. ಹಿಂದೀ ಸರಕಾರಕ್ಕೆ ಆ ತೀರ್ಪನ್ನು ಧಿಕ್ಕರಿಸುವ ಹಕ್ಕಿದೆಯಾದರೂ ಅಂತಹ ಸಂದರ್ಭದಲ್ಲಿ ಭಾರತದ ಹೊಣೆಗಾರಿಕೆ ಹೆಚ್ಚಲಿದೆ.

ಒಂದಲ್ಲೊಂದು ದಿನ ಕಾಶ್ಮೀರದ ಭವಿಷ್ಯ ಹೇಗಾಗುವುದೋ ಹೇಳಲಾಗುವದಿಲ್ಲ!

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2½% per annum.
For 6 months at 3½% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,96,345
Reserves....	Rs. 8,67,530

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ಗುರುವಾರ, ಉಡುಪಿ, ೮-೭-'೪೮

ಕರ್ನಾಟಕ ಪ್ರಾಂತ್ಯ ರಚನೆ

ಭಾಷಾವಾರು ಪ್ರಾಂತ್ಯ ರಚನೆಗೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸಿ ವರದಿಯೊಪ್ಪಿಸುವಂತೆ ಘಟನಾ ಸಮಿತಿಯ ಅಧ್ಯಕ್ಷರು ಒಂದು ಸಮಿತಿಯನ್ನು ಇತ್ತೀಚೆಗೆ ನೇಮಿಸಿದ್ದಾರೆ; ಸಲಹೆಗಾರ ಸದಸ್ಯರಾಗಿ ಒಂದೊಂದು ಭಾಷಾವಾರು ಭಾಗಕ್ಕೊಬ್ಬೊಬ್ಬನಂತೆ ಪ್ರತಿನಿಧಿಗಳನ್ನೂ ಈ ಸಮಿತಿಗಾರಿಸಿಕೊಂಡಿದ್ದಾರೆ. ದೀರ್ಘಾವಧಿಯ ಬೇಡಿಕೆಯಾಗಿರುವ ಭಾಷಾನುಗುಣ ಪ್ರಾಂತ್ಯಗಳನ್ನು ಕಟ್ಟಲು ಈಗ ತಾನೇ ಕೆಸರು ಕಲ್ಲು ಮುಹೂರ್ತ ನಡೆಯಿತೆನ್ನಬಹುದು; ಈ ಸಂಬಂಧದ ಅಧಿಕೃತ ಕಾರ್ಯಾರಂಭವಾದುದು ಇದೇ ಮೊದಲು. ಭಾಷಾವಾರು ವಿಭಾಗದ ಪ್ರಶ್ನೆಯು ದಕ್ಷಿಣ ಭಾರತಕ್ಕೆ ಮಾತ್ರ ಸಂಬಂಧಪಟ್ಟುದು. ಗುಜರಾತ್, ಮರಾಟಿ, ತೆಲುಗು, ತಮಿಳು, ಕರ್ನಾಟಕ, ಮಲೆಯಾಳ ಭಾಷಾ ಭಾಗಗಳು ಪುನರ್ವ್ಯವಸ್ಥೆಗೊಳಗಾಗಲು ಬದ್ಧವಿವೆ.

ಭಾಷಾನ್ವಯ ಪ್ರಾಂತ್ಯ ರಚನಾ ತತ್ವದ ಅಂಗೀಕಾರವೆಂದೋ ಆಗಿದ್ದಿತು; ಬ್ರಿಟಿಷ್ ಸರಕಾರವು ತನ್ನ ಆಡಳಿತೆಯ ಸೌಕರ್ಯವೊಂದನ್ನಲ್ಲದೆ, ಬೇರಾವುದನ್ನೂ ಗಣಿಸದೆ ಹಾಕಿದ್ದ ಪ್ರಾಂತಿಕ ಗಡಿಗಳನ್ನು ತಳ ಮಗುಚಿ, ಪುನರ್ರಚನೆಮಾಡಬೇಕೆಂದು ಕಾಂಗ್ರೆಸ್ ಕೇಳಿ ಬಹಳ ವರ್ಷಗಳಾಗಿವೆ. ಕಾಂಗ್ರೆಸಿನ ಕಾರ್ಯಕ್ಷೇತ್ರದ ಮಟ್ಟಿಗೆ ಭಾಷಾವಾರು ಭಾಗಗಳು ಹಲವು ವರುಷಗಳಿಂದಲೂ ಅಸ್ತಿತ್ವದಲ್ಲಿವೆ. ಇಂದು ಕಾಂಗ್ರೆಸ್ ಅಧಿಕಾರ ನಿರ್ವಹಿಸುತ್ತಿದೆ; ಆದರೆ ಅಧಿಕೃತವಾಗಿ ಭಾಷಾವಾರು ಪ್ರಾಂತ್ಯಗಳನ್ನು ಅಸ್ತಿತ್ವಕ್ಕೆ ತರಲು ಈ ತನಕ ಆಗಿಲ್ಲ. ಈ ವಿಳಂಬಕ್ಕೆ ಕಾರಣಗಳಿಷ್ಟು; ಈಗಲೂ ಇಲ್ಲವೆಂದಲ್ಲ; ಭಾಷಾವಾರು ಭಾಗಗಳವರು ತಮ್ಮಲ್ಲಿರುವ ರಾಷ್ಟ್ರೀಯ ಹಿತಾಕಾಂಕ್ಷೆ, ಉದಾರ ಬುದ್ಧಿ, ನಾಯಕರ ಮೇಲಿನ ಭಕ್ತಿಯನ್ನು ಇನ್ನಷ್ಟು ಅರಳಿಸಿಕೊಂಡರೇನೇ ಈ ವಿಳಂಬವನ್ನು ಸಮಾಧಾನದಿಂದ ಸಹಿಸಲು ಸಾಧ್ಯ. ಹೇಗಿದ್ದರೂ ಈಗ ಕಾರ್ಯಾರಂಭಿಸಿದೆ; ಇನ್ನದು ತ್ವರ್ಯದಲ್ಲಿ ಪೂರ್ಣಗೊಳ್ಳುವಂತೆ ಮಾಡಬೇಕಾದುದೊಂದೇ ಎಲ್ಲರ ಕರ್ತವ್ಯ.

ಕನ್ನಡಿಗರೀಗ ಕಾರ್ಯಪ್ರವೃತ್ತರಾಗಬೇಕು. ಮಿಕ್ಕ ಭಾಷಾಭಾಗಗಳ ಏಕೀಕರಣಗಳಿಗಿಂತ ಹೆಚ್ಚಿನ ತೊಡಕುಗಳು ಕರ್ನಾಟಕದ ಹಲವು ತುಂಡುಗಳನ್ನು ಪೋಣಿಸಿಕೊಳ್ಳುವುದರಲ್ಲಿದೆ ಎಂಬುದನ್ನು ಮರೆಯಬಾರದು, ಇದೇ ಪರಿಮಾಣದಲ್ಲಿ ಕನ್ನಡಿಗರ ಉತ್ಸಾಹ ಮತ್ತು ಪರಿಶ್ರಮವೀ ಭಾಗದಲ್ಲಿ ಹೆಚ್ಚಿಗಿರಬೇಕಾದುದು ಸಹಜ. 'ಇದೆಯೆ? ಇಲ್ಲ'ವೆಂಬ ಸಂಶಯಕ್ಕೆಡೆಯಿಲ್ಲ. ಆಂಧ್ರರ ಆಂದೋಲನದ ಪ್ರಭಾವ, ಕೇರಳದವರ ಕೆಚ್ಚು, ಕನ್ನಡಿಗರ ಚಟುವಟಿಕೆಗಳಲ್ಲಿ ತೋರದಿರಬಹುದು. ಆದರೀ ಸಂದರ್ಭದಲ್ಲಿ ಕಾರ್ಯ ಸಾಧನೆಗೆ ಬೇಕಾದುದು ಕಠೋರತೆಯಲ್ಲ—ವ್ಯವಹಾರ ಜಾಣ್ಮೆ. ಕನ್ನಡಿಗರಲ್ಲಿ ಈ ಯೋಗ್ಯತೆಯ ಅಭಾವವಿಲ್ಲ. ಕರ್ನಾಟಕ ಏಕೀಕರಣ ಪ್ರಮುಖರು ಈಗ ಮಾಡುತ್ತಿರುವ ಕೆಲಸಗಳು ಶ್ಲಾಘನೀಯವಿದ್ದು ಕನ್ನಡಿಗರು ಒಂದಾಗಿ ಅವರಿಗೆ ಸರ್ವ ವಿಧದಿಂದ ನೆರವಾಗಬೇಕಾದುದು ಅಗತ್ಯ. ಭಿನ್ನಾಭಿಪ್ರಾಯಗಳಿರಬಹುದು; ನೋಟಗಳಲ್ಲಿ, ಕಾರ್ಯ ವಿಧಾನಗಳಲ್ಲಿ ವ್ಯತ್ಯಾಸಗಳಿರಬಹುದು; ಆದರೆ ಕರ್ನಾಟಕ ಏಕೀಕರಣವಾಗಬೇಕು—ಅಖಂಡ ಕರ್ನಾಟಕ ರೂಪುಗೊಳ್ಳಬೇಕು—ಎಂಬುದೇ ಎಲ್ಲರ ಗುರಿ. ಆದ್ದರಿಂದ ಯಾರು ಯಾವ ಸಾಲು ಹಿಡಿದಿದ್ದರೂ ಈ ಗುರಿಯತ್ತ ಹೋಗದ ಅಡ್ಡ ಹಾದಿ ತಮಗೆ ಸಿಕ್ಕದಂತೆ ನೋಡಿಕೊಳ್ಳಬೇ... [illegible] ...ಕಾದುದು ಈ ಕಾಲದಲ್ಲಿ ಮುಖ್ಯ. ಇದೊಂದಿಷ್ಟಲ್ಲಿ ಅದರೊಳಗಿನ ಎಲ್ಲಾ ಮತಭೇದಗಳನ್ನೂ ಒಂದುಗೂಡಿಸಿಕೊಳ್ಳಲು—ಕೊನೆಯ ಪಕ್ಷ ಪರಸ್ಪರ ಕ್ಷಮಿಸಿಕೊಳ್ಳಲು—ಸಾಧ್ಯವಿದೆ. ಆ ಗುರಿಯತ್ತ ಬೇರೆ ಬೇರೆ ದಿಕ್ಕುಗಳಿಂದ ಹೊರಟವರು ಒಂದಲ್ಲೊಂದು ಮುಖ್ಯ ನೆಲೆಯಲ್ಲಿ ಒಟ್ಟಾಗಲೇ ಬೇಕು; ಮರುದಿನ ಪುನಃ ಬೇರೆ ಆಗುವಂತಿದ್ದರೂ ಗುರಿಯ ಸಮೀಪದಲ್ಲಿ ಒಂದಾಗಲೇಬೇಕು. ಆದ್ದರಿಂದ ಪ್ರಕೃತ ಕನ್ನಡಿಗರೆಲ್ಲರ ಬಾಳಿನ ಮೂಲ ಮಂತ್ರಗಳೆಂದರೆ—ಒಕ್ಕಟ್ಟು, ಒಮ್ಮತದ ಪ್ರಯತ್ನ.

ಅಂತೂ ಈ ಪ್ರಶ್ನೆಯೀಗ ಭಾವನಾ ರಂಗದಿಂದ ವ್ಯವಹಾರ ಕ್ಷೇತ್ರಕ್ಕಿಳಿಸಲ್ಪಟ್ಟಿದೆ; ಆದ್ದರಿಂದ ಈಗ ಬೇಕಾದುದು ಜಿಭಿನಾನ ಪ್ರದರ್ಶನವಲ್ಲ—ಆಚರಣೆ. ಘಟನಾ ಸಮಿತಿಯಾಗಲೀ, ಅದರಿಂದೀಗ ನೇಮಕಗೊಂಡಿರುವ ವಿಚಾರಣಾ ಸಮಿತಿಯಾಗಲೀ ಒಂದು ನವಾಕಾರ ರೂಪಿಸುವಾಗ ಭಾಷೆ, ಸಂಸ್ಕೃತಿ ಮತ್ತು ಭೌಗೋಲಿಕ ಸಂಬಂಧಗಳನ್ನು ಮಾತ್ರ ನೋಡುವುದು ಅಸಂಭವ; ಆ ಪ್ರಾಂತ್ಯದ ಆರ್ಥಿಕ ಸ್ಥಿತಿ—ಹುಟ್ಟುವಳ್ಳಿ—ಖರ್ಚು, ವ್ಯಾಪಾರ ವಹಿವಾಟು ಇತ್ಯಾದಿಗಳನ್ನೂ ತೂಗಿ ನೋಡಿಯೇ ನಿರ್ಧರಿಸಬೇಕಾಗಿದೆ. ಕರ್ನಾಟಕ ಪ್ರಾಂತ್ಯವಾಗಲೇಬೇಕಾದ ಕ್ಷೇತ್ರವು ಇವೆಲ್ಲಾ ಪರೀಕ್ಷೆಗಳಲ್ಲೂ ನಿಸ್ಸಂದೇಹವಾಗಿ ಜಯಿಸುವ ಯೋಗ್ಯತೆಯುಳ್ಳದ್ದೆಂಬುದು ನಿಜ. ಆದರೆ ಆ ಭಾಗದಂತೆಯೇ ಅದರ ಈ ಯೋಗ್ಯತೆಯೂ ಈಗ ಛಿಂದಿಛಿದ್ರವಾಗಿ ಬಿದ್ದಿದೆ ಎಂಬುದನ್ನು ಮರೆಯಬಾರದು. ಆದ್ದರಿಂದ ಪರೀಕ್ಷಕರ ಮುಂದಿಟ್ಟು ಅವರಿಗೆ ಮುಂದಟ್ಟು ಪಡಿಸಲಾಗುವಂತೆ ಮುಂದಾಗಿ ಈ ಯೋಗ್ಯತೆಯು ಅಖಂಡ ರೂಪ ದರ್ಶನವಾಗಬೇಕು. ಕರ್ನಾಟಕದ ಧುರೀಣರು ಈ ಕಾರ್ಯಸಾಧನೆಯಲ್ಲಿದ್ದಾರೆ ಎಂಬುದು ಸಮಾಧಾನಕರ. ಮೊದಲನೆಯದಾಗಿ ಮೈಸೂರು ಮತ್ತು ಮಿಕ್ಕ ಕರ್ನಾಟಕ ಭಾಗಗಳ ಜೋಡಣೆ ಸಾಧ್ಯವಾಗುವ ವ್ಯವಸ್ಥೆ ನಡೆದಿರುವಂತೆ ಕಾಣುತ್ತದೆ; ಎರಡನೆಯದಾಗಿ, ಕನ್ನಡಿಗರ ಈ ಮೊದಲಿನ "ಥಂಡಾ ಮನೋವೃತ್ತಿ"ಯ ದೆಸೆಯಿಂದಾಗಿ ಹುಟ್ಟಿ ಬೆಳೆದುಬಂದಿರುವ ಕೆಲವು ಗಡಿ ಸಮಸ್ಯೆಗಳಿವೆ. ಬಳ್ಳಾರಿ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಆಂಧ್ರರ, ಬೆಳಗಾಂವಿಯತ್ತ ಕಡೆ ಮರಾಟರ, ದಕ್ಷಿಣ ಕನ್ನಡದ ಕಾಸರಗೋಡು ಭಾಗದಲ್ಲಿ ಮಲೆಯಾಳಿಗಳ ಪ್ರಭಾವವ್ಯಾಪಿಸಿ, ನಿಜಕ್ಕೂ ಕರ್ನಾಟಕದ ಹಕ್ಕಿನದ್ದಾಗಿರುವ ಕೆಲವು ಭಾಗಗಳು ಪ್ರಶ್ನೆಗೊಳಗಾಗಿವೆ. ಗಾಂಧೀಜೀ ಅಪೇಕ್ಷಿಸಿದ್ದಂತೆ ಈ ಜಡುಪನ್ನು ನಾವು ನಾವೇ ಸೌಹಾರ್ದತೆಯಿಂದ ಏಕಮತವಾಗಿ ಬಿಡಿಸಿಕೊಳ್ಳಲು ಸಾಧ್ಯವಿದ್ದರೆ, ಇಂತಹ ಕೆಲಸಗಳ ಕಷ್ಟಕ್ಕೀಜಿಯೇ ನಿರ್ಧಾನಿಸುತ್ತಿರುವ ಕೇಂದ್ರ ಸರಕಾರದ ಕಾರ್ಯವನ್ನು ಸುಗಮಗೊಳಿಸಿದಂತಾಗುತಿತ್ತು; ಭಾಷಾವಾರು ಪ್ರಾಂತ್ಯಗಳನ್ನು ಉತ್ಸಾಹದಿಂದ ಬೇಗನೇ ಕಟ್ಟಿ ಪಾಕುವಂತಾಗುತಿತ್ತು; ಆದರೆ ಪರಸ್ಪರ ಸಂಗಾತೀಹಸ್ತ ಸಹಕಾರದಿಂದ ನಾವು ನಮ್ಮೊಳಗೇನೇ ಆ ಜಡುಪನ್ನು ಬಿಡಿಸಿಕೊಳ್ಳಲಾರೆವೆಂದು ತೋರಿದರೆ, ಉರುಡಾಡಿ, ಎಳೆದಾಡಿ ಆದಷ್ಟು ಅಧಿಕ ಲಾಭಪಡೆಯುವ ದುಸ್ಸಾಧನೆಗಾವ ಕಡೆಯವರೂ ಹೋಗಕೂಡದು. ತೀರ್ಮಾನಾಧಿಕಾರಿಗಳಿದ್ದಾರೆ. ಈಗಿನ ಪರಿಶೀಲನಾ ಸಮಿತಿಯು ಶಿಫಾರಸುಗಳನ್ನಾಧರಿಸಿ, ಘಟನಾ ಸಮಿತಿಯಿಂದ ಭಾಷಾವಾರು ಪ್ರಾಂತ್ಯಗಳ ಗಡಿ ನಿರ್ಣಯ ಸಮಿತಿ ನೇಮಕಗೊಳ್ಳಲಿದೆ. ನಮ್ಮ ಎಲ್ಲಾ 'ಕಾರ್ಡು'ಗಳನ್ನೂ ಅದರ ಮುಂದಿಟ್ಟರಾಯಿತು. ಈ ಪರೀಕ್ಷೆಗಳಲ್ಲಿ ಗೆಲ್ಲಬೇಕಾಗುವಂತೆ ಅಗತ್ಯವುಳ್ಳ ಸರ್ವವನ್ನೂ ಸಂಗ್ರಹಿಸಿಕೊಳ್ಳುವ ಕಾಲ ಮಾತ್ರ ಕನ್ನಡಿಗರ ಪಾಲಿಗೆ ಬಂದಿದೆ. ಆದ್ದರಿಂದ ವಿವಾದವಿದ್ದಿರುವ ಕರ್ನಾಟಕದ ಭಾಗಗಳಲ್ಲಿ ಈಗ ವಿಶೇಷ ರೀತಿಯ ಪ್ರಚಾರಕಾರ್ಯ ನಡೆಯಬೇಕು; ಕೇವಲ ದುರಭಿಮಾನದಿಂದ ಉದರಶೂಲೆಯಂತೆ ಒಳಗಿಂದೊಳಗೆ ಪೀಡಿಸುತ್ತಿರುವ ಒಂದೆರಡು ಉಪ ಭಾಷಾಭಿಮಾನಿಗಳ ಬಾಯಿಮುಚ್ಚಿಸಬೇಕು. ಅತ್ತ ಮೈಸೂರು ಮತ್ತಿತರ ಸಂಸ್ಥಾನೀ ಭಾಗಗಳ ಸಂಬಂಧವಾವುದೆಂಬುದನ್ನೂ ಸ್ಪಷ್ಟಪಡಿಸಿಕೊಳ್ಳಬೇಕು; ಅಖಂಡ ಕರ್ನಾಟಕದ ಭೌಗೋಳಿಕ, ಆರ್ಥಿಕ, ಸಾಂಸ್ಕೃತಿಕ ಶಕ್ತಿಯೋಗ್ಯತೆಗಳ ಸರಿಯಾದ ಸ್ಪಷ್ಟವಾದ ದಾಖಲೆಗಳು ತಯಾರಾಗಬೇಕು. ಒಂದು ಪ್ರಾಂತ್ಯದ ಪುನರ್ಜೀವನ ಮತ್ತು ಭವಿಷ್ಯಕ್ಕೆ ಸಂಬಂಧಿಸಿದ ಇವೆಲ್ಲಾ ಕಾರ್ಯಗಳ ಬೆಲೆ ಮತ್ತು ಆವಶ್ಯಕತೆಯನ್ನು ಗಮನಿಸಿ, ಅಗತ್ಯವಿದ್ದರೆ ಅಖಿಲ ಕರ್ನಾಟಕದ ಕಾರ್ಯಕರ್ತರೆಲ್ಲರ ಸಭೆಯನ್ನೂ ಕರೆದು, ಕರ್ನಾಟಕ ಪ್ರಮುಖರು ಯಾವ ಅಂಶವನ್ನೂ ಬಾಕಿ ಬಿಡದೆ ವಿಜಯ ಸಾಧಿಸಲೆಂದು ಹಾರೈಸುತ್ತೇವೆ; ಕನ್ನಡಿಗರೆಲ್ಲರೂ ಈ ಪರೀಕ್ಷಾಕಾಲದಲ್ಲಿ ಒಂದಾಗಿ ಗೆಲ್ಲಬೇಕೆಂದು ವಿಜ್ಞಾಪಿಸುತ್ತೇವೆ.

ಪ್ರಕಟಣೆ

ಲಲಿತಕಲಾ ಕರ್ನಾಟಕ ನಾಟಕ ಸಭಾ, ಮುಂಬಯಿ

ಇದರ ಸರ್ವ ಹಕ್ಕುಗಳು ಶ್ರೀಯುತರುಗಳಾದ ಪಿ. ಆರ್. ಬೋಳಾರ್, ಮತ್ತು ಬಿ. ಯಸ್. ನಾಯ್ಕ್, ಇವರಿಗೆ ಇರುತ್ತವೆ ಪ್ರತಿಯೊಬ್ಬ ಸದಸ್ಯರು ತಿಳಿದುಕೊಳ್ಳತಕ್ಕದ್ದು. ಅಲ್ಲದೆ ಶ್ರೀ. ಭುಜಂಗ, ಎಸ್., ಬೋಳಾರ್ ಇವರಿಗೆ ನಾಟಕ ಸಭೆಯ ಪರವಾಗಿ ಪತ್ರವ್ಯವಹಾರ ನಡಿಸಬಾರದಾಗಿ ವಿನಂತಿ. ಸಭೆಯ ಹೆಸರಲ್ಲಿ ಪತ್ರ ಬರೆಯುವವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬೇಕಾಗಿ ವಿನಂತಿ.

ಇತಿ,
ಬಿ. ಯಸ್. ನಾಯ್ಕ್
ಸ್ಥಾಪಕ.

Mr. B. S. Naik, Founder
Lalithkala Karnatak Natak Sabha,
205, Bora Bazar Street,
5 th Floor Fort,
Bombay.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.



Approved firm by the Govt. of Mysore
Certified by the Agent of the Govt. of Cylone & Indian.

ಕಾಶ್ಮೀರ ರಣಕಾಳಿಗೊಂದು ಧೀರ ಬಲಿ!

ಕಾಶ್ಮೀರ ರಣರಂಗದಲ್ಲಿ ವೀರ ನಾಯಕನೊಬ್ಬನ ರಕ್ತ ಚೆಲ್ಲಿತು; ಯೋಧಾಗ್ರೇಸರನ ಬಲಿದಾನವಾಯಿತು; ಬ್ರಿಗೇಡಿಯರ್ ಮಹಮ್ಮದ್ ಉಸ್ಮಾನರು ರಣಕಣದಲ್ಲೇ ಮಡಿದುಬಿದ್ದರು.

ಬ್ರಿಗೇಡಿಯರ್ ಉಸ್ಮಾನರು ಈಗ ಕಾಶ್ಮೀರ ರಂಗದಲ್ಲಿ ಹೋರಾಡುತ್ತಿರುವ ಹಿಂದೀ ದಳದ ಸೇನಾನಿಯಿದ್ದರು. ಅಲ್ಲಿಯ ಇದುವರೆಗಿನ ಹೋರಾಟಗಳಲ್ಲಿ ಬ್ರಿಗೇಡಿಯರ್ ಉಸ್ಮಾನರಷ್ಟು ಪ್ರಸಿದ್ಧಿ ಕೇಳಿದ ಇನ್ನೊಬ್ಬನಿಲ್ಲ. 'ನೌಶೇರಾ ಮತ್ತು ಝಂಗಾರದ ಧೀರನಾಯಕ'ಎಂದು ಅವರ ಹೆಸರು ಎಲ್ಲರ ಬಾಯಿಯಲ್ಲಿ ನಲಿದಾಡುತ್ತಿತ್ತು. ಕೆಲಕಾಲಕ್ಕೆ ಮೊದಲು ಅಸಾಮಾನ್ಯ ಧೈರ್ಯ ಸಾಹಸ ಮತ್ತು ಯುದ್ಧ ಜಾಣ್ಮೆಯಿಂದ ಆವಲಯಗಳ ಧಾಳಿಗಾರರ ಪ್ರಚಂಡ ದಳದ ಸೊಂಟ ಮುರಿದು ಓಡಿಸಿ, ಶ್ರವಣಮಾತ್ರದಿಂದ ಶಹಭಾಸ್ ಕೊಡುವಂತಹ ವಿಜಯ ಗಳಿಸಿದ್ದರು. ಅದು ಕಾಶ್ಮೀರರಣದ ಗಣ್ಯ ವಿಜಯ; ಪಂಡಿತ ನೆಹರುಗಳು ಕಾಶ್ಮೀರಕ್ಕೆ ಸ್ವತಃ ಹೋಗಿ ಬ್ರಿಗೇಡಿಯರ್ ಉಸ್ಮಾನರನ್ನು ಅಭಿನಂದಿಸಿದ್ದರು. ಪಾಕಿಸ್ತಾನಿಗಳ ಹಾಗೂ ಕಾಶ್ಮೀರದ ಧಾಳಿಗಾರರ ಅತ್ಯುಗ್ರ ದ್ವೇಷಾಸೂಯೆಗೊಳಗಾಗಿದ್ದ ಓರ್ವ ಸೋಲ್ಜರನೆಂದರೆ ಬ್ರಿಗೇಡಿಯರ್ ಉಸ್ಮಾನ್. ಕಾಶ್ಮೀರದ ಅಧಿಕಾರ ರಂಗದಲ್ಲಿ ಮಹಮ್ಮದ್ ಭಕ್ಷಿ ಹೇಗೋ ಹಾಗೆಯೇ ಅಲ್ಲಿಯ ರಣರಂಗದಲ್ಲಿ ಬ್ರಿಗೇಡಿಯರ್ ಉಸ್ಮಾನ್ ವೈರಿಗಳ ಕಣ್ಣಿಗೆ ಕಾಸರಕನ ಕೋಲಿನಂತೆ ಚುಚ್ಚುತ್ತಿದ್ದರು. ಧಾಳಿಗಾರರ 'ಅಝಾದ್ ಕಾಶ್ಮೀರ್' ನಾಮಾಂಕಿತ ಸರಕಾರವು ಬ್ರಿಗೇಡಿಯರ್ ಉಸ್ಮಾನರನ್ನು ಹಿಡಿದು ತಂದವರಿಗೆ ಹೇರಳ ಬಹುಮಾನವನ್ನು ಸಾರಿದ್ದಿತು.

ಇಂತಹ ಬ್ರಿಗೇಡಿಯರ್ ಯುದ್ಧ ಮಾಡುತ್ತಿದ್ದಲ್ಲಿಯೇ ವೀರಸಾವಿಗೆ ಸಂದರು! ತನ್ನ ಸಾಹಸೀ ಜೀವನಕ್ಕೆ ಧೀರ ಮರಣದ ಮುಕುಟವೇರಿಸಿಕೊಂಡರು!

ಬ್ರಿಗೇಡಿಯರ್ ಉಸ್ಮಾನರ ಶವವನ್ನು ತಾ. 4ನೇ ಆಸಂಜೆ ವಿಮಾನ ಮೂಲಕ ಡಿಲ್ಲಿಗೆ ತರಲಾಯಿತು. ಅಲ್ಲಿಯ ಪಾಲಮ್ ವಿಮಾನ ನಿಲ್ದಾಣದಲ್ಲಿ ಅದಕ್ಕೆ ಪೂರ್ಣ ಸೇನಾ ಗೌರವಗಳಾದುವು. ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗ್, ಜನರಲ್ ಕಾರ್ಯಪ್ಪ ಮತ್ತಿತರ ಸೇನಾನಾಯಕರು ನಿಲ್ದಾಣದಲ್ಲಿ ಹಾಜರಿದ್ದರು. ತಾ. 5ರಲ್ಲಿ ಸರ್ವ ಸೇನಾ ಗೌರವ ಮತ್ತು ಹೃದಯಸ್ಪರ್ಶೀ ದೃಶ್ಯಗಳ ನಡುವೆ ಉಸ್ಮಾನ್ ದೇಹದ ಅಂತ್ಯಕ್ರಿಯೆ ನಡೆಯಿತೆಂದು ತಿಳಿದುಬರುತ್ತದೆ.

ನೆಹರುಗಳ ದುಃಖ

ಪ್ರಧಾನ ಮಂತ್ರಿ, ಪಂಡಿತ ನೆಹರುಗಳು ಬ್ರಿಗೇಡಿಯರ್ ಉಸ್ಮಾನರ ಸಹೋದರ ಮಿ. ಮಹಮ್ಮದ್ ಸುಭಾನರಿಗೆ ಈ ಕೆಳಗಿನಂತೆ ಶೋಕಸಂದೇಶವಿತ್ತದ್ದಾರೆ: "ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಯುದ್ಧ ಕಾರ್ಯಾಚರಣೆಯಲ್ಲಿದ್ದಲ್ಲಿಯೇ ಮಡಿದುಬಿದ್ದ ನಿಮ್ಮ ಸಹೋದರ ಬ್ರಿಗೇಡಿಯರ್ ಮಹಮ್ಮದ್ ಉಸ್ಮಾನರ ಮರಣಕ್ಕಾಗಿ ನನಗಾಗಿರುವ ಗಾಢ ಶೋಕ ಮತ್ತು ಭಾರತ ಸರಕಾರಕ್ಕಾಗಿರುವ ಗಾಢ ಶೋಕ ಸೂಚನೆಗಾಗಿ ನಿಮಗಿದನ್ನು ಬರೆಯುತ್ತಿದ್ದೇನೆ. ಅದೊಬ್ಬ ಸೋಲ್ಜರನ ಮರಣ; ಒಬ್ಬ ಧೀರನ ಮರಣ; ಹಾಗಿದ್ದುದರಿಂದ ನಾವದಕ್ಕಾಗಿ ದುಃಖಿಸಬಾರದು. ಆದರೂ ರಾಷ್ಟ್ರ ಸೇವಾಬದ್ಧವಾದ ಆ ಅಮೂಲ್ಯ ಜೀವನವು ಈ ಅಲ್ಪಾವಧಿಯಲ್ಲಿ ಕಡಿದು ಹೋದ ಈ ದುರಂತಕ್ಕಾಗಿ ನಾವು ಗಾಢ ಸಂತಾಪವನುಭವಿಸುತಿದ್ದೇವೆ. ಕಾಶ್ಮೀರದ ತನ್ನ ಅನೇಕ ನಾಯಕತ್ವದಿಂದ ಉಸ್ಮಾನರು ಇಷ್ಟರಲ್ಲೇ ಕೀರ್ತಿ ಗಳಿಸಿದ್ದಾರೆ; ಹಿಂದೀ ಸೇನೆಯಲ್ಲೊಂದು ಉಜ್ವಲ ಭವಿಷ್ಯವು ಅವರಿಗೆ ಕಾದಿದ್ದಿತು. ಪ್ರಶಾಂತ, ಗಂಭೀರ, ಹಾಗೂ ತನಗೆ ದೊರೆತ ಕೀರ್ತಿಯಿಂದಲ್ಲ ನಿಗರ್ವಿಯಾಗಿದ್ದ ಸಾಮಾ ವರ್ತನೆಗಳಿಂದಿದ್ದ ಅವರು ಓರ್ವ ಮಾದರೀ ಸೋಲ್ಜರ; ಓರ್ವ ಮಾದರೀ ದೇಶಭಕ್ತ.

ಅವರು ಹುಟ್ಟಿದ ನನ್ನ ಸ್ವಂತ ಪ್ರಾಂತ್ಯಕ್ಕೆ, ಮತ್ತವರಿಗೆ ನಿಕಟ ಸಂಬಂಧವಿದ್ದ ನನ್ನ ನಗರ ಅಲ್ಲಹಾಬಾದಿಗೆ ಬ್ರಿಗೇಡಿಯರ್ ಉಸ್ಮಾನರ ವಿಯೋಗವು ಒಂದು ವಿಲಕ್ಷಣ ದುಃಖದಾಯಿಯಾಗಿದೆ. ಯಾರ ಸ್ವಾತಂತ್ರ್ಯ ಸೇವಾ ಕೃತ್ಯದಲ್ಲಿ ಅವರು ಜೀವಕೊಟ್ಟರೋ ಆ ಕಾಶ್ಮೀರ ಜನತೆಯ ಕಣ್ಮುಂದೆ ಅವರ ಸ್ಮರಣೆ ಬಹು ಸದಾಕಾಲ ಹಚ್ಚ ಹಸುರಾಗಿ ಉಳಿದೀತು; ಮತ್ತು ತಮ್ಮ ಸ್ವಾತಂತ್ರ್ಯವನ್ನು ಹೋರಾಡಿ ದಕ್ಕಿಸಿಕೊಳ್ಳಲು ಅಲ್ಲಿಯವರಿಗೊಂದು ಪ್ರೇರಣೆಯಾದೀತು. ಹೀಗಾಗಿ, ನಮಗೀಗ ಸಹಜವಾಗಿ ದುಃಖವಾಗುತ್ತಿದೆಯಾದರೂ, ಮರಣವನ್ನು ಗೆದ್ದು ರಾಜಿಸುವ, ಮತ್ತು ಕ್ರಮವಾಗಿ ಒಂದು ರಾಷ್ಟ್ರ ನಿರ್ಮಾಣಮಾಡುವದಿದೇ ಆಗಿರುವ ಆ ಧೈರ್ಯಕ್ಕಾಗಿ ನಾವು ಹಿಗ್ಗುತ್ತಿದ್ದೇವೆ".

ಬಲದೇವಸಿಂಗರ ದುಃಖ

ರಕ್ಷಣಾಮಂತ್ರಿ ಸರ್ದಾರ್ ಬಲದೇವಸಿಂಗರ ಶೋಕ ಸಂದೇಶ ಹೀಗಿದೆ: "ನಿಮ್ಮ ಸಹೋದರನ ಮರಣದಿಂದಾಗಿರುವ ದುಃಖದಲ್ಲಿ ಗಾಢ ಮತ್ತು ಹೃದಯಸ್ಪರ್ಶೀ ಸಹಾನುತಾಪ ಸೂಚಿಸುತ್ತಿದ್ದೇನೆ. ಬ್ರಿಗೇಡಿಯರ್ ಉಸ್ಮಾನರ ಮರಣವು ನಮಗೆಲ್ಲರಿಗೂ ತುಂಬಿಬರಲಾರದ ನಷ್ಟ. ಅವರೊಬ್ಬ ಮಹಾ ಯೋಧರಿದ್ದರು. ಜವಾಬ್ದಾರಿಯ್ಯೊಯಕ್ಕಾಗಿ ಈಗ ಪರಮಾವಧಿಯ ತ್ಯಾಗ ಮಾಡಿರುವರೋ, ಆ ಧ್ಯೇಯ ಸಾಧನೆಯಲ್ಲಿ ಅವರ ಸೇವೆಗಳೆಷ್ಟು ಅಮೂಲ್ಯವಿದ್ದುವೆಂಬುದನ್ನು ನಾನು ಬಲ್ಲೆ. ಅವರು ಜನ್ಮತಃ ಜನನಾಯಕರಿದ್ದರು; ಸೈನಿಕರು ಮತ್ತು ತನ್ನ ಬಂಧು ಅಧಿಕಾರಿಗಳಿಂದ ವಿಶೇಷ ಗೌರವ ಮತ್ತು ಪ್ರೇಮ ಗಳಿಸಿದ್ದರು. ಯುದ್ಧ ಕಾರ್ಯದ ಅವರ ಹುರುಪು ಮತ್ತು ದೃಢತೆ ಪ್ರತಿಯೊಬ್ಬನಿಗೂ ಪ್ರೇರಣೆಗಳಾಗಿದ್ದುವು. ಅವು ಎಂದೂ ಮರೆಯಲ್ಪಡುವವುಗಳಲ್ಲ. ನಿಮ್ಮ ದುಃಖದಲ್ಲೀಗ ನನ್ನ ಹೃದಯ ತಲ್ಲೀನವಾಗುತ್ತಿದೆ. ಅವರ ಆತ್ಮಕ್ಕೆ ಶಾಂತಿಯಿರಲಿ".

ಬ್ರಿಗೇಡಿಯರ್ ಉಸ್ಮಾನರ ನಿಧನಕ್ಕಾಗಿ ಕಾಶ್ಮೀರದ ರಾಜಧಾನಿ ಶ್ರೀನಗರದ ಎಲ್ಲಾ ಸರಕಾರೀ ಕಾರ್ಯಾಲಯಗಳೂ ಶಾಲೆಗಳೂ ಮುಚ್ಚಲ್ಪಟ್ಟುವು. ನಗರದಲ್ಲಿ ಅರ್ಧ ದಿನ ಹರತಾಳವಿದ್ದಿತು. ಹಲವೆಡೆ ದುಃಖಸೂಚಕ ಸಭೆಗಳಾದುವು; ಕಾಶ್ಮೀರ ರಣಮುಖದ ಊರೂರುಗಳನ್ನು ಸ್ವತಃ ಸಂದರ್ಶಿಸುತ್ತಾ ತಿರುಗುತ್ತಿದ್ದ ಶೇಕ್ ಅಬ್ದುಲ್ಲಾರು ಬ್ರಿಗೇಡಿಯರ್ ಉಸ್ಮಾನರ ಶವ ಸಂಸ್ಕಾರದಲ್ಲಿ ಹಾಜರಿರಲು ನವದಿಲ್ಲಿಗೆ ಬಂದಿದ್ದಾರೆ.

ಕಾಶ್ಮೀರ ಸಮಿತಿಯು ಜುಲಾಯಿ ತಾ 10ಕ್ಕೆ ನವದಿಲ್ಲಿಯಲ್ಲಿಳಿದು ಆ ಮೇಲೆ ಕಾಶ್ಮೀರ ಪಯಣ ಕೈಕೊಳ್ಳುವದೆಂದು ತಿಳಿದುಬರುತ್ತದೆ. ಈ ಪರೀಕ್ಷಾಕಾಲದಲ್ಲಿ ತಮ್ಮ ಯೋಗ್ಯತೆಯನ್ನು ತೋರಿಸಬೇಕೆಂದು ಪಾಕಿಸ್ತಾನೀ ಹಸ್ತಕ ಧಾಳಿಗಾರರು ವಿಶೇಷ ಸಂಖ್ಯೆ ಮತ್ತು ಹೆಚ್ಚಿನ ಹುರುಪಿನಿಂದ ಧಾಳಿಯನ್ನಾರಂಭಿಸಿರುವಂತಿದೆ. ಸಮಿತಿಯು ಕಾಶ್ಮೀರದೊಳಗೆ ಬಂದಾಗ ಪಾಕಿಸ್ತಾನೀ ಹಸ್ತಕರು ಒಳಗಡೆಯಲ್ಲೂ ಬಂಡಾಯವೆಬ್ಬಿಸುವ ಹಂಚಿಕೆ ಹೂಡಬಹುದೆಂಬ ನಿರೀಕ್ಷೆಯಿಂದ ಶೇಕ್ ಅಬ್ದುಲ್ಲಾ ಸರಕಾರವು ಗೃಹರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸಿದೆ.

ಬೊಂಬಾಯಿಯಲ್ಲಿ ಪುನಃ ಗಲಭೆ

ಜುಲಾಯಿ ತಾ. 4ನೇ ರಾತ್ರಿ ಬೊಂಬಾಯಿ ಮಧ್ಯವಲಯದಲ್ಲಿ ಚೂರಿ ಇರಿತಗಳೂ ಕಲ್ಲೆಸೆತಗಳೂ ದೊಡ್ಡ ಪರಿಮಾಣದಲ್ಲಿ ನಡೆದು ಮಹಮ್ಮದ್ ಆಲೀ ಕ್ಷೇತ್ರದಲ್ಲಿ ಪೋಲೀಸರು ಗುಂಡು ಹಾರಿಸಿರುವರೆಂದು ತಿಳಿದುಬರುತ್ತದೆ. ಆ ಕಡೆಯಲ್ಲಿ ಒಂದು ಟ್ರಾಮ್ ಕಾರಿನಿಂದ ಒಬ್ಬನು ಹೊರಗೆಸೆಯಲ್ಪಟ್ಟದ್ದೇ ಹೇತುವಾಗಿ ಒಂದು ಘಂಟೆಯೊಳಗೆ ಇಕ್ಕಡೆಯವರೂ ಹೊಡೆದಾಡಿಕೊಂಡು ಗಲಭೆಯು ಸಮೀಪದ ನಾಗಪಾಡಾ, ಅಗ್ರಿಪಾಡಾ, ಪೈಧೋಣಿ, ಡೋಂಗ್ರಿ ಕ್ಷೇತ್ರಗಳಿಗೆ ಹಬ್ಬಿಕೊಂಡಿತು; ಈ ಭಾಗಗಳ ಕರ್ಫ್ಯೂ ಜ್ಯಾರಿಯಾಗಿದೆ. ಗೊಂದಲ ಹಬ್ಬಿದ ಮಧ್ಯ ಬೊಂಬಾಯಿ ಕ್ಷೇತ್ರದಲ್ಲಿ ಹಿಂದೂ ಮುಸ್ಲಿಮರು ಬೆರೆಯಲ್ಲಿದ್ದಾರೆ. 1947ನೇ ಆಗೋಸ್ತು 15 ಸಮೀಪಿಸುವಾಗ ನಿಂತುಹೋಗಿದ್ದ ಬೊಂಬಾಯಿ ಜಾತೀ ಗಲಭೆಯು ಪುನಃ ತಲೆಯೆತ್ತಿದುದು ಇದೇ ಮೊದಲು.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ನವದಿಲ್ಲಿಯಲ್ಲಿ ಸೇರಿ ಹಲವು ಪ್ರಾಮುಖ್ಯ ನಿರ್ಧಾರಗಳನ್ನು ಮಾಡಿದೆ. ಮುಂದಿನ ಕಾಂಗ್ರೆಸ್ ಜಾಹೀರು ಅಧಿವೇಶನವನ್ನು ಡಿಸೆಂಬರ ತಿಂಗಳಲ್ಲಿ ಜೈಪುರದಲ್ಲಿ ಸೇರಿಸುವ ನಿಶ್ಚಯವಾಗಿದೆ.

ದೊಡ್ಡ ವಿಮಾನ ಅಪಘಾತ.

ಲಂಡನಿನ ಬಳಿಯಲ್ಲಿ ಇದೇ ತಾ. 4ರಲ್ಲಿ ಎರಡು ಪ್ರಯಾಣಿಕ ವಿಮಾನಗಳು ಢಿಕ್ಕಿ ಹೊಡೆದುಕೊಂಡು ಎರಡೂ ಸಂಪೂರ್ಣ ಸುಟ್ಟು ಹೋಗಿ 31 ಮಂದಿ ಮರಣಗೊಂಡ ಪ್ರಥಮ ವಾರ್ತೆ ಬಂದಿದೆ. ಕೆಲವರು ಪೂರ್ಣ ಭಸ್ಮವಾಗಿಂಬೇಕೆಂದು ಊಹಿಸಲಾಗಿದೆ. ಸತ್ತವರಲ್ಲಿ ಮಲಯದ ಫೆಡರೇಶನಿನ ಬ್ರಿಟಿಷ್ ಹೈಕಮಿಶನರಾಗಿದ್ದ ಸರ್. ಎಡ್ವರ್ಡ್ ಜೆಂಟರೊಬ್ಬರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 221|1948

ವಾದಿ- S ಪೊಣಪ್ಪ ಸೆಟ್ಟಿ.

ಪ್ರತಿವಾದಿರು- ರಾಮ ಪೂಜಾರಿ, ನಾಗಪ್ಪ ಪೂಜಾರಿ ಅಳಿಯ, ಉಡುಪಿ ತಾಲೂಕು ಹೊಸಾಳ ಗ್ರಾಮದಲ್ಲಿರುವವ, ಕೋಸ್ಟು ಬಾಕರ್ರು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ,

ಪ್ರತಿವಾದಿಯು ವಾದಿಗೆ ಬರಕೊಟ್ಟ ಬಿ ವಾಂಡು ನೋಟಿನ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು ತಾ. 19-7-48ಕ್ಕೆ ತನ್ನಿಗೆ ಬಿಟ್ಟಿರುತ್ತದೆ. ಆ ಕುರಿತು ನಿಮ್ಮ ಉದಾಹರಣೆ ವಾಕ್ಯ ಮಾಡುವದಿದ್ದ್ರೆ ಸದ್ರಿ ತಾರೀಕಿನ ದಿವ್ಸ ಹಗಲು 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಯಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

N. S. Sowkur,
Advocate for plaintiff

ಕುಂದಾಪುರ, ತಾ. 5-7-48

ನಡಿಯುವ ಚಿತ್ರ

ಭಾರತ್ ಪ್ರೊಡಕ್ಷನ್ಸ್‌ನವರ

"ಔಟ್‌ಲೋ"

ಕಮಲರಾಣಿ, ಬಾಬುರಾವ್, ವಸಂತರಾವ್, ಬುಧು ಅದ್ವಾನಿ.

ಬರುವ ಚಿತ್ರ

ವಿಶ್ವಾನಿಯವರ

"ಶಶಿ ಪುನ್ನು"

ಗೀತಾ ನೈಜಾಮಿ, ಜಯರಾಜ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. No. 167|1948

ಮಂಜ್ಯ ಶೆಟ್ಟಿ—ವಾದಿ

ಮೊಗೇರ ಅಬ್ಬಕ್ಕ—ನಂದು ಹೆಂಗ್ಸಿನ ಮಗಳು—ನಾಡಗ್ರಾಮದಲ್ಲಿರುವವಳು

—ಪ್ರತಿವಾದಿಳು

ಸದ್ರಿ ಪ್ರತಿವಾದಿಳಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ವಾದಿಯು ನಿನಮೇಲೆ ಸರ್ವಜಿತು ಸಂವತ್ಸರದ ಮೂಲಗೇಣಿ ಬಾಕಿ ರೂ. 22-9-0ಕ್ಕೆ ಮೇಲಿನ ಕೋರ್ಟಿನಲ್ಲಿ ದಾಖಲುಮಾಡಿದ ಸದ್ರಿ ದಾವೆಯು ತನ್ನಿಗೆ ತಾ 23-7-48ಕ್ಕೆ ಇಟ್ಟಿರುವುದರಿಂದ ಈ ದಾವಿನಲ್ಲಿ ನಿನ ಉದಾಹರಣೆಇರುವದಕ್ಕೆ ತನ್ನ ದಿವ್ಸ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟುಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿನಮೇಲೆ ಎಕ್ಸ್‌ಪಾರ್ಟೆ ಖತ್ರಿ ಕೊಡೋಣಾಗುವುದು ಎಂಬ ಸಂಗ್ತಿ ಕೋರ್ಟು ಹುಕುಂಪ್ರಕಾರ ತಿಳಿಸೋಣಾಗುತ್ತದೆ.

Soorappa Shetty Kolkebail
Advocate for Pltf

ಕುಂದಾಪುರ ತಾ 5-7-1948

ಉಡುಪಿ
ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ

ಇದರ ವಿಮಾ ಉದ್ಯೋಗಾರಂಭೋತ್ಸವವು ತಾ 4-7-48ನೇ ಆದಿತ್ಯವಾರ ಅಪರಾಹ್ನ ಉಡುಪಿ ಬೋರ್ಡು ಹೈಸ್ಕೂಲಿನ 'ಪೀಸ್ಲೀ ಹಾಲ್'ನಲ್ಲಿ ವಿಜೃಂಭಣೆಯಿಂದ ಜರಗಿತು. ಪ್ರಥಮತಃ ಕಂಪೆನಿಯು ಆಫೀಸಿನಲ್ಲಿ [ನವಯುಗ ಪ್ರೆಸ್ಸಿನ ಮಾಳಿಗೆ] ಅತಿಥಿಗಳಿಗೆ ಚಹಾ ಸತ್ಕಾರವಾಗಿ, ಆ ಮೇಲೆ ಜನಾಬ್ ಯಚ್. ಯಸ್. ಹುಸ್ಸೇನ್ ಸಾಹೇಬ್ ಎಂ ಎಲ್ ಎ, ಇವರ ಅಧ್ಯಕ್ಷತೆಯಲ್ಲಿ ಪೀಸ್ಲೀ ಹಾಲ್‌ನಲ್ಲಿ ಸಭೆಸೇರಿತು. ಕಂಪೆನಿಯು ಚೆಯರ್‌ಮೇನ್ ಶ್ರೀ. ಬಿ. ಪಿ. ಸೆಟ್ಟರು ಸ್ವಾಗತ ಭಾಷಣವಿತ್ತು ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿಯು ಆವಶ್ಯಕತೆಯನ್ನು ವಿವರಿಸಿದ ಮೇಲೆ ಡೈರೆಕ್ಟರರಲ್ಲೊಬ್ಬರಾದ ಶ್ರೀ ಯಸ್. ಯಸ್. ಕೊಳ್ಕೆಬೈಲ್, ಇವರು ಈ ಸಮಾರಂಭಕ್ಕೆ, ಮಂತ್ರಿಗಳು, ನಾಯಕರು ಮತ್ತು ಪ್ರಮುಖ ಮಹೋದ್ಯಮಿಗಳಿಂದ ಬಂದಿದ್ದ ಶುಭಾಕಾಂಕ್ಷೆಯ ಸಂದೇಶಗಳನ್ನೋದಿದರು. ಮೆನೇಜಿಂಗ್ ಡೈರೆಕ್ಟರ್ ಶ್ರೀ. ಕೆ. ಶಿವರಾಯರು ಕಂಪೆನಿಯ ಗತಕಾಲದ ಚರಿತ್ರೆ ಮತ್ತು ಮುಂದಿನ ಗುರಿಯ ನಿರೂಪಣೆ ಮಾಡಿದರು. ಡಾ। ಟಿ. ಮಾಧವ ಪೈಗಳು ಈ 'ನ್ಯೂ ಕರ್ನಾಟಕ ಪ್ರೊವಿಡೆಂಟ್' ವಿಮಾ ಸಂಸ್ಥೆಯ ಪ್ರಾರಂಭೋತ್ಸವ ಭಾಷಣವನ್ನಿತ್ತರು. ಆ ಮೇಲೆ ಶ್ರೀಗಳಾದ ಸಂಜೀವ ಭಟ್, ಸಂಜೀವ ಪೈ, ಡಾ। ಸುಂದರ ರಾಮ ಪೈ, ಟಿ. ಅನಂತ ಉಪೇಂದ್ರ ಪೈ, ರೋಕಿ ಫೆರ್ನಾಂಡಿಸ್, ಟಿ. ಗಣಪಯ್ಯ ಸೆಟ್ಟಿ, ಡಾ। ಕೆ. ಎಲ್. ಐತಾಳ, ಜಿ. ನಾಗಣ್ಣ ಹೆಗ್ಡೆ, ಮೊದಲಾದವರು, ಸಾಮಾನ್ಯ ರೈತ ಕೂಲಿಗಾರರಿಗೂ ಅನುಕೂಲವಾಗುವಂತಹ ಕೇವಲ ರೂ. 900 ಮಿತಿಯನ್ನಿಟ್ಟುಕೊಂಡಿರುವ ಇಂತಹ ಪ್ರೊವಿಡೆಂಟ್ ವಿಮಾ ವ್ಯವಸ್ಥೆಯು ಈ ಕಾಲದಲ್ಲಿ ಅತ್ಯಾವಶ್ಯವೆಂಬುದನ್ನು ವಿವರಿಸಿ, ಕಂಪೆನಿಗೆ ಜನತಾ ಬೆಂಬಲವನ್ನು ಹಾರೈಸಿ ಭಾಷಣವಿತ್ತರು. ಅಧ್ಯಕ್ಷರು ಸಾಮಾನ್ಯ ಜನೋಪಕಾರಿಯಾಗಿನ ಈ ಪ್ರೊವಿಡೆಂಟ್ ವಿಮಾ ವ್ಯವಸ್ಥೆಯನ್ನು ಪ್ರಶಂಸಿಸಿ, ಇದರ ವೈಶಿಷ್ಟ್ಯವನ್ನು ವಿವರಿಸಿ ಭೋದಪ್ರದ ಭಾಷಣವಿತ್ತ ಮೇಲೆ ಡೈರೆಕ್ಟರರಲ್ಲೊಬ್ಬರಾದ ಶ್ರೀ. ಪಿ. ಲಕ್ಷ್ಮೀನಾರಾಯಣ ನಾಯಕರಿಂದ ಧನ್ಯವಾದಗಳಾದುವು.

ಶೋಚನೀಯ ನಿಧನ— ಉದ್ಯಾವರ ಗ್ರಾಮದ ಪಟೇಲರಾಗಿದ್ದು ಉತ್ಸಾಹಿ ಹಾಗೂ ಜನಪ್ರೀತರಿದ್ದ ಶ್ರೀ ಯು. ವಸಂತ ಶೆಟ್ಟರು ವಿಷಮ ಜ್ವರಕ್ಕೀಡಾಗಿ ಇದೇ ತಾ 1ನೇ ರಾತ್ರಿ ದಿವಂಗತರಾದರೆನ್ನಲು ಅತ್ಯಂತ ವಿಷಾದಿಸುತ್ತೇವೆ. ಶ್ರೀಯುತರು ಕೇವಲ 23 ವಯಸ್ಸಿನ ಎಳೇ ತರುಣರಿದ್ದು, ಈ ಪ್ರಾಯದಲ್ಲೇ ತನ್ನ ಸತ್ಕಾರ್ಯ ಮತ್ತು ಸದ್ಗುಣಗಳಿಂದ ಜನರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. ಶೆಟ್ಟರ ವಿಯೋಗ ದುಃಖಕ್ಕಾಗಿ ತಾ. 2ರಲ್ಲಿ ಉದ್ಯಾವರದಲ್ಲಿ ಹರತಾಳ ಮತ್ತು ದುಃಖಸೂಚನೆಗಳಾದವು. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ದಿವಂಗತರ ಸಹೋದರ ಶ್ರೀ ಯು. ಭಾಸ್ಕರ ಸೆಟ್ಟಿ ಮತ್ತಿತರ ಸಂಬಂಧಿಕರಿಗೆ ಸಹಾನುತಾಪ ಸೂಚಿಸುತ್ತೇವೆ.

ಇದೇ ತಾ 1ರಲ್ಲೇ ಕಟಪಾಡಿ ಕೋಟೇಬೀಡಿನ ಶ್ರೀ ಶಿವಸೆಟ್ಟರು ತನ್ನ ಎಳೇ ವಯಸ್ಸಿನಲ್ಲಿ ವಿಷಮಜ್ವರಕ್ಕೆ ತುತ್ತಾದುದು ಅತೀವ ಶೋಚನೀಯವಿದೆ. ಶ್ರೀಯುತರು ಸಾಧು ಹಾಗೂ ಸಾತ್ವಿಕ ಬುದ್ಧಿಯ ಜನಪ್ರೀತ ಯುವಕರಿದ್ದರು. ಅವರ ಆತ್ಮಕ್ಕೆ ಶಾಂತಿಯನ್ನು ಹಾರೈಸಿ ಸಂಬಂಧಿಕರೊಡನೆ ಸಹ ಸಂತಾಪ ಸೂಚಿಸುತ್ತೇವೆ.

ಪ್ರಕಟಣೆ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಸ್ಮಾಲ ಸಂಟ್ರ 77/1948

ವಾದಿ ಅಮ್ಮು ರೈ, ಅನಜೆ ಕೊರಗಪ್ಪ ರೈಗಳ ಅಳಿಯ, ಪುತ್ತೂರು ತಾಲೂಕು ನಿಡ್ಪಳ್ಳಿ ಗ್ರಾಮ.

ಪ್ರತಿವಾದಿರು 1 ಅಜ್ಜಪ್ಪ ರೈ, ಕುರಿಂಜ ಹೊಸಮನೆ ಸುಬ್ಬಪ್ಪ ರೈ ಮೊಮ್ಮಗ, ಪಕುಂಜಿಕ್ಕೆ ಹೆಂಗ್ಸಿನ ಮಗ, 2 ಬೀರಂಣ ರೈ ಒಂದನೇ ಪ್ರತಿವಾದಿಯ ಮಗ, ಆರಿಯಡ್ಕ ಗ್ರಾಮಸ್ತರು. ಹಾಲಿ ಪುತ್ತೂರು ತಾಲೂಕು ಪಾಲ್ತಾಡು ಗ್ರಾಮದ ನೆಲ್ಯಾಜೆಯೆಂಬಲ್ಲಿರುವವರು.

ಸದ್ರಿ ಪ್ರತಿವಾದಿಂಗೆ- ಪ್ರತಿವಾದಿರು ವಾದಿಯಿಂದ ತಾರೀಕು 21-7-46ರಲ್ಲಿ ಡಿಮೆಂಡ್ ನೋಟಿಸು ಬರಕೊಟ್ಟು ಪಡದ ಸಾಲದ ಅಸ್ಲು ಬಡ್ಡಿಗೂ ಅದೇ ಪ್ರಾಮಿಸರಿ ಪರಂಬ್ರ ಅಸ್ಸೈನಮೆಯ ವಾದಿಯಿಂದ ಪಡದ ಕೈಕಡದ ಅಸ್ಲು ಬಡ್ಡಿಗೂ ಪಟ್ಟು ರುಪಾಯಿ 98 9-3 ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರಮೇಲೆ ಮಾಡಿದ ಮೇಲಿನ ವ್ಯಾಜ್ಯವು ಮುಂದೇ ಬರುವ ತಾರೀಕು 13-7-1948ಕ್ಕೆ ಈ ಕೋರ್ಟಿನಲ್ಲಿ ಇತ್ಯರ್ಥ ಕಸ್ಸಿಗೆ ಇಟ್ಟಿರುವದ್ರಿಂದ ಸದ್ರಿ ವಾದೆಯುಕುರಿತು ಪ್ರತಿವಾದಿರ ಆಕ್ಷೇಪವಿದ್ದರೆ ಸದ್ರಿ ವ್ಯಾದೆಯ ದಿವ್ಸ ಹಗಲು ಘಂಟೆ 10ಕ್ಕೆ ಈ ಕೋರ್ಟುಮುಂದೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಉತ್ತರಿಸತಕ್ಕದ್ದು- ತಪ್ಪಿದ್ದಲ್ಲಿ ಪ್ರತಿವಾದಿಂಗೆ ಶಿಕ್ಷ್ಯಮಾಡಿ ಏಕಪಕ್ಷ ವಿಚಾರಣೆಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವದು.

(By order of Court)

H. Sanjeeva Shetty,
Advocate, Puttur

ತಾ 18-6-48

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೆತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣತೋರಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs P. DEVEE, F. DS. (N. J)
Tollygunge CALCUTTA.

ನ್ಯಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರ್ಯ,
ರಥಬೀದಿ, ಉಡುಪಿ.

ಜಗತ್ತಿನಲ್ಲೆಲ್ಲಾ ಸುಮಾರು ನೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ



ವಾರ್ನಿಂಗ್ ಟಿಲ್ಲಿ ಆಯಿಲ್

'ದೇವಾನುಮೋದಿತ ಔಷಧ

ನಮ್ಮ ವಾರ್ನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾರ್ನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾರ್ನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾರ್ನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾರ್ನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾರ್ನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ವಾರ್ನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮುಖ ಇಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಸುಣ್ಣ ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು—ಸೀಸೆ 1ಕ್ಕೆ ರೂ, 3-8-0 ವಿ. ಪಿ. ಬೇರೆ. 1 ಡಜನ್ ಸೀಸೆಗಳಿಗೆ ವಿ ಪಿ ಖರ್ಚುಸಹಿತ ರೂ. 42.0.0. ಪ್ರೊಪರ್ ಬಾಟ್ಲಿ ಸೀಸೆಗೆ ರೂ. 5-0-0 ವಿ. ಪಿ. ಬೇರೆ; ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಬೇರೆ. ವಾರ್ನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18- ವಿ.ಪಿ.ಮಾಫ್.

ಪ್ರಶಂಸನಾ ಪತ್ರ—ನಾನು ನಿಮ್ಮ ವಾರ್ನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು, ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾರ್ನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

ವಿಳಾಸ—**ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,**
ದಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಉಡುಪಿ

ಸಂತಾಪ ಸೂಚಕ ಗೊತ್ತುವಳಿ- ಕಳೆದ ತಾ 30ರಲ್ಲಿ ಸೇರಿದ ಉಡುಪಿ ಲೋಕಲ್ ಕೋಪರೇಟಿವ್ ಯೂನಿಯನ್ ವ್ಯಾಪೃತರ ಸಭೆಯಲ್ಲಿ ಯೂನಿಯನ್ ಕಾರ್ಯದರ್ಶಿಗಳಾಗಿದ್ದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚಕ ಗೊತ್ತುವಳಿಯಾಗಿ ಅವರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು. ವಕೀಲ್ ಶ್ರೀ ಕೆ. ಜಿ. ಬಲ್ಲಾಳರು ಅಧ್ಯಕ್ಷತೆ ವಹಿಸಿದ್ದರು. ತೆರವಾಗಿದ್ದ ಸ್ಥಾನಕ್ಕೆ ವಕೀಲ್ ಶ್ರೀ ಪಿ. ವಿ. ಆಚಾರ್ಯರು ಡೈರೆಕ್ಟರರಾಗಿ ನೇಮಿಸಲ್ಪಟ್ಟು ಅವರನ್ನು ಕಾರ್ಯದರ್ಶಿಯರನ್ನಾಗಿ ಆರಿಸಲಾಯಿತು.

ಕರ್ನಾಟಕ ಸಂಘದ ದುಃಖ ಸೂಚನೆ—ಸ್ಥಳೀಯ ಕರ್ನಾಟಕ ಸಂಘದ ಉತ್ಸಾಹಿ ಜೀವಾಳವಾಗಿದ್ದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ನಿಧನದ ಬಗ್ಗೆ ದುಃಖ ಪ್ರದರ್ಶಿಸುವರೆ ಸಂಘದ ಕಾರ್ಯವಾಹೀ ಸಭೆಯು ತಾ 29ರಲ್ಲಿ ಶ್ರೀ ಪಿ. ಎಸ್. ಪ್ರಭುಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ತಾರಾನಾಥ ವಿದ್ಯಾಪೀಠ, ಬಳ್ಳಾರಿ ಈ ವಿದ್ಯಾಪೀಠದ ಸಂಚಾಲಕರಲ್ಲೋರ್ವರಾದ, ವೈದ್ಯಗುರು ಸ್ವಾಮಿ ರಾಮಯ್ಯ ಯೋಗಾಚಾರ್ಯರು ವಿದ್ಯಾಪೀಠ ಪ್ರಚಾರಾರ್ಥ ಮಂಗಳೂರ ಮಂಜೇಶ್ವರದಿಂದ ಇದೀಗ ಇಲ್ಲಿಗೆ ಬಂದಿರುತ್ತಾರೆ. ಈ ವರ್ಷವೇ ಖಂಡಿತವಾಗಿ ಮದ್ರಾಸ ಸರಕಾರದಿಂದ ಮಾನ್ಯತೆಯನ್ನು ಪಡೆಯಲರ್ಹವಾಗುವಂತೆ ಎಲ್ಲ ವ್ಯವಸ್ಥೆಗಳೂ ಮಾಡಲಾಗಿದೆ. ಸುಮಾರು ನೂರು ಜನ ವಿದ್ಯಾರ್ಥಿಗಳ ವೈದ್ಯಕ ಶಿಕ್ಷಣಕ್ಕೆ ಏರ್ಪಾಟಾಗಲಿದೆ. ತಾರಾನಾಥರಿಂದ ವೈದ್ಯಕ ಜ್ಞಾನಪಡೆದುಕೊಂಡು ಜನಸೇವೆ ಮಾಡಿ ಧನಮಾನವನ್ನು ಗಳಿಸುತ್ತಲಿರುವ ಅನೇಕ ಯುವಕರು ನಮ್ಮ ದಕ್ಷಿಣಕನ್ನಡದಲ್ಲಿ ನೆಲಸಿರುತ್ತಾರೆ. ಇಂದಿನ ನಿರುದ್ಯೋಗ ಸಮಸ್ಯೆಯ ಯುಗದಲ್ಲಿ ಯುವಕರಿಗೆ ಸ್ವತಂತ್ರಜೀವನವನ್ನು ಕಲ್ಪಿಸಿಕೊಟ್ಟು ಜನತೆಗೆ ಆರೋಗ್ಯ ಪ್ರಾಪ್ತಿಮಾಡಿಸಿಕೊಡುವ ಸತ್ಕಾರ್ಯವನ್ನು ಈ ವಿದ್ಯಾಪೀಠವು ಕೈಕೊಂಡು ಬಹುಮಟ್ಟಿಗೆ ಯಶಸ್ವೀಯಾಗಿ ಕಾರ್ಯ ಸಾಧಿಸುತ್ತಲಿದೆ. ಇಂತಹ ಸಂಸ್ಥೆಗೆ ತಾರಾನಾಥರ ಜನ್ಮಪ್ರದೇಶವಾದ ದಕ್ಷಿಣಕನ್ನಡದವರು ಉದಾರಾಶ್ರಯಕೊಟ್ಟು ಪೋಷಿಸಬೇಕಾಗಿ ಬಿನ್ನಹ.

ನೋಟೀಸು

ಉಡುಪಿ ೨ ಮು. ಕೋರ್ಟಿನಲ್ಲಿ

ಕ್ರಮಸಂಬ್ರ 136/1948

U. ಮುಕುಂದ ಕಾಮತ್—ವಾದಿ

ಮತ್ತು

ತಿಂಮಪ್ಪ ಸೆಟ್ಟಿ, ಪಕೀರ ಸೆಟ್ಟಿ ಅಳಿಯ, ಉಡುಪಿ ತಾಲೂಕು ಮೂಲೂರುಗ್ರಾಮ —ಪ್ರತಿವಾದಿ

ಸದ್ರಿ ಪ್ರತಿವಾದಿಗೆ

ಪ್ರತಿವಾದಿಯು ವಾದಿಗೆ ತಾ- 28-9-1946 ರ್ಲಿ ಬರಕೊಟ್ಟ ಚಾಲಗೇಣಿ ಎದ್ರುಸುಡಿಗೆ ಕಾರಣವಾದ ಅಸ್ತಿಯಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಾ ಕಳದವ್ಯಯ ಮತ್ತು ಸರ್ವಜಿತು ಸಂವತ್ಸರಗಳ ಗೇಣಿ ಬಾಕಿಬಗ್ಗೂ—ಆಸ್ತಿ ಸ್ವಾಧೀನ ಪಡಿಸುವಿಕೆ ಬಗ್ಗೆಸಹಾ ವಾದಿಯು ಪ್ರತಿವಾದಿಯಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 21-7-1948ಕ್ಕೆ ಯಿಟ್ಟದೆ. ಆ ದಿವ್ಸ ಸದರಿ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಸದರಿ ಕೋರ್ಟುಮುಂದೆ ಹಾಜರಾಗದಿದ್ದರೆ, ಪ್ರತಿವಾದಿಯ ಗೈರುಹಾಜರಿಯಲ್ಲಿ ಸದರಿ ವ್ಯಾಜ್ಯವು ತೈಸಲು ಮಾಡಲ್ಪಡುವದೆಂಬ ಸಂಗ್ತಿಯೂ ಮೂಲಕ ತಿಳಿಯಪಡಿಸೋದಾಗಿಯದೆ.

M. Damodar Kamath

Advocate for Plaintiff

ಉಡುಪಿ ದ. ಕನ್ನಡಾ. ತಾ. 30-6-1948

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 624/1940. R.I. A. 473/45

R. E. P. 197/1948

ವಾದಿ. ಸುಬ್ರಾಯ ಪೈ

ಪ್ರತಿವಾದಿರು. ವಾಸುದೇವ ಕಾರಂತ ಕೂಡಾ.

1. ವಾಸುದೇವ ಕಾರಂತ, ನಾರಾಯಣ ಕಾರಂತರ ಮಗ, 2. ವಾಸುದೇವ ಕಾರಂತ, ಗಣಪಯ್ಯ ಕಾರಂತರ ಮಗ, ಉಡುಪಿ ತಾಲೂಕು ಗುಂಡ್ಮಿ ಗ್ರಾಮದಲ್ಲಿರುವವರು.

ಸದರಿ ಪ್ರತಿವಾದಿರಿಗೆ.

ಮೇಲ್ಕಂಡ O. S 624/1940ನೇ ಡಿಕ್ರಿ ಪ್ರಕಾರ ವಾದಿಯು ಸದರಿ ಅಮಲ್‌ಜಾರಿ ನಡೆಸಿರುವದರಿಂದ ಯಾಕೆ ಅಮಲ್‌ಜಾರಿ ನಡಿಸ ಕೂಡದು ಎಂಬ ಸಬಬು ತೋರಿಸುವದಕ್ಕೆ ತಾ 19-7-1948ನೇ ದಿವ್ಸ ಹಗಲು 11 ಗಂಟೆಗೆ ಈ ಕೋರ್ಟಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟ ಹುಕುಂಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ.

K Raghunath Shenai

Pleader for Plaintiff.

Coondapoor 30-6-1948

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 109/48

ಮಹಮ್ಮದ್ ಉಸ್ಮಾನ್ ಸಾಹೇಬ್—ವಾದಿ

ಮತ್ತು

ಕೃಷ್ಣ ಭಟ್ಟತಾಳ, ಶ್ರೀನಿವಾಸ ಭಟ್ಟತಾಳರ ಮಗ, ಉಡ್ಪಿ ತಾಲ್ಲುಕ ಶಿವಳ್ಳಿಗ್ರಾಮದ ದೊಡ್ಡಗುಡ್ಡೆ—ಪ್ರತಿವಾದಿ.

ಯಿವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನಂದ್ರೆ:-

ವಾದಿಯವರಿಗೆ ಪ್ರತಿವಾದಿಯು ತಾ. 31-10-1945ನೇ ಮೂಲಗೇಣಿಚೀಟು ಶರ್ತ ಪ್ರಕಾರ ಮೂಲಗೇಣಿ ಹಕ್ಕಿನಿಂದ ಅನುಭವಿಸಿಬರುವ ಅಸ್ತಿಯಬಾಬ್ತು ಗೇಣಿಬಾಕಿ ಮತ್ತು ಕಾಣಿಕೆಬಾಕಿ ಅವುಗಳ ಮೇಲಿನ ಬಡ್ಡಿ ಕೂಡಾ ರುಪ್ಯಾ 162-14-8ಕ್ಕೆ ವಾದಿಯು ಹಾಕ್ಲಿ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 20-7-48ಕ್ಕೆ ಯಿಟ್ಟಿರುತ್ತದೆ. ಆ ಕುರಿತು ಆಕ್ಷೇಪವಿದ್ದಲ್ಲಿ ಸದ್ರಿ ತಾ- 20-7-48ನೇ ದಿವ್ಸ ಬೆಳಗ್ಗೆ 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿಕ್ಷ್ಯಾಮಾಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

P. V. Acharya

Vakil for Plaintiff

ಉಡ್ಪಿ ತಾ 29-6-48

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಎಲ್ಲ ತರದ ದಂತರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಬಿಸಿಲಿನ ತಿಂಗಳುಗಳು ಹೆಚ್ಚು ಕಡಿಮೆ ಆರಿವರಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು. ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಥಾಪಕರು— ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.



ಅಮೃತಾಂಜನ ತಲೆನೋವು, ನೆಗಡಿ, ನೋವು, ಉಳುಕು, ಕುತ್ತಿಗೆ, ಭುಜ ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾವು ಕೊಳ್ಳುವುದು, ಹೇಳು ಬಿಡಮುಂತಾದ ಬೇನೆ ಎಲ್ಲಾ ರೋಗಗಳಿಗೂ ಒಳ್ಳೇದು

ಕಡ, ಹುಳಿಕೆ ಮತ್ತು ಸಕ ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತೆ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಕಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಹೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳಿಯ ಕ್ಷೇತ್ರಗಳಲ್ಲಿ-ತಮಿಳುನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಪಟ್ಟೆಯ ತೆಂಗುಗಳ, ವೃಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಕಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮ ವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವು, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಕಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ ಬ್ಯಾಡಗಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂಡ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು.- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ.   ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ... ಮಣ್ಣು ಪಾಲಾಗುತ್ತೆ.

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸನ್ನಿ, ಮಲವಿರೋಧ, ಸ್ತನಗಳ ಬೀಗ, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ವರೆಗೆ ಕರೆಸಿ ನೂರಾರು ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಕೊನೆಯೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ '**ಪ್ರಸೂತಾಮೃತ**'ದ ೧ ಬಾಟ್ಲಿ ಮತ್ತು ೧ ಡಜನು '**ಪ್ರಸೂತ ಕಲ್ಯಾಣ ವಟಿ**' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಆಯುರ್ವೇದೀಯ ಔಷಧಿಗಳ ಶಾಸ್ತ್ರೀಯ ಮತ್ತು ಅನುಭವಿಕ ಗುಣಧರ್ಮ, ರೋಗಾನುಪಾನ ಪ್ರಮಾಣ, ಕ್ರಯ, ಇತ್ಯಾದಿ ಯುಕ್ತ 96 ಪಾಟಿಗಳ ಸೂಚೀಪತ್ರ, ![ಕ್ಕೆ] 0-8-0. 9 ಆಣೆಯ ಸ್ಟಾಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವದು

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ದಕ್ಷಿಣ ಕನ್ನಡ

ಬ್ರಹ್ಮಾವರ–ಸ್ಥಳೀಯ ಬೋ: ಹಾ. ಎ. ಶಾಲೆಯ ಹೆತ್ತವರ ಸಭೆಯು ತಾ 29-6-48ರಲ್ಲಿ ಉಡ್ಪಿ ರೇಂಜಿನ ಶಾಲೆಗಳ ಸೀನಿಯರ್ ಡಿ. ಇನಸ್ಪೆಕ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಹಿಂದೂಸ್ತಾನ್ ಸ್ಕೌಟ್ ಸಂಘದ, ಕಬ್ಸ್, ಬುಲ್‌ಬುಲ್ಸ್ ಮತ್ತು ಸ್ಕೌಟ್ಸ್‌ಗಳ ನಾಟಕ, ಘೋಷ ಮತ್ತು ವಿವಿಧ ವಿನೋದಾವಳಿಗಳು ಮನೋರಂಜಕವಾಗಿದ್ದವು.

ಉಪ್ಪುಂದ–ಉಪ್ಪುಂದ ಬೋರ್ಡು ಶಾಲೆಯಲ್ಲಿ 6ನೇ ತರಗತಿಯ ಉದ್ಘಾಟನಾ ಸಮಾರಂಭವು ತಾ 2-7-48ನೇ ಪೂರ್ವಾಹ್ನ ಗಂಟೆ 11ಕ್ಕೆ ಕುಂದಾಪುರ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸಪೆಕ್ಟರರಾದ ಶ್ರೀ. ಯು. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಅಂದು ಪ್ರಾರ್ಥನೆ, ಶಾಲಾವರದಿ, ಸ್ವಸ್ತಿವಾಚನ, ಸಭಿಕರ ಭಾಷಣಗಳು ಯಶಸ್ವಿಯಾಗಿ ಜರಗಿದಮೇಲೆ ಅಧ್ಯಕ್ಷರು ಹೆತ್ತವರಿಗೂ ಉಪಾಧ್ಯಾಯರಿಗೂ ಅನೇಕ ಉಪಯುಕ್ತ ಸಲಹೆಗಳನ್ನಿತ್ತಮೇಲೆ ಉಪಹಾರದೊಂದಿಗೆ ಅಂದಿನ ಸಮಾರಂಭವು ಕೊನೆಗೊಂಡಿತು.

ಕನ್ನಡ ರಂಗಭೂಮಿಯ ಶತಮಾನೋತ್ಸವ. ಕನ್ನಡಿಗರಲ್ಲಿ ಬಿನ್ನಹ

ಕನ್ನಡ ರಂಗಭೂಮಿಯ ಶತಮಾನೋತ್ಸವ ಮತ್ತು ಶ್ರೀ ಗುಬ್ಬಿ ನಾಟಕ ಸಂಸ್ಥೆಯ ವಜ್ರೋತ್ಸವವನ್ನು ಮೈಸೂರು ರಾಜಧಾನಿಯ ದಸರಾ ವಸ್ತುಪ್ರದರ್ಶನಾಲಯದಲ್ಲಿ ತಾ 26-8-47ರ ಆರಭ್ಯ ನಡೆಯಿಸಲು ಎಲ್ಲಾ ಏರ್ಪಾಡುಗಳು ಭರದಿಂದ ನಡೆಯುತ್ತಲಿವೆ. ಈ ಉತ್ಸವದ ಆರಂಭೋತ್ಸವವನ್ನು ಮೈಸೂರು ಮಹಾರಾಜರು ನೆರವೇರಿಸಲು ಒಪ್ಪಿರುತ್ತಾರೆ. ಈ ಉತ್ಸವದಲ್ಲಿ ಕನ್ನಡ ರಂಗಮಂಟಪದ ಕಲಾ ಪ್ರದರ್ಶನವನ್ನು ಏರ್ಪಡಿಸಿಯದೆ. ಈ ಸಂದರ್ಭದಲ್ಲಿ ನಾಟಕ, ಯಕ್ಷಗಾನ, ಬಯಲಾಟ, ನೃತ್ಯ, ಲಾವಣಿ, ಹಳ್ಳಿಯ ಆಟಗಳು, ಗ್ರಾಮ ಕೈಗಾರಿಕೆ ಕಲೆಗಳು, ಹಳ್ಳಿಯ ಕಥೆಗಳು, ಒಗಟುಗಳು ಮೊದಲಾದುವುಗಳಲ್ಲಿ ಆಸಕ್ತಿಯುಳ್ಳವರು ಇದೇ ತಾ 10-7-48ರೊಳಗಾಗಿ ತಿಳಿಸಬೇಕಾಗಿದೆ, ಹೆಚ್ಚಿನ ಮಾಹಿತಿಯನ್ನು ಪ್ರಧಾನ ವ್ಯವಸ್ಥಾಪಕ, ಕನ್ನಡ ರಂಗಭೂಮಿಯ ಶತಮಾನೋತ್ಸವ ಸಮಿತಿ ಕಚೇರಿ, ದಸರ ಪ್ರದರ್ಶನಾಲಯ, ಮೈಸೂರು, ಅವರಿಂದ ಪಡೆಯಬಹುದು.

ಮೊಗವೀರ ವ್ಯವಸ್ಥಾಪಕ ಮಂಡಳಿ ಬೊಂಬಾಯಿ–ಇದರ 45ನೇ ವರ್ಧಂತ್ಯುತ್ಸವವು ಮತ್ತು 'ಮೊಗವೀರ ಫ್ರೀ ನೈಟ್ ಹ್ಯಾಸ್ಕೂಲಿನ ಪಾರಿತೋಷಕ ವಿತರಣವು ಕಳೆದ ತಾ 20ರಲ್ಲು ಶ್ರೀ ರತಿಲಾಲ್. ಬಿ ದೇಸಾಯಿ, ಬಿ ಎ. ಅವರ ಅಧ್ಯಕ್ಷತೆಯಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಸಭಾಸದನದಲ್ಲಿ ಬಹು ವಿಜೃಂಭಣೆಯಿಂದ ಜರಗಿತು ಶ್ರೀ ನಾರಾಯಣ ಬಿ. ಬಂಗೇರರು ಸ್ವಾಗತ ಭಾಷಣಮಾಡಿದರು. ಶುಭ ಸಂದೇಶಗಳ ವಾಚನವಾದ ಬಳಿಕ ಶ್ರೀಗಳಾದ ಟಿ. ಎಸ್. ಹೆಗ್ಡೆ, ಕೆ ಡಿ. ಮಾಲ್ಪಿ. ಶೇಟ್ ಭಗವತಿ ಪ್ರಸಾದ ಖೇತಾನ್ ಮತ್ತು ಜಿ. ಕೆ. ವೈದ್ಯರು ಸಮಯೋಚಿತ ಮಾತನಾಡಿದರು.

ಶ್ರೀ ಬಿ. ಶಿವಶಂಕರಯ್ಯನವರು ಧನ್ಯವಾದಗಳನ್ನರ್ಪಿಸಿದನಂತರ ಅಧ್ಯಾಪಕ ಮತ್ತು ವಿದ್ಯಾರ್ಥಿಗಳಿಂದ 'ಹಿಡಿದ ಭೂತ'ವೆಂಬ ಸಾಮಾಜಿಕ ನಾಟಕವು ಅಭಿನಯಿಸಲ್ಪಟ್ಟಿತು.

ರೇಶನ್ ಕಾರ್ಡುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ವಿದಾಯ ಸತ್ಕಾರ ಮತ್ತು ದುಃಖ ಪ್ರದರ್ಶನ–ಕಳೆದ ತಾ 25ರಲ್ಲಿ ನಗರ ಸಭೆಯ ಅಧ್ಯಕ್ಷ ಮತ್ತು ಸದಸ್ಯರುಗಳೂ ಈ ತನಕ ಮುನಿಸಿಪಲ್ ಕಮೀಶನರರಾಗಿದ್ದ ಶ್ರೀ ಎಮ್. ನಾರಾಯಣ ಶೆಟ್ಟಿಯವರು ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟ ನಿಮಿತ್ತ ಅವರಿಗೆ ವಿದಾಯ ಸತ್ಕಾರವನ್ನಿತ್ತರು. ತದನಂತರ ನಗರ ಸಭೆಯು ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿ ಪಾನನಿರೋಧ ಮಂತ್ರಿ ಮಿ। ದಾನಿಯೆಲ್ ತೋಮಸರ ನಿಧನದಬಗ್ಗೆ ಸಂತಾಪ ಸೂಚಿಸಿ ಸಭೆಯ ಕಾರ್ಯಕಲಾಪಗಳನ್ನು ಮುಂದರಿಸಲಾಯಿತು.

ಏಕೀಕರಣ ಸಮಾಚಾರ–ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕಾರಿ ಸಮಿತಿಯ ಸಭೆಯೊಂದು ದಿನಾಂಕ ೨೩ರಂದು ಕಾಸರಗೋಡಿನಲ್ಲಿ ಸೇರಿ ಸಾಹಿತ್ಯ ಸಮ್ಮೇಳನದ ಖರ್ಚುಕಳೆದು ಉಳಿದ ರೂಪಾಯಿ ೪೦೦೦ವನ್ನು ದ. ಕನ್ನಡದಲ್ಲಿ ಏಕೀಕರಣ ಕಾರ್ಯಗಳನ್ನು ಜರಗಿಸುವುದಕ್ಕಾಗಿ ಅ. ಕ. ಏಕೀಕರಣ ಸಂಘಕ್ಕೆ ಕೊಡಬೇಕೆಂದು ನಿರ್ಧಾರವಾಯಿತು. ಶ್ರೀ ಮಂಜೇಶ್ವರ ಗೋವಿಂದ ಪೈಗಳು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೊಡಿಯಾಲ್ ಶ್ರೀನಿವಾಸರಾಯರ ನಿಧನಕ್ಕಾಗಿ ಸಂತಾಪ ಸೂಚಕ ನಿರ್ಣಯ ವಾಯಿತು.

ಅ. ಕ. ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಮತ್ತು ಶ್ರೀ ಕೆ ಆರ್. ಕಾರಂತರು ಕಾಸರಗೋಡಿಗೆ ಹೋಗಿ ಅಲ್ಲಿ ಒಂದು ಗಡಿಸಮಿತಿಯನ್ನು ರಚಿಸಿದರು ಈ ಕೆಳಗಿನವರು, ಗಡಿ ಸಮಿತಿಯ ಸದಸ್ಯರಾಗಿರುವರು. ಶ್ರೀಗಳಾದ ಜಿ. ಎಸ್. ಕಕ್ಕಿಲ್ಲಾಯ (ಕನ್ವೀನರ್) ಪಿ. ಎಸ್. ಭಟ್, ದೇವದಾಸ್ ಶೆಟ್ಟಿ, ಉಮೇಶ ರಾವ್, ಪಿ. ಎಲ್. ಪುಣಿಂಚತ್ತಾಯ, ದೇವಪ್ಪ ಆಳ್ವ, ಅಚ್ಯುತ ಶೆಟ್ಟಿ, ಬಿ. ಎ. ಶೆಟ್ಟಿ, ಮತ್ತು ಜನಾಬ್ ಎಚ್. ಎಚ್. ಜಮಾದಾರ್, ಮಾಹಿನ್ ಜಮಾದಾರ್, ಅಹಮ್ಮದ್ ಅಲಿ ಕಿರೂಲ್, ಮಹಮ್ಮದ್ ಜಮಾದಾರ್, ಎಮ್. ಎಸ್. ಮೊಗ್ರಾಲ್, ಪಿ ಕೆ. ಸಿ. ಮಹಮದ್ ಕುಂಞ, ಯು. ಮಹಮದ್ ಕುಂಞ, ಪಿ. ಅಹಮ್ಮದ್, ಎಡ್ವೊಕೇಟ್.

ಅಖಿಲ ಕರ್ನಾಟಕ ಏಕೀಕರಣ ಸಂಘದ ಕಾರ್ಯಾಲಯವೊಂದನ್ನು ಮಂಗಳೂರಿನ ಕೊಡಿಯಾಲ ಬೈಲಲ್ಲಿರುವ ಬೆಸೆಂಟ್ ಮಂದಿರದಲ್ಲಿ ತೆರೆಯಲಾಗಿದೆ.

ಕ್ಷಯರೋಗದಿಂದ ನರಳುವಿರೇಕೆ?

"ಮಹಾಜನ" ಇವರ

"ಭೃಂಗರಾಜ" ವನ್ನು

ಸೇವಿಸಿರಿ

ಪತ್ರವ್ಯವಹಾರಕ್ಕೆ ವಿಳಾಸ:

ದಿ ಮಹಾಜನ ಕೆಮಿಕಲ್ಸ್ ಮತ್ತು ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್,

ಕಾಸರಗೋಡು, ದ. ಇಂಡಿಯಾ.

ನೆನಪಿರಲಿ ಕೈಲಾಸ ಬೆಟ್ಟದ ಗಿಡ ಮೂಲಿಕೆಯ (ರಿಜಿಸ್ಟರ್ಡ್) ಒಂದು ಡೋಸ್ ಔಷಧವನ್ನು ತಾ. 21-7-48ನೆ ಶನಿವಾರ ಹುಣ್ಣಿಮೆ ದಿನ ಸೇವಿಸಿದರೆ ಎಂತಹ ಅಸ್ತಮ-ಗೂರು ಬ್ಬಸವು ಕಡಿಮೆಯಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Bramhachari G. Das,

Shri Sidh Bramhacharya,

Sewa Ashram,

P. O. Chitrakot (U. P.)

ಲೋಕಕ್ಕೇ ದೊಡ್ಡವ--ಜೋಸೆಫ್ ಸ್ಟಾಲಿನ್.

[೧ನೇ ಪುಟದಿಂದ]

ಕೆ ಹಿಂಗಿ ತೊಟ್ಟುಕೊಂಡಿದ್ದ ಮತ್ತು ಮೊಣಕಾಲ ಕೆಳಗಿನ ಕಪ್ಪು ಚರ್ಮದ ಬೂಟುಗಳೊಳಗೆ ತೂರಿಹೋಗಿದ್ದ ಖಾಕಿ ಟ್ರೌಝರ್ ಹಾಕಿಕೊಂಡಿದ್ದ ಸ್ಟಾಲಿನ ಶಾಂತನಾಗಿ ಮೇಜಿನ ಅಗ್ರಭಾಗದಲ್ಲಿ ಕುಳಿತುಕೊಂಡ. ನಾನವನ ಮುಖಭಾವವನ್ನು ಅವ ಹೇಗೆ ತೋರುತ್ತಿದ್ದ, ನಾವು ಏನು ಹೇಳುವೆವೆಂಬುದನ್ನು ಪೆನ್ಸಿಲ್ ಗೆರೆಯೆಳೆಯುತ್ತಾ ಕೊಂಡು ಅವನ ಎಡಭಾಗದಲ್ಲಿ ಮೊದಲಿನಯುವನಾಗಿ ಕುಳಿತಿದ್ದೆ. ಆತನ ಮುಖದಲ್ಲಿ ಸಿಡುಬಿನ ಕಲೆಯು ಉರುಟು ಕುಳಿಗಳು ಬಹಳವಿವೆ. ಹಣೆ ತಗ್ಗಾಗಿದ್ದು ಹಿಂಭಾಗಕ್ಕೆ ವಾಲಿಕೊಂಡಿದೆ. ಆಗ ಅವನ ತಲೆಗೂದಲು ಮತ್ತು ಮೀಸೆ, ಒತ್ತೊತ್ತಾಗಿ, ದೊರಗಾಗಿ ಕಪ್ಪಗಿದ್ದುವು. ಈಗ ಅವು ಬೂದಿಬಣ್ಣ ಮತ್ತು ತೆಳುವಾಗಿವೆ. ಅವ ನಕ್ಕಾಗ ಗಿಡ್ಡ ಹಲ್ಲುಗಳು ಕಾಣಿಸಿಕೊಂಡವು. ಅವು ಕಪ್ಪು ಅಥವಾ ಭಂಗಾರದ ಮುಚ್ಚಳವುಳ್ಳವಿದ್ದುವು. ಅವನ ಮೂಗು ಉದ್ದ ಮತ್ತು ದೊಡ್ಡದು.

ನಾನು ಬರೆಕೊಂಡ 'ನೋಟ್ಸ್'ಗಳಲ್ಲಿ ಸ್ಟಾಲಿನನ ಕಣ್ಣುಗಳು 'ಕುತಂತ್ರಿ'ಗಳೆಂದಿದೆ. ಬೂದು ಬಣ್ಣದ ಅವುಗಳು ಪೂರ್ಣ ತೆರೆಯಲ್ಪಡುವುದೇ ಅಪರೂಪ; ದೊಡ್ಡ ಕಣ್ಣುಗುಡ್ಡೆಗಳು, ದಪ್ಪಗಿನ ಹುಬ್ಬುಗಳು; ತಾವು ಪ್ರೇಕ್ಷಕರ ಹೃದಯಭೇದಿಸಿ ಒಳಗಡೆ ಆಳವಾಗಿ ನೆಟ್ಟಾಗಲೂ ತಮ್ಮ ಪರೀಕ್ಷೆಯನ್ನಾರೂ ಮಾಡಲಾಗದಂತೆ ಒಂದು ವಿಧದ ತ್ಯಾವದ ಪರದೆ ಆ ಕಣ್ಣುಗಳೊಳಗಿದೆ. "ಈ ಮನುಷ್ಯ ಎಷ್ಟೆಂಥವ!" ಎಂದು ಸ್ಟಾಲಿನನ ಕಣ್ಣುಗಳು ಪ್ರಶ್ನಿಸುತ್ತವೆ. ಒಂದು ಅಪಾಯತರ ಕೊಳ್ಳಿಯಿಂದಾದರೂ ತನ್ನ ಮೇಲೆ ನೆಗೆಯಬಹುದೆಂದು ಸದಾ ಜಾಗ್ರತೆಯಲ್ಲಿರುವ ಓರ್ವ ಬೇಟೆಗಾರನ ಕಣ್ಣುಗಳವು; ಲಾಭವನ್ನು ಮುಗಿಸಿಕೊಳ್ಳುವ ಕಾಲವಿದು ಹೌದೋ ಎಂದು ತತ್ತರಿಸುವ ಸಾಹುಕಾರನ ಕಣ್ಣುಗಳವು; ಯಂತ್ರೋಪಕರಣದ ಕಡೆಗೆ ತನ್ನ ಕಿವಿ ಮತ್ತು ಮೆದುಳನ್ನು ಕೊಟ್ಟು ಪರೀಕ್ಷಿಸುತ್ತಿರುವ ಓರ್ವ ಮನುಜನ ಕಣ್ಣುಗಳವು. ಅವನು ನಗೆ ಸೂಸುವಾಗ ಆ ಕಣ್ಣುಗಳಲ್ಲೊಂದು ಮಿಣುಕಾಟವಿರುತ್ತದ—ನಂಬಿಕೆಯನ್ನು ಪ್ರೇರಿಸಲು ಮತ್ತು ಮೋಹ ನಿರ್ಮಿಸಲು ಬಿಟ್ಟ ಬಾಣದಂತೆ. ಅವರದು ಕಿಲನಗೆಯಲ್ಲ. "ಅವನ ಆ ನಗೆಯೆಂಬುದು ವಿಶೇಷ ಸ್ನೇಹಾಚಾರದ್ದು ಮತ್ತು ತುಸು ಹೆಚ್ಚು ಮಾಧುರ್ಯವುಳ್ಳದ್ದೆಂದು ಪ್ರಾಯಶಃ ನಾನು ಕಲ್ಪನೆ ಮಾತ್ರ ಮಾಡಿಕೊಂಡದ್ದಾಗಿರಬೇಕು" ಎಂದು ಅಧ್ಯಕ್ಷ ರೂಸವೆಲ್ಟರ ಸ್ಪೆಶ್ಯಲ್ ರಾಯಭಾರಿಯಾಗಿ ಬಂದಿದ್ದ ಹ್ಯಾರಿ ಹೋಪ್ಕಿನ್ಸ್ 1941ರಲ್ಲಿ ಸ್ಟಾಲಿನನೊಡನೆ ನಡೆಸಿದ ಪ್ರಥಮ ಸಂಭಾಷಣೆಯ ಕುರಿತು ಬರೆದಿದ್ದ. ರಶ್ಯಕ್ಕೆ ಯುದ್ಧಸಾಮಾಗ್ರಿ ಒದಗಿಸಲು ಬಂದಿದ್ದ "ಹಾಗಾದರೆ ನಾವು ನಿಮ್ಮನ್ನು ಹಿಡಿದುಕೊಂಡೇ ಹೋಪ್ಕಿನ್ಸ್" ಆಗ ಹೋದವ. ಆದರೂ ಆಗಿನ ಸ್ಟಾಲಿನ್ ನಗೆ ಕೂಡಾ "ಧಂಡ; ಸ್ವನಿರ್ಮಿತ" ಇತ್ತು ಎಂದು ಹೋಪ್ಕಿನ್ಸ್‌ಗೆ ತೋರಿತು.

ಪ್ರತಿಭಾವಂತನಲ್ಲ—ಪರಿಶ್ರಮಿ

ಸ್ಟಾಲಿನ್ ವ್ಯಕ್ತಿತ್ವದಲ್ಲಿ ಮನಸ್ಸನ್ನು ಸೆರೆಹಿಡಿಯುವ ಮೋಹಕತೆ ಅಥವಾ ಮಾಧುರ್ಯವೇನೂ ಇಲ್ಲ. ಆತ ಕಾಂತಿಯುತನೂ ಅಲ್ಲ; ಸ್ಫೂರ್ತಿದಾಯಕನೂ ಅಲ್ಲ. ಆದರೆ ಆತ ತಾಸುತಾಸು ಮಾತಾಡುತ್ತಾ ಹೋದಂತೆ ಅವನ ಸಂಕಲ್ಪಶಕ್ತಿಯ ಕುರಿತು ಗೌರವ ಮೂಡುತ್ತದೆ. ಆತ ತನ್ನ ಇಂದಿನ ರಾಜಕೀಯ ಸ್ಥಾನವನ್ನು ನಿಧಾನವಾಗಿ, ಅನುಕ್ರಮವಾಗಿ, ಇಟ್ಟಿಗೆಯ ಮೇಲೆ ಇಟ್ಟಿಗೆಯೇರಿಸುತ್ತಾ ಹೇಗೆ ಸಂಪಾದಿಸಿದ್ದನೋ ಹಾಗೆಯೇ ತನ್ನ ಅಭಿಮತಗಳ ಕುರಿತೂ ಸದಭಿಪ್ರಾಯ ಹುಟ್ಟಿಸುತ್ತಾನೆ. ಇದರಿಂದ ಸುದೀರ್ಘ ಸಂಭಾಷಣೆಗಳಿಗೆ ಸ್ಟಾಲಿನನಿಗಿರುವ ಅಪೇಕ್ಷೆಯು ತೋರಿಬರಬಹುದು. ತನ್ನಿಚ್ಛೆಯ ಭಾವನೆಯನ್ನೇ ಅವರಲ್ಲಿ ಹುಟ್ಟಿಸುವಷ್ಟು ಸಮಯ ವ್ಯಯಿಸದೆ, ತನ್ನ ಸಂದರ್ಶಕರನ್ನು ಹೋಗಲೂ ಬಿಡುವದೆಂದರೆ ಆತನಿಗೆ ಬೇಸರವೆಂದು ತೋರುತ್ತದೆ. ಎಲ್ಲಿಯಟ್ ರೂಸ್ವೆಲ್ಟನೊಡನೆ ಆತ ಎರಡು ಘಂಟೆ ಮಾತಾಡಿದ್ದ; ವಿಂಡೆಲ್ ವಿಲ್ಕಿಗೆ ಎರಡು ತಾಸುಗಳಿಗೂ ಮಿಕ್ಕಿ, ಎರಿಕ್ ಜೋನ್ಸ್‌ನನಿಗೆ ಸುಮಾರು ಮೂರು ತಾಸು ಕೊಟ್ಟಿದ್ದ. ಹ್ಯಾರಿ ಹೋಪ್ಕಿನ್ಸನೊಡನೆ ಎರಡು ಸಂಭಾಷಣೆಗಳಲ್ಲಿ ಆರು ತಾಸುಗಳನ್ನು ವ್ಯಯಿಸಿದ್ದ.

ನಮ್ಮ ಅಮೇರಿಕ ಸಂಗಡ ಮುಂದಾಗಿ ಬರೆದು ಒಪ್ಪಿಸಿದ್ದ ಪ್ರಶ್ನಾವಳಿಕೆಗಳಿಗೆ ನಾಲ್ಕು ತಾಸುಗಳ ತನಕ ಸ್ಟಾಲಿನ್ ಉತ್ತರಿಸಿದ. (ನಮ್ಮ ಪ್ರಶ್ನೆಗಳನ್ನು ರಶ್ಯನ್ ಭಾಷೆಗೆ ತರ್ಜುಮೆಮಾಡಿ ಅವನಿಗೆ ಕೊಡಲಾಗಿತ್ತು; ಯಾಕೆಂದರೆ ಆತನಿಗೆ ಇಂಗ್ಲಿಷ್ ಅಥವಾ ಇತರ ಯಾವುದೇ ವಿದೇಶೀ ಭಾಷೆ ಬರುತ್ತಿಲ್ಲ). ನಿಶ್ಚಯರೂಪದ ಸಾಧಾರೀತಿಯ ಹಾಗೂ ಸ್ವಗವ್ಯ ಉತ್ತರಗಳವು. ನಡನಡುವೆ, ಪ್ರಶ್ನೆಯ ಅರ್ಥ ಹಿಡಿದುಕೊಳ್ಳಲಾಗದೆ ಆತ ಒದ್ದಾಡಿದ್ದಿದೆಯಾದರೂ ಕಟ್ಟಕಡೆಗೆ ಪ್ರತಿ ಸಂದರ್ಭದಲ್ಲೂ ಸರಿ ಸೇರಿದ್ದಾನೆ. ಆಗ ಅವನ ಉದ್ದುದ್ದ ಹಾಗೂ ಸವಿವರವಾದ ಉತ್ತರಗಳು ಬರುತ್ತವೆ. ವ್ಯಂಗ್ಯ ಚಾಟೋಕ್ತಿಯು, ಅಥವಾ ಇಡೀ ಯೋಚನಾರಂಗವನ್ನೊಮ್ಮೆಗೇ ಝಗ್ಗೆಂದು ಬೆಳಗಿಸಬಲ್ಲ ಉಪನ್ಯಾಸಕಲೆಯ ಯೋಗ್ಯತೆ ಸ್ಟಾಲಿನನಲ್ಲಿಲ್ಲ. ಆತ ಉದ್ದಕ್ಕೂ ಆಳಕ್ಕೂ ಉಳುತ್ತಾ ಹೋಗುವ ಮನುಷ್ಯ; ಮಿಂಚು ಧಾಳಿಯಿಂದಲ್ಲ—ಮುತ್ತಿಗೆ ಹಾಕಿಯೇ ಗೆಲ್ಲುವ ಜನ; ಅವನ ಆಯುಧ ಸುತ್ತಿಗೆ—ಹರಿತ ಕತ್ತಿಯಲ್ಲ. ಜಾಣ್ಮೆ, ಕಾಂತಿ, ವ್ಯಕ್ತಿಗತ ಸ್ಫೂರ್ತಿ, ಆಕರ್ಷಣ ಮತ್ತು ಪ್ರೇರಣೆಗಳ ಮಟ್ಟಿಗೆ ತನ್ನಲ್ಲಿರುವ ಕೊರತೆಯನ್ನು ಸ್ಟಾಲಿನನು ಕಠಿಣ ಕಾರ್ಯ, ಸಮಯ, ಮೆಲ್ಲಮೆಲ್ಲಗೆ ಬೀಸುವ ಬಲೆ, ಅವಿಶ್ರಾಂತ ಪರಿಶ್ರಮ, ಚುರುಕು ಹಂಚಿಕೆ ಮತ್ತು ಹಲವು ಶಕ್ತಿಗಳನ್ನೊಂದುಗೂಡಿಸಿ ಹೇರುವ ಭಾರ ಇತ್ಯಾದಿಗಳಿಂದ ತುಂಬಿಸಿಕೊಳ್ಳುತ್ತಾನೆ.

ನಾವು ನಾಲ್ಕು ಘಂಟೆ ಮುಗಿಸಿಕೊಂಡೊಡನೆ ಪ್ರೊಫೆಸರ್ ಚೆರೋವ್ ಸೇವಿಸನು ಕೊನೆಯ ವಿದಾಯ ವಂದನೆಯಾಗಿ "ಸ್ಟಾಲಿನರೇ, ತಾವಿಷ್ಟು ಸಮಯವನ್ನು ನಮಗೆ ಕೊಟ್ಟದ್ದಕ್ಕಾಗಿ ಧನ್ಯವಾದಗಳು" ಎಂದರು. ಆದರಾ ಬೋಲ್ಶೆವಿಕ್ ನಾಯಕನ ಕೆಲಸ ಆಗಲೂ ಮುಗಿದಿರಲಿಲ್ಲ. "ಇಲ್ಲ, ಇಲ್ಲ. ನಾನು ಈ ತನಕ ನಿಮ್ಮ ಪ್ರಶ್ನೆಗಳಿಗುತ್ತರ ಕೊಟ್ಟೆ. ಈಗ ನೀವು ನನ್ನ ಪ್ರಶ್ನೆಗಳಿಗುತ್ತರ ಕೊಡಬೇಕು" ಎಂದನಾತ. ಆ ಮೇಲೆ 'ಅಮೇರಿಕವು ಇನ್ನೂ ಸೋವಿಯಟ್ ರಶ್ಯವನ್ನು ಒಪ್ಪಿಕೊಂಡಿಲ್ಲವೇಕೆ?' 'ಅಮೇರಿಕದಲ್ಲಿ ಕೂಲಿಗಾರ ಪಕ್ಷವೇ ಇಲ್ಲವೇಕೆ?' 'ಅಮೇರಿಕದ ಎಲ್ಲಾ ಮಜೂರರೂ, ಟ್ರೇಡ್ ಯೂನಿಯನ್‌ಗಳಿಗೆ ಸೇರಿಲ್ಲವೇಕೆ?' 'ರಶ್ಯದಲ್ಲಿರುವಂತೆ ಅಮೇರಿಕದಲ್ಲಿಯೂ ಕೆಲಸಗಾರರಿಗೆ ನಿರುದ್ಯೋಗ ವಿಮೆಯ ವ್ಯವಸ್ಥೆಯಿದೆಯೇ?' ಎಂದು ಮುಂತಾಗಿ ಸವಾಲುಗಳನ್ನು ಧಡಾಯಿಸಿದ.

ಇಡೀ ಆರೂಕಾಲು ಘಂಟೆಯ ವರೆಗೂ ಸ್ಟಾಲಿನನು ಏನೊಂದು ಗಲಿಬಿಲಿಯನ್ನು ತೋರಿಸಿದುದಿಲ್ಲ. ಅವನ ಸ್ವರವು ಶಾಂತವಿತ್ತು; ಮತ್ತವನ ಎಲ್ಲಾ ವರ್ತನೆಗಳೂ ಈ ಮನುಷ್ಯ—ಈಗ ಪ್ರಪಂಚಕ್ಕೇನೇ ತಿಳಿದಿರುವಂತೆ—ಅನುದ್ರೇಕಿ, ಕಲುಷ್ಯದಯಿ ಮತ್ತು ಉಕ್ಕಿನ ಸಂಕಲ್ಪದವನೆಂಬುದನ್ನು ಮಂದಟ್ಟುಪಡಿಸುತಿದ್ದವು. "ಸ್ಟಾಲಿನ್"—ಆತನ ಕ್ರಾಂತಿಕಾರಿ ಅನುಯಾಯಿಗಳು ಹಲವು ವರುಷಗಳಿಗೆ ಮೊದಲಿನಿಂದಲೂ ಅವನನ್ನು ಉಕ್ಕಿನ ಮನುಷ್ಯನೆಂದು ಕರೆಯುತ್ತಾ ಬಂದಿದ್ದಾರೆ.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**

Our Chief Agency New business in 1946 bout **54 Lakhs**

Our experience of 37 years available to you for arranging Insurance investment It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.
Bombay Life Building,
Central Office, Udipi.

Branches at:
Mangalore, Calicut, Trivandrum, Madura, Madras, Bangalore & Bombay.

ನಿಮ್ಮ ಮುಂದಿನ ಅಭಿವೃದ್ಧಿಯ ವಿಷಯ ನೀವು ಯೋಚಿಸಿರುವಿರಾ?

ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯ ಕುರಿತು ಎಲ್ಲರೂ ಚರ್ಚಿಸುತ್ತಲಿರುವರು. ಜನರು ತಮ್ಮ ತಮ್ಮ ಯೋಗ್ಯತೆ ತರಗತಿಗಳಿಗೆ ಅನುಸಾರವಾಗಿ ಈ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಲಿರುವರು. ಪ್ರತಿ ಒಬ್ಬ ಮನುಷ್ಯನ ಆರ್ಥಿಕ ಸುಧಾರಣೆಯೇ ಈ ಎಲ್ಲಾ ಯೋಜನೆಗಳ ಧ್ಯೇಯವಾಗಿರುತ್ತದೆ. ಈ ಯೋಜನೆಗಳ ಫಲಿತಾಂಶವು ಜನರ ಬುದ್ಧಿಚಾತುರ್ಯ ಒಮ್ಮತಿತೆ ಮತ್ತು ಉತ್ಸುಕತೆಗಳ ಮೇಲೆ ಹೊಂದಿರುತ್ತದೆ.

ಪ್ರತಿ ಒಬ್ಬ ವ್ಯಕ್ತಿಯೂ ಅವನ ಭಾವಿ ಏಳಿಗೆಯ ವಿಷಯ ಯೋಚಿಸುವುದು ಅವಶ್ಯ. ಸಮಾಜದ ಆರ್ಥಿಕ ಅಭಿವೃದ್ಧಿಗೂ ಅದರ ಮೂಲಕ ವೈಯಕ್ತಿಕ ಅಭಿವೃದ್ಧಿಗೂ ಅವಕಾಶಕೊಡುವ ಮತ್ತು ಗ್ರಾಮದಲ್ಲಿ ಅಥವಾ ಸಮಾಜದಲ್ಲಿ ಜನರ ವಿರಾಮ ಕಾಲವನ್ನು ಪ್ರಯೋಜನಯುಕ್ತವಾಗಿ ಉಪಯೋಗಿಸಲು ಸಹಕಾರಿಗಳಾದ ಕೆಲವು ಯೋಜನೆಗಳು ನಮ್ಮಲ್ಲಿವೆ.

ಇವುಗಳನ್ನು

ಬಾಕ್ಸ ನಂಬ್ರ 22, ನವಯುಗ, ಉಡುಪಿ ಇವರಿಂದ ಪಡೆಯಿರಿ.

ಜನಾಭಿವೃದ್ಧಿಯೇ ದೇಶಾಭಿವೃದ್ಧಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ಪರಾಜಾಣ

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

15-7-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮ }
ವಾರ ೪೫ }

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

{ Vol. 28
{ No. 45

ಪಾಕಿಸ್ತಾನಿಗಳ ಈಗಿನ 'ಜೆಹಾದ್'

ಕಾಶ್ಮೀರದ ಆಕ್ರಮಣಕ್ಕೆ 'ಜೆಹಾದ್' ಹೆಸರು ಕೊಟ್ಟು ಧಾರ್ಮಿಕೋದ್ವೇಗವನ್ನು ನಿರ್ಮಿಸಿ, ಪಠಾಣರ ಟೊಳ್ಳುತಲೆಯೊಳಗೆ ಗಾಳಿಯೂದಿ,ಬತ್ತಾಯ ಹಾಕಿ, ಪಾಕಿಸ್ತಾನವು ಎಂತಹ ಆಟ ಹೂಡಿದೆ ಎಂಬುದು ಕಾಶ್ಮೀರದ ಪಿರ್‌ಕಾಂತಿ ರಣಕಣದಲ್ಲಿ ಸೆರೆಸಿಕ್ಕಿದ ಇಬ್ಬರು ಪಠಾಣರ ಆತ್ಮಕಥೆಯಿಂದ ಸ್ಪಷ್ಟವಾಗಿದೆ. ಸೆರೆಯಾಳುಗಳಾದ ಇಬ್ಬರಲ್ಲೊಬ್ಬನು ಪೂಂಚಿನ ಆಲಾಮ್‌ಖಾನನ ಮಗ ಸುಲೈಮಾನ್. ಮತ್ತೊಬ್ಬನು ಪಠಾಣ; ಹೆಸರು ವಜೀರ್. ಇಬ್ಬರೂ ಸೈನಿಕ ಪೋಷಾಕಿನಲ್ಲಿದ್ದರು. ವಜೀರ್ ಹೇಳಿದ ಆತ್ಮಕಥೆಯ ಸಾರ ಹೀಗಿದೆ:-

"ನಾನು ಪೇಶಾವರ ತಹಶೀಲಿಗೆ ಸೇರಿದ ಬಾಖ್ಮಿರ್ ಶಾ ಗ್ರಾಮದ ಅಹಮ್ಮದ್ ಸಯ್ಯೀದ್ ಎಂಬವರ ಮಗ. ನಾನೊಬ್ಬ ಬಡವ; ಬೇಸಾಯದ ಕೂಲಿ ಕೆಲಸ ಮಾಡಿಕೊಂಡು ದಿನ ದೂಡುತ್ತಿದ್ದೆ. ನನಗೆ ಕೆಲಸ ಕೊಟ್ಟ ಧನಿ ಒಂದು 'ಜೆಹಾದ್'ನಲ್ಲಿ ಹೋರಾಡುವುದಕ್ಕಾಗಿ ಯುದ್ಧಕ್ಕೆ ಹೋಗಬೇಕೆಂದು ಹೇಳಿದ. 'ನಾನದಕ್ಕೆ ಆಕ್ಷೇಪಿಸಿದೆ." ನಾನು ಹೆಂಡತಿ ಮಕ್ಕಳಿದ್ದವ; ನಾನೇ ಹೊಟ್ಟೆ ತುಂಬಿಸಬೇಕಾದ ನಾಲ್ವರು ಮಕ್ಕಳು ನನಗಿದ್ದಾರೆ. ಮಾತ್ರವಲ್ಲ; ನನ್ನ ಬಲಗೈ ಹೆಬ್ಬೆಟ್ಟು ಮುರಿದು ಹೋಗಿರುವುದರಿಂದ ಸೋಲ್ಜರನಾಗಲು ಅಸಮರ್ಥನಿದ್ದೇನೆ" ಎಂದು ಪ್ರತಿವಾದ ಹೂಡಿದೆ. ಆದರೆ ಅವರಾವುದನ್ನೂ ಕಿವಿಯ ಮೇಲೆ ಹಾಕಿಕೊಳ್ಳದೆ ಬಲಾತ್ಕಾರದಿಂದ ನನ್ನನ್ನೊಯ್ದರು. ನನ್ನನ್ನು ಸರಕಾರೀ ಬಸ್ಸೊಂದರಲ್ಲಿ ಹಾಕಿ ಪ್ರಥಮತಃ ಪೇಶಾವರದ ಸರಾಯಿ (ರಸ್ತೇಬದಿಯ ವಿಶ್ರಾಂತಿ ಗೃಹ) ಯೊಂದಕ್ಕೆ ತಂದಿಟ್ಟರು. ಅಲ್ಲಿ ನನ್ನಂತಹ ಸುಮಾರು 1000 ಮಂದಿ ಆ ಮೊದಲೇ ಜಮೆಯಾಗಿದ್ದು ಕಾಯುತ್ತಿದ್ದರು.ನನ್ನನ್ನಲ್ಲಿಂದ ಮತ್ತೊಂದು ಸರಾಯಿಗೊಯ್ದು ಊಟ ಕೊಟ್ಟರು.ಮರುದಿವಸ, ಪಾಕಿಸ್ತಾನವು ಸರಬರಾಯಿಮಾಡಿದ್ದ ಗ್ರಾಮಕೋವಿಗಳು ಮತ್ತು ಸೇನಾಕೋವಿಗಳನ್ನು ಹಿಡಿದುಕೊಂಡು 25 ಲೋರಿಗಳಲ್ಲಿ ನಾವೆಲ್ಲ ಅಬ್ಬಾಟ್ಟಾಬಾದಿಗೆ ಸಾಗಿದೆವು. ಪೇಶಾವರದಲ್ಲಿದ್ದ ಎರಡು ದಿವಸಗಳಲ್ಲಿಯೂ ಕಾಶ್ಮೀರದಲ್ಲಿ ಹಿಂದುಗಳು ಮಾಡುತ್ತಿರುವ ಅತ್ಯಾಚಾರಗಳ ಕುರಿತು ನಮಗೆ ಬೌದ್ಧಿಕಶಿಕ್ಷಣ ಕೊಡಲಾಗಿತ್ತು. ಅಬ್ಬೊಟ್ಟಾಬಾದಿನಿಂದ ನಾವು ಕೊಹಲಾಕ್ಕೆ ಹೋದೆವು. ಮುಝಫರಾಬಾದ್ ಮತ್ತು ಕೊಹಲಾಗಳು ಪಾಕಿಸ್ತಾನದ ಬಲವಾದ ಸೇನಾ ಪಹರಿಯಲ್ಲಿವೆ. ಕೊಹಲಾದಿಂದ ನಾವು ನಡೆದುಕೊಂಡೇ ಬಾಘ್‌ಗೆ ಹೋದೆವು. ನಾವು ಯಾವ ರೇಶನನ್ನೂ ಹಿಡಿದುಕೊಂಡು ಹೋಗಿರಲಿಲ್ಲ; ಹೋದಲ್ಲೆಲ್ಲಾ ಮಾಡಿಟ್ಟ ಅಡುಗೆಯೇ ನಮಗೆ ತಯಾರಿದ್ದಿತು. ಬಾಘ್‌ನಲ್ಲಿ ನಾವು ಎರಡು ದಿನಗಳಿದ್ದೆವು. ಅಲ್ಲಿ ನಮಗೆ ಮೂರು ದಿನಗಳ ರೇಶನನ್ನು ಕೊಡಲಾಯಿತು. ಮತ್ತು ಪೇಶಾವರದಲ್ಲಿ ನಾನು ಕಂಡಿದ್ದ ಆ ಸಾವಿರ ಮಂದಿಯೊಂದಿಗೆ ನನ್ನನ್ನೂ ಹಾಕಿ ಪಿರ್‌ಕಾಂತಿಗೆ ಕಳಿಸಿ ಕೊಡಲಾಯಿತು. ಗುಡ್ಡ ಶ್ರೇಣಿಯ ಬುಡಕ್ಕೆ ಬಂದಾಗ ನಮಗೆಲ್ಲಾ ಮದ್ದು ಗುಂಡುಗಳನ್ನು ಕೊಟ್ಟರು. ಮಿಕ್ಕವರಿಗೆ 80ರಿಂದ 100ರ ವರೆಗೆ ಗುಂಡುಗಳನ್ನು ಕೊಟ್ಟರು; ನನಗೆ ರೈಫಲ್ಲು ಕೊಡದಿದ್ದರೂ 10 ಗುಂಡುಗಳನ್ನು ಕೊಟ್ಟರು. ಪರ್ವತ ಬುಡದಲ್ಲಿ ಎರಡು ದೊಡ್ಡ ಗನ್ನುಗಳನ್ನಿಟ್ಟು, ನಮ್ಮನ್ನು ಹೋರಾಟ ಕೊಡುವಂತೆ ಚುಚ್ಚಿ ದೂಡುತ್ತಾ ನಮ್ಮ ಹಿಂಭಾಗದಲ್ಲಿ ಪಾಕಿಸ್ತಾನ್ ಸೇನೆಗಳಿದ್ದುವು. ಪಾಕಿಸ್ತಾನದ ಸುಮಾರು ಮೂರು ಪಟಲಾಮು ಸೇನೆಗಳು ಇಲ್ಲಿವೆಯೆಂದು ಸೇನೆಗೆ ಸಂಬಂಧಿಸಿದ ಓರ್ವ ಕತ್ತೇ ಸವಾರನು ನನಗೆ ಹೇಳಿದ್ದ. ಹಿಂದೀ ಸೇನೆಗಳು ನಮ್ಮನ್ನಟ್ಟಿಕೊಂಡು ಬಂದು ಸೆರೆ ಹಿಡಿಯುವ ವರೆಗೆ ಎರಡು ಹಗಲು ಮೂರು ರಾತ್ರಿಗಳನ್ನು ನಾನು ಪಿರ್‌ಕಾಂತಿಯಲ್ಲಿ ಕಳೆದಿದ್ದೆ. ಹಿಂದೀ ವಿಮಾನದಳಗಳ ಧಾಳಿಗಳು ನಮಗೆ ವಿಶೇಷ ಹಾನಿಯೊಡ್ಡುವೆಯಲ್ಲದೆ ನಮ್ಮ ಹೃದಯ ಕುಗ್ಗುವಂತೆ ಮಾಡಿವೆ".

ಹಿಂದೀ ಸೇನೆಗಳು ಓಡಿಸಿಕೊಂಡು ಹೋದಾಗ ಸೆರೆಸಿಕ್ಕದಂತೆ ತಪ್ಪಿಸಿಕೊಳ್ಳಬೇಕೆಂದು ಈ ವಜೀರ ಸುಮಾರು 70ಅಡಿ ಎತ್ತರದಿಂದ ಕೆಳಕ್ಕೆ ಹಾರಿ ತಲೆಗೆ ವಿಶೇಷ ಜಖಂ ಮಾಡಿಕೊಂಡಿದ್ದ.

೦೦ ೦೦

ಮೇಲಿನ ಸತ್ಯಕತೆಗಳಂತಹ ಹಲವು ಸತ್ಯಕತೆಗಳು ಕಾಶ್ಮೀರ ಧಾಳಿಗಾರ ಪಾಳಯದಲ್ಲಿ ಕೇಳಿಬರುತ್ತಿವೆ. ಅತ್ತ ಇಪಿ ಫಕೀರನು ಕಾಶ್ಮೀರದ ತನ್ನ 'ಜೆಹಾದ್'ಗೆ ಇತ್ತೀಚೆಗೆ ಪ್ರತಿಕೂಲನಾಗಿ ವರ್ತಿಸ ಹತ್ತಿದ್ದಾನೆಂದು ಕ್ರುದ್ಧಗೊಂಡು ಪಾಕಿಸ್ತಾನ್ ಸರಕಾರವು ಆತನ ವರ್ಚಸ್ಸು ಹಬ್ಬಿರುವ ಉತ್ತರ ವಝೀರಿಸ್ತಾನದ ಮೇಲೆಲ್ಲಾ ವಿಮಾನ ಧಾಳಿಗಳನ್ನು ನಡೆಸಲು ಪ್ರಾರಂಭಿಸಿದೆ. ಮಾತ್ರವಲ್ಲ; ಇಪಿ ಫಕೀರನ ಮುಖ್ಯ ಕಾರ್ಯಾಲಯವಿರುವ ಪರ್ವತ ವಲಯಕ್ಕೆ ಪಾಕಿಸ್ತಾನ್ ಸೇನೆಗಳು ಮುತ್ತಿಗೆ ಹಾಕಿವೆಯೆಂದೂ ಆತನ 31 ಅನುಯಾಯಿಗಳು ಸೆರೆಸಿಕ್ಕಿರುವರೆಂದೂ ಪೇಶಾವರದಿಂದ ಪ್ರಕಟಿಸಲ್ಪಟ್ಟಿದೆ. ತನ್ನ ಮನೆಗೆ ಹಾಕಿದ ಮುತ್ತಿಗೆಯನ್ನು ಭೇದಿಸಿ ನುಸುಳಿಕೊಂಡು ಹೋಗಲು ಯತ್ನಿಸಿದ ವಝೀರೀ ನಾಯಕ ಸಯ್ಯದ್ ಅಮೀರ್ ಎಂಬವನನ್ನು ಗುಂಡಿಟ್ಟು ಕೊಲ್ಲಲಾಯಿತೆಂದು ತಿಳಿದುಬರುತ್ತದೆ. ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್‌ಖಾನ್ ಮತ್ತವರ ಸುಮಾರು 1000 ಮಂದಿ ಅನುಯಾಯಿಗಳ ದಸ್ತಗಿರಿಯ ನಂತರ ಗಡಿನಾಡು ಪ್ರಾಂತ್ಯದಲ್ಲೂ ಇಪಿ ಫಕೀರನ ಕ್ಷೇತ್ರವಾದ ವಝೀರಿಸ್ಥಾನದಲ್ಲೂ ಪಾಕಿಸ್ತಾನ್ ಸರಕಾರಕ್ಕೆ ಹೃದಯಶೂಲೆಪ್ರಾಯವಾದ ಗೊಂದಲಗಳು ವಿಶೇಷ ರೀತಿಯಿಂದ ಹಬ್ಬಿವೆ. ಯಾವ ವಾರಂಟೂ ಇಲ್ಲದೆ ಜನಗಳನ್ನು ಮಾನ ತೋರುವ ಯಾವನನ್ನಾದರೂ ಪಾಕಿಸ್ತಾನದ ಯಾವ ಕಡೆಯಲ್ಲೂ ದಸ್ತಗಿರಿ ಮಾಡಿ ಬಂಧಿಸಿಡುವ ಅಧಿಕಾರವೀಗ ಗಡಿನಾಡು ಪ್ರಾಂತಿಕ ಸರಕಾರಕ್ಕೊಂದು ಓರ್ಡಿನೆನ್ಸ್ ಮೂಲಕ ದೊರೆತಿದೆ. ಪಾಕಿಸ್ತಾನ್ ಸೇನೆಗಳು ವಝೀರಿಸ್ಥಾನದ ಹಲವು ನೆಲೆಗಳ ಮೇಲೆ ಉಗ್ರ ಧಾಳಿಯನ್ನಾರಂಭಿಸಿವೆ. ಇಪಿ ಫಕೀರನು ಪಂಡಿತ ನೆಹರುಗಳ ಭೇಟಿಗೆ ಒಂದೊಮ್ಮೆ ತನ್ನ ರಾಯಭಾರಿಯನ್ನು ಕಳುಹಿಸಿ ನೆಹರುಗಳ ಸಹಾನುಭೂತಿಯನ್ನು ಸಂಪಾದಿಸಿದ್ದು, ಇತ್ತೀಚೆಗೆ ಪುನಃ ಕಳುಹಿಸಿದ್ದ ಪ್ರತಿನಿಧಿಯನ್ನು ಸಿಂಧ್ ಸರಕಾರ ದಸ್ತಗಿರಿ ಮಾಡಿಟ್ಟಿದೆ ಎಂದು ಪಾಕಿಸ್ತಾನವು ಕತೆ ಕಟ್ಟಿ ಪ್ರಕಟಿಸಿದೆ. ಇಂಡಸ್ ವರೆಗಿನ ಕ್ಷೇತ್ರವನ್ನು ಪಠಾಣ ಸ್ಥಾನವಾಗಿ ಪ್ರತ್ಯೇಕಿಸುವದಕ್ಕಾಗಿ ಭಾರತ ಸರಕಾರದ ಧನಸಹಾಯ ದೊರೆತೊಡನೆಯೇ ತಾವು ಆ ಕಡೆಯಿಂದ ಧಾಳಿಯಾರಂಭಿಸುವೆವೆಂದೂ ಅದಕ್ಕನುಗುಣವಾಗಿ ಈ ಕಡೆಯಿಂದ ಭಾರತ ಸರಕಾರವು ಪಾಕಿಸ್ತಾನದ ಮೇಲೆ ಬೀಳಬೇಕೆಂದೂ ಇಪಿ ಫಕೀರನು ಪಂಡಿತ ನೆಹರುಗಳಿಗೆ ಬರೆದಿದ್ದ ಪತ್ರದಲ್ಲಿ ಕೇಳಿಕೊಂಡಿದ್ದನೆಂದು ಪಾಕಿಸ್ತಾನ್ ಕಡೆಯ ಪ್ರಚಾರ. ಮುಸ್ಲಿಂ ಲೀಗಿನ ಮುಖಪತ್ರ 'ಡಾನ್' ಅಪತ್ರದ ಯಥಾನಕಲನ್ನು ಕೂಡಾ ಒಂದು ಪತ್ರ ಪ್ರಕಟಣೆಮಾಡಿದ್ದಿತು. ಇವೆಲ್ಲಾ ಸುದ್ದಿಗಳ ಸತ್ಯಾಂಶ ಹೇಗಿದ್ದರೂ ಪ್ರತ್ಯೇಕತೆಯ ಅಸ್ತ್ರವಾದದಲ್ಲೇ ತಲೆಯೆತ್ತಿದ ಪಾಕಿಸ್ತಾನ್ ಸರಕಾರೀ ಕಟ್ಟಡದಲ್ಲೂ ಅದೇ ಪ್ರತ್ಯೇಕತಾ ಬಿರುಕು ಬೀಳಹತ್ತಿದೆ; ಮಿ. ಜಿನ್ನರು ಅನ್ಯರಿದಿರೊಡ್ಡಿದ್ದುದನ್ನು ಈಗ ತಾವೇ ಇದಿರಿಸಬೇಕಾಗಿ ಬಂದಿದೆ, ಮಾಡಿದ್ದುಣ್ಣೋ ಮಹರಾಯ ಗಾದೆಯು ಅಲ್ಲಿ ಇನ್ನಾವರೀತಿ ಫಲಿಸುವವೋ! ನೋಡಲಿಕ್ಕಿದೆ!

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ:—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,

THE UNITED KARNATAK INSURANCE COMPANY, LIMITED.

★ ಅಲ್ಲಲ್ಲಿ ಕಿಡಿ ಕಾರುತ್ತಿರುವ ★ ಜಾಗತಿಕರಂಗ

★

ಪ್ರಾಪಂಚಿಕ ರಾಜಕೀಯ ರಥ ಯಥಾ ಪ್ರಕಾರ-ಮುಗ್ಗರಿಸಿ, ಮುಂದುವರಿಸಿ-ಸಾಗಿದೆ. ಯುದ್ಧ ಅಥವಾ ಶಾಶ್ವತ ಶಾಂತಿ ಸ್ಥಾಪನೆ, ಇವೆರಡರಲ್ಲೊಂದು ಗುರಿ ಮುಟ್ಟದೆ ಯಾವ ಪಕ್ಷ ಅಥವಾ ರಾಷ್ಟ್ರಕ್ಕಾದರೂ ತಾನು ಹಿಡಿದ ಧೋರಣೆಯನ್ನು ಬದಲಾಯಿಸಲಾಗುವದಿಲ್ಲ. ಆದ್ದರಿಂದ ಜಾಗತಿಕ ಸ್ಥಿತಿಗತಿಗಳಲ್ಲಿ ಯಾವ ವ್ಯತ್ಯಾಸವೂ ಕಂಡುಬರುವದಿಲ್ಲ.

ಭಾರತದ ಸಮಸ್ಯೆಗಳೂ ಮೊದಲಿನವೇ-ಹೈದರಾಬಾದ್, ಕಾಶ್ಮೀರ, ಸ್ಟರ್ಲಿಂಗ್ ಸಾಲಗಳ ವ್ಯವಸ್ಥೆ, ಇತ್ಯಾದಿಗಳು. ಈಗೀಗ ಭಾಷಾವಾರು ಪ್ರಾಂತ್ಯಗಳ ರಚನೆಯ ಕಡೆಗೆ ಹೆಚ್ಚಿನ ಲಕ್ಷ್ಯ ಬೀಳುತ್ತಿದೆ; ಪ್ರತ್ಯಕ್ಷ ಕಾರ್ಯಾರಂಭವಾಗಿದೆ. ನವಧಿಲ್ಲಿಯೇ ಈ ಕಾರ್ಯ ವಿಧಾನದ ಕಾಂಡವಾದರೂ, ಅದರ ಕವಲುಗಳೊಡೆಯುವದು ದಕ್ಷಿಣ ಭಾರತದಲ್ಲೇ. ಕರ್ನಾಟಕ, ಮಲೆಯಾಳ, ಆಂಧ್ರ, ತಮಿಳು, ಮಹಾರಾಷ್ಟ್ರ, ಗುಜರಾತ್ ಭಾಷಾ ಭಾಗಗಳಿಗೆ ಮಾತ್ರ ಸಂಬಂಧಿಸಿರುವ ವಿಷಯವಿದು.

ಉದ್ವೇಗದಾಯಕ ಕಾರ್ಯನಿರ್ವಹಿಸುವ ಹೊಣೆಯು ಈ ಬಾರಿ ಭಾರತಕ್ಕಿಂತ ಹೆಚ್ಚಾಗಿ ಪಾಕಿಸ್ತಾನದ ಹೆಗಲ ಮೇಲೆ ಬಿದ್ದಿದೆ. ಕಾರಣ, ಗಡಿನಾಡಿನ ಗುಡ್ಡಮಲಯುಗಳ ಅಸಾಮಾನ್ಯ ರೀತಿಯ ಗೊಂದಲಗಳು. ಅಂತೆಯೇ ಕರಾಚಿಯನ್ನು ಸಿಂಧ ಪ್ರಾಂತಿಕ ಸರಕಾರದ ಕೈಯಿಂದ ಕಸಗೊಂಡು ತನ್ನ ಸ್ವಂತ ಕೈಯೊಳಗಿಟ್ಟುಕೊಳ್ಳುವ ಪಾಕಿಸ್ತಾನ್ ಕೇಂದ್ರ ಸರಕಾರದ ಹಂಚಿಕೆಗೆ ಸಿಂಧ ಪ್ರಾಂತ್ಯದಲ್ಲಿರುವ ವಿರೋಧವು, ಜಿನ್ನರ ಮೇಲಿನ ಭಯ ಭಕ್ತಿಯಿದಿರಲ್ಲೂ ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದೆ; ಇಂತಹ ಪೊಡೆತಗಳನ್ನು ಕೊಡುವ ಅನುಭವ ಮಾತ್ರವಿದ್ದ ಜಿನ್ನಾ ಪಂಗಡಿಗರು ಈಗ ಅದನ್ನು ಸ್ವತಃ ಅನುಭವಿಸಿ ತಿಳಿಯುವಂತಾಗಿದೆ.

ಲೋಕದ ಸ್ಥಿತಿಗತಿ

ಮಾರ್ಶಲ್ ಯೋಜನೆಯ ಪ್ರಕಾರ ಅಮೇರಿಕದ ಸಾಲ ಸಹಾಯ ಪಡೆಯುವ ಅಂಗ್ಲೋ-ಅಮೇರಿಕಾ ಒಪ್ಪಂದವನ್ನು ಬ್ರಿಟಿಷ್ ಪಾರ್ಲಿಮೆಂಟು ಪ್ರಬಲ ಬಹುಮತದಿಂದ ಮಂಜೂರು ಮಾಡಿದೆ.

ಪಶ್ಚಿಮ ಯುರೋಪಿನ ರಕ್ಷಣಾ ಹೊಣೆಯಲ್ಲಿ ಅಮೇರಿಕವೂ ಪಾಲುಗಾರನಾಗುವ ವ್ಯವಸ್ಥೆಯು ರೂಪಿಸಲ್ಪಡುತ್ತಿದೆ.

ಬರ್ಲಿನ್ ನಗರದಲ್ಲಿ ಎರಡು ಮೂರು ವಾರಗಳಿಂದ ರಶ್ಯವು ಹಾಕಿರುವ ತೀವ್ರ ದಿಗ್ಬಂಧನದ ಕುರಿತು ಅಮೇರಿಕ ಮತ್ತು ಇಂಗ್ಲೆಂಡುಗಳು ತಮ್ಮ ಖಂಡತುಂಡ ನಿಷೇಧಗಳನ್ನು ಸೋವಿಯಟ್ ಸರಕಾರಕ್ಕೆ ಮುಟ್ಟಿಸಿವೆ. ಆ ನಂತರದ ಹೆಜ್ಜೆಯಾಗಿ ಉಗ್ರ ಪ್ರತೀಕಾರೋಪಾಯವಾವುದೂ ಈ ತನಕ ಕೈಕೊಳ್ಳಲ್ಪಟ್ಟಿಲ್ಲ. ರಶ್ಯದ ಉತ್ತರವೂ ಬರುವುದರಲ್ಲಿದೆ

ಪೆಲಸ್ತೈನಿನಲ್ಲಿ, ಸಂಯುಕ್ತ ರಾಷ್ಟ್ರ ಸಂಘದ ಶಾಂತಿದೂತ ಕೌಂಟ್ ಬೆರ್ನಡೊಟ್ಟಿಯವರು ಶತ ಪ್ರಯತ್ನ ಮಾಡಿ ಹೇಗೂ ಒಮ್ಮೆ ತುದಿಗಾಲಲ್ಲಿ ನಿಲ್ಲಿಸಿದ್ದ ಶಾಂತಿಯು ಅದರ ಪ್ರಥಮ ವಾಯಿದೆ ನಾಲ್ಕು ವಾರಗಳು ಮುಗಿಯುತ್ತಾ ಬಂದಾಗಲೇ ಕುಸಿದು ಬಿದ್ದಿದೆ. ಅಲ್ಲಿ ಪುನಃ ಹೋರಾಟವಾರಂಭವಾಗಿದೆ. ಇಸ್ರಾಯೇಲ್ ರಾಜಧಾನಿ ಟೆಲ್ ಅವೀವಿನಮೇಲೆ ಮತ್ತೊಮ್ಮೆ ಆಕಾಶ ಧಾಳಿಯಾರಂಭಿಸಿದೆ. ಈಜಿಪ್ಟ್ ಸೇನೆಗಳು ಮುಂದೊತ್ತಿ ಬಂದಿವೆ. ಯೆಹೂದೀ ಸರಕಾರದ ಪರವಾಗಿ ಜಾಗತಿಕ ಸಂಘಕ್ಕೀ ಕುರಿತು ವರದಿ ಹೋಗಿದೆ.

ಮಲಯದಲ್ಲಿ ಬ್ರಿಟಿಷ್ ಹಾಗೂ ಚೈನಾ ಮಾಲಕರನ್ನು ವಧೆ ಮಾಡುವುದೇ ಮುಂತಾದ ದೊಡ್ಡ ಪರಿಮಾಣದ ಬಂಡಾಯವು ಯಥಾಪ್ರಕಾರ ಸಾಗಿದೆ. ಈ ಕುರಿತು ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ವಸಾಹತು ಕಾರ್ಯದರ್ಶಿ ಮಿ. ಅರ್ಥರ್ ಕ್ರೀಚ್ ಜೋನ್ಸರು ಹೇಳಿಕೆ ಕೊಡುತ್ತಾ "ಮಲಯಕ್ಕೆ ಕೆಂಪು ಅಪಾಯ ಬಡಿದಿದೆ. ಮೋಸ್ಕೋದಿಂದ ಉಗಮಗೊಂಡು ಬ್ರಿಟನಿನ ಮೇಲೆ ಬಿದ್ದಿರುವ ಸುಳ್ಳು ಅಪಪ್ರಚಾರಗಳಲ್ಲಿರುವಂತೆ, ಬ್ರಿಟನು ಅಲ್ಲಿ ಒಂದು ರಾಷ್ಟ್ರೀಯ ಚಳವಳವನ್ನು ದಮನಿಸಲು ಹೊರಟದ್ದೇನೂ ಅಲ್ಲ. ಅದು ಮಲಯದ ಜನತೆಯ ಚಳವಳವಲ್ಲ. ಮಾನವ ಸಮಾಜ ಮತ್ತು ಕ್ರಮಬದ್ಧ ಜೀವನವನ್ನು ಬೇರುಸಮೇತ ನಿರ್ಮೂಲಿಸಲು ಹೊರಟ ಬಂಡಾಯಗಾರರ ಕೃತ್ಯವದು. ನಾವದನ್ನು ನಿರ್ಮೂಲಿಸಿಯೇ ಸಿದ್ಧ" ಎಂದಿದ್ದಾರೆ.

ಡಚ್ಚರು ಹಾಕಿರುವ ಆರ್ಥಿಕ ದಿಗ್ಬಂಧನ ಮತ್ತಿತರ ಅನ್ಯಾಯಗಳ ಕುರಿತು ಇಂಡೋನೇಶಿಯವು ಜಾಗತಿಕ ಸಂಘಕ್ಕೆ ದೂರಿತ್ತಿದೆ. ಸಂಯುಕ್ತ ರಾಷ್ಟ್ರ-ಸಂಘವದನ್ನು ಕೇಳಿಕೊಂಡು ತನ್ನ ಕಟ್ಟಿಟ್ಟ ಬುದ್ಧಿಗನುಗುಣವಾಗಿ ಆ ಸಂಬಂಧದ ಭಿನ್ನತೆಗಳನ್ನು ಒಂದುಗೂಡಿಸುವ ಹೊಣೆಯನ್ನು ತನ್ನ 'ಸುಕಾರ್ಯಾಲಯ'ಕ್ಕೊಪ್ಪಿಸಿದೆ.

ಫಿನ್ಲೆಂಡಿನಲ್ಲಿ ಈ ಬಾರಿ ಆದ ಚುನಾವಣೆಯ ಪರಿಣಾಮವಾಗಿ ಅಲ್ಲಿಯ ಅಧಿಕಾರವು ಕಮ್ಯೂನಿಷ್ಟರ ಕೈಯಿಂದ ತಪ್ಪಿದೆ. ಯಾವುದೇ ಒಂದು ಪಕ್ಷವು ಅಸಹಾಯಶೂರನಾಗಿ ಸರಕಾರ ರಚಿಸುವಷ್ಟು ಪ್ರಬಲ ವಿಜಯ ಪಡೆದಿಲ್ಲವಾದರೂ ಕೃಷಿಗಾರ ಪಕ್ಷ ಮತ್ತು ಸಮತಾವಾದಿಗಳೊಂದಾದರೆ ಪೂರ್ಣ ಬಹುಮತವಾಗಬಹುದು. ಹಲವು ಪಕ್ಷಗಳಿರುವ ಫಿನ್ಲೆಂಡಿನಲ್ಲಿ ಯಾವ ಮಾದರಿಯ ಸರಕಾರ ನಿರ್ಮಾಣಗೊಳ್ಳಬಹುದು-ಮತ್ತದರ ಕುರಿತು ನೆರೆಯ ರಶ್ಯವು ವಹಿಸುವ ಧೋರಣೆ ಯಾವುದು-ಎಂಬುದನ್ನು ನೋಡಲಿಕ್ಕಿದೆ.

ಅಮೇರಿಕದಲ್ಲಿ ಬರುವ ನವಂಬರಿಗೆ ನಡೆಯಲಿರುವ ಅಧ್ಯಕ್ಷ ಚುನಾವಣೆಗೆ ಉಮೇದ್ವಾರರನ್ನು ನಿರ್ಣಯಿಸುವ ಸನ್ನಿವೇಶವಿದು. ಅಧ್ಯಕ್ಷ ಟ್ರುಮೇನರು ತನ್ನ 'ಪ್ರಜಾಸತ್ತಾವಾದೀ' ಪಕ್ಷದಿಂದ ಪುನಃ ನೇಮಕಗೊಳ್ಳುವರೋ ಎಂಬುದನ್ನು ನೋಡುವದುಳಿದಿದೆ. ಟ್ರುಮೇನರೊಡನೆ ಭಿನ್ನಾಭಿಪ್ರಾಯದಿಂದಿರುವವರ ಸಂಖ್ಯೆ ಆ ಪಕ್ಷದಲ್ಲಿ ಕಡಿಮೆಯಿಲ್ಲ.

ಭಾರತ ಸಂಸ್ಥಾನಗಳು

ಭಾರತ ಸರಕಾರದ ಪಾಲಿನ ಕಂಟಕಗಳಾಗಿ ಹೈದರಾಬಾದ್ ಮತ್ತು ಕಾಶ್ಮೀರದ ಸಮಸ್ಯೆಗಳು ಈಗಲೂ ಉಳಿದಿವೆಯಾದರೂ, ನೂರಾರು ಸಂಸ್ಥಾನಗಳಿದ್ದ ಭಾರತದಲ್ಲಿ ಕಳೆದ ಒಂದು ವರುಷದಲ್ಲಿ ಎಂತಹ ರಕ್ತರಹಿತ ಕ್ರಾಂತಿಯೊಂದು ಈ ಸಂಬಂಧವಾಗಿ ನಡೆದಿದೆಯೆಂಬುದು ಮನನಾರ್ಹ ವಿಷಯ. ಭಾರತ ಸರಕಾರವು ತನ್ನ ಸಂಸ್ಥಾನಗಳ ಸಂಬಂಧ ಖಾತೆ ರಚನೆಗೊಂಡ ವಾರ್ಷಿಕೋತ್ಸವ ಮುಹೂರ್ತದಲ್ಲಿ ಪ್ರಕಟಿಸಿದ 'ಶ್ವೇತ ಪತ್ರ'ದ ಕೆಲವು ಅಂಶಗಳು ಗಮನಾರ್ಹವಿವೆ. "ಕಳೆದ ಕೆಲವು ತಿಂಗಳುಗಳಿಂದ ಹಿಂದೀ ಸಂಸ್ಥಾನಗಳಲ್ಲಿ ಅದ್ಭುತ ಬದಲಾವಣೆಯಾಗಿದೆ. ಈ ಬದಲಾವಣೆಯು ದ್ವಿಮುಖದ್ದು. ಮೊದಲನೆಯದಾಗಿ ಕಿರಿ ಸಂಸ್ಥಾನಗಳು ವಿಸ್ತಾರ ಯೋಗ್ಯ ಹಾಗೂ ಆಡಳಿತ ಯೋಗ್ಯ ಏಕಾಕಾರಗಳಾಗಿ ಸಮ್ಮಿಶ್ರಗೊಂಡುದು; ಎರಡನೆಯದಾಗಿ ಪ್ರಜಾಸತ್ತಾ ಸಂಘ ಸಂಸ್ಥೆಗಳ ಬೆಳವಣಿಗೆ ಮತ್ತು ಪ್ರಜಾಪ್ರಭುತ್ವ ಸ್ಥಾಪನೆ. ಒಂದೆಡೆಯಿಂದ ಸ್ವಾತಂತ್ರ್ಯದಿಂದ ಸಿಡಿದ ಪ್ರಜಾಸತ್ತಾತ್ಮಕ [illegible]ಗಳೂ, ಇನ್ನೊಂದೆಡೆಯಿಂದ ಬದಲಾವಣೆಯನ್ನು ಕೂಡಲೇ ಮನ್ನಿಸಿದ ರಾಜರ ರಾಷ್ಟ್ರ ಪ್ರೇಮವೂ ಈ ರಕ್ತ ರಹಿತ ಕ್ರಾಂತಿಯನ್ನು ತಂದವು" ಎಂದು ಶ್ವೇತಪತ್ರದಲ್ಲಿ ಉಲ್ಲೇಖಿಸಲ್ಪಟ್ಟಿದೆ. ನಿಜಕ್ಕೂ ಕಳೆದ ಒಂದು ವರುಷಾವಧಿಯಲ್ಲಿ ಎಂತಹ ಅದ್ಭುತ ಮಾರ್ಪಾಡು ನಡೆದಿದೆಯೆಂಬುದನ್ನು ಈ ಕೆಳಗಿನ ಅಂಕಿ ಸಂಖ್ಯೆಗಳಿಂದ ತಿಳಿಯಬಹುದು:—

84,774 ಚದರ ಮೈಲನ್ನು ವಿಸ್ತೀರ್ಣ 110·18 ಲಕ್ಷ ಜನ ಸಂಖ್ಯೆ ಹಾಗೂ 541·8 ಲಕ್ಷ ಉತ್ಪತ್ತಿಯಿರುವ 21[illegible] ಸಣ್ಣ ಸಂಸ್ಥಾನಗಳು ತಮ್ಮ ಒತ್ತಿನ ಭಾರತ ಪ್ರಾಂತ್ಯಗಳೊಂದಿಗೆ ಲೀನಗೊಂಡು ಪೂರ್ಣ ಅದೃಶ್ಯವಾಗಿವೆ. ಇನ್ನು 19,061 ಚದರ ಮೈಲು ವಿಸ್ತಾರವಿದ್ದ 14·37 ಲಕ್ಷ ಜನ ಸಂಖ್ಯೆ ಮತ್ತು [illegible]ಮಾರು 1[illegible] ಲಕ್ಷ ರೂ. ಉತ್ಪನ್ನವಿರುವ 22 ಸಂಸ್ಥಾನಗಳು ಹಿಮಾಚಲ ಪ್ರದೇಶ ಮತ್ತು ಕಚ್ ಎಂಬೆರಡು ಗುಂಪುಗಳಾಗಿ ರೂಪುಗೊಂಡು ಕೇಂದ್ರಾಡಳಿತೆಗೆ ಮಾರ್ಪಡಿಸಲ್ಪಟ್ಟಿವೆ. ಮೂರನೆಯದಾಗಿ ಒಟ್ಟು 150,400 ಚದರ ಮೈಲು ವಿ[illegible]

ನಿಮ್ಮ ಮುಂದಿನ ಅಭಿವೃದ್ಧಿಯ ವಿಷಯ ನೀವು ಯೋಚಿಸಿರುವಿರಾ?

ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯ ಕುರಿತು ಎಲ್ಲರೂ ಚರ್ಚಿಸುತ್ತಲಿರುವರು. ಜನರು ತಮ್ಮ ತಮ್ಮ ಯೋಗ್ಯತೆ ತರಗತಿಗಳಿಗೆ ಅನುಸಾರವಾಗಿ ಈ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಲಿರುವರು. ಪ್ರತಿ ಒಬ್ಬ ಮನುಷ್ಯನ ಆರ್ಥಿಕ ಸುಧಾರಣೆಯೇ ಈ ಎಲ್ಲಾ ಯೋಚನೆಗಳ ಧ್ಯೇಯವಾಗಿರುತ್ತದೆ. ಈ ಯೋಚನೆಗಳ ಫಲಿತಾಂಶವು ಜನರ ಬುದ್ಧಿಚಾತುರ್ಯ ಒಮ್ಮುಖತೆ ಮತ್ತು ಉತ್ಸುಕತೆಗಳ ಮೇಲೆ ಹೊಂದಿರುತ್ತದೆ.

ಪ್ರತಿ ಒಬ್ಬ ವ್ಯಕ್ತಿಯೂ ಅವನ ಭಾವಿ ಏಳಿಗೆಯ ವಿಷಯ ಯೋಚಿಸುವುದು ಅವಶ್ಯ. ಸಮಾಜದ ಆರ್ಥಿಕ ಅಭಿವೃದ್ಧಿಗೂ ಅದರ ಮೂಲಕ ವೈಯಕ್ತಿಕ ಅಭಿವೃದ್ಧಿಗೂ ಅವಕಾಶಕೊಡುವ ಮತ್ತು ಗ್ರಾಮದಲ್ಲಿ ಅಥವಾ ಸಮಾಜದಲ್ಲಿ ಜನರ ವಿರಾಮ ಕಾಲವನ್ನು ಪ್ರಯೋಜನಯುಕ್ತವಾಗಿ ಉಪಯೋಗಿಸಲು ಸಹಕಾರಿಗಳಾದ ಕೆಲವು ಯೋಚನೆಗಳು ನಮ್ಮಲ್ಲಿವೆ.

ಇವುಗಳನ್ನು

ಬಾಕ್ಸ ನಂಬ್ರ 22, ನವಯುಗ, ಉಡುಪಿ ಇವರಿಂದ ಪಡೆಯಿರಿ.

ಜನಾಭಿವೃದ್ಧಿಯೇ ದೇಶಾಭಿವೃದ್ಧಿ.

★ ಮುಕ್ತಾಯ ಗಲಭೆಯೆದ್ದಿರುವ ★ ಹಿಂದೀ ಸಮಸ್ಯೆ

★

ರ್ಣ, 237·64 ಲಕ್ಷ ಜನ, 2,819·45 ಲಕ್ಷ ಉತ್ಪನ್ನವಿರುವ 294 ಸಂಸ್ಥಾನಗಳು, ಸೌರಾಷ್ಟ್ರ, ಮತ್ಸ್ಯ, ವಿಂಧ್ಯಾ ಪ್ರದೇಶ, ರಾಜಸ್ಥಾನ್, ಮಧ್ಯಭಾರತ, ಪಾಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನೀ ಕೇಂದ್ರಗಳಾಗಿ ಗುಂಪುಗೂಡಿವೆ. ಬಹುಶೀಘ್ರವಾಗಿ ಎಲ್ಲಾ ಸಂಸ್ಥಾನಗಳಲ್ಲೂ ಒಂದಲ್ಲೊಂದು ರೀತಿಯ ಪ್ರಜಾಪ್ರಭುತ್ವ ಸ್ಥಾಪನೆಯಾಗಿದೆ; ಆಗುವುದರಲ್ಲಿದೆ. ಈ ಮಹಾಕಾರ್ಯವು ನಿಜಕ್ಕೂ ಚರಿತ್ರಾರ್ಹವಾದುದು. ಅತ್ತ ಭಾರತ ಸರಕಾರದ ಸೂತ್ರಚಾಲನೆಯು, ಇತ್ತ ಪ್ರಜಾಚಳವಳದ, ಇನ್ನೊಂದೆಡೆಯಿಂದ ಸ್ವತಃ ರಾಜರ ವಿಜಯ, ಸೌಖ್ಯ, ಅಭಿವೃದ್ಧಿ ಮತ್ತು ಹೆಗ್ಗಳಿಕೆ ಹೊರಸೂಸಿ ತೋರುವಂತೆ ಇಂತಹ ಒಂದು ಅಗಾಧ ಮಹತ್ಕಾರ್ಯವು ಕೆಲವೇ ತಿಂಗಳುಗಳೊಳಗೆ ಸಾಧಿಸಲ್ಪಟ್ಟುದು ಹೆಮ್ಮೆಯ ಸಂಗತಿ!

ಹೈದರಾಬಾದ್ ಸಮಸ್ಯೆ

ಹೈದರಾಬಾದಿಗೆ ಕಳ್ಳ ಮಾರ್ಗವಾಗಿ ವಿಮಾನ ಮೂಲಕ ಶಸ್ತ್ರಾಸ್ತ್ರಗಳ ಸರಬರಾಯಿಯಾಗುತ್ತಿದ್ದು, ಆ ವಿಮಾನಗಳು ಒಂದು ಬ್ರಿಟಿಷ್ ಕಂಪೆನಿಯವುಗಳಾಗಿದ್ದುವೆಂದೂ ನಂಬಲು ಕಾರಣಗಳಿವೆಯೆಂದು ಭಾರತ ಸರಕಾರವು ಬ್ರಿಟಿಷ್ ಸರಕಾರಕ್ಕೆ ತಿಳಿಸಿದ್ದಿತು. ಈ ಕುರಿತು ಪಾರ್ಲಿಮೆಂಟಿನಲ್ಲಿ ವಸಾಹತು ಸಂಬಂಧದ ಕಾರ್ಯದರ್ಶಿ ಮಿ ಫಿಲ್ಲಿಪ್ ನೋಯೆಲ್ ಬೇಕರರು ಸ್ಪಷ್ಟ ಹೇಳಿಕೆ ಕೊಡುತ್ತಾ ಹೈದರಾಬಾದಿಗೀ ರೀತಿಯ ಸರಬರಾಯಿ ಮಾಡುವುದು ಆಕಾಶಸಂಚಾರ ಸಂಬಂಧದ ಭಾರತಶಾಸನಕ್ಕೂ, ಚಿಕಾಗೋ ಒಡಂಬಡಿಕೆ ಮತ್ತು ಆಕಾಶಯಾನ ಸಂಬಂಧದ ಬ್ರಿಟಿಷ್ ಶಾಸನಗಳಿಗೂ ವಿರೋಧವಿರುವುದರಿಂದ ಅಂತಹದಾವುದೂ ನಡೆಯದಂತೆ ನೋಡಿಕೊಳ್ಳಲಾಗುವುದೆಂದಿದ್ದಾರೆ. ಭಾರತ ಸರಕಾರದ ವಿನಂತಿಗನುಸಾರವಾಗಿ ಈ ಕುರಿತು ಅವಸರದ ವಿಚಾರಣೆ ನಡೆಯಲಿರುವುದೆಂದೂ ತಿಳಿಸಿದ್ದಾರೆ. ಭಾರತಾಕಾಶದ ಮೇಲೆ ಹಾರಿ ಹೋಗುವ ಪರಕೀಯ ವಿಮಾನಗಳು ಪರಿಶೀಲನೆಗಾಗಿ ನಿಶ್ಚಿತ ನಿಲ್ದಾಣವೊಂದರಲ್ಲಿ ಇಳಿಯತಕ್ಕದ್ದೆಂಬ ನಿಯಮವಿದೆ. ಪಾರ್ಲಿಮೆಂಟಿನ ಟೋರಿ ಸದಸ್ಯರುಗಳು "ಭಾರತದಂತಹ ವಿಶೇಷ ಬಲಶಾಲಿ ರಾಷ್ಟ್ರವು ಹೈದರಾಬಾದನ್ನು ಜುಲುಮೆಗೊಳಪಡಿಸುತ್ತಿರುವುದೇ ಈ ಸಮಸ್ಯೆಗೆ ಮೂಲವಲ್ಲವೆ? ಪಂಡಿತ ನೆಹರುಗಳು ಹಾಗೆ ಮಾಡದಂತೆ ಅವರನ್ನು ಕೇಳಿಕೊಳ್ಳಬಹುದೆ?" ಎಂಬಂತಹ ಪ್ರಶ್ನೆಗಳಿಂದ ಕೂಲಿಗಾರ ಸರಕಾರವನ್ನು ಚುಚ್ಚಿದರೂ ನೋಯೆಲ್ ಬೇಕರರು ಸಮರ್ಪಕ ಉತ್ತರವಿತ್ತಿದ್ದರು.

ಹೈದರಾಬಾದಿನ ಮೇಲಿನ ಹಿಂದೀ ಸರಕಾರದ ಆರ್ಥಿಕ ದಿಗ್ಬಂಧನವೀಗ ಬಿಗಿಗೊಂಡಿದ್ದು ಟಪ್ಪಾಲು ಪಾರ್ಸೆಲ್ ಮೂಲಕ ಆ ಕಡೆಗೆ ಸೋರುತ್ತಿದ್ದ ತೂತುಗಳನ್ನೂ ಈಗ ಹಿಂದೀ ಸರಕಾರ ಪೂರ್ತಿ ಮುಚ್ಚಿದೆ. ಬಹಿಷ್ಕಾರದ ಪರಿಣಾಮವಾಗಿ ಹೈದರಾಬಾದಿನೊಳಗೆ ಸೇಕಡಾ 100ರಂತೆ ಏರಿದ್ದ ಸಾಮಾನುಗಳ ಮೌಲ್ಯವು ಇನ್ನೂ ಹೆಚ್ಚಬಹುದೆಂದು ನಿರೀಕ್ಷಿಸಲಾಗಿದೆ.

ಅನಾರೋಗ್ಯ ನಿಮಿತ್ತ ಎರಡು ತಿಂಗಳುಗಳಿಗೂ ಮಿಕ್ಕಿ ನವದಿಲ್ಲಿಯಲ್ಲಿ ಗೈರುಹಾಜರಿದ್ದ ಗೃಹ ಮಂತ್ರಿ ಮತ್ತು ಸಂಸ್ಥಾನಿಕ ಖಾತೆಯ ಸಚಿವ ಸರ್ದಾರ್ ಪಟೇಲರೀಗ ನವದಿಲ್ಲಿಗೆ ಬಂದು ಪುನಃ ಕಾರ್ಯೋದ್ಯುಕ್ತರಾಗಿರುವುದರಿಂದ ಹೈದರಾಬಾದ್ ಪ್ರಶ್ನೆಯೊಳಗೀಗ ಅವಶ್ಯಕ ಬಿಡಿಮದ್ದು ಸೇರಿಕೊಂಡಂತಾಗಿದೆ. ಸರ್ದಾರ್ ಪಟೇಲರು ಕಾಂಗ್ರೆಸ್ ಅಧ್ಯಕ್ಷರ ಸಮೇತ ಹಲವು ಮುಖಂಡರೊಡನೆ ಎಲ್ಲವನ್ನೂ ಪರ್ಯಾಲೋಚಿಸಿದ್ದಾರೆ. ಶಂಕೆ, ಸಮಜಾಯಿಸುವಿಕೆಯ ಅವಧಿಯು ಪೂರ್ತಿ ಕಳೆದು ಹೋಗಿ ನಿಜಾಮ್ ಸರಕಾರದ ಮೇಲೆ ಕಠಿಣ ಕಾರ್ಯ ಕೈಕೊಳ್ಳುವ ಸಮಯವೀಗ ಬಂದಿದೆ ಎಂಬ ದೃಢಾಭಿಪ್ರಾಯವಿರುವವರು ಪಟೇಲರು. ಅವರ ಈ ಧೋರಣೆಯನ್ನು ಕೆಲವು ಮಂತ್ರಿಗಳೂ ಹೈದರಾಬಾದ್ ಸುತ್ತು ವಲಯದ ಎಲ್ಲಾ ಪ್ರಾಂತಿಕ ಸರಕಾರಗಳೂ ಅನುಮೋದಿಸುತ್ತಿದ್ದಾರೆ. ಆದ್ದರಿಂದ ಈಗ ನಿಜಾಮ್ ಸರಕಾರದ ಕಡೆಗೆ ವ್ಯವಹಾರ ರಂಗದಲ್ಲಿ ಮಾತ್ರ ತೋರುತ್ತಿರುವ ಕಠೋರತೆಯು ಪ್ರತ್ಯಕ್ಷ ರೂಪದಿಂದ ಅದನ್ನಿದಿರಿಸುವ ಕಾಲ ದೂರವಿಲ್ಲವೆಂದು ನಿರೀಕ್ಷಿಸಬಹುದು. ಸರ್ದಾರರು ಈಗ ನಡೆಸುತ್ತಿರುವ ಪರ್ಯಾಲೋಚನೆಗಳು ಹೈದರಾಬಾದ್ ರೋಗ ನಿವಾರಣೆಯ ಕಷಾಯ ಪಾಕದಂತಿವೆ!

ಪ್ರೊಫೆಸರ್ ಭನ್ಸಾಲಿಗಳ ಆಮರಣಾಂತ ಉಪವಾಸ

ಹೈದರಾಬಾದಿನ ನಿರಪರಾಧಿ ಮಹಿಳೆಯರ ಮೇಲೆ ರಝಾಕಾರರು, ನಿಜಾಮರ ಪೋಲೀಸ್ ಮತ್ತು ಸೈನಿಕರು ನಡೆಸಿರುವ ಅತ್ಯಾಚಾರಗಳ ವಿರುದ್ಧವಾಗಿ ಮಹಾತ್ಮಾ ಗಾಂಧಿಯವರ ಪಟ್ಟ ಶಿಷ್ಯ ಪ್ರೊಫೆಸರ್ ಭನ್ಸಾಲಿಯವರು ಇದೇ ಜುಲಾಯಿ ತಾ 10ನೇ ಅಪರಾಹ್ನ 6 ಘಂಟೆಯಿಂದ ಸಾಯುವ ತನಕ ಉಪವಾಸ ದೀಕ್ಷೆವಹಿಸಿದ್ದಾರೆ. ಪ್ರೊ. ಭನ್ಸಾಲಿಗಳು ಸೇವಾಗ್ರಾಮಾಶ್ರಮದವರು; ಗಾಂಧಿಜೀಯ ತತ್ವಗಳನ್ನು ತ್ರಿಕರಣಪೂರ್ವಕವಾಗಿ ಅನುಸರಿಸುತ್ತಿರುವವರು. 1942ರ 'ಕ್ವಿಟ್ ಇಂಡಿಯಾ' ಆಂದೋಲನದಲ್ಲಿ ಅಷ್ಟಿ ಮತ್ತು ಚಿಮೂರಿನ ಮಹಿಳೆಯರ ಮೇಲೆ ನಡೆದ ಅತ್ಯಾಚಾರಗಳ ಪರಿಹಾರಾರ್ಥವಾಗಿ 63 ದಿನಗಳ (48 ದಿನ ನೀರು ಮಾತ್ರ ಸೇವಿಸಿ, 15 ದಿನ ನೀರೂ ಇಲ್ಲದೆ) ಉಪವಾಸ ಮಾಡಿ ಇಡೀ ರಾಷ್ಟ್ರದ ಹೃದಯವನ್ನು ಸೂರೆಗೊಂಡಿದ್ದರು. ಈ ಬಾರಿ ಹೈದರಾಬಾದ್ ರಝಾಕಾರರ ದುಷ್ಕೃತ್ಯಗಳ ಕುರಿತು ನಿಜಾಮರಿಗೆ ಪತ್ರ ಬರೆದು, ತಾನದಕ್ಕಾಗಿ ಅನಶನ ಕೈಗೊಳ್ಳುವೆನೆಂದು ತಿಳಿಸಿ ತಾ 9ನೇ ಮುಂಜಾನೆ ರೈಲು ಹತ್ತಿ ಹೈದರಾಬಾದ್ ಸಂಸ್ಥಾನದ ಮಧಿರಾಕ್ಕೆ ಹೋಗಿದ್ದರು; ಅಲ್ಲಿಗೆ ಹೋದೊಡನೆಯೇ ನಿಜಾಮ್ ಪೋಲೀಸರು ಅವರನ್ನು ನಿರ್ಬಂಧದಲ್ಲಿಟ್ಟು ಕೂಡಲೇ ಹೈದರಾಬಾದ್ ಸಂಸ್ಥಾನ ಬಿಟ್ಟು ಹೋಗತಕ್ಕದ್ದೆಂಬ ಆಜ್ಞೆ ಜಾರಿ ಮಾಡಿದರು. ಬೆನ್ನಲ್ಲಿಯೇ ಪ್ರೊಫೆಸರರನ್ನು ವಿಜಯವಾಡಾಕ್ಕೆ ಹೋಗುವ ರೈಲಿನಲ್ಲಿ ಹಾಕಿ ನಿಜಾಮ್ ಸಂಸ್ಥಾನದ ಗಡಿಯವರೆಗೆ ಪೋಲೀಸ್ ಪಹರೆಯಿಂದ ತಂದು ಮುಟ್ಟಿಸಿ ಹೋದರು. ತಾ. 10ನೇ ಅಪರಾಹ್ನ 6 ಘಂಟೆ ಸಮಯಕ್ಕೆ ರೈಲಿನೊಳಗೇನೇ ಪ್ರೊಫೆಸರ್ ಭನ್ಸಾಲಿ ಆಮರಣಾಂತ ಉಪವಾಸ ದೀಕ್ಷೆ ಕೈಕೊಂಡರು. ವಿಜಯವಾಡಾ ಸ್ಟೇಶನಿನಲ್ಲಿ ಅಲ್ಲಿಯ ಮುನ್ಸಿಪಲ್ ಚೆಯರ್‌ಮೇನ್ ಡಾ. ಚಲಪತಿರಾವ್, ಎ. ಕಾಳೇಶ್ವರ ರಾವ್ ಎಂ. ಎಲ್. ಎ., ಮೊದಲಾದವರು ಅನಶನ ವ್ರತಧಾರಿ ಭನ್ಸಾಲಿಗಳನ್ನಿದಿರುಗೊಂಡು ಚೆಯರ್‌ಮೇನರ ಮನೆಗೊಯ್ದರು. ಈಗ ಪ್ರೊಫೆಸರ್ ಭನ್ಸಾಲಿಗಳ ಉಪವಾಸ ಸಾಗಿದೆ. ಅವರು ನೀರನ್ನು ಕೂಡಾ ಸೇವಿಸುತ್ತಿಲ್ಲ. ತನ್ನೀ ಕಠೋರ ವ್ರತದ ಉದ್ದೇಶದ ಕುರಿತು ಇದೇ 11ರಲ್ಲಿ ಪ್ರೊಫೆಸರ್ ಭನ್ಸಾಲಿಗಳಂದಿದ್ದಾರೆ. "ನಿನ್ನೆ ನಾನು ಸಂಸ್ಥಾನದೊಳಗೆ ಪ್ರವೇಶಿಸುವಾಗ ನನ್ನ ಹೃದಯ ಭಾರವಾಗಿತ್ತು. ಆದರೆ ನಿನ್ನೆ ಅಪರಾಹ್ನ ಆಮರಣಾಂತ ಉಪವಾಸ ಧಾರಣೆ ಮಾಡಿದಂದಿನಿಂದ ನನ್ನ ಹೃದಯದ ಹೊರೆಯಿಳಿದಿದೆ. ನನ್ನ ಮನಸ್ಸಾಕ್ಷಿಯನ್ನು ಸಮಾಧಾನಿಸುವದಕ್ಕಾಗಿ ನಾನೀ ಉಪವಾಸ ಕೈಕೊಂಡಿದ್ದೇನೆ. 52 ವರುಷ ಪ್ರಾಯದವನಾದ ನಾನು ಒಂದು ತಿಂಗಳಿಗೂ ಮಿಕ್ಕಿ ಉಳಿಯಲಾರೆನೆಂಬುದನ್ನು ಬಲ್ಲೆ. ಯಾಕೆಂದರೆ ನಾನು ನೀರನ್ನು ಕೂಡಾ ತೆಗೆದುಕೊಳ್ಳುವದಿಲ್ಲ. ರಝಾಕಾರ್ ಅತ್ಯಾಚಾರಗಳಿಗೆ ಬಲಿಬಿದ್ದ ಆ ಮಹಿಳೆಯರ ಕಡೆಗೆ ನನ್ನ ಹೃದಯ ಸಾಗಿದೆ, ಸಾಯುವ ತಯಾರಿಯೊಂದೇ ಈ ಉಪವಾಸದಲ್ಲಿ ನನ್ನ ಉಪಕರಣ. ನಾನು ಅವರ ಕೃತ್ಯಗಳನ್ನು ದ್ವೇಷಿಸಿದರೂ, ಒಂದು ರೀತಿಯ ಮಾನವೀಯತೆಯ ಮೇಲಿಂದ ವ್ಯಕ್ತಿಶಃ ಅವರ ಮೇಲಾವ ದುರ್ಭಾವನೆಯೂ ಇಡದ ಆ ರಝಾಕಾರ್ ಪುಂಡರ ಸಮೇತ ಸರ್ವರಿಗೂ ನಾನು ಹಿತ ಕೋರುತ್ತೇನೆ. ಸದಾಕಾಲ, ನನ್ನ ದೃಢ ಸಂಕಲ್ಪವು ದುರ್ಬಲರ ಹಾಗೂ ಅನ್ಯಾಯ ಕ್ಕೀಡಾದವರ ಕಡೆಗೂ ನನ್ನ ದೃಢ ವಿಶ್ವಾಸವು ಆ ಚಿರಂಜೀವಿಯ ಮೇಲೂ ಇದೆ!"

ಮಾನವೀಯ ಕಾರ್ಯಸೇವೆಗಾಗಿ ತನ್ನನ್ನು ಹೈದರಾಬಾದ್ ಸಂಸ್ಥಾನದೊಳಗೆ ಸ್ವತಂತ್ರವಾಗಿ ಸಂಚರಿಸಲು ಬಿಡುವವಾದರೆ ತಾತ್ಕಾಲಿಕವಾಗಿ ಉಪವಾಸವನ್ನು ನಿಲ್ಲಿಸಲು ತಾನು ಸಿದ್ಧನಿದ್ದೇನೆಂದು ಪ್ರೊ. ಭನ್ಸಾಲಿಗಳಂದಿದ್ದಾರೆ. ಹೈದರಾಬಾದಿನಲ್ಲಿರುವ ಹಿಂದೀ ಏಜಂಟ್ ಜನರಲರ ಕಚೇರಿಗೆ ಟೆಲಿಫೋನ್ ಮಾಡಿ ನಿಜಾಮ್ ಸರಕಾರದಿಂದ ಭನ್ಸಾಲೀ ಸಂಚಾರಕ್ಕೊಪ್ಪಿಗೆ ಪಡೆಯುವಂತೆ ಮಾಡಬೇಕೆಂದು ಕೇಳಿಕೊಳ್ಳಲಾಗಿದೆ. ಈ ಉಪವಾಸದ ಕುರಿತು ಸರ್ದಾರ್ ಪಟೇಲರಿಗೂ ಟೆಲಿಫೋನ್ ಮೂಲಕ ಸುದ್ದಿ ಕೊಡಲಾಗಿದೆ ರಾಷ್ಟ್ರವಿಡೀ ಆತುರಕ್ಕೀಡಾಗಿದೆ.

ಕಾಶ್ಮೀರ ಕಂಟಕ

ಸಂಯುಕ್ತ ರಾಷ್ಟ್ರ ಸಭೆಯ ಕಾಶ್ಮೀರ ಸಮಿತಿ ಮುಂಚೂಣೀ ಸಂಗಡದವರು ಇಷ್ಟರಲ್ಲೇ ನವದಿಲ್ಲಿಗೆ ಬಂದಿದ್ದು ತಮ್ಮ ಕಾರ್ಯಾಲಯಗಳ ವ್ಯವಸ್ಥೆಯಲ್ಲಿ ತೊಡಗಿದ್ದಾರೆ; ಸಮಿತಿಯ ಎಲ್ಲಾ ಸದಸ್ಯರೂ ಶೀಘ್ರದಲ್ಲೇ ಆಗಮಿಸಿ ಕ್ರಮಬದ್ಧ ಕಾರ್ಯಕ್ರಮಗಳಾರಂಭವಾಗಲಿವೆ. 'ಕಾಶ್ಮೀರ ಸಂಬಂಧದ ಪಾಕಿಸ್ತಾನದ ಆಕ್ರಮ'ದ ಕುರಿತು ದೂರು ಕೊಟ್ಟುದಕ್ಕೆ ಜಾತೀಯ ನಾಶ, ಜುನಾಗಾಡ್ ಪ್ರಶ್ನೆ, ಪಾಕಿಸ್ತಾನಕ್ಕಾಗಬೇಕಾಗಿದ್ದ ಸಂದಾಯ ಬಾಕಿ, ಇತ್ಯಾದಿಗಳನ್ನೆಲ್ಲಾ ಸೇರಿಸಿ ಕಲಸು ಮೇಲೋಗರ ಮಾಡಿ 'ಭಾರತ-ಪಾಕಿಸ್ತಾನ್ ಪರಿಶೀಲನಾ ಸಮಿತಿ'ಯಾಗಿ ಬರುತ್ತಿರುವ ಈ ಸಮಿತಿಯ ಕಾರ್ಯಕ್ರಮಗಳ ಕುರಿತು ಭಾರತದ ಹಿಂದಿನ ಆಕ್ಷೇಪಗಳು ಅಚಲವಿದ್ದರೂ ತನ್ನ ಧೋರಣೆಗೆ ವ್ಯತಿರಿಕ್ತವಾಗದ ಎಲ್ಲಾ ವಿಧದ ಸಹಕಾರಗಳನ್ನೂ ಭಾರತ ಸರಕಾರವು ಈ ಸಮಿತಿಗೀಯಲಿದೆ.

ಭಾರತ ಮತ್ತು ಕಾಶ್ಮೀರವನ್ನು ಭೂಮಾರ್ಗವಾಗಿ ಜೋಡಿಸುವ ಪಠಾನ್ ಕೋಟ್-ಜಮ್ಮು ಮಾರ್ಗವನ್ನು ಜುಲಾಯಿ ತಾ. 7ರಲ್ಲಿ ಪಂಡಿತ ನೆಹರುಗಳು ತೆರೆದು "ಈ ರಸ್ತೆ ಮತ್ತದರ ಸೇತುವೆಗಳು ಎರಡು ಜನತೆಯ ಹೃದಯಗಳನ್ನು ನಿಜಕ್ಕೂ ಒಂದುಗೂಡಿಸುತ್ತವೆ" ಎಂದರು. ಮುಂಭಾಗದಲ್ಲಿ ಪಂಡಿತ ನೆಹರುಗಳನ್ನು ಕುಳ್ಳಿರಿಸಿಕೊಂಡು 16 ಮೋಟಾರು ಬಂಡಿಗಳು ಮತ್ತು ನಾಲ್ಕು ಕಾರುಗಳು ಈ ರಸ್ತೆಯ ಮುಖಾಂತರ ಜಮ್ಮುವಿನೊಳಗೆ ಪ್ರಥಮ ಪ್ರವೇಶ ಮಾಡಿದುವು. ಸುಮಾರು ಮೂರು ಕೋಟಿ ರೂಪಾಯಿ ವೆಚ್ಚದಿಂದ ಗುಡ್ಡಗಾಡು, ಹೊಳೆ, ತೋಡುಗಳನ್ನೆಲ್ಲಾ ಜೋಡಿಸಿ, ಸಮಮಟ್ಟಕ್ಕೆ ತಂದು ಹಲವು ಸಂಕ ಸೇತುವೆಗಳ ಸಮೇತ ರಚಿಸಿದ್ದ 65 ಮೈಲು ಉದ್ದದ ಈ ರಸ್ತೆಯು ಇಂಜಿನೀಯರ್ ಕೌಶಲ್ಯದ ಒಂದು ಉತ್ತಮ ಮಾದರಿ. ಕಾಶ್ಮೀರ ಯುದ್ಧ ಸರಬರಾಯಿಯ ತೊಡಕುಗಳು ಈ ರಸ್ತೆಯ ಉಗಮದೊಂದಿಗೆ ಅಸ್ತಮಿಸಿದುವು.

ಸ್ಟರ್ಲಿಂಗ್ ಸಾಲಗಳ ಕುರಿತು ಇಂಗ್ಲೆಂಡು ಮತ್ತು ಭಾರತಗಳೊಳಗಿನ ಒಪ್ಪಂದ ಕರಾರಿಗೆ ಲಂಡನಿನಲ್ಲಿ ಸಹಿ ಬಿದ್ದಿದೆ.

ಗಾಂಧಿಜೀ ಕೊಲೆಯ ಮೊಕದ್ದಮೆಯಲ್ಲಿ ಸರಕಾರೀ ಸಾಕ್ಷ್ಯಗಳಾಗುತ್ತಿವೆ.

ಸಂಗತಿ-ಸಾರ

ಗಾಂಧಿಜೀ ಕುರಿತು ಸ್ಮಟ್ಸರ ಮಾತು

ಗಾಂಧಿಜೀಯ ಜೀವನ ಮಾರ್ಪಾಟಿನ ಮೊದಲ ರಂಗವಾದ ದಕ್ಷಿಣಾಫ್ರಿಕದ ದರ್ಬಾನಿನಲ್ಲಿ ಗಾಂಧಿಜೀಯ ಭಸ್ಮಾವಶೇಷ ವಿಸರ್ಜನೋತ್ಸವವು ಇದೇ ತಾ ೧೮ರಲ್ಲಿ ನಡೆಯಿತು. ದ. ಆಫ್ರಿಕದ ಹಿಂದೀಯರ ಉದ್ಧಾರಕ್ಕಾಗಿ ಮಹಾತ್ಮರು ಚಳವಳ ಹೂಡಿದ್ದ ಆ ಕಾಲದಲ್ಲೂ ಅಲ್ಲಿಯ ಸರಕಾರದ ಶಿರಸ್ಸಾಗಿ ಅವರನ್ನು ಇದಿರಿಸಿದ್ದ–ಇತ್ತೀಚಿನ ವರೆಗೂ ಅಲ್ಲಿಯ ಮುಖ್ಯ ಮಂತ್ರಿಯಾಗಿದ್ದ–ಜನರಲ್ ಸ್ಮಟ್ಸರು ಈ ಸಂದರ್ಭಕ್ಕಾಗಿ ಈ ಕೆಳಗಿನ ಸಂದೇಶ ರವಾನಿಸಿದ್ದರು: "ಅವರು ತನ್ನ ರಾಷ್ಟ್ರದ ಮತ್ತು ಲೋಕದ ಸೇವೆಯನ್ನು ತನ್ನ ಆರೋಗ್ಯ ಹಾಗೂ ಮುದಿ ಪ್ರಾಯವನ್ನು ಕೂಡಾ ಗಣಿಸದೆ ಅನುಪಮ ಶಕ್ತಿ ಹಾಗೂ ಏಕಾಗ್ರತೆಯಿಂದ ಸಲ್ಲಿಸಿದ್ದರು. ಕೊನೆಯದಾಗಿ ಚರಿತ್ರೆಯ ಅತಿ ದೊಡ್ಡ ದುರ್ಘಟನೆಗಳಲ್ಲೊಂದಾಗುವ ಅತ್ಯಂತ ದೊಡ್ಡ ಪ್ರತಿಫಲವನ್ನೂ ಪಡೆದರು. ಪ್ರಾಯಶಃ ಅವರ ಅಸಾಮಾನ್ಯ ಜೀವನ ದಾಖಲೆಗೆ ಹೇಳಿಸಿದ ಮುಕ್ತಾಯವಿದೇ ಎನ್ನಬಹುದು; ಅವರ ಸಂದೇಶವು ಜನಮನದಲ್ಲಿ ಅಗ್ನಿಯಂತೆ ಜ್ವಲಿಸುತ್ತಿರಬೇಕಾದರೆ ಅದು ಈ ರೀತಿಯಲ್ಲೇ ಮುದ್ರೆಯೊತ್ತಲ್ಪಡಬೇಕಿತ್ತೇನೋ!"

ಜನರಲ್ ಸ್ಮಟ್ಸರ ಹಳೇ ಮೆದುಳಿಗೆ ತನ್ನ ಮುದ್ರೆಯನ್ನು ಇಷ್ಟು ಆಳಕ್ಕೊತ್ತಿದ ಗಾಂಧಿಜೀಯ ಬಲಿದಾನವು ಇನ್ನು ಎಂತಹದನ್ನೂ ಬಿಸಿ ಮಾಡೀತೆಂಬ ಮಾತು ನಿಜ.

ಅಮೇರಿಕದ ಜೈಲಿನ ರುಚಿ

ಕೂಲಿಗಾರ ಸಂಬಂಧದ ಜಾಗತಿಕ ಸಮ್ಮೇಳನವೊಂದರ ಹಿಂದೀ ಪ್ರತಿನಿಧಿಗಳಾಗಿ ಅಮೇರಿಕಕ್ಕೆ ಹೋಗಿದ್ದ ಮೈಸೂರಿನ ಕೂಲಿಗಾರ ಮಂತ್ರಿ ಶ್ರೀ ಕೆ. ಟಿ. ಭಾಷ್ಯಮ್ ಮತ್ತು ಪ್ರೊಫೆಸರ್ ಎನ್. ಜಿ. ರಂಗರು ಇತರರೊಂದಿಗೆ ಅಲ್ಲಿಯ ಸುಪ್ರಸಿದ್ಧ 'ಅಲ್ಕಟ್ರಾಝ್' ಸೆರೆಮನೆಗೆ ಭೇಟಿ ಕೊಟ್ಟರು. ಅಮೇರಿಕದ ಅತ್ಯಂತ ಕಠೋರ ಕ್ರಿಮಿನಲ್ ಕೈದಿಗಳನ್ನು ಕೂಡಿಸಿಡುವ ಜೈಲಿದು; ಅದ್ದರಿಂದ 'ಶಿಲೆ'ಯೆಂಬ ಬಿರುದಿನಿಂದ ಇಡೀ ಅಮೇರಿಕದಲ್ಲಿ ಈ ಕಾರಾಗೃಹವು ಪ್ರಸಿದ್ಧವಿದೆ. ಅಲ್ಲಿಯ ವಾರ್ಡನ್ ಹರ್ಬರ್ಟ್ ಸ್ಟೋಪೆ ಎಂಬವರು ಹಿಂದೀ ಪ್ರತಿನಿಧಿಗಳಿಗೆ ಸವಿವರವಾಗಿ ಪ್ರತಿಯೊಂದನ್ನೂ ತೋರಿಸಿದರು. ಹಿಂದೀ ಪ್ರತಿನಿಧಿಗಳು ಅಲ್ಲಿಯ ಜೈಲಾಹಾರವನ್ನು ರುಚಿ ನೋಡಿ "ನಾವು ಉಪಯೋಗಿಸುತ್ತಿದ್ದ ಆಹಾರಕ್ಕಿಂತ ಇದು ಉತ್ತಮವಿದೆ" ಎಂದು ಶಿಫಾರಸು ಕೊಟ್ಟರು. "ನೀವು ಜೈಲಿನಲ್ಲಿದ್ದು ವಿಶೇಷ ಅನುಭವವಿದ್ದವರಾದ್ದರಿಂದಲೇ ನಿಮಗೆ ಜೈಲೂಟದಳತೆಯ ಖಾತೆ ದೊರೆಯಿತೋ ಹೇಗೆ?" ಎಂದು ವಾರ್ಡನ್ ವಿಚಾರಿಸಿದಾಗ ಶ್ರೀ ಭಾಷ್ಯಮರು ತಾಳ್ಮೆಯಿಂದ ಅತನಿಗೆ ತಮ್ಮ ಆತ್ಮಕಥೆ ಬಿಚ್ಚಿದರಂತೆ. ತಮ್ಮೀ ತಂಗಡದವರಲ್ಲಿ ಹೆಚ್ಚಿನವರು ನಾಲ್ಕು ಅಥವಾ ಐದು ವರ್ಷಗಳನ್ನು ಜೈಲಲ್ಲೇ ಕಳೆದವರೆಂದು ಹೇಳಿದಾಗ ಆ ವಾರ್ಡನ್ ಬಾಯರಳಿಸಿ ನೋಡಿದರಂತೆ.

ಅಮೇರಿಕದ ಆ "ಶಿಲೆ"ಯಲ್ಲಿರುವವರಿಗಿಂತಲೂ ಕಠೋರವಾದ ಮನುಷ್ಯರು ಭಾರತದ ಸರಕಾರಗಳ ತಲೆಯಲ್ಲಿದ್ದಾರೆ!

ಹೈದರಾಬಾದಿಗೆ ಸರಬರಾಯಿ

ಇಂಗ್ಲೆಂಡು, ಅಮೇರಿಕಗಳಿಂದ ಹೈದರಾಬಾದಿಗೆ ಆಮದಾಗಿದ್ದು ಬೊಂಬಾಯಿ ಧಕ್ಕೆಯಲ್ಲಿ ಭಾರತ ಸರಕಾರದಿಂದ ತಡೆಹಿಡಲ್ಪಟ್ಟಿದ್ದ ಹಲವು ಸಾಮಾಗ್ರಿ ಸಂಗ್ರಹಗಳು ಈಗ ಬೊಂಬಾಯಿಯಲ್ಲಿರುವ ನಿಜಾಮರ ಬಂಗಲೆಗೆ ಸಾಗಿಸಲ್ಪಟ್ಟು ಅಲ್ಲಿ ಹಿಂದೀ ಸರಕಾರದ ಭದ್ರ ಪಹರೆಯೊಳಗೆ ಅಮಾನತಿಡಲ್ಪಟ್ಟಿವೆ. ಈ ಸಂಗ್ರಹದಲ್ಲಿ ಗಿರಣಿ ಮತ್ತು ಮೋಟಾರು ಸಾಮಗ್ರಿಗಳು, ರೈಲ್ವೇ ಭಾಗಗಳು, ಇಲೆಕ್ಟ್ರಿಕ್ ಉಪಕರಣಗಳೇ ಇತ್ಯಾದಿ ಬೆಲೆಯುಳ್ಳ ವಸ್ತುಗಳಿದ್ದು ಅವುಗಳ ಮೌಲ್ಯವು ಹಲವು ಕೋಟಿ ರೂಪಾಯಿಗಳಾಗಬಹುದೆಂದು ಊಹಿಸಲಾಗಿದೆ. ಅತ್ತ ಕರಾಚಿಯಿಂದ ಪಾಕಿಸ್ತಾನ್ ವಿಮಾನವೊಂದು ಒಂದೂವರೆ ಟನ್ ಔಷಧಗಳನ್ನು ಹೈದರಾಬಾದಿಗೆ ಭಾರತಾಕಾಶ ಮಾರ್ಗವಾಗಿ ಸಾಗಿಸುವರೆ ತನಗೆ ಅನುಮತಿ ಕೊಡಬೇಕೆಂದೂ, ತಾನು ನಿಲ್ದಾಣ ಬಿಡುವ ಮೊದಲು ಹಿಂದೀ ಸರಕಾರದ ಅಧಿಕಾರಿಗಳು ಕರಾಚಿಯಲ್ಲಿ ತನಿಖೆ ನಡಿಸಬಹುದೆಂದೂ ಹಿಂದೀ ಸರಕಾರವನ್ನು ಕೇಳಿಕೊಂಡಿದೆ. ಅದರಲ್ಲಿರುವ ಸಾಮಗ್ರಿಗಳೆಂದರೆ ಮುಖ್ಯವಾಗಿ ವಾಂತಿಭೇದಿ ಹಾಗೂ ವಿಷಮ ಜ್ವರದಂತಹ ರೋಗಗಳನ್ನು ನಿವಾರಿಸುವ ಔಷಧಿಗಳೆಂದು ಹೇಳಲಾಗಿದೆ.

ಆದರೆ ನಿಜಾಮ್ ಸರಕಾರದ ಮತ್ತು ರಝಾಕಾರರ ದುಷ್ಕೃತ್ಯಗಳಿಂದ ಮಿಕ್ಕವರಿಗೆ ಕ್ರೋಧಜ್ವರ ಮತ್ತು ವಾಂತಿ ಬರುತ್ತಿರುವಾಗ, ಇದಕ್ಕೇನೇ ಮುಂದಾಗಿ ಚಿಕಿತ್ಸೆಯಾಗಬೇಕಾದುದು ಅಗತ್ಯವಲ್ಲವೆ?

ಹೈದರಾಬಾದಿನ ಆಕ್ಷೇಪಗಳು

ಹಿಂದೀ ಸರಕಾರದ 'ಫೈಟರ್' ವಿಮಾನಗಳು ಮುಂದಾಗಿ ತಿಳಿಸದೆ ಹೈದರಾಬಾದ್ ಗಡಿಯೊಳಗೆ ಹಾರಾಡುತ್ತಿರುವುದು ಸರಿಯಲ್ಲವೆಂದೂ, ಸದ್ಯಸ್ಥಿತಿಯಲ್ಲಿ ಅಂತಹ ವಿಮಾನಗಳು ಪೂರ್ವ ಸೂಚನೆಯೇನನ್ನೂ ಕೊಡದೆ ಹಾರಾಡುವುದರಿಂದ ಆಕ್ಷೇಪಗಳೇಳಲು ಅವಕಾಶವಿದೆಯೆಂದೂ ನಿಜಾಮ್ ಸರಕಾರವು ದೂರಿದೆ. "ಇನ್ನು ನಮಗೆ ಮುಂದಾಗಿ ತಿಳಿಸಿಕೊಳ್ಳದೆ ಈ ಮಾದರಿಯ ವಿಮಾನ ಹಾರಾಟಗಳನ್ನು ನಡಿಸಿದ ಸಂದರ್ಭದಲ್ಲಿ ಏನಾದರೂ ಅಗಬಾರದುದಾಗಿ ಹೋದರೆ ನಾವು ಜವಾಬ್ದಾರರಲ್ಲ- ತಿಳಿದಿರತಕ್ಕದ್ದು" ಎಂದು ನಿಜಾಮ್ ಸರಕಾರವು ಹಿಂದೀ ಸರಕಾರಕ್ಕೆ ನೋಟೀಸು ಕೊಟ್ಟಿದೆ. ಆದರೆ ರಝಾಕಾರರ ಏಜೆಂಟರು ಕೆಲವರು ವೇಷ ಬದಲಾಯಿಸಿಕೊಂಡು ಬಂದು ಭಾರತದೊಳಗಿನ ಮುಸ್ಲಿಮರನ್ನು ರಝಾಕಾರ್ ಸಂಸ್ಥೆಗೆ ಸೇರಿಸಿಕೊಳ್ಳುವ ಹಂಚಿಕೆ ನಡಿಸುತ್ತಿರುವುದು ಕಂಡುಬಂದಿದೆ. ವಿಜಯವಾಡಾದಲ್ಲಿ ಇಂತಹ ಓರ್ವ ರಝಾಕಾರ್ ಪಂಚಮ ದಳದವನೂ ಅವನೊಂದಿಗೆ ಹೈದರಾಬಾದಿಗೆ ಹೊರಟಿದ್ದ ಇತರ ಏಳು ಮಂದಿಯೂ ರೈಲ್ವೇ ಪೋಲಿಸರಿಗೆ ಸೆರೆ ಸಿಕ್ಕಿದ್ದಾರೆ.

ನಿಜಾಮರ ಅಸ್ಪರ್ಶತಾ ಧರ್ಮ ಪ್ರಕಾರ, ತನ್ನ ಜವಾನರುಗಳು ಭಾರತದ ನೆಲದೊಳಗೆ ಸೇರಬಹುದಾದರೂ ಭಾರತದ ವಿಮಾನಗಳು ತನ್ನ ಆಕಾಶದಲ್ಲಿ ಹಾರಕೂಡದು!

ಚರ್ಚಿಲ್ ಕತೆಗಳು

ಯುದ್ಧ ಕಾಲ 1942ನೇ ಮೇ ತಿಂಗಳಲ್ಲಿ ಆಗ ಅಮೇರಿಕಾಧ್ಯಕ್ಷರಾದ ರೂಸವೆಲ್ಟರು ಭಾರತದಲ್ಲಿ ಒಂದು ತಾತ್ಕಾಲಿಕ ನಡುಗಾಲ ರಚಿಸಬೇಕೆಂದು ಚರ್ಚಿಲ್ಲರಿಗೆ ಸೂಚಿಸಿದರಂತೆ. ಅದನ್ನು ಕೇಳಿದ ಕೂಡಲೇ ಚರ್ಚಿಲ್ಲರು ಉರಿದು ಬಿದ್ದರಂತೆ. ಅಧ್ಯಕ್ಷ ರೂಸವೆಲ್ಟರ ಖಾಸಗೀ ಸಹಾಯಕನಾಗಿದ್ದ ಹೆರ್ರಿ ಹೋಪ್ಕಿನ್ಸರು ತನ್ನೊಂದು ಪತ್ರಿಕಾ ಲೇಖನದಲ್ಲಿ ಈ ಗುಟ್ಟನ್ನು ಈಗ ಬಹಿರಂಗಪಡಿಸಿದ್ದಾರೆ. ಇತ್ತೀಚೆಗೆ ಟೋರಿಗಳ ಒಂದು ಗುಪ್ತ ಸಭೆಯಲ್ಲಿ ಬರುವ ತಿಂಗಳು ಆಗೋಸ್ತಿನಲ್ಲಿಯೇ ಯುದ್ಧ ಸ್ಫೋಟಗೊಳ್ಳಲಿದೆಯೆಂದು ಚರ್ಚಿಲ್ಲರು ಹೇಳಿದ್ದರೆಂಬ ವಾರ್ತೆ ಪ್ರಕಟವಾಗಿತ್ತು; ಚರ್ಚಿಲ್ಲರದನ್ನು ಅಲ್ಲಗಳೆದಿದ್ದರೆ. ಆದರೆ ತನ್ನ ಚನಾವಣಾ ಕ್ಷೇತ್ರವೊಂದರಲ್ಲಿ ಇದೇ ತಾ 10ರಲ್ಲೇ ಮಿ ಚರ್ಚಿಲ್ಲರೇ ಕೆಳಗಿನ ಮಾತುಗಳನ್ನಾಡಿರುವರೆಂಬುದೇನೋ ಸತ್ಯ. "ನಾವೀಗ ರಷ್ಯದೊಡನೆ ವ್ಯವಹರಿಸುವದೆಂದರೆ ಸ್ವತಂತ್ರಾಭಿಪ್ರಾಯ ಪ್ರಕಟಿಸಬಲ್ಲ ಒಂದು ದೊಡ್ಡ ರಾಷ್ಟ್ರದೊಡನೆ ವ್ಯವಹರಿಸುವದೇನೂ ಅಲ್ಲ- ಧೀರ ರಶ್ಯನರಿಗೆ ತಮ್ಮನ್ನು ಸ್ವತಃ ತಾವೇ ಯಜಮಾನರಾಗಿ ಮಾಡಿಕೊಂಡು, ಭೀಕರ ಇವಾನನ ಕಾಲಾನಂತರ ಯಾವನೊಬ್ಬ ಝಾರನೂ ತೋರಿಸಿರದಂತಹ ಅತಿ ಕಠೋರ ಸರ್ವಾಧಿಕಾರಿತ್ವದಿಂದ ಆಳುತ್ತಿರುವ ಕ್ರೆಮ್ಲಿನಿನ ಕೇವಲ 13 ಮಂದಿಯೊಡನೆ. ತಮ್ಮಲ್ಲಾವ ನೈತಿಕಮಟ್ಟವೂ ಇಲ್ಲವೆಂದು ಈ 13 ಮಂದಿ ಸ್ವತಃ ಜಾಹೀರು ಮಾಡುತಿದ್ದಾರೆ. ಇಂಥವರೊಡನೆ ಯಾವ ಸಮಜಾಯಿಸುವಿಕೆಯೂ ಕೂಡದು."

ಗಟ್ಟಿ ಮನಸ್ಸುಮಾಡಿ, ಚರ್ಚಿಲ್ಲರನ್ನು ಭಾರತದ ಮೇಲಾಗಲೀ ರಷ್ಯದ ಮೇಲಾಗಲೀ ಅಟಂ ಬೋಂಬನ್ನಾಗಿ ಎಸೆದುಬಿಡಲು ಬ್ರಿಟಿಷ್ ಕೂಲಿಗಾರ ಸರಕಾರಕ್ಕೆ ಸಾಧ್ಯವಿದ್ದರೆ ಶಾಂತಿ ಸ್ಥಾಪನೆಯ ಅರ್ಧಾಂಶ ಕೆಲಸವಾದಂತೆಯೇ!

'ಡಾನ್' ಪತ್ರಿಕೆಯಲ್ಲಿ ಕಾಂಗ್ರೆಸ್ ವಾರ್ತೆ

ಜುಲಾಯಿ ತಾ ೮ರ 'ಡಾನ್' (ಪಾಕಿಸ್ತಾನದ ಮುಖ್ಯ ಪತ್ರಿಕೆ) ಪತ್ರಿಕೆಯು ಕಳೆದ ಎಪ್ರಿಲ್ ತಿಂಗಳಲ್ಲಿ ಬೊಂಬಾಯಿಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಗುಪ್ತಾಧಿವೇಶನದ ವರದಿಯನ್ನು ತನ್ನ ದೊಡ್ಡ ತಲೆಬರಹದಡಿಯ ... ಕೆಲವು ಭಾಷಣಗಳು ಬಂದಿವೆ. ಇದು ... ರ್ಣ ಸುಳ್ಳೆಂದೂ, ಆ ಗುಪ್ತ ಸಭೆಯ ... ಸಿದ್ಧಾಂತಗಳನ್ನು ತಾವು ಬರೆದುಕೊಂಡದ್ದು ಮಾತ್ರವಲ್ಲ, ಇನ್ನಾವ ವರದಿಗಾರನಿಗಾದರೂ ಅಲ್ಲಿ ಪ್ರವೇಶ ಕೊಟ್ಟಿದ್ದಿಲ್ಲವೆಂದು ಕಾಂಗ್ರೆಸಿನ ಕಾರ್ಯದರ್ಶಿ ಆಚಾರ್ಯ ಜುಗಲ್ ಕಿಶೋರರು ಪ್ರಕಟಿಸಿದ್ದಾರೆ.

ಚರ್ಚಿಲ್ಲರನ್ನು 'ಡಾನ್' ಪತ್ರಿಕೆ ಸಂಪಾದಕ ಮಂಡಳಿಗೇಕೆ ತೆಗೆದುಕೊಂಡಿಲ್ಲ?

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಗೊಳಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳಿಯ ಕ್ಷೇತ್ರಗಳಲ್ಲಿ–ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ–ಮಲಬಾರು ಜಿಲ್ಲೆಯ ತೆಂಗುಗಳ ವೃಕ್ಷವಾಟಿಕೆಗಳಿರುವಲ್ಲಿ– ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮ ನಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ- ಅದರಿಂದ ನಿಮಗೆ ಸಮಯವೂ, ಹಣವೂ ಉಳಿವದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಿಸಿದವರ ಶೀಘ್ರ ಲಕ್ಷ್ಯ ದೊರೆವದು.

The Canara Bank Limited.

ESTD: 1906

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— 3.28 Crores

Our Chief Agency New business in 1946 bout 54 Lakhs

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.

Bombay Life Building,

Central Office, Udipi:

Branches at:

Mangalore, Calicut, Trivandrum, Madura,

Madras, Bangalore & Bombay,

The Canara Banking Corporation Limited.

Estd: 1906.
(Incorporated in British India)
Head Office: **UDIPI**, S. India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,96,345
Reserves....	Rs. 8,67,530

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ಗುರುವಾರ, ಉಡುಪಿ, ೧೫-೭-'೪೮

ಗಾಂಧೀ ರಾಷ್ಟ್ರೀಯ ಸ್ಮಾರಕ

ಮಹಾತ್ಮಾ ಗಾಂಧಿಯವರ ಸ್ಮಾರಕವಾಗಿ, ಅವರ ತತ್ವಗಳನ್ನು ಹಾಗೂ ವಿಧಾಯಕ ಕಾರ್ಯಗಳನ್ನು ಪ್ರಚಾರಗೊಳಿಸುವರೆ 'ರಾಷ್ಟ್ರೀಯ ನಿಧಿ'ಯೊಂದನ್ನು ಸಂಗ್ರಹಿಸುವ ಕಾರ್ಯವೀಗ ಎಲ್ಲೆಡೆಗಳಲ್ಲೂ ನಡೆದಿದೆ. ಅಧಿಕೃತಪಾವತಿ ಪುಸ್ತಕಗಳು ವಿತರಣೆಗೊಂಡು, ನಿಧಿ ಸಂಗ್ರಹಾಧಿಕಾರಿಗಳು ಎಲ್ಲಾ ಕಡೆಗಳಿಗೂ ನೇಮಕಗೊಂಡಿದ್ದಾರೆ. ಪ್ರತಿಯೊಬ್ಬನೂ ತನ್ನ ಹತ್ತು ದಿನಗಳ ಉತ್ಪನ್ನಗಳಿಗೆ ಕಡಿಮೆಯಾಗದಷ್ಟನ್ನು ಈ ನಿಧಿಗೆ ಕೊಡಬೇಕೆಂದು ವಿಜ್ಞಾಪಿಸಿಕೊಳ್ಳಲಾಗಿದೆ.

ಮಹಾತ್ಮಾಜೀಯನ್ನು ಕಳಕೊಂಡು ಇಂದಿಗೆ ಪೂರ್ತಿ ಐದೂವರೆ ತಿಂಗಳುಗಳಾದುವು. ಪೂರ್ವ ವ್ಯವಸ್ಥೆಗಳೆಲ್ಲಾ ಮುಗಿದು ಕ್ರಮಬದ್ಧವಾಗಿ ಅವರ ಸ್ಮಾರಕ ನಿಧಿ ಸಂಗ್ರಹಕ್ಕಾರಂಭವಾದುದು ಇತ್ತೀಚೆಗೆನ್ನಬಹುದು; ನಿಧಿ ರಚನೆಯ ಮುಖ್ಯಾಧಿಕಾರಿಗಳಾಗಿರುವ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್, ಆಚಾರ್ಯ ಕೃಪಲಾನಿಗಳಂತಹ ನಾಯಕರು ವಿಶೇಷ ಜಾಗರೂಕತೆ ವಹಿಸಿ, ಮುಂದಾಗಿ ದೋಷರಹಿತ ವ್ಯವಸ್ಥೆಯನ್ನು ಮಾಡಿಡಲು ಇಳಿದುದರಿಂದಲೇ ಈ ವಿಳಂಬವಾಯಿತೆಂಬುದನ್ನು ತಿಳಿದಿರಬೇಕು. ಗಾಂಧಿಜೀಯ ಅಸಹಕಾರ ಕಾಲದಿಂದೀವರೆಗೂ ಭಾರತದಲ್ಲಿ ಹಲವು 'ರಾಷ್ಟ್ರೀಯನಿಧಿ'ಗಳಾಗಿವೆ; ಆಧಾರವಿರಲಿ, ಇಲ್ಲದಿರಲಿ, ಅವುಗಳ ವಿನಿಯೋಗ ವ್ಯವಸ್ಥೆಗಳ ಸಂಬಂಧವಾಗಿ ಜನತೆಯ ಆಕ್ಷೇಪಗಳಂತೂ ಕೇಳಿ ಬರುತ್ತಿವೆ. ಯಾವುದೊಂದು 'ನಿಧಿ' ಯಾದರೂ ಒಬ್ಬ ದೊಡ್ಡ ಶ್ರೀಮಂತನ ಭಂಡಾರವಷ್ಟಾದುದಿಲ್ಲ; ಆದರೆ ಅದರ ಸಂಗ್ರಹಕ್ಕಾಗಿ ನಡೆದ ಪ್ರಚಾರ ಮಾತ್ರ ಎಲ್ಲರ ಕಿವಿಗೂ ಆ 'ಭಂಡಾರ ಮಹಾತ್ಮೆ'ಯನ್ನು ಮುಟ್ಟಿಸುವ ಡಂಗುರವಾಗಿದ್ದುದರಿಂದ ಕೊನೆಗೆ 'ಅದೆಲ್ಲಿ ಹೋಯಿತು?' ಎಂದು ಸಹಜವಾಗಿ ಜನತೆ ವಿಚಾರಿಸಹತ್ತುತ್ತದೆ. ಇಂತಹ ಸಂದರ್ಭಗಳಲ್ಲಿ, ಅವುಗಳ ವಿನಿಯೋಗಕರ್ತರು 'ಯಾರು ಏನೇ ಹೇಳಲಿ—ನಾವು ನ್ಯಾಯೋಚಿತವಾಗಿ ವರ್ತಿಸಿದ್ದೇವೆ" ಎಂಬ ಆತ್ಮಸಮಾಧಾನದಿಂದಿದ್ದು ಬಿಟ್ಟರಾಗದು. ಜನ

ಮಾ ಕಾರ್ಯದಲ್ಲಿದ್ದ ಡಂಗುರಕ್ಕನುಗುಣವಾದ ಪ್ರಚಾರವು ಅದರ ವ್ಯಯ ವಿಭಾಗದಲ್ಲೂ ಇರಬೇಕು. ಅದಿಲ್ಲದ ದೆಸೆಯಿಂದಾಗಿಯೇ ಅನಗತ್ಯ ದೂರುದೂಷಣೆಗಳೇಳುತ್ತವೆ. ನಮ್ಮ ಇದುವರೆಗಿನ ಕೆಲವು 'ರಾಷ್ಟ್ರೀಯ ನಿಧಿ'ಗಳಿಗೆ ಸೋಂಕಿರುವುದು ಇಂತಹ ಛಾಯೆಯೇ. ಮಾತ್ರವಲ್ಲ, 'ಸ್ಮಾರಕ ನಿಧಿ' ಗಳಿಗೆ, ಒಂದೊಂದು ವಿಶೇಷ ಸನ್ನಿವೇಶಗಳಿಂದಾಗಿ ಜನತೆಯ ಹೃದಯದಲ್ಲಿ ಏಳುವ ಒಂದೊಂದು ವಿಶಿಷ್ಟ ಅನುತಾಪಗಳೇ ಆಧಾರ. ಈ ಅನುತಾಪ ಅಥವಾ ಉದ್ವೇಗಗಳು ಬಿಸಿಯಿರುವಾಗಲೇ ಆಕಾರ ಕೊಡುವಂಥವುಗಳೆಂಬುದರಿಂದ, ಸಂದರ್ಭದ ಕಡೆಗೆ ಲಕ್ಷ್ಯ ಕೊಟ್ಟಷ್ಟು ವ್ಯವಸ್ಥೆ, ಕ್ರಮ ನಿಯಮಗಳ ಕುರಿತು ಜಾಗರೂಕತೆ ವಹಿಸದೆ, ಅವಸರವಸರದಿಂದ ನಿಧಿ ಸಂಗ್ರಹವಾಗಿ ಹೋಗುತ್ತದೆ. ಇಂತಹ ಕ್ಷಿಪ್ರಾಚರಣೆಗಳಲ್ಲಿ ಪ್ರಮಾದಗಳಾಗುವದು ಸ್ವಾಭಾವಿಕ. ಇವೆಲ್ಲವನ್ನೂ ಗಮನಿಸಿ, ಇಂತಹ ಯಾವ ಕೊರತೆಯೂ ಮೂಡದಂತೆ ಮಾಡುವ ಸುವ್ಯವಸ್ಥೆಗಾಗಿಯೇ 'ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ' ಯ ಕ್ರಿಯಾರಂಭಕ್ಕೆ ಸಾವಧಾನವಾಯಿತೆಂಬುದನ್ನು ತಿಳಿದಿರಬೇಕು; ಇನ್ನು ಯಾವ ಸಂದೇಹಕ್ಕೂ ಈ ನಿಟ್ಟಿಗವಕಾಶವಿಲ್ಲವೆಂದು ಭರವಸೆ ಪಡಬೇಕು.

ವಿಯೋಗ ದುಃಖದ ಕಾವು ಏರಿರುವ ಅವಧಿಯಲ್ಲೇ ಸ್ಮಾರಕ ನಿಧಿ ಸಂಗ್ರಹಿಸುವದು ಶ್ರೇಯಸ್ಕರವೆಂಬ ಮಾತು ಬಾಪೂಜೀ ಸ್ಮಾರಕಕ್ಕನ್ವಯಿಸುವಂತಹದಲ್ಲ. ಜನತೆಯ ನೆನಪು ಶಕ್ತಿ ಗಿಡ್ಡವೆಂಬುದೇನೋ ನಿಜ; ಆದರೆ ಮಹಾತ್ಮರು ಭಾರತೀಯರ ಸ್ಮರಣೆಯಲ್ಲಿ ಮಾತ್ರ ಇರುವವರಲ್ಲ-ಅವರು ಎಂದೆಂದಿಗೂ ಆತ್ಮೀಯರು. ಇಂದಿನ ಹಿಂದೀ ಜನಜೀವನದ ನಿರ್ಮಾಣದಲ್ಲಿ ಗಾಂಧಿತ್ವವು ವಹಿಸಿದ್ದ ಭಾಗ ದೊಡ್ಡದು, ಭಾರತೀಯ ಮನೋವೃತ್ತಿ, ಗುಣ ನಡತೆ, ವೇಷ ಭೂಷಣ-ಇತ್ಯಾದಿಗಳಲ್ಲೇ ಆಳವಾಗಿ ಬೇರೂರಿರುವ 'ಗಾಂಧಿತ್ವ'ವು ಶಾಶ್ವತವಾದುದು; ಹಿಂದೀಯ ಬಾಳುವೆಯೆಂಬುದಿರುವವರೆಗೆ ಇದೂ ಬಾಳುವಂತಹದೇ. ಆದ್ದರಿಂದ ಮಹಾತ್ಮರ 'ಸ್ಮಾರಕ'ವೆಂದಾವುದೇ ನಿಧಿ ಅಥವಾ ಕಾರ್ಯಗಳನ್ನು ತೋರಿಸುವದಕ್ಕಿಂತ ಇಡೀ ರಾಷ್ಟ್ರವನ್ನೇ ತೋರಿಸಬಹುದು; ರಾಷ್ಟ್ರೀಯರನ್ನು ತೋರಿಸಬಹುದು. ಆದರೂ ಆತ್ಮೋದ್ಧಾರದೊಂದು ವಿಧಾನವಾಗಿ, ಸ್ವಕಾರ್ಯ ಸಾಧನೆಯಾಗಿ ಇಂದು 'ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ' ರಚನೆಗೊಳ್ಳುತ್ತಿದೆ-ಗಾಂಧಿಜೀಯ ನೆನವನ್ನು ಉಳಿಸುವ ಪ್ರಶ್ನೆಯೇ ಇಲ್ಲಿಲ್ಲ.

ಈ ಕುರಿತು ಜನತೆಯನ್ನು ಯಾಚಿಸುವ, ವಿಜ್ಞಾಪಿಸುವ ಅಗತ್ಯವೇ ಇಲ್ಲ. ಮುಖ್ಯವಾಗಿ ಮಹಾತ್ಮರ ಬಲಿದಾನಕ್ಕೆ ಹೇತುವಾದ ತಮ್ಮ ದೌರ್ಬಲ್ಯಗಳನ್ನು ಜನತೆ ಜ್ಞಾಪಿಸಿಕೊಳ್ಳಬೇಕು. ಗಾಂಧಿಜೀಯ ತತ್ವಗಳಿಗೆ ನಾವು ದೂರವಾಗಹತ್ತಿದುದರಿಂದಲೇ ಗಾಂಧಿಜೀ ನಮ್ಮಿಂದ ದೂರವಾದರೆಂಬ ವೇದನೆಯುಳಿಯಬೇಕು. ಇಡೀ ಪ್ರಪಂಚದಿಂದಾರಾಧಿಸಲ್ಪಡುತ್ತಿರುವ ಬಲಿದಾನೀ ಮಹಾತ್ಮನ 'ದೇಶಬಂಧುಗಳು ನಿಜ' ಎಂದು ಲೋಕವು ನಮ್ಮನ್ನೊಪ್ಪುವಂತಹ ಯೋಗ್ಯತೆಯಾದರೂ ನಮ್ಮಲ್ಲಿ ಕಂಡುಬರಬೇಕು. ಅದನ್ನು ನಮ್ಮಲ್ಲಿ ಬೆಳೆಯಿಸುವ ಸ್ವೋದ್ಧಾರ ಕಾರ್ಯಕ್ಕಾಗಿಯೇ ಈ ರಾಷ್ಟ್ರೀಯ ನಿಧಿ ವಿನಿಯೋಗಿಸಲ್ಪಡಲಿದೆ. ಈ ಸಂಬಂಧವಾಗಿ ವಾಕಿರುವ "ನಿಷ್ಠ ಮಿತಿ-ಪ್ರತಿಯೊಬ್ಬನೂ ತನ್ನ ಹತ್ತು ದಿನಗಳ ಉತ್ಪನ್ನವನ್ನಾದರೂ ಬಲಿದಾನಿ ಮಹಾತ್ಮನ ಹೆಸರಲ್ಲಿ ಸಮರ್ಪಿಸಬೇಕೆಂಬ ಸೂಚನೆ-ಎಲ್ಲರ ಮುಂದಿದೆ. ಸ್ವತಃ ತನ್ನದಾಗಿರುವ ಕರ್ತವ್ಯವೊಂದನ್ನು ನೆರವೇರಿಸಿಕೊಳ್ಳಲು ಸ್ಮಾರಕ ಸಮಿತಿಯವರು ತನಗೀ ಮೂಲಕ ಕೊಟ್ಟ ಸಹಾಯವಿದು ಎಂಬ ಭಾವನೆಯಿಂದ ಪ್ರತಿಯೊಬ್ಬನೂ ತನ್ನ ಪಾಲನ್ನಿದಕ್ಕೆ ಸಮರ್ಪಿಸಲಿ, ಎನ್ನುತ್ತೇವೆ

ದಿವಂಗತ ಶ್ರೀ ಕೇರಳವರ್ಮ ಮಹಾರಾಜರು.

ಕೊಚ್ಚಿಯ ಮಹಾರಾಜಾ ಹಿಸ್ ಹೈನೆಸ್ ಶ್ರೀ ಕೇರಳವರ್ಮರು ಜುಲಾಯಿ ತಾ 8ನೇ ಮಧ್ಯಾಹ್ನ ತನ್ನ ಕೃಷ್ಣವಿಲಾಸ ಅರಮನೆಯಲ್ಲಿ ದಿವಂಗತರಾದರು. ಸಾಯುವಾಗ ಮಹಾರಾಜರ ಪ್ರಾಯ 79.

ಕೊಚ್ಚಿ ಮಹಾರಾಜಾ ಪರಂಪರೆಯು 'ರಾಜರ್ಷಿ' ವರ್ತನೆಗಳಿಗೆ ಹೆಸರಾದುದು; ಮಹಾರಾಜಾ ಪರಿಷಣಿಯ ಪ್ರತಿಯೊಂದು ಕೊಂಡಿಯೂ ಉದಾರ ಬುದ್ಧಿ, ಮಾದರೀ ಗುಣ ನಡತೆಗಳಿಂದ ಪ್ರಕಾಶಮಾನವಾಗಿದೆ ಹಿಂದೀ ರಾಜರೆಂದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲೆಲ್ಲಾ 'ಬಣ್ಣದ ಗೊಂಬೆಗಳು'; 'ವಿಲಾಸಿಗಳು' ಎಂಬ ಕೀರ್ತಿಯನ್ನು ಗಳಿಸಿದವರು. ಹೆಚ್ಚಿನವರು ಸ್ತ್ರೀಲೋಲುಪತೆ, ಜೂಜಿನ ಕುದುರೆ, ಮತ್ತು ನಾಯಿಗಳ ಮೇಲಿನ ಲಾಲಸ, ವಜ್ರ ವೈಢೂರ್ಯ ವೇಷಭೂಷಣಗಳ ಥಳಕು, ಇತ್ಯಾದಿಗಳಿಂದ ಜಗತ್ಪ್ರಸಿದ್ಧರು. ಆದರೆ ದಿವಂಗತ ಶ್ರೀ ಮನ್ಮಹಾರಾಜಾ ಕೇರಳವರ್ಮರು ಇಂತಹ ಯಾವ ಅಪವಾದವೂ ಸೋಂಕದ ಉತ್ತಮ ರಾಜನಿದ್ದಂತೆಯೇ ಮಾದರೀ ಮನುಷ್ಯನೂ ಇದ್ದರು. ಮುಂದೆ ಪಟ್ಟಕ್ಕೇರಲಿರುವ ರಾಜಕುವರರಲ್ಲಿ ಕಾರ್ಯಯೋಗ್ಯತೆ ಬೇರೂರುವಂತೆ, ಬಾಲ್ಯದಲ್ಲಿ ಅವರನ್ನು ನಾಕೆ ಮತ್ತಿತರ ವಿಭಾಗಗಳ ಚಾಕರಿಗೆ ಹಚ್ಚಿ ತರಬೇತಿಗೊಳಿಸುವ ಕ್ರಮ ಬ್ರಿಟನಿನ ರಾಜಮನೆತನದಲ್ಲಿರುವಂತೆಯೇ ಕೊಚ್ಚಿ ರಾಜವಂಶವೂ ಇಲ್ಲಿಯ ಸ್ಥಿತಿಗತಿಗನುಗುಣವಾದ ಶಿಕ್ಷಣಗಳನ್ನು ರಾಜಕುಮಾರರಿಗೆ ಎಳೇ ಪ್ರಾಯದಲ್ಲಿ ಕೊಟ್ಟು ಪಕ್ವಗೊಳಿಸುತ್ತಿದೆ. ಅದರಂತೆ ಶ್ರೀಮಾನ್ ಕೇರಳವರ್ಮರು ಚಿಕ್ಕಂದಿನಲ್ಲಿ ಮದ್ರಾಸ್ ಸರಕಾರದ ಸಾಮಾನ್ಯ ನೌಕರಿಯಂತಹ ಉದ್ಯೋಗಗಳನ್ನೂ ನೋಡಿದ್ದು ಸಾಮಾನ್ಯ ಜನರೊಡನೆ ಹೊಕ್ಕು ಬಳಕೆಯಲ್ಲಿದ್ದರು. ಸಿಂಹಾಸನವೇರಿದ ಮೇಲೆ ಶ್ರೀಮಾನ್ ಕೇರಳವರ್ಮರು ತನ್ನ ಪ್ರಜೆಗಳ ಅನ್ಯೂನ ಗೌರವ ಮತ್ತು ವಿಶ್ವಾಸಗಳನ್ನು ಗಳಿಸಿದ್ದರು. ತನ್ನ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವವನ್ನು ಸ್ವಸಂತೋಷದಿಂದ ಘೋಷಿಸಿದವರು ಈ ಮಹಾರಾಜರು. ಯಾವದೇ ವಿಧದ ಒತ್ತಾಯ ಬೀಳುವ ಅಥವಾ ಅಪಾಯ ಚಿಹ್ನೆ ತೋರುವ ಮೊದಲೇ ತಾವಾಗಿ ಅಧಿಕಾರ ತ್ಯಾಗಕ್ಕೆ ಮುಂದೆ ಬಂದ ಕೆಲವೇ ಮಂದಿ ಹಿಂದೀ ರಾಜರಲ್ಲಿ ಶ್ರೀಮಾನ್ ಕೇರಳವರ್ಮರೊಬ್ಬರು. ಮಾತ್ರವಲ್ಲ; ಐಕ್ಯ ಕೇರಳ ಪ್ರಾಂತ ರಚನೆಗನುಕೂಲ ಮತ ಪ್ರಕಟಿಸಿ, ತನ್ನ 'ರಾಜಸ್ತಿಕೆ'ಯ ಎಲ್ಲಾ ಹಕ್ಕುಬಾಧ್ಯತೆಗಳೂ ಪ್ರಜೆಗಳ ನಿರ್ಣಯಾಧೀನವೆಂದು ಜಾಹೀರು ಮಾಡಿ, ಸರ್ದಾರ್ ಪಟೇಲರೇ ಮೊದಲಾದ ಭಾರತ ನಾಯಕರಿಂದ ಮುಕ್ತಕಂಠದ ಶ್ಲಾಘನೆ ಪಡೆದಿದ್ದರು. ಪತ್ತೊಂದು ಮಲೆಯಾಳೀ ಸಂಸ್ಥಾನವಾಗಿದ್ದ ತಿರುವಾಂಕೂರಿನಲ್ಲಿ ಆಗ ದಿವಾನರಾಗಿದ್ದ ಸರ್ ಸಿ. ಪಿ.ಯವರು ಭಾರತ ಕೇಂದ್ರದೊಂದಿಗೆ ಸೇರಿಕೊಳ್ಳುವದಕ್ಕೂ ಐಕ್ಯ ಕೇರಳ ರಚನೆಗೆ ನೆರವಾಗುವದಕ್ಕೂ ಬಲವಾದ ಆಕ್ಷೇಪ ಹೂಡುತ್ತಿದ್ದ ಆ ಕಾಲದಲ್ಲಿ ಕೊಚ್ಚೀ ಮಹಾರಾಜರು ಭಾರತ ಮತ್ತು ಕೇರಳದ ಜನತೆಗೆ ಎಂತಹ ಆಶಾಜ್ಯೋತಿಯಾಗಿದ್ದರೆಂಬ ಮಧುರ ಸ್ಮೃತಿ ಈಗಲೂ ಉಳಿದಿದೆ. ಐಕ್ಯ ಕೇರಳ ಸಮ್ಮೇಲನದಂತಹ ಸಾರ್ವಜನಿಕ ಸಮಾರಂಭಗಳಲ್ಲಿ ಹಾಜರಾಗಿ ಅವರಾಡಿದ್ದ ದೇಶಪ್ರೇಮಭರಿತ ವಾಣಿಗಳು ಈಗ ಕೂಡಾ ಮಾರ್ದನಿಸುತ್ತಿವೆ. ಉತ್ತಮ ದರ್ಜೆಯ ರಾಜನ ಮಟ್ಟಿಗೆ ಪುರಾಣೋಲ್ಲೇಖಿತ ಗುಣಗಳಾದ 'ವಿದ್ಯಾವಿನಯೌದಾರ್ಯ ಪ್ರಜಾವಾತ್ಸಲ್ಯಾದಿ' ಸದ್ಗುಣಗಳು ಶ್ರೀಮಾನ್ ಕೇರಳವರ್ಮರಲ್ಲಿ ಮೂರ್ತೀಭವಿಸಿದ್ದುವು. ಇಂತಹ ರಾಜರ ವಿಯೋಗಕ್ಕಾಗಿ ದೇಶ ಪ್ರಮುಖರೆಲ್ಲರೂ ದುಃಖ ಸೂಚಿಸಿದ್ದಾರೆ. ಕೊಚ್ಚಿಯಂತೂ ಅಧಿಪತಿ ಮತ್ತು ಆತ್ಮೀಯನನ್ನು ಕಳಕೊಂಡ ದುಃಖ ಪ್ರದರ್ಶಿಸಿದೆ.

ಇನ್ನು ಕೊಚ್ಚಿ ಸಿಂಹಾಸನಾರೂಢರಾಗಲಿರುವ ಯಚ್. ಯಚ್. ಶ್ರೀ ರಾಮವರ್ಮರು ಕೂಡಾ ದೊಡ್ಡ ವಿದ್ವಾಂಸರು; ಸದ್ಗುಣ ಮತ್ತು ಸದ್ವರ್ತನೆಯವರು. ಗತಿಸಿದ ರಾಜರು ತನ್ನಾಯುಷ್ಯದ ಕೊನೆಯ ಭಾಗದಲ್ಲಿ ಕ್ಷೇತ್ರವನ್ನು ಹಸನುಗೊಳಿಸಿ, ಬೀಜ ಹಾಕಿದ ಪ್ರಜಾಪ್ರಭುತ್ವವನ್ನು ಇವರು ಬೆಳೆಯಿಸಿ, ಫಲಬಿಡುವಂತೆ ಮಾಡುವರೆಂದು ನಿರೀಕ್ಷಿಸಲಾಗಿದೆ.

ಕೊರಡ್ಕಲ್ ಸ್ಮಾರಕ ನಿಧಿಗೆ
ಉದಾರ ಸಹಾಯ ಮಾಡಿರಿ.

ಗವರ್ನರ್ ಜನರಲ್ ಮತ್ತು ಪ್ರಧಾನ ಮಂತ್ರಿಗಳ ಹಿತೋಕ್ತಿ

ಸದ್ಯಸ್ಥಿತಿಯಲ್ಲಿ ಹಿಂದೀ ಸಾರ್ವಜನಿಕರ ಕರ್ತವ್ಯವಾವುದೆಂಬ ಉಪದೇಶಗಳನ್ನು ಗವರ್ನರ್ ಜನರಲ್ ಶ್ರೀ. ಸಿ ರಾಜಗೋಪಾಲಾಚಾರಿ ಮತ್ತು ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಇದೇ ತಾ 11ರಲ್ಲಿ ಡಿಲ್ಲಿ ಸಮಾರಂಭಗಳ ಭಾಷಣ ಮೂಲಕ ಇತ್ತಿದ್ದಾರೆ

ರಾಜಾಜಿ ಬೋಧನೆ

ಹಳೇ ಡಿಲ್ಲಿಯು ತನಗರ್ಪಿಸಿದ ಮಾನ ಪತ್ರಪ್ರತ್ಯುತ್ತರ ಕೊಡುತ್ತಾ, ಗವರ್ನರ್ ಜನರಲ್ ರಾಜಾಜಿಯು ಆ ನಗರ ಸಭೆಯನ್ನು ಅಭಿನಂದಿಸಿ, ಹೇಳಿದರು: "ರಾಷ್ಟ್ರದ ಆ ಕಡೆಯಿಂದೀ ಮೂಲೆಯ ವರೆಗಿನ ಆ ಸಂಖ್ಯಾತ ಸ್ತ್ರೀ ಪುರುಷ ಸಜ್ಜನರಿಂದ ಹಿತಾಕಾಂಕ್ಷೆ ಹಾಗೂ ನನಗಾಗಿ ಸಲ್ಲಿಸಿರುವ ಪ್ರಾರ್ಥನೆಗಳನ್ನು ಹೊಂದುವ ಭಾಗ್ಯ ನನಗೊದಗಿದೆ. ನನಗೆ ಇವೆಲ್ಲವುಗಳ ಅವಶ್ಯಕತೆ ಬಹಳವಿದೆ; ಆದ್ದರಿಂದ ಇವುಗಳಿಗಾಗಿ ಅತ್ಯಂತ ಕೃತಜ್ಞನಿದ್ದೇನೆ.

ನಾವೀಗ ಅತ್ಯಂತ ಬಿಗುವಾದ ಸಮಸ್ಯೆಗಳನ್ನು ಇದಿರಿಸಿದ್ದೇವೆ. ಅವುಗಳಲ್ಲಿ ಕೆಲವಂತೂ ಈ ಮೊದಲಿಂದಾದರೂ ಪ್ರಪಂಚದ ಯಾವದೇ ಸರಕಾರವನ್ನಾದರೂ ಇದಿರಿಸಿರದಷ್ಟು ದೊಡ್ಡವಿವೆ. ಆದ್ದರಿಂದ, ಅವುಗಳನ್ನೀಗ ನುರಿತ ಪೂರ್ವಿಕರ ಸಹಾಯವೇನೂ ಇಲ್ಲದೇನೇ ನಾವು ತೀರ್ಮಾನಿಸಿಕೊಳ್ಳಬೇಕಾಗಿದೆ.ಆದರೆ ಈಗ ಅಧಿಕಾರವನ್ನು ಹೊತ್ತಿರುವ ನುರಿತ ನಾಯಕರಿಗಿಂತ ಹೆಚ್ಚಿನ ವಿಶ್ವಾಸಯೋಗ್ಯ ಜನರನ್ನು ಈ ಕಾರ್ಯಕ್ಕೆ ಹುಡುಕಿ ತೆಗೆಯುವದು ನನ್ನಿಂದ ಅಸಾಧ್ಯ. ನಮ್ಮ ಮೇಲೆ ಬಂದು ಬಿದ್ದ ದೊಡ್ಡದೊಡ್ಡ ಅಗ್ನಿ ಪರೀಕ್ಷೆಗಳನ್ನು ಇದಿರಿಸಿ ನಿಲ್ಲುವಂತೆ ದೇವರು ಈ ಕನಕ ನಮಗೆ ನೆರವಾಗಿದ್ದಾನೆ. ಈ ಪರೀಕ್ಷೆಗಳ ಪರಿಣಾಮವಾಗಿ ನಮ್ಮ ಮನೋಬಲ ಅಧಿಕವಾಗುತ್ತಾ ಬಂದಿದೆ; ಯಾಕೆಂದರೆ ಎಲ್ಲಾ ದುರ್ದೈವಗಳಲ್ಲೂ ಅಡಕವಾಗಿರುವ ಶಾಸನವಿದು. ಇದಕ್ಕಾಗಿ ನಾವು ದೇವರಿಗೆ ಕೃತಜ್ಞರಿದ್ದೇವೆ. ಮತ್ತು ಎಲ್ಲಾ ಸಂಕಟಗಳನ್ನೂ ಕಡೆ ಹಾಯ್ದು, ನಮ್ಮ ಪ್ರಗತಿಪರ ಹಾಗೂ ಜಾಗತಿಕ ಶಾಂತಿಯ ತತ್ವಗಳಿಗೆ ನಿಷ್ಠೆಯಿಂದ ಹೊಂದಿಕೊಂಡು ನಮ್ಮೀ ಸ್ವಾತಂತ್ರ್ಯಕ್ಕೆ ಯೋಗ್ಯರೆನ್ನಿಸುವೆವೆಂದು ಆಶಿಸುತ್ತೇವೆ

ಗಾಂಧಿಜೀ ನಮ್ಮನ್ನು ಅಗಲಿ ಹೋದರು. ಆದರೆ ಅವರು ನಮಗೆ ಕಲಿಸಿದ್ದೇನು, ಅವರು ತನ್ನ ಪ್ರಾಣ ಕೊಟ್ಟುದು ಯಾವುದಕ್ಕಾಗಿ ಎಂಬುದು ನಮ್ಮ ನೆನಪಿನಲ್ಲಿರಲಿ. ನಮ್ಮಲ್ಲಿ ಪರಂಪರಾಗತವಾಗಿ ಬಂದ ಆಚಾರಗಳಂತೆ ದೇವರನ್ನು ಭಿನ್ನ ರೀತಿಗಳಿಂದ ಆರಾಧಿಸುವವರಾಗಿದ್ದರೂ ಕೂಡಾ ನಾವು ಸಹೋದರರಂತೆ ಬಾಳೋಣ. ನಾವು ನ್ಯಾಯಪ್ರಕಾರ ಹೆಗ್ಗಳಿಕೆ ಪಡುವಂತಹ ಈ ಚರಿತ್ರಾರ್ಹ ನಗರದ ಸೌಂದರ್ಯವನ್ನು ಹೆಚ್ಚಿಸುವುದಕ್ಕಿಂತಲೂ ನಾವು ಸಹೋದರರಂತೆ ಬಾಳಬೇಕಾದುದು ಮುಖ್ಯ. ಪ್ರೇಮರಹಿತ ಸೌಂದರ್ಯವು ವಿಷಭರಿತ ಹೂವಿಗೆ ಸಮಾನ-ನೋಟಕ್ಕೇನೋ ಸುಂದರ, ಆದರೆ ಪ್ರಾಣಕ್ಕೆ ಅಪಾಯ.

ನಾನೀಗ ಏರಿರುವ ಅಧಿಕಾರಪದದಲ್ಲಿ ನನಗೇನೂ ಸಂತೋಷ ಕಾಣಾವುದಿಲ್ಲ; ಅದವಾ ಸದ್ಯ ಸ್ಥಿತಿಯಲ್ಲಿ ಯಾವ ಅಧಿಕಾರಸ್ಥಾನವೂ ನನಗೆ ಆನಂದದಾಯಕವಾಗಿಲ್ಲ. ಆದರೆ ನನ್ನ ಸಹವರ್ತಿಗಳು ಈ ಮೂಲಕ ನಾನೂ ತಮ್ಮನ್ನು ಕೂಡಿಕೊಳ್ಳಬೇಕೆಂದು ಒಮ್ಮತದಿಂದ ಕೇಳಿಕೊಂಡುದರಿಂದ ನಾನು ಒಪ್ಪಿಕೊಂಡೆ. ನಿಮ್ಮ ಮತ್ತಿತರರ ಶುಭಾಶಯಗಳ ಬಲದಿಂದ ನಾನು ರಾಷ್ಟ್ರಕ್ಕೇನಾದರೂ ಪ್ರಯೋಜನ ಬೀಳುವೆನೆಂದಾಶಿಸುತ್ತೇನೆ.

ದೇಶ ಸೇವೆ ಮಾಡಬೇಕು; ಜನತೆಯ ಅಪಾರ ಸಂಕಷ್ಟಗಳನ್ನು ನಿವಾರಿಸುವ ಕಾರ್ಯದಲ್ಲಿ ಆಕರ್ಷಣೀಯ ಭಾಗವಹಿಸಬೇಕು ಎಂಬ ಮಹತ್ವಾಕಾಂಕ್ಷೆಯು ಸಹಜವಾದುದು ಮತ್ತು ಯೋಗ್ಯವಾದುದು. ಸ್ವತಂತ್ರ ಜನತೆಯೊಂದರ ಪ್ರಗತಿಗೆ ಇದು ಅವಶ್ಯವಿದ್ದು ಪ್ರೋತ್ಸಾಹನೀಯವಿದೆ. ಆದರೆ ಇಂದಿನ ಕ್ಲಿಷ್ಟಬದ್ಧ ದಿನಗಳಲ್ಲಿ, ಘನೋದ್ದೇಶಗಳ ಸಾಧನೆಗೆ ಸ್ಪರ್ಧಿಸಿಕೊಳ್ಳುವದಕ್ಕಿಂತ ಕೂಡಾ ಹೆಚ್ಚಿನದ್ದೆಂದರೆ ಐಕ್ಯ. ಆದ್ದರಿಂದ ನಾನೀಗ ಎಲ್ಲರನ್ನೂ ವಿಜ್ಞಾಪಿಸಿಕೊಳ್ಳುತ್ತಿರುವುದೇನೆಂದರೆ, ವ್ಯಕ್ತಿಗತ ಹಾಗೂ ಮೇಲಾಟದ ಮಹತ್ವಾಕಾಂಕ್ಷೆಗಳು ಎಷ್ಟೇ ಘನವಾದವುಗಳಿದ್ದರೂ ಅವೆಲ್ಲವುಗಳನ್ನೂ ಒಂದುಗೂಡಿಸಿಕೊಂಡು, ನಮ್ಮ ಕ್ಷಿಪ್ರಾವಶ್ಯ ಉದ್ದೇಶವು ಫಲಿಸುವ ವರೆಗೆ ಅವನ್ನು ಏಕಪ್ರವಾಹವಾಗಿ ಹರಿಯಿಸಬೇಕು".

ನೆಹರೂ ಉಪದೇಶ

ಡಿಲ್ಲಿ ನಗರಸಭೆಯವರು ಗವರ್ನರ್ ಜನರಲ್ ರಾಜಾಜಿಯ ಸನ್ಮಾನಾರ್ಥವಾಗಿ ಗಾಂಧಿ ಚೌಕದಲ್ಲಿ ಏರ್ಪಡಿಸಿದ್ದ ಪ್ರಚಂಡ ಸಭೆಯಲ್ಲಿ ಭಾಷಣವೀಯುತ್ತಾ ಪಂಡಿತ ಜವಾಹಿರಲಾಲರು ಶ್ರೀ ಸಿ. ರಾಜಗೋಪಾಲಾಚಾರ್ಯರನ್ನು ಮುಕ್ತಕಂಠದಿಂದ ಶ್ಲಾಘಿಸಿದರು. "ಅತ್ಯುಚ್ಚ ಅಧಿಕಾರಪೀಠವನ್ನೇರಿದ ಕಾರಣದಿಂದಲ್ಲ-ಸ್ವಾತಂತ್ರ್ಯ ಸಂಗ್ರಾಮದ ಹಳೇಯೋಧನೆಂಬುದರಿಂದಲೇ ರಾಜಾಜೀ ಹಿಂದೀ ಜನತೆಯ ವಿಶ್ವಾಸ ಮತ್ತು ಗೌರವಗಳಿಗೆ ಪಾತ್ರರಾಗಿದ್ದಾರೆ" ಎಂದರು. ರಾಷ್ಟ್ರದ ಮುಂದಿರುವ ಸಮಸ್ಯೆಗಳ ಕುರಿತು ಪಂಡಿತಜೀಯೆಂದರು: "ಸಮಸ್ಯೆಗಳೇನೋ ಜಟಿಲವಾಗಿದ್ದರೂ ನಾವು ಅವುಗಳನ್ನು ಎಚ್ಚರಿಕೆಯಿಂದ ಇದಿರಿಸಲೇಬೇಕು. ರಾಷ್ಟ್ರವು ಇಂತಹ ಸಮಸ್ಯೆಗಳನ್ನು ಇದಿರಿಸಿದ್ದಿತು; ಇದಿರಿಸುತ್ತಾ ... ... ಇದಿರಿಸಿ ಗೆ ಆದರೆ ಅವುಗಳನ್ನು ಜಾದುಕೋಲಿನಿಂದ ಮಾಯಗೊಳಿಸಲಾಗುವದಿಲ್ಲ. ನಾವೊಂದು ಧೀರ ರಾಷ್ಟ್ರವಾಗಿ, ನಮ್ಮ ಪ್ರಗತಿಪಥದಲ್ಲಡ್ಡ ಬರುವ ಪ್ರತಿಯೊಂದು ಕಂಟಕವನ್ನಿದಿರಿಸಲಿಕ್ಕೂ ಬದ್ಧರಾಗಿ ನಮ್ಮ ಕಾರ್ಯಕ್ರಮಗಳೊಡನೆ ಮುಂದೊತ್ತಬೇಕಾಗಿದೆ. ಇಂತಹ ಕಷ್ಟ ಕಾಲದಲ್ಲಿ ನಮಗೆ ಬೇಕಾದುದೆಂದರೆ ಅನುಭವ, ಸುಸ್ಪಷ್ಟ ಬುದ್ಧಿ ಮತ್ತು ಚಾತುರ್ಯ. ನಮ್ಮ ನವ ಗವರ್ನರ್ ಜನರಲರಲ್ಲಿ ಮಹಾತ್ಮಾ ಗಾಂಧಿಯವರೊಂದಿಗವರಿಗಿದ್ದ ದೀರ್ಘ ಸಂಬಂಧದ ಪರಿಣಾಮವಾಗಿ ... ಸದ್ಗುಣಗಳೂ ತುಂಬಿವೆ ಎನ್ನಲು ನಾನು ಹೆಗ್ಗಳಿಕೆ ಪಡುತ್ತೇನೆ. ಅವರ ಸಮರ್ಥ ನಿರ್ದೇಶಕತ್ವದಲ್ಲಿ ನಾವು ಪ್ರಗತಿ ಮತ್ತು ಅಭಿವೃದ್ಧಿಯತ್ತ ಸಾಗುವೆವು ಎಂಬ ಕುರಿತು ನನಗೆ ಸಂದೇಹವಿಲ್ಲ"

ನೋಟೀಸು

ಕುಂದಾಪುರ ಡಿವಿಜನಲ್ ರೆಂಟ್ ಕಂಟ್ರೋಲರ್-ವ-ರೆವಿನ್ಯೂ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ.

H. R. C. O. P No. 43/1948

ಯೋಗಪ್ಪ ಯಾನೆ ಬಾಬ ಶೆಟ್ಟಿಗಾರ —ಅರ್ಜಿದಾರ

ಮತ್ತು

ತನಿಯ ಮರಕಾಲ ಕೂಡಾ—ಎದ್ರಿಯಾರು

1ನೇ ಎದ್ರಿ ಉಡ್ಪಿ ತಾಲ್ಕು ಶಿವಳ್ಳಿಗ್ರಾಮದ ಕುಂಜಬೆಟ್ಟಿನಲ್ಲಿರುವ ಗುರುವ ಮರಕಾಲನ ಅಳಿಯ ತನಿಯ ಮರಕಾಲನಿಗೆ:

1ನೇ ಎದ್ರಿಯು ಅರ್ಜಿದಾರರವಳಗೆ ಅನುಭವಿಸಿಕೊಂಡುಬರುವ ಉಡ್ಪಿ ಮುನ್ಸಿಪಲ್ ನಂಬ್ರ 30 A,1 ನೇ ಅಟ್ಟೋಣದ ಸ್ವಾಧೀನ ತೆಗೆಲಿ ಅರ್ಜಿದಾರರು ಜೋಗಿಯಿಂದ ಕೋರ್ಟಿನಲ್ಲಿ ಎದ್ರಿಯರಮೇಲೆ ದಾಖಲು ಮಾಡಿದ ಅರ್ಜಿಯು ತಾ 23-7-1948ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಕುಂದಾಪುರದಲ್ಲಿ ಇಟ್ಟಿದೆ. ಆ ದಿನ 1ನೇ ಎದ್ರಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಬೆಳಿಗ್ಗೆ 10 ಗಂಟೆಗೆ ಕೋರ್ಟಿನಲ್ಲಿ ಹಾಜರಾಗಿ ತನ್ನ ಉದಾಹರಣೆಯಿದ್ದಲ್ಲಿ ಅದನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದ್ರೆ, 1ನೇ ಎದ್ರಿಯ ಗೈರುಹಾಜರಿಯಲ್ಲಿ ಅರ್ಜಿಯನ್ನು ತೀರ್ಮಾನಿಸಲಾಗುವುದು ಎಂತ ಈ ಮೂಲಕ ತಿಳುಹಿಸಲಾಗಿದೆ.

(By Order)

V. B. Krishna Rao

Advocate for the Petitioner

ಉಡುಪಿ ತಾ. 12-7-1948

ಗೃಹಿಣಿಯಿಲ್ಲದ ಗೃಹಕ್ಕೇನೇ ಆಗ್ರಹ!
ಗೃಹಿಣಿ ಬಂದಾಗಲೇ ದಂಪತಿಗಳೊಂದಾಗಿ

★ ಗೃಹ ಪ್ರವೇಶ ★

(ತೆಲುಗು)

ಭಾನುಮತಿ — ಸಿ. ಎಸ್. ಆರ್

ತಾ. 17—7—48 ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರಗಳು:-ಪ್ರತಿಜ್ಞಾ, ಶಿಕಾರಿ, ಜೈರಾಮ್ ಖಾನ್ ಇತ್ಯಾದಿ

ಆಭಾರ ಮನ್ನಣೆ

ನನ್ನ ಪೂಜ್ಯ ತಂದೆ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ವಿಯೋಗ ಮುಖದಲ್ಲಿ ನನ್ನೊಂದಿಗೆ ಹಾರ್ದಿಕ ಸಹ ಸಂತಾಪ ಸೂಚಿಸುವ ಪತ್ರಗಳೂ ತಂತಿಗಳೂ ಕರ್ನಾಟಕದ ವಿವಿಧ ಭಾಗಗಳಿಂದ ನನಗೆ ಬಂದಿವೆ ಈ ನನ್ನ ಬಂಧುಮಿತ್ರರೆಲ್ಲರಿಗೂ ಪ್ರತ್ಯ ಪ್ರತ್ಯೇಕವಾಗಿ ಉತ್ತರವನ್ನೀಯುವುದು ಅಸಾಧ್ಯವಾದ್ದರಿಂದ ಈ ಮೂಲಕ ಅವರೆಲ್ಲರ ಆಭಾರ ಮನ್ನಿಸುತ್ತೇನೆ.

-ಡಾ। ವಿ. ಆರ್. ಕೊರಡ್ಕಲ್

ಉಡುಪಿ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P 9/48

ಅಂತೋನಿ ಫೆರ್ನಾಂದಿಸ ಕೂಡಾ 5 ಜನರು —ಅರ್ಜಿದಾರರು

ಮತ್ತು

ಜೊಸೆಫ ಫೆರ್ನಾಂದಿಸ, ಅಂತೋನಿ ಫೆರ್ನಾಂದಿಸರ ಮಗ, ಕಾರ್ಕಳ ತಾಲೂಕು ಪುತ್ತಿಗೆ ಗ್ರಾಮದ ಗುಂಡ್ಯಡ್ಕ ಮನೆ ಎಂಬಲ್ಲಿಯಿರುವವ —ಎದ್ರಿ

ಈ ಮೂಲಕ ಎಲ್ಲಜನರಿಗೂ ತಿಳಿಯಪಡಿಸುವದೇನಂದ್ರೆ:-

ಕಾರ್ಕಳ ತಾಲೂಕು ಪುತ್ತಿಗೆ ಗ್ರಾಮದಲ್ಲಿ ಕಾಯಂ ವಾಸ್ತವ್ಯಕೊಂಡು ಬಂದು ಮೃತಪಟ್ಟ ಎಲಿಯಾಸ್ ಫೆರ್ನಾಂದಿಸಗೆ ಬರಬೇಕಾದ ಸಾಲ ವ ಯಿನ್ಸೂರೆನ್ಸ್ ಕಂಪೆನಿಯಿಂದ ಬರತಕ್ಕ ಆದಾಯವನ್ನು ವಸೂಲುಮಾಡುವ ಬಗ್ಗೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೊಟ್ಟ ಅರ್ಜಿಯು ಇದೇ ಬರುವ ತಾರೀಕು 16-9-48ಕ್ಕೆ ಯಿಟ್ಟಿರುತ್ತದೆ- ಸದ್ರಿ ಅರ್ಜಿಗೆ ಆಕ್ಷೇಪಯಿದ್ದವರು ಸದ್ರಿ ತಾರೀಕಿನಲ್ಲು ಬೆಳಿಗ್ಗೆ 10 ಗಂಟೆಗೆ ಹಾಜರಾಗಿ ಆಕ್ಷೇಪಿಸತಕ್ಕದ್ದು. ತಪ್ಪಿದ್ದಲ್ಲಿ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರನ ಹೆಸರಲ್ಲಿ ಸರ್ಟಿಫಿಕೇಟು ಕೊಡೋಣಾಗುತ್ತದೆ.

[ಕೋರ್ಟು ಹುಕುಂ ಪ್ರಕಾರ]

I. S. Rao

Advocate for the Pititinors

Karkala Dated 8-7-48

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. E. P. 319 48 S. C. 270/43

ವಾದಿ- ಟಿ. ಶಂಕರರಾವ್

ಪ್ರತಿವಾದಿ-ಅಣ್ಣಪ್ಪಾಚಾರಿ

ಪ್ರತಿವಾದಿ ಅಣ್ಣಪ್ಪಾಚಾರ್ಯ, ಬೈಲೂರ ಕೊಗ್ಗಾಚಾರಿ ಮಗ, ಕಂದಾವರ ಗ್ರಾಮ ಹಾಲಾಡೇರ ಹೊಬಳಿಯಲ್ಲಿ ಕೋಣಿಗೆ ರಸ್ತೆಯಲ್ಲಿ ವಾಸ್ತವ್ಯವಿರುತ್ತಾರೆ

ವಾದಿಯು ನಿಮ್ಮಮೇಲೆ ಪಡದ ಮೇಲೆ ಸ್ಮಾಲ ಕಾಜ 270/43ನೆ ಡಿಕ್ರಿ ಸಮಾಧಾನ ನಡಿಸಿದ ಮೇಲಣ ಸ್ಮಾಲ ಕಾಜ 319/48 ಅಮಲ್ಜಾರಿಯಲ್ಲಿ ನಿಮಗೆ ನಿರ್ದಾವರ್ತಿ ನೋಟಿಸುಮಾಡಿಸಿದಾಗ್ಯೂ ನೀವು ಜ್ಯಾರಿಗೆ ತಪ್ಪಿಕೊಳ್ಳುತ್ತಿದ್ದೀರಿ ನಿಮಮೇಲೆ ಯಾಕೆ ಅಲಜಾರಿ ನಡಿಸಕೂಡದು ಎಂಬುದಕ್ಕೆ ಸಬೂತೋರಿಸಲಿಕ್ಕೆ 1948ನೆ ಯಿಸವಿ ಜುಲ್ಯೈತಿಂಗಳು 30ಕ್ಕೆ ಯಿಟ್ಟಿದೆ ಆ ದಿವಸ ಪೂರ್ವಾಹ್ನ 11 ಗಂಟೆಗೆ ನೀವು ಕೋರ್ಟಿನಮುಂದೆ ಹಾಜರಾಗಬೇಕೆಂತ ನಿಮಗೆ ಈ ನೋಟಿಸು ದೋಣಾಗುತ್ತದೆ.

By Order

ವಕೀಲ್ ತಿ ಗಣೇಶರಾವ್

Pleader, Coondapur

ತಾರೀಕು 12-7-48

ಉಡುಪಿ

ಮುನಿಸಿಪಲ್ ಕೌನ್ಸಿಲು ಮೀಟಿಂಗು ದಿನಾಂಕ 10ರಲ್ಲಿ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ನಗರ ಕ್ಷೇತ್ರದಲ್ಲಿಯೇ ಅಜ್ಜರಕಾಡು ಅಥವಾ ಸಗ್ರಿ ಗುಡ್ಡೆಯಲ್ಲಿ ಒಂದು ಕಾಲೇಜನ್ನು ಸ್ಥಾಪಿಸುವ ಯೋಜನೆಯ ನಿಧಿಗೆ ಧನಸಹಾಯವನ್ನೀಯಬೇಕಾಗಿ ಅಪೇಕ್ಷಿಸಿದ ಉಡುಪಿ ಕಾಲೇಜು ಕಮಿಟಿಯ ಪತ್ರಗಳನ್ನು ಮನ್ನಿಸಿ ಒಂದು ಸಾವಿರ ರೂಪಾಯಿಯನ್ನು ನಾಲ್ಕು ವರ್ಷ ಕಂತುಗಳಿಂದ ಕೊಡುವದೆಂದಾಯಿತು. ಈ ನಿರ್ಣಯದಲ್ಲಿ ಶ್ರೀ ಎ. ಮಂಜುನಾಥ ರಾಯರು ತಾಟಸ್ಥ್ಯ ವಹಿಸಿದ್ದರು.

ರಸ್ತೆ ರಿಪೇರಿ ಈಗಾಗಲೇ ಆರಂಭವಾಗಿದೆ. ರಸ್ತೆಗಳ ಇಕ್ಕೆಡೆಯ ಹೊಲಸು ಮಣ್ಣು, ಕಸ ಚೂರುಗಳು ಇತ್ಯಾದಿ ರಸ್ತೆಗಳ ಮೇಲೆ ನೋಡಸಿಕ್ಕುತ್ತವೆ. ಪಾದರಕ್ಷೆಗಳಿಲ್ಲದ ಜನರಿಗೆ ತುಂಬಾ ಅಪಾಯಕರವೆಂದು ಸಂಬಂಧಪಟ್ಟವರು ತಿಳಿದುಕೊಳ್ಳಬೇಕಾಗಿದೆ.

ಅಕ್ಕಿ ವಿತರಣೆ—ನಗರ ಕ್ಷೇತ್ರದಲ್ಲಿಯ ರಿಲೀಫ್ ಅಂಗಡಿಗಳಲ್ಲಿ ಒಂದೊಂದರಲ್ಲಿ ಒಂದೊಂದು ವಿಧದ ಅಕ್ಕಿ ಕೊಡಲಾಗುತ್ತಿದೆ ಮುಖ್ಯತಃ ಬಿಳಿಗೆ ಅಕ್ಕಿಯ ಕುರಿತು ಜನತೆಯ ದೂರು ಕೇಳಬರುತ್ತಿದೆ. ಸಂಬಂಧಪಟ್ಟವರು ಈ ಕಡೆ ಬೇಗ ಗಮನ ಕೊಡಬೇಕಾಗಿದೆ.

ಉಡುಪಿ ತಾಲೂಕಿನ ಮಹಾಜನರಲ್ಲಿ ವಿನಂತಿ— ಪರಮಪೂಜ್ಯ ಮಹಾತ್ಮಾ ಗಾಂಧಿಯವರ ಸ್ಮಾರಕದ ಬಗ್ಗೆ ನಿಧಿಯೊಂದನ್ನು ಸಂಗ್ರಹಿಸಲಿಕ್ಕಾಗಿ, ಕಳೆದ ತಾ 15-4-48ರಂದು 'ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿ, ಉಡುಪಿ' ಸ್ಥಾಪಿತವಾದುದು ತಮಗೆ ತಿಳಿದಿರಬಹುದಷ್ಟೆ! ಇದುವರೆಗೆ ಅಖಿಲಭಾರತ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿಯಿಂದ ಪಾವತಿ ಪುಸ್ತಕಗಳು ಬಾರದಿದ್ದ ಪ್ರಯುಕ್ತ ನಿಧಿ ಸಂಗ್ರಹಮಾಡಲಾಗಲಿಲ್ಲ. ಈಗ ತಾನೆ ಪಾವತಿ ಪುಸ್ತಕಗಳು ಬಂದಿದ್ದು ಆ ಕಾರ್ಯವನ್ನು ಭರದಿಂದ ಮುಂದೊತ್ತಬೇಕಾಗಿದೆ. ಆದುದರಿಂದ, ಉಡುಪಿ ತಾಲೂಕಿನ ಎಲ್ಲಾ ಸಂಘ ಸಂಸ್ಥೆಗಳು, ಸರಕಾರಿ ಮತ್ತು ಇತರ ನೌಕರರು ಹಾಗೂ ಮಹಾಜನರೆಲ್ಲರೂ ರಾಷ್ಟ್ರಪತಿ ಬಾಬುರಾಜೇಂದ್ರ ಪ್ರಸಾದರ ಹೇಳಿಕೆಯ ಮೇರೆಗೆ, ಅವರವರ ಹತ್ತು ದಿನಗಳ ಆದಾಯಕ್ಕೆ ಕಡಮೆಯಾಗದಷ್ಟು ವಂತಿಗೆಯನ್ನಿತ್ತು ಈ ಪುಣ್ಯಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ವಿನಂತಿ. ಉಡುಪಿ ತಾಲೂಕಿನ ಮಟ್ಟಿಗೆ, ಪಾವತಿಪುಸ್ತಕಗಳನ್ನಿತ್ತು ನಿಧಿ ಸಂಗ್ರಹಿಸುವ ಅಧಿಕಾರವನ್ನು ಈ ಕೆಳಗಿನ ಮಹನೀಯರಿಗೆ ಮಾತ್ರ ಕೊಡಲಾಗಿದೆ.— 1 ಶ್ರೀ ಶಾಂಗಾಳ ಉಪೇಂದ್ರ ಶ್ರೀನಿವಾಸ ನಾಯಕ್ 2 ಡಾ. ಎಸ್. ಆರ್. ಪೈ, 3 ಡಾ ಟಿ. ಎಮ್. ಎ. ಪೈ, 4 ಡಾ. ಕೆ. ಎಲ್. ಐತಾಳ, 5 ಶ್ರೀ ಟಿ ಎ. ಪೈ, 6 ಶ್ರೀ ಕೆ. ನರಹರಿ ಕಾಮತ್, 7 ಶ್ರೀ ಬಾಳೆಕುದ್ರು ಕೃಷ್ಣಯ್ಯ ಹೆಗ್ಡೆ, ಕರ್ಕಳ. 8 ಶ್ರೀ ಎ. ಕೃಷ್ಣಯ್ಯ ಹೆಗ್ಡೆ, ಪೆರ್ಡೂರು. 9 ಡಾ. ಚಂದಯ್ಯ ಹೆಗ್ಡೆ, ಬಿರ್ತಿ 10 ಶ್ರೀ ಶಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಕಟಪಾಡಿ. 11 ಡಾ. ವಿಟ್ಠಲ ಶೆಟ್ಟಿ, ಕಾಪು. 12 ಶ್ರೀ ಕರಿಯಣ್ಣ ಶೆಟ್ಟಿ, ಪಡುಬಿದ್ರಿ. 13 ರೆ ಫಾ. ಗೊನ್ಸಾಲ್ವಿಸ್, ಶಿರ್ವ. 14 ಜಗಜ್ಜೀವನದಾಸ್ ಶೆಟ್ಟಿ, ಮಾಬುಕಳ

ಪಿ. ಉಪೇಂದ್ರ ಶ್ರೀನಿವಾಸ ನಾಯಕ್, ಅಧ್ಯಕ್ಷ. ಟಿ. ಅನಂತ ಪೈ, ಮತ್ತು ಕೆ. ನರಹರಿ ಕಾಮತ್, ಜತೆ ಕಾರ್ಯದರ್ಶಿಗಳು. ಕೆ. ನರಹರಿ ಕಾಮತ್, ಕೋಶಾಧಿಕಾರಿ.

ಅಲೆವೂರಿನಲ್ಲಿ ಶಿಲ್ಪಿ ಕೆಲಸದಲ್ಲಿ ಪ್ರಸಿದ್ಧಿಹೊಂದಿ ಅನೇಕ ಬಹುಮಾನಗಳನ್ನು ಪಡೆದ ಶ್ರೀ ನಾರಾಯಣಾಚಾರಿಯು ಕಳೆದ ತಾ 2-7-48ರಲ್ಲು ಅಕಾಲ ಮರಣಕ್ಕೆ ತುತ್ತಾದ ವಿಷಯ ತಿಳಿಸಲು ತುಂಬಾ ವಿಷಾದಪಡುತ್ತೇವೆ. ಮೃತರಿಗೆ 35 ವರ್ಷ ಪ್ರಾಯ ಅನೇಕ ದೇವಸ್ಥಾನದ ಜೀರ್ಣೋದ್ಧಾರ ಕೆಲಸವನ್ನು ಪೂರೈಸಿದ್ದಲ್ಲದೆ ಹೊಸಮಾದರಿಯ ಶಿಲಾ ಶಿಲ್ಪಗಳನ್ನು ಮಾಡಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನು ಈಯಲೆಂದು ಕೋರುತ್ತೇವೆ.

ಶೋಚನೀಯ ನಿಧನ ಉಪ್ಪೂರಿನ ಅಧ್ಯಾಪಕರೂ, ವಿದ್ಯಾವಿನಯ ಸೌಜನ್ಯಾದಿ ಗುಣಗಳಿಂದ ಸರ್ವಜನಪ್ರೀತರೂ ಆಗಿದ್ದ ಶ್ರೀ ಯು. ಕೆ. ಅಣ್ಣಪ್ಪ ಸೆಟ್ಟರು ತನ್ನ ಎಳೇ ವಯಸ್ಸಿನಲ್ಲಿ ಕ್ಷಯಕ್ಕೀಡಾಗಿ ಇದೇ ತಾ 12ರಲ್ಲಿ ದಿವಂಗತರಾದುದು ಅತ್ಯಂತ ಶೋಚನೀಯವಿದೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಸಂಬಂಧಿಕರೊಂದಿಗೆ ಸಹಾನುತಾಪ ಸೂಚಿಸುತ್ತೇವೆ.

ವಿ. ಫುರ್ಟಾಡೋರ ನಿಧನ— ತನ್ನ ನ್ಯಾಯನಿಷ್ಠೆ, ನಿಷ್ಪಕ್ಷಪಾತತೆ, ಸಜ್ಜನಿಕೆಗಳಿಂದ ಅಪರಾಧಿ ಭಯಂಕರರೂ ಜನಮಾನ್ಯರಾಗಿದ್ದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ವಿ. ಅಗಸ್ತಿಸ್ ಫುರ್ಟಾಡೋ ಇವರು ಇದೇ ತಾ. 12-7-48ನೇ ರಾತ್ರಿ ಉಡುಪಿಯ ತನ್ನ ನಿವಾಸದಲ್ಲಿ 54ನೇ ವಯಸ್ಸಿನಲ್ಲಿ ಇಹಯಾತ್ರೆ ಮುಗಿಸಿಕೊಂಡರೆನ್ನಲು ಅತ್ಯಂತ ವಿಷಾದಿಸುತ್ತೇವೆ. ತಾ 13ನೇ ಅಪರಾಹ್ನ ನಡೆದ ಅವರ ಸಮಾಧಿ ಮೆರವಣಿಗೆಯಲ್ಲಿ ಊರಪ್ರಮುಖ ನಾಗರಿಕರು ಭಾಗವಹಿಸಿ, ಶವಕ್ಕೆ ಪುಷ್ಪಹಾರ, ಮಾಲಾಹಾರಗಳನ್ನರ್ಪಿಸಿ, ತಮ್ಮ ಕೊನೆಯ ಗೌರವ ಸಲ್ಲಿಸಿದರು. 1940ರಿಂದ 44ರ ವರೆಗೆ ಉಡುಪಿಯಲ್ಲಿ ಸಬ್ ಇನ್ಸ್ಪೆಕ್ಟರರಾಗಿದ್ದು ತನ್ನ ಅಸಾಮಾನ್ಯ ನ್ಯಾಯನಿಷ್ಠೆ ಮತ್ತು ಧೈರ್ಯ ಸಾಹಸಗಳಿಂದ 'ಫುರ್ಟಾಡೋರ ಕೈಯಲ್ಲಿ ನ್ಯಾಯವು ಸುರಕ್ಷಿತ' ಎಂಬ ಮಾತು ಎಲ್ಲರ ಬಾಯಿಯಲ್ಲೂ ನಲಿದಾಡುವಂತೆ ಮಾಡಿದ್ದರು. ಅಂತ್ಯಭಾಗದಲ್ಲಿ "ಆಂಟೀ ಕರೆಪ್ಷನ್ ಎಕ್ಸ್‌ಟ್ರೆಂಟ್ ಸಿ. ಐ. ಡಿ ಇನ್ಸ್‌ಪೆಕ್ಟರ್" ಆಗಿದ್ದರು. ಕೆಲಕಾಲದಿಂದ ಪೀಡಿಸುತ್ತಿದ್ದ 'ಲಿವರ್' ಸಂಬಂಧದ ಕಾಯಿಲೆಯೊಂದು ಈ ಜನೋಪಕಾರೀ ಜೀವನವನ್ನು ಕೊನೆಗೊಳಿಸಿತು. ತನ್ನ ಕರ್ತವ್ಯ ಪಾಲನೆ ಮತ್ತದಕ್ಕೆ ಸಂಬಂಧಿಸಿದ ನ್ಯಾಯ, ಸತ್ಯರಕ್ಷಣೆಯನ್ನೇ ತನ್ನ ಜೀವನದ ಧ್ಯೇಯವಾಗಿಟ್ಟುಕೊಂಡು, ಯಾವ ವಿಧದ ಅನ್ಯಾಯದ ಅನುಗ್ರಹಗಳ ಅಂಜಿಕೆ ಆಕರ್ಷಣೆಗಳಿಗೂ ಬಲಿಬೀಳದೆ, ವಿ. ಫುರ್ಟಾಡೋರವರು ಸರ್ವಶಕ್ತಿಯಿಂದ ತನ್ನ ಗುರಿ ಸಾಧನೆಗೆ ದುಡಿಯಬಲ್ಲ ಅಧಿಕಾರಿಗಳು ನಿಜಕ್ಕೂ ಅತ್ಯಂತ ವಿರಳ. ಇಂಥವರ ನಿಯೋಗದಿಂದ ಸಾರ್ವಜನಿಕ ಶಾಂತಿ ಮತ್ತು ಭದ್ರತೆಯ ಒಂದು ಆಧಾರವೇ ತಪ್ಪಿದಂತಾಗಿದೆ. ನ್ಯಾಯರಕ್ಷಕ ಹಸ್ತವೊಂದು ಮುರಿದಂತಾಗಿದೆ. ವಿ। ಫುರ್ಟಾಡೋ ತನ್ನ ಕರ್ತವ್ಯಪಾಲನೆಯ ಮಟ್ಟಿಗೆ ನಿಷ್ಠುರರಿದ್ದಂತೆಯೇ ಅತ್ಯುಚ್ಚ ನಾಗರಿಕ ಗುಣ ನಡತೆಯವರಿದ್ದರು; ಸುಸಂಸ್ಕೃತರೂ ಸಜ್ಜನರೂ ಇದ್ದರು. ಎಲ್ಲಾ ವಿಧದಲ್ಲೂ ಜಾತಿಪಾಲಕರಿಗೊಂದು ಮಾದರಿಯಾಗಿ ತೋರಿಸಲಾಗುವಂತಿದ್ದರು. ನಿಜಕ್ಕೂ ಆ ಕ್ಷೇತ್ರದೊಂದು ಅಮೂಲ್ಯ ವಸ್ತು ಕಳೆದು ಹೋಯಿತು! ಅವರಿಗೆ ಮೂರು ಗಂಡು, ನಾಲ್ಕು ಹೆಣ್ಣು ಮಕ್ಕಳು. ಫುರ್ಟಾಡೋ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಸಂಬಂಧಿಕರೊಡನೆ ಸಹಸಂತಾಪ ಸೂಚಿಸುತ್ತೇವೆ.

ಬಾರ್ಕೂರು ಬಿಲ್ಲವರ ಚಾರಿಟಿ ಸಂಘ, ಬೊಂಬಾಯಿ—ಇವರ ನಾಲ್ವತ್ತರಿಕೋತ್ಸವವು ಇದೇ ಜುಲೈ ತಿಂಗಳ ತಾ 25ನೇ ರವಿವಾರ ಅಪರಾಹ್ನ ಘಂಟೆ 2-30ಕ್ಕೆ ಕೋಟೆಯೊಳಗಿನ ಸರ್ ಕಾವಸ್ಜಿ ಜಹಂಗೀರ್ ಸಾರ್ವಜನಿಕ ಸಭಾಸದನದಲ್ಲಿ ವರ್ತಕ ವಿಭೂಷಣ ಶ್ರೀ ಬಿ. ವಿ. ಭೂಮರೆಡ್ಡಿ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿದೆ.

ಪ್ರಕಟಣೆ

ಎರಡು ಬೆಳೆ ಬೆಳೆಯುವ ನಂಜಸ್ಥಳಗಳೆಂದು ರೆವಿನ್ಯೂ ಲೆಕ್ಕಗಳಲ್ಲಿ ದಾಖಲಾಗಿದ್ದ ಸ್ಥಳಗಳಲ್ಲಿ ಕಳೆದ 5 ವರ್ಷಗಳಲ್ಲಿ ಎರಡು ಬೆಳೆಗಳನ್ನು ಬೆಳಸದೆ ಇದ್ದರೆ ಅಂಥಾ ನಂಜಸ್ಥಳಗಳ ಖಾತೆದಾರರು ಈ ಸಂಗ್ತಿಯನ್ನು ಸರ್ಕಾರದವರ ಗಮನಕ್ಕೆ ಅರ್ಜಿಮೂಲಕ ತಂದಲ್ಲಿ ಅವುಗಳು ಒಂದು ಬೆಳೆಯ ತರಗತಿಗೆ ವರ್ಗಾಯಿಸಲ್ಪಡುವದು. ಇದೇ ರೀತಿಯಲ್ಲಿ ಬಾಗಾಯ್ತು ತರಗತಿಯಾಗಿ ದಾಖಲಾಗಿರುವ ಸ್ಥಳಗಳನ್ನು ಕಳೆದ 5 ವರ್ಷಗಳವರೆಗೆ ಬಾಗಾಯ್ತು ಆಗಿ ಉಪಯೋಗಿಸದೆ ಇದ್ದರೆ ಅಂಥಾ ಬಾಗಾಯ್ತು ಸ್ಥಳಗಳನ್ನು ಸಂಬಂಧಪಟ್ಟ ಖಾತೆದಾರರು ಸರ್ಕಾರದವರ ತಿಳುವಳಿಕೆಗೆ ಅರ್ಜಿಮೂಲಕ ತಂದಲ್ಲಿ ಅವುಗಳು ಪುಂಜ ತಿರ್ವೆಗೆ ವರ್ಗಾಯಿಸಲ್ಪಡಲಾಗುವದು ಎಂತ ಗವರ್ನಮೆಂಟಿನಿಂದ ಹುಕುಂ ತಲ್ಪಿರುತ್ತದೆಂದು ಸರ್ವಜನರ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಕಟಿಸಲಾಗಿದೆ.

(Sd.) P. Sitharama Shetty
Tahsildar.
ಉಡ್ಪಿ, ತಾಲೂಕು ಕಚೇರಿ, 8-7-48

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
S. C. No. 241/1948

ಸೈಯದ್ ಮುಹಮ್ಮದ್ ಸಾಹೇಬ —ವಾದಿ
ಕಾದಿರ್ ಸಾಹೇಬ, ನೈಯಿನ್ ಇಸ್ಮಾಲ್ ಸಾಹೇಬರ ಮಗ-ತೀರ್ಥರುಗ್ರಾಮದ ಕಳಿಬಸ್ಥ —ಪ್ರತಿವಾದಿ

ಸದ್ರಿ ಪ್ರತಿವಾದೀಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ-

ವಾದಿಯು ನಿಮ್ಮ ಮೇಲೆ ದಿಮಾಂಡ ನೋಟಿನ ಬಾಬ್ತು ಸಲ್ಲಬೇಕಾದ ರೂಪಾಯಿ 98-7-0 ನ್ನು ಬರಮಾಡಿಕೊಳ್ಳುವರೇ ಮೇಲಿನ ಕೋರ್ಟಿನಲ್ಲಿ ದಾಖಲುಮಾಡಿದ ಸದ್ರಿ ದಾವೆಯು ಚರ್ಚೆಗೆ ತಾ 28-7-1948ಕ್ಕೆ ಇಟ್ಟಿರುವುದರಿಂದ ಈ ಬಾಬಿನಲ್ಲಿ ನಿಮ್ಮ ಉಜುರಹರಕತ್ತುಗಳ ಪಕ್ಷಕ್ಕೆ ತಪ್ಪದೆ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನಲ್ಲಿ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಮೇಲೆ ಏಕ್ಸ್‌ಪಾರ್ಟೇ ಡಿಕ್ರಿ ಕೊಡಲಾಗುವುದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ.

V. Srinivasa Shetty,
Advocate for Pltf.
ಕುಂದಾಪುರ. ತಾ 8-7-1948

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
R. E. P. No. 314/1948

M. ಕುಂಞಾಮು —ಅರ್ಜಿದಾರ
ಕೆ. ಅಬ್ದುಲ್ ಕುಂಞ, ಮುಹಮ್ಮದ್ ಬ್ಯಾರಿ ಮಗ, ಚೆಂಗಳಗ್ರಾಮದ ಚೆರ್ಕಳದಲ್ಲಿ ರುವವ —ಜೆಡ್ಜ್‌ಮೆಂಟ

ಸದ್ರಿ ಜೆಡ್ಜ್‌ಮೆಂಟಿನ ಸ್ಥಿರಾಸ್ತಿ ಜಪ್ತಿಮಾಡಿ ಸದ್ರಿ ಅರ್ಜಿಯು ತಾರೀಕು 28-7-1948 ಕ್ಕೆ ಇಟ್ಟಿರುವ ಸಂಗ್ತಿ ತಿಳಿಸಲಾಗಿರುವದೆ.

Sd. P. Ahmad,
Advocate for Pititioner
ಕಾಸರಗೋಡು 10-7-48

THE VIJAYA BANK LIMITED.

Season deposits are now accepted at the Head Office and Branches of the Bank in sums of Rs 1000/- and over, in multiples of Rs. 500/- at the following rates:-

For 3 months at 2¼% per annum.
For 6 months at 3½% per annum.

For further particulars you may apply or call at any of our following Offices

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಸ್ವರಾಜ್ಯದ ಸಮಸ್ಯೆ ನೆನಪಿರಲಿ!

ಸ್ವರಾಜ್ಯ ತುಳು ಲಾವಣಿ

ಅಗೋಸ್ತು 15 ಸ್ವರಾಜ್ಯ ದಿನ ನೆನಪಿರಲಿ!

ಸ್ವರಾಜ್ಯ ಚರಿತ್ರೆ-ಗಾಂಧೀಜೀ ಬಲಿದಾನ - ಹೈದರಾಬಾದ್ ಘರ್ಷಣೆ-ನಮ್ಮ ಕರ್ತವ್ಯ-ಇತ್ಯಾದಿಗಳು ಬಗೆಯುಟ್ಟುವಂತೆ. ಹೇಳುವವರ ಮತ್ತು ಕೇಳುವವರ ಮೈ ರೋಮಾಂಚಗೊಂಡು ನವಚೇತನ ಮೂಡುವಂತೆ ಒಣ್ಣಿಸಿರುವ ನವನವೀನ ತುಳುಲಾವಣಿ ಪ್ರಕಟವಾಗಿದೆ

ಉದಾ.
ಬರಿಯೇ ಬರಿದಿಸ, ಹೈದರಬಾದ್ ಡ।
ಅರಸು ನಿಜಾಮೆಂದ, ಸರಕುಡ್ದೆ! ।ತನ।
ಮುರ್ಲ್ ಬುಡುದು ಸೇರ್ಯೆದ ಬಡ್ಡೆ! ।ಇಜ್ಜ।
ನರಕದ ಗುರಿ ಕೆಸರ್ ಡ್ ಮುಕ್ಕೆರ್!॥
ದರ್‌ಪಡ್ ರಝಾಕಾರ್ ರಕ್ಕಸ ಪಾಪದ।
ಮುರಿಯೊಲು! ಉಂಡಾಯಗ್ ಕೆಂದ್! ।ತ।ಬಲಿಬಲಿ।

ಬೆಲೆ:- ಕೇವಲ 0 2 0

ಪ್ರತಿಗಳಿಗೆ—
ಎಂ. ಪಿ. ಹೆಗ್ಡೆ, ನವಯುಗ ಪ್ರೆಸ್, ಉಡುಪಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ನೋಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧಿಯ ಬಾಟ್ಲಿಗಳು ಹೆಚ್ಚು ಕಡಿಮೆ ಕಲದಿವಸಗಳಿಗೆ ಬರುವವು. ಅಂದರೆ ಕೇವಲ ೯ ರೂಪಾಯಿಗಳ ಒಳಗೆ ಬಾಣಂತಿಯರಿಗೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಬಿ ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ರಾನಿಕ ರೋಗಗಳ ಬಗ್ಗೆ ಬರೆದಲ್ಲಿ ರೋಗಗಳಿಗೆ ತಕ್ಕ ಔಷಧ ರವಾನಿಸಲಾಗುವುದು. 1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು.— ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ, ವರ್ಕ್ ಶಾಪ್ ಎದುರುಗಡೆ, ಪರೇಲ್,(3)ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ., ಮಾಟುಂಗಾ.



ಎಲ್ಲ ತರದ ದಂತ ರೋಗಗಳನ್ನು ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಆಯ್ಕೆ—ಜೂನ್ ತಾ 8ರಲ್ಲಿ ಸಂಜೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಭೆಯು ಕೆ. ಪಿ. ಸಿ. ಸಿ. ಕಾರ್ಯದರ್ಶಿ ಶ್ರೀ ವೆಂಕಟೇಶ ಮಾಗಡಿಯವರ ಅಧ್ಯಕ್ಷತೆಯಲ್ಲಿ ಜರಗಿತು ಡಾ। ಯು. ಪಿ. ಮಲ್ಯ ಮತ್ತು ಶ್ರೀ ಕೆ. ಕರಿಯಣ್ಣ ಸೆಟ್ಟರು ಕೆ. ಪಿ. ಸಿ. ಸಿ. ಗೆ ಆರಿಸಲ್ಪಟ್ಟರು. ತದನಂತರ ನಡೆದ ಅಧ್ಯಕ್ಷ ಪದದ ಚುನಾವಣೆಯಲ್ಲಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಬಹುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕಾರ್ಯಕಾರೀ ಮಂಡಳಿಯ ಸದಸ್ಯರ ವಿವರ ಹೀಗಿದೆ:- ಡಾ। ಯು. ಪಿ. ಮಲ್ಯ, ಎಮ್. ಎಲ್. ಎ. ಮತ್ತು ಶ್ರೀ ಕೆ. ಈಶ್ವರ, ಎಮ್. ಎಲ್. ಎ. [ಉಪಾಧ್ಯಕ್ಷರು] ಶ್ರೀ ಕೆ. ಕೆ. ಸೆಟ್ಟಿ [ಕಾರ್ಯದರ್ಶಿ], ಶ್ರೀ ಎಸ್. ಉಪೇಂದ್ರ ನಾಯ್ಕ [ಜತೆ ಕಾರ್ಯದರ್ಶಿ], ಶ್ರೀ ಅಮೃತ ಕೃಷ್ಣರಾವ್ [ಕೋಶಾಧಿಕಾರಿ], ಶ್ರೀಗಳಾದ ಕೆ. ತಿಮ್ಮಪ್ಪ ಸೆಟ್ಟಿ, ಬಿ. ಸೂರಪ್ಪ ಸೆಟ್ಟಿ, ಬಿ. ಸದಾಶಿವ ಹೆಗ್ಡೆ, ಕೆ. ಶಿ. ರಾಮ ಮೊಳುವಾಳ, ಜಿ. ಮಾಧವ ಶೈ, ಎಮ್ ಉಪೇಂದ್ರರಾವ್, ಸಿ. ಮಾಧವ ಪಡಿಯಾರ, ಹಕೀಮ್ ಹಾಜಿ ಹಸನ, ಕೆ ಮಹಾಬಲ ಸೆಟ್ಟಿ ಕೂಡಾ ಹಾಡಿದ್ದರಮುಂದಿ.

ನಗರಸಭೆ—ದಿನಾಂಕ 3ರಲ್ಲು ಶ್ರೀ ಎಲ್ ಸಿ ಪಾಯಸರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ನಗರ ಸಭೆಯಲ್ಲಿ ಸ್ವತಂತ್ರ ಭಾರತದ ಹೊಸ ಗವರ್ನರ್ ಜನರಲ್ ಆಗಿ ನೇಮಕಗೊಂಡ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನು ಅಭಿನಂದಿಸುವ ಸಾರಾಯವಾಯಿತು. ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಇಂಟರ್ ತರಗತಿಯಲ್ಲಿ ಒಂದು, ಎರಡು ಮತ್ತು ಮೂರನೆ ಗುಂಪುಗಳಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವಂತೆ ಸರಕಾರವು ವ್ಯವಸ್ಥೆ ಮಾಡಬೇಕೆಂದು ಸರಕಾರವನ್ನು ಕೇಳುವ ಶ್ರೀ ಎಮ್. ರಾಘವೇಂದ್ರ ಪೈಗಳ ಠರಾವು ಮಂಜೂರಾಯಿತು. ಮುಸ್ಲಿಂ ಬಾಲಕಿಯರ ಪ್ರಯಾಣ ಸೌಕರ್ಯಕ್ಕಾಗಿ ತಿಂಗಳೊಂದರ ಇನ್ನೂರು ರೂಪಾಯಿ ಮಂಜೂರಾಯಿತು. ನಗರ ಸಭಾಧ್ಯಕ್ಷರಿಗೆ ತಿಂಗಳೊಂದರ ಐವತ್ತು ರೂಪಾಯಿಗಳ ಪ್ರಯಾಣ ಭತ್ತೆ ಸಿಗುವಂತೆ ಸಭೆಯು ಸರಕಾರವನ್ನು ಕೇಳಿಕೊಂಡಿತು.

ವಿದಾಯ ಸತ್ಕಾರ—ಕಳೆದ ತಾ 26ರಲ್ಲು ಕೆನರಾ ಹೈಸ್ಕೂಲಿನ ಅಧ್ಯಾಪಕ ಸಂಘವು ಶಾಲೆಯಲ್ಲಿ ಕೆಲಸಮಾಡಿ ನಿವೃತ್ತರಾದ ಶ್ರೀ ಕೆ. ಯಶವಂತರಾವ್ ಮತ್ತು ಶ್ರೀ ಯು. ಆರ್. ಶೆಣೈ ಅವರನ್ನು ಸತ್ಕರಿಸಿ ಬೀಳ್ಕೊಟ್ಟಿತು. ಈ ಸಂದರ್ಭದಲ್ಲಿ ಶಾಲೆಯ ಸಂಚಾಲಕರಾದ ಶ್ರೀ ಎಮ್. ಮಾಧವರಾಯರು ಒಂದೊಂದು ಪ್ರಶಸ್ತಿ ಪತ್ರವನ್ನೂ ಬೆಳ್ಳಿ ಬಟ್ಟಲನ್ನೂ ಅವರ ಸೇವೆಯ ಗುರುತಿಗಾಗಿ ಕೊಟ್ಟರು.

ಸ್ವತಂತ್ರ ಪಕ್ಷ—ದ ಕ ಜಿಲ್ಲಾ ಮೋಟಾರ್ ವರ್ಕರ್ಸ್ ಯೂನಿಯನ್ನಿನ ಮಹಾಸಭೆಯು ಈಚೆಗೆ ಜರಗಿ ಯೂನಿಯನ್ನು ಯಾವ ಪಕ್ಷಗಳಿಗೂ ಸೇರದೆ ಸ್ವತಂತ್ರವಾಗಿರಬೇಕೆಂದು ನಿರ್ಣಯವಾಯಿತು.

ದ. ಕ. ಜಿಲ್ಲೆಯಲ್ಲಿ ಕನ್ನಡದ ಬೆಳವಣಿಗೆ ಎಂಬೀ ವಿಷಯದಲ್ಲಿ ಶ್ರೀ ಟಿ. ಕೆ. ನಾರಾಯಣ, ವಿದ್ವಾನ್ ಅವರು ಸ್ಥಳೀಯ ಹಾ। ಗ್ರೇಡ್ ಟ್ರೈನಿಂಗ್ ಶಾಲೆಯ ಸಾಹಿತ್ಯ ಸಂಘದಲ್ಲಿ ಮಾತನಾಡಿದರು. ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಆಳ್ವರು ಧನ್ಯವಾದಗಳನ್ನರ್ಪಿಸಿದರು.

For Sale ಮಾರಾಟಕ್ಕಿದೆ.

12 · ಬೋರಿನ ಜೋಡುನಳಗೆಯ ಕೋವಿಯು ಮಾರಾಟಕ್ಕಿದೆ. ಬೇಕಾದವರು ಈ ಕೆಳಗಿನ ಎಡ್ರೆಸಿಗೆ ಬರೆಯಿರಿ.

C/o Postmaster,
Mulki, S. K.

WANTED

One manager, for a Limited company, on decent salary. Those who are efficient in correspondance and who can furnish a deposit of Rs. 500/- will be taken. Exeptional cases for the exciptional ability.

..apply 28 Navayuga.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

ಮೋಟಾರು ಕಾರುಗಳು ಮಾರುವದಿದೆ.

1929ನೆ ಮೊಡೆಲ್ ಫೋರ್ಡ್ ಕಾರು, 1936ನೆ ಮೊಡೆಲ್ ಓಲ್ಡ್ಸ್ ಮೊಬೈಲ್ ಕಾರು, ಹೀಗೆ ಒಳ್ಳೆ ಚಾಲು ಸ್ಥಿತಿಯಲ್ಲಿರುವ ಎರಡು ಕಾರುಗಳು ಮಾರಾಟಕ್ಕಿವೆ. ಖಾಯಿಸ್ ಉಳ್ಳವರು S. K. C/o ನವಯುಗ, ಉಡುಪಿ. ಇವರನ್ನು ಮುಖತ ಭೇಟಿಯಾಗಬಹುದು. ಇಲ್ಲವೆ ಪತ್ರವ್ಯವಹಾರಮಾಡಬಹುದು.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ಸಹಾಯದಿಂದ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಅಖಂಡ ಕರ್ನಾಟಕವೇ ನಮ್ಮ ಗುರಿ

ಪತ್ರಿಕಾ ಪರಿಷತ್ತಿನಲ್ಲಿ ಶ್ರೀ ಗಳಾದ ಹೆಗ್ಡೆ, ಕಾರಂತರ ಹೇಳಿಕೆ.

ದಿನಾಂಕ ೭ರಂದು ಏಕೀಕರಣ ಸಂಘದ ಕಾರ್ಯಾಲಯದಲ್ಲಿ ಪತ್ರಿಕಾ ಪ್ರತಿನಿಧಿಗಳ ಪರಿಷತ್ತೊಂದು ಸೇರಿತ್ತು. ಮಂಗಳೂರಿನ ಪ್ರಮುಖ ಪತ್ರಿಕೆಗಳ ಸಂಪಾದಕರೂ ಹಾಗು ಕೆಲವು ಪತ್ರಿಕೆಗಳ ಪ್ರತಿನಿಧಿಗಳೂ ಸಭೆಗೆ ಬಂದಿದ್ದರು. ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಶ್ರೀ. ಕೆ. ಆರ್. ಕಾರಂತರು ಏಕೀಕರಣಕ್ಕೆ ಸಂಬಂಧಿಸಿದ ಹಲವು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನಿತ್ತರು.

ಕಾಸರಗೋಡಿನ ಸಾಹಿತ್ಯ ಸಮ್ಮೇಳನದವರು ಕೊಟ್ಟ ೧೦೦೦ ರೂಪಾಯಿಗಳ ಉಪಯೋಗವೇನೆಂದೂ ಕೇಳಿದ ಪ್ರಶ್ನೆಗೆ ಶ್ರೀ ಜಿನರಾಜ ಹೆಗ್ಡೆಯವರು ಅದನ್ನು ಮುಖ್ಯವಾಗಿ ದಕ್ಷಿಣದ ಗಡಿನಾಡುಗಳಲ್ಲಿ ಏಕೀಕರಣದ ಪ್ರಚಾರಕ್ಕಾಗಿ ಉಪಯೋಗಿಸಲಾಗುವುದೆಂದು ಹೇಳಿದರು. ಆ ಮೇಲೆ ಶ್ರೀ ಜಿನರಾಜ ಹೆಗ್ಡೆಯವರು ಗಡಿ ನಿರ್ಣಯಕ್ಕೆ ಸಂಬಂಧಿಸಿದ ಹಲವು ಪ್ರಶ್ನೆಗಳಿಗೆ ಉತ್ತರಗಳನ್ನಿತ್ತರು. ಪೂರ್ವ ಮತ್ತು ದಕ್ಷಿಣ ಕರ್ನಾಟಕಗಳ ವಿಷಯವಾಗಿ ಮಾತನಾಡುತ್ತ ಶ್ರೀ ಜಿನರಾಜ ಹೆಗ್ಡೆಯವರು ಮತ್ತು ಕಾರಂತರು—ಬಳ್ಳಾರಿ ಜಿಲ್ಲೆಯ ಪಶ್ಚಿಮದ ಆರು ತಾಲೂಕುಗಳ ಬಗ್ಗೆ ಯಾವ ಚರ್ಚೆಯೂ ಇಲ್ಲ. ಪೂರ್ವದ ಮೂರು ತಾಲೂಕುಗಳಲ್ಲಿ ಕನ್ನಡಿಗರೇ ಹೆಚ್ಚಾಗಿದ್ದಾರೆ. ಆದರೆ ಇಲ್ಲಿ ತೆಲುಗರ ಪ್ರಭಾವ ಹೆಚ್ಚಾಗಿದೆ. ಶಾಲೆಗಳೆಲ್ಲಾ ತೆಲುಗು ಶಾಲೆಗಳು. ಅಂತೆಯೇ ಕೊಯಂಬುತ್ತೂರಿನ ಕೊಳ್ಳೆಗಾಲ, ಸೇಲಮಿನ ಹೊಸೂರು ಮೊದಲಾದ ತಾಲೂಕುಗಳಲ್ಲಿಯೂ ಕನ್ನಡಿಗರೇ ಹೆಚ್ಚಾಗಿದ್ದಾರೆ. ಇಲ್ಲಿ ತಮಿಳರ ಪ್ರಭಾವ ಹೆಚ್ಚು. ಈ ಪ್ರದೇಶಗಳಲ್ಲಿ ಏಕೀಕರಣದ ಪ್ರಚಾರವು ಜೋರಾಗಿ ನಾಗಬೇಕಾಗಿದೆ—ಎಂದು ಹೇಳಿದರು.

ಮೈಸೂರು ಮತ್ತು ಒಕ್ಕೂಟ ಕರ್ನಾಟಕದ ಸಂಬಂಧದ ವಿವಿಧಪ್ರಶ್ನೆಗಳಿಗೆ ಧುರೀಣರಿಂದ ಈ ರೀತಿ ಉತ್ತರ ಬಂತು—ಮೈಸೂರು ಮತ್ತು ಒಕ್ಕೂಟ ಕರ್ನಾಟಕದ ಭಾಗಗಳು ಒಂದಾಗದೆ ಪ್ರತ್ಯೇಕ ಪ್ರಾಂತವಾಗುವುದು ತೀರ ಕಷ್ಟ. ಅಲ್ಲದೆ ಕರ್ನಾಟಕ ಪ್ರಾಂತದಿಂದ ಮೈಸೂರು ಹೊರಗುಳಿದರೆ ಪೂರ್ವ ಕರ್ನಾಟಕದ ಮತ್ತು ದಕ್ಷಿಣ ಕರ್ನಾಟಕದ ಕೆಲವು ತಾಲೂಕುಗಳು ನಮ್ಮ ಕೈಬಿಡುವುವು. ಹೊಸೂರು, ಕೊಳ್ಳೆಗಾಲ ಮೊದಲಾದ ಪ್ರದೇಶಗಳ ಕನ್ನಡಿಗರಿಗೆ ಮುಖ್ಯವಾಗಿ ವ್ಯಾಪಾರ ವ್ಯವಹಾರಗಳ ಸಂಬಂಧವಿರುವುದು ಮೈಸೂರು, ಬೆಂಗಳೂರುಗಳೊಡನೆ. ಮೈಸೂರು ಕೂಡಿ ಕರ್ನಾಟಕ ಪ್ರಾಂತವಾಗಿ ಬೆಂಗಳೂರು ರಾಜಧಾನಿಯಾದರೆ ಮಾತ್ರ ಅವರು ನಮ್ಮೊಡನೆ ಕೂಡಲು ಒಪ್ಪುವರು. ಇಲ್ಲವಾದರೆ ಅವರು ಆಂಧ್ರರೊಡನೆಯೋ ತಮಿಳರೊಡನೆಯೋ ಸೇರಲು ಬಯಸುವರು. ಇದು ನಮ್ಮ ಅಭಿಪ್ರಾಯವಲ್ಲ. ಅಲ್ಲಿಯ ಜನರ ಅಭಿಪ್ರಾಯ.

ಯಾವ ಭಾಗದೊಡನೆ ಯಾವ ಭಾಗ ಸೇರಬೇಕೆಂಬ ಪ್ರಶ್ನೆ ಈಗ ಮುಖ್ಯವಲ್ಲ. ಹೆಚ್ಚು ಜನರು ಕನ್ನಡ ಮಾತಾಡುವ ಪ್ರದೇಶಗಳೆಲ್ಲಾ ಒಂದಾಗಿ ಒಂದೇ ಆಡಳಿತೆಯೊಳಗೆ ಬರಬೇಕು. ಇದುವೆ ಇಂದು ನಮಗೆ ಬೇಕಾದುದು. ಮೈಸೂರಿನವರು ನಮಗಿಂತ ಸ್ವಲ್ಪ ಮೇಲ್ತರಗತಿಯವರು; ನಾವು ಸ್ವಲ್ಪ ಕೆಳತರಗತಿಯವರು; ಇಂತಹ ಭೇದಗಳು ನಮ್ಮಲ್ಲಿ ಅಳಿಯದಿದ್ದರೆ ಇನ್ನೂ ಹತ್ತು ವರ್ಷಗಳ ವರೆಗೆ ಕನ್ನಡ ನಾಡು ಒಂದಾಗುವಂತಿಲ್ಲ. ಕನ್ನಡಿಗರೆಲ್ಲರೂ ಸಮಾನರು ಎಂದಿದ್ದರೆ ಮಾತ್ರ ಕರ್ನಾಟಕ ಪ್ರಾಂತ ನಿರ್ಮಾಣ ಸಾಧ್ಯ.

ಮೈಸೂರಿನ ಘಟನಾ ಸಮಿತಿಯಲ್ಲಿ ಯೂನಿಯನ್ ಕರ್ನಾಟಕವು ಮೈಸೂರಿಗೆ ಸೇರಬೇಕೆಂಬ ನಿರ್ಣಯವಾದುದೇನೋ ನಿಜ. ಆದರೆ ಈ ನಿರ್ಣಯದಿಂದ ಯಾವ ಬಾಧೆಯೂ ಇಲ್ಲ. ಮಹಾ ಕರ್ನಾಟಕ ನಿರ್ಮಾಣವಾದ ಮೇಲೆ ಅಖಂಡ ಕರ್ನಾಟಕಕ್ಕೆ ಹೊಸ ಘಟನಾ ಸಮಿತಿ ಚುನಾಯಿಸಲ್ಪಟ್ಟು ಕರ್ನಾಟಕದ ಘಟನೆ ಅದರಲ್ಲಿ ರಚಿತವಾಗುವದು.

ಮೈಸೂರು ಸಮೇತ ಕರ್ನಾಟಕ ಪ್ರಾಂತ ನಿರ್ಮಾಣವಾದೊಡನೆಯೇ ಮೈಸೂರಿನ ಅಧಿಕಾರವೆಲ್ಲ ಕಡಿಮೆಯಾಗುವುದು. ಇತರ ಪ್ರಾಂತಗಳಷ್ಟೆ ಅಧಿಕಾರ ಕರ್ನಾಟಕ ಪ್ರಾಂತಕ್ಕೂ ಕೊಡಲಾಗುವುದು. ಹೆಚ್ಚು ಅಧಿಕಾರ ಕೊಟ್ಟು ಕರ್ನಾಟಕ ಪ್ರಾಂತವನ್ನು ನಿರ್ಮಿಸಲು ಕೇಂದ್ರ ಸರಕಾರವು ಒಪ್ಪುವುದೋ ಎಂಬುದನ್ನು ನೆನಪಿನಲ್ಲಿಡಬೇಕು.

ಜನತೆ ಏನು ಹೇಳುತ್ತಿದೆ—ಎಂಬುದನ್ನು ತಿಳಿಯದೆ ಯಾವ ಕೆಲಸವನ್ನೂ ಮಾಡುವುದಿಲ್ಲ. ಅಖಂಡ ಕರ್ನಾಟಕ ಪ್ರಾಂತದ ರೂಪರೇಖೆಯನ್ನು ಜನತೆಯೇ ನಿರ್ಧರಿಸುವುದು. ಜನತಾ ಪ್ರತಿನಿಧಿಗಳೇ ಕರ್ನಾಟಕ ಪ್ರಾಂತದ ಘಟನೆ ಯಾವ ರೀತಿ ಇರಬೇಕೆಂಬುದನ್ನು ನಿರ್ಧರಿಸುವರು. ಅದರಲ್ಲಿ ನಾವೇನೂ ಮಾಡಲಾರೆವು.

ಮೈಸೂರಿನ ಮಹಾರಾಜರು ಅಖಂಡ ಕರ್ನಾಟಕದ ಘಟನಾಬದ್ಧ ರಾಜರಾಗುವರು. ಮಹಾರಾಜರಿಗೆ ಈ ಸ್ಥಾನವನ್ನು ಕೊಡದಿದ್ದರೆ ಮೈಸೂರಿನವರು ಕರ್ನಾಟಕಕ್ಕೆ ಸೇರಲು ಒಪ್ಪುವುದಿಲ್ಲ. ಅದಕ್ಕಾಗಿ ಮಹಾರಾಜರನ್ನು ಘಟನಾಬದ್ಧ ರಾಜರನ್ನಾಗಿ ಮಾಡಲು ಒಪ್ಪಬೇಕಾಯಿತು.

ಜನತೆಗೆ ಮಹಾರಾಜರು ಬೇಡವೆಂದು ಮುಂದಕ್ಕೆ ತೋರಿಬಂದಲ್ಲಿ ಹಾಗೆ ಮಾಡಬಹುದು ಜನತಾ ಪ್ರತಿನಿಧಿಗಳಿಗೆ ಎಲ್ಲಾ ಹಕ್ಕುಗಳೂ ಇವೆ.

ಮೈಸೂರು ಕೂಡಿ ಕರ್ನಾಟಕ ಪ್ರಾಂತವನ್ನು ರಚಿಸಲು ಪ್ರಯತ್ನಿಸಲಾಗುವುದು. ಆದರೆ ಇದು ಎನ್ನು ಮಾತ್ರಕ್ಕೂ ಸಾಧ್ಯವಿಲ್ಲವೆಂದಾದರೆ ಒಕ್ಕೂಟ ಕರ್ನಾಟಕದ ಭಾಗಗಳನ್ನು ಒಂದುಗೂಡಿಸಿ ಪ್ರತ್ಯೇಕ ಪ್ರಾಂತವನ್ನು ರಚಿಸುವ ಯತ್ನ ನಡೆಯುವುದು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಗ ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ—ಹರವೀವಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಹಾವೇರಿ ಟ್ಯಾಡ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಉರು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು.- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್ ನಂಜುಂಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶೀನಣಸಿದ್ಧಪ್ಪ ಹಾಲಪ್ಪ ದಾವಣಗೇರಿ.

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮುಳುಗಿ ಹಾಳಾಗುತ್ತೆ.

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ, ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸನ್ನಿ, ಮಲವಿರೋಧ, ಸ್ತನಗಳ ಬೀಗು, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ಸರೆಗೆ ಕರೆಸಿ ನೂರಾರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆ ಸೋಲೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣವಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು—ವಿಪತ್ತುಗಳಿಗೆ ಅಂಜಬೇಕಾಗಿಲ್ಲ

ಆಯುರ್ವೇದೀಯ ಔಷಧಿಗಳ ಶಾಸ್ತ್ರೀಯ ಮತ್ತು ಅನುಭವಿಕ ಗುಣಧರ್ಮ, ರೋಗಾನುಪಾನ ಪ್ರಮಾಣ, ಕ್ರಯ, ಇತ್ಯಾದಿ ಯುಕ್ತ 96 ಪುಟಗಳ ಸೂಚೀಪತ್ರ, 1ಕ್ಕೆ 0-8-0 9 ಆಣೆಯ ಸ್ಟಾಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವದು

Swadeshi Oushadhi Bhandara, (REGD)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ದಕ್ಷಿಣ ಕನ್ನಡ

ಮೂಡಬಿದಿರೆ—ತಾ. 4-4-1948ರಲ್ಲಿ ಇಲ್ಲಿಯ "ಮೂಡುಬಿದ್ರೆ ಎಜ್ಯುಕೇಶನಲ್ ಟ್ರಸ್ಟ್"ನ ಆಶ್ರಯದಲ್ಲಿ "ಗರ್ಲ್ಸ್ ಸೆಕಂಡರಿ ಶಾಲೆ"ಯು ಶ್ರೀನಿವಾಸ್ ಕೆ. ಶಿವರಾಮ ಕಾರಂತರ ಉದ್ಘಾಟನಾ ಭಾಷಣದೊಂದಿಗೆ ತೆರೆಯಲ್ಪಟ್ಟಿತು.

ಶ್ರೀ ಯಸ್. ವಿ. ಕಾಮತರು ರಾಷ್ಟ್ರಗೀತೆ ಹಾಡಿದನೆ, ರಾಷ್ಟ್ರಧ್ವಜವನ್ನು ಹಾಯಿಸಿದರು. ಕಾರ್ಯದರ್ಶಿಗಳಾದ ಶ್ರೀ ಜಿ. ಗೋಪಾಲ ಪೈಯವರು, 1944ನೇ ಇಸವಿಯಲ್ಲಿ ಮೂಡುಬಿದಿರೆಗೊಂದು ಪ್ರೌಢ ಶಾಲೆ ಬೇಕೆನ್ನುವ ಕೂಗು ತಾರಕಕ್ಕೇರಿದಾಗ, ಅಂತಹ ಒಂದು ಪ್ರೌಢ ಶಾಲೆಯನ್ನು ಸ್ಥಾಪಿಸುವ ಸದಿಚ್ಛೆಯಿಂದ ಜನ್ಮವೆತ್ತಿದ ಈ ಟ್ರಸ್ಟ್ ಸಾಧ್ಯವನಿತ್ತ್ ಆ ಭಾರವನ್ನು ಅಧಿಕ ಯೋಗ್ಯತೆಯುಳ್ಳ ಜೈನ ವಿದ್ಯಾವರ್ಧಕ ಸಂಘಕ್ಕೆ ಬಿಟ್ಟುಕೊಡುವ ಪ್ರಸಂಗವೊದಗಿ, ಇದೀಗ ಸರಕಾರದ ಅಪ್ಪಣೆ ಮೇರೆಗೆ, ಹುಡುಗಿಯರಿಗಾಗಿ ಒಂದು ಪ್ರೌಢ ಶಾಲೆಯನ್ನು ಸ್ಥಾಪಿಸುವ ನಿರ್ಧಾರಕ್ಕೆ ಬಂದು, ಕಾರ್ಯರಂಗಕ್ಕೆ ಇಳಿದಿದೆಯಾದುದರಿಂದ, ಊರ ಮಹನೀಯರೆಲ್ಲರೂ ತನುಮನಧನ ಸಹಾಯಗಳಿಂದ ಪ್ರೋತ್ಸಾಹಿಸುವುದಲ್ಲದೆ, ತಮ್ಮ ತಮ್ಮ ಮನೆಯಲ್ಲಿನ ಎಲ್ಲಾ ಹುಡುಗಿಯರನ್ನು ಈ ಶಾಲೆಗೆ ಕಳುಹಿಸಿ ವಿದ್ಯೆ ಕಲಿಸಬೇಕೆಂದು ಪ್ರಾರ್ಥಿಸಿದರು. ಸಭಿಕರ ಪರವಾಗಿ ಶ್ರೀಗಳಾದ ಯಚ್. ದೇವರಾಜ್, ಕೆ. ರಾಮಕೃಷ್ಣ ಶೆಟ್ಟಿ, ಕಾಂತ ರೈ, ಯಚ್. ನಾರಾಯಣ ರಾವ್, ಯಸ್. ವಿ. ಕಾಮತ್ ಮತ್ತು ಎ. ಜಿ. ಸೋನ್ಸ್ ಇವರುಗಳು ಭಾಷಣಗಳನ್ನಿತ್ತು ಈ ಶಾಲೆಯ ಏಳ್ಗೆಗಾಗಿ ಸಾರ್ವಜನಿಕರೆಲ್ಲರೂ, ಒಂದೇ ಮನದಿಂದ ದುಡಿದು ಪ್ರೋತ್ಸಾಹಿಸಬೇಕೆಂದರು. ತದನಂತರ ಶ್ರೀ ಕಾರಂತರು, ಸ್ತ್ರೀವಿದ್ಯಾಭ್ಯಾಸ ಆದರ್ಶಾಗಿ ಪ್ರವಹಿಸುವ ಇಂದಿನ ಸರಕಾರದ ರೀತಿ ನೀತಿಗಳು ಮತ್ತು ಗಮನಿಸಬೇಕಾದ ಮುಖ್ಯ ವಿಷಯಗಳು, ಅಲ್ಲದೆ ಸ್ತ್ರೀ ವಿದ್ಯಾಭ್ಯಾಸದಲ್ಲಿ ಪುರುಷರ ಕರ್ತವ್ಯ ಇವೆಲ್ಲವನ್ನೂ ಸವಿಸ್ತಾರವಾಗಿ ವಿವರಿಸಿ, ಒಟ್ಟಿಯ ಉಪಯುಕ್ತವಾದ ಮಹತ್ವದ ಸಲಹೆಗಳನ್ನಿತ್ತರಲ್ಲದೆ, ಸ್ಥಾಪಿಸಿದ ಶಾಲೆಯು ಚಿರಸ್ಥಾಯಿಯಾಗಿ ಬಾಳುವಂತೆ, ಮೂಡುಬಿದಿರೆಯ ಪ್ರತಿಯೊಬ್ಬನೂ ಹೆಣಗಬೇಕೆಂದು ಸಾರಿದರು. ಧನ್ಯವಾದಗಳೊಂದಿಗೆ ಸಭೆ ಕೊನೆಗಂಡಿತು.

ಕನ್ನಡ ಸಾಹಿತ್ಯ ಪರಿಷತ್ತು—ಕನ್ನಡ ನಾಡಿನ ಇಪ್ಪತ್ತನೆಯ ಶತಮಾನದ ಬರಹಗಾರರ ಪರಿಚಯಮಾಡಿಕೊಳ್ಳಲು ಒಂದು ಕೈಪಿಡಿಯನ್ನು ಪ್ರಕಟಿಸಬೇಕೆಂದು ಆಲೋಚಿಸಲಾಗಿದೆ. ಪರಿಚಯದಲ್ಲಿ ಗ್ರಂಥಕರ್ತರ ಜೀವನ ಮತ್ತು ಸಾಹಿತ್ಯ ಸೇವೆಗಳ ಬಗ್ಗೆ ಅಗತ್ಯವಾದ ಎಲ್ಲ ವಿವರಗಳನ್ನೂ ಕೊಡುವುದು ನಮ್ಮ ಗುರಿ. ಇಂತಹ ದೊಡ್ಡ ಕಾರ್ಯದಲ್ಲಿ ಎಲ್ಲ ಕನ್ನಡಿಗರೂ ಸಹಕರಿಸಿ ಇದನ್ನು ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ. ಗ್ರಂಥಕರ್ತರು, ಪ್ರಕಾಶಕರು, ವಾಚಕರು— ಎಲ್ಲರ ನೆರವಿಲ್ಲದೆ ಈ ಮಹತ್ಕಾರ್ಯದ ಸಾಧನೆಯಾಗಲಾರದು. ಗ್ರಂಥಕ್ಕೆ ಅವಶ್ಯಕವಾದ ವಿವರಗಳನ್ನು ಕೆಳಗೆ ಸೂಚಿಸಲಾಗಿದೆ; ಗ್ರಂಥಕರ್ತರು ತಮ್ಮ ಮತ್ತು ತಮಗೆ ಪರಿಚಿತರಾದ ಇತರ ಲೇಖಕರ ಬಗ್ಗೆಯೂ, ಪ್ರಕಾಶಕರು ತಾವು ಪ್ರಕಟಿಸಿದ ಗ್ರಂಥಗಳ, ಕರ್ತೃಗಳ ಬಗ್ಗೆಯೂ, ಎಲ್ಲ ಕನ್ನಡಿಗರೂ ತಮಗೆ ಪರಿಚಿತರಾದ ಬರಹಗಾರರ ಬಗ್ಗೆಯೂ ವಿವರಗಳನ್ನು ಪರಿಷತ್ತಿನ ಕಚೇರಿಗೆ ಕಳುಹಿಸಿಕೊಟ್ಟು ಅತ್ಯುಪಯುಕ್ತವಾದ ಈ ಕಾರ್ಯದಲ್ಲಿ ನೆರವಾಗಬೇಕೆಂದು ಪ್ರಾರ್ಥಿಸುತ್ತೇವೆ. ಕೈಪಿಡಿ ಅಕ್ಟೋಬರ್ ತಿಂಗಳಲ್ಲಿ ಹೊರಬೀಳಬೇಕಾಗಿರುವುದರಿಂದ ವಿವರಗಳನ್ನು ಎಷ್ಟು ಶೀಘ್ರವಾಗಿ ಕಳುಹಿಸಿದರೆ ಅಷ್ಟು ಅನುಕೂಲವಾದೀತು.

೧೮-೬-೪೮

ಎಲ್. ಎಸ್. ಶೇಷಗಿರಿರಾವ್
ಕಾರ್ಯದರ್ಶಿ

ವಿವರಗಳು – (ಅ) ಹೆಸರು [ಆ] ಹುಟ್ಟಿದ ತಾ॥ ಮತ್ತು ಸ್ಥಳ [ಇ] ವಿದ್ಯಾಭ್ಯಾಸ [ಈ] ಜೀವನದ ಮುಖ್ಯ ವಿವರಗಳು [೧] ಬರೆಹದ ವಿವರಗಳು: [೨] ಗ್ರಂಥಗಳು, ಅವು ರಚಿತವಾದ ಮತ್ತು ಪ್ರಕಟವಾದ ವರ್ಷಗಳು [೪] ಇತರ ಕೃತಿಗಳು [ಉ] ಈಗಿನ ವಿಳಾಸ [ಊ] ಮುಖ್ಯವೆಂದು ತೋರಬಹುದಾದ ಇತರ ವಿವರಗಳು.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 444/47

ವಾದಿ– ರಾಘವೇಂದ್ರ ಉಪಾಧ್ಯ.

ಪ್ರತಿವಾದಿ- ಗಾಣಿಗ ಮಂಜುನಾಥಕೂಡಾ, ಉಡುಪಿ ತಾಲ್ಲೂಕು ಮಣೂರು ಗ್ರಾಮದಲ್ಲಿರುವ ಶಿವರಾಮ ಮಯ್ಯರ ಮಗ ಸಪ್ಲಮೆಂಟು 3ನೇ ಪ್ರತಿವಾದಿ ಯಜ್ಞನಾರಾಯಣ ಮಯ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

1ನೇ ಪ್ರತಿವಾದಿಯಿಂದ ವಾದಿಗೆ ಕಳೆದ ವ್ಯಯಸಂವತ್ಸರಕ್ಕೆ ಬರತಕ್ಕ ಮೂಲಗೇಣಿ ಗೇಣಿ ಬಾಕಿಬಗ್ಗೆ ದಾಖ್ಲು ಮಾಡಿದ ಮೇಲಿನ ದಾವೆಯೂ ಮತ್ತು 3ನೇ ಪ್ರತಿವಾದಿಯನ್ನು ಸಪ್ಲಮೆಂಟು ಪ್ರತಿವಾದಿಯನ್ನಾಗಿ ಸೇರಿಸಿಕೊಳ್ಳಬೇಕೆಂತ ದಾಖ್ಲು ಮಾಡಿದ ಅರ್ಜಿಯೂ ತಾರೀಕು 21.7.48ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ- ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಅರ್ಜಿ ಹೇಳಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah
Advocate for Pltf.
Date 7-7-48. Coondapoor

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

REGD.

ಅಮೃತಾಂಜನ ತಲೆವೇದನೆ, ಶೀತ ವೇದನೆ, ಉಳುಕು ಕೆಮ್ಮು, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾವು ಕೀಲ್ನೋವು, ಹೇನು ವಿಷ ಜಂತುಗಳ ಕಡಿತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸರ್ವ ಔಷಧಾಲಯಗಳಲ್ಲಿ ಮತ್ತು ಸಣ್ಣ ಅಂಗಡಿಗಳಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಋತುಸ್ರಾವ ನಿಂತಿತು

'ಕುಮಾರ್' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿನಷ್ಟು ಋತುಸ್ರಾವವಾಗುವುದು ಸಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ.8/- [ವಿ. ಪಿ. ಹಸ್ಸೆರಡಾಕ ಪ್ರತ್ಯೇಕ]

Mrs P. DEVEE, F. DS (N. J.)
Tollygunge CALCUTTA,
ಪ್ರಾತಿನಿಧ್ಯರು: ಶಹಾ ಕಂಪೆನಿ, ಮಂಗಳೂರು

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ



ವಾರ್ನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

ನಮ್ಮ ವಾರ್ನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾರ್ನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹಾಲೆಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾರ್ನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಸಮೂತ್ರ, ಅಸ್ಥಿಕೋಶ, ಕಲಿಜೆಯ ರೋಗಗಳಲ್ಲಿ ವಾರ್ನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ವಾತ್ರವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾರ್ನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ವಾಣವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾರ್ನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ-ಚಿಂತೆಯಿಲ್ಲ, ಈ ವಾರ್ನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ಸೀಸೆ 1ಕ್ಕೆ ರೂ. 3-8-0 ವಿ. ಪಿ. ಬೇರೆ. 1 ಡಜನ್ ಶೀಸೆಗಳಿಗೆ ವಿ. ಪಿ. ಖರ್ಚುಸಹಿತ ರೂ. 42-0-0. ಡ್ರೊಪರ್ ಬಾಟ್ಲಿ ಸೀಸೆಗೆ ರೂ. 5-0-0 ವಿ. ಪಿ. ಬೇರೆ; ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಬೇರೆ. ವಾರ್ನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18. ವಿ.ಪಿ.ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾರ್ನಿಂಗ್ ಟಿಲ್ಲಿ ಆಯಿಲನ್ನು ಕಳೆದ ಎಳು ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ನಿರಾಕರಿಸಿದ ರೋಗಿಗಳನ್ನೂ ನಿಮ್ಮ ವಾರ್ನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಸಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

ವಿಳಾಸ— ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡ:, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency.
Dahanu Road, B. B. & C. I Rly.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ಎರಡಾಣೆ

Regd. No. M. 3618

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

22-7-1948

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೪೬

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister. Govt. of Madras.

Vol. 28
No. 46

ಭಾರತದ ಉದರಶೂಲೆಗಳು.

ಮಿತ್ರನಾಗಿದ್ದರೆ ಹೇಗೂ ವಾಸಿ; ಅದು ಅಸಾಧ್ಯವಾದಾಗ ಶತ್ರುವಾಗಿರುವವನೇ ಉತ್ತಮ; ಆದರೆ ಶತ್ರು ಭಾವನೆಯಿದ್ದು ಅನಿವಾರ್ಯವಾಗಿ ಮಿತ್ರನಂತೆ ತೋರಿಸಿಕೊಳ್ಳುವ ಹಿತಶತ್ರುವಿನಷ್ಟು ಅಪಾಯಕರ ಸಂಬಂಧ ಬೇರೊಂದಿರಲಾರದು. ಹಗಲು, ಇಲ್ಲವೇ ರಾತ್ರಿಯಿರಬಹುದು; ಆದರೆ 'ಇತ್ತ ದುಡಿಯುವುದಕ್ಕೂ ಅಲ್ಲ, ಅತ್ತ ನಿದ್ರಿಸಲಿಕ್ಕೂ ಅಲ್ಲ' ಎಂಬಂತಹ ಮುಸ್ಸಂಜೆ ಹೊತ್ತು ಸಂಧಿಗ್ಧಾವಸ್ಥೆಯದು. ಸಿಹಿಯೆಂತೂ ಬೇಕು; ಅಲ್ಲವಾದರೆ ಕಹಿಯೆಂಬುದರಿಂದ ತ್ಯಜಿಸುವದಕ್ಕಾದರೂ ಸಾಧ್ಯವಾಗಬೇಕು; ಸಿಹಿಯಿದ್ದೂ ಗೋಚರಕ್ಕೆ ಬಾರದಂತೆ ಒಳಗಿಂದೊಳಗೆ ಕೊಳೆತು ವಿಷವಾಗಿರುವ ಪದಾರ್ಥವು ನಿಜಕ್ಕೂ ಅಪಾಯಕರ. ಈ ನೀತಿಯನ್ನು ವ್ಯಕ್ತಿಗತ ಸಂಬಂಧಗಳಿಂದಾರಂಭಿಸಿ, ರಾಷ್ಟ್ರಜೀವನದ ವರೆಗೂ ಲಗ್ತೀಕರಿಸಬಹುದು. ಭಾರತದ ಈಗಿನ ರಾಜಕೀಯ ಸ್ಥಿತಿಗತಿಗಳಲ್ಲಿ ಇಂತಹ ಹಿತಶತ್ರು ಧೋರಣೆಗಳು ಹಲವಿವೆ. ಕೆಲವು ನಿದರ್ಶನಗಳನ್ನು ಇಲ್ಲಿ ಕೊಡಲಾಗಿದೆ.

೦೦ ೦೦

ಆಶ್ರಿತ ರಾಜರು ತಮ್ಮ ಕುಲ ಪರಂಪರಾಗತ ಸ್ವಭಾವವನ್ನು ಕೆಲವೇ ದಿನಗಳಲ್ಲಿ ಬದಲಾಯಿಸಿಕೊಂಡು ಹಿಂದೀ ಕೇಂದ್ರದೊಂದಿಗೆ ಜೋಡಣೆ ಹೊಂದುವುದಕ್ಕೂ ಪ್ರಜಾ ಜವಾಬ್ದಾರೀ ಸರಕಾರ ಸ್ಥಾಪಿಸುವುದಕ್ಕೂ ಮುಂದಾದ ಕ್ರಾಂತಿಕಾರ ಮಾರ್ಪಾಟವು ಹಿಂದೀ ರಾಜಕುಲಕ್ಕೆ ಶ್ಲಾಘನೆ ಸಂಪಾದಿಸಿದೆ. ಆದರೆ ರಾಜ ಮಹಾರಾಜರುಗಳಲ್ಲಿ ಹೆಚ್ಚಿನವರು ಅನ್ಯಥಾಗತಿಯಿಲ್ಲದೆ ಇಂತಹ ಸ್ಥಿತಿ ಬದಲಾವಣೆಗೊಂಡರಲ್ಲದೆ ಸ್ವೇಚ್ಛೆಯಿಂದಲ್ಲವೆಂಬುದು ಸ್ಪಷ್ಟವಿದೆ. ಬ್ರಿಟಿಷರ ಮೇಲೆ-ಅದರಲ್ಲೂ ಬ್ರಿಟಿಷ್ ರಾಜಮನೆತನದವರ ಮೇಲೆ-ಗೌರವವಿರುವಷ್ಟು ಯಾವನೊಬ್ಬ ಹಿಂದೀ ನಾಯಕನ ಮೇಲೂ ವಿಶ್ವಾಸವಿಡುವದನ್ನರಿಯದ ಹುಟ್ಟು ಸ್ವಭಾವವು ಹಿಂದೀ ರಾಜರದು. ಇದನ್ನರಿತೇ ಭಾರತ ನಾಯಕರು ಸ್ವರಾಜ್ಯಾನಂತರದ ಹತ್ತು ತಿಂಗಳವರೆಗೆ ರಾಜಮನೆತನದ ಲೋರ್ಡ್ ಮೌಂಟ್‌ಬೇಟನರನ್ನು ಗವರ್ನರ್ ಜನರಲರಾಗಿ ಇಟ್ಟುಕೊಂಡಿದ್ದರು. ಲೋರ್ಡ್ ಮೌಂಟ್‌ಬೇಟನರು ತನ್ನ ಯಥಾರ್ಥತೆ ಮತ್ತು ರಾಜವಂಶಸಹಜ ಹೆಗ್ಗುಣಗಳಿಂದ ಶಕ್ತಿಮೀರಿ ಪ್ರಯತ್ನಮಾಡಿ ಆಶ್ರಿತ ರಾಜರನ್ನು ಭಾರತ ಕೇಂದ್ರ ಒಕ್ಕೂಡಿಯೊಳಗೆ ಸೇರಿಸಲು ನೆರವಾದರು. ಕೊನೆಯದಾಗಿ ಹೈದರಾಬಾದಿನ ಸಂಬಂಧದ ಸರ್ವ ಪ್ರಯತ್ನಗಳನ್ನೂ ಮಾಡಿ ಇನ್ನು ಫಲವಿಲ್ಲವೆಂದು ತೋರಿಬಂದ ಮೇಲೆಯೇ ಹೊರಟುಹೋದರು; ಲೋರ್ಡ್ ಮೌಂಟ್‌ಬೇಟನರು ತಮ್ಮ 'ಕಾರ್ಯಸಾಧನೆಗನ್ನೂ ಬೇಕೆಂದು ಭಾರತ ಸರಕಾರಕ್ಕೆ ತೋರುತ್ತಿದ್ದರೆ ಅವರ ವಾಯಿದೆ ಮುಂದುವರಿಸಿಟ್ಟುಕೊಳ್ಳಲು ಸಾಧ್ಯವಿತ್ತು. ಥಳಕುಲಾಲಸೆಗಳಾದ — ವಂಶಪಾರಂಪರ್ಯವಾಗಿ ಒಣ ಠೀವಿ, ಆಡಂಬರ, ಅತಿಲಾಲಸೆಗಳನ್ನನುಭವಿಸುತ್ತಾ ಬಂದಿದ್ದ — ಗೊಂಬೇ ರಾಜರ ಬಂಜರು ಹೃದಯವು ಸ್ವರಾಜ್ಯ ವರ್ಷದಿಂದೊಮ್ಮೆಗೇ ತೊಯ್ದು ಪ್ರಜಾಭಕ್ತಿಯ ಸರೋವರವಾಗಿ ಮಾರ್ಪಟ್ಟಿತೆಂದು ಊಹಿಸಬಾರದು. ಅನಿವಾರ್ಯವಾಯಿತು; ವಲ್ಲಭಾಯಿಗಳ ಸಂಘಟಿತ ಕಾರ್ಯಶಕ್ತಿಯನ್ನಿದಿರಿಸುವುದು ಅಸಾಧ್ಯವಾಯಿತು; ಗೆಲ್ಲುವದಸಾಧ್ಯವೆಂದು ಖಚಿತವಾದೊಡನೆ ಸೋಲನ್ನೊಪ್ಪಿಕೊಳ್ಳುವ ತಮ್ಮ ಸ್ವಭಾವಕ್ಕನುಸಾರವಾಗಿ ಹಿಂದೀ ರಾಜ ವರ್ಗ ಭಾರತ ಕೇಂದ್ರದೊಳಗಾಯಿತು; ಅವರ ಯಾತನೆಯ ಕಠೋರತೆಯನ್ನು ತಗ್ಗಿಸಲು ಮೌಂಟ್‌ಬೇಟನ್ ಮಿರುಗು ನೆರವಾಯಿತು; ಅದಿಷ್ಟೆ! ಆದರೆ ಈಗ ಕೂಡಾ ಈ ರಾಜರ ಪೈಕಿ ಕೆಲವು ಹಳೇಹದ್ದುಗಳು ತಮ್ಮ ಮನೋವೃತ್ತಿಗನುಸಾರವಾಗಿ ಎಂತಹ ಭ್ರಾಮಕ ರಾಜ್ಯದಲ್ಲಿ ವಿಹರಿಸುತ್ತಿರುವರೆಂಬುದಕ್ಕೆ 'ಪಾಟಿಯಾಲಾ ಮತ್ತು ಪೂರ್ವ ಪಂಜಾಬ್ ಸಂಸ್ಥಾನಗಳ ಕೇಂದ್ರಾಡಳಿತೆ'ಯನ್ನು ಉದ್ಘಾಟಿಸುತ್ತಾ ಸರ್ದಾರ್ ಪಟೇಲರು ಎತ್ತಿ ಹೇಳಿದ ಒಂದು ಸಂಗತಿಯೇ ನಿದರ್ಶನ. ಒಬ್ಬ ಜ್ಯೋತಿಷಿ ರಾಜರಿಗೆ ಭವಿಷ್ಯ ಹೇಳಿದ್ದಾನಂತೆ: "ಆಗೋಸ್ಟಿನಲ್ಲಿ ಈಗಿನ ಮಂತ್ರಿಮಂಡಲ ಒಡೆದು ಹೋಗುವದು; ಸರಕಾರ ಪತನಗೊಳ್ಳುವದು. ಆಗ ಡಿಲ್ಲಿಗೆ ಧಾಳಿ ನಡಿಸುವ ಒಂದು ಸುಸಂದರ್ಭವು ರಾಜರಿಗೊದಗಲಿದೆ." ಕೆಲವು ರಾಜರೀಗ ಈ ಸಂದರ್ಭವನ್ನು ಕಾಯುತ್ತಾ ಇದ್ದಾರಂತೆ! ಅಂತೆಯೇ ಬೇರೆ ಕೆಲವು ರಾಜರು ಮತ್ತೊಬ್ಬ 'ಸಾಧು'ವಿನ ಉಪದೇಶಕ್ಕೆ ಕಿವಿಗೊಟ್ಟು ತಲೆಕೆಡಿಸಿಕೊಳ್ಳುತಿದ್ದಾರಂತೆ! ಈ ಜೋಯಿಸ ಮತ್ತಾ ಸಾಧುವಿನ ಭವಿಷ್ಯ ಸೂಚನೆಗಳು ರಾಜಮೆದುಳುಗಳೊಳಗೆ ಪೂರ್ತಿ ನೆಟ್ಟುಹೋಗಿವೆ. ಅವುಗಳ ಮೇಲೆ ನಂಬಿಕೆಯಿದ್ದರೂ "ಆಗುವದೆಲ್ಲಾ ನಮ್ಮ ಗುರುಹಿರಿಯರ ದಯೆಯಿಂದ ತಾನಾಗಿ ಆಗಲಿ!" ಎಂದು ಕಾಯುವದೊಂದಲ್ಲದೆ ಬೇರೇನನ್ನು ಮಾಡುವದೂ ಈ ರಾಜರುಗಳಿಂದ ಅಸಾಧ್ಯವಾದುದರಿಂದಾಯಿತು! ಇಲ್ಲವಾದರೆ ಕೆಲವು ರಾಜರುಗಳು ಇಷ್ಟರೊಳಗೆ ತಮ್ಮ ಶೇಷಾಧಿಕಾರವನ್ನೂ ಕಳಕೊಂಡು ಪತ್ರಿಕಾವಾಲರಾಗಿ, ಆ ಜೋಯಿಸರುಗಳ 'ವಾರ ಭವಿಷ್ಯ'ವ 'ರಾಷ ಭವಿಷ್ಯ'ಗಳನ್ನು ಪ್ರಕಟಿಸುತ್ತಾ ದಿನ ದೂಡಬೇಕಾಗಿ ಬರುತಿತ್ತು!

೦೦ ೦೦

ಹಿಂದೀ ಕೇಂದ್ರಪೊಳಗಿದ್ದು, ಪಾಕಿಸ್ತಾನದಿಂದ ತಾವು ನಿರೀಕ್ಷಿಸಿದ್ದ ಆಶ್ರಯವೂ ದೊರಕದ್ದರಿಂದ ಅನ್ಯೋಪಾಯವಿಲ್ಲದೆ "ನಾವೂ ನಿಷ್ಠಾವಂತ ಭಾರತೀಯರು" ಎಂದು ಹೇಳಹತ್ತಿರುವ ಲೀಗ್ ಮುಸಲ್ಮಾನರ ಅಂತರ್ಯ ಹೇಗಿದೆ ಎಂಬುದಕ್ಕೂ ಇತ್ತೀಚೆಗೆ ನಿದರ್ಶನಗಳು ಬೇಕಾದಷ್ಟು ದೊರಕಹತ್ತಿವೆ. ಭಾರತ-ಹೈದರಾಬಾದ್ ಸಂಧಾನ ಮುರಿದು ಹೋಗಿ ಹೈದರಾಬಾದಿನ ಮೇಲೆ ದಿಗ್ಬಂಧನ ಬಿದ್ದ ಬೆನ್ನಲ್ಲೇ ಭಾರತದೊಳಗಿನ ಹಲವು ಮುಸ್ಲಿಂ ಪ್ರಮುಖರನ್ನು ದಸ್ತಗಿರಿಮಾಡಬೇಕಾಗಿ ಬಂದಿದೆ. ಹೈದರಾಬಾದಿಗೆ ಕಳ್ಳ ಸರಬರಾಯಿ-ಹೈದರಾಬಾದಿನ ಪಂಚಮದಳದವರಾಗಿ ಸಬ್‌ಮೆರೀನ್ ಚಟುವಟಿಕೆ ನಡೆಸಿದುದು-ಹೈದರಾಬಾದ್ ಸಂಬಂಧದ ಹಲವು ಗುಪ್ತ ದಾಖಲೆಗಳಿದ್ದುದು- ಮುಂತಾದ ಆರೋಪಗಳು ಈ ಮುಸ್ಲಿಮರ ಮೇಲಿವೆ. ಇದೇ ಅನುಮಾನದಿಂದ ಬೊಂಬಾಯಿಯಲ್ಲಿ ದಸ್ತಗಿರಿಯಾಗಿರುವ ಪ್ರಮುಖ ನ್ಯಾಯಾಧೀಶರೇ ಮುಂತಾದ ಕೆಲವು ಮುಸ್ಲಿಮರಿಗೆ ಭಾರತದಲ್ಲಿದ್ದ ಸ್ಥಾನಮಾನಗಳನ್ನು ನೆನೆಸುವಾಗ ಆಶ್ಚರ್ಯವಾಗುತ್ತಿದೆ; "ಹೀಗಾದರೆ ಹೇಗೆ?" ಎಂದು ದಿಗಿಲು ಏಳುತ್ತಿದೆ! ಮದ್ರಾಸ್ ಪ್ರಾಂತ್ಯದಲ್ಲೂ ಇಂತಹ ಗುಪ್ತ ಚಟುವಟಿಕೆಗಳ ಪ್ರಾಬಲ್ಯಕ್ಕಂಜಿ ಎಲ್ಲೆಡೆಗಳಲ್ಲೂ ಮುಸ್ಲಿಂ ಬಂಧನಗಳಾಗಿವೆ. ಒಂದು ರಾಷ್ಟ್ರದ ಭವಿಷ್ಯಕ್ಕೆ ಸಂಬಂಧಿಸಿದ ಕಾರ್ಯದಲ್ಲಿ [illegible] ಪರಕೀಯರೊಡನೆ ಒಳಸಂಚು ನಡಿಸುವದೆಷ್ಟು ದೊಡ್ಡ ಅಪರಾಧವೆಂಬುದನ್ನೂ, ಇಂತಹ ಅಪರಾಧಿಗಳನ್ನು ಪಾಕಿಸ್ತಾನ್ ಸಮೇತ ಅನ್ಯ ರಾಷ್ಟ್ರಗಳು ಹೇಗೆ ಕಾಣುತ್ತಿವೆ ಎಂಬುದನ್ನೂ ಊಹಿಸಿದರೆ ಭಾರತದ ಪ್ರಾಂತಿಕ ಸರಕಾರಗಳು ತೀರಾ ಶಾಂತ ವರ್ತನೆ ಕೈಕೊಂಡಿವೆಯೆನ್ನಬೇಕು. ಆದರೂ ಮದ್ರಾಸ್ ಎಸೆಂಬ್ಲಿಯಲ್ಲಿ ನಡೆದ ಕೆಲವು ಪ್ರಶ್ನೋತ್ತರಗಳಿಂದ ಇಲ್ಲಿಯ ಲೀಗ್ ಮುಸ್ಲಿಮರ ಮನೋವೃತ್ತಿ ಹೇಗಿದೆಯೆಂಬುದನ್ನು ತಿಳಿಯಬಹುದು.

ಭಾರತ ಮತ್ತು ಪಾಕಿಸ್ತಾನಗಳೊಳಗಾಗಿರುವ ನಿರ್ಣಯ ಪ್ರಕಾರ ಅಲ್ಪ ಸಂಖ್ಯಾ

[ಅನೇ ಪುಟ ನೋಡಿರಿ]

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ— ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ. THE UNITED KARNATAK INSURANCE COMPANY, LIMITED.

★ ಬರ್ಲಿನ್ ಪೆಲಸ್ತೈನುಗಳ ★
★ ಆವೇಗಾಂದೋಲನಗಳು ★

ಲೋಕದ ಮತ್ತು ಭಾರತದ ಮುಖ್ಯ ರಾಜಕೀಯ ಘಟನೆಗಳು ಒಂದಿನನೇ ಆದರೂ ಈ ಬಾರಿ ಎಲ್ಲರನ್ನೂ ಹೊಸ ಜೀವ-ಸ್ಪಷ್ಟಾಕಾರ—ಬಂದಿದೆ ಎಂಬುದು ಖಂಡಿತ. ದೀರ್ಘಾವಧಿಯ ಬೇಸರದಿಂದ ಉದ್ವೇಗವೇಳುವಂತೆ, ಕೆಲಕಾಲದಿಂದ ಏಕಪ್ರಕಾರ ಥಂಡಾಗಟ್ಟಿದ್ದ ಎಲ್ಲಾ ವಿದ್ಯಮಾನಗಳೂ ಈಗ ಪ್ರಜ್ವಲಿಸಿವೆ.

ಬರ್ಲಿನ್ ದಿಗ್ಬಂಧನವನ್ನು ಕೊನೆಗಾಣಿಸಬೇಕೆಂದು ಪಾಶ್ಚಾತ್ಯ ತ್ರಿರಾಷ್ಟ್ರಗಳು ಅಂತಿಮ ಪ್ರಯತ್ನದಲ್ಲಿವೆ-ಮಲಯದ ದಂಗೆಯನ್ನು ನಿರ್ಮೂಲಿಸಿಯೇ ಸಿದ್ಧವೆಂದು ಬ್ರಿಟಿಷರು ಕಠೋರ ಸಂಹಾರ ಕೃತ್ಯಕ್ಕಾರಂಭಿಸಿದ್ದಾರೆ-ತನ್ನ ಖಂಡತುಂಡ ಘೋಷಣೆಯಿಂದ ಜಾಗತಿಕ ಸಂಘವು ಪೆಲಸ್ತೀನ್ ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಲೆದ್ದಿದೆ—ಹೈದರಾಬಾದ್ ಪ್ರಶ್ನೆಯನ್ನು ಕವಿದಿದ್ದ ಮಂಜನ್ನು ಭೇದಿಸುವ ಪ್ರಖರ ಕಿರಣವನ್ನು ಸರ್ದಾರ್ ವಲ್ಲಭಾಯಿ ಚೆಲ್ಲಿದ್ದಾರೆ-ಕಾಶ್ಮೀರ ಸಮಿತಿ ಕಾರ್ಯರಂಗದಲ್ಲೇ ಹಾಜರಾಗಿ ಕೆಲಸವಾರಂಭಿಸಿದೆ. ಅಂತೂ ಎಲ್ಲಾ ಸ್ಥಿತಿಗಳೂ ತ್ರಿಶಂಕು ಅವಸ್ಥೆಯಿಂದ ತಪ್ಪಿ 'ಅಚೆಗೆ ಅಥವಾ ಈಚೆಗೆ' ಬೀಳುವದರಲ್ಲಿವೆ.

ಇನ್ನೇನೇ ಆದರೂ, ಏನೊಂದೂ ಆಗದೆ ಕೊಳೆಯುತ್ತಾ ಇರುವ ದುಸ್ಥಿತಿಯಾದರೂ ತಪ್ಪುವದೆಂಬದು ಸಮಾಧಾನಕರ!

ಜಾಗತಿಕ ವಿದ್ಯಮಾನ

ಜಾಗತಿಕ ಸಂಘದ ಭದ್ರತಾ ಕೌನ್ಸಿಲು ತಾ 15ನೇ ರಾತ್ರಿ ಪೆಲಸ್ತೈನ್ ಶಾಂತಿ ಸಾಧನೆಯನ್ನು ಪುನಃ ಪರ್ಯಾಲೋಚಿಸಿ "ಇನ್ನು ಮೂರು ದಿನಗಳೊಳಗೆ ಗುಂಡು ಹಾರಾಟ ನಿಲ್ಲಿಸಬೇಕು; ಇಲ್ಲವಾದರೆ ಜಾಗತಿಕ ಸಂಘವು ಹಾಕುವ "ಸೆಂಕ್ಷನ್"ಗಳನ್ನು-ಬಲ ಪ್ರಯೋಗವನ್ನು ಕೂಡಾ-ಅನುಭವಿಸಲು ತಯಾರಿರಬೇಕು" ಎಂದು ಯೆಹೂದಿಗಳನ್ನೂ ಅರಬರನ್ನೂ ಸ್ಪಷ್ಟವಾಗಿ ನಿರ್ದೇಶಿಸಿದೆ. ಜೆರುಸಲೇಮ್ ನಗರದ ಕುರಿತು ಒಂದು ಶಾಂತಿಪಾಲನಾ ಒಪ್ಪಂದ ಮೊದಲೇ ಆಗಿದ್ದರೂ, ಇದು ಅಖಿಲ ಪೆಲಸ್ತೈನಿಗೆ ಲಗಾವಾಗುವ ಶಾಂತಿ ಸೂಚನೆ. ಯೆಹೂದಿಗಳಿದಕ್ಕೆ ಕೂಡಲೇ ಒಪ್ಪಿದ್ದಾರೆ. ಆದರೆ ವಾಯಿದೆಯು ಮುಕ್ತಾಯವಾದ 18ನೇ ಅಪರಾಹ್ನ 3 ಘಂಟೆ ಸಮೀಪಿಸುವ ವರೆಗೂ ಅರಬರ ನಿರ್ಧಾರವೇನೆಂಬುದು ತಿಳಿದು ಬಂದಿಲ್ಲ. ಭದ್ರತಾ ಕೌನ್ಸಿಲಿನ ನಿರ್ಧಾರವಾಗಿ ಅದು ಅಸ್ತಿತ್ವಕ್ಕೆ ಬರುವ ವರೆಗಿನ ನಡು-ಅವಧಿಯಲ್ಲೂ ಅರಬರೂ ಯೆಹೂದಿಗಳೂ ಉಗ್ರ ಹೋರಾಟಗಳನ್ನು ಸಾಗಿಸಿದ್ದರು–ಈ ಬಾರಿ ಭದ್ರತಾ ಕೌನ್ಸಿಲು ಒತ್ತಾಯದ ಚಿಕಿತ್ಸೆಗಿಳಿದಿರುವ ಪರಿಣಾಮವೇನೆಂಬುದನ್ನು ನೋಡಲಿಕ್ಕಿದೆ.

ಮಲಯದಲ್ಲಿ ಬ್ರಿಟಿಷರು ಕಟ್ಟುಗ್ರ ಕಾರ್ಯಾಚರಣೆಗಿಳಿದು ಬಂಡಾಯಗಾರರ ಮುಖ್ಯ ಕಾರ್ಯಾಲಯದ ಮೇಲೆ ದಾಳಿಟ್ಟು ಮುತ್ತಿಗೆ ಹಾಕಿ ಕಮ್ಯೂನಿಸ್ಟ್ ಪ್ರಮುಖರನ್ನು ಗುಂಡಿಟ್ಟು ಕೊಂದಿದ್ದಾರೆ. ಅಲ್ಲಿ ಘೂರ್ಕಾ ಸೇನೆಗಳನ್ನು ಮುಂದೊಡ್ಡಲಾಗಿದೆ. ಯುದ್ಧ ಕಾಲದಲ್ಲಿ 'ಜಪಾನೀ ವಿರೋಧೀ' ಸೇನೆಯಾಗಿದ್ದು ಈಗ 'ಬ್ರಿಟಿಷ್ ವಿರೋಧಿ' ದಂಡಾಗಿರುವ ಗೊರಿಲ್ಲಾ ದಳದ ತ್ರಿನಾಯಕರಲ್ಲೊಬ್ಬ ಲಾವುಯಾ ಎಂಬ ಚೀನೀ ಕಮ್ಯೂನಿಸ್ಟ್ ದಳಪತಿಯೂ ಬ್ರಿಟಿಷ್ ಗುಂಡಿಗೆ ಆಹುತಿಯಾಗಿದ್ದಾನೆ. ಮಲಯದ ಬಂಡಾಯ ನಿರ್ಮೂಲನಕ್ಕಾಗಿ ಬ್ರಿಟಿಷ್ ಸೇನೆ ಮತ್ತು ಪೋಲೀಸರು ಪರಮಾವಧಿ ಕಠೋರತೆಯ ದಬ್ಬಾಳಿಕೆ ಹೂಡಿದ್ದಾರೆ.

ಬರ್ಲಿನ್ ನಗರದಲ್ಲಿ ರಶ್ಯ ಮತ್ತು ಆಂಗ್ಲೋ ಅಮೇರಿಕ ಫ್ರೆಂಚರೊಳಗಿದ್ದಿರುವ ಘರ್ಷಣೆಯು ಪರಮಾವಧಿಗೆ ಮುಟ್ಟಿದೆ. ಪ್ರತ್ಯಕ್ಷ ಯುದ್ಧವೊಂದನ್ನು ಬಿಟ್ಟು ಉಳಿದೆಲ್ಲಾ ರೀತಿಯ ಕಠೋರತೆ ಮತ್ತು ವೈಷಮ್ಯಗಳು ಅಲ್ಲಿ ಪ್ರದರ್ಶಿಸಲ್ಪಟ್ಟಿವೆ. ಸುಮಾರು ಎರಡು ಮಿಲಿಯ ಜನರಿರುವ ತಮ್ಮ ಪಾಲಿನ ಪಶ್ಚಿಮ ಬರ್ಲಿನಿನ ಮೇಲೆ ಆಂಗ್ಲೋ-ಅಮೇರಿಕನರು ವಿಮಾನಗಳ ಕೋಟೆಯನ್ನು ಕಟ್ಟಿ ಆಕಾಶ ಮೂಲಕವೇ ಸರಬರಾಯಿ ಮಾಡುತ್ತಿದ್ದಾರೆ. ಈ ವಿಮಾನ ಬೇಲಿಯನ್ನು ಭೇದಿಸಲು ರಶ್ಯನರೀಗ ತವಕ ಪಡುತಿದ್ದಾರೆಂದು ತಿಳಿದು ಬರುತ್ತದೆ. ಅಮೇರಿಕಾಂಗ್ಲರ ವಿಮಾನ ಕೋಟೆಯಿರುವಲ್ಲೇ ತಾವು ಫೈಟರ್ ವಿಮಾನಗಳ ಹಾರಾಟ ತರಬೇತಿಯನ್ನು ಪ್ರಾರಂಭಿಸುವೆವೆಂದೂ, ಆ ಭಾಗದ ಆಕಾಶದ ಕಡೆಗೇನೇ ವಿಮಾನ ನಿರೋಧಕ ಗನ್ನು ಪ್ರಯೋಗಾಭ್ಯಾಸ ನಡೆಸುವೆವೆಂದೂ ರಶ್ಯನರು ಛಲ ಹಿಡಿದಿರುವರೆಂದು ತಿಳಿದು ಬರುತ್ತದೆ. ಈ ಕುರಿತು ರಶ್ಯದ ಕರಪತ್ರಗಳೂ ಹೊಸಹೊಸ ವಾರ್ತೆಗಳೂ ಹೊರಬಿದ್ದು ಬರ್ಲಿನ್ ವಾತಾವರಣ ವಿಶೇಷ ಪ್ರಕ್ಷುಬ್ಧವಾಗಿದೆ. ತಮ್ಮ ನರ ಕುಸಿಯುವಂತೆ ಮಾಡಿ ಬರ್ಲಿನಿನಿಂದೋಡಿಸಿಬಿಡಬೇಕೆಂದು ಸಂಕಲ್ಪಿಸಿರುವ ರಶ್ಯಕ್ಕೀ ಬಾರಿ ದೊಗ್ಗಾಲೂರಿದರೆ ಲೋಕದಿದಿರು ತಮ್ಮ ವರ್ಚಸ್ಸೇ ಕುಂದುವದೆಂದು ಹೆದರಿರುವ ಅಮೇರಿಕ ಮತ್ತು ಬ್ರಿಟನು, ಏನೇ ಬಂದರೂ ಬರ್ಲಿನಿನಲ್ಲಿ ಮಾನ ರಕ್ಷಿಸಿಕೊಳ್ಳಬೇಕೆಂದು ಪಂಥ ತೊಟ್ಟಿವೆ. ಅಮೇರಿಕದ ಯುದ್ಧ ವಿಮಾನಗಳು ಅಧಿಕ ಸಂಖ್ಯೆಯಲ್ಲಿ ಬ್ರಿಟನಿನಲ್ಲೀಗ ಜಮೆಯಾಗುತ್ತಿವೆ. ರಶ್ಯನರು ತಾವೀಗ ಹಾಕುತ್ತಿರುವ ಬೆದರಿಕೆಯಂತೆ, ಬರ್ಲಿನ್ ನೆಲದಲ್ಲಿ ಮಾಡಿದಂತೆಯೇ ಆಕಾಶದಲ್ಲೂ ಪಾಶ್ಚಾತ್ಯ ರಾಷ್ಟ್ರಗಳ ಪಥದೊಳಗೆ ಅಡ್ಡಗಾಲು ಹೊಗಿಸಿದಲ್ಲಿ ಪ್ರತ್ಯಕ್ಷ ಹೋರಾಟವೇ ಆರಂಭವಾಗುವದು ಸಂಭವನೀಯ.

ಅಮೇರಿಕದಲ್ಲಿ ನವಂಬರಿಗೆ ನಡೆಯಲಿರುವ ಅಧ್ಯಕ್ಷ ಚುನಾವಣೆಯ ಉಮೇದ್ವಾರೀ ನೇಮಕಗಳೀಗ ಆಗಿವೆ. ಈ ಸಂಬಂಧದ ಚಟುವಟಿಕೆಗಳಿಂದ ಅಲ್ಲಿಯ ವಾತಾವರಣದಲ್ಲಿ ಆಶ್ಚರ್ಯಕರ ಹಾಗೂ ಆವೇಶದಾಯ ಘಟನೆಗಳಾಗುತ್ತಿವೆ. "ರಿಪಬ್ಲಿಕನ್" ಪಕ್ಷವು ಗವರ್ನರ್ ಡಿವೆಯವರನ್ನು ಉಮೇದ್ವಾರಿಯಾಗಿ ಉತ್ಸಾಹದಿಂದ ನೇಮಿಸಿರುವಾಗ ಈಗಿನ ಅಧ್ಯಕ್ಷ ಟ್ರುಮೇನರ 'ಡೆಮೊಕ್ರೇಟ್' ಪಕ್ಷವು ನಿರುತ್ಸಾಹದಿಂದ ಟ್ರುಮೇನರನ್ನೇ ಪುನಃ ಆರಿಸಿದೆ. ಟ್ರುಮೇನ್ ಉಮೇದ್ವಾರಿಕೆಗೆ ಅವರ ಪಕ್ಷದಲ್ಲೇ ಒಮ್ಮತದ ಅನುಮೋದನೆಯಿಲ್ಲ; ಮಾತ್ರವಲ್ಲ, ದಕ್ಷಿಣ ಭಾಗದ ಡೆಮೊಕ್ರೇಟರೇ ಟ್ರುಮೇನರಿಗೆ ಬದ್ಧ ವಿರೋಧವಿದ್ದು ತಮ್ಮ ಪರವಾಗಿ ಬೇರೊಬ್ಬ ಉಮೇದ್ವಾರಿಯನ್ನು ನಿಲ್ಲಿಸಲಿರುವರೆಂದು ತಿಳಿದುಬರುತ್ತದೆ. ಈ ಬಾರಿಯ ಚುನಾವಣೆಯಲ್ಲಿ ಟ್ರುಮೇನಂಗೆ ಅಥವಾ ಅಧ್ಯಕ್ಷ ರೂಸವೆಲ್ಟರ ಕಾಲದಿಂದೀ ವರೆಗಿನ ಹದಿನಾರು ವರುಷಗಳಲ್ಲೂ ಅಮೇರಿಕದ ಅಧಿಕಾರ ನಿರ್ವಹಿಸುತ್ತಿರುವ ಡೆಮೊಕ್ರೇಟ್ ಪಕ್ಷಕ್ಕೆ ಪರಾಭವ ಖಂಡಿತವೆಂಬ ನಂಬಿಕೆ ಸರ್ವತ್ರ ಬೇರೂರಿದೆ. ಇದಿರುವಾದಿ ರಿಪಬ್ಲಿಕನ್ ಪಕ್ಷವು ಮತದಾರರ ಮನವೊಲಿಸುವುದಕ್ಕಾಗಿ ದಳಿತ ವರ್ಗದ ಉದ್ಧಾರವೇ ಮೊದಲಾದ ಆತ್ಯುಚ್ಚ ಕಾರ್ಯಕ್ರಮಗಳನ್ನೊಳಗೊಂಡ ಚುನಾವಣಾ ಘೋಷಣೆಗಳನ್ನು ಹೊರಡಿಸಿದೆ; ಪ್ರತ್ಯಕ್ಷ ಕಾರ್ಯರಂಗದಲ್ಲಿ ಇಂತಹ ಸುಧಾರಣೆಗಳಿಗೆ ಈ ವರೆಗೂ ಅನುಕೂಲವಿರದಿದ್ದ ರಿಪಬ್ಲಿಕನರ ಈ ಬಡಾಯಿಯ ಬಣ್ಣವನ್ನು ಒರೆಗೆ ಹಚ್ಚಿ ತೋರಿಸುವ ಉದ್ದೇಶದಿಂದ ಅಧ್ಯಕ್ಷ ಟ್ರುಮೆನರು ಒಂದು ಬುದ್ಧಿವಂತಿಕೆ ಹೂಡಿದ್ದಾರೆ; ಅಮೇರಿಕನ್ ಕಾಂಗ್ರೆಸಿನ ಚರಿತ್ರೆಗೆ ಇದುವರೆಗಿರದಂತಹ ಹೊಸ ಪುಟವೊಂದನ್ನು ಸೇರಿಸಿದ್ದಾರೆ. ಮುಂದುವರಿಸಿಟ್ಟಿದ್ದ ಅಮೇರಿಕನ್ ಕಾಂಗ್ರೆಸನ್ನು ಮಧ್ಯಾವಧಿಯಲ್ಲಿ ಪುನಃ ಕರೆದು ರಿಪಬ್ಲಿಕನ್ ಪಕ್ಷದ ಚುನಾವಣಾ ವಾಗ್ದಾನಗಳ ಹುರುಳು ಪರೀಕ್ಷೆಗೆ ಬೀಳುವಂತೆ ಮಾಡಿದ್ದಾರೆ. ಇದರ ಪರಿಣಾಮವೇನೆಂಬುದನ್ನು ನೋಡಲಿಕ್ಕಿದೆ.

ಯುಗೊಸ್ಲೇವಿಯದ ಮಾರ್ಶಲ್ ಟಿಟೋನ ಮೇಲೆ ರಶ್ಯಾ ಮತ್ತದರ ಹಿಂಬಾಲಕ ರಾಷ್ಟ್ರಗಳ ವೈರ ಬೆಳೆಯುತ್ತಾ ಹೋಗಿ ಯುಗೊಸ್ಲೇವಿಯದ ಮೇಲಿನ ಬಹಿಷ್ಕಾರ ಬಲಗೊಂಡಿದೆ. ಮಾರ್ಶಲ್ ಟಿಟೋ ಮತ್ತವನ ಪಕ್ಷಕರನ್ನು ಕದ್ದು ಕೊಂಡೊಯ್ಯುವ ಗೂಢ ಹಂಚಿಕೆಯನ್ನು ರಶ್ಯದ ಗುಪ್ತ ಪೋಲೀಸರು ಯುಗೊಸ್ಲೇವಿಯದ ಕಮ್ಯೂನಿಸ್ಟರ ಸಹಕಾರದಿಂದ ನಡೆಸಿದ್ದರೆಂದು ತಿಳಿದುಬರುತ್ತದೆ. ಅಂತೆಯೇ ಸ್ಪೈನಿನ ಜನರಲ್ ಫ್ರಾಂಕೋನ ಜೀವಾಪಹಾರ ಯತ್ನ ನಡೆದಿದ್ದಿತು.

ಚೈನಾ, ಇಂಡೋನೇಶಿಯಾ, ಮುಂತಾದ ಕಡೆಗಳ ಅಂತರ್ಯುದ್ಧ ಮತ್ತು ವಿವಾದಗಳು ಯಥಾಸ್ಥಿತಿಯಲ್ಲಿವೆ.

ಇಟೆಲಿಯ ಕಮ್ಯೂನಿಸ್ಟ್ ನಾಯಕ ಟೋಗ್ಲಿಯಟ್ಟಿನು ಎದೆಗೆ ಓರ್ವ ವಿದ್ಯಾರ್ಥಿ ನಾಲ್ಕು ಬಾರಿ ಗುಂಡಿಟ್ಟನಾದರೂ [illegible] ಸಾಯದೆ ಈಗ ಗುಣಹೊಂದುತಿದ್ದಾನೆ. ಇಟೆಲಿಯಲ್ಲಿ 70 ಲಕ್ಷ ಮಜೂರರ ಪ್ರಚಂಡ ಮುಷ್ಕರದ ಗಲಭೆಯೆದ್ದು ಈಗ ಸ್ಥಿತಿ ಶಾಂತವಾಗುತ್ತಿದೆ.

ಕಾಶ್ಮೀರ ಸಮಿತಿ

ಜಾಗತಿಕ ಸಂಘದ ಕಾಶ್ಮೀರ ಸಮಿತಿಯೀಗ ಭಾರತಕ್ಕೆ ಬಂದು ನವದೆಹಲಿಯಲ್ಲಿ ಹಿಂದೀ ಸೇನಾ ನಾಯಕರು ಮತ್ತು ಕಾರ್ಯಾಲಯಾಧಿಕಾರಿಗಳ ವಾಗ್ಮೂಲಗಳನ್ನು ಕೇಳಿದೆ. ಪರಿಸ್ಥಿತಿಯನ್ನು ಕೆಡಿಸುವ ಯಾವ ಹೇಳಿಕೆಯನ್ನೂ ಕೊಡದಂತೆ ಮತ್ತು ಸ್ಥಿತಿ ಸುಧಾರಣೆಗೆ ಸಾಧ್ಯವಿದ್ದ ಎಲ್ಲಾ ಪ್ರಯತ್ನಗಳನ್ನೂ ಕೈಕೊಳ್ಳುವಂತೆ ಕಾಶ್ಮೀರ ಸಮಿತಿಯು ಭಾರತ ಸರಕಾರವನ್ನು ಕೇಳಿಕೊಂಡಿತ್ತೆಂದೂ, [illegible] ಸ್ಥಿತಿ [illegible] ಯತ್ನ ಮಾಡಲು ತನ್ನ ಸರಕಾರವೆಂದೂ ಶಂಕಿಸಿದ್ದಿಲ್ಲ ಮತ್ತು ಕುರಿತು ಸಮಿತಿಯವರು ಭರವಸೆಯಿಂದಿರಬಹುದೆಂದು ಉತ್ತರವಿತ್ತಿರುವೆನೆಂದೂ ಪಂಡಿತ ನೆಹರುಗಳೆಂದಿದ್ದಾರೆ. ಸಮಿತಿಯ ಒಬ್ಬೊಬ್ಬ ಸದಸ್ಯರು ಕರಾಚಿಗೆ ಹೋಗಿ ಪಾಕಿ

ಎರಡು ಅಪೂರ್ವ ಪುಸ್ತಕಗಳು

ಕನ್ನಡದ ಪತ್ರಿಕೆಗಳೆಲ್ಲಾ ಮುಕ್ತ ಕಂಠದಿಂದ ಹೊಗಳಿದ ಲೋಕಪ್ರಿಯ
ಪ್ರಾತಿನಿಧಿಕ ಕಥಾಸಂಗ್ರಹ

ಹೂದೋಟ ಭಾಗ ೧

ಪುಟ ೨೫೦ ಬೆಲೆ: ೩ ೮ ೦ ಅಂ. ವೆ: ೦ – ೦

ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕಡಂಗೋಡ್ಲು ಶಂಕರ ಭಟ್ಟರ
ರಸಭರಿತ ಸುಂದರ - ಸ್ವತಂತ್ರ ಸಾಮಾಜಿಕ ಕಾದಂಬರಿ.

ಲೋಕದ ಕಣ್ಣು

ಪುಟ ೧೪೦ ಬೆಲೆ: ೨ ೬ ೦ ಅಂ. ವೆ. ೦ ೬ ೦

ನಮ್ಮ ಮುಂದಿನ ಪ್ರಕಟಣೆಗಳು

೧. ನಾನೇಕೆ ಹೀಗೆ (ಶ್ರೀ ಬನ್ನಂಜೆಯವರ ಲಘು ಕಾದಂಬರಿ) ೨. ಬಾಲ್ಯೋಟಗಳು (ಶ್ರೀ ಬನ್ನಂಜೆಯವರ ಕಥಾಸಂಗ್ರಹ) ೩. ಹೂದೋಟ (ಭಾಗ ೨) ೪. ೧೯೪೮ (ಕಥಾಸಂಗ್ರಹ) ೫. ಹೂಬುಟ್ಟಿ (ಏಕಾಂಕ ಸಂಗ್ರಹ)

ವಿವರಗಳಿಗೆ ಬರೆಯಿರಿ:

ಟಿ ಶ್ರೀಪತಿ
'ಕೃಷ್ಣ ನಿಹಾರ್' ಕದ್ರಿ ಟೆಂಪ್ಲ್ ರೋಡು,
ಬಿಜಯಿ, ಮಂಗಳೂರು.

★ ಕಾಶ್ಮೀರ ಹೈದರಾಬಾದ್ ★
★ ವಿಚಾರಣೆ ವಿವಾದಗಳು ★

ಸ್ತಾನ್ ಅಧಿಕಾರಿಗಳೊಂದಿಗೆ ಪರ್ಯಾಲೋಚನೆ ನಡೆಸುತ್ತಿದ್ದಾರೆ.

ಕಾಶ್ಮೀರ ರಣಕಣದಲ್ಲಂತೂ ಈ ವಿಶೇಷ ಸಂದರ್ಭಾನುಸಾರವಾಗಿ ಅತ್ಯಂತ ಕಠೋರ ಕಾಳಗ ನಡೆದಿದೆ. ಪಾಕಿಸ್ತಾನದ ಸೇನಾ ವಿಭಾಗಗಳು ಧಾಳಿಗಾರರ ಪಕ್ಷದಲ್ಲಿ ಜಾಹೀರಾಗಿ ಮುಂದೆ ಬಂದಿವೆ ಎಂಬುದಕ್ಕೆ ಸಾಕಷ್ಟು ನಿದರ್ಶನಗಳು ದೊರೆತಿವೆ. ಭಾರತ ಸರಕಾರದ ವಿಮಾನ ಪಡೆಗಳು ದೊಡ್ಡ ಪರಿಮಾಣದಲ್ಲಿ ವೈರಿಗಳ ಕೇಂದ್ರ ನೆಲೆಗಳ ಮೇಲೆ-ದೂರದೂರಕ್ಕೂ ಹೋಗಿ-ಧಾಳಿ ನಡೆಸಹತ್ತಿವೆ.

ನಿಜಾಮರಿಗೆ ಎಚ್ಚರಿಕೆ

ಭಾರತ ಸರಕಾರವು ಹೈದರಾಬಾದಿನ ಮೇಲೆ ಹಾಕಿರುವ ಅಜೇಯ ಆರ್ಥಿಕ ನಿರ್ಬಂಧನಗಳಿಂದ ಸಂಸ್ಥಾನದೊಳಗಿನ ವಹಿವಾಟುಗಳೆಲ್ಲಾ ಸ್ತಬ್ಧವಾಗ ಹತ್ತಿ ಧಾರಣೆಗಳು ಅಸಾಧ್ಯ ಮುಟ್ಟಿಕ್ಕೇರಿವೆ. ಇತ್ತ ಮುಂದೇನು ಎಂಬುದನ್ನು ಯೋಚಿಸಿ ನಿಶ್ಚಿತ ಹೆಜ್ಜೆಯನ್ನು ನಿರ್ಣಯಿಸುವುದಕ್ಕಾಗಿ ಹೈದರಾಬಾದಿನೊತ್ತಿನ ಪ್ರಾಂತ್ಯಗಳ ಪ್ರಧಾನ ಮಂತ್ರಿಗಳನ್ನೂ ಗೃಹ ಮಂತ್ರಿಗಳನ್ನೂ ಸರ್ದಾರ್ ಪಟೇಲರು ನವದಿಲ್ಲಿಗೆ ಕರೆದಿದ್ದಾರೆ. ಆ ಸಂಸ್ಥಾನದೊತ್ತಿನ ಪ್ರಾಂತ್ಯಗಳ ಕಾಂಗ್ರೆಸ್ ಕಮಿಟಿಗಳ ಅಧಿಕಾರಿಗಳೂ ಈ ತಿಂಗಳಲ್ಲೇ ಮದ್ರಾಸಿನಲ್ಲಿ ಸೇರಿ ಹೈದರಾಬಾದ್ ಧೋರಣೆಯನ್ನು ನಿರ್ಧರಿಸಲಿದ್ದಾರೆ. ಸರ್ದಾರ್ ಪಟೇಲರ ಮಾತಿನಂತೆ ಈ ಮೊದಲು ನಿಜಾಮರ ಮುಂದಿಟ್ಟಿದ್ದ ವಿಶೇಷ ರಿಯಾಯಿತಿಯ ಶರ್ತಗಳೆಲ್ಲಾ ಈಗ ರದ್ದಾಗಿಗೊಂಡು, ಇನ್ನು ಮುಂದೆ ಮಿಕ್ಕ ಸಂಸ್ಥಾನಗಳು ಸೇರಿದಂತೆ ಸೇರಿಕೊಳ್ಳುವದೊಂದೇ ನಿಜಾಮರ ಪಾಲಿಗುಳಿದಿದೆ ಎಂಬುದೂ ಖಾಡಾಖಾಡಿ ವರ್ತನೆಗೆ ಸುಸಂದರ್ಭವೊಂದನ್ನೇ ಹಿಂದೀ ಸರಕಾರವೀಗ ಕಾಯುತ್ತಿದೆಯೆಂಬುದೂ ಸ್ಪಷ್ಟವಾಗಿದೆ. ಅತ್ತ ನಿಜಾಮ್ ಸರಕಾರವು ಸ್ವರಕ್ಷಣೆಯ ಸರ್ವ ಸಿದ್ಧತೆಗಳನ್ನೂ ಗಲಿಬಿಲಿಯಿಂದ ನಡೆಸುತ್ತಿದೆ. ಹೈದರಾಬಾದ್, ಸಿಕಂದರಾಬಾದ್‌ಗಳಲ್ಲಿ ವಿಮಾನ ಧಾಳಿ ನಿರೋಧಕ ವ್ಯವಸ್ಥೆಗಳು ಕೂಡಾ ಆಗಿವೆ. ನಿಜಾಮರ ಸಲಹೆಗಾರ ಸರ್. ಮೋಂಕ್ಟನರ ಕಾರ್ಯದರ್ಶಿ ರಿಚರ್ಡ್ ಬ್ಯೂಮೊಂಟರು ಹೈದರಾಬಾದಿಗೆ ಬಂದಿದ್ದು ಮಾತುಕತೆ ನಡೆಸುತ್ತಿದ್ದಾರೆ. ಅವರನ್ನು ಭಾರತದಲ್ಲಿ ಜಪ್ತಿ ಮಾಡಿದಾಗ ಏನೂ ದೊರೆತಿಲ್ಲವಾದರೂ, ತನ್ನಾಗಮನಕ್ಕೂ ಭಾರತ-ಹೈದರಾಬಾದ್ ಸಮಸ್ಯೆಗೂ ಯಾವ ಸಂಬಂಧವೂ ಇಲ್ಲವೆಂದು ಅವರು ಹೇಳುತ್ತಿದ್ದುವಾದರೂ ಯಾವುದೋ ಒಂದು ಗುಪ್ತ ಕಾರಸ್ಥಾನದ ಕಾಲುವೆ ಎಂದು ಈ ಬಿಳಿ ಮನುಷ್ಯನನ್ನು ಊಹಿಸುವದಕ್ಕಡ್ಡಿಯಿಲ್ಲ.

ಇಕ್ಕಡೆಯ ವಾದಗಳು

ಸಂದರ್ಭದಲ್ಲಿ ಒಬ್ಬರ ಅಭಿಪ್ರಾಯ ಮತ್ತೊಬ್ಬರ ತಿಳುವಳಿಕೆಗೆ ಬಾರದೆ ಒಂದೇ ದಿನ ಭಾರತ ಸರಕಾರದ ಅಶ್ರಿತ ಖಾತೆಯ ಸದಸ್ಯ ಸರ್ದಾರ್ ಪಟೇಲರೂ ಹೈದರಾಬಾದಿನ ಪ್ರಧಾನ ಮಂತ್ರಿ ಮಿ. ಲಾಯಿಕ್ ಅಲಿಗಳೂ ತಂತಮ್ಮ ಧೋರಣೆ ಮತ್ತು ಪಂಥಗಳನ್ನಾಡಿ ತೋರಿಸಿರುವುದು ವಿಚಾರ ಯೋಗ್ಯವಿದೆ. ಪಾಟಿಯಾಳದಲ್ಲಿ 'ಪಾಟಿಯಾಲಾ ಮತ್ತು ಪೂರ್ವ ಪಂಜಾಬ್ ಸಂಸ್ಥಾನೀ ಕೇಂದ್ರ'ವನ್ನು ಉದ್ಘಾಟಿಸುತ್ತಾ ತಾ. 15ರಲ್ಲಿ ಸರ್ದಾರ್ ಪಟೇಲರು ಹೈದರಾಬಾದಿನ ಕುರಿತು ಹೇಳಿದರು: "ಹಿಂದಿನ ಗವರ್ನರ್ ಜನರಲರು ಹೈದರಾಬಾದಿನ ಸಂಬಂಧವಾಗಿ ಕೊಟ್ಟಿದ್ದ ಶರ್ತಗಳೂ ನಡೆಸಿದ್ದ ಮಾತುಕತೆಗಳೂ ಅವರೊಂದಿಗೇ ಹೋಗಿವೆ. ಇನ್ನು ನಿಜಾಮರೊಡನೆ ನಡೆಸುವ ಒಪ್ಪಂದವೆಂಬುದು ಇತರ ಸಂಸ್ಥಾನಗಳೊಡನಾಗಿರುವ ಒಪ್ಪಂದಗಳ ಪಂಕ್ತಿಯಲ್ಲೇ ಇರತಕ್ಕದ್ದು. ನಿಜಾಮರು ಅನರ್ಹ ಭರವಸೆಯಿಟ್ಟುಕೊಂಡಿರುವ ಹೊರಗಿನ ಸಹಾಯವಾವುದೂ ಅವರಿಗೆ ದೊರೆಯುವಂತಿಲ್ಲ. ಅವಿಶ್ರಾಂತವಾಗಿ ಚಡಪಡಿಸುತ್ತಿರುವವರಿಗೆ ನಾನೀಗ ಹೇಳಲಿಚ್ಛಿಸುವದಿಷ್ಟೆ. 'ನೀವು ನಮ್ಮ ಮೇಲೆ ನಂಬಿಕೆಯಿಡಬೇಕು. ಹೈದರಾಬಾದಿನ ಕುರಿತು ನೀವು ಅನುಭವಿಸುತ್ತಿರುವಷ್ಟೇ ವೇದನೆ ಸ್ವತಃ ನನಗೂ ಇದೆ. ಆದರೆ ನಾವೊಂದು ಶಸ್ತ್ರಕ್ರಿಯೆ ಕೈಕೊಳ್ಳುವಾಗ ಸಂಬಂಧಿಸಿದ ಅವಯವದ ಸಾಧ್ಯವಿದ್ದಷ್ಟು ಅಲ್ಪಾಂಶ ಮಾತ್ರ ಕತ್ತರಿಸಲ್ಪಡುವಂತೆಯೂ ಆ ಓಪರೇಶನ್ ಕಾಲ ಪಕ್ವವಾದಾಗ ಮಾತ್ರವೇ ಆಗುವಂತೆಯೂ ನೋಡಿಕೊಳ್ಳಲಿಕ್ಕಿದೆ". ಸರ್ದಾರರು ತನ್ನ ಖಂಡತುಂಡ ಧೋರಣೆಗನುಸಾರವಾಗಿ ಹೈದರಾಬಾದ್ ಪ್ರಶ್ನೆಯ ಹಿನ್ನೆಲೆಯ ಸ್ಪಷ್ಟ ಚಿತ್ರವನ್ನು ಈ ರೀತಿ ಬಿಡಿಸಿದ್ದರು: "ಹೈದರಾಬಾದಿಗೇನು ಎಂದು ಕೆಲವರು ನನ್ನನ್ನು ಪ್ರಶ್ನಿಸುತ್ತಿದ್ದಾರೆ. ನಾನು ಹಿಂದೊಮ್ಮೆ ಜುನಾಗಡಿನಲ್ಲಿ ಭಾಷಣಮಾಡಿಯುತ್ತಾ, ಹೈದರಾಬಾದ್ ನ್ಯಾಯ ವರ್ತನೆ ಕೈಕೊಳ್ಳದಿದ್ದರೆ ಜುನಾಗಡಿನ ಗತಿಯೇ ಅದಕ್ಕೂ ಕೂಡಾ ಎಂದು ಬಹಿರಂಗವಾಗಿ ಹೇಳಿದ್ದುದನ್ನು ಇವರು ಮರೆತಿದ್ದಾರೆ. ಆ ಮಾತುಗಳು ಈಗಲೂ ಅಸ್ತಿತ್ವದಲ್ಲಿವೆ; ನಾನಾ ಮಾತುಗಳಿಗೀಗಲೂ ಅಂಟಿಕೊಂಡಿದ್ದೇನೆ. ತಾನೊಂದು ಶಾಂತಿಪೂರ್ಣ ಒಡಂಬಡಿಕೆ ಸಾಧಿಸಬಲ್ಲೆನೆಂಬ ಆಲೋಚನೆಯು ಮಾಜೀ ಗವರ್ನರ್ ಜನರಲರಲ್ಲಿದ್ದಿತು. ಅದನ್ನು ಮಾಡಿನೋಡುವಂತೆ ನಾನವರನ್ನು ಬಿಟ್ಟೆ. ಅವರು ತಮ್ಮ ಸರ್ವ ಶಕ್ತಿಯಿಂದ ಪ್ರಯತ್ನಿಸಿದರು. 'ಹಿಸ್ ಮೆಜೆಸ್ಟಿಗಳ ವಿಶ್ವಾಸಾರ್ಹ ಮಿತ್ರ'ಎಂಬ ಜಂಭವನ್ನು ತನ್ನಷ್ಟಕ್ಕೆ ತಾನೇ ಕಟ್ಟಿಕೊಂಡಿರುವವರು ನಿಜಾಮರು. ಇದರಿಂದಾಗಿ ನಿಜಾಮರನ್ನು ಸಂಧಿಸಿ, ಅವರನ್ನು ಯೋಗ್ಯವಾದ ಜಾಗೂ ಶಾಂತಿಯ ಪಥದತ್ತ ತಿರುಗಿಸುವ ಹಕ್ಕು ತಮಗಿದೆ ಎಂದು ಬ್ರಿಟಿಷರು ಭಾವಿಸಿಕೊಳ್ಳುತ್ತಾರೆ. ಈ ಸ್ಫೂರ್ತಿಯಿಂದಲೇ ಲಾರ್ಡ್ ಮೌಂಟ್‌ಬೇಟನರು ಸರ್ ಮೋಂಕ್ಟನರ ಸಹಾಯ ಪಡೆದುಕೊಂಡು ಪರಮಾವಧಿ ಪ್ರಯತ್ನಿಸಿದರು. ಕೊನೆಯ ವರೆಗೂ ಅವರು ಆಶೆ ಕಟ್ಟಿಕೊಂಡೇ ಇದ್ದರು. ಈ ಆಶೆಯು ನಿಜಾಮರ ಕುಟಿಲ ವರ್ತನೆ ಮತ್ತು ಅವರ ಹಿಂದಿರುವ ದುಶ್ಶಕ್ತಿಗಳ ಆವೇಶದಿದಲ್ಲಿ ಹುಸಿಗೊಂಡಿತು"

ತಾ. 15ರಲ್ಲೇ ಹೈದರಾಬಾದಿನ ಧರ್ಮ ಪ್ರಮುಖರ ಸಮ್ಮೇಳನ ದಾಕ್ರಿಯದಲ್ಲ ಪುಲ್ಬಾಲಾ ಅರಮನೆಯಲ್ಲಿ ನಡೆದ ನಿಜಾಮರ ೩೮ನೇ ಸಿಂಹಾಸನಾರೋಹಣದ ವರ್ಧಂತ್ಯುತ್ಸವದ ಅಧ್ಯಕ್ಷ ಸ್ಥಾನ ವಹಿಸಿ ಹೈದರಾಬಾದ್ ಪ್ರಧಾನಿ ಮಿ. ಲಾಯಿಕ್ ಅಲಿಗಳು ಘರ್ಜಿಸಿದರು—"ಬ್ರಿಟಿಷರು ತೊರಟುಹೋದ ಮೇಲೆ ಸ್ವತಂತ್ರವಾಗುವ ಹಕ್ಕು ಭಾರತ ಅಥವಾ ಪಾಕಿಸ್ತಾನಗಳಿಗಿರುವಷ್ಟೇ ಹೈದರಾಬಾದಿಗೂ ಇದೆ. ಹೈದರಾಬಾದ್ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳುವ ನಮ್ಮ ದೃಢ ನಿರ್ಧಾರವನ್ನು ಯಾವ ಶಕ್ತಿಯೂ ಅಲುಗಾಡಿಸಲಾರದು". ಹೈದರಾಬಾದಿನ ಮೇಲೆ ನಿರ್ಬಂಧನಹಾಕಿ ಶರಣು ಬರುವಂತೆ ಮಾಡುವ ಭಾರತ ಸರಕಾರದ ಪ್ರಯತ್ನವು ಪರಾಭವಗೊಂಡಿದೆಯೆಂದೂ ಅದರಿಂದ ಹೈದರಾಬಾದಿನ ಪ್ರತಿಭಟನಾ ಸ್ಫೂರ್ತಿ ಹೆಚ್ಚಿದೆಯೆಂದೂ ಮಿ. ಲಾಯಿಕ್ ಅಲಿಗಳು ಹಂಗಿಸಿದರು.

ನಿಜಾಮ್ ಸರಕಾರದ ವ್ಯಾಪಾರೋದ್ಯಮ ಮಂತ್ರಿಗಳಾದ ಓರ್ವ ಹಿಂದು ಶ್ರೀ. ಜಿ. ವಿ. ಜೋಶಿಯವರು ಔರಂಗಾಬಾದಿನ ಸಾರ್ವಜನಿಕ ಸಭೆಯೊಂದರಲ್ಲಿ ರಝಾಕಾರರನ್ನು ಟೀಕಿಸುತ್ತಾ ಹೇಳಿದರು: "ದೇವರ ಸೇವಕರು ಎಂಬುದೇ ರಝಾಕಾರ್ ಶಬ್ದದ ಅರ್ಥ. ಅವರೀ ತತ್ವಕ್ಕನುಗುಣವಾಗಿ ವರ್ತಿಸುವರೆಂದು ನಂಬುತ್ತೇನೆ. ಸ್ವಾರ್ಥೋದ್ದೇಶವುಳ್ಳ ಕೆಲವು ತಂಟೆಕೋರರು ಈ ಚಳವಳದಲ್ಲಿ ಸೇರಿಕೊಂಡು, ಪರಿಸ್ಥಿತಿಯನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ; ಹತೋಟಿ ತಪ್ಪಿ ಶಿಸ್ತುಮೀರಿದ ಅತಿರೇಕಗಳನ್ನು ಮಾಡುತ್ತಿದ್ದಾರೆ. ಕಾಂಗ್ರೆಸಿಗ ಅಥವಾ ಕಮ್ಯೂನಿಸ್ಟ್ ಹಿಂದುಗಳೇ ರಝಾಕಾರರ ವೇಷದಿಂದ ಇಂತಹ ಅನಾಚಾರ ಮಾಡುತ್ತಿದ್ದಾರೆಂಬ ವಾದವನ್ನು ನಾನೊಪ್ಪಲಾರೆ. ಸಮಯ ಮೀರುವ ಮೊದಲೇ ರಝಾಕಾರರು ತಮ್ಮ ತಪ್ಪನ್ನು ತಿಳಿದುಕೊಳ್ಳುವದು ವಾಸಿ. ಹಿಂದುಗಳಲ್ಲಿ ವ್ಯಾಪಿಸಿರುವ ಭೀತಿಯು ರಝಾಕಾರ್ ಕೃತ್ಯಗಳ ಪರಿಣಾಮವೇ ಹೊರತು ನಿರಾಧಾರವಾದುದಲ್ಲ. ಪಾಕಿಸ್ತಾನ್ ಮತ್ತು ಭಾರತದಲ್ಲಿ ಕೊಲೆ ಸುಲಿಗೆಗಳು ಹಬ್ಬಿದ್ದಾಗ ಹೈದರಾಬಾದು ಈ ಗ್ರಹಣವಿರಹಿತವಾಗಿತ್ತು. ಅದರಿಂದ ಹುರುಪುಗೊಂಡೇ ನಾನು ಸರಕಾರದಲ್ಲಿ ಸೇರಿಕೊಂಡೆ. ಆದರೆ ಹೈದರಾಬಾದಿನ ಇತ್ತೀಚಿಗಿನ ವಿದ್ಯಮಾನಗಳು ನನ್ನ ವಿಶ್ವಾಸವನ್ನು ಭಂಗಿಸಿವೆ. ಸ್ವಪ್ನವನ್ನು ಹುಸಿಗೊಳಿಸಿವೆ. ತಮ್ಮ ಹಿಂದೂ ಸಹೋದರರಿಗೆ ತಮ್ಮ ಮೇಲೆ ವಿಶ್ವಾಸ ಮೊಳೆಯುವಂತೆ ಮಾಡುವದು ಮುಸ್ಲಿಮರ ಕರ್ತವ್ಯವಿದೆ."

ಹೇಗಿದ್ದರೂ ಹೈದರಾಬಾದ್ ಸ್ವಂತಾಭ್ಯಾಸ ಬಲದಿಂದ ಪಾಠ ಕಲಿಯುವ ಬದಲಿಗೆ ಹೊಡೆತ ತಿಂದೇ ಕಲಿಯುವ ತುಂಟ ಹುಡುಗನಾಗಿ ಇನ್ನೂ ನಿಂತಿದೆ!

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಜೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳಿಯ ಕ್ಷೇತ್ರಗಳಲ್ಲಿ-ತಮಿಳುನಾಡಿನ ಅಕ್ಕಿ ಸುತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವೃಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವ್ಯಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮ ವಿಶಿಷ್ಟ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತವೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು.. ನಿಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

Capital Authorised	Rs. 25,00,000
Capital Issued & Subscribed	Rs 20,00,000
Capital Paid up	Rs 19,96,345
Reserves....	Rs. 8,67,530

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ಗುರುವಾರ, ಉಡುಪಿ, ೨೨-೭-'೪೮

ಪಶ್ಚಿಮ ಕರಾವಳಿಗೊಂದು ಮಹಾಬಂದರ

ಪಶ್ಚಿಮ ಕರಾವಳಿಯಲ್ಲಿ ಕೊಚ್ಚಿ ಮತ್ತು ಮರ್ಮಗೋವಾಗಳ ನಡುವೆ ಯಾವುದನ್ನು ಮಹಾಬಂದರಾಗಿ ನಿರ್ಮಿಸಬೇಕೆಂಬುದು ದೀರ್ಘಾವಧಿಯಿಂದಲೂ ಪ್ರಶ್ನೆಯಾಗಿಯೇ ಉಳಿದಿದೆ. ಭಾರತ ಸರಕಾರದ ಪಾಲಿಗೆ ಅದೊಂದು ಸಮಸ್ಯೆಯಾಗಿದೆ. ಈ ಸಂಬಂಧವಾಗಿ ಕೇಂದ್ರ ಸರಕಾರವು ರಚಿಸಿದ್ದ ಸಮಿತಿಯು ಮೊನ್ನೆ ತಾನೇ ಬೆಂಗಳೂರಿಗೆ ಬಂದು ಮಹಾಬಂದರ ರಚನೆಸಂಬಂಧದ ಎಲ್ಲಾ ವಿಧದ ವಾದಗಳನ್ನೂ ಸಂಗತಿಗಳನ್ನೂ ಕೇಳಿ, ಪರಿಶೀಲನೆ ನಡೆಸಿ, ಹೋಗಿದೆ. ಇಂತಹ ಪರಾಮರ್ಶೆಗರ್ಹವುಳ್ಳ ಕಾರವಾರ, ಭಟ್ಕಳ, ಮಲ್ಪೆ, ಮಂಗಳೂರು ಬಂದರಗಳ ಯೋಗ್ಯತೆಗಳೆಲ್ಲವೂ ನಿರ್ಣಯಕರ್ತರ ಮುಂಭಾಗದ ದಾಖಲೆಗಳಲ್ಲಿ ಮಾತ್ರವಲ್ಲ, ಸ್ವತಃ ಅವರ ಮನಸ್ಸಿನ ಮೇಲೂ ಸರಿಯಾಗಿ ಪ್ರತಿಬಿಂಬಿಸಿರಬೇಕು; ಆಯಾಯ ಬಂದರ ಪಕ್ಷಪಾತಿಗಳಿಂದ ಅಷ್ಟೂ ಕೆಲಸಗಳಾಗಿವೆ. ನಾವೀ ಕುರಿತು ಈ ಮೊದಲೇ ಸಾಕಷ್ಟು ಚರ್ಚಿಸಿರುವೆವಾದ್ದರಿಂದ ಪುನಃ ಚರ್ವಿತಚರ್ವಣಕ್ಕೆ ಹೋಗುವುದಿಲ್ಲ. ಆದರೆ ಅಧಿಕಾರಿಗಳೊಂದು ನಿರ್ಣಯಕ್ಕೆ ಬರುವ ಕಾಲವಿದು; ಈ ಸಂದರ್ಭದಲ್ಲಿ ಅವರಿಗೆ ನೆನಪಿರಬೇಕಾದ ಕೆಲವು ಮೂಲಸೂತ್ರಗಳಿವೆ. ಉಮೇದ್ವಾರೀ ಬಂದರಗಳ ಪೈಕಿ ಚುನಾವಣೆಯ ಮೊದಲೇ ಮಂಗಳೂರು, ಕಾರವಾರ ಬಂದರಗಳ ಉಮೇದ್ವಾರಿಕೆಗಳು ಹಿಂತೆಗೆದುಕೊಳ್ಳಲ್ಪಟ್ಟಂತೆ, ಅಥವಾ ಅಸಿಂಧುಗೊಳಿಸಲ್ಪಟ್ಟಂತೆ ಕಾಣುತ್ತಿದೆ. ಈಗ ಸ್ಪರ್ಧೆಗೆ ಬದ್ಧರುವುದೆಂದರೆ ಮಲ್ಪೆ ಮತ್ತು ಭಟ್ಕಳಗಳ ಯೋಗ್ಯತೆಗಳು ಮಾತ್ರ. ಮಲ್ಪೆಯ ಪ್ರತಿನಿಧಿಗಳ ಶ್ಲಾಘನೀಯ ಪ್ರಯತ್ನಗಳ ಪರಿಣಾಮವಾಗಿ, ನಾವಿದನ್ನು ಬರೆಯುವವರೆಗೆ ನಿರಾಶೆಯ ಸುದ್ದಿಯಿಲ್ಲವಾದರೂ ಮೈಸೂರಿನ ಭಾರ ಬಿದ್ದಿರುವದರಿಂದಾಗಿ ಭಟ್ಕಳದ ತಕ್ಕಡಿಯೇ ತಗ್ಗಿರುವಂತಿದೆ. ಭಟ್ಕಳವೇ ಮಹಾ ಬಂದರಾಗಬೇಕೆಂಬ ಮೈಸೂರು ಸರಕಾರದ ವಾದದ ಮುಖ್ಯ ಕಾರಣಗಳಿವು:—ಮೈಸೂರು ಗಡಿಗೆ ಕೇವಲ ಹತ್ತೇ ಮೈಲು ದೂರದಲ್ಲಿರುವ ಏಕಮಾತ್ರ ಬಂದರವೆಂದರೆ ಭಟ್ಕಳ; ಶಿವಮೊಗ್ಗ ಜಿಲ್ಲೆಯ ಶರಾವತಿಯಲ್ಲಿ 9 ಕೋಟಿ ರೂಪಾಯಿ ವೆಚ್ಚದ ನೀರಾವರಿ ಯೋಜನೆ ಮತ್ತು ಅದೇ ಜಿಲ್ಲೆಯ ಜೋಗಿನಲ್ಲಿ 'ಮಹಾತ್ಮಾ ಗಾಂಧಿ ಹೈಡ್ರೋ ಇಲೆಕ್ಟ್ರಿಕ್' ಕಾರ್ಯ ಕೈಕೊಂಡಿರುವುದರಿಂದ ಮೈಸೂರಿನ ಭಾವೀ ಕೈಗಾರಿಕೆ ಮತ್ತು ಬೇಸಾಯ ಕೇಂದ್ರವೇ ಶಿವಮೊಗ್ಗಾ ಜಿಲ್ಲೆಯಾಗಲಿರುವಾಗ ಅದಕ್ಕೆ ಹೊಂದಿಕೊಂಡಿರುವ ಬಂದರವು ಭಟ್ಕಳವೇ; ಭಟ್ಕಳಕ್ಕೆ ಸುಲಭದಲ್ಲಿ ಸರಬರಾಯಿ ಮಾಡಿಸಲಾಗುವಷ್ಟು ಸಮೀಪದಲ್ಲಿ ಅರಣ್ಯ ಮತ್ತು ಖನಿಜ ಪ್ರದೇಶಗಳಿವೆ; ಬೆಂಗಳೂರು ಸಿಟಿಯ ಅಭಿವೃದ್ಧಿಗೆ, ಮತ್ತದಕ್ಕೆ ಸಂಬಂಧಿಸಿ ಕೊಚ್ಚಿ ಮತ್ತು ಮದ್ರಾಸ್ ಬಂದರಗಳೊಡನಿರುವ ಆಮದು ರಫ್ತಿಗೆ ಬೀಳುವ ತಡೆಯನ್ನು ಭಟ್ಕಳವು ಬಂದರವಾದರೆ ನಿವಾರಿಸಬಹುದು; ಮೈಸೂರಿನಿಂದ ಭಟ್ಕಳಕ್ಕೆ ಆಗಬೇಕಾದುದು ಸುಮಾರು 48 ಮೈಲುಗಳ ರೈಲು ರಸ್ತೆ ಮಾತ್ರ; ಈ ರಸ್ತೆಯ ನಡುವೆ ಬರುವ ತಲಗುಪ್ಪಾ ಮತ್ತು ಗಟ್ಟ ಪ್ರದೇಶಗಳ ಜೋಡಣೆಯಲ್ಲಿ, ಮಲ್ಪೆಯಂತಹ ಕಡೆಗೆ ರೈಲು ರಸ್ತೆ ಮಾಡಬೇಕಾದಂದುವಷ್ಟು ಕಷ್ಟವಿಲ್ಲ. ಭದ್ರಾವತಿಯ ಉಕ್ಕು ಮತ್ತು ಸಿಮೆಂಟು, ಜೋಗಿನ ವಿದ್ಯುತ್‌ಗಳ ಬಲದಿಂದ ಭಟ್ಕಳವನ್ನು ಮಾದರಿ ಹಡಗ ರಚನಾ ನಿಲ್ದಾಣವಾಗಿ ರಚಿಸಬಹುದು; ಭಟ್ಕಳ ಧಕ್ಕೆಯು ವರುಷವಿಡೀ ಉಪಯೋಗಕ್ಕೆ ಬೀಳುವಷ್ಟು ಭದ್ರವಿದೆ; ಅದನ್ನು ಮಹಾ ಬಂದರಾಗಿ ನಿರ್ಮಿಸಲು ವೆಚ್ಚ ಕಡಿಮೆ.

ಭಟ್ಕಳದ ಸಮರ್ಥನೆಯಲ್ಲಿ ಮೈಸೂರು ಸರಕಾರವು ಅವಲಂಬಿಸಿರುವ ಮೇಲಿನ ಕಾರಣಗಳಲ್ಲಿ ಮುಖ್ಯವಾಗಿ ಮೈಸೂರು ಸಂಸ್ಥಾನದ ಹಿತ ಸಾಧನೋದ್ದೇಶವಿದೆ ಎಂಬುದು ಸ್ಪಷ್ಟ. ಅಖಿಲ ಕರ್ನಾಟಕ ಪ್ರಾಂತ್ಯದೊಳಗೆ ಮೈಸೂರು ಲೀನ ಹೊಂದುವ ಒಡಂಬಡಿಕೆಗಳಾಗಿರುವಾಗ, ಕರ್ನಾಟಕ ಪ್ರಾಂತ್ಯ ರಚನೆಯ ನಂತರವೇ ಉಪಯೋಗಕ್ಕೆ ಬೀಳಲಿರುವ ಮಹಾ ಬಂದರದ ಪ್ರಶ್ನೆಯಲ್ಲಿ ಈ ಸ್ಥಳೀಯ ಸ್ವಾರ್ಥಕ್ಕೆ ಸ್ಥಾನವಿಲ್ಲ, ಮಿಕ್ಕ ಭಾಗಗಳವರೂ ಶಿವಮೊಗ್ಗೆಯ ಕೈಗಾರಿಕೋದ್ಯಮಾಭಿವೃದ್ಧಿ ಮತ್ತು ಬೆಂಗಳೂರಿನ ಪ್ರಗತಿ ಮುಂತಾದುವುಗಳನ್ನು ವಿಶಾಲ ಕರ್ನಾಟಕ ದೃಷ್ಟಿಯಿಂದಲೇ ನೋಡುವಾಗ, ಅವುಗಳಿಗೆ ಹೇಳಿಸಿದ್ದು ಭಟ್ಕಳ ಮಾತ್ರವೆಂದು ನಿಶ್ಚಿತವಾದರೆ ಆ ಮಾತು ಬೇರೆ. ಅಖಿಲ ಕರ್ನಾಟಕದ ಹಿತ ದೃಷ್ಟಿಯಲ್ಲಿ ಯೋಚಿಸಿ, ತುಲನೆ ಮಾಡಿ ನೋಡಿಕೊಳ್ಳಬೇಕಾದ ಇತರ ಪ್ರಾಮುಖ್ಯ ಸಂಗತಿಗಳೂ ಅದರೊಂದಿಗಿವೆ. ಮೇಲಾಗಿ ಒಂದು ಬಂದರದ ಪ್ರಶ್ನೆಯಲ್ಲಿ ಅದರ ಯೋಗ್ಯತೆ ಮತ್ತದಕ್ಕೆ ಹೊಂದಿರುವ ಎಲ್ಲಾ ಭಾಗಗಳ ವ್ಯಾಪಾರೋದ್ಯಮ-ವಹಿವಾಟುಗಳ ಪ್ರಶ್ನೆಯೇ, ಒಂದು ಭಾಗದ ಅಥವಾ ಒಂದು ಪ್ರಾಂತ್ಯದ ಸ್ವಾರ್ಥಕ್ಕಿಂತ ಮುಖ್ಯವಾದುದು; ಮೇಲಾದುದು. ಇವೆಲ್ಲವನ್ನೂ ಲಕ್ಷಿಸಿದರೆ, ಮೈಸೂರು 'ಇಂದು ಭಟ್ಕಳದಿಂದ ಸಾಧಿಸಬಹುದೆಂದಿರುವುದೆಲ್ಲವನ್ನೂ' ಅಲ್ಲಿಗಿಂತ ತುಸು ಉದ್ದದ ರೈಲ್ವೇ ಹಾದಿಯೊಂದನ್ನು ಜೋಡಿಸುವ ಮೂಲಕ-ಮಲ್ಪೆಯಿಂದ ಸಾಧಿಸಲು ಸಾಧ್ಯವಿದೆ; ಮಾತ್ರವಲ್ಲ, ಹೆಚ್ಚಿನದಾಗಿ ಮಲಬಾರತ್ತ ಕಡೆಯ ವಹಿವಾಟುಗಳನ್ನು ನಡಿಸುವ ಅನುಕೂಲತೆ ಮಲ್ಪೆಗಿದೆ. ಅಂತೆಯೇ ತುಲನಾತ್ಮಕವಾಗಿ ನೋಡುವಾಗ ಈಗಿನ ಮೈಸೂರು, ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳ ಪ್ರತಿಯೊಂದು ಕೇಂದ್ರ ವ್ಯಾಪಾರ ಸ್ಥಳಕ್ಕೂ ಮಲ್ಪೆಯು ಭಟ್ಕಳಕಿಂತ ಸುಮಾರು 18 ಮೈಲಿಗೆ ಸಮೀಪ ವಾರ್ಷಿಕವಾಗಿ ಸುಮಾರು 2 ಕೋಟಿ ರೂಪಾಯಿಗಳ ಮತ್ಸ್ಯ ವ್ಯವಸಾಯವಿರುವ ಮಲ್ಪೆಯು ಈ ಮಟ್ಟಿಗೆ ಅಖಿಲ ಭಾರತದಲ್ಲೇ ಅತ್ಯಂತ ದೊಡ್ಡದು ಪ್ರಕೃತಿಜನ್ಯ ಹುಟ್ಟು ಸೌಕರ್ಯಗಳ ಮಟ್ಟಿಗೆ—ಅಲ್ಪ ವೆಚ್ಚದ ರಚನೆಗೆ—ಮಲ್ಪೆಗೆ ಸಾಟಿಯಾದುದು ಮತ್ತೊಂದಿಲ್ಲವೆಂಬುದು ಸ್ವತಃ ಸಿದ್ಧ. ಅಂತೂ ಇವೆಲ್ಲಾ ಸಂಗತಿಗಳನ್ನಾಧರಿಸಿ – ಸ್ಥಳೀಯ ಸ್ವಾರ್ಥದೊತ್ತಡ ಅಥವಾ ತಾತ್ಕಾಲಿಕ ಅಗುಹೋಗುಗಳಿಗೆ ಬಲಿ ಬೀಳದೆ—ನ್ಯಾಯಬದ್ಧ ತೀರ್ಮಾನವಾಗಲಿ; ಸರಿಯಾದ ಕಾರಣಗಳ ಹೊರತು ಬೇರಾವುದೂ ಆ ತೀರ್ಮಾನದಲ್ಲಿ ತೋರಿಬಾರದಿರಲಿ; ಇಂತಹ ಆರಿಸುವಿಕೆಯಲ್ಲಿ ಯಾವ ಬಂದರ ಗೆದ್ದು ಬಂದರೂ ಸರ್ವೆಡೆಗಳವರ ಸುಸ್ವಾಗತವಿರಲಿ, ಎನ್ನುತ್ತೇವೆ.

ಉಡುಪಿ

ಸಂತಾಪ ಸೂಚನೆ—ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನ ಅಧ್ಯಾಪಕರಾಗಿದ್ದು ಕೊನೆಗೆ ಮಂಗಳೂರಿನ ಗ. ಕಾಲೇಜಿನ ಶಿಕ್ಷಕರಾಗಿದ್ದ ಶ್ರೀ ತೇಡೋರ್ ಸೋ.. ಬಿ.ಎ. ಎಲ್.ಟಿ. ಅವರ ಅಕಾಲ ನಿಧನದ ಸಂತಾಪ ಸೂಚಕ ಸಭೆಯೊಂದು ಕ್ರಿಶ್ಚಿಯನ್ ಹೈಸ್ಕೂಲಿನ ವಠಾರದಲ್ಲಿ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರುಗಿ ಹಲವರ ಭಾಷಣ, ಸಂತಾಪ ಸೂಚಕ ಠರಾವುಗಳಾದುವು. ಮೃತರು ಜನಪ್ರಿಯ ಶಿಕ್ಷಕರೂ ಸ್ಕಾಟು ಚಳವಳಿಯ ಮುಖಂಡರೂ ಆಗಿದ್ದರು.

ಶ್ರೀ. ಪಿ. ಲಕ್ಷ್ಮೀನಾರಾಯಣ ನಾಯ್ಕರಿಗೆ ಅಭಿನಂದನೆ—ಇದೇ ತಾ 18ರಲ್ಲಿ ಜರಗಿದ ನ್ಯೂ ಕರ್ನಾಟಕ ಪ್ರೊ - ಸೆಂಟ್ ಇನ್ಶೂರೆನ್ಸ್ ಕಂಪೆನಿಯ ಡ್ಯಾರೆಕ್ಟರರ ಸಭೆಯಲ್ಲಿ ಡ್ಯಾರೆಕ್ಟರರಲ್ಲೊಬ್ಬರಾದ ಶ್ರೀ ಶಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯವಾಯಿತು.

ಗ್ರಾಮಾಭಿವೃದ್ಧಿಯ ಶಿಕ್ಷಣ ಶಾಲೆಯು—ತಾ 28-7-48ರಲ್ಲಿ ಉಡುಪಿಯಲ್ಲಿ ತೆರೆಯಲ್ಪಟ್ಟು ಒಂದು ತಿಂಗಳ ವರೆಗೆ ಜರಗಲಿದೆ 18ರಿಂದ 25 ವರುಷ ವಯಸ್ಸಿನ ಎಂಟನೇ ತರಗತಿ (Form III)ಗೆ ಕಡಿಮೆಯಾಗದಷ್ಟು ಶಿಕ್ಷಣ ಪಡೆದ ಯುವಕರನ್ನು ಈ ಶಾಲೆಗೆ ಸೇರಿಸಿಕೊಳ್ಳಲಾಗುವುದು. ವಿದ್ಯಾರ್ಥಿಗಳಿಗೆ ತಿಂಗಳೊಂದರ ರೂ 12 ವೇತನ ಕೊಡಲ್ಪಡುವುದು. ಅಪೇಕ್ಷೆಯುಳ್ಳವರು ಕುಂದಾಪುರ ಡಿವಿಜನ್ ಅಸಿಸ್ಟೆಂಟ್ ಡೆವಲಪ್‌ಮೆಂಟ್ ಆಫೀಸರರು ಉಡುಪಿ ಮೊಕ್ಕಾಂ, ಇವರಿಗೆ ತಾ. 28-7-48ರ ಒಳಗೆ ಅರ್ಜಿ ಮಾಡಿಕೊಂಡು ತಾ 28-7-48ರಲ್ಲು ಪೂರ್ವಾಹ್ನ ಘಂಟೆ 10ಕ್ಕೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಚುನಾವಣೆ ಬಗ್ಗೆ ಹಾಜರಾಗತಕ್ಕದ್ದು ಎಂದು ಸ್ಪೆಶ್ಯಲ್ ಡೆವಲಪ್‌ಮೆಂಟ್ ಆಫೀಸರ್, ಶ್ರೀ ಕೆ. ಸರ್ವೋತ್ತಮ ರಾಯರು ತಿಳಿಸುತ್ತಾರೆ.

ಅಮೃತಾಂಜನ

ತಲೆನೋವು, ಶೀತ, ಕೀಲು ನೋವು, ಪಾದ ಮತ್ತು ಸ್ನಾಯುಗಳ ಒಡೆಯುವಿಕೆ, ಉರುಳು, ಬಾಲಗೂಳು, ಬಾವುಗಳು, ಗಾಯಗಳು ಬಾತು ಕೊಳ್ಳುವುದು, ಸೀಳು ಮುಂತಾದ ಬೇನೆ ಉಪಶಾಂತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

REGD.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳಿಗೆ ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**

Our Chief Agency New business in 1946 bout **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.

Bombay Life Building,

Central Office, Udipi:

Branches at:

Mangalore, Calicut, Trivandrum, Madura, Madras, Bangalore & Bombay,

ಮದ್ರಾಸಿನಲ್ಲಿ 'ಜಮೀನ್ದಾರಿ' ರದ್ದತಿ ವ್ಯವಸ್ಥೆ.

ಸ್ಟರ್ಲಿಂಗ್ ಒಪ್ಪಂದ

ಮದ್ರಾಸ್ ಪ್ರಾಂತ್ಯದ 'ಜಮೀನ್ದಾರೀ' ಮತ್ತು 'ಇನಾಮ್‌ದಾರ್' ಪದ್ಧತಿಗಳನ್ನು ಆ 'ದಾರ'ರಿಗೆ ಪರಿಹಾರ ಕೊಟ್ಟು ಬರ್ಖಾಸ್ತುಗೊಳಿಸುವ ಮಸೂದೆಯು ಈ ನೊದಲೇ ಶಾಸನ ಸಭೆಯ ಮುಂದೆ ಬಂದಿದ್ದು ಆ ಕುರಿತು ಮದ್ರಾಸ್ ಎಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ವಿಶೇಷ ಚರ್ಚೆ ನಡೆದಿದ್ದಿತು. ಅದರಲ್ಲಿ ನಿಯೋಜಿಸಲ್ಪಟ್ಟ ಪರಿಹಾರ ಧನದ ಕ್ರಮಗಳಿಂದ ತಮಗೆ ಅನ್ಯಾಯವಾಗುವದೆಂದು ಜಮೀನ್ದಾರ್, ಇನಾಮ್ದಾರರ ಕಡೆಯಿಂದ ಶಿಷ್ಟ ಮಂಡಲಿಯೊಂದು ಕಾಂಗ್ರೆಸ್ ಹೈಕಮಾಂಡಿಗೆ ದೂರು ಕೊಟ್ಟು, ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನವರು ಮದ್ರಾಸ್ ಮಂತ್ರಿಗಳ ಮತ್ತು ಜಮೀನ್ದಾರರ ಕಡೆಯ ವಾದಗಳನ್ನು ಕೇಳಿಕೊಂಡು ಪರಿಹಾರಾಂಶಗಳನ್ನು ಹೆಚ್ಚಿಸುವ ಸೂಚನೆಗಳನ್ನು ಕೊಟ್ಟಿದ್ದರು. ಇತ್ತ ಆ ಮಸೂದೆಯು ಎಸೆಂಬ್ಲಿ ಮತ್ತು ಕೌನ್ಸಿಲಿನ ಜತೆ ಚುನಾಯಿತ ಸಮಿತಿಯ ಪರಿಶೀಲನೆಗೊಪ್ಪಿಸಲ್ಪಟ್ಟು ಆ ಸಮಿತಿಯು ಸರ್ವಸಾಮಾನ್ಯವಾಗಿ ಮೂಲ ಮಸೂದೆಯ ವಿಧಾನಗಳನ್ನೇ ಶಿಫಾರಸು ಮಾಡಿದೆ; ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಸೂಚನೆಗಳು ನಷ್ಟದಾಯಕವೆಂದೂ ಉಲ್ಲೇಖಿಸಿದೆ. ಜುಲಾಯಿ ತಾ: ೧೦ರಲ್ಲಿ ಸೇರಿದ ಕಾಂಗ್ರೆಸ್ ನ್ಯಾಯವಿಧಾಯಕ ಸಭಾಸದಸ್ಯರ ಪಕ್ಷ ಸಭೆಯಲ್ಲಿ ಕಂದಾಯ ಮಂತ್ರಿ ಶ್ರೀ ಕಲಾ ವೆಂಕಟರಾಯರು ತಂದ ಈ ಕೆಳಗಿನ ಸೂಚನೆಯೇ ಬಹುಮತದಿಂದ ಮಂಜೂರಾಯಿತು: 'ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಸೂಚನೆಗಳನ್ನಾಧರಿಸಿದ್ದು, ಈಗ ಜತೆ ಸಿಲೆಕ್ಟ್ ಕಮಿಟಿಯಿಂದ ಹೊರಬಿದ್ದಿರುವ 'ಎಸ್ಟೇಟ್ ನಿರ್ಮೂಲನಾ ಮಸೂದೆ'ಯ ವಿಭಾಗಗಳಿಗೆ ಸರ್ವಸಾಮಾನ್ಯವಾಗಿ ಈ ಪಕ್ಷವು ತನ್ನ ಅಂಗೀಕಾರವನ್ನು ಸೂಚಿಸುತ್ತದೆ. ೩೦ ಎಕ್ರೆ ಅಥವಾ ಅದಕ್ಕೂ ಕಡಿಮೆಯಿದ್ದು ಧಾನ್ಯರೂಪದ ಗೇಣಿಪಡಕೊಳ್ಳುತ್ತಿರುವ ಇನಾಮ್ದಾರರಿಗೆ ಅಂತಹ ಧಾನ್ಯಗಳ ಸಾಮಾನ್ಯ ಬೆಲೆಯನ್ನಾಧರಿಸಿಯೇ ಪರಿಹಾರಕೊಡತಕ್ಕದ್ದೆಂಬ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಕೊನೆಯ ಸೂಚನೆಯಿಂದಾಗಿ ೨೦ ಕೋಟಿ ರೂಪಾಯಿಗಳಿಗೂ ಮಿಕ್ಕಿದ ಹೆಚ್ಚಿನ ಹೊರೆಯು ಪ್ರಾಂತಿಕ ಸರಕಾರದ ಮೇಲೆ ಬೀಳಲಿದೆ. ಈ ಭಾರವನ್ನು ಹೊರುವದು ಪ್ರಾಂತಿಕ ಸರಕಾರಕ್ಕಸಾಧ್ಯವಾದ್ದರಿಂದ ಆ ಸೂಚನೆಗಳನ್ನು ಹಿಂದೆಗೆದುಕೊಳ್ಳುವಂತೆ ಕಾಂಗ್ರೆಸ್ ಅಧ್ಯಕ್ಷರನ್ನು ವಿಜ್ಞಾಪಿಸಿಕೊಳ್ಳಬೇಕೆಂದು ಈ ಪಕ್ಷವು ನಿರ್ಧರಿಸುತ್ತದೆ".

ಮೇಲಿನ ಸೂಚನೆಗೆ ಎರಡು ತಿದ್ದುಪಡಿಗಳು ಬಂದಿದ್ದುವು. ೩೦ ಎಕ್ರೆ ಮತ್ತೊಳಗಿನ ಇನಾಮುಗಳನ್ನು ಇನಾಮ್ದಾರ ಮತ್ತು ಒಕ್ಕಲುಗಳೊಳಗೆ ಸಮಾನವಾಗಿ ಹಂಚಿ ಇಬ್ಬರಿಗೂ ರೈತ್ವಾರಿ ಪಟ್ಟಾ ಮಂಜೂರು ಮಾಡಬೇಕೆಂದೂ ೧೯೩೩ರಲ್ಲಿದ್ದ ಧಾನ್ಯದ ಬೆಲೆಯನ್ನಾಧರಿಸಿ ಲೆಕ್ಕ ಹಾಕಿಯೇ ಪರಿಹಾರ ಕೊಡಬೇಕೆಂದೂ ಶ್ರೀ. ಕೆ. ಭಾಷ್ಯಮ್‌ರು ತಿದ್ದುಪಡಿ ಸೂಚನೆ ತಂದಿದ್ದರು. ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನ ಸೂಚನೆಗಳನ್ನು ಅಂಗೀಕರಿಸಿ ಅದಕ್ಕನುಗುಣವಾಗಿ ಈ ಮಸೂದೆಯನ್ನು ಬದಲಾಯಿಸತಕ್ಕದ್ದೆಂದು ಶ್ರೀ. ಕೆ. ಆರ್. ಕಾರಂತರ ತಿದ್ದುಪಡಿ ಬಂದಿತ್ತು. ವಿಶೇಷ ಚರ್ಚೆಯಾಗಿ ಇವೆರಡು ತಿದ್ದುಪಡಿಗಳೂ ಬಿದ್ದುಹೋಗಿ ಸರಕಾರದ ಮೂಲ ಸೂಚನೆ ಮಂಜೂರಾಯಿತು- ಈ ಕುರಿತು ಕಾಂಗ್ರೆಸ್ ಹೈಕಮಾಂಡಿನೊಡನೆ ಮಾತಾಡಲು ಪ್ರಧಾನ ಮಂತ್ರಿ ಶ್ರೀ. ಓಮಂದೂರರು ನವದಿಲ್ಲಿಗೆ ಹೋಗಿದ್ದಾರೆ. ಶ್ರೀ. ಕೆ. ಆರ್. ಕಾರಂತರೂ ಅಧಿನಾಯಕರೊಡನೆ ಮಾತುಕತೆ ನಡೆಸುವದಕ್ಕಾಗಿಯೇ ನವದಿಲ್ಲಿಗೆ ಹೋಗಿದ್ದಾರೆಂದು ತಿಳಿದು ಬರುತ್ತದೆ.

ಸ್ಟರ್ಲಿಂಗ್ ಒಡಂಬಡಿಕೆ

ಹಿಂದೀ ಸರಕಾರದ ಅರ್ಥ ಸಚಿವ ಶ್ರೀ ಷಣ್ಮುಗಂ ಚೆಟ್ಟಿಯವರ ನಾಯಕತ್ವದಲ್ಲಿ ಭಾರತಸರಕಾರದ ಪರವಾಗಿ ಪ್ರತಿನಿಧಿಮಂಡಲಿಯೊಂದು ಲಂಡನಿಗೆ ಹೋಗಿ ಭಾರತಕ್ಕೆ ಇಂಗ್ಲಾಂಡು ಸಂದಾಯಿಸಲಿರುವ ಸ್ಟರ್ಲಿಂಗ್ ಸಾಲಗಳ ಸಂಬಂಧದ ಸಮಾಧಾನಕರ ಒಪ್ಪಂದವೊಂದಾಗಿದೆ. ಸದ್ಯಸ್ಥಿತಿಯಲ್ಲಿ ಎರಡು ಕಡೆಗಳವರಿಗೂ ಇದು 'ಸಮಾನ ಸಮಾಧಾನಕರ' ಎಂದು ತಜ್ಞರ ಅಭಿಪ್ರಾಯವಿದೆ. ಶ್ರೀ ಚೆಟ್ಟಿಯವರು ನವದಿಲ್ಲಿಯ ಪತ್ರಿಕಾ ಸಮ್ಮೇಳನವೊಂದರಲ್ಲಿ ಈ ಒಡಂಬಡಿಕೆಯ ಸೂಕ್ಷ್ಮ ಹಾಗೂ ಆಳವಾದ ವಿಚಾರಗಳನ್ನು ವಿವರಿಸಿ ಹೇಳಿದ್ದಾರೆ. ಆಗಾಗ ಕೇಳಿ ಬರುತ್ತಿದ್ದ ಸ್ಟರ್ಲಿಂಗ್ ಸಾಲದ ಪೂರ ತಗ್ಗಿಸುವ ಪ್ರಶ್ನೆಯೇ ಮುಂದೆ ಬಾರದೆ "ನಷ್ಟದಲ್ಲಿ ಬೀಳಲಿಲ್ಲ" ಎಂಬಂತಹ ಒಂದು ವ್ಯವಸ್ಥೆಯು ಭಾರತದ ಪಾಲಿಗೆ ದೊರಕಿದೆ. ಯುದ್ಧಾಂತ್ಯದಲ್ಲಿ ಬ್ರಿಟನು ಭಾರತದಲ್ಲಿ ಬಿಟ್ಟು ಹೋಗಿರುವ ಮತ್ತು ಬ್ರಿಟಿಷ್ ಸರಕಾರದ ಹಕ್ಕಿನದಾಗಿರುವ ಯುದ್ಧ ಸಾಮಾಗ್ರಿ ಸಂಗ್ರಹಗಳನ್ನು ಭಾರತವು ಪಡಕೊಂಡು ೩೭೫ ಮಿಲಿಯ ಪೌಂಡು (೫೦೦ ಕೋಟಿ ರೂಪಾಯಿ) ಪುಸ್ತಕ ಮೌಲ್ಯ ಬಾಳುವ ಅವುಗಳಿಗೆ ೧೦೦ ಮಿಲಿಯ ಪೌಂಡುಗಳನ್ನು (೧೩೩.೩ ಕೋಟಿ ರೂಪಾಯಿ.) ಸ್ಟರ್ಲಿಂಗ್ ಮೊತ್ತದಿಂದ ವಜಾ ಕೊಟ್ಟಿದೆ. ಅಂತೆಯೇ ಭಾರತದ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಅಧಿಕಾರ ನಿರ್ವಹಿಸಿ ನಿವೃತ್ತಿ ಹೊಂದಿ ಇಂಗ್ಲಾಂಡಿನಲ್ಲಿರುವ – ಭಾರತದಿಂದ ಪೆನ್ಶನ್ ಪಡೆಯುತ್ತಿರುವ – ಬ್ರಿಟಿಷರ ಪೆನ್ಶನ್‌ಗಳನ್ನು (ವಾರ್ಷಿಕ ಜಮಾ ೮ ಕೋಟಿ ರೂ.) ಮುಂದಿನ ೬೦ ವರುಷಗಳ ಮಟ್ಟಿಗೆ ಜಮೆ ನೋಡಿ ೧೪೭½ ಮಿಲಿಯ ಪೌಂಡುಗಳನ್ನು (೧೯೭ ಕೋಟಿ ರೂ.) ಅದಕ್ಕಾಗಿ ಬಿಟ್ಟು, ಅನುಕ್ರಮ ಇಳಿತದ ವರ್ಷಾಸನವಾಗಿ ಕೊಡಲು ವಾರ್ಷಿಕವಾಗಿ ಪಡಕೊಂಡು ೬೦ ವರುಷಗಳಲ್ಲಿ ಪೂರ್ತಿ ಮುಗಿಸುವ ವ್ಯವಸ್ಥೆಯಾಗಿದೆ. ಇವೆರಡು ಮೊತ್ತಗಳನ್ನು ತೆಗೆದು ಭಾರತಕ್ಕೆ ಬ್ರಿಟನು ಕೊಡಬೇಕಾಗಿ ಬರುವ ಸ್ಟರ್ಲಿಂಗ್ ಮೊತ್ತವೆಂದರೆ ೮೦೦ ಮಿಲಿಯ ಡೋಲರುಗಳು. ಈ ಪೈಕಿ ಮುಂದಿನ ಮೂರು ವರುಷಗಳಲ್ಲಿ ೧೬೦ ಮಿಲಿಯದಷ್ಟನ್ನು ಪಡಕೊಳ್ಳುವ ಒಪ್ಪಂದವಾಗಿದೆ. ಒಡಂಬಡಿಕೆಯಲ್ಲಿ ಮುಂದಿನ ವ್ಯವಸ್ಥೆ – ಇದರ ಆಧಾರದಿಂದ ನಡೆಯುವ ವ್ಯಾಪಾರ ವಹಿವಾಟು – ಇತ್ಯಾದಿಗಳಲ್ಲೂ ಸವಿವರ ಸ್ಪಷ್ಟ ಶರ್ತಗಳು ನಮೂದಿಸಲ್ಪಟ್ಟಿವೆ. ಮನು ಸುಭೇದಾರರಂತಹ ಕೆಲವರು ಭಾರತಕ್ಕಿದು ನಷ್ಟವೆಂಬರ್ಥದಲ್ಲಿ ಟೀಕಿಸುತ್ತಿರುವರಾದರೂ ಹೆಚ್ಚಿನ ವ್ಯಾಪಾರೀ ಮಂಡಲಿಗಳೂ ಅರ್ಥ ಶಾಸ್ತ್ರಜ್ಞರೂ ಈ ಕುರಿತು ಸಮಾಧಾನ ವ್ಯಕ್ತಪಡಿಸಿದ್ದಾರೆ.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲ್‌ಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶಲ್ ರೂ. 5-; ಅತಿಶಾಧಿಕ ಸ್ಪೆಶಲ್ ರೂ.8/- [ವಿ. ಪಿ. ಖರ್ಚು ಪ್ರತ್ಯೇಕ]

MIS. D. DEVEE, F. DS. (N. J.)
Tollygunge CALCUTTA,
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ರೇಶನ್ ಕಾರ್ಡುಗಳು

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over in multiples of Rs. 500/- at the following rates:-

For 3 months at 2½% per annum.
For 6 months at 3½% per annum.

For further particulars you may apply or call at any of our following Offices

Branches: Kadri Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

ಸ್ವರಾಜ್ಯದ ಸಮಸ್ಯೆ ನೆನಪಿರಲಿ!

ಸ್ವರಾಜ್ಯ ತುಳು ಲಾವಣಿ

ಆಗೋಸ್ತು ೧೫ ಸ್ವರಾಜ್ಯ ದಿನ ನೆನಪಿರಲಿ!

ಸ್ವರಾಜ್ಯ ಚರಿತ್ರೆ–ಗಾಂಧಿಜೀ ಬಲಿದಾನ - ಹೈದರಾಬಾದ್ ಘರ್ಷಣೆ-ನಮ್ಮ ಕರ್ತವ್ಯ-ಇತ್ಯಾದಿಗಳು ಬಗೆಮುಟ್ಟುವಂತೆ, ಹೇಳುವವರ ಮತ್ತು ಕೇಳುವವರ ಮೈ ರೋಮಾಂಚಗೊಂಡು ನವಚೇತನ ಮೂಡುವಂತೆ ಬಣ್ಣಿಸಿರುವ ನವನವೀನ ತುಳುಲಾವಣಿ ಪ್ರಕಟವಾಗಿದೆ.

ಧಾಟಿ:– ಒರಿಯೇ ಒರಿದಿನಿ, ಹೈದರಬಾದ್‌ದ
ಅರಸು ನಿಜಾಮೆದ; ಪರಕಡ್ಡ! ।ತನ।
ಪಾರ್‌ಲ್ ಬುಡುದು ಕೇಯೊರ್‌ದ ಬಡ್ಕೆ! ।ಇಜ್ಜ।
ನರಕದ ಗುರಿ ಕೆಸರ್‌ದ್ ಮಾರ್ಕೆ!॥
ದರ್‌ಪಡ್ ರದ್ದುಕಾರ್ ರಕ್ಕಸ ಪಾಪದ।
ಮುರಿಯೊಲು! ಉಂದಾಯಗ್ ಸಂದ್!॥ಬಲೆ॥ಬಲೆಬಲೆ।

ಬೆಲೆ:– ಕೇವಲ 0 2 0

ಪ್ರತಿಗಳಿಗೆ–

ಎಂ. ವಿ. ಹೆಗ್ಡೆ, ನವಯುಗ ಪ್ರೆಸ್, ಉಡುಪಿ

ನಡೆಯುವ ಚಿತ್ರ

★ **ಗೃಹ ಪ್ರವೇಶ** ★

(ತೆಲುಗು)

ಭಾನುಮತಿ — ಸಿ. ಎಸ್. ಆರ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರಗಳು:–

ನೆಪ್ಚೂನ್‌ನವರ

ಸಿಲ್ವರ್ ಕ್ವೀನ್

ಮಾಧುರಿ, ಆಗಾ, ನವೀನಚಂದ್ರ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಸೋಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹುಳಿಯನ್ನು ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಲಾಲಬಾವಿ, ಕೆಮಿಸ್ಟ್, ಹಾವೇರಿ ಬ್ಯಾಡಗಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ತೀವ್ರ ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಸೋಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ಶೀವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆಂಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ, ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸವೀಳದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ, ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸನ್ನಿ, ಮುಖಶೋಥ, ಸ್ತನಗಳ ಬೇಗು, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ಕಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ಪರಿಗೆ ಆರೆಸಿ ನೂರಾರು ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ '**ಪ್ರಸೂತಾಮೃತ**'ದ ೧ ಬಾಟ್ಲಿ ಮತ್ತು ೧ ಡಜನು '**ಪ್ರಸೂತ ಕಲ್ಯಾಣ ವಟಿ**' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಆಯುರ್ವೇದೀಯ ಔಷಧಿಗಳ ಪಟ್ಟಿಯು, ಪತ್ರ ಅನುಭವಿಕ ಗುಣಧರ್ಮ, ರೋಗನಿದಾನ ಪ್ರಮಾಣ, ಕ್ರಮ, ಇತ್ಯಾದಿ ಯುಕ್ತ ೯೯ ಪುಟಗಳ ಸಚಿತ್ರ ೧ಕ್ಕೆ 0-8 0 9 ಆಣೆಯ ಸ್ಟಾಂಪ್ ಕಳುಹಿಸಿದಲ್ಲಿ, ಪ್ರತಿ ಕಳುಹಿಸುವರು

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ದ. ಕನ್ನಡ

ಶಂಕರನಾರಾಯಣ—ಕುಂದಾಪುರ ವಿಭಾಗದ ಗ್ರಾಮಾಭಿವೃದ್ಧಿ ಉಪಾಧಿಕಾರಿಗಳಾದ ಶ್ರೀ ಕಾಳಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ತಾ ೧೩ರಲ್ಲು ಗ್ರಾಮಸ್ಥರ ಸಭೆಯೊಂದು ನೆರೆದು ಗ್ರಾಮಾಭಿವೃದ್ಧಿ ಸಮಿತಿ ರಚಿಸಲ್ಪಟ್ಟಿತು. ಶ್ರೀಗಳಾದ ಕೆ. ಗಣಪಯ್ಯ ಸೆಟ್ರು ಅಧ್ಯಕ್ಷರಾಗಿಯೂ ಕೆ. ನಾರಾಯಣಾಚಾರ್ಯರು ಉಪಾಧ್ಯಕ್ಷರಾಗಿಯೂ ಕೆ. ಕಿಟ್ಟಣ್ಣ ಸೆಟ್ಟರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಕಾಸರಗೋಡು—ಸ್ಥಳೀಯ ಶ್ರೀ ಕುರುಂಭಾ ಭಗವತಿ ಅತಿಯ ಸಮಾಜದ ಸ್ತ್ರೀ ಪುರುಷರ ಸಮ್ಮೇಳನವು ಇದೇ ತಾ ೪ರಲ್ಲು ಫಿಶರೀಸ್ ಡಾ॥ ಎ॥ ಶಾಲೆಯಲ್ಲಿ ಫಿಶರೀಸ್ ಇಲಾಖಾ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ. ಟಿ. ಸಿ. ಭರತನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮತ್ಸ್ಯವ್ಯವಸಾಯಿಗಳ ಕಷ್ಟ ಪರಂಪರೆಗಳು, ಅವುಗಳನ್ನು ನಿವಾರಿಸುವ ಸಾಧನೋಪಾಯಗಳು ಇತ್ಯಾದಿ ವಿಷಯಗಳ ಕುರಿತು ಶ್ರೀಗಳಾದ ಟಿ. ಡಿ. ನಾಯರ್, ಕೆ. ಸಿ. ಕೆ. ನಂಬಿಯಾರ್ ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾದನಂತರ ಬಾಲಮಕ್ಕಳ ವಿವಿಧ ಚಟುವಟಿಕೆಗಳ ಪ್ರದರ್ಶನವಾಯಿತು.

ಬೊಂಬಾಯಿ

ಬಂಟರ ಯಾನೆ ನಾಡವರ ಸಂಘ ಬೊಂಬಾಯಿ-ಇದರ 18ನೇ ವಾರ್ಷಿಕ ಮಹಾಸಭೆಯು ಜುಲೈ 4ನೇ ತಾರೀಕಿಗೆ, ಕರ್ನಾಟಕ ಫ್ರೀ ನೈಟ್ ಶಾಲೆಯ ವಠಾರದಲ್ಲಿ ಜರಗಿತು. ಗತವರ್ಷದ ವರದಿ ಓದಿ, ಲೆಖ್ಖ ಪತ್ರಗಳು ಮಂಜೂರಾದ ನಂತರ, ಹೊಸ ವರ್ಷದ ಆಡಳಿತದಾರರ ಚುನಾವಣೆಯಾಯಿತು. ಆಡಳಿತ ಮಂಡಳಿಗೆ 32 ಮಂದಿ ನೇಮಿ

ಸಲ್ಪಟ್ಟರು. ಅದರಲ್ಲಿ ಡಾ॥ ಕೆ. ರಾಜಗೋಪಾಲ ಶೆಟ್ಟಿ ಅಧ್ಯಕ್ಷರಾಗಿಯೂ, ಶ್ರೀ ಟಿ. ಸಂಜೀವ ಹೆಗ್ಗಡೆ, ಎಡ್ವಕೇಟ್ ಉಪಾಧ್ಯಕ್ಷರಾಗಿಯೂ, ಶ್ರೀ ವಾಸು ಬಿ. ಶೆಟ್ಟಿ ಕೋಶಾಧಿಕಾರಿಯಾಗಿಯೂ ಮತ್ತು ಶ್ರೀ ಯಚ್. ಮಹಾಬಲ ರೈ, ಗೌರವ ಕಾರ್ಯದರ್ಶಿಯಾಗಿಯೂ ನೇಮಕಹೊಂದಿದರು. ಅನೇಕ ಹಿತಚಿಂತಕರ ಮತ್ತು ಅತಿಥಿಗಳ ಭಾಷಣಗಳಾದ ಮೇಲೆ, ಕಾರ್ಯದರ್ಶಿಯವರ ಉಪಕಾರ ಸ್ಮರಣೆಯಾದಮೇಲೆ, ಲಘು ಫಲಹಾರದೊಂದಿಗೆ ಸಭೆ ಮುಕ್ತಾಯವಾಯಿತು.

ಬಗ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘ, ಮುಂಬಾಯಿ—ಈ ಸಂಘದ ಸಪ್ತಮ ವಾರ್ಷಿಕ ಮಹಾಸಭೆಯು ತಾ. 11-7-48ರಂದು ಹೊಂಗ್‌ಕೊಂಗ್ ಬ್ಯಾಂಕ್ ಕಟ್ಟಡದ ಒಂದನೇ ಮಾಳಿಗೆಯಲ್ಲಿ ಶ್ರೀಮಾನ್. ನೀಲಕಂಠ ಗೋವಿಂದ ಯಾನೆ ಬಾವುಸಾಹೇಬ್ ಕಾಮತ್ (ಬರ್ನಾರ್ಕೆಲ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್) ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಲ್ಲಿ ಜರಗಿತು. ಶ್ರೀಗಳಾದ ವಿ. ಎಸ್. ಪೈ, ಸಿ. ಎದುಲ್, ಕಂಡ್ಲೂರು, ಜಾರಪ್ಪ, ಟಿ. ಸುವರ್ಣ ಮತ್ತು ಕೆ. ಟಿ. ಕರ್ಕೇರ ಮುಂತಾದವರು ಸಂಘದ ಚಟುವಟಿಕೆಗಳನ್ನು ಕೊಂಡಾಡಿ ಮುಂದಿನ ಅಭಿವೃದ್ಧಿಯ ಕುರಿತು ಭಾಷಣಮಾಡಿದರು.

ಮಂಗಳೂರು

ಕ. ಸಾ. ಪರಿಷತ್ತಿನ ಮಂಗಳೂರು ಪ್ರದೇಶ—ಸಮಿತಿಯ ಸಭೆಯು ತಾ 11ರಲ್ಲಿ ಕಾಸರಗೋಡಿನಲ್ಲಿ ಶ್ರೀ ಬಿ. ಎಸ್. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ ನಿಧನಕ್ಕೆ ದುಃಖ ಸೂಚಿಸಿ ಅವರ ನಿಧನದಿಂದ ತೆರವಾದ ಸದಸ್ಯಸ್ಥಾನಕ್ಕೆ ಶ್ರೀ ಕಡೆಕಾರು ರಾಜಗೋಪಾಲ ಕೃಷ್ಣರಾಯರನ್ನು ಆರಿಸಲಾಯಿತು. ದಸರಾ ಸಮಯದಲ್ಲಿ ಜಿಲ್ಲೆಯ ಕೆಲವೆಡೆಗಳಲ್ಲಿ ನಾಡಹಬ್ಬವಾಚರಿಸುವ ವ್ಯವಸ್ಥೆ ಮಾಡಬೇಕೆಂದಾಯಿತು.

ಮಂಗಳೂರು ಕಸ್ತೂರಿಬಾ ವಿದ್ಯಾಲಯಕ್ಕೆ—ಹುಬ್ಬಳ್ಳಿ ಸಮೀಪದ ಅಮರಗೋಳಾಪಳ್ಳಿಯಲ್ಲಿ ತೆರೆಯಲ್ಪಟ್ಟ ಕಸ್ತೂರಿಬಾ ವಿದ್ಯಾಲಯಕ್ಕೆ ನಮ್ಮ ಜಿಲ್ಲೆಯಿಂದ ಕುಮಾರಿ ಸಾವಿತ್ರಿ ಪಡುಬಿದ್ರಿ ಮತ್ತು ಶ್ರೀಮತಿಯರಾದ ಗಿರಿಜಾಬಾಯಿ ಕಾರ್ಕಳ ಮತ್ತು ಕಮಲಾಬಾಯಿ ಕಾರ್ಕಳ ಈ ಮೂವರು [illegible] ಮಕ್ಕಳು ತರಬೇತಿಗಾಗಿ ಹೋಗಿರುವರು. ಇವರ ಪ್ರ[illegible] ವೆಚ್ಚವನ್ನು ಮಂಗಳೂರಿನ ಶ್ರೀ ಯು. ಶ್ರೀನಿವಾಸ ಮಲ್ಯರು ವಹಿಸಿದ್ದಾರೆಂದು ಶ್ರೀ ಕ. ಕರಿಯಣ್ಣ ಸೆಟ್ಟರು ತಿಳಿಸುತ್ತಾರೆ.

ಮೋಟಾರು ಕಾರುಗಳು ಮಾರುವದಿದೆ.

1929ನೆ ಮೊಡೆಲ್ ಫೋರ್ಡ್ ಕಾರು ೧, 1936ನೆ ಮೊಡೆಲ್ ಓಲ್ಡ್ಸ ಮೊಬೈಲ್ ಕಾರು ೧, ಹೀಗೆ ಒಳ್ಳೆ ಚಾಲು ಸ್ಥಿತಿಯಲ್ಲಿರುವ ಎರಡು ಕಾರುಗಳು ಮಾರಾಟಕ್ಕಿವೆ ಖಾಯಿಸ್ ಉಳ್ಳವರು S. K. C/o ನವಯುಗ, ಉಡುಪಿ. ಇವರನ್ನು ಮುಖತ ಭೇಟಿಯಾಗಬಹುದು. ಇಲ್ಲವೆ ಪತ್ರವ್ಯವಹಾರಮಾಡಬಹುದು.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S 170/1948

ವಾದಿರು- ತುಲುವೇಶ್ವರ ಗೋಪಾಲಕೃಷ್ಣದೇವರು

ಪ್ರತಿವಾದಿರು- 1 ಶ್ರೀನಿವಾಸ ಭಟ್ಟ, 2 ಸುಬ್ರಾಯ ಭಟ್ಟ, 3 ಕೇಶವ ಕಲ್ಕೂರ,

ಉಡುಪಿ ತಾಲ್ಲು ಹನೆಹಳ್ಳಿ ಗ್ರಾಮದ ಕರ್ಜೆಯಲ್ಲಿರುವ ಸುಬ್ಬಣ್ಣ ಭಟ್ಟರ ಮಗ 1ನೇ ಪ್ರತಿವಾದಿ ಶ್ರೀನಿವಾಸ ಭಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿರಿಂದ ವಾದಿರಿಗೆ ಬರತಕ್ಕ ತೀರ್ವೆ ಹಣ ಬದಮಾಡಿಕೊಳ್ಳುವರೆ ವಾದಿರು ಪ್ರತಿವಾದಿರಮೇಲೆ ದಾಖಲುಮಾಡಿದ ಮೇಲಿನ ದಾವೆಯು ತಾ. 29-7-1948ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಕ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ಎಂಬುದಾಗಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah

Advocate for Plff.

Date 13-7-48 Coondapoor

WANTED

One manager, for a Limited company, on decent salary. Those who are efficient in correspondance and who can furnish a deposit of Rs. 500/- will be taken. Exeptional cases for the exeiptional ability.

-apply 23 Navayuga.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

ದಕ್ಷಿಣ ಕನ್ನಡ

ಯೇಣಗುಡ್ಡೆ ಗರಡಿ ಬಿಲ್ಲವರ ಸಂಘ, ಮುಂಬಯಿ–ಇದರ ಮಹಾಸಭೆಯು ಇದೇ ತಾ 11 7-1948ನೇ ಆದಿತ್ಯವಾರ ಬೆಳಿಗ್ಗೆ ಶ್ರೀ ಪಿ ಕೆ. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಗತವರುಷದ ಕಾರ್ಯಕಲಾಪಗಳ ಕುರಿತು ಸಂಕ್ಷಿಪ್ತ ವರದಿಯೊಂದನ್ನು ಕಾರ್ಯದರ್ಶಿಯವರು ಓದಿ ಹೇಳಿದ ತರುವಾಯ, ಸದ್ರಿ ವರುಷದ ಆಯವ್ಯಯ ಲೆಕ್ಕಾಚಾರಗಳ ಪಟ್ಟಿಯು ಮಹಾಸಭೆಯ ಅನುಮತಿ ಮೇರೆಗೆ ಮಂಜೂರು ಮಾಡಲ್ಪಟ್ಟಿತು. ಹೊಸ ವರುಷದ ಕಮಿಟಿಗೆ ಹದಿನೈದು ಮೆಂಬರರ ಆಯ್ಕೆಯಾಗಿ, ಬಿಲ್ಲವ ಸಮಾಜದ ಮತ್ತು ಗರಡಿಯ ಕುರಿತಾಗಿ ಶ್ರೀಗಳಾದ| ಪಿ. ಕೆ. ಸುವರ್ಣ; ಕೃಷ್ಣಪ್ಪ, ಯಂ. ಬಂಗೇರ; ಮತ್ತು ದೇಜಪ್ಪ ಬಿ. ಕೋಟ್ಯಾನ್ ಇವರುಗಳ ಸುರಸ ಭಾಷಣಗಳಾದುವು. ಧನ್ಯವಾದಾರ್ಪಣೆಯಾದ ಬಳಿಕ ಸಭೆಯು ಮುಕ್ತಾಯವಾಯಿತು

ಶಿರ್ವಾ––ಶಿರ್ವಾ ಗ್ರಾಮಸ್ಥರ ಸಭೆಯೊಂದು ತಾ 13-7 48ರಲ್ಲೂ ಪಂಚಾಯ್ತ್ ಬೋರ್ಡ್ ಆಫೀಸಿನಲ್ಲಿ ಸೇರಿ ಗ್ರಾಮ ಸಂಘವನ್ನು ಸ್ಥಾಪಿಸಲಾಯಿತು. ಸದ್ರಿ ಸಂಘಕ್ಕೆ ಶ್ರೀ ಯಸ್. ಅಂಣಯ್ಯ ಹೆಗ್ಡೇರು ಪ್ರೆಸಿಡೆಂಟರಾಗಿ ಶ್ರೀಯಸ್ ರಾಮರಾಯರು ಸೆಕ್ರಿಟರಿಯರಾಗಿಯೂ, ಶ್ರೀಶಿವರಾವ್B A B-T. ಇವರು ಕೋಶಾಧಿಕಾರಿಯರಾಗಿ, ಆರಿಸಲ್ಪಟ್ಟರು. ಕಾರ್ಯಕಾರಿ ಸಮಿತಿಗೆ ಡಾಕ್ಟರ್ S. N ಮುಡಿ, ಶ್ರೀ ಕೆ. ಮುದ್ದು ಸೆಟ್ಟಿ, ಶ್ರೀ ಯಂ. ನಾರಾಯಣ ಹೆಗ್ಡೆ, ಶ್ರೀ ಕೆ ಕುಮಾರ ಹೆಗ್ಡೆ, ವಿ. ಅಂತೋನಿ ಮಿನೇಜಸ್, ಮತ್ತು ವಿ. ಯಸ್. ಶೇಖಬ್ಯಾರಿ ಇವರುಗಳು ಆರಿಸಲ್ಪಟ್ಟರು.

ಮೂಡಬಿದ್ರಿ-ಪುತ್ತಿಗೆ–ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನವರು ಸ್ಥಳೀಕ ಶ್ರೀ ಪುತ್ತಿಗೆ ಸೋಮನಾಥ ದೇವಸ್ಥಾನದ ಮೊಕ್ತೇಸರರನ್ನಾಗಿ ನಿಡ್ಡೋಡಿ ಗಾವದ ಶ್ರೀ ಎಸ್ ಸದಾಶಿವ ಶೆಟ್ರವರನ್ನು ನೇಮಿಸಿರುವರೆಂದು ತಿಳಿದುಬರುತ್ತದೆ.

ಶ್ರೀ ಎಂ. ಗಿರಿಯಪ್ಪ ಬಿ. ಇ.:-- ಮೂಲ್ಕಿಯ ಶ್ರೀ ಅಜ್ಜಣ್ಣ ದೇವಾಡಿಗರರ ತೃತೀಯ ಪುತ್ರ ಶ್ರೀ ಎಂ ಗಿರಿಯಪ್ಪ B E. ಅವರು ಈ ವರ್ಷ ಇಂಜಿನೀಯರಿಂಗ್ ಪಾಸಾಗಿ ಈಗಾಗಲೇ ಜೂನಿಯರ್ ಇಂಜಿನೀಯರಾಗಿ ತಿನ್ನವೆಲ್ಲಿಗೆ ನೇಮಿಸಲ್ಪಟ್ಟಿರುತ್ತಾರೆ. ಇವರು ದೇವಾಡಿಗ ಸಮಾಜದಲ್ಲಿ ಪ್ರಾರಂಭದಲ್ಲಿಯೇ ವಿದ್ಯಾಭ್ಯಾಸದಲ್ಲಿ ಪ್ರಗತಿತೋರಿಸಿ ಡಿ|| ಬೋರ್ಡು ಹಾಗೂ ಕಾಲೇಜಿನಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ವೇತನವನ್ನೂ ಹೊಂದಿದ್ದರು. ಅವರ ಸಹೋದರರ ಪರಿಶ್ರಮದಿಂದಾಗಿ ಮದ್ರಾಸಿನಲ್ಲಿ ಇಂಜನಿಯರಿಂಗ್ ಪಾಸಾಗಿ ದೇವಾಡಿಗ ಸಮಾಜದಲ್ಲಿ ಈ ರೀತಿಯ ಸರಕಾರಿ ದೊಡ್ಡ ಉದ್ಯೋಗ ಹೊಂದಿದುದು ಮೊದಲನೇಯದಾಗಿದೆ ಮುಂದಕ್ಕೆ ಸರಕಾರಿ ಕೆಲಸದಲ್ಲಿಯೂ, ಆಸಕ್ತಿ ವಹಿಸಿ, ಪ್ರಗತಿಯೊಂದಿತನ್ನ ಕರ್ತವ್ಯ ನಿಪುಣತೆ ತೋರಿಸಿ, ಕೀರ್ತಿಯೊಂದಿ ಆ ಮೂಲಕ ಹಿಂದುಳಿದ ದೇವಾಡಿಗ ಸಮಾಜದ ಸುಧಾರಣಾ ಕಾರ್ಯದಲ್ಲಿಯೂ ಆಸಕ್ತಿಹೊಂಗಿ ಸೇವೆ ನಡೆಸಲು ದೇವರು ಅನುಗ್ರಹಿಸಲಿ ಎಂದು ಹಾರೈಸುತ್ತೇನೆ. ಎಂದು ಶ್ರೀ ಎಂ ಪಿ. ಎಸ್. ಬರೆಯುತ್ತಾರೆ.

ಬೇಗಾರೆ-(ಮೈಸೂರು ಸ್ಟೇಟ್)-- ತಾ 13-7-48ರಲ್ಲಿ ಡಾಕ್ಟರ್ ಅರೂಗು ವಿಟ್ಠಲ ಸೆಟ್ಟಿ ಇವರ "ತಾರಾನಾಥ ಚಿಕಿತ್ಸಾನಿಲಯ"ದ ಪ್ರಾರಂಭೋತ್ಸವವು ಗುಡ್ಡಳ್ಳ ರಾಮಪ್ಪನವರಿಂದ ನೆರವೇರಿಸಲ್ಪಟ್ಟಿತು.

ಕೊರಡ್ಕಲ್ ಸ್ಮಾರಕ ನಿಧಿಗೆ

ಉದಾರ ಸಹಾಯ ಮಾಡಿರಿ.

ನೋಟಿಸು

ಉಡುಪಿ ತಾಲೂಕು ಬಡಾನಿಡಿಯೂರು ಗ್ರಾಮದಲ್ಲಿರುವ ತೋಟ್ಟಾಮು ಪುರುಷೋತ್ತಮ ಪೈಗಳ ವಿಧವೆ– ಕೃಷ್ಣಿ ಯಾನೆ ಪದ್ಮಾವತಿ ಅಮ್ಮನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ:–

ನನ್ನ ಒಬ್ಬನೇ ಮಗನಾದ ಬಾಲಕೃಷ್ಣ ಪೈಯು, ಇತ್ತಲಾಗೆ ರುಮಾರು ಕಳದ ಆರು ವರುಷಗಳಲಾಗ್ಯಾತು ಬುದ್ಧಿ ಸ್ವಾಸ್ಥತೆಯಿಲ್ಲದೆ, ಲೋಕವ್ಯವಹಾರಗಳನ್ನು ನಡೆಸುವಷ್ಟು ಜ್ಞಾನಶಕ್ತಿಯಿಲ್ಲದೆ, ತನ್ನ ಆರೈಕೆಯನ್ನು ಸರಿಯಾಗಿ ನೋಡುವಷ್ಟು ಚೈತನ್ಯ ಕೂಡ ಯಿಲ್ಲದೆ, ನನ್ನ ಆರೈಕೆ ಯಾನೆ ಗಾರ್ಡಿಯನ್‌ಶಿಪ್ ನಲ್ಲಿರುವ ಕಾರಣ, ಯಾವತ್ತು ರಿಜಿಸ್ಟ್ರೀವ ರಿಜಿಸ್ಟ್ರಿಯಿಲ್ಲದ ದಸ್ತಾವೇಜುಗಳನ್ನಾಗಲೀ, ಲೇವಾದೇವಿಗಳನ್ನಾಗಲೀ, ಯೋಜೆ ದೇಣಿಗಳನ್ನಾಗಲೀ ನನ್ನ ಕೂಡುವಿಕೆಯಿಲ್ಲದೆ, ಆತನ ಕೂಡೆ ಯಾವನೊಬ್ಬನಾದರೂ ಮಾಡಬಾರದಾಗಿಯೂ, ನಡಿಸಬಾರದಾಗಿಯೂ, ಇದಕ್ಕೆ ವಿರೋಧವಾಗಿ ಆತನ ಕೂಡೆ ಮಾಡಬಹುದಾದ ವ ನಡಿಸಬಹುದಾದ ಯಾವತ್ತೂ ದಸ್ತಾವೇಜುಗಳು, ಲೇವಾದೇವಿಗಳು, ನಡಿವಾಟುಗಳು ಆತನ ಮೇಲಾಗಲೀ ನನ್ನ ಗಂಡನ ಪಾಲಿಗೆ ಬಂದ ಯಾವತ್ತೂ ಸ್ಥಿರ ಚರ ಸೊತ್ತುಗಳ ಮೇಲಾಗಲೀ ಸಿದ್ಧಾಗತಕ್ಕದ್ದಲ್ಲವೆಂತಲೂ, ಕುರಿತ್ತಾಗಿ, ರುಪಾಯಿ 100/- ಒಂದು ನೂರು ಬಾಲಗೇಣಿ ಬರತಕ್ಕ ನನ್ನ ಕುಟುಂಬದ ಹಿಸೆ ಮೂಲಿಹಕ್ಕಿನ ಬಾಬ್ತು ತೆಂಕನಿಡಿಯೂರು ಗ್ರಾಮದ ವಂದ್ರೆ ಆಸ್ತಿಯನ್ನು ದುರ್ಬೋಧನೆಯಿಂದ ಸದ್ರಿ ನನ್ನ ಮಗ ಬಾಲಕೃಷ್ಣ ಪೈಗಳಿಂದ, ಈಗ ಕೆಲವುದಿನಗಳಿಂದ ಕ್ರಯಪಡ್ಸಿಕೊಳ್ಳುವ ಯಿರಾಧೆಯಲ್ಲಿ ನ ಒ ಯತ್ನದಲ್ಲಿ ಕೆಲವು ಅಸಾಮಿಗಳು ಯಿದ್ದಾರಾಗಿಯೂ, ನನ್ನ ತಿಳುವಳಿಕೆಗೆ ಬಂದದ್ದರಿಂದ ಆ ಪ್ರಕಾರ ಸದ್ರಿ ಆಸ್ತಿಗಳನ್ನು ಕ್ರಯಕ್ಕೆ ಕೊಳ್ಳಬಾರದಾಗಿಯೂ, ಆ ರೀತಿ ಕ್ರಯ ಮಾಡುವ ಗರ್ಜು ನನಗಿಲ್ಲವಾಗಿಯೂ, ಇದಕ್ಕೆ ವಿರೋಧವಾಗಿ ಕ್ರಯಪಡ್ಸಿಕೊಂಡಲ್ಲಿ ಸದ್ರಿ ಕ್ರಯಚೀಟು ಸದ್ರಿ ಬಾಲಕೃಷ್ಣ ಪೈಗಳ ಮೇಲಾಗಲೀ ನಮ್ಮ ಕುಟುಂಬದ ಮೇಲಾಗಲೀ ಸಿಂಧವಲ್ಲವೆಂತಲೂ, ಈ ಮೂಲಕ ಸರ್ವಜನರಿಗೆ ತಿಳಿಸೋಣಾಗಿದೆ.

ಕೃಷ್ಣಿ ಯಾನೆ ಪದ್ಮಾವತಿ

ಇ ಈ ಎಡಕೈ ಹೆಬ್ಬೆಟ್ಟು ಗುರ್ತು ಸದ್ರಿ ಕೃಷ್ಣಿ ಯಾನೆ ಪದ್ಮಾವತಿ ಅಮ್ಮನದ್ದಾಗಿರುತ್ತದೆ.

ಉಡುಪಿ ತಾ 19-7-48

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

जय हिंद दंतमंजन

ಜಯಹಿಂದ ದಂತಮಂಜನ

कर्नाटक आयुर्वेद विद्यापीठ फार्मसी बेलगांम.

ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ



ಜಗತ್ತಿನಲ್ಲೆಲ್ಲಾ ಸುಮಾರು ನೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆವರ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಆವಶ್ಯಕವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಹೃತ್ಕಂಪನ, ವಾತರೋಗ, ಪಕ್ಷವಾತ, ಗೂರಲು ಕ್ಷಯ. ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ಕರಗಿ ಹೊರಬೀಳುವವು. ಸಂಶಯವಿದ್ದರೆ ನಮ್ಮಲ್ಲಿರುವ ನೂರಾರು ಶಿಫಾರಸುಪತ್ರಗಳು ಬಂದಿರುವವು. ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿವಾರಣವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಮಾತ್ರ ಗುಣವಾಗುವದು. ಹಲ್ಲುನೋವು, ಮುಖ ಊದಿಕೊಂಡ ನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ಸೀಸೆ 1ಕ್ಕೆ ರೂ. 3 8 0 ವಿ. ಪಿ. ಬೇರೆ 1 ಡಜನ್ ಸೀಸೆಗಳಿಗೆ ವಿ. ಪಿ ಖರ್ಚುಸಹಿತ ರೂ. 42-0-0. ಸ್ಪೆಷಲ್ ಬಾಟ್ಲಿ ಸೀಸೆಗೆ ರೂ. 5-0-0 ವಿ. ಪಿ. ಬೇರೆ; ಡಜನ್ ಸೀಸೆಗಳಿಗೆ ರೂ. 60-0 0 ವಿ. ಪಿ. ಬೇರೆ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1 8-0 ಡಜನ್ ಸೀಸೆಗಳಿಗೆ ರೂ. 18. ವಿ. ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ, ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರವೆಂದು ವೈದ್ಯರು ನಿರಾಕರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವನದಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

ವಿಳಾಸ— **ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ**,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I. Rly.

ಭಾರತದ ಉದರಶೂಲೆಗಳು.

[೧ನೇ ಪುಟದಿಂದ]

ಕ ಸಮಾಜಗಳ ರಕ್ಷಣೆಯ ಕುರಿತು ಸ್ಥಳೀಯ ಸರ್ವ ಶಾಖೆಗಳ ಅಧಿಕಾರಿಗಳಿಗೂ ಕಲೆಕ್ಟರರುಗಳಿಗೂ ಸರಕಾರವು ಸ್ಪಷ್ಟ ಸೂಚನೆ ಕೊಟ್ಟಿದೆ ಎಂದು ಮದ್ರಾಸ್ ಎಸೆಂಬ್ಲಿ ಸಭಾನಾಯಕ ಶ್ರೀ ಬಿ. ಗೋಪಾಲ ರೆಡ್ಡಿಗಳೆಂದಾಗ, ಮುಸ್ಲಿಮ್ ಪಕ್ಷ ನಾಯಕ ಮಿ. ಮಹಮ್ಮದ್ ಇಸ್ಮಾಯಿಲ್ ಕೇಳಿದರು:– "ಮುಸ್ಲಿಮರೆಂಬ ಕಾರಣದಿಂದಲೇ ಮುಸ್ಲಿಮರ ಸಾಮೂಹಿಕ ದಸ್ತಗಿರಿ ನಡೆದಿರುವ ಇಂದಿನ ಸ್ಥಿತಿಯು ಈ ಸೂಚನೆಗಳಿಗೆ ಹೊಂದಿಕೆಯಾಗುವದೇ?"

ಶ್ರೀ ಗೋಪಾಲ ರೆಡ್ಡಿ– "ಅವರು ಮುಸ್ಲಿಮರೆಂಬುದಕ್ಕಾಗಿಯಲ್ಲ– ಅವರ ಇತರ ಚಟುವಟಿಕೆಗಳಿಗಾಗಿಯೇ ಅವರನ್ನು ದಸ್ತಗಿರಿಮಾಡಲಾಗಿದೆ."

ಇಸ್ಮಾಯಿಲ್– "ಪ್ರತಿಯೊಬ್ಬ ಗೌರವಾರ್ಹ ಮುಸ್ಲಿಮನೂ ದಸ್ತಗಿರಿಯಾಗಿರುವನೆಂಬುದೂ ನಮ್ಮೀ ಪ್ರಾಂತ್ಯದಲ್ಲೀಗ ಭೀತಿದಾಯಕ ಆಡಳಿತೆ ವ್ಯಾಪಿಸಿನಿಂತಿದೆಯೆಂಬುದೂ ನಿಜವೆ?"

ರೆಡ್ಡಿ–"ಪ್ರಾಂತ್ಯದಲ್ಲೀಗ ಭೀತಿದಾಯಕ ಆಡಳಿತೆಯಿದೆಯೆಂಬ ಮಾತನ್ನು ನಾ ನೊಪ್ಪಲಾರೆ. ಗೌರವಾನ್ವಿತರೋ ಅಗೌರವಾನ್ವಿತರೋ, ಅಂತೂ ಜನರನ್ನು ಅವರವರ ಕೃತ್ಯಗಳಿಗಾಗಿ ದಸ್ತಗಿರಿಮಾಡಲಾಗಿದೆ."

ರಾಘ್ಯೂಖಾನ್–"ಕಳೆದ ಒಂಭತ್ತು ತಿಂಗಳಿಂದ ಸರಕಾರೀ ಕೆಲಸಗಳಿಗೆ ಸೇರದಂತೆ ಇಡೀ ಮುಸ್ಲಿಂ ಜಾತಿಗೇನೇ ಕದ ಮುಚ್ಚಲ್ಪಟ್ಟಿದೆ ಎಂಬುದು ಸಭಾನಾಯಕರಿಗೆ ಗೊತ್ತೆ?"

ಮಾನ್ಯ ರೆಡ್ಡಿಗಳು ಅದನ್ನಲ್ಲಗಳೆದರು. ಆದರೂ ಮುಸ್ಲಿಂ ಮೆಂಬರರ ಅಡ್ಡ ಸವಾಲುಗಳ ಸುರಿಮಳೆಯಾಯಿತು. ಕೊನೆಗೆ ಅಲ್ಪಸಂಖ್ಯಾಕ ಸಮಾಜಗಳ ಹಿತರಕ್ಷಣೆಗಾಗಿ ಪೂರ್ವ ಪಶ್ಚಿಮ ಬಂಗಾಳಗಳಲ್ಲಿ ಇಷ್ಟರಲ್ಲೇ 'ಅಲ್ಪಸಂಖ್ಯಾಕ ಬೋರ್ಡು'ಗಳು ಸ್ಥಾಪನೆಗೊಂಡಿರುವಾಗ ಮದ್ರಾಸ್ ಸರಕಾರವು ಮಾತ್ರ ಕೇಂದ್ರಸರಕಾರದ ನಿರ್ಣಯವನ್ನು ಇನ್ನೂ ಕಾಯುತ್ತಿರುವದೇಕೆ ಎಂಬ ಪ್ರಶ್ನೆ ಬಂದಾಗ "ನಾವು ಪೂರ್ವ ಪಶ್ಚಿಮ ಬಂಗಾಳಗಳ ದೃಶ್ಯಗಳನ್ನೇ ಇಲ್ಲಿಯೂ ನಿರ್ಮಿಸುತ್ತಿಲ್ಲವಾದ್ದರಿಂದ ಅಂತಹ ಬೋರ್ಡು ಇಲ್ಲಿ ಅಗತ್ಯವಿಲ್ಲ" ಎಂದು ಶ್ರೀ ಗೋಪಾಲ ರೆಡ್ಡಿಗಳೆಂದರು.

ಮತ್ತೊಂದು ಸಂದರ್ಭದಲ್ಲಿ ಮುಸ್ಲಿಂ ಸದಸ್ಯರ ಕುಚೋದ್ಯ ನಡೆಯಿತು. ಮದ್ರಾಸ್ ಸರಕಾರದ 'ರಾಜ್ಯ ಚಿಹ್ನೆ'ಯಾಗಿ, ಭಾರತ ರಾಷ್ಟ್ರಚಿಹ್ನೆಯಾದ 'ಅಶೋಕ ಸಿಂಹ'ಗಳ ಜತೆಯಲ್ಲಿ ದಕ್ಷಿಣ ಭಾರತದ ವಿಶಿಷ್ಟ ಸಂಸ್ಕೃತಿ ಚಿಹ್ನೆಯಾಗಿ 'ದೇವಸ್ಥಾನದ ಗೋಪುರ'ವನ್ನು ಇಡುವ ಆಲೋಚನೆ ನಡೆಯುತ್ತಿದೆಯೆಂದು ಸಭಾನಾಯಕ ಶ್ರೀ ಗೋಪಾಲ ರೆಡ್ಡಿಗಳೆಂದಾಗ ಮುಸ್ಲಿಂ ಸದಸ್ಯರ ಪ್ರಶ್ನೆಗಳೀದಪ್ಪ.

ಪ್ಯೊದಿನ್‌ಕುಟ್ಟಿ—"ನಮ್ಮದು ಲೌಕಿಕ ವನ್ನಾಧರಿಸಿರುವ ಪ್ರಾಂತ್ಯವೆಂದು ಹೇಳುತ್ತಿರುವಾಗ, ವಿವಿಧ ಜಾತಿಗಳ ಪ್ರಾತಿನಿಧ್ಯವಿರುವ ಸರಕಾರವು ದೇವಾಲಯ ಗೋಪುರವನ್ನು ತನ್ನ ರಾಜ್ಯ ಚಿಹ್ನೆಯಾಗಿ ಅಂಗೀಕರಿಸುವದು ಸರಿಬೀಳುವುದೇ?"

ಗೋಪಾಲ ರೆಡ್ಡಿ– "ಇಂತಹ ಒಂದು ಚಿಹ್ನೆಯು ಸರಕಾರದ ಲೌಕಿಕಾಚಾರಕ್ಕೇನನ್ನೂ ಮಾಡುವಂತಿಲ್ಲ ಸರ್! ಚಿಹ್ನೆಯನ್ನಾರಿಸುವಾಗ ನಾವು ದಕ್ಷಿಣ ಭಾರತೀಯ ಸಂಸ್ಕೃತಿ ವೈಶಿಷ್ಟ್ಯವಾವುದೆಂಬುದನ್ನೇ ನೋಡಬೇಕಾಗಿದೆ. ಈ ಮಟ್ಟಿಗೆ ದೇವಸ್ಥಾನದ ಗೋಪುರವನ್ನಲ್ಲದೆ ಬೇರಾವುದನ್ನೂ ನಾವು ಯೋಚಿಸಲಾಗುವದಿಲ್ಲ"

ಅನ್ವಾರ್ ಸಾಹೇಬ್–"ಇಡ್ಲಿಯು ಇಲ್ಲಿಯವರ ಸಂಸ್ಕಾರ ವೈಶಿಷ್ಟ್ಯವಾಗಿಲ್ಲವೆ? ಅಂದಮೇಲೆ ಅದನ್ನೇ ಆರಿಸಿಕೊಂಡರಾಗದೆ?" ಈ ಅಪಹಾಸ್ಯಕ್ಕಾಗಿ ಸಭೆಯಲ್ಲಿ ನಗೆಯೆದ್ದಿತು. ಮಂತ್ರಿಗಳು ಉತ್ತರವನ್ನೇ ಕೊಡಲಿಲ್ಲ. ಮುಸ್ಲಿಂ ಸದಸ್ಯರ ಅಭಿರುಚಿ ಮತ್ತು ಆಸಕ್ತಿ ಹೇಗಿದೆ ಎಂಬ ಆಳವನ್ನು ಇಂತಹ ಆಕ್ಷೇಪಗಳಿಂದ ಅರಿಯಬಹುದು!

೦೦ ೦೦

ಅಂತೂ ಭಾರತವೀಗ ತನ್ನೊಳಗಿನ ಹಿತ ಶತ್ರುಗಳಿಗೆ ಹೆದರಬೇಕಾದಷ್ಟು ಹೊರಗಿನ ವೈರಿಗಳಿಗೆ ಭಯ ಪಡಬೇಕಾಗಿಲ್ಲ. ಆದಿಂದು ಕರುಳವೇದನೆಯಿಂದ ಚಡಪಡಿಸುತ್ತಿದೆ - ಕತ್ತೀ ಹೊಡೆತಗಳಿಗೆ ಹೆದರಿಕೊಂಡಿಲ್ಲ. ಜುನಾಗಾಡಿನ ನವಾಬರ ಬದಲಿಗೆ ಅಲ್ಲೀಗ ಸ್ಥಾಪನೆಗೊಂಡಿರುವ ಪ್ರಜಾ ಸರಕಾರದ ಕಾರ್ಯಕಾರೀ ಸದಸ್ಯರನ್ನು ಕೊಲೆ ಮಾಡಿ ಆ ಸರಕಾರವನ್ನೇ ಆಡಿಮೇಲು ಮಾಡುವ ಭೀಕರ ಒಳಸಂಚೊಂದು ನಡೆದಿದ್ದು, ಅದನ್ನೀಗ ಸರಕಾರವು ಕಂಡುಹಿಡಿದು ನಿರ್ಮೂಲಿಸಿದೆಯಲ್ಲದೆ, ಕಾರಣಕರ್ತರ ಮೇಲೆ ಕಠಿಣ ಕಾರ್ಯಾಚರಣೆ ಕೈಕೊಂಡಿದೆ. ಈ ಒಳಸಂಚನ್ನು ಪೋರ್ಚುಗೀಸ್ ಪ್ರಾಂತ್ಯದಲ್ಲಿದ್ದುಕೊಂಡು ಕೆಲವರು ನಡೆಸತೊಡಗಿದ್ದರು. ಆ ವೇಳೆ ಜುನಾಗಾಡಿನ ಸ್ಥಳೀಯ ಬೆಂಬಲ ಸಂಪಾದಿಸಲು ಪ್ರಯತ್ನಿಸಿ ಅದರಲ್ಲಿ ಪರಾಭವಗೊಂಡರು. ಆದರೂ ಬಿಡದೆ ತಮ್ಮ ಗುರಿ ಸಾಧಿಸಿಯೇ ತೀರಬೇಕೆಂದು ಅವರು ಅನ್ಯೋಪಾಯಗಳಿಂದ ಪ್ರಯತ್ನಿಸುತ್ತಿದ್ದಾಗ ಸರಕಾರವೇ ಹಾಲಾಹಲ ಪಾಕದ ವಾಸನೆ ಹಿಡಿದು ನಿರ್ಮೂಲಿಸಿತು. ಎಲ್ಲವನ್ನೂ ಪರಿಶೋಧಿಸುವಾಗ ಇಡೀ ಕಾಥಿಯಾವಾಡಿನಲ್ಲಿ ಈ ಬಂಡಾಯಗಾರರ ಗುಪ್ತಗಾಮೀ ಚಟುವಟಿಕೆಗಳು ನಡೆದಿದ್ದವೆಂದೂ ಧೋರಾಜ್, ಜೆಟ್ಪುರ್, ಭಾವನಗರ್ ಮತ್ತಿತರ ಮುಖ್ಯ ಸ್ಥಳಗಳೇ ಅವರ ಕೇಂದ್ರ ನೆಲೆಗಳಾಗಿವೆಯೆಂದೂ ತಿಳಿದುಬಂದಿದೆ. ಹೈದರಾಬಾದಿನ ರಝಾಕಾರ್ ದಳಕ್ಕೊಂದು ಜಾತಿಯವರನ್ನು ಸೇರಿಸಿಕೊಳ್ಳುವ ಪ್ರಬಲ ಪ್ರಯತ್ನಗಳೂ ಇಲ್ಲೆಲ್ಲಾ ನಡೆಯುತ್ತಾ ಹೋಗಿವೆಯಂತೆ. ಇಂತಹ ಒಳರೋಗಗಳು ಬೇರೆಬೇರೆ ವಿಧಾನಗಳಲ್ಲಿ ಸಣ್ಣ ದೊಡ್ಡ ಪರಿಮಾಣಗಳಲ್ಲಿ ರಾಷ್ಟ್ರದ ಸರ್ವೆಡೆಗಳಲ್ಲೂ ಹರಡಿವೆ ಎಂಬುದನ್ನು ಮರೆಯಬಾರದು. ರಾಜರ ಹುಟ್ಟುಗುಣ ಮತ್ತು ಮುಸ್ಲಿಂ ಲೀಗ್ ನಿರ್ಮಿತ ಭಾವನೆಗಳು ಸವೆದು ಸವೆದು ತಾವಾಗಿ ನಿರ್ಮೂಲಗೊಳ್ಳುವ ವರೆಗೆ ಕಾಯುವ ಅವಕಾಶವಿರುತ್ತಿದ್ದರೆ ಇಂತಹ ಅಪಾಯಗಳನ್ನು ಸಹಿಸಿ ನೋಡಬಹುದಿದ್ದಿತು. ಆದರೆ ಹೈದರಾಬಾದ್ ಮತ್ತು ಪಾಕಿಸ್ತಾನಗಳ ಘರ್ಷಣೆ ಮೈಮೇಲೆ ಬಿದ್ದಿರುವ ಈ ಕಾಲದಲ್ಲಿ ಈ ಮಾದರಿಯ ದ್ರೋಹಾತ್ಮಕ ಚಟುವಟಿಕೆಗಳನ್ನು ಹೊಟ್ಟೆಯೊಳಗೆ ಸೇರಿಕೊಂಡ ವಿಷವೆಂದೇ ಗಣಿಸಿ ಪೂರ್ತಿ ನಿರ್ಮೂಲಿಸಿಕೊಳ್ಳದೆ ನಿರ್ವಾಹವಿಲ್ಲ!

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೯ ರೂಪಾಯಿಗಳಿಂದ ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು– ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ... ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾರೆ ತಂಗ್ಗಿ ಬರದಕ್ಕೆ ರೋಗಕ್ಕೆ ತಕ್ಕಹಾದ ಔಷಧ ರವಾನಿಸಲಪಡುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ಎರಡಾಣೆ

Regd. No. M. 3618

29-7-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮ್ಯಾನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮ್ಯಾನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೪೭

NAVAYUGA WEEKLY, UDIPI.

FOUNDER: **Hon'ble Mr. A. B. SHETTY**, Health Minister, Govt. of Madras.

Vol. 28
No. 47

ಭಾರತ ಸರಕಾರದ ಇದಿರು ಏನೇನಿವೆ?

ಸದ್ಯ ಭಾರತ ಸರಕಾರದ ಪಾಲಿನ ಮುಖ್ಯ ಸಮಸ್ಯೆಗಳಾಗಿರುವ ಕಾಶ್ಮೀರ ಮತ್ತು ಹೈದರಾಬಾದ್ ಕಾರ್ಯಕ್ರಮಗಳಲ್ಲಿ ಈ ಕೆಳಗಿನ ಕೆಲವು ಪ್ರಶ್ನೆಗಳು ಇದಿರಿಗೆ ಬರುತ್ತಿವೆ. ಹಿಂದೀ ಸರಕಾರವು ಆಲಸ್ಯ ಅಥವಾ ಹೇಡಿತನ ವಹಿಸಿದೆ ಎಂಬು ದೂರುವವರೂ, ಹಿಂದೀ ಸರಕಾರವು ಆಕ್ರಮಣ ಕೈಕೊಂಡಿದೆ ಎಂದು ಆರೋಪಿಸುವವರೂ ಈ ಕೆಳಗಿನ ಪ್ರಶ್ನಾತ್ಮಕ ಚಿಹ್ನೆಗಳನ್ನು ಅಳಿಸಿ, ಅವುಗಳ ಸ್ಥಾನದಲ್ಲಿ ಪೂರ್ಣ ವಿರಾಮದ ಗುರುತಗಳನ್ನು ಹಾಕಬಲ್ಲರೆ? ಇದೀಗ ಮೊದಲನೇ ಪ್ರಶ್ನೆ!

ಕಾಶ್ಮೀರದ ಸಮಸ್ಯೆಯಲ್ಲಿ

ಜಾಗತಿಕ ಸಂಘದಿಂದ ನೇಮಿಸಲ್ಪಟ್ಟಿರುವ ಕಾಶ್ಮೀರ ಸಮಿತಿಯು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳ ಅಭಿಮತ ಕೇಳಿಕೊಂಡು ಈಗ ಕಾಶ್ಮೀರದ ಸ್ಥಿತಿಗತಿಗಳನ್ನು ಪ್ರತ್ಯಕ್ಷ ವಿಚಾರಿಸಿ ತಿಳಿಯುವ ಕಾರ್ಯ ಮಾಡುತ್ತಿದೆ. ಈ ಸಮಿತಿಯ ವಿಚಾರಣೆಯಲ್ಲಿ ಭಾರತ ಸರಕಾರವು ನಿಶ್ಶರ್ತವಾಗಿ ಭಾಗವಹಿಸಬಹುದೋ? ಕೂಡದೋ?

ಕೊನೆಯ ಪಕ್ಷ ಪೆಲಸ್ತೈನಿನಲ್ಲಿ ಮಾಡಿದಂತೆ ಒಂದು ಅವಧಿಯವರೆಗಾದರೂ ಕಾಶ್ಮೀರದ ಕಾಳಗವನ್ನು ನಿಲ್ಲಿಸಿ, ಶಾಂತಿ ಸ್ಥಾಪಿಸಿದ ಮೇಲೆಯೇ ರಾಜಿಯತ್ನ ಮಾಡಬೇಕೆಂಬುದು ಎಲ್ಲರಿಗೂ ಹೊಳೆಯುವಂತಹ ನ್ಯಾಯ. ಆದರೆ ಜಾಗತಿಕ ಸಂಘದ ಚರ್ಚೆಗಳಲ್ಲಿ ಭಾಗವಹಿಸಿದ್ದ ಭಾರತ ಮತ್ತು ಪಾಕಿಸ್ತಾನ್ ಸರಕಾರಗಳನ್ನು ಮಾತ್ರ ಯುದ್ಧ ನಿಲ್ಲಿಸುವಂತೆ ಕೇಳಿಕೊಳ್ಳಲು ಕಾಶ್ಮೀರ ಸಮಿತಿಗೆ ಸಾಧ್ಯ. ಹೊರತು ಗಡಿನಾಡಿನ ಧಾಳಿಗಾರ ಪುಂಡರನ್ನು ಕೇಳಿಕೊಳ್ಳಲೆಡೆಯಿದೆಯೆ?

ವಾದಕ್ಕಾಗಿ ಕಾಶ್ಮೀರ ಧಾಳಿಗಾರರಿಗೂ ತನಗೂ ಸಂಬಂಧವಿಲ್ಲವೆನ್ನುತ್ತಿರುವ ಪಾಕಿಸ್ತಾನವು ಪುಂಡರ ದಂಡನ್ನು ಹಿಂದಿರುಗಿಸುವ ಹೊಣೆಯನ್ನು ತಾನು ಹೊರಲು ಸಿದ್ಧವಿರುವದೆ? ಇಲ್ಲವಾದರೆ ಇತ್ತ ಭಾರತದ ಸೇನೆ ಮಾತ್ರ ಹಿಂದೆಗೆದು, ಅತ್ತ ಪಾಕಿಸ್ತಾನದ ಸೇನೆ ಮುಂದೆ ಬಂದುದೇ ಇಲ್ಲವೆಂದು ಗ್ರಹಿಸಿಕೊಂಡು, ಧಾಳಿಗಾರರನ್ನು ಕಾಶ್ಮೀರದಲ್ಲಿ ನಿರಾತಂಕ ಪುಂಡಾಟಿಕೆಗೆ ಬಿಡಲು ಸಾಧ್ಯವೆ?

ಕಾಶ್ಮೀರದ ಆಕ್ರಮಣ ಮುಂಬಾಗಿ ನಿಲ್ಲದೆ ತನ್ನ ಸೇನೆಯನ್ನು ಹಿಂದೆಗೆಯುವಂತಿಲ್ಲವೆಂಬ ಭಾರತ ಸರಕಾರದ ನ್ಯಾಯವಾದ ಛಲ ಮತ್ತು ಆಕ್ರಮಣ ನಿಲ್ಲಿಸುವಂತೆ ಯಾರನ್ನು ಕೇಳಿಕೊಳ್ಳುವದೆಂಬುದೇ ತಿಳಿಯದ ಕತ್ತಲೆಯ ದೆಸೆಯಿಂದ ಕಾಶ್ಮೀರದ ಕಾಳಗವನ್ನು ಹಾಗೇನೇ ಬಿಟ್ಟು ಸಮಿತಿಯವರು ರಾಜೀ ಯತ್ನಕ್ಕೆ ಪ್ರಯತ್ನಿಸಿದರೆ ಅದರ ಪ್ರತಿಯೊಂದು ಯತ್ನವೂ ಗಾಳಿಪಾಲಾಗುತ್ತಾ ಹೋಗುವದು ಖಂಡಿತವಲ್ಲವೆ?

ಆದರೂ ಇಲ್ಲಿಗೆ ಒಂದ ಪಾಠವನ್ನು ಒಂದು ತೀರ್ಮಾನ ಕೊಟ್ಟು ಪರಿಹರಿಸೋಣವೆಂದು ಕಾಶ್ಮೀರ ಸಮಿತಿಯೇನನ್ನಾದರೂ ನಿರ್ಣಯಿಸಲು ಹೊರಟರೆ ಆ ತೀರ್ಮಾನವೆಂತಹದೇ ಆದರೂ ಭಾರತ ಸರಕಾರಕ್ಕೆ ಹಾನಿಕರವಾದೀತೆಂಬುದು ಸಿದ್ಧವಲ್ಲವೆ?

ಕಾಶ್ಮೀರ ವಿಷವೃಕ್ಷದ ನೆಲದಡಿ ಬೇರುಗಳು ಅಗೆಯಲು ಸಿಗದ ಮೂರನೆಯವರ ವಿಚಾರಣಾ ಮಂಡಲಿಯು ಮೇಲ್ಭಾಗದ ರೆಂಬೆಗಳನ್ನಷ್ಟೇ ನೋಡಿ ಕೊಡಲಾಗುವ ತೀರ್ಮಾನವೆಂದರೆ ಕಾಶ್ಮೀರದ ಭವಿಷ್ಯವನ್ನು ಜನಮತ ಸಂಗ್ರಹಿಸಿ ತೀರ್ಮಾನಿಸಬೇಕು'ಎಂದೇ. ಕಾಶ್ಮೀರದಲ್ಲಿ ಎಲ್ಲಕ್ಕೂ ಮುಂದಾಗಿ ಶಾಂತಿ ಮತ್ತು ಭದ್ರತೆ ಸ್ಥಾಪನೆಯಾಗದೆ ಜನ ಮತ ಸಂಗ್ರಹಕ್ಕೊಪ್ಪಲು ಭಾರತ ಸರಕಾರ ಅಥವಾ ಕಾಶ್ಮೀರದ ಶೇಖ್ ಅಬ್ದುಲ್ಲಾ ಸರಕಾರ ತಯಾರಿದೆಯೆ?

ಜನಮತ ಸಂಗ್ರಹಕ್ಕೆ ಬೇಕಾಗುವ ಎಲ್ಲಾ ಅಧಿಕಾರಗಳೂ ತನ್ನ ಕೈಯಲ್ಲೇ ಇರಬೇಕೆಂದು ಕಾಶ್ಮೀರ ಸಮಿತಿಯು ವಾದಿಸುವದೂ ಸಹಜ; ಇಂತಹ ಸಂಗ್ರಹದಲ್ಲಿ ಒತ್ತಾಯ ಒತ್ತಡಗಳಾಗದಂತೆ ಶೇಖ್ ಅಬ್ದುಲ್ಲಾ ಸರಕಾರವನ್ನೇ ಬರ್ಖಾಸ್ತುಗೊಳಿಸಿಕೊಳ್ಳಬೇಕೆಂದು ಪಾಕಿಸ್ತಾನ್ ಸರಕಾರ ಕೇಳುವದೂ ಸಹಜವೇ. ಹಿಂದೀ ಸರಕಾರವು, ಮುಖ್ಯವಾಗಿ ಕಾಶ್ಮೀರದ ರಕ್ಷಣಾ ಹೊಣೆ ನಿರ್ವಹಿಸುತ್ತಿರುವ ಶೇಖ್ ಅಬ್ದುಲ್ಲಾ ಸರಕಾರವು ಮೊದಲನೇ ವಾದದೊಡನೆ ವಿಮರ್ಶಾತ್ಮಕ ಸ್ಪರ್ಧೆಗಿಳಿಯುವುದೂ ಎರಡನೇ ವಾದವನ್ನು ಕಂಠೋಕ್ತವಾಗಿ ವಿರೋಧಿಸುವದೂ ಸಹಜವಲ್ಲವೆ?

ಆಚೆಯಿಂದ ಕಾಶ್ಮೀರ ಯುದ್ಧ-ಒಳಗಡೆ ಪ್ರಜಾ ಸರಕಾರದ ಹತೋಟಿಗಾತಂಕ-ಪಾಕಿಸ್ತಾನಿಗಳ ಅಪಪ್ರಚಾರ, ಇವೆಲ್ಲಾ ಆಸ್ಪದ ಕೊಟ್ಟೀ ಮತಸಂಗ್ರಹಿಸಿದರೆ ಅತ್ಯಧಿಕ ಬಹುಸಂಖ್ಯಾಕ ಮುಸ್ಲಿಮರೇ ಉಳ್ಳ ಕಾಶ್ಮೀರದಲ್ಲಿ ಜನಮತ ತೀರ್ಮಾನವು ನ್ಯಾಯಕ್ಕೂ, ಕಾಶ್ಮೀರದ ಭದ್ರ ಭವಿಷ್ಯಕ್ಕೂ ವಿರುದ್ಧವಾಗಲಾರದೆಂದು ಹೇಳಲು ಸಾಧ್ಯವೆ?

'ಕಾಶ್ಮೀರದ ಆಕ್ರಮಣಗಾರರಿಗೆ ಪಾಕಿಸ್ತಾನವು ಕೊಡುತ್ತಿರುವ ಸಹಾಯಕ್ಕೆ ತಡೆ ಹಾಕಬೇಕು' ಎಂಬೊಂದೇ ವಿಷಯವನ್ನು ಭಾರತವು ಭದ್ರತಾ ಕೌನ್ಸಿಲಿನ ಮುಂದಿಟ್ಟಿದ್ದರೆ, 'ಪಾಕಿಸ್ತಾನ್ ಭಾರತಗಳೊಳಗಿನ ಲೆಕ್ಕಾಚಾರ ಬಾಕಿ' 'ಜುನಾಗಾಡ್ ಮಾನವದಾರ್ ಪ್ರಶ್ನೆ' 'ಜಾತೀಯ ಕಲಹ' ಇತ್ಯಾದಿ ಅಳಿದು ಹೋದ ಪ್ರಶ್ನೆಗಳಿಗೂ ಜೀವದಾನ ಮಾಡಲು ಬಂದ ಕಾಶ್ಮೀರ ಸಮಿತಿಯೊಡನೆ ಹಿಂದೀ ಸರಕಾರವು ಯಾವಾವುದರಲ್ಲಿ ಸಹಕರಿಸಬೇಕು? ಯಾವಾವುದನ್ನು ಬಹಿಷ್ಕರಿಸಬೇಕು?

'ಕಳೆದ ಆಗೋಸ್ತು 15ರೊಳಗೆ ಕಾಶ್ಮೀರವು ಪಾಕಿಸ್ತಾನಕ್ಕೆ ಸೇರುವದಾದರೆ ತಮ್ಮ ಆಕ್ಷೇಪವಿಲ್ಲವೆಂದು ನೆಹರುಗಳು ನನಗೆ ಸ್ಪಷ್ಟ ಭರವಸೆ ಕೊಟ್ಟಿದ್ದರು'ಎಂದು ಲೋರ್ಡ್ ಮೌಂಟ್‌ಬೇಟನರು ಲಂಡನಿಗೆ ಮರಳಿದ ಬೆನ್ನಲ್ಲೇ ಹೇಳಿದ್ದರು; ಪಾಕಿಸ್ತಾನಕ್ಕೊತ್ತಿನಲ್ಲಿದ್ದು, ಸೇಕಡಾ 70ಕ್ಕೂ ಮಿಕ್ಕಿ ಮುಸ್ಲಿಮರಿರುವ ಕಾಶ್ಮೀರವು ನ್ಯಾಯಪ್ರಕಾರ ಪಾಕಿಸ್ತಾನಕ್ಕೇ ಸೇರತಕ್ಕದ್ದೆಂದು ನಂಬಿಕೊಂಡೇ ಕಾಶ್ಮೀರ ಸಮಿತಿ ವರ್ತಿಸಿದರೆ ಮತ್ತು ಜಾಗತಿಕ ಸಂಘದ ಕ್ಷೇತ್ರ ಹಾಗೂ ಅಂತರ್ರಾಷ್ಟ್ರೀಯ ರಂಗದಲ್ಲಿ ಅದೇ ಭಾವನೆಯನ್ನದು ಹರಡಿಬಿಟ್ಟರೆ, ಈಗ ಕಾಶ್ಮೀರ ರಂಗದ ಇದಿರಾಳಿತನವೇ ಸಾಕಷ್ಟು ಭಾರವಾದ ಹೊರೆಯಾಗಿರುವ ಭಾರತ ಸರಕಾರಕ್ಕೆ ಮುಂದೀ ವಿಶಾಲ ಕ್ಷೇತ್ರದ ಸ್ಪರ್ಧೆ ಹೆಚ್ಚಿನ್ನಿಸಲಾರದೆ?

ಎಂದಾದರೂ, ಯಾವ ವಿಧಾನದಿಂದಾದರೂ ಕಾಶ್ಮೀರಗೊಣಸು ಭಾರತದ ಸರಪಣಿಯಿಂದ ಕಳಚಿ ಹೋದರೆ, ಭಾರತೀಯರ ಕರಕಂದಾಯಗಳ ಕೋಟ್ಯಾವಧಿ ಹಣವನ್ನೂ, ಬ್ರಿಗೇಡಿಯರ್ ಉಸ್ಮಾನರಿಂದಾರಂಭಿಸಿ ಸಾಮಾನ್ಯ ಸೋಲ್ಜರರ ವರೆಗಿನ ಸಹಸ್ರಾರು ಜೀವಗಳನ್ನೂ ಹಿಂದೀ ಸರಕಾರವು ಕಾಶ್ಮೀರದಲ್ಲಿ ಬಲಿಕೊಟ್ಟುದನ್ನು ಮರುವಸೂಲಿ ಮಾಡಿಕೊಳ್ಳುವುದು ಹೇಗೆ?

ಹೈದರಾಬಾದ್ ಸಮಸ್ಯೆಯಲ್ಲಿ

ಹೈದರಾಬಾದ್ ಸರಕಾರದ ಅತಿರೇಕ ವರ್ತನೆಗಳು ಅಸಹ್ಯವಾಗಿರುವುದರಿಂದ ಭಾರತ ಸರಕಾರವೀಗಲೇ ಅದರ ಮೇಲೆ ಉಗ್ರ ಪ್ರತೀಕಾರಾಚರಣೆಗೆ ತೊಡಗಬಹುದೋ? ಅಥವಾ ಶಾಸನ ಪ್ರಕಾರ ಬರುವ ನವಂಬರದ ವರೆಗೆ ಅವಧಿಯಿರುವ ಪ್ರಚಲಿತ ಒಪ್ಪಂದವು ಮುಗಿಯುವ ವರೆಗೆ ಕಾಯಬೇಕೋ?

ಹೈದರಾಬಾದಿಗೆ ಹಾಕಿರುವ ಆರ್ಥಿಕ ದಿಗ್ಬಂಧನವು ಅದನ್ನು ಉಸಿರುಕಟ್ಟಿಸಿ

[ಆನೇ ಪುಟ ನೋಡಿರಿ]

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,

THE UNITED KARNATAK INSURANCE COMPANY, LIMITED.

ಕೋಟನನ ಕಳ್ಳಾಂತಲಾಗ ★ ನಿಜಾಮರ ಗಗನಗೋಪುರ ★

ಪ್ರಾಪಂಚಿಕ ವಿದ್ಯಮಾನಗಳಿಗೂ ಇಳಿತ ಭರತಗಳಿವೆ;-ಅಲ್ಲಿ ಒಮ್ಮೆ ಪ್ರಚಂಡ ಬಿರುಗಾಳಿಯ ಅಬ್ಬರ, ಮತ್ತೊಮ್ಮೆ ಶಾಂತ ಸಾಮಾನ್ಯ ಸ್ಥಿತಿ, ಒಮ್ಮೊಮ್ಮೆ ನಿಧಾನೀ ಅವ್ಯಕ್ತ ನೆರೆ-ಏಳುವದಿದೆ. ಲೋಕದ ಮುಖ್ಯ ರಾಜಕೀಯ ಘಟನೆಗಳು ಹಿಂದಿನವೇ ಇದ್ದು ಕಳೆದ ವಾರ ಅವೆಲ್ಲವುಗಳಲ್ಲೂ ಏಕಪ್ರಕಾರ ಅಬ್ಬರರಹಿತ ನೆರೆಯೇರಿರುವಂತಿವೆ. ಈ ಸ್ಥಿತಿಗಾವ ಹೆಸರು-ಶಾಂತವೆಂದೋ ಉದ್ರೇಕವೆಂದೋ-ಹೇಳಲಾಗುವದಿಲ್ಲ!

ಲೋಕ ವಹಿವಾಟುಗಳು

ಬರ್ಲಿನಿನಲ್ಲಿ ಆಂಗ್ಲೋ ಅಮೆರಿಕ ಫ್ರೆಂಚ್ ಮತ್ತು ರಶ್ಯಗಳೊಳಗೆದ್ದಿರುವ ಬಿಕ್ಕಟ್ಟು ತೀರ್ಮಾನ ಹೊಂದಲು ಸಾಧ್ಯವಿದೆ, ಎಂಬ ಆಶಾಕಿರಣವೊಂದು ಬಿದ್ದಿದೆ. ಇದರ ಮೇಲೆ ಪೂರ್ಣ ಭರವಸೆಯಿಡುವದಸಾಧ್ಯವಾದರೂ ಅಲ್ಲಿ ಜಗಳ ಪ್ರಾರಂಭವಾದಮೇಲೆ ಮೂಡಿದ ಪ್ರಥಮ ಆಶಾಜ್ಯೋತಿಯಿದೇ. ಪಾಶ್ಚಾತ್ಯ ರಾಷ್ಟ್ರಗಳ ಪಾಲಿನ ಪಶ್ಚಿಮ ಬರ್ಲಿನ್ ನಗರ ವಲಯದ ಮೇಲೆ ರಶ್ಯ ಮೊನೆ ಹೊಗಿಸಲಾರದಷ್ಟು ಕಟ್ಟುನಿಟ್ಟಿನ ದಿಗ್ಬಂಧನಗಳನ್ನು ಹಾಕಿ, ಆಕಾಶ ಮೂಲಕ ಮಾಡುತ್ತಿರುವ ಸರಬರಾಯಿಗಳ ಕಡೆಗೂ ತೊಡಕುಗಳನ್ನೊಡ್ಡಿ ರಶ್ಯವು ಉದ್ದೇಶಪೂರ್ವಕ ಕೆಣಕಿರುವದು ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಪಾಲಿನ ಪಶ್ಚಿಮ ಜರ್ಮನಿಯಲ್ಲಿ ತಂದಿರುವ ಕರೆನ್ಸಿ ಪ್ರಧಾರಣೆಯ ಮೇಲೆ ಸಿಟ್ಟುಗೊಂಡೇ. ಪಶ್ಚಿಮ ಬರ್ಲಿನಿನ ಈ ಕರೆನ್ಸಿ ಬದಲಾವಣೆಯಿಂದಾಗಿ ತನ್ನ ಪಾಲಿನ ಬರ್ಲಿನಿನ ವ್ಯಾಪಾರ ವಹಿವಾಟುಗಳಿಗೆ ಧಕ್ಕೆ ಬೀಳುವುದರಿಂದ ಅದರ ಭದ್ರತೆಗಾಗಿ ಈ ದಿಗ್ಬಂಧನವನಿವಾರ್ಯವೆಂಬುದು ರಶ್ಯದ ವಾದ. ಈ ಕಾರಣ ಕೊಟ್ಟೇ ರಶ್ಯವು ಪಾಶ್ಚಾತ್ಯ ತ್ರಿರಾಷ್ಟ್ರಗಳು ಕಳುಹಿದ್ದ ನಿಷೇಧ ಸೂಚನೆಗಳನ್ನು ಧಿಕ್ಕರಿಸಿದ್ದಿತು. ಈಗ ಈ ಮೂಲ ಕಾರಣದ ಸಂಬಂಧವಾಗಿ ರಾಜಿಗೆ ಬರುವ ಸಾಧ್ಯತೆ ಕಂಡುಬಂದಿದೆ. ರಶ್ಯವು ಹೊಸತಾಗಿ ಮುದ್ರಿಸುವ ಕರೆನ್ಸಿಯೊಂದನ್ನು ರಶ್ಯಾ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳ ಪಾಲಿನ ಅಖಿಲ ಬರ್ಲಿನಿನಲ್ಲೂ ಚಲಾವಣೆಯುಳ್ಳದ್ದಾಗಿ ಬರ್ಲಿನ್ ವೈಷಮ್ಯವನ್ನು ನಿವಾರಿಸುವ ಬಯಕೆಯನ್ನು ಪಾಶ್ಚಾತ್ಯ ತ್ರಿರಾಷ್ಟ್ರಗಳು ಪ್ರದರ್ಶಿಸಿವೆ. ಎಲ್ಲವನ್ನೂ ಪರಿಶೀಲಿಸುವಾಗ ಬರ್ಲಿನಿನಲ್ಲಿ ಅಮೇರಿಕ, ಇಂಗ್ಲೆಂಡು ಮತ್ತು ಫ್ರಾನ್ಸುಗಳಿಗೆ ರಶ್ಯವು ಸಾಕಷ್ಟು ಬಿಸಿಯಾದ ಬರೆ ಕೊಟ್ಟಿತೆನ್ನಬಹುದು.

ಬರುವ ನವಂಬರಿನಲ್ಲಾಗಲಿರುವ ಅಮೆರಿಕಾಧ್ಯಕ್ಷ ಚುನಾವಣೆಗೆ ಮತ್ತೊಂದು ಪಕ್ಷದ ಮತ್ತೊಬ್ಬ ಉಮೇದ್ವಾರ ಮುಂದೆ ಬಂದಿದ್ದಾರೆ- ಸುಪ್ರಸಿದ್ಧ ಹೆನ್ರಿವೆಲ್ಲಾಸರು. ಹೊಸತಾಗಿ ವೆಲ್ಲಾಸರ ಧುರೀಣತ್ವದಲ್ಲಿ ರಚನೆಗೊಂಡಿರುವ 'ಪ್ರಗತಿಶೀಲ ಪಕ್ಷ'ವು ತನ್ನ ಉಮೇದ್ವಾರಿಯಾಗಿ ಅವರನ್ನಾರಿಸಿದೆ. ಈ ರೀತಿ 'ಡೆಮೊಕ್ರೇಟ್' ಪಕ್ಷದಿಂದ ಟ್ರುಮೇನ್, 'ರಿಪಬ್ಲಿಕನ್' ಪಕ್ಷದಿಂದ ಗವರ್ನರ್‌ಡ್ಯೂವೆ, 'ಪ್ರೊಗ್ರೆಸ್ಸಿವ್' ಪಕ್ಷದಿಂದ ಹೆನ್ರಿವೆಲ್ಲಾಸ್-ಈ ಮೂವರು ಮುಂದಿನ ಅಮೆರಿಕಾಧ್ಯಕ್ಷ ಸ್ಥಾನವನ್ನು ಸ್ಪರ್ಧಿಸಲಿದ್ದಾರೆ.

'ವಾರಕ್ಕೊಮ್ಮೆ ಸರಕಾರ ಬದಲಾವಣೆ' ಎಂಬ ಗಾದೆ ಪ್ರಸಿದ್ಧಿಯು ಫ್ರಾನ್ಸಿನಲ್ಲಿ ಕಳೆದ ವಾರ ಮತ್ತೊಂದು ಪತನವಾಯಿತು. ಶ್ಯುಮಾನರ ಸಮ್ಮಿಶ್ರ ಮಂತ್ರಿಮಂಡಲವು ಉರುಳಿ ಬಿತ್ತು. ಈಗ ತೀವ್ರಗಾಮಿ ಆಂದ್ರೆ ಮೇರೀ ಇವರು ಸರಕಾರ ರಚಿಸಿದ್ದಾರೆ. ಜನತಾರಿಪಬ್ಲಿಕನ್ ಮತ್ತು ಸಮಾಜವಾದಿ ಪಕ್ಷೀಯರು ನವ ಸರಕಾರಕ್ಕೆ ಬೆಂಬಲವಿರಿರುವುದರಿಂದ ಅವರಿಗೆ ಬಹುಮತವಿದೆ. ಆದರೆ ಕಮ್ಯೂನಿಸ್ಟ್ ಪಕ್ಷೀಯರು ಇಷ್ಟರಲ್ಲೇ ಇದನ್ನು ಕಠೋರವಾಗಿ ವಿರೋಧಿಸಹತ್ತಿದ್ದಾರೆ.

ಮಲಯದಲ್ಲಿ ವಿಮಾನ ಪಡೆಗಳ ಧಾಳಿ ಸಮೇತ ಬ್ರಿಟಿಷರು ಉಗ್ರ ದಬ್ಬಾಳಿಕೆ ನಡೆಸುತ್ತಿರುವರಾದರೂ ಕಮ್ಯೂನಿಸ್ಟ್ ಸೂತ್ರಚಾಲನೆಯಲ್ಲಿರುವ ಅಲ್ಲಿಯ ಬಂಡಾಯಗಾರರು ತಮ್ಮ ಧ್ವಂಸ ಕೃತ್ಯಗಳನ್ನು ಸಾಗಿಸುತಿದ್ದಾರೆ.

ಜಾಗತಿಕ ಸಂಘದ 'ಸುಸಮಿತಿ'ಯ ಆಶ್ರಯದಲ್ಲಿ ಇಂಡೋನೇಶಿಯಾ ವಿವಾದದ ಕುರಿತು ಅಲ್ಲಿಯ ರಿಪಬ್ಲಿಕನ್ ಸರಕಾರಕ್ಕೂ ಡಚ್ಚ ಸರಕಾರಕ್ಕೂ ನಡೆದ ರಾಜಕೀಯ ಮಾತುಕತೆಗಳು ಪ್ರಕೃತ ನಿಷ್ಫಲವಾಗಿ ನಿಂತುಹೋಗಿವೆ.

ಚೈನಾದ ಅಂತರ್ಯುದ್ಧ ಯಥಾಸ್ಥಿತಿಯಲ್ಲಿದೆ.

ಕಾಶ್ಮೀರದ ಕಲಹ

ಜಾಗತಿಕ ಸಂಘದ ಕಾಶ್ಮೀರ ಸಮಿತಿಯವರು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳ ಪ್ರತಿನಿಧಿಗಳೊಡನೆ ಪರ್ಯಾಲೋಚನೆ ನಡೆಸಿ, ಈಗ ಕಾಶ್ಮೀರ ವಿದ್ಯಮಾನಗಳನ್ನು ಪ್ರತ್ಯಕ್ಷ ಪರಿಶೀಲಿಸಲು ತೊಡಗಿದ್ದಾರೆ. ನವದಿಲ್ಲಿಯಲ್ಲಿ ಮುಖ್ಯ ಸೇನಾನಿ ಕಾರ್ಯಾಲಯದಲ್ಲಿ ಕಾಶ್ಮೀರ ಧಾಳಿಗಾರರಿಂದ ಕಸಗೊಂಡಿಡಲ್ಪಟ್ಟಿದ್ದ ಆಯುಧಗಳನ್ನೆಲ್ಲಾ ಈ ಸಮಿತಿಯೊಂದು ಉಪಸಮಿತಿಯವರು ಪರಿಶೀಲಿಸಿದ್ದಾರೆ. ಪಾಕಿಸ್ತಾನ್ ಸರಕಾರದಿಂದ ಧಾಳಿಗಾರರಿಗೆ ಸರಬರಾಯಿ ಆಗಿದ್ದ ಆಯುಧ ಮತ್ತಿತರ ಉಪಕರಣಗಳು ಆ ಸಂಗ್ರಹದಲ್ಲಿವೆ. ಈ ಸಮಿತಿಯವರು ಕಳುಹಿದ್ದ ಕಾಶ್ಮೀರದಲ್ಲಿ ಗುಂಡು ಹಾರಾಟ ನಿಲ್ಲಿಸುವ ನಿವೇದನೆಯೊಂದು ಭಾರತ ಸರಕಾರಕ್ಕೆ ತಲುಪಿದೆಯೆಂಬ ವಾರ್ತೆ ಪ್ರಕಟವಾಗಿದ್ದರೂ ಅಂತಹದೇನೂ ಆಗಿಲ್ಲವೆಂದು ಹಿಂದೀ ಸರಕಾರವು ಪ್ರಕಟಿಸಿದೆ. ಸಮಿತಿಯು ತನ್ನ ಮಾತುಕತೆಗಳ ನಡುವೆ ಈ ಸಂಬಂಧದ ಪ್ರಸ್ತಾಪವನ್ನು ಮುಂದಿಟ್ಟದ್ದಿತೆಂದೂ, ಆ ಕುರಿತು ಭಾರತ ಸರಕಾರದ ಸ್ಪಷ್ಟಾಭಿಪ್ರಾಯಗಳನ್ನು ಅದರ ಪ್ರತಿನಿಧಿಗಳು ತಿಳಿಸಿದ್ದರೆಂದೂ ಗೊತ್ತಾಗಿದೆ.

ಕಾಶ್ಮೀರ ರಣರಂಗದಲ್ಲಿ ಕೆಲವೆಡೆ ಸಮಬಲ ಕಠಿಣ ಕಾಳಗ ನಡೆದಿದೆ. ತಿತ್ವಾಲ್, ಚಾಕೋತಿ-ಉರಿ ಮುಂತಾದ ಕ್ಷೇತ್ರಗಳಲ್ಲಿ ಧಾಳಿಗಾರರ ಪ್ರಬಲ ಒತ್ತಡಗಳನ್ನು ಹಿಂದೀ ಸೇನೆಗಳು ಪ್ರತಿಭಟಿಸುತ್ತಿವೆ. ಕಾಶ್ಮೀರದ ಉಪ ಪ್ರಧಾನಿ ಗುಲಾಮ್ ಮಹಮ್ಮದರು ನವದಿಲ್ಲಿಗೆ ಬಂದು ಹೋಗಿದ್ದಾರೆ. ಶೇಕ್ ಅಬ್ದುಲ್ಲಾರು ಅಲ್ಲಲ್ಲಿ ಸಂಚರಿಸುತ್ತಾ 'ಕೊನೆಯ ಹಾಗೂ ಸಂದಿಗ್ಧ ಗಡಿಗೆ ಬಂದಿರುವ ಕಾಶ್ಮೀರದ ಹೋರಾಟದಲ್ಲಿ ಎಲ್ಲರೂ ನೆರವಾಗಬೇಕು' ಎಂದು ಹುರಿದುಂಬಿಸುತ್ತಿದ್ದಾರೆ.

ಹೈದರಾಬಾದ್ ತಂಟೆ

ಹೈದರಾಬಾದು ವಿದ್ಯಮಾನಗಳಲ್ಲಿ ಮಿಂಚು ವೇಗದ ಕೆಲವು ಘಟನೆಗಳು ನಡೆದಿವೆ. ಕೋಟನನ ಕಳ್ಳಾಂತಲಾಗ— ಹಿಂದೂ ಮಂತ್ರಿ ಜೋಶಿಯವರ ರಾಜೀನಾಮೆ-ಮೋಂಕ್ಟನ್ ಕಾರ್ಯದರ್ಶಿಯ ವಹಿವಾಟು-ಭನ್ಸಾಲಿ ಉಪವಾಸ ಮುಕ್ತಾಯ-ಇತ್ಯಾದಿಗಳಾಗಿವೆ. ನಿಜಾಮರ ಸಲಹೆಗಾರ ಸರ್. ವಾಲ್ಟರ್ ಮೋಂಕ್ಟನರ ಕಾರ್ಯದರ್ಶಿ ಬೀಮೋಂಟ್ ಹೈದರಾಬಾದಿಗೆ ಬಂದಿದ್ದು ನಿಜಾಮರೊಡನೆಯೂ ಅವರ ಮಂತ್ರಿಗಳೊಡನೆಯೂ ಗುಪ್ತಮಾತುಕತೆ ನಡೆಸಿದ್ದಲ್ಲದೆ ಭಾರತ ಸರಕಾರದ ಮೇಲೆ ಮುಂಬರುವ ಸಂಯುಕ್ತ ರಾಷ್ಟ್ರಸಂಘದ ಅಧಿವೇಶನದ ಮುಂದೆ ತನ್ನ ದೂರನ್ನು ಕೊಡುವಂತೆ ನಿಜಾಮರು ಈ ಕಾರ್ಯದರ್ಶಿಯ ಮೂಲಕ ಸರ್. ಮೋಂಕ್ಟನರಿಗೆ ನಿರ್ದೇಶಿಸಿರುವರೆಂದು ತಿಳಿದು ಬಂದಿದೆ. ಅಂತೂ ಹೈದರಾಬಾದ್ ಸರಕಾರವು ಕೊನೆಯವರೆಗೂ ದರ್ಪ ಧೋರಣೆಯನ್ನೇ ಅವಲಂಬಿಸುವ ದೃಢ ನಿರ್ಧಾರಮಾಡಿದೆ.

ಕೋಟನನ ಕಳ್ಳ ಹಾರಾಟ.

ಈ ನಡುವೆ ಕಾರ್ಯದ ದೃಷ್ಟಿಯಿಂದ ಅಗಣ್ಯವಾದರೂ ಭಾವನೆಗೆ ಹಾಗೂ ನೀತಿ ನಿಯಮಗಳಿಗೆ ವಿಶೇಷ ಧಕ್ಕೆ ಕೊಡುವಂತಹ ಕುಹಕ ಎದೆಗಾರಿಕೆಯೊಂದನ್ನು ಆಸ್ಟ್ರೇಲಿಯದ ವೈಮಾನಿಕ ಫ್ರೆಡರಿಕ್ ಸಿಡ್ನಿ ಕೋಟನ್ ಎಂಬವನು ಪ್ರದರ್ಶಿಸಿದ್ದಾನೆ. ಭಾರತದ ನಿಶ್ಚಿತ ನಿಲ್ದಾಣಗಳಲ್ಲಿ ಇಳಿಯದೆ ನೇರಾಗಿ ಹೈದರಾಬಾದಿಗೆ ಯಾವ ವಿಮಾನವೂ ಹಾರಕೂಡದೆಂಬ ಭಾರತ ಸರಕಾರದ ನಿಯಮೋಲ್ಲಂಘಿಸಿ ಈತ ತನ್ನ ನಾಲ್ಕು ಇಂಜಿನುಗಳ ಲಂಕೇಸ್ಟರ್ ವಿಮಾನದಲ್ಲಿ ಇದೇ ತಾ 19ರಲ್ಲಿ ಕರಾಚಿಯಿಂದ ಹೈದರಾಬಾದಿಗೆ ಒಂದೇ ದಮ್ಮಿಗೆ ನೆಗೆದು ಆಕಾಶ ಕೆಳವಿನ ಒಂದು ದಾಖಲೆ ನಿರ್ಮಿಸಿದ್ದಾನೆ. ತನ್ನ ವಿಮಾನದಲ್ಲಿ ನಾಲ್ಕು ಟನ್ನು ಔಷಧ ಸಾಮಗ್ರಿಗಳೂ ಜೊಡ್ಡ ಪರಿವಾಣದಲ್ಲಿ ಸೋಡಾ ಹುಡಿಯೂ ಇದ್ದುವೆಂದು ಕೋಟನನ ಹೇಳಿಕೆ. ತನ್ನೀ ಅಂತರ್ಗಕ್ಕೆ 'ದಯಾರ್ದ್ರ ಪಯಣ'ವೆಂದಾಗಲೀ, 'ವಂಚನೆ'ಅಥವಾ'ಕಳ್ಳತನ'ವೆಂದಾಗಲೀ ಹೇಳಲು ಕೋಟನ್‌ತಯಾರಿಲ್ಲ."ಭಾ

ದೂರದೃಷ್ಟಿಯಿದ್ದಲ್ಲಿ ದುಡ್ಡು ತಾನಾಗಿ ಕೂಡುತ್ತದೆ!
ಮುನ್ನೋಟ, ಮಿತವ್ಯಯ, ಇವು ಧನಸಂಚಯ
ಸುಲಭೋಪಾಯ.
ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ
ಇವರು ನಿಮ್ಮ ಆಪದ್ಧನದ ಸಮಸ್ಯೆಯನ್ನು
ಸುಲಭದಲ್ಲಿ ಬಿಡಿಸುತ್ತಾರೆ.
ರೂ. 900/-ರ ಒಳಗಿನ ಮೊತ್ತದಲ್ಲಿಯೆ ತಂತಮ್ಮ ಅನುಕೂಲತೆಗನುಕೂಲವಾಗಿ ವಿಮೆ ಇಳಿಸುವ ಸೌಕರ್ಯ
ವಿರುವುದೇ ಈ ಸಂಘದ ವೈಶಿಷ್ಟ್ಯ.
ಆಕರ್ಷಕ ಶರತ್ತಿನ ಮೇಲೆ ಉತ್ಸಾಹೀ ಕಾರ್ಯಕರ್ತರು
ಬೇಕಾಗಿದ್ದಾರೆ!
ವಿವರಗಳಿಗೆ ಬರೆಯಿರಿ.
The New Karnataka Provident
Insurance Co., Ltd.
P. B No. 22. UDIPI

★ರಝಾಕಾರರ ಅಸಹ್ಯ ಅತ್ಯಾಚಾರ

★ಹಿಂದೂ ಮಂತ್ರಿಯ ರಾಜಿನಾಮೆ

ರತ ಸರಕಾರವು ಹೈದರಾಬಾದಿನ ಮೇಲೆ ಹಾಕಿರುವ ಗಗನದಿಗ್ಬಂಧನವನ್ನು ಭೇದಿಸಿ, ಇನ್ನೆಲ್ಲರೂ ಹಾಗೆ ಮಾಡಬಹುದೆಂಬುದನ್ನು ತೋರಿಸಿ ಕೊಡುವದೇ ನನ್ನೀ ಹಾರಾಟದ ಉದ್ದೇಶ. ಚಿಕಾಗೋ ಅಂತರ್ರಾಷ್ಟ್ರೀಯ ವಿಮಾನ ಕರಾರಿನ ಐದನೇ ಕಲಮು ಪ್ರಕಾರ ಯಾವ ವಿಮಾನವಾದರೂ ಯಾವ ದೇಶದ ಮೇಲಾದರೂ ಇಳಿಯದೆ ಹಾರಬಹುದು!" ಎಂದು ಜಾಹೀರಾಗಿ ಎದೆ ತಟ್ಟಿಕೊಂಡಿದ್ದಾನೆ. ಸಿಡ್ನಿ ಕೋಟನ್ ಹೈದರಾಬಾದಿನಿಂದ ಮರಳಿ ಕರಾಚಿಗೆ ಬಂದು ಅಲ್ಲಿಂದ ಸೀದಾ ಲಂಡನಿಗೋಡಿದ್ದಾನೆ. ಹೈದರಾಬಾದ್ ಸರಕಾರವು ಕೋಟನ್ ಹಾರಾಟಕ್ಕೆ ತಾನು ಜವಾಬ್ದಾರಿಯಲ್ಲವೆಂದಿದೆಯಾದರೂ, ಪಾಕಿಸ್ತಾನ್ ಸರಕಾರವು ಅವನ ಲೈಸೆನ್ಸನ್ನು ರದ್ದು ಮಾಡಿರುವದಾದರೂ 'ಭಾರತ ಸರಕಾರದ ಮುಖಕ್ಕೊಂದು ಮಂಗಳಾರತಿಯಾಯಿತು!' ಎಂದು ಇವೆರಡು ಸರಕಾರಗಳೂ ಒಳಗಿಂದೊಳಗೆ ಹಿಗ್ಗಿರುವವೆನ್ನಬಹುದು. ಈ ಸರಕಾರಗಳ ಆಶ್ರಯದಡಿಯಲ್ಲೇ ಫೋರ್ಜರಿ ನಡೆಯಿತೆಂಬುದೂ ಮರೆಯುವಂತಹದಲ್ಲ. ಭಾರತ ಸರಕಾರವು ಈ ವಿಲಕ್ಷಣ ತಂಟೆ ನಡೆದೊಡನೆಯೇ ವಿಚಾರಣೆಗಾರಂಭಿಸಿತು; ಸ್ವಾರಸ್ಯದ ಸಂಗತಿಗಳು ತಿಳಿದುಬಂದಿವೆ.

ಈ ಕಳ್ಳಾಟಿಕೆಯ ಕಥೆ

ಸಿಡ್ನಿ ಕೋಟನ್ ಓರ್ವ ಆಸ್ಟ್ರೇಲಿಯನ್ ವೈಮಾನಿಕ. ಯುದ್ಧ ಕಾಲದಲ್ಲಿ ಬೇಹುಗಾರ ವಿಮಾನ ದಳವೊಂದರ ಅಧಿಪತಿಯಾಗಿಯೂ ಇದ್ದ. ಕೆಲಕಾಲದಿಂದ ಕರಾಚಿಯಲ್ಲಿ ವಿಮಾನ ಕಂಪೆನಿಯೊಂದರ ಮೆನೇಜಿಂಗ್ ಡೈರೆಕ್ಟರನಾಗಿದ್ದ. ಹಿಂದಿನ ಕೆಲವು ವಾರಗಳಲ್ಲಿ ಹೈದರಾಬಾದಿಗೆ ಕಳ್ಳ ಸರಬರಾಯಿ ಮಾಡುತ್ತಿದ್ದ. ಆರು ವಿಮಾನಗಳು ಇವನ ಕಂಪೆನಿಯವೆಂದು ತಿಳಿದುಬರುತ್ತದೆ. ಅವುಗಳಲ್ಲಿ ಎರಡರ ಮೇಲೆ ಕೆನಡಾದ ಚಿಹ್ನೆಗಳು ಹಚ್ಚಲ್ಪಟ್ಟಿದ್ದುದರಿಂದ ಭಾರತ ಸರಕಾರವು ಕೆನಡಾ ಸರಕಾರಕ್ಕೆ ನಿಷೇಧ ಸೂಚನೆ ಕಳುಹಿಸಿದ್ದಿತು. ತಾನು ಆ ವಿಮಾನಗಳನ್ನು ಜುಲಾಯಿ ೨ರಲ್ಲಿ ಆ ಖಾಸಗೀ ಕಂಪೆನಿಗೆ ಮಾರಿರುವುದರಿಂದ ತನ್ನ ಗುರುತವನ್ನು ತಾಗಿಸಿಕೊಳ್ಳುವ ಹಕ್ಕು ಅವುಗಳಿಗಿಲ್ಲವೆಂದು ಕೆನಡಾ ಸರಕಾರವು ಉತ್ತರಿಸಿದ್ದಿತು. ಆಸ್ಟ್ರೇಲಿಯನ್ ವೈಮಾನಿಕರ ಈ ಕಳ್ಳಾಟಿಕೆಗಾಗಿ ಆಸ್ಟ್ರೇಲಿಯ ಸರಕಾರಕ್ಕೆ ಪ್ರಶ್ನೆ ಹಾಕಿದಾಗ ಆತನು ಸುಮಾರು 30 ವರುಷಗಳ ಮೊದಲೇ ಆಸ್ಟ್ರೇಲಿಯವನ್ನು ಬಿಟ್ಟವನಾಗಿರಬೇಕೆಂದೂ, ಅವನ ಸರಿಯಾದ ಪರಿಚಯ ದಾಖಲೆಯಿದ್ದಲ್ಲಿ ತಿಳಿಸಿದರೆ, ತಾನು ಅಗತ್ಯವುಳ್ಳ ಕಾರ್ಯಕೈಕೊಳ್ಳುವೆನೆಂದೂ ಆಸ್ಟ್ರೇಲಿಯಾ ಸರಕಾರವು ಭಾರತ ಸರಕಾರಕ್ಕೆ ತಿಳಿಸಿದೆ. ಕೇವಲ ವ್ಯಾಪಾರೀ ದೃಷ್ಟಿಯು ಸಿಡ್ನಿ ಕೋಟನ್ ಕರಾಚಿಯಿಂದ ಹೈದರಾಬಾದಿಗೆ ನಡೆಸುತ್ತಿದ್ದ ಕಳ್ಳ ಸರಬರಾಯಿಗೆ ಭಾರತ ಸರಕಾರದ ಆಕಾಶ ಬಂದೋಬಸ್ತು ತಡೆಯಾದೊಡನೆಯೇ ಆತ ವೈದ್ಯಕೀ ಸಾಮಗ್ರಿಗಳನ್ನೊಯ್ಯಲು ತನಗೆ ಅನುಮತಿ ಕೊಡಬೇಕೆಂದು ಕರಾಚಿಯಲ್ಲಿರುವ ಹಿಂದೀ ಸರಕಾರದ ಹೈಕಮಿಶನರ್ ಶ್ರೀ. ಶ್ರೀಪ್ರಕಾಶರ ಮೂಲಕ ಕೇಳಿಕೊಂಡ. ಪದ್ಧತಿಯಂತೆ ಬೊಂಬಾಯಿಯ ಸುಂಕದ ಕಟ್ಟೆ ಹತ್ತಿಳಿದು ಹೈದರಾಬಾದಿಗೆ ಹಾರಲಡ್ಡಿಯಿಲ್ಲವೆಂದು ಹಿಂದೀ ಸರಕಾರ ತಿಳಿಸಿತು. ಇದನ್ನು ಕೇಳಿಕೊಂಡು ಕೋಟನ್ ಪುನಃ ಶ್ರೀ ಶ್ರೀಪ್ರಕಾಶರಲ್ಲಿಗೆ ಬಂದು ತಾನು ಬೊಂಬಾಯಿಯಲ್ಲಿಳಿಯಲು ತಯಾರಿದ್ದೇನೆಂದೂ, ಆದರೆ ಹೈದರಾಬಾದಿಗಿದುವರೆಗೆ ಕಳ್ಳ ಹಾರಾಟ ನಡೆಸಿದವನೆಂಬ ವೃಥಾನುಮಾನ ತನ್ನ ಮೇಲಿರುವುದರಿಂದ ಬೊಂಬಾಯಿಯಲ್ಲಿ ತನ್ನನ್ನು ದಸ್ತಗಿರಿ ಮಾಡುವ ಅಪಾಯವಿದೆಯೆಂದೂ, ಆ ಕುರಿತು ತನಗೆ ಅಭಯದೊರಕಬೇಕೆಂದೂ ಕೇಳಿಕೊಂಡ. ಅವನೀ ಹೆದರಿಕೆಯನ್ನು ಶ್ರೀ ಶ್ರೀಪ್ರಕಾಶರು ಭಾರತ ಸರಕಾರಕ್ಕೆ ಟೆಲಿಫೋನ್ ಮಾಡಿದಾಗ, ಕೋಟನ್‌ನ ಸಂದೇಹವು ನಿರಾಧಾರವಾದುದು– ಕ್ರಮ ಪ್ರಕಾರ ವರ್ತಿಸುವದಾದರೆ ಅವನಾವುದಕ್ಕೂ ಹೆದರಬೇಕಾಗಿಲ್ಲವೆಂದು ಉತ್ತರ ಬಂತು. ಈ ಉತ್ತರವನ್ನು ಸಿಡ್ನಿ ಕೋಟನನಿಗೆ ಶ್ರೀ ಪ್ರಕಾಶರು ಮುಟ್ಟಿಸುವ ಮೊದಲೇ ತಾ. ೧೮ನೇ ಮಧ್ಯರಾತ್ರಿ ಆತ ನೇರಾಗಿ ಹೈದರಾಬಾದಿಗೆ ನೆಗೆದಿದ್ದ. ಭಾರತ ಸರಕಾರವು ತನ್ನ ಆಕಾಶ ದಿಗ್ಬಂಧನ ಸೂತ್ರಗಳನ್ನು ಪಾಕಿಸ್ತಾನ್ ಸರಕಾರಕ್ಕೆ ಮುಂದಾಗಿ ತಿಳಿಸಿದ್ದಿತು. ತಾನು ಭಾರತದ ವಿಮಾನ ಸುಂಕಕಟ್ಟೆಗಳಾದ ಡಿಲ್ಲಿ, ಕಲ್ಕತ್ತಾ ಮತ್ತು ಬೊಂಬಾಯಿಗಳಲ್ಲಿ ಪರಿಶೋಧನೆಗಿಳಿಯುವಂತೆಯೇ ಎಲ್ಲಾ ವಿದೇಶೀ ವಿಮಾನಗಳಿಗೂ ಸರ್ಟಿಫಿಕೇಟು ಕೊಡುವೆನೆಂದೂ, ಈ ಸರ್ಟಿಫಿಕೇಟು ವಿನಹ ಯಾವ ವಿಮಾನವೂ ಕರಾಚಿ ನಿಲ್ದಾಣ ಬಿಡಬಾರದೆಂದೂ ಪಾಕಿಸ್ತಾನ್ ಸರಕಾರವು ಭಾರತ ಸರಕಾರಕ್ಕೆ ಮಾತು ಕೊಟ್ಟಿದ್ದಿತು. ಇದನ್ನರಿತ ಸಿಡ್ನಿ ಕೋಟನನು, ಪಾಕಿಸ್ತಾನ್ ಸರಕಾರವು ತನ್ನ ಪ್ರಯಾಣವನ್ನು ತಡೆಗಟ್ಟದಂತೆ 'ಇಂಜೆಕ್ಷನ್' ಕೊಡಬೇಕೆಂದು ಸಿಂಧಿನ ಚೀಫ್ ಕೋರ್ಟಿನಲ್ಲಿ ಪಾಕಿಸ್ತಾನ್ ಸರಕಾರದ ಮೇಲೆ ವ್ಯಾಜ್ಯ ದಾಖಲ್ಮಾಡಿದ್ದ; ಆ ಕೋರ್ಟು ಇಂಜಕ್ಷನ್ ಯಾಕೆ ಕೊಡಕೂಡದೆಂದು ಪಾಕಿಸ್ತಾನ್ ಸರಕಾರಕ್ಕೆ ನೋಟೀಸು ಕೊಟ್ಟಿದ್ದಿತು. "ನಮಗೀ ಸುದ್ದಿಯನ್ನು ಕೋಟನ್ ಮುಂದಾಗಿ ತಿಳಿಸಿದ್ದೂ ಇಲ್ಲ; ನಾವೀ ಹಾರಾಟಕ್ಕೆ ಹೊಣೆಗಾರರೂ ಅಲ್ಲ; ಆದರೆ ಕೋಟನ್ ವಿಮಾನದಲ್ಲಿ ಹಾಕಿ ತಂದ ಔಷಧ ಸಾಮಗ್ರಿಗಳಿಗೆ ನಮ್ಮ ಸುಸ್ವಾಗತವಿದೆ" ಎಂದು ನಿಜಾಮ್ ಸರಕಾರದ ಪ್ರತಿನಿಧಿಯೆಂದಿದ್ದಾನೆ. ಪ್ರಧಾನಿ ಮಿ. ಲಾಯಕ್‌ಅಲಿ ಕೋಟನನನ್ನು ಸ್ವಾಗತಿಸಿ ಆತನು ತಂದ ಸಾಮಾಗ್ರಿಗಳನ್ನು ಕೂಡಲೇ ಸಾಗಿಸುವ ವ್ಯವಸ್ಥೆ ಮಾಡಿದ್ದರು. ಕೋಟನನು ಕರಾಚಿಯಿಂದ ಹೇಗೆ ಹಾರಿದನೆಂಬುದನ್ನು ವಿಚಾರಿಸಬೇಕೆಂದು ಭಾರತ ಸರಕಾರದ ಪರವಾಗಿ ಹೈಕಮಿಶನರ್ ಶ್ರೀಪ್ರಕಾಶರು ಪಾಕಿಸ್ತಾನ್ ಸರಕಾರವನ್ನು ಕೇಳಿಕೊಂಡಿದ್ದಾರೆ. ತದನುಗುಣವಾಗಿ ಪಾಕಿಸ್ತಾನ್ ಸರಕಾರವು ಸಿಡ್ನೀ ಕೋಟನನಿಂದ ಉದಾಹರಣೆ ಕೇಳಿದುದಕ್ಕೆ ತಾನು ಸಿಂಧ್ ಕೋರ್ಟಿನಲ್ಲಿ ಪಾಕಿಸ್ತಾನ್ ಸರಕಾರದ ಮೇಲೆ ದಾಖಲ್ಮಾಡಿರುವ ದಾವೆಯನ್ನು ನಮೂದಿಸಿ ಚಿಕಾಗೋ ಸೂತ್ರಗಳ ಪ್ರಕಾರ ಕರಾಚಿಯಿಂದ ನೇರಾಗಿ ಹೈದರಾಬಾದಿಗೆ ಹಾರುವ ಅಧಿಕಾರ ತನಗಿದೆ ಎಂದು ಕೋಟನ್ ಉತ್ತರಿಸಿದ್ದಾನೆ. ಪಾಕಿಸ್ತಾನ್ ನಿಲ್ದಾಣಗಳಿಂದ ಭಾರತ ಮತ್ತು ಮಧ್ಯ ಪೂರ್ವದಲ್ಲಿ ಹಾರಾಡಬಹುದೆಂದು ಕಳೆದ ಜೂನಿನಲ್ಲಿ ಮೂರು ತಿಂಗಳ ಮಟ್ಟಿಗೆ ಕೋಟನನಿಗೆ ಕೊಟ್ಟಿದ್ದ ಅನುಮತಿ ಪತ್ರವನ್ನು ಪಾಕಿಸ್ತಾನ್ ಸರಕಾರವೀಗ ರದ್ದುಗೊಳಿಸಿದೆ. ಬ್ರಿಟಿಷ್ ಸರಕಾರದ ಅಭಿಮತವು ಹಿಂದೀ ಸರಕಾರದ ವರ್ತನೆಗೆ ಅನುಕೂಲವಿದೆಯಲ್ಲದೆ, ಸಿಡ್ನಿ ಕೋಟನನಿಗೆ ತಾನು ಕೊಟ್ಟಿರುವ ಪರ್ಮಿಟನ್ನು ರದ್ದುಗೊಳಿಸಲು ಅದು ಸಿದ್ಧವಿದೆ.

ಹೈದರಾಬಾದಿನ ದುರ್ವ್ಯಾಜ್ಯ

ಸಿಡ್ನಿಕೋಟನನ ಕಳ್ಳ ಹಾರಾಟವು ಭಾರತ ಸರಕಾರಕ್ಕಾವ ಆಶ್ಚರ್ಯವನ್ನೂ ಉಂಟುಮಾಡಿಲ್ಲ. ಕೇವಲ ಔಷಧ ಸಾಮಗ್ರಿಗಳನ್ನು ಹೇರಿಕೊಂಡಿದ್ದರೆ ಕೋಟನ್ ಬೊಂಬಾಯಿ ನಿಲ್ದಾಣದಲ್ಲಿಳಿಯುತಿದ್ದ. ಆದರಲ್ಲಿ ಯುದ್ಧೋಪಕರಣಗಳೇ ಇದ್ದಿರಬೇಕು. ಹೈದರಾಬಾದು ದೀರ್ಘ ಕಾಲದಿಂದ ಶಸ್ತ್ರಾಸ್ತ್ರಗಳ ಕಳ್ಳಾಮದು ಮಾಡಿಕೊಳ್ಳುತ್ತಿದೆ ಎಂಬುದು ಹಿಂದೀ ಸರಕಾರಕ್ಕೆ ಸರಿಯಾಗಿ ಗೊತ್ತಿದೆ. ಭಾರತದೊರ್ವ ಮಂತ್ರಿಯು ಇತ್ತೀಚೆಗೆ ಅಮೇರಿಕದಲ್ಲಿದ್ದಾಗ ಕೆಲವು ಖಾಸಗೀ ಮಹನೀಯರು ಬೇಕಾದಷ್ಟು ಶಸ್ತ್ರಾಸ್ತ್ರಗಳನ್ನು ಭಾರತದ ಯಾವುದೇ ಬಂದರಕ್ಕೆ ತಾವು ಕಳುಹಿಕೊಡುತ್ತೇವೆಂದು ಮುಂದೆ ಬಂದಿದ್ದರು.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬.

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಘೋಷಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಳೆಯ ಕ್ಷೇತ್ರಗಳಲ್ಲಿ–ತಮಿಳುನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ–ಮಲಬಾರು ಜಿಲ್ಲೆಯ ತೆಂಗುಗಳ, ವೃಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮ ವಿಶಿಷ್ಟ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

ಎರಡು ಅಪೂರ್ವ ಪುಸ್ತಕಗಳು

ಕನ್ನಡದ ಪತ್ರಿಕೆಗಳೆಲ್ಲಾ ಮುಕ್ತ ಕಂಠದಿಂದ ಹೊಗಳಿದ ಲೋಕಪ್ರಿಯ ಪ್ರಾತಿನಿಧಿಕ ಕಥಾಸಂಗ್ರಹ

ಹೂದೋಟ ಭಾಗ ೧

ಪುಟ ೨೫೦ ಬೆಲೆ: ೩ ೮ ೦ ಅಂ. ವೆ: ೦ ೭ ೦

ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ರಸಭರಿತ ಸುಂದರ – ಸ್ವತಂತ್ರ ಸಾಮಾಜಿಕ ಕಾದಂಬರಿ.

ಲೋಕದ ಕಣ್ಣು

ಪುಟ ೧೮೦ ಬೆಲೆ: ೨ ೬ ೦ ಅಂ. ವೆ. ೦ ೬ ೦

ನಮ್ಮ ಮುಂದಿನ ಪ್ರಕಟಣೆಗಳು

೧. ನಾನೇಕೆ ಹೀಗೆ (ಶ್ರೀ ಬನ್ನಂಜೆಯವರ ಲಘು ಕಾದಂಬರಿ) ೨. ಬಾಳ್ಬೋಟಿಗಳು (ಶ್ರೀ ಬನ್ನಂಜೆಯವರ ಕಥಾಸಂಗ್ರಹ) ೩. ಹೂದೋಟ (ಭಾಗ ೨) ೪. ೧೯೪೮ (ಕಥಾಸಂಗ್ರಹ) ೫. ಹೂಬುಟ್ಟಿ (ಏಕಾಂಕ ಸಂಗ್ರಹ)

ವಿವರಗಳಿಗೆ ಬರೆಯಿರಿ:

ಟಿ. ಶ್ರೀಪತಿ
'ಕೃಷ್ಣ ನಿವಾಸ' ಕದ್ರಿ ಟೆಂಪಲ್ ರೋಡು,
ಬಿಜಯಿ, ಮಂಗಳೂರು.

ಜೋಶಿಯವರ ಹೃದ್ರಾವಕ ಪತ್ರ!

ಆದರೆ ಬೆಲೆ ಮಾತ್ರ ವಿಪರೀತ; ಭಾರತ ಸರಕಾರವದನ್ನು ನಿರಾಕರಿಸಿದ್ದಿತು. ಹೈದರಾಬಾದ್ ಇಂತಹ ಕಳ್ಳ ವ್ಯಾಪಾರಗಳನ್ನು ಅತಿರೇಕ ಹಣತೆತ್ತು ನಡೆಸುತ್ತಾ ಬಂದಿದೆ.

ಇತ್ತೀಚೆಗೆ ಕೆನಡಾದೊಂದು ಕಂಪೆನಿಯೊಂದಿಗೆ ನಿಜಾಮ್ ಸರಕಾರವು ಶಸ್ತ್ರಾಸ್ತ್ರ ಸರಬರಾಯಿ ಒಪ್ಪಂದ ಮಾಡಿಕೊಂಡಿದ್ದಾಗ ಕೆನಡಾ ಸರಕಾರವು "ಇದು ಕ್ರಮಬದ್ಧವೇ ?" ಎಂದು ಹಿಂದೀ ಸರಕಾರವನ್ನು ವಿಚಾರಿಸಿದ್ದಿತು. ಹಿಂದೀ ಸರಕಾರವು ಕೂಡದೆಂದುದರಿಂದ ಆ ವ್ಯಾಪಾರ ನಿಂತುಹೋಗಿತ್ತು.

ಹೈದರಾಬಾದು ಭಾರತದ ಗಗನ ಶಾಸನೋಲ್ಲಂಘನ ಮಾಡಿಸಿ ಕಳ್ಳ ಸೊತ್ತನ್ನು ಪಡಕೊಳ್ಳುತ್ತಿರುವುದಷ್ಟೇ ಅಲ್ಲ; ತನ್ನ ಗಗನದಲ್ಲಿ ಅಸ್ಪರ್ಶತಾ ಧರ್ಮವನ್ನು ಜಾರಿಗೆ ತರುವದಕ್ಕೂ ಮುಂದಾಗಿದೆ. ನಿಜಾಮ್ ಸರಕಾರಕ್ಕೆ ಮುಂದಾಗಿ ತಿಳಿಸಿಕೊಳ್ಳದೆ ಹಿಂದೀ ವಿಮಾನಗಳು ಹೈದರಾಬಾದ್ ಆಕಾಶದಲ್ಲಿ ಹಾರುವುದು ತಪ್ಪೆಂದೂ ತತ್ಪರಿಣಾಮವಾಗಿ ಉಂಟಾಗಬಹುದಾದ ಅನರ್ಥಗಳಿಗೆ ತಾನು ಹೊಣೆಯಲ್ಲವೆಂದೂ ಹೈದರಾಬಾದ್ ಸರಕಾರವು ಹಿಂದೊಮ್ಮೆ ಪ್ರಕಟಿಸಿದ್ದಿತು; ಇದಕ್ಕುತ್ತರವಾಗಿ, ಮುಂದಾಗಿ ನಿಜಾಮ್ ಸರಕಾರಕ್ಕೆ ತಿಳಿಸುವ ಅಗತ್ಯವೇ ಇಲ್ಲವೆಂದೂ ಅಗತ್ಯ ತೋರಿದಾಗ ತನ್ನ ವಿಮಾನಗಳನ್ನು ಹೈದರಾಬಾದಾಕಾಶದಲ್ಲಿ ಹಾರಾಡಿಸುವ ಅಧಿಕಾರ ತನಗಿದೆಯೆಂದೂ ಭಾರತ ಸರಕಾರವೆಂದಿದೆ; ಮಾತ್ರವಲ್ಲ, ಹೈದರಾಬಾದಿನ ಮುಖ್ಯ ವಿಮಾನ ನಿಲ್ದಾಣವು ಭಾರತ ಸರಕಾರದ ಹಕ್ಕಿನದಾಗಿದ್ದು ಈ ವರೆಗೆ ನಿಜಾಮ್ ಸರಕಾರಕ್ಕೊಪ್ಪಿಸಲ್ಪಟ್ಟಿಲ್ಲವೆಂಬುದನ್ನೂ ನೆನಪು ಮಾಡಿಕೊಟ್ಟಿದೆ. ಭಾರತ ಸರಕಾರದ ಈ ಅಭಿಮತವನ್ನು ನಿಜಾಮ್ ಸರಕಾರವು ಹಠ ಹಿಡಿದು ಪ್ರತಿಭಟಿಸಿದೆ. "ನಿಜಾಮ್ ಸಂಸ್ಥಾನದ ಆಕಾಶಾಧಿಕಾರವು ಸಂಪೂರ್ಣವಾಗಿ ನಿಜಾಮರದೇ. ಈ ಹಕ್ಕು ಪ್ರಶ್ನಾತೀತವಾದುದು. ಭಾರತ ಸರಕಾರಕ್ಕೆ ತನ್ನ ಗಗನದ ಕುರಿತು ಯಾವ ಕಾರ್ಯಕ್ರಮ ಕೈಕೊಳ್ಳುವ ಹಕ್ಕಿದೆಯೋ ಅದೇ ಹಕ್ಕು ತನ್ನ ಆಕಾಶ ಸಂಬಂಧವಾಗಿ ನಿಜಾಮರಿಗೂ ಇದೆ. ಭಾರತ ಸರಕಾರವು ತನ್ನ ಹಕ್ಕಿನದೆಂದು ವಾದಿಸಿರುವ ಹೈದರಾಬಾದಿನ ಮುಖ್ಯ ವಿಮಾನ ನಿಲ್ದಾಣವನ್ನು, ಯುದ್ಧ ಮುಗಿದ ಆರು ತಿಂಗಳುಗಳಲ್ಲಿ ನಿಜಾಮರಿಗೊಪ್ಪಿಸುವ ಶರ್ತದಿಂದ ಬ್ರಿಟಿಷ್ ಸರಕಾರವು ಕಟ್ಟಿಸಿದ್ದು, 1947ನೇ ಆಗೋಸ್ತು 15ಕ್ಕೆ ಮೊದಲೇ ಈ ನಿಲ್ದಾಣದ ಸಂಚಾರ ನಿಯಂತ್ರಣಾಧಿಕಾರವು ರೋಯಲ್ ವಿಮಾನ ಪಡೆಯವರಿಂದ ನಿಜಾಮ್ ಸರಕಾರದ ಕೈಗೆ ಬಂದಿದ್ದಿತು. 1947ನೇ ಆಗೋಸ್ತು 15ರ ವರೆಗೆ ಭಾರತ ಸರಕಾರವು ಈ ಬೇಗಮ್‌ಪೇಟ್ ವಿಮಾನ ನಿಲ್ದಾಣವನ್ನು ಉಪಯೋಗಿಸಬಹುದೆಂದು ಹೈದರಾಬಾದ್ ಸರಕಾರವು ಹಿಂದೀ ಸರಕಾರದೊಡನೊಂದು ಪ್ರತ್ಯೇಕ ಒಪ್ಪಂದ ಮಾಡಿಕೊಂಡಿದ್ದಿತು. ಆ ತಾರೀಕಿನ ನಂತರ ಈ ವಿಮಾನ ನಿಲ್ದಾಣವು ತನ್ನಂತೆ ನಿಜಾಮ್ ಸರಕಾರದ ಹಕ್ಕಿನದಾಗುತ್ತದೆ. ಮೇಲಾಗಿ ಈ ಕ್ಷೇತ್ರದ ಸಿವಿಲ್ ಹಾಗೂ ಕ್ರಿಮಿನಲ್ ಅಧಿಕಾರವು ಸದಾ ಕಾಲದಲ್ಲೂ ಮತ್ತೀಗಲೂ ನಿಜಾಮ್ ಸರಕಾರದ್ದೇ ಆಗಿದೆ." ಎಂದು ಹೈದರಾಬಾದ್ ಸರಕಾರದ ಪ್ರಕಟಣೆಯಿದೆ. 'ಕೃತಕಾವೇಶದ ಆಟ' ಎಂದು ಭಾರತ ಸರಕಾರವು ನಿಜಾಮರ ಈ ವಾದವನ್ನು ಹೀಗಳೆದಿದೆ.

ಶ್ರೀ. ಜೋಶಿಗಳ ರಾಜೀನಾಮೆ

ನಿಜಾಮ್ ಸರಕಾರವು ಭಾರತದ ಸಂಬಂಧವಾಗಿ ಎಂತಹ ಹೇಯ ಮುಷ್ಕರಕ್ಕಿಳಿದಿದೆ ಎಂಬುದಕ್ಕೆ ಮೇಲಿನಂತಹ ಗಗನ ಗೋಪುರಗಳ ಕತೆಗಳಿರುವಂತೆಯೇ ಒಳಗಡೆಯಲ್ಲಿ ರಝಾಕಾರರಿಂದ ಎಂತಹ ಅತ್ಯಾಚಾರಗಳನ್ನು ಮಾಡಿಸುತ್ತಿದೆ ಎಂಬುದಕ್ಕೆ ಅಲ್ಲಿಯ ಓರ್ವ ಹಿಂದೂ ಮಂತ್ರಿ ಶ್ರೀ ಜೆ. ವಿ. ಜೋಶಿಯವರು ಕೊಟ್ಟಿರುವ ರಾಜೀನಾಮೆಯು ಮತ್ತೊಂದು ನಿದರ್ಶನವು ದೊರೆತಿದೆ. ಶ್ರೀ ಜೋಶಿಯವರು ಹೈದರಾಬಾದ್ ಮಂತ್ರಿಮಂಡಲದಲ್ಲಿ ವ್ಯಾಪಾರೋದ್ಯಮ ಖಾತೆಯ ಮಂತ್ರಿಯಾಗಿದ್ದರು. ರಝಾಕಾರ್ ದಾಳಿ ಸೋಂಕಿದ ಸ್ಥಳಗಳನ್ನು ಇತ್ತೀಚೆಗೆ ಸಂದರ್ಶಿಸಿ, ಕಣ್ಣಾರೆಕಂಡು ಪ್ರತ್ಯಕ್ಷಾನುಭವ ಮಾಡಿಕೊಂಡಿದ್ದರು. ಅವರಾ ಸಂದರ್ಭದಲ್ಲಿ ರಝಾಕಾರ್ ಕೃತ್ಯಗಳನ್ನು ಖಂಡಿಸಿ ಕೆಲವೆಡೆ ಕೊಟ್ಟಿದ್ದ ಭಾಷಣಗಳಿಂದ ನಿಜಾಮ್ ಮಂತ್ರಿಮಂಡಲದ ಮುಸ್ಲಿಂ ಸದಸ್ಯರು ಜೋಶಿಯವರ ಮೇಲೆ ರೇಗಿರುವರೆಂದು ತಿಳಿದುಬರುತ್ತದೆ. ಸೋಲಾಪುರದಲ್ಲಿ ಇತ್ತೀಚೆಗೆ ಸೇರಿದ ಲಿಂಗಾಯಿತ ಸಮ್ಮೇಳನವು ಹೈದರಾಬಾದಿನ ಅತ್ಯಾಚಾರದ ನಿಷೇಧಾರ್ಥವಾಗಿ ಅಲ್ಲಿಯ ಶಾಸನ ಸಭೆಯಲ್ಲಿರುವ ಲಿಂಗಾಯಿತ ಸದಸ್ಯರೂ ಮಂತ್ರಿಮಂಡಲದಲ್ಲಿರುವ ಓರ್ವ ಲಿಂಗಾಯಿತ ಮಂತ್ರಿಯೂ ರಾಜೀನಾಮೆ ಕೊಡಬೇಕೆಂದು ಕೇಳಿಕೊಂಡಿದ್ದಿತು. ಹೈದರಾಬಾದಿನ ಇತರ ಹಿಂದೂ ಮಂತ್ರಿಗಳೂ ಜೋಶಿಯವರನ್ನು ಅನುಕರಿಸುವರೋ ಎಂಬುದನ್ನು ನೋಡಲಿಕ್ಕಿದೆ. ಪ್ರಧಾನ ಮಂತ್ರಿ ಮಿ ಲಾಯಿಕ್ ಅಲಿಗೆ ತನ್ನ ರಾಜೀನಾಮೆಯನ್ನೊಪ್ಪಿಸುತ್ತಾ ಶ್ರೀ ಜೋಶಿಯವರು ಆಧಾರಸಹಿತ ಕೊಟ್ಟಿದ್ದ ಕಾರಣಗಳು ಗಮನಾರ್ಹವಿವೆ. ಜೋಶಿಯವರ ಪತ್ರದ ಸಾರಾಂಶ ಇಲ್ಲಿದೆ:-

"ಇತ್ತೀಚೆಗೆ ನಾನು ಕೈಕೊಂಡಿದ್ದ ಜೈನಾ, ಔರಂಗಾಬಾದ್, ಪರ್ಭಾನಿ ಮತ್ತು ನಾಂಡೆಡ್ ಜಿಲ್ಲೆಗಳ ಪ್ರವಾಸದ ವೇಳೆ ರಝಾಕಾರ್ ಸಂಸ್ಥೆಯ ದುರ್ಜನರಿಂದ ನಡೆದಿದ್ದ ಅಸಂಖ್ಯಾತ ಅತ್ಯಾಚಾರ ವಾರ್ತೆಗಳು ಅವುಗಳಿಗೀಡಾದವರಿಂದಲೂ, ಯಾರ ಯೋಗ್ಯತೆಯ ಕುರಿತು ನಾನು ಸ್ಪಷ್ಟ ಗ್ಯಾರಂಟಿ ಕೊಡಬಹುದೋ, ಆ ಗೌರವಾರ್ಹ ಜನರಿಂದಲೂ ನನ್ನ ಕಿವಿಯೊಳಗೆ ತುಂಬಿಹೋದುವು. ಹೀಗಾಗಿ, ಕೆಲವು ಮಹತ್ವದ ಅತ್ಯಾಚಾರಗಳನ್ನು ನಿಮ್ಮ ತಿಳುವಳಿಕೆಗಾಗಿ ಈ ಕೆಳಗೆ ಉಲ್ಲೇಖಿಸಲು ನನಗೆ ವೇದನೆಯಾಗುತ್ತಿದೆ. ಮಾತ್ರವಲ್ಲ, ಸಂಸ್ಥಾನದ ಜನತೆಯ ಪ್ರಾಣ ಸೊತ್ತುಗಳ ರಕ್ಷಣೆಗಾಗಿಯೂ ಕಾನೂನು ವ್ಯವಸ್ಥೆಗಳ ಪಾಲನೆಗಾಗಿಯೂ ಸಾರ್ವಜನಿಕ ಫಂಡಿನಿಂದ ಸಂಬಳ ಪಡೆದಿಡಲ್ಪಟ್ಟಿರುವ ಪೋಲೀಸರು ಮತ್ತು ಮಿಲಿಟರಿಯವರು, ಈ ಭಾಗಗಳ ಶಾಂತಿಪ್ರೇಮಿ ಹಿಂದುಗಳ ಸೊತ್ತು ಪ್ರಾಣ ಮಾನಗಳ ಮೇಲೆ ವಿಶೇಷ ರೀತಿಯ ಹಾನಿಗಳಾಗುವಾಗ ಆ ಕಡೆಗೇನೊಂದೂ ಲಕ್ಷ್ಯ ಕೊಟ್ಟಿಲ್ಲವೆಂದು ದೊರೆತ ಸುದ್ದಿಗಳಿಂದಲೂ ನನ್ನ ಪ್ರತ್ಯಕ್ಷಪರಿಶೀಲನೆಗಳಿಂದಲೂ ನನಗೆ ಮನವರಿಕೆಯಾಗಿದೆ. ಅಥವಾ ಈ ಕಂಟಕಗಳ ನಿವಾರಣೆಗೆ ಸ್ಥಳೀಯ ಅಧಿಕಾರಿಗಳಿಂದಾದರೂ ನಿರ್ಗತಿಕ ಹಿಂದುಗಳಿಗೆ ಎಳ್ಳಷ್ಟು ಸಹಾಯ ದೊರೆತುದಿಲ್ಲ. ಬದಲಿಗೆ ಲೈಸೆನ್ಸಿದ್ದರೂ ಹಿಂದುಗಳ ಕೋವಿ ಇತ್ಯಾದಿ ಆಯುಧಗಳನ್ನು ಅವರಿಗಾವ ಚೀಟಿಯನ್ನೂ ಕೊಡದೆ ಪೋಲೀಸರು ಕಸಗೊಂಡಿದ್ದಾರೆ. ಇಷ್ಟೇ ಅಲ್ಲ; ಲೂಟಿ, ದರೋಡೆ, ಕೊಲೆ, ಬಲಾತ್ಕಾರದ ವ್ಯಭಿಚಾರ ಮತ್ತು ಮಹಿಳಾಪಹಾರ ಮೊದಲಾದ ದುಷ್ಕೃತ್ಯಗಳಲ್ಲಿ ರಝಾಕಾರರೊಂದಿಗೆ ಪೋಲೀಸರೂ ಸೇರಿಕೊಂಡ ನಿದರ್ಶನಗಳೂ ಕಡಿಮೆಯಿಲ್ಲ. ಇದರ ಪರಿಣಾಮವಾಗಿ ಭಯಗ್ರಸ್ತರಾದ ಹೆಚ್ಚಿನ ಜನರು ಸಂಸ್ಥಾನದ ಹೊರಗಡೆ ಆಶ್ರಯ ಹೊಂದಿದ್ದಾರೆ. ಸಂಸ್ಥಾನದಲ್ಲಿ ಜಾತೀಯ ಐಕ್ಯತೆ ಮತ್ತು ಸಂಸ್ಥಾನದ ಪ್ರಗತಿ ಸಾಧಿಸಬಹುದೆಂಬ ಆಶೆಯಿಂದ ನಾನು ಸರಕಾರವನ್ನು ಸೇರಿಕೊಂಡಿದ್ದೆ. ಕಾಸಿಮ್ ರಜ್ವಿಯ ಮೇಲೆ ನನಗೆ ವಿಶೇಷ ಗೌರವವಿದ್ದುದರಿಂದ, ರಝಾಕಾರರ ಮೇಲಿನ ಎಲ್ಲಾ ಅಪವಾದಗಳೂ ಸುಳ್ಳೆಂಬ ಅವರ ಮತ್ತು ನಿಮ್ಮ ಮಾತುಗಳನ್ನು ನಾನು ನಂಬುತ್ತಾ ಬಂದೆ. ಆದರೆ ಈಗ ನಾನು ಸಂಗತಿಯೆಲ್ಲವನ್ನೂ ಕಣ್ಣಾರೆ ನೋಡಿದ್ದೇನೆ. ಪರ್ಭಾನಿ ಮತ್ತು ನಾಂಡೆಡ್ ಜಿಲ್ಲೆಗಳಲ್ಲಿ ಭಯಂಕರ ಭೀತಿಜ್ವರ ವ್ಯಾಪಿಸಿಕೊಂಡಿದೆ. ಲೋಹಾದಲ್ಲಿ ನಾನು ನೋಡಿದ ಒಂದು ಧ್ವಂಸ ಕೃತ್ಯವು ನನ್ನ ಕಣ್ಣುಗಳಿಂದ ನೀರಿಳಿಸಿತು. ಬ್ರಾಹ್ಮಣರು ಕೊಲೆ ಮಾಡಲ್ಪಟ್ಟಿದ್ದರು. ಅವರ ಕಣ್ಣುಗಳು ಕೀಳಲ್ಪಟ್ಟಿದ್ದುವು. ಮಹಿಳೆಯರ ಮೇಲೆ ಅತ್ಯಾಚಾರ ನಡೆದಿತ್ತು. ಮನೆಗಳು ಅಧಿಕ ಸಂಖ್ಯೆಯಲ್ಲಿ ಸುಡಲ್ಪಟ್ಟು ಬೂದಿಯಾಗಿದ್ದುವು. ನನ್ನ ಹೃದಯವು ವೇದನೆಯಿಂದ ಒಡೆದು ಚೂರು ಚೂರಾಗುತ್ತಿದೆ. ನಾಂಡೆಡ್ ಜಿಲ್ಲೆಯ ಲೋಹಾ ಗ್ರಾಮದ ಮೇಲೆ ಎಡೆಬಿಡದೆ ಮೂರು ದಿನ ಧ್ವಂಸ ಕೃತ್ಯ ನಡೆದರೂ ಅಧಿಕಾರಿಗಳು ಅತ್ತ ಬಂದುದಿಲ್ಲ. ಚಿಮನ್‌ರಾಯರನ್ನು ಮರದ ಕಂಭಕ್ಕೆ ಕಟ್ಟಿಹಾಕಿ ಸರಿಯಾಗಿ ಹೊಡೆದು ಅವರ ಕಣ್ಣನ್ನು ಛೇದಿಸಿ ತೆಗೆದು, ಕೊನೆಗೆ ಗುಂಡು ಹೊಡೆದು ಕೊಂದುಹಾಕಿದರು. ಪಂಡಿತರಾವ್ ಸಹ ಕೊಲೆ ಮಾಡಲ್ಪಟ್ಟರು. ವಾಮನ್ ಬದಂಕರರನ್ನು ಕೊಡಲಿಯಿಂದ ಕಡಿಯಲಾಗಿತ್ತು. ನಾರಾಯಣ ಮಂದಿವಾಲಾರ ಹೆಂಡತಿಯನ್ನು ಅವಳ ಸಂಬಂಧಿಕರ ಇದಿರಲ್ಲೇ ಏಳು ಜನ ಬಲಾತ್ಕಾರದಿಂದ ಸಂಭೋಗಿಸಿದರು. ಇಡೀ ಹಳ್ಳಿಯನ್ನೇ ಸುಲಿದು ಆ ಮೇಲೆ ಸುಟ್ಟುಹಾಕಿದ್ದರು. ನಿಮ್ಮ ಆಡಳಿತೆಯಲ್ಲಿ ಹಳ್ಳಿಹಳ್ಳಿಗಳ ಸ್ಥಿತಿ ಹೀಗಾದೀತೆಂದು ನಾನೆಂದೂ ಊಹಿಸಿರಲಿಲ್ಲ. ನಾನೊಬ್ಬ ಹಿಂದೂ ಮಂತ್ರಿಯೆಂಬುದರಿಂದ ಜನರು ನಾನಿದ್ದಲ್ಲಿಗೆ ಬಂದು ತಮ್ಮ ಕರುಣ ಕತೆಗಳನ್ನು ಹೇಳಿಕೊಂಡರು. ನಾನು ಅತ್ತುಬಿಟ್ಟೆ. ಈ ದೃಶ್ಯಗಳನ್ನೆಲ್ಲಾ ಕಣ್ಣಾರೆ ಕಂಡಮೇಲೆ ನಾನು ರಾತ್ರಿಗಳನ್ನು ನಿದ್ರಿಸಲಾರದೆ ಕಳೆದಿದ್ದೇನೆ. ನಾನು ಕಣ್ಣಾರೆ ಕಂಡ ಇಂತಹ ಹೃದ್ರಾವಕ ದುರಂತಗಳನ್ನೂ ನಿಲ್ಲಿಸಲಾರದ ಸರಕಾರದೊಡನೆ ನಾನು ನನ್ನ ಹೆಸರನ್ನು ಸೇರಿಸಲಾರೆ. ಆದ್ದರಿಂದ ಇದು ನನ್ನ ರಾಜೀನಾಮೆ. ಪ್ರತಿಯೊಬ್ಬ ಮುಸ್ಲಿಂ ಸಹೋದರನ ತುಟಿಯಲ್ಲೂ ಈಗ ಯುದ್ಧದ ಮಾತೇ ನಲಿದಾಡುತ್ತಿದೆ. ಆದರೀ ಯುದ್ಧಸಿದ್ಧತೆ ಯಾರ ಮೇಲೆಂಬುದನ್ನು ನಾನು ತಿಳಿಯಬಹುದೇ? ನಮ್ಮ ಹೈದರಾಬಾದು ಎಲ್ಲ ಕಡೆಗಳಿಂದಲೂ ಭಾರತ ಕೇಂದ್ರದಿಂದ ಸುತ್ತುಗಟ್ಟಲ್ಪಟ್ಟಿದೆ. ಭಾರತ ಮತ್ತು ಹೈದರಾಬಾದುಗಳು ಸುಭದ್ರವಾದ ಭೌಗೋಲಿಕ ಚರಿತ್ರೋಲ್ಲೇಖಿತ ಜೋಡಣೆಗಳಿಂದ ಒಂದುಗೂಡಿವೆ. ಹಿಂದುವಿರಲಿ, ಮುಸ್ಲಿಮನಿರಲಿ ಪ್ರತಿಯೊಬ್ಬ ಹೈದರಾಬಾದಿಯೂ ಭಾರತದ ಸಾಮಾಜಿಕ ಆರ್ಥಿಕ ಸಂಬಂಧಿಕನಿದ್ದಾನೆ. ಇವುಗಳನ್ನು ಛೇದಿಸುವದು ಎಂದೆಂದಿಗೂ ಅಸಾಧ್ಯ. ಭಾರತ ಮತ್ತು ಹೈದರಾಬಾದುಗಳೊಳಗೆ ಸಶಸ್ತ್ರ ಘರ್ಷಣೆಯೇಳದಂತೆ ದೇವರು ರಕ್ಷಿಸಿ ಕೊಡಲಿ! ಹಾಗಾದಲ್ಲಿ ಸಂಸ್ಥಾನದ ಮೂಲ ನಿರ್ಮೂಲನ ಖಂಡಿತವಾದ್ದರಿಂದ ಯಾವ ಸಂದರ್ಭದಲ್ಲೂ ನಾನೀ ವಿನಾಶ ಕೃತ್ಯದ ಸಹಭಾಗಿಯಾಗಲಾರೆ!"

ಶ್ರೀ ಜೋಶಿಯವರ ಈ ಪತ್ರವನ್ನೋದಿದ ಮೇಲೆ ಬೇರೇನು ಬೇಕು ? ಹದಿನೆಂಟು ದಿನ ಉಪವಾಸ ಮಾಡಿ ಮುಗಿಸಿ ಹೈದರಾಬಾದಿಗೆ ಹೊರಡಲಿದ್ದ ಪ್ರೊಫೆಸರ್ ಭನ್ಸಾಲಿಗಳು ಈ ಪತ್ರವನ್ನೋದಿದ ಮೇಲೆ, ಹೋಗಿ ಫಲವಿಲ್ಲವೆಂದು ನಿಂತಿದ್ದಾರೆ!

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2¼% per annum.
For 6 months at 3¼% per annum.

For further particulars you may apply or call at any of our following Offices

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs.

The Canara Banking Corporation Limited.

Estd: 1906.
(Incorporated in British India)
Head Office: **UDIPI**, S. India.

Capital Authorised	Rs. 25,00,000
Capital Issued & Subscribed	Rs. 20,00,000
Capital Paid up	Rs. 19,98,445
Reserves....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ಗುರುವಾರ, ಉಡುಪಿ, ೨೯-೭-'೪೮

ಭಾಷಾವಾರು ಪ್ರಾಂತ್ಯ ರಚನೆಗಾಗಿ—

ಘಟನಾ ಸಮಿತಿಯ ಅಧ್ಯಕ್ಷರಿಂದ ನೇಮಿಸಲ್ಪಟ್ಟಿದ್ದ 'ಕಮಿಶನು' ಸಾರ್ವಜನಿಕ ಅಭಿಪ್ರಾಯ ಸಂಗ್ರಹಕ್ಕಾಗಿ 23 ಪ್ರಶ್ನೆಗಳನ್ನು ಕೇಳಿದೆ. ಸಾರ್ವಜನಿಕ ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳು ಈ ಪ್ರಶ್ನಾವಳಿಗೆ ಉತ್ತರ ಬರೆದು ಕಳುಹಬೇಕೆಂದು ವಿಜ್ಞಾಪಿಸಿ ಕೊಂಡಿದೆ. ಹೊಸತಾಗಿ ನಿರ್ಮಾಣಗೊಳ್ಳುವ ಪ್ರಾಂತ್ಯಗಳ ಆಡಳಿತೆ ಮತ್ತು ಆರ್ಥಿಕ ಸ್ಥಿತಿಗತಿಗಳು ಹೇಗೆ ನಿಲ್ಲಬಹುದೆಂಬುದನ್ನು ತಿಳಿಯುವುದೇ ಈ ಸವಾಲುಗಳ ಉದ್ದೇಶ. 'ಆಂಧ್ರ, ಕೇರಳ, ಕರ್ನಾಟಕ, ಮಹಾರಾಷ್ಟ್ರಗಳು ಅಥವಾ ಅವುಗಳಲ್ಲಿ ಯಾವುದಾದರೊಂದು ಅಥವಾ ಹೆಚ್ಚಿನವು ಪ್ರತ್ಯೇಕ ಪ್ರಾಂತ್ಯಗಳಾಗಿ ನಿರ್ಮಾಣಗೊಳ್ಳಬೇಕೆ? ಬೇಕಾದರೆ ಅವುಗಳ ಗಡಿಗಳಾವುವು? ಈ ನಿಯೋಜಿತ ಪ್ರಾಂತ್ಯಗಳಲ್ಲಿ ಪ್ರತಿಯೊಂದೂ ಪ್ರತ್ಯೇಕ ಗವರ್ನರ್ ಮತ್ತು ಪೂರ್ಣ ಭಿನ್ನಾಡಳಿತೆಯ ಯಂತ್ರವುಳ್ಳದ್ದೇ ಆಗಿರಬೇಕೇ, ಅಥವಾ ನೆರೆಯ ಪ್ರಾಂತ್ಯದೊಡನೆ ಯಾವುದಾದರೂ ವಿಭಾಗದ ಮಟ್ಟಿಗೆ ಜತೆಯಾಡಳಿತೆ ನಿರ್ವಹಿಸುವಂತಿರಬಹುದೆ? ಪ್ರಚಲಿತ ಪ್ರಾಂತಗಳೊಳಗಡೆಯಲ್ಲೇ ಸ್ವತಂತ್ರಾಡಳಿತೆ ಯಂತ್ರವುಳ್ಳ ಉಪಪ್ರಾಂತ್ಯಗಳಾಗಿ ಮೇಲಿನ ಪ್ರಾಂತ್ಯಗಳನ್ನು ನಿರ್ಮಿಸಿಟ್ಟರೆ ಹೇಗೆ? ಯಾವುದಾದರೊಂದು ಪ್ರಾಂತ್ಯದಲ್ಲಿ ಆಸಕ್ತಿ ಹೊಂದಿಕೊಂಡಿರುವ ಯಾವುದಾದರೊಂದು ಸಂಸ್ಥಾನವನ್ನು ಸೇರಿಸಿಕೊಳ್ಳಬೇಕೇ? ಒಂದೊಮ್ಮೆಗೆ ಅಂತಹ ಸಂಸ್ಥಾನವು ಅಂತಹ ಪ್ರಾಂತ್ಯದಲ್ಲಿ ಲೀನಗೊಂಡಲೊಪ್ಪದಿದ್ದರೆ ಆ ಮೇಲೂ ಅದನ್ನು ಹೊಸ ಪ್ರಾಂತ್ಯವಾಗಿ ರಚಿಸಬೇಕೆ?' ಎಂಬಂತಹ ಪ್ರಶ್ನೆಗಳು ಆ ಮಾಲೆಯಲ್ಲಿವೆ. ಹೊಸತಾಗಿ ನಿರ್ಮಾಣಗೊಳ್ಳುವ ಪ್ರಾಂತ್ಯಗಳ ಹಣಕಾಸಿನ ಸ್ಥಿತಿಗತಿ ಹೇಗೆ? ಇಂತಹ ಹೊಸತನದ ಫಲದಿಂದ ದೊಡ್ಡ ಪರಿಮಾಣದಲ್ಲಿ ಜನ ಬದಲಾವಣೆ ಮಾಡಿಕೊಳ್ಳುವಂತಹ ತೊಂದರೆಗಳೇನಾದರೂ ಏಳಬಹುದೆ? ಹಾಗಿದ್ದರೆ ಅದಕ್ಕಾವ ಶಮನ? ಬೊಂಬಾಯಿ ಮತ್ತು ಮದ್ರಾಸ್ ನಗರಗಳು ನವನಿರ್ಮಿತ ಪ್ರಾಂತ್ಯಗಳಲ್ಲಿ ಸೇರುವಂತಹವೇ? ಹಾಗಿದ್ದರೆ ಯಾವ ಪ್ರಾಂತ್ಯಕ್ಕೆ ಯಾವುದು ಸೇರತಕ್ಕದ್ದು? ಎಂದು ಮುಂತಾಗಿ ಅದು ವಿಚಾರಿಸುತ್ತದೆ. ಈ ಪ್ರಶ್ನಾವಳಿಯ ದ್ವಿತೀಯ ಭಾಗವಾಗಿ ತಮಿಳುನಾಡು, ಗುಜರಾತ್ ಮತ್ತು ಮಧ್ಯ ಪ್ರಾಂತ್ಯದ ಹಿಂದೀ ಮಾತಾಡುವ ಭಾಗಗಳಿಗೆ ಪ್ರತ್ಯೇಕವಾಗಿ ಮೂರು ಪ್ರಶ್ನೆಗಳನ್ನು ಕೇಳಲಾಗಿದೆ. ಈಗಿರುವ ಪ್ರಾಂತ್ಯಗಳ ಮುಖ್ಯ ಭಾಗಗಳಾಗಿರುವ ಮೇಲಿನವುಗಳ ಬಗಲಿನಿಂದ ಭಾಷಾವಾರು ಹಕ್ಕು ಪಡೆದು ಉಳಿದ ಭಾಗಗಳು ಜಾರಿ ಹೋಗುವಾಗ ಈ ಮೂಲ ಭಾಗಗಳ ಪರಿಸ್ಥಿತಿ ಹೇಗೆ ನಿಲ್ಲುವದೆಂಬುದನ್ನು ತಿಳಿಯುವುದೇ ಆ ಪ್ರಶ್ನೆಗಳ ಉದ್ದೇಶ. ಅದಕ್ಕಾಗಿ 'ಆಂಧ್ರ, ಕೇರಳ, ಕರ್ನಾಟಕ, ಮಹಾರಾಷ್ಟ್ರಗಳನ್ನು ಭಾಷಾವಾರು ಹಕ್ಕನ್ನಾಧರಿಸಿ ಕಡಿದು ತೆಗೆದು ಪ್ರತ್ಯೇಕಿಸುವುದಕ್ಕೆ ನಿಮ್ಮ ಒಪ್ಪಿಗೆಯೇ? ಹೀಗೆ ನವಪ್ರಾಂತ್ಯಗಳನ್ನು ವಿಂಗಡಿಸಿ ಹಾಕಿದರೆ ಆ ಮೇಲೆ ಉಳಿಯುವ ಪ್ರಚಲಿತ ಪ್ರಾಂತಿಕ ಭಾಗಗಳ ಆಡಳಿತೆ, ಆರ್ಥಿಕ ಹಾಗೂ ಹಣಕಾಸುಗಳ ಸ್ಥಿತಿ ಹೇಗೆ? ನವಪ್ರಾಂತ್ಯ ನಿರ್ಮಾಣಾನಂತರ ಉಳಿಯುವ ಈಗಿನ ಪ್ರಾಂತ್ಯದ ಭಾಗಗಳ ಮುಖ್ಯ ಖಾತೆಗಳ ಆಯವ್ಯಯದ ಅಂದಾಜೆಷ್ಟು?" ಎಂದು ಹಾಗೆ ಉಳಿಯುವ ಭಾಗಗಳಾದ ತಮಿಳು, ಗುಜರಾತು ಮತ್ತು ಮಧ್ಯ ಪ್ರಾಂತ್ಯದ ಹಿಂದೀ ಕ್ಷೇತ್ರಗಳನ್ನೇ ಕೇಳಲಾಗಿದೆ.

ಹೊಸ ನಿರ್ಮಾಣಕ್ಕಗತ್ಯವುಳ್ಳ ವಿಷಯಗಳ-ಆಳವಾದ ಪರಾಮರ್ಶೆಗೆ ಸಂಬಂಧಪಟ್ಟ 'ಕಮಿಶನು' ಇಳಿದಿದೆ ಎಂಬುದನ್ನು ಮೇಲಿನ ಪ್ರಶ್ನಾವಳಿಯಿಂದ ಅರಿಯಬಹುದು. ಇದು ಸಹಜವಾದ ಪರೀಕ್ಷೆ; ಈ ಪ್ರಶ್ನಾವಳಿ ಮತ್ತದರ ಉತ್ತರಗಳು ಭಾಷಾವಾರು ಪ್ರಾಂತ್ಯಗಳ ಬೇಡಿಕೆಗಳೊಂದಿಗೇನೇ ಹುಟ್ಟಿರುವವುಗಳು. ಅದ್ದರಿಂದ ಇಲ್ಲಿ ಹೊಸತೇನೂ ಇಲ್ಲ. ಒಂದು ಪ್ರಾಂತ್ಯವು ರೂಪುಗೊಳ್ಳಬೇಕಾದರೆ ಅದರ ಆಕಾರ ಮತ್ತು ಗಡಿ ನಿರ್ಣಯಗಳಾಗಲೇ ಬೇಕು; ಅದು ಬಾಳಬೇಕಾದರೆ ಸಾಕಷ್ಟು ಉತ್ಪತ್ತಿಯು ಅಲ್ಲಿರಲೇಬೇಕು; ಹೀಗೆ ಹೊಸತನ್ನು ನಿರ್ಮಿಸುವಾಗ, ಅದನ್ನು ಪಡಾ ತೆಗೆದು ಉಳಿಯುವ ಭಾಗದ ಸ್ಥಿತಿಗತಿ ಹೇಗೆಂಬುವನ್ನೂ ನೋಡಲೇಬೇಕು. ಆಂಧ್ರ, ಕರ್ನಾಟಕ, ಕೇರಳ, ಮಹಾರಾಷ್ಟ್ರ ಪ್ರಾಂತ್ಯಗಳ ರಚನೆಯಿಂದ ಈ ಪೈಕಿ ಯಾವುದಕ್ಕೂ ಕೊರತೆಯಾಗುವಂತಿಲ್ಲವೆಂಬುದು ಎಂದೋ ಕಂಡುಹಿಡಿಯಲ್ಪಟ್ಟಿರುವ ವಿಷಯ. ಆದರೆ ಅವುಗಳ ಸವಿವರವಾದ ಚಿತ್ರವು ಈಗ ಅಪೇಕ್ಷಿಸಲ್ಪಟ್ಟಿದೆ-ಅದೂ ಸಾರ್ವಜನಿಕರಿಂದ. ಈ ಕುರಿತು ನಾವೀಮೊದಲೇ ಕರ್ನಾಟಕದ ಪ್ರಮುಖರ ಲಕ್ಷ್ಯವನ್ನೆಳೆದಿದ್ದೆವು. ಕನ್ನಡ ನಾಡಿನ ಸರಿಯಾದ ಆಕಾರ ಮತ್ತು ಆರ್ಥಿಕ ಸ್ಥಿತಿಗತಿ ಚಿತ್ರವನ್ನು ಎಲ್ಲಾ ಕನ್ನಡಿಗರ ಮುಂದಿಡಬೇಕು-ಅದಕ್ಕಾಗಿ ಅಗತ್ಯವಿದ್ದರೆ ಅಖಿಲ ಕನ್ನಡಿಗರ ಪ್ರತಿನಿಧಿ ಸಮ್ಮೇಳನವೊಂದನ್ನು ಕರೆಯಬೇಕು--ಎಂದು ಮೊದಲೇ ಸೂಚಿಸಿದ್ದೆವು. ಭಾವೀ ಕರ್ನಾಟಕದ ರೂಪರೇಖೆಯನ್ನು ಸ್ಪಷ್ಟಪಡಿಸಿ ತೋರಿಸುವ ಒಂದೆರಡು ಪುಸ್ತಕಗಳು ಪ್ರಕಟವಾಗಿ ಬಿಕ್ಕ ಪ್ರಕಟಣೆಗಳ ಪಂಕ್ತಿಯಲ್ಲೇ ಸೇರಿ ಹೋಗಿವೆ; ಅವುಗಳ ನಿರ್ದೇಶಕತ್ವವು ಮೇಲಿನ ಪ್ರಶ್ನಾವಳಿಗೆ ಕನ್ನಡಿಗರಿಂದ ಉತ್ತರ ಕೊಡಿಸುವಷ್ಟಿಲ್ಲ. ಅದ್ದರಿಂದ ಈಗಲಾದರೂ ಸರಿಯಾದ ಕಾರ್ಯ ನಡೆದೀತೆಂದು ನಂಬುತ್ತೇವೆ. ಕರ್ನಾಟಕ ಪ್ರಾಂತ್ಯ ರಚನೆಯ ಕಾರ್ಯ ಧುರೀಣತ್ವ ವಹಿಸಿರುವವರು ಈ ಪ್ರಶ್ನಾವಳಿಗೆ ತಕ್ಕ ಉತ್ತರಾವಳಿಯನ್ನು ಕೂಡಲೇ ತಯಾರಿಸಿ, ಕನ್ನಡಿಗರ ಕೈ ಸೇರುವಂತೆ ಮಾಡಬೇಕು. ಕನ್ನಡ ನಾಡಿನ ಮೂಲೆಮೂಲೆಗಳಲ್ಲೂ ಅದನ್ನು ಪ್ರಚಾರ ಮಾಡಿ ಎಲ್ಲಾ ಸಂಘ ಸಂಸ್ಥೆಗಳಿಂದಲೂ ವ್ಯಕ್ತಿಗಳಿಂದಲೂ ಅದೇ ಉತ್ತರವು ಘಟನಾ ಸಮಿತಿಯ ಕಮಿಶನಿನ ಕೈ ಸೇರುವಂತೆ ಮಾಡಬೇಕು. ಪ್ರಾಂತ್ಯದೊಳಗಿನ ಒಂದೆರಡು ಉಪಭಾಷೆಗಳವರು ತಮಗೆ ಪ್ರತ್ಯೇಕ ಗಡಿಯಾಚಿಸುತ್ತಿರುವುದನ್ನೂ ಆಂಧ್ರ, ಕೇರಳ, ತಮಿಳು, ಮರಾಟಿ ಭಾಗಗಳೊತ್ತಿನ ಕರ್ನಾಟಕ ಕ್ಷೇತ್ರಗಳಲ್ಲಿ ವಿವಾದವಿರುವುದನ್ನೂ ಈ ಸಂದರ್ಭದಲ್ಲಿ ವಿಶೇಷವಾಗಿ ಲಕ್ಷ್ಯಿಸಬೇಕಾಗಿದೆ. ಜನಾಭಿಪ್ರಾಯ ಸಂಗ್ರಹ ಯೋಜನೆಯು ಈ ಮಾದರಿಯ ಆಕ್ಷೇಪಗಾರರ ಆಟಕ್ಕೆ ದೊರೆತ ಅವಕಾಶವೆಂಬುದನ್ನು ಮರೆಯದೆ ಅಂತಹ ವಿಶಿಷ್ಟ ಭಾಗಗಳಲ್ಲಿ ಹೆಚ್ಚಿನ ಕೆಲಸ ನಡೆಯಬೇಕು. 'ನೆರೆಯ ಸಂಸ್ಥಾನವು ಪ್ರಾಂತ್ಯದೊಂದಿಗೆ ಮಿಲನಗೊಳ್ಳಲೊಪ್ಪದಿದ್ದ ಸಂದರ್ಭದಲ್ಲೂ ಅಂತಹ ಪ್ರಾಂತ್ಯವನ್ನು ರಚಿಸಬೇಕೇ?' ಎಂಬ ಪ್ರಶ್ನೆಯು ಕೇವಲ ಕರ್ನಾಟಕ ರಚನೆಗೆ ಸಂಬಂಧಿಸಿದುದಿದೆ. ಅದ್ದರಿಂದ ಭಾವೀ ಕರ್ನಾಟಕದಲ್ಲಿ ಮೈಸೂರಿನ ಸ್ಥಾನವಾವುದೆಂಬುದನ್ನು ಖಚಿತಗೊಳಿಸಿ ತೋರಿಸಬೇಕು. ಅಖಿಲ ಕನ್ನಡಿಗರು ಈ ಪರೀಕ್ಷಾ ಕಾಲದಲ್ಲಿ ಈ ಕಡೆಗೇನೇ ಎಲ್ಲಾ ಲಕ್ಷ್ಯಹರಿಸಿ, ಅವಿಶ್ರಾಂತವಾಗಿ ಅಭ್ಯಾಸಿಸಬೇಕು; ದುಡಿಯಬೇಕು. ಇವೆಲ್ಲಾ ಕಾರ್ಯಗಳೂ ನಾನಾತಿರೇಕಗಳಿಲ್ಲದೆ-ಒಮ್ಮತ ಮತ್ತು ಒಕ್ಕಟ್ಟಿನಿಂದ-ನಡೆಯುವವು, ನಡೆಯುತ್ತಿವೆ, ಎಂದು ನಿರೀಕ್ಷಿಸುತ್ತೇವೆ.

ಪುಸ್ತಕ ಪ್ರಿಯರಿಗೊಂದು ಸುಸಂಧಿ!

ಪ್ರಥಮ ಸ್ವಾತಂತ್ರ್ಯ ದಿನಾಚರಣೆಯ ಸಂತೋಷ ಸೂಚನಾರ್ಥವಾಗಿ ಅಗೋಸ್ತು 1ರಿಂದ 31ರ ವರೆಗೆ **ಕಿರಿಯರ ಪ್ರಪಂಚದ ಪುಸ್ತಕಗಳು** ರಿಯಾಯತಿ ದರದಲ್ಲಿ ಕೊಡಲ್ಪಡುವವು. ವಿವರಕ್ಕೆ ಬರುವ ಸಂಚಿಕೆ ನೋಡಿರಿ.

ಉಡುಪಿ

ಲೋಕಲ್ ಕಾಂಗ್ರೆಸ್ ಕಮಿಟಿಯ ಸಭೆಯು— ತಾ 17ರಲ್ಲು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಮದ್ರಾಸಿನ ಪಾನ ನಿರೋಧ ಮಂತ್ರಿ ಡಾನಿಯೆಲ್ ತೋಮಸರ ಮತ್ತು ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ ನಿಧನದ ಬಗ್ಗೆ ಸಂತಾಪ ಸೂಚಕ ಗೊತ್ತುವಳಿಗಳಾದುವು. ರೈತರಿಗೆ ಸಿಗುವ ಬೋನಸು ಮತ್ತು ಕೃಷಿ ಇಲಾಖೆಯವರಿಂದ ಕೂಪನುಗಳಿಗೆ ಗೊಬ್ಬರವು ಸರಾಗವಾಗಿ ಸಿಕ್ಕುವ ವ್ಯವಸ್ಥೆ ಮಾಡುವಂತೆ ಸಂಬಂಧಪಟ್ಟವರನ್ನು ಕೇಳಿಕೊಳ್ಳಬೇಕೆಂದಾಯಿತು. ಶ್ರೀ ಕೃಷ್ಣಮಠವು ಸಾರ್ವಜನಿಕ ದೇವಾಲಯವೆಂದು ನಿಶ್ಚಯಿಸಿ ಬಂದ ಸರಕಾರದ ಜಾಹೀರುನಾಮೆಯನ್ನು ರಿಕಾರ್ಡು ಮಾಡಿ ದೇವಸ್ಥಾನ ಪ್ರವೇಶದ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲು ಒಂದು ಕಮಿಟಿಯನ್ನು ರಚಿಸಲಾಯಿತು

ಎಂಡೋಮೆಂಟ್ ಕಮಿಶನರ್— ಮದ್ರಾಸು ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ಕಮಿಶನರ್ ಶ್ರೀ. ಎ. ಎಸ್. ಎಮ್. ನಾಯರರು ಕಳೆದ ವಾರ ಉಡುಪಿಯಲ್ಲಿ ಮೊಕ್ಕಾಂ ಮಾಡಿ ಶ್ರೀ ಕೃಷ್ಣ ದೇವಾಲಯ ಮತ್ತು ಇತರ ಮಠಗಳ ಸರ್ವಸಾಧಾರಣ ಆಡಳಿತವನ್ನು ಪರಿಶೀಲಿಸಿದರು. ಅಷ್ಟ ಮಠಗಳ ಸ್ವಾಧೀನವಿರುವ ಭೂಮಿಯ ಪೈಕಿ ಮೂಲಗೇಣಿ ಶರ್ತದ ಮೇಲೆ ಕೊಡೋಣಾದ ಆಸ್ತಿಗಳೆಷ್ಟು ಎಂಬುದನ್ನು ಚಾಕಸಿ ನಡಿಸಿದರು. ಕೆಲವು ಮಠಗಳ ಸುವ್ಯವಸ್ಥಿತ ಆಡಳಿತಕ್ಕಾಗಿ ತಕ್ಕ ಯೋಜನೆಗಳು ತಯಾರಾಗುತ್ತಿವೆ ಎಂದು ತಿಳಿದುಬರುತ್ತದೆ. ಇತ್ತಂಡಕ್ಕೂ ಬೇಕಾದವರಂತೆ ನಟಿಸುತ್ತಿರುವ ಕೆಲವು ಸಂದರ್ಭಸಾಧಕರಿಗೆ ಅಷ್ಟದ ದೊರೆತನ ಪರಿಸ್ಥಿತಿಯು ಮತ್ತಷ್ಟು ಕೆಡಬಹುದೆಂದು ಜನರಲ್ಲಿ ಅಂಜಿಕೆಯುಂಟಾಗಿದೆ.

ವಿದಾಯ ಸತ್ಕಾರ—ವರ್ಗವಾಗಿ ಮಲಬಾರಿಗೆ ಹೋಗಲಿರುವ ಸ್ಥಳೀಯ ಕೋಆಪರೇಟಿವ್ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಕಣ್ಣನ್ ನಾಯರರಿಗೆ ಕಳೆದ ಆದಿತ್ಯವಾರ ಟೌನ್ ಬೇಂಕ್ ಕಟ್ಟಡದಲ್ಲಿ ಶ್ರೀ. ಕೆ. ಗುರುರಾಜರಾಯರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರ ನಡೆಯಿತು. ಅ। ಡಿವೆಲಪ್‌ಮೆಂಟ್ ಆಫೀಸರ್ ಶ್ರೀ ಗೋಳಪ್ಪ ಸೆಟ್ಟಿ, ಪಂಡಿತ ಟಿ. ಎಸ್. ಕೇಳು ನಂಬಿಯಾರ್, ಜನಾಬ್ ಎಮ್. ಡಿ. ಉಸ್ಮಾನ್ ಸಾಹೇಬ್, ಶ್ರೀಗಳಾದ ಯು. [illegible] ಭಟ್, ಯು. ಕೇಶವ ಪ್ರಭು, ವಿ. ಕೆ. ಉಪಾಧ್ಯಾಯ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಸತ್ಕಾರ ಕೂಟದ ವ್ಯವಸ್ಥೆ ಮಾಡಿದವರು ಶ್ರೀ ಎಮ್. ವಾಮನ ಭಟ್ಟರು.

ಏಲಂ ನೋಟೀಸು

ಶಿವಳ್ಳಿ ಗ್ರಾಮದ ಕಂಚಿಗಾರ ಗುಳಿಯಲ್ಲಿರುವ ಶ್ರೀ ಅದಮಾರು ಮಠದ ಕಾಳೀಯಮರ್ದನ ಕೃಷ್ಣದೇವರ ಹೆಸರ ಪಟ್ಟಾ ನಂ. 101ಕ್ಕೊಪ್ಪಿದ ಸಂ. ನಂ. 66-1ರ ಪೈಕಿ ಪುಂಜ 36 ಎ. 94 ಸೆ. ವಿಸ್ತೀರ್ಣವುಳ್ಳ ಹಾಡಿಯಲ್ಲಿರುವ ಚೌಬಿನ ಕಟ್ಟಿಗೆಯನ್ನು ಬರುವ ಅಗೋಸ್ತು ತಿಂಗಳ ತಾ 12ನೇ ಗುರುವಾರ 3 ಗಂಟೆಗೆ ಏಲಂ ಮೂಲಕ ವಿಕ್ರಯಿಸೋಣಾಗುತ್ತದೆ. ಆ ದಿನ ಆ ಸಮಯಕ್ಕೆ ಉಡುಪಿ ಶ್ರೀ ಅದಮಾರು ಮಠಕ್ಕೆ ಉಮೇದ್ವಾರರು ಬರುವುದು.

P. Shripathi Rao,
Agent, Sri Admar Mutt,
Udipi, S. K.

ಮದ್ರಾಸಿನಲ್ಲಿ ಪಂಡಿತ ನೆಹರು

ಭಾರತದ ಪ್ರಧಾನ ಮಂತ್ರಿ-ಅಖಿಲ ಭಾರತೀಯರ ಹೃದಯಸಿಂಹಾಸನಾಧೀಶ-ಪಂಡಿತ ಜವಾಹಿರಲಾಲ ನೆಹರುಗಳು ಇದೇ ತಾ. 24ನೇ ಅಪರಾಹ್ನದಿಂದ 27ನೇ ಪೂರ್ವಾಹ್ನದ ವರೆಗಿನ ಮೂರು ದಿವಸಗಳಲ್ಲಿ ಮದ್ರಾಸ್ ನಗರಕ್ಕೆ ನವಚೇತನ ಮತ್ತು ಅಖಿಲ ದಕ್ಷಿಣ ಭಾರತಕ್ಕೆ ಹೊಸ ಹುರುಪನ್ನು ದಾನ ಮಾಡಿದ್ದಾರೆ. ಪಂಡಿತ ನೆಹರುಗಳು ಮದ್ರಾಸ್ ಸಿಟಿಯನ್ನು ಸಂದರ್ಶಿಸುವುದು ಒಂಭತ್ತು ವರುಷಗಳ ನಂತರ, ಪ್ರಧಾನಿಯಾದ ಮೇಲೆ ಇದೇ ಮೊದಲು. ನೆಹರುಗಳೆಂದರೆ ಭಾರತೀಯರಿಗೇನು ? ತಮ್ಮ ಹೃದಯ ರಾಣಿಕೆಯನ್ನು ಮುಂದೊಡ್ಡುತ್ತ, ಜನಸಾಮಾನ್ಯರಾವ ರೀತಿ ನೆಹರುಗಳ ಬೆನ್ನಿಗೆ ಬಿದ್ದಿದ್ದಾರೆ? ಎಂಬುದನ್ನು ನೆಹರು ಸಮ್ಮುಖದಲ್ಲಿ ನಡೆದ ಮದ್ರಾಸಿನ ಕೆಲವು ಅಭೂತಪೂರ್ವ ದೃಶ್ಯಗಳು ತೋರಿಸಿಕೊಟ್ಟವು.

ತನ್ನ ಆಪ್ತರೊಡನೆ ಡಿಲ್ಲಿಯಿಂದ ನೇರಾಗಿ ಮದ್ರಾಸಿಗೆಂದು ಹಾರಾಟ ನಡೆಸಿದ್ದ ಪಂಡಿತ ನೆಹರುಗಳ ವಿಮಾನವು ಹವೆಯ ಪ್ರತಿಕೂಲತೆಯಿಂದ ಬೊಂಬಾಯಿಯಲ್ಲಿ ಬಂದು ನಿಂತು ಮೂರು ಘಂಟೆ ತಡವಾಗಿ ತಾ. 24ನೇ ಅಪರಾಹ್ನ ಮದ್ರಾಸಿಗೆ ಮುಟ್ಟಿದ್ದಿತು. ವಿಮಾನದಲ್ಲಿ ಪ್ರಧಾನಿ ಓಮಂದೂರರು ಮತ್ತಿತರ ಮಂತ್ರಿಗಳು ಮತ್ತು ಪ್ರಾಂತ್ಯದ ಕಾಂಗ್ರೆಸ್ ನಾಯಕರು ಅವರನ್ನಿದಿರುಗೊಂಡರು. ಪ್ರಚಂಡ ಜನಸಂದಣಿ ನಿಶ್ಚಿತಾವಧಿಗೆ ಮೊದಲೇ ನಿಲ್ದಾಣ ಸೇರಿದ್ದು, ನೆಹರೂ ಮುಖ ಕಂಡೊಡನೆ ಜಯಘೋಷವೆಬ್ಬಿಸಿತು. ಗೌರವವಂದನೆ ಇತ್ಯಾದಿಗಳಾದ ಮೇಲೆ 'ರಿಪ್ಪನ್ ಭವನ'ದಲ್ಲಿ ಮದ್ರಾಸ್ ಕಾರ್ಪೊರೇಶನ್ ಅರ್ಪಿಸಿದ ಮಾನಪತ್ರಕ್ಕುತ್ತರಕೊಡುತ್ತಾ, ಪಂಡಿತ ನೆಹರುಗಳು ಭಾರತದ ಮೂಲಭೂತ ಒಕ್ಕಟ್ಟನ್ನು ಎತ್ತಿ ಹೇಳಿದರು. "ನಾವು ಜಾತೀಯತೆಯ ಮೇಲೆ ಯುದ್ಧ ಸಾರಿದ್ದೇವೆ. ಪರಿಣಾಮವೇನೇ ಆದರೂ ಈ ಜಾತೀಯತೆಯೆಂಬ ಮಾಯಾವ ಆಕಾರದಲ್ಲಿದ್ದರೂ ನಾವದನ್ನು ಸಹಿಸುವಂತಿಲ್ಲ' ಎಂದರು. ಲೆಜಿಸ್ಲೇಟಿವ್ ಎಸೆಂಬ್ಲಿ ಭವನದಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಗರ ಭಾವಚಿತ್ರ ಅನಾವರಣ ಮಾಡುತ್ತಾ, ಆಚಾರ್ಯರ ವ್ಯಕ್ತಿಗತ ಯೋಗ್ಯತೆ, ದೂರದೃಷ್ಟಿ, ಸೂಕ್ಷ್ಮ ವಿವೇಚನಾ ಶಕ್ತಿ ಇತ್ಯಾದಿಗಳನ್ನು ಮುಕ್ತ ಕಂಠದಿಂದ ಹೃದಯಸ್ಪರ್ಶಿ ಮಾತುಗಳಿಂದ ಕೊಂಡಾಡಿ 'ಆಚಾರ್ಯರು ರಾಷ್ಟ್ರದ ಒಂದು ಸಂಪತ್ತು' ಎಂದರು.

ತಾ. 26ನೇ ಮುಂಜಾನೆ ವಿದ್ಯಾರ್ಥಿಗಳ ಮತ್ತು ಕೆಲಸಗಾರರ ಪ್ರಚಂಡ ಸಾಮೂಹಿಕ ಪ್ರದರ್ಶನದೆದುರು ಭಾಷಣ ಮಾಡುತ್ತಾ ಅವರ ಕರ್ತವ್ಯಗಳನ್ನು ನಿರ್ದೇಶಿಸಿ ಕಮ್ಯೂನಿಸ್ಟರ ಚಟುವಟಿಕೆಗಳನ್ನೂ ಗುಣ ನಡತೆ ಮತ್ತು ಕ್ರಮಗಳನ್ನೂ ಸ್ಪಷ್ಟ ವಾಣಿಯಿಂದ ಖಂಡಿಸಿದರು. ಅಂದೇ ಮುಂಜಾನೆ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಹೊಸ ಕಾರ್ಯಾಲಯವನ್ನು ತೆರೆಯುತ್ತಾ, "ಅಂತರ್ಪ್ರಾಂತೀಯ ಮಧ್ಯವಾಹಿ ಭಾಷೆಯಾಗಿ ಹಿಂದುಸ್ಥಾನಿಯು ನಿಯೋಜಿಸಲ್ಪಡಲಿದೆ. ಸ್ಥಳೀಯ ಭಾಷೆಗಳಿಗೆ ಹಿಂದುಸ್ಥಾನಿಯು ಪ್ರತಿಸ್ಪರ್ಧಿಯಾಗುವಂತಿಲ್ಲ; ಆಗಲ್ಲ, ಅದು ಇತರ ಭಾಷೆಗಳ ಹಿರಿಯ ಸಹೋದರಿ ಮಾತ್ರ" ಎಂದರು.

ತಾ. 25ನೇ ಅಪರಾಹ್ನ ಮದ್ರಾಸಿನ ಟ್ರಿಪ್ಲಿಕೇನ ಬೀಚಿನಲ್ಲಿ ಸೇರಿದ್ದ ಐದು ಲಕ್ಷಕ್ಕೂ ಮಿಕ್ಕಿದ ಪ್ರಚಂಡ ಸಭೆಯೂ, ಅನು ತದೇಕಚಿತ್ತದಿಂದ 90 ಮಿನಿಟುಗಳ ವರೆಗೆ ಪಂಡಿತಜೀಯ ಭಾಷಣವನ್ನಾಲಿಸಿದ ಆ ಶಿಸ್ತು ಗಾಂಭೀರ್ಯವೂ ಮದ್ರಾಸಿನ ಚರಿತ್ರೆಯಲ್ಲೇ ಅತ್ಯಪೂರ್ವ ವಿದ್ಯಮಾನ. ಅಂತೆಯೇ ಪಂಡಿತಜೀ ಅಲ್ಲಿ ಮಾಡಿದ್ದ ಭಾಷಣವೂ ಅತ್ಯಮೋಘವಿದ್ದು ಉಪನ್ಯಾಸ ದಾಖಲೆಯಲ್ಲಿ ಮಿರುಗಿನಕ್ಷರಗಳಿಂದ ಉಲ್ಲೇಖಿಸಲ್ಪಡುವಂತಹದು. ಸ್ವಾತಂತ್ರ್ಯದ ಚರಿತ್ರೆ-ಆ ಸ್ವಾತಂತ್ರ್ಯವು ತಮ್ಮ ಮೇಲೆ ಹೇರಿರುವ ಅಪಾರ ಹೊರೆ-ಇತ್ಯಾದಿಗಳನ್ನೆಲ್ಲಾ ಮನ ಮುಟ್ಟುವಂತೆ ವರ್ಣಿಸಿ ಕೇವಲ ಸರಕಾರದಿಂದೇನೂ ಆಗಲಾರದೆಂದೂ ಎಲ್ಲರೂ ಒಕ್ಕಟ್ಟಾಗಿ ತಮ್ಮೊಡನೆ ಸಹಕರಿಸಬೇಕೆಂದೂ ಪಂಡಿತಜೀ ಆಗ್ರಹಪೂರ್ವಕ ವಿಜ್ಞಾಪಿಸಿಕೊಂಡರು. ಪಾಕಿಸ್ತಾನವು ಭಾರತದ ಮೇಲೆ ಜಾಗತಿಕ ಸಂಘದಲ್ಲೂ ಈಗಲೂ ಮಾಡುತ್ತಿರುವ ಸುಳ್ಳು ಆರೋಪಗಳನ್ನೆಲ್ಲಾ ಅಲ್ಲಗಳೆದು 'ಭಾರತಕ್ಕೆ ಪಾಕಿಸ್ತಾನದ ಆಕ್ರಮಣೇಚ್ಛೆಯಿಲ್ಲ. ಪಾಕಿಸ್ತಾನವು ಇಂದು ತೋರಿಕೊಂಡಿರುವ ಕೆಸರುಕುಂಡದಲ್ಲಿ ಭಾರತವೂ ಸೇರಿಕೊಳ್ಳಲಿಚ್ಛಿಸುವದಿಲ್ಲ' ಎಂದರು, ಭಾರತದ ಮುಸ್ಲಿಮರು ತ್ರಿಕರಣಪೂರ್ವಕ ಭಾರತಕ್ಕೆ ವಿಧೇಯರಾಗಿರಬೇಕೆಂದು ಉಪದೇಶಿಸಿ ಜಾತೀಯತೆಯೆಂಬುದೇ ಇರಕೂಡದೆಂದು ಒತ್ತಿ ಹೇಳಿದರು. ಹೈದರಾಬಾದಿಗೆ ಸ್ಪಷ್ಟ ಎಚ್ಚರಿಕೆ ಕೊಡುತ್ತಾ ಪಂಡಿತಜೀಯವರು:"ಹೈದರಾಬಾದಿನ ಸ್ವಾತಂತ್ರ್ಯವೆಂಬ ಎಂತಹದನ್ನಾದರೂ, ಯಾವ ಸಂದರ್ಭದಲ್ಲಾದರೂ ನಾವು ಒಪ್ಪುವಂತಿಲ್ಲ. ಭಾರತ ಕೇಂದ್ರಾಧೀನದ ಪೂರ್ಣ ಸದಸ್ಯನಾಗಿ ಹೈದರಾಬಾದು ಸೇರಿಕೊಳ್ಳಬೇಕು-ಸೇರಿಕೊಳ್ಳುವದು--ಎಂಬ ಕುರಿತು ನನಗಾವ ಸಂದೇಹವೂ ಇಲ್ಲ. ಅದು ಹಾಗೆ ಮಾಡದಿದ್ದರೆ ಅದರ ಅದೃಷ್ಟ ಏನಾಗುವುದೋ ನಾನು ಹೇಳಲಾರೆ. ಅದೊಂದು ಸಂಸ್ಥಾನವಾಗಿರುವುದೇ ಅಳಿಸಿಹೋಗಬಹುದು; ಅಥವಾ ಅದು ಸಮ್ಮಿಳಿತ ಉಪಭಾಗವಾಗಿರದಂತಾಗಲೂಬಹುದು."

ನೆಹರುಗಳು ಮದ್ರಾಸ್, ಪ್ರಾಂತ್ಯಕ್ಕೊಂದು 'ಟೋನಿಕ್' ಕೊಟ್ಟರು; ಅಖಿಲ ಭಾರತದ ಮುಖ್ಯ ಸಮಸ್ಯೆಗಳ ಕಡೆಗೆ ಸ್ಪಷ್ಟ ಪ್ರಕಾಶ ಚೆಲ್ಲಿ ಹೋದರು!

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ನೋಡಿಯೇ ತೀರಬೇಕೆಂಬ ಪ್ರತಿಜ್ಞೆ ಇದ್ದರೇನೆ
ಬರಬೇಕಾಗಿದ್ದ ಪ್ರತಿಜ್ಞೆಯು ಪ್ರತಿಸ್ಪರ್ಧಿಸಲ
ಸಾಧ್ಯವಾದ ಚಿತ್ರವಾಗಿ ಬಂದಿತು.

ಪ್ರತಿಜ್ಞಾ [ಚಿತ್ರ್ರದವರ ಕಲಾಪೂರ್ಣ ಚಿತ್ರ]

ಮೋತಿಲಾಲ್, ಸ್ವರ್ಣಲತಾ, ಸುನೇತ್ರಾ, ಬುಧೊ ಅದ್ವಾನಿ, ಸಂಕತಾ, ಬೇಬಿ ಮೀನಾ ಮೊದಲಾದವರು.

ತಾ. **22—7—48**ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಬರುವ ಚಿತ್ರ—ಫಿಲ್ಮಿಸ್ತಾನದವರ ● **ಮಜದೂರ್** ●

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಪುಸ್ತಕ ಪ್ರಪಂಚ

ಮಾಸ ಪತ್ರಿಕೆ
ಕ್ರೌನ್ ಅಷ್ಟದಳ ೬೪ ಪುಟ.

ವಾರ್ಷಿಕ ಚಂದಾ ರೂ. ೪-೧-೦ **ಬಿಡಿಪ್ರತಿ ೦-೬-೦**

ಪ್ರತಿ ತಿಂಗಳೂ ಪುಸ್ತಕ ಪ್ರಪಂಚ ೬೪ ಪುಟದ ಸುಂದರ ಪುಸ್ತಕವಾಗಿ ಪ್ರಕಟವಾಗುತ್ತದೆ. ನುರಿತ ಬರಹಗಾರರಿಂದ ಪ್ರಪಂಚದ ಅನೇಕ ಭಾಷೆಗಳಲ್ಲಿರುವ ಉತ್ತಮ ಗ್ರಂಥಗಳ ಮತ್ತು ಲೇಖನಗಳ ಸಾರವತ್ತಾದ ಭಾಗಗಳೂ, ಕನ್ನಡ ಗ್ರಂಥಗಳ ವಿಮರ್ಶೆಗಳೂ, ಉತ್ತಮ ದರ್ಜೆಯ ಲಲಿತ ಪ್ರಬಂಧ, ಪುಟ್ಟ ಕತೆ, ಏಕಾಂಕ ನಾಟಕ, ಕವನ ಮುಂತಾದುವುಗಳೂ, ಸುಂದರ ಚಿತ್ರಗಳೊಡನೆ ಈ ಪತ್ರಿಕೆಯಲ್ಲಿ ಪ್ರಕಟವಾಗುವುವು. ಇದು ವಾಚನಾಲಯಗಳಿಗೆ, ಓದುಗರಿಗೆ, ಮತ್ತು ಪುಸ್ತಕ ಭಂಡಾರಗಳಿಗೆ ಕೈಪಿಡಿಯಂತಿದೆ. ವಾರ್ಷಿಕ ಚಂದಾ ಕೇವಲ ನಾಲ್ಕು ರೂಪಾಯಿ. ಚಂದಾದಾರರಾಗಲು ಇಷ್ಟವುಳ್ಳವರು ದಯವಿಟ್ಟು ತಮ್ಮ ಚಂದಾ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿದೆ.

ವಿಳಾಸ:- ಚೀಫ್ ಎಕ್ಸಿಕ್ಯುಟಿವ್ ಆಫೀಸರ್,
ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ,
ಜಿಲ್ಲಾ ಬೋರ್ಡು ಕಟ್ಟಡ, ಮೈಸೂರು.

ಸಂಸ್ಥಾನದ ಎಲ್ಲ ಮಿಡ್ಲ್ ಮತ್ತು ಹೈಸ್ಕೂಲುಗಳ ಪುಸ್ತಕ ಭಂಡಾರ ಮತ್ತು ವಾಚನಾಲಯಗಳು 'ಪುಸ್ತಕ ಪ್ರಪಂಚ'ಕ್ಕೆ ಚಂದಾದಾರರಾಗಬೇಕೆಂದು ವಿದ್ಯಾ ಇಲಾಖೆಯ ಡೈರೆಕ್ಟರವರ ನೋಟಿಫಿಕೇಶನ್ ನಂ. ೧೯೬೮-೩೩ (೧೯೪೭-೪೮) ತಾರೀಖು ೫-೯-೪೭ರ ಪ್ರಕಾರ ಅಪ್ಪಣೆಯಾಗಿದೆ. ಆದ್ದರಿಂದ ಆಯಾ ಸಂಸ್ಥೆಯ ಮುಖ್ಯಾಧಿಕಾರಿಗಳು ಬೇಗನೆ ಚಂದಾ ಹಣ ಕಳುಹಿಸಿ ಕೊಡಲು ಕೋರಿಕೆ.

ವರನು ಬೇಕು

ಗೌಡ ಸಾರಸ್ವತ ಸಮಾಜದ ಹದಿನೈದು ವರುಷ ಪ್ರಾಯದ ಎಂಟನೆ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿದ ಸುಲಕ್ಷಣ ಕನ್ಯೆಗೆ ವರನು ಬೇಕು.

ವರನು ಗೌಡ ಸಾರಸ್ವತ ಅಥವಾ ಸಾರಸ್ವತ ಸಮಾಜದವನಿದ್ದು ಸಾಕಷ್ಟು ಸಂಪನ್ನನಿರಬೇಕು. ರಿಜಿಸ್ಟರ್ಡ್ ಮದುವೆ ಮಾಡಿ ಕೊಡಲೂಬಹುದು. ಎರಡನೆ ಸಂಬಂಧ ಮದುವೆ ಮಾಡಿಕೊಡಲೂ ಒಪ್ಪಿಗೆಯಿದೆ. ಹೆಚ್ಚಿನ ವಿವರಗಳಿಗೆ ಪತ್ರವ್ಯವಹಾರ ಮಾಡಬಹುದು ಇಲ್ಲವೆ ಮುಖತಃ ಮಾತನಾಡಬಹುದು.

ಸರಸ್ವತಿ ನರಸಿಂಹ ಶ್ಯಾನುಭಾಗ,
ಸೋದೆ ಮಠದ ರಸ್ತೆ,
ಉಡುಪಿ. [ದ. ಕನ್ನಡ]

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— 3.28 Crores

Our Chief Agency New business in 1946 bout 54 Lakhs

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India.
Bombay Life Building,
Central Office, Udipi:

Branches at:

Mangalore, Calicut, Trivandrum, Madura, Madras, Bangalore & Bombay,

WANTED

Wanted a qualified accountant. Salary according to qualifications.

Apply sharp,

To, The Agent,

Sri Admar Mutt,

UDIPI, S. K.

ಅಮೃತಾಂಜನ ತಲೆನೋವು, ತಿರುವೇದನೆ, ಉಳುಕು, ಕತ್ತಿಗೆ, ಘಟ್ಟ ಹಲ್ಲು ವೇದನೆಗಳು ಎದೆನೋವು, ಗಾಯಗಳು ಬಾತು ಕೊಳ್ಳುವುದು, ಹುಳು ಕಚ್ಚುವಿಕೆ ಮುಂತಾದ ಜಾತಿ ಕಷ್ಟಗಳಿಗೆ ಮೊದಲಾದ ಎಲ್ಲಾ ರೋಗಗಳಿಗೂ ಹಿತ

REGD.

ಅಧಿಕ ಗುಣಶಕ್ತಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ಋತುಸ್ರಾವ ನಿಂತಿತು

'ಕುಮಾರ್' ದಿಲ್ಲಿಗಳನ್ನು ಉಪಯೋಗಿಸಿದರೆ ಹಡತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಕಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MRS. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಮೂಲ್ಕಿ—ಇಲ್ಲಿಯ ಶ್ರೀ ಎಮ್. ಗಿರಿಯಪ್ಪ ದೇವಾಡಿಗರು ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಸರಕಾರಿ ಕೆಲಸಕ್ಕೆ ನೇಮಿಸಲ್ಪಟ್ಟ 'ಸಂತೋಷ ಸೂಚನಾರ್ಥವಾಗಿ ತಾ 16ರಲ್ಲು ಶ್ರೀಯುತರಿಗೆ ಸ್ಥಳೀಯ ದೇವಾಡಿಗ ಶುಭೋದಯ ಸಂಘದವರು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು, ಅಂದಿನ ಸಮಾರಂಭವು ಬಪ್ಪನಾಡು ಸಹಕಾರಿಸಂಘದ ಕಟ್ಟಡದಲ್ಲಿ ಶ್ರೀ ಬಿ. ಭೋಜರಾಯರ ಅಧ್ಯಕ್ಷತೆಯಲ್ಲಿ ಜರಗಿ ಹಲ ಕೆಲವರ ಸಂದರ್ಭೋಚಿತ ಮಾತುಗಳಾದುವು.

ಬೈಲೂರು—ಇದೇ ತಾ 18ರಲ್ಲು ಇಲ್ಲಿಯ ಕಾಂಗ್ರೆಸ್ ಸೇವಾದಳದ ಸಭೆಯು ಶ್ರೀ ಶಂಕರಪ್ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಾಂಗ್ರೆಸ್‌ಕಮಿಟಿಯ ಹೊಸ ಅಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರನ್ನು ಅಭಿನಂದಿಸುವ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರು ಜಿಲ್ಲಾ ಪ್ರವಾಸವನ್ನು ಕೈಗೊಂಡು ಸರಕಾರದ ಹಾಗೂ ಕಾಂಗ್ರೆಸ್ ಸಂಸ್ಥೆಯ ಪ್ರತಿಷ್ಠೆ ಹೆಚ್ಚುವಂತೆ ಪ್ರಚಾರ ಕಾರ್ಯ ಕೈಕೊಳ್ಳುವಂತೆ ವಿನಂತಿಸುವ ನಿರ್ಣಯಗಳಾದುವು.

ಪೆರ್ಡೂರು—ತಾ 7ರಲ್ಲು ಪೆರ್ಡೂರು ಗ್ರಾಮಸ್ಥರ ಸಭೆಯು ಶ್ರೀ ಸಿ. ಹಿರಿಯಣ್ಣ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿ ಗ್ರಾಮ ಸಂಘವು ರಚಿಸಲ್ಪಟ್ಟಿತು. ಶ್ರೀಗಳಾದ ಎ. ಕೃಷ್ಣಯ್ಯ ಹೆಗ್ಡೆ (ಅಧ್ಯಕ್ಷ), ಎ. ಪಿ. ಕಲ್ಯಾಣ (ಕಾರ್ಯದರ್ಶಿ), ಬಿ. ವೈ. ಕಪ್ಪಹೆಗ್ಡೆ (ಖಜಾನ್ಜಿ) ಕೆ. ನಾರಾಯಣ ಸೆಟ್ಟಿ, ಸಿ. ಹಿರಿಯಣ್ಣ ಸೆಟ್ಟಿ, ಬಿ. ಲಕ್ಷ್ಮೀನಾರಾಯಣ ನೆಲ್ಲಿ, ರಘುರಾಮಕುಂಡ ಹೆಗ್ಡೆ, ಬಿ. ಸಂಜೀವ ಹೆಗ್ಡೆ, ಮತ್ತು ರಾಘವೇಂದ್ರ ಮಲ್ಯ ಇವರನ್ನು ಕಮಿಟಿಯ ಸದಸ್ಯರಾಗಿ ಆರಿಸಲಾಯಿತು,

ತಾ 25ರಲ್ಲು ಕಮಿಟಿಯ ಸಭೆಯು ಶ್ರೀ ಎ ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಮಕ್ಕಳ ವಿವಿಧ ವಿನೋದಾವಳಿ, ಶ್ರೀ ಸಿ ಹಿರಿಯಣ್ಣ ಸೆಟ್ಟರ ಭಾಷಣಾದಿ ಕಾರ್ಯಕ್ರಮಗಳಾದುವು

ಬ್ರಹ್ಮಾವರದಲ್ಲಿ ಜಿಲ್ಲಾ ವೈದ್ಯ ಪರಿಷತ್ತು—ಉಡುಪಿ ತಾಲೂಕು ನಿವಿಷ್ಟ ವೈದ್ಯರ ಸಂಘದ ಕಾರ್ಯ ಸಮಿತಿಯ ಸಭೆಯೊಂದು ತಾ ೧೮ರಂದು ಜರಗಿ, ಇದುವರೆಗಿನ ಲೆಕ್ಕಪತ್ರಗಳ ಮಂಜೂರಾತಿ, ಶ್ರೀ ತೋನ್ಸೆ ಗೋಪಾಲ ಪೈಗಳಿಂದ ಜಿಲ್ಲಾ ವೈದ್ಯ ಪರಿಷತ್ತಿಗೆ ಬ್ರಹ್ಮಾವರಕ್ಕೆ ಬಂದ ಆಮಂತ್ರಣದ ಸ್ವೀಕಾರ. ವೈದ್ಯಕೀಯ ಪತ್ರಿಕೆಯೊಂದನ್ನು ಹೊರಡಿಸುವುದು, ವೈದ್ಯರನ್ನು ಸಿದ್ಧಗೊಳಿಸುವುದು ಮುಂತಾದ ನಿರ್ಣಯಗಳಾದುವು. ಜಿಲ್ಲಾ ಪರಿಷತ್ತಿಗೆ ಈ ಕೆಳಗಿನವರುಳ್ಳ ಸಲಹಾ ಸಮಿತಿ ರಚಿಸಲ್ಪಟ್ಟಿದೆ ಶ್ರೀ ಸಿ. ಲಕ್ಷ್ಮೀನಾರಾಯಣ ನಾಯಕ್ (ಅಧ್ಯಕ್ಷ) ಶ್ರೀ ಕಾ. ರಾ. ಪುರಾಣಿಕ (ಕಾರ್ಯದರ್ಶಿ) ಶ್ರೀಗಳಾದ ಟಿ. ಎಸ್. ಕೇಳು ನಂಬಿಯಾರ್, ಕೆ ಯನ್ ಸುವರ್ಣ, ಯು ರತ್ನಾಕರ ಶೆಣೈ (ಸದಸ್ಯರು)

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

R. E. P. No. 688/1947.

ಕೆ. ಉಗ್ಗಪ್ಪ ಶೆಟ್ಟಿ —ಅರ್ಜಿದಾರ.

ಮತ್ತು

ಪಾರ್ವತಿ ಹೆಂಗಸು —ರೆಸ್ಪಾಂಡೆಂಟಳು.

ರೆಸ್ಪಾಂಡೆಂಟ ಪಾರ್ವತಿ ಹೆಂಗಸು-ಕಾರ್ಬಾನೆ ಅಪ್ಪಯ್ಯ ಶೆಟ್ರ ಮಗಳು. ಕಾಸರಗೋಡು ತಾಲ್ಲೂಕು ಕಾಸರಗೋಡು ಕಸಬೆಯಲ್ಲಿ ವಾಸಿಸಳು. ಇವಳಿಗೆ ತಿಳಿಸುವದೇನೆಂದ್ರೆ:-

ಮೇಲ್ಕಂಡ ಅಮಲ್ಜಾರಿಯಲ್ಲಿ ಅರ್ಜಿದಾರನು ಹಾಜರುಪಡಿಸಿದ ಏಲಂ ಇಸ್ತಿಹ್ಯಾರಿನ ಶರ್ತಗಳು ನಿರ್ಣಯದ ಬಗ್ಗೆ ಸದ್ರಿ ಅಮಲ್ಜಾರಿಯು ತಾರೀಕು 3-8-1948ಕ್ಕೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

(sd) **S. Laxman Rau,**
Vakil for Petitioner.

Kasaragod, 20-7-1948.

ಶ್ರೀ ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ.

ಮಹಾಜನರಲ್ಲಿ

ವಿನಂತಿ

ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳೂ ಉಡುಪಿಯ ಗಣ್ಯನಾಯಕರೂ ಆದ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಬದುಕಿದ್ದಾಗ ನಾಡಿಗೂ ನುಡಿಗೂ ಸಲ್ಲಿಸಿದ ಸೇವೆಯ ನೆನಪು ಚಿರಕಾಲ ಉಳಿವಂತೆ ಒಂದು ಸೂಕ್ತ ಸ್ಮಾರಕ ಯೋಜನೆಯನ್ನು ರಚಿಸಬೇಕೆಂದು ತಾ. 24-6-48ರಂದು ಉಡುಪಿ ಬೋರ್ಡು ಹೈಸ್ಕೂಲಿನ ಸೀಸಲ್ಸ್ ಹಾಲಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ರಚಿಸಲ್ಪಟ್ಟ ಕೊರಡ್ಕಲ್ ಸ್ಮಾರಕ ಸಮಿತಿಯು ನಿಶ್ಚಯಿಸಿದೆ. ತೈಲಚಿತ್ರ [illegible]ವರಣ, ಸ್ಮಾರಕ ಗ್ರಂಥಪ್ರಕಾಶನ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಿವಿಧ ಪಾರಿತೋಷಗಳ ವ್ಯವಸ್ಥೆ ಮುಂತಾದುವನ್ನೇ ಸಮಿತಿ ಉದ್ದೇಶವಾಗಿಟ್ಟುಕೊಂಡಿದೆ. ಸಂಗ್ರಹವಾದ ಮೊತ್ತವನ್ನು ಅವಲಂಬಿಸಿ ಇವನ್ನು ಪೂರ್ತಿಯಾಗಿ ಅಥವಾ ಅಂಶತಃ ಕೈಗೊಳ್ಳಲಾಗುವುದು.

ಶ್ರೀ ಕೊರಡ್ಕಲ್ ಶ್ರೀನಿವಾಸರಾಯರನ್ನು ಬಲ್ಲವರೂ, ಶಿಷ್ಯವೃಂದದವರೂ, ಗೆಳೆಯರೂ, ಅಭಿಮಾನಿಗಳೂ ಈ ಸತ್ಕಾರ್ಯಕ್ಕೆ ಉದಾರವಾದ ಸಹಾಯವನ್ನು ನೀಡಿ ನಮ್ಮೊಡನೆ ಸಹಕರಿಸಬೇಕೆಂದು ವಿನಂತಿ.

ಡಾ| ಸುಂದರರಾವು ಪೈ,
ಅಧ್ಯಕ್ಷ.

ಬೈಲೂರು ವಾಸುದೇವ ರಾವ್,
ಉಪಾಧ್ಯಕ್ಷ ಮತ್ತು ಕೋಶಾಧಿಕಾರಿ.

ಕೆ. ಹೊನ್ನಯ್ಯ ಸೆಟ್ಟಿ,
ಕಾರ್ಯದರ್ಶಿ.

ಹಣವನ್ನು ಕೆಳಗಿನ ವಿಳಾಸಕ್ಕೆ ಕಳಿಸಬಹುದು. ಕಾರ್ಯದರ್ಶಿ, ಕೊರಡ್ಕಲ್ ಸ್ಮಾರಕ ಸಮಿತಿ, ನವಯುಗ ಪ್ರೆಸ್,

ಇದು ಕಾಲಚಕ್ರವನ್ನು ಜಯಿಸಿ ನಿಂತಿದೆ

SERIES No. 4

ಅದೇ ರೀತಿ

ಭಾರತವೂ

ನಮ್ಮ ಪಾಲಿಸಿದಾರರು ಅವರ ಪಾಲಿಸಿಯ ಸುಲಭ ಪರಿಸ್ಥಿತಿ ಮತ್ತು ಪ್ರಯೋಜನ ಇವುಗಳು ಅವರ ಅವಶ್ಯಕತೆ, ರೀತಿ ಮತ್ತು ಶಾಸ್ತ್ರೀಯ ರೀತಿಯಲ್ಲಿ ಪರಿಸ್ಥಿತಿಗನುಗುಣವಾಗಿ ಆಗುವ ಬದಲಾವಣೆ ಇವುಗಳಿಗೆ ತಕ್ಕುದಾಗಿ ಇವೆ ಎಂಬುದನ್ನು ತಿಳಿದಿರುವರು. ಯಾವ ಸಂಸ್ಥೆಯ ಆರ್ಥಿಕ ಸ್ಥಿತಿ ಪಾಲಿಸಿದಾರರೊಡನೆ ಯೋಗ್ಯ ಮತ್ತು ನ್ಯಾಯವಾದ ವರ್ತನೆ, ಪಾಲಿಸಿದಾರರ ಆವಶ್ಯಕತೆಯನ್ನು ತಿಳಿಸುವುದರಲ್ಲಿ ವಿನಿಯೋಗಿಸುವ ಕುಶಲತೆ ಇವುಗಳಿಂದ ತನ್ನ ಹೆಸರನ್ನೂ ಜನರ ಪ್ರೀತಿಯನ್ನೂ ಗಳಿಸಿದುವವೋ ಆ ಮುಂದೊಕ್ಕುವ ಸಂಸ್ಥೆಗಳು ಏಳಿಗೆಯಲ್ಲಿ ತಾವೂ ಭಾಗವಹಿಸುವೆವು ಎಂಬುದನ್ನು, ಅವರು ತಿಳಿದಿರುವರು.

ಭಾರತ ಇನ್ಶೂರೆನ್ಸ್ ಕಂ ಲಿಮಿಟೆಡ್

ಸ್ಥಾಪನೆ: ೧೮೯೬

ಮುಖ್ಯ ಕಚೇರಿ: ನಂಬ್ರ ೧, ದರ್ಯಾಗಂಜ್, ದೆಹಲಿ

ಶಾಖೆಗಳು: ಹಿಂದೂಸ್ಥಾನ, ಪೂರ್ವ ಆಫ್ರಿಕ, ಸಿಲೋನ್ ಮತ್ತು ಮಲಯಾ—ಇವುಗಳ ಎಲ್ಲಾ ಭಾಗಗಳಲ್ಲಿ

ADARTS BI 4 Kanarese

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣನ ಗುಡಿಗೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ!

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧದ ಬಾಟ್ಲಿಗಳು ಜಿಲ್ಲೆಯ ಕೆಲವು ಔಷಧಿಶಾಲೆಗಳಿಗೆ ಬರುವವು. ಅಂದರೆ ಕೇವಲ ಈ ರಸಾಯನಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

ಸ್ಟಾಕಿಸ್ಟರು- ಡಾ| ಬಿ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಯರೋಗ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; $\frac{1}{2}$ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಶ್ ಸಂಗ್ತಿ ಬರದಲ್ಲಿ ರೋಗಳ್ಳ ತಕ್ಕಂತ ಔಷಧಿ ರವಾನಿಸಬಹುದು (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್, 183, ಸುಕಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಎಲ್ಲ ತರದ ದಂತ ರೋಗಗಳನ್ನು ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಸ್ವೀಕಾರ—ವಿಮರ್ಶೆ

ದಕ್ಷಿಣ ಕನ್ನಡದ ಇತಿಹಾಸ:— [ತುಳುವ ಚರಿತ್ರೆ] ಗ್ರಂಥಕರ್ತ ಮತ್ತು ಪ್ರಕಾಶಕರು, ಶ್ರೀ ಕೇಶವ ಕೃಷ್ಣ ಕುಡುವ, ಕಾರ್ಕಳ, ಲಾಲ್‍ಬಾಗ್, ಮಂಗಳೂರು, ದ. ಕ. ಪುಟಗಳು. ಕಿರೀಟಾಕಾರದ ೧೭೪. ಬೆಲೆ: ರೂ. ೨-೧೨-೦

ನಮ್ಮ ಜನಸಾಮಾನ್ಯರಿಗೆ ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಅನ್ಯದೇಶಗಳ ಚರಿತ್ರೆ ತಿಳಿದಿರುವಷ್ಟು, ನಮ್ಮ ತಾಯ್ನಾಡಾದ ದಕ್ಷಿಣ ಕನ್ನಡ ಚರಿತ್ರೆಯೇ ತಿಳಿದಿಲ್ಲವೆಂದರೆ ತಪ್ಪಾಗಲಾರದು. ಅದಕ್ಕೆ ಬೇರೆ ಎಷ್ಟೇ ಕಾರಣಗಳಿದ್ದರೂ ವ್ಯವಸ್ಥಿತರೂಪದಲ್ಲಿ ಸಂಗ್ರಹಿಸಲ್ಪಟ್ಟ ಚರಿತ್ರೆಯ ಪುಸ್ತಕಗಳಿಲ್ಲದಿರುವುದೇ ಮುಖ್ಯಕಾರಣವಾಗಿದೆ. ಆ ದೃಷ್ಟಿಯಿಂದ, ಶ್ರೀ ಗಣಪತಿ ಕುಡುವರು ತಮ್ಮ ಉಪಯುಕ್ತವಾದ ಈ ಗ್ರಂಥದ ಮೂಲಕ, ದಕ್ಷಿಣ ಕನ್ನಡದ ಆವಶ್ಯಕತೆಗಳೊಂದನ್ನು ಸಮರ್ಪಕವಾಗಿ ಪೂರೈಸಿಕೊಟ್ಟಿದ್ದಾರೆಂದೇ ಅವರು ಅಭಿನಂದನಾರ್ಹರು. ಪುರಾಣ ಕತೆಗಳು, ಐತಿಹ್ಯಗಳು, ಚಾರಿತ್ರಿಕ ಸಿದ್ಧಾಂತಗಳು, ಮತ್ತು ಪಾಡ್ದನಗಳಂತಹ ಜನಪದ ಸಾಹಿತ್ಯ ಈ ಚಾರಿತ್ರಿಕ ಸಾಮಗ್ರಿಗಳ ಬೆಂಬಲದಿಂದಲೇ ತುಳುನಾಡಿನ ಸಾದ್ಯಂತ ಚರಿತ್ರೆಯನ್ನು ಕಣ್ಣಿಗೆ ಕಟ್ಟುವಂತೆ ಅಂದವಾಗಿ, ಸರಳವಾಗಿ ಅವರು ರಚಿಸಿದ್ದಾರೆ. 'ತುಳುವ' ಪದದ ಉತ್ಪತ್ತಿ, ತುಳುನಾಡಿನ ಪ್ರಾಚೀನತೆ, ಕದಂಬ, ಚಾಲುಕ್ಯರೇ ಮೊದಲಾದ ಕರ್ನಾಟಕ ಸಾಮ್ರಾಟರ ಕೈಕೆಳಗೆ ತುಳುನಾಡನ್ನು ಆಳುತಿದ್ದ ಆಳುಪ ಬೈರರಸರು, ಮತ್ತು ಸಾಮಂತಬಂಗ, ಚೌಟ ಮೊದಲಾದವರ ಸಂಪೂರ್ಣ ಚರಿತ್ರೆ, ಹಾಗೂ ಬ್ರಿಟಿಷ್ ಆಡಳಿತಕ್ಕೊಳಪಟ್ಟ ಬಳಿಕ ಜಿಲ್ಲೆಯಲ್ಲಾದ ಸಾಮಾಜಿಕ, ರಾಜಕೀಯ ಸ್ಥಿತಿ ಬದಲಾವಣೆಗಳು ಇವೆಲ್ಲ ವಿವರಗಳನ್ನೊಳಗೊಂಡ ಈ ಪುಸ್ತಕವು ಪ್ರತಿಯೊರ್ವ ಕನ್ನಡಿಗನೂ ಓದತಕ್ಕುದೇ ಆಗಿದೆ. ಆದರೆ ಗ್ರಂಥಕರ್ತರು ಪ್ರಸ್ತಾವನೆಯಲ್ಲಿ ತಾಗು ೩೫ ವರ್ಷ ರಾಜಭೃತ್ಯನಾಗಿ, ನಿಸ್ಸಾರ ಜೀವನವನ್ನು ಕಳೆದು, ಈಗ ಕನ್ನಡಿಗರ ಸೇವೆಗೆಂದು ಹೊರಟಿರುವುದು ತನ್ನ ದುಡುಕುತನವೆಂದು ಹೇಳಿದ ಮಾತನ್ನು ನಾವು ಒಪ್ಪಲಾರೆವು. ಅವರು ಹೀಗೆ ಮುಂದೆಬಂದಿರುವುದು 'ನಾಡಿನ ಪುಣ್ಯ' ವೆಂದಿಷ್ಟೇ ಹೇಳಬಯಸುತ್ತೇವೆ. ಶ್ರೀಯುತ ಕುಡುವರ ಈ ಗ್ರಂಥವು ಮುಂದಿನ ಮುದ್ರಣದಲ್ಲಿ ಮತ್ತಷ್ಟು ವಿಸ್ತೃತವಾಗಿ, ಸಚಿತ್ರವಾಗಿ ಹೊರಬೀಳಲೆಂದೂ, ಈ ಬಗೆಯ ಇನ್ನೂ ಹಲವು ಸಂಶೋಧನಾತ್ಮಕ ಕೃತಿಗಳು ಶ್ರೀಯುತರ ಲೇಖನಿಯಿಂದ ಹೊರ[illegible] ಹಾರೈಸುತ್ತೇವೆ.

-ಕೆ ವಿ. ಎಸ್.

Notice

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.

O. P. No. 34/1948.

ಅಪ್ಪಚ್ಚು ಹೆಂಗ್ಸು, ಉಂಞ ಹೆಂಗ್ಸಿನ ಮಗಳು. ಪುತ್ತೂರು ತಾಲ್ಲೂಕು ಪೆರುವಾಯಿ ಗ್ರಾಮ. —ಅರ್ಜಿದಾರಳು.

ಉಂಞ ಹೆಂಗ್ಸು, ಕುಂಞಾಂಬು ಹೆಂಗ್ಸಿನ ಮಗಳು. ಸದ್ರಿ ಪೆರುವಾಯಿ ಗ್ರಾಮ —ಎದ್ರಿ.

ಅರ್ಜಿದಾರಳ ಮಗ ಮೃತ ಟಿ. ಕೃಷ್ಣಪ್ಪನ ಹೆಸರಲ್ಲಿ ದಿ. ಮಂಗ್ಳೂರು ಬೇಂಕ್ ಲಿಮಿಟೆಡ್ ವಿಟ್ಲ ಶಾಖೆಯಲ್ಲಿ S. B. M. 65ರ ಪ್ರಕಾರ ರೂಪಾಯಿ 1050-1-5 ಬಾಕಿರುವುದರಿಂದ ಅದನ್ನು ಪಡಕೊಳ್ಳುವರೆ ತನ್ನ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ಮಾಡಿದ ಮೇಲ್ಕಂಡ ಅರ್ಜಿಯು ತಾ 18-8-48ಕ್ಕೆ ಇರುವುದರಿಂದ ಅದಕ್ಕೆ ಯಾರದಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಪುತ್ತೂರು ಕೋರ್ಟು ಮುಂದೆ ಹಾಜರಾಗಿ ಉಜರಿಪಡಿಸಿಕೊಳ್ಳತಕ್ಕದ್ದು. ಎಂತ ಕೋರ್ಟು ಹುಕ್ಕುಂ ಪ್ರಕಾರ ತಿಳಿಸಿಯದೆ.

ಪುತ್ತೂರು, ತಾ. 17-9-1948.

C. S. Shastry.
Vakil for Petitioner.

ಮಂಗಳೂರು

ದ. ಕ. ಕೃಷಿಕರ ಸಹಕಾರಿ ವ್ಯಾಪಾರ ಸಂಘದ ವಾರ್ಷಿಕ ಮಹಾಸಭೆಯು ತಾರೀಕು 25-7-48ನೇ ಆದಿತ್ಯವಾರ ಅಪರಾಹ್ನ 2-30ಕ್ಕೆ ಪುತ್ತೂರು ಸಹಕಾರಿ ಕಟ್ಟಡದಲ್ಲಿ ಶ್ರೀ. ಬೈಂದೂರು ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದಿನ ವರುಷದ ವರದಿಯನ್ನೂ ಮುಂದಿನ ವರ್ಷದ ಖರ್ಚಿನ ಅಂದಾಜು ಪಟ್ಟಿಯನ್ನೂ ಮಂಜೂರುಮಾಡಿದ ನಂತರ ಮುಂದಿನ ವರ್ಷಕ್ಕೆ ಈ ಕೆಳಗಿನವರನ್ನು ಆಡಳಿತ ಮಂಡಳಿಗೆ ಚುನಾಯಿಸಲಾಯಿತು. ಶ್ರೀಗಳಾದ ಬಿ. ಪ್ರಭಾಕರ ರಾವ್, ಮೊಳಹಳ್ಳಿ ಶಿವರಾವ್, ಜಿ. ಕೆ. ಗೋವಿಂದ ಭಟ್ಟ, ಎಂ. ಎಸ್. ಭೀಡೆ, ಸಗ್ರಿಮೂಲೆ ಶಂಕರ ಭಟ್ಟ, S. R. ಕೋಟಿ, ಕೆ. ವೆಂಕಪ್ಪಯ್ಯ, ಎನ್. ವಿ. ಕೊಳತ್ತಾಯ, ಪೆರ್ಡಾಲ್ ಕಪ್ಪಯ್ಯ, ಎಂ. ಬೆಳ್ಳಪ್ಪ ಗೌಡ, ಬಚ್ಚ ಮುರಳಲ್, ಬೈಲೂರು ರಾಮರಾವ್. ನಂತರ ಶ್ರೀ. ಎಂ. ಶಿವರಾಯರು ಸಂಘದ ವಿಷಯ ಮಾತನಾಡಿ ಜನರು ಹೆಚ್ಚಾಗಿ ಸಹಕರಿಸಬೇಕೆಂದು ಕೇಳಿಕೊಂಡರು. ಶ್ರೀ ಸಿ. ಎಸ್. ಶಾಸ್ತ್ರಿಗಳವರು ಮೆಂಬರರಿಗೂ, ನಿವೃತ್ತರಾದ ಆಡಳಿತ ಮಂಡಳಿಯ ಮೆಂಬರರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಲಘು ಉಪಾಹಾರದ ನಂತರ ಸಭೆಯು ಮುಕ್ತಾಯವಾಯಿತು.

ನಿರುದ್ಯೋಗಿಗಳಿಗೆ ಸುಸಂಧಿ— ದ. ಕ. ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಉದ್ಯೋಗವಿಲ್ಲದವರಿಗೆ ಸಮಯಾನುಸಾರ ಉದ್ಯೋಗವನ್ನು ಕಲ್ಪಿಸಿಕೊಡುವ ಶಾಖಾ ಆಫೀಸೊಂದು ತೆರೆಯಲಾಗಿದೆ. ಯುದ್ಧದಲ್ಲಿ ಸೇವೆಮಾಡಿ ಮರಳಿಬಂದಂತಹ ಮಾಜಿ ಸೈನಿಕರು, ಪ್ರಾಯಪೂರ್ತಿಯಾದವರು ಆ ಶಾಖೆಯ ಉದ್ಯೋಗ ಸರಬರಾಯಿ ಆಫೀಸರಿಗೆ ಅರ್ಜಿಮಾಡಿ ತಮ್ಮ ಹೆಸರನ್ನು ರಿಜಿಸ್ಟ್ರ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನಪೇಕ್ಷಿಸುವವರು ಡಿಸ್ಟ್ರಿಕ್ಟ್ ಎಂಪ್ಲೋಯಿಮೆಂಟ್ ಆಫೀಸರ್, ಜಿಲ್ಲಾ ಕಲೆಕ್ಟರರ ಆಫೀಸು, ಮಂಗಳೂರು, ಅವರಿಂದ ಪಡೆಯಬಹುದು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O S. 133-1948.

ಶ್ರೀ ರಾಜರಾಜೇಶ್ವರಿ ಅಮ್ಮನವರ ಭಂಡಾರ —ವಾದಿ.

ಬಿ. ರಾಮಪ್ಪ, ಜಾರಪ್ಪನ ಮಗ. ಪುತ್ತೂರು [illegible] ಗ್ರಾಮದಲ್ಲಿರುವವ—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ,—

ಗೇಣಿ ಬಾಕಿ ವ ಮಿಗಿಗೆ ಕೊಡಾ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 9-8-1948ಕ್ಕೆ ಇಟ್ಟಿರುವುದ್ರಿಂದ ಸದ್ರಿ ವ್ಯಾದೆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ನೀವು ಈ ಕೋರ್ಟು ಮುಂದೆ ಹಾಜರಾಗಿ ಉಜರಿಸಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯವು ಫೈಸಲು ಮಾಡೋಣಾದೀತೆಂತ ನೀವು ತಿಳಿಯತಕ್ಕದ್ದು.

(ಕೋರ್ಟು ಹುಕ್ಕುಂ ಪ್ರಕಾರ)

ಮೊಕ್ಕಾಂ: ಪುತ್ತೂರು. ತಾ 17-7-1948.

S. Soorappaya.
Vakil for Plaintiff.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

ಮಂಗಳೂರು

ಅಮ್ಮೆಂಬಳ ಶ್ರೀನಿವಾಸ ಪೈಗಳ

ನಿಧನ—ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳು ಇದೇ ತಾ 20ರಲ್ಲು ರಾತ್ರಿ ತಮ್ಮ 79ನೆ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ, ದಿವಂಗತರು ಭಾರತದ ಒಕ್ಕೂಟ ಸರಕಾರದ ಪ್ರಧಾನಿ ಜವಾಹರಲಾಲ ನೆಹರುಗಳಿಗೆ ಕೇಂದ್ರ ಸೆಕ್ರೆಟೇರಿಯಟ್ಟಿನ ಬಗ್ಗೆ ಖಾಸಗಿ ಕಾರ್ಯದರ್ಶಿಗಳಾಗಿರುವ ಶ್ರೀ ಎ. ವಿ ಪೈ, ಐ. ಸಿ. ಎಸ್. ಅವರ ಜನಕ.

ದಿವಂಗತರು ಅಮ್ಮೆಂಬಳ ಕುಟುಂಬದಲ್ಲಿ ಚಿಕ್ಕಂದಿನಲ್ಲಿ ಉಚ್ಚ ಶಿಕ್ಷಣಪಡೆದು ಮಂಗಳೂರಲ್ಲಿ ವಕೀಲವೃತ್ತಿಯನ್ನು ಕೈಕೊಂಡಾಗಲೇ ಸಾರ್ವಜನಿಕ ಸಂಘ ಸಂಸ್ಥೆಗಳಲ್ಲಿ ಗಣನೀಯ ಪಾತ್ರವನ್ನು ವಹಿಸಿದ್ದರು. ಶಿಕ್ಷಣ ಕ್ಷೇತ್ರದಲ್ಲೂ ತಮ್ಮ ಸೇವೆಯನ್ನು ಸಲ್ಲಿಸಿದ್ದರು. ಇವರ ನಿಧನದ ಸಲುವಾಗಿ ಕೆನರಾ ಹೈಸ್ಕೂಲು, ಕೆನರಾ ಬಾಲಿಕಾ ಪಾಠಶಾಲೆಗಳು ಮುಚ್ಚಲ್ಪಟ್ಟು ವಿದ್ಯಾರ್ಥಿಗಳೂ ಅಧ್ಯಾಪಕರೂ ಸೇರಿ ದಿವಂಗತರ ಗುಣಗಾನ ಮಾಡಿ ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸಿದರು. ಜಿಲ್ಲಾ ಕೋರ್ಟಿನಲ್ಲಿ, ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ, ದ. ಕ. ವಾಣಿಜ್ಯ ಸಂಘದಲ್ಲೆಲ್ಲಾ ದುಃಖಸೂಚಕ ಸಭೆಗಳು ಜರಗಿ ಶ್ರೀ ಪೈಗಳ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು.

ಸಾಹುಕಾರ ಬಂಧುಗಳು ತಂತಮ್ಮ ಅಂಗಡಿಗಳನ್ನು ಮುಚ್ಚಿ ತಮ್ಮ ದುಃಖವನ್ನು ಪ್ರದರ್ಶಿಸಿದರು.

ಇಂತಹ ಸದ್ಗುಣಪೂರ್ಣ ಗಣ್ಯವ್ಯಕ್ತಿಯ ನಿಧನದಿಂದ ನಮ್ಮ ಜಿಲ್ಲೆಗೆ ಅಪಾರ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿಕೋರಿ ಬಂಧುಮಿತ್ರರ ದುಃಖದಲ್ಲಿ ಸಹಭಾಗಿಗಳಾಗುತ್ತೇವೆ.

ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಸ್. ಸುಬ್ಬರಾಯರು—ನಿವೃತ್ತರಾಗುವ ನಿಮಿತ್ತ ಅವರನ್ನು ಬೀಳ್ಕೊಡುವ ಸತ್ಕಾರ ಕೂಟವೊಂದು ತಾ 16ರಲ್ಲಿ ಗವರ್ನಮೆಂಟ್ ಹಾ। ಎ। ಟ್ರೈನಿಂಗ್ ಶಾಲೆಯಲ್ಲಿ ಜರಗಿತು. ಜಿಲ್ಲೆಯ ವಿದ್ಯಾಖಾತೆಯ ನೌಕರರೂ ಅಧಿಕಾರಿಗಳೂ ಬಹುತೇಕವಾಗಿ ಬಂದಿದ್ದರು.

ವಿಭಕ್ತ ಕೋರ್ಸ್—ಕೆಲವು ಆರಿಸಲ್ಪಟ್ಟ ಸೆಕೆಂಡರಿ ಶಾಲೆಗಳಲ್ಲಿ 1948-49ನೆ ಶಾಲಾ ವರ್ಷದಲ್ಲಿ ವಿಭಕ್ತ ಕೋರ್ಸುಗಳನ್ನು ಆರಂಭಿಸಬೇಕೆಂದು ಸರಕಾರವು ನಿಶ್ಚಯಿಸಿರುತ್ತದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಆರಿಸಲ್ಪಟ್ಟ ಶಾಲೆಗಳ ವಿವರ ಹೀಗಿದೆ, ಬೋರ್ಡು ಹೈಸ್ಕೂಲು, ಪುತ್ತೂರು, ಎಗ್ರಿಕಲ್ಚರ್; ಸೈಂಟ್ ಎಲೋಸಿಯಸ್ ಕಾಲೇಜು ಹೈಸ್ಕೂಲು, ಮಂಗಳೂರು, ಇಂಜಿನಿಯರಿಂಗ್; ಕೆನರಾ ಹೈಸ್ಕೂಲು, ಮಂಗಳೂರು, ಇಂಜಿನಿಯರಿಂಗ್; ಸೈಂಟ್ ಆಗ್ನೆಸ್ ಹೈಸ್ಕೂಲು ಮಂಗಳೂರು, ಡೊಮೆಸ್ಟಿಕ್ ಸಾಯನ್ಸ್; ಸೈಂಟ್ ಆನ್ಸ್ ಹೈಸ್ಕೂಲು ಮಂಗಳೂರು, ಡೊಮೆಸ್ಟಿಕ್ ಸಾಯನ್ಸ್.

ಬೀಡಿಯೆಲೆಯ ತುಟ್ಟಿಯ ಪರಿಣಾಮವಾಗಿ ಕೆಲವು ಬೀಡಿ ಫ್ಯಾಕ್ಟರಿಗಳು ಮುಚ್ಚಲ್ಪಟ್ಟಿವೆ. ಬೀಡಿ ಕಟ್ಟುವವರು ಸಂಕಷ್ಟಕ್ಕೀಡಾಗಿದ್ದಾರೆ. ರಾಷ್ಟ್ರೀಯ ಬೀಡಿ ಮಜೂರ ಸಂಘದ ಕಾರ್ಯಕಾರೀ ಸಮಿತಿಯು ಈ ವಿಚಾರವಾಗಿ ಚರ್ಚಿಸಿ ಕಲೆಕ್ಟರರಲ್ಲಿಗೊಂದು ಶಿಷ್ಟಮಂಡಲವನ್ನೊಯ್ಯುವ ನಿರ್ಧಾರ ಮಾಡಿದೆ.

ವರ್ಗಾವರ್ಗಿ ಇಲ್ಲಿಯ ಪಂಜಿನ ಕ್ಷೇಮಚಿಂತನೆಯ ಆಫೀಸರ್ ಶ್ರೀ ಕೆ. ದೇವೇಂದ್ರ ಇವರು ಕಾಸರಗೋಡು ಆ। ಚ। ಟಿ। ಆಫೀಸರಾಗಿ ಅವರ ಸ್ಥಾನಕ್ಕೆ ಶ್ರೀ ಸಿ. ಎಂ. ಶೆಣೈ ಯವರು ನೇಮಿಸಲ್ಪಟ್ಟಿದ್ದಾರೆ. ಶ್ರೀ ಎಸ್. ಯು. ಪರಶುರಾಮ ನಾಯ್ಕರು ಕುಂದಾಪುರ ತಹಶಿಲ್ದಾರ್ ರಾಗಿ ನೇಮಕಹೊಂದಿದ್ದಾರೆ.

ರಾಜಕೀಯ ಸಂತ್ರಸ್ತರಿಗೆ ಸರಕಾರದಿಂದ ಭೂಮಿದಾನ—ಜಿಲ್ಲೆಯ ರಾಜಕೀಯ ಸಂತ್ರಸ್ತರು ಸರಕಾರದಿಂದ ಭೂಮಿದಾನ ಪಡೆಯುವ ಅವಧಿಯನ್ನು ಈ ತಿಂಗಳ ಅಂತ್ಯದವರೆಗೆ ಮುಂದುವರಿಸಲಾಗಿದೆ. ಆದ್ದರಿಂದ ಈ ವರೆಗೆ ಅರ್ಜಿ ಹಾಕದವರಿದ್ದರೆ ಈ ಅವಧಿಯೊಳಗೆ ಅರ್ಜಿಮಾಡಿಕೊಳ್ಳತಕ್ಕದ್ದು. ಆ ಮೇಲೆ ಯಾವ ಅರ್ಜಿಯೂ ಸ್ವೀಕರಿಸಲ್ಪಡಲಾರದು.

ಇನ್ನುಮುಂದೆ ಅರ್ಜಿ ಹಾಕುವವರು ಮತ್ತು ಈವರೆಗೆ ಕೇವಲ ಅರ್ಜಿಮಾತ್ರ ಹಾಕಿದವರು, ತಮಗೆ ಅನುಕೂಲವಾದ ಗ್ರಾಮಗಳಲ್ಲಿ ಸರಕಾರೀ ಸ್ಥಳವನ್ನು ಹುಡುಕಿ ನೋಡಿ ರೆವಿನ್ಯೂ ಅಧಿಕಾರಿಗಳ ಸಹಾಯದಿಂದ ಅವುಗಳ ಸರ್ವೆ ನಂಬ್ರ ಮೊದಲಾದ ವಿವರಗಳನ್ನು ಜಿಲ್ಲಾ ಕಲೆಕ್ಟರರಿಗೆ ನೆಟ್ಟಗೆ ತಿಳಿಸುವುದು ಅತ್ಯಗತ್ಯವಾಗಿದೆ, ಈ ಸಂಬಂಧವಾಗಿ ರೆವಿನ್ಯೂ ಅಧಿಕಾರಿಗಳು ಬೇಕಾದ ಸಹಾಯ ಕೊಡಲಿರುವರು. ಸರ್ವೆ ನಂಬ್ರ ಮೊದಲಾದ ವಿವರ ಕೊಟ್ಟರೆ ಮಾತ್ರ ಭೂಮಿಯನ್ನು ಬೇಗನೆ ಪಡೆಯಲು ಅನುಕೂಲವಾಗುವುದು.

ನಂಜವಾದರೆ 5 ಎಕ್ರೆ, ಪುಂಜವಾದರೆ 10 ಎಕ್ರೆ ವರೆಗೆ ಭೂಮಿಯನ್ನು ಪ್ರತಿಯೊಬ್ಬನಿಗೆ ಕೊಡುವ ನಿರ್ಧಾರವನ್ನು ಮದ್ರಾಸ್ ಸರಕಾರವು ಮಾಡಿರುತ್ತದೆ. ಕೆಲವೊಂದು ಪ್ರದೇಶ ಯಾ ತಾಲೂಕಿನ ಹತ್ತುಮಂದಿ ಮಿಕ್ಕಿದ ರಾಜಕೀಯ ಸಂತ್ರಸ್ತರು, ಒಟ್ಟುಸೇರಿ ಸಹಕಾರಿ ಪದ್ಧತಿ ನೇರಿಗೆ ವಸಾಹತನ್ನು ಸ್ಥಾಪಿಸುವುದಾದರೆ ಸರಕಾರವು ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಲಿರುವುದು. ಸರಕಾರವು ಕೊಡುವ ಭೂಮಿಯ ಅಭಿವೃದ್ಧಿಗಾಗಿ ಬೋನಸನ್ನು ಕೊಡುವ ಆಲೋಚನೆಯು ನಡೆದಿದೆ, ಆದರೆ ಈ ಕುರಿತು ನಿಶ್ಚಿತ ಯೋಜನೆಯು ಈ ವರೆಗೆ ಪ್ರಕಟವಾಗಿಲ್ಲ.

ಜಿಲ್ಲೆಯ ರಾಜಕೀಯ ಸಂತ್ರಸ್ತರ ಪರಿಷತ್ತೊಂದನ್ನು ನಡಿಸುವ ಆಲೋಚನೆಯು ಜಿಲ್ಲಾ ಕಾಂಗ್ರೆಸ್ ಕಮಿಟಿಗಿದೆ. ಆ ಕುರಿತು ಮುಂದೆ ಪ್ರಕಟನೆ ಕೊಡಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರು ಬರೆಯುತ್ತಾರೆ.

The most powerful medicine for
ASTAMA
(Registered and Genuine)

CHITRAKOT
ASTHMA - SPECIFIC

Hundred years fame to cure the dreaded disease permanently only by one dose to be taken on purnima (full moon) dated 19-8-1948.

Apply atonce :-

Kr. Badri Nath Singh,
Shubh Chintak
Karyalaya Chitrakot,
Distt. Banda, U. P.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 280/1948.

ವಾದಿ—ರಾಮು.
ಪ್ರತಿವಾದಿ—ಮಂಜು.

ಕುಂದಾಪುರ ತಾಲ್ಲೂಕ ಬೀಜಾಡಿ ಗ್ರಾಮದ ಹುಪ್ಪಾರಿಕೆಯಲ್ಲಿರುವ ಕೆರಗಲ್ ಮನೆ ಸದಿಯಮ್ಮನ ಮಗ ಪ್ರತಿವಾದಿ ಮಂಜುಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಪ್ರತಿವಾದಿಯು ವಾದಿಯಿಂದ ತಾ. 7-8-46ರಲ್ಲು ಕೈಗಡ ಪಡೆದ ರೂ. 55-0-0 ವ ಅದರ ಮೇಲಣ ಬಡ್ಡಿ ಕೂಡಾ ಪ್ರತಿವಾದಿಯಿಂದ ಬರಮಾಡಿಕೊಳ್ಳುವರೆ ವಾದಿಯು ದಾಖ್ಲು ಮಾಡಿದ ಮೇಲಿನ ದಾವೆಯು ತಾ. 9-8-48ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ, ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

N. S. Parameshwariah.
Advocate for Plaintiff.
Date 23-7-1948. Coondapoor.

ಪ್ರಕಟಣೆ

ಲಲಿತಕಲಾ ಕರ್ನಾಟಕ ನಾಟಕ ಸಭೆ, ಮುಂಬಯಿ—ಮುಂಬಯಿ ಕನ್ನಡಿಗರಲ್ಲಿ ವಿನಂತಿಸುವುದೇನೆಂದರೆ,–ಲಲಿತಕಲಾ ಕರ್ನಾಟಕ ನಾಟಕ ಸಭೆಯ ಹಕ್ಕುದಾರರು ತಾನು ಮತ್ತು ಪಿ. ಆರ್. ಬೋಳಾರ್ ಎಂದು ಮಾಜಿ ಕಾರ್ಯದರ್ಶಿ ಬಿ. ಎಸ್. ನಾಯ್ಕರು ತಾ. 8-7-48ರಲ್ಲಿ ಪ್ರಕಟಿಸಿ, ಸಭೆಗೆ ದ್ರೋಹ ಬಗೆದಿದ್ದಾರೆ. ಲ. ಕ. ನಾ. ಸಭೆಯ ಹಕ್ಕು ಅದರ ಎಲ್ಲಾ ಸದಸ್ಯರಿಗಿದ್ದು, ಕಾರ್ಯಭಾರವು ವರ್ಕಿಂಗ್ ಕಮಿಟಿಯದಾಗಿದೆ, ಬಿ. ಎಸ್. ನಾಯ್ಕರ ಅಪಪ್ರಚಾರಕ್ಕೆ ಮನ ಕೊಡದೆ, ಅತನಲ್ಲಿ ಸಭೆಯ ಪರವಾದ ಸಂಬಂಧವಿಡಬೇಡಿರಿ.

ಭುಜಂಗ ಎಸ್. ಬೋಳಾರ್,
ಗೌ। ಕಾರ್ಯದರ್ಶಿ.
ಲ. ಕ. ನಾ. ಸಭಾ, ಮುಂಬಯಿ,
ಬೊಂಬೇ ಸ್ಟೇಷನರಿ ಡಿಪೊ,
ಶಾರ್ಕಿ ಬಜಾರ್ ಸ್ಟ್ರೀಟ್
ಬೊಂಬ್ಯಾ 1.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ಹಾರ್ಲೆಮ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

ನಮ್ಮ ಹಾರ್ಲೆಮ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಗೃಹದ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿದಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ಹಾರ್ಲೆಮ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ಹಾರ್ಲೆಮ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ಹಾರ್ಲೆಮ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಗಳಿಗೆ ಹಾರ್ಲೆಮ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣ ವಾಧೆ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ಹಾರ್ಲೆಮ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಿಲ್ಲ, ಈ ಹಾರ್ಲೆಮ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು—ಸೀಸೆ 1ಕ್ಕೆ ರೂ. 3-8-0 ವಿ. ಪಿ. ಬೇರೆ. 1 ಡಜನ್ ಸೀಸೆಗಳಿಗೆ ವಿ. ಪಿ. ಖರ್ಚುಸಹಿತ ರೂ. 42-0-0. ದೊಡ್ಡದ ಬಾಟ್ಲಿ ಸೀಸೆಗೆ ರೂ. 5-0-0 ವಿ. ಪಿ. ಬೇರೆ; ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಬೇರೆ. ಹಾರ್ಲೆಮ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18. ವಿ. ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ಹಾರ್ಲೆಮ್ ಟಿಲ್ಲಿ ಆಯಿಲನ್ನು ಕಳೆದ ೩ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ನಿರಾಕರಿಸಿದ ರೋಗಿಗಳನ್ನೂ ನಿಮ್ಮ ಹಾರ್ಲೆಮ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಥಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

ವಿಳಾಸ—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಭಾರತ ಸರಕಾರದ ಇದಿರು ಏನೇನಿವೆ?

(೧ನೇ ಪುಟದಿಂದ)

ಯಾದಿಗೆ ತರಬಹುದೆಂದು ನಿರೀಕ್ಷಿಸಬಹುದೇ? ಪ್ರತ್ಯಕ್ಷ ಧಾಳಿ ಅನಿವಾರ್ಯವಾದರೂ ಹೈದರಾಬಾದ್ ಈಬಹಿಷ್ಕಾರರಾಷ್ಟ್ರದಿಂದ ಕುಗ್ಗಿ ನಿಶ್ಶಕ್ತಗೊಳ್ಳುವವರೆಗೆ ತಡೆಯುವದು ವಾಸಿಯೇ? ಅಥವಾ ಯಾವ ಕಾರಣಕ್ಕಾದರೂ ಇನ್ನು ಒಂದೇ ಒಂದು ದಿನ ಸಹಿಸುವದೂ ತಪ್ಪಾಗುವದೆ?

ಹೈದರಾಬಾದು ಭಾರತಕೇಂದ್ರಕ್ಕೆ ಸೇರಲೇಬೇಕೆಂಬುದಕ್ಕೆ ಅಲ್ಲಿಯ ಪ್ರಜೆಗಳಲ್ಲಿ ಶೇಕಡಾ 87 ರಷ್ಟು ಹಿಂದುಗಳೆಂಬುದೂ ಒಂದು ಮುಖ್ಯ ಕಾರಣವೆಂದ ಮೇಲೆ ಅಂತಹ ಹಿಂದೂ ಬಹುಸಂಖ್ಯಾಕ ರಾಷ್ಟ್ರದ ಮೇಲೆ ಹಾಕಿರುವ ಆರ್ಥಿಕ ಬಹಿಷ್ಕಾರದಿಂದ ಅಲ್ಲಿ ಶೇಕಡಾ 100ಕ್ಕೂ ಅಧಿಕ ಬೆಲೆಯೇರಿರುವುದರ ದುಷ್ಪರಿಣಾಮಗಳನ್ನು ಅನುಭೋಗಿಸತಕ್ಕವರೂ ಹಿಂದುಗಳೇ ಅಲ್ಲವೆ? ಅಥವಾ ಇದರಿಂದ ಮುಂದಾಗಿ ಅಲ್ಲಿಯ ಆಡಳಿತೆಗೆ ಪೆಟ್ಟು ಬೀಳುವವೆಂದೂ ಒಳಗಿನ ಹಿಂದುಗಳು ಈ ದುರ್ಬಲಾಡಳಿತೆಯ ವಿರುದ್ಧ ಬಂಡಾಯವೇಳುವರೆಂದೂ, ಈ ಪರಿಣಾಮಗಳಾದರೂ ಅಗತ್ಯವಿರುವಷ್ಟು ಕ್ಷಿಪ್ರದಲ್ಲಿ ಆಗಬಹುದೆಂದೂ ನಿರೀಕ್ಷಿಸಲು ಸಾಧ್ಯವೇ?

ಭಾರತವು ಧಾಳೀ ಕ್ರಮ ಕೈಕೊಂಡಲ್ಲಿ, ಇದಕ್ಕೆ ಪ್ರತೀಕಾರವಾಗಿ ಸಶಸ್ತ್ರ ರಝಾಕಾರ್ ರಾಕ್ಷಸರು - ಶಸ್ತ್ರಧಾರಣೆ ಅಥವಾ ಸಂಘಟನೆಗಿದುವರೆಗೂ ಅವಕಾಶ ದೊರೆಯದೆ ಹಲ್ಲು ಕಿತ್ತ ಹಾವಿನಂತಿರುವ ಹೈದರಾಬಾದ್ ಹಿಂದುಗಳನ್ನು ಒಳಗಿನಿಂದಲೇ ನಜ್ಜುಗುಜ್ಜು ಮಾಡುವ ಅಪಾಯವಿಲ್ಲವೆ?

ಬ್ರಿಟಿಷ್ ಸರಕಾರದ ಅಧಿಕಾರ ದಾನ ನಿರೂಪಣಾ ಶಾಸನದ ಅಕ್ಷರಗಳನ್ವಯ ಹಿಂದೀ ಸಂಸ್ಥಾನಗಳಿಗೆ ಸ್ವೇಚ್ಛೆಯ ಸ್ಥಾನ ವಹಿಸುವ ಅಧಿಕಾರವಿದೆ. ಆ ಶಾಸನದ ಆಧಾರದಿಂದಲೇ ಇಂದಿನ ಸ್ವಾಧಿಕಾರವನ್ನು ಅನುಭೋಗಿಸುತ್ತಿರುವ ಭಾರತದ ಕೇಂದ್ರದೊಳಗೆ ಹೈದರಾಬಾದು ಸೇರಲಿಲ್ಲವೆಂಬ ಒಂದೇ ಕಾರಣಕ್ಕಾಗಿ ಅದನ್ನು ಆಕ್ರಮಿಸಿಕೊಂಡರೆ ಬ್ರಿಟಿಷರಿಗೂ ಲೋಕಕ್ಕೂ ಹಿಂದೀ ಸರಕಾರದ ವರ್ತನೆಯು ಅನ್ಯಾಯವೆಂದು ತೋರಲಾರದೆ?

ಸರ್. ವೋಲ್ಟನರಂತಹ ವಿಚಕ್ಷಣವಂತ, ಹಾಗೂ ಚರ್ಚಿಲ್ಲರಂತಹ ಪ್ರಭಾವಶಾಲಿ ಬ್ರಿಟಿಷ್ ಮುತ್ಸದ್ದಿಗಳ ಮತ್ತು ಪಾಕಿಸ್ತಾನ್ ಹಾಗೂ ಲೋಕದ ಇತರ ಮುಸ್ಲಿಂ ರಾಷ್ಟ್ರಗಳ ಬೆಂಬಲದಿಂದ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತನ ಸಂಪಾದಿಸಿಕೊಂಡರೆ ಅಥವಾ ಲೋಕದ ಇತರ ರಾಷ್ಟ್ರಗಳಿಂದ ಮಂಜೂರಾತಿ ಪಡಕೊಂಡರೆ ಹೈದರಾಬಾದು ಸ್ವತಂತ್ರ ರಾಷ್ಟ್ರವೆನ್ನಿಸದೆ? ಅಂತಹ ಸಂದರ್ಭದಲ್ಲಿ ಭಾರತವು ಹೈದರಾಬಾದಿನ ಮೇಲೆ ಮಾಡುವ ಧಾಳಿಯು ಒಂದು ಸ್ವತಂತ್ರ ರಾಷ್ಟ್ರವು ಮತ್ತೊಂದು ಸ್ವತಂತ್ರ ರಾಷ್ಟ್ರದ ಮೇಲೆ ನಡೆಸಿದ ಅತಿಕ್ರಮಣವಾಗಿ ಭಾರತವು ಲೋಕದದೃಷ್ಟಿಯಲ್ಲಿ ಅಪರಾಧಿಯಾಗಲಾರದೆ?

ಅದೇ ರೀತಿ, ಕಳ್ಳಂತರ್ಲ್ಯಾಂಡ್ ಹೊಡೆದ ಆಸ್ಟ್ರೇಲಿಯದ ವೈಮಾನಿಕ ಸಿಡ್ನಿ ಕೋಟ್ಸನ್ನನ ವಾದದಂತೆ 'ಚಿಕಾಗೋ ಅಂತರ್ರಾಷ್ಟ್ರೀಯ ಆಕಾಶಕರಾರು' ಪ್ರಕಾರ ಯಾವ ವಿಮಾನಕ್ಕಾದರೂ ಹೈದರಾಬಾದಿಗೆ ಹಾರುವ ಅಧಿಕಾರವಿದೆ ಎಂಬುದು ಸಿಂಧುವಾದರೆ, ಅಂತೆಯೇ ನಿಜಾಮರ ಪ್ರಯತ್ನವಿರುವಂತೆ ಪೋರ್ತುಗೀಸರ ಗೋವೆಯು ಹೈದರಾಬಾದಿಗೆ ದೊರೆತರೆ ಭಾರತವು ಹಾಕಿದ ಆರ್ಥಿಕ ದಿಗ್ಬಂಧನ ಕೂಡಾ ಬಹುಮಟ್ಟಿಗೆ ನಿರರ್ಥಕವಾಗಲಾರದೇ?

ಭಾರತೀಯರಲ್ಲಿ ಹೆಚ್ಚಿನವರು ಇನ್ನೂ ನಮ್ಮ ಅಖಂಡ ಭಾರತದ ಆಶೆ ಕಟ್ಟಿಕೊಂಡಿರುವಂತೆಯೇ ಭಾರತದ ಒಂದು ಮೂರನೇ ಅಂಶದ ಪಾಲನ್ನು ಕೇಳಿದ ತಮಗೆ ಒಂದು ನಾಲ್ಕನೇ ಭಾಗ ಮಾತ್ರ ಸಿಕ್ಕಿರುವ ಪಾಕಿಸ್ತಾನಿಗಳು ಕೊನೆಯ ಪಕ್ಷ ತಾವು ಅದಿಯಲ್ಲಿ ಕೇಳಿದಷ್ಟನ್ನಾದರೂ ಸಂಪಾದಿಸಿಯೇ ತೀರಬೇಕೆಂಬ ಗುಪ್ತ ಶಪಥದಲ್ಲಿರುವರೆಂಬುದು ಲಕ್ಷ್ಯದಲ್ಲಿದೆಯಷ್ಟೆ? ಅತ್ತ ಹೈದರಾಬಾದಿನ ಮೇಲೆ ಭಾರತವು ಬೀಳುವಾಗಲೇ ಇತ್ತ ತಮ್ಮೀ ಉದ್ದೇಶ ಸಾಧನೆಗಾಗಿ ಪಾಕಿಸ್ತಾನಿಗಳು ಭಾರದ ಮೇಲೆ ನೆಗೆಯುವ ಅಂತರ್ಗಾಮೀ ಒಡಂಬಡಿಕೆ ಮಾಡಿಕೊಂಡಿರಲಾರದೆ? ಅಂತೆಯೇ ಎಲ್ಲಾ ಮುಸ್ಲಿಂ ರಾಷ್ಟ್ರಗಳೂ ಹೈದರಾಬಾದ್ ಪಾಕಿಸ್ತಾನಗಳೊಡನೆ ಕೂಡಿಕೊಳ್ಳುವ ಸಂಭವವಿಲ್ಲವೆ?

ಹೊರಗಿನ ಜೋಡಣೆಗಳನ್ನು ಕಡೆಗಣಿಸಿದರೂ, ಪಾಕಿಸ್ತಾನ್ ರಚನಾ ಸಂಬಂಧವಾಗಿ ಉತ್ತರ ಹಿಂದುಸ್ಥಾನವಿಡೀ ಯಾವ ರೀತಿ ಜಾತೀಯ ಕಲಹಗಳ ನರಕಕುಂಡವಾಯಿತೋ ಅದೇ ರೀತಿ ಹೈದರಾಬಾದ್ ಸ್ವಾತಂತ್ರ್ಯ ಸಮರದ ಸಂಬಂಧವಾಗಿ ಅಖಿಲ ದಕ್ಷಿಣ ಹಿಂದುಸ್ಥಾನವೇ ಜಾತೀಯ ಗೊಂದಲದಿಂದ ಕೆಸರು ರಂಗವಾಗಿ ಮಾರ್ಪಟ್ಟೀತೆಂದು ನಿರೀಕ್ಷಿಸುವದು ಬೇಡವೆ?

ರಜ್ವಿಯಂದಂತೆ ಹೈದರಾಬಾದಿನ ಒಂದು ಮಿಲಿಯ ರಝಾಕಾರರು, ಇತ್ತ ಮುಸಲಿಪಟಾಮ್ ಅತ್ತ ಢಿಲ್ಲಿಗೆ ದಾಳಿಡಹತ್ತಿದರೆ, ಅದನ್ನಿದಿರಿಸಲು ಅಂತಹದೇ ಬಲದ ಸೇನೆ ಹೈದರಾಬಾದಿನೊತ್ತಿನಲ್ಲಿರುವ ಭಾರತದ ಪ್ರಾಂತ್ಯಗಳಲ್ಲಾವುದಿನಲ್ಲಿ ಹಿಂದೀ ಸೇನೆಯಿದ್ದರೆ ಅದಕ್ಕಿದಿರಾಗಿ ಪಾಕಿಸ್ತಾನ್ ಮತ್ತಿತರ ಮುಸ್ಲಿಂ ರಾಷ್ಟ್ರಗಳ ಹಾಗೂ ಹೈದರಾಬಾದಿನ ಸಮಬದ್ಧ ಸೇನೆಗಳೂ ಪ್ರತ್ಯೇಕವಿವೆಯಷ್ಟೆ?

ವಿ. ಸೂ. - ಕಾಶ್ಮೀರ ಸಮಿತಿ ಹಾಗೂ ನಿಜಾಮ್ ಸರಕಾರಗಳೀಗ ಸ್ವಪಕ್ಷ ಸಾಮ್ರಾಜ್ಯದಲ್ಲೀ ವಿಹರಿಸುತ್ತಿವೆಯಾದ್ದರಿಂದ ಅಂಥವುಗಳನ್ನು ವಾಸ್ತವ್ಯಗಳೆಂದೇ ಗಣಿಸಿ ಮೇಲಿನ ಸವಾಲುಗಳು ಬಂದಿವೆ. ಕಾಶ್ಮೀರ ಮತ್ತು ಹೈದರಾಬಾದುಗಳ ಕುರಿತು ಹಿಂದೀ ಸರಕಾರವು ಹಿಂದು ಮುಂದಿನದೆಲ್ಲವನ್ನೂ ವಿಚಾರಿಸಿ ನೋಡಿಕೊಂಡೇ ನಿಶ್ಚಿತ ಧೋರಣೆಯನ್ನನುಸರಿಸಿದ್ದು, ಮೇಲಿನ ಸ್ವಪ್ನಗಳಿಂದ ಬಿಡಿಸಿ ಸಂಬಂಧಪಟ್ಟವರನ್ನು ಎಚ್ಚರಿಸುವ ಸ್ಪಷ್ಟ ವಿಧಾನಗಳು ಅದರ ದೃಷ್ಟಿಪಥದಲ್ಲಿದ್ದೇ ಇವೆ. ಆದರೆ ಎಂತಹ ಕೃತಕ ಹಾಗೂ ಜಟಿಲ ಮಾಯಾಜಾಲಗಳನ್ನು ಭಾರತ ಸರಕಾರವು ಇದಿರಿಸಬೇಕಾಗಿ ಬಂದಿದೆ ಎಂಬುದನ್ನೂ ಅವುಗಳ ತೂಕಾನುಗುಣವಾದ ಕಾರ್ಯಾಚರಣೆ ಕೈಕೊಳ್ಳುವಾಗ ಭಾರತ ಸರಕಾರಕ್ಕೆ ಸಮಯ ಮತ್ತು ಸನ್ನಾಹ ಬೇಕೇಬೇಕೆಂಬುದನ್ನೂ ವಿಮರ್ಶಕರು ತಿಳಿದುಕೊಳ್ಳಬೇಕೆಂಬುದೊಂದೇ ಇಲ್ಲಿ ಮುಖ್ಯ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಿ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ್ಯ ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಖಾರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪೂರ— ಶಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಾಪುರ, ಶಿವಮೊಗ್ಗ, ಹಾವೇರಿ, ಬ್ಯಾಡಗಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉಡುಳು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಎತ್ತು ಹಾಳಾಗುತ್ತೆ.

ಹೆಂಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ, ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ, ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸನ್ನಿ, ಮಲವಿರೋಧ, ಸ್ತನಗಳ ಬೀಗು, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ಬಳಿಗೆ ಕರೆಸಿ ನೂರಾರು ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಆಯುರ್ವೇದೀಯ ಔಷಧಿಗಳ ಶಾಸ್ತ್ರೀಯ ಮತ್ತು ಅನುಭವಿಕ ಗುಣಧರ್ಮ ರೋಗಾನುಪಾನ ಪ್ರಮಾಣ, ಕ್ರಯ, ಇತ್ಯಾದಿ ಯುಕ್ತ 96 ಪುಟಗಳ ಸೂಚೀಪತ್ರ 1ಕ್ಕೆ 0-8-0- 9 ಆಣೆಯ ಸ್ಟಾಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವದು

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.